ರಿಜಿಸ್ಟರ್ ನಂ 792 WEEKLY EDITION ಪ್ರತಿ ಸಂಚಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಗುರುವಾರ ೧-೬-೫೩ [ಸಂಚಿಕೆ ೪೧

ಪೂರ್ವ ಯೂರೋಪು ಸಭೆಗಾಗಿ ಸ್ಟಾಲಿನ್ ಯತ್ನ

ಚುನಾವಣೆಯಲ್ಲಿ ಸೋತ ಅಧ್ಯಕ್ಷರಿಂದ ಖುಲಾಸೆ

ಮೈಸೂರು ೧

ಕಳೆದ ಡಿಸೆಂಬರ್ ೨೩ನೇ ತಾ|| ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಓಟನ್ನು ಕೇಳುತ್ತಿದ್ದ ಜ|| ಸೈಯದ್ ಇಸ್ಮಾಯಿಲ್ ರವರಿಗೆ, ಎದುರು ಪಕ್ಷದ ಉಮೇದುವಾರರ ಪರವಾಗಿ ಪ್ರಚಾರ ಮಾಡುತ್ತಿದ್ದ ಜ|| ಅಜೀಜ್ ಎ. ಸತ್ತಾರ್ ಸೇಟ್ ರವರು ಚಾಕುವಿನಿಂದ ಹೊಡೆದರೆಂಬ ಅಪಾದನೆ ಮೇಲೆ ಹೂಡಲಾಗಿದ್ದ ಮೊಕದ್ದಮೆಯು ವಿಚಾರಣೆ ನಡೆದು ಜ|| ಅಜೀಜ್ ಸೇಟರು ನಿರಪರಾಧಿಗಳೆಂದು ಖುಲಾಸೆಯಾಗಿರುತ್ತಾರೆ.

ಸತ್ಯಾಗ್ರಹದ ಸಂಬಂಧವಾಗಿ ರುಜು ಸಂಗ್ರಹ

ಮೈಸೂರು ಜಿಲ್ಲಾ ಸಮಾಜವಾದಿ ಪಕ್ಷದವರು ಆಹಾರದ ಬೆಲೆ ಏರಿಕೆ ವಿರುದ್ಧವಾಗಿ ಹೂಡಲಿರುವ ಅಖಿಲ ಸತ್ಯಾಗ್ರಹದ ಅಂಗವಾಗಿ, ರಾಷ್ಟ್ರಾಧ್ಯಕ್ಷರಿಗೆ ಮನವಿಯೊಂದನ್ನು ಸಲ್ಲಿಸಲು ಇಂದಿನಿಂದ ರುಜುಗಳನ್ನು ಸಂಗ್ರಹಿಸುವ ಉದ್ಯಮದಲ್ಲಿ ತೊಡಗಿರುತ್ತಾರೆ. ಸಾರ್ವಜನಿಕರು ಈ ಕಾರ್ಯದಲ್ಲಿ ಸಹಕರಿಸಬೇಕೆಂದು ಪಕ್ಷದ ಕಾರ್ಯದರ್ಶಿಯವರು ಕೋರಿರುತ್ತಾರೆ.

ಜಿಲ್ಲಾ ಬೋರ್ಡ್ ಸಭೆ

ಹಗ್ಗದದೇವನಕೋಟೆ ತಾಲ್ಲೂಕಿನಲ್ಲಿ ಕಾಲರಾ ವ್ಯಾಧಿಯು ಹರಡಿರುವುದರಿಂದ ಈ ತಿಂಗಳು ೬ ನೇ ತಾ|| ಸರಗೂರಿನಲ್ಲಿ ಸೇರಬೇಕಾಗಿದ್ದ ಜಿಲ್ಲಾ ಬೋರ್ಡ್ ಸಭೆಯು ಮೈಸೂರು ನಗರದಲ್ಲಿ ಅದೇ ದಿನ ಸೇರುವಂತೆ ಗೊತ್ತು ಪಡಿಸಲಾಗಿದೆ.

ಹಿಂದೂ ಮಹಾ ಸಭೆಯ ಮುಖಂಡರ ಬಿಡುಗಡೆ

ಅಂತರ ಜಾತೀಯ ವಿವಾಹದ ಸಂಬಂಧವಾಗಿ ದೆಹಲಿಯಲ್ಲಿ ನಡೆದ ಪ್ರದರ್ಶನದ ಗಲಭೆ ಸಂದರ್ಭದಲ್ಲಿ ದಸ್ತಗಿರಿಯಾಗಿದ್ದ ಹಿಂದೂ ಮಹಾ ಸಭೆ ಕಾರ್ಯದರ್ಶಿ ವಿ ಜಿ ದೇಶಪಾಂಡೆಯವರು ಬಿಡುಗಡೆಯಾಗಿರುತ್ತಾರೆ. ಇನ್ನೂ ಹತ್ತು ಜನರು ಬಂಧಮುಕ್ತರಾಗಿರುವರು.

೪೫ ನಿಮಿಷಗಳಲ್ಲಿ ೧೦ ಮೊಟ್ಟೆ ಹಾಕಿದ ಕೋಳಿ

ಇಂಗ್ಲೆಂಡಿನ ವಾರ್ ವಿಕ್ ಷೈರ್ ಪ್ರಾಂತದ ಊರೊಂದರಲ್ಲಿ ಒಂದು ಕೋಳಿಯು ಕಳೆದ ೨೬ ನೇ ತಾ|| ೪೫ ನಿಮಿಷಗಳಲ್ಲಿ ೧೦ ಅಸ್ವಾಭಾವಿಕವಾದ ಮೊಟ್ಟೆಗಳನ್ನು ಹಾಕಿ ಪ್ರಪಂಚದ ದಾಖಲೆಯನ್ನು ಸ್ಥಾಪಿಸಿರುತ್ತದೆ. ಆ ಕೋಳಿಯು ಇಡುವ ಮೊಟ್ಟೆಗಳು ಸಾಮಾನ್ಯವಾಗಿ ಸಾಯುವುವೆಂದೂ, ಆದರೆ ಇದು ಜೀವಂತವಾಗಿರುವುದೆಂದೂ ಹೇಳಲಾಗಿದೆ.

○ ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರೀ ಮತ್ತು ಪ್ರಧಾನಿ ಚಾಂಗ್ ಟೇಕ್ ಸಾಂಗ್ ರವರನ್ನು ಕೊಲೆಮಾಡಿ, ಅಲ್ಲಿನ ಸರ್ಕಾರವನ್ನು ಉರುಳಿಸುವ ಪಿತೂರಿಯೊಂದು ನಡೆದಿತ್ತೆಂದೂ, ಈ ಸಂಬಂಧವಾಗಿ ಈಗಾಗಲೇ ೧೦ ಜನರನ್ನು ದಸ್ತಗಿರಿ ಮಾಡಲಾಗಿದೆಯೆಂದೂ ವರದಿಯಾಗಿದೆ.

ಕಾರ್ಮಿಕರ ಹಿತ ರಕ್ಷಣೆ ಬಗ್ಗೆ ಅಂಕಿ ಅಂಶಗಳ ಶೇಖರಣೆ

ಮೈಸೂರು ಸರ್ಕಾರದ ಸೂಚನೆ

ಬೆಂಗಳೂರು ೧

ಸಂಸ್ಥಾನದ ಕಾರ್ಮಿಕರ ಯೋಗಕ್ಷೇಮ, ಧಾನ್ಯಗಳ ಬೆಲೆ, ಅವರ ಜೀವನದ ಸ್ಥಿತಿ, ನೀರಿನ ಸೌಕರ್ಯ, ಕೂಲಿ, ಮನೆ ಬಾಡಿಗೆ ಮತ್ತು ಕೈಗಾರಿಕಾ ವ್ಯಾಜ್ಯಗಳ ಬಗ್ಗೆ ಅಂಕಿ ಅಂಶಗಳನ್ನು ಶೇಖರಿಸಬೇಕೆಂದು ಮೈಸೂರು ಸರ್ಕಾರದವರು ಕಾರ್ಮಿಕರ ಹಿತರಕ್ಷಣಾ ಕಮಿಷನರರಿಗೆ ಸೂಚಿಸಿರುತ್ತಾರೆ. ರಕ್ಷಣಾ ಇಲಾಖೆಗಳ ವಶದಲ್ಲಿರುವ ಕಾರ್ಖಾನೆಯ ಕಾರ್ಮಿಕರ ಬಗ್ಗೆಯೂ ಈ ಸೂಚನೆಯು ಅನ್ವಯಿಸುವುದು.

ಜನರಿಗೆ ಪೋಲೀಸರಿಗೂ ಪ್ರದರ್ಶನಕಾರರಿಗೂ ಘರ್ಷಣೆ

೧೯೪೯ರಲ್ಲಿ ಆದ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತನೊಬ್ಬನ ಕೊಲೆಯ ನೆನಪಿಗಾಗಿ ಮೊನ್ನೆ ಟೋಕಿಯೋದಲ್ಲಿ ೩,೦೦೦ ಕಾರ್ಮಿಕರು ನಡೆಸಿದ ಪ್ರದರ್ಶನದಲ್ಲಿ ಅವರಿಗೂ ಪೋಲೀಸರಿಗೂ ಘರ್ಷಣೆ ನಡೆದು, ಇಬ್ಬರು ಮಡಿದು ಅನೇಕರಿಗೆ ಗಾಯಗಳಾದುವು. ಹೆಚ್ಚು ಗಲಭೆಗೆ ಅವಕಾಶ ಕೊಡದಂತೆ ೨೫ ಸಾವಿರ ಪೋಲೀಸರು ಊರಿನಲ್ಲೆಲ್ಲಾ ಗಸ್ತು ತಿರುಗಿದರು.

ಕಣ್ಣಡಕದ ಕಾರ್ಖಾನೆಗೆ ಬೆಂಕಿ

ಬೊಂಬಾಯಿಗೆ ೧೭ ಮೈಲಿ ದೂರವಿರುವ ವಿಕ್ರೋಲಿ ಎಂಬಲ್ಲಿನ ಕಣ್ಣಡಕಗಳ ಚೌಕಟ್ಟು ತಯಾರಿಕೆ ಕಾರ್ಖಾನೆಗೆ ಗುರುವಾರ ಬೆಂಕಿ ಬಿದ್ದ ಪರಿಣಾಮವಾಗಿ ಕಬ್ಬಿಣದ ಚೌಕಟ್ಟಿನ ಭಾರಿದಾಸ್ತಾನು ಉರಿದುಹೋಯಿತೆಂದೂ, ಒಂದು ಗೋಡೆಯ ಭಾಗದ ಬೆಂಕಿಯನ್ನು ಹತೋಟಿಗೆ ತರಲಾಯಿತೆಂದೂ ವರದಿಯಾಗಿದೆ.

ವಿವಾಹ ಮಹೋತ್ಸವ

ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್, ಶ್ರೀ ಜಿ. ಮಂಜನಾಥ ಅಯ್ಯರ್ ರವರು ತಮ್ಮ ಕುಮಾರಿ ಇಂದಿರಾರವರನ್ನು ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಕೆ ಬೊರಸ್ವಾಮಿ ಅಯ್ಯಂಗಾರರವರ ಮಕ್ಕಳು ಶ್ರೀ ಕೆ ಶ್ರೀನಿವಾಸರವರಿಗೆ ಕೊಟ್ಟು ಗುರುವಾರ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು.

ಪೂರ್ವ ಯೂರೋಪು ರಾಷ್ಟ್ರ ಸಭೆಗೆ ಸ್ಟಾಲಿನ್ ಪ್ರಯತ್ನ

ಪಶ್ಚಿಮ ಬರ್ಲಿನ್ ಮೇಲೆ ಪಾಶ್ಚಾತ್ಯ ರಾಷ್ಟ್ರಗಳ ಅಧಿಕಾರವನ್ನು ಕಿತ್ತು ಹಾಕಿ ಪಶ್ಚಿಮ ಜರ್ಮನಿಯೊಡನೆ ಆ ರಾಷ್ಟ್ರಗಳು ಮಾಡಿಕೊಂಡಿರುವ ಕರಾರು ಮತ್ತು ಐರೋಪ್ಯ ರಕ್ಷಣಾ ಒಪ್ಪಂದವು ಅಂಗೀಕಾರವಾಗದಂತೆ ಮಾಡುವ ಉದ್ದೇಶದಿಂದ ರಷ್ಯದ ಪ್ರಧಾನಿ ಮಾರ್ಷಲ್ ಸ್ಟಾಲಿನ್ ರವರು ಶೀಘ್ರದಲ್ಲೇ ಪೂರ್ವ ಯೂರೋಪು ರಾಷ್ಟ್ರಗಳ ಸಭೆಯನ್ನು ಸೇರಿಸಲಿರುವರೆಂದು ವರದಿಯಾಗಿದೆ. ಪೂರ್ವ ಜರ್ಮನಿಯ ಅಧಿಕಾರಿಗಳು ದಿಗ್ಬಂಧನವನ್ನೇನಾದರೂ ಹಾಕಿದರೆ ೨೪ ಘಂಟೆಗಳಲ್ಲಿ ಪಶ್ಚಿಮ ಬರ್ಲಿನ್ನಿಗೆ ವಿಮಾನಗಳ ಮೂಲಕ ಸೈನ್ಯ ಮತ್ತು ಸಾಮಗ್ರಿಗಳ ರವಾನೆ ಮಾಡಲು ಪಾಶ್ಚಾತ್ಯ ರಾಷ್ಟ್ರಗಳು ಸಿದ್ಧವಾಗಿರುವುವೆಂದು ಹೇಳಲಾಗಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ರಚನೆ

ಬೆಂಗಳೂರು ೧

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಮಾಜಿ ಹಣಕಾಸಿನ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರು ಅವಿರೋಧವಾಗಿ ಚುನಾಯಿತರಾಗಿರುವರು. ಶ್ರೀಗಳಾದ ಟಿ ಸುಬ್ರಹ್ಮಣ್ಯಂ, ಹೆಚ್ ಕೆ ವೀರಣ್ಣ ಗೌಡ, ಹೆಚ್ ಎಸ್ ರುದ್ರಪ್ಪ ಮತ್ತು ಎಂ ಎಲ್ ನಂಜರಾಜ ಅರಸ್ ಇವರುಗಳು ತಮ್ಮ ಉಮೇದುವಾರಿಕೆಗಳನ್ನು ವಾಪಸು ತೆಗೆದಿರುವರು. ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಗೆ ಈ ಕೆಳಗೆ ಕಂಡವರು ಆರಿಸಲ್ಪಟ್ಟಿರುತ್ತಾರೆ:

ಬೆಂಗಳೂರು - ಆರ್ ಸುಬ್ಬಣ್ಣ, ಜಿಲ್ಲೆ-ಕೆ ಸುಬ್ಬರಾವ್, ಕೋಲಾರ ಜಿಲ್ಲೆ ಶ್ರೀ ಹೆಚ್ ಸಿ ಲಿಂಗಾರೆಡ್ಡಿ, ಮಂಡ್ಯ ಜಿಲ್ಲೆ ಶ್ರೀ ಹೆಚ್ ಕೆ ವೀರಣ್ಣ ಗೌಡ, ಮೈಸೂರು ನಗರ-ಶ್ರೀ ಎಸ್ ಚನ್ನಯ್ಯ ಜಿಲ್ಲೆ ಶ್ರೀ ಪಿ ಮಹದೇವಯ್ಯ, ತುಮಕೂರು ಜಿಲ್ಲೆ- ಶ್ರೀ ಮರಿ ಮಲ್ಲಯ್ಯ, ಹಾಸನ ಜಿಲ್ಲೆ - ಶ್ರೀ ಜಿ ಎ. ತಿಮ್ಮಪ್ಪ ಗೌಡ, ಚಿಕ್ಕ ಮಗಳೂರು ಜಿಲ್ಲೆ-ಶ್ರೀ ಡಿ. ಸಿ ಬಸಪ್ಪ, ಶಿವಮೊಗ್ಗ ಜಿಲ್ಲೆ-ಶ್ರೀ ಹೆಚ್ ಎಸ್. ರುದ್ರಪ್ಪ, ಚಿತ್ರದುರ್ಗ - ಶ್ರೀ ಎಸ್. ವಾಸುದೇವರಾವ್

ಬೊಂಬಾಯಿ ಪೋಲೀಸರಿಗೆ ನರರಿಗೆ ನೋಟೀಸು

ಬೊಂಬಾಯಿಯಲ್ಲಿರುವ ಆ ಹಾ ಗೋಡೌನುಗಳನ್ನು ವಶಕ್ಕೆ ತೆಗೆದುಕೊಂಡು ಹೆಚ್ಚು ಬೆಲೆಗೆ ಧಾನ್ಯವನ್ನು ಮಾರಿ ಬಂದ ಮೊತ್ತವನ್ನು ಖಜಾನೆಗೆ ಸರ್ಕಾರದ ಹೆಸರಿನಲ್ಲಿ ಒಪ್ಪಿಸಲು ಈ ದಿನ ಸಮಾಜವಾದಿಗಳ ಒಂದು ತಂಡವು ಹೊರಡುವುದೆಂದು ಬೊಂಬಾಯಿಯ ಪೋಲೀಸು ಕಮಿಷನರರಿಗೆ ಆ ಪಕ್ಷದವರು ತಿಳಿಸಿರುತ್ತಾರೆ.

ವರ್ತಕರು ಆಹಾರ ಧಾನ್ಯ ಮಾರುವ ತತ್ವಕ್ಕೆ ಒಪ್ಪಿಗೆ

ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಂಡು ಅವನ್ನು ಹಂಚಲು ವರ್ತಕರಿಗೆ ಅವಕಾಶ ಕೊಡಬೇಕೆಂಬುದಾಗಿ ಬೊಂಬಾಯಿಯ ಧಾನ್ಯ ವ್ಯಾಪಾರಸ್ಥರು ಮಾಡಿದ ಕೋರಿಕೆಯನ್ನು ಗಮನಿಸಿ, ಅದರಲ್ಲಿ ಅಡಗಿರುವ ತತ್ವವನ್ನು ಒಪ್ಪಿರುವುದಾಗಿ ಕೇಂದ್ರ ಆಹಾರ ಮಂತ್ರಿ ಕಿದ್ವಾಯ್ ರು ತಿಳಿಸಿರುತ್ತಾರೆ.

ಆಂಧ್ರ ಪ್ರಾಂತಕ್ಕಾಗಿ ಸರ್ಕಾರಿ ಕಛೇರಿ ಬಳಿ ಪಿಕೆಟಿಂಗ್

ಆಂಧ್ರ ಪ್ರಾಂತದ ಸ್ಥಾಪನೆ ಸಂಬಂಧವಾಗಿ ಮ. ದ್ರಾಸು ಶಾಸನ ಸಭೆಯ ಸದಸ್ಯ ಭೂಪತಿ ರಾಜು ಸುಬ್ಬ ರಾಜುರಾವರವರೂ ಅವರ ಪತ್ನಿ ಮಾಜಿ ಸದಸ್ಯೆ ಬಂಗಾರಮ್ಮನವರೂ ಇದೇ ೪ ನೇ ತಾ|| ಮದ್ರಾಸು ಸರ್ಕಾರಿ ಕಛೇರಿ ಮುಂದೆ ಪಿಕೆಟಿಂಗ್ ನಡೆಸಲಿರುವರು. ಸ್ವಾಮಿ ಸೀತಾರಾಂರವರು ಏಳು ದಿವಸಗಳಿಂದಲೂ ಉಪವಾಸವನ್ನು ಕೈಗೊಂಡಿರುತ್ತಾರೆ.

ಮಗುವಿನ ಗಂಟಲಲ್ಲಿ ಮೀನು ಸಿಕ್ಕಿ ಉಸಿರು ಕಟ್ಟಿತ್ತು

ಕಲ್ಕತ್ತದ ಬಳಿ ಚಂದ್ರನಗರದಲ್ಲಿ ೯ ತಿಂಗಳಿನ ಒಂದು ಮಗುವು ಬುಟ್ಟಿಯಲ್ಲಿದ್ದ ಒಂದು ಮೀನನ್ನು ತೆಗೆದುಕೊಂಡು ನುಂಗಲು ಹೋಗಿ ಅದು ಮಗುವಿನ ಗಂಟಲಿನಲ್ಲಿ ಸಿಕ್ಕಿ ಮಗುವಿನ ಉಸಿರು ಕಟ್ಟಿಕೊಂಡಿತೆಂದೂ, ತರುವಾಯ ಮಗುವಿನ ಗಂಟಲನ್ನು ಕುಯ್ದು ಉಸಿರಾಡಲು ಅವಕಾಶವನ್ನು ಕಲ್ಪಿಸಿದ ನಂತರ, ಗಂಟಲಿನ ಶಸ್ತ್ರ ಚಿಕಿತ್ಸೆ ನಡೆಸಿ ಮೀನನ್ನು ಹೊರಕ್ಕೆ ತೆಗೆಯಲಾಯಿತೆಂದೂ ವರದಿಯಾಗಿದೆ.

ಮುಂಬೈ ಪೋಲೀಸರಿಗೆ ನವಾಬರ ಶರಣಾಗತಿ

೧೯೫೨ರ ವಿದೇಶೀ ಹಣದ ವ್ಯವಸ್ಥೆ ಶಾಸನದ ಉಲ್ಲಂಘನೆ ಸಂಬಂಧವಾಗಿ ಹೈದರಾಬಾದಿನ ನವಾಬ್ ಜಾಹಿರ್ ಜಂಗ್ ಬಹದ್ದೂರ್ ಮತ್ತು ಅವರ ಪತ್ನಿ ಬೇಗಂ ಹಸ್ಮತ್ ಉನ್ನೀಸಾರವರ ಮೇಲಿದ್ದ ವಾರಂಟಿನ ಪ್ರಕಾರ ಅವರು ಪೋಲೀಸರ ಮುಂದೆ ಹಾಜರಾಗಿ, ತಲಾ ೧ ಲಕ್ಷ ರೂ. ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಅವರು ಕಳೆದ ಏಪ್ರಿಲ್‌ನಲ್ಲಿ ಹಣವನ್ನು ಆಭರಣಗಳನ್ನು ಕಳ್ಳತನದಲ್ಲಿ ತೆಗೆದುಕೊಂಡು ವಿದೇಶಕ್ಕೆ ಹೊರಟಿದ್ದುದು ಪತ್ತೆಯಾಗಿದ್ದಿತು.

○ ವಿದ್ಯಾ ಸಂಸ್ಥೆಗಳ ರಕ್ಷಣೆ ಸಂಬಂಧವಾಗಿ ವಿಶೇಷ ಅಧಿಕಾರಿಗಳಾಗಿದ್ದ ಶ್ರೀ ಕೆ. ಶೇಷಗಿರಿರಾಯರನ್ನು ಶ್ರೀಮನ್ ಮಹಾರಾಜರ ಅಸಿಸ್ಟೆಂಟ್ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ.

ವಾರ ಭವಿಷ್ಯ

ತಾ|| ೧-೬-೫೨ ರಿಂದ ೮-೬-೫೨ ರ ವರೆಗೆ

ಮೇಷ — ನಿಮ್ಮ ವ್ಯವಹಾರದಲ್ಲಿ ಸ್ತ್ರೀಯರ ಪ್ರವೇಶ ಆದರೆ ಅಂತ್ಯ ಜಯ ಆರೋಗ್ಯ ನೆಟ್ಟಗಿರದು ವಿಶ್ವಾಸಘಾತ ಆತಂಕ. ತಾ|| ೩, ೩ ಸ್ತ್ರೀಯರಿಂದ ಹಾನಿ, ಗುಪ್ತ ಚಿಂತೆ

ವೃಷಭ — ಗೊಂದಲದ ವಾರ ನಿಮ್ಮ ಏಳಿಗೆ ಕಂಡು ಇತರರಿಗೆ ಹೊಟ್ಟೆ ಉರಿ ಆರೋಗ್ಯ ನೆಟ್ಟಗೆ ಮಹತ್ವದ ಕಾರ್ಯ ಅರ್ಧಕ್ಕೆ ನಿಲ್ಲುವುದು ತಾ|| ೩, ೩ ಸತ್ಸಹವಾಸ ಮಹತ್ವದ ಪತ್ರ

ಮಿಥುನ — ಪವಿತ್ರ ಕ್ಷೇತ್ರ ಸಂದರ್ಶನ ಆರೋಗ್ಯ ನೆಟ್ಟಗೆ ಹಣದ ಲಾಭ ಸುಖ ಪ್ರವಾಸ. ತಾ|| ೩, ೩ ವಿಶೇಷ ಖರ್ಚು, ಗಡಿಬಿಡಿ

ಕರ್ಕ — ಚಿಂತಾಗ್ರಸ್ತತೆ ನೌಕರಿಯಲ್ಲಿ ಕ್ಲೇಶ ವ್ಯಾಪಾರಾದಿಗಳಲ್ಲಿ ಹಾನಿ. ವಿಶ್ವಾಸ ಘಾತ ಆರೋಗ್ಯ ನೆಟ್ಟಗಿರದು ತಾ|| ೪, ೫, ೬ ವಿಯೋಗ ಧನ ನಾಶ, ವಸ್ತ್ರ ಪೀಡೆ

ಸಿಂಹ — ಸಾಹಸದ ಅನೇಕ ಕಾರ್ಯ ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಅಧಿಕಾರ ಹೆಚ್ಚುವುದು ಧನ ಲಾಭ ತಾ|| ೨,೩ ನೂತನ ಪರಿಚಯ ಲಾಭ

ಕನ್ಯಾ — ಕುಟುಂಬದಲ್ಲಿ ಅನಿರೀಕ್ಷಿತ ವಿರಸ ಆರೋಗ್ಯ ಉತ್ತಮವಿಲ್ಲ ವ್ಯಾಪಾರಾದಿಗಳಲ್ಲಿ ಸ್ಥಿತಿ ಕೆಡುವುದು ಹಣದ ಸ್ಥಿತಿ ಕೆಡುವುದು ತಾ|| ೧, ೩ ಚಿಂತೆ, ಸ್ತ್ರೀಯರಿಂದ ಅಪಮಾನ

ತುಲಾ — ತೊಂದರೆ ಹೆಚ್ಚು ವ್ಯಾಪಾರಾದಿಗಳಲ್ಲಿ ತೊಂದರೆ ಹಣದ ಅಡಚಣೆ ತಾ|| ೨ ೩ ಧಕ್ಕೆಯ ವಾರ್ತೆ, ಪತ್ನಿಗೆ ಅಗ್ನಿ ಭಯ

ವೃಶ್ಚಿಕ — ವಿವೇಚನೆಯಿಲ್ಲದೆ ಹಣದ ವೆಚ್ಚ ಮುಗ್ಗಟ್ಟಿನ ಸ್ಥಿತಿ ವ್ಯಾಪಾರಾದಿ ಚಟುವಟಿಕೆ ಕುಗ್ಗುವುದು ಪ್ರವಾಸ ಬೇಡ ಆರೋಗ್ಯ ನೆಟ್ಟಗಿರದು ತಾ|| ೪, ೫, ೬ ಕಳುವು, ಕಲಹ

ಧನು — ಅಪೇಕ್ಷಿತ ಘಟನೆಗಳು ಆರೋಗ್ಯ ನೆಟ್ಟಗೆ ಹಣದ ಲಾಭ ವ್ಯಾಪಾರಾದಿಗಳಲ್ಲಿ ಪ್ರಶಂಸೆ ಸುಖ ಪ್ರವಾಸ ತಾ|| ೪, ೫ ಶುಭವಾರ್ತೆ, ಆನಂದ

ಮಕರ — ಆರೋಗ್ಯ ನೆಟ್ಟಗೆ ಮಾನಸಿಕ ಸ್ಥಿತಿ ವಿಷಾದಕರ ಹಣದ ವೆಚ್ಚ ವಿಪರೀತ ವ್ಯಾಪಾರಾದಿಗಳಲ್ಲಿ ವಿಶ್ವಾಸಘಾತ ಪ್ರವಾಸದಲ್ಲಿ ಅಪಘಾತ ಭಯ ತಾ|| ೩ ೬ ಉತ್ತಮ ಧನ ಚಿಂತಾ ನಿವಾರಣೆ

ಕುಂಭ — ಆರೋಗ್ಯ ನೆಟ್ಟಗೆ ಸಹವಾಸಿಗಳಿಂದ ವಿಶ್ವಾಸಘಾತ ವ್ಯಾಪಾರಾದಿಗಳಲ್ಲಿ ಪ್ರಗತಿ ಸುಖ ಪ್ರವಾಸ ತಾ|| ೪, ೫ ಮಹತ್ವದ ಭೇಟಿ ಧನ ಲಾಭ

ಮೀನ — ಆರೋಗ್ಯ ನೆಟ್ಟಗಿರದು [illegible] ಪ್ರವಾಸದಲ್ಲಿ [illegible] ವ್ಯಾಪಾರಾದಿಗಳಲ್ಲಿ [illegible] ಘಟನೆ [illegible]

RAJAKAMAL,
MYSORE
From 30-5-52 Daily 3 Shows
ZORRO'S FIGHTING LEGION
A Thrilling full Republic's Serial

SRI GANESH
TALKIES
[illegible] Daily [illegible]
TREASURE ISLAND
(Technicolour)
Starring Robert Newton and Bobby Driscoll

Edited Printed and Published by A. R. Nagarajan at Sadhvi Press D. Subbaiah Road, Mysore

ಕಾಶ್ಮೀರದ ಸಮಸ್ಯೆ ಬಗ್ಗೆ ಸಂಧಾನಕ್ಕೆ ಒಪ್ಪಂದ

ವಿಶ್ವ ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಮೊನ್ನೆ ಸಂಸ್ಥೆಯ ಪ್ರತಿನಿಧಿ ಡಾ|| ಗ್ರಹಾಂರವರೊಡನೆ ಭಾರತ ಮತ್ತು ಪಾಕಿಸ್ತಾನಗಳ ಪ್ರತಿನಿಧಿಗಳು ಭೇಟಿನಡೆಸಿ ಕಾಶ್ಮೀರದ ಪ್ರಶ್ನೆ ಸಂಬಂಧವಾಗಿ ಮಾತುಕತೆಗಳನ್ನು ನಡೆಸಲು ಒಪ್ಪಂದಕ್ಕೆ ಬಂದರೆಂದು ತಿಳಿದುಬಂದಿದೆ

ಕೋಟಗಿರಿ ಬಳಿ ಬೆಟ್ಟದಿಂದ ಬಿದ್ದು ಮರಣ

ಉದಕ ಮಂಡಲದ ಬಳಿ ಕೋಟಗಿರಿ ಹತ್ತಿರ ಎಲ್ಕ್ ಜಲಪಾತಕ್ಕೆ ವಿಹಾರಾರ್ಥವಾಗಿ ಕಳೆದ ಬುಧವಾರ ಹೋಗಿದ್ದ ಹೈದರಾಬಾದಿನ ಅಮೆರಿಕ ಪಾದ್ರಿ ರೆ|| ನಾರ್ಥಕ್ರಾಸ್‌ರವರ ಪತ್ನಿಯು ಬಂಡೆಯ ತುದಿಯಲ್ಲಿ ನಿಂತಿದ್ದ ತಮ್ಮ ಮಕ್ಕಳನ್ನು ರಕ್ಷಿಸಲು ಹೋಗಿ ಕಾಲು ಜಾರಿ ೩೦೦ ಅಡಿ ಕೆಳಗೆ ಬಿದ್ದು ಕೂಡಲೇ ಮೃತಪಟ್ಟರೆಂದು ವರದಿಯಾಗಿದೆ

ಶ್ರೀ ನಗರದಲ್ಲಿ ಭೂಕಂಪ

ಕಳೆದ ಬುಧವಾರ ಶ್ರೀನಗರದಲ್ಲಿ ಸಾಮಾನ್ಯ ಭೂಕಂಪವಾಯಿತು ದೀಪದ ಸತ್ತು ತಂತಿ ಕಂಭಗಳು ಅಲ್ಲಾಡಿದುವು ಜಮ್ಮುವಿನ ಹಲವು ನಗರಗಳಲ್ಲಿ ಭೂಕಂಪಗಳಾಗಿವೆ

೧೨ ಸಾವಿರ ದನಗಳ ಮರಣ

ಕಡಪಾ ಜಿಲ್ಲೆಯಲ್ಲಿ ಇತ್ತೀಚೆಗೆ ಬಂದ ಬರಗಾಲದ ಪರಿಣಾಮವಾಗಿ ೧೨ ಸಾವಿರ ಕಲ್ಲು ಮೇಲ್ಪಟ್ಟು ದನಗಳು ಸತ್ತುಹೋದುವೆಂದು ವರದಿಯಾಗಿದೆ

ಚಿನ್ನದ ಗಣಿ ದುರಂತದ ಬಗ್ಗೆ ತನಿಖೆ ಸಮಿತಿ

ಕೋಲಾರದ ಚಿನ್ನದ ಗಣಿಯಲ್ಲಿ ೩ ತಿಂಗಳಿಗೆ ಭೂಮಿಯೊಳಗೆ ಬಂಡೆ ಸಿಡಿದು ೨೦ ಜನ ಕಾರ್ಮಿಕರು ಸತ್ತು, ೯ ಜನರಿಗೆ ಗಾಯವಾದ ಸಂಬಂಧವಾಗಿ ತನಿಖೆ ನಡೆಸಲು ಭಾರತ ಸರ್ಕಾರದವರು ಸಮಿತಿಯೊಂದನ್ನು ರಚಿಸಲಿರುವರೆಂದು ತಿಳಿದುಬಂದಿದೆ.

೩ ವರ್ಷದ ಮಗುವಿನ ರುಂಡದ ಪತ್ತೆ

ವಿಜಯವಾಡದಲ್ಲಿ ಒಂದು ಕಡೆ ೩ ವರ್ಷದ ಗಂಡು ಮಗುವಿನ ಕತ್ತರಿಸಲ್ಪಟ್ಟ ತಲೆಯೊಂದು ಸಿಕ್ಕಿರುವುದೆಂದು ವರದಿಯಾಗಿದೆ ಯಾರೂ ಪೊಲೀಸರಿಗೆ ಈ ಬಗ್ಗೆ ದೂರುಕೊಟ್ಟಿಲ್ಲ. ಮಗು ಯಾರದೆಂಬುದು ಗೊತ್ತಾಗಿಲ್ಲ

ಮಹಾತ್ಮ ಗಾಂಧಿ ಪಾಠಶಾಲೆಯ

ಕುಂಬಾರಗರ ಶ್ರೀರಾಮ ಮಂದಿರದಲ್ಲಿ ನಡೆಯುತ್ತಿದ್ದ ಮೇಲ್ಕಂಡ ಪಾಠಶಾಲೆಯನ್ನು ಕಳೆದ ಗುರುವಾರದಿಂದ ಸಂತೇಪೇಟೆಯಲ್ಲಿರುವ ಸಾ|| ದೊಡ್ಡಯ್ಯನವರ ಛತ್ರದ ದಕ್ಷಿಣ ಭಾಗದ ಮಹಡಿಗೆ ವರ್ಗಾಯಿಸಲಾಗಿದೆ

ಆಕಾಶವಾಣಿ ವಾರದ ಕಾರ್ಯಕ್ರಮ

ಬೆಳಿಗ್ಗೆ ೬-೩೦ ಮುಸರಿ ಸುಬ್ರಹ್ಮಣ್ಯ ಅಯ್ಯರ್ ರಿಕಾರ್ಡು ಸಂಗೀತ ಮಧ್ಯಾಹ್ನ ೧-೩೦ ನಾಗಸ್ವರ ೩ ಚಿತ್ರ ಸಂಗೀತ ೭-೧೫ ಆರ್ಕೆಸ್ಟ್ರಾ, ಸಂಜೆ ೩೦ ಮತ್ತು ಟಿ ಪಿ ಎನ್ ಶೇಷಗಿರಿರಾವ್ ಪಿಟೀಲು ೬-೧೦ ಗಾನವಿಹಾರ ೭ ಕನ್ನಡ ಗೀತೆಗಳು ೮-೩೦ ಮತ್ತು ೯-೩೦ ಬಿ ಎಸ್ ಚಿನ್ನಮ್ಮ ಸಂಗೀತ ೯-೧೫ ಇಂಗ್ಲೀಷಿನಲ್ಲಿ ಭಾಷಣ

ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು.

ಮೈಸೂರ ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ್ ಸೊಸೈಟಿಯ ಅಫೀಸಿನಿಂದ ಸಮಸ್ತ ಜನಗಳಿಗೂ ತಿಳಿಸುವುದೇನೆಂದರೆ :—

ತುರುವೇಕೆರೆ ರಂಗಯ್ಯ ಪುರಾಣಿಕರೆಂಬ ನಮ್ಮ ಸೊಸೈಟಿಯ ಸದಸ್ಯರು ತಾ|| ೧೫-೬-೧೯೪೮ರಲ್ಲಿ ೪೨೦೦ ರೂಪಾಯಿಗಳನ್ನು ನಾಲ್ಕು ವರ್ಷಗಳ ಫಿಕ್ಸೆಡ್ ಡಿಪಾಜಿಟ್ಟನ್ನು ಇಟ್ಟು ತಾ|| ೯-೧೧-೧೯೪೯ರಲ್ಲಿ ಮೃತರಾಗಿರುತ್ತಾರೆ ಸದರಿ ರಂಗಯ್ಯ ಪುರಾಣಿಕರು ಬರೆದಿಟ್ಟಿರುವ ಉಯಿಲುಪತ್ರಗಳಲ್ಲಿ ಮೇಲ್ಕಂಡ ಫಿಕ್ಸೆಡ್ ಡಿಪಾಜಿಟ್ಟಿಗೆ ೧) ಟಿ ಆರ್ ಚನ್ನಿಗರಾಯ ಪುರಾಣಿಕರು ೨) ಟಿ ಆರ್ ಶ್ರೀಕಂಠಯ್ಯ ಇವರಿಬ್ಬರೇ ಹಕ್ಕುದಾರರೆಂದೂ ಈಗ ಸದರಿ ಟಿ ಆರ್ ಶ್ರೀಕಂಠಯ್ಯನವರು ತಮ್ಮ ಹಕ್ಕನ್ನು ನಿವೃತ್ತಿ ಮಾಡಿಕೊಂಡಿರುವುದಾಗಿಯೂ, ರಂಗಯ್ಯ ಪುರಾಣಿಕರ ೪೨೦೦ ರೂಪಾಯಿಗಳ ಡಿಪಾಜಿಟ್ಟಿಗೆ ಈಗ ಟಿ ಆರ್ ಚೆನ್ನಿಗರಾಯ ಪುರಾಣಿಕರೊಬ್ಬರೇ ಹಕ್ಕುದಾರರಾಗಿರುತ್ತಾರೆಂದೂ ಹೇಳುತ್ತಾರೆ ಈ ಫಿಕ್ಸೆಡ್ ಡಿಪಾಜಿಟ್ಟು ೧೫-೬-೧೯೫೨ಕ್ಕೆ ಮೆಚ್ಯೂರ್ ಆಗುತ್ತೆ ಮತ್ಯಾರಾದರೂ ಈ ಫಿಕ್ಸೆಡ್ ಡಿಪಾಜಿಟ್ಟಿಗೆ ಹಕ್ಕುದಾರರಿದ್ದಲ್ಲಿ ಒಂದು ತಿಂಗಳ ಒಳಗೆ ನಮ್ಮ ಸೊಸೈಟಿಯ ಅಫೀಸಿಗೆ ಒಂದು ಅರ್ಜಿ ತಕ್ಕನ್ನು ಸರಿಯಾದ ಕಾಗದ ಪತ್ರದೊಡನೆ ಸ್ಥಿರ ಪಡಿಸಿಕೊಳ್ಳತಕ್ಕದ್ದು ಇಲ್ಲದ ಪಕ್ಷದಲ್ಲಿ ಸೊಸೈಟಿಯವರು ರೂಲ್ಸು ಅನುಸರಿಸಿ ಹಕ್ಕುದಾರರೆಂದು ಕಂಡುಬರುವವರನ್ನು ವಾರಸುದಾರರೆಂದು ಗಮನಿಸಬೇಕಾಗುತ್ತೆ ತಿಳಿಯುವುದು

(ರುಜು) ಕೆ ವಿ. ವೆಂಕಟಸುಬ್ಬಯ್ಯ,
ಆನರರಿ ಸೆಕ್ರೆಟರಿ

ಹಿಂದೂಸ್ಥಾನ್ ಇನ್ವೆಸ್ಟ್‌ಮೆಂಟ್ಸ್ (ಲಿಮಿಟೆಡ್)

(ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾದುದು ಮೆಂಬರುಗಳ ಹೊಣೆಗೆ ಮಿತಿ ಇದೆ)

ಪ್ರಧಾನ ಕಛೇರಿ :— ಬೆಂಗಳೂರು

ಮೈಸೂರು ಶಾಖೆ :— ಮೈಸೂರು ಹಾಲ್ ಮಹಡಿ, ಸಯ್ಯಾಜಿರಾವ್ ರಸ್ತೆ,

— ಇತರ ಶಾಖೆಗಳು —

ಅರಸೀಕೆರೆ, ಅದೋಣಿ, ಹೈದ್ರಾಬಾದು, ತುಮಕೂರು, ತಿಪಟೂರು, ಮಂಗಳೂರು, ಮದ್ರಾಸು, ಕಡೂರು, ಕೆ ಜಿ ಎಫ್

ನಮ್ಮ ಎಲ್ಲಾ ಶಾಖೆಗಳಿಂದ ಕೆಲಸ ಆರಂಭ ಮಾಡಿದ ಕೇವಲ ಹನ್ನೊಂದು ತಿಂಗಳೊಳಗಾಗಿ ತಾ|| ೧೫-೫-೫೨ ರ ವರೆಗೆ ೨,೫೩,೭೦೦ ರೂಪಾಯಿಗಳಷ್ಟು ಬಹುಮಾನ ಕೊಡಲ್ಪಟ್ಟಿದೆಯೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ ಈ ಯೋಜನೆಯ ವಿಧಾನ ಸಹಕಾರ ತತ್ವವನ್ನು ಅವಲಂಬಿಸಿದೆ

ನಮ್ಮ ಚಿಟ್ ಫಂಡ್ ಮೂಲಕ ತಿಂಗಳು ಒಂದಕ್ಕೆ ಕೇವಲ ೩೦ ರಂತೆ ಕ್ರಮವಾದ ಸಂಪಾದನೆ ಆಗುತ್ತದೆ ಎಂದು ನಮ್ಮ ಸಾವಿರಾರು ಸದಸ್ಯರುಗಳು ಘೋಷಿಸಿದ್ದಾರೆ ಇದುವರೆಗೆ ನಮ್ಮ ಮೈಸೂರು ಶಾಖೆಯಲ್ಲಿ ನಡೆದ ನಮ್ಮ [illegible] ತರಗತಿ ಹರಾಜಿನಲ್ಲಿ [illegible] ರೂ ಗಳ [illegible] ತಿಂಗಳ ಕಂತಿನ [illegible] ರೂ ಬಂದವಾಳ [illegible] ರೂ ಗಳ ವರೆಗೂ, "A" ತರಗತಿಯ ೨೦೦ ರೂ ಗಳ [illegible] ತಿಂಗಳ ಕಂತಿನ [illegible] ರೂ ಬಂಡವಾಳದ ಹರಾಜಿನಲ್ಲಿ ೪ ರೂ ಗಳ ವರೆಗೂ ಮತ್ತು "D" ತರಗತಿಯ [illegible] ರೂ ಗಳ [illegible] ತಿಂಗಳ ಕಂತಿನ [illegible] ರೂ ಗಳ ಬಂಡವಾಳದ ಹರಾಜಿನಲ್ಲಿ [illegible] ರೂ ಗಳ ವರೆಗೂ ಡಿವಿಡೆಂಡನ್ನು ಕೊಡಲಾಗಿದೆ

ತಾ|| [illegible] ರಲ್ಲಿ "B" ತರಗತಿಯ ೬೦೦ ರೂ ಬಂಡವಾಳದ [illegible] ರೂ ಗಳ [illegible] ತಿಂಗಳ ಕಂತಿನ ಹರಾಜನ್ನು ಮತ್ತು "C" ತರಗತಿಯ [illegible] ರೂ ಬಂಡವಾಳದ [illegible] ರೂ ಗಳ [illegible] ತಿಂಗಳ ಕಂತಿನ ಹರಾಜನ್ನು ತಾ|| [illegible] ರಲ್ಲಿಯೂ ನಡೆಸಲಾಗುತ್ತೆ ಮೇಲ್ಕಂಡ ತರಗತಿಯಲ್ಲಿ ಕೇವಲ ಒಂದೆರಡು ಸ್ಥಾನಗಳು ಮಾತ್ರ ಖಾಲಿ ಇರುತ್ತೆ ಸ್ವಪ್ರಯತ್ನಶೀಲರು ಸದಸ್ಯರಾಗಿ ಕಂಪೆನಿಗೆ ಪ್ರೋತ್ಸಾಹ ಕೊಡುವುದರ ಮೂಲಕ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ

ತಾ|| [illegible] ರಲ್ಲಿ "L" ನೇ ತರಗತಿಯ [illegible] ರೂ ಬಂಡವಾಳದ [illegible] ರೂ ಗಳ [illegible] ಕಂತಿನ ಹರಾಜು ನಡೆಸಲಾಗುತ್ತೆ ಹೆಚ್ಚಿನ ವಿವರಗಳನ್ನು ಅಫೀಸಿನಲ್ಲಿ ತಿಳಿದುಕೊಳ್ಳಬಹುದು

ವಿ. ಕೆ. ನಟರಾಜನ್,
ಬ್ರಾಂಚ್ ಮ್ಯಾನೇಜರ್

ರಿಜಿಸ್ಟರ್ಡ್ ನಂ. 792 || ಶಂಕರ ಸ್ಮಾರಕಂ || ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೩-೬-೫೩ [ಸಂಚಿಕೆ ೩೬೧

ನೇಪಾಳದ ಕೆಳ ದರ್ಜೆ - ನೌಕರರ ಮುಷ್ಕರ -

ದಾಸಪ್ಪನವರು ಅಧಿಕಾರ ವಹಿಸಿಕೊಂಡರು

ಬೆಂಗಳೂರು ೨

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ನೂತನ ಅಧ್ಯಕ್ಷರಾದ ಶ್ರೀ ಎಚ್ ಸಿ. ದಾಸಪ್ಪನವರಿಗೆ ಅಧಿಕಾರವನ್ನು ವಹಿಸಿಕೊಟ್ಟರು ಆ ಸಂದರ್ಭದಲ್ಲಿ ಶ್ರೀ ಹನುಮಂತಯ್ಯನವರು ಭಾಷಣ ಮಾಡಿ ಪ್ರಜಾ ಪ್ರಭುತ್ವದ ಪಾಲನೆಯಲ್ಲಿ ಯಾರ್‍ಯಾರು ನಿರತರಾಗಿರುವರೊ ಅಂತಹವರೆಲ್ಲರನ್ನೂ ಕಾಂಗ್ರೆಸ್ಸಿಗೆ ಸೇರಿಸಿಕೊಂಡು ಕಮ್ಯೂನಿಸ್ಟರ ಕಾರ್‍ಯಾಚರಣೆಯನ್ನು ತಡೆಗಟ್ಟಬೇಕೆಂದು ಹೇಳಿದರು. ಕಮ್ಯೂನಿಸ್ಟರ ಕೇಂದ್ರ ಕಛೇರಿಯು ಈಗ ಉತ್ತರ ಭಾರತದಿಂದ ದಕ್ಷಿಣಕ್ಕೆ ವರ್ಗಾಯಿಸಲ್ಪಟ್ಟಿರುವುದರಿಂದ ಈ ಬಗ್ಗೆ ಬಹಳ ಎಚ್ಚರಿಕೆಯಿಂದಿದ್ದು ಮುಂದಿನ ರಾಜಕೀಯವನ್ನು ರೂಪಿಸಬೇಕೆಂದೂ, ಈ ಬಗ್ಗೆ ನೂತನ ಕಾಂಗ್ರೆಸ್ ಅಧ್ಯಕ್ಷ ಶ್ರೀ ದಾಸಪ್ಪನವರ ಮೇಲೆ ಗುರುತರವಾದ ಜವಾಬ್ದಾರಿಯಿರುವುದೆಂದೂ ಅವರು ನುಡಿದರು ಅನಂತರ ಶ್ರೀ ಎಚ್ ಸಿ ದಾಸಪ್ಪನವರು ಮಾತನಾಡಿ ತಮ್ಮನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ ಬಗ್ಗೆ ಕೃತಜ್ಞತೆಯನ್ನು ಸಲ್ಲಿಸಿ, ಎಲ್ಲರ ಸಹಕಾರವನ್ನು ಕೋರಿದರು

ಬೊಂಬಾಯಿ ಸಮಾಜವಾದಿ ಸತ್ಯಾಗ್ರಹಿಗಳ ಬಂಧನ

ಆಹಾರ ಧಾನ್ಯಗಳ ಬೆಲೆಯನ್ನು ಏರಿಸಿರುವುದನ್ನು ವಿರೋಧಿಸಿ ಬೊಂಬಾಯಿನ ಸಮಾಜವಾದಿ ಪಕ್ಷದವರು ಅಲ್ಲಿನ ಸರ್ಕಾರಿ ಗೋಡೌನುಗಳ ಬಳಿ ಸತ್ಯಾಗ್ರಹ ಹೂಡಲು ನಿರ್ಧರಿಸಿದ್ದ ಕಾರ್ಯಕ್ರಮವು ನೆನ್ನೆ ಆರಂಭವಾಗಿ, ೧೧ ಮಂದಿ ಸತ್ಯಾಗ್ರಹಿಗಳ ತಂಡವನು ಹೊರಟು, ಪ್ರತಿಬಂಧಕಾಜ್ಞೆಯು ಜಾರಿಯಲ್ಲಿದ್ದ ಸರ್ಕಾರಿ ಗೋಡೌನಿನ ಆವರಣಕ್ಕೆ ಪ್ರವೇಶಿಸಲು ಪ್ರಯತ್ನಿಸಿ ಬಂಧಿಸಲ್ಪಟ್ಟರು

ಭೂ ಸುಧಾರಣೆ ಬಗ್ಗೆ ನೆಹರೂರವರ ಕಾತುರತೆ

ಭಾರತದಲ್ಲಿ ಭೂ ಸುಧಾರಣಾ ಯೋಜನೆಗಳನ್ನು ಬೇಗನೆ ಪೂರೈಸಿಗೊಳಿಸುವ ಬಗ್ಗೆ ಪಂಡಿತ ನೆಹರೂರವರು ಕಾತುರರಾಗಿರುವರೆಂದೂ, ಈ ಸಂಬಂಧವಾಗಿ ಅಖಿಲ ಭಾರತ ಕಾಂಗ್ರೆಸ್ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಗಳ ನಡುವೆ ಸಹಾಯಕ ಸಮಿತಿಯನ್ನು ಅವರು ರಚಿಸಲಿರುವರೆಂದೂ ಹೇಳಲಾಗಿದೆ.

ಇದೇ ೨೬ರಿಂದ ಮಲಾನ್ ವಿರುದ್ಧ ಚಳುವಳಿ

ಆಫ್ರಿಕದ ನ್ಯಾಷನಲ್ ಕಾಂಗ್ರೆಸ್ ಮತ್ತು ದಕ್ಷಿಣ ಆಫ್ರಿಕದ ಭಾರತೀಯ ಕಾಂಗ್ರೆಸ್ ಸಮಿತಿಗಳ ಜಂಟಿ ಸಭೆಯು ಮೊನ್ನೆ ಪೋರ್ಟ್ ಎಲಿಜಬೆತ್ತಿನಲ್ಲಿ ಸೇರಿ ದಕ್ಷಿಣ ಆಫ್ರಿಕದಲ್ಲಿ ಜಾರಿಯಲ್ಲಿದ್ದ ನ್ಯಾಯ ಬಾಹಿರವಾದ ಶಾಸನಗಳನ್ನು ಸಾಮೂಹಿಕವಾಗಿ ಉಲ್ಲಂಘಿಸುವ ಬಗ್ಗೆ ಇದೇ ೨೬ ನೇ ತಾರೀಖಿನಿಂದ ರಾಷ್ಟ್ರೀಯ ಚಳುವಳಿಯನ್ನು ಹೂಡುವುದಾಗಿ ಘೋಷಿಸಿ ಅಂದಿನಿಂದ ಮಲಾನ್ ಸರ್ಕಾರದ ವಿರುದ್ಧ ಮೆರವಣಿಗೆ ಹೊರಡಲಿರುವರೆಂದು ಗೊತ್ತಾಗಿದೆ.

ಮಹಿಳಾಸೇವಾದಳ ಶಿಬಿರದ ಮುಕ್ತಾಯ ಸಮಾರಂಭ

ಮೈಸೂರು ೨

ಭಾರತ ಮಹಿಳಾ ಸೇವಾದಳದ ಮೈಸೂರು ಶಾಖೆಯ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಶಿಬಿರದ ಮುಕ್ತಾಯ ಸಮಾರಂಭವು ನೆನ್ನೆ ಸಂಜೆ ಟೌನಹಾಲಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಮಂತ್ರಿಗಳಾದ ಶ್ರೀ ಟಿ.ಸಿದ್ಧಲಿಂಗಯ್ಯ, ಶ್ರೀ ಎ. ಜಿ ರಾಮಚಂದ್ರರಾವ್, ಶ್ರೀ ಟಿ.ಚನ್ನಯ್ಯ, ಮತ್ತು ಶ್ರೀ ಎಂ. ಹೆಚ್ ಷರೀಫರೂ ಆಗಮಿಸಿದ್ದರು

ಪ್ರಾರ್ಥನೆಯಾದನಂತರ ಸೇವಾದಳದ ಸ್ವಯಂಸೇವಕರಿಂದ ಲೆಜಿಂ ಮತ್ತು ಕವಾಯತು ಪ್ರದರ್ಶನಗಳಾದುವು ಆನಂತರ ಶಿಬಿರಾಧಿಪತಿ ಶ್ರೀಮತಿ ಟಿ ಸುನಂದಮ್ಮನವರು ಸ್ವಾಗತ ಭಾಷಣ ಮಾಡಿ ಶಿಬಿರದ ವರದಿಯನ್ನು ಓದಿದರು ಶಿಬಿರದಲ್ಲಿ ೬೦ ಜನ ಸ್ವಯಂಸೇವಕಿಯರಿಗೆ ೨೫ ದಿನಗಳ ಕಾಲ ಶಾರೀರಿಕ, ಬೌದ್ಧಿಕ ಮತ್ತು ವ್ಯವಸ್ಥಾಪನೆ ಎಂಬ ಮೂರು ಕ್ರಮಗಳಲ್ಲಿ ಶಿಕ್ಷಣ ಕೊಡಲಾಯಿತೆಂದೂ, ಇದಕ್ಕಾಗಿ ಸುಮಾರು ೧೭೫೦ ರೂ ಗಳು ಖರ್ಚಾದುವೆಂದೂ ಅವರು ತಿಳಿಸಿದರು ಶ್ರೀ ರುದ್ರಮಾಲೆ ಚನ್ನಬಸವಯ್ಯನವರು ಸೇವಾದಳದ ವ್ಯವಸ್ಥೆಯನ್ನೂ ಮತ್ತು ಅದರ ಪ್ರಾಮುಖ್ಯತೆಯನ್ನೂ ವಿವರಿಸಿದರು

ಶ್ರೀಮತಿ ಉಮಾಬಾಯಿ ಕುಂದಾಪುರ ಅವರು ಮಹಾತ್ಮಾ ಕಾಂಗ್ರೆಸ್ಸಿನ ಚಳುವಳಿಯ ಯಶಸ್ಸಿಗೆ ಸೇವಾದಳದ ಕಾರ್ಯವೇ ಮುಖ್ಯಕಾರಣವೆಂದೂ ಸರ್ಕಾರದವರು ಹಿಂದಿ ಶಿಕ್ಷಣಕ್ಕೆ ಕೊಡುವಷ್ಟು ಪ್ರಾಮುಖ್ಯತೆಯನ್ನು ಸೇವಾದಳದ ಶಿಕ್ಷಣಕ್ಕೂ ಕೊಡಬೇಕೆಂದೂ ನುಡಿದರು

ಮುಖ್ಯ ಮಂತ್ರಿಗಳಾದ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ ಸೇವಾದಳದ ಚಟುವಟಿಕೆಗೆ ಸರ್ಕಾರದ ಬೆಂಬಲವು ಇದ್ದೇ ಇರುವುದೆಂದು ತಿಳಿಸಿದರು

ರಾಜ್ಯಸಭೆ
ಡೆಪ್ಯೂಟಿ ಛೇರ್‌ಮನ್

ಬೆಂಗಳೂರು ೨, ರಾಜ್ಯ ವಿಧಾನ ಪರಿಷತ್ತಿನ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ನೇಪಾಳದ ಕೆಳ ದರ್ಜೆ ನೌಕರರ ಮುಷ್ಕರ

ನೇಪಾಳದಲ್ಲಿ ಅಲ್ಪ ವೇತನ ಪಡೆಯುತ್ತಿರುವ ಸರ್ಕಾರಿ ನೌಕರರು ತಮ್ಮ ಕನಿಷ್ಟ ಸಂಬಳವನ್ನು ೮೦ ರೂ ಗೊತ್ತು ಪಡಿಸಿ, ರಜದ ವ್ಯವಸ್ಥೆಯನ್ನು ಉತ್ತಮಪಡಿಸಬೇಕೆಂದೂ ಮೊದಲಾದ ಬೇಡಿಕೆಗಳನ್ನು ಇಟ್ಟು ಕೆಲವು ದಿನಗಳಿಂದ ಮುಷ್ಕರ ಹೂಡಿದ್ದರು ಮೇಲ್ಕಂಡ ನೌಕರರ ಸಂಘವನ್ನು ಸರ್ಕಾರದವರು ಕಾನೂನು ಬಾಹಿರವಾದುದೆಂದು ಘೋಷಿಸಿ ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಿದ್ದರು ಅದನ್ನು ಪ್ರತಿಭಟಿಸಿ ನೌಕರರು ನೆನ್ನೆ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸಲಾಗಿ ಪೋಲೀಸರು ಅವರ ಮೇಲೆ ಅಶ್ರುವಾಯುವನ್ನು ಪ್ರಯೋಗಿಸಿದರು ಈ ಗಲಭೆಯಲ್ಲಿ ಇಬ್ಬರು ಪೋಲೀಸರಿಗೂ ಮತ್ತು ಆರು ಮಂದಿ ಪ್ರದರ್ಶಕಕಾರರಿಗೂ ಗಾಯವಾಯಿತೆಂದು ಹೇಳಲಾಗಿದೆ ಅಂಚೆ ಮತ್ತು ತಂತಿ, ವೈರ್‌ಲೆಸ್ ಸ್ಟೇಷನ್ನುಗಳಿಗೆ ತೀವ್ರ ನಷ್ಟ ಸಂಭವಿಸಿರುವುದಾಗಿ ಗೊತ್ತಾಗಿದೆ

ಕಮ್ಯೂನಿಸ್ಟರಿಂದ ವಿಷ ಕ್ರಿಮಿ ಪ್ರಯೋಗವೇ?

ಕೊರಿಯಾ ರಣಾಂಗಣದಲ್ಲಿ ಕಮ್ಯೂನಿಸ್ಟರು ವಿಷ ಕ್ರಿಮಿಗಳನ್ನು ಪ್ರಯೋಗಿಸಿ ಶತ್ರುಗಳನ್ನು ನಾಶ ಮಾಡಲು ಪ್ರಯತ್ನಿಸುತ್ತಿರುವುದಾಗಿಯೂ, ಇಬ್ಬರು ಬ್ರಿಟಿಷ್ ಸಿಪಾಯಿಗಳಿಗೆ ಇದನ್ನು ಪ್ರಯೋಗಿಸಿರುವುದು ಪತ್ತೆಯಾಗಿರುವುದೆಂದೂ ನ್ಯೂಯಾರ್ಕಿನ ಒಂದು ಪತ್ರಿಕೆಯಲ್ಲಿ ರಿಯರ್ ಅಡ್ಮಿರಲ್ ಎಲ್ಲಿಸ್ ಜಕಾರಿಯಾಸ್ ಎಂಬುವರು ಬರೆದಿರುವರು

೧೦೦ ಜನ ಪ್ರಯಾಣಿಕರಿದ್ದ ದೋಣಿಯ ಮುಳುಗಡೆ

೧೦೦ ಜನ ಪ್ರಯಾಣಿಕರಿದ್ದ ದೋಣಿಯೊಂದು ಕಳೆದ ೨೬ ನೇ ತಾ॥ ಛೀನಾ ನದಿಯಲ್ಲಿ ಮುಳುಗಿತೆಂದೂ ೧೦ ಮೃತ ಶರೀರಗಳು ಪತ್ತೆಯಾಗಿರುವುವೆಂದೂ ಹೇಳಲಾಗಿದೆ ದೋಣಿಯ ಅಂಬಿಗನು ಈಜಿ ದಡವನ್ನು ಸೇರಿದನೆಂದು ಹೇಳಲಾಗಿದೆ.

ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದವರು

ಮೈಸೂರು .

ಕಳೆದ ಮಾರ್ಚ್ - ಏಪ್ರಿಲ್ ತಿಂಗಳಲ್ಲಿ ನಡೆದ ಕೆಳಗೆ ಕಂಡ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದವರುಗಳ ಹೆಸರುಗಳನ್ನು ಪ್ರಕಟಿಸಲಾಗಿದೆ:—

ಇಂಟರ್‌ಮೀಡಿಯೇಟ್ ಆರ್ಟ್ಸ್:- ೧ ಪಿ ಎ ಚಂದ್ರಶೇಖರಯ್ಯ (೬೦೩೮) ೨ ಜಿ ಪುಟ್ಟಸ್ವಾಮಿ (೭೦೬೯), ೩ ಬಿ. ಎಲ್ ಇಂದಿರ (೬೭೦೫).

ಇಂಟರ್ ಸೈನ್ಸ್:- ೧ ಎಸ್ ವಿಶ್ವೇಶ್ವರ ವ ಜೋಶಿ (೪೧೧೫), ೨ ಹೆಚ್. ಆರ್ ರಾಮಾನುಜಂ (೨೫೫೦), ೩ ಆರ್ ಬಾಲಕೃಷ್ಣ (೧೮೩೬)

ಇಂಟರ್‌ಮೀಡಿಯೇಟ್ ಕಾಮರ್ಸ್ ೧) ಹೆಚ್. ಇ. ಆರಂಸ್ಟ್ರಾಂಗ್, (೧೨೬) ೨ ಜಿ. ನಾಗರಾಜರಾವ್ (೨೯೦), ೩ ಕೆ ಶ್ರೀಪತಿರಾವ್ (೩೭೦).

ಎಂ. ಪಿ. ಸಿ. ಸಿ.ಗೆ ಸಂಜೀವರಾಜ ಅರಸರ ರಾಜೀನಾಮೆ

ಮೈಸೂರು ಪ್ರದೇಶ ಕಾಂಗ್ರೆಸ್ಸಿಗೆ ಮೈಸೂರು ತಾಲ್ಲೂಕಿನಿಂದ ಚುನಾಯಿತರಾಗಿರುವ ಶ್ರೀ ಎಂ ಎಲ್ ಸಂಜೀವರಾಜ ಅರಸಿನವರು ರಾಜೀನಾಮೆ ಸಲ್ಲಿಸಿರುವರೆಂದು ತಿಳಿದುಬಂದಿದೆ

ಅಮೆರಿಕದ ವಾರ್ತಾ ಸಂಸ್ಥೆಗಳಿಗೆ ಕೊರಿಯದ ಎಚ್ಚರಿಕೆ

ದಕ್ಷಿಣ ಕೊರಿಯದಲ್ಲಿರುವ ಅಮೆರಿಕದ ವಾರ್ತಾ ಸಂಸ್ಥೆಗಳವರು ಅಲ್ಲಿನ ಒಳ ಆಡಳಿತದಲ್ಲಿ ಪ್ರವೇಶಿಸುತ್ತಿರುವರೆಂದೂ, ಇದನ್ನು ನಿಲ್ಲಿಸದಿದ್ದರೆ ಅಂತಹವರನ್ನು ಕೊರಿಯದಿಂದ ಹೊರದೂಡಬೇಕಾಗಿ ಬರುವುದೆಂದೂ ದಕ್ಷಿಣ ಕೊರಿಯಾ ಸರ್ಕಾರದವರು ಎಚ್ಚರಿಕೆ ಇತ್ತಿರುವರು

ಪೌರಸಭಾ ಕಮಿಷನರು ಕೆಸ ಗುಡಿಸಿದರು

ಬಳ್ಳಾರಿಯ ಜಾಡಮಾಲಿಗಳು ಹೆಚ್ಚು ಸಂಬಳದ ಬೇಡಿಕೆಯನ್ನಿಟ್ಟು ನೆನ್ನೆ ಮುಷ್ಕರವನ್ನು ಕೈಗೊಂಡ ಸಂಬಂಧದಲ್ಲಿ ಅಲ್ಲಿನ ಪೌರಸಭಾ ಕಮಿಷನರರೂ ಮತ್ತು ನೌಕರರೂ ಸ್ವತಃ ನಗರ ನಿರ್ಮಲೀಕರಣ ಕಾರ್ಯದಲ್ಲಿ ತೊಡಗಿ ನಾಗರಿಕರಿಗೆ ಮೇಲ್ಪಂಕ್ತಿಯನ್ನು ಹಾಕಿ ಜಾಡಮಾಲಿಗಳಿಗೆ ಪಾಠ ಕಲಿಸಿದರೆಂದು ವರದಿಯಾಗಿದೆ.

ಕಳೆದುಹೋಗಿದೆ

ಮೊನ್ನೆ ಶನಿವಾರ ಸಾಯಂಕಾಲ ೬ ಮತ್ತು ೬ ೧೫ ಘಂಟೆಯಲ್ಲಿ ಒಂದು ಗೋಲ್ಡ್ ಪ್ಲೇಟೆಡ್ ಕೈ ಗಡಿಯಾರವು (ಫೇವರ್‌ಲೂಬಾ, ಸ್ಕ್ವಾಯರ್, ರೆಕ್ಟಾಂಗುಲರ್ ಷೇಪ್) ಕಪ್ಪು ಬಣ್ಣದ ಬೆಲ್ಟ್ ಸಮೇತ ಮೈಸೂರು ಪ್ರಭಾ ಟಾಕೀಸಿನ ಮುಂದಿನ ಫುಟ್ ಪಾತಿನಲ್ಲಿ ಮಾರ್ಕೆಟ ಕಡೆಯಿಂದ ಕಳೆದು ಬಿದ್ದು ಹೋಗಿರುತ್ತೆ. ಸಿಕ್ಕಿದ ಮಹನೀಯರು ದಯಮಾಡಿ ಈ ಮಾಲು ಅರಸು ರಸ್ತೆಯಲ್ಲಿರುವ "ಸಾಧ್ವಿ" ಆಫೀಸಿಗೆ ತಲುಪಿಸಿ ಸೂಕ್ತ ಬಹುಮಾನ ಪಡೆಯಬೇಕಾಗಿ ಕೋರಲಾಗಿದೆ.

ನೇಪಾಳದ ಸಚಿವರೊಬ್ಬರ ಮೇಲೆ ಶಿಸ್ತಿನ ಕ್ರಮ

ನೇಪಾಳದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿದ್ದ ಶ್ರೀ ಚಂದ್ರಲಾಲ್ ಮಿಶ್ರರವರು ದಂಗೆಕೋರರೊಡನೆ ಸೇರಿದ್ದ ಕಾರಣಕ್ಕಾಗಿ ಅವರಿಗೆ ಕಾಂಗ್ರೆಸ್ಸಿನಿಂದ ಬಹಿಷ್ಕಾರ ಹಾಕಲಾಗಿದ್ದು. ಅಖಿಲ ಪ್ರಧಾನಿ ಶ್ರೀ ಎಂ. ಪಿ. ಕೊಯಿರಾಲಾರವರು ಒಂದು ಆಜ್ಞೆಯನ್ನು ಹೊರಡಿಸಿ ಶ್ರೀ ಮಿಶ್ರರವರು ಮಂತ್ರಿಮಂಡಲದ ಸಭೆಗಳಲ್ಲಿ ಭಾಗವಹಿಸಲಾಗದೆಂದು ತಿಳಿಸಿರುವರು.

ಬೇಸಿಗೆ ಶಿಕ್ಷಣ ಶಿಬಿರ

ಮೈಸೂರು ತಾಲ್ಲೂಕು ಕಲ್ಲೂರು ನಾಗನಹಳ್ಳಿ ಗ್ರಾಮದಲ್ಲಿ ವಿದ್ಯಾರ್ಥಿಗಳ ಬೇಸಿಗೆ ಶಿಕ್ಷಣವು ಕಳೆದ ತಿಂಗಳು ೭ ನೇ ತಾ|| ಯಿಂದ ನಡೆಯುತ್ತಿದೆ. ರಾಜಧಾನಿಯ ಕ್ರೈಸ್ತಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿರುತ್ತಾರೆ

ಸಮಾಜವಾದಿಗಳ ಅನ್ನ ಸತ್ಯಾಗ್ರಹ

ಸಮಾಜವಾದಿ ಪಕ್ಷದವರು ಮದ್ರಾಸಿನಲ್ಲಿ ಕೈಗೊಳ್ಳಲಿರುವ ಅನ್ನ ಸತ್ಯಾಗ್ರಹದ ಬಗ್ಗೆ ಪ್ರಚಾರ ಕಾರ್ಯವು ಶುರುವಾಗಿ ಮತ್ತು ಸತ್ಯಾಗ್ರಹದಲ್ಲಿ ಭಾಗವಹಿಸಲು ಸ್ವಯಂಸೇವಕರನ್ನು ಕೂಡಿಸುವ ಕಾರ್ಯವು ಈಗಾಗಲೇ ಆರಂಭವಾಗಿದೆ. ಸ್ವಯಂಸೇವಕರಾಗಿ ಸೇರಲಿಚ್ಛಿಸುವವರು ಅಶೋಕಾ ರಸ್ತೆಯಲ್ಲಿರುವ ಪಕ್ಷದ ಕಛೇರಿಯಲ್ಲಿ ತಮ್ಮ ಹೆಸರುಗಳನ್ನು ಕೊಡಬಹುದೆಂದು ಕೋರಲಾಗಿದೆ. ಮೂರು ದಿನಗಳ ಕಾಲ ಪ್ರಚಾರ ನಡೆದ ತರುವಾಯ ಸಾರ್ವಜನಿಕ ಸಭೆಯು ಏರ್ಪಾಡಾಗಿದೆ

ಬಸ್ಸು ರಾಷ್ಟ್ರೀಕರಣಕ್ಕಾಗಿ ೩೦ ಲಕ್ಷ ರೂ. ವೆಚ್ಚ

ಮೈಸೂರು ಸಂಸ್ಥಾನದಲ್ಲಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವ ಕಾರ್ಯಕ್ಕಾಗಿ ಸರ್ಕಾರದವರು ೩೦ ಲಕ್ಷ ರೂಗಳನ್ನು ವೆಚ್ಚ ಮಾಡಿರುವರೆಂದು ಗೃಹ ಮಂತ್ರಿ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ

D. BANUMIAH'S EDUCATIONAL INSTITUTION,
MYSORE

Applications are invited for the post of a Clerk in our Institution Candidates who have passed Senior Typewriting and Senior Accountancy need only apply to the Honorary Secretary on or before 6th June 1952

Edited, Printed and Published by A R Nagarajan at Sadhvi Press, D Subbaiah Road, Mysore.

ಫ್ರೆಂಚ್ ಕಮ್ಯೂನಿಸ್ಟ್ ಕಛೇರಿಗೆ ಪೋಲೀಸರ ಮುತ್ತಿಗೆ

ಫ್ರೆಂಚ್ ಕಮ್ಯೂನಿಸ್ಟರ ಪ್ರಧಾನ ಕಛೇರಿಗೆ ೫೦೦ ಜನ ಶಿರಸ್ತ್ರಾಣ ಧರಿಸಿದ ಪೋಲೀಸರು ನೆನ್ನೆ ಮುತ್ತಿಗೆ ಹಾಕಿದ್ದರು. ಒಳಗಡೆ, ಇದ್ದ ಕಾಗದ ಪತ್ರಗಳನ್ನು ಕಮ್ಯೂನಿಸ್ಟರು ಸುಟ್ಟುಹಾಕಿದ್ದರೆಂದು ಹೇಳಲಾಗಿದೆ

ಮಹಿಳೆಯರಿಗಾಗಿ ಗಮಕ ತರಗತಿಗಳು

ರಾಜಧಾನಿ ದಿವಾನರ ಅಗ್ರಹಾರದಲ್ಲಿರುವ ಮಹಿಳಾ ಸದನದಲ್ಲಿ ಈ ತಿಂಗಳ ೯ ನೇ ತಾ|| ಯಿಂದ ೩ ತಿಂಗಳ ಕಾಲ ಗಮಕ ತರಗತಿಗಳನ್ನು ಮಹಿಳೆಯರಿಗಾಗಿ ಏರ್ಪಡಿಸಲಾಗಿದೆ ಶ್ರೀ ಕೃಷ್ಣಗಿರಿ ಕೃಷ್ಣರಾಯರು ಶಿಕ್ಷಣವೀಯುವರು. ಇದು ಮುಗಿದ ನಂತರ ಪರೀಕ್ಷೆಯನ್ನು ನಡೆಸಿ ಉತ್ತೀರ್ಣರಾದವರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ಕೊಡಲಾಗುವುದು ಮಿಡಲ್ ಸ್ಕೂಲ್ ದರ್ಜೆ ಶಿಕ್ಷಣ ಪಡೆದು ೧೪ ವರ್ಷಕ್ಕೆ ಹೆಚ್ಚಿನವರಾಗಿರುವವರು ಸೇರಬೇಕು ಸ್ವಲ್ಪ ಮಟ್ಟಿನ ರಾಗ ಜ್ಞಾನವು ಇದ್ದರೆ ಸಾಕು ಸೇರಲಿಚ್ಛಿಸುವವರು ೩ ರೂ ಶುಲ್ಕದೊಡನೆ ಇದೇ ೭ನೇ ತಾ|| ನೊಳಗೆ ಸದನದ ಕಾರ್ಯದರ್ಶಿಗಳಿಗೆ ಲಿಖಿತ ಮೂಲಕ ಬರೆದುಕೊಳ್ಳಬೇಕೆಂದು ಸಮಿತಿಯ ಕಾರ್ಯದರ್ಶಿನಿಯವರು ತಿಳಿಸಿರುತ್ತಾರೆ

ಪುಟ್ಟುಸ್ವಾಮಿಗಳವರ ನಿಧನ

ಕುಂಭಕೋಣದ ಕೋಟಿ ಕನ್ಯಾದಾನಂ ಅಗ್ನಿ ಹೋತ್ರಂ ಶ್ರೀನಿವಾಸ ತಾತಾಚಾರ್ಯ ಸ್ವಾಮಿಗಳವರು ತಮ್ಮ ೮೫ ನೇ ವಯಸ್ಸಿನಲ್ಲಿ ಕಳೆದ ೩೦ ನೇ ತಾ|| ಇಹಲೋಕವನ್ನು ಬಿಟ್ಟರು ಅವರನ್ನು ಪುಟ್ಟುಸ್ವಾಮಿಗಳೆಂದೂ ಕರೆಯಲಾಗುತ್ತಿತ್ತು

ಕೂಡಲೇ ಮಾರಾಟಕ್ಕಿದೆ

1 ಸ್ವಿಫ್ಟ್ [illegible] 50 ರಿಂದ 60 [illegible] ಎಲೆಕ್ಟ್ರಿಕ್ ವಾಟರ್ [illegible] 120 [illegible]

[illegible] 1939 [illegible]

ಅಬಿ [illegible]

[illegible] ಮೈಸೂರು

NOTIFICATION
The National Institute of Engineering, Mysore

Printed application forms and prospectus containing full instructions for admission to the Civil Engineering L C E Diploma and B E Degree courses can be had from the Principal on payment of one rupee by money order

Minimum Qualifications For Admission To:—

1 Diploma Course:- A pass in S S.L C (E.C & P.S) with Physics, Chemistry and Mathematics as optionals or an equivalent examination

2. B E. Degree Course. A pass in Intermediate Examination with Physics, Chemistry and Mathematics as optionals or an equivalent examination

Applications found incomplete in any respect will not be considered.

Last date for the application forms to reach the office is 18th June 1952

List of provisionally selected candidates will be published on the Notice Board of the Institute by 25th June 1952 and only these candidates should interview the Principal before 1st July 1952 and should come prepared to join forthwith, if selected, during the interview, on payment of the prescribed fees in full, failing which they forfeit their seats.

The Principal reserves the right of refusing admission to students provisionally selected but found unfit for the courses in any respect during interview.

20th May 1952

S. RAMASWAMY,
Principal.

ಜಪಾನು ಬಿಡುವಂತೆ ರಷ್ಯಾ ನಿಯೋಗಕ್ಕೆ ಸೂಚನೆ

ಕಳೆದ ಏಪ್ರಿಲ್ ೨೮ ರಿಂದ ಮಿತ್ರರ ಆಕ್ರಮಣವು ಮುಕ್ತಾಯವಾಗುವುದರಿಂದ ಇದುವರೆಗೆ ಅಲ್ಲಿರುವ ರಷ್ಯಾ ರಾಜತಾಂತ್ರಿಕ ನಿಯೋಗದವರು ಆ ರಾಷ್ಟ್ರವನ್ನು ಬಿಡುವಂತೆ ಜಪಾನ್ ಸರ್ಕಾರದವರು ಸದರಿ ನಿಯೋಗದವರಿಗೆ ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಬಿ. ಎಸ್. ಸುಬ್ರಹ್ಮಣ್ಯ ವೀಣಾ. ಮಧ್ಯಾಹ್ನ ೧-೩೦ ಕೊಲು. ೧-೫೦ ಆರ್. ಚಂದ್ರಶೇಖರಯ್ಯರ್ ಕರ್ನಾಟಕ ಸಂಗೀತ. ಸಂಜೆ ೫-೩೦ ಸಂಗೀತ. ೬-೧೦ ಗಾನ ವಿಹಾರ. ೭ ಹಿಂದುಸ್ತಾನಿ ಸಂಗೀತ. ೮ ಬಿ. ಎಸ್. ಸುಬ್ರಹ್ಮಣ್ಯ ವೀಣೆ. ೮-೩೦ ವೃಂದ ಸಂಗೀತ ೯-೧೫ ಆರ್. ಕೆ. ನಾರಾಯಣರಿಂದ ಇಂಗ್ಲಿಷ್ ಭಾಷಣ ೯-೩೦ ಗಾನಾನ್ಯತ

Dip-in-Com (D. Com)
IN ONE YEAR.
THE BRIGHT COLLEGE
OF COMMERCE,
OFFERS SPECIAL COACHING
JOIN FORTHWITH

ಪ್ರಭಾ * ಕಲ್ಯಾಣ ಜನ ಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ

ಅಮರ ಭೂಪಾಲಿ

ಕಥಾ ಸಾರಾಂಶ

[illegible]

ಹೊಸ ಹೊಸ ರೀತಿ ಸೀರೆಗಳನ್ನು ಮದುವೆಗಳಿಗಾಗಿ ತರಿಸಿದ್ದೇವೆ. ಬೆಲೆ ಸುಲಭ

M.V. ಬೋಜಯ್ಯ, [illegible] ಮೈಸೂರು.

ರಿಜಿಸ್ಟರ್ಡ್ ನಂ ೧೯೭ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ-೩೦] ಮಂಗಳವಾರ ೩-೬-೫೨ [ಸಂಚಿಕೆ ೨೬.೨

ಪಾರ್ಲಿಮೆಂಟ್ ಭವನಕ್ಕೆ ಬೆಂಕಿ ಹಚ್ಚುವ ಪ್ರಯತ್ನ

ನಿಮ್ನ ವರ್ಗದವರ ಏಳಿಗೆಗೆ ೬ ಲಕ್ಷ ರೂ. ಸಹಾಯ

ಬೆಂಗಳೂರು ೩

೧೯೫೧-೫೨ ನೇ ಸಾಲಿನಲ್ಲಿ ಸಂಸ್ಥಾನದ ನಿಮ್ನ ವರ್ಗದವರ ಏಳಿಗೆಗಾಗಿ ಸರ್ಕಾರದವರು ಆರು ಲಕ್ಷ ರೂ ಗಳನ್ನು ಮಂಜೂರು ಮಾಡಿರುವರೆಂದು ತಿಳಿದುಬಂದಿದೆ. ಗ್ರಾಮಾಭಿವೃದ್ಧಿಗಾಗಿ ೪,೪೫,೧೫೬ ರೂ.ಗಳನ್ನು ಒದಗಿಸುವರೆಂದೂ ಹೇಳಲಾಗಿದೆ

ಮಳೆಯಿಂದ ೧೪೦೦ ಜನ ಮಾಜಿ ಸೈನಿಕರಿಗೆ ತೊಂದರೆ

ಬೆಂಗಳೂರಿನಲ್ಲಿ ಮೊನ್ನೆ ರಾತ್ರಿ ಆದ ಭಾರಿ ಮಳೆಯ ಪರಿಣಾಮವಾಗಿ ಅಲ್ಲಿನ ಸಿವಿಲ್ ಪ್ರದೇಶದಲ್ಲಿ ವಾಸವಾಗಿದ್ದ ೧೪೦೦ ಜನ ಮಾಜಿ ಸೈನಿಕರ ಗುಡಿಸಲುಗಳು ಕುಸಿದು ಬಿದ್ದು ಅವರೆಲ್ಲರೂ ನಿರಾಶ್ರಿತರಾಗಿರುವರೆಂದು ವರದಿಯಾಗಿದೆ ಈ ಪೈಕಿ ೪೦೦ ಸಂಸಾರದವರಿಗೆ ಅವರುಗಳ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಕೊಡಲಾಗಿದೆಯೆಂದೂ ಇತರರು ಛತ್ರಗಳಲ್ಲಿ ಆಶ್ರಯ ಹೊಂದಿರುವರೆಂದೂ ಹೇಳಲಾಗಿದೆ

ಹೈ ಕೋರ್ಟಿನಲ್ಲಿ ಬಾಲರತ್ನಂರ ಮೊಕದ್ದಮೆ ಅಪೀಲು

ದೊಡ್ಡಬಳ್ಳಾಪುರದ ವಕೀಲರಾದ ಶ್ರೀ ಪಿ. ರಾಮಕೃಷ್ಣಯ್ಯನವರ ಕೊಲೆ ಪ್ರಯತ್ನದ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿರುವ ಅವರ ಮಗ ವಿ. ಬಾಲರತ್ನಂರವರ ಪರವಾಗಿ ನೆನ್ನೆ ಹೈಕೋರ್ಟಿನಲ್ಲಿ ಅಪೀಲು ದಾಖಲಾಯಿತು ಅವರನ್ನು ಜಾಮೀನಿನ ಮೇಲೆ ಬಿಡಲೂ ಸಹ ಅರ್ಜಿ ಸಲ್ಲಿಸಲಾಗಿದೆ

ಸ್ಕೂಲ್ ಫೈನಲ್ ಫಲಿತಾಂಶ ೭ನೇ ತಾ॥ ಪ್ರಕಟಣೆ

ಎಸ್ ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶವು ಇದೇ ತಿಂಗಳು ೭ ನೇ ತಾ॥ ಪ್ರಕಟವಾಗಲಿದೆಯೆಂದು ತಿಳಿದು ಬಂದಿದೆ

ಅಶ್ಲೀಲ ಪುಸ್ತಕವನ್ನು ಪ್ರಕಟಿಸಿದುದಕ್ಕೆ ಸಜಾ

ಮದರಾಸಿನ ಎ. ಡಿ. ಸಭಾಪತಿ ಮತ್ತು ಪಿ. ಪಾಂಡುರಂಗಂ ಎಂಬುವರು "ಕಾಮ ಲೀಲೆ" ಎಂಬ ಅಶ್ಲೀಲಕರವಾದ ಸಚಿತ್ರ ಪುಸ್ತಕವನ್ನು ಮುದ್ರಿಸಿ ಪ್ರಕಟಿಸಿದುದಕ್ಕಾಗಿ ಅಲ್ಲಿನ ಚೀಫ್ ಪ್ರೆಸಿಡನ್ಸಿ ಮ್ಯಾಜಿಸ್ಟ್ರೇಟರು ಆಪಾದಿತರಿಬ್ಬರಿಗೂ ತಲಾ ಮೂರು ತಿಂಗಳು ಕಠಿಣ ಸಜಾ ಮತ್ತು ಒಂದು ಸಾವಿರ ರೂ. ಜುಲ್ಮಾನೆ, ಜುಲ್ಮಾನೆ ಕೊಡದಿದ್ದರೆ ಮತ್ತೆ ಮೂರು ವಾರ ಕಠಿಣ ಸಜಾ ಶಿಕ್ಷೆ ವಿಧಿಸಿರುವರು

ಗೃಹ ಸಹಕಾರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಗೃಹ ಸಹಕಾರ ಸಂಘದ ಅಧಿಕಾರ ವರ್ಗದ ಚುನಾವಣೆಯು ನೆನ್ನೆ ನಡೆದು ಶ್ರೀ ಎಂ ಎಸ್ ರಾಮಚಂದ್ರ ಜೋಯಿಸ್‌ರವರು ಅಧ್ಯಕ್ಷರಾಗಿಯೂ, ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಶೇಷಗಿರಿರಾಯರು ಕಾರ್ಯದರ್ಶಿಯವರಾಗಿಯೂ, ಶ್ರೀ ಎಂ ಆರ್ ನಾರಾಯಣಸ್ವಾಮಿಯವರು ವಕೀಲರಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಪಾರ್ಲಿಮೆಂಟ್ ಭವನಕ್ಕೆ ಬೆಂಕಿ ಹಚ್ಚಲು ಪ್ರಯತ್ನ

ಪೂರ್ವ ಬಂಗಾಳದಿಂದ ಕಲ್ಕತ್ತೆಕ್ಕೆ ಆಗಮಿಸಿದ್ದ ಹಜ್ ಡಿ ಸಹಾ ಎಂಬ ಒಬ್ಬ ಯುವಕನಿಗೆ ಆ ನಗರದ ಸುಂಕದ ಇಲಾಖೆಯವರು ಕೊಟ್ಟ ಕಿರುಕುಳದ ಬಗ್ಗೆ ಸೇಡು ತೀರಿಸಿಕೊಳ್ಳಲು ಕಳೆದ ಶನಿವಾರ ಅವನು ಡೆಲ್ಲಿ ಪಾರ್ಲಿಮೆಂಟ್ ಭವನಕ್ಕೆ ಎರಡು ಸಾರಿ ಬೆಂಕಿ ಹಚ್ಚಿಸಲು ಪ್ರಯತ್ನಿಸಿ ಈಗ ಪೋಲೀಸರಿಂದ ಬಂಧಿಸಲ್ಪಟ್ಟಿರುತ್ತಾನೆಂದು ವರದಿಯಾಗಿದೆ

ಖೈದಿಗಳ ಶಿಬಿರದೊಳಗೆ ಟ್ಯಾಂಕುಗಳ ಪ್ರವೇಶ

ದಕ್ಷಿಣ ಕೊರಿಯದ ಕೋಜೆ ದ್ವೀಪದಲ್ಲಿರುವ ಕಮ್ಯೂನಿಸ್ಟ್ ಖೈದಿಗಳ ಶಿಬಿರದೊಳಗೆ ಅಮೆರಿಕಾ ಟ್ಯಾಂಕುಗಳು ನೆನ್ನೆ ನುಗ್ಗಿದುವು ಅವುಗಳ ಹಿಂದೆ ಸೈನಿಕರು ಬಂದೂಕಗಳನ್ನು ಹಿಡಿದು ಪ್ರವೇಶಿಸಿದರು ಖೈದಿಗಳು ಶಿಬಿರದಲ್ಲಿ ದಂಗೆ ಎದ್ದು, ಕಮ್ಯಾಂಡರನ್ನು ಹಿಡಿದಿದ್ದು ಆ ನಂತರ ಬಿಟ್ಟುಕೊಟ್ಟದ್ದರು ಅವರು ವಿಧೇಯರಾಗಿ ವರ್ತಿಸುವಂತೆ ಮಾಡಲು ಎಲ್ಲ ಶಕ್ತಿಗಳನ್ನೂ ಪನಿಯೋಗಿಸಲಾಗುವುದೆಂದು ವಿಶ್ವಸಂಸ್ಥೆ ಸೈನ್ಯಾಧಿಕಾರಿಯು ತಿಳಿಸಿರುತ್ತಾರೆ

೩ ರೂಪಾಯಿಗೆ ೧ ಬಟ್ಟಲು ಕಾಫಿ

ದಕ್ಷಿಣ ಕೊರಿಯದ ಪುಸಾನ್ ನಗರದಲ್ಲಿ ಒಂದು ಬಟ್ಟಲು ಕಾಫಿಗೆ ಅಲ್ಲಿನ ೩ ಸಾವಿರ ಯೆನ್, ಅಥವಾ ಭಾರತದ ೩ ರೂಪಾಯಿಯಷ್ಟು ಬೆಲೆಯಾಗಿದೆ.

ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬೆಂಗಳೂರಿಂದ ಬಂದಿರುವ ಕೀರ್ತನ ಶಿರೋಮಣಿ ಪಿ ರಾಮುಸ್ವಾಮಿ ನಾಯ್ಡುರವರಿಂದ ಈ ಸಂಜೆ ೭ ಘಂಟೆಗೆ ನಲತಂಗಿ, ನಾಳೆ ರುಕ್ಮಾಂಗದ, ನಾಳಿದ್ದು ದಾನಶೂರ ಕರ್ಣ ಎಂಬ ಹರಿಕಥೆಯೂ, ಈ ಬಾಗ್ದಾಯಿತ್ತು ಎರಡು ತಿಂಗಳು ಪ್ರತಿ ದಿನವೂ ಕಥೆಗಳು ನಡೆಯುವಂತೆಯೂ ಏರ್ಪಾಟಾಗಿದೆ.

ಅಂತರ ರಾಷ್ಟ್ರೀಯ ವ್ಯವಹಾರದ ಡಿಪ್ಲೊಮಾ

ಮೈಸೂರು ೩

ಅಂತರ ರಾಷ್ಟ್ರೀಯ ಸಂಬಂಧ(ರಾಜತಾಂತ್ರಿಕ)ವಾದ ವ್ಯವಹಾರಗಳನ್ನು ಅಭ್ಯಾಸ ಮಾಡುವ ಬಗ್ಗೆ ಇಲ್ಲಿನ ವಿಶ್ವ ವಿದ್ಯಾಲಯದಲ್ಲಿ ಡಿಪ್ಲೊಮಾ ಒಂದು ತರಗತಿಯನ್ನು ತೆರೆಯುವ ಆಲೋಚನೆಯಿರುತ್ತದೆಂದೂ, ಅಮೆರಿಕದ ವಿಸ್ಕಾನ್‌ಸಿನ್ ವಿಶ್ವ ವಿದ್ಯಾಲಯದ ಪ್ರೊ॥ ಹಾರ್ಟ್‌ರವರು ಬರುವ ಜುಲೈ ತಿಂಗಳು ಆಖೈರಿಗೆ ಇಲ್ಲಿಗೆ ಬಂದು ಈ ವಿಷಯವಾಗಿ ಭಾಷಣಗಳನ್ನು ಮಾಡಲಿರುವರೆಂದೂ ಹೇಳಲಾಗಿದೆ ಅಂತರ ರಾಷ್ಟ್ರೀಯ ನ್ಯಾಯ ಶಾಸ್ತ್ರ, ರಾಜ್ಯ ಶಾಸ್ತ್ರ ಮತ್ತು ಅರ್ಥ ಶಾಸ್ತ್ರಗಳ ಸಾಮಾನ್ಯ ತತ್ವಗಳನ್ನು ಮೇಲ್ಮಂಡ ತರಗತಿಯಲ್ಲಿ ಅಭ್ಯಾಸ ಮಾಡುವ ಅವಕಾಶ ಕೊಡಲಾಗುವುದಲ್ಲದೆ, ವಿದ್ಯಾರ್ಥಿಗಳಿಗೆ ಒಂದೊಂದೇ ಪ್ರದೇಶದ ವಿಷಯಗಳನ್ನು ಹೃದಯಂಗಮವಾಗಿ ಪಾಠ ಕಲಿಯಲು ಏರ್ಪಾಡಿಸಲಾಗುವುದೆಂದು ಹೇಳಲಾಗಿದೆ ಈ ಯೋಜನೆಯನ್ನು ಅಮೆರಿಕದ ವಾರ್ತಾ ಸಂಸ್ಥೆಯವರು ತಯಾರಿಸಿರುವರು

ಇಂಜನಿಯರಿಂಗ್ ಕಾಲೇಜಿಗೆ ದಾತಾರರವರ ವೇತನ

ರಾಜಧಾನಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನವರು ನಡೆಸುತ್ತಿರುವ ಕಾಲೇಜಿನ ೧, ೨ ಮತ್ತು ೩ ನೇ ತರಗತಿಗಳಲ್ಲಿ ಚೆನ್ನಾಗಿ ಓದುವ ವಿದ್ಯಾರ್ಥಿಯೊಬ್ಬನಿಗೆ ಮಾಹೆಯಾನಾ ೪೦ ರೂ. ಗಳ ಒಂದೊಂದು ವೇತನವನ್ನು ಬೊಂಬಾಯಿಯ ಟಾಟಾ ಸಂಸ್ಥೆಯ ಧರ್ಮದರ್ಶಿಗಳು ಕೊಡಲೊಪ್ಪಿರುವರೆಂದು ವರದಿಯಾಗಿದೆ

ಬಸ್ಸು ನಾಲೆಗೆ ಬಿದ್ದು ೩೩ ಜನರ ಮರಣ

ಬೆಲ್ಜಿಯಂ ಫುಟ್ ಬಾಲ್ ಕ್ಲಬ್ಬಿನ ಹಲವು ಮಂದಿ ಪ್ರೋತ್ಸಾಹಕರು ಮೊನ್ನೆ ದಿನ ಒಂದು ಬಸ್ಸಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿದ್ದಾಗ ಹೇಕರ್ಕೆನ ಬಳಿ ಬಸ್ಸು ಒಂದು ಕಾಲುವೆಗೆ ಬಿದ್ದು ೩೩ ಮಂದಿ ಮೃತಪಟ್ಟರೆಂದು ವರದಿಯಾಗಿದೆ ಇತರ ೧೫ ಮಂದಿ ಪ್ರಯಾಣಿಕರು ರಕ್ಷಿಸಲ್ಪಟ್ಟರು.

ಅಮೆರಿಕಾ ಅಧ್ಯಕ್ಷರ ಆಜ್ಞೆ ಅಕ್ರಮವೆಂದು ತೀರ್ಪು

ಅಮೆರಿಕದಲ್ಲಿ ಉಕ್ಕಿನ ಕಾರ್ಮಿಕರ ಮುಷ್ಕರವು ನಡೆಯದಂತೆ ಮಾಡುವ ಸಲುವಾಗಿ ಕಳೆದ ಏಪ್ರಿಲ್ ೮ ರಲ್ಲಿ ಅಧ್ಯಕ್ಷ ಟ್ರೂಮನ್ನರು ಅಲ್ಲಿನ ಉಕ್ಕಿನ ಕೈಗಾರಿಕೆಯನ್ನು ರಾಷ್ಟ್ರೀಕರಿಸಿ ಆಜ್ಞೆ ಮಾಡಿರುವುದನ್ನು ಅಲ್ಲಿನ ಸುಪ್ರೀಂ ಕೋರ್ಟು ಅಕ್ರಮವೆಂದು ಸಾರಿರುತ್ತದೆ ಇದರ ಮೇರೆ ಕೈಗಾರಿಕೆಯನ್ನು ಖಾಸಗೀ ಮಾಲೀಕರಿಗೆ ಹಿಂತಿರುಗಿ ಕೊಡುವಂತೆ ಅಧ್ಯಕ್ಷರು ಸೂಚಿಸಿರುತ್ತಾರೆ. ಸುಪ್ರೀಂ ಕೋರ್ಟಿನ ತೀರ್ಪು ಆದ ನಂತರ ಅಲ್ಲಿನ ೬.೫ ಲಕ್ಷ ಉಕ್ಕಿನ ಕಾರ್ಮಿಕರ ಮುಖಂಡರಾದ ಮುರ್ರೆಯವರು ರಾಷ್ಟ್ರಾದ್ಯಂತವೂ ಮುಷ್ಕರ ಹೂಡಬೇಕೆಂದು ಘೋಷಿಸಿರುತ್ತಾರೆ.

ನೇಪಾಳದ ನೌಕರರಿಗೆ ಹೊಸ ಸಂಬಳದ ಸ್ಕೇಲು

ನೇಪಾಳ ಸರ್ಕಾರದ ಅಲ್ಪ ವೇತನ ಪಡೆಯುತ್ತಿರುವ ನೌಕರರು ಮೊನ್ನೆ ನಡೆಸಿದ ಮುಷ್ಕರದ ಸಂಬಂಧವಾಗಿ ಅಲ್ಲಿನ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ನೌಕರರು ಸರ್ಕಾರದ ವಿರುದ್ಧವಾಗಿ ದಂಗೆಯೇಳಲು ಹೆಚ್ಚು ಸಂಬಳದ ಬೇಡಿಕೆಯ ನೆಪವನ್ನು ಇಟ್ಟು ಮುಷ್ಕರ ಹೂಡಿರುವರೆಂದು ತಿಳಿಸಿರುವರು ಮೊನ್ನೆ ಸಂಜೆ ೫ ಘಂಟೆಯೊಳಗೆ ಕೆಲಸಕ್ಕೆ ಬಾರದಿದ್ದ ಎಲ್ಲ ನೌಕರರನ್ನೂ ವಜಾ ಮಾಡಲಾಗುವುದೆಂದೂ ಕೆಲಸದ ಮೇಲೆ ಹಿಂದಿರುಗುವವರನ್ನು ತಡೆಗಟ್ಟುವರೆ ಅಂತಹವರ ಮೇಲೆ ಬಲ ಪ್ರಯೋಗ ಮಾಡಲಾಗುವುದೆಂದೂ ಎಚ್ಚರಿಸಲಾಗಿತ್ತು ಅಲ್ಲದೆ ಹೊಸ ಸಂಬಳದ ಸ್ಕೇಲು ಮತ್ತು ಬತ್ತಿ ಇವುಗಳನ್ನು ಕುರಿತು ಇನ್ನು ಎರಡು ವಾರಗಳಲ್ಲಿ ಒಂದು ಪ್ರಕಟಣೆ ಹೊರಬೀಳಲಿದೆಯೆಂದೂ ತಿಳಿಸಲಾಗಿದೆ.

ಎನ್. ಜಿ. ಒ. ಗಳ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ

ಮದರಾಸಿನಲ್ಲಿರುವ ಎಲ್ಲ ಸರ್ಕಾರಿ ಮತ್ತು ಏಡೆಡ್ ಶಾಲೆಗಳಲ್ಲಿ ನಾನ್ ಗೆಜೆಟೆಡ್, ಸರ್ಕಾರಿ ನೌಕರರ ಮಕ್ಕಳಿಗೆ ಎಲಿಮೆಂಟರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಉಚಿತ ಶಿಕ್ಷಣ ಕೊಡಬೇಕೆಂದೂ, ಹೈಸ್ಕೂಲುಗಳಲ್ಲಿ ಅರ್ಧ ಶುಲ್ಕವನ್ನು ತೆಗೆದುಕೊಳ್ಳಬೇಕೆಂದೂ ಅಲ್ಲಿನ ಸರ್ಕಾರವು ಆಜ್ಞೆಮಾಡಿರುತ್ತದೆ ಇದರಿಂದ ಏಡೆಡ್ ಶಾಲೆಗಳಿಗೆ ಉಂಟಾಗುವ ನಷ್ಟವನ್ನು ಪೂರ್ತಿಯಾಗಿಯೂ ಮತ್ತು ಲೋಕಲ್ ಬೋರ್ಡುಗಳಿಗೆ ಉಂಟಾಗುವ ನಷ್ಟವನ್ನು ಅರ್ಧದಷ್ಟು ಸರ್ಕಾರವು ವಹಿಸುವುದಾಗಿ ತಿಳಿಸಲಾಗಿದೆ ಮದರಾಸಿನ ಎಲ್ಲ ಏಡೆಡ್ ಎಲಿಮೆಂಟರಿ ಮತ್ತು ಸೆಕೆಂಡರಿ ಶಾಲಾ ಉಪಾಧ್ಯಾಯರ ಮಕ್ಕಳಿಗೂ ಈ ರಿಯಾಯಿತಿಯನ್ನು ಕೊಡಲಾಗುವುದು

○ ಆಸ್ಟ್ರೇಲಿಯದ ಮೊರೊನಿಯ ಎಂಬಲ್ಲಿ ಲೆವೆಲ್ ಕ್ರಾಸಿನಲ್ಲಿ ಬರುತ್ತಿದ್ದ ಬಸ್ಸಿಗೆ ರೈಲೊಂದು ಡಿಕ್ಕಿ ಹೊಡೆದ ಪರಿಣಾಮವಾಗಿ ಬಸ್ಸು ಎರಡು ಭಾಗವಾಯಿತಲ್ಲದೆ ಒಳಗಿದ್ದ ಬಾಲಕರ ಪೈಕಿ ೮ ಜನರು ಮಡಿದು ೧೭ ಮಂದಿಗೆ ತೀವ್ರ ಗಾಯಗಳಾಗಿರುವುವಂತೆ

ಮಾರ್ಷಲ್ ಸ್ಟಾಲಿನ್ನರಿಗೆ ಅನಾರೋಗ್ಯ

ಮಾರ್ಷಲ್ ಸ್ಟಾಲಿನ್ನರ ಆರೋಗ್ಯವು ಕೆಡುತ್ತಿರುವುದೆಂದೂ ಅವರಿಗೆ ವಿಶ್ರಾಂತಿ ಅಗತ್ಯವೆಂದು ವೈದ್ಯರು ಸಲಹೆ ಮಾಡಿರುವರೆಂದೂ ತಿಳಿದು ಬಂದಿದೆ

ದೇವರಾಜಾ ಮಾರ್ಕೆಟ್ಟಿನಲ್ಲಿ ಅಸಭ್ಯತೆ ?

ರಾಜಧಾನಿಯ ದೇವರಾಜಾ ಮಾರ್ಕೆಟ್ಟಿನೊಳಗೆ ಕೆಲವು ಹೆಂಗಸರು ಹಣ್ಣುಗಳ ಅಂಗಡಿಗಳನ್ನು ಇಟ್ಟುಕೊಂಡಿರುವರು ವ್ಯಾಪಾರಸ್ಥಳವಾದ್ದರಿಂದ ದೊಡ್ಡವರು ಚಿಕ್ಕವರೇ ಆದಿಯಾಗಿ ಎಲ್ಲರೂ ಬೇಕಾದ ವಸ್ತುಗಳನ್ನು ಕೊಳಲು ಅಲ್ಲಿಗೆ ಹೋಗುವುದು ವಾಡಿಕೆ ವ್ಯಾಪಾರ ಮಾಡುವಾಗ ಧಾರಣೆ ಮುಂತಾದುವುಗಳ ಬಗ್ಗೆ ಜಿಜ್ಞಾಸ ಬರುವುದು ಸ್ವಾಭಾವಿಕ ಮತ್ತು ನ್ಯಾಯವಾದದ್ದು ವ್ಯಾಪಾರಮಾಡುವಾಗ ಮರ್ಯಾದೆಯ ಎಲ್ಲೆಯನ್ನು ಮೀರದಿರಬೇಕಾದುದು ಧರ್ಮ ಪೌರಸಭೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಮಾರ್ಕೆಟ್ಟಿಗೆ ಗೌರವವನ್ನು ತರದಿರುವ ಕೆಲ ಪ್ರಸಂಗವೊಂದು ಕಳೆದ [illegible] ತಾ॥ ಆಗ ಒಬ್ಬ ಹೆಂಗಸ ನಡೆದುಕೊಂಡ ರೀತಿಯನ್ನು ನೋಡಿ ಮಾರ್ಕೆಟ್ಟಿಗೆ ಬಂದವರೆಲ್ಲರೂ [illegible]ಯಿಂದ ತಲೆ ತಗ್ಗಿಸಿಕೊಂಡು ಹೋಗಬೇಕಾದ ಪರಿಸ್ಥಿತಿ ಒದಗಿತು ಪೌರಸಭಾ ಅಧ್ಯಕ್ಷರು [illegible] ಇತರ ಅಧಿಕಾರಿಗಳು ಮತ್ತು ಸದಸ್ಯರು ಇದನ್ನು ಗಮನಿಸಿ ಇಂತಹ ಪ್ರಸಂಗಗಳಾಗದಂತೆ ಸೂಕ್ತ ವ್ಯವಸ್ಥೆ ಮಾಡಿ ತಪ್ಪುಮಾಡುವವರನ್ನು [illegible] ರಿಸುವರೆಂದು ನಂಬಲಾಗಿದೆಯೆಂದು ನಾಕೆ [illegible] ಒಬ್ಬರು ತಿಳಿಸಿರುತ್ತಾರೆ

ಪಬ್ಲಿಕ್ ಲೈಬ್ರರಿ

[illegible] ಯಲ್ಲಿರುವ ಪಬ್ಲಿಕ್ ಲೈಬ್ರರಿಗೆ ಕಳೆದ ತಿಂಗಳಲ್ಲಿ [illegible] ಮಂದಿ ವಾಚಕರು ಭೇಟಿಯಿತ್ತಿದ್ದರೆಂದೂ, [illegible] ಪುಸ್ತಕಗಳನ್ನು ಓದಲು ಕೊಡಲಾಗಿತ್ತೆಂದೂ [illegible] ತಿಳಿಸಿರುತ್ತಾರೆ

TO OUR ESTEEMED CUSTOMERS

We have shifted our firm to the MUNICIPAL STALL No 1 (next to the GRADUATES CO OPERATIVE SOCIETY Ltd,) HUNDRED FEET ROAD MYSORE

We request our customers to continue to [illegible] the same patronage [illegible] period of [illegible] been extending to us all these years

H VENKATARAMIAH & SONS,
Vidyanidhi Book Depot
Hundred Feet Road Mysore

ಜೆಕೊಸ್ಲೊವೇಕಿಯದ ಉಪ ಪ್ರಧಾನಿಯ ವಜಾ

ಜೆಕೊಸ್ಲೊವೇಕಿಯದ ಉಪ ಪ್ರಧಾನಿ ಡಾ॥ ಜಾಕ್ ಸೇವಿಕ್‌ರವರನ್ನು ಅಲ್ಲಿನ ಅಧ್ಯಕ್ಷ ಕ್ಲೆಮೆಂಟ್ ಗೋಟ್‌ವಾಲ್ಡ್‌ರವರು ವಜಾ ಮಾಡಿರುತ್ತಾರೆಂದು ವರದಿಯಾಗಿದೆ

ರೇಡಿಯೋ ಲೈಸೆನ್ಸ್ ಪಡೆಯಲು ಹೆಚ್ಚಿನ ಅವಕಾಶ

ರಹದಾರಿಯಿಲ್ಲದೆ ರೇಡಿಯೋವನ್ನು ಪಡೆದಿರುವವರಿಗೆ ಅಂಚೆ ಇಲಾಖಾ ಡೈರೆಕ್ಟರ್ ಜನರಲ್‌ರವರು ಎಚ್ಚರಿಕೆಯೊಂದನ್ನಿತ್ತು ಅಂತಹವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದೂ [illegible] ಹೆಚ್ಚಿನ [illegible] ಕೊಡದೆ ಲೈಸೆನ್ಸ್ ಪಡೆಯಲು ಜುಲೈ [illegible] ತಾರೀಕಿನವರೆಗೆ ಅವಧಿಯನ್ನು ಹೆಚ್ಚಿಸಲಾಗಿದೆಯೆಂದೂ ತಿಳಿಸಿರುವರು

ವಿವಾಹ ಮಹೋತ್ಸವ

ಮೈಸೂರಿನ ಸುಪ್ರಸಿದ್ಧ ಸಾಹಿತಿಗಳೂ ರ್‍ಯಾಷನಲಿಸ್ಟ್ ಪತ್ರಿಕಾ ಸಂಪಾದಕರೂ ಆದ ಶ್ರೀ ಜಿ ಆರ್ ಜೋಸ್ಯರ್ ರವರು ತಮ್ಮ ಮಗಳು ಸೌ॥ ರಾಜ [illegible] ಎಂ [illegible] ವರಿಗೆ ಕೊಟ್ಟು [illegible] ವಧೂವರರ [illegible] ಬೆಳಿಗ್ಗೆ [illegible] ವರೆಗೆ ವಿವಿಧ ಉತ್ಸವ [illegible] ಮಹೋತ್ಸವವೂ [illegible] ಗೃಹಪ್ರವೇಶೋತ್ಸವಗಳೂ [illegible] ಯ ವೃತ್ತ

CITY TUTORIAL COLLEGE
Near V V Mohalla Mysore
ADMISSIONS RECEIVED
B Sc English & P C M
INTER English P C M & C B Z
I COM Parts I II & III &
INTER GEOGRAPHY
Classes Next Week

ಈರುಳ್ಳಿ ರವಾನೆ ಬಗ್ಗೆ ನಿಷೇಧ ರದ್ದು

ಭಾರತ ಸರ್ಕಾರದವರ ಒಂದು ವಿಶೇಷ ಆಜ್ಞೆಯನ್ನು ಹೊರಡಿಸಿ ದೇಶದೊಳಗೆ ಈರುಳ್ಳಿಯನ್ನು [illegible]ದಿಂದ ಸ್ಥಳಕ್ಕೆ ರವಾನಿಸುವ ಮತ್ತು ಅದರ ಬೆಲೆಯ ಬಗ್ಗೆ ನಿರ್ಬಂಧಗಳನ್ನು ಪೂರ್ಣವಾಗಿ ರದ್ದುಗೊಳಿಸಿರುವರು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ [illegible] ಸಂಗೀತ ಎಂ ಸಿ ಕೇಶವ ಮೂರ್ತಿ ಮಧ್ಯಾಹ್ನ [illegible] ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ಸಂಜೆ [illegible] ಸಂಗೀತ ಎಂ ಸಿ ಕೇಶವ ಮೂರ್ತಿ [illegible] ಬಾಲ ಜಗತ್ ಮಕ್ಕಳ ಕಾರ್ಯಕ್ರಮ [illegible] ಗೀತೆಗಳು ಸರೋಜಾ ದೇವಿ [illegible] ಪಶ್ಚಿಮಾತ್ಯ ರಿಕಾರ್ಡು ಸಂಗೀತ [illegible] ಪಿಟೀಲು ಟಿ ಚೌಡಯ್ಯ [illegible] ಕತೆ [illegible] ನಿಮ್ಮ ಮೆಚ್ಚಿನ ಗೀತೆಗಳು

ಬೆಂಗಳೂರಿನಲ್ಲಿ

ಡಾ ಎಂ ಸಿ ಮೋದಿಯವರು

ಸುಪ್ರಸಿದ್ಧ ನೇತ್ರ ಚಿಕಿತ್ಸಕರಾದ ಡಾ॥ ಎಂ ಸಿ ಮೋದಿಯವರು [illegible] ಬೆಂಗಳೂರಿಗೆ [illegible] ನೇತ್ರ ಪರೀಕ್ಷೆ ಮಾಡಿ ಚಿಕಿತ್ಸೆ ನಡೆಸುವ [illegible] ನೇತ್ರ ಚಿಕಿತ್ಸೆ ಸೌಲಭ್ಯವನ್ನು ಪಡೆಯಬಯಸುವವರು ಧರ್ಮಾರ್ಥ ನೇತ್ರ ಚಿಕಿತ್ಸಾ [illegible] ಬೆಂಗಳೂರು [illegible] ಮೇಲಿನ [illegible] ಹಾಜರಾಗಬೇಕೆಂದು ಸ್ವಾಗತ ಸಮಿತಿಯ [illegible] ಯವರು ತಿಳಿಸುತ್ತಾರೆ

ಕಳ್ಳರ ಕೈಗೆ ಚಿನ್ನದ ಇಟ್ಟಿಗೆಗಳು

ಕೆನಡದ ಒಂಟೇರಿಯೋ ಪ್ರಾಂತದ ಒಂದು [illegible] ನಿಲ್ದಾಣದಲ್ಲಿದ್ದ ಅಂಚೆ ಗಾಡಿಯಿಂದ ೮೦ ಸಾವಿರ ಡಾಲರ್ ಬೆಲೆಯ [illegible] ಚಿನ್ನದ ಗಟ್ಟಿಗಳನ್ನು ಕಳೆದ [illegible] ತಾ॥ ಕಳ್ಳರು ಅಪಹರಿಸಿರುವರೆಂದು ವರದಿಯಾಗಿದೆ

ಬೇಸಿಗೆ ಶಿಬಿರದಲ್ಲಿ ಹರಿಕಥೆ

ರಾಜಧಾನಿಯ ವರ್ಲ್ಡ್ಸ್ ಶಿಕ್ಷಣ ಸಮಿತಿ ಆಶ್ರಯದಲ್ಲಿ ಮೈಸೂರು ತಾಲ್ಲೂಕು ಕಲ್ಲೂರು ನಾಗೇನಹಳ್ಳಿಯಲ್ಲಿ ನಡೆಯುತ್ತಿರುವ ಬೇಸಿಗೆ ಶಿಬಿರದಲ್ಲಿ ಕಳೆದ [illegible] ತಾ॥ ದಕ್ಷೇಶ ಬಂಧನ ಎಂಬ ಹರಿಕಥೆಯು ಬೇಲೂರು ಕೃಷ್ಣಮೂರ್ತಿಯವರಿಂದ ನಡೆಯಿತು ಕಥೆ ಕೇಳಲು ಸುಮಾರು ೩೦೦ ಜನರು ಸೇರಿದ್ದರು ಶಿಬಿರದವರು ಇದುವರೆಗೆ ಸುಮಾರು [illegible] ಮೈಲಿ ರಸ್ತೆಯ ರಿಪೇರಿಮಾಡಿರುತ್ತಾರೆ

ನಾಯಿ ಕೆಮ್ಮಿಗೆ ಔಷಧಿ
(WHOOPING COUGH REMEDY)
ಆರ್ ಎಸ್ ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

SRI GANESH
TALKIES
From 4-6-52 Daily 3 Shows
R K O's
VENDETTA
Starring Faith Domergue
FROM 7—6 52
Mighty Joe Young

ALL MODELS ARE NOW AVAILABLE
IN WELL KNOWN
MURPHY RADIOS
SERVICE & REPLACEMENTS GUARANTEED
ABIDS,
Murphy Radios Sales and Service
Sayyaji Rao Road Mysore

Edited Printed and Published by A R Nagaraj at [illegible] Sadhvi Press [illegible] Road Mysore

P SUBBARAYA SASTRY, M A (Mysore)
M A in Commerce (Calcutta)
C E I D Lond) P C I (Lond)
PRINCIPAL

ESTD 1917

M S POTTANNA, B Sc,
N D Com (C O S)
D Com [illegible] B (Lond)
VICE PRINCIPAL

CHAMPION METROPOLITAN COLLEGE

Of Commerce CO OPERATORS HOME, 100 Ft Road MYSORE

APPLICATIONS FOR ADMISSION to the Diploma Courses in Commerce as well as Typewriting and Shorthand are now being received on all working days between 7 and 10 A M Details can be seen on College's Notice Board

SPECIAL ATTENTION is invited to Diploma in Commerce & Business Administration, ISSUED BY THE MINISTRY OF EDUCATION, GOVT OF INDIA, WHICH IS DECLARED EQUAL TO B Com

ಹೊಸ ಹೊಸ ರೇಷ್ಮೆ ಸೀರೆಗಳನ್ನು ಮದುವೆಗಳಿಗಾಗಿ ತರಿಸಿದ್ದೇವೆ ಬೆಲೆ ಸುಲಭ

M. V. ಭೋಜಯ್ಯ,
[illegible]

ಟೆಲಿಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೮ ೬ ೫೨ [ಸಂಚಿಕೆ ೨೬೬

ಖೇರರು ಬ್ರಿಟನ್ನಿನಲ್ಲಿ - ಹೈ ಕಮೀಷನರರು -

ಎ. ಶಾಂತಿರಾಜಶಾಸ್ತ್ರಿ ಯವರ ನಿಧನ

ಮೈಸೂರು ೮

ಆಸ್ಥಾನ ವಿದ್ವಾನ್ ಶಾಂತಿಕ ರತ್ನಂ ನ್ಯಾಯತೀರ್ಥ ಎ ಶಾಂತಿರಾಜ ಶಾಸ್ತ್ರಿಗಳವರು ಕಳೆದ ೩೧ ನೇ ತಾ॥ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಜೈನ ಸಮಾಜದ ಪ್ರಮುಖ ವಿದ್ವಾಂಸರೂ, ಧಾರ್ಮಿಕ ಪ್ರವೃತ್ತಿಯುಳ್ಳವರೂ ಆಗಿದ್ದರು

ಕಾಂಗ್ರೆಸ್ ಅಧ್ಯಕ್ಷರಿಂದ ಲಾವಣಿ ವಿದ್ವಾಂಸರಿಗೆ ಸನ್ಮಾನ

ಮಹಾ ಚುನಾವಣೆಗಳ ಕಾಲದಲ್ಲಿ ಕಾಂಗ್ರೆಸ್ಸಿನ ಪರವಾಗಿ ಪ್ರಚಾರ ಗಾಡಿ ಲಾವಣಿಗಳನ್ನು ಹೇಳಿ ಕೀರ್ತಿ ಪಡೆದುಕೊಟ್ಟ ಲಾವಣಿ ವಿದ್ವಾಂಸರುಗಳಾದ ಶ್ರೀ ಬಿ ಎಸ್ ರಾಮಸ್ವಾಮಯ್ಯ, ಎಂ ನೀಲಕಂಠಯ್ಯ, ಹೆಚ್ ರಾಮದಾಸಪ್ಪ ಮತ್ತು ಹೆಚ್ ರಾಜಣ್ಣನವರುಗಳಿಗೆ ಮೈ॥ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಕೆ ಹನುಮಂತಯ್ಯನವರು ಜೋಡಿ ಶಾಲುಗಳನ್ನು ಬಹುಮಾನವಾಗಿ ಕೊಟ್ಟು ಸನ್ಮಾನಿಸಿರುತ್ತಾರೆ

ಹರಿಕಥೆ

ಅಖಿಲಭಾರತ ಸಂಚಾಲಕರಾದ ಶ್ರೀ ಹರಿನಾರಾಯಣ ದಾಸರು ನಾಳೆ ಸಂಜೆ ೭ ಘಂಟೆಗೆ ಮೈಸೂರ ವಲ್ಲಭನರಾಜ ಚೌಕದಲ್ಲಿರುವ ಶ್ರೀರಾಮ ಮಂದಿರದಲ್ಲಿ ಕೃಷ್ಣಾರ್ಜುನ ಎಂಬ ಹರಿಕಥೆಯನ್ನು ಮಾಡುವರು

ಪರೀಕ್ಷೆಗಳಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿ

ಈ ಸಾರಿ ಇಂಟರ್‌ಮೀಡಿಯಟ್ ಸೈನ್ಸ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕನ್ನು ಪಡೆದಿರುವ ಶ್ರೀ ವಿಶ್ವೇಶ್ವರಮೂರ್ತಿಯವರು ಲೋಯರ್ ಸೆಕೆಂಡರಿ ಮತ್ತು ಎಸ್ ಎಸ್ ಎಲ್ ಸಿ ಪರೀಕ್ಷೆಗಳಲ್ಲೂ ಪ್ರಥಮ ರ್‍ಯಾಂಕು ಗಳಿಸಿದ್ದರೆಂದು ತಿಳಿದು ಬಂದಿದೆ

ರಷ್ಯಾ ಆಕ್ರಮಿತ ಪ್ರದೇಶಕ್ಕೆ ಬ್ರಿಟಿಷ್ ಸೈನಿಕರ ಪ್ರವೇಶ

ರಷ್ಯನ್ನರು ಆಕ್ರಮಿಸಿರುವ ಮತ್ತು ತನ್ನ ಹತೋಟಿಯಲ್ಲಿಟ್ಟುಕೊಂಡಿರುವ ಪೂರ್ವ ಬರ್ಲಿನ್ ನಗರದೊಳಗೆ ಬ್ರಿಟಿಷ್ ಸೈನ್ಯಪಡೆಗಳು ನೆನ್ನೆ ಮುಂಜಾನೆ ಪ್ರವೇಶಿಸಿ ಅಲ್ಲಿನ ರೇಡಿಯೋ ಕಟ್ಟಡವನ್ನು ವಶಪಡಿಸಿಕೊಂಡರುವೆಂದು ವರದಿಯಾಗಿದೆ ಅಲ್ಲದೆ ಕಟ್ಟಡಕ್ಕೆ ಎಲ್ಲ ಬಗೆಯ ಬಂಧನವನ್ನು ಹಾಕಲಾಗಿದೆ ಈ ಕ್ರಿಯಾಚರಣೆಗೆ ಯಾವ ಅಡ್ಡಿಯೂ ಬರಲಿಲ್ಲವೆಂದು ಹೇಳಲಾಗಿದೆ

ಸ್ಮಶಾನದಲ್ಲಿ ಶವಕ್ಕೆ ಜೀವ ಬಂದ ಪ್ರಸಂಗ

ಬಳ್ಳಾಪುರದಲ್ಲಿ ಅಲಾಗು ಥೀಮರ್ ಎಂಬ ೪೦ ವರ್ಷದ ಒಬ್ಬ ಕ್ಷಯರೋಗಿಯು ಜ್ಞಾನ ತಪ್ಪಿದ್ದುದರಿಂದ ಅವನು ಸತ್ತಿರುವನೆಂದು ಭಾವಿಸಿ ಅವನ ಸಂಬಂಧಿಕರು ಶರ್ಮದಾ ತೀರದ ಬಳಿ ಅಂತ್ಯಕ್ರಿಯೆಗಾಗಿ ತೆಗೆದುಕೊಂಡು ಹೋಗಿ ಅವನ ದೇಹಕ್ಕೆ ಬೆಂಕಿ ಹೊತ್ತಿಸುವ ಸಮಯದಲ್ಲಿ ಅವನಿಗೆ ಪ್ರಜ್ಞೆ ತಿಳಿದು ಜೀವಂತನಾದನೆಂದು ವರದಿಯಾಗಿದೆ

ಸಿಂಹಳದಲ್ಲಿ ಹೊಸ ಸರ್ಕಾರ

ಸಿಂಹಳದಲ್ಲಿ ಸಾರ್ವತ್ರಿಕ ಚುನಾವಣೆಗಳು ಮುಗಿದು ಅಧಿಕಾರಿಗಳಲ್ಲಿದ್ದ ರಾಷ್ಟ್ರೀಯ ಪಂಗಡದವರು ಬಹುಮತ ಗಳಿಸಿ ಪುನಃ ಸರ್ಕಾರವನ್ನು ರಚಿಸಿರುತ್ತಾರೆ ಸಿಂಹಳದಲ್ಲಿ ನೌಕರಿಗಳಿಗೆ ಅಲ್ಲಿನವರನ್ನೇ ಸೇರಿಸಿಕೊಳ್ಳಬೇಕೆಂದು ಮಾಡುವ ಇಲಾಖೆಯು ಈಗ ರದ್ದಾಗಿರುತ್ತದೆ

ಆಸ್ತಿ ಮೇಲೆ ತೆರಿಗೆ ಹಾಕಲು ಒತ್ತಾಯ

ಪಾರ್ಲಿಮೆಂಟಿನಲ್ಲಿ ಆಯವ್ಯಯದ ಮೇಲೆ ಭಾಷಣ ಮಾಡುತ್ತಾ ಮಾಜಿ ಮಂತ್ರಿ ಎನ್ ವಿ ಗಾಡ್ಗೀಳರು ಆಸ್ತಿ ಮೇಲೆ ತೆರಿಗೆಯನ್ನು ವಿಧಿಸಬೇಕೆಂದು ಸೂಚಿಸಿರುತ್ತಾರೆ ಈ ಬಗ್ಗೆ ೧೯೪೬ ರಲ್ಲಿ ತಯಾರಾಗಿದ್ದ ಮಸೂದೆಯು ಶಾಸನವಾಗಬೇಕೆಂದು ಅವರು ಸೂಚಿಸಿರುತ್ತಾರೆ

ಬೇಕಾದಷ್ಟು ಗೋಧಿ ಯನ್ನು ಪಡೆಯಲವಕಾಶ

ಕೋಲಾರದಲ್ಲಿ ಯಾರು ಬೇಕಾದರೂ ಯಾವ ನಿರ್ಬಂಧವೂ ಇಲ್ಲದೆ ರೇಷನ್ ಕಾರ್ಡುಗಳನ್ನು ಹಾಜರು ಮಾಡದೆಯೇ ಎಷ್ಟು ಗೋಧಿಯನ್ನು ಬೇಕಾದರೂ ಪಡೆಯಬಹುದೆಂದು ತಿಳಿಸಲಾಗಿದೆ

ರೂಪಾಯಿಗೆ ೩ ಸೇರು ಅಕ್ಕಿ ಮಾರಾಟ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಸಂತೆಯಲ್ಲಿ ಕಳೆದ ೩೧ ನೇ ತಾರೀಖು ರೂಪಾಯಿಗೆ ೩ ಸೇರಿನಂತೆ ಅಕ್ಕಿಯನ್ನು ಮಾರಾಟ ಮಾಡಲಾಯಿತೆಂದು ವರದಿಯಾಗಿದೆ ಹತೋಟಿ ದರಕ್ಕಿಂತ ಹೆಚ್ಚಿನ ಕ್ರಯಕ್ಕೆ ಧಾನ್ಯವನ್ನು ಮಾರದಂತೆ ಮಾರಾಟಗಾರರಿಗೆ ಎಚ್ಚರಿಕೆ ಕೊಡಲಾಗಿತ್ತೆಂದು ಹೇಳಲಾಗಿದೆ

ವಿಮಾನ ಕಾರ್ಖಾನೆ ಬಂಡವಾಳಕ್ಕೆ ಇನ್ನೂ ೨ ಕೋಟಿ ರೂ

ಬೆಂಗಳೂರಿನಲ್ಲಿರುವ ಹಿಂದೂಸ್ತಾನ್ ವಿಮಾನ ಕಾರ್ಖಾನೆಯ ಬಂಡವಾಳಕ್ಕೆ ಕೇಂದ್ರ ಸರ್ಕಾರದವರು ಇನ್ನೂ ೨ ಕೋಟಿ ರೂ ಗಳನ್ನು ಒದಗಿಸಲಿರುವರು ಇದುವರೆಗೆ ಮೈಸೂರು ಮತ್ತು ಭಾರತ ಸರ್ಕಾರಗಳು ಸಮನಾಗಿ ಬಂಡವಾಳವನ್ನು ಹಾಕಿದ್ದುವು

ಬಿ. ಜಿ. ಖೇರರು ಬ್ರಿಟನ್ನಿನಲ್ಲಿ ಭಾರತದ ಹೈಕಮೀಷನರ್

ಬೊಂಬಾಯಿ ಮಾಜಿ ಮುಖ್ಯಮಂತ್ರಿ ಮತ್ತು ಕೌನ್ಸಿಲ್ ಆಫ್ ಸ್ಟೇಟ್ಸ್ ಸದಸ್ಯರಾಗಿರುವ ಬಿ ಜಿ ಖೇರರು ಸದಸ್ಯತ್ವ ಸ್ಥಾನಕ್ಕೆ ಶೀಘ್ರದಲ್ಲೇ ರಾಜೀನಾಮೆ ಕೊಡಲಿರುವರೆಂದು ತಿಳಿದುಬಂದಿದೆ ವಿ ಕೆ ಕೃಷ್ಣಮೆನನ್ನರ ಸ್ಥಾನದಲ್ಲಿ ಅವರು ಬ್ರಿಟನ್ನಿನಲ್ಲಿ ಭಾರತದ ಹೈಕಮೀಷನರರಾಗಿ ನೇಮಕವಾಗಲಿರುವರು

ಸಿಂಹಳ ಶಾಸನ ಸಭೆಗೆ ಭಾರತೀಯ ಸದಸ್ಯ

ಸಿಂಹಳದಲ್ಲಿರುವ ೯ ಲಕ್ಷ ಭಾರತೀಯರ ಪರವಾಗಿ ಅಲ್ಲಿನ ಮಾಜಿ ಕಾಂಗ್ರೆಸ್ ಸದಸ್ಯ ವೈದ್ಯಲಿಂಗಂರವರನ್ನು ಅಲ್ಲಿನ ಶಾಸನ ಸಭೆಗೆ ನಾಮಕರಣ ಮಾಡಲಾಗಿದೆ

ಪುರಸಭಾಧಿವೇಶನಕ್ಕೆ ಪತ್ರಿಕಾಕರ್ತರಿಗೆ ಆಹ್ವಾನವಿಲ್ಲ

ಕಳೆದ ಭಾನುವಾರ ಕೋಲಾರ ಪೌರ ಸಭೆಯು ಮೊದಲನೇ ಸಲ ಸಭೆಯು ನೂತನ ಅಧ್ಯಕ್ಷರಾದ ಶ್ರೀ ಸಿ ಎಚ್ ವೆಂಕಟರಮಣಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ್ದಾಗ ಪತ್ರಿಕಾ ವರದಿಗಾರರಿಗೆ ಆಹ್ವಾನ ಕೊಟ್ಟಿರಲಿಲ್ಲವೆಂದು ತಿಳಿದು ಬಂದಿದೆ ಅದರ ಅಗತ್ಯವಿಲ್ಲವೆಂಬುದಾಗಿ ಅಧ್ಯಕ್ಷರು ತಿಳಿಸಿದರೆಂದು ಹೇಳಲಾಗಿದೆ

ಗಮಕ ಗೋಷ್ಠಿ

ರಾಜಧಾನಿಯ ಗಮಕ ಸಂಘದ ಆಶ್ರಯದಲ್ಲಿ ನೆನ್ನೆ ಸಂಜೆ ಶ್ರೀ ಕೆ ರಾಮಸ್ವಾಮಿಯವರ ಮನೆಯಲ್ಲಿ ಗಮಕ ಗೋಷ್ಠಿಯು ಏರ್ಪಟ್ಟಿತ್ತು ಶ್ರೀ ಮಿರ್ಲೆ ಸುಬ್ರಹ್ಮಣ್ಯ ಶಾಸ್ತ್ರಿಗಳವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ರಾಮಸ್ವಾಮಿಯವರು ಎಲ್ಲರನ್ನೂ ಸ್ವಾಗತಿಸಿದ ನಂತರ ಶ್ರೀಗಳಾದ ಎಂ ಎಸ್ ರಾಮಸ್ವಾಮಿ ಅಯ್ಯರ್, ಅಶ್ವತ್ಥ ನಾರಾಯಣ, ಶ್ರೀಕಂಠಯ್ಯ, ಸತ್ಯನಾರಾಯಣ ಶಾಸ್ತ್ರಿ ಮತ್ತು ಶ್ರೀಮತಿಗಳಾದ ಗೌರಮ್ಮ, ಸರಸ್ವತಮ್ಮ ಮೊದಲಾದವರು ವಾಚನ ಮಾಡಿದರು ಶ್ರೀ ವೈದ್ಯನಾಥ ಭಟ್ಟರು ವಂದನಾರ್ಪಣೆ ಮಾಡಿದರು

ಫ್ರೆಂಚರನ್ನು ಓಡಿಸಲು ಭಾ ಕಮ್ಯೂನಿಸ್ಟರ ಯೋಜನೆ

ಫ್ರೆಂಚ್ ಭಾರತದ ಸ್ವಾಸ್ಥ್ಯಗಳಲ್ಲಿರುವ ಜನರನ್ನು ವಿಮೋಚನೆ ಮಾಡಲು ಕಮ್ಯೂನಿಸ್ಟರು ಉದ್ಯುಕ್ತರಾಗುವ ಬಗ್ಗೆ ಒಂದು ಯೋಜನೆಯನ್ನು ಸಿದ್ಧಗೊಳಿಸುತ್ತಿರುವರೆಂದು ವರದಿಯಾಗಿದೆ ಈ ಕಾರ್ಯದಲ್ಲಿ ಕಮ್ಯೂನಿಸ್ಟರು ಅಲ್ಲಿರುವ ಎಲ್ಲ ಪ್ರಜಾ ಸತ್ತಾತ್ಮಕ ಪಕ್ಷಗಳೊಡನೆ ಸೇರಲು ಆಲೋಚಿಸಿರುತ್ತಾರೆ

ಇನ್ನು ೧೫ ವರ್ಷಗಳಲ್ಲಿ ಇಂಗ್ಲಿಷ್ ರದ್ದು

ಬೊಂಬಾಯಿಯ ಅಡಳಿತದಲ್ಲಿ ೧೫ ವರ್ಷಗಳೊಳಗೆ ಇಂಗ್ಲಿಷನ್ನು ರದ್ದುಗೊಳಿಸುವ ಬಗ್ಗೆ ಅಲ್ಲಿನ ಸರ್ಕಾರದವರು ಸೂಕ್ತ ಶಾಸನವನ್ನು ಸಧ್ಯದಲ್ಲೇ ಮಾಡಲಿರುವರೆಂದು ವರದಿಯಾಗಿದೆ ಅಧಿಕಾರಿಗಳು ಈಗಿನಿಂದಲೇ ಹಿಂದಿ, ಮರಾಠಿ ಗುಜರಾತಿ ಮತ್ತು ಕನ್ನಡ ಭಾಷೆಗಳನ್ನು ಕಲಿಸುವ ಬಗ್ಗೆಯೂ ಶಾಸನವಾಗಲಿದೆ

ಫ್ರಾನ್ಸಿನಲ್ಲಿ ೩೦ ಲಕ್ಷ ಕಾರ್ಮಿಕರ ಮುಷ್ಕರ

ಫ್ರಾನ್ಸಿನ ಕಮ್ಯೂನಿಸ್ಟರ ಮೇಲೆ ಅಲ್ಲಿನ ಸರ್ಕಾರದವರು ಕೈಗೊಂಡಿರುವ ಕ್ರಮದ ವಿರುದ್ಧವಾಗಿ ಕಮ್ಯೂನಿಸ್ಟರು ತಮ್ಮ ಅಧೀನದಲ್ಲಿರುವ ೩೦ ಲಕ್ಷ ಕಾರ್ಮಿಕರು ಮುಷ್ಕರ ಹೂಡಬೇಕೆಂದು ಸೂಚಿಸಿರುತ್ತಾರೆ ಈ ಪರಿಸ್ಥಿತಿಯನ್ನೆದುರಿಸಿ ಅವರನ್ನು ಪೂರ್ತಿಯಾಗಿ ದಮನ ಮಾಡಲು ಫ್ರೆಂಚ್ ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ನಡೆಸುತ್ತಿರುವರೆಂದು ಹೇಳಲಾಗಿದೆ

ಸಮುದ್ರದಿಂದ ೧೦೦ ಅಡಿ ಎತ್ತರದ ನೀರಿನ ಬುಗ್ಗೆ

ಫ್ರಾನ್ಸಿನ ಬಳಿ ಇರುವ ಬಿಸ್ಕೆ ಕೊಲ್ಲಿಯಲ್ಲಿ ಕಳೆದ ತಿಂಗಳು ಒಂದು ದಿನ ಸಮುದ್ರದ ನೀರು ೧೦೦ ಅಡಿಯಷ್ಟು ಎತ್ತರವಾಗಿ ಬುಗ್ಗೆಯಂತೆ ಮೇಲಕ್ಕೆದ್ದ ದೃಶ್ಯವನ್ನು ಆ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಭಾರತದ ನೌಕೆಯ ಅಧಿಕಾರಿಗಳು ಕಂಡರೆಂದು ವರದಿಯಾಗಿದೆ

ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲಾ

ಮೇಲ್ಕಂಡ ಪಾಠಶಾಲೆಯು ಇದೇ ೧೧ ನೇ ತಾ॥ ಯಿಂದ ಆರಂಭವಾಗುವುದು ಅಲ್ಲಿ ಪ್ರೈಮರಿ, ಸೆಕೆಂಡರಿ, ವಿದ್ವತ್ ಪ್ರಥಮ ಮತ್ತು ಉತ್ತಮ ತರಗತಿಗಳ ಸಂಸ್ಕೃತ ಪಾಠಗಳು ಎಲ್ಲಾ ಶಾಸ್ತ್ರಗಳಲ್ಲಿಯೂ, ವೇದ ಮತ್ತು ಆಗಮ ಭಾಗದಲ್ಲಿಯೂ ನಡೆಯುವುವು ಎಲ್ಲಾ ಕೋಮಿನ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶವುಂಟು. ಪ್ರವೇಶ ಧನ ಕೊಡಬೇಕಾಗಿಲ್ಲ ವಿದ್ಯಾರ್ಥಿಗಳಿಗೆ ಅವರವರ ತರಗತಿಗಳಿಗನುಸಾರವಾಗಿ ವೇತನ ಮತ್ತು ಉಚಿತ ವಸತಿ ಸೌಕರ್ಯಗಳನ್ನು ಕೊಡಲಾಗುವುದು ಸೇರಲು ಇಚ್ಛಿಸುವವರು ತಾ॥ ೧೧ ೬ ೫೨ ರಿಂದ ೯ ೭ ೫೨ ರ ವರೆಗೆ ಸೇರಬಹುದು ಅರ್ಜಿ ಫಾರಂಗಳನ್ನು ಬೇಕಾದವರು ಮಹಾ ಪಾಠಶಾಲಾ ಅಧ್ಯಕ್ಷರವರಿಂದ ಖುದ್ದಾಗಿಯೂ, ಪೋಸ್ಟ್ ಮೂಲಕವಾಗಿ ೨ ಆಣೆ ಅಂಚೆ ಸ್ಟಾಂಪು ಕಳುಹಿಸಿ ಪಡೆಯಬಹುದು

ಕೇಂದ್ರದಲ್ಲಿ ಮತ್ತೊಬ್ಬ ಉಪ ಮಂತ್ರಿ

ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟಿನ ಸದಸ್ಯರಾದ ರಾಜ್ ಬಹದ್ದೂರ್ ರವರನ್ನು ಮಾರ್ಗಾನುಕೂಲದ ಇಲಾಖಾ ಉಪ ಮಂತ್ರಿಯಾಗಿ ನೇಮಿಸಿರುತ್ತಾರೆ.

ಭಗಿನಿ ಸೇವಾ ಸಮಾಜ

ಕಳೆದ ಮೂವತ್ತು ವರ್ಷಗಳಿಂದಲೂ ಮಹಿಳೆಯರ ಸೇವೆಯನ್ನು ಮಾಡುತ್ತಿರುವ ನಗರದ ಭಗಿನೀ ಸೇವಾ ಸಮಾಜದಲ್ಲಿ ಕನ್ನಡ, ಹಿಂದಿ, ಇಂಗ್ಲಿಷ್, ವೀಣೆ, ಪಿಟೀಲು, ಸಂಗೀತ ಮುಂತಾದ ವಿಷಯಗಳಲ್ಲಿ ಮೊದಲಿನಿಂದ ಮೇಲು ದರ್ಜೆಯವರೆಗೂ ಶಿಕ್ಷಣ ಕೊಡಲು ಏರ್ಪಾಡು ಮಾಡಲಾಗಿದೆ ಬಟ್ಟೆ ಹೊಲೆಯುವುದು ಮತ್ತು ಇತರ ಕೈಗಾರಿಕಾ ಕೆಲಸಗಳನ್ನೂ ಹೇಳಿಕೊಡಲಾಗುವುದು. ಅಪ್ಪರ್ ಪ್ರೈಮರಿ, ಮಾಧ್ಯಮಿಕ ಶಾಲಾ, ಹಿಂದಿ, ಸಂಗೀತ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪರೀಕ್ಷೆಗಳಿಗೆ ಹೋಗಲಿಚ್ಛಿಸುವವರಿಗೆ ಪ್ರತ್ಯೇಕ ಶಿಕ್ಷಣ ಕೊಡಲಾಗುವುದು. ಮಹಿಳೆಯರು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಕೋರಲಾಗಿದೆ ಹೆಚ್ಚಿನ ವಿವರಗಳನ್ನು ಲಕ್ಷ್ಮೀಪುರಂ ೯೧೨ ನೇ ನಂ ಮನೆಯಲ್ಲಿ ವಿಚಾರಿಸಬಹುದು.

ಹಿಂದುಳಿದವರನ್ನು ಐ. ಎ. ಎಸ್.ಗೆ ಸೇರಿಸಲು ಮನವಿ

ಪಾರ್ಲಿಮೆಂಟಿನ ಮೈಸೂರು ಸದಸ್ಯರಾದ ಶ್ರೀ ಎಸ್. ರಾಚಯ್ಯನವರು ಮೈಸೂರಿನ ಮುಖ್ಯಮಂತ್ರಿಗಳಿಗೊಂದು ಪತ್ರವನ್ನು ಬರೆದು ಐ. ಎ. ಎಸ್. ಮತ್ತು ಎ. ಸಿ. ಎಸ್. ಗಳ ಮುಖಾಂತರದಲ್ಲಿ ಇದುವರೆಗೆ ಹರಿಜನರ ಪೈಕಿ ಒಬ್ಬರನ್ನು ತೆಗೆದುಕೊಳ್ಳದಿರುವುದಕ್ಕೆ ಅವರು ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ ಪ್ರಜಾಸಂಖ್ಯೆಯಲ್ಲಿ ೫ ನೇ ಒಂದು ಭಾಗದವರಾದ ಆ ಕೋಮಿನವರ ಹಿತರಕ್ಷಣೆಯು ಆವಶ್ಯಕವೆಂದು ಅವರು ತಿಳಿಸಿ, ಈ ಸಾರಿಯಾದರೂ ಹರಿಜನರನ್ನು ಆ ಪಟ್ಟಿಗೆ ಸೇರಿಸಬೇಕೆಂದು ಕೋರಿರುತ್ತಾರೆ.

SRI GANESH
TALKIES
From 4 6 52 · Daily 3 Shows
R K O's
VENDETTA
Starring Faith Domergue

FROM 7 6 52
Mighty Joe Young

ಅಧಿಕಾರದಲ್ಲಿರುವ ಕನ್ನಡಿಗರಿಗೆ ಸತ್ಕಾರ

ದೆಹಲಿಯ ಕರ್ನಾಟಕ ಸಂಘದವರು ಬಿಹಾರ್ ಗೌರ್ನರ್ ಆಗಿ ನೇಮಕವಾಗಿರುವ ಆರ್. ಆರ್. ದಿವಾಕರ್, ಉತ್ಪಾದನಾ ಮಂತ್ರಿ ಕೆ. ಸಿ. ರೆಡ್ಡಿ, ವಾಣಿಜ್ಯ ಉಪಮಂತ್ರಿ ಡಿ. ಪಿ. ಕರ್ಮಾರ್ಕರ್, ಹಿರಿಯ ಶಾಸನ ಸಭಾ ಉಪಾಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿ ಮತ್ತು ಪಾರ್ಲಿಮೆಂಟಿನ ಕನ್ನಡ ಪ್ರದೇಶಗಳ ಸದಸ್ಯರುಗಳಿಗೆ ಅಭಿನಂದನೆ ಸಲ್ಲಿಸಲು ನವದೆಹಲಿಯಲ್ಲಿ ಮೊನ್ನೆ ಸಂಜೆ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಉಪಾಹಾರ ಸಂಗೀತಗಳಾದನಂತರ ಸಂಘದ ಅಧ್ಯಕ್ಷ ಶ್ರೀ ಎಸ್. ಆರ್. ಎಸ್. ರಾಘವರವರು ಅತಿಥಿಗಳ ಗುಣಗಾನ ಮಾಡಿದರು. ಅತಿಥಿಗಳು ಸೂಕ್ತ ಉತ್ತರವಿತ್ತನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ವನಸ್ಪತಿ ತುಪ್ಪದ ಬೆಲೆ ಇಳಿಯಿತು

ವನಸ್ಪತಿ ತುಪ್ಪದ ಬೆಲೆಯನ್ನು ಭಾರತ ಸರ್ಕಾರದವರು ಮೊನ್ನೆಯಿಂದ ಇಳಿಸಿರುತ್ತಾರೆ ಮೈಸೂರು, ಕೊಡಗು, ಮದ್ರಾಸು, ಬೊಂಬಾಯಿ, ಮುಂತಾದ ಕಡೆಗಳಲ್ಲಿ ಅದನ್ನು ಪೌಂಡಿಗೆ ೩ ಆಣೆಯಂತೆ ಕಡಿಮೆಯಾಗಿ ಮಾರಲು ಸೂಚಿಸಲಾಗಿದೆ ಪಶ್ಚಿಮ ಬಂಗಾಳ, ಓರಿಸ್ಸಾಗಳಲ್ಲಿ ೧ ಆಣೆಯಂತೆ ಕಡಿಮೆಯಾಗಿದೆ.

D. BANUMIAH'S EDUCATIONAL INSTITUTION,
MYSORE.

Applications are invited for the post of a Clerk in our Institution. Candidates who have passed Senior Typewriting and Senior Accountancy need only apply to the Honorary Secretary on or before 6th June 1952.

ಶ್ರೀಮಂತನೊಡನೆ ಸನ್ಯಾಸಿನಿಯ ವಿವಾಹ

ಹಾಲೆಂಡಿನಲ್ಲಿರುವ ಒಂದು ದೇವಾಲಯದಲ್ಲಿ ೨೦ ವರ್ಷಗಳಿಂದ ಸನ್ಯಾಸಿಯಾಗಿದ್ದ ಅಮಿಷಮಾರ್ಗರೆಟ್ ಎಂಬ ೫೦ ವರ್ಷದ ಸ್ತ್ರೀಯನ್ನು ಇಂಗ್ಲೆಂಡಿನ ೭೭ ವರ್ಷದ ಅರ್ಲ್ ಆಫ್ ಸಾಂಡ್ವಿಚ್ ರವರು ವಿವಾಹವಾಗಲಿರುವರು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ಸಂಗೀತ, ಮಧ್ಯಾಹ್ನ ೧-೩೦ ಪಿ. ೧-೫೦ ದಂಡಪಾಣಿ ದೇಶಿಗರ್ ತಿರುವಾರೂರ್ ಸಂಗೀತ ೨ ಎಂ. ವಿ. ಸೂರ್ಯನಾರಾಯಣ ವೇಣುಗಾನ. ಸಂಜೆ ೫-೩೦ ಸಂಗೀತ. ೬-೧೫ ಚಿಕ್ಕ ಮಕ್ಕಳಿಗೆ. ೭ ಚಿತ್ರಗೀತ. ೭-೩೦ ಸಂಗೀತ ೮ ಶಿಕ್ಷಕರು ಸುಬ್ರಹ್ಮಣ್ಯ ಅಯ್ಯರ್ ರಿಕಾರ್ಡ್ ಸಂಗೀತ. ೮-೩೦ ಎಂ. ವಿ. ಸೂರ್ಯನಾರಾಯಣ ವೇಣುಗಾನ. ೯ ೧೫ ಚರ್ಚೆ. ೯-೩೦ ರಾಗಮಾಲಿಕೆ.

ಹರಿಕಥೆ

ಮಂಡಿ ಮೊಹಲ್ಲಾ ಜಮಾಲ್ ಪುರದ ಬೀದಿಯಲ್ಲಿರುವ ಶ್ರೀ ಪಾಂಡುರಂಗಸ್ವಾಮಿ ದೇವಾಲಯದಲ್ಲಿ ಈ ಸಂಜೆ ೬ ಘಂಟೆಗೆ ಎಂ. ಸಿ. ಬಾಲಾಜಿರಾಯರಿಂದ ಚಂದ್ರಹಾಸ ಎಂಬ ಹರಿಕಥೆಯು ನಡೆಯುವುದು

CITY TUTORIAL COLLEGE
Near V. V. Market, Mysore
ADMISSIONS RECEIVED
B. Sc. :- English & P. C. M.
INTER .- English, P.C.M. & C.B.Z.
I. COM:- Parts I, II & III. &
INTER. GEOGRAPHY.
Classes Next Week

ಮೈಸೂರು ಟ್ರಾನ್ಸಿಟ್ ಸರ್ವಿಸ್

ರವಾನಿಳಾಸ ರಸ್ತೆ, ಮೈಸೂರು ಫೋನ್ ನಂ 537

ಮೈಸೂರು ಮತ್ತು ಮದ್ರಾಸುಗಳ ನಡುವೆ ಸರ್ವೀಸ್ ಏಜೆಂಟರಾದ ಮೆ॥ ಮದ್ರಾಸು-ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೂಲಕ ಸುವ್ಯವಸ್ಥಿತ ರೀತಿಯಲ್ಲಿ ಸರಕುಗಳನ್ನು ರವಾನಿಸುವ ಸಂಸ್ಥೆ.

ಮಾಲೀಕರು:— ಶೀ ಥ ರ ಮ ತ್ತು ಕಂ ಪೆ ನಿ

ಹರಾಜು

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ರವರ ಕೋರ್ಟ್ ೧೯೪೮ ೪೯ ನೇ ಸಾಲಿನ ಇನ್ಸಾಲ್ವೆನ್ಸಿ ನಂ ೩ ನೇ ಮೊಕದ್ದಮಾವಲ್ಲಿನ ಇನ್ಸಾಲ್ವೆಂಟ್ ಅರ್ಜಿದಾರರ ಬಾಬ್ತು ಸ್ವತ್ತಾದ ಈ ಕೆಳಗೆ ವಿವರಿಸಿರುವ ಚರಸ್ವತ್ತುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಅಫಿಷಿಯಲ್ ರಿಸೀವರಿಂದ ಹರಾಜು ಷರತ್ತುಗಳಿಗೆ ಒಳಪಟ್ಟು, ೮-೬-೫೨ ನೇ ಬಾನುವಾರ ಬೆಳಗ್ಗೆ ೯-೩೦ ಘಂಟೆಗೆ ಮೈಸೂರು ಸಿಟಿ ... ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿ ೪೯೨, ೪೯೩ ಮತ್ತು ೪೯೪ ನಂ ಮನೆ ಬಳಿ, ಅಂದರೆ ಕಾಳಮ್ಮನ ಗುಡಿ ಬೀದಿಯ ಚೌಕದ ಹತ್ತಿರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದೂ, ಇಷ್ಟವುಳ್ಳವರು ಬಂದು ಖರೀದಿ ಮಾಡಿಕೊಂಡುಕೊಳ್ಳಬಹುದೆಂದೂ ಈ ಮೂಲಕ ಪ್ರಚುರ ಪಡಿಸಲಾಗಿದೆ, ಹರಾಜು ಷರತ್ತುಗಳನ್ನೂ ಇತರ ವಿಷಯಗಳನ್ನೂ ಅಫಿಷಿಯಲ್ ರಿಸೀವರಿಂದ ತಿಳಿದುಕೊಳ್ಳಬಹುದು

—: ಚ ರ ಸ್ವ ತ್ತು ಗ ಳು :—

1 ರೋಲರ್ ಮಿಷನ್ (ಹುರುಳಿಸುಣ್ಣ ತಯಾರು ಮಾಡುವ ಮಿಷನ್)
2 ಫ್ಲೋರ್ ಮಿಲ್ಲು (ಹನ್ನೆರಡು ಇಂಚಿನ ಪ್ಲೇಟ್ ಉಳ್ಳದ್ದು)
3 ಪೊಗೆಸೊಪ್ಪು ಕಡ್ಡಿ ವಗೈರೆ ಫಾಡರ್ ಕಟಿಂಗ್ ಮಿಷನ್ ಒಂದು
4 ದಿ ಬ್ರಿಟಿಷ್ ಥಾಮ್ಸನ್ ಎಂಡ್ ಹೌಸ್ಟನ್ ಕಂಪೆನಿಯ ಇಂಡಕ್ಷನ್ ಎಲೆಕ್ಟ್ರಿಕ್ ಮೊಟಾರ್ (ಐದು ಕುದುರೆ ಬಲವುಳ್ಳದ್ದು) ಒಂದು.
5 ಗೋಡೆಗೆ ತಗುಲಿಸಿರತಕ್ಕ ಎಲೆಕ್ಟ್ರಿಕ್ ಮೊಟಾರ್ ಬೋರ್ಡಿನಲ್ಲಿರುವ ಮಿಲ್ ಪವರ್ ಸ್ಟಾರ್ಟರ್
6. ಮರದ ಬಾಗಿಲು, ಕುರ್ಚಿ, ಟೇಬಲ್, ಕೂರದ ದೊಡ್ಡಿಗಳು, ಕಬ್ಬಿಣದ ಮಂಚ, ಕ್ಯಾಮಗಿ ಓಡಳು, ಸಾಗುವಾನಿ ಮರದ ಗಾಡಿ ಗುಂಬಗಳು, ಬೀರು, ಎತ್ತಿನಗಾಡಿ ದೂರಿ, ಹಲಗೆಗಳು ವಗೈರೆ-

ಎಸ್. ಎಲ್. ಲಕ್ಷ್ಮೀಗೌಡ,
ಅಫಿಷಿಯಲ್ ರಿಸೀವರ್,
ಮೈಸೂರು ಡಿಸ್ಟ್ರಿಕ್ಟ್.

ಮೈಸೂರು,
26-5-52

ಪ್ರಖ್ಯಾತ ತಾರೆ ನರ್ಗೀಸಳ ತಯಾರಿಕೆ
ಬೊಂಬಾಯಿ ನಗರದಲ್ಲಿ ಕಿಕ್ಕಿರಿದ ಜನ ಸಮುದಾಯಕ್ಕೆ ಪ್ರದರ್ಶಿಸಲ್ಪಡುತ್ತಿದೆ
ಕರ್ನಾಟಕದಲ್ಲೇ ಪ್ರಥಮ ಪ್ರದರ್ಶನ

ಒಲಂಪಿಯಾ — 5-6-52 ರಿಂದ
ದಿನವಹಿ 3 ಆಟಗಳು :: ಅನೋಖ ಪ್ರಾರಂಭ
ನರ್ಗೀಸ್ ಆರ್ಟ್ ಪ್ರೊಡಕ್ಷನ್ಸ್‌ರವರ ಉದ್ರೇಕಪೂರಿತ ಕುತೂಹಲಕರ ಚಿತ್ರ
ನರ್ಗೀಸ್, ತ್ರಿಲೋಕ್ ಕಪೂರ್, ಪ್ರಕಾಶ್, ಸೈಲಂ ಮತ್ತು ಕಕ್ಕು ನಟಿಸಿರುವ

ಪ್ಯಾರ್ ಕಿ ಬಾತೇ

ಬೆಳಗಿನ ಪ್ರದರ್ಶನ — ಸುಧಾಬಾಲಾ ಪಾತ್ರವಹಿಸಿರುವ ಪರದೇಶಿ

One of the Best Tamil Socials -Challanging Picture of the Year

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
ಪಕ್ಷಿರಾಜಾರವರ ತಮಿಳು ಚಿತ್ರ

* ಕಾಂಚನಾ *

5—6—52ರಿಂದ ಅನೋಖ 6 ನೇ ವಾರ

Edited, Printed and Published by A. R. Nagarajan at Sadhvi Press, D Subbiah Road, Mysore

ರಿಜಿಸ್ಟರ್ಡ್ ನಂ. 793 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೫-೬-೫೨ [ಸಂಚಿಕೆ ೨೬೪

ದ. ಕೊರಿಯ ಸರ್ಕಾರಕ್ಕೆ ತ್ರಿರಾಷ್ಟ್ರ ಪ್ರತಿಭಟನೆ

ಕೆ. ಸಿ. ರೆಡ್ಡಿಯವರ ಮೇಲೆ ಪುಟ್ಟರಾಜ ಅರಸರ, ದಾವಾ ವಜಾ

ಬೆಂಗಳೂರು ೫

ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ೧೯೫೧ ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ತಮ್ಮ ವಿಷಯವಾಗಿ ಆಡಿರುವ ಮಾತುಗಳು ಮಾನನಷ್ಟಕರವಾಗಿರುವುವೆಂದು ಹೈಕೋರ್ಟ್ ಮಾಜಿ ನ್ಯಾಯಾಧೀಶರಾದ ಶ್ರೀ ಆರ್. ಪುಟ್ಟರಾಜ ಅರಸ್‌ರವರು ಅವರ ಮೇಲೆ ದಾವೆಯನ್ನು ಹೂಡಿ ೧೦೧ ರೂ. ಪರಿಹಾರ ಕೇಳಿದ ಸಂಬಂಧವಾಗಿ ನೆನ್ನೆ ಇಲ್ಲಿನ ಮುನ್ಸೀಫರಾದ ಶ್ರೀ ರಾಮಚಂದ್ರರಾಯರು ತೀರ್ಪಿತ್ತು ದಾವೆಯನ್ನು ಖರ್ಚು ಸಮೇತ ವಜಾ ಮಾಡಿದರು.

ಶ್ರೀ ಅರಸಿನವರ ಮೇಲೆ ಜಸ್ಟಿಸ್ ಕನಿಯಾ ಮತ್ತು ಜಸ್ಟಿಸ್ ಫಜಲ್ ಅಲಿಯವರ ಮುಂದೆ ಕೆಲವು ದೂರುಗಳನ್ನು ಹೇಳಲಾಗಿತ್ತೆಂದೂ, ಅರಸಿನವರು ತಮ್ಮ ತೀರ್ಪುಗಳನ್ನು ವಕೀಲರಿಂದ ಬರೆಸಿಕೊಳ್ಳುತ್ತಿದ್ದರೆಂದೂ, ತಮಗೆ ಬೇಕಾದ ವಕೀಲರುಗಳಿಗೆ ಅನುಕೂಲವಾಗಿ ಮೊಕದ್ದಮೆಗಳನ್ನು ಇತ್ಯರ್ಥ ಮಾಡುತ್ತಿದ್ದರೆಂದೂ, ೩೦ ಕೇಸುಗಳಲ್ಲಿ ಕೆಳಕೋರ್ಟ್ ಜಡ್ಜರುಗಳ ಮೇಲೆ ಅವರು ಪ್ರಭಾವ ಬೀರಿದ್ದರೆಂದೂ ಶ್ರೀ ರೆಡ್ಡಿಯವರು ಭಾಷಣದಲ್ಲಿ ಹೇಳಿರುವುದಾಗಿ ಶ್ರೀ ಅರಸಿನವರು ಆಪಾದಿಸಿದ್ದರು

ಚೀನಾ ಭತ್ತ ಮೈಸೂರಿನಲ್ಲಿ ಬೆಳೆಯುವ ಯೋಜನೆ

ಕಾಶ್ಮೀರದಲ್ಲಿ ಪ್ರಯೋಗ ನಡೆಸಿದ ಪರಿಣಾಮವಾಗಿ ಚೀನಾ ಭತ್ತವು ಎಕರೆಗೆ ೫ ಸಾವಿರ ಪೌಂಡಿನಷ್ಟು ಬೆಳೆಯುತ್ತೆಂದು ಗೊತ್ತಾಗಿದೆ. ಈಗ ಆ ಭತ್ತವನ್ನು ಮೈಸೂರು, ಮದ್ರಾಸು ಮುಂತಾದೆಡೆಗಳಲ್ಲಿ ಬೆಳೆಯಲು ಯೋಜನೆಯನ್ನು ಮಾಡಲಾಗುತ್ತಿದೆ

ಚನ್ನಪಟ್ಟಣದ ಬಳಿ ಗೂಡ್ಸ್ ರೈಲಿಗೆ ಸಿಕ್ಕಿ ಮರಣ

ಮೊನ್ನೆ ಬೆಳಗಿನ ಜಾವ ಮೈಸೂರಿನಿಂದ ಬರುತ್ತಿದ್ದ ಗೂಡ್ಸ್ ರೈಲೊಂದಕ್ಕೆ ಚನ್ನಪಟ್ಟಣದ ಬಳಿ ಇಬ್ಬರು ಸಿಕ್ಕಿಕೊಂಡು ಒಬ್ಬನು ಮಡಿದನೆಂದೂ ಮತ್ತೊಬ್ಬನಿಗೆ ತೀವ್ರ ಗಾಯಗಳಾದುವೆಂದೂ ವರದಿಯಾಗಿದೆ. ಗಾಯಗೊಂಡವನಿಗೆ ಪ್ರಥಮ ಚಿಕಿತ್ಸೆ ನಡೆಸಿದ ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕಳುಹಿಸಲಾಯಿತು. ಹಿಂದಿನ ರಾತ್ರಿ ಮೀನು ಹಿಡಿಯಲು ಹೋಗಿ ವಾಪಸು ಬರುವಾಗ ಅವರು ರೈಲು ಅಪಘಾತಕ್ಕೆ ಈಡಾದರೆಂದು ತಿಳಿದುಬಂದಿದೆ

ಸೇವಕನ ಕೆಲಸಕ್ಕೆ ಪದವೀಧರನ ಅರ್ಜಿ

ಪದವೀಧರನೊಬ್ಬನು ಒರಿಸ್ಸಾ ಗವರ್ನರಿಗೆ ಮನವಿಯೊಂದನ್ನು ಕಳುಹಿಸಿ ತನಗೆ ಸರ್ಕಾರಿ ಭವನದಲ್ಲಿ ಸೇವಕನ ಹುದ್ದೆಯೊಂದನ್ನು ಕೊಡಬೇಕೆಂದು ಬೇಡಿಕೊಂಡಿದ್ದನೆಂದೂ, ಇದಕ್ಕಿಂತ ದುಃಖಕರವಾದ ಸಂಗತಿಯು ಇಲ್ಲವೆಂದೂ ಅಲ್ಲಿನ ಗೌರ್ನರ್ ಆಸಫ್ ಅಲಿಯವರು ತಿಳಿಸಿರುತ್ತಾರೆ.

ಹೈಕೋರ್ಟಿನಲ್ಲಿ ಬಾಲರತ್ನಂ ಮೊಕದ್ದಮೆ

ಸ್ವಂ ಸು ಪ್ರೋ] ಬೆಂಗಳೂರು ೫

ಹೈಕೋರ್ಟ್ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯನವರ ಮುಂದೆ ಬಾಲರತ್ನಂ ಮತ್ತು ಇನ್ನಿಬ್ಬರ ಶಿಕ್ಷೆ ವಿರುದ್ಧದ ಅಪೀಲು ಸಂಬಂಧವಾದ ಜಾಮೀನು ಅರ್ಜಿಯು ಈ ದಿನ ಪರಿಶೀಲನೆಗೆ ಬಂದಿತ್ತು. ಮದ್ರಾಸಿನ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಶ್ರೀ ಪಿ. ಸೋಮಯ್ಯನವರು ಬಾಲರತ್ನಂ ಪರ ವಕಾಲತ್ತು ವಹಿಸುವರು. ಚಾರ್ಜ್ ಪರ ಶ್ರೀ ಎನ್. ಎಸ್. ನಾರಾಯಣರಾಯರು ಹಾಜರಾದರು. ಮೊಕದ್ದಮೆಯನ್ನು ವಿಳಂಬವಿಲ್ಲದೆ ಪರಿಶೀಲನೆಗೆ ತೆಗೆದುಕೊಳ್ಳುವುದಾಗಿ ನ್ಯಾಯಾಧೀಶರು ತಿಳಿಸಿದುದರಿಂದ ವಕೀಲರು ಜಾಮೀನಿಗಾಗಿ ಒತ್ತಾಯ ಮಾಡಲಿಲ್ಲ. ಬಾಲರತ್ನಂರವರಿಗೆ ಹಲವು ರಿಯಾಯಿತಿ ಕೊಡಬೇಕೆಂದುದಕ್ಕೆ ನ್ಯಾಯಾಧೀಶರು ಒಪ್ಪಿದರು

ಮೊರಾರ್ಜಿ ದೇಸಾಯರ ವಿಜಯ

ಅಹಮದಾಬಾದು ನಗರ ಕ್ಷೇತ್ರದಿಂದ ಮುಂಬಾಯಿಯ ಶಾಸನ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಅಲ್ಲಿನ ಮುಖ್ಯಮಂತ್ರಿ ಮೊರಾರ್ಜಿ ದೇಸಾಯರು ಆರಿಸಿ ಬಂದಿರುತ್ತಾರೆ. ಅವರ ವಿರುದ್ಧವಾಗಿ ನಿಂತಿದ್ದ ಕಮ್ಯೂನಿಸ್ಟ್ ಉಮೇದುವಾರ ದಿನಕರ ಮೆಹತಾರವರು ಪರಾಜಿತರಾಗಿರುವರು.

ಸತ್ತ ತಂದೆಯನ್ನು ಕನಸಿನಲ್ಲಿ ಕಂಡ ಬಾಲಕಿಯ ಮರಣ

ಉತ್ತರ ಭಾರತದ ಗಾಜಿರಾ ಎಂಬಲ್ಲಿ ಮುಸ್ಲಿಂ ಬಾಲಕಿಯೊಬ್ಬಳು ಕಳೆದ ಸೋಮವಾರ ರಾತ್ರಿ ಮಲಗಿ ನಿದ್ರಿಸುತ್ತಿದ್ದಾಗ, ಕನಸಿನಲ್ಲಿ ತನ್ನ ತಂದೆಯ ಮೃತ ಶರೀರವನ್ನು ಕಂಡಳೆಂದೂ, ಮಾರನೇ ದಿನ ಹುಡುಗಿಯು ಸ್ಮಶಾನಕ್ಕೆ ಹೋಗಿ ತನ್ನ ತಂದೆಯ ಗೋರಿ ಬಳಿ ಬಹಳ ಹೊತ್ತು ಅಳುತ್ತ ಕುಳಿತು ಮನೆಗೆ ಬಂದ ನಂತರ ಮೃತಪಟ್ಟಳೆಂದೂ ವರದಿಯಾಗಿದೆ.

ದ. ಕೊರಿಯಾ ಅಧ್ಯಕ್ಷರಿಗೆ ೩ ರಾಷ್ಟ್ರಗಳ ಪ್ರತಿಭಟನೆ

ದಕ್ಷಿಣ ಕೊರಿಯದಲ್ಲಿ ಮಾರ್ಷಲ್ ಲಾವನ್ನು ಜಾರಿ ಮಾಡಿ ಅಲ್ಲಿನ ಪಾರ್ಲಿಮೆಂಟಿನ ಹಲವು ಸದಸ್ಯರನ್ನು ದಸ್ತಗಿರಿ ಮಾಡಿರುವುದಕ್ಕಾಗಿ ಅಮೆರಿಕಾ, ಬ್ರಿಟನ್ ಮತ್ತು ಆಸ್ಟ್ರೇಲಿಯಗಳು ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರೀಯವರಿಗೆ ಪ್ರತಿಭಟನಾ ಪತ್ರಗಳನ್ನು ಬರೆದಿವೆಯೆಂದು ವರದಿಯಾಗಿದೆ. ಆ ದೇಶದಲ್ಲಿ ಪುನಃ ಅಧ್ಯಕ್ಷರ ಚುನಾವಣೆಯಾಗಬೇಕೆಂದು ರೀಯವರು ಮಾಡಿದ ಸಲಹೆಗೆ ಅಲ್ಲಿನ ಪಾರ್ಲಿಮೆಂಟಿನ ಬೆಂಬಲ ದೊರೆಯದಿದ್ದುದರಿಂದ ಆ ಸಭೆಯನ್ನು ರದ್ದುಗೊಳಿಸಲು ಸೂಚಿಸಿರುವ ಬೆದರಿಕೆಗಾಗಿಯೂ ಪ್ರತಿಭಟನೆಯನ್ನು ಮಾಡಲಾಗಿದೆ. ದಕ್ಷಿಣ ಕೊರಿಯದಲ್ಲಿ ರಾಜಕೀಯ ಮತ್ತು ಮಿಲಿಟರಿ ಪರಿಸ್ಥಿತಿ ಕುರಿತು ನೇರವಾಗಿ ಬ್ರಿಟಿಷ್ ಮಂತ್ರಿಮಂಡಲಕ್ಕೆ ವರದಿ ಮಾಡಲು ರಕ್ಷಣಾ ಮಂತ್ರಿಗಳ ನೇತೃತ್ವದಲ್ಲಿ ನಿಯೋಗ ಕಳುಹಲು ಬ್ರಿಟನ್ನು ನಿರ್ಧರಿಸಿರುತ್ತದೆ

ಫ್ರೆಂಚ್ ಭಾರತ ಸ್ವಾಸ್ಥ್ಯಗಳ ಬಗ್ಗೆ ಬೇರೆ ಶಾಂತಮಾರ್ಗ

ದಕ್ಷಿಣ ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳನ್ನು ಭಾರತಕ್ಕೆ ಸೇರಿಸಿಕೊಳ್ಳುವ ಬಗ್ಗೆ ನ್ಯಾಯವಾದ ಪ್ರಜಾಭಿಪ್ರಾಯ ಸಂಗ್ರಹಣೆಗೆ ಅವಕಾಶವಿರುವುದಿಲ್ಲವೆಂದೂ, ಅವುಗಳನ್ನು ಭಾರತದೊಳಗೆ ಐಕ್ಯಗೊಳಿಸಲು ಬೇರೆ ಶಾಂತ ಉಪಾಯ ಮಾರ್ಗಗಳನ್ನು ಅವಲಂಬಿಸಬೇಕೆಂದೂ ಪ್ರಧಾನಿ ನೆಹರೂರವರು ಸೂಚಿಸಿರುತ್ತಾರೆ.

ದಕ್ಷಿಣ ಭಾರತದ ಬೆಂಕಿಕಡ್ಡಿ ಕೈಗಾರಿಕೆಯಲ್ಲಿ ಬಿಕ್ಕಟ್ಟು

ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಕೂಡಲೇ ರಕ್ಷಣಾ ಕ್ರಮ ಕೈಗೊಳ್ಳದಿದ್ದರೆ, ದಕ್ಷಿಣ ಭಾರತದ ಬೆಂಕಿಕಡ್ಡಿ ಕಾರ್ಖಾನೆಗಳನ್ನು ಮುಚ್ಚಬೇಕಾಗುವುದೆಂದೂ, ಇದರಿಂದ ೩೦ ಸಾವಿರ ಕಾರ್ಮಿಕರು ನಿರುದ್ಯೋಗಿಗಳಾಗುವರೆಂದೂ ದಕ್ಷಿಣ ಭಾರತದ ಬೆಂಕಿಕಡ್ಡಿ ಕಾರ್ಖಾನೆಯ ಮಾಲೀಕರ ಸಂಘದವರು ತಿಳಿಸಿರುತ್ತಾರೆ

ಎಂ. ಕಾಮಣ್ಣನವರ್ ೬ ತಿಂಗಳು ಜೀವದಾನ.

ಸ್ವಂ.ಸು ಪ್ರೋ] ಬೆಂಗಳೂರು

ಸಂಸ್ಥಾನದ ಹಣಕಾಸಿನ ಇಲಾಖಾ ಕಾರ್ಯದರ್ಶಿ ಶ್ರೀ ಎಂ. ಕಾಮಣ್ಣನವರಿಗೆ ಜೂನ್ ೩ ನೇ ತಾರೀಖಿನಿಂದ ಆರು ತಿಂಗಳು ಕಾಲ ಜೀವದಾನವನ್ನು ಕೊಡಲಾಗಿದೆ

ಸಿವಿಲ್ ಸಪ್ಲೈ ಇಲಾಖೆಯ ಸಿಬ್ಬಂದಿಯಲ್ಲಿ ಕೋತಾ

ಸಿವಿಲ್ ಸಪ್ಲೈ ಇಲಾಖೆಯಲ್ಲಿ ವರ್ಷಕ್ಕೆ ೭೦ ಸಾವಿರ ರೂ ಗಳಷ್ಟು ಸಿಬ್ಬಂದಿ ಕೋತಾ ಮಾಡಲಾಗುವುದೆಂದು ಗೊತ್ತಾಗಿದೆ

ಇಪಿ ಫಕೀರರ ಕೇಂದ್ರದ ಮೇಲೆ ಪಾಕ್ ವಿಮಾನ ಧಾಳಿ

ವಜೀರಿಸ್ತಾನದಲ್ಲಿರುವ ಗ್ರ್ಯಾಮ್ ಶಿಬಿರದೊಳಗೆ ನೆಲೆಯನ್ನು ಸ್ಥಾಪಿಸಿಕೊಂಡಿರುವ ಇಪಿ ಫಕೀರರ ಕೇಂದ್ರದ ಮೇಲೆ ಪಾಕಿಸ್ತಾನದ ವಿಮಾನಗಳು ೩ ಸಾರಿ ಧಾಳಿ ನಡೆಸಿದುವೆಂದು ಹೇಳಲಾಗಿದೆ. ಇದನ್ನು ಫಕ್ತೂನ್ ಸೈನಿಕರು ಗುಂಡು ಮತ್ತು ವಿಮಾನ ವಿಧ್ವಂಸಕ ಬಂದೂಕಗಳಿಂದ ಎದುರಿಸಿದರೆಂದು ವರದಿಯಾಗಿದೆ. ಧಾಳಿ ಮಾಡಿದಾಗ ಫಕ್ತೂನಿಸ್ತಾನ ರಾಜ್ಯಸ್ಥಾಪನೆ ಬಗ್ಗೆ ಗುಡ್ಡಗಾಡಿನ ಮುಖಂಡರು ಸಭೆ ನಡೆಸುತ್ತಿದ್ದರೆಂದು ವರದಿಯಾಗಿದೆ. ಆ ಜನರಲ್ಲಿ ಶತಮಾನಗಳಿಂದ ಇದ್ದ ವ್ಯಾಜ್ಯಗಳನ್ನು ಒತ್ತರಿಸಿ, ಅವರು ಒಟ್ಟಾಗಿ ಸೇರಿದ್ದುದು ಇದೇ ಮೊದಲೆಂದೂ, ಗಡಿನಾಡಿನ ಮೂವರು ಪ್ರತಿನಿಧಿಗಳೂ ಅವರಲ್ಲಿ ಭಾಗವಹಿಸಿದ್ದರೆಂದೂ ಹೇಳಲಾಗಿದೆ

ಸಹಕಾರ ಸಂಘಗಳ ಅಧಿಕಾರಿಯ ಮೇಲೆ ಕೈಮಾಡಿದ್ದಕ್ಕಾಗಿ ದಸ್ತಗಿರಿ

ಮಳವಳ್ಳಿ ತಾಲ್ಲೂಕು ಕಲ್ಕುಣಿ ಗ್ರಾಮದಲ್ಲಿ ಕಳೆದ ಭಾನುವಾರ ರಾತ್ರಿ ಸಹಕಾರ ಸಂಘಗಳ ಇನ್ಸ್‌ಪೆಕ್ಟರ್ ಶ್ರೀ ವೇಣುಗೋಪಾಲ ಶೆಟ್ಟಿಯವರ ಮೇಲೆ ಕೈ ಮಾಡಿದರೆಂದು ಸಿದ್ದೇಗೌಡ, ದ್ಯಾವಯ್ಯ ಎಂಬುವರನ್ನು ದಸ್ತಗಿರಿ ಮಾಡಲಾಗಿದೆ. ಅಲ್ಲಿನ ಗ್ರಾಮ ಸಹಕಾರ ಸಂಘದ ಉಪ ಕಾರ್ಯದರ್ಶಿ ನಾಗರಾಜ್‌ರವರು ಪತ್ತೆಯಿಲ್ಲವೆಂದೂ, ಸಂಘದ ೩ ಸಾವಿರ ರೂ ಗಳ ಪದಾರ್ಥಗಳು ಗೈರ್‌ವಿಲೆಯಾಗಿವೆಯೆಂದೂ ತಿಳಿದುಬಂದಿದೆ

ಅಮರಭೂಪಾಳಿ ಚಿತ್ರಕ್ಕೆ ಗೋವಾದಲ್ಲಿ ನಿಷೇಧ

ಭಾರತದ ರಾಷ್ಟ್ರಧ್ವಜವನ್ನು ತೋರಿಸುವ ದೃಶ್ಯಗಳು ಇರುವುದರಿಂದ ಮರಾಠಿಯ 'ಅಮರ ಭೂಪಾಳಿ' ಚಿತ್ರವು ಗೋವಾ ಪ್ರಜೆಗಳ ಹಿತಕ್ಕೆ ಧಕ್ಕೆಯುಂಟು ಮಾಡುವುದೆಂದು ಅಲ್ಲಿನ ಸರ್ಕಾರದವರು ಆ ಚಿತ್ರದ ಪ್ರದರ್ಶನವನ್ನು ನಿಷೇಧಿಸಿರುವರೆಂದು ವರದಿಯಾಗಿದೆ

ವಿಮಾನ ಕಾರ್ಖಾನೆ ರಕ್ಷಣಾ ಖಾತೆ ವಶದಲ್ಲೇ

ಹಿಂದೂಸ್ತಾನ್ ವಿಮಾನ ಕಾರ್ಖಾನೆಯು ಭಾರತದ ರಕ್ಷಣಾ ಇಲಾಖೆಯ ವಶದಲ್ಲೇ ಇರುವುದೆಂದೂ, ಅದನ್ನು ಉತ್ಪನ್ನ ಖಾತೆಗೆ ಒಪ್ಪಿಸಲಾಗುವುದಿಲ್ಲವೆಂದೂ ತಿಳಿದುಬಂದಿದೆ.

ಭಾರತದ ಚುನಾವಣಾ ವೆಚ್ಚ ೯ ಕೋಟಿ

ಭಾರತದಲ್ಲಿ ನಡೆದ ಮಹಾ ಚುನಾವಣೆಗಳಿಗಾಗಿ ಒಂಭತ್ತು ಕೋಟಿಗಿಂತಲೂ ಹೆಚ್ಚಾಗಿ ಸರ್ಕಾರದವರು ಹಣವನ್ನು ವ್ಯಯ ಮಾಡಿರುವರೆಂದು ವರದಿಯಾಗಿದೆ

ಕೆ. ಎಂ. ಪಿ. ಪಕ್ಷದ ಕಾರ್ಯಕಾರಿ ಸಮಿತಿ

ಸಂಸ್ಥಾನದ ಕೆ. ಎಂ. ಪಿ ಪಕ್ಷದ ಕಾರ್ಯಕಾರಿ ಸಮಿತಿಗೆ ಪಕ್ಷದ ಅಧ್ಯಕ್ಷರಾದ ಶ್ರೀ ಬಿ ಹುಚ್ಚೇಗೌಡರು ಕೆಳಗೆ ಕಂಡವರನ್ನು ಅಧಿಕಾರ ವರ್ಗ ಮತ್ತು ಸದಸ್ಯರಾಗಿ ತೆಗೆದುಕೊಂಡಿರುತ್ತಾರೆ —

ಉಪಾಧ್ಯಕ್ಷ ಸ್ಥಾನಕ್ಕೆ- ಶ್ರೀ ಎಲ್ ಸಿದ್ದಪ್ಪ, ಕಾರ್ಯದರ್ಶಿ- ಶ್ರೀ ಕೆ ಎಂ ನಾಗಣ್ಣ, ಜಂಟಿ ಕಾರ್ಯದರ್ಶಿ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್, ಸ್ಥಾನಸ್ಥ ಕಾರ್ಯದರ್ಶಿ- ಶ್ರೀ ಎಂ ಸಿ ಲಿಂಗೇಗೌಡ, ಖಜಾಂಚಿ ಶ್ರೀ ವೈ ವಿ ಶ್ರೀನಿವಾಸನ ಆರ್ಕ ಸದಸ್ಯರು- ಶ್ರೀಗಳಾದ ಬಿ ಟಿ ರಾಮಯ್ಯ, ಎಂ ಲಿಂಗೇಗೌಡ, ಬಿ ಜಿ ದಾಸ್, ಎಂ ಎಸ್ ಗುರುಪಾದಸ್ವಾಮಿ, ಕೆ ಚಿಕ್ಕಲಿಂಗಯ್ಯ, ಎಸ್ ರಾಮಪ್ಪ, ಎಂ ಎಸ್ ಪಾಪಣ್ಣ, ಕೆ ನಂಜುಂಡಂ, ವೈ ಧರ್ಮಪ್ಪ, ಟಿ ನಾಗಪ್ಪ, ಎಸ್ ಎಂ ಸಿದ್ದಯ್ಯ, ಎಂ ಚಿಕ್ಕಲಿಂಗಯ್ಯ ಎಚ್ ಜಿ ನರಸಿಂಹೇಗೌಡ ಮತ್ತು ಜ|| ಮಹಮದ್ ಇಮಾಂ

ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶದ ಪ್ರಕಟಣೆ

ಮೈಸೂರು ಸ್ಕೂಲ್ ಫೈನಲ್ ಪರೀಕ್ಷಾ ಫಲಿತಾಂಶವು ನಾಳೆದ್ದು ಬೆಳಗ್ಗೆ ೧೧ ಗಂಟೆಗೆ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಪ್ರಕಟಿಸಲ್ಪಡುವುದು

ನಗರಾಭಿವೃದ್ಧಿ ಸಮಿತಿ ಕಛೇರಿ

ಮೈಸೂರು ತಾ|| ೩೦-೫-೫೨

ಅಪೂರ್ವ ಸಮಯ! ಅಪೂರ್ವ ಸದವಕಾಶ!

ಪ್ರಕಟಣೆ

ಅಂಗಡಿ ನಿವೇಶನಗಳ ಹರಾಜು

——:0.——

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ - ಮೇಲ್ಕಂಡ ಸಮಿತಿಯವರಿಂದ ಮೈಸೂರು ಸಿಟಿ ದೇವರಾಜ ಮಾರ್ಕೆಟ್ ಮತ್ತು ಲ್ಯಾನ್ಸ್‌ಡೌನ್ ಬಜಾರ್ ಮಧ್ಯೆ ಹೊಸದಾಗಿ ನಿರ್ಮಿಸಲ್ಪಡುತ್ತಿರುವ ಸ್ಥಾಪನೆ ಸರ್ಕಲ್ಲಿನಲ್ಲಿ ನಮೂದಿಸಿರುವ ಅನುಕ್ರಮಣಿಕೆಯ 33 ಅಂಗಡಿ ನಿವೇಶನಗಳನ್ನು ತಾ|| 30-5-52 ನೇ ಮುಕ್ಕಾಂ ಹರಾಜು ಹರಿಸ್ಸುಗಳಿಗೆ ಒಳಪಟ್ಟ ತಾ|| 16-6-52 ನೇ ಸೋಮವಾರ ಬೆಳಗ್ಗೆ 9 ಘಂಟೆ ಆಗಾಯಿತು ಮತ್ತು ಅವಶ್ಯವಿದ್ದರೆ ಮರು ದಿನ ಸಹ ಬೆಳಗ್ಗೆ 9 ಘಂಟೆ ಆಗಾಯಿತು ನಿವೇಶನದ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ಪಿ. ಗೋಪಾಲಕೃಷ್ಣ ಶೆಟ್ಟಿ
ಅಧ್ಯಕ್ಷರು

ಗ್ರಹದಿಂದ ಗ್ರಹಕ್ಕೆ ವಿಮಾನಯಾನ ವ್ಯವಸ್ಥೆ

ಅಂತರ ಗ್ರಹಗಳ ಪ್ರಯಾಣವು ಸಫಲವಾಗುವುದಾದರೆ, ಭೂಮಿಗೆ ಸಹಸ್ರಾರು ಮೈಲಿ ದೂರ ಹೋಗಬಲ್ಲ ಶಕ್ತಿಯುತ ವಿಮಾನವನ್ನು ನಿರ್ಮಿಸುವ ಬಗ್ಗೆ ಅಮೆರಿಕದಲ್ಲಿ ಆಲೋಚನೆ ನಡೆದಿದೆ

ಬೆಂಗಳೂರಿನಲ್ಲಿ ಡಾ. ಎಂ. ಸಿ. ಮೋದಿಯವರ ನೇತ್ರ ಚಿಕಿತ್ಸೆ

ಕರ್ನಾಟಕದ ಸುಪ್ರಸಿದ್ಧ ನೇತ್ರ ತಜ್ಞ ಡಾ|| ಮೋದಿಯವರ ಧರ್ಮಾರ್ಥ ನೇತ್ರ ಚಿಕಿತ್ಸಾ ಶಿಬಿರದಲ್ಲಿ ನೇತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಈಗಾಗಲೇ ೩೦೦೦ ಜನರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿರುತ್ತಾರೆ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಲು ಅರ್ಜಿಗಳನ್ನು ಹಾಕಿದ್ದೂ ಸಹ ಅವರಿಗೆ ಏನೂ ಉತ್ತರ ಬಾರದೆ ಇದ್ದವರು ನೇರವಾಗಿ ಕ್ಯಾಂಪು ನಡೆಯುವ ಬಡುದೇವ ಹಾಸ್ಟೆಲ್ ಬಿಲ್ಡಿಂಗ್, ಶೇಷಾದ್ರಿ ರಸ್ತೆ, ಬೆಂಗಳೂರು ಇಲ್ಲಿಗೆ ಬಂದು ನೇತ್ರ ಪರೀಕ್ಷೆ ಮಾಡಿಸಿಕೊಳ್ಳಬಹುದು ಎಂದು ಸ್ವಾಗತ ಸಮಿತಿಯ ಜಂಟಿ ಕಾರ್ಯದರ್ಶಿ ಎಂ ಸುಬ್ಬರಾಯರು ತಿಳಿಸಿರುತ್ತಾರೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭.೩೦ ತಿಪ್ಪೆ ಕೃಷ್ಣಯ್ಯಂಗಾರ್ ಸಂಗೀತ ವ ಧ್ಯಾಹ್ನ ೧೨.೨೦ ದಿಲ್ರುಬಾ ..... ಸಿಸ್ಟರ್ಸ್ ಕಲಾವಿದರು ಸಂಜೆ ೫.೩೦ ಮತ್ತು ೬.೩೦ ಆರ್ ವಿಶ್ವೇಶ ಕಲ್ಯಾಣ ಸುಂದರಂ ಸಂಗೀತ ೭.೧೦ ಗಾನ ವಿಹಾರ ೭ ಹೆಚ್ ಆರ್ ಲೀಲಾವತಿ ಹಿಂದಿ ಗೀತೆ ೮ ಗೀತಾ ಮಾಲಾ ೯ ಗಂಟೆ ಚಿತ್ರ ಸಂಗೀತ ೯.೩೦ ಆರ್ಕೆಸ್ಟ್ರಾ

ರಾಜಕಮಲ್,
ಮೈಸೂರು
6—6—52 ರಿಂದ ಪ್ರಾರಂಭ
ಪ್ರತಿದಿನ 3 ಆಟಗಳು
ದಿ ಸೀಕ್ರೆಟ್ ಆಫ್
ಎ ಸ್ಟ್ರೇಂಜರ್ ಐಲೆಂಡ್
ಎಂಟು ರೋಮಾಂಚಕರವಾದ
ಭಾಗಗಳ ಸೀರಿಯಲ್

ಪ್ರಾರ್ಥನಾ ಭಾಷಣ ಕಾಲದಲ್ಲೇ ೩ ಅಂಗುಲ ಮಳೆ

ಕಡಲೂರು ಬಳಿ ವಿರುಪ್ಪಾಚಿಯಲ್ಲಿರುವ ಶ್ರೀ ರಾಮ ದೇವಾಲಯದಲ್ಲಿ ಕೆಲವು ಕಾಲ ಕುಂಭಾಭಿಷೇಕ ನಡೆದು ಶ್ರೀ ಟಿ. ಎ. ಕಾಶೀನಾಥಯ್ಯರೆಂಬುವರು ರಾಮಾಯಣದ ಮೇಲೆ ಉಪನ್ಯಾಸ ಮಾಡುತ್ತಿದ್ದಾಗ, ಒಬ್ಬ ಗೌಡರು ಎದ್ದು ಮಳೆಯು ಹುಯ್ಯದೆ ಇರುವಾಗ ಅಭಿಷೇಕ ಮತ್ತು ಉಪನ್ಯಾಸಗಳಿಂದ ಪ್ರಯೋಜನವೇನೆಂದು ಕೇಳಲಾಗಿ, ಉಪನ್ಯಾಸಕರು ಕಾಳ್ಗಿಯಿಂದ ಪತ್ನಿ ಬಾರಿ ರಾಮನಾಮ ಜಪ ಮಾಡುವಂತೆ ಹೇಳಿದರೆಂದೂ, ಅವರ ಉಪನ್ಯಾಸವು ಅರ್ಧವಾಗುತ್ತಲೇ ೩ ಅಂಗುಲದಷ್ಟು ಮಳೆ ಬಿದ್ದು, ಎಲ್ಲರಿಗೂ ಆಶ್ಚರ್ಯವಾಯಿತೆಂದೂ ಹೇಳಲಾಗಿದೆ

ಸೆಕೆಂಡರಿ ವಿದ್ಯಾಭ್ಯಾಸ ಸಮಿತಿ ಸದಸ್ಯರು

ಸೆಕೆಂಡರಿ ವಿದ್ಯಾಭ್ಯಾಸದ ಸಮಿತಿಗೆ ಶ್ರೀಗಳಾದ ಎಂ ವಿ ರಾಮರಾವ್, ಡಿ ಆರ್ ನಾರಾಯಣರಾವ್, ಎಸ್ ಸುಬ್ರಹ್ಮಣ್ಯಂ ಮತ್ತು ಟಿ. ಎಸ್. ರಾಜಲಕ್ಷ್ಮಂ ರವರನ್ನು ನಾಮಕರಣ ಮಾಡಿರುತ್ತಾರೆ

ಸಿಡಿಲಿನಿಂದ ಮರಣ

ರಾಜಧಾನಿಯ ಚಾಮುಂಡಿಪುರದ ಎಲೆ ತೋಟದಲ್ಲಿ ನೆನ್ನೆ ಮಧ್ಯಾಹ್ನ ಸಿಡಿಲು ಬಡಿದು ಮಂಚಯ್ಯ ಎಂಬ ಯುವಕನು ಮಡಿದನೆಂದು ವರದಿಯಾಗಿದೆ ಅವನ ಪಕ್ಕದಲ್ಲಿದ್ದ ಎಮ್ಮೆಯೂ ಸಹ ಮರಣ ಹೊಂದಿತೆಂದು ಗೊತ್ತಾಗಿದೆ

ಚಾಮುಂಡೇಶ್ವರಿ
ಟಾಕೀಸ್
6-6-52 ರಿಂದ ಜಯಭೇರಿಯಾದ
2 ನೇ ವಾರ
ಧರ್ಮದೇವತೆ
ತೆಲುಗು
ತಾರೆ : ಶಾಂತಕುಮಾರಿ, ಅಂಜಲಿ ದೇವಿ, ಸುಬ್ಬಯ್ಯ ನಾಯುಡು, ಶ್ರೀರಂಜನಿ, ರೇಲಂಗಿ ಮುಂತಾದವರು

Edited, Printed and Published by A R Nagarajan at Sadhvi Press, D. Subbiah Road, Mysore

ಕಮಿಷನ್ ಗೋಷ್ಠಿಗಾಗಿ ಭಾರತದ ಪ್ರಾರ್ಥನೆ

ಕೆನಡಾದಿಂದ ಬಂದ ಸುದ್ದಿ ಗೋಷ್ಠಿಯನ್ನು ಕರೆಯಬೇಕೆಂದು ಆ ದೇಶವನ್ನು ಭಾರತವು ಪ್ರಾರ್ಥಿಸುತ್ತಿದೆಯೆಂದು ವರದಿಯಾಗಿದೆ ಅಮೆರಿಕಕ್ಕೆ ಸಹ ಗೋಷ್ಠಿ ಕರೆಯುವಂತೆ ಕೇಳಲಾಗಿದೆಯೆಂದು ಗೊತ್ತಾಗಿದೆ

ಸರ್ಕಾರದ ವಿರುದ್ಧ ಕಾನೂನು

ಬೆಂಗಳೂರಿನ ಹೈಕೋರ್ಟ್ ಶ್ರೀ ಟಿ. ವಿ. ಲಂಕೆಪ್ಪನವರು ಅಧಿಕಾರಿಗಳಾಗಿದ್ದ ಕಾಲದ "ಪತ್ರಿಕೆ" ಯನ್ನು ಅಲ್ಲಿನ ಶಾಸನ ವಿರುದ್ಧವಾದ ಸಂಸ್ಥೆಯು ಸಿಟಿ ನಲ್ಲಿ ಸೇರಿಸಲಾಗುವುದೆಂದು ಶ್ರೀ ಲಂಕೆಪ್ಪನವರು ಹೇಳಿ, ಸರ್ಕಾರದ ಪ್ರಕಟಣೆಯು ಕೋರ್ಟಿನ ಮೂಲಕ ವಿವಾದ ವಿಚಾರಣೆಯಾಗಬೇಕು ಇಲ್ಲದೇ ಹೋದಲ್ಲಿ ಅವರು ರಾಜೀನಾಮೆ ಕೊಡಬೇಕೆಂದು ತಿಳಿಸುತ್ತಾರೆ.

ವಿದ್ಯಾರಣ್ಯರ ಸ್ಮಾರಕೋತ್ಸವ

ರಾಜಧಾನಿಯ ಸಂಸ್ಕೃತ ಪಾಠಶಾಲೆಯ ಮಹೋತ್ಸವ ಸಭೆಯು ಅಧ್ಯಕ್ಷತೆಯಲ್ಲಿ ಶ್ರೀಮದ್ ವಿದ್ಯಾರಣ್ಯರ ಸ್ಮಾರಕೋತ್ಸವವು ಶ್ರೀ ಚಾಮರಾಜ ಸಂಸ್ಕೃತ ಪಾಠಶಾಲೆಯಲ್ಲಿ ನೆರವೇರುವುದು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ರವರು ಅಧ್ಯಕ್ಷತೆ ವಹಿಸುವರು ನಾಳೆ ಬೆಳಗ್ಗೆ ವಿದ್ಯಾರಣ್ಯರ ಪೂಜೆಯೂ, ಸಂಜೆ ೬ ಗಂಟೆಗೆ ಅವರ ಮಹಿಮೆಯ ವಿಚಾರವಾಗಿ ಶ್ರೀ ಎಸ್ ವಿ ಪರಮೇಶ್ವರ ಭಟ್ಟರಿಂದ ಉಪನ್ಯಾಸವೂ ನಡೆಯುವುವು

ಬರಲಿದೆ! ! ಬರಲಿದೆ!
"ಸಿಂಧು"
ಕನ್ನಡ ವಾರ ಪತ್ರಿಕೆ
ಬೇಜಾರಿಗೆ ಮದ್ದು
—: ಸಂಪಾದಕ :—
ಪಾ. ನ. ರಾಮಚಂದ್ರನ್ ಬಿ ಎ
ನಂ 13 ರಾಮಾನುಜ ಅಗ್ರಹಾರ,
ಮೈಸೂರು

ಪ್ರಭಾ 6.6.52 ರಿಂದ
2 ನೇ ವಾರ
ದಿನವೂ 3 ಆಟಗಳು
ಭಾರತ ದೇಶದಲ್ಲಿ ಅನೇಕ ಥಿಯೇಟರ್‌ಗಳಲ್ಲಿ ಪ್ರದರ್ಶನದಲ್ಲಿ ಪ್ರಶಂಸೆ ಪಡೆದು ನೂರಾರು ವಾರಗಳು ಪ್ರದರ್ಶಿಸಲ್ಪಟ್ಟು ಜನಪ್ರಿಯತೆ ಗಳಿಸಿರುವ ಚಿತ್ರ
ಅಮರ ಭೂಪಾಳಿ
ನಿರ್ದೇಶನ — ವಿ ಶಾಂತಾರಾಂ

— MORNING SHOWS —
From 6-6-52 For 3 days
Eagle Lion's
SUN DOWNERS
With— Robert Preston
Chilliwills

ಪ್ರಖ್ಯಾತ ತಾರೆ ನರ್ಗೀಸಳ ತಯಾರಿಕೆ
ಬೊಂಬಾಯಿ ನಗರದಲ್ಲಿ ಕಿಕ್ಕಿರಿದ ಜನ ಸಮುದಾಯಕ್ಕೆ ಪ್ರದರ್ಶಿಸಲ್ಪಡುತ್ತಿದೆ
ಸಂಸ್ಥಾನದಲ್ಲೇ ಪ್ರಥಮ ಪ್ರದರ್ಶನ
ಒಲಿಂಪಿಯಾ — 5-6-52 ರಿಂದ
ದಿನವೂ 3 ಆಟಗಳು ಅನೇಕ ಸ್ಥಾರಂಭ
"ಗೀತ್ ಆರ್ ಪ್ರೊಡಕ್ಷನ್ಸ್‌ರವರ ಉನ್ನತ ಹಾಸ್ಯ ಮನೋರಂಜಕ ಚಿತ್ರ
ನರ್ಗೀಸ್, ತ್ರಿಲೋಕ್ ಕಪೂರ್, ಪ್ರಾಣ್, ನೀಲಂ ಮತ್ತು ಕಕ್ಕು ನಟಿಸಿರುವ
ಪ್ಯಾರ್ ಕಿ ಬಾತೇ
ಚೆಲುವ ಪ್ರವರ್ತಕ — ಸಂಗೀತ ನಿರ್ದೇಶಕರು ಬುಲೋ ಸಿ ರಾನಿ ಹರದೇಶ್

ಹೊಸ ಹೊಸ ರೇಷ್ಮೆ ಸೀರೆಗಳನ್ನು
ಮದುವೆಗಳಿಗಾಗಿ ತರಿಸಿದ್ದೇವೆ. ಬೆಲೆ ಸುಲಭ
M. V. ಬೋಜಯ್ಯ, ಬಿ ಎ
ಅಶೋಕ ರೋಡ್ ಬಳಿ, ಮೈಸೂರು.

ರಿಜಿಸ್ಟರ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೬ ೬-೫೨ [ಸಂಚಿಕೆ ೨೬೩

ದಕ್ಷಿಣ ಆಫ್ರಿಕದಲ್ಲಿ ಡಾ|| ದಾದೂರ ಬಂಧನ!

ಪೌರ ಸಭೆಯಲ್ಲಿ ಸಭಾ ಪರಿತ್ಯಾಗ

ಸ್ವೈರ ವರ್ತನೆ ಬಗ್ಗೆ ನಿರ್ಣಯದ ವಿರುದ್ಧ ಪ್ರತಿಭಟನೆ

ಮೈಸೂರು ೬

ನೆನ್ನೆ ಮಧ್ಯಾಹ್ನ ಪೌರಸಭೆಯ ಮುಂದುವರಿದ ಅಧಿವೇಶನವು ಸೇರಿತ್ತು. ಪೌರಸಭೆಯ ಮಾಜಿ ಉಪಾಧ್ಯಕ್ಷರೂ ಮತ್ತು ಹಾಲಿ ಸದಸ್ಯರೂ ಆದ ಶ್ರೀ ಎಂ ಎಸ್ ನಂಜಪ್ಪನವರು ದೇವರಾಜಾ ಮಾರ್ಕೆಟ್ಟಿನಲ್ಲಿ ಅಂಗಡಿ ಮಳಿಗೆಯನ್ನು ಬಾಡಿಗೆಗೆ ತೆಗೆದುಕೊಂಡು ಅದನ್ನು ಸಬ್ ಲೆಟ್ ಮಾಡಿದ ಬಗ್ಗೆ ಅವರ ಮೇಲೆ ಕೋರ್ಟಿನಲ್ಲಿ ಕ್ರಮ ಜರುಗಿಸಬೇಕೆಂದು ಸಭೆಯ ನ್ಯಾಯಾಂಗ ಸಮಿತಿಯ ಶಿಫಾರಸಿನ ನಿರ್ಣಯವು ಚರ್ಚೆಯಾಯಿತು

ಶ್ರೀ ಎ ವೆಂಕಟೇಶಯ್ಯನವರು ಸೂಚಕರಾಗಿ, ಶ್ರೀ ನಂಜಪ್ಪನವರು ಕಳೆದ ಆರೇಳು ವರ್ಷಗಳಿಂದ ಅಕ್ರಮವಾಗಿ ಅಂಗಡಿಯನ್ನು ಬಾಡಿಗೆಗೆ ಕೊಟ್ಟಿರುವರೆಂದೂ, ಮೊದಲು ಶ್ರೀ ರಾಜಾರಾಯರೆಂಬ ವ್ಯಾಪಾರಿಗೂ, ಅನಂತರ ಒಬ್ಬ ಇನ್ಶೂರೆನ್ಸ್ ಏಜೆಂಟರಿಗೂ ಕೊಟ್ಟು, ಕಡೆಯದಾಗಿ ಶ್ರೀ ಗಣೇಶರಾವ್ ಎಂಬ ಬಟ್ಟೆ ವ್ಯಾಪಾರಿಗಳಿಗೆ ಅಕ್ರಮವಾಗಿ ಬಾಡಿಗೆಗೆ ಕೊಟ್ಟಿರುವರೆಂದೂ ನುಡಿದರು ಹಿಂದೆ ಇದರ ಬಗ್ಗೆ ಪ್ರಶ್ನಿಸಲಾಗಿ ತಾವು ಬಾಡಿಗೆಯನ್ನು ತೆಗೆದುಕೊಂಡಿಲ್ಲವೆಂದೂ, ಅನಂತರ ತಾವೇ ಇನ್ಶೂರೆನ್ಸ್ ಕಂಪನಿಯ ಏಜೆಂಟರೆಂದೂ ತಿಳಿಸಿ ಕಡೆಯದಾಗಿ ಈಗ ತಾವು ಶ್ರೀ ಗಣೇಶರಾಯರೊಡನೆ ವ್ಯಾಪಾರದಲ್ಲಿ ಪಾಲುದಾರರಾಗಿರುವುದಾಗಿ ಹೇಳುತ್ತಾರೆಂದೂ ಆದರೆ ಅವರ ಪಾಲುದಾರಿಕೆ ಪತ್ರವು ನ್ಯಾಯಸಮ್ಮತವಾಗಿಲ್ಲವೆಂದೂ, ಸಭಾ ಸದಸ್ಯರಾದ ಅವರು ಇತರರಿಗೆ ಮಾದರಿಯಾಗಿರುವಂತೆ ನಡೆದುಕೊಳ್ಳದಿರುವುದು ಖೇದಕರವಾದುದೆಂದೂ, ಪುರಸಭೆಯು ಅವರ ಮೇಲೆ ಕ್ರಮ ಕೈಗೊಳ್ಳುವುದು ಸೂಕ್ತವೆಂದೂ ಹೇಳಿದರು.

ತಮಗೂ ಮತ್ತು ತಮ್ಮ ಪಾಲುದಾರರಾದ ಶ್ರೀ ಗಣೇಶರಾಯರಿಗೂ ಒಟ್ಟಿಗೆ ಅಂಗಡಿಯನ್ನು ಬಾಡಿಗೆಗೆ ಕೊಡಬೇಕೆಂದು ಶ್ರೀ ನಂಜಪ್ಪನವರು ಸಲ್ಲಿಸಿದ್ದ ಅರ್ಜಿಯನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು

ಶ್ರೀ ಕಾಲಹಳ್ಳಿ ಸೀತಾರಾಮಯ್ಯನವರು ಮಾತನಾಡಿ ಶ್ರೀ ನಂಜಪ್ಪನವರ ವರ್ತನೆಯನ್ನು ಖಂಡಿಸಿ ಅವರ ಮೇಲೆ ಕ್ರಮ ಕೈಗೊಳ್ಳಲು ಕೆಲವು ಕಾನೂನಿನ ತೊಂದರೆಗಳಿವೆಯೆಂದೂ ಪುರಸಭೆಯು ಅವರ ಅರ್ಜಿಯ ಪ್ರಕಾರ ಕರಾರು ಮಾಡಿಕೊಂಡು ಹೆಚ್ಚಿನ ಬಾಡಿಗೆಯನ್ನು ಪಡೆಯಬಹುದೆಂದೂ ಕೋರ್ಟಿನಲ್ಲಿ ಕ್ರಮವೇನೂ ಅವಶ್ಯಕವಿಲ್ಲವೆಂದೂ ನುಡಿದರು

ಅನಂತರ ಕೆಲವು ಸದಸ್ಯರು ಮಾತನಾಡಿ ಚರ್ಚೆಯಾದ ಮೇಲೆ ಶ್ರೀ ನಂಜಪ್ಪ ಮತ್ತು ಅವರ ಪಾಲುದಾರರು ಒಟ್ಟಾಗಿ ತಿಂಗಳಿಗೆ ೧೨೫ ರೂ ಕೊಡುವ ಆ ಅಂಗಡಿಯ ಬಾಡಿಗೆದಾರರನ್ನಾಗಿ ಕಳೆದ ಡಿಸೆಂಬರ್ ತಿಂಗಳಿಂದ ಪರಿಗಣಿಸತಕ್ಕದ್ದೆಂದೂ, ಇದು [illegible] ಹೋಗಿದ್ದಲ್ಲಿ ಅವರ ಮೇಲೆ ಕ್ರಮ ಜರುಗಿಸತಕ್ಕದ್ದೆಂದೂ ಶ್ರೀ ಸಿ ಸೀತಾರಾಮಯ್ಯನವರು ತಂದ ನಿರ್ಣಯವನ್ನು ಶ್ರೀ ಕೆ ಪುಟ್ಟಸ್ವಾಮಿಯವರು ಅನುಮೋದಿಸಿದರು

ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಅದನ್ನು ವಿರೋಧಿಸಿ, ಪುರಸಭೆಯು ನಂಜಪ್ಪನವರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಅದು ಸಭೆಗೆ ಅವಮಾನವೆಂದು ಹೇಳಿದರು ಅನಂತರ ನಿರ್ಣಯವನ್ನು ಸಭೆಯು ೬ ೪ ಮತಗಳಿಂದ ಅಂಗೀಕರಿಸಿತು

ಶ್ರೀಗಳಾದ ಎ ವೆಂಕಟೇಶಯ್ಯ, ಬಿ ಕೆ ರಾಮಕೃಷ್ಣಯ್ಯ, ಬಿ ಸುಬ್ಬಣ್ಣ, ಮತ್ತು ಬಿ ನಾರಾಯಣಪ್ಪನವರು ನಿರ್ಣಯವನ್ನು ಪ್ರತಿಭಟಿಸಿ ಸಭಾ ಪರಿತ್ಯಾಗ ಮಾಡಿದರು

ಧಾನ್ಯದ ವಸೂಲಿ ಬೆಲೆ ಇಳಿಸಲು ಪ್ರಾಂತ್ಯಗಳಿಗೆ ಸಲಹೆ

ಆಹಾರ ಧಾನ್ಯಗಳು ಹೇರಳವಾಗಿ ದೊರೆಯುವ ಕಡೆಗಳಲ್ಲಿ ಸರ್ಕಾರದವರು ಅವನ್ನು ಕೊಳ್ಳುವ ಬೆಲೆ ಕಡಿಮೆ ಮಾಡಬೇಕೆಂದು ಕೇಂದ್ರ ಸರ್ಕಾರದವರು ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯಿತ್ತಿರುವರೆಂದು ಭಾರತದ ಆಹಾರ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು ಚೀಣವು ಭಾರತಕ್ಕೆ ನಗದು ವ್ಯಾಪಾರದಮೇಲೆ ಒಂದುಲಕ್ಷ ಟನ್ ಅಕ್ಕಿಯನ್ನು ಸರಬರಾಜು ಮಾಡಲು ಒಪ್ಪಿರುವುದಾಗಿಯೂ ಅವರು ತಿಳಿಸಿ ಈ ಬಗ್ಗೆ ಚೀಣಕ್ಕೆ ಕೃತಜ್ಞತೆಯನ್ನು ಸೂಚಿಸಿರುವರು

ಫಕ್ತೂನಿಸ್ತಾನ ಬಿಡಲು ಪಾಕಿಸ್ತಾನಕ್ಕೆ ಎಚ್ಚರಿಕೆ

ಇಪಿ ಫಕೀರರ ಕೇಂದ್ರ ಸ್ಥಾನವಾದ ಗ್ರೂಯಿಕ್ ಎಂಬಲ್ಲಿ ಈಚೆಗೆ ನಡೆದ ಫಕ್ತೂನ್ ಜನರ ಭಾರಿ ಸಭೆಯಲ್ಲಿ ಪಾಕಿಸ್ತಾನವು ಫಕ್ತೂನಿಸ್ತಾನ ಪ್ರದೇಶದಿಂದ ವಾಪಸ ಹೋಗುವಂತೆ ಸೂಚಿಸುವ ನಿರ್ಣಯವನ್ನು ಮಾಡಲಾಗಿದೆ ಸಭೆಗೆ ಇಪಿ ಫಕೀರರು ಅಧ್ಯಕ್ಷತೆ ವಹಿಸಿದ್ದರು ಪಾಕಿಸ್ತಾನವು ನಿರ್ಣಯದ ಪ್ರಕಾರ ನಡೆಯದಿದ್ದರೆ ಫಕ್ತೂನಿಸ್ತಾನ ಪ್ರಜೆಗಳು ರಾಷ್ಟ್ರಾದ್ಯಂತ ಚಳುವಳಿಯನ್ನು ಹೂಡಲಿರುವುದಾಗಿಯೂ ಎಚ್ಚರಿಕೆ ಕೊಡಲಾಗಿದೆ

ಹಿರಿಯ ಶಾಸನ ಸಭಾ ಸದಸ್ಯರ ಸಂಬಳ ಮತ್ತು ಭತ್ಯ

ರಾಜಪ್ರಮುಖರ ಆಜ್ಞೆ

ಸ್ವಂ ಸು ಪ್ರೋ] ಬೆಂಗಳೂರು ೬

ಶ್ರೀಮನ್ಮಹಾರಾಜರು ಈ ದಿನ ಸಂಸ್ಥಾನದ ಹಿರಿಯ ಶಾಸನ ಸಭಾ ಸದಸ್ಯರಿಗೆ ಮಾಹೆಯಾನಾ ೧೦೦ ರೂ ಸಂಬಳ, ಅಧಿವೇಶನ ಕಾಲದಲ್ಲಿ ೧೫ ರೂ. ದಿನಭತ್ಯ ಮತ್ತು ಡಬ್ಬಲ್ ಫಸ್ಟ್ ಕ್ಲಾಸ್ ಅಥವಾ ಮೈಲಿಗೆ ೮ ಆಣೆಯಂತೆ ಪ್ರಯಾಣ ಭತ್ಯವನ್ನು ಕೊಡಬೇಕೆಂದು ನಿಗದಿ ಮಾಡಿರುತ್ತಾರೆ ಅಧಿವೇಶನದ ಕಾಲದಲ್ಲಿ ರಜ ಬರುವ ದಿನಗಳು ಮತ್ತು ಅಧಿವೇಶನದ ಮೊದಲ ದಿನ ಮತ್ತು ಅದು ಮುಗಿದ ಮಾರನೇ ದಿನದ ಭತ್ಯಗಳನ್ನೂ ಸಹ ಎಲ್ಲ ಸದಸ್ಯರಿಗೂ ಕೊಡಲಾಗುವುದು

ರೇಸ್ ಕ್ಲಬ್ಬಿನ ಮೇಲೆ ದಾವಾ ವಜಾ

ಈ ದಿನ ಫಸ್ಟ್ ಮುನ್ಸೀಫ್ ಕೋರ್ಟಿನಲ್ಲಿ ಶ್ರೀ ಬಿ ಡಿ ನಾರಾಯಣರವರು ಬೆಂಗಳೂರು ರೇಸ್ ಕ್ಲಬ್ಬಿನ ಮೇಲೆ ದಾವಾ ಹೂಡಿ ಕ್ಲಬ್ಬಿನ ಯಾವ ಸಭೆ ಮತ್ತು ರೇಸುಗಳು ತಮ್ಮ ಗೈರು ಹಾಜರಿಯಲ್ಲಿ ನಡೆಯಕೂಡದೆಂದು ಹೂಡಿದ್ದ ದಾವೆಯನ್ನು ವಜಾ ಮಾಡಿ ಇಂಜಂಕ್ಷನ್ನನ್ನು ರದ್ದುಪಡಿಸಲಾಗಿದೆ

ದ.ಆಫ್ರಿಕಾ ಭಾರತೀಯ ಕಾಂಗ್ರೆಸ್ ಅಧ್ಯಕ್ಷರ ದಸ್ತಗಿರಿ

ಭಾಷಣಗಳನ್ನು ಮಾಡಕೂಡದೆಂಬ ನಿರ್ಬಂಧವನ್ನು ಉಲ್ಲಂಘಿಸಿದುದಕ್ಕಾಗಿ ದಕ್ಷಿಣ ಆಫ್ರಿಕದ ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷ ಯೂಸುಫ್ ದಾದೂ ಮತ್ತು ಟ್ರಾನ್ಸ್‌ವಾಲ್ ಕಾಂಗ್ರೆಸ್ಸಿನ ಕಾರ್ಯದರ್ಶಿ ಡೇವಿಡ್ ಬೊಪಾಪೆಯವರನ್ನು ನೆನ್ನೆ ರಾತ್ರಿ ಜೊಹಾನ್ಸ್‌ಬರ್ಗಿನಲ್ಲಿ ದಸ್ತಗಿರಿ ಮಾಡಲಾಯಿತು

ಲಂಡನ್ನಿನಲ್ಲಿ ಮೈಸೂರು ಟ್ರೇಡ್ ಕಮಿಷನರ ಹುದ್ದೆ ರದ್ದು

ಲಂಡನ್ನಿನಲ್ಲಿ ಮೈಸೂರು ಟ್ರೇಡ್ ಕಮೀಷನರ ಹುದ್ದೆಯನ್ನು ರದ್ದುಮಾಡಿ ಈಗ ಆ ಸ್ಥಾನದಲ್ಲಿರುವ ಶ್ರೀ ವೆಂಕಟಪತಿ ವರೆಡ್ಡಿಯವರು ಹಿಂದಿರುಗಬೇಕೆಂದು ಮೈಸೂರು ಸರ್ಕಾರವು ಅವರಿಗೆ ಸೂಚನೆಯಿತ್ತಿರುವುದಾಗಿ ಗೊತ್ತಾಗಿದೆ

ಶೀಘ್ರದಲ್ಲೇ ೧ ನೇ ತರಗತಿ ರೈಲು ಪ್ರಯಾಣ ರದ್ದು

ಆದಷ್ಟು ಶೀಘ್ರವಾಗಿ ಭಾರತದ ರೈಲ್ವೆಗಳ ಒಂದನೇ ತರಗತಿ ಪ್ರಯಾಣವನ್ನು ತಾವು ರದ್ದುಗೊಳಿಸಲಿರುವುದಾಗಿ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ ಸರಕಾರವು ನಡೆಯುವಂತೆ ಮಾಡಲು ಮುಷ್ಕರ ಹೂಡುವುದನ್ನು ತಪ್ಪಿಸಲು ಮಾಡಲಾಗಿರುವ ರಾಷ್ಟ್ರೀಯ ರಕ್ಷಣಾ ನಿಬಂಧನೆಗಳು ಸಧ್ಯದಲ್ಲಿ ಮುಂದುವರಿಯುವುವೆಂದೂ, ತುಂಬಾ ಅವಶ್ಯಕವಾದರೆ ಅವುಗಳ ಉಪಯೋಗ ಮಾಡಲಾಗುವುದೆಂದೂ ಅವರು ಹೇಳಿರುತ್ತಾರೆ

ವಾರಂಟಿನಲ್ಲಿ ಅಶೋಕಚಕ್ರ ಇಲ್ಲದಿದ್ದುದಕ್ಕೆ ಬಿಡುಗಡೆ

ಅಶೋಕಚಕ್ರದ ಮುದ್ರೆಯು ವಾರಂಟಿನಲ್ಲಿಲ್ಲದಿದ್ದುದರಿಂದ ಅದು ಅಕ್ರಮವೆಂದು ಸೂಚಿಸಿ ದಸ್ತಗಿರಿಯಾದ ರಾಮಗೋಪಾಲ ಖತ್ರಿ ಎಂಬ ವ್ಯಾಪಾರಿಯನ್ನು ಬೊಂಬಾಯಿ ನ್ಯಾಯಾಧೀಶರು ಬಿಡುಗಡೆಮಾಡಲು ಆಜ್ಞೆ ಮಾಡಿರುತ್ತಾರೆ ಆ ಹಣವನ್ನು ಪೆಟಲಿಗೆ ಸೇರಿದೊಯ್ಯಬೇಕಾಗಿತ್ತು ಕೋರ್ಟಿನಿಂದ ಹೊರಗೆ ವ್ಯಾಪಾರಿಯು ನಗುತ್ತಾ ಹೋದನೆಂದು ವರದಿಯಾಗಿದೆ

ಹೋಟೇಲುಗಳಲ್ಲಿ ಅಕ್ಕಿಯ ಪದಾರ್ಥಗಳಿಗೆ ನಿಷೇಧ

ತುಮಕೂರಿನಲ್ಲಿ ಅಧಿಕಾರಿಗಳು ಮತ್ತು ಖಾಸಗಿ ಜನರ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಸಂಸ್ಥಾನದ ಆಹಾರ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ಗಿರಣಿಗಳಲ್ಲಿ ಭತ್ತವನ್ನು ಅಕ್ಕಿ ಮಾಡುವ ಕೆಲಸವನ್ನೂ, ಹೊಟೇಲುಗಳಲ್ಲಿ ಅಕ್ಕಿಯ ಪದಾರ್ಥಗಳ ತಯಾರಿಕೆಯನ್ನೂ ತಾತ್ಕಾಲಿಕವಾಗಿ ನಿರ್ಬಂಧಿಸಬಹುದೆಂದು ತಿಳಿಸಿರುತ್ತಾರೆ ಸಂಸ್ಥಾನದಲ್ಲಿ ಗೋಧಿಯ ದಾಸ್ತಾನು ಈಗ ಅಧಿಕವಾಗಿರುವುದೆಂದೂ, ವ್ಯಾಪಾರಸ್ಥರು ಮಾರಾಟ ಮಾಡಲು ಮುಂದೆ ಬಂದರೆ, ಆ ಧಾನ್ಯವನ್ನು ಅವರಿಗೆ ಒಪ್ಪಿಸಲು ಸರ್ಕಾರದವರು ಸಿದ್ಧವಾಗಿರುವುದಾಗಿಯೂ ಅವರು ಹೇಳಿರುತ್ತಾರೆ

ಕೇಂದ್ರ ಮಂತ್ರಿಗಳ ಭಾಷಣದ ಮರುಪ್ರಸಾರ

ಮೈಸೂರಿನ ಆಲ್ ಇಂಡಿಯಾ ರೇಡಿಯೋ ನಿಲಯದಲ್ಲಿ ನಾಳೆ ಮತ್ತು ನಾಳಿದ್ದು ರಾತ್ರಿ ೮-೩೦ ಘಂಟೆಗೆ ಕೇಂದ್ರ ವಸತಿ ಮತ್ತು ಮಂತ್ರಿ ಸರ್ದಾರ್ ಸ್ವರ್ಣಸಿಂಗ್ ಮತ್ತು ಆರೋಗ್ಯ ಮಂತ್ರಿ ಅಮೃತಕೌರ್‌ರವರು ದೆಹಲಿಯಲ್ಲಿ ಮಾಡುವ ಇಂಗ್ಲಿಷ್ ಭಾಷಣಗಳನ್ನು ಪುನರ್ ಪ್ರಸಾರ ಮಾಡಲಾಗುವುದು

ಖಾರೆಯವರ ವಿಜಯ

ಗ್ವಾಲಿಯರ್ ಮತ್ತು ಶಿವಪುರ ಕ್ಷೇತ್ರದಿಂದ ಪಾರ್ಲಿಮೆಂಟಿನ ಕೆಳಸಭೆಗೆ ನಡೆದ ಉಪಚುನಾವಣೆಯಲ್ಲಿ ಹಿಂದೂ ಮಹಾಸಭೆ ಅಧ್ಯಕ್ಷ ಡಾ|| ಎನ್ ಬಿ ಖಾರೆಯವರು ಕಾಂಗ್ರೆಸ್ ಉಮೇದುವಾರರಾದ ಗೌತಮ್ ಶರ್ಮರವರನ್ನು ಸೋಲಿಸಿ, ಚುನಾಯಿತರಾಗಿರುವರು

ಕೇಂದ್ರದ ಸಹಾಯವಿಲ್ಲದೆ ಧಾನ್ಯದ ಬೆಲೆ ಕಡಿಮೆ ಇಲ್ಲ

ಪುರಸಭೆಗೆ ಸರ್ಕಾರದ ಪತ್ರ

ಮೈಸೂರು ೬

ಆಹಾರಧಾನ್ಯಗಳ ಈಗಿನ ಮಾರಾಟದ ದರದಿಂದ ಸರ್ಕಾರಕ್ಕೆ ಲಾಭವಿಲ್ಲವೆಂದೂ, ಅಲ್ಲದೆ ಕೇಂದ್ರ ಸರ್ಕಾರದವರು ಧನ ಸಹಾಯ ಕೊಡದಿರುವುದರಿಂದ ಧಾನ್ಯಗಳ ಬೆಲೆಗಳನ್ನು ಇಳಿಸಲು ಆಗುವುದಿಲ್ಲವೆಂದೂ ಆದರೆ ಕೇಂದ್ರವು ಕೆಂಪು ಜೋಳದ ದರವನ್ನು ಇಳಿಸಿದುದರಿಂದ ಇಲ್ಲೂ ಗೋಧಿಯ ಬೆಲೆಯನ್ನು ಕಡಿಮೆ ಮಾಡಲಾಗಿದೆಯೆಂದೂ ಮೈಸೂರು ಸರ್ಕಾರದವರು ಇಲ್ಲಿನ ಪುರಸಭೆಗೆ ಪತ್ರ ಬರೆದು ತಿಳಿಸಿರುತ್ತಾರೆ ಆಹಾರ ನೀತಿಯ ಬಗ್ಗೆ ಪುರಸಭೆಯು ಮಾಡಿದ ನಿರ್ಣಯಕ್ಕೆ ಸರ್ಕಾರದಿಂದ ಬಂದ ಉತ್ತರವನ್ನು ತಿಳಿಸಬೇಕೆಂದು ನೆನ್ನೆ ಸೇರಿದ ಸಭೆಯ ಮುಂದುವರಿದ ಅಧಿವೇಶನದಲ್ಲಿ ಡಾ॥ ಬಿ ಜಿ ದಾಸರು ಕೇಳಿದಾಗ ಅಧ್ಯಕ್ಷರು ಮೇಲ್ಕಂಡ ಪತ್ರವನ್ನು ಓದಿದರು

SRI GANESH
TALKIES
From 7—6—52
MIGHTY JOE YOUNG
With Terry moore and
Ben Johnson

FROM 10—6—52
SAVAGE SPLENDOR
(Technicolor)

ಸಂಗೀತ ತರಗತಿಗಳು

ಮೈಸರಾಯರ್ ರೋಡಿನಲ್ಲಿರುವ ೬೭೯ನೇ ನಂಬರು ಮನೆಯಲ್ಲಿ ಜೂನಿಯರ್ ಸೀನಿಯರ್ ಮತ್ತು ವಿದ್ವತ್ ಸಂಗೀತ ಪರೀಕ್ಷೆಗಳಿಗೆ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ವೀಣೆ ಮತ್ತು ಹಾಡುಗಾರಿಕೆಯಲ್ಲಿ ತಯಾರು ಮಾಡಲು ಆಸ್ಥಾನ ವೈಣಿಕ ವಿದ್ವಾನ್ ಆರ್ ಎನ್ ದೊರೆಸ್ವಾಮಿಯವರಿಂದ ತರಗತಿಗಳು ನಡೆಸಲ್ಪಡುತ್ತಲಿವೆ ಸೇರಬಯಸುವವರು ಮೇಲ್ಕಂಡ ವಿಳಾಸದಲ್ಲಿ ವಿವರಗಳನ್ನು ತಿಳಿಯಬಹುದು

ಸಿಂಹಾಸನ ಬಿಡಲು ಜಾರ್ಡಾನ್ ದೊರೆಗೆ ಸೂಚನೆ

ಜೋರ್ಡಾನಿನ ಅರಸರಾದ ತಲಾಲರಿಗೆ ಬುದ್ಧಿ ವಿಕಲ್ಪವಾಗಿರುವ ಕಾರಣ ಅವರು ಸಿಂಹಾಸನವನ್ನು ತಮ್ಮ ಸಹೋದರ ಹುಸ್ಸೇನರವರಿಗೆ ಬಿಟ್ಟುಕೊಡುವಂತೆ ಕೋರುವ ವಿಷಯವನ್ನು ಅಲ್ಲಿನ ಪಾರ್ಲಿಮೆಂಟು ಪರಿಶೀಲಿಸುತ್ತಿರುವುದಾಗಿ ವರದಿಯಾಗಿದೆ

ನಾಳಿದ್ದು ಸಮಾಜವಾದಿಗಳ ಸತ್ಯಾಗ್ರಹ ?

ರಾಜಧಾನಿಯ ಸಮಾಜವಾದಿಗಳು ನಾಳಿದ್ದು ಸರ್ಕಾರಿ ಆಹಾರ ಡಿಪೋಗಳ ಮುಂದೆ ಸತ್ಯಾಗ್ರಹವನ್ನು ನಡೆಸಲಿರುವರೆಂದು ಗೊತ್ತಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಚಿತ್ರಜಗತ್ ಮಧ್ಯಾಹ್ನ ೧-೩೦ ಗೀತಾರ್ ವಾದನ ೩ ಬಾಲಜಗತ್ ಸಂಜೆ ೫-೩೦ ಮತ್ತು ೬ ಎಂ ಎಸ್ ಪುಟ್ಟಣ್ಣ ಪಿಟೀಲು ವಾದನ ೬-೧೦ ಸಾವಿತ್ರೀ ೭-೩೦ ವನಿತಾವಿಹಾರ ೮ ಕಥಾಕಾಲಕ್ಷೇಪ ೯-೧೫ ಡಿ ಸೀನಪ್ಪನವರ ತಂಡ ೯-೧೫ ಗಾನವಾರಿಧಿ

SRI GAYATHRI
TALKIES
From 7—6—52
(3 Shows on Sat & Sunday
20th Century's
ANNE OF THE INDIES
Technicolor)
With Jean Peters
Louis Jourdan

— MORNING SHOWS
On 7th and 8th
Warners
The Private Life of ELIZABETH & ESSEX
(Technicolor
With Errol Flynn and
Betty Davis

COMING ATTRACTION
HALF ANGEL
(Technicolor)

ವಿಯಟ್ನಾಂ ಸರ್ಕಾರದ ವಜಾ

ಇಂಡೋಚೈನಾದ ದೊರೆ ಬಾವೊಡಾಯ್‌ರವರು ಅಲ್ಲಿನ ಟ್ರಾನ್ ವಾನ್ ಹೂರವರ ಮಂತ್ರಿಮಂಡಲವನ್ನು ವಜಾ ಮಾಡಿ, ಹೊಸ ಸರ್ಕಾರವನ್ನು ರಚಿಸುವಂತೆ ಒಳಾಡಳಿತ ಸಚಿವ ನ್ಗುಯೆನ್ ವಾನ್ ಟಾಂರವರಿಗೆ ಸೂಚಿಸಿರುತ್ತಾರೆ

ಶ್ರೀ ರಾಮ ಸಹಾಯ ಸಂಘ

ಮೈಸೂರು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮೇಲ್ಕಂಡ ಸಂಘದ ಆಶ್ರಯದಲ್ಲಿ ಎಲ್ ಎಸ್ ಹಾಗೂ ಎಸ್ ಎಸ್ ಎಲ್ ಸಿ ತರಗತಿಗಳಲ್ಲಿ ಓದುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಇದೇ ತಿಂಗಳು ೧೫ ರಿಂದ ತರಗತಿಗಳು ಆರಂಭವಾಗುತ್ತವೆ ಸೇರಬಯಸುವವರು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಾರಾಗಿ ನಂಬಲಾಗಿದೆ ಹೆಚ್ಚಿನ ವಿವರಗಳನ್ನು ಸಂಘದ ಕಾರ್ಯಾಲಯದಲ್ಲಿ ತಿಳಿಯಬಹುದು

CITY TUTORIAL COLLEGE
Near V V Market Mysore
ADMISSIONS RECEIVED
B Sc - English & P. C M
INTER English, P C M & C B Z.
I COM Parts I, II & III. &
INTER GEOGRAPHY
Classes Next Week

THEOSOPHY STUDY GROUP,
Vidyavigiri Road
Vontikoppal
Saturday the 7th JUNE 1952
at 6-15 p m.
Talks followed by Questions and Answers on
The Mystery of Man
III ARJUNA ON THE KURUKSHETRA
THE STRUGGLE OF MAN
THE SUPREME FAITH

ದಕ್ಷಿಣ ಆಫ್ರಿಕಾ ವಿರುದ್ಧ ವಿಶ್ವಸಂಸ್ಥೆ ಕ್ರಮ ಅಗತ್ಯ

ಭಾರತೀಯ ನಿವಾಸಿಗಳ ವಿರುದ್ಧ ದಕ್ಷಿಣ ಆಫ್ರಿಕಾ ಸರ್ಕಾರದ ವರ್ತನೆಗೆ ವಿಶ್ವ ಸಂಸ್ಥೆಯ ನಿರ್ಣಯವನ್ನು ಆ ಸರ್ಕಾರವು ಧಿಕ್ಕರಿಸಿರುವುದರಿಂದ ಮೇಲೆ ಕ್ರಮ ಕೈಗೊಳ್ಳಬೇಕಾದುದು ಆ ಸಂಸ್ಥೆಯ ಕೆಲಸವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

ಚಾಮರಾಜನಗರ- ಸತ್ಯಮಂಗಲಂ ರೈಲ್ವೆ

ಕೇಂದ್ರ ಕೃಷಿ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ಬಳಿ ಮೈಸೂರಿನಲ್ಲಿಯಿಂದ ಲೋಕಸಭೆಗೆ ಚುನಾಯಿತರಾಗಿರುವ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಇದೇ ೧೫ರಂದು ಹೋಗಿ ಚಾಮರಾಜನಗರ-ಸತ್ಯಮಂಗಲಂ ರೈಲು ಮಾರ್ಗದ ಬಗ್ಗೆ ಮಾತುಕತೆ ನಡೆಸಿದರೆಂದೂ, ಆ ಪ್ರಶ್ನೆಯನ್ನು ಪರಿಶೀಲಿಸುವುದಾಗಿ ಸಚಿವರು ತಿಳಿಸಿದರೆಂದೂ ವರದಿಯಾಗಿದೆ.

ಮೋದಿಯವರ ನೇತ್ರ ಚಿಕಿತ್ಸಾ ಶಿಬಿರ

ಬೆಂಗಳೂರಿನಲ್ಲಿ ಡಾ॥ ಎಂ ಸಿ ಮೋದಿಯವರು ಪ್ರಾರಂಭಿಸಿರುವ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ನಡೆಯುವ ಪರೀಕ್ಷೆ ಮತ್ತು ಶಸ್ತ್ರಚಿಕಿತ್ಸೆ ಕಾರ್ಯಗಳ ಚಲನ ಚಿತ್ರವನ್ನು ತೆಗೆಯಲು ಸರ್ಕಾರದವರು ಏರ್ಪಡಿಸಿರುತ್ತಾರೆ

Tutorial Classes for students preparing for the Intermediate Examination of September 1952 will be run from 10-6-52 in Saradavilas College, Mysore Further particulars may be obtained from the College office.

Hon. SECRETARY,
Saradavilas Educational Institutions, Mysore.

MYSORE TRANSIT SERVICE
Excellent and Regular Goods Vehicle Service Between **MYSORE & MADRAS** in arrangements with our Agents M/s Madras-Bangalore Transport Co
Proprietors .— **THIRTHA & COMPANY,**
Clearing and Forwarding Agents
Ramavilasa Road Mysore (PHONE 537)

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ, ಲಿ.,

ಸಾಯೀವಿಲಾಸ ಮಾರ್ಕೆಟ್ ಹೌಸ್, ಮೈಸೂರು

ಪ್ರಕಟಣೆ

ಮೇಲ್ಕಂಡ ಸೊಸೈಟಿಯ ಚಿಟ್ ಅಕೌಂಟಿನಲ್ಲಿ ಆರು ವರ್ಷಕ್ಕೆ ಮೇಲ್ಪಟ್ಟು ಬಾಕಿ ನಿಂತಿರುವ ಮೊಬಲಗುಗಳ ತಪ್ಸೀಲು ಪಟ್ಟಿಯನ್ನು ಸೊಸೈಟಿಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿರುತ್ತೆ ಆ ಮೊಬಲಗುಗಳನ್ನು ಸಂಬಂಧಪಟ್ಟವರು ಈ ತಾರೀಖು ಲಾಗಾಯ್ತು ಒಂದು ತಿಂಗಳೊಳಗೆ ಸರಿಯಾದ ದಾಖಲೆಗಳನ್ನು ಹಾಜರ್ಪಡಿಸಿ ವಾಪಸು ಪಡೆಯದೆ ಇದ್ದಲ್ಲಿ ಸದರೀ ಮೊಬಲಗನ್ನು ೧೯೫೦-೫೧ ನೇ ಸಾಲಿನ ಜನರಲ್ ಬಾಡಿ ತೀರ್ಮಾನದಂತೆ ಸೊಸೈಟಿಯ ರಿಸರ್ವ್ ಫಂಡಿಗೆ ಸೇರಿಸಲಾಗುತ್ತೆ- ಎಂಬ ವಿಷಯವನ್ನು ಈ ಮೂಲಕ ಪ್ರಕಟಿಸಿರುತ್ತೆ

ಮೈಸೂರು
4—6—1952

ಬಿ ಆರ್. [illegible]ಯ್ಯ,
ಎಂ.ಎಸ್.[illegible] ಬಿ ಎ ,
ಆನರರಿ ಸೆಕ್ರೆಟರಿಗಳು

ನೆನಪಿರಲಿ! ನೆನಪಿರಲಿ!

ಅಬೀದ್‌ರವರ ಭಾರಿ ಹರಾಜು ಮಾರಾಟ

8—6—1952ನೇ ಭಾನುವಾರ :: ಬೆಳಿಗ್ಗೆ 9-30 ಗಂಟೆಗೆ

ಬೀಟಿ ಮತ್ತು ತೇಗದ ಮರದ ಸಿಂಗಲ್ ಮತ್ತು ಡಬ್ಬಲ್ ಮಂಚಗಳು, [illegible] ಮೇಜುಗಳು, [illegible] ಮತ್ತು [illegible] ಇಂಗ್ಲೀಷ್ [illegible], ವಿದ್ಯುಚ್ಛಕ್ತಿ [illegible] ಯಂತ್ರಗಳು ಮತ್ತು [illegible] ಮತ್ತು [illegible] ಗೃಹ ಕೃತ್ಯದ ಸಾಮಾನುಗಳು ಮತ್ತು [illegible] ಉಪಯುಕ್ತ ಪದಾರ್ಥಗಳು

1952 ನೇ ಜೂನ್ 7 ನೇ ಶನಿವಾರ ಮಧ್ಯಾಹ್ನ 3 ರಿಂದ 6 ರ ವರೆಗೆ ಸಾಮಾನುಗಳನ್ನು ಪರಿಶೀಲಿಸಬಹುದು

Edited, Printed and Published by A R. Nagarajan, at Sadhvi Press, D Subbiah Road Mysore

ರಿಜಿಸ್ಟರ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೭ ೬-೫೩ [ಸಂಚಿಕೆ ೨೬೬

ಮದ್ರಾಸು ಪ್ರಾಂತದಲ್ಲಿ ಧಾನ್ಯ ಹತೋಟಿ ರದ್ದು

ಜಿಲ್ಲಾ ಬೋರ್ಡ್ ಅಧ್ಯಕ್ಷರು ಯೂನಿಟ್ ಅಧಿಕಾರಿ

ಬೋರ್ಡಿನ ಸಭೆಯಲ್ಲಿ ಸರ್ಕಾರವನ್ನು ಕೋರುವ ನಿರ್ಣಯ

ಮೈಸೂರು ೭

ಇಲ್ಲಿನ ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ಉಪಾಧ್ಯಕ್ಷರಾದ ಶ್ರೀ ಟಿ ಪಿ ಬೋರಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ಸೇರಿದ್ದಾಗ ಜಿಲ್ಲಾ ಬೋರ್ಡ್ ಅಧ್ಯಕ್ಷರನ್ನು ಜಿಲ್ಲಾಧಿಕಾರಿಗಳ ಬದಲು ಶಿಕ್ಷಣ ಯೂನಿಟ್ ಅಧಿಕಾರಿಗಳನ್ನಾಗಿ ನೇಮಿಸುವಂತೆ ಸರ್ಕಾರವನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಬೋರ್ಡಿನ ಅವಧಿಯನ್ನು ಮುಂದೆ ತಿಳಿಸುವವರೆಗೆ ಸರ್ಕಾರದವರು ಹೆಚ್ಚಿಸಿರುವುದನ್ನು ಸಭೆಯು ಶಿಕಾರ್ಸು ಮಾಡಿಕೊಂಡಿತು. ನಂತರ ಸರ್ಕಾರಕ್ಕೆ ಶಿಫಾರಸು ಮಾಡಲು ಈ ಕೆಳಗೆ ಕಂಡ ನಿರ್ಣಯಗಳನ್ನು ಮಾಡಲಾಯಿತು —

ಜಿಲ್ಲಾ ಬೋರ್ಡಿನ ಹೈಸ್ಕೂಲುಗಳಲ್ಲಿ ವ್ಯವಸಾಯದ ಶಿಕ್ಷಣವನ್ನು ಕೊಡುವುದ, ಇಲ್ಲಿಯವರೆಗೆ ನೇಮಕ ಮಾಡಿರುವ ಪ್ರೌಢ ಶಾಲಾ ಸಿಬ್ಬಂದಿಯನ್ನು ಖಾಯಂ ಮಾಡುವುದು, ಜಿಲ್ಲೆಯ ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ನೌಕರರನ್ನು ವರ್ಗಾಯಿಸುವ ಹಕ್ಕು ಬೋರ್ಡಿಗೇ ಇರತಕ್ಕದ್ದು, ಎಲ್ಲಾ ಶಾಲೆಗಳ ಬಳಿಯಲ್ಲೂ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಉಪಾಹಾರ ಗೃಹಗಳನ್ನು ತೆರೆಯುವುದು, ಧನ ಸಹಾಯ ಒದಗಿದ ಕಡೆಗಳಲ್ಲೆಲ್ಲಾ ನೌಕರರಿಗೆ ಮನೆಗಳನ್ನು ಕಟ್ಟಿಕೊಡುವುದು. ಶಾಲೆಗಳ ಸಿಬ್ಬಂದಿ ಖರ್ಚನ್ನು ಕಡಿಮೆ ಮಾಡುವುದು.

ಮುಂದಿನ ಸಭೆಯನ್ನು ಆಗಸ್ಟ್ ೮ನೇ ತಾ॥ ಶುಕ್ರವಾರ ನಡೆಸಲು ತೀರ್ಮಾನಿಸಲಾಯಿತು.

ಯಾದವ ಸಂಘದ ಸಭೆ

ರಾಜಧಾನಿಯ ಯಾದವ ಸಂಘದ ವಿಶೇಷ ಸಭೆಯು ನಾಳೆ ಸಂಜೆ ೬ ಗಂಟೆಗೆ ರಮಾ ವಿಲಾಸ ರಸ್ತೆಯಲ್ಲಿರುವ ಸಂಘದ ಕಟ್ಟಡದಲ್ಲಿ ನಡೆಯುವುದು. ಸಂತೇಪೇಟೆ ವರ್ತಕರಾದ ಶ್ರೀ ಡಿ ಪುಟ್ಟಯ್ಯನವರು ಅಧ್ಯಕ್ಷತೆ ವಹಿಸುವರು. ಸದಸ್ಯರುಗಳು ಬರಬೇಕೆಂದು ಕೋರಲಾಗಿದೆ.

ನಗರ ಕಾಂಗ್ರೆಸ್ ಕಛೇರಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಭೇಟಿ

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಚ್ ಸಿ ದಾಸಪ್ಪನವರು ಇದೇ ೮ ನೇ ತಾರೀಕು ಭಾನುವಾರ ಸಂಜೆ ೬-೩೦ ಗಂಟೆಗೆ ಮೈಸೂರು ನಗರ ಕಾಂಗ್ರೆಸ್ ಕಛೇರಿಗೆ ಭೇಟಿ ಕೊಡುವರು. ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ಬರಬೇಕೆಂದು ಕೋರಲಾಗಿದೆ.

ಹರಿಕಥೆ

ದೇವರಾಜ ಮೊಹಲ್ಲಾ ಆನೆ ಸಾರೋಟು ಬೀದಿ ಹತ್ತಿರ ಜನರ ಭಜನೆ ವೆಂಕಟಪ್ಪನವರ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೭॥ ಘಂಟೆಗೆ ಪ್ರಸಿದ್ಧ ಪ್ರಯುಕ್ತ ಬೆಂಗಳೂರಿನ ಶ್ರೀ ಎಂ. ಬಾಲಾಜಿ ಕೃಷ್ಣದಾಸ್‌ರವರಿಂದ ಶಿರಿಯಾಳ ಚಕ್ರವರ್ತಿ ಎಂಬ ಹರಿಕಥೆಯು ನಡೆಯುವುದು.

ಸಮಾಜವಾದಿಗಳಿಂದ ಸರ್ಕಾರಿ ಡಿಪೋ ಆಕ್ರಮಣ

ಮೈಸೂರು ೭

ಮೈಸೂರು ಜಿಲ್ಲಾ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೧೦ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯು ನಡೆಯುವುದೆಂದೂ ನಂತರ ಶ್ರೀ ಕೆ ಪಿ ಶಾಂತಮೂರ್ತಿಯವರ ನಾಯಕತ್ವದಲ್ಲಿ ಸತ್ಯಾಗ್ರಹಿಗಳ ತಂಡವು ಹೊರಟು ಗಾಂಧಿ ಚೌಕದಲ್ಲಿರುವ ಲಷ್ಕರ್ ಒಂದನೇ ನಂಬರು ಸರ್ಕಾರಿ ಡಿಪೋವನ್ನು ಶಾಂತ ರೀತಿಯಿಂದ ಆಕ್ರಮಿಸಿಕೊಂಡು ಆಹಾರ ಧಾನ್ಯಗಳನ್ನು ಹಿಂದಿನ ಬೆಲೆಗೆ ಮಾರಾಟ ಮಾಡಲಾಗುವುದೆಂದೂ ತಿಳಿಸಲಾಗಿದೆ.

ಪಾಕಿಸ್ತಾನದಲ್ಲಿ ಭಾರಿ ಖ್ಯಾತಿಯ ಭೂಪತ್ಟನ ದಸ್ತಗಿರಿ

ಸೌರಾಷ್ಟ್ರದಲ್ಲಿ ಅನೇಕ ಕೊಲೆ, ದರೋಡೆ ಮತ್ತು ಲೂಟಿಗಳನ್ನು ನಡೆಸಿ, ಒಹುವಿಧವಾಗಿ ಹಾವಳಿ ಮಾಡಿ ಪೋಲೀಸರಿಗೆ ಸಿಕ್ಕದೆ ತಲೆ ತಪ್ಪಿಸಿಕೊಂಡಿದ್ದ ಖ್ಯಾತಿಯುತ ಭೂಪತ್ಟನು ರಹದಾರಿ ಇಲ್ಲದೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯವನ್ನು ಪ್ರವೇಶಿಸಿ ಅಲ್ಲಿ ಬಂಧಿಸಲ್ಪಟ್ಟಿರುವನೆಂದು ಹೇಳಲಾಗಿದೆ. ಅವನು ರಹದಾರಿಯಿಲ್ಲದೆ ಬಂದೂಕವನ್ನು ಹೊಂದಿದ್ದನೆಂದೂ ಹೇಳಲಾಗಿದೆ. ಅವನನ್ನು ಬಂಧಿಸಲು ಸಹಾಯ ಮಾಡುವವರಿಗೆ ೫೦ ಸಾವಿರ ರೂ ಬಹುಮಾನ ಕೊಡುವುದಾಗಿ ಸೌರಾಷ್ಟ್ರ ಸರ್ಕಾರದವರು ಹಿಂದೆ ಪ್ರಕಟಿಸಿದ್ದರು. ಈ ದರೋಡೆಕಾರನ ಹಾವಳಿ ಸಂಬಂಧವಾಗಿ ಸೌರಾಷ್ಟ್ರ ಮತ್ತು ಮಧ್ಯ ಭಾರತದ ಹಲವು ರಾಜಕುಮಾರರು ಮತ್ತು ರಾಜಕುಮಾರಿಯವರನ್ನು ದಸ್ತಗಿರಿ ಮಾಡಲಾಗಿದೆ.

ಬವೇರಿಯಾ ಮತ್ತು ಜೆಕೋಸ್ಲೋವೇಕಿಯಾ ಗಡಿ ಬಂದ್

ಜೆಕೋಸ್ಲೋವೇಕಿಯಾ ಪೋಲೀಸರು ಮತ್ತು ಸೈನಿಕರು ಬವೇರಿಯಾ ಗಡಿ ಎಲ್ಲವನ್ನೂ ಪೂರ್ತಿಯಾಗಿ ಬಂದು ಮಾಡಿ, ಅಲ್ಲಿ ಮೈಲು ಹಾಕಿರುವುದಲ್ಲದೆ ವಿದ್ಯುಚ್ಛಕ್ತಿ ಹರಿಯುವ ತಂತಿ ಬೇಲಿಗಳನ್ನು ಕಟ್ಟಿರುತ್ತಾರೆಂದು ಗೊತ್ತಾಗಿದೆ.

ಮದ್ರಾಸಿನಲ್ಲಿ ಆಹಾರದ ಹತೋಟಿ, ಪಡಿತರ ರದ್ದು

ಮದ್ರಾಸು ಪ್ರಾಂತದಲ್ಲಿ ೧೦ ನಗರಗಳಿಂದಲೂ ಜಾರಿಯಲ್ಲಿದ್ದ ಅಕ್ಕಿ ಮತ್ತು ಇತರ ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನೂ ಪ ತ್ತು ಕಡ್ಡಾಯದ ಪಡಿತರ ಪದ್ಧತಿಯನ್ನೂ ರದ್ದುಗೊಳಿಸಿರುವುದಾಗಿ ಅಲ್ಲಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಿಳಿಸಿರುತ್ತಾರೆ. ತಮ್ಮ ಸರ್ಕಾರದ ಆಹಾರ ನೀತಿಗೆ ಭಾರತದ ಪ್ರಧಾನ ನೆಹರೂ ಮತ್ತು ಅವರ ಮಂತ್ರಿ ಮಂಡಲದ ಬೆಂಬಲವಿರುವುದೆಂದು ಅವರು ತಿಳಿಸಿರುವರು. ಆಹಾರ ಧಾನ್ಯಗಳ ಸಾಗಣೆ ಮತ್ತು ವ್ಯಾಪಾರಗಳನ್ನು ನಡೆಸಲು ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ದೊರಕಿಸುವುದರಲ್ಲಿ ಮದ್ರಾಸು ಸಂಸ್ಥಾನವು ಇತರ ಪ್ರಾಂತಗಳಿಗೆ ಮಾರ್ಗದರ್ಶಕವಾಗಿರುವುದೆಂದೂ ಇದರಿಂದ ರೈತರು ಮತ್ತು ವರ್ತಕರು ತೊಂದರೆಯನ್ನುಂಟುಮಾಡುವ ನಿರ್ಬಂಧಗಳಿಂದ ಪಾರಾಗುವರೆಂದೂ ಹೇಳಿರುತ್ತಾರೆ. ಸಹಕಾರ ಭಾವನೆಯು ಜನರಲ್ಲಿ ಮೂಡಬೇಕೆಂದು ಅವರು ಪ್ರಾರ್ಥಿಸಿರುತ್ತಾರೆ. ಸಂಸ್ಥಾನದಲ್ಲಿ ಎಲ್ಲಿಂದ ಎಲ್ಲಿಗೆ ಬೇಕಾದರೂ ಧಾನ್ಯವನ್ನು ಸಾಗಿಸಿಕೊಂಡು ಹೋಗಿ ಮಾರಲು ಅವಕಾಶವನ್ನು ಕೊಡಲಾಗಿದೆಯೆಂದು ಅವರು ತಿಳಿಸಿರುತ್ತಾರೆ.

ಮದ್ರಾಸನ್ನು ಆರು ವಿಭಾಗಗಳಾಗಿ ವಿಂಗಡಿಸಿ ಒಂದೊಂದು ಭಾಗದಿಂದ ಮತ್ತೊಂದಕ್ಕೆ ಧಾನ್ಯವನ್ನು ರಹದಾರಿ ಮೂಲಕ ಸಾಗಿಸಲು ಏರ್ಪಾಡು ಮಾಡಿರುವುದಾಗಿಯೂ ಆದರೆ ತಲೆ ಹೊರೆ ಮತ್ತು ಗಾಡಿಗಳನ್ನು ತಡೆಯುವುದಿಲ್ಲವೆಂದೂ ಅವರು ಹೇಳಿರುತ್ತಾರೆ. ದೇಶದಲ್ಲಿ ಜನರು ವ್ಯರ್ಥ ಮಾಡದಂತೆಯೂ ಜಾಗರೂಕತೆಯಿಂದಲೂ ಉಪಯೋಗಿಸಿದರೆ ಈಗ ಇರುವ ಆಹಾರವೇ ಸಾಕಾಗುವುದೆಂದೂ ಹೇಳಿರುತ್ತಾರೆ. ಮೈಸೂರು ಸರ್ಕಾರದವರೂ ಸಹ ಮದ್ರಾಸಿನ ಈ ಪದ್ಧತಿಯನ್ನು ಪರಿಶೀಲಿಸುತ್ತಿರುವರು.

ಜಯಪ್ರಕಾಶ್ ನಾರಾಯಣರಿಂದ ೨೧ ದಿನ ಉಪವಾಸ

ಭಾರತದ ಸಮಾಜವಾದಿ ಪಕ್ಷದ ನಾಯಕರಾದ ಜಯ ಪ್ರಕಾಶ್ ನಾರಾಯಣರವರು ಈ ತಿಂಗಳು ಮಧ್ಯ ಭಾಗದಲ್ಲಿ ಪೂನಾ ನಗರದಲ್ಲಿ ೨೧ ದಿವಸಗಳ ವರೆಗೆ ಉಪವಾಸ ವ್ರತವನ್ನು ಕೈಗೊಳ್ಳಲಿರುವರು. ಉಪವಾಸಕ್ಕೆ ಕಾರಣವೇನೆಂದು ಅವರನ್ನು ಪ್ರಶ್ನಿಸಲಾಗಿ ಅವರು ಉತ್ತರ ಕೊಡಲು ನಿರಾಕರಿಸಿರುತ್ತಾರೆ. ತಮ್ಮದು ಶುದ್ಧೀಕರಣದ ಉಪವಾಸ ವ್ರತವಲ್ಲವೆಂದು ಅವರು ಸ್ಪಷ್ಟಪಡಿಸಿರುತ್ತಾರೆ.

ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಪಡೆದವರು

ಸ್ವಂ ಸು ಘೋ] ಬೆಂಗಳೂರು ೭

ಮೈಸೂರಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇ॥ ೪೪.೫ ರಷ್ಟು ಮಂದಿ ಉತ್ತೀರ್ಣರಾಗಿರುತ್ತಾರೆ. ಒಟ್ಟು ಅಭ್ಯರ್ಥಿಗಳಾದವರಲ್ಲಿ ೧೬೯೧೦ ಮಂದಿ ಪರೀಕ್ಷೆಗೆ ಕುಳಿತಿದ್ದರು. ೫೮೬೪ ಜನರಿಗೆ ಇ ಸಿ ಅಂಡ್ ಪಿ ಎಸ್ ಮತ್ತು ೨೮೨೯ ಮಂದಿಗೆ ಇ ಪಿ ಎಸ್. ಬಂದಿರುವುವು. ೭೯೮೩ ಮಂದಿ ಉತ್ತೀರ್ಣರಾಗಿರುವರು.

ಬೆಂಗಳೂರಿನ ಸೆಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲಿನ ಭೂಪೇಂದ್ರನಾಥ ಬಾರಿಯವರು ಪ್ರಥಮ ಸ್ಥಾನವನ್ನು ಗಳಿಸಿರುತ್ತಾರೆ. ಇತರ ಸ್ಥಾನಗಳು ಈ ರೀತಿ ಇವೆ –

೨ ನೇ ಸ್ಥಾನ ಹಾಸನದ ಸರ್ಕಾರಿ ಹೈಸ್ಕೂಲ್ ವಿದ್ಯಾರ್ಥಿ ಎಸ್ ಸಿ ಅನಂತರಾಮಯ್ಯ, ೩, ೪ ಮತ್ತು ೬ ನೇ ಸ್ಥಾನ ಕ್ರಮವಾಗಿ ಬೆಂಗಳೂರು ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲಿನ ಶ್ರೀಗಳಾದ ಹೆಚ್ ಎಸ್ ಸುಂದರಮೂರ್ತಿ, ಸಿ ಆರ್ ಚಕ್ರವರ್ತಿ ಮತ್ತು ಎ ರಾಮಚಂದ್ರನ್, ೫ನೇ ಸ್ಥಾನ(ಇಬ್ಬರು) ರಾಬರ್ಟ್‌ಸನ್‌ಪೇಟೆಯ ಹೈಸ್ಕೂಲಿನ ಹೆಚ್ ಎಸ್ ವಿಶ್ವೇಶ್ವರಯ್ಯ ಮತ್ತು ಮೈಸೂರಿನ ಡಿ ಬನುಮಯ್ಯ ಹೈಸ್ಕೂಲಿನ ಎ ಎಸ್ ನಾಗರಾಜ್, ೬ ನೇ ಸ್ಥಾನ (ಇನ್ನೊಬ್ಬರು) ಮಹಾರಾಜಾ ಹೈಸ್ಕೂಲಿನ ಶ್ರೀ ಹೆಚ್ ಸಿ ಕೃಷ್ಣಮೂರ್ತಿ ೭ ನೇ ಸ್ಥಾನ ಅದೇ ಹೈಸ್ಕೂಲಿನ ಜಿ ಆರ್ ರಾಮಾನುಜಾಚಾರ್, ೮ ಬೆಂಗಳೂರು ಮಹಾರಾಣಿ ಮಹಿಳಾ ವಿದ್ಯಾಲಯದ ಶ್ರೀಮತಿ ಎಲ್ ಶೀಲಾ.

ಸಂಸ್ಥಾನಕ್ಕೆ ಕೇಂದ್ರ ಆಹಾರ ಮಂತ್ರಿ ಕಿದ್ವಾಯರ ಭೇಟಿ

ಕೇಂದ್ರ ಆಹಾರ ಮಂತ್ರಿಗಳಾದ ರಫಿ ಅಹಮದ್ ಕಿದ್ವಾಯರು ಈ ತಿಂಗಳು ಮೂರನೇ ವಾರದಲ್ಲಿ ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಡಲಿರುವರೆಂದೂ, ಆಹಾರ ಸಮಸ್ಯೆ ಸಂಬಂಧವಾಗಿ ಅವರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರೊಡನೆ ಮಾತುಕತೆ ನಡೆಸುವರೆಂದೂ ತಿಳಿದುಬಂದಿದೆ. ಆಹಾರದ ವಿಷಯವಾಗಿ ಶೀಘ್ರ ಪರಿಹಾರ ಮಾರ್ಗವನ್ನು ಕಂಡುಹಿಡಿಯಲು ಕೇಂದ್ರದವರು ಕಾತುರರಾಗಿರುವರೆಂದು ಹೇಳಲಾಗಿದೆ.

ಡ್ರೈವರ್ ಇಲ್ಲದೆ ಇಂಜಿನ್ನಿನ ೫೦ ಮೈಲಿ ಓಟ

ಈಜಿಪ್ಟಿನ ರಾಜಧಾನಿ ಕೈರೋವಿಗೆ ೫೦ ಮೈಲಿ ದೂರವಿರುವ ಜಗಾಜಿಗ್‌ಎಂಬಲ್ಲಿನ ರೈಲ್ವೆ ಕಾರ್ಖಾನೆಯಿಂದ ನೆನ್ನೆ ಹೊರಟ ಒಂದು ರೈಲು ಇಂಜನ್ನು ಡ್ರೈವರ್ ಮತ್ತು ಫೈರ್‌ಮನ್‌ಗಳು ಹತ್ತುವುದಕ್ಕೆ ಮುಂಚೆಯೇ ಓಡಲು ಪ್ರಾರಂಭಿಸಿ ಕೈರೋ ನಗರದವರೆಗೂ ಹೋಯಿತೆಂದೂ, ಮೋಟಾರೊಂದರಲ್ಲಿ ಕುಳಿತು ಡ್ರೈವರು ಅದನ್ನು ಹಿಂಬಾಲಿಸಿ, ಕಡೆಗೆ ಕೈರೋ ಬಳಿ ಅವನು ಇಂಜನ್ನಿಗೆ ಹಾರಿ ಅದನ್ನು ಆ ಸ್ಟೇಷನ್ನಿಗೆ ಸುರಕ್ಷಿತವಾಗಿ ಕೊಂಡೊಯ್ದನೆಂದೂ, ಇದರಿಂದ ಯಾರಿಗೂ ಅಪಾಯವಾಗಲಿಲ್ಲವೆಂದೂ ವರದಿಯಾಗಿದೆ.

ಪಶ್ಚಿಮ ಬರ್ಲಿನ್ ಸುತ್ತ ಬಲವಾದ ಕಾವಲು

ಪಶ್ಚಿಮ ಬರ್ಲಿನ್ ಸುತ್ತಲೂ ಅಲ್ಲಿನ ಪೋಲೀಸರು ಬಲವಾದ ಕಾವಲನ್ನು ಮೊನ್ನೆಯಿಂದ ಹಾಕಿರುವರೆಂದೂ, ರಷ್ಯನ್ ಸೈನ್ಯಗಳು ಆ ನಗರದ ಗಡಿ ಬಳಿ ಶೇಖರಣೆಯಾದುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ ಆರು ವಾರಗಳಿಂದ ಪೂರ್ವ ಮತ್ತು ಪಶ್ಚಿಮ ಬರ್ಲಿನ್‌ಗಳಿಗೆ ಶೀತಲ ಯುದ್ಧವು ನಡೆಯುತ್ತಿರುವುದೆಂದು ವರದಿಯಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ವಿಚಿತ್ರ ಮಾಧುರ್ಯ ಮಧ್ಯಾಹ್ನ ೧-೩೦ ಜಲತರಂಗ್ ೧-೫೦ ನಾವು ಮತ್ತು ನಮ್ಮವರು ೩ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫-೩೦ ವಾರ್ತೆ ೭-೨೦ ಎ. ಲೀಲಾವತಿ ಸಂಗೀತ ೭-೧೦ ಆರ್ಕೆಸ್ಟ್ರಾ ೭ ಚಿತ್ರ ಸಂಗೀತ ಆ ಎಲ್. ರಾಜಾರಾಂ, ವೀಣಾ ವಾದನ. ೯-೧೫ ಎ. ಸಿ. ವಸಂತಕುಮಾರಿ ರಿಕಾರ್ಡು ಸಂಗೀತ ೯-೩೦ ಕನ್ನಡ ನಾಟಕ

ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ಶ್ರೀ ರಾಮಪೇಟೆಯಲ್ಲಿರುವ ಶ್ರೀಮತ್ಸ್ಯಕಾಮರನೇಶ್ವರ ದೇವಾಲಯದಲ್ಲಿ ನಡೆಸಲ್ಪಡುತ್ತಿದ್ದ ಶ್ರೀ ರಾಮೋತ್ಸವದ ಅಂಗವಾಗಿ ಹೂವಿನ ಪಲ್ಲಕ್ಕಿ ಉತ್ಸವವು ನಾಳೆ ರಾತ್ರಿ ೮ ಘಂಟೆಗೆ ದೇವಸ್ಥಾನದಿಂದ ಹೊರಟು ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮೂಲಕ ಕೊಂಡೊಯ್ಯಲ್ಪಡುವುದು ಪುಸ್ತಳದಿಂದ ಬಂದಿರುವ ವಾದ್ಯಗಾರರ ವಾದ್ಯವೂ ಮತ್ತು ವಿಶೇಷ ದೀಪ ಪಂಕ್ತಿ ಮಾಲೆಯೂ ಏರ್ಪಾಡಾಗಿವೆ

ನೇಪಾಳದಲ್ಲಿ ಪ್ರದರ್ಶನಕಾರರ ಮೇಲೆ ಅಶ್ರುವಾಯು

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿ ಭಾರತದ ವಿರುದ್ಧವಾಗಿ ಕೂಗುತ್ತಿದ್ದ ೪ ಸಾವಿರ ಮಂದಿ ಪ್ರದರ್ಶನಕಾರರನ್ನು ಮೊನ್ನೆ ಪೋಲೀಸರು ಚದುರಿಸಲು ಅಶ್ರು ವಾಯು ಬಣ್ಣದ ನೀರು ಮತ್ತು ಲಾಠಿ ಪ್ರಯೋಗಗಳನ್ನು ಮಾಡಿದರು ೩೦ ಮಂದಿಗೆ ಗಾಯಗಳಾಗಿವೆ ಕಮ್ಯೂನಿಸ್ಟರು ಮತ್ತು ಗೂರ್ಖಾ ಪರಿಷತ್ತಿನವರ ಪ್ರಚೋದನೆಯಿಂದ ಪ್ರದರ್ಶನವು ನಡೆಯಿತೆಂದು ಹೇಳಲಾಗಿದೆ ವಿದ್ಯಾರ್ಥಿಗಳೂ ಸಹಾ ಇದರಲ್ಲಿ ಪ್ರಮುಖ ಪಾತ್ರವಹಿಸಿದ್ದರೆಂದು ಗೊತ್ತಾಗಿದೆ.

ಪತ್ರಿಕೋದ್ಯಮಿಗಳ ಸಭೆ

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸದಸ್ಯರ ಸಭೆಯು ನಾಳೆ ಬೆಳಗ್ಗೆ ೯ ಘಂಟೆಗೆ ಸಭಾ ಕಟ್ಟಡದಲ್ಲಿ ಸೇರುವುದು.

ಬಂಗ್ಲೆ ಬಿಕರಿಗಿದೆ

ಮೈಸೂರು ಸರಸ್ವತಿಪುರಂ ಹೊಸ ಬಡಾವಣೆಯ C II 38&5ನೇ ನಂಬರು ಪೂರ್ತಿ ತಾರಸಿ ಕಟ್ಟಿದ ಸುಮಾರು 16,000 ರೂ ಬೆಲೆ ಬಾಳುವ ಮತ್ತು ದಿ ಸ, ಫಾವಿ, ಕಾಂಪೌಂಡು, ಗ್ಯಾರೇಜ ಒಳ ಚರಂಡಿ ವ್ಯವಸ್ಥೆಯಿಂದ ಒಡಗೂಡಿ ಪ್ರೈವೇಟ್ ಸ್ಟೋರ್, ಕೋರ್ಟು ಕಛೇರಿ, ಸ್ಕೂಲ್ ಕಾಲೇಜುಗಳಿಗೆ ಸಮೀಪದಲ್ಲಿರುವ ಬಂಗ್ಲೆ ಬಿಕರಿಗಿದೆ ಬಾಕಿ ವಿಚಾರಗಳಿಗೆ ಈ ಕೆಳಗೆ ಕಂಡ ಅಡ್ರೆಸ್ಸಿನಲ್ಲಿ ವಿಚಾರಿಸಿ

ಜಿ. ಆರ್ ಶಾಮರಾವ್,
2879, ಲಾ ಕೋರ್ಟ್ ಹಿಂಭಾಗ
ಮೈಸೂರು.

೧೭ ಗೂಡ್ಸ್ ವ್ಯಾಗನ್ನುಗಳು ತಲೆಕೆಳಗಾದುವು

ಕಾಟ್ಪಾಡಿಯಿಂದ ಜಾಲಾರಪೇಟೆಗೆ ಹೋಗುತ್ತಿದ್ದ ಗೂಡ್ಸ್ ರೈಲಿನ ೧೭ ವ್ಯಾಗನ್ನುಗಳು ತಲೆಕೆಳಗಾದುವೆಂದೂ, ಇವುಗಳ ೧೧ ಗಾಡಿಗಳು ಕಂಬಿ ತಪ್ಪಿದುವೆಂದೂ ವರದಿಯಾಗಿದೆ ೫ ವ್ಯಾಗನ್ನುಗಳಿಗೆ ತುಂಬಾ ನಷ್ಟವಾಗಿರುತ್ತದೆ.

SRI GANESH
TALKIES
From 7—6—52
MIGHTY JOE YOUNG
With:- Terry moore and Ben Johnson

FROM 10—6—52
SAVAGE SPLENDOR
(Technicolor)

D. BANUMAIAH'S COLLEGE OF COMMERCE, MYSORE.

NOTIFICATION

Applications for admission to the Junior I. Com. Class will be received from *10th June 1952.*

Forms of Application can be obtained from the office of the College during working hours

D. V. BANUMAIAH
Principal.

ಹರಾಜು

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್ ೧೯೪೮-೪೯ ನೇ ಸಾಲಿನ ಇನ್‌ಸಾಲ್ವೆನ್ಸಿ ನಂ ೩ ನೇ ಮೊಕದ್ದಮೆಯಲ್ಲಿನ ಇನ್‌ಸಾಲ್ವೆಂಟ್ ಆಸಾಮಿಯ ಬಾಬ್ತು ಸ್ವತ್ತಾದ ಈ ಕೆಳಗೆ ವಿವರಿಸಿರುವ ಚರಸ್ವತ್ತುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಅಫಿಷಿಯಲ್ ರಿಸೀವರಿಂದ ಹರಾಜು ಷರತ್ತುಗಳಿಗೆ ಒಳಪಟ್ಟು ತಾ|| ೮-೬-೫೨ ನೇ ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಮೈಸೂರು ೩ನೇ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿ ೪೯೨, ೪೯೩ ಮತ್ತು ೪೯೪ ನೇ ನಂ ಮನೆ ಬಳಿ, ಅಂದರೆ ಕಾಳಮ್ಮನ ಗುಡಿ ಬೀದಿಯ ಚೌಕದ ಹತ್ತಿರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದೂ, ಇಷ್ಟವುಳ್ಳವರು ಬಂದು ಬಿಡ್ಡು ಮಾಡಿ ಕೊಂಡುಕೊಳ್ಳಬಹುದೆಂದೂ ಈ ಮೂಲಕ ಪ್ರಚುರ ಪಡಿಸಲಾಗಿದೆ. ಹರಾಜು ಷರತ್ತುಗಳನ್ನೂ ಇತರ ವಿಷಯಗಳನ್ನೂ ಅಫಿಷಿಯಲ್ ರಿಸೀವರಿಂದ ತಿಳಿದುಕೊಳ್ಳಬಹುದು

—: ಚರಸ್ವತ್ತುಗಳು :—

1 ರೋಲರ್ ಮಿಷೀನ್ (ಹುರುಳಿನುಚ್ಚು ತಯಾರು ಮಾಡುವ ಮಿಷೀನ್)
2 ಫ್ಲೋರ್ ಮಿಲ್ಲು (ಹನ್ನೆರಡು ಇಂಚಿನ ಪ್ಲೇಟ್ ಉಳ್ಳದ್ದು).
3 ಜೋಳದ ಕಡ್ಡಿ ವಗೈರೆ ಫಾಡರ್ ಕಟಿಂಗ್ ಮಿಷೀನ್ ಒಂದು.
4. ದಿ ಬ್ರಿಟಿಷ್ ಥಾಮ್ಸನ್ ಎಂಡ್ ಹೌಸ್ಟನ್ ಕಂಪೆನಿಯ ಇಂಡಕ್ಷನ್ ಎಲೆಕ್ಟ್ರಿಕ್ ಮೊಟಾರ್ (೨೦ ಕುದುರೆ ಬಲವುಳ್ಳದ್ದು) ಒಂದು.
5 ಗೋಡೆಗೆ ತಗುಲಿಸಿರತಕ್ಕ, ಎಲೆಕ್ಟ್ರಿಕ್ ಮೊಟಾರ್ ಜೋಡಿಸಿರುವ ಮಿಲ್ ಪವರ್ ಸ್ಟಾರ್ಟರ್.
6. ಮರದ ಬಾಗಿಲು, ಕುರ್ಚಿ, ಟೇಬಲ್, ತೂಕದ ಬೊಟ್ಟುಗಳು, ಕಬ್ಬಿಣದ ಮಂಚ, ಕ್ಯಾಮಗೆ ಒರಳು, ಸಾಗುವಾನಿ ಮರದ ಗಾಡಿ ಗುಂಬಗಳು, ಬೀರು, ಎತ್ತಿನಗಾಡಿ ದೂರಿ, ಹಲಗೆಗಳು ವಗೈರೆ-

ಮೈಸೂರು,
ತಾ|| ೨೬-೫-೫೨

ಎಸ್. ಎಲ್. ಲಕ್ಕೇಗೌಡ,
ಅಫಿಷಿಯಲ್ ರಿಸೀವರ್,
ಮೈಸೂರು ಡಿಸ್ಟ್ರಿಕ್ಟ್

DON'T MISS! :: ATTEND AUCTION!
AT
A B I D S
TO-MORROW — AT 9-30 A.M.

Edited, Printed and Published by A. R. Nagarajan, at Sadhvi Press, D. Subbiah Road Mysore

P. SUBBARAYA SASTRY, M.A (Mysore)
M. A. in Commerce (Calcutta)
C. E. I. D. (Lond) P. C. T. (Lond)
PRINCIPAL

ESTD 1917
THE

M. S. PUTTANNA, B. Sc.,
N. D. Com (G. O. I.)
D. Com., F. I. B. (Lond)
VICE-PRINCIPAL

CHAMPION METROPOLITAN COLLEGE

Of Commerce, "CO-OPERATORS' HOME", 100 Ft. Road, MYSORE

APPLICATIONS FOR ADMISSION to the Diploma Courses in Commerce as well as Typewriting and Shorthand are now being received on all working days between 7 and 10 A. M. Details can be seen on *College's Notice Board*

SPECIAL ATTENTION is invited to Diploma in Commerce & Business Administration, ISSUED BY THE MINISTRY OF EDUCATION, GOVT. OF INDIA, WHICH IS DECLARED EQUAL TO B. COM.

Tutorial Classes for students preparing for the Intermediate Examination *of September 1952 will be* run from 20-6-52 in Saradavilas College, Mysore. Further particulars may be obtained from the College office.

Hon SECRETARY,
Saradavilas Educational Institutions, *Mysore.*

ಹೊಸ ಹೊಸ ರೇಷ್ಮೆ ಸೀರೆಗಳನ್ನು ಮದುವೆಗಳಿಗಾಗಿ ತರಿಸಿದ್ದೇವೆ. ಬೆಲೆ ಸುಲಭ

M. V. ಬೋಜಯ್ಯ, ಬಿ ಎ
ಅಶೋಕಾ ರೋಡ್ ಬಳಿ, ಮೈಸೂರು.

ರಿಜಿಸ್ಟರ್ ನಂ. 792 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೮-೬-೫೨ [ಸಂಚಿಕೆ ೪೨

ಮೈಸೂರಿನಲ್ಲಿ ಆಹಾರ ಸತ್ಯಾಗ್ರಹಿಗಳ ಬಂಧನ!

ಮೈಸೂರಿನಲ್ಲೂ ಪಡಿತರ ಮತ್ತು ಕಂಟ್ರೋಲ್ ರದ್ದು?

ಬೆಂಗಳೂರು ೮

ಮದರಾಸ್ ಸರ್ಕಾರವು ಆಹಾರ ಧಾನ್ಯದ ಕಂಟ್ರೋಲ್ ಮತ್ತು ಪಡಿತರವನ್ನು ರದ್ದು ಪಡಿಸುವ ಅಂಶವನ್ನು ಮೈಸೂರು ಮಂತ್ರಿ ಮಂಡಲವು ಪರಿಶೀಲಿಸಿ ಇಲ್ಲೂ ಅದೇ ರೀತಿಯನ್ನು ಅನುಸರಿಸುವ ಬಗ್ಗೆ ವಿವರಗಳನ್ನು ಕುರಿತು ಸಮಾಲೋಚನೆ ನಡೆಸುತ್ತಿರುವುದಾಗಿಯೂ, ಮದ್ರಾಸಿನಲ್ಲಿ ಆಗುವ ಪ್ರತಿಕ್ರಿಯೆಯನ್ನು ಪರಿಶೀಲಿಸುವುದಾಗಿಯೂ ತಿಳಿದುಬಂದಿದೆ.

ಸೌರಾಷ್ಟ್ರದ ದರೋಡೆಕೋರ ಭೂಪತ್‌ನಿಗೆ ಸಜಾ

ಪಾಕಿಸ್ತಾನದಲ್ಲಿ ಬಂಧಿಸಲ್ಪಟ್ಟಿರುವ ಸೌರಾಷ್ಟ್ರದ ಸುಪ್ರಸಿದ್ಧ ದರೋಡೆಕೋರನಾದ ಭೂಪತ್ ಮತ್ತು ಅವನ ಮೂವರು ಅನುಯಾಯಿಗಳಿಗೆ ಅಕ್ರಮವಾಗಿ ಪಾಕಿಸ್ತಾನವನ್ನು ಪ್ರವೇಶಿಸಿದ ಮತ್ತು ಲೈಸೆನ್ಸ್ ಇಲ್ಲದೆ ಬಂದೂಕನ್ನು ಹೊಂದಿದ್ದ ಆಪಾದನೆಗಾಗಿ ಒಂದು ವರ್ಷ ಸಜಾ ವಿಧಿಸಲಾಗಿದೆ. ಬಂಧಿತರನ್ನು ಸೌರಾಷ್ಟ್ರಕ್ಕೆ ಕರೆಸಲು ಅಲ್ಲಿನ ಸರ್ಕಾರವು ಭಾರತ ಸರ್ಕಾರದ ಮೂಲಕ ಪಾಕಿಸ್ತಾನದೊಡನೆ ವ್ಯವಹಾರ ನಡೆಸಲಿದೆಯೆಂದೂ ಹೇಳಲಾಗಿದೆ.

ಪತ್ರಿಕೋದ್ಯೋಗಿಗಳ ಸಂಘದ ಹೊಸ ಅಧಿಕಾರ ವರ್ಗ

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸಭೆಯು ೫ ಬೆಳಿಗ್ಗೆ ಶ್ರೀ ಹೆಚ್. ಕೆ. ವೀರಣ್ಣಗೌಡರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಶ್ರೀ ಕೆ. ಶಾಂತಯ್ಯನವರು ಒಪ್ಪಿಸಿದ ವರದಿಯನ್ನು ಸಭೆಯು ಅಂಗೀಕರಿಸಿತು. ಹೊಸ ಅಧಿಕಾರ ವರ್ಗಕ್ಕೆ ಚುನಾವಣೆ ನಡೆದು ಶ್ರೀ ಆರ್. ಗೋಪಾಲಕೃಷ್ಣರಾಯರು ಅಧ್ಯಕ್ಷರು, ಶ್ರೀ ಎಂ. ಎಸ್. ಕೃಷ್ಣರಾವ್, ಉಪಾಧ್ಯಕ್ಷರು ಮತ್ತು ಶ್ರೀ ಎಸ್. ಎಸ್. ಶಾಸ್ತ್ರಿಯವರು ಕಾರ್ಯದರ್ಶಿಗಳಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

ವಿ. ಟಿ. ಶ್ರೀನಿವಾಸನ್‌ರವರು ಮದ್ರಾಸಿನ ಅಕೌಂಟೆಂಟ್ ಜನರಲ್

ಮೈಸೂರಿನಲ್ಲಿ ಕಂಟ್ರೋಲರ್ ಆಗಿದ್ದು ಈಗ ದಕ್ಷಿಣ ರೈಲ್ವೆಯ ಮುಖ್ಯ ಲೆಕ್ಕ ಪರಿಶೋಧಕ ಅಧಿಕಾರಿಗಳಾಗಿರುವ ಶ್ರೀ ವಿ. ಟಿ. ಶ್ರೀನಿವಾಸನ್‌ರವರನ್ನು ಮದ್ರಾಸಿನ ಅಕೌಂಟೆಂಟ್ ಜನರಲ್ಲರಾಗಿ ನೇಮಿಸಲಾಗಿದೆ.

ಭಾರತದಲ್ಲೆಲ್ಲಾ ಧಾನ್ಯದ ಮಾರಾಟದ ಕಂಟ್ರೋಲ್ ರದ್ದು

ಭಾರತ ಸರ್ಕಾರದ ಆಹಾರ ನೀತಿಯಲ್ಲಿ ಸಧ್ಯದಲ್ಲೇ ಹಲವು ಮಾರ್ಪಾಟುಗಳಾಗಿ ಗೋಧಿ ಮತ್ತು ಇತರ ಹಲವು ಧಾನ್ಯಗಳ ಮಾರಾಟದ ಬಗ್ಗೆ ಪ್ರತಿಬಂಧಕಗಳನ್ನು ತೆಗೆಯಲಾಗುವುದೆಂದೂ ಮತ್ತು ದೇಶದ ನಾನಾ ಕೈಗಾರಿಕಾ ಕೇಂದ್ರಗಳು ಮತ್ತು ಪ್ರಮುಖ ನಗರಗಳಲ್ಲಿನ ರೇಷನ್ ಡಿಪೋಗಳನ್ನು ಫೇರ್ ಪ್ರೈಸ್ ಡಿಪೋಗಳನ್ನಾಗಿ ಪರಿವರ್ತಿಸಲಾಗುವುದೆಂದೂ ತಿಳಿದುಬಂದಿದೆ. ಹಲವು ಧಾನ್ಯಗಳ ಬೆಲೆಯನ್ನು ಇಳಿಸಲಾಗುವುದು.

ಆಹಾರ ಡಿಪೋ ವಶಕ್ಕಾಗಿ ಸತ್ಯಾಗ್ರಹ

ನಾಲ್ಕು ಜನ ಸಮಾಜವಾದಿಗಳ ಬಂಧನ

ಮೈಸೂರು ೮

ಮೈಸೂರು ಜಿಲ್ಲಾ ಸಮಾಜವಾದಿ ಪಕ್ಷದವರು ಆಹಾರದ ಬೆಲೆ ಏರಿಕೆ ವಿರುದ್ಧವಾಗಿ ಸತ್ಯಾಗ್ರಹವನ್ನು ಹೂಡಲು ನಿರ್ಧರಿಸಿದ್ದ ಪ್ರಕಾರ ಈ ದಿನ ಬೆಳಿಗ್ಗೆ ೧೧ ಘಂಟೆಗೆ ೪ ಮಂದಿ ಸತ್ಯಾಗ್ರಹಿಗಳು ಗಾಂಧಿ ಚೌಕದಲ್ಲಿರುವ ಸರ್ಕಾರಿ ಡಿಪೋವನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಡೆಸಿ, ದಸ್ತಗಿರಿಯಾದರು.

ಬೆಳಿಗ್ಗೆ ೧೦ ಗಂಟೆಗೆ ಸಮಾಜವಾದಿ ಪಕ್ಷದ ಸತ್ಯಾಗ್ರಹ ಸಮಿತಿಯ ಸದಸ್ಯರಾದ ಚಿಕ್ಕಬೋರ್ ಹನೀಫ್ ಸುಹೇಲ್ ಮತ್ತು ಶ್ರೀಗಳಾದ ಬಿ. ಪುಟ್ಟಸ್ವಾಮಿ, ಆ. ಶ್ರೀನಿವಾಸರಾವ್, ವೇದಾಂತಂ ಹೆಮ್ಮಿಗೆ ಮುಂತಾದವರು ಟೌನ್ ಹಾಲ್ ಮೈದಾನದಲ್ಲಿ ಭಾಷಣ ಮಾಡಿ, ಅಲ್ಲಿಂದ ತಮ್ಮ ಪಕ್ಷದ ಧ್ವಜವನ್ನು ಹಿಡಿದುಕೊಂಡು "ಸರ್ಕಾರದ ಆಹಾರದ ಬೆಲೆ ಏರಿಸುವುದಕ್ಕೆ ಧಿಕ್ಕಾರ" ಎಂದು ಘೋಷಿಸಿಕೊಂಡು ಸಯ್ಯಾಜಿರಾವ್ ರಸ್ತೆ ಮತ್ತು ಹಳೇ ಮೈಸೂರು ಬ್ಯಾಂಕು ರಸ್ತೆ ಮೂಲಕ ಗಾಂಧೀ ಚೌಕಕ್ಕೆ ಬಂದರು. ಆಹಾರ ಡಿಪೋವಿನ ಕಾಂಪೌಂಡಿನಲ್ಲಿ ಪೋಲೀಸರ ಕಾವಲು ಬಲವಾಗಿತ್ತು. ಸಿಟಿ ಮ್ಯಾಜಿಸ್ಟ್ರೇಟರೂ, ಡಿ. ಎಸ್. ಪಿ ಮುಂತಾದ ಅಧಿಕಾರಿಗಳೂ ಹಾಜರಿದ್ದರು.

ಶ್ರೀಗಳಾದ ಕೆ. ಪಿ. ಶಾಂತಮೂರ್ತಿ, ಶ್ರೀನಿವಾಸರಾವ್, ವೇದಾಂತಂ ಹೆಮ್ಮಿಗೆ ಮತ್ತು ಉತ್ತರ ಪ್ರದೇಶದಿಂದ ಆಗಮಿಸಿರುವ ವಾಸುದೇವ್‌ರವರುಗಳು ಕಾಂಪೌಂಡಿನೊಳಗೆ ಪ್ರವೇಶಿಸಿ, ಡಿಪೋವಿನೊಳಗೆ ಹೋಗಲು ಪ್ರಯತ್ನಿಸಿದಾಗ ಪೋಲೀಸರು ಅವರನ್ನು ಕ್ರಿ. ಪ್ರೊ. ಕೋ. ೧೫೧ ರ ಪ್ರಕಾರ ದಸ್ತಗಿರಿ ಮಾಡಿ, ಸೆಂಟ್ರಲ್ ಪೋಲೀಸು ಸ್ಟೇಷನ್ನಿಗೆ ಕರೆದೊಯ್ದರು. ಇದನ್ನು ನೋಡಲು ಸಹಸ್ರಾರು ಜನರು ನೆರೆದಿದ್ದರು.

ಖಾಸಿಂ ರಜ್ವಿಯ ಬಿಡುಗಡೆಯೇ?

ಹೈದರಾಬಾದಿನ ರಜಾಕರ್ ನಾಯಕ ಖಾಸಿಂ ರಜ್ವಿಯವರನ್ನು ಬಿಡುಗಡೆ ಮಾಡುವ ವಿಷಯವು ಅಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ತಿಳಿದುಬಂದಿದೆ. ರಜ್ವಿಯವರು ಅಧ್ಯಕ್ಷರಾಗಿದ್ದ ಇತ್ತಿಹಾದ್ ಮುಸಲ್ಮೀನ್ ಸಂಸ್ಥೆಯ ಇತರ ನಾಯಕರು ರಜ್ವಿಯವರ ಬಿಡುಗಡೆಗಾಗಿ ಪ್ರಯತ್ನವನ್ನು ಪ್ರಾರಂಭಿಸಿದ್ದಾರೆಂದೂ ಹೇಳಲಾಗಿದೆ.

ಸಂಸ್ಥಾನಗಳಲ್ಲಿ ಕಡ್ಡಾಯದ ಹಿಂದಿ ಶಿಕ್ಷಣ

ಮಕ್ಕಳಿಗೆ ಹಿಂದಿ ಶಿಕ್ಷಣವನ್ನು ಕಡ್ಡಾಯವಾಗಿಯೂ, ಒಂದೇ ರೀತಿಯಲ್ಲಿಯೂ ಕೊಡಬೇಕೆಂದು ವಿಧಿಸುವ ಸೂಚನೆಯನ್ನು ಕೇಂದ್ರ ಸರ್ಕಾರದವರು ಪ್ರಾಂತಗಳಿಗೆ ಶೀಘ್ರದಲ್ಲೇ ಕಳುಹಿಸಿಕೊಡುವುದಾಗಿ ಕೇಂದ್ರ ವಿದ್ಯಾ ಮಂತ್ರಿ ಮೌಲಾನಾ ಆಜಾದ್‌ರವರು ತಿಳಿಸಿರುತ್ತಾರೆ. ದಕ್ಷಿಣ ಭಾರತದಲ್ಲಿ ಅಲ್ಪ ಮಂದಿ ಮಾತ್ರ ಹಿಂದಿ ಶಿಕ್ಷಣಕ್ಕೆ ವಿರೋಧವಾಗಿದ್ದವರೆಂದೂ, ಬಹು ಜನರು ಹಿಂದಿಯನ್ನು ಕಲಿಯಲು ಆಸಕ್ತರಾಗಿರುವರೆಂದೂ ಅವರು ತಿಳಿಸಿರುತ್ತಾರೆ.

ಆಹಾರದ ಬೆಲೆ ಬಗ್ಗೆ ಬೊಂಬಾಯಿಯಲ್ಲಿ ಪ್ರದರ್ಶನ

ಆಹಾರ ಪದಾರ್ಥಗಳ ಬೆಲೆ ಏರಿಕೆಯ ವಿರುದ್ಧವಾಗಿ ಬೊಂಬಾಯಿಯಲ್ಲಿ ೭೫,೦೦೦ ಬಟ್ಟೆ ಗಿರಣಿ ಕಾರ್ಮಿಕರು ಮೊನ್ನೆ ಮುಷ್ಕರ ಹೂಡಿ ಪ್ರದರ್ಶನವನ್ನು ನಡೆಸಿದರು. ೬೪ ಗಿರಣಿಗಳ ಪೈಕಿ ೪೯ ಬಂದಾಗಿದ್ದುವು. ಎರಡು ಹೋಟೇಲುಗಳನ್ನು ಮುಚ್ಚಿಲ್ಲವೆಂದು ಅವುಗಳ ಮೇಲೆ ಪ್ರದರ್ಶನಕಾರರು ಧಾಳಿ ನಡೆಸಿದರೆಂದೂ, ೩೦ ಜನರ ದಸ್ತಗಿರಿಯಾಯಿತೆಂದೂ ವರದಿಯಾಗಿದೆ.

ಹರಿಕಥೆ

ಪೂರ್ಣಿಮಾ ಪ್ರಯುಕ್ತ ಈ ದಿನ ರಾತ್ರಿ ೯ ಘಂಟೆಗೆ ಮೈಸೂರು ಸಾವಿತ್ರಿ ಪತ್ರಿಕಾ ಕಛೇರಿ ಮಹಡಿ ಮೇಲೆ ವೇ|| ಸಮೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಕೃಷ್ಣಾರ್ಜುನ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ ಸರ್ವರಿಗೂ ಸ್ವಾಗತವುಂಟು.

ವಾರ್ಷಿಕೋತ್ಸವ

ರಾಜಧಾನಿಯ ೧ ನೇ ಅಡಿಗಾ ಬಡಾವಣೆಯಲ್ಲಿರುವ ಶ್ರೀ ಗಂಗಾ ಪರಮೇಶ್ವರಿ ಯುವಕರ ಸಂಘದ ೫ ನೇ ವಾರ್ಷಿಕೋತ್ಸವವು ಈ ರಾತ್ರಿ ೮ ಗಂಟೆಗೆ ಸಂಘದ ಆವರಣದಲ್ಲಿ ನಡೆಯುವುದು. ಪೌರ ಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿ ರಾಯರು ಅಧ್ಯಕ್ಷತೆ ವಹಿಸುವರು. ಈ ಸಂಬಂಧವಾಗಿ ಆರೋಗ್ಯ ಪ್ರದರ್ಶನವನ್ನು ಸಹ ಏರ್ಪಡಿಸಲಾಗಿದೆ.

ಆಹಾರದ ಪರ್ತಕರ ಪರೀಕ್ಷೆ ಎಂದು ರಾಜಾಜಿ

ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಆಹಾರದ ಕಂಟ್ರೋಲನ್ನು ತಾತ್ಕಾಲಿಕ ರದ್ದು ಪಡಿಸಿ, ವರ್ತಕರುಗಳು ಇನ್ನು ಮುಂದೆ ನ್ಯಾಯವಾಗಿ ಧಾನ್ಯವನ್ನು ಮಾರುವ ಪರೀಕ್ಷೆಗೆ ಗುರಿಯಾಗಿರುವರೆಂದು ತಿಳಿಸಿರುತ್ತಾರೆ. ಅಪರಿಮಿತ ಲಾಭಕ್ಕಾಗಿ ಕಂಟ್ರೋಲಿರಬೇಕೆಂದು ಇದುವರೆಗೆ ಹೇಳಲಾಗುತ್ತಿತ್ತೆಂದೂ, ಈ ಹೇಳಿಕೆಯು ನ್ಯಾಯವಾದುದಲ್ಲವೆಂಬುದನ್ನು ತೋರಿಸುವುದು ವ್ಯಾಪಾರಿಗಳ ಕೈಯ್ಯಲ್ಲಿರುವುದೆಂದೂ ಅವರು ಹೇಳಿರುತ್ತಾರೆ. ಕಂಟ್ರೋಲನ್ನು ನಾವು ತೆಗೆದುದು ತಮ್ಮ ಅಂತರ್ವಾಣಿಯ ಕರೆಯಿಂದಲೆಂದು ಅವರು ಹೇಳಿ, ಇನ್ನು ಮುಂದೆ ಹೆಚ್ಚು ಭತ್ತ ಬೆಳೆಯಲಾಗುವುದೆಂದು ತಿಳಿಸಿರುತ್ತಾರೆ. ಹೋಟೇಲುಗಳಲ್ಲಿ ಆಹಾರದ ಪ್ರಮಾಣವು ಜಾಸ್ತಿಯಾಗುವುದಲ್ಲವೇ ಎಂದು ಕೇಳಲಾಗಿ ಯಾವುದಕ್ಕೂ ಇನ್ನು ಮುಂದೆ ಮಿತಿ ಇರುವುದಿಲ್ಲವೆಂದು ಅವರು ಸೂಚಿಸಿರುತ್ತಾರೆ.

ಅವರ ಈ ನೀತಿಗೆ ಕಮ್ಯೂನಿಸ್ಟರು ವಿನಹ ಇತರರೆಲ್ಲರೂ ಬೆಂಬಲವಿತ್ತಿರುವರು. ತನಗೆ ಬೇಕಾದ ವಸ್ತುವನ್ನು ಇಷ್ಟಬಂದಲ್ಲಿ ಕೊಳ್ಳುವ ಅವಕಾಶವು ದೊರಕಿದುದಕ್ಕಾಗಿ ಸಾಮಾನ್ಯ ಪ್ರಜೆಗಳಿಗೆ ತುಂಬಾ ಹರ್ಷವಾಗಿರುತ್ತದೆ.

ಬರುವ ಜೂನ್ ೨ರಲ್ಲಿ ಬ್ರಿಟಿಷ್ ರಾಣಿ ಕಿರೀಟ ಧಾರಣೆ

ಮುಂದಿನ ಜೂನ್ ೨ ನೇ ತಾ|| ಬ್ರಿಟನ್ನಿನ ರಾಣಿ ಎಲಿಜಬೆತ್ತರ ಕಿರೀಟ ಧಾರಣೋತ್ಸವವು ಮಧ್ಯ ಕಾಲದ ಮತ್ತು ಆಧುನಿಕ ಕಾಲದ ವಿಜೃಂಭಣೆಯೊಡನೆ ನೆರವೇರುವುದೆಂದು ಘೋಷಿಸಲಾಗಿದೆ.

ಕೆ. ಎಂ. ಪಿ. ಮತ್ತು ಸಮಾಜವಾದಿ ಪಕ್ಷಗಳ ಐಕ್ಯ

ಕೆ.ಎಂ.ಪಿ. ಮತ್ತು ಭಾರತದ ಸಮಾಜವಾದಿ ಪಕ್ಷಗಳು ಐಕ್ಯವಾಗಬಹುದೆಂದು ಆಚಾರ್ಯ ಕೃಪಲಾನಿಯವರು ತಿಳಿಸಿರುತ್ತಾರೆ.

ಐದು ವರ್ಷಗಳಲ್ಲಿ ಟ್ಯೂನಿಸ್ ದೇಶಕ್ಕೆ ಸ್ವಾತಂತ್ರ್ಯ

ಐದು ವರ್ಷಗಳಲ್ಲಿ ಟ್ಯೂನಿಸ್ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವ ಬಗ್ಗೆ ಫ್ರೆಂಚ್ ಮತ್ತು ಟ್ಯೂನಿಸ್ ಮುಖಂಡರು ಒಂದು ಯೋಜನೆಯನ್ನು ಸಿದ್ಧಗೊಳಿಸಿರುತ್ತಾರೆ. ಈ ಕೂಡಲೇ ಆ ದೇಶಕ್ಕೆ ಹೆಚ್ಚಿನ ಸ್ವಯಮಾಡಳಿತವನ್ನು ಕೊಡಲೂ ಸಹ ಏರ್ಪಾಡು ಮಾಡಲಾಗಿದೆ.

ಫೇಲಾದ ಇಂಜನಿಯರಿಂಗ್ ವಿದ್ಯಾರ್ಥಿಗಳ ಸಭೆ

ಇಂಜನಿಯರಿಂಗ್ ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಗಳ ಸಭೆಯು ನಾಳೆ ಸಂಜೆ ೫ ಘಂಟೆಗೆ ಮ್ಯಾಕಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಆವರಣದಲ್ಲಿ ನಡೆಯುತ್ತದೆ. ಸೋತ ವಿದ್ಯಾರ್ಥಿಗಳು ತಪ್ಪದೆ ಬರಬೇಕಾಗಿ ಕೋರಲಾಗಿದೆ.

ವಾರ ಭವಿಷ್ಯ

ತಾ|| ೮-೬-೫೨ ರಿಂದ ೧೫-೬-೫೨ ರ ವರೆಗೆ

ಮೇಷ — ಕುಟುಂಬದಲ್ಲಿ ಕ್ಲೇಶ ಮನೆಯಲ್ಲಿ ವಿಷ್ಯಾರಣ ಕಲಹ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಗಳು ಸಾಧಾರಣ ವ್ಯಾಪಾರಾದಿಗಳಲ್ಲಿ ಕಷ್ಟ ಸ್ಥಿತಿ ತಾ|| ೯, ೧೩ ಮಿತ್ರ ಸಹಾಯ, ಮಾನ ಸಂರಕ್ಷಣೆ

ವೃಷಭ — ಜವಾಬ್ದಾರಿ ಕೆಲಸದಲ್ಲಿ ಶಾಂತಿ ಪ್ರತಿ ಸ್ಪರ್ಧಿಗಳಿಗೆ ಮುಖಭಂಗ ವ್ಯಾಪಾರಾದಿ ಸ್ಥಿತಿಗಳು ಉತ್ತಮ ತಾ|| ೮, ೯ ಖರ್ಚು ಹೆಚ್ಚು ಬಂಧುಗಳ ಆಗಮನ

ಮಿಥುನ — ಆರೋಗ್ಯ ಉತ್ತಮ ಯೋಜಿತ ಕೆಲಸ ಸಿದ್ಧಿ ಹಣ ಕಾಸಿನ ಸ್ಥಿತಿ ಉತ್ತಮ, ಆದರೆ ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ಉತ್ತಮ ತಾ|| ೧೧, ೧೨ ಬಂಧು ಮಿತ್ರರ ಆಗಮನ, ಖರ್ಚು ಹೆಚ್ಚು

ಕರ್ಕ — ನಿರಾಶೆಯಿಂದ ಬಳಲುವಿರಿ ಸಾಂಪತ್ತಿಕ ಸ್ಥಿತಿ ಉತ್ತಮ ವಿಪರೀತ ವೆಚ್ಚ ವ್ಯಾಪಾರದಲ್ಲಿ ಹಾನಿ ಇಷ್ಟರೊಡನೆ ಕ್ಲೇಶ ಉಂಟು ಪ್ರವಾಸ ಬೇಡ ತಾ|| ೮, ೯ ಅನಿಷ್ಟ ವಾರ್ತೆ, ಪ್ರಿಯ ಜನ ವಿಯೋಗ

ಸಿಂಹ — ಶತ್ರುಗಳ ಶಕ್ತಿ ಕುಗ್ಗುವುದು ಆರೋಗ್ಯ ನೆಟ್ಟಗೆ ಸಾಂಪತ್ತಿಕ ಸ್ಥಿತಿಯಲ್ಲಿ ಸುಧಾರಣೆ ವ್ಯಾಪಾರಾದಿಗಳಲ್ಲೂ ಪ್ರವಾಸ, ನೌಕರಿಗಳಲ್ಲೂ ಅನಾನುಕೂಲ ತಾ|| ೯, ೧೩ ಶುಭ ವಾರ್ತೆ, ಆಕಸ್ಮಿಕ ಲಾಭ

ಕನ್ಯಾ — ವ್ಯಾಪಾರಾದಿಗಳಲ್ಲಿ ಕ್ಲೇಶ. ಆರೋಗ್ಯ ಮತ್ತು ಮಾನಸಿಕ ಸ್ಥಿತಿ ತಾಪದಾಯಕ ತಾ|| ೮, ೯, ೧೧ ಜ ಮನುಷ್ಯ ಸಸ್ಯಾವಿನ ಆಹಾರ, ನೇತ್ರ ಬಾಧೆ

ತುಲಾ — ವ್ಯಾಪಾರಾದಿಗಳಲ್ಲಿ ಅಲ್ಪ ಲಾಭ ಆರೋಗ್ಯ, ಆರ್ಥಿಕ ಸ್ಥಿತಿ ನೆಟ್ಟಗಿರದು ತಾ|| ೧೧, ೧೨ ವ್ಯಥೆ, ವ್ಯಾಪಾರದಲ್ಲಿ ಹಾನಿ

ವೃಶ್ಚಿಕ — ಮಾನಸಿಕ ವ್ಯಥೆ ಹೆಚ್ಚು [illegible] ಆರೋಗ್ಯ ನೆಟ್ಟಗಿರದು ವ್ಯಾಪಾರಾದಿಗಳಲ್ಲಿ [illegible] ಪ್ರವಾಸ [illegible] ಕಲಹ

ಧನು — [illegible] ಪ್ರತಿಸ್ಪರ್ಧಿಗಳ ಸೋಲು ವ್ಯಾಪಾರಾದಿ [illegible] ತಾ|| [illegible] ಮಾನ ಸನ್ಮಾನ

ಮಕರ — ಆತ್ಮ ಸ್ತುತಿ ಬೇಡ ವ್ಯಾಪಾರಾದಿಗಳಲ್ಲಿ ವಿಘ್ನ ಆರೋಗ್ಯ ಸಾಧಾರಣ ತಾ|| ೮, ೯ ವ್ಯಥೆ ಕಲಹ

ಕುಂಭ — ಆರೋಗ್ಯ, ಆರ್ಥಿಕ, ವ್ಯಾಪಾರ ನೌಕರಿ ಸ್ಥಿತಿಗಳು ಉತ್ತಮ ಪ್ರವಾಸ ಸುಖಪ್ರದ ತಾ|| ೧೧, ೧೨ ಬಂಧುಗಳ ಆಗಮನ ಖರ್ಚು

ಮೀನ — ಆರೋಗ್ಯ ಸಮಾಧಾನಕರವಲ್ಲ ವ್ಯಾಪಾರಾದಿಗಳಲ್ಲಿ ಹಿತ ಶತ್ರುಗಳಿಂದ ಹಾನಿ ಪ್ರವಾಸದಲ್ಲಿ ನಷ್ಟ ತಾ|| ೧೨, ೧೩ ನಿದ್ರಾ ನಾಶ, ವ್ಯಥೆ

ಸ್ವಾಮಿ ಸೀತಾರಾಮಂರವರ ದೇಹಸ್ಥಿತಿ ತೀರಾ ಕೆಟ್ಟಿದೆ

ಆಂಧ್ರ ಪ್ರಾಂತ ರಚನೆ ಸಂಬಂಧವಾಗಿ ಭೀಮಾವರದಲ್ಲಿ ಉಪವಾಸ ಕೈಗೊಂಡಿರುವ ಸ್ವಾಮಿ ಸೀತಾರಾಂರವರ ಸ್ಥಿತಿಯು ತೀರಾ ಕಳವಳಕರವಾಗಿರುವುದೆಂದು ತಿಳಿದುಬಂದಿದೆ

ಉಪನ್ಯಾಸ

ಈ ದಿನ ಸಂಜೆ ೭ ಗಂಟೆಗೆ ಅಶೋಕಾ ರಸ್ತೆಯಲ್ಲಿರುವ ಗೀತಾ ಪ್ರಚಾರಣೀ ಸಭಾಂಗಣದಲ್ಲಿ ಆರು ಕವಿ ರತ್ನಂ ಭಾರತಿಗಳವರಿಂದ ಸುಧನ್ವ ಭಕ್ತಿ ಎಂಬ ವಿಷಯವಾಗಿ ಉಪನ್ಯಾಸವನ್ನು ಏರ್ಪಡಿಸಲಾಗಿದೆ

ವಿವಾಹ ಮಹೋತ್ಸವ

ರಾಜಧಾನಿಯ ರಾಜಕಮಲ್ ಟಾಕೀಸಿನ ಮಾಲೀಕರಾದ ಶ್ರೀ ಜಿ ಕೆ ಡಿ ಭಗವಮ್ಯನವರು ತಮ್ಮ ಮಕ್ಕಳು ಚಿ|| ರಾ|| ಭಾನುವರ್ಮರವರಿಗೆ ಬೆಂಗಳೂರಿನ ಶ್ರೀ ಸಗರಿ ಸಿ ಜನವತ್ತಪ್ಪನವರ ಪುತ್ರಿ ಸೌ|| ಶಾಂತಮ್ಮನವನ್ನು ತಂದುಕೊಂಡು ಗುರುವಾರ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಭಾರತಕ್ಕೆ ೧೭೬ ರೈಲ್ವೆ ಇಂಜನ್ನುಗಳ ಆಮದು

ಬ್ರಿಟನ್, ಪಶ್ಚಿಮ ಜರ್ಮನಿ ಮತ್ತು ಸ್ವಿಟ್ಸರ್ಲೆಂಡುಗಳಿಂದ ಒಟ್ಟು ೧೭೬ ರೈಲ್ವೆ ಇಂಜನ್ನುಗಳನ್ನು ಭಾರತಕ್ಕೆ ಆಮದು ಮಾಡಿಕೊಳ್ಳಲಾಗುವುದೆಂದು ರೈಲ್ವೆ ಮಂತ್ರಿಗಳು ತಿಳಿಸಿರುತ್ತಾರೆ

ಲಂಡನ್ ಸಂಗೀತ ಗೋಷ್ಠಿಗೆ ಮೈಸೂರು ರಾಜರಿಂದ ೪ ಲಕ್ಷ ರೂ.

ಲಂಡನ್ನಿನಲ್ಲಿ ಉತ್ತಮ ಗಾಯನ ಗೋಷ್ಠಿಗಳಿಗಾಗಿ ಮೈಸೂರಿನ ಶ್ರೀಮನ್ ಮಹಾರಾಜರು ಕಳೆದ ಮೂರು ವರ್ಷಗಳಿಂದಲೂ ಉದಾರವಾಗಿ ಸಹಾಯ ಮಾಡುತ್ತಿದ್ದಾರೆ ಅಲ್ಲದೆ ಗೋಷ್ಠಿಯ ಅಧ್ಯಕ್ಷರೂ ಆಗಿರುತ್ತಾರೆ ಇದುವರೆಗೆ ಶ್ರೀಮನ್ ಮಹಾರಾಜರು ಅವುಗಳಿಗಾಗಿ ೪ ಲಕ್ಷ ರೂ ಕೊಟ್ಟಿರುವರೆಂದು ತಿಳಿದುಬಂದಿದೆ

ಶಾಸನ ಸಭಾಧ್ಯಕ್ಷರುಗಳ ವೇತನ ಮತ್ತು ಭತ್ಯ

ತಾತ್ಕಾಲಿಕ ಶಾಸನ ಸಭಾಧ್ಯಕ್ಷರ ಸಂಬಳವನ್ನು ತಿಂಗಳಿಗೆ ೫೦೦ ರೂ ಎಂದು ನಿರ್ಧರಿಸಿದವರು ಗೊತ್ತುಪಡಿಸಿರುತ್ತಾರೆ ಕೆಳಗಿನ ಶಾಸನ ಸಭೆಯ ಅಧ್ಯಕ್ಷರ ಪ್ರಯಾಣ ಮತ್ತು ದಿನ ಭತ್ಯವನ್ನೂ ಸಹ ಗೊತ್ತುಪಡಿಸಲಾಗಿದೆ ರೈಲಿನಲ್ಲಿ ಅವರು ಪ್ರಯಾಣ ಮಾಡಿದರೆ ೧ನೇ ತರಗತಿಯ ಕಂಪಾರ್ಟ್‌ಮೆಂಟನ್ನು ಭತ್ಯ ಜವಾನರುಗಳಿಗಾಗಿ ೩ ಮೂರನೇ ತರಗತಿಯ ಭತ್ಯ ಮತ್ತು ೧೦ ಮಣ ವಸ್ತು ಲಗ್ಗೇಜಿಗಾಗಿ ಭತ್ಯ ಎಂದೂ, ರಸ್ತೆಯಲ್ಲಿ ಪ್ರಯಾಣ ಮಾಡುವಾಗ, ಮೈಲಿಗೆ ೮ ಆಣೆಯಂತೆಯೂ, ೫೦ ಮೈಲಿಗಿಂತಲೂ ಹೆಚ್ಚಾದರೆ ಹೆಚ್ಚಿನ ಮೈಲಿಗೆ ೦-೫-೪ ರೂ ನಂತೆಯೂ ನಿಗದಿ ಮಾಡಲಾಗಿದೆ

ತಂದೆಯಿಂದ ಮಗಳ ಕೊಲೆ

ಕರಾಚಿಯಲ್ಲಿ ಜೆಬುನ್ನೀಸ ಎಂಬ ೧೮ ವರ್ಷದ ತರುಣಿಯೋರ್ವಳು ತನಗೆ ಇಚ್ಛೆ ಬಂದವನನ್ನು ವರಿಸುವುದಾಗಿ ಹಟ ಹಿಡಿದುದರಿಂದ ಆಕೆಯ ತಂದೆ ಅಬ್ದುಲ್ ಹಕೀಂ ಎಂಬ ವೃದ್ಧನು ಮಗಳ ಮೇಲೆ ಕೋಪಗೊಂಡು ಆಕೆಯನ್ನು ಹರಿತವಾದ ಚೂರಿಯಿಂದ ಇರಿದು ಕೊಂದನೆಂದೂ, ಅವನನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆಂದೂ ತಿಳಿದುಬಂದಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ಜಿ. ಎಸ್ ಬಾಲಕೃಷ್ಣಯ್ಯಂ ರಿಕಾರ್ಡು ಸಂಗೀತ. ಮಧ್ಯಾಹ್ನ ೧-೩೦ ನಾಗಸ್ವರ. ೨ ಚಿತ್ರ ಸಂಗೀತ ೩-೧೫ ಆರ್. ಸ್ವಾಮಿ ಸಂಜೆ ೬-೩೦ ಟಿ ಎಸ್ ತಾತಾಚಾರ್ ಪಿಟೀಲು ೬-೧೫ ಗಾನವಿಹಾರ ೭ ಕನ್ನಡ ಗೀತೆಗಳು ೭-೩೦ ಜನರಂಜನಿ. ೭-೩೦ ವಿಶ್ವ ವಿಮರ್ಶೆ ೮-೩೦ ಮತ್ತು ೯-೩೦ ನೇಜ್ ರಾಮನಾಥ ಸಂಗೀತ ೯-೧೫ ಇಂಗ್ಲಿಷ್ ಭಾಷಣ

೧೧ ನೇ ತಾ|| ಎಲ್. ಎಸ್. ಪರೀಕ್ಷಾ ಫಲಿತಾಂಶ

ಮೈಸೂರು ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶವು ಇದೇ ೧೧ ನೇ ತಾರೀಖು ಪ್ರಕಟಿಸಲ್ಪಡುವುದೆಂದು ತಿಳಿದು ಬಂದಿದೆ

CITY TUTORIAL COLLEGE
Near V. V. Market Mysore
ADMISSIONS RECEIVED
B Sc - English & P C M
INTER English, P C M & C B Z
I COM Parts I, II & III &
INTER GEOGRAPHY
Classes Next Week

THE CENTRAL COLLEGE OF COMMERCE
Vanivilas Market Buildings
Admissions to — Diploma Courses in Commerce and Stenography, Typewriting and Shorthand, will be received on all working days Reserve your seats immediately

D BANUMIAH'S COLLEGE OF COMMERCE, MYSORE
NOTIFICATION
Applications for admission to the Junior I Com Class will be received from 10th June 1952
Forms of Application can be obtained from the office of the College during working hours
B. V. BANUMIAH, Principal

1952 September S S. L C TUTORIAL CLASSES
ADMISSIONS FOR THE ABOVE CLASSES are now being received between 7 and 10 A. M. Classes will be handled by expert High School teachers Apply in person to —
THE ORGANIZER,
Kabal Tutorial College, C/o
Champion Metropolitan College,
Co-operators Home,
100 Lett Road, Mysore.

ಬಂಗ್ಲೆ ಬಿಕರಿಗಿದೆ
ಮೈಸೂರು ಸರಸ್ವತೀಪುರಂ ಹೊಸ ಬಡಾವಣೆಯಲ್ಲಿ C II/38-5ನೇ ನಂಬರು ಪೂರ್ತಾ ತಾರಸಿ ಕಟ್ಟಡ ಸುಮಾರು 16,000 ರೂ ಬೆಲೆ ಬಾಳುವ ಮತ್ತು ಮೀಟರ್, ಬಾವಿ, ಕಾಂಪೌಂಡು, ಗೇಟು ವ್ಯವಸ್ಥೆಯುಳ್ಳ ಒಡಗೂಡಿ ರೈಲ್ವೆ ಸ್ಟೇಷನ್, ಕೋರ್ಟ್ ಕಛೇರಿ, ಸ್ಕೂಲ್ ಕಾಲೇಜುಗಳಿಗೆ ಸಮೀಪದಲ್ಲಿರುವ ಬಂಗ್ಲೆ ಬಿಕರಿಗಿದೆ ಬಾಕಿ ವಿಚಾರಗಳಿಗೆ ಈ ಕೆಳಗೆ ಕಂಡ ಅಡ್ರೆಸ್ಸಿನಲ್ಲಿ ವಿಚಾರಿಸಿ
ಕೆ. ಆರ್. ಶಾಮರಾವ್
2379, ಲಾ ಕಾಲೇಜ್ ಹಿಂಭಾಗ
ಮೈಸೂರು

ರಾಜಕಮಲ್,
ಮೈಸೂರು
6—6—52 ರಿಂದ ಪ್ರಾರಂಭ
ಪ್ರತಿದಿನ ೩ ಆಟಗಳು
ದಿ ಸೀಕ್ರೆಟ್ ಆಫ್
ಎ ಪ್ರಿಮರ ಐಲೆಂಡ್
ಎಂಬ ರೋಮಾಂಚಕಾರಿಯಾದ
[illegible] ಸೀರಿಯಲ್

ಮೈಸೂರು ಟ್ರಾನ್ಸಿಟ್ ಸರ್ವಿಸ್
ರಮಾವಿಲಾಸ ರಸ್ತೆ, ಮೈಸೂರು ಫೋನ್ ನಂ 537
ಮೈಸೂರು ಮತ್ತು ಮದರಾಸುಗಳ ನಡುವೆ
ನಮ್ಮ ಏಜೆಂಟರಾದ ಮೆಸರ್ಸ್ ಮದ್ರಾಸು ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೂಲಕ ಸುವ್ಯವಸ್ಥಿತ ರೀತಿಯಲ್ಲಿ ಸರಕುಗಳನ್ನು ರವಾನಿಸುವ ಸಂಸ್ಥೆ
ಮಾಲೀಕರು ತೀರ್ಥ ಮತ್ತು ಕಂಪೆನಿ,
ಸಂಸ್ಥಾಪಕ ಏಜೆಂಟ್ — ಮೆಸರ್ಸ್ ಎಸ್. ಎಸ್. ಶೆಟ್ಟಿ,
ಹನುಮಂತ ರಾವ್ ರಸ್ತೆ (ಪ್ರಭಾ ಟಾಕೀಸ್ ಹತ್ತಿರ) ಮೈಸೂರು

Edited, Printed and Published by A. R. Nagarajan at Sadhvi Press, D Subbiah Road, Mysore.

ರಿಜಿಸ್ಟರ್ಡ್ ನಂ. 793 || ಸಂಪಾದಕರು: || ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೯-೬-೫೩ [ಸಂಚಿಕೆ ೫೬೬

ಕೋಲಾರ ಕ್ಷಾಮನಿಧಿಗೆ ನೆಹ್ರೂ ಧನ ಸಹಾಯ

ನಗರ ಕಾಂಗ್ರೆಸ್ ಸಮಿತಿಗೆ ದಾಸಪ್ಪನವರ ಭೇಟಿ

ಮೈಸೂರು ೯

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ನೆನ್ನೆ ದಿವಸ ನಗರ ಕಾಂಗ್ರೆಸ್ ಸಮಿತಿ ಕಛೇರಿಗೆ ಭೇಟಿಯಿತ್ತಿದ್ದರು. ಶ್ರೀ ಎಸ್. ಚನ್ನಯ್ಯನವರು ಸ್ವಾಗತ ಭಾಷಣ ಮಾಡಿ ಮೈಸೂರು ನಗರದವರಾದ ದಾಸಪ್ಪನವರು ಎರಡನೆ ಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದುದಕ್ಕೆ ತಮ್ಮ ಸಂತೋಷವನ್ನು ಸೂಚಿಸಿ ಅವರನ್ನು ಅಭಿನಂದಿಸಿದರು. ಅನಂತರ ಶ್ರೀಗಳಾದ ಎ. ರಾಮಣ್ಣ, ತಿಮ್ಮಣ್ಣ ಮುಂತಾದವರು ಮಾತನಾಡಿ ಕಾಂಗ್ರೆಸ್ ಅಧ್ಯಕ್ಷರನ್ನು ಅಭಿನಂದಿಸಿದರು. ಶ್ರೀ ದಾಸಪ್ಪನವರು ಮಾತನಾಡಿ ತಮಗೆ ಸದಸ್ಯರೆಲ್ಲರೂ ಇತ್ತ ಬೆಂಬಲಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು. ಎಲ್ಲಾ ಪ್ರಾಂತದಲ್ಲೂ ಜನಸಂಖ್ಯೆಯಲ್ಲಿ ಶೇಕಡ ಹತ್ತರಷ್ಟು ಜನರನ್ನಾದರೂ ಕಾಂಗ್ರೆಸ್ಸಿಗೆ ಸದಸ್ಯರನ್ನಾಗಿ ಸೇರಿಸಬೇಕೆಂದು ಕೇಂದ್ರ ಕಛೇರಿಯಿಂದ ಬಂದ ಆದೇಶವನ್ನು ತಿಳಿಸಿ ಕಾರ್ಯಕರ್ತರುಗಳು ಇದಕ್ಕಾಗಿ ಶ್ರಮಿಸಬೇಕೆಂದು ಅವರು ಕೋರಿದರು. ಶ್ರೀ ಟಿ. ವೆಂಕಟರಮಣಪ್ಪನವರು ವಂದನಾರ್ಪಣೆಯನ್ನು ಮಾಡಿದರು.

ನೆಹ್ರೂ ಮೋಟಾರಿನ ಮುಂದೆ ಮಲಗಿದ ಸಾಧುವಿಗೆ ಸಜಾ

ನೆಹರೂರವರ ಭೇಟಿ ಮಾಡ ಪ್ರಯತ್ನದಲ್ಲಿ ವಿಫಲಗೊಂಡ ಭುಜಂಗ್ ಎಂ. ದೆಹಲಿಯ ಸಾಧುವು ಕಳೆದ ೨೦ನೇ ತಾರೀಖು ಅವರು ಮೋಟಾರಿನಲ್ಲಿ ಕುಳಿತು ತಮ್ಮ ಮನೆಯಿಂದ ಹೊರ ಹೋಗುವ ಸಮಯದಲ್ಲಿ ಮೋಟಾರಿನ ಮುಂದೆ ಮಲಗಲಾಗಿ ಪೋಲೀಸರು ಅವನನ್ನು ಬಂಧಿಸಿ ಆತ್ಮಹತ್ಯಾ ಪ್ರಯತ್ನದ ಅಪಾದನೆಗಾಗಿ ವಿಚಾರಣೆಗೆ ಗುರಿಮಾಡಿದ್ದರು. ಮೊನ್ನೆ ದಿವಸ ಅವನು ೪ ತಿಂಗಳ ಸಜಾ ಶಿಕ್ಷೆಗೆ ಗುರಿಯಾದನು.

ಮೈಸೂರಿನಲ್ಲಿ ಸಹ ಕಮ್ಯೂನಿಟಿ ಪ್ರಾಜೆಕ್ಟ್ ಡೈರೆಕ್ಟರ್

ಬೆಂಗಳೂರು ೮

ಮದ್ರಾಸು ಪ್ರಾಂತದಂತೆಯೇ ಈ ಸಂಸ್ಥಾನದಲ್ಲಿ ಸಹ ಮೂಲಾಧಾರದ ಜನಸಮುದಾಯ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಲು ಡೈರೆಕ್ಟರ ಹುದ್ದೆಯೊಂದನ್ನು ಸರ್ಕಾರದವರು ಏರ್ಪಡಿಸಲಿರುವರೆಂದು ತಿಳಿದುಬಂದಿದೆ. ಈ ಯೋಜನೆ ಪ್ರಕಾರ ಶಿವಮೊಗ್ಗದ ಸಾಗರ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ, ಮಂಡ್ಯದಲ್ಲೂ ಕೆಲಸ ಕಾರ್ಯಗಳು ನಡೆಯುವುವು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಮತ್ತು ಸಾಗರ ತಾಲ್ಲೂಕುಗಳಲ್ಲಿ ಇಂತಹ ಅಭಿವೃದ್ಧಿಯೋಜನೆಗಾಗಿ ಕೇಂದ್ರದವರು ೨೦ ಲಕ್ಷ ರೂ. ಸಹಾಯವನ್ನು ಕೊಟ್ಟಿರುವರು. ಇವುಗಳಲ್ಲಿ ೨೦ ಲಕ್ಷ ರೂ. ಗಳನ್ನು ಸಾಲವಾಗಿ ಮೈಸೂರು ಸರ್ಕಾರಕ್ಕೆ ಕೊಟ್ಟಿರುವರು. ಒಟ್ಟು ೬೫ ಲಕ್ಷ ರೂ. ವೆಚ್ಚದಲ್ಲಿ ಕೆಲಸವನ್ನು ನಡೆಸಲಾಗುವುದು.

ಬೆಂಗಳೂರಿಗೆ ಆಯುರ್ವೇದ ಕಾಲೇಜಿನ ವರ್ಗ

ಮೈಸೂರು ೯

ಮೈಸೂರಿನಲ್ಲಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಬೆಂಗಳೂರಿಗೆ ವರ್ಗಾಯಿಸಲ್ಪಡುವ ವಿಷಯವನ್ನು ಚರ್ಚಿಸಲು ನೆನ್ನೆ ದಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಶ್ರೀನಾಥ್ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆಯು ಸೇರಿದ್ದಿತು. ಅನೇಕ ಸ್ಥಳೀಯ ಪಂಡಿತರುಗಳೂ, ವಿದ್ಯಾರ್ಥಿಗಳೂ, ಹಿತಚಿಂತಕರೂ ಆಗಮಿಸಿದ್ದರು. ಹಲವರು ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದನ್ನು ಸಮರ್ಥಿಸಿಯೂ, ಒಬ್ಬಿಬ್ಬರು ವಿರೋಧಿಸಿಯೂ ಭಾಷಣ ಮಾಡಿದರು.

ವಿದ್ಯಾರ್ಥಿಗಳ ಪರವಾಗಿ ಶ್ರೀಗಳಾದ ಜಿ. ಎಸ್. ರಾಮರಾಯರೂ ಮತ್ತು ಅಕ್ಷಯ ನಾರಾಯಣ ಪಂಡಿತರೂ ಮಾತನಾಡಿ, ಕಾಲೇಜು ಬೆಂಗಳೂರಿಗೆ ಹೋಗುವುದರಲ್ಲಿ ವಿದ್ಯಾರ್ಥಿಗಳಿಗಾಗುವ ಪ್ರಯೋಜನಗಳನ್ನು ವಿವರಿಸಿದರು. ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ಸ್ವಾಗತಿಸಿ ಸರ್ಕಾರವನ್ನು ಅಭಿನಂದಿಸುವ ನಿರ್ಣಯವನ್ನು ಮಂಡಿಸಿದರು. ಕೆಲವು ಸ್ಥಳೀಯ ಪಂಡಿತರುಗಳು ತಮ್ಮ ತಮ್ಮಲ್ಲೇ ನಿಯೋಗಗಳನ್ನು ರಚಿಸಿಕೊಂಡು ವಿದ್ಯಾರ್ಥಿಗಳ ಅಭಿಲಾಷೆಗೆ ಮತ್ತು ಕಾಲೇಜಿನ ಪ್ರಗತಿಗೆ ಕಂಟಕಪ್ರಾಯರಾಗಿ ಮಂತ್ರಿಗಳಲ್ಲಿ ಹೋಗಿ ತಮ್ಮಕೈ ದೂಷಣಾದ ಅಭಿಪ್ರಾಯಗಳನ್ನು ಉಂಟು ಮಾಡಬಹುದೆಂಬುದನ್ನು ಶ್ರೀ ಜಿ. ಎಸ್. ರಾಮರಾಯರು ಕಟುವಾಗಿ ಖಂಡಿಸಿದರು. ಇಂತಹ ನಿಯೋಗಗಳ ಕೋರಿಕೆಗಳನ್ನು ನಿರ್ಲಕ್ಷಿಸಬೇಕೆಂದು ಮಂತ್ರಿಗಳಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.

ಸಭೆ ಯಾವ ನಿರ್ಧಾರದಲ್ಲೂ ಅಂತಿಮ ನಿರ್ಧಾರಕ್ಕೆ ಬರದೆ ಅನಿರ್ದಿಷ್ಟವಾಗಿ ಮುಂದೆ ಹಾಕಲ್ಪಟ್ಟಿತು—ಎಂಬುದಾಗಿ ಕಾಲೇಜು ಸಂಘದ ಕಾರ್ಯದರ್ಶಿ ಜಿ. ಸೈಯದ್ ಹಾಸೀಂರವರು ತಿಳಿಸುತ್ತಾರೆ.

ಎಸ್. ಲಿಂಗಣ್ಣನವರು

ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು

ಮೈಸೂರು ೯

ಪೌರಸಭಾ ಸದಸ್ಯರಾದ ಶ್ರೀ ಎಸ್. ಲಿಂಗಣ್ಣನವರನ್ನು ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ಸರ್ಕಾರದವರು ನೇಮಿಸಿರುತ್ತಾರೆ. ಈ ದಿನ ಮಧ್ಯಾಹ್ನ ಅವರು ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರಿಂದ ಅಧಿಕಾರವನ್ನು ವಹಿಸಿಕೊಂಡರು.

ಅಕ್ಕಿ ಸತ್ಯಾಗ್ರಹಿಗಳ ಬಿಡುಗಡೆ

ನೆನ್ನೆ ಅಕ್ಕಿ ಸತ್ಯಾಗ್ರಹ ನಡೆಸಿದ ಸಂಬಂಧದಲ್ಲಿ ದಸ್ತಗಿರಿ ಮಾಡಿದ್ದ ೪ ಮಂದಿ ಸಮಾಜವಾದಿಗಳನ್ನು ಈ ದಿನ ಪೋಲೀಸರು ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಿರುತ್ತಾರೆ.

ಹೆಬ್ಬಾವನ್ನು ನುಂಗಿ ಬದುಕಿ ಬಂದ ಮನುಷ್ಯ

ಹೈದರಾಬಾದಿನ ಬಿಹಾರ್ ಜಿಲ್ಲೆಯಲ್ಲಿ ಜನರ ಗುಂಪೊಂದು ಆಕಸ್ಮಾತ್ತಾಗಿ ಹೆಬ್ಬಾವೊಂದರ ಹತ್ತಿರಕ್ಕೆ ಹೋದಾಗ ಅದು ಒಬ್ಬನನ್ನು ನುಂಗಿತೆಂದೂ, ಅನಂತರ ಅದನ್ನು ಭರ್ಜಿಗಳಿಂದ ತಿವಿದು ಕೊಂದು ನುಂಗಲ್ಪಟ್ಟಿದ್ದವನನ್ನು ಸತ್ತಿರುವನೆಂದು ಭಾವಿಸಿ, ಸಮಾಧಿ ಮಾಡಲು ಕೊಂಡೊಯ್ಯುತ್ತಿದ್ದಾಗ ಅವನು ಮೂರ್ಛೆ ತಿಳಿದೆದ್ದನೆಂದೂ, ಈಗ ಗುಣಹೊಂದುತ್ತಿರುವನೆಂದೂ ವರದಿಯಾಗಿದೆ.

ಕೋಲಾರದ ಕ್ಷಾಮನಿಧಿಗೆ ನೆಹ್ರೂರಿಂದ ೫೦,೦೦೦ ರೂ.

ಬೆಂಗಳೂರು ೯

ಕೋಲಾರ ಜಿಲ್ಲೆಯಲ್ಲಿ ತಲೆದೋರಿರುವ ಕ್ಷಾಮ ಪರಿಸ್ಥಿತಿಯ ಪರಿಹಾರಕ್ಕಾಗಿ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ದೆಹಲಿಯ ಹಾಗೂ ಇತರಗಳಲ್ಲಿ ಸಂಚರಿಸಿ ನೆಹ್ರೂ ಪ್ರಧಾನಿಯವರಿಗೆ ಭೇಟಿಯಿತ್ತಾಗ ಅಕ್ಕಿ ಕ್ಷಾಮ ನಿಧಿಗೆ ಪೌರಸಭೆಯವರು ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಅವರು ಭಾಷಣ ಮಾಡಿ ಭಾರತದ ಪ್ರಧಾನಿ ಪಂಡಿತ ನೆಹರೂರವರು ಪ್ರಧಾನಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ೫೦ ಸಾವಿರ ರೂ. ಅನ್ನು ಕೋಲಾರದ ಕ್ಷಾಮ ನಿವಾರಣಾ ನಿಧಿಗಾಗಿ ಕೊಟ್ಟಿರುವರೆಂದು ತಿಳಿಸಿದರು.

೧೧೫ ಕ್ಕೆ ೧೧೩ ಮಂದಿ ತೇರ್ಗಡೆ

ಬೆಂಗಳೂರಿನ ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲಿನಿಂದ ಈ ಸಾರಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿದ್ದ ೧೧೫ ಮಂದಿಯ ಪೈಕಿ ೧೧೩ ಜನರು ತೇರ್ಗಡೆಯಾಗಿರುವರೆಂದು ಗೊತ್ತಾಗಿದೆ. ಇವರಲ್ಲಿ ೪೮ ಮಂದಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವರಲ್ಲದೆ ೪ ಮಂದಿ ರ್‍ಯಾಂಕುಗಳನ್ನು ಗಳಿಸಿರುವರು.

ನಿಜಲಿಂಗಪ್ಪನವರಿಗೆ ಮತ್ತೆ ಅಧ್ಯಕ್ಷ ಪದವಿ

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಸಭೆಯು ನೆನ್ನೆ ಹುಬ್ಬಳ್ಳಿಯಲ್ಲಿ ಜರುಗಿ ಹಾಲಿ ಅಲ್ಲಿನ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀ ಎಸ್. ನಿಜಲಿಂಗಪ್ಪನವರನ್ನೇ ಮತ್ತೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಿತು. ಅವರು ಏಕಮತವಾಗಿ ಮೂರು ಬಾರಿ ಮೇಲ್ಕಂಡ ಹುದ್ದೆಗೆ ಆರಿಸಲ್ಪಟ್ಟಿರುತ್ತಾರೆ.

ವಿಮಾನ ನಿಲ್ದಾಣದಿಂದ ವಿಮಾನದ ಕಳುವು

ಕ್ಯಾಲಿಫೋರ್ನಿಯಾದ ಓಕ್‌ಲೆಂಡ್ ವಿಮಾನ ನಿಲ್ದಾಣದಲ್ಲಿದ್ದ ಒಂದು ಅಮೆರಿಕ ವಿಮಾನವನ್ನು ಮೊನ್ನೆ ಯಾರೋ ಅಪಹರಿಸಿರುವರೆಂದು ವರದಿಯಾಗಿದೆ. ಆ ವಿಮಾನವು ಪೆಸಿಫಿಕ್ ಕಡೆಗೆ ಹೋದ ಬಗ್ಗೆ ಅನುಮಾನವಿದ್ದು, ೧೧೧ ಪೌಂಡು ತೂಕದ ಬಾಂಬುಗಳು ಅದರಲ್ಲಿ ತುಂಬಲ್ಪಟ್ಟಿತ್ತೆಂದೂ ಹೇಳಲಾಗಿದೆ.

ತಿ ದ್ದು ಪ

ರಾಜಧಾನಿಯ ಸ್ವಾಗತಕಾರ್ಯದಲ್ಲಿದ್ದ ನಿಯೋ ಫಾರ್ಮಸಿಯ ಶ್ರೀ ಎಸ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಯವರ ಪತ್ನಿ ಶ್ರೀಮತಿ ಸಾವಿತ್ರಮ್ಮನವರು ನೆನ್ನೆ ಸಂಜೆ ತಮ್ಮ ೫೦ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಮೂವರು ಹೆಣ್ಣು ಮಕ್ಕಳೂ, ಇಬ್ಬರು ಗಂಡು ಮಕ್ಕಳೂ ಇರುವರು. ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಬೇಕೆಂದೂ ಮತ್ತು ಅವರ ಅಕಾಲ ಮರಣದ ಬಗ್ಗೆ ಶೋಕ ತಮ್ಮ ಧರಿಸುವ ಶಕ್ತಿಯನ್ನು ಅವರ ಬಂಧು ವರ್ಗದವರಿಗೆ ಕರುಣಿಸಲೆಂದೂ ಭಗವಂತನನ್ನು ಪ್ರಾರ್ಥಿಸುತ್ತೇವೆ.

ನೆಹರೂ ಭೇಟಿ ದೊರೆಯದೆ ಆತ್ಮಹತ್ಯ ಪ್ರಯತ್ನ

ಪ್ರಧಾನಿ ನೆಹರೂರವರೊಡನೆ ಭೇಟಿ ದೊರೆಯದಿದ್ದುದಕ್ಕಾಗಿ ಅವರ ಭವನದ ಮುಂದೆ ಹಿಂದು ಕಳೆದ ಏಪ್ರಿಲ್ ೨೬ನೇ ತಾ॥ ಮೈ ಮೇಲೆ ಸೀಮೆಯೆಣ್ಣೆ ಸುರಿದುಕೊಂಡು ಸುಟ್ಟುಕೊಳ್ಳುವ ಪ್ರಯತ್ನ ನಡೆಸಿದನೆಂದು ಪಶ್ಚಿಮ ಪಂಜಾಬಿನ ಒಬ್ಬ ನಿರಾಶ್ರಿತನನ್ನು ದೆಹಲಿಯ ನ್ಯಾಯಾಲಯವೊಂದರಲ್ಲಿ ವಿಚಾರಣೆಗೆ ಗುರಿಪಡಿಸಲಾಗಿದೆ

ಕಾಶ್ಮೀರ ಸಂಸ್ಥಾನಕ್ಕೆ ಚುನಾಯಿತ ಅಧಿಪತಿ

ಕಾಶ್ಮೀರದ ರಾಜ್ಯಾಂಗ ಸಭೆಯು ಪಕ್ಷದಲ್ಲೇ ಸಮಾವೇಶಗೊಂಡು ಅಲ್ಲಿ ವಂಶ ಪಾರಂಪರ್ಯದ ರಾಜತ್ವವನ್ನು ರದ್ದುಗೊಳಿಸುವ ಬಗ್ಗೆ ಒಂದು ಮಸೂದೆಯು ಬರಲಿರುವುದೆಂದು ವರದಿಯಾಗಿದೆ ಸಂಸ್ಥಾನಾಧೀಶರನ್ನು ಇನ್ನು ಮುಂದೆ ಚುನಾವಣೆ ಮೂಲಕ ಆರಿಸಲಾಗುವುದೆಂದೂ, ಈಗ ಅಲ್ಲಿರುವ ಯುವರಾಜರನ್ನೇ ಪ್ರಥಮ ಚುನಾಯಿತ ಅಧಿಪತಿಯನ್ನಾಗಿ ನೇಮಿಸಲಾಗುವುದೆಂದೂ ಹೇಳಲಾಗಿದೆ

ಚೇಳು ಬಾಣದಿಂದ ೪ ಮಂದಿಗೆ ಗಾಯ

ಬೆಂಗಳೂರಿನ ಸಿವಿಲ್ ಪ್ರದೇಶದ ಒಂದು ರಸ್ತೆಯಲ್ಲಿ ಕಳೆದ ಶುಕ್ರವಾರ ಬಾಣಗಳನ್ನು ಹತ್ತಿಸುತ್ತಿದ್ದಾಗ ಒಂದು ಬಾಣವು ರಸ್ತೆ ಪಕ್ಕದ ಒಂದು ಗುಡಿಸಲಿನೊಳಗೆ ಹೊಕ್ಕು ಅಲ್ಲಿದ್ದ ೩ ಮಂದಿ ಸ್ತ್ರೀಯರು ಮತ್ತು ಒಬ್ಬ ಹುಡುಗನಿಗೆ ತಗುಲಿದುದರಿಂದ ಅವರ ಮೈ ಸುಟ್ಟು ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರೆಂದು ವರದಿಯಾಗಿದೆ

ಗುಡ್ಡಗಾಡು ಜನರ ಏಳಿಗೆ ಬಗ್ಗೆ ಸಮ್ಮೇಳನ

ಭಾರತದಲ್ಲಿರುವ ೨ ಕೋಟಿ ಗುಡ್ಡಗಾಡು ಜನರ ಪುರೋಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಮೊನ್ನೆ ದೆಹಲಿಯಲ್ಲಿ ನಡೆದ ಸಮ್ಮೇಳನದ ಪ್ರಾರಂಭೋತ್ಸವವನ್ನು ರಾಷ್ಟ್ರಾಧ್ಯಕ್ಷರು ನೆರವೇರಿಸಿ, ಅಂಥವರ ಏಳಿಗೆಯನ್ನು ಸಾಧಿಸಲು ರಾಜ್ಯಾಂಗವು ಸರ್ಕಾರವನ್ನು ಬದ್ಧಪಡಿಸಿರುವುದೆಂದು ತಿಳಿಸುತ್ತಾರೆ ಪ್ರಧಾನಿ ನೆಹರೂರವರು ಭಾಷಣ ಮಾಡಿ, ಈ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ತಿಳಿಸುತ್ತಾರೆ

THE CENTRAL COLLEGE OF COMMERCE
Vanivilas Market Buildings
Admissions to **Diploma Courses in Commerce and Stenography, Typewriting and Shorthand,** will be received on all working days Reserve your seats immediately

ಪಶ್ಚಿಮ ಬಂಗಾಳಾದಲ್ಲೂ ಧಾನ್ಯ ಪಡಿತರ ರದ್ದು

ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ॥ ಬಿ ಸಿ ರಾಯರು ಮದರಾಸಿನಲ್ಲಿ ಧಾನ್ಯದ ಪಡಿತರ ರದ್ದು ಮಾಡಿರುವುದನ್ನು ಪರಿಶೀಲಿಸಿ ತಮ್ಮ ಪ್ರಾಂತದಲ್ಲೂ ಅದನ್ನು ರದ್ದು ಮಾಡಲು ಪರ್ಯಾಲೋಚಿಸುತ್ತಿರುವುದಾಗಿ ತಿಳಿದು ಬಂದಿದೆ

ಭಿಕ್ಷುಕನಿಂದ ೧೦೦ ರೂ. ದರೋಡೆ

ಹಳೆಯ ದೆಹಲಿಯಲ್ಲಿ ಬಾಬಾ ರಾಮಚಂದ್ರ ಎಂಬ ಭಿಕ್ಷುಕನು ೩೦ ದಿನಗಳಿಂದಲೂ ಭಿಕ್ಷಾವೃತ್ತಿ ನಡೆಸಿ ಸಂಪಾದಿಸಿದ್ದ ೧೦೦ ರೂಪಾಯಿಗಳನ್ನು ಕಳೆದ ೫ನೇ ತಾ॥ ಮೂರು ಜನರು ಚಾಕು ತೋರಿಸಿ ಅಪಹರಿಸಿದರೆಂದು ವರದಿಯಾಗಿದೆ

ಮಹಾರಾಜರ ಸ್ವಂತ ಪದಾತಿ ದಳದ ಕಟ್ಟಡಕ್ಕೆ ಪೋಲೀಸ್ ಕಛೇರಿ ವರ್ಗ

ಮೈಸೂರು ನರಸಿಂಹರಾಜ ಮೊಹಲ್ಲಾದಲ್ಲಿ ಶ್ರೀಮನ್ ಮಹಾರಾಜರ ಸ್ವಂತ ಪದಾತಿ ದಳದ ಕಟ್ಟಡದಲ್ಲಿದ್ದ ಪೋಲೀಸ್ ಶಿಕ್ಷಣ ಶಾಲೆಯನ್ನು ಬಾಡಿಗಾರ್ಡ್ ಕಟ್ಟಡಕ್ಕೆ [illegible]

ಸೌರಾಷ್ಟ್ರದಲ್ಲಿ ಮತ್ತೊಬ್ಬ ಗಿರಾಸದಾರರ ದಸ್ತಗಿರಿ

ಸ್ಥಾನಬದ್ಧತೆ ಶಾಸನದ ಪ್ರಕಾರ ಸೌರಾಷ್ಟ್ರ ಸರ್ಕಾರದವರು ಗೋಂಡಲ್‌ನಲ್ಲಿ ಗಂಭೀರ್ ಸಿಂಹಜಿ ಎಂಬ ಗಿರಾಸದಾರನನ್ನು ದಸ್ತಗಿರಿ ಮಾಡಿರುತ್ತಾರೆ ಲಿಮ್ಡಾದ ಗಿರಾಸದಾರರಾದ ರಜತ ಸಿಂಗರ ದಸ್ತಗಿರಿಗೂ ಆಜ್ಞೆ ಮಾಡಲಾಗಿದೆ

ಸಂಗೀತ, ನಾಟಕಗಳ ಅಭಿವೃದ್ಧಿಗೆ ಭಾರತ ಸರ್ಕಾರದ ಕ್ರಮ

ನೃತ್ಯ, ನಾಟಕ ಮತ್ತು ಸಂಗೀತ ಕಲೆಗಳನ್ನು ಅಭಿವೃದ್ಧಿಗೊಳಿಸಲು ಭಾರತ ಸರ್ಕಾರದವರು ನಿರ್ಧರಿಸಿ ಅದಕ್ಕಾಗಿ ಒಂದು ಶಾಲೆಯನ್ನು ತೆರೆಯಲಿರುವರು ಇದರ ಕೇಂದ್ರ ಕಛೇರಿಯು ದೆಹಲಿಯಲ್ಲಿದ್ದು ಅದು ಪ್ರಾಂತಗಳಲ್ಲಿ ನಡೆಯುವ ಕಾರ್ಯಕ್ರಮಗಳ ಮೇಲ್ವಿಚಾರಣೆ ನಡೆಸುವುದೆಂದು ಹೇಳಲಾಗಿದೆ

ಮನೆ, ಜಮೀನು, ಷೇರು.
ಮಾರುವವರು, ಕ್ರಯಕ್ಕೆ ತೆಗೆದುಕೊಳ್ಳುವವರು, ಸಾಲ ಪಡೆಯುವವರು ಮತ್ತು ಸಾಲವನ್ನು ಕೊಡುವವರು ಸಹ ನಮ್ಮಲ್ಲಿ ವಿಚಾರಿಸಿ
ಬಿ. ಆರ್. ಲಕ್ಷ್ಮಣ ಶೆಟ್ಟಿ,
ದಿ ಎಸ್ಟೇಟ್ ಬ್ರೋಕರೇಜ್ ಹೌಸ್,
ಚಾಮುಂಡೇಶ್ವರಿ ಸಿನಿಮಾ ಬಲಭಾಗದ ಮಹಡಿ ಮೇಲೆ — ಮೈಸೂರು.

ಮೈಸೂರಿಗೆ ಸಾವಿರ ಟನ್ ಜೋಳ

ಮಧ್ಯ ಪ್ರದೇಶ ಪ್ರಾಂತದಿಂದ ಮೈಸೂರಿಗೆ ೧ ಸಾವಿರ ಟನ್ ಜೋಳವು ಬರಲಿದೆ ಮಧ್ಯ ಪ್ರದೇಶವು ಹೊರಕ್ಕೆ ಕಳುಹಿಸುವ ೯೪ ಸಾವಿರ ಟನ್ ಅಕ್ಕಿ ಮತ್ತು ೫೫ ಸಾವಿರ ಟನ್ ಜೋಳವನ್ನು ತಿರುವಾಂಕೂರು-ಕೊಚ್ಚಿ, ಮದ್ರಾಸು, ಬೊಂಬಾಯಿ, ಹೈದರಾಬಾದುಗಳಿಗೆ ಕೊಡಲಾಗುವುದು

ಕಡಲೇಕಾಯಿ ಮೇಲಿನ ಹತೋಟಿ ರದ್ದು

ಕಡಲೆಕಾಯಿ ಮೇಲಿನ ಎಲ್ಲ ವಿಧವಾದ ಹತೋಟಿಯನ್ನು ಭಾರತದ ಆದ್ಯಂತ ರದ್ದುಮಾಡಲಾಗುವುದೆಂದು ಹೇಳಲಾಗಿದೆ

ಬೇಸಿಗೆ ಶಿಕ್ಷಣ ಶಿಬಿರ ಮುಕ್ತಾಯ

ಮೈಸೂರು ತಾಲ್ಲೂಕು ನಾಗನಹಳ್ಳಿ ಗ್ರಾಮದಲ್ಲಿ ಕಳೆದ ಒಂದು ತಿಂಗಳಿಂದಲೂ ನಡೆಯುತ್ತಿದ್ದ ಬೇಸಿಗೆ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವು ೭ನೇ ತಾ॥ ಮೈಸೂರು ಶಾಸನ ಸಭಾ ಸದಸ್ಯರಾದ ಶ್ರೀ ಬಿ ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಶ್ರೀ ಎಸ್ ಪಿ ಪುಂಜನಾಥರವರು ಸ್ವಾಗತ ಭಾಷಣ ಮಾಡಿದರು ಸುಗ್ಗಿ ಕುಣಿತವನ್ನು ಏರ್ಪಡಿಸಲಾಗಿತ್ತು ಅಧ್ಯಕ್ಷರು ಶಿಬಿರದ ವಿದ್ಯಾರ್ಥಿಗಳಿಗೆ ಯೋಗ್ಯತಾ ಪತ್ರಗಳನ್ನು ಹಂಚಿ, ಸೂಕ್ತ ಹಿತೋಕ್ತಿಗಳನ್ನು ಹೇಳಿದ ನಂತರ ವಂದನಾರ್ಪಣೆ ಮತ್ತು ಚಲನ ಚಿತ್ರ ಪ್ರದರ್ಶನಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಲ್ ಗೋಪಾಲರಾವ್ ವೀಣೆ ಮಧ್ಯಾಹ್ನ ೧ ೩೦ ಕೊಳಲು ಎ ಎ ಎಂ. ಉಲ್ಲಾಳ್ ವೇಣು ವಾದನ. ಸಂಜೆ ೫ ೩೦ ಆರ್. ಚಂದ್ರಸಿಂಗ್ ಸಂಗೀತ ೭-೧೦ ಗಾನ ವಿಹಾರ ೭ ಎ ಎಂ ಉಲ್ಲಾಳ್ ಕೊಳಲು. ೭-೩೦ ಕನ್ನಡದ ಭಾಷಣ ೮ ಎಲ್ ಗೋಪಾಲರಾವ್ ವೀಣೆ ೮ ೩೦ ವೃಂದ ಸಂಗೀತ ೯-೧೫ ಇಂಗ್ಲಿಷ್ ಭಾಷಣ ೯-೩೦ ಗಾನಾಮೃತ

ಭತ್ತದ ಗದ್ದೆ ಬಿಕರಿಗಿದೆ
ಮೈಸೂರು-ಬೆಂಗಳೂರು ರಸ್ತೆ ಮಗ್ಗುಲಿನಲ್ಲಿ, ಮೈಸೂರಿಗೆ ಸುಮಾರು ೪ ಮೈಲಿ ದೂರದಲ್ಲಿ ಕೇತ್ತನಾಡಿ ಗ್ರಾಮದಲ್ಲಿ ವಿರಿಜಾ ನದಿ ನಾಲಾ ಪಕ್ಕದಲ್ಲಿರುವ ೨ ಎಕರೆ ೮॥ ಗುಂಟೆ ಖುಲ್ಲ ಯಾವ ತಕರಾರಿಲ್ಲದ ಗದ್ದೆಯು ಖರೀದಿಗೆ ಇದೆ. ಇಷ್ಟವುಳ್ಳವರು ಕೆಳಗೆ ಕಂಡವರಲ್ಲಿ ಮಾತನಾಡಿ ಕ್ರಯಕ್ಕೆ ಪಡೆಯಬಹುದು
ಶಿ ವ ಶಂ ಕ ರ್,
ಪೆನ್ ರಿಪೇರರ್,
ದಿ ಇಂಗ್ಲಿಷ್ ಹೇರ್ ಡ್ರೆಸ್ಸಿಂಗ್ ಸಲೂನ್,
ಚಾಮುಂಡೇಶ್ವರಿ ಟಾಕೀಸ್ ಎದುರು,
ಮೈಸೂರು

ಈಜಿಪ್ಟಿನಲ್ಲಿ ೪೫೦೦ ಜನ ವಕೀಲರ ಮುಷ್ಕರ

ಈಜಿಪ್ಟಿನಲ್ಲಿ ಕಳೆದ ಜನವರಿಯಲ್ಲಿ ಬ್ರಿಟಿಷರ ವಿರುದ್ಧ ದಂಗೆಗಳಾದಾಗ ಘೋಷಿಸಲಾಗಿದ್ದ ಸೈನ್ಯದ ಆಡಳಿತವನ್ನು ಇನ್ನೂ ಕೊನೆಗಾಣಿಸದೆ ಇರುವುದನ್ನು ಪ್ರತಿಭಟಿಸುವ ಸಲುವಾಗಿ ಕಳೆದ ಶನಿವಾರದಿಂದ ಎರಡು ದಿನಗಳ ಮುಷ್ಕರವನ್ನು ಅಲ್ಲಿನ ೪೫೦೦ ಜನ ವಕೀಲರು ನಡೆಸಿ ಕೋರ್ಟುಗಳಿಗೆ ಹೋಗಲಿಲ್ಲವೆಂದು ವರದಿಯಾಗಿದೆ ಜಾರಿ ಇರುವ ಮಿಲಿಟರಿ ಟ್ರಿಬ್ಯೂನಲ್ಲುಗಳ ತೀರ್ಪುಗಳ ಮೇಲೆ ಅಪೀಲು ಹೋಗಲು ಅವಕಾಶವಿಲ್ಲದಿರುವುದನ್ನು ಅವರು ಪ್ರತಿಭಟಿಸಿದ್ದಾರೆ.

ಮಧ್ಯಮವರ್ಗ ಮತ್ತು ಒರಟು ಬಟ್ಟೆಬೆಲೆ ಹೆಚ್ಚಳ

ಈ ತಿಂಗಳು ಮಧ್ಯಮ ವರ್ಗ ಮತ್ತು ಒರಟು ಬಟ್ಟೆಗಳ ದರವನ್ನು ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು.

ಬರ್ಲಿನ್ ರೇಡಿಯೋ ಕಟ್ಟಡ ಬಿಟ್ಟುಹೋಗಲು ನಿರಾಕರಣೆ

ರಷ್ಯದ ವಶದಲ್ಲಿದ್ದು ಇತ್ತೀಚೆಗೆ ಬ್ರಿಟಿಷ್ ಸೈನಿಕರಿಂದ ಆವರಿಸಲ್ಪಟ್ಟಿರುವ ಬರ್ಲಿನ್ ರೇಡಿಯೋ ಕಟ್ಟಡದಲ್ಲಿರುವ ಸೋವಿಯಟ್ ಜವಾನರು ಅಧಿಕಾರಿಗಳೂ ಮತ್ತು ನಡೆಸುವವರೂ ಕಟ್ಟಡವನ್ನು ಬಿಟ್ಟು ಹೊರಕ್ಕೆ ಹೋಗುವುದಾದರೆ ಅವರನ್ನು ಸುರಕ್ಷಿತವಾಗಿ ಕಳುಹಿಸುವುದಾಗಿ ಬ್ರಿಟಿಷರು ತಿಳಿಸಿದುದನ್ನು ಅವರು ನಿರಾಕರಿಸಿರುವರೆಂದು ತಿಳಿದುಬಂದಿದೆ

ಸಮಾಜವಾದಿಗಳ ಸತ್ಯಾಗ್ರಹ

ನಾಳೆ ಬೆಳಗ್ಗೆ ನಗರದ ಸಮಾಜವಾದಿ ಪಕ್ಷದವರು ಮತ್ತೆ ಆಹಾರ ಸತ್ಯಾಗ್ರಹವನ್ನು ಹೂಡಲಿರುವರು ಬೆಳಗ್ಗೆ ೯॥ ಗಂಟೆಗೆ ಬಹಿರಂಗಸಭೆಯು ನಡೆದನಂತರ ಸತ್ಯಾಗ್ರಹಿಗಳು ಶ್ರೀ ಹೆಚ್. ವಿ ಪ್ರಭಾಕರ್‌ರವರ ನೇತೃತ್ವದಲ್ಲಿ ಗಾಂಧಿ ಚೌಕದಲ್ಲಿರುವ ಆಹಾರ ಧಾನ್ಯಗಳ ಡಿಪೋವಿಗೆ ಮೆರವಣಿಗೆಯಲ್ಲಿ ಹೊರಡುವರೆಂದು ಗೊತ್ತಾಗಿದೆ ಪಕ್ಷದ ಕಾರ್ಯದರ್ಶಿ ಶ್ರೀ ಟಿ ವಿ ಶ್ರೀನಿವಾಸರಾಯರು ಒಂದು ಹೇಳಿಕೆಯನ್ನಿತ್ತು ನಿನ್ನೆ ನಡೆದ ಸತ್ಯಾಗ್ರಹದಲ್ಲಿ ಸಹಾಯ ನೀಡಿದವರೆಲ್ಲರಿಗೂ ವಂದನೆಗಳನ್ನರ್ಪಿಸಿರುತ್ತಾರೆ

SRI GANESH
TALKIES
From 10—6—52
SAVAGE SPLENDOR
(Technicolor)

From 13—6—52
ROCK ISLAND TRAIL
(True color)

Edited, Printed and Published by A R Nagarajan at Sadhvi Press, D Subbiah Road, Mysore

ಹೊಸ ಹೊಸ ರೀತಿ ಸೀರೆಗಳನ್ನು ಮದುವೆಗಳಿಗಾಗಿ ತರಿಸಿದ್ದೇವೆ. ಬೆಲೆ ಸುಲಭ
M. V. ಭೋಜಯ್ಯ, ಬಿ.ಎ.
[illegible] ಬಳಿ, ಮೈಸೂರು

ರಿಜಿಸ್ಟರ್ ನಂ. 792 || ... || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೧೦-೬-೫೩ [ಸಂಚಿಕೆ ೨೬೮

ಜಾರ್ಡಾನ್ ದೊರೆ ತಲಾಲರ ಪದಚ್ಯುತಿ?

ನಗರಾಭಿವೃದ್ಧಿ ಸಮಿತಿಯ ೩ ವರ್ಷಗಳ ಕಾರ್ಯಕಲಾಪ

ಪಿ. ಗೋಪಾಲಕೃಷ್ಣ ಶೆಟ್ಟರವರಿಂದ

ಮೈಸೂರು ೧೦

ನೆನ್ನೆ ಮಧ್ಯಾಹ್ನ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರ ಅಧಿಕಾರವನ್ನು ವಹಿಸಿಕೊಡುವ ಮುನ್ನ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟಿಯವರು ಪತ್ರಿಕಾ ಗೋಷ್ಠಿಯೊಂದನ್ನು ಕರೆದು ತಮ್ಮ ೩ ವರ್ಷದ ಅಧಿಕಾರದ ಕಾಲದಲ್ಲಿ ಸಮಿತಿಯು ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿದರು. ಹೊಸ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರು ಬಂದಿದ್ದರು

ತಾವು ಅಧಿಕಾರಕ್ಕೆ ಬಂದ ಮೇಲೆ ನಗರದಲ್ಲಿ ಹೊಸ ಹೊಸ ಬಡಾವಣೆಗಳನ್ನು ನಿರ್ಮಿಸಿ, ಬಡ ಜನರ ಅನುಕೂಲಕ್ಕಾಗಿ ಸುಲಭ ದರದಲ್ಲಿ ಮನೆಗಳನ್ನು ಕಟ್ಟಿಸಲಾಗಿದೆಯೆಂದೂ, ಹರಿಜನರಿಗೋಸ್ಕರವಾಗಿಯೇ ಮನೆಗಳನ್ನು ಕಟ್ಟಿದರೂ ಅವರಲ್ಲಿ ಯಾರೂ ಮುಂದೆ ಬಂದು ತೆಗೆದುಕೊಳ್ಳದೇ ಇರುವುದು ಸಮಿತಿಯನ್ನು ಯೋಚನೆಗೆ ಈಡು ಮಾಡಿದೆಯೆಂದೂ ತಿಳಿಸಿದರು. ಇದುವರೆಗೆ ಒಟ್ಟು ೨೧೮ ಮನೆಗಳನ್ನು ೩,೮೬,೯೭೩ ರೂ. ಗಳ ಖರ್ಚಿನಲ್ಲಿ ನಿರ್ಮಿಸಲಾಯಿತೆಂದೂ, ಪ್ರತಿ ವರ್ಷವೂ ಹೆಚ್ಚು ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆಯೆಂದೂ ಹೇಳಿದರು. ಮುಂದೆ ಕೈಗೊಳ್ಳಲಿರುವ ಮತ್ತು ಈಗ ಆಗುತ್ತಿರುವ ಕೆಲಸಗಳನ್ನು ವಿವರಿಸಿ, ಸಮಿತಿಯ ಕೆಲಸಗಳನ್ನು ನಡೆಸಲು ಅನೇಕ ಇಲಾಖೆಗಳ ಸಹಕಾರ ಪಡೆಯಬೇಕಾಗಿರುವುದರಿಂದ ಕೆಲವು ಕಾರ್ಯಗಳು ನಿಧಾನವಾಗುತ್ತಿದ್ದುವೆಂದು ಅವರು ನುಡಿದರು

ಪುರಸಭೆಗೂ ಮತ್ತು ಸಮಿತಿಗೂ ಭಿನ್ನಾಭಿಪ್ರಾಯಗಳಿದ್ದುವೆಂದೂ, ಆದರೆ ಇದರಿಂದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಯಾವ ಕುಂದೂ ಆಗಲಿಲ್ಲವೆಂದೂ ಅವರು ಹೇಳಿದರು. ಭಾರತದ ನಗರಾಭಿವೃದ್ಧಿ ಸಮಿತಿಗಳಲ್ಲೆಲ್ಲಾ ಮೈಸೂರಿನದು ಹಳೆಯದೂ ಮತ್ತು ಪ್ರಸಿದ್ಧವಾದುದೂ ಆಗಿರುವ ಅಂಶವನ್ನು ಪ್ರಸ್ತಾಪಿಸಿ ಬರುವ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಇದರ ರಜತ ಮಹೋತ್ಸವವು ನಡೆಯುವುದೆಂದು ಅವರು ನುಡಿದರು

ಕೊನೆಯದಾಗಿ ತಮ್ಮ ಕೆಲಸಕಾರ್ಯಗಳಲ್ಲಿ ತಮಗೆ ಸಹಾಯ ನೀಡಿದವರೆಲ್ಲರಿಗೂ ಶ್ರೀ ಶೆಟ್ಟರು ವಂದನೆಯನ್ನರ್ಪಿಸಿದರು

ದಸ್ತಗಿರಿಯಾದವರ ಬಿಡುಗಡೆಯಾದರೂ ಸತ್ಯಾಗ್ರಹ ಉಂಟು

ಜಿಲ್ಲಾ ಸಮಾಜವಾದಿ ಪಕ್ಷದ ಕಾರ್ಯಸಮಿತಿಯು ನೆನ್ನೆ ಸಭೆ ಸೇರಿ ದಸ್ತಗಿರಿಯಾದ ಸತ್ಯಾಗ್ರಹಿಗಳ ಬಿಡುಗಡೆಯಾದರೂ ಸಹ, ಆಹಾರದ ಬೆಲೆಯ ವಿರುದ್ಧದ ಸತ್ಯಾಗ್ರಹವನ್ನು ಮುಂದುವರಿಸುವುದಾಗಿ ನಿರ್ಣಯ ಮಾಡಿತು. ಇಂದೂ ಮತ್ತು ನಾಳೆಯೂ ಸತ್ಯಾಗ್ರಹವು ನಡೆಯುವುದೆಂದು ತಿಳಿಸಲಾಗಿದೆ. ಸರ್ಕಾರದ ವಶದಲ್ಲಿರುವ ಧಾನ್ಯವನ್ನು ಹಿಂದಿನ ಬೆಲೆಗೆ ಫೇರ್ ಪ್ರೈಸ್ ಡಿಪೋಗಳ ಮೂಲಕ ಪ್ರಜೆಗಳಿಗೆ ಒದಗಿಸಬೇಕೆಂದು ಸಮಿತಿಯು ಕೇಳುತ್ತದೆ. ಸತ್ಯಾಗ್ರಹವು ಬೆಲೆಯ ವಿರುದ್ಧವಾಗಿ ಮಾತ್ರ ಎಂದು ಹೇಳಲಾಗಿದೆ

೬ ಜನ ಆಹಾರದ ಸತ್ಯಾಗ್ರಹಿಗಳ ಬಂಧನ

ಮೈಸೂರು ೧೦

ಜಿಲ್ಲಾ ಸಮಾಜವಾದಿ ಪಕ್ಷದವರು ಮೊನ್ನೆಯಿಂದ ಪ್ರಾರಂಭಿಸಿರುವ ಆಹಾರದ ಬೆಲೆಯ ವಿರುದ್ಧದ ಸತ್ಯಾಗ್ರಹವು ಇಂದೂ ಮುಂದುವರಿದು ಆರು ಜನರ ದಸ್ತಗಿರಿಯಾದರು. ಬಂಧಿತರಾದವರಲ್ಲಿ ಮೊನ್ನೆ ಬಿಡುಗಡೆ ಹೊಂದಿದವರಲ್ಲದೆ, ಶ್ರೀ ಹೆಚ್ ವಿ ಪ್ರಭಾಕರ್ ಮತ್ತು ಶ್ರೀ ಸಿ ಕೆ ಕುಮಾರ್‌ರವರೂ ಇದ್ದರು. ಇದಕ್ಕೆ ಮೊದಲು ಟೌನ್ ಹಾಲ್ ಮೈದಾನದಲ್ಲಿ ಸಭೆಯನ್ನು ನಡೆಸಿ, ಡಾ|| ಬಿ ಶಾರ್ ನಾರ್ ಕುಸ್ತ, ಮತ್ತು ಶ್ರೀ ಬಿ. ಶ್ರೀಕಂಠಪ್ಪನವರು ಭಾಷಣ ಮಾಡಿದನಂತರ ಗಾಂಧಿ ಚೌಕದಲ್ಲಿರುವ ಆಹಾರದ ರಿಸರ್ವ್ ಡಿಪೋವಿಗೆ ಮೆರವಣಿಗೆಯಲ್ಲಿ ಹೋಗಲಾಯಿತು. ಗೇಟಿನ ಬಳಿ ಸತ್ಯಾಗ್ರಹಿಗಳ ದಸ್ತಗಿರಿಯಾಯಿತು. ಇದನ್ನು ನೋಡಲು ಮೊನ್ನೆಗಿಂತಲೂ ಅಧಿಕ ಸಂಖ್ಯೆಯಲ್ಲಿ ಜನರು ಸೇರಿದ್ದರು

ಸಿಂಹಳದ ಸತ್ಯಾಗ್ರಹಿಗಳ ಮೇಲೆ ಪ್ರಹಾರ

ಕೊಲಂಬೋವಿನಲ್ಲಿರುವ ಭಾರತೀಯ ಹೈಕಮಿಷನರ್‌ರವರ ಕಛೇರಿ ಮುಂಭಾಗದ ರಸ್ತೆ ಮಧ್ಯೆ ನೆನ್ನೆ ಕುಳಿತ ೧೧ ಮಂದಿ ಭಾರತೀಯ ಸತ್ಯಾಗ್ರಹಿಗಳ ಮೇಲೆ ಸಿಂಹಳದ ಪೋಲೀಸರು ಬೆತ್ತದಿಂದ ಪ್ರಹಾರ ಮಾಡಿದರೆಂದು ವರದಿಯಾಗಿದೆ. ಹಲವರಿಗೆ ಸ್ವಲ್ಪ ಗಾಯವಾಗಿ ೫ ಜನರು ಆಸ್ಪತ್ರೆಗೆ ಸಾಗಿಸಲ್ಪಟ್ಟಿರುತ್ತಾರೆ

ಜಾಲಹಳ್ಳಿಯಲ್ಲಿ ಯಂತ್ರ ಸಾಮಗ್ರಿ ಕಾರ್ಖಾನೆ ಆರಂಭ

ಬರುವ ವರ್ಷ ಆಗಸ್ಟ್ ತಿಂಗಳಿನಲ್ಲಿ ಬೆಂಗಳೂರಿನ ಬಳಿ ಜಾಲಹಳ್ಳಿಯಲ್ಲಿ ಯಂತ್ರ ಸಾಮಗ್ರಿಗಳ ತಯಾರಿಕಾ ಕಾರ್ಖಾನೆಯು ಕೆಲಸವನ್ನು ಆರಂಭಿಸುವುದೆಂದೂ, ಅಲ್ಲಿ ಪ್ರತಿ ವರ್ಷವೂ ೬೩೩ ಮಿಲಿಯಂ ಮತ್ತು ೩೦೦ ಭಾರಿ ಡ್ರಿಲ್ಲಿಂಗ್ ಯಂತ್ರಗಳನ್ನು ತಯಾರಿಸಲಾಗುವುದೆಂದು ಕೇಂದ್ರ ಉತ್ಪಾದನಾ ಮಂತ್ರಿ ಕೆ ಸಿ. ರೆಡ್ಡಿಯವರು ತಿಳಿಸಿರುತ್ತಾರೆ

ಹತ್ತೋಟಿ ಬಗ್ಗೆ ಪೌರಸಭೆಗಳ ಅಭಿಪ್ರಾಯ ಸಂಗ್ರಹ

ಬೆಂಗಳೂರು ೧೦

ಶಾಸನ ಎದ್ದ ಹತೋಟಿ ಮತ್ತು ಬೆಲೆಗಳನ್ನು ಇಳಿಸುವ ಬಗ್ಗೆ ಮೈಸೂರು ಬೆಂಗಳೂರು, ದಾವಣಗೆರೆ, ಚನ್ನಪಟ್ಟಣ ಪೌರಸಭೆಗಳ ಅಭಿಪ್ರಾಯವನ್ನು ಕೇಳಲಾಗಿದೆಯೆಂದು ಆಹಾರ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ತಿಳಿಸಿರುತ್ತಾರೆ. ಈಗ ಸಂಸ್ಥಾನದಲ್ಲಿ ಆಹಾರದ ಬೆಲೆಯನ್ನು ಇಳಿಸುವುದು ಉಚಿತವಾಗಲಾರದೆಂದು ಅವರು ಅಭಿಪ್ರಾಯಪಟ್ಟು, ಮದರಾಸಿನಲ್ಲಿ ಹತೋಟಿಯು ತೆಗೆಯಲ್ಪಟ್ಟ ಮೇಲೆ ಅಲ್ಲಿನ ಪರಿಸ್ಥಿತಿಯನ್ನು ಸರ್ಕಾರದವರು ಜಾಗರೂಕತೆಯಿಂದ ಪರಿಶೀಲಿಸುತ್ತಿರುವುದಾಗಿ ಹೇಳಿರುತ್ತಾರೆ. ಅಲ್ಲಿನ ಸ್ಥಿತಿಗತಿಗಳನ್ನು ತಿಳಿಯಲು ಒಬ್ಬ ಅಧಿಕಾರಿಯನ್ನು ಕಳುಹಿಸಲಾಗಿರುವುದೆಂದೂ, ಆಹಾರ ಇಲಾಖೆಯಲ್ಲಿ ಈಗ ೧೧ ಲಕ್ಷ ರೂ ಗಳಷ್ಟು ಉಳಿಯುವ ಬಗ್ಗೆ ಸಿಬ್ಬಂದಿ ಕಡಿತ ಮಾಡಲಾಗಿದೆಯೆಂದೂ ಸಚಿವರು ಹೇಳಿರುತ್ತಾರೆ

ಮೈಸೂರಿನಲ್ಲಿ ಸಮಾಜವಾದಿಗಳು ಹೂಡಿರುವ ಸತ್ಯಾಗ್ರಹವು ನ್ಯಾಯಬದ್ಧವಾದುದಲ್ಲವೆಂದೂ, ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಸ್ಥಾನವೇ ಇಲ್ಲವೆಂದೂ ಅವರು ತಿಳಿಸಿರುತ್ತಾರೆ

ಭಾರತ ಮತ್ತು ಜಪಾನ್ ಶಾಂತಿ ಒಪ್ಪಂದ

ಭಾರತ ಮತ್ತು ಜಪಾನುಗಳ ನಡುವೆ ಶಾಂತಿ ಒಪ್ಪಂದಕ್ಕೆ ನೆನ್ನೆ ದಿನ ಟೋಕಿಯೋವಿನಲ್ಲಿ ಉಭಯ ರಾಷ್ಟ್ರಗಳ ಪ್ರತಿನಿಧಿಗಳು ರುಜುಮಾಡಿದರೆಂದು ವರದಿಯಾಗಿದೆ

ವಿದ್ಯುಚ್ಛಕ್ತಿ ಕೋತಾ ರದ್ದಿಗಾಗಿ ಕಾರ್ಮಿಕರ ಮೆರವಣಿಗೆ

ಶಿವನಸಮುದ್ರ ಮತ್ತು ಶಿಂಷಾಗಳಿಂದ ಒದಗಿಸುತ್ತಿರುವ ವಿದ್ಯುಚ್ಛಕ್ತಿಯಲ್ಲಿ ಕೋತಾ ಮಾಡಿರುವ ಬಗ್ಗೆ ನೆನ್ನೆ ಬೆಂಗಳೂರಿನ ಬಟ್ಟೆ ಕಾರ್ಮಿಕರು ಕೋತಾವನ್ನು ರದ್ದುಗೊಳಿಸಬೇಕೆಂದು ಸೂಚಿಸುವ ಬೋರ್ಡುಗಳನ್ನು ಹಿಡಿದು ಆಕಾರ ಕಛೇರಿಗೆ ಮೆರವಣಿಗೆಯನ್ನು ತೆಗೆದುಕೊಂಡು ಹೋದರು

ಜಾರ್ಡಾನ್ ದೊರೆಯ ಪದಚ್ಯುತಿ?

ಜಾರ್ಡಾನಿನ ದೊರೆ ತಲಾಲರಿಗೆ "ಬುದ್ಧಿ ಸರಿಯಿಲ್ಲದಿರುವುದರಿಂದ" ಅವರನ್ನು ಪದಚ್ಯುತಿಗೊಳಿಸಿ, ಅವರ ಸ್ಥಾನದಲ್ಲಿ ಅವರ ೧೭ ವರ್ಷದ ಕುಮಾರ ಹುಸೇನರವರಿಗೆ ಪಟ್ಟ ಕಟ್ಟಲಾಗುವುದೆಂದು ತಿಳಿದು ಬಂದಿದೆ. ಲೌಸೇನ್ ಹೋಟೆಲಿನಿಂದ ಹೊರಟು ಹೋಗಿರುವರೆಂದು ಹೇಳಲಾದ ತಲಾಲರ ಪತ್ನಿ ರಾಣಿ ಜೈನರವರು ಸ್ವಿಟ್ಜರ್ಲೆಂಡ್ ಪೋಲೀಸರ ರಕ್ಷಣೆಯಲ್ಲಿರುವರೆಂದೂ ಹೇಳಲಾಗಿದೆ

ರಾಜೇಂದ್ರ ಸಿಂಹಜಿ ಹಂಗಾಮಿ ಸೇನಾನಿ

ಸಮುದ್ರದ ಆಚೆ ನಿಯೋಗ ಹೋಗುವ ಭಾರತದ ಪ್ರಧಾನ ಸೇನಾನಿ ಜ|| ಕಾರಿಯಪ್ಪನವರ ಗೈರು ಹಾಜರಿಯಲ್ಲಿ ದಕ್ಷಿಣ ಭಾಗದ ಸೇನಾನಿ ಲೆ|| ಜ|| ರಾಜೇಂದ್ರ ಸಿಂಹಜಿಯವರನ್ನು ಹಂಗಾಮಿ ಪ್ರಧಾನ ಸೇನಾನಿಯಾಗಿ ನೇಮಕ ಮಾಡಲಾಗಿದೆಯೆಂದು ವರದಿಯಾಗಿದೆ. ಬ್ರಿಟನ್ ಮತ್ತು ಫ್ರಾನ್ಸುಗಳಿಗೆ ಕಾರಿಯಪ್ಪನವರು ಭೇಟಿ ಕೊಡಲು ಈ ತಿಂಗಳು ೨೦ ನೇ ತಾ|| ತೆರಳಿ, ಬರುವ ತಿಂಗಳು ೧೮ ಕ್ಕೆ ವಾಪಸು ಬರುವರೆಂದು ಗೊತ್ತಾಗಿದೆ

ಆಯುರ್ವೇದ ಕಾಲೇಜಿನ ವರ್ಗದ ಬಗ್ಗೆ ಪ್ರತಿಭಟನೆ

ರಾಜಧಾನಿಯ ಆರೋಗ್ಯ ಕಾರ್ಯದರ್ಶಿಯು ಶ್ರೀ ಕೆ ಸಿ ಪುರಾಣಿಕರು ಈ ರೀತಿ ತಿಳಿಸಿರುತ್ತಾರೆ:—

ತಮ್ಮ ತಾ|| ೯-೬ ೫೩ ನೆಯ ಸಾಧ್ವಿಯಲ್ಲಿ ಪ್ರಕಟವಾದ "ಬೆಂಗಳೂರಿಗೆ ಆಯುರ್ವೇದ ಕಾಲೇಜಿನ ವರ್ಗ" ಎಂಬ ಶಿರೋನಾಮೆಯಲ್ಲಿ ಕಾಲೇಜು ಸಂಘದ ಕಾರ್ಯದರ್ಶಿ ಜ|| ಸೈಯ್ಯದ್ ಬಾಸಿಂರವರು ತಿಳಿಸಿದ ವರದಿಯ ಬಹು ಭಾಗವು ನಿಜವಲ್ಲದ್ದು ಮತ್ತು ಸಾರ್ವಜನಿಕರಿಗೂ, ಸರಕಾರದವರಿಗೂ ತಪ್ಪು ಭಾವನೆಯನ್ನುಂಟು ಮಾಡುವಂತಹುದು

ಸಭೆ ಸೇರಿದ ಮುಖ್ಯ ಉದ್ದೇಶವು "ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದನ್ನು ಪ್ರತಿಭಟಿಸುವುದೇ ವಿನಹ ವರ್ಗಾಯಿಸಬೇಕೇ ಬೇಡವೇ ಎಂಬುದನ್ನು ಚರ್ಚಿಸುವುದಲ್ಲ" ಸಭೆಯ ಉದ್ದೇಶವನ್ನು ಪ್ರಕಟಣೆಯಲ್ಲಿಯೇ ಸ್ಪಷ್ಟಪಡಿಸಿದೆ

ಕಾಲೇಜು ವರ್ಗಾವಣೆಯನ್ನು ವಿರೋಧಿಸಿ ಆರು ಮಂದಿ ಗಣ್ಯ ಮಹನೀಯರೂ, ವರ್ಗಾಯಿಸಬೇಕೆಂದು ವಿದ್ಯಾರ್ಥಿ ಶ್ರೀ ಕೆ ಎಸ್ ರಾಮರ್ ಮತ್ತು ಶ್ರೀ ಅಶ್ವತ್ಥ ನಾರಾಯಣ ಪಂಡಿತರು ಇಬ್ಬರು ಮಾತ್ರ ಮಾತನಾಡಿದರು. ವಿಷಯವನ್ನು ಚರ್ಚೆ ಮಾಡಲು ಪ್ರಮೇಯವಿಲ್ಲವೆಂದು ಅವರಿಬ್ಬರಿಗೂ ತಿಳಿಸಲಾಯಿತು. ಸಭೆಯಲ್ಲಿ ಕಾಲೇಜು ವರ್ಗಾವಣೆಯ ಪ್ರತಿಭಟನಾ ನಿರ್ಣಯವಲ್ಲದೇ ಬೇರೆ ಯಾವ ನಿರ್ಣಯವನ್ನು ಯಾರೂ ಮಂಡಿಸಲಿಲ್ಲ. ಶ್ರೀ ಕೆ. ಎಸ್. ರಾಮರವರಿಗೆ ಅಧ್ಯಕ್ಷರು ಎಚ್ಚರಿಕೆ ಕೊಟ್ಟರೂ ಅವರು ಕೇಳದಿದ್ದುದರಿಂದ ಕಾಂತಿಪ್ರಿಯರಾದ ಅಧ್ಯಕ್ಷರು ಸಭೆಯನ್ನು ಅಲ್ಲಿಗೇ ಮುಗಿಸಬೇಕಾಯಿತು.

ಜೋರ್ಡಾನ್ ರಾಣಿಯವರ ಪರಾರಿ

ಸ್ವಿಟ್ಜರ್ಲೆಂಡಿನ ಲೌಸೇನ್ ನಗರದ ಒಂದು ಹೋಟೇಲಿನಲ್ಲಿ ತಂಗಿದ್ದ ಜೋರ್ಡಾನ್ ದೇಶದ ರಾಣಿ ಜೈನ್‌ರವರು ಕಳೆದ ಶುಕ್ರವಾರ ರಾತ್ರಿ ಇದ್ದಕ್ಕಿದ್ದಂತೆಯೇ ಹೋಟೇಲಿನಿಂದ ಪತ್ತೆಯಿಲ್ಲದೆ ಎಲ್ಲೋ ಹೊರಟುಹೋಗಿರುವರೆಂದು ವರದಿಯಾಗಿದೆ. ಅವರ ಪತಿ ತಲಾಲ್ ದೊರೆಗಳು ಪ್ಯಾರಿಸ್ಸಿನಲ್ಲಿ ಖಾಯಿಲೆಯಿಂದ ನರಳುತ್ತಿದ್ದು ಕಳೆದ ಶನಿವಾರ ಪತ್ನಿಯನ್ನು ನೋಡಲು ಲೌಸೇನಿಗೆ ಬಂದು ಹೋಟೇಲಿನಲ್ಲಿ ನೋಡಬಾಗಿ ಅವರಿಗೆ ಈ ಸುದ್ದಿಯು ತಿಳಿದುಬಂದಿತು. ರಾಣಿಯೊಡನೆ ಆಕೆಯ ೧೭ ವರ್ಷದ ಮಗ ಹುಸೇನರವರೂ ಹೋಗಿರುವುದಾಗಿ ಹೇಳಲಾಗಿದೆ.

ವಿವಾಹ ಮಹೋತ್ಸವಗಳು

ಮೈಸೂರು ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ನಾರಾಯಣರವರು ತಮ್ಮ ಕುಮಾರರೂ, ರಾಜಧಾನಿಯ ಪ್ರಭಾತ ಪತ್ರಿಕೆಯ ಸಂಪಾದಕರೂ ಆದ ಶ್ರೀ ಟಿ. ವೆಂಕಟರಾಂರವರಿಗೆ ಚಿಕ್ಕೋರಿಯ ಶ್ರೀ ನಾರಾಯಣ ಭಟ್ಟರವರ ಮಗಳು ಸೌ|| ಲಕ್ಷ್ಮೀನರಸಮ್ಮನನ್ನು ತಂದುಕೊಂಡು ನೆನ್ನೆ ಜಾವ [illegible] ಯಲ್ಲಿರುವ ಹೊಯ್ಸಳ ಕರ್ನಾಟಕ ವಿದ್ಯಾರ್ಥಿ ನಿಲಯದಲ್ಲಿ ವಿವಾಹವನ್ನು ನೆರವೇರಿಸಿದರು. ಪಂಚ ಸ್ವಾಗತ ಸಮಾರಂಭವೂ ಏರ್ಪಾಡಾಗಿತ್ತು.

ರಾಜಧಾನಿಯ [illegible] ಯಲ್ಲಿರುವ ಸರ್ಕಾರಿ ಮಿಡಲ್ ಸ್ಕೂಲ್ ಹೆಡ್ಮಾಸ್ಟರ್ ಶ್ರೀ ಎಚ್. ವೆಂಕಟಸುಬ್ಬಯ್ಯನವರು ತಮ್ಮ ಕುಮಾರ ಎ. ವಿ. ಸತ್ಯನಾರಾಯಣರಾಯರಿಗೆ [illegible] ರುವ ಶ್ರೀ ಕೊಪಗೊಡು ಶ್ರೀಕಂಠಯ್ಯನವರ ಕುಮಾರಿ ಸೌ|| ನಾಮಗಿರಿಯನ್ನು ತಂದುಕೊಂಡು ನೆನ್ನೆ ಕಾವೇರಿ ಪಟ್ಟಂ ಸುಬ್ಬರಾಯ ಶೆಟ್ಟರ ಛತ್ರದಲ್ಲಿ ವಿವಾಹವನ್ನು ನೆರವೇರಿಸಿದರು. ಸಂಜೆ [illegible] ಅಕ್ಷತೆಯೂ ಏರ್ಪಾಡಾಗಿತ್ತು.

ಅವರ್ ಕ್ಲಬ್ಬಿನ ವಾರ್ಷಿಕೋತ್ಸವ

ಮೇಲ್ಕಂಡ ಸಮಾರಂಭವು ಮೊನ್ನೆ ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯಲ್ಲಿರುವ ಸಂಘದ ಆವರಣದಲ್ಲಿ ನಡೆಯಿತು. [illegible] ಪಂದ್ಯಗಳಲ್ಲಿ ಗೆದ್ದ ಶ್ರೀ [illegible] ಪದ್ಮನಾಭ್ ಸಿ. ಎಂ. ಚಂದ್ರಪ್ಪ ಮತ್ತು ಎ. ಪಿ. ಸುಬ್ರಮಣ್ಯಯ್ಯನವರಿಗೆ ಬಹುಮಾನಗಳನ್ನು ಶ್ರೀ [illegible] ಶ್ರೀನಿವಾಸಮೂರ್ತಿಯವರು ಹಂಚಿದರು. ಮುಂದಿನ ಸಾಲಿಗೆ ಶ್ರೀ [illegible] ಯವರನ್ನು ಅಧ್ಯಕ್ಷರನ್ನಾಗಿಯೂ, ಟಿ. [illegible] ಶ್ರೀನಿವಾಸಮೂರ್ತಿಯವರನ್ನು ಕಾರ್ಯದರ್ಶಿಯವರನ್ನಾಗಿಯೂ ಚುನಾಯಿಸಲಾಯಿತು.

SRI GAYATHRI
TALKIES
from 16—6—52 for 3 days
Twentieth Century Fox's
HALF ANGELS
(In Technicolor)

ಹಟಯೋಗದಿಂದ ಗುಂಡಿನ ಏಟನ್ನು ತಡೆಯುವ ಯತ್ನ

[illegible] ವಾರದ ೨೪ ಕೊನ್ನಾನಗರ ತಾಲ್ಲೂಕಿನ ಒಂದು ಹಳ್ಳಿಯ ಹಟಯೋಗಿಯೊಬ್ಬನು ಬಹು ಉಗ್ರವಾದ ಹಟಯೋಗದ ಸಾಧನಗಳನ್ನು ಮಾಡುತ್ತಿದ್ದು ಕಳೆದ ವಾರ ತನ್ನ ಮೈಗೆ ಗುಂಡಿನಿಂದ ಹೊಡೆಸಿಕೊಳ್ಳುವ ಸಾಹಸ ಮಾಡಿ, ಒಬ್ಬ ಬಂದೂಕಗಳ ರಿಪೇರಿ ಮಾಡುವವನ ಬಳಿ ಹೋಗಿ ತನ್ನ ಅಂಗೈಗೆ ಬಂದೂಕದಿಂದ ಹೊಡೆಸಿಕೊಂಡನೆಂದೂ ಅದರಿಂದ ಅವನಿಗೆ ಘಾಸಿಯಾಗದಿರಲು ಮತ್ತೆ ತನ್ನ ಬೆನ್ನಿಗೆ ಬಂದೂಕದಿಂದ ಹೊಡೆಸಿಕೊಂಡನೆಂದೂ ಆಗ [illegible] ಸಿಗೆ ತೀವ್ರ ಪೆಟ್ಟು ತಗುಲಿ ನಳಿದ [illegible] ಕೆ ಬಿದ್ದನೆಂದೂ ಕೂಡಲೆ ಪೋಲೀಸರು ಅವನನ್ನು ಆಸ್ಪತ್ರೆಗೆ ಸೇರಿಸಿ ಬಂದೂಕ ರಿಪೇರಿ ಮಾಡುವವನನ್ನು ಬಂಧಿಸಿದರೆಂದೂ ವರದಿಯಾಗಿದೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ [illegible] ಎಸ್. ಸಣ್ಣಪ್ಪ [illegible]

ಸ್ವಾಗತ ಸಮಾರಂಭ

ರಾಜಧಾನಿಯ [illegible] ಪೇಟೆಯ ಕಬ್ಬಿಣದ ವ್ಯಾಪಾರಿಗಳಾದ ಶ್ರೀ ಜಿ. [illegible] ಚನ್ನಯ್ಯನವರು ತಮ್ಮ ಕುಮಾರ ಶ್ರೀ ಜಿ. ವಿ. [illegible] ತ್ತು ಬೆಂಗಳೂರಿನ ಶ್ರೀ [illegible] ದತ್ತಪ್ಪನವರ ಮಗಳು ಸೌ|| [illegible] ರವರುಗಳ ವಿವಾಹದ ಸಂದರ್ಭದಲ್ಲಿ ನೆನ್ನೆ ಸಂಜೆ ತಮ್ಮ ರಾಜಕಮಲ್ ಚಿತ್ರಮಂದಿರದಲ್ಲಿ ಸ್ವಾಗತ ಸಮಾರಂಭವೊಂದನ್ನು ಏರ್ಪಡಿಸಿದರು.

"ಗಳತಿ"

ರಾಜಧಾನಿಯ [illegible] ಶ್ರೀ ಜಿ. ನಾ. ಚಂದ್ರಪ್ರಭರವರು ರಚಿಸಿರುವ "ಗಳತಿ" ಎಂಬ ಗೀತೆಗಳ ಸಂಗ್ರಹವನ್ನು ಆದರದಿಂದ ಸ್ವೀಕರಿಸಿದ್ದೇವೆ. ಸಂಭಾವಿತ ಮತ್ತು ಭಾವಗರ್ಭಿತವಾದ ಕವನಗಳಿಂದ ಕೂಡಿದ ಈ ಪುಟ್ಟ ಪುಸ್ತಕವು ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಇದರ ಬೆಲೆ ೦-೪-೦

SRI GANESH
TALKIES
From 10—6—52
SAVAGE SPLENDOR
(Technicolor)

From 13—6—52
ROCK ISLAND TRAIL
(True color)

ದಲೈ ಲಾಮಾರವರೇ ಟಿಬೆಟ್ಟಿನ ಪ್ರಧಾನಿ

ಟಿಬೆಟ್ಟಿನಲ್ಲಿ ಲಾಮಾರವರ ಅಧಿಕಾರ [illegible] ಮನ್ನಣೆ ಕೊಡುವ ಬಗ್ಗೆ [illegible] ಸರ್ಕಾರವು ಅನುಸರಿಸುತ್ತಿರುವ ನೀತಿಯನ್ನು ಕುರಿತು ಅಸಮಾಧಾನಗೊಂಡು ಟಿಬೆಟಿನ ಇಬ್ಬರು ಪ್ರಧಾನಿಗಳೂ ದಲೈ ಲಾಮಾರವರಿಗೆ ರಾಜೀನಾಮೆ ಸಲ್ಲಿಸಿದರೆಂದೂ, ಅದನ್ನು ಅಂಗೀಕರಿಸಿ ಲಾಮಾರವರೇ ಪ್ರಧಾನಿಯ ಅಧಿಕಾರವನ್ನೂ ಸ್ವೀಕರಿಸಿರುವರೆಂದೂ ವರದಿಯಾಗಿದೆ. ಟಿಬೆಟ್ಟಿನಲ್ಲಿರುವ ಚೀಣದ ಪ್ರತಿನಿಧಿ ಜನರಲ್ ಚಾಂಗ್ ಚಿಂಗ್ ವೂ ಎಂಬುವರ ಸೂಚನೆ ಮೇರೆ ಟಿಬೆಟ್ಟಿನ ಸರ್ಕಾರವು ಆಡಳಿತ ನಡೆಸುತ್ತಿದೆಯೆಂದು ಹೇಳಲಾಗಿದೆ.

ಕಳುವಾಗಿದ್ದ ವಿಮಾನದ ಪತ್ತೆ

ಕ್ಯಾಲಿಫೋರ್ನಿಯಾದ ಓಕ್‌ಲಂಡ್ ವಿಮಾನ ನಿಲ್ದಾಣದಿಂದ ಕಳೆದ ಶನಿವಾರ [illegible] ವಿಮಾನವು [illegible] ಬ್ರೌನ್ಸ್‌ವಿಲ್ [illegible] ಕಾಣಿಸಿಕೊಂಡಿತೆಂದು ವರದಿ [illegible] ವಿಮಾನ [illegible] ಯುನೈಟೆಡ್ ಸ್ಟೇಟ್ಸ್ [illegible] ರವರು [illegible] ಎಂಬ ತನ್ನ ಕೊಡ [illegible] ಮತ್ತು [illegible] ವಿಮಾನವನ್ನು ಅಪಹರಿಸಿಕೊಂಡು ಹೋಗಿದ್ದರೆಂದೂ ಪೋಲೀಸರು ಈಗ ಅವನನ್ನು ಪತ್ತೆ ಹಚ್ಚಿರುವುದಾಗಿಯೂ ತಿಳಿದುಬಂದಿದೆ.

ಬೊಂಬಾಯಲ್ಲಿ ಧಾನ್ಯದ ಬೆಲೆ ಇಳಿತಾಯ

ಕಲ್ಕತ್ತಾದಲ್ಲಿ ನೆನ್ನೆ ಭಾರತದ ಆಹಾರ ಸಚಿವರುಗಳ ಸಭೆಯೊಂದು ಸೇರಿ ನಾನಾ ಪ್ರಾಂತ್ಯಗಳ ಆಹಾರ ಪರಿಸ್ಥಿತಿಯನ್ನು ಕುರಿತು ಚರ್ಚಿಸಿತು. ಬೊಂಬಾಯಿಯು ಆಹಾರದ ಅಭಾವ ಪ್ರದೇಶವಾದುದರಿಂದ ಅಲ್ಲಿ ಪಡಿತರವನ್ನು ತೆಗೆಯಲಾಗುವುದಿಲ್ಲವೆಂದು [illegible] ಆಹಾರ ಸಚಿವರು ತಿಳಿಸಿದರು ಮತ್ತು ಬೊಂಬಾಯಿಯಲ್ಲಿ ಧಾನ್ಯದ ಬೆಲೆಯನ್ನು ಇಳಿಸಲು ಸಭೆಯು ನಿರ್ಧರಿಸಿತು.

SARADA TUTORIAL SECTION
Sardavilas High School Buildings, Mysore

The coaching classes for S S L C students sitting for the supplementary Examination of September 52 will be held in the Sarada-vilas High School Buildings from 16-6-52 Particulars can be had in the office between 11 A M & 5 P. M on all working days.

(Sd.) **R V Rajagopala Iyengar,**
Tru-tee

ಅಮೆರಿಕಕ್ಕೆ ಹೊಸ ರಷ್ಯಾ ರಾಯಭಾರಿ

ಅಮೆರಿಕದಲ್ಲಿ ರಷ್ಯದ ರಾಯಭಾರಿಯಾಗಿರುವ ಪನ್ಯೂಷ್ಕಿನ್‌ರವರ ಸ್ಥಾನದಲ್ಲಿ ಜಾರ್ಜ್ ಜಾರುಬಿನ್‌ರವರನ್ನು ನೇಮಿಸಲಾಗಿದೆ. ಅವರು ಹಿಂದೆ ಲಂಡನ್ನಿನಲ್ಲಿ ರಷ್ಯಾ ರಾಯಭಾರಿಯಾಗಿದ್ದರು.

ವಿದ್ಯುಚ್ಛಕ್ತಿಯ ಮೆದುಳಿನ ತಯಾರಿಕೆ

ಮೆಕ್ಸಿಕೋದಿನ [illegible] ಸಂಶೋಧಕ ಪ್ರವೀಣರೊಬ್ಬರು ಗಣಿತದ ಲೆಕ್ಕಾಚಾರಕ್ಕೆ ಉಪಯೋಗವಾಗುವ ಒಂದು ವಿದ್ಯುಚ್ಛಕ್ತಿಯ ಮೆದುಳನ್ನು ಕಂಡುಹಿಡಿರುವರೆಂದು ವರದಿಯಾಗಿದೆ. ಘುರಿತ ಗಣಿತ ಶಾಸ್ತ್ರಜ್ಞನು ಲೆಕ್ಕಾಚಾರ ಹಾಕುವುದಕ್ಕೂ ಒಂದು ಲಕ್ಷಪಟ್ಟು ಜಾಗ್ರತೆಯಾಗಿ ಈ ಮೆದುಳು ಕೆಲಸ ಮಾಡಬಲ್ಲದೆಂದೂ, ಅದನ್ನು ತಯಾರಿಸಲು ೩ ಲಕ್ಷ ೩೦ ಸಾವಿರ ಡಾಲರು ವೆಚ್ಚವಾಗಿ, ೩ ವರ್ಷ ಕಾಲ ಹಿಡಿಯಿತೆಂದೂ ಹೇಳಲಾಗಿದೆ.

THE CENTRAL COLLEGE
OF COMMERCE
Vani Vilas Mohalla Buildings
Admissions to **Diploma Courses in Commerce and Stenography, Typewriting and Shorthand,** will be received on all working days Reserve your seats immediately

ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ, ಲಿಮಿಟೆಡ್,
ಚಾಮರಾಜ ರಸ್ತೆ, ಮೈಸೂರು

ಪ್ರಕಟಣೆ

ಮೈಸೂರು ಸಿಟಿ ತಿಲ್ಲೆ ಮೊಹಲ್ಲಾ ಮಾನಂದವಾಡಿ ರಸ್ತೆ [illegible] ಯಲ್ಲಿ ಸೊಸೈಟಿಯವರು ಕಟ್ಟಿಸುವ ಹನ್ನೆರಡು ಮಾದರಿ ಮನೆಗಳನ್ನು ಸೊಸೈಟಿಯ ಮನೆಯಿಲ್ಲದ ಸದಸ್ಯರುಗಳಿಗೆ ಹರಾಜುಗಳಿಗೆ [illegible] ವಿಲೇ ಮಾಡಲಾಗುತ್ತದೆ. ಪ್ರತಿ ಮಾದರಿ ಮನೆಗೂ ಸುಮಾರು 6000 ರೂ. ಬೆಲೆಯಾಗುತ್ತದೆ. ಸದರಿ ಮನೆಯನ್ನು ಹೊಂದಬೇಕೆನ್ನುವ ಸದಸ್ಯರು ತಾ|| 30-6-52 ರ ಒಳಗಾಗಿ ಅರ್ಜಿಯನ್ನೂ, ಜೊತೆಯಲ್ಲಿ 1000 - ರೂ. ಗಳ ಠೇವಣಿ ಹಣವನ್ನೂ ದಾಖಲು ಮಾಡತಕ್ಕದ್ದು. [illegible] ಮಾಬಲನ್ನು ಮನೆ ವಿಲೇ [illegible] ಒಂದು ತಿಂಗಳೊಳಗಾಗಿ [illegible] ಮಾಡತಕ್ಕದ್ದು. ಹೆಚ್ಚಿನ ವಿವರಗಳನ್ನು ಸೊಸೈಟಿಯಲ್ಲಿ ತಿಳಿಯಬಹುದು.

ಎಸ್. ಶೇಷಗಿರಿರಾವ್,
ಗೌರವ ಕಾರ್ಯದರ್ಶಿ

Edited, Printed and Published by A. R. Nagaraja at Sadhvi Press, Mysore

ರಿಜಿಸ್ಟರ್ಡ್ ನಂ ೨೪೨ || ಮೈಸೂರು [illegible] || ಬಿಡಿಯ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೧೧-೬-೫೩ [ಸಂಚಿಕೆ ೨೬೯

ಕೊರಿಯಾ ಒಪ್ಪಂದಕ್ಕೆ ನೆಹರೂರ ಒತ್ತಾಯ

ಶಾಸನಸಭಾ ಕಾರ್ಯಕ್ರಮ

ಬೆಂಗಳೂರು ೧೧

ಸಂಸ್ಥಾನದ ಕಿರಿಯ ಶಾಸನ ಸಭೆಯ ಅಧಿವೇಶನವು ಇದೇ ೧೮ ನೇ ತಾ|| ಆರಂಭವಾಗಿ ೨೧ ದಿನಗಳವರೆಗೆ ನಡೆಯುವುದು ಮೂರನೇ ದಿನ ಹಿರಿಯ ಮತ್ತು ಕಿರಿಯ ಸಭೆಗಳ ಜಂಟಿ ಅಧಿವೇಶನವು ನಡೆದು ಶ್ರೀಮನ್ಮಹಾರಾಜರು ಅವುಗಳನ್ನು ಉದ್ದೇಶಿಸಿ ಭಾಷಣ ಮಾಡುವರು

ಕಿರಿಯ ಸಭೆಯ ಸದಸ್ಯರು ೧೮ ನೇ ತಾ|| ಪ್ರಮಾಣವಚನ ಸ್ವೀಕಾರಮಾಡಿದನಂತರ, ಸಭೆಯ ಸ್ಪೀಕರರ ಚುನಾವಣೆಯು ನಡೆಯುವುದು ೨೦ನೇ ತಾ|| ೫೩-೫೪ ನೇ ಸಾಲಿನ ಆಯವ್ಯಯವನ್ನು ಸಭೆಯ ಮುಂದೆ ಮಂಡಿಸಲಾಗುವುದು ಸಭೆಯ ಕಾರ್ಯಕ್ರಮವು ಈ ರೀತಿ ಇದೆ:—

ಜೂನ್ ೨೩ ಮತ್ತು ೨೪ ಮಸೂದೆಗಳು, ೨೫ ರಿಂದ ೬ ದಿನಗಳು ಆಯವ್ಯಯದ ಚರ್ಚೆಗೆ, ೨೮ ರಿಂದ ಜುಲೈ ೭ ರ ವರೆಗೆ ಬೇಡಿಕೆಗಳಮೇಲೆ ಓಟು, ೧೦ ಖಾಸಗೀ ಕಾರ್ಯಕ್ರಮ ೧೧ ಸರ್ಕಾರಿ ಕಾರ್ಯಕಲಾಪ

ಸಭೆಯಲ್ಲಿ ೫೦೦ ಪ್ರಶ್ನೆಗಳೂ ೮೦ ಖಾಸಗೀ ನಿರ್ಣಯಗಳೂ ಪರಿಶೀಲಿಸಲ್ಪಡಲಿವೆ ಸಾರ್ವಜನಿಕರು ಸೇರುವ ಸ್ಥಳಗಳಿಗೆ ಸಂಬಂಧಿಸಿದ ಮಸೂದೆಯೂ ವ್ಯವಸಾಯೋತ್ಪತ್ತಿ ಮಾರ್ಕೆಟ್ಟುಗಳ ಕಾನೂನನ್ನು ತಿದ್ದುಪಡಿ ಮಾಡುವ ಮಸೂದೆಯೂ ಚರ್ಚೆಗೆ ಬರುವುವು

ಶಾಸನ ಸಭೆಗಳ ನಾಯಕರು

ಮೈಸೂರು ಕಿರಿಯ ಶಾಸನ ಸಭೆಗೆ ಶ್ರೀ ಕೆ ಹನುಮಂತಯ್ಯನವರು ಮತ್ತು ಹಿರಿಯ ಸಭೆಗೆ ಶ್ರೀ ಟಿ ಸಿದ್ದಲಿಂಗಯ್ಯನವರು ನಾಯಕರಾಗುವರು

ಅಶ್ಲೀಲ ಪ್ರಕಟಣೆಗಳಿಗಾಗಿ ಪ್ರಕಾಶಕರ ಮೇಲೆ ಮೊಕದ್ದಮೆ

ಬೆಂಗಳೂರಿನಲ್ಲಿ ಹೊರಡುತ್ತಿರುವ ಕಾಮಕಲಾ ಮಾಸಪತ್ರಿಕೆಯಲ್ಲಿ ಸಾರ್ವಜನಿಕರ ನೀತಿಯನ್ನು ಕೆಡಿಸುವಂತಹ ಮತ್ತು ಅಶ್ಲೀಲವೂ ಕಾಮುಕವೂ ಅಪರಿಶುದ್ಧವೂ ಆದ ಭಾವನೆಗಳನ್ನು ಪ್ರಚೋದಿಸುವ ಲೇಖನಗಳು ಪ್ರಕಟಿಸಲ್ಪಟ್ಟಿವೆ ಎಂದು ಪತ್ರಿಕೆಯ ಮುದ್ರಕರೂ ಮತ್ತು ಪ್ರಕಾಶಕರೂ ಆದ ಶ್ರೀ ಎಂ ರಾಮಮೂರ್ತಿಯವರ ಮೇಲೆ ಪೋಲೀಸರು ಬೆಂಗಳೂರು ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿರುತ್ತಾರೆ

ಮೈಸೂರು-ಕೊಯಮುತ್ತೂರು ರೈಲ್ವೆ

೧೯೫೪ ೫೫ ಮತ್ತು ೫೫ ೫೬ ನೇ ಸಾಲುಗಳಲ್ಲಿ ಸತ್ಯಮಂಗಲದ ಮಾರ್ಗವಾಗಿ ಮೈಸೂರು ಮತ್ತು ಕೊಯಮುತ್ತೂರು ರೈಲ್ವೆಯನ್ನು ಹಾಕುವ ವಿಚಾರ ಆಗುವುದೆಂದು ಲೋಕ ಸಭೆಯಲ್ಲಿ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ ೧೦೭ ಮೈಲಿ ಉದ್ದದ ಈ ರೈಲ್ವೆ ಮಾರ್ಗದ ನಿರ್ಮಾಣಕ್ಕಾಗಿ ೪ ೬೫ ಕೋಟಿ ರೂ ವೆಚ್ಚ ತಗುಲುವುದೆಂದು ಅವರು ತಿಳಿಸಿದ್ದಾರೆ

ಮಂತ್ರಿಗಳಿಗೆ ಸಂಬಳ, ಭತ್ಯ ಸೇರಿ ತಿಂಗಳಿಗೆ ೨,೦೦೦ ರೂ.

ಸ್ವಂ ಮು ಫೋ] ಬೆಂಗಳೂರು ೧೧

ಸಂಸ್ಥಾನದ ಮಂತ್ರಿಗಳಿಗೆ ಸಾವಿರ ರೂ ಸಂಬಳ, ೨೫೦ ರೂ ಬಾಡಿಗೆ ಭತ್ಯ ಅಥವಾ ಉಚಿತ ಭವನ ೨೫೦ ರೂ ವಾಹನ ಭತ್ಯ ಮತ್ತು ಸಾಮೂಹಿಕ (ಸಂಪ್ಚುಯರಿ) ಭತ್ಯ ೫೦೦ ರೂ ಗಳನ್ನು ಕೊಡಬೇಕೆಂದು ಸೂಚಿಸುವ ಸರ್ಕಾರಿ ಮಸೂದೆಯೊಂದು ಮುಂದಿನ ಶಾಸನ ಸಭೆಯಲ್ಲಿ ಬರಲಿದೆಯೆಂದು ಗೊತ್ತಾಗಿದೆ

ಖಾಸಗಿ ಅಕ್ಕಿಗೆ ಅವಕಾಶ

ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ, ಇನ್ನು ಮುಂದೆ ಖಾಸಗಿ ಪಡರ ಭತ್ತವನ್ನು ಎಲ್ಲ ಗಿರಣಿಗಳೂ ರಹದಾರಿ ಇಲ್ಲದೆ ಅಕ್ಕಿ ಮಾಡಬಹುದೆಂದು ಸೂಚಿಸಿರುತ್ತಾರೆ

ಕೊರಿಯಾ ಶಾಂತಿ ಒಪ್ಪಂದದ ಬಗ್ಗೆ ನೆಹರೂ ಕಾತರತೆ

ಬ್ರಿಟನ್ನಿನ ರಕ್ಷಣಾ ಮಂತ್ರಿ ಲಾರ್ಡ್ ಅಲೆಕ್ಸಾಂಡರ್‌ರವರು ಭಾರತದ ಪ್ರಧಾನಿ ನೆಹರೂರವರನ್ನು ಮೊನ್ನೆ ದೆಹಲಿಯಲ್ಲಿ ಭೇಟಿ ಮಾಡಿದಾಗ, ಕೊರಿಯದ ಶಾಂತಿ ಸಂಧಾನವು ಯಶಸ್ವಿಯಾಗುವುದಕ್ಕೆ ಏಕಮಾತ್ರ ಅಡ್ಡಿಯಾಗಿರುವ ಯುದ್ಧ ಖೈದಿಗಳ ವಿನಿಮಯದ ಪ್ರಶ್ನೆಯು ಇತ್ಯರ್ಥವಾಗಲು ದಾರಿ ತೋರಬೇಕೆಂದು ನೆಹರೂರವರು ಒತ್ತಾಯಪಡಿಸಿದರೆಂದು ಗೊತ್ತಾಗಿದೆ ಈಗ ನಡೆಯುತ್ತಿರುವ ಕೊರಿಯಾ ಶಾಂತಿಯ ಮಾತುಕತೆಯ ಭವಿಷ್ಯದ ಮೇಲೆ ಪ್ರಪಂಚದ ಶಾಂತಿಯು ನಿಂತಿರುವುದೆಂದು ಭಾರತ ಸರ್ಕಾರದವರು ಭಾವಿಸಿರುವುದಾಗಿಯೂ ಹೇಳಲಾಗಿದೆ

ಮದ್ರಾಸಿನ ರೇಷನಿಂಗ್ ಕಛೇರಿಗಳು ಬಂದ್

ಮದರಾಸಿನಲ್ಲಿ ಪಡಿತರವನ್ನು ರದ್ದು ಮಾಡಿರುವುದರಿಂದ ಆ ನಗರದ ೫೦೦ ಮಂದಿ ನೌಕರರನ್ನುಳ್ಳ ರೇಷನಿಂಗ್ ಕಛೇರಿಯನ್ನು ಬಂದು ಮಾಡಲಿರುವುದಾಗಿ ಗೊತ್ತಾಗಿದೆ ಈ ನೌಕರರನ್ನು ಮುಂದೆ ಯಾವ ಕೆಲಸಗಳಿಗೆ ನೇಮಿಸಿಕೊಳ್ಳಲಾಗುವುದೆಂಬುದು ಇನ್ನೂ ತೀರ್ಮಾನವಾಗಿಲ್ಲ.

೯ ಜನ ಸತ್ಯಾಗ್ರಹಿಗಳ ಬಂಧನ ಮತ್ತು ಬಿಡುಗಡೆ

ಮೈಸೂರು ೧೧

ಜಿಲ್ಲಾ ಸಮಾಜವಾದಿ ಪಕ್ಷದವರು ಕಳೆದ ಮೂರು ದಿನಗಳಿಂದೀಚೆ ನಡೆಸುತ್ತಿರುವ ಅನ್ನ ಸತ್ಯಾಗ್ರಹವು ಈ ದಿನವೂ ಮುಂದುವರೆದು ಶ್ರೀ ಟಿ ಎ ಶ್ರೀನಿವಾಸರಾಯರ ನಾಯಕತ್ವದಲ್ಲಿ ಸರ್ಕಾರಿ ಡಿಪೋವಿನ ಬಳಿಗೆ ಹೋದಾಗ ಈಕೆಳಗೆ ಕಂಡವರನ್ನು ದಸ್ತಗಿರಿ ಮಾಡಿ ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್ ಹತ್ತಿರ ಕೊಂಡೊಯ್ದು ಅವರುಗಳನ್ನು ಬಿಟ್ಟುಬಿಡಲಾಯಿತು —

ಶ್ರೀಗಳಾದ ಟಿ ಎ ಶ್ರೀನಿವಾಸರಾವ್, ಬಿ ಶ್ರೀಕಂಠಪ್ಪ, ಕೆ ಪಿ ಶಾಂತಮೂರ್ತಿ, ವೇದಾಂತಂ ಹೆಮ್ಮಿಗೆ, ವಿಶ್ವನಾಥ್, ರಾಮದೇವ್, ಶ್ರೀನಿವಾಸಮೂರ್ತಿ, ಪ್ರಭಾಕರ್ ಮತ್ತು ಜ|| ಮಿರ್ಜಾ ಮೊಹಮ್ಮದ್ ಇದಕ್ಕೆ ಮುಂಚೆ ಟೌನ್ ಹಾಲ್ ಮೈದಾನದಲ್ಲಿ ಸಭೆ ನಡೆಯಿತು ನೆನ್ನೆ ದಸ್ತಗಿರಿ ಮಾಡಿದ್ದವರನ್ನೆಲ್ಲಾ ನೆನ್ನೆ ಮಧ್ಯಾಹ್ನ ೨ ಘಂಟೆಯಲ್ಲಿ ಬಿಡುಗಡೆ ಮಾಡಲಾಗಿತ್ತು

ನಾಳೆಯಿಂದ ಸತ್ಯಾಗ್ರಹವು ಇಲ್ಲವೆಂದು ತಿಳಿಸಲಾಗಿದೆ

ಭಾರತೀ ಸ್ತ್ರೀ ಸಮಾಜದಲ್ಲಿ ಭಾಷಣ

ರಾಜಧಾನಿಯ ವಾಣೀವಿಲಾಸ ಮೊಹಲ್ಲದಲ್ಲಿರುವ ಭಾರತೀ ಸ್ತ್ರೀ ಸಮಾಜದಲ್ಲಿ ನಾಳೆ ಸಂಜೆ ೫.೩೦ ಘಂಟೆಗೆ ಸಂಸ್ಥಾನದ ಕಸ್ತೂರಿ ಬಾ ಶಿಕ್ಷಣ ಸಮಿತಿಯ ಏಜೆಂಟರಾದ ಶ್ರೀಮತಿ ಯಶೋಧರಾ ದಾಸಪ್ಪನವರು ಭಾಷಣ ಮಾಡುವರು

ನ್ಯೂಯಾರ್ಕಿನಲ್ಲಿ ಪ್ರಚಂಡ ಬಿರುಗಾಳಿಯ ಅನಾಹುತ

ನ್ಯೂಯಾರ್ಕಿನಲ್ಲಿ ಮೊನ್ನೆ ಬಲವಾದ ಗಾಳಿ ಮಳೆಯುಂಟಾಗಿ ಅಲ್ಲಿನ ಒಂದು ಮನೆಯ ನಾಲ್ಕನೇ ಅಂತಸ್ತಿನ ಮಹಡಿ ಮೇಲೆ ನಿಂತಿದ್ದ ಮನುಷ್ಯನೊಬ್ಬನು ತಾರಿಸಲ್ಪಟ್ಟು, ಅವನು ಕೆಳಗೆ ಬಿದ್ದು ಮೃತನಾದನೆಂದು ವರದಿಯಾಗಿದೆ ಅನೇಕ ಮನೆಗಳಿಗೆ ವಿದ್ಯುತ್ ಸರಬರಾಜು ನಿಂತಿತ್ತು ಹಗಲಲ್ಲೇ ಊರಿನಲ್ಲಿ ಕತ್ತಲೆಯು ಕವಿದಿತ್ತು

ಲೋವರ್ ಸೆಕೆಂಡರಿ ಪರೀಕ್ಷೆ ಪ್ರಥಮ ೫ ಸ್ಥಾನಗಳು

ಸ್ವಂ ಮು ಫೋ] ಬೆಂಗಳೂರು ೧೧

ಈ ವರ್ಷದ ಮಿಡಲ್ ಸ್ಕೂಲು ಪರೀಕ್ಷೆಗೆ ಕಳುಹಿಸಿದ್ದ ೪೧,೫೫೧ ಮಂದಿ ವಿದ್ಯಾರ್ಥಿಗಳಲ್ಲಿ ೪೦,೨೧೧ ಜನರು ಪರೀಕ್ಷೆಗೆ ಕುಳಿತಿದ್ದರು ೨೩,೧೪೨ ಮಂದಿ ಉತ್ತೀರ್ಣರಾದರು ಶೇ|| ೫೭ ೫ ರಷ್ಟು ಈ ವರ್ಷದ ಫಲಿತಾಂಶವು ಇರುವುದು ೩,೭೮೯ ಮಂದಿ ಪ್ರಥಮ ವರ್ಗದಲ್ಲಿ ಉತ್ತೀರ್ಣರಾಗಿರುವರು,

ತುಮಕೂರಿನ ಜ್ಯೂನಿಯರ್ ಮಿಡಲ್ ಸ್ಕೂಲಿನ ಜ|| ನಜೀರ್ ಅಹಮದ್ ಎಂಬ ಬಾಲಕನು ಪ್ರಥಮ ಸ್ಥಾನ ಗಳಿಸಿರುವನು. ಹಾಸನದ ಸಿ ಎಸ್ ಅನಂತರಾಮ್ ದ್ವಿತೀಯ ಸ್ಥಾನ, ತುಮಕೂರಿನ ಬಿ ವಿ ಸುಂದರಂ ತೃತೀಯ ಸ್ಥಾನ, ಮೈಸೂರು ಲಕ್ಷ್ಮೀಪುರಂ ಬಾಯ್ಸ್ ಸ್ಕೂಲಿನ ವೆಂಕಟೇಶ ಅಯ್ಯಂಗಾರ್, ೪ನೇ ಸ್ಥಾನ, ಅದೇ ಸ್ಕೂಲಿನ ರಾಮಕೃಷ್ಣ ಉಪಾಧ್ಯಾಯ ೫ ನೇ ಸ್ಥಾನ ಗಳಿಸಿರುವರು

ಅಪ್ಪರ್ ಪ್ರೈಮರಿ ಪರೀಕ್ಷಾ ಫಲಿತಾಂಶ

ಅಪ್ಪರ್ ಪ್ರೈಮರಿ ಪರೀಕ್ಷಾ ಫಲಿತಾಂಶಗಳು ಹೊರಬಿದ್ದಿವೆ ಬಾಲಕಿಯರುಗಳಲ್ಲಿ ಮಂಡ್ಯದ ಶ್ರೀಮತಿ ಕೆ ಎಸ್. ಸರೋಜಮ್ಮಾಳ್ ಮತ್ತು ಕಾನಕಾನಹಳ್ಳಿಯ ಶ್ರೀಮತಿ ಎಸ್ ವಿಮಲಾರವರು ಪ್ರಥಮ ಮತ್ತು ದ್ವಿತೀಯ ಸ್ಥಾನಗಳನ್ನು ಗಳಿಸಿರುತ್ತಾರೆ

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನಾಮಕರಣ

ಬೆಂಗಳೂರು ೧೧

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಸಿ ದಾಸಪ್ಪನವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಕೆ ಹನುಮಂತಯ್ಯ, ಟಿ ಸಿದ್ದಲಿಂಗಯ್ಯ, ಟಿ ಸುಬ್ರಹ್ಮಣ್ಯ, ಎಲ್ ಎಸ್. ವೆಂಕಾಜಿರಾವ್ ಮತ್ತು ಆರ್ ಚನ್ನಿಗರಾಮಯ್ಯನವರುಗಳನ್ನು ಸದಸ್ಯರಾಗಿ ನಾಮಕರಣ ಮಾಡಿರುತ್ತಾರೆ. ಶ್ರೀ ಹೆಚ್ ಎಸ್. ರುದ್ರಪ್ಪನವರನ್ನು ಉಪಾಧ್ಯಕ್ಷರಾಗಿಯೂ, ಶ್ರೀ ಎಲ್ ಎಸ್. ವೆಂಕಾಜಿರಾಯರನ್ನು ಕಾರ್ಯದರ್ಶಿಯಾಗಿಯೂ, ಶ್ರೀ ಆರ್. ಸುಬ್ಬಣ್ಣನವರನ್ನು ಖಜಾಂಚಿಯಾಗಿಯೂ ನೇಮಿಸಿರುತ್ತಾರೆ

ಪಾರಿಭಾಷಿಕ ಶಾಲೆಗಳಲ್ಲಿ ಪ್ರವೇಶಾವಕಾಶ ಖೋತಾ

ಸಾಧನೋಪಕರಣದ ವ್ಯವಸ್ಥೆಯ ಕೊರತೆ ಇರುವುದರಿಂದ ಸಂಸ್ಥಾನದ ಪಾರಿಭಾಷಿಕ ಶಾಲೆಗಳಲ್ಲಿರುವ ಪ್ರವೇಶಾವಕಾಶವನ್ನು ಸರ್ಕಾರದವರು ಖೋತಾ ಮಾಡಿ ಆಜ್ಞೆ ಹೊರಡಿಸಿದ್ದಾರೆ. ಬೆಂಗಳೂರಿನ ಸರ್ಕಾರಿ ಇಂಜನಿಯರಿಂಗ್ ಕಾಲೇಜಿನಲ್ಲಿ ೨೦೦ ರ ಬದಲು ೧೦೦ ಕ್ಕೆ, ಬಿ ಎಂ ಎಸ್. ಕಾಲೇಜಿನಲ್ಲಿ ೨೪೦ ರ ಬದಲು ೮೦ ಕ್ಕೆ ಇಳಿಸಲಾಗಿದೆ ಮೆಡಿಕಲ್ ಕಾಲೇಜು ಮತ್ತು ಶಾಲೆಯಲ್ಲೂ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಪ್ರವೇಶಾವಕಾಶದ ನಿಯಮಗಳನ್ನು ಪುನರ್ವಿಮರ್ಶಿಸಲು ಸಮಿತಿಯೊಂದನ್ನು ಸರ್ಕಾರದವರು [illegible]

ಹಕೋಟಿಯ ಪೂರ್ಣ ರದ್ದಿಗಾಗಿ ಸಲಹೆ

ಭಾರತದ ಅದ್ಯಂತ ಹಕೋಟಿಗಳನ್ನು ರದ್ದು ಮಾಡಲು ವ್ಯವಸ್ಥೆ ಮಾಡುವಂತೆ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಲವು ಪ್ರಮುಖ ಸದಸ್ಯರು ಕಾಂಗ್ರೆಸ್ ಅಧ್ಯಕ್ಷರಿಗೆ ಸಲಹೆ ಮಾಡಿರುವರೆಂದು ತಿಳಿದುಬಂದಿದೆ

ಮೈಸೂ ತಗುಲಿ ಹಡಗು ಮುಳುಗಿತು

ಜೀವಿಣ ಹಡಗೊಂದು ಸಮುದ್ರದಲ್ಲಿ ಚಲಿಸುತ್ತಿದ್ದಾಗ ಅದಕ್ಕೆ ಮೈನು ತಗಲಿ ೬೦ ಮಂದಿ ನೀರು ಪಾಲಾದರೆಂದು ವರದಿಯಾಗಿದೆ

ಪರಿಕ್ಷೆ

ಮೈಸೂರು ಮಂಡಿ ಮೊಹಲ್ಲ ಕಬೀರ್ ರೋಡು ಜಮಾಲ್ ಮಹಲ ಬೀದಿಯಲ್ಲಿರುವ ಶ್ರೀ ಪಾಂಡುರಂಗಸ್ವಾಮಿ ದೇವಾಲಯದಲ್ಲಿ ನಾಳೆಯಿಂದ ದಿನವೂ ಸಂಜೆ ೭ ಘಂಟೆಗೆ ಶ್ರೀ ಎಂ ಸಿ ಬಾಲಾಜಿ ಕೃಷ್ಣದಾಸರಿಂದ ಹರಿಕಥೆಯು ಏರ್ಪಾಡಾಗಿದೆ

ಕೋಲಾರಕ್ಕೆ ಮಂಡ್ಯದ ರೈತರಿಂದ ಉಚಿತ ಹುಲ್ಲು ಸರಬರಾಜು

ಮಳೆಯಿಲ್ಲದ ಕೋಲಾರ ಜಿಲ್ಲೆಯ ದನಕರುಗಳಿಗಾಗಿ ಮಂಡ್ಯದ ರೈತರು ಉಚಿತವಾಗಿ ಕೊಟ್ಟಿರುವ ೩೦ ಗಾಡಿ ಹುಲ್ಲು, ಅಲ್ಲಿನ ಜನ ಜನರಿಗಾಗಿ ಕೊಡಲಾಗಿದ್ದ ೩೦ ಪಲ್ಲ ಭತ್ತ ಮತ್ತು ೩೦ ರೂ ಗಳನ್ನು ರವಾನಿಸುವ ಬಗ್ಗೆ ಒಂದು ಸಮಾರಂಭವು ನೆನ್ನೆ ಮಂಡ್ಯದಲ್ಲಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರ ಸಮ್ಮುಖದಲ್ಲಿ ನಡೆಯಿತು ಆ ಸಾವಿರ ರೈತರು ಅದರಲ್ಲಿ ಭಾಗವಹಿಸಿದ್ದರು ಶ್ರೀ ಹನುಮಂತಯ್ಯನವರು ಭಾಷಣ ಮಾಡಿ, ಕ್ಷಾಮಕ್ಕೀಡಾಗಿರುವ ಸಹೋದರರುಗಳಿಗೆ ಸಹಾಯವೊದಗಿಸಲು ಮುಂದೆ ಬಂದ ರೈತರನ್ನು ಅಭಿನಂದಿಸಿದರು ಕೋಲಾರಕ್ಕೆ ಬೀಜದ ಭತ್ತ, ರಾಗಿ ಮುಂತಾದುವು ಈಗ ಅವಶ್ಯಕವಾಗಿವೆಯೆಂದು ತಿಳಿಸಿದರು

UNIVERSITY SENATE

ELECTION

Registered Graduates Constituency

Please give one of the SIX Valuable Votes to

K S SURYANARAYANA B.A.LL.B.,

Lawyer 145 College Road MYSORE

ಬರ್ದವಾನಿನ ಕರ್ಜನ್ ಗೇಟು ಉರುಳಿತು

೧೯೦೫ ರಲ್ಲಿ ಭಾರತದ ವೈಸರಾಯಿಯಾಗಿದ್ದ ಲಾರ್ಡ್ ಕರ್ಜನ್‌ರವರು ಬರ್ದವಾನ್ ನಗರಕ್ಕೆ ಭೇಟಿಯಿತ್ತಾಗ ಅವರ ಜ್ಞಾಪಕಾರ್ಥವಾಗಿ ಕಟ್ಟಿಸಿದ್ದ ಕರ್ಜನ್ ಗೇಟು ಭಾನುವಾರ ಉರುಳಿತೆಂದು ವರದಿಯಾಗಿದೆ ಸದರಿ ಗೇಟಿಗೆ ಇತ್ತೀಚೆಗೆ ವಿಜಯ ತೋರಣವೆಂದು ನಾಮಕರಣ ಮಾಡಲಾಗಿತ್ತು

ಪಾರ್ಲಿಮೆಂಟ್ ಭವನವನ್ನು ಸುಡುವ ಯತ್ನಕ್ಕಾಗಿ ಸಜಾ

ದೆಹಲಿ ಪಾರ್ಲಿಮೆಂಟ್ ಭವನವನ್ನು ಸುಡುವ ಪ್ರಯತ್ನ ನಡೆಸಿದ ಅಪಾದನೆಗಾಗಿ ಬಂಗಾಳದ ನಿರಾಶ್ರಿತ ಹರಿದಾಸ್ ಸಹಾ ಎಂಬಾತನಿಗೆ ೧೮ ತಿಂಗಳ ಶಿಕ್ಷೆಯಾಗಿರುತ್ತದೆ

ಆಹಾರ ಮಂತ್ರಿಗಳಿಗೆ ನೆಹರ್ ಕೂಕೀವರ ಉತ್ತರ

ಚುನಾವಣೆಗಳಲ್ಲಿ ಸೋತು ಹೋದುದಕ್ಕಾಗಿ ಸ್ವಂತ ತೀರಿಸಿಕೊಳ್ಳಲು ಸಮಾಜವಾದಿಗಳು ಆಹಾರ ಸತ್ಯಾಗ್ರಹವನ್ನು ಕೈಗೊಂಡರೆಂದು ಮೈಸೂರಿನ ಆಹಾರ ಮಂತ್ರಿ ಶ್ರೀ ಟಿ ಸಿದ್ದವೀರಪ್ಪನವರು ಹೇಳಿರುವುದು ಸರಿಯಲ್ಲವೆಂದೂ, ಸತ್ಯಾಗ್ರಹದ ಅಸ್ತ್ರವನ್ನು ಪ್ರಯೋಗಿಸಿದ ಪಕ್ಷದವರು ಬಡಜನರ ಪರವಾಗಿ ಹೋರಾಡುತ್ತಿದ್ದೇವೆಂದೂ, ರಾಜಧಾನಿಯ ಸಮಾಜವಾದಿ ಪಕ್ಷದ ಮುಖಂಡರಾದ ಶ್ರೀ ಮಾರ್ ಕೂಕೀರವರು ತಿಳಿಸಿ, ಸರ್ಕಾರವು ಆಹಾರದ ಬೆಲೆಯನ್ನು ಕಡಿಮೆ ಮಾಡಬೇಕಾದುದು ಅವರ ಕರ್ತವ್ಯವೆಂದೂ, ಕೇವಲ ಹಕೋಟಿಯನ್ನು ತೆಗೆದು ಹಾಕುವುದರಿಂದ ಪ್ರಜೆಗಳ ಬವಣೆಯು ಹರಿದಿರಿವುದಾಗಲಿಲ್ಲವೆಂದೂ ತಿಳಿಸಿರುತ್ತಾರೆ

D HANUMIAH'S COLLEGE OF COMMERCE, MYSORE

NOTIFICATION

Applications for admission to the Junior I Com Class will be received from 10th June 1952

Forms of Application can be obtained from the office of the College during working hours

D V HANUMIAH,
Principal

ಸಿಡಿಲು ಬಡಿದು ೬೦ ಮನೆಗಳು ಬೆಂಕಿಗೆ ಆಹುತಿ

ಕಟಕ್ಕಿನ ಬಳಿ ಗುಂಟುಪುಂದಾ ಎಂಬ ಗ್ರಾಮದಲ್ಲಿ ತೆಂಗಿನ ಮರವೊಂದಕ್ಕೆ ಸಿಡಿಲು ಬಡಿದು ಬೆಂಕಿಹೊತ್ತಿಕೊಂಡ ಪರಿಣಾಮವಾಗಿ ಪಕ್ಕದಲ್ಲಿದ್ದ ೬೦ ಮನೆಗಳಿಗೆ ಬೆಂಕಿಹತ್ತಿ ಅವು ಸುಟ್ಟುಹೋದುವೆಂದು ವರದಿಯಾಗಿದೆ ೫೦ ಸಾವಿರ ರೂಗಳಷ್ಟು ನಷ್ಟವಾಗಿರುವುದೆಂದು ಅಂದಾಜಾಗಿದೆ

ಶ್ರೀರಾಮ ಸಹಾಯ ಸಂಘ

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮೇಲ್ಕಂಡ ಸಂಘದಲ್ಲಿ ೧೨ ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಕುಳಿತಿದ್ದ ೨೨ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಒಟ್ಟು ೨೦ ಮಂದಿ ಉತ್ತೀರ್ಣರಾಗಿರುತ್ತಾರೆ ಇವರಲ್ಲಿ ೧೫ ಮಂದಿ ಇಸಿ ಮತ್ತು ಸಿ ಎಸ್ ಪಡೆದಿರುತ್ತಾರೆ ಸಪ್ಲಿಮೆಂಟರಿ ಪರೀಕ್ಷಾ ತರಗತಿಗಳು ಮುಂದಿನ ವಾರ ಆರಂಭವಾಗುತ್ತವೆ

ಇದಲ್ಲದೆ ೧೫ ನೆಯ ಲೋವರ್‌ಸೆಕೆಂಡರೀ ಪರೀಕ್ಷೆಯ ತರಗತಿಗಳೂ ಸಹ ಆರಂಭವಾಗಲಿವೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಸಂಘದ ಕಾರ್ಯಾಲಯದಲ್ಲಿ ವಿವರಗಳನ್ನು ಪಡೆಯಬಹುದು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೦ ಎ ವಿ ನಾರಣಪ್ಪ ಸಂಗೀತ ವ್ಯಾಖ್ಯಾನ ೩ ರಂಗಪ್ಪ ವೇಣುವಾದನ ಸಂಜೆ ೫ ೩೦ ಮತ್ತು ೬ ೩೦ ಎಂ ಕೆ ಇಂದಿರ ಸಂಗೀತ ೭ ೦೦ ಕನ್ನಡ ಗೀತೆಗಳು ೭ ಚಿತ್ರ ಲೊ ಳ ಲ ಆಯ್ಕೆಮನೆಸೇನ ಜೋಶಿ, ಕನ್ನಡ ಗೀತೆಗಳು ೮ ೩೦ ರಂಗಸ್ವಾಮಿ ವೇಣುಗಾನ ೯-೧೫ ರಸ ಪ್ರಶ್ನೆ ೩೦ ಇತ್ಯಾದಿ ಪ್ರಶ್ನೆಗಳು

1952 September S S L C TUTORIAL CLASSES

ADMISSIONS FOR THE ABOVE CLASSES are now being received between 7 and 10 A M Classes will be handled by expert High School teachers Apply in person to –

THE ORGANIZER,
Nobel Tutorial College, C/o Champion Metropolitan College,
Co operators Hom
100 Feet Road Mysore

ಕನ್ನೇಗೌಡನ ಕೊಪ್ಪಲಿನಲ್ಲಿ ನೀರಿನ ತೊಂದರೆ

ರಾಜಧಾನಿಯ ಕನ್ನೇಗೌಡನ ಕೊಪ್ಪಲಿನಲ್ಲಿ ಬೀದಿ ನಲ್ಲಿಗಳು ಬಹಳ ಕಡಿಮೆಯಾಗಿವೆ ಸಾಕಾದಷ್ಟು ನೀರು ಅವುಗಳಲ್ಲಿ ಬರದೆ ಜನರಿಗೂ ಜಾನುವಾರುಗಳಿಗೂ ತುಂಬಾ ತೊಂದರೆಯಾಗಿದೆ ಸಬ್ ಲೈನು ಇಲ್ಲದಿರುವುದೇ ಇದಕ್ಕೆ ಕಾರಣ ಇದನ್ನು ಹಾಕಿಕೊಟ್ಟರೆ ಅನೇಕರು ತಮ್ಮ ಮನೆಗಳಿಗೆ ಕನೆಕ್ಷನ್ ತೆಗೆದುಕೊಳ್ಳುವರು ಪೌರಸಭೆಯವರು ಈ ಕಡೆಗೆ ಗಮನವಿತ್ತು ಜನರ ತೊಂದರೆಯನ್ನು ಪರಿಶೀಲಿಸಬೇಕೆಂದು, ಅಲ್ಲಿನ ನಿವಾಸಿ ಶ್ರೀ ನಾರಾಯಣ ಸ್ವಾಮಿಯವರು ಕೋರಿರುತ್ತಾರೆ

Paramount's Powerful Masterpiece

TO WHOM THE BELL TOLLS

(In Glorious color)

Starring Gary Cooper and Ingrid Bergman

From 14-6 52

At

SRI GAYATHRI

ಭಿಕ್ಷುಕರ ಪರಿಹಾರ ಸಮಿತಿ

ಫೀರ್‌ಮಾನ್‌ರವರ ಕಛೇರಿ ಮೈಸೂರು

ತಾ|| 9-6-52

ಟೆಂಡರ್ ನೋಟೀಸ್

ಇದೇ ಮೈಸೂರು ನಗರದ ಸಂಚಾರಿ ಬಹದ್ದೂರ್ ಛತ್ರದ ೩ನೇ ಬ್ಲಾಕಿನಲ್ಲಿರುವ ಭಿಕ್ಷುಕರ ವಸತಿಗೃಹಕ್ಕೆ ಬೇಕಾಗುವ ಆಹಾರ ವಗೈರೆ ಸಾಮಾನುಗಳನ್ನು ತಾ|| 1 7 1952 ರಿಂದ 30-6 1953 ನೇ ಇಸವಿಯವರೆಗೆ ಸಪ್ಲೈ ಮಾಡತಕ್ಕ ಬಗ್ಗೆ ಸೀಲು ಮಾಡಿದ ಟೆಂಡರ್‌ಗಳನ್ನು ತಾ|| 25 6 1952 ನೇ ಬುಧವಾರ 4 30 ರಿಂದ 5 ರ ಒಳಗೆ ಸದರಿ ಭಿಕ್ಷುಕರ ಪರಿಹಾರ ಸಮಿತಿಯ ಛೇರ್‌ಮನ್‌ರವರಾದ ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತ ವಿವರಗಳನ್ನು ಸದರಿ ಛೇರ್‌ಮನ್ನರವರ ಆಫೀಸಿನಲ್ಲಿ ಪಡೆಯಬಹುದು.

ಎ ಕೃಷ್ಣಮೂರ್ತಿರಾವ್,
ಛೇರ್‌ಮನ್ನರು,
ಭಿಕ್ಷುಕರ ಪರಿಹಾರ ಸಮಿತಿ ಮೈಸೂರು

ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ರಾಮಾನುಜಾ ರಸ್ತೆಯಲ್ಲಿರುವ ೧೫ ನೇ ನಂಬರಿನ ಮುನಿಸಿಪಲ್ ಮಾದರಿ ಮನೆ—ದೀಪ, ಪ್ಲಂಬಿಂಗ್ ಮತ್ತು ಕಾಂಪೌಂಡು ಸಹಾ ಇವೆ ಬೆಲೆ ಸುಮಾರು ೫೫೦೦ ರೂ

— ವಿವರಗಳಿಗೆ

" ಸಾಧ್ವಿ " ಪತ್ರಿಕಾ ಕಛೇರಿಯಲ್ಲಿ ವಿಚಾರಿಸಿರಿ

MYSORE TRANSIT SERVICE

Excellent and Regular Goods Vehicle Service Between **MYSORE & MADRAS** in arrangement with our Agents M/s Madras-Bangalore Transport Co

Proprietors :— **THIRTHA & COMPANY,**
Clearing and Forwarding Agents
Ramavilasa Road Mysore (PHONE 547)

Edited Printed and Published by A R Nagarajan, at Sadhvi Press, D Subbiah Road Mysore

ಮಲೇರಿಯಾ ಗೆಡ್ಡೆಗಳಿಗೆ

40 ವರ್ಷಗಳಿಂದ ಪ್ರಖ್ಯಾತರಾಗಿರುವ ಮೈಸೂರು ಎಸ್ ಎಸ್ ಪಂಡಿತ್ ಅಂಡ್ ಸನ್ಸ್ ರವರ ಪಂಚಾಮೃತ, ಸ್ಪೆಷಲ್ ವಾತಾದ ಲೇಹ್ಯ ಮಂಗಧರಾಜ ತೈಲ-ಇವುಗಳನ್ನು ಉಪಯೋಗಿಸಿರಿ

ರಿಜಿಸ್ಟರ್ ನಂ 793 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧೨ ೬-೫೨ [ಸಂಚಿಕೆ ೨೬೦

ಕಾಲೇಜುಗಳ ಸ್ಥಾನದ ಹಂಚಿಕೆ ಬಗ್ಗೆ ನಿರ್ಧಾರ

ಶೃಂಗೇರಿ ಜಗದ್ಗುರುಗಳವರ ವರ್ಧಂತಿ ಮಹೋತ್ಸವ

ಶೃಂಗೇರಿ ಮಠಾಧೀಶರಾದ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಒಂದು ವಾರದಿಂದಲೂ ಬಹಿರ್ಮುಖರಾಗಿರುತ್ತಾರೆ ಅವರು ಆರೋಗ್ಯವಾಗಿರುವರು ಜಗದ್ಗುರುಗಳವರ ಸೇವಾಸಮಿತಿಯವರು ಅಲ್ಲಿ ನಡೆಸಬೇಕೆಂದಿರುವ ಅತಿರುದ್ರ ಮುಂತಾದ ಹೋಮಗಳ ವಿಷಯವನ್ನು ಸ್ವಾಮಿಗಳವರು ಕೇಳಿ ಅದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವರಲ್ಲದೆ, ಕಾರ್ತಿಕ ಮಾಸ ಶುಕ್ಲ ಪಕ್ಷದಲ್ಲಿ ವಿದ್ಯಾಶಂಕರ ರಥೋತ್ಸವವನ್ನು ನೆರವೇರಿಸಿದ ನಂತರ, ಸದರಿ ಹೋಮಾದಿಗಳನ್ನು ನಡೆಸಬಹುದೆಂದು ಅಪ್ಪಣೆ ಕೊಡಿಸಿರುವರು ಶ್ರೀ ಶ್ರೀಗಳವರ ಸಂದರ್ಶನಕ್ಕಾಗಿ ಅನೇಕ ಭಕ್ತರು ಬರುತ್ತಿರುವರು

ಪಾಕಿಸ್ತಾನದಲ್ಲಿ ಆಶ್ರಯಕ್ಕಾಗಿ ಭೂಪಟ್ಟನ ಕೋರಿಕೆ

ಪಾಕಿಸ್ತಾನಕ್ಕೆ ಅಕ್ರಮ ಪ್ರವೇಶ ಮಾಡಿ ಶಿಕ್ಷೆಗೆ ಗುರಿಯಾಗಿರುವ ಸೌರಾಷ್ಟ್ರದ ದರೋಡೆಕಾರ ಭೂಪಟ್ಟನು ಅಲ್ಲಿನ ಸರ್ಕಾರಕ್ಕೆ ಪತ್ರವೊಂದನ್ನು ಬರೆದು ತನ್ನನ್ನು ರಾಜಕೀಯ ನಿರಾಶ್ರಿತನೆಂದು ಪರಿಗಣಿಸಬೇಕೆಂದು ಕೋರಿರುವುದಾಗಿ ಗೊತ್ತಾಗಿದೆ ಸೌರಾಷ್ಟ್ರದಲ್ಲಿ ದಸ್ತಗಿರಿಯಾಗಿರುವ ಗಿರಾಸದಾರರ ವಿರೋಧವಾಗಿ ತನ್ನನ್ನು ಉಪಯೋಗಿಸಿಕೊಳ್ಳಲು ಭಾರತ ಸರ್ಕಾರದವರು ಇಚ್ಛಿಸಿದುದರಿಂದ ತಾನು ಭಾರತದಿಂದ ಪಾಕಿಸ್ತಾನಕ್ಕೆ ಓಡಿಬಂದುದಾಗಿ ಅತನು ತಿಳಿಸಿ ಪಾಕಿಸ್ತಾನವು ತನಗೆ ಆಶ್ರಯ ಕೊಡಬೇಕೆಂದು ಕೋರಿರುತ್ತಾನೆ

ಕೊರಕಲಿಗೆ ಪ್ರವಾಹ ನುಗ್ಗಿ ನಾಲ್ವರ ಮರಣ

ಪೂನಾ ಬಳಿ ಪಾಷಾರ್ ಎಂಬಲ್ಲಿ ಕಳೆದ ಭಾನುವಾರ ವಿಪರೀತ ಮಳೆ ಬಂದು ಒಂದು ಕೊರಕಲಿನಲ್ಲಿ ಪ್ರವಾಹವು ಉಕ್ಕಿ ಬಂದು, ವಿಹಾರಾರ್ಥವಾಗಿ ಹೋಗಿದ್ದ ಪೂನಾದ ನಾಲ್ಕುಮಂದಿ ಪಾರ್ಸಿಗಳು ಅದರಲ್ಲಿ ಸಿಕ್ಕಿ ಕೊಚ್ಚಿಹೋದರೆಂದು ವರದಿಯಾಗಿದೆ ಮೂವರ ಶರೀರಗಳು ದೊರಕಿವೆ ಕೊರಕಲಿನಿಂದ ಆಚೆಗೆ ತಮ್ಮ ಕಾರನ್ನು ಅವರು ತರಲೆತ್ನಿಸಿದಾಗ ಈ ಅನಾಹುತವು ಸಂಭವಿಸಿತೆಂದು ಹೇಳಲಾಗಿದೆ

ಬಡ ವಿದ್ಯಾರ್ಥಿಗಳಿಗಾಗಿ ಉಚಿತ ಭೋಜನದ ಏರ್ಪಾಡು

ಮೈಸೂರು ನಗರದಲ್ಲಿ ಓದುವ ಎಲ್ಲ ಕೋಮುಗಳ ಸುಮಾರು ೧೦೦ ಬಡ ವಿದ್ಯಾರ್ಥಿಗಳಿಗಾಗಿ ಉಚಿತ ಊಟದ ಸೌಕರ್ಯಗಳನ್ನು ಪೌರ ಸಭೆಯವರು ಪ್ರತಿ ವರ್ಷದಂತೆ ಈ ಸಾರಿಯೂ ಏರ್ಪಡಿಸಲಿರುವರು ಇದನ್ನು ಪಡೆಯಲಿಚ್ಛಿಸುವವರು ಬರುವ ತಿಂಗಳು ೧೫ ನೇ ತಾ|| ೫ ಗಂಟೆ ಒಳಗೆ ಅರ್ಜಿಗಳನ್ನು ಸಲ್ಲಿಸಬಹುದೆಂದು ತಿಳಿಸಲಾಗಿದೆ ಅವುಗಳ ನಮೂನೆಗಳನ್ನು ಪೌರಸಭಾ ಕಛೇರಿಯ ಸೂಪರಿಂಟೆಂಡೆಂಟರಿಂದ ಪಡೆಯಬಹುದು ಅಂಚೆ ಮೂಲಕ ಪಡೆಯಲಿಚ್ಛಿಸುವವರು ೨ ಆಣೆ ಸ್ಟ್ಯಾಂಪುಗಳನ್ನು ಕಳುಹಿಸಬೇಕೆಂದು ಸೂಚಿಸಲಾಗಿದೆ

ಕಾಶ್ಮೀರದಲ್ಲಿ ವಂಶ ಪಾರಂಪರ್ಯದ ರಾಜತ್ವ ವಜಾ

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದಲ್ಲಿ ವಂಶಪಾರಂಪರ್ಯ ರಾಜತ್ವವನ್ನು ವಜಾ ಮಾಡಿ ಆ ಸ್ಥಾನದಲ್ಲಿ ಪ್ರಜಾಸತ್ತಾತ್ಮಕವಾಗಿ ಆರಿಸಿ ಬರುವವರೊಬ್ಬರನ್ನು ನೇಮಿಸುವಂತೆ ಸೂಕ್ತ ನಿಬಂಧನೆಯನ್ನು ಅಲ್ಲಿನ ರಾಜ್ಯಾಂಗದಲ್ಲಿ ಅಳವಡಿಸಬೇಕೆಂದು ರಾಜ್ಯಾಂಗ ಸಭೆಯ ಮೂಲತತ್ವ ಸಮಿತಿಯು ಶಿಫಾರಸು ಮಾಡುತ್ತದೆ

ಅಟ್ಲಾಂಟಿಕ್ ಕೌನ್ಸಿಲಿಗೆ ಮತ್ತೆ ೩೦ ವರ್ಷಗಳ ಜೀವದಾನ

ಅಟ್ಲಾಂಟಿಕ್ ಕೌನ್ಸಿಲಿನ ಅವಧಿಯನ್ನು ೨೦ ವರ್ಷಗಳಿಂದ ೫೦ ವರ್ಷಗಳವರೆಗೆ ಹೆಚ್ಚಿಸಲಾಗುವುದೆಂದು ತಿಳಿದುಬಂದಿದೆ

ಹರಿಕಥೆಗಳು

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರೀ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ದಿನದಿಂದ ೧೫ ನೇ ತಾ|| ವರೆಗೆ ಪ್ರತಿಸಂಜೆ ೭ ಗಂಟೆಗೆ ಹರಿಕಥೆಗಳು ಏರ್ಪಾಡಾಗಿವೆ ಬೆಂಗಳೂರಿನ ಶ್ರೀ|| ತಿ|| ಓ ರಾಮಸ್ವಾಮಿ ನಾಯ್ಡುರವರಿಂದ ಈ ದಿನ ಚೂಡಾಮುದ್ರಿಕೆಯನ್ನು ಅಂಜನೇಯನು ಸೀತೆಗೆ ಒಪ್ಪಿಸುವುದು ಎಂಬ ವಿಷಯವಾಗಿ ಹರಿಕಥೆಯನ್ನೂ, ಅವರ ಮಕ್ಕಳು ಶ್ರೀ ಗುರುರಾಜನಾಯ್ಡುರವರಿಂದ ನಾಳೆ ಶ್ರೀ ಕೃಷ್ಣಗಾರುಡಿ, ನಾಳಿದ್ದು ರೋಹಿಣಿ ಮತ್ತು ಕಬೀರ್ ಮತ್ತು ೧೫ ನೇ ತಾ|| ಇಂದ್ರಜಿತು ಎಂಬ ಕಥೆಗಳನ್ನೂ ಏರ್ಪಡಿಸಲಾಗಿದೆ

ಅರಸೀಕೆರೆಯಲ್ಲಿ ಸಾರ್ವಜನಿಕ ಟೆಲಿಫೋನು

ಅರಸೀಕೆರೆಯ ಜನರ ಉಪಯೋಗಕ್ಕಾಗಿ ಅಲ್ಲಿನ ಅಂಚೆ ಕಛೇರಿಯಲ್ಲಿ ಒಂದು ಸಾರ್ವಜನಿಕ ಟೆಲಿಫೋನನ್ನು ಬರುವ ವರ್ಷದಿಂದ ಇಡಲು ವ್ಯವಸ್ಥೆಯಾಗುತ್ತದೆ

ಫೈನಲ್ ಆನರ್ಸ್ ಫಲಿತಾಂಶದ ಪ್ರಕಟಣೆ

ಆನರ್ಸ್ ಫೈನಲ್ ಪರೀಕ್ಷಾ ಫಲಿತಾಂಶಗಳು ಈ ತಿಂಗಳು ೧೫ ನೇ ತಾ|| ೧೧ ಗಂಟೆಗೆ ಪ್ರಕಟವಾಗುವುವು

ಕಾಲೇಜುಗಳಲ್ಲಿ ಸ್ಥಾನಗಳ ಹಂಚಿಕೆ

ಬೆಂಗಳೂರು ೧೨

ಸಂಸ್ಥಾನದ ಪಾರಿಭಾಷಿಕ ಮತ್ತು ಔದ್ಯೋಗಿಕ ಶಾಲೆಗಳ ಸ್ಥಾನಗಳ ಪೈಕಿ ಶೇಕಡ ೧೫ ರಷ್ಟು ಸ್ಥಾನಗಳನ್ನು ನಿಮ್ನ ವರ್ಗದವರಿಗೂ, ಶೇ|| ೩೫ ರಷ್ಟು ಹಿಂದುಳಿದ ಪಂಗಡಗಳವರಿಗೂ ಉಳಿದುದನ್ನು ಅರ್ಹತೆ ಪಡೆದವರಿಗೂ ಹಂಚಬೇಕೆಂದು ಸರ್ಕಾರದವರು ಸೂಚಿಸಿದ್ದಾರೆ ನಿಮ್ನ ವರ್ಗದವರ ಸ್ಥಾನಗಳು ಭರ್ತಿಯಾಗದಿದ್ದರೆ ಅವನ್ನು ಹಿಂದುಳಿದ ಪಂಗಡಗಳಿಗೆ ಕೊಡಬೇಕೆಂದು ತಿಳಿಸಲಾಗಿದೆ ಹಿಂದೆ ಸರ್ಕಾರದವರು ಶೇ|| ೧೦ ಸ್ಥಾನಗಳನ್ನು ತಮ್ಮ ನಿರ್ಧಾರಕ್ಕೆ ಇಟ್ಟುಕೊಂಡಿದ್ದುದನ್ನು ಈಗ ತೆಗೆದುಹಾಕಲಾಗಿದೆ ಪಾರಿಭಾಷಿಕ ಶಾಲೆಗಳಿಗೆ ಸೇರಿಸಬೇಕಾದರೆ ಐಚ್ಛಿಕ ವಿಷಯಗಳಲ್ಲಿ ಶೇ|| ೪೦ರಷ್ಟು ಅಂಕಗಳು ಬಂದಿರಬೇಕೆಂದು ವಿಧಿಸಲಾಗಿದೆ

ಶಾಸನ ಸಭೆಗೆ ಖಾಸಗೀ ನಿರ್ಣಯಗಳು

ಹಿರಿಯ ಶಾಸಕ ಸಭೆಯ ವಜಾ, ಮಿಡಲ್ ಸ್ಕೂಲ್ ಪರೀಕ್ಷೆಯ ರದ್ದು, ಸಂಸ್ಥಾನಾದ್ಯಂತ ಪಾನ ನಿರೋಧವನ್ನು ಜಾರಿಗೆ ತರುವುದು ಮತ್ತು ಹತೋಟಿಯನ್ನು ಪೂರ್ಣವಾಗಿ ತೆಗೆದು ಹಾಕುವುದು ಇವೇ ಮುಂತಾದ ನಿರ್ಣಯಗಳು ಈ ತಿಂಗಳು ೧೮ ರಿಂದ ಬೆಂಗಳೂರಿನಲ್ಲಿ ನಡೆಯುವ ಕಿರಿಯ ಶಾಸನ ಸಭೆಯಲ್ಲಿ ಚರ್ಚೆಗೆ ಬರಲಿವೆ

೪ ಕೋಡು ಮತ್ತು ೪ ಕಾಲುಗಳುಳ್ಳ ಶಿಶು

ಉತ್ತರ ಭಾರತದ ಅಜಾಂಗಡದ ಆಸ್ಪತ್ರೆಯಲ್ಲಿ ನೆನ್ನೆ ಬೆಳಗ್ಗೆ ಒಬ್ಬ ಹೆಂಗಸು ನಾಲ್ಕು ಕೋಡುಗಳು ಮತ್ತು ೪ ಕಾಲುಗಳುಳ್ಳ ಒಂದು ಗಂಡು ಶಿಶುವನ್ನು ಹಡೆದಳೆಂದು ವರದಿಯಾಗಿದೆ ಮಗುವಿಗೆ ಒಂದೇ ತಲೆಯಿದ್ದು, ಅದರ ಮುಂಭಾಗದಲ್ಲಿ ಎರಡು ಕಿವಿಗಳೂ ಮತ್ತು ಹಿಂಭಾಗದಲ್ಲಿ ಎರಡು ಕಣ್ಣುಗಳೂ, ಬಾಯಿ ಮತ್ತು ಮೂಗೂ ಇವೆ ಆ ಶಿಶುವನ್ನು ನೋಡಲು ಅನೇಕರು ಆಸ್ಪತ್ರೆಗೆ ಬರುತ್ತಿರುವರು

ಪರ್ಷಿಯಾ ಸರ್ಕಾರ ಉರುಳಿಸಲು ಪಿತೂರಿ

ಪರ್ಷಿಯಾದ ಪ್ರಧಾನಿ ಡಾ|| ಮುಸಾದಿಕ್‌ರವರ ಸರ್ಕಾರವನ್ನು ಉರುಳಿಸುವ ಪಿತೂರಿ ಸಂಬಂಧವಾಗಿ ೫ ಜನ ಸೈನ್ಯಾಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ ವಿಹಾರಾರ್ಥವಾಗಿ ಹೋಗಿದ್ದ ಪರ್ಷಿಯಾದ ದೊರೆಯು ಪಿತೂರಿ ವಿಷಯವನ್ನು ಕೇಳಿ ರಾಜಧಾನಿ ಟೆಹರಾನಿಗೆ ಹಿಂತಿರುಗಿರುತ್ತಾರೆ

ರೋಗ ನಿವಾರಕ ಉಷ್ಣೋದಕ,

ಅಸ್ಸಾಮಿನ ಹಿಲ್ಲಾಂಗ್ ಮತ್ತು ಸಿಬ್ಸಾಗರ್‌ಗಳ ನಡುವೆ ಒಂದು ಕಡೆ ಉದ್ಭವಿಸಿರುವ ಗಂಧಕ ವಸ್ತು ಕೂಡಿದ ಉಷ್ಣೋದಕದಲ್ಲಿ ಅನೇಕರು ಸ್ನಾನ ಮಾಡುತ್ತಿರುವರು ಚರ್ಮ ರೋಗವನ್ನು ಇದು ನಿವಾರಿಸುವುದೆಂದು ಹೇಳಲಾಗಿದೆ ಇದನ್ನು ಸೇವಿಸಿದರೆ ಉದರ ವ್ಯಾಧಿಗಳು ಗುಣವಾಗುವುವೆಂದು ಗೊತ್ತಾಗಿದೆ

ವೈದ್ಯರ ವರ್ಗಾವರ್ಗೀ

ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಯ ಡಾ|| ಎಂ ರಂಗರತ್ನನವರನ್ನು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೂ ಆ ಆಸ್ಪತ್ರೆಯ ಡಾ|| ಟಿ ಎಸ್ ಶ್ರೀನಿವಾಸಯ್ಯನವರನ್ನು ಮೆಗ್ಗಾನ್ ಆಸ್ಪತ್ರೆಗೂ ವರ್ಗಾಯಿಸಲಾಗಿದೆ

ಮುಮ್ಮಡಿ ಕೃಷ್ಣರಾಜ ಒಡೆಯರ ವರ್ಧಂತಿ

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಜಯಂತ್ಯುತ್ಸವವು ಬರುವ ತಿಂಗಳು ೯ನೇ ತಾರೀಖು ಬುಧವಾರ ಸಂಜೆ ೬ ಘಂಟೆಗೆ ರಾಜಧಾನಿಯ ರಂಗಾಚಾರ್ಲು ಪುರಭವನದಲ್ಲಿ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಡಾ|| ಬಿ ಎಲ್ ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ಜರುಗುವುದು ಸರ್ವರಿಗೂ ಆಹ್ವಾನವಿರುವುದಾಗಿ ವ್ಯವಸ್ಥಾಪಕರಾದ ಶ್ರೀ ಎಚ್ ಕಿ ದೇವರಾಜೇ ಅರಸಿನವರು ತಿಳಿಸಿರುತ್ತಾರೆ

ಆಹಾರದ ಹತೋಟಿ ರದ್ದಿನ ಬಗ್ಗೆ ಅಧಿಕಾರಿಗಳೊಡನೆ ಆಲೋಚನೆ

ಸಂಸ್ಥಾನದಲ್ಲಿ ಆಹಾರದ ಹತೋಟಿಯನ್ನು ಪೂರ್ಣವಾಗಿ ರದ್ದುಗೊಳಿಸುವ ಬಗ್ಗೆ ನೆನ್ನೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಕೆ ಹನುಮಂತಯ್ಯನವರು ಜಿಲ್ಲಾಧಿಕಾರಿಗಳೊಡನೆ ಚರ್ಚಿಸಿದರು ಇತರ ಸಚಿವರುಗಳೂ ಮತ್ತು ಆಹಾರ ಶಾಖಾ ಕಾರ್ಯದರ್ಶಿಯೂ ಬಂದಿದ್ದರು ಹತೋಟಿ ರದ್ದಿನ ಬಗ್ಗೆ 'ನಿಧಾನವಾಗಿ ಹೋಗಬೇಕೆಂದು' ಕೆಲವು ಅಧಿಕಾರಿಗಳು ಸಲಹೆ ಮಾಡಿದರೆಂದು ಹೇಳಲಾಗಿದೆ ಸಭೆಯಲ್ಲಿ ಯಾವ ನಿರ್ಧಾರವನ್ನೂ ಕೈಗೊಳ್ಳಲಿಲ್ಲ

ಈಗಿನಂತೆಯೇ ಮಾರಾಟ ತೆರಿಗೆ ಮುಂದುವರಿಯಲು ಸಲಹೆ

ಸಂಸ್ಥಾನದಲ್ಲಿ ಮಾರಾಟ ತೆರಿಗೆಯ ವಿಧಾನವನ್ನು ಕುರಿತು ಪರಿಶೀಲನೆ ನಡೆಸಲು ಏರ್ಪಾಡಾದ ಸಮಿತಿಯು ಶಿಫಾರಸಿನಂತೆ ಈಗಿರುವಂತೆ ಹಲವಾರು ಕಡೆ ತೆರಿಗೆ ವಸೂಲು ಮಾಡುವ ಪದ್ಧತಿಯೇ ಅಲ್ಪ ಬದಲಾವಣೆಗಳೊಡನೆ ಮುಂದುವರಿಯಬೇಕೆಂದು ಸೂಚಿಸಲಾಗಿದೆ ಸಮಿತಿಯ ವರದಿಯು ಸರ್ಕಾರದ ಪರ್ಯಾಲೋಚನೆಯಲ್ಲಿರುವುದು

ರೇಷನ್ ಡಿಪೋಗಳಲ್ಲಿ ಧಾನ್ಯ ಕೊಳ್ಳುವವರು ಕಡಿಮೆ

ಮೈಸೂರು ೧೧

ರಾಜಧಾನಿಯ ಅನೇಕ ರೇಷನ್ ಡಿಪೋಗಳಲ್ಲಿ ಕಳೆದ ತಿಂಗಳು ಆಹಾರ ಧಾನ್ಯಗಳನ್ನು ಕೊಳ್ಳುವುದು ಕಡಿಮೆಯಾಗಿ ಶೇಕಡ ೩೩ ರಷ್ಟು ಅಕ್ಕಿ ಮತ್ತು ಶೇಕಡ ೫೦ ರಷ್ಟು ಗೋಧಿಯ ಮಾರಾಟವಾಗದೆ ಉಳಿದಿರುವುದಾಗಿ ಹೇಳಲಾಗಿದೆ.

ಹೈಸ್ಕೂಲುಗಳಲ್ಲಿ ಪರೀಕ್ಷಾ ಫಲಿತಾಂಶ

ರಾಜಧಾನಿಯ ಶಾರದಾ ವಿಲಾಸ ಹೈಸ್ಕೂಲಿನ ೩೩೧ ಮಂದಿ ವಿದ್ಯಾರ್ಥಿಗಳು ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಗೆ ಕುಳಿತು ತೇರ್ಗಡೆ ಹೊಂದಿರುವ ೧೫೭ ವಿದ್ಯಾರ್ಥಿಗಳ ಪೈಕಿ ೧೧೩ ಜನರಿಗೆ ಎಸ್ ಎಸ್ ಎಲ್ ಸಿ ದೊರೆತು ೪೯ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವರು. ವಿದ್ಯಾವರ್ಧಕ ಹೈಸ್ಕೂಲಿನ ೩೬ ವಿದ್ಯಾರ್ಥಿಗಳಲ್ಲಿ ತೇರ್ಗಡೆಯಾದ ೩೩ ಮಂದಿ ಪೈಕಿ ೧೬ ಜನರಿಗೆ ಎಸ್ ಎಸ್ ಎಲ್ ಸಿ ದೊರೆತಿರುವುದೆಂದೂ ತಿಳಿದುಬಂದಿದೆ. ಮಹಾಜನ ಹೈಸ್ಕೂಲಿನ ೭೫ ಮಂದಿ ಪೈಕಿ, ೪೮ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು. ಈ ಪೈಕಿ ೪೬ ಜನರಿಗೆ ಎಸ್ ಎಸ್ ಎಲ್ ಸಿ ಬಂದ ೯ ಮಂದಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾಗಿರುವರು. ೬ ಮಂದಿಗೆ ಎಸ್ ಎಲ್ ಸಿ ದೊರೆತಿದೆ.

ನಗರಕ್ಕೆ ೬೦೦ ಹೆಚ್ಚು ಟೆಲಿಫೋನುಗಳು

ಮೈಸೂರು ನಗರದಲ್ಲಿ ಹಾಕಲು ಹೆಚ್ಚಾಗಿ ೬೦೦ ಮತ್ತು ಬೆಂಗಳೂರಿನಲ್ಲಿ ಹಲವು [illegible] ಟೆಲಿಫೋನುಗಳನ್ನು ಭಾರತ ಸರ್ಕಾರದವರು ಕೊಡಲಿರುವರೆಂದು ತಿಳಿದುಬಂದಿದೆ.

ನ್ಯಾಯಮೂರ್ತಿಯಲ್ಲಿ ಪ್ರತಿಬಂಧಕಾಜ್ಞೆ

ನ್ಯಾಯಮೂರ್ತಿಯ ಹಲವು ಸಂಗಡಿಗರಲ್ಲಿ ಮನಸ್ತಾಪವುಂಟಾಗಿರುವುದರಿಂದ ಈ ದಿನದಲ್ಲಿ ಈ ತಿಂಗಳು ೧೧ ರಿಂದ ಒಂದು ತಿಂಗಳು ಪೂರ್ತಿ ಮೆರವಣಿಗೆ, ಸಭೆ ಮುಂತಾದುವುಗಳನ್ನು ಅಮಲ್ದಾರರು ಪ್ರತಿಬಂಧಿಸಿರುತ್ತಾರೆ.

ಮನೆ ಕುಸಿದು ಬಿತ್ತು

ರಾಜಧಾನಿಯ [illegible] ಉತ್ತರ ಭಾಗದ ಗಲ್ಲಿಯಲ್ಲಿರುವ ಮಾರಮ್ಮನ ಗುಡಿ ಬಳಿ ಮಹಡಿ ಮನೆಯೊಂದು ಇದ್ದಕ್ಕಿದ್ದಂತೆಯೇ ನೆನ್ನೆ ಬೆಳಗ್ಗೆ ಪೂರ್ತಿಯಾಗಿ ಕುಸಿದು ಬಿತ್ತು. ಮನೆಯಲ್ಲಿ ಬಾಡಿಗೆದಾರರೊಬ್ಬರು ವಾಸವಾಗಿದ್ದರು. ಅವರು [illegible] ಸಿಕ್ಕಿಕೊಂಡ ಒಬ್ಬ ಹೆಂಗಸನ್ನು ಕಷ್ಟಪಟ್ಟು ಹೊರಕ್ಕೆ ತೆಗೆಯಲಾಯಿತು. ಅದೃಷ್ಟವಶಾತ್ ಮನೆಯಲ್ಲಿ ಇನ್ಯಾರಿಗೂ ಅಪಾಯವಾಗಲಿಲ್ಲ.

ವಿದ್ಯಾವರ್ಧಕ ಹೈಸ್ಕೂಲು

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ವಿದ್ಯಾವರ್ಧಕ ಹೈಸ್ಕೂಲಿನಲ್ಲಿ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮ ತರಗತಿಗಳು [illegible] ಕನ್ನಡ [illegible] ಸ್ಕೂಲಿನಲ್ಲಿ [illegible] ಪ್ರಥಮ [illegible] ಲೆಯಲ್ಲಿ ಜೂನ್ [illegible] ಟ್ರಾನ್ಸ್‌ಫರ್ ಸರ್ಟಿಫಿಕೇಟು ಸಮೇತ ಈ ತಿಂಗಳ ೨೦ ನೆ ತಾರೀಖಿನೊಳಗೆ [illegible] ಗಳನ್ನು ಹಾಕಿಕೊಳ್ಳಬಹುದೆಂದು ತಿಳಿಸಲಾಗಿದೆ.

ಖಜಾನೆ ಗುಮಾಸ್ತನಿಂದ ೧ ಲಕ್ಷ ರೂ. ಅಪಹಾರವೇ?

ರಾಜಾಸ್ಥಾನದಲ್ಲಿರುವ ಧೋಲ್‌ಪುರದ ಸರ್ಕಾರಿ ಖಜಾನೆಯ ೧ ಲಕ್ಷ ರೂ. ಗಳನ್ನು ಅಲ್ಲಿನ ಗುಮಾಸ್ತ ಹಾರಕಚಂದ್ [illegible] ಎಂಬುವರು ಅಪಹರಿಸಿರುವರೆಂದು ಕಲ್ಪಿಸಲ್ಪಟ್ಟಿದ್ದು ನೋಟುವಾರು ಪೋಲೀಸರು ಅವರನ್ನೂ ಅವರ ಪತ್ನಿಯನ್ನೂ ದಸ್ತಗಿರಿ ಮಾಡಿರುತ್ತಾರೆ. ಅಕೆಯನ್ನು ಜಾಮೀನಿನ ಮೇಲೆ ಬಿಡಲಾಗಿದೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ಆಲ್ ಎಸ್ ಕೇಶವಮೂರ್ತಿ ವೀಣೆ ಮಧ್ಯಾಹ್ನ ೧-೩೦ ದಿಲ್ಲಿಯಿಂದ [illegible] ಕಲಾವಿದರು ಸಂಜೆ ೫-೫೦ ಮತ್ತು ೭-೩೦ ರತ್ನಮ್ಮ ಕೃಷ್ಣಮೂರ್ತಿ ಸಂಗೀತ ೭-೧೦ ಗಾನವಿಹಾರ ೭ ಮೋಹನ ಕುಮಾರಿ ಹಿಂದೀ ಗೀತೆ ೮ ಗೀತಾ ಮಾಲಾ ೯-೧೫ ಚಿತ್ರಸಂಗೀತ ೯-೩೦ ಆರ್ಕೆಸ್ಟ್ರಾ

ಪ್ರಭಾ ✻ ೩ ನೇ ಸುತ್ತು ಕಡೇ ವಾರ 13 6 52 ರಿಂದ

[illegible]

ಅಮರ ಭೂಪಾಳಿ

[illegible]

[illegible] ಆಂಧ್ರ ಯಾ [illegible]

MORNING SHOWS

From 13 6 52 for 3 days

BLANCHE FURY

(Technicolour)

ಭಾರತ ಮತ್ತು ಪಾಕೀಸ್ತಾನಗಳಿಗೆ ಸಂಚಾರ ಒಪ್ಪಂದ

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಸಂಚಾರ ವ್ಯವಸ್ಥೆ ಯನ್ನು ಕಡಿತಗೊಳಿಸಿದ [illegible] ಒಪ್ಪಂದವು ಎರಡು ದೇಶಗಳಿಗೂ ಆಗಿರುವುದೆಂದು ವರದಿಯಾಗಿದೆ. ಅದು ಸೆಪ್ಟೆಂಬರ್ ತಿಂಗಳಿಂದ ಜಾರಿಗೆ ಬರುವುದೆಂದು ನಂಬಲಾಗಿದೆ.

ವನಸ್ಪತಿ ತುಪ್ಪ ಹಾನಿಕರವಲ್ಲವೆಂದು ಪಂಡಿತ ನೆಹ್ರೂ

ವನಸ್ಪತಿ ತುಪ್ಪಗಳ ಉಪಯೋಗವು ಆರೋಗ್ಯಕ್ಕೆ ಹಾನಿಕರವಲ್ಲವೆಂದು ವೈಜ್ಞಾನಿಕ ಪರೀಕ್ಷೆಗಳು ಮತ್ತು ಸಂಶೋಧನೆಗಳಿಂದ ಧೃಢಪಟ್ಟಿರುವುದಾಗಿಯೂ, ಅದನ್ನು ನಿರೋಧಿಸಬೇಕಾಗಿಲ್ಲವೆಂದೂ ಪ್ರಧಾನಿ ನೆಹರೂರವರು ತಿಳಿಸಿರುವರು.

ಚಾಮುಂಡೇಶ್ವರಿ

ಟಾಕೀಸ್

13-6-52 ರಿಂದ ಅನಭಿರಿತವಾದ 3 ನೇಯ ವಾರ

ಧರ್ಮದೇವತ

ತೆಲುಗು

ಪಾತ್ರ [illegible] ನಾಗೇಶ್ವರರಾವು, [illegible] ಮುಕ್ಕಾಮಲ ಶ್ರೀಕೃಷ್ಣ, ರೇಲಂಗಿ ಮುಂತಾದವರು

SRI GAYATHRI

TALKIES

On 12th & 13th

STORM WARNING

Starring Steve Cochran, Ronalda Reagan

From 14-6-52

Paramount's Powerful Masterpiece

TO WHOM THE BELL TOLLS

(In Glorious color)

Starring - Garry Cooper and Ingrid Bergman

THE MODEL TUTORIAL INSTITUTE

D Banumaiah's School Buildings Mysore

The Institute will conduct classes for the Supplementary S S L C Public Examination of 1952. Admissions will be received between 11 A.M. and 5 P.M. on working days. Classes start working from Monday, 16th June 1952. Further particulars can be had from the office of the Organiser during working hours.

MYSORE, 12 6 1952 — P. Seshagiri Rao, Organiser

SRI GANESH

TALKIES

From 13-6-52

ROCK ISLAND TRAIL

(In True color A Republic Production)

A big Story of American Era

From 15-6-52

TRAIL OF ROBINHOOD

[In True color]

THE CENTRAL COLLEGE OF COMMERCE

Vanivilas Market Buildings

Admissions to Diploma Courses in Commerce and Stenography, Typewriting and Shorthand, will be received on all working days. Reserve your seats immediately.

ರಾಜಕಮಲ್ ಟಾಕೀಸ್, ಮೈಸೂರು

13-6-52 ರಿಂದ ಅನೋಖ ಪ್ರಾರಂಭ ಪ್ರತಿ ದಿನ 3 ಆಟಗಳು

ಮ್ಯಾಟಿನಿ 2 ಗಂಟೆಗೆ 1ನೇ ಆಟ 6-15ಘಂ 2ನೇ ಆಟ 10ಘಂಟೆಗೆ

✻ (ತಮಿಳು) **ನನ್ನ ತಂಗಿ** (ತಮಿಳು) ✻

ಭೂಮಿಕೆಯಲ್ಲಿ — ಮಾಧುರಿದೇವಿ, ಎಂ ಜಿ ರಾಮಚಂದ್ರನ್, ಡಿ ಎಸ್ ಗೋವಿಂದನ್, ಮುಂತಾದವರು

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

12-6 52 ರಿಂದ : ಅನೋಖ 7 ನೇ ವಾರ

ಪಕ್ಷಿರಾಜಾರವರ ತಮಿಳು ಚಿತ್ರ

✻ ಕಾಂಚನಾ ✻

14 6-52 ನೇ ಶನಿವಾರದಿಂದ

ಜೆಮಿನಿಯವರ **ಬಾಲನಾಗಮ್ಮ**

THE CITY TUTORIAL COLLEGE

(Near V V Market Mysore)

§ S S L C. Coaching Classes

(For Sept 52 & March 53)

§ INTER Eng, P C M, C B Z & Commerce

§ B Sc. — English and P C M.

ಮಿಡಲ್ ಸ್ಕೂಲಿನ ಎಲ್ಲಾ ತರಗತಿಗಳೂ ನಡೆಯುತ್ತಿವೆ.

Edited, Printed and Published by A R Nagarajan at Sadhvi Press, D Subbiah Road, Mysore

ಸಂಪುಟ ೧೧] ಶುಕ್ರವಾರ ೧೬-೬-೫೩ [ಸಂಚಿಕೆ ೫೬೦

ಚೀಣದ ಮೇಲೆ ಬಾಂಬು ಹಾಕಲು ಬ್ರಿಟನ್ನಿಗೆ ಸಲಹೆ

ಧಾನ್ಯದ ಮಾರಾಟ, ಸಾಗಾಣಿ ನಿರ್ಬಂಧ ತೊಲಗಬೇಕು

ಸರ್ಕಾರಕ್ಕೆ ಪೌರಸಭೆಯ ಸೂಚನೆ

ಮೈಸೂರು ೧೬

ಮದ್ರಾಸಿನಲ್ಲಿ ಆಹಾರದ ಮೇಲಿನ ಕಂಟ್ರೋಲ್ ಮತ್ತು ನಿರ್ಬಂಧಗಳನ್ನು ತೆಗೆದಿರುವ ಬಗ್ಗೆ ಉಂಟಾಗಿರುವ ಪರಿಸ್ಥಿತಿಯನ್ನು ಗಮನಿಸಿ ಮೈಸೂರು ಸಂಸ್ಥಾನದಲ್ಲೂ ಸಹ ಆಹಾರದ ಮೇಲೆ ಇರುವ ಕಂಟ್ರೋಲ್ ತೆಗೆಯುವ ಬಗ್ಗೆ ಸರ್ಕಾರದವರು ಪೌರಸಭೆಗಳ ಅಭಿಪ್ರಾಯವನ್ನು ಕೇಳಿದ ಸಂಬಂಧವಾಗಿ ನೆನ್ನೆ ಇಲ್ಲಿನ ಪೌರಸಭೆಯ ವಿಶೇಷ ಸಭೆಯು ಅಧಿವೇಶನವು ನಡೆಯಿತು

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಪಿ. ಸೀತಾರಾಮಯ್ಯನವರು ನಿರ್ಣಯ ವೊಂದನ್ನು ಮಂಡಿಸಿ, ಆಹಾರಧಾನ್ಯದ ಸಾಗಾಣಿಕೆ ಮತ್ತು ಮಾರಾಟಗಳ ಮೇಲಿನ ಪ್ರತಿಬಂಧಗಳನ್ನು ತೆಗೆಯಬೇಕೆಂದೂ, ಆದರೆ ರೇಷನ್ ಕಾರ್ಡುದಾರರಿಗೆ ಫೇರ್ ಪ್ರೈಸ್ ಡಿಪೋಗಳ ಮೂಲಕ ಧಾನ್ಯದ ಮಾರಾಟವು ನಡೆಯಬೇಕೆಂದೂ ಸೂಚಿಸಿದರು. ಶ್ರೀ ಚೌಡಯ್ಯನವರು ನಿರ್ಣಯವನ್ನು ಅನುಮೋದಿಸಿದರು

ಜ|| ಬಿ. ಸಾರ್ ಸೂರ್ ಹುಸೇನರವರು ಭಾಷಣಮಾಡಿ ಸರ್ಕಾರದ ಮತ್ತು ಸ ತೋಟಗಳ ಕದ್ದಾಪಚಿ ಮುಂದೆ ಉಂಟಾಗಲಿರುವ ತೊಂದರೆಗಳನ್ನು ವಿವರಿಸಿ, ಲಾಭದ ಆಸೆಯಿಂದ ವರ್ತಕರು ಧಾನ್ಯ ಸಂಗ್ರಹಿಸುವರೆಂದು ಹೇಳಿದರು ಸರ್ಕಾರದವರಿಗೆ ಸ್ವಲ್ಪ ಹಣವು ನಷ್ಟವಾದರೂ ಡಿಪೋಗಳ ಮೂಲಕವೇ ಜನರಿಗೆ ಆಹಾರ ದೊರೆಯಬೇಕೆಂದೂ ತಿಳಿಸಿದರು

ಶ್ರೀಗಳಾದ ಟಿ ಎಸ್ ರಾಜಗೋಪಾಲಯ್ಯಂಗಾರ್, ಬಿ. ಕೆ. ರಾಮಕೃಷ್ಣಯ್ಯ, ಪಿ ಡಿ ಕೃಷ್ಣಸ್ವಾಮಿ, ಬಿ ಜಿ ದಾಸ್ ಅವರು ಮಾತನಾಡಿ, ಪಡಿತರವು ರದ್ದಾಗಿ ಜನರಿಗೆ ನಿರ್ಬಂಧವಿಲ್ಲದೆ ಆಹಾರ ದೊರೆಯುವಂತಾಗಬೇಕೆಂದು ಸೂಚಿಸಿದರು

ಶ್ರೀ ಎ ವೆಂಕಟೇಶಯ್ಯನವರು ನಿರ್ಣಯಕ್ಕೆ ತಿದ್ದುಪಡಿ ತಂದು ಆಹಾರ ಧಾನ್ಯವು ಬಲವಂತವಾಗಿ ಮಾರಾಟವಾಗಬೇಕೆಂದೂ, ಸರ್ಕಾರದವರು ಸಾಕಾದಷ್ಟು ಧಾನ್ಯವನ್ನು ಇಟ್ಟುಕೊಂಡು ಜನರನ್ನು ಫೇರ್ ಪ್ರೈಸ್ ಡಿಪೋ ಮೂಲಕ ಹಂಚಬೇಕೆಂದೂ ತಿಳಿಸಿದರು ತಿದ್ದುಪಡಿಯೊಡನೆ ನಿರ್ಣಯವು ಅಂಗೀಕೃತವಾಯಿತು

ದೊಡ್ಡ ಅಂಗಡಿಯ ಪ್ರಾರಂಭ

ರಾಜಧಾನಿಯ ಡಿ ಷಣ್ಮುಖಯ್ಯ ರಸ್ತೆಯಲ್ಲಿ ನೆನ್ನೆ ಅಯ್ಯಂಗಾರ್ಸ್ ಕೃಷ್ಣ ದೊಡ್ಡ ಅಂಗಡಿಯ ಪ್ರಾರಂಭೋತ್ಸವ ವು ನಡೆಯಿತು. ಮಾಲೀಕರಾದ ಶ್ರೀ ಕೆ ಆರ್ ಕೃಷ್ಣಸ್ವಾಮಿಅಯ್ಯಂಗಾರ್ಯರು ಆಭ್ಯಾಗತರನ್ನು ಸ್ವಾಗತಿಸಿದರು

ಸಂಗೀತ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಕೃಷ್ಣಜಯಂತಿ ಉತ್ಸವ ನಾಳೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಅ|| ಜ|| ವಿ|| ಎಸ್ ಎ ಮುರಳಿ ಯವ್ರತರವರ ಗಾಯನ ಸಹಿತ ಸ್ತುತ ವಾದ್ಯಗಳೊಡನೆ ಏರ್ಪಾಡಾಗಿದೆ

ಹೈದರಾಬಾದು ಬಜೆಟ್ಟಿನಲ್ಲಿ ೪ ಕೋಟಿ ರೂ. ಖೋತಾ

೨೫-೫೨ ನೇ ಸಾಲಿಗೆ ಹೈದರಾಬಾದಿನ ಆಯವ್ಯಯದಲ್ಲಿ ೩. ೦೧ ಕೋಟಿ ರೂ. ಗಳ ಖೋತಾವಾಗುವುದೆಂದು ಅಲ್ಲಿನ ಹಣಕಾಸಿನ ಮಂತ್ರಿ, ಡಾ|| ಜಿ ಎಸ್ ಮೇಲ್ಕೋಟೆಯವರು ತಿಳಿಸಿದ್ದಾರೆ ಇದನ್ನು ಸರಿದೂಗಿಸಲು ಕೆಲವು ಪದಾರ್ಥಗಳ ಮೇಲಿನ ಮಾರಾಟ ತೆರಿಗೆಯನ್ನು ಹೆಚ್ಚಿಸುವುದು ಮತ್ತು ಕಚೇರಿಯು, ತೂಗಿ ನೋಡುವ ಯಂತ್ರಗಳನ್ನು ಹೊಸ ಯಂತ್ರ ಅಧಿಕಾರಿಗಳ ಕಂಪಾಯವನ್ನು ಏರಿಸುವುದು ಇವೇ ಮುಂತಾದ ಕ್ರಮಗಳು ಸರ್ಕಾರದ ಪರ್ಯಾಲೋಚನೆಯಲ್ಲಿ ದೆಯೆಂದು ಹೇಳಲಾಗಿದೆ

ನೀರಿನ ಟ್ಯಾಂಕು ಕುಸಿದು ಹಾಸ್ಟೆಲ್ ಮರಣ

ವೆಲ್ಲೂರಿನ ಬಳಿ ಅರಿಯ್ಯಾಕೂರು ಎಂಬ ಹಳ್ಳಿಯಲ್ಲಿ ಇತ್ತೀಚೆಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದ್ದ ಟ್ಯಾಂಕೊಂದು ನೊಚ್ಚ ಕುಸಿದುಬಿದ್ದು, ೮ ಜನರು ಮಡಿದು ೧೫ ಮಂದಿಗೆ ತೀವ್ರ ಗಾಯಗಳಾಗಿವೆ ಕುಸಿಯುವ ಕ್ಷಣದಲ್ಲಿ ಟ್ಯಾಂಕಿನ ಕೆಳಭಾಗದಲ್ಲಿ ಜನರು ನಿಂತಿದ್ದಾಗ ಇದ್ದಕ್ಕಿದ್ದಂತೆಯೇ ಅದರ ನಾಲ್ಕು ಗೋಡೆಗಳೂ ಉರುಳಿಕೊಂಡು ಅಪಘಾತವು ಸಂಭವಿಸಿತು ಗಾಯವಾದವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ

ಯುಕಾಂಡೂರು ವಿದ್ಯಾರ್ಥಿ ನಿಧಿ

ಯುಕಾಂಡೂರು ವಿದ್ಯಾರ್ಥಿ ನಿಧಿಗೆ ಜಹಗೀರ್ದಾರ್ ರವರ ಫಂಡಿನಿಂದ ಸಾಲಿಯಾನ ಕೊಡುತ್ತಿರುವ ೫೦೦ ರೂ ಹಂಚಿಕೆ ನೊಬಲಗನ್ನು ಇನ್ನು ಅವರ ಗಳ ಕಾಲ ಮುಂದುವರಿಸಬಹುದೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ.

ಅಂತರ್ಕಾಲೇಜು ಚರ್ಚಾಸ್ಪರ್ಧೆ

ಬೆಂಗ್ಳೂ ೬ ೩೦ ಪಕ್ಷಗಳಲ್ಲಿ ಮಧ್ಯಾಹ್ನ ೧ ೩೦ ಗಂಟೆಗೆ ಶ್ರೀ ೩ ಬಾಲಗಂಗಾಧರ್ ಸಂಜೆ ೫-೩೦ ಮತ್ತು ೭ ಆ ಶ್ರೀ ಕೆ ಶ್ರೀನಿವಾಸಮೂರ್ತಿ ವೀಣಾ ವಾದನ ೬ ೧೧ ಚಿತ್ರಾಕ್ಷೀ ೭-೩೦ ಪ ಪ್ರಾಸಂಗಿಕ ಎ ಎಲ್. ಅಶ್ವತ್ಥ, ಸತ್ಯಗಾಂಭೀರ್ಯರ ೯-೧೫ ಗಾಯನ ೯-೩೦ ವರ್ತಮಾನ

ಸನ್ಯಾಸಿ ವೇಷಧಾರಿಯಿಂದ ೧೦ ಸಾವಿರ ರೂ. ಮೋಸ

ಅಶ್ವತ್ಥಾನಂದ ವೇಷದ ಯೋಗಿಯೆಂಬ ಹೆಸರಿನ ಸಾಧುವೊಬ್ಬನು ಕೋಲಾರದ ಒಂದು ಹೋಟೇಲಿನಲ್ಲಿ ೧|| ತಿಂಗಳಿಂದಲೂ ಇದ್ದು, ಅಲ್ಲಿನ ಹಲವರೊಡನೆ ಸೇರಿಕೊಂಡು ಊರಿನ ಮತ್ತು ಸುತ್ತಮುತ್ತಲ ಜನರಿಂದ ೫||| ರೂ ಗಳ ೧೭ ಸಾವಿರ ರೂ ಬರುತ್ತದೆಂದು ನಂಬಿಸಿ, ಸುಮಾರು ೧೦ ಸಾವಿರ ರೂ ಗಳನ್ನು ಶೇಖರಿಸಿ ಸಂಗಡಿಗರೊಡನೆ ಪರಾರಿಯಾಗಿರುವನೆಂದು ವರದಿಯಾಗಿದೆ ಆ ಅ ಸಡೆದು ಕೊಂಡಿರುವವರಲ್ಲಿ ಹೆಂಗಸರು, ಬಡವರು, ವರ್ತಕರು, ನೌಕರರು ಮತ್ತು ವಕೀಲರು ಇರುವರು ಆ ಯೋಗಿಯ ಪತ್ತೆ ಬಂದಾಗಿರುವುದಾಗಿ ಗೊತ್ತಾಗಿದೆ

೧೫ ಮೈಲಿ ಎತ್ತರದಲ್ಲಿ ವಿಮಾನದ ಹಾರಾಟ

ಅ ಮೆ ರಿ ಕಾ ನೌಕಾಪಡೆಯ ಹಾರುವಿಮಾನ ಚಾಲಕನಾದ ಮುಡಾಕು ೧೫ ಮೈಲಿಯಷ್ಟು ಎತ್ತರಕ್ಕೆ ವಿಮಾನವನ್ನು ಕೊಂಡೊಯ್ದು ಹೊಸ ದಾಖಲೆಯನ್ನು ಸ್ಥಾಪಿಸಿದ್ದಾನೆ. ಆತನು ೭೯ ಸಾವಿರ ಅಡಿಗಿಂತಲೂ ಹೆಚ್ಚು ಎತ್ತರಕ್ಕೆ ಹೋಗಿದ್ದನೆಂದು ಹೇಳಲಾಗಿದೆ

ಮಂಗಳವಾರದಿಂದ ಜಯಪ್ರಕಾಶರ ಉಪವಾಸ

ಬರುವ ಮಂಗಳವಾರದಿಂದ ಸಮಾಜವಾದಿ ಪಕ್ಷದ ನಾಯಕರಾದ ಜಯಪ್ರಕಾಶ ನಾರಾಯಣರವರು ತಮ್ಮ ೨೧ ದಿನಗಳ ಉಪವಾಸವನ್ನು ಪೂನಾದಲ್ಲಿ ಪ್ರಾರಂಭಿಸುವರು

ಕೋಲಾರ ಜಿಲ್ಲೆಗೆ ಕ್ಷಾಮ ಪರಿಹಾರ ಲಕ್ಷ ರೂ. ಸಹಾಯ

ಸಂಸ್ಥಾನದ ಕ್ಷಾಮ ಪೀಡಿತ ಪ್ರದೇಶಗಳಿಗೆ ಒದಗಿಸಿರುವ ಪರಿಹಾರ ದ್ರವ್ಯದಲ್ಲಿ ಕೋಲಾರ ಜಿಲ್ಲೆಗೆ ಪ್ರತಿ: ಐದು ಲಕ್ಷ ರೂ.ಗಳನ್ನು ಸರ್ಕಾರದವರು ಒಪ್ಪಿಸುವುದಾಗಿ ವರದಿಯಾಗಿದೆ

ರಾಜಧಾನಿಯ ಮಹಾರಾಣಿ ಕಾಲೇಜಿನ ಜೂನಿಯರ್ ಇಂಟರ್ ತರಗತಿಗೆ ೪ ಸೀಟುಗಳಿದ್ದ ೭೭ ವಿದ್ಯಾರ್ಥಿನಿಯರ ಪೈಕಿ ಇಲ ಮಂದಿ ಸೇರಿಸಲ್ಪಟ್ಟಾಗಿ ೯ ಜನರಿಗೆ ಪ್ರವೇಶ ದೊರೆಯದೆ ಹೋಗಿದೆ

ಚೀಣಾ ಮೇಲೆ ಬಾಂಬು ಹಾಕಲು ಬ್ರಿಟನ್ನಿಗೆ ಸಲಹೆ

ಕೊರಿಯದ ಪರಿಸ್ಥಿತಿಯನ್ನು ೩ ಸ್ಥಗಿತಗೊಳಿಸುವ ಬಗ್ಗೆ ಕೊರಿಯಾ ಜನರಿಗೆ ತಿಳಿಸುವ ಬ್ರಿಟನ್ನಿನ ಪ್ರಧಾನ ಮಂತ್ರಿ ಚರ್ಚಿಲ್ ಅವರ ಸೂಚನೆಯಂತೆ, ಕೊರಿಯಾದಲ್ಲಿ ಕಮ್ಯೂನಿಸ್ಟರ ಪ್ರಭಾವ ಯುದ್ಧದ ಅಂಗವಾಗಿ ಧಾಳಿ ಆರಂಭಿಸಿದರೆ, ಚೀಣದ ಮೇಲೆ ಬಾಂಬು ಹಾಕಬೇಕೆಂದು ಬ್ರಿಟನ್ನಿಗೆ ಸಲಹೆ ಮಾಡಲಾಗಿದೆಯೆಂದು ವರದಿಯಾಗಿದೆ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಾರ್ಷಲ್ ಅವರಿಗೂ ಈ ಬಗ್ಗೆ ಒಪ್ಪಿಗೆಯಿರುವುದೆಂದೂ ತಿಳಿದು ಬಂದಿದೆ

ವಿಶ್ವ ಸಂಸ್ಥೆಗೆ ನೆಹರೂರವರ ಎಚ್ಚರಿಕೆ

ಟ್ಯುನೀಸಿಯಾ ದೇಶದ ಪ್ರಶ್ನೆಯನ್ನು ವಿಶ್ವ ಸಂಸ್ಥೆಯ ಮುಂದೆ ತರಲು ಏಷ್ಯಾ ಮತ್ತು ಆಫ್ರಿಕಾ ದೇಶಗಳು ಒಟ್ಟಾಗಿ ಪ್ರಯತ್ನ ಪಟ್ಟರೂ ಹಿರಿಯ ರಾಷ್ಟ್ರವೊಂದು ಅಲಕ್ಷಿಸುವುದೆಂಬ ಕಾರಣಕ್ಕಾಗಿ ಅದಕ್ಕೆ ಅವಕಾಶ ಕೊಡದಿರುವುದನ್ನು ಉಗ್ರವಾಗಿ ನೆಹರೂರವರು ಟೀಕಿಸಿದ್ದಾರೆ ವಿಶ್ವ ಸಂಸ್ಥೆಯಿಂದ ಈ ರಾಷ್ಟ್ರಗಳು ದೂರಬಂದು ತಮ್ಮ ತಮ್ಮ ಭಾವನೆಗಳನ್ನು ಮಾತ್ರ ರೂಪಿಸಿಕೊಳ್ಳುವ ಕಾಲವು ಬರಬಹುದೆಂದು ಅವರು ಎಚ್ಚರಿಸಿದ್ದಾರೆ ಅಟ್ಲಾಂಟಿಕ್ ಛಾರ್ಟರ್ ಅವಧಿಯನ್ನು ೩೦ ರಿಂದ ೫೦ ವರ್ಷಗಳಿಗೆ ಹೆಚ್ಚಿಸುವುದನ್ನು ಅವರು ಖಂಡಿಸಿ, ಇದರಿಂದ ಮಹಾಯುದ್ಧ ರಾಷ್ಟ್ರ ಪದ್ಧತಿಗೆ ಜೀವದಾನ ಕೊಟ್ಟಂತಾಗಿರುವುದೆಂದೂ ತಿಳಿಸುತ್ತಾರೆ

ಸವರ್ ಉದ್ಯೋಗ ಕೆಲಸಗಾರರ ಸಂಘಕ್ಕೆ ಕೋರಿಕೆಗಳು

ರಾಜಧಾನಿಯಲ್ಲಿರುವ ಸುಮಾರು ೨೦ ಸವರ್ ಉದ್ಯೋಗ ಕಾರ್ಖಾನೆಗಳ ಪೈಕಿ ೦ರಲ್ಲಿ, ಬಟ್ಟೆ ವರಗಳು ಇಳಿಮುಖದ ಕಾರಣಕ್ಕಾಗಿ ಕೆಲಸ ಸಡೆಯುವುದು, ಅದರಿಂದ ಜೀವನ ನಡೆಸುತ್ತಿರುವ ಸುಮಾರು ನಾಲ್ಕೈದು ಸಾವಿರ ಜನರಿಗೆ ತೊಂದರೆಯಾಗಿರುತ್ತದೆ ಈ ಕಾರ್ಖಾನೆಗಳ ೭೦೦-೮೦೦ ಮಂದಿ ಕೆಲಸಗಾರರಿಗೆ ನಿರುದ್ಯೋಗವುಂಟಾಗಿದೆ ಅವರ ಸಂಸಾರದವರು ಹೊಟ್ಟೆಗಿಲ್ಲದವರಾಗಿರುತ್ತಾರೆ ನಿಲ್ಲಿಸಿರುವ ಕೈಗಾರಿಕೆಯನ್ನು ಮಾಲೀಕರುಗಳು ಪುನಃ ನಡೆಸಿ ಬಡ ಜನರ ಜೀವನೋಪಾಯಕ್ಕೆ ದಾರಿಮಾಡಿ ಕೊಡಬೇಕು ಇಲ್ಲದೆ ಸರ್ಕಾರದವರು ಬಡ ಕಾರ್ಮಿಕರ ಪರಿಸ್ಥಿತಿಯನ್ನು ಪರಿಶೀಲಿಸಿ ಅವರ ಕಷ್ಟವನ್ನು ಪರಿಹರಿಸಬೇಕು-ಎಂದು ರಾಜಧಾನಿಯ ಸವರ್‌ಉದ್ಯೋಗ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಂ ಎಲ್. ಶಿವಲಿಂಗಯ್ಯನವರು ತಿಳಿಸಿದ್ದಾರೆ.

ಹಿಂದುಳಿದ ಜನಾಂಗದವರ ಅಭಿವೃದ್ಧಿ ಹೆಚ್ಚು ಹಣವನ್ನು ಕೇಂದ್ರಕ್ಕೆ ಮನವಿ

ರಾಜ್ಯಾಂಗದ ವಿಧಿ ನಿಯಮದ ಪ್ರಕಾರ ಹಿಂದುಳಿದ ಸಂಘಗಳಾವುವೆಂಬ ಬಗ್ಗೆ ಅಧಿಕೃತ ಪಟ್ಟಿಯನ್ನು ತಯಾರಿಸಲು ರಾಷ್ಟ್ರಪತಿಯವರ ಅಪ್ಪಣೆ ಮೇರೆ ಸಮಿತಿಯನ್ನು ರಚಿಸಬೇಕೆಂದು ಮೈಸೂರು ಸರ್ಕಾರದವರು ಕೇಂದ್ರಕ್ಕೆ ಸಲಹೆ ಮಾಡಿದ್ದಾರೆ.

SRI GANESH
TALKIES

From 13—6—52

ROCK ISLAND TRAIL

(In True color A Republic Production)

A big Story of American Era

From 15—6—52

TRAIL OF ROBINHOOD

[In True color]

THEOSOPHY STUDY GROUP,

Yadavagiri Road

Vontikoppal

Saturday the 14th JUNE 1952

at 5-30 p m

Talks followed by Questions and Answers on

The Mystery of Man

IV FROM MAN TO GOD

CONCENTRATION

ಒಲಿಂಪಿಯಾ

14-6 52 ರಿಂದ 3ನೇ ವಾರ

ಪ್ಯಾರ್ ಕೀ ಬಾತೇ

ಪಾತ್ರ: ನರ್ಗೀಸ್, ತ್ರಿಲೋಕ್ ಕಪೂರ್, ಪ್ರಾಣ್

— ಬೆಳಗಿನ ಪ್ರದರ್ಶನ —

UNIVERSITY SENATE ELECTION

Registered Graduates' Constituency

Please give one of the SIX Valuable Votes to

K S SURYANARAYANA B A LL B

Lower Hill College Road MYSORE

SRI GAYATHRI
TALKIES

From 14-6 52

Paramount's Powerful Masterpiece

(In Technicolor)

Starring Gary Cooper and Ingrid Bergman

FOR WHOM THE BELL TOLLS

Please Note the Change of Time Only for ...

MORNING SHOWS

On 14th & 15th

WHITE HEAT

THE MODEL TUTORIAL INSTITUTE

D Banumaiah's School Buildings Mysore

The Institute will conduct classes for the Supplementary S S L C Public Examination of 1952 Admissions will be received between **11 A M and 5 P M** on working days **Classes start working from Monday, 16th June 1952** Further particulars can be had from the office of the Organiser during working hours

MYSORE **B Seshagiri Rao,**

1-6 1952 Organiser

Edited Printed and Published by A R Nagarajan at Sadhvi Press D Subbiah Road Mysore

ಪಶ್ಚಿಮ ಬಂಗಾಳದಲ್ಲಿ ಹೊಸ ಮಂತ್ರಿ ಮಂಡಲ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಡಾ|| ಬಿ ಸಿ ರಾಯರು ತಾವೂ ಸೇರಿ ... ಜನರ ಮಂತ್ರಿ ಮಂಡಲವನ್ನು ರಚಿಸಿದ್ದಾರೆ ... ಜನರನ್ನು ಉಪಮಂತ್ರಿಗಳಾಗಿ ನೇಮಿಸಿಕೊಳ್ಳಲಾಗಿದೆ

D BANUMIAH'S COLLEGE OF COMMERCE, MYSORE

NOTIFICATION

Applications for admission to the Junior I Com Class will be received from 10th June 1952

Forms of Application can be obtained from the office of the College during working hours

B V BANUMIAH,
Principal

ABIDS OUTRIGHT AUCTION

On SUNDAY the 15th inst. at 9.30 A M

FURNITURE and HOUSEHOLD EFFECTS including S W & R W Single & Double COTS ALMIRAHS Writing TABLES Arm & Armless CHAIRS Coat Stands Towel Rails WESTING HOUSE Ice Box A C RADIO Fancy Electric TABLE LAMPS & STOVES and many other useful articles

INSPECTION on SATURDAY the 14th inst between 3 & 6 P M

Also FOR SALE —Brand new English Electric STOVES & TABLE LAMPS At Moderate rates

A B I D S

ಪ್ರಭು ದೇವಾ ಟಾಕೀಸ್

14-6-52ರಿಂದ :: ಅಮೋಘ ಪ್ರಾರಂಭ

ಜೆಮಿನಿಯವರ

* ಬಾಲನಾಗಮ್ಮ *

ಪಾತ್ರ: ಕಾಂಚನಮಾಲ, ಪುಷ್ಪವಲ್ಲಿ, ಡಾ|| ಸುಬ್ಬರಾವ್ ಇತ್ಯಾದಿ

ಮೈಸೂರು ದೊಡ್ಡಕೆರೆ ಮೈದಾನದಲ್ಲಿ

15—6—52ನೇ ಭಾನುವಾರ ಮಧ್ಯಾಹ್ನ 4 ಘಂಟೆಗೆ

ಅಮೋಘವಾದ 6 ಜೊತೆ ಭಾರಿ ಕುಸ್ತಿಗಳು

ಶ್ರೀ ಸ್ಟಾರ್ ರಾಮು ...

ಶ್ರೀ ರಾಜ ... — ಶ್ರೀ ...

ಶ್ರೀ ...

THE CITY TUTORIAL COLLEGE

(Near V V Market Mysore)

§ S S L C Coaching Classes

(For Sept 52 & March 53)

§ INTER Eng, P C M, C B Z & Commerce

§ B Sc — English and P C M

ವಿಂಟರ್ ಸ್ಕೂಲಿನ ಎಲ್ಲಾ ತರಗತಿಗಳೂ ನಡೆಯುತ್ತವೆ.

T SUBBARAYA SASTRY, M.A (Mysore) M A in Commerce (Calcutta) C I T D (Lon) D P C I (Lond) PRINCIPAL

ESTD 1917 THE

M S PUTTANNA, B Sc, N D Com (G O I) D C in I I B (Lond) VICE PRINCIPAL

CHAMPION METROPOLITAN COLLEGE

of Commerce, CO-OPERATORS HOME", 100 Ft Road, MYSORE

APPLICATIONS FOR ADMISSION to the Diploma Courses in Commerce as well as Typewriting and Shorthand are now being received on all working days between 7 and 10 A M Details can be seen on College's Notice Board

SPECIAL ATTENTION is invited to Diploma in Commerce & Business Administration, ISSUED BY THE MINISTRY OF EDUCATION, GOVT OF INDIA, WHICH IS DECLARED EQUAL TO B Com

ಮಕ್ಕಳ ಲಿವರ್ ಗೆಡ್ಡೆ

ಈ ಕಾಯಿಲೆ ಗುಣವಾಗಲು ... ಚಿಕಿತ್ಸೆ ... 8 ರಿಂದ 11 ಘಂಟೆವರೆಗೆ ... ಪರೀಕ್ಷಿಸಲಾಗುವುದು

139 ..., ಮೈಸೂರು

ರಿಜಿಸ್ಟರ್ಡ್ ನಂ 792 || ಚಂದಾ ... ಒಂದು ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೪-೬-೫೨ [ಸಂಚಿಕೆ ...

ಮುಖ್ಯ ಮಂತ್ರಿಗಳಿಗೇ ಕಾಂಗ್ರೆಸ್ ಅಧ್ಯಕ್ಷ ಸ್ಥಾನ

ನಾಗನಹಳ್ಳಿಯಲ್ಲಿ ಕ್ರಿಯಾತ್ಮಕ ಶಿಕ್ಷಣ ಕೇಂದ್ರ

ಮೈಸೂರು ೧೪

ನೆನ್ನೆ ಸಂಜೆ ಮೈಸೂರು ನಗರದ ಸಮಾಜವಾದಿಗಳು ನಾಗನಹಳ್ಳಿಯಲ್ಲಿ ಒಂದು ಕ್ರಿಯಾತ್ಮಕ ಶಿಕ್ಷಣ ಕೇಂದ್ರದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಡಾ|| ಮಾರ್ ತೂರ್ ಕುರ್ಗ್ಯನರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಟಿ ವಿ ಶ್ರೀನಿವಾಸರಾವ್, ವೇದಾಂತಂ ಹೆಮ್ಮಿಗೆ ವಿಶ್ವನಾಥ್ ಮುಂತಾದವರು ಭಾಷಣ ಮಾಡಿ, ಗ್ರಾಮಸ್ಥರು ಜಾಗೃತರಾಗಬೇಕೆಂದೂ, ಒಗ್ಗಟ್ಟಿನಿಂದ ವರ್ತಿಸಿ, ಇನಾಂದಾರರ ದುರ್ವರ್ತನೆಗಳನ್ನು ಪ್ರತಿಭಟಿಸಬೇಕೆಂದೂ ಮತ್ತು ಜಮೀನ್ದಾರರ ಲಂಚದ ಆಸೆಗೆ ಮರುಳಾಗದೆ ಒಗ್ಗಟ್ಟನ್ನು ಕಾಪಾಡಿಕೊಂಡುಬರಬೇಕೆಂದೂ ಹುಡಿದರು

ಅಧ್ಯಕ್ಷರು ಮಾತನಾಡಿ ಸಮಾಜವಾದಿ ಪಕ್ಷವು ಮಾಡಬೇಕೆಂದಿರುವ ಕಾರ್ಯಗಳನ್ನು ವಿವರಿಸಿ, ಅದಕ್ಕೆ ಜನರ ಬೆಂಬಲವನ್ನು ಕೋರಿದರು

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಲಕ್ಷ್ಮೀಬೋಯಿಯವರು ಮಾತನಾಡಿ ಹಿಂದೆ ಇಪ್ಪತ್ತು ವರ್ಷಗಳ ಹಿಂದೆ ಗ್ರಾಮಸ್ಥರೆಲ್ಲರೂ ಸುಖವಾಗಿದ್ದರೆಂದೂ, ಶ್ರೀ ವಿ. ಕಂಠೀರವರು ಇದನ್ನು ಕೊಂಡುಕೊಂಡನಂತರ ಗ್ರಾಮಸ್ಥರಿಗೆ ಜಮೀನೇ ಇಲ್ಲದಂತೆ ಆಗಿ ಬಹಳ ತೊಂದರೆಯುಂಟಾಗಿದೆಯೆಂದೂ ತಿಳಿಸಿದರು

... ರೈತರುಗಳ ಸಭೆಯು, ಶ್ರೀ ಲಕ್ಷ್ಮೀಬೋಯಿಯವರನ್ನೇ ... ಪಂಚಾಯಿತಿಯ ಅಧ್ಯಕ್ಷರನ್ನಾಗಿ ಆರಿಸಿತು

ಆಯುರ್ವೇದ ಕಾಲೇಜಿನ ವರ್ಗಾವಣೆಯನ್ನು ಪ್ರತಿಭಟಿಸಲು ಸಭೆ

ರಾಜಧಾನಿಯಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದನ್ನು ಪ್ರತಿಭಟಿಸುವ ಸಲುವಾಗಿ ನಾಳೆ ಸಂಜೆ ೪ ಘಂಟೆಗೆ ಶಿವರಾಂಪೇಟೆಯ ಶಿವಸಿಂಗ್ ಬಹಾದ್ದೂರ್ ಛತ್ರದ ಆವರಣದಲ್ಲಿ ಆಯುರ್ವೇದ ವೈದ್ಯರ ಸಂಘದ ಸಭೆಯೊಂದು ಏರ್ಪಾಡಾಗಿದೆ

ಉಪನ್ಯಾಸ

ಮೈಸೂರು ೮ ಸುಬ್ಬರಾಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ, ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಾಳೆ ಸಾಯಂಕಾಲ ೬-೩೦ ಗಂಟೆಗೆ ಅಗರಂ ಸ್ವರ್ಣಕುಮಾರಿಯವರು ಹಂಪಿಯಿಂದ ತೀರ್ಥಯಾತ್ರೆ ಎಂಬ ವಿಷಯದ ಬಗ್ಗೆ ಭಾಷಣವನ್ನು ಮತ್ತು ಆಸ್ಥಾನ ವಿದ್ವಾನ್ ... ಅವರ ಹಾಡುಗಾರಿಕೆಯನ್ನು ಏರ್ಪಡಿಸಲಾಗಿದೆ

ಸಂತಾಪ ಸೂಚಕ ಸಭೆ

ಮೈಸೂರು ಸಿಯೋ ಫಾರ್ಮಸಿಯ ಡಾ|| ಎ ಎಸ್ ಸುಬ್ರಹ್ಮಣ್ಯ ಶಾಸ್ತ್ರಿ ಧರ್ಮಪತ್ನಿ ಶ್ರೀಮತಿ ಸಾವಿತ್ರಮ್ಮನವರ ಅಕಾಲ ಮರಣದ ಪ್ರಯುಕ್ತ ನಾಳೆ ಸಾಯಂಕಾಲ ೪ ಘಂಟೆಗೆ ಟೌನ್ ಹಾಲಿನಲ್ಲಿ ಮೈಸೂರು ಸಿಟಿ ಆಯುರ್ವೇದ ಮತ್ತು ಯುನಾನಿ ವೈದ್ಯರ ಪರವಾಗಿ ಸಂತಾಪ ಸೂಚಕ ಸಭೆಯು ಏರ್ಪಟ್ಟಿದೆ ಸರ್ವರೂ ಬರಬೇಕೆಂದು ಡಾ|| ಲಕ್ಷ್ಮೀನಾರಾಯಣ ಪಂಡಿತರು ಕೋರಿರುತ್ತಾರೆ.

ಪ್ರದೇಶ ಕಾಂ|| ಅಧ್ಯಕ್ಷತೆಗೆ ಮುಖ್ಯಮಂತ್ರಿಗಳು

ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ನೆನ್ನೆ ಭೂಪಾಲಿನ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಭಾರತದ ಸಂಸ್ಥಾನಗಳ ಮುಖ್ಯ ಮಂತ್ರಿಗಳನ್ನೇ ಆಯಾ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರನ್ನಾಗಿ ಮಾಡುವ ಅಂಶವು ಕೇಂದ್ರ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಪರಿಶೀಲನೆಯಲ್ಲಿರುವುದೆಂದು ತಿಳಿಸಿದರು ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಯು ಪ್ರತಿಸ್ಪರ್ಧೆಯಿಲ್ಲದೆ ಸರ್ವಾನುಮತದಿಂದ ನಡೆಯಬೇಕೆಂಬುದು ಪಂಡಿತ ನೆಹರೂರವರ ಆಶಯವೆಂದೂ, ಈ ಕ್ರಮದಿಂದ ಕಾಂಗ್ರೆಸ್ಸು ಮತ್ತು ಸರ್ಕಾರಗಳಿಗೆ ನಿಕಟ ಬಾಂಧವ್ಯ ಬೆಳೆಯಲು ಅನುಕೂಲವಾಗುವುದಲ್ಲದೆ ಚುನಾವಣೆಗಾಗಿ ಆಗುವ ಶ್ರಮವೂ ಉಳಿಯುವುದೆಂದೂ ಅವರು ನುಡಿದರು

ಹರಿಕಥೆ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ಆಶ್ರಯದಲ್ಲಿ ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಕಾವನಾಟಗೇರಿ ಶ್ರೀ ಶಿವಲಿಂಗಸ್ವಾಮಿ ಯವರ ತುಳಸೀಬೃಂದಾವನಂ ವೈಕುಂಠ ಶ್ರೀರಾಮ ಮಂದಿರದಲ್ಲಿ ಈ ರಾತ್ರಿ ೮-೩೦ ಘಂಟೆಗೆ ಶ್ರೀಗಳಾದ ಪಿ ರಾಮಸ್ವಾಮಿನಾಯ್ಡು ಮತ್ತು ಅವರ ಪುತ್ರರಾದ ಆರ್ ಗುರುರಾಜುಲು ನಾಯ್ಡುರವರಿಂದ ಹರಿಶ್ಚಂದ್ರ ವಿಶ್ವಾಮಿತ್ರ ಸಂವಾದ ಎಂಬ ಕಥೆಯು ನಡೆಯುವುದು ವರ್ತಮಾನ್ ಪತ್ರಿಕಾ ಸಂಪಾದಕರಾದ ಶ್ರೀ ಎಂ ಎ ತಿಮ್ಮಯ್ಯನವರು ಅಧ್ಯಕ್ಷತೆ ವಹಿಸುವರು

೬ ಮಂದಿ ಯುವತಿಯರ ಆತ್ಮಹತ್ಯ ಪ್ರಯತ್ನ

ಹಿಮಾಲಯ ಪರ್ವತದ ತಪ್ಪಲಿನ ಬಳಿ ಇರುವ ಹಾರಿ ಎಂಬಲ್ಲಿನ ೧೬ ರಿಂದ ೨೦ ವರ್ಷವಯಸ್ಸಿನ ಆರು ಮಂದಿ ತರುಣಿಯರು ಜೀವನದಲ್ಲಿ ಜಿಗುಪ್ಸೆಯುಂಟಾಗಿ ಆತ್ಮಹತ್ಯಮಾಡಿಕೊಳ್ಳಲು ನಿರ್ಧರಿಸಿ ಭಾಗೀರಥಿ ನದಿ ದಡಕ್ಕೆ ಹೋಗಿ ಮೊದಲು ಇಬ್ಬರು ಒಟ್ಟಿಗೆ ಹಗ್ಗ ಕಟ್ಟಿಕೊಂಡು ನೀರಿಗೆ ಬಿದ್ದರೆಂದೂ, ತರುವಾಯ ಇನ್ನಿಬ್ಬರು ಒಬ್ಬರ ನಂತರ ಒಬ್ಬರು ಬಿದ್ದರೆಂದೂ ವರದಿಯಾಗಿದೆ ಉಳಿದ ಇಬ್ಬರು ಈ ದೃಶ್ಯವನ್ನು ಕಂಡು ಹೆದರಿ ಗಾಬರಿಯಿಂದ ಮನೆಗೆ ಓಡಿಹೋಗಿ ಸುದ್ದಿಯನ್ನು ತಿಳಿಸಲು ಜನರು ನದೀತೀರಕ್ಕೆ ಬಂದು ನೋಡಲಾಗಿ ಹಗ್ಗವನ್ನು ಕಟ್ಟಿಕೊಂಡು ಬಿದ್ದ ಇಬ್ಬರು ಮೃತಪಟ್ಟು, ಉಳಿದ ಇಬ್ಬರು ಮೂರ್ಛೆ ತಪ್ಪಿ ದಡಕ್ಕೆ ಒಯ್ಯಲ್ಪಟ್ಟಿದ್ದುದು ಪತ್ತೆಯಾಯಿತು.

ಮತ್ತೆ ಹಕೋಟೆ ಇಲ್ಲವೆಂದು ರಾಜಾಜಿ ಭರವಸೆ

ಮದರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ನೆನ್ನೆ ಅನಂತಪುರಕ್ಕೆ ಭೇಟಿಯಿತ್ತು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಮದರಾಸಿನಲ್ಲಿ ಹತೋಟಿ ಮತ್ತು ಪಡಿತರವನ್ನು ತೆಗೆದ ನಂತರ ಆಹಾರದ ಪರಿಸ್ಥಿತಿಯು ಉತ್ತಮಗೊಂಡಿರುವುದೆಂದೂ ಸರಕಾರವು ಕೈಗೊಂಡಿರುವ ಈ ಕ್ರಮವು ಯಶಸ್ವಿಯಾಗಲು ಎಲ್ಲ ವರ್ತಕರೂ ಮತ್ತು ರೈತರೂ ಸಹಕರಿಸಬೇಕೆಂದೂ ಮನವಿ ಮಾಡಿದರು ಹತೋಟಿಯು ಮತ್ತೆ ಜಾರಿಗೆ ಬರುವುದಿಲ್ಲವೆಂಬ ಭರವಸೆಯನ್ನು ಅವರು ಕೊಟ್ಟು ಅದು ಬಂದಲ್ಲಿ ತಾವು ಗಸ್ಥಾನದಲ್ಲಿರಲಾರೆನೆಂದು ತಿಳಿಸಿದರು.

ನೆಲಕ್ಕೆ ಅಪ್ಪಳಿಸಿ ಹ್ವೈದಿಯಿಂದ ಮಗುವಿನ ಕೊಲೆ

ಪಾಟ್ನಾ ಬಳಿ ಬಂಕೀಪುರದ ಪೈಲಿನಲ್ಲಿ ಬಂಧನದಲ್ಲಿರುವ ಹುಚ್ಚ ಖೈದಿಯೊಬ್ಬನು ಕಳೆದ ಮಂಗಳವಾರ ಜೈಲು ಆಸ್ಪತ್ರೆಗೆ ಹೋಗಿ, ಅಲ್ಲಿಗೆ ಔಷಧಿ ತೆಗೆದುಕೊಳ್ಳಲು ಬಂದಿದ್ದ ಜೈಲು ಹೆಡ್ ವಾರ್ಡರನ ಐದು ವರ್ಷದ ಮಗುವನ್ನು ಎತ್ತಿ ನೆಲಕ್ಕೆ ಅಪ್ಪಳಿಸಿ ಸಾಯಿಸಿದನೆಂದು ವರದಿಯಾಗಿದೆ ಪೋಲೀಸರು ಪ್ರಶ್ನಿಸಲಾಗಿ, ತನಗೆ ಹುಚ್ಚು ಹಿಡಿದಿಲ್ಲವೆಂದೂ, ತನಗೆ ಬಹಳ ಅನ್ಯಾಯವಾಗಿರುವುದರಿಂದ ಮೇಲ್ಕಂಡ ಕೃತ್ಯವನ್ನು ನಡೆಸಿದುದಾಗಿಯೂ ಹೇಳಿ, ತಾನು ಇನ್ನೂ ಹೆಚ್ಚು ಜನರನ್ನು ಕೊಲ್ಲುವುದಾಗಿ ತಿಳಿಸಿದನು.

ದಕ್ಷಿಣ ಅಮೆರಿಕದಲ್ಲಿ ೪೮ ಗಂಟೆ ಕಾಲ ಭೂಕಂಪ

ದಕ್ಷಿಣ ಅಮೆರಿಕದ ಅಂಡೀಸ್ ಪರ್ವತ ಶ್ರೇಣಿ ಪ್ರದೇಶದಲ್ಲಿರುವ ಸ್ಯಾನ್ ಜುವಾನ್ ಎಂಬಲ್ಲಿ ಕಳೆದ ಮಂಗಳವಾರದಿಂದ ಎರಡು ದಿನಗಳು ಮೇಲಿಂದಮೇಲೆ ಭೂಕಂಪವು ಸಂಭವಿಸಿದ ಕಾರಣವಾಗಿ ಸಾವಿರಾರು ಸಂಸಾರಗಳು ನಿರಾಶ್ರಿತರಾಗಿರುವರೆಂದೂ, ಅನೇಕ ಮನೆಗಳು ನೆಲಸಮವಾಗಿರುವುವೆಂದೂ ಹಲವಾರು ಹಳ್ಳಿಗಳು ಪೂರ್ಣವಾಗಿ ನಾಶವಾಗಿರುವುವೆಂದೂ ವರದಿಯಾಗಿದೆ ಸ್ಯಾನ್ ಜುವಾನ್ ಎಂಬಲ್ಲಿ ಒಬ್ಬನು ಸತ್ತು ೪೪ ಜನರು ಗಾಯಗೊಂಡರೆಂದೂ ಪ್ರಮುಖ ಸರ್ಕಾರಿ ಕಛೇರಿ ಕಟ್ಟಡಗಳಿಗೆ ತೀವ್ರ ನಷ್ಟ ಆಗಿರುವುದಾಗಿಯೂ ತಿಳಿದುಬಂದಿದೆ ಭೂಕಂಪ ಸಂಭವಿಸಿದ ಕಡೆಗಳಲ್ಲೆಲ್ಲಾ ತೀವ್ರ ನೆರವು ಬೇಕಾಗಿರುವುದೆಂದೂ ಹೇಳಲಾಗಿದೆ

೧೦,೦೦೦ ಮಂದಿಗೆ ಸತ್ಕಾರ ಮಾಡಿದ ಕೋಟ್ಯಾಧೀಶನಿಗೆ ಸಜಾ

ಬಿಕನೀರ್ ಸಂಸ್ಥಾನದ ಕೋಟ್ಯಾಧೀಶರಾದ ಮುನ್ನೀಲಾಲ್ ಕೊಠಾರಿ ಎಂಬುವರು ಸರ್ಕಾರದ ನಿಯಮವನ್ನು ಉಲ್ಲಂಘಿಸಿ ಹತ್ತು ಸಾವಿರ ಮಂದಿ ಅತಿಥಿಗಳಿಗೆ ಸತ್ಕಾರ ಕೂಟವನ್ನು ಏರ್ಪಡಿಸಿದ್ದಕ್ಕಾಗಿ ಆರು ತಿಂಗಳು ಸಜಾ ಮತ್ತು ಒಂದು ಸಾವಿರ ರೂ ಜುಲ್ಮಾನೆ ಶಿಕ್ಷೆಗೆ ಗುರಿಯಾಗಿರುವರು

ಕರ್ನಾಟಕ ಏಕೀಕರಣಕ್ಕೆ ಮೈಸೂರಿನ ಬೆಂಬಲವಿಲ್ಲವೇ?

ಮೈಸೂರು ಶಾಸನ ಸಭೆಯ ಕೆಳಮನೆ ಸದಸ್ಯರಾದ ಶ್ರೀ ಎ ಸಿ ನಾಗಯ್ಯರೆಡ್ಡಿಯವರು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದ್, ಪ್ರಧಾನಿ ನೆಹರೂ ಮತ್ತು ಕೇಂದ್ರ ಮುಖ್ಯಾಧಿಕಾರಿ ಶ್ರೀ ... ಕೆ ಸಿ ರೆಡ್ಡಿಯವರಿಗೆ ತಂತಿಯನ್ನು ಕಳುಹಿಸಿ ಕರ್ನಾಟಕದ ಏಕೀಕರಣಕ್ಕೆ ಸ್ವಲ್ಪವೂ ಮೈಸೂರಿನ ಜನತೆಯ ಬೆಂಬಲವಿಲ್ಲವೆಂದೂ, ಈ ಬಗ್ಗೆ ಪ್ರಜಾಭಿಪ್ರಾಯ ಪಡೆಯದೆ ಯಾವ ಕಾರ್ಯಕ್ರಮಗಳನ್ನು ಕೈಗೊಂಡರೂ ಅವನ್ನು ವಿರೋಧಿಸುವುದಾಗಿಯೂ ತಿಳಿಸಿರುವುದಾಗಿ ಗೊತ್ತಾಗಿದೆ

ಡಿಪೋವಿನಲ್ಲಿ ಸಾವಿರಪಲ್ಲ ಅಕ್ಕಿ ಮಾರಾಟವಾಗಿಲ್ಲ

ಚಿಕ್ಕಮಗಳೂರು ೧೩

ಕಳೆದ ಬುಧವಾರ ಇಲ್ಲಿ ಸೇರಿದ್ದ ಸಂತೆಯಲ್ಲಿ ಗಾಡಿಗಳಲ್ಲಿ ಅಕ್ಕಿಯು ಮಾರಾಟಕ್ಕೆ ಬಂದು ನೂರಾರು ಪಲ್ಲ ಬಿಕರಿಯಾಗಿ, ಜನರು ಹಸನಾದ ಸಣ್ಣ ಅಕ್ಕಿಯನ್ನು ರೂಪಾಯಿಗೆ ೧|| ಸೇರಿನಂತೆಯೂ, ದಪ್ಪ ಅಕ್ಕಿಯನ್ನು ೩ ಸೇರಿನಂತೆಯೂ ಕೊಂಡರು ಸಂತೆಯಲ್ಲಿ ಬಹಿರಂಗವಾಗಿ ಅಕ್ಕಿ ಮಾರಾಟವಾಗುತ್ತಿದ್ದುದನ್ನು ಕಂಡು ಹಲವು ಹಳ್ಳಿಯ ವರ್ತಕರೂ ತಮ್ಮ ಅಂಗಡಿಗಳಲ್ಲಿ ಅಕ್ಕಿ ಮಾರಾಟವನ್ನು ಆರಂಭಿಸಿದರು ಇಲ್ಲಿನ ಸೆಂಟ್ರಲ್ ಡಿಪೋವಿನಲ್ಲಿ ಪ್ರತಿ ಮಾಹೆಯೂ ಒಂದುಸಾವಿರ ಪಲ್ಲ ಅಕ್ಕಿಯು ಬಿಕರಿಯಾಗುತ್ತಿದ್ದುದು ಕಳೆದ ತಿಂಗಳು ಕೇವಲ ಒಂಭತ್ತು ಪಲ್ಲ ಮಾರಾಟವಾಗಿದೆ.

ವೇದಾಂತ ವಿದ್ಯೆಗಾಗಿ ಬಹುಮಾನ

ಸ್ವಂ ಸು] ಉಡುಪಿ ೧೨

ಮದರಾಸಿನ ವ್ಯವಸಾಯ ಮಂತ್ರಿಗಳಾದ ಡಾ॥ ಯು ಕೃಷ್ಣರಾಯರು ತಮ್ಮ ತಂದೆ, ದಿವಂಗತ ಡಾ॥ ಯು ರಾಮರಾಯರ ಸ್ಮರಣಾರ್ಥವಾಗಿ ಪ್ರತಿ ವರ್ಷವೂ ಉಡುಪಿ ಸಂಸ್ಕೃತ ಕಾಲೇಜಿನಿಂದ ಸ್ಮೃತ ವೇದಾಂತ ಶಿರೋಮಣಿ ಅಂತ್ಯ ಪರೀಕ್ಷೆಯಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆಯಾಗುವ ವಿದ್ಯಾರ್ಥಿಗೆ ಪ್ರಥಮ ಪಾರಿತೋಷಕವನ್ನು ಸ್ಥಾಪಿಸಲು ನಿಶ್ಚಯಿಸಿದ್ದಾರೆ ಇದಕ್ಕಾಗಿ ೨ ಸಾವಿರ ರೂಪಾಯಿಗಳನ್ನು ದಾನ ಮಾಡಿರುತ್ತಾರೆ ಈ ನಿಧಿ ಮೇಲೆ ಬರುವ ಬಡ್ಡಿ ಹಣವನ್ನು ಪಾರಿತೋಷಕಕ್ಕೆ ವಿನಿಯೋಗಿಸಲಾಗುವುದು

COACHING CLASS.

Dalvoy High School

Coaching class for S S L C Candidates appearing for the September Examination 1952 will be Conducted in Dalvoy High School Efficient Coaching will be given

The classes start work from the 15th of this month Further details can be had from the organiser during the school hours

Time 7.0 A M to 10-30 A M Apply sharp

ORGANISER

Edited, Printed and Published by A R Nagarajan at Sadhvi Press D Subbiah Road, Mysore

ದೇವಾಂಗ ಸಂಘ

ರಾಜಧಾನಿಯ ದೇವಾಂಗ ಮಹಾಸಭೆ ವಿದ್ಯಾರ್ಥಿ ನಿಲಯಕ್ಕೆ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರೂ ಕಾಲೇಜು ವಿದ್ಯಾರ್ಥಿಗಳೂ ಸೇರಲು ಅರ್ಜಿಗಳನ್ನು ಹಾಕಿಕೊಳ್ಳಬಹುದೆಂದೂ, ಅಲ್ಲಿ ಸಭ್ಯರಿಗೆ ಉಚಿತ ವಸತಿ ಸೌಕರ್ಯವನ್ನು ಏರ್ಪಡಿಸಲಾಗಿರುವುದೆಂದೂ ತಿಳಿಸಲಾಗಿದೆ ಅರ್ಜಿ ನಮೂನೆಯನ್ನು ಅವೆನ್ಯೂ ರಸ್ತೆಯಲ್ಲಿರುವ ಜವಳಿ ವ್ಯಾಪಾರಿಗಳೂ, ನಿಲಯದ ಕಾರ್ಯದರ್ಶಿಯವರೂ ಆದ ಶ್ರೀ ಎಸ್ ಗೋವಿಂದಯ್ಯನವರಿಂದ ಪಡೆಯಬಹುದು

ಉಪನಯನ

ಶ್ರೀಮಾನ್ ಮಹಾರಾಣಿಯವರ ವಿದ್ಯಾಗುರುಗಳೂ ಆಸ್ಥಾನ ವಿದ್ವಾಂಸರೂ ಆದ ಶ್ರೀ ಬಿ ಚನ್ನಕೇಶವಯ್ಯನವರು ತಮ್ಮ ಕುಮಾರ ಬಿ ಸಿ ರಾಜಗೋಪಾಲನಿಗೆ ಮೊನ್ನೆ ಚಾಮುಂಡಿಪುರದಲ್ಲಿರುವ ತಮ್ಮ ನಿವಾಸದಲ್ಲಿ ಉಪನಯನವನ್ನು ನೆರವೇರಿಸಿ ಬಂಧು ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

No Pass No Fees

JOIN IMMEDIATELY

SRI RAGHAVENDRA TUTORIAL INSTITUTE

New Carl Hot

S S L L Mysore

COACHING CLASSES FOR

1. S S L C (for September 52 & March 53)
2. Lower Secondary
3. Madras Matriculation

Full fees will be refunded to the students, if failed in the Supplementary S S L C Examination of 1952

Limited Seats Moderate Fees

Principal s-o Person

M RAMA RAO

B Sc , B Com

ಆಹಾರಕ್ಕಾಗಿ ಸಬ್ಸಿಡಿ ಕೊಡುವ ನೀತಿ ಸರಿಯಲ್ಲ

ಹೆಚ್ ಎಂ ಚನ್ನಬಸಪ್ಪನವರ ಹೇಳಿಕೆ

ಮೈಸೂರು ೧೪

ಕೇಂದ್ರ ಸರ್ಕಾರದವರು ಪ್ರಾಂತಗಳಿಗೆ ಆಹಾರ ಧಾನ್ಯದ ಬೆಲೆಯ ಸಂಬಂಧವಾಗಿ ಸಹಾಯ ದ್ರವ್ಯವನ್ನು ಕೊಡಬೇಕೆಂಬ ತತ್ವವು ದೇಶದಲ್ಲಿ ಅಶಾಂತಿಯನ್ನುಂಟುಮಾಡುತ್ತದೆ ಮತ್ತು ಈ ರೀತಿ ಸಾರ್ವಜನಿಕ ನಿಧಿಯನ್ನು ಪೋಲು ಮಾಡುವುದು ಉಚಿತವಲ್ಲ — ಎಂದು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಮೊನ್ನೆ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು

ಮದ್ರಾಸಿನಲ್ಲಿ ರಾಜಾಜಿಯವರು ಕಂಟ್ರೋಲನ್ನು ತೆಗೆದುಹಾಕಿರುವುದನ್ನು ಸ್ವಾಗತಿಸಿ ರಾಜಾಜಿಯವರು ಇದನ್ನು ವಿಫಲಗೊಳಿಸುವವರ ಮೇಲೆ ಉಗ್ರ ಕಾರ್ಯಕ್ರಮ ಕೈಗೊಳ್ಳಲು ರಾಷ್ಟ್ರಪತಿಯವರಿಂದ ವಿಶೇಷ ಅಧಿಕಾರಗಳನ್ನು ಪಡೆಯಬೇಕೆಂದು ನುಡಿದರು

ಉಳುವ ರೈತನಿಗೆ ಬಂಡವಾಳ ಒದಗಿಸುವ ಮೂಲಕ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದು ಅವರು ಹೇಳಿ ಸಾಮೂಹಿಕ ವ್ಯವಸಾಯ ಕ್ರಮವು ಯಶಸ್ವಿಯಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು

ಕಳೆದ ಜನವರಿಯಲ್ಲೇ ರಾಜ ಪ್ರಮುಖರು ಹೊಸ ಜಿಲ್ಲಾ ಬೋರ್ಡುಗಳ ರಚನೆಯನ್ನು ಘೋಷಿಸಿ ಅದರಂತೆ ಈಗಿರುವವುಗಳನ್ನೇ ಹೊಸ ಬೋರ್ಡುಗಳ ರಚನೆಯಾಗುವವರೆಗೂ ಮುಂದುವರಿಸಿದರೂ ಸರ್ಕಾರದವರು ಇನ್ನೂ ಹಳೆಯ ಕಾನೂನಿನ ರೀತಿಯನ್ನೇ ಅನುಸರಿಸುತ್ತಿರುವುದರಿಂದ ಹಳ್ಳಿಯ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯಲು ತೊಂದರೆಯಾಗಿರುವುದೆಂದೂ ಅವರು ತಿಳಿಸಿದರು

ಶ್ರೀ ಹೆಚ್ ಸಿ ದಾಸಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದುದನ್ನು ಸ್ವಾಗತಿಸುತ್ತಾ ಅತ್ಯಂತ ಹಿರಿಯರಾದ ಅವರು ಆ ಜವಾಬ್ದಾರಿ ಸ್ಥಾನವನ್ನು ಹೊಂದಿರುವುದರಿಂದ ಕಾಂಗ್ರೆಸ್ಸಿನಲ್ಲಿರುವ ಅನೇಕ ರೀತಿಯ ಅಶಿಸ್ತು

ಹಿಮ್ಮತಪುರದ ಸಂಗೀತ ಸಂಘ

ಈ ಸಂಘದ ವಾರ್ಷಿಕೋತ್ಸವವು ನಾಳೆ ಸಾರಿಗ್ರಾಮದಲ್ಲಿ ನಡೆಯಲಿರುವುದಾಗಿ ದಯವಿಟ್ಟು ಮುಂಬರುಗ ಲೆಲ್ಲ ತಪ್ಪದೆ ಬರಬೇಕಾಗಿಯೂ, ಮೈಸೂರಿನಿಂದ ಸದಸ್ಯರುಗಳು ಬರ್ಸ್ಸಾಗಿ ಪ್ರಯಾಣ ಮಾಡಲು ಏರ್ಪಡಿಸಲಾಗಿದೆಯೆಂದೂ, ಬಸ್ಸುಗಳು ರಾಜ ಬಹದ್ದೂರ್ ಛತ್ರದ ಬಳಿಯಿಂದ ೭-೩೦ ಘಂಟೆ ಒಳಗೆ ಹೊರಡುವುವೆಂದೂ, ಪ್ರಾರ್ಥಿಸಲಾಗಿದೆ

ಅಂದಿನ ಕಾರ್ಯಕ್ರಮ

ಬೆಳಗ್ಗೆ ೭.೩೦ ಸುಪ್ರಭಾತ, ಮಧ್ಯಾಹ್ನ ೧-೩೦ ಕ್ಕೆ ಸಂಗೀತ ೧-೫೦ ಹಾಡು ಮತ್ತು ಕಮ್ಮತಂ ೨ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೩.೦ ನಿತಾರ್ ಸಂಗೀತ ೬.೧೦ ಆರ್ತಿ ೭ ಚಿತ್ರ ಸಂಗೀತ ೭-೩೦ ಮತ್ತು ರಾತ್ರಿ ೯-೩೦ ಕ್ಕೆ ಪೌರಾಣಿಕ ನಾಟಕ "ಜಲಗಾರ"

ಮತ್ತು ಮತ್ತು ಕೋಮುವಾರು ಭಾವನೆಯನ್ನು ಹೋಗಲಾಡಿಸಿ ಕಾಂಗ್ರೆಸ್ಸನ್ನು ಪುನರುಜ್ಜೀವನಗೊಳಿಸುವರೆಂದು ಆಶಿಸುವುದಾಗಿ ಅವರು ಹೇಳಿದರು

SRI GAYATRI TUTORIAL COLLEGE,

C/o THE CENTRAL COLLEGE OF COMMERCE

Vanivilas Market Buildings

Offers excellent coaching for S S L C & I Com students taking the September 1952 Examination Admissions are being received Enrol immediately

THE CENTRAL COLLEGE OF COMMERCE

Vanivilas Market Buildings

Admissions to Diploma Courses in Commerce and Stenography, Typewriting and Shorthand, will be received on all working days Reserve your seats immediately

ಮೈಸೂರು ದೊಡ್ಡಕೆರೆ ಮೈದಾನದಲ್ಲಿ

15—6—52ನೇ ಭಾನುವಾರ ಮಧ್ಯಾಹ್ನ 4 ಘಂಟೆಗೆ

ಅಮೋಘವಾದ 6 ಜೊತೆ ಭಾರಿ ಕುಸ್ತಿಗಳು



ಪೈ॥ ಸ್ವಾಟ್ ರಾಮು ಕರಡಿ(ತಿಜಪಾಡ ಕಾಡು ಮೃಗ)

ಪೈ॥ ರಾಜ ಚೆನ್ನೂರು ನಂಜಪ್ಪ — ಪೈ॥ ಕೃಷ್ಣಾಜಿ (ಬೆಂಕಿಯ ಮಗ)

ಪೈ॥ ಸಾಬೂಲಾಲ್ - ಭಾಷಾ (ಮೆಹಬೂಬ್ ತಮ್ಮ)

ಸ್ವಾಟ್ ರಾಮುವಿಗೂ ಹೊಸದಾದ ಕರಡಿಗೂ ನಡೆಯುವ ಕಾಳಗವನ್ನು ನೋಡಲು ಮರೆಯಬೇಡಿರಿ

ಟಿಕೆಟ್ಟುಗಳು ಮಾರ್ಕೆಟ್ ಚೌಕದಲ್ಲೂ ಮತ್ತು ಹಳೇ ಅಗ್ರಹಾರದಲ್ಲಿರುವ ಶ್ರೀನಿವಾಸ ಸೈಕಲ್ ಶಾಪಿನಲ್ಲೂ ದೊರೆಯುತ್ತವೆ

ಪ್ರಭು ದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

14-6-52ರಿಂದ :: ಅಮೋಘ ಪ್ರಾರಂಭ

ಜೆಮಿನಿಯವರ

* ಬಾಲನಾಗಮ್ಮ *

ಪಾತ್ರ ಕಾಂಚನಮಾಲ, ಪುಷ್ಪವಲ್ಲಿ, ಡಾ॥ ಸಿ ಬೈರಾವ್, ಬಳ್ಳಾರಿ ಲಲಿತ ಮುಂತಾದವರು

ನೆನಪಿರಲಿ! :: ನೆನಪಿರಲಿ!

ಅಬೀದ್ ರವರ ಹರಾಜು ಮಾರಾಟ

—:o:—

ನಾಳೆ ಬೆಳಗ್ಗೆ 9-30 ಕ್ಕೆ

ಮೈಸೂರು ಟ್ರಾನ್ಸಿಟ್ ಸರ್ವೀಸ್

ದಿವಾನ್ಸ್ ರಸ್ತೆ, ಮೈಸೂರು ಫೋನ್ ನಂ 537

ಮೈಸೂರು ಮತ್ತು ಮದರಾಸುಗಳ ನಡುವೆ

ನಮ್ಮ ಏಜೆಂಟರಾದ ಮೆಸರ್ಸ್ ಮದ್ರಾಸು ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೂಲಕ ಸುವ್ಯವಸ್ಥಿತ ರೀತಿಯಲ್ಲಿ ಸರಕುಗಳನ್ನು ರವಾನಿಸುವ ಸಂಸ್ಥೆ

ಮಾಲೀಕರು:—ಮೆ॥ ತೀರ್ಥ ಅಂಡ್ ಕಂಪೆನಿ

ಸಂಗ್ರಹ ಶಾಖೆ — ಮೆಸರ್ಸ್ ಎಸ್. ಎಸ್. ಶೆಟ್ಟಿ,

ಹನುಮಂತ ರಾವ್ ರಸ್ತೆ (ಪ್ರಭಾ ಟಾಕೀಸ್ ಹತ್ತಿರ) ಮೈಸೂರು

ಬೆಂಗಳೂರು ನಂ 792 WEEKLY EDITION ಅಂಚೆ ಚಿಲ್ಲರೆ 6 ಕಾಸು

ಸಾಧ್ವಿ

ಸಂಪುಟ ೧೬] ಶನಿವಾರ ೧೫-೩-೫೩ [ಸಂಚಿಕೆ ೪೭

ಮೈಸೂರು ಆಯವ್ಯಯದಲ್ಲಿ ೧½ ಕೋಟಿ ಖೋತ

ಮದ್ರಾಸಿನ ಆಹಾರ ಶಾಖೆ ಸಿಬ್ಬಂದಿಯಲ್ಲಿ ಖೋತಾ

ಮದರಾಸಿನಲ್ಲಿ ಪಡಿತರ ಮತ್ತು ಹತೋಟಿಗಳನ್ನು ರದ್ದು ಮಾಡಿರುವುದರಿಂದ ಆ ಎರಡು ಕೆಲಸಗಳಿಗಾಗಿ ನೇಮಿಸಿಕೊಂಡಿದ್ದ ಸಿಬ್ಬಂದಿಯಲ್ಲಿ ಕೇವಲ ಎರಡು ನೌಕರರ ಹೊರತು ಉಳಿದವರನ್ನು ತೆಗೆಯಲಾಗುವುದೆಂದೂ ಈ ಕ್ರಮವು ಬರುವ ವಾರದಿಂದ ಆರಂಭವಾಗಲಿದೆ ಎಂದೂ ತಿಳಿದುಬಂದಿದೆ

ಹೈದ್ರಾಬಾದ್ ನವಾಬರ ಮೇಲೆ ದಾವಾ

ಪೊಲೀಸ್ ಕಾರ್ಯಾಚರಣೆಗೆ ಮುನ್ನ ಹೈದರಾಬಾದಿನ ಹಣಕಾಸಿನ ಸಚಿವರಾಗಿ ನವಾಬ್ ಮೊಯಿನ್ ನವಾಜ್ ಜಂಗರು ಪಾಕಿಸ್ತಾನಕ್ಕೆ ವರ್ಗಾಯಿಸಲು ಗಿದ್ದ ಸರ್ಕಾರದ ಕೋಟಿ ೨೫ ಲಕ್ಷ ರೂ ಗಳನ್ನು ವಾಪಸು ಪಡೆಯಲು ಅವರ ಮೇಲೆ ನ್ಯಾಯಾಲಯದಲ್ಲಿ ದಾವಾ ಹೂಡಲಾಗಿದೆಯೆಂದು ಮೊನ್ನೆ ಅಲ್ಲಿನ ಶಾಸನ ಸಭೆಯಲ್ಲಿ ಈಗಿನ ಹಣಕಾಸಿನ ಮಂತ್ರಿ ಡಾ॥ ಮೇಲುಕೋಟೆ ಯವರು ತಿಳಿಸಿದರು

ಕೋಜೆ ದ್ವೀಪದಲ್ಲಿ ಯುದ್ಧ ಖೈದಿಗಳ ದಂಗೆ

ಕೊರಿಯದ ಕೋಜೆ ದ್ವೀಪದಲ್ಲಿಡಲ್ಪಟ್ಟಿರುವ ಯುದ್ಧ ಖೈದಿಗಳಲ್ಲಿ ೫೦೦ ಮಂದಿ ಮೊನ್ನೆ ದಂಗೆಯೆದ್ದು ಮತ್ತೊಂದು ಶಿಬಿರಕ್ಕೆ ರವಾನೆಯಾಗಲು ಸಮ್ಮತಿಸಲಿಲ್ಲವೆಂದೂ, ಗಲಭೆಯಾಗದಂತೆ ತಡೆಯಲು ಅಮೆರಿಕದ ಸೈನ್ಯಗಳನ್ನು ಆ ದ್ವೀಪಕ್ಕೆ ಕಳುಹಿಸಲಾಯಿತೆಂದೂ ವರದಿಯಾಗಿದೆ ಈಗ ಅಲ್ಲಿ ಶಾಂತಿ ನೆಲೆಸಿರುತ್ತದೆ

ಕೊರಿಯಕ್ಕೆ ತಾಟಸ್ಥ್ಯ ದೇಶಗಳ ನಿಯೋಗ

ಕೊರಿಯದಲ್ಲಿ ಕಮ್ಯೂನಿಸ್ಟ್ ಯುದ್ಧ ಖೈದಿಗಳ ಬಗ್ಗೆ ತೋರಲಾಗುತ್ತಿರುವ ವರ್ತನೆಯನ್ನು ಪರಿಶೀಲಿಸಲು ಭಾರತ, ಸ್ವೀಡನ್, ಸ್ವಿಟ್ಸರ್‌ಲೆಂಡ್, ಪಾಕಿಸ್ತಾನ ಮತ್ತು ಇಂಡೋನೇಷ್ಯಗಳಿಂದ ಮಿಲಿಟರಿ ವೀಕ್ಷಕರ ನಿಯೋಗವೊಂದನ್ನು ಕಳುಹಿಸಬಹುದೆಂದು ಅಮೆರಿಕದ ಅಧ್ಯಕ್ಷ ಟ್ರೂಮನ್ನರು ಸಲಹೆ ಮಾಡಿರುತ್ತಾರೆ

ರೈಲುಗಾಡಿ ತಯಾರಿಕೆ ಬಗ್ಗೆ ವಿದೇಶಗಳಿಗೆ ಆರ್ಡರಿಲ್ಲ

ಭಾರತಕ್ಕೆ ರೈಲ್ವೆ ಕೋಚು ಮತ್ತು ವ್ಯಾಗನ್ನುಗಳನ್ನು ತಯಾರಿಸಲು ಹೊರ ದೇಶಗಳಿಗೆ ಆರ್ಡರು ಕೊಟ್ಟಿಲ್ಲವೆಂದೂ, ಈ ದೇಶದಲ್ಲೇ ಇರುವ ವರ್ಕ್‌ಷಾಪುಗಳಲ್ಲಿ ಈಗ ೧,೩೦೦ ಕೋಚುಗಳೂ ಮತ್ತು ೪,೯೦೩ ವ್ಯಾಗನ್ನುಗಳನ್ನೂ ತಯಾರಿಸಲಾಗುತ್ತಿದೆಯೆಂದೂ ಅವಕ್ಕಾಗಿ ಒಟ್ಟು ೧೭ ಕೋಟಿ ರೂ ವೆಚ್ಚ ತಗಲುವುದೆಂದೂ ಪಾರ್ಲಿಮೆಂಟ್ ಸಭೆಯಲ್ಲಿ ಪಾರ್ಲಿಮೆಂಟರಿ ಕಾರ್ಯದರ್ಶಿಯವರು ತಿಳಿಸಿರುವರು

ಕಾಶ್ಮೀರದಲ್ಲಿ ರಾಜತ್ವದ ರದ್ದು

ಕಾಶ್ಮೀರದಲ್ಲಿ ವಂಶಪಾರಂಪರ್ಯ ರಾಜತ್ವದ ಪದ್ಧತಿಯನ್ನು ರದ್ದುಮಾಡಿ ಚುನಾಯಿತ ಅಧಿಪತಿಯನ್ನು ಆರಿಸಿಕೊಳ್ಳುವ ಕ್ರಮವನ್ನು ಜಾರಿಗೆ ತರಲು ಅಲ್ಲಿನ ರಾಜ್ಯಾಂಗ ಸಮಿತಿಯು ತೀರ್ಮಾನಿಸಿರುತ್ತದೆ

ಸಂಸ್ಥಾನದ ಆಯವ್ಯಯದಲ್ಲಿ ೧½ ಕೋಟಿ ರೂ. ಖೋತಾ

ಬೆಂಗಳೂರು ೧೩

ಸಂಸ್ಥಾನದ ಹೊಸ ಆಯವ್ಯಯದ ಅಂದಾಜಿನಲ್ಲಿ ೧½ ಕೋಟಿ ರೂ ಗಳು ಖೋತಾ ಆಗುವ ಸಂಭವವಿದೆಯೆಂದು ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಟಿ ಚನ್ನಯ್ಯನವರು ತಿಳಿಸಿದ್ದಾರೆ

ಸಿನಿಮಾ ಮತ್ತು ಸಭೆಗಳಲ್ಲಿ ಧೂಮಪಾನಕ್ಕೆ ನಿಷೇಧ

ಕಟ್ಟಡಗಳು ಮತ್ತು ಚಾವಣಿಗಳುಳ್ಳ ಆವರಣಗಳಲ್ಲಿ ನಡೆಯುವ ಚಲನ ಚಿತ್ರ ಪ್ರದರ್ಶನ, ನಾಟಕ ನೃತ್ಯ ಮತ್ತು ಬಹಿರಂಗ ಸಭೆಗಳಲ್ಲಿ ಧೂಮಪಾನವನ್ನು ನಿಷೇಧಿಸುವ ಬಗ್ಗೆ ಸರ್ಕಾರದವರು ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ತರಲಿರುವರು ಈ ಆಜ್ಞೆಯನ್ನು ಉಲ್ಲಂಘಿಸುವವರ ಮೇಲೆ ಕ್ರಮವನ್ನು ಜರುಗಿಸಿ ಸಭೆಯಿಂದ ಹೊರದೂಡಿ ೫೦ ರೂ, ಜುಲ್ಮಾನೆಯನ್ನು ವಿಧಿಸಲು ಅವಕಾಶವಿರುವುದು

ರಾಣಿ ಸೀರೆಗೆ ಬೆಂಕಿ ಹಚ್ಚಿ ಸುಟ್ಟ ಆಪಾದನೆ

ಬಾಮುಧೀರಜ್ ಕುವರ್ ಎಂಬ ೧೯ ವರ್ಷದ ರಾಜಕುಮಾರಿಯನ್ನು ಒಂದು ವರ್ಷದ ಹಿಂದೆ ಸುಟ್ಟು ಕೊಂದರೆಂಬ ಆಪಾದನೆಗೆ ಒಳಗಾಗಿ ಬರೋಡಾ ಸೆಷನ್ಸ್ ನ್ಯಾಯಾಧೀಶರಿಂದ ಖುಲಾಸೆಯಾಗಿದ್ದ ೧೫ ವರ್ಷ ವಯಸ್ಸಿನ ರಾಜಕುಮಾರ ಮತ್ತು ಅವರ ತಾಯಿಯನ್ನು ಪುನಃ ದಸ್ತಗಿರಿ ಮಾಡಬೇಕೆಂದು ಬೊಂಬಾಯಿಯ ಹೈ ಕೋರ್ಟು ಆಜ್ಞೆ ಮಾಡಿರುತ್ತದೆ ಒಂದು ರಾತ್ರಿ ಆಕೆಯನ್ನು ಗಂಡನೂ, ಅತ್ತೆಯೂ ಹೊಡೆದು, ಕೈ ಕಾಲು ಕಟ್ಟಿ ಸೀರೆಗೆ ಬೆಂಕಿ ಹತ್ತಿಸಿದರೆಂದೂ, ಅಕ್ಕ ಪಕ್ಕದ ಜನರಿಗೆ ಬೆಂಕಿ ಕಾಣಿಸಲಾಗಿ ಅವರು ಬಂದು ಆರಿಸಿದರೆಂದೂ ಹೇಳಲಾಗಿದೆ

ಪ್ರಜಾ ಮಂಡಳದ ಬಹಿರಂಗ ಸಭೆ

ಆಹಾರದ ಪರಿಸ್ಥಿತಿಯನ್ನು ಪರಿಶೀಲಿಸಲು ಈ ಸಂಜೆ ೬½ ಗಂಟೆಗೆ ಪ್ರಜಾ ಮಂಡಲದ ಆಶ್ರಯದಲ್ಲಿ ಬಹಿರಂಗ ಸಭೆಯೊಂದು ಟೌನ್ ಹಾಲ್ ಮೈದಾನದಲ್ಲಿ ನಡೆಯಲೇರ್ಪಾಡಾಗಿದೆ

ಶಾಸನ ಸಭಾ ಮೇಲ್ಮನೆ ಅಧ್ಯಕ್ಷರ ಸಂಬಳ

ಬೆಂಗಳೂರು ೧೫

ಸಂಸ್ಥಾನದ ಹಿರಿಯ ಶಾಸನಸಭೆಯ ಅಧ್ಯಕ್ಷ ಉಪಾಧ್ಯಕ್ಷರ ಸಂಬಳ ಮತ್ತು ಭತ್ಯಗಳನ್ನು ನಿಗದಿ ಮಾಡಿ ಶ್ರೀಮನ್ಮಹಾರಾಜರು ಒಂದು ಆಜ್ಞೆಯನ್ನು ಹೊರಡಿಸಿರುವರು ಅಧ್ಯಕ್ಷರಿಗೆ ಮಾಹೆಯಾನ ೮೦೦ ರೂ ಸಂಬಳ, ೩೫೦ ರೂ ವಾಹನ ಭತ್ಯ ಮತ್ತು ೨೦೦ ರೂ ಮನೆ ಬಾಡಿಗೆ ಅಥವಾ ಸುಸಜ್ಜಿತವಾದ ಒಂದು ಮನೆ, ಮತ್ತು ಉಪಾಧ್ಯಕ್ಷರಿಗೆ ತಿಂಗಳಿಗೆ ೩೫೦ ರೂ ಸಂಬಳವನ್ನು ಗೊತ್ತು ಮಾಡಲಾಗಿದೆ ಕೆಳ ಸಭೆ ಅಧ್ಯಕ್ಷರಿಗೆ ಕೊಡುವಂತೆಯೇ ಮೇಲ್ಮನೆ ಅಧ್ಯಕ್ಷರಿಗೂ ಪ್ರಯಾಣದ ಭತ್ಯವನ್ನು ಕೊಡಲಾಗುವುದು

ಮುಖ್ಯ ಮಂತ್ರಿಗಳಿಗೆ ಕಾಂಗ್ರೆಸ್ ಅಧ್ಯಕ್ಷತೆಯಿಲ್ಲ

ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೆ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಕೊಡಲು ಯೋಚಿಸಿರುವುದಾಗಿ ಹಾಗು ಹೇಳಲಿಲ್ಲವೆಂದೂ, ತಮ್ಮ ಹೇಳಿಕೆಯು ಸರಿಯಾಗಿ ವರದಿಯಾಗಿಲ್ಲವೆಂದೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಲಾಲ್ ಬಹದ್ದೂರ್ ಶಾಸ್ತ್ರಿಗಳು ತಿಳಿಸಿರುತ್ತಾರೆ

ದೇಶಾದ್ಯಂತ ಆಹಾರದ ಹತೋಟಿ ತೆಗೆಯುವುದಿಲ್ಲ

ಭಾರತದ ಪ್ರಧಾನ ಮಂತ್ರಿ ನೆಹರೂರವರು ನೆನ್ನೆ ರೇಡಿಯೋ ಭಾಷಣ ಮಾಡುತ್ತಾ, ದೇಶದಲ್ಲಿ ಗೋಧಿಯು ದಾಸ್ತಾನು ಹೆಚ್ಚಾಗಿರುವುದೆಂದೂ, ಆದರೆ ಅಕ್ಕಿಯು ಸಾಕಷ್ಟಿಲ್ಲವೆಂದೂ ತಿಳಿಸಿದರು. ಸರ್ಕಾರ ಬೆಲೆಗಿಂತ ಕಡಿಮೆಯಾಗಿ ಧಾನ್ಯವು ಮಾರಾಟವಾಗಿ ಬೆಳೆಯುತ್ತಿದೆಯಾದರೂ ಹತೋಟಿಯನ್ನು ತೆಗೆದಲ್ಲಿ ಕಠಿಣ ಪರಿಸ್ಥಿತಿ ಸಂಭವಿಸಬಹುದೆಂದು ನಿರೀಕ್ಷಿಸಲಾಗಿದೆ ಧಾನ್ಯದ ಸಾಗಾಣಿಕೆ ಮತ್ತು ಶೇಖರಣೆ ಬಗ್ಗೆ ಹತೋಟಿಗಳನ್ನು ಸದ್ಯ ಮುಟ್ಟಿಗೆ ಸಡಿಲಿಸಲಾಗುವುದು ಎಂದು ಅವರು ಹೇಳಿದರು ಎಲ್ಲ ಕಡೆಗಳಲ್ಲೂ ಹತೋಟಿಯನ್ನು ರದ್ದು ಮಾಡುತ್ತಿಲ್ಲವೆಂದು ಅವರು ತಿಳಿಸಿದರು

ನಗರಗಳಲ್ಲೂ ಆಹಾರ ಹತೋಟಿ ರದ್ದಾಗಬೇಕು

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಅಭಿಪ್ರಾಯ

ಸ್ವಂ ವ ವರದಿ] ಬೆಂಗಳೂರು ೧೫

ಈ ದಿನ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ನಡೆದು ನಗರಗಳಲ್ಲೂ ಆಹಾರ ಧಾನ್ಯಗಳ ಹತೋಟಿಯನ್ನು ರದ್ದು ಮಾಡಿ ಪಡಿತರವನ್ನು ತೆಗೆದುಹಾಕಬೇಕೆಂಬ ಅಭಿಪ್ರಾಯವನ್ನು ಅನೇಕರು ಸೂಚಿಸಿದರೆಂದು ಗೊತ್ತಾಗಿದೆ

ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಯನ್ನು ಈ ಕೆಳಗೆ ಕಂಡಂತೆ ಪುನರ್ರಚನೆ ಮಾಡಲಾಯಿತು — ಅಧ್ಯಕ್ಷರು. ಶ್ರೀ ಹೆಚ್ ಸಿ ದಾಸಪ್ಪನವರು ಸದಸ್ಯರು ಶ್ರೀಗಳಾದ ಹೆಚ್ ಎಸ್ ರುದ್ರಪ್ಪ, ಟಿ ಸುಬ್ರಹ್ಮಣ್ಯ, ಎಚ್ ಚನ್ನಯ್ಯ ಮತ್ತು ಶ್ರೀ ಎಲ್ ಹೆಚ್ ವೆಂಕಟರಾವ್ (ಕಾರ್ಯದರ್ಶಿ)

ಕಾಂಗ್ರೆಸ್ ಸದಸ್ಯರನ್ನು ಭೂದಾನದ ಕಾರ್ಯವನ್ನು ಕೈಗೊಳ್ಳಲೂ, ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ನೆರವು ನೀಡಲೂ, ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಸೂಚನೆ ಕೊಡುವುದು, ಕಾಂಗ್ರೆಸ್ ಸಂಸ್ಥೆಯನ್ನು ತ್ಯಜಿಸಿದ್ದ ಹಿರಿಯ ಅಧಿಕ ಹಲವು ಸದಸ್ಯರನ್ನು ಅವರ ಕೋರಿಕೆ ಮೇರೆ ಪುನಃ ಕಾಂಗ್ರೆಸ್ಸಿಗೆ ಸೇರಿಸಲು ಅನುಮತಿ ಕೊಡುವುದು (ಆದರೆ ಒಂದು ವರ್ಷ ಅವರನ್ನು ಯಾವ ಅಧಿಕಾರ ಸ್ಥಾನಕ್ಕೂ ಆರಿಸದಿರುವುದು) ಇವೇ ಮುಂತಾದ ನಿರ್ಣಯಗಳಾದುವು

ಹೂವಿನ ಪಲ್ಲಕ್ಕಿ ಉತ್ಸವ

ಶ್ರೀರಾಂಪೇಟೆ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯು ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀ ರಾಮಚಂದ್ರ ಸ್ವಾಮಿಯವರಿಗೆ ಹೂವಿನ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಲಾಗಿದೆ ಮೆರವಣಿಗೆಯು ಕೊತ್ವಾಲ್ ರಾಮಯ್ಯನವರ ರಸ್ತೆ, ಹಾರ್ಡಿಂಜ್ ಶಾಸ್ತ್ರಿ ರಸ್ತೆ, ಶ್ರೀರಾಂಪೇಟೆ, ಅಶೋಕ ರಸ್ತೆ, ಜಮಾಲ್ ಮಠದ ಬೀದಿ, ಕಾಳಮ್ಮನ ಗುಡಿ ಬೀದಿ, ಡಿ ಅರ್ ಅಗ್ರಹಾರ ರಸ್ತೆ ಸಯ್ಯಾಜಿರಾವ್ ರಸ್ತೆ ಮೂಲಕ ಹಾಯ್ದು ಸ್ವಸ್ಥಾನವನ್ನು ಸೇರುವುದು

ಇಂಜಿನಿಯರಿಂಗ್ ಪರೀಕ್ಷೆಯಲ್ಲಿ ಹೇರಾಫೇರಿ

ಈ ವರ್ಷದ ಇಂಜಿನಿಯರಿಂಗ್ ಕಾಲೇಜು ಪರೀಕ್ಷೆಗಳಲ್ಲಿ ಅನೇಕರು ಉತ್ತೀರ್ಣರಾಗಿರುವುದಿಲ್ಲ ಮೊದಲನೆ ಮತ್ತು ಎರಡನೇ ತರಗತಿಗಳ ವಿಷಯವಂತೂ ಶೋಚನೀಯವಾಗಿದೆ ಒಂದು ವಿಷಯವನ್ನು ಎರಡು ಭಾಗಗಳಾಗಿ ಮಾಡಿರುತ್ತದು ಕಳೆಯಲ್ಲ ಎರಡನೇ ತರಗತಿಯಲ್ಲಿ ಪಾಸಾಗಿರುತ್ತಿಲ್ಲ, ಮೊದಲನೇ ತರಗತಿಯಲ್ಲಿ ಫೇಲ್ ಮತ್ತು ಕೆಮಿಸ್ಟ್ರಿಗಳ ಪ್ರಶ್ನೆ ವಿಭಾಗಿಸಿರುತ್ತಾರೆ. ವಿಶ್ವವಿದ್ಯಾಲಯದವರು ಇದರಿಂದ ಉಂಟಾಗುವ ತೊಂದರೆಯನ್ನು ಪರಿಶೀಲಿಸಿ ಅದನ್ನು ತಪ್ಪಿಸುವರೆಂದು ಆಶಿಸಲಾಗಿದೆ

ನೊಂದ ವಿದ್ಯಾರ್ಥಿ

ವಾರ ಭವಿಷ್ಯ

೧೫-೬-೫೨ ರಿಂದ ೨೧-೬-೫೨ ರ ವರೆವಿಗೆ

ಮೇಷ— ಆರೋಗ್ಯ ಉತ್ತಮ ಬೇಸರ ಹೆಚ್ಚು ವ್ಯಾಪಾರ ಉದ್ಯೋಗಗಳಲ್ಲಿ ಸ್ಥಿತಿ ತೃಪ್ತಿಕರವಾಗಿಲ್ಲ ಖರ್ಚು ಹೆಚ್ಚು ತಾ|| ೧೫, ೧೬ ಕಲಹ ಕುಟುಂಬದ ಚಿಂತೆ

ವೃಷಭ — ಆರೋಗ್ಯ ಉತ್ತಮ ಸಾರ್ವಜನಿಕ ಕಾರ್ಯದಲ್ಲಿ ಯಶಸ್ಸು ಆರ್ಥಿಕ ಸ್ಥಿತಿ ಚೆನ್ನಾಗಿರುವುದು ವ್ಯವಹಾರಗಳಲ್ಲಿ ಪ್ರಗತಿ ತಾ|| ೧೫, ೧೭ ಮೃಷ್ಟಾನ್ನ ಭೋಜನ, ಮಿತ್ರ ಸಹಾಯ

ಮಿಥುನ — ಆರೋಗ್ಯ ಚೆನ್ನಾಗಿರದು ಸಜ್ಜನರ ಸಹವಾಸದಿಂದ ಮನಸ್ತೃಪ್ತಿ ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ತಾ|| ೧೬, ೧೮ ಬಂಧು ಮಿತ್ರರ ಭೇಟಿ

ಕರ್ಕ — ಆರೋಗ್ಯ ಸಾಧಾರಣ ಖರ್ಚು ಹೆಚ್ಚು ಧನಾಗಮನ ಉತ್ತಮ ವ್ಯವಹಾರಗಳಲ್ಲಿ ಹಾನಿಯಿಲ್ಲ ತಾ|| ೧೯, ೨೦ ಆಪ್ತ ಮಿತ್ರರ ಭೇಟಿ ಖರ್ಚು

ಸಿಂಹ — ಮಹತ್ತರ ಕಾರ್ಯಗಳಲ್ಲಿ ಯಶಸ್ಸು ಆರೋಗ್ಯ ಉತ್ತಮ ಪ್ರವಾಸ ಸುಖಕರವಾಗಿರುವುದು ವ್ಯವಹಾರಗಳಲ್ಲಿ ಪ್ರಗತಿ ತಾ|| ೧೫ ೧೭ ವಿಶ್ರಾಂತಿ ಕಮ್ಮಿ ಜಾಗರಣೆ

ಕನ್ಯಾ — ಆರೋಗ್ಯ ಸಾಧಾರಣ ಅಜಾಗರೂಕತೆಯಿಂದ ಕೆಲಸ ಕಾರ್ಯಗಳಲ್ಲಿ ಹಾನಿ ಸಂಭವ ಆರ್ಥಿಕ ಸ್ಥಿತಿ ಉತ್ತಮವಿರಲಾರದು ತಾ|| ೧೬ ೧೮ ಮನೋವ್ಯಾಕುಲ, ಖರ್ಚು

ತುಲ — ಆರೋಗ್ಯದ ಕಡೆ ಎಚ್ಚರಿಕೆಯಿಂದಿರಿ. ವ್ಯಾಪಾರ ವ್ಯವಹಾರಗಳಲ್ಲಿ ಹಾನಿ ಸಂಭವ ದೈವ ಕೃಪೆಯಿಂದ ತೊಂದರೆ ಕಮ್ಮಿ ತಾ|| ೧೯, ೨೦ ಹಣ ಕಾಸಿನ ಮುಗ್ಗಟ್ಟು ಕೆಟ್ಟ ವಾರ್ತೆ

ವೃಶ್ಚಿಕ —ಆರೋಗ್ಯ ಚೆನ್ನಾಗಿರಲಾರದು ದುಡ್ಡಿನ ಅಭಾವದಿಂದ ಕೆಲಸ ಕಾರ್ಯಗಳು ನಿಲ್ಲುವುವು ಪ್ರವಾಸ ಬೇಡ ವ್ಯವಹಾರಗಳಲ್ಲಿ ತೊಂದರೆ ತಾ|| ೧೬, ೧೯ ಮನೋವ್ಯಾಕುಲ

ಧನು — ಆರೋಗ್ಯ ಉತ್ತಮ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಧನಾಗಮನ ಚೆನ್ನಾಗಿದೆ ವ್ಯವಹಾರಗಳಲ್ಲಿ ಪ್ರಗತಿ ತಾ|| ೧೫, ೧೬ ಮಂಗಳ ಕಾರ್ಯ ಖರ್ಚು, ಜಾಗರಣೆ

ತೃತೀಯ ಯುದ್ಧ ಸಮೀಪಿಸುತ್ತಿದೆಯೆಂದು ಅರ್ಜಂಟೈನಾ ಅಧ್ಯಕ್ಷರ ಹೇಳಿಕೆ

ಅರ್ಜೆಂಟೈನಾದ ಅಧ್ಯಕ್ಷ ಪೆರಾನ್‌ರವರು ಮೊನ್ನೆ ಒಂದು ಹೇಳಿಕೆಯನ್ನಿತ್ತು ಸಧ್ಯದಲ್ಲೇ ಮೂರನೇ ಮಹಾಯುದ್ಧವು ಸಂಭವಿಸಲಿರುವುದೆಂದೂ ಅದು ಸುಮಾರು ಐದಾರು ವರ್ಷಗಳ ಕಾಲ ನಡೆಯಬಹುದೆಂದೂ ಅಂತಹ ಪರಿಸ್ಥಿತಿಗಾಗಿ ಅರ್ಜಂಟೈನಾವು ಎಲ್ಲ ಸಿದ್ಧತೆಗಳನ್ನೂ ಈಗಿನಿಂದಲೇ ಮಾಡಿಕೊಳ್ಳಬೇಕೆಂದೂ ಎಚ್ಚರಿಸಿರುವರು ಅಮೆರಿಕವು ತಯಾರಿಸುವಂತಹ ಶ್ರೇಷ್ಠ ದರ್ಜೆಯ ಮೋಟಾರು ಕಾರುಗಳನ್ನೇ ಅರ್ಜಂಟೈನಾವು ತಯಾರಿಸುತ್ತಿರುವುದಾದರೂ ಅಮೆರಿಕದ ಕಾರುಗಳಿಗೆ ಒಂದಕ್ಕೆ ಎರಡರಷ್ಟು ಬೆಲೆ ಕೊಡಲಾಗುತ್ತಿದೆ ಅಮೆರಿಕದ ಒಂದೊಂದು ಮೋಟಾರಿನ ಬೆಲೆಯಲ್ಲಿ ಪ್ರತಿಯೊಂದು ಕಾರಿನೊಡನೆಯೂ ತಯಾರಾಗುವ ಒಂದೊಂದು ಫಿರಂಗಿಯ ಬೆಲೆಯೂ ಸೇರಿರುತ್ತದೆ ನಮ್ಮಲ್ಲಿ ಮೋಟಾರು ಮತ್ತು ಇತರ ಉಪಕರಣಗಳ ತಯಾರಿಕೆಯು ಹೆಚ್ಚುವಂತೆಲ್ಲಾ ನಾವು ಹೊರಗಿನಿಂದ ಏನನ್ನೂ ತರದೆ ಇಲ್ಲಿಂದ ರಫ್ತು ಮಾಡಲೂ ಶಕ್ತರಾಗುವುದಲ್ಲದೆ ನಮ್ಮ ದೇಶದ ರಕ್ಷಣೆಗೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ತಯಾರಿಸಬಹುದೆಂದೂ ತಿಳಿಸಿರುವರು

ಕೇಂದ್ರ ಆಹಾರ ಶಾಖಾ ಅಧಿಕಾರಿಗಳ ದಸ್ತಗಿರಿ

ಕೇಂದ್ರ ಸರಕಾರದ ಆಹಾರ ಮತ್ತು ವ್ಯವಸಾಯ ಶಾಖೆಯ ಉನ್ನತಾಧಿಕಾರಿಗಳಾದ ಶ್ರೀಗಳು ಸಿ ಎಸ್ ಡಿ ಸ್ವಾಮಿ ಎಸ್ ವೈ ಕೃಷ್ಣಸ್ವಾಮಿ ರತಿಲಾಲ್ ನಾನಾವತಿ ಮತ್ತು ಎ ಕೆ ಸಾಹನಿ ಎಂಬುವರ ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿರುವ ಕಾರಣದ ಮೇಲೆ ಬಂಧಿಸಲ್ಪಟ್ಟಿರುವರೆಂದು ದೆಹಲಿ ಪಾರ್ಲಿಮೆಂಟಿನಲ್ಲಿ ಆಹಾರ ಸಚಿವ ಕೆ ಎಂ ಮುನ್ಷಿರವರು ತಿಳಿಸಿರುವರು

ಪ್ರಪಂಚದ ಕ್ರೀಡೆಗಳಲ್ಲಿ ಮೈಸೂರಿನವರ ಪಾತ್ರ

ಹೆಲ್ಸಿಂಕಿಯಲ್ಲಿ ನಡೆಯುವ ಪ್ರಪಂಚದ ಕ್ರೀಡೆಗಳಲ್ಲಿ ಭಾಗವಹಿಸುವ ಭಾರತದ ಹಾಕಿ ಟೀಮಿನಲ್ಲಿ ಮೈಸೂರು ಸಂಸ್ಥಾನದ ದೇಶಮುಖ್ ಮತ್ತು ರಾಜಗೋಪಾಲ್ ಇವರುಗಳು ಇರುವರು

ಮಕರ — ಆರೋಗ್ಯ ಸಾಧಾರಣ ವ್ಯಾಪಾರ,ಉದ್ಯೋಗಗಳಲ್ಲಿ ಸಾಮಾನ್ಯ ಫಲ ಮಾನಸಿಕ ಸ್ಥಿತಿ ಚೆನ್ನಾಗಿರದು ತಾ|| ೧೬, ೧೭ ಖರ್ಚು ಹೆಚ್ಚು ದುಸ್ಸಹವಾಸ

ಕುಂಭ ಆರೋಗ್ಯ ಚೆನ್ನಾಗಿರುವುದು ವ್ಯಾಪಾರ ಉದ್ಯೋಗಗಳಲ್ಲಿ ಯಶಸ್ಸು ಆರ್ಥಿಕ ಸ್ಥಿತಿ ಚೆನ್ನಾಗಿದೆ ಶತ್ರುಗಳ ಪರಾಭವ ತಾ|| ೧೬, ೧೭ ಪ್ರವಾಸ ಸಂಭವ, ಸಜ್ಜನರ ಸಹವಾಸ

ಮೀನ — ಆರೋಗ್ಯ ಚೆನ್ನಾಗಿರಲಾರದು ವ್ಯಾಪಾರ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದಿರಿ ಆರ್ಥಿಕ ಪರಿಸ್ಥಿತಿ ಸಾಧಾರಣ. ತಾ|| ೧೫, ೧೬ ಖರ್ಚು ಹೆಚ್ಚು ದುಸ್ವಪ್ನಗಳು

ರಂಜಾನ್ ಹಬ್ಬದ ರಜಾ ಬಗ್ಗೆ ಸರ್ಕಾರದವರು ಗಮನ ಕೊಡಬೇಕು

ರಂಜಾನ್ ಹಬ್ಬದ ದಿನ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ಸ್ ಶಾಸನದ ಪ್ರಕಾರ ಸಾರ್ವತ್ರಿಕ ರಜಾವಾಗಿರುತ್ತದೆ ಆದರೂ ಸರ್ಕಾರ ಆ ಬಗ್ಗೆ ಪ್ರತಿ ಸಾರಿಯೂ ರಜಾ ದಿವಸವೇ ಪ್ರಕಟಣೆಯನ್ನು ಹೊರಡಿಸುತ್ತಿರುವುದರಿಂದ ಬ್ಯಾಂಕುಗಳ ನೌಕರರಿಗೆ ತೊಂದರೆಯಾಗುತ್ತಿದೆ ಆದರಿಂದ ಸರ್ಕಾರದವರು ಮುಂಚಿತವಾಗಿಯೇ ಪ್ರಕಟಣೆಯನ್ನು ಹೊರಡಿಸಿ ತೊಂದರೆಯನ್ನು ತಪ್ಪಿಸಬೇಕೆಂದು ನೊಂದ ನೌಕರರು ಕೋರಿರುತ್ತಾರೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ಎಂ ಎಲ್ ವಸಂತಕುಮಾರಿ ಕರ್ನಾಟಕ ಸಂಗೀತ ಮಧ್ಯಾಹ್ನ ೨ ಚಿತ್ರ ಸಂಗೀತ, ಕರ್ನಾಟಕ ಕಾರ್ಯಕ್ರಮ ಸಂಜೆ ೫ ೩೦ ಮತ್ತು ೮ ... ಟೀಲು ವಾದನ, ಎಂ ಆರ್ ಸುಬ್ಬರತ್ನ ೭ ೩೦ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ಭಾಷಣ ೮-೩೦ ಮತ್ತು ೯ ೩೦ ಸಂಗೀತ ಶ್ರೀಮತಿ ಪ್ರಸಾದ್

ಅರಮನೆ ಮುಜರಾಯಿ ಇಲಾಖೆ

ಹರಾಜು ನೋಟೀಸ್

ನಾಡು ಹಂಚುಗಳು ಹಂಜರ ಬಗಿಲ ಕಟಕ ಚೌಕಟ್ಟು ಗಳು ಸಾಗುವಾನಿ ಪಂಕ್ತಿಗಳು ವಗೈರೆ ಸಂಮಾನುಗಳನ್ನು 1952ನೇ ಜೂನ್ 26ನೇ ತಾರೀಖು ಗುರುವಾರದಿಂದ ಪ್ರತಿ ದಿನವೂ ಬೆಳಗ್ಗೆ 9 ಘಂಟೆಯಿಂದ ಇಟ್ಟಿಗೆ ಗೂಡು ಮಾಡಲ್ ಮನೆಗಳ ಹತ್ತಿರ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಸಾಮಾನುಗಳನ್ನು ಹರಾಜಿನಲ್ಲಿ ಪಡೆಯಬಹುದು ಹರಾಜು ಕಂಡಿಷನ್ ವಗೈರೆಗಳನ್ನು ಆಫೀಸಿನಲ್ಲಿ ನೋಟೀಸ್ ಬೋರ್ಡಿನಲ್ಲಿ ನೋಡಬಹುದು

ಎಚ್ ಕೆ ಪಂಡಿತಾರಾಧ್ಯ,
ಮ್ಯಾನೇಜರ್ ಪ ಜಯಿರ್ ...

ಸಂಗೀತ ತರಗತಿಗಳು

ರಾಜಧಾನಿಯ ಮೈಸೂರ್ ರೋಡಿನಲ್ಲಿರುವ 369ನೇ ನಂಬರು ಮಾಧವ ಭವನ್‌ದಲ್ಲಿ ಸಂಗೀತ ತರಗತಿಗಳು ತೆರೆಯಲ್ಪಟ್ಟಿವೆ ಜೂನಿಯರ್ ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳಿಗೆ ವೀಣೆ ಮತ್ತು ಹಾಡುಗಾರಿಕೆಯಲ್ಲಿ ವಿದ್ಯಾರ್ಥಿನಿಯರಿಗೆ ವೈಣಿಕ ದ್ವಾರ್ ಆರ್ ಎಸ್ ದೊರೆಸ್ವಾಮಿಯವರಿಂದ ಶಿಕ್ಷಣವು ಕೊಡಲ್ಪಡುತ್ತದೆ ಸೇರಬಯಸುವವರು ವ್ಯವಸ್ಥಾಪಕರಿಂದ ವಿವರಗಳನ್ನು ತಿಳಿಯಬಹುದು

ಜ ಕೆ ಶ್ರೀನಿವಾಸರಾವ್
ವ್ಯವಸ್ಥಾಪಕರು

COACHING CLASS

Dalvoy High School

Coaching class for S S L C Candidates appearing for the September Examination 1952 will be Conducted in Dalvoy High School Efficient Coaching will be given

The classes start work from the 15th of this month Further details can be had from the organiser during the school hours

Time 7 0 A M to 10-30 A M Apply sharp

ORGANISER

THE CITY TUTORIAL COLLEGE

(Near V V Market Mysore)

§ S S L C Coaching Classes
(For Sept 52 & March 53)
§ INTER Eng, P C M, C B Z & Commerce
§ B Sc — English and P C M

ಮಿಡಲ್ ಸ್ಕೂಲಿನ ಎಲ್ಲಾ ತರಗತಿಗಳೂ ನಡೆಯುತ್ತಿವೆ

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

14-6-52ರಿಂದ :: ಅಮೋಘ ಪ್ರಾರಂಭ

ಜೆಮಿನಿಯವರ * ಬಾಲನಾಗಮ್ಮ *

ಪಾತ್ರ ಕಾಂಚನಮಾಲ, ಪುಷ್ಪವಲ್ಲಿ ಎ ‖ ಸುಬ್ಬರಾವ್ ಬಳ್ಳಾರಿ ಲಲಿತ ಮುಂತಾದವರು

ರಾಜಕಮಲ್ ಟಾಕೀಸ್, ಮೈಸೂರು

13 6 52ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

* (ತಮಿಳು) ನನ್ನ ತಂಗಿ (ತಮಿಳು) *

ಭೂಮಿಕೆಯಲ್ಲಿ — ಮಾಧುರಿದೇವಿ, ಎಂ ಜಿ ರಾಮಚಂದ್ರನ್, ಟಿ. ಎಸ್ ಗೋವಿಂದನ್, ಮುಂತಾದವರು

SRI GANESH

TALKIES

From 16 6 52 (2 days only)

TRAIL OF ROBINHOOD

[In True color]

The action thrill of all time

Starring Roy Rogers Ray Corrigan Jack Holt

From 18—6—52

'SURRENDER'

Edited, Printed and Published by A R Nagarajan at Sadhvi Press, D Subbiah Road Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧೭-೬-೫೨ [ಸಂಚಿಕೆ ೨೬೩

ಹಿರಿಯ ಶಾಸನ ಸಭಾ ಅಧ್ಯಕ್ಷತೆಗೆ ಕೆ. ಟಿ. ಭಾಷ್ಯಂ

ಬೆಂಗಳೂರು ಮತ್ತು ಚಿನ್ನದ ಗಣಿಗಳಲ್ಲಿ ಮಾತ್ರ ಪಡಿತರ

ಇತರ ಕಡೆಗಳಲ್ಲಿ ರದ್ದು ಮಾಡುವಂತೆ ಕಾಂ|| ಕಾರ್ಯಕಾರಿ ಸಮಿತಿ ಸಲಹೆ

ಬೆಂಗಳೂರು ೧೬

ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಶ್ರೀ ಹೆಚ್ ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಸಂಸ್ಥಾನದಲ್ಲಿ ಬೆಂಗಳೂರು ನಗರ ಮತ್ತು ಕೋಲಾರದ ಚಿನ್ನದ ಗಣಿಗಳ ವಿನಹ ಉಳಿದ ಕಡೆಗಳಲ್ಲಿ ಕೂಡಲೇ ಆಹಾರದ ಪಡಿತರವನ್ನು ರದ್ದುಗೊಳಿಸುವಂತೆಯೂ, ಇದರಿಂದ ಉಂಟಾಗುವ ಪರಿಣಾಮವನ್ನು ಅರಿತುಕೊಂಡನಂತರ ದೇಶಾದ್ಯಂತ ಪೂರ್ಣವಾಗಿ ಪಡಿತರವನ್ನು ತೆಗೆಯಬೇಕೆಂದೂ ಸಮಿತಿಯು ಠರಾವು ಮಾಡಿತು ಪಡಿತರವನ್ನು ತೆಗೆದನಂತರ ಉಳಿಯುವ ರೇಷನ್ ಡಿಪೋಗಳನ್ನು ಫೇರ್ ಪ್ರೈಸ್ ಡಿಪೋಗಳನ್ನಾಗಿ ಪರಿವರ್ತಿಸಬೇಕೆಂದೂ ಅದು ಸಲಹೆ ಮಾಡಿರುತ್ತದೆ

ಸ್ವಾಮಿ ಸೀತಾರಾಮರವರ ಉಪವಾಸ ಮುಕ್ತಾಯ

ಆಂಧ್ರ ಪ್ರಾಂತ್ಯದ ರಚನೆ ಸಂಬಂಧದಲ್ಲಿ ಸ್ವಾಮಿ ಸೀತಾರಾಮರವರು ಕಳೆದ ತಿಂಗಳು ೨೫ ನೇ ತಾರೀಖು ೩೦ ದಿನಗಳ ಉಪವಾಸವನ್ನು ಆರಂಭಿಸಿ ನೆನ್ನೆ ದಿನ ಯಶಸ್ವಿಯಾಗಿ ಅದನ್ನು ಮುಕ್ತಾಯಗೊಳಿಸಿದರು ನೆನ್ನೆ ಮಧ್ಯಾಹ್ನ ೨ ಘಂಟೆಗೆ ಅವರು ಗಂಗಾ ಜಲ ಬೆರಸಿದ ಹಣ್ಣಿನ ರಸವನ್ನು ತೆಗೆದುಕೊಂಡರು

ಅಗಸರ ಹೆಂಗಸರಿಂದ ಸಿನಿಮಾಗಳಿಗೆ ಬಹಿಷ್ಕಾರ

ಅಲಹಾಬಾದಿನ ಅಗಸರ ಕೋಮಿನ ಮುಖಂಡರು ಕಳೆದ ಗುರುವಾರ ಸಭೆ ಸೇರಿ ಸಿನಿಮಾಗಳಿಂದ ಸಂಭವಿಸುವ ಅನೀತಿ ಮತ್ತು ಅನರ್ಥಗಳನ್ನು ಪರಿಶೀಲಿಸಿ ಇನ್ನು ಮುಂದೆ ತಮ್ಮ ಕೋಮಿನವರೆಲ್ಲರೂ ಸಿನಿಮಾಗಳನ್ನು ಬಹಿಷ್ಕರಿಸಲು ನಿರ್ಧರಿಸಿದರು ಈ ನಿರ್ಧಾರವನ್ನು ಉಲ್ಲಂಘಿಸುವವರ ಮೇಲೆ ಬಹಿಷ್ಕಾರ ಹಾಕಬೇಕೆಂದೂ ನಿರ್ಣಯ ಮಾಡಲಾಯಿತು

ಏಕ ಕಾಲದಲ್ಲಿ ೫ ಕರುಗಳ ಜನನ

ಮದನಪಲ್ಲಿಯ ಬಳಿ ಮೇಕಲವಾರಿಪಲ್ಲಿ ಎಂಬ ಗ್ರಾಮದಲ್ಲಿ ಕಳೆದ ಶುಕ್ರವಾರ ಒಂದು ಹಸುವು ಏಕ ಕಾಲದಲ್ಲಿ ಐದು ಕರುಗಳನ್ನು ಹಾಕಿತೆಂದೂ ಎರಡು ಗಂಟೆಯ ಕಾಲದ ನಂತರ ಕರುಗಳೆಲ್ಲವೂ ಮೃತಪಟ್ಟುವೆಂದೂ ವರದಿಯಾಗಿದೆ

ಹಣ ದಸ್ತು ಮಾಡಿ ಪಾಕಿಸ್ತಾನಕ್ಕೆ ನೌಕರನ ಪರಾರಿ

ಎಸ್ಪ್ಲನೇಡ್ ನ ಪುರ ಜಿಲ್ಲೆಯ ಒಂದು ಸಬ್ ಡಿವಿಜನ್ ಕಛೇರಿಯ ಮುಸ್ಲಿಂ ನೌಕರನೊಬ್ಬನು ಸರ್ಕಾರದ ೨೦,೦೦೦ ರೂ ಹಣವನ್ನು ತೆಗೆದುಕೊಂಡು ಪಾಕಿಸ್ತಾನದ ಪೂರ್ವ ಬಂಗಾಳಕ್ಕೆ ಹೋಗಿ ಸೇರಿಕೊಂಡಿರುವನೆಂದೂ, ಎಕ್ಸ್ಟ್ರಡಿಷನ್ ವಾರಂಟಿನ ಮೂಲಕ ಅವನನ್ನು ವಾಪಸು ಕರೆಸಲು ಅಸ್ಸಾಂ ಸರ್ಕಾರದವರು ಪ್ರಯತ್ನಪಡುತ್ತಿರುವರೆಂದೂ ವರದಿಯಾಗಿದೆ

ಕಾಳಸಂತೆ ನಡೆಸಿದಂತೆ ಡಿಪೋ ಮಾಲೀಕರಿಂದ ಕರಾರು

ಮದರಾಸಿನ ಫೇರ್ ಪ್ರೈಸ್ ಡಿಪೋಗಳನ್ನು ನಡೆಸುತ್ತಿರುವ ಖಾಸಗಿ ಜನರು ಧಾನ್ಯಗಳ ಕಾಳಸಂತೆ ನಡೆಸ ಪುದಿಲ್ಲವೆಂಬ ಬಗ್ಗೆ ಭರವಸೆಯ ಕರಾರುಗಳನ್ನು ಅವರಿಂದ ಬರೆಸಿಕೊಳ್ಳಲಾಗುತ್ತಿದೆಯೆಂದು ತಿಳಿದುಬಂದಿದೆ

೬೭ ದಿನಗಳ ಉಪವಾಸ

ವಿಷಸರ್ಪಗಳ ನಡುವೆ ಗಾಜಿನ ಪೆಟ್ಟಿಗೆಯಲ್ಲಿ ಕುಳಿತು ೬೫ ದಿನಗಳ ಕಾಲ ಯಶಸ್ವಿಯಾಗಿ ಉಪವಾಸ ಮಾಡಿದ ಭಾರತದ ಫಕೀರ ರೋಜರ್ ಬರ್ಮನನು ಮತ್ತೆ ೬೭ ದಿನಗಳ ರಿಕಾರ್ಡು ಸ್ಥಾಪಿಸುವ ಸಲುವಾಗಿ ಸಿಸಲಿಯ ಪಲೇರ್ಮೊ ಎಂಬಲ್ಲಿ ಉಪವಾಸವನ್ನು ಆರಂಭಿಸಿ ೧೫ ದಿನಗಳವರೆಗೆ ಮುಂದುವರಿಸಿದನಂತರ ಕಳೆದ ಮಂಗಳವಾರ ಒಂದು ವಿಷಸರ್ಪವು ಅವನ ನಾಲಿಗೆಯಮೇಲೆ ಕಚ್ಚಿತೆಂದು ವರದಿಯಾಗಿದೆ ಕೂಡಲೇ ಅವನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಯಿತೆಂದೂ ಈಗ ಅವನು ಗುಣಹೊಂದುತ್ತಿರುವನೆಂದೂ ತಿಳಿದುಬಂದಿದೆ

ನಂಜರಾಜೆ ಅರಸಿನವರ ಚುನಾವಣೆ ರದ್ದು

ಮೈಸೂರು ಪ್ರದೇಶ ಕಾಂಗ್ರೆಸ್ಸಿಗೆ ಮೈಸೂರು ತಾಲ್ಲೂಕಿನಿಂದ ಡೆಲಿಗೇಟುಗಳ ಉಪಚುನಾವಣೆ ನಡೆದು ಶ್ರೀ ಎಂ ಎಲ್ ನಂಜರಾಜೇ ಅರಸಿನವರು ಚುನಾಯಿತರಾದ ಬಗ್ಗೆ ಅವರ ಪ್ರತಿಸ್ಪರ್ಧಿ ಶ್ರೀ ಕುಪ್ಪೇಗಾಲದ ಚಿನ್ನಸ್ವಾಮಿಯವರು ಜಿಲ್ಲಾ ಕಾಂಗ್ರೆಸ್ ಚುನಾವಣಾ ಟ್ರಿಬ್ಯೂನಲ್ಲಿನವರಾದ ಶ್ರೀ ಎಸ್ ಶ್ರೀರಂಗಾಚಾರ್ಯರಲ್ಲಿ ಒಂದು ತಕರಾರು ಅರ್ಜಿಯನ್ನು ಸಲ್ಲಿಸಿದ್ದರು ಶ್ರೀ ಎಸ್ ಶ್ರೀರಂಗಾಚಾರ್ಯರು ವಿಚಾರಣೆ ನಡೆಸಿ ಶ್ರೀ ನಂಜರಾಜ ಅರಸಿನವರಿಗೆ ಬಂದ ಓಟುಗಳ ಪೈಕಿ ಒಂದು ವ್ಯರ್ಥವಾದುದೆಂದು ತೀರ್ಪು ಕೊಟ್ಟಿರುತ್ತಾರೆ ಒಂದು ಓಟು ಕಡಿಮೆಯಾದುದರಿಂದ ಶ್ರೀ ಅರಸಿನವರು ಪರಾಜಿತರಾಗಿ ಶ್ರೀ ಚಿನ್ನಸ್ವಾಮಿಯವರು ಚುನಾಯಿತರಾಗಿರುವುದಾಗಿ ಅವರು ತೀರ್ಪಿತ್ತಿರುತ್ತಾರೆ

ಹಿರಿಯ ಶಾಸನ ಸಭೆಯ ಅಧ್ಯಕ್ಷತೆಗೆ ಕೆ. ಟಿ. ಭಾಷ್ಯಂ

ಸ್ವಂ ನು ಫೋ] ಬೆಂಗಳೂರು ೧೬

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನೆನ್ನೆ ಸೇರಿ ಶ್ರೀ ಕೆ ಟಿ ಭಾಷ್ಯಂರವರನ್ನು ಹಿರಿಯ ಶಾಸನ ಸಭೆಯ ಅಧ್ಯಕ್ಷತೆ ಚುನಾವಣೆಗೆ ನಿಲ್ಲಿಸತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಿತು ಚುನಾವಣೆಯು ನಾಳೆ ನಡೆಯಲಿದೆ

ಈ ದಿನ ಶ್ರೀ ಭಾಷ್ಯಂರವರ ಪರವಾಗಿ ನಾಮೇದುವಾರಿಕೆ ಪತ್ರವು ಸಲ್ಲಿಸಲ್ಪಟ್ಟಿತು

ಕೆ ಎಂ ಪಿ ಪಕ್ಷದವರು ಕೋಲಾರದ ಶ್ರೀ ಡಿ ವೆಂಕಟರಾಮಯ್ಯನವರ ಹೆಸರನ್ನು ಅದೇ ಸ್ಥಾನಕ್ಕೆ ಸೂಚಿಸಿರುತ್ತಾರೆ

ಕಿರಿಯ ಶಾಸನ ಸಭೆಯ ಅಧ್ಯಕ್ಷತೆ

ಕಾಂಗ್ರೆಸ್ ಪಕ್ಷದ ಸಭೆಯು ಈ ದಿನ ಸೇರಿತ್ತು ಕಿರಿಯ ಶಾಸನ ಸಭಾಧ್ಯಕ್ಷತೆಗೆ ಶ್ರೀಗಳಾದ ಹಚ್ ಕೆ ವೀರಣ್ಣಗೌಡ, ಹೆಚ್ ಸಿದ್ದಯ್ಯ, ಆರ್ ಚನ್ನಿಗರಾಮಯ್ಯ ಮತ್ತು ಸೇಠಿ ಪಾದಯ್ಯ ಇವರುಗಳ ಹೆಸರುಗಳು ಕ್ರಮವಾಗಿ ಸೂಚಿಸಲ್ಪಟ್ಟದ್ದುವು ಬೆಂಗ್ಳೂರು ಯಾವ ತೀರ್ಮಾನವನ್ನು ಬರದೆ ವಿಷಯದ ಪರಿಶೀಲನೆಯನ್ನು ಈ ದಿನ ಸಂಜೆಗೆ ಮುಂದುವರಿಸಲಾಯಿತು

ಹಿರಿಯ ಶಾಸನ ಸಭಾಧಿವೇಶನ

ಈ ಮಧ್ಯಾಹ್ನ ಹಂಗಾಮಿ ಅಧ್ಯಕ್ಷ

ಡಾ|| ಪಟ್ಟಾಭಿ ಮಧ್ಯಪ್ರದೇಶದ ಗವರ್ನರರು?

ಭಾರತ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರನ್ನು ಮಧ್ಯ ಪ್ರದೇಶದ ಗವರ್ನರರನ್ನಾಗಿ ನೇಮಿಸುವ ಸಂಭವವಿರುವುದೆಂದು ತಿಳಿದುಬಂದಿದೆ

೫½ ವರ್ಷದ ಬಾಲಕನಿಂದ ವೇದ, ಗೀತೆಗಳ ಪಠಣ

ಅಬ್ಬಿಪ್ಪುರದ ಬಳಿ ಕಡಾಕೇಡಿ ಎಂಬ ಹಳ್ಳಿಯೊಂದರಲ್ಲಿ ಒಬ್ಬ ಪೂಜಾರಿಯ ೫½ ವರ್ಷ ವಯಸ್ಸಿನ, ಓದುಬರಹ ತಿಳಿಯದ ಗಂಡು ಮಗುವೊಂದು ರಾಮಾಯಣ, ಮಹಾಭಾರತ, ಭಗವದ್ಗೀತೆ ಮತ್ತು ವೇದಗಳನ್ನು ಬಾಯಿಯಲ್ಲಿ ಹೇಳುತ್ತಿದೆಯೆಂದು ವರದಿಯಾಗಿದೆ ಅದರ ಸಂಸ್ಕೃತ ಶ್ಲೋಕಗಳನ್ನು ಹೇಳುವಾಗ ಮಗುವಿಗೆ ಸ್ವಲ್ಪ ಬಿಕ್ಕಲು ಬರುವುದೆಂದೂ, ಮಗುವು ಪೂರ್ತಿ ಚನ್ನದ ಸ್ವರಡೆಯ ಶಕ್ತಿಯನ್ನು ಹೊಂದಿ ಆಗ ತಾನು ದೇವಸ್ಥಾನದ ಅರ್ಚಕನಾಗಿದ್ದುದಾಗಿಯೂ ತಿಳಿಸುತ್ತಿದೆಯೆಂದು ಹೇಳಲಾಗಿದೆ

ರೈಲಿಗೆ ಸಿಕ್ಕಿ ಫೇಲಾದ ವಿದ್ಯಾರ್ಥಿಯ ಆತ್ಮಹತ್ಯೆ

ಕಡೂರು ತಾಲ್ಲೂಕು ಲಕ್ಷ್ಮೀಪುರ ಎಂಬಲ್ಲಿ ೨೫ ವರ್ಷದ ಆರ್ ಹನುಮಂತಪ್ಪ ಎಂಬ ವಿದ್ಯಾರ್ಥಿಯು ಎಸ್ ಎಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಕಾರಣದಿಂದ ರೈಲಿಗೆ ಸಿಕ್ಕಿ ಮೃತಪಟ್ಟನೆಂದು ವರದಿಯಾಗಿದೆ

ಕರುವಿಗೆ ನಾಯಿಯು ಹಾಲುಣಿಸುವ ಪ್ರಸಂಗ

ಮದನಪಲ್ಲಿಗೆ ಸೇರಿದ ಮೇಕಲವಾರಿಪಲ್ಲಿ ಗ್ರಾಮದಲ್ಲಿ ಒಂದು ಹಸುವು ಕರುವನ್ನು ಹಾಕಿದನಂತರ ಅದು ಸತ್ತು ಹೋಯಿತೆಂದೂ, ತಬ್ಬಲಿ ಕರುವಿಗೆ ಒಂದು ನಾಯಿಯು ಹಾಲುಣಿಸುತ್ತಾ ಅದನ್ನು ಕಾಪಾಡುತ್ತಿದೆಯೆಂದೂ ಮತ್ತು ನಾಯಿಯು ಕರುವನ್ನು ಬಿಡದೆ ಸದಾ ಕಾಯುತ್ತಿದೆಯೆಂದೂ ಹೇಳಲಾಗಿದೆ

ಚೀನಾದಲ್ಲಿ ಅಣು ಬಾಂಬು ಧಾಳಿ ಮುಂಜಾಗ್ರತೆ

ಅಣು ಬಾಂಬು ಧಾಳಿ ಬಗ್ಗೆ ರಕ್ಷಣೆ ಪಡೆಯುವ ಸಲುವಾಗಿ ಚೀನಾದಲ್ಲಿ ಆಶ್ರಯ ಸ್ಥಾನಗಳನ್ನು ನಿರ್ಮಿಸಲು ಭಾರಿ ಸುರಂಗಗಳನ್ನು ತೋಡಿ ಕಾರ್ಯಾರಂಭ ಮಾಡಿರುವರೆಂದು ವರದಿಯಾಗಿದೆ

ಬಹಿರಂಗ ಸಭೆ

ಮೈಸೂರು ಲೇಬರ್ ಬೋರ್ಡ್ ಸಂಘದ ಆಶ್ರಯದಲ್ಲಿ ಈ ಸಂಜೆ ೬-೩೦ ಕ್ಕೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಸಲು ಏರ್ಪಡಿಸಲಾಗಿದೆ ಬೆಂಗಳೂರಿನ ಲೋಕಸೇವಾನಿರತ ಶ್ರೀ ಎಂ ಕೃಷ್ಣಯ್ಯಶೆಟ್ಟರು ಅಧ್ಯಕ್ಷತೆ ವಹಿಸುತ್ತಾರೆ.

ರಾದ ಶ್ರೀ ಕೆ ಸಂಪಿಗೆ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಹಿರಿಯ ಶಾಸನ ಸಭಾಧಿವೇಶನವು ಸೇರಿತ್ತು ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರವು ನಡೆದು ಸಭೆ ಬರಖಾಸ್ತಾಯಿತು

ಕಚ್ಛದ ತೀರದಲ್ಲಿ ಸ್ವೀಡಿಷ್ ವಿಮಾನದ ಅದೃಶ್ಯ

ಕಚ್ಛದ ಆಖಾತದ ತೀರಪ್ರದೇಶದಲ್ಲಿ ಮೊನ್ನೆ ಏರ್ ಸ್ವೀಡನ್ನಿನ ವಿಮಾನವೊಂದು ಅದೃಶ್ಯವಾಗಿ ಅದರಲ್ಲಿದ್ದ ಆರು ಜನರೂ ಸತ್ತಿರಬಹುದೆಂದು ವರದಿಯಾಗಿದೆ.

ಸರ್ಕಾರೀ ಆಸ್ಪತ್ರೆ ಕೆಲಸಗಾರರ ಸಂಘ

ಮೈಸೂರು ಸರ್ಕಾರಿ ಆಸ್ಪತ್ರೆ ಕೆಲಸಗಾರರ ಸಂಘದ ಸಭೆಯು ಕಳೆದ ಬುಧವಾರ ಸೇರಿ ಶ್ರೀ ಎ ರಂಗಣ್ಣನವರನ್ನು ಸಂಘದ ಅಧ್ಯಕ್ಷರನ್ನಾಗಿಯೂ, ಶ್ರೀ ಬಾಲಾಜಿ ಸಿಂಗ್ ರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಟಿ. ಎಸ್. ಸುಬ್ಬಣ್ಣ ಮತ್ತು ಚೌಡಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಶ್ರೀ ರಂಗೇಗೌಡರನ್ನು ಖಜಾಂಚಿಯಾಗಿಯೂ ಚುನಾಯಿಸಿತು

ಸ್ಯಾನಿಟೋರಿಯಮ್ಮಿನ ಶ್ರೀ ವೆಂಕಟಯ್ಯನವರನ್ನು ಕೆಲಸದಿಂದ ವಜಾ ಮಾಡಿರುವುದನ್ನು ಖಂಡಿಸಿ ಆ ಬಗ್ಗೆ ಸತ್ಯಾಗ್ರಹ ಕಾರ್ಯಕ್ರಮ ಕೈಗೊಳ್ಳಲು ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ಅಧಿಕಾರ ಕೊಡುವುದು, ಸ್ಯಾನಿಟೋರಿಯಮ್ಮಿನ ಮೇಟ್ರನ್ ರವರು ಕೆಲಸಗಾರರಿಗೆ ಕೊಡುತ್ತಿರುವ ಕಿರುಕುಳವನ್ನು ಸಹಿಸಲು ಸಾಧ್ಯವಿಲ್ಲದುದರಿಂದ ಅವರನ್ನು ಕೂಡಲೇ ವರ್ಗಾಯಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು ಮತ್ತು ಅಲ್ಲಿನ ಅಧಿಕೃತ ವರ್ಗದವರು ಕೆಲಸಗಾರರ ವಿಷಯದಲ್ಲಿ ಸೌಹಾರ್ದತೆಯಿಂದ ವರ್ತಿಸಬೇಕೆಂದು ಅವರನ್ನು ಪ್ರಾರ್ಥಿಸುವುದು ಈ ತೀರ್ಮಾನಗಳು ಮಂಜೂರಾದುವು

THE CENTRAL COLLEGE OF COMMERCE

Vanivilas Market Buildings.

Admissions to **Diploma courses in Commerce and Stenography, Typewriting and Shorthand,** will be received on all working days Reserve your seats immediately.

ಎ. ಕೆ. ಗೋಪಾಲನ್ ರವರು ಲೋಕಸಭೆ ವಿರೋಧ ಪಕ್ಷದ ನಾಯಕರು

ಪಾರ್ಲಿಮೆಂಟಿನ ವಿರೋಧ ಪಕ್ಷದ ನಾಯಕರನ್ನಾಗಿ ಕಮ್ಯೂನಿಸ್ಟ್ ಪಕ್ಷದ ನಾಯಕ ಶ್ರೀ ಎ ಕೆ. ಗೋಪಾಲನ್ ರವರನ್ನು ಸಭಾಧ್ಯಕ್ಷರು ಅಂಗೀಕರಿಸಿ ವಿರೋಧ ಪಕ್ಷದ ನಾಯಕರ ಸ್ಥಾನವನ್ನು ಅವರಿಗಾಗಿ ಏರ್ಪಡಿಸಲಾಗಿರಲು ಆಜ್ಞೆ ಮಾಡಿರುವರು

ಅಮಲ್ದಾರರ ವರ್ಗ

ಅಳ್ಳಕೆರೆಯ ಅಮಲ್ದಾರರಾಗಿರುವ ಶ್ರೀ ವಿ ಪಿ ವೆಂಕಟರಾಮಯ್ಯನವರನ್ನು ಯಳಂದೂರಿಗೆ ವರ್ಗಾಯಿಸಲಾಗಿದೆ

ಗಮಕ ತರಗತಿಯ ಆರಂಭೋತ್ಸವ

ದೇವರಾಜ ಮೊಹಲ್ಲಾ ಮಹಿಳಾ ಸದನದಲ್ಲಿ ಕಳೆದ ಮಂಗಳವಾರ ಸಂಜೆ ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಸ್ ವಿ ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ಗಮಕ ಸಾಹಿತ್ಯ ತರಗತಿಯ ಆರಂಭೋತ್ಸವವು ಜರುಗಿತು ಶ್ರೀಮತಿ ಗೌರಮ್ಮ ಶ್ರೀನಿವಾಸಮೂರ್ತಿಯವರು ಮಹಾಭಾರತದ ವಿಸ್ತ್ರರಾಜ ಸಂದರ್ಶನ ಎಂಬ ಭಾಗವನ್ನು ವಾಚನ ಮಾಡಿದರು ಶ್ರೀ ಕೃಷ್ಣಗಿರಿ ಕೃಷ್ಣರಾಯರು ಗಮಕ ಕಲೆಯ ಹಿರಿಮೆಯನ್ನು ಕುರಿತು ಭಾಷಣ ಮಾಡಿದರು ಅನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಹಿಳೆಯರು ಗಮಕ ಕಲೆಯನ್ನು ಕಲಿಯುವುದರ ಆಗತ್ಯವನ್ನು ವಿವರಿಸಿದರು

SRI GANESH

TALKIES

From 16 6 52 2 days only

TRAIL OF ROBINHOOD

[In True color]

The action thrill of all time

Starring — Roy Rogers Rix Corrigan Jack Holt

From 18—6—52

'SURRENDER'

ಬಿರುಗಾಳಿ ಹೊಡೆತದಿಂದ ದೋಣಿ ಮುಳುಗಿತು

ರಾಜಕೋಟೆಯ ಪೋರ್ ಬಂದರ್ ಬಳಿ ಸಮುದ್ರ ತೀರದಲ್ಲಿ ೫೦ ಮಂದಿ ಕಾರ್ಮಿಕರನ್ನು ಕೊಂಡೊಯ್ಯುತ್ತಿದ್ದ ದೋಣಿಯೊಂದು ಕಳೆದ ಗುರುವಾರ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಮುಳುಗಿ ಹೋಯಿತೆಂದು ವರದಿಯಾಗಿದೆ ಹತ್ತು ಮಂದಿ ಪ್ರಯಾಣಿಕರು ಮೃತಪಟ್ಟು, ಗಾಯಗೊಂಡ ಇತರ ಹತ್ತು ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ಸೈಕಲ್ ಷಾಪಿನ ಆರಂಭ

ರಾಜಧಾನಿಯ ನ್ಯಾಷನಲ್ ಸೈಕಲ್ ಮಾರ್ಟಿನ ಮಾಲೀಕರಾದ ಎ. ಎಸ್ ಅಜೀಜ್ ರವರು ನೂರಡಿ ರಸ್ತೆಯ ೩೭೭ ನೇ ನಂಬರು ಮಳಿಗೆಯಲ್ಲಿ ನೆನ್ನೆ ಬೆಳಿಗ್ಗೆ ಪಾಪ್ಯುಲರ್ ಸೈಕಲ್ ಮಾರ್ಟ್ ಎಂಬ ಹೊಸ ಸೈಕಲ್ ಷಾಪನ್ನು ತಮ್ಮ ಅನೇಕ ಇಷ್ಟಮಿತ್ರರನ್ನು ಆಹ್ವಾನಿಸಿ ಪ್ರಾರಂಭಿಸಿದರು

ರಾಜಧಾನಿಗೆ ಮದ್ರಾಸ್ ಗವರ್ನರರ ಭೇಟಿ

ಮದರಾಸಿನ ಗವರ್ನರರಾದ ಶ್ರೀ ಶ್ರೀಪ್ರಕಾಶರವರು ಏಪ್ರೀಲ್ ೨೩ ನೇ ತಾರೀಕು ಇಲ್ಲಿಗೆ ಆಗಮಿಸಿ ಕೆಲವು ದಿನಗಳ ಕಾಲ ಶ್ರೀಮನ್ಮಹಾರಾಜರವರ ಅತಿಥಿಗಳಾಗಿರುವರೆಂದು ತಿಳಿದುಬಂದಿದೆ

SRI GAYATHRI TUTORIAL COLLEGE,

C/o THE CENTRAL COLLEGE OF COMMERCE

Vanivilas Market Buildings

Offers excellent coaching for **S S L C & I COM** students taking the September 1952 Examinations Admissions are being received Enrol immediately

ಮದರಾಸಿನಲ್ಲಿ ಹೊಸ ತೆರಿಗೆಗಳು

ಮದರಾಸಿನ ಮುಖ್ಯಮಂತ್ರಿ ರಾಜಾಜಿಯವರು ನೆನ್ನೆ ನಡೆದ ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಆ ಪ್ರಾಂತ ಸರ್ಕಾರದ ಹೊಸ ಆಯವ್ಯಯದ ಅಂದಾಜಿನಲ್ಲಿ ಸ್ವಲ್ಪ ಕೊರತೆ ಬರುವುದೆಂದೂ, ಅದನ್ನು ನಿರಿದೂಗಿಸಲು ಜನರು ಕೆಲವು ಹೊಸ ತೆರಿಗೆಗಳನ್ನು ಕೊಡಲು ಸಿದ್ಧರಾಗಿರಬೇಕೆಂದೂ ಹೇಳಿದರು. ಕೇಂದ್ರದಿಂದ ಅದಕ್ಕೆ ಧನ ಸಹಾಯ ದೊರೆಯಲಾಗುವುದೆಂದೂ, ಅದರ ಜೊತೆಗೆ ಸಂಸ್ಥಾನದ ಪ್ರಜೆಗಳೂ ಕೆಲವು ಹೊಸ ತೆರಿಗೆಯನ್ನು ಕೊಡಲು ಈಗಲೇ ಪೂರ್ವಭಾವಿಯಾಗಿ, ಸಿದ್ಧರಾಗಬೇಕೆಂದೂ ಅವರು ತಿಳಿಸಿದರು

ಅರಮನೆ ಮರಾಮತ್ ಇಲಾಖಾ

ಹರಾಜು ನೋಟೀಸ್

ನಾಡು ಹಂಚುಗಳು, ಹಂಚರ, ಬಾಗಿಲು, ಕಿಟಕಿ ಚೌಕಟ್ಟು, ಸರಿಗಳು, ಸಾಗುವಾನಿ ದಂತಿಗಳು ವಗೈರೆ ಸಾಮಾನುಗಳನ್ನು 1952ನೇ ಜೂನ್ 26ನೇ ತಾರೀಖು ಗುರುವಾರದಿಂದ ಪ್ರತಿ ನಿತ್ಯವೂ ಬೆಳಿಗ್ಗೆ 9 ಘಂಟೆಯಿಂದ ಇಟ್ಟಿಗೆಗೂಡು ಮಾಹಲ್ ಮನೆಗಳ ಹತ್ತಿರ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಸಾಮಾನುಗಳನ್ನು ಹರಾಜಿನಲ್ಲಿ ಪಡೆಯಬಹುದು ಹರಾಜು ಕಂಡಿಷನ್ ವಗೈರೆಗಳನ್ನು ಆಫೀಸಿನಲ್ಲಿ ನೋಟೀಸ್ ಬೋರ್ಡಿನಲ್ಲಿ ನೋಡಬಹುದು

ಎಸ್. ಆ. ಪಂಡಿತಾರಾಧ್ಯ,

ಪ್ಯಾಲೇಸ್ ಇಂಜನಿಯರ್.

Edited, Printed and Published by A R Nagarajan at Sadhvi Press, D Subbiah Road, Mysore

---

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ-ಮಾಡಲಾಗುತ್ತೆ.

* ಅತ್ಯುತ್ತಮವಾದ ಒಗೆಯುವ ಸಾಬೂನು
* ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು
* ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.
* ಬಾಳಿಕೆಯಲ್ಲಿ ಉಳಿತಾಯ, ಕೈಗಳ ರಕ್ಷಣೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌ ರ್ನ ಮೆಂ ಟ್ ಸೋ ಪ್ ಫ್ಯಾ ಕ್ಟ ರಿ,

ಬೆಂ ಗ ಳೂ ರು

ಮೈಸೂರು ಸರ್ಕಾರಿ ಶ್ರೀ ಗಂಧದೆಣ್ಣೆ ಕಾರ್ಖಾನೆ ಜನರಲ್ ಮ್ಯಾನೇಜರ್ ಆಫೀಸಿನಿಂದ — ತಾರೀಖು 9—6—52

ನೋ ಟಿ ಫಿ ಕೇ ಷ ನ್

ಬೆಂಗಳೂರಿನ ಕಾರ್ಖಾನೆಗೆ ಬೇಕಾಗಿರುವ (200) ಎರಡು ನೂರು ಟನ್ ಉತ್ತಮವಾದ (ಪುಡಿ ಮತ್ತು ಸಣ್ಣ ತುಂಡುಗಳಿಲ್ಲದ) ಇದ್ದಿಲು ಸರಬರಾಜು ಮಾಡಲು, ಕಾರ್ಖಾನೆಯ ಜನರಲ್ ಮ್ಯಾನೇಜರ್ ರವರಿಂದ ಟೆಂಡರುಗಳನ್ನು ತಾ 20 6 1952ನೇ ಶುಕ್ರವಾರ ಮಧ್ಯಾಹ್ನ ನಾಲ್ಕು (4) ಘಂಟೆ ವರೆವಿಗೂ ಸ್ವೀಕರಿಸಲಾಗುತ್ತದೆ

ಇಷ್ಟವುಳ್ಳವರು ಒಂದು ಟನ್ನು (100 ಸೇರಿನ ಚೀಲಾ ಮಾದರಿ) ವರೆವಿಗೂ ಸಹಾಯ ರೂ 25/ ರೂಪಾಯಿ ಠೇವಣಿಯೊಡನೆ ಟೆಂಡರನ್ನು ಈ ಆಫೀಸಿಗೆ 20 6 1952ನೇ ತಾರೀಖು ಮಧ್ಯಾಹ್ನ (4) ನಾಲ್ಕು ಘಂಟೆಯೊಳಗೆ ತಲುಪುವ ಹಾಗೆ ಕಳುಹಿಸತಕ್ಕದ್ದು ಮಾದರಿ ಚೀಲಗಳನ್ನು ಆದಲಾಗಿ ಪರಿಗಣಿಸಬಹುದು

ಕಾರ್ಖಾನೆಯ ಜನರಲ್ ಮ್ಯಾನೇಜರ್ ಮಾಲನ್ನು ಡೆಲಿವರಿ ಕೊಡಬೇಕಾಗಿರುವುದರಿಂದ ದರವನ್ನು ಅದಕ್ಕೆ ಸರಿಹೊಂದಿಸಿಕೊಂಡು ಟೆಂಡರನ್ನು ಕೊಡುವುದು ದರದಲ್ಲಿ ಸಾಗಾಣಿಕೆ ತೆರಿಗೆ ಸೇರಿದೆಯೋ ಇಲ್ಲವೋ ಎಂಬುದನ್ನು ನಮೂದಿಸತಕ್ಕದ್ದು ಸಪ್ಲೈ ಮಾಡತಕ್ಕಾದ ಇದ್ದಿಲಿನ ಮಾದರಿಯನ್ನು ಹರಾಜಿನ ಬಗ್ಗೆ ಹಾಜರು ಮಾಡತಕ್ಕದ್ದು ಮತ್ತು ಸಪ್ಲೈ ಮಾಡಿದಾಗ ಅದೇ ದರದ ಇಲ್ಲದಿದ್ದ ಪಕ್ಷದಲ್ಲಿ ಮಾಲನ್ನು ಸ್ವೀಕರಿಸಲಾಗುವುದಿಲ್ಲ

ಸದರಿ ಮಾಲನ್ನು ಆಫೀಸಿನಿಂದ ತಿಳಿಸಿದ ಒಂದು ವಾರದೊಳಗೆ ಫ್ಯಾಕ್ಟರಿಯ ಸ್ಟೋರಿಗೆ ಸರಬರಾಜು ಮಾಡುವುದು. ಟೆಂಡರ್ ಒಪ್ಪಿದ ನಂತರ ಕಂಟ್ರ್ಯಾಕ್ಟರ್ ಕಾರ್ಖಾನೆಯವರು ಒಪ್ಪಿದ ರೀತಿಯಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಸಪ್ಲೈ ಮಾಡಬೇಕು. ಹಾಗೆ ತಪ್ಪಿದ ಪಕ್ಷದಲ್ಲಿ ಬೇರೆಯವರಿಗೆ ಈ ಕೆಲಸವನ್ನು ಒಪ್ಪಿಸಿ ಉಂಟಾದ ಎಲ್ಲಾ ನಷ್ಟವನ್ನು ಮೊದಲನೆ ಟೆಂಡರ್ ದಾರರಿಂದ ಕಾನೂನಿನ ರೀತಿಯಲ್ಲಿ ವಸೂಲಿ ಮಾಡಲಾಗುವುದು

ಕೆ. ತಿಪ್ಪೇಸ್ವಾಮಿ, ಜನರಲ್ ಮ್ಯಾನೇಜರ್.

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಮಂಗಳವಾರ ೧೭-೬-೫೨ [ಸಂಚಿಕೆ ೨೬೩

ಶಾಸನ ಸಭಾಧ್ಯಕ್ಷತೆಗೆ ! ಶ್ರೀ ಹೆಚ್. ಸಿದ್ದಯ್ಯನವರು

ಕಿರಿಯ ಶಾಸನಸಭಾಧ್ಯಕ್ಷತೆಗೆ ಕಾಂ|| ಉಮೇದುವಾರರು ಹೆಚ್ ಸಿದ್ದಯ್ಯನವರ ಆಯ್ಕೆ

ಸ್ವಂ ಸು ಫೋ] ಬೆಂಗಳೂರು ೧೭



ಸಂಸ್ಥಾನದ ಕಿರಿಯ ಶಾಸನ ಸಭಾಧ್ಯಕ್ಷತೆಗೆ ಕಾಂಗ್ರೆಸ್ಸಿನ ಪರವಾಗಿ ಮಾಜಿ ರೆವಿನ್ಯೂ ಮಂತ್ರಿ ಶ್ರೀ ಹೆಚ್ ಸಿದ್ದಯ್ಯನವರನ್ನು ಉಮೇದುವಾರರನ್ನಾಗಿ ಆರಿಸಲಾಗಿದೆ. ಅವರ ಹೆಸರನ್ನು ಶ್ರೀ ಗಳಾದ ಹೆ. ಬೀಮಪ್ಪ ನಾಯಕ್ ರವರು ಸೂಚಿಸಿ ಶ್ರೀ ... ಚೆನ್ನಿಗರಾಮಯ್ಯನವರು ಅನುಮೋದಿಸಿರುತ್ತಾರೆ. ನಾಳೆ ದಿನ ಅಧ್ಯಕ್ಷ ಚುನಾವಣೆಯು ನಡೆಯುವುದು. ಸಮಾಜವಾದಿ ಪಕ್ಷದ ಪರವಾಗಿ ಶ್ರೀ ಹೆಚ್ ಗೋಪಾಲಗೌಡರೂ ಅವರ ವಿರುದ್ಧ ಸ್ಪರ್ಧಿಸಿರುತ್ತಾರೆ.

ಆಯುರ್ವೇದ ಕಾಲೇಜಿನ ವರ್ಗಕ್ಕೆ ಪ್ರತಿಭಟನೆ

ಮೈಸೂರು ೧೭

ಮೊನ್ನೆ ಸಂಜೆ ರಾಜಧಾನಿಯ ಮೈಸೂರು ವೈದ್ಯ ಸಂಘದ ಸಭೆಯು ಈಸ್ಟರ್ನ್ ಬಜಾರ್ ಮಹಡಿಯ ರೇಲಿ ಸೇರಿ, ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವುದನ್ನು ಪ್ರತಿಭಟಿಸಿಯೂ, ಸದರಿ ಕಾಲೇಜನ್ನು ಮೈಸೂರಿನಲ್ಲಿಯೇ ಉಳಿಸುವಂತೆ ಮಂತ್ರಿಗಳಲ್ಲಿ ನಿಯೋಗ ಹೋಗಬೇಕೆಂದೂ ನಿರ್ಣಯಿಸಿತು. ಕಾಲೇಜಿನ ವಿದ್ಯಾರ್ಥಿಗಳಿಗೆ ಸಂಸ್ಕೃತ ಜ್ಞಾನವು ಹೆಚ್ಚು ಇರಬೇಕೆಂದೂ, ಕಾಲೇಜೆಂದು ಹೇಳಲ್ಪಡುವ ಈ ಸಂಸ್ಥೆಯಲ್ಲಿ ಡಿಪ್ಲೊಮಾ ಕೊಡುವುದನ್ನು ತಪ್ಪಿಸಿ ಯೂನಿವರ್ಸಿಟಿಯ ಆಯುರ್ವೇದ ಶಿರೋಮಣಿಗೆ ಅನುಗುಣವಾದ ಅಥವಾ ಅದಕ್ಕೂ ಹೆಚ್ಚಿನ ದರ್ಜೆಯ ಪಾಠ ಮತ್ತು ಉಪನ್ಯಾಸಗಳ ಮಟ್ಟವನ್ನು ಹೆಚ್ಚಿಸಿ ಕಾಲೇಜೆಂಬ ಹೆಸರನ್ನು ಸಾರ್ಥಕವಾಗುವಂತೆ ಮಾಡಬೇಕಾಗಿ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯಗಳನ್ನು ಮಾಡಲಾಯಿತು. ನಿಯೋಗ ಗೋಷ್ಠಿಯಲ್ಲಿ ಶ್ರೀಗಳಾದ ಡಾ|| ಎ ವೆಂಕಟರಾಮ ಪಂಡಿತರು, ಡಾ|| ಎಂ ಎಸ್ ನಾಗೇಶರಾವ್ ರವರು, ಡಾ|| ಎ ಟಿ ಕೆ ನಂಬೀಸನ್ ರವರೂ, ಸೂರ್ಯನಾರಾಯಣ ಪಂಡಿತರೂ, ಪಂಡಿತ ಕೆ ಸಿ ಪುರಾಣೀಕರೂ, ಪಾಲಹಳ್ಳಿ ಸೀತಾರಾಮಯ್ಯನವರೂ, ಟಿ ಎಸ್ ರಾಜಗೋಪಾಲ ಅಯ್ಯಂಗಾರ್ ರವರೂ, ಎಂ ಎಸ್ ಜೋಯಿಸ್ ರೂ, ಮತ್ತು ಡಿ ... ಕೃಷ್ಣಪ್ಪನವರೂ ಇರುತ್ತಾರೆಂದು ಕಾರ್ಯದರ್ಶಿ ಗೋಪಾಲಕೃಷ್ಣ ಪಥಿಗಳು ತಿಳಿಸಿರುತ್ತಾರೆ.

ಹರಿಕಥಾ ಕಾಲಕ್ಷೇಪ

ರಾಜಧಾನಿಯ ಚಾಮರಾಜಪುರಂ ಗೀತಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ವಿಶ್ವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆಯಿಂದ ೧ ವಾರದ ವರೆಗೆ ಪ್ರತಿ ಸಂಜೆ ೬ ಘಂಟೆಗೆ ಹರಿಕಥಾ ವಿದ್ವಾನ್ ಸುಬ್ರಹ್ಮಣ್ಯ ದಾಸರಿಂದ ಹರಿಕಥಾ ಕಾಲಕ್ಷೇಪವು ನಡೆಯ ಲೇರ್ಪಾಡಾಗಿದೆ. ಆಸ್ತಿಕ ಮಹಾಶಯರು ದಯಮಾಡಿಸಬೇಕೆಂದು ಕೋರಲಾಗಿದೆ.

ಚರಂಡಿಯಲ್ಲಿ ಶವದ ಪತ್ತೆ

ರಾಜಧಾನಿಯ ಅಶೋಕಾ ರಸ್ತೆಯ ಬಳಿ ಇರುವ ದೊಡ್ಡ ಚರಂಡಿಯಲ್ಲಿ ಲಷ್ಕರ್ ಮೊಹಲ್ಲಾ ಭಗವಾನ್ ಮಸೀದಿ ರಸ್ತೆಯಲ್ಲಿರುವ ಶ್ರೀ ಈಶ್ವರರಾವ್ ಎಂಬುವರ ಮಗ ರಾಮರಾವ್ ಎಂಬ ಸುಮಾರು ೨೦ ವರ್ಷದ ತರುಣನ ಶವವು ಪತ್ತೆಯಾಗಿದೆ. ಅವನಿಗೆ ಮೂಲ ರೋಗವಿರುತ್ತಿತ್ತೆಂದು ಹೇಳಲಾಗಿದೆ. ಪೋಲೀಸರು ಶವವನ್ನು ಪರೀಕ್ಷೆಗಾಗಿ ಕಳುಹಿಸಿರುತ್ತಾರೆ.

ಕೊಯಿಮುತ್ತೂರಿನಿಂದ ಪಾರ್ಲಿಮೆಂಟಿಗೆ ಚುನಾವಣೆ

ಕೊಯಮುತ್ತೂರು ಮತ್ತು ನೀಲಗಿರಿಯಿಂದ ಪಾರ್ಲಿಮೆಂಟಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿನ ಸ್ಪರ್ಧಿ ಟಿ ಎ ಲಿಂಗಂರವರು ಜಯಗಳಿಸಿದ್ದಾರೆ.

ಅಮೆರಿಕಕ್ಕೆ ಭಾರತದ ಹೊಸ ರಾಯಭಾರಿ

ಸುಂಕ ಮತ್ತು ಸಾರಿಗೆ ಸಮಿತಿಯ ಅಧ್ಯಕ್ಷರೂ, ಯೋಜನಾ ಮಂಡಲಿಯ ಸದಸ್ಯರೂ ಆದ ಗಗನ ವಿಹಾರಿ ಲಾಲ್ ಮೆಹತಾರವರನ್ನು ಅಮೆರಿಕಾಕ್ಕೆ ಭಾರತದ ರಾಯಭಾರಿಯಾಗಿ ನೇಮಿಸಲಾಗಿದೆ. ಮಹತಾರವರು ಶೀಘ್ರದಲ್ಲೇ ವಾಷಿಂಗ್ಟನ್ನಿಗೆ ತೆರಳಿ ಅಲ್ಲಿರುವ ರಾಯಭಾರಿ ಬಿ ಆರ್ ಸೇನರವರಿಂದ ಅಧಿಕಾರ ವಹಿಸಿಕೊಳ್ಳುವರು. ಹಿಂದೆ ಅವರು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯ ಉಪ ಸಂಪಾದಕರಾಗಿದ್ದರು.

ಅರೇಬಿಯಾ ದೊರೆಗೆ ಹನ್ನೊಂದನೇ ಮಗು

ಅರೇಬಿಯದ ದೊರೆ ಇಬ್ನ ಸೌದ ರಿಗೆ ಮೊನ್ನೆ ೬೪ ನೆಯ ಮಗು ಹುಟ್ಟಿತೆಂದು ವರದಿಯಾಗಿದೆ.

ಕಡಲೆಯ ಪರಮಾವಧಿ ಬೆಲೆ ನಿಗದಿ ರದ್ದು

ಕಡಲೆ, ಕಡಲೆ ಬೇಳೆ ಮತ್ತು ಹಿಟ್ಟು ಇವುಗಳ ಪರಮಾವಧಿ ಬೆಲೆಯನ್ನು ಕೇಂದ್ರ ಸರ್ಕಾರದವರು ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬಿನ ಹಿಸ್ಸಾರ್ ಮತ್ತು ರೋಹತಕ್ ಜಿಲ್ಲೆಗಳನ್ನು ಬಿಟ್ಟು ಉಳಿದ ಎಲ್ಲ ಕಡೆಗಳಲ್ಲೂ ರದ್ದು ಮಾಡಲು ನಿರ್ಧರಿಸಿರುತ್ತಾರೆ.

ಹಿರಿಯ ಶಾಸನ ಸಭಾಧ್ಯಕ್ಷ ಚುನಾವಣೆ

ಕೆ ಟಿ ಭಾಷ್ಯಂರವರಿಗೆ ವಿಶೇಷ ಬಹುಮತ

ಸ್ವಂ ಸು ಫೋ] ಬೆಂಗಳೂರು ೧೭

ಹಿರಿಯ ಶಾಸನ ಸಭೆಗೆ ಈ ದಿನ ಚುನಾವಣೆಯು ನಡೆದು ಕಾಂಗ್ರೆಸ್ಸಿನ ಉಮೇದುವಾರರಾದ ಶ್ರೀ ಕೆ ಟಿ ಭಾಷ್ಯಂರವರು ವಿಶೇಷ ಬಹುಮತದಿಂದ ಜಯಗಳಿಸಿದರು. ಶ್ರೀಯುತರನ್ನು ಅಭಿನಂದಿಸಿ ಸಭೆಯ ೨೬ ಮಂದಿ ಸದಸ್ಯರು ಅವರ ಗುಣಗಾನ ಮಾಡಿದರು. ಮತ್ತೊಬ್ಬ ಉಮೇದುವಾರರಾಗಿದ್ದ ಕೋಲಾರದ ಶ್ರೀ ವೆಂಕಟರಾಮಪ್ಪನವರು ಭಾಷಣ ಮಾಡಿ ಭಾಷ್ಯಂರವರು ತಮ್ಮ ಹಳೆಯ ಗುರುಗಳಾಗಿರುವರೆಂದು ತಿಳಿಸಿದರು. ಶ್ರೀ ಭಾಷ್ಯಂರವರು ಎಲ್ಲರನ್ನೂ ವಂದಿಸಿದರು. ನಂತರ ಸಭೆಯು ಮುಕ್ತಾಯವಾಯಿತು.

ರೇಷನ್ ತೆಗೆಯಲು ಬೆಂಗಳೂರು ಪೌರಸಭೆಯ ಸಲಹೆ

ಸಂಸ್ಥಾನದಲ್ಲೆಲ್ಲಾ ಆಹಾರದ ಹತೋಟಿಯನ್ನು ಪೂರ್ಣವಾಗಿ ರದ್ದು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡುವ ನಿರ್ಣಯವನ್ನು ಬೆಂಗಳೂರು ಪೌರಸಭೆಯಲ್ಲಿ ಅಂಗೀಕರಿಸಲಾಗಿದೆ.

ಸಂಸ್ಥಾನದ ಆಹಾರ ಸಚಿವರಿಗೆ ಕಿದ್ವಾಯಿಯರ ಆಹ್ವಾನ

ಬೆಂಗಳೂರು ೧೭

ಮೈಸೂರು ಸಂಸ್ಥಾನದ ಆಹಾರದ ಪರಿಸ್ಥಿತಿಯನ್ನು ಪರಿಶೀಲಿಸಿ, ಇಲ್ಲಿನ ಸರ್ಕಾರದವರ ಮುಂದಿನ ಆಹಾರ ನೀತಿ ಬಗ್ಗೆ ಮಾತುಕತೆ ನಡೆಸಲು ಸಂಸ್ಥಾನದ ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರನ್ನು ಕೇಂದ್ರ ಆಹಾರ ಸಚಿವ ಶ್ರೀ ರಫಿ ಅಹಮದ್ ಕಿದ್ವಾಯಿಯವರು ದೆಹಲಿಗೆ ಆಹ್ವಾನಿಸಿರುವರು. ಶ್ರೀ ಸಿದ್ದವೀರಪ್ಪನವರು ನಾಳೆ ದೆಹಲಿಗೆ ಪ್ರಯಾಣ ಬೆಳೆಸುವರು. ಸಚಿವರುಗಳ ಭೇಟಿ ಸಮಯದಲ್ಲಿ ಸಂಸ್ಥಾನದಲ್ಲಿ ಆಹಾರದ ಹತೋಟಿ ರದ್ದಿನ ವಿಷಯವೂ ಬರಲಿದೆಯೆಂದು ಗೊತ್ತಾಗಿದೆ. ಸರ್ಕಾರದವರು ಹತೋಟಿ ರದ್ದಿನ ಬಗ್ಗೆ ಯಾವ ನಿರ್ಧಾರಕ್ಕೂ ಬರದಿದ್ದರೂ ಸಹ, ಕಡ್ಡಾಯ ಪಡಿತರವಿರುವ ಬೆಂಗಳೂರು, ಮೈಸೂರು, ದಾವಣಗೆರೆ ಮತ್ತು ಚಿನ್ನದ ಗಣಿಗಳ ಪೈಕಿ ಎರಡು ನಗರಗಳಲ್ಲಿ ಪ್ರಯೋಗಾರ್ಥವಾಗಿ ಪಡಿತರವನ್ನು ರದ್ದು ಮಾಡಲು ಇಚ್ಛೆ ಹೊಂದಿರುವುದಾಗಿ ಗೊತ್ತಾಗಿದೆ.

ಸ್ವೀಡನ್ ವಿಮಾನವನ್ನು ರಷ್ಯಾ ವಿಮಾನ ಕೆಡವಿತು

ಬಾಲ್ಟಿಕ್ ಸಮುದ್ರದಲ್ಲಿ ಕಳೆದ ಎರಡು ದಿನಗಳಿಂದ ಹಾರಾಡುತ್ತಿದ್ದ ಸ್ವೀಡನ್ನಿನ ವಿಮಾನವೊಂದನ್ನು ರಷ್ಯಾದ ಹಾರಾಟ ವಿಮಾನವು ಹೊಡೆದುರುಳಿಸಿರುವುದೆಂದು ವರದಿಯಾಗಿದೆ. ಉರುಳಿದ ವಿಮಾನದಲ್ಲಿ ೭ ಜನ ವೈಮಾನಿಕರು ಇದ್ದರು. ಜರ್ಮನ್ ಹಡಗೊಂದು ವೈಮಾನಿಕರೆಲ್ಲರನ್ನೂ ರಕ್ಷಿಸಿತು. ರಷ್ಯಾ ವಿಮಾನವು ಎರಡು ಬಾರಿ ಸ್ವೀಡನ್ ವಿಮಾನದ ಮೇಲೆ ಗುಂಡು ಹಾರಿಸಿತೆಂದೂ ನಂತರ ಸ್ವೀಡನ್ನಿನ ಇತರ ಕಾದಾಟದ ವಿಮಾನಗಳು ಘಾಳಿ ಸುದ್ದಿ ಕೇಳಿದ ಕೂಡಲೇ ಅವರ ರಕ್ಷಣೆಗಾಗಿ ಓಡಿ ಬಂದುವೆಂದೂ ಹೇಳಲಾಗಿದೆ. ಬಿದ್ದುಹೋದ ವಿಮಾನವು ಮತ್ತೊಂದು ವಿಮಾನದ ಪತ್ತೆಗಾಗಿ ಸಂಚರಿಸುತ್ತಿದ್ದಿತೆಂದು ಹೇಳಲಾಗಿದೆ. ಇದಕ್ಕೆ ಸ್ವೀಡನ್ ಪ್ರತಿಭಟನೆಯನ್ನು ಸೂಚಿಸಿರುತ್ತದೆ. ಲಟ್ವಿಯಾ ತೀರದ ಬಳಿ ರಷ್ಯದ ಹಡಗುಗಳು ಯುದ್ಧ ತಾಲೀಮು ಮಾಡಿಕೊಳ್ಳುತ್ತಿದ್ದುವೆಂದೂ, ಆ ಪ್ರದೇಶದ ಬಳಿ ಸ್ವೀಡನ್ ವಿಮಾನವು ಬಂದಿತ್ತೆಂದೂ ಹೇಳಲಾಗಿದೆ.

ದೇಶದಲ್ಲಿ ಒಂದು ವರ್ಷಕ್ಕೆ ಬೇಕಾಗುವಷ್ಟು ಧಾನ್ಯವಿದೆ

ಕೇಂದ್ರ ಆಹಾರ ಸಚಿವ ರಫಿ ಅಹಮದ್ ಕಿದ್ವಾಯ್ ರವರು ಮೊನ್ನೆ ದೆಹಲಿಯ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಭಾರತದಲ್ಲಿ ಈಗ ಆಹಾರವು ಸಾಕಷ್ಟಿರುವುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈಗ ಇಲ್ಲಿ ಸಂಗ್ರಹವಾಗಿರುವ ಧಾನ್ಯದೊಡನೆ ಹೊರಗಿನಿಂದ ಬರಲಿರುವುದೂ ಸೇರಿದರೆ ಇನ್ನೂ ಒಂದು ವರ್ಷಕ್ಕೆ ಬೇಕಾಗುವಷ್ಟು ಆಹಾರವು ಇರುವುದೆಂದೂ, ಹಲವು ಧಾನ್ಯದ ಡಿಪೋಗಳಲ್ಲಿ ಅರ್ಧದಷ್ಟು ಧಾನ್ಯವೂ ಸಹ ಖರ್ಚಾಗುತ್ತಿಲ್ಲವೆಂದೂ ಅವರು ನುಡಿದರು.

ಮೈಸೂರು ಜಿಲ್ಲಾ ಮುದ್ರಣ ಕೆಲಸಗಾರರ ಸಂಘ

ಮೈಸೂರು ೧೬

ಕಳೆದ ಗುರುವಾರ ಸಂಜೆ ಮೇಲ್ಕಂಡ ಸಂಘದ ಉಪಾಧ್ಯಕ್ಷರಾದ ಶ್ರೀ|| ನರಸಿಂಹಲು ನಾಯ್ಡುರವರ ಅಧ್ಯಕ್ಷತೆಯಲ್ಲಿ ಸಂಘದ ಕಾರ್ಯನಿರ್ವಾಹಕ ಸಮಿತಿಯು ಸಭೆ ಸೇರಿ ಈ ಕೆಳಗೆ ಕಂಡ ನಿರ್ಣಯಗಳನ್ನು ಮಾಡಿತು —

೧ ಇಂಡಿಯಾ ಪ್ರೆಸ್ಸಿನ ಮಾಲೀಕರು ಇಬ್ಬರು ಕೆಲಸಗಾರರನ್ನು ನಿಷ್ಕಾರಣವಾಗಿ ಕೆಲಸದಿಂದ ತೆಗೆದಿದ್ದು, ಷಾಪ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಇನ್‌ಸ್ಪೆಕ್ಟರವರಿಂದ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಆರ್ಡರ್ ಆಗಿ, ಆ ಆರ್ಡರನ್ನು ಮಾಲೀಕರು ತಿರಸ್ಕರಿಸಿರುವ ವರ್ತನೆಯನ್ನು ಈ ಸಭೆಯು ಖಂಡಿಸುತ್ತದೆ ಮತ್ತು ಮಾಲೀಕರು ಈ ಕೂಡಲೇ ವಜಾ ಮಾಡಲ್ಪಟ್ಟ ಆ ಕೆಲಸಗಾರರನ್ನು ಇನ್ನು ಒಂದು ವಾರದೊಳಗಾಗಿ ಕೆಲಸಕ್ಕೆ ತೆಗೆದುಕೊಳ್ಳದೆ ಹೋದರೆ ಅವರ ಪ್ರೆಸ್ಸಿನ ಮುಂದೆ ಸತ್ಯಾಗ್ರಹವನ್ನು ಮಾಡತಕ್ಕದ್ದೆಂದೂ ತೀರ್ಮಾನಿಸಿದೆ

೨ ಫ್ಯಾಕ್ಟರಿ ಇನ್‌ಸ್ಪೆಕ್ಟರವರಲ್ಲಿ ವಜಾಮಾಡಲ್ಪಟ್ಟ ಕೆಲಸಗಾರರು ತಮ್ಮನ್ನು ಪುನಃ ಕೆಲಸಕ್ಕೆ ಸೇರಿಸಬೇಕೆಂದು ಅರ್ಜಿಯೊಡನೆ ಹೋದಲ್ಲಿ ಸಂಘಕ್ಕೆ ಸೇರಬಾರದೆಂದು ಕೆಲಸಗಾರರ ಮನಸ್ಸನ್ನು ಕೆಡಿಸುತ್ತಿರುವುದೂ ಮತ್ತು ಮಾಲೀಕರುಗಳಿಗೆ ಕೆಲಸಗಾರರ ಸಂಘದೊಡನೆ

ಮೈಸೂರು ದಸರಾ ವಸ್ತು ಪ್ರದರ್ಶನ 1952

(ಸೆಪ್ಟೆಂಬರ್ 20 ರಿಂದ ಅಕ್ಟೋಬರ್ 5 ರ ವರೆಗೆ ಎರಡು ದಿನಗಳೂ ಸೇರಿ)

ಈ ಪ್ರದರ್ಶನಕ್ಕೆ ಸಂಬಂಧಪಟ್ಟ ಪ್ರಾಸ್ಪೆಕ್ಟಸ್, ಅಪ್ಲಿಸಲ್ಲಿದೆ ಇವರ ಕೆಲವು ಭಾಗಗಳನ್ನು ಜಾಹಿರಾತುಗಳಿಗಾಗಿ ಕಾದಿರಿಸಲಾಗಿವೆ ಜಾಹಿರಾತಿನ ದರಗಳು ಈ ಕೆಳಗೆ ಕಂಡಂತಿವೆ —

ಸಾಧಾರಣ ಪೂರ್ತಿ ಪುಟ 15 ರೂ ಅರ್ಧ ಪುಟ 8 ರೂ ಪ್ರಾಸ್ಪೆಕ್ಟಸ್ಸಿನ ಅಳತೆ 8"×5" ಇದೆ

ಜಾಹಿರಾತುಗಳ ವಿಷಯ ಬ್ಲಾಕು ಮುಂತಾದ ಪ್ರತಿ ... ಅವರ ಪೂರ್ಣ ನೊಬಲಗುಗಳನ್ನು ... ಕಳುಹಿಸಲು ಕಡೆಯ ತಾರೀಖು 1952 ಜ ... 10 ಅಥವಾ ಮುಂಚೆ

ಹೆಚ್ಚಿನ ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಾರ್ಯದರ್ಶಿ,
ಮೈಸೂರು ದಸರಾ ವಸ್ತು
ಪ್ರದರ್ಶನ ಸಮಿತಿ, ಮೈಸೂರು

ಹೈದ್ರಾಬಾದಿನಲ್ಲಿ ಸಧ್ಯದಲ್ಲೇ ಧಾನ್ಯದ ಹತೋಟಿ ರದ್ದು

ಹೈದರಾಬಾದಿನ ಆಹಾರ ಸಚಿವ ಶ್ರೀ ಚೆನ್ನರೆಡ್ಡಿಯವರು ಅಲ್ಲಿನ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಸಂಸ್ಥಾನದಲ್ಲಿ ಧಾನ್ಯದ ಸಂಗ್ರಹಣೆಯು ತೃಪ್ತಿಕರವಾಗಿರುವುದರಿಂದ ಇನ್ನು ... ತಿಂಗಳ ಅವಧಿಯೊಳಗೆ ಅದರ ಮೇಲಿನ ಹತೋಟಿಯನ್ನು ಪೂರ್ಣವಾಗಿ ರದು ಮಾಡಲು ಅವಕಾಶವಾಗಬಹುದೆಂದು ತಿಳಿಸಿರುವರು

ಪ್ರಜಾಮಂಡಲದ ಬಹಿರಂಗ ಸಭೆ

ಆಹಾರದ ಪರಿಸ್ಥಿತಿಯನ್ನು ಚರ್ಚಿಸಲು ನೆನ್ನೆ ಸಂಜೆ ಟೌನ್ ಹಾಲಿನಲ್ಲಿ ಪ್ರಜಾ ಮಂಡಲದವರ ಸಭೆಯು ಶ್ರೀ ಎ ಎಸ್ ವೆಂಕಟಸುಬ್ಬಯ್ಯ ಶರ್ಮರವರ ಅಧ್ಯಕ್ಷತೆಯಲ್ಲಿ ಸೇರಿತ್ತು ಯುಗಶಕ್ತಿಯ ಸಂಪಾದಕ ಶ್ರೀ ಎಸ್ ದೇವಣ್ಣನವರು ಭಾಷಣ ಮಾಡುತ್ತಾ ನಗರಗಳೊಳಕ್ಕೆ ಆಹಾರ ಧಾನ್ಯಗಳನ್ನು ತರಲು ಅವಕಾಶ ಕೊಡುವ ಮುಂಚೆ ಸರ್ಕಾರದವರು ಧಾನ್ಯಗಳ ಬೆಲೆಯನ್ನು ಇಳಿಸಬೇಕೆಂದು ತಿಳಿಸಿದರು ... ಮಾತನಾಡಿ ಸರ್ಕಾರವು ... ನಿಂತೆ ... ನ್ನು ಮಾರಲು ... ದರು

ಸಾರ್ವಜನಿಕ ವಿತರಣೆ ... ಈ ಸಭೆಯು ಖಂಡಿಸುತ್ತದೆ ಮತ್ತು ಸರ್ಕಾರದವರು ಈ ಕೂಡಲೇ ಇವರನ್ನು ... ಬೇಕೆಂದು ಅವರನ್ನು ಈ ಸಭೆಯು ಪ್ರಾರ್ಥಿಸುತ್ತದೆ

ಸಿಡಿಲಿನಿಂದ ಹುಲಿ ಮರಣ

ಹೈದರಾಬಾದಿನ ಲಂಕಾಪಲ್ಲಿ ಎಂಬಲ್ಲಿ ಅನೇಕ ಜಾನುವಾರುಗಳನ್ನು ತಿಂದು ಹಾವಳಿ ನಡೆಸುತ್ತಿದ್ದ ಒಂದು ಹುಲಿಯು ಬಹಳ ದಿನಗಳಿಂದ ಶಿಕಾರಿಗೂ ಸಿಕ್ಕದೆ ಇದ್ದು, ಇತ್ತೀಚೆಗೆ ಸಿಡಿಲು ಬಡಿದು ಮೃತಪಟ್ಟಿತೆಂದು ತಿಳಿದುಬಂದಿದೆ

ಬಹುಪತ್ನೀತ್ವ ನಿಷೇಧ ಮಸೂದೆ

ಬಹು ಪತ್ನಿತ್ವವನ್ನೂ ನಿಷೇಧಿಸುವ ಬಗ್ಗೆ ಸಂಸ್ಥಾನದ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿನ ಶ್ರೀ ಬಿ ವೆಂಕಟರಾಮಯ್ಯನವರು ಒಂದು ಖಾಸಗಿ ಮಸೂದೆಯನ್ನು ತರಲಿರುವರು ಅದರ ಪ್ರಕಾರ ದಂಪತಿಗಳು ಜೀವಂತರಾಗಿರುವಾಗ ಪತಿಯಾಗಲೀ ಪತ್ನಿಯಾಗಲೀ ಬೇರೆ ವಿವಾಹ ಮಾಡಿಕೊಳ್ಳುವುದನ್ನು ನಿಷೇಧಿಸಲಾಗುವುದು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ಕ್ಲಾರಿಯೋನೆಟ್, ಹೆಚ್ ಎಜ್ಜೂರಪ್ಪ ಮಧ್ಯಾಹ್ನ ೨ ವನಿತಾ ವಿಹಾರ, ಮಹಿಳೆಯರ ಕಾರ್ಯಕ್ರಮ ಸಂಜೆ ... ೩೦ ಕ್ಲಾರಿಯೋನೆಟ್ ಹೆಚ್ ಎಜ್ಜೂರಪ್ಪ ೬ ೧೦ ಬಾಲಜಗತ್, ಮಕ್ಕಳ ಕಾರ್ಯಕ್ರಮ ೭ ಹಿಂದಿ ಗೀತೆಗಳು ... ರಾಮಣ್ಣನ ಸಂಗೀತ, ... ೩೦ ... ಗೀತೆಗಳು

SRI GANESH
TALKIES
From 18 6 52 2 days only
A Republic Production
D ...
'SURRENDER'
With — John Carroll and
Walter Brennan

NEXT ATTRACTION
From 20 6 2
TARZAN's TRIUMPH

ಪ್ರಭಾ
ಅಮೋಘ ಪ್ರಾರಂಭ
19 6 52 ರಿಂದ
ದಿನಕ್ಕೆ 3 ಆಟಗಳು
ನವಕೇತನದವರ ಅತ್ಯುತ್ತಮ ಸಾಹಸಮಯ
ಹಿಂದಿ ಚಿತ್ರ
ಆಂಧಿಯಾನ್
ಪಾತ್ರ — ದೇವಾನಂದ್ ನಿಮ್ಮಿ ಕಲ್ಪನಾ ...
ದಿಗ್ದರ್ಶನ ಚೇತನ್ ಆನಂದ್
... ಬಾಲ್ ...

ಪಶ್ಚಿಮ ಪಂಜಾಬಿನಲ್ಲಿ ಏರ್ ಕಂಡಿಷನ್ ಬಸ್ ವ್ಯವಸ್ಥೆ

ರಾವಲ್ಪಿಂಡಿ ಮತ್ತು ಲಾಹೋರುಗಳ ನಡುವೆ ಏರ್ ಕಂಡಿಷನ್ ಬಸ್ ಸರ್ವಿಸ್ಸುಗಳ ವ್ಯವಸ್ಥೆಯನ್ನು ಪಶ್ಚಿಮ ಪಂಜಾಬ್ ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿನವರು ಏರ್ಪಡಿಸಲಿರುವರು ಇದರಿಂದ ಬಸ್ಸುಗಳಲ್ಲಿ ಸಮ ಶೀತೋಷ್ಣದ ಹವಾವನ್ನು ಉಂಟುಮಾಡಲಾಗುವುದು

ಬ್ಯಾಡ್ಮಿಂಟನ್ ಟೆನಿಸ್ ಟೂರ್ನಿ

ರಾಜಧಾನಿಯ ಕೃಷ್ಣಮೂರ್ತಿಪುರಂ ಬ್ಯಾಡ್ಮಿಂಟನ್ ಟೆನ್ನಿಸ್ ಕ್ಲಬ್ಬಿನವರು ನಡೆಸಿದ ಬ್ಯಾಡ್ಮಿಂಟನ್ ಟೆನ್ನಿಸ್ ಟೋರ್ನಮೆಂಟಿನಲ್ಲಿ ಈ ಕೆಳಗೆ ಕಂಡವರು ಜಯಶೀಲರಾಗಿರುತ್ತಾರೆ ಸಿಂಗಲ್ಸ್ ವಿನ್ನರ್ ಶ್ರೀ ಎಸ್ ಸಾಮ್ಯುಯಲ್, ಸಿಂಗಲ್ಸ್ ರನ್ನರ್ ಶ್ರೀ ಎ ಆರ್ ರಾಮಮೂರ್ತಿ, ಡಬ್ಬಲ್ಸ್ ವಿನ್ನರ್ಸ್ ಬಿ ಎಲ್ ವಿಶ್ವನಾಥ್ ಮತ್ತು ಜಿ ಹೆಚ್ ಕೃಷ್ಣಮೂರ್ತಿ ಡಬ್ಬಲ್ಸ್ ರನ್ನರ್ಸ್ ಎ ಆರ್ ರಾಮಮೂರ್ತಿ ಮತ್ತು ಶಂಕರ ನಾರಾಯಣ್

ಭಾರತಿ ಸ್ತ್ರೀ ಸಮಾಜ

ರಾಜಧಾನಿಯ ವಾಣಿವಿಲಾಸ ಮೊಹಲ್ಲೆಯಲ್ಲಿರುವ ಭಾರತೀ ಸ್ತ್ರೀ ಸಮಾಜದಲ್ಲಿ ಎಂದಿನಂತೆ ಹೊಲಿಗೆ ಮತ್ತು ಹಿಂದಿ ತರಗತಿಗಳು ಮಹಿಳೆಯರಿಗಾಗಿ ಏರ್ಪಟ್ಟು ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ತರಗತಿಗಳು ಪ್ರಾರಂಭವಾಗಿವೆ ಸಮಾಜದವರು ಏರ್ಪಡಿಸಿರುವ ಶಿಶುವಿಹಾರದ ತರಗತಿಗಳೂ ಪ್ರಾರಂಭವಾಗಿವೆ ಮಕ್ಕಳನ್ನು ಸೇರಿಸಬಿಚ್ಛಿಸುವವರು ಕೂಡಲೇ ಗಮನಿಸಬೇಕೆಂದು ಸಮಾಜದ ಕಾರ್ಯದರ್ಶಿ ಶ್ರೀಮತಿ ರಾಜಲಕ್ಷ್ಮಮ್ಮನವರು ಕೋರಿರುತ್ತಾರೆ

SRI GAYATHRI
TALKIES
From 18 6 52 Daily 3 Shows
M G M's Musical Picture
Bigger than BATHING BEAUTY
TEXAS CARNIVAL
Starring — Esther Williams
and Red Skelton
MORNING SHOWS
On 21st and 22nd
CAPTAIN BLOOD
With Errol Flynn

SRI KANYAKAPARAMESWARI
Co-operative Society Limited,
Hanumantha Rao Street
(Near Prabha Picture House)

WANTED
Wanted three Daily Auditors for the year 1952 53 on a lumpsum Honorarium Candidates should apply with Testimonials stating Qualifications and Experience on or before 25 6-52
(Sd) D Eswara Setty,
Hon Secretary

MYSORE TRANSIT SERVICE
Excellent and Regular Goods Vehicle Service Between **MYSORE & MADRAS** in arrangement with our Agents M/s Madras-Bangalore Transport Co
Proprietors :— **THIRTHA & COMPANY,**
Clearing and Forwarding Agents
Ramavilasa Road Mysore (PHONE 547)
— City Collecting Branch —
Messrs N S. PADAKI,
Hanumantha Rao Street (Near Prabha Talkies, Mysore)

ಶಾಲೆಗಳಲ್ಲಿ ಸ್ಥಳ ಸಿಗದೆ ತೊಂದರೆ ಪಡುತ್ತಿರುವ
S S L C ವಿದ್ಯಾರ್ಥಿನಿಯರಿಗೆ ಸುಸಮಯ
ಎಸ್ ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿನಿಯರಿಗೂ
ಹೈಸ್ಕೂಲು ತರಗತಿಗಳಲ್ಲಿ ಓದಿ ಬಿಟ್ಟಿರುವ ವಿದ್ಯಾರ್ಥಿನಿಯರಿಗೂ
ಪ್ರತ್ಯೇಕವಾದ
— — ತರಗತಿಗಳನ್ನೇರ್ಪಡಿಸಲಾಗಿದೆ — —
CITY TUTORIAL COLLEGE,
Near V V Market, Mysore

Edited, Printed and Published by A R Nagarajan at Sadhvi Press, D Subbaiah Road, Mysore

ರಿಜಿಸ್ಟರ್ಡ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಬುಧವಾರ ೧೮-೬-೫೩ [ಸಂಚಿಕೆ ೨೬೫

ಅಮೆರಿಕಾ ಗಡಿಯಲ್ಲಿ ಕಾವಲಿಗಾಗಿ ಎಚ್ಚರಿಕೆ

ಬಳ್ಳಾರಿ ಕೇಡಿಗೆ ಭಾರಿ ಶಿಕ್ಷೆ

ಮೈಸೂರು ೧೮

ರಾಜಾಸಾಬ್ ಎಂಬ ಒಬ್ಬ ಬಳ್ಳಾರಿ ಕೇಡಿಯು ರಾಜಧಾನಿಯಲ್ಲಿ ನಡೆಸಿದ ನಾಲ್ಕು ಕಳ್ಳತನಗಳಿಗಾಗಿ ನಗರದ ೧ ನೇ ನ್ಯಾಯಾಧೀಶರು ಅವನಿಗೆ ೩ ವರ್ಷ ಕಠಿಣ ಸಜವನ್ನು ವಿಧಿಸಿರುತ್ತಾರೆ ನೋಟಗಳ್ಳ ಮತ್ತು ಕ್ಯಾತನಹಳ್ಳಿಗಳಲ್ಲಿ ಅವನು ಮಾಡಿದ ಕಳ್ಳತನಗಳಿಗಾಗಿ ನಗರದ ಎರಡನೇ ನ್ಯಾಯಾಧೀಶರು ೩ ವರ್ಷ ಕಠಿಣ ಸಜಾವನ್ನು ವಿಧಿಸಿರುತ್ತಾರೆ

ಸೈಕಲ್ ಕಳುವಿಗಾಗಿ ೩ ವರ್ಷ ಸಜ

ಅರಮನೆ ಕಛೇರಿಯ ಮೋಟಾರ್ ರಂಗನಾಥ ಉರುಫ್ ದೊರೆಸಾಮಿ ಎಂಬುವನು ಸೈಕಲ್ ಕಳುವು ಮಾಡಿದ ನೆಂದು ನಗರದ ೧ ನೇ ನ್ಯಾಯಾಧೀಶರು ಅವನಿಗೆ ೨ ವರ್ಷ ಕಠಿಣ ಸಜಾ ವಿಧಿಸಿ, ಸಜಾ ಮುಗಿದನಂತರ ೫ ವರ್ಷ ಕಾಲ ಪೋಲೀಸರಿಗೆ ತನ್ನ ವಿಳಾಸವನ್ನು ತಿಳಿಸುವಂತೆ ಆಜ್ಞಾಪಿಸಿರುತ್ತಾರೆ

ಸೈಕಲ್ಲುಗಳ ಪತ್ತೆ

ನಗರದ ಕ್ರೈಂ ಬ್ರಾಂಚ್ ಪೋಲೀಸರು ಕುಣಿಗಲ್ಲಿನ ಅಹಮದ್ ಖಾಸಿಂ ಎಂಬುವನನ್ನು ದಸ್ತಗಿರಿ ಮಾಡಿ ಅವನ ಬಳಿ ಇದ್ದ ಕಳುವಿನ ೬ ಸೈಕಲ್ಲುಗಳನ್ನು ಪತ್ತೆ ಹಚ್ಚಿರುತ್ತಾರೆ ೩ ಸೈಕಲ್ಲುಗಳ ಕಳುವಿಗಾಗಿ ಅವನಿಗೆ ೬ ತಿಂಗಳು ಸಜಾ ವಿಧಿಸಲಾಗಿದೆ ತುಮಕೂರು ಮತ್ತು ಬೆಂಗಳೂರು ಪೋಲೀಸರು ಅವನನ್ನು ಹುಡುಕುತ್ತಿದ್ದರೆಂದು ಹೇಳಲಾಗಿದೆ

ಹಿಂದಿ ಪರೀಕ್ಷೆಗಳಿಗೆ ಅರ್ಜಿ ಪತ್ರ

ಬರುವ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಅರ್ಜಿ ಪತ್ರಗಳನ್ನು ಕಳುಹಿಸಲು ತಾ|| ೨೧-೬-೫೩ ನೇ ಶನಿವಾರ ಕೊನೆಯ ದಿನವಾಗಿರುತ್ತದೆ ಅರ್ಜಿ ಪತ್ರಗಳನ್ನು ಮೈಸೂರು ೬ ಚಾಮರಾಜ ರಸ್ತೆಯಲ್ಲಿರುವ ಸಭಾ ಕಾರ್ಯಾಲಯದಲ್ಲಿ ಪಡೆಯಬಹುದು

ಜಪಾನಿನ ೮ ಲಕ್ಷ ಕಾರ್ಮಿಕರ ಮುಷ್ಕರ

ಮುಷ್ಕರ ಪ್ರಕರಣಗಳ ನಿರೋಧದ ಶಾಸನವನ್ನು ಜಪಾನ್ ಸರ್ಕಾರದವರು ಮಾರ್ಪಡಿಸಿರುವುದರಿಂದ ಆ ಮಸೂದೆಗೆ ಪ್ರತಿಭಟನೆ ತೋರಲು ಅಲ್ಲಿನ ೮ ಲಕ್ಷ ಕಾರ್ಮಿಕರು ನೆನ್ನೆ ಒಂದು ದಿನದ ಮುಷ್ಕರವನ್ನು ಹೂಡಿದ್ದರು ಇದರ ಪರಿಣಾಮವಾಗಿ ಹಲವು ಘಂಟೆ ಕಾಲ ವಿದ್ಯುತ್ ಸರಬರಾಜು ನಿಂತುಹೋಗಿತ್ತು ಆ ದೇಶದ ೩೮ ವಿಶ್ವ ವಿದ್ಯಾಲಯದ ೨೦ ಸಾವಿರ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗಲಿಲ್ಲ ಒಂದು ವಿಶ್ವ ವಿದ್ಯಾಲಯದ ಮುಖ್ಯಾಧಿಕಾರಿಗಳು ಮುಷ್ಕರ ಹೂಡಿರುವ ವಿದ್ಯಾರ್ಥಿಗಳು ಹಿಂತಿರುಗುವವರೆಗೂ ಉಪವಾಸ ಮಾಡುವುದಾಗಿ ತಿಳಿಸಿರುತ್ತಾರೆ

ನ್ಯಾಷನಲ್ ಕಾಲೇಜಿನಲ್ಲಿ ಬಿ ಎಸ್‌ಸಿ. ತರಗತಿ

ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ೮೦ ವಿದ್ಯಾರ್ಥಿಗಳು ಓದಲು ಬಿ ಎಸ್‌ಸಿ ತರಗತಿಗಳನ್ನು ತೆರೆಯುವುದಕ್ಕೆ ವಿಶ್ವ ವಿದ್ಯಾಲಯದ ಕೌನ್ಸಿಲ್ಲಿನವರು ಅನುಮತಿಯಿತ್ತಿರುವರು

ದಕ್ಷಿಣ ಕೊರಿಯದ ಮದ್ದು ಗುಂಡು ಕೋಠಿಯಲ್ಲಿ ಸಿಡಿತ

ದಕ್ಷಿಣ ಕೊರಿಯದ ರಾಜಧಾನಿಗೆ ಸುಮಾರು ೧೫ ಮೈಲಿ ದೂರವಿರುವ ಒಂದು ಸ್ಥಳದಲ್ಲಿ ವಿಶ್ವ ಸಂಸ್ಥೆಯವರು ಏರ್ಪಡಿಸಿಕೊಂಡಿದ್ದ ಮದ್ದು ಗುಂಡುಗಳ ಕೋಠಿಯಲ್ಲಿ ನೆನ್ನೆ ಇದ್ದಕ್ಕಿದ್ದಂತೆಯೇ ಒಂದಾಗುತ್ತಲೊಂದು ಸಿಡಿತವುಂಟಾಗಿ ಹತ್ತಿರದ ಪೂಸಾನ್ ನಗರವೇ ನಡುಗಿಹೋಯಿತೆಂದು ವರದಿಯಾಗಿದೆ

೩೩ ಸಾವಿರ ಸ್ವಿಸ್ ಬಟ್ಟೆ ಕಾರ್ಮಿಕರ ಪ್ರದರ್ಶನ

ಸ್ವಿಟ್ಜರ್‌ಲೆಂಡಿನ ಬಟ್ಟೆ ಕೈಗಾರಿಕೆಯ ೩೩,೦೦೦ ಕಾರ್ಮಿಕರು ಭಾನುವಾರ ಅಲ್ಲಿನ ರಾಜಧಾನಿ ಬರ್ನ್ ನಗರದಲ್ಲಿ ಪ್ರದರ್ಶನ ನಡೆಸಿ, ಬಟ್ಟೆ ಕೈಗಾರಿಕೆಗೆ ರಕ್ಷಣೆ ಕೊಟ್ಟು, ಕಾರ್ಮಿಕರ ನಿರುದ್ಯೋಗವನ್ನು ಪರಿಹರಿಸಬೇಕೆಂದು ಘೋಷಿಸಿದರು ವರ್ತಕರು ದುರಾಶೆಗೀಡಾಗಿ ಅಧಿಕ ಲಾಭ ಪಡೆಯಲು ಕೈ ಹಾಕಬಾರದೆಂದು ಕೋರುವ ನಿರ್ಣಯವನ್ನು ಪ್ರದರ್ಶನಕಾರರ ಸಭೆಯಲ್ಲಿ ಕೈಗೊಳ್ಳಲಾಯಿತು

ಹತೋಟಿ ರದ್ದಾದುದರಿಂದ ಸಂಗ್ರಹಣೆ ತೀರ ಕಡಿಮೆ

ಮದ್ರಾಸಿನಲ್ಲಿ ಆಹಾರದ ಹತೋಟಿಯು ರದ್ದಾಗುವುದೆಂದು ಪ್ರಕಟವಾದ ಒಂದು ವಾರದಲ್ಲಿ ೫೩,೩೨೦ ಟನ್ ಧಾನ್ಯದ ವಸೂಲಿಯಾಗುವುದರ ಬದಲು ೩,೯೧೧ ಟನ್ ಮಾತ್ರ ವಸೂಲಾಗಿರುವುದೆಂದು ತಿಳಿದುಬಂದಿದೆ

ರೈಲಿಗೆ ಸಿಕ್ಕಿ ಫೇಲಾದ ಎಲ್ ಎಸ್. ವಿದ್ಯಾರ್ಥಿಯ ಆತ್ಮಹತ್ಯೆ

ಈ ವರ್ಷದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದಕ್ಕಾಗಿ ಕಡೂರು ತಾಲ್ಲೂಕಿನ ಲಕ್ಷ್ಮೀಪುರದ ಸುಮಾರು ೧೫ ವರ್ಷದ ಆರ್ ಹನುಮಂತಯ್ಯ ಎಂಬ ವಿದ್ಯಾರ್ಥಿಯು ಕಳೆದ ೧೫ ನೇ ತಾ|| ಕಡೂರು - ಬೀರೂರುಗಳ ಮಧ್ಯೆ ಹೋಗುತ್ತಿದ್ದ ಗೂಡ್ಸ್ ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ ರೈಲು ಬರುವ ವೇಳೆಗೆ ಸರಿಯಾಗಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಕಂಬಿ ಮೇಲೆ ಮಲಗಿ ಪ್ರಾಣ ಬಿಟ್ಟನೆಂದು ಹೇಳಲಾಗಿದೆ

ಅಮೆರಿಕಾ ಗಡಿಯಲ್ಲೆಲ್ಲಾ ಕಾವಲಿಗಾಗಿ ಆಜ್ಞೆ

ಬರುವ ತಿಂಗಳು ೧೪ ರಿಂದ ಅಮೆರಿಕದ ಗಡಿ ಠಾಣ್ಯಗಳಲ್ಲೆಲ್ಲಾ ೨೪ ಗಂಟೆಗಳ ಕಾಲವೂ ಕಾವಲಿರಬೇಕೆಂದು ಅಮೆರಿಕದ ರಕ್ಷಣಾ ಇಲಾಖೆಯವರು ತಮ್ಮ ವಿಮಾನ ಹಾರಾಟ ಕಂಡುಹಿಡಿಯುವ ಅಧಿಕಾರಿಗಳಿಗೆ ಆಜ್ಞಾಪಿಸಿರುತ್ತಾರೆ ರಷ್ಯನರು ಯಾವಾಗ ಬೇಕಾದರೂ ಧಾಳಿ ನಡೆಸಲು ಸನ್ನದ್ಧರಾಗಿರುವರೆಂದೂ, ಆದುದರಿಂದ ಕಾವಲು ಕಾಯುವುದು ಆವಶ್ಯಕವೆಂದು ಅಮೆರಿಕದ ವಿಮಾನ ಖಾತೆಯ ಪ್ರಮುಖ ಅಧಿಕಾರಿ ಮೇ|| ಜ|| ಸ್ಮಿತ್‌ರವರು ತಿಳಿಸಿರುತ್ತಾರೆ

ರಷ್ಯದ ವಿರುದ್ಧ ೨ ಕೋಟಿ ಜರ್ಮನರ ದಂಗೆ

ರಷ್ಯನವರು ಆಕ್ರಮಿಸಿರುವ ಪೂರ್ವ ಜರ್ಮನಿಯ ಸುಮಾರು ೨ ಕೋಟಿ ಜನರು ರಷ್ಯದ ವಿರುದ್ಧವಾಗಿ ದಂಗೆಯೆದ್ದಿರುವರೆಂದು ವರದಿಯಾಗಿದೆ ಈ ಪ್ರತಿಭಟನೆಯನ್ನು ಅಡಗಿಸಲು ಪೂರ್ವ ಜರ್ಮನ್ ಪೋಲೀಸರ ನೆರವಿಗೆ ಸಿದ್ಧವಾಗಿರಬೇಕೆಂದು ರಷ್ಯಾ ಸರ್ಕಾರದವರು ತಮ್ಮ ಸೈನಿಕರಿಗೆ ಸೂಚಿಸಿರುವರೆಂದು ಹೇಳಲಾಗಿದೆ ಸರ್ಕಾರದ ಅನುಮತಿಯಿಲ್ಲದೆ ಪೂರ್ವ ಜರ್ಮನ್ ಪ್ರದೇಶದಿಂದ ಬರ್ಲಿನ್ ನಗರಕ್ಕೆ ಹೊರಟಿದ್ದವರನ್ನೆಲ್ಲಾ ದಸ್ತಗಿರಿ ಮಾಡಲಾಗಿದೆ ಪೂರ್ವ ಮತ್ತು ಪಶ್ಚಿಮ ಜರ್ಮನ್ ಗಡಿಗಳನ್ನು ಮುಚ್ಚಿರುವುದಕ್ಕಾಗಿಯೂ, ಪೂರ್ವ ಜರ್ಮನಿಯಲ್ಲಿ ಪುನರ್‌ಶಸ್ತ್ರಾಸ್ತ್ರ ಸಿದ್ಧತೆಗಾಗಿಯೂ ತೀರ ಅಸಮಾಧಾನ ಪಟ್ಟು ಜನರು ದಂಗೆಯೆದ್ದಿರುವರೆಂದು ಹೇಳಲಾಗಿದೆ

ಕಾಂಬೋಡಿಯಾ ಪ್ರಧಾನಿಯ ವಜಾ

ಇಂಡೋ ಚೀಣಾದ ಒಂದು ಭಾಗವಾದ ಕಾಂಬೋಡಿಯಾದ ದೊರೆಯು ತಮ್ಮ ಪ್ರಧಾನ ಮಂತ್ರಿ ಹುಯ ಕಾಂತೋಲ್ ರವರನ್ನು ವಜಾ ಮಾಡಿ ಆಡಳಿತಾಧಿಕಾರವನ್ನು ತಾನೇ ವಹಿಸಿಕೊಂಡಿರುತ್ತಾರೆ ದೊರೆಯೇ ಪ್ರಧಾನಿಯಾಗಿರುವ ಹೊಸ ಮಂತ್ರಿಮಂಡಲವೊಂದು ಅಲ್ಲಿ ರಚನೆಯಾಗಲಿದೆ

ಹೊಸ ಶಾಸನ ಸಭೆಯ ಅಧಿವೇಶನ

ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

ಸ್ವಂ ಕು ವರ್ತ] ಬೆಂಗಳೂರು ೧೮

ಸಾರ್ವತ್ರಿಕ ಚುನಾವಣೆಗಳಾದ ನಂತರ ರಚನೆಯಾದ ನೂತನ ಶಾಸನ ಸಭಾಧಿವೇಶನವು ಈ ದಿನ ಬೆಳಗ್ಗೆ ೧೧ ಘಂಟೆಗೆ ಅಠಾರಾ ಕಛೇರಿಯ ಪುಸ್ತಕ ಭಂಡಾರದ ಭವನದಲ್ಲಿ ಸೇರಿತ್ತು ಹಂಗಾಮಿ ಅಧ್ಯಕ್ಷರಾದ ಶ್ರೀ ವಿ ವೆಂಕಟಪ್ಪನವರು ಅಗ್ರಾಸನವನ್ನು ವಹಿಸಿದ್ದರು ಒಟ್ಟು ೧೦೮ ಮಂದಿ ಸದಸ್ಯರಲ್ಲಿ ೯೫ ಮಂದಿ ಸಭೆಗೆ ಬಂದಿದ್ದರು

ಮಂತ್ರಿಗಳು, ಮಾಜಿ ಮಂತ್ರಿಗಳು ಮತ್ತು ಸದಸ್ಯರು ಕನ್ನಡದಲ್ಲಿ ಪ್ರಮಾಣ ವಚನವನ್ನು ತೆಗೆದುಕೊಂಡರು ಶಿವಮೊಗ್ಗ ಜಿಲ್ಲೆಯ ಶ್ರೀ ರಂಗಾ ನಾಯಕ್ ಎಂಬ ಅನಕ್ಷರಸ್ಥ ಸದಸ್ಯರು ಶಾಸನ ಸಭಾ ಕಾರ್ಯದರ್ಶಿಯವರಿಂದ ಓದಲಾದ ಸದಸ್ಯರ ಪ್ರಮಾಣ ವಚನವನ್ನು ತಾವು ಉಚ್ಚರಿಸಿದರು

ಸಭಾಧಿವೇಶನವು ಸೇರಿದ್ದ ಪುಸ್ತಕ ಭಂಡಾರದ ಭವನವನ್ನು ಬಹು ಚೆನ್ನಾಗಿ ಶೃಂಗರಿಸಲಾಗಿತ್ತು ಸ್ಪೀಕರರು ಕೂಡುವ ಸ್ಥಾನದ ಹಿಂಭಾಗದಲ್ಲಿ ಮೇಲುಗಡೆ ಮಹಾತ್ಮ ಗಾಂಧಿಯವರ ಕಂಚಿನ ಪ್ರತಿಮೆಯನ್ನಿಡಲಾಗಿದೆ ಅದರ ಎರಡು ಪಕ್ಕಗಳಲ್ಲಿ ರಾಷ್ಟ್ರಾಧ್ಯಕ್ಷರ ಮತ್ತು ಶ್ರೀ ಮನ್ ಮಹಾರಾಜರ ಭಾವಚಿತ್ರಗಳನ್ನು ಅಲಂಕರಿಸಿ, ರಾಷ್ಟ್ರಬಾವುಟವನ್ನು ಅವುಗಳ ಮೇಲೆ ಇಡಲಾಗಿದೆ

ಶಾಸನ ಸಭಾಧ್ಯಕ್ಷರ ಚುನಾವಣೆ

ಕಿರಿಯ ಶಾಸನ ಸಭೆಯ ಪ್ರಾಯಂ ಅಧ್ಯಕ್ಷರ ಚುನಾವಣೆಯು ಈ ದಿನ ಮಧ್ಯಾಹ್ನ ೧ ಗಂಟೆಗೆ ಬ್ಯಾಲೆಟ್ ಮೂಲಕ ಏರ್ಪಾಡಾಗಿದೆ. ಸಂಜೆ ೫ ಗಂಟೆ ನಂತರ ಓಟುಗಳ ಎಣಿಕೆಯು ನಡೆಯುವುದು

ಪೌರಸಭೆಗಳಿಗೆ ಮನರಂಜನೆ ತೆರಿಗೆಯ ಹಣ

ಸಂಸ್ಥಾನದ ಪೌರಸಭೆಗಳ ಪ್ರದೇಶಗಳಲ್ಲಿ ವಸೂಲಾಗುವ ಮನರಂಜನೆ ತೆರಿಗೆಯ ಬಾಬತು ಹಣವನ್ನು ಆಯಾ ಪೌರಸಭೆಗಳಿಗೆ ವಹಿಸಲು ಸರ್ಕಾರದವರು ನಿರ್ಧರಿಸಿರುವರೆಂದು ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ ಚೆನ್ನಯ್ಯನವರು ತಿಳಿಸಿರುತ್ತಾರೆ

ತೆಲಂಗಾಣ ಕಮ್ಯೂನಿಸ್ಟರಿಗೆ ರಷ್ಯದಿಂದ ೬೪ ಲಕ್ಷ ರೂ

ತೆಲಂಗಾಣಾ ಕಮ್ಯೂನಿಸ್ಟರು ಹೈದರಾಬಾದಿನ ಕಾನೂನು ಬದ್ಧ ಸರ್ಕಾರದೊಡನೆ ಹೋರಾಟವನ್ನು ಮುಂದುವರಿಸಿಕೊಂಡು ಹೋಗಲು ರಷ್ಯದಿಂದ ವರ್ಷಕ್ಕೆ ೬೪ ಲಕ್ಷ ರೂಪಾಯಿಗಳನ್ನು ಸಹಾಯವಾಗಿ ಅವರು ಪಡೆಯುತ್ತಿರುವರೆಂದು ಅಲ್ಲಿನ ಶಾಸನ ಸಭೆಯಲ್ಲಿ ಸಭಾ ಸದಸ್ಯರಾದ ಕೊಂಡ ಲಕ್ಷ್ಮಣ್‌ರವರು ತಿಳಿಸಿ ತಾವು ಈ ಬಗ್ಗೆ ರುಜುವಾತು ಮಾಡಿಕೊಡುವುದಾಗಿ ಹೇಳಿರುತ್ತಾರೆ. ಆ ಸಂಸ್ಥಾನದ ಕಮ್ಯೂನಿಸ್ಟರು ಗೆರಿಲ್ಲಾ ಕದನವನ್ನು ನಡೆಸಲು ಜನರನ್ನು ತರಪೇತು ಮಾಡುವ ಕಾರ್ಯದಲ್ಲಿ ನಿರತರಾಗಿರುವಾಗ ಪೋಲೀಸು ಖಾತೆಗಾಗಿ ವೆಚ್ಚವನ್ನು ಕಡಿಮೆ ಮಾಡುವುದು ಸಾಧ್ಯವಿಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು

ಮರಾಮತ್ತು ಇಲಾಖೆ ರಾಜಾಜಿಗೆ ಎರಡನೇ ಶತ್ರು

ಮರಾಮತ್ತು ಇಲಾಖೆಯು ತಮ್ಮ ಎರಡನೇ ಶತ್ರುವೆಂದು ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ತಿಳಿಸಿ, ಕಟ್ಟಡಗಳ ನಿರ್ಮಾಣಕ್ಕಾಗಿ ಸರ್ಕಾರದವರಿಗೆ ತಗಲುವ ವೆಚ್ಚವು ಕಡಿಮೆಯಾಗಬೇಕೆಂದು ಸೂಚಿಸಿರುತ್ತಾರೆ ಕಮ್ಯೂನಿಸ್ಟರು ತಮ್ಮ ಮೊದಲನೇ ಶತ್ರುವೆಂದು ಅವರು ಹಿಂದೆ ಹೇಳಿದರು

ವಾರ್ಷಿಕೋತ್ಸವ

ರಾಜಧಾನಿಯ ಜೈನ ಸಾಹಿತ್ಯ ಪ್ರಚಾರ ಸಂಘದ ದ್ವಿತೀಯ ವಾರ್ಷಿಕೋತ್ಸವವು ಬಿ ಟಿ ಕಂಪೆನಿಯ ಮಾಲೀಕರಾದ ಶ್ರೀ ಟಿ ಶಾಂತರಾಜಪ್ಪನವರ ಅಧ್ಯಕ್ಷತೆಯಲ್ಲಿ ನಾಳಿದ್ದು ಸಂಜೆ ೭ ಗಂಟೆಗೆ ಸಂಘದ ಕಛೇರಿಯಲ್ಲಿ ಜರುಗುವುದು ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಪ್ರೊ|| ಡಿ ಎಲ್ ನರಸಿಂಹಾಚಾರ್ಯರು ಜೈನ ಕವಿಗಳ ಸ್ಥಾನದ ವಿಷಯ ಭಾಷಣ ಮಾಡುವರು

No P...
JOIN IMMEDIATELY
SRI RAGHAVENDRA TUTORIAL INSTITUTE
Near Collector Hr Ashoka Road Mys.
COACHING CLASSES FOR
§ S S L C (for September 52 & March 53)
§ Lower Secondary
§ Madras Matriculation
Full fees will be refunded to the students if failed in the Supplementary S.S L C Examination of 1952
Limited Seats Moderate Fees
Particulars in Person
M. RAMA RAO
B Sc., B com.

ಪರೀಕ್ಷಾ ಫಲಿತಾಂಶ

ಸ್ವಂ ಸು] ಆ ಪುರಾಜನಗರ ೧೬

ಇಲ್ಲಿನ ಹೈಸ್ಕೂಲಿನ ೧೪ ಮಂದಿ ವಿದ್ಯಾರ್ಥಿಗಳು ಈ ಸಾರಿಯ ಸ್ಕೂಲ್ ಫೈನಲ್ ಪರೀಕ್ಷೆಗೆ ಕುಳಿತಿದ್ದರು ಅದರ ಪೈಕಿ ೬೦ ಮಂದಿ ತೇರ್ಗಡೆ ಹೊಂದಿರುತ್ತಾರೆ ೧೭ ಜನರಿಗೆ ಇ ಸಿ ಎಸ್ ದೊರೆತಿರುವುದು ಫಲಿತಾಂಶವು ಒಟ್ಟಿನಲ್ಲಿ ತೋಷದಾಯಕವಾಗಿರುವುದೆಂದು ಇಲ್ಲಿನ ಜನರು ಭಾವಿಸಿರುತ್ತಾರೆ

ಭಾರತೀ ಸ್ತ್ರೀ ಸಮಾಜ

ರಾಜಧಾನಿಯ ಒಂಟಿಕೊಪ್ಪಲಿನ ಭಾರತೀ ಸ್ತ್ರೀಸಮಾಜದಲ್ಲಿ ಕಳೆದ ಬುಧವಾರ ಮಹಿಳೆಯರನ್ನು ಕುರಿತು ಕಸ್ತೂರಿಬಾ ನಿಧಿಯ ಮೈಸೂರು ಪ್ರಾಂತಾಧಿಕಾರಿಗಳಾದ ಶ್ರೀಮತಿ ಯಶೋಧರಾ ದಾಸಪ್ಪನವರು ಭಾಷಣಮಾಡಿ ಪ್ರಜಾಸತ್ತಾತ್ಮಕವಾದ ಭಾರತದಲ್ಲಿ ಮಹಿಳೆಯರ ಸ್ಥಾನವನ್ನು ವಿವರಿಸಿದರು ಸ್ತ್ರೀಯರು ಪ್ರಯತ್ನಗಳನ್ನು ಮಾಡಿ ವಿಫಲರಾದರೆ ಅದಕ್ಕೇ ಬೇಜಾರುಪಡದೆ ಕಾರ್ಯಸಾಧನೆಯಾಗುವವರೆಗೂ ದುಡಿಯಬೇಕು [illegible]

SRI GAYATHRI
TEXAS CARNIVAL
Starring Esther Williams & Red Skelton
MORNING SHOWS
CAPTAIN BLOOD
With Errol Flynn

ಹೆಚ್ಚು ಕಾವೇರಿ ನೀರು ಬಿಡಲು ಮೈಸೂರಿಗೆ ಮನವಿ

ಮದ್ರಾಸಿನ ವಿದ್ಯುಚ್ಛಕ್ತಿಯ ಆವಶ್ಯಕತೆಯ ಪೂರೈಕೆಗಾಗಿ ಮೆಟ್ಟೂರಿನ ವಿದ್ಯುತ್ ತಯಾರಿಕಾ ಕೇಂದ್ರವು ಹೆಚ್ಚಾಗಿ ಕೆಲಸಮಾಡುವಂತೆ ಆಗಲು ಕಾವೇರಿಯಿಂದ ಹೆಚ್ಚು ನೀರನ್ನು ಒದಗಿಸುವಂತೆ ಮೈಸೂರು ಸರ್ಕಾರದವರನ್ನು ಅಲ್ಲಿನ ಸರ್ಕಾರದವರು ಕೋರಿರುತ್ತಾರೆ

ಪ್ರದೋಷ ಸಂಗೀತ

ರಾಜಧಾನಿಯ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶ್ರೀರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಈ ಸಂಜೆ ೭ ಘಂಟೆಗೆ ವಿದ್ವಾನ್ ರಾಮಚಂದ್ರರಾಯರ ಹಾಡುಗಾರಿಕೆಯು ವಿ|| ಎ ಕೃಷ್ಣಮೂರ್ತಿ ಅಯ್ಯಂಗಾರರವರ ಪಿಟೀಲು ಮತ್ತು ವಿ|| ರಾಮಚಂದ್ರಾಚಾರ್ಯರ ಮೃದಂಗದೊಡನೆ ನಡೆಯಲಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಎಸ್ ರಾಮಚಂದ್ರರಾವ್ ಸಂಗೀತ ಮಧ್ಯಾಹ್ನ ೧-೩೦ [illegible] ವಿ ಮಹದೇವಪ್ಪ, ಪಿಟೀಲು ಸಂಜೆ [illegible] ಮತ್ತು [illegible] ಕನ್ನಡ ಗೀತೆಗಳು [illegible] ಮತ್ತು [illegible] ವಿ ಮಹದೇವಪ್ಪ, ಪಿಟೀಲು [illegible]

ಮೈಸೂರು ಜಿಲ್ಲಾ ಪ್ರಿಂಟರುಗಳ ಸಂಘದ ಸಭೆ

ಮೈಸೂರು ಜಿಲ್ಲಾ ಪ್ರಿಂಟರುಗಳ ಸಂಘದ ಸರ್ವ ಸದಸ್ಯರ ಸಾಮಾನ್ಯ ಸಭೆಯು ಇದೇ ೨೨ ನೇ ತಾರೀಕು ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಯುನೈಟೆಡ್ ಪ್ರಿಂಟರ್ಸ್ ಕಛೇರಿಯಲ್ಲಿ ನಡೆಯಲಿರುವುದಾಗಿದೆ ಜಿಲ್ಲಾ ಪ್ರಿಂಟಿಂಗ್ ಪ್ರೆಸ್ಸುಗಳ ಮಾಲೀಕರೆಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ

SRI GAYATHRI TUTORIAL COLLEGE,
C/o THE CENTRAL COLLEGE OF COMMERCE
Vani Vilas Market Buildings
Offers excellent coaching for S S L C & I COM students taking the September 1952 Examinations
Admissions are being received Enrol immediately

ವಿವಾಹ ಮಹೋತ್ಸವಗಳು

ಬೆಂಗಳೂರಿನ ವಿಶ್ವ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರವರು ತಮ್ಮ ಹಿರಿಯ ಕುಮಾರ ಚಿ|| ರಾ|| ತಿರುಮಲೆ ಶ್ರೀರಂಗಾಚಾರ್ಯರಿಗೆ ಶ್ರೀ ಕೆ ಗೋಪಾಲಯ್ಯಂಗಾರ್ಯರ ಕುಮಾರಿ ಸೌ|| ವೈದೇಹಿಯನ್ನು ತಂದುಕೊಂಡು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಅರಮನೆ ಕಛೇರಿಯ ಮುಜರಾಯಿ ಇಲಾಖೆಯ ಶ್ರೀ ವೈ ಸುಬ್ಬಾ ಶಾಸ್ತ್ರಿಯವರು ತಮ್ಮ ಕುಮಾರ ಚಿ|| ರಾ|| ಎಸ್ ರಾಮಣ್ಣನವರಿಗೆ ಬೆಂಗಳೂರಿನಲ್ಲಿರುವ ಹೊನ್ನಾವರದ ವೇ|| ಬ್ರ|| ಶಂಕರಯ್ಯನವರ ತಮ್ಮ ಶ್ರೀ ಸುಬ್ಬಯ್ಯನವರ ಮಗಳು ಸೌ|| ಸರಸ್ವತಿಯನ್ನು ತಂದುಕೊಂಡು ಮೊನ್ನೆ ಹೊಗೂರು ಜಿಲ್ಲಾ ಹೊನ್ನಾವರದಲ್ಲಿ ವಿವಾಹವನ್ನು ನೆರವೇರಿಸಿದರು

ನಂಜನಗೂಡಿನಲ್ಲಿರುವ ನಿವೃತ್ತ ಡಿ|| ರಿಕಾರ್ಡ್ ಕೀಪರ್ ಶ್ರೀ ವಿ ರಾಮಣ್ಣನವರು ತಮ್ಮ ಕುಮಾರಿ ಸೌ|| ಸರೋಜಮ್ಮನವರನ್ನು ಶ್ರೀರಂಗಪಟ್ಟಣದಲ್ಲಿರುವ [illegible] ನಾರಣಪ್ಪನವರ ಮಗ ಶ್ರೀ ಕೆ ಎನ್ [illegible] ರವರಿಗೆ ಕೊಟ್ಟು ಮೊನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು.

ಬೀಡಿ ಕಾರ್ಮಿಕರ ಪ್ರದರ್ಶನ

ಮೈಸೂರು ನಗರಕ್ಕೆ ಹೊರಗಿನಿಂದ ಬೀಡಿ ಎಲೆಯನ್ನು ತರಿಸಿಕೊಳ್ಳಲು ಪೈಲ್ಟ್ ಪ್ಯಾಕನ್ನುಗಳನ್ನು ಒದಗಿಸಬೇಕೆಂದು ಘೋಷಿಸುತ್ತಾ ಭಾನುವಾರ ಸಾವಿರ ಬೀಡಿ ಕಾರ್ಮಿಕರು ರಾಜಧಾನಿಯ ವಿವಿಧ ರಸ್ತೆಗಳಲ್ಲಿ ಪ್ರದರ್ಶನ ನಡೆಸಿದರು. ಎರಡು ಮೂರು ದಿನಗಳಲ್ಲಿ ಎಲೆಗಳು ಬರದಿದ್ದರೆ ಈಗಿರುವ ದಾಸ್ತಾನು ಮುಗಿದುಹೋಗಿ ೧೭ ಸಾವಿರ ಕಾರ್ಮಿಕರಿಗೆ ಉದ್ಯೋಗವಿಲ್ಲವಾಗುವುದೆಂದು ಹೇಳಲಾಗಿದೆ.

SRI GANESH TALKIES
From 18 6 52 2 days only
A Republic in Production
Of outstanding merit
'SURRENDER'
With — John Carroll and Walter Brennan
NEXT ATTRACTION
From 20 6 52
TARZAN'S TRIUMPH

ಮೈಸೂರು ಸರ್ಕಾರಿ ಶ್ರೀ ಗಂಧದೆಣ್ಣೆ ಕಾರ್ಖಾನೆ ಜನರಲ್ ಮ್ಯಾನೇಜರ್ ಆಫೀಸಿನಿಂದ — ತಾರೀಖು 9-6-52

ನೋಟಿಫಿಕೇಷನ್

ಮೇಲ್ಕಂಡ ಕಾರ್ಖಾನೆಗೆ ಬೇಕಾಗುವ (200) ಎರಡು ನೂರು ಮೂಟೆ ಉತ್ತಮವಾದ (ಸೌದೆ ಮತ್ತು ಹೆಣ್ಣು ಜಾತಿಗಳಲ್ಲಿ) ಇದ್ದಿಲು ಸರಬರಾಜು ಮಾಡಲು ಕಾರ್ಖಾನೆಯ ಜನರಲ್ ಮ್ಯಾನೇಜರವರಿಂದ ಟೆಂಡರುಗಳನ್ನು ತಾ|| 20 6 1952ನೇ ಶುಕ್ರವಾರ ಮಧ್ಯಾಹ್ನ ನಾಲ್ಕು (4) ಘಂಟೆ ವರೆವಿಗೂ ಸ್ವೀಕರಿಸಲಾಗುತ್ತದೆ

ಒಪ್ಪವುಳ್ಳವರು ಮೂಟೆ 1ಕ್ಕೆ (100 ಸೇರಿನ ಪಲ್ಲಾ ಮೂಟೆ) ದರವನ್ನು ನಮೂದಿಸಿ 25/ ರೂಪಾಯಿ ಠೇವಣಿಯೊಡನೆ ಟೆಂಡರ್‌ನ್ನು ಈ ಆಫೀಸಿಗೆ 20 6 1952ನೇ ತಾರೀಖು ಮಧ್ಯಾಹ್ನ (4) ನಾಲ್ಕು ಘಂಟೆಯೊಳಗೆ ತಲುಪುವ ಹಾಗೆ ಕಳುಹಿಸತಕ್ಕದ್ದು [illegible] ವಿವರಗಳನ್ನು ಬದಲಾಗಿ ಹೊಂದಬಹುದು

ಕಾರ್ಖಾನೆಯ ಜನರಲ್ ಸ್ಟೋರಿಗೆ ಮಾಲನ್ನು ಡೆಲಿವರಿ ಕೊಡಬೇಕಾಗಿರುವುದರಿಂದ ದರವನ್ನು ಅದಕ್ಕೆ ಸರಿಹೊಂದಿಸಿಕೊಂಡು ಟೆಂಡರನ್ನು ಕೊಡುವುದು ದರದಲ್ಲಿ ಮಾರ್ಕೆಟ್ ರೇಟಿಗೆ [illegible] ಎಂಬುದನ್ನು ಸೂಚಿಸತಕ್ಕದ್ದು ಸಪ್ಲೈ ಮಾಡಬಹುದಾದ [illegible] ಪ್ರಾರಂಭಕ್ಕೆ ಒಗ್ಗೆ [illegible] ಮಾಡತಕ್ಕದ್ದು ಮತ್ತು ಸಪ್ಲೈ ಮಾಡುವಾಗ ಅದೇ ತರಹ ಇಲ್ಲದಿದ್ದ ಪಕ್ಷದಲ್ಲಿ ಮಾಲನ್ನು ಸ್ವೀಕರಿಸಲಾಗುವುದಿಲ್ಲ

ಸದರಿ ಮಾಲನ್ನು ಆಫೀಸಿನಿಂದ ತಿಳಿಸಿದ ಒಂದು ವಾರದೊಳಗೆ ಫ್ಯಾಕ್ಟರಿಯ ಸ್ಟೋರಿಗೆ ಸರಬರಾಜು ಮಾಡುವುದು ಟೆಂಡರ್ ಒಪ್ಪಿದ ನಂತರ ಕಂಟ್ರಾಕ್ಟರ್ ಕಾರ್ಖಾನೆಯವರು ಒಪ್ಪುವ ರೀತಿಯಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಸಪ್ಲೈ ಮಾಡಬೇಕು ಹಾಗೆ ತಪ್ಪಿದ ಪಕ್ಷದಲ್ಲಿ ಬೇರೆಯವರಿಗೆ ಈ ಕೆಲಸವನ್ನು ಒಪ್ಪಿಸಿ ಉಂಟಾದ ಎಲ್ಲಾ ನಷ್ಟವನ್ನು ಮೊದಲನೆ ಟೆಂಡರ್‌ದಾರರಿಂದ ಕಂದಾಯದ ರೀತಿಯಲ್ಲಿ ವಸೂಲಿ ಮಾಡಲಾಗುವುದು.

ಜಿ. ತಿಪ್ಪೇಸ್ವಾಮಿ, ಜನರಲ್ ಮ್ಯಾನೇಜರ್

THE CITY TUTORIAL COLLEGE
(Near V V Market Mysore)
§ S S L C Coaching Classes
(For Sept 52 & March 53)
§ INTER Eng, P C M, C B Z & Commerce
§ B Sc. — English and P C M
ಮಿಡಲ್ ಸ್ಕೂಲಿನ ಎಲ್ಲಾ ತರಗತಿಗಳೂ ನಡೆಯುತ್ತಿವೆ.

Edited Printed and Published by A R. Nagarajan, at Sadhvi Press, D Subbiah Road Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧೯-೬-೫೨ [ಸಂಚಿಕೆ ೩೬೬

ಶಾಸನ ಸಭೆಗಳ - ಜಂಟಿ ಅಧಿವೇಶನ -

ಸಂಸ್ಥಾನ ಆಯವ್ಯಯದಲ್ಲಿ ನಿರೀಕ್ಷೆಗಿಂತ ಹೆಚ್ಚು ಖೋತಾ

ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಸ್ವಂ ಸು ಫೋ॥] ಬೆಂಗಳೂರು ೧೯

ಸಂಸ್ಥಾನದ ನೂತನ ಶಾಸನ ಸಭೆಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ಈ ದಿನ ಶ್ರೀಮನ್ಮಹಾರಾಜರು ಭಾಷಣ ಮಾಡಿದರು ಇದಕ್ಕಾಗಿ ಒಂದು ಭಾರಿ ಸಮಾರಂಭವು ಏರ್ಪಾಡಾಗಿತ್ತು ಉಭಯ ಸಭೆಗಳ ಅಧ್ಯಕ್ಷರುಗಳಾದ ಶ್ರೀಗಳು ಕೆ ಟಿ ಭಾಷ್ಯಂ ಮತ್ತು ಹೆಚ್ ಸಿದ್ದಯ್ಯನವರು ಪ್ರಭುಗಳನ್ನು ಸ್ವಾಗತಿಸಿದರು ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು.—

ಕಳೆದ ಸಾರಿ ನಾನು ಶಾಸನ ಸಭೆಯಲ್ಲಿ ಭಾಷಣ ಮಾಡಿದಂದಿನಿಂದ ಈಚೆಗೆ ದೇಶದಲ್ಲಿ ಹೊಸ ಅಧ್ಯಾಯವೇ ಆರಂಭವಾಗಿರುತ್ತದೆ ನೂತನ ರಾಜ್ಯಾಂಗದ ಪ್ರಕಾರ, ಸರ್ವ ತಂತ್ರ ಸ್ವತಂತ್ರ ಪ್ರಜಾಪ್ರಭುತ್ವವು ಸ್ಥಾಪಿತವಾಗಿದೆ. ಸಾರ್ವಜನಿಕ ಚುನಾವಣೆಗಳು ಎಲ್ಲ ರಾಷ್ಟ್ರಗಳ ಗಮನವನ್ನು ಸೆಳೆಯುವಷ್ಟು ಯಶಸ್ವಿಯಾಗಿ ನಡೆದಿವೆ ಸ್ವಾತಂತ್ರ್ಯ ಪ್ರಿಯರೆಲ್ಲರಿಗೂ ಇದು ಸಂತೋಷವನ್ನುಂಟುಮಾಡುವುದಾಗಿದೆ

ಈ ಪರಿಸ್ಥಿತಿಯಲ್ಲಿ ಉಭಯ ಶಾಸನ ಸಭೆಗಳ ಮೇಲೂ ವಿಶೇಷ ಹೆಚ್ಚಿನ ಜವಾಬ್ದಾರಿ ಬಿದ್ದಿರುತ್ತದೆ ರಾಜ್ಯಾಂಗದ ಉನ್ನತ ಆದರ್ಶಗಳಿಗೆ ಅನುಗುಣವಾಗಿ ನೀವೆಲ್ಲರೂ ವರ್ತಿಸಿ ಅದನ್ನು ಯಶಸ್ವಿಗೊಳಿಸಬೇಕು ಸಭೆಯ ವ್ಯಕ್ತಿಗಳಿಗೂ ಸಂಗಡಿಗಳಿಗೂ ಗೌರವಯುತವಾದ ಮತ್ತು ಸೌಹಾರ್ದಪೂರಿತವಾದ ಸಂಬಂಧವು ಇರಬೇಕು ದೇಶಾಭಿಮಾನದಿಂದ ಎಲ್ಲರೂ ವರ್ತಿಸಬೇಕು

ಮಳೆಯ ಅಭಾವವೇ ಮುಂತಾದ ಕಾರಣಗಳಿಂದ ಉಂಟಾದ ಕಷ್ಟ ಪರಿಸ್ಥಿತಿಯು ಇನ್ನೂ ಕಠಿಣತರವಾಗಿ ಪರಿಣಮಿಸುವುದೆಂಬ ಭೀತಿಯುಂಟಾಗದುತ್ತದೆ ಇದುವರೆಗೆ ನಿರೀಕ್ಷಿಸಲಾಗಿದ್ದುದಕ್ಕಿಂತ ಹೆಚ್ಚು ಇಳಿತಾಯವು ಸಂಸ್ಥಾನದ ಆಯವ್ಯಯದಲ್ಲಿ ಸಂಭವಿಸುವ ನಿರೀಕ್ಷೆಯಿದೆ ಆದುದರಿಂದ ಮಿತವ್ಯಯವನ್ನು ಕಟ್ಟುನಿಟ್ಟಾಗಿ ಆಚರಿಸಬೇಕಾಗಿದೆ

ಹೊಸ ಆಹಾರ ನೀತಿಯಂತೆ ದಾಸ್ತಿ ರವಾನೆಯ ನಿರ್ಬಂಧವನ್ನು ತೆಗೆದಿರುವುದರಿಂದ ಪ್ರಜೆಗಳಿಗೆ ವಿಶೇಷ ಸೌಕರ್ಯವೂ, ಸಮಾಧಾನವೂ ಉಂಟಾಗಿವೆ ಧಾನ್ಯದ ಬೆಲೆಯೂ ಸಹ ಇಳಿಯಬಹುದೆಂಬ ಆಸೆಯುಂಟಾಗಿರುತ್ತದೆ ಹೆಚ್ಚು ಅನುಕೂಲವುಳ್ಳವರು ವಿಶೇಷವಾಗಿ ಧಾನ್ಯವನ್ನು ಶೇಖರಿಸಿ, ಪುನಃ ಅಭಾವವನ್ನುಂಟುಮಾಡಬಹುದಾದ ಸಂದರ್ಭದಲ್ಲಿ ಪುನಃ ಹತೋಟಿಗಳನ್ನು ಜಾರಿಗೆ ತರಬೇಕಾದೀತೋ ಏನೋ ಎಂಬ ಶಂಕೆಯು ಕೆಲವು ಕಡೆ ಇದೆ ಆದುದರಿಂದ ಸರ್ಕಾರದವರು ಜಾಗರೂಕತೆಯಿಂದ ವರ್ತಿಸುವ ನೀತಿಯನ್ನು ಅವಲಂಬಿಸಿದ್ದಾರೆ

ಇತ್ತೀಚೆಗೆ ಬಂದಿರುವ ಮಳೆಯ ದೆಸೆಯಿಂದ ಸಂಸ್ಥಾನದ ಹಲವು ಭಾಗಗಳ ಅಭಾವ ಪರಿಸ್ಥಿತಿಯು ನಿವಾರಣೆಯಾದೀತೆಂಬ ಆಶೋತ್ತರವುಂಟಾಗಿರುತ್ತದೆ

ವಿದ್ಯಾಭ್ಯಾಸದ ಸುಧಾರಣೆ ಮತ್ತು ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದವರು ಮುಖ್ಯ ಗಮನ ಕೊಟ್ಟಿರುವರು ಸಂಸ್ಥಾನವು ಇದುವರೆಗೆ ಗಳಿಸಿರುವ ಪ್ರಗತಿಪರ ಸ್ಥಾನವನ್ನು ಮುಂದುವರಿಸಲು ತಮ್ಮೆಲ್ಲರ ಸಹಕಾರವು ಅತ್ಯಗತ್ಯ

ಬಿಹಾರಿನಲ್ಲೂ ಧಾನ್ಯದ ಪಡಿತರ ಮತ್ತು ಹತೋಟಿ ರದ್ದು

ಬಿಹಾರಿನಲ್ಲಿ ಆಹಾರ ಧಾನ್ಯದ ಹತೋಟಿ ಮತ್ತು ಪಡಿತರವನ್ನು ಈ ಕೂಡಲೇ ರದ್ದು ಮಾಡಲಾಗಿದೆಯೆಂದು ನೆನ್ನೆ ಅಲ್ಲಿನ ಶಾಸನ ಸಭೆಯಲ್ಲಿ ಆಹಾರ ಸಚಿವ ಪಂಡಿತ ಹರಿಹರನಾಥ ಮಿಶ್ರರವರು ತಿಳಿಸಿದರು ಜನರಿಗೆ ಧಾನ್ಯವು ಸುಲಭವಾಗಿ ದೊರೆಯುವಂತಾಗಲು ಫೇರ್‌ಪ್ರೈಸ್ ಡಿಪೋಗಳನ್ನು ತೆಗೆಯಲಾಗುವುದೆಂದೂ, ಹಲವು ಕಡೆಗಳಲ್ಲಿ ವಿನಹ, ಪ್ರಾಂತ್ಯದ ಒಳಗೆ ಸ್ಥಳದಿಂದ ಸ್ಥಳಕ್ಕೆ ಧಾನ್ಯದ ರವಾನೆಯ ಬಗ್ಗೆ ನಿರ್ಬಂಧವನ್ನು ತೆಗೆಯಲಾಗಿದೆಯೆಂದೂ,ಕೇಂದ್ರ ಸರ್ಕಾರದವರು ಈ ಕ್ರಮಕ್ಕೆ ಅನುಮತಿಯನ್ನಿತ್ತಿರುವುದಾಗಿಯೂ ಅವರು ಹೇಳಿದರು

ಅಭಾವ ಪ್ರದೇಶಗಳಿಗೆ ಪ್ರಭುಗಳಿಂದ ೩೦,೦೦೦ ರೂ

ಸಂ ಸು ಫೋ॥] ಬೆಂಗಳೂರು ೧೯

ಕೋಲಾರ, ತುಮಕೂರು ಮುಂತಾದ ಕಡೆಗಳಲ್ಲಿನ ಅಭಾವ ಪ್ರದೇಶಗಳಿಗೆ ನೆರವು ನೀಡಲು ಶ್ರೀಮನ್ಮಹಾರಾಜರು ಮೂವತ್ತು ಸಾವಿರ ರೂ ಧನ ಸಹಾಯ ಮಾಡಿರುವರು ಮತ್ತು ಸದ್ಯದಲ್ಲಿಯೇ ಆ ಪ್ರದೇಶಗಳಲ್ಲಿ ಪ್ರವಾಸ ಕೈಗೊಳ್ಳಲಿರುವರು

ಸ್ಪೀಕರ್ ಆಗಿ ಹೆಚ್. ಸಿದ್ದಯ್ಯನವರ ಆಯ್ಕೆ

ಮೈಸೂರಿನ ಕಿರಿಯ ಶಾಸನ ಸಭೆಯ ಸ್ಪೀಕರ್ ಸ್ಥಾನಕ್ಕೆ ನೆನ್ನೆ ನಡೆದ ಚುನಾವಣೆಯಲ್ಲಿ ಮಾಜಿ ರೆವಿನ್ಯೂ ಮಂತ್ರಿ ಶ್ರೀ ಹೆಚ್ ಸಿದ್ದಯ್ಯನವರು ಬಹುಮತದಿಂದ ಆರಿಸಲ್ಪಟ್ಟಿರುತ್ತಾರೆ ಅವರ ವಿರುದ್ಧವಾಗಿ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷದ ಸದಸ್ಯರಾದ ಶ್ರೀ ಎಸ್ ಗೋಪಾಲಗೌಡರಿಗೆ ೧೪ ಓಟುಗಳೂ, ಶ್ರೀ ಸಿದ್ದಯ್ಯನವರಿಗೆ ೭೯ ಓಟುಗಳೂ ಬಂದಿವೆ.

ದುಡ್ಡು ಕೊಟ್ಟರೂ ನೀರು ದೊರೆಯುತ್ತಿಲ್ಲ

ಸೇಲಂ ಬಳಿ ಇರುವ ತಿರುಚೆನ ಗೋಡಿನಲ್ಲಿ ಮಳೆಯು ಬಾರದೆ ಭಾವಿಗಳೆಲ್ಲವೂ ಬತ್ತಿಹೋಗಿ ಜನರಿಗೆ ತುಂಬಾ ತೊಂದರೆಯಾಗಿರುವುದಾಗಿ ಗೊತ್ತಾಗಿದೆ ಊರಿನ ಹತ್ತಿರ ಇರುವ ಕೆರೆಯೂ ಒಣಗುತ್ತಿರುವುದೆಂದೂ, ದುಡ್ಡು ಕೊಟ್ಟರೂ ಪಾತ್ರೆಯಷ್ಟು ನೀರು ಸಿಗುತ್ತಿಲ್ಲವೆಂದೂ ಹೇಳಲಾಗಿದೆ

ಕಾಂ॥ ಕಾರ್ಯಕಾರಿ ಸಮಿತಿಯಲ್ಲಿ ಭಾಷಾಪ್ರಾಂತ ಪ್ರಶ್ನೆ

ಈ ತಿಂಗಳು ೨೯ ನೇ ತಾ॥ ಡೆಹಲಿಯಲ್ಲಿ ಸೇರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಷಾವಾರು ಪ್ರಾಂತಗಳ ಪ್ರಶ್ನೆಯು ನಿಖರವಾದ ರೂಪು ತಾಳಿ, ಆಪ್ಯರಾಗಿ ಪರಿಹಾರವಾಗಲಿರುವುದೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿರುತ್ತಾರೆ

ಸಿಕ್ಕಿಬಿದ್ದ ಕಳ್ಳ ನೇಣು ಹಾಕಿಕೊಂಡ ಪ್ರಸಂಗ

ಪೊಳ್ಳಾಚಿಯಲ್ಲಿ ಕಳೆದ ೧೫ ನೇ ತಾ॥ ರಾತ್ರಿ ಒಂದು ಎಣ್ಣೆ ಅಂಗಡಿಗೆ ನುಗ್ಗಿದ ಒಬ್ಬ ಕಳ್ಳನು ಬೆಲೆ ಬಾಳುವ ವಸ್ತುಗಳನ್ನು ಜೋಡಿಸಿಕೊಳ್ಳುತ್ತಿದ್ದಾಗ ಸುತ್ತಮುತ್ತಲ ಜನರು ಅಂಗಡಿಯನ್ನು ಮುತ್ತಿದುದರಿಂದ ತಪ್ಪಿಸಿಕೊಂಡು ಹೋಗಲು ದಿಕ್ಕುಕಾಣದೆ ಸಣ್ಣ ಹಗ್ಗದಿಂದ ನೇಣು ಹಾಕಿಕೊಂಡು ಅಲ್ಲಿಯೇ ಸತ್ತು ಹೋದನೆಂದು ವರದಿಯಾಗಿದೆ

ಬೊಂಬಾಯಿ ಜೈಲುಗಳೆಲ್ಲ ಸತ್ಯಾಗ್ರಹಿಗಳಿಂದ ಭರ್ತಿ

ಆಹಾರ ಸತ್ಯಾಗ್ರಹವನ್ನು ನಡೆಸುತ್ತಿರುವ ಸತ್ಯಾಗ್ರಹಿಗಳಿಂದ ಬೊಂಬಾಯಿಯ ಎಲ್ಲ ಜೈಲುಗಳೂ ತುಂಬಿರುವುದರಿಂದ ಹೊಸದಾಗಿ ದಸ್ತಗಿರಿ ಮಾಡಿದವರನ್ನು ಇಡಲು ಪೋಲೀಸರಿಗೆ ತುಂಬಾ ಕಷ್ಟವಾಗಿದೆ ಮೊನ್ನೆ ಸ್ಥಳ ಸಿಗದೆ ಜೈಲಿನಿಂದ ಪೈಲಿಗೆ ಖೈದಿಗಳನ್ನು ಕರೆದುಕೊಂಡು ಹೋಗಬೇಕಾಯಿತು

ಹೈದರಾಬಾದು ನವಾಬರಿಗೆ ೧೦ ಲಕ್ಷ ರೂ. ದಂಡ

ಕಳೆದ ಏಪ್ರಿಲ್ ೧೯ ನೇ ತಾರೀಖು ಹೈದರಾಬಾದಿನ ನವಾಬ್ ಜಹೀರ್ ಯಾರ್ ಜಂಗ್ ಮತ್ತು ಅವರ ಪತ್ನಿಯವರು ಬೊಂಬಾಯಿಯಿಂದ ವಿಮಾನದಲ್ಲಿ ಯೂರೋಪಿಗೆ ಹೊರಡುವ ಸಮಯದಲ್ಲಿ ಸುಂಕದ ಅಧಿಕಾರಿಗಳು ಅವರ ಬಳಿ ಬಚ್ಚಿಡಲ್ಪಟ್ಟಿದ್ದ ೬ ಲಕ್ಷ ರೂ ಬೆಲೆಯ ರತ್ನಗಳನ್ನು ಪತ್ತೆ ಹಚ್ಚಿದ ಸಂಬಂಧವಾಗಿ ನವಾಬರು ಮತ್ತು ಅವರ ಪತ್ನಿಯ ಮೇಲೆ ಅಕ್ರಮ ರವಾನೆ ಪ್ರಯತ್ನಕ್ಕಾಗಿ ಮೊಕದ್ದಮೆ ಹೂಡಲಾಗಿ ನವಾಬರಿಗೆ ನೆನ್ನೆ ಬೊಂಬಾಯಿ ನ್ಯಾಯಾಧೀಶರು ೧೦ ಲಕ್ಷ ರೂ ದಂಡವನ್ನು ವಿಧಿಸಿದರು ಅವರ ಪತ್ನಿಗೆ ೪ ಲಕ್ಷ ರೂ ದಂಡ ವಿಧಿಸಲಾಗಿದೆ

ರೈಲಿನಲ್ಲಿ ಸ್ತ್ರೀಯಿಂದ ಟ್ರಂಕಿನ ಅಪಹಾರ

ಕಳೆದ ತಿಂಗಳು ೩೦ ನೇ ತಾ॥ ದಾವಣಗೆರೆಯಿಂದ ಬೆಂಗಳೂರಿಗೆ ಹೋಗುತ್ತಿದ್ದ ರಾತ್ರಿ ರೈಲಿನಲ್ಲಿ ಚನ್ನಪಟ್ಟಣದ ಮುದರ್ ಸ್ಕೂಲಿನ ಉಪಾಧ್ಯಾಯಿನಿಯೊಬ್ಬರ ಟ್ರಂಕನ್ನು ಕದ್ದು ಅರಸೀಕೆರೆಯ ಹೊರಭಾಗದ ಸಿಗ್ನಲ್ ಬಳಿ ಇಳಿದುಹೋದಳೆಂದೂ, ಟ್ರಂಕಿನಲ್ಲಿ ೩ ಸಾವಿರ ರೂ ಬೆಲೆ ಬಾಳುವ ಒಡವೆ ವಸ್ತ್ರಗಳಿದ್ದುವೆಂದೂ ಆಪಾದಿಸಿ ಅರಸೀಕೆರೆಯ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಹಾಸನದ ನ್ಯಾಯಾಧೀಶರು ನಿಂಗಮ್ಮ ಉರುಫ್ ಸಾರದಮ್ಮ ಎಂಬಾಕೆಗೆ ೩ ಮೂರು ತಿಂಗಳು ಕಠಿಣ ಸಜಾ ವಿಧಿಸಿರುತ್ತಾರೆ

ಇಸ್ಮೇಲ್ ಷರೀಫ್‌ರವರಿಗೆ ಕೆಲಸದಿಂದ ಬಲವಂತದ ನಿವೃತ್ತಿ

'ಲಂಚ ಮತ್ತು ಕೆಟ್ಟ ನಡವಳಿಕೆ' ಆಪಾದನೆಗಾಗಿ ಸಂಸ್ಥಾನದ ಮಾಜಿ ಕಾರ್ಮಿಕ ಕಮಿಷನರ್ ಜ॥ ಇಸ್ಮೇಲ್ ಷರೀಫರನ್ನು ನಿವೃತ್ತಿ ಮಾಡಿ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ ಸರ್ವೀಸ್ ನಿಬಂಧನೆ ಪ್ರಕಾರ ಸರ್ಕಾರಕ್ಕಿರುವ ವಿಶೇಷಣೆಯನ್ನು ಪ್ರಯೋಗಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಅವರನ್ನು ನಿವೃತ್ತಿಗೊಳಿಸಲಾಗಿದೆಯೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ ಜ॥ ಷರೀಫರು ಈಗ ರಜದ ಮೇಲಿರುತ್ತಾರೆ

ಶ್ರೀ ಗಾಯತ್ರೀ ಟಾಕೀಸಿನ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ಗಾಯತ್ರೀ ಟಾಕೀಸಿನ ನಾಲ್ಕನೇ ವಾರ್ಷಿಕೋತ್ಸವವು ನೆನ್ನೆ ದಿನ ಜರುಗಿದ ಸಂದರ್ಭದಲ್ಲಿ ಮಂದಿರದ ಮಾಲೀಕರು ನಮಗೆ ಕಳುಹಿಸಿಕೊಟ್ಟಿರುವ ಸಿಹಿ ತಿಂಡಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ

ಎಲ್. ಎಸ್. ಪರೀಕ್ಷೆಯಲ್ಲಿ ೧೫ಕ್ಕೆ ೧೪ ಮಂದಿಗೆ ತೇರ್ಗಡೆ

ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಹೊನ್ನಾಪುರ ಎಂಬ ಗ್ರಾಮದ ನ್ಯಾಟ್ವೆಪ್ ಮಿಡಲ್ ಸ್ಕೂಲಿನಿಂದ ಕಳೆದಸಾರಿ ಎಲ್ ಎಸ್ ಪರೀಕ್ಷೆಗೆ ೧೫ ಮಂದಿ ವಿದ್ಯಾರ್ಥಿಗಳು ಕುಳಿತಿದ್ದು ೧೪ ಜನರು ಉತ್ತೀರ್ಣರಾಗಿರುವರೆಂದೂ, ಆ ಪೈಕಿ ಒಬ್ಬನು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುವನೆಂದೂ ತಿಳಿದುಬಂದಿದೆ

ಕಾಫಿ ಚಟ ಬಿಡುವಂತೆ ಸರ್ಕಾರದ ಸೂಚನೆ

ಜನರು ಕಾಫಿ ಸೇವನೆಯ ಚಟುವನ್ನು ಬಿಟ್ಟುಬಿಡಬೇಕೆಂದು ಕೇಂದ್ರ ಸರ್ಕಾರದ ವಾಣಿಜ್ಯ ಉಪಮಂತ್ರಿ ಡಿ ಪಿ ಕರ್ಮರ್ಕರ್‌ರವರು ತಿಳಿಸಿರುತ್ತಾರೆ ಕಾಫಿಯ ಸೇವನೆಯನ್ನು ನಿರೋಧಿಸಲಾಗುವುದೇ-ಎಂದು ಅವರನ್ನು ಪಾರ್ಲಿಮೆಂಟಿನಲ್ಲಿ ಪ್ರಶ್ನಿಸಿದಾಗ ಅವರು ಉತ್ತರವೀಯಲಿಲ್ಲ

ವಿಶ್ವಸಂಸ್ಥೆ ಸದಸ್ಯತ್ವಕ್ಕಾಗಿ ಜಪಾನಿನ ಅರ್ಜಿ

ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ತನ್ನನ್ನು ಸೇರಿಸಿಕೊಳ್ಳುವಂತೆ ಆ ಸಂಸ್ಥೆಗೆ ಜಪಾನು ಅರ್ಜಿಯನ್ನು ಹಾಕಿಕೊಂಡಿದೆ

ರೇಷ್ಮೆ ಪದಾರ್ಥಗಳ ಬೆಲೆ ಇಳಿಸಲು ಮಂಜೂರಾತಿಗೆ ಸಂತಿ

ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ಮೊನ್ನೆ ಸಂಜೆ ನಗರದ ರೇಷ್ಮೆ ವ್ಯಾಪಾರಿಗಳ ಸಭೆಯು ಬೆಂಗಳೂರಿನ ಶ್ರೀ ಡಿ ಎ ಕೃಷ್ಣಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು ಆಹಾರದ ಬೆಲೆಯನ್ನು ಇಳಿಸಬೇಕೆಂದೂ, ಪ್ರಾಂತಾದ್ಯಂತ ಆಹಾರದ ಹತೋಟಿಯನ್ನು ಸಂಪೂರ್ಣವಾಗಿ ತೆಗೆಯಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು ಶ್ರೀಮನ್ ಮಹಾರಾಜರಿಗೂ ಮತ್ತು ಮುಖ್ಯ ಮಂತ್ರಿಯವರಿಗೂ ನಿರ್ಣಯದ ವಿಷಯವನ್ನು ತಂತಿ ಮೂಲಕ ಸಂಘದ ಅಧ್ಯಕ್ಷರಾದ ಶ್ರೀ ಬಿ ಜಿ ದಾಸ್‌ರವರು ತಿಳಿಸಿರುತ್ತಾರೆ

ಗಫಾರ್ ಖಾನರ ಬಿಡುಗಡೆಗೆ ಮೌಲ್ವಿಗಳ ಒತ್ತಾಯ

೪ ವರ್ಷಗಳಿಂದ ಜೈಲಿನಲ್ಲಿರುವ ಗಡಿನಾಡಿನ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಪಾಕಿಸ್ತಾನದ ಗೌರ್ನರ್ ಜನರಲ್ ಮತ್ತು ಪ್ರಧಾನಿಯವರಿಗೆ ಅರಬ್ ರಾಜ್ಯಗಳ ಅನೇಕ ಮೌಲ್ವಿಗಳು ಒತ್ತಾಯ ಮಾಡಿರುತ್ತಾರೆ

ಎಲ್ ಎಸ್. ಮತ್ತು ಎಸ್. ಎಸ್ ಎಲ್ ಸಿ ಶಿಕ್ಷಣ ತರಗತಿಗಳು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ಇದೇ ೨೫ನೇ ತಾರೀಖಿನಿಂದ ಮೇಲ್ಕಂಡ ಶಿಕ್ಷಣ ತರಗತಿಗಳು ಆರಂಭವಾಗಲಿವೆ ಸೇರಲಪೇಕ್ಷಿಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರತಿ ದಿನ ಸಂಜೆ ೫ ರಿಂದ ೭ ಘಂಟೆ ವರೆಗೆ ಸಂಘದ ಕಛೇರಿಯಲ್ಲಿ ಹೆಚ್ಚಿನ ವಿವರಗಳನ್ನು ತಿಳಿಯಬಹುದು

ಸಂಗೀತ ಶಾಲಾ ವಾರ್ಷಿಕ

ರಾಜಧಾನಿಯ ... ಸಂಗೀತ ವಿದ್ಯಾ ಮಂದಿರದವರು ತಮ್ಮ ... ನೇ ವಾರ್ಷಿಕವನ್ನು ಇದೇ ... ಆಚರಿಸಲಿರುವ ... ನೇ ... ಕೃಷ್ಣ ... ಶ್ರೀಯುತ ... ಎಂ ನರಸಿಂಹಾಚಾರ್ಯರು ... ಆರಂಭೋತ್ಸವವನ್ನು ನಡೆಸುವರು

ಹೆಂಡತಿ ಮೇಲೆ ದೂರು

೧೫ ತಿಂಗಳ ಗಂಡು ಮಗುವನ್ನು ತನ್ನ ಹೆಂಡತಿಯು ತೌರುಮನೆಗೆ ತಂದೆ ತಾಯಿಗಳ ಸಹಾಯದಿಂದ ಅಪಹರಿಸಿಕೊಂಡು ಹೋಗಿರುವಳೆಂದು ದೆಹಲಿಯ ಭಾರಿ ವ್ಯಾಪಾರಿಯೊಬ್ಬನು ಪೊಲೀಸರಿಗೆ ದೂರು ಕೊಟ್ಟಿರುತ್ತಾನೆಂದು ವರದಿಯಾಗಿದೆ ಮಗುವಿನ ಮೈ ಮೇಲೆ ಬೆಲೆ ಬಾಳುವ ಆಭರಣಗಳಿದ್ದುವೆಂದು ಅವನು ತಿಳಿಸಿರುತ್ತಾನೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಟಿ ಕೆ ಪದ್ಮನಾಭರಾವ್ ಸಂಗೀತ ಮಧ್ಯಾಹ್ನ ೧ ೩೦ ದಿಲ್ರುಬಾ ೨ ನಿಮ್ಮ ಮೆಚ್ಚಿನ ಕಲಾವಿದರು ಸಂಜೆ ೫-೩೦ ಮತ್ತು ೭ ೨೦ ಚೌಡಮ್ಮ ಸಂಗೀತ ೭ ಕ್ಲಾರಿಯೊನೆಟ್ ೬ ೧೦ ಗಾನವಿಹಾರ ೭ ಸರೋಜಿನಿ ಡಾಟೆ ಹಿಂದಿ ಗೀತೆ ೮ ಗೀತಾ ನಾಯ್ಡು ೯-೧೫ ಚಿತ್ರಸಂಗೀತ ೯ ೩೦ ಆರ್ಕೆಸ್ಟ್ರಾ

ಹರಿಕಥೆ

ರಾಜಧಾನಿಯ ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಕಮಲಾಂಬಾ ನಿಲಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಸೀತಾ ಪಾಣಿಗ್ರಹಣ ಎಂಬ ಹರಿಕಥೆಯು ನಡೆಯುವುದು ದೊಡ್ಡವರಿಗೆ ಮಾತ್ರ ಆಹ್ವಾನವುಂಟು

SRI GANESH
TALKIES
From 20 6 52 3 days only
TARZAN'S TRIUMPHS
NEXT ATTRACTION —
SPANISH MINE
(Technicolor)

ಚಾಮುಂಡೇಶ್ವರಿ
ಟಾಕೀಸ್
20-6-52 ರಿಂದ ಜಯಪ್ರದವಾದ
4ನೆಯ ವಾರ
ಧರ್ಮದೇವತ
—.ಬೆಳಗಿನ ಪ್ರದರ್ಶನ —
20-6-52 ರಿಂದ
ನೂತನ ಮತ್ತು ರೂಪ್ ನಟಿಸಿರುವ
ನಗೀನ

ಮಕ್ಕಳ ಲಿವರ್ ಗಡ್ಡೆ

ಅತಿ ಶೀಘ್ರ ಗುಣವಾಗುವ ವಿಧಾನವನ್ನು ಕಂಡುಹಿಡಿಯಲಾಗಿದೆ ತಿಂಗಳುಗಟ್ಟಲೆ ಔಷಧ ಸೇವನೆಯ ಅವಶ್ಯಕವಿಲ್ಲ ಕೆಮ್ಮು, ಕೈಕಾಲು ಊತ, ಬಣ್ಣ ಹೀನಾಗಿ ಜ್ವರ ಬರುತ್ತಿದ್ದರೂ ಗುಣವಾಗುತ್ತದೆ ಪ್ರತಿ ಭಾನುವಾರ ಬೆಳಗ್ಗೆ 8 ರಿಂದ 11 ಘಂಟೆ ವರೆಗೆ ಮಕ್ಕಳ ವ್ಯಾಧಿಯನ್ನು ಪರೀಕ್ಷಿಸಲಾಗುವುದು

ಸಿ. ರಾಮಚಂದ್ರಾಚಾರ್ಯರು,
ಆಯುರ್ವೇದ ಪಂಡಿತರು,
139, ಅಶೋಕ ರೋಡು
ಸುಬ್ಬರಾಯನ ಕೆರೆ ಬಳಿ ಮೈಸೂರು

Edited, Printed and Published by A R Nagarajan at Sadhvi Press D Subbaiah Road, Mysore

ಹೆಚ್ಚುವರಿ ಪ್ರದೇಶದಲ್ಲಿ ಫೇರ್ ಪ್ರೈಸ್ ಡಿಪೋಗಳು

ಆಹಾರದ ಬೆಲೆಗಳು ಹೆಚ್ಚುತ್ತಿರುವುದರಿಂದ ಹೆಚ್ಚುವರಿ ಧಾನ್ಯದ ಪ್ರದೇಶಗಳಲ್ಲಿರುವ ಪಟ್ಟಣಗಳಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುವಂತೆ ಮದ್ರಾಸು ಸರ್ಕಾರದವರು ಸೂಚನೆಯಿತ್ತಿರುವರು

ಹರಾಜು ಗೃಹಕೃತ್ಯದ ನೋಟೀಸು

ಗುಂಡ್ಲುಪೇಟೆ ತಾಲ್ಲೂಕು, ... ಹೋಬಳಿ, ... ಗ್ರಾಮದಲ್ಲಿರುವ ... ನ ಮಗ ... 24 ವರ್ಷ ವಯಸ್ಸಿನ ... ಜನಗಳಿಗೂ ತಿಳಿಯಪಡಿಸುವುದೇನೆಂದರೆ ನನಗೆ ಸುಮಾರು 9 ವರ್ಷದ ಮಗನಿದ್ದು ... ಗಂಡ ... 3-4 ವರ್ಷಗಳಿಂದ ಬುದ್ಧಿ ಭ್ರಮಣೆಯಾಗಿ, ... ನ ಚಪಲ ಚಿತ್ತನಾಗಿರುತ್ತ ... ತನ್ನ ... ಮತ್ತು ... ದವರುಗಳು ... ಪ್ರೇರಣೆಗಳನ್ನು ಕೇಳಿ, ... ಸ್ತಿ ಪಾಸ್ತಿಗಳನ್ನು ಕ್ರಯ ಭೋಗ್ಯ ... ಕೊಡುವ ... ಪ್ರಯತ್ನ ... ನನ್ನ ಗಂಡ ಸದರಿ ಸ್ವತ್ತುಗಳನ್ನು ಯಾರಿಗೂ ಯಾವ ವಿಧವಾಗಿಯೂ ... ಪರಭಾರೆ ಮಾಡಿರುವುದಿಲ್ಲ ... ಸದರಿ ಸ್ವತ್ತುಗಳನ್ನು ... ಮಾಡಿಸಿಕೊಂಡರೂ ... ದರ ... ಮಾಡಿಸಿಕೊಂಡಾಗ್ಯೂ ... ಮಾಡಿಸಿಕೊಂಡವರ ... ಅಷ್ಟು ... ಲಕ ತಿಳಿಸುತ್ತೇನೆ

ಷೆಡ್ಯೂಲ್ ಸ್ವತ್ತಿನ ತಪಶೀಲು – ಗುಂಡ್ಲುಪೇಟೆ ತಾಲ್ಲೂಕು ... ಹೋಬಳಿ ... ಗ್ರಾಮ ... ಇರುವುದು –

1 ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ದೇವಮ್ಮನ ... ಉತ್ತರಕ್ಕೆ ... ಈ ಮಧ್ಯೆ ... ಮನೆ ...

2 ಪೂರ್ವಕ್ಕೆ ... ದಾರಿ, ದಕ್ಷಿಣಕ್ಕೆ ... ಪಶ್ಚಿಮಕ್ಕೆ ... ಉತ್ತರಕ್ಕೆ ... ಈ ಮಧ್ಯೆ ... ಮನೆ

3 ಪೂರ್ವಕ್ಕೆ ದೇವಮ್ಮನ ... ಪಶ್ಚಿಮಕ್ಕೆ ... ಉತ್ತರಕ್ಕೆ ... ಈ ಮಧ್ಯೆ ... ಮನೆ

4 ಪೂರ್ವಕ್ಕೆ ... ದಾರಿ, ದಕ್ಷಿಣಕ್ಕೆ ... ಪಶ್ಚಿಮಕ್ಕೆ ... ಉತ್ತರಕ್ಕೆ ... ಈ ಮಧ್ಯೆ ... ಮನೆ

5 ... ಗ್ರಾಮದಲ್ಲಿ ... ಸರ್ವೆ 26/1 ವಿಸ್ತೀರ್ಣ 1-25, ಆಕಾರ 1 8 0

6 ಸರ್ವೆ 27/2 ವಿಸ್ತೀರ್ಣ 1-30, ಆಕಾರ 1-12-0

ಒಟ್ಟು 6 ಸ್ವತ್ತುಗಳನ್ನು ಯಾರು ಯಾವ ವಿಧವಾಗಿಯೂ ... ಪರಭಾರೆ ಮಾಡಿಸಿಕೊಂಡಲ್ಲಿ ... ಆಗದೆಂದು ತಿಳಿಸಿರುತ್ತೆ

ದೊಡ್ಡಮ್ಮನ ... ಗುಡಿಗೆ ...

THE NATIONAL INSTITUTE OF ENGINEERING, MYSORE

18th June 1952

NOTIFICATION

On account of the delay in the issue of marks cards to candidates who passed the S S L C the date of receiving application forms for the Diploma Course in this Institute has been extended from the 18th June 1952 to 25th June 1952

S RAMASWAMY, Principal,
The National Institute of Engineering,
MYSORE

ರಾಜಕಮಲ್ ಟಾಕೀಸ್, ಮೈಸೂರು
20-6 52 ರಿಂದ ಅನೋಘ 2ನೇ ವಾರ ಪ್ರತಿ ದಿನ 3 ಆಟಗಳು
(ತಮಿಳು) ನನ್ನ ತಂಗಿ (ತಮಿಳು)
ಭೂಮಿಕೆಯಲ್ಲಿ — ಸೂರ್ಯಕುಮಾರಿ, ಎಂ. ಜಿ. ರಾಮಚಂದ್ರನ್, ಟಿ ಎಸ್ ಗೋವಿಂದನ್, ಮುಂತಾದವರು

ಒಲಿಂಪಿಯಾ
22-6 52 ರಿಂದ ಅನೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಮಾನವತೆಯ ಪೂರ್ಣ ಭಾವನೆಗಳನ್ನು ಪ್ರತಿಪಾದಿಸುವ,
ಬಾಂಬೆ ಟಾಕೀಸಿನವರ ಮೇಲ್ಪಟ್ಟದ ಹಿಂದಿ ಕಲಾಕೃತಿ
- M A A * ಮಾ -
ಪಾತ್ರ:— ಶ್ಯಾಮಾ, ಭಾರತ್ ಭೂಷಣ್, ಲೀಲಾ ಚಿಟ್ನೀಸ್

ಅಂಚೆ ರಿ. ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೦-೬-೫೨ [ಸಂಚಿಕೆ ೨೬೬

– ಆಜಾದ್ ಕಾಶ್ಮೀರ – ಸರ್ಕಾರದ ರಾಜೀನಾಮೆ

ಹೆಚ್ಚು ಸಚಿವರ ನೇಮಕದ ಪ್ರಶ್ನೆ

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿಗಳ ವಿವರಣೆ

ಬೆಂಗಳೂರು ೧೯

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಪತ್ರಿಕಾ ಗೋಷ್ಠಿಯನ್ನು ನಡೆಸಿ ಸರ್ಕಾರದ ಆಹಾರ ನೀತಿಯನ್ನು ವಿವರಿಸಿದರು. ಕೇಂದ್ರದ ಅಧಿಕಾರಿಗಳೊಡನೆ ಇಲ್ಲಿನ ಆಹಾರ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಮಾತುಕತೆ ನಡೆಸಿದನಂತರ ಇಲ್ಲಿನ ಪರಿಸ್ಥಿತಿ ಮತ್ತು ಅಭಿಪ್ರಾಯಗಳಿಗನುಗುಣವಾಗಿ ಸೂಕ್ತ ಮಾರ್ಪಾಡು ಮಾಡಬೇಕಾಗುವುದೆಂದು ತಿಳಿಸಿದರು. ಹತೋಟಿ ತೆಗೆಯುವ ವಿಷಯದಲ್ಲಿ ಎಚ್ಚರಿಕೆಯಿಂದ ವರ್ತಿಸುವಂತೆ ಅಧಿಕಾರಿಗಳು ಸರ್ಕಾರಕ್ಕೆ ಸಲಹೆ ಮಾಡಿರುವರೆಂದು ಅವರು ತಿಳಿಸಿದರು

ಮಂತ್ರಿ ಮಂಡಲಕ್ಕೆ ಹೆಚ್ಚಿನ ಸದಸ್ಯರನ್ನು ತೆಗೆದುಕೊಳ್ಳುವ ಬಗ್ಗೆ ಪ್ರಶ್ನೆಗೆ ಉತ್ತರವಿತ್ತು, ದಕ್ಷತೆಯು ಹೆಚ್ಚುವ ಗುರಿಯ ದೃಷ್ಟಿಯಿಂದ ಈ ವಿಷಯವು ಪರಿಶೀಲಿಸಲ್ಪಡುವುದೆಂದು ತಿಳಿಸಿದರು ಶಾಸನ ಸಭೆಯಲ್ಲಿ ಜ|| ಇಮಾಂರವರು ಕಳುಹಿಸಿರುವ ಪ್ರಶ್ನೆಯು ಚರ್ಚೆಯಾದನಂತರ ಉಪಮಂತ್ರಿಗಳ ನೇಮಕದ ವಿಷಯವನ್ನು ಪರಿಶೀಲಿಸಬೇಕಾಗುವುದೆಂದು ಅವರು ಹೇಳಿದರು

ಕಾಂಗ್ರೆಸ್ ಪಕ್ಷದ ಅಂಗರಚನೆ

ಮೈಸೂರಿನ ಎರಡು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸದಸ್ಯರುಗಳ ಸಭೆಯು ನೆನ್ನೆ ನಡೆದು ಪಕ್ಷದ ಅಂಗರಚನಾ ನಿಬಂಧನೆಗಳನ್ನು ಒಪ್ಪಲಾಯಿತು ಅವುಗಳ ಅಂಗೀಕಾರಕ್ಕಾಗಿ ಕೇಂದ್ರ ಪಾರ್ಲಿಮೆಂಟರಿ ಸಮಿತಿಗೆ ಕಳುಹಿಸಲು ತೀರ್ಮಾನವಾಯಿತು

ಪಿ ಆರ್ ಬಾಲಕೃಷ್ಣನ್‌ರವರಿಗೆ ವಿಶ್ವಸಂಸ್ಥೆ ಹುದ್ದೆ

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಪಿ ಆರ್ ಬಾಲಕೃಷ್ಣನ್‌ರವರನ್ನು ಸಿಂಹಳದಲ್ಲಿ ವಿಶ್ವ ಸಂಸ್ಥೆಯ ಯೋಜನಾ ಇಂಜನಿಯರನ್ನಾಗಿ ನೇಮಿಸಲಾಗಿರುವುದೆಂದು ಗೊತ್ತಾಗಿದೆ

ಬ್ರೆಡ್ಡುಗಳಿಗೆ ಮಾರಾಟ ತೆರಿಗೆ ಇಲ್ಲ

ಸಂಸ್ಥಾನವಲ್ಲೆಲ್ಲಾ ಬ್ರೆಡ್ಡುಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಕೂಡದೆಂದು ಆಜ್ಞೆ ಮಾಡಲಾಗಿದೆ

ಸತ್ತವನ ಪತ್ನಿಯೊಡನೆ ವೈದ್ಯನ ವಿವಾಹ

ರೋಂ ನಗರದಲ್ಲಿ ಒಬ್ಬ ರೋಗಿಯನ್ನು ಪರೀಕ್ಷಿಸಲು ಕರೆಸಲ್ಪಟ್ಟ ಒಬ್ಬ ವೈದ್ಯನು ರೋಗಿಗೆ ಶಸ್ತ್ರಚಿಕಿತ್ಸೆ ನಡೆಸಿದನೆಂದೂ, ಅದರ ಪರಿಣಾಮವಾಗಿ ಅವನು ಮೃತಪಟ್ಟುದರಿಂದ ಅವನ ಪತ್ನಿಯನ್ನು ತಾನೇ ವಿವಾಹ ಮಾಡಿಕೊಂಡನೆಂದೂ ವರದಿಯಾಗಿದೆ

ಟಿ. ಚೌಡಯ್ಯನವರ ಪಿಟೀಲು

ಮೈಸೂರು ಟೌನ್‌ನಲ್ಲಿರುವ ರೈಲ್ವೆ ವರ್ಕ್‌ಶಾಪಿನ ಫಲಾಹಾರ ಮಂದಿರದಲ್ಲಿ ನಾಳೆ ಸಂಜೆ ೬|| ಘಂಟೆಗೆ ರೈಲ್ವೆ ನೌಕರರ ಮನರಂಜನೆಗಾಗಿ ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ವಾದನವು ವಿ|| ರಂಗನಾಥರವರ ಮೃದಂಗದೊಡನೆ ಏರ್ಪಾಡಾಗಿದೆ

ಆಹಾರ ಹತೋಟಿ ರದ್ದಿಗೆ ಸಂಸ್ಥಾನಗಳಿಗೆ ಸ್ವಾತಂತ್ರ್ಯ

ಸಂಸ್ಥಾನಗಳಲ್ಲಿ ಆಹಾರದ ದಾಸ್ತಾನು ಮತ್ತು ಸಂಗ್ರಹ ಕಾರ್ಯ ಇವುಗಳು ತೃಪ್ತಿಕರವಾಗಿದ್ದಲ್ಲಿ, ಧಾನ್ಯದ ಮೇಲಿನ ಹತೋಟಿಯನ್ನು ರದ್ದುಪಡಿಸಲು ಸಂಸ್ಥಾನ ಸರ್ಕಾರಗಳಿಗೆ ಸ್ವಾತಂತ್ರ್ಯವಿರುವುದೆಂದು ಪ್ರಧಾನಿ ನೆಹರೂರವರು ಮೊನ್ನೆ ಇಲ್ಲಿನ ಆಹಾರ ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರಿಗೆ ತಿಳಿಸಿರುವರೆಂದು ವರದಿಯಾಗಿದೆ

ನ್ಯಾಯಾಧೀಶರ ಮೇಲೆ ಪಾದರಕ್ಷೆ ಎಸೆದ ಪ್ರಸಂಗ

ಕಳುವಿನ ಆಪಾದನೆಗಾಗಿ ವಿಚಾರಣೆಗೆ ಗುರಿಯಾಗಿದ್ದ ಒಬ್ಬನು ಕಳೆದ ೧೫ನೇ ತಾರೀಕು ಗ್ವಾಲಿಯರಿನ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ವಿಚಾರಣೆಗೆ ನಿಲ್ಲಿಸಲ್ಪಟ್ಟು ಮೂರು ವರ್ಷ ಸಜಾ ಶಿಕ್ಷೆಗೆ ಗುರಿ ಮಾಡಲ್ಪಟ್ಟಾಗ ಆಪಾದಿತನು ನ್ಯಾಯಾಧೀಶರ ಮೇಲೆ ಪಾದರಕ್ಷೆಯನ್ನೆಸೆದನೆಂದು ವರದಿಯಾಗಿದೆ ಈ ಕೃತ್ಯದಿಂದ ಕೋರ್ಟಿಗೆ ಅಪಮಾನ ಮಾಡಿದ ಅಪರಾಧಕ್ಕಾಗಿ ಅವನಿಗೆ ೧೦೦ ರೂ ಜುಲ್ಮಾನೆಯನ್ನು ವಿಧಿಸಲಾಯಿತು

ಮಾಂಬಳ್ಳಿ ಸಾಹುಕಾರ್ ಬಸವಣ್ಣದೇವರ ನಿಧನ

ಆಗರ ೧೯

ಆಗರ ಮಾಂಬಳ್ಳಿಯ ಸಾಹುಕಾರ್ ಶ್ರೀ ಬಸವಣ್ಣ ದೇವರುರವರು ನೆನ್ನೆ ಮಾಂಬಳ್ಳಿಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ ಅವರು ಕಳೆದ ೧|| ವರ್ಷಗಳಿಂದ ಪಾರ್ಶ್ವ ವಾಯುವಿನಿಂದ ನರಳುತ್ತಿದ್ದರು ದಿವಂಗತರು ಪ್ರಜಾ ಪ್ರತಿನಿಧಿ ಸಭೆ ಜಿಲ್ಲಾ ಬೋರ್ಡು, ಸ್ಥಳೀಯ ಪೌರ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ ಇವರು ಮಾಂಬಳ್ಳಿಯಲ್ಲಿ ಆಸ್ಪತ್ರೆಯನ್ನು ಕಟ್ಟಿಸಿ ಬಿಳಿಗಿರಿ ರಂಗನ ಬೆಟ್ಟದಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿಸಿಕೊಟ್ಟಿರುತ್ತಾರೆ ಮೃತರ ಆತ್ಮಕ್ಕೆ ಶಾಂತಿಯನ್ನೂ ಮತ್ತು ಬಂಧು ವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನೂ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ

ಆಜಾದ್ ಕಾಶ್ಮೀರ ಸರ್ಕಾರದ ರಾಜೀನಾಮೆ

ಪಾಕಿಸ್ತಾನದಲ್ಲಿರುವ ಆಜಾದ್ ಕಾಶ್ಮೀರ ಸರ್ಕಾರವು ರಾಜೀನಾಮೆಯನ್ನಿತ್ತಿರುವುದೆಂದು ವರದಿಯಾಗಿದೆ ಈಗಿನ ಪ್ರಧಾನಿ ಮೀರ್ ವೈಜ್ ಮಹಮದ್ ಯೂಸುಫ್‌ರವರ ಬದಲು, ಕಾಶ್ಮೀರ ಮತ್ತು ಜಮ್ಮು ಮುಸ್ಲಿಂ ಸಮ್ಮೇಳನದ ಮುಖಂಡರಾದ ಕ|| ಷೇರ್ ಅಹಮದ್ ಖಾನರ ನೇತೃತ್ವದಲ್ಲಿ ಹೊಸ ಸರ್ಕಾರ ರಚನೆಯಾಗಲಿದೆಯೆಂದು ಹೇಳಲಾಗಿದೆ

ಬ್ರಿಟಿಷ್ ರಾಣಿಯ ನಿವಾಸದ ಬಳಿ ಬಾಂಬು ಸಿಡಿತ

ಬ್ರಿಟನ್ನಿನ ರಾಣಿ ಎಲಿಜಬೆತ್ತರು ಮತ್ತು ಅವರ ಪತಿ ಎಡಿಂಬರ್ಗ್ ಡ್ಯೂಕರು ವಿಂಡ್ಸರ್ ಕೋಟೆಯಲ್ಲಿ ತಂಗಿದ್ದಾಗ ಕಳೆದ ಮಂಗಳವಾರ ಇದ್ದಕ್ಕಿದ್ದಂತೆಯೇ ಅವರ ನಿವಾಸದ ಬಳಿ ಅಶ್ವದಳದ ಶಿಬಿರದಲ್ಲಿ ಬಾಂಬೊಂದು ಸಿಡಿದು ಹತ್ತು ಮಂದಿ ಸೈನಿಕರಿಗೆ ಗಾಯವಾಗಿರುವುದು ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ

ದಕ್ಷಿಣ ಆಫ್ರಿಕದಲ್ಲಿ ದೊಂಬಿ

ದಕ್ಷಿಣ ಆಫ್ರಿಕದ ವರ್ಣೀಯ ಗಂಡಸರು ಮತ್ತು ಹೆಂಗಸರು ಗುರ್ತಿನ ಚೀಟಿಗಳನ್ನು ಹೊಂದಿರಬೇಕೆಂಬ ಶಾಸನದ ವಿರೋಧದ ಸಂಬಂಧವಾಗಿ ಆರೆಂಜ್ ಫ್ರೀಸ್ಟೇಟಿನ ಒಂದು ನಗರದಲ್ಲಿ ಮೊನ್ನೆ ಮೂರು ಸಾವಿರ ಜನರು ದೊಂಬಿ ನಡೆಸಿದುದರಿಂದ ಒಬ್ಬನು ಮೃತಪಟ್ಟು ಅನೇಕರಿಗೆ ಗಾಯವಾಗಿದೆ ಒಬ್ಬ ಬಿಳಿಯ ಪೋಲೀಸನಿಗೂ ಪೆಟ್ಟು ತಗುಲಿದೆ ಮೂವರು ಆಫ್ರಿಕನ್ನರ ದಸ್ತಗಿರಿಯಾಗಿದೆ

ಇರಿತದಿಂದ ಇಡೀ ಸಂಸಾರದ ಕೊಲೆ

ಕಲ್ಲಿಕೋಟೆಯ ಬಳಿ ಮುರುಕನಾಡು ಎಂಬ ಹಳ್ಳಿಯಲ್ಲಿ ಒಬ್ಬ ತಾಯಿ, ಮೂರು ಮಕ್ಕಳು ಮತ್ತು ಒಬ್ಬ ಸೇವಕಿ- ಇಷ್ಟು ಜನರುಳ್ಳ ಇಡೀ ಸಂಸಾರವೊಂದನ್ನು ಯಾರೋ ಹಲವರು ಕಳೆದ ಭಾನುವಾರ ರಾತ್ರಿ ಚೂರಿಯಿಂದ ಇರಿದು ಕೊಲೆ ಮಾಡಿರುವರೆಂದು ವರದಿಯಾಗಿದೆ ಪೋಲೀಸರು ಶವಗಳನ್ನು ಪರೀಕ್ಷೆಗೆ ಕಳುಹಿಸಿರುತ್ತಾರೆ. ಯಾರ ದಸ್ತಗಿರಿಯೂ ಆಗಿಲ್ಲ.

ಡೆಪ್ಯುಟಿ ಮಂತ್ರಿಗಳ ನೇಮಕ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ವ. ಫೋ.] ಬೆಂಗಳೂರು ೨೦

ಈ ದಿನ ಮಧ್ಯಾಹ್ನ ೧೨ ಘಂಟೆಗೆ ಕಿರಿಯ ಶಾಸನ ಸಭೆಯು ಶ್ರೀ ಹೆಚ್ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು

ಜ|| ಇಮಾಂರವರು ಉಪ ಮಂತ್ರಿಗಳ ನೇಮಕದ ವಿಷಯವನ್ನು ಕುರಿತು ಪ್ರಶ್ನೆ ಮಾಡಿದರು ಹಿಂದೆ ಕಾಂಗ್ರೆಸ್ ಮಂತ್ರಿಯೇ ಸರ್ಕಾರದ ಕಾರ್ಯಭಾರವನ್ನು ವಹಿಸುತ್ತಿದ್ದರೆಂದೂ, ಹೆಚ್ಚಿನ ಜನರನ್ನು ಮಂತ್ರಿ ಮಂಡಲಕ್ಕೆ ತೆಗೆದುಕೊಳ್ಳುವುದು ಹಣ ಕಾಸಿನ ಮುಗ್ಗಟ್ಟಿರುವುದರಿಂದ ಸರ್ಕಾರಕ್ಕೆ ಭಾರವಾಗುವುದೆಂದೂ, ಹೆಚ್ಚು ಜನರಿಗೆ ಕೆಲಸವು ಸಾಕಾದಷ್ಟು ಇಲ್ಲವೆಂದೂ ಅಭಿಪ್ರಾಯ ಸೂಚಿಸುವ ಪ್ರಶ್ನೆಗಳನ್ನು ಅವರು ಮಾಡಲಾಗಿ ಮುಖ್ಯ ಮಂತ್ರಿಗಳು ಉತ್ತರವಿತ್ತು ಮೇಲ್ಕಂಡ ಅಭಿಪ್ರಾಯಗಳನ್ನು ನಿರಾಕರಿಸಿದರು

ಸರ್ಕಾರದ ಕೆಲಸ ಕಾರ್ಯಗಳು ಹೆಚ್ಚಿರುವುವೆಂದೂ, ಸಹಕಾರ ಇಲಾಖೆ ಸಾಮೂಹಿಕ ಯೋಜನೆ ಮುಂತಾದ ಹೊಸ ಇಲಾಖೆಗಳು ಏರ್ಪಡುತ್ತಿರುವುವೆಂದೂ ಅವರು ತಿಳಿಸಿ, ಡೆಪ್ಯುಟಿ ಮಂತ್ರಿಗಳ ನೇಮಕದ ವಿಷಯವು ಬಹುಸಂಖ್ಯಾತ ಪಕ್ಷದ ನಾಯಕರ ವಿವೇಚನೆಗೆ ಒಳಪಟ್ಟಿರುವುದೆಂದು ಹೇಳಿದರು

ಶ್ರೀ ಹೆಚ್ ಎಸ್ ರುದ್ರಪ್ಪನವರು ಶ್ರೀಮನ್ ಮಹಾರಾಜರ ಭಾಷಣಕ್ಕಾಗಿ ಅವರನ್ನು ಅಭಿನಂದಿಸುವ ನಿರ್ಣಯವನ್ನು ಮಂಡಿಸಿದರು ವಿದ್ಯಾಭ್ಯಾಸದ ಸುಧಾರಣೆಗೆ ಸಂಬಂಧಪಟ್ಟ ಹಲವು ಪ್ರಶ್ನೆಗಳನ್ನು ಮಾಡಲಾಯಿತು.

ಬೆಂಗಳೂರು ಪೋಲೀಸ್ ಅಧಿಕಾರಿಗೆ ಕೇಂದ್ರದ ಹುದ್ದೆ

ಬೆಂಗಳೂರಿನ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಎಂ ಪಿ ಆನಂದ್ ರವರನ್ನು ಕೇಂದ್ರದ ಸಿ ಐ ಡಿ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿ ನೇಮಿಸಲಾಗಿದೆ ಇವರು ಬರುವ ವಾರ ದೆಹಲಿಗೆ ತೆರಳುವರು

ಕೋಲಾರಕ್ಕೆ ನಾಳಿದ್ದು ಶ್ರೀಮನ್ ಮಹಾರಾಜರ ಭೇಟಿ

ಶ್ರೀಮನ್ ಮಹಾರಾಜರು ಕೋಲಾರ ಜಿಲ್ಲೆಗೆ ನಾಳಿದ್ದು ಭೇಟಿ ಕೊಡಲಿರುವರೆಂದು ತಿಳಿದುಬಂದಿದೆ ಕರ್ನಾಟಕ ವಿಶ್ವ ವಿದ್ಯಾಲಯ ನಿಯೋಗದವರಾದ ಶ್ರೀ ಆರ್ ಎಸ್ ಹುಕ್ಕೇರಿಕರ್ ಬಿ ಎ ಪಾಟೀಲ್ ಮತ್ತು ಶ್ರೀ ಹಂಡೀಮನೀರವರು ಈ ದಿನ ತಮ್ಮ ವಿಶ್ವ ವಿದ್ಯಾಲಯದ ಸಂಬಂಧವಾದ ಹಲವು ಪ್ರಶ್ನೆಗಳನ್ನು ಕುರಿತು ಶ್ರೀಮನ್ ಮಹಾರಾಜರೊಡನೆ ಮಾತುಕತೆ ನಡೆಸುವರು

೨೩ನೇ ತಾ|| ಆಯವ್ಯಯದ ಅಂದಾಜಿನ ಮಂಡನೆ

ಇದೇ ೨೩ ನೇ ತಾ|| ಕಿರಿಯ ಶಾಸನ ಸಭೆಯಲ್ಲಿ ಸಂಸ್ಥಾನದ ಆಯವ್ಯಯದ ಅಂದಾಜು ಪಟ್ಟಿಯನ್ನು ಮಂಡಿಸಲಾಗುವುದು ಈ ದಿನ ಮತ್ತು ನಾಳೆ ರಾಜಪ್ರಮುಖರ ಭಾಷಣದ ಬಗ್ಗೆ ಚರ್ಚೆ ಇದೆ.

ಸಿಂಹಳದ ಸತ್ಯಾಗ್ರಹಿಗಳ ಮೇಲೆ ದೊಂಡಾಮರ್ಷ

ಸಿಂಹಳದ ಪಾರ್ಲಿಮೆಂಟಿನ ಸಭಾ ಭವನದ ಮುಂದೆ ಸತ್ಯಾಗ್ರಹವನ್ನಾಚರಿಸಲು ನೆನ್ನೆ ಅಖಿಲ ಭಾರತೀಯ ಕಾಂಗ್ರೆಸ್ ಸದಸ್ಯರು ಪ್ರಯತ್ನಪಟ್ಟರೆಂದೂ, ಆಪ್ಟೋಲ್ಲಂಘನೆ ಮಾಡಿದರೆಂಬ ಕಾರಣಕ್ಕಾಗಿ ಅವರನ್ನು ಪೋಲೀಸರು ಹೊಡೆದು [illegible] ದೂರಕ್ಕೆ ಎಸೆಯಲ್ಪಟ್ಟರೆಂದೂ ವರದಿಯಾಗಿದೆ

ಭಾರತ ಸೇವಾದಳದ ಕೇಂದ್ರ ನಾಯಕ ಶಿಬಿರ

ಸಂಸ್ಥಾನದ ಭಾರತ ಸೇವಾದಳದ ಕೇಂದ್ರ ನಾಯಕ ಶಿಕ್ಷಣ ಶಿಬಿರವು ದೊಡ್ಡಬಳ್ಳಾಪುರದಲ್ಲಿ ಇದೇ ತಿಂಗಳು ೨೪ರಿಂದ ಪ್ರಾರಂಭವಾಗಿ ಒಂದು ತಿಂಗಳ ಕಾಲ ನಡೆಯುವುದು. ಎಸ್ ಎಸ್ ಎಲ್ ಸಿ ವರ್ಗದ ವಿದ್ಯೆ ಹೊಂದಿರುವವರು ಮತ್ತು ವೃತ್ತಿಕಾರ್ಯರಾದವರನ್ನು ಶಿಕ್ಷಣಕ್ಕಾಗಿ ಸೇರಿಸಿಕೊಳ್ಳಲಾಗುವುದು. ಶಿಬಿರಕ್ಕೆ ಬರುವವರು ತಮ್ಮ ಹಾಸಿಗೆ, ಬಟ್ಟೆ, ಊಟದ ತಟ್ಟೆ, ಲೋಟ, ತಂಬಿಗೆ, ಬರೆಯುವ ಪುಸ್ತಕ, ಸೇವಾದಳದ ಸಾಹಿತ್ಯ ಮತ್ತು ಸಲಕರಣೆಗಳನ್ನು ತರಬೇಕೆಂದೂ, ಶಿಬಿರದ ನಿವಾಸಿಗಳೆಲ್ಲರೂ ಖಾದಿಯ ಕಪ್ಪು ಚಡ್ಡಿ, ಬಿಳಿಯ ಅರ್ಧ ತೋಳಿನ ಬನೀನು ಮತ್ತು ಸೇವಾದಳದ ಟೋಪಿಯುಳ್ಳ ಸಮವಸ್ತ್ರವನ್ನು ಹೊಂದಿರಬೇಕೆಂದೂ ತಿಳಿಸಲಾಗಿದೆ. ಶಿಕ್ಷಣ ಮುಗಿದನಂತರ ಟ್ರೂಪ್ ಕೋಟನ್ನು ಧರಿಸಬೇಕಾಗುವುದರಿಂದ ಅವರು ೧೦ ರೂಗಳನ್ನು ತರಬೇಕೆಂದೂ ಸೂಚಿಸಲಾಗಿದೆ

ಭೋಗ ವಸ್ತುಗಳ ಮೇಲೆ ಈಜಿಪ್ಟಿನಲ್ಲಿ ನಿರ್ಬಂಧ

ಆಭರಣಗಳು, ಮೋಟಾರು ಕಾರು, ವೈರ್‌ಲೆಸ್ ಸೆಟ್ಟುಗಳು, ಬಟ್ಟೆಬರೆಗಳು ಸಾಬೂನು, ಚರ್ಮ ಇವೇ ಮುಂತಾದ ಭೋಗ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಈಜಿಪ್ಟ್ ನಿರ್ಬಂಧವನ್ನು ವಿಧಿಸಿ ಅವನ್ನು ತರಿಸಲು ಪೂರ್ವಭಾವಿ ಅನುಮತಿಯು ಅವಶ್ಯಕವೆಂದು ಸೂಚಿಸಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಚಿತ್ರಜಗತ್. ಮಧ್ಯಾಹ್ನ ೧-೩೦ ಗಿಟಾರ್ ವಾದನ. ೧-೫೦ ಕನ್ನಡ ಗೀತೆಗಳು ಟಿ ನಾಗಮ್ಮ ೩ ಬಾಲಜಗತ್ ಸಂಜೆ ೫-೩೦ ಮತ್ತು ೬ ಸಂಗೀತ. ೬-೧೦ ನಾದಶ್ರೀ. ೭-೩೦ ವನಿತಾ ವಿಹಾರ ೮ ಕಥಾಕಾಲಕ್ಷೇಪ ಸೇತುಮಾಧವದಾಸ್ ೮-೩೦ ಕೇಂದ್ರ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಪ್ರಸಾರ ಭಾಷಣದ ಪುನಃ ಪ್ರಸಾರ ೯-೧೫ ತಬಲ ವಾದನ ೯-೩೦ ಗಾನ ವಾರಿಧಿ

ಹತೋಟಿ ಮುಂದುವರಿಸಲು ದಾವಣಗೆರೆ ಪೌರಸಭೆ ಸಲಹೆ

ಕಡ್ಡಾಯ ಸಡಿಲಿಸಿದ ಬಳಿಕ ಇರುವ ಸಂಸ್ಥಾನದ ನಾಲ್ಕು ಪಟ್ಟಣಗಳಲ್ಲಿ ಆಹಾರದ ಹತೋಟಿಯನ್ನು ಮುಂದುವರಿಸಬೇಕೆಂದು ದಾವಣಗೆರೆ ಪೌರ ಸಭೆಯು ತನ್ನ ಅಭಿಪ್ರಾಯವಿತ್ತಿದೆ.

[illegible] ಮಹಾರಾಜರಿಂದ ಭಾರೀ ಆನೆಯ ಶಿಕಾರಿ

[illegible] ವಿಹಾರಾರ್ಥವಾಗಿ ಹೋಗಿರುವ ಜಯಪುರದ ಮಹಾರಾಜರು ೬ ಅಡಿ ಕೊಂಬಿನ ಭಾರಿ ಆನೆಯೊಂದನ್ನು ಶಿಕಾರಿ ಮಾಡಿರುತ್ತಾರೆ

ಸೇಲಂ ಬಳಿ ಮ್ಯಾಗ್ನೇಷಿಯಾ ಕಾರ್ಖಾನೆ

ಸೇಲಂ ಬಳಿ ಮ್ಯಾಗ್ನೇಷಿಯಾ ಕಾರ್ಖಾನೆಯೊಂದನ್ನು ಸ್ಥಾಪಿಸಲು ಜಪಾನಿನ ಕಂಪನಿಯೊಂದು ಒಪ್ಪಂದ ಮಾಡಿಕೊಂಡಿರುತ್ತದೆ ಪ್ರತಿ ವರ್ಷವೂ ೩೦ ಸಾವಿರ ಟನ್ನಿನಷ್ಟು ಮ್ಯಾಗ್ನೇಷಿಯಾವನ್ನು ತಯಾರಿಸಲಾಗುವುದು

ಸಂಯುಕ್ತ ಪ್ರಜಾರಂಗದ ಸ್ಥಾಪನೆ

ಮೈಸೂರಿನ ಶಾಸನ ಸಭೆಯ ೧೭ ಮಂದಿ ಕಾಂಗ್ರೆಸ್ಸೇತರ ಸದಸ್ಯರುಗಳು ನೆನ್ನೆ ಸಭೆ ಸೇರಿ ಸಂಯುಕ್ತ ಪ್ರಜಾರಂಗವನ್ನು ರಚಿಸಿರುತ್ತಾರೆ. ಕೆ ಎಂ ಪಿ ಪಕ್ಷದ ನಾಯಕರಾದ ಡಾ|| ಇಮಾಂರವರು ಪಕ್ಷದ ನಾಯಕರಾಗಿರುವರು. ಹೊಸ ರಾಜಕೀಯ ಪಕ್ಷಕ್ಕೆ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳುವ ಪ್ರಯತ್ನವು ನಡೆಯುತ್ತಿದೆ

ಇಂಜನಿಯರಿಂಗ್ ಡಿಪ್ಲೊಮಾಗಳಿಗೆ ಭಾರತ ಸರ್ಕಾರದ ಮನ್ನಣೆ

ಬೆಂಗಳೂರಿನ ಇಂಜನಿಯರಿಂಗ್ ಶಾಲೆಯ ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಇಂಜನಿಯರಿಂಗ್ ಡಿಪ್ಲೊಮಾಗಳಿಗೆ ಇತರ ಸಂಸ್ಥಾನಗಳ ಡಿಪ್ಲೊಮಾಗಳಂತೆಯೇ ಭಾರತ ಸರ್ಕಾರದವರು ಮನ್ನಣೆಯಿತ್ತಿರುವರು

THEOSOPHY STUDY GROUP,
Yadavagiri Road
Vontikoppal
Saturday the 21st JUNE 1952
at 5-30 p. m
Talks followed by Questions and Answers on
The Mystery of Man
IV FROM MAN TO GOD
MEANS OF CONCENTRATION

ಉಪಾಧ್ಯಕ್ಷರ ಚುನಾವಣೆ

[illegible] ೧೯

ಇಲ್ಲಿನ ಪೌರ ಸಭೆಯ ಉಪಾಧ್ಯಕ್ಷಸ್ಥಾನಕ್ಕೆ ಚುನಾವಣೆಯು ನೆನ್ನೆ ನಡೆಯಿತು. ಶ್ರೀ ಚಾಮನಾಯಕರು ೧೦-೫ ಓಟುಗಳಿಂದ ಶ್ರೀ ಜಿ ಗಂಟೆ ದಾಸೇಗೌಡರನ್ನು ಸೋಲಿಸಿ ಜಯಗಳಿಸಿದರು

ಹರಿಕಥೆ

ಇಲ್ಲಿನ ವೈದ್ಯೇಶ್ವರ ದೇವಸ್ಥಾನದಲ್ಲಿ ನಾಳಿದ್ದು ಶನಿವಾರ ರಾತ್ರಿ ೮ ಘಂಟೆಗೆ ಶ್ರೀ ಎಸ್. ಕೃಷ್ಣಯ್ಯಂಗಾರ್ಯರಿಂದ "ಲವ ಕುಶ" ಎಂಬ ಹರಿಕಥೆಯು ನಡೆಯುವುದು

ತತ್ವವಾದನ ಮತ್ತು ಮಹಾ ಮಂಗಳಾರತಿ

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಗಂಗಾನುಶಕ್ಷರ ಬೀದಿಯಲ್ಲಿರುವ ಕಾರ್ಪೊರೇಟರ್ ಗರಡಿಯ ಶ್ರೀ ರಾಮಮಂದಿರದ ಮುಂಭಾಗದಲ್ಲಿ ಕೂಡಿಸಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ನೆನ್ನೆ ರಾತ್ರಿ ವಾಟರ್ ವರ್ಕ್ಸ್‌ನಲ್ಲಿರುವ ಶ್ರೀನಿವಾಸಯ್ಯ, ಪೋಲೀಸ್ ಮರಿಯಪ್ಪ ಮತ್ತು ಮಕ್ಕಳುಗಳಿಂದ ತತ್ವ ವಾದನವೂ, ಮಹಾ ಮಂಗಳಾರತಿಯೂ, ಪ್ರಸಾದ ವಿನಿಯೋಗವೂ ನಡೆಯಿತು

ಸಂಗೀತ ತರಗತಿಗಳು

ರಾಜಧಾನಿಯ ನೈಸರಾರ್ ರೋಡಿನಲ್ಲಿರುವ 369ನೇ ನಂಬರು "ಮಾಧವ ಭವನ"ದಲ್ಲಿ ಸಂಗೀತ ತರಗತಿಗಳು ತೆರೆಯಲ್ಪಟ್ಟಿವೆ. ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಪರೀಕ್ಷೆಗಳಿಗೆ ವೀಣೆ ಮತ್ತು ಹಾಡುಗಾರಿಕೆಯಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮೈಸೂರಿನ ವಿದ್ವಾನ್ ಆರ್ ಎನ್ ದೊರೆಸ್ವಾಮಿಯವರಿಂದ ಶಿಕ್ಷಣವು ಕೊಡಲ್ಪಡುತ್ತದೆ. ಸೇರಬಿಚ್ಛಿಸುವವರು ಮೇಲ್ಕಂಡ ವಿಳಾಸದಲ್ಲಿ ವಿವರಗಳನ್ನು ತಿಳಿಯಬಹುದು.

ಜಿ ಕೆ. ಶ್ರೀನಿವಾಸರಾವ್,
ವ್ಯವಸ್ಥಾಪಕರು

ಶಾಲೆಗಳಲ್ಲಿ ಸ್ಥಳ ಸಿಗದೆ ತೊಂದರೆ ಪಡುತ್ತಿರುವ
S. S. L. C ವಿದ್ಯಾರ್ಥಿನಿಯರಿಗೆ ಸುಸಮಯ
ಎಲ್. ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೂ, ಹೈಸ್ಕೂಲು ತರಗತಿಗಳಲ್ಲಿ ಓದಿ ಬಿಟ್ಟಿರುವ ವಿದ್ಯಾರ್ಥಿಗಳಿಗೂ
ಪ್ರತ್ಯೇಕ ಪಾಠ
—— ತರಗತಿಗಳನ್ನು ಪ್ರಾರಂಭಿಸಲಾಗಿದೆ ——
CITY TUTORIAL COLLEGE,
Near V. V. Market, Mysore.

ಒಲಂಪಿಯಾ * 22-6-52 ರಿಂದ ಅಪೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಮಾನವತೆಯ ಪೂರ್ಣ ಭಾವನೆಗಳನ್ನು ಪ್ರತಿಬಿಂಬಿಸುವ,
ಬಾಂಬೆ ಟಾಕೀಸಿನವರ ಮೇಲ್ಪಟ್ಟದ ಹಿಂದಿ ಕಲಾಕೃತಿ
- M A A * ಮಾ -
ಪಾತ್ರ:— ಶ್ಯಾಮಾ, ಭಾರತ ಭೂಷಣ, ಲೀಲಾ ಚಿಟ್ನೀಸ್

ಮೈಸೂರು ಟ್ರಾನ್ಸಿಟ್ ಸರ್ವೀಸ್
ರಮಾವಿಲಾಸ ರಸ್ತೆ, ಮೈಸೂರು. ಫೋನ್ ನಂ. 537
ಮೈಸೂರು ಮತ್ತು ಮದರಾಸುಗಳ ನಡುವೆ
ನಮ್ಮ ಏಜೆಂಟರಾದ ಮೆಸರ್ಸ್ ಮದ್ರಾಸು-ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೂಲಕ ಸುವ್ಯವಸ್ಥಿತ ರೀತಿಯಲ್ಲಿ ಸರಕುಗಳನ್ನು ರವಾನಿಸುವ ಸಂಸ್ಥೆ.
ಮಾಲೀಕರು:— ಮೊ. ತೀರ್ಥ ಅಂಡ್ ಕಂಪೆನಿ
ಜನರಲ್ ಏಜೆಂಟ್:— ಮೆಸರ್ಸ್ ಎಸ್. ಎಸ್. ಷರೀಫ್,
ಹನುಮಂತ ರಾವ್ ಸ್ಟ್ರೀಟ್, (ಪ್ರಭಾ ಟಾಕೀಸ್ ಹತ್ತಿರ) ಮೈಸೂರು

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
21-6-52 ರಿಂದ :: ಅಪೋಘ 2ನೇ ವಾರ
ಜೆಮಿನಿಯವರ
* ಬಾಲನಾಗಮ್ಮ
ಪಾತ್ರ:— ಕಾಂಚನಮಾಲ, ಪುಷ್ಪವಲ್ಲಿ, ಡಾ|| ಸುಬ್ಬರಾವ್, ಬಾಲಸರಸ್ವತಿ ಲಲಿತ ಮುಂತಾದವರು.

ನೆನಪಿರಲಿ! :: ನೆನಪಿರಲಿ!
ಅಬೀದ್ ರವರ ಹರಾಜು
22—6—52 ನೇ :: ಭಾನುವಾರ :: ಬೆಳಿಗ್ಗೆ 9-30 ಘಂಟೆಗೆ
ಒಂಟಿ ಮಂಚಗಳು, ಒಂಟಿ ಡ್ರಾ ಟೇಬಲ್ಲುಗಳು, ಬರೆಯುವ ಮೇಜುಗಳು, ಬೀಟೆ ಮತ್ತು ತೇಗದ ಗೋದಿ ಸೋಫ ಸೆಟ್ಟುಗಳು, ಔಷಧದ ಬೀರುಗಳು, ಬೀಟೆ ಮರದ ಕೈ ಇರುವ ಮತ್ತು ಇಲ್ಲದ ಕುರ್ಚಿಗಳು, ಅದ ಮತ್ತು ಕಬ್ಬಿಣದ ಪೆಟ್ಟಿಗೆಗಳು, ಸೈಕಲ್ಲುಗಳ ಭಾಗಗಳು, ಸರಿಯಾದ ಸ್ಥಿತಿಯಲ್ಲಿರುವ 1939 ನೇ ಮಾದರಿಯ 1-5 ಅಶ್ವ ಶಕ್ತಿಯುಳ್ಳ ನ್ಯೂ ಹಡ್ಸನ್ ಮೋಟಾರು ಸೈಕಲ್ಲು ಒಂದು- ಇನ್ನೂ ಮನೆ ಬಳಕೆ ಮತ್ತು ಗೃಹಕೃತ್ಯದ ಪದಾರ್ಥಗಳು ಮತ್ತು ಅನೇಕ ಇತರ ಉಪಯುಕ್ತ ಸಾಮಾನುಗಳು.
ಶನಿವಾರ ಮಧ್ಯಾಹ್ನ 3 ರಿಂದ 6 ರ ವರೆಗೆ ಸಾಮಾನುಗಳನ್ನು ಅವಲೋಕಿಸಬಹುದು

Edited, Printed and Published by A. R. Nagarajan, at Sadhvi Press, D. Subbiah Road, Mysore

ಟೆಲಿಫೋನ್ ನಂ. 792 || ವಂದೇ ಮಾತರಂ || ಒಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಶನಿವಾರ ೨೧-೬-೫೨ [ಸಂಚಿಕೆ ೨೬೯

ಮೈಸೂರು ದೇಶಕ್ಕೆ - ರಾಷ್ಟ್ರಧ್ವಜ ಮಾತ್ರ -

ಹಾಸನ-ಮಂಗಳೂರು ರೈಲ್ವೆ ಸ್ಥಾಪನೆ

ಸಚಿವರ ಬಳಿ ಹಾಸನದ ಜಿಲ್ಲಾ ಬೋರ್ಡ್ ಸದಸ್ಯರ ನಿಯೋಗ

ಬೆಂಗಳೂರು ೧೨

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್ ಮತ್ತು ಆರೋಗ್ಯ ಮಂತ್ರಿ ಶ್ರೀ ಚನ್ನಯ್ಯನವರ ಬಳಿ ಹಾಸನ ಜಿಲ್ಲಾ ಬೋರ್ಡಿನ ನಿಯೋಗದ ಸದಸ್ಯರಾದ ಶ್ರೀಗಳು ವೈ ಧರ್ಮಪ್ಪ, ಬಿ ಎಗ ಬೋರಣ್ಣ ಗೌಡ, ಜಿ. ಎ ತಿಮ್ಮಪ್ಪ ಗೌಡ, ಎ ಎಸ್ ಮಲ್ಲಪ್ಪ ಮತ್ತು ಲಕ್ಕಪ್ಪ ಇವರುಗಳು ನೆನ್ನೆ ಹೋಗಿ ಹಾಸನ ಮತ್ತು ಮಂಗಳೂರುಗಳ ನಡುವೆ ರೈಲ್ವೆ ರಸ್ತೆಯನ್ನು ಜಾಗ್ರತೆಯಾಗಿ ಹಾಕುವ ಬಗ್ಗೆ ಮನವಿಯೊಂದನ್ನು ಸಲ್ಲಿಸಿದರು ೧೮೭೫ ರಲ್ಲೇ ಸದರಿ ರಸ್ತೆಯ ನಿರ್ಮಾಣದ ವಿಷಯವನ್ನು ಯೋಚಿಸಲಾಗಿತ್ತೆಂದೂ, ಹಾಸನ, ಚಿಕ್ಕಮಗಳೂರು, ಕೊಡಗು ಮತ್ತು ಮಂಗಳೂರಿನ ಜನರಿಗೆ ಈ ರಸ್ತೆಯಿಂದ ಉಪಯೋಗವಾಗುವುದೆಂದೂ, ಕಾಫಿ, ಟೀ ಮುಂತಾದ ಮಲೆನಾಡಿನ ಉತ್ಪತ್ತಿ ವಸ್ತುಗಳು ಹೊರಕ್ಕೆ ಹೋಗಲು ಉಪಯೋಗವಾಗುವುದೆಂದೂ ಸೂಚಿಸಲಾಗಿದ್ದಿತು

ಮುಖ್ಯಮಂತ್ರಿಯವರು ನಿಯೋಗದವರ ಅಭಿಪ್ರಾಯಕ್ಕೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಆಶ್ವಾಸನೆಯಿತ್ತರು.

ಕಾಲೇಜು ಸಮಿತಿಗಳ ಬಗ್ಗೆ ಅವಸರ ನಿರ್ಣಯಗಳ ತಿರಸ್ಕಾರ

ಸಂಸ್ಥಾನದ ಔದ್ಯೋಗಿಕ ಕಾಲೇಜುಗಳ ಸಮಿತಿ ನೇಮಕ, ಅವುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಇಳಿಸಿರುವುದು, ಇವುಗಳ ಸಂಬಂಧವಾಗಿ ಶ್ರೀಗಳಾದ ಬಿ. ಹುಚ್ಚೇಗೌಡ, ಮುನಿಯ ಗೋವಿಂದರೆಡ್ಡಿ ಮತ್ತು ಬಿ ವಿ. ನಾರಾಯಣ ರೆಡ್ಡಿ ಮುಂತಾದವರು ಎರಡು ಅವಸರದ ನಿರ್ಣಯಗಳನ್ನು ಶಾಸನ ಸಭೆಯಲ್ಲಿ ತಂದಿದ್ದರು ಅವುಗಳ ಬಗ್ಗೆ ಶೀಘ್ರದಲ್ಲೇ ಚರ್ಚಿಸಲು ಅವಕಾಶವಿರುವುದರಿಂದ ನಿರ್ಣಯಗಳ ಅವಶ್ಯಕವಿಲ್ಲವೆಂದು ಅಧ್ಯಕ್ಷರು ತಳ್ಳಿಹಾಕಿದರು

೩ ಜನ ಉಪ ಮಂತ್ರಿಗಳು

ಮೂರು ಜನ ಉಪ ಮಂತ್ರಿಗಳನ್ನು ನೇಮಿಸಿಕೊಳ್ಳುವ ವಿಷಯವನ್ನು ಶೀಘ್ರ ಪರ್ಯಾಲೋಚಿಸುತ್ತಿರುವುದಾಗಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ.

ಸ್ವೀಡನ್ ತೀರದಲ್ಲಿ ರಷ್ಯಾ ಯುದ್ಧ ನೌಕಾ ಚಟುವಟಿಕೆ

ಬಾಲ್ಟಿಕ್ ಸಮುದ್ರದಲ್ಲಿ ಗೋಟಾ ದ್ವೀಪದ ಬಳಿ ಸಂಚರಿಸುತ್ತಿರುವುವೆಂದು ಹೇಳಲಾದ ರಷ್ಯಾ ಯುದ್ಧ ನೌಕೆಗಳ ಶೋಧನಾ ಕಾರ್ಯದಲ್ಲಿ ತಮ್ಮ ನೌಕೆಗಳು ಮತ್ತು ವಿಮಾನಗಳು ತೊಡಗಿರುವುದಾಗಿ ಸ್ವೀಡನ್ನಿನ ರಕ್ಷಣಾ ಇಲಾಖೆಯು ಪ್ರಕಟಿಸಿರುತ್ತದೆ ಸ್ವೀಡನ್ನಿನ ಒಂದು ರೇವು ನಗರದ ಮೇಲೆ ವಿದೇಶೀ ವಿಮಾನವೊಂದು ಹಾರಾಡಿತೆಂದು ಸಹ ತಿಳಿಸಲಾಗಿದೆ

ಕೊಲೆಗಾಗಿ ಜೀವಾವಧಿ ಶಿಕ್ಷೆ

ಮೈಸೂರು ೨೦

ನಂಜನಗೂಡು ತಾಲ್ಲೂಕು ಕಗ್ಗಲಿಪುರದ ನಿವಾಸಿಗಳಾದ ನೇರಳೆ ಮಾದಪ್ಪ, ಅವನ ಮಕ್ಕಳು ಪುಟ್ಟಸ್ವಾಮಿ ಮತ್ತು ತಮ್ಮಯ್ಯ ಇವರು ತಾ||೧೨-೮-೫೧ ರಲ್ಲಿ ಅಲ್ಲಿನ ತೆಂಗಿನ ತೋಟವೊಂದಕ್ಕೆ ಹೋಗಿ ಕಾಯಿಗಳನ್ನು ಕದಿಯುತ್ತಿದ್ದರೆಂದೂ, ನಂಜಪ್ಪ ಎಂಬುವರೊಬ್ಬರು ಅವರನ್ನು ತಡೆಯಲಾಗಿ ಆತನನ್ನು ೧ ನೇ ಮತ್ತು ೩ ನೇ ಆಪಾದಿತರು ಹಿಡಿದುಕೊಂಡು ೨ ನೇಯವನು ಅವರನ್ನು ಚೂರಿಯಿಂದ ಇರಿದು ಕೊಂದನೆಂದೂ ತರಲಾಗಿದ್ದ ಆಪಾದನೆ ಮೇಲೆ ಅವರುಗಳು ಸೆಷನ್ಸ್ ವಿಚಾರಣೆಗೆ ಗುರಿಯಾಗಿ ನೆನ್ನೆ ನ್ಯಾಯಾಧೀಶರಾದ ಶ್ರೀ ಕೆ. ಸಿ. ಲಿಂಗಯ್ಯ ಗೌಡರು ತೀರ್ಪಿತ್ತು ೧ ನೇ ನೇರಳೆ ಮಾದಪ್ಪ ಮತ್ತು ೩ ನೇ ತಮ್ಮಯ್ಯನವರನ್ನು ತಪ್ಪಿತಸ್ಥರಲ್ಲವೆಂದು ಖುಲಾಸೆ ಮಾಡಿ, ಪುಟ್ಟಸ್ವಾಮಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದರು ಆಪಾದಿತರ ಪರ ನಂಜನಗೂಡಿನ ವಕೀಲರಾದ ಶ್ರೀ ಎಂ ಸಿ ಬಿಳಿಗಿರಿರಂಗಯ್ಯನವರೂ, ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರೂ ವಕಾಲತ್ತು ವಹಿಸಿದ್ದರು

ಹ ರಿ ಕ ಥೆ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿ ಚೌಡೇಶ್ವರಿ ರಾಮಲಿಂಗೇಶ್ವರಿ ದೇವಸ್ಥಾನದಲ್ಲಿ ಶ್ರೀ ಪಿ. ರಾಮಸ್ವಾಮಿನಾಯ್ಡುರವರು ಈ ದಿನ ಗಂಗಾವತಾರ, ನಾಳೆ ಚಂದ್ರಹಾಸ, ನಾಳಿದ್ದು ಸೀತಾಕಲ್ಯಾಣ ಹರಿಕಥೆಗಳನ್ನು ಪ್ರತಿ ಸಂಜೆ ೭ ಘಂಟೆಗೆ ಮಾಡಲಿರುವರು

ಎಂ. ಎನ್. ರಾಯರಿಗೆ ತೀವ್ರ ಅಪಘಾತ

ಪ್ರಪಂಚದ ಕ್ರಾಂತಿಕಾರಿಯೂ, ವಿಶ್ವಖ್ಯಾತ ಅಂತರ ರಾಷ್ಟ್ರೀಯ ವ್ಯಕ್ತಿಯೂ ಆದ ಎಂ ಎನ್ ರಾಯರು ತಮ್ಮ ಪತ್ನಿಯೊಡನೆ ಮುಸ್ಸೂರಿಯಲ್ಲಿ ವಿಹರಿಸುತ್ತಿದ್ದಾಗ, ಒಂದು ಕಡೆ ಕಾಲು ಜಾರಿ ಆಳವಾದ ಗುಂಡಿಯೊಳಗೆ ರಾಯರು ಬಿದ್ದರೆಂದೂ, ಅವರ ಎರಡು ಎಲುಬುಗಳು ಮುರಿದುದಲ್ಲದೆ ಮುಖದ ಮೇಲೆ ಗಾಯಗಳಾದುವೆಂದೂ ವರದಿಯಾಗಿದೆ

ಕೋಲಾರಕ್ಕೆ ನೆಹರೂರಿಂದ ಪುನಃ ೩೦ ಸಾವಿರ ರೂ.

ಬೆಂಗಳೂರು ೨೦

ಪ್ರಧಾನ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಯಿಂದ ಈಗಾಗಲೇ ಕೊಟ್ಟಿರುವ ೨೦ ಸಾವಿರ ರೂ ಗಳ ಜೊತೆಗೆ ಇನ್ನೂ ೩೦,೦೦೦ ರೂ ಗಳನ್ನು ಕೋಲಾರ ಮುಂತಾದ ಅಭಾವ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಪಂಡಿತ ನೆಹರೂರವರು ಕಳುಹಿಸಿರುತ್ತಾರೆಂದು ಮುಖ್ಯಮಂತ್ರಿ ಶ್ರೀ ಕೆ.ಹನುಮಂತಯ್ಯನವರು ತಿಳಿಸಿರುವರು

ಶಾಸನ ಸಭೆಯ ನೆನ್ನಿನ ಕಾರ್ಯಕಲಾಪ

ಶ್ರೀ ಹೆಚ್. ಎಸ್. ರುದ್ರಪ್ಪನವರು ರಾಜಪ್ರಮುಖರ ಭಾಷಣಕ್ಕಾಗಿ ವಂದಿಸುವ ನಿರ್ಣಯವನ್ನು ಮಂಡಿಸಿದರು ಮೈಸೂರು ಸಂಸ್ಥಾನದಲ್ಲಿ ಮೊದಲು ಪ್ರಜಾ ಪ್ರಭುತ್ವ ಪದ್ಧತಿಯು ಬಂದಿತೆಂದೂ, ಇದಕ್ಕೆ ಬಹುಮಟ್ಟಿಗೆ ಆಳುವ ವಂಶದವರೇ ಕಾರಣರೆಂದೂ ಅವರು ಹೇಳಿ ಸಂಸ್ಥಾನದ ಆಯವ್ಯಯವನ್ನು ಸಮ ತೂಗಿಸಲು ಸರ್ಕಾರದವರು ತುಂಬಾ ಶ್ರಮ ಪಡುತ್ತಿರುವರೆಂದೂ, ಪ್ರಜೆಗಳ ಸಹಕಾರವು ಆಗತ್ಯವಾಗಿ ಇದಕ್ಕೆ ಬೇಕೆಂದೂ ತಿಳಿಸಿದರು

ಶ್ರೀ ಎಸ್. ಗೋಪಾಲಗೌಡ (ಸಮಾಜವಾದಿ) ರು ಭಾಷಣ ಮಾಡಿ ಇತ್ತೀಚಿನ ಚುನಾವಣೆಯಲ್ಲಿ ಮೋಸವು ನಡೆದಿರುವುದೆಂದು ತಿಳಿಸಿದರು ವಿದ್ಯಾಭ್ಯಾಸ ನೀತಿಯನ್ನು ವಿಮರ್ಶಿಸಿ, ಶಾಲೆಗಳಿಗಾಗಿ ಹೆಚ್ಚಿನ ಕಟ್ಟಡಗಳನ್ನು ಕಟ್ಟಕೂಡದೆಂದು ತಿಳಿಸಿದರು

ಶ್ರೀ ನಾಗರಾಜಮೂರ್ತಿಯವರು ಮಾತನಾಡಿ ಆಹಾರದ ಹತೋಟಿ ಸಂಪೂರ್ಣ ರದ್ದು ಮಾಡಲು ಸರ್ಕಾರಕ್ಕೆ ಎದೆಗಾರಿಕೆ ಇಲ್ಲದೆ ಹೋಯಿತೆಂದು ಟೀಕಿಸಿದರು. ಲಂಚದ ಇಲಾಖೆಯನ್ನು ರದ್ದುಗೊಳಿಸಿದರೆ ಲಂಚಗುಳಿತನ ಕಡಿಮೆಯಾಗುವುದೆಂದು ಅವರು ಅಭಿಪ್ರಾಯಪಟ್ಟರು

ಮತ್ತೊಂದು ಮೆಡಿಕಲ್ ಕಾಲೇಜನ್ನು ತೆರೆಯುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ವಿದ್ಯಾ ಮಂತ್ರಿ ಎ ಜಿ ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವೀಯುವಾಗ ತಿಳಿಸಿರುತ್ತಾರೆ

ಇನ್ನುಮುಂದೆ ಸಂಸ್ಥಾನದಲ್ಲಿ ರಾಷ್ಟ್ರಧ್ವಜ ಮಾತ್ರ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಸ್ವಂ.ವ ವರದಿ] ಬೆಂಗಳೂರು ೨೧

ಶಾಸನ ಸಭೆಯು ಈ ಬೆಳಿಗ್ಗೆ ಪುನಃ ಸೇರಿ ಮಧ್ಯಾಹ್ನ ೨ ಘಂಟೆ ವರೆಗೆ ನಡೆಯಿತು.

ಶ್ರೀ ಜೆ ಅಪ್ಪಾಜಿ ಗೌಡರನ್ನು ಇನ್ಷೂರೆನ್ಸ್ ಇಲಾಖೆಯ ಅಧಿಕಾರಿಯನ್ನಾಗಿ ನೇಮಿಸಿದ ಸಂಬಂಧದಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರವೀಯುತ್ತಾ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇಲಾಖೆಯಲ್ಲಿ ದಕ್ಷತೆಯು ಹೆಚ್ಚಲೆಂದು ಅವರನ್ನು ತೆಗೆದುಕೊಳ್ಳಲಾಯಿತೆಂದೂ, ನಿವೃತ್ತ ಅಧಿಕಾರಿಗಳನ್ನು ನೇಮಿಸುವಾಗ ಅವರ ಅರ್ಹತೆಗಳನ್ನು ಪರಿಶೀಲಿಸಿ ತೆಗೆದುಕೊಳ್ಳಲಾಗುವುದೆಂದೂ ತಿಳಿಸಿದರು

ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸಿಲ್ಲವೆಂದು ಮುಖ್ಯ ಮಂತ್ರಿಗಳು ಶ್ರೀ ಕೆ ಎಸ್. ವಾಸನರವರ ಪ್ರಶ್ನೆಗೆ ಉತ್ತರವಿತ್ತು ತಿಳಿಸಿದರು.

ರಾಜಪ್ರಮುಖರನ್ನು ಅಭಿನಂದಿಸುವ ನಿರ್ಣಯದ ಸಂಬಂಧವಾಗಿ ವಿರೋಧ ಪಕ್ಷದವರು ಮಾಡಿದ ಟೀಕೆಗಳಿಗೆ ಮುಖ್ಯ ಮಂತ್ರಿಯವರು ಉತ್ತರವೀಯುತ್ತಾ, ಬ್ರಿಟನ್ ಪಾರ್ಲಿಮೆಂಟಿನಲ್ಲಿ ರಾಜರು ಭಾಷಣ ಮಾಡುವ ವಿಧಾನದಂತೆ ಇಲ್ಲೂ ಸಹ ರಾಜಪ್ರಮುಖರ ಭಾಷಣವನ್ನು ನಿರ್ಧರಿಸಲಾಗಿದೆಯೆಂದೂ ಸರ್ಕಾರದವರು ಮುಂದೆ ನಡೆಸಬಹುದಾದ ಕಾರ್ಯಕ್ರಮಗಳನ್ನು ಅದರಲ್ಲಿ ಸಂಕ್ಷಿಪ್ತವಾಗಿ ಮಾತ್ರ ತಿಳಿಸಲು ಸಾಧ್ಯವೆಂದೂ ಹೇಳಿದರು

ಇನ್ನು ಮುಂದೆ ಮೈಸೂರು ಸಂಸ್ಥಾನದಲ್ಲಿ ಎರಡು ಧ್ವಜಗಳನ್ನು ಹಾಕುವ ಪದ್ಧತಿಯನ್ನು ನಿಲ್ಲಿಸಿ ರಾಷ್ಟ್ರಧ್ವಜವೊಂದನ್ನು ಮಾತ್ರ ಹಾರಿಸಬೇಕೆಂಬ ಕಾನೂನು ಮಾಡಲಾಗುವುದೆಂದು ಅವರು ಹೇಳಿದರು.

ಶಾಸನ ಸಭಾಧ್ಯಕ್ಷರ ವೇತನ

ಕಿರಿಯ ಮತ್ತು ಹಿರಿಯ ಶಾಸನ ಸಭಾಧ್ಯಕ್ಷರಿಗೆ ವರ್ಷಕ್ಕೆ ೯೬೦೦ ರೂ ವೇತನ, ೬೪೦೦ ರೂ ಭತ್ಯೆ, ೧೮೦೦ ರೂ ಪ್ರಯಾಣ ಭತ್ಯೆ, ಉಪ ಸ್ಪೀಕರ್ ಮತ್ತು ಉಪಾಧ್ಯಕ್ಷರಿಗೆ ವರ್ಷಕ್ಕೆ ೩ ಸಾವಿರ ರೂ ವೇತನ ಕೊಡುವ ಬಗ್ಗೆ ಮಸೂದೆಯೊಂದನ್ನು ತರಲಾಗಿದೆ

ಅಧ್ಯಕ್ಷರುಗಳ ಪ್ಯಾನೆಲ್

ಶಾಸನ ಸಭಾಧ್ಯಕ್ಷರು ಸಭೆಯಲ್ಲಿಲ್ಲದಿರುವಾಗ, ಸಭಾಧ್ಯಕ್ಷತೆ ವಹಿಸಲು ಈ ಕೆಳಗೆ ಕಂಡವರ ಅಧ್ಯಕ್ಷರ ಪ್ಯಾನೆಲ್ ಒಂದನ್ನು ರಚಿಸಲಾಗಿದೆ. :- ಶ್ರೀಗಳು ಎಂ ವಿ ರಾಮರಾವ್, ಎಂ. ಮಾದಯ್ಯ, ಎಸ್ ಗೋಪಾಲಗೌಡ ಮತ್ತು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.

○ ಮದ್ರಾಸಿನ ಗೌರ್ನರ್ ಶ್ರೀ ಶ್ರೀಪ್ರಕಾಶರು ನಾಳೆ ರಾಜಧಾನಿಗೆ ಆಗಮಿಸುವರು ಅವರು ಕೃಷ್ಣರಾಜಸಾಗರ, ಮುಂತಾದ ಸ್ಥಳಗಳಿಗೆ ಭೇಟಿಯಿತ್ತು ಮಂಗಳವಾರ ಬೆಂಗಳೂರಿಗೆ ತೆರಳುವರು.

ಪೆಟ್ರೋಲು ಮಾರಾಟ ತೆರಿಗೆ ಹೆಚ್ಚಿಸಲು ಆರ್ಡಿನೆನ್ಸ್

ಮುಖ್ಯಾಧಿನ ಗೌರ್ನರರು ಒಂದು ಆರ್ಡಿನೆನ್ಸನ್ನು ಹೊರಡಿಸಿ ಪೆಟ್ರೋಲಿನ ಚಿಲ್ಲರೆ ಬಿಕರಿ ತೆರಿಗೆಯ ದರವನ್ನು ಗ್ಯಾಲನ್ನಿಗೆ ನಾಲ್ಕರಿಂದ ಆರು ಆಣೆಗೆ ಹೆಚ್ಚಿಸಿರುತ್ತಾರೆ ಈ ಆಜ್ಞೆಯು ಪೆಟ್ರೋಲು ಬಳಕೆ ಮಾಡುವವರೆಲ್ಲರಿಗೂ ಈ ಕೂಡಲೇ ಅನ್ವಯವಾಗುವುದು ಶಾಸನ ಸಭೆಯ ಒಪ್ಪಿಗೆಯನ್ನು ಪಡೆದು ಮಾಡಬೇಕೆಂದಿದ್ದ ಈ ಶಾಸನದ ವಿಷಯವು ಅನಧಿಕೃತವಾಗಿ ಬಹಿರಂಗವಾದ ಸಲಾಮುದರಿಂದಲೇ ಗೌರ್ನರರ ಆರ್ಡಿನೆನ್ಸ್ ಮೂಲಕ ಈ ತೆರಿಗೆಯನ್ನು ವಿಧಿಸಲಾಯಿತೆಂದು ತಿಳಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೦ ಮಿಸ್ತ್ರ ವಾದ್ಯಗೋಷ್ಠಿ ಮಧ್ಯಾಹ್ನ ೧೨-೦ ಜಲತರಂಗ ೧ ... ನಾವು ಮತ್ತು ನಮ್ಮವರು ... ಮೆಚ್ಚಿನ ಗೀತೆಗಳು ಸಂಜೆ ... ತ್ತು ೭-೩೦ ಎಂ ಸಿ ... ಗೀತ, ೭ ನಾಗಸ್ವರ ... ೭ ಚಿತ್ರ ವಾಣಿ ... ಗೀತ, ೮-೩೦ ಕೇಂದ್ರ ವಾರ್ತೆ ... ಶ್ರೀ ಟಿ ಟಿ ಕೃಷ್ಣಮಾಚಾರಿಯವರ ಭಾಷಣದ ಪುನರ್ ಪ್ರಸಾರ ... ಸಿ ಕ ವೆಂಕಟರಾಮಯ್ಯನವರ ... ಕ ಮುಂದೋದಂ

ಗಾಯತ್ರೀ ಸಮಾಜದ ವಾರ್ಷಿಕೋತ್ಸವ

ರಾಜಧಾನಿಯ ... ದ ಶ್ರೀ ಗಾಯತ್ರೀ ಸಮಾಜದ ಎರಡನೇ ವಾರ್ಷಿಕೋತ್ಸವವು ನಾಳೆ ಸಂಜೆ ... ಘಂಟೆಗೆ ಅರಸು ಬೋರ್ಡಿಂಗ್ ಹಾಲಿನಲ್ಲಿ ನಡೆಯುವುದು ... ವನ್ನು ... ದೇವೇಗೌಡರು ... ಸುವರು

ರಷ್ಯದ ಪುಸ್ತಕಗಳ ಮಾರಾಟಕ್ಕೆ ಪ್ರೋತ್ಸಾಹವಿಲ್ಲ

ಶೈಲ್ಪ ... ಪುಸ್ತಕದ ಅಂಗಡಿಗಳಲ್ಲಿ ರಷ್ಯದ ಪುಸ್ತಕಗಳ ಮಾರಾಟಕ್ಕೆ ಪ್ರೋತ್ಸಾಹವಿಲ್ಲವೆಂದು ... ಸರ್ಕಾರದವರು ಸೂಚನೆಯಿತ್ತಿರುವರು

ಹಿಂದುಳಿದ ವರ್ಗದವರ ಏಳಿಗೆಗಾಗಿ ಸಮಿತಿ

ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ... ವರ್ಗದ ಏಳಿಗೆಗಾಗಿ ಸಮಿತಿಯೊಂದನ್ನು ಏಳ ... ತ್ತಾರೆ ... ಮಂತ್ರಿಗಳ ... ಕಮಿಷನರ್ ವಿದ್ಯಾ ... ಡೈರಕ್ಟರ್ ... ಸಂಸ್ಥೆ ... ಅಧಿಕಾರಿ ಸದಸ್ಯರಾಗಿರುವರು ಶ್ರೀ ಗಳಾದ ಬಿ ಟಿ ಕೆಂಪರಾಜ್ ಎಂ ಕ ಪ್ರಭಾಕರ್ ಎಂ ಮಾದಯ್ಯ ಬಿ ... ಹೆಚ್ ಎಂ ಗಂಗಾಧರಯ್ಯ ... ಹನುಮಂತಯ್ಯ, ... ಮೋಹನದಾಸ್, ಎ ವೆಂಕಟೇಶ್ ...

ರಶಿಪ ... ಸಪ್ತಾಹ

... ಲಿಂಗಸ್ವಾಮಿ ... ಕೀರ್ತನ ... ಏಳು ದಿವಸ ...

ಸ್ವೀಡನ್ನಿಗೆ ರಷ್ಯಾ ಪ್ರತಿಭಟನೆ

ಕಳೆದ ೧೬ ನೇ ತಾ|| ಸ್ವೀಡನ್ನಿನ ವಿಮಾನವೊಂದು ರಷ್ಯದ ತೀರ ಪ್ರದೇಶವನ್ನು ಆಕ್ರಮವಾಗಿ ದಾಟಿ ಅಂತರರಾಷ್ಟ್ರೀಯ ನಿಯಮವನ್ನು ಉಲ್ಲಂಘಿಸಿತೆಂದು ರಷ್ಯಾವು ಸ್ವೀಡನ್ನಿಗೆ ಪ್ರತಿಭಟನೆಯನ್ನು ಸೂಚಿಸಿದೆ ಈ ಬಗ್ಗೆ ಸ್ವೀಡನ್ನು ರಷ್ಯಕ್ಕೆ ಕ್ಷಮಾಪಣೆಯನ್ನು ಕೇಳಿದೆ

ಶಿವಾಜಿ ಜಯಂತಿ

ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ೩೨೩ ನೇ ಜಯಂತ್ಯುತ್ಸವವನ್ನು ರಾಜಧಾನಿಯ ಸಹಕಾರ ಭವನದಲ್ಲಿ ಕಳೆದ ೧೫ನೇ ತಾ|| ಬಾಬುಸಾಹೆಬ್ ಕ್ಷತ್ರಿಯ ಸಮಾಜದವರು ನೆರವೇರಿಸಿದರು ಶ್ರೀ ಆರ್ ಅಚ್ಯುತರಾವ್ ಸಿಂಧೆಯವರು ಅಧ್ಯಕ್ಷತೆ ವಹಿಸಿದ್ದರು ... ಚಕ್ರಶೇಖರಯ್ಯಂಗಾರ್ಯರು ಶಿವಾಜಿಯ ಜೀವನ ಚರಿತ್ರೆಯನ್ನು ವಿವರಿಸಿದರು ಶ್ರೀಯು ಎಲ್ ರಾಮಚಂದ್ರರಾವ್ ಮತ್ತು ಶ್ರೀಮತಿ ... ಬಾಯಿಯವರು ಭಾಷಣ ಮಾಡಿದರು ಮರಾಠಾ ವಿದ್ಯಾರ್ಥಿಗಳಿಗಾಗಿ ನಿಲಯವೊಂದನ್ನು ಕಟ್ಟಲು ... ಶ್ರೀಗಳಾದ ಅಚ್ಯುತರಾವ್ ಸಿಂಧೆ ಮತ್ತು ವಿ ರಾಮಕೃಷ್ಣರಾಯರು ... ರೂ ಕೊಡಲು ... ಮತ್ತೊಂದು ... ಉದಾರಿಗಳಾಗಿ ... ದ್ದೇಶ ... ಕೋರಲಾಗಿದೆ

ಕೀರ್ತನಕಾರರ ಮಂಡಲಿ ... ಕೀರ್ತನಕಾರರ ಮಂಡಲಿಯ ... ಸಮ್ಮೇಳನ ... ನಾಳೆ ಬೆಳಿಗ್ಗೆ ... ಘಂಟೆಗೆ ... ಮಾರ್ಕೆಟ್ ... ರೋಟು ಬೀದಿಯಲ್ಲಿರುವ ಭಜನೆ ವೆಂಕಟಪ್ಪನವರ ... ದಿರದಲ್ಲಿ ನಡೆಯುವುದು ಕೀರ್ತನಕಾರರೂ, ಭಕ್ತ ವಾದ್ಯ ವಿದ್ವಾಂಸರುಗಳೂ ಬರಬೇಕೆಂದು ಕೋರಲಾಗಿದೆ

ದುಷ್ಕೃತ್ಯಗಳನ್ನು ಮಾಡುವುದಿಲ್ಲವೆಂದು ಹಳ್ಳಿಗರ ಪ್ರತಿಜ್ಞೆ

ಹೊಗೆಬತ್ತಿ ಸೇದುವುದೇ ಮೊದಲಾದ ಎಲ್ಲಾ ದುಷ್ಕೃತ್ಯಗಳನ್ನೂ ಬಿಟ್ಟು ಬಿಡಲು ... ಹಳ್ಳಿಯ ಜನರು ಪ್ರತಿಜ್ಞಾ ವಚನಗಳನ್ನು ಸ್ವೀಕರಿಸಿರುತ್ತಾರೆ ಇದನ್ನು ಉಲ್ಲಂಘಿಸುವವರಿಗೆ ಶಿಕ್ಷೆ ವಿಧಿಸಲಾಗುವುದು ಈ ಹಳ್ಳಿಗಳು ... ರಾಯಿ ತೆಗೆಯಲು ಪ್ರಯತ್ನಿಸುತ್ತಿದ್ದಾರೆ

ನೀಲಗಿರಿ ಬಳಿ ಕೃತಕ ವಜ್ರಗಳ ತಯಾರಿಕೆ

ಬರುವ ವರ್ಷ ಜುಲೈ ತಿಂಗಳಲ್ಲಿ ಉದಕಮಂಡಲ ಅಥವಾ ಸೈಕಾರಾ ಬಳಿ ಕೃತಕ ವಜ್ರಗಳ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುವುದೆಂದು ತಿಳಿದುಬಂದಿದೆ ಈ ಕೈಗಾರಿಕೆಗೆ ಭಾರತ ಮತ್ತು ಸ್ವಿಟ್ಜರ್ಲೆಂಡುಗಳ ಬಂಡವಾಳವನ್ನು ಹಾಕಲಾಗುವುದು ಪ್ರಪಂಚದಲ್ಲಿ ಇಂತಹ ಕಾರ್ಖಾನೆಗಳು ಕೆಲವು ಮಾತ್ರವಿರುವುವೆಂದೂ, ವರ್ಷಕ್ಕೆ ೮೦೦ ಟನ್ನುಗಳಷ್ಟು ರತ್ನಗಳನ್ನು ಈಗ ತಯಾರಿಸಲಾಗುತ್ತಿರುವುದೆಂದೂ ಹೇಳಲಾಗಿದೆ

ಯಾದವ ವಿದ್ಯಾರ್ಥಿಗಳಿಗೆ ಸೌಕರ್ಯ

ಮೈಸೂರು ರಾಮವಿಲಾಸ ಅಗ್ರಹಾರದಲ್ಲಿರುವ ಯಾದವ ಸಂಘದವರು ಮೈಸೂರಿನ ಕಾಲೇಜು ತರಗತಿಯಲ್ಲಿ ಓದುವ ಯಾದವ ಜನಾಂಗದ ಇಬ್ಬರಿಗೆ ಸ್ಕಾಲರ್‌ಶಿಪ್ಪನ್ನು ಕೊಡಲು ನಿರ್ಧರಿಸಿರುತ್ತಾರೆ ಅಪೇಕ್ಷಿಸುವವರು ಈ ತಿಂಗಳು ೩೦ ರೊಳಗೆ ಸಂಘದ ಕಾರ್ಯದರ್ಶಿಯವರಿಗೆ ಅರ್ಜಿ ಹಾಕಿಕೊಳ್ಳಬಹುದು

ಟಿ. ಚೌಡಯ್ಯನವರಿಗೆ ಸತ್ಕಾರ

ಹಿರಿಯ ಶಾಸನ ಸಭೆಗೆ ನಾಮಕರಣ ಮಾಡಲ್ಪಟ್ಟಿರುವ ಸಂ|| ವಿ|| ಟಿ ಚೌಡಯ್ಯನವರನ್ನು ಸತ್ಕರಿಸಲು ನಾಳೆ ಸಂಜೆ ೬ ಘಂಟೆಗೆ ಅಯ್ಯನಾರ್ ಕಲಾ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಸತ್ಕಾರ ಕೂಟವೊಂದನ್ನು ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಏರ್ಪಡಿಸಿದ್ದಾರೆ ಸಂಗೀತ ಶಾಸ್ತ್ರ ವಿಶಾರದ ಕೆ ವಾಸುದೇವಾಚಾರ್ಯರು ಅಧ್ಯಕ್ಷತೆ ವಹಿಸುವರು

CITY MUNICIPAL OFFICE

MYSORE Dated 19 6 52

NOTIFICATION

Notice is hereby given to the inhabitants of the Municipality of Mysore that the Mysore City Municipal Council desire to amend the bye-laws sanctioned in G O No 1 3618 C M 27-51 2 dated 16 7 51 for the licensing of hawkers in the City of Mysore framed under Section 51 (1) (a) (ii) and (vi) and (vii) read with Section 82 and 167 of the Mysore City Municipalities Act 1933, so as to empower the Council to exempt from time to time any person or persons or class of persons from the operation of the above bye laws by adding the following words at the end of Rule 2

The Municipal Council may however exempt from time to time any person or persons or class of persons from the operation of these sets of bye laws

Any inhabitant of the Municipality objecting to the proposed tax may within one month from the date of this notice send his objection in writing to the Municipal Council

Sd F M Abdul Rahim,
Municipal Commissioner

JUST PUBLISHED

Kannada Shorthand Primer

(Revised Third Edition)

BY

K SEETA RAMA RAO,

Principal

Bright College of Commerce, Mysore

Price R 2 Postage Extra

SRI GAYATHRI

TALKIES

From 22 6 52 Daily 2 shows

DECISION BEFORE DAWN

Starring Richard Basehart

MORNING SHOWS

CAPTAIN BLOOD

Edited, Printed and Published by A R Nagarajan at Sadhvi Press, D Subbiah Road, Mysore

WANTED

1 A parttime teacher in English History for S S L C Class from 9 a m to 11 30 a m (Retired persons preferred)

2 A Store keeper Clerk with knowledge of correspondence Scale of pay 40-3-45 SECURITY Rs 250, essential

3 ಸ್ಟೆನೋ ... ಬೇಕಾಗಿದೆ ... ಸಂಬಳ ೨೦-೧-೩೦

CITY TUTORIAL COLLEGE Near V V Market Mysore

ಅಂಚೆ ನಂ. ೨೨ WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೩] ಭಾನುವಾರ ೨೨-೬-೫೨ [ಸಂಚಿಕೆ ೪೮

ಖೈದಿಗಳಿಂದ ಬ್ರೆಜಿಲ್ ದೇಶದ ಆಕ್ರಮಣ !

ಜಿಲ್ಲಾಧಿಕಾರಿಗಳ ದರ್ಜೆ ನೌಕರರ ಸಂಖ್ಯೆ ಖೋತಾ ?

ಬೆಂಗಳೂರು ೨೨

ಜಿಲ್ಲಾಧಿಕಾರಿಗಳ ದರ್ಜೆ ನೌಕರರ ಸಂಖ್ಯೆಯು, ಖಾಲಿ ಇರುವ ಜಾಗಗಳಿಗಿಂತಲೂ ಹೆಚ್ಚಾಗಿರುವುದೆಂದೂ, ಸರ್ಕಾರದ ವೆಚ್ಚವನ್ನು ಖೋತಾ ಮಾಡುವುದಕ್ಕಾಗಿ ಈ ಸಂಖ್ಯೆಯನ್ನು ಕಡಿಮೆ ಮಾಡುವ ಆಲೋಚನೆ ನಡೆವುದೆಂದೂ ಮುಖ್ಯ ಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಶಾಸನ ಸಭೆಯಲ್ಲಿ ನೆನ್ನೆ ತಿಳಿಸಿದರು.

ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮೀಷನರುಗಳು, ಅಮಲ್ದಾರರುಗಳ ದರ್ಜೆಯಲ್ಲಿರುವ ಒಟ್ಟು ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆಮಾಡುವಾಗ ದಾಮಾಷಾದಲ್ಲಿ ಒದಗಿಸಬೇಕೆಂದು ಶ್ರೀ ಮಾದಯ್ಯನವರು ಪ್ರಶ್ನಿಸಲಾಗಿ, ಕೆಲವು ಜಾಗಗಳು ಜಸ್ಟ್‌ಯನ್ನು ಸಿವಿಲ್ ಲಿಸ್ಟಿನಿಂದ ತೆಗೆದುಹಾಕಿರುವುದರಿಂದ ಅದನ್ನೊದಗಿಸಲು ಸಾಧ್ಯವಿಲ್ಲವೆಂದು ಮುಖ್ಯ ಮಂತ್ರಿಗಳು ಹೇಳಿದರು. ಹಿಂದಿನ ಸಂಗಡದವರ ಹೆಚ್ಚು ಮಾಡಲಾಗಿದೆಯೇ ಎಂದು ಕೇಳಲಾಗಿ, ಅದು ರಾಷ್ಟ್ರಾಧ್ಯಕ್ಷರು ನೇಮಿಸುವ ಕಮಿಷನ್ನಿನ ಜವಾಬ್ದಾರಿಯೆಂದೂ, ಆ ಕಮಿಷನ್ನು ಇಲ್ಲಿಗೆ ಬಂದಾಗ ಸರ್ಕಾರದವರು ಸಹಾಯವನ್ನು ಸಿದ್ಧಗೊಳಿಸುವರೆಂದೂ ಅವರು ಹೇಳಿದರು.

ಹೊಸ ರಾಜ್ಯ ಸ್ಥಾಪನೆಗೆ ಒತ್ತಾಯ

ರಷ್ಯದ ಉತ್ತರ ಭಾಗದ ರೇವು ನಗರವಾದ ಮರ್ಮಾನ್ಸ್ಕ್‌ನಲ್ಲಿರುವ ರೇಡಿಯೋ ಕೇಂದ್ರವು ಸ್ವೀಡನ್, ನಾರ್ವೆ ಮತ್ತು ಫಿನ್ಲೆಂಡ್ - ಈ ಮೂರು ರಾಷ್ಟ್ರಗಳ ಭಾಗಗಳನ್ನು ಐಕ್ಯಗೊಳಿಸಿ ಹೊಸ ಲಾಪ್ಲ್ಯಾಂಡ್ ದೇಶವನ್ನು ಸ್ಥಾಪಿಸಬೇಕೆಂದು ತಿಳಿಸಿರುತ್ತದೆ.

ಸರಳಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಹೊಸ ಶಾಖೆಯ ಆರಂಭ

ರಾಜಧಾನಿಯ ಸರಳಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಐದನೇ ಶಾಖೆಯ ಪ್ರಾರಂಭೋತ್ಸವವು ನೆನ್ನೆ ಚಾಮುಂಡೀಪುರಂ ಬಸ್ಸು ಸ್ಟಾಂಡು ಎದುರಿಗಿರುವ ೧೧೦೩ ನೇ ನಂಬರು ಮನೆಯಲ್ಲಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಕಾರ್ಯದರ್ಶಿ ಶ್ರೀ ಎಂ. ಆರ್. ನರಸಿಂಗರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀಮತಿ ಕಾಂತಾರವರಿಂದ ಪ್ರಾರ್ಥನೆ, ಶ್ರೀ ಸರಸ್ವತಿ ಭಾರತೀಯವರ ವೀಣೆ, ಶ್ರೀ ಎಂ. ರಾಮಸ್ವಾಮಿಯವರಿಂದ ಸ್ವಾಗತ ಭಾಷಣಗಳಾದನಂತರ ಅಧ್ಯಕ್ಷರು ಮಾತನಾಡಿ ಮಂದಿರವು ಪಡೆದಿರುವ ಜನ ಬೆಂಬಲ ಮತ್ತು ಅದರ ಏಳಿಗೆಗಾಗಿ ವ್ಯವಸ್ಥಾಪಕರಾದ ಮೈಸೂರು ಸಹೋದರರನ್ನು ವಂದಿಸಿದರು. ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

ಹೆಚ್. ಚಂಜುಂಡಯ್ಯನವರ ನಿಧನ

ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಮಾಜಿ ಅಧ್ಯಕ್ಷರೂ, ನಿವೃತ್ತ ನ್ಯಾಯಾಧೀಶರೂ ಆದ ಶ್ರೀ ಹೆಚ್. ನಂಜುಂಡಯ್ಯನವರು ನೆನ್ನೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮದ್ರಾಸಿನಲ್ಲಿ ಸಭೆ ಮತ್ತು ಮೆರವಣಿಗೆಗೆ ನಿರ್ಬಂಧ

ಮದ್ರಾಸಿನ ಶಾಸನ ಸಭೆಯ ಸುತ್ತಮುತ್ತಲೂ ಈ ತಿಂಗಳು ೨೭ ರಿಂದ ಒಂದು ತಿಂಗಳವರೆಗೆ ಸಭೆ, ಮೆರವಣಿಗೆ ಮುಂತಾದುವನ್ನು ಯಾರೂ ನಡೆಸದಂತೆ ಪ್ರತಿಬಂಧಕಾಜ್ಞೆಯನ್ನು ಹಾಕಲಾಗಿದೆ. ಆ ಕಾಲದಲ್ಲಿ ಅಲ್ಲಿನ ಶಾಸನ ಸಭಾಧಿವೇಶನವು ಸಮಾವೇಶಗೊಳ್ಳುವುದು.

ಮದ್ರಾಸಿನ ಮಾಜಿ ರೇಷನ್ ಅಧಿಕಾರಿಗಳಿಗೆ ಪರಿಹಾರ

ಮದ್ರಾಸಿನಲ್ಲಿ ಧಾನ್ಯ ಸಂಗ್ರಹಣೆ ಮತ್ತು ಪಡಿತರ ಪದ್ಧತಿಯನ್ನು ರದ್ದು ಮಾಡಿರುವುದರಿಂದ ನೌಕರಿಗಳನ್ನು ಕಳೆದುಕೊಂಡವರಿಗೆ ಪರಿಹಾರವೊದಗಿಸಲು ಮದ್ರಾಸು ಸರ್ಕಾರದವರು ಆಲೋಚಿಸಿರುತ್ತಾರೆ. ಅವರುಗಳಿಗೆ ನಿಗದಿಯಾದ ಒಂದು ಮೊತ್ತದಷ್ಟು ಹಣವನ್ನು ಕೊಡಲಾಗುವುದೆಂದು ಹೇಳಲಾಗಿದೆ.

ಕಾಶ್ಮೀರದ ರಾಜತ್ವದ ಬಗ್ಗೆ ತ್ರಿಪಕ್ಷ ಮಾತುಕತೆ

ಕಾಶ್ಮೀರದ ರಾಜತ್ವದ ಭವಿಷ್ಯವನ್ನು ಕುರಿತು ಪ್ರಧಾನಿ ನೆಹರೂ, ಕಾಶ್ಮೀರದ ಯುವರಾಜ ಕರಣ್ ಸಿಂಗ್, ಅಲ್ಲಿನ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರು ಇದೇ ೨೭ ನೇ ತಾ|| ದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಸುವರು. ಮಹಾರಾಜ ಹರಿಸಿಂಗ್‌ರವರೂ ಸಹ ಇದರಲ್ಲಿ ಭಾಗವಹಿಸುವರು.

ಸಿಂಹಳದ ಭಾರತೀಯರ ಭವಿಷ್ಯದ ಬಗ್ಗೆ ಸಮ್ಮೇಳನ

ಸಿಂಹಳದ ಭಾರತೀಯರ ಭವಿಷ್ಯವನ್ನು ಕುರಿತು ಸಮಾಲೋಚಿಸಲು ಒಂದು ಸಮ್ಮೇಳನವನ್ನು ತಾವು ಕರೆಯುವುದಾಗಿ ಅಲ್ಲಿನ ಪ್ರಧಾನ ಮಂತ್ರಿ ಸೇನಾನಾಯಕರವರು ತಿಳಿಸಿರುತ್ತಾರೆ.

ಸಿಮೆಂಟಿನ ಬೆಲೆ ಇಳಿಯಿತು

ಇಂಡಿಯಾ ಸಿಮೆಂಟ್ ಲಿಮಿಟೆಡ್‌ನವರು ತಯಾರಿಸಿರುವುದರ ಹೊರತು ಇತರ ಎಲ್ಲ ಕಂಪೆನಿಗಳ ಸಿಮೆಂಟಿನ ಮಾರಾಟವನ್ನು ಮೈಸೂರು ಸಂಸ್ಥಾನದಲ್ಲಿ ಟನ್ ಒಂದಕ್ಕೆ ೭೭ ರೂ ೧೦ ಆ ರೂ ನಿಂದ ೭೧ ರೂ ಗೆ ಇಳಿಸಲಾಗಿದೆ.

ಬ್ರೆಜಿಲ್ ದೇಶದ ಮೇಲೆ ಖೈದಿಗಳ ದಂಡಯಾತ್ರೆ

ಬ್ರೆಜಿಲ್ ತೀರದ ಬಳಿ ಇರುವ ಅನ್‌ಚೀಟಾ ಎಂಬ ದ್ವೀಪದಲ್ಲಿ ಬಂಧನದಲ್ಲಿದ್ದ ಸುಮಾರು ೩೫೦ ಮಂದಿ ಖೈದಿಗಳು ನೆನ್ನೆ ದಂಗೆಯೆದ್ದು ಜೈಲು ಬಾಗಿಲನ್ನು ಮುರಿದು ಹೊರಕ್ಕೆ ಬಂದು, ಜೈಲು ಕಾವಲುಗಾರರನೇಕರನ್ನು ಕೊಲೆಮಾಡಿ, ಬ್ರೆಜಿಲ್ಲಿನ ಮೇಲೆ ಮುತ್ತಿಗೆ ನಡೆಸಲು ಹೊರಟು ಉಬಾಟುಬಾ ಎಂಬ ನಗರವನ್ನು ಆಕ್ರಮಿಸಲು ಪ್ರಯತ್ನಪಟ್ಟರೆಂದು ವರದಿಯಾಗಿದೆ. ದಂಗೆಯನ್ನಡಗಿಸಲು ಉಬಾಟುಬಾ ನಗರದ ಕಡೆಗೆ ಸರ್ಕಾರಿ ಸೈನ್ಯಗಳನ್ನು ಕಳುಹಿಸಲಾಗಿದೆ. ವಿಮಾನ ಪಡೆಗಳು ಸರಿಶೀಲನಾ ಹಾರಾಟ ನಡೆಸುತ್ತಿವೆ. ದಂಗೆಯ ಪರಿಸ್ಥಿತಿಯು ತೀವ್ರ ವಿಷಮವಾಗಿರುವುದೆಂದೂ ಹೇಳಲಾಗಿದೆ.

ಡಾ|| ಪಟ್ಟಾಭಿಯವರು ಮಧ್ಯ ಪ್ರದೇಶದ ಗೌರ್ನರ್

ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಮಧ್ಯ ಪ್ರದೇಶದ ಗೌರ್ನರ್ ಆಗಲು ಒಪ್ಪಿ ನೆಹರೂರವರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ. ಅವರು ಇದೇ ೩೦ ನೇ ತಾ|| ಅಧಿಕಾರವನ್ನು ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಹೆಜ್ಜೆ ನಮಸ್ಕಾರ ಹಾಕಿ ಪೂರಿ ಜಗನ್ನಾಥ ಯಾತ್ರೆ

ಆಟಕ್ಕಿನ ಬಳಿಗರ್ ;ಮಧುಪುರವೆಂಬ ಹಳ್ಳಿಯ ೬೦ ವರ್ಷದ ಮುದುಕನೊಬ್ಬನು ಪೂರಿ ಜಗನ್ನಾಥ ಕ್ಷೇತ್ರಕ್ಕೆ ತನ್ನ ಊರಿನಿಂದ ಹೆಜ್ಜೆ ನಮಸ್ಕಾರ ಹಾಕಿಕೊಂಡು ಯಾತ್ರೆ ಹೋಗಬೇಕೆಂದು ನಿರ್ಧರಿಸಿ ಎರಡು ತಿಂಗಳ ಹಿಂದೆ ತನ್ನ ಗ್ರಾಮವನ್ನು ಬಿಟ್ಟು ಇದುವರೆಗೆ ೫೦ ಮೈಲಿ ದೂರ ಹೋಗಿರುವನೆಂದೂ, ಅವನು ಇನ್ನೂ ೫೦ ಮೈಲಿ ಪ್ರಯಾಣ ಮಾಡಬೇಕಾಗಿದೆಯೆಂದೂ ವರದಿಯಾಗಿದೆ.

ನಾಳೆಯಿಂದ ಜೈಪ್ರಕಾಶರ ಉಪವಾಸ

ಸಮಾಜವಾದಿ ಪಕ್ಷದ ನಾಯಕರಾದ ಜೈಪ್ರಕಾಶ್ ನಾರಾಯಣರವರು ನಾಳೆಯಿಂದ ೨೧ ದಿನಗಳ ಉಪವಾಸವನ್ನು ಕೈಗೊಳ್ಳುವರು.

ಮೈಸೂರು ರಾಜಪ್ರಮುಖರಿಗೆ ಪ್ರತ್ಯೇಕ ಧ್ವಜ

ಬೆಂಗಳೂರು ೨೨

ಮೈಸೂರಿನ ರಾಜ ಪ್ರಮುಖರು ಪ್ರತ್ಯೇಕ ಧ್ವಜವನ್ನು ಹೊಂದಿರಬಹುದೆಂದೂ, ಅದರ ಸಂಸ್ಥಾನಕ್ಕೆ ಪ್ರತ್ಯೇಕ ಧ್ವಜವನ್ನು ಇಟ್ಟುಕೊಳ್ಳಕೂಡದೆಂದೂ ಪಂಡಿತ ನೆಹರೂರವರು ಸಂಸ್ಥಾನದ ಸರ್ಕಾರಕ್ಕೆ ಸಲಹೆ ಮಾಡಿರುವರೆಂದು ಪರಿಣಾಮವಾಗಿದೆ. ಸಂಸ್ಥಾನದಲ್ಲಿ ಇನ್ನು ಮುಂದೆ ಭಾರತದ ಧ್ವಜವನ್ನು ಹಾರಿಸಬೇಕೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸೂಚನೆಯಿತ್ತಿರುತ್ತಾರೆ.

ಮೈಸೂರಿನಲ್ಲಿ ಒಂದೇ ರಾಷ್ಟ್ರಗೀತೆ

ಸಂಸ್ಥಾನದಲ್ಲಿ ರಾಷ್ಟ್ರಗೀತೆಯನ್ನು ಹಾಡಿದ ನಂತರ ಮೈಸೂರಿನ ಗೀತೆಯನ್ನು ಹೇಳಲಾಗುತ್ತಿರುವುದೆಂದೂ, ಇದರಿಂದ ಸಿನಿಮಾದಲ್ಲಿ ವೈವಿಧ್ಯತೆ ಉಂಟಾಗುವುದೆಂದೂ ಶಾಸನ ಸಭೆಯಲ್ಲಿ ಆಕ್ಷೇಪಿಸಲಾಗಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು, ಭಾರತದ ರಾಷ್ಟ್ರಗೀತೆಯೇ ಎಲ್ಲಾ ಸರ್ವಶ್ರೇಷ್ಠವಾದದ್ದೆಂದೂ ಮೈಸೂರಿನಲ್ಲಿ ಒಂದೇ ಧ್ವಜ ಮತ್ತು ಒಂದೇ ಗೀತೆ ಇರುವಂತೆ ತಾವು ಏರ್ಪಡಿಸುವುದಾಗಿಯೂ ತಿಳಿಸಿರುತ್ತಾರೆ.

ಹೆಚ್ಚುವರಮಾನ ಬರುವವರ ಮೇಲೆ ಆಹಾರದ ತೆರಿಗೆ ?

ದೇಶದಲ್ಲಿ ಆಹಾರದ ಅಭಾವವನ್ನು ಸಮತೂಗಿಸುವ ಸಲುವಾಗಿ ಹೆಚ್ಚು ವರಮಾನ ಬರುವವರ ಮೇಲೆ ಆಹಾರದ ತೆರಿಗೆಯನ್ನು ವಿಧಿಸಲು ಕೇಂದ್ರ ಮಂತ್ರಿಮಂಡಲವು ಪರ್ಯಾಲೋಚಿಸುತ್ತಿರುವುದಾಗಿಯೂ, ಇತ್ತೀಚೆಗೆ ಧಾನ್ಯದ ಬೆಲೆಯನ್ನು ಹೆಚ್ಚಿಸಿದ ಮೇಲೆ ರೇಷನ್ ಡಿಪೋಗಳಲ್ಲಿ ಧಾನ್ಯವನ್ನು ಕೊಳ್ಳುವ ಪ್ರಮಾಣವು ಕಡಿಮೆಯಾದ ಕಾರಣವನ್ನು ಕಳೆದ ನಡೆಸಿದ ಪರಿಣಾಮವಾಗಿಯೇ ಮೇಲ್ಕಂಡ ಕ್ರಮವನ್ನು ಕೈಗೊಳ್ಳಲಾಗುವುದೆಂದೂ ತಿಳಿದುಬಂದಿದೆ.

ಪರೀಕ್ಷೆಯಲ್ಲಿ ಕಾಪಿ ಮಾಡಲು ವಿದ್ಯಾರ್ಥಿನಿಯರ ಯುಕ್ತಿ

ಇಂಟರ್ ಮತ್ತು ಮೆಟ್ರಿಕ್ಯುಲೇಷನ್ ಪರೀಕ್ಷೆಗಳಲ್ಲಿ ಕಾಪಿ ಮಾಡಲು ಕಾನ್ಪುರದ ಹಲವು ವಿದ್ಯಾರ್ಥಿನಿಯರು ನಡೆಸಿದ ಯುಕ್ತಿಯು ಪತ್ತೆಯಾಗಿದೆ. ತಮಗೆ ಬೇಕಾದ ಉತ್ತರಗಳನ್ನು ಅವರು ಸೀರೆಗಳ ಅಂಚಿನಲ್ಲಿ ಬರೆದುಕೊಂಡು ತಮಯ ಕಾಪ್ಯು ಉತ್ತರಗಳನ್ನು ಬರೆಯುತ್ತಿದ್ದರೆಂದೂ, ಇತರ ಹಲವರು ತಾವು ಧರಿಸಿರುವ ಲಂಗಗಳ ಮೇಲೆ ಉತ್ತರವನ್ನು ಬರೆದು ಅವುಗಳ ಮೇಲೆ ತೆಳುವಾದ ಸೀರೆಯುಟ್ಟು ಆ ಮೂಲಕ ಕಾಪಿ ಮಾಡುತ್ತಿದ್ದರೆಂದೂ ಹೇಳಲಾಗಿದೆ.

ಬಹಿರಂಗ ಸಭೆ

ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ಪ್ರಜಾ ಮಂಡಲದ ಆಶ್ರಯದಲ್ಲಿ "ದವಸ ಧಾನ್ಯ ಮತ್ತು ಬೆಲೆಗಳ ರಕ್ಷಣೆ" ಬಗ್ಗೆ ಈ ಸಂಜೆ ೬ ಘಂಟೆಗೆ ಭಾಷಣಗಳು ನಡೆಯುವುವು. ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ.

ವಾರ ಭವಿಷ್ಯ

೨೨-೬-೫೨ ರಿಂದ ೨೮-೬-೫೨ ರ ವರೆಗೆ

ಮೇಷ — ಮಾನಸಿಕ ಸ್ಥಿತಿ ಚೆನ್ನಾಗಿಲ್ಲ ಆರೋಗ್ಯ ಅತೃಪ್ತಿಕರ, ಉದ್ಯೋಗ, ನೌಕರಿಗಳಲ್ಲಿ ತೊಂದರೆ ತಾ|| ೨೪, ೨೫ ಪತ್ನಿಗೆ ಅಪಘಾತ, ಧನ ಚಿಂತೆ

ವೃಷಭ — ಧೈರ್ಯಗುಂದದಿರಿ ಆರೋಗ್ಯ ಮಾನಸಿಕ ಸ್ಥಿತಿ ತೃಪ್ತಿಕರ ಮಹತ್ವಾಕಾಂಕ್ಷೆಯ ಸಾಫಲ್ಯ ವ್ಯಾಪಾರಾದಿಗಳಲ್ಲಿ ಲಾಭ ತಾ|| ೨೪, ೨೫ ಪ್ರವಾಸ ಯೋಗ, ಶುಭ ವಾರ್ತೆ

ಮಿಥುನ — ಜನತಾ ಸೇವೆ ಆರೋಗ್ಯ, ಆರ್ಥಿಕ ಸ್ಥಿತಿಗಳು ಸರಿಯಾಗಿರುವುವು ವ್ಯಾಪಾರಾದಿಗಳಲ್ಲಿ ಲಾಭ ತಾ|| ೨೭ ೨೮ ಭೋಜನ, ಆಕಸ್ಮಿಕ ಲಾಭ,

ಕರ್ಕ — ಆರೋಗ್ಯ ಆರ್ಥಿಕ ಸ್ಥಿತಿಗಳು ಸರಿಯಿಲ್ಲ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಶತ್ರುವಿನ ಕಾಟ ತಾ|| ೨೪,೨೫ ಅನಿಷ್ಟ ವಾರ್ತೆ, ಖರ್ಚು

ಸಿಂಹ — ಮಾನ ಸನ್ಮಾನ ಆರೋಗ್ಯ ಆರ್ಥಿಕ ಸ್ಥಿತಿ ತೃಪ್ತಿಕರ ವ್ಯಾಪಾರಾದಿಗಳಲ್ಲಿ ಲಾಭ ಪ್ರವಾಸ ಸುಖಕರ ತಾ|| ೨೪, ೨೫ ಖರ್ಚು, ಮನಸ್ಸಿಗೆ ಶಾಂತಿ

ಕನ್ಯಾ — ಆರೋಗ್ಯಕ್ಕೆ ಕ್ಲೇಶ ವ್ಯಾಪಾರಾದಿಗಳಲ್ಲಿ ಮೋಸ ಸಿದ್ಧಿಯಲ್ಲಿ ಅಲಸ್ಯ ಪ್ರವಾಸದಲ್ಲಿ ವಿಘ್ನ ತಾ|| ೨೪, ೨೫ ಮಿತ್ರರ ಭೇಟಿ ತೊಂದರೆ ಸ್ವಲ್ಪ ಮಟ್ಟಿಗೆ ನಿವಾರಣೆ

ತುಲಾ — ಆರೋಗ್ಯ, ವ್ಯಾಪಾರ, ನೌಕರಿ, ಆರ್ಥಿಕ ಸ್ಥಿತಿಗಳು ಚೆನ್ನಾಗಿಲ್ಲ ಪ್ರವಾಸ ಬೇಡ ತಾ|| ೨೪, ೨೫ ತಾಪತ್ರಯ ನಿವಾರಣೆ, ಶಾಂತಿ

ವೃಶ್ಚಿಕ — ಆರ್ಥಿಕ ತೊಂದರೆ ನಿದ್ರಾನಾಶ ವ್ಯಾಪಾರಾದಿಗಳಲ್ಲಿ ತೊಂದರೆ ಕೈಕೆಳಗಿನವರಿಂದ ಮೋಸ ಪ್ರವಾಸ ಕಷ್ಟಕರ ತಾ|| ೨೨, ೨೩ ಅವಮಾನ ಮಾಡುವ ಜನರ ಸಹವಾಸ ಪತ್ನಿಗೆ ಅಪಘಾತ

ಧನು — ಸಮಾಜ ಸೇವೆ ಆರೋಗ್ಯ, ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ಜಯ. ತಾ|| ೨೪, ೨೫ ಖರ್ಚು, ನಿದ್ರಾನಾಶ

ಮಕರ — ಆರೋಗ್ಯ ಆರ್ಥಿಕ ಸ್ಥಿತಿ ಉತ್ತಮ. ವ್ಯಾಪಾರಾದಿಗಳಲ್ಲಿ ಕಲಹ ಮನಸ್ಸಿನ ಸ್ಥಿಮಿತ ಬೇಕು ತಾ|| ೨೨, ೨೩ ಮೋಸ, ಖರ್ಚು

ಕುಂಭ — ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಪ್ರಗತಿ ಪ್ರವಾಸ ಸುಖಕರ ತಾ|| ೨೪, ೨೫ ಅತಿಥಿಗಳಿಗಾಗಿ ಖರ್ಚು, ಸಲಾಟೆ

ಮೀನ — ಆರೋಗ್ಯ ಸಾಧಾರಣ ಆದಾಯಕ್ಕಿಂತ ಛ ರಷ್ಟು ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ಹಿತ ಶತ್ರುಗಳ ಕಾಟ ಪ್ರವಾಸದಲ್ಲಿ ಹಾನಿ ತಾ|| ೨೭, ೨೮ ಹಾನಿ, ಅಪಘಾತ

Edited, Printed and Published by A R Nagarajan at Sadhvi Press, D Subbaiah Road, Mysore

ಹೆಚ್ಚು ಬೆಳೆಯಾದರೆ ಬರುವ ವರ್ಷ ಆಹಾರದ ಆಮದಿಲ್ಲ

ಈ ವರ್ಷ ಅಧಿಕ ಬೆಳೆಯಾದರೆ ಬರುವ ವರ್ಷ ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳುವ ಆವಶ್ಯಕತೆ ಇರುವುದಿಲ್ಲವೆಂದು, ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ತಿಳಿಸಿರುತ್ತಾರೆ.

ವಿದ್ಯಾ ಶುಲ್ಕ ಹೆಚ್ಚಿಸುವುದಿಲ್ಲ

ಸರ್ಕಾರಿ ಶಾಲೆಗಳಲ್ಲಿ ವಿದ್ಯಾ ಶುಲ್ಕವನ್ನು ಹೆಚ್ಚಿಸುವ ಬಗ್ಗೆ ಸರ್ಕಾರದವರು ಯಾವ ತೀರ್ಮಾನವನ್ನೂ ಮಾಡಿಲ್ಲವೆಂದೂ, ಆದರೆ ಈ ಬಗ್ಗೆ ಸೆಕೆಂಡರಿ ವಿದ್ಯಾಭ್ಯಾಸ ಸಮಿತಿಯ ಸಲಹೆ ಸರ್ಕಾರಕ್ಕೆ ಬಂದಿರುವುದೆಂದೂ ವಿದ್ಯಾ ಸಚಿವರು ಸೂಚಿಸಿರುವರು

ಕೊಯಮತ್ತೂರಿಗೆ ಶ್ರೀಮನ್ಮಹಾರಾಜರ ಭೇಟಿ

ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರವಾಸವನ್ನು ಮುಗಿಸಿಕೊಂಡು ೨೭ ನೇ ತಾ|| ಬೆಂಗಳೂರಿಗೆ ಶ್ರೀಮನ್ಮಹಾರಾಜರು ಹಿಂತಿರುಗುವರು. ೨೮ ನೇ ತಾ|| ಅವರು ಕೊಯಮತ್ತೂರಿಗೆ ತೆರಳಿ, ಬರುವ ತಿಂಗಳು ೨ ನೇ ತಾ|| ವಾಪಸ ಬರುವರು

ಕಾಫಿಪುಡಿ ಬೆರಿಕೆ ನಿಷೇಧದ ಕಾನೂನಿನ ರದ್ದು

ಚಿಕೋರಿಯು ದೇಹಾರೋಗ್ಯವನ್ನು ಕೆಡಿಸದಂತಹ ವಸ್ತುವಾಗಿರುವುದರಿಂದ ಅದನ್ನು ಕಾಫಿ ಪುಡಿಯೊಡನೆ ಮಿಶ್ರ ಮಾಡಿ ಮಾರುವುದರಿಂದ ಕೆಡುಕು ಇಲ್ಲವೆಂದು ಕೇಂದ್ರ ಸರ್ಕಾರದ ಸಲಹೆಯನ್ನು ಅಂಗೀಕರಿಸಿ ಮುಂಬಯಿ ಸರ್ಕಾರದವರು ಕಾಫಿ ಪುಡಿಗೆ ಚಿಕೋರಿ ಬೆರಿಕೆಯ ನಿಷೇಧದ ಶಾಸನವನ್ನು ತಾತ್ಕಾಲಿಕವಾಗಿ ರದ್ದು ಮಾಡಿರುತ್ತಾರೆ.

ಟೋಕಿಯೋ ನೆಲಮಾಳಿಗೆಯಲ್ಲಿ ವಜ್ರಗಳ ಕೊಪ್ಪರಿಗೆ

ಟೋಕಿಯೋವಿನ ಬ್ಯಾಂಕೊಂದರ ನೆಲಮಾಳಿಗೆಯಲ್ಲಿ ೧೧೦ ಟನ್ ಚಿನ್ನ, ೩ ಸಾವಿರ ಟನ್ ಬೆಳ್ಳಿ ಮತ್ತು ೧೫೦ ಸಾವಿರ ಕ್ಯಾರಟ್ಟಿನ ವಜ್ರ ಇವುಗಳು ಯಾರ ವಾರಸುದಾರರೂ ಇಲ್ಲದೆ ಬಿದ್ದಿರುವುವು ೧೯೪೫ರಲ್ಲಿ ಅಮೆರಿಕಾ ಸೈನಿಕರು ಈ ಐಶ್ವರ್ಯವನ್ನು ವಶಪಡಿಸಿಕೊಂಡಿದ್ದರು ಅದನ್ನು ಈಗ ಜಪಾನ್ ಸರ್ಕಾರಕ್ಕೆ ಒಪ್ಪಿಸಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೩೦ [illegible] ೧-೩೦ [illegible] ೧-೫೦ [illegible] ೨ [illegible] ೫-೩೦ [illegible] ೮ [illegible] ೬ ೧೦ [illegible] ೬-೩೦ [illegible] ೬-೩೦ [illegible] ೮-೩೧ [illegible] ೯-೩೦ [illegible] ೯-೧೫ [illegible] ಬಗ್ಗೆ [illegible]

[illegible]

[illegible]

COMMERCIAL INSTITUTE
attached to
Sarada Vilas High School
MYSORE.

Applications for admission to DIP – IN – COM., DIP-IN-STEN, and individual Certificate courses in TYPEWRITING, SHORTHAND, ACCOUNTANCY, Etc, are now being received

Individual Attention and efficient coaching by experienced teachers are given. Further particulars can be had in person APPLY SHARP and RESERVE YOUR SEATS

GRAND RAMZAN ATTRACTION
AT SRI GANESH
TALKIES
From 20-6-52 For 3 Days
THE SPANISH MAIN
(In glorious Technicolor)
Featuring Paul Henreid, Moureen O' Hara and Walter Slezack

From 26—6—52
PAYMENT ON DEMAND
(A Timely Story)

I. COM. COURSE
is being introduced at
St. Philomena's College
this year
Classes Start on 2nd July 1952
Apply for admission to the Principal

ರಾಜಕಮಲ್ ಟಾಕೀಸ್, ಮೈಸೂರು
20-6-52 ರಿಂದ ಅನೇಕ 2ನೇ ವಾರ ಪ್ರತಿ ದಿನ 3 ಆಟಗಳು
* (ತಮಿಳು) ನನ್ನ ತಂಗಿ (ತಮಿಳು) *
ಭೂಮಿಕೆಯಲ್ಲಿ — ಮಾಧುರಿದೇವಿ, ಎಂ. ಜಿ ರಾಮಚಂದ್ರನ್,
ಟಿ. ಎಸ್ ಗೋವಿಂದನ್, ಮುಂತಾದವರು

MYSORE CITY MUNICIPALITY

NOTIFICATION

Sealed tenders will be received by the undersigned on 26th June 1952 till 4 P M for the works 1) Dismantling the existing Jutka Stand at Vanivilas Market and reconstructing the same at the rear of the new shops of V. V Market 2) Providing B.S.Slab flooring to green stall of Devaraja Market 3) Providing water supply to dhobi ghat at Kukkanahally Tank 4) Dismantling and levelling the old toll gate building in Yelwal Road, Devaraja Mohalla. Tenders should be accompanied with a challan for having remitted in the Municipal Treasury a sum of Rs 50/, Rs 46/-, Rs 36/- and Rs 35/- respectively as earnest money For full particulars please see the notification on the office noticeboard

Sd. V K Mahadev,
Municipal Engineer

ಶಾಲೆಗಳಲ್ಲಿ ಸ್ಥಳ ಸಿಗದೆ ತೊಂದರೆ ಪಡುತ್ತಿರುವ
S. S L C ವಿದ್ಯಾರ್ಥಿನಿಯರಿಗೆ ಸುಸಮಯ
ಎಲ್ ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿನಿಯರಿಗೂ,
ಹೈಸ್ಕೂಲು ತರಗತಿಗಳಲ್ಲಿ ಓದಬಯಸುವ ವಿದ್ಯಾರ್ಥಿನಿಯರಿಗೂ
ಪ್ರತ್ಯೇಕ ಪಾಠ
—— ತರಗತಿಗಳನ್ನು ಪ್ರಾರಂಭಿಸಲಾಗಿದೆ ——
CITY TUTORIAL COLLEGE,
Near V. V. Market Mysore.

ಟೆಲಿಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೨೩-೬-೫೨ [ಸಂಚಿಕೆ ೨೭೦

ಮೈಸೂರು ಬಡ್ಜೆಟ್ಟಿನಲ್ಲಿ ೧೧೧ ಲಕ್ಷ ರೂ. ಖೋತಾ

ಎಂ. ವಿ. ನಾರಾಯಣ ರಾಯರ ನಿಧನ

ಮೈಸೂರು ೨೩.

ರಾಜಧಾನಿಯ ಸುಪ್ರಸಿದ್ಧ ಸುಗಂಧ ದ್ರವ್ಯ ವ್ಯಾಪಾರಿಗಳಾದ ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿಯ ಮಾಲೀಕರಾದ ಶ್ರೀ ಎಂ. ವಿ. ನಾರಾಯಣರಾಯರು ನೆನ್ನೆ ರಾತ್ರಿ ಪಾರ್ಶ್ವವಾಯು ತಗುಲಿ, ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟು ಈ ದಿನ ಬೆಳಿಗ್ಗೆ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ದಿವಂಗತರು ಬಹಳ ದಿನಗಳಿಂದಲೂ ಮೈಸೂರು ಅರಮನೆ ಮತ್ತು ಇತರ ಸಂಸ್ಥಾನಗಳ ಮಹಾರಾಜರುಗಳಿಗೆ ಸುಗಂಧ ದ್ರವ್ಯಗಳ ಸರಬರಾಜು ಮಾಡುತ್ತಿದ್ದರು. ಇವರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರಾಗಿದ್ದರು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.

ಸಂತಾಪ ಸೂಚಕ ಸಭೆ

ರಾಜಧಾನಿಯ ಕೃಷ್ಣರಾಜೇಂದ್ರ ಗಿರಣಿಯ ಕಾರ್ಮಿಕರ ಸಂಘದ ಸಭೆಯು ನೆನ್ನೆ ಮಧ್ಯಾಹ್ನ ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿ ಗಿರಣಿಯ ಮಾಜಿ ಅಧ್ಯಕ್ಷರೂ ನಿವೃತ್ತ ಜಿಲ್ಲಾ ನ್ಯಾಯಾಧೀಶರೂ ಆದ ಹೆಚ್. ನಂಜುಂಡಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಾಡಿತು. ಆಡಳಿತ ವರ್ಗದವರು ನೆನ್ನೆ ಮಧ್ಯಾಹ್ನ ೧೨ ರಿಂದ ೧೨-೧೦ ರ ವರೆಗೆ ಮೌನವನ್ನಾಚರಿಸಲು ಕಾರ್ಮಿಕರಿಗೆ ಅವಕಾಶಕೊಟ್ಟಿದ್ದರೆಂದು ಗೊತ್ತಾಗಿದೆ.

ನಗರದಲ್ಲಿ ಮದ್ರಾಸ್ ಗೌರ್ನರರು

ಮದ್ರಾಸಿನ ಗೌರ್ನರರಾದ ಶ್ರೀ ಶ್ರೀಪ್ರಕಾಶರು ನೆನ್ನೆ ದಿನ ರಾಜಧಾನಿಗೆ ಉದಕಮಂಡಲದಿಂದ ಆಗಮಿಸಿದರು. ಅವರು ಜಗನ್ಮೋಹನಭವನದ ಚಿತ್ರಶಾಲೆಗೆ ನೆನ್ನೆ ಮಧ್ಯಾಹ್ನ ಭೇಟಿಯಿತ್ತಿದ್ದರು. ಇವರ ಗೌರವಾರ್ಥವಾಗಿ ನಗರದ ಪ್ರಮುಖ ವರ್ತಕರೂ ಪಾರ್ಲಿಮೆಂಟಿನ ಮಾಜಿ ಸದಸ್ಯರೂ ಆದ ಶ್ರೀ ಎಂ. ವೆಂಕಟಯ್ಯನವರು ನೆನ್ನೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು.

ದಪ್ಪಕ್ಕಿ ಮತ್ತು ನುಚ್ಚಿನ ಬೆಲೆಯಲ್ಲಿ ಖೋತಾ

ಕೆಂಪು ಜೋಳದಂತೆಯೇ ಬಡ ಜನರ ಆಹಾರವಾಗಿರುವ ದಪ್ಪಕ್ಕಿ ಮತ್ತು ನುಚ್ಚು ಅಕ್ಕಿಯ ಬೆಲೆಯಲ್ಲಿ ಖೋತಾ ಮಾಡಲಾಗುವುದೆಂದು ವರದಿಯಾಗಿದೆ. ಆದರೆ ಎಷ್ಟರ ಮಟ್ಟಿಗೆ ಖೋತಾ ಪ್ರಮಾಣವಿರುವುದೆಂಬುದನ್ನು ಭಾರತ ಸರ್ಕಾರದವರು ಇನ್ನೂ ನಿರ್ಧರಿಸಿಲ್ಲವೆಂದು ಹೇಳಲಾಗಿದೆ.

ಬಂದೂಕ ಉಜ್ಜುತ್ತಿದ್ದಾಗ ಗುಂಡು ಹಾರಿ ಮರಣ

ರಾಣಿ ಜಿಲ್ಲೆಯಿಂದ ಲೋಕ ಸಭೆಗೆ ಚುನಾಯಿತರಾಗಿದ್ದ ಎ. ಎಸ್. ನಂದ್ಯಾರ್‌ರವರು ಜಾವರ್ ಗ್ರಾಮದ ತಮ್ಮ ಮನೆಯಲ್ಲಿ ನೆನ್ನೆ ಬಂದೂಕವನ್ನು ಶುಭ್ರ ಮಾಡುತ್ತಾ, ಗುಂಡು ತುಂಬಿರುವುದನ್ನರಿಯದೇ ಕುದುರೆಯನ್ನು ಒತ್ತಲು ಗುಂಡು ಅವರ ಹೊಟ್ಟೆಗೆ ಹೊಡೆಯಿತೆಂದೂ ಆಸ್ಪತ್ರೆಯಲ್ಲಿ ಅವರು ಮೃತಿಪಟ್ಟರೆಂದೂ ಗೊತ್ತಾಗಿದೆ.

ಸಂಸ್ಥಾನದಲ್ಲಿ ವರದಕ್ಷಿಣೆ ರದ್ದಿಲ್ಲ

ಸಂಸ್ಥಾನದಲ್ಲಿ ವರದಕ್ಷಿಣೆ ಕೊಡುವ ಪದ್ಧತಿಯನ್ನು ತಪ್ಪಿಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿಲ್ಲವೆಂದೂ ಮತ್ತು ಈ ಬಗ್ಗೆ ಶಾಸನವು ಅನವಶ್ಯಕವೆಂದೂ ನ್ಯಾಯಾಂಗ ಮತ್ತು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಶಾಸನಸಭೆಯಲ್ಲಿ ತಿಳಿಸಿರುತ್ತಾರೆ.

ವಯಸ್ಕರ ಶಿಕ್ಷಣ ಸಮಿತಿಗೆ ವರ್ಷಂಪ್ರತಿ ಕೊಡುವ ೫ ಲಕ್ಷ ರೂ. ಸಹಾಯವನ್ನು ನಿಲ್ಲಿಸುವುದಿಲ್ಲವೆಂದು ಅವರು ಸೂಚಿಸಿರುತ್ತಾರೆ. ಇದುವರೆಗೆ ೨೨,೨೭೦೫ ಜನರು ಅಕ್ಷರಸ್ಥರಾಗಿರುವರೆಂದು ಅವರು ತಿಳಿಸಿದರು.

ಸರ್ಕಾರದ ಕಟ್ಟಡಗಳ ಮೇಲಿನ ಸಂಸ್ಥಾನದ ಧ್ವಜ ಇಳಿಸಲಾಯಿತು

೧೮೮೧ ರಿಂದಲೂ ಅವಿಚ್ಛಿನ್ನವಾಗಿ ಸರ್ಕಾರಿ ಕಟ್ಟಡಗಳ ಮೇಲೆ ಹಾರಾಡುತ್ತಿದ್ದ ಮೈಸೂರು ಗಂಡ ಭೇರುಂಡ ಧ್ವಜವನ್ನು ಮೊನ್ನೆ ಆ ಕಟ್ಟಡಗಳಿಂದ ಕೆಳಗಿಳಿಸಲಾಯಿತು. ರಾಷ್ಟ್ರ ಧ್ವಜ ಮತ್ತು ಸಂಸ್ಥಾನದ ಧ್ವಜಗಳೆರಡೂ ಹಾರಾಡುತ್ತಿದ್ದ ಬಗ್ಗೆ ಶಾಸನ ಸಭೆಯಲ್ಲಿ ಬಂದ ಪ್ರಶ್ನೆಗೆ ಉತ್ತರವಾಗಿ ಮೈಸೂರು ಧ್ವಜವನ್ನು ಇನ್ನು ಹಾರಿಸಲಾಗುವುದಿಲ್ಲವೆಂದು ಮುಖ್ಯ ಮಂತ್ರಿ ಹನುಮಂತಯ್ಯನವರು ತಿಳಿಸಿದ ಪರಿಣಾಮವಾಗಿ ಈ ಕಾರ್ಯಕ್ರಮ ಕೈಗೊಳ್ಳಲಾಗಿದೆ.

ಹೈದ್ರಾಬಾದಿನಲ್ಲಿ ಪಟ್ವಾರಿ ಗ್ರಾಮ ನೌಕರರಿಗೆ ರದ್ದು

ಹೈದರಾಬಾದು ಸಂಸ್ಥಾನದಲ್ಲಿ ಅನುವಂಶಿಕ ಗ್ರಾಮಾಧಿಕಾರಿಗಳ ಪದ್ಧತಿಯನ್ನು ರದ್ದುಗೊಳಿಸಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ.

೨೭ ಸಾವಿರ ಕೊರಿಯಾ ಯುದ್ಧ ಬಂದಿಗಳ ಬಿಡುಗಡೆ

ಉತ್ತರ ಕೊರಿಯಾದ ೨೭ ಸಾವಿರ ಯುದ್ಧ ಸೈನಿಕರನ್ನು ಬಂಧ ಮುಕ್ತರನ್ನಾಗಿ ಮಾಡಲು ವಿಶ್ವ ಸಂಸ್ಥೆಯು ನಿರ್ಧರಿಸಿರುತ್ತೆ.

ಬೊಂಬಾಯಿಯಲ್ಲೂ ಧಾನ್ಯದ ಹತೋಟಿ ರದ್ದು ?

ಬೊಂಬಾಯಿನ ಸಿವಿಲ್ ಸಪ್ಲೈ ಶಾಖೆಯ ಉಪ ಸಚಿವರಾದ ಶ್ರೀ ವಿ. ಕೆ. ಪಾವಟೆಯವರು ಮೊನ್ನೆ ದಿನ ಹುಬ್ಬಳ್ಳಿಯ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಮದರಾಸಿನಲ್ಲಿ ಧಾನ್ಯದ ಹತೋಟಿ ರದ್ದಿನ ಕ್ರಮವು ಯಶಸ್ವಿಯಾದಲ್ಲಿ ಬೊಂಬಾಯಿಯಲ್ಲೂ ಅದನ್ನು ಜಾರಿಗೆ ತರಲಾಗುವುದೆಂಬ ಅಂಶವನ್ನು ವ್ಯಕ್ತಪಡಿಸಿದರು.

ಸಾಂಡೂರು ಬಳಿ ಕಬ್ಬಿಣದ ಅದಿರು

೯೩ ಕೋಟಿ ಟನ್ನಿನಷ್ಟು ಕಬ್ಬಿಣದ ಅದಿರನ್ನು ಮದ್ರಾಸು, ಮಧ್ಯ ಪ್ರದೇಶ ಸಂಸ್ಥಾನಗಳಲ್ಲಿ ಭಾರತದ ಭೂಗರ್ಭ ಇಲಾಖೆಯವರು ಕಂಡುಹಿಡಿದಿರುತ್ತಾರೆ. ಮದ್ರಾಸು ಸಂಸ್ಥಾನದ ಸಾಂಡೂರು ಪ್ರದೇಶದಲ್ಲಿ ೯೩ ಕೋಟಿ ಟನ್ನಿನಷ್ಟು ಉತ್ತಮ ಕಬ್ಬಿಣವು ಭೂಮಿಯಿಂದ ಕೇವಲ ೧೫೦ ಅಡಿ ಕೆಳಗೆ ದೊರೆಯುವುದೆಂದು ಅಂದಾಜಾಗಿದೆ.

ಅನುವಂಶಿಕ ರಾಜತ್ವದ ರದ್ದಿಗೆ ಭಾರತದ ಒಪ್ಪಿಗೆ

ಕಾಶ್ಮೀರದಲ್ಲಿ ಅನುವಂಶಿಕ ರಾಜತ್ವವನ್ನು ರದ್ದುಗೊಳಿಸಬೇಕೆಂದು ಅಲ್ಲಿನ ರಾಜ್ಯಾಂಗ ಸಭೆಯು ಮಾಡಿರುವ ನಿರ್ಣಯವನ್ನು ಪ್ರಸ್ತಾಪಿಸಿ, ಪ್ರಧಾನಿ ನೆಹರೂರವರು ಭಾರತವು ವಂಶಪಾರಂಪರ್ಯದ ಆಳ್ವಿಕೆಯ ರದ್ದಿನ ಸಾಮಾನ್ಯ ತತ್ವವನ್ನು ಅಂಗೀಕರಿಸಿರುವುದೆಂದು ತಿಳಿಸಿರುತ್ತಾರೆ.

ಷಾಮ್ ಸಂಸ್ಥಾನದ ಮುಖ್ಯ ಮಂತ್ರಿಯ ಕೊಲೆ

ಬರ್ಮಾ ಪಾರ್ಲಿಮೆಂಟಿನ ಸದಸ್ಯರೂ ಅಲ್ಲಿನ ಷಾನ್ ಸಂಸ್ಥಾನಗಳ ಮುಖ್ಯ ಮಂತ್ರಿಯೂ ಆದ ಯು ಕಿನ್ ಮಾಂಗ್ ಮತ್ತು ಅವರ ೩ ಜನ ಸಂಸಾರದವರನ್ನು ಜವಾನನ ಸೈನಿಕನೊಬ್ಬನು ಗುಂಡಿನಿಂದ ಹೊಡೆದು ಕೊಂದಿರುತ್ತಾನೆ.

ಪ್ರಸ್ತುತ ತೆರಿಗೆಗಳನ್ನು ಹೆಚ್ಚಿಸುವುದಿಲ್ಲವೆಂದೂ ಅದಕ್ಕೆ ಅವಶ್ಯಕತೆಯು ಕಾಣುತ್ತಿಲ್ಲವೆಂದೂ, ಹಾನ ವಿರೋಧವನ್ನು ತುಂಬುವ ರೀತಿಯಲ್ಲಿ ಶ್ರೀ ಹನುಮಂತಯ್ಯನವರು ತಿಳಿಸಿದರು.

ಸಂಸ್ಥಾನದ ಬಡ್ಜೆಟ್ಟಿನಲ್ಲಿ ೧೧೧ ಲಕ್ಷ ರೂ. ಖೋತಾ

ಹೊಸ ತೆರಿಗೆ ಇಲ್ಲ, ಸಿಬ್ಬಂದಿಯಲ್ಲಿ ಖೋತಾ

ಮುಖ್ಯ ಮಂತ್ರಿಗಳ ವಿವರಣೆ

ಸ್ವಂ. ಸು. ಫೋ.] ಬೆಂಗಳೂರು ೨೩.

ಸಂಸ್ಥಾನದ ಮುಖ್ಯ ಮತ್ತು ಹಣಕಾಸಿನ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ದಿನ ಮಧ್ಯಾಹ್ನ ಶಾಸನಸಭೆಯಲ್ಲಿ ೫೨-೫೩ ನೇ ಸಾಲಿನ ಆಯವ್ಯಯದ ಅಂದಾಜನ್ನು ಮಂಡಿಸಿ ಅದರಲ್ಲಿ ೧೧೧ ಲಕ್ಷ ರೂ. ಖೋತಾ ಬೀಳುವುದೆಂದು ತಿಳಿಸಿದರು. ೨೦,೭೯,೩೪,೦೦೦ ರೂ. ಆದಾಯವೂ, ೨೧,೯೦,೫೪,೦೦೦ ರೂ. ವೆಚ್ಚವೂ ಆಗಲಿರುವುದೆಂದೂ ಹೇಳಿದರು.

ಹಿಂದಿನ ಹಣಕಾಸಿನ ಮಂತ್ರಿಗಳು ಕಳೆದ ಶಾಸನ ಸಭೆಯಲ್ಲಿ ೩ ತಿಂಗಳಿನ ಆಯವ್ಯಯವನ್ನು ಮಂಡಿಸಿ, ಪ್ರಸಕ್ತ ಸಾಲಿನಲ್ಲಿ ೮೩.೯೫ ಲಕ್ಷ ರೂ. ಖೋತಾ ಬರುವ ನಿರೀಕ್ಷೆಯಿದೆಯೆಂದು ತಿಳಿಸಿದ್ದರೆಂದೂ, ಈಚೆಗೆ ಆಹಾರದ ಬಗ್ಗೆ ಕೇಂದ್ರದಿಂದ ದ್ರವ್ಯ ಸಹಾಯವು ಒದಗಿ ಖೋತಾ ಪ್ರಮಾಣವು ಹೆಚ್ಚಿತೆಂದೂ, ಅದರೂ ಸಹ ಖೋತಾವು ಹೆಚ್ಚಾಗದಂತೆ ನೋಡಿಕೊಳ್ಳುವ ಕ್ರಮವನ್ನು ಕೈಗೊಳ್ಳಲಾಗಿದೆಯೆಂದೂ ತಿಳಿಸಿದರು. ದ್ರವ್ಯ ಸಹಾಯ ಬರದಿದ್ದುದರಿಂದ ಆಹಾರದ ಬೆಲೆಯನ್ನು ಹೆಚ್ಚಿಸಬೇಕಾಯಿತೆಂದು ಅವರು ತಿಳಿಸಿ, ಆಯವ್ಯಯವನ್ನು ಆಗತ್ಯವಾದಷ್ಟು ಸಮತೂಗಿಸಲು ಯತ್ನವಿಲ್ಲದೆ ಇಲಾಖೆಗಳಲ್ಲಿ ಸಿಬ್ಬಂದಿಯ ಖೋತಾವನ್ನು ಮಾಡಲು ಏರ್ಪಡಿಸಲಾಗಿದೆಯೆಂದೂ ತಿಳಿಸಿದರು. ಅಬ್ಕಾರಿ ಇಲಾಖೆಯಲ್ಲಿ ಈ ವರ್ಷ ೩೨೬ ಭಾಗದಷ್ಟು ಅಂದರೆ ಸುಮಾರು ೨೭ ಲಕ್ಷ ರೂ. ಕಡಿಮೆ ವರಮಾನ ಬರುವುದೆಂದು ಅವರು ತಿಳಿಸಿದರು.

ಖರ್ಚನ್ನು ಕಡಿಮೆ ಮಾಡಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮವನ್ನು ಅವರು ವಿವರಿಸಿ, ಅರ್ಥಿಕ ಸಲಹೆಗಾರರ, ಆಹಾರದ ಇಲಾಖಾ ಕಾರ್ಯದರ್ಶಿ ವಾಣಿಜ್ಯ ಇಲಾಖೆ ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆಗಳನ್ನು ರದ್ದು ಮಾಡಲಾಗಿದೆಯೆಂದೂ, ಲಂಡನ್ನಿನ ಟ್ರೇಡ್ ಕಮಿಷನರನ್ನು ವಾಪಸು ಕರೆಸಲಾಗುವುದೆಂದೂ ತಿಳಿಸಿದರು. ವಿಶ್ವವಿದ್ಯಾನಿಲಯ ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಯನ್ನು ಬರುವ ಆಗಸ್ಟ್ ೧ ರಿಂದ ತೆಗೆಯಲಾಗುವುದೆಂದೂ, ಸಂಸ್ಥಾನದ ಹೈಕೋರ್ಟಿಗೆ ಅಧಿಕ ನ್ಯಾಯಾಧೀಶರನ್ನು ತೆಗೆದುಕೊಳ್ಳುವುದಿಲ್ಲವೆಂದೂ ತಿಳಿಸಿದರು. ಅಲ್ಲದೆ ಇತರ ವೆಚ್ಚಗಳಲ್ಲಿ ಹೀಗೆ ಕಡಿಮೆ ಮಾಡಲಾಗಿದೆಯೆಂದು ಹೇಳಿದರು —

ಸೆಕ್ರೆಟೇರಿಯಟ್ ೦.೦೪ ಲಕ್ಷ, ಪಾರ್ಲಿಮೆಂಟರಿ ಇಲಾಖೆ ೦.೫೨ ಲಕ್ಷ, ಜಿಲ್ಲಾ ಆಡಳಿತ ೦.೬೦ ಲಕ್ಷ, ನ್ಯಾಯಾಂಗ ೦.೩೮ ಲಕ್ಷ, ವ್ಯವಸಾಯ ೫.೭೯ ಲಕ್ಷ, ಗ್ರಾಮಾಭಿವೃದ್ಧಿ ೪.೦೮ ಲಕ್ಷ.

ವರಮಾನವನ್ನು ಹೆಚ್ಚಿಸಲು ಅರಣ್ಯ ಇಲಾಖೆಯ ಬೊಂಬುಗಳ ಮೇಲಿನ ರಾಯಲ್ಟಿ ಸುಂಕವನ್ನು ೩ ರಷ್ಟು ಹೆಚ್ಚಿಸಲಾಗುವುದೆಂದು ಅವರು ಹೇಳಿದರು.

ಆಸ್ತಿ ಮತ್ತು ಅಬ್ಕಾರಿ ಕಾರ್ಯಕ್ರಮದಲ್ಲಿ ಈ ವರ್ಷ ಎಂದೂ ಇಲ್ಲದಷ್ಟು ಅಂದರೆ ೨.೮ ಕೋಟಿ ರೂ. ನಷ್ಟು ವೆಚ್ಚವಿನ ಉತ್ಪತ್ತಿಯಾಗುವುದೆಂದು ತಿಳಿಸಿದರು. ನೀರಾವರಿ ಕಾಮಗಾರಿಗೆ ೧೮೩ ಲಕ್ಷ ರೂ. ಗಳನ್ನು ತೆಗೆದಿಡಲಾಗಿದೆಯೆಂದೂ, ಪೊಲೀಸು, ಸಿಬ್ಬಂದಿಯು ಅಲ್ಪ ಪ್ರಮಾಣದಲ್ಲಿರುವುದರಿಂದ ಅದರಲ್ಲಿ ಖೋತಾ ಮಾಡಿಲ್ಲವೆಂದೂ ಅವರು ಹೇಳಿದರು.

(ಹಿಂದಿನ ಕಾಲಂನಲ್ಲಿ ಮುಂದುವರಿದಿದೆ)

ಆಸ್ಪತ್ರೆ ನೀರಿನ ತೊಟ್ಟಿಯಲ್ಲಿ ಮಕ್ಕಳ ಶವ

ಮದ್ರಾಸಿನ ಕಸ್ತೂರಿ ಬಾ ಗಾಂಧಿ ಗೋಷಾ ಆಸ್ಪತ್ರೆಯಲ್ಲಿ ೩ ಮತ್ತು ೭ ದಿನದ ಎರಡು ಗಂಡು ಮಕ್ಕಳ ತಾಯಿಯು ಮೊನ್ನೆ ರಾತ್ರಿ ತನ್ನ ವಾರ್ಡಿನಿಂದ ಬಚ್ಚಲು ಮನೆಗೆ ಹೋಗಿ ಹಿಂದಿರುಗಿ ಬಂದು ನೋಡಲಾಗ ಎರಡು ಮಕ್ಕಳೂ ತೊಟ್ಟಿಲಲ್ಲಿ ಕಾಣಲಿಲ್ಲವೆಂದೂ ಅವಕ್ಕೆ ಹಾಲು ಕೊಡಲು ಕರೆದುಕೊಂಡು ಹೋಗಿರಬಹುದೆಂದು ಭಾವಿಸಿ ಅವರು ಸುಮ್ಮನಿದ್ದರೆಂದೂ ಅನಂತರ ಆಸ್ಪತ್ರೆಯ ಮೇಟ್ರನ್ ಬಂದು ಮಕ್ಕಳು ಪತ್ತೆಯಿಲ್ಲದುದನ್ನು ಕಂಡು ತನಿಖೆ ನಡೆಸಲು ಆಗ ಅವು ಆಸ್ಪತ್ರೆ ಆವರಣದ ಒಂದು ನೀರಿನ ತೊಟ್ಟಿಯಲ್ಲಿ ಸತ್ತು ಬಿದ್ದಿದ್ದುದು ಪತ್ತೆಯಾಯಿತೆಂದೂ ವರದಿಯಾಗಿದೆ

ಟ್ಯೂನಿಸ್ ಬೇಯುವರ ಅಂಗರಕ್ಷಕನ ಆತ್ಮಹತ್ಯ

ಟ್ಯೂನಿಸ್ಸಿನ ಅಧಿಪತಿ ಬೇಯುವರ ಮಾಜಿ ಅಂಗರಕ್ಷಕನನ್ನು ಮೊನ್ನೆ ರಾತ್ರಿ ವೈದ್ಯರೊಬ್ಬರು ಪರೀಕ್ಷಿಸಲು ಬಂದಾಗ ಅವನು ಗುಂಡಿನಿಂದ ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ ಕೆಲವು ದಿನಗಳ ಕೆಳಗೆ ಬೇಯುವರ ಕೊಲೆ ಪ್ರಯತ್ನದ ಬಗ್ಗೆ ಅಂಗರಕ್ಷಕನ ಸಹೋದರನು ಬಂಧಿಸಲ್ಪಟ್ಟ ಸಂಬಂಧವಾಗಿ ಈ ಪ್ರಕರಣವು ನಡೆಯಿತೆಂದು ಹೇಳಲಾಗಿದೆ

ಶಾಸನಸಭಾ ಕಾಂಗ್ರೆಸ್ ಪಕ್ಷ

ಮೈಸೂರು ಶಾಸನಸಭೆಗೆ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗದ ಚುನಾವಣೆಯು ನಡೆದು ಶ್ರೀ ಟಿ ಸಿದ್ದಲಿಂಗಯ್ಯನವರು ಉಪನಾಯಕರಾಗಿಯೂ, ಶ್ರೀ ಎಸ್ ಕರಿಯಪ್ಪ ಕಾರ್ಯದರ್ಶಿ ಮತ್ತು ಶ್ರೀಮತಿ ಎಂ ಆರ್ ಲಕ್ಷ್ಮಮ್ಮ ಜಂಟಿ ಕಾರ್ಯದರ್ಶಿಯಾಗಿಯೂ, ಶ್ರೀ ಆರ್ ಸುಬ್ಬಣ್ಣನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟಿರುತ್ತಾರೆ ಶ್ರೀಗಳಾದ ಟಿ ಮರಿಯಪ್ಪ, ಎ ಭೀಮಪ್ಪನಾಯಕ್ ಆರ್ ಚನ್ನಿಗರಾಮಯ್ಯ, ಎಸ್ ವೀರಪ್ಪ, ಎಂ ಪಳನಿಯಪ್ಪ, ಡಿ ದೇವರಾಜ ಅರಸ್, ಸಿ ಜಿ ದೇವನಾಥ ಸೆಟ್ಟಿ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಕಾರ್ಯಕಾರಿ ಮಂಡಲಿಯ ಸದಸ್ಯರಾಗಿಯೂ ಆರಿಸಲ್ಪಟ್ಟಿರುವರು

ಚುನಾವಣೆಯಲ್ಲಿ ಸ್ಪರ್ಧಿಸಲು ಅಧಿಕಾರ ಬೇಕು

ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಬೆಂಗಳೂರು ೨೨

ದಕ್ಷಿಣ ಭಾರತದ ಗ್ರಾಮಾಧಿಕಾರಿಗಳ ಸಮ್ಮೇಳನವು ಇಲ್ಲಿ ಮೊನ್ನೆ ನಡೆಯಿತು ಮೈಸೂರಿನ ಅಡ್ವೋಕೇಟರಾದ ಶ್ರೀ ಎ ವೆಂಕಟೇಶಯ್ಯನವರು ಅಧ್ಯಕ್ಷತೆ ವಹಿಸಿದ್ದರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಪ್ರಾರಂಭೋತ್ಸವವನ್ನು ನೆರವೇರಿಸಿದರು

ಅಧ್ಯಕ್ಷರು ಭಾಷಣ ಮಾಡಿ, ಅನುವಂಶಿಕ ಗ್ರಾಮಾಧಿಕಾರಿಗಳ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ, ಅವರುಗಳಿಗೆ ಹೆಚ್ಚು ಪ್ರೋತ್ಸಾಹ ಅಥವಾ ಸಂಬಳವನ್ನು ಕೊಡಬೇಕೆಂದೂ ಸೂಚಿಸಿದರು ಗ್ರಾಮಾಧಿಕಾರಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವ ಅಧಿಕಾರವನ್ನು ತೆಗೆದುಹಾಕಕೂಡದೆಂದು ಅವರು ಹೇಳಿದರು ಹಳ್ಳಿಗಳಲ್ಲಿ ನಡೆಯುವ ವ್ಯಾಜ್ಯಗಳಿಗೆ ಗ್ರಾಮಾಧಿಕಾರಿಗಳನ್ನು ಹೊಣೆ ಮಾಡುವುದು ಮ[illegible] [illegible] ಅವರು ತಿಳಿಸಿದರು.

[illegible] ಟೂರ ಸಾಲಂ[illegible] [illegible] ಜಿಲ್ಲೆಗಳಿಂದಲೂ [illegible] ಸಂ[illegible] ಪ್ರತಿನಿ[illegible] [illegible]ಬಂದಿದ್ದರು

ದೋಟೇಲು ಕೆಲಸಕ್ಕೆ ಅಂಡರ್ ಗ್ರಾಜುಯೇಟ್

[illegible] ಒಬ್ಬ ಯುವಕನು ಅಂಡರ್ ಗ್ರಾಜುಯೇಟ್ ಮಟ್ಟದ ಶಿಕ್ಷಣ ಪಡೆದು, ಒಂದು ವರ್ಷ ಕಾಲ ಕೆಲಸಕ್ಕಾಗಿ ಅಲೆದಾಡಿ ವಿಫಲನಾಗಿ ಕಡೆಗೆ ಒಂದು ಹೋಟೇಲಿನಲ್ಲಿ ೧೨ ರೂ ಸಂಬಳ ಮತ್ತು ಉಚಿತ ಊಟ ಪಡೆದು ಆಳಿನ ಕೆಲಸಕ್ಕೆ ಸೇರಿಕೊಂಡಿರುವನೆಂದು ವರದಿಯಾಗಿದೆ

ವಾರ್ಷಿಕೋತ್ಸವ

ರಾಜಧಾನಿಯ ಜೈನ ಸಾಹಿತ್ಯ ಪ್ರಚಾರ ಸಂಘದ ಎರಡನೇ ವಾರ್ಷಿಕೋತ್ಸವವು ಶುಕ್ರವಾರ ಶ್ರೀ ಟಿ ಶಾಂತರಾಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಡಿ ಎಲ್ ನರಸಿಂಹಾಚಾರ್ಯರು ಕನ್ನಡ ಕವಿಗಳ ಮಹತ್ವವನ್ನು ವರ್ಣಿಸಿ, ಜೈನ ಧರ್ಮದ ಬಗ್ಗೆ ಉಪನ್ಯಾಸ ಮಾಡಿದರು ಶಾಂತಿ ಶೃಂಗಾರವೆಂಬ ಪುಸ್ತಕವನ್ನು ಅಲ್ಲಿ ಹಂಚಲಾಯಿತು

ಆಹಾರದ ದಾಸ್ತಾನು ವಶಪಡಿಸಿಕೊಳ್ಳಲು ಶಾಸನ

ಆಹಾರ ಧಾನ್ಯವನ್ನು ದುಬಾರಿ ಬೆಲೆಗಾಗಲಿ, ಅಥವಾ ಕಾಳ ಸಂತೆಯಲ್ಲಾಗಲೀ ಮಾರುವ ಪ್ರಯತ್ನ ನಡೆದರೆ ಅದನ್ನು ತಡೆಗಟ್ಟಲು ಅಂತಹವರಿಂದ ದಾಸ್ತಾನುಗಳನ್ನು ವಶಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನೀಯುವ ಶಾಸನವನ್ನು ಜಾರಿಗೆ ತರಲಾಗುವುದೆಂದು ವರದಿಯಾಗಿದೆ ಕಾಳಸಂತೆ ಮೊದಲಾದ ಅಕ್ರಮ ನಡವಳಿಕೆಗಳನ್ನು ಪತ್ತೆ ಹಚ್ಚಿ ಕೊಡುವ ಖಾಸಗಿ ಜನರಿಗೂ ಬಹುಮಾನ ಕೊಡಲಾಗುವುದೆಂದೂ ಸೂಚಿಸಲಾಗಿದೆ

ಕರೂರು ಬಳಿ ಭೂಕಂಪದ ಬಗ್ಗೆ ಸಂಶೋಧನೆ

ತಿರುಚನಾಪಳ್ಳಿ ಜಿಲ್ಲೆಯ ಕರೂರಿನ ಗುಡ್ಡ ಪ್ರದೇಶದಲ್ಲಿ ಕಳೆದ ಎರಡು ತಿಂಗಳಿಂದ ಆಗಾಗ್ಗೆ ಭೂಕಂಪ ಮತ್ತು ಗುಡುಗಿನ ಶಬ್ದಗಳಾಗುತ್ತಿರುವ ಅಸಾಮಾನ್ಯ ಪರಿಸ್ಥಿತಿಯನ್ನು ಖುದ್ದಾಗಿ ತಿಳಿದುಕೊಳ್ಳಲು ಅಲ್ಲಿ ಭಾರತದ ಭೂಗರ್ಭ ಇಲಾಖೆಯವರು ಸಂಶೋಧನೆ ನಡೆಸಲಿರುವರು

ಬರುವ ವರ್ಷದಿಂದ ಸಮಾಜ ವಿಮಾ ಯೋಜನೆ

ಮೈಸೂರು ಸಂಸ್ಥಾನದಲ್ಲಿರುವ ಕಾರ್ಖಾನೆಗಳ ಕಾರ್ಮಿಕರಿಗಾಗಿ ಸಾಮಾಜಿಕ ವಿಮಾ ಪದ್ಧತಿಯನ್ನು ಬರುವ ವರ್ಷ ದಿಂದ ಜಾರಿಗೆ ತರಲಾಗುವುದೆಂದೂ, ಬೆಂಗಳೂರಿನಲ್ಲಿ ಈ ಬಗ್ಗೆ ಪ್ರಾದೇಶಿಕ ಕಛೇರಿಯನ್ನು ತೆರೆಯಲಾಗುವುದೆಂದೂ ಕೇಂದ್ರ ಸರ್ಕಾರದ ಇನ್ಸೂರೆನ್ಸ್ ಅಧಿಕಾರಿ ಎ ಆರ್ ನಟೇಶನ್‌ರವರು ತಿಳಿಸಿರುತ್ತಾರೆ

SRI GAYATHRI

TALKIES

From 24 6 52 Daily 2 shows

20th Century Fox's

RAW HIDE

With Tyrone Power, Susan Hayward

೧೭೦ ದಿನಗಳಲ್ಲಿ ೩೭೫ ಮೊಟ್ಟೆಗಳನ್ನಿಟ್ಟ ಕೋಳಿ

ಇಂಗ್ಲೆಂಡಿನ ಚೆಷೈರ್ ಎಂಬಲ್ಲಿ ಒಬ್ಬ ರೈತನ ಬಳಿ ಇರುವ ೧೧ ತಿಂಗಳ ಕೋಳಿಯೊಂದು ೧೭೦ ದಿನಗಳಲ್ಲಿ ೩೭೫ ಮೊಟ್ಟೆಗಳನ್ನಿಟ್ಟು ಪ್ರಪಂಚದಲ್ಲೇ ಒಂದು ರಿಕಾರ್ಡನ್ನು ಸ್ಥಾಪಿಸಿರುವುದೆಂದು ವರದಿಯಾಗಿದೆ. ಅಲ್ಲಿ ಏರ್ಪಡಿಸಲಾದ ಪ್ರದರ್ಶನಕ್ಕಾಗಿ ಕೋಳಿಯನ್ನು ಮನೆಯಿಂದ ಮೋಟಾರಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ ದಾರಿಯಲ್ಲೇ ಅದು ಒಂದು ಮೊಟ್ಟೆಯನ್ನಿಟ್ಟಿತೆಂದೂ, ಪ್ರದರ್ಶನದ ಕಾಲದಲ್ಲಿ ಇನ್ನೆರಡು ಮೊಟ್ಟೆಯನ್ನಿಟ್ಟು ವಾಪಸು ಮನೆಗೆ ಹೋಗುವಾಗ ದಾರಿಯಲ್ಲಿ ಮೋಟಾರಿನಲ್ಲಿ ಮತ್ತೊಂದು ಮೊಟ್ಟೆಯನ್ನು ಹಾಕಿತೆಂದೂ ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ ಜೆಚ್ ಜಯವೀಣೆ ಮಧ್ಯಾಹ್ನ ೧ ೩೦ ಕೊಳಲು. ಶಂಕರಜೋಷಿ ದೇವಗಿರಿ ಹಿಂದೂಸ್ತಾನಿ ಸಂಗೀತ ಸಂಜೆ ೫ ೩೦ ಎಂ ಎಲ್ ಶಿವಯ್ಯ ಸಂಗೀತ ೬ ೧೦ ಗಾನವಿಹಾರ ೭ ಶಂಕರಜೋಷಿ, ಹಿಂದೂಸ್ತಾನಿ ಸಂಗೀತ ೮ ಎಂ ಜೆಚ್ ಜಯಮ್ಮ ವೀ[illegible] ೮ ೩೦ ವೃಂದ ಸಂಗೀತ ೯-೧೫ ಶಿಕ್ಷ[illegible] ೯-೩೦ ಗಾನಾಮೃತ

ಎಲ್. ಎಸ್ ಪರೀಕ್ಷೆಯಲ್ಲಿ ೩ ವರ್ಷದ ಬಾಲಕನಿಗೆ ತೇರ್ಗಡೆ

ಚಾಮರಾಜನಗರದ ರೆವಿನ್ಯೂ [illegible]ವಾನನಾದ ಶ್ರೀ ಸಣ್ಣಶೆಟ್ಟಿ ಎಂಬುವನು ತನ್ನ ೩೪ ನೇ ವಯಸ್ಸಿನಲ್ಲಿ ಕಳೆದ ಎಲ್ ಎಸ್ ಪರೀಕ್ಷೆಗೆ ಕುಳಿತು ಉತ್ತೀರ್ಣನಾಗಿರುವನೆಂದು ತಿಳಿದು ಬಂದಿದೆ

I. COM. COURSE

is being introduced a[illegible]

St. Philomena's Colle[illegible]

this year

Classes Start on 2nd July 195[illegible]

Apply for admission to the Principal

MYSORE TRANSIT SERVICE

Excellent and Regular Goods Vehicle Servi[illegible] between **MYSORE & MADRAS** in arrangemen[illegible] with our Agents M/s Madras-Bangalore Transport Co

Proprietors :— **THIRTHA & COMPANY**,

Clearing and Forwarding Agents

Ramvilas Road, Mysore (PHONE 537)

— City Collecting Branch —

Messrs N S PADAKI,

Hanumantha Rao Street [Near Prabha Talkies Mysore]

Edited. Printed and Published by A R Nagarajan, at Sadhvi Press, D Subbiah Road, Mysore

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

✠ ಅತ್ಯುತ್ತಮವಾದ ಒಗೆಯುವ ಸಾಬೂನು

✠ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು

✠ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.

✠ ಬಾಳಿಕೆಯಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ರಿಜಿಸ್ಟರ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೨೪-೬-೫೨ [ಸಂಚಿಕೆ ೨೬೦

ಪಶ್ಚಿಮ ಬಂಗಾಳದ ಶಾಸನ ಸಭೆಗೆ ಮುತ್ತಿಗೆ

ಆಯವ್ಯಯದ ಅಂದಾಜಿನ ಬಗ್ಗೆ ಭಾಷಣದ ವಿವರಗಳು

ಬೆಂಗಳೂರು ೨೩

ನೆನ್ನೆ ಶಾಸನ ಸಭೆಯಲ್ಲಿ ಪ್ರಸಕ್ತ ಸಾಲಿನ ಆಯವ್ಯಯದ ಅಂದಾಜು ಪಟ್ಟಿಯನ್ನು ಮಂಡಿಸಿದಾಗ ಮುಖ್ಯ ಮಂತ್ರಿಯವರು ಈ ರೀತಿ ತಿಳಿಸಿದರು:

ಹೊಸ ರಾಜ್ಯಾಂಗದ ಪ್ರಕಾರ ಇದೇ ಪ್ರಥಮವಾಗಿ ರಾಜ್ಯಾಂಗ ಬದ್ಧ ಆಯವ್ಯಯ ಪಟ್ಟಿಯನ್ನು ಮಂಡಿಸಲಾಗಿರುವುದು. ಸದಸ್ಯರ ಸಹಾನುಭೂತಿ, ಸಹಕಾರ ಮತ್ತು ಟೀಕೋಟಿಗಳು ಅವಶ್ಯಕ.

ಆಹಾರದ ವಿಷಯದಿಂದಲೇ ಆಯವ್ಯಯದ ಕೊರತೆಯು ಉಂಟಾಗಿಲ್ಲ ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬೆಂಗಳೂರುಗಳಲ್ಲಿ ಅಭಾವ ಪರಿಸ್ಥಿತಿಯುಂಟಾಗಿ ಆಯವ್ಯಯದ ಮೇಲೆ ಹೆಚ್ಚು ಪರಿಣಾಮವನ್ನುಂಟುಮಾಡಿದೆ ಸಕಾಲದಲ್ಲಿ ಮಳೆ ಬಾರದೆ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ಇಳಿದು, ವಿದ್ಯುಚ್ಛಕ್ತಿ ವರಮಾನ ಕಡಿಮೆಯಾಗುವ ಸ್ಥಿತಿ ಇದೆ

ಈ ರೀತಿ ಕಡಿಮೆಯಾಗುವ ಆದಾಯವನ್ನು ತುಂಬುವುದಕ್ಕೂ, ವೆಚ್ಚವನ್ನು ಕಡಿಮೆ ಮಾಡುವುದಕ್ಕೂ ಹಲಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಕೇಂದ್ರ ಸರ್ಕಾರದವರಿಂದ ಹಣಸಹಾಯ ದೊರಕಿಸಿಕೊಳ್ಳಲು ಭಾರತದ ಹಣಕಾಸಿನ ಮಂಡಲಿಯವರಿಗೆ ಮನವಿಯೊಂದನ್ನು ಸಲ್ಲಿಸಲಾಗಿದೆ ಹಲಕಾಲಾಂತರದಿಂದ ಒಂದೇರೀತಿಯಲ್ಲಿರುವ ಭೂಕಂದಾಯದ ವ್ಯವಸ್ಥೆಯನ್ನು ಪರಿಷ್ಕರಿಸಲಾಗುವುದು ಹೆಚ್ಚು ಬಾಕಿ ಉಳಿಯುವುದನ್ನು ಸರ್ವೆ ಮಾಡಲಾಗುವುದು ಕೋರ್ಟು ಫೀ ದರವನ್ನು ಹೆಚ್ಚಿಸಲಾಗುವುದು

ಅಲ್ಲದೆ ೩೦ ಲಕ್ಷ ರೂ ಉಳಿತಾಯ ಮಾಡಲು ತಕ್ಕಹು ಸಿಬ್ಬಂದಿ ಕಡಿತ ಮಾಡಲಾಗುವುದು

ವಿದ್ಯಾಭ್ಯಾಸಕ್ಕೆ ಹೆಚ್ಚು ಹಣ ಒದಗಿಸಲಾಗಿದೆ ಸ್ಕೂಲುಗಳಿಗೆ ಗ್ರಾಂಟನ್ನು ಕಡಿಮೆ ಮಾಡಲಾಗಿದೆ ವ್ಯವಸಾಯ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕೆಲಸ ಕೈಗೊಳ್ಳಲಾಗಿದೆ ಕೋಲಾರ ಮುಂತಾದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ೨೦ ಲಕ್ಷ ರೂ ಗಳನ್ನು ಒದಗಿಸಲಾಗಿದೆ ಪಾನನಿರೋಧದ ನೀತಿಯು ಜಾರಿಯಲ್ಲಿದ್ದರೂ ಹೆಚ್ಚು ಜಿಲ್ಲೆಗಳಿಗೆ ಅದನ್ನು ಈ ಸಾರಿ ಅನ್ವಯಿಸುವುದಿಲ್ಲ

ಗ್ರಾಮಾಂತರ ಸಾವಯಿಕ ಯೋಜನೆಗಾಗಿ ೬೫ ಲಕ್ಷ ರೂ ಗಳನ್ನು ತೆಗೆದಿಡಲಾಗಿದೆ ಪಂಚವಾರ್ಷಿಕ ಯೋಜನೆಗಾಗಿ ಒಟ್ಟು ೫೬೦ ಲಕ್ಷ ರೂ ಗಳು ಈ ಸಾಲಿನಲ್ಲಿ ವೆಚ್ಚವಾಗುವ ನಿರೀಕ್ಷೆಯಿದೆ ಈ ಯೋಜನೆಗಳ ವೆಚ್ಚವು ಭಾರತ ಸರ್ಕಾರದ ಹಣ ಸಹಾಯದ ಆಧಾರದ ಮೇಲೆ ನಿಂತಿದೆ

ಕೊರಿಯಾ ವಿವಾದದ

ಕೊರಿಯಾ ಜನತೆಯ ಮೇಲೆ ಅಮೆರಿಕನ್ನರು ನಡೆಸುತ್ತಿರುವ ಕ್ರಿಮಿ ಯುದ್ಧದ ವಿರುದ್ಧವಾಗಿ ಪ್ರತಿಭಟನೆಯನ್ನು ಸೂಚಿಸಲು ಮತ್ತು ಇಂದಿನ ಆಹಾರ ಪರಿಸ್ಥಿತಿ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿಯ

೪ ನಗರಗಳಲ್ಲಿ ಸಧ್ಯದಲ್ಲಿ ಧಾನ್ಯದ ಪಡಿತರ ರದ್ದಿಲ್ಲ

ಬೆಂಗಳೂರು ೨೩

- ಸಂಸ್ಥಾನದ ಆಹಾರ ಪರಿಸ್ಥಿತಿಯು ಇನ್ನೂ ತೃಪ್ತಿಕರವಾಗಿಲ್ಲವೆಂದೂ, ಆದುದರಿಂದ ಕಡ್ಡಾಯ ಪಡಿತರ ಪ್ರದೇಶಗಳಲ್ಲಿ ಈ ಕೂಡಲೇ ಧಾನ್ಯದ ಪಡಿತರವನ್ನು ರದ್ದು ಮಾಡಲಾಗುವುದಿಲ್ಲವೆಂದೂ, ಇನ್ನೂ ಮೂರು ತಿಂಗಳ ನಂತರ ಪರಿಸ್ಥಿತಿಯನ್ನು ಪರಿಶೀಲಿಸಿ ಸಂಸ್ಥಾನದ ಆಹಾರ ನೀತಿಯ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಾಗುವುದೆಂದೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಶಾಸನ ಸಭೆಯ ಬಜೆಟ್ ಭಾಷಣ ಮಾಡುತ್ತಾ ತಿಳಿಸಿದರು

ಭಾರತ ಮತ್ತು ಪಾಕಿಸ್ತಾನಗಳ ಗೋಧಿ ಅಕ್ಕಿ ವಿನಿಮಯ

ಭಾರತದ ಗೋಧಿಯನ್ನು ಪಾಕಿಸ್ತಾನಕ್ಕೆ ರಫ್ತು ಮಾಡಿ ಅದಕ್ಕೆ ಪ್ರತಿಯಾಗಿ ಅಲ್ಲಿಂದ ಅಕ್ಕಿಯನ್ನು ಆಮದು ಮಾಡಿಕೊಳ್ಳುವ ಬಗ್ಗೆ ಎರಡು ರಾಷ್ಟ್ರಗಳಿಗೂ ಒಪ್ಪಂದವಾಗಿರುವುದೆಂದೂ, ಅದಲು ಬದಲು ಮಾಡಿಕೊಳ್ಳಲಾಗುವ ಧಾನ್ಯದ ಪ್ರಮಾಣವನ್ನು ಸಧ್ಯದಲ್ಲೇ ನಿರ್ಧರಿಸಲಾಗುವುದೆಂದೂ ತಿಳಿದುಬಂದಿದೆ

ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರ ರಾಜೀನಾಮೆ

ಬ್ರಿಟನ್ನಿನ ಪ್ರಧಾನ ಮಂತ್ರಿ ವಿನ್‌ಸ್ಟನ್ ಚರ್ಚಿಲ್ಲರ ಆರೋಗ್ಯವು ಸಮರ್ಪಕವಾಗಿಲ್ಲದಿರುವುದರಿಂದ ಅವರು ತಮ್ಮ ಪದವಿಗೆ ರಾಜೀನಾಮೆಯನ್ನು ಕೊಡಲಿರುವರೆಂದು ಹೇಳಲಾಗಿದೆ ಅವರ ಸ್ಥಾನಕ್ಕೆ ವಿದೇಶಾಂಗ ಮಂತ್ರಿ ಆಂಥೊನಿ ಈಡನ್‌ರವರು ಬರಲಿರುವರೆಂದೂ, ಚರ್ಚಿಲ್ಲರು ಬ್ರಿಟಿಷ್ ರಾಣಿಯ ಕಿರೀಟಧಾರಣೋತ್ಸವದ ವರೆಗೂ ಪ್ರಧಾನಿಯಾಗಿರುವರೆಂದೂ ಗೊತ್ತಾಗಿದೆ

ಘೋಷಣೆಯನ್ನು ಜನತೆಯ ಮುಂದಿಡಲು ನಾಳೆ ಸಂಜೆ ೬ ಘಂಟೆಗೆ ಮಂಡಿ ಮೊಹಲ್ಲಾ ಶಾಂತರಾಜ ಪಾರ್ಕಿನಲ್ಲಿ ಬಹಿರಂಗ ಸಭೆಯೊಂದನ್ನು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯವರು ಏರ್ಪಡಿಸಿರುತ್ತಾರೆ

ಪಶ್ಚಿಮ ಬಂಗಾಳಾ ಶಾಸನ ಸಭಾ ಭವನಕ್ಕೆ ಮುತ್ತಿಗೆ

ದೇಶದಲ್ಲಿನ ಆಹಾರದ ಉತ್ಕಟ ಪರಿಸ್ಥಿತಿ ಬಗ್ಗೆ ಸಭಾ ಸದಸ್ಯರ ಗಮನ ಸೆಳೆಯುವ ಸಲುವಾಗಿ ಸುಮಾರು ನಾಲ್ಕು ಸಾವಿರ ಜನರು ನೆನ್ನೆ ಪಶ್ಚಿಮ ಬಂಗಾಳಾ ಶಾಸನ ಸಭಾ ಭವನವನ್ನು ಮುತ್ತಿಗೆ ಹಾಕಿ ಪ್ರದರ್ಶನ ನಡೆಸಿ, ಅಲ್ಲಿನ ಪ್ರಧಾನಿ ಡಾ|| ಬಿ ಸಿ ರಾಯರು ಖುದ್ದಾಗಿ ಬಂದು ತಮ್ಮ ಕುಂದುಕೊರತೆಗಳನ್ನೂ ಮತ್ತು ಅಹವಾಲುಗಳನ್ನೂ ಕೇಳಬೇಕೆಂದು ಒತ್ತಾಯಪಡಿಸಿದರೆಂದು ವರದಿಯಾಗಿದೆ ಮುಖ್ಯ ಮಂತ್ರಿ ಬಿ ಸಿ ರಾಯರು ಪ್ರದರ್ಶಕಕಾರರ ನಾಯಕರನ್ನು ಕರೆಸಿ ತಾವು ಸಭಾ ಭವನವನ್ನು ಬಿಟ್ಟುಬರುವುದು ಅಕ್ರಮವಾಗುವುದೆಂದೂ, ಪ್ರದರ್ಶನಕಾರರ ಪೈಕಿ ಐದು ಅಥವಾ ಹತ್ತು ಮಂದಿಯ ನಿಯೋಗದೊಡನೆ ತಾವು ಮಾತನಾಡಲು ಸಿದ್ಧರಿರುವುದಾಗಿಯೂ ತಿಳಿಸಿದರು ಗುಂಪಿನವರು ಚದುರದಿರಲು ಸಭಾಧ್ಯಕ್ಷರು ಕಾರ್ಯಕಲಾಪಗಳನ್ನು ಅಕಸ್ಮಿಕ ನಿಲ್ಲಿಸಿ ನಾಳೆಗೆ ಮುಂದುವರಿಸಿದರು ಅನಂತರ ಪೋಲೀಸರು ಲಘು ಲಾಠಿ ಪ್ರಹಾರ ಮಾಡಿ, ಗುಂಪನ್ನು ಚದುರಿಸಿ ಸಭಾ ಸದಸ್ಯರು ಹೊರಗೆ ಹೋಗಲು ದಾರಿ ಮಾಡಿ ಕೊಟ್ಟರು ನಾಲ್ಕು ಮಂದಿಗೆ ಏಟು ಬಿದ್ದಿರುವುದೆಂದೂ, ೧೬ ಜನರನ್ನು ಬಂಧಿಸಲಾಯಿತೆಂದೂ ತಿಳಿದುಬಂದಿದೆ ಆ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿದೆ

ಕೊರಿಯಾ ಮೇಲೆ ೫೦೦ ವಿಮಾನಗಳ ಪ್ರಚಂಡ ಧಾಳಿ

ಅಮೆರಿಕದ ೫೦೦ ವಿಮಾನಗಳು ನೆನ್ನೆ ಕೊರಿಯದ ಯಾಲೂ ನದಿಯ ವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರಗಳ ಮೇಲೆ ಭಾರಿ ಧಾಳಿಯನ್ನು ನಡೆಸಲಾಗಿ ದಂಕೊರಿಯಾ ಮತ್ತು ಉತ್ತರ ಕೊರಿಯಗಳ ಸಹಸ್ರಗಟ್ಟಲೆ ಚದುರ ಮೈಲಿ ವಿಸ್ತಾರದ ಪ್ರದೇಶಗಳಲ್ಲಿ ಕತ್ತಲು ಕವಿಯಿತೆಂದೂ, ಈ ವಿದ್ಯುತ್ ಕೇಂದ್ರಗಳಿಂದ ಚೀಣದ ಅತ್ಯಂತ ಭಾರಿ ಕೈಗಾರಿಕೆಗಳಿಗೆ ಶಕ್ತಿಯು ದೊರೆಯುತ್ತಿತ್ತೆಂದೂ ಹೇಳಲಾಗಿದೆ

ಸಾರ್ವಜನಿಕ ಸೇವಾ ಪದಕಗಳ ತಾತ್ಕಾಲಿಕ ರದ್ದು

ಸ್ಪೇ ಸು. ಪ್ರೋ] ಬೆಂಗಳೂರು ೨೪

ಶ್ರೀಮನ್ಮಹಾರಾಜರು ಸಾರ್ವಜನಿಕ ಸೇವೆ ಮಾಡಿದವರಿಗೆ ಪದಕಗಳನ್ನು ಕೊಡುವ ಪದ್ಧತಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿರುವುದೆಂದೂ, ಈ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗುವ ಬಗ್ಗೆ ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರವನ್ನು ನಡೆಸುತ್ತಿರುವರೆಂದೂ ಈ ದಿನ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು ಕಾಂಗ್ರೆಸ್ಸಿನವರ ಪೈಕಿ ಅಂತಹ ಪದಕವು ಯಾರಿಗಾದರೂ ಬಂದಿದೆಯೋ ಎಂಬ ಪ್ರಶ್ನೆ ಮಾಡಲು ಸಮಯ ಬಂದಿಲ್ಲವೆಂದು ಅವರು ಹೇಳಿದರು

ಸಂಸ್ಥಾನದ ಗ್ರಾಮಾಂತರ ಪ್ರದೇಶದಲ್ಲಿ ಒಟ್ಟು ೨೩-೨೪ ಕೋಟಿ ರೂ ಗಳಷ್ಟು ಕೈಸಾಲವು ಇರುವುದೆಂದೂ, ಈ ಬಗ್ಗೆ ಸರ್ವೆ ನಡೆಸಲಾಗಿದೆಯೆಂದೂ ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ತುಂಗಾ ಅಣೆಕಟ್ಟಿನ ಮೊದಲನೇ ಹಂತದ ಕೆಲಸವು ೫೩ ೫೪ ರಲ್ಲಿ ಪೂರೈಸಲಿರುವುದೆಂದೂ, ೫೫ ೫೬ ರೊಳಗೆ ಅನ್ಯರಾಗಿ ಕೆಲಸವು ಮುಗಿಯುವುದೆಂದೂ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀ ಹೆಚ್. ಎಸ್. ರುದ್ರಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ನಂತರ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು ಶ್ರೀ ಎಸ್. ನಂಜುಂಡಪ್ಪನವರು ನಿರ್ಣಯವೊಂದನ್ನು ಮಂಡಿಸಿ, ಸರ್ಕಾರದವರು ಈಗಾಗಲೇ ಪಾನನಿರೋಧವು ಜಾರಿಯಲ್ಲಿರುವ ಪ್ರದೇಶಗಳ ಪೈಕಿ ೨ ತಾಲ್ಲೂಕುಗಳಲ್ಲಿ ಪುನಃ ಹೆಂಡ ಇಳಿಸಲು ಕೊಟ್ಟಿರುವ ಅವಕಾಶವನ್ನು ರದ್ದುಪಡಿಸಬೇಕೆಂದು ಸೂಚಿಸಿದ್ದರು ಆರೋಗ್ಯ ಮಂತ್ರಿಗಳು ಉತ್ತರವಿತ್ತು ಬೆಂಗಳೂರು ಜಿಲ್ಲೆಯೊಂದರಿಂದಲೇ ಪಾನನಿರೋಧ ಪ್ರಯುಕ್ತ ಸರ್ಕಾರಕ್ಕೆ ೫೦ ಲಕ್ಷ ರೂ ಗಳಷ್ಟು ನಷ್ಟವಾಗುತ್ತಿರುವುದೆಂದೂ, ಈ ನಷ್ಟವನ್ನು ಭರ್ತಿ ಮಾಡಿಕೊಳ್ಳಲು ವಿವಿಧ ತಾಲ್ಲೂಕುಗಳಲ್ಲಿ ಹೆಂಡ ಇಳಿಸಲು ಅವಕಾಶ ಕೊಡಲಾಯಿತೆಂದೂ ಸೂಚಿಸಿದರು ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಕಪಿನಿ ಅಣೆಕಟ್ಟು ಯೋಜನೆ ಸಧ್ಯಕ್ಕಿಲ್ಲ

ಕಪಿನಿ ಅಣೆಕಟ್ಟು ಯೋಜನೆಯನ್ನು ಕಾರ್ಯಗತ ಮಾಡಲು ಸಧ್ಯದಲ್ಲಿ ಕೈಗೊಳ್ಳುವುದಿಲ್ಲವೆಂದು ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತಾಗ ತಿಳಿಸಿದರು ಸ್ವಾರಿ ೨|| ಕೋಟಿ ರೂ ವೆಚ್ಚದ ಈ ಯೋಜನೆಗೆ ಕೇಂದ್ರದವರ ಸಹಾಯವನ್ನು ಕೋರಲಾಗಿದೆಯೆಂದೂ, ತಿರುಮಕೂಡಲು ನರಸೀಪುರ ಮತ್ತು ತಿಂಪಾಗಳಿಗೆ ಬೇಸಿಗೆಯಲ್ಲಿ ನೀರನ್ನು ಈ ಅಣೆಕಟ್ಟಿನಿಂದ ಒದಗಿಸಿಕೊಂಡು, ಕೃಷ್ಣರಾಜಸಾಗರದ ನೀರನ್ನು ಹೆಚ್ಚಾಗಿ ವಿಶ್ವೇಶ್ವರಯ್ಯ ನಾಲಾ ನೀರಾವರಿ ಕಾರ್ಯಕ್ಕೆ ಉಪಯೋಗಿಸುವುದೇ ಈ ಯೋಜನೆಯ ಉದ್ದೇಶವೆಂದೂ ಅವರು ಸ್ಪಷ್ಟಪಡಿಸಿರುತ್ತಾರೆ.

ನಗರ ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಸಭೆಯು ನಾಳೆ ಸಂಜೆ ೭ ಘಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಕಛೇರಿಯಲ್ಲಿ ನಡೆಯುವುದೆಂದೂ, ಸದಸ್ಯರೆಲ್ಲರೂ ತಪ್ಪದೆ ಬರಬೇಕೆಂದೂ ಕಾರ್ಯದರ್ಶಿ ಶ್ರೀ ಕೆ. ಎಸ್ ಸೂರ್ಯನಾರಾಯಣರವರು ಕೋರಿರುತ್ತಾರೆ

ವೈದ್ಯಾಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು ೨೮

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ವೈದ್ಯರುಗಳಾದ ಶ್ರೀ ಮುರುಗೇಂದ್ರಪ್ಪನವರನ್ನು ಸಕಲೇಶಪುರದ ಕ್ರಾಫರ್ಡ್ ಆಸ್ಪತ್ರೆಗೂ, ಶ್ರೀ ಎಂ. ಜಿ. ರಾಜಣ್ಣನವರನ್ನು ತೀರ್ಥಹಳ್ಳಿಯ ಆಸ್ಪತ್ರೆಗೂ ವರ್ಗಾಯಿಸಲಾಗಿದೆ. ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಶ್ರೀ ಎಂ. ಬಸವರಾಜೇಅರಸರನ್ನು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಿವಂಗತ ಬಿ. ಕೆ. ರಾಮಕೃಷ್ಣರಾಯರ ಸ್ಥಾನದಲ್ಲಿ ನೇಮಿಸಲಾಗಿದೆ. ಶ್ರೀ ಎಂ. ಪಿ. ರಾಮಕೃಷ್ಣರಾಯರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರನ್ನಾಗಿ ನೇಮಿಸಲಾಗಿದೆ.

ಮೈಸೂರಿಗೆ ಜಪಾನಿನ ಗೃಹ ಕೈಗಾರಿಕಾ ಯಂತ್ರಗಳ ದಾನ

ಬೊಂಬಾಯಿಯಲ್ಲಿ ನೇರಿದ್ದ ವಸ್ತುಪ್ರದರ್ಶನಕ್ಕಾಗಿ ಜಪಾನ್ ಸರ್ಕಾರದವರು ಕಳುಹಿಸಿದ್ದ ಹಲವು ಸಣ್ಣ ಗೃಹ ಕೈಗಾರಿಕಾ ಯಂತ್ರಗಳನ್ನು ಮೈಸೂರಿಗೆ ದಾನವಾಗಿ ಕೊಡಲು ಅವರು ಮುಂದೆ ಬಂದಿರುವರೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ತಿಳಿಸಿದರು.

ಈಜಿಪ್ಟಿಗೆ ರಷ್ಯದ ಎಚ್ಚರಿಕೆ

ಮಧ್ಯ ಪ್ರಾಚ್ಯ ರಕ್ಷಣೆ ಸಂಬಂಧವಾಗಿ ಪಾಶ್ಚಾತ್ಯ ಚತುರ್ರಾಷ್ಟ್ರಗಳು ತಯಾರಿಸಿರುವ ಯೋಜನೆಯು ರಷ್ಯ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳನ್ನು ಯುದ್ಧಕ್ಕೆ ಎಳೆಯುವ ಗುರಿಯಿಂದ ಕೂಡಿರುವುದೆಂದೂ, ಆದುದರಿಂದ ಆ ಯೋಜನೆಯಲ್ಲಿ ಈಜಿಪ್ಟ್ ಸೇರಬಾರದೆಂದೂ ರಷ್ಯವು ಈಜಿಪ್ಟಿಗೆ ಎಚ್ಚರಿಕೆಯಿತ್ತಿರುವುದಾಗಿ ತಿಳಿದುಬಂದಿದೆ.

'ಆಯುರ್ವೇದ' ಮಾಸ ಪತ್ರಿಕೆ

ರಾಜಧಾನಿಯ ಆಯುರ್ವೇದ ವಿದ್ವಾನ್ ಎಂ. ಎಸ್. ನಾಗೇಶರಾಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಮೇಲ್ಕಂಡ ಮಾಸಪತ್ರಿಕೆಯ ೮ ಮತ್ತು ೯ನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಆಯುರ್ವೇದ ಶಿಕ್ಷಣವು ಹೇಗಿರಬೇಕು, ಬಿಲ್ವಪತ್ರೆಯ ಉಪಯೋಗ ಇವುಗಳಿಗೆ ಸಂಬಂಧಿಸಿದ ಲೇಖನಗಳು ಇದರಲ್ಲಿ ಅಡಕವಾಗಿವೆ. ನಾರಾಯಣಶಾಸ್ತ್ರಿ ರಸ್ತೆಯ ೧೮೭೩ನೇ ನಂಬರು ಮನೆಯಲ್ಲಿರುವ ಪತ್ರಿಕಾ ಕಛೇರಿಯಲ್ಲಿ ಶ್ರೀ ರಾ.ರಾ. ಪುರಾಣಿಕರಿಂದ ಪತ್ರಿಕೆಯು ಪ್ರಕಾಶಿಸಲ್ಪಟ್ಟಿದೆ. ಅದರ ಬಿಡಿ ಪ್ರತಿಗೆ ೪ ಆಣೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೨೦ ಡಿ. ಓ. ಸಂಜೀವಪ್ಪ ನಾಗಸ್ವರ. ಮಧ್ಯಾಹ್ನ ೧-೩೦ ಪಿಟೀಲು ವಸಿಕಾವಿಯಾರ. ಸಂಜೆ ೫-೩೦ ಡಿ. ಸಂಜೀವಪ್ಪ ನಾಗಸ್ವರ. ೭ ಟಿ. ಆರ್. ಮಹಾಲಿಂಗಂ ಕೊಳಲು (ರಿಕಾರ್ಡ್ಸ್) ೬-೧೦ ಬಾಲಜಗತ್. ೭ ಶಿವಪ್ರಸಾದ್ ರಾಮಾಯಣ ವಾಚನ. ೭-೩೦ ಗೀತಾಂಜಲಿ. ೮ ಅನೂರ್ ಸೂರ್ಯನಾರಾಯಣ ಗೀತ. ೯-೧೫ 'ಲಕ್ಷ್ಮೀಕಟಾಕ್ಷ' ನಾಟಕ. ೯-೩೦ ನಿಮ್ಮ ಮೆಚ್ಚಿನ ಗೀತೆಗಳು.

ವಿಶೇಷ ಕಾರಣಕ್ಕಾಗಿ ರಾಜಾಜಿ ನಾಮಕರಣ

ಮದ್ರಾಸಿನ ಹಿರಿಯ ಶಾಸನಸಭೆಯ ಸದಸ್ಯರಾಗಿ ರಾಜಾಜಿಯವರನ್ನು ಅಲ್ಲಿನ ಗೌರ್ನರರು ನೇಮಿಸಿರುವುದು ವಿಶೇಷ ಕಾರಣಕ್ಕಾಗಿ ಎಂದೂ, ರಾಜಾಜಿಯವರು ಆ ಕ್ಷಣದಲ್ಲೇ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮಾಡುವುದು ಅವರಿಗೆ ಒಂದು ಹೊರೆಯೆಂದು ಭಾವಿಸಲಾಯಿತೆಂದೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

ನದಿಯನ್ನು ಸರೋವರವನ್ನಾಗಿ ಪರಿವರ್ತಿಸಿದ ಪ್ರಸಂಗ

ರಷ್ಯದ ವಿಜ್ಞಾನಿಗಳು ಹಲವು ವಿಧದ ಆಸ್ಫೋಟನೆಯ ಪ್ರಯೋಗದಿಂದ ಸೈಬೀರಿಯದ ಒಂದು ನದಿಯನ್ನು ಹಲವು ಸೆಕೆಂಡುಗಳ ಕಾಲದಲ್ಲಿ ಸರೋವರವನ್ನಾಗಿ ಪರಿವರ್ತಿಸಿರುವರೆಂದು ವರದಿಯಾಗಿದೆ.

ನಂಜನಗೂಡಿನಲ್ಲಿ ಕಾಲರಾ ಉಪದ್ರವ

ನಂಜನಗೂಡಿನಲ್ಲಿ ಕೆಲವು ದಿನಗಳಿಂದ ಕಾಲರಾ ವ್ಯಾಧಿಯು ಹರಡಿ ಇದುವರೆವಿಗೆ ೧೦-೧೨ ಮಂದಿ ಮೃತಪಟ್ಟಿರುವರೆಂದು ತಿಳಿದುಬಂದಿದೆ. ಈ ರೋಗವನ್ನು ತಡೆಗಟ್ಟಲು ಸ್ಥಳೀಯ ಚಿತ್ರಮಂದಿರಗಳು, ಹೋಟೆಲುಗಳು ಮೊದಲಾದವನ್ನು ಎರಡು ವಾರ ಕಾಲ ಮುಚ್ಚಲು ಆಜ್ಞೆ ಮಾಡಲಾಗಿದೆ. ಜನರಿಗೆ ಇನಾಕ್ಯುಲೇಷನ್ ಚುಚ್ಚಲಾಗುತ್ತಿದೆ.

೧೭ ಮಂದಿ ಭಿಕ್ಷುಕರ ಬಂಧನ

ರಾಜಧಾನಿಯ ಪುರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ನೆನ್ನೆ ದಿನ ಸಿಬ್ಬಂದಿಯೊಡನೆ ನಗರದಲ್ಲಿ ೧೭ ಮಂದಿ ಭಿಕ್ಷುಕರನ್ನು ಬಂಧಿಸಿ ಭಿಕ್ಷುಕರ ವಸತಿಗೃಹಕ್ಕೆ ಸೇರಿಸಿರುತ್ತಾರೆ.

ಸಂಸ್ಥಾನದಲ್ಲಿ ಸಿಮೆಂಟು ಉತ್ಪತ್ತಿ ಹೆಚ್ಚಿದೆ

ಮೈಸೂರು ಸಂಸ್ಥಾನದಲ್ಲಿ ಸಿಮೆಂಟಿನ ತಯಾರಿಕೆಯು ಇದುವರೆಗೆ ದಿನಂಪ್ರತಿ ೭೦ ಟನ್ನುಗಳಷ್ಟಿದ್ದುದು ಈಗ ೨೦೦ ಟನ್ನುಗಳಿಗೆ ಏರುವುದಾಗಿ ತಿಳಿದುಬಂದಿದೆ.

ವಿಶ್ವದಲ್ಲೇ ದೊಡ್ಡದಾದ ಪರಮಾಣು ಕೇಂದ್ರ

ಐರೋಪ್ಯ ರಾಷ್ಟ್ರಗಳ ಪ್ರಮುಖ ಅಣು ವೈಜ್ಞಾನಿಕರು ಕೋಪನ್‌ಹೇಗನ್ನಿನಲ್ಲಿ ಸಭೆ ಸೇರಿ ಡೆನ್ಮಾರ್ಕ್ ಅಥವ ಸ್ವಿಟ್ಜರ್‌ಲೆಂಡಿನಲ್ಲಿ ವಿಶ್ವದಲ್ಲೇ ದೊಡ್ಡ ಪರಮಾಣು ಸಂಶೋಧಕ ಕೇಂದ್ರವನ್ನು ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ ಬೆಲ್ಜಿಯಂ, ಹಾಲೆಂಡ್, ಸ್ವಿಟ್ಜರ್ಲೆಂಡ್, ಡೆನ್ಮಾರ್ಕ್, ನಾರ್ವೆ, ಸ್ವೀಡ್, ಮತ್ತು ಯುಗೋಸ್ಲೇವಿಯ ಈ ಹತ್ತು ರಾಷ್ಟ್ರಗಳೂ ಸೇರಿ ಸ್ಥಾಪಿಸಬೇಕೆಂದು ನಿರ್ಧರಿಸಿದರು. ಅದನ್ನು ನಿರ್ಮಿಸಲು ೫೦ ಲಕ್ಷ ಪೌಂಡು ವೆಚ್ಚ ತಗಲುವುದೆಂದೂ, ಸುಮಾರು ಏಳು ವರ್ಷಕಾಲ ಹಿಡಿಯುವುದೆಂದೂ ಹೇಳಲಾಗಿದೆ. ಇದರ ಸ್ಥಾಪನೆಗೆ ಅಮೆರಿಕದ ಸಹಾಯವನ್ನು ಕೇಳುವುದಿಲ್ಲವೆಂದೂ ಹೇಳಲಾಗಿದೆ.

ಗೋಡೆ ಕುಸಿದು ಮೂವರು ಜಾಡಮಾಲಿಗಳ ಮರಣ

ಪಾಟ್ನಾದ ೧೦ ಮಂದಿ ಜಾಡಮಾಲಿಗಳು ಒಂದು ಮನೆಯ ಪಕ್ಕದ ಚರಂಡಿಯನ್ನು ಚೊಕ್ಕಟ ಮಾಡುತ್ತಿದ್ದಾಗ ಮನೆಯ ಗೋಡೆಯು ಕುಸಿದುಬಿದ್ದು ಮೂವರು ಮಡಿದಿರುವರೆಂದೂ, ಇನ್ನಿಬ್ಬರಿಗೆ ತೀವ್ರ ಗಾಯಗಳಾಗಿವೆಯೆಂದೂ ತಿಳಿದುಬಂದಿದೆ.

ಪೋಲೀಸ್ ಇನ್ಸ್‌ಪೆಕ್ಟರ ಮನೆ ಬೀಗ ಮುರಿದು ಕಳುವು

ಪೂನಾದ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರರು ಕಳೆದ ಗುರುವಾರ ಕೆಲಸದ ಮೇಲೆ ಹೋಗಿದ್ದಾಗ ಯಾರೋ ಕಳ್ಳರು ಅವರ ಮನೆ ಬೀಗವನ್ನು ಒಡೆದು ಒಳಕ್ಕೆ ನುಗ್ಗಿ ಅಲ್ಲಿದ್ದ ಒಂದು ಬಂದೂಕ ಮತ್ತು ಹಲವು ತೋಟಾಗಳನ್ನು ಅಪಹರಿಸಿರುವರೆಂದು ವರದಿಯಾಗಿದೆ.

ಪೆಟ್ಟಿಗೆ ಗಾಡಿ ಬೇಕಾಗಿದೆ

ಒಳ್ಳೆ ಸ್ಥಿತಿಯಲ್ಲಿರುವ, ಮಕ್ಕಳು ಸ್ಕೂಲಿಗೆ ಹೋಗಲನುಕೂಲವಾದ ಒಂಟೆತ್ತಿನ ಪೆಟ್ಟಿಗೆ ಗಾಡಿ ಬೇಕಾಗಿದೆ. ಮಾರಲಿಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸಿ. ವಿ. ರಾಮರ್ ಅಂಡ್ ಸನ್ಸ್,
ಬರ್ಮಾಶೆಲ್ ಏಜೆಂಟ್ಸ್,
ಚಾಮರಾಜನಗರ.

ಪಶ್ಚಿಮ ಬಂಗಾಳದಲ್ಲಿ ಬೈಸಿಕಲ್ ಕಾರ್ಖಾನೆ

ಕಲ್ಕತ್ತೆಗೆ ೧೪ ಮೈಲಿ ದೂರದ ಸ್ನಾಪುರದ ಬಳಿ ಬೈಸಿಕಲ್ ಕಾರ್ಖಾನೆಯೊಂದನ್ನು ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಉಪಮಂತ್ರಿ ಶ್ರೀ ಡಿ. ಪಿ. ಕರಮರ್ಕರ್‌ರವರು ಮೊನ್ನೆ ಆರಂಭಿಸಿದರು. ಭಾರತ ಮತ್ತು ಬ್ರಿಟನ್ನಿನ ಸಂಯುಕ್ತ ಬಂಡವಾಳವುಳ್ಳ ಈ ಕಾರ್ಖಾನೆಯಲ್ಲಿ ವರ್ಷಕ್ಕೆ ಒಂದು ಲಕ್ಷ ಬೈಸಿಕಲ್ಲುಗಳು ತಯಾರಾಗುವುವೆಂದು ಗೊತ್ತಾಗಿದೆ.

ಕೈಲಿದ್ದ ನೋಟಿನ ಕಂತೆ ರಣಹದ್ದಿನ ಪಾಲು

ಉತ್ತರ ಭಾರತದ ಜಲಗಾಂ ಎಂಬ ಊರಿನ ಬಳಿ ಜಲನಾಥ್ ಎಂಬಲ್ಲಿ ಒಬ್ಬ ಧನಿಕನು ಕಳೆದ ೧೮ನೇ ತಾರೀಖು ಕೈಲಿ ನೋಟಿನ ಕಂತೆಯನ್ನು ಹಿಡಿದುಕೊಂಡು ರಸ್ತೆಯಲ್ಲಿ ಹೋಗುತ್ತಿದ್ದಾಗ ಒಂದು ರಣಹದ್ದು ನೋಟಿನ ಕಂತೆಯನ್ನು ಹಾರಿಸಿಕೊಂಡು ಪರಾರಿಯಾಯಿತೆಂದೂ, ಅದನ್ನು ವಾಪಸು ಪಡೆಯಲು ಅವನು ಪಟ್ಟ ಪ್ರಯತ್ನವೆಲ್ಲಾ ವಿಫಲವಾಯಿತೆಂದೂ ವರದಿಯಾಗಿದೆ.

ಪೌರ ಸಭೆಯ ಉಪಾಧ್ಯಕ್ಷತೆಗೆ ಲಿಂಗಯ್ಯನವರ ಆಯ್ಕೆ

ಸ್ವಂ. ವ.] ಶ್ರೀರಂಗಪಟ್ಟಣ ೨೩

ಗಂಜಾಂ ಶ್ರೀ ಲಿಂಗಯ್ಯನವರು ಇಲ್ಲಿನ ಪೌರಸಭಾ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ.

ಜಿಲ್ಲಾಧಿಕಾರಿಗಳ ಭೇಟಿ

ಮಂಡ್ಯದ ಜಿಲ್ಲಾಧಿಕಾರಿಗಳಾದ ಶ್ರೀ ಬಿ. ಬೀರಪ್ಪನವರು ಇಲ್ಲಿನ ಪೌರ ಸಭಾ ಕಛೇರಿಗೆ ಮೊನ್ನೆ ಭೇಟಿಯಿತ್ತರು. ಅಲ್ಲದೆ ಇಲ್ಲಿ ರೈಲ್ವೆ ಸ್ಟೇಷನ್ ಬಳಿ ಇರುವ ಹುಲ್ಲಿನ ಕೇಂದ್ರಕ್ಕೂ ಭೇಟಿಯಿತ್ತರು.

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು.

D. HANUMIAH'S COLLEGE OF COMMERCE, MYSORE

Admissions to the Junior I. com class continued Junior I Com class commences working from 30-6-52.

SRI RAGHAVENDRA INSTITUTE

32, East Cross, Ashoka Road

Classes from 25th June 52

		Monthly	Full
1. L. S.	Rs	5	45
2. Madras Matric	,,	10	75
3. S.S.L.C. (Sup)	,,	10	30

Suitable time to employed Persons

Office time:- 8 A.M....10 A.M
7 P.M....8 P.M

ಪ್ರಕಟಣೆ

ನಂಜನಗೂಡು ಟೌನ್ ಮುನಿಸಿಪಾಲಿಟಿ

ತಾ|| 1-7-52 ಆರಭ್ಯ 31-3-53 ರ ಪೂರ್ತಿ ಆಗುವ 9 ತಿಂಗಳುಗಳಲ್ಲಿ ಟೋಲು ವಸೂಲಿ ಮಾಡುವ ಬಾಬನ್ನು ಟೆಂಡರು ಮೂಲಕ ವಿಲೇ ಮಾಡಲ್ಪಡುತ್ತೆ. ತಾ|| 30-6-52 ರ ಮಧ್ಯಾಹ್ನ 3 ಘಂಟೆಯೊಳಗಾಗಿ ಮುನಿಸಿಪಲ್ ಆಫೀಸಿಗೆ ಡಿಪಾಜಿಟ್ ಸಮೇತ ಟೆಂಡರು ಹಾಜರ್ಪಡಿಸಬೇಕು. ಈ ಸಂಬಂಧವಾದ ಷರತ್ತುಗಳನ್ನು ಮುನಿಸಿಪಲ್ ಆಫೀಸಿನಲ್ಲಿ ತಿಳಿಯಬಹುದು.

ಎಸ್. ಕೆ. ಮರಿಕೆಂಪಯ್ಯ,
ಪ್ರೆಸಿಡೆಂಟ್.

Edited, Printed and Published by A. R. Nagarajan at Sadhvi Press, D. Subbiah Road, Mysore.

ಟೆಲಿಫೋನ್ ನಂ. 792 || ವಂದೇ ಮಾತರಂ || ಬಿಡಿ ಪ್ರತಿ 3 ಪೈ —

ಸಾಧ್ವಿ

ಸಂಪುಟ ೧೦] ಬುಧವಾರ ೨೫-೬-೫೨ [ಸಂಚಿಕೆ ೨೬೩

ಭಾರತದ ರಾಷ್ಟ್ರಧ್ವಜಕ್ಕೆ ಕಾಶ್ಮೀರದ ಪೂರ್ಣನಿಷ್ಠೆ

ಭಾರತದ ಧ್ವಜಕ್ಕೆ ಕಾಶ್ಮೀರದ ನಿಷ್ಠೆ

..ಈಗ ದಿನಪತ್ರಿಕೆಗಳಲ್ಲಿ ಪ್ರಸಾರ ಭಾಷಣ ಮಾಡುತ್ತಾ ನೆನ್ನೆ ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲಾರವರು ಭಾರತದ ಇತರ ಪ್ರದೇಶಗಳಲ್ಲಿ ಭಾರತದ ಧ್ವಜಕ್ಕಿರುವ ಗೌರವ ಮತ್ತು ಸ್ಥಾನವೇ ಕಾಶ್ಮೀರದಲ್ಲೂ ಅದಕ್ಕಿರುವುದೆಂದು ತಿಳಿಸಿರುತ್ತಾರೆ. ಕಾಶ್ಮೀರದ ರಾಜ್ಯಾಂಗ ಸಭೆಯು ಆ ಸಂಸ್ಥಾನಕ್ಕಾಗಿ ಒಂದು ಧ್ವಜವಿರಬೇಕೆಂದು ನಿರ್ಣಯಿಸಿರುವುದರಿಂದ ಭಾರತದ ಧ್ವಜಕ್ಕೆ ಚ್ಯುತಿ ಬರದೆಂದೂ, ಆ ಸಂಸ್ಥಾನದಲ್ಲಿ ಇದುವರೆಗೆ ಹಾರುತ್ತಿದ್ದ "ಏಕ ಸಾಮ್ರಾಜ್ಯ" ದ ಧ್ವಜದ ಬದಲು ಹೊಸ ಧ್ವಜವನ್ನು ಹಾರಿಸಲಾಗುವುದೆಂದೂ ಅವರು ಸ್ಪಷ್ಟಪಡಿಸಿರುತ್ತಾರೆ.

ಬ್ಲಿಟ್ಸ್ ಸಂಪಾದಕರ ದಸ್ತಗಿರಿ

ಗಣಿತ ಶಾಸ್ತ್ರದಲ್ಲಿ ಹಣ ಎಂಬ ಶಿರೋನಾಮೆಯಲ್ಲಿ ಬರೆಯಲ್ಪಟ್ಟ ಲೇಖನದ ಬಗ್ಗೆ ಆಕ್ಷೇಪಿಸಿ ಲಕ್ನೋವಿನ ಪ್ರೊಫೆಸರ್ ಡಾ|| ಎ. ಎನ್. ಸಿಂಗ್‌ರವರು ಮಾನನಷ್ಟ ಮೊಕದ್ದಮೆಯನ್ನು ಹೂಡಿರುವ ಸಂಬಂಧವಾಗಿ ಬೊಂಬಾಯಿಯ "ಬ್ಲಿಟ್ಸ್" ಪತ್ರಿಕೆ ಸಂಪಾದಕ ಆರ್. ಕೆ. ಕರಾಂಜಿಯಾರವರನ್ನು ದಸ್ತಗಿರಿ ಮಾಡಿ, ನಂತರ ೭,೦೦೦ ರೂ. ಜಾಮೀನಿನ ಮೇಲೆ ಬಿಡಲಾಗಿದೆ.

ಮಲೆನಾಡಿನ ಅಭಿವೃದ್ಧಿಗೆ ೧ ಕೋಟಿ ರೂ. ವೆಚ್ಚ

ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ನೀರಾವರಿ ಕಾಲುವೆಗಳಿಗೆ ೨೫ ಲಕ್ಷ ರೂ., ರಸ್ತೆ, ಸೇತುವೆಗಳು, ಅಂತರ ಗ್ರಾಮ ರಸ್ತೆಗಳಿಗಾಗಿ ೩೫ ಲಕ್ಷ ರೂ., ಮತ್ತು ಆರೋಗ್ಯ ಕೇಂದ್ರಗಳಿಗಾಗಿ ೪೦ ಲಕ್ಷ ರೂ. ಗಳನ್ನು ಪಂಚ ವಾರ್ಷಿಕ ಯೋಜನೆಯಲ್ಲಿ ಒದಗಿಸಲಾಗುವುದೆಂದು ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ನೆನ್ನೆ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸುತ್ತಾರೆ.

ರೆವಿನ್ಯೂ ಅಪೀಲುಗಳನ್ನು ಇತ್ಯರ್ಥ ಮಾಡಲು ಮಂತ್ರಿಗಳ ಬದಲು ಬೋರ್ಡೊಂದನ್ನು ನೇಮಿಸಲಾಗುವುದೆಂದು ರೆವಿನ್ಯೂ ಸಚಿವರು ತಿಳಿಸಿರುತ್ತಾರೆ.

ವಿಶ್ವಸಂಸ್ಥೆ ಸೈನ್ಯಾಧಿಪತಿ ಸ್ಥಾನಕ್ಕೆ ಬ್ರಿಟಿಷ್ ಅಧಿಕಾರಿ

ಕೊರಿಯಾ ಯುದ್ಧದಲ್ಲಿ ವಿಶ್ವಸಂಸ್ಥೆ ಸೈನ್ಯಗಳ ಮುಖ್ಯ ಸೇನಾನಿಯಾಗಿ ಬ್ರಿಟನ್ನಿನ ಸೈನ್ಯಾಧಿಕಾರಿಯನ್ನು ನೇಮಿಸುವುದಕ್ಕೆ ಅಮೆರಿಕವು ಸಮ್ಮತಿಸಲಿರುವುದೆಂದು ಗೊತ್ತಾಗಿದೆ. ಅಲ್ಲಿ ಈಗ ಇರುವ ಅಮೆರಿಕಾ ಸೈನ್ಯಾಧಿಪತಿ ಮಾರ್ಕ್ ಕ್ಲಾರ್ಕ್‌ರವರೂ ಸಹ ಈ ಸಲಹೆಗೆ ಒಪ್ಪಿಗೆಯನ್ನು ಸೂಚಿಸಿರುವರೆಂದು ಹೇಳಲಾಗಿದೆ.

ಭಾರತದಲ್ಲಿ ಟ್ರ್ಯಾಕ್ಟರುಗಳ ತಯಾರಿಕೆ

ಟ್ರ್ಯಾಕ್ಟರುಗಳನ್ನು ಭಾರತದಲ್ಲೇ ತಯಾರಿಸುವ ಬಗ್ಗೆ ೩ ಯೋಜನೆಗಳು ಸಿದ್ಧವಾಗಿರುವುವೆಂದು ಭಾರತದ ವ್ಯವಸಾಯ ಮಂತ್ರಿಗಳು ತಿಳಿಸಿರುತ್ತಾರೆ.

ಕ್ರಿಮಿ ಯುದ್ಧದ ಅಪಾದನೆ ಬಗ್ಗೆ ಅಮೆರಿಕಾ ನಿರ್ಣಯ

ಕೊರಿಯದಲ್ಲಿ ವಿಶ್ವ ಸಂಸ್ಥೆ ಸೈನಿಕರು ಕ್ರಿಮಿ ಯುದ್ಧ ನಡೆಸಿರುವರೆಂದು ರಷ್ಯವು ಆರೋಪಿಸಿರುವ ಬಗ್ಗೆ ಭದ್ರತಾ ಮಂಡಲಿಯಲ್ಲಿ ಅಮೆರಿಕವು ಒಂದು ನಿರ್ಣಯವನ್ನು ಮಂಡಿಸಿ ಈ ಸಂಬಂಧವಾಗಿ ಸ್ವತಂತ್ರ ಅಂತರ ರಾಷ್ಟ್ರೀಯ ಪರಿಶೀಲನೆ ನಡೆಯಬೇಕೆಂದು ಸೂಚಿಸುರುವದಾಗಿ ವರದಿಯಾಗಿದೆ. ಈ ನಿರ್ಣಯದ ಮೇಲೆ ರಷ್ಯಾ ಪ್ರತಿನಿಧಿಯು ತನ್ನ ಅಭಿಪ್ರಾಯವನ್ನು ಸೂಚಿಸಿ, ಚೀನಾ ಮತ್ತು ಉತ್ತರ ಕೊರಿಯಾ ಪ್ರತಿನಿಧಿಗಳನ್ನು ಚರ್ಚೆಗಾಗಿ ಕರೆಯಬೇಕೆಂದು ಸೂಚಿಸಿರುವರು. ನಿರ್ಣಯದ ಪರಿಶೀಲನೆಯನ್ನು ಮುಂದಕ್ಕೆ ಹಾಕಲಾಗಿದೆ.

ಜಮಾಬಂದಿ ಕಾಲದಲ್ಲಿ ಗ್ರಾಮಾಧಿಕಾರಿಗಳಿಗೆ ಅಸನ

ಮದರಾಸಿನ ಉಚ್ಚ ಅಧಿಕಾರಿಗಳು ಜಮಾಬಂದಿ ನಡೆಸುವ ವೇಳೆಗಳಲ್ಲಿ ಗ್ರಾಮಾಧಿಕಾರಿಗಳು ಜಮಾಬಂದಿ ಮುಗಿಯುವವರೆಗೂ ಕುಳಿತುಕೊಳ್ಳಲು ಅವಕಾಶವಿಲ್ಲದೆ ಗಂಟೆಗಟ್ಟಲೆ ನಿಂತೇ ಇರಬೇಕಾದ ಪರಿಸ್ಥಿತಿಯನ್ನು ಕುರಿತು ಸರ್ಕಾರದವರು ಎಲ್ಲ ಅಧಿಕಾರಿಗಳಿಗೂ ಸೂಚನೆ ಕಳುಹಿಸಿ ಇನ್ನು ಮುಂದೆ ಜಮಾಬಂದಿ ಕಾಲದಲ್ಲಿ ಗ್ರಾಮಾಧಿಕಾರಿಗಳು ಕುಳಿತುಕೊಳ್ಳುವುದಕ್ಕಾಗಿ ಆಸನದ ವ್ಯವಸ್ಥೆ ಮಾಡಬೇಕೆಂದು ತಿಳಿಸಿರುವರೆಂದು ವರದಿಯಾಗಿದೆ.

ಭಾರತ ಮತ್ತು ಪಾಕಿಸ್ತಾನಕ್ಕೆ ಟ್ರಿಗ್ವೆ ಲೈರವರ ಭೇಟಿ

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾದ ಟ್ರಿಗ್ವೆ ಲೈರವರು ಬರುವ ಚಳಿಗಾಲದಲ್ಲಿ ಭಾರತ, ಪಾಕಿಸ್ತಾನ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಭೇಟಿ ಕೊಡುವರೆಂದು ವರದಿಯಾಗಿದೆ.

೪೯,೦೦೦ ಟನ್ ಗೋಧಿಗೆ ೩೭,೦೦೦ ಟನ್ ಅಕ್ಕಿ

ಭಾರತವು ೪೯,೦೦೦ ಟನ್ ಗೋಧಿಯ ಬದಲಾಗಿ ಪಾಕಿಸ್ತಾನವು ೩೭,೦೦೦ ಟನ್ ಅಕ್ಕಿಯನ್ನು ಕೊಡಲಿದೆ.

ಮದ್ದೂರು-ಸತ್ಯಮಂಗಲ ರೈಲುಮಾರ್ಗಕ್ಕೆ ಏರ್ಪಾಡು

ಶಾಸನ ಸಭೆಯಲ್ಲಿ ನಿರ್ಣಯ

ಬೆಂಗಳೂರು ೨೫

ಸಂಸ್ಥಾನದ ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಎಂ. ಚಿಕ್ಕಲಿಂಗಯ್ಯನವರು ನಿರ್ಣಯವೊಂದನ್ನು ತಂದು ಸತ್ಯಮಂಗಲ ಮತ್ತು ಮದ್ದೂರುಗಳ ನಡುವೆ ರೈಲು ಮಾರ್ಗದ ಸಂಪರ್ಕವೇರ್ಪಡಬೇಕೆಂದು ಸೂಚಿಸಿರುವುದನ್ನು ಸಭೆಯು ಒಪ್ಪಿತು. ಈ ರೈಲು ಮಾರ್ಗವನ್ನು ಮಳವಳ್ಳಿ, ಕೊಳ್ಳೇಗಾಲ ಮತ್ತು ಚಾಮರಾಜನಗರ ಮುಂತಾದ ವ್ಯಾಪಾರ ಸ್ಥಳಗಳ ಮೂಲಕ ನಿರ್ಮಿಸಬೇಕೆಂದು ನಿರ್ಣಯದಲ್ಲಿ ಕೋರಲಾಗಿತ್ತು. ಶ್ರೀ ಬಿ. ಪಿ. ನಾಗರಾಜಮೂರ್ತಿಯವರು ಅದನ್ನು ಅನುಮೋದಿಸಿದರು.

ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು ಈ ಮಾರ್ಗ ನಿರ್ಮಾಣದ ಬಗ್ಗೆ ರೈಲ್ವೆ ಬೋರ್ಡಿಗೆ ಶಿಫಾರಸು ಮಾಡುವುದಾಗಿ ಸೂಚಿಸಿದರು.

೧ ಲಕ್ಷ ರೂ. ವೆಚ್ಚದಿಂದ ಮೈಸೂರು ಮತ್ತು ಬೆಂಗಳೂರುಗಳಲ್ಲಿ ಹೈಸ್ಕೂಲು ಮತ್ತು ಕಾಲೇಜುಗಳ ಹಿಂದು ವರ್ಗದ ವಿದ್ಯಾರ್ಥಿಗಳಿಗಾಗಿ ಒಂದೊಂದು ನಿಲಯವನ್ನು ನಿರ್ಮಾಣ ಮಾಡಬೇಕೆಂದು ಶ್ರೀ ಎಂ. ಮಾದಯ್ಯನವರು ನಿರ್ಣಯವೊಂದನ್ನು ತಂದರು. ೪|| ಲಕ್ಷ ರೂ. ವೆಚ್ಚದಲ್ಲಿ ಪ್ರತಿ ಜಿಲ್ಲಾ ಕೇಂದ್ರಗಳಲ್ಲೂ ಇಂತಹ ನಿಲಯವಿರಬೇಕೆಂದು ಶ್ರೀ ಬಿ. ರಾಚಯ್ಯನವರು ಸೂಚಿಸಿದರು. ನಿರ್ಣಯ ಮತ್ತು ತಿದ್ದುಪಡಿಗಳು ಬಿದ್ದು ಹೋದುವು.

LATEST NEWS

ಸೆನೆಟ್ಟಿಗೆ ಚುನಾವಣೆ

ಮೈಸೂರು ೨೫

ಶ್ರೀಗಳಾದ ಎ. ಶ್ರೀನಿವಾಸ ಮೂರ್ತಿ, ಎಂ. ಪಿ. ಎಲ್. ಶಾಸ್ತ್ರಿ, ಗುಬ್ಬಯ್ಯ, ಗುರುವಾರಪ್ಪ, ಎಲ್. ಶ್ರೀಕಂಠಯ್ಯ, ಟಿ. ಎಸ್. ರಾಜಗೋಪಾಲಯ್ಯಂಗಾರ್ ಇವರುಗಳು ವಿಶ್ವ ವಿದ್ಯಾನಿಲಯದ ಸೆನೆಟ್ಟಿಗೆ ಪದವೀಧರರ ಕ್ಷೇತ್ರದಿಂದ ಆರಿಸಿ ಬಂದಿರುವರೆಂದು ಗೊತ್ತಾಗಿದೆ.

ಸಂಸ್ಥಾನದಲ್ಲಿ ೫-೬ ತಿಂಗಳಿಗೆ ಆಗುವಷ್ಟು ಧಾನ್ಯವಿದೆ

ಶಾಸನ ಸಭೆಯಲ್ಲಿ ಮಂತ್ರಿಗಳ ವಿವರಣೆ

ಸ್ವಂ. ವ. ಸೋ||] ಬೆಂಗಳೂರು ೨೫

ಈ ದಿನ ಶಾಸನ ಸಭೆಯಲ್ಲಿ ವ್ಯವಸಾಯ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಜಮೀನು ಅಭಿವೃದ್ಧಿಗಾಗಿ ಫೋರ್ಡ್ ಫೌಂಡೇಷನ್ನಿನವರು ಮಂಡ್ಯ ಜಿಲ್ಲೆಯಲ್ಲಿ ಏರ್ಪಡಿಸುವ ದಕ್ಷಿಣದ ವ್ಯವಸಾಯ ಶಿಕ್ಷಕರ ಕೇಂದ್ರಕ್ಕೆ ಮೈಸೂರಿನ ೪೦ ಮಂದಿಯನ್ನು ಆರಿಸಲಾಗಿದೆಯೆಂದೂ, ಮದ್ರಾಸು, ತಿರುವಾಂಕೂರು ಮುಂತಾದ ಎಲ್ಲ ಕಡೆಗಳಿಂದಲೂ ಒಟ್ಟು ೧೮೦ ಜನರು ಅಲ್ಲಿ ಶಿಕ್ಷಣ ಪಡೆಯುವರೆಂದೂ ತಿಳಿಸಿದರು. ಮೈಸೂರಿನ ವ್ಯವಸಾಯದ ಅಡಿಷನಲ್ ಡೈರೆಕ್ಟರು ಕೇಂದ್ರದ ಮೇಲ್ವಿಚಾರಣೆಯಲ್ಲಿರುವರೆಂದೂ ತಿಳಿಸಿದರು.

ಆಹಾರದ ಪರಿಸ್ಥಿತಿ ಸಂಬಂಧವಾದ ಪ್ರಶ್ನೆಗಳಿಗೆ ಉತ್ತರವಿತ್ತು, ೫-೬-೫೨ನೇ ತಾ|| ನ ದಾಸ್ತಾನು ಪ್ರಕಾರ ಐದು ಆರು ತಿಂಗಳುಗಳಿಗೆ ಬಗುವಷ್ಟು ಆಹಾರವು ಸಂಸ್ಥಾನದಲ್ಲಿರುವುದೆಂದು ಅವರು ಹೇಳಿದರು. ದಾಸ್ತಾನಿನ ಬಗ್ಗೆ ಅವರು ಈ ರೀತಿ ಪಟ್ಟಿಯನ್ನು ಕೊಟ್ಟರು:—

ಪಲ್ಲಾಗಳಲ್ಲಿ- ಭತ್ತ: ೬೬೧೯೦೨; ಅಕ್ಕಿ ೧೯೫೯೫೯; ರಾಗಿ ೧೫೪೯೯೭; ಜೋಳ ೧೪೭೨೨೩; ಗೋಧಿ ೧೬೫೧೦೦; ಸಕ್ಕರೆ ೨೧೯೯೪ ಮೂಟೆ.

ಆಹಾರದ ಪೂರ್ಣ ಪಡೆಯುವಿಕೆಗೆ ಇರುವ ವಿಚಾರದಲ್ಲಿ ನಿಧಾನವಾಗಿ ಹೋಗಬೇಕೆಂದು ಸರ್ಕಾರಕ್ಕೆ ಸಲಹೆ ಬಂದಿರುವುದೆಂದು ಅವರು ಹೇಳಿದರು. ಕಡ್ಡಾಯದ ಕಡಿತವಿರುವ ಪ್ರದೇಶಗಳಿಗೆ ತಮ್ಮ ಸ್ವಂತ ಧಾನ್ಯವನ್ನು ಕೊಂಡೊಯ್ಯಲು ಅವಕಾಶ ಕೊಡಲು ಸಾಧ್ಯವಿಲ್ಲವೆಂದೂ ಇದರಿಂದ ಗ್ರಾಮಾಂತರ ಪ್ರದೇಶಗಳಿಗೆ ತೊಂದರೆಯಾಗುವುದೆಂದೂ ಸಚಿವರು ತಿಳಿಸಿದರು.

ಶ್ರೀ ಹೆಚ್. ಎಂ. ಚನ್ನಬಸಪ್ಪನವರಿಗೆ ಗೊಬ್ಬರ ಗೋಡು ಮುಂತಾದುವು ಸಂಬಂಧವಾಗಿ ಕಾನೂನುಬದ್ಧವ ಸಹಾಯ ಮಾಡಲಾಗಿರುವುದೆಂದು ಸಚಿವರು ಮತ್ತೊಂದು ಪ್ರಶ್ನೆಗೆ ಉತ್ತರವಿತ್ತರು.

ಲೋಯರ್ ಸೆಕೆಂಡರಿ ಪರೀಕ್ಷೆ ರದ್ದಿನ ಬಗ್ಗೆ ನಿರ್ಣಯ ವಾಪಸು

ಶಾಸನ ಸಭೆಯಲ್ಲಿ ನೆನ್ನೆ ಶ್ರೀ ಎಸ್. ಕರಿಯಪ್ಪನವರು ನಿರ್ಣಯವೊಂದರ ಮೂಲಕ, ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ರದ್ದುಗೊಳಿಸಬೇಕೆಂದು ಸೂಚಿಸಿದರು. ಇದೇ ವಿದ್ಯಾಭ್ಯಾಸ ಪದ್ಧತಿಯಲ್ಲೇ ಸುಧಾರಣೆ ಮಾಡಬೇಕೆಂದು ಸರ್ಕಾರದವರು ಉದ್ದೇಶಪಟ್ಟಿರುವಾಗ ಪ್ರತ್ಯೇಕವಾದ ಬದಲಾವಣೆಗಳನ್ನು ಈಗ ಮಾಡುವುದು ಸೂಕ್ತವಲ್ಲವೆಂದು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಲಾಗಿ, ಸೂಚಕರು ನಿರ್ಣಯವನ್ನು ವಾಪಸು ತೆಗೆದುಕೊಂಡರು.

ಕೇಂದ್ರ ಆಹಾರ ಸಲಹಾ ಸಮಿತಿಯ ರದ್ದು

ಸಂಸ್ಥಾನದ ಕೇಂದ್ರ ಆಹಾರ ಸಲಹಾ ಸಮಿತಿಯನ್ನು ಸರ್ಕಾರದವರು ರದ್ದುಗೊಳಿಸ ಆಜ್ಞೆ ಹೊರಡಿಸಿರುತ್ತಾರೆ.

…ನಿಸ್ಟರ ಮೇಲಿನ …ಪಾದನೆ ಪರಿಶೀಲನೆ

ಭಾರತದ ರಕ್ಷಣಾ ಇಲಾಖೆಯ ಆಯವ್ಯಯದ ಸಂಬಂಧವಾಗಿ ಪಾರ್ಲಿಮೆಂಟಿನಲ್ಲಿ ಕಮ್ಯೂನಿಸ್ಟ್ ಸದಸ್ಯರೊಬ್ಬರು ಮಾಡಿದ ಭಾಷಣವನ್ನು ಟೀಕಿಸಿ ಸಭಾ ಸದಸ್ಯರಾದ ಶ್ರೀ ಸತ್ಯನಾರಾಯಣಸಿನ್ಹರವರು, ಇಲ್ಲಿನ ಕಮ್ಯೂನಿಸ್ಟರ ಭಾಷಣಗಳು ವಿದೇಶೀಯರ ಅನುಕರಣಗಳೆಂದು ಹೇಳಿ ಆ ಬಗ್ಗೆ ಹಲವು ಆಧಾರಭೂತವಾದ ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿ ಅವುಗಳನ್ನು ಹಕ್ಕುಬಾಧ್ಯತಾ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗಿದೆ. ಈ ಆಪಾದನೆಗಳು ಮೋಸ ಮತ್ತು ಫೋರ್ಜರಿಯೆಂದು ಮತ್ತೊಬ್ಬ ಕಮ್ಯೂನಿಸ್ಟ್ ಸದಸ್ಯರು ತಿಳಿಸಿದ್ದರು

ಮದರಾಸು ಕೈಮಗ್ಗದವರಿಗೆ ಪರಿಹಾರ

ಮದರಾಸಿನ ಕೈಮಗ್ಗದವರಿಗೆ ಕೆಲಸವಿಲ್ಲದೆ ಉಂಟಾಗಿರುವ ತೊಂದರೆಯನ್ನು ನಿವಾರಿಸುವ ಸಲುವಾಗಿ ಸರ್ಕಾರದವರು ಒಂದು ಯೋಜನೆಯನ್ನು ಜಾರಿಗೆ ತಂದು ಪ್ರಾಂತ್ಯದ ೧೪ ಜಿಲ್ಲೆಗಳಲ್ಲಿ ಕೈಮಗ್ಗಗಳ ಸಹಕಾರ ಸಂಘಗಳಲ್ಲಿ ಮಗ್ಗದವರಿಗೆ ಕೆಲಸ ಕೊಡಿಸಿ, ಅವರು ಸಂಘಗಳಲ್ಲಿ ಷೇರುಗಳನ್ನು ಕೊಳ್ಳಲು ೨೫ ರೂ ಅನ್ನು ಸರ್ಕಾರದಿಂದ ಸಾಲವಾಗಿ ಕೊಟ್ಟು, ಇದನ್ನು ಸಹಕಾರ ಸಂಘಗಳವರು ಅವರಿಗೆ ಕೊಡುವ ಸಂಬಳದಲ್ಲಿ ಕಳೆಯಿಸುವಂತೆ ವ್ಯವಸ್ಥೆ ಮಾಡಲಿರುವರೆಂದು ವರದಿಯಾಗಿದೆ. ಈ ಯೋಜನೆಯು ಮುಂದಿನ ತಿಂಗಳು ೫ನೇ ತಾರೀಕಿನಿಂದ ಜಾರಿಗೆ ಬರಲಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಕೆ. ಗೋಪಿನಾಥ್ ಕೊಳಲು. ಮಧ್ಯಾಹ್ನ ೧-೩೦ ವೀಣೆ. ೧-೪೫ ಶ್ರೀಮತಿ ವಿಜಯಲಕ್ಷ್ಮಿ ರೆಕಾರ್ಡ್ ಸಂಗೀತ ೨ ಕೆ. ಗೋಪಿನಾಥ್ ಕೊಳಲು. ಸಂಜೆ ೫-೩೦ ಮತ್ತು ೭-೩೦ ಬಿ ರಾಜಮ್ಮ ಸಂಗೀತ. ೭ ಪಿಟೀಲು. ೭-೧೦ ಕನ್ನಡ ಗೀತೆಗಳು ೭ ಚಿತ್ರವಾಣಿ. ೮ ಭೀಮಸೇನ ಜೋಷಿ ರೆಕಾರ್ಡ್ ಸಂಗೀತ ೮-೧೫ ವಚನ ಗಾನ. ೯-೩೦ ಬಿ. ನಾಗೇಂದ್ರಪ್ಪ, ಕ್ಲಾರಿಯೊನೆಟ್ ೯-೧೫ ರಸ ನಿಮಿಷ. ೯-೩೦ ವಿವಿಧ ವಿನೋದಾವಳಿ.

ಸಮಾಜವಾದಿ ಪಕ್ಷದೊಡನೆ ಸೇರಲು ಕೆ.ಎಂ.ಪಿ. ಪಕ್ಷದ ಶರತ್ತು

ಮೈಸೂರಿನ ಶ್ರೀಮನ್ ಮಹಾರಾಜರ ಸ್ಥಾನವು ಈಗಿನಂತೆಯೇ ಮುಂದುವರಿಯುವುದಾದರೆ ಇಲ್ಲಿನ ಕೆ.ಎಂ.ಪಿ. ಪಕ್ಷದವರು ಸಮಾಜವಾದಿ ಪಕ್ಷದೊಡನೆ ಮಿಲನವಾಗಬಹುದೆಂದು ಆ ಪಕ್ಷದ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ.

Edited, Printed and Pub-
…shed by A. R. Nagarajan
…t Sadhvi Press, D. Subb-
…h Road, Mysore.

ಯಳಂದೂರು ಹೈಸ್ಕೂಲು ಕಟ್ಟಡಕ್ಕೆ ಧನ ಸಹಾಯ

ಸ್ವಂ.ಸು] ಅಗರ-ಮಾಂಬಳ್ಳಿ ೨೪

ಇಲ್ಲಿನ ಪೌರಸಭಾಧಿವೇಶನವು ಮೊನ್ನೆ ತಾಲ್ಲೂಕು ಅಮಲ್ದಾರ್ ಜ|| ಅಬ್ದುಲ್ ಬಷೀರ್ ಅಹಮದ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಅದಕ್ಕೆ ಮುಂಚೆ ಅಧ್ಯಕ್ಷರು ಸದಸ್ಯರೊಡನೆ ಗ್ರಾಮ ಬಡಾವಣೆ ಸಂದರ್ಭದಲ್ಲಿ ಸ್ಥಳ ಪರಿಶೀಲನೆ ನಡೆಸಿದರು

ಪೌರಸಭೆಯ ಉತ್ಪತ್ತಿಯು ತಿಂಗಳು ತಿಂಗಳಿಗೆ ಕಡಿಮೆಯಾಗುತ್ತಿರುವುದರ ಬಗ್ಗೆ ವಿಪುಲ ಚರ್ಚೆ ನಡೆಯಿತು ೫೧-೫೨ನೇ ಸಾಲಿಗೆ ಇದುವರೆಗೆ ೮೭ ಬೈಸಿಕಲ್ಲುಗಳಿಗೆ ಮಾತ್ರ ಕಂದಾಯ ವಸೂಲಾಗಿರುವುದೆಂದು ತಿಳಿದುಬಂದಿತು ಹಲ ಕೆಲವು ಬೈಸಿಕಲ್ ಅಂಗಡಿಗಳಿಗೆ ಪ್ರಸಕ್ತ ಸಾಲಿನ ಬಿಲ್ಲೆಗಳನ್ನು ಕೊಟ್ಟು ದುಡ್ಡು ಪಡೆದಿರುವುದಾದರೂ, ಸದರಿ ಹಣವು ಪೌರಸಭೆಗೆ ಜಮಾ ಆಗಿಲ್ಲವೆಂದು ತಿಳಿಸಿ, ಈ ಬಗ್ಗೆ ಸೂಕ್ತ ವಿಚಾರಣೆ ನಡೆಸುವುದಾಗಿ ಅಧ್ಯಕ್ಷರು ಭರವಸೆಯಿತ್ತರು.

ಯಳಂದೂರಿನ ಪೌರಸಭಾ ಹೈಸ್ಕೂಲ್ ಕಟ್ಟಡಕ್ಕಾಗಿ ೨,೦೦೦ ರೂ ಗಳ ಧನ ಸಹಾಯವನ್ನು ಮಂಜೂರು ಮಾಡಲಾಯಿತು

ಕೋಜೆ ಶಿಬಿರಕ್ಕೆ ಪಾಕಿಸ್ತಾನದ ವೀಕ್ಷಕರು

ಕೋಜೆ ದ್ವೀಪದಲ್ಲಿರುವ ಕೊರಿಯಾ ಖೈದಿಗಳ ಸ್ಥಿತಿಗತಿಗಳನ್ನು ಪರಿಶೀಲಿಸಲು ತಾಟಸ್ಥ್ಯ ದೇಶಗಳ ಸೈನಿಕ ವೀಕ್ಷಕರನ್ನು ಕಳುಹಬೇಕೆಂದು ಅಮೆರಿಕವು ಮಾಡಿರುವ ಸಲಹೆಗೆ ಪಾಕಿಸ್ತಾನವು ಒಪ್ಪಿರುತ್ತದೆ.

ಬೃಂದಾವನದಲ್ಲಿ ದೀಪೋತ್ಸವದ ಮೊಟಕು

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಕಡಿಮೆಯಾಗಿರುವುದರಿಂದ ಬೃಂದಾವನದಲ್ಲಿ ದಕ್ಷಿಣ ದಡದ ಪ್ರಥಮ ಹಂತ ಮತ್ತು ಉತ್ತರ ದಡದ ತೋಟಗಳಲ್ಲಿ ಮಾತ್ರ ದೀಪೋತ್ಸವವನ್ನು ನಡೆಸಲು ಏರ್ಪಡಿಸಲಾಗಿದೆ. ಸಾಕಷ್ಟು ನೀರು ಜಲಾಶಯದಲ್ಲಿ ಶೇಖರಣೆಯಾಗುವವರೆಗೂ ಈ ಏರ್ಪಾಡು ಜಾರಿಯಲ್ಲಿರುವುದು.

ಬೆಂಗಳೂರಿನಲ್ಲಿ ೧ ರೂಪಾಯಿಗೆ ೪ ಮಣ ಸೌದೆ

ಮಾವು, ಗೋಣಿ, ಆಲ ಮುಂತಾದ ಕಾಡು ಸೌದೆಯ ಮಾರಾಟದ ದರವನ್ನು ಬೆಂಗಳೂರು ನಗರದಲ್ಲಿ ೧ ರೂ. ಗೆ ಉಂಡೆಯದು ೪ ಮಣದಂತೆಯೂ, ಒಡೆದುದು ೩|| ಮಣದಂತೆಯೂ ಗೊತ್ತುಪಡಿಸಲಾಗಿದೆ.

ರೈಲು ಪ್ರಯಾಣಿಕನಿಂದ ೧೦ ಸಾವಿರ ರೂ. ದಂಡೆ

ಲಕ್ನೋ ಬರೇಲಿ ನಡುವೆ ಒಂದು ಪ್ಯಾಸೆಂಜರ್ ರೈಲಿನ ೩ನೇ ತರಗತಿ ಗಾಡಿಯಲ್ಲಿ ಕಳೆದ ಗುರುವಾರ ಪ್ರಯಾಣ ಮಾಡುತ್ತಿದ್ದ ಒಬ್ಬನ ಬಳಿ ಇದ್ದ ೧೦ ಸಾವಿರ ರೂ. ಅನ್ನು ಮೂವರು ಅಪಹರಿಸಿದ ಪ್ರಸಂಗವು ವರದಿಯಾಗಿದೆ. ಅವರು ಗುಂಡು ಹೊಡೆದು ಪ್ರಯಾಣಿಕನನ್ನು ಗಾಯಗೊಳಿಸಿ ಈ ಕೃತ್ಯ ನಡೆಸಿದರೆಂದು ಹೇಳಲಾಗಿದೆ.

ಜರ್ಮನಿಗೆ ಮೈಸೂರು ಆನೆಗಳು

ಜರ್ಮನಿಯ ಮೃಗಾಲಯಗಳಿಗಾಗಿ ಮೈಸೂರು ಮತ್ತು ಕೊಡಗಿನ ೮ ಆನೆಮರಿಗಳನ್ನು ಬೊಂಬಾಯಿಯಿಂದ ಹಡಗಿನ ಮೂಲಕ ಕಳೆದ ಶನಿವಾರ ರವಾನಿಸಲಾಯಿತು. ಅವುಗಳ ಜೊತೆಯಲ್ಲಿ ಎರಡು ಚಿರತೆಗಳನ್ನೂ ಕಳುಹಲಾಗಿದೆ

ಗ್ರಾಮಾಧಿಕಾರಿಗಳ ಮಕ್ಕಳಿಗೂ ಶಿಕ್ಷಣ ಶುಲ್ಕದ ವಿನಾಯಿತಿ ಬೇಕು

ಮದರಾಸಿನಲ್ಲಿ ಎಲಿಮೆಂಟರಿ ಶಾಲಾ ಅಧ್ಯಾಪಕರು ಮತ್ತು ನಾನ್ ಗೆಜೆಟೆಡ್ ನೌಕರರ ಮಕ್ಕಳಿಗೆ ಶಿಕ್ಷಣ ಶುಲ್ಕವನ್ನು ಪಡೆಯದೆ ಉಚಿತ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಏರ್ಪಡಿಸಿರುವಂತೆ ಗ್ರಾಮಾಧಿಕಾರಿಗಳಿಗೂ ಇದೇ ರಿಯಾಯಿತಿಯನ್ನು ಕೊಡಬೇಕೆಂದು ಕೋರುವ ನಿರ್ಣಯವು ಬೆಂಗಳೂರಿನಲ್ಲಿ ಸೇರಿದ್ದ ದಕ್ಷಿಣ ಭಾರತ ಗ್ರಾಮಾಧಿಕಾರಿಗಳ ಸಮ್ಮೇಳನದಲ್ಲಿ ಅಂಗೀಕೃತವಾಯಿತು.

ಮೈಸೂರು ಅಧಿಕಾರಿಗೆ ಅಮೆರಿಕಾ ವಿದ್ಯಾರ್ಥಿ ವೇತನ

ಬೆಂಗಳೂರು ಪೌರಸಭಾ ಸಹಾಯಕ ಆರೋಗ್ಯಾಧಿಕಾರಿ ಡಾ|| ಹೆಚ್ ಕೃಷ್ಣರಾಯರು ೧ ವರ್ಷ ಕಾಲ ಅಮೆರಿಕದ ಬಾಲ್ಟಿಮೋರ್ ನಗರದಲ್ಲಿರುವ ಜಾನ್ ಹಾಪ್ಕಿನ್ಸ್ ವಿಶ್ವ ವಿದ್ಯಾಲಯದಲ್ಲಿ ಸಾರ್ವಜನಿಕ ಆರೋಗ್ಯದ ಬಗ್ಗೆ ಉಚ್ಚ ಶಿಕ್ಷಣ ಪಡೆಯಲು ರಾಕ್‌ಫೆಲ್ಲರ್ ಸಂಸ್ಥೆಯ ವಿದ್ಯಾರ್ಥಿ ವೇತನವನ್ನು ಪಡೆದಿರುತ್ತಾರೆ

ಬೆಂಗಳೂರಿನಿಂದ ಮದನಪಲ್ಲಿಗೆ ಸರ್ಕಾರಿ ಬಸ್ಸು ವ್ಯವಸ್ಥೆಗೆ ಮನವಿ

ಮದನಪಲ್ಲಿ ಟೌನ್ ಕಾಂಗ್ರೆಸ್ ಸಮಿತಿ ಸಭೆಯು ಕಳೆದ ೧೮ನೇ ತಾರೀಕು ಸೇರಿ ಬೆಂಗಳೂರಿನಿಂದ ರಾಯಲಪಾಡಿನವರೆಗೆ ಏರ್ಪಾಡಾಗಿರುವ ಮೈಸೂರು ಸರ್ಕಾರಿ ಬಸ್ ಸಂಚಾರ ವ್ಯವಸ್ಥೆಯನ್ನು ಮದನಪಲ್ಲಿಯವರೆಗೂ ಮುಂದುವರಿಸಬೇಕೆಂದು ಮೈಸೂರು ಸರ್ಕಾರವನ್ನು ಕೋರುವ ನಿರ್ಣಯವನ್ನು ಮಾಡಿತು

ಡಾ|| ಮೋದಿಯವರಿಗೆ ಬಹುಮಾನ

ಬೆಂಗಳೂರು ೨೪

ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ. ಸಿ. ಮೋದಿಯವರು ಬೆಂಗಳೂರು ನಾಗರಿಕರಿಗೆ ಮಾಡಿರುವ ಸೇವೆಯನ್ನು ಮೆಚ್ಚಿ ಅಲ್ಲಿನ ಪೌರಸಭೆಯವರು ೧೭ ಸಾವಿರ ರೂ. ಬೆಲೆಯಾಗುವ ಪ್ರಥಮ ಚಿಕಿತ್ಸೆ ವ್ಯಾನ್ ಒಂದನ್ನು ಬಹುಮಾನವಾಗಿ ಕೊಡಲು ನಿರ್ಧರಿಸಿರುತ್ತಾರೆ.

ಟಿ. ಚೌಡಯ್ಯನವರಿಗೆ ಸತ್ಕಾರ

ಆಸ್ಥಾನ ವಿದ್ವಾನ್, ಸಂಗೀತ ರತ್ನ ಟಿ. ಚೌಡಯ್ಯನವರು ಸಂಸ್ಥಾನದ ಹಿರಿಯ ಶಾಸನ ಸಭೆಗೆ ನಾಮಕರಣ ಮಾಡಲ್ಪಟ್ಟ ಸಂದರ್ಭದಲ್ಲಿ ರಾಜಧಾನಿಯ ಅಯ್ಯನಾರ್ ಕಲಾ ಶಾಲೆಯವರು ಕಳೆದ ಭಾನುವಾರ ಅವರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಸಂಗೀತ ಶಾಸ್ತ್ರ ವಿಶಾರದ ಕೆ. ವಾಸುದೇವಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯಾದ ನಂತರ ಕಲಾ ಶಾಲಾ ಪ್ರಿನ್ಸಿಪಾಲರಾದ ಶ್ರೀ ಟಿ ಚೌಡಯ್ಯನವರಿಗೆ ಮಾನಪತ್ರವನ್ನು ಅರ್ಪಿಸಿದರು ಅಧ್ಯಕ್ಷರು ಭಾಷಣ ಮಾಡಿ ಶ್ರೀ|| ಚೌಡಯ್ಯನವರ ನೇತೃತ್ವದಲ್ಲಿ ಶಾಲೆಯು ಅಭಿವೃದ್ಧಿಗೆ ಬಂದಿರುವ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಅದು ಇನ್ನೂ ಪ್ರವರ್ಧಮಾನಕ್ಕೆ ಬರಲೆಂದು ಹಾರೈಸಿದರು. ಶ್ರೀ ಟಿ ಚೌಡಯ್ಯನವರು ಶಾಲಾ ವಿದ್ಯಾರ್ಥಿಗಳಿಗೆ ಹಲವು ಹಿತನುಡಿಗಳನ್ನಾಡಿದರು. ಅ|| ಪ|| ದೊರೆಸ್ವಾಮಯ್ಯಂಗಾರ್‌ರ ವೀಣಾವಾದನವು ವಿ|| ಎಚ್. ಟಿ ನಾಗಣ್ಣನವರ ಮೃದಂಗದೊಡನೆ ಸುಶ್ರಾವ್ಯವಾಗಿ ಜರುಗಿದ ನಂತರ ಮಂಗಳದೊಡನೆ ಸಮಾರಂಭವು ಮುಕ್ತಾಯವಾಯಿತು.

ಮೈಸೂರು ಜಿಲ್ಲಾ ಪ್ರಿಂಟರ್ಸ್ ಅಸೋಸಿಯೇಷನ್

ಮೇಲ್ಕಂಡ ಸಂಘವನ್ನು ಅಭಿವೃದ್ಧಿಪಡಿಸಿ, ಮುದ್ರಣಕಾರರಿಗೆ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಜಿಲ್ಲೆಯ ಎಲ್ಲಾ ಪ್ರೆಸ್ಸುಗಳ ಮಾಲೀಕರೂ ಸಂಘದ ಸದಸ್ಯರಾಗಬೇಕೆಂದೂ, ಸಧ್ಯದಲ್ಲಿಯೇ ಸರ್ವ ಸದಸ್ಯರ ಸಭೆಯು ನಡೆಯುವುದೆಂದೂ, ಆದ್ದರಿಂದ ಹೊಸದಾಗಿ ಸದಸ್ಯರಾಗುವವರೂ ಭಾಗವಹಿಸಬಹುದೆಂದೂ ಕಾರ್ಯದರ್ಶಿಗಳಾದ ಶ್ರೀ ಕೆ. ವಿ ಅನಂತರಾಮಯ್ಯನವರು ತಿಳಿಸುತ್ತಾರೆ ಸದಸ್ಯತ್ವದ ಅರ್ಜಿಗಳು [illegible] ರಸ್ತೆಯ ಯುನೈಟೆಡ್ ಪ್ರಿಂಟರ್ಸ್‌ರವರಲ್ಲಿ ದೊರೆಯುತ್ತವೆ.

Miss not this opportunity !
SRI GANESH
TALKIES
From 26-6-52 : For 2 Days
PAYMENT ON DEMAND
With:- Betty Davis and Barry Sullivan in the Leading Role
A timely story which has never before been shown in the City
From 28—6—52
Christopher Columbus

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
26-6-52ನೇ ಗುರುವಾರದಿಂದ ಅಮೋಘ ಪ್ರಾರಂಭ
ರಾಯಲ್ ಟಾಕೀಸ್ ರವರ ತಮಿಳು ಚಿತ್ರ ಹರಿದಾಸ್
ಪಾತ್ರ:— ತ್ಯಾಗರಾಜ ಭಾಗವತರ್, ಟಿ. ಆರ್. ರಾಜಕುಮಾರಿ, ಕೃಷ್ಣನ್, ಮಧುರಂ ಮುಂತಾದವರು

ರಿಜಿಸ್ಟರ್ಡ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೬-೬-೫೨ [ಸಂಚಿಕೆ ೨೬೩

ಶಾಸನ ಸಭೆಯಲ್ಲಿ ಪ್ರಭುಗಳ ಚಿತ್ರವೇಕೆ ?

ಕ್ಷಾಮ ಪರಿಹಾರಕ್ಕಾಗಿ ಪ್ರವೀಣರ ಸಮಿತಿ

ಶ್ರೀಮನ್ ಮಹಾರಾಜರಲ್ಲಿ ಅರಿಕೆ

ಬೆಂಗಳೂರು ೨೬

ಕೋಲಾರದ ಜಿಲ್ಲಾ ಪ್ರವಾಸವನ್ನು ನೆನ್ನೆ ಶ್ರೀಮನ್ಮಹಾರಾಜರು ಕೈಗೊಂಡಾಗ ವೇದಿಕೆಯಲ್ಲಿ ಆಗಾಗ್ಗೆ ಸಂಭವಿಸುವ ಅಭಾವ ಮತ್ತು ಕ್ಷಾಮ ಪರಿಸ್ಥಿತಿಗಳನ್ನು ಎದುರಿಸಲು ಹಂಗಾಮಿ ಮತ್ತು ಶಾಶ್ವತ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ತಕ್ಕ ಸಲಹೆಯನ್ನು ನೀಡಲು ಪ್ರವೀಣರುಗಳುಳ್ಳ ಒಂದು ಸಮಿತಿಯು ರಚನೆಯಾಗಬೇಕೆಂದು ಅಲ್ಲಿನ ಜಿಲ್ಲಾ ಪ್ರಮುಖರು ಕೋರಿದರು.

೨೦೦ ಮೈಲಿ ದೂರದ ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿನ ಜನರ ಸ್ಥಿತಿಗತಿಗಳನ್ನು ಕಂಡು ಪ್ರಭುಗಳು ಮರುಕಗೊಂಡರು. ಒಂದುಕಡೆ ಪ್ರಭುಗಳು ಅಕ್ಕಿಯನ್ನು ಬಡ ಜನರಿಗೆ ಹಂಚಿದರು.

ಶಾಸನಸಭೆಗೆ ಹೋಗಕೂಡದೆಂದು ಸದಸ್ಯರ ನಿರ್ಧಾರ

ಆಂಧ್ರ ಪ್ರಾಂತ ನಿರ್ಮಾಣವು ತಡವಾಗುತ್ತಿರುವುದರಿಂದ ತಮ್ಮ ಪ್ರತಿಭಟನೆಯನ್ನು ಸೂಚಿಸಲು ಮದ್ರಾಸು ಶಾಸನ ಸಭೆಯ ಭೂಪತಿರಾಜು ಸುಬ್ಬರಾಜುರವರು ೬ ವಾರ ಕಾಲ ಶಾಸನ ಸಭಾಧಿವೇಶನಕ್ಕೆ ಹೋಗುವುದಿಲ್ಲವೆಂದು ನಿರ್ಧರಿಸಿರುತ್ತಾರೆ.

ವಾರ್ಷಿಕೋತ್ಸವ

ಶ್ರೀ ಸಾಯಿಬಾಬಾ ವಿದ್ಯಾಗೋಷ್ಠಿಯ ವಾರ್ಷಿಕೋತ್ಸವವು ಈ ಸಂಜೆ ೬ ಗಂಟೆಯಿಂದ ರಾತ್ರಿ ೯ ಗಂಟೆವರೆಗೆ ಗೋಷ್ಠಿಯ ಕಟ್ಟಡದಲ್ಲಿ ನಡೆಯುವುದು. ಕುಮಾರಿ ಎಂ. ಎಸ್ ಶಾಂತಲರವರ ಸಂಗೀತ, ಶ್ರೀಗಳಾದ ದಾವಿದ್, ಮಾನೆ ಸತ್ಯ ಇವರುಗಳಿಂದ ಚಿತ್ರಸಂಗೀತ ಮತ್ತು ಶ್ರೀ ಎಂ. ಎಸ್. ಮುತ್ತುರವರಿಂದ ವಿವಿಧ ಹಾಡುಗಾರಿಕೆ ಇವು ಏರ್ಪಾಡಾಗಿವೆ. ರಾತ್ರಿ ೯-೩೦ ಗಂಟೆಗೆ ಶ್ರೀ ಎಂ.ಸಿ.ಬಾಲಾಜಿ ಕೃಷ್ಣದಾಸರಿಂದ ರಾಜಾ ಗೋಪೀಚಂದ್ ಎಂಬ ಹರಿಕಥೆಯು ಜರುಗುವುದು. ಪೌರಸಭಾ ಸದಸ್ಯರಾದ ಡಾ|| ಬಿ. ಜಿ. ದಾಸ್‌ರವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕದ ವಿಶ್ವವಿದ್ಯಾಲಯಕ್ಕೆ ಶ್ರೀಮನ್ಮಹಾರಾಜರ ಧನಸಹಾಯ

ಹುಬ್ಬಳ್ಳಿಯಲ್ಲಿ ಸದ್ಯದಲ್ಲೇ ನಿರ್ಮಿಸಲ್ಪಡುವ ಕರ್ನಾಟಕದ ವಿಶ್ವವಿದ್ಯಾಲಯದ ಘಟಿಕೋತ್ಸವದ ಭವನಕ್ಕೆ ಮೈಸೂರಿನ ಶ್ರೀಮನ್ಮಹಾರಾಜರ ಹೆಸರನ್ನು ಇಡಲಾಗುವುದೆಂದೂ, ಅದರ ನಿರ್ಮಾಣಕ್ಕೆ ೫ ಲಕ್ಷ ರೂ ವೆಚ್ಚ ತಗಲುವುದೆಂದೂ ಹೇಳಲಾಗಿದೆ. ಈ ಕಾರ್ಯಕ್ಕೆ ಪ್ರಭುಗಳೂ ಉದಾರ ಧನಸಹಾಯ ನೀಡಲಿರುವರೆಂದೂ, ಬರುವ ತಿಂಗಳು ೭ನೇ ತಾರೀಖು ನಡೆಯಲಿರುವ ಅವರ ವರ್ಧಂತಿ ಸಂದರ್ಭದಲ್ಲಿ ಅವರು ಸಹಾಯ ಧನದ ಬಗ್ಗೆ ಘೋಷಣೆ ಹೊರಡಿಸುವರೆಂದೂ ವರದಿಯಾಗಿದೆ.

ಡಾ|| ರಾಜಣ್ಣನವರ ವರ್ಗ ರದ್ದು

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರ್, ಶ್ರೀ ರಾಜಣ್ಣನವರು ತೀರ್ಥಹಳ್ಳಿ ಆಸ್ಪತ್ರೆಗೆ ವರ್ಗವಾಗಿರುವುದನ್ನು ರದ್ದು ಮಾಡಲಾಗಿದೆ

ಶಾಂತಿಸಂಧಾನ ಮುರಿದರೆ ಬಲವಾದ ಯುದ್ಧ ಸಿದ್ಧ

ಕೊರಿಯಾ ಯುದ್ಧದ ದ್ವಿತೀಯ ವಾರ್ಷಿಕೋತ್ಸವದ ದಿನ ಮೊನ್ನೆ ವಿಶ್ವಸಂಸ್ಥೆಯ ಪ್ರಧಾನ ಸೇನಾನಿ ಮಾರ್ಕ್ ಕ್ಲಾರ್ಕ್‌ರವರು ಸಂದೇಶವೊಂದನ್ನಿತ್ತು, ಶಾಂತಿ ಸಂಧಾನವು ಮುರಿದು ಬಿದ್ದರೆ "ರಕ್ತ ಪ್ರವಾಹದ" ಯುದ್ಧವು ಸಿದ್ಧವೆಂದೂ ಅದಕ್ಕೆ ವಿಶ್ವಸಂಸ್ಥೆ ಸೈನ್ಯಗಳು ಸನ್ನದ್ಧವಾಗಿರುವುದೆಂದೂ ಸೂಚಿಸಿರುತ್ತಾರೆ. ಕೊರಿಯಾ ಕಮ್ಯೂನಿಸ್ಟರ ಮುಖಂಡ ಜ|| ನಾಂ ಇಲ್ ರವರೂ ತಮ್ಮ ಪಕ್ಷದ ಸೈನ್ಯಗಳೂ ಸಜ್ಜಾಗಿರುವುವೆಂದು ತಿಳಿಸಿರುತ್ತಾರೆ.

ಬ್ರಿಟಿಷ್ ರಾಣಿಯವರ ಗಂಡನಿಗೆ ಅಸ್ವಸ್ಥತೆ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ಗಂಡಂದಿರಾದ ಎಡಿನ್‌ಬರೋ ಡ್ಯೂಕರು ಕಾಮಾಲೆ ರೋಗದಿಂದ ನರಳುತ್ತಿರುವರು. ಹಲವು ದಿನಗಳ ವರೆಗೆ ಅವರು ತಮ್ಮ ನಿವಾಸವನ್ನು ಬಿಟ್ಟು ಕದಲುವುದಿಲ್ಲವೆಂದು ಹೇಳಲಾಗಿದೆ.

ಅಂಗಡಿ ಕಾನೂನು ಉಲ್ಲಂಘನೆಗಾಗಿ ದಂಡ

ಷಾಪ್ ಎಸ್ಟಾಬ್ಲಿಷ್‌ಮೆಂಟ್ಸ್ ಕಾನೂನಿನ ಉಲ್ಲಂಘನೆಗಾಗಿ ನಗರದ ಎರಡನೇ ನ್ಯಾಯಾಧೀಶರು ಬೋಪಿಲಿಂಗತಿ ಮಾಲೀಕರಾದ ಶ್ರೀ ಗಿರೀಶಾ, ವ್ಯಾಪಾರಿಗಳಾದ ಶ್ರೀ ಸಂಗಶೆಟ್ಟಿ, ಶ್ರೀ ಕೆ. ಆರ್. ರಾಮಾಂಜನೇಯಶೆಟ್ಟಿಯವರಿಗೆ ತಲಾ ೧೦ ರೂ. ಮತ್ತೆಯೂ ಶ್ರೀ ಕೃಷ್ಣಯ್ಯ, ಶ್ರೀ ಜವರಯ್ಯ ಮತ್ತು ಜ|| ಮುನಾವರ್ ಹುಸೇನರವರಿಗೆ ತಲಾ ೫ ರೂ. ನಂತೆಯೂ ಜುಲ್ಮಾನೆ ವಿಧಿಸಿರುತ್ತಾರೆ.

ರೇಡಿಯೋವಿನಲ್ಲಿ ವಿವಿಧ ವಿನೋದಾವಳಿ

ಮೈಸೂರಿನ ಆಲ್ ಇಂಡಿಯಾ ರೇಡಿಯೋವಿನಲ್ಲಿ ನೆನ್ನೆ ಮೈಸೂರು ಬಾಲ ಬಳಗದ ವ್ಯವಸ್ಥಾಪಕ ಶ್ರೀ ಸಿ.ಪಿ. ಸೂರ್ಯಪ್ರಕಾಶ್‌ರವರು ತಮ್ಮ ಬಾಲಕ ಬಾಲಕಿಯರಿಂದ ವಿವಿಧವಿನೋದಾವಳಿ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಬಾಲಕ ಶ್ರೀ ಸೀತಾರಾಂ ಮತ್ತು ಬಾಲಕಿ ಸೀತಾ ಪದ್ಮಜ ಇವರುಗಳು ಚೆನ್ನಾಗಿ ಮಾತನಾಡಿದರು.

ಶಾಸನ ಸಭೆಯಲ್ಲಿ ಮಹಾರಾಜರ ಭಾವಚಿತ್ರ

ಹಕ್ಕು ಬಾಧ್ಯತಾ ಸೂಚನೆಯ ನಿರಾಕರಣೆ

ಸಂ. ಸು. ಪ್ರೋ] ಬೆಂಗಳೂರು ೨೬

ಶಾಸನ ಸಭಾ ಭವನದಲ್ಲಿ ರಾಜ್ಯಾಧ್ಯಕ್ಷರ ಭಾವಚಿತ್ರದೊಡನೆ ರಾಜಪ್ರಮುಖರ ಚಿತ್ರವನ್ನು ಇಟ್ಟಿರುವುದರಿಂದ ಸಭೆಯ ಹಕ್ಕು ಬಾಧ್ಯತೆಗೆ ಧಕ್ಕೆ ಬಂದಿರುವುದಾಗಿ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ತಂದ ಹಕ್ಕು ಬಾಧ್ಯತಾ ಸೂಚನೆಯನ್ನು ಈ ದಿನ ಅಧ್ಯಕ್ಷರು ತಳ್ಳಿಹಾಕಿದರು

ಈ ವಿಷಯವನ್ನು ತಮ್ಮ ಪ್ರಜಾ ಸಂಯುಕ್ತ ಪಕ್ಷದಲ್ಲಿ ಚರ್ಚಿಸಲಾಯಿತೆಂದೂ, ಈ ಸೂಚನೆಗೆ ಪಕ್ಷದ ಎಲ್ಲರ ಒಪ್ಪಿಗೆ ಇಲ್ಲವೆಂದೂ ಸದಸ್ಯರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಇದನ್ನು ಬಿಡಲಾಗಿದೆಯೆಂದೂ ವಿರೋಧ ಪಕ್ಷದ ನಾಯಕರಾದ ಜ|| ಇಮಾಂರವರು ಹೇಳಿದರು. ಹೀಗಿರುವಲ್ಲಿ ಈ ಸಂಗತಿಯನ್ನು ವಿರೋಧಪಕ್ಷವೆಂದು ಹೇಗೆ ಅಂಗೀಕರಿಸಬೇಕೆಂಬ ಬಗ್ಗೆ ಬಹಳ ಚರ್ಚೆಯಾಯಿತು. ಮದ್ರಾಸಿನಲ್ಲಿ ಈ ಬಗೆಯ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆಯೆಂದು ತಿಳಿಸಲಾಯಿತು.

ಈ ವಿಷಯದಲ್ಲಿ ಹಕ್ಕು ಬಾಧ್ಯತೆಯ ಅಂಶವೇನೂ ಇಲ್ಲವೆಂದು ಹೇಳಿ ಸೂಚನೆಯನ್ನು ಅಧ್ಯಕ್ಷರು ತಳ್ಳಿಹಾಕಿದರು.

ಹಿರಿಯ ಶಾಸನ ಸಭೆ ರದ್ದು ಮಾಡಲಾಗದು

ಹಿರಿಯ ಶಾಸನ ಸಭೆಯನ್ನು ರದ್ದು ಮಾಡಬೇಕೆಂದು ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ತಂದ ನಿರ್ಣಯವನ್ನು ನೆನ್ನೆ ಶಾಸನ ಸಭೆಯು ತಿರಸ್ಕರಿಸಿತು

ಶ್ರೀ ಎಂ. ಶಂಕರ ಲಿಂಗೇಗೌಡರು ಮತ್ತೊಂದು ನಿರ್ಣಯವನ್ನು ತಂದು ಶಾಸನ ಸಭಾ ಸದಸ್ಯರಿಗೆ ಮಾಹೆಯಾನಾ ಕೊಡುವ ನೂರು ರೂ. ವೇತನವನ್ನು ತಪ್ಪಿಸಬೇಕೆಂದು ಸೂಚಿಸಿದರು. ಅದನ್ನು ಓಟಿಗೆ ಹಾಕಲಾಗಿ ಅದು ಬಿದ್ದುಹೋಯಿತು.

"ಅಬ್ಸರ್ಡ್" ಎಂಬುದು ಪಾರ್ಲಿಮೆಂಟರಿ ಪದವೇ !

ಶಾಸನ ಸಭೆಯಲ್ಲಿ ವಿಚಾರ

ಸ್ವಂ.ಸು.ಪ್ರೋ] ಬೆಂಗಳೂರು ೨೬

ಮೈಸೂರಿನ ಜ|| ಮಹಮದ್ ಸೇಟರಿಗೆ ರೇಷ್ಮೆ ವ್ಯಾಪಾರದ ಏಜೆನ್ಸಿಯನ್ನು ಕೊಟ್ಟ ಸಂಬಂಧದಲ್ಲಿ ಅವರಿಂದ ಚುನಾವಣೆಗಳಿಗೆ ಸಹಾಯವಾಗುವ ನಿರೀಕ್ಷಣೆಯೇನಾದರೂ ಇದ್ದಿತೇ? ಎಂಬುದಾಗಿ ಶ್ರೀ ಎಂ ರಾಜಶೇಖರ ಮೂರ್ತಿಯವರು ಈ ದಿನ ಶಾಸನ ಸಭೆಯಲ್ಲಿ ಕೇಳಿದಾಗ ಸಚಿವರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಈ ಟೀಕೆಯು "ಅಬ್ಸರ್ಡ್" ಎಂದು ಹೇಳಿದರು. ಈ ಪದವು ಪಾರ್ಲಿಮೆಂಟರಿಯೇ ಅಲ್ಲವೇ ಎಂಬ ಬಗ್ಗೆ ಸ್ವಲ್ಪ ಚರ್ಚೆ ನಡೆಯಿತು. ಸಚಿವರು ಈ ಪದ ಪ್ರಯೋಗ ಮಾಡಿದರೆ ಸದಸ್ಯರೂ ಮಾಡಬಹುದೇ ಎಂದು ಜ|| ಇಮಾಂರವರು ಕೇಳಿದರು.

ಭಾರತ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರೂರವರು "ನಾನ್‌ಸೆನ್ಸ್", "ಅಬ್ಸರ್ಡ್" ಮುಂತಾದ ಪದಗಳನ್ನು ಪ್ರಯೋಗಿಸಿರುವರೆಂದೂ ಈ ಪದಗಳು ಪಾರ್ಲಿಮೆಂಟರಿ ಪ್ರಯೋಗಕ್ಕೆ ವಿರೋಧವಲ್ಲವೆಂದೂ ಅಧ್ಯಕ್ಷರು ಹೇಳಿ, ಆದರೂ ಅವುಗಳನ್ನು ತ್ಯಜಿಸುವುದು ಉತ್ತಮವೆಂದು ಅಭಿಪ್ರಾಯಪಟ್ಟರು.

ಮೈಸೂರು ಧ್ವಜ ಮತ್ತು ಗೀತೆಗಳ ಬಗ್ಗೆ ನಿಲುವಳಿ ಸೂಚನೆ

ಮೈಸೂರಿನ ಗಂಡಭೇರುಂಡ ಧ್ವಜ ಮತ್ತು ಕಾಯೌ ಶ್ರೀಗೌರಿ ಗೀತೆಗಳನ್ನು ರದ್ದು ಮಾಡಿರುವ ಬಗ್ಗೆ ಜ|| ಇಮಾಂರವರು ತಂದ ನಿಲುವಳಿ ನಿರ್ಣಯವು ಸಾರ್ವಜನಿಕ ವಿಷಯವಾದರೂ, ಹಿಂದೆಯೇ ಚರ್ಚೆಯಾಗಿರುವುದರಿಂದ ಇದಕ್ಕೆ ಪುನಃ ಅವಕಾಶ ಕೊಡಲಾಗುವುದಿಲ್ಲವೆಂದು ಅಧ್ಯಕ್ಷರು ಹೇಳಿದರು.

ದಕ್ಷಿಣ ಕೊರಿಯಾ ಅಧ್ಯಕ್ಷರ ಕೊಲೆ ಪ್ರಯತ್ನ

ಕೊರಿಯಾ ಯುದ್ಧದ ದ್ವಿತೀಯ ವಾರ್ಷಿಕೋತ್ಸವದಲ್ಲಿ ನೆನ್ನೆ ಅಧ್ಯಕ್ಷ ಸಿಂಗ್ಮನ್ ರೀಯವರು ಭಾಷಣ ಮಾಡುತ್ತಿದ್ದಾಗ ಅವರ ಹಿಂದುಗಡೆ ಕುಳಿತಿದ್ದ ೬೨ ವರ್ಷದ ರ್ಯು ಸಿ ಎಂಬ ವ್ಯಕ್ತಿಯು ಅವರನ್ನು ಗುಂಡಿನಿಂದ ಹೊಡೆದು ಕೊಲ್ಲಲು ಎರಡು ಬಾರಿ ಪಿಸ್ತೂಲಿನ ಕುದುರೆಯನ್ನು ಅದುಮಿದಾಗ ಗುರಿಯು ತಪ್ಪಿತೆಂದೂ, ರೀಯವರಿಗೆ ಅಪಾಯವಾಗಲಿಲ್ಲವೆಂದೂ ವರದಿಯಾಗಿದೆ. ಪೊಲೀಸರು ಕೂಡಲೇ ಓಡಿಬಂದು ಅವನನ್ನು ಎಳೆದು ಕೊಂಡು ಹೋದರು.

ಹರಿಕಥೆ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಪಿ. ರಾಮಸ್ವಾಮಿನಾಯ್ಡುರವರಿಂದ ಈ ದಿನ "ಚಿತ್ರಕೂಟದಲ್ಲಿ ಭರತನಿಂದ ಶ್ರೀರಾಮ ದರ್ಶನ", ನಾಳೆ ಆದಿ ಶುಕ್ರವಾರದ ಪ್ರಯುಕ್ತ "ಜಯದೇವಸ್ವಾಮಿ ಚರಿತ್ರೆ" ಎಂಬ ಕಥೆಗಳೂ, ನಾಳಿದ್ದು ರಾಮಾಯಣ ಕಥೆಯೂ ಸಂಜೆ ೭ ಘಂಟೆಗೆ ಏರ್ಪಾಡಾಗಿವೆ. ಆದಿ ಮತ್ತು ಶ್ರಾವಣ ಶುಕ್ರವಾರಗಳಲ್ಲಿ ಅಮ್ಮನವರಿಗೆ ನಾನಾ ಅಲಂಕಾರಗಳನ್ನು ಮಾಡಲಾಗುವುದು.

ಮದ್ಯಸೇವಿಸುವುದಿಲ್ಲವೆಂದು ದೇವರ ಮುಂದೆ ಪ್ರಮಾಣ

ಈರೋಡಿನ ಬಳಿ ಕಾವೇರಿ ನದಿ ತೀರ ಪ್ರದೇಶದ ಹಲವು ಗ್ರಾಮಸ್ಥರು ಇನ್ನು ಮುಂದೆ ಮದ್ಯಪಾನ ಮಾಡುವುದಿಲ್ಲವೆಂದು ದೇವರ ಮುಂದೆ ಪ್ರಮಾಣ ಮಾಡುತ್ತಾರೆ. ಇಂತಹ ಅಪರಾಧ ಮಾಡುವವರನ್ನು ಪತ್ತೆಹಚ್ಚಲು ಗ್ರಾಮದ ಪ್ರಜೆಗಳ ಕಾವಲುಗಾರಿಕೆ ಸಮಿತಿಯೊಂದನ್ನು ರಚಿಸಲಾಗಿದೆ. ತಪ್ಪಿತಸ್ಥರನ್ನು ಪೋಲೀಸರಿಗೆ ಹಿಡಿದುಕೊಡುವುದಲ್ಲದೆ, ಅವರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ವಿಧಿಸುವಂತೆ ತೀರ್ಮಾನಿಸಲಾಗಿದೆ.

ಅಧಿಕ ಬೆಳೆ ತೆಗೆಯುವವರಿಗೆ ೫ ಸಾವಿರ ರೂ. ಬಹುಮಾನ

ಭತ್ತ, ಗೋಧಿ, ಆಲೂಗೆಡ್ಡೆ, ಜೋಳ ಬಾಜ್ರ, ಮತ್ತು ಕಡಲೆ ಈ ಮುಖ್ಯ ಧಾನ್ಯಗಳಲ್ಲಿ ಅತ್ಯಂತ ಅಧಿಕ ಬೆಳೆಯನ್ನು ತೆಗೆಯುವ ರೈತರಿಗೆ ತಲಾ ೫ ಸಾವಿರ ರೂ ಬಹುಮಾನ ಮತ್ತು ಕೃಷಿ ಪಂಡಿತ ಎಂಬ ಪ್ರಶಸ್ತಿ ಪತ್ರವನ್ನು ಕೊಡಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಈ ಸಂಬಂಧವಾಗಿ ಮೈಸೂರು ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಇಲ್ಲಿನ ವ್ಯವಸಾಯಗಾರರೂ ಈ ಬಹುಮಾನ ಮತ್ತು ಪ್ರಶಸ್ತಿ ಪತ್ರ ಪಡೆಯಲು ಪ್ರಯತ್ನ ಪಡಬೇಕೆಂದು ಸೂಚಿಸಿರುತ್ತಾರೆ

ಆಷಾಢ ಶುಕ್ರವಾರದ ಪ್ರಯುಕ್ತ ವಿಶೇಷ ಅಲಂಕಾರ

ರಾಜಧಾನಿಯ ಕೋಟೆಯೊಳಗಿರುವ ಶ್ರೀ ಕೋಡಿ ಸೋಮೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ಪಿ ವರಿಗೆ ನಾಳೆ ಗಣೇಶ ಜನನದ ಅಲಂಕಾರವನ್ನು ಏರ್ಪಡಿಸಲಾಗಿದೆ

ಡಾ|| ಎಂ. ವಿ ಗೋಪಾಲಸ್ವಾಮಿಯವರ ನಿವೃತ್ತಿ

ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಂ ವಿ ಗೋಪಾಲಸ್ವಾಮಿಯವರು ನೆನ್ನೆ ಅಧಿಕಾರದಿಂದ ನಿವೃತ್ತರಾದರು. ಶ್ರೀ ಎಸ್ ವಿ ರಂಗಣ್ಣನವರು ಅವರಿಂದ ಚಾರ್ಜ್ ವಹಿಸಿಕೊಂಡರು

ರಾಜಕಮಲ್

27—6—52ರಿಂದ 3 ನೇ ವಾರ

ನನ್ನ ತಂಗಿ [ತಮಿಳು]

ಪಶ್ಚಿಮ ಪಾಕಿಸ್ತಾನದಲ್ಲಿ ಬಿಸಿಲಿನಿಂದ ಪ್ರಾಣಹಾನಿ

ಉಷ್ಣಾಂಶವು ಹೆಚ್ಚಿರುವುದರಿಂದ ಪಶ್ಚಿಮ ಪಾಕಿಸ್ತಾನದಲ್ಲಿ ಪ್ರಾಣಹಾನಿಗಳಾಗಿರುವುವೆಂದು ವರದಿಯಾಗಿದೆ ರಾವಲ್ಪಿಂಡಿಯಲ್ಲಿ ೪ ಮತ್ತು ಮಜಸರ್ಗ ದಿನದಲ್ಲಿ ನಾಲ್ಕು ಜನರು ಮಡಿದಿರುವರು ಲಾಹೋರಿನಲ್ಲಿ ೧೦೦ ಪ್ರಾಣಿಗಳು ಸತ್ತಿವೆ ಓಡುತ್ತಿದ್ದ ಟಾಂಗಾದ ಕುದುರೆಗಳು ಹಾಗೆಯೇ ಸತ್ತುಬಿದ್ದವೆಂದು ವರದಿಯಾಗಿದೆ ಲಾಹೋರಿನ ಮೃಗಾಲಯದ ಒಂದು ಸಿಂಹವು ತಾಪ ತಾಳಲಾರದೆ ೨ ಅಡಿ ನೀರಿನ ಕೊಳಕ್ಕೆ ನುಗ್ಗಿತೆಂದು ಹೇಳಲಾಗಿದೆ

ದಕ್ಷಿಣ ಮತ್ತು ಮೈಸೂರು ರೈಲ್ವೆ ಕಾರ್ಮಿಕ ಸಂಘಗಳ ಐಕ್ಯ

ದಕ್ಷಿಣ ರೈಲ್ವೆ ಮತ್ತು ಮೈಸೂರು ಸಂಸ್ಥಾನದ ರೈಲ್ವೆ ಕಾರ್ಮಿಕರ ಸಂಘಗಳ ಕಾರ್ಯಕಾರಿ ಸಮಿತಿಗಳ ಜಂಟಿ ಸಭೆಯು ನಡೆದು ಮಾಜಿ ಮೈಸೂರು ರೈಲ್ವೆ ಯ ... ಕಾರ್ಮಿಕರಿಗೂ ಅನ್ವಯಿಸುವ ಒಂದೇ ಸಂಘವಿರಬೇಕೆಂದು [illegible]

ಚೌಲ ಮತ್ತು ಉಪನಯನ ಮಹೋತ್ಸವಗಳು

[illegible] ಸಹಪಾಠಿ ಶ್ರೀ ಎ ಚಾಮುಂಡಯ್ಯನವರ ಪುತ್ರ ಚಿ|| ಗುರುರಾಜನಿಗೂ ಮತ್ತು ಅಗರದ ಶ್ರೀ ವೆಂಕಟರಾಯರ ಪುತ್ರ ಬಿ ಟಿ ನರಸಿಂಗರಾಯರ ಮಗ ಚಿ|| ಗುರುರಾಜನಿಗೂ ನೆನ್ನೆ ವೆಲ್ಕಂ ಶ್ರೀ ಎಚ್ ಅನಂತಸ್ವಾಮಿ ರಾಯರ ಗೃಹದಲ್ಲಿ ಉಪನಯನ ಮಹೋತ್ಸವಗಳು ಜರುಗಿದುವು

THE MODEL TUTORIAL INSTITUTE

D Banumaiahs School Buildings Mysore

Classes have started working from 16th June 1952 Admissions received between 8 A M and 11 A M on working days

B Seshagiri Rao,
25 6-52 Organiser

ಬರ್ಮದಲ್ಲಿ ಕುದುರೆ ಜೂಜು ರದ್ದು

ಕುದುರೆ ಜೂಜುಗಳನ್ನು ಪೂರ್ಣವಾಗಿ ರದ್ದು ಮಾಡಲು ನಿರ್ಧರಿಸಿ ಬರ್ಮಾ ಸರ್ಕಾರದವರು ಹಲವು ಪೂರ್ವಭಾವಿ ಕ್ರಮಗಳನ್ನು ಕೈಗೊಂಡು ಈಗ ವಾರಕ್ಕೊಂದು ದಿನ ೧೨ ರೇಸುಗಳು ನಡೆಯುತ್ತಿರುವುದನ್ನು ಇನ್ನು ಮುಂದೆ ೧೫ ದಿನಕ್ಕೊಮ್ಮೆ ೮ ರೇಸುಗಳು ನಡೆಸುವಂತೆ ಸೂಚನೆ ಇತ್ತಿರುವರೆಂದು ತಿಳಿದುಬಂದಿದೆ

ಬೌಲ್ಸರ ನಿಯೋಗ ಫಲಿಸಲಿಲ್ಲ

ಭಾರತದ ಪಂಚ ವಾರ್ಷಿಕ ಆಹಾರ ಯೋಜನೆಗೆ ಪ್ರತಿ ವರ್ಷವೂ ೨೫ ಕೋಟಿ ರೂ ಗಳಂತೆ ೬ ವರ್ಷಗಳ ವರೆಗೆ ಅಮೆರಿಕದಿಂದ ಸಹಾಯ ಒದಗಿಸುವ ಸಲುವಾಗಿ ಸ್ವದೇಶಕ್ಕೆ ಹಿಂತಿರುಗಿದ್ದ ಭಾರತದಲ್ಲಿರುವ ಅಮೆರಿಕದ ರಾಯಭಾರಿ ಚೆಸ್ಟರ್ ಬೌಲ್ಸರ ಪ್ರಯತ್ನವು ಫಲಿಸಲಿಲ್ಲವೆಂದು ಹೇಳಲಾಗಿದೆ

ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿ ಮೋಟರು ತಯಾರಿಕೆ

ಮಾಂಚೆಸ್ಟರಿನ ಕಂಪನಿಯು ಸಹಕರಿಸಿ [illegible] ವಿದ್ಯುಚ್ಛಕ್ತಿಯ ಮೋಟರುಗಳನ್ನು ಬೆಂಗಳೂರಿನಲ್ಲಿ ತಯಾರಿಸುವ [illegible] ರೂ ಗಳ ಯೋಜನೆಗೆ ಮೈಸೂರು ಸರ್ಕಾರದವರು ಮಂಜೂರಾತಿ ಕೊಟ್ಟಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ ಶಂಕರನಾರಾಯಣ ಶಾಸ್ತ್ರಿ ವೀಣೆ ಮಧ್ಯಾಹ್ನ ೧-೩೦ ದಿಲ್ಲಿ ರಿಲೆ ೧-೪೫ ಸಂಗೀತ ೨ ನಿಮ್ಮ ಮೆಚ್ಚಿನ ಕಲಾವಿದರು ಸಂಜೆ ೬-೩೦ ಮತ್ತು ೭-೩೦ ಕಮಲಾ ಶಂಕರ್ ಸಂಗೀತ, ೭ ಮಹಿಳಾ ವೀಣೆ ೭-೧೦ ಗಾನ ವಿಹಾರ, ೭-೪೫ ಶಾಲಿಂಗರಾವ್ ಹಿಂದಿ ಗೀತೆ ೮ ಗೀತಮಾಲಾ, ೮-೧೫ ಎಂ ಶಂಕರನಾರಾಯಣ ಶಾಸ್ತ್ರಿ ವೀಣೆ ೯-೧೫ ಚಿತ್ರಸಂಗೀತ, ೯-೩೦ ವಾರ್ತೆ

ಚಾಮುಂಡೇಶ್ವರಿ ಟಾಕೀಸ್

27-6-52 ರಿಂದ ಜನಭರಿತವಾದ 5ನೆಯ ವಾರ

ಧರ್ಮದೇವತ

ಪಾತ್ರ: ನಾಗೇಶ್ವರರಾವ್, ಲಲಿತ ಪದ್ಮಿನಿ, ಮುಕ್ಕಾಮಲ ಕೃಷ್ಣಮೂರ್ತಿ, ರೇಲಂಗಿ ಮುಂತಾದವರು

ಶಾಸನ ಸಭೆಯಲ್ಲಿ ಮಸೂದೆಗಳ ಅಂಗೀಕಾರ

ಬೆಂಗಳೂರು ೨೫

ಶಾಸನ ಸಭೆಯಲ್ಲಿ ನೆನ್ನೆ ಹೆರಿಗೆ ಸೌಕರ್ಯದ ಬಗ್ಗೆ ತಿದ್ದುಪಡಿ ಮಸೂದೆ, ವಿಶ್ವವಿದ್ಯಾಲಯದ ತಿದ್ದುಪಡಿ ಮಸೂದೆಗಳು ಅಂಗೀಕೃತವಾದವು

ಕಾರ್ಖಾನೆಗಳಲ್ಲಿ ಕೂಲಿಮಾಡುವ ಹೆಂಗಸರಿಗೆ ಪ್ರಸವ ಸಮಯಕ್ಕೆ ಹಿಂದಲೂ ಅನಂತರವೂ ಅವರ ವೇತನಕ್ಕಿಂತಲೂ ಹೆಚ್ಚು ದುಡ್ಡನ್ನು ಹೆರಿಗೆ ಸೌಕರ್ಯಕ್ಕಾಗಿ ಒದಗಿಸಬೇಕೆಂದು ಒಂದು ಮಸೂದೆಯಲ್ಲಿ ತಿಳಿಸಲಾಗಿತ್ತು

ವಿಶ್ವವಿದ್ಯಾಲಯದ ಕಾನೂನಿನಲ್ಲಿರುವ ಹಲವು ಅಸಮಂಜಸ ಅಂಶಗಳನ್ನು ತೆಗೆದು ಸೆನೆಟ್ ಸದಸ್ಯರ ಸಂಖ್ಯೆಯನ್ನು ೭೫ಕ್ಕೆ ಗೊತ್ತುಪಡಿಸಬೇಕಾಗಿದೆಯೆಂದೂ, ವಿಶ್ವವಿದ್ಯಾಲಯಕ್ಕೆ ಸೇರದ ಕಾಲೇಜುಗಳ ಮುಖ್ಯಾಧಿಕಾರಿಗಳು ಸದಸ್ಯರಾಗುವುದನ್ನು ತಪ್ಪಿಸಬೇಕೆಂದೂ, ಪ್ರಥಮ ದರ್ಜೆ ಕಾಲೇಜು ಪ್ರಿನ್ಸಿಪಾಲರಿಗೆ ಮಾತ್ರ ಸದಸ್ಯತ್ವವನ್ನು ಕೊಡಬೇಕೆಂದೂ, ಕಿರಿಯ ಶಾಸನಸಭೆಯಿಂದ ೯ ಮತ್ತು ಹಿರಿಯ ಶಾಸನಸಭೆಯಿಂದ ೩ ಸದಸ್ಯರಿಗೆ ಪ್ರಾತಿನಿಧ್ಯವಿರಬೇಕೆಂದೂ ಮತ್ತೊಂದು ಮಸೂದೆಯಲ್ಲಿ ಸೂಚಿಸಲಾಗಿತ್ತು

ಶಾಸನಸಭಾ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳ ವೇತನ ಭತ್ಯ ಮುಂತಾದವುಗಳ ಸಂಬಂಧವಾದ ಮಸೂದೆಯು ಆಯ್ಕೆ ಸಮಿತಿಯ ಪರ್ಯಾಲೋಚನೆಗೆ ಒಪ್ಪಿಸಲ್ಪಟ್ಟಿತು

ಪ್ರಕಟಣೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ – ಮೈಸೂರು ಸಿಟಿ ಚಾಮರಾಜ ಮೊಹಲ್ಲಾ [illegible] ಬಡಾವಣೆಯಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿಗೆ ಸೇರಿದ ಒಂದು ನೂರ ಐವತ್ತು (150) ತೆಂಗಿನ ಮರ ಮತ್ತು ಅರವತ್ತು (60) ಅಡಿಕೆ ಮರಗಳ ಫಸಲನ್ನು ತಾರೀಖು 1-7-52ರಿಂದ ಮೂರು ವರ್ಷಗಳ ಅವಧಿಗೆ ಅನುಭವಿಸಿಕೊಳ್ಳುವ ಹಕ್ಕನ್ನು ಟೆಂಡರುಗಳ ಮೂಲಕ ಏಲಂ ಮಾಡಲಾಗುತ್ತದೆ ಇಷ್ಟವುಳ್ಳವರು ತಾರೀಖು 30-6-52ನೇ ಸೋಮವಾರ ಮಧ್ಯಾಹ್ನ ಮೂರು ಘಂಟೆ ಒಳಗೆ ಐವತ್ತು ರೂಪಾಯಿ 50(-) ಠೇವಣಿ ಸಮೇತ ಟೆಂಡರನ್ನು ಕೊಡತಕ್ಕದ್ದು ಇತರ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ಎಸ್, ಲಿಂಗಣ್ಣ,
ಮೈಸೂರು ಅಧ್ಯಕ್ಷರು
ತಾ|| 10 6 52 ನಗರಾಭಿವೃದ್ಧಿ ಸಮಿತಿ

ಮೈಸೂರು ಟ್ರಾನ್ಸಿಟ್ ಸರ್ವಿಸ್

ರಮಾವಿಲಾಸ ರಸ್ತೆ, ಮೈಸೂರು ಫೋನ್ ನಂ 537

ಮೈಸೂರು ಮತ್ತು ಮದರಾಸುಗಳ ನಡುವೆ

ನಮ್ಮ ಏಜಂಟರಾದ ಮೆಸರ್ಸ್ ಮದ್ರಾಸು-ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೂಲಕ ಸುವ್ಯವಸ್ಥಿತ ರೀತಿಯಲ್ಲಿ ಸರಕುಗಳನ್ನು ರವಾನಿಸುವ ಸಂಸ್ಥೆ

ಮಾಲೀಕರು – ಮೆ|| ತೀರ್ಥ ಅಂಡ್ ಕಂಪೆನಿ

ಸಂಗ್ರಹ ರಾವ್ ಮೆಸರ್ಸ್ ಎಲ್. ಎಸ್. ಹೆಡಿಗೆ,

ಹನುಮಂತ ರಾವ್ ರಸ್ತೆ (ಪ್ರಭಾ ಟಾಕೀಸ್ ಹತ್ತಿರ) ಮೈಸೂರು

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

26-6-52ನೇ ಗುರುವಾರದಿಂದ ಅಪೂರ್ವ ಪ್ರಾರಂಭ

ರಾಯಲ್ ಟಾಕೀಸ್ ರವರ ತಮಿಳು ಚಿತ್ರ ❤ ಹರಿದಾಸ್ ❤

ಪಾತ್ರ: ತ್ಯಾಗರಾಜ ಭಾಗವತರ್ ಟಿ ಆರ್ ರಾಜಕುಮಾರಿ ಕೃಷ್ಣನ್, ಮಧುರಂ ಮುಂತಾದವರು

Edited Printed and Published by A R Nagaraj at the Sadhvi [illegible] Mysore

ರಿಜಿಸ್ಟರ್ಡ್ ನಂ. 792 ॥ ವಂದೇ ಮಾತರಂ ॥ ಬಿಡಿಪ್ರತಿ ಸಿ ಕ್ಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೭-೬-೫೨ [ಸಂಚಿಕೆ ೨೭೪

ದಕ್ಷಿಣ ಆಫ್ರಿಕದಲ್ಲಿ ಶಾಸನ ಭಂಗ ಚಳುವಳಿ

ಮಧ್ಯ ಪ್ರದೇಶದ ಹೊಸ ಗೌರ್ನರ್

ಡಾ॥ ಪಟ್ಟಾಭಿ ಸೀತಾರಾಮಯ್ಯನವರು

ಕೊರಿಯಾ ದಿನಾಚರಣೆ

ಮೈಸೂರು ೨೭

ಇಲ್ಲಿನ ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಪುಂಡಿತೋಪಿನಲ್ಲಿ ಶಾಂತಿ ರಾಜಾ ಪಾರ್ಕಿನಲ್ಲಿ ನೆನ್ನೆ ಕೊರಿಯಾ ದಿನಾಚರಣೆಯು ನೆರವೇರಿಸಲ್ಪಟ್ಟಿತು ಶ್ರೀ ಸೋಮಸುಂದರ ಶರ್ಮರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಂ. ಎಸ್. ಉಗ್ರಪ್ಪ, ಪಿ. ಆರ್. ಕೃಷ್ಣಮೂರ್ತಿ, ಸುಂಖಾ ಮೋಹರ್ ಮತ್ತು ಡಾ॥ ಉಮರ್ ಕೋಯಾರವರು ಭಾಷಣ ಮಾಡಿ, ಕೊರಿಯದಲ್ಲಿ ಅಮೆರಿಕನ್ನರು ನಡೆಸುತ್ತಿರುವ ಕ್ರಿಮಿ ಯುದ್ಧವನ್ನು ಖಂಡಿಸಿದರು. ಕ್ರಿಮಿ ಯುದ್ಧ ನಡೆಸುತ್ತಿರುವುದನ್ನು ಖಂಡಿಸಿಯೂ, ದಕ್ಷಿಣ ಕೊರಿಯಕ್ಕೆ ಭಾರತವು ಕಳುಹಿಸುತ್ತಿರುವ ವೈದ್ಯಕೀಯ ತಂಡವನ್ನು ವಾಪಸು ಕರೆಸುವಂತೆ ಒತ್ತಾಯಪಡಿಸಿಯೂ, ವಿಶ್ವ ಶಾಂತಿಗಾಗಿ ಪಂಚ ರಾಷ್ಟ್ರ ಒಪ್ಪಂದವಾಗಬೇಕೆಂದೂ ನಿರ್ಣಯಗಳನ್ನು ಮಾಡಲಾಯಿತು. ಭಾರತದಲ್ಲಿ ಆಹಾರ ಬೆಲೆಯನ್ನು ಇಳಿಸಿ, ಪದಾರ್ಥಗಳು ಸುವ್ಯವಸ್ಥಿತ ರೀತಿಯಲ್ಲಿ ದೊರೆಯುವಂತೆ ಏರ್ಪಾಡು ಮಾಡಬೇಕೆಂದೂ ಒತ್ತಾಯಪಡಿಸಲಾಯಿತು.

ಗಂಡಭೇರುಂಡ ಧ್ವಜವು ಪುನಃ ಹಾರಾಡಲಿ ಒತ್ತಾಯ

ಕಳೆದ ೨೨ ನೇ ತಾ॥ ರಾಜಧಾನಿಯ ಟೌನ್ ಹಾಲ್ ಮೈದಾನದಲ್ಲಿ ಪ್ರಜಾ ಮಂಡಲದ ಆಶ್ರಯದಲ್ಲಿ ನಡೆದ ಒಂದು ಬಹಿರಂಗ ಸಭೆಯಲ್ಲಿ ಮೈಸೂರು ಸಂಸ್ಥಾನದ ಗಂಡಭೇರುಂಡ ಧ್ವಜವನ್ನು ಶ್ರೀ ವ ... ಪ್ರಜಾ ಪ್ರತಿನಿಧಿ ... ವಿಷಯವನ್ನು ... ಅಧ್ಯಕ್ಷ ... ಕೆಲವೆಡೆಗಳಲ್ಲಿ ಆಫೀಸುಗಳ ಮೇಲೆ ... ಸ್ವಾತಂತ್ರ್ಯ ಹೋರಾಟದ ಧ್ವಜವಾಗದೆಂದು ಮತ್ತೊಂದು ನಿರ್ಣಯವನ್ನು ಮಾಡಲಾಯಿತು

ಶಿಕ್ಷಣ ಸಂಚಾಲಯಿತಿಯ ಪ್ರಾರಂಭೋತ್ಸವ

ಮೈಸೂರು ತಾಲ್ಲೂಕು ನಾಗನಹಳ್ಳಿ ಗ್ರಾಮದಲ್ಲಿ ಕ್ರಿಯಾತ್ಮಕ ಕೇಂದ್ರ ಮತ್ತು ಶಿಕ್ಷಣ ಸಂಚಾಲಯಿತಿಗಳ ಪ್ರಾರಂಭೋತ್ಸವವನ್ನು ಸಂಸ್ಥಾನದ ಸಮಾಜವಾದಿ ಪಕ್ಷದ ಅಧ್ಯಕ್ಷರಾದ ಶ್ರೀ ಸಿ. ಜಿ. ಕೆ. ರೆಡ್ಡಿಯವರು ನಾಳೆ ಮಧ್ಯಾಹ್ನ ೩ ಗಂಟೆಗೆ ನೆರವೇರಿಸುವರು. ಇದೇ ಸಂಬಂಧದಲ್ಲಿ ಶ್ರೀ ಮುತ್ತೇಗೌಡರ ಸ್ಮಾರಕಾರ್ಥವಾಗಿ ಮುಕ್ತ ಸೇವಾ ಸದನವನ್ನು ಆರಂಭಿಸಲಾಗುವುದು

ಕೊರಿಯಾ ಯುದ್ಧದಲ್ಲಿ ೫೦ ಲಕ್ಷ ಜನರಿಗೆ ಸಾವು ನೋವು

ಕೊರಿಯಾ ಯುದ್ಧದಲ್ಲಿ ಕಳೆದ ಎರಡು ವರ್ಷಗಳಿಂದ ೫೦ ಲಕ್ಷ ಜನರಿಗೆ ಸಾವು ನೋವುಗಳಾಗಿರುವುದೆಂದು ವರದಿಯಾಗಿದೆ. ಈ ಪೈಕಿ ಹೆಚ್ಚು ಜನರು ಕೊರಿಯನ್ನರು. ಅಮೆರಿಕದ ಕಡೆ ೧ ಲಕ್ಷದ ೧೦ ಸಾವಿರ ಜನರು ಸಾವು ನೋವಿಗೆ ತುತ್ತಾಗಿರುತ್ತಾರೆ. ಅವರ ಪೈಕಿ ಸುಮಾರು ೨೦ ಸಾವಿರ ಜನ ಮಡಿದಿರುವರು. ಈ ಯುದ್ಧದಲ್ಲಿ ಅಮೆರಿಕಕ್ಕೆ ಇದುವರೆಗೆ ೫೦೦೦ ಕೋಟಿ ಡಾಲರ್ ಹಣ ವೆಚ್ಚವಾಗಿದೆ.

ವರ್ಣಭೇದದ ವಿರುದ್ಧವಾಗಿ ದ. ಆಫ್ರಿಕದಲ್ಲಿ ಚಳುವಳಿ

ದಕ್ಷಿಣ ಆಫ್ರಿಕಾ ಸರ್ಕಾರದ ವರ್ಣಭೇದ ಶಾಸನದ ವಿರುದ್ಧವಾಗಿ ನೆನ್ನೆ ಅಲ್ಲಿನ ಕರಿಯ ಜನಾಂಗದವರು ಶಾಸನ ಭಂಗ ಚಳುವಳಿಯನ್ನು ಆರಂಭಿಸಿದರು. ದಕ್ಷಿಣ ಆಫ್ರಿಕದಲ್ಲೆಲ್ಲಾ ಪ್ರಸರಿಸಿರುವ ಸರ್ವಾಧಿಕಾರತ್ವವನ್ನು ಪ್ರತಿಭಟಿಸಲು ಅವರು ಅಹಿಂಸಾತ್ಮಕ ಹೋರಾಟವನ್ನು ಕೈಗೊಂಡಿರುತ್ತಾರೆ. ೭೮ ಜನ ವರ್ಣೀಯರೂ, ಒಬ್ಬ ಬಿಳಿಯ ಮಾಜಿ ಪಾರ್ಲಿಮೆಂಟ್ ಸದಸ್ಯರೂ ಈ ಸಂಬಂಧದಲ್ಲಿ ದಸ್ತಗಿರಿಯಾಗಿರುವರು

೫ ಮಕ್ಕಳ ಜನನ

ಗಿರಗಾಂಗೆ ಸಮೀಪದಲ್ಲಿರುವ ಒಂದು ಹಳ್ಳಿಯ ಹರಿಜನ ಸ್ತ್ರೀಯೊಬ್ಬಳು ಕಳೆದ ೨೪ ನೇ ತಾ॥ ಐದು ಮಕ್ಕಳನ್ನು ಪ್ರಸವಿಸಿದಳೆಂದೂ, ಹುಟ್ಟಿದ ಕೆಲವು ಹೊತ್ತಿನಲ್ಲೇ ಅವೆಲ್ಲವೂ ಮೃತಿಹೊಂದಿದುವೆಂದೂ ವರದಿಯಾಗಿದೆ.

ಕಾಲೇಜು ಪ್ರಿನ್ಸಿಪಾಲರಿಗೆ ವಿದ್ಯಾರ್ಥಿಗಳಿಂದ ಏಟು

ಅಂಬಾಲಾ ಕಾಲೇಜಿನ ಮುಖ್ಯೋಪಾಧ್ಯಾಯರನ್ನು ಅಕ್ರಮವಾಗಿ ಬಂಧಿಸಿದ ಸಂಬಂಧದಲ್ಲಿ ಮೂರು ಜನ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿ, ಜಾಮೀನಿನ ಮೇಲೆ ಬಿಡಲಾಗಿದೆ. ಮುಖ್ಯೋಪಾಧ್ಯಾಯರನ್ನು ಒಬ್ಬ ವಿದ್ಯಾರ್ಥಿಯು ಕಳೆದ ೨೧ನೇ ತಾ॥ ರಾತ್ರಿ ಗಾಳಿ ಸಂಚಾರಕ್ಕಾಗಿ ಕರೆದನೆಂದೂ, ಅವರಿಬ್ಬರೂ ಒಟ್ಟಿಗೆ ಹೋಗುತ್ತಿದ್ದಾಗ ಅನೇಕ ವಿದ್ಯಾರ್ಥಿಗಳು ಪ್ರಿನ್ಸಿಪಾಲರನ್ನು ಸುತ್ತುಗಟ್ಟಿ ಹೊಡೆದುದಲ್ಲದೆ ಅವರ ರುಮಾಲಿನಿಂದ ಅವರ ಕೈಗಳನ್ನು ಕಟ್ಟಿಹಾಕಿ ಬಂಧಿಸಿದ್ದರೆಂದೂ ಹೇಳಲಾಗಿದೆ.

ಗ್ರಾಮಾಭಿವೃದ್ಧಿ ಕಾರ್ಯಕ್ಕೆ ೧೫ ಕೋಟಿ ರೂ. ವೆಚ್ಚ

ಶಾಸನ ಸಭೆಯಲ್ಲಿ ಮಂತ್ರಿಗಳ ಹೇಳಿಕೆ

ಸ್ವಂ. ವ. ಪ್ರೋ॥] ಬೆಂಗಳೂರು ೨೭

ಈ ದಿನ ಶಾಸನ ಸಭೆಯಲ್ಲಿ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಶ್ರೀ ಗೋಪಾಲಗೌಡರ ಪ್ರಶ್ನೆಗೆ ಉತ್ತರವಿತ್ತು ೧೯೫೧ ರಿಂದ ೫೬ನೇ ಇಸವಿಯವರೆಗೆ ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ೧,೪೫,೩೩,೫೦೭ ರೂ. ವೆಚ್ಚವಾಗುವುದೆಂದೂ, ಆ ಯೋಜನೆಯ ಅಂಗವಾಗಿ ಒಟ್ಟು ೮೭ ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆಯೆಂದೂ, ಇನ್ನು ೫೭ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದೂ ತಿಳಿಸಿದರು

ಕಾಲೇಜುಗಳಲ್ಲಿ ಒಟ್ಟು ೪೫ ಪ್ರೊಫೆಸರರೂ, ೮೫ ಅಸಿಸ್ಟೆಂಟ್ ಪ್ರೊಫೆಸರರೂ ಇರುವರೆಂದೂ, ಕನ್ನಡ ವಿಭಾಗಕ್ಕೆ ಇನ್ನೂ ಹೆಚ್ಚಿನ ಅಸಿಸ್ಟೆಂಟ್ ಪ್ರೊಫೆಸರುಗಳನ್ನು ನೇಮಿಸಬೇಕೆಂದು ಸರಕಾರಕ್ಕೆ ವಿಶ್ವ ವಿದ್ಯಾಲಯದ ಕೌನ್ಸಿಲ್ಲಿನವರು ಸಲಹೆ ಮಾಡಿರುವರೆಂದೂ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ನಂತರ ಆಯವ್ಯಯದ ಮೇಲೆ ಚರ್ಚೆ ನಡೆಯಿತು. ಡಾ॥ ಇಮಾಂರವರು ... ನಾಡಿನ ... ಮಂತ್ರಿಗಳು ... ಕಡಿಮೆ ... ಮಾಡುವ ... ಅಧಿಕಾರಿಗಳು ... ಮಾಡಿರುವರೆಂದು, ಆದರೆ ಅಪೇಕ್ಷಿಸಿ, ಆಯವ್ಯಯದ ಅಂದಾಜಿನಲ್ಲಿ ತೋರಿಸಲಾಗಿರುವ ೧೧೧ ಲಕ್ಷ ರೂ. ಖೋತಾವು ಸಮ್ಮ ಲೆಕ್ಕದ ಪ್ರಕಾರ ೧೪೩ ಲಕ್ಷ ರೂ. ಆಗುವುದೆಂದು ಅವರು ತಿಳಿಸಿದರು

ಪತ್ರಿಕೋದ್ಯೋಗಿಗಳ ಸಭೆ

ರಾಜಧಾನಿಯ ಪತ್ರಿಕೋದ್ಯಮಿಗಳ ಸಂಘದ ಮುಂದುವರಿದ ಸಭೆಯು ನಾಳೆ ಸಂಜೆ ೬ ಘಂಟೆಗೆ ಸಂಘದ ಕಛೇರಿಯಲ್ಲಿ ನಡೆಯುವುದು. ಸದಸ್ಯರೆಲ್ಲರೂ ಬರಬೇಕೆಂದು ಕೋರಲಾಗಿದೆ.

ನಿಧನ

ರಾಜಧಾನಿಯ ಒಲಂಪಿಯಾ ಟಾಕೀಸಿನ ಮಾಲೀಕರಾದ ಶ್ರೀ ವೀರೇಂದ್ರ ಕುಮಾರ್‌ರವರ ಪತ್ನಿ ಶ್ರೀಮತಿ ಲೀಲಾರವರು ತಮ್ಮ ೨೨ ನೇ ವಯಸ್ಸಿನಲ್ಲಿ ಈ ದಿನ ಮಿಷನ್ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಈಗ ೧॥ ತಿಂಗಳ ಹಿಂದೆ ಪ್ರಸವಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಇಬ್ಬರು ಮಕ್ಕಳಿರುತ್ತಾರೆ. ಅವರ ಗೌರವಾರ್ಥವಾಗಿ ಈ ದಿನ ಒಲಂಪಿಯಾ ಟಾಕೀಸಿನಲ್ಲಿ ಚಿತ್ರ ಪ್ರದರ್ಶನವನ್ನು ನಿಲ್ಲಿಸಲಾಗಿದೆ.

ಕಾಫಿ ಪ್ಲಾಂಟರಿಂದ ತನ್ನ ಮತ್ತು ಹೆಂಡತಿ ಕೊಲೆ

ನೀಲಗಿರಿಯ ಕಾಲಹುರ ಜಕೇರಿ ಜೋನ್ಸ್ ಎಂಬ ಕಾಫಿ ತೋಟಗಾರರೂ ವೃದ್ಧರೂ ಮೊನ್ನೆ ತಮ್ಮ ಹೆಂಡತಿ ಮತ್ತು ೧೧ ವರ್ಷದ ಮಗಳಿಗೆ ಗುಂಡು ಹೊಡೆದು ಆನಂತರ ತಾವೂ ಹೊಡೆದುಕೊಂಡರೆಂದೂ ಪರಿಣಾಮವಾಗಿ ಗಂಡ ಹೆಂಡತಿ ಸತ್ತು ಮಗಳು ತೀವ್ರ ಗಾಯಗೊಂಡಿದ್ದಾಳೆಂದು ತಿಳಿದುಬಂದಿದೆ. ಮಗಳನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ಗೌರೀಶಂಕರ ಶಿಖರದ ಆರೋಹಣವೇ ?

ಗೌರೀಶಂಕರದ ತುತ್ತತುದಿಯನ್ನು ಸ್ವಿಟ್ಜರ್ಲೆಂಡಿನ ಹಿಮಾಲಯಾ ಪರ್ವತಾರೋಹಿಗಳು ಏರಿರಬೇಕೆಂದು ಲಂಡನ್ನಿನ ಭೂಗೋಳ ಶಾಸ್ತ್ರ ಸಂಘದ ಅಧ್ಯಕ್ಷರಾದ ಜೇಮ್ಸ್ ವರ್ಡೀ ಯವರು ಸೂಚಿಸಿದ್ದಾರೆ. ಸ್ವಿಟ್ಜರ್ಲೆಂಡಿನಿಂದ ಮೊನ್ನೆ ಬಂದ ವಾರ್ತೆ ಪ್ರಕಾರ ಅವರು ತುದಿಗೆ ೧೦೦೦ ಅಡಿ ಕೆಳಗೆ ಇದ್ದರೆಂದು ಹೇಳಲಾಗಿದೆ

ಮೇಲೆ ಗೋರಿ, ಕೆಳಗೆ ಕಳ್ಳಭಟ್ಟಿ ಕಾರ್ಖಾನೆ

ಹುಬ್ಬಳ್ಳಿಯ ಸ್ಮಶಾನದಲ್ಲಿ ಒಂದು ಸಲ ಪೋಲೀಸರು ೬ ಗೋರಿಗಳನ್ನು ಅಗೆದು ಒಳಗಡೆ ೧೦ ಗ್ಯಾಲನ್ ಕಳ್ಳಭಟ್ಟಿ ಸಾರಾಯಿಯನ್ನು ಕಂಡುಹಿಡಿದಿದ್ದಾರೆ ಮರಣವನ್ನು ಹೂತು ಮೇಲೆ ಗೋರಿಗಳನ್ನು ಕಟ್ಟಲಾಗಿತ್ತೆಂದು ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಚಿತ್ರಜಗತ್ ಮಧ್ಯಾಹ್ನ ೧-೩೦ ಗಿಟಾರ್ ವಾದನ ೩ ಬಾಲಜಗತ್, ಸಂಜೆ ೫-೩೦ ಮತ್ತು ೭ ಆರ್. ಎಸ್. ಸುಬ್ರಹ್ಮಣ್ಯ ಪಿಳ್ಳೆ ೭ ಸಂಗೀತ. ೮-೧೦ ಪಾದತ್ರೀ ೭-೩೦ ಶ್ರವಣಪ್ರಹಾರ. ೮ ನೀತಾಶಾಸ್ತ್ರ ಶ್ರೀ ವಾಸುದೇವ. ೯ ೧೫ ಶಾರದಾ ವೃ. ೯-೩೦ ಗಾನಪಾರಿಧಿ

ಬೆಂಗಳೂರಿನ ವಿದ್ಯಾರ್ಥಿಗೆ ಅಮೇರಿಕಾ ಪದವಿ

ಬೆಂಗಳೂರಿನ ವಕೀಲರಾದ ಶ್ರೀ ಆರ್ ಗೋಪಾಲಕೃಷ್ಣರಾಯರವರು ಫುಲ್ ಬ್ರೈಟ್ ವಿದ್ಯಾರ್ಥಿವೇತನವನ್ನು ಪಡೆದು ಅಮೆರಿಕಾಕ್ಕೆ ಹೋಗಿ ಅಲ್ಲಿ ಹಾವರ್ಡ್ ವಿಶ್ವವಿದ್ಯಾನಿಲಯದಲ್ಲಿ ಎಂ. ಎಲ್ ಪರೀಕ್ಷೆಯಲ್ಲಿ ಪದವಿಯನ್ನು ಪಡೆದಿರುತ್ತಾರೆ

THE MODEL TUTORIAL INSTITUTE

D. Banumiah's School Buildings Mysore.

Classes have started working from 16th June 1952 Admissions received between 8 A.M. and 11 A.M. on working days.

B. Seshagiri Rao, Organizer.

25-6-52.

ಪೂನಾದಲ್ಲಿ ೧೫೩ ಆಹಾರ ಸತ್ಯಾಗ್ರಹಿಗಳ ಬಂಧನ

ಆಹಾರದ ಬೆಲೆ ಹೆಚ್ಚಿಸಿರುವುದನ್ನು ವಿರೋಧಿಸಿ, ಪೂನಾದಲ್ಲಿ ನಡೆಯುತ್ತಿರುವ ಬೊಂಬಾಯಿ ಶಾಸನ ಸಭೆಗೆ ಪ್ರವೇಶ ಮಾಡಲೆತ್ನಿಸಿದ ಎಸ್. ಜಿ. ಗೋರೆ ಮತ್ತು ಸೀನಿಯರ್ ಅಲ್ವಾರಿಸ ಮುಂತಾದ ೧೫೩ ಸತ್ಯಾಗ್ರಹಿಗಳನ್ನು ಮೊನ್ನೆ ಪೋಲೀಸರು ದಸ್ತಗಿರಿ ಮಾಡಿದರು

ಹೊಸ ವಿವಾಹ ಶಾಸನ

ಜಾತಿ, ಮತ ಭೇದಗಳನ್ನೆಣಿಸದೆ ಎಲ್ಲ ಭಾರತೀಯರಿಗೂ ಅನ್ವಯಿಸುವ ವಿವಾಹದ ಮಸೂದೆಯೊಂದನ್ನು ತರಲು ಕೇಂದ್ರ ಸರ್ಕಾರದವರು ಆಲೋಚಿಸಿರುತ್ತಾರೆ ಏಕ ಪತ್ನಿತ್ವ ಮತ್ತು ವಿವಾಹ ವಿಚ್ಛೇದನ ಇವೇ ಮುಂತಾದ ಸೌಲಭ್ಯಗಳನ್ನು ಹೊಸ ಶಾಸನದಲ್ಲಿ ಅಳವಡಿಸಲಾಗುವುದು.

ಸಂಬಂಧಿಕರ ಮೇಲೆ ಭಿಕ್ಷುಕರ ವೆಚ್ಚದ ಹೊರೆ

ಭಿಕ್ಷುಕರ ಪಾಲನೆ ಸ್ವಹತ್ಯೆ ನೀಡಲಿಲ್ಲ ಟ್ಟವರ ಊಟೋಪಚಾರಗಳ ಖರ್ಚನ್ನು ಅವರ ಸಂಬಂಧಿಕರು ವಹಿಸ ೧೯೫೩ ರ ಶಾಸನವನ್ನು ಬೊಂಬಾಯಿ ಸರ್ಕಾರದವರು ಜಾರಿಗೆ ತಂದಿರುತ್ತಾರೆ ಗೊತ್ತಾಗಿದೆ ಬೊಂಬಾಯಿ ಸರ್ಕಾರದಿಂದ ಬರುವ ... ಶಾಸನ ... ಜಾರಿಗೆ ಬರಲಿದೆ.

ತೀರ್ಥ ವಿದ್ಯೋದಯಕ್ಕೆ ಪ್ರಶಸ್ತಿ ದಿನ

ರಾಜಧಾನಿಯ ತೀರ್ಥ ವಿದ್ಯೋದಯ ಸಂಘದ ವಾರ್ಷಿಕೋತ್ಸವವು ಜೂನ್ ೨೮ ನೇ ತಾರೀಖು ಭಾನುವಾರ ನಡೆಯಲಿದೆ ಆ ದಿನ ಸಂಘದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯುವುದು ಅಂದು ಬೆಳಿಗ್ಗೆ ೭-೩೦ ಗಂಟೆಗೆ ಸಭೆ ನಡೆಯುವುದು ಎಲ್ಲ ವಿದ್ಯೋದಯ ವಿದ್ಯಾರ್ಥಿಗಳು ಹಾಜರಾಗಬೇಕೆಂದು ಕೋರಲಾಗಿದೆ.

THEOSOPHY STUDY GROUP,

Yadavagiri Road Vontikoppal.

Saturday the 28th JUNE 1952 at 6 p. m

Talks followed by Questions and Answers on

The Mystery of Man

IV. FROM MAN TO GOD MEDITATION or ADEPSHIP

ಅಖಿಲ ಭಾರತ ಚರಕಾ ಸಂಘದ ಖಾದಿ ವಿದ್ಯಾಲಯ

ಸೇವಾ ಗ್ರಾಮದಲ್ಲಿರುವ ಅಖಿಲ ಭಾರತ ಚರಕಾ ಸಂಘದವರ ಖಾದಿ ವಿದ್ಯಾಲಯವು ಬರುವ ಜೂಲೈ ೧ ರಿಂದ ಆರಂಭವಾಗುವುದು ಸೇರಲಿಚ್ಛಿಸುವ ವಿದ್ಯಾರ್ಥಿಗಳು ಈ ತಿಂಗಳು ೩೦ ರೊಳಗೆ ಅರ್ಜಿಗಳನ್ನು ದಾಖಲೆಮಾಡಿಕೊಳ್ಳಬೇಕು. ಮೆಟ್ರಿಕ್ ಅಥವಾ ಅದಕ್ಕೆ ಸಮನಾದ ಪರೀಕ್ಷೆಯಾಗಿರಬೇಕು. ೨೫ ರಿಂದ ೪೦ ವಯಸ್ಸಾಗಿಯೂ, ಶರೀರ ಶ್ರಮ ಪಡುವ ಸಾಮರ್ಥ್ಯವೂ ಇರಬೇಕು. ಹಿಂದಿ ಭಾಷೆಯಲ್ಲಿ ವ್ಯವಹಾರ ಜ್ಞಾನವಿರಬೇಕು – ಹಿಂದುಳಿದವರುಗಳಿಗೆ ಪ್ರವೇಶವು ದೊರೆಯುವುದು. ಅಭ್ಯಾಸ ಕ್ರಮವು ಮುಗಿದ ನಂತರ ಚರಕಾ ಸಂಘದ ಉದ್ದೇಶಾನುಸಾರವಾಗಿ ಕೆಲಸ ಮಾಡಲು ಒಪ್ಪುವ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ೩೦ ರೂ. ಗಳಂತೆ ವೃತ್ತಿಯನ್ನು ಕೊಡಲಾಗುವುದು– ಎಂಬುದಾಗಿ ಚರಕಾ ಸಂಘದ ದಕ್ಷಿಣ ಕರ್ನಾಟಕ ವಿಭಾಗದ ಸಂಚಾಲಕರಾದ ಶ್ರೀ ಜೀ. ಆರ್ ವೆಂಕಟರಾವ ಅಯ್ಯಂಗಾರ್‌ರವರು ತಿಳಿಸಿರುತ್ತಾರೆ

೨೦೦ ಅಕ್ಕಿ ಮೂಟೆಯಿದ್ದ ದೋಣಿ ಸಮುದ್ರದ ಪಾಲು

೨೦೦ ಚೀಲಗಳಷ್ಟು ಅಕ್ಕಿಯನ್ನು ತುಂಬಿದ್ದ ದೋಣಿಯೊಂದು ಮೊನ್ನೆ ವಿಶಾಖಪಟ್ಟಣದ ಬಳಿ ಬಂದ ಪಟ್ಟಣದ ಗಡಿ ... ಸಮುದ್ರದ ಪಾಲಾಯಿತು ... ದೊಡ್ಡ ನಷ್ಟವುಂಟಾಗಿದೆಯೆಂದು ಹೇಳಲಾಗಿದೆ

ಸಾಗರ ಜಿಲ್ಲಾ ವಿದ್ಯಾರ್ಥಿ ನಿಲಯಕ್ಕೆ ದಾನ

ರಾಜಧಾನಿಯ ಬ್ಯಾಂಕರ್ ಆದ ಶ್ರೀ ಎಂ. ಎಸ್. ಕೃಷ್ಣಮೂರ್ತಿಯವರು ಸಾಗರ ಜಿಲ್ಲಾ ವಿದ್ಯಾರ್ಥಿ ನಿಲಯಕ್ಕೆ ಒಂದು ಭಾಗವನ್ನು ಕಟ್ಟಲು ೨೦೦೦ ರೂ ಗಳನ್ನು ಉದಾರವಾಗಿ ಸಹಾಯ ಮಾಡಿರುತ್ತಾರೆ

SRI GANESH TALKIES

From 28-6-52 : For 3 Days

CHRISTOPHER COLUMBUS

(Technicolor)

Starring – Frederich March

From 1—7—52

DANCING YEARS

(In Technicolor)

ಹೆಚ್. ಎಲ್. ದೇವರಾಜ ಅರಸಿನವರ ಜೀವನ ಚರಿತ್ರೆ

ಶ್ರೀಮನ್ ಮಹಾರಾಜರ ದರ್ಬಾರ್ ಬಕ್ಷಿ ಶ್ರೀ ಹೆಚ್. ಎಲ್. ದೇವರಾಜ ಅರಸಿನವರ ಜೀವನ ಚರಿತ್ರೆಯ ಗ್ರಂಥವನ್ನು ರಾಜಧಾನಿಯ ಶ್ರೀ ಎಸ್. ರಂಗನಾಥಾಚಾರ್ಯರು ಬರೆದು ಮುದ್ರಿಸಿ ಪ್ರಕಟಿಸಿರುತ್ತಾರೆ. ಶ್ರೀ ಅರಸಿನವರ ವಂಶಾವಳಿ, ಬಾಲ್ಯ, ಯೌವನ, ವಿದ್ಯಾರ್ಜನೆ ಮತ್ತು ಜೀವನ ಸ್ವರೂಪವನ್ನು ಗ್ರಂಥದಲ್ಲಿ ವರ್ಣಿಸಲಾಗಿದೆ ಅಲ್ಲದೆ ಅವರ ಜೀವನವನ್ನು ಚಿತ್ರಗಳ ಮೂಲಕ ವಿವರಿಸಲಾಗಿದೆ ಶ್ರೀಮನ್ ಮಹಾರಾಜರಿಗೆ ಅವರು ಸಲ್ಲಿಸಿರುವ ಸೇವೆ ಲೌಕಿಕದಲ್ಲಿ ಅವರ ಪ್ರಭಾವ ವ್ಯಕ್ತಿತ್ವಗಳನ್ನು ವರ್ಣಿಸಲಾಗಿದೆ ಶ್ರೀ ಜಿ. ಆರ್. ಜೋಸೈಯರ್ ರವರು ಮುನ್ನುಡಿ ಬರೆದಿರುತ್ತಾರೆ ಆಸ್ಥಾನ ಮಹಾವಿದ್ವಾಂಸರಾದ ಕೇಶವಾಚಾರ್ಯರು, ಅಲ್ಲದೆ ಬಿ. ವಿ. ನರಸಿಂಹಾಚಾರ್ಯರು ಮತ್ತು ವಿದ್ವಾಂಸರ ವೆಂಕಟಾಚಾರ್ಯರು ಗುರುಗಳು ಪ್ರಸ್ತಾವನೆಗಳನ್ನು ಬರೆದಿದ್ದಾರೆ ೧೫೦ ಪುಟಗಳುಳ್ಳ ಈ ಪುಸ್ತಕವು ಒಂದು ಬೆಲೆ ೨ ರೂಪಾಯಿ. ಬೆಲೆ ೨-೦-೦ ರೂ ಪೋಸ್ಟೇಜು ಪ್ರತ್ಯೇಕ ಎಸ್. ರಂಗನಾಥಾಚಾರ್, ರಾಮ ... ಹಳೇ ಅಗ್ರಹಾರ, ೩ ನೇ ಕ್ರಾಸ್ ಮೈಸೂರು

ಅರಮನೆಯಲ್ಲಿಗೆ ಪ್ರಭುಗಳ ಭೇಟಿ

ಬರುವ ತಿಂಗಳು ೨ ನೇ ತಾರೀಖು ಶ್ರೀ ಮನ್ಮಹಾರಾಜರು ರಾಜಧಾನಿಯಲ್ಲಿಗೆ ಭೇಟಿಯಿತ್ತು, ಅಲ್ಲಿ ನಡೆಸಿಗೆ ಕಟ್ಟಲಾಗಿರುವ ಸ್ಮಾರಕ ... ಆರಂಭೋತ್ಸವವನ್ನು ನೆರವೇರಿಸುವರು.

SRI GAYATHRI

From 27-6-52 Daily 2 shows

LULLABY OF BROADWAY

(In Technicolor)

Starring.- Doris Day and Gene Nelson.

– MORNING SHOWS –

On 28th Sat & 29th Sun

Where the Side Walk Ends

Featuring – Dona Andrews and Gene Tierney.

ಸಾಧ್ವಿ ಪತ್ರಿಕೆಯ ಚಂದಾ ವಿವರ

ವಾರ್ಷಿಕ — (ತಿಂಗಳಿಗೆ)	0-8-0
ವರ್ಷಕ್ಕೆ (ಅಂಚೆ ಮೂಲಕ)	1-0-0
ಬಿಡಿ ಪ್ರತಿ — —	0 0-3

ಏಜೆಂಟರಿರುವ ಕಡೆಗಳಲ್ಲಿ ಚಂದಾ ತಿಂಗಳಿಗೆ ಏಜೆಂಟರ ಮೂಲಕ.

ಕಡಿಮೆಯೇ ಚಂದಾದಾರರಾಗಿರಿ

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

26-6-52ನೇ ಗುರುವಾರದಿಂದ ಅನೇಕ ಪ್ರಾರಂಭ

ರಾಯಲ್ ಟಾಕೀಸ್ ಕನ್ನಡ ವಾಕ್ಚಿತ್ರ

ಹರಿದಾಸ್

ತಾರೆಗಳು— ತ್ಯಾಗರಾಜ ಭಾಗವತರ್, ಟಿ. ಆರ್. ರಾಜಕುಮಾರಿ, ಕೃಷ್ಣನ್, ಮಧುರಂ ಮುಂತಾದವರು

Edited, Printed and Published by A. R. Nagarajan at Sadhvi Press, D Subbiah Road, Mysore

ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ದಸ್ತಗಿರಿ

ಮೈಸೂರು ೨೮

ಲಕ್ಷ್ಮಿ ಉರುಫ್ ಕುಲಸುಂ ಎಂಬ ಮುಸ್ಲಿಂ ಮತಕ್ಕೆ ಪರಿವರ್ತಿತಳಾದ, ಆದಿ ಕರ್ನಾಟಕ ಸ್ತ್ರೀಯೊಬ್ಬಳ ಮಗಳು ಮಹಮ್ಮದ್ ಎಂಬ ೫ ವರ್ಷದ ಬಾಲಕಿಯ ಮೇಲೆ ಮಂಡಿ ಮೊಹಲ್ಲದ ಉಸ್ಮಾನ್ ಎಂಬ ೩೦ ವರ್ಷದ ತರುಣನು ಕಳೆದ ೨೬ ನೇ ತಾ॥ ರಾತ್ರಿ ಬಲಾತ್ಕಾರವಾಗಿ ಅತ್ಯಾಚಾರ ನಡೆಸಿದನೆಂದು ಅವನನ್ನು ಮಂಡಿ ಪೊಲೀಸರು ದಸ್ತಗಿರಿ ಮಾಡಿರುವರು. ಬಾಲಕಿಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ.

ಮದ್ರಾಸ್ ಗೌರ್ನರರ ಭಾಷಣಕ್ಕೆ ಬಹಿಷ್ಕಾರ

ಪ್ರಜೆಗಳ ಸಾರ್ವಭೌಮಾಧಿಕಾರವನ್ನು ತುಳಿಯುವ ನೀತಿಯನ್ನು ಹೊಂದಿರುವರೆಂದು ಆಪಾದಿಸಿ, ಮದ್ರಾಸು ಶಾಸನ ಸಭೆಯ ಕಮ್ಯೂನಿಸ್ಟ್ ಮತ್ತು ಕೆ. ಎಂ. ಪಿ. ಪಕ್ಷದ ಸದಸ್ಯರು ನೆನ್ನೆ ಶಾಸನ ಸಭೆಗಳ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲು ಮದ್ರಾಸು ಗೌರ್ನರರು ಬಂದಾಗ ಅವರ ಭಾಷಣಕ್ಕೆ ಬಹಿಷ್ಕಾರ ಹಾಕಿದರು. ಸರ್ಕಾರದ ದಸ್ತಗಳು ಹೊರ ಬರುವುದಕ್ಕೆ ಮಂತ್ರಿಗಳೇ ಜವಾಬ್ದಾರರಾಗಿದ್ದರೂ, ಹೊಸ ತೆರಿಗೆಯನ್ನು ವಿಶೇಷವಾಗಿ ಈ ಮೂಲಕ ಗೌರ್ನರರು ಪ್ರಜೆಗಳ ಮೇಲೆ ಹೊರಿಸಿರುವುದಕ್ಕಾಗಿ ಅವರುಗಳು ಆಕ್ಷೇಪಿಸಿರುತ್ತಾರೆ.

ಮದ್ರಾಸಿನಲ್ಲಿ ಬಸ್ ಪ್ರಯಾಣಿಕರ ಮೇಲೆ ತೆರಿಗೆ

ಮದ್ರಾಸು ಶಾಸನ ಸಭೆಯಲ್ಲಿ ಅಲ್ಲಿನ ಹಣಕಾಸಿನ ಮಂತ್ರಿ ಸಿ. ಸುಬ್ರಹ್ಮಣ್ಯಂ ರವರು ೩೬-೫೦ ನೇ ಸಾಲಿನ ಆಯವ್ಯಯದ ಅಂದಾಜನ್ನು ಮಂಡಿಸಿ, ೩.೫೮ ಕೋಟಿ ರೂ ಗಳ ಕೊರತೆಯನ್ನು ಸರಿಪಡಿಸಲು ಬಸ್ಸುಗಳ ಪ್ರಯಾಣಿಕರ ಮೇಲೆ ಮೈಲಿಗೆ ಒಂದು ಕಾಸಿನಂತೆ ತೆರಿಗೆ, ಗ್ಯಾಲನ್ನಿಗೆ ೨ ಆಣೆಯಂತೆ ಪೆಟ್ರೋಲ್ ಮಾರಾಟ ತೆರಿಗೆ ಮತ್ತು ವಿದೇಶಿ ಮದ್ಯದ ಮಾರಾಟದ ಮೇಲೆ ಹೊಸ ತೆರಿಗೆ, ಹೆಚ್ಚು ಭೂಮಿಯುಳ್ಳವರ ಮೇಲೆ ಕಂದಾಯ ಮತ್ತು ಹೊಸ ನೀರಾವರಿ ಪ್ರದೇಶಗಳಲ್ಲಿ ಅಭಿವೃದ್ಧಿ ತೆರಿಗೆ ಇತ್ಯಾದಿಗಳನ್ನು ವಿಧಿಸುವ ಬಗ್ಗೆ ಸೂಚನೆಯನ್ನು ಮಾಡಿರುತ್ತಾರೆ. ಈ ತೆರಿಗೆಗಳಿಂದ ೨.೭ ಕೋಟಿ ರೂ. ಉತ್ಪತ್ತಿಯಾಗುವುದೆಂದು ಗೊತ್ತಾಗಿದೆ.

ತಲೆಯಲ್ಲಿ ೮ ಕಣ್ಣುಗಳುಳ್ಳ ಶಿಶು

ಚಿಕ್ಕಮಗಳೂರಿನ ಹೆರಿಗೆ ಆಸ್ಪತ್ರೆಯಲ್ಲಿ ಕೊಂಗರ ಸ್ತ್ರೀಯೊಬ್ಬಳು ಕಳೆದ ೨೫ ನೇ ತಾ॥ ಭೂತಾಕಾರದ ವಿಚಿತ್ರ ಮಗುವನ್ನು ಹಡೆದಳೆಂದೂ ಅದಕ್ಕೆ ತಲೆ ಹಿಂಭಾಗದಲ್ಲಿ ನಾಲ್ಕು ಕಣ್ಣುಗಳಿದ್ದುವೆಂದೂ, ನೋಡುವುದಕ್ಕೆ ಭಯಂಕರವಾಗಿದ್ದ ಆ ಮಗು ಹುಟ್ಟಿದಾಗಲೇ ಮೃತಪಟ್ಟಿತ್ತೆಂದೂ ಹೇಳಲಾಗಿದೆ.

ರಿಜಿಸ್ಟರ್ಡ್ ನಂ. 793 ॥ ವಂದೇ ಮಾತರಂ ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೮-೩-೫೨ [ಸಂಚಿಕೆ ೨೭೫

ಆಗಸ್ಟ್ ೫ನೇ ತಾ॥ ನಿಂದ ಅಂಚೆ ನೌಕರರ ಮುಷ್ಕರ

ಕಾಲೇಜು ಸ್ಥಾನಗಳ ಹಂಚಿಕೆಯಲ್ಲಿ ಬದಲಾವಣೆ

ಬೆಂಗಳೂರು ೨೮

ಪಾರಿಭಾಷಿಕ ಕಾಲೇಜುಗಳಲ್ಲಿ ಸ್ಥಾನಗಳನ್ನು ಹಂಚುವ ಬಗ್ಗೆ ಕಳೆದ ೧೧ ನೇ ತಾ॥ ಮಾಡಿದ್ದ ಆಜ್ಞೆಯನ್ನು ಸರ್ಕಾರದವರು ಬದಲಾಯಿಸಿ ಆಜ್ಞೆ ಮಾಡಿರುತ್ತಾರೆ. ಹಿಂದುಳಿದ ವರ್ಗದವರಿಗೆ ಶೇ॥ ೧೫ ರಷ್ಟು ಸ್ಥಾನಗಳನ್ನು ಮೀಸಲಾಗಿಟ್ಟು ಉಳಿದ ಸ್ಥಾನಗಳನ್ನು ಹಿಂದುಳಿದ ಮತ್ತು ಸಾಮಾನ್ಯ ವರ್ಗದವರಿಗೆ ಸಮನಾಗಿ ಹಂಚಬೇಕೆಂದು ಸೂಚಿಸಿರುತ್ತಾರೆ.

ಸಮುದ್ರದ ನೀರಿನಿಂದ ವಿದ್ಯುಚ್ಛಕ್ತಿ

ಪುದುಚೇರಿಯಲ್ಲಿ ಸಮುದ್ರದ ನೀರಿನಿಂದ ವಿದ್ಯುಚ್ಛಕ್ತಿಯನ್ನು ತಯಾರಿಸುವುದಕ್ಕಾಗಿ ಫ್ರೆಂಚ್ ಭಾರತದ ಸರ್ಕಾರದವರು ೧೦ ಲಕ್ಷ ರೂ ವನ್ನು ಮಂಜೂರ್ ಮಾಡಿರುತ್ತಾರೆ.

ಅಂಚೆ ಅಧಿಕಾರಿಗಳಲ್ಲಿ ರೇಡಿಯೋ ಪರವಾನಗಿ ನಿಯೋಗ

ಮದ್ರಾಸಿನ ಪೋಸ್ಟ್ ಮಾಸ್ಟರ್ ಜನರಲ್‌ರವರು ಮೈಸೂರಿಗೆ ಭೇಟಿ ಕೊಟ್ಟ ಸಮಯದಲ್ಲಿ ನೆನ್ನೆ ಅವರ ಬಳಿ ಇಲ್ಲಿನ ರೇಡಿಯೋ ವರ್ತಕರ ನಿಯೋಗವೊಂದು ಹೋಗಿತ್ತು. ಮನೆಗಳ ರೇಡಿಯೊ ರಹದಾರಿ ಶುಲ್ಕವನ್ನು ೧೫ ರಿಂದ ೧೦ ರೂ. ಗೆ ಇಳಿಸುವುದು; ಮೋಟಾರು ಕಾರುಗಳ ರೀತಿಯಲ್ಲಿ ಒಂದೇ ಕಡೆಯಿರುವ ಪ್ರತಿಯೊಂದು ರೇಡಿಯೊವಿಗೂ ಪ್ರತ್ಯೇಕ ರಿಜಿಸ್ಟ್ರೇಷನ್ ಮಾಡದಿರುವುದು, ರೇಡಿಯೋ ಮಾರಾಟಗಾರರ ರಹದಾರಿ ಪದ್ಧತಿಯ ಪುನರ್ವಿಮರ್ಶೆ, ಮಾರ್ಕೆಟ್ ಅಂಚೆ ಕಛೇರಿಯ ಬದಲಾವಣೆ, ವಾಣಿವಿಲಾಸ ಮಾರ್ಕೆಟ್ಟಿನಲ್ಲಿ ಹೊಸ ಅಂಚೆ ಕಛೇರಿಯ ಸ್ಥಾಪನೆ, ಮೈಸೂರು - ಬೆಂಗಳೂರುಗಳ ನಡುವೆ ಟ್ರಂಕ್ ಟೆಲಿಫೋನ್ ದರ ಇಳಿಸುವುದು-ಈ ವಿಷಯಗಳ ಬಗ್ಗೆ ನಿಯೋಗದವರು ಅಧಿಕಾರಿಗಳೊಡನೆ ಚರ್ಚಿಸಿದರು. ಅವರ ಬೇಡಿಕೆಗಳನ್ನು ಸಾವಧಾನವಾಗಿ ಕೇಳಿ ಸೂಕ್ತವಾದ ಕ್ರಮ ಕೈಗೊಳ್ಳುವುದಾಗಿ ಅವರು ನಿಯೋಗದವರಿಗೆ ಭರವಸೆಯಿತ್ತರು.

ಬರುವ ಆಗಸ್ಟಿನಲ್ಲಿ ಅಂಚೆ ನೌಕರರ ಮುಷ್ಕರ

ಬರುವ ಆಗಸ್ಟ್ ೫ ರಿಂದ ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂದು ಭಾರತದ ಅಂಚೆ ಇಲಾಖಾ ಕೆಳ ದರ್ಜೆ ನೌಕರರಿಗೆ, ಆ ನೌಕರರ ಸಂಘದ ಕಾರ್ಯಕಾರಿ ಸಮಿತಿಯು ಸೂಚಿಸಿರುತ್ತದೆ. ಸಂಘದ ಅಧ್ಯಕ್ಷರಾದ ಜಯಪ್ರಕಾಶ್ ನಾರಾಯಣರ ೨೧ ದಿನಗಳ ಉಪವಾಸವು ಮುಕ್ತಾಯವಾದನಂತರ ಈ ಬಗ್ಗೆ ಸರ್ಕಾರಕ್ಕೆ ನೋಟೀಸು ಕೊಡಲು ತೀರ್ಮಾನವಾಗಿದೆ. ಮೂರು ವರ್ಷಗಳ ಕೆಳಗೆ ಅಂಚೆ ಇಲಾಖಾ ಮಂತ್ರಿಯಾಗಿದ್ದ ರಫಿ ಅಹಮದ್ ಕಿದ್ವಾಯಿಯವರು ಹಿಂದೆ ನಡೆದ ಸತ್ಯಾಗ್ರಹದ ಕಾಲದ ವೇತನವನ್ನು ಕೊಡಿಸುವುದಾಗಿ ವಾಗ್ದಾನ ಮಾಡಿದ್ದರೆಂದೂ, ಅವರು ತಮ್ಮ ವಾಗ್ದಾನವನ್ನು ನಡೆಯದಿದ್ದರೆ ರಾಜೀನಾಮೆ ಕೊಡಬೇಕಾಗಿತ್ತೆಂದೂ ತಿಳಿಸಿ ಆ ಮಂತ್ರಿಗಳ ವರ್ತನೆ ಬಗ್ಗೆ ಪ್ರಧಾನಿಯವರು ತನಿಖೆ ನಡೆಸಬೇಕೆಂದೂ ಸಂಘವು ಒತ್ತಾಯಪಡಿಸಿ ನಿರ್ಣಯ ಮಾಡಿರುತ್ತದೆ.

ಶಾಸನಸಭಾ ವಿಶ್ವಾಸ ಬೇಕೆಂದು ರಾಜಾಜಿ ಬೇಡಿಕೆ

ಮದ್ರಾಸಿನ ಮುಖ್ಯ ಮಂತ್ರಿಗಳಾಗಿ ಇರಕೂಡದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವ ಉದ್ದೇಶದಿಂದ ಅಲ್ಲಿನ ಶಾಸನ ಸಭಾ ಸಂಯುಕ್ತ ಪ್ರಜಾ ಪಕ್ಷದವರು ಗೌರ್ನರರ ಭಾಷಣದ ಸಮಯದಲ್ಲಿ ನೆನ್ನೆ ಸಭಾತ್ಯಾಗ ಮಾಡಿದರೆಂದು ಭಾವಿಸಿ ರಾಜಾಜಿಯವರು ತಮ್ಮ ಮುಖ್ಯ ಮಂತ್ರಿತ್ವದ ಬಗ್ಗೆ ಸಭೆಯ ವಿಶ್ವಾಸವಿರುವುದೇ ಎಂಬುದನ್ನು ತಿಳಿದುಕೊಳ್ಳಲು ಇದೇ ೩೧ನೇ ತಾ॥ ವಿಶ್ವಾಸದ ಮತವನ್ನು ಕೇಳಲಿರುವರೆಂದು ವರದಿಯಾಗಿದೆ.

ಶಸ್ತ್ರಸಜ್ಜಿತ ಜನರಿಂದ ವಿಮಾನ ಮಾರ್ಗದ ಬದಲಾವಣೆ

ಯುಗೋಸ್ಲಾವಿಯದ ಜಾಗ್ರೆಬ್ ನಗರದಿಂದ ನೆನ್ನೆ ಹೊರಟ ವಿಮಾನವೊಂದನ್ನು ಅದರಲ್ಲಿದ್ದ ೩ ಜನ ಶಸ್ತ್ರಸಜ್ಜಿತ ಜನರು ಬಲಾತ್ಕಾರವಾಗಿ ತಮ್ಮ ವಶಕ್ಕೆ ತೆಗೆದುಕೊಂಡು ಇಟಲಿಯ ಫೋಲಿಗ್ನೊ ನಗರಕ್ಕೆ ತಾವೇ ನಡೆಸಿಕೊಂಡು ಹೋಗಿ ಇಳಿಸಿದರೆಂದು ವರದಿಯಾಗಿದೆ.

ಭದ್ರಾವತಿ ಮತ್ತು ಲೋ[...] ಶಾಲ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

(ನಮ್ಮ ಸು.ಪ್ರೋ॥) ಬೆಂಗಳೂರು ೨೮

ಈ ದಿನ ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರ ರಾಯರು ಪ್ರಶ್ನೆಗಳಿಗೆ ಉತ್ತರಕೊಡುತ್ತಾ, ಡಾ॥ ಸಿ. ಆರ್. ರೆಡ್ಡಿಯವರ ವರದಿಯಲ್ಲಿ ಅಡಕವಾಗಿರುವ ಸೂಚನೆಗಳೆಲ್ಲವನ್ನು ಜಾರಿಗೆ ತರಲು ಹಣಕಾಸಿನ ಪರಿಸ್ಥಿತಿಯಿಂದ ಅವಕಾಶವಿಲ್ಲನೆಂದು ಹೇಳಿದರು. ವಿದ್ಯಾಭ್ಯಾಸದ ಸುಧಾರಣೆಗಾಗಿ ಸಮಿತಿಯೊಂದನ್ನು ನೇಮಿಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುವುದಾಗಿಯೂ ಹೇಳಿದರು.

ಶ್ರೀ ಕೆ. ಎಸ್. ನಾಗರವರ ಪ್ರಶ್ನೆಗೆ ಉತ್ತರವಾಗಿ ವಿದ್ಯಾ ಮಂತ್ರಿಗಳು ಗಣಿಗಳು ಮತ್ತು ಲೋಹಗಳ ಶಾಲೆಯೊಂದನ್ನು ಭದ್ರಾವತಿಯಲ್ಲಿ ತೆಗೆಯಲಾಗುವುದೆಂದು ಹೇಳಿದರು.

ತುಮಕೂರು ಜಿಲ್ಲೆಯ ದಳವಾಯಿಕೆರೆ ಬಳಿ ಕೆಲವು ತಿಂಗಳ ಹಿಂದೆ ಪೊಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ಇಬ್ಬರು ಸತ್ತು ೮ ಮಂದಿಗೆ ಗಾಯವಾಯಿತೆಂದೂ, ಅವರುಗಳ ಸಂಸಾರದವರಿಗೆ ಜಮೀನುಗಳನ್ನು ಕೊಡುವುದು, ಮುಂತಾದ ಸೂಕ್ತ ಪರಿಹಾರ ಒದಗಿಸಲು ಆಲೋಚಿಸಲಾಗಿದೆಯೆಂದೂ ಸಚಿವರು ತಿಳಿಸಿದರು.

ನಂತರ ಆಯವ್ಯಯದ ಮೇಲೆ ಚರ್ಚೆಗಳಾದುವು ಶ್ರೀ ಬಿ. ವಿ. ನಾರಾಯಣ ರೆಡ್ಡಿಯವರು ಮಾತನಾಡಿ ಕೋಲಾರದ ಗ್ರಾಮ ಪ್ರದೇಶಗಳಿಗೆ ಸರ್ಕಾರದವರು ಇದೀಯ ಪಕ್ಷ ೫೦ ಸಾವಿರ ರೂಗಳನ್ನಾದರೂ ಹೆಚ್ಚಾಗಿ ಕೊಡಬೇಕೆಂದು ಸೂಚಿಸಿದರು.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಭಾಷಣ ಮಾಡಿ, ಸಂಸ್ಥಾನದಲ್ಲಿ ಹೆಂಗಸರ ಶಿಕ್ಷಣಕ್ಕೆ ಹೆಚ್ಚು ಕೊಡಬೇಕೆಂದೂ, ಗೋವಧೆ ಮತ್ತು ಪ್ರಾಣಿಗಳ ವಧೆಯು ತಪ್ಪಬೇಕೆಂದೂ ತಿಳಿಸಿದರು. ರಸ್ತೆ ಸಂಚಾರದ ವ್ಯವಸ್ಥೆಯು ವಿಫಲವಾಗಿರುವುದೆಂದೂ, ಅದನ್ನು ಬಿಟ್ಟುಬಿಡಬೇಕೆಂದೂ ಸೂಚಿಸಿದರು.

ರಿಪಬ್ಲಿಕ ಸಚಿವರು ಮಾತನಾಡಿ ಗೇಣಿ ಶಾಸನವು ೯ ತಾಲ್ಲೂಕುಗಳಲ್ಲಿ ಈಗ ಜಾರಿಯಲ್ಲಿರುವುದೆಂದೂ, ಅದರ ಫಲಿತಾಂಶದ ಮೇಲೆ ಮುಂದೆ ಭೂ ಸುಧಾರಣೆ ಕ್ರಮ ಕೈಗೊಳ್ಳಲಾಗುವುದೆಂದೂ ಹೇಳಿದರು.

ನಗರಗಳಲ್ಲಿ ಹಾಲಿನ ಸರಬರಾಜು ವ್ಯವಸ್ಥೆ ಬಗ್ಗೆ ಸಮಿತಿ

ಸಂಸ್ಥಾನದ ವಿವಿಧ ನಗರಗಳಲ್ಲಿ ಉಂಟಾಗಿರುವ ಹಾಲಿನ ಅಭಾವವನ್ನು ಪರಿಹರಿಸುವ ಬಗ್ಗೆ ಸಮಿತಿಯೊಂದನ್ನು ಸರ್ಕಾರದವರು ನೇಮಿಸಲಿರುವರೆಂದು ಗೊತ್ತಾಗಿದೆ.

ದಕ್ಷಿಣ ಆಫ್ರಿಕಾ ಚಳುವಳಿಯಲ್ಲಿ ೫೦ ಜನರ ದಸ್ತಗಿರಿ

ದಕ್ಷಿಣ ಆಫ್ರಿಕಾಸರ್ಕಾರದ ವರ್ಣಭೇದ ನೀತಿಯನ್ನು ಪ್ರತಿಭಟಿಸುವ ಬಗ್ಗೆ ಹೂಡಲಾಗಿರುವ ಶಾಸನ ಭಂಗ ಚಳುವಳಿ ಸಂಬಂಧದಲ್ಲಿ ನೆನ್ನೆ ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದ ಅಷ್ಟು ೫೦ ಜನರ ದಸ್ತಗಿರಿಯಾಗಿರುತ್ತದೆ.

ಸಂಸ್ಥಾನದ ಆಯುವ್ಯಯದ ಮೇಲೆ ಚರ್ಚೆ

ಬೆಂಗಳೂರು ೨೭

ಶಾಸಕ ಸಭೆಯಲ್ಲಿ ನೆನ್ನೆ ಆಯುವ್ಯಯದ ಅಂದಾಜು ಪಟ್ಟಿಯ ಮೇಲೆ ಚರ್ಚೆ ನಡೆಯಿತು ಆಯುವ್ಯಯದಲ್ಲಿ ಭಾರಿ ಕೊರತೆಯಿದ್ದರೂ ಸಹ ಹೊಸ ತೆರಿಗೆಯನ್ನು ಹಾಕದಿರುವುದಕ್ಕೆ ಸದಸ್ಯರು ಸಂತೋಷವನ್ನು ವ್ಯಕ್ತಪಡಿಸಿದರು

ಶ್ರೀ ಎಂ ವಿ. [illegible]ರವರು ಮಾತನಾಡಿ ಹೊಸ ತೆರಿಗೆಯನ್ನು ವಿಧಿಸದಿದ್ದುದಕ್ಕಾಗಿ ಸಂತೋಷವನ್ನು ಸೂಚಿಸಿದರು

ಶ್ರೀ ಪಿ ಆರ್ ರಾಮಯ್ಯನವರು, ಕಳೆದ ೨೦ ವರ್ಷಗಳಲ್ಲಿ ಸಂಸ್ಥಾನವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿರುವುದೆಂದು ತಿಳಿಸಿದರು ಜನರಿಗೆ ತೆರಿಗೆ ಕೊಡುವ ಶಕ್ತಿಯು ಹೆಚ್ಚುವಂತಾಗಲು ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿದರು

ಶ್ರೀ ಸಿದ್ಧಿ ಭಾಮರ್ರನವರು ಮಾತನಾಡಿ ಆಯುವ್ಯಯದ ಕೊರತೆಯು ಇನ್ನೂ ಹೆಚ್ಚಬಹುದೆಂದು ತಿಳಿಸಿದರು

ಶ್ರೀ ಲಕ್ಕಪ್ಪನವರು ಮಾತನಾಡಿ ಭದ್ರಾವತಿ ಕಬ್ಬಿಣ ಕಾರ್ಖಾನೆಯು ಲಾಭದಾಯಕವಾಗಿರುವುದನ್ನು ಪ್ರಶಂಸಿಸಿದರು

ಶ್ರೀ ಟಿ ನಾರಾಯಣ ಸ್ವಾಮಿಯವರು ಭಾಷಣ ಮಾಡಿ ಆಹಾರದ ಬೆಲೆ ಹೆಚ್ಚುತ್ತಿರುವುದು ಅನಿವಾರ್ಯವೆಂದೂ, ಆದಕ್ಕಾಗಿ ಸತ್ಯಾಗ್ರಹವನ್ನು ನಡೆಸುವುದು ಅನಾವಶ್ಯಕವೆಂದೂ ತಿಳಿಸಿದರು.

ಶ್ರೀ ಮಲ್ಲಾ ಗೋವಿಂದರೆಡ್ಡಿಯವರು ಮಾತನಾಡಿ, [illegible] ಕೈಗಾರಿಕೆ ಬಂಡವಾಳದ ಅಧಿಕ ಸ್ವಾತಂತ್ರ್ಯ [illegible] ಟೀಕಿಸಿದರು.

ಶಾಸಕರು ಸತ್ಯಾಗ್ರಹದ ಬಗ್ಗೆ ಪ್ರಶ್ನೋತ್ತರ

ಶಾಸನ ಸಭೆಯಲ್ಲಿ ಮೊನ್ನೆ [illegible] ಸತ್ಯಾಗ್ರಹದ ಸಂಬಂಧವಾದ ಪ್ರಶ್ನೋತ್ತರಗಳಾಯಿತು. ಅಲ್ಲಿನ ಜನಸಾಮಾನ್ಯರಿಗೆ ತೊಂದರೆಯಾಗಿರುವ ಯಾವ ಸಮಾಚಾರವನ್ನೂ ಒದಗಿಸಿಲ್ಲವೆಂದೂ, ೬ ತಿಂಗಳು ಕಾಲ ಪೊಲೀಸರು ಅಲ್ಲಿ ಶಿಬಿರ ಹೂಡಿದ್ದರೆಂದೂ, ಶಾಂತಿ ಭಂಗವಾಗುವ ಬೆದರಿಕೆಯುಂಟಾಗುವುದರಿಂದ ಪೊಲೀಸರು ಅಲ್ಲಿಗೆ ಹೋಗಬೇಕಾಯಿತೆಂದೂ ಗೃಹ ಸಚಿವ ಶ್ರೀ ಸಿದ್ದವೀರಪ್ಪನವರು ಶ್ರೀ ಗೋಪಾಲಗೌಡರಿಗೆ ಉತ್ತರವಾಗಿ ತಿಳಿಸಿದರು

ಮಧ್ಯ ಪ್ರದೇಶ ಸರ್ಕಾರಕ್ಕೆ ನೀರಿನ ಸಂಶೋಧಕರು

ನೀರು ಸಂಶೋಧಕರ ಸಂಘವೊಂದನ್ನು ಏರ್ಪಡಿಸಲು ಮಧ್ಯ ಪ್ರದೇಶ ಸರ್ಕಾರದವರು ಆಲೋಚಿಸುತ್ತಿದ್ದಾರೆ ಸರ್ಕಾರಿ ಅಧಿಕಾರಿಗಳ ಪೈಕಿ ಹಲವರೂ, ಇತರ [illegible] ನೀರಿನ ಆಕರಗಳನ್ನು ಕಂಡುಹಿಡಿಯುವ ಶಕ್ತಿಯುಳ್ಳವರಾಗಿ [illegible] ಹೇಳಲಾಗಿದೆ.

ಯಾಲೂ ಧಾಳಿ ಬಗ್ಗೆ ನೆಹರೂ ಖಂಡನೆ

ಉತ್ತರ ಕೊರಿಯದ ಯಾಲೂ ನದಿಯ ಬಳಿ ಇರುವ ವಿದ್ಯುಚ್ಛಕ್ತಿ ಕಾರ್ಖಾನೆಗಳ ಮೇಲೆ ಅಮೆರಿಕನ್ನರು ಬಾಂಬು ಹಾಕಿರುವುದರ ಬಗ್ಗೆ ಅಸಮ್ಮತಿಯನ್ನು ಸೂಚಿಸಿ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಹೇಳಿಕೆಯಿತ್ತಿರುವರು

ತಾಂತ್ರಿಕ ಕಾಲೇಜುಗಳಲ್ಲಿ ಹೆಚ್ಚು ಸ್ಥಾನಗಳು

ಸಂಸ್ಥಾನದ ಇಂಜನಿಯರಿಂಗ್ ಕಾಲೇಜುಗಳಲ್ಲಿ ಸ್ಥಾನಗಳನ್ನು ಹೆಚ್ಚಿಸಿ ಏರ್ಪಾಡು ಮಾಡಲಾಗಿದೆ ಬೆಂಗಳೂರು ಸರ್ಕಾರಿ ಇಂಜನಿಯರಿಂಗ್ ಕಾಲೇಜಿನ ಸ್ಥಾನಗಳನ್ನು ೧೨೦ ರಿಂದ ೧೫೦ ಕ್ಕೂ ಬಿ ಎಂ. ಎಸ್ ಕಾಲೇಜಿನ ಸ್ಥಾನಗಳನ್ನು ೮೦ ರಿಂದ ೧೨೦ ಕ್ಕೂ ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್‌ನಲ್ಲಿ ೮೦ ರ ವರೆಗೂ ಸ್ಥಾನಗಳನ್ನು ಹೆಚ್ಚಿಸಲಾಗುವುದು ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ೬೦ ಮತ್ತು ಬೆಂಗಳೂರ ಮೆಡಿಕಲ್ ಕಾಲೇಜಿನಲ್ಲಿ ೧೧೦ ಸ್ಥಾನಗಳಿರುವುವೆಂದು ತಿಳಿಸಲಾಗಿದೆ

[illegible] ಸರ್ಕಾರದ ಕ್ರಮ

[illegible] ವರದಿಯನ್ನು ಜನತೆಯ ಮುಂದೆ [illegible] ಶೀಘ್ರವಾದ ವಿಷಯಗಳನ್ನು ಪ್ರಕಟಣೆಗಳ ಮೂಲಕ ಪ್ರಚುರ ಪಡಿಸಲಾಗುತ್ತಿದೆಯೆಂದೂ ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರು ಶ್ರೀ ಪಿ ಆರ್ ರಾಮಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದ್ದಾರೆ

ನಂಜನಗೂಡು ಸಂಗೀತ ವಿದ್ಯಾಲಯ

ನಂಜನಗೂಡು. ಶ್ರೀ ಎ ಎಸ್ ಮೂರ್ತಿಯವರ ಸಂಗೀತ ವಿದ್ಯಾಲಯದಿಂದ ಈ ವರ್ಷ ಪರೀಕ್ಷೆಗೆ ಕುಳಿತ ೨೦ ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದಾರೆ ೪ ಜನ ಸೀನಿಯರ್ ಪರೀಕ್ಷೆಗೆ ಕುಳಿತಿದ್ದವರಲ್ಲಿ ಇಬ್ಬರು ಮೊದಲನೇ, ಮತ್ತಿಬ್ಬರು ಎರಡನೇ ತರಗತಿಗಳಲ್ಲಿ ಉತ್ತೀರ್ಣರಾಗಿರುವರು ಜೂನಿಯರ್ ಪರೀಕ್ಷೆಗೆ ಕುಳಿತ ೧೬ ಮಂದಿಯಲ್ಲಿ ಒಬ್ಬರು ಪ್ರಥಮ ಮತ್ತು ನಾಲ್ಕು ಮಂದಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿರುವರು

CONSULT
Sri M RAJA RAO,
WESTERN ASTROLOGER,
SRINGERI,
For all your coming events with your date of birth ? Test Questions with brief analysis of life-Rs 5 V P P

೧೫೭ ವರ್ಷದ ಬ್ರಹ್ಮಚಾರಿ

ಭಾರತದಲ್ಲೆಲ್ಲಾ ಪ್ರಾಯಶಃ ಅತ್ಯಂತ ವೃದ್ಧನಾದ ಸಿಬ್ಬಾನ್ ಅಲಿ ಹಜಾ ಎಂಬ ೧೫೭ ವರ್ಷದ ಬ್ರಹ್ಮಚಾರಿಯು ಬೊಂಬಾಯಿಯಲ್ಲಿರುವನು. ಆತನು ಬ್ರಹ್ಮಚಾರಿಯಾಗಿದ್ದುಕೊಂಡು, ಕೇವಲ ಹಾಲು ಮತ್ತು ಮಾಂಸದ ಸಾರವನ್ನು ಮಾತ್ರ ಉಪಯೋಗಿಸುತ್ತಿರುವನೆಂದೂ, ಕುಡಿಯುವುದಾಗಲಿ ಹೊಗೆಬತ್ತಿ ಸೇದುವುದಾಗಲಿ ಇಲ್ಲವೆಂದೂ ಹೇಳಲಾಗಿದೆ. ತನ್ನ ಸ್ವಂತ ಊರಿನಲ್ಲಿಯೇ ಆತನು ಐದಾರು ತಲೆಮಾರಿನವರು ಹುಟ್ಟಿ ಸತ್ತಿರುವುದನ್ನು ನೋಡಿರುವನು ಒಂದು ಶತಮಾನದ ಹಿಂದಿನ ನೆನಪುಗಳನ್ನೆಲ್ಲಾ ಆತನು ಹೇಳುತ್ತಿರುವನು

ಹಿಂದೀ ತರಗತಿಗಳು

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಕಳೆದ ೨ ನೇ ತಾ|| ನಿಂದ ಹಿಂದಿ ತರಗತಿಗಳನ್ನು ಹಿಂದಿ ಪ್ರಚಾರ ಸಭೆಯವರು ತೆರೆದಿರುತ್ತಾರೆ ಕಲಿಯಲಿಚ್ಛಿಸುವವರು ತರಗತಿಗಳಿಗೆ ಸೇರಲು ಅವಕಾಶವಿದೆ

ನೀರು ಸರಬರಾಜಿಗೆ ತಡೆ

[illegible] ಸಭಾ ಕಮಿಷನರಾದ ಡಾ|| ಎಚ್ ಎಂ ಅಬ್ದುಲ್ ರಹೀಂರವರು ತಿಳಿಸಿರುತ್ತಾರೆ

ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವ

ನಂಜನಗೂಡು ಕಸಬಾ ರೇಂಜಿನ ಕನ್ನಡ ಮತ್ತು ಉರ್ದು ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಬರುವ ತಿಂಗಳು ೫ ನೇ ತಾ|| ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರುವುದು

ಆಕಾಶವಾಣಿ ಶನಿವಾರ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಮಿಶ್ರ ವಾದ್ಯ ಸಂಗೀತ, ಮಧ್ಯಾಹ್ನ ೧೨-೩೦ [illegible], ೧೨-೫೦ [illegible] ಮತ್ತು ನಮ್ಮವರು, ೨ ಸಿನಿಮಾ ಗೀತೆಗಳು, ಸಂಜೆ ೫-೩೦ ಮಿಶ್ರ ೬-೩೦ ಬಿ. ಕೃಷ್ಣಪ್ಪ ಸಂಗೀತ, ೭ ವಾರ್ತೆಗಳು ೮-೧೦ ವಾರ್ತಾ ಪತ್ರಿಕೆ, ೮ ಗಂಗೂಬಾಯಿ ಹಾನಗಲ್ (ರೆಕಾರ್ಡ್) ಸಂಗೀತ, ೯-೧೫ ಪಂಡಿತ್ ಮಲ್ಲಿಕ್ (ರೆಕಾರ್ಡ್) ಸಂಗೀತ, ೯-೩೦ ಪಿರಿ ಫರ್ ಹಾದ್ ನಾಟಕ

ಸಾಧ್ವಿ ಪತ್ರಿಕೆಯ ಚಂದಾ ವಿವರ

ಮಾಸಿಕ — (ಅಂಚೆಸಹಿತ)	0-8-0
ಪರಸ್ಥಳಕ್ಕೆ (ಅಂಚೆ ವೆಚ್ಚ ಸಹಿತ)	1 0-0
ಬಿಡಿ ಪ್ರತಿ — —	0 0 6

ಏಜೆಂಟರಿರುವ ಕಡೆಗಳಲ್ಲಿ ಚಂದಾ ತಿಂಗಳಿಗೆ ಎಂಟಾಣೆ ಮಾತ್ರ

ಕೂಡಲೇ ಚಂದಾದಾರರಾಗಿರಿ

ಹಾಸನ-ಮಂಗಳೂರು ರೈಲು ಬಗ್ಗೆ ಕೇಂದ್ರಕ್ಕೆ ನಿಯೋಗ

ಹಾಸನ ಮತ್ತು ಮಂಗಳೂರುಗಳ ನಡುವೆ ರೈಲು ರಸ್ತೆ ನಿರ್ಮಾಣ ಮಾಡುವ ಆವಶ್ಯಕತೆಯನ್ನು ಕುರಿತು ತಿಳಿಸುವುದಕ್ಕಾಗಿ ದೆಹಲಿಗೆ ಮೈಸೂರು ಸಂಸ್ಥಾನದ ವಾಣಿಜ್ಯ ಸಂಘದವರು ನಿಯೋಗವೊಂದನ್ನು ಕಳುಹಿಸಲು ನಿರ್ಧರಿಸಿರುತ್ತಾರೆ [illegible] ಈ ರಸ್ತೆಯನ್ನು ಹಾಕಿ ಮಲೆನಾಡು ಭಾಗದ ವ್ಯಾಪಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಿಯೋಗದವರು ಕೇಂದ್ರ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳಲಿರುವರು.

ದಸರಾ ವಸ್ತುಪ್ರದರ್ಶನದ ಸಮಿತಿ

ಸರ್ಕಾರದವರು ಈ ಕೆಳಗೆ ಕಂಡವರನ್ನು ಈ ಸಾರಿಯ ದಸರಾ ವಸ್ತು ಪ್ರದರ್ಶನದ ಸಮಿತಿಯ ಸದಸ್ಯರನ್ನಾಗಿ ನೇಮಿಸಿರುತ್ತಾರೆ:—

ಅಧ್ಯಕ್ಷರು ವಿದ್ಯಾ ಮಂತ್ರಿಗಳು, ಉಪಾಧ್ಯಕ್ಷರು ಕೈಗಾರಿಕೆ ಡೈರೆಕ್ಟರು, ಸದಸ್ಯರು:- ವಿದ್ಯಾ ಇಲಾಖಾಧಿಕಾರಿಗಳು, ವಿದ್ಯುಚ್ಛಕ್ತಿ ಮುಖ್ಯಾಧಿಕಾರಿಗಳು, ಗ್ರಾಮಾಭಿವೃದ್ಧಿ ಕಮಿಷನರು, ವ್ಯವಸಾಯ ಇಲಾಖಾ ಡೈರೆಕ್ಟರು, ಮೈಸೂರು ಜಿಲ್ಲಾಧಿಕಾರಿಗಳು, ಬಿಲ್ಡಿಂಗ್ ಡಿವಿಜನ್ನಿನ ಎಕ್ಸಿಕ್ಯೂಟಿವ್ ಇಂಜನಿಯರು, ಮೈಸೂರು ಪೌರಸಭಾಧ್ಯಕ್ಷರು, ಸಂಸ್ಥಾನದ ವಾಣಿಜ್ಯ ಸಂಘದ ಅಧ್ಯಕ್ಷರು, ಅ|| ಭಾ|| ವಸ್ತು ಪ್ರದರ್ಶನದ ಸಂಘದ ಅಧ್ಯಕ್ಷರು, ಸರ್ಕಾರದ ಪ್ರಕಟಣಾಧಿಕಾರಿಗಳು ಮತ್ತು ಶ್ರೀಗಳಾದ ಟಿ ಎಸ್. ಸುಬ್ಬಣ್ಣ, ಜೆ ಎಂ. ಚನ್ನಬಸಪ್ಪ, ಕೆ ಎಸ್ ಕುಮಾರನ್, ವಿ ಎಸ್ ಕೃಷ್ಣಯ್ಯರ್, ಆರ್ ಸುಬ್ಬಣ್ಣ, ರುಮಾಲೆ ಚನ್ನಬಸವಯ್ಯ, ಜಿ ವಿ ಚಲ್ಲಂ, ಶ್ರೀಮತಿ ಲಲಿತಾ ವಿ ಆರ್ ನಾಯ್ಡು, ಶ್ರೀಮತಿ ಪುಟ್ಟನಂಜಮ್ಮ ಮತ್ತು ಕಾರ್ಯದರ್ಶಿ ಶ್ರೀ ಕೆ ವಿ ಐಯಂ

ಆದಾಯ ತೆರಿಗೆ ಇಲಾಖೆ

ಹರಾಜು ನೋಟೀಸ್

೨೮-೬-೫೨, ಮೈಸೂರು

ಈ ತಿಂಗಳ ೩೦ ನೇ ತಾರೀಖು [illegible] ಮರಮಟ್ಟುಗಳು [illegible] ಹರಾಜಿನಲ್ಲಿ ಭಾಗವಹಿಸಬೇಕಾಗಿ ಕೋರಿದೆ

ಡಾ. ಕೆ ಪಂಡಿತಾರಾಧ್ಯ,
ಎಕ್ಸಿಕ್ಯೂಟಿವ್ ಇಂಜನಿಯರ್

Edited, Printed and Published by A R Nagarajan at Sadhvi Press, Dr Subbiah Road, Mysore

ರೋ॥ ನಂ 792 WEEKLY EDITION ಒಂದಿನ ಪತ್ರಿಕೆ 6 ಆಣೆ

ಸಾಧ್ವಿ

ಸಂಪುಟ ೧೬] ಭಾನುವಾರ ೨೯ ೭ ೫೩ [ಸಂಚಿಕೆ ೪೫

ಕೊರಿಯ ಶಾಸನ ಸಭೆ ವಿಸರ್ಜನೆಗೆ ಒತ್ತಾಯ

ಮೈಸೂರು ಧ್ವಜ ತೆಗೆಯಲು ಮಹಾರಾಜರ ಒಪ್ಪಿಗೆ

ಮುಖ್ಯ ಮಂತ್ರಿ ಹನುಮಂತಯ್ಯ ನವರ ಹೇಳಿಕೆ

ಬೆಂಗಳೂರು ೨೯

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಹೆಚ್ಚಿನ ಮಂತ್ರಿಗಳನ್ನು ನೇಮಿಸುವುದಿಲ್ಲವೆಂದು ತಿಳಿಸಿದರು ಉಪ ಮಂತ್ರಿಗಳ ನೇಮಕದ ವಿಷಯವು ಇನ್ನೂ ಪರ್ಯಾಲೋಚನೆಯಲ್ಲಿರುವುದಾಗಿ ಹೇಳಿದರು

ಶ್ರೀಮನ್ ಮಹಾರಾಜರ ಒಪ್ಪಿಗೆಯನ್ನು ಪಡೆದು ಗಂಡ ಭೇರುಂಡ ಧ್ವಜವನ್ನೂ, ಮೈಸೂರು ಗೀತೆಯನ್ನೂ ತೆಗೆದುಹಾಕಲಾಯಿತೆಂದೂ, ರಾಜ ಪ್ರಮುಖರು ಕಾಲ ಧರ್ಮಕ್ಕನುಗುಣವಾಗಿ ವರ್ತಿಸುತ್ತಿರುವುದರಿಂದ ಜನಗಳಲ್ಲಿ ರಾಜ ಭಕ್ತಿಯು ಹೆಚ್ಚು ಬರುತ್ತಿರುವುದಾಗಿಯೂ ಅವರು ಹೇಳಿದರು ಎರಡು ಧ್ವಜ ಮತ್ತು ಎರಡು ರಾಷ್ಟ್ರ ಗೀತೆಗಳಿಂದ ಯಾವುದೊಂದು ರಾಷ್ಟ್ರದ ಏಳಿಗೆಯಾಗುವುದಿಲ್ಲವೆಂದೂ ಅವರು ಹೇಳಿ, ಕಾಶ್ಮೀರದಲ್ಲಿ ಪ್ರತ್ಯೇಕ ಧ್ವಜವಿರುವುದು ರಾಷ್ಟ್ರದ ಐಕ್ಯತೆಗೆ ಹಾನಿಯೆಂದು ಅಭಿಪ್ರಾಯಪಟ್ಟರು

ಖರೆಯವರಿಂದ ಬಿಗಿಮುಷ್ಟಿ ಪ್ರದರ್ಶನ

ಪೂರ್ವ ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾತರ ವಿಷಯವನ್ನು ಕುರಿತು ಪಾರ್ಲಿಮೆಂಟಿನಲ್ಲಿ ನೆನ್ನೆ ಪ್ರಶ್ನೋತ್ತರ ನಡೆಯುತ್ತಿದ್ದಾಗ ಹಿಂದೂ ಮಹಾ ಸಭಾ ಧ್ಯಕ್ಷರಾದ ಡಾ॥ ಎನ್ ಬಿ ಖರೆಯವರು ಬಿಗಿ ಮುಷ್ಟಿ ಪ್ರದರ್ಶನವನ್ನು ಮಾಡಿದರು ಪಂಡಿತ ನೆಹರೂರವರು ಅದನ್ನು ಟೀಕಿಸಿ, ಖರೆಯವರು ಲಿಯಾಖತ್ ಅಲಿಯವರ ಮಾರ್ಗವನ್ನು ಅನುಸರಿಸುತ್ತಾರೆಂದು ಹೇಳಿದಾಗ ಖರೆಯವರು ಉತ್ತರವಿತ್ತು, ಧೂರ್ತರಿಗೆ ಧೂರ್ತರಾಗಿ ವರ್ತಿಸಬೇಕೆಂದು ತಿಳಿಸಿದರು ಅದಕ್ಕೆ ಪ್ರತ್ಯುತ್ತರವಾಗಿ ನೆಹರೂರವರು ಇಬ್ಬರೂ ಒಂದೇ ಜಾತಿಗೆ ಸೇರಿದವರೆಂದು ಹೇಳಿದರು

ರಾಜಗೋಪಾಲಾಚಾರಿಯವರು ಸಂಬಳ ಪಡೆಯುತ್ತಿಲ್ಲ

ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಸಂಬಳವನ್ನು ಪಡೆಯದೆ ಕೆಲಸ ಮಾಡುತ್ತಿರುವರೆಂದೂ, ಇಂತಹ ಅಭಿನಂದನೀಯ ಆದರ್ಶವನ್ನು ಪಾಲಿಸಲು ತಮಗೂ ಸಾಧ್ಯವಿಲ್ಲವೆಂದೂ ಅಲ್ಲಿನ ಗವರ್ನರ್ ಶ್ರೀ ಪ್ರಕಾಶರವರು ತಿಳಿಸಿರುತ್ತಾರೆ

ಚುನಾವಣೆಯಲ್ಲಿ ಮಾಜಿ ಮುಖ್ಯಮಂತ್ರಿ ಸೋಲು

ಮಧ್ಯ ಭಾರತದ ಮಾಜಿ ಮುಖ್ಯ ಮಂತ್ರಿ ತಖ್ತಮಲ್ ಜೈನ್‌ರವರು ಅಲ್ಲಿನ ಶಾಸನ ಸಭೆಯ ಉಪ ಚುನಾವಣೆಯೊಂದರಲ್ಲಿ ಸ್ಪರ್ಧಿಸಿ ಹಿಂದೂ ಮಹಾ ಸಭಾ ಅಭ್ಯರ್ಥಿಯಿಂದ ಸೋಲಿಸಲ್ಪಟ್ಟಿರುವರು ಸಾರ್ವತ್ರಿಕ ಚುನಾವಣೆಯಲ್ಲೂ ಸಹ ಅವರು ಸೋತು ಹೋಗಿದ್ದರು

ಅಭಾವ ಪ್ರದೇಶಗಳಿಗೆ ರಾಜ ಪ್ರಮುಖರಿಂದ ಪುನಃ ೨೦,೦೦೦ ರೂ.

ವರ್ಧಂತಿಯು ನಿರಾಡಂಬರವಾಗಿ ನಡೆಯಲು ಪ್ರಭುಗಳ ಸೂಚನೆ

ಬೆಂಗಳೂರು ೨೯

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪ್ರವಾಸವನ್ನು ಮುಗಿಸಿಕೊಂಡು ಹಿಂತಿರುಗಿರುವ ಶ್ರೀಮನ್ ಮಹಾರಾಜರು ಅಲ್ಲಿನ ಪ್ರಜೆಗಳ ಸ್ಥಿತಿಯನ್ನು ಕಂಡು ಮರುಕಗೊಂಡು ಅವರಿಗೆ ಪರಿಹಾರ ಒದಗಿಸಲು ಪುನಃ ೨೦ ಸಾವಿರ ರೂ ಗಳನ್ನು ಕೊಟ್ಟಿರುತ್ತಾರೆ ಈಗಾಗಲೇ ಅವರು ೩೦ ಸಾವಿರ ರೂ ಗಳನ್ನು ಕೊಟ್ಟಿರುವರು ಅಭಾವದಿಂದ ಬಳಲುತ್ತಿರುವ ಜನರ ಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟು ಅವರು ತಮ್ಮ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಲ್ಲದೆ ನಿರಾಡಂಬರವಾಗಿಯೂ ಖಾಸಗಿಯಾಗಿಯೂ ನಡೆಸುವಂತೆ ಸೂಚಿಸಿರುವರು

ಮಂಡ್ಯದ ಜಿಲ್ಲೆಯಿಂದ ಅಭಾವ ಪ್ರದೇಶಗಳಿಗೆ ಧಾನ್ಯ ಮತ್ತು ಹುಲ್ಲು ಮುಂತಾದುವನ್ನು ಸಾಗಿಸಲು ಫರ್ಗುಸನ್ ಕಂಪೆನಿಯವರು ೪ ಟ್ರೈಲರ್ ಮತ್ತು ಟ್ರಾಕ್ಟರುಗಳನ್ನು ಉದಾರವಾಗಿ ಸರ್ಕಾರಕ್ಕೆ ಕೊಟ್ಟಿರುತ್ತಾರೆ

ಮದ್ರಾಸು ಬಳಿ ಫೌಂಟನ್ ಪೆನ್ ತಯಾರಿಕಾ ಕಾರ್ಖಾನೆ

ಮದ್ರಾಸಿಗೆ ೧೦ ಮೈಲಿ ದೂರದಲ್ಲಿರುವ ಪೂಲಾಲ್ ಪೋರ್ಸ್ ಎಂಬಲ್ಲಿ ಪೈಲಟ್ ಫೌಂಟನ್ ಪೆನ್ನುಗಳನ್ನು ತಯಾರಿಸುವ ಕಾರ್ಖಾನೆಯೊಂದು ಸ್ಥಾಪಿತವಾಗಲಿದೆ ಅದಕ್ಕಾಗಿ ಭಾರತ ಮತ್ತು ಜಪಾನುಗಳು ೧೦ ಲಕ್ಷ ರೂ ಬಂಡವಾಳವನ್ನು ಹಾಕಲಿರುವುವೆಂದು ಹೇಳಲಾಗಿದೆ

ಬಿ. ಸಂಸ್ಥಾನಗಳಿಗೂ ಇತರ ಭಾಗಗಳ ಆದಾಯ ತೆರಿಗೆ

ಭಾರತದ ಇತರ ಭಾಗಗಳಂತೆಯೇ, ಬಿ ಸಂಸ್ಥಾನಗಳಲ್ಲೂ ೧೯೫೩–೫೪ ರಿಂದ ವರಮಾನ ತೆರಿಗೆಯನ್ನು ಸಮನಾಗಿ ವಿಧಿಸಲಾಗುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ತಿಳಿಸಿರುವರು

ಸೇನಾನಿಗಳಿಂದ ಶಾಂತಿಗೆ ಭಂಗವೆಂದು ನೆಹರೂ

ಉತ್ತರ ಕೊರಿಯದ ಯಾಲೂ ಎದ್ದ ಕೇಂದ್ರಗಳ ವಿಶ್ವ ಸಂಸ್ಥೆ ವಿಮಾನಗಳು ನಡೆಸಿದ ಧಾಳಿಯ ಬಗ್ಗೆ ಪಂಡಿತ ನೆಹರೂರವರು ವಿಷಾದವನ್ನು ವ್ಯಕ್ತಪಡಿಸಿ ಶಾಂತಿ ಎತ್ತ ಸಮರ ಇವುಗಳ ಪಂಚಾಯಿತಿಯನ್ನೇ ಲೆಕ್ಕಿಸದೆ ವಿಶ್ವ ಸಂಸ್ಥೆ ಸೈನಾಧಿಕಾರಿಗಳ, ಯಾವ ಸೂಚನೆಯನ್ನೂ ನಡೆಯದೆ ... ತಪ್ಪು ತೀರ್ಮಾನ ಕೈಗೊಳ್ಳುತ್ತಿರುವ ಬಗ್ಗೆ ಆಕ್ಷೇಪಿಸಿರುವರು ಸೇನಾನಿಗಳಿಗೆ ಶಾಂತಿ ಭವಿಷ್ಯತ್ತಿಂತಲೂ ಸ್ಥಳೀಯ ವಿಜಯದ ಗುರಿಗಳೇ ಪ್ರಧಾನವಾಗಿ ಕಾಣುತ್ತಿರುವುದು ವ್ಯಥಾ ವಿಷಯವೆಂದು ಅವರು ಹೇಳಿ ಕೊರಿಯಾ ವಿಷಯದ ಸಮ್ಮೇಳನಗಳಲ್ಲಿ ಭಾರತವು ಸೇರಿಯಿಲ್ಲದಿದ್ದರೂ ಸಹ ಅದು ವಿಶ್ವ ಸಂಸ್ಥೆ ಸದಸ್ಯ ರಾಷ್ಟ್ರವಾಗಿರುವುದರಿಂದ ಅದರ ಅಭಿಪ್ರಾಯ ಕೊರಿಯದಲ್ಲಿ ಯುದ್ಧ ಕಾರ್ಯಾಚರಣೆಗಳು ನಿಲ್ಲಬೇಕೆಂದೂ, ಸೀಸ್ ಫೈರ್ ಆಗಬೇಕೆಂದೂ ಅವರು ಒತ್ತಾಯಪಡಿಸಿರುವರು

೧೧ ಲಕ್ಷ ರೂ. ಬಗ್ಗೆ ನಟನಿಗೆ ಮೋಸ

ಮಂತ್ರದಿಂದ ಹಣವನ್ನು ದ್ವಿಗುಣಗೊಳಿಸುವುದಾಗಿ ನಂಬಿಸಿ ಬೊಂಬಾಯಿಯ ಸಿನಿಮಾ ನಟ ಕುಲದೀಪ್ ಕುಮಾರರಿಂದ ೧೧ ಲಕ್ಷ ರೂ ಪಡೆದು ಮೋಸ ಮಾಡಿದವರೆಂದು ಚಲನ ಚಿತ್ರ ಡೈರೆಕ್ಟರ್ ರಾಜಕುಮಾರ್ ರಾಂಪಾಲ್ ಮತ್ತು ಗೋಪಾಲ್ ಮದನ ಗೋಪ್ ಎಂಬುವರನ್ನು ಪೊಲೀಸರು ದಸ್ತಗಿರಿ ಮಾಡಿ, ಅವರ ಬಳಿ ಇದ್ದ ೬೭,೦೦೦ ರೂ ಗಳನ್ನು ವಶಪಡಿಸಿಕೊಂಡಿರುತ್ತಾರೆ ೫೦ ಸಾವಿರ ರೂ ಗಳ ಜಾಮೀನಿನ ಮೇಲೆ ಅವರನ್ನು ಬಿಡಲಾಗಿದೆ

ಅಗಸ್ಟ್ ಆಖೈರು ವರೆಗೆ ಕಾಂಗ್ರೆಸ್ ಸದಸ್ಯತ್ವ

ಸಾಮಾನ್ಯ ಮತ್ತು ಕಾರ್ಯನಿರತ ಕಾಂಗ್ರೆಸ್ ಸದಸ್ಯರನ್ನು ಸೇರಿಸಲು ಅವಧಿಯನ್ನು ಬರುವ ಅಗಸ್ಟ್ ೩೧ ನೇ ತಾ॥ ವರೆಗೂ ಹೆಚ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಪ್ಪಿರುತ್ತದೆ

ಕೊರಿಯಾ ಶಾಸನ ಸಭೆಯ ಮುಂದೆ ಪ್ರದರ್ಶನ

ಕೊರಿಯದ ಶಾಸನ ಸಭೆಯ ಮುಂದೆ ನೆನ್ನೆ ೬೦೦ ಜನ ಅಧ್ಯಕ್ಷ ರ್ಹೀ ಯವರ ಬೆಂಬಲಗಾರರು ಪ್ರದರ್ಶನ ನಡೆಸಿ ಶಾಸನ ಸಭೆಯನ್ನು ರದ್ದುಗೊಳಿಸಬೇಕೆಂದು ಒತ್ತಾಯ ಪಡಿಸಿದರು ಶಾಸನ ಸಭಾ ಭವನವನ್ನು ಅವರು ಮುತ್ತಲಾಗಿ ಒಳಗಿದ್ದ ೬೦ ಜನ ಸದಸ್ಯರನ್ನು ಹೊರಕ್ಕೆ ಸುರಕ್ಷಿತವಾಗಿ ಕಳುಹಿಸುವುದು ಪೊಲೀಸರಿಗೆ ದುಸ್ತರವಾಯಿತೆಂದು ಹೇಳಲಾಗಿದೆ

ದರೋಡೆಗಾರರು ಅಪಹರಿಸಿದ್ದ ಧನಿಕನ ಮಗನ ರಕ್ಷಣೆ

ರಾಜಾಸ್ಥಾನದ ಜೋಧಪುರ ಜಿಲ್ಲೆಗೆ ಸೇರಿದ ಒಬ್ಬ ಹಣವಂತನ ೩೬ ವರ್ಷದ ಮಗ ವೇಣಿ ಪ್ರಸಾದ್ ಎಂಬುವನನ್ನು ಕಳೆದ ೨೪ ನೇ ತಾ॥ ದರೋಡೆಗಾರರು ಅಪಹರಿಸಿದ್ದರೆಂದೂ, ಅವನನ್ನು ಈಗ ಪೊಲೀಸರು ರಕ್ಷಿಸಿರುತ್ತಾರೆಂದೂ ವರದಿಯಾಗಿದೆ ಆತನ ಅಪಹರಣಕ್ಕಾಗಿ ದರೋಡೆಕಾರರು ಒಂಟೆಗಳನ್ನು ತರಿಸಿದ್ದರೆಂದು ಹೇಳಲಾಗಿದೆ ೪ ಜನ ತಪ್ಪಿತಸ್ಥರನ್ನೂ, ೨೦ ಒಂಟೆಗಳನ್ನೂ ಪೊಲೀಸರು ಹಿಡಿದಿರುತ್ತಾರೆ

ಸಾರ್ವಜನಿಕ ಸ್ಥಳಗಳಲ್ಲಿ ಉಗಿದರೆ ಶಿಕ್ಷೆಯಾಗಬೇಕು

ರೈಲು, ಟ್ರಾಂ ಗಾಡಿ, ಬಸ್ಸು ಮುಂತಾದ ವಾಹನಗಳಲ್ಲೂ ಸಾರ್ವಜನಿಕ ಸ್ಥಳಗಳಲ್ಲೂ ಉಗಿಯುವ ಜನರನ್ನು ಶಿಕ್ಷೆಗೆ ಗುರಿಪಡಿಸುವ ಶಾಸನವನ್ನು ಮಾಡುವಂತೆ ಬಂಗಾಳದ ಕ್ಷಯರೋಗ ಸಂಘದವರು ಸರ್ಕಾರಕ್ಕೆ ಪ್ರಾರ್ಥನೆ ಸಲ್ಲಿಸಿರುತ್ತಾರೆ

ಹುಡುಗನನ್ನು ಉಳಿಸಲು ಹೋದ ೪ ಸ್ತ್ರೀಯರ ಮರಣ

ಬೆಳ್ಳೂರು ೬ ೮ ಶ್ರೀ ವೈಷ್ಣವ ನದಿಯಲ್ಲಿ ಕಳೆದ ೨೯ ನೇ ತಾ॥ ಕಾಲು ಜಾರಿ ಬಿದ್ದ ಒಬ್ಬ ಸಣ್ಣ ಹುಡುಗನನ್ನು ಉಳಿಸಲು ಹೋಗಿ ೪ ಜನ ಸ್ತ್ರೀಯರು ನೀರಿನಲ್ಲಿ ಮುಳುಗಿದರೆಂದು ಹೇಳಲಾಗಿದೆ ಅವರಲ್ಲಿ ಇಬ್ಬರು ಗರ್ಭಿಣಿಯರು

ಸ್ಕೌಟುಗಳ ಗ್ರಾಂಟು ಕಡಿಮೆಯಾಗಬಾರದು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕಳೆದ ೨೩ ನೇ ತಾ॥ ಶಾಸನ ಸಭೆಯಲ್ಲಿ ಸಂಸ್ಥಾನದ ಆಯವ್ಯಯ ಪಟ್ಟಿಯನ್ನು ಮಂಡಿಸಿದಾಗ ಸ್ಕೌಟು ಚಳುವಳಿಗೆ ಕೊಡುವ ಸಹಾಯ ದ್ರವ್ಯವನ್ನು ಕಡಿಮೆ ಮಾಡುವುದಾಗಿ ಸೂಚಿಸಿರುವರು ಇದು ನ್ಯಾಯವಲ್ಲ ಎಷ್ಟೋ ದಿನಗಳಿಂದಲೂ ನಡೆದುಕೊಂಡು ಬಂದಿರುವ ಈ ಸಂಸ್ಥೆಯು ವಿಶೇಷ ಉಪಯುಕ್ತವಾಗಿರುತ್ತದೆ ದೇಶದ ಬಾಲಕರಿಗೆ ಹಿತವನ್ನು ಕೋರುವುದೇ ಸಂಸ್ಥೆಯ ಮೂಲ ತತ್ವ ಸಂಸ್ಥಾನದ ರಾಜ ಪ್ರಮುಖರು ಮುಖ್ಯ ಸ್ಕೌಟುಗಳಾಗಿರುತ್ತಾರೆ. ಈಗಿನ ಸರ್ಕಾರದವರು ಸ್ಕೌಟು ಚಳುವಳಿಯ ಮೂಲ ತತ್ವವನ್ನು ಗ್ರಹಿಸಬೇಕು ಭಾರತ ಸೇವಾದಳಕ್ಕೆ ಪ್ರೋತ್ಸಾಹವನ್ನು ಕೊಡುವಂತೆಯೇ ಈ ಚಳುವಳಿಗೂ ಸಹಾಯ ನೀಡಬೇಕು ಎಂದು ಭಾರತ ಸೇವಾದಳಕ್ಕೆ ಸೇರಿದವರೊಬ್ಬರು ತಿಳಿಸಿರುತ್ತಾರೆ

ವಾರ ಭವಿಷ್ಯ

ತಾ|| ೨೯ ೬-೫೨ ರಿಂದ ೬ ೭ ೫೨ ರ ವರೆಗೆ

ಮೇಷ — ಮಹಸ್ಸಿನ ಸ್ಥಿತಿ ಕೆಡುವುದು ಸ್ತ್ರೀ ವರ್ಗದಲ್ಲಿ ಕಲಹ ವ್ಯಾಪಾರಾದಿಗಳಲ್ಲಿ ಕಾಲುಗಾರರಿಂದ ಹಾನಿ ವಿಶ್ವಾಸಘಾತ. ಆರೋಗ್ಯಕ್ಕೆ ಕ್ಲೇಶ ತಾ|| ೨೯, ೩೦ ಅಪ್ರಿಯ ವಾರ್ತೆ, ಖರ್ಚು

ವೃಷಭ — ಗ್ರಹಮಾನ ಅನುಕೂಲವಾಗಿದೆ ಆರೋಗ್ಯ, ಆರ್ಥಿಕ ಸ್ಥಿತಿ ಸ್ತ್ರೀಕರ ಸಂತತಿಗೆ ಉತ್ಕರ್ಷ ವ್ಯಾಪಾರಾದಿಗಳಲ್ಲಿ ದೊಡ್ಡವರಿಂದ ಸಹಾಯ ತಾ|| ೨, ೩ ಹೆಚ್ಚು ಖರ್ಚು, ಕುಶಲ ವಾರ್ತೆ

ಮಿಥುನ — ವಿದ್ಯಾರ್ಥಿಗಳಿಗೆ ಶ್ರೇಷ್ಠ ಭವಿಷ್ಯ ಕಾದಿದೆ ಆರೋಗ್ಯ, ಆರ್ಥಿಕ ಸ್ಥಿತಿ ಸಾಧಾರಣ ವ್ಯಾಪಾರಾದಿಗಳಲ್ಲಿ ಅಲಕ್ಷ್ಯದಿಂದ ಹಾನಿ ಕುಟುಂಬದಲ್ಲಿ ಕಲಹ. ಕೆಲಸದಲ್ಲಿ ವಿಘ್ನ ತಾ|| ೨೯ ೩೦ ಖರ್ಚು ಹೆಚ್ಚು, ನಿದ್ರಾನಾಶ

ಕರ್ಕ — ವೃಥಾ ಕಲಹ ಪ್ರವಾಸದಿಂದ ಉಪಯೋಗವಿಲ್ಲ ವ್ಯಾಪಾರಾದಿಗಳಲ್ಲಿ ತೊಂದರೆ ಸ್ತ್ರೀ ಕೇಳಿಗಿವರಿಂದ ಅವಮಾನ ತಾ|| ೨ ೩ ಪಶುಗಳಿಗೆ ಹಾನಿ, ದ್ರವ್ಯ ನಾಶ

ಸಿಂಹ—ಮಹತ್ಕಾರ್ಯದ ಆರಂಭ ಆರೋಗ್ಯ ಆರ್ಥಿಕ ಸ್ಥಿತಿ ಸರ್ವದಾ ಈ ವ್ಯಾಪಾರಾದಿಗಳಲ್ಲಿ ಲಾಭ ಧಾರ್ಮಿಕ ಕಾರ್ಯ ತಾ|| ೩೦, ೨ ಅಲ್ಪ ಪ್ರವಾಸ ಶುಭ ವಾರ್ತೆ

ಕನ್ಯಾ ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಹಾಗಿರದು ವ್ಯಾಪಾರಾದಿಗಳಲ್ಲಿ ಶತ್ರು ಕೃತಘಾತ ವಿದ್ಯಾರ್ಥಿಗಳಿಗೆ ಆಲಸ್ಯ ತಾ|| ೨೯, ೩೦ ಅವಮಾನ, ಅಪ್ರಿಯ ವಾರ್ತೆ

ತುಲಾ — ಆರೋಗ್ಯ ಸಂಮಿರದು ವ್ಯಾಪಾರಾದಿಗಳಲ್ಲಿ ಪೇಚಿನ ಪ್ರಸಂಗ ತಾ|| ೨೯, ೩೦ ವಿಶ್ವರದಿಂದ ಬೀಳುವ ಸಂಭವ ಕಲಹ

ವೃಶ್ಚಿಕ — ಆರೋಗ್ಯ ಸರಿಯಾಗಿರುವುದು ವ್ಯಾಪಾರಾದಿಗಳಲ್ಲಿ ಲಾಭವಿಲ್ಲ ಹಾನಿಯಾಗುವ ಹೆದರಿಕೆ ಪ್ರವಾಸ ಬೇಡ ತಾ|| ೨೯, ೩೦ ಮಾನ ರಕ್ಷಣೆಗೆ ಮಿತ್ರ ಸಹಾಯ

ಧನು — ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಲಾಭದ ಯೋಗ ವಿದ್ಯಾರ್ಥಿಗಳ ಪ್ರಗತಿ ಶ್ರೇಷ್ಠ ಜನರ ಭೇಟಿ ತಾ|| ೨, ೩ ಮಿತ್ರರ ಉತ್ತೇಜನ ಮಹತ್ವದ ಪತ್ರಾಗಮನ

ಮಕರ ಆರೋಗ್ಯ ಕೆಡುವುದು ಸಾಂಪತ್ತಿಕ ಸ್ಥಿತಿ ಸೆಟ್ಟಗೆ ವ್ಯಾಪಾರಾದಿಗಳಲ್ಲಿ ಭಯ ಸಂಬಂಧದಲ್ಲಿ ಖಚಿತ ತಾ|| ೩೦ ೬ ಖರ್ಚು ಮನೋವ್ಯಥೆ

ಕುಂಭ — ಸ್ವ ಕೃತ ಕಾರ್ಯದಲ್ಲಿ ಜಯ ವ್ಯಾಪಾರಾದಿಗಳಲ್ಲಿ ಪ್ರಗತಿ ವಿದ್ಯಾಭ್ಯಾಸದಲ್ಲಿ ಪ್ರಗತಿ ತಾ|| ೨೯, ೩೦ ಮಂಗಳ ಕಾರ್ಯ, ಬಂಧುಗಳ ಆಗಮನ

ಮೀನ — ವ್ಯಾಪಾರ, ಉದ್ಯೋಗ, ನೌಕರಿಗಳಲ್ಲಿ ಹಿತ ಶತ್ರುಗಳ ಬಾಧೆ ತಾ|| ೨, ೩ ನಿದ್ರಾ ನಾಶ, ದ್ರವ್ಯ ನಾಶ

ಇತರ ಕಡೆಗಳಿಗೆ ಕೊರಿಯಾ ಯುದ್ಧದ ವ್ಯಾಪನೆ ?

ಯಾಲೂ ನದಿಯ ವಿದ್ಯುಚ್ಛಕ್ತಿ ಕೇಂದ್ರಗಳ ಮೇಲೆ ಅಮೆರಿಕದ ೫೦೦ ವಿಮಾನಗಳು ಧಾಳಿ ನಡೆಸಿರುವುದರ ಪರಿಣಾಮವು ತೀವ್ರವಾಗಿರುವುದೆಂದೂ ಇದರಿಂದ ಕೊರಿಯಾ ಯುದ್ಧವು ಇತರ ಕಡೆಗಳಿಗೂ ಹರಡಬಹುದೆಂದೂ ವಿಶ್ವಸಂಸ್ಥೆಯ ಹಲವು ರಾಷ್ಟ್ರಗಳ ಪ್ರತಿನಿಧಿಗಳು ಹೆದರಿರುವುದಾಗಿ ವರದಿಯಾಗಿದೆ

ಕಾಶಿ ವಿಶ್ವೇಶ್ವರ ದೇವಾಲಯದ ಹೊಸಕಟ್ಟಡಗಳ ಪ್ರಾರಂಭೋತ್ಸವ

ರಾಜಧಾನಿಯ ದೇವಾಂಬ ಅಗ್ರಹಾರದ ಕಾಶಿ ವಿಶ್ವೇಶ್ವರ ಸ್ವಾಮಿ ದೇವಾಲಯದಲ್ಲಿ ಕೆ ವೀರಭದ್ರ ಮುದಲಿಯಾರ್ ಮತ್ತು ಲಕ್ಷ್ಮಿ ದೇವಮ್ಮ ಕುಮಾರಸ್ವಾಮಿಯವರ ಹೆಸರುಗಳಲ್ಲಿ ಕಟ್ಟಲ್ಪಟ್ಟಿರುವ ಎರಡು ಕಟ್ಟಡಗಳ ಆರಂಭೋತ್ಸವವನ್ನು ಮೊನ್ನೆ ಪೌರ ಸಭಾಧ್ಯಕ್ಷ-ರಾಷ್ಟ್ರ... ಶ್ರೀ ಎ ಕೃಷ್ಣಮೂರ್ತಿರಾಯರು ನೆರವೇರಿಸಿದರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಶ್ರೀ ತಿ ವೀರಭದ್ರ ... ದ ... ರ ... ಭಾವಚಿತ್ರವನ್ನು ಅನಾವರಣ ಮಾಡಿದರು ... ದೇವಾಲಯದ ... ರತ ... ಶ್ರೀ ... ಚಿತ್ರ ... ಶ್ರೀ ... ಕೃಷ್ಣನ ... ಶ್ರೀ ಎಸ್ ಲಿಂಗಣ್ಣನವರಿಗೂ ... ಪತ್ರಗಳನ್ನು ಅರ್ಪಿಸಲಾಯಿತು ... ಪತ್ರಗಳಿಗೆ ಅವರು ಸೂಕ್ತ ಉತ್ತರವನ್ನಿತ್ತರು

ನಂಜನಗೂಡು ಪೌರಸಭಾ ಉಪಾಧ್ಯಕ್ಷರು

ನಂಜನಗೂಡಿನ ಪೌರಸಭಾ ಉಪಾಧ್ಯಕ್ಷರ ಚುನಾವಣೆಯು ಕಳೆದ ಸೋಮವಾರ ನಡೆದು ಶ್ರೀ ವೈ ಕೆ ಎಸ್ ಲಕ್ಷ್ಮಣ ಶೆಟ್ಟರು ಮತ್ತೆ ಇನ್ನೇ ಒಂದು ಚುನಾಯಿತರಾದರು ಇವರ ಪ್ರತಿ ಸ್ಪರ್ಧಿ ಯಾದ ಶ್ರೀ ಸಿದ್ದಯ್ಯನವರಿಗೆ ೮ ಓಟುಗಳೂ, ಶ್ರೀ ಶೆಟ್ಟರಿಗೆ ೧೨ ಓಟುಗಳೂ ಬಂದುವು

ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿತು

ಭಾರತದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಿರುವುದೆಂದು ಕೇಂದ್ರ ಪಾರ್ಲಿಮೆಂಟಿನಲ್ಲಿ ಕಾರ್ಮಿಕ ಮಂತ್ರಿ ವಿ ವಿ ಗಿರಿಯವರು ತಿಳಿಸಿರುತ್ತಾರೆ ಮೇ ತಿಂಗಳ ಅಖೈರಿನಲ್ಲಿ ೧೪,೮೩೯ ಪದವೀಧರರೂ, ೧,೦೧,೦೩೮ ಸ್ಕೂಲ್ ಫೈನಲ್ ಪರೀಕ್ಷೆಯಾದವರೂ ೨,೫೦,೭೨೦ ಇತರರೂ ನೌಕರಿಗಳಿಗಾಗಿ ಅರ್ಜಿ ಹಾಕಿಕೊಂಡಿದ್ದರೆಂದು ಅವರು ಸೂಚಿಸಿರುತ್ತಾರೆ

ಅಧಿಕಾರಿಗಳ ವರ್ಗಾವರ್ಗಿ

ಮೈಸೂರು ವಿಭಾಗದ ಮಾರಾಟ ತೆರಿಗೆ ಅಧಿಕಾರಿಗಳಾದ ಶ್ರೀ ಬಿ ಎಂ ಕೃಷ್ಣಯ್ಯನವರು ಸರ್ಕಾರದ ವಿಶೇಷ ಕಾರ್ಯದರ್ಶಿಯಾಗಿಯೂ ಬೆಂಗಳೂರು ವಿಭಾಗದ ಮಾರಾಟ ತೆರಿಗೆ ಅಧಿಕಾರಿ ಶ್ರೀ ಸಿ ಬಿ ಶಂಕರ ಅಯ್ಯಂಗಾರರವರು ಮೈಸೂರು ವಿಭಾಗಕ್ಕೂ ರಜದ ಮೇಲಿರುವ ಅಧ್ಯಾಪಕರಾಗಳಾದ ಶ್ರೀ ಎಲ್ ... ಸ್ವಾಮಿ ರವ ಬೆಂಗಳೂರಿನ ಮಾರಾಟ ತೆರಿಗೆ ಅಧಿಕಾರಿಗಳಾಗಿಯೂ ವರ್ಗ ಮಾಡಲ್ಪಟ್ಟರು

ನಂಜನಗೂಡು ಕೈ ... ನಿಯ ... ನಾಪ್ಪತ್ರಾರ ... ಕೃಷ್ಣಸ್ವಾಮಿ ... ಪ್ಯಾಂಗರಾಯ ... ರೆ ... ಸ್ಥಿತಿಗೆ ... ಶ್ರೀ ಎಂ ಪಿ ನಾಗರಾಜ ... ನಂಜನಗೂಡ ... ನೇಮಿಸಲಾಗಿದೆ

ಪುರಾಣ ವಾಚನ

ರಾಜಧಾನಿಯ ಸೀತಾವಿಲಾಸ ಅಗ್ರಹಾರದ ಸೀತಾರಾಮ ದೇವಾಲಯದಲ್ಲಿ ಜುಲೈ ೫ ನೇ ತಾ|| ಆದಿವಾರದಿಂದ ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆಯಿಂದ ೬ ರವರೆಗೆ ಶ್ರೀಮದ್ಭಾಗವತ ಮಹಾ ಪುರಾಣದ ವಾಚನವನ್ನು ಶ್ರೀ ವೆಂಕಟೇಶ ಅಯ್ಯಂಗಾರ್ ಮತ್ತು ಶ್ರೀ ಸುಬ್ಬರಾಯರು ನಡೆಸುವರು ಸರ್ವರಿಗೂ ಆಹ್ವಾನವುಂಟು

CONSULT
Sri M RAJA RAO
WESTERN ASTROLOGER
SRINGERI,
For all your ... events with your date of birth ... Questions ... VIP

ಸಿಡುಬಿನಿಂದ ೫೦೦ ಗುಡ್ಡಗಾಡಿನವರ ಮರಣ

ಬರ್ಮಾದ ಶಾಯುಮ್ಮ ಭಾಗದಲ್ಲಿರುವ ನಾಗಾ ವಂಶಕ್ಕೆ ಸೇರಿದ ಗುಡ್ಡಗಾಡಿನ ಜನರಲ್ಲಿ ಸಿಡುಬು ರೋಗವು ಹರಡಿ ಅದರಿಂದ ಸುಮಾರು ೫ ನೂರು ಮಂದಿ ಮಡಿದಿರುವರೆಂದು ಹೇಳಲಾಗಿದೆ ಅಲ್ಲಿಗೆ ವೈದ್ಯ ಸಹಾಯವನ್ನು ಕಳುಹಿಸಲಾಗಿದೆ ವಿಮಾನಗಳ ಮೂಲಕ ಔಷಧವನ್ನು ಹಾಕಲಾಗುತ್ತಿದೆ ನಾಗಾ ಜನರು ಸತ್ತರೆ ಅವರ ಶವ ಸಂಸ್ಕಾರವನ್ನು ಹಬ್ಬ ನಡೆ ಹಾಗೆಯೇ ಬಿಡುವ ಪದ್ಧತಿಯು ಅವರಲ್ಲಿರುವುದರಿಂದ ಎರಡು ತಿಂಗಳ ಹಿಂದೆ ಬಂದ ರೋಗವು ಈಗ ಉಲ್ಬಣಿಸಿರುವುದೆಂದು ಹೇಳಲಾಗಿದೆ

ಟಾರ್ಜಾನ್ ಪಾತ್ರಧಾರಿಯ ನಿಧನ

ಪ್ರಥಮ ಟಾರ್ಜಾನ್ ಚಿತ್ರದಲ್ಲಿ ಪಾತ್ರವಹಿಸಿದ ಸಿನಿಮಾ ನಟ ಎಲ್ಮೊ ಲಿಂಕನ್‌ರವರು ತಮ್ಮ ೬೩ ನೇ ವಯಸ್ಸಿನಲ್ಲಿ ಮೊನ್ನೆ ಹಾಲಿವುಡ್‌ನಲ್ಲಿ ಹೃದಯ ವೇದನೆಯಿಂದ ಮೃತಪಟ್ಟಿರುವರು

ಆಕಾಶ ವಾಣಿ ನಾಳೆ ಕಾರ್ಯಕ್ರಮ

... ಪ್ರತ್ಯಕ್ಷ ... ಸಂಗೀತ ... ಸಂಗೀತ ... ಸಂಜೆ ೬ ೩೦ ಮತ್ತು ... ಜಂಗಲ್ ... ೬ ... ನ ವಿಹಾರ ೭ ಕನ್ನಡ ಗೀತೆಗಳು ... ೮ ೩೦ ಎಂ ವಿ ... ಗಿಟಾರ್ ವಾದನ ... ಮತ್ತು ೯-೩೦ ... ಸಂಗೀತ

ಮನೆ ಬಿಕರಿಗಿದೆ

ಮೈಸೂರು ... ವಾಣಿ ವಿಲಾಸ ಮೊಹಲ್ಲಾ ... ರಸ್ತೆಯಲ್ಲಿರುವ 261 1 ನೇ ನಂ. ಮನೆ ದೀಪ ಮತ್ತು ನಲ್ಲಿ ಹಾಕಿದೆ ಭದ್ರವಾದ ಕಾರ ಕಟ್ಟಡ ಸೈಟು ವಿಸ್ತೀರ್ಣ 85'x45' ಮನೆ ಕೊಳ್ಳ ಬಯಸುವವರು ಇವರಲ್ಲಿ ವಿಚಾರಿಸಿ

ಬಿ ವಿಶಕಂಠಯ್ಯ,
2611|1 ... ರಸ್ತೆ
... ಮೊಹಲ್ಲಾ ಮೈಸೂರು

ರಾಜಕಮಲ್
27-6 52ರಿಂದ 3 ನೆ ವಾರ
ನನ್ನ ತಂಗಿ
[ತಮಿಳು]

MYSORE TRANSIT SERVICE
Excellent and Regular Goods ... Service
Between MYSORE & MADRAS in arrangemen with our Agents M/s Madras-Bangalore Transport Co
Proprietors — THIRTHA & COMPANY,
Clearing and Forwarding Agents
Ramvilas Road Mysore (PHONE 5)
— City Collecting Branch
Messrs N S PADAKI,
Hanumantha Rao Street (Near Prabha Talkies Mysore)

ಸಾಧ್ವಿ ಪತ್ರಿಕೆಯ ಚಂದಾ ವಿವರ

ತ್ರೈಮಾಸಿಕ (೨ ತಿಂಗಳು)	0-8-0
ಷಣ್ಮಾಸಿಕ (೬ ತಿಂಗಳ)	1 0-0
ಬಿಡಿ ಪ್ರತಿ	0 0 3

ಏಜೆಂಟರ ಕಡೆಗಳಲ್ಲಿ ಚಂದಾ ತಿಂಗಳಿಗೆ ಎಂಟಾಣೆ ಮಾತ್ರ
ಸೂಚನೆ: ಚಂದಾ ಮುಂಗಡವಾಗಿ

Edited, Printed and Published by A R Nagarajan at Sadhvi Press, D Subbaiah Road, Mysore

ರಿಜಿಸ್ಟರ್ಡ್ ನಂ 793 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೩೦-೬-೫೨ [ಸಂಚಿಕೆ ೨೬೩

ಈಜಿಪ್ಟಿನ ಹಿಲಾಲಿ ಪಾಷ ಸರ್ಕಾರದ ರಾಜೀನಾಮೆ

ರಷ್ಯಕ್ಕೆ ಅಚೆಸನ್ನರ ಎಚ್ಚರಿಕೆ

ಅಮೆರಿಕದ ಸಂಸ್ಥಾನಗಳ ರಾಜ್ಯ ಕಾರ್ಯದರ್ಶಿ ಡೀನ್ ಅಚೆಸನ್‌ರವರು ಶನಿವಾರ ಬರ್ಲಿನ್ನಿನಲ್ಲಿ ಮೊನ್ನೆ ಅಮೆರಿಕದ ಒಂದು ವಾಚನಾಲಯದ ಅಸ್ತಿಭಾರ ಶಿಲಾ ಸ್ಥಾಪನೋತ್ಸವವನ್ನು ನೆರವೇರಿಸಿದರು ಆ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಅವರು ಬರ್ಲಿನ್ ನಗರ ಮತ್ತು ಪ್ರಜೆಗಳ ರಕ್ಷಣೆಯ ಜವಾಬ್ದಾರಿಯು ಅಮೆರಿಕಾ, ಇಂಗ್ಲೆಂಡ್ ಮತ್ತು ಫ್ರಾನ್ಸ್ ರಾಷ್ಟ್ರಗಳಿಗೆ ಸೇರಿರುವುದೆಂದೂ, ಈ ಬಗ್ಗೆ ತೃಪ್ತಿಕರವಾದ ಭರವಸೆಯುಂಟಾಗುವವರೆಗೆ ಮೇಲ್ಕಂಡ ರಾಷ್ಟ್ರಗಳವರು ಬರ್ಲಿನ್ ನಗರವನ್ನು ತ್ಯಜಿಸುವುದಿಲ್ಲವೆಂದೂ ತಿಳಿಸಿದರು ಬರ್ಲಿನ್ನಿನ ಮೇಲೆ ಯಾರೇ ಆಗಲೀ, ಯಾವ ಕಡೆಯಿಂದಲೇ ಆಗಲಿ ನಡೆಸಬಹುದಾದ ಧಾಳಿಯನ್ನು ತಮ್ಮ ಮೇಲೆಯೇ ನಡೆಸಿದಂತೆ ಭಾವಿಸಿ ಸೂಕ್ತ ಪ್ರತಿಕ್ರಿಯೆ ಕೈಗೊಳ್ಳುತ್ತೇವಾಗಿಯೂ ಅವರು ರಷ್ಯಕ್ಕೆ ಎಚ್ಚರಿಕೆಯಿತ್ತಿರುವರು

ಪಾರ್ಲಿಮೆಂಟಿನಲ್ಲಿ ಸದಸ್ಯರು ತೂಕಡಿಸಬಹುದು

ಸಂಸ್ಥಾನದ ಪಾರ್ಲಿಮೆಂಟಿನ ಸದಸ್ಯರು ಸಭೆಯಲ್ಲಿ ತೂಕಡಿಸಬಹುದೆಂದು ಸ್ಪೀಕರ್ ರೂಲಿಂಗ್ ಕೊಟ್ಟಿರುವರೆಂದು ಅದರ ಗೊರಕೆ ಹೊಡೆಯಕೂಡದೆಂದು ನಿರ್ಧರಿಸಲಾಗಿದೆ ವಯಸ್ಸಾದವರು ಅಥವಾ ಮಧ್ಯಾಹ್ನ ನಿದ್ರೆ ಮಾಡುವ ಅಭ್ಯಾಸ ಹೊಂದಿರುವವರು ಕೆಲವು ಕಾಲ ಸಭೆಯಲ್ಲಿ ಸಭೆಯ ಕಲಾಪಗಳಿಗೆ ತೊಂದರೆಯಾಗದಂತೆ ನಿದ್ರೆ ಮಾಡಿದರೆ ತಪ್ಪಿಲ್ಲವೆಂದು ತಿಳಿಸಲಾಗಿದೆ

ಮಗುವಿನ ಕಾಲಿಗೆ ಸಿಕ್ಕಿ ಹಾವಿನ ಸಾವು

ಪಾಟ್ನಾದ ಛಪ್ರಾ ಎಂಬ ಊರಿನ ಒಂದು ಸಣ್ಣ ಮಗುವು ಒಂದು ಎಳೆಯ ನಾಗರ ಹಾವಿನೊಡನೆ ಆಟವಾಡುತ್ತಿದ್ದಾಗ ಆಕಸ್ಮಾತ್ತಾಗಿ ಹಾವಿನ ಮರಿಯು ಮಗುವಿನ ಕಾಲಿನ ಕೆಳಗೆ ಸಿಕ್ಕಿ ಸತ್ತುಹೋಯಿತೆಂದೂ ಅನಂತರ ಮನೆಯ ದೊಡ್ಡವರು ಈ ದೃಶ್ಯವನ್ನು ನೋಡಿ, ಮಗುವಿಗೆ ಏನಾದರೂ ಅಪಾಯ ಸಂಭವಿಸಿರುವುದೆ ಎಂದು ಶಂಕಿಸಿ ಆಸ್ಪತ್ರೆಗೆ ಕರೆದುಕೊಂಡುಹೋಗಿ ಪರೀಕ್ಷಿಸಿ ನೋಡಲು ಅದು ಸುರಕ್ಷಿತವಾಗಿ ಇರುವುದೆಂಬ ಭರವಸೆ ಪಡೆದರೆಂದೂ ತಿಳಿದುಬಂದಿದೆ

ತೇರಿನ ಚಕ್ರಕ್ಕೆ ಸಿಕ್ಕಿ ತರುಣಿಯ ಮರಣ

ಕೊಂಬಾಯಿಯಲ್ಲಿ ತಿರುಮಂಜನಂ ಎಂಬ ರಥೋತ್ಸವದ ಸಂದರ್ಭದಲ್ಲಿ ತೇರನ್ನು ಎಳೆಯುತ್ತಿದ್ದಾಗ ೧೮ ವರ್ಷದ ತರುಣಿಯೊಬ್ಬಳು ಅದರ ಚಕ್ರಕ್ಕೆ ಸಿಕ್ಕಿ ಮೃತಪಟ್ಟಳೆಂದು ತಿಳಿದುಬಂದಿದೆ

ಅಶೋಕ ಚಕ್ರ ಸಂಘ

ರಾಜಧಾನಿಯ ಅಶೋಕ ಚಕ್ರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಸಾಧ್ವಿ ಕಛೇರಿಯ ಮಹಡಿ ಮೇಲೆ ಶ್ರೀ ಸು ಕೃಷ್ಣಮೂರ್ತಿಯವರು "ಅಶೋಕನ ಶಿಲಾ ಶಾಸನಗಳು" ಎಂಬ ವಿಷಯವಾಗಿ ಉಪನ್ಯಾಸ ಮಾ

ಈಜಿಪ್ಟಿನ ಹಿಲಾಲಿ ಪಾಷಾ ಸರ್ಕಾರದ ರಾಜೀನಾಮೆ

ಈಜಿಪ್ಟಿನಲ್ಲಿ ನಹಾಸ್ ಪಾಷಾರವರ ಮಂತ್ರಿಮಂಡಲವು ಉರುಳಿ, ಕಳೆದ ಮಾರ್ಚಿ ೧ನೇ ತಾರೀಖು ಹೊಸದಾಗಿ ರಚಿತವಾದ ಹಿಲಾಲಿ ಪಾಷಾರವರ ಮಂತ್ರಿಮಂಡಲವು ಪತ್ರ ರಾಜೀನಾಮೆಯನ್ನು ನಿನ್ನೆ ಫರೂಕ್ ದೊರೆಗಳು ಅಂಗೀಕರಿಸಿ ಹುಸೇನ್ ಸಿರ್ರಿ ಪಾಷಾ ಅವರನ್ನು ಹೊಸ ಸರ್ಕಾರ ರಚಿಸಲು ಆಹ್ವಾನಿಸಿರುವರೆಂದು ವರದಿಯಾಗಿದೆ ಸಿರ್ರಿ ಪಾಷಾರವರು ೧೯೪೦ ರಲ್ಲಿ ಮಂತ್ರಿಮಂಡಲವನ್ನು ರಚಿಸಿ ೧೯೪೨ ರವರೆಗೂ ಅಧಿಕಾರದಲ್ಲಿದ್ದರೆಂದು ಹೇಳಲಾಗಿದೆ

ಕಾಶ್ಮೀರ ಸಂಧಾನ ಒಂದು ತಿಂಗಳಲ್ಲಿ ಮುಗಿಯಬಹುದು

ಕಾಶ್ಮೀರದ ಸೈನ್ಯಾಪಸರಣದ ಬಗ್ಗೆ ಚರ್ಚೆ ನಡೆಸಲು ನಾಳೆ ದಿನ ವಿಶ್ವ ಸಂಸ್ಥೆಯ ಕಛೇರಿಯಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮಿಲಿಟರಿ ಸಲಹೆಗಾರರ ಸಮ್ಮೇಳನವೊಂದು ಜರುಗಲಿದೆ ಕಾಶ್ಮೀರ ಸಮಸ್ಯೆಯ ಸಂಧಾನವನ್ನು ಒಂದು ತಿಂಗಳೊಳಗೆ ಮುಗಿಸಬೇಕೆಂದು ಪಾಕಿಸ್ತಾನವು ಸಲಹೆ ಮಾಡಿರುವ ಬಗ್ಗೆ ಡಾ|| ಗ್ರಹಾಂರವರು ಅದು ಸಾಧ್ಯವಿಲ್ಲವೆಂದು ತಿಳಿಸಿರುವರೆಂದು ವರದಿಯಾಗಿದೆ

ವಿಶ್ವದ ಸುಂದರ ತರುಣಿ

ಕ್ಯಾಲಿಫೋರ್ನಿಯದ ಲಾಂಗ್ ಬೀಚ್ ಎಂಬಲ್ಲಿ ವಿಶ್ವದ ಸುಂದರ ತರುಣಿಯ ಆಯ್ಕೆ ಬಗ್ಗೆ ನಡೆದ ಸ್ಪರ್ಧೆಯಲ್ಲಿ ಫಿನ್ಲೆಂಡಿನ ಮಿಸ್ ಅರ್ಮಿ ಕುಸೇಲಾ ಎಂಬ ೧೭ ವರ್ಷದ ಹುಡುಗಿಯು ಜಯಶೀಲಳಾಗಿರುವಳೆಂದು ತಿಳಿದುಬಂದಿದೆ ಇದರ ಪರಿಣಾಮವಾಗಿ ಆಕೆಯು ಯೂನಿವರ್ಸಲ್ ಇಂಟರ್ ನ್ಯಾಷನಲ್ ಸ್ಟೂಡಿಯೋವಿನಲ್ಲಿ ಏಳು ವರ್ಷ ಕಾಲ ನಟಿಯಾಗಿರುವ ಕಂಟ್ರಾಕ್ಟ್ ಮತ್ತು ಮೂರು ಸಾವಿರ ಡಾಲರ್ ಬೆಲೆಯ ಒಂದು ಮೋಟಾರು ಮತ್ತು ೫|| ಸಾವಿರ ಡಾಲರಿನ ಒಂದು ಗಡಿಯಾರ ಇವುಗಳನ್ನು ಬಹುಮಾನವಾಗಿ ಪಡೆದಿರುವಳು

ಪಾನ್‌ಮುನ್‌ಜಾನ್ ಮೇಲೆ ಕಮ್ಯೂನಿಸ್ಟರ ಶೆಲ್ಲು ಧಾಳಿ

ಕೊರಿಯಾ ಶಾಂತಿ ಸಂಧಾನ ನಡೆಯಲು ಗೊತ್ತಾಗಿದ್ದ ಪಾನ್ ಮುನ್‌ಜಾನ್ ಪ್ರದೇಶದ ಮೇಲೆ ಕಳೆದ ಶುಕ್ರವಾರ ಕಮ್ಯೂನಿಸ್ಟರು ಶೆಲ್ಲುಗಳನ್ನು ಸುರಿಸಿ ಧಾಳಿ ನಡೆಸಿದರೆಂದು ವಿಶ್ವ ಸಂಸ್ಥೆ ಸೈನ್ಯ ಕೇಂದ್ರದವರ ಪಕ್ಷದಿಂದ ಕಮ್ಯೂನಿಸ್ಟರಿಗೆ ಪತ್ರ ಬರೆದಿರುವರೆಂದು ವರದಿಯಾಗಿದೆ ಎರಡೂ ಪಕ್ಷಗಳ ಅಧಿಕಾರಿಗಳೂ ನಡೆಸಿದ ಜಂಟಿ ತನಿಖೆಯಿಂದ ಈ ಸುದ್ದಿಗೆ ಸಾಕಷ್ಟು ಆಧಾರಗಳು ದೊರೆತಿರುವುವೆಂದು ಸೂಚಿಸಲಾಗಿದೆ

ಬದುಕಿರುವ ಮಾಜಿ ಜಡ್ಜರ ಬಗ್ಗೆ ಸಂತಾಪ ಸೂಚನೆ

ಹೈದರಾಬಾದಿನ ಮಾಜಿ ನ್ಯಾಯಾಧೀಶರಾದ ಜ|| ಕಾಲಿಬ ಜಾವಾರ್ ಎಂಬುವರು ಮೃತರಾದರೆಂಬ ವಾರ್ತೆಯು ಹೈದರಾಬಾದಿನ ಅಧಿಕಾರಿ ವಲಯಗಳಲ್ಲಿ ಹರಡಿದ ಸಂದರ್ಭದಲ್ಲಿ ಅಲ್ಲಿನ ರೆವಿನ್ಯೂ ಖಾತೆಯವರು ಮೊನ್ನೆ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿದರೆಂದು ವರದಿಯಾಗಿದೆ ಅನಂತರ ಜ|| ಕಾಲಿಬ ಜಾವಾರರವರು ಆರೋಗ್ಯದಿಂದಿರುವರೆಂದು ಸುದ್ದಿಯು ಬಂದುದಾಗಿಯೂ ಹೇಳಲಾಗಿದೆ

ರೇಸ್ ಡಿಪೋ ನೌಕರರ ಸಂಘ

ನಗರದ ರೇಸ್ ಡಿಪೋ ನೌಕರರ ಸಂಘದ ವಾರ್ಷಿಕೋತ್ಸವವು ನೆನ್ನೆ ಚಾಮರಾಜಪೇಟೆ ಭವನದ ಆವರಣದಲ್ಲಿರುವ ದೇವಸ್ಥಾನದಲ್ಲಿ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದ ಮುಖ್ಯ ರೇಷನಿಂಗ್ ಅಧಿಕಾರಿಗಳೂ, ಇತರ ಅನೇಕ ಅತಿಥಿಗಳೂ ಬಂದಿದ್ದರು ಪ್ರಾರ್ಥನೆಯಾದ ನಂತರ ಅಧ್ಯಕ್ಷರಾದ ಶ್ರೀ ಎಂ ಪಿ ಕೃಷ್ಣರವರು ಸ್ವಾಗತ ಭಾಷಣ ಮಾಡಿದ ಮೇಲೆ ಕಾರ್ಯದರ್ಶಿ ಶ್ರೀ ಎಸ್ ಬಿ ಬಸವರಾಜುರವರು ವರದಿಯನ್ನೊಪ್ಪಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಳೆದ ೮ ವರ್ಷಗಳಿಂದಲೂ ರೇಷನಿಂಗ್ ಡಿಪೋ ನೌಕರರು ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ ಅವರಿಗೆ ಶುಭವನ್ನು ಕೋರಿದರು ವಂದನಾರ್ಪಣೆಯ ನಂತರ ಸಭೆ ಮುಕ್ತಾಯವಾಯಿತು

ಸಚಿವರುಗಳ ಸಂಬಳದ ಬಗ್ಗೆ ಮಸೂದೆ

ಜಾಯಿಂಟ್ ಸಮಿತಿ ಪರಿಶೀಲನೆಗೆ

(ನಮ್ಮ ವರದಿಗಾರರಿಂದ) ಬೆಂಗಳೂರು ೨೮

ಈ ದಿನ ಶಾಸನ ಸಭೆಯಲ್ಲಿ ಸಚಿವ ಶ್ರೀ ಎ ಜಿ ರಾಮಚಂದ್ರರಾಯರು ಸಚಿವರುಗಳ ಸಂಬಳ ಮತ್ತು ಭತ್ಯಗಳಿಗೆ ಸಂಬಂಧಪಟ್ಟ ಮಸೂದೆಯನ್ನು ಮಂಡಿಸಿದರು ಅನಂತರ ಶ್ರೀಗಳಾದ ಡಾ|| ಇಮಾಂ, ಹೆಚ್ ಎಸ್ ರುದ್ರಪ್ಪ, ತಿಂಗಾರೆಡ್ಡಿ, ತಿಮ್ಮೇಗೌಡ, ಲಿಂಗಣ್ಣ, ದೇವರಾಜ್ ಅರಸ್, ಕೆಂಪರಾಜ್, ಶಂಕರಲಿಂಗೇಗೌಡ ಮತ್ತು ಶ್ರೀಮತಿ ಬಿ ಎಲ್ ಸುಬ್ಬಮ್ಮ ಮುಂತಾದವರುಗಳನ್ನೊಳಗೊಂಡ ಸಮಿತಿಯ ಪರಿಶೀಲನೆಗೆ ಮಸೂದೆಯನ್ನು ಹಾಕಲಾಯಿತು

ಅನಂತರ ಬಸ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಕೆಲಸ ಕಾರ್ಯದ ಬಗ್ಗೆ ಪ್ರಶ್ನೆಗಳಿಗೆ ಶ್ರೀ ಹೆಚ್ ಸಿದ್ದವೀರಪ್ಪನವರ ಉತ್ತರವಿತ್ತು ಆ ಸಂಬಂಧವಾಗಿ ಪರಿಶೀಲನೆ ನಡೆಸಲಾಗುತ್ತಿದೆಯೆಂದೂ, ಇದರ ಪರಿಣಾಮವನ್ನು ನೋಡಿಕೊಂಡು ಮೇಲಾದ್ಯಂತವೂ ಅದನ್ನು ಜಾರಿಗೆ ತರುವ ಬಗ್ಗೆ ಕ್ರಮ ಕೈಗೊಳ್ಳಲಾಗವುದೆಂದೂ ತಿಳಿಸಿದರು ಎಸ್ಸರ್ಗಳ ಸಂಚಾರವನ್ನು ಜೋಡಿಸಲು ಮತ್ತು ಮದರಾಸು ಸಂಸ್ಥಾನ ಪ್ರದೇಶಗಳಿಗೆ ವಿಸ್ತರಿಸಲು ಮಾತುಕತೆಗಳಾಗುತ್ತಿವೆಯೆಂದೂ ಅವರು ಹೇಳಿದರು

ಬಜೆಟ್ ಮೇಲಿನ ಟೀಕೆಗಳಿಗೆ ಉತ್ತರ

ಮಾಜಿ ಸಚಿವ ಶ್ರೀ ಟಿ ಮರಿಯಪ್ಪನವರು ಬಜೆಟ್ ಬಗ್ಗೆ ಡಾ|| ಇಮಾಂರವರು ಮಾಡಿದ ಟೀಕೆಗಳಿಗೆ ಉತ್ತರವಿತ್ತರು

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಯು ಯಶಸ್ವಿಯಾಗಿ ಕೆಲಸ ಮಾಡುತ್ತಿರುವುದಕ್ಕೆ ಕೇಂದ್ರ ಸರ್ಕಾರದವರು ಪ್ರಶಂಸಿಸಿರುವರೆಂದೂ, ಸಂಸ್ಥಾನದ ಪೋಲೀಸು ಇಲಾಖೆಗೆ ಬಹಳ ಕಷ್ಟ ಹೆಚ್ಚು ಮಾಡುತ್ತಿದ್ದಾಗ್ಯೂ ಅದು ಬಹಳ ದಕ್ಷವಾಗಿ ಕೆಲಸ ಮಾಡುತ್ತಿದೆಯೆಂದೂ ಶ್ರೀ ಸಿದ್ದವೀರಪ್ಪನವರು ತಿಳಿಸಿದರು

ಪತಿ ಹಿಂಸೆ ತಡೆಯದೆ ಪತ್ನಿ ಪ್ರಿಯನನ್ನು ವರಿಸಿದಳು

ಪಾಟ್ನಾವಿಗೆ ಸೇರಿದ ಸೌರಾಭಿರಾಮ ಎಂಬಲ್ಲಿ ೧೮ ವರ್ಷದ ಒಬ್ಬ ವಿವಾಹಿತ ತರುಣಿಯು ತನ್ನ ಗಂಡನ ಚಿತ್ರಹಿಂಸೆಯನ್ನು ತಡೆಯಲಾರದೆ ಬೇರೊಬ್ಬ ಪ್ರಿಯತಮನೊಡನೆ ಗಾಂಧರ್ವ ವಿವಾಹ ಮಾಡಿಕೊಂಡು ಹೊರಟುಹೋದ ಪ್ರಸಂಗವು ವರದಿಯಾಗಿದೆ ಈ ಪ್ರಕರಣವನ್ನು ಇತ್ಯರ್ಥಪಡಿಸಲು ಜನರು ಮಾಡಿದ ಪ್ರಯತ್ನಗಳು ವಿಫಲವಾದುವೆಂದೂ, ಇದಕ್ಕೆ ಒಂದು ವರ್ಷ ಮುಂಚೆ ಅವಳು ತನ್ನ ಮೊದಲನೆಯ ಗಂಡನನ್ನು ಮದುವೆಯಾಗಿದ್ದಳೆಂದೂ ಹೇಳಲಾಗಿದೆ ಗಾಂಧರ್ವ ವಿವಾಹವು ನಡೆದ ದಿನ ಆಕೆಯ ಮೊದಲನೆಯ ಗಂಡನು ಅವಳ ತಂದೆಯ ಒಂದು ದರ್ಬಾರು ಬೊಂಬೆಯನ್ನು ಮಾಡಿಸಿ, ಅದರ ದಹನ ಮಾಡಿದ ಬಳಿಕ ಶ್ರಾದ್ಧ ಕರ್ಮವನ್ನು ನಡೆಸಿದನೆಂದು ತಿಳಿದುಬಂದಿದೆ

ಬ್ರಿಟನ್ನಿನಿಂದ ವಿದೇಶಗಳಿಗೆ ಸಿದ್ಧಪಡಿಸಿದ ಮನೆಗಳ ರಫ್ತು

ಸಿದ್ಧಪಡಿಸಿದ ಮನೆಗಳು, ಆಸ್ಪತ್ರೆಗಳು, ಅಂಚೆ ಕಛೇರಿಗಳು ಮತ್ತು ಟೆಲಿಫೋನ್ ಎಕ್ಸ್‌ಚೇಂಜುಗಳನ್ನು ಭಾರಿ ಪ್ರಮಾಣದಲ್ಲಿ ತಯಾರಿಸಲು ಬ್ರಿಟನ್ನಿನಲ್ಲಿ ಒಂದು ಕೈಗಾರಿಕೆಯು ಸ್ಥಾಪಿಸಲ್ಪಡಲಿದೆಯೆಂದೂ, ಇನ್ನು ಹತ್ತು ವರ್ಷಗಳ ಅವಧಿಯಲ್ಲಿ ೫ ರಿಂದ ೧೦ ಕೋಟಿ ಡಾಲರ್ ಬೆಲೆಯ ಮನೆಗಳನ್ನು ಹೊರದೇಶಗಳಿಗೆ ರಫ್ತು ಮಾಡಲಾಗುವುದೆಂದೂ, ಅವುಗಳಿಗೆ ಹೇರಳವಾಗಿ ಗಿರಾಕಿಗಳಿರುವರೆಂದೂ ಬ್ರಿಟನ್ನಿನ ವರ್ಕ್ಸ್ ಮಂತ್ರಿ ಡೇವಿಡ್ ಎಕ್ಲೆಸ್‌ರವರು ತಿಳಿಸಿರುವರು

ಮಹಿಳೆಯರನ್ನು ಸೈನ್ಯಕ್ಕೆ ಸೇರಿಸುವ ಬಗ್ಗೆ ಮಸೂದೆ

ಯುದ್ಧವೇನಾದರೂ ಸಂಭವಿಸಿದಲ್ಲಿ ೫೧ ವರ್ಷಕ್ಕೆ ಮೇಲ್ಪಟ್ಟ ಹೆಂಗಸರನ್ನೂ ಸೈನ್ಯಕ್ಕೆ ಸೇರಿಸಿಕೊಳ್ಳುವ ಬಗ್ಗೆ ಫ್ರಾನ್ಸ್ ಸರ್ಕಾರವು ಒಂದು ಮಸೂದೆಯನ್ನು ಸಿದ್ಧಗೊಳಿಸುತ್ತಿರುವುದೆಂದು ತಿಳಿದುಬಂದಿದೆ

ಗಿರಣಿಯಲ್ಲಿ ೮ ಪಲ್ಲಾ ಭತ್ತದ ಕಳುವು

ಮಳವಳ್ಳಿಯ ಶ್ರೀ ಗಂಗಾ ಪರಮೇಶ್ವರಿ ಅಕ್ಕಿ ಗಿರಣಿಯ ಉಗ್ರಾಣದಲ್ಲಿದ್ದ ೮ ಪಲ್ಲಾ ಭತ್ತವನ್ನೂ ಮತ್ತು ಅಲ್ಲಿನ ವಿವಿಧೋದ್ದೇಶ ಸಹಕಾರ ಸಂಘಗಳಲ್ಲಿ ೪೦೦ ರೂ ಬೆಲೆಯ ಸಾಮಾನುಗಳನ್ನೂ ಸಹ ಕಳುವು ಮಾಡಲಾಗಿರುವುದೆಂದೂ ಹೇಳಲಾಗಿದೆ

ಎಲ್ ಎಸ್. ಮತ್ತು ಎಸ್. ಎಸ್ ಎಲ್ ಸಿ ತರಗತಿಗಳು

ಮೈಸೂರು ನಗರದ ಆದಿ ಕರ್ನಾಟಕ ಯುವಕ ಸಂಘದ ಆಶ್ರಯದಲ್ಲಿ ಚಾಮರಾಜ ಮೊಹಲ್ಲಾ ಎ ಕೆ ಪುರಂ ಶ್ರೀ ರಾಮ ಮಂದಿರದಲ್ಲಿ ಮಿಡಲ್ ಮತ್ತು ಎಸ್ ಎಸ್ ಎಲ್ ಸಿ ಪರೀಕ್ಷೆಗೆ ಓದುವ ಹರಿಜನ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ಉಚಿತ ಪಾಠವನ್ನು ಹೇಳಿಕೊಡಲು ಏರ್ಪಾಡು ಮಾಡಿರುತ್ತೆ ಈ ಸುಸಮಯವನ್ನು ಉಪಯೋಗಿಸಿಕೊಳ್ಳಲು ಬಯಸುವ ಹರಿಜನ ವಿದ್ಯಾರ್ಥಿಗಳು ೫-೭ ತಾ॥ ರೊಳಗಾಗಿ ಸದರಿ ಸಂಘದ ಕಾರ್ಯದರ್ಶಿಯವರಿಗೆ ಅರ್ಜಿ ಹಾಕಿಕೊಳ್ಳಬಹುದೆಂದು ಸೂಚಿಸಲಾಗಿದೆ

ಚಿಕ್ಕ ದೇವರಾಜ ಜಿನ್ನಪ ಸಪ್ತಾಹ

ಚಿಕ್ಕ ದೇವರಾಜ ಜಿನ್ನಪದ ಎರಡನೇ ವರ್ಷದ ಸಪ್ತಾಹವು ಜುಲೈ ೬ ನೇ ತಾ॥ ಆರಂಭವಾಗಿ ೧೩ ನೇ ತಾರೀಕಿನ ವರೆಗೂ ಮೇಲುಕೋಟೆಯ ದೇವಸ್ಥಾನದಲ್ಲಿ ಜರುಗುವುದು ಈ ಸಂಬಂಧದಲ್ಲಿ ಮದರಾಸಿನ ನ್ಯಾಯ ವೇದಾಂತ ವಿದ್ವಾನ್ ಶ್ರೀ ಉ ವೇ ಕಾರ್ಪಂಕಾಡು ವೆಂಕಟಾಚಾರ್ಯ ಸ್ವಾಮಿಗಳವರು ಪ್ರತಿ ದಿನ ಸಂಜೆ ೪ ರಿಂದ ೬ ಗಂಟೆವರೆಗೆ ಉಪನ್ಯಾಸ ಮಾಡುವರು ಜುಲೈ [illegible] ನೇ ತಾರೀಕು ಮಹಾಭಿಷೇಕ ಮತ್ತು ಕಲ್ಯಾಣೋತ್ಸವಗಳೂ, ೧೩ ನೇ ತಾ॥ ಕೃಷ್ಣರಾಜ ಮುಡಿ ಉತ್ಸವವೂ [illegible]

ಕೊರಿಯಾ ಅಸೆಂಬ್ಲಿ ಗಲಭೆಯಲ್ಲಿ ಒಬ್ಬ ಸದಸ್ಯರ ಮರಣ

ದಕ್ಷಿಣ ಕೊರಿಯಾದ ಶಾಸನ ಸಭೆಯನ್ನು ವಿಸರ್ಜಿಸಬೇಕೆಂದು ಅಧ್ಯಕ್ಷ ಸಿಂಗ್ಮನ್ ರೀ ಯವರು ಮೊನ್ನೆ ಶಾಸನ ಅಸೆಂಬ್ಲಿಯಲ್ಲಿ ತಂದ ನಿರ್ಣಯವು ತಳ್ಳಹಾಕಲ್ಪಟ್ಟ ಸಂದರ್ಭದಲ್ಲಿ ಗಲಭೆ ನಡೆದ ಪರಿಣಾಮವಾಗಿ ಸಭೆಯಿಂದ ಹೊರಗೆ ಹೋಗಲು ಪ್ರಯತ್ನಿಸಿದ ಹಲವು ಸದಸ್ಯರನ್ನು ಗಲಭೆಕಾರರು ಎತ್ತಿ ಸಭಾ ಭವನದೊಳಕ್ಕೆ ಮತ್ತೆ ಎಸೆದರೆಂದೂ ಇದರಿಂದ ಒಬ್ಬ ಸದಸ್ಯರು ಮೃತಪಟ್ಟರೆಂದೂ ವರದಿಯಾಗಿದೆ

ಪಾಕಿಸ್ತಾನ ನಾಣ್ಯದ ಅಪಮೌಲ್ಯವಿಲ್ಲ

ಪಾಕಿಸ್ತಾನದ ರೂಪಾಯಿಯ ಬೆಲೆಯನ್ನು ಇಳಿಸುವುದಿಲ್ಲವೆಂದು [illegible] ವಾಣಿಜ್ಯ ಸಚಿವರು ತಿಳಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩೦ ಸಿ ಎ ರಂಗಸ್ವಾಮಿ ಅಯ್ಯಂಗಾರ್ ವೀಣೆ, ಮಧ್ಯಾಹ್ನ ೧ [illegible] ಕೊಳಲು, [illegible] ಹೆಚ್ ಎಸ್ ಯಾಸಿಂ ಸಿತಾರ್ ವಾದನ ಸಂಜೆ [illegible] ಎಂ ವೆಂಕಟಪ್ಪ ಸಂಗೀತ, ೭ ಮೃದಂಗ ೭.೧೦ ಗಾನ ವಿಹಾರ — ಹೆಚ್ ಎಸ್ ಯಾಸಿಂ ಸಿತಾರ್ ೭.೪೦ ಪ್ರಜೋಪಕಾರ ಯಾತ್ರೆ ಬಗ್ಗೆ ಭಾಷಣ [illegible] ಸಿ ಎ ರಂಗಸ್ವಾಮಿ ಅಯ್ಯಂಗಾರ್ ವೀಣೆ, [illegible] ಸಿತಾರ್ [illegible] ೯.೩೦ ಗಾನಾಮೃತ

ಸಬ್ ಡಿವಿಜನ್ನುಗಳನ್ನು ರದ್ದುಗೊಳಿಸಲು ಸಲಹೆ

ಮೈಸೂರು ಅಸೆಂಬ್ಲಿಯ ಬಡ್ಜೆಟ್ ಮೇಲಿನ ಚರ್ಚೆಯು ಮೊನ್ನೆ ನಡೆಯುತ್ತಿದ್ದಾಗ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಮಾತನಾಡುತ್ತಾ ಸಂಸ್ಥಾನದ ೯ ಜಿಲ್ಲೆಗಳನ್ನು ಕಡಿಮೆ ಮಾಡಬಾರದೆಂದೂ, ಅದಕ್ಕೆ ಪ್ರತಿಯಾಗಿ ಸಬ್ ಡಿವಿಜನ್ನುಗಳನ್ನು ರದ್ದುಗೊಳಿಸಬೇಕೆಂದೂ ಮತ್ತು ಸಿಬ್ಬಂದಿಗಾಗಿ ತಗಲುವ ಖರ್ಚನ್ನು ಕಡಿಮೆ ಮಾಡಬೇಕೆಂದೂ ಸೂಚಿಸಿದರು

ಫೋರ್ಡ್ ಮೋಟಾರು ಕಂಪೆನಿ ಮುಚ್ಚುವ ಪರಿಸ್ಥಿತಿ

ಅಮೆರಿಕದ ಉಕ್ಕಿನ ಕೈಗಾರಿಕಾ ಕಾರ್ಮಿಕರು ಕಳೆದ ೨೭ ದಿನಗಳಿಂದ ಕೈಗೊಂಡಿರುವ ಮುಷ್ಕರದ ಪರಿಣಾಮವಾಗಿ ಹಲವು ಪ್ರಮುಖ ಮೋಟಾರು ಕಂಪೆನಿಗಳು ಮುಚ್ಚಲ್ಪಡುವ ಪರಿಸ್ಥಿತಿಯೊದಗಿರುವುದೆಂದೂ ಡಿಟ್ರಾಯಿಟ್‌ನಲ್ಲಿರುವ ಫೋರ್ಡ್ ಮೋಟಾರು ಸಂಸ್ಥೆಯು ವಿವಿಧ ಪ್ರದೇಶಗಳಲ್ಲಿರುವ ಮೋಟಾರು ಬಿಡಿಭಾಗಗಳನ್ನು ಜೋಡಿಸುವ ತನ್ನ ೧೭ ಕಾರ್ಖಾನೆಗಳನ್ನು ನಾಳೆಯಿಂದ ಮುಚ್ಚಿ, ೫೦ ೦೦೦ ಜನರನ್ನು ಕೆಲಸದಿಂದ ತೆಗೆಯಲು ನಿರ್ಧರಿಸಿರುವುದೆಂದೂ ವರದಿಯಾಗಿದೆ ಜನರಲ್ ಮೋಟಾರ್ಸ್ ಸಂಸ್ಥೆಯವರು ಈಗಾಗಲೇ ತಮ್ಮ ೧೮ ಕಾರ್ಖಾನೆಗಳ ೩೮ ೦೦೦ ಕಾರ್ಮಿಕರನ್ನು ಕೆಲಸದಿಂದ ತೆಗೆದಿರುವುದಾಗಿ ತಿಳಿದು ಬಂದಿದೆ ಇನ್ನೆರಡು ಮೂರು ವಾರ ಕಾಲ ಉಕ್ಕಿನ ಕಾರ್ಮಿಕರ ಮುಷ್ಕರವು ಮುಂದುವರಿದರೆ ಮೋಟಾರು ಕೈಗಾರಿಕೆಯು ಪೂರ್ಣವಾಗಿ ನಿಲ್ಲಬಹುದೆಂದೂ ಹೇಳಲಾಗಿದೆ ಈ ಮಧ್ಯೆ ಪೆನ್ಸಿಲ್ವೇನಿಯಾದಲ್ಲಿರುವ ಪಿಟ್ಸ್‌ಬರ್ಗಿನ ಉಕ್ಕಿನ ಕೇಂದ್ರದಲ್ಲಿ ಕಾರ್ಮಿಕರಿಗೂ ಆಡಳಿತ ವರ್ಗದವರಿಗೂ ಒಪ್ಪಂದವಾಗಿ ೧೩ ೦೦೦ ಮಂದಿ ಕಾರ್ಮಿಕರು ಮುಷ್ಕರವನ್ನು ನಿಲ್ಲಿಸಿರುವುದಾಗಿ ಗೊತ್ತಾಗಿದೆ

ಕೊರಿಯಾ ವಿದ್ಯುತ್ ಕೇಂದ್ರಗಳ ಮೇಲೆ ೪ ನೇ ಧಾಳಿ

ಉತ್ತರ ಕೊರಿಯಾದ ವಿದ್ಯುತ್ ಕೇಂದ್ರಗಳ ಮೇಲೆ ವಿಶ್ವ ಸಂಸ್ಥೆಯ ವಿಮಾನಗಳು ಮೊನ್ನೆ ನಾಲ್ಕನೇ ಬಾರಿ ಧಾಳಿ ನಡೆಸಿದುವೆಂದು ಹೇಳಲಾಗಿದೆ

ರುಚಿ! ರುಚಿ!
ಫಲಾಹಾರ ಮಂದಿರ
ನಿಮ್ಮ ಮೆಚ್ಚಿನ ಫಲಾಹಾರ ಮಂದಿರಕ್ಕೆ ಭೇಟಿ ಕೊಡಿ
ಶ್ರೀ ವಿಜಯಾ ಕೆಫೆ
ದೊಡ್ಡ ಅಂಗಡಿ ಬೀದಿ,
ಚಾಮರಾಜನಗರ
ಪ್ರೊಪ್ರೈಟರ್:— ಕೆ [illegible]

ಕಾಲೇಜು ಸಂಘಗಳ ಸದಸ್ಯತ್ವದ ನಿರ್ಬಂಧದ ರದ್ದು

ಮೈಸೂರು ವಿಶ್ವವಿದ್ಯಾಲಯದ ಕೌನ್ಸಿಲ್ಲಿನವರು ಕಾಲೇಜು ಸಂಘಗಳ ಸದಸ್ಯತ್ವದ ಸಂಬಂಧವಾಗಿ ಮಾಡಿರುವ ನಿರ್ಣಯವು ಶ್ಲಾಘನೀಯವಾಗಿರುವುದೆಂದೂ, ಸದಸ್ಯತ್ವವನ್ನು ಹೊಂದುವುದು ಅಥವಾ ಹೊಂದದಿರುವುದು ವಿದ್ಯಾರ್ಥಿಗಳ ಇಚ್ಛೆಗೆ ಬಿಟ್ಟಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ತುಂಬಾ ಸಹಾಯ ಮಾಡಿದಂತಾಗಿದೆಯೆಂದೂ ಇದುವರೆಗೆ ಸಂಘಗಳಿಗೆ ನಡೆಯುತ್ತಿದ್ದ ಚುನಾವಣೆಗಳಲ್ಲಿ ಪರಸ್ಪರ ದ್ವೇಷ ಅಸೂಯೆಗಳು ಹೆಚ್ಚಿ ವಿದ್ಯಾರ್ಥಿಗಳ ಭವಿಷ್ಯವನ್ನು ಕೆಡಿಸುತ್ತಿದ್ದುವೆಂದೂ, ಈ ದುಷ್ಪರಿಣಾಮವು ಮೇಲ್ಕಂಡ ಕ್ರಮದಿಂದ ತಪ್ಪುವುದೆಂದೂ ಮುಂತಾಗಿ ಕಾಲೇಜು ವಿದ್ಯಾರ್ಥಿಗಳಾದ ಶ್ರೀಗಳು ಎಂ ಸತ್ಯನಾರಾಯಣ ಕೃಷ್ಣಪ್ಪ ಕೆ ಎಸ್ ಸತ್ಯನಾರಾಯಣ ಜಯದೇವ, ಕೆ ಆರ್ ಗೋಪಾಲಸ್ವಾಮಿಯವರುಗಳು ತಿಳಿಸಿರುತ್ತಾರೆ

ಪೌರ ಸಭಾ ಉಪಾಧ್ಯಕ್ಷರ ಚುನಾವಣೆ

ಸ್ವಂ ಸು] ಚಾಮರಾಜನಗರ ೨೮

ಇಲ್ಲಿನ ಪೌರ ಸಭೆಯ ಉಪಾಧ್ಯಕ್ಷ ಚುನಾವಣೆಯು ನೆನ್ನೆ ನಡೆದು ಶ್ರೀ ಸಿ. ವಿ ವೆಂಕಟೇಶ್‌ರವರು ಆರಿಸಲ್ಪಟ್ಟಿರುವರು

ಇಲ್ಲಿನ ಹಳೇ ಕೋಟೆಯಲ್ಲಿರುವ ಶ್ರೀ ಮಾರುತಿ ದೇವಾಲಯವು ತುಂಬಾ ಶಿಥಿಲವಾಗಿದ್ದ ಪ್ರಯುಕ್ತ ಅದನ್ನು ಸ್ಥಳೀಯ ಕಂಟ್ರಾಕ್ಟರುಗಳ ಸಂಘದವರು ಮಹಾಜನರಿಂದ ವಸೂಲಾದ ಧನದಿಂದ ಸರಿಪಡಿಸಿರುತ್ತಾರೆ ಭಕ್ತಾದಿಗಳು ದೇವಾಲಯಕ್ಕೆ ತಮ್ಮ ಉದಾರ ಸಹಾಯ ಮಾಡಬೇಕೆಂದು ಭಕ್ತ ಜನ ಮಂಡಲಿಯವರು ಕೋರಿರುತ್ತಾರೆ

ಒಲಂಪಿಯಾ
28 6 52 ರಿಂದ ಜನಭರಿತ ೩ನೇ ವಾರ
ಬಾಂಬೆ ಟಾಕೀಸ್‌ರವರ
ಮಾ MAA
ಪಾತ್ರ ಲೀಲಾ ಚಿಟ್ನಿಸ್ ಭರತ್ ಭೂಷಣ್
ಬೆಳಗಿನ ಪ್ರದರ್ಶನ —
ರಾಜ್‌ಕಪೂರ್ ಪಾತ್ರವಹಿಸಿರುವ
ಜಾನ್ ಪಹೆಚಾನ್

SRI GANESH
TALKIES
From 1-7-52 For 2 Days
THE DANCING YEARS
[In Technicolor]
With - Dennis Price & Patricia Dainton
From 3—7—52
TRAPPED

ಮೈಸೂರು ಸಾಬೂನು
ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.
❋ ಅತ್ಯುತ್ತಮವಾದ ಒಗೆಯುವ ಸಾಬೂನು
❋ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು
❋ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.
❋ ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.
ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ
★
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

Edited, Printed and Published by A R. Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ. 792 || ಸಂಪಾದಕ ... || ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೧-೭-೫೨ [ಸಂಚಿಕೆ ೨೬೬

ಮುಂಬಾಯಿ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗೆ ಪೆಟ್ಟು

ಮುಂಬಾಯಿ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಎಂ. ಡಿ. ಭಟ್ನಾಗಿ ಯವರ ಮೇಲೆ ನೆನ್ನೆ ಸರ್ದಾರ್ ಪಟೇಲ್ ಬುಲ್ಲಾಖಾನ್ ಎಂಬ ಅಧ್ಯಕ್ಷನು ಕಛೇರಿಗಳಲ್ಲಿ ಕಾಗದಗಳ ಮೇಲಿಡುವ ಪೇಪರ್ ವೇಟ್‌ಗಳಿಂದ ಹೊಡೆದು ಗಾಯ ಗೊಳಿಸಿದನೆಂದು ವರದಿಯಾಗಿದೆ. ಕೇಂದ್ರ ಸರ್ಕಾರದವರು ಪೂನಾ ನಗರವನ್ನು ಬಿಟ್ಟು ಹೋಗದಂತೆ ಅವನನ್ನು ನಿರ್ಬಂಧಿಸಿದ ಸಂಬಂಧವಾಗಿ ಅವನು ಭಟ್ನಾಗಿಯವರೊಡನೆ ಮಾತುಕತೆ ನಡೆಸಲು ಹೋಗಿದ್ದನೆಂದೂ, ಆ ವಿಷಯದಲ್ಲಿ ತಾವು ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ಅವರು ತಿಳಿಸಿದಾಗ ಅಧ್ಯಕ್ಷನು ಮೇಲ್ಕಂಡಂತೆ ಹೊಡೆದನೆಂದೂ ಹೇಳಲಾಗಿದೆ. ಅವನನ್ನು ಪೋಲೀಸರು ವಶಪಡಿಸಿಕೊಂಡಿರುತ್ತಾರೆ.

ವಿಶ್ವ ಗೃಹಿಣಿಯರ ಸಮ್ಮೇಳನ

ಜರ್ಮನಿಯ ಫ್ರಾಂಕ್‌ಫರ್ಟ್ ನಗರದಲ್ಲಿ ಅಂತರ ರಾಷ್ಟ್ರೀಯ ಗೃಹಿಣಿಯರ ಸಮ್ಮೇಳನವು ನಡೆಯಲಿದೆ. ಅಲ್ಲಿಗೆ ಭಾರತ, ಬ್ರಿಟನ್, ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಅಮೆರಿಕಾ, ಫಿನ್ಲೆಂಡ್, ಫ್ರಾನ್ಸ್, ಹಾಲೆಂಡ್ ಮತ್ತು ಬೆಲ್ಜಿಯಂ ರಾಷ್ಟ್ರಗಳ ಪ್ರತಿನಿಧಿಗಳು ಹೋಗಿರುತ್ತಾರೆ. ಮನೆಗಳಲ್ಲಿ ಮಿತವ್ಯಯವನ್ನು ಅನುಸರಿಸುವುದಕ್ಕೆ ಸಹಕಾರಿಯಾಗುವ ಪ್ರದರ್ಶನವೊಂದನ್ನು ಸಹ ಅಲ್ಲಿ ಏರ್ಪಡಿಸಲಾಗುವುದು.

ಒಂದೇ ಗಿಡದಲ್ಲಿ ಎರಡು ಬಗೆ ಹಣ್ಣುಗಳು

ರಷ್ಯಾದ ಸಸ್ಯಶಾಸ್ತ್ರಜ್ಞರೊಬ್ಬರು ಒಂದು ಪಕ್ವವಾದ ಮರಕ್ಕೆ ಮತ್ತೊಂದನ್ನು ಕಸಿ ಮಾಡಿ ಸೇರಿಸಿದ ಪರಿಣಾಮವಾಗಿ ಅದರಲ್ಲಿ ಈಗ ನಿಂಬೆ ಮತ್ತು ಟ್ಯಾಂಗರಿನ್ ಎಂಬ ಮತ್ತೊಂದು ವಿಧದ ಹಣ್ಣುಗಳು ಬೆಳೆಯುತ್ತಿರುವುವೆಂದು ಗೊತ್ತಾಗಿದೆ.

ಹಿಂದೂಕೋಡು ಮಸೂದೆಗೆ ಸಾರ್ವಜನಿಕಾಭಿಪ್ರಾಯ

ಹಿಂದೂ ಕೋಡು ಮಸೂದೆಯ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಪಡೆದು ಪುನಃ ಪಾರ್ಲಿಮೆಂಟಿನ ಮುಂದೆ ತರಲಾಗುವುದೆಂದು ಹೇಳಲಾಗಿದೆ.

ಕುಲ ಕಸಬನ್ನು ಬಿಡಲಾಗದೆಂದು ರಾಜಾಜಿ ಸಲಹೆ

ಹರಿಜನ ಕಛೇರಿಗಳಲ್ಲಿ ಕೆಲವರಿಗೆ ಮಾತ್ರ ಪೌರತ್ವಗಳನ್ನು ಒದಗಿಸಬಲ್ಲ ವಿದ್ಯೆಗಾಗಿ ಆಸೆಪಟ್ಟು, ವಂಶಪಾರಂಪರ್ಯವಾಗಿ ಬಂದಿರುವ ಉದ್ಯೋಗವನ್ನು ಕಡೆಗಣಿಸಬಾರದೆಂದು ಮದ್ರಾಸಿನ ಮುಖ್ಯಮಂತ್ರಿ ರಾಜಾಜಿಯವರು ನೆನ್ನೆ ತಮಿಳು ನಾಡು ಅಗಸರ ಸಮ್ಮೇಳನದಲ್ಲಿ ತಿಳಿಸಿದರು. ಜಾತಿವರ್ಣಗಳವು ಸ್ವಭಾವ ಆಧಾರದ ಮೇಲೆ ಸೃಷ್ಟಿಯಾಯಿತೆಂದೂ, ದ್ವೇಷವನ್ನು ಹರಡುವುದಕ್ಕಾಗಿಯೇ ಜಾತಿ ಕೋಮುಗಳ ಬಗ್ಗೆ ಹಲವರು ನಡೆಸುತ್ತಿರುವ ಪ್ರಚಾರಕ್ಕೆ ಕಿವಿಗೊಡಕೂಡದೆಂದೂ ಅವರು ಸೂಚಿಸಿದರು.

ಶಾಸನ ಸಭೆಯಲ್ಲಿ ರಾಜಧನದ ಬಗ್ಗೆ ಚರ್ಚೆ

ರಾಜಧನದ ವಜಾ ಆಗಬೇಕೆಂದು ಒತ್ತಾಯ

ಶಾಸನಸಭೆಯಲ್ಲಿ ಮುಖ್ಯಮಂತ್ರಿ ಹನುಮಂತಯ್ಯನವರ ಉತ್ತರ

ಬೆಂಗಳೂರು ೧

ಆಯವ್ಯಯದ ಚರ್ಚೆಗೆ ನೆನ್ನೆ ಉತ್ತರವಿತ್ತು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ರಾಜಪ್ರಮುಖರ ರಾಜಧನವನ್ನು ರದ್ದು ಮಾಡಬೇಕೆಂದು ಸಲ್ಲಿಸಿದ ಸೂಚನೆಯನ್ನು ಟೀಕಿಸಿ, ಸದಸ್ಯರು ಈ ವಿಷಯದಲ್ಲಿ ತೀವ್ರವಾದ ಟೀಕೆಗಳನ್ನು ಮಾಡಬಾರದೆಂದೂ, ಅವರಿಗೆ ಕೊಡುವ ಧನದ ಬಗ್ಗೆ ಕೇಂದ್ರ ಸರ್ಕಾರಕ್ಕೂ ಅವರಿಗೂ ಒಪ್ಪಂದವಾಗಿರುವುದೆಂದೂ ತಿಳಿಸಿದರು. ಈಗ ಕೇಂದ್ರ ಸರ್ಕಾರದವರು ಕೊಡುವ ರಾಜಧನ ಮತ್ತು ಮೈಸೂರು ಸರ್ಕಾರದವರು ಕೊಡುವ ಭತ್ಯ ಇವುಗಳ ಮೊತ್ತಕ್ಕೆ ರಾಜಪ್ರಮುಖರು ತಮ್ಮ ವೆಚ್ಚವನ್ನು ಹೊಂದಿಸಿಕೊಳ್ಳುವಂತೆ ಅವರಿಗೆ ತಾವು ಅರಿಕೆ ಮಾಡಿಕೊಂಡಿರುವುದಾಗಿಯೂ ಹೇಳಿದರು.

ಜನ ಅವರ ಜೀವನಾವಶ್ಯಕ ಮತ್ತು ಆರ್ಥಿಕ ಉನ್ನತಿಯನ್ನು ಸಾಧಿಸಲು ಹಾನಿ ನಿರೋಧವು ಅಗತ್ಯವಾದದ್ದೂ, ಮೇಲ್ದರ್ಜೆಯ ಜನರು ವಿದೇಶೀ ಮಾದಕ ಪದಾರ್ಥಗಳನ್ನು ಉಪಯೋಗಿಸುವುದಕ್ಕೆ ರಹದಾರಿಯನ್ನು ಏರ್ಪಡಿಸಬಹುದೆಂದು ಅವರು ಸೂಚಿಸಿದರು.

ಮೈಸೂರು ಉಕ್ಕಿಗೆ ಹೆಚ್ಚು ಬೆಲೆ

ಉಕ್ಕಿನ ಬೆಲೆಯನ್ನು ಟನ್ನಿಗೆ ೫೦ ರೂ. ಗಳಂತೆ ಇಂದಿನಿಂದ ಕೇಂದ್ರ ಸರ್ಕಾರದವರು ಹೆಚ್ಚಿಸಿರುತ್ತಾರೆ. ಭದ್ರಾವತಿ ಕಾರ್ಖಾನೆಯ ಉಕ್ಕಿಗೆ ೫೦ ರೂ. ಗಳಂತೆ ಹೆಚ್ಚಿಸಲಾಗಿದೆ. ಮೈಸೂರಿನ ಉಕ್ಕಿಗೆ ಈ ದರವನ್ನು ಗಣಿಗಳೇ ಅಕ್ಟೋಬರ್ ತಿಂಗಳಿಂದ ಕೊಡಲಾಗುವುದು. ಕೃಷಿಗೆ ಸಾಗಾಣಿಕೆ ದರ ಹೆಚ್ಚಿಸಿರುವುದು ಮೈಸೂರು ಉಕ್ಕಿಗೆ ಹೆಚ್ಚಿಗೆ ಬೆಲೆ ಕೊಡುವಂತೆ ಸಾರಿಗೆ ಸಮಿತಿಯವರು ಶಿಫಾರಸು ಮಾಡಿರುವುದು ಇವೇ ಮುಂತಾದವುಗಳ ಪರಿಣಾಮವಾಗಿ ಬೆಲೆಯನ್ನು ಹೆಚ್ಚಿಸಲಾಗಿದೆ.

ಶಾಸನ ಸಭಾ ಉಪಾಧ್ಯಕ್ಷತೆಗೆ ಸ್ಪರ್ಧಿಗಳು

ಸ್ವಂ ಸು. ಫೋ.] ಬೆಂಗಳೂರು ೧

ಶಾಸನ ಸಭೆಯ ಉಪಾಧ್ಯಕ್ಷತೆಗೆ ಕಾಂಗ್ರೆಸ್ಸಿನ ಪರವಾಗಿ ಶ್ರೀ ಆರ್. ಚನ್ನಿಗರಾಮಯ್ಯನವರ ಹೆಸರನ್ನು ಶ್ರೀ ಟಿ. ಮರಿಯಪ್ಪನವರು ಸೂಚಿಸಿ, ಶ್ರೀ ಎ. ಭೀಮಪ್ಪನಾಯಕರು ಅನುಮೋದಿಸಿರುತ್ತಾರೆ. ಶ್ರೀ ಎಂ. ಚಿಕ್ಕಲಿಂಗಯ್ಯನವರ ಹೆಸರನ್ನು ಪ್ರಜಾ ಪಕ್ಷದ ಪರವಾಗಿ ಸೂಚಿಸಿರುವವರು ಶ್ರೀ ಎಂ. ಶಂಕರಲಿಂಗೇಗೌಡರು ಅನುಮೋದಿಸಿರುವರು. ಈ ಮಧ್ಯಾಹ್ನ ೧ ೩೦ ರಿಂದ ೩ ೩೦ ರವರೆಗೆ ಬ್ಯಾಲೆಟ್ ಮೂಲಕ ಚುನಾವಣೆ ನಡೆಯುತ್ತದೆ.

ಸಹಕಾರ ವ್ಯವಸಾಯ ಪದ್ಧತಿಗೆ ಉತ್ತೇಜನ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಸೇರಿ ದೇಶದಲ್ಲಿ ಆಹಾರದ ಉತ್ಪತ್ತಿಯನ್ನು ಹೆಚ್ಚಿಸಲು ಸಹಕಾರ ಪದ್ಧತಿಯ ವ್ಯವಸಾಯವನ್ನು ಜಾರಿಗೆ ತರುವುದು, ಗ್ರಾಮಾಂತರಗಳಲ್ಲಿ ಸಹಕಾರ ಸಂಸ್ಥೆಗಳಿಗೆ ಉತ್ತೇಜನ ಕೊಡುವುದು ಮುಂತಾದ ಕ್ರಮಗಳನ್ನು ಜಾರಿಗೆ ತರುವುದು ಅಗತ್ಯವೆಂದು ಅಭಿಪ್ರಾಯ ಸೂಚಿಸಿತು. ಪ್ರತಿಯೊಬ್ಬರಿಗೂ ಇರಬಹುದಾದ ಪರಮಾವಧಿ ಭೂಮಿಯನ್ನು ನಿಗದಿ ಮಾಡಬೇಕೆಂದು ಸಭೆಯು ಅಭಿಮತವನ್ನು ವ್ಯಕ್ತಪಡಿಸಿರುವುದಾಗಿ ತಿಳಿದುಬಂದಿದೆ.

ಬಟ್ಟೆ ಬೆಲೆ ಹೆಚ್ಚಳ

ಜುಲೈ ಮತ್ತು ಸೆಪ್ಟೆಂಬರುಗಳ ಮಧ್ಯೆ ಮೂರು ತಿಂಗಳಿನ ಅವಧಿಯಲ್ಲಿ ಭಾರತ ಸರ್ಕಾರದವರು ಬಟ್ಟೆಗಳ ಬೆಲೆಯನ್ನು ಹೆಚ್ಚಿಸಿ ಪಟ್ಟಿ ಮಾಡಿರುತ್ತಾರೆ. ಒರಟು ಬಟ್ಟೆಯ ಬೆಲೆಯನ್ನು ಶೇ|| ೫ ೫೦ ರಿಂದ ೬-೭೫ ರ ವರೆಗೂ, ಮಧ್ಯಮ ಸಣ್ಣ ಬಟ್ಟೆಯ ಬೆಲೆಯನ್ನು ಶೇ|| ೦-೭೫ ರಿಂದ ೧-೫೦ ರ ವರೆಗೂ, ಬಹುನಯವಾದ ಬಟ್ಟೆಯ ದರವನ್ನು ಏಪ್ರಿಲ್ ಜೂನ್ ಪಟ್ಟಿಯಲ್ಲಿದ್ದಂತೆ ಶೇ|| ೮ ರಿಂದ ೧೧ ರ ವರೆಗೂ ಹೆಚ್ಚಿಸಲಾಗಿದೆ. ಅತಿ ನಯವಾದ ಬಟ್ಟೆ ಬೆಲೆ ಶೇ|| ೮ ರಿಂದ ೧೩ ಹೆಚ್ಚು ಇರುತ್ತದೆ.

ವ್ಯವಸಾಯ ಇಲಾಖೆ ರದ್ದು ಮಾಡುವ ಬಗ್ಗೆ ಪ್ರಶ್ನೆ

ಶಾಸನ ಸಭೆಯಲ್ಲಿ ಮಂತ್ರಿಗಳ ಸಮಾಧಾನ

ಸ್ವಂ ಸು. ಫೋ.] ಬೆಂಗಳೂರು ೧

ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು ವ್ಯವಸಾಯ ಇಲಾಖಾ ಮಂತ್ರಿ ಶ್ರೀ ಸಿದ್ದವೀರಪ್ಪನವರು ಆ ಇಲಾಖೆಗಾಗಿ ೩೧,೫೦,೦೦೦ ರೂ. ಗಳನ್ನು ಖರ್ಚು ಮಾಡಲಾಗುತ್ತಿದೆಯೆಂದೂ, ಇದುವರೆಗೂ ಯಾವುದೇ ಇಪ್ಪತ್ತು ಫೀಲ್ಡ್ ಕಾರ್ಯಕರ್ತರನ್ನು ಕಡಿಮೆಮಾಡುವಂತೆ ಅಧಿಕಾರಿಗಳಿಗೆ ಸರ್ಕಾರದವರು ಸೂಚಿಸಿರುವುದಾಗಿಯೂ ತಿಳಿಸಿದರು.

ಶ್ರೀ ಎ. ಭೀಮಪ್ಪನಾಯಕರು ಮಾತನಾಡಿ ಆ ಇಲಾಖೆಯನ್ನು ಏಕಾಏಕಿ ರದ್ದು ಮಾಡಬಾರದೆಂದು ಕೇಳಿದುದಕ್ಕೆ ಮಂತ್ರಿಗಳು ಉತ್ತರವಿತ್ತು ಕಳೆದ ೫೦ ವರ್ಷಗಳಿಂದಲೂ ಇಲಾಖೆಯು ಉಪಯುಕ್ತ ಕೆಲಸ ಮಾಡುತ್ತಿರುವುದೆಂದೂ, ಅದರಿಂದ ಅನುಕೂಲವಿರುವುದೆಂದೂ ಹೇಳಿದರು.

ಶ್ರೀ ಮುನಿಸ್ವಾಮಯ್ಯನವರು ಗೆಜೆಟೆಡ್ ಅಧಿಕಾರಿಗಳ ಸಂಖ್ಯೆ ಸಂಬಂಧವಾಗಿ ಕೇಳಿದ ಪ್ರಶ್ನೆಗೆ ಶ್ರೀ ಹನುಮಂತಯ್ಯನವರು ಉತ್ತರವಿತ್ತು, ಆ ದರ್ಜೆಯ ಅಧಿಕಾರಿಗಳನ್ನು ಸಿವಿಲ್ ಸರಬರಾಜು ಮತ್ತು ಆಹಾರ ಇಲಾಖೆಗಳಲ್ಲಿ ಕಡಿಮೆ ಮಾಡಲಾಗಿದೆಯೆಂದೂ, ಯಾರಿಗೂ ಜೀವದಾನವನ್ನು ಕೊಡಲಾಗುವುದಿಲ್ಲವೆಂದೂ ಹೇಳಿದರು. ನಿಮ್ನ ವರ್ಗದ ಅಧಿಕಾರಿಗಳನ್ನು ತೆಗೆದುಹಾಕುವ ಬಗ್ಗೆ ಕೇಂದ್ರದಿಂದ ಯಾವ ಸಲಹೆಯೂ ಬಂದಿಲ್ಲವೆಂದೂ, ಬಂದರೂ ಸಹ ತಾವು ಅದನ್ನು ಅಂಗೀಕರಿಸುವುದಿಲ್ಲವೆಂದೂ ಅವರು ಹೇಳಿದರು.

ನಂತರ ಆಯವ್ಯಯದ ಬೇಡಿಕೆಗಳ ಬಗ್ಗೆ ಕೋತಾ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ನಂಜನಗೂಡಿನ ಶ್ರೀ ಹೆಚ್ಚಿಗೆ ಅಂಗಡಿ ಶಾಸಕರು ನಿರ್ಣಯವನ್ನು ಮಂಡಿಸಿ ಮೈಸೂರು ಜಿಲ್ಲೆಯಲ್ಲಿ ಜಲ ಅಭಾವ ಪರಿಸ್ಥಿತಿ ಇರುವುದೆಂದೂ ಅಲ್ಲಿಗೆ ಕೊಟ್ಟಿರುವ ೫೦,೦೦೦ ರೂ. ಗಳ ಪರಿಹಾರವು ಸಾಲದೆಂದೂ ತಿಳಿಸಿದರು.

ಸರ್ಕಾರದವರು ಉತ್ತರವಿತ್ತು, ಕೋಲಾರ ಮುಂತಾದ ಜಿಲ್ಲೆಗಳಿಗಿಂತ ಹೋಲಿಸಿದಲ್ಲಿ ಮೈಸೂರು ಜಿಲ್ಲೆಯಲ್ಲಿ ಅಭಾವವಿಲ್ಲವೆಂದು ಗೊತ್ತಾಗುವುದೆಂದು ಹೇಳಿದರು. ನಿರ್ಣಯವನ್ನು ಓಟಿಗೆ ಹಾಕಲಾಗಿ ಅದು ಬಿದ್ದುಹೋಯಿತು.

ಉತ್ತರ ಪ್ರದೇಶದಲ್ಲಿ ಧಾನ್ಯದ ಕಟ್ಟೋಟ ಸಡಿಲ

ಉತ್ತರ ಪ್ರದೇಶದಲ್ಲಿ ಈ ದಿನದಿಂದ ಆಹಾರ ಧಾನ್ಯದ ಸಾಗಾಣಿಕೆಯ ಮತ್ತು ಬೆಲೆಯ ಕಟ್ಟೋಟೆಯನ್ನು ಸಡಿಲಗೊಳಿಸಲಾಗಿದೆ. ಸದ್ಯದಲ್ಲಿ ಸರ್ಕಾರದವರು ಧಾನ್ಯದ ವಸೂಲಿಯನ್ನು ನಿಲ್ಲಿಸುತ್ತಾರೆ.

○ ಅದೇ ಮೊಟ್ಟ ಮೊದಲಾಗಿ ಭಾರತದ ಅಂಚೆ ಇಲಾಖೆಯವರು ಕಬೀರ್, ತುಳಸೀದಾಸ್, ಮೀರಾ, ಗಾಲಿಬ್ ಮತ್ತು ಟಾಗೋರ್ ಮುಂತಾದ ಭಾರತದ ಕವಿಗಳ ಚಿತ್ರಗಳುಳ್ಳ ಹೊಸ ಅಂಚೆ ಸ್ಟಾಂಪುಗಳನ್ನು ಶೀಘ್ರದಲ್ಲೇ ಮುದ್ರಿಸಲಿರುವರೆಂದು ತಿಳಿದುಬಂದಿದೆ.

ಪ್ರಭುಗಳಿಂದ ಕೊಯ ಮತ್ತೂರು ಆಸ್ಪತ್ರೆ ಆರಂಭ

ಮೈಸೂರಿನ ಶ್ರೀಮನ್ಮಹಾರಾಜರು ನೆನ್ನೆ ಕೊಯಮತ್ತೂರಿನ ಮಹಿಳೆಯರ ಮತ್ತು ಮಕ್ಕಳ ಆಸ್ಪತ್ರೆಯನ್ನು ಆರಂಭಗೊಳಿಸಿದರು. ಅಲ್ಲಿನ ಕ್ಷಯ ರೋಗ ಆಸ್ಪತ್ರೆಯ ಸಾಧಾರಣ ವಾರ್ಡಿನ ಕಂಬ ಸ್ಥಾಪನೆಯನ್ನು ನೆನ್ನೆ ಪ್ರಭುಗಳು ನೆರವೇರಿಸಿದರು. ಅಲ್ಲದೆ ಛಾವಣಿ ಮತ್ತು ನೆಲದ ಹೆಂಚುಗಳ ಕಾರ್ಖಾನೆಯೊಂದನ್ನು ಆರಂಭಗೊಳಿಸಿದರು.

ಶ್ರೀಮನ್ ಮಹಾರಾಜರಿಗೆ ಅಲ್ಲಿನ ನಾಗರೀಕರು ಹೃತ್ಪೂರ್ವಕ ಸ್ವಾಗತವನ್ನು ಬಯಸಿದರು. ಮಹಿಳಾ ಆಸ್ಪತ್ರೆಯನ್ನು ತೆರೆಯುವಾಗ ಪ್ರಭುಗಳು ಈ ರೀತಿ ತಿಳಿಸಿದರು.—

ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಹೋಲಿಸಿದರೆ, ಭಾರತದಲ್ಲಿ ಮಕ್ಕಳು ಮತ್ತು ತಾಯಿಯರ ಮರಣ ಸಂಖ್ಯೆ ಹೆಚ್ಚಾಗಿರುವುದು ಮಹಿಳೆಯರಿಗೆ ಚಿಕಿತ್ಸೆ ಸೌಲಭ್ಯವಿಲ್ಲದಿರುವುದೇ ಇದಕ್ಕೆ ಕಾರಣ. ಸೂಲಗಿತ್ತಿಯವರ ತೊಂದರೆಯೇ ಒಂದು ಸಮಸ್ಯೆಯಾಗಿದೆ. ೧ ಲಕ್ಷ ಮಂದಿ ಸೂಲಗಿತ್ತಿಯರಾದರೂ ಭಾರತಕ್ಕೆ ಬೇಕು. ಈಗ ಶಿಕ್ಷಣ ಪಡೆದ ಸೂಲಗಿತ್ತಿಯರು ೫೦೦೦ ಮಾತ್ರವಿರುತ್ತಾರೆ.

ಈಗ ಯಾವ ಸರ್ಕಾರಗಳಿಗೇ ಆಗಲಿ ಇಂತಹ ಸೌಕರ್ಯಗಳನ್ನು ಏರ್ಪಡಿಸುವುದು ಶಕ್ಯಕ್ಕೆ ಅವಕಾಶವಿಲ್ಲ. ಜನ ಸಾಮಾನ್ಯರಲ್ಲಿರುವ ಧನವಂತರು ತಮ್ಮ ದೇಶಪ್ರೇಮ ಮತ್ತು ಸಹೋದರತ್ವಗಳನ್ನು ತೋರಿಸಿ, ಸಹಾಯಮಾಡುವುದು ಅಗತ್ಯವಾಗಿದೆ.

ಶಖೆಯಿಂದ ೧೫೬ ಅಮೆರಿಕನ್ನರ ಮರಣ

ಯೂರೋಪಿನಲ್ಲೂ, ಅಮೇರಿಕದಲ್ಲೂ ಶಖೆಯು ವಿಪರೀತವಾಗಿ ಹೆಚ್ಚಿರುವುದೆಂದು ವರದಿಯಾಗಿದೆ. ಕಳೆದ ನಾಲ್ಕು ದಿನಗಳಲ್ಲಿ ೧೫೬ ಅಮೆರಿಕನ್ನರು ತಾಪವನ್ನು ತಾಳಲಾರದೆ ಮೃತಪಟ್ಟಿರುವರೆಂದು ಹೇಳಲಾಗಿದೆ. ಇಂಗ್ಲೆಂಡಿನಲ್ಲಿ ಜನರು ಬೇಗೆಯನ್ನು ತಡೆಯಲಾರದೆ ಸಮುದ್ರ ತೀರಗಳ ಕಡೆಗೆ ಹೋಗುತ್ತಿರುವರೆಂದು ಹೇಳಲಾಗಿದೆ.

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಅಧ್ಯಕ್ಷರು

ಶ್ರೀ ಪಿ ಆರ್. ಬಾಲಕೃಷ್ಣರವರ ಸ್ಥಾನದಲ್ಲಿ ಶ್ರೀ ಎಸ್. ಮುನಿನಂಜಪ್ಪನವರನ್ನು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಧ್ಯಕ್ಷರಾಗಿ ನೇಮಿಸಲಾಗಿದೆ.

ಚಾಮುಂಡೇಶ್ವರಿ
ಟಾಕೀಸ್
2-7-52 ರಿಂದ ಅಮೋಘ ಪ್ರಾರಂಭ
* ಅಮ್ಮ *
(ತಮಿಳು)
ಪಾತ್ರ:- ಟಿ ಎಸ್ ಸರೋಜ,
ಲಲಿತಾ, ಪದ್ಮಿನಿ

ವಿಶ್ವಾಸ ನಿರ್ಣಯದ ಬಗ್ಗೆ ರಾಜಾಜಿಯವರ ಸ್ಪಷ್ಟೋಕ್ತಿ

ಮದ್ರಾಸಿನ ಶಾಸನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ಭಾಷಣ ಮಾಡಿ, ಸಭೆಗೆ ತಮ್ಮಲ್ಲಿ ವಿಶ್ವಾಸವಿರುವುದೇ ಅಥವಾ ಇಲ್ಲವೇ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಕೋರಿದರು. ವಿರೋಧ ಪಕ್ಷದವರಿಗೆ ತಾವು ಅಧಿಕಾರದಲ್ಲಿರುವುದು ಹಿಡಿಸದೆಂದೂ, ಅವರಿಗೆ ಬೇಕಾಗಿರುವುದು ಅರಾಜಕತೆ, ಅಶಾಂತಿ ಮತ್ತು ಅವ್ಯವಸ್ಥೆಯೆಂದೂ ಅವರು ಹೇಳಿ, ಒಂದು ವೇಳೆ ವಿರೋಧ ಪಕ್ಷದವರ ಮಾರ್ಗವನ್ನೆಲ್ಲಾ ತಾವು ಅಂಗೀಕರಿಸಿದರೂ ಸಹ ಅವರುಗಳು ತಮ್ಮ ತತ್ವಗಳನ್ನು ಬದಲಾಯಿಸುವರೇ ಹೊರತು ತಮಗೆ ಬೆಂಬಲವೀಯುವುದಿಲ್ಲವೆಂದು ಹೇಳಿದರು. ಆಡಳಿತ ನಡೆಸುವುದರಲ್ಲಿ ತಾವು ತುಂಬಾ ಕಷ್ಟಗಳನ್ನು ಅನುಭವಿಸುತ್ತಿರುವುದಾಗಿಯೂ, ಆಹಾರ ನೀತಿಯಲ್ಲಿ ಬದಲಾವಣೆ, ಮುಂತಾದ ಪ್ರಮುಖ ಕೆಲಸಗಳನ್ನು ತಾವು ಕೈಗೊಳ್ಳಬೇಕಾಗಿರುವುದೆಂದೂ, ದೇಶದ ಅಭ್ಯುದಯಕ್ಕಾಗಿ ಸಾಲವನ್ನು ಎತ್ತಬೇಕಾಗಿರುವುದೆಂದೂ, ಈ ಸಂದರ್ಭದಲ್ಲಿ ತಮ್ಮಲ್ಲೂ, ತಮ್ಮ ಮಂತ್ರಿಮಂಡಲದಲ್ಲೂ ಸಭೆಯ ವಿಶ್ವಾಸವಿರುವುದೇ ಎಂಬುದು ಸ್ಪಷ್ಟ ಪಡಬೇಕೆಂದೂ ಅವರು ಹೇಳಿದರು. ನಂತರ ರಾಜಾಜಿಯವರ ಮಂತ್ರಿಮಂಡಲದಲ್ಲಿ ವಿಶ್ವಾಸವನ್ನು ಸೂಚಿಸುವ ನಿರ್ಣಯವನ್ನು ಹಣಕಾಸಿನ ಮಂತ್ರಿ ಸುಬ್ರಹ್ಮಣ್ಯಂರವರು ಮಂಡಿಸಿದರು.

೯ ವರ್ಷಗಳ ನಂತರ ವಿಳಾಸ ತಲಪಿದ ಕಾರ್ಡು

ಮೈಸೂರು ರೈಲ್ವೆ ಟ್ರಾಫಿಕ್ ಮ್ಯಾನೇಜರ್ ರವರ ಆಫೀಸಿನಿಂದ ಚಿತ್ರದುರ್ಗದ ಶ್ರೀ ಕಾಶಿ ರಾಧಾಕೃಷ್ಣ ಶೆಟ್ಟರಿಗೆ ೧೨-೧೮-೪೩ ರಲ್ಲಿ ಹಾಕಲಾದ ಅಂಚೆ ಕಾರ್ಡೊಂದು ೫ ೬-೫೨ ರಲ್ಲಿ ವಿಳಾಸದಾರರ ಕೈಸೇರಿದ ಸುದ್ದಿ ವರದಿಯಾಗಿದೆ. ಆ ಕಾರ್ಡಿನ ಮೇಲೆ ೧೩-೧೦-೪೩ ರ ಮುದ್ರೆಯೂ ೪-೬-೫೨ ರ ಬೆಂಗಳೂರು ಪೇಟೆಯ ಮುದ್ರೆಯೂ ೫-೬ ೫೨ ರ ಚಿತ್ರದುರ್ಗದ ಮುದ್ರೆಯೂ ಇವೆಯೆಂದು ಹೇಳಲಾಗಿದೆ.

ಭಿಕ್ಷುಕರ ವಸತಿ ಗೃಹ

ನೆನ್ನೆ ದಿಲ್ಲಿ ರಾಜಧಾನಿಯ ದೇವರಾಜ ಪೋಲೀಸಿನವರು ನಗರದಲ್ಲಿ ೧೮ ಮಂದಿ ಭಿಕ್ಷುಕರನ್ನು ಹಿಡಿದು ಭಿಕ್ಷುಕರ ವಸತಿ ಗೃಹಕ್ಕೆ ಸೇರಿಸಿರುತ್ತಾರೆ.

ಒಲಂಪಿಯಾ
28-6-52 ರಿಂದ ಜನಭರಿತ ೩ನೇ ವಾರ
ಬ್ಯಾಂಜಿ ಟಾಕೀಜ್ ರವರ
ಮಾ MAA
ಪಾತ್ರ: ಶೀಲಾ ..., ಭರತ್ ಭೂಷಣ್
—: ಬೇಗನೆ ಪ್ರದರ್ಶನ :—
ರಾಜ್ ಕಪೂರ್ ಪಾತ್ರವಹಿಸಿರುವ
ಜಾರ್ಜ್ ಪತೇಚಾರ್

ಹೆಚ್ಚು ಆಹಾರ ಬೆಳೆ ಯೋಜನೆಯ ವಿಸ್ತರಣೆ

ದೇಶದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಯನ್ನು ಯಶಸ್ವಿಗೊಳಿಸುವ ಬಗ್ಗೆ ಸಲಹೆ ನೀಡಲು ಕೇಂದ್ರ ಸರ್ಕಾರದವರು ರಚಿಸಿದ್ದ ಕೃಷ್ಣಮಾಚಾರಿ ಸಮಿತಿಯವರು ಒಂದು ಕಾರ್ಯಕ್ರಮವನ್ನು ಸಿದ್ಧಪಡಿಸಿ, ಈ ಯೋಜನೆಯ ಹೆಸರನ್ನು "ಗ್ರಾಮಾಭಿವೃದ್ಧಿ ಯೋಜನೆ" ಎಂದು ಬದಲಾಯಿಸಬೇಕೆಂದೂ, ಗ್ರಾಮ ಜೀವನವನ್ನು ಉತ್ತಮಪಡಿಸಬೇಕೆಂದೂ ಮತ್ತು ಈ ಕಾರ್ಯದಲ್ಲಿ ಗ್ರಾಮಗಳ ಮುಖಂಡರ ನೆರವು ಪಡೆದು ಇದು ಯಶಸ್ವಿಯಾಗುವಂತೆ ಮಾಡಬೇಕೆಂದೂ ಸಲಹೆ ಮಾಡಿರುವರು. ಹೆಚ್ಚು ಧಾನ್ಯ ಬೆಳೆಯುವಂತೆ ರೈತರನ್ನು ಪ್ರೇರೇಪಿಸಲು ಸರ್ಕಾರದವರು ಆಹಾರದ ಕನಿಷ್ಠ ಬೆಲೆ ನಿಗದಿ ಮಾಡಿ ಭರವಸೆ ಕೊಟ್ಟು, ಪಂಚವಾರ್ಷಿಕ ಯೋಜನೆ ಮೀರಿ ಸಣ್ಣ ವ್ಯವಸಾಯ ಕಾರ್ಯಗಳಿಗಾಗಿ ಸಂಸ್ಥಾನಗಳಿಗೆ ಸಾಲ ಮಂಜೂರು ಮಾಡುವುದರ ಜೊತೆಗೆ ಮತ್ತೆ ೧೦ ಕೋಟಿ ರೂ ಗಳನ್ನು ಒದಗಿಸಬೇಕೆಂದು ಸೂಚಿಸಿರುವರು.

ನಂಜನಗೂಡು ಆಸ್ಪತ್ರೆಗೆ ಹೊಸ ವೈದ್ಯರು

ನಂಜನಗೂಡು ತಾಲ್ಲೂಕು ಸುತ್ತೂರಿನ ಆಸ್ಪತ್ರೆಯಲ್ಲಿ ನಾಲ್ಕು ವರ್ಷ ವೈದ್ಯರಾಗಿದ್ದ ಡಾ|| ಬಿ ಜಿ ಸಂಪತ್ ಕುಮಾರರನ್ನು ಮೈಸೂರಿಗೆ ವರ್ಗಾಯಿಸಿ, ಅವರ ಸ್ಥಾನದಲ್ಲಿ ಹುರದಲ್ಲಿದ್ದ ಡಾ|| ಆರ್ ಜೆ ಪಟೇಲರನ್ನು ನೇಮಿಸಲಾಗಿದೆ.

ಪಠ್ಯ ಪುಸ್ತಗಳಿಗೆ ಅಭಾವ

ಪ್ರಾಥಮಿಕ, ಮಾಧ್ಯಮ ಮತ್ತು ಪ್ರೌಢಶಾಲೆಗಳು ಈಗಾಗಲೇ ಪ್ರಾರಂಭವಾಗಿವೆ ಆದಾಗ್ಯೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಸರಿಯಾಗಿ ದೊರಕುತ್ತಿಲ್ಲ. ಪುಸ್ತಕ ವ್ಯಾಪಾರಿಗಳು ಅವು ಬಂದಿಲ್ಲವೆಂದು ಹೇಳುತ್ತಿರುವರು. ಆದರೆ ಅವುಗಳನ್ನು ಬಚ್ಚಿಡುತ್ತಿರುವರೆಂದೂ ಕಾಳಸಂತೆಯಲ್ಲಿ ತಮಗೆ ಬೇಕಾದವರಿಗೆ ಒದಗಿಸುತ್ತಿರುವರೆಂದೂ ಮಾತು ಕೇಳಿ ಬರುತ್ತಿದೆ. ಇದಕ್ಕೆ ಸರ್ಕಾರದವರು ಗಮನ ಕೊಟ್ಟು, ಕೂಡಲೇ ಸರಿಪಡಿಸುವುದು ಅಗತ್ಯ -ಎಂಬುದಾಗಿ ಎಂ ಸಿ ವರಸಿಂಹಯ್ಯನವರು ಬರೆದಿರುತ್ತಾರೆ.

SRI GAYATHRI
TALKIES
From 1-7-52 : For 2 Days
Daily 2 Shows
CAPTAIN CAREY
U. S. A.
With:-Allan Ladd
—: NEXT CHANGE :—
From 3-7-52
SILVER CITY

Edited, Printed and Published by A R. Nagarajan at Sadhvi Press, D. Subbiah Road, Mysore

ಪೇಟೆ ಧಾರಣೆ

ಮೈಸೂರು ೧

ರಾಜಧಾನಿಯ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ನೆನ್ನೆಯ ಪದಾರ್ಥಗಳ ಧಾರಣೆಗಳು ಈ ಕೆಳಗೆ ಕಂಡಂತಿದ್ದುವು:—

			ರಿಂದ	ರ
ನೆಲಗಡಲೆ ಪಲ್ಲಕ್ಕೆ	ರೂ		೯.೦.೦	೧೦-೩-೦
ಎಳ್ಳು	,,	,,	೫೫-೦.೦	೬೩.೧೪.೦
ಹೊಂಗೆಬೀಜ	,,	,,	೧೩-೪.೦	
ಹುರಳಿ	,,	,,	೩೯-೧೨-೦	
ಹೆಸರು	,,	,,	೩೩-೪-೦	೫೭ ೮-೭
ಉದ್ದು	,,	,,	೫೫ ೧೦ ೦	೩೫ ೩.೦
ಕಳಸಂದೆ	,,	,,	೪೭-೪-೦	೩೧-೧೨-೦
ಕೊಬ್ಬರಿ ಕಾಯಿ ಸುಲಿದ್ದು				
[illegible]	,,		೯ ೧೨ ೦	೧೧- ೨-೦
ಹುಣಸೇಹಣ್ಣು	,,		೩-೧೧ ೦	
ಸೀಗೇಕಾಯಿ	,,	,,	೩-೨ ೦	೩-೭.೦
ತೆಂಗಿನಕಾಯಿ ೧೦೦ಕ್ಕೆ			೩೪.೮.೦	೧೫೫.೦.೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಸಂಗೀತ ಎಚ್ ರಾಮಚಂದ್ರರಾವ್, ಮಧ್ಯಾಹ್ನ ೧ ೫೦ ಟಿ. ಚೂಡಾಮಣಿ ಕರ್ನಾಟಕ ಸಂಗೀತ, ೨ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ, ಸಂಜೆ ೫ ೪೦ ಸಂಗೀತ ಎಚ್ ರಾಮಚಂದ್ರರಾವ್, ೬ ೧೦ ಬಾಲ ಜಗತ್ ಮಕ್ಕಳ ಕಾರ್ಯಕ್ರಮ, ೭ ಹಿಂದಿ ಗೀತೆಗಳು ಕಮಲವರ್ಮ, ೮ ನಾಗಸ್ವರ ರಾಜಾರಾವ್, ೯ ೧೫ ಸಣ್ಣ ಕಥೆ, ೯.೩೦ ಚಿತ್ರ ಮೆಚ್ಚಿನ ಗೀತೆಗಳು

ಜಮ್ಮುವಿನಲ್ಲಿ ಹರತಾಳ

ಕಾಶ್ಮೀರದಲ್ಲಿ ರಾಜತ್ವವನ್ನು ತೆಗೆದು ಹಾಕಿರುವುದಲ್ಲದೆ, ಹೊಸ ಧ್ವಜವನ್ನು ಏರ್ಪಡಿಸಿಕೊಂಡಿರುವುದಕ್ಕೆ ಪ್ರತಿಭಟನೆಯನ್ನು ಸೂಚಿಸಲು ನೆನ್ನೆ ಜಮ್ಮುವಿನ ಜನರು ಸಾರ್ವತ್ರಿಕ ಹರತಾಳವನ್ನು ಆಚರಿಸಿದರು.

○ ಈ ವರ್ಷದಲ್ಲಿ ಅಮೆರಿಕದಿಂದ ಭಾರತವು ೬೬೦ ಲಕ್ಷ ಡಾಲರ್ ಮತ್ತು ಪಾಕಿಸ್ತಾನವು ೩೨೫ ಲಕ್ಷ ಡಾಲರ್ ಸಹಾಯವನ್ನು ಪಡೆಯಲಿರುವುವೆಂದು ವರದಿಯಾಗಿದೆ.

ಚಂದಾದಾರರಲ್ಲಿ ವಿನಂತಿ

"ಸಾಧ್ವಿ" ಪತ್ರಿಕೆಯ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿಯನ್ನು ಪಡೆಯಬೇಕೆಂದೂ, ರಶೀತಿ ಪಡೆಯದೆ ಕೊಟ್ಟ ಹಣಕ್ಕೆ ನಾವು ಜವಾಬ್ದಾರರಲ್ಲವೆಂದೂ ಈ ಮೂಲಕ ತಿಳಿಸುತ್ತೇವೆ.

ಪತ್ರಿಕೆಗಳು ತಲಪದಿದ್ದರೆ 792ನೇ ನಂಬರಿಗೆ (ಸಾಧ್ವಿ) ಟೆಲಿಫೋನ್ ಮಾಡಬೇಕೆಂದು ಕೋರಲಾಗಿದೆ.

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಪತ್ರಿಕೆ ಏಜೆಂಟರು,
ಮೈಸೂರು.

ಸಾಧ್ವಿ ಪತ್ರಿಕೆಯ
ಚಂದಾ ವಿವರ

ಸ್ಥಳಕ್ಕೆ— (ತಿಂಗಳಿಗೆ)	0-8-0
ಪರಸ್ಥಳಕ್ಕೆ (ಅಂಚೆ ಮೂಲಕ)	1-0-0
ಬಿಡಿ ಪ್ರತಿ — —	0-0-3

ಏಜೆಂಟರುಗಳ ಕಡೆಗಳಲ್ಲಿ ಚಂದಾ ತಿಂಗಳಿಗೆ ಎಂಟಾಣೆ ಮಾತ್ರ.
ಕೂಡಲೇ ಚಂದಾದಾರರಾಗಿರಿ

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೧] ಬುಧವಾರ ೨-೭-೫೨ [ಸಂಚಿಕೆ ೨೭೮

ಭದ್ರತಾ ಸಮಿತಿಗೆ ರಷ್ಯದ ಬಹಿಷ್ಕಾರವೇ ?

ಹೊಸ ಕೈಗಾರಿಕಾ ನ್ಯಾಯಾಲಯ

ಮೈಸೂರು ೨.

ಸಂಸ್ಥಾನದ ಕೈಗಾರಿಕಾ ನ್ಯಾಯಾಲಯವನ್ನು ಪುನರ್ರಚಿಸಿ ಸರ್ಕಾರದವರು ಈ ಕೆಳಗೆ ಕಂಡವರನ್ನು ಅದರ ಸದಸ್ಯರಾಗಿ ನೇಮಿಸಿರುತ್ತಾರೆ:—ನಿವೃತ್ತ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಬಿ ಆರ್. ರಾಮಲಿಂಗಯ್ಯ (ಅಧ್ಯಕ್ಷರು), ಬೆಂಗಳೂರಿನ ಶ್ರೀ ಕೆ. ಶ್ಯಾಮರಾಜ ಯ್ಯಂಗಾರ್ ಮತ್ತು ಮಾಜಿ ಮಂತ್ರಿ ಜ|| ಮಹಮದ್ ಷರೀಫ್

ಮೈಸೂರಿನಲ್ಲಿ ಮೋಟರ್ ಗೇಜ್ ರೈಲಿನ ಮುಖ್ಯ ಕಛೇರಿ

ಮೈಸೂರು ನಗರದಲ್ಲಿ ದಕ್ಷಿಣ ರೈಲ್ವೆಗಳ ಮೀಟರ್ ಗೇಜಿನ ಮುಖ್ಯ ಕಛೇರಿಯು ಇರುವುದೆಂದೂ, ಅದನ್ನು ಹುಬ್ಬಳ್ಳಿಗೆ ವರ್ಗಾಯಿಸುವ ಯೋಚನೆಯು ಸದ್ಯಕ್ಕಿಲ್ಲವೆಂದೂ, ಕೇಂದ್ರ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪಾರ್ಲಿಮೆಂಟಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿರುವರು

ಡಾ|| ಗೋಪಾಲಸ್ವಾಮಿಯವರಿಗೆ ವಿಶ್ವಸಂಸ್ಥೆ ವೇತನ

ಮಹಾರಾಜಾ ಕಾಲೇಜಿನ ನಿವೃತ್ತ ಮುಖ್ಯೋಪಾಧ್ಯಾಯರಾದ ಡಾ|| ಎಂ ವಿ ಗೋಪಾಲಸ್ವಾಮಿಯವರು ಮಕ್ಕಳ ಮನಶ್ಶಾಸ್ತ್ರದಲ್ಲಿ ಹೆಚ್ಚು ಪರಿಶ್ರಮ ಹೊಂದಲು ವಿಶ್ವ ಸಂಸ್ಥೆಯ ಆರೋಗ್ಯ ವೇತನವು ಅವರಿಗೆ ಕೊಡಲ್ಪಟ್ಟಿದೆ.

ಚಿನ್ನದ ಗಣಿಯಲ್ಲಿ ಮತ್ತೆ ಆಸ್ಫೋಟನೆ

ಕೋಲಾರ ಜಿಲ್ಲೆಯಲ್ಲಿರುವ ಚಾಂಪಿಯನ್ ರೀಫ್ ಚಿನ್ನದ ಗಣಿಯ ಕೆಳಗೆ ೫೭, ೮೭, ೮೮ನೇ ಮಟ್ಟಗಳಲ್ಲಿ ಮೊನ್ನೆ ಭಾರಿ ಆಸ್ಫೋಟನೆಯಾಗಿ ಒಬ್ಬನು ಸತ್ತನೆಂದೂ, ೯ ಜನರು ಪತ್ತೆಯಿಲ್ಲವೆಂದೂ ವರದಿಯಾಗಿದೆ ಇದಕ್ಕೆ ಸ್ವಲ್ಪ ಮುಂಚೆ ಉರಿಗಂ ಗಣಿಯಲ್ಲೂ ಸಿಡಿತ ಉಂಟಾಗಿ ಅಲ್ಲೂ ಒಬ್ಬನು ಸತ್ತು, ಇಬ್ಬರಿಗೆ ಗಾಯವಾಯಿತೆಂದು ಹೇಳಲಾಗಿದೆ ಚಾಂಪಿಯನ್ ಗಣಿಗಳಲ್ಲಿ ಕೆಲಸವು ನಿಂತುಹೋಗಿದೆ

ಬಂಡೀಪುರದಲ್ಲಿ ರಾಷ್ಟ್ರೀಯ ವನದ ಏರ್ಪಾಡು

ಕಾಡು, ಮೃಗಗಳ ರಕ್ಷಣೆಯ ಉದ್ದೇಶಕ್ಕಾಗಿ, ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಬಳಿ ಬಂಡೀಪುರದ ಕಾಡು ಪ್ರದೇಶದಲ್ಲಿ ರಾಷ್ಟ್ರೀಯ ವನವನ್ನು ನಿರ್ಮಿಸುವ ಆಲೋಚನೆಯು ಸರ್ಕಾರಕ್ಕೆ ಇರುವುದೆಂದು ಶಾಸನ ಸಭೆಯಲ್ಲಿ ನೆನ್ನೆ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ತಿಳಿಸಿರುತ್ತಾರೆ. ಕಾಡು ಮೃಗಗಳ ರಕ್ಷಣೆಯ ಸಮಸ್ಯೆಯು ಕೇಂದ್ರ ಸರ್ಕಾರದವರ ಗಮನದಲ್ಲಿರುವುದೆಂದೂ, ನಶಿಸಿಹೋಗುತ್ತಿರುವ ಈ ಆಸ್ತಿಯನ್ನು ಉಳಿಸಬೇಕಾದುದು ಅಗತ್ಯವೆಂದೂ, ಅದರಿಂದ ರೈತರಿಗೆ ತೊಂದರೆ ಇಲ್ಲವೆಂದೂ ಸಚಿವರು ಹೇಳಿರುವರು

ಕಳೆದ ಶನಿವಾರ ಚಿದಂಬರದಲ್ಲಿ ಶ್ರೀ ನಟರಾಜ ಸ್ವಾಮಿಯವರ ರಥೋತ್ಸವವು ನಡೆಯುತ್ತಿದ್ದಾಗ ೧೩ ವರ್ಷದ ಒಂದು ಹುಡುಗಿಯು ರಥದ ಚಕ್ರಕ್ಕೆ ಸಿಕ್ಕಿ ಮೃತಪಟ್ಟಳೆಂದು ವರದಿಯಾಗಿದೆ

ಭಾರತ ಆಹಾರ ರವಾನೆ ! ವೆಚ್ಚ ೫೦ ಕೋಟಿ !

ವಿದೇಶಗಳಿಂದ ಭಾರತಕ್ಕೆ ಕಳೆದ ಸಾಲಿನಲ್ಲಿ ಆಮದು ಮಾಡಿಕೊಂಡ ಆಹಾರಕ್ಕಾಗಿ ೫೦ ಕೋಟಿ ರೂ ಗಳ ಸಾಗಾಣಿಕೆ ವೆಚ್ಚವಾಗಿರುವುದೆಂದು ಹೇಳಲಾಗಿದೆ

ಧಾನ್ಯದ ವರ್ತಕರ ರಿಜಿಸ್ಟ್ರೇಷನ್ ವ್ಯವಸ್ಥೆ

ಕೇಂದ್ರ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ, ನೆನ್ನೆ ಆಹಾರದ ಮಂತ್ರಿ ರಫಿ ಅಹಮದ್ ಕಿದ್ವಾಯ್‌ರವರು ೫ ಕೋಟಿಗಳು ಅವಶ್ಯಕವೆಂದು ತಾವು ಭಾವಿಸಿದ್ದರೂ ಸಹ ಕಳೆದ ೧೦ ವರ್ಷಗಳಿಂದ ಇದ್ದ ಹತೋಟಿಗಳು ಜನರಿಗೆ ಸಹಾಯಕವಾಗಿಲ್ಲವೆಂದು ತಿಳಿಸಿದರು ಬಳಸುವವರ ಹಿತವನ್ನು ಗಮನಿಸಿ ಹಲವು ಪ್ರದೇಶಗಳಲ್ಲಿ ಹತೋಟಿಗಳನ್ನು ತೆಗೆಯಬೇಕಾಯಿತೆಂದು ಅವರು ಹೇಳಿ, ಇದರಿಂದ ಒದಗುವ ಅಪಾಯಗಳನ್ನು ಪರಿಹರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಭರವಸೆಯಿತ್ತರು ಧಾನ್ಯ ವಸೂಲಿಯ ಪದ್ಧತಿಯನ್ನು ಮುಂದುವರಿಸಿಕೊಂಡು ಬರುವುದಲ್ಲದೆ, ಹತೋಟಿಗಳು ಹೋದ ಕಡೆಗಳಲ್ಲಿ ಧಾನ್ಯದ ವರ್ತಕರೆಲ್ಲರೂ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವಂತೆ ಸರ್ಕಾರದವರು ಕ್ರಮ ಕೈಗೊಂಡಿರುತ್ತಾರೆಂದೂ, ಬೆಲೆಗಳು ಹೆಚ್ಚಿದರೆ ವರ್ತಕರಲ್ಲಿ ಇರುವ ದಾಸ್ತಾನುಗಳನ್ನು ವಶಪಡಿಸಿಕೊಂಡು ಅವನ್ನು ಫೇರ್‌ಪ್ರೈಸ್ ಅಂಗಡಿಗಳ ಮೂಲಕ ಮಾರಾಟ ಮಾಡಲಾಗುವುದೆಂದೂ ತಿಳಿಸಿದರು ವರ್ತಕರು ತಮ್ಮ ಬಳಿ ಇರುವ ದಾಸ್ತಾನು ಮತ್ತು ಮಾರಾಟ ಮಾಡಿದ ಧಾನ್ಯದ ಬಗ್ಗೆ ಲೆಕ್ಕ ಒಪ್ಪಿಸುವಂತೆಯೂ ಮಾಡಲಾಗುವುದೆಂದು ಅವರು ಹೇಳಿದರು

ಬಾಲ್ಗರವರಿಗೆ ಜೀವದಾನ

ಕಾರ್ಮಿಕನೊಬ್ಬನನ್ನು ಕೊಲೆ ಮಾಡಿದ ಸಂಬಂಧವಾಗಿ ಮರಣ ದಂಡನೆಗೆ ಗುರಿಯಾಗಿದ್ದ ಕೊಯಮತ್ತೂರು ಜಿಲ್ಲೆಯ ಕಮ್ಯೂನಿಸ್ಟ್ ಬಾಲ್ಗರವರ ಶಿಕ್ಷೆಯನ್ನು ಮದ್ರಾಸ್ ಸರ್ಕಾರದವರು ಜೀವಾವಧಿ ಶಿಕ್ಷೆಗೆ ಇಳಿಸಿರುತ್ತಾರೆ

ಭದ್ರತಾ ಸಮಿತಿಗೆ ರಷ್ಯನರ ಬಹಿಷ್ಕಾರ ?

ಕೊರಿಯಾದಲ್ಲಿ ಕ್ರಿಮಿ ಯುದ್ಧ ನಡೆಯುತ್ತಿರುವುದೆಂದು ತನ್ನ ಮೇಲೆ ಮಾಡಲಾಗಿರುವ ಆರೋಪಣೆಯನ್ನು ಕುರಿತು ತನಿಖೆ ನಡೆಸುವಂತೆ ಅಮೆರಿಕವು ಮಾಡಿರುವ ಸೂಚನೆಯನ್ನು ಭದ್ರತಾ ಸಮಿತಿಯು ಚರ್ಚೆಗೆ ತೆಗೆದುಕೊಂಡರೆ, ಅದಕ್ಕೆ ಬಹಿಷ್ಕಾರ ಹಾಕುವುದಾಗಿ ರಷ್ಯವು ಆ ಸಮಿತಿಗೆ ತಿಳಿಸಿರುತ್ತದೆ ತನಿಖೆಗಾಗಿ ಪಕ್ಷಪಾತ ರಹಿತ ಸಮಿತಿಯನ್ನು ನೇಮಿಸುವ ಯೋಜನೆಯನ್ನು ವಿಟೋ ಅಧಿಕಾರದ ಪ್ರಯೋಗಿಸಿ ತಿರಸ್ಕರಿಸುವುದಾಗಿಯೂ ರಷ್ಯವು ಸೂಚಿಸಿರುತ್ತದೆ

ಗೋಡೆ ಕುಸಿದು ಮೂರು ಮಕ್ಕಳ ಮರಣ

ಕೊಡೂರಿನಲ್ಲಿ ಕಳೆದ ೨೮ ನೇ ತಾ|| ಒಂದು ಮನೆಯ ಗೋಡೆಯು ಆಕಸ್ಮಿಕವಾಗಿ ಉರುಳಿ, ಮೇಲ್ಛಾವಣಿಯು ಕೆಳಗ ಬಿದ್ದ ಪರಿಣಾಮವಾಗಿ ಮೂರು ಮಕ್ಕಳು ಮಡಿದುವು ತಾಯಿ ತಂದೆಗಳಿಗೆ ಅಲ್ಪ ಸ್ವಲ್ಪ ಗಾಯಗಳಾದುವು ಅವರ ಹಿರಿಯ ಮಗನಿಗೆ ತೀವ್ರ ಪೆಟ್ಟುಗಳು ಬಿದ್ದು ಆಸ್ಪತ್ರೆಗೆ ಸಾಗಿಸಲಾಗಿದೆ

೩೦,೦೦೦ ವಿದ್ಯಾರ್ಥಿಗಳ ಮುಷ್ಕರ

ಅಹಮದಾಬಾದಿನ ಗುಜರಾತ್ ಕಾಲೇಜಿನಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ಕಳೆದ ೧೭ ದಿನಗಳಿಂದಲೂ ಅಲ್ಲಿನ ೧೫೦೦ ಮಂದಿ ವಿದ್ಯಾರ್ಥಿಗಳು ಮುಷ್ಕರವನ್ನು ಕೈಗೊಂಡಿದ್ದರು ಅವರಿಗೆ ಬೆಂಬಲ ನೀಡುವ ಸಲುವಾಗಿ ಅಲ್ಲಿನ ಇತರ ಶಾಲಾ ಕಾಲೇಜುಗಳ ೩೦,೦೦೦ ವಿದ್ಯಾರ್ಥಿಗಳು ನೆನ್ನೆ ಸಹಾನುಭೂತಿ ಮುಷ್ಕರವನ್ನು ಆಚರಿಸಿದರೆಂದು ತಿಳಿದುಬಂದಿದೆ

ಡಾ|| ಸ್ಪೀಕರ್ ಆಗಿ ಚನ್ನಿಗರಾಮಯ್ಯನವರ ಆಯ್ಕೆ

ಮಾಜಿ ಆರೋಗ್ಯಮಂತ್ರಿ ಶ್ರೀ ಆರ್ ಚನ್ನಿಗರಾಮಯ್ಯನವರು ಶಿರಿಯ ಶಾಸನಸಭಾ ಉಪಾಧ್ಯಕ್ಷತೆಗೆ ಆರಿಸಲ್ಪಟ್ಟಿರುತ್ತಾರೆ ಅವರಿಗೆ ೭೩ ಮತ್ತು ಪ್ರತಿಸ್ಪರ್ಧಿ ಶ್ರೀ ಎಂ ತಿಮ್ಮಲಿಂಗಯ್ಯನವರಿಗೆ ೧೯ ಓಟುಗಳು ಬಂದಿವೆ

ಆಹಾರ ಧಾನ್ಯಗಳ ಬಗ್ಗೆ ಸರ್ಕಾರಕ್ಕೆ ಆಗಿರುವ ನಷ್ಟ

ಮಂತ್ರಿಗಳ ವಿವರಣೆ

ಸ್ವಂ.ಸು.ಪ್ರೋ|] ಬೆಂಗಳೂರು ೨

ಈ ದಿವಸ ಶಾಸನ ಸಭೆಯಲ್ಲಿ ಆಹಾರ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಶ್ರೀ ಭೀಮಪ್ಪ ನಾಯಕರ ಪ್ರಶ್ನೆಗೆ ಉತ್ತರವಾಗಿ ಹೊರಗಿನಿಂದ ಆಮದಾದ ಅಕ್ಕಿಯಿಂದ ೧೪,೫೫,೦೦೦, ಗೋಧಿ ೩೩,೨೨,೦೦೦, ಕೆಂಪುಜೋಳ ೨೩,೧೦, ಸಾವಿರ ರೂ ಗಳೂ, ಸ್ಥಳೀಯವಾಗಿ ಕೊಂಡ ಧಾನ್ಯಗಳಿಂದ ಒಟ್ಟು ೯೦ ಲಕ್ಷ ರೂ. ಗಳೂ ಇದುವರೆಗೆ ಸರ್ಕಾರಕ್ಕೆ ನಷ್ಟವಾಗಿರುವುದೆಂದು ತಿಳಿಸಿದರು

ಚಿನ್ನದ ಗಣಿಗಳ ಕಂಪೆನಿಗೂ ಸರ್ಕಾರಕ್ಕೂ ಆಗಿರುವ ಒಪ್ಪಂದವು ರಹಸ್ಯವಾಗಿರುವುದರಿಂದ ಅದರ ಬಗ್ಗೆ ವಿವರಗಳನ್ನು ಕೊಡಲಾಗುವುದಿಲ್ಲವೆಂದು ಮತ್ತೊಂದು ಪ್ರಶ್ನೆಗೆ ಉತ್ತರ ಕೊಡಲಾಯಿತು

ಕುಮಾರಾ ಪಾರ್ಕ್ ಭವನವನ್ನು ಸಜ್ಜುಗೊಳಿಸಲು ೪ ಸಾವಿರ ರೂ ಗಳನ್ನು ವೆಚ್ಚ ಮಾಡಲಾಯಿತೆಂದು ತಿಳಿಸಲಾಯಿತು

ಸಿಬ್ಬಂದಿ ಮೋಟಾವನ್ನು ಈಗಾಗಲೇ ಸರ್ಕಾರದವರು ಮಾಡಿರುವರೆಂದೂ ಅವಶ್ಯಕ ಬಿದ್ದೆಡೆ ಇನ್ನೂ ಮಾಡಲಾಗುವುದೆಂದೂ 'ಮೋಟಾವು ಕೆಳ ನೌಕರರಿಗೇ ಅಲ್ಲದೆ ದೊಡ್ಡ ಅಧಿಕಾರಿಗಳಿಗೂ ಅನ್ವಯಿಸಿರುವುದೆಂದೂ ತಿಳಿಸಲಾಗಿದೆ

ನಂತರ ಮೋಟಾ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು ಜ|| ಇಮಾಂರವರು ಸಂಚಾರ ವ್ಯವಸ್ಥೆ ಸಂಬಂಧವಾಗಿ ಮೋಟಾ ನಿರ್ಣಯದ ಮೇಲೆ ಭಾಷಣ ಮಾಡಿ, ಸರ್ಕಾರದವರು ಎಲ್ಲ ಹುದ್ದೆಗಳಿಗೂ ಕಾಂಗ್ರೆಸ್ಸಿನವರನ್ನೇ ನೇಮಿಸಿ "ಲೂಟಿ" ಮಾಡುತ್ತಿರುವರೆಂದು ಆಪಾದಿಸಿದರು ಇದನ್ನು ಶ್ರೀ ಎ. ಎನ್ ಸ್ವನಾಯಕರು ತೀವ್ರವಾಗಿ ಪ್ರತಿಭಟಿಸಲು, ಆ ಶಬ್ದವನ್ನು ಜ|| ಇಮಾಂರವರು ವಾಪಸು ತೆಗೆದುಕೊಂಡರು

ರಾಮನಾಡಿನ ೧೪ ಜನ ಕಮ್ಯೂನಿಸ್ಟರಿಗೆ ಶಿಕ್ಷೆ

ಹಿಂಸೆ ಮತ್ತು ಭಯೋತ್ಪಾದಕ ಕ್ರಮಗಳಿಂದ ಸರ್ಕಾರವನ್ನು ಉರುಳಿಸುವ ಪಿತೂರಿ ಸಂಬಂಧವಾದ ಮೊಕದ್ದಮೆಯಲ್ಲಿ ರಾಮನಾಡಿನ ೫೫ ಜನ ಕಮ್ಯೂನಿಸ್ಟರ ಪೈಕಿ ೧೪ ಮಂದಿಗೆ ೩ ರಿಂದ ೫ ವರ್ಷಗಳ ಶಿಕ್ಷೆಯನ್ನು ವಿಧಿಸಲಾಗಿದೆ ೩೭ ಜನರನ್ನು ಖುಲಾಸೆ ಮಾಡಲಾಗಿದೆ ಹತ್ತು ಜನರಿಗೆ ಕಠಿಣ ೧ ವರ್ಷ ಶಿಕ್ಷೆ ವಿಧಿಸಲಾಗಿದೆ

ಹರಿಕಥೆಗಳು

ರಾಜಧಾನಿಯ ಚಾಕಲ್ಮನ ಗುಡಿ ಬೀದಿಯಲ್ಲಿರುವ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಬೆಂಗಳೂರಿನ ಶ್ರೀ ಪಿ ರಾಮಸ್ವಾಮಿ ನಾಯುಡುರವರಿಂದ ಈ ಸಂಜೆ ೭ ಘಂಟೆಗೆ ಕಳೆದಮದುಂತಿ ಎಂಬ ಹರಿಕಥೆಯೂ, ನಾಳೆ ಸಂಜೆ ರುಕ್ಮಾಂಗದ, ಶುಕ್ರವಾರ ಸತಿ ಸುಕನ್ಯ ಮತ್ತು ಶನಿವಾರ ಶನಿ ಮಹಾತ್ಮ ಕಥೆಗಳೂ ನಡೆಯಲೇರ್ಪಾಡಾಗಿದೆ

ಪೌರಸಭೆಯ ಅಧಿವೇಶನ

ಮೈಸೂರು ೧

ಪೌರಸಭೆಯ ಸಾಮಾನ್ಯ ಅಧಿವೇಶನವು ನೆನ್ನೆ ನಡೆಯಿತು ಶ್ರೀ ಪಿ ಡಿ. ಕೃಷ್ಣಸ್ವಾಮಿಯವರು ಮಾತನಾಡಿ ನಂಜನಗೂಡಿನಲ್ಲಿ ತಲೆದೋರಿರುವ ಕಾಲರಾ ಉಪದ್ರವವು ಮೈಸೂರಿಗೆ ಹರಡದಂತೆ ನೋಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡಿದರು ಈಗಾಗಲೇ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿರುವುದೆಂದು ಆರೋಗ್ಯಾಧಿಕಾರಿಗಳು ತಿಳಿಸಿದರು ಶ್ರೀ ಎಸ್ ಲಿಂಗಣ್ಣನವರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ ನೇಮಿಸಲ್ಪಟ್ಟ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವನ್ನು ಮಾಡಲಾಯಿತು ಕೃಷ್ಣಮೂರ್ತಿ ಪುರದಲ್ಲಿರುವ ಬಲ್ಲಾಳ್ ಮೊಟೇಲು ಬಳಿ ಇರುವ ಶಾಲೆಗಳ ಹತ್ತಿರ ವಾಹನಗಳನ್ನು ನಿಧಾನವಾಗಿ ಬಿಡುವಂತೆ ಸೂಚಿಸುವ ಎಚ್ಚರಿಕೆ ಬೋರ್ಡುಗಳನ್ನು ಹಾಕಬೇಕೆಂದು ನಿರ್ಣಯಿಸಲಾಯಿತು

ನಗರಾಭಿವೃದ್ಧಿ ಸಮಿತಿಯಲ್ಲಿ ಶ್ರೀ ಎಸ್ ಲಿಂಗಣ್ಣನವರ ಸ್ಥಾನಕ್ಕೆ ಚುನಾವಣೆ ನಡೆದು ಶ್ರೀ ಟಿ ವೆಂಕಟರಮಣಯ್ಯನವರು ಆರಿಸಲ್ಪಟ್ಟರು

ನಗರಾಭಿವೃದ್ಧಿ ಸಮಿತಿಗೆ ಪ್ರತ್ಯೇಕ ಅಧ್ಯಕ್ಷರನ್ನು ನೇಮಿಸುವುದು ಸರಿಯಾಗಬೇಕೆಂದು ಶ್ರೀ ಬಿ ಜಿ. ದಾಸರು ತಂದ ನಿರ್ಣಯಕ್ಕೆ ಅನುಮೋದಕರು ದೊರೆಯದೆ ಅದು ಬಿದ್ದು ಹೋಯಿತು

ಉಪನ್ಯಾಸ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಆಂಡಾಳ್ ಮಂದಿರದಲ್ಲಿ ಈ ಸಂಜೆ ೬ ಘಂಟೆಗೆ ಶ್ರೀ ಎ ಸೂರ್ಯನಾರಾಯಣ ಪಂಡಿತರು ಪುಣ್ಯ ಕ್ಷೇತ್ರಗಳು ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ನಾಳೆ ಸಂಜೆ ೬ಕ್ಕೆ ಶ್ರೀ ಎ ವಾಸುದೇವಯ್ಯನವರು ಧ್ರುವ ವಿಜಯ ಎಂಬ ಹರಿಕಥೆಯನ್ನು ಮಾಡುವರು

ವಿವಾಹ ಮಹೋತ್ಸವ

ನಂಜನಗೂಡಿನಲ್ಲಿರುವ ನರಸೀಪುರದ ಕೃಷ್ಣಶಾಸ್ತ್ರಿಗಳವರ ಮಕ್ಕಳು ಶ್ರೀ ಚಂದ್ರಶೇಖರ ಶಾಸ್ತ್ರಿಗಳವರು ತಮ್ಮ ಜ್ಯೇಷ್ಠ ಪುತ್ರಿ ಚಿ|| ಸೌ|| ವಿಶಾಲಾಕ್ಷಮ್ಮನವರನ್ನು ರಾಜಧಾನಿಯ ಕಾಲೇಜು ರಸ್ತೆಯಲ್ಲಿರುವ ಬಾಳೇ ತೋಟದ ವೆಂಕಟರಮಣಯ್ಯರ್‌ರವರ ಮಕ್ಕಳು ಶ್ರೀ ಶ್ರೀನಿವಾಸ ಅಯ್ಯರ್‌ರವರ ನಾಲ್ಕನೇ ಪುತ್ರ ಚಿ|| ವಿಶ್ವೇಶ್ವರನಿಗೆ ಕೊಟ್ಟು ಈ ದಿನ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

ಆಭರಣದ ಆಸೆಯಿಂದ ಸನ್ಯಾಸಿಯ ಕೊಲೆ

ಕುಂಭಕೋಣದ ಬಳಿ ಚಂದ್ರಶೇಖರಪುರ ಎಂಬಲ್ಲಿ ಕಳೆದ ೬೦ ವರ್ಷಗಳಿಂದಲೂ ವಾಸವಾಗಿದ್ದ, ಮೌನ ವ್ರತಧಾರಿಯಾದ ೭೭ ವರ್ಷದ ಬ್ರಹ್ಮೇಂದ್ರ ಸ್ವಾಮಿಜಿ ಎಂಬ ಒಬ್ಬ ಸನ್ಯಾಸಿಯನ್ನು ಯಾರೋ ದುರಾತ್ಮರು ಚೂರಿಯಿಂದ ಇರಿದು ಅವರ ಕೊರಳಿನಲ್ಲಿದ್ದ ಬಂಗಾರದ ಸರ ಮತ್ತು ಕೈಯುಂಗುರಗಳನ್ನು ಅಪಹರಿಸಿರುವರೆಂದು ವರದಿಯಾಗಿದೆ

ಕನ್ನಂಬಾಡಿಯಲ್ಲಿ ದಳ್ಳಾಳಿಗಳಿಂದ ಅಕ್ಕಿ ಕೊಳ್ಳುವಿಕೆ

ಕನ್ನಂಬಾಡಿ ಸಂತೆಯಲ್ಲಿ ಮೊನ್ನೆ ಈ ಬಾರಿ ಹಲವು ದಳ್ಳಾಳಿಗಳು ಸಂತೆಗೆ ತರಲಾಗಿದ್ದ ಅಕ್ಕಿಯೆಲ್ಲವನ್ನೂ ಪಲ್ಲಗಟ್ಟಲೆ ಕೊಳಿಸಿಕೊಂಡರು ಜನ ಸಾಮಾನ್ಯರಿಗೆ ಇದರಿಂದ ರೂ ೧ಗೆ ೧|| ಸೇರಿನಂತೆ ಅಕ್ಕಿ ಸಿಗುವುದು ದುಸ್ತರವಾಯಿತು ದಳ್ಳಾಳಿಗಳು ಕೊಳ್ಳದಂತೆ ಸರಕಾರದವರು ಏರ್ಪಡಿಸಬೇಕೆಂದು ರಾಜಧಾನಿಯ ಶ್ರೀ ಎಂ ಎ ಲಕ್ಷ್ಮಯ್ಯನವರು ಬರೆದಿರುತ್ತಾರೆ

ಉತ್ತರ ಪ್ರದೇಶದಲ್ಲಿ ಪದಿತರ ರ ಪಟ್ಟಿ

[illegible] ಗರ್ಗ [illegible] ಪದಿತರನ್ನು [illegible] ರುತ್ತಾರೆ [illegible] ವ ಸ್ಥಿರ ಘಟ್ಟ ಇದ್ದಂತೆ ಮಾಡಲು ಅವಕಾಶವೀಯಲಾಗಿದೆ

ಹರಿಕಥೆ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಗೀತಾ ಪ್ರಚಾರಿಣಿ ಸಭೆಯಲ್ಲಿ ನಾಳೆ ರಾತ್ರಿ ೧೦ ಘಂಟೆಗೆ ಪ್ರಥಮ ಏಕಾದಶಿ ನಿಮಿತ್ತ ವೇ|| ಗಮಕಿ ನಾರಾಯಣ ಕೃಷ್ಣ ಶಾಸ್ತ್ರಿಯವರಿಂದ ಅಕ್ರೂರ ಭಕ್ತಿ ಎಂಬ ಹರಿಕಥೆಯು ಏರ್ಪಾಡಾಗಿದೆ. ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ

ತಖ್ತ್‌ಮಲ್ ಜೈನರ ರಾಜೀನಾಮೆ

ಮರು ಚುನಾವಣೆಯಲ್ಲೂ ಮಧ್ಯಭಾರತ ಶಾಸನ ಸಭೆಗೆ ಆರಿಸಲ್ಪಡದೇ ಹೋದ ಅಲ್ಲಿನ ಮಾಜಿ ಮುಖ್ಯ ಮಂತ್ರಿ ತಖ್ತ್‌ಮಲ್ ಜೈನರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವರು

ಜಯಪುರದ ಕೋರ್ಟಿನಲ್ಲಿ ಮಾರ್ವಾಡಿಯ ಕೊಲೆ

ಜಯಪುರದಲ್ಲಿ ಒಬ್ಬ ಮಾರ್ವಾಡಿಯವನ ಪತ್ನಿಯೊಡನೆ ಮತ್ತೊಬ್ಬನು ಅಕ್ರಮ ಸಂಪರ್ಕವನ್ನು ಹೊಂದಿದ್ದನೆಂಬ ಆಪಾದನೆ ಮೇಲೆ ವಿಚಾರಣೆಗೆ ಗುರಿಪಡಿಸಲ್ಪಟ್ಟು ಮೊನ್ನೆ ಮೊಕದ್ದಮೆ ನಡೆಯುತ್ತಿದ್ದ ವೇಳೆಯಲ್ಲಿ ವಾದಿ ಪ್ರತಿವಾದಿಗಳಿಗೆ ಮಾತು ಬೆಳೆದು ವಾದಿಯು ಆಪಾದಿತನನ್ನು ಚೂರಿಯಿಂದ ಇರಿದ ಪರಿಣಾಮವಾಗಿ ಅವನು ಮೃತಪಟ್ಟನೆಂದು ವರದಿಯಾಗಿದೆ ಹಂತಕನನ್ನು ಪೋಲೀಸರು ಬಂಧಿಸಿರುವರು

ಈಜಿಪ್ಟಿನಲ್ಲಿ ೧೪ ಜನರುಳ್ಳ ಹೊಸ ಮಂತ್ರಿಮಂಡಲ

ಈಜಿಪ್ಟಿನ ಹೊಸ ಪ್ರಧಾನಿ ಹುಸ್ಸೇನ್ ಸಿರ್ರಿ ಪಾಷಾರವರು ೧೪ ಜನರುಳ್ಳ ಮಂತ್ರಿಮಂಡಲವನ್ನು ರಚಿಸಿರುವರು

ಸಂಸ್ಥಾನದ ಹೊಸ ಅಕೌಂಟೆಂಟ್ ಜನರಲ್

ಒರಿಸ್ಸಾ ಪ್ರಾಂತದಲ್ಲಿ ಅಕೌಂಟೆಂಟ್ ಜನರಲ್ ಆಗಿರುವ ಶ್ರೀ ಬಿ ಟಿ [illegible] ಅಯ್ಯಂಗಾರ್ಯರನ್ನು ಮೈಸೂರು ಸಂಸ್ಥಾನದ ಅಕೌಂಟೆಂಟ್ ಜನರಲ್ಲರಾಗಿ ಭಾರತ ಸರ್ಕಾರದವರು ವರ್ಗಾಯಿಸಿರುವರೆ. ಇಲ್ಲಿದ್ದ ಶ್ರೀ ಗುಪ್ತರವರನ್ನು ಉತ್ತರ ರೈಲ್ವೆಗಳ ಚೀಫ್ ಆಡಿಟರಾಗಿ ವರ್ಗಾಯಿಸಲಾಗಿದೆ ಶ್ರೀ ಬಿ ಕೆ ತಿರುನಾರಾಯಣ ಅಯ್ಯಂಗಾರ್ಯರು ಹಿಂದೆ ಸಂಸ್ಥಾನದಲ್ಲಿ ಜಿಲ್ಲಾ ನ್ಯಾಯಾಧೀಶರಾಗಿದ್ದ ಡಾ|| ಬಿ ಕೃಷ್ಣಸ್ವಾಮಿ ಅಯ್ಯಂಗಾರ್ಯರ ಮಕ್ಕಳು

ಪೇಟೆ ಧಾರಣೆ

ಮೈಸೂರು ೨

ರಾಜಧಾನಿಯ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ನೆನ್ನೆಯ ಪದಾರ್ಥಗಳ ಧಾರಣೆಗಳು ಈ ಕೆಳಗೆ ಕಂಡಂತಿದ್ದುವು —

		ಪಲ್ಲಕ್ಕೆ ರೂ, [illegible]	ಗೆ
ನೆಲಗಡಲೆ	,	೧೭ ೦ ೦	೧೬-೧೨-೦
ಎಳ್ಳು	,,	೩೪-೮-೦	೩೬-೫-೦
ಹುರುಳಿ	,	೩೯ ೧೨ ೦	
ಹೆಸರು	,,	೫೭-೪-೦	೫೬ ೮
ಅವರೆ	,	೫೯-೨ ೦	
ಉದ್ದು		೫೪-೧೪ ೦	೫೮ ೧೪-೦
ಹಲಸಂದೆ	,	೪೩ ೨ ೦	೫೬ ೦ ೦
ಮೆಣಸಿನ ಕಾಯಿ ಪುಡಿ	,,	೫೨ ೦	೧೫-೨ ೦
ಹುಣಸೇಹಣ್ಣು	,,	೩ ೧೦ ೦	
ಸೀಗೇಕಾಯಿ	,,	೫-೧೨ ೦	೬-೬-೦
ತೆಂಗಿನಕಾಯಿ ೧೦೦ಕ್ಕೆ		೫೯-೦	[illegible] ೦ ೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೨೦ ಮತ್ತು ಮಧ್ಯಾಹ್ನ ೨ ಟಿ ಆರ್ ಚಂದ್ರಶೇಖರ ತಂಡದವರು [illegible] ೧ ೪೦ ರಿಂದ ೧ ೫೦ [illegible] ಸಿಪ್ಪಿ [illegible] ಸಂಗೀತ, ಸಂಜೆ ೫ ೪೦ ಮತ್ತು ೭ ೨೦ [illegible] ಸಂಗೀತ [illegible] ಕನ್ನಡ ಗೀತೆಗಳು [illegible] ಸಂಗೀತ [illegible] ಸಂಗೀತ [illegible] ಭಜನ ಗಾನ [illegible] ಎಸ್ ಕಲ್ಲಿಪಳ್ಳಿ ಅಯ್ಯಂಗಾರ್ ಸಂಗೀತ [illegible] ರಾಗಿಣೀ

ಇಂಜನ್ನಿಗೆ ಗೂಡ್ಸ್ ಗಾಡಿ ಡಿಕ್ಕಿಯಿಂದ ಒಬ್ಬನ ಮರಣ

ಉತ್ತರ ಭಾರತದ ಚಿತ್ತರಪುರ ರೈಲ್ವೆ ಸ್ಟೇಷನ್ನಿನಲ್ಲಿ ಮೊನ್ನೆ ಮದ್ರಾಸು ಮೇಲು ಗಾಡಿಯ ಇಂಜನ್ನು ನೀರನ್ನು ತೆಗೆದುಕೊಳ್ಳುತ್ತಿದ್ದಾಗ ಆ ವ್ಯಾಗನ್ನುಗಳು ಅದಕ್ಕೆ ಡಿಕ್ಕಿ ಹೊಡೆದುದರ ಪರಿಣಾಮವಾಗಿ ಒಬ್ಬನು ಮಡಿದು ಮತ್ತೊಬ್ಬನಿಗೆ ಗಾಯವಾಗಿದೆ ಮುಂಚಿತವಾಗಿ ಹೊರಟ ಗೂಡ್ಸ್ ಗಾಡಿಯು ಮಾರ್ಗ ಮಧ್ಯದಲ್ಲಿ ಎರಡು ಭಾಗವಾಗಿ ಅದರ ಎಂಟು ವ್ಯಾಗನ್ನುಗಳು ಹಿಂದಕ್ಕೆ ಹೋದುದರಿಂದ ಈ ಘಟನೆ ಸಂಭವಿಸಿತೆಂದು ಹೇಳಲಾಗಿದೆ

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
3 7-52 ರಿಂದ :: ಅಮೋಘ 2ನೇ ವಾರ
* ಹರಿದಾಸ್ *
11-7-52 ನೇ :: ಶುಕ್ರವಾರದಿಂದ
ಜೆಮಿನಿ ಯವರ ಮೂವರು ತನಯರು ಮೂವರು ಮಕ್ಕಳು

ಮೈಸೂರು ಟ್ರಾನ್ಸಿಟ್ ಸರ್ವಿಸ್
ರಮಾವಿಲಾಸ ರಸ್ತೆ ಮೈಸೂರು ಫೋನ್ ನಂ ೨47
ಮೈಸೂರು ಮತ್ತು ಮದರಾಸುಗಳ ನಡುವೆ
ನಮ್ಮ ಏಜೆಂಟರಾದ ಮೆಸರ್ಸ್ ಮದ್ರಾಸು-ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ಮೂಲಕ ಸುವ್ಯವಸ್ಥಿತ ರೀತಿಯಲ್ಲಿ ಸರಕುಗಳನ್ನು ರವಾನಿಸುವ ಸಂಸ್ಥೆ
ಮಾಲೀಕರು—ಮೆ|| ತೀರ್ಥ ಅಂಡ್ ಕಂಪೆನಿ
ಸಂಗ್ರಹ ಶಾಖೆ ಮೆಸರ್ಸ್ ಎಸ್. ಎಸ್. ಪದಕಿ,
ಹನುಮಂತ ರಾವ್ ರಸ್ತೆ (ಪ್ರಭಾ ಟಾಕೀಸ್ ಹತ್ತಿರ) ಮೈಸೂರು

CITY TUTORIAL COLLEGE
Near V V Market Mysore
‡ CLASSES WORKING
B Sc ,-P. C M
INTER-Eng , P C M & C.B Z.
‡ COACHING CLASS FOR
INTER-KANNADA-Sept 52
STARTS ON 6 7-52
‡ Admissions Received for
B A & B Sc ENGLISH
Sept. & March Exams.

ಚಾಮುಂಡೇಶ್ವರಿ ಟಾಕೀಸ್
2-7-52 ರಿಂದ ಅಮೋಘ ಪ್ರಾರಂಭ
* ಅಮ್ಮ *
(ತಮಿಳು)
ಪಾತ್ರ - ಟಿ ಎಸ್ ಸರೋಜ,
ಲಲಿತಾ, ಪದ್ಮಿನಿ

SRI GANESH
TALKIES
From 3-7-52 For 2 Days
TRAPPED
With -Lloyd Bridges &
Barbara Payton
From 5-7-52
Somerset Maugham's
TRIO

Edited, Printed and Published by A R Nagarajan at Sadhvi Press, D Subbiah Road, Mysore.

ಸಂಪುಟ ೧೦] ಗುರುವಾರ ೩-೩-೫೧ [ಸಂಚಿಕೆ ೨೬೬

ಕೊರಿಯಾ ಯುದ್ಧದಲ್ಲಿ - ಚೀಣರ ನಿರುತ್ಸಾಹ -

ಮಾರಾಟ ತೆರಿಗೆ ವಿಧಾನವು ಮುಂದುವರಿಯುವುದು

ಶಾಸನ ಸಭೆಯಲ್ಲಿ ಮಂತ್ರಿಗಳ ಹೇಳಿಕೆ

ಬೆಂಗಳೂರು ೩

ಕೋರಾ ನಿರ್ಣಯದೊಂದಿಗೆ ಸಂಬಂಧ ವಾಗಿ ಉತ್ತರಕೊಡುತ್ತಾ ಅರ್ಥ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ಕರ ಮಾರಾಟ ತೆರಿಗೆ ವಿಧಾನದ ಈಗಿನ ಪದ್ಧತಿಯು ಮುಂದುವರಿಯುವುದೆಂದು ಹೇಳಿದರು. ಮಾರಾಟ ತೆರಿಗೆಯ ಪ್ರಶ್ನೆಯನ್ನು ಸರ್ಕಾರದವರು ಅನುಭವಪೂರ್ವಕವಾಗಿ ಪರಿಶೀಲಿಸುತ್ತಿರುವುದಾಗಿಯೂ, ಈ ಸಂಬಂಧ ವಾಗಿ ನೇಮಕವಾದ ಸಮಿತಿಯು ಅವು ಗಳ ವಿಧಿಸುವ ರೀತಿಯನ್ನು ಮುಂದುವರಿಸುವಂತೆ ಶಿಫಾರಸು ಮಾಡಿರುವುದಾಗಿಯೂ ಅವರು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರುಗಳ ಅವಧಿ ಹೆಚ್ಚಳ

ವಿವಿಧ ಜಿಲ್ಲೆಗಳ ಪಬ್ಲಿಕ್ ಪ್ರಾಸಿಕ್ಯೂಟರುಗಳ ಅವಧಿಯನ್ನು ಸರ್ಕಾರದವರು ಇದೇ ೧ನೇ ತಾರೀಖಿನಿಂದ ಒಂದು ವರ್ಷಕಾಲ ಹೆಚ್ಚಿಸಿರುವರು ತುಮಕೂರಿನ ಪಬ್ಲಿಕ್ ಪ್ರಾಸಿಕ್ಯೂಟ ರಾಗಿ ಶ್ರೀ ಕೆ ಭೀಮಯ್ಯನವರನ್ನು ನೇಮಿಸಲಾಗಿದೆ

ರೈಲಿಗೆ ಸಿಕ್ಕಿ ಆತ್ಮಹತ್ಯೆ

ಮದ್ರಾಸಿನ ಎಕ್ಸ್‌ಪ್ರೆಸ್ ರೈಲುಗಾಡಿಯು ನೆನ್ನೆ ಬೆಂಗಳೂರು ನಗರದ ಸ್ಟೇಷನ್ನಿಗೆ ತಲುಪಿ, ಪ್ರಯಾಣಿಕರು ಇಳಿದುಹೋದ ಮೇಲೆ ಅದನ್ನು ಶೆಡ್ಡಿಗೆ ಕೊಂಡೊಯ್ಯುತ್ತಿದ್ದಾಗ ಸುಮಾರು ೭೦ ವರ್ಷದ ವೃದ್ಧನೊಬ್ಬನು ಚಕ್ರಕ್ಕೆ ತಲೆ ಕೊಟ್ಟು ಮೃತಪಟ್ಟನೆಂದು ವರದಿಯಾಗಿದೆ ಗುರುತೂ ಸಹ ಸಿಗದಂತೆ ಅವನ ಮುಖವು ಜಜ್ಜಿಹೋಗಿದೆ

ಸಕ್ಕರೆ ಕಂಪೆನಿ ಮತ್ತು ಬಿ. ಟಿ. ಸಿ. ಅಧ್ಯಕ್ಷರುಗಳಿಗೆ ವೇತನಾಸ

ಮಂಡ್ಯದ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಶ್ರೀ ಎ ಜಿ ಬಂಡೀಗೌಡರಿಗೂ, ಬೆಂಗಳೂರು ಬಿ ಟಿ ಸಿ ಕಂಪೆನಿಯ ಅಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂ ಅಯ್ಯಂಗಾರ್ ಮಾಧವರಾಯರಿಗೂ ಮತ್ತೆ ರಡು ವರ್ಷದ ಜೀವದಾನ ಕೊಡಲಾಗಿ ದೆಯೆಂದು ವರದಿಯಾಗಿದೆ

ಯೂರೋಪ್ ವಿದ್ಯುತ್ ಕೇಂದ್ರಗಳ ಪೂರ್ಣ ನಾಶ

ಕೊರಿಯಾದ ಯಾಲೂನದಿಯಲ್ಲಿರುವ ೧೩ ವಿದ್ಯುಚ್ಛಕ್ತಿ ಕೇಂದ್ರಗಳನ್ನೂ ಸಂಪೂರ್ಣವಾಗಿ ನಾಶಪಡಿಸಲಾಗಿದೆಯೆಂದು ಮ ಪ್ರಕಟನೆಯೊಂದು ತಿಳಿಸಿರುತ್ತದೆ

ಪೌರಸಭಾಧ್ಯಕ್ಷರಲ್ಲಿ ಅಧಿಕಾರಿಗಳ ನಿಯೋಗ

ರಾಜಧಾನಿಯ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಪ್ಪ ನವರ ಬಳಿ ನಗರದ ಆಫೀಸರುಗಳ ನಿಯೋಗವೊಂದು ನೆನ್ನೆ ಹೋಗಿ ಮಿಡಿಕಲ್ ಸರ್ಟಿಫಿಕೆಟನ್ನು ಪಡೆಯಲು ಅವರುಗಳಿಗೆ ವೈದ್ಯಕೀಯ ಶುಲ್ಕವನ್ನು ವಿಧಿಸುವುದನ್ನು ನಿಲ್ಲಿಸಬೇಕೆಂದೂ, ಸರ್ಟಿಫಿ ಕೆಟು ಪದ್ಧತಿಯನ್ನು ಪಡೆಯುವ ಮಾರ್ಗವನ್ನು ಸುಲಭಗೊಳಿಸಬೇಕೆಂದೂ ಮನವಿ ಮಾಡಿಕೊಂಡಿತು

ಕೊರಿಯಾ ಯುದ್ಧದಲ್ಲಿ ಚೀಣೀಯರ ಬೇಸರ

ಕೊರಿಯಾ ಯುದ್ಧದಲ್ಲಿ ಚೀಣಾ ಸರ್ಕಾರದವರು ಮತ್ತು ಪ್ರಜೆಗಳು ಬೇಸತ್ತಿರುವುದಾಗಿ ಭಾರತೀಯ ನಿಯೋಗವೊಂದು ಹೇಳಿರುವುದರ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳಾದುವು. ಜಾಗತಿಕ ರಾಷ್ಟ್ರಗಳೊಂದು ಶಾಂತಿಯ ಷರತ್ತುಗಳನ್ನು ಹಾಕಿದರೆ ಅದರ ಆಧಾರದ ಮೇಲೆ ಚೀಣಾ ಸರ್ಕಾರವು ಶಾಂತಿಗೆ ಒಪ್ಪಬಹುದೆಂದು ಭಾರತೀಯ ನಿಯೋಗವು ಹೇಳಿರುವುದಾಗಿ ವರದಿಯಾಗಿದೆ ಮಂತ್ರಿಗಳು ಉತ್ತರವಾಗಿ ಪಾರ್ಲಿಮೆಂಟ್ ಸಭಾಸದರಿಗೆ ಇದು ಬಾಹ ವಿಶ್ವಸ್ಥಿತಿ ಪರಿಹಾರದ ಬಗ್ಗೆ ಇನ್ನೂ ಸೂಕ್ತವಾದ ಕ್ರಮವನ್ನು ಕೈಗೊಳ್ಳುವ ಪ್ರಯತ್ನವನ್ನು ಇದು ಮಾಡುತ್ತಿರುವುದಾಗಿ ತಿಳಿಸಿದರು

ಚರ್ಚಿಲ್ಲರ ಮೇಲಿನ ಖಂಡನಾ ನಿರ್ಣಯ ಬಿದ್ದು ಹೋಯಿತು

ವಿಶ್ವಸಂಸ್ಥೆ ಪಡೆಗಳು ಉತ್ತರ ಕೊರಿಯದ ಯಾಲೂ ವಿದ್ಯುತ್ಕೇಂದ್ರದ ಮೇಲೆ ಇತ್ತೀಚೆಗೆ ಧಾಳಿ ನಡೆಯಿಸಿದ ಬಗ್ಗೆ ಅಮೆರಿಕವು ಬ್ರಿಟನ್ನಿನ ಸಲಹೆಯನ್ನು ಪಡೆಯುವಂತೆ ಚರ್ಚಿಲ್ ಸರ್ಕಾರವು ಮಾಡಲಿಲ್ಲವೆಂದು ಆಕ್ಷೇಪಿಸಿ ಬ್ರಿಟನ್ನಿನ ಲೇಬರ್ ಪಕ್ಷವು ಮೊನ್ನೆ ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿ ತಂದ ಖಂಡನಾ ನಿರ್ಣಯದ ಮೇಲೆ ಚರ್ಚೆಯು ನಡೆದು ನಿರ್ಣಯದ ಪರವಾಗಿ ೩೦೦ ವೋಟುಗಳೂ, ವಿರುದ್ಧವಾಗಿ ೩೦೦ ವೋಟುಗಳೂ ಬಂದು ಚರ್ಚಿಲ್ಲರಿಗೆ ಜಯ ಲಭಿಸಿತು.

ಸೂಚನೆ

ಪ್ರಥಮ ಏಕಾದಶಿ ಕಾರಣ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ವನ ಮಹೋತ್ಸವ

ಮೂರನೇ ವರ್ಷದ ವನ ಮಹೋತ್ಸವದ ಸಂಬಂಧದಲ್ಲಿ ಭಾರತದ ಪ್ರಾಂತಗಳಲ್ಲಿ ಮೊನ್ನೆ ಹೊಸದಾಗಿ ಸಸಿಗಳನ್ನು ನೆಡುವ ಸಮಾರಂಭವನ್ನು ಆಚರಿಸಲಾಯಿತು. ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರೂ, ಹಿಮಾಲಯಗಳಲ್ಲಿ ಅಲ್ಲಿನ ಮುಖ್ಯ ಮಂತ್ರಿಯವರೂ ಮತ್ತು ಮದ್ರಾಸಿನಲ್ಲಿ ಮುಖ್ಯ ಮಂತ್ರಿ ರಾಜಾಜಿಯವರೂ ಗಿಡಗಳನ್ನು ನೆಟ್ಟು ಉತ್ಸವವನ್ನು ಆಚರಿಸಿದರು.

ಜೋಧಪುರದ ಆಸ್ಪತ್ರೆ ದಾದಿಯರ ಉಪವಾಸ ಮುಷ್ಕರ

ಜೋಧಪುರದಲ್ಲಿರುವ ರಾಜಾಸ್ಥಾನದ ಸುಪ್ರಸಿದ್ಧ ಮಹಾತ್ಮಾ ಗಾಂಧಿ ಆಸ್ಪತ್ರೆಯ ಕಾಂಪೌಂಡರು ಮತ್ತು ದಾದಿಯರು ಸೇರಿ ೧೫೦ ಜನರು, ಹಲವು ನಿಯಮಗಳನ್ನು ಜಾರಿಗೆ ತಂದುದನ್ನು ಪ್ರತಿಭಟಿಸಿ, ಉಪವಾಸ ಮುಷ್ಕರ ಕೈಗೊಂಡಿರುವರೆಂದು ತಿಳಿದುಬಂದಿದೆ ಮುಷ್ಕರದ ಪರಿಣಾಮವಾಗಿ ಆಸ್ಪತ್ರೆ ಕೆಲಸ ಕಾರ್ಯಗಳಿಗೇನೂ ಧಕ್ಕೆ ಸಂಭವಿಸಿಲ್ಲವೆಂದು ಹೇಳಲಾಗಿದೆ

ಮಾರಾಟ ತೆರಿಗೆ ಬಗ್ಗೆ ವರ್ತಕರ ಹರತಾಳ

ಮಾರಾಟ ತೆರಿಗೆಯನ್ನು ಎಲ್ಲ ಸರಕುಗಳಲ್ಲೂ ವಿಧಿಸಬೇಕೆಂದು ಬೊಂಬಾಯಿ ಸರ್ಕಾರದವರು ತರಲಿರುವ ಬದಲಾವಣೆಯನ್ನು ಪ್ರತಿಭಟಿಸಲು ಅಲ್ಲಿನ ೫೦ ವರ್ತಕ ಸಂಘಗಳು ೧ ದಿನದ ಹರತಾಳವನ್ನು ನಡೆಸಬೇಕೆಂದು ನಿರ್ಧರಿಸಿವೆ.

ಶ್ರೀ ಜಯಚಾಮರಾಜರಿಂದ ಆಸ್ಪತ್ರೆ ನರ್ಸುಗಳ ವಸತಿಗೃಹ ಪ್ರಾರಂಭ

ಶ್ರೀರಾಜಪ್ರಮುಖರವರು ನೆನ್ನೆ ರಾಜಭವನದ ಬಳಿ ಆರೋಗ್ಯಶಾಖೆಯಿಂದ ಬೆಂಗಳೂರು ಜಿಲ್ಲಾ ಬೋರ್ಡಿನವರು ಕಟ್ಟಿಸಿರುವ ನೀಡುವೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು ಜಿಲ್ಲಾ ಬೋರ್ಡಿನವರೂ ನಾಗರಿಕರೂ ಪೌರಸಭೆಯವರೂ ಮಹಾರಾಜರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದರು. ಶ್ರೀ ರಾಜಪ್ರಮುಖರು ಧಾರಾಳವಾಗಿ ಜಿಲ್ಲಾ ಬೋರ್ಡಿನವರು ನಡೆಸಿರುವ ಕಾರ್ಯಗಳಿಗಾಗಿ ಅವರನ್ನು ಅಭಿನಂದಿಸಿದರು

ಗೀತಾ ಪಠನ ಮತ್ತು ಯಕ್ಷಗಾನ

ರಾಜಧಾನಿಯ ರಾಮೇಶ್ವರ ಶ್ರೀ ಶಂಕರ ದೇವಾಲಯದ ಬೀದಿಯಲ್ಲಿರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ಶಾಲೆಯಲ್ಲಿ ಈ ಸಂಜೆ ೬॥ ಘಂಟೆ ಆಗಾಗಿ ಪ್ರಥಮ ಏಕಾದಶಿ ಪ್ರಯುಕ್ತ ಶ್ರೀ ಹ್ಯಾಪ್‌ಕ ದ ಸಂಘದ ವಿದ್ಯಾರ್ಥಿಗಳಿಂದ ಭಗವದ್ಗೀತಾ ಪಠನವೂ, ನಂತರ ಶ್ರೀ ಕೃಷ್ಣ ಸ್ವಾಮಿಯ ಯಕ್ಷಗಾನ ಮಂಡಳಿಯ ವರಿಂದ ರಾಜಸೂಯ ಯಾಗ ಎಂಬ ಕಥೆಯೂ ನಡೆಯುವುವು

ಶಾಸನ ಸಭೆಯ ವಿರೋಧ ಪಕ್ಷದವರ ಭವಿಷ್ಯ

ಈಗಿನಂತೆಯೇ ಮುಂದುವರೆಯುತಿ ಎಂದು ಮುಖ್ಯ ಮಂತ್ರಿ ಹೇಳಿಕೆ

(ಸ್ವಂ ವ.ಪ್ರೊ॥) ಬೆಂಗಳೂರು ೩

ಈ ದಿನ ಶಾಸನ ಸಭೆಯಲ್ಲಿ ಪ್ರಿಂಟೀಸ್ ಅದಾಲತಿನಲ್ಲಿ ಸಿಬ್ಬಂದಿ ಹೋಟಾ ಮಾಡುವ ಪ್ರಶ್ನೆಯನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದು ತಿಳಿಸಲಾಯಿತು. ಈಗಾಗಲೇ ಕೆಲಸದಲ್ಲಿ ಲ್ಲವರಿಗೆ ಪಿಂಚಣಿ ಒದಗಿಸುವುದು ಸಾಧ್ಯವೇ ಎಂಬುದನ್ನು ಸದಸ್ಯರೇ ಪರ್ಯಾಲೋಚಿಸಬೇಕೆಂದೂ ತಿಳಿಸಲಾಯಿತು

ಪಿರಿಯಾಪಟ್ಟಣಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಒದಗಿಸಲು ವಿಪರೀತ ವೆಚ್ಚವು ತಗುಲುವುದರಿಂದ ಅದು ಸಾಧ್ಯವಿಲ್ಲವೆಂದೂ, ಕೊಡಗಿಗೆ ಅದನ್ನು ಒದಗಿಸುವಾಗ ಪಿರಿಯಾಪಟ್ಟಣಕ್ಕೂ ಕೊಡಬಹುದೆಂದೂ ಶ್ರೀ ಎಸ್.ಎಂ ಮರಿಯಪ್ಪನವರ ಪ್ರಶ್ನೆಗೆ ಉತ್ತರಕೊಡಲಾಯಿತು

ಶ್ರೀ ಎ. ಭೀಮಪ್ಪನಾಯಕರು ಮಾತನಾಡಿ ವಿರೋಧ ಪಕ್ಷದವರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಅದರ ಭವಿಷ್ಯದ ಬಗ್ಗೆ ತೀರ್ಮಾನ ಕೊಡುವ ಪ್ರಶ್ನೆಯು ಇನ್ನೂ ಇತ್ಯರ್ಥವಾಗಿಲ್ಲವೆಂದು ಹೇಳಲಾಗಿ, ಸಭಾಧ್ಯಕ್ಷರು ನಾಳೆ ತಿಳಿಸುವುದಾಗಿ ಹೇಳಿದರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ, ಶಾಸನಸಭೆಯಲ್ಲಿ ಇದೇ ತಾರೀ ವಿರೋಧ ಪಕ್ಷವು ರೂಪುಗೊಳ್ಳುತ್ತಿರುವುದರಿಂದ ಈ ಬಗ್ಗೆ ನಿರ್ಧಾರವೇನೂ ಅಗತ್ಯವಿಲ್ಲವೆಂದೂ, ಅವರು ಈಗಿನಂತೆಯೇ ಮುಂದುವರಿಯಬಹುದೆಂದೂ, ವಿರೋಧ ಪಕ್ಷದವರೇ ತಮ್ಮ ಪಕ್ಷದ ಬಗ್ಗೆ ಒಂದು ನಿಶ್ಚಿತ ವಿಚಾರವನ್ನು ಮಾಡಿಕೊಳ್ಳಬೇಕೆಂದೂ ತಿಳಿಸಿದರು ಇದಕ್ಕಾಗಿ ಡಾ॥ ಇಮಾಂರವರು ಮುಖ್ಯ ಮಂತ್ರಿಗಳಿಗೆ ವಂದನೆಯನ್ನು ಸಲ್ಲಿಸಿದರು.

ನಂತರ ಸೆಕ್ರೆಟೇರಿಯಟ್ ಸಿಬ್ಬಂದಿಯಲ್ಲಿ ಕಡಿಮೆ ಮಾಡಬೇಕೆಂಬ ನಿರ್ಣಯವನ್ನು ತರಲಾಗಿ ಅದು ಬಿದ್ದುಹೋಯಿತು,

ದ.ಕೊರಿಯಾ ಶಾಸನ ಸಭಾ ಸದಸ್ಯನಿಗೆ ಮರಣ ದಂಡನೆ

ಕಳೆದ ಏಪ್ರಿಲಿನಲ್ಲಿ ಸ್ವಾಧಿಕಾರಿ ಯೊಬ್ಬನನ್ನು ಪಿಸ್ತೂಲಿನಿಂದ ಕೊಲ್ಲಲು ಕೊಲೆ ಮಾಡಿದ ಅಪರಾಧಕ್ಕಾಗಿ ದಕ್ಷಿಣ ಕೊರಿಯದ ಶಾಸನ ಸಭಾ ಸದಸ್ಯನೊಬ್ಬನಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ

ಬಂಗಾರಪೇಟೆಯ ೧೧೧ ಹಳ್ಳಿಗಳಿಗೆ ಕಂದಾಯದ ರಿಯಾಯಿತಿ

ಕಳೆದ ಸಾಲಿನಲ್ಲಿ ಮಳೆ ಬಾರದ ಪ್ರಯುಕ್ತ ತೊಂದರೆಯಾಗಿದ್ದುದರಿಂದ ಬಂಗಾರಪೇಟೆಯ ೧೧೧ ಹಳ್ಳಿಗಳ ರೈತರಿಗೆ ಸರ್ಕಾರದವರು ಮುಖ್ಯ ಕಂದಾಯದಲ್ಲಿ ಅರ್ಧವನ್ನು ವಿನಾಯಿತಿ ಕೊಟ್ಟು, ಉಳಿದ ಅರ್ಧ ಭಾಗವನ್ನು ವಸೂಲು ಮಾಡದಂತೆ ತಾತ್ಕಾಲಿಕವಾಗಿ ನಿಲ್ಲಿಸಿರುತ್ತಾರೆ. ಒಟ್ಟು ೧೪,೩೭೮—೦—೧೦ ಕಂದಾಯವು ಅವುಗಳಿಂದ ಸರಕಾರಕ್ಕೆ ಬರಬೇಕಾಗಿತ್ತು.

ಮೈಸೂರಿನಲ್ಲಿ ಆಹಾರ ಸ್ವಾವಲಂಬನೆ

ಬೆಂಗಳೂರು ೩

ಶಾಸನ ಸಭೆಯಲ್ಲಿ ನೆನ್ನೆ, ವ್ಯವಸಾಯ ಮಂತ್ರಿ, ಶ್ರೀ ಹೆಚ್. ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಸಂಸ್ಥಾನದಲ್ಲಿ ಆಹಾರ ಸ್ವಾವಲಂಬನೆಗಾಗಿ ಹೆಚ್ಚು ಆಹಾರ ಬೆಳೆಯುವ ೧೮ ಯೋಜನೆಗಳನ್ನು ತಯಾರಿಸಲಾಗಿದೆಯೆಂದು ಹೇಳಿದರು. ಅವುಗಳ ಅಂಗವಾಗಿ ನೀರಾವರಿ ಭಾವಿಗಳು, ಕೆರೆಗಳ ವ್ಯವಸ್ಥೆ, ಏತಗಳ ವ್ಯವಸ್ಥೆ, ನದೀ ಕಣಿವೆಗಳ ಏರ್ಪಾಡು, ಗೊಬ್ಬರದ ತಯಾರಿ ಮತ್ತು ಹಂಚಿಕೆ, ಮುಂತಾದುವುಗಳನ್ನು ನಡೆಸಲಾಗುವುದೆಂದೂ, ಎಲ್ಲಾ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳೂ ಕಾರ್ಯಗತವಾದರೆ ಆಹಾರದ ಸ್ವಾವಲಂಬನೆಯ ಗುರಿಯು ಸಾಧಿಸಲ್ಪಡುವುದೆಂದೂ ಅವರು ಹೇಳಿದರು. ಈಗ ವರ್ಷಂಪ್ರತಿ ೧೫,೦೦೦ ಟನ್ ಅಕ್ಕಿ ೧೦,೦೭೭ ಟನ್ ಗೋಧಿ ಮತ್ತು ೩೭,೭೦೦ ಟನ್ ಇತರ ಧಾನ್ಯಗಳ ಕೊರತೆ ಇರುವುದಾಗಿ ಅವರು ತಿಳಿಸಿರುವರು.

೧೦೩ ಕೋಟಿ ರೂ. ಬಚ್ಚಿಟ್ಟ ಧನದ ಪತ್ತೆ

ವರಮಾನ ತೆರಿಗೆ ತನಿಖೆಯಿಂದ ಸಮಿತಿಯವರು ಕಳೆದ ವರ್ಷ ನಡೆಸಿದ ಪರಿಶೀಲನೆಯ ಸಂಬಂಧವಾಗಿ ೧೦೩ ಕೋಟಿ ರೂ ಗಳಷ್ಟು ಬಚ್ಚಿಟ್ಟ ಧನವು ಪತ್ತೆಯಾಗಿರುವುದೆಂದು ಗೊತ್ತಾಗಿದೆ. ಇದರಿಂದ ಸರ್ಕಾರಕ್ಕೆ ೩೦ ಕೋಟಿ ರೂ ಗಳ ವರಮಾನ ಬರುವುದೆಂದೂ ಅಂದಾಜಾಗಿದೆ.

ಗಿರಿಜಾ ಕಲ್ಯಾಣೋತ್ಸವ

ನಂಜನಗೂಡು ೩

ಇಲ್ಲಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾ ಕಲ್ಯಾಣೋತ್ಸವದ ಸಂಬಂಧವಾಗಿ ಇದೇ ೮ ನೇ ತಾರೀಖು ಮಂಗಳವಾರ ರಾತ್ರಿ ೯ ಘಂಟೆಗೆ ವರಪೂಜೆಯೂ, ಮಾರನೇ ದಿನ ಬೆಳಿಗ್ಗೆ ನಾಂದಿ, ಗ್ರಹ ಯಜ್ಞ ಮೊದಲಾದ ಸಮಾರಂಭಗಳಾದ ನಂತರ ರಾತ್ರಿ ೧೦-೩೦ ಘಂಟೆಗೆ ಧಾರಾ ಮಹೋತ್ಸವವೂ ಜರುಗುವುವು. ಇದರ ಅಂಗವಾಗಿ ೮ ನೇ ತಾರೀಖಿನಿಂದ ೧೫ ನೇ ತಾರೀಖಿನ ವರೆಗೆ ಪ್ರತಿ ದಿನ ರಾತ್ರಿ ವಿದ್ವಾಂಸರುಗಳಿಂದ ಸಂಗೀತ ಕಛೇರಿಗಳನ್ನು ಏರ್ಪಡಿಸಲಾಗಿದೆ.

SRI GAYATHRI

TALKIES

From 3 7 52 For 2 Days

Daily 2 Shows

SILVER CITY

(In Technicolor)

With — Edmond O Brien and Yvone De Carlo

From 5 7—52

DESERT FOX

ಕೊರಿಯಾದಲ್ಲಿ ಭಾರತ ಮಧ್ಯಸ್ತಿಕೆ ವಹಿಸಬೇಕು

ಕೊರಿಯಾದಲ್ಲಿ ಶಾಂತಿ ಸ್ಥಾಪಿಸಲು ಭಾರತವೊಂದೇ ಅರ್ಹವಾದ ರಾಷ್ಟ್ರವಾಗಿರುವುದೆಂದು ಸಿಂಗಪುರದ ಸಂಡೆ ಟೈಮ್ಸ್ ಪತ್ರಿಕೆಯು ತಿಳಿಸಿರುತ್ತದೆ. ಭಾರತವು ಎರಡು ಪಕ್ಷಗಳೊಡನೆಯೂ ಮಧುರ ಬಾಂಧವ್ಯವನ್ನು ಹೊಂದಿರುವುದೆಂದೂ, ನೆಹರೂರವರು ಮಧ್ಯಸ್ತಿಕೆ ವಹಿಸಲು ಸಿದ್ಧವಾದರೆ ಚೀಣವು ಅದನ್ನು ತಿರಸ್ಕರಿಸಲು ಧೈರ್ಯ ಹೊಂದುವುದಿಲ್ಲವೆಂದೂ ಅದು ಹೇಳುವುದು. ವಿಮಾನ ಧಾಳಿಗಳಿಂದಲಾಗಲಿ, ರಣ ಭೂಮಿಯಲ್ಲಿ ಜನಸಮೂಹವನ್ನೇ ಸಂಹಾರ ಮಾಡುವುದರಿಂದಲಾಗಲೀ ಶಾಂತಿಯು ಲಭಿಸದೆಂದು ಅದು ಹೇಳುವುದು.

ತೌಡಿನಿಂದ ಎಣ್ಣೆ

ಮಧ್ಯ ಬರ್ಮಾದ ವ್ಯವಸಾಯ ಅಧಿಕಾರಿಗಳೊಬ್ಬರು, ತೌಡಿನಿಂದ ಊಟಕ್ಕೆ ಉಪಯೋಗಿಸುವ ಎಣ್ಣೆಯನ್ನು ಕಂಡುಹಿಡಿದಿರುವರೆಂದು ವರದಿಯಾಗಿದೆ.

ಅಧಿಕ ತೆರಿಗೆ ವಿರುದ್ಧ ಸತ್ಯಾಗ್ರಹ

ಬೊಂಬಾಯಿಯಲ್ಲಿ ತೆರಿಗೆಗಳನ್ನು ಹೆಚ್ಚಿಸಿರುವ ಬಗ್ಗೆ ಅಲ್ಲಿನ ಸಮಾಜವಾದಿಗಳು ಸತ್ಯಾಗ್ರಹ ನಡೆಸಲಿರುವರೆಂದು ಹೇಳಲಾಗಿದೆ. ಕಮ್ಯೂನಿಸ್ಟ್ ಪಕ್ಷದವರೂ ಸಹ ಇದೇ ರೀತಿ ಸತ್ಯಾಗ್ರಹ ಹೂಡಲಿರುವರು. ಸಮಾಜವಾದಿಗಳು ಈಗ ಆಹಾರ ಸತ್ಯಾಗ್ರಹವನ್ನು ಕೈಗೊಂಡಿರುವರು.

ಮಹರ್ಷಿ ದಯಾನಂದರಿಗೆ ಲೋಕಮಾತ

ಹುಬ್ಬಳ್ಳಿಯ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಅಂಗವಾಗಿ ಹೊರಟಿರುವ ಮಹರ್ಷಿ ದಯಾನಂದರಿಗೆ ಲೋಕಮಾತ ಎಂಬ ಚಿಕ್ಕ ಪುಸ್ತಕವು ನಮ್ಮ ಹಸ್ತಗತವಾಗಿದೆ. ಹುಬ್ಬಳ್ಳಿಯ ಶ್ರೀ ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು ಇದರ ಸಂಪಾದಕರು ಮತ್ತು ಪ್ರಕಾಶಕರು. ಈ ಕಾಲದಲ್ಲಿ ಪ್ರಾಚೀನ ವೈದಿಕ ತತ್ವಗಳನ್ನು ಚಿಕ್ಕ ಪುಸ್ತಕಗಳ ಮೂಲಕ ಪ್ರಚಾರಗೊಳಿಸುವುದು ಅವರ ಉದ್ದಿಷ್ಟವೆಂದು ಹೇಳಲಾಗಿದೆ. ಬೆಲೆ ೦—೨—೦ ಆಣೆ

THEOSOPHY STUDY GROUP,

Yadavagiri Road

Vontikoppal.

Saturday the 5th JULY 1952

at 6 p. m.

Talks followed by Questions and Answers on

A Universal Charter of The rights of Man

I THE RIGHTS OF MAN

CORRELATION BETWEEN RIGHTS AND DUTIES

ನಾಯಿಯಿಂದ ಕುಡುಕರ ಪತ್ತೆ

ಕಳ್ಳರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ತರಪೇತು ಹೊಂದಿರುವ ಮದರಾಸಿನ ಕಿವ್ ಎಂಬ ಸುಪ್ರಸಿದ್ಧ ನಾಯಿಯು ಕಳೆದ ೨೬ ನೇ ತಾರೀಖು ಕುಡಿದು ಅಮಲಿನಲ್ಲಿದ್ದ ಇಬ್ಬರನ್ನೂ ಮತ್ತು ಹೂತಿಟ್ಟಿದ್ದ ಹಲವು ಹೆಂಡದ ಸೀಸೆಗಳನ್ನೂ ಪತ್ತೆ ಹಚ್ಚಿದ ಪ್ರಸಂಗವು ವರದಿಯಾಗಿದೆ. ನಾಯಿಯ ಪಾಲಕನು ಅದನ್ನು ಶಿಕ್ಷಣಕ್ಕಾಗಿ ಮೈದಾನದ ಕಡೆ ಕರೆದುಕೊಂಡು ಹೋಗುತ್ತಿದ್ದಾಗ ಎದುರಿಗೆ ಬರುತ್ತಿದ್ದ ಇಬ್ಬರು ಕುಡುಕರು ಓಡಲು ಪ್ರಯತ್ನಿಸಿದರು. ಇದನ್ನು ಕಂಡು ನಾಯಿಯ ಪಾಲಕನು ಕಿವ್ ಎಂಬ ನಾಯಿಯ ಸರಪಳಿ ಕಳೆದು ಬಿಟ್ಟು, ತಾನೂ ಕುಡುಕರನ್ನು ಹಿಡಿಯಲು ಓಡಿದನು. ಕುಡುಕನೊಬ್ಬನು ನಾಯಿಗೂ ಇನ್ನೊಬ್ಬನು ಅದರ ಪಾಲಕನಿಗೂ ಸಿಕ್ಕಿಬಿದ್ದರು. ಅವರ ಬಾಯಿಯಿಂದ ಮದ್ಯದ ವಾಸನೆ ಬರಲು ಯಜಮಾನನ ಸಂಜ್ಞೆ ಮೇಲೆ ನಾಯಿಯು ಅವರ ಜಾಡನ್ನು ಮೂಸಿ ನೋಡಿ ಅನಂತರ ಅವರು ಹೆಂಡದ ಸೀಸೆಯನ್ನು ಬಚ್ಚಿಟ್ಟಿದ್ದ ಪೊದೆಯನ್ನು ಪತ್ತೆ ಹಚ್ಚಿತೆಂದು ಹೇಳಲಾಗಿದೆ.

ದಿವಾನ್ ಬಹದ್ದೂರ್ ರಾಮಸ್ವಾಮಿ ಒಕ್ಕಲಿಗರ ಕನ್ಯಾ ಹಾಸ್ಟೆಲ್

ಬೆಂಗಳೂರು ಶೇಷಾದ್ರಿ ರಸ್ತೆಯಲ್ಲಿ ಒಕ್ಕಲಿಗರ ಕನ್ಯಾ ಸೇವಾ ಸಮಿತಿ ಆಶ್ರಯದಲ್ಲಿ ಹೊಸದಾಗಿ ಕಟ್ಟಿರುವ ವಿದ್ಯಾರ್ಥಿನಿಲಯಕ್ಕೆ ವಿವಿಧ ಕಾಲೇಜುಗಳಲ್ಲಿಯೂ, ಹೈಸ್ಕೂಲುಗಳಲ್ಲಿಯೂ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಲಾಗುವುದು. ಬೋರ್ಡರುಗಳಾಗಿ ಸೇರಲಿಚ್ಛಿಸುವ ಮತ್ತು ಹಾಸ್ಟೆಲಿನ ನಿಯಮಗಳಿಗೆ ಒಪ್ಪುತ್ತಕ್ಕ ವಿದ್ಯಾರ್ಥಿಗಳು ಪೂರ್ಣವಿವರಗಳೊಂದಿಗೆ ಇದೇ ೧೦ ನೇ ತಾರೀಖಿನೊಳಗಾಗಿ ಸಂಘದ ಕಾರ್ಯದರ್ಶಿ ಡಾ|| ಶ್ರೀ ಕಂಠೇಶ್ವರ್, ನಂ ೬, ನಾಗಸಂದ್ರ ರೋಡ್, ಬಸವನಗುಡಿ ಈ ವಿಳಾಸಕ್ಕೆ ಮನವಿ ಪತ್ರಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

ರಾಜಕಮಲ್

4—7—52 ರಿಂದ 1 ನೇ ವಾರ

ನನ್ನ ತಂಗಿ [ತಮಿಳು]

ಮೈಸೂರು ಪೇಟೆ ಧಾರಣೆ

		ಪಲ್ಲಕ್ಕೆ ರೂ.ಆಂ.ಪೈ	ರೂ.ಆಂ.ಪೈ
ನೆಲಗಡಲೆ	,,	[illegible]	[illegible]
ಎಳ್ಳು	,,	[illegible]	[illegible]
ಹುರುಳಿ	,,	[illegible]	[illegible]
ಹೆಸರು	,,	[illegible]	[illegible]
ಅವರೆ	,,	[illegible]	
[illegible]	,,	[illegible]	[illegible]
[illegible]	,,	[illegible]	[illegible]
ಮೆಣಸಿನಕಾಯಿ			
[illegible]	,,	[illegible]	[illegible]
[illegible]	,,	[illegible]	
ಸೀಗೇಕಾಯಿ	,,	[illegible]	[illegible]
ತೆಂಗಿನಕಾಯಿ ೧೦೦ಕ್ಕೆ		[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎಸ್. [illegible] ಯವರ ಸಂಗೀತ ಮಧ್ಯಾಹ್ನ ೧-೩೦. [illegible] ೧ ೫೦. ಸಂಗೀತ [illegible] ಮೊಟ್ಟನ ಕಲಾವಿದರು [illegible] ಮತ್ತು ೬ ೩೦ ಪಿ. ವಿ. ರಾಘವ ಸಂಗೀತ. [illegible] ಗಾನವಿಹಾರ. ೭ [illegible] [illegible] ಗೀತ [illegible] ೯-೧೫ ಚಿತ್ರ ಸಂಗೀತ ೯ ೩೦ ಆಕೇಸ್ಟ್ರಾ.

ಬೆಂಗಳೂರು

ಬೆಳಿಗ್ಗೆ ೭ ೩೦ ಚಿತ್ರ ಗೀತ ಮಧ್ಯಾಹ್ನ ೯ ೩೦ ಗಿಟಾರ್ ೩ ಬಾಲ ಜಗತ್ ಸಂಜೆ ೫ ೪೫ ಮತ್ತು ೬ ಆರ್ ಅಂಬುಜಮ್ಮ ಸಂಗೀತ. ೬ ೧೫ ನಾದ [illegible]. ೭ ೩೦ [illegible] [illegible] [illegible] ೯ ೩೦ ಗಾನವೈಭವ

ಚಾಮುಂಡೇಶ್ವರಿ ಟಾಕೀಸ್

ಬೆಳಗಿನ ಪ್ರದರ್ಶನ

4—7 52 ರಿಂದ

ಬಕ್ ರೋಜರ್ಸ್

BUCK ROGERS

ABIDS OUTRIGHT AUCTION SALE

ON SUNDAY the 6th JULY 52 at 10 A. M

FURNITURE and household effects including Spring-cushioned upholstered sofa suites Rosewood and Teakwood single and double cots, Tables with and without drawers suitable for offices and hotels, R Wood and T Wood arm and armless chairs Meat safe Wall show cases, Big and small wooden racks suitable for shops Screens, Counter tables Door and window frames, Perambulator as good as new Low and high stools Fancy table lamps and Electric stoves Sign boards, Cash boxes photos with frames and glasses, Scales and many other usefull articles

INSPECTION ON SATURDAY 5th JULY between 3 to 6 P M

Edited, Printed and Published by A. R. Naga- [illegible]

ರಿಜಿಸ್ಟರ್ಡ್ ನಂ ೨೯೨ || ವಂದೇ ಮಾತರಂ || ಒಂದಾಣೆ ಪ್ರತಿ ೩ ಕಾಸು

ಸಂಪುಟ ೧೦] ಶನಿವಾರ ೫ ೭-೫೨ [ಸಂಚಿಕೆ ೨೭೯

ಈಜಿಪ್ಟ್ ನಗರಗಳಲ್ಲಿ - ಜರೂರು ಪರಿಸ್ಥಿತಿ -

ಕಾಲೇಜುಗಳಲ್ಲಿ ಸ್ಥಾನಗಳ ಹಂಚಿಕೆಯ ನೀತಿ

ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿಗಳ ಹೇಳಿಕೆ

ಸ್ವಂ ಸು ಪ್ರೋ] ಬೆಂಗಳೂರು ೫

ಈ ದಿನ ಶಾಸನ ಸಭೆಯಲ್ಲಿ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಕಾಲೇಜುಗಳಲ್ಲಿ ಸ್ಥಾನಗಳ ಹಂಚಿಕೆ ಬಗ್ಗೆ ಪ್ರಶ್ನೆ ಮಾಡಿ, ಹಿಂದೆ ಹಿಂದುಳಿದವರಿಗೆ ಶೇ ೭೫ ರಷ್ಟು ಸ್ಥಾನಗಳನ್ನು ಮೀಸಲಾಗಿಟ್ಟು, ಈಗ ಅದನ್ನು ಬದಲಾಯಿಸಿರುವ ಬಗ್ಗೆ ಸರ್ಕಾರದ ನೀತಿಯ ವಿವರಣೆಯನ್ನು ಕೇಳಿದರು. ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರ ರಾಯರು ಉತ್ತರವಿತ್ತು ಹಂಚಿಕೆಯ ಬಗ್ಗೆ ಕೇಳಿದವರು ಪಟ್ಟಿಯನ್ನು ಕೊಟ್ಟು, ನೂತನ ರಾಜ್ಯಾಂಗದಲ್ಲಿ ಅಡಕವಾಗಿರುವ ತತ್ವಗಳನ್ನನುಸರಿಸಿ ಈ ಹಂಚಿಕೆಯನ್ನು ಮಾಡಲಾಗಿರುವುದೆಂದು ತಿಳಿಸಿದರು. ಒಟ್ಟು ೩೨೦೦ ಅರ್ಜಿಗಳು ಕಾಲೇಜುಗಳ ಸ್ಥಾನಗಳಿಗಾಗಿ ಬಂದಿರುವುವೆಂದೂ, ವಿಜ್ಞಾನ ತರಗತಿಗಳಲ್ಲೆಲ್ಲಾ ಸ್ಥಾನವನ್ನು ಒದಗಿಸಿದ ನಂತರ ಉಳಿದುವುಗಳನ್ನು ಇತರ ಕಾಲೇಜುಗಳಿಗೆ ವರ್ಗಾಯಿಸಲಾಗುವುದೆಂದೂ ಹೇಳಿದರು.

ವಿಜ್ಞಾನ ಸಂಶೋಧನೆಗಾಗಿ ೩,೯೭,೦೦೦ ರೂ ಗಳ ಬೇಡಿಕೆಗೆ ಸಭೆಯ ಅಂಗೀಕಾರವು ದೊರೆಯಿತು. ನಂತರ ವಿದ್ಯಾಭ್ಯಾಸದ ಬೇಡಿಕೆಯನ್ನು ಮಂಡಿಸಲಾಯಿತು. ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಬೋಧಕಾ ಶಿಕ್ಷಣವನ್ನು ತಂದ, ಶಾಲೆ ಶಾಲೆಗಳಲ್ಲಿ ಉಪಾಧ್ಯಾಯರುಗಳ ಸಂಖ್ಯೆ ಹೆಚ್ಚು ಆಗಿರುವುದೆಂದು ಆಕ್ಷೇಪಿಸಿದರು. ಶ್ರೀ ಬಿ ನಾರಾಯಣಸ್ವಾಮಿಯವರು ಮಾತನಾಡಿ, ಇದೊಂದು ಜಾಡ್ಯವಾಗಿರುವುದೆಂದೂ ಅದರ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದೂ ತಿಳಿಸಿದರು.

ವಿದ್ಯಾ ಮಂತ್ರಿಗಳು ಉತ್ತರವಿತ್ತು, ಹೆಚ್ಚು ಆಗಿರುವುದೆಂಬುದನ್ನು ತಾವು ಅಂಗೀಕರಿಸುವುದಿಲ್ಲವೆಂದು ಹೇಳಿದರು. ಬಿದ್ದಿ ಸಂಶೋಧನೆಯನ್ನು ಕೊಡುವ ಬಗ್ಗೆ ಸಮಿತಿಗಳು ಪರ್ಯಾಲೋಚನೆ ನಡೆಸಿ ನೀಡಲಿರುವ ವರದಿ ಬರುವುದೆಂದು ಅವರು ಈ ಸರ್ಕಾರದ ವಿದ್ಯಾಭ್ಯಾಸದ ಮಾರ್ಗಾನ ಬಗ್ಗೆ ಹೊಸ ನೀತಿಯನ್ನು ರೂಪಿಸುವಾಗ ಈ ಅಂಶವನ್ನು ಪರಿಶೀಲಿಸಲಾಗುವುದೆಂದು ಭರವಸೆಯಿತ್ತರು. ಮೋಕ ರ್ಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಮಾರಾಟ ತೆರಿಗೆ ವಿರುದ್ಧ ಬೊಂಬಾಯಿಯಲ್ಲಿ ಹರತಾಳ

ಬೊಂಬಾಯಿ ಸರ್ಕಾರದವರು ವಿಧಿಸುವ ಬಹು ಮುಖ ಮಾರಾಟ ತೆರಿಗೆ ವಿರುದ್ಧವಾಗಿ ಬೊಂಬಾಯಿಯ ವರ್ತಕರು ನೆನ್ನೆ ಭಾರಿ ಹರತಾಳ ನಡೆಸಿದರು. ಅಲ್ಲಿನ ನಗರದ ೬೦ ಸಾವಿರ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ಸ್ಟಾಕ್ ಎಕ್ಸ್ ಚೇಂಜ್‌ಗಳು ಸಹಾ ಬಂದಾಗಿದ್ದುವೆಂದು ಗೊತ್ತಾಗಿದೆ. ಅಹಮದಾಬಾದಿನಲ್ಲೂ ಸಹಾ ಹರತಾಳವನ್ನು ಆಚರಿಸಲಾಯಿತು.

ಕೇಂದ್ರ ಮಂತ್ರಿಯಾಗಲು ೧೨ ವರ್ಷದ ಬಾಲಕಿಯ ಆಶೆ

ಪ್ರಧಾನಿ ನೆಹರೂರವರು ಉತ್ತರ ಪ್ರದೇಶದ ದುಹಾರಿಯ ಎಂಬಲ್ಲಿನ ಶಾಲೆಯೊಂದಕ್ಕೆ ಭೇಟಿ ಕೊಟ್ಟು ಅಲ್ಲಿನ ವಿದ್ಯಾರ್ಥಿಗಳನ್ನು ತಮ್ಮ ಆಶೋತ್ತರಗಳ ಬಗ್ಗೆ ಪ್ರಶ್ನೆ ಕೇಳಲು ೧೨ ವರ್ಷದ ಬಾಲಕಿಯು ತಾನು ಕೇಂದ್ರ ಮಂತ್ರಿಯಾಗುವ ಆಶಯನ್ನು ಹೊಂದಿರುವುದಾಗಿ ತಿಳಿಸಿದಳು.

ಶ್ರೀ ರಾಘವೇಂದ್ರ ಸ್ವಾಮಿಗಳವರ ಆಗಮನ

ಮೈಸೂರು ೫

ಮಂತ್ರಾಲಯದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಾಧೀಶರಾದ ಶ್ರೀ ಮತ್ಸುಯಮೀಂದ್ರ ಶ್ರೀಪಾದಂಗಳವರು ದಕ್ಷಿಣ ದೇಶದ ಯಾತ್ರೆಯನ್ನು ಮುಗಿಸಿಕೊಂಡು ಕಳೆದ ಸೋಮವಾರ ನಂಜನಗೂಡಿಗೆ ಚಿಜಯ ಮಾಡಿಸಿ, ಆ ದಿನ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು. ಸುಬ್ಬರಾಯನ ಕೆರೆ ಬಳಿ ಇರುವ ಶ್ರೀರಾಮ ದೇವಸ್ಥಾನದಲ್ಲಿ ಭಕ್ತ ವೃಂದದವರು ಅವರನ್ನು ಸ್ವಾಗತಿಸಿದರು. ಆ ದಿನ ಸಂಜೆ ಶ್ರೀಗಳವರು ಉಪನ್ಯಾಸ ಮಾಡುವರು. ನಾಳೆ ಸೋಸಲೆಗೆ ತೆರಳಿ ಅಲ್ಲಿನ ಶ್ರೀಗಳವರನ್ನು ಸಂದರ್ಶಿಸಿ ಪುನಃ ನಂಜನಗೂಡಿನಲ್ಲಿ ಒಂದು ವಾರ ಮೊಕ್ಕಾಂ ಮಾಡಿ, ನಂತರ ಮಂತ್ರಾಲಯಕ್ಕೆ ಚಿತ್ತೈಸುವರು.

ಕುದುರೆ ಪಂದ್ಯದಲ್ಲಿ ಜಾಕಿ ಮತ್ತು ಕುದುರೆಯ ಮರಣ

ಕಳೆದ ಬುಧವಾರ ಬೆಂಗಳೂರು ಕುದುರೆ ಪಂದ್ಯಗಳು ಆರಂಭವಾದಾಗ ವಿಷ್ಣು ಹೇರೆಸ್ ಎಂಬ ಕುದುರೆಯು ಒಸು ತೊಂದರೆಯುಂಟು ಮಾಡಿ ಜಾಕಿ ಡಿ ಕೂಂಬ್‌ರನ್ನು ಒಂದಾವರ್ತಿ ಕೆಳಗೆ ಕೆಡವಿದರೂ ಅವರು ಮತ್ತೆ ಮೇಲೇರಲು ಅದು ಹುಚ್ಚಾಪಟ್ಟೆ ಓಡಿ ಹೊರಗಡೆ ಬಿಗಿದಿದ್ದ ಕಂಬಿಯ ಕಡೆಗೆ ನುಗ್ಗಿ ಡಿ ಕೂಂಬ್‌ರನ್ನು ಕೆಳಗೆ ಕೆಡವಿತೆಂದೂ ಕುದುರೆಯು ಎದೆಗೆ ಕಂಬಿಯೊಂದು ತಿವಿದು ಅದು ಸ್ಥಳದಲ್ಲೇ ಮೃತಪಟ್ಟಿತೆಂದೂ, ಜಾಕಿ ಡಿ ಕೂಂಬರನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಅವರು ಮೃತಪಟ್ಟರೆಂದೂ ಗೊತ್ತಾಗಿದೆ. ಅವರ ಎಲುಬುಗಳು ಮುರಿದಿದ್ದುವು.

ಸ್ಕೂಲ್ ಫೈನಲ್ ಪರೀಕ್ಷೆಗೆ ಅರ್ಜಿ ಕಳುಹಿಸಲು ಅವಧಿ

ಎಸ್. ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಗೆ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ತಾರೀಖನ್ನು ಜುಲೈ ೭ ನೇ ತಾರೀಖಿನಿಂದ ೧೧ ನೇ ತಾರೀಖಿಗೆ ಮುಂದುವರಿಸಲಾಗಿದೆ.

ಎಸ್. ಮಾಧವರಾಯರು ರೆವಿನ್ಯೂ ಕಮಿಷನರ್

ಸ್ವಂ ಸು ಪ್ರೋ] ಬೆಂಗಳೂರು ೫

ಸಂಸ್ಥಾನದ ರೆವಿನ್ಯೂ ಕಮಿಷನರಾದ ಶ್ರೀ ಕೆ ಶ್ರೀನಿವಾಸನ್‌ರವರ ಸೇವೆಯನ್ನು ಭಾರತ ಸರ್ಕಾರಕ್ಕೆ ಮೈಸೂರು ಸರ್ಕಾರದವರು ಒಪ್ಪಿಸಿರುವರು. ಅವರು ಹೈದರಾಬಾದು ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಲಿರುವರು. ಈಗ ಮಾಲೀಕರಾದ ಶ್ರೀ ಎಸ್ ಮಾಧವರಾಯರನ್ನು ರೆವಿನ್ಯೂ ಕಮಿಷನರನ್ನಾಗಿ ನೇಮಿಸಲಾಗಿದೆ.

೭೦ ವರ್ಷದ ಮುದುಕಿಗೆ ಮಗುವಿನ ಜನನ

ಕರಾಚಿಯ ಆಸ್ಪತ್ರೆಯೊಂದರಲ್ಲಿ ೭೦ ವರ್ಷದ ಮುಸ್ಲಿಂ ವೃದ್ಧೆಯೊಬ್ಬಳು ಕಳೆದ ಬುಧವಾರ ತನ್ನ ೧೬ ನೆಯ ಮಗುವಿಗೆ ಜನ್ಮವಿತ್ತಳೆಂದೂ, ಆಕೆಯ ಇತರ ೧೫ ಮಕ್ಕಳೂ ಸುರಕ್ಷಿತವಾಗಿರುವರೆಂದೂ ತಿಳಿದುಬಂದಿದೆ.

ರಾಜಾಜಿ ಮಂತ್ರಿಮಂಡಲದಲ್ಲಿ ವಿಶ್ವಾಸ ಸೂಚನೆ

ರಾಜಾಜಿಯವರ ಮಂತ್ರಿಮಂಡಲದಲ್ಲಿ ಮದ್ರಾಸ್ ವಿಧಾನ ಸಭೆಯು ನೆನ್ನೆ ಬಹುಮತದಿಂದ ವಿಶ್ವಾಸವನ್ನು ವ್ಯಕ್ತಪಡಿಸಿತು. ವಿಶ್ವಾಸ ಬೇಡಿಕೆ ನಿರ್ಣಯದ ಮೇಲೆ ೩ ದಿನಗಳ ಚರ್ಚೆ ನಡೆದ ನಂತರ ನಿರ್ಣಯದ ಪರವಾಗಿ ೨೦೦ ಓಟುಗಳೂ ವಿರುದ್ಧವಾಗಿ ೧೫೧ ಓಟುಗಳೂ ಬಂದುವು.

ಕೈರೊ, ಅಲೆಗ್ಸಾಂಡ್ರಿಯದಲ್ಲಿ ವಿಶೇಷ ಪರಿಸ್ಥಿತಿ ಘೋಷಣೆ

ಈಜಿಪ್ಟಿನ ರಾಜಧಾನಿ ಕೈರೊ ಮತ್ತು ರೇವುನಗರ, ಅಲೆಕ್ಸಾಂಡ್ರಿಯಾಗಳಲ್ಲಿ ನೆನ್ನೆ ಅಲ್ಲಿನ ಸರ್ಕಾರದವರು ಜರೂರು ಪರಿಸ್ಥಿತಿಯೊದಗಿರುವುದೆಂದು ಘೋಷಿಸಿದರು. ೨ ನಗರದ ಮುಖ್ಯ ಬೀದಿಗಳಲ್ಲಿ ಉಕ್ಕಿನ ಶಿರಸ್ತ್ರಾಣಗಳನ್ನು ಧರಿಸಿದ ಪೋಲೀಸರು ಗಸ್ತು ತಿರುಗುತ್ತಿರುವರು. ಹೊಸ ಮಂತ್ರಿಮಂಡಲದವರು ಅಧಿಕಾರಕ್ಕೆ ಬಂದ ಮೇಲೆ ಇದೇ ಮೊದಲಾಗಿ ಅಲ್ಲಿ ಈ ರೀತಿಯ ಘೋಷಣೆಯನ್ನು ಮಾಡಲಾಗಿದೆ.

ಜೋಧಪುರದ ಪ್ರದರ್ಶನಕಾರರ ಮೇಲೆ ಗುಂಡಿನೇಟು

ಜೋಧಪುರದ ಆಸ್ಪತ್ರೆಯಲ್ಲಿ ಮುಷ್ಕರ ನಡೆಸುತ್ತಿರುವ ೧೩೦ ಮಂದಿ ದಾದಿಯರು ಮತ್ತು ಕಾಂಪೌಂಡರುಗಳ ಸಹಾನುಭೂತಿಗಾಗಿ ಕಳೆದ ೩ನೇ ತಾ|| ಆಸ್ಪತ್ರೆಯ ಮುಂದೆ ಪ್ರದರ್ಶನ ನಡೆಸಿದಾಗ ಗುಂಪು ಚದುರುವಂತೆ ಪೋಲೀಸರು ತಿಳಿಸಿದರೂ ಸಹ ಕೇಳದೆ ಆಸ್ಪತ್ರೆಯ ಕಡೆಗೆ ನುಗ್ಗಿದುದರಿಂದ ಅವರ ಮೇಲೆ ಲಾಠಿ ಪ್ರಯೋಗ ಮಾಡಿ ಅಶ್ರುವಾಯುವನ್ನು ಬಿಟ್ಟರೂ ಸಹಾ ಅವರು ಚದುರದೆ ಇದ್ದುದರಿಂದ ಗುಂಡು ಹಾರಿಸಬೇಕಾಯಿತು. ಪೋಲೀಸರೂ ಸೇರಿ,೪೦ ಜನರಿಗೆ ಗಾಯಗಳಾದುವು. ೧೦ ಜನರ ದಸ್ತಗಿರಿಯಾಗಿದೆ.

ರಕ್ತ ವರ್ಣದ ಮಳೆ

ಕೊಚ್ಚಿ ಜಿಲ್ಲೆಯ ಕ್ರಾಂಗನೂರು ಮತ್ತು ಚಿಲ್ಲಾವಾಯಿಗಳ ಬಳಿ ಕಳೆದ ವಾರ ರಕ್ತ ವರ್ಣದ ಮಳೆ ಬಿದ್ದಿತೆಂದೂ, ಅದನ್ನು ಪರೀಕ್ಷಿಸಲಾಗಿ ಅದರಲ್ಲಿ "ಐರನ್ ಆಕ್ಸೈಡ್" ರಸಾಯನದ ಅಂಶವು ಹೆಚ್ಚಾಗಿರುವುದು ಗೊತ್ತಾಯಿತೆಂದೂ ವರದಿಯಾಗಿದೆ. ಇಂತಹ ಮಳೆಯು ವ್ಯವಸಾಯಕ್ಕೆ ಹೆಚ್ಚು ಉಪಯುಕ್ತವಾಗುವುದೆಂದು ಗೊತ್ತಾಗಿದೆ.

ಸೆಂಟ್ ಫಿಲೊಮಿನಾ ಕಾಲೇಜಿನಲ್ಲಿ ವಿದ್ಯಾರ್ಥಿಯ ಸತ್ಯಾಗ್ರಹ

ರಾಜಧಾನಿಯ ಸೇಂಟ್ ಫಿಲೊಮಿನಾ ಕಾಲೇಜಿನ ಸೀನಿಯರ್ ಬಿ ಎಸ್ ಸಿ ತರಗತಿಯಲ್ಲಿ ಕಳೆದ ವರ್ಷ ಓದಿ, ಪರೀಕ್ಷೆಗೆ ೭೨ ಹಿಸದೆ ಇದ್ದ ಶ್ರೀ ಪ್ರಭಾಕರ್ ಶರ್ಮ ಎಂಬ ವಿದ್ಯಾರ್ಥಿಯು ಈ ಸಾರಿ ಕಾಲೇಜಿನಲ್ಲಿ ಸ್ಥಾನಕ್ಕಾಗಿ ಹಾಕಿಕೊಂಡ ಅರ್ಜಿಯು ತಿರಸ್ಕೃತವಾದುದರಿಂದ, ಅವರು ಕಾಲೇಜು ಪ್ರಿನ್ಸಿಪಾಲರ ಕೊಠಡಿಯ ಮುಂಭಾಗದಲ್ಲಿ ಮೊನ್ನೆ ಸಂಜೆಯಿಂದ ಸತ್ಯಾಗ್ರಹವನ್ನು ಆಚರಿಸುತ್ತಿರುವರು. ಸ್ಥಾನವನ್ನು ದೊರಕಿಸಿಕೊಳ್ಳುವ ವರೆಗೂ ಸತ್ಯಾಗ್ರಹವನ್ನು ಅವರು ನಡೆಸಲು ನಿರ್ಧರಿಸಿರುವರು.

ಮರ್ಮಸ್ಥಳದ ಮೇಲೆ ಗಾಯ

ರಾಜಧಾನಿಯ ದೇವಾಂಬಾ ಅಗ್ರಹಾರದ ಶ್ರೀ ರಾಮಣ್ಣ ಮತ್ತು ಶ್ರೀಮತಿ ಸುಬ್ಬಲಕ್ಷ್ಮಮ್ಮ ಎಂಬುವರು ವಾಸವಾಗಿರುವ ಮನೆಯಲ್ಲಿ ಕಳೆದ ಶುಕ್ರವಾರ ಮಧ್ಯ ರಾತ್ರಿಯಲ್ಲಿ ಯಾರೊ ಕಳ್ಳತನಕ್ಕಾಗಿ ನುಗ್ಗಿದರೆಂಬ ದೂರನ್ನು ಕೇಳಿ ಕೃಷ್ಣರಾಜ ಪೋಲೀಸರು ಅಲ್ಲಿಗೆ ಹೋಗಿ ನೋಡಲಾಗಿ, ಆ ಮನೆಯ ಮುರಿದು ಹೋದ ಒಬ್ಬಲು ಮನೆಯಲ್ಲಿ ಶೇಷಾದ್ರಯ್ಯ ಎಂಬ ವ್ಯಕ್ತಿಯು ಪ್ರಜ್ಞೆ ತಪ್ಪಿ ಬಿದ್ದಿದ್ದನೆಂದೂ, ಅವನ ಪುರುಷೇಂದ್ರಿಯವನ್ನು ೩ ಅಂಗುಲದಷ್ಟು ಕುಯ್ದು ಗಾಯಪಡಿಸಲಾಗಿತ್ತೆಂದೂ ವರದಿಯಾಗಿದೆ. ಅತನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಗಿ, ಈಗ ಅವನು ಗುಣಮುಖನಾಗುತ್ತಿರುವನೆಂದು ಹೇಳಲಾಗಿದೆ. ತಾನು ಆ ಮನೆಯಲ್ಲಿ ಆ ರಾತ್ರಿ ಬಹಳ ಹೊತ್ತು ಇದ್ದುದಾಗಿಯೂ, ತನಗೆ ಕುಡಿಯಲು ಏನೋ ಪದಾರ್ಥವನ್ನು ಕೊಡಲಾಯಿತೆಂದೂ, ಪ್ರಜ್ಞೆ ತಪ್ಪಿದ ಬಳಿಕ ನಡೆದ ಸಂಗತಿಯು ತನಗೆ ಗೊತ್ತಿಲ್ಲವೆಂದೂ ಅವನು ಪೋಲೀಸರಿಗೆ ತಿಳಿಸಿರುವನು.

ವನಗಳ ಸಂರಕ್ಷಣೆಗಾಗಿ ಮಹಾರಾಜರ ಮನವಿ

ನಮ್ಮ ದೇಶದ ಚರಿತ್ರೆ ಮತ್ತು ಅನೂಚಾನವಾಗಿ ಬಂದಿರುವ ಅಭ್ಯಾಸಗಳಲ್ಲಿ ವನಮಹೋತ್ಸವದ ಪದ್ಧತಿಯು ರೂಢಮೂಲವಾಗಿರುವುದೆಂದೂ, ಗಿಡಗಳಿಗೆ ದೈವಾಂಶವಿರುವುದೆಂದು ನಮ್ಮ ಮತಗ್ರಂಥಗಳು ಸಾರುತ್ತಿರುವುವೆಂದೂ, ಅವುಗಳ ಸಂರಕ್ಷಣೆಯು ಪ್ರತಿಯೊಬ್ಬನ ಕರ್ತವ್ಯವೆಂದೂ ಮೈಸೂರಿನ ಶ್ರೀಮನ್ಮಹಾರಾಜರು ಕೊಲ್ಲೆಂಗೋಡಿನಲ್ಲಿ ವನ ಮಹೋತ್ಸವವನ್ನು ನೆರವೇರಿಸಿದಾಗ ತಿಳಿಸಿರುವರು ರಾಜ್ಯಕ್ಕೆ ಅರಣ್ಯಗಳು ಬಹು ಮುಖ್ಯವಾದ ಸಂಪತ್ತೆಂದೂ, ತಿದನ್ನು ಕಂಡೇ ಹಿಂದೆ ಅಶೋಕ ಚಕ್ರವರ್ತಿಯು ಸಾಲುಮರಗಳನ್ನು ನೆಡುವಂತೆ ಸೂಚಿಸಿದ್ದನೆಂದೂ, ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ವನಗಳ ಸಂರಕ್ಷಣೆಗೆ ಪ್ರಾಮುಖ್ಯತೆಯನ್ನು ಕೊಟ್ಟಿರುವುದಾಗಿಯೂ ಅವರು ಹೇಳಿರುವರು

ಮೈಸೂರು ಧ್ವಜ ಮತ್ತು ಗೀತೆ ಬಗ್ಗೆ ಬಹಿರಂಗ ಸಭೆ

ಮೈಸೂರಿನ ಗಂಡಭೇರುಂಡ ಧ್ವಜ ಮತ್ತು ಕಾಯೌಶ್ರೀಗೌರಿ ಗೀತೆಯ ವಿಷಯವಾಗಿ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಲು ಬಹಿರಂಗ ಸಭೆಯನ್ನು ಇದೇ ೬ ನೇ ತಾ|| ಭಾನುವಾರ ಸಂಜೆ ೬|| ಗಂಟೆಗೆ ರಾಜಧಾನಿಯ ಟೌನ್‌ಹಾಲಿನಲ್ಲಿ ಏರ್ಪಡಿಸಲಾಗಿದೆ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸುವರು. ಸರ್ವರೂ ದಯಮಾಡಿಸಬೇಕೆಂದು ವ್ಯವಸ್ಥಾಪಕರಾದ ಶ್ರೀ ಎಂ ಆರ್ ಸಿ ಬಸಪ್ಪನವರು ಕೋರಿರುತ್ತಾರೆ

ಹರಿಕಥೆ

ಮೈಸೂರು ಅಶೋಕಾ ರಸ್ತೆ ತುಂಗಬದಪ್ಪ ಶೆಟ್ಟರ ಧರ್ಮಛತ್ರದಲ್ಲಿ ಈ ರಾತ್ರಿ ೯-೩೦ ಕ್ಕೆ ಡಾ|| ಬಿ ಜಿ ದಾಸ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಹರಿಹರ ಕೀರ್ತನಕಾರ್ ಶ್ರೀ ಎಂ ಸಿ ಬಾಲಾಜಿ ಕೃಷ್ಣದಾಸ್ ರವರಿಂದ 'ಮೃತ್ಯು ಪರೀಕ್ಷೆ' ಎಂಬ ಹರಿಕಥೆಯನ್ನು ಶ್ರೀ ಸಾಯಿಬಾಬಾ ವಾಙ್ಮಯಗೋಷ್ಠಿಯೊಡನೆ ಏರ್ಪಡಿಸಿದೆ

ಪಬ್ಲಿಕ್ ಲೈಬ್ರರಿ

ರಾಜಧಾನಿಯ ಪಬ್ಲಿಕ್ ಲೈಬ್ರರಿಂಗ ಕಳೆದ ತಿಂಗಳು ೧೮,೭೬೮ ಮಂದಿ ವಾಚಕರು ಭೇಟಿಯಿತ್ತು, ೪೭೭೦ ಪುಸ್ತಕಗಳನ್ನು ಪಡೆದಿದ್ದರೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ.

SRI GAYATHRI

TALKIES

On 5th and 6th

Daily 2 Shows

ON DESERT FOX

With James Mason

On 7.7.1952

Paramount's

LET US DANCE

(In Technicolor)

ಪಾರ್ಸಿ ಸ್ತ್ರೀಯೊಡನೆ ಬ್ರಿಟಿಷ್ ಶ್ರೀಮಂತನ ವಿವಾಹ

ಬ್ರಿಟನ್ನಿನ ಚರಿತ್ರೆಯಲ್ಲೇ ಇದೇ ಮೊದಲಾಗಿ ಅಲ್ಲಿನ ೮೯ ವರ್ಷದ ಮಾರ್ಕ್ವಿಸ್‌ನೊಬ್ಬನು ೪೯ ವರ್ಷದ ಬೊಂಬಾಯಿಯ ಪಾರ್ಸಿ ಹೆಂಗಸೊಬ್ಬಳನ್ನು ವಿವಾಹವಾಗಿರುತ್ತಾನೆ ಇವರಿಬ್ಬರಿಗೂ ೧೯೩೮ ರಲ್ಲಿ ಬೊಂಬಾಯಿಯಲ್ಲಿ ಪರಿಚಯವಾಗಿತ್ತು ಆಕೆಯು ಇನ್ನು ಮುಂದೆ ಮಾರ್ಷಿಯೋನೆಸ್ ಬಿರುದನ್ನು ಹೊಂದುವಳು

ಶೋಚನೀಯ ನಿಧನ

ಮೈಸೂರು ಪತ್ರಿಕೆ ಸಂಪಾದಕರಾದ ಶ್ರೀ ಟಿ ನಾರಾಯಣರವರ ಅಣ್ಣಂದಿರ ಪುತ್ರ ಶ್ರೀ ಟಿ ಸಿ ಶೇಖರ್ ಎಂಬುವರು ಕಳೆದ ಶನಿವಾರ ಕರ್ಕಿ ಬಳಿ ಇರುವ ಸೇತುವೆಯ ಮೇಲೆ ಬೈಸಿಕಲ್ಲಿನಲ್ಲಿ ಬರುತ್ತಿರುವಾಗ್ಯೆ ಬೈಸಿಕಲ್ ಕಂಟ್ರೋಲು ತಪ್ಪಿ ಪೂರ್ಣ ಪ್ರವಾಹವಿದ್ದ ನದಿಗೆ ನೂಗಿಕೊಂಡು ನೀರಿನಲ್ಲಿ ಕೊಚ್ಚಿ ಹೋದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರಿಗೆ ೩೩ ವರ್ಷ ವಯಸ್ಸು ಇವರಿಗೆ ವೃದ್ಧ ತಾಯಿಯೂ ಪತ್ನಿಯೂ, ಒಬ್ಬ ಮಗನೂ ಅಣ್ಣಂದಿರೂ ಮತ್ತು ಚಿಕ್ಕ ತಂಗಿಯರೂ ಇರುತ್ತಾರೆ ಇವರ ಪೂರ್ವಜರು ಪತ್ರಿಕಾ ರಂಗದಲ್ಲಿ ಬಹು ದೀರ್ಘ ಕಾಲ ಸೇವೆ ಸಲ್ಲಿಸಿದ್ದರು ಇವರು ವೃದ್ಧಿಪಡಿಸಿದ ಹಣಕಾಸಿನ ವಿಚಾರವು ... ಮೇಲೆ ಕೋರ್ಟು ... ಪ್ರಾಪ್ತವಾಗಿದೆ

ಜಿಲ್ಲಾ ಮೋಟಾರ್ ಕೆಲಸಗಾರರ ಸಂಘ

ನಾಳೆ ರಾತ್ರಿ ೭-೩೦ ಗಂಟೆಗೆ ಮೇಲ್ಕಂಡ ಸಂಘದ ಕಛೇರಿಯಲ್ಲಿ ಸಕಲ ಸದಸ್ಯರ ಸಭೆಯು ಸೇರುತ್ತದೆ. ಶ್ರೀಗಳಾದ ಕೇಶವ ಕುಲಕರ್ಣಿಯವರೂ ಮತ್ತು ಎ ರಾಮಣ್ಣನವರೂ ಭಾಷಣ ಮಾಡುತ್ತಾರೆ

ಹಿಂದಿ ಡಿಪ್ಲೊಮಾ ತರಗತಿಗೆ ವಿಸ್ತರಣ

ಹಿಂದಿ, ಫ್ರೆಂಚ್, ಜರ್ಮನಿ ಮತ್ತು ಇಂಡಾಲಜಿಗಳಲ್ಲಿ ೧ ವರ್ಷದ ತರಗತಿಗಳನ್ನು ಮೈಸೂರು ವಿಶ್ವ ವಿದ್ಯಾಲಯದವರು ಈ ವರ್ಷ ಏರ್ಪಡಿಸಲಿರುವರು

ಒಲಂಪಿಯಾ

6-7-52 ರಿಂದ ಜನಭರಿತ 3 ನೇ ವಾರ

ಬಾಂಬೆ ಟಾಕೀಸ್‌ರವರ

ಮಾ MAA

ಪಾತ್ರ ರೀಲಾಚಿಟ್ನಿಸ್ ಭರತ್‌ಭೂಷಣ್

ಬೆಳಗಿನ ಪ್ರದರ್ಶನ

ಸಗೀರ್, ರಾಜಕಪೂರ್ ಪಾತ್ರವಹಿಸಿರುವ

: ಜಾಗ ಸೆಹಬಾರ :...

ರೈಲುಗಾಡಿಗಳಲ್ಲಿ ಸೌಕರ್ಯಕ್ಕಾಗಿ ೮೦ ಕೋಟಿ ರೂ.

ರೈಲ್ವೆ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರಕಾರದವರು ಬರುವ ಐದು ವರ್ಷಗಳಲ್ಲಿ ೮೦ ಕೋಟಿ ರೂಗಳನ್ನು ವೆಚ್ಚ ಮಾಡುವರೆಂದು ರೈಲ್ವೆಗಳ ಹಣಕಾಸಿನ ಕಮಿಷನರರು ತಿಳಿಸಿರುವರು ೩ನೇ ತರಗತಿ ಗಾಡಿಗಳಲ್ಲಿ ವಿದ್ಯುಚ್ಛಕ್ತಿ ಬೀಸಣಿಗೆಗಳನ್ನು ಇಡಲಾಗುವುದು ಪ್ರಯಾಣಿಕರು ಮಲಗಲು ಅನುಕೂಲಿಸುವಂತೆ ಹೊಸ ರೀತಿಯ ೩ ನೇ ತರಗತಿ ಗಾಡಿಗಳನ್ನೂ ತಯಾರಿಸಲಾಗುವುದು

ಮಂತ್ರಿ ಪದವಿಗಾಗಿ ಶಿಕ್ಷಣ

ದೆಹಲಿಯ ಪ್ರೊಫೆಸರರೊಬ್ಬರು ಪಾರ್ಲಿಮೆಂಟ್ ಸದಸ್ಯರುಗಳಿಗೆ ಒಂದು ಸೂಚನೆಯನ್ನು ಕಳುಹಿಸಿ ಮಂತ್ರಿ, ಉಪಮಂತ್ರಿ, ಪಾರ್ಲಿಮೆಂಟರಿ ಕಾರ್ಯದರ್ಶಿ ಮತ್ತು ವಿರೋಧ ಪಕ್ಷದ ಮುಖಂಡರಾಗುವ ಯೋಗ್ಯ ತರಪೇತು ಕೊಡುವುದಾಗಿ ಅವರಿಗೆ ತಿಳಿಸಿರುತ್ತಾರೆ ಹಲವರ ಭಾಷಣಗಳನ್ನೂ ತಾವು ಸಿದ್ಧಗೊಳಿಸುವುದಾಗಿ ಅವರು ಹೇಳಿರುವರು ... ಅದಕ್ಕಾಗಿ ... ಹೇಳಲಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ	ಅಂದಾಜು
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಸಾಸುವೆ	[illegible]	
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ		
ಮಣ	[illegible]	[illegible]
ಹುಣಸೇಹಣ್ಣು	[illegible]	[illegible]
ತೆಂಗಿನಕಾಯಿ	[illegible]	[illegible]

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೨೦ ಮಿತ್ರಸೂಧುರ್ಯರ ... ೧-೩೦ ಜಲತರಂಗ್ ... ಸಾವು ಮತ್ತು ನನ್ನವರು ... ನಮ್ಮ ನೆಚ್ಚಿನ ಗೀತಗಳು. ಸಂಜೆ ೫-೪೦ ಮತ್ತು ೬-೨೦ ಪಿ ಎಂ ಮುಸಿಪೋಲಪ್ಪ ಸಂಗೀತ ... ಆರ್ಕೆಸ್ಟ್ರಾ ... ಕಾರ್ಯ ಕೊಳಲು ... ನಾಟಕ

ಸಾಧ್ವಿ ಪತ್ರಿಕೆಯ

ಚಂದಾ ವಿವರ

ಸ್ಥಳಕ್ಕೆ— (ತಿಂಗಳಿಗೆ)	0-8-0
ಪರಸ್ಥಳಕ್ಕೆ (ಅಂಚೆ ಮೂಲಕ)	1-0-0
ಬಿಡಿ ಪ್ರತಿ — —	0-0-3

ಏಜೆಂಟರುಗಳ ಕಡೆಗಳಲ್ಲಿ ಚಂದಾ ತಿಂಗಳಿಗೆ ಎಂಟಾಣೆ ಮಾತ್ರ.

ಕೂಡಲೇ ಚಂದಾದಾರರಾಗಿರಿ

ಪೆಟ್ರೋಲಿಂದ ಮನೆ ಭಸ್ಮ

ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಗ್ರಾಮದಲ್ಲಿ ಚಿಕ್ಕಣ್ಣಾಚಾರ್ ಎಂಬುವರ ಮಹಡಿ ಮನೆಯು ಕಳೆದ ೨೩ ನೇ ತಾ|| ಪೆಟ್ರೋಲಿನಿಂದ ಉಂಟಾದ ಬೆಂಕಿಯ ಪರಿಣಾಮವಾಗಿ ಪೂರ್ಣವಾಗಿ ಸುಟ್ಟು ಹೋಯಿತೆಂದು ವರದಿಯಾಗಿದೆ ಅವರ ಮನೆಯಲ್ಲಿ ವಾಸವಾಗಿದ್ದವರು ಆ ರಾತ್ರಿ ಲಾಂದ್ರ ಹಿಡಿದು ಮಹಡಿ ಮೇಲೆ ಇದ್ದ ಪೆಟ್ರೋಲನ್ನು ಬಗ್ಗಿಸುತ್ತಿದ್ದಾಗ ಅಕಸ್ಮಾತ್ ಪೆಟ್ರೋಲಿಗೆ ಬೆಂಕಿ ತಗುಲಿತೆಂದು ಹೇಳಲಾಗಿದೆ ಒಬ್ಬರಿಗೆ ಗಾಯವಾಗಿದೆ ಅಕ್ಕ ಪಕ್ಕದ ಜನರು ಮುಂಜಾಗ್ರತೆ ಕ್ರಮ ಕೈಗೊಂಡುದರಿಂದ ಬೆಂಕಿಯು ಹರಡಲಿಲ್ಲ.

ಉಪನ್ಯಾಸ

ಮೈಸೂರು ವಾಣಿವಿಲಾಸ ಮೊಹಲ್ಲಾ ಆಂಡಾಳ್ ಮಂದಿರದಲ್ಲಿ ಈ ದಿನ ಮತ್ತು ಸೋಮವಾರ ಸಂಜೆ ಆರು ಗಂಟೆಗೆ ಶ್ರೀಮತಿ ವಿ ರುಕ್ಮಿಣಮ್ಮ, ಶ್ರೀಗಳಾದ ಎಸ್ ಕೃಷ್ಣಮೂರ್ತಿ ಮತ್ತು ಎ ವಾಸದೇವಯ್ಯನವರು ಮನುಷ್ಯನ ಸ್ವರೂಪ ಮತ್ತು ಜೀವನದ ಗುರಿ ಎಂಬ ವಿಷಯವಾಗಿ ಭಾಷಣ ಮಾಡುವರು

ಗುರು ಪೂರ್ಣಿಮಾ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಸಾಯಿಬಾಬಾ ಮಂದಿರದಲ್ಲಿ ನಾಳಿದ್ದು ಗುರು ಪೂರ್ಣಿಮಾ ಪ್ರಯುಕ್ತ ಬೆಳಿಗ್ಗೆ ಪೂಜೆ, ಹೋಮ, ಸತ್ಯನಾರಾಯಣ ವ್ರತ ಮುಂತಾದುವುಗಳೂ ಸಂಜೆ ೭ ಘಂಟೆಗೆ ಮುಳಬಾಗಿಲು ಶ್ರೀ ನಾರಾಯಣ ದಾಸರು ಮತ್ತು ಶ್ರೀ ಪಿ ರಾಮಸ್ವಾಮಿ ನಾಯ್ಡುರವರಿಂದ ರೋಟರಿ ಕಬೀರ್ ಸಂವಾದ ಎಂಬ ಹರಿಕಥೆಯೂ ಏರ್ಪಾಟಾಗಿವೆ

ಯುವಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಇಟ್ಟಿಗೆ ಗೂಡಿನ ಯುವಕರ ಸಂಘದ ೭ ನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ಘಂಟೆಗೆ ಇಟ್ಟಿಗೆಗೂಡಿನಲ್ಲಿರುವ ವಿ ಡಿ ಎಸ್ ನಾಯ್ಡುರವರ ವ್ಯಾಯಾಮ ಶಾಲೆಯಲ್ಲಿ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದಾಗಿದೆ

ಚಂದಾದಾರರಲ್ಲಿ ವಿನಂತಿ

'ಸಾಧ್ವಿ' ಪತ್ರಿಕೆಯ ಚಂದಾದಾರರೆಲ್ಲರೂ ತಮ್ಮ ಚಂದಾ ಹಣವನ್ನು ಮುಂಗಡವಾಗಿ ಪಾವತಿ ಮಾಡಿ ರಶೀತಿಯನ್ನು ಪಡೆಯಬೇಕೆಂದೂ, ರಶೀತಿ ಪಡೆಯದೆ ಕೊಟ್ಟ ಹಣಕ್ಕೆ ನಾವು ಜವಾಬ್ದಾರರಲ್ಲವೆಂದೂ ಈ ಮೂಲಕ ತಿಳಿಸಬಯಸುತ್ತೇವೆ

ಪತ್ರಿಕೆಗಳು ತಲಪದಿದ್ದರೆ 792ನೇ ನಂಬರಿಗೆ (ಸಾಧ್ವಿ) ಟೆಲಿಫೋನ್ ಮಾಡಬೇಕೆಂದು ಕೋರಲಾಗಿದೆ

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಪತ್ರಿಕೆ ಏಜೆಂಟರು,
ಮೈಸೂರು.

ನೆನಪಿರಲಿ! :: ನೆನಪಿರಲಿ!

ಅಬೀಡ್ಸ್‌ರವರ

ನಾಳೆ ಬೆಳಿಗ್ಗೆ ಹರಾಜು ಮಾರಾಟ 10 ಘಂಟೆಗೆ

Edited, Printed and Published by A R Nagarajan at Sadhvi Press, D Subbiah Road, Mysore.

ಪೋ॥ ನಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೬-೭-೫೨ [ಸಂಚಿಕೆ ೪೬

ಮುಂಬಯಿ ಭಾಷಾ ಪ್ರದೇಶಗಳ ವಿಂಗಡಣೆ

ಪೊಲೀಸಿನವರು ಬಸ್ಸುಗಳಲ್ಲಿ ಉಚಿತವಾಗಿಹೋದರೆಕ್ರಮ

ಗೃಹಮಂತ್ರಿ ಸಿದ್ದವೀರಪ್ಪನವರ ಹೇಳಿಕೆ

ಬೆಂಗಳೂರು ೬

ಶಾಸನ ಸಭೆಯಲ್ಲಿ ನೆನ್ನೆ ಪೊಲೀಸು ಇಲಾಖಾ ಬೇಡಿಕೆ ಸಂಬಂಧವಾಗಿ ಬಂದ ಎರಡು ಖೋತಾ ನಿರ್ಣಯಗಳ ಮೇಲಿನ ಚರ್ಚೆಗೆ ಉತ್ತರವೀಯುತ್ತಾ ಗೃಹ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಪೊಲೀಸು ಇಲಾಖೆಯ ಪುನರ್ವ್ಯವಸ್ಥೆ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದೆಂದೂ, ಮತ್ತು ಪೊಲೀಸು ಸಬ್ ಇನ್ಸ್‌ಪೆಕ್ಟರುಗಳ ಸಂಬಳವನ್ನು ಹೆಚ್ಚಿಸುವ ವಿಷಯವೂ ಸರ್ಕಾರದ ಗಮನದಲ್ಲಿದೆಯೆಂದೂ ತಿಳಿಸಿ ಪೊಲೀಸು ಕಾನ್ಸ್‌ಟೇಬಲ್ಲುಗಳು ವಾರಂಟು ಇಲ್ಲದೆ ಬಸ್ಸುಗಳಲ್ಲಿ ಉಚಿತವಾಗಿ ಹೋದರೆ ಅವರುಗಳನ್ನು ಶಿಕ್ಷೆಗೆ ಗುರಿಪಡಿಸಲಾಗುವುದೆಂದು ಹೇಳಿದರು. ಮದ್ಯಪಾನನಿರೋಧದ ಸಂಬಂಧವಾಗಿ ಬಂದ ಖೋತಾ ನಿರ್ಣಯಕ್ಕೆ ಉತ್ತರವಿತ್ತು ಸಚಿವರು ಕುಡುಕರನ್ನು ಹೆಚ್ಚಾಗಿ ಪತ್ತೆಹಚ್ಚಿ ಪೊಲೀಸರು ಕ್ರಮ ಕೈಗೊಂಡಿರುವರೆಂದೂ ಪೊಲೀಸರ ಶಾಸನವನ್ನು ಉಲ್ಲಂಘನೆ ಮಾಡಿದರೆ ಆ ವಿಷಯವನ್ನು ಸರ್ಕಾರದ ಗಮನಕ್ಕೆ ಸದಸ್ಯರು ತರಬೇಕೆಂದೂ ಸೂಚಿಸಿದರು

ಬಾಲಕ ಡಕಾಯಿತನಿಂದ ೪೦ಸಾವಿರ ರೂ. ಅಪಹಾರ

ಬೊಂಬಾಯಿನ ಬ್ಯಾಂಕೊಂದರಲ್ಲಿ ನೆನ್ನೆ ಒಬ್ಬ ಬಾಲಕನು ಒಬ್ಬ ಗುಮಾಸ್ತೆಯಿಂದ ೪೫ ಸಾವಿರ ರೂಗಳ ಚೀಲವೊಂದನ್ನು ಅಪಹರಿಸಿಕೊಂಡು ಯಾರಿಗೂ ಸಿಗದೆ ಹೋಗಿರುವನೆಂದು ವರದಿಯಾಗಿದೆ. ಗುಮಾಸ್ತೆಯು ಹಣವನ್ನು ಬ್ಯಾಂಕಿಗೆ ಕಟ್ಟಲು ನಿಂತಿದ್ದಾಗ ಆ ಬಾಲಕನು ಅವನ ಗಮನವನ್ನು ಬೇರೆ ಕಡೆ ಸೆಳೆದು ಹಣದ ಚೀಲವನ್ನು ಕಸಿದುಕೊಂಡು ಪರಾರಿಯಾದನೆಂದು ಗೊತ್ತಾಗಿದೆ

ಪರ್ಷಿಯಾ ಸರ್ಕಾರದ ರಾಜೀನಾಮೆ

ಪರ್ಷಿಯಾದಲ್ಲಿ ಸಂಭವಿಸಿದ ರಾಜಕೀಯ ಬಿಕ್ಕಟ್ಟಿನ ಪರಿಣಾಮವಾಗಿ ಅಲ್ಲಿನ ಪ್ರಧಾನಿ ಡಾ॥ ಮುಸ್ಸಾದಿಕ್‌ರವರೂ ಮತ್ತು ಅವರ ಸಹೋದ್ಯೋಗಿಗಳೂ ನೆನ್ನೆ ಷಹಾರವರಿಗೆ ರಾಜೀನಾಮೆ ಸಲ್ಲಿಸಿದರೆಂದು ತಿಳಿದುಬಂದಿದೆ. ಮುಸ್ಸಾದಿಕ್ಕರು ರೇಡಿಯೋ ಭಾಷಣ ಮಾಡಿ ತಮಗೆ ಅಧಿಕಾರದಲ್ಲಿ ಬೇಸರಿಕೆಯಾಗಲೀ ಅಥವಾ ನಿಶ್ಶಕ್ತಿಯಾಗಲೀ ಉಂಟಾಗಿಲ್ಲವೆಂದೂ, ಪಾರ್ಲಿಮೆಂಟು ಅಪಕ್ಷ ಪಟ್ಟಿನಲ್ಲಿ ಹೊಸ ಸರ್ಕಾರ ರಚಿಸಿ ವಿದೇಶೀ ಸಾಮ್ರಾಜ್ಯ ಶಾಹಿಯ ವಿರುದ್ಧ ಹೋರಾಡಲು ಸಿದ್ಧವಾಗಿರುವುದಾಗಿಯೂ ತಿಳಿಸಿದರು. ತರುವಾಯ ಅಲ್ಲಿನ ಮಜ್ಲಿಸ್ ಶಾಸನ ಸಭೆಯ ಅಧ್ಯಕ್ಷ ಡಾ॥ ಹಸನ್ ಇಮಾಮಿಯವರು ಷಹಾರವರನ್ನು ಭೇಟಿ ಮಾಡಿ ಹೊಸದಾಗಿ ಚುನಾಯಿತವಾದ ಮಜ್ಲಿಸ್ ಸಭೆಯು ಅಧಿಕಾರ ವಹಿಸಿಕೊಳ್ಳಲು ಸಿದ್ಧವಾಗಿರುವುದೆಂದು ಹೇಳಿದರು

ಪ್ರದರ್ಶನಕಾರರ ಮೇಲೆ ಪೊಲೀಸ್ ನಾಯಿಗಳ ಧಾಳಿ

ಡೆನ್ಮಾರ್ಕಿನ ರಾಜಧಾನಿ ಕೋಪನ್ ಹೇಗನ್ ನಗರದಲ್ಲಿ ನೆನ್ನೆ ಅಟ್ಲಾಂಟಿಕ್ ರಾಷ್ಟ್ರಗಳ ಸೇನಾನಿ ಮ್ಯಾಥ್ಯೂರಿಜ್‌ವೇಯವರು ಅಲ್ಲಿನ ಪ್ರಧಾನ ಸೇನಾನಿಯವರೊಡನೆ ಭೋಜನ ಮಾಡುತ್ತಿದ್ದಾಗ ಹೊರಗಡೆ ೭೦೦ ಜನರು ಪ್ರದರ್ಶನ ನಡೆಸಿದರೆಂದೂ, ಅವರನ್ನು ಓಡಿಸಲು ಪೊಲೀಸ್ ನಾಯಿಗಳನ್ನು ಬಿಡಲಾಯಿತೆಂದೂ ನಾಯಿಗಳು ಕಚ್ಚಿದುದರಿಂದಾಗಿ ಹಲವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ಹೇಳಲಾಗಿದೆ. ಪೊಲೀಸರು ೪೦ ಜನರನ್ನು ದಸ್ತಗಿರಿ ಮಾಡಿ ೯ ಜನರನ್ನು ಇಟ್ಟುಕೊಂಡು ಮಿಕ್ಕವರನ್ನು ಬಿಟ್ಟುಬಿಟ್ಟಿರುವರು

ಸಹಕಾರಸಂಘಗಳ ರಿಜಿಸ್ಟ್ರಾರ್ ಕಛೇರಿಯಲ್ಲಿ ಬೆಂಕಿ

ಮದ್ರಾಸಿನ ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ನೆನ್ನೆ ಬೆಂಕಿಯುಂಟಾಗಿ ಅಗಾಧ ನಷ್ಟವುಂಟಾಗಿರುತ್ತದೆ. ಬೆಂಕಿ ಆರಿಸುವ ಏಳು ಇಂಜನ್ನುಗಳು ಮುಕ್ಕಾಲು ಘಂಟೆ ಕಾಲ ಸತತವಾಗಿ ಹೋರಾಡಿ ಬೆಂಕಿಯನ್ನು ಉಪಶಮನಗೊಳಿಸಿದುವೆಂದು ಹೇಳಲಾಗಿದೆ. ಕಛೇರಿಯ ಕೆಲಸವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಪೆಟ್ಟಿಗೆಯೊಂದರಲ್ಲಿದ್ದ ಫಿಲಂಗಳಿಗೆ ಬೆಂಕಿ ತಗುಲಿ ಅವು ಸಿಡಿದುವೆಂದೂ, ನೌಕರರು ತಮ್ಮ ಪ್ರಾಣರಕ್ಷಣೆಗಾಗಿ ೩೦ ಅಡಿ ಎತ್ತರದಿಂದ ಕೆಳಗೆ ಧುಮುಕಿದರೆಂದೂ ಹೇಳಲಾಗಿದೆ. ಆ ಕೊಠಡಿಗಳಲ್ಲಿದ್ದ ಪುರಾವೆಗಳೂ ಉರಿದುಹೋದುವು

ಗುರು ಪೂರ್ಣಿಮಾ

ಗುರು ಪೂರ್ಣಿಮಾ ಪ್ರಯುಕ್ತ ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ನಾಳೆಯಿಂದ ೧೧ ನೇ ತಾರೀಖಿನ ವರೆಗೆ ಪ್ರತಿದಿನ ಬೆಳಗ್ಗೆ ಅಭಿಷೇಕ, ಪೂಜೆ ಮತ್ತು ಪ್ರಾರ್ಥನೆ ಮುಂತಾದವೂ, ಸಾಯಂಕಾಲ ಸಂಗೀತ ಹರಿಕಥೆಗಳೂ ನಡೆಯಲೇರ್ಪಾಡಾಗಿವೆ ೧೦ ನೇ ತಾರೀಖು ಗುರುವಾರ ಬಡ

ಬೊಂಬಾಯಿಯ ಭಾಷಾವಾರು ಪ್ರದೇಶಗಳ ವಿಂಗಡಣೆ

ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಬಿ ಎಸ್ ಹಿರೆಯವರು ನೆನ್ನೆ ದಿನ ಪೂನಾದಲ್ಲಿ ಸೇರಿದ್ದ ಕಾಂಗ್ರೆಸ್ ಸಭೆಯಲ್ಲಿ ಮಾತನಾಡುತ್ತಾ ಬೊಂಬಾಯಿಯನ್ನು ಭಾಷಾವಾರು ಪ್ರದೇಶವಾಗಿ ವಿಂಗಡಿಸುವ ವಿಷಯವನ್ನು ಕಳೆದ ವಾರ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತೆಂದೂ, ಸಧ್ಯದಲ್ಲೇ ಈ ಸಂಬಂಧದ ಗಡಿ ನಿರ್ಧಾರಣಾ ಸಮಿತಿಯು ರಚನೆಯಾಗಲಿರುವುದಾಗಿಯೂ ತಿಳಿಸಿದರು

ಆಸ್ತಿ ಪಟ್ಟಿ ಒದಗಿಸಲು ಅಸ್ಸಾಂ ನೌಕರರಿಗೆ ಸೂಚನೆ

ಅಸ್ಸಾಮಿನ ಸರ್ಕಾರಿ ನೌಕರರ ವರ್ತನೆಯಿಂದ ನಿಬಂಧನೆಗಳನ್ನು ತಿದ್ದುಪಡಿ ಮಾಡಿ, ಪ್ರತಿಯೊಬ್ಬ ನೌಕರನೂ ತನ್ನ, ತನ್ನ ಪತ್ನಿ ಅಥವಾ ಸಂಸಾರದವರ ಆಸ್ತಿಗಳ ಬಗ್ಗೆ ಆಗಾಗ್ಗೆ ವರದಿಯೊಪ್ಪಿಸಬೇಕೆಂದು ಸೂಚಿಸಲಾಗಿದೆ. ತಪ್ಪಿದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಗಿದೆ. ಡಿಕ್ಲರೇಷನ್ನಿನಲ್ಲಿ ನಮೂದಿಸದಿರುವ ಆಸ್ತಿಯು ಇದ್ದರೆ ಅದು ಅಪ್ರಾಮಾಣಿಕತೆಯಿಂದ ಪಡೆದುದೆಂದು ಭಾವಿಸಲಾಗುವುದು.

ವಿವಾಹ ಮಹೋತ್ಸವ

ರಾಜಧಾನಿಯ ವಕೀಲರಾದ ಶ್ರೀ ಆರ್ ಎಂ ಶ್ರೀನಿವಾಸಯ್ಯಂಗಾರ್ಯರ ತಮ್ಮ ಪುತ್ರ ಚಿ॥ ರಾ॥ ಆರ್ ಎಂ ನಾರಾಯಣ ಅಯ್ಯಂಗಾರ್ಯರಿಗೆ ಶ್ರೀ ಎಸ್ ಶ್ಯಾಮಯ್ಯಂಗಾರ್ಯರ ಮಗಳು ಸೌ॥ ಎಸ್. ಪದ್ಮಾವತಿಯವರನ್ನು ತಂದುಕೊಂಡು ಬೆಂಗಳೂರಿನಲ್ಲಿ ಕಳೆದ ೨ ನೇ ತಾ॥ ವಿವಾಹವನ್ನು ನೆರವೇರಿಸಿದರು

ಬಗ್ಗರಿಗೆ ಅನ್ನ ಸಂತರ್ಪಣೆಯೂ, ಸಂಜೆ ಗೃಹಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರ್ಥನೆಯೂ ಜರುಗುವುವು. ೧೧ ನೇ ತಾ॥ ಸಂಜೆ ೭ ಘಂಟೆಗೆ ಶ್ರೀ ಸದ್ಗುರು ಸಾಯಿನಾಥರ ಉತ್ಸವ ಏರ್ಪಾಡಾಗಿದೆ

ನಂಜನಗೂಡಿಗೆ ಇಂಟರ್ ಕಾಲೇಜು

ಶಾಸನ ಸಭೆಯಲ್ಲಿ ನಿಲುವಳಿ ನಿರ್ಣಯ

ಬೆಂಗಳೂರು ೬

ನೆನ್ನೆ ದಿನ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳಾದ ನಂತರ ನಿಲುವಳಿ ನಿರ್ಣಯಗಳ ಬಗ್ಗೆ ಚರ್ಚೆಯಾಯಿತು. ಉಪಾಧ್ಯಕ್ಷರಾದ ಶ್ರೀ ಆರ್ ಚನ್ನಿಗರಾಮಯ್ಯನವರು ಆ ಕಾಲದಲ್ಲಿ ಪ್ರಥಮತಃ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ೨,೨೭,೬೯,೦೦೦ ರೂ ಗಳ ಬೇಡಿಕೆಯೊಂದನ್ನು ಸಲ್ಲಿಸಲಾಯಿತು.

ಶ್ರೀ ಎಚ್ ಕೆ ಶಿವರುದ್ರಪ್ಪನವರು ಒಂದು ನಿಲುವಳಿ ಸೂಚನೆಯನ್ನು ಮುಂದಿಟ್ಟು ನಂಜನಗೂಡಿನ ಸುತ್ತ ಮುತ್ತ ಅನೇಕ ಹೈಸ್ಕೂಲುಗಳು ಸ್ಥಾಪಿತವಾಗಿರುವುದರಿಂದ ನಂಜನಗೂಡಿನಲ್ಲಿ ಒಂದು ಇಂಟರ್‌ಮೀಡಿಯೇಟ್ ಕಾಲೇಜನ್ನು ತೆರೆಯುವುದು ಅಗತ್ಯವೆಂದು ಒತ್ತಾಯಪಡಿಸಿದರು. ಶ್ರೀ ಎಂ ಲಿಂಗಣ್ಣನವರು ಸೂಚನೆಯನ್ನು ಸಮರ್ಥಿಸಿದರು. ಶ್ರೀ ಕೆ ವಿ ಶಂಕರಗೌಡರು ಅದನ್ನು ವಿರೋಧಿಸಿ, ಈಗಾಗಲೇ ತೆರೆಯಲಾಗಿರುವ ಇಂಟರ್ ಕಾಲೇಜುಗಳಿಗೇ ಕಟ್ಟಡಗಳು ಮತ್ತು ಲ್ಯಾಬೊರೇಟರಿ ಉಪಕರಣಗಳೇ ಇಲ್ಲದೆ ಅಪೂರ್ಣವಾಗಿರುವುದರಿಂದ ಹೊಸ ಕಾಲೇಜುಗಳನ್ನು ತೆರೆಯಬಾರದೆಂದು ತಿಳಿಸಿದರು.

ವಿದ್ಯಾ ಸಚಿವರು ಚರ್ಚೆಗೆ ಉತ್ತರವಿತ್ತು ಸಂಸ್ಥಾನದಲ್ಲಿ ಒತ್ತಾಯಪೂರ್ವಕ ಪ್ರಾಥಮಿಕ ವಿದ್ಯಾಭ್ಯಾಸದ ವೆಚ್ಚವನ್ನು ತಗ್ಗಿಸಲು ಸರ್ಕಾರದವರು ಇಚ್ಛಿಸುತ್ತಿಲ್ಲವೆಂದೂ, ಕಾಲೇಜು ಸ್ಥಾಪನೆಗೆ ಬಹಳ ವೆಚ್ಚ ತಗುಲುವುದರಿಂದ ಸ್ಥಳೀಯ ಸಂಸ್ಥೆಗಳಾದ ಪೌರಸಭೆ ಮತ್ತು ಜಿಲ್ಲಾ ಬೋರ್ಡುಗಳು ಇಂಟರ್ ಕಾಲೇಜನ್ನು ತೆರೆಯುವುದರಲ್ಲಿ ಅಭ್ಯಂತರವಿರುವುದಿಲ್ಲವೆಂದೂ ತಿಳಿಸಿದರು. ಅನಂತರ ನಿಲುವಳಿಯು ವಾಪಸು ತೆಗೆದುಕೊಳ್ಳಲ್ಪಟ್ಟಿತು

ಪ್ರಾಥಮಿಕ ಶಾಲಾ ಉಪಾಧ್ಯಾಯರ ಮೂಲ ಸಂಬಳವನ್ನು ೩೦ ರೂ ಕ್ಕೇರಿಸಬೇಕೆನ್ನುವ ಬಗ್ಗೆ ಶ್ರೀ ಬಿ ಪಿ ನಾಗರಾಜಮೂರ್ತಿಯವರು ಒಂದು ನಿಲುವಳಿ ನಿರ್ಣಯವನ್ನು ತಂದು ಅದರ ಚರ್ಚೆಗೆ ಅವಕಾಶ ಕೋರಿದರು. ವಿದ್ಯಾ ಸಚಿವರು ಉತ್ತರವಿತ್ತು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಸರ್ಕಾರದವರು ೧೧ ಕೋಟಿ ರೂ ವೆಚ್ಚಮಾಡುತ್ತಿರುವರೆಂದೂ ಈ ಬಗ್ಗೆ ಸರ್ಕಾರದವರು ಸಹಾನುಭೂತಿ ಹೊಂದಿರುವರೆಂಬುದಕ್ಕೆ ಇದೇ ನಿದರ್ಶನವೆಂದೂ ಆದುದರಿಂದ ನಿಲುವಳಿ ಸೂಚನೆಯು ಅಗತ್ಯವಿಲ್ಲವೆಂದೂ ತಿಳಿಸಿದರು. ಸದಸ್ಯರ ಒತ್ತಾಯದ ಮೇಲೆ ಅದನ್ನು ಓಟಿಗೆ ಹಾಕಲಾಗಿ ಬಿದ್ದು ಹೋಯಿತು

ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹೆಚ್ಚು ವೇತನ ಕೊಡುವ ಬಗ್ಗೆ ಶ್ರೀ ಬಿ ರಾಚಯ್ಯನವರು ತಂದ ನಿಲುವಳಿ ಸೂಚನೆಗೆ ಸಚಿವರು ಸೂಕ್ತ ಸಮಾಧಾನವಿತ್ತ ನಂತರ ವಾಪಸು ತೆಗೆದುಕೊಳ್ಳಲ್ಪಟ್ಟಿತು

ಕುಂಭಾಭಿಷೇಕ

ರಾಜಧಾನಿಯ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಗುಂಡುಗವಿ ಶಾಂತಾಶ್ರಮದಲ್ಲಿ ನಾಳೆ ಬೆಳಗ್ಗೆ ೧೦ ಗಂಟೆಗೆ ಕುಂಭಾಭಿಷೇಕ, ಕಳಸ ಸ್ಥಾಪನೆ ಮತ್ತು ಮಂಗಳಾರತಿ ಇವುಗಳು ಏರ್ಪಾಡಾಗಿವೆ. ಸಂಜೆ ೫ ಗಂಟೆಗೆ ಶ್ರೀಮತಿ ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತ, ಸ್ವಾಮಿ ಸೋಮನಾಥಾನಂದರವರ ಭಾಷಣ, ಶ್ರೀ ಸಂಬಂಧ ಮೂರ್ತಿಯವರಿಂದ ಭಕ್ತ ನಂದನಾರ್ ಎಂಬ ಹರಿಕಥೆ ಇವೂ ಏರ್ಪಾಡಾಗಿವೆ. ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು

ವಾರ ಭವಿಷ್ಯ

ತಾ|| ೬-೭-೫೨ರಿಂದ ೧೨-೭-೫೨ ರ ವರೆಗೆ

ಮೇಷ — ವಾಹನಾದಿಗಳ ಬಗ್ಗೆ ಎಚ್ಚರಿಕೆ ಬೇಕು ಮಾರ್ಗದಲ್ಲಿ ಘಕ್ಕೆ ಸಂಭವ ವಾಹನಗಳಿಗೂ ಜಖಂ ವ್ಯಾಪಾರಾದಿಗಳಲ್ಲಿ ತೊಂದರೆ ದೂರ ತಾ|| ೬-೭ ಸ್ತ್ರೀ ಸಂಬಂಧಿಕರಿಂದ ಸಹಾಯ

ವೃಷಭ ಆರೋಗ್ಯ ನೆಟ್ಟಗೆ ಮಾನಸಿಕ ತೊಂದರೆ ಎಳ್ಳಷ್ಟೂ ವಿಶ್ರಾಂತಿ ಇಲ್ಲ ಮೇಲಧಿಕಾರಿಗಳೊಡನೆ ಮನಸ್ತಾಪ, ಮಹತ್ವದ ಕಾಗದ ಪತ್ರಗಳೇ ಹೋಗುವ ಪ್ರಸಂಗ ತಾ|| ೭-೮ ವಿಶೇಷ ಖರ್ಚು ಮುಗ್ಗಟ್ಟು

ಮಿಥುನ — ಸತ್ಪುರುಷರ ಸಹವಾಸ ಆರೋಗ್ಯ ನೆಟ್ಟಗ ಪರೋಕ್ಷವಾದ ವ್ಯಾಪಾರಾದಿಗಳಲ್ಲಿ ಸಮಾಧಾನಕರ ಸ್ಥಿತಿ ತೀರ್ಥ ಕ್ಷೇತ್ರಗಳ ಪ್ರವಾಸ. ತಾ|| ೮ ಅತಿಥಿಗಳ ಹಾವಳಿ ದಾನ ಧರ್ಮಕ್ಕಾಗಿ ಖರ್ಚು

ಕರ್ಕ ಮಾನಸಿಕ ಸ್ವಾಸ್ಥ್ಯವಿರದು ಆರೋಗ್ಯಕ್ಕೆ ಧಕ್ಕೆ ಹಣಕಾಸಿನ ಸ್ಥಿತಿಯೂ ಚೆನ್ನಾಗಿರದು. ವ್ಯಾಪಾರಾದಿಗಳಲ್ಲಿ ಅಸಹಕಾರ ನೌಕರಿಯಲ್ಲಿ ಬೇಸರ ತಾ|| ೭, ೭ ಅಗ್ನಿ ಭಯ ವಾಹನ ಭಯ

ಸಿಂಹ ವಾರ ಸಾಧಾರಣ ಆರೋಗ್ಯ ನೆಟ್ಟಗ ಉದ್ಯೋಗ ನೌಕರಿಗಳಲ್ಲಿ ಪರಿಸ್ಥಿತಿ ಬಲಗೊಳ್ಳುವುದು ಎದುರಾಳಿಗಳ ಪರಾಭವ ಪವಿತ್ರ ಸ್ಥಳ ಸಂದರ್ಶನ ತಾ|| ೮ ಗೆಳೆಯರ ಅತಿಥಿಗಳ ಆಗಮನ

ಕನ್ಯಾ — ಆರೋಗ್ಯ ನೆಟ್ಟಗ ಕುಟುಂಬ ಸ್ಥಿತಿ ಕ್ಲೇಶಕರ ಅಣ್ಣ ತಮ್ಮಂದಿರ ಹಗೆತನ ಆಲಸ್ಯದ ವಾರ ಕಣ್ಣಿ ತಾ|| ೧೧, ೧೧ ಧನ ಹಾನಿ, ಮಹತ್ವದ ಪತ್ರವ್ಯವಹಾರ

ತುಲಾ — ಸಂತೋಷವಿರದು ಆರೋಗ್ಯ ನೆಟ್ಟಗಿಲ್ಲ ನೌಕರಿಯಲ್ಲಿ ಸಂತಾಪ ಘಟನೆ ವ್ಯಾಪಾರಾದಿಗಳಲ್ಲಿ ಹಾನಿ ತಾ|| ೭, ೯ ವಾಹನಾಪಘಾತ ಎತ್ತರದಿಂದ ಬೀಳುವ ಪ್ರಸಂಗ

ವೃಶ್ಚಿಕ ಬಹಳ ಎಚ್ಚರಿಕೆ ಇರಲಿ ಗಾಬರಿ ಪಡುವ ವಾರ ಶಾಂತಿ ಇರದು. ಆರೋಗ್ಯ ನೆಟ್ಟಗಿರದು ವ್ಯಾಪಾರ ಉದ್ಯೋಗಗಳಲ್ಲಿ ವಿರುದ್ಧ ಘಟನೆಗಳು ತಾ|| ೧೦, ೧೧ ಅಪಮಾನ, ಧನಹಾನಿ

ಧನು — ಕುಟುಂಬದಲ್ಲಿ ಗೊಂದಲ ಆರೋಗ್ಯ ಉತ್ತಮ. ಮಾನ ಸನ್ಮಾನ ಆಕಸ್ಮಿಕ ಪ್ರವಾಸ ವ್ಯಾಪಾರಾದಿಗಳಲ್ಲಿ ಲಾಭ ತಾ|| ೯, ೧೦ ಮಹತ್ವದ ಪತ್ರ, ಶುಭ ವಾರ್ತೆ

ಮಕರ ಉತ್ತಮ ಹಣ ಕಾಸಿನ ಸ್ಥಿತಿ ಆರೋಗ್ಯ ನೆಟ್ಟಗ ನೌಕರಿಯಲ್ಲಿ ಧಕ್ಕೆ ವ್ಯಾಪಾರಾದಿಗಳಲ್ಲಿ ಬಿಕ್ಕಟ್ಟ

WANTED

TYPEWRITERS In Good Condition

Please Contact

COMMERCIAL SECTION

CITY TUTORIAL COLLEGE

Near V. V. Market Mysore

ಜಪಾನಿನಲ್ಲಿ ಕಮ್ಯೂನಿಸ್ಟರ ಪಿತೂರಿ

ಜಪಾನಿನಲ್ಲಿ ಸಶಸ್ತ್ರ ದಂಗೆ ಎಬ್ಬಿಸಲು ಕಮ್ಯೂನಿಸ್ಟರು ಪಿತೂರಿ ನಡೆಸುತ್ತಿರುವರೆಂದು ಗೊತ್ತಾಗಿದೆ ಅಲ್ಲಿನ ೬ ಪ್ರಮುಖ ನಗರಗಳಲ್ಲಿ ಶಸ್ತ್ರಸಜ್ಜಿತರಾದ ಪ್ರದರ್ಶನಕಾರರಿಗೂ ಪೋಲೀಸರಿಗೂ ಘರ್ಷಣೆಯುಂಟಾಯಿತೆಂದೂ ಒಸಾಕಾದಲ್ಲಿ ೫೦೦ ಮಂದಿ ಪ್ರದರ್ಶನಕಾರರ ಮೇಲೆ ಪೋಲೀಸರು ಅಶ್ರು ವಾಯು ಪ್ರಯೋಗ ನಡೆಸಿದರೆಂದೂ ವರದಿಯಾಗಿದೆ

ಮದ್ರಾಸು ಜವಾನರಿಗೆ ೨ ರೂ. ಹೆಚ್ಚು ಭತ್ಯ

ಜೀವನ ವೆಚ್ಚವು ಹೆಚ್ಚಿರುವುದರಿಂದ ಮದ್ರಾಸು ನಗರದ ಸರ್ಕಾರಿ ಜವಾನರುಗಳಿಗೆ ತಿಂಗಳಿಗೆ ೨ ರೂ ಗಳ ಹೆಚ್ಚಿನ ಭತ್ಯವನ್ನು ಕೊಡಲು ಏರ್ಪಾಡಾಗಿದೆ ಇದರಿಂದ ವರ್ಷಕ್ಕೆ [illegible] ಸಾವಿರ ರೂ ಹೆಚ್ಚು ವ್ಯಯವಾಗುವುದು

ಆಹಾರದ ನೀತಿ ಬಗ್ಗೆ ೭ ನೇ ತಾ|| ಹೇಳಿಕೆ

[illegible]

ಬಗೆ [illegible] ನಡೆಯಲಿದೆ

ಉಪನ್ಯಾಸ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ [illegible] ಶ್ರೀಮಾನ್ [illegible] ಉಪನ್ಯಾಸ [illegible] ಭಕ್ತಿ ಸಾಹಿತ್ಯ ಎಂಬ ವಿಷಯವಾಗಿ [illegible] ಏರ್ಪಡಿಸಲಾಗಿದೆ [illegible] ನಡೆಯುವುದು

ತನ ತಾ|| ೧೦, ೧೧ ಪ್ರವಾಸ ಗೆಳೆಯರ ಭರವಸೆ

ಕುಂಭ ಉತ್ತಮ ಸಾಂಪತ್ತಿಕ ಸ್ಥಿತಿ ವ್ಯಾಪಾರಾದಿಗಳಲ್ಲಿ ಲಾಭ ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ವೈಭವದ ದಿನಗಳು ಶತ್ರುಗಳಿಗೆ ಪಟ್ಟ ತಾ|| ೮, ೯ ಖರ್ಚು, ಅತಿಥಿಗಳ ಹಾವಳಿ

ಮೀನ ಸಂಕಟ ಪ್ರಸಂಗಗಳ ನಿವಾರಣೆ ಹಣದ ಚಿಂತೆ ದೂರವಾಗುವುದು ಪ್ರಯತ್ನಕ್ಕೆ ಫಲವುಂಟು ಪ್ರವಾಸ ಭೇಟಿ ತಾ|| ೧೦, ೧೧ ವಾಹನ ಭಯ, ಕಲಹ

ಬಿರುಗಾಳಿಯಿಂದ ೭೪ ಮಂದಿಯ ಮರಣ

ಫಿಲಿಪ್ಪೈನ್ ದ್ವೀಪಗಳ ಒಂದು ಭಾಗದಲ್ಲಿ [illegible] ಮತ್ತು ೬ನೇ ತಾ|| ರಾತ್ರಿ [illegible] ಬೀಸಿದುದರ ಪರಿಣಾಮವಾಗಿ ೭೪ ಮಂದಿ ಮಡಿದು, [illegible] ಜನರು ಪತ್ತೆಯಿಲ್ಲವಾಗಿರುತ್ತಾರೆ [illegible] ವಾಗಿದ ಲಕ್ಷಾಂತರ ರೂ ಬೆಲೆ ಬಾಳುವ ಆಸ್ತಿಗಳಿಗೆ ನಷ್ಟ ಸಂಭವಿಸಿದೆ ಸಾವಿರ ಮನೆಗಳು ಬಿದ್ದು ಹೋಗಿರುವುದಲ್ಲದೆ ಬೆಳೆ ಮುಂತಾದುವು ನಾಶವಾಗಿವೆ ಪಶ್ಚಿಮ ಬಂಗಾಳದಲ್ಲೂ [illegible] ಬಿರುಗಾಳಿಯಿಂದ [illegible] ಒಂದು ದೋಣಿ ಮಗುಚಿಕೊಂಡು ೩೦ ಜನರು ಮುಳುಗಿ ಹೋದರೆಂದು ನಾವಿಕರ [illegible] ಅನೇಕ [illegible] ಗಾಳಿಗೆ [illegible] ಹೋಗಿವೆ

ಎರಡು ಧ್ವಜಗಳು ಸರಿಯಲ್ಲ ಎಂದು ಸರ್ಕಾರದ ಪ್ರಕಟಣೆ

ಮೈಸೂರು ಸಂಸ್ಥಾನವು ಭಾರತದ [illegible] ಪ್ರಕಟಣೆ [illegible] ಮೈಸೂರು ಸರ್ಕಾರದ ಪ್ರಕಟಣೆ [illegible] ಧ್ವಜವನ್ನು ಮಾತ್ರ ಹಾರಿ [illegible] ಮೈಸೂರು ಧ್ವಜ ಹಾರಿ [illegible] ಜನರ [illegible] ಧ್ವಜವನ್ನು [illegible] ಪ್ರಕಟಣೆಯು ತಿಳಿಸುತ್ತದೆ

ಶಿಕ್ಷಣ ತರಗತಿಗಳು

[illegible] ಸಹಾಯ ಸಂಘ [illegible] ಎಂದಿನಂತೆ ಎಲ್ [illegible] ಮತ್ತು [illegible] ಪರೀಕ್ಷೆಗೆ [illegible] ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ತರಗತಿಗಳನ್ನೇರ್ಪಡಿಸಿದೆ

ಕೊರಿಯಾದಲ್ಲಿ ಕ್ರಿಮಿ ಯುದ್ಧ ನಡೆಸಲಾಗುತ್ತಿದೆಯೆಂಬ [illegible] ವಾದವನ್ನು ಬಗ್ಗೆ ನಿಷ್ಪಕ್ಷಪಾತ ವಿಚಾರಣೆಯಾಗಬೇಕೆಂಬ [illegible] ವಿಷಯವನ್ನು ಭದ್ರತಾ ಸಮಿತಿಯಲ್ಲಿ ರಷ್ಯಾ ವೀಟೋ ಪ್ರಯೋಗ ಮಾಡಿ ತಿರಸ್ಕರಿಸಿರುವುದು

ಚಿನ್ನದ ಗಣಿ ಶಿಲಾಸ್ಫೋಟನೆಯಲ್ಲಿ ೯ ಜನ ಪತ್ತೆಯಿಲ್ಲ

ಕಳೆದ ೩೦ ನೇ ತಾ|| ಚಾಂಪಿಯನ್ ರೀಫ್ ಗಣಿಗಳಲ್ಲಿ ಉಂಟಾದ ಶಿಲಾಸ್ಫೋಟನೆಯಿಂದ ಕಾಣದಾಗಿರುವ ೯ ಮಂದಿ ಇನ್ನೂ ಪತ್ತೆಯಾಗಿಲ್ಲವೆಂದೂ, ಪತ್ತೆಹಚ್ಚಲು ಹೋದವರು ಇನ್ನೂ ಹುಡುಕುತ್ತಲಿದ್ದಾರೆಂದೂ ಗೊತ್ತಾಗಿದೆ

ವಿಳಾಸ ಮುಟ್ಟಲು ೮೫೦ ದಿನ

ಅರಕಲಗೂಡಿನಲ್ಲಿ ೨-೪-೧೯೫೦ ರಲ್ಲಿ ಬರೆದ ಕಾರ್ಡೊಂದು ೪೦ ಮೈಲಿ ದೂರವಿರುವ ಶಿಕ್ಕಂರಿಯ ವಿಳಾಸವನ್ನು ೨-೪-೧೯೫೨ ರಲ್ಲಿ ತಲುಪಿತೆಂದು ಹೇಳಲಾಗಿದೆ ಪತ್ರದಲ್ಲಿ ೧೯೫೦ ನೇ ಏಪ್ರಿಲ್ ಪರೀಕ್ಷೆಯಲ್ಲಿ ವಿದ್ಯಾರ್ಥಿಯೊಬ್ಬನ ರಿಜಿಸ್ಟರ್ ನಂಬರನ್ನು ತಿಳಿಸಲಾಗಿತ್ತು

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಆಣೆ ಪೈ	
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
[illegible]	[illegible]	[illegible]
ಕಡಲೆಬೇಳೆ	[illegible]	[illegible]
[illegible]		
ರಾಗಿ	[illegible]	[illegible]
ಬೆಲ್ಲ (ಹೊಸದು)	[illegible]	[illegible]
ತೆಂಗಿನ ಕಾಯಿ ೧೦೦೦ ಕ್ಕೆ	[illegible]	[illegible]

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ [illegible] ಕರ್ನಾಟಕ ಸಂಗೀತ [illegible] ಸಂಗೀತ [illegible] ರಾವ್ ಪಾಟೀಲ [illegible] ಕನ್ನಡ ಗೀತೆಗಳು [illegible] ಸಂಗೀತ [illegible] ಕಾಲದ ಹವಾಮಾನ ಬಗ್ಗೆ ವಾರ್ತೆ

ಶ್ರೀರಂಗಪಟ್ಟಣದಲ್ಲಿ ಅಕ್ಕಿಯ ಮಾರಾಟ

ಶ್ರೀರಂಗಪಟ್ಟಣದ ಸಂತೆಯಲ್ಲಿ ಈಗ್ಗೆ ಎರಡು ವಾರಗಳಿಂದ ಅಕ್ಕಿಯ ಮಾರಾಟವಾಗುತ್ತಿದೆ ಮೊದಲ ಸಂತೆ [illegible] ಸೇರಿನಂತೆಯೂ, ಎರಡನೆಯದರಲ್ಲಿ [illegible] ಸೇರಿನಂತೆಯೂ ಬಿಕರಿಯಾಗಿರುತ್ತದೆ

ರಾಜಕಮಲ್

4—7—52ರಿಂದ [illegible] ನೇ ವಾರ

ನನ್ನ ತಂಗಿ (ತಮಿಳು)

CITY TUTORIAL COLLEGE

Near V. V. Market Mysore

COACHING CLASSES IN

"KANNADA"

INTER Arts & Sc. (Sept 52)

Admissions Received

MYSORE TRANSIT SERVICE

Excellent and Regular Goods Vehicle Service

Between **MYSORE & MADRAS** in arrangement with our Agents M/s Madras-Bangalore Transport Co

Proprietors: **THIRTHA & COMPANY**

Clearing and Forwarding Agents

Ramavilas Road Mysore (PHONE 547)

— City Collecting Branch

Messrs N S PADAKI,

Hanumantha Rao Street Near Prabha Talkies Mysore]

Edited, Printed and Published by A R Nagaraja at Sadhvi Press, D Subbiah Road, Mysore

ರಿಜಿಸ್ಟರ್ಡ್ ನಂ. 292 ॥ ವಂದೇ ಮಾತರಂ ॥ ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೭-೭-೫೨ [ಸಂಚಿಕೆ ೩೮೦

ಮುಸ್ಸಾದಿಕ್ಕರೇ ಮತ್ತೆ ಪರ್ಷಿಯದ ಪ್ರಧಾನಿ

ಗಂಡಭೇರುಂಡ ಧ್ವಜ ಮತ್ತು ಮೈಸೂರು ಗೀತೆ

ಇವುಗಳನ್ನು ಉಳಿಸಲು ಬಹಿರಂಗ ಸಭೆಯಲ್ಲಿ ನಿರ್ಣಯ

ಮೈಸೂರು ೭

ನೆನ್ನೆ ಸಾಯಂಕಾಲ ಮೈಸೂರಿನ ರಂಗಾಚಾರ್ಲು ಸ್ಮಾರಕ ಭವನದಲ್ಲಿ, ರಾಜಸೇವಾ ಪ್ರಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಐಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಮೈಸೂರು ಮಹಾಜನರ ಬಹಿರಂಗ ಸಭೆಯಲ್ಲಿ ಕೆಳಗೆ ಕಂಡ ನಿರ್ಣಯವು ಅಂಗೀಕೃತವಾಯಿತು

ಮೈಸೂರು ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಕಳೆದ [illegible] ಇನ್ನು ಮುಂದೆ ಗಂಡಭೇರುಂಡ ಧ್ವಜವನ್ನು ಸರಕಾರೀ ಕಟ್ಟಡಗಳ ಮೇಲೆ ಹಾರಿಸಕೂಡದೆಂದೂ ಮೈಸೂರಿನ ರಾಷ್ಟ್ರಗೀತೆಯಾದ 'ಕಾಯೌ ಶ್ರೀಗೌರೀ' ಎಂಬ ಮಂಗಳವನ್ನು ಹಾಡಕೂಡದೆಂದೂ ಮಾಡಿರುವ ಆಜ್ಞೆಯಿಂದ ರಾಜಭಕ್ತಿ ಪೂರಿತರಾದ ಮೈಸೂರಿನ ಮಹಾಜನರಿಗೆ ಅತ್ಯಂತ [illegible] ಹಿಂದೆ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಆತನದ 'ಗಂಡಭೇರುಂಡ' ವನ್ನು [illegible] ರಾಜವಂಶದವರು ಶ್ರೀರಂಗಪಟ್ಟಣವನ್ನು ಗೆದ್ದ ನಂತರ 'ಗಂಡಭೇರುಂಡ' ಧ್ವಜವು ನಿರ್ಮಾಣವಾಯಿತು. ಅಂದಿನ ಗಂಡಭೇರುಂಡ ಧ್ವಜವು [illegible] ಹಿಂದಿನ ವಿಜಯನಗರ ಸಾಮ್ರಾಜ್ಯ ಮತ್ತು ಮೈಸೂರು ಸುಲ್ತಾನರ [illegible] ಸಂಸ್ಕೃತಿಯ [illegible] ಅದರಂತೆ ಮೈಸೂರಿನ [illegible] 'ಕಾಯೌ ಶ್ರೀಗೌರೀ' ಎಂಬ [illegible] ಸರ್ವರ [illegible] ಮಂಗಳವಿಯೂ [illegible] [illegible] ಭಾರತ [illegible] ಮೈಸೂರು ಧ್ವಜದಲ್ಲಿ [illegible] ಇದರಿಂದ ಗಂಡಭೇರುಂಡ ಧ್ವಜ ಮತ್ತು ಕಾಯೌ ಶ್ರೀಗೌರೀ ಗೀತೆಗೆ ಪ್ರತಿಬಂಧಕ ಹಾಕುವುದು ನ್ಯಾಯವಲ್ಲವೆಂದೂ, ಆ ಪ್ರತಿಬಂಧಕವನ್ನು ಕೂಡಲೇ ರದ್ದುಮಾಡಿ, ಮೈಸೂರು ಧ್ವಜವು ಎಂದಿನಂತೆ ಎಲ್ಲಾ ಸರ್ಕಾರೀ ಕಟ್ಟಡಗಳ ಮೇಲೂ ಹಾರುವಂತೆಯೂ, ಕಾಯೌ ಶ್ರೀಗೌರೀ ಗೀತೆಯನ್ನು ಹಾಡುವಂತೆಯೂ ಆಜ್ಞೆಯನ್ನು ಹೊರಡಿಸಬೇಕೆಂದೂ ಈ ಸಭೆಯು ಮೈಸೂರಿನ ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸುತ್ತದೆ.

ಶ್ರೀಗಳಾದ ಎಫ್. ಸಿ. ದೇವರಾಜೇ ಅರಸ್, ಟಿ. ನಾರಾಯಣ, ಡಿ. ಎಚ್. [illegible] ಎಂ. ಗಂಗಾಧರಸ್ವಾಮಿ, [illegible] ಮತ್ತು [illegible] ಅವರು ಮಾತನಾಡಿದರು

ಮೊಲ್ಲಂದ ಮೈಸೂರ ಮಹಾಜನರ [illegible] ನ್ಯಾಯ [illegible] ನಿರ್ಧಾರಗಳನ್ನು ಭಾರತ ರಾಷ್ಟ್ರಾಧ್ಯಕ್ಷರಿಗೂ ಮಹಾ ಪ್ರಧಾನರಿಗೂ [illegible]

ಪ್ರಜಾ ಪ್ರಭುತ್ವದಲ್ಲಿ ಯುವಕರ ಜವಾಬ್ದಾರಿ

ಕಡಿದಾಳ್ ಮಂಜಪ್ಪನವರ ಭಾಷಣ

ಮೈಸೂರು ೭

ಒಕ್ಕಲಿಗರ ವಿದ್ಯಾರ್ಥಿ [illegible] ಮಹೋತ್ಸವವು ನೆನ್ನೆ [illegible] ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಸ್ವಾಗತ ಭಾಷಣಗಳಾದನಂತರ ಶ್ರೀ [illegible] ಆಧುನಿಕ ಕವಿತೆಗಳ ಪಠಣವೂ [illegible] ಕಾರ್ಯಕ್ರಮದಿಂದ [illegible] ಸಂಗೀತವೂ ವಿವಿಧ ವೇಷ ಸ್ಪರ್ಧೆಗಳೂ ನಡೆದುವು

ಕಾರ್ಯದರ್ಶಿಯವರಿಂದ ವರದಿ [illegible] ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನವನ್ನು ಹಂಚಿದರು

ಅಧ್ಯಕ್ಷರು ಭಾಷಣ ಮಾಡಿ ಪ್ರಜಾ ಪ್ರಭುತ್ವದಲ್ಲಿ ಯುವಕರ ಜವಾಬ್ದಾರಿಯು ಗುರುತರವಾದುದೆಂದು ಹೇಳಿದರು. ಪ್ರಾಚ್ಯ ಮತ್ತು ದೇಶಗಳಂತೆ ನಮ್ಮಲ್ಲಿಯೂ [illegible] ಮತ್ತು ವ್ಯವಸ್ಥೆಗಳು [illegible] ಕೇವಲ ಟೀಕೆ ಯಲ್ಲಿಯೇ ತೊಡಗುವುದರ ಬದಲು ಜನರು ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೆಂದು ತಿಳಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

ವಿಷಪೂರಿತ ಪ್ರಸಾದ ತಿಂದು ೬೮ ಜನರ ಕಳವಳಕರ ಸ್ಥಿತಿ

ಗೌಹತಿಯ ಬಳಿ ಒಂದು ಹಳ್ಳಿಯಲ್ಲಿ ಕಳೆದ ಶುಕ್ರವಾರ ನಡೆದ ಒಂದು ದೇವತಾ ಕಾರ್ಯದಲ್ಲಿ ಕೊಟ್ಟ ಪ್ರಸಾದವನ್ನು ಸೇವಿಸಿದ ೯೦ ಜನರ ಪೈಕಿ ಒಬ್ಬನು ಮೃತಪಟ್ಟು, ೬೮ ಜನರು ಆಸ್ಪತ್ರೆಗೆ ಸೇರಿಸಲ್ಪಟ್ಟರೆಂದೂ, ಆ ಪೈಕಿ ಗಿ ಮಂದಿಯ ಸ್ಥಿತಿಯು ಕಳವಳಕರವಾಗಿರುವುದೆಂದೂ ವರದಿಯಾಗಿದೆ ಪ್ರಸಾದವು ವಿಷಪೂರಿತವಾಗಿದ್ದುದರಿಂದಲೇ ಈ ಘಟನೆಯು ಸಂಭವಿಸಿತೆಂದು ಹೇಳಲಾಗಿದೆ

ಗಂಡನ ಪುನರ್ವಿವಾಹಕ್ಕಾಗಿ ಪತ್ನಿಯ ಆತ್ಮಹತ್ಯೆ

ಮಂಗಳೂರಿನಲ್ಲಿ ಮನೋರಮಾ ಎಂಬ ೨೫ ವರ್ಷದ ತರುಣಿಯು ತನ್ನ ಗಂಡನು ಪೇರೊಬ್ಬಳನ್ನು ವಿವಾಹವಾದ ಕ್ಕೆ ಬಿಗುಪ್ಸೆಗೊಂಡು ತನ್ನ ನಾಲ್ಕು ಮಕ್ಕಳೊಡನೆ ಕೆರೆಗೆ ಬಿದ್ದು ಪ್ರಾಣ ಕಳೆದು ಕೊಂಡ ಸುದ್ದಿಯು ವರದಿಯಾಗಿದೆ

ರಾಘವೇಂದ್ರ ಸ್ವಾಮಿಗಳ ಉಪದೇಶ

ಮೈಸೂರು ೭

ಶ್ರೀ ರಾಘವೇಂದ್ರ ಸ್ವಾಮಿಗಳವರು ಮೊನ್ನೆ ಸುಬ್ಬರಾಯನ ಕೆರೆ ಬಳಿ ಇರುವ ದೇವಾಲಯದಲ್ಲಿ ಮೂಲ ರಾಮ ದೇವರ ಪೂಜಾದಿಗಳನ್ನು ವೈಭವದಿಂದ ನೆರವೇರಿಸಿದರು. ತರುವಾಯ ಸಹಸ್ರಾರು ಜನರಿಗೆ ಅನ್ನದಾನವೂ ನಡೆಯಿತು. ಪೋಲ್ಲಂಡ ಮಠದ ನಾಲ್ಕನೇ ವಾರ್ಷಿಕೋತ್ಸವವು ಮೊನ್ನೆ ರಾತ್ರಿ ಶ್ರೀಗಳವರ ಸನ್ನಿಧಿಯಲ್ಲಿ ನೆರವೇರಿಸಲ್ಪಟ್ಟಿತು. ಭಕ್ತರ ಪರವಾಗಿ ಶ್ರೀ ಸ್ವಾಮಿಗಳವರಿಗೆ ವಿಜ್ಞಾಪನಾ ಪತ್ರಿಕೆಯೂ ವಾರ್ಷಿಕ ವರದಿಯೂ ಒಪ್ಪಿಸಲ್ಪಟ್ಟವು ವೇ॥ ಬ್ರಂ॥ ಶ್ರೀ॥ ಭೀಮಾಚಾರ್ಯರವರ, ಗುರುಭಕ್ತಿಯ ವಿಷಯವಾಗಿ ಅನೋಘವಾದ ಭಾಷಣ ಮಾಡಿದರು.

ಮೊನ್ನೆ ಬೆಳಿಗ್ಗೆ ದರ್ಬಾರ್ ಭಕ್ಷಿ ಶ್ರೀ ಹೆಚ್ ಎಲ್ ದೇವರಾಜ ಅರಸಿನವರು ಶ್ರೀಗಳವರನ್ನು ತಮ್ಮ ಉದ್ಯಾನವನಕ್ಕೆ ಆಹ್ವಾನಿಸಿ ಶ್ರದ್ಧಾಭಕ್ತಿಗಳಿಂದ ಪಾದಪೂಜೆಯನ್ನು ನೆರವೇರಿಸಿದರು

LATEST NEWS

ಮೈಸೂರು ನಗರದಲ್ಲಿ ಪಡಿತರ ರದ್ದು

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಸ್ವಂ ಟೆಲಿಫೋನ್] ಬೆಂಗಳೂರು ೭

ಈ ದಿನ ಶಾಸನ ಸಭೆಯಲ್ಲಿ ಆಹಾರದ ನೀತಿಯ ಮೇಲೆ ಚರ್ಚೆ ಮುಗಿದ ನಂತರ ಮುಖ್ಯ ಮಂತ್ರಿ ಹನುಮಂತಯ್ಯನವರು ಹೇಳಿಕೆಯಿತ್ತು ಮೈಸೂರು ನಗರದಲ್ಲಿ ಈ ಕೂಡಲೇ ಆಹಾರದ ಹತೋಟಿ ಮತ್ತು ಪಡಿತರವನ್ನು ರದ್ದು ಮಾಡಲಾಗುವುದೆಂದೂ, ಇದರ ಪರಿಣಾಮವನ್ನು ನೋಡಿಕೊಂಡು ಬೆಂಗಳೂರು, ಚಿನ್ನದ ಗಣಿ ಮತ್ತು ದಾವಣಗೆರೆಗಳಲ್ಲಿ ಈ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಹೇಳಿದರು

ದೂಗೆ ವರೂರು ಸೇರು ಗೋಧಿ

ಇನ್ನು ಮುಂದೆ ಗೋಧಿಯನ್ನು ರೂಗೆ ೩ ಸೇರಿನಂತೆ ಮಾರಲಾಗುವುದೆಂದೂ ಅವರು ಹೇಳಿದರು

೫೫ ಮುಸ್ಸಾದಿಕ್ಕರೇ ಮತ್ತೆ ಪರ್ಷಿಯದ ಪ್ರಧಾನಿ

ಪರ್ಷಿಯದ ಕಿರಿಯ ಶಾಸನ ಸಭೆಯು ನೆನ್ನೆ ಗುಪ್ತವಾಗಿ ಸೇರಿ ಡಾಕ್ಟರ್ ಮುಸ್ಸಾದಿಕ್ಕರೇ ಮತ್ತೆ ಪ್ರಧಾನಿಯಾಗಿ ಹೊಸ ಸರ್ಕಾರ ರಚಿಸಬೇಕೆಂದು ಬಹುಮತದಿಂದ ನಿರ್ಣಯಿಸಿತು. ಈ ಸಂಬಂಧವಾಗಿ ಮತ ಸಂಗ್ರಹಿಸಿದಾಗ ಮುಸ್ಸಾದಿಕ್ಕರ ಪರವಾಗಿ ೫೫ ಓಟುಗಳೂ, ಅವರ ಪ್ರತಿ ಸ್ಪರ್ಧಿಗಳಾದ ಅಸದುದ್ ಪೂರ್ವಾಂ ಸುಲ್ತಾನ ಮತ್ತು ನಸರುಲ್ಲಾ ಎಂತೆ ಜಾಂದವರಿಗೆ ಕ್ರಮವಾಗಿ ೩ ಮತ್ತು ೧ ಓಟುಗಳೂ ಬಂದುವು

ಆಹಾರದ ನೀತಿಯಲ್ಲಿ ಸಧ್ಯಕ್ಕೆ ಬದಲಾವಣೆ ಇಲ್ಲ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಸ್ವಂ ಟೆಲಿಫೋನ್] ಬೆಂಗಳೂರು ೭

ಈ ದಿನ ಶಾಸನ ಸಭೆಯು ಸೇರಿ ಹಲವು ಬೇಡಿಕೆಗಳನ್ನು ಮಂಜೂರು ಮಾಡಿದ ನಂತರ ಆಹಾರ ಸಚಿವರಾದ ಶ್ರೀ ಸಿದ್ಧವೀರಪ್ಪನವರು ಸಂಸ್ಥಾನದ ಆಹಾರ ನೀತಿಯನ್ನು ವಿಮರ್ಶಿಸಿ, ಪಡಿತರ ಮತ್ತು ಹತೋಟಿಗಳು ಹೇಗೆ ಜಾರಿಗೆ ಬಂದುವೆಂಬುವನ್ನು ವಿವರಿಸಿದರು

ಆಹಾರ ಧಾನ್ಯದ ಡಿಪೋಗಳಲ್ಲಿ ಜನರು ಆಹಾರವನ್ನು ಕೊಳ್ಳುವುದು ಕಡಿಮೆಯಾಗಿರುವುದರಿಂದ ಕೇಂದ್ರ ಸರ್ಕಾರದವರು ಸಂಸ್ಥಾನಕ್ಕೆ ಒದಗಿಸಲಿರುವ ೧॥ ಲಕ್ಷ ಟನ್ ಧಾನ್ಯದ ಪೈಕಿ ೫೩,೭೦೦ ಟನ್ನು ಮಾತ್ರ ಸಾಕೆಂದು ತಿಳಿಸಿರುವುದಾಗಿಯೂ, ಕೇಂದ್ರದವರು ಅಷ್ಟನ್ನೇ ಒದಗಿಸಲಿರುವರೆಂದೂ ಅವರು ಹೇಳಿದರು

ಸಂಸ್ಥಾನದಲ್ಲಿ, ಮುಖ್ಯವಾಗಿ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಮಳೆಯಾಗದೆ ಅನೇಕ ಕಡೆಗಳಲ್ಲಿ ಬಿತ್ತನೆಯ ಕಾರ್ಯ ನಡೆದಿಲ್ಲವೆಂದೂ, ಇದನ್ನೂ, ಮುಂದಿನ ಸುಗ್ಗಿ ಫಸಲನ್ನು ನೋಡಿಕೊಂಡು ಒಂದು ನಿರ್ಧಾರಕ್ಕೆ ಬರಬಹುದೆಂದೂ ಸಚಿವರು ಹೇಳಿದರು. ಸಂಸ್ಥಾನದ ಹೊರಗಡೆ ಧಾನ್ಯವನ್ನು ಸಾಗಿಸುವ ಪ್ರಯತ್ನಗಳು ನಡೆದಿರುವ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿರುವುದಾಗಿಯೂ, ಇದನ್ನು ತಡೆಗಟ್ಟಲು ಎಲ್ಲ ಕ್ರಮಗಳನ್ನೂ ಕೈಗೊಂಡು, ತಪ್ಪಿತಸ್ಥರ ಮೇಲೆ ಪ್ರಿವೆಂಟಿವ್ ಡಿಟೆನ್ಷನ್ ಶಾಸನದ ಪ್ರಕಾರ ಉಗ್ರ ಕ್ರಮ ಕೈಗೊಳ್ಳಲಾಗುವುದೆಂದೂ ಅವರು ಹೇಳಿದರು

ಗೋಧಿಯನ್ನು ಜನರು ಹೆಚ್ಚಾಗಿ ತೆಗೆದುಕೊಳ್ಳದಿರುವುದರಿಂದ ಈಗ ಅದು ಹೆಚ್ಚಾಗಿ ನಿಂತುಹೋಗಿರುವುದೆಂದೂ, ಒಟ್ಟಿನಲ್ಲಿ ಈಗ ಶೇಖರಿಸಿರುವ ಧಾನ್ಯವು ಬಿಕರಿಯಾಗದೆ ಹೊಸದಾಗಿ ಸಂಗ್ರಹಣಾ ಕಾರ್ಯಕ್ಕೂ ಅಡಚಣೆಯಾಗಿರುವುದೆಂದೂ ಆಹಾರ ಸಚಿವರು ತಿಳಿಸಿದರು.

ಪಡಿತರ ಮತ್ತು ಹತೋಟಿಗಳನ್ನು ಪೂರ್ಣವಾಗಿ ರದ್ದುಗೊಳಿಸುವ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಲು, ರೆವಿನ್ಯೂ ಸಚಿವರ, ಗೃಹ ಸಚಿವರ ಮತ್ತಿತರ ಉನ್ನತಾಧಿಕಾರಿಗಳಿಂದ ಕೂಡಿದ ಒಂದು ಸಮಿತಿಯು ಸೇರಿ ಪರಿಶೀಲನೆ ನಡೆಸಿದ ನಂತರ ಈ ಅಧಿವೇಶನ ಮುಗಿಯುವುದರೊಳಗೆ ಅವರುಗಳು ನಿರ್ಧಾರವನ್ನು ತಿಳಿಸಲಾಗುವುದೆಂದು ಸಚಿವರು ನುಡಿದರು

ಹರಿಕಥೆ

ಮೈಸೂರು ೭

ಪೂರ್ಣಿಮಾ ಪ್ರಯುಕ್ತ ಈ ರಾತ್ರಿ ೯ ಘಂಟೆಗೆ ಸಾಧ್ವಿ ಕಛೇರಿಯಲ್ಲಿ ವೇ॥ ಬ್ರ॥ ಶ್ರೀ॥ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ "ಭಕ್ತ ಅಂಬರೀಷ" ಎಂಬ ಹರಿಕಥೆ ನಡೆಯಲಿರುವುದಾಗಿದೆ. ಸರ್ವರಿಗೂ ಸ್ವಾಗತವುಂಟು

ಪಡಿತರ ಪ್ರದೇಶಕ್ಕೆ

ಈ ಸೇರು ಧಾನ್ಯ ಕರಲು ಅವಕಾಶ

ಪಡಿತರ ಪ್ರದೇಶಗಳಿಗೆ ರಹದಾರಿ ಇಲ್ಲದೆ ತರುವ ಧಾನ್ಯದ ಪ್ರಮಾಣವನ್ನು ೩ ಸೇರಿನಿಂದ ೫ ಸೇರಿಗೆ ಹೆಚ್ಚಿಸಲಾಗಿದೆಯೆಂದೂ ಸಚಿವರು ಹೇಳಿದರು.

ನಂಜನಗೂಡಿಗೆ ಗರ್ಲ್ಸ್ ಹೈಸ್ಕೂಲು

ಈ ವರ್ಷ ಸಾಧ್ಯವಿಲ್ಲವೆಂದು ಸಚಿವರು

ಬೆಂಗಳೂರು ೬

ನಂಜನಗೂಡಿನಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಕಲಿತು ಈ ಬಾರಿ ೬೦ ಮಂದಿ ಹೆಣ್ಣುಮಕ್ಕಳು ಹೈಸ್ಕೂಲಿಗೆ ಸೇರಲಿರುವುದರಿಂದ ಅವರಿಗಾಗಿ ಟವನ್ನಿನಲ್ಲಿ ಒಂದು ಹೈಸ್ಕೂಲನ್ನು ತೆರೆಯುವ ಬಗ್ಗೆ ಶ್ರೀ ಎಂ. ಲಿಂಗಣ್ಣನವರು ಮೊನ್ನೆ ಶಾಸನ ಸಭೆಯಲ್ಲಿ ಒಂದು ಪ್ರೋತ್ಸಾ ನಿರ್ಣಯನನ್ನು ಮಂಡಿಸಿದರು. ಸಹವಿದ್ಯಾಭ್ಯಾಸವು ಉಚಿತವಲ್ಲವೆಂದು ಶ್ರೀ ಲಿಂಗಣ್ಣನವರು ಹೇಳಿ ಚನ್ನಪಟ್ಟಣದಲ್ಲಿರುವ ಹೆಣ್ಣುಮಕ್ಕಳ ಹೈಸ್ಕೂಲು ಪ್ರಯೋಜನಕಾರಿಯಾಗಿಲ್ಲವೆಂದು ತಿಳಿಸಿ, ಅದನ್ನು ನಂಜನಗೂಡಿಗೆ ವರ್ಗಾಯಿಸಬಹುದೆಂದು ಸೂಚಿಸಿದರು.

ವಿದ್ಯಾಸಚಿವರು ಉತ್ತರವಿತ್ತು ಸ್ಥಳೀಯ ಸಂಸ್ಥೆಗಳು ಮತ್ತು ಖಾಸಗೀ ಜನರು ಶಾಲೆಗಳನ್ನು ತೆರೆಯುವ ವಿಷಯದಲ್ಲಿ ಆಸಕ್ತಿವಹಿಸಬೇಕೆಂದೂ, ಸಹವಿದ್ಯಾಭ್ಯಾಸವು ಸಾಧುವಲ್ಲೆಂಬುದನ್ನು ಸರ್ಕಾರದವರು ಒಪ್ಪುವರೆಂದೂ ತಿಳಿಸಿ ಈ ವರ್ಷ ಅಲ್ಲಿ ಹೆಂಗಸರಿಗಾಗಿ ಹೈಸ್ಕೂಲನ್ನು ತೆರೆಯಲು ಸಾಧ್ಯವಿಲ್ಲವೆಂದೂ ಮತ್ತು ಚನ್ನಪಟ್ಟಣದ ಹೈಸ್ಕೂಲನ್ನು ವರ್ಗಾಯಿಸುವ ವಿಷಯವನ್ನು ಪರಿಶೀಲಿಸಲಾಗುವುದೆಂದೂ ಭರವಸೆಯಿತ್ತರು. ಸೂಚಕರು ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಂಡರು.

ದೇವೀ ಜಾತ್ರೆ ನಡೆಸಲು ರಹದಾರಿ

ಮೊನ್ನೆ ದಿನ ಶಾಸನ ಸಭೆಯಲ್ಲಿ ಪ್ರಾಣಿಬಲಿ ನಿರೋಧ ಶಾಸನದ ಬಗ್ಗೆ ಪ್ರಶ್ನೋತ್ತರ ನಡೆದು ೧೯೫೨ನೇ ಜುಲೈ ತಿಂಗಳಿಂದ ಈ ಶಾಸನವು ಜಾರಿಯಲ್ಲಿರುವುದೆಂದೂ ಅದನ್ನು ಉಲ್ಲಂಘಿಸಿದ ಹಲವಾರು ಜನರ ಮೇಲೆ ಸೂಕ್ತ ಕ್ರಮ ಜರುಗಿಸಿ ಶಿಕ್ಷಿಸಲಾಗಿದೆಯೆಂದೂ ರೆವಿನ್ಯೂ ಸಚಿವರು ತಿಳಿಸಿದರು. ಗ್ರಾಮಾಂತರ ಪ್ರದೇಶಗಳ ಜನರು ಈ ನಿಯಮವನ್ನು ಸುವ್ಯವಸ್ಥೆಯಿಂದ ಪಾಲಿಸಲೆಂಬ ಉದ್ದೇಶದಿಂದ ಅಲ್ಲಿ ನಡೆಯುವ ದೇವಿ ಜಾತ್ರೆಗಳಿಗೆ ರಹದಾರಿ ಪಡೆಯುವಂತೆ ವಿಧಾಯಕ ಮಾಡುವ ಅಂಶವನ್ನು ಸರ್ಕಾರದವರು ಪರ್ಯಾಲೋಚಿಸುವರೆಂದೂ ಸಚಿವರು ಹೇಳಿದರು.

ಅಮಂಗಳದ ಸ್ವಾತಂತ್ರ್ಯ ವಿನೋದ್ಯವದ ನಿನ್ನೆ ಕಳೆದ ಬುಧವಾರ ಆದ ನಾನಾ ಅನಾಹುತಗಳಲ್ಲಿ ಒಟ್ಟು ೧೧೦ ಮಂದಿ ಮೃತಪಟ್ಟಿರುವರು.

ರೈಲು ಅಪಘಾತವಾದರೂ ಪೆಟ್ಟು ಬೀಳದಂತೆ ಸೌಕರ್ಯ

ರೈಲ್ವೆ ಅಪಘಾತವಾದರೂ ಸಹ ಪ್ರಯಾಣಿಕರಿಗೆ ಪೆಟ್ಟು ಬೀಳದಂತೆ ಹೆಚ್ಚು ರಕ್ಷಣೆ ದೊರೆಯುವ ಮತ್ತು ಹೆಚ್ಚು ಸೌಕರ್ಯಗಳಿಂದ ಕೂಡಿರುವ ೩ನೇ ತರಗತಿ ಮತ್ತು ಇಂಟರ್, ೩ನೇ ತರಗತಿಗಳುಳ್ಳ ೩ ರೈಲು ಗಾಡಿಗಳನ್ನು ಸ್ವಿಟ್ಸರ್ಲೆಂಡಿನಿಂದ ಭಾರತ ಸರ್ಕಾರದವರು ಕೊಂಡಿರುತ್ತಾರೆ. ಇಂತಹ ನೂರು ಗಾಡಿಗಳನ್ನು ಆಮದು ಮಾಡಿಕೊಳ್ಳಲಾಗುವುದು.

ಮದ್ರಾಸಿನಲ್ಲಿ ಕುದುರೆ ಜೂಜಿನ ರದ್ದಿಲ್ಲ

ಮದ್ರಾಸಿನಲ್ಲಿ ಕುದುರೆ ಜೂಜನ್ನು ರದ್ದುಗೊಳಿಸಲಾಗುವುದಿಲ್ಲವೆಂದು ಅಲ್ಲಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಿಳಿಸಿರುತ್ತಾರೆ. ಆದರೆ ಜೂಜಿನ ಮೇಲೆ ಖಾಸಗಿಯಾಗಿ ಹಣ ಕಟ್ಟುವ ಪದ್ಧತಿಯನ್ನು ನಿಷೇಧಿಸುವ ಕಾನೂನನ್ನು ಬರುವ ವರ್ಷದಿಂದ ಜಾರಿಗೆ ತರಲಾಗುವುದೆಂದು ಅವರು ಹೇಳಿರುತ್ತಾರೆ.

ಭಾಷಾಪ್ರಾಂತದ ಬಗ್ಗೆ ನಿರ್ಣಯಕ್ಕೆ ವಿರೋಧ

ಇತ್ತ ಮಾರು ... ತಗ ... ಈಗಿನ ಸಂಸ್ಥಾನ ... ಕೂಡಲೇ ಏಂಗ ... ಸರ್ಕಾರ ... ಸ್ಥಿ ... ಪ್ರಾಂತವನ್ನು ... ನಿಲೆ ... ಕಾಂಗ್ರೆಸ್ ಪಕ್ಷವು ವಿರೋಧಿಸಿ ... ಭಾಷಾ ಪ್ರಾಂತ ರಚನೆಗೆ ಕಾಂಗ್ರೆಸ್ ಪಕ್ಷವು ವಿರೋಧವಿಲ್ಲದಿದ್ದರೂ ಸಹ ಈಗಿನ ಸನ್ನಿವೇಶವು ಭಾಷಾ ಪ್ರಾಂತ ರಚನೆಗೆ ತಕ್ಕದ್ದಲ್ಲವೆಂದು ಅದು ಭಾವಿಸಿರುತ್ತದೆ.

ಸತ್ಕಾರ ಕೂಟ

ರಾಜಧಾನಿಯ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಶ್ರೀ ಲಿಂಗಣ್ಣನವರ ಗೌರವಾರ್ಥವಾಗಿ ಇಟ್ಟಿಗೆಗೂಡಿನ ಯುವಕರ ಸಂಘದವರು ಮೊನ್ನೆ ಸಂಜೆ ಚಾಮುಂಡೇಶ್ವರಿ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಪೌರ ಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿ ರಾಯರು ಅಧ್ಯಕ್ಷತೆ ವಹಿಸಿದ್ದರು.

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತಿ

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಜಯಂತ್ಯುತ್ಸವವು ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯುವುದು. ವೈಸ್ ಛಾನ್ಸಲರ್ ಡಾ॥ ಬಿ. ಎಲ್. ಮಂಜುನಾಥ್‌ರವರು ಅಧ್ಯಕ್ಷತೆ ವಹಿಸುವರು.

ರೈಲ್ವೆ ಇಲಾಖೆಯೊಡನೆ ಕಾರ್ಮಿಕರ ಸಂಧಾನ

ರೈಲ್ವೆ ಕಾರ್ಮಿಕರ ಬೇಡಿಕೆಗಳ ಸಂಬಂಧವಾಗಿ ಇತ್ಯರ್ಥವಾಗದೇ ಉಳಿದಿರುವ ಹಲವು ವಿಷಯಗಳ ಬಗ್ಗೆ ರೈಲ್ವೆ ಇಲಾಖೆ ಮತ್ತು ರೈಲ್ವೆ ಕಾರ್ಮಿಕರ ಸಂಘಗಳಿಗೆ ಇದೇ ೧೧ ಮತ್ತು ೧೨ನೇ ತಾ॥ ಸಂಧಾನ ನಡೆಯಲಿರುವುದೆಂದು ಕಾರ್ಮಿಕರ ಮುಖಂಡರಾದ ಎಸ್. ಗುರುಸ್ವಾಮಿಯವರು ತಿಳಿಸಿರುತ್ತಾರೆ. ಸಂಬಳದ ದರ್ಜೆಯಲ್ಲಿ ವ್ಯತ್ಯಾಸ, ಸ್ಥಳೀಯ ಭತ್ಯ, ನೌಕರರ ಮಕ್ಕಳಿಗೆ ವಿದ್ಯಾ ಸೌಕರ್ಯ- ಇವೇ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಯಲಿದೆ.

ರುಮೇನಿಯಾ ವಿದೇಶಾಂಗ ಸಚಿವರ ಉಚ್ಚಾಟನೆ

ರುಮೇನಿಯದ ವಿದೇಶಾಂಗ ಸಚಿವರಾಗಿದ್ದ ಅನ್ನಾ ಪೌಕರ್ ಎಂಬುವರು ಕಮ್ಯೂನಿಸ್ಟ್ ಪಕ್ಷದ ನೀತಿ ನಿಯಮಗಳನ್ನು ಉಲ್ಲಂಘಿಸಿದುದರಿಂದ ಆಕೆಯನ್ನು ಪದಚ್ಯುತಳನ್ನಾಗಿ ಮಾಡಿ, ಅವರ ಸ್ಥಾನದಲ್ಲಿ ರಷ್ಯದಲ್ಲಿ ರಾಯಭಾರಿಯಾಗಿದ್ದ ಸೈಮ ಬುಗುಚಿಯವರನ್ನು ನೇಮಿಸಲಾಗಿದೆ.

ಮಹಿಳಾಸದನದ ಆಡಳಿತ ವರ್ಗದ ಚುನಾವಣೆ

ರಾಜಧಾನಿಯ ದೇವರಾಜ ಮೊಹಲ್ಲಾ ದಿವಾನರ ಅಗ್ರಹಾರದಲ್ಲಿರುವ ಮಹಿಳಾ ಸದನದ ಸಕಲ ಸದಸ್ಯರ ವಾರ್ಷಿಕ ಸಭೆಯು ನೆನ್ನೆ ಶ್ರೀಮತಿ ಸಿ. ಎಸ್. ತಂಗಮ್ಮನವರ ಅಧ್ಯಕ್ಷತೆಯಲ್ಲಿ ಸೇರಿ ಹೊಸ ಕಾರ್ಯನಿರ್ವಾಹಕ ಸಮಿತಿಯ ಚುನಾವಣೆ ನಡೆಸಿತು. ಶ್ರೀಮತಿ ಮುಂತಾದ ಪಿ. ಎಸ್. ತಂಗಮ್ಮ, ಆರ್. ರಾಜಲಕ್ಷ್ಮಿ, ಎಚ್. ಜಾನಕಿಯವರು ಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸ್ಥಾನಗಳಿಗೂ, ಮತ್ತು ಶ್ರೀಮತಿ ಎಂ. ಡಿ. ರಂಗನಾಯಕಮ್ಮನವರು ಸಹ ಕಾರ್ಯದರ್ಶಿ ಮತ್ತು ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟರು.

CITY TUTORIAL COLLEGE

Near V. V. Market, Mysore

Admissions Received for

§ S.S.L.C. (March 53)

§ INTER-KANNADA- (Sept 52)

&

§ MADRAS MATRICULATION

(Those above 19 years and studied up to V Form can appear.)

ಕೈಯಿಲ್ಲದ, ಕುರುಡನಿಗೆ ಎಂ. ಎ. ಪದವಿ

೧೧ ವರ್ಷಗಳ ಕೆಳಗೆ ಕಳೆದ ಮಹಾಯುದ್ಧದ ಅಂಗವಾಗಿ ಲಿಬಿಯದಲ್ಲಿ ನಡೆದ ಕದನಗಳಲ್ಲಿ ಕೈ ಮತ್ತು ಕಣ್ಣುಗಳನ್ನು ಕಳೆದುಕೊಂಡ ಒಬ್ಬ ಬ್ರಿಟಿಷ್ ಸೈನಿಕನು ಎಂ. ಎ. ಪದವಿಯನ್ನು ಗಳಿಸಿರುತ್ತಾನೆ. ತನ್ನ ಜ್ಞಾಪಕಶಕ್ತಿಯಿಂದ ಪ್ರಶಸ್ತಿ ಪಡೆದಿರುವುದಾಗಿ ಆತನು ಹೇಳಿರುವನು.

ಕೈಗಾಡಿ ಮತ್ತು ರಿಕ್ಷಾಗಳಿಗೆ ಕಲ್ಕತ್ತದಲ್ಲಿ ನಿಷೇಧ

ರಿಕ್ಷಾ, ಕೈಗಾಡಿ ಮುಂತಾದುವುಗಳನ್ನು ಮಧ್ಯ ಕಲ್ಕತ್ತೆಯ ಹಲವು ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿ ತೆಗೆದುಕೊಂಡು ಹೋಗಕೂಡದೆಂದು ನಿರ್ಬಂಧಿಸಲಾಗಿದೆ.

ಭಾರತಕ್ಕೆ ೧೭ ಕೋಟಿ ರೂ. ಬೆಲೆಯ ರೈಲು ಇಂಜಿನ್‌ಗಳು

೧೭ ಕೋಟಿ ರೂಗಳ ಬೆಲೆಯ ರೈಲ್ವೆ ಇಂಜನ್ನು ಮತ್ತು ಅದರ ಸಾಧನಗಳನ್ನು ಹೊರಗಿನಿಂದ ತರಿಸಲು ಭಾರತ ಸರ್ಕಾರದವರು ಆರ್ಡರ್ ಕೊಟ್ಟಿರುತ್ತಾರೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಕ್ಕೆ ಆನ್ಯುಕ ವೀಣೆ, ಮಧ್ಯಾಹ್ನ ... ಕೊಳಲು, ೧೫೦ ಪಾಲಘಾಟ್ ಸುಬ್ರಹ್ಮಣ್ಯ ಅಯ್ಯರ್ ರಿಕಾರ್ಡ್ ಸಂಗೀತ, ಸಂಜೆ ೫.೦ ಕ್ಕೆ ರುಕ್ಮಿಣಿ ಸಂಗೀತ, ೬.೦೦ ಗಾನ ವಿಹಾರ, ೭.೩೦ ಕ್ಕೆ ಎಸ್. ಸೋಲೆಬೂ ಹಿಂದೂಸ್ತಾನಿ ಸಂಗೀತ, ೭.೪೦ ಕನ್ನಡದಲ್ಲಿ ಭಾಷಣಗಳು, ೮ ಪಿ. ಅಚ್ಯುತ ವೀಣೆ, ೮.೪೦ ವೃಂದ ಸಂಗೀತ, ೯.೧೫ "ಜೀನು ಸಾಕುಪ್ಪದು" ಇಂಗ್ಲಿಷ್ ಭಾಷಣ, ೯.೪೦ ಗಾನಾಮೃತ

ಶಿಕ್ಷಣ ತರಗತಿಗಳು

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ "ಜ್ಞಾನ ಮಂದಿರದಲ್ಲಿ" (329ನೇ ನಂ ಮನೆ) 13-7-52 ನೇ ಭಾನುವಾರದಿಂದ ಮಿಡಲ್ ಸ್ಕೂಲ್ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ (1953ನೇ ಮಾರ್ಚಿ ಪಬ್ಲಿಕ್ ಪರೀಕ್ಷೆಗೆ ಕುಳಿತುಕೊಳ್ಳುವವರಿಗೂ ಸಹ) ಶಿಕ್ಷಣ ತರಗತಿಗಳನ್ನು ಏರ್ಪಡಿಸಿದೆ. ಈ ಸುಸಮಯವನ್ನು ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬೇಕೆಂದು ಕೋರಲಾಗಿದೆ.

Edited, Printed and Published by A. R. Nagarajan at Sadhvi Press, D. Subbiah Road, Mysore

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

ಮೈಸೂರು ನಾಗೇಂದ್ರ ರಾವ್ ಅಭಿನಯಿಸಿರುವ, ಜೆಮಿನಿಯವರ

• ಮೂವರು ತನಯರು •

(ಮೂವರು ಮಕ್ಕಳು)

11—7—52 ನೇ .... ಶುಕ್ರವಾರದಿಂದ

ವರ್ಧಂತಿ ದರ್ಬಾರು ಇಲ್ಲ

ಮೈಸೂರು ೮

ಶ್ರೀಮನ್ಮಹಾರಾಜರವರ ವರ್ಧಂತಿ ಸಂಬಂಧವಾಗಿ ಈ ಸಾರಿ ಅರಮನೆಯಲ್ಲಿ ದರ್ಬಾರ್ ನಡೆಯುವುದಿಲ್ಲವೆಂದೂ ಕಲ್ಯಾಣ ಮಂಟಪದಲ್ಲಿ ಶಾಸ್ತ್ರೋಕ್ತವಾದ ಆಯುಷ್ಯ ಹೋಮ ಮುಂತಾದ ಕಾರ್ಯಕ್ರಮಗಳು ಮಾತ್ರ ಜರುಗುವುವೆಂದೂ ತಿಳಿದುಬಂದಿದೆ. ಆ ದಿನ ಸಂಜೆ ಮೆರವಣಿಗೆ ನಡೆಯುವುದಿಲ್ಲವೆಂದು ಈ ಮೊದಲೇ ಪ್ರಕಟವಾಗಿದೆ.

ರೂ ಗೆ ಮೂರು ಸೇರು ಗೋಧಿ

ರೂಪಾಯಿಗೆ ೩ ಸೇರು ಗೋಧಿಯಂತೆ ಇಂದಿನಿಂದ ಡಿಪೋಗಳಲ್ಲಿ ಮಾರಾಟ ಮಾಡಬೇಕೆಂದು ನಗರದ ರೇಷನಿಂಗ್ ಅಧಿಕಾರಿಗಳು ಸೂಚಿಸಿರುವರು.

ಸ್ಥಳೀಯ ಭಾಷೆಗಳಲ್ಲಿ ಸರ್ಕಾರಿ ಪತ್ರ ವ್ಯವಹಾರ

ಹೈದರಾಬಾದಿನ ವಿವಿಧ ಇಲಾಖೆಗಳು ಆಯಾ ಪ್ರದೇಶದ ಭಾಷೆಯಲ್ಲೇ ಕಾಗದ ಪತ್ರಗಳನ್ನು ಬಳಸಬೇಕೆಂದು ಅಲ್ಲಿನ ಸರ್ಕಾರದವರು ಸೂಚನೆಯಿತ್ತಿರುವರು. ಕೆಳ ವರ್ಗದ ವ್ಯವಹಾರದಲ್ಲಿ ಹೆಚ್ಚಾಗಿ ಸ್ಥಳೀಯ ಭಾಷೆಯ ಉಪಯೋಗವನ್ನು [illegible] ಕಡ್ಡಾಯಗೊಳಿಸಲಾಗಿರುವುದು.

ಕಾಲೇಜಿನಲ್ಲಿ ಓದದವರ ಮಕ್ಕಳಿಗೆ ಪ್ರಥಮಾವಕಾಶ

ಯಾವ ವಿದ್ಯಾರ್ಥಿಯ ತಂದೆ ಅಥವಾ ತಾತನಿಗೆ ಕಾಲೇಜಿನಲ್ಲಿ ಓದಲು ಅವಕಾಶವಿರಲಿಲ್ಲವೋ ಅಂತಹವನಿಗೆ ಯೋಗ್ಯತೆಯಿದ್ದರೆ ಕಾಲೇಜುಗಳಲ್ಲಿ ಸೇರಿಸಿಕೊಳ್ಳಲು ಪ್ರಥಮ ಅವಕಾಶವೀಯಬೇಕೆಂದು ಮದ್ರಾಸ್ ಸರ್ಕಾರದವರು ಆಜ್ಞೆ ಮಾಡಿರುವರೆಂದು ಗೊತ್ತಾಗಿದೆ.

ಬಿಸಿಲಿನ ತಾಪದಿಂದ ೧೧೦ ಜನರ ಮರಣ

ಬಿಸಿಲಿನ ತಾಪವನ್ನು ತಾಳಲಾರದೆ ಜರ್ಮನಿಯಲ್ಲಿ ನೂರಕ್ಕಿಂತಲೂ ಹೆಚ್ಚಿನ ಜನರು ಮಡಿದಿರುವರೆಂದು ಹೇಳಲಾಗಿದೆ. ಅಲ್ಲಿನ ಫ್ರಾಂಕ್‌ಫರ್ಟ್ ನಗರದಲ್ಲಿ ನಡೆಯುತ್ತಿದ್ದ ಕ್ರೀಡೆಗಳಲ್ಲಿ ೫೦೦೦ ಮೀಟರ್ ಓಡುವ ಸಂದರ್ಭದಲ್ಲಿ ಗೆದ್ದವನೊಬ್ಬನು ಪಂದ್ಯ ಮುಗಿದ ಕೂಡಲೇ ಸೂರ್ಯನ ತಾಪದಿಂದ ಮೃತಪಟ್ಟನೆಂದೂ ತಿಳಿದುಬಂದಿದೆ.

ನದಿಯಲ್ಲಿ ದೋಣಿ ಮುಳುಗಿ ೧೪ ಜನರ ಮರಣ

ಗೌಹಾಟಿ ಬಳಿ ಬ್ರಹ್ಮಪುತ್ರಾ ನದಿಯಲ್ಲಿ ಜನರಿಂದ ಕಿಕ್ಕಿರಿದ ನಾಡು ದೋಣಿಯೊಂದು ಮೊನ್ನೆ ಮುಳುಗಿಕೊಂಡಿತು. ಅವರಲ್ಲಿದ್ದ ೧೪ ಮಂದಿಯೂ ನೀರಿನ ಪಾಲಾದರೆಂದು ವರದಿಯಾಗಿದೆ.

ರಾಜಕೀಯದಲ್ಲಿ ಹೋರಾಡಿದ ಮೈಸೂರಿನವರಿಗೆ ಜಮೀನು

ರಾಜಕೀಯ ಹೋರಾಟಗಳಲ್ಲಿ ಕೆಲಸ ಮಾಡಿ ಕಷ್ಟಗಳಿಗೆ ಗುರಿಯಾಗಿರುವವರಿಗೆ ಜಮೀನು ಗಳನ್ನು ಕೊಡಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡುವ ನಿರ್ಣಯವನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಂಗೀಕರಿಸಿರುತ್ತದೆ.

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ನಾಡಿ

ಸಂಪುಟ ೧೮] ಮಂಗಳವಾರ ೮-೭-೫೨ [ಸಂಚಿಕೆ ೨೮೮

ಅಮೆರಿಕದ ರಿಪಬ್ಲಿಕ್ ಪಕ್ಷದವರಲ್ಲೇ ಘರ್ಷಣೆ

ಧಾನ್ಯ ಸಂಗ್ರಹಣೆ ಕಾರ್ಯದಲ್ಲಿ ಹೊಸ ಪದ್ಧತಿ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಬೆಂಗಳೂರು ೮

ಶಾಸನ ಸಭೆಯಲ್ಲಿ ನೆನ್ನೆ ನಡೆದ ಆಹಾರ ನೀತಿಯ ಚರ್ಚೆಗೆ ಉತ್ತರವಿತ್ತು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಧಾನ್ಯ ಸಂಗ್ರಹಣೆ ಕೆಲಸದ ಭಾರವನ್ನು ವರ್ತಕರ ಮೇಲೆ ಹೇರಲಾಗುವ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ನಗರದಲ್ಲಿ ಅದನ್ನು ಈ ಕೂಡಲೇ ತೆರೆದು ಜಾಹೀರಾಗುವುದೆಂದೂ ಗೋಧಿಯನ್ನು ರೂ ಗೆ ೩ ಸೇರಿನಂತೆ ಕೊಡಲಾಗುವುದೆಂದೂ ಪಡಿತರವಿರುವ ಪ್ರದೇಶಗಳಿಗೆ ರಾಗಿ ಒದಗಿಸುವ ದೃಷ್ಟಿಯಿಂದ ಧಾನ್ಯದ ಪ್ರಮಾಣವನ್ನು [illegible] ರಿಂದ ೫ ಸೇರಿನವರೆಗೂ ಹೆಚ್ಚಿಸಲಾಗಿದೆಯೆಂದೂ ತಿಳಿಸಿದರು. ಈಗಿನ ಧಾನ್ಯ ಸಂಗ್ರಹಣೆ ಪದ್ಧತಿಯನ್ನು ತೆಗೆದುಹಾಕಿ, ಲೆವಿ ಪದ್ಧತಿಯನ್ನು ಜಾರಿಗೆ ತರಲಾಗುವುದೆಂದೂ ತಿಳಿಸಿದರು. ಪಡಿತರವನ್ನು ಪೂರ್ಣವಾಗಿ ತೆಗೆಯಬೇಕೆಂಬುದು ಸರ್ಕಾರದ ಇಚ್ಛೆಯಾದರೂ ಅದರ ಮುಂದಿನ ಬೆಳೆ ಮುಂತಾದುವನ್ನು ಗಮನಿಸಿ ಮುಂದುವರಿಯಬೇಕಾಗಿರುವುದೆಂದೂ ಅವರು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ಮಳೆ ಬಾರದೆ ಬೆಳೆ ಕೆಟ್ಟಿದೆ. ಆರು ಸೇರು ರಾಗಿ ೫ ಸೇರು ಜೋಳದ ಬೆಲೆ ಏರಿದೆ. [illegible] ಸರ್ಕಾರದವರು ತಮ್ಮ ನೀತಿಯನ್ನು ಬದಲಿಸುವುದಿಲ್ಲ. ಹೆಚ್ಚು ಹೆಚ್ಚು ಬೆಳೆಯುವುದನ್ನು ಮುಂದೆ ಪ್ರೋತ್ಸಾಹಿಸಲಾಗುವುದು. ಪಡಿತರ ಪ್ರದೇಶಗಳಿಗೆ ೫ ಸೇರಿಗಿಂತಲೂ ಹೆಚ್ಚು ಧಾನ್ಯವನ್ನು ತರುವುದಕ್ಕೆ ಅವಕಾಶವಿಲ್ಲ. ತಲೆಯಮೇಲೆ ಅಥವಾ ಗಾಡಿಗಳಲ್ಲಿ ಕೊಂಡೊಯ್ಯುವ ಲಾರಿ ಮತ್ತು ರೈಲುಗಳಲ್ಲಿ ಸಾಗಿಸುವುದನ್ನು ವ್ಯಾಪಾರವೆಂದು ಪರಿಗಣಿಸಲಾಗುವುದು. ನಿಯಂತ್ರಣವಿರುವುದರಿಂದ ಧಾನ್ಯದ ಲೆವಿ ಪ್ರಮಾಣವನ್ನು ಗೊತ್ತುಪಡಿಸಲಾಗುವುದು ಎಂದೂ ಅವರು ತಿಳಿಸಿದರು.

ಆಹಾರ ಸಚಿವ ಸಿದ್ದವೀರಪ್ಪನವರು ತಮ್ಮ ಭಾಷಣದಲ್ಲಿ ಆಹಾರ ವಿಷಯಗಳು ಕೆಲವು ಕಾಲ ಇರಬೇಕೆಂದು, ಸೂಚಿಸಿದರು. ಅಪರಾಧ ಮಾಡಿದವರಿಗೆ ಉಗ್ರ ಶಿಕ್ಷೆ ವಿಧಿಸಲಾಗುವುದೆಂದು ಅವರು ಎಚ್ಚರಿಸಿದರು.

ಅಮೆರಿಕಾ ಅಧ್ಯಕ್ಷ ಸ್ಥಾನದ ಸ್ಪರ್ಧಿಗಳ ಬೆಂಬಲಿಗರಲ್ಲಿ ಹೊಡೆದಾಟ

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕ್ ಪಕ್ಷದ ಪರವಾಗಿ ಉಮೇದುವಾರರನ್ನು ಆಯ್ಕೆಯಿಂದ ಆರಿಸುವ ಬಗ್ಗೆ ನಡೆದ ಸಂಘ ಸಭೆ [illegible] ಜನರಲ್ ಐಸನ್‌ಹೋವರ್ ಮತ್ತು ಸೆನೆಟರ್ ಟಾಫ್ಟ್ ಇವರ ಬೆಂಬಲಿಗರಿಗೆ ತೀವ್ರ ಘರ್ಷಣೆ ನಡೆಯಿತೆಂದು ವರದಿ [illegible] ಐಸನ್‌ಹೋವರ್ ಮತ್ತು ಟಾಫ್ಟ್ [illegible] ಪಕ್ಷದ ಪರವಾಗಿ ಸ್ಪರ್ಧಿಸಲು ಮುಂದೆ ಬಂದಿರುತ್ತಾರೆ.

ಹೈದರಾಬಾದು ವಿಭಜನೆ ವಿಪತ್ಕಾರಿಯೆಂದು ನೆಹರೂ

ಹೈದರಾಬಾದು ಸಂಸ್ಥಾನವನ್ನು ವಿಭಜಿಸುವ ಕಾರ್ಯಕ್ಕಿಂತ ಅನಪೇಕ್ಷಣೀಯ ದುರದೃಷ್ಟಕರ ಮತ್ತು ವಿಪತ್ಕಾರಿಯಾದ ಮತ್ತೊಂದು ವಿಷಯವೇ ಇಲ್ಲವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ. ಹೈದರಾಬಾದಿನ ವಿಭಜನೆಯಾದರೆ ಇಡೀ ದಕ್ಷಿಣ ಭಾರತದ ರಚನೆಯೇ ತಲೆಕೆಳಗಾಗುವುದೆಂದು ಅವರು ಸೂಚಿಸಿರುತ್ತಾರೆ. ಭಾಷಾವಾರು ಪ್ರಾಂತಗಳ ಬಗ್ಗೆ ಉಗ್ರ ಚಳವಳಿ ನಡೆಸುವುದರಲ್ಲಿ ಅರ್ಥವಿಲ್ಲವೆಂದೂ, ಯಾವುದಾದರೂ ನಿರ್ದಿಷ್ಟ ಪ್ರದೇಶದಲ್ಲಿ ಅದಕ್ಕೆ ಸಂಬಂಧಿಸಿದ ಜನರಲ್ಲಿ ಏಕಾಭಿಪ್ರಾಯವಿದ್ದರೆ ಆ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಭಾರತ ಸರ್ಕಾರದವರು ಸಿದ್ಧವಾಗಿರುವರೆಂದೂ ಅವರು ಹೇಳಿರುವರು.

ಬಂಧನದಿಂದ ತಪ್ಪಿಸಿಕೊಂಡ ಖೈದಿಗಳಿಂದ ಜೈಲಿಗೆ ಬೆಂಕಿ

ಉತ್ತರ ಅಮೆರಿಕದ ಒಂಟೇರಿಯೋ ಎಂಬಲ್ಲಿ ಬಂಧಿಸಲ್ಪಟ್ಟಿದ್ದ ಸಾವಿರ ಮಂದಿ ದರೋಡೆಕೋರ ಖೈದಿಗಳು ಮೊನ್ನೆ ರಾತ್ರಿ ಜೈಲು ಒಡೆದು, ಟಿಯರ್ ಗ್ಯಾಸ್ ಮತ್ತು ಬಂದೂಕಗಳನ್ನು ಹೊಂದಿದ್ದ ಜೈಲು ಕಾವಲುಗಾರರನ್ನು ಎದುರಿಸಿ

ಸರ್ಕಾರಿ ಭವನಗಳ ಬಗ್ಗೆ ವೆಚ್ಚ

ಶಾಸನ ಸಭೆಯಲ್ಲಿ ವಿವರಣೆ

ಸ್ವಂ. ಸು ವರದಿಗಾರ] ಬೆಂಗಳೂರು ೮

ಈ ದಿನ ಶಾಸನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಸರ್ಕಾರಿ ಭವನಗಳಿಗಾಗಿ ವರ್ಷಕ್ಕೆ ೬೬ ೯೮೨ ರೂ ಗಳನ್ನು ವೆಚ್ಚ ಮಾಡಲಾಗುತ್ತಿರುವುದೆಂದೂ, ಮೈಸೂರಿನಲ್ಲಿರುವ ಸರ್ಕಾರಿ ಭವನದ ವೆಚ್ಚದಲ್ಲಿ ಈ ಸಾರಿ ೫ ಸಾವಿರ ರೂ ಗಳನ್ನು ಕಡಿಮೆ ಮಾಡಲಾಯಿತೆಂದೂ ತಿಳಿಸಲಾಯಿತು. ಮಂತ್ರಿಗಳು ಸರ್ಕಾರಿ ಭವನದಲ್ಲೇ ತಂಗುವ ಬಗ್ಗೆ ವ್ಯವಸ್ಥೆ ಮಾಡಲಾಗುವುದೆಂದು ಭರವಸೆಯೀಯಲಾಯಿತು.

ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಮತ್ತೊಂದು ಪ್ರಶ್ನೆಗೆ ಉತ್ತರವಿತ್ತು ಅಸಿಸ್ಟೆಂಟ್ ಪ್ರೊಫೆಸರುಗಳ ನೇಮಕ, ಬಡ್ತಿ ಮುಂತಾದ ವಿಷಯಗಳು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ವ್ಯಾಪ್ತಿಗೆ ಒಳಪಡುವುದಿಲ್ಲವೆಂದೂ ಲೆಕ್ಚರರು, ಅಸಿ ಪ್ರೊಫೆಸರರು ಮತ್ತು ಪ್ರೊಫೆಸರರುಗಳ ನೇಮಕ, ಬಡ್ತಿ ಇವುಗಳನ್ನು ಪರಿಶೀಲಿಸಲು ವಿಶ್ವವಿದ್ಯಾಲಯದ ಕೌನ್ಸಿಲಿನ ಸಮಿತಿಗಳು ಇರುವುವೆಂದೂ ಆ ಸಮಿತಿಗಳ ವರದಿಯು ರಹಸ್ಯವೆಂದೂ ಹೇಳಿದರು.

ಹಿರಿಯ ಶಾಸನ ಸಭಾಧಿವೇಶನ

ಮೈಸೂರಿನ ಹಿರಿಯ ಶಾಸನಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಅಧಿವೇಶನವು ಈ ತಿಂಗಳು ೨೮ ರಿಂದ ಆರಂಭವಾಗುವುದು. ಒಂದು ವಾರದ ವರೆಗೆ ಅದು ನಡೆಯುವ ಬಗ್ಗೆ ಕಾರ್ಯಕ್ರಮವನ್ನು ಹಾಕಲಾಗಿದೆಯೆಂದು ಹೇಳಲಾಗಿದೆ.

● ಪ್ರೊ|| ಟಿ ಎಸ್ ಶ್ರೀಕಂಠಯ್ಯನವರನ್ನು ಧಾರವಾಡ ವಿಶ್ವವಿದ್ಯಾನಿಲಯದ ಪ್ರೊಫೆಸರಾಗಿ ೨ ವರ್ಷದ ವರೆಗೆ ಸೇವೆಸಲು ಅವಕಾಶವೀಯಲಾಗಿದೆ.

○ ಲೆಜಿಸ್ಲೇಟಿವ್ ಕೌನ್ಸಿಲಿನ ಕಾರ್ಯದರ್ಶಿಯಾಗಿ ಶ್ರೀ ಟಿ ಡಿ ರಾಮನಾಥರವರನ್ನು ನೇಮಕರನ್ನಾಗಿ ಮಾಡಲಾಗಿದೆ.

ಮೈಸೂರು ರೈಲ್ವೆ ನೌಕರರಿಗೆ ಪ್ರೈವೇಜ್

ಮೈಸೂರು ಮತ್ತು ಇತರ 'ಬಿ' ಸಂಸ್ಥಾನಗಳ ರೈಲ್ವೆಗಳ ನೌಕರರಿಗೆ ಗಳಿಕೆ ರಜ ಪ್ರೈವೇಜ್ ರಿಯಾಯಿತಿಯನ್ನು ಕೊಡಲು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ. ಇದರ ಪ್ರಕಾರ, ೧೯೫೦ ನೇ ಏಪ್ರಿಲ್ ೧ ಕ್ಕೆ ೨೫ ವರ್ಷ ಅಥವಾ ಹೆಚ್ಚು ಕಾಲ ಸೇವೆ ಸಲ್ಲಿಸಿರುವ ಎಲ್ಲ ನೌಕರರಿಗೂ, ತಮ್ಮ ಸಂಬಳದ ದರ್ಜೆಯಲ್ಲಿ ಇನ್ನೊಂದು ಬಡ್ತಿ ಕೊಡಲಾಗುವುದೆಂದೂ, ಕೇಂದ್ರದ ಹೊಸ ಸ್ಕೇಲಿನಂತೆ ಅವರುಗಳ ಕನಿಷ್ಟ ಸಂಬಳದ ಮೇಲೆ ೬ ವರ್ಷಕ್ಕೆ ಒಂದರಂತೆ ಬಡ್ತಿಗಳನ್ನು ಸೇರಿಸಿ, ಒಟ್ಟು ಆಗುವ ಮೊಬಲಗಿಗಿಂತ ಅವರ ಸಂಬಳವು ಕಡಿಮೆಯಾದಲ್ಲಿ ಆ ವ್ಯತ್ಯಾಸವನ್ನು ಸರಿಪಡಿಸಿ ಸಂಬಳವನ್ನು ಹೆಚ್ಚಿಸಲಾಗುವುದೆಂದೂ ಗೊತ್ತಾಗಿದೆ.

ಬಂಧನದಿಂದ ತಪ್ಪಿಸಿಕೊಂಡು ಹೊರಗೆ ಬಂದು ಜೈಲು ಕಟ್ಟಡಕ್ಕೆ ಬೆಂಕಿ ಹಚ್ಚಿದರೆಂದು ವರದಿಯಾಗಿದೆ.

ಬ್ರಿ॥ ರಾಣಿಯ ರಾಜಧನದ ಖೋತಾಕ್ಕೆ ಪ್ರಯತ್ನ

ಬ್ರಿಟನ್ನಿನ ರಾಣಿಯವರಿಗೆ ಕೊಡುತ್ತಿರುವ ರಾಜಧನವನ್ನು ಅರ್ಧದಷ್ಟು ಇಳಿಸುವಂತೆ ಪಾರ್ಲಿಮೆಂಟಿನ ಇಬ್ಬರು ಸದಸ್ಯರು ಸೂಚನೆ ತರಲಿರುವರು ಹಾಗೆಯೇ ಅವರ ಗಂಡ ಎಡಿನ್‌ಬರೋ ಡ್ಯೂಕರ ವೇತನವನ್ನು ವರ್ಷಕ್ಕೆ ೪೦ ಸಾವಿರ ಪೌಂಡುಗಳಿಂದ ೧೦ ಸಾವಿರಕ್ಕೆ ಇಳಿಸುವಂತೆಯೂ ಒತ್ತಾಯಪಡಿಸಲಾಗುವುದು

ಹೈದ್ರಾಬಾದು ನಿಜಾಮರ ಮಗನ ಮೇಲೆ ದಾವಾ

ಹೈದ್ರಾಬಾದು ನಿಜಾಮರ ಎರಡನೇ ಪುತ್ರರಾದ ಪ್ರಿನ್ಸ್ ಮೊ[illegible] ಜಾ[illegible] ರವರು ಬೊಂಬಾಯಿನ ವೈದ್ಯರೊಬ್ಬರಲ್ಲಿ ಪಡೆದ ಔಷದೋಪಚಾರಗಳಿಗಾಗಿ ತಮಗೆ [illegible] ರೂ ಫೀಕೊಡಬೇಕೆಂದ ವೈದ್ಯರು ಬೊಂಬಾಯಿಯ ಹೈಕೋರ್ಟಿನಲ್ಲಿ ಅವರ ಮೇಲೆ ದಾವಾ ಹೂಡಿರುವರೆಂದು ತಿಳಿದುಬಂದಿದೆ

ಕಾಲೇಜು ಬಳಿ ಉಪವಾಸ ನಿಂತಿತು

ರಾಜಧಾನಿಯ ಸೇಂಟ್ ಫಿಲೋಮಿನಾ ಕಾಲೇಜಿನ ಬಿ ಎಸ್‌ಸಿ ತರಗತಿಗೆ ಸೇರಿಸಿಕೊಳ್ಳಲಿಲ್ಲವೆಂದು ಹಲವು ದಿನಗಳಿಂದಲೂ ಕಾಲೇಜಿನ ಪ್ರಿನ್ಸಿಪಾಲರ ಕೊಠಡಿಯ ಒಳ ಉಪವಾಸ ಮಾಡುತ್ತಿದ್ದ ಶ್ರೀ ಪ್ರಭಾಕರ ಶರ್ಮರವರು ಒಂದು ಪತ್ರ ಬರೆದ, ತಪ್ಪು [illegible] ಉಪವಾಸವನ್ನು ನಿಲ್ಲಿಸಬೇಕೆಂದು ಹಲವು ಮಿತ್ರರು ಮತ್ತು ನಾಗರಿಕರು ಕೋರಿ, ಉಪವಾಸದ ಕಾರಣವನ್ನು ಪರಿಶೀಲಿಸಿ ನ್ಯಾಯವನ್ನು ದೊರಕಿಸಲು ಮುಂದೆ ಬಂದಿರುವುದರಿಂದ ಸತ್ಯಾಗ್ರಹವನ್ನು ನಿಲ್ಲಿಸಿದ್ದುದಾಗಿ ತಿಳಿಸಿರುತ್ತಾರೆ

ಅಭಾವ ಪ್ರದೇಶಗಳಿಗೆ ಮಾಜಿ ಸೈನಿಕರ ನಿಧಿಯ ಸಹಾಯ

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಇರುವ ಜನರ ಪರಿಹಾರಕ್ಕಾಗಿ ಮಾಜಿ ಸೈನಿಕರ ಯೋಗಕ್ಷೇಮ ನಿಧಿಯ ವ್ಯವಸ್ಥಾಪಕರು ೫೦೦ ರೂ ಗಳನ್ನು ಮುಖ್ಯಮಂತ್ರಿಯವರಿಗೆ ಕಳುಹಿಸುವರು

ದೇವರು ಒಲಿಯಲಿಲ್ಲವೆಂದು ವಿಗ್ರಹ ಭೇದನ

ಅಹಮದಾಬಾದು ಜಿಲ್ಲೆಯ ತಾಲೂಕ್ ಎಂಬ ಹಳ್ಳಿಯ ಸಾಧುವೊಬ್ಬನು ಮಳೆಗರೆಸುವಂತೆ ಪಾರ್ವತಿ ಪರಮೇಶ್ವರರನ್ನು ಕುರಿತು ದೇವಾಲಯವಲ್ಲಿ ೩ ದಿನಗಳ ಕಾಲ ಎಡಬಿಡದೆ ಪ್ರಾರ್ಥನೆಯನ್ನು ಸಲ್ಲಿಸಿದರೂ, ದೇವರು ಪ್ರಸನ್ನನಾಗಲಿಲ್ಲವೆಂದು ಕೋಪಗೊಂಡು ಶಿವನ ವಿಗ್ರಹವನ್ನು ಒಡೆದು ಬಾವಿಗೆ ಹಾಕಿ ಪಾರ್ವತಿ ವಿಗ್ರಹವನ್ನು ಒಂದು ಮರ[illegible] ಹಾಕಿರುವನೆಂದ ವರದಿಯಾಗಿದೆ ನಂತರ ಇವಿ[illegible] ನದಿಗೆ ಹೋಗಿ ಕತ್ತಿನ ಮಟ್ಟದ ನೀ[illegible] ನಿಂತು ಮಳೆಯ[illegible] ಬರುವವರೆಗ ತಾನು ಇಲ್ಲಿಯೇ ಇರುವುದಾಗಿ ಪ್ರತಿಜ್ಞೆ ಮಾಡಿರುವನೆಂದು ಹೇಳಲಾಗಿದೆ

ಆಂಜನೇಯನ ದೇವಸ್ಥಾನದಲ್ಲಿ ಅದ್ಭುತ ಪ್ರಸಂಗ

ದೆಹಲಿಯ ಹನುಮಾನ್ ದೇವಸ್ಥಾನವೊಂದರಲ್ಲಿ ಕೆಲವು ದಿನಗ[illegible] ಪ್ರಾರ್ಥನೆ ನಡೆಸ[illegible] [illegible]

[illegible] ನ್ನು ಬಿಡಲಾಗುವುದೆಂದೂ [illegible] ಗಿದೆ

ಗಿರಿಜಾ ಕಲ್ಯಾಣ

ರಾ[illegible] ಯ ತರೋ[illegible] ರಸ್ತೆಯ [illegible] ಪ್ರವಚನಕಾರ [illegible] ನ[illegible] ಪ್ರಕಾರ [illegible] ಗಿರಿಜಾ ಕಲ್ಯಾಣ [illegible] ಇದೇ [illegible] ರಾತ್ರಿ [illegible] ಇದರ ಅಂಗವಾಗಿ [illegible] ರಿಂದ ೧೫ ನೇ ತಾ॥ ವರೆಗೂ ನಡೆಯುವವು

೧೦೦ ಪಲ್ಲ ಅಕ್ಕಿ ಕಳ್ಳ ದಾಸ್ತಾನಿನ ವಶ

ಮಧುಗಿರಿಯ ಗರಣಿ ಮಾಲೀಕರಾದ ಚಿಕ್ಕರಾಮಶೆಟ್ಟಿ ಎಂಬುವರು ಅಕ್ರಮವಾಗಿ [illegible] ೧೦೦ ಪಲ್ಲ ಅಕ್ಕಿ ಮತ್ತು ಭತ್ತವನ್ನೂ ಮತ್ತು ೬೦ ಮೂಟೆ ರಾಗಿಯನ್ನೂ ಪೊಲೀಸ್ ವಶಪಡಿಸಿಕೊಂಡು ಅವನ ಗೋಡೌನನ್ನು ಸೀಲ್ ಮಾಡಿರುವುದಾಗಿ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ	ಇಂದ ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಗುರೆಳ್ಳು	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ ಮಣ	[illegible]	[illegible]
ಹುಣಸೇಹಣ್ಣು	[illegible]	
ಬೆಳ್ಳುಳ್ಳಿ	[illegible]	[illegible]
[illegible]	[illegible]	[illegible]

ಕಥಾಲೋಕ

[illegible] ಸಚಿತ್ರ ಕಥಾ ಮಾಸಪತ್ರಿಕೆ

ಸಾಹಿತ್ಯ ಸಂಚಿಕೆ

೧೯೫೨ ಆಗಸ್ಟ್ ೧೫

ಪ್ರಕಟವಾಗುವುದು

[illegible]

ಕಥಾಲೋಕ ಕಾರ್ಯಾಲಯ

[illegible] ಪ್ರಿಂಟರ್ಸ್

[illegible] ರಸ್ತೆ, ಮೈಸೂರು

[illegible]

ಅಥರ್ವಣ ವೇದದ ಉಪದೇಶ

ರಾಜಧಾನಿಯ ಶ್ರೀ ನರಸಿಂಹ ಉಪಾಸಕರಾದ ಮಂತ್ರ ಮೂರ್ತಿ ಶ್ರೀ ಸಂಪತ್ಕುಮಾರಾಚಾರ್ಯರು ಪತ್ರವೊಂದನ್ನು ಬರೆದು ತಿಳಿಸಿರುವ ಪ್ರಕಾರ, ಅವರು ೧೯೩೬ ರಲ್ಲಿ ಅಥರ್ವಣ ವೇದವನ್ನು ಮುದ್ರಿಸಿ ಪ್ರಕಟಿಸಿರುವುದಾಗಿಯೂ ಅದರಲ್ಲಿ ಕೆಲವು ಗೂಢವಾದ ಮಂತ್ರ ರಹಸ್ಯಗಳಿರುವುವೆಂದೂ, ಮತಭೇದವಿಲ್ಲದೆ ಸರ್ವ ವರ್ಣದವರಿಗೂ ಪಾತ್ರಾಪಾತ್ರವರಿತು ಅವನ್ನು ಉಪದೇಶಿಸಲು ಅವರು ಸದಾ ಸಿದ್ಧರಿರುವುದಾಗಿಯೂ ಗೊತ್ತಾಗಿದೆ. ಪರೋಪಕಾರಕ್ಕೆ ವಿನಃ ಇತರ ಕಾರ್ಯಗಳಿಗೆ ಇವನ್ನು ಉಪಯೋಗಿಸುವಂತಿಲ್ಲ ಇದರಿಂದ ದೇಶಕ್ಕೆ ಬಂದಿರುವ ಸ್ವಾತಂತ್ರ್ಯದ ರಕ್ಷಣೆಗೂ ಸಹಾಯಕವಾಗುವುದೆಂದೂ ಅವರು ಹೇಳಿರುವರು ಹೆಚ್ಚಿನ ವಿವರಗಳನ್ನು ತಿಳಿಯಬಯಸುವವರು ನ್ಯೂ ಸಯ್ಯಾಜಿರಾವ್ ರಸ್ತೆಯ 80/1 ನೇ ಮನೆ, ಕುಮಾರಸ್ವಾಮಿ ಬೀದಿ, ಬಿಲ್ಲ [illegible] ಇವರಲ್ಲಿ [illegible] ವಿಚಾರಿಸಬಹುದು

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible] ಕಾರ್ಯಕ್ರಮ [illegible] ಕಾರ್ಯಕ್ರಮ, ೭ ರಿಂದ [illegible] ಸಂಗೀತ [illegible] ಗೀತೆಗಳು

Edited Printed and Published by A R Nagarajan at Sadhvi Press D Subbiah Road, Mysore

ಚಾಮುಂಡೇಶ್ವರಿ

ಟಾಕೀಸ್

9-7-52 ರಿಂದ ಪ್ರತಿದಿನ ಪ್ರಾರಂಭ

[illegible] ಭಾಗವತರ [illegible]

ತಿರು ನೀಲಕಂಠರ್

(ತಮಿಳು ಚಿತ್ರ)

ಮುಖ್ಯ ಪಾತ್ರ – [illegible]

SRI GAYATHRI

TALKIES

Daily 2 Shows

From 7-7-52 to [illegible]

LET'S DANCE

(In Technicolor)

From 9-7-52 to [illegible]

HONGKONG

(In Technicolor)

Starring Ronald Reagan and Rhonda Fleming

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

✽ ಅತ್ಯುತ್ತಮವಾದ ನೊರೆಯುವ ಸಾಬೂನು

✽ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು.

✽ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.

✽ ಬಾಳಿಕೆಯಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಪ್ರಭುದೇವಾ ಟಾಕೀಸ್

ಮೈಸೂರು ನಾಗೇಂದ್ರ ರಾವ್ ಅಭಿನಯಿಸಿರುವ, ಜೆಮಿನಿಯವರ ತಮಿಳು ಚಿತ್ರ

ಮೂವರು ತನಯರು

(ಮೂವರು ಮಕ್ಕಳು)

11—7—52 ನೇ .... ಶುಕ್ರವಾರದಿಂದ

ಟೆಲಿಫೋನ್ ನಂ 792 || ಸಂಚೆ ಪತ್ರಿಕೆ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೧] ಬುಧವಾರ ೯ ೭ ೫೧ [ಸಂಚಿಕೆ ೩೦೨

ಡಾ|| ಗ್ರಹಾಂರೊಡನೆ ಪಾಕ್ ಸಂಧಾನ ರದ್ದೇ

...ಗ್ರಹಾಂರೊಡನೆ ಪಾಕಿಸ್ತಾನದ ಪ್ರತಿನಿಧಿಗಳ ಸಂಧಾನ ರದ್ದು ?

ವಿಶ್ವ ಸಂಸ್ಥೆಯ ಕಾಶ್ಮೀರ ಪ್ರತಿನಿಧಿ ಡಾ|| ಗ್ರಹಾಂರೊಡನೆ ಸಂಧಾನ ನಡೆಸುತ್ತಿರುವ ತನ್ನ ಪ್ರತಿನಿಧಿಗಳನ್ನು ವಾಪಸು ಕರೆಸಿಕೊಳ್ಳುವ ಆಲೋಚನೆಯನ್ನು ಪಾಕಿಸ್ತಾನವು ಮಾಡುತ್ತಿರುವುದೆಂದು ವರದಿಯಾಗಿದೆ. ನಿರ್ಧಾರವೇನಾದರೂ ಕೈಗೊಂಡಲ್ಲಿ ಯಾವ ಘಳಿಗೆಯಲ್ಲಾದರೂ ಆ ಪ್ರತಿನಿಧಿಗಳು ಹಿಂತಿರುಗುವರೆಂದು ಹೇಳಲಾಗಿದೆ. ಭಾರತ ಮತ್ತು ಪಾಕಿಸ್ತಾನ ಪ್ರತಿನಿಧಿಗಳೊಡನೆ ಗ್ರಹಾಂರವರು ನಾಲ್ಕನೇ ಬಾರಿ ಸಂಧಾನ ನಡೆಸಿದರೂ, ಇದುವರೆಗೂ ಏನೂ ಪ್ರಗತಿ ಸಾಧಿಸಲ್ಪಟ್ಟಿಲ್ಲವೆಂದು ಪಾಕಿಸ್ತಾನದ ಅಭಿಪ್ರಾಯವಾಗಿರುವುದೆಂದು ಹೇಳಲಾಗಿದೆ.

ಪ್ರಥಮ ಘಟ್ಟದಲ್ಲಿ ಐಸನ್‌ಹೋವರರ ವಿಜಯ ?

ಅಮೆರಿಕದ ರಿಪಬ್ಲಿಕನ್ ಪಕ್ಷದ ವಾಷಿಂಗಟನ ಪ್ರಥಮ ಪರೀಕ್ಷಾ ಮತದಾನದಲ್ಲಿ ಜ|| ಐಸನ್ ಹೋವರರು ವಿಜಯಗಳಿಸಿರುತ್ತಾರೆ ಅವರಿಗೆ [illegible] ಮತ್ತು ಅವರ ವಿರೋಧಿ ಟಾಫ್ಟ್‌ರವರಿಗೆ [illegible] ವೋಟುಗಳು ಬಂದಿವೆ. ಐಸನ್ ಹೋವರರು [illegible] ದೇಶದ ಅಧ್ಯಕ್ಷಸ್ಥಾನಕ್ಕೆ ನಡೆಯುವ ಸ್ಪರ್ಧೆಯ [illegible] ಪಕ್ಷದ ಸ್ಪರ್ಧಿಯಾಗಿ ಆರಿಸಿ ಬರುವ ನಿರೀಕ್ಷೆಯಿದೆ. ಜಾರ್ಜಿಯಾ ಸಂಸ್ಥಾನದವರು ಟಾಫ್ಟ್‌ರವರಿಗೆ ಬೆಂಬಲವಿತ್ತಿರುವರು.

ಕಲ್ಕತ್ತಾದಲ್ಲಿ ೧೨ ಸಾವಿರ ರೂ. ದರೋಡೆ

ಕಲ್ಕತ್ತದ ಬಳಿ ಉತ್ತರಪ್ರದೇಶ [illegible] ಬ್ಯಾಂಕೊಂದರ ಕ್ಯಾಷಿಯರ್ ಮತ್ತು ವರ್ತಕರ ಮೇಲೆ ಐದಾರು ಜನರು ದಾಳಿ ನಡೆಸಿ [illegible] ೧೨ ಸಾವಿರ ರೂಗಳನ್ನು ಕಿತ್ತುಕೊಂಡು ಹೋಗಿರುವರೆಂದು ವರದಿಯಾಗಿದೆ. ಪಕ್ಕದವರನ್ನು [illegible] ಆಸ್ಪತ್ರೆಗೆ ಸಾಗಿಸಲಾಗಿ...

ರಷ್ಯದ ಮೇಲೆ ಅಮೆರಿಕದ ಆಪಾದನೆ

ಕೊರಿಯಾದಲ್ಲಿ ಕ್ರಿಮಿ ಯುದ್ಧವನ್ನು ನಡೆಸಲಾಗುತ್ತಿರುವುದೆಂಬ ಆಪಾದನೆಯನ್ನು ಜಗತ್ತಿನಲ್ಲಿ ಹರಡಿ ಸೋವಿಯೆಟ್ ರಷ್ಯವು [illegible] ಪ್ರಚಾರವನ್ನು ಮಾಡುತ್ತಿರುವುದಾಗಿ ಅಮೆರಿಕವು ಆಪಾದಿಸಿರುತ್ತದೆ. ಇಂತಹ ಪ್ರಚಾರವನ್ನು ಭದ್ರತಾ ಸಮಿತಿಯು ಖಂಡಿಸಬೇಕೆಂದೂ ಅದು ಸೂಚಿಸಿರುತ್ತದೆ.

ಶಾಸನಸಭಾಸದಸ್ಯರು ಓಟು ಕೊಡಲು ಹೊಸ ಸಾಧನ

ಶಾಸನಸಭಾ ಸದಸ್ಯರು ತಾವು ಕುಳಿತ ಸ್ಥಳದಿಂದಲೇ ಗುಂಡಿ ಒತ್ತಿ ಓಟು ಕೊಡಬಲ್ಲಂತಹ ಯಾಂತ್ರಿಕ ಸಾಧನವನ್ನು ಅಳವಡಿಸಲು ಪಶ್ಚಿಮ ಬಂಗಾಳ ಶಾಸನ ಸಭಾಧ್ಯಕ್ಷರು ಯೋಚಿಸುತ್ತಿರುವರು. ಇಂತಹ ಸಾಧನವು ದಿಲ್ಲಿಯಲ್ಲಿರುವುದು.

ಭಾರತದಲ್ಲಿ ರಾಜತ್ವವೇ ಇಲ್ಲವೆಂದು ನೆಹರೂ

ಭಾರತದಲ್ಲಿ ಈಗ ರಾಜತ್ವವೇ ಇಲ್ಲವೆಂದೂ, ಬ್ರಿಟಿಷರಿದ್ದ ಕಾಲದಲ್ಲಿ ಅಲ್ಲಿ ಕೆಲವು ಅಧಿಕಾರ ಹೊಂದಿದ್ದ ಹಲವು ಜನರಿಗೆ [illegible] ಈಗ ಆ ಅಧಿಕಾರವು ಇಲ್ಲ [illegible] ನೆಹರೂರವರು [illegible] ಹಲವರಿಗೆ [illegible] [illegible] ಪ್ರಶ್ನೆಗೆ [illegible] ವ್ಯವಸ್ಥೆಯ ಪರಿಶೀಲನೆಗಾಗಿ ಪುರಿಯಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು.

ಫಿಲಂಗಳ ಮೇಲೆ ಬಲವಾದ ಹತೋಟಿ ?

ಭಾರತದಲ್ಲಿ [illegible] ಫಿಲಂಗಳ ನೈತಿಕ ಮಟ್ಟವು ಉತ್ತಮಗೊಳ್ಳದಿದ್ದರೆ ಕೇಂದ್ರ ಸರ್ಕಾರವು ಇನ್ನೂ ಬಲವತ್ತರವಾದ ಹತೋಟಿಯನ್ನು ಹಾಕಬೇಕಾಗುವುದೆಂದು ಕೇಂದ್ರ ವಾರ್ತಾ ಸಚಿವರಾದ ಡಾ|| ಬಿ. ವಿ. ಕೇಸ್ಕರ್‌ರವರು ತಿಳಿಸಿರುವರು. ಈಗ ಉತ್ಪಾದಿಸುತ್ತಿರುವ [illegible] ಫಿಲಂಗಳು ಸಾಮಾಜಿಕವಾಗಿ ಅನುಗುಣವಾಗಿಲ್ಲವೆಂದೂ, ಹಾಲಿವುಡ್ಡಿನ ನಟಿಯರನ್ನು ಅನುಕರಣೆ ಮಾಡಲಾಗುತ್ತಿರುವುದೆಂದೂ ಅವರು ಹೇಳಿದರು.

ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷಾಮದ ಸೂಚನೆ ?

ಚಿತ್ರದುರ್ಗ ಜಿಲ್ಲೆಯಲ್ಲಿ ಕ್ಷಾಮದ ಚಿಹ್ನೆಗಳು ಕಾಣಿಸಿಕೊಂಡಿರುವುದಾಗಿಯೂ ಬಿತ್ತನೆಯು ಕಾರ್ಯವು ಆಗಿಯೇ ಇಲ್ಲವೆಂದೂ, ಅನೇಕ ಜನರು ಉಪವಾಸವಿರುತ್ತಿರುವರೆಂದೂ, ವರದಿಯಾಗಿದೆ. ನಿರುದ್ಯೋಗವು ಹೆಚ್ಚಾಗಿ ಜನರು ಕಷ್ಟಪಡುತ್ತಿರುವರೆಂದೂ ಹೇಳಲಾಗಿದೆ.

ಇಂಗ್ಲೀಷ್ ಭಾಷೆಗೆ ಪ್ರತಿಭಟನೆಗಾಗಿ ಸಭಾತ್ಯಾಗ

ದೆಹಲಿಯ ಶಾಸನಸಭೆಯಲ್ಲಿ ಆಯವ್ಯಯದ ಮೇಲೆ ನೆನ್ನೆ ಚರ್ಚೆಯಾಗುತ್ತಿದ್ದಾಗ ಇಂಗ್ಲಿಷ್ ಭಾಷೆಯ ಕಾರ್ಯಕಲಾಪಗಳು ನಡೆದುವೆಂದು ಪ್ರತಿಭಟಿಸಲು ನೆನ್ನೆ ಇಬ್ಬರು ಸ್ವತಂತ್ರ ಸದಸ್ಯರು ಸಭಾತ್ಯಾಗ ಮಾಡಿದರು.

ಕ್ಷೌರದಂಗಡಿಯವರಿಗೆ ವೈದ್ಯರ ಸರ್ಟಿಫಿಕೇಟು

ಪೌರಸಭೆಯಲ್ಲಿ ಪರಿಶೀಲನೆ

ಮೈಸೂರು [illegible]

[illegible] ಪೌರಸಭೆಯ ಅಧಿವೇಶನವು [illegible] ನಡೆದಾಗ ಕ್ಷೌರದ ಅಂಗಡಿಗಳ [illegible] ಬಂದ [illegible] ಅಧ್ಯಕ್ಷ ಶ್ರೀ [illegible] ಕ್ಷೌರದಂಗಡಿಯವರಿಗೆ [illegible] ವೈದ್ಯರ ಸರ್ಟಿಫಿಕೇಟನ್ನು [illegible] [illegible] ಇಲ್ಲದಿರುವುದೆಂದು [illegible] ಈ ಬಗ್ಗೆ ಸೂಚನೆ [illegible] ನಂತರ [illegible]

[illegible] ನೌಕರರ [illegible] ವೇತನ [illegible] ಕೆಲವು ಸದಸ್ಯರು [illegible] ಇಲ್ಲದೆ [illegible] ಕಾರಿಗಳ ಯೋಜನೆ [illegible] ಶೀಲಿಸಿ ಸಭೆಯು ಅದನ್ನು ವಹಿಸಿತು.

ಬೆಂಗಳೂರಿಗೆ ಕಿದ್ವಾಯಿಯವರ ಭೇಟಿ

ಭಾರತ ಸರ್ಕಾರದ ಆಹಾರ ಮಂತ್ರಿ ಜ|| ರಫಿ ಅಹಮದ್ ಕಿದ್ವಾಯಿಯವರು ಬೆಂಗಳೂರಿಗೆ ಈ ತಿಂಗಳು ೧೮ ಅಥವಾ ೧೯ನೇ ತಾ|| ಭೇಟಿಯೀಯುವ ನಿರೀಕ್ಷೆಯಿದೆ. ಸಂಸ್ಥಾನದ ಆಹಾರ ಮತ್ತು ಕೋಲಾರ ಜಿಲ್ಲೆಯ ಅಭಾವ ಪರಿಸ್ಥಿತಿಗಳನ್ನು ಕುರಿತು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರೊಡನೆ ಅವರು ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ಬಂಡವಾಳದ ಉದ್ಯಮಕ್ಕೆ ರಿಸರ್ವ್ ನಿಧಿ ವಿನಿಯೋಗವಿಲ್ಲ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಸ್ವಂತ ವರದಿ] ಬೆಂಗಳೂರು [illegible]

ಈ ದಿನ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ವಿದೇಶೀ ವೇತನಗಳನ್ನು ಈ ಸಾರಿ ಸಂಸ್ಥಾನದ ೧೦ ಮಂದಿಗೆ ಕೊಡಲಾಯಿತೆಂದೂ, ಆ ಪೈಕಿ ೧೪ ಜನರಿಗೆ ದಾಮೋದರದಾಸ್ ವೇತನವನ್ನು ಕೊಡಲಾಯಿತೆಂದೂ, ಈ ಬಗ್ಗೆ ಅನ್ಯಾಯವು ಮಾಡಿಗೂ ಆಗಿಲ್ಲವೆಂದೂ, ಅನಿರೀಕ್ಷಕ ಸರ್ಕಾರಕ್ಕೆ ಅರ್ಜಿ [illegible] ಬಹುದೆಂದೂ ತಿಳಿಸಿದರು.

ಭಾರತ ಸರ್ಕಾರದ ೧೦ ಕೋಟಿ ರೂ ಗಳ ಬಾಂಡುಗಳನ್ನು ಸರ್ಕಾರದವರು ಕೊಂಡಿರುವುದಾಗಿಯೂ, ಇನ್ನೂ ೧೦-೧೧ ಲಕ್ಷ ರೂ ಗಳ ಕೊಂಬಾಯು ಮತ್ತು ಮದ್ರಾಸಿನ [illegible] ಬಾಂಡುಗಳನ್ನು ತೆಗೆದುಕೊಳ್ಳಲಾಗಿರುವುದೆಂದೂ, ಬಂಡವಾಳದ ಉದ್ಯಮಗಳಿಗಾಗಿ ಇನ್ನು ಮುಂದೆ ರಿಸರ್ವ್ ನಿಧಿಯ ವಿನಿಯೋಗ ಮಾಡಲಾಗುವುದಿಲ್ಲವೆಂದೂ ಮುಖ್ಯ ಮಂತ್ರಿಗಳು ಶ್ರೀ [illegible] ರವರ ಪ್ರಶ್ನೆಗೆ ಉತ್ತರವಿತ್ತು ತಿಳಿಸಿದರು.

ಸಂಸ್ಥಾನದ [illegible] ಪ್ರದೇಶದ [illegible] ಅಗತ್ಯಗಳಿಗಾಗಿ [illegible] ತೊಡೆದು [illegible] ಬೇಕಾಗಿರುವುದೆಂದು ರೆವಿನ್ಯೂ ಮಂತ್ರಿ ಶ್ರೀ ಟಿ. ಚನ್ನಯ್ಯನವರು ನೆನ್ನೆ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು ತಿಳಿಸಿದರು.

ಶ್ರೀ [illegible] ರವರು ಈ ದಿನ ಶ್ರೀ ಎಸ್ [illegible] ಪ್ರಮಾಣ ವಚನ [illegible] ಅವರು ನ್ಯಾಯ [illegible]

[illegible] ನ್ಯಾಯಾಂಗ [illegible] ಶ್ರೀ [illegible] ಗಿದೆ

ಕಾಂ|| ಕಾರ್ಯಕಾರಿ ಸಮಿತಿಗೆ ನಿಜಲಿಂಗಪ್ಪನವರ ಆಯ್ಕೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪ, ಮಾಜಿ ಕೇಂದ್ರ ಮಂತ್ರಿ ಎಂ. ವಿ. ಗಾಡ್ಗೀಲ್, ಬಲವಂತರಾಯ್ ಮೆಹತಾ, ಖಂಡೂಭಾಯಿ ದೇಸಾಯಿ ಮತ್ತು [illegible] ಮೊದಲಾದ ಹೊಸ ಸದಸ್ಯರುಗಳನ್ನು ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರು ತಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತೆಗೆದುಕೊಂಡಿರುವರು. ಕೇಂದ್ರ ಮಂತ್ರಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿ, ಗುಲ್ಜಾರಿಲಾಲ್ ನಂದಾ ಮತ್ತು ಬೊಂಬಾಯಿ ಮಂತ್ರಿ ಎಸ್. ಕೆ. ಪಾಟೀಲರವರು ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರು. ಬಲವಂತರಾಯ ಮೆಹತಾರವರು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗುವರು.

ಕಾಲೇಜು ಪ್ರಿನ್ಸಿಪಾಲರ ಮೇಲೆ ವಿದ್ಯಾರ್ಥಿಗಳ ಧಾಳಿ

ಅಂಬಾಲಾದ ಕಾಲೇಜೊಂದರ ಪ್ರಾಧ್ಯಾಪಕರನ್ನು ಹೊಡೆದು ಬೀದಿಯಲ್ಲಿ ಬೆತ್ತಲೆ ನಡೆಯುವಂತೆ ಮಾಡಿದರೆಂಬ ಆಪಾದನೆ ಮೇಲೆ ... ವಿದ್ಯಾರ್ಥಿಗಳನ್ನು ದಸ್ತಗಿರಿಮಾಡಿ ಜಾಮೀನು ಮೇಲೆ ಬಿಡುಗಡೆಮಾಡಲಾಗಿದೆ ಆಡಳಿತ ವರ್ಗದವರು ಅವರುಗಳನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಿ ಕಾಲೇಜು ಹಾಸ್ಟೆಲಿನಿಂದ ಹೊರಡುವಂತೆ ... ಮಾಡಿದ್ದಾರೆ ವಿದ್ಯಾರ್ಥಿಗಳು ಮುಷ್ಕರ ನಡೆಸಿ ಪ್ರಿನ್ಸಿಪಾಲರನ್ನು ವಜಾ ಮಾಡಬೇಕೆಂದೂ, ಅವರ ವಾಸದ ಮನೆಯಿಂದ ಹೊರಡಿಸಬೇಕೆಂದೂ ಒತ್ತಾಯಪಡಿಸಿದ್ದಾರೆ

ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರ

ಮೇಲ್ಕಂಡ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ತಾ ... ನೇ ಶುಕ್ರವಾರ ಸಂಜೆ ... ಘಂಟೆಗೆ ಸರಸ್ವತಿ ಪೂಜಾ ಮಹೋತ್ಸವವು ವರ್ತಮಾನ ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎನ್ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಲೇರ್ಪಡಿಸಿದ್ದು ಕಾರ್ಯಕ್ರಮದ ಅಂಗವಾಗಿ ಮಂದಿರದ ವಿದ್ಯಾರ್ಥಿ ... ವಿದ್ಯಾರ್ಥಿಗಳು ಬರೆದಿರುವ ಕಲಿತ ಬುದ್ಧಿ ಎಂಬ ಕಿರು ನಾಟಕ ಪ್ರದರ್ಶನವೂ ... ಹಾಸ್ಯ ಪ್ರಹಸನ ಪ್ರದರ್ಶನವೂ ... ಮತ್ತು ಚಂದ್ರಶೇಖರ್ ರವರಿಂದ ... ಜರುಗುವುವು ಮಂದಿರದ ಸದಸ್ಯರೂ ಮತ್ತು ಕಲಾಭಿಮಾನಿಗಳೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಶಾತಾತ್ತ್ರದ ಶ್ರೀವೈಷ್ಣವ ಯುವಕರ ಸಂಘದ ವಿದ್ಯಾರ್ಥಿ ನಿಲಯ

ರಾಜಧಾನಿಯ ... ಮೊಹಲ್ಲಾದ ... ರಸ್ತೆಯಲ್ಲಿ ... ನೇ ನಂಬರು ... ಶಾತಾತ್ತ್ರದ ಶ್ರೀವೈಷ್ಣವ ಯುವಕ ಸಂಘದವರು ತಮ್ಮ ವಿದ್ಯಾರ್ಥಿ ನಿಲಯಕ್ಕೆ ಸದರಿ ಕೋಮಿನ ವಿದ್ಯಾರ್ಥಿಗಳನ್ನು ಈ ತಿಂಗಳು ... ತಾರೀಖಿನ ವರೆಗೂ ಸೇರಿಸಿಕೊಳ್ಳುವರು. ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಸಂಘದ ಕಛೇರಿಯಲ್ಲಿ ತಿಳಿಯಬಹುದಾಗಿದೆ

ಉಪಾಧ್ಯಾಯಿನಿಯರಿಂದ ಉಪವಾಸ ಮುಷ್ಕರ

ನೆಹಲಿಯ ಪೌರಸಭೆಯ ಪ್ರಾಥಮಿಕ ಶಾಲೆಯ ೫ ಮಂದಿ ಉಪಾಧ್ಯಾಯಿನಿಯರಿಗೆ ಬರಬೇಕಾದ ಬಾಕಿ ಸಂಬಳವು ದೊರೆತಿಲ್ಲವಾಗಿ ಅವರು ಕಳೆದ ನಾಲ್ಕೈದು ದಿನಗಳಿಂದ ಉಪವಾಸ ಮುಷ್ಕರ ನಡೆಸುತ್ತಿರುವರು

ಕುಂಚಿಟಿಗರ ವಿದ್ಯಾರ್ಥಿ ನಿಲಯ

ರಾಜಧಾನಿಯ ಶ್ರೀರಾಂಪೇಟೆಯಲ್ಲಿರುವ ಧರ್ಮಪರಾಯಣೆ ದೇವಿ ಅಣ್ಣಮ್ಮನವರ ಧರ್ಮ ಛತ್ರದಲ್ಲಿ ಸ್ಥಾಪಿಸಲ್ಪಟ್ಟಿರುವ ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ಈ ವರ್ಷ ವಿದ್ಯಾರ್ಥಿಗಳಿಗಾಗಿ ಹೆಚ್ಚಿಗೆ ಉಚಿತ ಭೋಜನ ಮತ್ತು ವಸತಿಗಳನ್ನು ಏರ್ಪಡಿಸಿರುವರೆಂದೂ ಕುಂಚಿಟಿಗರ ಏಳಿಗೆಗೆ ಸದಾ ದುಡಿಯುತ್ತಿರುವ ಶ್ರೀ ಜಿ ನರಸಿಂಹಯ್ಯ ಮತ್ತು ಎಂ ಮರಿಯಪ್ಪನವರುಗಳು ಈ ಪರೋಪಕಾರ ಕಾರ್ಯಗಳಿಗಾಗಿ ಹೆಚ್ಚಾಗಿ ಮುಕ್ತ...

ಗೃಹಕೃತ್ಯದ ನೋಟೀಸು

ಮೈಸೂರು ಚಾಮರಾಜ ಮೊಹಲ್ಲಾ ... ನೇ ನಂಬರಿನ ಮನೆಯು ಬಿಕರಿ ಮಾಡಲು ವಿಶ್ವಾಸ ... ತೀರ್ಮಾನವಾಗಿದೆ ... ಮನೆಯು ಪಿತ್ರಾರ್ಜಿತವಾದ ಶ್ರೀ ಧನ ಸ್ವತ್ತಾಗಿರುತ್ತೆ ನಮ್ಮ ತಂಗಿ ರಂಗನಾಯಕಮ್ಮನವರಿಗೆ ಗಂಡು ಸಂತಾನವಿಲ್ಲದೆ ಲೋಕವನ್ನು ... ಕಮಲಮ್ಮನೂ ತವರ ಇಬ್ಬರು ಗಂಡ ಮಕ್ಕಳ ... ಯ ತಂಗಿ ಶಾರದಮ್ಮನೆಂಬುವಳೂ ಇದಕ್ಕೆ ಹಕ್ಕುದಾರರಾಗಿದ್ದಾರೆ ಅಕ್ಕ ತಂಗಿಯರಿಗೆ ಸ್ವತ್ತಿನ ವಿಭಾಗ ಪತ್ರವಾಗಿಲ್ಲ ಶಾರದಮ್ಮನಿಗೆ ಸಂತಾನವಿಲ್ಲ ಇದಕ್ಕೆ ತಕರಾರಿರುವುದರಿಂದಲೂ ಮೈನರು ಮಕ್ಕಳಿರುವುದರಿಂದಲೂ ಯಾರೊಬ್ಬರೂ ಇದನ್ನು ಕ್ರಯ ಭೋಗ್ಯಾದಿ ಪರಭಾರೆ ಮಾಡಬಾರದು ಹಾಗೆ ಅಕ್ರಮದಿಂದ ಪರಭಾರೆ ಮಾಡಿ ಮೋಸದಿಂದ ಪಡೆದರೆ ಅಂಥವರು ನಷ್ಟ ಪಡುವುದಲ್ಲದೆ ನಮ್ಮ ಕಷ್ಟ ನಷ್ಟಗಳಿಗೆ ಬದ್ಧರಾಗಬೇಕಾಗುತ್ತೆ

(ಸಹಿ) ಸಿ ಆರ್. ರಂಗರಾವ್,
ಚಾಮರಾಜ ಪೇಟೆ, ಬೆಂಗಳೂರು

ಚೀಫ್ ಇಂಜನಿಯರಿಗೆ ನಿವೃತ್ತಿಯ ಪೂರ್ವದ ರಜಾ

ಸರ್ಕಾರದ ಚೀಫ್ ಇಂಜನಿಯರರಾದ ಶ್ರೀ ಎನ್ ನೀಲಕಂಠಸ್ವಾಮಿಯವರಿಗೆ ನಿವೃತ್ತಿಯ ಪೂರ್ವಭಾವಿಯಾಗಿ ಮೊನ್ನೆಯಿಂದ ೩ ತಿಂಗಳ ರಜಾ ಕೊಡಲಾಗಿದೆ ಅವರ ಅಧಿಕಾರವನ್ನು ಹಿರಿಯ ಚೀಫ್ ಇಂಜನಿಯರ್ ರವರೇ ನೋಡಿಕೊಳ್ಳುವರು.

ವರ್ಷ ವಹಿಸಿ, ಬಡ ವಿದ್ಯಾರ್ಥಿಗಳ ಕೃತಜ್ಞತೆಗೆ ಪಾತ್ರರಾಗಿರುವರೆಂದು ನಿಲಯದ ವಿದ್ಯಾರ್ಥಿಗಳು ತಿಳಿಸಿರುವರು.

ಚಾಮುಂಡೇಶ್ವರಿ
ಟಾಕೀಸ್
9-7-52 ರಿಂದ ಅಮೋಘ ಪ್ರಾರಂಭ
ಎಂ ಕೆ ತ್ಯಾಗರಾಜ ಭಾಗವತರ್ ರವರ
ಸಂಗೀತಮಯ ತಮಿಳು ಚಿತ್ರ
ತಿರು ನೀಲಕಂಠರ್
(ಹೊಸಾ ಹೊಸ ಪ್ರಿಂಟ್)
... ಪಾತ್ರ, ... ರಾಜಾ ... ಮುಂತಾದವರ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಆಣೆ	ರೂ ಆಣೆ
ನೆಲಗಡಲೆ	೧೧೮೦	೧೮-೮-೦
ಎಳ್ಳು	೬೫೦೦	೬೨-೬-೦
ಹುರುಳಿ	೪೨೮೦	೧೦೯೦
ಹೆಸರು	೫೩೦೦	೫೮ ೦
ಅವರೆ	೪೫೦೦	
ಉದ್ದು	೪೭೧೦೦	೫೭೧೩೦
ಹಲಸಂದೆ	೫೨೦೦	೩೯೦೦
ಬೆಣ್ಣೆಕಾಯಿ ಮಣ ೧ಕ್ಕೆ	೭೪೦	೧೬-೧೪-೦
ಹುಣಸೇಹಣ್ಣು	೩೧೫೦	
ಹೊಗೆಸೊಪ್ಪು	೩೧೦೦	೩ ೪೦
ತೆಂಗಿನಕಾಯಿ ೧೦೦೦ಕ್ಕೆ	೬೦ ೦ ೦	೧೦೦ ೦ ೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ... ಗಂಟೆ ... ಸಂಗೀತ, ಮಧ್ಯಾಹ್ನ ೧ ೩೦ ಗಂಟೆ, ... ಎಸ್ ನಾರಾಯಣ ಮೂರ್ತಿ ಕೊಳಲು ಸಂಜೆ ೫ ೩೦ ... ಎಸ್ ... ಸಂಗೀತ ... ಕನ್ನಡ ಗೀತೆಗಳು ... ಚಿತ್ರ ಸಂಗೀತ, ... ಗಂಟೆ ರಾಮಾನುಜಾಚಾರ್ ಸಂಗೀತ ... ನಾರಾಯಣಪ್ಪ ... ಭಾರತ ವಾಚನ, ... ಕೆ ಎಸ್ ನಾರಾಯಣ ಮೂರ್ತಿ ಕೊಳಲು ... ರಸ ವಿನೋದ

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
11—7—52 ನೇ ಶುಕ್ರವಾರದಿಂದ ಪ್ರಾರಂಭ
ಮೈಸೂರು
ನಾಗೇಂದ್ರರಾವ್
ಅಭಿನಯಿಸಿರುವ
ತಮಿಳು ಚಿತ್ರ



...... ಜೆಮಿನಿ ಚಿತ್ರ
ಪಾತ್ರ:— ನಾಗೇಂದ್ರರಾವ್, ಎಂ. ಕೆ ರಾಧಾ, ಕಣ್ಣಾಂಬ, ಸುಂದರಿಬಾಯಿ ಮುಂತಾದವರು

SRI GANESH
TALKIES
From 10-7-52 For 2 Days
SO LONG AT THE FAIR
Starring Jean Simmons and Dirk Bogarde
From - 12 7- 52
ZEMBA THE GORILLA



ಪ್ರಭಾ * ಅಮೋಘ ಪ್ರಾರಂಭ 11 7—52 ರಿಂದ
ಪ್ರತಿದಿನ ಮೂರು ಆಟಗಳು
ಶಾಕುಂತಲ 'ಡಾಕ್ಟರ್ ಕೋಟ್ನಿಸ್' 'ದಹೇಜ್' ಮತ್ತು 'ಅಮರ ಭೂಪಾಲಿ'
ಮುಂತಾದ ಪ್ರಸಿದ್ಧ ಚಿತ್ರಗಳ ನಿರ್ಮಾಪಕರಾದ ಶ್ರೀ ವಿ ಶಾಂತಾರಾಂ
ರವರಿಂದ ದಿಗ್ದರ್ಶಿಸಲ್ಪಟ್ಟ ನೂತನ ಹಿಂದಿ ಚಿತ್ರ
— ರಾಜಕಮಲ್ ಕಲಾಮಂದಿರ್ ರವರ —
* ಪರ್ ಛಾಯಿ [ಛಾಯೆ] *
ತಾರಾಗಣ ವಿ ಶಾಂತಾರಾಂ ... ಲಲಿತ ಪವಾರ್
ಸಂಧ್ಯಾ ಮುಂತಾದವರು
ಸಂಗೀತ ... ರಾಮಚಂದ್ರ
ವಿಶೇಷ ಸೂಚನೆ ... 11-7-52 ರಿಂದ 3 ದಿನಗಳು ಮಾತ್ರ ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿರುವುದಿಲ್ಲ ಬಾಲ್ಕನಿ ತರಗತಿಯ ಟಿಕೇಟುಗಳು ಮುಂಗಡವಾಗಿ ರಿಸರ್ವ್ ಮಾಡಲ್ಪಡುತ್ತೆ
MORNING SHOWS FROM 11-7-52 FOR 3 DAYS ONLY
THE GIRL OF THE YEAR (Technicolor)

Edited Printed and Published by V R Nagarajan at Sadhvi Press, D Subbiah Road, Mysore

ಟೆಲಫೋನ್ ನಂ 792 || ವಂದೇ ಮಾತರಂ || ಬಿಡಿ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧೦-೮-೫೦ [ಸಂಚಿಕೆ ೨೮೪

- ಮದ್ರಾಸಿನಲ್ಲಿ - ಪ್ರಕಾಶಂ ಚಳುವಳಿ ?

ನಗರ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಗೆ ಚುನಾವಣೆ

ಮೈಸೂರು, ೧೦

ರಾಜಧಾನಿಯ ನಗರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರ ಚುನಾವಣೆಯು ಈ ತಿಂಗಳು ೨೭ ನೇ ತಾರೀಖು ನಡೆಯುವುದು. ಉಮೇದುವಾರರಾಗಲಿಚ್ಛಿಸುವವರು ೩ ರೂಪಾಯಿಗಳ ರುಸುಂ ಸಮೇತ ಅರ್ಜಿ ಕೊಡಬೇಕು. ಈ ಬಗ್ಗೆ ವೇಳಾ ಪಟ್ಟಿಯು ಈ ರೀತಿ ಇದೆ—

೧೬ ನೇ ತಾ|| ಮಧ್ಯಾಹ್ನ ೨ ಘಂಟೆ ವರೆಗೆ ಉಮೇದುವಾರಿಕೆ ಅರ್ಜಿ ಸ್ವೀಕಾರ. ೧೭ನೇ ತಾ|| ಬೆಳಗ್ಗೆ ೧೦ ಘಂಟೆಗೆ ಅರ್ಜಿಗಳ ಪರಿಶೀಲನೆ ಮತ್ತು ಮಧ್ಯಾಹ್ನ ೨ ಗಂಟೆಗೆ ಅಂಗೀಕೃತ ಹೆಸರುಗಳ ಪ್ರಕಟಣೆ. ೧೮ ನೆ ತಾ|| ಮಧ್ಯಾಹ್ನ ೨ ಘಂಟೆ ವರೆಗೆ ಉಮೇದುವಾರಿಕೆ ವಾಪಸು ಪಡೆಯುವುದು. ೨೦ ನೇ ತಾ|| ಮಧ್ಯಾಹ್ನ ೩ ರಿಂದ ೫ ರ ವರೆಗೆ ಚುನಾವಣೆ. ೫ ಘಂಟೆಗೆ ಓಟುಗಳ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ.

ಸಹಕಾರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರಲ್ಲಿ ಅವಿಶ್ವಾಸ ಸೂಚನೆ

ಮೈಸೂರು ಕೋ ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳಾದ ಶ್ರೀಗಳು ಬಿ ಎಸ್ ತಾಂಡವಮೂರ್ತಿ, ಎಂ ಎಸ್ ನಂಜಪ್ಪ ಮತ್ತು ಡಾ|| ಬಿ ಚಿದಂಬರ್‌ರವರು ಸಂಘದ ಅಧ್ಯಕ್ಷರು ಮತ್ತು ಗೌರವ ಕಾರ್ಯದರ್ಶಿಯವರ ಕೆಲಸ ಕಾರ್ಯಗಳಲ್ಲಿ ಅನೇಕ ಲೋಪ ದೋಷಗಳಿರುವುವೆಂದೂ, ಅವರು ಡೈರೆಕ್ಟರ ಗಳ ಹಕ್ಕು ಬಾಧ್ಯತೆಗಳಿಗೆ ಚ್ಯುತಿ ತಂದಿರುವರೆಂದೂ ತಿಳಿಸಿ ಅವರಲ್ಲಿ ತಮಗೆ ಅವಿಶ್ವಾಸವಿರುವುದೆಂದು ನಿರ್ಣಯವನ್ನು ಕಳುಹಿಸಿರುತ್ತಾರೆ. ಅದನ್ನು ಪರಿಶೀಲಿಸಲು ೩ ದಿನಗಳೊಳಗೆ ಡೈರೆಕ್ಟರುಗಳ ಸಭೆಯನ್ನು ಸೇರಿಸಬೇಕೆಂದು ಅವರು ಕೋರಿರುತ್ತಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತಿ

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಜಯಂತ್ಯುತ್ಸವವು ನೆನ್ನೆ ಟೌನ್‌ಹಾಲಿನಲ್ಲಿ ನೆರವೇರಿಸಲ್ಪಟ್ಟಿತು. ಜಸ್ಟಿಸ್ ಬಾಲಕೃಷ್ಣಯ್ಯ? ಡಾ|| ಬಿ ಎಲ್ ಮಂಜುನಾಥ್‌ರವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನಾ ನಂತರ ಉತ್ಸವದ ಸಮಿತಿ ಅಧ್ಯಕ್ಷರೂ, ಧರ್ಮದರ್ಶಿಗಳೂ ಆದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ಮಾತನಾಡಿ ಮುಮ್ಮಡಿ ಕೃಷ್ಣರಾಜ ಒಡೆಯರ ಗುಣಗಾನ ಮಾಡಿದರು. ಮೈಸೂರಿನ ಪ್ರಗತಿಗೆ ಮುಮ್ಮಡಿಯವರೂ ಮತ್ತು ರಾಜಮನೆತನದವರೂ ನಡೆಸಿದ ಮಹಾ ಕಾರ್ಯಗಳನ್ನು ವಿವರಿಸಿದರು. ವಿ|| ವಿಶ್ವೇಶ್ವರರಾಯರಿಂದ ಲಾವಣಿ ಮತ್ತು ಸಂಗೀತವಾದ ನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಗಂಗಾವತಾರ ಅಲಂಕಾರ

ರಾಜಧಾನಿಯ ಹಿರಮನೆ ಕೋಟೆಯಲ್ಲಿರುವ ಕೋಡಿ ಸೋಮೇಶ್ವರ ಸ್ವಾಮಿಯವರ ನವಗ್ರಹ ದೇವಸ್ಥಾನದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ನಾಳೆ ಅಮ್ಮನವರಿಗೆ ಗಂಗಾವತಾರ ಅಲಂಕಾರವನ್ನು ಮಾಡಲಾಗುವುದು.

ಧರ್ಮದ ಆಧಾರದ ಮೇಲೆ ರಾಷ್ಟ್ರ ನಿರ್ಮಾಣ

ಶ್ರೀ ರಾಘವೇಂದ್ರ ಸ್ವಾಮಿಗಳವರ ಸಂದೇಶ

ನಂಜನಗೂಡು, ೧೦

ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಾಧಿಪತಿಗಳಾದ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರು ನೆನ್ನೆಯ ದಿನ ರಾಜಧಾನಿಯ ಪತ್ರಿಕೋದ್ಯೋಗಿಗಳನ್ನು ಆಹ್ವಾನಿಸಿ ಫಲಮಂತ್ರಾಕ್ಷತೆಗಳನ್ನಿತ್ತು ಆಶೀರ್ವದಿಸಿದರು. ಮತ್ತು ಜನತೆಗೆ ಕಾರಲು ಬಯಸುವ ಸಂದೇಶವನ್ನು ಸಹಾ ಇತ್ತರು. (ವಿವರಗಳನ್ನು ನಾಳೆ ಪ್ರಕಟಿಸಲಾಗುವುದು)

ಅಲ್ಲಿ ನೆರೆದಿದ್ದವರನ್ನು ಕುರಿತು ಶ್ರೀ ಸ್ವಾಮಿಗಳವರು ಹಿತೋಪದೇಶ ಮಾಡಿ ಭರತಖಂಡಕ್ಕೆ ಈಗ ಸ್ವಾತಂತ್ರ್ಯವು ದೊರೆತಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ಪುಣ್ಯ ಭೂಮಿ, ಧರ್ಮ ಭೂಮಿ ಕರ್ಮಭೂಮಿ—ಎಂದು ಹೆಸರುಗೊಂಡು ಪ್ರಪಂಚದ ಎಲ್ಲ ಜನಾಂಗಗಳ ಆಕರ್ಷಣೆಗೂ ಕಾರಣವಾಗಿರುವ ಭಾರತ ಭೂಮಿಯ ಸಕಲ ಶ್ರೇಯಸ್ಸಿಗೂ ಧರ್ಮವೇ ಆಧಾರವೆಂದು ತಿಳಿಸಿದರು. ಈಗ ದೊರೆತಿರುವ ಸ್ವಾತಂತ್ರ್ಯವು ಯಾವ ಅಡಚಣೆಯೂ ಇಲ್ಲದೆ ಶಾಶ್ವತವಾಗಿ ನಡೆದುಕೊಂಡು ಬರಲು ಧರ್ಮದ ಅಸ್ತಿಭಾರದ ಮೇಲೆಯೇ ಮುಂದಿನ ರಾಷ್ಟ್ರ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕೆಂದೂ ಧರ್ಮವನ್ನು ರಾಜನೀತಿಯೊಡನೆ ಪ್ರತ್ಯೇಕವಾಗಿಡಬೇಕೆಂದೂ ಅಪ್ಪಣೆ ಕೊಡಿಸಿದರು. ಈ ಮಹಾ ಕಾರ್ಯದಲ್ಲಿ ಪತ್ರಿಕಾ ಕರ್ತರೆಲ್ಲರೂ ತಮ್ಮ ಪೂರ್ಣ ನೆರವನ್ನು ನೀಡಬೇಕೆಂದು ಕೋರಿದರು.

ಕೊರಿಯಾ ಯುದ್ಧದ ಬಗ್ಗೆ ಭಾರತ-ಬ್ರಿಟನ್ ಸಂಧಾನ

ಕೊರಿಯಾ ಶಾಂತಿ ಸಂಧಾನದ ಬಿಕ್ಕಟ್ಟನ್ನು ಪರಿಹರಿಸುವ ಒಳ್ಳೆ ಮಾರ್ಗವನ್ನು ಕಲ್ಪಿಸುವ ಸಂಬಂಧವಾಗಿ ಭಾರತ ಮೊದಲೆ ಬ್ರಿಟನ್ನು ಮಾತುಕತೆ ನಡೆಸುತ್ತಿರುವುದೆಂದು ಗೊತ್ತಾಗಿದೆ. ಬ್ರಿಟನ್ನಿನಿಂದ ವಾಪಸು ಬಂದಿರುವ ವಿ ಕೆ ಕೃಷ್ಣಮೆನನ್ನರು ಪುನಃ ಅಲ್ಲಿಗೆ ಹೋಗಿರುವುದು ಈ ಸಂಬಂಧದಲ್ಲೇ ಎಂದು ಭಾವಿಸಲಾಗಿದೆ.

ಅಮೆರಿಕಾ ನಿರ್ಣಯಕ್ಕೆ ರಷ್ಯದ ತಿರಸ್ಕಾರ

ಕ್ರಿಮಿ ಯುದ್ಧದ ಸಂಬಂಧವಾಗಿ ವಿಷ ಪ್ರಚಾರ ನಡೆಸುತ್ತಿರುವುದನ್ನು ಖಂಡಿಸಬೇಕೆಂಬ ಅಮೆರಿಕಾ ನಿರ್ಣಯವನ್ನು ಭದ್ರತಾ ಸಮಿತಿಯಲ್ಲಿರುವ ರಷ್ಯದ ಪ್ರತಿನಿಧಿಯು ವಿಟೋ ಅಧಿಕಾರ ಚಲಾಯಿಸಿ ತಿರಸ್ಕರಿಸಿರುವರು. ಈ ನಿರ್ಣಯದಿಂದ ರಾಷ್ಟ್ರಗಳಲ್ಲಿ ವೈಷಮ್ಯ ಹೆಚ್ಚುವುದೆಂದು ರಷ್ಯದ ಅಭಿಪ್ರಾಯವಾಗಿದೆ.

ಮಹಾರಾಜರು ಕೋರ್ಟಿನಲ್ಲಿ ಹಾಜರಾಗಬೇಕಾಗಿಲ್ಲ

ಬೆಂಗಳೂರು ೧೦

ಸಂಸ್ಥಾನದ ಸಿವಿಲ್ ನ್ಯಾಯಾಲಯಗಳಲ್ಲಿ ತಮಗೆ ಸಂಬಂಧಿಸಿದ ಯಾವುದೇ ವ್ಯವಹಾರಗಳಲ್ಲಾದರೂ ಶ್ರೀಮನ್ಮಹಾರಾಜರು ಖುದ್ದಾಗಿ ಹಾಜರಾಗಬೇಕಾಗಿಲ್ಲವೆಂದು ಸರ್ಕಾರದವರು ಪ್ರಕಟಣೆ ಹೊರಡಿಸಿರುತ್ತಾರೆ.

ಅಹಮದಾಬಾದು ಬಳಿ ಲಾಠಿ ಪ್ರಹಾರ

ಅಹಮದಾಬಾದು ಬಳಿ ಅಸ್ಲಾಲಿ ಎಂಬಲ್ಲಿ ಸಮಾಜವಾದಿಗಳು ನಡೆಸುತ್ತಿರುವ ಆಹಾರ ಸತ್ಯಾಗ್ರಹದ ಸಂಬಂಧವಾಗಿ ನೆರೆದಿದ್ದ ಗುಂಪಿನ ಮೇಲೆ ಪೋಲೀಸರು ನೆನ್ನೆ ಲಾಠಿ ಪ್ರಹಾರ ಮಾಡಿದ ಪರಿಣಾಮವಾಗಿ ೪೦ ಜನರಿಗೆ ಗಾಯಗಳಾಗಿವೆ. ೧೫ ಮಂದಿ ಸ್ತ್ರೀಯರೂ ಸೇರಿ ೧೩೫ ಜನರ ದಸ್ತಗಿರಿಯಾಗಿದೆ. ಒಟ್ಟು ೧೧೦ ಜನ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟಿರುತ್ತಾರೆ.

ಊರಿನವರು ಹಾಕಿದ ಬೆಂಕಿಯಿಂದ ಇಡೀ ಸಂಸಾರ ಭಸ್ಮ

ಕಡಲೂರು ಬಳಿ ತಿರುಕೋವಿಲೂರು ಎಂಬಲ್ಲಿ ಊರಿನ ಜನರಿಂದ ಬಹಿಷ್ಕರಿಸಲ್ಪಟ್ಟಿದ್ದ ಒಂದು ಸಂಸಾರದ ಮನೆಗೆ ಕಳೆದ ಶನಿವಾರ ಊರಿನವರು ಬೆಂಕಿಯಿಟ್ಟ ಪರಿಣಾಮವಾಗಿ ಸದರಿ ಸಂಸಾರದ ಯಜಮಾನ ಆತನ ಹೆಂಡತಿ ಮತ್ತು ಮೂವರು ಗಂಡು ಮಕ್ಕಳು ಸತ್ತು ಹೋದರೆಂದು ವರದಿಯಾಗಿದೆ.

ರಷ್ಯಕ್ಕೆ ಭಾರತದ ರಾಯಭಾರಿಯಾಗಿ ಕೆ.ಪಿ. ಎಸ್. ಮೆನನ್

ಭಾರತದ ವಿದೇಶಾಂಗ ಇಲಾಖಾ ಕಾರ್ಯದರ್ಶಿಯಾಗಿರುವ ಕೆ ಪಿ ಎಸ್ ಮೆನನ್ನರನ್ನು ರಷ್ಯದಲ್ಲಿ ರಾಯಭಾರಿಯಾಗಿ ನೇಮಿಸಲಾಗಿದೆ. ಅವರು ಸೆಪ್ಟೆಂಬರ್ ತಿಂಗಳಿನಲ್ಲಿ ಮಾಸ್ಕೋಗೆ ತೆರಳುವರು.

ಕರ್ನಾಟಕದಲ್ಲಿ ಮೈಸೂರಿನ ಐಕ್ಯಕ್ಕೆ ವಿರೋಧ

ಪ್ರಧಾನಿ ನೆಹರೂರವರಿಗೆ ಶಾಸನ ಸಭಾ ಸದಸ್ಯರ ಮನವಿ

ಸ್ವಂ ಸು ಫೋನ್] ಬೆಂಗಳೂರು ೧೦

ಮೈಸೂರು ಶಾಸನ ಸಭೆಯ ಸುಮಾರು ೭೦ ಮಂದಿ ಸದಸ್ಯರು ಪ್ರಧಾನ ಮಂತ್ರಿ ಪಂಡಿತ ನೆಹರೂರವರಿಗೆ ಮನವಿಯೊಂದನ್ನು ಸಲ್ಲಿಸಿ, ಕರ್ನಾಟಕ ಪ್ರಾಂತದಲ್ಲಿ ಮೈಸೂರು ಸಂಸ್ಥಾನವನ್ನು ಐಕ್ಯಗೊಳಿಸುವುದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಕನ್ನಡ ಪ್ರಾಂತದ ರಚನೆ ಸಂಬಂಧವಾಗಿ ದೆಹಲಿಯಲ್ಲಿ ಹಲವರು ಪ್ರಚಾರ ನಡೆಸುತ್ತಿರುವುದು ಸರಿಯಲ್ಲವೆಂದೂ, ರಾಜ್ಯಾಂಗದ ಕ್ರಮವನ್ನನುಸರಿಸಿ ಭಾಷಾ ಪ್ರಾಂತದ ರಚನೆಗೆ ಮೈಸೂರಿನವರ ವಿರೋಧವಿಲ್ಲವೆಂದೂ ಅವರುಗಳು ಸೂಚಿಸಿರುತ್ತಾರೆ.

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಇಂಟರ್ ಕಾಲೇಜುಗಳಿಗೆ ಸೇರಲು ಅರ್ಜಿ ಹಾಕಿರುವವರೆಲ್ಲರಿಗೂ ಸ್ಥಾನಗಳನ್ನು ಕಲ್ಪಿಸಲು ಏರ್ಪಡಿಸಲಾಗಿದೆಯೆಂದು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಶ್ರೀ ಹೆಚ್ ಸಿ ಲಿಂಗಾರೆಡ್ಡಿಯವರ ಅಲ್ಪಕಾಲಾವಧಿ ಪ್ರಶ್ನೆಯೊಂದಕ್ಕೆ ಈ ದಿನ ಶಾಸನ ಸಭೆಯಲ್ಲಿ ಉತ್ತರವಿತ್ತರು. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕೌನ್ಸಿಲ್‌ಗಳ ಶಿಫಾರಸ್ಸಿನ ಪ್ರಕಾರ ಮೆಡಿಕಲ್ ಕಾಲೇಜಿನಲ್ಲಿ ಸ್ಥಾನಗಳನ್ನು ಕಡಿಮೆ ಮಾಡಲಾಗಿರುವುದೆಂದೂ, ಇತರ ಪಾರಿಭಾಷಿಕ ಕಾಲೇಜುಗಳಲ್ಲೂ ಸ್ವಲ್ಪಮಟ್ಟಿಗೆ ಸ್ಥಾನಗಳ ಸಂಖ್ಯೆ ಕಡಿಮೆಯಾಗಿದೆಯೆಂದೂ ಅವರು ಹೇಳಿದರು.

ಮದ್ರಾಸ್ ಸರ್ಕಾರದ ವಿರುದ್ಧ ಪ್ರಕಾಶಂ ಚಳುವಳಿ

ಚುನಾವಣೆಗಳ ಕಾಲದಲ್ಲಿ ಜನರು ತಿರಸ್ಕರಿಸಿರುವ ಕಾಂಗ್ರೆಸ್ ಸಂಸ್ಥೆಯ ಮಂತ್ರಿಮಂಡಲವು ಬಲವಂತವಾಗಿ ಪ್ರಜೆಗಳ ಮೇಲೆ ಹೇರಿಸಲ್ಪಟ್ಟಿರುವುದೆಂದೂ, ಅದನ್ನು ಪ್ರತಿಭಟಿಸಲು ಕಾಲವು ಬಂದಾಗ ತಾವು ಚಳುವಳಿ ನಡೆಸಿ ಅದರ ಮುಖಂಡತ್ವವನ್ನು ವಹಿಸುವುದಾಗಿಯೂ, ಶ್ರೀ ಟಿ ಪ್ರಕಾಶಂರವರು ನೆನ್ನೆ ಅಲ್ಲಿನ ಹಿರಿಯ ಶಾಸನ ಸಭೆಯಲ್ಲಿ ತಿಳಿಸಿದರು. ಜವಾಬ್ದಾರರು ದಬ್ಬಾಳಿಕೆ ಮಾಡುವವರಾದರೆ ಅವರು ಇಂಗ್ಲಿಷರೇ ಆಗಲಿ, ಭಾರತೀಯರೇ ಆಗಲಿ ಅವರನ್ನು ಎದುರಿಸಲು ಗಾಂಧೀಜಿಯವರು ಸೂಕ್ತ ಮಾರ್ಗವನ್ನು ಹಾಕಿಕೊಟ್ಟಿರುವುದಾಗಿ ಅವರು ಹೇಳಿದರು. ರಾಜಾಜಿಯವರಿಗೆ ದೊರೆತಿರುವ ವಿಶ್ವಾಸದ ಓಟಿಗೆ ಬೆಲೆಯೇ ಇಲ್ಲವೆಂದು ಅವರು ಸೂಚಿಸಿದರು.

ತಾಲ್ಲೂಕು ಕಛೇರಿಗೆ ಜೆ ಅಪ್ಪಾಜಿಗೌಡರ ಭೇಟಿ

ಸಂಸ್ಥಾನದ ಲಂಚ ನಿರೋಧಾಧಿಕಾರಿಗಳಾದ ಶ್ರೀ ಜೆ ಅಪ್ಪಾಜಿಗೌಡರವರು ಈ ದಿನ ಇಲ್ಲಿನ ತಾಲ್ಲೂಕು ಕಛೇರಿ ಅನಿರೀಕ್ಷಿತವಾಗಿ ಭೇಟಿಯಿತ್ತು ಕಾಗದ ಪತ್ರಗಳನ್ನು ಪರಿಶೀಲಿಸಿದರು.

ಭಾರತದ ವಾಮ ಪಕ್ಷಗಳ ಒಕ್ಕೂಟ

ಭಾರತದಲ್ಲಿರುವ ವಾಮ ಪಕ್ಷಗಳ ಒಕ್ಕೂಟವನ್ನು ಏರ್ಪಡಿಸುವ ಸಲುವಾಗಿ ಸಮ್ಮೇಳನವೊಂದನ್ನು ಒರುವ ತಿಂಗಳು ದೆಹಲಿಯಲ್ಲಿ ಸೇರಿಸಲು ಪ್ರಯತ್ನಗಳಾಗುತ್ತಿವೆಯೆಂದು ವರದಿಯಾಗಿದೆ ಈ ಸಮ್ಮೇಳನದಲ್ಲಿ ಸಮಾಜವಾದಿ ಪಕ್ಷವಾಗಲಿ, ಕಮ್ಯೂನಿಸ್ಟ್ ಪಕ್ಷವಾಗಲಿ ಭಾಗವಹಿಸ ಪುದಿಲ್ಲವೆಂದು ಹೇಳಲಾಗಿದೆ

ಅಲ್ಯೂಮಿನಂ ಮನೆ

ಜಮೈಕಾದ ರಾಜಧಾನಿ ಕಿಂಗ್‌ಸ್ಟನ್‌ನಲ್ಲಿ ಅಲ್ಯೂಮಿನಂನಿಂದ ಮನೆಯನ್ನು ತಯಾರಿಸಲಾಗಿದೆ ಈ ಮನೆಯು [illegible] ಪೌಂಡ ತೂಕವಿದೆಯೆಂದೂ ಇದನ್ನು ಒಂದು ಪೆಟ್ಟಿಗೆಯಲ್ಲಿ ಇಡಬಹುದೆಂದೂ [illegible] ಜನರು [illegible] ದಿನಗಳಲ್ಲಿ ನಿಲ್ಲಿಸಬಹುದೆಂದೂ ಹೇಳಲಾಗಿದೆ ಇದರ ಕ್ರಯ ಸುಮಾರು [illegible] ರೂಗಳಾಗುವುದು ಈ ಮನೆಯು [illegible] ಅಡಿ ಎತ್ತರವಿದ್ದು [illegible] ಅಡಿಯ [illegible] ಕೊಠಡಿಗಳ ಮತ್ತು [illegible] ಅಡಿಯ [illegible] ಹಜಾರಗಳನ್ನು ಹೊಂದಿರುತ್ತದೆ

ವರ್ಧಂತಿ ಪ್ರಯುಕ್ತ ಕೋಟೆಯೊಳಗೆ ದೇವರ ಉತ್ಸವ

ಇದೇ ಶ್ರೀ ನಂದನ ನಾಮ ಸಂವತ್ಸರದ ಆಷಾಢ [illegible] ಷಷ್ಠಿ ಶನಿವಾರ [illegible] ಗಂಟೆಗೆ ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ಅರಮನೆ ಕೋಟೆಯೊಳಗೆ ದೇವರುಗಳ ಉತ್ಸವವು ಸಮಸ್ತ ಮರ್ಯಾದೆಗಳೊಡನೆ ವಿಜೃಂಭಣೆಯಿಂದ ಜರಗುತ್ತದೆ

ಕಾಂಗ್ರೆಸ ಸಂಸ್ಥೆ ಬಲಗೊಳ್ಳಲು ಕ್ರಮ

ಸಂಸ್ಥಾನದಲ್ಲಿ ಕಾಂಗ್ರೆಸ್ಸಿನ ಸಂಘಟನೆಯನ್ನು ಬಲಪಡಿಸುವ ಸಲುವಾಗಿ ಒಬ್ಬ ವ್ಯವಸ್ಥಾಪಕ ಕಾರ್ಯದರ್ಶಿಯನ್ನು ನೇಮಿಸಲು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು [illegible] ವರೆಂದು [illegible]

ಆಗಮತ್ರಯ ಮಹಾಮಂಡಲದ ಅಧ್ಯಕ್ಷರು

ಹೈದರಾಬಾದು ಮತ್ತು ಮೈಸೂರುಗಳಲ್ಲಿ ಮಂತ್ರಿಗಳಾಗಿ ನಿವೃತ್ತರಾಗಿರುವ ಶ್ರೀ ಎಂ [illegible] ವರು ಸಂ[illegible] [illegible] ಮಹಾಮಂಡಲದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು ಶ್ರೀ ಎನ್ [illegible] ರಾಜು [illegible] ಶಾಸ್ತ್ರಿ ಮತ್ತು ಶ್ರೀ ಎಂ [illegible] ಎಲ್ [illegible] ಶಾಸ್ತ್ರಿಯವರು ಉಪಾಧ್ಯಕ್ಷರಾಗಿ [illegible] ರುತ್ತಾರೆ

ಪ್ರಿಟೋರಿಯದಲ್ಲಿ ಭಾರತೀಯರ ಅಂಗಡಿಗೆ ಬೆಂಕಿ

ದಕ್ಷಿಣ ಆಫ್ರಿಕದ ಪ್ರಿಟೋರಿಯಾ [illegible] ಗರದಲ್ಲಿರುವ ಭಾರತೀಯ [illegible] ಸ್ಟೈಲ್ ಎಂಬುವನ ಅಂಗಡಿಗೆ [illegible] ಗಲಭೆಗಾರರು ಬೆಂಕಿಯಿಟ್ಟರೆಂದು ವರದಿಯಾಗಿದೆ [illegible] ವದಲ್ಲಿ ಅಂಗಡಿಯಲ್ಲಿ ಇದ್ದ [illegible] ಸ್ಫೋಟಿಸಿತೆಂದೂ ಶಬ್ದವನ್ನು ಕೇಳಿ ಮಾಲೀಕನು ಓಡಿ ಬರಲಾಗಿ ಬೆಂಕಿಗೆ [illegible] ಯಾಗಿತ್ತೆಂದೂ ಅದನ್ನು ಆರಿಸುವ ಪ್ರಯತ್ನದಲ್ಲಿ [illegible] ಗಾಯ [illegible] ಪೆಂದೂ ವರದಿಯಾಗಿದೆ

ಕಡೂರಿನಲ್ಲಿ ನೀರಿನ ಅಭಾವ

ಕಡೂರು ಮತ್ತು [illegible] ಗರಗಳಿಗೆ ನೀರನ್ನು ಒದಗಿಸುವ [illegible] ಕೆರೆಯು ಪೂರ್ಣವಾಗಿ ಬತ್ತಿ ಹೋಗುತ್ತಿರುವುದೆಂದೂ ಮಳೆಯು [illegible] ಹೋದರೆ ಕಡೂರ ಟವನಿಗೆ ನೀರಿನ ಅಭಾವವುಂಟಾಗುವುದೆಂದೂ ಹೇಳಲಾಗಿದೆ [illegible] ಕೆಳಗಿ[illegible] ನೀರಿ[illegible] [illegible] ಬಿದೆ

[illegible]

ನಂಜನಗೂಡು [illegible]

ನಗರ

ನಂಜನಗೂಡ [illegible] ಕಾರ್ [illegible] ಶ್ರೀ [illegible] ನಾಗಿ [illegible] ಸ್ಥಿತಿಗೆ [illegible]

[illegible]

ಪ ಕ ಟಿ ಣೆ

ಶ್ರೀ [illegible] ನ್ನೂ [illegible] ಗರದಲ್ಲಿ [illegible] ದೊರೆ [illegible] ಗಳು ಮುದ್ರಿಸಲ್ಪಟ್ಟ [illegible] ಅವಶ್ಯಕತೆಯುಳ್ಳವರು [illegible]

ಹೆಚ್ [illegible] ರೆಡ್ಡಿ

ರೇಸ್‌ [illegible] ಅಧಿಕಾರಿಗಳು

ವಿದ್ಯಾಧಿಕಾರಿಗಳಲ್ಲಿ ಉಪಾಧ್ಯಾಯರ ನಿಯೋಗ

ಸಂಸ್ಥಾನದ [illegible] ಹೈಸ್ಕೂಲು ಉಪಾಧ್ಯಾಯರ [illegible] ಸಂಘದ ಅಧ್ಯಕ್ಷ[illegible] ಮತ್ತು ಕಾರ್ಯದರ್ಶಿಗಳು ಕಳೆದ [illegible] ವಿದ್ಯಾ ಇಲಾಖಾಧಿಕಾರಿ ಶ್ರೀ [illegible] ರಾಧ್ಯರನ್ನು ಭೇಟಿ ಮಾಡಿ [illegible] ಸಂಘ ಮತ್ತು ಇತರ ವಿಷಯ [illegible] ಚರ್ಚೆ ಮಾಡಿಕೊಂಡರು ಸರ್ಕಾರಿ ಉಪಾಧ್ಯಾಯರುಗಳಿಗೆ ಕೊಡುವ [illegible] ಬತ್ತೆ ಮತ್ತು ಪ್ರಾವಿಡಂಟ್ ಫಂಡಿ ಸೌಲಭ್ಯ [illegible] ರವರ ಮುಂದೆ [illegible] ದೆ [illegible] ಕೆಲದಿಂದ [illegible] ಸೌಲಭ್ಯ [illegible] ಮಾಡಿಕೊಳ[illegible] ಕೇಳಿಕೆ [illegible] ಸಹಾನುಭೂತಿಯಿಂದ ಪರಿಶೀಲಿ[illegible] ವಾಗಿ [illegible] ತ್ತಾರೆ

ನೇತ್ರ [illegible]

[illegible]

ರಾಜಕಮಲ್

[illegible]

ಪಟ್ಟ ತ್ರಂಗಿ

[ತಮಿಳು]

ಮೈಸೂರು ಪೇಟೆ ಧಾರಣೆ

[illegible]	[illegible]	[illegible]
ಎಳ್ಳು	[illegible]	[illegible]
ತೊಗರಿ	[illegible]	
ಹೆಸರ	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹುರಳಿ	[illegible]	[illegible]
ಕೊಬ್ಬರಿ	[illegible]	
ಹುಣಸೇಹಣ್ಣು	[illegible]	
ಸೀಗೆಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ಆಕಾಶವಾಣಿಯ ಕಾರ್ಯಕ್ರಮ

ಬೆಂಗಳೂರು [illegible] ಶ್ರೀನಿವಾಸ [illegible] ಸಂಗೀತ [illegible] ಚಿತ್ರ ಸಂಗೀತ [illegible]

[illegible] ನಗರದಲ್ಲಿ [illegible] ಚಿಕಿತ್ಸಾಲಯವಿರಲಿಲ್ಲವಾದ್ದರಿಂದ [illegible] ಕೊರತೆ ನಿವಾರಣೆಯಾದಂತಾಗಿದೆ ಎಂದು ಒಬ್ಬ ವಾಚಕ [illegible]

CITY TUTORIAL COLLEGE

I M o

H R cl for

S S L C (March 53)

INTER KANNADA (Sept 52)

MADRAS MATRICULATION

(Ilo c 19 ears and st d ed p 1 Forc c appear)

ಪ್ರಭುದೇವಾ ಟಾಕೀಸ್

[illegible] ಆಟಗಳು

11—7—52 ನೇ ಶುಕ್ರವಾರದಿಂದ ಪ್ರಾರಂಭ

ಮೈಸೂರು ನಾಗೇಂದ್ರರಾವ್ ಅಭಿನಯಿಸಿರುವ

ತಮಿಳು ಚಿತ್ರ

ಮೂವರು ಕನ್ಯೆಯರು

ಜೆಮಿನಿ ಚಿತ್ರ

ಪಾತ್ರ — ನಾಗೇಂದ್ರರಾವ್, ಎಂ ಕೆ ರಾಧಾ, [illegible], ಸುಂದರಿಬಾಯಿ ಮುಂತಾದವರು

[illegible]

ಒಲಂಪಿಯಾ

10 7 52 ರಿಂದ ಅನಿರೋಧ ಪ್ರಾರಂಭ

ಪ್ರತಿ ದಿನ 3 ಆಟಗಳು

ಬಿ.ಎ. ಪಿಕ್ಚರ್ಸ್‌ರವರ ಉನ್ನತ ಸಾಮಾಜಿಕ ಚಿತ್ರ

ರಾಗರಂಗ್

[illegible] ಗೀತ [illegible] ಅಶೋಕ ಕುಮಾರ್ [illegible] ದೇವಿ

ಬೆಳಗಿನ ಪ್ರದರ್ಶನ ಶಾಲಿನಾವುಷ್ಕನ ಸರಿಟರುವ - ಡಾಕ್ಟರ್.-

Edited Printed and Published by A R Nagarajan at Sadhvi Press D Subbiah Road Mysore

ಟೆಲಿಫೋನ್ ನಂ 792 || ಸಂಘೇ ಶಕ್ತಿಃ || ಬಿಡಿ ಪತ್ರಿಕೆ 3 ಕಾಸು

ಸಂಪುಟ ೧೦] ಶುಕ್ರವಾರ ೧೧ ೬-೫೩ [ಸಂಚಿಕೆ ೨೮೪

ರಾಜ ಸೋದರಿಯರ ಭತ್ಯವು ನಿಲ್ಲುವುದೇ?

ರಾಜ ಸಹೋದರಿಯರಿಗೆ ಭತ್ಯ ನಿಲ್ಲುವುದೇ ?

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೧೧

ಶಾಸನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾಸಾಶನ, ಪ್ರಾದೇಶಿಕ ಮತ್ತು ರಾಜ ಕೀಯ ವಿರಾಮ ವೇತನಗಳನ್ನು ಕೊಡುವುದು ರಾಜ್ಯಾಂಗದ ವಿಧಿಗಳ ಮತ್ತು ನಿಬಂಧನೆಗಳ ಉಲ್ಲಂಘನೆಯಾಗುವುದೆಂದು ಅಭಿಪ್ರಾಯಪಟ್ಟರು ಹೈದರ್ ಅಲಿ ಮತ್ತು ಟೀಪು ಸುಲ್ತಾನ್ ರವರ ಅಧಿಕಾರಿಗಳ ಸಂತತಿಯವರಿಗೆ ವರ್ಷಕ್ಕೆ ೪೦ ಸಾವಿರ ರೂ ಗಳನ್ನು ಕೊಡಲಾಗುತ್ತಿರುವುದೆಂದೂ, ಅಲ್ಲದೆ ಬಂದೆ ಘನತೆ ಹೊಂದಿದ್ದವರ ಸಮಾಧಿಗಳನ್ನು ಕಾಪಾಡಲು ವರ್ಷಕ್ಕೆ ೩೦ ಸಾವಿರ ರೂ ವೆಚ್ಚವಾಗುತ್ತಿರುವುದೆಂದೂ ತಿಳಿಸಿದರು ಪಾಳೆಯಗಾರರಿಗಾಗಿ ೪೦ ಸಾವಿರ ಸರ್ಕಾರಪುರದವರಿಗೆ ೧,೫೦೦ ಮತ್ ಫರ್ಕಾತ್ ವಿರಾಮ ವೇತನಕ್ಕಾಗಿ ಸಾವಿರ ರೂ ಗಳನ್ನು ಕೊಡಲಾಗುತ್ತಿರುವುದೆಂದೂ ಅವರು ಹೇಳಿದರು

ಶ್ರೀಮನ್ಮಹಾರಾಜರ ಸಹೋದರಿಯರಿಬ್ಬರಿಗೂ ಒಬ್ಬೊಬ್ಬರಿಗೆ ೪೦ ಸಾವಿರ ರೂ ಸಂಬಳವೂ, ರಾಜಕುಮಾರ ದೇವರಾಜ ಅರಸರ ಒಬ್ಬ ಮಕ್ಕಳಿಗೆ ೧೬೦೦೦ ರೂ ಮತ್ತೊಬ್ಬರಿಗೆ ೮೦೦೦ ರೂ ಮತ್ತು ಮೂರನೆಯವರಿಗೆ ೫೦೦೦ ರೂ ಸಂಬಳವೂ ಕೊಡಲಾಗುತ್ತಿರುವುದೆಂದ ಮುಖ್ಯ ಮಂತ್ರಿಗಳು ವಿವರಿಸಿ ಇವುಗಳಿಗಾಗಿ ಒಟ್ಟು ೩೧ ಲಕ್ಷ ರೂ ಸರ್ಕಾರಕ್ಕೆ ವೆಚ್ಚವಾಗುತ್ತಿರುವುದೆಂದು ಹೇಳಿದರು

ದೊಡ್ಡ ರಾಜಕುಮಾರಿಯರುಗಳನ್ನು ವಿವಾಹವಾಗಿರುವ ಮಹಾರಾಜರ ಸಹೋದರಿಯವರಿಗೆ ಭತ್ಯವನ್ನು ಕೊಡುವುದರಲ್ಲಿ ನ್ಯಾಯವಿಲ್ಲವೆಂದೂ, ಆದರೂ ಈ ವಿಷಯವನ್ನು ಪರಸ್ಪರ ಸೌಹಾರ್ದಪೂರಿತ ತಿಳಿವಳಿಕೆಯ ಮಟ್ಟದಲ್ಲಿ ಪರಿಶೀಲಿಸುವುದಾಗಿಯೂ ಅವರು ತಿಳಿಸಿದರು

ಮರಿಸ್ವಾಮಿಯವರು ಎ ಎಸ್ ಪಿ

ನೆಲಮಂಗಲದ ತಾಲ್ಲೂಕಿನ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಮರಿಸ್ವಾಮಿಯವರನ್ನು ಎ ಎಸ್ ಪಿ ಪದಕ್ಕೆ ಏರಿಸಿ ಅವರನ್ನು ಚಿಕ್ಕಬಳ್ಳಾಪುರದ ಡಿವಿಜನ್ನಿಗೆ ವರ್ಗಾಯಿಸಲಾಗಿದೆ ಅಲ್ಲಿನ ಎ ಎಸ್ ಪಿ ಶ್ರೀ ತಿಮ್ಮೇಗೌಡರನ್ನು ಮೈಸೂರಿನ ಅರಮನೆ ರಿಸರ್ವ್‌ಗೆ ವರ್ಗಾಯಿಸಲಾಗಿದೆ

ಪರ್ವತ ಶಿಲೆಗಳು ಉರುಳಿ ಸೈನ್ಯ ಶಿಬಿರದ ನಾಶ

ಉತ್ತರ ಇಟಲಿಯ ೧೦ ಸಾವಿರ ಅಡಿ ಎತ್ತರದ ಡೊಲೊಮೈಟ್ಸ್ ಪರ್ವತಪ್ರಾಂತ್ಯದಲ್ಲಿ ಸಹಸ್ರಾರು ಟನ್ನಿನಷ್ಟು ಶಿಲೆಗಳು ೭,೫೦೦ ಅಡಿ ಎತ್ತರದಿಂದ ಕೆಳಕ್ಕೆ ಜಾರಿ ಕೆಳಗಡೆ ಸ್ಥಾಪಿತವಾಗಿದ್ದ ಸೈನ್ಯಗಳ ಶಿಬಿರವೊಂದು ಧ್ವಂಸವಾಯಿತು ಜಾರಿದ ಶಿಲೆಗಳು ಬೀಳುವ ಶಬ್ದವನ್ನು ಕೇಳಿ ಸೈನಿಕರೆಲ್ಲರೂ ಸುರಕ್ಷಿತ ಪ್ರದೇಶಗಳಿಗೆ ಹೋಗಿ ಅಪಾಯದಿಂದ ಪಾರಾಗಿರುವರು

ಮುಖ್ಯ ಮಂತ್ರಿಗಳ ಕ್ಷಾಮ ಪರಿಹಾರ ನಿಧಿ

ಬೆಂಗಳೂರು ೧೧

ಶಾಸನ ಸಭೆಯಲ್ಲಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಮುಖ್ಯ ಮಂತ್ರಿಯವರ ಹೆಸರಿನಲ್ಲಿ ಅಭಾವ ಪರಿಹಾರ ನಿಧಿಯನ್ನು ಸ್ಥಾಪಿಸಲಾಗಿರುವುದೆಂದು ತಿಳಿಸಿದರು ಅಭಾವವಿರುವ ಪ್ರದೇಶವಲ್ಲಿ ಪರಿಹಾರ ಒದಗಿಸಲು ಸರ್ಕಾರದವರು ಆತುರರಾಗಿರುವರೆಂದೂ ಈಗ ಕೋಲಾರ ಮುಂತಾದ ಪ್ರದೇಶಗಳಲ್ಲಿ ಪರಿಸ್ಥಿತಿಯು ಇನ್ನೂ ಕೆಟ್ಟಿರುವುದೆಂದೂ ತಿಳಿಸಿದರು ಕೇಂದ್ರ ಸರ್ಕಾರದವರನ್ನು ಪ್ರತಿ ಹೆಜ್ಜೆಯಲ್ಲೂ ಸಹಾಯಕ್ಕಾಗಿ ಕೋರುವುದು ನಮ್ಮ ಘನತೆ ಮತ್ತು ಗೌರವಗಳಿಗೆ ತಕ್ಕದ್ದಲ್ಲವೆಂದು ಅವರು ಅಭಿಪ್ರಾಯ ಪಟ್ಟರು

ಕೋಲಾರದ ಹಳ್ಳಿಯ ಪಟೇಲರ ಕೊಲೆ

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಬರಗೂರು ಗ್ರಾಮದ ಪಟೇಲ ಶ್ರೀ ಮುನಿಸ್ವಾಮಿ ಗೌಡರನ್ನು ಅವರ ಸೋದರಳಿಯಂದಿರಿಬ್ಬರ ಮಚ್ಚಿನಿಂದ ಚೂರು ಚೂರಾಗಿ ಕತ್ತರಿಸಿ ಕೊಲೆಮಾಡಿರುವರು ಅಪಾದಿತರು ಕೋಲಾರದ ನ್ಯಾಯಾಧೀಶರ ಮುಂದೆ ತಾವೇ ಹಾಜರಾಗಿ ಹೇಳಿಕೆಯನ್ನಿತ್ತಿರುವರು ಪಟೇಲರು ಅವರ ಆಸ್ತಿ ಪಾಸ್ತಿಗಳನ್ನು ಮೋಸ ಮಾಡಿ ಪಡೆದುಕೊಂಡರೆಂಬುದೇ ಕೊಲೆಗೆ ಕಾರಣವೆಂದು ಹೇಳಲಾಗಿದೆ

ಹಾವು ಕಡಿದ ಯುವಕನಿಗೆ ಪುನಃ ಪ್ರಾಣ ಬಂತು

ಮುಜಫರಪುರದ ಬಳಿ ಒಂದು ಹಳ್ಳಿಯಲ್ಲಿ ಹಾವು ಕಚ್ಚಿ ಮರಣ ಹೊಂದಿದ ಯುವಕನೊಬ್ಬನಿಗೆ ಪುನಃ ಜೀವ ಬಂದ ಪ್ರಸಂಗವು ವರದಿಯಾಗಿದೆ ಅವನನ್ನು ಬದುಕಿಸಲು ವೈದ್ಯರುಗಳು ಮೊದಲು ಬಹಳ ಶ್ರಮಪಟ್ಟರೂ ವಿಫಲವಾಗಿ ಕೊನೆಗೆ ಸುಡಲು ಅವನ ದೇಹವನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಒಬ್ಬ ಮಂತ್ರವಾದಿಯು ದಾರಿಯಲ್ಲಿ ಶವಕ್ಕೆ ಮಂತ್ರ ಹಾಕಿದ ಮೇಲೆ ಅವರ ಬಾಯಿಯಿಂದ ವಿಷವು ಸುರಿದು ಅವನಿಗೆ ಪ್ರಾಣ ಬಂದಿತೆಂದು ಹೇಳಲಾಗಿದೆ

ಧಾನ್ಯದ ಮಾರಾಟಕ್ಕೆ ಫೇರ್‌ಪ್ರೈಸ್ ಡಿಪೋಗಳು

ಆಹಾರ ಸಲಹಾ ಸಮಿತಿಯಲ್ಲಿ ಸಚಿವರ ವಿವರಣೆ

ಮೈಸೂರು ೧೧

ಸಂಸ್ಥಾನದ ಆಹಾರ ಸಚಿವರಾದ ಶ್ರೀ ಹೆಚ್ ಸಿದ್ದವೀರಪ್ಪನವರು ನೆನ್ನೆ ನಗರದ ಆಹಾರ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಿ ಸರ್ಕಾರದ ನೂತನ ಆಹಾರದ ನೀತಿ ಬಗ್ಗೆ ವಿವರಿಸುತ್ತ ಇಂದು ತಿಳಿದುಬಂದಿದೆ ಈಗಿನ ಆಹಾರ ಡಿಪೋಗಳನ್ನು ಫೇರ್ ಪ್ರೈಸ್ ಡಿಪೋಗಳಾಗಿ ಪರಿವರ್ತಿಸಲಾಗುವುದೆಂದೂ ಅಂಗಡಿಗಳಲ್ಲಿ ಅಕ್ಕಿ ಮುಂತಾದ ರೇಷನ್ ಧಾನ್ಯಗಳನ್ನು ಮಾರಲು ಅವಕಾಶವಿರುವುದಿಲ್ಲವೆಂದೂ ಮನೆಗಳಿಗೆ ಅವಶ್ಯಕವಿರುವಷ್ಟು ಧಾನ್ಯವನ್ನು ಹೊರಗಿನಿಂದ ತರಲು ಅವಕಾಶವಿರುವುದೆಂದೂ ಮಂತ್ರಿಗಳು ತಿಳಿಸಿರುವುದಾಗಿ ಹೇಳಲಾಗಿದೆ ಈ ಸಂಬಂಧವಾದ ವಿವರಗಳನ್ನು ಜಿಲ್ಲಾಧಿಕಾರಿಗಳ ವಿವೇಚನೆಗೆ ಬಿಟ್ಟಿರುವುದಾಗಿ ಅವರು ಹೇಳಿದರೆಂದು ಗೊತ್ತಾಗಿದೆ ಫೇರ್ ಪ್ರೈಸ್ ಡಿಪೋಗಳಲ್ಲಿ ರೇಷನ್ ಕಾರ್ಡುಗಳಲ್ಲಿರುವಷ್ಟು ಮಾತ್ರ ಧಾನ್ಯವನ್ನು ಒದಗಿಸಲಾಗುವುದೆಂದೂ ಹೆಚ್ಚು ಧಾನ್ಯ ಬೇಕಾದವರು ಬೇರೆ ಕಡೆಗಳಿಂದ ಕೊಂಡುಕೊಳ್ಳಬಹುದೆಂದೂ ಅವರು ಸ್ಪಷ್ಟಪಡಿಸಿದರೆಂದು ಗೊತ್ತಾಗಿದೆ

ಹರಿಕಥೆ

ರಾಜಧಾನಿಯ ಮಂಡಿಮೊಹಲ್ಲಾ, ಕಾಳಮ್ಮನಗುಡಿ ಬೀದಿಯಲ್ಲಿರುವ ರಾಮಲಿಂಗೇಶ್ವರ ಚಾಮುಂಡೇಶ್ವರೀ ದೇವಾಲಯದಲ್ಲಿ ಈ ಸಂಜೆ ೬ ಘಂಟೆಗೆ ಪಾಲಹಳ್ಳಿ ಶ್ರೀ ಗುಂಡೂರಾಯರಿಂದ ಪ್ರಾಸಾ ದರ್ಬಾರ್ ಎಂಬ ಕಥೆಯೂ, ಅಮ್ಮನವರಿಗೆ ರಾಜರಾಜೇಶ್ವರೀ ಅಲಂಕಾರವೂ ಏರ್ಪಾಡಾಗಿವೆ

ಬಹಿರಂಗ ಸಭೆ

ರಾಜಧಾನಿಯ ರೆ ಹೇ ಕಾರ್ಮಿಕರ ಸಂಘದ ಬಹಿರಂಗ ಸಭೆಯು ನಾಳೆ ಸಂಜೆ ೬ ಘಂಟೆಗೆ ಟೌನ್ ಹಾಲ್‌ನಲ್ಲಿ ನಡೆಯುವುದು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಕೆ ಜೀವಣ್ಣರಾಯರು ಅಧ್ಯಕ್ಷತೆ ವಹಿಸುವರು

ಮೈಸೂರಿನಲ್ಲಿ ಮಾನವ ಸಂಬಂಧದ ಶಾಲೆ

ಮೈಸೂರು ೧೧

ಭಾರತ ಸರ್ಕಾರದವರ ಸೂಚನೆ ಪ್ರಕಾರ, ಮಹಾರಾಜಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಡಾ|| ಎಂ ವಿ ಗೋಪಾಲಸ್ವಾಮಿಯವರು ಮಾನವ ಸಂಬಂಧದ ಶಾಲೆಯನ್ನು ಸ್ಥಾಪಿಸುವ ಬಗ್ಗೆ ಯೋಜನೆಯೊಂದನ್ನು ತಯಾರಿಸಿರುವರು ಪೌರ್ವಾತ್ಯ ದೇಶದಲ್ಲಿ ಇಂತಹ ಶಾಲೆಯು ಸ್ಥಾಪಿತವಾಗುವುದು ಇದೇ ಮೊದಲು ಅದರ ಗುರಿ ಸಾಧಿಸಲು ತಗಲುವ ೩ ಲಕ್ಷ ರೂ ಪ್ರಾರಂಭಿಕ ಮತ್ತು ೫೦ ಸಾವಿರ ರೂ. ವಾರ್ಷಿಕ ವೆಚ್ಚದಲ್ಲಿ ಸ್ವಲ್ಪ ಭಾಗವನ್ನು ಕೇಂದ್ರ ಸರ್ಕಾರದವರು ವಹಿಸುವರೆಂದು ಹೇಳಲಾಗಿದೆ ವಿಶ್ವ ಸಂಸ್ಥೆಯ ಆರ್ಥಿಕ ಸಾಮಾಜಿಕ ಮಂಡಲಿಯು ಶಾಲೆಗೆ ಬೇಕಾಗುವ ಪುಸ್ತಕಗಳನ್ನೂ ಸಿಬ್ಬಂದಿಯನ್ನೂ ಒದಗಿಸುವುದು ಮಾನವರ ಪರಸ್ಪರ ಸಂಬಂಧ, ಸಾಮಾಜಿಕ ವ್ಯವಹಾರ, ಅಂತರ ರಾಷ್ಟ್ರೀಯ ಬಿಕ್ಕಟ್ಟುಗಳು ಜೀವನದ ಮಟ್ಟ, ಆರ್ಥಿಕ ಸಂಪತ್ತಿನ ಹಂಚಿಕೆ ಹಕ್ಕು ಬಾಧ್ಯತೆ ಮುಂತಾದ ವಿಷಯಗಳನ್ನು ಸಾಮಾಜಿಕ ವಿಜ್ಞಾನಿಗಳು ಪರಿಶೀಲಿಸಲು ಈ ಶಾಲೆಯನ್ನು ಸ್ಥಾಪಿಸಲಾಗುವುದು

ಇಂಟರ್ ಮತ್ತು ಬಿ ಎಸ್‌ಸಿ ಸೀಟುಗಳಿಗಾಗಿ ಬಹಿರಂಗ ಸಭೆ

ಇಂಟರ್ ಮತ್ತು ಬಿ ಎಸ್‌ಸಿ ವಿದ್ಯಾರ್ಥಿಗಳಿಗೆ ಕಾಲೇಜುಗಳಲ್ಲಿ ಪ್ರವೇಶ ದೊರಕಲು ಇರುವ ಕುಂದುಕೊರತೆಗಳನ್ನು ನಿವಾರಿಸುವ ಬಗ್ಗೆ ಚರ್ಚಿಸಲು ಮಹಾಜನರ ಸಭೆಯೊಂದು ಸಹಕಾರ ಭವನದಲ್ಲಿ ಈ ಸಂಜೆ ೬ ಘಂಟೆಗೆ ಏರ್ಪಾಡಾಗಿದೆ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು ಶ್ರೀಗಳಾದ ಎಂ ರಂಗಯ್ಯ, ಚಿನ್ನಸ್ವಾಮಿ ಶೆಟ್ಟಿ, ಟಿ ಎಸ್ ರಾಜಗೋಪಾಲಯ್ಯಂಗಾರ್ ಮುಂತಾದವರು ಭಾಷಣ ಮಾಡುವರು

ಮೋಟಾರು ಡಿಕ್ಕಿಯಿಂದ ಗರ್ಭಸ್ರಾವ

ಕಳೆದ ಶನಿವಾರ ರಾತ್ರಿ ಬೆಂಗಳೂರು ಸಿವಿಲ್ ಪ್ರದೇಶದ ಪೋಸ್ಟಾಫೀಸ್ ಬಳಿ ಮೋಟಾರು ಕಾರೊಂದು ಒಬ್ಬ ಹೆಂಗಸಿಗೂ ಆಕೆಯ ಮಗನಿಗೂ ಡಿಕ್ಕಿ ಹೊಡೆದು ಅವರಿಬ್ಬರಿಗೂ ತೀವ್ರ ಗಾಯವಾಗಿರುತ್ತದೆ ಪೆಟ್ಟು ತುಂಬಾ ಬಿದ್ದುದರಿಂದ ಹೆಂಗಸಿಗೆ ಗರ್ಭಸ್ರಾವವಾಯಿತೆಂದು ಹೇಳಲಾಗಿದೆ

ರಹದಾರಿ ಮೂಲಕವೇ ಆಹಾರ ಧಾನ್ಯ ಮಾರಾಟ

ರಹದಾರಿಯಿಲ್ಲದೆ ಆಹಾರ ಧಾನ್ಯಗಳನ್ನು ಮಾರಾಟ ಮಾಡಕೂಡದೆಂದು ಸೂಚಿಸಿ ಭಾರತ ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿರುತ್ತಾರೆ ಗಣನೀಯ ಮೊತ್ತಗಳಲ್ಲೂ ಹೆಚ್ಚಾಗಿ ಕೊಳ್ಳುವವರು ಈ ಆಜ್ಞೆಯ ನಿಬಂಧನೆಗಳಿಗೆ ಒಳಪಡುವರು ಸರ್ಕಾರದವರು ನಿಗದಿ ಮಾಡುವ ಬೆಲೆಗೆ ಮತ್ತು ಅವರು ಸೂಚಿಸುವ ಜನರಿಗೆ ಮಾತ್ರ ಧಾನ್ಯವನ್ನು ಕೊಡಬಹುದು

ಧರ್ಮ ಮತ್ತು ಸಂಸ್ಕೃತಿಗಳ ಬಗ್ಗೆ ಜಾಗೃತಿ ಉಂಟುಮಾಡಬೇಕು

ಶ್ರೀ ರಾಘವೇಂದ್ರ ಸ್ವಾಮಿಗಳವರ ಸಂದೇಶ

ಸಕಲ ಧರ್ಮಾಚಾರ್ಯರೂ ಒಟ್ಟಾಗಿ ಸೇರಬೇಕು

ನಂಜನಗೂಡು ೯

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲ ಸಂಸ್ಥಾನಾಧೀಶ ಶ್ರೀಮತ್ಪೂಜ್ಯ ಶ್ರೀ ಸುಯಮೀಂದ್ರ ತೀರ್ಥ ಶ್ರೀಪಾದಂಗಳವರು ಪತ್ರಿಕೋದ್ಯೋಗಿಗಳಿಗಿತ್ತ ಸಂದೇಶದ ಸಾರಾಂಶವು ಈ ರೀತಿ ಇದೆ

ಭಾರತ ವರ್ಷವು ಸ್ವತಂತ್ರವಾಗಿ ಈಗ ನಮ್ಮ ರಾಷ್ಟ್ರವು ಪ್ರಗತಿ ಪಥದಲ್ಲಿ ಮುನ್ನಡೆ ಇಟ್ಟಿರುವುದು ನಮಗೆ ಸಂತೋಷವೆನಿಸಿದೆ ನಮ್ಮ ಆರ್ಯಾವರ್ತವು ಪ್ರಾಚೀನ ಕಾಲದಿಂದಲೂ ಕಲೆ, ನಾಗರಿಕತೆ, ಸಂಸ್ಕೃತಿ ಆರ್ಯ ಧರ್ಮ ಮತ್ತು ತತ್ವ ಶಾಸ್ತ್ರಗಳಿಗೆ ಮೂತ್ಯ ಭೂಮಿಯೆನಿಸಿದೆ ಹಿಂದಿನಿಂದ ನಮ್ಮ ರಾಷ್ಟ್ರವು ಆರ್ಯ ಧರ್ಮದ ತಳಹದಿಯ ಮೇಲೆ ಪ್ರಾರಂಭಿಸಲ್ಪಟ್ಟು ಅದರಂತೆಯೇ ನಡೆಯುತ್ತ ಬಂದುದರಿಂದಲೇ ನಮ್ಮ ದೇಶವು ಜಗತ್ತಿಗೇ ಆದರ್ಶವೆನಿಸಿತು ಮುಂದೆ ಬೇರೆ ಬೇರೆ ವಿದೇಶೀಯರ ದಬ್ಬಾಳಿಕೆಗೆ ಸಿಕ್ಕಿ ಸ್ವಾತಂತ್ರ್ಯವನ್ನು ಕಳೆದುಕೊಂಡಾಗಲೂ ಆರ್ಯ ಜನಾಂಗವು ಸನಾತನ ಧರ್ಮವನ್ನು ಬಿಡದೆ ದೃಢದಿಂದ ಎದುರಿಸಿದ್ದರಿಂದಲೇ ಇಂದಿಗೂ ನಮ್ಮ ಧರ್ಮವು ಅಮರವಾಗಿ ಉಳಿಯಿತು ಮತ್ತು ಆರ್ಯ ಧರ್ಮಾಚರಣೆಯ ಪ್ರಭಾವದಿಂದಲೇ ನಮಗೆ ದಾಸ್ಯವು ತಪ್ಪಿ ಪೂರ್ಣ ಸ್ವಾತಂತ್ರ್ಯವು ಲಭಿಸಿತೆಂದು ಹೇಳಬಹುದು

ಇಂದಿನ ರಾಜ್ಯಾಂಗದವರೂ ನಮ್ಮ ದೇಶದ ಸಂಸ್ಕೃತಿ ಮತ್ತು ಧರ್ಮವನ್ನವಲಂಬಿಸಿ ರಾಜ್ಯದಳಿತ ನಡೆಸುವುದು ಭಾರತ ಪ್ರಗತಿಯ ದೃಷ್ಟಿಯಿಂದ ಮುಖ್ಯವಾದುದು

ಜನತೆಯಲ್ಲಿ ದೇಶ ಸಂಸ್ಕೃತಿ ಮತ್ತು ಧರ್ಮಗಳ ಅಭಿಮಾನ ಜಾಗೃತವಾಗಬೇಕಾದರೆ ಅದಕ್ಕೆ ಮುಖ್ಯವಾಗಿ ಶಿಕ್ಷಣದಲ್ಲಿ ಮಾರ್ಪಾಟು ಅನಿವಾರ್ಯವಾಗಿದೆ ಇಂದಿನ ಶಿಕ್ಷಣವು ನಮ್ಮ ದೇಶದ ಸಂಸ್ಕೃತಿ ಹಾಗೂ ಧರ್ಮಗಳಿಗನುಗುಣವಾಗಿಲ್ಲ, ಅಂತೆಯೇ ಜನತೆಯಲ್ಲಿ ಪಾಶ್ಚಾತ್ಯರ ಅನುಕರಣೆ ಇಷ್ಟು ಅಧಿಕವಾಗಿದೆ ಪಾಶ್ಚಾತ್ಯ ವಿದ್ಯೆಯು ನಮ್ಮ ಸಂಸ್ಕೃತಿ, ನಾಗರಿಕತೆಯ ಮೇಲೆ ಬಹಳ ದುಷ್ಪರಿಣಾಮವನ್ನು ತಂದೊಡ್ಡಿದೆ ನಾವಿಂದು ಸ್ವತಂತ್ರರಾಗಿರುವುದರಿಂದ ಈಗಲಾದರೂ ವಿದ್ಯಾಶಾಲೆ, ಕಲಾಶಾಲೆಗಳಲ್ಲಿ ಇಂಗ್ಲಿಷ್ ವಿದ್ಯೆಯನ್ನು ಕಡಿಮೆ ಮಾಡಿ ಸಂಸ್ಕೃತ ವಿದ್ಯೆ ಮತ್ತು ತತ್ವ ಶಾಸ್ತ್ರಗಳನ್ನು ಕಡ್ಡಾಯವಾಗಿ ಅಭ್ಯಾಸ ಮಾಡಿಸಲು ವ್ಯವಸ್ಥೆ ಮಾಡಬೇಕು ಅಂದರೆ ಜನತೆಯಲ್ಲಿ ದೇಶಭಾಷೆ ಸಂಸ್ಕೃತಿ ಮತ್ತು ಧರ್ಮಗಳಲ್ಲಿ ಅಭಿಮಾನವು ಬೇರೂರಿ ಇನ್ನೆಂದಿಗೂ ದೇಶವು ಪರರ ಪಾಲಾಗದೆ ತನ್ನದೇ ಆದ ವ್ಯಕ್ತಿತ್ವದಿಂದ ಚಿರಕಾಲ ಸ್ವತಂತ್ರವಾಗಿ ಬಾಳುವುದೆಂದು ನಾವು ಧೈರ್ಯವಾಗಿ ಹೇಳುತ್ತೇವೆ

ರಾಜಕೀಯವನ್ನೂ, ಧರ್ಮವನ್ನೂ ಬೇರೆ ಸಬಾರದು ಹಿಂದೆ ಒರಿಸ್ಸಾ ದೇಶದ ಅಭಿವೃದ್ಧಿಗಾಗಿ ಶ್ರೀ ನರಹರಿ ತೀರ್ಥರು ಸಿಂಹಾಸನಾರೂಢರಾಗಿದ್ದಾಗಲೂ ಮತ್ತು ಕರ್ನಾಟಕ ಸಾಮ್ರಾಜ್ಯ ಸ್ಥಾಪನೆಗೆ ಹಾಗೂ ಅಭಿವೃದ್ಧಿಗೆ ಶ್ರೀ ವಿದ್ಯಾರಣ್ಯರು ಮತ್ತು ಶ್ರೀ ವ್ಯಾಸರಾಜರು ಕಾರಣರಾಗಿದ್ದರೂ ರಾಜಕೀಯ ಮತ್ತು ಧರ್ಮಗಳನ್ನು ಬೇರೆಸಿರಲಿಲ್ಲ ಅಂತೆಯೇ ದೇಶದ ಕೀರ್ತಿಯು ವಿದೇಶಗಳಲ್ಲೂ ಹರಡಿತ್ತು ಇಂದಿನ ದೇಶದ ರಾಜಕೀಯ ನಾಯಕರು ಧರ್ಮದಲ್ಲಿ ಶ್ರದ್ಧೆ ... ಧರ್ಮ ... ಸಲಹೆ ... ದೇಶಕ್ಕೆ ಕಲ್ಯಾಣ ... ಸಂದೇಹವಿಲ್ಲ

[illegible] ಸಕಲ ಧರ್ಮ ... [illegible]

... ಸನಾತನ ವಿದ್ಯೆ ... ಪದ್ಧತಿಗಳನ್ನು ... ಜನತೆಗೆ ಮಾರ್ಗದರ್ಶನ ಮಾಡಿ ... ಹಿತ ಸಾಧನೆ ಮಾಡಬೇಕಾಗಿದೆ

ಶ್ರೀ ರಾಘವೇಂದ್ರ ಗುರುಗಳವರ ಮಹಿಮೆ ... ದೇಶದ ಒಳಗೆ ... ಅದನ್ನೇ ಈ ... ಪ್ರಕಟಿಸುತ್ತೇವೆ

ನಮ್ಮ ಸಂಸ್ಥಾನದ ಮೂಲ ಸ್ಥಾನಕ್ಕೆ ಈ ಶುಭ ಸಮಯದಲ್ಲಿ ಜನತೆಗೆ ಈ ಗುರುವಾರದ ಸಂದೇಶವನ್ನಿತ್ತು ಭಾರತ ದೇಶಕ್ಕೂ ಭಾರತ ಜನತೆಗೂ ಕಲ್ಯಾಣವಾಗಲೆಂದು ಜಗದ್ಗುರು ಶ್ರೀ ರಾಘವೇಂದ್ರ ಗುರುವಂತರ್ಗತ ಶ್ರೀ ಮೂಲರಾಮ ದೇವರಲ್ಲಿ ಪ್ರಾರ್ಥಿಸುತ್ತ ಸರ್ವರಿಗೂ ಶುಭವಾಗಲೆಂದು ಆಶೀರ್ವದಿಸಿ ಧರ್ಮಕ್ಕೆ ಜಯವಾಗಲಿ ಭಾರತವು ಅಮರವಾಗಲಿ ಎಂಬ ಘೋಷಣೆಯೊಡನೆ ವಿರಮಿಸುತ್ತೇವೆ

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

11—7—52 ನೇ ಶುಕ್ರವಾರದಿಂದ ಪ್ರಾರಂಭ

ಮೈಸೂರು ನಾಗೇಂದ್ರರಾವ್ ಅಭಿನಯಿಸಿರುವ

ತಮಿಳು ಚಿತ್ರ

*** ಮೂವರು ತನಯರು ***

ಪಾತ್ರ:— ನಾಗೇಂದ್ರರಾವ್, ಎಂ. ಕೆ. ರಾಧಾ, ಕಣ್ಣಾಂಬ, ಸುಂದರಿಬಾಯಿ ಮುಂತಾದವರು

ನಾಲ್ಕು ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟು ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

Edited Printed and Published by A R Nagarajan, at Sadhvi Press, D. Subbiah Road Mysore

THEOSOPHY STUDY GROUP,

Vidyavagiri Road

Vontikoppal

Saturday the 12th JULY 1952

at 6 p m

Talks followed by Questions and Answers on

A Universal Charter of the RIGHTS OF MAN

II *Duties to Ourselves*

The Body How to use it

SRI GAYATHRI

TALKIES

Daily 2 Shows

From 11-7-52 - - for 2 days

Warner s

TEA FOR TWO

(In Technicolor)

—:MORNING SHOWS:—

On 12th and 13th

RAINBOW ISLAND

(In Technicolor)

ಒಲಿಂಪಿಯಾ ✻ 10 7—52 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಜಾಲಿ ಸಿಸ್ಟರ್ಸ್‌ರವರ ಉನ್ನತ ಸಾಮಾಜಿಕ ಚಿತ್ರ **ರಾಗ್ ರಂಗ್**

ಪಾತ್ರ ಗೀತಾಬಾಲಿ, ಅಶೋಕ ಕುಮಾರ್, ಮನಾದೇವಿ

ಬೇಗನೆ ಪ್ರದರ್ಶನ ಪಾಕಿಜಾಮಲ್ಲಿಕ್ ನಟಿಸಿರುವ -:ಡಾಕ್ಟರ್:-

AVAILABLE FOR SALE

THE INDIAN LAW REPORTS

(REPRINT)

From the Beginning to end of 1952

&

THE ALL-INDIA REPORTER

FROM 1921 to 1939

For Inspection and Other Particulars please contact

Messrs THIRTHA & Co.,

K m val s Road Phone 537 MYSORE

ABIDS AUCTION SALE

ON SUNDAY 13th JULY 52 at 10 A M Sharp

FURNITURE and House hold effects including Cots single and double Baby s cots, iron and wooden without and with mattress respectively Almirahs Sofa suites, Copper boiler Wooden racks and show cases Arm & armless chairs Single and double desk writing tables One "PAL Gramophone with sound box, with 10 film records Meat safe Cradles, Door and window frames, Show-cart with 4 cycle wheels Screens, Bed-side Cabinets and many other useful articles

INSPECTION on SATURDAY 12th inst between 3 and 6 P M

ಅಂಬಳೆ ರಾಮುಸ್ವಾಮಿ ಅಯ್ಯಂಗಾರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಹಿಷ್ಟ (ಮುಟ್ಟಿನ) ಸಂಬಂಧದ ಹೊಟ್ಟೆನೋವಿನಿಂದ ನರಳುತ್ತಿರುವವರು, ಅಕ್ರಮ ಸೂಚಕ ಕ್ರಮತಪ್ಪಿ ಬಹಿಷ್ಟ, ಗರ್ಭ ಪತನ ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗೃತಿ ಸಂತಾನ ಫಲ ದೊರೆಯುವದರ ಮೇಲ್ಕಂಡ ಸಿದ್ಧೌಷಧವನ್ನು "ಮದನ ವಿಲಾಸ" ಜೊತೆ ಸಂಸತಿಯರಿಬ್ಬರೂ ೧ ಸೀಸೆ ಅನುಪಾನ ಪತ್ರಿಕೆಯ ಮೇರೆ ಸೇವಿಸಿದರೆ ಸಾಕು, ರೂ ... ೧ ಸೀಸೆ ೧ ರೂ ಪತ್ರ ವ್ಯವಹಾರ ... ಉಚಿತ ಪುಸ್ತಕ ... ೭ ಆಣೆ ಸ್ಟಾಂಪು ಕಳಿಸಿ

ವಿಶೇಷ ಸೂಚನೆ ಔಷಧದ ಪ್ಯಾಕೆಟ್ ಮೇಲೆ ಶ್ರೀ ಎ ಆರ್ ಅಯ್ಯಂಗಾರ್‌ರವರ ಫೋಟೋ ಮತ್ತು ರುಜು ನೋಡಿ ಇದುವರೆಗೆ ಯಾಳಂದೂರು ತಾಲ್ಲೂಕು ಅಂಬಳೆ ಮತ್ತು ಮೈಸೂರು ಹೊಸ್ಪಿನ ಕೊಳದ ಬೀದಿಯಲ್ಲಿದ್ದ ಆಫೀಸುಗಳನ್ನು ಈಗ ಕೆಳಕಂಡ ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ

ಹೊಸ ವಿಳಾಸ — ಎ. ರಾಮುಸ್ವಾಮಿ ಅಯ್ಯಂಗಾರ್ ಸನ್

" ಸಂತಾನ ಸಿಂಧೂರ ಬಿಲ್ಡಿಂಗ್ "

628, ನೂರಡಿ ರಸ್ತೆ ದಕ್ಷಿಣ ಕಾರ್ನರ್,

(ಕೃಷ್ಣ ಕ್ರೈಸ್ ಮಿಲ್ ಹತ್ರ) ಮೈಸೂರು

ರಿಜಿಸ್ಟರ್ ನಂ. 792 || ವಂದೇ ಮಾತರಂ || 'ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೧೨ ೭-೫೨ [ಸಂಚಿಕೆ ೨೦೬

ಇಸ್ರೇಲ್ ರಾಷ್ಟ್ರದ ಮೇಲೆ ಸಿರಿಯಾ ಯುದ್ಧವೇ ?

ಶ್ರೀಮನ್ಮಹಾರಾಜರ ವರ್ಧಂತಿ

ನಿರಾಡಂಬರವಾದ ಉತ್ಸವ, ಮಂತ್ರಿಗಳ ಶುಭಾಶಯ

ಮೈಸೂರು ೧೧

ಶ್ರೀಮನ್ಮಹಾರಾಜರವರ ೩೩ನೇ ವರ್ಧಂತಿಯು ಈ ದಿನ ಅರಮನೆಯಲ್ಲಿ ಸರಳವಾಗಿಯೂ, ನಿರಾಡಂಬರವಾಗಿಯೂ ನೆರವೇರಿಸಲ್ಪಟ್ಟಿತು. ಪ್ರಭುಗಳು ಮುಂಜಾನೆ ಮಂಗಳ ಸ್ನಾನಾದಿಗಳನ್ನು ಮುಗಿಸಿ, ದೇವರ ದರ್ಶನ ಪಡೆದರು. ರಾಜಗುರುಗಳಾದ ಪರಕಾಲ ಸ್ವಾಮಿಯವರಿಗೆ ಪಾದಪೂಜೆಯನ್ನು ನೆರವೇರಿಸಿ, ಅವರ ಆಶೀರ್ವಾದವನ್ನು ಪಡೆದರು. ಆಯುಷ್ಯ ಹೋಮ ಮುಂತಾದ ಶಾಸ್ತ್ರೋಕ್ತ ವಿಧಿಗಳನ್ನು ನೆರವೇರಿಸಿದರು. ಅರಮನೆ ಮತ್ತು ಕೋಟೆಯ ಮೇಲೆ ಮೈಸೂರು ಧ್ವಜವನ್ನು ಹಾರಿಸಲಾಗಿತ್ತು. ವರ್ಧಂತಿ ಉತ್ಸವದ ಸೂಚಕವಾಗಿ ೩೩ ಕುಶಾಲ ತೋಪನ್ನು ಹಾರಿಸಲಾಯಿತು.

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರೂ, ಇತರ ಸಚಿವರುಗಳೂ ಮತ್ತು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ದಾಸಪ್ಪನವರೂ ಅರಮನೆಗೆ ತೆರಳಿ ಮಹಾರಾಜರಿಗೆ ಶುಭಾಶಯಗಳನ್ನು ಕೋರಿದರು.

ಉತ್ಸವದ ಸಂಬಂಧವಾಗಿ ಎಲ್ಲ ಸಾರ್ವಜನಿಕ ಕಛೇರಿಗಳಿಗೂ, ಶಾಲೆಗಳಿಗೂ ಈ ದಿನ ರಜಾ ಕೊಡಲಾಗಿತ್ತು.

ಮಂತ್ರಿಗಳಿಗೂ ಅಧಿಕಾರಿಗಳಿಗೂ ಉಚಿತ ಸರಬರಾಜು ಕೂಡದು

ಮಂತ್ರಿಗಳು ಮತ್ತು ಅಧಿಕಾರಿಗಳು ಪ್ರವಾಸದಲ್ಲಿರುವಾಗ ಅವರುಗಳಿಗಾಗಿ ಸರಬರಾಜು ಮಾಡುವ ಪದಾರ್ಥಗಳಿಗೆ ಬಿಲ್ಲುಗಳನ್ನು ಕೊಡದಿರುವುದೂ ಮತ್ತು ಅಧಿಕಾರಿಗಳು ಸರಬರಾಜಾದ ವಸ್ತುಗಳಿಗೆ ಹಣ ಕೊಡದಿರುವುದೂ ಸರ್ಕಾರದ ಗಮನಕ್ಕೆ ಬಂದಿರುವುದೆಂದೂ, ಇದು ನಿಬಂಧನೆಗಳ ಉಲ್ಲಂಘನೆಯೆಂದೂ, ಸಣ್ಣ ಪುಟ್ಟ ಅಧಿಕಾರಿಗಳು ತಮ್ಮ ಕೈಯಿಂದ ಈ ಸರಬರಾಜಿಗಾಗಿ ಹಣ ಕೊಡಬೇಕಾಗಿ ಬರುವುದರಿಂದ ಈ ಪದ್ಧತಿಯು ಖಂಡನೀಯವೆಂದೂ ಸರ್ಕಾರದವರು ಸೂಚಿಸಿ ಪ್ರಕಟಣೆ ಹೊರಡಿಸಿರುವರು. ಸಾರ್ವಜನಿಕ ಸೇವೆಯಲ್ಲಿರುವವರು ಉಚಿತವಾಗಿ ಕೊಡಲಾಗುವ ಸರಬರಾಜುಗಳನ್ನು ಸ್ವೀಕರಿಸುವುದೂ ಅದನ್ನು ಕೊಡುವುದೂ ಸರಿಯಲ್ಲವೆಂದೂ ಹಾಗೆ ಮಾಡಿದರೆ ಕ್ರಮ ಜರುಗಿಸಲಾಗುವುದೆಂದೂ ಸರ್ಕಾರದವರು ಎಚ್ಚರಿಕೆಯಿತ್ತಿರುವರು.

ವಿದ್ಯುಚ್ಛಕ್ತಿ ಮೂಲಕ ಶವದ ದಹನ ಕ್ರಿಯೆ

ಶವಗಳ ದಹನ ಕ್ರಿಯೆಯನ್ನು ವಿದ್ಯುಚ್ಛಕ್ತಿಯ ಮೂಲಕ ನಡೆಸುವ ಬಗ್ಗೆ ಮದ್ರಾಸಿನ ಕಾರ್ಪೊರೇಷನ್ ಕಮಿಷನರರು ಒಂದು ಸಲಹೆಯನ್ನು ನೀಡಿರುವರೆಂದೂ, ಅದು ಅಂಗೀಕೃತವಾದರೆ ಅಲ್ಲಿನ ನಗರದ ಸ್ಮಶಾನವೊಂದರಲ್ಲಿ ಈ ವ್ಯವಸ್ಥೆಯನ್ನು ಏರ್ಪಡಿಸಲಾಗುವುದೆಂದೂ ವರದಿಯಾಗಿದೆ.

ಇಸ್ರೇಲ್ ಮೇಲೆ ಸಿರಿಯಾದ ಯುದ್ಧ ?

ಇಸ್ರೇಲಿಗೆ ಸೇರಿರುವ ಗ್ಯಾಲಿಲಿ ಸಮುದ್ರದ ಪೂರ್ವ ತೀರವನ್ನು ಸಿರಿಯಕ್ಕೆ ಒಪ್ಪಿಸಬೇಕೆಂದು ಸಿರಿಯ ಪ್ರಧಾನ ಸೇನಾನಿಯವರು ಇಸ್ರೇಲಿಗೆ ಸೂಚಿಸಿರುವರೆಂದು ವರದಿಯಾಗಿದೆ. ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಸಿರಿಯವು ಮಿಲಿಟರಿ ಕಾರ್ಯಾಚರಣೆಯನ್ನು ನಡೆಸಬಹುದೆಂದು ಹೇಳಲಾಗಿದೆ.

ವಿದ್ಯಾರ್ಥಿನಿಯ ಅಪಹಾರಕ್ಕಾಗಿ ವಿದ್ಯಾರ್ಥಿಗಳ ಬಂಧನ

ಅಮೃತಸರದ ಕಾಲೇಜಿನ ವಿದ್ಯಾರ್ಥಿಗಳಾದ ಗುರುಚರಣ ಸಿಂಗ್ ಮತ್ತು ಸುಖದೇವ ಸಿಂಗ್ ಎಂಬವರ ಕಾಲೇಜಿನ ವಿದ್ಯಾರ್ಥಿನಿಯೊಬ್ಬಳನ್ನು ಅಪಹರಿಸಿಕೊಂಡು ಹೋಗಿ ಆಕೆಯ ಮೇಲೆ ಬಲವಂತ ಪ್ರಯೋಗ ನಡೆಸಿದರೆಂದು ಪೋಲೀಸರು ಮೊಕದ್ದಮೆ ಹೂಡಿರುವರು.

೬೭ ದಿನಗಳ ಉಪವಾಸದ ರಿಕಾರ್ಡು

ಇಟಲಿಯ ಟ್ರಿಯಸ್ಟ ನಗರದಲ್ಲಿ ಪಿಯರ್ ಕ್ರೈರ್ ಎಂಬುವನು ೬೭ ದಿನಗಳು ೧೫ ಗಂಟೆ ಮತ್ತು ೭ ನಿಮಿಷಗಳ ಉಪವಾಸ ಮಾಡಿ ಪ್ರಪಂಚದ ಹೊಸ ರಿಕಾರ್ಡನ್ನು ಸ್ಥಾಪಿಸಿರುತ್ತಾನೆ.

ಸರ್ಕಾರದ ವಿಧಾನ ಸಮಿತಿಗೆ ಪಿ. ಗೋಪಾಲಕೃಷ್ಣ ಶೆಟ್ಟರು

ಸರ್ಕಾರದ ವಿಧಾನಸಮಿತಿಯ ಸದಸ್ಯರಾಗಿ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿಯವರನ್ನು ಚಿತ್ರದುರ್ಗದ ಶ್ರೀ ಎಂ. ಗೋವಿಂದ ರೆಡ್ಡಿಯವರ ಸ್ಥಾನದಲ್ಲಿ ನೇಮಿಸಲಾಗಿದೆ.

ಕ್ಷಾಮ ಪರಿಹಾರ ನಿಧಿ ಬಗ್ಗೆ ಸಮಿತಿಗಳ ರಚನೆ

ಮುಖ್ಯ ಮಂತ್ರಿಯವರ ಹೆಸರಿನಲ್ಲಿ ಸ್ಥಾಪಿಸಲಾಗಿರುವ ಅಭಾವ ಪರಿಹಾರ ನಿಧಿಯ ಸಂಬಂಧವಾಗಿ ಸಾರ್ವಜನಿಕರಿಂದ ಉದಾರ ಧನ, ಧಾನ್ಯ ಮತ್ತು ಹುಲ್ಲು ಇವುಗಳನ್ನು ಪಡೆಯುವುದಕ್ಕಾಗಿ ಜಿಲ್ಲಾಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಸಮಿತಿಗಳನ್ನು ರಚಿಸಬೇಕೆಂದು ಸರ್ಕಾರದವರು ಸೂಚಿಸಿರುವರು.

ಖಾಸಗಿ ಕಾಲೇಜುಗಳ ಸ್ಥಾಪನೆಗೆ ಪ್ರೋತ್ಸಾಹ ಅಗತ್ಯ

ಪತ್ರಿಕಾ ಗೋಷ್ಠಿಯಲ್ಲಿ ಡಾ|| ಪೈರವರ ಹೇಳಿಕೆ

ಮೈಸೂರು ೧೧

ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟ್ ಸಂಸ್ಥೆಯ ಅಧ್ಯಕ್ಷರಾದ ಡಾ|| ಟಿ. ಎಂ. ಎ. ಪೈರವರು ನಿನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ, ಖಾಸಗಿ ಜನರು ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರದವರು ಹೆಚ್ಚು ಪ್ರೋತ್ಸಾಹ ಮತ್ತು ಅವಕಾಶವೀಯಬೇಕೆಂದು ತಿಳಿಸಿದರು. ಔದ್ಯೋಗಿಕ ಕಾಲೇಜುಗಳು ಹೆಚ್ಚು ಹೆಚ್ಚಾಗಿ ಸ್ಥಾಪಿತವಾಗಬೇಕೆಂದು ಅವರು ಅಭಿಪ್ರಾಯಪಟ್ಟರು. ದೊಡ್ಡ ಕಟ್ಟಡಗಳೂ ಭಾರಿ ಸಾಮಗ್ರಿಗಳ ಸಂಗ್ರಹವೂ ಕಾಲೇಜು ವಿದ್ಯಾಭ್ಯಾಸಕ್ಕೆ ಅತ್ಯಗತ್ಯವೆಂಬ ಭಾವನೆಯು ಹೋಗಿ, ಸರಳವಾದ ರೀತಿಯಲ್ಲಿ ಅದನ್ನು ದೊರಕಿಸಿಕೊಡಲು ಪ್ರಯತ್ನಗಳಾಗಬೇಕೆಂದು ತಿಳಿಸಿದರು.

ನಾನ್‌ಗೆಜೆಟೆಡ್ ನೌಕರರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವಿಲ್ಲ

ಮದ್ರಾಸಿನಲ್ಲಿರುವಂತೆ ಇಲ್ಲಿಯೂ ನಾನ್ ಗೆಜೆಟೆಡ್ ನೌಕರರ ಮಕ್ಕಳಿಗೆ ಹೈಸ್ಕೂಲು ಮತ್ತು ಕಾಲೇಜು ಶಾಲೆಗಳಲ್ಲಿ ಉಚಿತ ಶಿಕ್ಷಣದ ವ್ಯವಸ್ಥೆಯ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿಲ್ಲವೆಂದು ಶ್ರೀ ಎ. ಜಿ. ರಾಮಚಂದ್ರರಾಯರು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ.

ಬಸ್ಸು ಸಂಚಾರವನ್ನು ಏರ್ಪಡಿಸುವ ಪೂರ್ಣ ಹಕ್ಕನ್ನು ಸರ್ಕಾರದವರು ಪರೀಕ್ಷಾರ್ಥವಾಗಿ ೩೦೦ ಮೈಲಿ ದೂರವಿರುವ ಪ್ರದೇಶಗಳಲ್ಲಿ ಮೊದಲು ತೆಗೆದುಕೊಂಡು ಪರಿಶೀಲನೆ ನಡೆಸುವರೆಂದು ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ತಿಳಿಸಿರುತ್ತಾರೆ.

ರಾಜಧಾನಿಯಲ್ಲಿ ಮಳೆ

ಮೊನ್ನೆಯಿಂದಲೂ ರಾಜಧಾನಿ ಮತ್ತು ಸುತ್ತಮುತ್ತಲೂ ಹವಾ ಗುಣವು ವ್ಯತ್ಯಾಸವಾಗಿರುತ್ತದೆ. ನೆನ್ನೆ ಮತ್ತು ಈ ದಿನ ಇಲ್ಲೂ, ಚಾಮರಾಜನಗರ, ನಂಜನಗೂಡು ಮುಂತಾದ ಪ್ರದೇಶಗಳಲ್ಲೂ ಮಳೆಯಾಗಿದೆ.

ಎಂ. ವಿ. ಕೃಷ್ಣಪ್ಪನವರು ಕೇಂದ್ರ ಪಾರ್ಲಿಮೆಂಟರಿ ಕಾರ್ಯದರ್ಶಿ

ಪಾರ್ಲಿಮೆಂಟಿಗೆ ಕೋಲಾರ ಜಿಲ್ಲೆಯಿಂದ ಚುನಾಯಿತರಾಗಿರುವ ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ ನೇಮಿಸಿ, ಅವರನ್ನು ಆಹಾರ ಮತ್ತು ವ್ಯವಸಾಯ ಇಲಾಖೆಯಲ್ಲಿ ಕೆಲಸ ನೋಡುವಂತೆ ಸೂಚಿಸಲಾಗಿದೆ. ಪ್ರಧಾನಿ ನೆಹರೂರವರ ಮುಂದೆ ಅವರು ಈ ದಿನ ಪ್ರಮಾಣ ವಚನವನ್ನು ಸ್ವೀಕರಿಸುವರು.

ಕೊರಿಯಾ ಮೇಲೆ ಅತ್ಯಂತ ಭಾರಿ ವಿಮಾನ ಧಾಳಿ

ಉತ್ತರ ಕೊರಿಯಾ ಮೇಲೆ ವಿಶ್ವಸಂಸ್ಥೆ ವಿಮಾನಗಳು ನೆನ್ನೆ ಅತ್ಯಂತ ಭಾರಿ ಧಾಳಿಯನ್ನು ನಡೆಸಿ, ಅಲ್ಲಿನ ರಾಜಧಾನಿ ಪ್ಯೊಂಗ್‌ಯಾಂಗ್ ಮತ್ತು ಇನ್ನೆರಡು ನಗರಗಳ ಸುತ್ತಮುತ್ತಲಿರುವ ಕಾರ್ಖಾನೆಗಳ ಮೇಲೆ ಬಾಂಬುಗಳನ್ನು ಸುರಿಸಿ ಧ್ವಂಸ ಮಾಡಿರುವುದಾಗಿ ಗೊತ್ತಾಗಿದೆ.

ಇಂಟರ್ ಮತ್ತು ಬಿ. ಎಸ್‌ಸಿ. ವಿದ್ಯಾರ್ಥಿಗಳಿಗೆ ಓದಲು ಅವಕಾಶ

ರಾಜಧಾನಿಯ ಸಹಕಾರ ಭವನದಲ್ಲಿ ನೆನ್ನೆ ಸಂಜೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಮಹಾಜನರ ಸಭೆಯೊಂದು ನಡೆದು, ಕಾಲೇಜುಗಳಿಗೆ ಪ್ರವೇಶಕ್ಕಾಗಿ ಐಚ್ಛಿಕ ವಿಷಯಗಳಲ್ಲಿ ಶೇ|| ೪೦ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುವವರನ್ನು ಕಾಲೇಜುಗಳಿಗೆ ತೆಗೆದುಕೊಳ್ಳಬಾರದೆಂಬ ಸರ್ಕಾರದವರ ಸೂಚನೆಯು ನ್ಯಾಯವಾದುದಲ್ಲವೆಂದೂ, ಯಾವ ಜಾತಿ, ಮತ ಭೇದವಿಲ್ಲದೆ ಶೇ|| ೪೦ ಕ್ಕಿಂತಲೂ ಹೆಚ್ಚು ನಂಬರು ಪಡೆದವರಿಗೆ ಅವರು ಬಯಸುವ ಐಚ್ಛಿಕ ವಿಷಯಗಳ ಓದಿಗೆ ಅವಕಾಶವೀಯಬೇಕೆಂದೂ ನಿರ್ಣಯ ಮಾಡಲಾಯಿತು. ೪೦ ನಂಬರಿಗಿಂತ ಕಡಿಮೆಯಾದವರನ್ನು ಸೇರಿಸಿಕೊಳ್ಳಲು ಕಾಲೇಜುಗಳ ಮುಖ್ಯಾಧಿಕಾರಿಗಳಿಗೆ ಅವಕಾಶವೀಯಬೇಕೆಂದು ಕೋರಲಾಯಿತು. ಬಿ. ಎ. ಅಥವಾ ಬಿ. ಎಸ್‌ಸಿ.ಗಾಗಿ ಹೋಗುವ ವಿದ್ಯಾರ್ಥಿಗಳ ಮೇಲೆ ಐಚ್ಛಿಕ ವಿಷಯವನ್ನು ಹೊರಿಸಬಾರದೆಂದೂ ಶಾರದಾ ವಿಲಾಸ ಕಾಲೇಜಿನಲ್ಲಿ ಬಿ. ಎಸ್‌ಸಿ. ತರಗತಿಯನ್ನು ತೆರೆಯಲು ಈ ವರ್ಷವೇ ಅವಕಾಶ ಕೊಡಬೇಕೆಂದೂ ಸೂಚಿಸುವ ನಿರ್ಣಯಗಳನ್ನು ಮಾಡಲಾಯಿತು.

೧೧೨ ವರ್ಷದ ವೃದ್ಧೆಯ ಮರಣ

ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ನಿವಾಸಿ ಶ್ರೀ ಪುಟ್ಟಾಚಾರ್ಯರ ತಾಯಿ ಲಿಂಗಮ್ಮ ಎಂಬ ೧೧೨ ವರ್ಷದ ವೃದ್ಧೆಯು ಕಳೆದ ೬ನೇ ತಾ|| ನಿಧನ ಹೊಂದಿದಳೆಂದು ತಿಳಿಸಲು ವಿಷಾದಿಸುತ್ತೇವೆ. ಆಕೆಯ ಹಲ್ಲುಗಳು ಗಟ್ಟಿಯಾಗಿದ್ದುವು. ಯಾವಜ್ಜೀವವೂ ಆಕೆಯು ಔಷಧಿಯನ್ನು ಸೇವಿಸಿರಲಿಲ್ಲವೆಂದು ಗೊತ್ತಾಗಿದೆ. ಧೂತಾಳಿ ಗಡ್ಡೆ ಕ್ಷಾಮ, ಹುಣಸೇ ಬೀಜದ ಕ್ಷಾಮ ಎಂದು ಕರೆಯಲ್ಪಡುವ ಎರಡು ಬರಗಾಲವನ್ನು ಆಕೆಯು ನೋಡಿದ್ದಳೆಂದು ಹೇಳಲಾಗಿದೆ.

ಬ್ರಿಟಿಷ್ ರಾಣಿಯವರಿಗೆ ೪೫ ಲಕ್ಷ ಪೌಂಡು ಧನ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ವೆಚ್ಚಕ್ಕಾಗಿ ಅಲ್ಲಿನ ಪಾರ್ಲಿಮೆಂಟು ೪೫ ಲಕ್ಷ ಪೌಂಡುಗಳನ್ನು ಮಂಜೂರು ಮಾಡುತ್ತದೆ. ಅದನ್ನು ೩೫ ಲಕ್ಷಕ್ಕೆ ಇಳಿಸಬೇಕೆಂಬ ತಿದ್ದುಪಡಿಯು ಬಿದ್ದುಹೋಯಿತು.

ಕುದುರೆ ಜೂಜಿನಲ್ಲಿ ಹಣ ಕಳೆದ ತರುಣಿಯರ ಅನೀತಿ

ಬೆಂಗಳೂರಿನ ಕುದುರೆ ಜೂಜಿಗೆ ಹೋಗಿ ಅಲ್ಲಿ ತಮ್ಮಲ್ಲಿದ್ದ ೨೦೦ ರೂ. ಗಳನ್ನು ಕಳೆದುಕೊಂಡ ರಾಜಧಾನಿಯ ಶಾಂತ ಮತ್ತು ಕಮಲ ಎಂಬ ಇಬ್ಬರು ತರುಣಿಯರು ಅಲ್ಲಿನ ತರುಣನೊಬ್ಬನಿಗೆ ಕೈಸನ್ನೆ ಮಾಡಿ ವ್ಯಭಿಚಾರಕ್ಕೆ ಅವನನ್ನು ತಾವು ಇಳಿದಿದ್ದ ಹೋಟಲಿನ ಕೊಠಡಿಯೊಳಕ್ಕೆ ಎಳೆದುಕೊಂಡು ಹೋದರೆಂಬ ಆಪಾದನೆ ಮೇಲೆ ಅವರಿಗೆ ತಲಾ ೧೦ ರೂ. ಗಳ ಜುಲ್ಮಾನೆಯನ್ನು ವಿಧಿಸಲಾಗಿದೆ. ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ದಂಡವನ್ನು ತೆತ್ತರು.

ಬೆರಕೆ ಬೆಣ್ಣೆ ಮಾರುವವರ ಪತ್ತೆ

ಬೆರಕೆ ಬೆಣ್ಣೆಯನ್ನು ಮಾರುವವರಿಬ್ಬರನ್ನು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಶ್ರೀ ಕೆ. ಸಿ. ಬಸಪ್ಪನವರು ಪತ್ತೆ ಹಚ್ಚಿ ಆರೋಗ್ಯಾಧಿಕಾರಿಗಳ ಗಮನಕ್ಕೆ ತಂದಿರುತ್ತಾರೆ. ಅವರು ತನಿಖೆ ನಡೆಸುತ್ತಿರುವರು. ದಿನ ದಿನವೂ ಈ ಮೋಸದ ವ್ಯಾಪಾರವು ಹೆಚ್ಚಾಗುತ್ತಿದೆ. ಹಳ್ಳಿಯವರಂತೆ ಹಲವು ಪಟ್ಟಣಿಗರು ವೇಷ ಧರಿಸಿ, ಹಳ್ಳಿಯ ಅಪ್ಪಟ ಬೆಣ್ಣೆಯೆಂದು ಹೇಳುತ್ತಾ ಮಾರುತ್ತಿರುವರೆಂದು ಸದರಿ ವಿದ್ಯಾರ್ಥಿಯು ತಿಳಿಸಿರುತ್ತಾರೆ. ಇಂತಹವರನ್ನು ಪತ್ತೆ ಮಾಡಿ ಆರೋಗ್ಯಾಧಿಕಾರಿಗಳ ಗಮನಕ್ಕೆ ನಾಗರಿಕರು ತರಬೇಕೆಂದು ಅವರು ಕೋರಿರುತ್ತಾರೆ.

ಪತ್ರಿಕೋದ್ಯೋಗಿಗಳ ನಿಧನಕ್ಕಾಗಿ ಸಂತಾಪ ಸೂಚನೆ

ಮದ್ರಾಸಿನ ಹಿಂದೂ ಪತ್ರಿಕೆಯ ಮಾಜಿ ಪ್ರಧಾನ ಸಹಾಯಕ ಸಂಪಾದಕರಾದ ಶ್ರೀ ಕೆ. ವಿಶ್ವನಾಥ ಅಯ್ಯರ್‌ರವರ ನಿಧನಕ್ಕಾಗಿ ಮೊನ್ನೆ ಇಲ್ಲಿನ ಪತ್ರಿಕೋದ್ಯೋಗಿಗಳ ಸಂಘದ ಸಭೆಯಲ್ಲಿ ಸಂತಾಪವನ್ನು ಅಂಗೀಕರಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಗಳಿಗೆ ಮೋಸಕ್ಕಾಗಿ ಪ್ರಾಧ್ಯಾಪಕರಿಗೆ ಶಿಕ್ಷೆ

ಸೆಲೆಕ್ಷನ್ ಪರೀಕ್ಷೆಯಲ್ಲಿ ತೇರ್ಗಡೆ ಮಾಡಿಸಿ, ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕೂಡಿಸುವುದಾಗಿ ನಂಬಿಸಿ ೭ ವಿದ್ಯಾರ್ಥಿಗಳಿಂದ ತಲಾ ೪೫ ರೂ. ಗಳನ್ನು ಪಡೆದು ಮೋಸ ಮಾಡಿದರೆಂಬ ಕಾರಣಕ್ಕಾಗಿ ದೆಹಲಿ ಕಾಲೇಜೊಂದರ ಪ್ರಾಧ್ಯಾಪಕ ಅಯೋಧ್ಯ ಪ್ರಸಾದ್ ಎಂಬುವರಿಗೆ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

೩೨೬ ಕ್ಯಾರೆಟ್ಟಿನ ವಜ್ರ

ರೀವಾ ಸಂಸ್ಥಾನದ ಪನ್ನಾ ವಜ್ರದ ಗಣಿ ಕಂಪೆನಿಯವರು ೩೨೬ ಕ್ಯಾರೆಟ್ ತೂಕದ ಹಸುರು ಬಣ್ಣದ ವಜ್ರವೊಂದನ್ನು ತೆಗೆದಿರುತ್ತಾರೆ. ಅದನ್ನು ಪಡೆಯುವವರು ಒಳ್ಳೆ ಅದೃಷ್ಟವಂತರಾಗುವರೆಂಬ ಪ್ರತೀತಿ ಇದೆ.

ನೀರಿನ ತೊಂದರೆ

ರಾಜಧಾನಿಯ ೧೦೦ ಅಡಿ ರಸ್ತೆಯಿಂದ ದಕ್ಷಿಣಕ್ಕೆ ಇರುವ ಡಿ. ಸುಬ್ಬಯ್ಯ ರಸ್ತೆಯಲ್ಲಿ ನೀರಿನ ತೊಂದರೆಯು ಸುಮಾರು ೩ ತಿಂಗಳಿನಿಂದಲೂ ಬಹಳವಾಗಿದೆ. ಬೆಳಗಿನ ಜಾವ ೧೨ ಗಂಟೆಯಾದರೂ ನಲ್ಲಿಗಳಲ್ಲಿ ಸರಿಯಾಗಿ ನೀರು ಬರುವುದಿಲ್ಲ ಮತ್ತು ೧೧ ಗಂಟೆಗೆ ನಿಲ್ಲುವುದು. ಇದರಿಂದ ಅನೇಕ ವಿದ್ಯಾರ್ಥಿಗಳಿಗೂ ಮತ್ತು ಸಂಸಾರಿಕರಿಗೂ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ತಕ್ಷಣವೇ ಗಮನಿಸಿ ನೀರಿನ ತೊಂದರೆಯನ್ನು ತಪ್ಪಿಸಿ ಅನುಕೂಲ ಮಾಡಿಸಬೇಕೆಂದು ಅಲ್ಲಿನ ನಿವಾಸಿಗಳು ಕೋರುತ್ತಾರೆ.

ವಿವಾಹ ಮಹೋತ್ಸವ

ನಂಜನಗೂಡಿನಲ್ಲಿರುವ ಬಾಳೆ ತೋಟದ ಶ್ರೀ ವೆಂಕಟರಮಣ ಅಯ್ಯರ್‌ರವರ ಪುತ್ರರಾದ ಶ್ರೀ ಶ್ರೀನಿವಾಸಯ್ಯರ್‌ರವರು ತಮ್ಮ ಮಕ್ಕಳು ಚಿ|| ರಾ|| ಸುಬ್ರಹ್ಮಣ್ಯರವರಿಗೆ ಶಿವಮೊಗ್ಗ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಇ. ವಿ ಪಟ್ಟಾಭಿರಾಮಯ್ಯರ್‌ರವರ ಮಗಳು ಸೌ|| ಲಲಿತಾಂಬನನ್ನು ತಂದುಕೊಂಡು ಶಿವಮೊಗ್ಗೆಯಲ್ಲಿ ಕಳೆದ ಬುಧವಾರ ವಿವಾಹವನ್ನು ನೆರವೇರಿಸಿದರು.

ವಿನೋಬಾ ಭಾವೆಯವರ ಸ್ವಚ್ಛ ಭಾರತ ಚಳುವಳಿ

ಭೂದಾನ ಯಜ್ಞದಂತೆ ಸ್ವಚ್ಛ ಭಾರತದ ಚಳುವಳಿಯನ್ನು ಆಚಾರ್ಯ ವಿನೋಬಾ ಭಾವೆಯವರು ಹೂಡಲಿರುವರು. ಪವಿತ್ರವಾದ ಗಂಗಾ ನದಿಯೊಳಗೆ ಜನರು ಕಲ್ಮಲಗಳನ್ನು ಹಾಕುತ್ತಿರುವುದನ್ನು ಅವರು ಖಂಡಿಸಿರುತ್ತಾರೆ.

ಬಿ. ಆರ್. ನಾಯ್ಡುರವರಿಗೆ ಸೊಸೈಟಿ ಸದಸ್ಯತನ

ಮೈಸೂರು ಕೋ-ಆಪರೇಟಿವ್ ಸೊಸೈಟಿಯವರು ಸದಸ್ಯರಾದ ಶ್ರೀ ಬಿ. ಆರ್. ನಾಯ್ಡುರವರನ್ನು ಸದಸ್ಯತ್ವದಿಂದ ವಜಾ ಮಾಡಿದ ಬಗ್ಗೆ ಅವರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ರವರಲ್ಲಿ ಅಪೀಲು ಹೂಡಲಾಗಿ, ಅವರನ್ನು ತೆಗೆದಿರುವುದು ನ್ಯಾಯವಲ್ಲವೆಂದು ತೀರ್ಪು ಕೊಡಲಾಗಿತ್ತು. ಇದರ ಮೇಲೆ ಅಸೋಸಿಯೇಷನ್‌ನವರು ಅಪೀಲು ಮಾಡಲಾಗಿ, ಕೆಳಗಿನ ಕೋರ್ಟಿನ ತೀರ್ಪನ್ನೇ ಸರ್ಕಾರದವರು ಎತ್ತಿಹಿಡಿದಿರುವರು.

ಡಿಪೋವಿನಲ್ಲಿ ರಾಗಿ ಕೊಡುತ್ತಿಲ್ಲ

ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ಡಿಪೋವಿನಲ್ಲಿ ರಾಗಿಯು ದಾಸ್ತಾನು ಇದ್ದರೂ ಜನರಿಗೆ ಅದನ್ನು ಕೊಡದಿರುವುದು ಒಂದು ಕೊರತೆಯಾಗಿದೆ. ಹದಿನೈದು ದಿನಗಳ ಹಿಂದೆಗೂ ಮೂಟೆ ರಾಗಿಯು ಡಿಪೋವಿನಲ್ಲಿ ಇದ್ದಿತು. ಆದರೆ ಈಗ ಎಂಟು ಮೂಟೆಗಳ ಬರ ಜನರಿಗೆ ಮಾತ್ರ ರಾಗಿಯು ದೊರೆತಿರುವುದಿಲ್ಲ. ಈ ಕುಂದುಕೊರತೆಯನ್ನು ಅಧಿಕಾರಿಗಳು ಗಮನಿಸಿ ಸರಿಪಡಿಸುವುದು ನ್ಯಾಯವಾಗಿರುತ್ತದೆ ಎಂದು ಅಲ್ಲಿನ ನಿವಾಸಿಯೊಬ್ಬರು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫೦: ಶಾಸ್ತ್ರ ಸಂಗೀತ [illegible], ಮಧ್ಯಾಹ್ನ ೧-೪೦ ಜಲತರಂಗ್, ೧-೫೦ ನಾಟಕ ಮತ್ತು ನಮ್ಮ ಪಶು, ೨ ನಮ್ಮ ಹಳ್ಳಿಯ ಗೀತೆಗಳು. ಸಂಜೆ ೫-೪೦ ಮತ್ತು ೭-೨೦ ಪಿ. ಟಿ. ವೆಂಕಟೇಶ್ ಸಂಗೀತ, ೬-೧೦ [illegible], ೭ ಚಿತ್ರ ಸಂಗೀತ, ೮-೬ ಭುವನೇಶ್ವರಯ್ಯ ಪಿಟೀಲು, ೯-೧೫ ಪಟ್ಟಮ್ಮಾಳ್ ಕರ್ನಾಟಕ ಸಂಗೀತ, ೯-೪೦ "[illegible]" [illegible].

ಜೀವಂತನಿಗೆ ಸತ್ತವನ ರಕ್ತ ನಾಳದ ಜೋಡಣೆ

ಸತ್ತವನ ಅಯೋರ್ಟಾ ಎಂಬ ಮುಖ್ಯ ರಕ್ತನಾಳವನ್ನು ಜೀವಂತನಾದವನಿಗೆ ಶಸ್ತ್ರ ಚಿಕಿತ್ಸೆ ಮೂಲಕ ಅಮೇರಿಕದ ಫಿಲಡೆಲ್ಫಿಯದ ವೈದ್ಯರು ಜೋಡಿಸಿ ಜೀವದಾನ ಮಾಡಿರುತ್ತಾರೆ. ಆತನ ಆ ರಕ್ತನಾಳವು ಒಂದುಕಡೆ ಕಿರಿದಾಗಿಯೂ ಮತ್ತೊಂದು ಕಡೆ ಅತಿ ದಪ್ಪವಾಗಿಯೂ ಇದ್ದು ಅದು ಯಾವ ಗಳಿಗೆಯಲ್ಲಾದರೂ ಪ್ರಾಣಾಪಾಯವನ್ನು ತರುತ್ತಿದ್ದುದರಿಂದ, ವೈದ್ಯರು ಮೇಲ್ಕಂಡಂತೆ ಶಸ್ತ್ರ ಚಿಕಿತ್ಸೆ ನಡೆಸಿದರಿಂದ ಜೀವ ಉಳಿದಿದೆ.

ಮೈಸೂರು ಪೇಟೆ ಧಾರಣೆ

		[illegible]	[illegible]
[illegible]	,,	೧೪-೧೦-೦	೧೩-೧-೦
ಎಳ್ಳು	,,	[illegible]	[illegible]
ಹರಳು ಬೀಜ	,,	[illegible]	
ಹೊಂಗೆಬೀಜ	,,	೧೨-೧೦-೦	
ಹುರುಳಿ	,,	[illegible]	[illegible]
ಜೋಳ	,,	[illegible]	[illegible]
ಅವರೆ	,,	[illegible]	
ಉದ್ದು	,,	[illegible]	[illegible]
ಹುರುಕಡಲೆ	,,	[illegible]	[illegible]
ತೆಂಗಿನಕಾಯಿ			
ನೂರು ಒಂದಕ್ಕೆ		೭-೧೨-೦	೧೮-೪-೦
ಹುಣಸೇಹಣ್ಣು	,,	೩-೧೨-೦	೪-೧-೦
ಸೀಗೆಕಾಯಿ	,,	[illegible]	[illegible]
ತೆಂಗಿನಕಾಯಿ ೧೦೦೦		[illegible]	[illegible]

ಕಥಾಲೋಕ

ಸಣ್ಣ ಕತೆಗಳಿಗಾಗಿಯೇ ಮೀಸಲಾಗಿರುವ ಮಾಸಪತ್ರಿಕೆ

ಮೊದಲನೆಯ ಸಂಚಿಕೆ

೧೯೫೨ ಆಗಸ್ಟ್ ೧೫

ಪ್ರಕಟವಾಗುವುದು

ಬೇಗನೆ ಲೇಖಕರುಗಳು ತಮ್ಮ ಲೇಖನಗಳನ್ನು

ಕಥಾಲೋಕ ಕಾರ್ಯಾಲಯ,

ಯುನೈಟೆಡ್ ಪ್ರಿಂಟರ್ಸ್,

ರಮಾವಿಲಾಸ ರಸ್ತೆ, ಮೈಸೂರು.

ಇವರಲ್ಲಿಗೆ ದಯೆಯಿಟ್ಟು ಕಳುಹಿಸಬೇಕಾಗಿ ವಿನಂತಿ. ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

11—7—52 ನೇ ಶುಕ್ರವಾರದಿಂದ ಪ್ರಾರಂಭ

ಮೈಸೂರು ನಾಗೇಂದ್ರರಾವ್ ಅಭಿನಯಿಸಿರುವ ತಮಿಳು ಚಿತ್ರ

* ಮೂವರು ತನಯರು *

ಪಾತ್ರ:— ನಾಗೇಂದ್ರರಾವ್, ಎಂ. ಕೆ. ರಾಧಾ, ಕಣ್ಣಾಂಬ, ಸಂಗರಿಬಾಯಿ ಮುಂತಾದವರು.

ನಾಲ್ಕು ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

ನೆನಪಿರಲಿ ! :: ನೆನಪಿರಲಿ !

ಅಬೀದ್‌ರವರ ಹರಾಜು ಮಾರಾಟ

ನಾಳೆ : ಬೆಳಗ್ಗೆ : 10 ಘಂಟೆಗೆ

FOR IMMEDIATE SALE

Three VALUABLE BUNGALOW SITES in one plot with a Compound wall all round, either in one lot or separately. Most centrally situated in best locality facing the GOVERNMENT HOUSE, MYSORE, having main Roads on three sides near the Convent, Primary, Middle & HIGH SCHOOLS. Any reasonable offer will be accepted.

For further particulars apply to :—

Messrs A B I D & Co

House and Estate agents, Statue Square, Mysore

Edited, Printed and Published by A. R. Nagarajan, at Sadhvi Press, D. Subbiah Road, Mysore.

ಫೋನ್ ನಂ. 792 WEEKLY EDITION ಬಿಡಿ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೩-೭-೫೨ [ಸಂಚಿಕೆ ೪೭

ಕೊರಿಯಾ ಪ್ರಜೆಗಳಿಗೆ ವಿಮಾನ ಧಾಳಿ ಎಚ್ಚರಿಕೆ

ಶ್ರೀಮನ್ಮಹಾರಾಜರಿಗೆ ಶುಭಾಶಯ

ರಾಜಧಾನಿಯ ಬಹಿರಂಗ ಸಭೆಯಲ್ಲಿ ನಿರ್ಣಯ

ಮೈಸೂರು ೧೩

ರಾಜಧಾನಿಯ ಪೌರ ಕಾರ್ಯಕಾರರ ಸಂಘದ ಪತ್ರಿಯಲ್ಲಿ ನೆನ್ನೆ ಬಹಿರಂಗ ಸಭೆಯು ಟೌನ್‌ಹಾಲಿನಲ್ಲಿ ನಡೆದು ಶ್ರೀಮನ್ಮಹಾರಾಜರವರ ೩೪ ನೇ ವರ್ಧಂತಿ ಸಂದರ್ಭದಲ್ಲಿ ಅವರಿಗೆ ಶುಭಾಶಯವನ್ನು ಕೋರುವ ನಿರ್ಣಯವನ್ನು ಮಾಡಲಾಯಿತು. ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಕೆ. ಜೀವಣ್ಣರಾಯರು ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲುಗಡೆ ಶ್ರೀಮನ್ಮಹಾರಾಜರವರ ದೊಡ್ಡ ತೈಲ ಚಿತ್ರವನ್ನಿಟ್ಟು ಮೇಲ್ಭಾಗದಲ್ಲಿಂದು ಕಡೆ ರಾಷ್ಟ್ರಧ್ವಜ ಮತ್ತೊಂದು ಕಡೆ ಗಂಡಭೇರುಂಡ ಧ್ವಜಗಳನ್ನು ಅಲಂಕರಿಸಲಾಗಿತ್ತು.

ಪ್ರಾರ್ಥನೆಯ ನಂತರ ಸಂಘದ ಕಾರ್ಯದರ್ಶಿಗಳಾದ ಡಾ॥ ಬಿ. ಜಿ. ದಾಸ್, ಶ್ರೀಗಳಾದ ಎಂ. ಆರ್. ಸ್ವಾಮಿ, ಬಸಪ್ಪ, ತೆ ಸ್ವಾಮಿದಾಸ್, ಜಿ. ವೃಷಭೇಂದ್ರ ಜೋಯಿಸ್, ಮುಂತಾದವರು ಭಾಷಣ ಮಾಡಿ ಶ್ರೀಮನ್ಮಹಾರಾಜರವರ ಗುಣಗಾನ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಮೈಸೂರಿನ ಸಂಸ್ಕೃತಿ, ಕಲೆ ಮತ್ತು ಕೈಗಾರಿಕೆಗಳಿಗೆ ಹಿಂದಿನಿಂದಲೂ ನೆಲೆವೀಡಾಗಿರುವುದೆಂದೂ, ಇದಕ್ಕೆ ಬಹುಮಟ್ಟಿಗೆ ರಾಜಮನೆತನದವರ ಸಹಾಯವೇ ಕಾರಣವೆಂದೂ ಹೇಳಿದರು. ಶ್ರೀಮನ್ಮಹಾರಾಜರವರು ಆಧುನಿಕ ಪ್ರಜಾಪ್ರಭುತ್ವವನ್ನು ಅನುಸರಿಸಿಕೊಂಡು, ಈಗಿನ ಪರಿಸ್ಥಿತಿಯಲ್ಲಿ, ಪ್ರಜಾ ಪ್ರಭುತ್ವ ತತ್ವದ ಅನುಷ್ಠಾನದಲ್ಲಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸಿರುವರೆಂದು ಸೂಚಿಸಿದರು. ವಂದನಾರ್ಪಣೆಯಾದ ನಂತರ ಶ್ರೀ ಗೌರೀ ಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಜೈನ ಯುವಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ತಿ. ಹನುಮಯ್ಯ ಹೈಸ್ಕೂಲಿನ ಪಕ್ಕದಲ್ಲಿರುವ ಶ್ರೀ ಶಾಂತೀಶ್ವರ ದೇವಾಲಯದಲ್ಲಿ ಇಲ್ಲಿನ ಜೈನ ಯುವಕ ಸಂಘದ ೫ ನೇ ವಾರ್ಷಿಕೋತ್ಸವವು ಈ ಸಂಜೆ ೭ ಘಂಟೆಗೆ ಮಹಾರಾಜಾ ಕಾಲೇಜಿನ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ನಡೆಯುವುದು. ಎ॥ ವಿ॥ ಡಿ. ನಾಗರಾಜ ಶಾಸ್ತ್ರಿಯವರು ಮುಖ್ಯ ಭಾಷಣ ಮಾಡುವರು. ಶ್ರೀ ಡಿ. ಪದ್ಮನಾಭಶರ್ಮರವರು ಮೋಕ್ಷಮಾರ್ಗ ಪ್ರತಿಷ್ಠಿತ ಮತ್ತು ಪಾರಿಶ್ವಭ್ಯುದಯಗಳ ಮೇಲೆ ಭಾಷಣ ಮಾಡುವರು.

ಭಾಷಾ ಪ್ರಾಂತ ರಚನೆಯ ನಿರ್ಣಯಕ್ಕೆ ಸೋಲು

ಕೂಡಲೇ ಇಡೀ ದೇಶವನ್ನು ಭಾಷಾವಾರು ಪ್ರಾಂತಗಳಾಗಿ ವಿಂಗಡಿಸಬೇಕೆಂದು ಕೋರುವ ಖಾಸಗೀ ನಿರ್ಣಯವು ನೆನ್ನೆ ಭಾರತ ಪಾರ್ಲಿಮೆಂಟಿನಲ್ಲಿ ೭೭—೨೬೧ ಓಟುಗಳಿಂದ ಬಿದ್ದು ಹೋಯಿತು.

ಅಮೇರಿಕಾ ಅಧ್ಯಕ್ಷತೆಗೆ

ರಿಪಬ್ಲಿಕನ್ ಪಕ್ಷದ ಉಮೇದುವಾರ ಜನರಲ್ ಐಸೆನ್‌ಹೋವರ್

ಅಮೇರಿಕಾ ಅಧ್ಯಕ್ಷತೆಗೆ ಐಸೆನ್‌ಹೋವರ್

ಅಮೇರಿಕದ ರಿಪಬ್ಲಿಕನ್ ಪಕ್ಷದ ಪರವಾಗಿ ಅಲ್ಲಿನ ಅಧ್ಯಕ್ಷತೆಗೆ ಐಸೆನ್‌ಹೋವರರು ಸ್ಪರ್ಧಿಸುವರು. ಅದಕ್ಕಾಗಿ ನಡೆದ ಪಕ್ಷದ ಸ್ಪರ್ಧೆಯಲ್ಲಿ ಅವರು ಸೆನೆಟರ್ ಟಾಫ್ಟ್‌ರವರನ್ನು ಸೋಲಿಸಿರುತ್ತಾರೆ. ಐಸೆನ್ ಹೋವರರು ತಮ್ಮ ಪಕ್ಷಕ್ಕೆ ಜಯ ದೊರಕಿಸಲು ಪಣ ತೊಟ್ಟಿರುವರು. ಅವರ ವಿರೋಧಿಗಳಾಗಿದ್ದ ಸೆನೆಟರ್ ಟಾಫ್ಟ್, ಗೌರ್ನರ್ ವಾರೆನ್ ಮತ್ತು ಹೆರಾಲ್ಡ್ ಸ್ಟಾಸನ್‌ರವರು ಐಸೆನ್‌ಹೋವರರಿಗೆ ಬೆಂಬಲನೀಡಿರುವರು.

ಕೋತಿ ಕೊಂದು ಬಾಲ ತಂದವರಿಗೆ ೮ ಆಣೆ

೩೦ ಕೋತಿಗಳನ್ನು ಕೊಂದು ಬಾಲವನ್ನು ತರುವವರಿಗೆ ಒಂದೊಂದು ಬಾಲಕ್ಕೆ ೮ ಆಣೆಯಂತೆ ಬಹುಮಾನ ಕೊಡಲಾಗುವುದೆಂದು ಮಧ್ಯ ಭಾರತದ ವ್ಯವಸಾಯ ಸಚಿವರು ತಿಳಿಸಿರುತ್ತಾರೆ. ಕೋತಿಗಳು ಬೆಳೆಗಳನ್ನು ನಾಶಪಡಿಸುವುದನ್ನು ತಪ್ಪಿಸುವುದಕ್ಕಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ.

ಸೊಸೈಟಿ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳಲ್ಲಿ ಅವಿಶ್ವಾಸ

ಮೈಸೂರು ೧೩

ಮೈಸೂರ ಕೋ-ಆಪರೇಟಿವ್ ಸೊಸೈಟಿಯ ಪ್ರತಿನಿಧಿಗಳ ಸಭೆಯು ನೆನ್ನೆ ರಾತ್ರಿ ನಡೆದು ಅಧ್ಯಕ್ಷ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ ಮತ್ತು ಕಾರ್ಯದರ್ಶಿ ಶ್ರೀ ಪಿ. ಎಸ್. ... ರವರಲ್ಲಿ ಅವಿಶ್ವಾಸವನ್ನು ಸೂಚಿಸುವ ನಿರ್ಣಯವನ್ನು ... ಓಟುಗಳಿಂದ ಅಂಗೀಕರಿಸಲಾಯಿತು. ಶ್ರೀ ಜಿ. ... ಜೋಯಿಸ್ ... ಶ್ರೀ ಬಿ. ಎಸ್. ... ರವರುಗಳು ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ ಆರಿಸಲ್ಪಟ್ಟಿರುತ್ತಾರೆ.

ಸಿಂಹಳದ ಮಂತ್ರಿ ಮಗನೆಂದು ಮದ್ರಾಸು ಮಂತ್ರಿಗೆ ಮೋಸ?

ಮದ್ರಾಸಿನ ಬಾಡಿಗೆ ಹೋಟೆಲ್ ಮಂತ್ರಿಗಳಾದ ರಾಮ್ನಾಡಿನ ಮಹಾರಾಜರನ್ನು ಮೋಸಗೊಳಿಸುವ ಪ್ರಯತ್ನಕ್ಕಾಗಿ ಅಲ್ಲಿನ ಪೋಲೀಸರು ಇಬ್ಬರನ್ನು ದಸ್ತಗಿರಿ ಮಾಡಿರುತ್ತಾರೆ. ಒಬ್ಬನು ತಾನು ಸಿಂಹಳದ ಮಂತ್ರಿ ಸೆರಿ ಸುಂದರಂರವರ ಮಗನೆಂದೂ, ವ್ಯಾಪಾರಸ್ಥನೆಂದೂ ನಟಿಸಿ, ದೆಹಲಿಗೆ ಹೋಗಲು ಸಾವಿರ ರೂ. ಬೇಕಾಗಿರುವುದೆಂದು ಕೇಳಿದನೆಂದೂ, ಮಂತ್ರಿಗಳು ಕೊಲಂಬೋವಿಗೆ ಟೆಲಿಫೋನ್ ಮಾಡಿ ಅವನು ಮೋಸಗಾರನೆಂದು ತಿಳಿದ ಮೇಲೆ ಮಾರನೇ ದಿನ ಅವನನ್ನೂ ಅವನ ಸಂಗಡಿಗನನ್ನೂ ಪೋಲೀಸರ ವಶಕ್ಕೆ ಒಪ್ಪಿಸಿದರೆಂದೂ ಹೇಳಲಾಗಿದೆ.

ಎಲ್ಲ ಬಗೆಯ ಗಿರಣಿ ಬಟ್ಟೆಗಳ ಮೇಲೆ ಸೆಸ್

ಖಾದಿಯನ್ನು ಅಭಿವೃದ್ಧಿಪಡಿಸಲು ಬೇಕಾಗುವ ೧ ಕೋಟಿ ರೂ. ಗಳ ಆದಾಯಕ್ಕಾಗಿ ಗಿರಣಿಗಳಲ್ಲಿ ತಯಾರಾಗುವ ಎಲ್ಲ ಬಗೆಯ ಬಟ್ಟೆಗಳ ಮೇಲೂ ಗಜವೊಂದಕ್ಕೆ ೧ ಕಾಸಿನಂತೆ ಸೆಸ್ಸನ್ನು ವಿಧಿಸುವ ಯೋಜನೆಯನ್ನು ಕೇಂದ್ರ ಸರ್ಕಾರದವರಿಗೆ ಇರುವುದೆಂದು ಗೊತ್ತಾಗಿದೆ.

ಕೊರಿಯಾ ನಾಗರಿಕರಿಗೆ ವಿಶ್ವಸಂಸ್ಥೆ ಸೈನ್ಯಗಳ ಎಚ್ಚರಿಕೆ

ವಿಶ್ವ ಸಂಸ್ಥೆಯ ವಿಮಾನ ಬಲಗಳು ಉತ್ತರ ಕೊರಿಯ ಮೇಲೆ ನಡೆಸುವ ಧಾಳಿಗಳ ಬಗ್ಗೆ ಅಲ್ಲಿನ ನಾಗರಿಕರಿಗೆ ಪೂರ್ವಭಾವಿಯಾಗಿ ಎಚ್ಚರಿಕೆಯನ್ನು ಕೊಡುವ ವ್ಯವಸ್ಥೆಯಾಗುತ್ತದೆ. ನಾಗರಿಕರ ಮೇಲೆ ಧಾಳಿ ಮಾಡಬಾರದೆಂಬುದು ವಿಶ್ವ ಸಂಸ್ಥೆಯ ಉದ್ದಿಶ್ಯವೆಂದೂ, ಆದರೆ ಜನರು ಮಿಲಿಟರಿ ಗುರಿಗಳ ಬಳಿ ಇದ್ದರೆ ಅವರನ್ನು ರಕ್ಷಿಸಲು ಸಾಧ್ಯವಿಲ್ಲವೆಂದೂ ಸಹ ವಿಮಾನ ಬಲದವರು ತಿಳಿಸುತ್ತಾರೆ.

ಎಂ. ವಿ. ಕೃಷ್ಣಪ್ಪನವರಿಂದ ಪ್ರಮಾಣ ವಚನ ಸ್ವೀಕಾರ

ಕೇಂದ್ರ ಆಹಾರ ಮತ್ತು ವ್ಯವಸಾಯ ಇಲಾಖಾ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ ಶ್ರೀ ಎಂ. ವಿ. ಕೃಷ್ಣಪ್ಪನವರು ಪ್ರಮಾಣ ವಚನವನ್ನು ನೆನ್ನೆ ಸ್ವೀಕರಿಸಿದರು. ಆಹಾರ ಮಂತ್ರಿ ಕಿದ್ವಾಯಿ ಮತ್ತು ಇತರ ಸಚಿವರುಗಳು ಭಾಗವಹಿಸಿದ್ದರು. ಕಿದ್ವಾಯಿಯವರು ಭೋಪಾಲ್, ಬೊಂಬಾಯಿ, ತಿರುವಾಂಕೂರ್, ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳಿಗೆ ಸದ್ಯದಲ್ಲೇ ಭೇಟಿ ಕೊಡುವಾಗ ಅವರೊಡನೆ ಶ್ರೀ ಕೃಷ್ಣಪ್ಪನವರೂ ಇರುವರು.

ಗಂಡನು ಮಡಿದುದರಿಂದ ಪತ್ನಿಗೆ ಹುಚ್ಚು

ಚಿಕ್ಕ ಜಾಜೂರಿನಿಂದ ಶಿವಮೊಗ್ಗಕ್ಕೆ ವರ್ಗವಾದ ಗಾರ್ಡ್ ಶ್ರೀ ಕುಮಾರಸ್ವಾಮಿಯವರು ರೈಲ್ವೆ ಸ್ಟೇಷನ್ನಿನಲ್ಲಿ ನೆನ್ನೆ ಹೃದಯ ಸ್ತಂಭನದಿಂದ ಮಡಿದರು. ಇವರು ದೇವರ ಸೇವೆಯನ್ನು ಮುಗಿಸಿಕೊಂಡು ಊರಿಗೆ ಹೊರಡಲು ರೈಲ್ವೆ ಸ್ಟೇಷನ್ನಿಗೆ ಬಂದಾಗ ಅವರಿಗೆ ಮೃತ್ಯು ಒದಗಿತು. ಅದನ್ನು ನೋಡಿದೊಡನೆ ಅವರ ಪತ್ನಿಗೆ ಹುಚ್ಚು ಹಿಡಿಯಿತೆಂದು ಹೇಳಲಾಗಿದೆ.

ಮುಂಗಸಿಯೊಡನೆ ಘಟಸರ್ಪದ ಹೋರಾಟ

ಬಾಳೆಹೊನ್ನೂರಿನ ಬಳಿ ಕಾಡಿನಲ್ಲಿ ಘಟಸರ್ಪವೊಂದು ಸುಮಾರು ೩ ಘಂಟೆಗಳ ಕಾಲ ಮುಂಗುಸಿಯೊಡನೆ ಹೋರಾಡಿತೆಂದೂ, ಮುಂಗಸಿ ಆಗಾಗ್ಗೆ ಯಾವುದೋ ಹಸುರು ಗಿಡವನ್ನು ತಿಂದುಕೊಂಡು ಬಂದು ಕಾಳಗವಾಡುತ್ತಿತ್ತೆಂದೂ, ೩ ಘಂಟೆಗಳ ಕದನದ ನಂತರ ಮುಂಗಸಿಯು ಸರ್ಪದ ಮೂತಿಯನ್ನು ಬಲವಾಗಿ ಹಿಡಿದು ಕೊಂದಿತೆಂದು ಗೊತ್ತಾಗಿದೆ.

ರವೆ ಮತ್ತು ಹಿಟ್ಟುಗಳ ಬೆಲೆಯಲ್ಲಿ ಇಳಿತಾಯ

ಸಾರ್ವಜನಿಕರ ಉಪಯೋಗಕ್ಕಾಗಿ ಸರ್ಕಾರದವರು ರವೆ, ಗೋಧಿ ಹಿಟ್ಟು ಮತ್ತು ಮೈದಾಗಳ ಬೆಲೆಯನ್ನು ಇಳಿಸಿರುತ್ತಾರೆ. ಸಣ್ಣ ರವೆ ಪೌಂಡಿಗೆ ೬ ಆಣೆಯಂತ ಸರಬರಾಜಾಗಿ, ವಿಾಡಿಯಂ ದಪ್ಪ ೬॥ ಆಣೆಯಿಂದ ೦-೩-೬, ಸ್ಥಳೀಯ ಗೋಧಿ ಹಿಟ್ಟು ಪೌಂಡಿಗೆ ೦-೩-೩, ಸ್ಥಳೀಯ ಮೈದಾ ೦-೩-೩. ಹೋಟೇಲು, ಫಲಹಾರ ಮಂದಿರ ಮತ್ತು ಬ್ರೆಡ್ಡು ಅಂಗಡಿಗಳಿಗೆ ಹಿಂದಿನ ಬೆಲೆಯೇ ಇರುವುದು.

ವಾರ ಭವಿಷ್ಯ

ತಾ|| ೧೩-೭-೫೨ರಿಂದ ೨೦-೭-೫೨ರ ವರೆಗೆ

ಮೇಷ — ನೆಮ್ಮದಿ ಭಂಗದ ಘಟನೆ ಹಣದ ವೆಚ್ಚ ವ್ಯಾಪಾರಾದಿಗಳಲ್ಲಿ ಆರೋಪಣ. ತಾ|| ೧೩, ೧೪ ವಿಶ್ವಾಸ ಘಾತ, ಪತ್ನಿಗೆ ಅಗ್ನಿ ಭಯ

ವೃಷಭ — ದೊಡ್ಡ ಜವಾಬ್ದಾರಿಯಿಂದ ಬಿಡುಗಡೆ ಆರೋಗ್ಯ ನೆಟ್ಟಗೆ ಉತ್ತಮ ಹಣಕಾಸಿನ ಸ್ಥಿತಿ ಮನಸ್ಸಿಗೆ ಹರ್ಷ. ವ್ಯಾಪಾರಾದಿಗಳಲ್ಲಿ ಹಿತ ಘಟನೆ ಅಪೇಕ್ಷಾ ಸಿದ್ಧಿ ತಾ|| ೧೪, ೧೫ [illegible], ಧರ್ಮ ಕಾರ್ಯ.

ಮಿಥುನ — ಮನಸ್ಸಿನ ಮೇಲೆ ಸಿ ಮಂತ್ರಣ ಇರಲಿ ವಿಶ್ರಾಂತಿ ಇಲ್ಲ ಕೆಲಸ ಕಾರ್ಯದ ಒತ್ತಡ ಆರೋಗ್ಯ ನೆಟ್ಟಗೆ. ತಾ|| ೧೭, ೧೮ ಕ್ಲೇಶ, ತೊಂದರೆ

ಕರ್ಕ — ಕಷ್ಟದ ವಾತಾವರಣ ಕಲಹ. ವಿರುದ್ಧ ಘಟನೆ ವ್ಯಾಪಾರಾದಿಗಳಲ್ಲಿ ದಗಾ ದಗಾ ತಾ|| ೧೩, ೧೭ [illegible] ನಾಶ, ಮಿತ್ರ ಸಹಾಯ

ಸಿಂಹ — [illegible] ಘಟನೆ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ [illegible]ರಿಯಲ್ಲಿ ಪ್ರಶಂಸೆ ತಾ|| ೧೪, ೧೬ [illegible], ಸನ್ಮಾನ

ಕನ್ಯಾ — ಆರೋಗ್ಯ ನೆಟ್ಟಗೆ [illegible] ಮನಸ್ಸು ಅಪೇಕ್ಷಾ ಭಂಗ ವ್ಯಾಪಾರಾದಿಗಳಲ್ಲಿ ಅಲಸ್ಯ [illegible] ತಾ|| ೧೦, ೧೫ [illegible]

ತುಲಾ — ಬೇಸರದ ಘಟನೆ [illegible]ಯಲ್ಲಿ ಮಾತ್ಸರ್ಯ ವ್ಯಾಪಾರಾದಿಗಳಲ್ಲಿ ಅವಿಶ್ವಾಸಿಗಳ ಭೇಟಿ [illegible] ತಾ|| ೧೭, ೧೭ ಧನಹಾನಿ [illegible] ಚಿಂತೆ

ವೃಶ್ಚಿಕ — [illegible] ಕ್ಲೇಶ [illegible] ತೊಂದರೆ, ಪ್ರವಾಸದಲ್ಲಿ ವಿಘ್ನ [illegible] ೧೪, ೧೫ ಕಳವು ಕಲಹ

ಧನು — ಪ್ರವಾಸ ಒಳ್ಳೆಯದು ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ಮಿತ್ರರ ಭೇಟಿ ತಾ|| ೧೭ [illegible], ಮನಸ್ಸಿನ ಕಾಲ ವ್ಯರ್ಥ

ಮಕರ — ಅಶಾಂತಿ ದೂರವಾಗುವು ಆರೋಗ್ಯ ಉತ್ತಮ ವ್ಯಾಪಾ[illegible]

ಹಾಳು ಭಾವಿಗೆ ಎಸೆಯಲ್ಪಟ್ಟ ಶಿಶುವಿನ ಪಾರು

ಕೋಲಾರದ ಬಳಿ ಒಕ್ಕಲೇರಿ ಹಳ್ಳಿಯ ಹೆಂಗಸೊಬ್ಬಳಿಗೆ ಕೆಲವು ದಿನಗಳ ಹಿಂದೆ ಹುಟ್ಟಿದ ಮಗುವೊಂದು ಭೂತಸ್ವರೂಪವಾಗಿದ್ದಿತೆಂದೂ, ಅದನ್ನು ಮನೆಯಲ್ಲಿಟ್ಟುಕೊಳ್ಳುವುದು ಅರಿಷ್ಟವೆಂದು ಕೇಳಿ ತಾಯಿಯು, ೩೦ ಅಡಿ ಆಳದ ಹಾಳು ಭಾವಿಗೆ ಅದನ್ನು ಹಾಕಿದಳೆಂದೂ ೩ ದಿನಗಳ ನಂತರ ಭಾವಿ ಹತ್ತಿರ ಹೋಗುತ್ತಿದ್ದ ಘುಕ್ಕಳಿಲ್ಲದ ಮುಸ್ಲಿಂ ಸ್ತ್ರೀಯೊಬ್ಬಳು ಮಗುವಿನ ಚೀತ್ಕಾರವನ್ನು ಕೇಳಿ ಅದನ್ನು ಹೊರಕ್ಕೆ ತೆಗೆಸಿದಳೆಂದೂ ನಂತರ ತಾಯಿಯಾದವಳು ಅದನ್ನು ಆಕೆಯಿಂದ ತೆಗೆದುಕೊಂಡು ಹೋದಳೆಂದೂ ವರದಿಯಾಗಿದೆ

ನಗರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಚುನಾವಣೆ

ಇದೇ ತಿಂಗಳು ತಾ|| ನಡೆಯುವ ನಗರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಸಕ್ರಿಯ ಸದಸ್ಯರ ಸ್ಪರ್ಧಿಸಲು ಅವಕಾಶವಿರುವುದಾಗಿ [illegible]

[illegible]

ಕುಂಭ — [illegible] ಪ್ರವಾಸ ತಾ|| ೧೩, ೧೪ [illegible], ಆಕಸ್ಮಿಕ ಲಾಭ

ಮೀನ — [illegible] ವೃಷ್ಟಿ [illegible] ಅಥವಾ ವಿದ್ಯುತ್ [illegible] ಹಣಕಾಸಿನ ಸ್ಥಿತಿ ಕ್ಲೇಶಕರ ವ್ಯಾಪಾರಾದಿಗಳಲ್ಲಿ ಚಿಂತೆ ತಾ|| ೧೫, ೧೭ [illegible], ಮಿತ್ರರ ಸಹಾಯ

ರಾಜಕಮಲ್

11-7-52 ರಿಂದ 5 ನೇ ವಾರ

ನನ್ನ ತಂಗಿ

[ತಮಿಳು]

ಕೋಲಾರದ ಆಸ್ಪತ್ರೆಯಲ್ಲಿ ಭೇದಭಾವ

ಕೋಲಾರದ ಚಿನ್ನದ ಗಣಿಗಳಲ್ಲಿರುವ ಆಸ್ಪತ್ರೆಯಲ್ಲಿ ಅಧಿಕಾರಿಗಳಿಗೂ ಕೆಳದರ್ಜೆ ನೌಕರರಿಗೂ ಪ್ರತ್ಯೇಕ ರೀತಿ ಚಿಕಿತ್ಸೆಗಳು ನಡೆಯುತ್ತಿರುವುದೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಗಮನಕ್ಕೆ ತರಲಾಗಿ ಅವರು ಇಂತಹ ಪದ್ಧತಿಯು ಕೂಡಲೇ ನಿಲ್ಲಬೇಕೆಂದು ಸೂಚನೆಯಿತ್ತರೆಂದು ಹೇಳಲಾಗಿದೆ

ಚಿನ್ನದ ಗಣಿ ಬೋರ್ಡಿಗೆ ಇಬ್ಬರು ಸರ್ಕಾರದ ಡೈರೆಕ್ಟರು

ಚಿನ್ನದ ಗಣಿಗಳಲ್ಲಿ ಕಾರ್ಮಿಕರ ಕ್ಷೇಮ ಚಿಂತನೆ ಮತ್ತು ಮಜೂರಿ ಬೆಚ್ಚಗಳ ಪರಿಶೀಲನೆಗಾಗಿ ಇಬ್ಬರು ಡೈರೆಕ್ಟರುಗಳನ್ನು ಮೈಸೂರು ಸರ್ಕಾರದವರು ಗಣಿಗಳ ಸಮಿತಿಗೆ ನೇಮಿಸುವರೆಂದೂ, ಆ ಪೈಕಿ ಒಬ್ಬರು [illegible] ಎಂದೂ ತಿಳಿದುಬಂದಿದೆ

ದೇವಸ್ಥಾನದ ಸಂತರ್ಪಣೆಯಲ್ಲಿ ಅವ್ಯವಸ್ಥೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿ [illegible] ಗಿರಿಜಾ ಕಲ್ಯಾಣ [illegible] [illegible] [illegible] ಊಟದ [illegible] ಸಂಭವ [illegible] [illegible] [illegible] ಪ್ರತ್ಯೇಕ [illegible] ಧರ್ಮಾದಾಯ [illegible] [illegible] ದ್ರವ್ಯವನ್ನು ವಿನಿಯೋಗಿಸುವುದರ ಸಂಬಂಧಪಟ್ಟ ಅಧಿಕಾರಿಗಳು [illegible] ದೃಷ್ಟಿಯಿಂದ ವರ್ತಿಸಬೇಕೆಂದು ಕೋರಿ [illegible]ರೊಬ್ಬರು ಬರೆದಿರುತ್ತಾರೆ

ಸಾಧ್ವಿ ಪತ್ರಿಕೆಯ

ಚಂದಾ ವಿವರ

ಸ್ಥಳಕ್ಕೆ — (ತಿಂಗಳಿಗೆ)	0—8—0
ಪರಸ್ಥಳಕ್ಕೆ (ಅಂಚೆ ವೆಚ್ಚ)	1 0—0
ಬಿಡಿ ಪ್ರತಿ —	0 0 3

ಏಜೆಂಟರಿಗೆ ಕಡಿಗಳಲ್ಲಿ ಚಂದಾ ತಿಂಗಳಿಗೆ ಎಂಟು ಕಾಣೆ ಮಾತ್ರ.

ಕೂಡಲೇ ಚಂದಾದಾರರಾಗಿರಿ

ಬೊಂಬಾಯಿಯಂಥಲ್ಲಿ ಮೋಟಾರು ವಾಹನಗಳ ಮುಷ್ಕರ

ಮೋಟಾರು ವಾಹನಗಳ ತೆರಿಗೆಯನ್ನು ಹೆಚ್ಚಿಸುವ ಯೋಜನೆಯ ವಿರೋಧವಾಗಿ ೩೩ ಬೊಂಬಾಯಿಯಲ್ಲಿ ಸಾವಿರ ಲಾರಿಗಳು ಮತ್ತು ೭|| ಸಾವಿರ ಟ್ಯಾಕ್ಸಿ ಮೋಟಾರುಗಳು ನೊನ್ನೆ ೧ ದಿನದ ಮುಷ್ಕರ ಹೂಡಿದ ಬಗ್ಗೆ ವರದಿಯಾಗಿದೆ.

ಸಚಿವರ ಪ್ರವಾಸದಲ್ಲಿ ಅನವಶ್ಯಕವಾದ ಅಧಿಕಾರಿಗಳು ಇರಕೂಡದು

ಮಂತ್ರಿಗಳು ಪ್ರವಾಸ ಮಾಡುವ ಸಮಯದಲ್ಲಿ ಅವಶ್ಯಕವಾಗಿ ಬೇಕಾದವರೆಂದು ತೀರ್ಮಾನಿಸದೆ ಇದ್ದಾಗ್ಯೂ ಹಲವು ಅಧಿಕಾರಿಗಳು ಮಂತ್ರಿಗಳೊಡನೆ ಪ್ರವಾಸ ಮಾಡುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಾಗಿಯೂ, ಅಪೇಕ್ಷಿಸಲಾಗಿರುವ ಅಧಿಕಾರಿಗಳು ಮಾತ್ರ ಮಂತ್ರಿಗಳ ಪ್ರವಾಸದಲ್ಲಿ ಸೇರಬೇಕೆಂದೂ ಸರ್ಕಾರದವರು ತಿಳಿಸಿರುತ್ತಾರೆ

ಆಕಾಶವಾಣಿ ನಿಲಯದ ಕಾರ್ಯಕ್ರಮ

ಜುಲೈ ೭ ೩೦ ಸಾಧಕರ ಬಣಿ [illegible] ಕರ್ನಾಟಕ ಸಂಗೀತ ಮಧ್ಯಾಹ್ನ ೧ ೩೦ [illegible] ಚಿತ್ರ ಸಂಗೀತ [illegible] [illegible] [illegible] [illegible] ಕನ್ನಡ [illegible] ೭ ೩೦ [illegible] ೭-೩೦ ಗಿಟಾರ್ [illegible] ಸಂಗೀತ [illegible] ಇಂಗ್ಲಿಷ್ [illegible]

ಫಿಲಿಪ್ಪೈನ್ ದೇಶದೊಡನೆ ಭಾರತವು ಸ್ನೇಹದ ಒಪ್ಪಂದವನ್ನು ಮಾಡಿಕೊಂಡಿತು ಎರಡು ರಾಷ್ಟ್ರಗಳ ನಡುವೆ ಶಾಶ್ವತ ಶಾಂತಿಯೂ, ಸೌಹಾರ್ದವೂ ನೆಲೆಗೊಂಡಿವೆ ಎಂಬ [illegible] ಒಪ್ಪಂದದಲ್ಲಿವೆ

CITY TUTORIAL COLLEGE

[illegible] V Mohalla Mysore

Admissions Received for

§ S S L C (March 53)

§ INTER-KANNADA - (Sept 52)

&

§ MADRAS MATRICULATION

Those above 17 years and studied up to V Form can appear)

ಅಂಬಳೆ ರಾಮಸ್ವಾಮಿ ಅಯ್ಯಂಗಾರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಿಳಿಸೆರಗು (ಮುಟ್ಟಿನ) ಸಂಬಂಧದ ರೋಗಗಳಿಂದ ಮಕ್ಕಳಾಗದಿರುವವರು ಅಕ್ರಮ ಸೂತಕ, ಕ್ರಿಮಿಗಳು, ಬಿಳಿಸೆರಗು, ಗರ್ಭ ಪತನ ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

[illegible] ದಿವಸಗಳಲ್ಲಿ ಈ ಔಷಧಿಯನ್ನು [illegible] ಸಂತಾನ ಫಲ ಬೇಕಾದವರು [illegible] ಸಿದ್ಧೌಷಧವನ್ನು [illegible] ಜೊತೆಗೆ ಸತಿಪತಿಯರಿಬ್ಬರೂ ! [illegible] ಅನುಪಾನ ಪತ್ರಿಕೆಯ ಮೇರೆ ಸೇವಿಸಿ [illegible] ಫಲ [illegible] ನಂ 1 ಸೆಟ್ 3 ರೂ ಪತ್ರ ವ್ಯವಹಾರ ಮತ್ತು [illegible] ಉಚಿತ ಪಟ್ಟಿ ಬೇಕಾದ 2 ಆಣೆ ಸ್ಟಾಂಪು ಕಳಿಸಿ

ವಿಶೇಷ ಸೂಚನೆ—ವಿಷವದ ಸ್ಯಾಕೆಟ್ ಮೇಲೆ ಶ್ರೀ ಎ. ಆರ್ ಅಯ್ಯಂಗಾರ್ ರ ಫೋಟೋ ಮತ್ತು ರುಜು ನೋಡಿ [illegible] ಅಂಬಳೆ [illegible] ಮೈಸೂರು [illegible] ಬೀದಿಯಲ್ಲಿದ್ದ ಆಫೀಸುಗಳನ್ನು [illegible] ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೇವೆ ,

ಹೊಸ ವಿಳಾಸ — ಎ ರಾಮಸ್ವಾಮಿ ಅಯ್ಯಂಗಾರ್ ಸನ್

" ಸಂತಾನ ಸಿಂಧೂರ ಬಿಲ್ಡಿಂಗ್ "

628, ಸೂರಿಡಿ ರಸ್ತೆ ದಕ್ಷಿಣ ಕ್ರಾಸ್ ,

(ಕೃಷ್ಣ ಕ್ರೈಸ್ ನರ್ ಪಕ್ಕ) ಮೈಸೂರು

The National Institute of Engineering, Mysore

10th July 1952

TENDER NOTICE

TENDERS are invited for the opening of a CANTEEN in the premises of the Institute in Mysore South

Application forms containing the conditions can be had in the office of the Institute on working days

The form must be returned to the office on or before the 25th July 1952

S RAMASWAMY, Principal

Edited, Printed and Published by A R Nagarajan, at Sadhvi Press, D. Subbiah Road, Mysore.

ಟೆಲಿಫೋನ್ ನಂ. 792 ‖ ವಂದೇ ಮಾತರಂ ‖ ಬಿಡಿಪ್ರತಿ ಬೆಲೆ 3 ಕಾಸು

ಸಂಪುಟ ೧೦] ಸೋಮವಾರ ೧೪-೭-೩೨ [ಸಂಚಿಕೆ ೨೮೭

ಮಂಚೂರಿಯಾ ಧಾಳಿ ಬಗ್ಗೆ ಅಮೆರಿಕಕ್ಕೆ ಎಚ್ಚರಿಕೆ

ಪತ್ರಿಕೋದ್ಯೋಗಿಗಳ ಸಂಘಕ್ಕೆ ದಾಸಪ್ಪನವರ ಭೇಟಿ

ಮೈಸೂರು ೧೪

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ನೆನ್ನೆ ನಗರದ ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ ಇತ್ತಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಆರ್. ಗೋಪಾಲಕೃಷ್ಣರಾಯರು ಸದಸ್ಯರ ಪರವಾಗಿ ಅವರಿಗೆ ಸ್ವಾಗತವನ್ನು ಕೋರಿದರು.

ಶ್ರೀ ದಾಸಪ್ಪನವರು ಭಾಷಣ ಮಾಡಿ ಇಂದಿನ ಪ್ರಜಾ ಪ್ರಭುತ್ವದ ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆ ಮತ್ತು ಸರ್ಕಾರಗಳಿಂದ ಜನತೆಯ ಸೇವೆಯು ಹೇಗೆ ಆಗಬೇಕೆಂಬುದನ್ನು ವಿವರಿಸಿದರು. ಮಹಾಜನರೂ, ಪತ್ರಿಕೋದ್ಯೋಗಿಗಳೂ ರಚನಾತ್ಮಕ ಟೀಕೆಗಳನ್ನು ಮಾಡಿ ದೇಶದ ಅಭಿವೃದ್ಧಿ ಕಾರ್ಯಗಳಿಗೆ ನೆರವಾಗಬೇಕೆಂದು ಕೋರಿದರು. ಪ್ರಜಾ ಪ್ರಭುತ್ವ ಯಶಸ್ವಿಯಾಗಲು ಸತ್ಸಂಪ್ರದಾಯಗಳನ್ನು ಬೆಳೆಸಿಕೊಂಡು ಬರಬೇಕೆಂದೂ ಅವರು ಸೂಚಿಸಿದರು.

ಮೈಸೂರು ನಗರದಲ್ಲಿ ಪಡಿತರವು ರದ್ದಾಗುವುದೆಂದು ಮುಖ್ಯ ಮಂತ್ರಿಗಳು ತಿಳಿಸಿದ್ದರೂ ಈ ಬಗ್ಗೆ ಇನ್ನೂ ಸರಿಯಾದ ವ್ಯವಸ್ಥೆ ಏರ್ಪಾಡಾಗದಿರುವ ಬಗ್ಗೆ ಪ್ರಶ್ನೋತ್ತರಗಳಾದುವು. ಪುರವಾಸಿಗಳ ತೊಂದರೆಯನ್ನು ನಿವಾರಿಸಲು ತಮ್ಮ ಕೈಲಾದ ಪ್ರಯತ್ನಗಳನ್ನು ಮಾಡುವುದಾಗಿ ಶ್ರೀ ದಾಸಪ್ಪನವರು ತಿಳಿಸಿದರು.

ವರ್ಧಂತ್ಯುತ್ಸವ

ರಾಜಧಾನಿಯ ಅಧಿಕಾರ್ತೀಪೇಟೆಯ ಲಿಟಲ್ ಫ್ಲವರ್ ಮಿಡಲ್ ಸ್ಕೂಲಿನಲ್ಲಿ ನೆನ್ನೆ ದಿನ ಶ್ರೀಮನ್ಮಹಾರಾಜರ ಜಯಂತೀ ವರ್ಷದ ವರ್ಧಂತಿಯು, ನಗರದ ಮುನಿಸಿಪಲ್ ಅಧಿಕಾರಿಗಳಾದ ಶ್ರೀ ಬಿ. ಆರ್. ಚೆಂಚಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಲ್. ರಾಜಯ್ಯನವರು ಮಹಾರಾಜರ ವಂಶದ ಚರಿತ್ರೆಯನ್ನು ಕುರಿತು ವಿವರಿಸಿದರು. ಸಹಾಯೋಪಾಧ್ಯಾಯರಾದ ಶ್ರೀ ಎಸ್. ವಿ. ನಾರಾಯಣಯ್ಯಂಗಾರ್ಯರು ಪ್ರಭುಗಳ ಜೀವನ ಚರಿತ್ರೆಯನ್ನು ಕುರಿತು ಭಾಷಣ ಮಾಡಿದರು. ಸಿಹಿ ತಿಂಡಿ ಮತ್ತು ಹಣ್ಣುಗಳ ವಿನಿಯೋಗವಾದನಂತರ ಭಜನೆ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಖೈದಿಗಳು ಧೂಮಪಾನ ಮಾಡಲು ಅವಕಾಶ

ಬೊಂಬಾಯಿಯ ಬಂದೀಖಾನೆಗಳಲ್ಲಿ ಪುರುಷ ಖೈದಿಗಳು ಇನ್ನು ಮುಂದೆ ಧೂಮಪಾನ ಮಾಡಲು ಅನುಮತಿ ಕೊಡಲಾಗಿದೆ. ಸ್ತ್ರೀ ಬಂದಿಗಳು ತಮ್ಮಲ್ಲಿಗೆ ಬಾಚಣಿಗೆ ಮುಂತಾದವುಗಳನ್ನು ತಮ್ಮ ಕೈಚೀಲಗಳನ್ನು ತೆಗೆದುಹಾಕಬೇಕೆಂದು ಇದುವರೆಗೂ ಇದ್ದ ನಿಯಮವನ್ನು ರದ್ದುಮಾಡಿ ಅವರಿಗೆ ಬಳೆ ತೊಟ್ಟುಕೊಳ್ಳಲು ಅವಕಾಶ ಕೊಡಲಾಗಿದೆ. ಈಗಾಗಲೇ ಒಳೆಗಳನ್ನು ತೆಗೆದುಹಾಕಿರುವವರು ಸರ್ಕಾರದ ವೆಚ್ಚದಲ್ಲಿ ಅವನ್ನು ಕೊಳ್ಳಲು ಅವಕಾಶ ಕೊಡಲಾಗಿದೆ.

ವಿಶ್ವಸಂಸ್ಥೆ ವಿಮಾನ ಧಾಳಿಗೆ ಚೀಣಾದ ಪ್ರತಿಭಟನೆ

ವಿಶ್ವಸಂಸ್ಥೆಯ ವಿಮಾನಗಳು ಕಳೆದ ಶುಕ್ರವಾರ ಚೀಣಾದ ಭಾರಿ ವಿಮಾನ ಕ್ಷೇತ್ರಗಳಿಂದ ಮತ್ತು ಚೀಣಿಯರ ೩ ನಗರಗಳ ಮೇಲೆ ಧಾಳಿ ನಡೆಸಿವೆಯೆಂದು ಪಿಕಿಂಗ್ ರೇಡಿಯೋ ಆಪಾದಿಸಿದೆ. ಚೀಣದ ಪ್ರಧಾನಿ ಚೌ ಎನ್ ಲಾಯ್‌ರವರು ಈ ಧಾಳಿಯನ್ನು ತೀವ್ರವಾಗಿ ಪ್ರತಿಭಟಿಸಿ ಇಷ್ಟರ ಪರಿಣಾಮಕ್ಕೆ ಅಲ್ಲದೆ ವಂತಹ ಈ ಕಾರ್ಯಕ್ರಮದ ಪರಿಣಾಮಗಳಿಗೆ ವಿಶ್ವಸಂಸ್ಥೆಯೇ ಹೊಣೆಯೆಂದು ತಿಳಿಸಿರುವರು.

ಕಾಶ್ಮೀರದ ಯುವರಾಜರ ಭವಿಷ್ಯದ ಬಗ್ಗೆ ಒಪ್ಪಂದ

ಕಾಶ್ಮೀರ ಮತ್ತು ಭಾರತಗಳ ನಡುವೆ ಇರುವ ಸಮಸ್ಯೆಗಳು ಸೌಹಾರ್ದಯುತವಾಗಿ ಬಗೆಹರಿಯುವುವೆಂದೂ, ಈ ಬಗ್ಗೆ ಷೇಖ್ ಅಬ್ದುಲ್ಲಾ ಮತ್ತು ಕಾಶ್ಮೀರದ ಇತರ ಎಲ್ಲ ಮಂತ್ರಿಗಳೂ ದೆಹಲಿಗೆ ಹಾಗೆ ಬಂದು ಒಪ್ಪಂದವನ್ನು ಮಾಡಿಕೊಳ್ಳಲಿರುವರೆಂದೂ ಗೊತ್ತಾಗಿದೆ. ಕಾಶ್ಮೀರದ ಯುವರಾಜ ಕರಣಸಿಂಗರು ಆ ಪ್ರಾಂತ ಚುನಾಯಿತ ಅಧಿಪತಿಯಾಗಲು ಅವರು ಒಪ್ಪಿಕೊಳ್ಳುವರೆಂದು ಹೇಳಲಾಗಿದೆ.

ಮೋಟಾರು ಅಪಘಾತದಲ್ಲಿ ತಲೆ ಕತ್ತರಿಸಲ್ಪಟ್ಟಿತು

ಅಸ್ಸಾಮಿನ ಡಿಬ್ರುಗಢ ನಗರದಲ್ಲಿ ವೇಗವಾಗಿ ಹೋಗುತ್ತಿದ್ದ ಲಾರಿಯಿಂದ ಕೆಳಗೆ ಹಾರಿದ ಒಂದು ದೊಡ್ಡ ಹಲಗೆಯು ಲಾರಿಯ ಪಕ್ಕದಲ್ಲಿ ರಭಸದಿಂದ ಬರುತ್ತಿದ್ದ ಮೋಟಾರು ಬೈಸಿಕಲ್ ಸವಾರನಿಗೆ ತಗುಲಿ ಅವನ ತಲೆಯನ್ನು ಕತ್ತರಿಸಿತೆಂದೂ, ತಲೆಯಿಲ್ಲದ ಮುಂಡದಿಂದಲೇ ಚಲಿಸಲ್ಪಡುತ್ತಿದ್ದ ಬೈಸಿಕಲ್ಲು ಸ್ವಲ್ಪ ದೂರದಲ್ಲಿ ಮಗುವನ್ನೆತ್ತಿಕೊಂಡು ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ಹೆಂಗಸಿಗೆ ಕೂಡ ಹೊಡೆಯಿತೆಂದೂ ವರದಿಯಾಗಿದೆ. ಬರೀ ಮುಂಡವೇ ಸೈಕಲ್ ನಡೆಸುತ್ತಿರುವುದನ್ನು ಕಂಡು ಲಾರಿ ಡ್ರೈವರನು ದಿಗ್ಭ್ರಾಂತನಾಗಿ ಕೂಡಲೇ ಸತ್ತುಹೋದನೆಂದೂ, ಲಾರಿಯು ಮನೆಯೊಂದಕ್ಕೆ ಡಿಕ್ಕಿ ಹೊಡೆದು ವಿಶೇಷ ನಷ್ಟವುಂಟು ಮಾಡಿತೆಂದೂ ತಿಳಿದುಬಂದಿದೆ.

ಜಯಪ್ರಕಾಶ ನಾರಾಯಣ್

ಜಯ ಪ್ರಕಾಶ್‌ರವರ ಉಪವಾಸ ಮುಕ್ತಾಯ

ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಆತ್ಮ ಶುದ್ಧಿಗಾಗಿ ಕೈಗೊಂಡಿದ್ದ ೨೧ ದಿನಗಳ ಉಪವಾಸ ವ್ರತವನ್ನು ಇಂದು ಬೆಳಿಗ್ಗೆ ೮ ಘಂಟೆಯಲ್ಲಿ ಮುಕ್ತಾಯಗೊಳಿಸಿದರು. ೨೧ ದಿವಸಗಳ ಉಪವಾಸದ ಪರಿಣಾಮವಾಗಿ ಅವರು ೧೭ ಪೌಂಡು ತೂಕವನ್ನು ಇಳಿದಿರುತ್ತಾರೆ. ಉಪವಾಸ ಕಾಲದಲ್ಲಿ ಅವರು ಪ್ರತಿದಿನ ೩ ಸೇರು ನೀರನ್ನು ನಿಂಬೆ ಉಪ್ಪು ಮತ್ತು ಸೋಡಾ ಬೈಕಾರ್ಬ್ ಲವಣಗಳನ್ನು ಮಾತ್ರ ಸೇವಿಸುತ್ತಿದ್ದರು.

ಬಂಗಾಳದಲ್ಲಿ ಪೆಟ್ರೋಲ್ ಗಣಿ

ಪಶ್ಚಿಮ ಬಂಗಾಳದ ಸುಂದರವನಗಳ ಪ್ರದೇಶದಲ್ಲಿ ಪೆಟ್ರೋಲು ಸಿಗುವುದೆಂದು ಅಮೆರಿಕದ ಸ್ಟಾಂಡರ್ಡ್ ಆಯಿಲ್ ಕಂಪೆನಿಯವರು ತಿಳಿಸಿರುತ್ತಾರೆ. ಭೂಮಿಯಿಂದ ಎಣ್ಣೆ ತೆಗೆಯುವ ಬಗ್ಗೆ ಸರ್ಕಾರದೊಡನೆ ಆ ಕಂಪೆನಿಯವರು ಸಂಧಾನ ನಡೆಸುತ್ತಿರುವರೆಂದು ಗೊತ್ತಾಗಿದೆ.

ಡಾ|| ಪೈರವರ ಗೌರವಾರ್ಥವಾಗಿ ಸತ್ಕಾರ ಕೂಟ

ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಮತ್ತು ಬ್ಯಾಂಕಿಂಗ್ ಸಿಂಡಿಕೇಟಿನ

ಸಂಸ್ಥಾನದ ವಿದ್ಯಾಭ್ಯಾಸದ ನೀತಿ

ಶಾಸನ ಸಭೆಯಲ್ಲಿ ಸಚಿವರ ವಿವರಣೆ

ಸ್ವಂ. ವಾ. ಪ್ರ.] ಬೆಂಗಳೂರು ೧೪

ಈ ದಿನ ಶಾಸನ ಸಭೆಯಲ್ಲಿ ೧ ಘಂಟೆ ಪ್ರಶ್ನೋತ್ತರಗಳಾದ ನಂತರ ಸಚಿವ ಎ. ಜಿ. ರಾಮಚಂದ್ರರಾಯರು ವಿದ್ಯಾಭ್ಯಾಸದ ಬಗ್ಗೆ ಸರ್ಕಾರದ ನೀತಿಯನ್ನು ವಿವರಿಸಿ ಹೇಳಿಕೆಯೊಂದನ್ನಿತ್ತರು.

ಆಹಾರ ಸಚಿವ ಸಿದ್ಧವೀರಪ್ಪನವರು ಮಾತನಾಡಿ ಮೈಸೂರು ನಗರದಲ್ಲಿ ಪಡಿತರವನ್ನು ರದ್ದುಗೊಳಿಸುವ ಬಗ್ಗೆ ಕೇಂದ್ರದ ಮಂಜೂರಾತಿಯನ್ನು ಕೇಳಲಾಗಿದೆಯೆಂದೂ, ಈಗಾಗಲೇ ಪಡಿತರ ರದ್ದು ಅಲ್ಲಿ ಜಾರಿಗೆ ಬಂದಂತೆಯೇ ಪರಿಗಣಿಸಲಾಗುವುದೆಂದೂ, ಈ ಬಗ್ಗೆ ಸದ್ಯದಲ್ಲೇ ಪ್ರಕಟನೆ ಹೊರಡಿಸುವುದಾಗಿಯೂ ತಿಳಿಸಿದರು.

ವಿದ್ಯಾಭ್ಯಾಸದ ಸುಧಾರಣೆ ಬಗ್ಗೆ ಅನೇಕ ವರದಿಗಳು ಸಿದ್ಧವಾಗಿರುವುವೆಂದೂ, ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲು ಈಗ ಕಾಲ ಸನ್ನಿಹಿತವಾಗಿರುವುದೆಂದೂ, ಪ್ರೈಮರಿ, ಪ್ರೌಢಶಾಲೆ, ಔದ್ಯೋಗಿಕ ಮತ್ತು ವ್ಯಾಯಾಮ ಶಿಕ್ಷಣಗಳಿಗೆ ಮುಖ್ಯ ಗಮನ ಕೊಡಬೇಕೆಂದೂ, ಇವೆಲ್ಲಕ್ಕೂ ಮುಖ್ಯವಾಗಿ ಉಪಾಧ್ಯಾಯರುಗಳಿಗೆ ಉತ್ತಮ ಸ್ಥಾನಮಾನ, ಸಂಬಳಗಳು ದೊರೆಯಬೇಕಾದುದು ಅಗತ್ಯವೆಂದೂ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಿದರು.

ಡಾ|| ಇಮಾಂರವರು ಸಚಿವರ ಹೇಳಿಕೆಯ ಬಗ್ಗೆ ಟೀಕೆ ಮಾಡಿ ಸರಿಯಾದ ವ್ಯವಸ್ಥಾಪಕ ಸಮಿತಿ ಯಾವ ಸುಧಾರಣೆಗೂ ಕೈಹಾಕುವುದು ಸರಿಯಲ್ಲವೆಂದೂ ವಿದ್ಯಾಭ್ಯಾಸವನ್ನು ಹಸ್ತು ವರ್ಗಗಳಿಗೆ ಪರಿಮಿತಗೊಳಿಸಬೇಕೆಂದೂ ತಿಳಿಸಿ ಪ್ರೈಮರಿ ವಿದ್ಯಾಭ್ಯಾಸವನ್ನು ಲೋಕಲ್ ಬೋರ್ಡುಗಳಿಗೆ ವಹಿಸಿ, ಮಾಧ್ಯಮಿಕ ಶಾಲೆಗಳನ್ನು ರದ್ದುಗೊಳಿಸಬೇಕೆಂದು ಸೂಚಿಸಿದರು. ಶ್ರೀ ಶಂಕರಲಿಂಗೇಗೌಡರು ಡಾ|| ಇಮಾಂರವರ ಸಲಹೆಯನ್ನು ಅನುಮೋದಿಸಿದರು.

ಸಚಿವರುಗಳಿಗೆ ಭತ್ಯ ಮತ್ತು ಸಂಬಳ

ಸಚಿವರ ಸಂಬಳ ಮತ್ತು ಭತ್ಯಗಳ ಮಸೂದೆಯ ಬಗ್ಗೆ ಪರಿಶೀಲನೆ ನಡೆಸಲು ನೇಮಿತವಾದ ಚುನಾಯಿತ ಸಮಿತಿಯು ವರದಿಯನ್ನು ಸಲ್ಲಿಸಿ ಇನ್ನು ಮುಂದೆ ಸಚಿವರು ವಿಮಾನ ಪ್ರಯಾಣ ಕೈಗೊಂಡ ಕಾಲದಲ್ಲಿ ವೆಚ್ಚದ ಒಂದೂವರೆಯಷ್ಟನ್ನು ಕೊಡಬಹುದೆಂದೂ, ಮುಖ್ಯ ಮಂತ್ರಿಗಳಿಗೆ ವರ್ಷಕ್ಕೆ ಆರು ಸಾವಿರಕ್ಕೆ ಬದಲು ಐದು ಸಾವಿರ ರೂ ಸಂಸ್ಥಾನದ ಅಲೋಯನ್ಸ್ ಮತ್ತು ಸಚಿವರುಗಳಿಗೆ ಮಾಹೆಯಾನಾ ಸಾವಿರ ರೂ ಗಳಿಗೆ ಬದಲು ೯೦೦ ರೂ ಸಂಬಳವನ್ನು ಕೊಡಬಹುದೆಂದು ಅಭಿಪ್ರಾಯಪಟ್ಟಿದೆ.

ಅಧ್ಯಕ್ಷರಾದ ಡಾ|| ಟಿ. ಎಂ. ಎ. ಪೈರವರ ಗೌರವಾರ್ಥವಾಗಿ ಆ ಸಂಸ್ಥೆಯ ಮೈಸೂರು ಶಾಖೆಯ ಏಜೆಂಟರಾದ ಶ್ರೀ ಬಿ. ಆರ್. ಭಂಡಾರ್‌ಕರ್‌ರವರು ಬ್ಯಾಂಕಿಂಗ್ ಕಟ್ಟಡದಲ್ಲಿ ನೆನ್ನೆ ಸಂಜೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು.

ಜಪಾನಿನಲ್ಲಿ ಪ್ರವಾಹದಿಂದ ೮೦ ಜನರ ಮರಣ

ಕಳೆದ ೮೦ ವರ್ಷಗಳಲ್ಲಿ ಅತ್ಯಂತ ಭಾರಿಯಾದ ಮಳೆಯು ಪಶ್ಚಿಮ ಮತ್ತು ಮಧ್ಯ ಜಪಾನುಗಳಲ್ಲಾಗಿ ಪ್ರವಾಹಗಳಲ್ಲಿ ೮೦ ಕ್ಕೂ ಹೆಚ್ಚು ಜನ ಮಡಿದಿರುವುದಾಗಿ ಗೊತ್ತಾಗಿದೆ ಸುಮಾರು ಅಷ್ಟೇ ಜನ ಪತ್ತೆಯಿಲ್ಲವಾಗಿರುತ್ತಾರೆ ರಸ್ತೆಗಳೂ, ಸೇತುವೆಗಳೂ ನಾಶವಾಗಿ, ಅನೇಕ ಕಡೆಗಳಲ್ಲಿ ಭತ್ತದ ಬೆಳೆಯು ಸಂಪೂರ್ಣವಾಗಿ ಕೊಚ್ಚಿಹೋಗಿರುವುದೆಂದು ವರದಿಯಾಗಿದೆ ಒಂದು ಕಡೆ ಜಲಾಶಯದ ಅಣೆಕಟ್ಟು ಒಡೆದು ೫೦ ಮಂದಿ ಸತ್ತಿರುವರು ಸಾವಿರಾರು ಮನೆಗಳು ನಾಶವಾಗಿವೆ

ಪಾದರಕ್ಷೆ ಪಾಲಿಷ್ ಮಾಡುವ ಪದವೀಧರರು

ನಾಗಪುರದ ಮಹಾ ವಿದ್ಯಾಲಯದ ಬಳಿ ಪದವೀಧರರಿಬ್ಬರು ಪಾದರಕ್ಷೆಗೆ ಪಾಲಿಷ್ ಮಾಡುವ ಉದ್ಯೋಗವನ್ನು ಹಿಡಿದಿರುವರೆಂದು ಗೊತ್ತಾಗಿದೆ ಇವರು ಕಾಮರ್ಸ್ ಪದವಿಗಳನ್ನು ಪಡೆದ ನಂತರ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡರೆಂದೂ ಅದರಿಂದ ಜೀವನ ನಡೆಸುವುದು ಕಷ್ಟವಾಗಿ ಕಂಡು ಬಂದುದರಿಂದ ಈ ಉದ್ಯೋಗಕ್ಕಿಳಿದಿರುವರೆಂದೂ ಹೇಳಲಾಗಿದೆ

ಶ್ರೀಮನ್ಮಹಾರಾಜರ ವರ್ಧಂತಿ ಉತ್ಸವ

ಒಂಟಿಕೊಪ್ಪಲಿನಲ್ಲಿರುವ ಭಾರತಿ ಸ್ತ್ರೀ ಸಮಾಜ ಮತ್ತು ಶಿಶುವಿಹಾರದವರು ಮೊನ್ನೆ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವನ್ನು ಆಚರಿಸಿ, ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೨೦ ಹೆಚ್ ಎಸ್ ಕೃಷ್ಣಮೂರ್ತಿ ವೀಣೆ ಮಧ್ಯಾಹ್ನ ೧-೩೦ ಕೇಳಲು. ಎ ಡಿ ಬಿ. ಹರೀಂದ್ರ ಹಿಂದೂಸ್ತಾನಿ ಸಂಗೀತ ಸಂಜೆ ೫.೩೦ ಹೆಚ್ ಆರ್ ರಾಧಾಕೃಷ್ಣ ಸಂಗೀತ ೭.೧೦ ಗಾನವಿಹಾರ ೭.೩೦ ಬಿ ಹರೀಂದ್ರ ಹಿಂದೂಸ್ತಾನಿ ಸಂಗೀತ ೮ ಹೆಚ್ ಎಸ್ ಕೃಷ್ಣಮೂರ್ತಿ ವೀಣೆ ೮.೩೦ ವೃಂದ ಸಂಗೀತ, ೯-೧೫ ವಿಜ್ಞಾನದ ನಡೆ ಬಗ್ಗೆ ಇಂಗ್ಲಿಷ್ ಭಾಷಣ ೯.೩೦ ಗಾನಾಮೃತ

ಶ್ರೀ ಜಗದಾಂಬಾ ಶಿಶುವಿಹಾರ ಸ್ಥಳ ಬದಲಾವಣೆ

ಇದುವರೆಗೆ ರಾಜಧಾನಿಯ ದಿವಾನರ ರಸ್ತೆಯ ೨೦೫ ನೇ ನಂಬರು ಮನೆಯಲ್ಲಿದ್ದ ಮೇಲ್ಕಂಡ ಶಿಶುವಿಹಾರವನ್ನು ಕಳೆದ ಗುರುವಾರದಿಂದ ಅದೇ ರಸ್ತೆಯಲ್ಲಿ ಸುಮಾರು ಅರ್ಧ ಫರ್ಲಾಂಗು ದಕ್ಷಿಣಕ್ಕಿರುವ ೫೩೮ ನೇ ನಂಬರಿನ ಮನೆಗೆ ವರ್ಗಾಯಿಸಲಾಗಿದೆ ಮಕ್ಕಳ ಮತ್ತು ಶಾಲಾ ಕಾರ್ಯಕಲಾಪಗಳ ಹಿತದೃಷ್ಟಿಯಿಂದ ಮೇಲ್ಕಂಡ ವಿಶಾಲವಾದ ಭವನಕ್ಕೆ ವರ್ಗಾಯಿಸಲಾಗಿದೆ ಎಂದಿನಂತೆ ಮಹಾ ಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಡಿ ಕೃಷ್ಣಮೂರ್ತಿ,
ಮ್ಯಾನೇಜರ್

ರೇಡಿಯೋಗಳಲ್ಲಿ ಚಲನ ಚಿತ್ರ ಸಂಗೀತವಿಲ್ಲ

ಆಲ್ ಇಂಡಿಯಾ ರೇಡಿಯೋಗಳಲ್ಲಿ ಫಿಲಂ ಸಂಗೀತದ ಕಾರ್ಯಕ್ರಮವನ್ನು ಇನ್ನಾರು ತಿಂಗಳೊಳಗೆ ತೆಗೆದುಹಾಕಿ ಅವುಗಳ ಬದಲು ಲಘು ಸಂಗೀತವನ್ನು ಏರ್ಪಡಿಸಲು ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ಗೊತ್ತಾಗಿದೆ ಫಿಲಂ ಸಂಗೀತವನ್ನು ಪ್ರಸಾರ ಮಾಡುವುದು ವ್ಯಾಪಾರ ಜಾಹಿರಾತಾಗುವುದೆಂದೂ, ಹಲವು ಫಿಲಂಗಳ ಗಾನವು ತುಂಬಾ ಕೀಳಾಗಿದ್ದು ಅವುಗಳನ್ನು ಕೇಳುವವರ ಮೇಲೆ ಅನೀತಿಯ ಪ್ರಭಾವವನ್ನುಂಟು ಮಾಡುವುದೆಂದೂ ಸರ್ಕಾರದವರು ಭಾವಿಸಿರುತ್ತಾರೆ ಫಿಲಂ ರಿಕಾರ್ಡುಗಳ ಕೊಳ್ಳುವಿಕೆಯನ್ನು ನಿಲ್ಲಿಸುವಂತೆ ಈಗಾಗಲೇ ಸೂಚಿಸಲಾಗಿದೆ

ಕುಡಿಯುವ ನೀರಿಗಾಗಿ ಕೊಲೆ

ರಂಗೂನಿಗೆ ಸರಬರಾಜಾಗುವ ನೀರಿನ ಭಾರಿ ಕೊಳವೆಯನ್ನು ಬರ್ಮಾದ ರೆಬೆಲರು ಮತ್ತೆ ಕತ್ತರಿಸಿಹಾಕಿರುವುದರಿಂದ, ಶಹರದಲ್ಲಿ ನೀರಿನ ಅಭಾವವುಂಟಾಗಿ [illegible] ಒತ್ತಟ್ಟಿಗೆ [illegible] ಜಗಳವಾಡುತ್ತಿದ್ದಾರೆ ನೀರಿಗಾಗಿ ಜನರ ಹೊಡೆದಾಟಗಳು ಆಗಿ ಒಂದು ಕಡೆ ಒಬ್ಬ [illegible] ವ್ಯಕ್ತಿಯನ್ನು ಮತ್ತೊಬ್ಬನು [illegible] ಕೊಂದನೆಂದೂ ಹೇಳಲಾಗಿದೆ

ಕಥಾಲೋಕ

ಸಣ್ಣ ಕತೆಗಳಿಗಾಗಿಯೇ ಮೀಸಲಾಗಿರುವ
ಮಾಸಪತ್ರಿಕೆ
ಮೊದಲನೆಯ ಸಂಚಿಕೆ
೧೯೫೨ ಆಗಸ್ಟ್ ೧೫
ಪ್ರಕಟವಾಗುವುದು
ಲೇಖಕ ಲೇಖಕಿಯರು ತಮ್ಮ
ಲೇಖನಗಳನ್ನು
ಕಥಾ ಲೋಕ ಕಾರ್ಯಾಲಯ,
ಯುನೈಟೆಡ್ ಪ್ರಿಂಟರ್ಸ್,
ರಾಮವಿಲಾಸ ರಸ್ತೆ, ಮೈಸೂರು
ಇವರಲ್ಲಿಗೆ ದಯೆಯಿಟ್ಟು ಕಳುಹಿಸಬೇಕಾಗಿ ವಿನಂತಿ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು

ಮೊದಲು ನ್ಯಾಯಾಧೀಶರಿಗೆ ನಂತರ ದೇವರಿಗೆ ಪದ್ಯಗಳ ಅರ್ಪಣೆ

ಬರುವ ಗಣೇಶನ ಹಬ್ಬದ ಕಾಲದಲ್ಲಿ ದೇವರ ಬಗ್ಗೆ ರಚಿಸಲಾಗುವ ಕವನಗಳು, ಶ್ಲೋಕಗಳು ಮತ್ತು ಇತರ ಕೃತಿಗಳನ್ನು ಮೊದಲು ನ್ಯಾಯಾಧೀಶರಿಗೆ ತೋರಿಸಿ ನಂತರ ದೇವರಿಗೆ ಅರ್ಪಿಸಬೇಕೆಂಬ ಆಜ್ಞೆಯನ್ನು ಪೂನಾದಲ್ಲಿ ಮಾಡಲಾಗಿದೆ ವಿವಿಧ ಕೋಮು ಮತ್ತು ರಾಜಕೀಯ ಪಂಗಡಗಳಲ್ಲಿ ವೈಷಮ್ಯ ತರುವ ಗೀತೆಗಳನ್ನು ನಿಷೇಧಿಸುವ ಉದ್ದೇಶದಿಂದ ಮೇಲ್ಕಂಡ ಆಜ್ಞೆಯನ್ನು ಹೊರಡಿಸಲಾಗಿದೆ.

ರೈಲು ಇಂಜಿನ್ನಿನೊಡನೆ ಎಮ್ಮೆಯ ಕಾಳಗ

ಹೌರಾ-ದಿನಪುರ ಪ್ಯಾಸೆಂಜರ್ ರೈಲು ಗಾಡಿಯನ್ನು ಒಂದು ಎಮ್ಮೆಯು ಅರ್ಧ ಗಂಟೆ ಕಾಲ ತಡೆದು ನಿಲ್ಲಿಸಿದ ಪ್ರಸಂಗವು ವರದಿಯಾಗಿದೆ ರೈಲು ಕಂಬಿ ಮಧ್ಯೆ ನಿಂತಿದ್ದ ಅದು ಸ್ಥಳ ಬಿಟ್ಟು ಕದಲದೆ ಇಂಜನ್ನನ್ನು ಗುದ್ದಿ [illegible] ರೈಲು ಇದರಿಂದ ನಿಲ್ಲಬೇಕಾಯಿತೆಂದೂ, [illegible] ಅವರ [illegible] ಓಡುಹೋದರೂ ಅದು ಜಗ್ಗಲಿಲ್ಲ [illegible] ರೈಲನ್ನು [illegible] ಗೆದ್ದ [illegible]

SRI GANESH
TALKIES
From 15-7-52 For 2 Days
MADNESS OF THE HEART
With - Margaret Lockheart and Maxwell Reed

ಸೇಲ್ಸ್‌ಮನ್ ಬೇಕು

ನಮ್ಮ ಸುಪ್ರಸಿದ್ಧ "ವಾಸು" ಸ್ಪೆಷಲ್ ಊದುಬತ್ತಿಗಳನ್ನು ಕಮಿಷನ್ ಅಥವಾ ಸಂಬಳದ ಮೇಲೆ ಮಾರಾಟ ಮಾಡುವ ಟ್ರಾವಲಿಂಗ್ ಸೇಲ್ಸ್ ಮೆನ್ ಬೇಕಾಗಿದ್ದಾರೆ

ಎಸ್. ರಂಗರಾವ್ ಅಂಡ್ ಸನ್ಸ್,
1105 ನಾರಾಯಣಶಾಸ್ತ್ರಿ ರಸ್ತೆ
ಶಿವರಾಂಪೇಟೆ ಮೈಸೂರು

ON COMMISSION SALE

At **ABIDS**, Statue Square, Mysore

1 **MOTOR CYCLE** New Hudson 1939 model 4.5 H P Rs 350
2 **GUN** 12 bore D B B L Hammer WARD & SONS Birmingham England Rs 300
3 **G E C.** Elect OVEN with Grill A C- D C perfect condition Rs 350
4 **FURNITURE** a) Wooden & Iron Child's cots with & without mattress Rs. 75 & 35 respectively
b) Rosewood Rexine covered spring cusshioned Sofa suite in three pieces Rs 175
c) Rosewood arm & armless chairs ranging from Rs 12/— to Rs 35
d) Rosewood & Teakwood Tables ranging from Rs 35/ to Rs 150

ಅಫ್ಘಾನಿಸ್ತಾನ ಪಾಕಿಸ್ತಾನಗಳಿಗೆ ಬಿಕ್ಕಟ್ಟು

ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನಗಳ ನಡುವೆ ಬಿಕ್ಕಟ್ಟು ಹೆಚ್ಚುತ್ತಿರುವುದೆಂದು ಗೊತ್ತಾಗಿದೆ ಕಾಬೂಲಿಗೆ ಪಾಕಿಸ್ತಾನದ ರಾಯಭಾರಿಯನ್ನು ಕಳುಹಿಸುವುದನ್ನು ತಡಮಾಡುವ ವಿಷಯವು ಪಾಕಿಸ್ತಾನದ ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಹೇಳಲಾಗಿದೆ

ಹರಿಕಥೆ

ಮೈಸೂರು ಅಶೋಕ ರೋಡು ಸೆಂಟ್ರಲ್ ಕಛೇರಿ ಮುಂಭಾಗದಲ್ಲಿರುವ ಶ್ರೀ ಮಹಾದೇವಸ್ವಾಮಿ ದೇವಾಲಯದಲ್ಲಿ 'ವರ್ತಮಾನ' ಪತ್ರಿಕೆ ಸಂಪಾದಕರಾದ ಶ್ರೀ ಎಂ ಎಸ್ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಶ್ರೀ ಎ. ಸಿ ಬಾಲಾಜಿ ಕೃಷ್ಣದಾಸರಿಂದ [illegible]ಕಾಂಗಿ ಎಂಬ ಹರಿಕಥೆಯು. ಶ್ರೀ ಸಾಯಿಬಾಬಾ ವಾದ್ಯಗೋಷ್ಠಿಯೊಂದಿಗೆ ನಡೆಸಲ್ಪಡುತ್ತೆ.

ನಗರಾಭಿವೃದ್ಧಿ ಸಮಿತಿ

ತಾ|| —7—1952

ಮಾದರಿ ಮನೆಗಳ ಮಾರಾಟ ಪ್ರಕಟಣೆ

ಇದರಿಂದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ

ಮೈಸೂರು ಸಿಟಿ [illegible] ಪೂರ್ವ ದಿಕ್ಕಿನಲ್ಲಿರುವ ಸರಸ್ವತೀಪುರದ ಬಡಾವಣೆಯಲ್ಲಿ ಕಟ್ಟಿರುವ ಮನೆಗಳ ಪೈಕಿ ೨೩ ಮಾದರಿ ಮನೆಗಳ ವಿಕ್ರಯ ಬಗ್ಗೆ 23-7-52 ನೇ ಸೋಮವಾರ ಮಧ್ಯಾಹ್ನ 4 ಘಂಟೆ ವರೆಗೆ 200|- ರೂಪಾಯಿ ಠೇವಣಿ ಸಮೇತ ಮೈಸೂರು ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತೆ ಮನೆ ಮಂಜೂರಾಗದ ಅರ್ಜಿದಾರರಿಗೆ ಠೇವಣಿ ಮೊಬಲಗು ವಾಪಸ್ಸು ಮಾಡಲಾಗುತ್ತದೆ ಪ್ರತಿ ಮನೆ ಬೆಲೆ ಕೆಳಗೆ ವಿವರಿಸಿರುವಂತೆ 4800 ರೂಪಾಯಿ ಲಾಗಾಯ್ತು 5500 ರೂಪಾಯಿಗಳು ಮಂಜೂರಾದ ಅರ್ಜಿದಾರರು ತಮಗೆ ತಿಳಿಸಿದ ಕೂಡಲೆ [illegible] ತಿಂಗಳಲ್ಲಿ ತಮಗೆ ಕೊಟ್ಟ ಮನೆ ಬೆಲೆಯ ಅರ್ಧ ಭಾಗವನ್ನು ಪಾವತಿ ಮಾಡಬೇಕು ಉಳಿದ ಅರ್ಧ ಭಾಗವನ್ನು 48 ಸಮನಾದ ಮಾಸಿಕ ಕಂತುಗಳಲ್ಲಿ ಶೇ 6½ ಬಡ್ಡಿ ಸಮೇತ ಕೊಡಲು ವಿಧಾಯಕವಾದ ಕರಾರು ಬರೆದುಕೊಟ್ಟು ಮನೆ ಸ್ವಾಧೀನ ಪಡೆಯತಕ್ಕದ್ದು ತಪ್ಪಿದಲ್ಲಿ ಠೇವಣಿ ಮೊಬಲಗನ್ನು ಕಳೆದುಕೊಳ್ಳಬೇಕಾಗುತ್ತದೆ ಠೇವಣಿ ಇಲ್ಲದ ಮತ್ತು ನಿಗದಿಯಾದ ನಮೂನೆಯಲ್ಲಿಲ್ಲದ ಅರ್ಜಿಗಳಿಗೆ ಗಮನ ಕೊಡಲಾಗುವುದಿಲ್ಲ. ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ಎಸ್. ರಂಗಣ್ಣ,
ಅಧ್ಯಕ್ಷರು

ಪಶ್ಚಿಮದ ಕಡೆ ಇರುವ
3 ಕೊನೆ ಮನೆಗಳು ತಲಾ 4900-0-0
ಪೂರ್ವದ ಕಡೆಯ 3
ಕೊನೆ ಮನೆಗಳು 5000-0-0
ಪಾರ್ಕ್ ಎದುರಿಗಿರುವ
ಪೂರ್ವ ಭಾಗದ ಮನೆ [illegible]00-0-0
ಉಳಿದ 16 ಮನೆಗಳು ತಲಾ 4800-0-0

Edited, Printed and Published by A. R. Nagarajan at Sadhvi Press D. Subbiah Road, Mysore

ಸೊಸೈಟಿ ಡೈರೆಕ್ಟರರ ವಜಾ

ಮೈಸೂರು ೧೫

ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳಾದ ಶ್ರೀಗಳು ಟಿ ಎಸ್ ರಾಜಗೋಪಾಲಯ್ಯಂಗಾರ್, ಜಿ ವಿ ದೇವರಾಜಾಚಾರ್, ಜಿ. ಎಸ್ ಚಕ್ರವರ್ತಿ ಮತ್ತು ಬಿ ಎಸ್ ಗುರುಕೃಷ್ಣನವರು ನಿಯಮಿತ ಪ್ರಮಾಣಕ್ಕಿಂತ ಹೆಚ್ಚು ಸಾಲವನ್ನು ಪಡೆದುಕೊಂಡಿದ್ದರೆಂಬ ಕಾರಣದ ಮೇಲೆ ಕಾನೂನು ಪ್ರಕಾರ ತಮ್ಮ ಡೈರೆಕ್ಟರ್ ಸ್ಥಾನವನ್ನು ಕಳೆದುಕೊಂಡಿರುವರೆಂದು ತಿಳಿದುಬಂದಿದೆ. ಡೈರೆಕ್ಟರುಗಳು ಸ್ವಂತವಾಗಿಯಾಗಲಿ ಜಂಟಿಯಾಗಿಯಾಗಲಿ ಯಾವ ಸಾಲವನ್ನೂ ಪಡೆಯಕೂಡದೆಂದೂ, ಹೆಚ್ಚೆಂದರೆ ಮೊಬಲಗಿನ ಶೇ|| ೫೦ ರಷ್ಟಕ್ಕೆ ಮೀರದಂತೆ ಮಾತ್ರ ಅಲ್ಪಾವಧಿ ಸಾಲವನ್ನು ಪಡೆಯಬಹುದೆಂದೂ ಉಪನಿಯಮವಿರುತ್ತದೆ. ಇವರುಗಳು ಈ ಪರಿಮಿತಿಗೆ ಮೀರಿ ಅಲ್ಪಾವಧಿ ಸಾಲವನ್ನು ತೆಗೆದುಕೊಂಡಿದ್ದರೆಂದೂ ಈ ಕಾರಣದಿಂದ ಇವರನ್ನು ಆ ಸ್ಥಾನಗಳಿಂದ ತೆಗೆದುಹಾಕಲಾಗಿದೆಯೆಂದೂ ಗೊತ್ತಾಗಿದೆ

ಕಾಂಗ್ರೆಸ್ ಚುನಾವಣಾಧಿಕಾರಿಗಳು

ಪೌರ ಸಭಾ ಸದಸ್ಯರಾದ ಶ್ರೀ ಎಸ್ ಗಣ್ಣನವರನ್ನು ನಗರ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯ ಚುನಾವಣೆಗಳ ಸಂಬಂಧವಾಗಿ ಚುನಾವಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಸ್ಪರ್ಧಿಸಬಯಸುವವರು ೯ ತಾ|| ಮಧ್ಯಾಹ್ನ ೩ ಘಂಟೆಯೊಳಗಾಗಿ ರೂ ೧ ರೊಡನೆ ಅರ್ಜಿಯನ್ನು ಕೊಡಬೇಕೆಂದು ಸೂಚಿಸಲಾಗಿದೆ

ವಾರ್ಷಿಕೋತ್ಸವ

ಜಯಚಾಮರಾಜೇಂದ್ರ ರಾತ್ರಿಶಾಲೆಯ ೬ ನೇ ವಾರ್ಷಿಕೋತ್ಸವ ಕೃಷ್ಣರಾಜಸಾಗರದಲ್ಲಿ ಕಳೆದ ೧೨ ನೇ ತಾ|| ನಡೆಯಿತು. ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಎಂ ಶಂಕರಯ್ಯನವರು ಅಧ್ಯಕ್ಷತೆ ವಹಿಸಿದ್ದರು

ದ|| ಆಫ್ರಿಕಾ ಸತ್ಯಾಗ್ರಹಿಗಳ ಮೇಲೆ ಕ್ರೂರ ಶಾಸನ

ದಕ್ಷಿಣ ಆಫ್ರಿಕದಲ್ಲಿ ನಡೆಯುತ್ತಿರುವ ವರ್ಣಭೇದ ಶಾಸನದ ವಿರುದ್ಧ ಸತ್ಯಾಗ್ರಹ ಮಾಡಿರುವ ನಾಯಕರ ಮೇಲೆ ತೀವ್ರವಾದ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ, ಅಲ್ಲಿನ ಪ್ರತ್ಯೇಕತಾ ಶಾಸನದ ವಿರುದ್ಧವಾಗಿ ಆಗುತ್ತಿರುವ ಚಳುವಳಿಯನ್ನು ಮೆಟ್ಟಿ ಹಾಕಲು ಅವರ ಮೇಲೆ ಭಾರಿ ಸಿಕ್ಷೆ ಮೊಕದ್ದಮೆಯನ್ನು ಹೂಡಲಾಗುವುದೆಂದೂ ವರದಿಯಾಗಿದೆ

ದೇವರ ನಾಮಗಳ ಕೀರ್ತನೆ

ಮೈಸೂರು ೧೫

ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಶ್ರೀಪಾದಪುತ್ರರಾದ ಶ್ರೀ ರಾಜಾ ಗುರುರಾಜಾಚಾರ್ಯರವರು ಸ್ವತಃ ರಚಿಸಿರುವ ಕೀರ್ತನೆಗಳು ಮತ್ತು ದಾಸರ ಪದಗಳನ್ನು ಈ ರಾತ್ರಿ ೭-೩೦ ಘಂಟೆಗೆ ಸಾಧ್ವಿ ಕಾರ್ಯಾಲಯ ಕಛೇರಿ ಮಹಡಿ ಮೇಲೆ ಹಾಡುವರು. ಸರ್ವರಿಗೂ ಸ್ವಾಗತವುಂಟು

ಟೆಲಿಫೋನ್ ನಂ. 792 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಂಪುಟ ೧೦] ಮಂಗಳವಾರ ೧೫-೭-೫೨ [ಸಂಚಿಕೆ ೩೧೮

ಮೈಸೂರಿನ ಆರ್ಥಿಕ ಒಪ್ಪಂದದ ವಿಮರ್ಶೆ?

ಸಂಸ್ಥಾನದ ಹಣಕಾಸಿನ ವಿಲೀನೀಕರಣದ ಪ್ರಶ್ನೆ

ಒಪ್ಪಂದದ ಪುನರ್ವಿಮರ್ಶೆಗಾಗಿ ಕೇಂದ್ರಕ್ಕೆ ಅರಿಕೆ

ಬೆಂಗಳೂರು ೧೫

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಶ್ರೀ ಹೆಚ್ ಸಿ ಲಿಂಗಾರೆಡ್ಡಿಯವರ ಪ್ರಶ್ನೆಗೆ ಉತ್ತರವಿತ್ತು, ಕೇಂದ್ರದೊಡನೆ ಮೈಸೂರು ಸರ್ಕಾರದವರು ಮಾಡಿಕೊಂಡ ಹಣಕಾಸಿನ ವಿಲೀನೀಕರಣದ ಒಪ್ಪಂದದಿಂದ ಸಂಸ್ಥಾನದ ೧೫ ಇಲಾಖೆಗಳು ಕೇಂದ್ರ ಸರ್ಕಾರಕ್ಕೆ ಒಪ್ಪಿಸಲ್ಪಟ್ಟು ಸಂಸ್ಥಾನದ ಆದಾಯವು ಬಹುಮಟ್ಟಿಗೆ ಕಡಿಮೆಯಾಗಿರುವುದೆಂದೂ, ಸದರಿ ಒಡಂಬಡಿಕೆಯನ್ನು ಪುನರ್ವಿಮರ್ಶಿಸುವ ಆಗತ್ಯವನ್ನು ಕೇಂದ್ರ ಹಣಕಾಸಿನ ಸಮಿತಿಗೆ ಅರಿಕೆ ಮಾಡಿಕೊಳ್ಳಲಾಗಿದೆಯೆಂದೂ ತಿಳಿಸಿದರು. ಈ ಒಪ್ಪಂದದ ಪ್ರಕಾರ ಕೇಂದ್ರದಿಂದ ಮೈಸೂರು ಸರ್ಕಾರಕ್ಕೆ ೩೫೦ ಲಕ್ಷ ರೂ ವರ್ಷಂಪ್ರತಿ ಗ್ರಾಂಟು ಬರುತ್ತಿರುವುದೆಂದು ಅವರು ವಿವರಿಸಿದರು

ಸಂಸ್ಥಾನದಲ್ಲಿ ಸರ್ಕಾರದವರ ಕೈಕೆಳಗೆ ನಡೆಸಲ್ಪಡುತ್ತಿರುವ ೧೦ ಕೈಗಾರಿಕೆಗಳ ಪೈಕಿ ಆ ಕಾರ್ಖಾನೆಗಳಲ್ಲಿ ಲಾಭ ಬರುತ್ತಿರುವುದೆಂದೂ, ಒಟ್ಟು ಕಾರ್ಖಾನೆಗಳನ್ನು ಅವುಗಳ ಮೇಲೆ ಒಂದು ಬಾಳ ಹಾಕಲಾಗಿದೆಯೆಂದೂ, ಸರ್ಕಾರದವರು ಖಾಸಗೀ ಉದ್ಯಮಿಗಳಿಗೆ ಹಲವು ಕೈಗಾರಿಕೆಗಳನ್ನು ವಹಿಸಿಕೊಡಲು ಆಲೋಚಿಸುತ್ತಿರುವರೆಂದೂ, ಆದರೆ ಅವುಗಳನ್ನು ಈಗಲೇ ವಹಿಸಿಕೊಡುವ ಪರಿಸ್ಥಿತಿಯಿಲ್ಲವೆಂದೂ ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

○ ಬಿಹಾರ್ ಪ್ರಾಂತದ ಒಬ್ಬ ರೈತನು ಈಚೆಗೆ ದಿನಸ್ಸು ಹುಲ್ಲು ತರಲು ಹೋಗಿದ್ದಾಗ ೩ ಕರಡಿಗಳು ಅವನ ಮೈಮೇಲೆ ಬಿದ್ದವೆಂದೂ, ಜನಗಳೊಡನೆ ಹೋರಾಡಿ ಓಡಿಸಿದನೆಂದೂ ಗೊತ್ತಾಗಿದೆ. ಜನರಿಗೆ ತುಂಬಾ ಪೆಟ್ಟು ಬಿದ್ದುದರಿಂದ ಮೂರ್ಛೆ ಹೋಗಿದ್ದನೆಂದೂ, ಅವನನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ಹೇಳಲಾಗಿದೆ

ಲಂಚ ನಿರೋಧದ ಇಲಾಖೆ ರದ್ದು

ಸರ್ಕಾರದ ಪರ್ಯಾಲೋಚನೆಯಲ್ಲಿ ಇರುವುದಾಗಿ ಸಚಿವರ ಹೇಳಿಕೆ

[ಸಂ ಸು ಪ್ರೊ] ಬೆಂಗಳೂರು ೧೫

ಶಾಸನಸಭೆಯಲ್ಲಿ ಈ ದಿನ ಪ್ರಶ್ನೋತ್ತರಗಳಕಾಲದಲ್ಲಿ ಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರು ಮಾತನಾಡಿ, ಲಂಚದ ಸಂಬಂಧದ ೧ ಎಷ್ಟು ಜನ ನೌಕರರ ಹೆಸರುಗಳನ್ನು ಪಟ್ಟಿ ಮಾಡಿದೆಯೆಂಬುವನ್ನು ತಿಳಿಸಲಿ ಸಾಧ್ಯವಿಲ್ಲವೆಂದೂ, ಆಗ ಸಬ್‌ಜುಡೀಸ್ ಆಗುವುದೆಂದೂ, ಹಲವು ಅಧಿಕಾರಿಗಳ ನಂಬಿಕೆ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಹೆಸರುಗಳನ್ನು ಪ್ರಕಟಿಸುವುದಿಲ್ಲವೆಂದೂ ಹೇಳಿದರು

ಈಗಾಗಲೇ ಚಾರ್ಜ್ ಹೊರಿಸಲಾಗಿರುವ ಹಲವು ಅಧಿಕಾರಿಗಳ ನಡವಳಿಕೆ ಬಗ್ಗೆ ಪುನರ್ವಿಮರ್ಶೆ ಮಾಡಲಾಗಿರುವುದೆಂದೂ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವ ಉದ್ದೇಶದಿಂದ ಈ ಇಲಾಖೆಯನ್ನು ವಜಾ ಮಾಡುವ ವಿಷಯವೂ ಸಹ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದೂ ಅವರು ಹೇಳಿದರು. ಹಲವು ಅಪಾದನೆಗಳನ್ನು ನ್ಯಾಯಾಸ್ಥಾನಗಳ ಮುಂದೆಯೂ ತರುವುದಾಗಿ ತಿಳಿಸಿದರು. ಅವರೊಬ್ಬರಿಂದಲೇ ಬಂದಿದ್ದ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರ ಮೇಲೆ ದೂರುಗಳು ಬಂದಿದ್ದುವೇ ಎಂದು ಪ್ರಶ್ನಿಸಲಾಗಿ ನೋಟೀಸು ಬೇಕು ಎಂದು ತಿಳಿಸಲಾಯಿತು

ಆಸ್ಪತ್ರೆ ಕೆಲಸಗಾರರ ಕುಂದುಕೊರತೆಗಳು

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಕೆಲಸಗಾರರೆಲ್ಲರೂ ಕಳೆದ ಗುರುವಾರ ಸಭೆ ಸೇರಿ ಅಸಿಸ್ಟೆಂಟ್ ಮೇಟ್ರನ್‌ರವರಿಂದ ತಮಗೆ ಉಂಟಾಗುತ್ತಿರುವ ತೊಂದರೆ ಮತ್ತು ಕಿರುಕುಳಗಳನ್ನು ಕುರಿತು ಸಮಾಲೋಚನೆ ನಡೆಸಿದರು. ಸಭೆಗೆ ರೆಸಿಡೆಂಟ್ ಮೆಡಿಕಲ್ ಆಫೀಸರ್ ಶ್ರೀ|| ರಾಜಣ್ಣನವರೂ, ನರ್ಸಿಂಗ್ ಸೂಪರಿಂಟೆಂಡೆಂಟರೂ, ದಯಮಾಡಿಸಿ, ಕೆಲಸಗಾರರ ಕುಂದುಕೊರತೆಗಳನ್ನು ಸಾವಧಾನವಾಗಿ ವಿಚಾರಿಸಿ, ಅವನ್ನು ಪರಿಹರಿಸುವುದಾಗಿ ಹೇಳಿ ಸೂಕ್ತ ಭರವಸೆಯನ್ನಿತ್ತರೆಂದು ತಿಳಿದುಬಂದಿದೆ.

ಲಂಚ ಕೊಡುವುದು ಅಪರಾಧವೆಂದು ಶಾಸನ

ಕ್ರಿಮಿನಲ್ ಲಾ ಶಾಸನದ ತಿದ್ದುಪಡಿ ಮಸೂದೆಯು ಭಾರತ ಪಾರ್ಲಿಮೆಂಟಿನಲ್ಲಿ ಕಳೆದ ಮೂರು ದಿನಗಳಲ್ಲಿ ಚರ್ಚಿಸಲ್ಪಟ್ಟಿತು. ಲಂಚ ಕೊಡುವುದನ್ನು ಅಪರಾಧವೆಂದು ಶಾಸನ ಮಾಡಲು ಮಸೂದೆಯಲ್ಲಿ ನಿಬಂಧನೆಗಳನ್ನು ಸೇರಿಸಲಾಗಿದೆ. ಸಾಮಾನ್ಯ ಜನರು ಪ್ರಯೋಜನಗಳ ಒತ್ತಾಯಕ್ಕೆ ಸಿಕ್ಕಿ ಹಣ ಕೊಡುವುದಕ್ಕೂ, ವ್ಯಾಪಾರಿಗಳು ಕೊಡುವುದಕ್ಕೂ ವ್ಯತ್ಯಾಸವಿರಬೇಕೆಂದು ಹಲವು ಸದಸ್ಯರು ವಾದಿಸಿದರು. ಗೃಹ ಮಂತ್ರಿ ಕಟ್ಜುರವರು ಮಾತನಾಡಿ, ಸಣ್ಣವರ ಗೊಡವೆಗೆ ಹೋಗುವ ಉದ್ದೇಶವಿಲ್ಲವೆಂದೂ, ಅನ್ಯಾಯದ ಲಾಭಗಳಿಸಲು ಅಧಿಕಾರಿಗಳನ್ನು "ಪ್ರೇರಿಸುವ" ದೊಡ್ಡವರನ್ನು ಹಿಡಿಯಲಾಗುವುದೆಂದೂ ತಿಳಿಸಿ, ಅಂತಹವರನ್ನು ಕುದುರೆ ಚಾವಟಿಯಿಂದ ಹೊಡೆಯಬೇಕೆಂದು ಅಭಿಪ್ರಾಯಪಟ್ಟರು. ಲಂಚ ಪಡೆಯುವವರಿಗೆ ಇರುವ ಶಿಕ್ಷೆಯ ಅವಧಿಯನ್ನು ೩ ರಿಂದ ೭ ವರ್ಷಕ್ಕೆ ಹೆಚ್ಚಿಸಲಾಗುವುದು

ಎರಡು ತಲೆಯ ಶಿಶು

ಹಾಂಗ್ ಕಾಂಗಿನ ರೈತರ ಹೆಂಗಸೊಬ್ಬಳಿಗೆ ೨ ತಲೆಗಳುಳ್ಳ ಶಿಶುವೊಂದು ಜನಿಸಿದೆಯೆಂದೂ ಅದರ ೨ ಕೈಗಳಲ್ಲೂ, ತಲಾ ೧೦ ಬೆರಳುಗಳಿರುವುವೆಂದೂ, ೨ ತಲೆಗಳ ಪೈಕಿ ಒಂದರಲ್ಲಿ ಬಾಯಿನ ಅರ್ಧಭಾಗ ಮಾತ್ರ ಇದ್ದು ಇನ್ನೊಂದು ತಲೆಯಲ್ಲಿ ಕೂದಲಾಗಲೀ ಕಣ್ಣಾಗಲೀ ಇಲ್ಲವೆಂದೂ ವರದಿಯಾಗಿದೆ. ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿರುವರು

ಚುನಾವಣಾ ಮೊಕದ್ದಮೆ ನ್ಯಾಯಾಧೀಶರುಗಳು

ಮೈಸೂರು ಹಿರಿಯ ಶಾಸನ ಸಭೆಗೆ ಚನ್ನರಾಯಪಟ್ಟಣದ ತಾಲ್ಲೂಕಿನಿಂದ ಶ್ರೀ ಕೆ ಲಕ್ಕಪ್ಪನವರು ಮತ್ತು ಪಿರಿಯಾಪಟ್ಟಣದಿಂದ ಶ್ರೀ ಎಸ್ ಎಂ. ಮರಿಯಪ್ಪನವರು ಚುನಾಯಿತರಾದ ಬಗ್ಗೆ ಆಕ್ಷೇಪಣೆಯನ್ನಿತ್ತ ಚನ್ನರಾಯಪಟ್ಟಣದ ಶ್ರೀ ಎಸ್ ಜಿ. ನರಸಿಂಹೇಗೌಡ ಮತ್ತು ಪಿರಿಯಾಪಟ್ಟಣದ ಶ್ರೀ ಶಂಕರೇಗೌಡ ಇವರುಗಳು ಹೂಡಿರುವ ಮೊಕದ್ದಮೆಗಳಲ್ಲಿ ವಿಚಾರಣೆ ನಡೆಸಲು ಮೈಸೂರು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ವಿ ಕಂದಸ್ವಾಮಿ ಪಿಳ್ಳೆಯವರು ಅಧ್ಯಕ್ಷರಾಗಿಯೂ, ಬೆಂಗಳೂರು ಅ|| ಜಿಲ್ಲಾ ನ್ಯಾಯಾಧೀಶ ಶ್ರೀ ಹೆಚ್ ಹೊಂಬೇಗೌಡ ಮತ್ತು ವಕೀಲರು ಜ|| ಮಿರ್ ಇಕ್ಬಾಲ್ ಹುಸೇನರವರು ಸದಸ್ಯರಾಗಿಯೂ ಇರುವ ನ್ಯಾಯಮಂಡಲವನ್ನು ನಿರ್ಮಿಸಲಾಗಿದೆ. ಬೆಂಗಳೂರಿನಲ್ಲಿ ನ್ಯಾಯಾಸ್ಥಾನವು ಸೇರುವುದು

○ ಈ ತಿಂಗಳು ೩೧ ನೇ ತಾರೀಖಿನೊಳಗೆ ಫ್ರೆಂಚರು ದಕ್ಷಿಣ ಭಾರತದಲ್ಲಿರುವ ತಮ್ಮ ವಸಾಹತುಗಳನ್ನು ತ್ಯಜಿಸುವ ಸೂಚನೆ ಕಾಣಬರದಿದ್ದಲ್ಲಿ ಮುಂದಿನ ತಿಂಗಳಿಂದ ಶಾಂತಿಯುತವಾದ ಸತ್ಯಾಗ್ರಹವನ್ನು ಆಚರಿಸಲಿರುವುದಾಗಿ ಕಾರೈಕಲ್ಲಿನ ರಾಷ್ಟ್ರೀಯ ಯುವಕ ಕಾಂಗ್ರೆಸ್ಸಿನವರು ಫ್ರಾನ್ಸ್ ಸರ್ಕಾರಕ್ಕೆ ಎಚ್ಚರಿಕೆಯನ್ನಿತ್ತಿರುವರು.

ರಾಘವೇಂದ್ರ ಮತ್ತು ವ್ಯಾಸ ರಾಜ ಗುರುಗಳ ಭೇಟಿ

ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠಾಧೀಶರಾದ ಶ್ರೀ ಸುಶಮೀಂದ್ರ ತೀರ್ಥ ಶ್ರೀಪಾದಂಗಳವರು ೩ ನೇ ತಾ|| ಸೋಸಲೆಗೆ ಚಿತ್ತೈಸಿ, ಅಲ್ಲಿ ವ್ಯಾಸರಾಜ ಮಠಾಧಿಪತಿಗಳಾದ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದಂಗಳವರನ್ನು ಭೇಟಿಮಾಡಿದರು ಸೋಸಲೆಯಲ್ಲಿ ಶ್ರೀಗಳವರು ಮೆರವಣಿಗೆಯಲ್ಲಿ ಅಲಂಕೃತ ಪಲ್ಲಕ್ಕಿಯಲ್ಲಿ ಕುಳಿತು ಮಠದ ಬಳಿ ಬಂದಾಗ ವ್ಯಾಸರಾಜ ಗುರುಗಳು ಅವರನ್ನು ಬಾಗಿಲು ಬಳಿ ಸ್ವಾಗತಿಸಿ ಬರಮಾಡಿಕೊಂಡರು. ನಂತರ ಉಭಯ ಗುರುಗಳೂ ಏಕಾಸನದಲ್ಲಿ ಮಂಡಿಸಿ ಭಕ್ತ ವೃಂದಕ್ಕೆ ದರ್ಶನವಿತ್ತರು ಶ್ರೀ ವ್ಯಾಸರಾಜ ಗುರುಗಳು ಸ್ವಾಗತ ಭಾಷಣ ಮಾಡಿ ಎರಡು ಮಠಗಳೂ ಶ್ರೀ ಮಧ್ವಾಚಾರ್ಯರ ಮುಖ್ಯ ಪರಂಪರೆಯಲ್ಲಿ ಬಂದಿರುವುವಲ್ಲದೆ, ಎರಡು ಮಠಗಳ ಪೂರ್ವ ಪುರುಷರೂ ಶ್ರೀ ಪ್ರಹ್ಲಾದ ರಾಜರ ಅವತಾರವೆಂದು ಪ್ರಸಿದ್ಧರಾಗಿರುವುದರಿಂದ ಎರಡನ್ನೂ ಶ್ರೀ ಪ್ರಹ್ಲಾದ ಮಠವೆಂದು ಕರೆಯಬಹುದು ಸಮಂಜಸವಾಗಿರುವುದೆಂದು ಅಭಿಪ್ರಾಯಪಟ್ಟರು

ಶ್ರೀ ಸುಶಮೀಂದ್ರ ತೀರ್ಥರು ಪ್ರತ್ಯುತ್ತರವಿತ್ತನಂತರ, ಉಭಯ ಶ್ರೀಗಳವರೂ ಭಕ್ತವೃಂದಕ್ಕೆ ಆಶೀರ್ವಾದ ಮಾಡಿದರು ಶ್ರೀಗಳವರ ಶ್ರೀಪಾದ ಪುತ್ರರುಗಳು ಪರಸ್ಪರ ಸ್ವಾಮಿಗಳವರಿಗೆ ಪಾದ ಪೂಜೆ ನಡೆಸಿದ ನಂತರ ಗುರುಗಳು ಶ್ರೀ ಮೂಲ ರಾಮ ಮತ್ತು ಮೂಲ ಗೋಪಾಲ ಕೃಷ್ಣ ದೇವರ ಪೂಜೆ ನಡೆಸಿದರು. ಅನಂತರ ತೀರ್ಥ ಪ್ರಸಾದ ವಿನಿಯೋಗಳಾದುವು

ಗಂಡಭೇರುಂಡ ಧ್ವಜದ ಮೆರವಣಿಗೆ

ರಾಜಧಾನಿಯ ಪ್ರಜಾ ಮಂಡಲದವರು ಕಳೆದ ಶನಿವಾರ ಶ್ರೀಮನ್ಮಹಾರಾಜರ ವರ್ಧಂತಿ ಪ್ರಯುಕ್ತ ಗಂಡಭೇರುಂಡ ಧ್ವಜ ಮತ್ತು ಶ್ರೀಮನ್ಮಹಾರಾಜರ ಭಾವಚಿತ್ರಗಳ ಮೆರವಣಿಗೆ ನಡೆಸಿದರು ಸಿಹಿ ತಿಂಡಿಗಳನ್ನು ವಿನಿಯೋಗ ಮಾಡಲಾಯಿತು. ಸಂಜೆ ದೊಡ್ಡ ಕರಿಮೈದಾನದಲ್ಲಿ ಸೇರಿದ್ದ ಸಭೆಯಲ್ಲಿ ಜಗದ್ಗುರು ಶಂಕರಾಚಾರ್ಯ ಶ್ರೀ ಬ್ರಹ್ಮಾನಂದ ಸ್ವಾಮಿಗಳು ಭಾಷಣ ಮಾಡಿದರು ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯೊಂದಿಗೆ ಸಭೆ ಮುಕ್ತಾಯವಾಯಿತು

ANNOUNCEMENT

M N Satyanarayana Rao regrets to announce the demise of his father Sri M V Narayana Rao Proprietor Sri Satyanarayana Tailoring Factory Mysore on 23-6-1952 and requests his numerous customers to continue their valuable patronage to the firm which is now owned and managed by his son

ಪ್ಯೋಂಗ್‌ಯಾಂಗ್ ಮೇಲೆ ಹಸ್ತಪತ್ರಿಕೆಗಳ ಸುರಿಮಳೆ

ಉತ್ತರ ಕೊರಿಯದ ರಾಜಧಾನಿಯಾದ ಪ್ಯೋಂಗ್‌ಯಾಂಗ್ ನಗರದ ಮೇಲೆ ಅಮೆರಿಕದ ವಿಮಾನಗಳು ಲಕ್ಷಗಟ್ಟಲೆ ಹಸ್ತ ಪತ್ರಿಕೆಗಳನ್ನು ಸುರಿಸಿ ಅಲ್ಲಿ ನಡೆಯಬಹುದಾದ ಧಾಳಿಯ ಬಗ್ಗೆ ಎಚ್ಚರಿಕೆಯನ್ನಿತ್ತಿರುವುವೆಂದೂ, ವಿಮಾನಗಳಲ್ಲಿ ಲೌಡ್ ಸ್ಪೀಕರುಗಳನ್ನಿಟ್ಟುಕೊಂಡು ಜನರಿಗೆ ಗಾಬರಿಯನ್ನುಂಟು ಮಾಡುವ ರೀತಿಯಲ್ಲಿ ಎಚ್ಚರಿಕೆಯನ್ನಿತ್ತು ಮಿಲಿಟರಿ ಗುರಿಗಳನ್ನು ಬಿಟ್ಟು ಹೋಗುವಂತೆ ಸೂಚನೆಗಳನ್ನು ಕೊಡುತ್ತಿರುವುವೆಂದೂ ಹೇಳಲಾಗಿದೆ

ವರ್ಧಂತ್ಯುತ್ಸವ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ರಾಮಲಿಂಗೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀಮನ್ಮಹಾರಾಜರ ವರ್ಧಂತಿ ಮಹೋತ್ಸವದ ಪ್ರಯುಕ್ತ ಅಭಿಷೇಕ, ನೈವೇದ್ಯವೂ ಮಧ್ಯಾಹ್ನ ಶ್ರೀ ಲಿಂಗಾನಂದ ಪರಮಹಂಸ ಭಾರತಿ ಸ್ವಾಮಿಗಳವರಿಂದ ಉಪನ್ಯಾಸವೂ, ಅನಂತರ ಮಹಾ ಮಂಗಳಾರತಿ ಮಾಡಿದ ನಂತರ ಹಣ್ಣು ಹಂಪಲುಗಳನ್ನು ಬಂದಿದ್ದ ಭಕ್ತಾದಿಗಳಿಗೆ ಹಂಚಲಾಯಿತು [illegible] ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆ ಮತ್ತು ಸಂತಾನಾಭಿವೃದ್ಧಿಯನ್ನೂ ಕೋರಲಾಯಿತು

ಚಾಮುಂಡೇಶ್ವರಿ
ಟಾಕೀಸ್
16-7-52 ರಿಂದ ಪ್ರತಿದಿನ 3 ಆಟಗಳು
ಅಶೋಕ್‌ಕುಮಾರ್
(ತೊಹಾತೊಹ ಫ್ರಿಂಟು)
ವ್ಯಾಸರಾಜಭಾಗವತರ್ ಕನ್ನಂಬ ಕಾಣಿಸಿಕೊಂಡಿರುವ ತಮಿಳು ಚಿತ್ರ

ವಿಶ್ವ ಸಂಸ್ಥೆ ವಿಮಾನ ಧಾಳಿಗೆ ೨ ಸಾವಿರ ಜನರ ಆಹುತಿ

ವಿಶ್ವ ಸಂಸ್ಥೆಯ ವಿಮಾನಗಳು ಕಳೆದ ಶುಕ್ರವಾರ ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್‌ಯಾಂಗ್ ನಗರದ ಮೇಲೆ ೨೪ ಘಂಟೆಗಳ ಕಾಲ ಸತತ ಧಾಳಿ ನಡೆಸಿದ ಪರಿಣಾಮವಾಗಿ ಎರಡು ಸಾವಿರ ಜನರು ಮಡಿದು, ನಾಲ್ಕುಸಾವಿರ ಜನರಿಗೆ ಗಾಯವಾಯಿತೆಂದೂ, ೨೦೦ ಜನರು ಪತ್ತೆಯಿಲ್ಲವೆಂದೂ ಪ್ಯೋಂಗ್‌ಯಾಂಗ್ ರೇಡಿಯೋವು ಪ್ರಸಾರ ಮಾಡಿದೆ ವಿಶ್ವಸಂಸ್ಥೆ ಯುದ್ಧ ಖೈದಿಗಳ ಶಿಬಿರದ ಮೇಲೂ ಬಾಂಬು ಹಾಕಲಾಯಿತೆಂದೂ, ಇದರಿಂದ [illegible] ಮಂದಿ ವಿಶ್ವಸಂಸ್ಥೆ ಖೈದಿಗಳು ಮಡಿದು ೭೨ ಜನರು ಗಾಯಗೊಂಡರೆಂದೂ ಮತ್ತು ೨೩ ಜನರು ಪತ್ತೆಯಿಲ್ಲವೆಂದೂ ಹೇಳಲಾಗಿದೆ

ಹರಿ ಮಂದಿರ

ದಿವಂಗತ, ಕೀರ್ತನಾಚಾರ್ಯ ಬೇಲೂರು ಕೇಶವದಾಸರಿಂದ ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ಸ್ಥಾಪಿತವಾಗಿರುವ ಶ್ರೀ ಹರಿ ಮಂದಿರದ ಗರ್ಭಾಂಕಣದ ದ್ವಾರದ ಸ್ಥಾಪನಾಕಾರ್ಯವನ್ನು ಮೈಸೂರು ಸರ್ಕಾರದ ಪಾಜಿ [illegible] ಮುಜರಾಯಿ ಕಮೀಷನರ್ ಶ್ರೀ ಪಿ ಎಚ್ ಕೃಷ್ಣರಾಯರು ಮೊನ್ನೆ ನೆರವೇರಿಸಿದರು

SRI GAYATHRI
TALKIES
Daily 2 Shows
From [illegible] for 3 Days
M G M's
THE TOAST OF NEW ORLEANS
(In Technicolor)
NEXT CHANGE
M G M's
LONE STAR
With Clark Gable

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ [illegible] ರಿಂದ [illegible]

ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	
ಹೊಂಗೆಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ		
ಮಣ ಬಿಳ್ಳೆ	[illegible]	[illegible]
ಹುಣಸೇಹಣ್ಣು	[illegible]	
ಸೀಗೆಕಾಯಿ	[illegible]	
ತೆಂಗಿನಕಾಯಿ	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ನಾಗಸ್ವರ ಎಸ್ [illegible] ಬೇಲೂರಯ್ಯ ಮಧ್ಯಾಹ್ನ 5 [illegible] ರಾದ ಮಹಿಳೆಯರ ಕಾರ್ಯಕ್ರಮ ಸಂಜೆ [illegible] ನಾಗಸ್ವರ, ಎಸ್ [illegible] ಬೇಲೂರಯ್ಯ [illegible] ಬಾಲಕಗಳು, ಮಕ್ಕಳ ಕಾರ್ಯಕ್ರಮ [illegible] ರಾಮಾಯಣ ವಾಚನ, [illegible] "[illegible]" ಎಂದು [illegible] ಗೀತೆಗಳು

ಮೈಸೂರಿನಲ್ಲಿ ಸೇವಾದಳದ ಪ್ರಗತಿ

ಭಾರತ ಸೇವಾದಳದವರು ಪ್ರಕಟಿಸಿರುವ ಇತ್ತೀಚಿನ ವರದಿಯ ಪುಸ್ತಕವು ನಮ್ಮ ಹಸ್ತಗತವಾಗಿದೆ ಸ್ವಾತಂತ್ರ್ಯ ಸ್ಥಾಪನೆಯಾದಂದಿನಿಂದಲೂ ಸೇವಾದಳವು ನಡೆಸಿರುವ ಕಾರ್ಯಗಳನ್ನು ಅದರಲ್ಲಿ ವಿವರಿಸಲಾಗಿದೆ ಸೇವಾದಳದ ಸ್ವಯಂ ಸೇವಕರು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿರುವ ಅನೇಕ ಚಿತ್ರಗಳು ಅಡಕವಾಗಿವೆ

ಮೈಸೂರು ವ್ಯವಸಾಯ ಇಲಾಖೆ, ಬೆಂಗಳೂರು

ನೋಟೀಸು

ಮಂಡ್ಯದ ವಿಶ್ವೇಶ್ವರಯ್ಯಾ ಸಾಲಾ ಫಾರಂನಲ್ಲಿ ವ್ಯವಸಾಯ ವಿಸ್ತರಣ ಕಾರ್ಯ-ಶಿಕ್ಷಣ ಮತ್ತು ಅಭಿವೃದ್ಧಿ ಯೋಜನೆಗಾಗಿ ಅಭ್ಯರ್ಥಿಗಳು

ಮೇಲ್ಕಂಡ ಕೇಂದ್ರದಲ್ಲಿ ಗ್ರಾಮ ವ್ಯವಸಾಯ ವಿಸ್ತರಣ ಕಾರ್ಯದಲ್ಲಿ ತರಬೇತು ಪಡೆಯಬೇಕೆನ್ನುವ ಅಭ್ಯರ್ಥಿಗಳಿಂದ, 1952ನೇ ಜುಲೈ 3 ಬುಧವಾರದ ವರೆಗೆ ಕೆಳಗೆ ಕಾಣುವ ಷರತ್ತುಗಳ ಪ್ರಕಾರ ಅರ್ಜಿಗಳನ್ನು ಸ್ವೀಕರಿಸಲಾಗುವುದು

ವ್ಯವಸಾಯದ ಅರ್ಹತೆಯನ್ನು ಅರ್ಜಿದಾರರು ಹೊಂದಿರುವುದಲ್ಲದೆ ಗ್ರಾಮಾಂತರ ಪರಿಚಯ ಮತ್ತು ಬೇಸಾಯದಲ್ಲಿ ಪ್ರಾಕ್ಟಿಕಲ್ ಅನುಭವವನ್ನು ಪಡೆದವರಾಗಿರಬೇಕು ಸರ್ಕಾರಿ ನೌಕರಿಯಲ್ಲಿದ್ದು ಅರ್ಹತೆಯುಳ್ಳವರೂ ಕ್ರಮವಾದ ಮಾರ್ಗದ ಮೂಲಕ ಅರ್ಜಿಗಳನ್ನು ಹಾಕಿಕೊಳ್ಳಬಹುದು

1952ನೇ ಸೆಪ್ಟೆಂಬರ್ 1 ನೇ ತಾ|| ಶಿಕ್ಷಣವು ಪ್ರಾರಂಭವಾಗಿ ಪರೀಕ್ಷೆಯಿಂದ ಸತ್ವ ಆರು ತಿಂಗಳ ಕಾಲ ಇದು ನಡೆಯುವುದು. ಮೊದಲು 32 ಜನರನ್ನು ತೆಗೆದುಕೊಳ್ಳಲಾಗುವುದು

ವಿವರಗಳಿಗಾಗಿ 1952 ನೇ ಜುಲೈ 10 ನೇ ತಾ|| ನ ಮೈಸೂರು ಗೆಜೆಟ್ಟ್ ಸಂಚಿಕೆಯನ್ನು ನೋಡಬಹುದು

(ರುಜು) ಡಿ. ಟಿ ನಾರಾಯಣನ್, ವ್ಯವಸಾಯ ಮತ್ತು ವಿಸ್ತರಣ ಕಾರ್ಯದ ಜಾಯಿಂಟ್ ಡೈರೆಕ್ಟರ್

ಅಂಟಳೆ ರಾಮಸ್ವಾಮಿ ಅಯ್ಯಂಗಾರರವರ ಸುಪ್ರಸಿದ್ಧ
ಸಂತಾನ ಸಿಂಧೂರ
ಬಹಿಷ್ಠೆ (ಮುಟ್ಟಿನ) ಸಂಬಂಧದ ವ್ಯಾಧಿಗಳಾದ ಮುಟ್ಟು ಸರಿಯಾಗಿ ಬಾರದಿರುವುದು ಅತ್ಯತಿ ಸೂತಕ ಕ್ರಮತಪ್ಪಿ ಬರುವುದು, ಗರ್ಭ ಪತನ ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ
3 ದಿವಸಗಳಲ್ಲಿ ಈ ಔಷಧಿ ಸೇವಿಸಿ ರೋಗ ವಾಸಿಯಾಗಿ ಅಲ್ಲದೆ ಸಂತಾನ ಫಲ ದೊರೆತವರ ಸಂಖ್ಯೆ ಸಾವಿರಾರು. ಸೇವಿಸಿ ಫಲ ಪಡೆದವರ ಸರ್ಟಿಫಿಕೇಟುಗಳು ಲಭ್ಯ! ಸೀಸೆ ಅನುಪಾನ ಪತ್ರಿಕೆಯ ಸಹಿತ ನೀಡಲಾಗುವುದು, [illegible] ಬೆಲೆ [illegible] ಸೀಸೆ 1 ಕ್ಕೆ 3 ರೂ ಪೋಸ್ಟೇಜ್ ಸ್ವತಂತ್ರ. ಖ್ಯಾತಿವೆತ್ತ ಔಷಧ ಬೆಲೆ ಮೂರು ರೂಪಾಯಿ ಮಾತ್ರ. [illegible]
ವಿಶೇಷ ಸೂಚನೆ:— ಔಷಧದ ಪ್ಯಾಕೆಟ್ ಮೇಲೆ ಶ್ರೀ ಎ ಆರ್ ಅಯ್ಯಂಗಾರರವರ ಫೋಟೋ ಮತ್ತು ರುಜು ನೋಡಿ ಇದು ವರೆಗೆ ಯಾರಿಂದಲೂ ನಕಲು ಮಾಡಲಾಗದ ಅಪ್ಪಟ ಮೈಸೂರು ಸೂಸೈಟಿ ಕೊಡುವ ಏಜೆಂಟುಗಳನ್ನು ಕೇಳಿ, ಅಂಚೆ ಮೂಲಕವೂ ಪಡೆಯಬಹುದು
ತೊಳ ವಿಳಾಸ:— ಎ ರಾಮಸ್ವಾಮಿ ಅಯ್ಯಂಗಾರ್ ಸನ್
" ಸಂತಾನ ಸಿಂಧೂರದ ಬಿಲ್ಡಿಂಗ್ "
628 ಹರದಿ ರಸ್ತೆ ದಕ್ಷಿಣ ಕ್ರಾಸ್,
(ಕೃಷ್ಣ ರೈಸ್ ಮಿಲ್ ಪಕ್ಕ) ಮೈಸೂರು

Edited Printed and Published by A R Nagarajan at Sadhvi Press, D Subbiah Road Mysore

ರಿಜಿಸ್ಟರ್ಡ್ ನಂ. 792 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೧೬-೭-೫೩ [ಸಂಚಿಕೆ ೨೬೯

ಕಲ್ಕತ್ತಾ ಜನರ ಗುಂಪಿನ - ಮೇಲೆ ಪ್ರಹಾರ -

ಹನುಮಂತಯ್ಯನವರ ತಮ್ಮನಿಗೆ ೫೦ ಎಕರೆ ಜಮೀನು

ಶಾಸನ ಸಭೆಯಲ್ಲಿ ನಿಲುವಳಿ ತೀರ್ಮಾನಕ್ಕೆ ತಿರಸ್ಕಾರ

ಸ್ವಂ ಸು ವರದಿ] ಬೆಂಗಳೂರು ೧೬

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ತಮ್ಮ ಶ್ರೀ ಕೆ ನಂಜಪ್ಪನವರಿಗೆ ೧೬ನೆ ನಗರ ತಾಲ್ಲೂಕಿನ ದೊಡ್ಡ ಮುಳ್ಳೂರು ಎಂಬಲ್ಲಿ ೫೦ ಎಕರೆ ಭೂಮಿಯನ್ನು ಕೊಡಲಾಗಿರುವ ಬಗ್ಗೆ ಈ ದಿನ ಶಾಸನ ಸಭೆಯಲ್ಲಿ ಶ್ರೀ ಗೋಪಾಲಗೌಡರು ನಿಲುವಳಿ ತೀರ್ಮಾನವೊಂದನ್ನು ಸೂಚಿಸಿದರು. ಈ ಜಮೀನನ್ನು ಕೊಟ್ಟಾಗ ರೈತರು ಸತ್ಯಾಗ್ರಹ ನಡೆಸಿ ೨೦ ಜನರು ದಸ್ತಗಿರಿಯಾದರೆಂದು ಅವರು ಹೇಳಿದರು. ೫ ಎಕರೆಗಿಂತ ಹೆಚ್ಚಾಗಿ ಒಬ್ಬರಿಗೆ ಕೊಡುವುದು ಅನುಚಿತವೆಂದು ಶ್ರೀ ಇಮಾಂರವರು ಹೇಳಿದರು.

ಅಧಿಕಾರದ ಪ್ರಭಾವದಿಂದ ಈ ಜಮೀನನ್ನು ಕೊಟ್ಟಿರುವುದಾಗಿ ರುಜುವಾತು ಮಾಡಿದರೆ ತಾವು ರಾಜೀನಾಮೆ ಕೊಡುವುದಾಗಿ ಶ್ರೀ ಹನುಮಂತಯ್ಯನವರು ನುಡಿದರು.

ವ್ಯವಸಾಯ ಮಂತ್ರಿ ಶ್ರೀ ಸಿದ್ದವೀರಪ್ಪನವರು ಹೇಳಿಕೆ ಇತ್ತು, ಹಿಂದಿನ ಮಂತ್ರಿಮಂಡಲದ ಕಾಲದಲ್ಲಿ ರೈತರಿಗೆ ಕೊಡಬೇಕಾಗಿದ್ದ ಸದರಿ ಜಮೀನುಗಳಲ್ಲಿ ಅವರು ಮರಗಳನ್ನು ಕಡಿದುಹಾಕಿ ಷರತ್ತಿಗೆ ವಿರುದ್ಧವಾಗಿ ನಡೆದುಕೊಂಡರೆಂದೂ, ಅದುದರಿಂದ ಜಮೀನನ್ನು ಹಿಂದಕ್ಕೆ ತೆಗೆದುಕೊಂಡು ವ್ಯವಸಾಯ ಶಿಕ್ಷಣ ಪಡೆದಿರುವ ಶ್ರೀ ನಂಜಪ್ಪನವರಿಗೆ ಕೊಡಲಾಯಿತೆಂದೂ ಹೇಳಿದರು. ಅಧ್ಯಕ್ಷರು ನಿಲುವಳಿ ತೀರ್ಮಾನವನ್ನು ತಳ್ಳಿಹಾಕಿದರು.

ನದಿಗಳ ಪ್ರವಾಹದಿಂದ ೫೦೦ ಗ್ರಾಮಗಳಿಗೆ ನೀರು

ಬಿಹಾರಿನ ಅತ್ಯಧಿಕ ಜನನಿಬಿಡ ಪ್ರದೇಶವಾದ ದರ್ಭಾಂಗ ಜಿಲ್ಲೆಯಲ್ಲಿ ಕೋಸಿ ಮತ್ತು ಕಮಲಾ ಎಂಬ ಎರಡು ನದಿಗಳಲ್ಲಿ ಪ್ರವಾಹವುಂಟಾಗಿ ೫೦೦ ಗ್ರಾಮಗಳು ಕೊಚ್ಚಿಹೋಗಿರುವುವೆಂದೂ, ೫ ಲಕ್ಷ ಜನರು ಕಷ್ಟ ನಷ್ಟಗಳಿಗೆ ಸಿಕ್ಕಿರುವರೆಂದೂ ವರದಿಯಾಗಿದೆ. ಭತ್ತದ ಗದ್ದೆಗಳು ನೀರಿನಲ್ಲಿ ಮುಳುಗಿವೆ. ಧಾನ್ಯ ವ್ಯಾಪಾರಕ್ಕೆ ಕೇಂದ್ರವಾದ ಒಂದು ಮುಖ್ಯ ಊರಿನಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಜನರು ದೋಣಿಗಳಲ್ಲಿ ಸಂಚಾರ ಮಾಡಬೇಕಾಗಿದೆ. ಕೆಲವು ಕಡೆ ರೈಲು ಸಂಚಾರ ನಿಲ್ಲಿಸಲ್ಪಟ್ಟಿದೆ.

ವಿಮಾನದಲ್ಲಿ ಶಿಶು ಜನನ

ಆಸ್ಟ್ರೇಲಿಯಾದಲ್ಲಿ ನೆಲೆಸುವ ಉದ್ದೇಶದಿಂದ ಲಂಡನ್ನಿನ ದಂಪತಿಗಳಿಬ್ಬರು ಅಲ್ಲಿಗೆ ವಿಮಾನದಲ್ಲಿ ಕಳೆದ ತಿಂಗಳು ಪ್ರಯಾಣ ಮಾಡುತ್ತಿದ್ದಾಗ ಹೆಂಡತಿಗೆ ಪ್ರಸವವೇದನೆಯುಂಟಾಗಿ ಅಲ್ಲಿಯೇ ಹೆಣ್ಣು ಮಗುವೊಂದನ್ನು ಹಡೆದಳೆಂದು ವರದಿಯಾಗಿದೆ. ವಿಮಾನದ ಸ್ತ್ರೀ ಅಧಿಕಾರಿಣಿಯು ತಾಲಿಕ್ಕನ ಕೊಠಡಿಯ ಹಿಂದುಗಡೆ ತೆರಿಗೆಯನ್ನು ಮಾಡಿ ಸಿನಳು ಉಪಯೋಗವಾಯಿತು.

ಕೋಲಾರ ಜಿಲ್ಲೆಗೆ ಇನ್ನೂ ೨ ಲಕ್ಷ ರೂ.

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಸ್ವಂ.ಸು ವರದಿ] ಬೆಂಗಳೂರು ೧೬

ಈ ದಿನ ಶಾಸನ ಸಭೆಯಲ್ಲಿ ಪಿರಿಯಾಪಟ್ಟಣದ ಶ್ರೀ ಎಸ್ ಎಂ ಮರಿಯಪ್ಪನವರ ಪ್ರಶ್ನೆಗೆ ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು, ಶ್ರೀ ಹೆಚ್ ಎಂ ಚನ್ನಬಸಪ್ಪನವರಿಗೆ ಶೇ|| ೪ ರಂತೆ ಬಡ್ಡಿ ಮೇರೆಗೆ ೫೦ ಸಾವಿರ ರೂಗಳ ಸಾಲವನ್ನು ಕೊಡಲಾಗಿತ್ತೆಂದೂ, ಸಾಲ ತೀರ್ಮೆ ಮೊದಲನೇ ಕಂತಿನ ಅವಧಿಯು ೧೯೫೦ನೇ ಜನವರಿಯೆಂದೂ ಆ ಕಂತೂ ಪಾವತಿಯಾಗಿಲ್ಲವೆಂದೂ ಸಾಲವನ್ನು ತೀರಿಸುವ ಬಗ್ಗೆ ಅವರೊಡನೆ ಪತ್ರ ವ್ಯವಹಾರವು ನಡೆಯುತ್ತಿರುವುದಾಗಿಯೂ ಹೇಳಿದರು.

ರಾಜಕೀಯ ಹೋರಾಟಗಳಲ್ಲಿ ನೊಂದವರಿಗೆ ಜಮೀನು ಕೊಟ್ಟ ಬಗ್ಗೆ ಶ್ರೀ ಮಂಜಪ್ಪನವರು ಪಟ್ಟಿಯೊಂದನ್ನು ಸಭೆಯ ಗಮನಕ್ಕೆ ತಂದರು. ಶ್ರೀ ಬಿ ಎ ದೊರೆಣ್ಣಗೌಡರು ಮದ್ರಾಸಿನಲ್ಲಿ ಜಮೀನು ಕೊಡುವುದನ್ನು ನಿಲ್ಲಿಸಿಲ್ಲವೇ ಎಂದು ಪ್ರಶ್ನಿಸಲಾಗಿ, ಆ ರೀತಿ ಇಲ್ಲಿ ನಿಲ್ಲಿಸುವ ಆಲೋಚನೆಯಿಲ್ಲವೆಂದು ಸರ್ಕಾರದವರು ತಿಳಿಸಿದರು.

ಶ್ರೀ ಹೆಚ್ ಸಿ ಲಿಂಗಾರೆಡ್ಡಿಯವರು ಅಲ್ಪಾವಧಿ ಪ್ರಶ್ನೆಯೊಂದಕ್ಕೆ, ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಉತ್ತರವಿತ್ತು ಕೋಲಾರ ಜಿಲ್ಲೆಯಲ್ಲಿ ಪರಿಹಾರ ಕಾರ್ಯಕ್ಕಾಗಿ ಈಗಾಗಲೇ ಮಂಜೂರಾದ ೧೮ ಲಕ್ಷಕ್ಕಿಂತಲೂ ಹೆಚ್ಚು ಹಣದ ಕೆಲಸವು ನಡೆದಿರುವುದೆಂದೂ, ಇನ್ನೂ ೨ ಲಕ್ಷ ರೂ ಗಳನ್ನು ಸರ್ಕಾರದವರು ಕೊಟ್ಟಿರುವುದಾಗಿಯೂ ಹೇಳಿದರು. ಅವಶ್ಯವಿದ್ದ ಕಡೆ ಮಾತ್ರ ಪರಿಹಾರ ಕಾರ್ಯವನ್ನು ನಡೆಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದರು.

ಚೀನ ಸಂಸ್ಥೆಯು ಎರಡು ಯುದ್ಧ ನೌಕೆಗಳನ್ನು ಮುಳುಗಿಸಿರುವುದಾಗಿ ಉತ್ತರ ಕೊರಿಯಾದವರು ತಿಳಿಸಿರುವರೆಂದು ಗೊತ್ತಾಗಿದೆ. ಅವರ ಮೂರು ವಿಮಾನಗಳನ್ನು ಕೆಡವಲಾಗಿದೆ.

ಅವಿಶ್ವಾಸ ನಿರ್ಣಯಕ್ಕೆ ತಾತ್ಕಾಲಿಕ ತಡೆ ಆಜ್ಞೆ

ಮೈಸೂರು ೧೬

ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್, ಮತ್ತು ಕಾರ್ಯದರ್ಶಿ ಶ್ರೀ ಬಿ ಎಸ್ ರುದ್ರಪ್ಪನವರುಗಳಲ್ಲಿ ಅವಿಶ್ವಾಸ ಸೂಚಿಸಿ ಸದಸ್ಯರು ಮಾಡಿದ್ದ ನಿರ್ಣಯವನ್ನು ಜಾರಿಗೆ ಕೊಡದಂತೆ ೧೫, ಶ್ರೀ ಜಿ ಆರ್ ಹೋಸ್ಮರ್ ಮತ್ತು ಶ್ರೀ ಬಿ ಎಸ್ ಕಾಂತವಮೂರ್ತಿಯವರು ಅಧ್ಯಕ್ಷ ಮತ್ತು ಕಾರ್ಯದರ್ಶಿ ಅಧಿಕಾರವನ್ನು ವಹಿಸಕೂಡದೆಂದೂ ಶ್ರೀ ಟಿ ಎಸ್ ರುದ್ರಪ್ಪನವರು ಸಲ್ಲಿಸಿದ್ದ ಅರ್ಜಿ ಮೇರೆ ಮುಖ್ಯ ಜಿಲ್ಲಾ ನ್ಯಾಯಾಧೀಶರು ನೆನ್ನೆ ತಾತ್ಕಾಲಿಕ ಇಂಜಂಕ್ಷನ್ ಕೊಟ್ಟು ಆಜ್ಞೆಯನ್ನು ಹೊರಡಿಸಿರುತ್ತಾರೆ. ಸದರಿ ಆಜ್ಞೆಯನ್ನು ಈ ದಿನ ಸೊಸೈಟಿಯ ಮೇಲೆ ಜಾರಿ ಮಾಡಲಾಗಿದೆ.

ರಾಜಧಾನಿಗೆ ಜಗಜೀವನರಾಂರವರ ಭೇಟಿ

ಕೇಂದ್ರ ಮಾರ್ಗಾನುಗಮನ ಮಂತ್ರಿ ಶ್ರೀ ಜಗಜೀವನರಾಂರವರು ಬರುವ ತಿಂಗಳು ಮೊದಲನೇ ವಾರದಲ್ಲಿ ರಾಜಧಾನಿಗೆ ಬಂದು ಮೋತೀಖಾನೆಯಲ್ಲಿ ಸ್ಥಾಪಿಸಲಾಗುವ ಭೂತನ ಟೆಲಿಫೋನ್ ಕಛೇರಿಯ ಕೇಂದ್ರದ ಪ್ರಾರಂಭೋತ್ಸವವನ್ನು ನೆರವೇರಿಸುವರೆಂದು ಹೇಳಲಾಗಿದೆ.

ಹೋಟೇಲುಗಳ ಮೇಲೆ ಹೊಸ ತೆರಿಗೆ

ಬೆಂಗಳೂರು ೧೬

ಸಂಸ್ಥಾನದಲ್ಲಿರುವ ಹೋಟೇಲುಗಳ ರಹದಾರಿ ರುಸುಂ ಹೊರತಾಗಿ ವಿಶೇಷ ತೆರಿಗೆಯನ್ನು ವಿಧಿಸುವ ವಿಷಯವನ್ನು ಪರಿಶೀಲಿಸಲು ಸರ್ಕಾರದವರು ಸಮಿತಿಯೊಂದನ್ನು ನೇಮಿಸಿರುತ್ತಾರೆ. ಅಶುಚಿಯಾದ ಹೋಟೇಲುಗಳನ್ನು ತಪ್ಪಿಸಿ, ಆಗ್ರಹಾರವನ್ನು ಮಿತಿಗೊಳಿಸಿ, ಸ್ವಚ್ಛತೆ ಮತ್ತು ಜನರ ಆರೋಗ್ಯವನ್ನು ಕಾಪಾಡುವ ಉದ್ದೇಶವನ್ನು ಹೇಗೆ ಸಾಧಿಸಬಹುದೆಂಬುದನ್ನು ಸಮಿತಿಯವರು ಪರಿಶೀಲಿಸಬೇಕೆಂದು ಸೂಚಿಸಲಾಗಿದೆ. ಈ ಸಮಿತಿಗೆ ಸರ್ಕಾರದ ಶ್ರೀ ಕೆ. ಕಾರ್ಯದರ್ಶಿಯವರು ಅಧ್ಯಕ್ಷರಾಗಿರುವರು.

ಸೊಸೈಟಿ ಆಡಳಿತ ಎ. ಕೃಷ್ಣಮೂರ್ತಿರಾಯರಿಗೆ

ಮೈಸೂರು ೧೬

ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಮೇಲೆ ಈ ದಿನ ಜಿಲ್ಲಾ ನ್ಯಾಯಾಧೀಶರು ಜಂಗಾಮೀ ಇಂಜಂಕ್ಷನ್ ಕೊಟ್ಟು ತಂತಮ, ಶ್ರೀ ಬಿ ಎಸ್. ಕಾಂತವಮೂರ್ತಿಯವರು ಮೇಲ್ಕಂಡ ನ್ಯಾಯಾಲಯದಲ್ಲಿ ಎರಡು ಅರ್ಜಿಯನ್ನು ಹಾಕಲಾಗಿ, ಮುಂದೆ ಆಜ್ಞೆಯಾಗುವವರೆಗೆ ಶ್ರೀ ಎ ಕೃಷ್ಣಮೂರ್ತಿರಾಯರು ಸೊಸೈಟಿಯ ಸಂಪೂರ್ಣ ಆಡಳಿತವನ್ನು ನಿರ್ವಹಿಸತಕ್ಕದ್ದೆಂದು ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ.

ಬಂಗಾಳಾ ಶಾಸನಸಭೆ ಬಳಿ ಪ್ರದರ್ಶನಕಾರರ ಮೇಲೆ ಲಾಠಿ

ಪಶ್ಚಿಮ ಬಂಗಾಳದಲ್ಲಿ ಹೊಸ ಆಹಾರದ ಯೋಜನೆಯನ್ನು ಜಾರಿಗೆ ತರುವಂತೆ ಒತ್ತಾಯ ತರಲು ಕಲ್ಕತ್ತೆಯ ಶಾಸನಸಭಾ ಭವನದ ಬಳಿ ನಿರ್ಬಂಧದ ಆಜ್ಞೆಯನ್ನು ಉಲ್ಲಂಘಿಸಿ ನೆನ್ನೆ ಸೇರಿದ್ದ ೪ ಸಾವಿರ ಪ್ರದರ್ಶನಕಾರರ ಮೇಲೆ ಪೋಲೀಸರು ಅಶ್ರುವಾಯು ಮತ್ತು ಲಾಠಿ ಪ್ರಹಾರಗಳನ್ನು ಮಾಡಿ ಚದುರಿಸಿದರೆಂದು ವರದಿಯಾಗಿದೆ. ೫೦ ಜನರಿಗೆ ಗಾಯವಾಗಿ ೩೩ ಮಂದಿಯು ದಸ್ತಗಿರಿಯಾಗಿದೆ.

೧೮ ವರ್ಷದ ಯುವತಿಯ ಸಹಗಮನ

ಚಟ್ಟಿಲ್ಪುರದ ದಲಾರಿ ಎಂಬ ೧೮ ವರ್ಷದ ಮಹಿಳೆಯು ಕಳೆದ ಭಾನುವಾರ ರಾತ್ರಿ ಮೃತಪಟ್ಟ ತನ್ನ ಗಂಡನ ಶವವನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಬೆಂಕಿ ಹಚ್ಚಿ ಚಿತೆಯೊಡನೆ ಸಹಗಮನ ಮಾಡಿದಳೆಂದು ವರದಿಯಾಗಿದೆ.

ಮದ್ರಾಸು ಗೌರ್ನರರ ಸಂಬಳದಲ್ಲಿ ಕಡಿತ

ಮದ್ರಾಸಿನ ಗೌರ್ನರ್ ಶ್ರೀಪ್ರಕಾಶರವರು ತಮ್ಮ ೫|| ಸಾವಿರ ರೂ ಸಂಬಳದಲ್ಲಿ ೭೫೦ ರೂ ಕಡಿತ ಮಾಡಿಕೊಳ್ಳುವುದಾಗಿ ಸೂಚಿಸಿರುವುದಾಗಿಯೂ, ಇನ್ನೂ ಕಡಿಮೆ ಮಾಡಿಕೊಳ್ಳಲು ಸಿದ್ಧರಿರುವುದಾಗಿಯೂ ತಿಳಿಸಿರುವರೆಂದು ಮುಖ್ಯ ಮಂತ್ರಿ ರಾಜಾಜಿಯವರು ತಿಳಿಸಿರುತ್ತಾರೆ.

೩೫ ಸಾವಿರ ರೂ. ಆಭರಣದ ದರೋಡೆ

ಬೊಂಬಾಯಿಯ ದಾದರ್ ಪ್ರದೇಶದಲ್ಲಿರುವ ಜವಾಹಿರಿ ಅಂಗಡಿಯ ಕಾವಲುಗಾರರನ್ನು ಮೊನ್ನೆ ರಾತ್ರಿ ಮೂರು ಜನರು ನೇಣು ಹಾಕಿ ಕೊಂದು, ಅಲ್ಲಿದ್ದ ೩೫ ಸಾವಿರ ರೂ ಬೆಲೆಯ ಆಭರಣಗಳನ್ನು ಅಪಹರಿಸಿಕೊಂಡು ಹೋಗಿರುವರೆಂದು ವರದಿಯಾಗಿದೆ. ೧-೫ ಲಕ್ಷ ರೂ ಬೆಲೆಯ ಆಭರಣಗಳಿದ್ದ ಪೆಟ್ಟಿಗೆಯನ್ನು ಒಡೆಯಲು ದರೋಡೆಕಾರರು ಪ್ರಯತ್ನಿಸಿ ವಿಫಲರಾದರೆಂದು ತಿಳಿದುಬಂದಿದೆ.

ಅಂಚೆ ಮುಷ್ಕರ ಸದ್ಯಕ್ಕಿಲ್ಲ

ಆಗಸ್ಟ್ ೫ನೇ ತಾ|| ನಿಂದ ನಡೆಯಬೇಕೆಂದು ನಿರ್ಧರಿಸಲಾಗಿದ್ದ ಅಂಚೆ ಮುಷ್ಕರವನ್ನು ಸದ್ಯಕ್ಕೆ ಮುಂದೆ ಹಾಕಲಾಗಿದೆ.

ಬೊಂಬಾಯಿ ಆಹಾರ ಸತ್ಯಾಗ್ರಹ ನಿಂತಿತು

ಆಹಾರದ ಬೆಲೆ ಏರಿಸಿರುವ ಬಗ್ಗೆ ಪ್ರತಿಭಟನೆ ಸೂಚಿಸಲು ಬೊಂಬಾಯಿ ಪ್ರಾಂತದ ಸಮಾಜವಾದಿ ಪಕ್ಷದವರು ಕಳೆದ ೧೬ ದಿನಗಳಿಂದಲೂ ನಡೆಸುತ್ತಿದ್ದ ಸತ್ಯಾಗ್ರಹವನ್ನು ನಿಲ್ಲಿಸಿರುವರು ಆಹಾರದ ಸತ್ಯಾಗ್ರಹದಲ್ಲಿ ೬೫೦ ಜನರ ದಸ್ತಗಿರಿಯಾಗಿದೆ ಸರ್ಕಾರದವರು ಕೆಲಗೆಗಳನ್ನು ತೆಗ್ಗಿಸಿರುವ ವಿಷಯದ ಕಡೆಗೆ ಸಮಾಜವಾದಿಗಳು ವಿಶೇಷ ಗಮನ ಕೊಡುವ ಉದ್ದೇಶದಿಂದ ಸತ್ಯಾಗ್ರಹವನ್ನು ನಿಲ್ಲಿಸಿರುವುದಾಗಿ ಹೇಳಿರುತ್ತಾರೆ

ವಿದ್ಯೋದಯ ಪ್ರೌಢಶಾಲಾ ಸಂಘ

ಟಿ ನರಸೀಪುರದ ವಿದ್ಯೋದಯ ಪ್ರೌಢಶಾಲೆ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಗೆ ಈ ಸಾಲಿನಲ್ಲಿ ಚುನಾವಣೆಯು ನಡೆದು ಉಪಾಧ್ಯಾಯರುಗಳ ಪರವಾಗಿ ಮುಖ್ಯೋಪಾಧ್ಯಾಯರಾದ ಶ್ರೀ ಟಿ ಪಿ ಸತ್ಯನಾರಾಯಣರವರು ಅಧ್ಯಕ್ಷರು, ಶ್ರೀ ಜಿ ಕೆ ವೆಂಕಟರಾಮಯ್ಯನವರು ಉಪಾಧ್ಯಕ್ಷರು, ಶ್ರೀ ಆರ್ ಕೆ ಶರ್ಮರವರು ಕಾರ್ಯದರ್ಶಿ ಮತ್ತು ಆರ್ ರುದ್ರಯ್ಯನವರು ಖಜಾಂಚಿಯಾಗಿ ಆರಿಸಲ್ಪಟ್ಟಿರುತ್ತಾರೆ ವಿದ್ಯಾರ್ಥಿಗಳ ಪರವಾಗಿ ಶ್ರೀ ಆರ್ ಗೋವಿಂದರಾಜು ಮತ್ತು ಟಿ ಎ ಮೂರ್ತಿಯವರು ಕಾರ್ಯದರ್ಶಿಗಳಾಗಿಯೂ ಜ|| ಖಲೀಲ್ ಉರ್ ರಹಮಾನರವರು ವ್ಯವಸ್ಥಾಪಕರಾಗಿಯೂ ಚುನಾಯಿತರಾಗಿರುವರು

ಹೆಮ್ಮರಗಾಲದಲ್ಲಿ ಪ್ರಭುಗಳ ವರ್ಧಂತಿ

ಶ್ರೀಮನ್ಮಹಾರಾಜರವರ ೩೪ ನೇ ವರ್ಷ ವರ್ಧಂತಿ ಪ್ರಯುಕ್ತ ಕಳೆದ ೧೪ ನೇ ತಾ|| ನಂಜನಗೂಡು ತಾಲ್ಲೂಕು ಹೆಮ್ಮರಗಾಲದಲ್ಲಿ ಎಲ್ಲ ದೇವಾಲಯಗಳಲ್ಲೂ ಪೂಜಾದಿಗಳನ್ನು ನಡೆಸಿ ಶ್ರೀಮನ್ಮಹಾರಾಜರಿಗೆ ಶ್ರೇಯಸ್ಸನ್ನು ಕೋರಲಾಯಿತು ಗ್ರಾಮಪಂಚಾಯಿತಿಯವರು ಶ್ರೀ ಹೆಚ್ ವಿ ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ರಾಜಭಕ್ತಿಯನ್ನು ವ್ಯಕ್ತಪಡಿಸಿದರು ಶಾಲಾ ಬಾಲಕ ಬಾಲಕಿಯರಿಗೆ ಸಿಹಿ ತಿಂಡಿಗಳನ್ನು ಹಂಚಲಾಯಿತು

ಧಾನ್ಯದ ಹತೋಟಿ ಪೂರ್ಣವಾಗಿ ಹೋಗುವುದಿಲ್ಲ

ದೇಶದಲ್ಲಿ ಆಹಾರದ ಹತೋಟಿಯನ್ನು ಪೂರ್ಣವಾಗಿ ತೆಗೆದುಹಾಕುವುದಿಲ್ಲವೆಂದು ಪಂಡಿತ ನೆಹರೂರವರು ಪ್ರಾಂತ್ಯಗಳ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು, ಹತೋಟಿಗಳ ಬಗ್ಗೆ ಇದ್ದ ಸಿಬ್ಬಂದಿಯನ್ನು ಪೂರ್ಣವಾಗಿ ತೆಗೆದುಹಾಕಬಾರದೆಂದು ತಿಳಿಸಿರುವರೆಂದು ವರದಿಯಾಗಿದೆ ಹತೋಟಿಯು ರದ್ದಾಗಿರುವ ಕಡೆಗಳಲ್ಲೂ ಧಾನ್ಯ ಸಂಗ್ರಹಣ ಕಾರ್ಯವನ್ನು ಕೈಗೊಳ್ಳಬೇಕೆಂದು ಅವರು ಸೂಚಿಸಿರುವರೆಂದು ಹೇಳಲಾಗಿದೆ ಹತೋಟಿಯನ್ನು ರದ್ದು ಮಾಡಿರುವ ಪ್ರಯೋಗವು ಯಶಸ್ವಿಯಾಗದಿದ್ದರೆ ಮತ್ತೆ ಹತೋಟಿಗಳನ್ನು ಹಾಕಬೇಕಾಗಬಹುದೆಂದೂ ಸಹಾ ಅವರು ಸೂಚಿಸಿರುತ್ತಾರೆ

ವಿದ್ಯುಚ್ಛಕ್ತಿ ನೆಯ್ಗೆ ಮಗ್ಗಗಳ ಕಾರ್ಮಿಕರ ಸಂಘ

ರಾಜಧಾನಿಯ ವಿದ್ಯುಚ್ಛಕ್ತಿ ನೆಯ್ಗೆ ಮಗ್ಗಗಳ ಕಾರ್ಮಿಕರ ಸಂಘದ ಕಛೇರಿಯನ್ನು ಕಬೀರ್ ರಸ್ತೆಯಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ಕಛೇರಿಯ ಕಟ್ಟಡದಲ್ಲಿ ತೆರೆಯಲಾಗಿದೆ ಇನ್ನೂ ಸದಸ್ಯರಾಗದೇ ಇರುವ ಎಲ್ಲ ಉದ್ಯಮದ ಕೆಲಸಗಾರರು ಜಾಗ್ರತೆ ಸೇರಬೇಕೆಂದು ಕೋರಲಾಗಿದೆ

ಮಹಾರಾಜರ ವರ್ಧಂತ್ಯುತ್ಸವ

ಟಿ ನರಸೀಪುರದ ವಿದ್ಯೋದಯ ಹೈಸ್ಕೂಲಿನ ವಿದ್ಯಾರ್ಥಿ ಸಂಘದವರು ಈ ೧೪ ನೇ ತಾ|| ಶ್ರೀಮನ್ಮಹಾರಾಜರ ೩೪ ನೇ ವರ್ಷದ ವರ್ಧಂತಿ ಉತ್ಸವವನ್ನು ನೆರವೇರಿಸಿದರು ಶಾಲೆಯ ಉಪಾಧ್ಯಾಯರಾದ ಶ್ರೀ ಎಸ್ ನಂಜಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮನ್ಮಹಾರಾಜರಿಗೆ ಶುಭಾಶಯಗಳನ್ನು ಕೋರಲಾಯಿತು

ಚಾಮುಂಡೇಶ್ವರಿ ಟಾಕೀಸ್

16 7 52 ರಿಂದ ಪ್ರತಿದಿನ 3 ಆಟಗಳು

ಅಶೋಕ್ ಕುಮಾರ್

(ಹೊಸಾಹೊಸ ಪ್ರಿಂಟು)

ತ್ಯಾಗರಾಜಭಾಗವತರ್ ಕನ್ನಾಂಬ ನಾಗಯ್ಯ ಪಾತ್ರವಹಿಸಿರುವ ತಮಿಳು ಚಿತ್ರ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ ರೂ ಗೆ	
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹೊ ಗೋಧಿ	[illegible]	
ಹುರಳಿ	[illegible]	[illegible]
ತೊಗರಿ	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಹುಲಸಂದೆ	[illegible]	[illegible]
ಮೆಣಸಿನಕಾಯಿ ಸಣ್ಣ ಗಟ್ಟಿ	[illegible]	[illegible]
ಸೀಗೆಕಾಯಿ	[illegible]	[illegible]
ತೆಂಗಿನಕಾಯಿ ೧೧೦೦	[illegible]	[illegible]

ಎಲ್ಲಾ ಬಗೆಯ

ಅಲೋಪಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಸೂಲ್‌ಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಕ್ಕೆ ನಂಜುಂಡಸ್ವಾಮಿ ಸಂಗೀತ ಮಧ್ಯಾಹ್ನ ೧ ೪೦ ಕ್ಕೆ ಹಾರ್ಮೋನಿಯಂ ಸುಬ್ರಹ್ಮಣ್ಯ ಅಯ್ಯರ್ ರವರ ಸಂಗೀತ ೨ ಎ ಕೆ ಸುಬ್ಬರಾವ್ ವೀಣಾ ವಾದನ ಸಂಜೆ ೫ ೪೦ ಕ್ಕೆ ವೆಂಕಟ ಸುಬ್ಬಯ್ಯ ಸಂಗೀತ ೭ ೧೦ ಕನ್ನಡ ಗೀತೆಗಳು ೭ ೩೦ ಕ್ಕೆ ನಂಜುಂಡಸ್ವಾಮಿ, ಸಂಗೀತ ಲ ಭೀಮಸೇನ ಜೋಷಿ ದೇವರನಾಮ ೮ ೪೦ ಎ ಕೆ ಸುಬ್ಬರಾವ್ ವೀಣಾ ವಾದನ ೯ ೧೫ ರಲ್ಲಿ ವಿವಿಧ

ಒಲಂಪಿಯಾ ಟಾಕೀಸ್

17—7—52ರಿಂದ ಅಮೋಘ 2ನೆಯ ವಾರ ಪ್ರತಿ ದಿನ 3 ಆಟಗಳು

ಬಿ.ಟಿ ಸಹೋದರ ಯವರ ರಾಗರಂಗ್

ಪಾತ್ರ – ಅಶೋಕ್ ಕುಮಾರ್ ಗೀತಾ ಬಾಲಿ, ಸುಧಾಬಾಲಿ

ಬೆಳಗಿನ ಪ್ರದರ್ಶನ

18-7 52 ರಿಂದ 3 ದಿನಗಳು

ಪತಂಗ– ಪಾತ್ರ ನಿಗಾರ್ ಶ್ಯಾಂ



PFAFF SEWING MACHINES

(Made in Germany)

ಪಫ್ ಹೊಲಿಗೆಯ ಯಂತ್ರಗಳು

ಪಫ್ ಹೊಲಿಗೆಯ ಯಂತ್ರವೂ ಮತ್ತು ಇದಕ್ಕೆ ಸಂಬಂಧಪಟ್ಟ ಸಾಮಾನುಗಳೂ ಬಹು ಕಾಲ ಬಾಳಿಕೆ ಬರುತ್ತವೆ ಎಂಬುದೂ ಮತ್ತು ಇತರ ಹೊಲಿಗೆ ಯಂತ್ರಕ್ಕಿಂತ ಬಲವಾಗಿವೆ ಎಂಬುದೂ ಎಲ್ಲರಿಗೂ ತಿಳಿದ ಅಂಶವಾಗಿದೆ

ಈಗ ತಾನೆ ಹೊಸದಾಗಿ ಬಂದಿರುವ ಪಫ್ ಹೊಲಿಗೆ ಯಂತ್ರಗಳು ಮತ್ತು ಇತರ ಸಾಮಾನುಗಳಿಗೆ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿರಿ

ಕೆ ಎಸ್ ನಂಜಪ್ಪ,

1382 ಕಬೀರ್ ರೋಡ್, ಮೈಸೂರು

ಹತ್ತಿ ಮಾರಾಟದ ಸಹಕಾರ ಸಂಘ, ಲಿಮಿಟೆಡ್

ಇಲವಾಲದ ರಸ್ತೆ ಮೈಸೂರು

ಪ್ರಸಿದ್ಧ ಪತ್ರಿಕೆ

ಮೇಲ್ಕಂಡ ಸಹಕಾರ ಸಂಘಕ್ಕೆ ಸೇರಿದ ಸುಮಾರು 2500 ಮಣ ಎಂ ಎ 5 ನೇ ನಂಬರಿನ ಹತ್ತಿಯ ಬೀಜ (ಕಾಳು) ಮಾರಾಟಕ್ಕಿದೆ ಈ ಬೀಜವನ್ನು ದನಗಳ ಮೇವಿಗಾಗಿ ಮಾರಾಟ ಮಾಡಿಕೊಳ್ಳುವವರಿಗೆ ಒಳ್ಳೆ ಸಮಯ ಕೊಳ್ಳಬಿಚ್ಛಿಸುವವರು ಜುಲೈ ತಿಂಗಳು 22 ನೇ ತಾರೀಖು ಸಾಯಂಕಾಲ 3 ಘಂಟೆಯೊಳಗಾಗಿ 100 ರೂಪಾಯಿ ಡಿಪಾಜಿಟ್ಟಿನೊಡನೆ ಸೀಲಾದ ಟೆಂಡರನ್ನು ಮೈಸೂರು ಜಿಲ್ಲೆ ವ್ಯವಸಾಯದ ಇಲಾಖೆ ಅಸಿಸ್ಟೆಂಟ್ ಡೈರೆಕ್ಟರವರ ಆಫೀಸಿಗೆ ತಲುಪಿಸಿ ರಶೀದಿ ಪಡೆಯಬಹುದು ಬೀಜದ ದಾಸ್ತಾನನ್ನು ಮೈಸೂರು ಟಿ ಟಿ ಮಿಲ್ಲಿನಲ್ಲಾಗಲೀ ಅಥವಾ ಮೇಲ್ಕಂಡ ಆಫೀಸಿನಲ್ಲಾಗಲೀ ಪರೀಕ್ಷಿಸಬಹುದು ಟೆಂಡರನ್ನು ಒಪ್ಪಿಕೊಂಡು ತಿಳುಹಿಸಿದ ಮೂರು ದಿವಸದೊಳಗಾಗಿ ಸರಕನ್ನು ಪಡೆದು ಹಣ ಪಾವತಿ ಮಾಡದಿದ್ದಲ್ಲಿ ಡಿಪಾಜಿಟ್ ಮೊಬಲಗನ್ನು ವಾಪಸ್ಸು ಕೊಡ ವುದಿಲ್ಲ.

ಸಿ. ಎಂ. ರೇವಣ್ಣ,

ಮ್ಯಾನೇಜಿಂಗ್ ಪ್ರೆಸಿಡೆಂಟರು,

ಹತ್ತಿ ಮಾರಾಟದ ಸಹಕಾರ ಸಂಘ, ಲಿಮಿಟೆಡ್

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತ.

❋ ಅತ್ಯುತ್ತಮವಾದ ಒಗೆಯುವ ಸಾಬೂನು

❋ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು

❋ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ

❋ ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

Edited, Printed and Published by A R Nagarajan at Sadhvi Press, D Subbiah Road Mysore.

ರಿಜಿಸ್ಟರ್ಡ್ ನಂ 762 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೧೮-೬ ೫೩ [ಸಂಚಿಕೆ ೨೯೦

ಕೊರಿಯಾ ಶಾಂತಿಗೆ ಚೀಣದ ಒಡಂಬಡಿಕೆ?

ನಗರದಲ್ಲಿ ಆಹಾರ ಹತೋಟಿ ರದ್ದಿನ ವಿಷಯ

ಆಹಾರದ ಡೈರೆಕ್ಟರ್ ವಿವರಣೆ

ಮೈಸೂರು ೧೭

ಸಂಸ್ಥಾನದ ಆಹಾರ ಡೈರೆಕ್ಟರ್ ಶ್ರೀ ಎಂ ಎಸ್ ಹಿರಣ್ಣಯ್ಯನವರು ನೆನ್ನೆ ಪತ್ರಿಕಾ ಸಮ್ಮೇಳನ ನಡೆಸಿ, ಮೈಸೂರು ನಗರದಲ್ಲಿ ಆಹಾರ ಪರಿಸ್ಥಿತಿಯು ತೃಪ್ತಿಕರವಾಗಿದೆಯೆಂದು ತಿಳಿಸಿದರು. ಗೋಧಿಯ ದಾಸ್ತಾನು ಹೇರಳವಾಗಿರವುದೆಂದೂ, ಅದು ಹಸನಾಗಿರುವುದೆಂದೂ, ಬೆಲೆಯನ್ನು ಇಳಿಸುವುದರಿಂದ ಪೂರ್ತಿ ದಾಸ್ತಾನು ಖರ್ಚಾಗುವ ಸಂಭವವಿರುವುದೆಂದೂ ಹೇಳಿದರು. ಸ್ಥಳೀಯವಾಗಿ ತಯಾರು ಮಾಡಲಾದ ಮೈದಾ ಮತ್ತು ರವೆಯನ್ನು ಕಾರ್ಡುದಾರರಿಗೆ ಕೊಡಲು ಸರ್ವ ಪ್ರಯತ್ನವನ್ನೂ ನಡೆಸಲಾಗುವುದೆಂದು ಅವರು ತಿಳಿಸಿದರು. ಮೈದಾ ಬೆಲೆಯನ್ನು ರೀಲ್ ೫೦ ರಷ್ಟು ಇಳಿಸಲಾಗಿದೆಯೆಂದೂ ಅವರು ಹೇಳಿದರು. ಮೈಸೂರು ನಗರದಲ್ಲಿ ಆಹಾರದ ಹತೋಟಿ ರದ್ದಿನ ಬಗ್ಗೆ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಾಯಲಾಗುತ್ತಿರವುದೆಂದೂ ಅವರು ತಿಳಿಸಿದರು. ಪಡಿತರವನ್ನು ವಜಾ ಮಾಡುವುದರಿಂದ ಉದ್ಭವಿಸುವ ಇತರ ಪ್ರಶ್ನೆಗಳು ಸರ್ಕಾರದ ಪರಿಶೀಲನೆಯಲ್ಲಿವೆಯೆಂದು ಅವರು ಸೂಚಿಸಿದರು.

ಇನ್ನು ಮುಂದೆ ಮೈಸೂರು ಸಂಸ್ಥಾನದವರು ಕೇಳುವವರೆಗೆ ಇಲ್ಲಿಗೆ ಗೋಧಿಯನ್ನು ಕಳುಹಿಸಬಾರದೆಂದು ಕೇಂದ್ರ ಸರ್ಕಾರವನ್ನು ಸಂಸ್ಥಾನ ಸರ್ಕಾರದವರು ಕೋರಿರುವರೆಂದು ಶ್ರೀ ಎಂ ಎಸ್ ಹಿರಣ್ಣಯ್ಯನವರು ತಿಳಿಸಿದರು.

ಹರಿಕಥೆ

ರಾಜಧಾನಿಯ ಸುಬ್ಬರಾಯನ ಕರೆಯ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಈ ದಿನದಿಂದ ಪ್ರತಿ ನಿತ್ಯವೂ ಸಂಜೆ ೫ ೩೦ ಘಂಟೆಯಿಂದ ೮ ರವರೆಗೆ ಹರಿದಾಸ ಭೂಷಣ ಶ್ರೀ ಟಿ ಕೆ ವೇಣುಗೋಪಾಲ ದಾಸರವರಿಂದ ಉತ್ತರಾಂಗದ ಎಂಬ ಹರಿಕಥೆಯು ನಡೆಯುವುದು.

ಮೈಸೂರು ಪಂಡಿ ಕೊತ್ತಲ್ ಆಗ್ರಹಾರದ ಬೀದಿ ಶ್ರೀ ಚೌಡೇಶ್ವರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕೊನೇ ಆಡಿ ಶ್ರಾವಣದ ಪ್ರಯುಕ್ತ ಬೆಂಗಳೂರಿನ ಕೀರ್ತನ ಶಿರೋಮಣಿ ಶ್ರೀ ಪಿ ರಾಮಸ್ವಾಮಿ ನಾಯ್ಡುರವರಿಂದ ನಾಳೆ ಸಂಜೆ ೭ ಘಂಟೆಗೆ ಸಿವ ಗಂಧರ್ವ ಕುಮಾರಿ ಎಂಬ ಶಿವಕಥೆಯು ನಡೆಯುವುದು.

೫೦೦೦ ಜನ ಹಸಿದವರ ಮೇಲೆ ಲಾಠಿ ಪ್ರಹಾರ

ಹಸಿದು ನಡೆದು ಒಂದವರೆಂದು ಹೇಳಲಾದ ೫ ಸಾವಿರ ಜನರ ಗುಂಪಿನ ಮೇಲೆ ರಣಘಾಟಿನ ಪೋಲೀಸರು ಲಾಠಿ ಪ್ರಹಾರ ಮಾಡಿದರೆಂದು ಕಲ್ಕತ್ತಾ ವರದಿಯೊಂದು ತಿಳಿಸಿರುತ್ತದೆ. ಅನಂತರಗಿ ಗಾಯಗಳಾಗಿವ ಹಲವರನ್ನು ವಶ್ತಗಿರಿ ಮಾಡಿ ಅವರ ಪೈಕಿ ಕೆಲವರನ್ನು ಬಡಗದ ಮಾಡಲಾಯಿತು. ಇದರಲ್ಲಿ ಹರಿತಾಳವನ್ನು ಆಚರಿಸಲಾಯಿತು.

ಶಾಸನ ಸಭೆಯಲ್ಲಿ ಸಭಾ ಪರಿತ್ಯಾಗ

ಬೆಂಗಳೂರು ೧೭

ಮೈಸೂರಿನ ಕಿರಿಯ ಶಾಸನ ಸಭೆಯು ನೆನ್ನೆ ಮುಕ್ತಾಯಗೊಂಡಿತು. ಕೊನೆಯ ಗಳಿಗೆಯಲ್ಲಿ ಸಂಯುಕ್ತ ಪ್ರಜಾ ಪಕ್ಷದ ೧೦ ಮಂದಿ ಸದಸ್ಯರು ಜ ಇಮಾಂರವರ ನೇತೃತ್ವದಲ್ಲಿ ಸಭಾ ಪರಿತ್ಯಾಗ ಮಾಡಿದರು. ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಮಸೂದೆಯು ಚರ್ಚೆಗೆ ಬಂದಾಗ ಎರಡು ವಿಧಿಗಳನ್ನು ಬಿಟ್ಟುಬಿಡಬೇಕೆಂಬ ಸಲಹೆಯನ್ನು ಶ್ರೀ ಚೀನಪ್ಪ ಸಾಹುಕಾರ ಮಾಡಲು ಅದನ್ನು ಜ ಇಮಾಂ ಮತ್ತು ಶ್ರೀ ಬಿ ಹೆಚ್ ಗೌಡರು ವಿರೋಧಿಸಿದರು. ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಸದರಿ ನಿಬಂಧನಗಳನ್ನು ಕೈ ಬಿಡದಿದ್ದರೆ, ಮಸೂದೆಯ ಅಂಗೀಕಾರವನ್ನು ತಡ ಮಾಡಬೇಕಾಗುವುದೆಂದೂ ಹೊಸ ಜಿಲ್ಲಾ ಬೋರ್ಡುಗಳನ್ನು ರಚಿಸುವುದು ಮುಂದೆ ಹೋಗುವುದೆಂದೂ ತಿಳಿಸಿದರು.

ಸರ್ಕಾರದವರು ಈ ವಿಷಯದ ಬಗ್ಗೆ ಉಪವಾದ ವರ್ತನೆಯನ್ನು ಅವಲಂಬಿಸಿರುವರೆಂದು ಪ್ರತಿಭಟಿಸಿ ಸಭಾತ್ಯಾಗ ಮಾಡಲಾಯಿತು.

ಜೇನು ಹುಳುಗಳ ಕಡಿತದಿಂದ ಅವಾಂತರ

ಮಲಬಾರಿನ ಬಾಲುಸ್ಸೇರಿ ಎಂಬಲ್ಲಿ ಒಂದು ಮರಕ್ಕೆ ಕಟ್ಟಿದ ಜೇನುಗೂಡನ್ನು ಆಹಾರವೆಂದು ಭಾವಿಸಿ ಒಂದು ಹದ್ದು ಹಾರಿಬಂದು ಅನಾಮತ್ತಾಗಿ ಗೂಡನ್ನು ಎತ್ತಿಕೊಂಡು ಹೋಯಿತೆಂದೂ ಅನಂತರ ಅದಕ್ಕೆ ಜೇನು ಕಡಿಯಲು ಅದನ್ನು ಎತ್ತಿ ಹಾಕಲಾಗಿ ಒಬ್ಬರ ಮನೆ ಅಂಗಳದಲ್ಲಿ ಅದು ಬಿದ್ದು, ಅಲ್ಲಿ ಕಟ್ಟಿಹಾಕಿದ್ದ ನಾಯಿಯೊಂದನ್ನು ಹುಳುಗಳು ಕಚ್ಚಿದುವೆಂದೂ ನಾಯಿಯ ಕೂಗಾಟವನ್ನು ಕೇಳಿ ಇಬ್ಬರು ಮಕ್ಕಳು ಓಡಿ ಬರಲಾಗಿ ಅವುಗಳನ್ನೂ ಜೇನು ಹುಳುಗಳು ಕಡಿದುವೆಂದೂ ಹೇಳಲಾಗಿದೆ. ನಾಯಿಯು ೪ ಗಂಟೆ ಕಾಲ ತುಂಬಾ ಸಂಕಟಪಟ್ಟು, ರಕ್ತವನ್ನು ಕಾರಿ ಪ್ರಾಣ ಬಿಟ್ಟಿತೆಂದು ಗೊತ್ತಾಗಿದೆ.

ಕೊರಿಯ ಯುದ್ಧ ಖೈದಿಗಳ ರಕ್ಷಣೆ ಜವಾಬ್ದಾರಿ ಭಾರತಕ್ಕೆ

ಕೊರಿಯಾ ಶಾಂತಿ ಸಂಧಾನವು ಮುರಿದುಹೋಗಲು ಕಾರಣವಾದ ಯುದ್ಧ ಖೈದಿಗಳ ರಕ್ಷಣೆಯ ಜವಾಬ್ದಾರಿಯನ್ನು ಭಾರತಕ್ಕೆ ವಹಿಸುವ ಸಲಹೆಯನ್ನು ಚೀಣವು ಒಪ್ಪಿರುವುದಾಗಿ ಇಲ್ಲಿನ ಪತ್ರಿಕೆಗಳು ತಿಳಿಸಿರುತ್ತವೆ. ಇದರಿಂದ ಕೊರಿಯಾದಲ್ಲಿ ಜಾಗತಿಕ ಶಾಂತಿ ನೆಲೆಸಲು ಸಾಧ್ಯವಾಗಬಹುದೆಂದು ಹೇಳಲಾಗಿದೆ. ಚೀಣವು ಈ ಬಗ್ಗೆ ಹಲವು ಷರತ್ತುಗಳನ್ನು ವಿಧಿಸಿರುವುದೆಂದೂ ಗೊತ್ತಾಗಿದೆ.

೪ ಮಕ್ಕಳಾದುದನ್ನು ಕೇಳಿ ತಂದೆಗೆ ಆಲಸ್ಯ

ನ್ಯೂಯಾರ್ಕಿನ ಸ್ಟೆಲಾಸ್ ಸಿಂಕಿನ ಎಂಬವನಿಗೆ ೩ ದಿನಗಳ ಹಿಂದೆ ೪ ಮಕ್ಕಳು ಏಕ ಕಾಲದಲ್ಲಿ ಜನಿಸಿದುವೆಂದೂ ಅದನ್ನು ಕೇಳಿ ಅವನಿಗೆ ಗಾಬರಿಯಾಗಿ ಅವನನ್ನು ಆಸ್ಪತ್ರೆಗೆ ಸಾಗಿಸಿ, ಅವನ ಪತ್ನಿಯು ಇರುವ ಬಳಿ ಮಲಗಿಸಲಾಯಿತೆಂದೂ ವರದಿಯಾಗಿದೆ. ತಾಯಿ ಮತ್ತು ಮಕ್ಕಳು ಆರೋಗ್ಯವಾಗಿರುವುದಾಗಿ ಗೊತ್ತಾಗಿದೆ.

ಕಲ್ಕತ್ತದಲ್ಲಿ ಪೋಲೀಸರಿಗೂ ವಿದ್ಯಾರ್ಥಿಗಳಿಗೂ ಕಾಳಗ

ಕಲ್ಕತ್ತದಲ್ಲಿ ಸೆನೆಟರ ಭವನದ ಸಮೀಪದಲ್ಲಿ ನೆನ್ನೆ ಸಂಜೆ ೬ ಸಾವಿರ ವಿದ್ಯಾರ್ಥಿಗಳು ಅಶ್ರು ವಾಯುವನ್ನು ಉಪಯೋಗಿಸಿದ ಪೋಲೀಸರೊಡನೆ ೨೦ ನಿಮಿಷ ಕಾಲ ಕಾಳಗ ನಡೆಸಿದರೆಂದು ವರದಿಯಾಗಿದೆ. ಪೋಲೀಸರ ಎರಡು ಮೋಟಾರು ಬೈಸಿಕಲ್ಲುಗಳಿಗೆ ಬೆಂಕಿಯನ್ನಿಟ್ಟು ಇಬ್ಬರಿಗೆ ಅಂಗ ಊನ ಮಾಡಲಾಯಿತೆಂದು ಹೇಳಲಾಗಿದೆ. ಇಬ್ಬರು ಪೋ॥ ಇನ್ಸ್‌ಪೆಕ್ಟರು, ೮ ಜನ ಸಾರ್ಜೆಂಟರು, ೬ ಜನ ಅಶ್ವದಳದವರಿಗೆ ಪೆಟ್ಟು ಬಿದ್ದಿದೆ. ೩೦ ಜನರಿಗೆ ಗಾಯವಾಗಿದೆ. ೩ ಜನ ಶಾಸನ ಸಭಾ ಸದಸ್ಯರೂ ಇವರು ಸ್ತ್ರೀಯರೂ ಸೇರಿ ೧೦೫ ಮಂದಿಯು ದಸ್ತಗಿರಿಯಾಗಿವೆ. ರಾತ್ರಿಯೂ ಸಹ ಬೇರೆ ಕಡೆಯಲ್ಲೂ ಗಲಾಟೆಯಾಗಿ ಜನರು 'ಅಸೆಂಬ್ಲಿ ಚಲೋ' ಎಂದು ಕೂಗಿಕೊಂಡರೆಂದು ಹೇಳಲಾಗಿದೆ. ೩ ವಾರಗಳ ಕಾಲ ಸಭೆ ಮೆರವಣಿಗೆ ನಡೆಸುವಂತ ಪ್ರತಿಬಂಧಕ ಹಾಕಲಾಗಿದೆ.

ಸಿನಿಮಾ ಮಂದಿರಗಳಲ್ಲಿ ಧೂಮಪಾನ ನಿಷೇಧ ಶಾಸನ

ಬೆಂಗಳೂರು ೧೭

ಸಿನಿಮಾ ಮಂದಿರಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸುವ ಶಾಸನದ ಮಸೂದೆಯನ್ನು ಶಾಸನ ಸಭೆಯು ನೆನ್ನೆ ಅಂಗೀಕರಿಸಿತು. ನಿಬಂಧನೆಗಳನ್ನು ಉಲ್ಲಂಘಿಸುವವರನ್ನು ಹೊರಕ್ಕೆ ಕಳುಹಿಸುವುದಲ್ಲದೆ ೫೦ ರೂ ವರೆಗೆ ದಂಡವನ್ನು ವಿಧಿಸಲು ಶಾಸನದಲ್ಲಿ ಅವಕಾಶ ಕಲ್ಪಿಸಲಾಗಿದೆ.

ದ॥ ಆಫ್ರಿಕದ ಮುಖಂಡರಿಗೆ ೬ ತಿಂಗಳು ಸಜಾ

ದಕ್ಷಿಣ ಆಫ್ರಿಕಾದ ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ॥ ವೈ ಎಂ ದಾದೂರವರಿಗೆ ಕಮ್ಯೂನಿಸ್ಟರ ದಮನ ಶಾಸನದ ಪ್ರಕಾರ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ. ದಾದೂರವರು ಹೇಳಿಕೆಯೊಂದನ್ನಿತ್ತು ತಾವು ನಿಷ್ಠಾಬದ್ಧ ಪ್ರಜೆಯೆಂದೂ, ಅನ್ಯಾಯವಾದ ಕಾನೂನುಗಳನ್ನು ಮಾತ್ರ ಕ್ರಮಬದ್ಧ ರೀತಿಯಲ್ಲಿ ಎದುರಿಸುವುದಾಗಿಯೂ ಹೇಳಿರುವರು.

ಹೈದರಾಬಾದಿನಲ್ಲಿ ಸ್ವಲ್ಪ ಮಟ್ಟಿನ ಹತೋಟಿ ರದ್ದು

ಹೈದರಾಬಾದಿನ ರಾಜಧಾನಿ ಮತ್ತು ಸಿಕಂದರಾಬಾದ ಗಳು ವಿನ ಸಂಸ್ಥಾನದ ಇತರ ಭಾಗಗಳ ಆಹಾರದ ಹತೋಟಿಯನ್ನು ರದ್ದು ಮಾಡಲು ಇಲ್ಲಿನ ಸರ್ಕಾರದವರ ನಿರ್ಧರಿಸಿರುವರೆಂದು ತಿಳಿದು ಬಂದಿದೆ.

ಅಧ್ಯಕ್ಷ ಟ್ರೂಮನ್ನರು ಆಸ್ಪತ್ರೆಗೆ

ಅಮೆರಿಕದ ಅಧ್ಯಕ್ಷ ಟ್ರೂಮನ್ನರು ವಿಷ ಸಂಬಂಧವಾದ ರೋಗ ಚಿಕಿತ್ಸೆಗಾಗಿ ಅಲ್ಲಿನ ಮಿಲಿಟರಿ ಆಸ್ಪತ್ರೆಯೊಂದಕ್ಕೆ ಸೇರಿರುವರು.

ವಿಶ್ವ ವನಮೃಗ ರಕ್ಷಣಾ ಸಮಿತಿಗೆ ಮಹಾರಾಜರು

ಬ್ರುಸಲ್ಸಿನಲ್ಲಿ ಕಾಡು ಮೃಗಗಳ ರಕ್ಷಣೆಗಾಗಿ ಇರುವ ಅಂತರ ರಾಷ್ಟ್ರೀಯ ಮಂಡಲಿಯ ವಿಶ್ವದ ಸದಸ್ಯರಾಗಿ ಭಾರತದಿಂದ ಹೆಸರನ್ನು ಕಳುಹಿಸಬೇಕೆಂದು ಕೋರಲಾಗಿದ್ದು ಮೈಸೂರಿನ ಶ್ರೀಮನ್ಮಹಾರಾಜರವರ ಹೆಸರನ್ನು ಭಾರತ ಸರ್ಕಾರದವರು ಸೂಚಿಸಿರುವರೆಂದು ಗೊತ್ತಾಗಿದೆ.

ಅಸ್ಸಾಂ ಪ್ರವಾಹದಲ್ಲಿ ೨ ಕೋಟಿ ರೂ ನಷ್ಟ

ಅಸ್ಸಾಂನಲ್ಲಿ ಒಂದು ವಾರ ಪ್ರವಾಹ ಉಂಟಾಗಿ ಒಟ್ಟು ೨ ಕೋಟಿ ರೂ ಗಳ ಬೆಲೆಯ ಭತ್ತ, ಸೆಣಬು, ಮತ್ತು ಚಹಾ ಬೆಳೆಗಳು ನಷ್ಟವಾಗಿರುವುದೆಂದು ಗೊತ್ತಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩ ಎಸ್ ಚಂದ್ರಶೇಖರಯ್ಯನವರ ಗೀತ ಮಧ್ಯಾಹ್ನ ೧೨ ೩೦ ಲಘು ಸಂಗೀತ ವಿದ್ವಾನ್ ಸೆಟ್ಟಿಸ ಕಲಾವಿದರು ಸಂಜೆ ೫ ೩೦ ಮಕ್ಕಳ ೬ ೩೦ ನಾಗಾಬಾಯಿ ನರಸಪ್ಪ ಸಂಗೀತ ೭ ೩೦ ಗಾನ ವಿಹಾರ ೭ ೪೫ ಅದ್ ಲೀಲಾಂಬತ ಪ್ರಬಂಧಗಳ ಓದುವಿಕೆ ೮ ರಿಂದ ವಾದ್ಯ ೯ ೧೫ ಚಿತ್ರ ಸಂಗೀತ ೯ ೩೦ ಅರ್ಕೆಸ್ಟ್ರಾ

ವಿಮಾನ ಬಡಿದು ೪ ಸ್ತ್ರೀಯರಿಗೆ ಪೆಟ್ಟು

ಇಂಗ್ಲೆಂಡಿನ ರಾಚೆಸ್ಟರ್ ನಗರದಲ್ಲಿ ಕಳೆದ ಭಾನುವಾರ ಕ್ರಿಸ್ತ ದೇವಾಲಯವೊಂದರಲ್ಲಿ ಪ್ರಾರ್ಥನೆ ಮುಗಿಸಿಕೊಂಡು ನಾಲ್ಕು ಸ್ತ್ರೀಯರು ಹಿಂದಿರುಗುತ್ತಿದ್ದಾಗ ವಿಮಾನವೊಂದು ಕೆಳಗೆ ಹಾರಿ ಬಂದು ಅವರಿಗೆ ಬಡಿಯಿತೆಂದೂ ತ ನಂತರ ವಿಮಾನವು ಕೆಳಗೆಬಿದ್ದು ಮುರಿದುಹೋಯಿತೆಂದೂ ಹೇಳಲಾಗಿದೆ ಒಬ್ಬಳು ಕೈ ಮೂಳೆಯನ್ನು ಮುರಿದುಕೊಂಡಿರುವಳು ಅವರನ್ನೆಲ್ಲಾ ಆಸ್ಪತ್ರೆಗೆ ಸಾಗಿಸಲಾಗಿದೆ

-: ಬೆಳಗಿನ ಪ್ರದರ್ಶನ :-

ಚಾಮುಂಡೇಶ್ವರಿ ಟಾಕೀಸ್

ಜಂಗಲ್ ಕ - ಜವಾಹಿರ್

ಪಾತ್ರ ಜಾನ್ ಕವಾಸ್ ನಾದಿಯಾ

ಗಣೆಯಲ್ಲಿ ೧ ಮೈಲಿ ಎತ್ತರದಿಂದ ಬಿದ್ದು ಮರಣ

ಆಫ್ರಿಕದ ಆರೆಂಜ್ ಫ್ರೀಸ್ಟೇಟ್ ಚಿನ್ನದ ಗಣಿಯಲ್ಲಿ ಒಂದು ಕಡೆ [illegible] ಟ್ಟೆಯು ಕಡಿದುಹೋದುದ[illegible] ಒಬ್ಬ ಬಿಳಿಯ ಮತ್ತು ೪ ಜನ ನೀಗ್ರೊ ಕೆಲಸಗಾರರು ೧ ಮೈಲಿ ಆಳದ ಹಳ್ಳಕ್ಕೆ ಬಿದ್ದು ಮಡಿದರೆಂದು ವರದಿಯಾಗಿದೆ [illegible] ತಹ ವ ತ್ತೊಂದು ಘಟನೆಯ[illegible] ದಿನಗಳ [illegible] ಂದೆ ನಡೆದು ೭ ಜನರು [illegible] ದಿರು

ರಾಜಕಮಲ್

18 7-52 ರಿಂದ 6ನೆ ವಾರ

ನನ್ನ ತಂಗಿ

[ತಮಿಳು]

Edited Printed and Published by A R Nagarajan at Sadhvi Press D Subbiah Road Mysore

ಕೊರಿಯಾ ಶಾಂತಿಗೆ ಒಪ್ಪುವವರೆಗೆ ವಿಮಾನ ಧಾಳಿ

ಕಮ್ಯೂನಿಸ್ಟರು ಶಾಂತಿಗೆ ಒಪ್ಪುವವರೆಗೂ ಅವರ ಯುದ್ಧ ಯಂತ್ರಗಳ ಮೇಲೆ ಬಲವಾದ ಧಾಳಿಗಳನ್ನು ವಿಶ್ವಸಂಸ್ಥೆ ವಿಮಾನಗಳು ನಡೆಸುವುವೆಂದು ಅಮೆರಿಕದ ಸೈನ್ಯಾಧಿಪತಿ ಜ|| ಕಾರ್ಲಿನ್‌ರವರು ತಿಳಿಸಿರುತ್ತಾರೆ ಉತ್ತರ ಕೊರಿಯದಿಂದ ಕಮ್ಯೂನಿಸ್ಟರು ಹೊರಟು ಹೋದ [illegible] ಅಲ್ಪ ಕಾಲದ ವರೆಗೂ ವಿಶ್ವಸಂಸ್ಥೆ ಸೈನ್ಯಗಳು ಅಲ್ಲಿಂದ ಕಾಲ್ತೆಗೆಯುವುದಿಲ್ಲವೆಂದು ಅವರು ಹೇಳಿರುವರು

ಭಾರತೀಯ ಸಂಸ್ಥೆಗಳಿಗೆ ಪಾಕೀಸ್ಥಾನದ ಅಡ್ಡಿ

ಪಾಕೀಸ್ಥಾನ ಸರ್ಕಾರ [illegible] ಡಾಲ್ಮಿಯಾ ಜೈನ್ ಸಿಮೆಂಟ್ ಡಕ್ಕಾ ವಿದ್ಯುಚ್ಛಕ್ತಿ ಆಕ್ಸಿಜನ್ ಉಕ್ಕು ಮತ್ತು ವಿದ್ಯುಚ್ಛಕ್ತಿ ಮತ್ತು ಇಂಜ[illegible] ರಿಂಗ್ ಕಂ

SRI GAYATHRI

TALKIES

Daily 2 Shows

[illegible]

LONE STAR

[illegible]

ENCHANTED QUEBEC [illegible]

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ ,	[illegible]	
ಹೊಂಗೆಬೀಜ	[illegible]	
ಹುರುಳಿ	[illegible]	[illegible]
ಹೆಸರು ,	[illegible]	[illegible]
ಅವರೆ ,	[illegible]	
ಉದ್ದು	[illegible]	[illegible]
ಕಡಲೆಕಾಯಿ	[illegible]	[illegible]
ಮೆಣಸಿನಕಾಯಿ		
ಹುಣಸೆ [illegible]	[illegible]	[illegible]
ಹುಣಸೇಹಣ್ಣು ,	[illegible]	
ಸೀಗೆಕಾಯಿ	[illegible]	
ತೆಂಗಿನಕಾಯಿ [illegible]	[illegible]	[illegible]

ಪೆನ್ನಿಗಳೆಂಬ ೨ ಭಾರತೀಯ ವ್ಯಾಪಾರ ಸಂಸ್ಥೆಗಳು ವ್ಯವಹಾರ ನಡೆಸಕೂಡದೆಂದು ಪಾಕೀಸ್ಥಾನದ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಡಾಲ್ಮಿಯಾ [illegible] ಮೆಂಟ್ ಕಂಪೆನಿಯನ್ನು ಮುಚ್ಚಲಾಗಿದೆ

ಒಲಂಪಿಯಾ ಟಾಕೀಸ್

[illegible] 7 [illegible]2ರಿಂದ ಅಮೋಘ 2ನೆಯ ವಾರ ಪ್ರತಿ ದಿನ 3 ಆಟಗಳು

ವಾಲಿ ಸಹೋದರಿ ಯರ ನ

ರಾಗರಂಗ್

ಪಾತ್ರ ಅಶೋಕ್ ಕುಮಾರ್ ಗೀತಾ ಬಾಲಿ, ಸುಧಾಬಾರಿ

ಬೆಳಗಿನ ಪ್ರದರ್ಶನ

18 ಮತ್ತು 19 ನೇ ತಾ॥ ಮಾತ್ರ

ಪತಂಗ. [illegible]

ಪ್ರಭುದೇವಾ ಟಾಕೀಸ್

ಪ್ರತಿ ದಿನ [illegible]

18 7-52 ರಿಂದ

2 ನೆಯ ವಾರ

.... ಜೆಮಿನಿ ಚಿತ್ರ

ಪ್ರಸಾರ ನೋಟೀಸು

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ

[illegible] 40 of 1951-52

[illegible] 17 of 50-51

ಡಿಕ್ರಿ [illegible] ಕೃಷ್ಣರಾಜಾರಾವ್

[illegible] ದೆಟರ [illegible] 1 [illegible] ಗ್ರಾಮದ ಲೇಟ್ ಶ್ಯಾನುಭೋಗ ಸಂಗಪ್ಪನವರ ಮಕ್ಕಳು ಎಂ ಎಸ್ ಪುಟ್ಟ[illegible], 2. ಇವರ 1 ನೇ ಮೈನರ್ ಮಗ ವಸಂತ ಕುಮಾರ್ [illegible]. 2 ನೆಯವನ ತನ್ನ ಮೈನರ್ ಗುಂಡೂರಾವ್

[illegible] ಕೆಳಗೆ [illegible] ಸ್ವತ್ತುಗಳು ಮೈಸೂರು [illegible] ದಿವಸ ಬೆಳಿಗ್ಗೆ 11 ಘಂಟೆ [illegible] ನೀಲಾಮು [illegible] ಮಾಡಲ್ಪಡುತ್ತವೆ [illegible] ಕೋರ್ಟು [illegible] ಮಾ [illegible] ಯಿಗಳ [illegible] ಇಷ್ಟವುಳ್ಳವರು [illegible] ಬಿಡ್ ಮಾಡಬಹುದು

ಷೆಡ್ಯೂಲು —

ಮೈಸೂರು [illegible] ಕೃಷ್ಣಮೂರ್ತಿಪುರದಲ್ಲಿರುವ ಡೋರ್ ನಂಬರ್ 1442 ನೇ ನಂಬರುಳ್ಳ ಪೂರ್ತಿ ಮನೆ

ಕೃಷ್ಣರಾಜನಗರದ ೨ ಬ್ಲಾಕು [illegible] ಗ್ರಾಮದಲ್ಲಿರುವ ಸರ್ವೆ ನಂಬರುಗಳು 54/1, 55/1 20?/1, 280 281, ಒಟ್ಟು ವಿಸ್ತೀರ್ಣ 10 ಎಕರೆ 10 ಗುಂಟೆ ಉಳ್ಳ ತರೀ ಜಮೀನು

[illegible] ತಾಲ್ಲೂಕು [illegible] ಹಳ್ಳಿಯಲ್ಲಿರುವುದು ಸರ್ವೆ ನಂಬರುಗಳು 108, 109 110 123 12? 1?9/1, 160 ಒಟ್ಟು ವಿಸ್ತೀರ್ಣ 13 ಎಕರೆ 18 ಗುಂಟೆ ಉಳ್ಳ ತರೀ ಜಮೀನು

[illegible] ಡಿಕ್ರಿ [illegible] ಡೆಟರುಗಳಿಗೂ [illegible] ರುವ ಪೂರ್ತಿ ಹಕ್ಕು ಮತ್ತು [illegible] ಜಮೀನುಗಳಲ್ಲಿ ಒಂದನೇ ಜಡ್ಜ್‌ಮೆಂಟ್ ಡೆಟರಿಗೆ ಇರುವ ಮೂರನೇ ಒಂದು ಹಿಸ್ಸೆ ಹಕ್ಕು [illegible] ಮಾಡಲ್ಪಡುತ್ತೆ

ಮೈಸೂರು 16-7 5[illegible]

ಡಿಕ್ರಿ ಹೋಲ್ಡರ ಪರ
ಕೆ ಗೋಪಾಲಾಚಾರ್

18-7-52 ರಿಂದ : ಪ್ರಾರಂಭ : ದಿನವಹಿ 3 ಆಟಗಳು

ಮೈಸೂರು ರಣಜಿತ್

ಮತ್ತು ಬೆಂಗಳೂರು ಸಾಗರ್ ಚಿತ್ರ ಮಂದಿರಗಳಲ್ಲಿ

ಜಗತ್ ಪಿಕ್ಚರ್ಸ್‌ರವರ ಮನೋಹರ ಪ್ರಣಯ ಕಥೆಯಿಂದ ಕೂಡಿದ ಹಿಂದಿ ಚಿತ್ರ

ಅಂಬರ್ AMBER

ಪಾತ್ರ - [illegible] ರಾಜ್‌ಕಪೂರ್ [illegible] ಮತ್ತು [illegible]

[illegible] ಜಯಂತ್ [illegible]

RAJSHRI RELEASE

ಶ್ರೀಲಕ್ಷ್ಮಿ ಮೈಸೂರು ** WE TWO ★ ನಾವಿಬ್ಬರು **

(ತಮಿಳು)

18—7—52 ರಿಂದ ಪ್ರತಿ ದಿನ 3 ಆಟಗಳು

[illegible] ನಂ 762 || [illegible] || ಇಂದಿನ ಪತ್ರಿಕೆ [illegible]

ಸಾಧ್ವಿ

ಸಂಪುಟ ೧೦] ಶುಕ್ರವಾರ ೧೭-೭-೫೩ [ಸಂಚಿಕೆ ೨೯೧

೨ ವಾರದಲ್ಲಿ ಕೊರಿಯಾ ಯುದ್ಧದ ಸಮಾಪ್ತಿ?

ಸೊಸೈಟಿ ವ್ಯವಹಾರದ ಬಗ್ಗೆ ಕೋರ್ಟಿನಲ್ಲಿ ಅರ್ಜಿಗಳು

ಮೈಸೂರು ೧೬

ಮೈಸೂರು ಕೋ ಆಪರೇಟಿವ್ ಸೊಸೈಟಿಯ ಅವಿಶ್ವಾಸದ ಪ್ರಕರಣದ ಪರಿಣಾಮವಾಗಿ ಜಿಲ್ಲಾ ನ್ಯಾಯಾಧೀಶರು ಕೊಟ್ಟಿದ್ದ ತಾತ್ಕಾಲಿಕ ಇಂಜಂಕ್ಷನ್ ಆಜ್ಞೆ ಮತ್ತು ಅವರ ಎಕ್ಸ್‌ಪಾರ್ಟಿ ಆಜ್ಞೆಯ ಪರಿಶೀಲನೆಯು ನಿನ್ನೆ ನ್ಯಾಯಾಲಯದಲ್ಲಿ ನಡೆಯಿತು ಶ್ರೀ ಎ ಎಸ್ ರುದ್ರಪ್ಪನವರು ಅರ್ಜಿಯೊಂದನ್ನು ಸಲ್ಲಿಸಿ ಶ್ರೀ ಎ ಕೃಷ್ಣಮೂರ್ತಿಯವರಿಗೆ ಸಂಸದ [illegible] ವಾದ ಹಕ್ಕನ್ನು ಕೋರ್ಟಿನವರು ಕೊಟ್ಟಿರುವುದು ಸರಿಯಲ್ಲವೆಂದೂ ಈ ವಿಷಯಗಳಲ್ಲಿ ಅವರೊಬ್ಬ ಪಾರ್ಟಿಯೆಂದು ಕೂಡ [illegible], ತಮ್ಮ ಕಡೆಯವರೆನ್ನು ನೇಮಿಸಿ ವಂತ ಕೋರಿದರು

ಶ್ರೀ ಗಳಾದ ಬಿ ಎಸ್ ಕಾಂಡದ ವ [illegible] ಮತ್ತು ಟಿ ಆರ್ ಜೋಸ್ಯರ್ ರವರು ಎದುರು ಅರ್ಜಿಯನ್ನು ಸಲ್ಲಿಸಿ, ಶ್ರೀ ಎ ಕೃಷ್ಣಮೂರ್ತಿಯವರ ನೇಮಕದ ಬಗ್ಗೆ ಈಗಾಗಲೇ ಮಾಡಿರುವ ಆಜ್ಞೆಯನ್ನು ಬದಲಾಯಿಸಲು ಕಾರಣವಿಲ್ಲವೆಂದೂ ತಿಳಿಸಿದ್ದರು ಎದುರು ಅರ್ಜಿದಾರರ ಪರವಾಗಿ ಶ್ರೀಗಳಾದ ಕೆ ಪುಟ್ಟಸ್ವಾಮಿ, ಎ ವೆಂಕಟೇಶಯ್ಯ ಮತ್ತು ಎ ಲಿಂಗಪ್ಪಯ್ಯನವರು ವಕಾಲತ್ತು ವಹಿಸಿರುವರು ವಿಚಾರಣೆಯು ೨೬ ನೇ ತಾರೀಖಿಗೆ ಮುಂದುವರಿಸಲ್ಪಟ್ಟಿದೆ

ವರ್ಧಂತ್ಯುತ್ಸವ

ರಾಜಧಾನಿಯ [illegible] ರಾಜಪುರದ ಕಸ್ತೂರಿ ಬಾಲಿಕಾ ಪಾಠಶಾಲೆಯಲ್ಲಿ ನಿನ್ನೆ ಶ್ರೀಮನ್ಮಹಾರಾಜರವರ [illegible] ವರ್ಧಂತ್ಯುತ್ಸವ ಪೌರಸಭಾ ಸದಸ್ಯರಾದ ಶ್ರೀ ಟಿ ಕೆ [illegible] ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಶಾಲೆಯ ಉಪಾಧ್ಯಾಯರುಗಳೂ, ವಿದ್ಯಾರ್ಥಿಗಳೂ ಉತ್ಸವದಲ್ಲಿ ಭಾಗಗಳಿಸಿದ್ದರು ಪ್ರಾರ್ಥನೆ ಗೀತಾಪಠಣ ಶ್ರೀ ಟಿ ಗುಂಡಪ್ಪನವರಿಂದ ಯದುವಂಶ ಚರಿತ್ರೆಯ ಬಗ್ಗೆ ಉಪನ್ಯಾಸಗಳು ನಡೆದುವು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಮೈಸೂರು ತಾಲ್ಲೂಕು ಕಸಬಾ [illegible] ಗನ ಹ[illegible]ಯಲ್ಲಿ ಮೊನ್ನೆ ವರ್ಧಂತಿ ಮಹೋತ್ಸವವು ಶ್ರೀ ಬಿ ಶಿವಲಿಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು ಶಾಲಾ ಉಪಾಧ್ಯಾಯರುಗಳಿಂದ ಶ್ರೀಮನ್ಮಹಾರಾಜರ ಗುಣ ಕಥನವಾಯಿತು ಬಾಲಕರಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ಪ್ರದೋಷ ಸಂಗೀತ

ರಾಜಧಾನಿಯ ಬಿ[illegible]ರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ [illegible] ಮುಂದಿರುವಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೬ ಘಂಟೆಗೆ ಕುಮಾರಿ ಚಂಪಾ ಮತ್ತು ಕುಮಾರಿ ಲೀಲಾ [illegible] ವರಿಂದ ಸಂಗೀತವೂ, ಎ|| ಎ ಕೃಷ್ಣಮೂರ್ತಿ ಅಯ್ಯಂಗಾರ್ ರವರ ಪಿಟೀಲು ಮತ್ತು ಶ್ರೀ ರಾಮಚಂದ್ರಾಚಾರ್ಯರ ಮೃದಂಗಗಳ ಸಮೇತ ನಡೆಯುವುದು ಸರ್ವರಿಗೂ ಆಹ್ವಾನವಿದೆ

ಭಿಕ್ಷುಕರ ಬಂಧನ

ರಾಜಧಾನಿಯ ದೇವರಾಜ ಪೋಲೀಸರು ನಿನ್ನೆ ೧೫ ಜನ ಭಿಕ್ಷುಕರನ್ನು ಬಂಧಿಸಿ ಭಿಕ್ಷುಕರ ವಸತಿಗೃಹಕ್ಕೆ ಸೇರಿಸಿದರು

ಕಾಲೇಜುಗಳಲ್ಲಿ ಸ್ಥಾನಗಳ ಬಗ್ಗೆ ಹೊಸ ಆಜ್ಞೆ

ಬೆಂಗಳೂರು ೮

ಸಂಸ್ಥಾನದ ಮೆಡಿಕಲ್ ಕಾಲೇಜುಗಳಲ್ಲಿ ಸ್ಥಾನಗಳನ್ನು ಒದಗಿಸುವ ಬಗ್ಗೆ [illegible] ಕಂಗದ [illegible] ಅವರ [illegible] ಸಂ[illegible] [illegible]ಯಲ್ಲಿ ಸ್ಥಾನಗಳ ಹಂಚಿಕೆಯಾಗದಿರುವುದರಿಂದ ಆ [illegible] ಮಾಡಲು ಸರ್ಕಾರದವರು ಸೂಚನೆಯೊಂದನ್ನು ನೀಡಿ ಆಯಾ ಕಾಲೇಜು [illegible]ಗಳಿಗೆ ಆಜ್ಞೆ ಕಳುಹಿಸಿರುವರೆಂದು ಗೊತ್ತಾಗಿದೆ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನೇ ಪ್ರಾಮುಖ್ಯವಾಗಿ ಗಣಿಸಕೂಡದೆ ಮೂ ಅವರ ಇತರ ಅರ್ಹತೆಗಳನ್ನು ಪರಿಶೀಲಿಸಬೇಕೆಂದೂ ಸೂಚಿಸ [illegible] ಅತ್ಯ ಬಿದ್ದರೆ ಹಿಂದುಳಿದವರ ಬಗ್ಗೆ ವಿಶೇಷ ಸಂದರ್ಭದಲ್ಲಿ ಶೇ|| [illegible] ಅಂಕ [illegible]ಯನ್ನು ಸಹ ಪರಿಗಣಿಸ [illegible] ಸರ್ಕಾರದವರು ತಿಳಿಸಿರುವರು

ಭಾರತದ ಮಧ್ಯಸ್ಥಿಕೆಯಿಂದ ಕೊರಿಯಾ ಯುದ್ಧ ಪರಿಸಮಾಪ್ತಿ

ಭಾರತವು ಕೊರಿಯಾ ಯುದ್ಧದ ಸಂಬಂಧವಾಗಿ ನಡೆಸುವ ಸಂಧಾನದ ಪರಿಣಾಮವಾಗಿ ಇನ್ನೆರಡು ವಾರಗಳಲ್ಲಿ ಯುದ್ಧವು ಕೊನೆಗಾಣುವದೆಂದು ಜಪಾನಿನ ಪ್ರಮುಖ ಪತ್ರಿಕೆ [illegible] ಎಂಬುದ ತಿಳಿಸುತ್ತದೆ

ಅಂಗಡಿ ಸಿಬ್ಬಂದಿ ಕಾನೂನು ಉಲ್ಲಂಘನೆಗಾಗಿ ದಂಡ

ರಾಜಧಾನಿಯ ಅಂಗಡಿಗಳು ಮತ್ತು ಸಿಬ್ಬಂದಿಗಳ ಕಾನೂನಿನ ಪ್ರಕಾರ ಕೆಳಗೆ [illegible] ಅಂಗಡಿ ಮಾಲೀಕರುಗಳಿಗೆ ಈ ರೀತಿ ದಂಡವನ್ನು ವಿಧಿಸಲಾಗಿದೆ

ಕೃಷ್ಣರಾಜ ಮೊಹಲ್ಲಾ ಶ್ರೀ ಎಂ ಎ [illegible] ವೆಂಕಟೇಶ ೧೦ ರೂ [illegible] ಮೊಹಲ್ಲಾ ಶ್ರೀ ಕೇಸರಿಮಲ್ ದೀನಾಜ ಟ್ಯಾಕ್ಸಿ ಸ್ಟ್ಯಾಂಡ್ ಬಳಿ ಇರುವ ಜ|| ಡಿ ಎಂ ಅಲಿಸಾಹೇಬ್ [illegible] ಕದ ಬಟ್ಟೆ ಅಂಗಡಿ ಶ್ರೀ ಜಿ ಶ್ರೀನಿವಾಸರಾವ್ ಮತ್ತು ಬಟ್ಟೆ ಅಂಗಡಿ ಶ್ರೀ ಎಂ ಓರ್ ಬಾಲಯ್ಯ ಇವರುಗಳಿಗೆ ತಲಾ ೫ ರೂ, ಏವರಾಂಸ್ [illegible] ಟೈಲರ್ ಶ್ರೀ ಬಿ ಎಸ್ ಗಣೇಶರಾವ್ ೩ ರೂ ಟ್ಯಾಕ್ಸಿ ಸ್ಟ್ಯಾಂಡ್ ಟ್ರಂಕ್ ಅಂಗಡಿ ಜ|| ಎ ಐ ಜವಾದ್ ಮತ್ತು ಕಬೀರ್ ರಸ್ತೆ [illegible] ಅಂಗಡಿ ಶ್ರೀ ಎಂ ಕೆ ಸಿದ್ದೇಗೌಡ ಇವರುಗಳಿಗೆ ತಲಾ ೨ ರೂ

ಕಲ್ಕತ್ತೆಯಲ್ಲಿ ಪ್ರಚಂಡ ಹರತಾಳ; ೪೦೦ ಬಂಧನ

ಕಲ್ಕತ್ತೆಯ ಪೊಲೀಸರಿಗೂ ವಿದ್ಯಾರ್ಥಿಗಳಿಗೂ ಮೊನ್ನೆ ಘರ್ಷಣೆ ನಡೆದ ವೇಳೆ, ಕ್ಷಾಮ ನಿವಾರಣಾ ಸಮಿತಿಯ ಸೂಚನೆ ಪ್ರಕಾರ ಅಲ್ಲಿ ನಿನ್ನೆ ಬಾರಿ ಹರತಾಳವು ಆಚರಿಸಲ್ಪಟ್ಟಿತು ಉತ್ತರ ಕಲ್ಕತ್ತೆಯಲ್ಲಿ ಟ್ರಾಂ [illegible], ಮತ್ತು ಇತರ [illegible] ನಡೆಸಿದ್ದು [illegible] ೧೦ ರಷ್ಟು ವಾಹನಗಳು ಮಾತ್ರ ಓಡಾಡುತ್ತಿದ್ದುವು [illegible] ಕೆ [illegible] ತು [illegible] ದಿಗೆ ಗಾಯವಾಗಿದೆ ೪೦೦ ಜನ ದಸ್ತಗಿರಿಯಾಗಿದೆ ಹೌರಾ ರೈಲ್ವೆ ನಿಲ್ದಾಣದ ಬಳಿ ಪೊಲೀಸರು ೩ ಬಾರಿ [illegible] ವಾಯು ಸಿಡಿಗುಂಡುಗಳನ್ನು ಹಾರಿಸಿದರೆಂದೂ, ಅದಕ್ಕೆ ಮುಂಚೆ ಸೀಲ್ದಾ ರೈಲಿನ ಗಾಡಿಗಳ [illegible] ಷ್ಟಿಂಗನ್ನು ಜನರು ಮುರಿದುಹಾಕಿ ಡ್ರೈವರ್ ಮತ್ತು ಫೈರ್‌ಮನ್ನರ ಮೇಲೆ ಕಲ್ಲೆಸೆದರೆಂದೂ, ರೈಲನ್ನು ಪ್ರಯಾಣಿಕರ ರಕ್ಷಣೆ ಪಡೆದು ನಿಲ್ದಾಣಕ್ಕೆ ತರಲಾಯಿತೆಂದೂ ಗೊತ್ತಾಗಿದೆ ಉಲ್ಟಾಡಂಗಾ ನಿಲ್ದಾಣದಲ್ಲಿ ಮತ್ತೊಂದು ರೈಲಿನ ಮೇಲೂ ಕಲ್ಲುಗಳನ್ನು ಎಸೆಯಲಾಯಿತೆಂದೂ ಒಂದು ಸೇತುವೆಯ ಮೇಲಿನ ಟ್ರಾಂ ಲೈನನ್ನು ಕತ್ತರಿಸಲಾಯಿತೆಂದೂ ಗೊತ್ತಾಗಿದೆ

ಅಸ್ಸಾಂನಲ್ಲಿ ಪ್ರವಾಹದಿಂದ ೨೫ ಲಕ್ಷ ಜನರಿಗೆ ಕಷ್ಟ

ಅಸ್ಸಾಮಿನ ಬ್ರಹ್ಮಪುತ್ರ ಮತ್ತು ಅದರ ಉಪನದಿಗಳಲ್ಲಿ ಪ್ರವಾಹವುಂಟಾಗಿ ಏಳು ಜಿಲ್ಲೆಗಳ ೪೦೦೦ ಚದುರ ಮೈಲಿಯ ಪ್ರದೇಶದಲ್ಲಿ ನೀರ ನುಗ್ಗಿರುವುದರಿಂದ ೨೫ ಲಕ್ಷ ಪ್ರಜೆಗಳಿಗೆ ತೊಂದರೆಯಾಗಿರುವುದೆಂದು ಹೇಳಲಾಗಿದೆ [illegible] ರಿಂದ ಇದುವರೆಗೆ ಇಂತಹ ಭಾರಿ ಪ್ರವಾಹವು ಬಂದಿರಲಿಲ್ಲ

ಶಿರಾತಾಭುಜಾರ್ಶ್ರೀಯ ಅಲಂಕಾರ

ರಾಜಧಾನಿಯ ಅರಮನೆ ಕೋಟೆಯಲ್ಲಿರುವ ಶ್ರೀ ಕರ್ಣಾಡಿ ಸೋಮೇಶ್ವರ ಸ್ವಾಮಿಯವರ ನವಗ್ರಹ ದೇವಾಲಯದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ದೇವರಿಗೆ ಶಿರಾತಾಭುಜಾರ್ಶ್ರೀಯ ಅಲಂಕಾರವನ್ನು ಈ ದಿನ ಹಾಕಲಾಗುವುದು

ಸಂಸ್ಥಾನದ ಅಭಾವ ಹಳ್ಳಿಗಳಿಗೆ ಇನ್ನೂ ೧೫ ಲಕ್ಷ ರೂ.

ಬೆಂಗಳೂರು ೧೬

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ ಸರ್ಕಾರದವರು ಇನ್ನೂ ೧೫ ಲಕ್ಷ ರೂ ಗಳನ್ನು ಒದಗಿಸಲು ನಿರ್ಧರಿಸಿರುವರೆಂದು ಗೊತ್ತಾಗಿದೆ ಈ ಪೈಕಿ ೬ ಲಕ್ಷ ರೂ ಗಳನ್ನು ಕೋಲಾರ ಜಿಲ್ಲೆಗೆ ಮೀಸಲಾಗಿಡಲಾಗಿದೆಯೆಂದೂ, ಕೆಲಸ ತಪ್ಪಿದ ಅಲ್ಲಿನ ೪೯ ಸಾವಿರ ಕಾರ್ಮಿಕರಿಗೆ ಪುನಃ ಕೆಲಸ ಒದಗಿಸಲಾಗುವುದೆಂದೂ ಹೇಳಲಾಗಿದೆ

ಪರ್ಷಿಯಾದ ಪ್ರಧಾನಿ ಮುಸ್ಸಾದಿಕ್ಕರ ರಾಜೀನಾಮೆ

ಪರ್ಷಿಯಾದ ಪ್ರಧಾನಿ ಡಾ|| ಮಹಮದ್ ಮುಸ್ಸಾದಿಕ್ ರವರು ನಿನ್ನೆ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿದರು ತಮಗೆ ೬ ತಿಂಗಳ ಕಾಲ ವಿಶೇಷ ಅಧಿಕಾರ ಬೇಕೆಂದು ಅಲ್ಲಿನ ಪಾರ್ಲಿಮೆಂಟಿನಲ್ಲಿ ಅವರು ಕೇಳಿ ಆ ಸಭೆಯು ಇನ್ನೂ ಯಾವ ನಿರ್ಧಾರವನ್ನೂ ಕೈಗೊಂಡಿರಲಿಲ್ಲ

ವಿಶ್ವಾಸ್ಯದ ಧೋರಣೆ--ನೆಹರೂ

ಭಾರತದಲ್ಲಿ ಈಜಿಪ್ಟಿನ ರಾಯಭಾರಿಯಾಗಿರುವ ಇಸ್ಮೇಲ್ ಕಮಾಲ್ ಬೇಯವರು ಅಲೆಕ್ಸಾಂಡ್ರಿಯಾ ನಗರದಲ್ಲಿ ಭಾಷಣ ಮಾಡಿ, ಭಾರತದ ಪ್ರಧಾನಿ ಪಂ|| ನೆಹರೂರವರು ವಿಶ್ವಾಸ್ಯದ ಧೋರಣೆಯೆಂದು ಹೇಳುತ್ತಾರೆ ವಿಶ್ವದ ಸ್ವಾತಂತ್ರ್ಯವನ್ನು ಅವರ ನೀತಿಯು ಪ್ರತಿಬಿಂಬಿಸುತ್ತಿರುವುದೆಂದೂ ಅದರಿಂದ ವಿಶ್ವಾಸ್ಯವಾಣಿಗೆ ಪ್ರಪಂಚದಲ್ಲಿ ಗೌರವ ದೊರೆತಿರುವುದೆಂದೂ ಅವರು ತಿಳಿಸಿರುತ್ತಾರೆ

ಪರಕಾಲ ಮಠದ ಸ್ವಾಮಿಗಳವರ ವರ್ಧಂತಿ

ರಾಜಧಾನಿಯಲ್ಲಿರುವ ಶ್ರೀ ಬ್ರಹ್ಮತಂತ್ರ ಪರಕಾಲ ಮಠದ ಶ್ರೀ ಸ್ವಾಮಿಗಳವರ ೭೮ ನೇ ತಿರುನಕ್ಷತ್ರ (ವರ್ಧಂತಿ) ಯು ಇದೇ [illegible] ನೇ ತಾ|| ಸೋಮವಾರ ಶ್ರೀ ಮಠದಲ್ಲಿ ನೆರವೇರುವುದು ಮತ್ತು ಶ್ರೀ ವೇದಶಾಸ್ತ್ರ ಪಾರಂಗತರ ೭೫ ನೇ ವಿದ್ವತ್ಸಭೆಯು [illegible] ಜಯಂತಿಯ ಅಂಗವಾಗಿ ಅದೇ ದಿನ ಮಧ್ಯಾಹ್ನ ೬|| ಘಂಟೆಗೆ ಆರಂಭವಾಗುವುದು ಸಭೆಗೆ ಭಾಗವಹಿಸಲು ಬರುವ ವಿದ್ವಾಂಸರು [illegible] ಕ್ಕೆ ಕಡಿಮೆಯಿಲ್ಲದಿರಬೇಕೆಂದು [illegible] ಲಾಗಿದೆ

ಸಂಗೀತ ಮತ್ತು ಭಾರತ ವಾಚನ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಭಾರತೀ ಸ್ತ್ರೀ ಸಮಾಜದಲ್ಲಿ ಈ ಸಂಜೆ ೬ ಘಂಟೆಗೆ ಶ್ರೀಮತಿ ಗಳಾದ ತುಂಗ ಮತ್ತು [illegible] ರವರಿಂದ ಸಂಗೀತವೂ, ನಾಳೆ ಮಧ್ಯಾಹ್ನ ೪ ಘಂಟೆಗೆ ಶ್ರೀ ನಾಗಮ್ಮನವರಿಂದ ಭಾರತ ವಾಚನವೂ ನಡೆಯುವುದು ಸರ್ವರಿಗೂ ಆಹ್ವಾನವಿದೆ

○ ನಜರ್‌ಬಾದಿನ ಶ್ರೀ ದುರ್ಗಾದೇವಿ ದೇವಸ್ಥಾನದಲ್ಲಿ ಆಡಿ ಶುಕ್ರವಾರದ ಪ್ರಯುಕ್ತ ಈ ಸಂಜೆ ೭|| ಘಂಟೆಗೆ ಮಹಾಮಂಗಳಾರತಿ ನಡೆಯುತ್ತದೆ

ಫಕ್ತೂನ್ ಮತ್ತು ಪಾಕಿಸ್ತಾನ್ ಪಡೆಗಳಿಗೆ ೧೨ ಗಂಟೆ ಕಾಳಗ

ಮಧ್ಯ ಫಕ್ತೂನಿಸ್ತಾನ್ ಪ್ರದೇಶದ ೧೨ ಒಂಟೆಗಳ ಮೇಲೆ ಪಾಕಿಸ್ತಾನದವರು ಆಹಾರ ಧಾನ್ಯವನ್ನು ಸಾಗಿಸುತ್ತಿದ್ದಾಗ ಅವರನ್ನು ಫಕ್ತೂನ್ ಸಿಪಾಯಿಗಳು ತಡೆದರೆಂದೂ ಅವೆರಡು ಗುಂಪುಗಳಿಗೂ ೧೨ ಗಂಟೆ ಕಾಳಗ ನಡೆದು ಪಾಕಿಸ್ತಾನದ ೧೫ ಸೈನಿಕರು ಸತ್ತರೆಂದೂ ಫಕ್ತೂನ್ ಸಿಪಾಯಿಗಳಲ್ಲಿ ೩ ಜನರು ಮಡಿದರೆಂದೂ ಹೇಳಲಾಗಿದೆ. ಧಾನ್ಯದ ಸಮೇತ ಒಂಟೆಗಳನ್ನು ಫಕ್ತೂನ್ ಸಿಪಾಯಿಗಳು ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ

ವಿಸರ್ಜಿತ ಸೈನಿಕರ ಸಂಘ

ರಾಜಧಾನಿಯ [illegible] ಸೈನಿಕರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ [illegible] ನೇ ತಾ॥ ಶ್ರೀ ಸಿ [illegible] ದೇವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆದು ಸಂಘವು ಪುರೋಭಿವೃದ್ಧಿಗಾಗಿ ಒಂದು ಠರಾವ್ [illegible] [illegible]

ಬೇಕಾಗಿದ್ದಾರೆ

೩೨ ರಿಂದ [illegible] ವರ್ಷ ವಯಸ್ಸಿನ [illegible] ಅನುಭವಸ್ಥರು [illegible] ಬೇಕಾಗಿದ್ದಾರೆ.

ಎಲ್ ಮಾಣಿಕ್‌ಚಂದ್ ಫ್ಲೋರ್‌ಮಿಲ್

[illegible] ಮೈಸೂರು

SREE GANESHA

TALKIES

From 19 7 52 [illegible] Day

THE WOMAN IN QUESTION

(A Mystery [illegible])

From 22- 7 52

THE ADVENTURES

(Depicting the [illegible] Continent)

ಯುಗೋಸ್ಲೇವಿಯಾ ಗಡಿಗೆ ಹಂಗೆರಿ ಸೈನ್ಯ

ಯುಗೋಸ್ಲೇವಿಯಾದ ಗಡಿ ಕಡೆಗೆ ಹಂಗೆರಿಯ ಸೈನ್ಯಗಳ ಹೊಗುತ್ತಿರುವುದೆಂದು ಹೇಳಲಾಗಿದೆ [illegible] ಅನ್ನು ಸಹ ತರಲಾಗುತ್ತಿರುವುದೆಂದೂ ವರದಿಯಾಗಿದೆ

ಸಬ್‌ಮಿಲಿಟರಿ ಹಾಗೂ ಅಧಿಕಾರ ವರ್ಗದ ಚುನಾವಣೆಯು ನಡೆದ [illegible] ದೇವನಾಥ್‌ರವರು ಅಧ್ಯಕ್ಷರಾಗಿಯೂ ಶ್ರೀ ಎಸ್ ಜಿ [illegible] ವ್ ಉಪಾಧ್ಯಕ್ಷರಾಗಿ ಮೂ, ಶ್ರೀ ಎಲ್ [illegible] [illegible] ಕಾರ್ಯದರ್ಶಿ ಶ್ರೀ ಎಂ ಎನ್ ಕೃಷ್ಣಮೂರ್ತಿಯವರ [illegible] ಶ್ರೀ ಎಸ್ ಎನ್ [illegible] ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ [illegible] ಭಾಷಣ ಮಾಡಿ [illegible]

[illegible]

ಕೇ ನಂ 75 1952 53

[illegible] ಜಿಲ್ಲಾ [illegible] 1738 [illegible] ಮೈಸೂರು

ಪ್ರತಿವಾದಿಯವರಿಗೆ ದಾವಾ ಹಿಯರಿಂಗ್ ತಾ॥೨೭ ನೇ ೩ನೇ ೧೧ ಘಂಟೆಗೆ ಹಾಜರಾಗಬೇಕೆಂದು ಈ ಮೂಲಕ ತಿಳಿಸಿರುತ್ತೆ ತಪ್ಪಿದಲ್ಲಿ ಏಕಪಕ್ಷ ತೀರ್ಪು (Ex parte Decree) ತೀರ್ಮಾನಿಸಲಾಗುತ್ತೆ

[illegible] ಅಡ್ವೊಕೇಟ್

ಶ್ರೀ [illegible] ರಾಜೇಂದ್ರ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ	ಇಂದ ರೂ ಗೆ
ನೆಲಗಡಲೆ	೧೩ ೪ ೦	೧೯ ೬-೦
ಎಳ್ಳು	೭೩ ೧೦ ೦	೭೬ ೧೦ ೦
ಹರಳು ಬೀಜ	೪ ೦ ೦	
ಹೊಂಗೆ ಬೀಜ	೧ ೦ ೦	
ಹುರುಳಿ	೪೦ ೦ ೦	
ಹೆಸರು	೩೭ ೦ ೦	೬೪ ೦ ೦
ಅವರೆ	೬೪ ೬ ೦	
ಉದ್ದು	೬೭ ೧೦ ೦	
ಹಲಸಂದೆ	೫೩ ೧೦ ೦	೬೪ ೧೪ ೦
ಮೆಣಸಿನಕಾಯಿ		
ಮುಚ್ಚೆ ಗಟ್ಟೆ	೩ ೧೦ ೦	೧೪ ೧೦ ೦
ಹುಣಸೇಹಣ್ಣು	೪ ೦	
ಸೀಗೇಕಾಯಿ	೩ ೦ ೦	
ತೆಂಗಿನಕಾಯಿ ೧೦೦ ಕ್ಕೆ	೧೩ ೦ ೦	೧೯ ೦ ೦

ಆಕಾಶವಾಣಿ ನಿಲಯದ ಕಾರ್ಯಕ್ರಮ

ಬೆಳಗ್ಗೆ [illegible] ಚಿತ್ರ ಜಗತ್ತು ಮಧ್ಯಾಹ್ನ [illegible] ಬಾಲ [illegible] ಸಂಜೆ [illegible] ಭರತನಾಥ್ [illegible] ಸಂಗೀತ [illegible] ವಿಹಾರ [illegible] [illegible]

THEOSOPHY STUDY GROUP,

[illegible] Road

Vontikoppal

Saturday the 19th JULY 1952

at 6 p m

[illegible] followed by Questions and Answers on

A Universal Charter of the RIGHTS OF MAN

II Duties to Ourselves

Emotions How to Subdue them

ವರ್ಧಂತಿ ಮಹೋತ್ಸವ

ಚಾಮರಾಜನಗರ ೧೪

ಚಾಮರಾಜನಗರದ ಸರ್ಕಾರಿ ಕನ್ನಡ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ಕಳೆದ ೧೨ ನೇ ತಾ॥ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವವು ತಾಲ್ಲೂಕ್ ಅಮಲ್ದಾರರಾದ ಶ್ರೀ ಬಿ ಸಿ ಮುನಿಯಣ್ಣನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ರೇಂಜ್ ಇನ್ಸ್‌ಪೆಕ್ಟರರು, ಶಾಲಾ ಮುಖ್ಯೋಪಾಧ್ಯಾಯರು ಮತ್ತು ಇತರ ಅಧ್ಯಾಪಕರುಗಳು ಭಾಷಣ ಮಾಡಿದರು. ಶ್ರೀಮನ್ ಮಹಾರಾಜರಿಗೆ ಶುಭವನ್ನು ಕೋರಲಾಯಿತು. ಶಾಲಾ ಆವರಣದಲ್ಲಿ ೫೦ ಹೊಂಗೇ ಗಿಡಗಳನ್ನು ನೆಡಲಾಯಿತು

ಶಿವಪುರದಲ್ಲಿ

ಇದೇ ತಾಲ್ಲೂಕು ಶಿವಪುರದ ಪ್ರಾಥಮಿಕ ಬಾಲಕರ ಪಾಠಶಾಲೆಯಲ್ಲಿ ೧೨ ನೇ ತಾ॥ ಉತ್ಸವವು ನಡೆದು ಬಾಲಕರುಗಳಿಗೆ ಸಿಹಿ ತಿಂಡಿಗಳನ್ನು ಹಂಚಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಚಿಕ್ಕಬೊಮ್ಮೇಗೌಡರು ಅಧ್ಯಕ್ಷತೆ ವಹಿಸಿದ್ದರು. ಶಾಲಾ ಅಧ್ಯಾಪಕ ಶ್ರೀ ಟಿ ಎನ್ ನಾಗಪ್ಪನವರು ಭಾಷಣ ಮಾಡಿದರು

ಎಲ್ಲಾ ಬಗೆಯ

ಅಲೋಪಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ಪ್ರಭಾ 16-7-52ರಿಂದ ಜಯಪ್ರದ 2ನೇ ವಾರ

ಪ್ರತಿ ದಿನ ಮೂರು ಆಟಗಳು

ಆಗಲೇ 15 ಸಾವಿರಕ್ಕೆ ಮೇಲ್ಪಟ್ಟು ಜನರು ನೋಡಿ ಆನಂದಿಸಿರುವ

ವಿ ಶಾಂತಾರಾಮರವರ

ಪರ್ ಛಾಯಿ

[ಛಾಯೆ]

ಪಾತ್ರ - ವಿ ಶಾಂತಾರಾಂ ಜಯಶ್ರೀ ಲಲಿತಾ ಪವಾರ್ ಸಂಧ್ಯಾ ಮತ್ತು ಇತರರು

ಸಂಬೋಧ ಸಿ [illegible]

ಇವರು ಕಲ್ಕತ್ತದವರು. ನ್ಯೂಯಾರ್ಕಿನ ಸಾಮಾಜಿಕ ಸಂಶೋಧನೆಗಳ ಕಾಲೇಜಿನಲ್ಲಿ ಬೋಧಕರಾಗಿರುವ ಇವರಿಗೆ ವಯಸ್ಕರ ಶಿಕ್ಷಣಕ್ಕಾಗಿ ಸ್ಥಾಪಿಸಿರುವ ನೇತೃತ್ವದ 1000 ಡಾಲರುಗಳ ಅಮೆರಿಕದ ಲೊಯಿ ಎಸ್ ರೆಯುಸ್ ಸ್ಮಾರಕದ ಬಹುಮಾನ ದೊರೆತಿದೆ. ಕುರುಡರಾದ ಇವರು ಭಾರತದಲ್ಲಿ ಕುರುಡರಿಗಾಗಿ ವಯಸ್ಕರ ಶಿಕ್ಷಣ ಶಾಲೆಯನ್ನು ಸ್ಥಾಪಿಸಿರುವರು

ಅಬೀದ್ ರವರ

ಭಾರಿ ಹರಾಜು ಮಾರಾಟ

20 7-52ನೇ ಭಾನುವಾರ ಬೆಳಗ್ಗೆ 10 ಘಂಟೆಗೆ ಪ್ರಾರಂಭ

[illegible] ವಾಚಿಯ [illegible] ಮತ್ತು [illegible] ಇರುವ ಸೋಫಾ ಸೆಟ್ಟುಗಳು, [illegible] ಮತ್ತು ಇಲ್ಲದ ಕುರ್ಚಿಗಳು, ತೊಟ್ಟಿಲುಗಳು [illegible] ಗಳಿರುವ ಮತ್ತು ಇಲ್ಲದ ಮೇಜುಗಳು [illegible] ಪ ಅಂಗಡಿ ಡ್ರಾಯರುಗಳು ಪರದೆ, ರಬ್ಬರ್ ಟೈರ್ ಸೋಫಾ [illegible] ಮರದ ಶೀರು ಕಪಾಟುಗಳು ಮತ್ತು [illegible] ಒಂದು ಭಾರಿ ಮೊಸಳೆ, ಮೋಟಾರು ಸೈಕಲ್, ೩ ಮೊಳೆಗಳು [illegible]

ಎಕ್ಸ್ ಬ್ರಾಕೆಟ್ಲುಗಳು, ಇದೇ ಮುಂತಾದ ಮನೆಬಳಕೆ ವಸ್ತುಗಳು ಮತ್ತು ಇತರ ಸಾಮಾನುಗಳು

19ನೇ ತಾ॥ ಶನಿವಾರ ಮಧ್ಯಾಹ್ನ ೩ ರಿಂದ 6 ರವರೆಗೆ ಆಪನಾಯಿಸಿ ನೋಡಬಹುದು

Edited Printed and Published by A R Nagarajan at Sadhvi Press, D Subbiah Road Mysore

ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೧೦] ಶನಿವಾರ ೧೯ ೭-೫೨ [ಸಂಚಿಕೆ ೨೯೩

ನೇಪಾಳದ ಶ್ರೀಮಂತರ ವಿರುದ್ಧವಾಗಿ ದೊಂಬಿ

ನಗರ ಕಾಂಗ್ರೆಸ್ ಸಮಿತಿ ಚುನಾವಣೆ

ಮೈಸೂರು ೧೮

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಚುನಾವಣೆಗೆ ಉಮೇದವಾರಿಕೆ ಸಲ್ಲಿಸಲು ನೆನ್ನೆಯೇ ಕೊನೆಯ ದಿನವಾಗಿತ್ತು. ಚಾಮುಂಡಿ ಮತ್ತು ಕೃಷ್ಣರಾಜ ಮೊಹಲ್ಲಾಗಳಿಂದ ಇರುವ ೩ ಸ್ಥಾನಗಳಿಗೆ ಶ್ರೀಗಳಾದ ಎಂ. ಎಸ್. ಜೋಯಿಸ್, ಕೆ. ಎಸ್. ಸೂರ್ಯನಾರಾಯಣರಾವ್ ಮತ್ತು ಈಶ್ವರರಾಯರು ಚುನಾಯಿತರಾಗಿದ್ದಾರೆ. ವಿಲ್ಸ್, ಲಷ್ಕರ್ ಮತ್ತು ನಜರ್‌ಬಾದ್ ಮೊಹಲ್ಲಾಗಳಿಂದ ಇದ್ದ ೩ ಸ್ಥಾನಗಳಿಗೆ ಶ್ರೀಗಳಾದ ಟಿ. ವೆಂಕಟರಮಣಯ್ಯ, ಎ. ಕೃಷ್ಣಮೂರ್ತಿರಾವ್ ಮತ್ತು ಎಸ್. ರಾಜಯ್ಯನವರುಗಳು ಮಾತ್ರ ಉಮೇದುವಾರರಾಗಿದ್ದುದರಿಂದ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ದೇವರಾಜ್ ಮತ್ತು ಮಂಡಿ ಮೊಹಲ್ಲಾಗಳಿಂದ ಇರುವ ೩ ಸ್ಥಾನಗಳಿಗೆ ಶ್ರೀಗಳಾದ ಪಿ. ಗೋಪಾಲಕೃಷ್ಣಶೆಟ್ಟಿ, ಎ. ಶಿವಣ್ಣ, ಎಸ್. ಗೋಪಾಲರಾವ್ ಮತ್ತು ಎಂ. ಆರ್. ಸಿ. ಬಸಪ್ಪನವರುಗಳು ಉಮೇದುವಾರಿಕೆ ಅರ್ಜಿ ಸಲ್ಲಿಸಿರುತ್ತಾರೆ. ನೆನ್ನೆಯೇ ಉಮೇದುವಾರಿಕೆ ವಾಪಸು ಪಡೆಯಲು ಕೊನೆಯ ದಿನವಾಗಿತ್ತು. ನಾಳೆ ಮಧ್ಯಾಹ್ನ ೩ ರಿಂದ ೫ ಘಂಟೆ ವರೆಗೆ ಚುನಾವಣೆಗಳು ನಡೆಯುತ್ತವೆ.

ಬೊಂಬಾಯಿಯಲ್ಲಿ ಮಳೆ ಹಾವಳಿ

ಕಳೆದ ನಾಲ್ಕೈದು ದಿನಗಳಲ್ಲಿ ಬೊಂಬಾಯಿಯಲ್ಲಿ ೩೦ ವರ್ಷಗಳಲ್ಲಿ ಎಂದೂ ಇಲ್ಲದ ಮಳೆಯಾಗಿ ಅಲ್ಲಿ ಚಟುವಟಿಕೆಗಳೆಲ್ಲಾ ನಿಂತುಹೋಗಿದ್ದುವು. ಎಲ್ಲಾ ಸ್ಥಳೀಯ ರೈಲುಗಳೂ ನಿಂತಿದ್ದುವು. ೩ ಲಕ್ಷ ಕಛೇರಿ ಉದ್ಯೋಗಸ್ಥರು ಕೆಲಸಕ್ಕೆ ಹೋಗಲು ಅಡಚಣೆಯಾಗಿತ್ತು. ಎರಡು ನಿಲ್ದಾಣಗಳಿಂದ ಒಂದು ಬಿಟ್ಟು ಯಾನ ವಿಮಾನಗಳೂ ಹೊರಡಲೂ ಇಲ್ಲ ಮತ್ತು ಅಲ್ಲಿಗೆಯಾವುದೂ ಬರಲಿಲ್ಲ. ಶಾಲೆಗಳೆಲ್ಲವೂ ಮುಚ್ಚಿದ್ದುವು. ಕಾರ್ಖಾನೆಗಳಲ್ಲಿ ಕಡಿಮೆ ಸಿಬ್ಬಂದಿಯು ಹಾಜರಿತ್ತು. ಸಮುದ್ರದಲ್ಲಿ ಅಲೆಗಳೂ ಜೋರಾಗಿದ್ದುವು. ಅನೇಕ ಜನರನ್ನು ರಕ್ಷಿಸಲು ಸ್ವಯಂಸೇವಕರು ತುಂಬಾ ಕಷ್ಟಪಟ್ಟರು. ಒಟ್ಟು ೨೬ ಅಂಗುಲ ಮಳೆಯಾಗಿದೆ.

ಸಂಸ್ಥಾನಗಳಲ್ಲೂ ವನ ಮೃಗ ರಕ್ಷಣಾ ಸಮಿತಿಗಳು

ಕೇಂದ್ರ ವನ ಮೃಗ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಮೈಸೂರಿನ ಶ್ರೀ ಮನ್ಮಹಾರಾಜರು ಮದ್ರಾಸಿನ ಅರಣ್ಯಗಳ ಇನ್ಸ್‌ಪೆಕ್ಟರ್ ಜನರಲ್ ಎಂ. ಡಿ. ಚತುರ್ವೇದಿಯವರೊಡನೆ ಮಾತುಕತೆ ನಡೆಸಿರುವರು. ಪ್ರತಿ ಸಂಸ್ಥಾನದಲ್ಲೂ ವನ ಮೃಗಗಳ ರಕ್ಷಣಾ ಸಮಿತಿಗಳನ್ನು ರಚಿಸಲಾಗುವುದೆಂದು ಗೊತ್ತಾಗಿದೆ. ಬಿಹಾರಿನ ರಾಜಕುಮಾರರೂ ಸಹ ಈ ಸಮಿತಿಯ ಕಾರ್ಯ ಚಟುವಟಿಕೆಗಳಲ್ಲಿ ನೆರವಾಗುವರೆಂದು ಹೇಳಲಾಗಿದೆ.

ನೇಪಾಳದಲ್ಲಿ ಶ್ರೀಮಂತ ವಿರೋಧಿಗಳ ಗಲಭೆ

ನೇಪಾಳದ ರೌತಹಾತ್ ಮತ್ತು ಸರ್ಲಾಹಿ ಜಿಲ್ಲೆಗಳಲ್ಲಿ ಶ್ರೀಮಂತಿಕೆಯ ವಿರೋಧಿಗಳಿಂದ ಭಾರಿ ಗಲಭೆಯು ನಡೆಯುತ್ತಿರುವುದೆಂದು ವರದಿಯಾಗಿದೆ. ಧನಿಕರ ಮನೆಗಳ ಲೂಟಿ, ಹಣಕ್ಕೆ ಸಂಬಂಧಿಸಿದ ಅವರ ಕಾಗದ ಪತ್ರಗಳಿಗೆ ಬೆಂಕಿ ಮುಂತಾದ ಪ್ರಕರಣಗಳು ಆಗುತ್ತಿರುವುದಾಗಿಯೂ, ಆಕ್ರಮವೆಂದು ಸಾರಲ್ಪಟ್ಟಿರುವ ಕಮ್ಯೂನಿಸ್ಟ್ ಪಕ್ಷದ ಸದಸ್ಯರೂ ಸಮಾಜ ಘಾತಕರೂ ಆ ಪ್ರದೇಶದಲ್ಲಿ ಜನರಿಗೆ ಭಯೋತ್ಪಾದನೆ ಮಾಡುತ್ತಿರುವರೆಂದೂ ಹೇಳಲಾಗಿದೆ. ಪರಿಸ್ಥಿತಿಯು ಹತೋಟಿಯಲ್ಲಿರುವುದೆಂದು ಅಲ್ಲಿನ ಪ್ರಧಾನಿಯವರ ತಿಳಿಸುತ್ತಾರೆ.

ಪರ್ಷಿಯದ ಹೊಸ ಪ್ರಧಾನಿ

ಪರ್ಷಿಯದ ಪಾರ್ಲಿಮೆಂಟ್ ಸಭೆಯ ಮೊನ್ನಿನ ರಹಸ್ಯ ಅಧಿವೇಶನದಲ್ಲಿ ೭೨ ವರ್ಷದ ಶ್ರೀಮಂತರಾದ ಗವಾಂ ಸುಲ್ತಾನೆರವರನ್ನು ಪ್ರಧಾನಿಯಾಗಿರುವಂತೆ ಸೂಚಿಸಲಾಗಿದೆ. ಅವರು ಷಹಾರವರಿಂದ ನಿರೂಪವನ್ನು ಪಡೆಯಲು ನೆನ್ನೆ ಅರಮನೆಗೆ ತೆರಳುವಾಗ ದಾರಿಯಲ್ಲಿ ಗಲಭೆಗಳಾಗದಂತೆ ತಡೆಯಲು ಟ್ಯಾಂಕುಗಳೂ, ಶಸ್ತ್ರಸಜ್ಜಿತ ಮೋಟಾರುಗಳೂ ಸಿದ್ಧವಾಗಿ ನಿಂತಿದ್ದುವು. ಮಾರ್ಷಲ್ ಲಾ ಆಜ್ಞೆಯನ್ನು ಉಲ್ಲಂಘಿಸುವವರ ಮೇಲೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ.

ಭಾರತಕ್ಕೆ ೧೬೦ ಸಾವಿರ ಟನ್ ಸಯಾಂ ಅಕ್ಕಿ

ಸಯಾಮಿನಿಂದ ೧,೬೦ ಸಾವಿರ ಟನ್ನಷ್ಟು ಅಕ್ಕಿಯನ್ನು ಭಾರತಕ್ಕೆ ಕಳುಹುವ ಬಗ್ಗೆ ಒಪ್ಪಂದವಾಗಿರುತ್ತದೆ. ಈಗಾಗಲೇ ೬೦ ಸಾವಿರ ಟನ್ ಧಾನ್ಯವನ್ನು ಕಳುಹಿಸಲೂ ವ್ಯವಸ್ಥೆಯಾಗಿರುತ್ತದೆ.

ಜಪಾನ್ ಭೂಕಂಪದಲ್ಲಿ ೪ ಮರಣ, ೭೦ ಜನರಿಗೆ ಗಾಯ

ಪಶ್ಚಿಮ ಜಪಾನಿನಲ್ಲಿ ನೆನ್ನೆ ಭಾರಿ ಭೂಕಂಪವಾಗಿ ೪ ಮಂದಿ ಮಡಿದು ೭೦ ಕ್ಕೂ ಹೆಚ್ಚು ಜನರು ಗಾಯಗೊಂಡಿರುವರೆಂದು ಗೊತ್ತಾಗಿದೆ.

ಏಕ ಸಂತಾನ ಕೇಂದ್ರಗಳ ಸ್ಥಾಪನೆ

ಬೆಂಗಳೂರು ೧೮

ಇನ್ನಿನ ಪೌರ ಸಭೆಯ ಅಧಿವೇಶನವು ನೆನ್ನೆ ನಡೆದು ನಗರದ ಪ್ರತ್ಯೇಕ ಪ್ರದೇಶಗಳಲ್ಲಿ ಏಕ ಸಂತಾನವನ್ನು ಬೋಧಿಸುವ ಒಂದೊಂದು ಕೇಂದ್ರ ಮತ್ತು ಮಕ್ಕಳ ಯೋಗಕ್ಷೇಮದ ಕೇಂದ್ರಗಳನ್ನು ತೆರೆಯುವಂತೆ ನಿರ್ಧರಿಸಲಾಯಿತು.

ಚುನಾವಣೆ ಪೆಟ್ಟಿಗೆ ಪಟ್ಟಿ ಒಪ್ಪಿಸದಿದ್ದುದಕ್ಕೆ ಅನರ್ಹತೆ

ಮೈಸೂರು ಶಾಸನ ಸಭೆಗೆ ಉಪಾಧ್ಯಾಯರ ಪ್ರತಿನಿಧಿ ಉಮೇದುವಾರರಾಗಿ ನಿಂತು ಕಾಲದಲ್ಲಿ ಮತ್ತು ಗೊತ್ತಾದ ರೀತಿಯಲ್ಲಿ ಚುನಾವಣಾ ವೆಚ್ಚದ ಪಟ್ಟಿಯನ್ನು ಒಪ್ಪಿಸದಿದ್ದುದಕ್ಕಾಗಿ ರಾಜಧಾನಿಯ ಮಹಾರಾಜ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎಂ. ಎಸ್. ರಾಮಚಂದ್ರ ಜೋಯಿಸ್, ಶಾರದಾ ವಿಲಾಸ ಹೈಸ್ಕೂಲಿನ ಶ್ರೀ ಬಿ. ರಾಮಣ್ಣ, ಕುಣಿಗಲ್ ಹೈಸ್ಕೂಲಿನ ಶ್ರೀ ಕೆ. ರಾಮಸ್ವಾಮಿ, ಬೆಂಗಳೂರು ಕೋಟೆ ... ಪುರದ ಹೈಸ್ಕೂಲಿನ ಶ್ರೀ ಕೆ. ಸುಬ್ಬಣ್ಣನವರು ತಮ್ಮ ಅರ್ಹತೆಯನ್ನು ಕಳೆದುಕೊಂಡಿರುವರು.

ಅ|| ಭಾ|| ಶಾಸನ ಸಭಾ ಕಾಂ|| ಪಕ್ಷಗಳ ಸಮ್ಮೇಳನ

ಭಾರತದ ಎಲ್ಲ ಪ್ರಾಂತಗಳ ಶಾಸನ ಸಭಾ ಕಾಂಗ್ರೆಸ್ ಪಕ್ಷಗಳ ಕಾರ್ಯಕಾರಿ ಸಮಿತಿ ಸದಸ್ಯರುಗಳ ಸಮ್ಮೇಳನವೊಂದನ್ನು ಕಾಂಗ್ರೆಸ್ ಅಧ್ಯಕ್ಷರಾದ ನೆಹರೂರವರು ಇಂದೋರಿನಲ್ಲಿ ಎ. ಐ. ಸಿ. ಸಿ. ಅಧಿವೇಶನ ಕಾಲದಲ್ಲಿ ನಡೆಸಬೇಕೆಂದು ಸೂಚಿಸಿರುವರು. ಶಾಸನ ಸಭಾ ಸದಸ್ಯರುಗಳ ಪರಸ್ಪರ ಪರಿಚಯ ಮತ್ತು ಸಂಪರ್ಕಕ್ಕೆ ಇಂತಹ ಸಮ್ಮೇಳನವು ಸಹಕಾರಿಯಾಗುವದೆಂದು ಭಾವಿಸಲಾಗಿದೆ.

ಡೀಸೆಲ್ ಎಣ್ಣೆಯಿಂದ ನಡೆಯುವ ಹಡಗುಗಳ ನಿರ್ಮಾಣ

ವಿಶಾಖಪಟ್ಟಣದ ಬಂದರಿನಲ್ಲಿ ೭ ಡೀಸಲ್ ಎಣ್ಣೆಯಿಂದ ನಡೆಯುವ ಹಡಗುಗಳನ್ನು ನಿರ್ಮಿಸಲಾಗುವುದೆಂದು ಗೊತ್ತಾಗಿದೆ.

ಪಾರ್ಲಿಮೆಂಟಿನಲ್ಲಿ ಕಮ್ಯೂನಿಸ್ಟ್ ಸದಸ್ಯರ ಉಚ್ಚಾಟನೆ

ಅಧ್ಯಕ್ಷರ ಮೇಲಿನ ಅಪಾದನೆಗಾಗಿ ಕೋಲಾಹಲ

ದೆಹಲಿ ಪಾರ್ಲಿಮೆಂಟಿನ ಅಧ್ಯಕ್ಷರಾದ ಜಿ. ವಿ. ಮಾವಲಂಕರ್‌ರವರು ಅನ್ಯಾಯವಾಗಿ ವರ್ತಿಸುತ್ತಿರುವರೆಂದು ಆಕ್ಷೇಪಿಸಿ ಮಾಡಿರುವ ಅಪವಾದದ ಮಾತುಗಳನ್ನು ವಾಪಸು ತೆಗೆದುಕೊಳ್ಳದೆ ಹೋದುದರಿಂದ ನೆನ್ನೆ ಸಭೆಯ ಸದಸ್ಯರಾದ ಆನಂದ್ ನಂಬಿಯಾರರನ್ನು ಹೊರಕ್ಕೆ ಹೋಗಲು ಅಧ್ಯಕ್ಷರು ಸೂಚಿಸಿದರೂ ಅವರು ಹೋಗದ ಪ್ರಯುಕ್ತ ಅವರನ್ನು ಸಭೆಯ ಸಿಪಾಯಿಯೊಬ್ಬರು ಆಚೆಗೆ ತಳ್ಳಿದರೆಂದು ವರದಿಯಾಗಿದೆ. ನಂಬಿಯಾರರು ಅಧ್ಯಕ್ಷರ ಕಡೆಗೆ ಮುಷ್ಟಿಯನ್ನು ಪ್ರದರ್ಶಿಸಿ ಹೆದರಿಸಿದರೆಂದೂ ವರದಿಯಾಗಿದೆ. ತಾವು ಸಭೆಯನ್ನು ಬಿಡಬಲ್ಲರೇ ಹೊರತು ಮಾತುಗಳನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂದು ನಂಬಿಯಾರರು ತಿಳಿಸಿದರು. ಕಮ್ಯೂನಿಸ್ಟ್ ಪಕ್ಷದ ಉಪ ನಾಯಕ ಮುಖರ್ಜಿಯವರು ನಂಬಿಯಾರರ ಮಾತುಗಳನ್ನು ಒಪ್ಪಲಿಲ್ಲ. ಹರೀಂದ್ರನಾಥ ಚಟ್ಟೋಪಾಧ್ಯಾಯರು ಎದ್ದು "ಎಲ್ಲರೂ ಇಲ್ಲಿಂದ ಹೊರಡೋಣ" ಎಂದು ಹೇಳಲಾಗಿ, ಮುಖರ್ಜಿಯವರು ಅಧ್ಯಕ್ಷರ ಅನುಮತಿಯಿಂದ ತಮ್ಮ ಪಕ್ಷದವರು ಹೊರಗೆ ಹೋಗುವುದಾಗಿ ತಿಳಿಸಿ, ಆಚೆಗೆ ಬಂದರು.

ನಂತರ ನೆಹರೂರವರು ಮಾತನಾಡಿ ಸಭಾಧ್ಯಕ್ಷರಿಗೆ ಸಭೆಯ ಪರವಾಗಿ ತಮ್ಮ ವಿಷಾದವನ್ನು ಸೂಚಿಸಿ, ನಂಬಿಯಾರರ ವರ್ತನೆಯನ್ನು ಸಭೆಯ ಹಕ್ಕುಬಾಧ್ಯತಾ ಸಮಿತಿಗೆ ಹಾಕಬೇಕೆಂದು ಸೂಚಿಸಿದರು. ಅರ್ಧ ಗಂಟೆಯಾದನಂತರ ನಂಬಿಯಾರ್ ಒಬ್ಬರು ಬಿಟ್ಟು ಉಳಿದ ಸದಸ್ಯರು ವಾಪಸು ಸಭೆಗೆ ಬಂದರು.

ಕಾಶ್ಮೀರದ ಆಕ್ರಮಣಕ್ಕಾಗಿ ಪಂಜಾಬ್ ಮಾಜಿ ಮಂತ್ರಿಯ ಸ್ವಂತ ಹಣ !

ಕಾಶ್ಮೀರದ ಮೇಲೆ ಗುಡ್ಡಗಾಡಿನ ಜನರು ನಡೆಸಿದ ಆಕ್ರಮಣದ ವೆಚ್ಚಕ್ಕಾಗಿ ಪಾಕಿಸ್ತಾನ್ ಸರ್ಕಾರಕ್ಕೆ ತಮ್ಮ ಸ್ವಂತದ ೬೮ ಸಾವಿರ ರೂ. ಗಳನ್ನು ಕೊಟ್ಟಿದ್ದಾಗಿಯೂ, ಅದನ್ನು ವಾಪಸು ಕೊಡಬೇಕೆಂದೂ, ಪಶ್ಚಿಮ ಪಂಜಾಬಿನ ಮಾಜಿ ಮುಖ್ಯ ಮಂತ್ರಿ ಮಮ್ದೋತಿನ ನವಾಬರು ಕೇಳಿರುತ್ತಾರೆಂದೂ, ೧೬ ಸಾವಿರ ರೂ. ಗಳನ್ನು ತೆರಲು ಪಾಕಿಸ್ತಾನ ಸರ್ಕಾರದವರು ಒಪ್ಪಿದ್ದರೂ ಪೂರ್ತಾ ಮೊಬಲಗು ತಮಗೆ ಬೇಕೆಂದು ಅವರು ಹಟ ಹಿಡಿದಿರುವುದಾಗಿಯೂ ಗೊತ್ತಾಗಿದೆ.

ವಿದ್ಯುಚ್ಛಕ್ತಿಯಿಂದ ಶವದ ದಹನ

ವಿದ್ಯುಚ್ಛಕ್ತಿ ಸಹಾಯದಿಂದ ಶವ ದಹನ ಮಾಡುವ ವ್ಯವಸ್ಥೆಯನ್ನು ಬೊಂಬಾಯಿಯಲ್ಲಿ ಸಧ್ಯದಲ್ಲೇ ಏರ್ಪಡಿಸಲಾಗುವುದು. ಈ ಸಲಕರಣೆಗೆ ೫ ಲಕ್ಷ ರೂ. ವೆಚ್ಚವಾಗುವುದು. ದಿನಕ್ಕೆ ೬೦ ಶವಗಳನ್ನು ದಹನ ಮಾಡಬಹುದು. ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಇದರ ಉಪಯೋಗದ ಅವಕಾಶವಿರುವುದು.

ಚಂದ್ರಗ್ರಹಣದ ಫಲಾಫಲ

ಬರುವ ತಿಂಗಳು ೫ನೇ ತಾ|| ಆಗುವ ಪಾರ್ಶ್ವ ಗ್ರಹಣದ ಫಲಾಫಲಗಳು ಹೀಗಿವೆ.— ಯಾವುದಾದರೊಂದು ದೊರೆತನ(ಬಹುಶಃ ಕಾಶ್ಮೀರ)ದ ಪತನವೂ ಪ್ರಾಪ್ತಿಯಾಗುವುದು ಧಾನ್ಯಗಳ ಬೆಲೆ ಇಳಿಯುವುದು ಗುಜರಾತ್ ಮತ್ತು ಉತ್ಕಲ ಪ್ರದೇಶಗಳಲ್ಲಿ ಕ್ಷಾಮ, ಗಿರಣಿ, ಕಲ್ಲಿದ್ದಲು ಗಣಿ ಮತ್ತು ಸಂಚಾರ ಕಾರ್ಮಿಕರ ಮುಷ್ಕರ, ಮದ್ರಾಸಿನಲ್ಲಿ ದ್ರಾವಿಡ ಸಂಘದವರ ಗಲಾಟೆ ಮುಂತಾದುವು ಆಗುವುವು

ಭಾರತ ಪಾಕಿಸ್ತಾನ ಮತ್ತು ಭಾರತ ಕಾಶ್ಮೀರ ಸಂಬಂಧದಲ್ಲಿ ಹೆಚ್ಚು ತೊಂದರೆಯುಂಟು ಶಾಂತಿಗೆ ಭಂಗ ತರುವುದನ್ನು ತಡೆಯಲು ವಿಶೇಷ ಅಧಿಕಾರದ ಪ್ರಯೋಗವಾಗುವುದು ಅಸ್ಸಾಂ, ಬಂಗಾಳ ಮತ್ತು ತುರ್ಕಿಗಳಲ್ಲಿ ಭೂಕಂಪ ಮತ್ತು ಬಿರುಗಾಳಿಗಳಾಗುವುವು ಪ್ರಕೃತಿಯ ವಿಕಾರದಿಂದ ಭಾರಿ ಮಳೆ ಮತ್ತು ಸಮುದ್ರದ ಉಬ್ಬರಗಳ ಸಂಭವ ಮಕರದಲ್ಲಿ ಚಂದ್ರ ಗ್ರಹಣವಾಗುವುದರಿಂದ ಯಾವನೋ ಒಬ್ಬ ದೊರೆಯ ವಿರುದ್ಧವಾಗಿ ಪಿತೂರಿ ನಡೆದು ಅವನಿಗೆ ಮರಣ ಉಂಟಾಗುವುದು

ಬ್ಲ್ಯೂಸ್ ಫುಟ್‌ಬಾಲ್ ಕ್ಯಾಪ್ಟನ್‌ರವರಿಗೆ ಸತ್ಕಾರ

ದೂರ ಪೂರ್ವ ಪ್ರವಾಸವನ್ನು ಮುಗಿಸಿಕೊಂಡು ಬಂದಿರುವ ಮೈಸೂರು ಬ್ಲ್ಯೂಸ್ ಫುಟ್‌ಬಾಲ್ ಕ್ಲಬ್ಬಿನ ಕ್ಯಾಪ್ಟನ್ ಶ್ರೀ ಎಂ ಎನ್ ನಂಜುಂಡಯ್ಯನವರ ಗೌರವಾರ್ಥವಾಗಿ ಸದರಿ ಕ್ಲಬ್ಬಿನವರು ಸತ್ಕಾರ ಕೂಟವೊಂದನ್ನು ಬೊಂಬಾಯಿ ಇಂದ್ರಭವನದಲ್ಲಿ ಬುಧವಾರ ಏರ್ಪಡಿಸಿದ್ದರು. ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು ಉಪಾಹಾರ, ಪ್ರಾರ್ಥನೆ, ಮೈಸೂರು ಸಹೋದರರಿಂದ ಸಂಗೀತ ಮತ್ತು ವೀಣಾ ವಾದನಗಳಾದ ನಂತರ, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರೂ, ಶ್ರೀ ಎ ಕೃಷ್ಣಮೂರ್ತಿ ರಾಯರೂ ಭಾಷಣಗಳನ್ನು ಮಾಡಿ ನಂಜುಂಡಯ್ಯನವರಿಗೆ ಯಶಸ್ಸನ್ನು ಕೋರಿದರು

ಶ್ರೀ ಜಗದಾಂಬಾ ಶಿಶುವಿಹಾರ ಸ್ಥಳ ಬದಲಾವಣೆ

ಇದುವರೆಗೆ ರಾಜಧಾನಿಯ ದಿವಾನರ ರಸ್ತೆಯ ೩೦೫ ನೇ ನಂಬರು ಮನೆಯಲ್ಲಿದ್ದ ಮೋಲ್ಡಂಡ ಶಿಶುವಿಹಾರವನ್ನು ಕಳೆದ ಗುರುವಾರದಿಂದ ಅದೇ ರಸ್ತೆಯ ½ ಸುಮಾರು ಅರ್ಧ ಫರ್ಲಾಂಗು ದಕ್ಷಿಣಕ್ಕಿರುವ ೫೦೮ ನೇ ನಂಬರಿನ ಮನೆಗೆ ವರ್ಗಾಯಿಸಲಾಗಿದೆ ಮಕ್ಕಳ ಮತ್ತು ಬಾಲಾ ಕಾರ್ಯಕಲಾಪಗಳ ಹಿತದೃಷ್ಟಿಯಿಂದ ಮೋಲ್ಡಂಡ ವಿಶಾಲವಾದ ಜಾಗಕ್ಕೆ ವರ್ಗಾಯಿಸಲಾಗಿದೆ ಎಂದಿನಂತೆ ಮಹಾ ಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಬಿ ಕೃಷ್ಣಮೂರ್ತಿ,
ಡೈರೆಕ್ಟರ್.

ವರದಕ್ಷಿಣೆ ಮತ್ತು ಬಹು ಪತ್ನೀತ್ವ ನಿಷೇಧದ ಮಸೂದೆ

ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿರುವ ಖಾಸಗಿ ಮಸೂದೆಗಳ ಪ್ರಕಾರ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು, ಬಹು ಪತ್ನೀತ್ವ ಇವನ್ನು ನಿಷೇಧಿಸುವುದು, ಮರಣ ದಂಡನೆಯನ್ನು ತಪ್ಪಿಸುವುದು ಮತ್ತು ರಾಜಧನವನ್ನು ನಿಲ್ಲಿಸುವುದಕ್ಕೆ ಸಂಬಂಧಪಟ್ಟ ಮಸೂದೆಗಳಿವೆ ವರದಕ್ಷಿಣೆ ನಿಷೇಧದ ಕಾನೂನು ಉಲ್ಲಂಘನೆಗೆ ೧ ತಿಂಗಳಿಂದ ೧ ವರ್ಷದ ವರೆಗೆ ಶಿಕ್ಷೆ ವಿಧಿಸಲು ಏರ್ಪಾಟಾಗಿದೆ

ಮೋಹಿನಿ ಹಿಡಿದ ಮನುಷ್ಯನಿಗೆ ಉಪೋಷಣಾಚಾರ

ಮಧ್ಯ ಪ್ರದೇಶದ ಕಾಟ್ನಿ ಎಂಬಲ್ಲಿರುವ ಪೀಟರ್ ಎಂಬ ಕ್ರಿಸ್ತನೊಬ್ಬನಿಗೆ ಮೋಹಿನಿಯು ಹಿಡಿದು ಸಿಹಿ ತಿಂಡಿ ಮುಂತಾದುವನ್ನು ತಿನ್ನಲಿಕ್ಕೆ ಕೊಡುತ್ತಿರುವಳೆಂದೂ ಇದನ್ನು ಅನೇಕರು ನೋಡಿರುವರೆಂದೂ ಗೊತ್ತಾಗಿದೆ

ಇಂಗ್ಲಿಷ್ ಕಾಲುವೆ ಈಜಿದ ಮೊಟ್ಟಮೊದಲ ಭಾರತೀಯನು

[illegible] ಭಾರ[illegible] ದ ಮಿಹಿರ ಸೇನ್ ಎಂಬುವರು ಇಂಗ್ಲಿಷ್ ಕಾಲುವೆಯನ್ನು ಈಜಿ ದಾಟಲು ನಿರ್ಧರಿಸಿರುವರು [illegible] ಇನ್ನೂ [illegible] ಯನ್ನು [illegible] ಯನ್ನು ಈಜುವವರಲ್ಲಿ ಅತಿಯ [illegible] ಲನೇ ಭಾರತೀಯನಾಗಿರುವನು

ಅಮೇರಿಕದ ಸ್ವಾತಂತ್ರ್ಯ ಸ್ಮಾರಕ ಪ್ರತಿಮೆ



ಕಳೆದ ವಾರ ಅಮೇರಿಕದ ರಾಷ್ಟ್ರವ್ಯಂತ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು ಅಂದು ಸ್ವಾತಂತ್ರ್ಯ ದಿನದ ಸವಿ ನೆನಪಿಗೆ ನಿರ್ಮಿಸಿರುವ ಈ ಪ್ರತಿಮೆಗೆ ಗೌರವಗಳನ್ನು ಸಲ್ಲಿಸಲಾಯಿತು

ಕಳ್ಳತನ ಪತ್ತೆಹಚ್ಚುವ ಯಂತ್ರ

ಕಳ್ಳತನ ಮಾಡುವುದನ್ನು ಸುಲಭವಾಗಿ ಕಂಡುಹಿಡಿಯಬಲ್ಲ ಸಾಧನವೊಂದನ್ನು ಬೊಂಬಾಯಿ ಪೋಲೀಸರು ಇಟ್ಟುಕೊಳ್ಳುವರೆಂದು ವರದಿಯಾಗಿದೆ ದ್ವಿತೀಯ ಯುದ್ಧದಲ್ಲಿ ಇದನ್ನು ಕಂಡು ಹಿಡಿಯಲಾಯಿತು ಈಗಾಗಲೇ ಸಾವಿರ ಸಂದರ್ಭಗಳಲ್ಲಿ ಈ ಯಂತ್ರವು ಯಶಸ್ಸು ಗಳಿಸಿದೆ. ಕಳ್ಳತನ ಮಾಡುತ್ತಿರುವಾಗಲೇ ಇಂತಹ ಕಡೆ ನಡೆಯುತ್ತಿರುವುದೆಂಬುದಕ್ಕೆ ಪೋಲೀಸು ಕಛೇರಿಯಲ್ಲಿ ಟೆಲಿಫೋನ್ ಮೂಲಕ ಶಬ್ದವಾಗುವುದು

ಉಸ್ಮಾನಿಯಾ ಕಾಲೇಜು ವಿದ್ಯಾರ್ಥಿಗಳ ಸತ್ಯಾಗ್ರಹ

ಉಸ್ಮಾನಿಯಾ ವಿಶ್ವ ವಿದ್ಯಾಲಯವನ್ನು ಕೇಂದ್ರ ಸರ್ಕಾರದವರು ತಮ್ಮ ವಶಕ್ಕೆ ಪಡೆದು ಅದನ್ನು ಒಂದು ವಿಶ್ವ ವಿದ್ಯಾಲಯವನ್ನಾಗಿ ಪರಿವರ್ತಿಸುವುದನ್ನು ಪ್ರತಿಭಟಿಸಲು ಆ ವಿಶ್ವ ವಿದ್ಯಾ[illegible] ವಿದ್ಯಾರ್ಥಿಗಳು ಸತ್ಯಾಗ್ರಹ [illegible]

ಹೆಂಗಸಿನ ವೇಷದಲ್ಲಿ ಮನೆಗೆ ನುಗ್ಗಿ ಕಳುವಿನ ಪ್ರಯತ್ನ

ರಾಜಧಾನಿಯ ದೇವಾಂಬಾ ಅಗ್ರಹಾರದಲ್ಲಿರುವ ಶ್ರೀ ಕೃಷ್ಣಯ್ಯಂಗಾರ್ಯರ ಮನೆಗೆ ಕಳೆದ ೧೬ನೇ ತಾ|| ರಾತ್ರಿ ೧೧ ಗಂಟೆಯ ಸಮಯದಲ್ಲಿ ತಿಮ್ಮನೆಂಬುವನು ಹೆಂಗಸಿನ ವೇಷವನ್ನು ಧರಿಸಿ, ಕಳ್ಳತನಕ್ಕಾಗಿ ಪ್ರಯತ್ನ ಪಟ್ಟನೆಂದೂ, ಮನೆಯವರು ಇದನ್ನು ಕಂಡು ಅವನನ್ನು ಹಿಡಿದು ಪೋಲೀಸರ ವಶಪಡಿಸಿದರೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

		ಪಲ್ಲಕ್ಕೆ ರೂ. ಇಂದ	ರೂ. ಗೆ
ನೆಲಗಡಲೆ	,,	೬೪೨	೧೯-೧೪-೦
ಎಳ್ಳು	,	೬೨ ೩ ೦	೬೭ ೮ ೦
ಹರಳು ಬೀಜ	,	೪೬ - ೦	
ಹೊಂಗೆಬೀಜ		೧೭ ೫ ೩	
ಹುರುಳಿ	,	೪೦ ೧೦ ೦	೪೧ ೧೦ ೦
ಹೆಸರು	,	೫೭ ೪ ೮	೬೦ ೨.೦
ಅವರೆ	,	೬೪ ೬ ೦	
ಉದ್ದು		೫೨ ೦ ೦	೬೬-೦-೦
ಹಲಸಂದೆ		೫೬ ೦ ೦	೬೭-೪-೦
ಮೆಣಸಿನಕಾಯಿ			
ಮಣ ೧ಕ್ಕೆ		೪ ೧೦ ೦	೧೪ ೧೦ ೦
ಮೆಣಸೀನಗ್ಗು	,,	೪. ೦	
ಸೀಗೆಕಾಯಿ	,	೪ ೦ ೦	
ತೆಂಗಿನಕಾಯಿ ೧೦೦೦		೧೧೮ ೦ ೦	೧೫೪ ೦.೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ವಾತ್ರ ವಾಘಾಯರ್, ಮಧ್ಯಾಹ್ನ ೧ ೫೦ ಜಲತರಂಗ್, ೧ ೫೦ ಹಾಡು ಮತ್ತು ಗದ್ಯ ಪದ್ಯ, ೩ ಮಕ್ಕಳ ಮೆಟ್ಟಿನ ಗೀತೆಗಳು ಸಂಜೆ ೬ ೩೦ ಮತ್ತು ೭ ೦ ಹಿ. ಆರ್ ದಾಸಪ್ಪ ಸಂಗೀತ, ೬ ೧೦ ಅರ್ಕೆಸ್ಟ್ರಾ, ೭ ಚಿತ್ರ ಸಂಗೀತ, ೮ ಆರ್ ಆರ್ ಕೇಶವ ಮೂರ್ತಿ, ಪಿಟೀಲು ೮ ೪೦ ಕೇಂದ್ರ ಮಂತ್ರಿ ಸಿ ಸಿ ಬಿಸ್ವಾಸ್‌ರವರ ಭಾಷಣದ ಪ್ರಸಾರ ೯ ೩೦ ಸಂಗೀತ [illegible] ನಾಗಪ್ಪ

SRI GAYATHRI
TALKIES
Daily 2 Shows
From 20-7-52 for 3 days
QUEBEC
Roaring with Adventure
(Color by Technicolor)

NEXT CHANGE —
ENFORCER

REMEMBER !! — REMEMBER !!
ABIDS OUTRIGHT
✱ AUCTION SALE ✱
TOMORROW AT SHOW ROOMS AT 10 A.M.

ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಹಿಷ್ಠೆ (ಮುಟ್ಟಿನ) ಸಂಬಂಧದ ಹೊಟ್ಟೆನೋವಿನಿಂದ [illegible], ಅಕ್ರಮ ಸೂತಕ, ಕ್ರಮತಪ್ಪಿ ಬಹಿಷ್ಠೆ, ಗರ್ಭ ಪತನ, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ [illegible] ಸಂತಾನ ಫಲ [illegible] ದರಿ ಮೋಲ್ಡಂಡ ಸಿದ್ಧೌಷಧವನ್ನು "ಮದನ ವಿಲಾಸ್" ಜೊತೆ ಸೇವಿಸಿ [illegible] 1 ಸೆರ್ ಆಸುಪಾನ ಪತ್ರಿಕೆಯ ಜೊತೆ [illegible] ಸಾಕ, [illegible] ಮನೇ ನೋಡಬಹುದು. [illegible] 1 ಸೆರ್ 5 ರೂ ಪತ್ರ ವ್ಯವಹಾರ [illegible] ವ್ಯಾಪಾರಿಗಳು ಉಚಿತ [illegible] ಮಾಡಿಕೆಗೆ 2 ಅಣೆ ಸ್ಟಾಂಪು ಕಳಿಸಿ

ವಿಶೇಷ ಸೂಚನೆ — ಔಷಧದ ಪ್ಯಾಕೆಟ್ ಮೇಲೆ ಶ್ರೀ ಎ ಆರ್ ಅಯ್ಯಂಗಾರ್ ರವರ ಫೋಟೋ ಮತ್ತು ರುಜು ನೋಡಿ [illegible] ಅಂಬಳೆ ಮತ್ತು ಮೈಸೂರು ಸೂಪರ್ ಕೊಳದ [illegible] ಆಫೀಸುಗಳನ್ನು ಕೆಳಕಂಡ ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ.

ಹೊಸ ವಿಳಾಸ.— ಎ ರಾಮಸ್ವಾಮಿ ಅಯ್ಯಂಗಾರ್ ಸನ್
" ಸಂತಾನ ಸಿಂಧೂರ ಬಿಲ್ಡಿಂಗ್ "
623, ನೂರಡಿ ರಸ್ತೆ ಪಕ್ಕಾ ಪ್ಯಾಲೆಸ್,
(ಕೃಷ್ಣ ಕೃಪಾ ಮಿಲ್ ಹತ್ತಿರ) ಮೈಸೂರು

Edited, Printed and Published by A R Naga-
[illegible]

ರಿಜಿಸ್ಟರ್ಡ್ ನಂ. ೨೦೨ || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೦] ಸೋಮವಾರ ೨೧-೩-೫೩ [ಸಂಚಿಕೆ ೨೯೪

ಮೈಸೂರು ಹಿರಿಯ ಶಾಸನ ಸಭಾಧಿವೇಶನ

ಮೈಸೂರ್ ಕೋ-ಆಪರೇಟಿವ್ ಸೊಸೈಟಿ ವ್ಯವಹಾರ

ಸಹಕಾರ ಮಂತ್ರಿಗಳಿಗೆ ಹೊಸ ಆಡಳಿತ ವರ್ಗದವರ ಮನವಿ

ಮೈಸೂರು ೨೧

ಸಂಸ್ಥಾನದ ಸಹಕಾರ ಶಾಖಾ ಸಚಿವರಾದ ಶ್ರೀ ಹೆಚ್. ಸಿದ್ದವೀರಪ್ಪನವರು ನೆನ್ನೆ ಇಲ್ಲಿಗೆ ಆಗಮಿಸಿದ್ದಾಗ್ಯೆ ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಮತ್ತು ಡೈರೆಕ್ಟರುಗಳಾದ ಶ್ರೀಗಳು ಎಂ ಎಸ್ ನಂಜಪ್ಪ ಮತ್ತು ಟಿ ಎಸ್ ಶಾಂತವಮೂರ್ತಿಯವರು ಅವರನ್ನು ಭೇಟಿ ಮಾಡಿ, ಶ್ರೀ ಟಿ. ಎಸ್ ರಾಜಗೋಪಾಲ ಅಯ್ಯಂಗಾರ್ ಮತ್ತು ಇತರರು ಕಳೆದ ೧೦ ವರ್ಷಗಳಿಂದ ಸೊಸೈಟಿಯ ಅಧಿಕಾರದಲ್ಲಿದ್ದಾಗಿನ ಹಲವು ವ್ಯವಹಾರಗಳನ್ನು ಸಚಿವರ ಅವಗಾಹನೆಗೆ ತಂದು ಒಂದು ಮನವಿಯನ್ನು ಸಲ್ಲಿಸಿರುವರೆಂದು ತಿಳಿದುಬಂದಿದೆ ವಿದ್ಯಮಾನಗಳೆಲ್ಲವನ್ನೂ ಪರಿಶೀಲಿಸಿ, ಸೊಸೈಟಿಯ ಹಿತದೃಷ್ಟಿಯಿಂದ ಸೂಕ್ತವಾದ ಕಾರ್ಯಕ್ರಮವನ್ನು ಜರುಗಿಸುವ ಬಗ್ಗೆ ಸಚಿವರು ಭರವಸೆಯಿತ್ತರೆಂದೂ ಹೇಳಲಾಗಿದೆ

ಪ ರಿ ಕ ತೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಈ ಸಂಜೆ ೭ ಘಂಟೆಗೆ ಅಮಾವಾಸ್ಯೆ ಪ್ರಯುಕ್ತ ಬೆಂಗಳೂರಿಂದ ಬಂದಿರುವ ಶ್ರೀ ಪಿ ರಾಮಸ್ವಾಮಿ ನಾಯ್ಡುರವರಿಂದ ಭೀಷ್ಮ ಪ್ರತಿಜ್ಞೆ ಎಂಬ ಹರಿಕಥೆಯೂ, ಅಮ್ಮನವರಿಗೆ ರಾಶಿಕಾ ಅಲಂಕಾರವೂ ದೇವಾಂಗ ಸಂಘದವರಿಂದ ಏರ್ಪಡಿಸಲ್ಪಟ್ಟಿರುತ್ತೆ

ನೇಪಾಳದ ಮಂತ್ರಿ ಮಂಡಲದ ಬದಲಾವಣೆ

ನೇಪಾಳದಲ್ಲಿ ೧೭ ತಿಂಗಳ ಹಿಂದೆ ಸ್ಥಾಪಿಸಲಾದ ತಾತ್ಕಾಲಿಕ ಮಂತ್ರಿ ಮಂಡಲವನ್ನು ಮೂರನೇ ಬಾರಿ ಈಗ ಬದಲಾಯಿಸುವ ಬಗ್ಗೆ ಬಿಕ್ಕಟ್ಟು ಸಂಭವಿಸಿ ಸಧ್ಯದಲ್ಲೇ ಹೊಸ ಸರ್ಕಾರವು ರಚಿತವಾಗಲಿದೆಯೆಂದು ಹೇಳಲಾಗಿದೆ. ಸಚಿವರ ಆಯ್ಕೆ ಬಗ್ಗೆ ಮುಖ್ಯ ಮಂತ್ರಿ ಎಂ ಪಿ. ಕೊಯಿರಾಲಾರವರು ತಮಗೆ ಪೂರ್ಣ ಸ್ವಾತಂತ್ರ್ಯವಿರಬೇಕೆಂದೂ, ಇದರಿಂದ ಏಕಾಭಿಪ್ರಾಯದಿಂದ ಕೂಡಿದ ಭದ್ರವಾದ ಸರ್ಕಾರ ರಚಿಸಲು ಸಾಧ್ಯವಾಗುವುದೆಂದು ತಿಳಿಸಿರುವುದಾಗಿಯೂ ವರದಿಯಾಗಿದೆ. ಅವರ ಇಚ್ಛೆಗೆ ವಿರುದ್ಧವಾಗಿ ಬೇರೆ ಹಲವರನ್ನು ಸೇರಿಸಿಕೊಳ್ಳಬೇಕೆಂದು ಅಲ್ಲಿನ ಕಾರ್ಯಕಾರಿ ಸಮಿತಿಯು ಒತ್ತಾಯಪಡಿಸುತ್ತಿದೆಯೆಂದೂ ಹೇಳಲಾಗಿದೆ

ಬಿರುಗಾಳಿಗೆ ಸಿಕ್ಕಿ ೧೫ ಜನರ ಮರಣ

ದಕ್ಷಿಣ ಫಾರ್ಮೋಸಾ ದ್ವೀಪದ ಮೇಲೆ ಮೊನ್ನೆ ದಿನ ಗಂಟೆಗೆ ನೂರು ಮೈಲಿ ವೇಗದ ಪ್ರಚಂಡ ಬಿರುಗಾಳಿಯು ಬೀಸಿದ ಪರಿಣಾಮವಾಗಿ ೧೫ ಜನರು ಸತ್ತು ೩೦ ಮಂದಿಗೂ ಮೇಲ್ಪಟ್ಟು ಗಾಯಗೊಂಡು ವರದಿಯಾಗಿದೆ

ಭಾರತ ಮತ್ತು ಕಾಶ್ಮೀರಗಳ ಮಾತುಕತೆಗಳಲ್ಲಿ ಪ್ರಗತಿ

ಭಾರತ ಮತ್ತು ಕಾಶ್ಮೀರಗಳ ಸಂಬಂಧವಾಗಿ ದೆಹಲಿಯಲ್ಲಿ ನಡೆಯುತ್ತಿರುವ ಮಾತುಕತೆಗಳು ಸಮರ್ಪಕವಾದ ಘಟ್ಟವನ್ನು ಮುಟ್ಟಿರುವುವೆಂದೂ, ಪರಿಸ್ಥಿತಿಯು ಬಹಳ ಆಶಾದಾಯಕವಾಗಿದೆಯೆಂದೂ ತಿಳಿದುಬಂದಿದೆ ಕಾಶ್ಮೀರದಲ್ಲಿ ಭಾರತದ ಧ್ವಜಕ್ಕೆ ಗೌರವವು ದೊರೆಯುತ್ತಿರುವುದರಿಂದ ಪ್ರತ್ಯೇಕ ಧ್ವಜವನ್ನು ಹೊಂದಲು ಭಾರತ ಸರ್ಕಾರದವರು ಆಕ್ಷೇಪಿಸುವುದಿಲ್ಲವೆಂದು ಗೊತ್ತಾಗಿದೆ

ಈ ಸಂಬಂಧವಾಗಿ ದೆಹಲಿಗೆ ಆಗಮಿಸಿರುವ ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರು ನೆನ್ನೆ ಸ್ವದೇಶಕ್ಕೆ ಹಿಂದಿರುಗಬೇಕಾಗಿದ್ದುದನ್ನು ಇನ್ನೆರಡು ದಿನಗಳಿಗೆ ಮುಂದುವರಿಸಿರುವರು ಅವರು ಭಾರತದ ಪಾರ್ಲಿಮೆಂಟ್ ಸದಸ್ಯರನ್ನು ಉದ್ದೇಶಿಸಿ ಮೇಲ್ಕಂಡ ಸಮಸ್ಯೆಯನ್ನು ಕುರಿತು ಭಾಷಣ ಮಾಡಲಿರುವರೆಂದೂ ಮತ್ತು ಪಂಡಿತ ನೆಹರೂರವರೂ ಸಂಧಾನದ ಪರಿಸಮಾಪ್ತಿಯನ್ನು ಕುರಿತು ಒಂದು ಘೋಷಣೆ ಹೊರಡಿಸುವರೆಂದೂ ಹೇಳಲಾಗಿದೆ

ಟೆಹರಾನಿನಲ್ಲಿ ಕರ್ಫ್ಯೂ ಜಾರಿ

ಪರ್ಷಿಯದ ಮಾಜಿ ಪ್ರಧಾನಿ ಮುಸ್ಸಾದಿಕ್‌ರವರ ಬೆಂಬಲಗಾರರು, ಮೊನ್ನೆ ವಿರೋಧ ಪಕ್ಷದ ಪತ್ರಿಕೆ ಅತೇಶ್ ಎಂಬುದರ ಕಛೇರಿಗೆ ನುಗ್ಗಿ ಅದನ್ನು ನಾಶಪಡಿಸಿದರೆಂದು ವರದಿಯಾಗಿದೆ. ಇನ್ನೆರಡು ಪತ್ರಿಕಾ ಕಛೇರಿಗಳಲ್ಲೂ ಗಲಭೆ ನಡೆಸಲಾಯಿತೆಂದು ಹೇಳಲಾಗಿದೆ ಗಲಭೆ ಮಾಡುವವರನ್ನು ತಡೆಯಲು ಬಂದಾಗ ಘರ್ಷಣೆಗಳೂ ಆದುವು ಘರ್ಷಣೆಯ ಪರಿಣಾಮವಾಗಿ ೬ ಮಂದಿಗೆ ಗಾಯವಾಯಿತೆಂದೂ ಇಬ್ಬರು ಸತ್ತಿರುವರೆಂದೂ ಹೇಳಲಾಗಿದೆ ಸುಮಾರು ೧೦೦ ಜನ ಪ್ರದರ್ಶನಕಾರರನ್ನು ಬಂಧಿಸಲಾಗಿದೆ ಟೆಹರಾನ್ ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿ ಮಾಡಲಾಗಿದೆ

○ ಪಶ್ಚಿಮ ಬಂಗಾಳದಲ್ಲಿ ಅಕ್ಕಿಯ ಮಾರಾಟದ ಬೆಲೆಯನ್ನು ಇಂದಿನಿಂದ ಸೇರಿಗೆ ೧|| ಆಣೆಯಂತೆ ಹೆಚ್ಚಿಸಲಾಗಿದೆ

ಭಕ್ತ ಬರುವವರಿಗೆ ಗೋಧಿ ಪಡೆಯಲು ಅವಕಾಶ

ಮೈಸೂರು ೨೧

ರಾಜಧಾನಿಯಲ್ಲಿ ಭಕ್ತ ಬಗುವ ರೇಷನ್ ಕಾರ್ಡುದಾರರು ಈಗಾಗಲೇ ತಾವು ಪಡೆದಿರುವ ೧೨ ಔನ್ಸು ಅಕ್ಕಿ ಪಡಿತರದ ಜೊತೆಗೆ ಪ್ರತಿಯೊಬ್ಬರಿಗೆ ಎರಡು ಔನ್ಸು ಗೋಧಿಯನ್ನು, ತಾತ್ಕಾಲಿಕವಾಗಿ ೨ ತಿಂಗಳ ಕಾಲ ಪಡೆಯಬಹುದೆಂದು ಆಹಾರ ಶಾಖಾ ಡೈರೆಕ್ಟರ್‌ರವರು ತಿಳಿಸಿರುವರು

ಕಲ್ಕತ್ತಾದಲ್ಲಿ ೧೨೬ ಜನ ಪ್ರದರ್ಶನಕಾರರ ಬಂಧನ

ಉತ್ತರ ಕಲ್ಕತ್ತದ ಕಸ್ಸಿಪುರ ನಿವಾಸಿಗಳು ಒಮ್ಮತಿಯವರು ಅಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ನೆನ್ನೆ ಸಂಜೆ ಸಭೆಯನ್ನು ನಡೆಸಲು ಪ್ರಯತ್ನಿಸಿದರು ಪೊಲೀಸರು ಲಾಠಿ ಪ್ರಯೋಗ ಮಾಡಿ ಗುಂಪನ್ನು ಚದುರಿಸಿದರು. ೧೨೬ ಮಂದಿ ಪ್ರದರ್ಶನಕಾರರನ್ನು ಬಂಧಿಸಲಾಯಿತು ಗಲಾಟೆಯಲ್ಲಿ ಹಲವು ಪೊಲೀಸರಿಗೂ ಗಾಯಗಳಾಗಿವೆ

ಕೊರಿಯಾ ಸಂಧಾನಕ್ಕೆ ನೆಹರೂ ಮಧ್ಯಸ್ಥಿಕೆ

ಕೊರಿಯಾ ಶಾಂತಿ ಸಂಧಾನದಲ್ಲಿ ಮಧ್ಯಸ್ಥಿಕೆ ವಹಿಸುವಂತೆ ಪಂಡಿತ ನೆಹರೂರವರನ್ನು ಪ್ರಾರ್ಥಿಸುವ ನಿರ್ಣಯವೊಂದನ್ನು ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯುವ ಬ್ರಿಟಿಷ್ ಲೇಬರ್ ಪಕ್ಷದ ವಾರ್ಷಿಕಾಧಿವೇಶನದಲ್ಲಿ ತರಲಾಗುವುದೆಂದು ಗೊತ್ತಾಗಿದೆ

ಭಗವತ್ಸಾಕ್ಷಾತ್ಕಾರ ಯತ್ನದಲ್ಲಿ ಆತ್ಮಾರ್ಪಣೆ

ಜುನಾಗಢದ ಬಳಿ ಬಂಟಿಯಾ ಎಂಬಲ್ಲಿ ೬೦ ವರ್ಷದ ದೈವ ಭಕ್ತನು ಭಗವಂತನ ಸಾಕ್ಷಾತ್ಕಾರ ಪಡೆಯುವ ಉದ್ದೇಶದಿಂದ ತದೇಕ ಚಿತ್ತನಾಗಿ ೮೭ ದಿನಗಳ ಕಾಲ ಉಪವಾಸ ಮಾಡಿ ಕಳೆದ ಗುರುವಾರ ಮೃತಪಟ್ಟನೆಂದು ವರದಿಯಾಗಿದೆ ಆ ಕಾಲದಲ್ಲಿ ಅವನು ನೀರನ್ನು ಸಹ ತೆಗೆದುಕೊಳ್ಳಲಿಲ್ಲವೆಂದು ಹೇಳಲಾಗಿದೆ

ಹಿರಿಯ ಶಾಸನ ಸಭೆಯ ಅಧಿವೇಶನ

ಮೈಸೂರು ಧ್ವಜದ ಬಗ್ಗೆ ನಿಲುವಳಿ ಸೂಚನೆ

ಸ್ವಂ. ವರ ದಿಗಾರ] ಬೆಂಗಳೂರು ೨೧

ಸಂಸ್ಥಾನದ ಹಿರಿಯ ಶಾಸನ ಸಭೆಯ ಪ್ರಥಮ ಅಧಿವೇಶನವು ಈ ದಿನ ಅಪರಾಹ್ನ ೧ ಘಂಟೆಗೆ ಆರಂಭವಾಯಿತು ಶ್ರೀ ಕೆ. ಟಿ ಭಾಷ್ಯಂರವರು ಅಧ್ಯಕ್ಷತೆ ವಹಿಸಿದ್ದರು.

ವಿಶ್ವವಿದ್ಯಾಲಯದ ಕ್ರೈಸ್ತರ ಸ್ಥಾನ ಬಿಟ್ಟು ಇತರರಿಗೆ ಉದ್ಯೋಗಗಳನ್ನು ಒದಗಿಸಲಾಗಿದೆಯೆಂದೂ ಈ ಬಗ್ಗೆ ಕೆಲವು ಯೋಜನೆಗಳನ್ನು ಕೈಗೊಳ್ಳಲಾಗಿದೆಯೆಂದೂ, ಇದಕ್ಕಾಗಿ ಕೇಂದ್ರ ಸರ್ಕಾರದವರು ೩,೩೨,೫೦೦ ರೂ ಸಹಾಯ ಧನ, ೪,೭೫,೦೦೦ ರೂ ಸಾಲ ಮತ್ತು ಒಂದು ಲಕ್ಷ ರೂ ಅಡ್ವಾನ್ಸನ್ನು ಕೊಟ್ಟಿರುವುದಾಗಿಯೂ ಶ್ರೀ ಎ ಜಿ. ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ಶ್ರೀ ಎಂ ಪಿ ಎಲ್ ಶಾಸ್ತ್ರಿಗಳು ಟಿ ಮ್ಯೋಗಿಗಳ ಶಿಕ್ಷಣ ಭಾಗಗಳ ಸೀಟುಗಳ ಹಂಚಿಕೆ ವಿಷಯದಲ್ಲಿ ಸರ್ಕಾರದ ಹೊಸ ಆಜ್ಞೆಯ ಬಗ್ಗೆಯೂ ಮತ್ತು ಮೈಸೂರು ಧ್ವಜದ ನಿಷೇಧದ ಬಗ್ಗೆಯೂ, ಶ್ರೀ ಡಿ. ವೆಂಕಟರಮಣಯ್ಯನವರು ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟುಗಳನ್ನು ಹಂಚಿರುವ ವಿಷಯವಾಗಿಯೂ ನಿಲುವಳಿ ಸೂಚನೆಗಳನ್ನು ತಂದರು

ಈ ನಿಲುವಳಿ ಸೂಚನೆಗಳನ್ನು ಸಾಮಾನ್ಯ ವಿಷಯಗಳ ಚರ್ಚೆಯ ಕಾಲದಲ್ಲಿ ತೆಗೆದುಕೊಳ್ಳಬಹುದಾದ್ದರಿಂದ ಈಗ ಅವು ಅನವಶ್ಯಕವೆಂದು ತಿಳಿಸಿ ಅಧ್ಯಕ್ಷರು ತಳ್ಳಿಹಾಕಿದರು

ಅಧ್ಯಕ್ಷರ ಗೈರು ಹಾಜರಿ ಕಾಲದಲ್ಲಿ ಸಭಾಧ್ಯಕ್ಷತೆ ವಹಿಸಲು ಶ್ರೀಗಳಾದ ಜ ವೀರಪ್ಪ, ಪಿ ಗೋಪಾಲಕೃಷ್ಣ ಶೆಟ್ಟಿ, ಎಲ್ ಪಿ ಗೋವಿಂದಗೌಡ ಮತ್ತು ಜಿ|| ವೆಲ್ಲೂರಿಯವರುಗಳನ್ನೊಳಗೊಂಡ ಪ್ಯಾನಲ್ಲನ್ನು ರಚಿಸಿರುವುದಾಗಿ ಅಧ್ಯಕ್ಷರು ತಿಳಿಸಿದರು

ಶ್ರೀಮನ್ಮಹಾರಾಜರ ಭಾಷಣಕ್ಕಾಗಿ ಅಭಿನಂದಿಸುವ ನಿರ್ಣಯವನ್ನು ಶ್ರೀಮತಿ ಎಂ.ಆರ್ ಲಕ್ಷಮ್ಮನವರು ಮಂಡಿಸಿದರು. ಅದರ ಮೇಲೆ ಚರ್ಚೆ ಆರಂಭವಾಯಿತು

ಚೀಫ್ ಇಂಜನಿಯರುಗಳ ಹುದ್ದೆಯ ಜೋಡಣೆ

ಸಂಸ್ಥಾನದ ಮರಾಮತ್ತು ಇಲಾಖೆಯಲ್ಲಿ ಇರುವ ಎರಡು ಚೀಫ್ ಇಂಜನಿಯರ್.ಗಳ ಹುದ್ದೆಯ ಸ್ಥಾನ ಒಂದನ್ನು ವಜಾ ಮಾಡಲು ಸರ್ಕಾರದವರು ಆಲೋಚಿಸಿರುವರೆಂದು ತಿಳಿದುಬಂದಿದೆ

ಮಹಮದ್ ಸೇಟರಿಗೆ ಸರ್ಕಾರಿ ರೇಷನ್ ಏಜನ್ಸಿ ರದ್ದು

ಸರ್ಕಾರಿ ರೇಷನ್ ನೇಯ್ಗೆ ಕಾರ್ಖಾನೆಯ ಪದಾರ್ಥಗಳ ಮಾರಾಟದ ಬಗ್ಗೆ ಮೈಸೂರಿನ ಜಿ|| ಮಹಮದ್ ಅಬ್ಬಾಸೇಟರಿಗೆ ಕೊಡಲ್ಪಟ್ಟಿದ್ದ ಏಜನ್ಸಿಯನ್ನು ಸರ್ಕಾರದವರು ವಜಾ ಮಾಡಿದ್ದಾರೆಂದು ತಿಳಿದುಬಂದಿದೆ

೧೮| ಗಂಟೆಗಳಲ್ಲಿ ಬೊಂಬಾಯಿಂದ ಲಂಡನ್ನಿಗೆ

ಬೊಂಬಾಯಿಂದ ಸಂಜೆ ಹೊರಡುವ ವಿಮಾನವು ೧೮| ಘಂಟೆಗಳಲ್ಲಿ ಲಂಡನ್ ನಗರವನ್ನು ಸೇರುವ ವ್ಯವಸ್ಥೆಯನ್ನು ಇಂಗ್ಲೆಂಡಿನ ಕಾಮೆಟ್ ವಿಮಾನ ಕಂಪೆನಿಯವರು ಮಾಡಿರುತ್ತಾರೆ ಈ ವಿಮಾನವು ಬರುವ ೧೨ ನೇ ತಾ|| ಮೊಟ್ಟಮೊದಲಾಗಿ ಲಂಡನ್ನಿನಿಂದ ಬೊಂಬಾಯಿಗೆ ಬರುವುದು.

ಮಾರಾಟ ತೆರಿಗೆ ವಿರುದ್ಧ ಹರತಾಳ

ಮಾರಾಟದ ತೆರಿಗೆಯನ್ನು ವಿವಿಧ ಕಡೆಗಳಲ್ಲಿ ವಿಧಿಸುವ ಶಾಸನಕ್ಕೆ ಪ್ರತಿಭಟನೆ ಸೂಚಿಸಲು ಹೈದರಾಬಾದು ಮತ್ತು ಸಿಕಂದರಾಬಾದುಗಳಲ್ಲಿ ೧ ದಿನದ ಹರತಾಳವನ್ನು ಮೊನ್ನೆ ದಿನ ಆಚರಿಸಲಾಯಿತು

ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸಮಸ್ಯೆ

ಮೈಸೂರು: ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ರಜಾ ಮತ್ತು ವಿರಾಮ ಕಾಲಗಳಲ್ಲಿ ಯಾವ ವಿಧವಾದ ಕಾರ್ಯಗಳಲ್ಲಿ ನಿರತರಾಗುವರು ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಅವರ ಭಾವನೆ ಏನು ಎಂಬುದರ ಸಂಶೋಧನೆಯನ್ನು ಬೊಂಬಾಯಿಯ ಟಾಟಾ ಸಂಸ್ಥೆಯ ಸದಸ್ಯರಾದ ಪಂಡರಿನಾಥ್ ಪ್ರಭು ಮತ್ತು ಎ ಎಫ್ ಕೈಕೊಬಾದ್‌ರವರ ಮುಖಂಡತ್ವದಲ್ಲಿ ಶ್ರೀ ಜಿ ಪಿ ಕೃಷ್ಣರಾಯರು ನಡೆಸುತ್ತಿರುವರು ಸಮಾಜ ಸೇವೆಯಲ್ಲೂ, ರಾಷ್ಟ್ರಾಭ್ಯುದಯದಲ್ಲೂ ವಿದ್ಯಾರ್ಥಿಗಳ ದೃಷ್ಟಿಪಥವನ್ನು ಕಂಡು ಹಿಡಿಯುವುದೇ ಸಂಶೋಧನೆಯ ಉದ್ದಿಶ್ಯವಾಗಿದೆ

ಭಾರತ ಸೈನ್ಯದಲ್ಲಿ ಶೇ|| ೧ ರಷ್ಟು ಮೈಸೂರಿನವರು

ಭಾರತದ ಸೈನ್ಯದಲ್ಲಿ ಪಂಜಾಬಿಗಳು ಶೇ|| ೨೬. ೭ ರಷ್ಟಿರುವರೆಂದು ಗೊತ್ತಾಗಿದೆ ಉತ್ತರ ಪ್ರದೇಶದವರು ೧೯. ೨ ರಷ್ಟು, ಮದ್ರಾಸಿನವರು ೧೪ ೩ ರಷ್ಟು ಇರ ವರು ಮೈಸೂರಿನವರು ಶೇ|| ೧, ಹೈದರಾಬಾದಿನವರು ಶೇ೪.೦೫, ತಿರುವಾಂಕೂರು-ಕೊಚ್ಚಿಯವರು ೪.೬, ಕೊಡಗಿನವರು ಶೇ|| ೦ ೩ ರಷ್ಟಿರುವರು

ವಾರ್ಷಿಕೋತ್ಸವ

ರಾಜಧಾನಿಯ ಮಧುರ ಕಲಾ ಮಂದಿರದ ನಾಲ್ಕನೇ ವಾರ್ಷಿಕೋತ್ಸವವು ನೆನ್ನೆ ಟೌನಹಾಲಿನಲ್ಲಿ ಜರುಗಿತು ಸಂಸ್ಥಾನದ ಗೃಹ ಸಚಿವ ಶ್ರೀ ಎಚ್ ಸಿದ್ದವೀರಪ್ಪನವರು ಅಧ್ಯಕ್ಷತೆ ವಹಿಸಿದ್ದರು ಮಂದಿರದ ಅಧ್ಯಕ್ಷರಾದ ಶ್ರೀ ವಿ ಆರ್ ನಾಯ್ಡು ರವರು ಸ್ವಾಗತ ಭಾಷಣ ಮಾಡಿದರು ಶ್ರೀ ನರಸಿಂಹಯ್ಯಂಗಾರ್ಯರು ವರದಿಯನ್ನು ಓದಿದರು ಕರುನಾಡಿನ ನಾಟ್ಯಕಲಾ ವಿಶಾರದ ಎಂ. ಸಿ ಮಹದೇವ ಸ್ವಾಮಿಯವರು ಭಾಷಣ ಮಾಡಿ ಭರತ ನಾಟ್ಯ ಮೊದಲಾದ ಪ್ರಾಚೀನ ಕಲೆಗಳನ್ನು ಪುನರುದ್ಧಾರ ಮಾ

ಮರಾಮತ್ತು ಕಂಟ್ರಾಕ್ಟರುಗಳ ಸಹಕಾರ ಸಂಘದ ಸಭೆ

ಚಾಮರಾಜನಗರ ೨೦

ಇದೇ ೨೭ ನೇ ತಾ|| ಶನಿವಾರ ಮಧ್ಯಾಹ್ನ ೩ ಘಂಟೆಗೆ ಮರಾಮತ್ತು ಕಂಟ್ರಾಕ್ಟರುಗಳ ಸಹಕಾರ ಸಂಘದ ಸಾಮಾನ್ಯ ಸಭೆಯು ನಡೆಯುವುದು. ನಂಜನಗೂಡಿನ ಸಬ್ ಡಿವಿಜನ್ ಅಧಿಕಾರಿಗಳಾಗಿರುವ ಶ್ರೀ ಎಂ ನರಸಿಂಹರಾಯರು ಅಧ್ಯಕ್ಷತೆ ವಹಿಸುವರು

ಹುವುದರ ಅಗತ್ಯವನ್ನು ವಿವರಿಸಿ ಹೇಳಿದರು ಬೆಂಗಳೂರು ನಗರ ಕಾರ್ಪೊರೇಷನ್ನಿನ ಮೇಯರರಾದ ಶ್ರೀ ಬಿ ವಿ. ಲಂಕಪ್ಪನವರು ನಾಟ್ಯ ಸರಸ್ವತಿ ಜೆಟ್ಟಿ ತಾಯಮ್ಮನವರ ಭಾವಚಿತ್ರವನ್ನು ಅನಾವರಣ ಮಾಡಿದರು ಅಧ್ಯಕ್ಷರ ಭಾಷಣವಾದನಂತರ ನೃತ್ಯ, ವಾದ್ಯ ಸಮ್ಮೇಳನ ಮೊದಲಾದ ಕಾರ್ಯಕ್ರಮಗಳು ಜರುಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಆಕಾಶವಾಣಿ ಬೆಂಗಳೂರು ಕಾರ್ಯಕ್ರಮ

[illegible]

ಅಯ್ಯರ್ ಸಹೋದರ್ಯ, ಮೈಸೂರು

ಕಾಶಿಯಿಂದ ಬಂದಿರುವ ಸ್ವಾಮಿ ಜಗದೀಶಾನಂದಜಿಯವರು ಮೊಲ್ಕಂಡ ಸಮಾಜದಲ್ಲಿ ನೆನ್ನೆ ಬೆಳಿಗ್ಗೆ ಉತ್ತರ ಸಾಕ್ಷಾತ್ಕಾರ ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು ಸಮಾಜದ ಅಧ್ಯಕ್ಷರಾದ ಶ್ರೀ ಬಿ. ಲಕ್ಷ್ಮೀನಾರಾಯಣರವರು ಅಗ್ರಾಸನ ವಹಿಸಿದ್ದರು.

SREE GANESHA

TALKIES

From 22 7 52 For 2 Days

THE ADVENTURES

With - Dennis Price
Peter Hammond

— NEXT CHANGE

CAGE OF GOLD

ಚಾಮುಂಡೇಶ್ವರಿ
ಟಾಕೀಸ್

22 7 52 ರಿಂದ ಅಮೋಘ ಪ್ರಾರಂಭ

ಹನುಮಾನ್ ಪಾತಾಳ ವಿಜಯ

(ಹಿಂದಿ)

ಪಾತ್ರ — ಲೀಲಾ ಕುಮಾರಿ ಮಹಿಪಾಲ್ ಮುಂತಾದವರು

MYSORE CITY MUNICIPALITY

NOTIFICATION

1 Sealed tenders will be received by the undersigned on the 28th July 1952 till 4 P M for erecting and fixing the Gandhi Memorial Stoopa stones at Gandhi Square Mysore, constructing R.C C Terrace roofing to the Cattle Trevices in the Veterinery hospital, Chamaraja mohalla & Two model houses to be constructed in Besthageri, K R Mohalla Tenders should be accompanied with a challan for having remitted in the Municipal Treasury a sum of Rs. 250/-, 55/ & 250/- as earnest money

2 Quotation will be received on 23rd July 52, for supply of 40 seasoned teak wood poles of 14 feet length. Supplies are to be made at the Town Hall by quoting the rate for each pole

3. Quotation will be received on 25—7—52, for decoration bountings as per specification with a sample length of 20 feet

For full particulars please see the notification on the office notice board.

Sd V. K. MUKUNDAN,
Municipal Engineer.

ಮೈಸೂರು ನಗರದ ರೇಷನಿಂಗ್ ಆಫೀಸರರ ಕಛೇರಿ

ಪ್ರಕಟಣೆ

ನಂ ಸಿ ಸಿ ಡಿ ಎ 1-133/51-52 ಮೈಸೂರು ತಾ|| 24-6-52

ನಗರದ ಹಲವು ಸಬ್ ಗೋಡೌನ್ ಮತ್ತು ರಿಸರ್ವ್ ಗೋಡೌನುಗಳಿಂದ ಶೇಖರಿಸಲ್ಪಟ್ಟ ಕಸದಿಂದ ಮಿಶ್ರಿತವಾದ ಸುಮಾರು ಏಳು ಪಲ್ಲ ಮತ್ತು ಎಂಭತ್ತು ಸೇರುಗಳಷ್ಟು ಧಾನ್ಯಗಳನ್ನು 1952ನೇ ಜುಲೈ ೭೫ನೇ ತಾರೀಖು ಬೆಳಿಗ್ಗೆ 11 ಘಂಟೆಗೆ ಸಿ ಪಿ ಸಿ ಹಾಲಿನ ರಿಸರ್ವ್ ಗೋಡೌನಿನಲ್ಲಿ ಬಹಿರಂಗವಾಗಿ ಹರಾಜು ಹಾಕಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ:-

—: ಮಾರಾಟದ ಷರತ್ತುಗಳು :—

1 ಹರಾಜಿನಲ್ಲಿ ಬಿಡ್ಡು ಮಾಡುವ ಅರ್ಹತೆ ಪಡೆಯಲು ಪ್ರತಿಯೊಬ್ಬ ಬಿಡ್ಡುದಾರನೂ ೧೦ ರೂ ಡಿಪಾಜಿಟ್ಟು ಮಾಡಬೇಕು ಹರಾಜು ಮುಗಿದ ಒಡನೆಯೇ ಈ ಮೊಬಲಗನ್ನು ವಾಪಸು ಮಾಡಲಾಗುವುದು

2 ಜಯಶೀಲನಾದ ಟೆಂಡರುದಾರನು ಕ್ರಯದ ಮೊಬಲಗಿನ ಶೇ|| 25 ರಷ್ಟನ್ನು ಸ್ಥಳದಲ್ಲೇ ಪಾವತಿ ಮಾಡಿ ಮಾರಾಟದ ಮಂಜೂರಾತಿ ಬಗ್ಗೆ ತನಗೆ ಸುದ್ದಿಕೊಟ್ಟ 3 ದಿನಗಳೊಳಗಾಗಿ ಬಾಕಿ ಮೊಬಲಗನ್ನು ಪಾವತಿ ಮಾಡಿ ಮಾಲನ್ನು ಕೂಡಲೇ ಸಾಗಿಸತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಆತನ ಡಿಪಾಜಿಟ್ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅವನ ಜವಾಬ್ದಾರಿಯ ಮೇಲೆಯೇ ಧಾನ್ಯವನ್ನು ಮತ್ತೆ ಮಾರಾಟ ಮಾಡಿ ಅದರಿಂದ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟಗಳಿಗೆ ಆತನನ್ನೇ ಗುರಿಪಡಿಸಲಾಗುವುದು.

3 ಹರಾಜು ಮಾರಾಟವು ರೇಷನಿಂಗ್ ಅಧಿಕಾರಿಗಳಿಂದಲಾಗಲಿ ಅಥವಾ ಅವರಿಂದ ಅಧಿಕಾರ ಹೊಂದಿದ ಬೇರೆ ಅಧಿಕಾರಿಗಳಿಂದಲಾಗಲಿ ನಡೆಸಲ್ಪಡುವುದು ಮಾರಾಟವು ಬೆಂಗಳೂರಿನಲ್ಲಿರುವ ಮೈಸೂರು ಸರ್ಕಾರದ ಆಹಾರ ಸರಬರಾಜು ಶಾಖಾ ಡೈರೆಕ್ಟರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಯಾವುದೇ ಬಿಡ್ಡನ್ನಾಗಲೀ, ಯಾವ ಕಾರಣವನ್ನೂ ಕೊಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಛೇರಿ ಅಧಿಕಾರಿಗಳು ಪಡೆದಿರುತ್ತಾರೆ. ಒಂದು ವೇಳೆ ಮಾರಾಟವನ್ನು ರದ್ದು ಮಾಡಿದಲ್ಲಿ ಅದರಿಂದ ಬಿಡ್ಡುದಾರರು ಯಾವ ವಿಧವಾದ ಪ್ರತಿಫಲ ಅಥವಾ ಪರಿಹಾರವನ್ನು ಪಡೆಯಲೂ ಬಾಧ್ಯರಲ್ಲ.

4. ಗೋಡೌನುಗಳಲ್ಲಿ ಶೇಖರಿಸಲ್ಪಟ್ಟಿರುವ ಧಾನ್ಯವನ್ನು ಒಂದೇ ಲಾಟಿನಲ್ಲಾಗಲೀ ಅಥವಾ ಬೇರೆ ಬೇರೆ ಲಾಟುಗಳಲ್ಲಾಗಲೀ ಮಾರಲು ರೇಷನಿಂಗ್ ಅಧಿಕಾರಿಗಳು ಹಕ್ಕುಳ್ಳವರಾಗಿರುತ್ತಾರೆ.

5. ಬಿಡ್ಡು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ನಂತರವೇ ಮಾರಾಟವಾದ ಧಾನ್ಯದ ದಾಸ್ತಾನನ್ನು ರವಾನಿಸಲು ಅವಕಾಶ ಕೊಡಲಾಗುವುದು.

6 ಗಾಂಧಿ ಚೌಕದ ಸಿ. ಪಿ ಸಿ ಹಾಲಿನಲ್ಲಿರುವ ರಿಸರ್ವ್ ಗೋಡೌನಿನಲ್ಲಿ, ಅಪೇಕ್ಷಿಸುವ ಬಿಡ್ಡುದಾರರು ಕಛೇರಿ ಕೆಲಸದ ವೇಳೆಗಳಲ್ಲಿ ಬಂದು ದಾಸ್ತಾನುಗಳನ್ನು ಆಜಮಾಯಿಷಿ ಮಾಡಬಹುದು

(ರುಜು) ಹೆಚ್. ಜಿ. ವಿಜಯರಾಘವ ಶೆಟ್ಟಿ,
ರೇಷನಿಂಗ್ ಆಫೀಸರು. ಮೈಸೂರು ಸಿಟಿ.

Edited. Printed and Published by A. R Nagarajan, at Sadhvi Press, D Subbiah Road, Mysore.

ರಿಜಿಸ್ಟರ್ಡ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಮಂಗಳವಾರ ೨೨ ೭-೫೨ [ಸಂಚಿಕೆ ೨೯೫

ಕಾಶ್ಮೀರ ಮತ್ತು ಭಾರತ ಸರ್ಕಾರಗಳಿಗೆ ಒಪ್ಪಂದ

ಚೀಣಕ್ಕೆ ರಷ್ಯದ ಭೂ ಸೈನ್ಯಗಳ ರವಾನೆ

ರಷ್ಯದ ಹಲವು ಭೂಸೈನ್ಯ ಪಡೆಗಳು ಉತ್ತರ ಚೀಣದ ಪ್ರಮುಖ ನಗರಗಳಿಗೆ ರವಾನಿಸಲ್ಪಡುತ್ತಿವೆಯೆಂದೂ, ಅಲ್ಲಿ ಅವು ಬಲವಾದ ರಕ್ಷಣಾ ಸಾಲಿಗಳನ್ನು ಸ್ಥಾಪಿಸುತ್ತಿವೆಯೆಂದೂ ವರದಿಯಾಗಿದೆ ಉತ್ತರ ಚೀಣದ ಪ್ರಮುಖ ರೇವು ಪಟ್ಟಣವಾದ ಸಿಂಗ್ ಟಾಂ ಪ್ರೊ ಎಂಬಲ್ಲಿಗೆ ೧೬೦ ದೊಡ್ಡ ಟ್ಯಾಂಕುಗಳಿಂದ ಕೂಡಿದ ರಷ್ಯದ ಭಾರಿ ಟ್ಯಾಂಕು ಪಡೆಯೂ ರವಾನಿಸಲ್ಪಟ್ಟಿರುವುದಾಗಿ ತಿಳಿದುಬಂದಿದೆ

ಈಜಿಪ್ಟಿನ ಹೊಸ ಸರ್ಕಾರದ ರಾಜೀನಾಮೆ

ಈಜಿಪ್ಟಿನಲ್ಲಿ ಇದೇ ತಿಂಗಳು ೨ ನೇ ತಾ|| ರಚಿತವಾದ ಸಿರ್ರಿಪಾಷಾರವರ ಮಂತ್ರಿಮಂಡಲವು ಕೇವಲ ಮೂರು ವಾರಗಳ ಅವಧಿಯಲ್ಲೇ ಮುಕ್ತಾಯಗೊಂಡು ನೆನ್ನೆ ಸಚಿವರೆಲ್ಲರೂ ರಾಜೀನಾಮೆ ಸಲ್ಲಿಸಿದರೆಂದು ತಿಳಿದುಬಂದಿದೆ ಇವರಿಗೆ ಮುಂಚೆ ಸರ್ಕಾರವನ್ನು ರಚಿಸಿದ್ದ ಹಿಲಾಲಿಪಾಷಾರವರನ್ನು ದೊರೆ ಫರೂಕ್‌ರವರು ಮತ್ತೆ ಆಹ್ವಾನಿಸಿದುದರ ಮೇರೆ ಅವರು ಹೊಸ ಮಂತ್ರಿಮಂಡಲವನ್ನು ರಚಿಸಿರುವರೆಂದು ವರದಿಯಾಗಿದೆ

ಟೆಹರಾನಿನಲ್ಲಿ ಗುಂಡಿನಿಂದ ೨೨ ಮಂದಿಯ ಮರಣ

ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿ ಮಾಜಿ ಪ್ರಧಾನಿ ಮುಸಾದಿಕ್‌ರವರ ಬೆಂಬಲಗಾರರು ನೆನ್ನೆ ನಡೆಸಿದ ಪ್ರದರ್ಶನಗಳನ್ನು ತಡೆಯಲು ಪೋಲೀಸರು ಗುಂಡು ಹಾರಿಸಿದಾಗ ೨೨ ಜನರು ಸತ್ತರೆಂದು ವರದಿಯಾಗಿದೆ ೨೦೦ ಕ್ಕೂ ಮೇಲ್ಪಟ್ಟ ಜನರ ದಸ್ತಗಿರಿಯಾಗಿದೆ ಮೊನ್ನೆಯ ಘರ್ಷಣೆಯಲ್ಲಿ ೮೦ ಜನರಿಗೆ ಗಾಯಗಳಾಗಿದ್ದುವು

ಪ್ಯೊಂಗ್ಯಾಂಗ್ ಧಾಳಿಯಲ್ಲಿ ೧೦ ಸಾವಿರ ಜನರ ಆಹುತಿ

ಉತ್ತರ ಕೊರಿಯಾ ರಾಜಧಾನಿ ಪ್ಯೊಂಗ್‌ಯಾಂಗ್ ಮೇಲೆ ಅಮೆರಿಕ ವಿಮಾನಗಳು ಸಾಮೂಹಿಕವಾಗಿ ನಡೆಸಿದ ಧಾಳಿಯ ಪರಿಣಾಮವಾಗಿ ಅಲ್ಲಿನ ಹತ್ತು ಸಾವಿರ ಜನರು ಉರಿದುಹೋಗಿರುವರೆಂದು ತಿಳಿದುಬಂದಿದೆ ಅನೇಕರು ಅಂಗಹೀನರಾಗಿರುವರೆಂದೂ, ಧಾಳಿಗಳಲ್ಲಿ ನಾಪಾಂ ಬಾಂಬುಗಳನ್ನು ಹಾಕಲಾಯಿತೆಂದೂ ಹೇಳಲಾಗಿದೆ.

ನೇಪಾಳ ಸರ್ಕಾರದ ರಾಜೀನಾಮೆಗೆ ಒತ್ತಾಯ

ನೇಪಾಳದ ಪ್ರಧಾನಿ ಎಂ ಪಿ ಕೊಯಿರಾಲರವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕೆಂದು ಅಲ್ಲಿನ ಅಧಿಕಾರಿ ಪಕ್ಷವಾದ ಕಾಂಗ್ರೆಸ್ ಸಂಸ್ಥೆಯ ಕಾರ್ಯಕಾರಿ ಸಮಿತಿಯು ಅವರಿಗೆ ಸೂಚಿಸಿರುತ್ತದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಚುನಾಯಿಸಿದ ೭ ಜನಗಳ ಮಂತ್ರಿ ಮಂಡಲವನ್ನು ಕೊಯಿರಾಲಾರವರು ಒಪ್ಪದಿದ್ದುದೇ ಈ ಸೂಚನೆಗೆ ಕಾರಣವೆಂದು ಹೇಳಲಾಗಿದೆ

ನಗರ ಕಾಂ|| ಕಾರ್ಯಕಾರಿ ಸಮಿತಿಗೆ ಚುನಾವಣೆ

ಮೈಸೂರು ೨೨

ನಗರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ದೇವರಾಜ ಮತ್ತು ಮಂಡಿ ಮೊಹಲ್ಲಾ ಕ್ಷೇತ್ರಗಳಿಂದ ೩ ಸ್ಥಾನಗಳಿಗೆ ಮೊನ್ನೆ ನಡೆದ ಚುನಾವಣೆಗಳಲ್ಲಿ ಶ್ರೀಗಳಾದ ಎ ಶಿವಣ್ಣ, ಎಂ ಗೋಪಾಲರಾವ್ ಮತ್ತು ಎಂ ಆರ್ ಸಿ ಬಸಪ್ಪನವರು ಜಯಗಳಿಸಿರುವರು ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಮುಖ್ಯ ಸ್ಪರ್ಧಿಗಳಾಗಿದ್ದರು ಇತರ ಮೊಹಲ್ಲಾಗಳಿಂದ ಅವಿರೋಧವಾಗಿ ಈಗಾಗಲೇ — ಜನರು ಆರಿಸಲ್ಪಟ್ಟಿರುವರು.

ಸೊಸೈಟಿಗೆ ಬಿ ಆರ್. ಲಕ್ಷ್ಮಣ ಶೆಟ್ಟರವರ ರಾಜೀನಾಮೆ

ಶ್ರೀ ಬಿ ಆರ್ ಲಕ್ಷ್ಮಣ ಶೆಟ್ಟರು ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರ್ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವರೆಂದು ಗೊತ್ತಾಗಿದೆ

ಪರ್ಷಿಯದ ಹೊಸ ಪ್ರಧಾನಿಯ ರಾಜೀನಾಮೆ

ಮೂರು ದಿನಗಳ ಕೆಳಗೆ ಪರ್ಷಿಯದ ಪ್ರಧಾನಿಯಾಗಿ ನೇಮಕವಾದ ಖವಾಂ ಸುಲ್ತಾನೆಯವರು ನೆನ್ನೆ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಷಹಾರವರಿಗೆ ಒಪ್ಪಿಸಿದರೆಂದು ಗೊತ್ತಾಗಿದೆ ಸುಲ್ತಾನೆಯವರ ವಿರುದ್ಧವಾಗಿ ಮುಸಾದಿಕ್ ಪಕ್ಷದವರು ದೇಶಾದ್ಯಂತ ನಡೆಸಿದ ಪ್ರದರ್ಶನಗಳೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ಸರೋವರಕ್ಕೆ ರೈಲು ಬಿದ್ದು ೧೫೦ ಜನರ ಮರಣ

ಬರ್ಲಿನ್ ಮತ್ತು ಮಾಸ್ಕೊ ನಗರಗಳ ನಡುವೆ ಸಂಚರಿಸುವ ರಷ್ಯದ ಒಂದು ಎಕ್ಸ್‌ಪ್ರೆಸ್ ರೈಲು ಕಳೆದ — ನೇ ತಾ|| ಒಂದು ಸರೋವರಕ್ಕೆ ಬಿದ್ದು ಅದರಲ್ಲಿದ್ದ ೧೫೦ ಜನ ಪ್ರಯಾಣಿಕರು ನೀರಿನಲ್ಲಿ ಮುಳುಗಿ ಮೃತಪಟ್ಟರೆಂದು ತಿಳಿದುಬಂದಿದೆ ಅನೇಕರು ರೈಲುಗಾಡಿಗಳ ಅಡಿಯಲ್ಲಿ ಸಿಕ್ಕಿ ಕೆಸರಿನಲ್ಲಿ ಹೂಳಲ್ಪಟ್ಟರೆಂದು ಹೇಳಲಾಗಿದೆ

ಪಿ. ಗೋಪಾಲಕೃಷ್ಣ ಶೆಟ್ಟರು ಮೇಲ್ಮನೆಯ ಉಪಾಧ್ಯಕ್ಷರು

ಸ್ವಂ ವ ಫೋ] ಬೆಂಗಳೂರು ೨೨

ಮೈಸೂರಿನ ವಕೀಲರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರ ಹೆಸರನ್ನು ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಉಪಾಧ್ಯಕ್ಷತೆಗೆ ಕಾಂಗ್ರೆಸ್ ಪಕ್ಷದವರ ಸೂಚಿಸಿರುತ್ತಾರೆ ಬೇರೆ ಯಾರೂ ಉಮೇದುವಾರರಿಲ್ಲದಿರುವುದರಿಂದ, ಅವರೇ ಉಪಾಧ್ಯಕ್ಷರಾಗಿ ಚುನಾಯಿತರಾಗುವರು

ಕಾಶ್ಮೀರದ ಸಮಸ್ಯೆಯ ಪರಿಹಾರದ ಒಪ್ಪಂದ

ಕಾಶ್ಮೀರ ಮತ್ತು ಭಾರತ ಸರ್ಕಾರಗಳಿಗೆ ಎಲ್ಲ ವಿಷಯಗಳ ಬಗ್ಗೆಯೂ ಒಪ್ಪಂದವಾಗಿರುವುದೆಂದು ಗೊತ್ತಾಗಿದೆ ಕಾಶ್ಮೀರದ ಅರಸು ಮನೆತನವನ್ನು ಕೊನೆಗಾಣಿಸುವುದಕ್ಕೆ ಒಪ್ಪಲಾಗಿದ್ದರೂ, ಈಗಿನ ಯುವರಾಜರನ್ನು ಅಲ್ಲಿಯ ಶಾಸನ ಬದ್ಧ ಅಧಿಪತಿಯನ್ನಾಗಿ ರಾಷ್ಟ್ರಾಧ್ಯಕ್ಷರು ನೇಮಿಸಲು ಅವಕಾಶವು ಇರುವುದೆಂದು ಹೇಳಲಾಗಿದೆ. ಭಾರತ ರಾಜ್ಯಾಂಗದ ಮೂಲಭೂತ ಹಕ್ಕುಗಳು ಭಾರತದ ಸುಪ್ರೀಂಕೋರ್ಟಿನಲ್ಲಿ ಕಾಶ್ಮೀರದ ಹಣಕಾಸಿನ ಐಕ್ಯ, ಕಾಶ್ಮೀರದಲ್ಲಿ ಸುಪ್ರೀಂ ಕೋರ್ಟಿನ ವ್ಯಾಪ್ತಿ, ಇವುಗಳು ಒಡಂಬಡಿಕೆಯಲ್ಲಿ ಅಡಕವಾಗಿವೆ ಭೂ ವಿಧಾನಗಳನ್ನು ಪರಿಹಾರ ಕೊಡದೆ ವಶಪಡಿಸಿಕೊಳ್ಳುವ ಒಗ್ಗೆ ಮಾತ್ರ ಕಾಶ್ಮೀರಕ್ಕೆ ರಿಯಾಯಿತಿ ದೊರೆತಿರುವುದು

ಲಾಹೋರಿನಲ್ಲಿ ಗುಂಡಿನೇಟಿನಿಂದ ೭ ಜನರ ಮರಣ

ಲಾಹೋರಿನಲ್ಲಿ ಸಭೆಗಳನ್ನು ನಡೆಸಕೂಡದೆಂಬ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೊನ್ನೆ ಅಕ್ರಮವಾಗಿ ಸೇರಿದ್ದ ಜನರ ಗುಂಪಿನ ಮೇಲೆ ಪೋಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ೭ ಜನರು ಸತ್ತು, ೧೦ ಜನರಿಗೆ ಗಾಯಗಳಾಗಿರುವುವೆಂದು ಗೊತ್ತಾಗಿದೆ

ನಂಜನಗೂಡಿನಲ್ಲಿ ಶವದ ಪತ್ತೆ

ನಂಜನಗೂಡಿನ ಚೆನಿವಾರ ಕಟ್ಟೆಯ ಬೀದಿಯ ಅಂಗಡಿ ಮುಂಗಡಿಯೊಂದರಲ್ಲಿ ಮೈಸೂರಿನ ಸುಮಾರು ೩೦ ವರ್ಷದ ಶ್ರೀನಿವಾಸ ಎಂಬುವನ ಮೃತ ಶರೀರವು ಬಿದ್ದಿದ್ದುದು ಪತ್ತೆಯಾಗಿದೆ ಈ

ಚಾಮರಾಜನಗರ, ಚಿಕ್ಕಮಗಳೂರುಗಳಲ್ಲಿ ಅಭಾವ

ಹಿರಿಯ ಶಾಸನ ಸಭೆಯಲ್ಲಿ ನಿಲುವಳಿ ನಿರ್ಣಯಗಳ ತಿರಸ್ಕಾರ

ಸ್ವಂ ವ ಫೋ] ಬೆಂಗಳೂರು ೨೨

ಈ ದಿನ ಶಾಸನ ಸಭೆಯಲ್ಲಿ ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಪ್ರಶ್ನೆಗೆ ಉತ್ತರವಿತ್ತು ಸಂಸ್ಥಾನಗಳಲ್ಲಿ ೧೦೧ ಜ್ಯೂನಿಯರ್ ಮತ್ತು ೩ ಸೀನಿಯರ್ ಮೂಲ ಶಿಕ್ಷಣ ಪದ್ಧತಿಯ ಶಾಲೆಗಳಿರುವುವೆಂದೂ, ಎಲ್ಲಾ ಕಡೆಗಳಿಗೂ ಈ ಪದ್ಧತಿಯನ್ನು ತರಬೇಕಾದರೆ ೧ ಕೋಟಿ ೪೦ ಲಕ್ಷ ರೂ ವೆಚ್ಚವಾಗುವುದೆಂದೂ ತಿಳಿಸಿ ಅವರು ಈಗ ನಡೆಯುತ್ತಿರುವ ಶಾಲೆಗಳು ಯಶಸ್ವಿಯಾಗಿ ಕೆಲಸ ಮಾಡುತ್ತಿವೆಯೆಂದು ಅವರು ಹೇಳಿದರು

ಸಂಸ್ಥಾನದಲ್ಲಿ ಇದುವರೆಗೆ ೨೫ ಕೈಗಾರಿಕಾ ವ್ಯಾಜ್ಯಗಳಲ್ಲಿ ತೀರ್ಮಾನ್ಯಾಯಾಲಯದವರು ಪರಿಶೀಲಿಸಿ ೬ ಮೊಕದ್ದಮೆಗಳಲ್ಲಿ ತೀರ್ಪು ಇತ್ತಿರುವರೆಂದು ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಶ್ರೀ ಸಿ ಜಿ ದೇವನಾದರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ವ್ಯಾಜ್ಯಗಳಲ್ಲಿ ಉಭಯ ಪಕ್ಷದವರು ಹೇಳಿಕೆ ಪ್ರತಿ ಹೇಳಿಕೆ ಕೊಡುತ್ತಿರುವುದೇ ವ್ಯವಹಾರವು ನಿಧಾನವಾಗಿರುವುದಕ್ಕೆ ಕಾರಣವೆಂದು ಅವರು ತಿಳಿಸಿದರು

ನಿಲುವಳಿ ಸೂಚನೆಗಳು

ಚಾಮರಾಜನಗರ ತಾಲ್ಲೂಕಿನ ಮೆಟ್ಟಿದೊಡ್ಡಿಯಲ್ಲಿ ಶ್ರೀ ಕೆ ನಂಜಪ್ಪನವರಿಗೆ ೫೦ ಎಕರೆ ಜಮೀನು ಕೊಟ್ಟ ವಿಷಯವಾಗಿ ಶ್ರೀ ಬಿ ಟಿ ರಾಮಯ್ಯನವರೂ ಚಿಕ್ಕಮಗಳೂರು ಮತ್ತು ಚಾಮರಾಜನಗರ, ಗುಂಡ್ಲುಪೇಟೆ ಮುಂತಾದ ಕಡೆ ಅಭಾವವುಂಟಾಗಿರುವುದೆಂದು ಶ್ರೀ ಎಂ ಎಂ ಪಿ. ಗೋವಿಂದಗೌಡರು ಮತ್ತು ಆರ್ ಸಿ ರೇವಣ್ಣನವರೂ, ಟೆಕ್ನಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ ಸ್ಥಾನ ಕಲ್ಪಿಸದಿರುವ ಬಗ್ಗೆ ಶ್ರೀ ಶಿವಪ್ಪನವರೂ ಕಳುಹಿಸಿರುವ ನಿಲುವಳಿ ನಿರ್ಣಯಗಳನ್ನೂ ಅಧ್ಯಕ್ಷರು ಅವು ಜರೂರಾದ ವಿಷಯವಲ್ಲವೆಂದೂ, ಸಭೆಯ ಸಾಮಾನ್ಯ ಚರ್ಚೆ ಯಲ್ಲಿ ಪ್ರಸ್ತಾಪಿಸಬಹುದೆಂದೂ ತಿಳಿಸಿ ತಳ್ಳಿಹಾಕಿದರು

ವರದಕ್ಷಿಣೆ ವಿರೋಧವಾಗಿ ಆಮರಣಾಂತ ಉಪವಾಸ

ದೆಹಲಿಯ ಜೈನ ಸಮಾಜದವರು ವಿವಾಹದ ಸಮಯದಲ್ಲಿ ಪಡೆವ ವರದಕ್ಷಿಣೆ ಮತ್ತು ಭೋಗ ಪದ್ಧತಿಯ ವಿರೋಧವಾಗಿ ಜೈನ ಸನ್ಯಾಸಿ ಭಿಕ್ಷು ರಂಗ್ವಿಜಯಜಿಯವರು ಆಮರಣಾಂತ ಉಪವಾಸ ವ್ರತವನ್ನು ಕೈಗೊಂಡಿರುವರು

ಸಂಬಂಧವಾಗಿ ಹಲವರನ್ನು ದಸ್ತಗಿರಿ ಮಾಡಲಾಗಿದೆ ಆ ಸ್ಥಳವು ಬಹು ದಿನಗಳಿಂದ ಭಾರಿ ಜೂಜಿನ ಕಟ್ಟೆಯಾಗಿ ಸಾವಿರಾರು ರೂಪಾಯಿಗಳ ಜೂಜಾಟವು ನಡೆಯುತ್ತಿತ್ತೆಂದು ಹೇಳಲಾಗಿದೆ

ಮೈಸೂರು ಶಾಸನ ಸಭಾ ಸದಸ್ಯರ ಮನವಿಯ ಖಂಡನೆ

[illegible]

ರೈಲು ಮತ್ತು ಟ್ರಾಲಿಗಳ ಘರ್ಷಣೆಯಿಂದ ೩ ಮರಣ

[illegible]

ಫುಟ್ ಬಾಲ್ ಪಂದ್ಯ

[illegible]

SRI GAYATHRI

TALKIES

Daily 2 Shows

THE ENFORCER

NEXT CHANCE

SIDE STREET

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯ ದರದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

ಸಾಲ ತೀರಿಸಲಾರದೆ ಪರ್ತಕನ ಆತ್ಮಹತ್ಯೆ

[illegible]

ಮೈಸೂರು ಪೇಟೆ ಧಾರಣೆ

[illegible]

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible]

ಚಾಮುಂಡೇಶ್ವರಿ

22 7 52 ರಿಂದ ಪ್ರಾರಂಭ

ಹನುಮಾನ್

ಪಾತಾಳ ವಿಜಯ

ಪ್ರಕಟಣೆ

[illegible]

ಎ ಪಿ ರಾವ್,

ಜನರಲ್ ಮ್ಯಾನೇಜರ್

Office of the President,

DISTRICT BOARD, MYSORE

1 Sealed tenders will be received at the office of the President, District Board, Mysore upto 3 P M on 24 7-52 for the works noted below:

2 The work is to be completed by end of October, 1952

3 Tenders should be quoted on percentage basis either above or below the sanctioned estimate

4 Items not provided in the estimate will be calculated as per schedule rate or as per data worked out during execution of the work

5 Each tender must be accompanied by a duplicate challan for having credited into the Treasury the deposit amount noted against each work to the District fund, Mysore

6 The stipulated progress must be shown from the very commencement, failing which the earnest money will be forfeited and the contract cancelled without further notice

7 Controlled articles required for construction will be supplied departmentally at the prevailing rates and the incidental charges and contingencies will be charged in addition

8 Plans and other details connected with the work, can be seen in the office on any working day during office hours

9 The successful tenderers will be required to produce an Income Tax Clearance or verification certificate before executing the work

10 The President reserves the right of accepting or rejecting the tender without assigning any reason

11 The decision of the District Board in respect of any disputes regarding rates and other matters arising will be final

	Estimate Rs	Earnest Money Rs
1 Constructing a Primary school building at Danayakanapur 1 Narasipur taluk	2,600	125
2 Construction of a dispensary at Halaganahally Periyapatna taluk	7,400	300
3 Constructing stalls in Shandy Maidan at Halaganahally, Periyapatna taluk	1,600	80
4 Constructing open stall in Shandy maidan at Hemmaragala	1,600	80
5 Installing Electric lights to the newly constructed Musafirkhana at Chamarajanagar	1,667	80

N B — Materials to be used for Item No 5 should be specifically stated

H M CHANNABASAPPA,

President

District Board, Mysore

Edited Printed and Published by A R Nagarajan at Sadhvi Press, D Subbiah Road, Mysore

ರಿಜಿಸ್ಟರ್ಡ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೨೩-೭-೫೨ [ಸಂಚಿಕೆ ೨೯೬

ನೇಪಾಳ ಸರ್ಕಾರದ ರಾಜೀನಾಮೆಯಿಲ್ಲ

ಕೆ. ಸಿ. ರೆಡ್ಡಿಯವರ ಆಗಮನ

ಮೈಸೂರು ೨೨

ಕೇಂದ್ರ ಉತ್ಪತ್ತಿ ಖಾತಾ ಮಂತ್ರಿ ಶ್ರೀ ಕೆ ಸಿ. ರೆಡ್ಡಿಯವರು ಈ ದಿನ ಬೆಂಗಳೂರಿಗೆ ಆಗಮಿಸಿ, ನಾಳೆ ಇಲ್ಲಿಗೆ ಬರುವರು. ೨೬ ಮತ್ತು ೨೭ ನೇ ತಾ|| ಅವರು ಸ್ವೀಕ ಸ್ಥಳವಾದ ಶ್ಯಾಸಂಬ ಳ್ಳಿಗೆ ತೆರಳುವರು. ೨೮ನೇ ತಾ|| ಮದ್ರಾಸಿಗೆ ಪ್ರಯಾಣ ಮಾಡುವರು.

ಲಿಂಗಣ್ಣನವರಿಗೆ ಸತ್ಕಾರ

ರಾಜಧಾನಿಯ ಜಗದಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರ ಗೌರವಾರ್ಥವಾಗಿ ಇತ್ತೀಚೆಗೊ ತಿಪ ನಿವಾಸಿಗಳು ನೆನ್ನೆ ಶ್ರೀ ತಿಮ್ಮಯ್ಯ ಶಾಸ್ ಛತ್ರದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು ವಿ|| ಚಿಕ್ಕಸ್ವಾಮಿ ಮತ್ತು ಪಾರ್ಟಿಯವರಿಂದ ಸಂಗೀತವಾದ ನಂತರ ಶ್ರೀಗಳಾದ ಮರಿಯಪ್ಪ, ಕೃಷ್ಣ ಮತ್ತು ಇಗಿ ಬಿ ರೇವಿಸಿದ್ದವರು ಮೊದಲಾದವರು, ಶ್ರೀ ಲಿಂಗಣ್ಣನವರ ಗುಣಗಾನ ಮಾಡಿದರು. ಅಧ್ಯಕ್ಷರು ಭಾಷಣ ಮಾಡಿದ ನಂತರ ಶ್ರೀ ಲಿಂಗಣ್ಣನವರು ಸೂಕ್ತವಾದ ಉತ್ತರವಿತ್ತರು ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹರಿಕಥೆ

ರಾಜಧಾನಿಯ ಅನೆ ಪಾಳ್ಯದ ವೀ ದಿ ಭಜನೆ ವೆಂಕಟಪ್ಪನವರ ಹತ್ತು ಜನರ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀ ಆರ್ ಎಸ್ ಶೇಷಗಿರಿ ದಾಸರಿಂದ ಭಕ್ತ ಚೋಖಾ ಮೇಳಾ ಎಂಬ ಕಥೆಯು ನಡೆಯುವುದು

ಮಹಿಳಾ ಪಾಠಶಾಲೆಯು

ರಾಜಧಾನಿಯ ೧೦ ಟಿಕೊಪ್ಪಲು ಭಾಷಣ ಶ್ರೀ ಸರೋಜಮ್ಮನವರು ಮಹಿಳೆಯರಿಗಾಗಿ ಪಾಠಶಾಲೆಯೊಂದನ್ನು ಇದೇ ೨೦ ನೇ ತಾ|| ದಿಂದ ಏರ್ಪಡಿಸಿರುತ್ತಾರೆ ಪ್ರತಿ ದಿನ ಸಂಜೆ ೪ ರಿಂದ ೬ರ ವರೆಗೆ ಪಾಠಶಾಲೆಯನ್ನು ತೆರೆಯಲಾಗುವುದು ಮಹಿಳೆಯರು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು.

ಮೈಸೂರು ರೇಡಿಯೋದಿಂದ ವಿಶ್ವ ಒಲಿಂಪಿಕ್ ಸ್ಪರ್ಧೆ ಪ್ರಸಾರ

ಫಿನ್ಲೆಂಡ್ ರಾಜಧಾನಿ ಹೆಲ್ಸಿಂಕಿಯಲ್ಲಿ ನಡೆಯುತ್ತಿರುವ ಕ್ರೀಡೆಗಳ ವಿಷಯವಾಗಿ ಪ್ರೊಫೆಸರ್ ಜಿ ಡಿ ಸೋಂಧಿರವರು ಮಾಡುವ ವಿಮರ್ಶೆಯನ್ನು ಮೈಸೂರಿನ ರೇಡಿಯೋವು ಪುನರ್ ಪ್ರಸಾರ ಮಾಡುವುದು ಇದೇ ೨೬, ೨೮, ೩೦ ೩೧ ಮತ್ತು ಆಗಸ್ಟ್ ೧ ನೇ ತಾರೀಖುಗಳ ರಾತ್ರಿ ೮-೩೦ ಗೆ ಪುನರ್ ಪ್ರಸಾರ ನಡೆಯುವುದು

ಮರಿ ಮಕ್ಕಳಿರುವವರ ವಿವಾಹ

ಇಂಗ್ಲೆಂಡಿನ ನ್ಯೂ ಕ್ಯಾಸಲ್ ಎಂಬಲ್ಲಿ ಜಾರ್ಜ್ ಹೆನ್ರಿ ವೈಟ್ ಹೌಸ್ ಎಂಬ ೮೧ ವರ್ಷದ ವೃದ್ಧನು ೭೨ ವರ್ಷದ ಜಸ್ಸಿಲಿ ಲಿಯಾಪಾಲ್ಡ್ ಎಂಬ ಮುದುಕಿಯನ್ನು ಈಗ ವಿವಾಹವಾಗಿರುವನು ಅವರಿಬ್ಬರಿಗೂ ಈಗಾಗಲೇ ಒಟ್ಟು ೧೧ ಜನ ಮಕ್ಕಳೂ, ೩೩ ಮೊಮ್ಮಕ್ಕಳೂ ಮತ್ತು ೩೮ ಮರಿ ಮಕ್ಕಳೂ ಇರುವರು

ನೇಪಾಳ ಕಾಂಗ್ರೆಸ್ಸಿನ ಸೂಚನೆಯ ತಿರಸ್ಕಾರ

ನೇಪಾಳದ ಪ್ರಧಾನಿ ಮಾತೃಕಾ ಪ್ರಸಾದ ಕೊಯಿರಾಲಾರವರು ತಮ್ಮ ಮಂತ್ರಿ ಮಂಡಲದ ರಾಜೀನಾಮೆಯನ್ನು ಒಪ್ಪಿಸಬೇಕೆಂದು ಅಲ್ಲಿನ ಕಾರ್ಯಕಾರಿ ಸಮಿತಿ ಕೊಟ್ಟಿರುವ ಸೂಚನೆಯನ್ನು ಪ್ರಧಾನಿಯವರು ತಿರಸ್ಕರಿಸಿರುತ್ತಾರೆ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಅವರ ಸಹೋದರ ಬಿ ಪಿ ಕೊಯಿರಾಲಾರವರಿಗೆ ಪ್ರಧಾನಿಯವರು ಪತ್ರವೊಂದನ್ನು ಬರೆದು, ಇತ್ತಂದವನ್ನು ಮುರಿದಿರುವ ಅಧ್ಯಕ್ಷರಿಂದ ನಾಮಕರಣವಾದ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಕೊಡಬೇಕೆಂದು ಸೂಚಿಸುವ ಅಧಿಕಾರವಿಲ್ಲವೆಂದೂ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಮಾತ್ರ ಆ ಮಹತ್ವದ ವಿಷಯವು ಇತ್ಯರ್ಥವಾಗಬೇಕೆಂದೂ ತಿಳಿಸಿರುವರೆಂದು ಗೊತ್ತಾಗಿದೆ ಇತ್ತೀಚಿನ ವರದಿ ಪ್ರಕಾರ ಸಹೋದರರಿಬ್ಬರಿಗೂ ಭೇಟಿ ನಡೆದು ಭಿನ್ನಾಭಿಪ್ರಾಯಗಳನ್ನು ಪರಿಹರಿಸುವ ಕಾರ್ಯವು ನಡೆಯುತ್ತಿರುವುದೆಂದು ಗೊತ್ತಾಗಿದೆ

ಅಮೇರಿಕದಲ್ಲಿ ಭೂಕಂಪ

ಅಮೇರಿಕದ ಲಾಸ್ ಏಂಜಲ್ಸ್ ಮತ್ತು ಸ್ಯಾನ್‌ಫ್ರಾನ್ಸಿಸ್ಕೋಗಳಲ್ಲಿ ನೆನ್ನೆ ಬಲವಾದ ಭೂಕಂಪವಾಗಿದೆ ಒಂದು ಪಟ್ಟಣವು ಸಂಪೂರ್ಣ ನಾಶವಾಗಿದೆ ಒಂಭತ್ತು ಜನರು ಮಡಿದಿರುವರು ಗಾಯಗೊಂಡವರ ಸಂಖ್ಯೆ ಇನ್ನೂ ತಿಳಿಯಬೇಕಾಗಿದೆ

ಮಹಾರಾಜರ ಭಾಷಣಕ್ಕಾಗಿ ಸಂತೋಷ

ಶ್ರೀಮನ್ಮಹಾರಾಜರವರು ಶಾಸನಸಭೆಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ಪ್ರಜಾಸಭೆಯಲ್ಲಿ ವಂದನೆಯನ್ನರ್ಪಿಸುವ ನಿರ್ಣಯವನ್ನು ನೆನ್ನೆ ಅಂಗೀಕರಿಸಲಾಯಿತು ಕೈಗಾರಿಕಾ ಮಂತ್ರಿ ಮತ್ತು ಸಭಾನಾಯಕರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಭಾಷಣ ಮಾಡಿ, ಮಹಾರಾಜರವರ ಭಾಷಣವು ಭಗವದ್ಗೀತೆಯಂತಿರುವುದೆಂದು ಹೇಳಿದರು ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಅಸೆಂಬ್ಲಿ ಸದಸ್ಯರುಗಳಲ್ಲಿ ತಾರತಮ್ಯವನ್ನು ಎಣಿಸಬಾರದೆಂದೂ ತಿಳಿಸಿದರು

ಎಣ್ಣೆ ವ್ಯಾಜ್ಯದಲ್ಲಿ ಬ್ರಿಟನ್ ವಿರುದ್ಧ ತೀರ್ಪು

ಪರ್ಷಿಯದಲ್ಲಿ ಬ್ರಿಟಿಷರ ಎಣ್ಣೆ ಗಣಿಗಳನ್ನು ಅಲ್ಲಿನ ಸರ್ಕಾರದವರು ರಾಷ್ಟ್ರೀಕರಿಸಿರುವುದಕ್ಕೆ ಹಕ್ಕಿಲ್ಲವೆಂದ ಅಂತರ ರಾಷ್ಟ್ರೀಯ ನ್ಯಾಯಸ್ಥಾನದಲ್ಲಿ ಬ್ರಿಟನ್ ಹೂಡಿದ್ದ ಮೊಕದ್ದಮೆಯಲ್ಲಿ ಬ್ರಿಟನ್ನಿನ ದೂರನ್ನು ಆ ಕೋರ್ಟ್ ೯ ಓಟುಗಳಿಂದ ತಿರಸ್ಕರಿಸಿದೆ ಕೋರ್ಟಿನ ಅಧ್ಯಕ್ಷತೆ ವಹಿಸಿದ್ದ ಬ್ರಿಟನ್ನಿನ ಅರ್ನಾಲ್ಡ್ ಮೆಕ್ನಾಯರ್‌ರವರು ಸದರಿ ತೀರ್ಪನ್ನು ಎತ್ತಿ ಹಿಡಿದಿರುವರು.

ಮುಸಾದಿಕ್ ಪುನಃ ಪರ್ಷಿಯದ ಪ್ರಧಾನಿ

ಪರ್ಷಿಯದ ಪಾರ್ಲಿಮೆಂಟ್ ಸಭೆಯು ಪುನಃ ಮುಸಾದಿಕ್‌ರವರನ್ನು ಮುಖ್ಯಮಂತ್ರಿಯನ್ನಾಗಿ ಆರಿಸಿರುತ್ತದೆ ನೆನ್ನೆ ಟೆಹರಾನಿನಲ್ಲಿ ನಡೆದ ಗಲಭೆಯಲ್ಲಿ ಷಹಾರವರ ಸಹೋದರಿ ಅಲಿ ರಜಾರವರು ಜನರ ಗುಂಪಿನಲ್ಲಿ ಸಿಕ್ಕಿಕೊಂಡಿದ್ದರೆಂದೂ, ಆದರೂ ಅವರು ಸುರಕ್ಷಿತವಾಗಿ ಅರಮನೆಗೆ ಸೇರಿದರೆಂದೂ ವರದಿಯಾಗಿದೆ

ಕಾಣಿಕೆ ವ್ಯಾಜ್ಯದಲ್ಲಿ ಗುಂಡಿನಿಂದ ನಾಲ್ವರ ಮರಣ

ತಿರುನಲ್ವೇಲಿಯ ಬಳಿ ಅವಶಾತಪುರಂ ಎಂಬ ಹಳ್ಳಿಯಲ್ಲಿ ದೇವರ "ತೊಡಿ" ಹಬ್ಬದ ಕಾಣಿಕೆ ಸಂಬಂಧವಾಗಿ ಗ್ರಾಮಸ್ಥರ ಎರಡು ಪಕ್ಷಗಳಲ್ಲಿ ವ್ಯಾಜ್ಯವುಂಟಾಗಿ ಒಂದು ಪಕ್ಷದವರು ಹಾರಿಸಿದ ಗುಂಡಿನಿಂದ ೪ ಜನ ವಿರೋಧ ಪಕ್ಷದವರು ಮಡಿದರೆಂದು ವರದಿಯಾಗಿದೆ ಪೊಲೀಸರು ಶಾಂತಿಯನ್ನು ತಂದಿರುವರು

ಮಳೆ ಕರೆಸಲು ಬಾಲಕರ ಉಪವಾಸ ವ್ರತ

ಮಧ್ಯಪ್ರದೇಶದ ಮಾಗೊ ಎಂಬ ಹಳ್ಳಿಯಲ್ಲಿ ನೂರು ಮಂದಿ ಬಾಲಕರು, ಮಳೆ ಬರುವ ತನಕ ಊಟ ಮಾಡುವುದಿಲ್ಲವೆಂದು ನಿರ್ಧರಿಸಿ ನೆನ್ನೆ ದೇವರ ಪ್ರಾರ್ಥನೆ ನಡೆಸಿದರೆಂದೂ, ಈ ಬಾಲಕರ ಪ್ರಾರ್ಥನೆಯನ್ನು ಮೆಚ್ಚುವಂತೆ ಅಂತ ರೀತಿಯಲ್ಲಿ ೨೪ ಘಂಟೆಗಳೊಳಗಾಗಿ ಭಾರಿ ಮಳೆಯಾಯಿತೆಂದೂ ವರದಿಯಾಗಿದೆ

ಮೇಲ್ಮನೆ ಉಪಾಧ್ಯಕ್ಷತೆಗೆ ಗೋಪಾಲಕೃಷ್ಣಶೆಟ್ಟರ ಆಯ್ಕೆ

ಸ್ವಂ ವ ಪ್ರೋ] ಬೆಂಗಳೂರು ೨೨

ಹಿರಿಯ ಶಾಸನಸಭೆಯ ಉಪಾಧ್ಯಕ್ಷತೆಗೆ ಮೈಸೂರಿನ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಹೆಸರನ್ನು ಶ್ರೀ ಜಿ ಕೃಷ್ಣರಾಯರು ಸದರಿ ಸಭೆಯಲ್ಲಿ ಇಂದು ಸೂಚಿಸಿ, ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅನುಮೋದಿಸಿದರು ಬೇರೆ ಉಮೇದುವಾರರು ಯಾರೂ ಇರಲಿಲ್ಲವಾಗಿ ಶ್ರೀ ಶೆಟ್ಟರು ಚುನಾಯಿತರಾದರೆಂದು, ಅಧ್ಯಕ್ಷ ಶ್ರೀ ಕೆ ಟಿ ಭಾಷ್ಯಂರವರು ಘೋಷಿಸಿ ಅವರನ್ನು ಸ್ವಾಗತಿಸಿದರು ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಆರ್. ಪಿ ದೇವಣ್ಣ, ಟಿ ಎಸ್ ರಾಜಗೋಪಾಲಯ್ಯಂಗಾರ್, ಎಂ ಶಂಕರಯ್ಯ, ಸಿ ಜೆ ದೇವನಾಥ್, ಮುಂತಾದವರು ಶ್ರೀಯುತರನ್ನು ಅಭಿನಂದಿಸಿದರು ಶ್ರೀ ಶೆಟ್ಟರು ಉತ್ತರವಿತ್ತು ಸಕಲರ ಸಹಕಾರವನ್ನು ಕೋರಿ, ತಾವು ಕರ್ತವ್ಯ ನಿಷ್ಠರಾಗಿ ದುಡಿಯುವುದಾಗಿ ಭರವಸೆಯಿತ್ತರು

ಬೆಂಗಳೂರಿಗೆ ಕಿದ್ವಾಯಿ

ಕೇಂದ್ರ ಆಹಾರ ಮಂತ್ರಿ ರಫಿ ಅಹಮದ್ ಕಿದ್ವಾಯ್‌ರವರು ಇದೇ ೨೯ನೇ ತಾ|| ಬೆಂಗಳೂರಿಗೆ ಆಗಮಿಸಿ, ಸಂಸ್ಥಾನದಲ್ಲಿ ೩ ದಿವಸಗಳ ವರೆಗೆ ಇರುವರು ಕ್ಷಾಮ ಪೀಡಿತ ಜಿಲ್ಲೆಯಲ್ಲಿ ಅವರು ಪ್ರವಾಸ ಮಾಡುವರು

ಬಲಿ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಜ್ಞೆ

ಬೆಂಗಳೂರಿಗೆ ಆಗಮಿಸಿರುವ ಜೈನ ಗುರುಗಳಾದ ಶ್ರೀ ಆನಂದಸಾಗರ ಮಹಾರಾಜ್‌ರವರು ಮಾಡಿದ ಉಪದೇಶದ ಪರಿಣಾಮವಾಗಿ ಅಲ್ಲಿನ ಸುಮಾರು ೬೦ ಮಂದಿ ಕ್ಷತ್ರಿಯ ವರ್ತಕರು ಪೂರ್ಣವಾದ ಅಹಿಂಸಾ ದೀಕ್ಷೆಯನ್ನು ವಹಿಸಲು ಪ್ರತಿಜ್ಞೆ ಮಾಡಿರುವರು ಬಲಿ ಮೊದಲಾದ ದುಷ್ಟತನಗಳಿಂದ ಯಾರನ್ನೂ ಹಿಂಸಿಸುವುದಿಲ್ಲವೆಂದು ಅವರು ಪ್ರಮಾಣ ಮಾಡಿರುತ್ತಾರೆ

೨೦ ಗಜ ಉದ್ದದ ರೆಕ್ಕೆಯ ಭಾರಿ ರಣಹದ್ದು

ಹಿಮಾಲಯದ ದೇವದಾಳಿ ಎಂಬ ೨೦ ಸಾವಿರ ಅಡಿ ಶಿಖರದಲ್ಲಿ ಅತ್ಯಂತ ಅಪೂರ್ವವಾದ ಬಿಳಿಯ ರಣಹದ್ದು ವಾಸಿಸುತ್ತಿರುವುದೆಂದು ಫ್ರೆಂಚ್ ಪರ್ವತಾರೋಹಿಗಳು ತಿಳಿಸಿರುವರು ೧೫ ಸಾವಿರ ಅಡಿ ಎತ್ತರದ ದೂರದಿಂದ ನೋಡಿದಾಗ ಅವುಗಳ ರೆಕ್ಕೆಯು ೨೦|| ಗಜದಷ್ಟು ದೊಡ್ಡದಾಗಿದ್ದಿತೆಂದು ಅವರು ತಿಳಿಸಿರುತ್ತಾರೆ ಪರ್ವತದಲ್ಲಿ ವಾಸವಾಗಿರುವ "ಹಿಮದ ಮನುಷ್ಯ" ಎಂಬುವನ ಹೆಜ್ಜೆ ಗುರುತುಗಳ ಚಿತ್ರವನ್ನು ಅವರು ತೆಗೆದುಕೊಂಡಿರುವರು

ಅಂಬಾರಿ ಆನೆಯ ಮರಣ

ಐರಾವತ ಎಂಬ ಅರಮನೆಯ ಅಂಬಾರಿ ಆನೆಯು ಈ ದಿನ ಬೆಳಿಗ್ಗೆ ೬-೩೦ ಘಂಟೆಗೆ ಮೃತಪಟ್ಟಿತೆಂದು ತಿಳಿಸಲು ವಿಷಾದಿಸುತ್ತೇವೆ. ಅದು ಮೂರು ನಾಲ್ಕು ದಿವಸಗಳಿಂದಲೂ [illegible] ದ ನರಳುತ್ತಿತ್ತು

ಶಾಸನಸಭೆಗಳೆರಡರ ಸ್ಥಾನಮಾನದಲ್ಲಿ ವ್ಯತ್ಯಾಸವಿಲ್ಲ

ಸಭಾಧ್ಯಕ್ಷ ಶ್ರೀ ಕೆ. ಟಿ ಭಾಷ್ಯಂ ರವರ ಹೇಳಿಕೆ

ಬೆಂಗಳೂರು ೨೧

ಮೈಸೂರಿನ ಎರಡು ಶಾಸನ ಸಭೆಗಳ ಸದಸ್ಯರ ಪ್ರಾಮುಖ್ಯತೆ, ಗೌರವ, ಹಕ್ಕುಬಾಧ್ಯತೆ ಮತ್ತು ಸೌಲಭ್ಯಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲವೆಂದೂ, ಎರಡು ಸಭೆಗಳ ಸದಸ್ಯರನ್ನೂ ಸಮಾನ ರೀತಿಯ ಮರ್ಯಾದೆಯಿಂದ ಕಾಣಲಾಗುವುದೆಂದೂ ನೆನ್ನೆ ಹಿರಿಯ ಶಾಸನ ಸಭಾಧ್ಯಕ್ಷರಾದ ಶ್ರೀ ಕೆ ಟಿ ಭಾಷ್ಯಂರವರು ರೂಲಿಂಗ್ ಅನ್ನು ಕೊಟ್ಟರು

ಶ್ರೀ ಡಿ ವೆಂಕಟರಾಮಯ್ಯನವರು ಭಾಷಣ ಮಾಡಿ, ಮಂತ್ರಿಮಂಡಲದಲ್ಲಿ ಹಿರಿಯ ಸಭೆಯ ಸದಸ್ಯರಿಲ್ಲದಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದರು. ಅದಕ್ಕೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು ಸದರಿ ಸಭೆಯು ಕೇವಲ ಸಹಾಯ ಸಂಸ್ಥೆಯೇ ಹೊರತು ಲೆಜಿಸ್ಲೇಟಿವ್ ಅಸೆಂಬ್ಲಿಯಂತೆ ಹಕ್ಕನ್ನು ಕೇಳುವ ಅಧಿಕಾರವುಳ್ಳದ್ದಲ್ಲವೆಂದು ತಿಳಿಸಲಾಗಿ, ಅಧ್ಯಕ್ಷರು ಮೇಲ್ಕಂಡಂತೆ ರೂಲಿಂಗ್ ಕೊಟ್ಟರು

ಮಂತ್ರಿಮಂಡಲದಲ್ಲಿ ಅವಕಾಶ ಸಲ್ಲಿಸುವುದಕ್ಕೆ ಮಾತ್ರ ಈ ಸಭೆಗೆ ಅಧಿಕಾರವಿರುವುದಿಲ್ಲ ಅದಕ್ಕಾಗಿಯೇ ಈ ಸಭೆಯನ್ನು ಹೆಚ್ಚು ಮಿತ್ರ ಭಾವನೆಯಿಂದ ನೋಡಿಕೊಳ್ಳಬೇಕಾದುದು ಅಗತ್ಯ ಇನ್ನೊಂದು ಸಭೆಯವರ ಮಂತ್ರಿಮಂಡಲದ ಮೇಲಿನ ನ್ಯಾಯಾಧೀಶರಂತೆ ಇರುವರು – ಎಂದು ಅಧ್ಯಕ್ಷರು ತಿಳಿಸಿದರು

ಒಲಂಪಿಯಾ ಟಾಕೀಸ್

24-7-52 ರಿಂದ ಪ್ರತಿ ದಿನ ೩ ಆಟಗಳು
ಮಧುಬಾಲಾ ದಿಲೀಪ್‌ಕುಮಾರ್ ಗೋಪ್ ಪಾತ್ರ ವಹಿಸಿರುವ

★ ತರಾನಾ ★

—: ಬೆಳಗಿನ ಪ್ರದರ್ಶನ :—

★ ಸಿಕಂದರ್ ★

25 ಮತ್ತು 26 ನೇ ತಾರೀಖು ಮಾತ್ರ

ರೈತರ ಜಗಳದಲ್ಲಿ ೫ ಜನರ ಮರಣ

ಜೋಧಪುರದ ಜೋಮಿ ಎಂಬ ಹಳ್ಳಿಯಲ್ಲಿ ಒಂದು ಜಮೀನಿನ ಸಂಬಂಧವಾಗಿ ರೈತರ ಎರಡು ಪಕ್ಷಗಳವರಿಗೆ ಸೋಮವಾರ ಸಶಸ್ತ್ರ ಘರ್ಷಣೆ ನಡೆದು ಐದು ಜನರು ಮಡಿದು ಹತ್ತು ಮಂದಿ ಗಾಯಗೊಂಡರೆಂದು ವರದಿಯಾಗಿದೆ

ವಿದ್ಯುಚ್ಛಕ್ತಿ ನೆಯ್ಗೆ ಕೆಲಸಗಾರರ ಸಭೆ

ರಾಜಧಾನಿಯ ವಿದ್ಯುಚ್ಛಕ್ತಿ ನೆಯ್ಗೆ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ಕಟ್ಟಡದಲ್ಲಿ ನಾಳೆ ಸಂಜೆ ೬ ಘಂಟೆಗೆ ನಡೆಯುವುದು ಸಂಘದ ಅಧ್ಯಕ್ಷರಾದ ಶ್ರೀ ಕೆ ಪುಟ್ಟಸ್ವಾಮಿಯವರು ಅಗ್ರಾಸನವನ್ನು ವಹಿಸುವರು ಸದಸ್ಯರೆಲ್ಲರೂ ಸಭೆಗೆ ಬರಬೇಕೆಂದು ಕೋರಲಾಗಿದೆ.

ಋಗ್ವೇದ ಉಪಾಕರ್ಮ

ಋಗ್ವೇದ ಶಾಖೆಯವರಿಗೆ ಉಪಾಕರ್ಮವು ಇದೇ ತಿಂಗಳು ೨೭ ನೇ ತಾ ಭಾನುವಾರ ಬೆಳಿಗ್ಗೆ [illegible]

[illegible] ಸಹಕಾರ ಸಂಘ

ರಾಜಧಾನಿಯ [illegible] ಸಂಘವನ್ನು ಏರ್ಪಡಿಸಿಕೊಂಡಿರುವರು ಶ್ರೀ ಪಿ ಸುಬ್ಬರಾಯರು ಅಧ್ಯಕ್ಷರಾಗಿರುವರು

SRI GAYATHRI
TALKIES
Daily 2 Shows
From 24-7-52 [illegible]
M. G. M's Detective Drama
SIDE STREET

From 26 7 52
Your long awaited Picture
M. G. M's
WEDDING BELLS

ಮದ್ರಾಸಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅಗ್ರಸ್ಥಾನ

ಹತ್ತು ವರ್ಷಗಳಲ್ಲಿ ಎಲ್ಲರಿಗೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತ ಮತ್ತು ಒತ್ತಾಯವಾಗಿ ಕೊಡುವುದಕ್ಕೆ ಮದ್ರಾಸು ಸರ್ಕಾರದವರು ಅಗ್ರಸ್ಥಾನವನ್ನು ಕೊಡಲಿರುವರು ವಿದ್ಯಾಭ್ಯಾಸ ಕಾರ್ಯಕ್ಕೆ ಇಲ್ಲಿನ ಸರ್ಕಾರದವರು ೧೨ ಕೋಟಿ ರೂಗಳನ್ನು ವೆಚ್ಚ ಮಾಡಲಿರುವರು

ಹರಿಜನರ ವಿದ್ಯಾಭ್ಯಾಸ

ರಾಜಧಾನಿಯ ಆದಿ ಕರ್ನಾಟಕವರ್ಗದವರಲ್ಲಿರುವ ಹರಿಜನರಿಗೆ ವಿದ್ಯಾಭ್ಯಾಸವನ್ನು ಹೆಚ್ಚು ಹೆಚ್ಚಾಗಿ ಏರ್ಪಡಿಸುವ ಸಂಬಂಧವಾಗಿ ಡಾ|| ಎನ್ ಸಿ ಬಿಳಿಗಿರಿ ರಂಗಯ್ಯನವರು ಮೊನ್ನೆ ಒಂದು ಸಭೆಯನ್ನು ಕರೆದಿದ್ದರು ೧೫೦ ವಿದ್ಯಾರ್ಥಿಗಳು ಸೇರಿದ್ದರು ಶ್ರೀ ಎಂ ಎಸ್ ಚಂದ್ರಶೇಖರಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಎಸ್ ಎಂ ಸಿದ್ದಯ್ಯ, ಎನ್ ಸಿ ಬಿಳಿಗಿರಿ ರಂಗಯ್ಯ ಮತ್ತು ಪಿ ಎಲ್ ಕುಮಾರಸ್ವಾಮಿಯವರು ಭಾಷಣ ಮಾಡಿ [illegible]

ಕೋಲಾರದ ಇಂಟರ್ ಕಾಲೇಜು ಸೂಪರಿಂಟೆಂಡೆಂಟರು

ಮೈಸೂರಿನ [illegible] ಕಾಲೇಜಿನ [illegible] ನೇಮಿಸಲಾಗಿದೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible] ಸಂಗೀತ [illegible] ಸಂಗೀತ, [illegible] ಕೃಷ್ಣಪ್ಪ ಸಂಗೀತ [illegible] ಎಂ ಪಿ ನಾಗಮುತ್ತು ವಚನಗಾನ, [illegible] ವೇಣುಗಾನ [illegible] ಸಮಾಪ್ತ

SREE GANESHA
TALKIES
From 24 7 52 For 2 Days
CAGE OF GOLD
With—Jean Simmons & James Donald

— NEXT CHANGE
Golden Salamander

ಹಿಂದಿ ಸಂತ ಕವಿಗಳ ಬಗ್ಗೆ ಭಾಷಣ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಕಾಶಿಯ ಸ್ವಾಮಿ ಜಗದೀಶ್ವರಾನಂದರವರು ಹಿಂದಿಯ ಸಂತ ಕವಿಗಳು ಎಂಬ ವಿಷಯವಾಗಿ ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಾಳೆ ಸಂಜೆ ೬ ಗಂಟೆಗೆ ಉಪನ್ಯಾಸ ಮಾಡುವರು

ಸಿಟಿ ಮುನಿಸಿಪಲ್ ಆಫೀಸು, ಮೈಸೂರು
ತಾ|| 17-7-1952

ಹರಾಜು ಇಸ್ತಿಹಾರ್

ಈ ಮೂಲಕ ತಿಳಿಯಪಡಿಸುವುದೇನೆಂದರೆ —

1952 ನೇ ಇಸವಿ ಜುಲೈ ಮಾಹೆ 30 ನೇ ತಾರೀಖು ಬುಧವಾರ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಮುನಿಸಿಪಲ್ ಆಫೀಸಿನ ಕಾಂಪೌಂಡಿನಲ್ಲಿ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಮುನಿಸಿಪಲ್ ಇಂಜನಿಯರವರಿಂದ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಹರಾಜಾಗುವ ಸಾಮಾನಿನ ವಿವರಗಳನ್ನು ಆಫೀಸ್ ನಡೆಯುವ ಕಾಲದಲ್ಲಿ ತಿಳಿಯಬಹುದು ಮತ್ತು ಸಾಮಾನುಗಳನ್ನು ಹರಾಜಿನ ದಿನ ಬೆಳಿಗ್ಗೆ 8 ಘಂಟೆಯಿಂದ ನೋಡಲು ಅವಕಾಶ ಕೊಡಲಾಗುತ್ತೆ ಅಪೇಕ್ಷೆಯುಳ್ಳವರು ಸದರಿ ಹರಾಜಿಗೆ ಹಾಜರಾಗಿ ಮಾಲುಗಳನ್ನು ಕೂಗಿ ಪಡೆಯಬಹುದು ಹರಾಜು ಕೈದು ಆದ ನಂತರ ಆಖೈರು ಬಿಡ್ಡುದಾರರು, ಮುನಿಸಿಪಲ್ ಕಮೀಷನರವರಿಂದ ಆಖೈರು ಬಿಡ್ಡು ಮಂಜೂರಾದ ನಂತರ, ಹರಾಜು ಪೂರ್ತಾ ಮೊಬಲಗನ್ನು ಮುನಿಸಿಪಲ್ ಖಜಾನೆಗೆ ಪಾವತಿ ಮಾಡಿ, ಸರ್ಟಿಫೈಡ್ ಚಲನ್ ಹಾಜರುಪಡಿಸಿ ಹರಾಜಿನಲ್ಲಿ ಪಡೆದ ಮಾಲನ್ನು ಸಾಗಿಸತಕ್ಕದು ಹಾಗೆ ಮಾಡಲು ತಪ್ಪಿದಲ್ಲಿ ಮರಳಿ ಹರಾಜು ಮಾಡುವುದಲ್ಲದೆ, ತನ್ಮೂಲಕ ಉಂಟಾಗುವ ವಿಶಿಷ್ಟ ನಷ್ಟವನ್ನೂ ವಸೂಲು ಮಾಡಲಾಗುತ್ತೆಂದು ತಿಳಿಯುವುದು

ಎಫ್. ಎಂ ಅಬ್ದುಲ್ ರಹೀಂ,
ಮುನಿಸಿಪಲ್ ಕಮೀಷನರ್

ವಿವರ

1 ಸಣ್ಣ ಸೈಜು ಖಾಲಿ ಟಾರ್ ಡ್ರಮ್ಮುಗಳು – 400
2 ಅನುಪಯುಕ್ತವಾದ ಲಾರಿ ಸಾಮಾನುಗಳು – ಟೈರು, ಟ್ಯೂಬು, ಬ್ಯಾಟರಿ, ಇತರೆ ಚಿಲ್ಲರೆ ಸಾಮಾನುಗಳು
3 ಖಾಲಿ ಜಾಯಿಕಾಯಿ ಪೆಟ್ಟಿಗೆಗಳು. — 50

ಅಂಬಳ ರಾಮಸ್ವಾಮಿ ಅಯ್ಯಂಗಾರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಿಳಿಸೆರಗು (ಮುಟ್ಟಿನ) ಸಂಬಂಧದ ರೋಗಗಳಿಂದ [illegible],
[illegible] ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

[illegible] ದಿವಸಗಳಲ್ಲಿ ಈ [illegible] ಸಂತಾನ ಫಲ [illegible] "[illegible]" [illegible] 1 [illegible] 1 [illegible] ರೂ [illegible] ಉಚಿತ [illegible] ಸ್ಟಾಂಪು [illegible].

ವಿಶೇಷ ಸೂಚನೆ [illegible] ಶ್ರೀ ಎ ಆರ್ ಅಯ್ಯಂಗಾರ್‌ರವರ ಫೋಟೋ ಮತ್ತು [illegible] ಅಂಬಳೆ ಮತ್ತು ಮೈಸೂರು [illegible] ಆಫೀಸುಗಳನ್ನು [illegible] ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ

ಹೊಸ ವಿಳಾಸ:— ಎ ರಾಮಸ್ವಾಮಿ ಅಯ್ಯಂಗಾರ್ ಸನ್
" ಸಂತಾನ ಸಿಂಧೂರ ಬಿಲ್ಡಿಂಗ್ "
628 ನೂರಡಿ ರಸ್ತೆ ದಕ್ಷಿಣ ಕ್ರಾಸ್,
(ಕೃಷ್ಣ ಕೈಸ್ ಮಿಲ್ ಪಕ್ಕ) ಮೈಸೂರು

ಶ್ರೀ ಚಾಮುಂಡೇಶ್ವರಿ ಟಾಕೀಸ್

25-7-52ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ ೩ ಆಟಗಳು
ಪ್ರತಿಭಾರವರ ಅತ್ಯುತ್ತಮ ನೂತನ ಸಾಮಾಜಿಕ ತೆಲುಗು ಚಿತ್ರ

★ ಚಿನ್ನ ಕೋಡಲು ★
(ಚಿಕ್ಕ ಸೊಸೆ)

ಪಾತ್ರ: ಕುಮಾರಿ, ಕೃಷ್ಣ ಕುಮಾರಿ ಡಾ|| ಸುಬ್ಬರಾವ್,
ಎಸ್ ವಿ ಸ್ವಾಮಿ ಮುಂತಾದವರು

Edited. Printed and Published by A R Nagarajan at Sadhvi Press, D. Subbi [illegible]

ಪಲಪ್ಪು ಸಂ. 792 ॥ ವಂದೇ ಮಾತರಂ ॥ ಅಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಗುರುವಾರ ೨೪-೭-೫೨ [ಸಂಚಿಕೆ ೨೯೪

ಈಜಿಪ್ಟಿನ ಸೈನ್ಯಗಳಿಗೆ - ಪರಸ್ಪರ ಘರ್ಷಣೆ -

ಪಿ. ಗೋಪಾಲಕೃಷ್ಣ ಶೆಟ್ಟರು

ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರು

ಬೆಂಗಳೂರು ೨೪

ನೆನ್ನೆ ಶ್ರೀ ಗೋಪಾಲ ಕೃಷ್ಣ ಶೆಟ್ಟರು ಇದೇ ಮೊಟ್ಟಮೊದಲಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಕಾರ್ಯಕಲಾಪಗಳನ್ನು ನಡೆಸಿದರು

ಸುಳ್ಳು ವಯಸ್ಸು ಕೊಟ್ಟ ಅಧಿಕಾರಿಗಳ ನಿವೃತ್ತಿ

ಬೆಂಗಳೂರು ೨೪

ಸರ್ಕಾರಿ ನೌಕರಿಗೆ ಸೇರಿದಾಗ ಸುಳ್ಳು ವಯಸ್ಸನ್ನು ಕೊಟ್ಟವರೆಂಬ ಕಾರಣಕ್ಕಾಗಿ ೧೪ ಮಂದಿ ಗೆಜೆಟೆಡ್ ಅಧಿಕಾರಿಗಳನ್ನು ನಿವೃತ್ತಿ ಮಾಡುವಂತೆ ಸರಕಾರದವರು ಸೂಚಿಸಿರುತ್ತಾರೆ. ಹಲವು ಉನ್ನತ ಅಧಿಕಾರಿಗಳೂ, ಆರು ಮಂದಿ ಶಿಕ್ಷಣ ಇಲಾಖೆಯವರೂ ಈ ಪೈಕಿ ಇರುವರು

ಸಫ್ದರ್ ಹುಸೇನರ ನಿವೃತ್ತಿ

ಅಬ್ಕಾರಿ ಕಮಿಷನರರಾದ ಜ|| ಸಫ್ದರ್ ಹುಸೇನರವರು ನಿವೃತ್ತರಾಗಲಿರುವರೆಂದೂ, ಅವರ ಸ್ಥಾನಕ್ಕೆ ವಿದ್ಯಾ ಕಾರ್ಯದರ್ಶಿ ಶ್ರೀ ಎ. ಸಿ ದೇವೇಗೌಡರನ್ನ ವರ್ಗಾಯಿಸಿ, ಶ್ರೀ ಶಿವ್ವೇರುದ್ರಯ್ಯನವರನ್ನು ವಿದ್ಯಾ ಇಲಾಖೆಗೆ ವರ್ಗಾಯಿಸಲಾಗುವುದೆಂದೂ, ಮಿತವ್ಯಯದ ಕಾರಣಕ್ಕಾಗಿ ಗೃಹ ಕಾರ್ಯದರ್ಶಿ ಹುದ್ದೆಯನ್ನು ತೆಗೆದುಹಾಕಿ ಶ್ರೀ ಜಿ ಎಲ್ ನಾಗರಾಜರಾಯರನ್ನು ಗ್ರಾಮಾಭಿವೃದ್ಧಿ ಕಮಿಷನರ್ ಮತ್ತು ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿ ವರ್ಗಾಯಿಸಲಾಗುವುದೆಂದೂ ತಿಳಿದುಬಂದಿದೆ

ಶಿವಮೊಗ್ಗ ಅಥವಾ ಹರಿಹರದಲ್ಲಿ ಅಲ್ಯೂಮಿನಿಯಂ ಕೈಗಾರಿಕೆ

ಸಂಸ್ಥಾನದಲ್ಲಿ ಅಲ್ಯೂಮಿನಿಯಂ ಕೈಗಾರಿಕೆಯನ್ನು ಆರಂಭಿಸಲು ಹಲವು ಖಾಸಗಿ ಉದ್ಯಮಿಗಳು ಮುಂದೆ ಬಂದಿರುವರೆಂದೂ, ಅವರು ಸರ್ಕಾರದ ಷರತ್ತುಗಳನ್ನು ಒಪ್ಪಿದರೆ, ಹರಿಹರ ಅಥವಾ ಶಿವಮೊಗ್ಗದಲ್ಲಿ ಈ ಕೈಗಾರಿಕೆಯು ಸ್ಥಾಪಿತವಾಗಬಹುದೆಂದೂ ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಹಿರಿಯ ಶಾಸನ ಸಭೆಯಲ್ಲಿ ತಿಳಿಸಿರುವರು

ರಾಜಧಾನಿಯ ಆಹಾರ ಸಲಹಾ ಸಮಿತಿಯ ರದ್ದು

ಮೈಸೂರು, ಬೆಂಗಳೂರು, ದಾವಣಗೆರೆ, ಕೋಲಾರದ ಚಿನ್ನದಗಣಿ ಪ್ರದೇಶಗಳ ಸ್ಥಳೀಯ ಆಹಾರ ಸಲಹಾ ಸಮಿತಿಗಳನ್ನು ಸರ್ಕಾರದವರು ರದ್ದುಗೊಳಿಸಿರುತ್ತಾರೆ

ಪಾರ್ಲಿಮೆಂಟಿನ ವಿರೋಧ ಪಕ್ಷದವರ ಸಭಾತ್ಯಾಗ

ಪಾರ್ಲಿಮೆಂಟಿನಲ್ಲಿ ಮುನ್ನೆಚ್ಚರಿಕೆ ಸ್ಥಾನಬದ್ಧತಾ ಶಾಸನದ ಮಸೂದೆಯ ಎರಡನೇ ತಿದ್ದುಪಡಿಯು ಪರಿಶೀಲನೆ ಕಾಲದಲ್ಲಿ ಮಸೂದೆಯನ್ನು ಹೆಚ್ಚಾಗಿ ಚರ್ಚಿಸಲು ಅವಕಾಶ ಬೇಕೆಂದು ಸಮಾಜವಾದಿ ಪಕ್ಷದ ಸದಸ್ಯರಾದ ಶಾರಂಗಧರದಾಸ್‌ರವರು ನೆನ್ನೆ ಮಾಡಿದ ಸೂಚನೆಯನ್ನು ಸಭಾಧ್ಯಕ್ಷರು ತಳ್ಳಿಹಾಕಿದುದನ್ನು ಪ್ರತಿಭಟಿಸುವ ಸಲುವಾಗಿ ವಿರೋಧ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡಿದರು ಸುಮಾರು ೧೦೦ ಜನರು ಸಭಾತ್ಯಾಗದಲ್ಲಿ ಸೇರಿದ್ದರೆಂದು ಹೇಳಲಾಗಿದೆ ಈ ಸಭಾ ತ್ಯಾಗವು ಎರಡನೇ ಬಾರಿಯದು

೭೦೦ ಜನರ ಬಿಡುಗಡೆ

ಕಮ್ಯೂನಿಸ್ಟ್ ಆಪಾದಿತ ಪ್ರವರ್ತನೆಗಳ ಸಂಬಂಧವಾಗಿ ದಸ್ತಗಿರಿಯಾಗಿರುವ ೭೦೦ ಜನರನ್ನು ಬಿಡಲಾಗುವುದೆಂದು ಅಲ್ಲಿನ ಮುಖ್ಯಮಂತ್ರಿ ಬಿ. ಸಿ. ರಾಯರು ತಿಳಿಸಿರುತ್ತಾರೆ

ಈಜಿಪ್ಟಿನಲ್ಲಿ ಮಿಲಿಟರಿಯವರ ಕ್ರಾಂತಿ

ಈಜಿಪ್ಟಿನಲ್ಲಿ ಮಿಲಿಟರಿ ಅಧಿಕಾರಿಗಳ ಕ್ರಾಂತಿಯು ನೆನ್ನೆ ನಡೆದು ಸರ್ಕಾರವನ್ನು ಅವರು ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ. ಈ ರಕ್ತವಿಲ್ಲದ ಕ್ರಾಂತಿಗೆ ನಗೀಬ್ ಮಹಮದ್‌ರವರು ಮುಖಂಡರಾಗಿರುತ್ತಾರೆ ರಾಜೀನಾಮೆಯಿತ್ತ ಸಿರ್ರಿ ಪಾಷಾರವರ ಮಂತ್ರಿಮಂಡಲದಲ್ಲಿ ಯುದ್ಧ ಮಂತ್ರಿಯಾಗಿ ಇವರನ್ನು ನೇಮಿಸಲಾಗಿತ್ತು. ಅದಕ್ಕೆ ದೊರೆ ಫರೂಕರ ವಿರೋಧವಿದ್ದಿತೆಂದೂ ಅದಕ್ಕಾಗಿಯೇ ಸಿರ್ರಿ ಪಾಷಾರವರು ರಾಜೀನಾಮೆಯಿತ್ತರೆಂದೂ ಹೇಳಲಾಗಿದೆ ನಗೀಬ್‌ರವರು ಘೋಷಣೆ ಹೊರಡಿಸಿ, ತಮ್ಮ ಆಜ್ಞೆಯನ್ನು ಪಾಲಿಸಬೇಕೆಂದೂ ವಿನಾಶ ಕೃತ್ಯಗಳನ್ನು ಸಹಿಸುವುದಿಲ್ಲವೆಂದೂ, ತಮ್ಮ ವಿರೋಧಿಯಾಗಿರುವ ಮುಖಂಡರೆಲ್ಲರನ್ನೂ ದಸ್ತಗಿರಿ ಮಾಡಿರುವುದಾಗಿಯೂ ಹೇಳಿರುತ್ತಾರೆ

ಅಪೆಕ್ಸ್ ಬ್ಯಾಂಕಿಗೆ ೧ ಕೋಟಿ ರೂ ಸಾಲ

ಸಂಸ್ಥಾನದ ರೈತರುಗಳಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಕೊಡುವ ಸಲುವಾಗಿ ಅಪೆಕ್ಸ್ ಬ್ಯಾಂಕಿಗೆ ೧ ಕೋಟಿ ರೂ ಸಾಲವನ್ನು ರಿಸರ್ವ್ ಬ್ಯಾಂಕು ಒದಗಿಸುವಂತೆ ಸೂಚಿಸಬೇಕೆಂದು ಮೈಸೂರು ಸರಕಾರಕ್ಕೆ ಅಪೆಕ್ಸ್ ಬ್ಯಾಂಕಿನವರು ಕೋರಿರುವುದಾಗಿ ಗೊತ್ತಾಗಿದೆ

ಫರೂಕರ ಸೈನಿಕರಿಗೂ, ಕ್ರಾಂತಿ ಪಡೆಗೂ ಘರ್ಷಣೆ

ಈಜಿಪ್ಟಿನ ದೊರೆ ಫರೂಕರ ಅಂಗರಕ್ಷ ಸೈನ್ಯಗಳು ಕ್ರಾಂತಿಯ ಮುಖಂಡರಿಗೆ ಶರಣಾಗತರಾಗಲು ಒಪ್ಪಲಿಲ್ಲವೆಂದೂ, ದೊರೆಗಳ ಪಕ್ಷ ವಹಿಸಿರುವ ಸೈನ್ಯಗಳಿಗೂ, ಅವರನ್ನು ವಿರೋಧಿಸುವ ತಂಡಗಳಿಗೂ ಹೋರಾಟವು ನಡೆಯುತ್ತಿರುವುದೆಂದೂ ಗೊತ್ತಾಗಿದೆ. ದೊರೆಗಳ ವಿಮಾನವು ಅಪ್ಪಣೆ ಮೀರಿ ನಿಲ್ದಾಣದಿಂದ ಹೊರಡುವಷ್ಟಾಗಿ ಅದನ್ನು ಗುಂಡು ಹೊಡೆದು ಕೆಳಕ್ಕೆ ಕೆಡವಲಾಯಿತೆಂದೂ, ಅದರಲ್ಲಿ ದೊರೆಗಳಿದ್ದರೇ ಎಂಬುದು ತಿಳಿಯದೆಂದೂ ಗೊತ್ತಾಗಿದೆ ಕೈರೋ ನಗರದಲ್ಲಿ ದೊರೆಗಳ ವಿರುದ್ಧ ಜನರು ಘೋಷಣೆ ಮಾಡಿದರೆಂದು ಹೇಳಲಾಗಿದೆ

ಈ ಸಂಜೆ ರೆಡ್ಡಿಯವರ ಆಗಮನ

ಕೇಂದ್ರ ಉತ್ಪನ್ನಶಾಖಾ ಮಂತ್ರಿ ಶ್ರೀ ಕೆ. ಸಿ ರೆಡ್ಡಿಯವರು ನೆನ್ನೆ ಬೆಂಗಳೂರಿಗೆ ವಿಮಾನದಲ್ಲಿ ಆಗಮಿಸಿದರು. ಅವರನ್ನು ರೆವಿನ್ಯೂ ಮಂತ್ರಿ, ಕಡಿದಾಳ್ ಮಂಜಪ್ಪ, ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯ, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಸಿ ದಾಸಪ್ಪ, ಕಾರ್ಯದರ್ಶಿ ಶ್ರೀ ಎಲ್ ಎಸ್ ವೆಂಕಾಜಿರಾವ್, ಶ್ರೀ ಎಸ್. ಚನ್ನಯ್ಯ, ಟಿ. ಮರಿಯಪ್ಪ, ಹೋಂ ಸೆಕ್ರೆಟರಿ ಜಿ.ಎಲ್. ನಾಗರಾಜರಾವ್, ಜಿಲ್ಲಾಧಿಕಾರಿ ಶ್ರೀ ರಂಗಮಲ್ಲಯ್ಯ ಮುಂತಾದವರು ಸ್ವಾಗತಿಸಿದರು ಈ ದಿನ ಅವರು ಯಂತ್ರ ಸಾಮಗ್ರಿಗಳ ಕಾರ್ಖಾನೆಗೆ ಭೇಟಿಯಿತ್ತರು. ಈ ಸಂಜೆ ೪ ಘಂಟೆಗೆ ಹೊರಟು ರಾಜಧಾನಿಯನ್ನು ೬ ಘಂಟೆಗೆ ತಲಪುವರು.

ನೌಕರಿಯಲ್ಲಿ ಎ. ಮತ್ತು ಬಿ. ವರ್ಗಗಳು ರಾಜ್ಯಾಂಗಕ್ಕೆ ವಿರೋಧವಲ್ಲ

ಹಿರಿಯ ಶಾಸನ ಸಭೆಯಲ್ಲಿ ರೆವಿನ್ಯೂ ಸಚಿವರ ಹೇಳಿಕೆ

ಸ್ವಂ ಸು. ಪ್ರೋ] ಬೆಂಗಳೂರು ೨೪

ಈ ದಿನ ಹಿರಿಯ ಶಾಸನ ಸಭೆಯಲ್ಲಿ ಶ್ರೀ ಎಂ. ಪಿ ಎಲ್ ಶಾಸ್ತ್ರಿಯವರ ಪ್ರಶ್ನೆಗೆ ಉತ್ತರವಾಗಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ರಚನೆ, ಅದರ ಸದಸ್ಯರ ಪಟ್ಟಿ ಮುಂತಾದ ವಿಷಯಗಳನ್ನು ತಿಳಿಸಿ, ನೌಕರಿಗೆ ನೇಮಿಸುವಾಗ ಯಾರನ್ನೂ ಪರೀಕ್ಷಿಸಿರುವುದಿಲ್ಲವೆಂದು ತಿಳಿಸಿದರು ಸಿ ಐ. ಡಿ ಯ ರಹಸ್ಯ ಕೆಲಸವನ್ನು ಸಮಿತಿಯು ಮಾಡುತ್ತಿಲ್ಲವೆಂದು ಅವರು ಹೇಳಿದರು ನೌಕರಿಯಲ್ಲಿ ಎ. ಮತ್ತು ಬಿ ವರ್ಗಗಳನ್ನು ಏರ್ಪಡಿಸಿರುವುದು ರಾಜ್ಯಾಂಗಕ್ಕೆ ವಿರೋಧವಾಗಿಲ್ಲವೆಂದೂ, ರಾಜ್ಯಾಂಗವು ಈಚೆಗೆ ತಿದ್ದುಪಡಿಯಾಗಿರುವುದೆಂದೂ ಸಚಿವರು ತಿಳಿಸಿದರು ಜಿಲ್ಲಾ ಬೋರ್ಡು ಮತ್ತು ಪೌರ ಸಭಾ ನೌಕರರಿಗೂ ಈ ಆಜ್ಞೆಯು ಅನ್ವಯಿಸುವ ಬಗ್ಗೆ ನಿಬಂಧನೆಗಳನ್ನು ಮಾಡುವ ಯೋಚನೆಯಿರುವುದಾಗಿಯೂ ಅವರು ಹೇಳಿದರು

ಮಾರಾಟದ ತೆರಿಗೆಯ ಪದ್ಧತಿಯಲ್ಲಿ ಭಾರಿ ಬದಲಾವಣೆ ಮಾಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿ ಇಲ್ಲವೆಂದೂ, ಯಾವ ಬದಲಾವಣೆ ಮಾಡಬೇಕೆಂಬುದು ಸರ್ಕಾರದ ಆಲೋಚನೆಯಲ್ಲಿದೆಯೆಂದೂ ಶ್ರೀ ಮಂಜಪ್ಪನವರು ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಜಿಲ್ಲಾ ಬೋರ್ಡುಗಳ ಅಧ್ಯಕ್ಷರಿಗೆ ವರ್ಷಕ್ಕೆ ೧೪೦೦ ರೂ, ಉಪಾಧ್ಯಕ್ಷರಿಗೆ ೭೦೦ ರೂ ಭತ್ಯವನ್ನು ಕೊಡಲಾಗುತ್ತಿರುವುದೆಂದೂ, ಇದಕ್ಕೆ ಮಿಗಿಲಾಗಿ ಹಣ ಪಡೆದಿದ್ದರೆ ಸರ್ಕಾರದವರು ವರದಿಯನ್ನು ತರಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳುವುದಾಗಿಯೂ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ ಚನ್ನಯ್ಯನವರು ತಿಳಿಸಿದರು

ಪರ್ಷಿಯದ ಮಾಜಿ ಪ್ರಧಾನಿ ದಸ್ತಗಿರಿ ಮತ್ತು ಪರಾರಿ

ಪರ್ಷಿಯದಲ್ಲಿ ೩ ದಿನಗಳ ವರೆಗೆ ಪ್ರಧಾನಿಯಾಗಿದ್ದ ಘವಾಂ ಸುಲ್ತಾನೆಯವರನ್ನು ನೆನ್ನೆ ರಾಜಧಾನಿ ಟೆಹರಾನಿಗೆ ೫೦ ಮೈಲಿ ದೂರದಲ್ಲಿ ಅವರ ಮಿತ್ರರೊಬ್ಬರ ಮನೆಯಲ್ಲಿ ದಸ್ತಗಿರಿ ಮಾಡಲಾಯಿತು. ಅವರನ್ನು ಹಿಡಿಯಲು ದೇಶದ ಗಡಿಗಳಲ್ಲೆಲ್ಲಾ ಕಾವಲನ್ನು ಹಾಕಲಾಗಿತ್ತು. ದೇಶದಿಂದ ಹೊರಕ್ಕೆ ಅವರನ್ನು ಬಿಡಲಾಗುವುದಿಲ್ಲವೆಂದು ಈಗಿನ ಪ್ರಧಾನಿ ಮುಸ್ಸಾಡಿಕ್‌ರವರು ತಿಳಿಸಿದ್ದರು ಘವಾಂರವರು ಈಗ ತಪ್ಪಿಸಿಕೊಂಡು ಓಡಿ ಹೋಗಿರುವರೆಂದು ಹೇಳಲಾಗಿದೆ

ಭೂಮಿ ವ್ಯಾಜ್ಯದಲ್ಲಿ ೩ ಜನರ ಕೊಲೆ

ಭೂಮಿಯ ವ್ಯಾಜ್ಯಕ್ಕಾಗಿ ಕೊಯಮತ್ತೂರಿನ ವೀರಪಂಡಿ ಹಳ್ಳಿಯಲ್ಲಿ ದಾಮೋದರಸ್ವಾಮಿ ನಾಯ್ಡು, ಆತನ ಪತ್ನಿ ರಾಜಮ್ಮಾಳ್ ಮತ್ತು ಮಗಳು ವಸಂತ ಮಣಿ ಇವರುಗಳನ್ನು ಕಳೆದ ಗುರುವಾರ ಚೂರಿ ಮತ್ತು ಮಚ್ಚುಗ ತ್ತಿಯಿಂದ ಹೊಡೆದು ಕೊಲ್ಲಲಾಯಿತೆಂದೂ, ಮತ್ತೊಬ್ಬ ಮಗಳಿಗೂ ಏಟು ಬಿದ್ದಿರುವುದೆಂದೂ ವರದಿಯಾಗಿದೆ. ಈ ಸಂಬಂಧವಾಗಿ ಚೆನ್ನಯ್ಯಗೌಂಡರ್ ಮತ್ತು ರಂಗಸ್ವಾಮಿ ಗೌಂಡರ್ ಎಂಬುವರಿಬ್ಬರು ಪೋಲೀಸರ ವಶವಾಗಿರುತ್ತಾರೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ [illegible] ಎಸ್ [illegible] ವಿದ್ಯಾ [illegible] ಮಧ್ಯಾಹ್ನ [illegible] ಬಿಲ್ಲು [illegible] ಸಣ್ಣ ಮೆಚ್ಚಿನ ಕಲಾವಿದರು ಸಂಜೆ [illegible] ಎಸ್ ಲಕ್ಷ್ಮೀ ದೇವಿ ಸಂಗೀತ, [illegible] ಇಂದಿರ ಹಾಡುಗಳು [illegible] ಗೀತಾಮಾಲಾ [illegible] ಆರ್ಕೆಸ್ಟ್ರಾ

ರಾಜಕಮಲ್

25-7-52 ರಿಂದ 7 ನೇ ವಾರ

ನನ್ನ ತಂಗಿ
[ತಮಿಳು]

ಚರ್ಚಿಲ್ ಆಹ್ವಾನಕ್ಕೆ ನೆಹರೂ ಮನ್ನಣೆಯಿಲ್ಲ

ಲಂಡನ್ನಿನಲ್ಲಿ ನಡೆಯುವ ಕಾಮನ್ ವೆಲ್ತ್ ಪ್ರಧಾನಿಯವರ ಸಮ್ಮೇಳನಕ್ಕೆ ಬರಬೇಕೆಂದು ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಇತ್ತ ಆಹ್ವಾನವನ್ನು ಪ್ರಧಾನಿ ನೆಹರೂರವರು ಅಂಗೀಕರಿಸಲಿಲ್ಲವೆಂದು ಗೊತ್ತಾಗಿದೆ

ರೇಡಿಯೋವಿನಲ್ಲಿ ವಿವಿಧ ವಿನೋದಾವಳಿ

ಮೈಸೂರಿನ ಆಲ್ ಇಂಡಿಯಾ ರೇಡಿಯೋವಿನಲ್ಲಿ ಈ ರಾತ್ರಿ [illegible] ಗಂಟೆಗೆ ಕುಶಲರಾದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗಾಗಿ ಗೀತಾ ಶ್ಲೋಕಗಳು, ಧೂಮಕೇತುಗಳ ಬಗ್ಗೆ ಉಪನ್ಯಾಸ ಪ್ರೊ|| ಸಾಂಬಶಿವಯ್ಯ ಮತ್ತು ಸರ್ಪಗಳು ಎಂಬ ವಿಷಯಗಳುಳ್ಳ ವಿವಿಧ ವಿನೋದಾವಳಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

[illegible]

ರಘುಲಾಲ್ ಅಂಡ್ ಕೋ

ಔಷಧಿ ವ್ಯಾಪಾರಿಗಳು,

[illegible]

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ ರೂ ಇಂದ ರೂ ಗೆ

ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	
ಹುಚ್ಚೆಳ್ಳು	[illegible]	
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಕಡಲೆಕಾಯಿ	[illegible]	[illegible]
ಮೆಣಸಿನಕಾಯಿ		
ಮಣಕ್ಕೆ	[illegible]	[illegible]
ಹುಣಿಸೇಹಣ್ಣು	[illegible]	
ಸೀಗೆಕಾಯಿ	[illegible]	[illegible]
ಕೊಬ್ಬರಿ	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

ಒಲಿಂಪಿಯಾ ಟಾಕೀಸ್

24-7-52 ರಿಂದ ಪ್ರತಿ ದಿನ ೩ ಆಟಗಳು ಮಧುಬಾಲ ದಿಲೀಪ್‌ಕುಮಾರ್ ಗೋಪ್ ಪಾತ್ರ ವಹಿಸಿರುವ

* ತರಾನ *

— ಬೆಳಗಿನ ಪ್ರದರ್ಶನ —

★ ಸಿಕಂದರ್ ★

25 ಮತ್ತು 26 ನೇ [illegible]

Edited Printed and Published by A. R. N[illegible] at the Sadhvi Press, D[illegible] [illegible]iah Road, Mysore

ರೇಷ್ಮೆ ದಾರದಲ್ಲಿ ಭೂಪಟ

ಉತ್ಕಲ ದೇಶದವರ ಕಲಾ ಕೌಶಲ್ಯವನ್ನು ತೋರ್ಪಡಿಸುವ ಅತಿ ನಯವಾದ ರೇಷ್ಮೆ ದಾರದಲ್ಲಿ ಒರಿಸ್ಸಾ ಪ್ರಾಂತದ ಭೂಪಟವನ್ನು ತಯಾರಿಸಿ ಇದನ್ನು ರಾಷ್ಟ್ರಪತಿಗಳ ಕಲಾಶಾಲೆಗೆ ಕೊಡಲಾಗಿದೆ

ಬೆಂಗಳೂರು

ಕಲಾ ಮಂದಿರದ

ಸಹಾಯಾರ್ಥವಾಗಿ

ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ

2-8-52 ಮತ್ತು 3-8-52 ನೇ

ಶನಿವಾರ ಮತ್ತು ಭಾನುವಾರ

ಸಂಜೆ 6-30 ಕ್ಕೆ

ನಾಟಕ, ನೃತ್ಯ ಮತ್ತು ಸಂಗೀತ

ಕವಿ ಪುಂಗವ, ಆ ರಾತ್ರಿ ಮತ್ತು ಕಲ್ಯಾಣಿ ಕಮಂಗಿ

ನಾಟಕಗಳು

[illegible] ಜನರ ಕೂಲಿಕಾರರ ಸಮಸ್ಯೆಯನ್ನು ರಂಗಭೂಮಿಯಲ್ಲಿ ತೋರುವ [illegible]

[illegible] ಶ್ರೀಮತಿ ಚೆನ್ನಮ್ಮ [illegible]

[illegible] ನೃತ್ಯ [illegible]

[illegible] 33 ವರ್ಷಗಳಿಂದ ದುಡಿಯುತ್ತಿರುವ ಕಲಾಮಂದಿರಕ್ಕೆ ಸಹಾಯ ಮಾಡಿ

ದಿ ಮೈಸೂರು ಸಿಟಿ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿ, ಲಿ

ಚಾಮುಂಡಿ [illegible]

ಪ್ರಕಟಣೆ

ಮೈಸೂರು ಸಿಟಿ ಕಿಲ್ಲೆ ಮೊಹಲ್ಲಾ ಮಾನಂದವಾಡಿ ರಸ್ತೆ ಬಡಾವಣೆಯಲ್ಲಿ ಸೊಸೈಟಿಯವರು ಕಟ್ಟಿರುವ ಮಾದರಿ ಮನೆಗಳ ಪೈಕಿ ಕಸ್ತೂರಿ ಮನೆಗಳನ್ನು ಸ್ವಂತ ಮನೆಯಿಲ್ಲದ ಸೊಸೈಟಿ ಸದಸ್ಯರುಗಳಿಗೂ, ಸದಸ್ಯರಲ್ಲದವರಿಗೂ ವಿಲೇ ಮಾಡಲಾಗುತ್ತದೆ ಪ್ರತಿ ಮನೆಗೂ ಸುಮಾರು 6000 ರೂ ಬೆಲೆಯಾಗುತ್ತದೆ ಸದರಿ ಮನೆಯನ್ನು ಕೊಂಡವರು ಮೊದಲನೆ ಕಂತಾಗಿ 1000 ರೂಗಳ ರೇವಣಿ ಸಹಿತ ಸವಿಸ್ತರ ಅರ್ಜಿ ಕೊಡತಕ್ಕದ್ದು. ಉಳಿಕೆ ಮೊಬಲಗನ್ನು ಸೊಸೈಟಿಯ ಮ್ಯಾನೇಜಿಂಗ್ ಕಮಿಟಿಯವರ ತೀರ್ಮಾನದ ಪ್ರಕಾರ ಪಾವತಿ ಮಾಡತಕ್ಕದ್ದು ಅರ್ಜಿ ವಾಪಸು ಕೊನೆಯ ದಿನ ತಾ|| 10 ೮ 1952 ಹೆಚ್ಚಿನ ವಿವರಗಳನ್ನು ಸೊಸೈಟಿಯಲ್ಲಿ ತಿಳಿಯಬಹುದು

ಎಸ್. ಶೇಷಗಿರಿ ರಾವ್,
ಗೌರವ ಕಾರ್ಯದರ್ಶಿ.

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

- ಅತ್ಯುತ್ತಮವಾದ ಒಗೆಯುವ ಸಾಬೂನು
- ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು
- ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ
- ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಶ್ರೀ ಚಾಮುಂಡೇಶ್ವರಿ ಟಾಕೀಸ್

25-7-52 ರಿಂದ ಆರೋಗ್ಯ ಪ್ರಾರಂಭ · ಪ್ರತಿ ದಿನ 3 ಆಟಗಳು

ಪ್ರತಿಭಾವರ ಅತ್ಯುತ್ಕೃಷ್ಟ ನೂತನ ಸಾಮಾಜಿಕ ತೆಲುಗು ಚಿತ್ರ

★ ಚಿನ್ನ ಕೋಡಲು ★

(ಚಿಕ್ಕ ಸೊಸೆ)

ಪಾತ್ರ - ಕುಮಾರಿ, ಕೃಷ್ಣ ಕುಮಾರಿ ಡಾ|| ಸುಬ್ಬರಾವ್, ಎಸ್ ವಿ ರಂಗಸ್ವಾಮಿ ಮುಂತಾದವರು

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

25-7-52 ರಿಂದ

3 ನೆಯ ವಾರ

ಟೆಲಿಫೋನ್ ನಂ 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶುಕ್ರವಾರ ೨೫ ೭–೫೨ [ಸಂಚಿಕೆ ೨೯೯

ನೇಪಾಳ ಮತ್ತು ಭಾರತ ಗಡಿಯಲ್ಲಿ ರಕ್ಷಣಾ ಕ್ರಮ

ರಾಜಧಾನಿಗೆ ಕೆ. ಸಿ. ರೆಡ್ಡಿಯವರು

ಮೈಸೂರು ೨೫

ಕೇಂದ್ರ ಉತ್ಪನ್ನ ಸರಬರಾಜು ಮಂತ್ರಿ, ಶ್ರೀ ಕೆ. ಸಿ. ರೆಡ್ಡಿಯವರು ನೆನ್ನೆ ರಾತ್ರಿ ೯ ೪೫ ಘಂಟೆಗೆ ರಾಜಧಾನಿಗೆ ಆಗಮಿಸಿದರು ಅವರು ಸರ್ಕಾರಿ ಭವನದಲ್ಲಿ ತಂಗಿರುವರು ಅವರನ್ನು ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾವ್, ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯ, ಪೌರಸಭಾ ಕಮೀಷನರ್ ಜ॥ ಅಬ್ದುಲ್ ರಹೀಂ ಜಿಲ್ಲಾಧಿಕಾರಿಗಳಾದ ಜ॥ ಮಹಮದ್ ಅಹಮದ್, ಮತ್ತು ಇತರ ಅಧಿಕಾರಿ ಮತ್ತು ಖಾಸಗಿ ಜನರು ಸ್ವಾಗತಿಸಿದರು ಪೌರರ ಪರವಾಗಿ ಶ್ರೀ ಕೃಷ್ಣಮೂರ್ತಿರಾಯರು ಮಂತ್ರಿಗಳಿಗೆ ಪುಷ್ಪ ಮಾಲಿಕೆಯನ್ನು ಸಮರ್ಪಿಸಿದರು ಶ್ರೀ ರೆಡ್ಡಿಯವರು ಖಾಸಗಿ ಕೆಲಸಕ್ಕಾಗಿ ಇಲ್ಲಿಗೆ ಆಗಮಿಸಿರುವರು ಅವರು ಈ ದಿನ ಬೆಂಗಳೂರಿಗೆ ತೆರಳಿ ಶ್ರೀ ಕೆ ಹನುಮಂತಯ್ಯನವರೊಡನೆ ಮಾತನಾಡಲಿರುವರು

ಮುಖ್ಯ ಮಂತ್ರಿಯವರ ಆಗಮನ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಾಳೆ ಬೆಳಗ್ಗೆ ಬೆಂಗಳೂರಿನಿಂದ ಹೊರಟು ರಾಜಧಾನಿಗೆ ೪ ಘಂಟೆಗೆ ಆಗಮಿಸುವರು

ಸಂಸ್ಥಾನಕ್ಕೆ ಬೇರೆ ಅಕೌಂಟೆಂಟ್ ಜನರಲ್

ಸಂಸ್ಥಾನದ ಅಕೌಂಟೆಂಟ್ ಜನರಲ್ಲಾಗಿ ನೇಮಕವಾಗಿದ್ದ ಶ್ರೀ ಬಿ ಟಿ ಕೆ ಅಯ್ಯಂಗಾರ್ಯರು ಬರುವುದಿಲ್ಲವೆಂದೂ ಬೊಂಬಾಯಿಯ ಜಿ ಐ ಪಿ ರೈಲ್ವೆಯ ಚೀಫ್ ಆಡಿಟರ್ ಆಗಿರುವ ಶ್ರೀ ಎಸ್ ಎನ್ ಪಟೇಲ್‌ರವರು ಆ ಸ್ಥಾನಕ್ಕೆ ನೇಮಕವಾಗಿರುವರೆಂದೂ ಗೊತ್ತಾಗಿದೆ

ಬ್ಯಾಂಕು ನೌಕರರ ಪ್ರತಿಭಟನಾ ದಿನಾಚರಣೆ

ಬ್ಯಾಂಕು ನೌಕರರು ಬರುವ ತಿಂಗಳು ೧ ನೇ ತಾ॥ ಪ್ರತಿಭಟನಾ ದಿನವನ್ನು ಆಚರಿಸಿ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಿ ಅಖಿಲ ಭಾರತ ಬ್ಯಾಂಕಿಂಗ್ ತನಿಖೆ ಸಮಿತಿಯ ವರದಿಗೆ ವಿರೋಧವನ್ನು ಸೂಚಿಸಬೇಕೆಂದು ನೌಕರರ ಕೇಂದ್ರ ಸಂಘದವರು ಕೋರಿರುತ್ತಾರೆ ತನಿಖೆ ಸಮಿತಿಯ ವರದಿಯಲ್ಲಿ ನೌಕರರು ೩೯ ಗಂಟೆ ಕಾಲ ಕೆಲಸ ಮಾಡಬೇಕೆಂದೂ, ವೈದ್ಯ ಚಿಕಿತ್ಸೆ ಸಹಾಯವನ್ನು ಪಡೆಯಲು ಅನರ್ಹರಾಗಿರುವರೆಂದೂ, ಅವರಿಗೆ ತುಟ್ಟಿ ಭತ್ಯವನ್ನು ಕೊಡಬೇಕಾಗಿಲ್ಲವೆಂದೂ ತಿಳಿಸಲಾಗಿದೆ.

ಅಲಿ ಮಹರ್ ಪಾಷಾ ಹೊಸ ಈಜಿಪ್ಟ್ ಪ್ರಧಾನಿ

ಈಜಿಪ್ಟಿನ ಹಿಲಾಲಿ ಪಾಷಾರವರು ತಮ್ಮ ಪ್ರಧಾನಿ ಪದವಿಗೆ ರಾಜೀನಾಮೆಯಿತ್ತ ಮೇಲೆ ಈಗ ಅಲಿ ಮಹರ್ ಪಾಷಾರವರನ್ನು "ಜರೂರಾತಿ ಪ್ರಧಾನಿ" ಯವರನ್ನಾಗಿ ನೇಮಿಸಲಾಗಿದೆ ಕ್ರಾಂತಿಯ ಮುಖಂಡ ನಗೀಬರು ಪ್ರಧಾನ ಸೈನ್ಯಾಧಿಕಾರಿಗಳಾಗಿರುತ್ತಾರೆ

| ವಂದೇಮಾತರಂ |

★ ಸಾಧ್ವಿ ★

ಹತ್ತನೆಯ ವಾರ್ಷಿಕೋತ್ಸವ

ತಾ। 26-7-1952 ನೇ ಶನಿವಾರ ಸಂಜೆ ೬ ಘಂಟೆಗೆ ಮೈಸೂರ ಚಿ ಸುಬ್ಬಯ್ಯಾ ರಸ್ತೆಯಲ್ಲಿರುವ ಶ್ರೀ ರಾಮ ಪ್ರೆಸ್ಸಿನಲ್ಲಿ "ಸಾಧ್ವಿ" ಪತ್ರಿಕೆಯ ಹತ್ತನೆಯ ವಾರ್ಷಿಕೋತ್ಸವವು ನಡೆಯುವುದು

ಮೈಸೂರು ಸಂಸ್ಥಾನದ

ಮಾನ್ಯ ಮುಖ್ಯ ಮಂತ್ರಿಯವರಾದ

ಶ್ರೀ ಕೆ. ಹನುಮಂತಯ್ಯನವರು

ಅಧ್ಯಕ್ಷತೆ ವಹಿಸುವರು

ಜನರು ಹಾಜರಿದ್ದು ದಯಮಾಡಿಸಬೇಕಾಗಿ

ವಿನಂತಿ

— ಕಾರ್ಯಕ್ರಮ

೧ ಮಂಗಳಾಚರಣೆ- ಕುಮಾರಿ ಅಂಬಾ

೨ ಕಾವ್ಯವಾಚನ

ಗಮಕಿ ಸಂ॥ ಅಶ್ವತ್ಥ ನಾರಾಯಣ

೩ ಸ್ವಾಗತ,

೪ ಅಧ್ಯಕ್ಷರ ಭಾಷಣ

೫ ಗಾನ ಗೋಷ್ಠಿ —

ಆಸ್ಥಾನ ವಿದ್ವಾನ್, ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು,

ವಿದ್ವಾನ್ ವಿ ರಾಮರತ್ನಂರವರ ಗಾನ

ವಿದ್ವಾನ್ ಎಂ ಜೆ ಶ್ರೀನಿವಾಸ ಅಯ್ಯಂಗಾರ್ಯರವರ ವೀಣೆ,

ಡಾ॥ ವಿ ಆರ್ ಕೃಷ್ಣಮಾಚಾರ್‌ರವರ ವೇಣು ವಾದನ,

ವಿದ್ವಾನ್ ವೀರಭದ್ರಯ್ಯನವರ ಮೃದಂಗ

ವಿದ್ವಾನ್ ಮಂಜುನಾಥರವರ ಘಟ

ನಗರಂ ರಂಗಯ್ಯ,

ಸಂಪಾದಕರು

ಗೋಡ್ಸೆ ತಮ್ಮನಿಗೆ ಶಿಕ್ಷೆ ಕಡಿಮೆ

ಮಹಾತ್ಮ ಗಾಂಧಿಯವರ ಕೊಲೆಗಾರ ನಿಗೆ ೧೯೪೮ ಗೋಡ್ಸೆಗೆ ಸಹಾಯಕನಾದುದಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಗೋಪಾಲ ಗೋಡ್ಸೆಗೆ ೮ ವರ್ಷ ೫ ತಿಂಗಳ ಶಿಕ್ಷೆ ಮಾತ್ರವೆ ಎಂದು ಸೂಚಿಸಿದೆ ಮುಂಬಯಿ ಸರಕಾರಕ್ಕೆ ೮ ವರ್ಷ ೪ ತಿಂಗಳ ವಿನಾ ಶಿಕ್ಷೆಯ ರಿಯಾಯಿತಿ ಇರುವುದು ಇವನಿಲ್ಲಿರುವಾಗ ಸರಿಯಾಗಿ ನಡೆದುಕೊಳ್ಳುತ್ತಿರುವರೆಂದೂ ಸೋದರನ ಕೋರಿಕೆ ಮೇರೆ ಅವರನ್ನು ಪಂಜಾಬ್ ನಾಸಿಕದ ಜೈಲಿಗೆ ವರ್ಗಾಯಿಸಲಾಗಿದೆ ಹೀಗಿದೆ ತನ್ನ ಹೆಂಡತಿ ಮಕ್ಕಳುಗಳನ್ನು ನೋಡಲು ಅವಕಾಶವಾಗುವಂತೆ ಅವನ ಕೋರಿಕೆಯ ಮೇರೆಗೆ ಹೀಗೆ ಮಾಡಲಾಗಿಲ್ಲವೆಂದೂ ಗೊತ್ತಾಗಿದೆ

ಹಿಂದೂ ವಿವಾಹ ಪದ್ಧತಿ ಬದಲಾವಣೆ ಮುಸೂದೆ

ಹಿರಿಯ ಶಾಸನಸಭೆಯಲ್ಲಿ ಖಾಸಗೀ ನಿರ್ಣಯಕ್ಕೆ ಅವಕಾಶವಿಲ್ಲ

ಸ್ವಂ ಸು ಪ್ರೋ॥] ಬೆಂಗಳೂರು ೨೫

ಹಿರಿಯ ಶಾಸನ ಸಭೆಯಲ್ಲಿ ಇಂದು ಖಾಸಗಿ ವಿಷಯಗಳನ್ನು ಪರಿಶೀಲನೆಗೆ ತೆಗೆದುಕೊಳ್ಳಲಾಯಿತು ಕೋಲಾರದ ಶ್ರೀ ಡಿ ವೆಂಕಟರಾಮಯ್ಯನವರು ಹಿಂದೂ ಜನರಲ್ಲಿ ವಿವಾಹ ಪದ್ಧತಿಯ ಮಾರ್ಪಾಡಿನ ಬಗ್ಗೆ ಮಸೂದೆಯೊಂದನ್ನು ಮಂಡಿಸಲು ಸಭೆಯ ಅನುಮತಿ ಬೇಡಿದರು ಸಭಾ ನಾಯಕರಾದ ಶ್ರೀ ಟಿ ಸಿದ್ದಲಿಂಗಯ್ಯನವರು ವಿರೋಧಿಸಿ, ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಮಸೂದೆಯು ಬರುವುದೆಂದು ತಿಳಿಸಿದರು ಸಭೆಯು ನಿರ್ಣಯಕ್ಕೆ ಅನುಮತಿ ಕೊಡಲಿಲ್ಲ

ಭಾರತದಲ್ಲಿ ಕಾಶ್ಮೀರದ ಐಕ್ಯ ಸಾಂಗವಾಯಿತು

ಪಾರ್ಲಿಮೆಂಟಿನಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಕಾಶ್ಮೀರ ಮತ್ತು ಭಾರತ ಸರ್ಕಾರಗಳ ಒಪ್ಪಂದದ ಬಗ್ಗೆ ವರದಿ ಮಾಡಿ, ಭಾರತದೊಳಗೆ ಆ ಸಂಸ್ಥಾನದ ಐಕ್ಯವು ಕಾನೂನು ಪ್ರಕಾರವೂ, ವಾಸ್ತವಿಕವಾಗಿಯೂ ಪೂರ್ಣವಾಗಿರುವುದೆಂದೂ, ಆ ಸಂಸ್ಥಾನವು ಇತರ ಪ್ರಾಂತಗಳಂತೆ ಒಂದಾಗಿ, ಅಲ್ಲಿನ ಪ್ರಜೆಗಳು ಭಾರತದ ಪ್ರಜೆಗಳಂತೆಯೇ ಇರುವರೆಂದೂ ಸ್ಪಷ್ಟಪಡಿಸಿರುತ್ತಾರೆ ಇತರ ಬಿ ಸಂಸ್ಥಾನಗಳು ಭಾರತದಲ್ಲಿ ಐಕ್ಯಗೊಂಡ ವಿಧಾನದಂತೆ ಕಾಶ್ಮೀರವೂ ನಡೆದುಕೊಂಡಿರುವುದಾಗಿ ಅವರು ಹೇಳಿರುತ್ತಾರೆ ಒಪ್ಪಂದದ ಅಂಶಗಳನ್ನು ಅವರು ವಿವರಿಸಿ, ಕಾಶ್ಮೀರದ ಅಧಿಪತಿಯನ್ನು ಅಲ್ಲಿನ ಸರ್ಕಾರದವರ ಶಿಫಾರಸಿನ ಮೇರೆ ರಾಷ್ಟ್ರಾಧ್ಯಕ್ಷರೇ ನೇಮಿಸುವರೆಂದು ತಿಳಿಸಿರುತ್ತಾರೆ ಕಾಶ್ಮೀರದ ಯುವರಾಜರು ರಚಿಸಿದ್ದ ಸಲಹಾ ಮಂಡಲಿಯನ್ನು ವಜಾ ಮಾಡಲು ಒಪ್ಪಿಗೆಯಾಗಿರುವುದೆಂದು ಅವರು ಹೇಳಿ, ಅಲ್ಲಿನ ಪ್ರಜೆಗಳು ಇಟ್ಟುಕೊಂಡಿರುವ ಬಾವುಟವು, ಭಾರತ ಧ್ವಜದ ಸಮಾನವಲ್ಲವೆಂದೂ, ರಾಷ್ಟ್ರ ಧ್ವಜಕ್ಕೆ ಇತರ ಕಡೆ ಇರುವ ಗೌರವವು ಅಲ್ಲಿಯೂ ದೊರಕುವುದೆಂದೂ ಅವರು ಹೇಳಿದರು

ಸಂಸ್ಥಾನಕ್ಕೆ ಕಿದ್ವಾಯರ ಭೇಟಿ ಸೆಪ್ಟೆಂಬರಿನಲ್ಲಿ

ಸ್ವಂ ಸು ಪ್ರೋ॥] ಬೆಂಗಳೂರು ೨೫

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಸಂಸ್ಥಾನಕ್ಕೆ ಕೇಂದ್ರ ಆಹಾರ ಮಂತ್ರಿ, ಕಿದ್ವಾಯ್‌ರವರು ಬರುವ ಕಾರ್ಯಕ್ರಮವು ಸೆಪ್ಟಂಬರಿಗೆ ಮುಂದೆ ಹೋಗಿರುವುದೆಂದು ತಿಳಿಸಿ, ಆಗ ಅವರು ೯ ದಿನಗಳ ವರೆಗೆ ಇಲ್ಲಿದ್ದು ಸಮಗ್ರ ಪರಿಸ್ಥಿತಿಯನ್ನರಿತುಕೊಳ್ಳುವರೆಂದೂ ಕಿದ್ವಾಯ್‌ರವರನ್ನು ಭೇಟಿಗಾಗಿ ತಾವು ಮತ್ತು ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರು ನಾಳೆ ವಿಮಾನದಲ್ಲಿ ತಿರುವಾಂಕೂರಿಗೆ ತೆರಳಿ ೨೮ ನೇ ತಾ॥ ವಾಪಸು ಬರುವುದಾಗಿಯೂ ಹೇಳಿದರು

ಹೆಚ್ಚು ವಯಸ್ಸಾದ ೩೦ ಜನ ಅಧಿಕಾರಿಗಳು ನಿವೃತ್ತರಾಗಲಿರುವರೆಂದೂ, ಹೆಚ್ಚು ಕಡಿಮೆ ವಯಸ್ಸು ಕೊಟ್ಟವರ ಬಗ್ಗೆ ತನಿಖೆಯು ಎರಡು ವರ್ಷಗಳಿಂದಲೂ ನಡೆಯುತ್ತಿತ್ತೆಂದೂ ಅವರು ಹೇಳಿದರು ಅಧಿಕಾರಿಗಳ ಹೆಸರುಗಳನ್ನು ಬಹಿರಂಗಪಡಿಸಲು ಅವರು ಇಚ್ಛೆಪಡಲಿಲ್ಲ ಈ ರೀತಿ ನಿವೃತ್ತಿ ಮಾಡುವುದರಿಂದ ಯಾವ ವಿಧವಾದ ಶಿಕ್ಷೆಯನ್ನು ವಿಧಿಸಿದಂತಾಗುವುದೆಂದು ಭಾವಿಸಬಾರದಾಗಿ ಅವರು ಹೇಳಿ, ಈ ವಯಸ್ಸಿನ ಬಗ್ಗೆ ಇಂತಹ ತಪ್ಪು ಹೇಳಿಕೆಗಳು ಬರುವುದು ಸ್ವಾಭಾವಿಕವೆಂದು ಅವರು ಹೇಳಿದರು

ಈ ವರ್ಷ ಡೆಪ್ಯುಟಿ ಮಂತ್ರಿಗಳ ನೇಮಕವಿಲ್ಲ

ಸಂಸ್ಥಾನದ ಹಣಕಾಸಿನ ದೃಷ್ಟಿಯಿಂದ ಉಪ ಮಂತ್ರಿಗಳ ನೇಮಕವು ಈ ವರ್ಷ ಇಲ್ಲವೆಂದೂ, ಮಂತ್ರಿ ಮಂಡಲದ ವಿಸ್ತರಣೆಯೂ ಸಹ ಆಗುವುದಿಲ್ಲವೆಂದೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಶಾಸನ ಸಭೆಯಲ್ಲಿ ತಿಳಿಸಿದರು ನೌಕರರ ಸಂಬಳವನ್ನು ಹೆಚ್ಚಿಸಲು ಸಾಧ್ಯವಿಲ್ಲವೆಂದು ಅವರು ಹೇಳಿದರು

ವಿಶ್ವದ ಹಾಕಿ ಪಂದ್ಯದಲ್ಲಿ ಭಾರತಕ್ಕೆ ಜಯ

ಪ್ರಪಂಚದ ಒಲಂಪಿಕ್ ಕ್ರೀಡಾ ಸ್ಪರ್ಧೆಗಳ ಪೈಕಿ ಒಂದಾದ ಹಾಕಿ ಆಟದಲ್ಲಿ ಭಾರತವು ಛಾಂಪಿಯನ್ ಎಂಬ ಹೆಸರನ್ನು ಈ ಸಾರಿಯೂ ಗಳಿಸಿರುತ್ತದೆ. ಹಾಲೆಂಡ್ ಆಟಗಾರರನ್ನು ಭಾರತದವರು ೬ ೧ ಗೋಲುಗಳಿಂದ ಸೋಲಿಸಿರುವರು ಬಲ ವೀರ ಸಿಂಗ್‌ರವರೊಬ್ಬರೇ ೩ ಗೋಲುಗಳನ್ನು ಹೊಡೆದಿರುತ್ತಾರೆ

ನೇಪಾಳ ಮತ್ತು ಭಾರತದ ಗಡಿ ಬಳಿ ರಕ್ಷಣಾ ವ್ಯವಸ್ಥೆ

ನೇಪಾಳದಲ್ಲಿ ಅಂತರ ವೈಷಮ್ಯವು ಹೆಚ್ಚಿ, ಕಮ್ಯೂನಿಸ್ಟರು ಗಾಬರಿಯನ್ನುಂಟು ಮಾಡುವ ರೀತಿಯಲ್ಲಿ ಆ ದೇಶದೊಳಗೆ ನುಗ್ಗಿ ಬರುತ್ತಿರುವರೆಂದೂ, ಆ ದೇಶದಲ್ಲಿ ಸಧ್ಯದಲ್ಲೇ ಭಾರಿ ಗೊಂದಲವಾಗುವುದೆಂದೂ ನಂಬಲಾಗಿದೆ ಭಾರತ ಮತ್ತು ನೇಪಾಳದ ಗಡಿ ಬಳಿ ಭಾರತ ಸರ್ಕಾರದವರು ರಕ್ಷಣಾ ಕ್ರಮದ ಏಲಗೊಳಿಸಿದ್ದಾರೆ

ಕೇಂದ್ರದಿಂದ ಮೈಸೂರಿಗೆ ೮ ಕೋಟಿ ರೂ. ಮುಂಗಡ

ಭದ್ರಾವತಿ ಕಾರ್ಖಾನೆಗೆ ಕೊಡುವ ಸಹಾಯ ಮತ್ತು ಸಾಲದ ದ್ರವ್ಯವಲ್ಲದೇ ಇನ್ನೂ ೮ ಕೋಟಿ ರೂ ಗಳನ್ನು ಕೇಂದ್ರ ಸರಕಾರದವರು ಸಂಸ್ಥಾನಕ್ಕೆ ಮುಂಗಡವಾಗಿ ಕೊಡಲಿರುವರು ೨೦ ಕೋಟಿ ರೂ ವೆಚ್ಚದ ಲಕ್ಕವಳ್ಳಿ ಅಣೆಕಟ್ಟಿನ ಯೋಜನೆಯನ್ನು ಕೇಂದ್ರ ಸರ್ಕಾರದವರು ನಿರ್ವಹಿಸುವುದಿಲ್ಲವೆಂದು ಗೊತ್ತಾಗಿದೆ

ಪ್ರಭುಗಳೊಡನೆ ಭೇಟಿ

ಆಳುವ ಶ್ರೀಮನ್ ಮಹಾರಾಜರವರು ನಿವೃತ್ತ ಅಸಿಸ್ಟೆಂಟ್ ಕಮೀಷನರ್ ಶ್ರೀ ಆರ್ ತಿರುನಾರಾಯಣೈಯ್ಯಂಗಾರ್ ರವರಿಗೆ ಅರಮನೆಯಲ್ಲಿ ಮೊನ್ನೆ ಭೇಟಿ ದಯ ಪಾಲಿಸಿದರು ಎರಡನೆ ಸರ್ತಿ ವಲ್ಲಿ ಮೇಲುಕೋಟೆಯಲ್ಲಿ ನಡೆದ ಚೆಲ್ವ ದೇವರಾಜ ಬನ್ನಪದ ಸಪ್ತಾಹದ ಪ್ರಸಾದವನ್ನು ಶ್ರೀಯುತರು ಪ್ರಭುಗಳಿಗೆ ಅರ್ಪಿಸಿದರು ಸಪ್ತಾಹವು ಯಶಸ್ವಿಯಾಗಿ ನಡೆದ ವಿಷಯವನ್ನು ಕೇಳಿ ಶ್ರೀವ ಮಹಾರಾಜರು ಬಹಳ ಸಂತೋಷಪಟ್ಟರು ... ಶ್ರೀಮಾನ್ ತಿರುನಾರಾಯಣೈಯ್ಯಂಗಾರ್ಯರಿಗೆ ಒಂದು ಜೊತೆ ... ಬಹುಮಾನವಾಗಿ ಕೊಟ್ಟರು

ಪೌರಸಭೆಗಳಲ್ಲಿ ೭ ವರ್ಷಗಳಿಂದ ಲೆಕ್ಕ ಪರಿಶೀಲನೆ ಇಲ್ಲ

ಸಂಸ್ಥಾನದ ಹಲವು ಪೌರಸಭೆಗಳಲ್ಲಿ ೭ ವರ್ಷಗಳಿಂದ ಲೆಕ್ಕಪತ್ರಗಳ ಪರಿಶೀಲನೆಯು ನಡೆದಿಲ್ಲವೆಂದು ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ತಿಳಿಸುತ್ತಾರೆ ಇದಕ್ಕೆ ಕಾರಣವನ್ನು ತಿಳಿಸಲು ಸಾಧ್ಯವಿಲ್ಲವೆಂದು ಅವರು ಹೇಳಿದರಾಗಿ

ಪ್ರಭಾ 25-7-52 ರಿಂದ ಪ್ರತಿ ನಿತ್ಯ

ಕೈಯಿಂದ ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಗುತ್ತಿರುವ, ಪಾರ್ವತಿ ಕಲಾ ಮಂದಿರದವರ

ಪರ್ ದ್ರಾಯಿ

[ಛಾಯಾ ಚಿತ್ರ]

...

ಪ್ರಕಟಣೆ

ಹೋಂ ವಿದ್ಯುತ್ ಕೇಂದ್ರದಿಂದ ... ಸ್ವಿಚಿಂಗ್ ... ರಿಪೇರಿ ಮಾಡುವ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ... ಭಾನುವಾರ ಬೆಳಿಗ್ಗೆ ... ಗಂಟೆ ವರೆಗೆ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗುವುದೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ

ಕೆ. ವೇದಾಂತಯ್ಯಂಗಾರ್,
ಛೀಫ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ...

ಹೆಚ್ಚು ಸಂಬಳ ಕೊಡದಿದ್ದರೆ ಗಡ್ಡ ಬಿಡುವುದಾಗಿ ಪ್ರತಿಜ್ಞೆ

ಓಟುದಾರರ ಪಟ್ಟಿಯನ್ನು ತಯಾರಿಸುವ ಸಂಬಂಧವಾಗಿ ಅಧಿಕ ... ಪಡೆಯುವ ವರೆಗೆ ಮುಖ ಕ್ಷೌರ ಮಾಡಿಕೊಳ್ಳದೆ ಗಡ್ಡ ಬೆಳೆಸಲು, ... ಪೌರ ಸಭಾ ಕಚೇರಿ ನೌಕರರು ನಿರ್ಧರಿಸುತ್ತಾರೆ

ಹೋಟೇಲು ಕೆಲಸಗಾರರ ಸಂಘ

... ಹೋಟೇಲು ಕೆಲಸಗಾರರ ಸಂಘದ ಸಭೆಯು ಕಳೆದ ಸೋಮವಾರ ನಡೆದು ಶ್ರೀ ... ಎಸ್ ಕೇಶವರಾಯರು ಅಧ್ಯಕ್ಷರಾಗಿಯೂ, ಶ್ರೀ ಎಸ್ ಎಂ ... ರವರು ಉಪಾಧ್ಯಕ್ಷರಾಗಿಯೂ, ಶ್ರೀ ... ನಾರಾಯಣರಾವ್ ಕಾರ್ಯದರ್ಶಿ, ಶ್ರೀ ಎಂ ವೇಣುಗೋಪಾಲಶರ್ಮರವರು ಸಹ ಕಾರ್ಯದರ್ಶಿಯಾಗಿಯೂ, ಶ್ರೀ ಎಸ್ ... ಸ್ವಾಮಿಯವರು ಖಜಾಂಚಿಯಾಗಿಯೂ ಚುನಾಯಿಸಲ್ಪಟ್ಟರು

ವರ್ಣ ಭೇದ ಶಾಸನ ಜಾರಿಗೆ ೪೨೦ ಕೋಟಿ ಪೌಂ॥ ವೆಚ್ಚ!

ದಕ್ಷಿಣ ಆಫ್ರಿಕದಲ್ಲಿ ವರ್ಣ ಭೇದ ಶಾಸನವನ್ನು ಪೂರ್ಣವಾಗಿ ಜಾರಿಗೆ ತರಲು ೪೨೦ ಕೋಟಿ ಪೌಂಡು ... ವೆಚ್ಚವಾಗುವುದೆಂದು ಅಲ್ಲಿನ ಮಾಜಿ ಮಂತ್ರಿಯೊಬ್ಬರು ತಿಳಿಸುತ್ತಾರೆ ಆದುದರಿಂದ ಇಂತಹ ... ಕೇವಲ ... ರುವುದೆಂದು ಅವರು ಅದನ್ನು ... ದಿರುತ್ತಾರೆ ಅಲ್ಲಿ ನಡೆಯುತ್ತಿರುವ ಸತ್ಯಾಗ್ರಹದಲ್ಲಿ ಇದ ವರೆಗೆ ... ಮಂದಿಯು ದಸ್ತಗಿರಿಯಾಗಿವೆ

ಹೊಸ ಅಂಬಾರಿ ಆನೆ

ಐವತ್ತು ಮೊದಲು ರೋಗದಿಂದ ಮೃತಪಟ್ಟುದರಿಂದ ಅದರ ಸ್ಥಾನದಲ್ಲಿ ... ರಂಗನಾಥ ... ಆನೆಯನ್ನು ಅಂಬಾರಿ ಆನೆಯಾಗಿ ... ಲಾಗಿದೆ

ಲಕ್ಷರೂ ಹಗಲು ದರೋಡೆ

ಕಲ್ಕತ್ತೆಯ ... ಪ್ರಸಿದ್ಧ ಬ್ರಿಟಿಷ್ ವ್ಯಾಪಾರಿ ಸಂಸ್ಥೆಯ ಸಹಾಯಕ ಕ್ಯಾಷಿಯರ್ ಮತ್ತು ದಫೇದಾರರನ್ನು ಡಕಾಯಿತರ ಗುಂಪು ಮೊನ್ನೆ ಹಗಲಿನಲ್ಲಿ ... ಅವರ ಬಳಿ ಇದ್ದ ... ಲಕ್ಷ ರೂ ಗಳ ಚೀಲವನ್ನು ದರೋಡೆ ಮಾಡಿಕೊಂಡು ಓಡಿದರೆಂದು ವರದಿಯಾಗಿದೆ ... ಸಂಸ್ಥೆಯ ನೌಕರರು ಬ್ಯಾಂಕಿನಲ್ಲಿ ಹಿಂತಿರುಗುತ್ತಿದ್ದಾಗ ಅವರನ್ನು ತಡೆಯಲಾಯಿತು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ ರೂ ಇಂದ ರೂ ಗೆ

...	[illegible]	[illegible]
...	[illegible]	[illegible]
...	[illegible]	[illegible]
...	[illegible]	
...	[illegible]	[illegible]
...	[illegible]	
...	[illegible]	[illegible]
...	[illegible]	
...	[illegible]	[illegible]
...	[illegible]	[illegible]

... ವಿಶ್ರಾಂತಿ ... ಕಾರ್ಯಕ್ರಮ

... ಬಾಲ ... ಕಾವ್ಯ ... ವಿವಾಹ ಪದ್ಧತಿ — ... ಬಗ್ಗೆ ಕನ್ನಡದಲ್ಲಿ ... ಭಾರತಿ ... ಕಾಲಕ್ಷೇಪ ...

ಹರಿಕಥೆ

ಇದೇ ... ಮಂಡಿ ಮೊಹಲ್ಲಾ ... ಗುಡಿ ಬೀದಿಯಲ್ಲಿರುವ ಶ್ರೀ ... ರಾಮಲಿಂಗೇಶ್ವರ ಸ್ವಾಮಿ ದೇವಾಲಯದಲ್ಲಿ ಈ ಸಂಜೆ ... ಗಂಟೆಗೆ ಬೆಂಗಳೂರಿನ ಶ್ರೀ ಸಿ ... ರಾಮಸ್ವಾಮಿ ... ರವರಿಂದ ಗಜಗೌರಿವ್ರತ ಮತ್ತು ... ಸಂಜೆ ... ಭಕ್ತ ಸುಧನ್ವ ... ಹರಿಕಥೆಗಳು ಜರುಗುವುವು

ಪ್ರಕಟಣೆ

... ವ್ಯವಸಾಯ ... ಬೆಂಗಳೂರು

ಸರ್ಕಾರದ ... ತರಬೇತಿ ... ಪುಸ್ತಕ ... ಶಿಕ್ಷಣ ...

... ವ್ಯವಸಾಯ ವಿಸ್ತರಣೆ ಕಾರ್ಯದ ಸಂಬಂಧವಾಗಿ ... ಶಿಕ್ಷಣ ... ಅರ್ಜಿಗಳನ್ನು ... ವರೆಗೆ ...

... ಬಿ ಟಿ ನಾರಾಯಣನ್,
ವ್ಯವಸಾಯ ಮತ್ತು ... ಡೈರೆಕ್ಟರ್ ...

SRI GAYATHRI
TALKIES
Daily 2 Shows

WEDDING BELL

SREE GANESHA

Golden Salamander

25 7 52 ರಿಂದ ... ಪ್ರಾರಂಭ
... ಚಾಮುಂಡೇಶ್ವರಿ
ಬೆಂಗಳೂರ್ ... ವಿಜಯಾ
ಸಿಟಿ ಟಾಕೀಸ್ - ಸ್ಟ್ಯಾಂಡರ್ಡ್ — ರೂಪವಾಣಿ
... ಮಂದಿರಗಳಲ್ಲಿ
ಪ್ರತಿ ದಿನ ...
ಪ್ರೇಕ್ಷಕರ ... ತೆಲುಗು ಚಿತ್ರ
★ ಚಿನ್ನ ಕೋಡಲು ★
(ಚಿಕ್ಕ ಸೊಸೆ)
... ಕೃಷ್ಣ ಕುಮಾರಿ ...
ಡಾ॥ ... ಜಿ ಎಸ್ ...
RAJSHRI RELEASE

ABSTRACT TENDER NOTIFICATION

R M C 80/52 53

Notice is hereby given that Sealed Tenders will be received by the undersigned at the Office of the Agricultural Produce Market Committee Mysore upto 1 P M on 26th July 1952 for running a high class vegetarian canteen and a beedi & a fruit shop etc in the building situated at the Regulated Market New Santhepet, Mysore The lease runs for a period of three years from the date of giving possession of the Building The tender should be accompanied by an earnest money of Rs 500/- (Five hundred only) in cash. Further particulars and conditions can be had from the undersigned.

MIRZA INAYAT HUSSAIN
Secretary,
Regulated Market Committee

Edited, Printed and Published by A R Nagarajan at Sadhvi Press, ... Mysore.

ಟೆಲಿಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೬ ೭ ೧೯೫೩ [ಸಂಚಿಕೆ ೧

ಕೊರಿಯಾ ಸಂಧಾನ ಸಂಪೂರ್ಣವಾಗಿ ಭಂಗ

ರಾಜಧಾನಿಯಲ್ಲಿ ನೀರಿನ ಸರಬರಾಜಿಗೆ ಅಡಚಣೆ

ಮೈಸೂರು ೨೬

ರಾಜಧಾನಿಯಲ್ಲಿ ವಿದ್ಯುಚ್ಛಕ್ತಿಯನ್ನು ನಾಳೆ ಬೆಳಿಗ್ಗೆ ೭ ರಿಂದ ಸಂಜೆ ೫ ರವರೆಗೆ ನಿಲ್ಲಿಸುವುದರಿಂದ ನಗರದ ಎಲ್ಲ ಭಾಗಗಳಲ್ಲೂ, ಮುಖ್ಯವಾಗಿ ಕೃಷ್ಣಮೂರ್ತಿಪುರಂ, ಕನ್ನೇಗೌಡನಕೊಪ್ಪಲು, ಜಯನಗರ, ಆದಿಕರ್ನಾಟಕ ಪುರ ಮತ್ತು ಒಂಟಿಕೊಪ್ಪಲಿನಲ್ಲೂ ನೀರಿನ ಸರಬರಾಜಿಗೆ ಅಡಚಣೆಯಾಗುವುದರಿಂದ ಸಾರ್ವಜನಿಕರು ಈದಿನವೇ ಅದನ್ನು ಶೇಖರಿಸಿಕೊಳ್ಳಬೇಕೆಂದು ಪೌರಸಭೆಯವರು ತಿಳಿಸಿರುತ್ತಾರೆ

ಭಾರತ ವಾಚನ

ರಾಜಧಾನಿಯ ಬನುಮಯ್ಯ ರಸ್ತೆಯಲ್ಲಿರುವ ಕುಂಚಿಟಿಗರ ಶ್ರೀ ರಾಮ ಮಂದಿರದಲ್ಲಿ ಈ ದಿನ ಶ್ರಾವಣ ಶನಿವಾರದಿಂದ ಮೊದಲ್ಗೊಂಡು ಪ್ರತಿನಿತ್ಯವೂ ಸಂಜೆ ೭ ಘಂಟೆಗೆ ಶ್ರೀ ಬಿ ಎಸ್ ಎಸ್ ಕೌಶಿಕ್‌ರವರಿಂದ ಭಾರತ ವಾಚನವೂ, ಶ್ರೀ ಕೆ ವೆಂಕಟಸುಬ್ಬಯ್ಯನವರಿಂದ ವ್ಯಾಖ್ಯಾನವೂ ಏರ್ಪಾಡಾಗಿದೆ ಸರ್ವರಿಗೂ ಆಹ್ವಾನವಿದೆ ಮಹಿಳೆಯರಿಗೆ ಪ್ರತ್ಯೇಕ ಸ್ಥಳವನ್ನೇರ್ಪಡಿಸಲಾಗಿದೆ

ಪಿಟೀಲು ಕಛೇರಿ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಚಾಮುಂಡಿಪುರದ ಶಾಖೆಯಲ್ಲಿ ನಾಳೆ ಸಂಜೆ ೭ ಘಂಟೆಗೆ ವಿ|| ಎಂ ಪಿ. ರಾಮಯ್ಯನವರಿಂದ ಪಿಟೀಲು ಕಛೇರಿಯನ್ನೂ, ಬ್ರ|| ವಿ|| ಡಿ ಚಂದ್ರಶೇಖರಯ್ಯನವರಿಂದ ತಬಲವನ್ನೂ ಏರ್ಪಡಿಸಲಾಗಿದೆ

ರತ್ನಖಚಿತ ಬುದ್ಧನ ಪ್ರತಿಮೆಗಳು

೬೦ ವರ್ಷಗಳ ಹಿಂದೆ ಬರ್ಮಾ ಥೊರೆ ಥೀಬಾರವರ ಸೋಲಿನ ನಂತರ ಮಧ್ಯ ಬರ್ಮಾ ಅರಮನೆಯಲ್ಲಿ ಬಚ್ಚಿಟ್ಟ ಬುದ್ಧ ದೇವನ ಪಚ್ಚೆ, ವಜ್ರ ಮುಂತಾದ ರತ್ನಖಚಿತವಾದ ೩ ವಿಗ್ರಹಗಳು ಈಗ ಹೊರಕ್ಕೆ ತೆಗೆಯಲ್ಪಟ್ಟಿವೆ ಜನರ ಇಷ್ಟಾರ್ಥವನ್ನು ಅವು ನೆರವೇರಿಸಿಕೊಡುತ್ತಿದ್ದುವೆಂದು ಪ್ರತೀತಿ ಇದೆ

ಸಂಸ್ಥಾನಕ್ಕೆ ೧|| ಕೋಟಿ ರೂ ಗಾಗಿ ಕೇಂದ್ರಕ್ಕೆ ಬೇಡಿಕೆ

ಆಹಾರೋತ್ಪತ್ತಿ ಮತ್ತು ಕೆರೆಗಳ ದುರಸ್ತಿಗಾಗಿ ಕೇಂದ್ರ ಸರ್ಕಾರದವರು ೧|| ಕೋಟಿ ರೂ ಗಳ ಸಹಾಯವನ್ನು ಸಂಸ್ಥಾನಕ್ಕೆ ಒದಗಿಸುವಂತೆ ಕೇಂದ್ರ ಆಹಾರ ಮಂತ್ರಿಯವರನ್ನು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಒತ್ತಾಯಪೂರ್ವಕವಾಗಿ ಕೋರಲಿರುವರೆಂದು ವರದಿಯಾಗಿದೆ

ವಿದ್ಯಾಭ್ಯಾಸ ಇಲಾಖಾ ಕಾರ್ಯದರ್ಶಿ ಹುದ್ದೆ ರದ್ದು

ಸಂಸ್ಥಾನದ ವಿದ್ಯಾ ಇಲಾಖಾ ಕಾರ್ಯದರ್ಶಿ ಶ್ರೀ ಎ ಸಿ. ನಿರ್ವಾಣೇಗೌಡರನ್ನು ಅಬ್ಕಾರಿ ಕಮೀಷನರನ್ನಾಗಿ ನೇಮಿಸಲಾಗಿದೆ ವಿದ್ಯಾ ಕಾರ್ಯದರ್ಶಿಯ ಸ್ಥಾನವನ್ನು ರದ್ದುಮಾಡಿ ಆ ಖಾತೆಯನ್ನು ಬೇರೆಯವರಿಗೆ ವಹಿಸಲಾಗುವುದು ಇಲಾಖಾ ಕಾರ್ಯದರ್ಶಿಗಳ ಸಂಖ್ಯೆಯನ್ನು ೫ ಕ್ಕಿಂತ ಕಡಿಮೆ ಇಳಿಸಲಾಗುವುದು

ಹಿರಿಯ ಶಾಸನ ಸಭೆಯಿಂದ ಸೆನೆಟ್ಟಿಗೆ ಚುನಾವಣೆ

ಸ್ವಂತ ವರದಿ] ಬೆಂಗಳೂರು ೨೬

ಶ್ರೀ ಗಳಾದ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಎಸ್ ಆರ್ ಗುರುಸಿದ್ದಪ್ಪ ಧರ್ಮಪ್ಪನವರು ಹಿರಿಯ ಶಾಸನ ಸಭೆಯಿಂದ ಸೆನೆಟ್ಟಿಗೆ ಸದಸ್ಯರಾಗಿ ಚುನಾಯಿತರಾಗಿದ್ದಾರೆ

ಪಕ್ಕ ಬುಧ್ಯಶಾ ಸಮಿತಿಗೆ ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ ಟಿ ಎಸ್ ರಾಜಗೋಪಾಲಯ್ಯಂಗಾರ್, ಗಾಂಜಿ ವೀರಪ್ಪ ಮತ್ತು ಡಿ ವೆಂಕಟರಾಮಯ್ಯನವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ ಶ್ರೀ ಎನ್ ಪಿ ಗೋವಿಂದಗೌಡರನ್ನು ಅಧ್ಯಕ್ಷರು ನಾಮಕರಣ ಮಾಡಿರುತ್ತಾರೆ ಶ್ರೀ ಪಿ ಸೀತಾರಾಮಯ್ಯನವರು ಸಮಿತಿಯ ಅಧ್ಯಕ್ಷರು

ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯು ರದ್ದಿಲ್ಲ

ಭಾರತದ ಆಡಳಿತ ಸರ್ವೀಸ್ಸು ಏರ್ಪಟ್ಟ ನಂತರವೂ ಸಹ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯು ಮುಂದುವರಿಯುವುದೆಂದೂ ಅದನ್ನು ರದ್ದುಗೊಳಿಸಲಾಗುವುದಿಲ್ಲವೆಂದೂ ಶಾಸನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿಗಳು ತಿಳಿಸಿದರು

— ಸೂಚನೆ —

ಗರುಡ ಪಂಚಮಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಜಪಾನಿಗೆ ಸಂಸ್ಥಾನದ ವಾಣಿಜ್ಯ ಪ್ರಮುಖರ ಭೇಟಿ

ಮೈಸೂರಿನ ವಾಣಿಜ್ಯ ಸಂಘದ ಪರವಾಗಿ ಮಾಜಿ ಅಧ್ಯಕ್ಷರಾದ ಜಿ ಎ. ಆಚಾರ್ಯ, ಮೈಸೂರು ಬ್ಯಾಂಕಿನ ಡೈರೆಕ್ಟರ್ ಶ್ರೀ ಬಿ. ಎನ್ ಗುಪ್ತ, ರಾಜಾ ಮಿಲ್ಸ್ ಕಂಪೆನಿ ಮಾಲೀಕರಾದ ಶ್ರೀ ವಿ ಆರ್ ಸುಬ್ರಹ್ಮಣ್ಯಂ, ಶಂಕರ ಟೆಕ್ಸ್‌ಟೈಲ್ಸಿನ ಶ್ರೀ ಚಿಗಟೇರಿ ಮುರಿಗಪ್ಪನವರು ಬರುವ ೧ ನೇ ತಾ|| ಬೆಂಗಳೂರಿನಿಂದ ಹೊರಟು ಜಪಾನಿಗೆ ನಿಯೋಗ ಹೋಗಲಿರುವರು

ಕೆ. ಹನುಮಂತಯ್ಯನವರು

ಇಂದು "ಸಾಧ್ವಿ" ಪತ್ರಿಕೆಯ ಪತ್ರಿಕೆಯ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸುವರು

ಟೆಹರಾನಿನಲ್ಲಿ ಅಮೆರಿಕಾ ವಿರುದ್ಧವಾಗಿ ಗಲಭೆ

ಅಮೆರಿಕನ್ನರ ವಿರುದ್ಧವಾಗಿ ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿ ದೊಂಬಿಗಳಾಗುತ್ತಿರುವುವೆಂದೂ ಅಮೆರಿಕದ ವಿದೇಶಾಂಗ ಇಲಾಖೆಗೆ ವರದಿಗಳು ಬಂದಿರುತ್ತವೆ ಗಲಭೆಗಳು ಮಾಜಿ ಪ್ರಧಾನಿ ಘವಾಂರವರ ವಿರುದ್ಧವಾಗಿ ನಡೆಯುತ್ತಿದ್ದರೂ ಸಹ, ಅಮೆರಿಕದ ಮಿಲಿಟರಿ ಅಧಿಕಾರಿಗಳನ್ನು ಹೊಡೆಯಲಾಗಿದೆಯೆಂದು ಗೊತ್ತಾಗಿದೆ ವಿಶ್ವ ನ್ಯಾಯಾಲಯದಲ್ಲಿ ಪರ್ಷಿಯಾ ಎಣ್ಣೆ ವಿವಾದದ ತೀರ್ಪು ಕೊಟ್ಟಾಗ ಅಮೆರಿಕದ ನ್ಯಾಯಾಧೀಶರು ಪರ್ಷಿಯದ ಹಕ್ಕಿಗೆ ವಿರೋಧವಾಗಿ ವರ್ತಿಸಿರುವುದು ಪರ್ಷಿಯಾ ಪ್ರಜೆಗಳನ್ನು ರೊಚ್ಚಿಗೆಬ್ಬಿಸಿರುವುದೆಂದು ಹೇಳಲಾಗಿದೆ

ಸೂಪರಿಂಟೆಂಡಿಂಗ್ ಇಂಜನೀಯರುಗಳ ಸಂಖ್ಯೆ ಕಡಿಮೆ

ಸಂಸ್ಥಾನದ ಸೂಪರಿಂಟೆಂಡಿಂಗ್ ಇಂಜನಿಯರುಗಳ ಸಂಖ್ಯೆಯನ್ನು ಇಳಿಸಿ, ಎಕ್ಸಿಕ್ಯೂಟಿವ್ ಇಂಜನಿಯರರಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದೂ, ಮರಾಮತ್ತು ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಿ, ರಿಡ್ ಟೇಪಿಸಂ ಅನ್ನು ಹೋಗಲಾಡಿಸಲಾಗುವುದೆಂದೂ ತಿಳಿದುಬಂದಿದೆ

ಧೂಮಪಾನಕ್ಕೆ ಪ್ರತಿಬಂಧಕ

ಹಿರಿಯ ಶಾಸನಸಭೆಯಲ್ಲಿ ಮಸೂದೆ

ಸ್ವಂತ ವರದಿ] ಬೆಂಗಳೂರು ೨೬

ನಾಟಕ ಮಂದಿರ, ಸಿನಿಮಾ ಮತ್ತು ಸಭೆಗಳಲ್ಲಿ ಧೂಮ ಪಾನವನ್ನು ನಿಷೇಧಿಸಲು ಸರ್ಕಾರದವರು ತಂದಿದ್ದ ಮಸೂದೆ, ತಪ್ಪು ಮಾಡುವ ಸ್ವಭಾವದವರಿಗೆ ಶಿಕ್ಷೆ ವಿಧಿಸುವ ಮಸೂದೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರವೇಶದ ಮಸೂದೆ, ಮೃದಾಯುಧ ಮಸೂದೆಗಳಿಗೆ ತಿದ್ದುಪಡಿ ಮತ್ತು ಔಷಧಿಗಳ ಹಕೋಟ ತಿದ್ದುಪಡಿ ಮಸೂದೆ- ಇವುಗಳು ಈ ದಿನ ಹಿರಿಯ ಶಾಸನ ಸಭೆಯಲ್ಲಿ ಅಂಗೀಕರಿಸಲ್ಪಟ್ಟವು ಧೂಮಪಾನವನ್ನು ಪ್ರತಿಬಂಧಿಸುವ ಪ್ರಯುಕ್ತಕ್ಕಾಗಿ ನಾಟಕ ರತ್ನ ಗುಬ್ಬಿ ವೀರಣ್ಣನವರೂ ಸಂಗೀತ ರತ್ನ ಚೌಡಯ್ಯನವರೂ ಸರ್ಕಾರದವರನ್ನು ಅಭಿನಂದಿಸಿದರು

ಧೂಮಪಾನ ಮಾಡುವವರಿಗಾಗಿ ಪ್ರತ್ಯೇಕವಾದ ಕೊಠಡಿಗಳನ್ನು ಸಿನಿಮಾ ಮಂದಿರಗಳವರು ಏರ್ಪಡಿಸುವಂತೆ ವಿಧಾಯಕ ಮಾಡಲಾಗುವುದೆಂದು ಗೃಹ ಸಚಿವರು ತಿಳಿಸಿದರು

ರೀಗೋರವರು ಚಿನ್ನದ ಗಣಿಯಲ್ಲಿ ಸರ್ಕಾರಿ ಡೈರೆಕ್ಟರ್

ಸರ್ಕಾರದ ಅಭಿವೃದ್ಧಿ ಶಾಖಾ ಕಾರ್ಯದರ್ಶಿ ಶ್ರೀ ಆರ್ ಜೆ ರೀಗೋರವರನ್ನು ಹಂಗಾಮಿಯಾಗಿ ಕೋಲಾರದ ಚಿನ್ನದ ಗಣಿಗಳಿಗೆ ಸರ್ಕಾರಿ ಡೈರೆಕ್ಟರಾಗಿ ನೇಮಿಸಲಾಗಿದೆ

ಅಭಾವ ಪ್ರದೇಶಗಳಿಗೆ ಪುನಃ ೬।।। ಲಕ್ಷ ರೂ.

ಕ್ಷಾಮ ನಿವಾರಣೆ ತಕಾವಿ ಸಾಲ ಮತ್ತು ಜಮೀನು ಅಭಿವೃದ್ಧಿಗಾಗಿ ೭ ಲಕ್ಷ ೬೦ ಸಾವಿರ ರೂಗಳನ್ನು ಹೆಚ್ಚಾಗಿ ಕೊಟ್ಟಿರುವುದಾಗಿ ಮುಖ್ಯಮಂತ್ರಿ ಹನುಮಂತಯ್ಯನವರು ತಿಳಿಸಿರುತ್ತಾರೆ ಆ ಹಣವನ್ನು ಈರೀತಿ ಉಪಯೋಗಿಸಲಾಗುವುದು -ಹುಬ್ಬಳ್ಳಿಕೊಳ್ಳಲು ೧೩ ಲಕ್ಷರೂ, ಕೋಲಾರ ಜಿಲ್ಲೆ ೮೪ ಲಕ್ಷ, ಬೆಂಗಳೂರು ಜಿಲ್ಲೆ ೧೫ ಸಾವಿರ, ಹಾಸನ ೨೦ ಸಾವಿರ, ಮೈಸೂರು ಜಿಲ್ಲೆ ೬೦ ಸಾವಿರ, ತುಮಕೂರು ೧ ಲಕ್ಷ, ಚಿತ್ರದುರ್ಗ ೭೫ ಸಾವಿರ, ಶಿವಮೊಗ್ಗ ೧೦ ಸಾವಿರ, ಚಿಕ್ಕಮಗಳೂರು ೧೦ ಸಾವಿರ ಚಿತ್ರದುರ್ಗ ಜಿಲ್ಲೆಗೆ ತಕಾವಿ ಸಾಲಕ್ಕಾಗಿಯೇ ೫೦ ಸಾವಿರ ಈ ಒಟ್ಟು ಮೊತ್ತವು ೯೧೨ ಲಕ್ಷವಾಗುವುದೆಂದೂ, ಸರ್ಕಾರದವರು ಒದಗಿಸಿರುವ ಹಣದ ಮೊತ್ತಕ್ಕೆ ರೆವಿನ್ಯೂ ಕಮಿಷನರ ಬಳಿ ಇರುವ ೧೬೨ ಲಕ್ಷ ರೂ ಅನ್ನು ಸೇರಿಸಲಾಗುವುದೆಂದೂ ಗೊತ್ತಾಗುತ್ತದೆ

ಕೊರಿಯಾ ರಹಸ್ಯ ಸಂಧಾನದ ಭಂಗ

ಮೂರು ವಾರಗಳಿಂದ ಕಮ್ಯೂನಿಸ್ಟರಿಗೂ ವಿಶ್ವಸಂಸ್ಥೆಯ ಪ್ರತಿನಿಧಿಗಳಿಗೂ ರಹಸ್ಯವಾಗಿ ನಡೆಯುತ್ತಿದ್ದ ಸಂಧಾನವು ಪೂರ್ಣವಾಗಿ ಭಂಗವಾಗಿರುವುದೆಂದೂ ಮುಂದೆ ಒಪ್ಪಂದವಾಗುವ ಬಗ್ಗೆ ಆಶೆ ಇರುವುದಿಲ್ಲವೆಂದೂ ವಿಶ್ವ ಸಂಸ್ಥೆಯ ಪ್ರಧಾನ ಪ್ರತಿನಿಧಿಯು ತಿಳಿಸಿರುತ್ತಾರೆ ೧೦ ತಿರುವಳ್ಳೇಲಿ ಬಳಿ ನೆಟ್ಟಿ ಕೈಲು ನಿಲ್ದಾಣದ ಬೋರ್ಡಿನ ಮೇಲೆ ಬರೆಯಲಾಗಿದ್ದ ಹಿಂದಿ ಹೆಸರನ್ನು ಅಳಿಸಿದುದಕ್ಕಾಗಿ ಮೂರು ಜನರಿಗೆ ೧೫ ರೂ ದಂಡ ಅಥವಾ ೩ ವಾರಗಳ ಶಿಕ್ಷೆ ವಿಧಿಸಲಾಗಿದೆ

★ ಸಾಧ್ವಿ ★
ತಾ|| 26—7—52 ಶನಿವಾರ

ನಮ್ಮ ವಿನಂತಿ

ಇಂದ್ಯ ದಿನ ಪತ್ರಿಕೆಯು ಜನ್ಮ ತಾಳಿ, ವರ್ಷಗಳಾದುವು. ಹನ್ನೊಂದನೆ ವರ್ಷದಲ್ಲಿ ಅದು ಈಗ ಕಾಲಿಡುತ್ತಿದೆ. ಇಪ್ಪತ್ತೈದು ವರ್ಷಗಳ ಹಿಂದೆ ಅದು ಪತ್ರಿಕೆಯಾಗಿ ಆರಂಭವಾಯಿತು ...ನೇ ಇಸವಿಯಿಂದ ದಿನ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ. ಈ ಕಾರ್ಯದಲ್ಲಿ ನಮಗೆ ನೆರವು ನೀಡಿರುವ ವಾಚಕರು, ಚಂದಾದಾರರು, ಜಾಹೀರಾತುದಾರರು ಮತ್ತು ಇತರ ಹಿತೈಷಿಗಳ ಸಹಕಾರಕ್ಕೆ ಕೃತಜ್ಞತೆಯ ದರ್ಶಿಸುವುದು ನಮ್ಮ ಇಂದಿನ ಪ್ರಥಮ ಕರ್ತವ್ಯ. ಮೈಸೂರಿನ ವೃದ್ಧ ಪಿತಾಮಹರೆಂದು ಪ್ರಸಿದ್ಧರಾದ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರು ಸುಮಾರು ಅರ್ಧ ಶತಮಾನದ ಕಾಲಕ್ಕೆ ಮುಂಚೆಯೇ ನಾಡಿನ ಜನ ಜಾಗೃತಿಗಾಗಿ ಸ್ಥಾಪಿಸಿದ ಹಲವಾರು ಪತ್ರಿಕೆಗಳ ಪೈಕಿ ಸಾಧ್ವಿಯೂ ಒಂದು. ದೇಶದ ಅಭಿವೃದ್ಧಿಗೂ ಸಮಾಜದ ಪ್ರಗತಿಗೂ ಉನ್ನತ ವರ್ಗದ ಪತ್ರಿಕೆಗಳ ಪ್ರಸಾರವು ಅತ್ಯಗತ್ಯವೆಂದು ಅವರು ಆಗಲೇ ಮನಗಂಡಿದ್ದರು. ಸತ್ಯ, ಧರ್ಮ, ದೇಶಾಭಿಮಾನ ಮತ್ತು ಪರೋಪಕಾರಗಳ ಆದರ್ಶದಿಂದ ಅವರು ಯಾವ ಕಷ್ಟ ನಷ್ಟಗಳಿಗೂ ಹಿಂಜರಿಯದೆ ದಿಟ್ಟತನದಿಂದ ತಮ್ಮ ಪತ್ರಿಕಾ ವೃತ್ತಿಯನ್ನು ನಡೆಸುತ್ತಿದ್ದರು. ಅವರಲ್ಲಿ ಕೆಲವು ಕಾಲ ಶಿಷ್ಯ ವೃತ್ತಿಯನ್ನು ಅವಲಂಬಿಸುವ ಸದವಕಾಶವು ನಮಗೆ ದೊರೆತಿದ್ದುದರ ಕೃತಜ್ಞತೆಗಾಗಿ ನಾವು ಅವರಿಂದಲೇ ಸ್ಥಾಪಿಸಲ್ಪಟ್ಟ ಈ ಪತ್ರಿಕೆಯನ್ನು ಅವರ ಸವಿ ನೆನಪಿನ ಅಲ್ಪ ಗುರುಹಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಆ ಮಹನೀಯರು ನಾಡಿನ ಸರ್ವತೋಮುಖವಾದ ಅಭ್ಯುದಯಕ್ಕಾಗಿ ಮಾಡಿದ ಅನೇಕ ಮಹತ್ಕಾರ್ಯಗಳಲ್ಲಿ ಒಂದಾದ ಈ ಪತ್ರಿಕೋದ್ಯಮದ ಉದಾತ್ತ ಧ್ಯೇಯಗಳನ್ನು ಯಥಾಶಕ್ತಿ ಪಾಲಿಸಿಕೊಂಡು ಬರಲು ನಾವು ಸರ್ವದಾ ಪ್ರಯತ್ನಿಸುತ್ತಿದ್ದೇವೆ. ಈ ಕಾರ್ಯದಲ್ಲಿ ನಮಗೆ ಭಗವಂತನ ಪೂರ್ಣಾನುಗ್ರಹವೂ, ಮಹಾಜನರ ಉದಾರ ಸಹಕಾರವೂ ದೊರೆಯಲೆಂದು ಬೇಡುತ್ತೇವೆ.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ವಿದ್ಯಮಾನಗಳು ಮಿಂಚಿನ ವೇಗದಿಂದ ಮುಂದೆ ಸಾಗುತ್ತಿವೆ. ವಿಜ್ಞಾನ ಸಂಶೋಧನೆಯಲ್ಲಿಯೂ ಕೈಗಾರಿಕೋದ್ಯಮಗಳಲ್ಲಿಯೂ ಅತ್ಯಂತ ಹೊಸ ಹೊಸದಾದ ಪ್ರಗತಿಯು ಸಾಧಿಸಲ್ಪಡುತ್ತಿದೆ. ಮಾನವನ ಜೀವನವನ್ನು ಸುಖಮಯವಾಗಿ ಮಾಡತಕ್ಕ ... ಗಳು ಸಿಗುತ್ತಿವೆ. ಆದರೂ ವಿಶ್ವದ ಅನೇಕ ಕಡೆಗಳಲ್ಲಿ ಅಶಾಂತಿ, ಅಸಮಾಧಾನ, ಭಯ ಮತ್ತು ಅಭಾವಗಳು ತಾಂಡವವಾಡುತ್ತಿವೆ. ಪರಸ್ಪರ ತಿಳುವಳಿಕೆಯೂ ಸೋದರ ಭಾವವೂ ಪ್ರೀತಿ ವಿಶ್ವಾಸಗಳೂ ಇಲ್ಲದೆ ದುರಾಕಾಪೂರಿತವಾದ ಸಾಮ್ರಾಜ್ಯ ದಾಹ, ಮಿತಿಮೀರಿದ ಧನಾಕಾಂಕ್ಷೆ, ಅಪರಿಮಿತ ಅಧಿಕಾರಲಾಲಸೆ ಇವುಗಳೇ ಈ ಕೃತಕವಾದ ಕ್ಲಿಷ್ಟ ಪರಿಸ್ಥಿತಿಗೆ ಕಾರಣ. ಲೋಕ ದೇಶಗಳಿಗೂ, ಜನಾಂಗ ಜನಾಂಗಗಳಿಗೂ, ವಿವಿಧ ಪಂಗಡಗಳಿಗೂ ನಿಜವಾದ ಮತ್ತು ಪರಿಶುದ್ಧವಾದ ಅಂತಃಕರಣವನ್ನು ಬೆಳೆಸಿ ಮೈತ್ರೀ ಭಾವವನ್ನು ಪ್ರಚೋದಿಸುವುದೇ ಈಗ ಜಗತ್ತಿನ ಮಹಾ ನಾಯಕರುಗಳ ಮುಂದಿರುವ ಮುಖ್ಯವಾದ ಕಾರ್ಯ. ಈ ಕಾರ್ಯ ಸಾಧನೆಯಲ್ಲಿ ಪತ್ರಿಕಾ ವೃತ್ತಿಯು ವಹಿಸಬೇಕಾದ ಪಾತ್ರವು ಅಮೂಲ್ಯವಾದುದು.

ಪತ್ರಿಕೋದ್ಯಮವನ್ನು ರಾಷ್ಟ್ರದ ಚತುರ್ಥಾಂಗವೆಂದು ನಾಗರಿಕ ರಾಷ್ಟ್ರಗಳೆಲ್ಲವೂ ಅಂಗೀಕರಿಸಿವೆ. ಪ್ರಭು, ಪ್ರಭುತ್ವ, ಮತ್ತು ಶಾಸನಾಂಗಗಳಿಗೆ ಸರಿಸಮಾನವಾದ ಸ್ಥಾನಮಾನಗಳನ್ನು ಈ ಪವಿತ್ರವಾದ ವೃತ್ತಿಗೂ ಸ್ವತಂತ್ರ ರಾಜ್ಯಗಳು ಕಲ್ಪಿಸಿಕೊಟ್ಟಿವೆ. ಅದರ ಘನತೆ ಗೌರವ, ಸ್ಥಾನಮಾನಗಳನ್ನು ಕಾಪಾಡಲು ಸದಾ ಸಿದ್ಧವಾಗಿವೆ. ನಮ್ಮ ದೇಶದಲ್ಲಿಯೂ ಸಹ ಸ್ವಾತಂತ್ರ್ಯ ಸಾಧನೆಯ ನಂತರ ಪತ್ರಿಕೋದ್ಯಮವು ಬಹಳವಾಗಿ ಅಭಿವೃದ್ಧಿ ಹೊಂದಿ ದಿನ ದಿನವೂ ಪ್ರವರ್ಧಮಾನವನ್ನು ಹೊಂದುತ್ತಿದೆ. ಈ ಪವಿತ್ರ ವೃತ್ತಿಯಲ್ಲಿ ತೊಡಗಿರುವ ಸಕಲ ಬಾಂಧವರಿಗೂ ನಮ್ಮ ಹೃತ್ಪೂರ್ವಕವಾದ ಶುಭಾಶಯವನ್ನು ಕೋರಿ ಜಗದೀಶ್ವರನು ಸಕಲರಿಗೂ ಸನ್ಮಂಗಳಗಳನ್ನು ಕರುಣಿಸಲೆಂದು ಅನನ್ಯ ಭಕ್ತಿಯಿಂದ ಬೇಡುತ್ತೇವೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಮಿಶ್ರ ಮಾಧುರ್ಯ, ಮಧ್ಯಾಹ್ನ ೧-೪೦ ಜಲತರಂಗ, ೧-೫೦ ನಾವು ಮತ್ತು ನಮ್ಮವರು, ೨ ಚಿಣ್ಣರ ಪುಟ್ಟ ಗೀತೆಗಳು, ಸಂಜೆ ೫-೪೦ ಮತ್ತು ೬-೩೦ ಲೀಲಾವತಿ ಕೃಷ್ಣಸ್ವಾಮಿ ಸಂಗೀತ, ೬-೧೦ ಆರ್ಕೆಸ್ಟ್ರಾ, ೭ ಚಿತ್ರ ಸಂಗೀತ, ೮ ಎನ್. ಶ್ರೀನಿವಾಸನ್ ನಾಗಸ್ವರ, ೯-೧೫ ಬಸವರಾಜ ಗುರು ರೆಕಾರ್ಡು, ೯-೪೦ "ಚಿತ್ರಲೇಖಾ" ನಾಟಕ

28—7—52

ಬೆಳಿಗ್ಗೆ ೯-೦ ಜಿ. ಎನ್. ಬಾಲಸುಬ್ರಹ್ಮಣ್ಯಂರವರ ರೆಕಾರ್ಡು ಸಂಗೀತ, ಮಧ್ಯಾಹ್ನ ೧-೪೦ ನಾಗಸ್ವರ, ೧-೫೦ ಸಂಗೀತ, ೨ ಚಿತ್ರ ಸಂಗೀತ, ಸಂಜೆ ೫-೪೦ ಮತ್ತು ೮ ಬಿ. ಎನ್. ಕೃಷ್ಣಮೂರ್ತಿರಾವ್ ಪಿಟೀಲು, ೬ ಲತಾ ಮಂಗೇಶ್ಕರ್ ರೆಕಾರ್ಡು ಸಂಗೀತ, ೬-೧೦ ಗಾನ ವಿಹಾರ, ೭ ಎಸ್. ಟಿ. ಬಿಂದೂರಾವ್ ಭಾರತ ವಾಚನ, ೭-೩೦ ಜನರಂಜನಿ, ೮-೪೦ ಮತ್ತು ೯-೪೦ ಟಿ. ಚೆನ್ನಮ್ಮ ಸಂಗೀತ

ಕಾಂಗ್ರೆಸ್ಸಿನಿಂದ ನೇಪಾಳ ಪ್ರಧಾನಿಯ ಉಚ್ಛಾಟನೆ

ನೇಪಾಳದ ಪ್ರಧಾನ ಮಂತ್ರಿ ಎಂ. ಪಿ. ಕೊಯಿರಾಲಾ ಮತ್ತು ಇತರ ಮಂತ್ರಿಗಳು ರಾಜೀನಾಮೆ ಕೊಡದಿದ್ದರೆ ಅವರನ್ನು ಮೂರು ವರ್ಷಗಳ ಕಾಲ ಅಲ್ಲಿನ ಕಾಂಗ್ರೆಸ್ಸಿನಿಂದ ಹೊರದೂಡಲು ಆ ಸಂಸ್ಥೆಯ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ.

ಉಪಾಕರ್ಮ

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಮತತ್ರಯ ಬ್ರಾಹ್ಮಣರಿಗೆ ಋಗ್ಯಜುಸ್ಸಾಮೋಪಾಕರ್ಮಗಳನ್ನು ಈ ರೀತಿಯಾಗಿ ಏರ್ಪಡಿಸಲಾಗಿದೆ:—

ಋಗುಪಾಕರ್ಮ-ನಾಳೆ ೨೭ ನೇ ತಾ|| ಬೆಳಿಗ್ಗೆ ೮|| ... ಸೌರ ಋಗುಪಾಕರ್ಮ ತಾ|| ೨-೯-೫೨ ರ ಪ್ರಾತಃಕಾಲ ೮|| ಘಂಟೆಗೆ.

ಯಜುರುಪಾಕರ್ಮ-ಬೆಳಿಗ್ಗೆ ೮|| ... ಶುಕ್ಲ ಯಜುರ್ವೇದಿಗಳಿಗೆ, ೫-೮-೫೨ ತಾ|| ಬೆಳಿಗ್ಗೆ ೧೦ ಘಂಟೆಗೆ ಕೃಷ್ಣಯಜುರ್ವೇದದ ಶ್ರೀ ವೈಷ್ಣವರಿಗೆ, ೬-೯-೫೨ ನೇ ತಾ|| ಬೆಳಿಗ್ಗೆ ೮|| ಘಂಟೆಗೆ ಕೃಷ್ಣ ಯಜುರ್ವೇದ ಸ್ಮಾರ್ತರಿಗೆ

ಸಾಮುಗೋಪಾಕರ್ಮ- ೨೪-೮-೫೨ ತಾ|| ಭಾನುವಾರ ಬೆಳಿಗ್ಗೆ ೮|| ಘಂಟೆಗೆ.

ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಶೃಂಗೇರಿ ಬ್ರಂ|| ಶ್ರೀ|| ನೇಂದೀರೀಮಕೃಷ್ಣಭಟ್ಟರವರಿಂದ ಋಗ್ವೇದ ಉಪಾಕರ್ಮವು ನಾಳೆ ಬೆಳಿಗ್ಗೆ ೮ ಗಂಟೆಗೆ ನಡೆಯುವುದು

ಎಲ್ಲಾ ಬಗೆಯ
ಹೋಮಿಯೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ಸುಲಾಲ್ & ಕೋ
ಔಷಧಿ ವ್ಯಾಪಾರಿಗಳು,
7 ಸಯ್ಯಾಜಿರಾವ್ ರೋಡ್,
ಮೈಸೂರು

★ ಕಂದ ★
ಮಕ್ಕಳ ಪ್ರಾಸಾದ ಮಾಸಪತ್ರಿಕೆ.
ಈಗ ಕಂದನ ನಾಲ್ಕನೇ ಸಂಪುಟ
ಬಣ್ಣ ಬಣ್ಣಗಳಲ್ಲಿ ಹೊರಬೀಳಲಿದೆ
ಏಜೆಂಟರುಗಳಿಗೆ ಧಾರಾಳವಾದ
ಕಮೀಷನ್
ಹೆಚ್ಚಿನ ವಿವರಗಳಿಗೆ:
ಕಾರ್ಯದರ್ಶಿ ಶಿಶು ಸಾಹಿತ್ಯ ಸಂಘ,
ಜಯನಗರ ಮೈಸೂರು
ಇವರಿಗೆ ಬರೆಯಿರಿ

ಬೆಂಗಳೂರು
ಕಲಾ ಮಂದಿರದ
ಸಹಾಯಾರ್ಥವಾಗಿ
ರಂಗಾಚಾರ್ಲು ಮೆಮೋರಿಯಲ್
ಹಾಲಿನಲ್ಲಿ
2-8-52 ನೇ ಶನಿವಾರ ಸಂಜೆ
ಕವಿ ಪುಂಗವ
ಶ್ರೀ ರಾತ್ರಿ ಮತ್ತು
ನಾಟಕಗಳು
ನೃತ್ಯ ಮತ್ತು ವಿನೋದಗಳು
3-8-52 ನೇ ಭಾನುವಾರ ಸಂಜೆ
ಕವಿ ಪುಂಗವ ಮತ್ತು
ಕಲ್ಕುಂಟಿ ಕಮಂಗಿ
ನಾಟಕಗಳು ಮತ್ತು
ಸಂಗೀತ ವಿದುಷಿ ಶ್ರೀಮತಿ
ಜಿ. ಚನ್ನಮ್ಮನವರ ಸಂಗೀತ
ನೃತ್ಯ ಮತ್ತು ವಿನೋದಗಳೂ ಉಂಟು
ಕಲೆಗಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ
ಸಹಾಯ ಮಾಡಿ

25-7-52 ರಿಂದ ಅಪೋಷ ಪ್ರಾರಂಭ
ಮೈಸೂರು ಚಾಮುಂಡೇಶ್ವರಿ
ಬೆಂಗಳೂರು ಸಿಟಿ ಸಿವಿಲ್ ಏರಿಯಾ
ಸಿಟಿ ಟಾಕೀಸ್ - ಸ್ವಸ್ತಿಕ್ — ರೂಪಮಹಲ್
ಚಿತ್ರ ಮಂದಿರಗಳಲ್ಲಿ
ಪ್ರತಿ ದಿನ 3 ಆಟಗಳು
ಪ್ರತಿಭಾವರ ಅತ್ಯುತ್ತಮ ಅಪೋಷ ಸಾಮಾಜಿಕ ತೆಲುಗು ಚಿತ್ರ
★ ಚಿನ್ನ ಕೋಡಲು ★
(ಚಿಕ್ಕ ಸೊಸೆ)
ಪಾತ್ರ - ಕುಮಾರಿ, ಕೃಷ್ಣ ಕುಮಾರಿ, ಶೀಶಿವರಾಂಬ,
ಡಾ|| ಸುಬ್ಬರಾವ್, ಜಿ. ಎಸ್. ಸ್ವಾಮಿ, ಸೂರ್ಯಕಾಂತಂ
[RAJSHRI RELEASE

ರಾಜಕಮಲ್
25-7-52 ರಿಂದ : 7 ನೇ ವಾರ
ನನ್ನ ತಂಗಿ
[ತಮಿಳು]

SRI
RAGHAVENDRA INSTITUTE,
32, East Cross Ashoka Road
MYSORE
Admissions Received for
MADRAS MATRICULATION
LAST DATE 28—7—1952
S.S.L.C & I.S Examinations
M. RAMA RAO. Bsc., D.Com

Edited Printed and Published by A R Nagarajan at Sadhvi Press, D Subbiah Road, Mysore.

ಟೆಲಿಫೋನ್ ನಂ 792 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೮ ೭ ೧೯೫೨ [ಸಂಚಿಕೆ ೨

- ದೊರೆ ಫರೂಕರ -
ರಾಜ್ಯ ಮತ್ತು ದೇಶತ್ಯಾಗ

ಟಿಕೆಟ್ ಇಲ್ಲದೆ ಪ್ರಯಾಣ ಮಾಡಿದುದಕ್ಕೆ ದಂಡ

ಸ್ವಂ ವ. ೨೮

ಚಾಮರಾಜನಗರದಿಂದ ರಾಜಧಾನಿಯ ಚಾಮರಾಜನಗರ ರೈಲ್ವೆ ನಿಲ್ದಾಣ ... ಟಿಕೆಟ್ ಇಲ್ಲದೆ ಪ್ರಯಾಣ ಮಾಡಿದವರನ್ನು ರಂಗಪ್ಪ ... ರೈಲ್ವೆ ರಸ್ತೆಯ ... ಕೆಲವು ಪ್ರಯಾಣಿಕರ ೧೦ ರೂ ಗಳ ದಂಡವನ್ನು ವಿಧಿಸಲಾಗಿದೆ ಮೊದಲೇ ಟಿಕೇಟಿನ ದ್ವಿಗುಣ ಮಾಬಲಗನ್ನು ಸಹಾ ಅವರಿಂದ ವಸೂಲು ಮಾಡಲಾಗಿತ್ತು

ಸೊಸೈಟಿ ವ್ಯವಹಾರದ ಅರ್ಜಿ ವಾಪಸು

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಸೊಸೈಟಿಯ ಆಡಳಿತದ ಸಂಬಂಧವಾಗಿ ಮೈಸೂರು ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ ಮಾಜಿ ಕಾರ್ಯದರ್ಶಿ ಶ್ರೀ ಬಿ. ಎಸ್ ರುದ್ರಪ್ಪನವರು ಕೊಟ್ಟಿದ್ದ ಅರ್ಜಿಯನ್ನು ವಾಪಸು ತೆಗೆದುಕೊಂಡಿರುತ್ತಾರೆ ಸೊಸೈಟಿಯ ವ್ಯವಹಾರಗಳು ಸಿವಿಲ್ ಕೋರ್ಟಿನ ವ್ಯಾಪ್ತಿಗೆ ಸೇರಿಲ್ಲವೆಂಬುದೇ ಇದಕ್ಕೆ ಕಾರಣ

ಅಂಗಡಿಯಲ್ಲಿ ಕಳ್ಳನ ಬಂಧನ

ಮೈಸೂರು ನೂರಡಿ ರಸ್ತೆಯಲ್ಲಿರುವ ಚಂದ್ರಮೌಳೇಶ್ವರ ಸ್ಟೋರ್ಸ್ ಅಂಗಡಿಗೆ ನೆನ್ನೆ ಬೆಳಗಿನ ಝಾವ ಜಾರ್ಜ ಅರಸ್ ಪುಟ್ಟ ಎಂಬ ಹಳೇ ಕಾಡಿಯು ಬೀಗವನ್ನು ತೆಗೆದು ಒಳಗೆ ನುಗ್ಗಿ ಕಳ್ಳತನದ ಪ್ರಯತ್ನದಲ್ಲಿದ್ದಾಗ ಅಂಗಡಿಯಲ್ಲಿ ಮಲಗಿದ್ದ ಕಾವಲುಗಾರನು ದಾಸಪ್ಪ ವೆಂಕಟರಾಮು ವಂತಾಪವರ ಸಹಾಯದಿಂದ ಲಕ್ಷ್ಮೀಪುರಂ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ದಫೇದಾರರಿಗೆ ತಿಳಿಸಲು ಅವರಿಲ್ಲಿರೂ ಕಳ್ಳನನ್ನು ಬಂಧಿಸಿದರು ಮುಂದಿನ ತನಿಖೆ ಕ್ರಮ ನಡೆಸಲಾಗುತ್ತಿದೆ ಕೆಲವು ದಿನಗಳ ಹಿಂದೆ ಶ್ರೀ ಎಂ ಎನ್ ನಾಗಣ್ಣನವರ ಅಂಗಡಿಯಲ್ಲೂ ಸುತ್ತಮುತ್ತಲಿನ ಇತರ ಕಡೆಗಳಲ್ಲೂ ಕಳ್ಳತನಗಳಾಗಿದ್ದುವು

ರೈಲಿಗೆ ಸಿಕ್ಕಿ ಮರಣ

ನಂಜನಗೂಡಿನಿಂದ ರಾಜಧಾನಿಗೆ ಕಳೆದ ೨೫ ನೇ ತಾ॥ ಹೊರಟುಬರುತ್ತಿದ್ದ ಷಟಲ್ ರೈಲಿಗೆ ಸಣ್ಣಮ್ಮ ಎಂಬ ಸುಮಾರು ೨೫ ವರ್ಷದ ಯುವತಿಯು ಸಿಕ್ಕಿ ಕೈಕಾಲುಗಳು ಕತ್ತರಿಸಲ್ಪಟ್ಟವೆಂದೂ, ಆಕೆಯನ್ನು ರೈಲಿನಲ್ಲಿ ಹಾಕಿಕೊಂಡು ಪುನಃ ನಂಜನಗೂಡಿಗೆ ಕರೆದುಕೊಂಡು ಹೋಗಿ ಅಲ್ಲಿನ ಆಸ್ಪತ್ರೆಯಲ್ಲಿ ಸೇರಿಸಲಾಯಿತೆಂದೂ ಅಲ್ಲಿ ಅವಳು ಮೃತಪಟ್ಟಳೆಂದೂ ವರದಿಯಾಗಿದೆ

ವಿಲಿಯಂ ಥಿಯೋಬಾಲ್ಡರ ನಿಧನ

ರಾಜಧಾನಿಯ ಸುಪ್ರಸಿದ್ಧ ಪಿರಾರಿಯೂ, ಪೌರ ಸಭೆಯ ಮತ್ತು ಶಾಸನ ಸಭೆಯ ಮಾಜಿ ಸದಸ್ಯರೂ ಆದ ವಿಲಿಯಂ ಎಚ್ ಥಿಯೋಬಾಲ್ಡರವರು ನೆನ್ನೆ ತಮ್ಮ ೬೪ನೇ ವಯಸ್ಸಿನಲ್ಲಿ ಹೃದಯ ರೋಗದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅನೇಕ ವರ್ಷ ಅವರು ನಗರದ ಆಂಗ್ಲೊ ಇಂಡಿಯನ್ ಸಂಘ ಮತ್ತು ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು ಅವರ ಪತ್ನಿ ಮತ್ತು ಬಂಧುಗಳಿಗೆ ನಮ್ಮ ಸಂತಾಪವನ್ನು ಸೂಚಿಸಿ, ದಿವಂಗತರ ಆತ್ಮಕ್ಕೆ ಶಾಂತಿಯು ದೊರೆಯಲೆಂದು ಪ್ರಾರ್ಥಿಸುತ್ತೇವೆ

ಈಜಿಪ್ಟ್ ದೊರೆ ಫರೂಕರ ಸಿಂಹಾಸನ ತ್ಯಾಗ

ರಾಣಿಯೊಡನೆ ಅಮೆರಿಕಕ್ಕೆ ಪ್ರಯಾಣ

ಈಜಿಪ್ಟಿನ ದೊರೆ ಫರೂಕರು ನೆನ್ನೆ ಇದ್ದಕ್ಕಿದ್ದಂತೆಯೇ ತಮ್ಮ ಏಳು ತಿಂಗಳ ಮಗ ರಾಜಕುಮಾರ ಫೌವದ್ ಹೆಸರಿನಲ್ಲಿ ಸಿಂಹಾಸನ ತ್ಯಾಗ ಮಾಡಿ ತಮ್ಮ ಪತ್ನಿ ನರಿಮನ್, ಹೊಸ ದೊರೆ ಫೌದ್ ಮತ್ತು ಮೊದಲ ಪತ್ನಿಯ ಮೂರು ಹೆಣ್ಣು ಮಕ್ಕಳೊಡನೆ ವಿಹಾರ ಜಹಜಿನಲ್ಲಿ ಅಮೆರಿಕಕ್ಕೆ ತೆರಳಲು ಜಿನೋವಾಗೆ ಹೊರಟರು ೬ ವರ್ಷಗಳ ... ತ್ತಲೇ ಬಾಲಕ ದೊರೆಯು ಈಜಿಪ್ಟಿಗೆ ವಾಪಸು ಬರಬೇಕೆಂದು ಗೊತ್ತು ಮಾಡಲಾಗಿದೆ ಆ ವರೆಗೆ ೩ ಜನ ರಾಜ ಪ್ರತಿನಿಧಿಗಳುಳ್ಳ ... ಮಂಡಲವಿರುವುದು ನಾಟಕದ ಈ ಪರಿಣಾಮ ... ಈ ಘಟನೆಗೆ ಮುಂಚೆ ರಾಜ್ಯವನ್ನು ವಶಮಾಡಿಕೊಂಡ ಫೀ॥ ಮಾರ್ಷಲ್ ನಗೀಬ್ ಮಹಮುದ್ದರ ಸೈನ್ಯಗಳು ಫರೂಕರ ಅರಮನೆಯನ್ನು ಸುತ್ತಗಟ್ಟಿ ಅವರನ್ನು ಸಿಂಹಾಸನ ತ್ಯಾಗ ಮಾಡುವಂತೆ ಒತ್ತಾಯಪಡಿಸಿದವು ಕೈರೋವಿನ ಅರಮನೆಗಳೂ ಸೈನಿಕರಿಂದ ಮುತ್ತಲ್ಪಟ್ಟವು ನಗೀಬರು ದೇಶದ ವಿಮೋಚಕರೆಂದು ಪ್ರಜೆಗಳು ಘೋಷಿಸಿದರು ಫರೂಕರು ತಮ್ಮ ಎಳೆಯ ಕುಮಾರನ ಹೆಸರಿನಲ್ಲಿ ರಾಜ್ಯತ್ಯಾಗ ಮಾಡುವಂತೆ ಅವರಿಗೆ ಮಾಡಿದ ಆಜ್ಞೆಯನ್ನು ಕೇಳಿ ಅಮೆರಿಕದಲ್ಲಿ ಆಶ್ಚರ್ಯವನ್ನು ವ್ಯಕ್ತಪಡಿಸಲಾಗಿದೆ ಈಗ ಅಮೆರಿಕದಲ್ಲಿ ರಾಜಮನೆತನದವರು ಹೆಚ್ಚು ಪ್ರಮಾಣದಲ್ಲಿ ನಾನಾ ರೂಪವಾಗಿ ಬಂಡವಾಳವನ್ನು ಹಾಕಿದ್ದಾರೆಂದು ಹೇಳಲಾಗಿದೆ ಅರಮನೆ ಕಛೇರಿಗಳು ಮತ್ತು ಇತರ ಪ್ರಮುಖ ಸ್ಥಳಗಳಲ್ಲಿದ್ದ ಫರೂಕರ ಪಟಗಳನ್ನೆಲ್ಲಾ ಒಡೆದು ಹಾಕಲಾಯಿತು ಸಿಂಹಾಸನ ತ್ಯಾಗ ಮಾಡಿದ ಫರೂಕರು ದೊರೆಗಳ ಪೈಕಿ ಹತ್ತನೆಯವರೆಂದು ಗೊತ್ತಾಗಿದೆ

○ ಚರಿತ್ರೆಯಲ್ಲಿ ಉಲ್ಲೇಖವಾದ ದಿನಗಳಿಗಿಂತಲೂ ಪೂರ್ವಕ್ಕೆ ಸೇರಿದುದೆಂದು ಭಾವಿಸಲಾಗಿರುವ ಮನುಷ್ಯನ ಅಸ್ಥಿಪಂಜರವು ಮದ್ರಾಸಿನ ನರಸಣ್ಣಪೇಟೆಯ ಹಳ್ಳಿಯೊಂದರಲ್ಲಿ ದೊರೆತಿದೆ ಅದರ ಉದ್ದ ೯ ಅಡಿ ಇದೆ

ಈಜಿಪ್ಟಿನ ವಾಫ್ಡ್ ಮುಖಂಡರು ವಾಪಸು

ಯೂರೋಪಿನಲ್ಲಿ ನೆಲಸಿದ್ದ ಈಜಿಪ್ಟಿನ ರಾಷ್ಟ್ರೀಯ ಮತ್ತು ಜನ ಪ್ರಿಯವಾದ ವಾಫ್ಡ್ ಪಕ್ಷದ ಮುಖಂಡರುಗಳನ್ನು ಈಜಿಪ್ಟಿನ ಪ್ರಧಾನಿ ಅಲಿ ಮೆಹರ್ ಪಾಷಾರವರ ಆಹ್ವಾನಿಸುತ್ತಿದ್ದಾರೆ ... ಪಕ್ಷವನ್ನು ... ಅನೇಕ ಕ್ರಮಗಳನ್ನು ಕೈಗೊಂಡಿದ್ದಾರೆ ಈಜಿಪ್ಟಿನಲ್ಲಿ ಪ್ರಜಾ ಪ್ರಭುತ್ವ ರಾಜ್ಯಭಾರವನ್ನು ಪುನಃ ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ ... ಮುಂದೆ ದೇಶ ... ರಾಜಕಾರಣಗಳಿಗೆ ... ಪ್ರತಿಜ್ಞಾ ವಚನವನ್ನು ... ಮಾಡಿಸಲಾಗುವುದು ಇದುವರೆಗೆ ಪ್ರತಿಜ್ಞೆಯಲ್ಲಿ ಮೊದಲ ದೊರೆಯ ಹೆಸರು ಬರುತ್ತಿತ್ತು

ಭಾವನಗರದ ರಾಜಕುಮಾರರಿಗೆ ೬ ವರ್ಷ ಸಜಾ

ಸೌರಾಷ್ಟ್ರದ ಅಮ್ರೇಲಿ ಜಿಲ್ಲೆಯ ಹಳ್ಳಿಯೊಂದರಲ್ಲಿ ೮ ಸಾವಿರ ರೂ ಡಕಾಯಿತಿ ನಡೆಸಿದ ಸಂಬಂಧವಾಗಿ ಭಾವನಗರದ ರಾಜಕುಮಾರ ನಿರ್ಮಲ ಕುಮಾರರಿಗೆ ೬ ವರ್ಷಗಳ ಕಠಿಣ ಶಿಕ್ಷೆಯನ್ನೂ ಮತ್ತು ೩,೦೦೦ ರೂ ಜುಲ್ಮಾನೆಯನ್ನು ವಿಧಿಸಲಾಗಿದೆ

ಅಮೆರಿಕದ ಉಕ್ಕಿನ ಕಾರ್ಮಿಕರ ಮುಷ್ಕರದ ಮುಕ್ತಾಯ

ಅಮೆರಿಕದ ಅಧ್ಯಕ್ಷ ಟ್ರೂಮನ್ನರು ಅಲ್ಲಿನ ಉಕ್ಕಿನ ಕೈಗಾರಿಕಾ ಮಾಲೀಕರು ಮತ್ತು ಕಾರ್ಮಿಕರ ವಿವಾದಗಳ ಮಧ್ಯ ಪ್ರವೇಶಿಸಿದುದರಿಂದ ಕಾರ್ಮಿಕರ ೫೩ ದಿನಗಳ ಮುಷ್ಕರವು ಮುಕ್ತಾಯಗೊಂಡಿರುತ್ತದೆ

೩ ತಿಂಗಳೊಳಗೆ ರೈಲಿನಲ್ಲಿ ಪ್ರಥಮ ತರಗತಿಯು ರದ್ದು

ಭಾರತಾದ್ಯಂತ ಇನ್ನಾರು ತಿಂಗಳುಗಳಲ್ಲಿ ರೈಲಿನ ಪ್ರಥಮ ತರಗತಿಯು ವಜಾ ಆಗುವುದೆಂದು ಗೊತ್ತಾಗಿದೆ ಮೊದಲನೇ ತರಗತಿ ಬದಲು ಏರ್‌ಕಂಡಿಷನ್ ಗಾಡಿಗಳನ್ನು ಓಡಿಸಲಾಗುವುದೆಂದೂ ಅವು ತಯಾರಾಗುತ್ತಿರುವುವೆಂದೂ ಗೊತ್ತಾಗಿದೆ

ಟೆಲಿಫೋನ್ ದರ ಹೆಚ್ಚಿಸಿದ ಬಗ್ಗೆ ಪ್ರಶ್ನೆ

ಹಿರಿಯ ಶಾಸನ ಸಭೆಯಲ್ಲಿ ಮಂತ್ರಿಗಳ ಹೇಳಿಕೆ

ಸ್ವಂ ಸು. ಫೋ] ಬೆಂಗಳೂರು ೨೮

ಕೇಂದ್ರಕ್ಕೆ ಟೆಲಿಫೋನ್ ವ್ಯವಸ್ಥೆಯನ್ನು ಒಪ್ಪಿಸಿದ ನಂತರ ದರಗಳನ್ನು ಹೆಚ್ಚಿಸಿರುವ ಬಗ್ಗೆ ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೆಗಳು ಹಾಕಲ್ಪಟ್ಟುವು ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಉತ್ತರವಿತ್ತು ಈಗ ರಾಜ್ಯಭಾರದ ಬದಲಾವಣೆಯ ಸಂದಿಗ್ಧ ಸಮಯವಾಗಿರುವುದೆಂದೂ, ಕಾಲ ಕ್ರಮೇಣ ಎಲ್ಲವೂ ಸರಿಹೋಗುವುದೆಂದೂ ತಿಳಿಸಿದರು ಬೆಂಗಳೂರಿಗೆ ೬ ಸಾವಿರ ಟೆಲಿಫೋನುಗಳನ್ನು ಹಾಕಲಾಗುವುದೆಂದೂ, ಟೆಲಿಫೋನುಗಳ ಸಂಖ್ಯೆಯನ್ನು ಹೆಚ್ಚಿಸಲು ೫೦-೬೦ ಲಕ್ಷ ರೂ ಗಳ ಯೋಜನೆಯನ್ನು ಕೇಂದ್ರ ಸರ್ಕಾರದವರು ಇಟ್ಟುಕೊಂಡಿರುವುದಾಗಿಯೂ ಹೇಳಿದರು

ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ಶ್ರೀ ಸಿದ್ದಲಿಂಗಯ್ಯನವರು ಕೇಂದ್ರಕ್ಕೆ ವಹಿಸಲಾದ ೧೫ ಇಲಾಖೆಗಳ ಪಟ್ಟಿಯನ್ನು ಕೊಟ್ಟು ... ಉದ್ಯೋಗ ವಿನಿಮಯ ಮತ್ತು ಜಾಯಿಂಟ್ ಸ್ಟಾಕ್ ಕಂಪನಿಗಳು ಇವನ್ನು ಕೇಂದ್ರದ ಪರವಾಗಿ ಸಂಸ್ಥಾನದ ಸರ್ಕಾರದವರು ನಡೆಸುತ್ತಿರುವರೆಂದು ತಿಳಿಸಿದರು ಈ ಎರಡು ಇಲಾಖೆಗಳಿಗೆ ತಗುಲುವ ಒಟ್ಟು ವೆಚ್ಚದಲ್ಲಿ ಶೇ॥ ೪೦ ರಷ್ಟನ್ನು ಸಂಸ್ಥಾನ ಸರ್ಕಾರದವರು ವಹಿಸುವರೆಂದು ತಿಳಿಸಲಾಯಿತು

ಇಲ್ಲಿನ ಬಿ ಎಂ ಎಸ್ ಕಾಲೇಜಿನಲ್ಲಿ ಸಾಕಷ್ಟು ಸಾಧನ ಸಾಮಗ್ರಿಗಳು ಇಲ್ಲದೆ ವಿದ್ಯಾರ್ಥಿಗಳು ಸರ್ಕಾರಿ ಇಂಜನಿಯರಿಂಗ್ ಕಾಲೇಜಿಗೆ ಸೇರಲು ಬರುತ್ತಿರುವರೆಂದು ತಿಳಿಸಲಾಯಿತು

ಶ್ರೀ ಭಾಷ್ಯಂರವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಎ ಜಿ ರಾಮಚಂದ್ರ ರಾವ್ ಪಿ ಗೋಪಾಲಕೃಷ್ಣ ಶೆಟ್ಟಿ, ಪಿ ಸೀತಾರಾಮಯ್ಯ, ಗೌಸ್ ಮೊಹಿಯುದ್ದೀನ್, ವೈ ಧರ್ಮಪ್ಪ, ಎಸ್ ಶಿವಪ್ಪ, ಎನ್ ಪಿ ಗೋವಿಂದ ...ರನ್ನೊಳಗೊಂಡ ನಿಬಂಧನೆ ರಚನಾ ಸಮಿತಿಯನ್ನು ಮಾಡಲಾಯಿತು ಹಿರಿಯ ಶಾಸನ ಸಭೆಯು ನಾಳೆಯೂ ನಡೆಯುವುದು

ಭೂ ಸುಧಾರಣೆಗಾಗಿ ರಾಜ್ಯಾಂಗದಲ್ಲಿ ಬದಲಾವಣೆ

ಭೂ ಸುಧಾರಣೆಯನ್ನು ಯಾವ ತಡೆಯಿಲ್ಲದೆ ಸಂಸ್ಥಾನದ ಸರ್ಕಾರಗಳು ನಡೆಸಿಕೊಂಡು ಹೋಗಲನುಕೂಲವಾಗುವಂತೆ ಭಾರತ ರಾಜ್ಯಾಂಗದಲ್ಲಿ ಬದಲಾವಣೆಯಾಗಬೇಕೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ಧಾಳಿ ನರಸಿಂಹ ಭಟ್ಟರ ನಿಧನ

ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯ ಅಧ್ಯಾಪಕರಾಗಿದ್ದ ವೇ॥ ಮೂ॥ ಬ್ರಂ॥ ಶ್ರೀ ಧಾಳಿ ನರಸಿಂಹಭಟ್ಟರು ನೆನ್ನೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೭೦ ವರ್ಷ ವಯಸ್ಸಾಗಿದ್ದಿತು ಅವರು ವೇದ ಪಾರಂಗತರಾಗಿದ್ದರಲ್ಲದೆ ಯಜ್ಞಯಾಗಾದಿಗಳಲ್ಲಿ ಮುಖ್ಯಪಾತ್ರ ವಹಿಸುತ್ತಿದ್ದರು.

ಸಾಧ್ವಿ ಪತ್ರಿಕೆಯ ಹತ್ತನೆಯ ವಾರ್ಷಿಕೋತ್ಸವ

ಮುಖ್ಯ ಮಂತ್ರಿ ಹನುಮಂತಯ್ಯ ನವರ ಅಧ್ಯಕ್ಷ ಭಾಷಣ

ಮೈಸೂರು ೨೮

ಸಾಧ್ವಿ ದಿನ ಪತ್ರಿಕೆಯ ಹತ್ತನೇ ವಾರ್ಷಿಕೋತ್ಸವವು ಮೊನ್ನೆ ಪತ್ರಿಕಾ ಕಛೇರಿಯಲ್ಲಿ ನಡೆಯಿತು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯ, ಜಿಲ್ಲಾಧಿಕಾರಿಗಳಾದ ಜ|| ಕೆ ಮಹಮದ್ ಅಹಮದ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣ, ಪೌರಸಭಾ ಕಮಿಷನರಾದ ಜ|| ಅಬ್ದುಲ್ ರಹೀಂ ಶಾಸನ ಸಭಾ ಸದಸ್ಯರುಗಳಾದ ಬಿ ನಾರಾಯಣಸ್ವಾಮಿ, ಕೆ. ಪುಟ್ಟಸ್ವಾಮಿ, ಹಿರಿಯ ಶಾಸನ ಸಭೆ ಸದಸ್ಯರಾದ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್, ಸಂಸ್ಕೃತ ವಿಶಾರದ ಶ್ರೀ ಕೆ ವಾಸುದೇವಾಚಾರ್ ಮತ್ತು ಪೌರಸಭಾ ಸದಸ್ಯರುಗಳೂ, ಪತ್ರಿಕೋದ್ಯಮಿಗಳೂ ಮತ್ತು ಇತರ ಅನೇಕ ಮಹನೀಯರೂ ಮಹಿಳೆಯರೂ ದಯಮಾಡಿಸಿದ್ದರು

ಕುಮಾರಿ ಅಂಬಾರವರಿಂದ ಮಂಗಳಾಚರಣೆಯಾದನಂತರ, ಗಮಕಿ ಸಂಪತ್ತು ನಾರಾಯಣರವರು ಸುಶ್ರಾವ್ಯವಾಗಿ ಕುಮಾರವ್ಯಾಸನ ಭಾರತದ ವಾಚನವನ್ನು ಮಾಡಿದರು

ಪತ್ರಿಕೆಯ ಸಂಚಾಲಕರಾದ ಶ್ರೀ ಅಗರಂ ರಂಗಯ್ಯನವರು ಸಕಲರನ್ನೂ ಸಮಾರಂಭಕ್ಕೆ ಸ್ವಾಗತಿಸಿ ಭಾಷಣ ಮಾಡಿದರು ಪತ್ರಿಕೆಯ ಮೂಲಪುರುಷರಾದ ವೃದ್ಧ ಪಿತಾಮಹ ಶ್ರೀ ಎಂ ವೆಂಕಟಕೃಷ್ಣಯ್ಯನವರನ್ನು ಅವರು ಸ್ಮರಿಸಿ ಸಾಧ್ವಿ ಮುಂತಾದ ಅನೇಕ ಪತ್ರಿಕೆಗಳನ್ನು ಶ್ರೀ ವೆಂಕಟಕೃಷ್ಣಯ್ಯನವರು ನಡೆಸುತ್ತಿದ್ದ ಕಾಲದಲ್ಲಿ ಜನಜಾಗೃತಿಯನ್ನುಂಟುಮಾಡುವ ಗುರಿಯೇ ಅವರಿಗೆ ಮುಖ್ಯವಾಗಿತ್ತೆಂದು ಅವರು ತಿಳಿಸಿ, ವೆಂಕಟಕೃಷ್ಣಯ್ಯನವರ ಸಾರ್ವಜನಿಕ ಸೇವೆಯ ನೆನಪಿಗಾಗಿ, ಅವರಲ್ಲಿ ವಿಶ್ವಾಸದಿಂದ ಕೆಲಸ ಮಾಡಿದ ತಾವು ಅವರ ಜ್ಞಾಪಕಾರ್ಥವಾಗಿ ಸಾಧ್ವಿ ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಂತರ ಭಾಷಣ ಮಾಡಿ, ಸದರಿ ಸಮಾರಂಭದಲ್ಲಿ ಭಾಗವಹಿಸಲು ಅವಕಾಶವಾದುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು. ಸಾಧ್ವಿ ಪತ್ರಿಕೆಯು ಆಕಾರದಲ್ಲಿ ಕಿರಿಯದಾದರೂ, ಗೌರವ ಮತ್ತು ಮನ್ನಣೆಯನ್ನು ಪಡೆದಿರುವುದೆಂದು ತಿಳಿಸಿದರು ತಾತಯ್ಯನವರು ಹಿಂದೆಯೇ ಪತ್ರಿಕೆಗಳ ಸ್ಥಾಪನೆಯ ಮೂಲಕ ಪ್ರಜಾ ಪ್ರಭುತ್ವವನ್ನು ಏರ್ಪಡಿಸುವುದಕ್ಕೆ ಅಂಕುರಾರ್ಪಣವನ್ನು ಮಾಡಿದರು ಅವರ ಆ ಕಾರ್ಯವು ಈಗ ಸಫಲವಾಗಿರುತ್ತದೆ ಪ್ರಜಾ ಪ್ರಭುತ್ವವನ್ನು ಸ್ಥಾಪಿಸುವುದರಲ್ಲಿ ಸಾಧ್ವಿ ಪತ್ರಿಕೆಯು ಪಾತ್ರವಹಿಸಿದ್ದಿತು ಈಗಲೂ ಪತ್ರಿಕೆಯು ಅದೇ ಸತ್ಸಂಪ್ರದಾಯವನ್ನು ಕಾಪಾಡಿಕೊಂಡು ಬರುತ್ತಿದೆ - ಎಂದು ಅವರು ಹೇಳಿ ಪತ್ರಿಕೆಗೆ ಶುಭವನ್ನು ಕೋರಿದರು

ನಂತರ ಬ|| ವಿ|| ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು ವಾದನವು ವಿ|| ಪಿ ರಾಮರತ್ನಂ ಮತ್ತು ಸಿ ಶ್ರೀನಿವಾಸರವರ ವೀಣಾ ಡಾ ಬಿ ಆರ್ ರಾಮಾಚಾರ್‌ರವರ ಕೊಳಲು ವಿ ಎಂ ಜಿ ಶ್ರೀನಿವಾಸಯ್ಯಂಗಾರ್‌ರವರ ವೀಣೆ ವಿ ವೀರಭದ್ರಪ್ಪನವರ ಮೃದಂಗಗಳೊಡನೆ ಸುಶ್ರಾವ್ಯವಾಗಿ ನಡೆಯಿತು

ಸಮಾರಂಭಕ್ಕೆ ಯಶಸ್ಸನ್ನು ಕೋರಿ ಹಿರಿಯ ಶಾಸನ ಸಭೆ ಅಧ್ಯಕ್ಷರಾದ ಶ್ರೀ [illegible] ಭಾಷ್ಯಂ, ರೆವಿನ್ಯೂ ಮಂತ್ರಿ ಶ್ರೀ [illegible] ಮುಖ್ಯ ನ್ಯಾಯಾಧೀಶ [illegible] ಪತ್ರಿಕಾ [illegible] ಪಿ ಆರ್ [illegible] ಕೃಷ್ಣ [illegible] ರಾವ್ [illegible] ರಾಜ್ [illegible] ಪ್ರತಿನಿಧಿ ಶ್ರೀ ರಾಮಚಂದ್ರರಾವ್, ಸ್ವತಂತ್ರ ಕರ್ಣಾಟಕದ ಸಂಪಾದಕರಾದ ಶ್ರೀ ಬಿ ಶಿವಮೂರ್ತಿ ಶಾಸ್ತ್ರಿ ಶ್ರೀ ಹೆಚ್ ವಿ ಯಜ್ಞೇಶ್ವರ ಶಾಸ್ತ್ರಿಯವರುಗಳಿಂದ ಶುಭಸಂದೇಶಗಳು ಬಂದಿದ್ದವು ವಂದನಾರ್ಪಣೆ ಮತ್ತು ಪುಷ್ಪ ತಾಂಬೂಲ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಈ ಸಮಾರಂಭದ ಅಂಗವಾಗಿ ನೆನ್ನೆ ಸಂಜೆ ಪತ್ರಿಕಾಲಯದಲ್ಲಿ ಸತ್ಕಾರಕೂಟವೊಂದನ್ನು ಏರ್ಪಡಿಸಲಾಗಿತ್ತು ನಗರದ ಅನೇಕ ಗಣ್ಯ ಮಹನೀಯರು ಭಾಗವಹಿಸಿದ್ದರು ಶ್ರೀ ಅಗರಂ ರಂಗಯ್ಯನವರು ಭಾಷಣ ಮಾಡಿ ಪತ್ರಿಕೆ ಚಾಲನದಲ್ಲಿ ಸಹಕರಿಸುತ್ತಿರುವ ಮಾರಾಟದ ಬಾಲಕರು, ಏಜೆಂಟರುಗಳು, ಕೆಲಸಗಾರರು ಸಹೋದ್ಯೋಗಿಗಳು ಮತ್ತು ಇತರ ಎಲ್ಲ ಹಿತೈಷಿಗಳಿಗೂ ತಮ್ಮ ಧನ್ಯವಾದವನ್ನು ಸಲ್ಲಿಸಿದರು.

SREE GANESHA
TALKIES
From 29-7-52 For 3 Days
I'LL GET YOU FOR THIS
Starring George Raft Coleen Gray and the Italian boy Tony
From 31—7—52
MACBETH

ಅಸ್ಸಾಂ ಕಾಡು ಮೃಗಗಳು ಊರುಗಳಿಗೆ ನುಗ್ಗುತ್ತಿವೆ

ಅಸ್ಸಾಮಿನ ಅರಣ್ಯ ಪ್ರದೇಶಗಳಲ್ಲೆಲ್ಲಾ ಪ್ರವಾಹದ ನೀರು ನುಗ್ಗಿರುವುದರಿಂದ ಅಲ್ಲಿ ವಾಸವಾಗಿದ್ದ ಆನೆ, ಹುಲಿ ಮುಂತಾದ ಕಾಡು ಮೃಗಗಳು ಜನನಿವಾಸ ಸ್ಥಳಗಳ ಬಳಿಗೆ ಓಡಿಬರುತ್ತಿವೆ ಇದರಿಂದ ಜನರ ಪ್ರಾಣ ಮತ್ತು ಆಸ್ತಿಪಾಸ್ತಿಗಳಿಗೆ ಭೀತಿಯುಂಟಾಗಿದೆ

ಅ|| ಭಾ|| ಪತ್ರಿಕಾ ಸಂಪಾದಕರ ಸಮ್ಮೇಳನಾಧ್ಯಕ್ಷರು

ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನಾಧ್ಯಕ್ಷರಾಗಿ ನಾಗಪುರದ ಹಿತವಾದ ಪತ್ರಿಕೆಯ ಸಂಪಾದಕ ಎ ಡಿ ಮಣಿಯವರು ಸರ್ವಾನುಮತದಿಂದ ಚುನಾಯಿತರಾಗಿರುವರು.

ಹಿರಿಯ ಶಾಸನ ಸಭಾ ಉಪಾಧ್ಯಕ್ಷರಿಗೆ ಅಭಿನಂದನೆ

ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾದ ಶ್ರೀ ಪಿ ಗೋಪಾಲ ಕೃಷ್ಣಶೆಟ್ಟರನ್ನು ಅಭಿನಂದಿಸುವ ನಿರ್ಣಯವು ರಾಜಧಾನಿಯ ಶಾವ್ ಜನಿಕ ವಿದ್ಯಾರ್ಥಿ ನಿಲಯ [illegible] ಗಳು ಕಳೆದ [illegible] ನೇ [illegible] ನಡೆಸಿದ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible] ಶಿವರಾಂ [illegible] ಕೀರ್ತನೆಗಳು, [illegible] ಸಿತಾರ್ [illegible] ಪ್ರಸನ್ನಮೂರ್ತಿ ಸಂಗೀತ, [illegible] ದಯಾನಿಧಿ ಸಿತಾರ್ [illegible] ಕನ್ನಡದಲ್ಲಿ ಭಾಷಣ [illegible] ಶಿವರಾಂ [illegible] ವೃಂದ ಸಂಗೀತ [illegible] ಗಾನಾಮೃತ

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ.
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ಮದ್ರಾಸಿನ ಮಾಜಿ ಬ್ರಿಟಿಷ್ ಗೌರ್ನರರ ನಿಧನ

೧೯೩೪-೩೯ ರಲ್ಲಿ ಮದ್ರಾಸಿನ ಗೌರ್ನರಾಗಿದ್ದ ಲಾರ್ಡ್ ಎರ್ಸ್‌ಕಿನ್‌ರವರು ಕಳೆದ ೨೪ ನೇ ತಾ|| ಲಂಡನ್ನಿನಲ್ಲಿ ಮೃತರಾದರು

ಮೈಸೂರು ಪೇಟೆ ಧಾರಣೆ

		ಪಲ್ಲಕ್ಕೆ ರೂ. ಇಂದ	ರೂ. ಗೆ
ನೆಲಗಡಲೆ	,,	೮ ೦-೨	೧೯-೬-೦
ಎಳ್ಳು	,,	೭೫.೦ ೦	೮೩.೮.೦
ಹರಳು ಬೀಜ	,,	೪೨.೦ ೦	೪೪. ೦
ಹುಚ್ಚೆಳ್ಳು	,,	೪೦-೪-೦	
ಹೊಂಗೆಬೀಜ	,	೧೫-೦-೦	೧೫ ೬-೦
ತೊಗರಿ	,	೩೯-೪ ೦	೪೦-೧೦-೦
ಹೆಸರು	,,	೫೭ ೦ ೮	೫೯ ೦-೦
ಅವರೆ	,,	೫೯.೧೪ ೦	
ಉದ್ದು	,	೬೭ ೦ ೦	
ಹಲಸಂದೆ	,,	೩೪ ೨ ೦	೬೮ ೨ ೦
ಮೆಣಸಿನಕಾಯಿ			
ಮಣ ೧ಕ್ಕೆ		೬ ೧೨ ೦	೧೪ ೦.೦
ಮೆಣಸೇಹಣ್ಣು	,	.೪-೦	೪-೧-೦
ಸೀಗೆಕಾಯಿ		೩ ೪ ೦	೪-೧ ೦
ಕೊಬ್ಬರಿ	,,	೫ ೦ ೦	೬೪-೧೦-೦
ತೆಂಗಿನಕಾಯಿ ೧೧೦೦		೧೦೯ ೦ ೦	೩೧೯-೦.೦

ರೇಡಿಯೋ ಭಾಷಣ

ಮೈಸೂರಿನ ಅಂಚೆ ಕಛೇರಿ ಸೂಪರಿಂಟೆಂಡೆಂಟರಾದ ಶ್ರೀ ಟಿ ಆರ್ ಶಂಕರ್‌ರವರು ಈ ರಾತ್ರಿ [illegible] ಕ್ಕೆ "ನಿಮ್ಮ ರೇಡಿಯೋ ಲೈಸೆನ್ಸ್" ಎಂಬ ವಿಷಯವಾಗಿ ಆಕಾಶವಾಣಿಯಲ್ಲಿ ಇಂಗ್ಲಿಷಿನಲ್ಲಿ ಭಾಷಣ ಮಾಡುವರು.

ಬೆಂಗಳೂರು
ಕಲಾ ಮಂದಿರದ
ಸಹಾಯಾರ್ಥವಾಗಿ
ರಂಗಾಚಾರ್ಲು ಮೆಮೋರಿಯಲ್
ಹಾಲಿನಲ್ಲಿ
2-8-52 ನೇ ಶನಿವಾರ ಸಂಜೆ
ಕವಿ ಪುಂಗವ
ಮತ್ತು ಆ ರಾತ್ರಿ
ನಾಟಕಗಳು
ನೃತ್ಯ ಮತ್ತು ವಿನೋದಗಳು
3-8-52 ನೇ ಭಾನುವಾರ ಸಂಜೆ
ಕವಿ ಪುಂಗವ ಮತ್ತು
ಕಲ್ಕುಂಟೆ ಕಮಂಗಿ
ನಾಟಕಗಳು ಮತ್ತು
ಸಂಗೀತ ವಿದುಷಿ ಶ್ರೀಮತಿ
ಜಿ. ಚನ್ನಮ್ಮನವರ ಸಂಗೀತ
ನೃತ್ಯ ಮತ್ತು ವಿನೋದಗಳೂ ಉಂಟು.
ಕಲೆಗಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ
ಸಹಾಯ ಮಾಡಿ

ಮುದ್ರಣವಾಗಿದೆ ! || ಜೈ ಹಿಂದ್ || ಹೊರಬರಲಿದೆ !
ಕಂಪಲ್ಸರಿ ಹಿಂದೀ ಸರಳ ವ್ಯಾಕರಣ
(ಸರ್ಕಾರಿ ಸಿಲಬಸ್‌ಗಳನ್ನೊಳಗೊಂಡಿದೆ)
ಹೈಸ್ಕೂಲು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಮತ್ತು ಹಿಂದೀ ಕಲಿಯಲು ಇಚ್ಛಿಸುವ ಪ್ರತಿಯೊಬ್ಬ ಪೌರನಿಗೂ ಅತ್ಯಂತ ಉಪಯುಕ್ತವಾದ ಹಿಂದಿ ಸರಳ ವ್ಯಾಕರಣ
ಲೇಖಕರು.— ಚಿಕ್ಕನರಸಿಂಹಯ್ಯ, ಸಾಹಿತ್ಯ ವಿಶಾರದ
ಹಿಂದೀ ಅಧ್ಯಾಪಕ, ಮಹಾರಾಜರವರ ಹೈಸ್ಕೂಲು, ಮೈಸೂರು
ಪ್ರಕಾಶಕರು.— ಶ್ರೀ ನರಸಿಂಹಸ್ವಾಮಿ ಏಜನ್ಸೀಸ್,
ಸಾಹಿತ್ಯ ಪ್ರಸಾರ ಮಂದಿರ ೦: ಸದರ್ ಬಜಾರ್, ಮೈಸೂರು

ಬಾಡಿಗೆಗೆ ಕೊಡಲಾಗುತ್ತದೆ
ಮೈಸೂರು ಬ್ಯಾಂಕು, ಅಂಚೆ ಕಛೇರಿ ಮತ್ತು ಸೆಂಟ್ರಲ್ ಪೊಲೀಸು ಸ್ಟೇಷನ್ನಿಗೆ ಕೆಲವು ಗಜಗಳ ದೂರದಲ್ಲಿರುವ ಮತ್ತು ಬ್ಯಾಂಕುಗಳು ಕ್ಲಬ್ಬುಗಳು, ಕಛೇರಿಗಳು ಅಥವಾ ವಾಸದ ಮನೆಗಳಾಗಲು ತಕ್ಕದ್ದಾಗಿರುವ, ಸ್ವತಂತ್ರ ಪ್ರವೇಶಕ್ಕೆ ಅವಕಾಶವುಳ್ಳ, ವಿದ್ಯುಚ್ಛಕ್ತಿ ದೀಪಗಳು ಮತ್ತು ನೀರಿನ ನಲ್ಲಿ ಉಳ್ಳ ಅಶೋಕಾ ರಸ್ತೆಯ 221 ನೇ ನಂಬರು ಮನೆಯ ಮಹಡಿಯು 1-8-1952 ರಿಂದ ಬಾಡಿಗೆಗೆ ಇದೆ. ಬಾಡಿಗೆ ಸಾಮಾನ್ಯ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೆ|| ಅಬೀದ್ ಅಂಡ್ ಕಂಪೆನಿ,
ಸ್ಟ್ಯಾಚೂ ಚೌಕ, ಮೈಸೂರು

Edited, Printed and Published by A. R. Nagarajan, at Sadhvi Press, D. Subbiah Road, Mysore.

ಟೆಲಿಫೋನ್ ನಂ 792 || ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೯-೭-೧೯೫೨ [ಸಂಚಿಕೆ ೩

ಫರೂಕರು ಬ್ರೆಜಿಲ್ಲಿನಲ್ಲಿ ನೆಲೆಸುವರೇ?

ಮೈಸೂರು ಜಿಲ್ಲೆಯಲ್ಲಿ ಮಹಾರಾಜರ ಪ್ರವಾಸ

ಮೈಸೂರು ೨೯

ಶ್ರೀಮನ್ಮಹಾರಾಜರವರು ಬರುವ ತಿಂಗಳು ೩ ಮತ್ತು ೪ ನೇ ತಾ|| ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ೩ ನೇ ತಾ|| ನಂಜನಗೂಡು ಪುರಸಭೆಯ ಕಛೇರಿ ಮತ್ತು ಗುಂಡ್ಲುಪೇಟೆ ಹೈಸ್ಕೂಲಿನ ಕಟ್ಟಡದ ಪ್ರಾರಂಭೋತ್ಸವ, ೪ ನೇ ತಾ|| ಹುಣಸೂರು ಮತ್ತು ಪಿರಿಯಾಪಟ್ಟಣಗಳ ಹೈಸ್ಕೂಲು ಕಟ್ಟಡಗಳ ಪ್ರಾರಂಭೋತ್ಸವಗಳನ್ನು ನೆರವೇರಿಸುವರು.

ಭತ್ತದ ಬೆಳೆಗೆ ಮಾತ್ರ ನೀರು ಒದಗಿಸುವಂತೆ ಪ್ರಾರ್ಥನೆ

ರಾಜಧಾನಿಯ ಶ್ರೀ ಎಂ. ಆರ್ ಸಿ. ಬಸಪ್ಪನವರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ ಮತ್ತು ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರಿಗೆ ತಂತಿ ಕಳುಹಿಸಿ, ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ಕಳೆದ ವರ್ಷ ಈ ದಿನಗಳಲ್ಲಿ ೧೨೨ ಅಡಿ ಇದ್ದಿತೆಂದೂ, ಈಗ ಕೇವಲ ೮೨ ಇರುವುದೆಂದೂ ಆದ್ದರಿಂದ ಅತಿ ಮುಖ್ಯ ಬೆಳೆಯಾದ ಭತ್ತದ ಬೇಸಾಯಕ್ಕೆ ಮಾತ್ರ ನೀರನ್ನು ಒದಗಿಸಬೇಕೆಂದೂ, ಮಳೆಯು ಸಾಕಷ್ಟು ಬಂದರೆ ಇತರ ಬೆಳೆಗಳಿಗೆ ಒದಗಿಸಬಹುದೆಂದೂ ಸೂಚಿಸಿರುತ್ತಾರೆ

ಈಜಿಪ್ಟಿನ ಕಡೆಗೆ ಬ್ರಿಟಿಷ್ ಯುದ್ಧದ ಹಡಗುಗಳು

ಈಜಿಪ್ಟಿನ ನೇವಿ ನಗರವಾದ ಪೋರ್ಟ್ ಸೈಡ್ಡಿಗೆ ಸೈಪ್ರಸ್ ದ್ವೀಪದಲ್ಲಿದ್ದ ಬ್ರಿಟಿಷ್ ಯುದ್ಧದ ಹಡಗೊಂದು ಹಠಾತ್ತನೆ ಹೊರಟಿರುತ್ತದೆ ಮಾಲ್ಟಾ ದ್ವೀಪದಿಂದ ಬೇರೆ ಹಡಗುಗಳೂ ಅಲ್ಲಿಗೆ ಹೊರಟಿವೆ. ಸೈಪ್ರಸ್ಸಿನಲ್ಲಿರುವ ಬ್ರಿಟಿಷ್ ಸೈನ್ಯಗಳೆಲ್ಲವೂ ಸಿದ್ಧವಾಗಿರಬೇಕೆಂದು ಸೂಚಿಸಲಾಗಿದೆ. ಟರ್ಕಿಯಲ್ಲಿದ್ದ ಯುದ್ಧದ ಹಡಗುಗಳೂ ಸಹ ಈಜಿಪ್ಟಿನ ಕಡೆಗೆ ಹೊರಟಿರುತ್ತವೆ. ಲಾರ್ಡ್ ಮೌಂಟ್ ಬ್ಯಾಟನ್ನರು ಈ ಏರ್ಪಾಡಿನಲ್ಲಿರುತ್ತಾರೆ

ಲಾಹೋರಿನಲ್ಲಿ ಗಲಭೆ

ಪಶ್ಚಿಮ ಪಂಜಾಬಿನ ರಾಜಧಾನಿ ಲಾಹೋರಿನಲ್ಲಿ ಮುಸ್ಲಿಂ ಲೀಗ್ ಕೌನ್ಸಿಲ್ ಸದಸ್ಯರುಗಳ ಕಾರುಗಳ ಮೇಲೆ ನೆನ್ನೆ ಪ್ರದರ್ಶನಕಾರರು ಕಲ್ಲುಗಳನ್ನು ಎಸೆದರೆಂದೂ ಪೋಲೀಸರು ಅವರನ್ನು ಚದುರಿಸಲು ೩ ಬಾರಿ ಅಶ್ರುವಾಯುವನ್ನು ಪ್ರಯೋಗಿಸಿದರೆಂದೂ ಗೊತ್ತಾಗಿದೆ. ಲಾಠಿ ಪ್ರಹಾರವೂ ಆಯಿತು ಇದುವರೆಗೆ ೧೦೦ ಕ್ಕೂ ಹೆಚ್ಚು ಮಂದಿಯ ದಸ್ತಗಿರಿಯಾಗಿದೆ ೫ ಜನರಿಗಿಂತ ಹೆಚ್ಚಾದ ಸಂಖ್ಯೆಯಲ್ಲಿ ಸೇರಕೂಡದೆಂದು ಪ್ರತಿಬಂಧಕ ಹಾಕಲಾಗಿದೆ ಕಲ್ಲಿನ ಏಟಿನಿಂದ ಹಲವರಿಗೆ ಗಾಯಗಳಾಗಿವೆ

ಈಜಿಪ್ಟಿನ ಅರಮನೆಗಳು ಆಸ್ಪತ್ರೆ ಮತ್ತು ಶಾಲೆಗಳಿಗೆ

ಈಜಿಪ್ಟಿನ ಅಲೆಕ್ಸಾಂಡ್ರಿಯ ಮತ್ತು ಕೈರೊ ನಗರದಲ್ಲಿರುವ ಫರೂಕರ ಅರಮನೆಗಳನ್ನು ಆಸ್ಪತ್ರೆ, ವಿಶ್ವವಿದ್ಯಾನಿಲಯದ ಕಛೇರಿ ಮತ್ತು ಶಾಲಾ ಕಟ್ಟಡಗಳಿಗೆ ಉಪಯೋಗಿಸಲಾಗುವುದು

ಅಭಾವ ಪ್ರದೇಶಕ್ಕೆ ಸಹಾಯಕ್ಕಾಗಿ ಸಾರ್ವಜನಿಕರ ಸಭೆ

ಮೈಸೂರು ೨೯

ಮುಖ್ಯ ಮಂತ್ರಿಯವರು ಏರ್ಪಡಿಸಿರುವ ಅಭಾವ ಪ್ರದೇಶಗಳ ಪರಿಹಾರದ ನಿಧಿಗೆ ದ್ರವ್ಯ ಸಹಾಯವನ್ನು ಕೂಡಿಸುವ ಸಲುವಾಗಿ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿ ರಾಯರು ಬರುವ ೧ನೇ ತಾ|| ಸಂಜೆ ೫ ಘಂಟೆಗೆ ಟೌನ್ ಹಾಲಿನಲ್ಲಿ ನಗರದ ಪ್ರಮುಖರ ಸಭೆಯೊಂದನ್ನು ಕರೆದಿರುತ್ತಾರೆ ಮಹಾಜನರು ಒದಗಿಸುವ ಧನ, ಧಾನ್ಯ ಸಹಾಯ ಪಡೆಯಲು ಸಮಿತಿಯೊಂದನ್ನು ರಚಿಸಲಾಗುವುದು

ಪಾಕಿಸ್ತಾನದಲ್ಲಿ ಮಹಿಳೆಯರ ಅಭಾವ

ಪಾಕಿಸ್ತಾನದಲ್ಲಿ ಜನ ಸಂಖ್ಯಾ ಪ್ರವೀಣರು ಹೇಳುವ ಪ್ರಕಾರ ಅಲ್ಲಿ ಮಹಿಳೆಯರ ಸಂಖ್ಯೆಯು ಬಹಳ ಕಡಿಮೆಯಾಗಿರುವುದೆಂದು ಗೊತ್ತಾಗಿದೆ. ಈ ಕೊರತೆಯನ್ನು ನೀಗಿಸಲು ಹಲವಾರು ಸಲಹೆಗಳನ್ನು ಸರ್ಕಾರಕ್ಕೆ ಮಾಡಲಾಗಿದೆ ವಿದೇಶಗಳಿಂದ, ಮುಖ್ಯವಾಗಿ ಅಮೆರಿಕ ಮತ್ತು ಬ್ರಿಟನ್ನಿನಿಂದ ಮಹಿಳೆಯರನ್ನು ಆಮದು ಮಾಡಿಕೊಳ್ಳುವುದು, ಪಾಕಿಸ್ತಾನದಲ್ಲಿ ಶಾಲಾ ಉಪಾಧ್ಯಾಯಿನಿಯರು ಮತ್ತು ವೈದ್ಯವೃತ್ತಿಯನ್ನವಲಂಬಿಸಿರುವ ಮಹಿಳೆಯರು ವಿವಾಹವಾಗುವಂತೆ ಒತ್ತಾಯಪಡಿಸುವುದು, ಗಂಡಸರು ಒಬ್ಬರಿಗಿಂತಲೂ ಹೆಚ್ಚು ಮಂದಿ ಪತ್ನಿಯರನ್ನು ಹೊಂದವಂತೆ ಮಾಡುವುದು, ದೇಶದಲ್ಲಿ ಹೆಚ್ಚು ಸಂಖ್ಯೆಯ ಹೆಣ್ಣು ಮಕ್ಕಳ ಜನನಕ್ಕೆ ಪ್ರೋತ್ಸಾಹವೀಯುವುದು ಮತ್ತು ವಿದೇಶಗಳಿಂದ ವಿವಾಹ ವಿಚ್ಛೇದನವಾದ ಸ್ತ್ರೀಯರು ಮತ್ತು ವಿಧವೆಯರನ್ನು ಕರೆಸಿಕೊಳ್ಳುವುದು- ಇವೇ ಆ ಸಲಹೆಗಳು

ಮಾರಾಟ ತೆರಿಗೆ ಕೊಡದಿದ್ದುದಕ್ಕೆ ಜುಲ್ಮಾನೆ

ಮಾರಾಟದ ತೆರಿಗೆಯನ್ನು ಕೊಡದೆ ಇದ್ದುದಕ್ಕಾಗಿ ಚಾಮರಾಜನಗರದ ಆರ್ ಕರಿಬಸಪ್ಪನವರಿಗೆ ೫೦ ರೂ ಮತ್ತು ಆರ್ ಮಲ್ಲಪ್ಪನವರಿಗೆ ೩೫ ರೂ ದಂಡವನ್ನು ಈ ದಿನ ಮೈಸೂರು ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ

ಬ್ರೆಜಿಲ್ಲಿನಲ್ಲಿ ಫರೂಕರ ವಾಸವೇ?

ಈಜಿಪ್ಟಿನ ಮಾಜಿ ದೊರೆ ಫರೂಕರು ತಮ್ಮ ಸಂಸಾರದೊಡನೆ ಬ್ರೆಜಿಲ್‌ನಲ್ಲಿ ವಾಸಿಸುವರೆಂದು ಕೈರೋವಿನ ಪತ್ರಿಕೆಯೊಂದು ತಿಳಿಸಿರುತ್ತದೆ ಈಚೆಗೆ ಆ ದೇಶಕ್ಕೆ ಫರೂಕರು ೩೦ ಲಕ್ಷ ಪೌಂಡು ಆಸ್ತಿಯನ್ನು ವರ್ಗ ಮಾಡಿಕೊಂಡಿದ್ದರೆಂದು ಹೇಳಲಾಗಿದೆ ಫರೂಕರು ಹೊರಟಿದ್ದ ಜಹಜು ಇಟಲಿಯ ರೇವೊಂದನ್ನು ಸಮೀಪಿಸಿದಾಗ, ಅದರಲ್ಲಿ ಅವರು ಇರಲಿಲ್ಲವೆಂದು ವರದಿಯಾಗಿದೆ

ಕೇಂದ್ರ ಮಂತ್ರಿಗಳ ಸಂಬಳದಲ್ಲಿ ಖೋತಾ

ಕೇಂದ್ರ ಮಂತ್ರಿಗಳ ಸಂಬಳ ಭತ್ಯ ಇವುಗಳ ಸಂಬಂಧವಾದ ಮಸೂದೆಯನ್ನು ನೆನ್ನೆ ಪಾರ್ಲಿಮೆಂಟಿನಲ್ಲಿ ಗೃಹ ಮಂತ್ರಿ ಕಟ್ಜುರವರು ಮಂಡಿಸಿದರು ಮಂತ್ರಿಗಳಿಗೆ ೩ ಸಾವಿರದ ಬದಲು ೨೨೫೦ ರೂ. ಸಂಬಳ, ಉಪಮಂತ್ರಿಗಳಿಗೆ ೨ ಸಾವಿರದ ಬದಲು ೧೭೫೦ ರೂ ವೇತನವನ್ನು ಇನ್ನು ಮುಂದೆ ಕೊಡುವ ವ್ಯವಸ್ಥೆಯಾಗುವುದು. ಮಂತ್ರಿಮಂಡಲದ ಸದಸ್ಯರು ಪಡೆಯುತ್ತಿದ್ದ ಸಂಚಾರಿ ಭತ್ಯವನ್ನು ಬೇರೆ ರೂಪದಲ್ಲಿ ಅವರಿಗೆ ೫೦೦ ಕ್ಕೆ ಮೀರದಂತೆ ಕೊಡಲಾಗುವುದು ಉಪಮಂತ್ರಿಗಳಿಗೆ ಯಾವ ಭತ್ಯವೂ ಸಿಗುವುದಿಲ್ಲ

ಬಸ್ ಮಾಲೀಕರ ಕೊಲೆಗಾಗಿ ನಾಲ್ವರಿಗೆ ಮರಣದಂಡನೆ

ಚನ್ನಪಟ್ಟಣ ತಾಲ್ಲೂಕು ಸಿಂಗರಾಜಪುರದ ಹಳ್ಳಿಯಲ್ಲಿ ಕಳೆದ ವರ್ಷ ಆಗಸ್ಟ್ ೧೨ ನೇ ತಾ|| ರಾತ್ರಿ ಬ್ಯಾಂಗಲೂರ್ ಮೋಟಾರು ಬಸ್ಸಿನ ಮಾಲೀಕರಾದ ಶ್ರೀ ಎಸ್ ವಿ ನರಸಿಂಹಮೂರ್ತಿಯವರನ್ನು ಕೊಲೆ ಮಾಡಿದುದಕ್ಕಾಗಿ ಪದ್ಮನಾಭ ರಾವ್, ಮರಿ ತಿಮ್ಮ, ತಿರುಕ ಉರುಫ್ ಚಿಕ್ಕತಮ್ಮಯ್ಯ ಮತ್ತು ಚಿಕ್ಕಹುಚ್ಚಯ್ಯನವರುಗಳಿಗೆ ಮರಣ ದಂಡನೆಯನ್ನು ವಿಧಿಸಿರುವುದಲ್ಲದೆ, ಅವರು ಪ್ರತಿಯೊಬ್ಬರೂ ಸಾವಿರ ರೂ. ದಂಡವನ್ನು ಕೊಡಬೇಕೆಂದು ಬೆಂಗಳೂರಿನ ಸೆಷನ್ಸ್ ನ್ಯಾಯಾಧೀಶರು ಆಜ್ಞೆ ಮಾಡಿರುತ್ತಾರೆ. ಅವರು ಯುವಕರಾದುದರಿಂದ ಕಡಿಮೆ ಶಿಕ್ಷೆಯಾಗಬೇಕೆಂಬ ವಾದವನ್ನು ನ್ಯಾಯಾಧೀಶರು ಅಂಗೀಕರಿಸಲಿಲ್ಲ

ಪ್ರೌಢಶಾಲೆ ಅಧ್ಯಾಪಕರ ಸಂಬಳದ ಬಗ್ಗೆ ಪ್ರಶ್ನೆಗಳು

ಶಾಸನ ಸಭಾ ಕಾರ್ಯಕಲಾಪ

ಸ್ವಂ ಸು. ಪ್ರೋ|] ಬೆಂಗಳೂರು ೨೯

ಈ ದಿನ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳಾದ ನಂತರ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ತಿದ್ದುಪಡಿ ಮಸೂದೆಯು ಚರ್ಚಿಸಲ್ಪಟ್ಟು ಮಂಜೂರಾಯಿತು ಶ್ರೀ ಧರ್ಮಪ್ಪನವರು ಮತ್ತು ಇತರರು ಅದನ್ನು ವಿರೋಧಿಸಿದರು.

ಪ್ರಶ್ನೋತ್ತರ ಕಾಲದಲ್ಲಿ ಜನಾಬ್ ಗಫಾರ್‌ರವರು ಪುರ ಸಭೆ ಮತ್ತು ಜಿಲ್ಲಾ ಬೋರ್ಡು ಹೈ ಸ್ಕೂಲುಗಳಲ್ಲಿರುವ ಸಂಬಳ ಶ್ರೇಣಿಗಳ ವ್ಯತ್ಯಾಸವನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲವೇ ಎಂದು ಕೇಳಲಾಗಿ, ಅದಕ್ಕೆ ಕೈ ಹಾಕುವುದು ಉಚಿತವಲ್ಲವೆಂದು ವಿದ್ಯಾ ಸಚಿವರು ನುಡಿದರು

ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಹೈಸ್ಕೂಲುಗಳ ಅಧ್ಯಾಪಕರ ವಿರಾಮ ವೇತನದ ಬಗ್ಗೆ ಹಲವು ಮನವಿಗಳು ಬಂದಿರುವುವೆಂದೂ, ಅವನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ ಮತ್ತೊಂದು ಪ್ರಶ್ನೆಗೆ ಉತ್ತರ ಕೊಡಲಾಯಿತು ಮೇಲ್ಕಂಡ ಶಾಲೆಗಳ ಅಧ್ಯಾಪಕರು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಪರ್ಯಾಲೋಚನೆಯಲ್ಲಿಲ್ಲವೆಂದೂ, ಆದರೆ ಅಲ್ಲಿ ನೌಕರಿಗಳಿಗೆ ನೇಮಿಸಿಕೊಳ್ಳುವಾಗ ಮಾತ್ರ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಸಲಹೆ ಪಡೆಯುವರೆಂದೂ ತಿಳಿಸಲಾಯಿತು.

ಸಿನಿಮಾ ಆಪರೇಟರುಗಳಿಗೆ ಪರೀಕ್ಷೆ

ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯದಲ್ಲಾಗಲಿ ಅಥವಾ ಸರ್ಕಾರದ ಮನ್ನಣೆ ಪಡೆದಿರುವಂತಹ ಮತ್ಯಾವ ಸಂಸ್ಥೆಯಲ್ಲಾಗಲಿ ಆಪರೇಟರ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವವರನ್ನು ಮಾತ್ರ ಸಿನಿಮಾ ಮಂದಿರಗಳಿಗೆ ಆಪರೇಟರಾಗಿ ತೆಗೆದುಕೊಳ್ಳಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ ಮೂರು ವರ್ಷಕ್ಕಿಂತ ಹೆಚ್ಚು ಅನುಭವ ಪಡೆದಿರುವವರಿಗೆ ಇದು ಅನ್ವಯಿಸುವುದಿಲ್ಲ

ಈಜಿಪ್ಟಿನಲ್ಲಿ ಶಾಂತಿ

ಕಳೆದ ವಾರ ಈಜಿಪ್ಟಿನಲ್ಲಿ ಸಂಭವಿಸಿದ ಕ್ರಾಂತಿ ಪರಿಸ್ಥಿತಿಯು ಸ್ತಿಮಿತಕ್ಕೆ ಬಂದಿರುವುದೆಂದು ಹೇಳಲಾಗಿದೆ. ಕೈರೋ ನಗರದಲ್ಲಿ ಹಲವು ಟ್ಯಾಂಕುಗಳು ಮಾತ್ರ ಓಡಾಡುತ್ತಿವೆ ಮಾಜಿ ಪ್ರಧಾನ ಸೇನಾಧಿಪತಿಯನ್ನು ದಸ್ತಗಿರಿ ಮಾಡಲು ಆಜ್ಞೆಯಾಗಿದೆ.

ದೇವರ ಕೊಂಡಪ್ಪನವರ ನಿಧನ

ಆನೇಕಲ್ ಟವನ್ನಿನ ಕಾಂಗ್ರೆಸ್ ಮುಂದಾಳುಗಳಾದ ಶ್ರೀ ಆರ್. ದೇವರ ಕೊಂಡಪ್ಪನವರು ಮೊನ್ನೆ ಅಲ್ಲಿನ ದೇವಸ್ಥಾನಕ್ಕೆ ಪೂಜೆಗಾಗಿ ಹೋಗಿ, ಸ್ವಲ್ಪ ಆಯಾಸ ಕಂಡುಬಂದುದರಿಂದ ವಿಶ್ರಮಿಸಿಕೊಳ್ಳಲು ಸ್ವಲ್ಪ ದೂರ ಬಂದಾಗ ಕಲ್ಲೊಂದನ್ನು ಎಡವಿ ಮೃತಿ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೫೦ ವರ್ಷ ವಯಸ್ಸಾಗಿತ್ತು ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಅನೇಕಾವರ್ತಿ ಜೈಲು ವಾಸವನ್ನೂ ಅನುಭವಿಸಿದ್ದರು.

ರಾಜಾಜಿಯವರ ಸಂಬಳ

ರಾಜಾಜಿಯವರು ತಿಂಗಳಿಗೆ ಸಾವಿರ ರೂ ಸಂಬಳ, ೨೫೦ ರೂ ಮನೆ ಬಾಡಿಗೆ ಮತ್ತು ೨೫೦ ರೂ ವಾಹನ ಭತ್ಯ ಇವುಗಳನ್ನು ಪಡೆಯುತ್ತಿರುವರೆಂದು ಗೊತ್ತಾಗಿದೆ ಗೌರ್ನರ್ ಜನರಲ್ ಆಗಿ ಮೊದಲು ಇದ್ದು ಈಗ ಮುಖ್ಯ ಮಂತ್ರಿಯಾಗಿರುವುದು ಘನತೆಗೆ ಕುಂದುಕವಲ್ಲವೇ ಎಂದು ಅವರನ್ನು ಪ್ರಶ್ನಿಸಲಾಗಿ, ತಾವು ಅಂತಹ ' ಘನ" ತೆಯ ಮೇಲೆ ನಿಂತಿರುವುದಿಲ್ಲವೆಂದು ಅವರು ತಿಳಿಸಿರುತ್ತಾರೆ

ತೆಂಗಿನಕಾಯಿ ವರ್ತಕರ ಸಂಘ

ರಾಜಧಾನಿಯ ದೇವರಾಜ ಮಾರ್ಕೆಟ್ ಮತ್ತು ಇತರ ಮಾರ್ಕೆಟ್‌ಗಳ ತೆಂಗಿನಕಾಯಿ ವರ್ತಕರು ಸೇರಿ ಮೊನ್ನೆ ತಮ್ಮದೇ ಆದ ಒಂದು ಸಂಘವನ್ನು ಶ್ರೀ ಎಂ ಕೆ ರಂಗಾಚಾರ್ ರವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿಕೊಂಡಿದ್ದಾರೆ ಪ್ರಸಕ್ತ ಸಾಲಿಗೆ ಆರ್ ರಂಗಪ್ಪನವರು ಅಧ್ಯಕ್ಷರಾಗಿಯೂ, ಎ ಶಿವನಂಜಪ್ಪನವರು ಉಪಾಧ್ಯಕ್ಷರಾಗಿಯೂ, ಬಿ ಎಂ ಚನ್ನಪ್ಪ ಮತ್ತು ಎಲ್ ವೆಂಕೋಬರಾವ್ ರವರು ಕಾರ್ಯದರ್ಶಿಗಳಾಗಿಯೂ ಮತ್ತು ನಂಜಯ್ಯನವರು ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟಿದ್ದಾರೆ

ಸಾರ್ವಜನಿಕ ವಿದ್ಯಾರ್ಥಿ ನಿಲಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ಅಧಿಕಾರ ವರ್ಗದ ಚುನಾವಣೆಯು ಮೊನ್ನೆ ಶ್ರೀ ಹೆಚ್ ವಿ ಸುಬ್ಬರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಡಿ ಎಸ್ ಶಂಕರಪ್ಪನವರು ಉಪಾಧ್ಯಕ್ಷರಾಗಿಯೂ ಶ್ರೀ ಬಿ ಆರ್ ರಾಮಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀಗಳಾದ ಸಿ ಜಬಲರಾಂ, ಗಿರಿಮಲ್ಲಯ್ಯ ಕೆ ವಿ ನಾರಾಯಣಸ್ವಾಮಿ ಮತ್ತು ಕಾ ನಾ ಕೃಷ್ಣಮೂರ್ತಿಯವರು ಸದಸ್ಯರಾಗಿಯೂ ಚುನಾಯಿತರಾದರು

ಕೆಂಪು ಚೀಣಾ ಗಡಿ ಬಳಿ ಅಮೇರಿಕಾ ವಿಮಾನಗಳು

ಫಾರ್ಮೋಸಾ ದ್ವೀಪದ ರಕ್ಷಣೆಗಾಗಿ ನೇಮಿಸಲ್ಪಟ್ಟಿರುವ ಅಮೇರಿಕದ ನೌಕಾ ವಿಮಾನಗಳ ಭಾರಿ ಸಮೂಹವು ಚೀಣಾ ದೇಶದ ಬಳಿ ಹಾರಾಡಿದುವೆಂದೂ, ಕೆಂಪು ಚೀಣಕ್ಕೆ ಎಚ್ಚರಿಕೆ ಕೊಡುವ ಉದ್ದಿಷ್ಟದಿಂದಲೇ, ಅಮೇರಿಕದ ಶಕ್ತಿಯ ಪ್ರದರ್ಶನೆ ಮಾಡಲಾಯಿತೆಂದೂ ವರದಿಯಾಗಿದೆ

ಬ್ರಿಟಿಷ್ ತೀರದ ಮೇಲೆ ವಿಮಾನಗಳ ಗುಂಡು

ಬ್ರಿಟನ್ನಿನ ತೀರದ ಗ್ರಾಮಗಳ ಮೇಲೆ ೨೫ನೇ ತಾ|| ಅಪರಿಚಿತ ವಿಮಾನಗಳು ಗುಂಡು ಹಾರಿಸಿದುವೆಂದು ವರದಿಯಾಗಿದೆ

ಅರ್ಜೆಂಟೈನಾ ಅಧ್ಯಕ್ಷರ ಪತ್ನಿಯ ಮರಣ

ದಕ್ಷಿಣ ಅಮೆರಿಕದ ಅರ್ಜೆಂಟೈನಾದ ಅಧ್ಯಕ್ಷ ಪೆರಾನರ ಪತ್ನಿ ಇವಾ ಪೆರಾನರವರು ಕಳೆದ ೨೬ ನೇ ತಾ|| ರಾತ್ರಿ ಮೃತಿ ಹೊಂದಿದರ ಅವರಿಗೆ ೩೩ ವರ್ಷವಾಗಿತ್ತು ಅವರು ವಿವಾಹವಾಗುವ ಮುನ್ನ ಸಿನಿಮಾ ನಟಿಯಾಗಿದ್ದರು ಆಕೆಯೇ ಮೊದಲಿನ ಸಿನಿಮಾ ನಟಿ

ಮಂಡ್ಯಜಿಲ್ಲೆ ಪಾರ್ಲಿಮೆಂಟ್ ಸದಸ್ಯರ ಮೇಲೆ ಚುನಾವಣಾ ನೊಕದ್ದಮೆ

ಪಾರ್ಲಿಮೆಂಟಿನ ಕೆಳ ಸಭೆಗೆ ಮಂಡ್ಯ ಜಿಲ್ಲೆಯಿಂದ ಚುನಾಯಿತರಾಗಿರುವ ಶ್ರೀ ಎಂ. ಕೆ ಶಿವನಂಜಪ್ಪನವರ ಮೇಲೆ ಮದ್ದೂರಿನ ಶ್ರೀ ಎಂ ಸಿ ಲಿಂಗೇಗೌಡರು ಚುನಾವಣಾ ಅರ್ಜಿಯನ್ನು ಕೊಟ್ಟಿರುತ್ತಾರೆ ಚುನಾವಣಾ ನ್ಯಾಯಾಲಯದಲ್ಲಿ ಈ ಅರ್ಜಿಯ ವಿಚಾರಣೆ ನಡೆಯುವುದು

ಆಂಧ್ರ ಪ್ರಾಂತಕ್ಕಾಗಿ ೧೦೮ ವರ್ಷದವಳ ಉಪವಾಸ

ಆಂಧ್ರಪ್ರಾಂತ್ಯ ನಿರ್ಮಾಣಕ್ಕಾಗಿ ಭೀಮಾವರದ ೧೦೮ ವರ್ಷದ ಶ್ರೀ. ಕಲ್ಲಕಮ್ಮ ಎಂಬ ವೃದ್ಧೆಯು ೯ ದಿನಗಳ ಉಪವಾಸ ಸತ್ಯಾಗ್ರಹವನ್ನು ಆಚರಿಸುತ್ತಿರುವರು

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಬರುವ ತಿಂಗಳು ೬ ೭ ಮತ್ತು ೮ ನೇ ತಾ|| ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವವು ನಡೆಯುವುದು ನಿತ್ಯವೂ ಬೆಳಗ್ಗೆ ಅಭಿಷೇಕಾದಿಗಳು ಜರುಗುವುವು ೬ ಮತ್ತು ೭ ನೇ ತಾ|| ಪ್ರಾಕಾರೋತ್ಸವ, ಸಂಜೆ ೭ ಗಂಟೆಗೆ ಉತ್ಸವಗಳಾಗುವುವು ೮ ನೇ ತಾ|| ನೂರಡಿ, ಡಿ ಸುಬ್ಬಯ್ಯ ಸೀತಾವಿಲಾಸ ರಸ್ತೆಗಳಲ್ಲಿ ರಥದಲ್ಲಿ ಗುರುಗಳ ಉತ್ಸವವನ್ನು ನಡಸಲಾಗುವುದು

ಆನೇಸಾರೋಟು ಬೀದಿಯಲ್ಲಿ ಕಷ್ಟ

ದೇವರಾಜ ಮೊಹಲ್ಲಾ ಆನೆ ಸಾರೋಟಿನ ಬೀದಿಯಲ್ಲಿರುವ ಎರಡು ಮನೆಗಳಲ್ಲಿ ಫ್ಲಷೌಟ್ ಕಕ್ಕಸು ಇಲ್ಲದೆ ಗಲೀಜು ನೀರು ರಸ್ತೆಯ ಮೇಲ್ಭಾಗಕ್ಕೆ ಬಂದು ಜನರು ತಿರುಗಾಡಲು ತುಂಬಾ ಅಸಹ್ಯವಾಗಿರುವುದಲ್ಲದೆ, ಜನ ರೋಗಕ್ಕೆ ಕಾರಣವಾಗಿರುತ್ತದೆ ಈ ವಿಷಯವನ್ನು ಸಂಬಂಧಪಟ್ಟ ಪೌರಸಭಾಧಿಕಾರಿಗಳು ಗಮನಕ್ಕೆ ತೆಗೆದುಕೊಂಡು ಜನರ ತೊಂದರೆಯನ್ನು ನಿವಾರಿಸಬೇಕು- ಎಂದು ಕೇರಿ ವಾಚಕರೊಬ್ಬರು ಪತ್ರ ಬರೆದಿರುತ್ತಾರೆ.

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ	ರೂ.ಇಂದ	ರೂ ಗೆ
ಕಲಗಡಲೆ	,	೪೮.೨	೧೯-೮-೦
ಎಳ್ಳು	,	೬೦ ೦ ೦	೮೨ ೨ ೦
ಹರಳು ಬೀಜ	,,	೪೩ ೧೦ ೦	೪೪ ೬.೦
ಹುಚ್ಚೆಳ್ಳು	,,	೪೫- -೦	
ಹೊಂಗೆಬೀಜ	,,	೧೫ ೦-೦	೧೫ ೬-೦
ಹುರಳಿ	,	೩೯ ೨ ೦	೪೦-೬-೦
ಹೆಸರು	,,	೫೬-೨ ೮	೫೯.೨.೦
ಅವರೆ	,,	೫೯ ೧೪ ೦	
ಉದ್ದು	,,	೫೭ ೦.೦	೬೮-೦-೦
ಹಲಸಂದೆ	,	೫೬ ೬ ೦	೬೬-೮.೦
ಮೆಣಸಿನಕಾಯಿ			
ಮಣ ೧ಕ್ಕೆ		೬ ೪ ೦	೦೬ ೧೦ ೦
ಹುಣಸೇಹಣ್ಣು	,	೪ ೦-೦	೪-೧-೦
ಸೀಗೆಕಾಯಿ	.	೪.೪.೦	೪ ೫.೦
ಕೊಬ್ಬರಿ	,,	೫ ೦ ೦	೬೪-೧೦-೦
ತೆಂಗಿನಕಾಯಿ ೧೦೦೦		೨೦ ೦ ೦	೨೪೪.೦ ೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ಟಿ. ಚಾಪಯ್ಯ ನಾಗಸ್ವರ ಮಧ್ಯಾಹ್ನ ೧ ೪೦ ಪಿಟೀಲು, ೨ ವನಿತಾ ವಿಹಾರ ಸಂಜೆ ೫ ೪೦ ಟಿ ಚಾಪಯ್ಯ ನಾಗಸ್ವರ ೬ ೧೦ ಬಾಲಜಗತ್, ೭ ವಾರ್ತೆ ಸಮಾಚಾರ, ೬ ೦ ವಿ ಗೀತ, ೭ ೩೦ ಗೀತಾಂಜಲಿ, ೭ ೪೦ ಕೆ ರಂಗಸ್ವಾಮಿ ಅಯ್ಯಂಗಾರ್ ಭಾಷಣ ೮ ಸಂಗೀತ, ೯ ೧೫ "ಸಾಹಿತ್ಯ ಸಂಗಾತ", ೯ ೪೦ ನಿಮ್ಮ ಮೆಚ್ಚಿನ ಗೀತೆಗಳು

SRI GAYATHRI
TALKIES
Daily 2 Shows
On 30 7 52 for One day only
M G Ms
RIGHT CROSS
— NEXT CHANGE —
R K Os
Alice in Wonderland
[In Technicolor]

ಆಫೀಸು ಕೆಲಸಕ್ಕೆ ಹುಡುಗರು ಬೇಕು

ನಮ್ಮ ಆಫೀಸಿನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದೆ ಕೂಡಲೇ ಬಂದು ವಿಚಾರಿಸಿರಿ

ವ್ಯವಸ್ಥಾಪಕರು,
ಸಾಧ್ವಿ, ಮೈಸೂರು.

ಶ್ರೀ ಜಗದಾಂಬಾ ಶಿಶುವಿಹಾರ ಸ್ಥಳ ಬದಲಾವಣೆ

ಇದುವರೆಗೆ ರಾಜಧಾನಿಯ ದಿವಾನರ ರಸ್ತೆಯ ೨೦೫ ನೇ ನಂಬರು ಮನೆಯಲ್ಲಿದ್ದ ಮೇಲ್ಕಂಡ ಶಿಶುವಿಹಾರವನ್ನು ಕಳೆದ ಗುರುವಾರದಿಂದ ಅದೇ ರಸ್ತೆಯಲ್ಲಿ ಸುಮಾರು ಅರ್ಧ ಫರ್ಲಾಂಗು ದಕ್ಷಿಣಕ್ಕಿರುವ ೫೨೮ ನೇ ನಂಬರಿನ ಮನೆಗೆ ವರ್ಗಾಯಿಸಲಾಗಿದೆ ಮಕ್ಕಳ ಮತ್ತು ಶಾಲಾ ಕಾರ್ಯಕಲಾಪಗಳ ಹಿತದೃಷ್ಟಿಯಿಂದ ಮೇಲ್ಕಂಡ ವಿಶಾಲವಾದ ಭವನಕ್ಕೆ ವರ್ಗಾಯಿಸಲಾಗಿದೆ ಎಂದಿನಂತೆ ಮಹಾ ಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಡಿ ಕೃಷ್ಣಮೂರ್ತಿ,
ಡೈರೆಕ್ಟರ್

THE MYSORE SILK FILATURES, LTD.,

SILK FABRICS manufactured by the company are available also at

Sri K. S. Satyanarayana Rao's Cloth Emporium,

203. Sayyajirao Road,
MYSORE

ಅಂಬಲೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಹಿಷ್ಠ (ಮುಟ್ಟಿನ) ಸಂಬಂಧದ ಹೊಟ್ಟೆನೋವಿನಿಂದ ಮಕ್ಕಳಾಗದಿರುವುದು, ಅಕ್ರಮ ಸೂತಕ, ಕ್ರಮತಪ್ಪಿ ಬಹಿಷ್ಠ, ಗರ್ಭ ಪತನ ಬಂಜೆತನ ಇತ್ಯಾದಿಗಳಿಗೆ ಗ್ಯಾರೆಂಟಿ ಔಷಧ

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಸಿದ್ಧೌಷಧವನ್ನು "ಮದನ ವಿಲಾಸ" ದೊಡನೆ ಸೇವಿಸಿರಿ. ಪ್ರತಿಯೊಬ್ಬರೂ 1 ಸೆಟ್ ಅನುಪಾನ ಪತ್ರಿಕೆಯ ಮೇರೆ ಸೇವಿಸಿರಿ, ಸಾಕು, ಫಲ ತಮಗೇ ಗೊತ್ತಾಗುತ್ತದೆ ಕ್ರಯ 1 ಸೆಟ್ 5 ರೂ. ಪತ್ರ ವ್ಯವಹಾರ ಗುಪ್ತ ಕ್ಯಾಟಲಾಗು ಉಚಿತ ಹೆಚ್ಚು ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿ.

ವಿಶೇಷ ಸೂಚನೆ—ಔಷಧದ ಪ್ಯಾಕೆಟ್ ಮೇಲೆ ಶ್ರೀ ಎ ಆರ್ ಅಯ್ಯರ್ ರವರ ಫೋಟೋ ನೋಡಿ ಕೊಂಡು ತೆಗೆದುಕೊಳ್ಳಿ ಇದುವರೆಗೂ ಮಂಡಿಪೇಟೆ ಅಂಬಳೆ ನಾಗಪ್ಪ ಮೈಸೂರು ಸೂಪ್ಪಿನ ಕೋರ್ಟ್ ಬೀದಿಯಲ್ಲಿದ್ದ ಆಫೀಸುಗಳನ್ನು ಕೆಳಗೆ ಕಂಡ ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ.

ಹೊಸ ವಿಳಾಸ:— ಎ ರಾಮಸ್ವಾಮಿ ಅಯ್ಯರ್ ಸನ್
" ಸಂತಾನ ಸಿಂಧೂರ ಬಿಲ್ಡಿಂಗ್ "
628, ನೂರಡಿ ರಸ್ತೆ ಪಶ್ಚಿಮ ಕ್ರಾಸ್,
(ಕೃಷ್ಣ ಕೃಪಾ ಮಿಲ್ ಹತ್ತ) ಮೈಸೂರು.

ಬೆಂಗಳೂರು

ಕಲಾ ಮಂದಿರದ

ಸಹಾಯಾರ್ಥವಾಗಿ
ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ
2-8-52 ನೇ ಶನಿವಾರ ಸಂಜೆ

ಕವಿ ಪುಂಗವ ಮತ್ತು ಆ ರಾತ್ರಿ

ನಾಟಕಗಳು
ನೃತ್ಯ ಮತ್ತು ವಿನೋದಗಳು
3-8-52 ನೇ ಭಾನುವಾರ ಸಂಜೆ

ಕವಿ ಪುಂಗವ ಮತ್ತು ಕಲ್ಕುಂಟೆ ಕಮಂಗಿ

ನಾಟಕಗಳು ಮತ್ತು
ಸಂಗೀತ ವಿದುಷಿ ಶ್ರೀಮತಿ
ಜಿ. ಚೆನ್ನಮ್ಮನವರ ಸಂಗೀತ
ನೃತ್ಯ ಮತ್ತು ವಿನೋದಗಳೂ ಉಂಟು
ಕಲೆಗಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ
ಸಹಾಯ ಮಾಡಿ

Edited, Printed and Published by A. R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧]   ಬುಧವಾರ ೩೦-೬ ೧೯೫೩   [ಸಂಚಿಕೆ ೪

ಕಾಶ್ಮೀರದ ಒಡೆತನಕ್ಕೆ ಕರಣ್‌ಸಿಂಗ್ ಒಪ್ಪಿಗೆ ಇಲ್ಲ

ಅಸಿಸ್ಟೆಂಟ್ ಪ್ರೊಫೆಸರರ ನೇಮಕಕ್ಕೆ ನಿರ್ದಿಷ್ಟ ನೀತಿ

ಬೆಂಗಳೂರು, ೩೦

ವಿಶ್ವವಿದ್ಯಾನಿಲಯದಲ್ಲಿ ಅಸಿಸ್ಟೆಂಟ್ ಪ್ರೊಫೆಸರುಗಳ ನೇಮಕದ ಬಗ್ಗೆ ಸರ್ಕಾರದವರು ಹಲವು ತತ್ವಗಳನ್ನಿಟ್ಟುಕೊಂಡಿರುವರೆಂದೂ ಅವರ ಪ್ರಕಾರವೇ ನೇಮಕಗಳಾಗುತ್ತಿರುವುವೆಂದೂ, ಕೇವಲ ಸೀನಿಯಾರಿಟಿಯೊಂದನ್ನೇ ಪರಿಗಣಿಸಲಾಗುವುದಿಲ್ಲವೆಂದೂ, ಅನುಭವ, ವಿದ್ಯಾರ್ಹತೆ, ಪಾಠ ಹೇಳುವ ಸಾಮರ್ಥ್ಯ ಇವುಗಳನ್ನೂ ಸಹ ನೇಮಕದ ಕಾಲದಲ್ಲಿ ಪರಿಶೀಲಿಸಲಾಗುವುದೆಂದೂ ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು. ಲೆಕ್ಚರರುಗಳ ಮತ್ತು ಅಸಿಸ್ಟೆಂಟ್ ಪ್ರೊಫೆಸರ ನೇಮಕಗಳಲ್ಲಿ ಅಂತರವಿರುವುದೆಂದು ಅವರು ಸ್ಪಷ್ಟಪಡಿಸಿದರು. ಅ|| ಪ್ರೊ|| ರ ನೇಮಕದ ಬಗ್ಗೆ ತಜ್ಞರ ಸಮಿತಿಯ ಶಿಫಾರಸಿಗೆ ವ್ಯತಿರಿಕ್ತವಾಗಿ ವಿಶ್ವವಿದ್ಯಾನಿಲಯದ ಕೌನ್ಸಿಲ್ಲು ಏಳು ಸಂದರ್ಭಗಳಲ್ಲಿ ಶಿಫಾರಸು ಮಾಡಿತೆಂದೂ, ಕೌನ್ಸಿಲ್ಲಿನ ಶಿಫಾರಸನ್ನು ಏಳು ಸಂದರ್ಭಗಳಲ್ಲಿ ಸರ್ಕಾರದವರು ತಿರಸ್ಕರಿಸಿದರೆಂದೂ ವಿದ್ಯಾ ಮಂತ್ರಿಗಳು ಹೇಳಿದರು.

ಕೊಲೆ ಮಾಡಿದರೆ, ೧೦೦ ಜನಕ್ಕಾದರೂ ಮರಣದಂಡನೆ

ಚೆನ್ನಪಟ್ಟಣದ ತಾ|| ಸಿಂಗರಾಜಪುರದಲ್ಲಿ ಸ್ಪೆಂಡಿಡ್ ಬಸ್ ಮಾಲೀಕರಾದ ನರಸಿಂಹಮೂರ್ತಿಯವರ ಕೊಲೆ ಸಂಬಂಧವಾಗಿ ಬೆಂಗಳೂರು ಸರ್ಷನ್ ನ್ಯಾಯಾಧೀಶರಾದ ಶ್ರೀ ಪದ್ಮನಾಭಯ್ಯನವರು ತಮ್ಮ ತೀರ್ಪಿನಲ್ಲಿ, ತರುಣರು ತಮಗೆ ಇಷ್ಟವಿಲ್ಲದ ಜನರನ್ನೆಲ್ಲಾ ಕೊಲೆ ಮಾಡುತ್ತಾ ಹೋಗುವುದು ಸರಿಯಲ್ಲವೆಂದೂ, ೪ ಜನರಿಗೆ ಮರಣದಂಡನೆ ವಿಧಿಸಿರುವುದರಿಂದ ಕೋರ್ಟು ಅವರ ಬಗ್ಗೆ ಕಠಿಣವಾಗಿ ವರ್ತಿಸಿದೆಯೆಂದು ಭಾವಿಸಬಹುದಾದರೂ, ಪ್ರಕೃತ ಸಂದರ್ಭದ ನಡವಳಿಕೆಯನ್ನು ನುಸಗಂಡರೆ ಮರಣದಂಡನೆ ವಿಧಿಸಲು ಹಿಂದು ಮುಂದು ನೋಡಬಾರದೆಂದೂ, ಒಂದು ವೇಳೆ ನೂರು ಜನರು ಕೊಲೆ ನಡೆಸಿದ್ದಾರೆಂಬುದು ರುಜುವಾತಾದರೆ, ಆ ನೂರು ಮಂದಿಗೂ ಮರಣದಂಡನೆ ವಿಧಿಸಲು ತಾವು ಹಿಂಜರಿಯುವುದಿಲ್ಲವೆಂದೂ ತಿಳಿಸಿರುತ್ತಾರೆ.

ಬೊಂಬಾಯಿ ಹೈಕೋರ್ಟಿಗೆ ವಿಷಪ್ರಾಶನ ಮೊಕದ್ದಮೆ

ಮೈಸೂರು ಹೈಕೋರ್ಟು ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಸಿ ಮೇದಪ್ಪನವರನ್ನು ವಿಷ ಕೊಟ್ಟು ಕೊಲ್ಲುವ ಪ್ರಯತ್ನ ನಡೆಸಿದರೆಂದು ಶಿಕ್ಷೆಗೆ ಗುರಿಯಾಗಿರುವ ದಾಸಪ್ಪನಾಯ್ಡು ಮತ್ತು ಅಗ್ನಿಸ್‌ರವರ ಅಪೀಲನ್ನು ಬೊಂಬಾಯಿ ಹೈಕೋರ್ಟಿಗೆ ವರ್ಗಾಯಿಸಲು ಸುಪ್ರೀಂ ಕೋರ್ಟಿನ ರಜಾ ಕಾಲದ ನ್ಯಾಯಾಧೀಶರಾದ ಜಸ್ಟಿಸ್ ಮೆಹರ್‌ಚಂದ್ ಮಹಾಜನರವರು ಕ್ರಿ ಪ್ರೊ ಕೋಡಿನ ೫೭೭ನೇ ನಿಬಂಧನೆ ಪ್ರಕಾರ ಆಜ್ಞೆ ಮಾಡಿರುವಾಗೆ

ಕೋ ಆಪರೇಟಿವ್ ಸೊಸೈಟಿ

ಮೈಸೂರು, ೩೦

ಮೈಸೂರು ಕೋ-ಆಪರೇಟಿವ್ ಸೊಸೈಟಿಯಲ್ಲಿ ಇತ್ತೀಚೆಗೆ ನಡೆದ ಪ್ರಕರಣದಿಂದ ಉದ್ಭವಿಸಿರುವ ಪರಿಸ್ಥಿತಿಯ ಮತ್ತು ಸೊಸೈಟಿಯ ವಿದ್ಯಮಾನಗಳನ್ನು ವಿವರಿಸಲು ನೆನ್ನೆ ದಿನ ಸೊಸೈಟಿಯ ಕಟ್ಟಡದಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಸೊಸೈಟಿಯ ಮಾಜಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ಮೇಲೆ ಅವಿಶ್ವಾಸ ನಿರ್ಣಯವನ್ನು ಮಾಡಿದ ನಂತರ ವ್ಯವಹಾರವು ನ್ಯಾಯಾಲಯವನ್ನು ಹತ್ತಿ, ಅನಂತರ ಅದು ಬಿ ದಕ್ಕೆ ತೆಗೆದುಕೊಳ್ಳಲ್ಪಟ್ಟಿ ಸಂಬಂಧವಾದ ವಿಚಾರಗಳನ್ನು ಕುರಿತು ತಿಳ್ಸಿದಾದ ಜ ಆರ್ ಜೋಸೈರ್‌ರವರು ಒಂದು ಹೇಳಿಕೆಯನ್ನಿತ್ತರು. ಹೊಸ ಡೈರೆಕ್ಟರುಗಳೂ ಅಧಿಕಾರ ವರ್ಗದವರೂ ಈಗ ಸೊಸೈಟಿಯ ಆಡಳಿತವನ್ನು ವಹಿಸಿಕೊಂಡು ಮುಂದೆ ಸುವ್ಯವಸ್ಥೆಯಿಂದ ನಡೆಸಲು ಏರ್ಪಾಡು ಮಾಡಿರುವುದಾಗಿ ತಿಳಿಸಿದರು. ಸೊಸೈಟಿಯ ಭದ್ರತೆ ಮತ್ತು ವ್ಯವಹಾರಗಳಿಗೆ ಯಾವ ವಿಧದಲ್ಲೂ ಅಪಾಯವುಂಟಾಗಿಲ್ಲವೆಂದು ಅಂಕಿ ಅಂಶಗಳ ಮೂಲಕ ಉಪಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ವಿವರಿಸಿ ಇನ್ನು ಮುಂದೆ ಕೆಲಸ ಕಾರ್ಯಗಳು ಕ್ರಮಬದ್ಧವಾಗಿ ನಡೆಯುವುವೆಂಬ ಭರವಸೆಯನ್ನು ವ್ಯಕ್ತಪಡಿಸಿದರು.

ಸೊಸೈಟಿಯಲ್ಲಿ ಕೆಲವು ವರ್ಷಗಳಿಂದ ನಡೆದ ಅವ್ಯವಸ್ಥೆಗಳನ್ನು ಅಡ್ವೋಕೇಟ್ ಶ್ರೀ ಕೆ. ಪುಟ್ಟಸ್ವಾಮಿಯವರು ವಿವರಿಸಿ ಇನ್ನು ಮುಂದೆ ಅವುಗಳು ಸರಿಹೋಗುವುವೆಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಕಾರ್ಯದರ್ಶಿಗಳಾದ ಶ್ರೀ ಬಿ ಎಸ್ ತಾಂಡವ ಮೂರ್ತಿಯವರು ಧನ್ಯವಾದಗಳನ್ನು ಸಲ್ಲಿಸಿ, ಸೊಸೈಟಿಯ ಪುರೋಭಿವೃದ್ಧಿಗೆ ಸಕಲರ ಸಹಾಯವನ್ನು ಕೋರಿದರು.

ವಿಮಾನಿನ ಮಳೆ

ಗುಜರಾತಿನ ಕಾತ್ಲಾಲ್ ಎಂಬ ಚಿಕ್ಕ ಊರಿನಲ್ಲಿ ಕಳೆದ ವಾರ ಭಾರಿ ಮಳೆಯಾದಾಗ ಅದರಲ್ಲಿ ಸಣ್ಣ ಸಣ್ಣ ಬಿಳಿಯ ಮೀನುಗಳ ಇದ್ದುವೆಂದೂ ಜನರು ಪಾತ್ರೆಗಳನ್ನಿಟ್ಟು ಅವನ್ನು ಶೇಖರಿಸಿದರೆಂದೂ ವರದಿಯಾಗಿದೆ.

ಕಾಶ್ಮೀರದ ಅಧಿಪತಿಯಾಗಲು ಕರಣ್‌ಸಿಂಗರ ಇಚ್ಛೆಯಿಲ್ಲ

ಕಾಶ್ಮೀರದ ಚುನಾಯಿತ ಅಧಿಪತಿಯಾಗಲು ಈಗಿನ ಯುವರಾಜರಾದ ಕರಣ್‌ಸಿಂಗರು ಒಪ್ಪುತ್ತಿಲ್ಲವೆಂದು ಹೇಳಲಾಗಿದೆ. ಈ ಸಂಬಂಧವಾಗಿ ಅವರು ನೆಹರೂರವರಿಗೆ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದಾಗಿಯೂ ಗೊತ್ತಾಗಿದೆ.

ಗಾಂಧೀ ಸ್ಮಾರಕಕ್ಕಾಗಿ ನಾಲ್ಕು ಮ್ಯೂಸಿಯಂಗಳು

ಗಾಂಧೀಜಿಯ ಸ್ಮಾರಕಾರ್ಥವಾಗಿ ರಾಜಘಾಟ್ ಸೇವಾ ಗ್ರಾಮ ಸಬರಮತಿ ಆಶ್ರಮ ಮತ್ತು ಮಧುರೆಯಲ್ಲಿ ಒಂದೊಂದು ಮ್ಯೂಸಿಯಂ ಅನ್ನು ಏರ್ಪಡಿಸಲು ಸ್ಮಾರಕ ನಿಧಿ ಸಮಿತಿಯವರು ನಿರ್ಧರಿಸಿರುವರು. ಅವುಗಳಲ್ಲಿ ಗಾಂಧಿಯವರ ಸಂಬಂಧವಾದ ಎಲ್ಲ ಗ್ರಂಥಗಳನ್ನೂ, ಅವರು ಉಪಯೋಗಿಸುತ್ತಿದ್ದ ಪದಾರ್ಥಗಳನ್ನೂ ಅವರ ಕಾಗದ ಪತ್ರಗಳ ಫೋಟೋಗಳನ್ನೂ ಇಡಲಾಗುವುದೆಂದು ಗೊತ್ತಾಗಿದೆ. ಅಲ್ಲದೆ ೧೦೦ ಸ್ಮಾರಕ ಕಂಬಗಳನ್ನೂ ನೆಡಲು ನಿರ್ಧಾರವಾಗಿದೆ.

ರಾಷ್ಟ್ರಾಧ್ಯಕ್ಷರಿಂದ ಶೇ|| ೪೦ರಷ್ಟು ಸಂಬಳ ಖೋತಾ

ರಾಷ್ಟ್ರಾಧ್ಯಕ್ಷರು ತಮಗೆ ಕೊಡಲಾಗುತ್ತಿರುವ ಹತ್ತು ಸಾವಿರ ರೂ ಸಂಬಳದಲ್ಲಿ ಶೇ|| ೪೦ ರಷ್ಟನ್ನು ತಾವಾಗಿಯೇ ಕಡಿಮೆ ಮಾಡಿಕೊಂಡು ಕಳೆದ ಜೂನ್‌ನಿಂದ ೬ ಸಾವಿರ ರೂ ಗಳನ್ನು ಮಾತ್ರ ಪಡೆಯುತ್ತಿರುವರೆಂದು ವರದಿಯಾಗಿದೆ. ಮುಂದಿನ ಅಧ್ಯಕ್ಷರ ಸಂಬಳವನ್ನು ಕಡಿಮೆ ಮಾಡುವ ಬಗ್ಗೆ ಪಾರ್ಲಿಮೆಂಟಿನಲ್ಲಿ ಮಸೂದೆಯನ್ನು ತರಲಾಗುವುದು.

ಐದು ಸಮುದ್ರಗಳಿಗೆ ಸಂಪರ್ಕ

ರಷ್ಯದ ವೋಲ್ಗಾ ಮತ್ತು ಡಾನ್ ನದಿಗಳನ್ನು ನೌಕಾ ಪ್ರಯಾಣಕ್ಕನುಕೂಲವಾಗುವಂತೆ ೬೫ ಮೈಲಿಗಳ ಭಾರಿ ಕಾಲುವೆಗಳನ್ನು ತೋಡಿ, ಬಿಳಿಯ ಸಮುದ್ರ, ಬಾಲ್ಟಿಕ್ ಸಮುದ್ರ, ಕ್ಯಾಸ್ಪಿಯನ್ ಸಮುದ್ರ, ಅಜೋವ್ ಮತ್ತು ಕಪ್ಪು ಸಮುದ್ರಗಳಿಗೆ ಸಂಪರ್ಕವನ್ನೇರ್ಪಡಿಸಲಾಗಿದೆ. ಕಾಲುವೆಗೆ ಸಂಬಂಧಿಸಿದಂತೆ ಭಾರಿ ವಿದ್ಯುತ್‌ಕೇಂದ್ರವೂ ಜಲಾಶಯವೂ ನೀರಾವರಿ ವ್ಯವಸ್ಥೆಯೂ ಆಗಿದೆ.

ವಿದ್ಯಾಭ್ಯಾಸಕ್ಕೆ ೫೦ ಕೋಟಿ ವೆಚ್ಚವಾದರೂ ಫಲವಿಲ್ಲ

ಹಿರಿಯ ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿಗಳ ಹೇಳಿಕೆ

ಸ್ವಂ ಸು. ಪ್ರೋ] ಬೆಂಗಳೂರು ೩೦

ಈ ದಿನ ಹಿರಿಯ ಶಾಸನ ಸಭೆಯು ಮುಕ್ತಾಯಗೊಂಡಿತು. ವಿದ್ಯಾ ಮಂತ್ರಿ ಶ್ರೀ ರಾಮಚಂದ್ರರಾಯರು ಸರ್ಕಾರದ ವಿದ್ಯಾಭ್ಯಾಸದ ನೀತಿಯ ಬಗ್ಗೆ ವಿವರಣೆಯೊಂದನ್ನಿತ್ತು, ೧೯೧೭ ರಿಂದ ಇದುವರೆಗೆ ವಿದ್ಯಾಭ್ಯಾಸಕ್ಕಾಗಿ ಸುಮಾರು ೫೦ ಕೋಟಿ ರೂ ವೆಚ್ಚವಾಗಿರುವುದೆಂದೂ, ಈಗ ದೊರೆಯುತ್ತಿರುವ ವಿದ್ಯಾಭ್ಯಾಸದಿಂದ ಹೆಚ್ಚು ಪ್ರಯೋಜನವು ಸಿಕ್ಕುತ್ತಿಲ್ಲವೆಂದೂ ತಿಳಿಸಿ, ಸರ್ಕಾರದವರು ಹೆಚ್ಚು ಫಲದಾಯಕವಾದ ಶಿಕ್ಷಣ ಕ್ರಮವನ್ನು ಏರ್ಪಡಿಸಲು ಆಲೋಚಿಸುತ್ತಿರುವುದಾಗಿಯೂ ಹೇಳಿದರು. ಈ ಬಗ್ಗೆ ಸದಸ್ಯರ ಸಲಹೆಗಳನ್ನು ಅವರು ಕೋರಿದರು.

ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಎಂ. ಪಿ ಎಲ್ ಶಾಸ್ತ್ರಿಯವರ ಅಲ್ಪಕಾಲಾವಧಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಸಚಿವರು ಪಾರಿಭಾಷಿಕ ಕಾಲೇಜುಗಳ ಸ್ಥಾನಗಳ ಸಂಬಂಧವಾಗಿ ಈಚೆಗೆ ಬದಲಾವಣೆ ಮಾಡಿ ಹೊಸ ಆಜ್ಞೆಯನ್ನು ಸರ್ಕಾರದವರು ಮಾಡಿರುವುದು ಆಯಾ ಕಾಲೇಜುಗಳ ಸಮಿತಿಗಳ ವರದಿಯ ಮತ್ತು ಶಿಫಾರಸಿನ ಮೇಲೆ ಎಂದು ತಿಳಿಸಿದರು. ಈ ಹೊಸ ಆಜ್ಞೆಯಿಂದ ಹಿಂದುಳಿದ ವರ್ಗದವರಿಗೆ ಶೇ|| ೫೦|| ರಷ್ಟು ಲಭ್ಯವಾಗುವುದೆಂದು ಸಚಿವರು ಒಪ್ಪಿದರು. ಹಿಂದುಳಿದವರು ಯಾರೆಂಬುದನ್ನು ಗೊತ್ತು ಮಾಡಲು ರಾಷ್ಟ್ರಾಧ್ಯಕ್ಷರ ಸಮಿತಿಯು ಬರುವವರೆಗೂ ಈಗಿನ ಏರ್ಪಾಡೇ ಮುಂದುವರಿಯುವುದೆಂದೂ ತಿಳಿಸಿದರು. ಹೊಸ ಆಜ್ಞೆ ಹೊರಡಿಸಲು ಸಮಿತಿಗಳ ವಿವರಗಳನ್ನು ಪಡೆಯುವುದು ಅವಶ್ಯಕವಾಗಿರಲಿಲ್ಲವೆಂದು ಸರ್ಕಾರದ ಭಾವನೆಯಾಗಿತ್ತೆಂದೂ ಅವರು ತಿಳಿಸಿದರು.

ಶ್ರೀ ಟಿ ಎಸ್ ರಾಜಗೋಪಾಲ ಅಯ್ಯಂಗಾರ್ಯರು ಹಾಕಿದ ಪ್ರಶ್ನೆಗೆ ಉತ್ತರವಾಗಿ ಸಚಿವರು ಹಲವು ಕಾಲೇಜುಗಳಲ್ಲಿ ಲ್ಯಾಬೊರೇಟರಿ ಸಾಮಗ್ರಿಗಳು ದೊರೆಯದೆ ಒಂದು ಕಾಲೇಜಿನಿಂದ ಮತ್ತೊಂದಕ್ಕೆ ವಿದ್ಯಾರ್ಥಿಗಳು ಹೋಗುತ್ತಿರುವುದಾಗಿ ಹೇಳಿದರು.

ಕಾಲು ಜಾರಿ ನೆಹ್ರೂರವರಿಗೆ ಪೆಟ್ಟು

ದೆಹಲಿಯ ಪಾರ್ಲಿಮೆಂಟ್ ಭವನದ ಮೆಟ್ಟಿಲುಗಳನ್ನು ನೆನ್ನೆ ಬೆಳಿಗ್ಗೆ ನೆಹರುರವರು ಹತ್ತುತ್ತಿದ್ದಾಗ ಅವರ ಕಾಲು ಜಾರಿ, ಎಡ ಮುಂಡಿಗೆ ಕೊಂಚ ಗಾಯವಾಯಿತೆಂದೂ, ವೈದ್ಯರು ಚಿಕಿತ್ಸೆ ನಡೆಸಿದರೆಂದೂ ವರದಿಯಾಗಿದೆ. ಅವರು ಪಾರ್ಲಿಮೆಂಟಿನಲ್ಲಿ ತಮ್ಮ ಕೆಲಸವನ್ನು ಕುಂಟುತ್ತಲೇ ಮಾಡುತ್ತಿದ್ದರೆಂದು ಹೇಳಲಾಗಿದೆ.

○ ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞ ಚಳುವಳಿಗೆ ಕಾಶಿಯ ಬಳಿ ಹಮಾರ್‌ಪುರದಲ್ಲಿರುವ ಜಮೀನುದಾರರು ತಮ್ಮ ಭೂಮಿಯೆಲ್ಲವನ್ನೂ ೪೮ ಬಡ ಕುಟುಂಬಗಳಿಗೆ ಹಂಚುವ ಸಲುವಾಗಿ ದಾನ ಮಾಡಿರುವರು.

ವಿಶ್ವಸಂಸ್ಥೆಯನ್ನು ಪಾಕಿಸ್ತಾನವು ತ್ಯಜಿಸಬೇಕು

ವಿಶ್ವ ಸಂಸ್ಥೆಯನ್ನು ಪಾಕಿಸ್ತಾನವು ತ್ಯಜಿಸಬೇಕೆಂದು ಲಾಹೋರಿನಲ್ಲಿ ಸೇರಿದ ಪಶ್ಚಿಮ ಪಂಜಾಬಿನ ಮುಸ್ಲಿಂ ಲೀಗಿನ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ

ಈಜಿಪ್ಟಿನ ಕ್ರಾಂತಿಯ ಸೇನಾಪತಿ ಸ್ವಸ್ಥಾನಕ್ಕೆ

ಈಜಿಪ್ಟಿನ ಮಿಲಿಟರಿ ಮುಖಂಡರಾದ ನಗೀಬರು ತಮ್ಮ ಹಿಂದಿನ ಜನರಲ್ ಸ್ಥಾನಕ್ಕೆ ಹೋಗಿರುವರು. ಫರೂಕರು ತಮಗೆ ಕೊಟ್ಟಿದ್ದ ಫೀಲ್ಡ್ ಮಾರ್ಷಲ್ ಪದವನ್ನು ಬಿಟ್ಟು, ಪ್ರಧಾನ ಸೈನ್ಯಾಧಿಪತ್ಯದಿಂದ ಸಣ್ಣ ಸ್ಥಾನಕ್ಕೆ ಇಳಿದಿರುತ್ತಾರೆ

ವಿಮಾನದಲ್ಲಿ ಅರಮನೆ

ಅರೇಬಿಯದ ದೊರೆ ಇಬ್ನ್ ಸಾದರಿಗಾಗಿ ಅಮೆರಿಕದ ಇಂಜಿನಿಯರ್ ಒಬ್ಬರು ಸ್ಕೈಮಾಸ್ಟರ್ ಪ್ರಯಾಣಿಕರ ವಿಮಾನವನ್ನು ಅರಮನೆಯಂತೆ ಪರಿವರ್ತಿಸಲಾಗುವುದು. ಅದರಲ್ಲಿ ಸಿಂಹಾಸನ, ರಾಜ ತಿನ್ನೆಯುಳ್ಳ ಮಲಗುವ ಕೋಣೆ, ದಕ್ಷಿಣ ದಿಕ್ಕು ಇವೇ ಮುಂತಾದ ಪುಗನನ್ನು ಅಳವಡಿಸಲಾಗುವುದು.

ಹುಣಸೂರು ವಕೀಲರ ಸಸ್ಪೆಂಡ್

ವಿರ್ಜೆ ಪೌರಸಭೆಯ ವಕೀಲರು ಹುಣಸೂರಿನ ವಕೀಲರಾದ ಶ್ರೀ ಕೃಷ್ಣರಾಯರಿಗೆ ವಹಿಸಿದ್ದ [illegible] ರೂ ಗಳನ್ನು ಸಕಾಲದಲ್ಲಿ ವಾಪಸು ಮಾಡದ್ದಕ್ಕಾಗಿ ಹೈಕೋರ್ಟಿನವರು ಅವರನ್ನು [illegible] ತಿಂಗಳ ಕಾಲ ಸಸ್ಪೆಂಡು ಮಾಡಿರುತ್ತಾರೆ. ಅವರ ಮೇಲಿನ ನೊಕದ್ದಮೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ವಾಪಸು ತೆಗೆದುಕೊಳ್ಳಲು ಒಪ್ಪಿಕೊಟ್ಟಿದ್ದರೂ ಸಹ, ಹೈಕೋರ್ಟಿನವರು ಇಂತಹ ವ್ಯವಹಾರಗಳಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ

ಬೆಂಗಳೂರು

ಕಲಾ ಮಂದಿರದ

ಸಹಾಯಾರ್ಥವಾಗಿ

ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ

2-8-52 ನೇ ಶನಿವಾರ ಸಂಜೆ

ಕವಿ ಪುಂಗವ

ಮತ್ತು **ಆ ರಾತ್ರಿ**

ನಾಟಕಗಳು

ನೃತ್ಯ ಮತ್ತು ವಿನೋದಗಳು

3-8-52 ನೇ ಭಾನುವಾರ ಸಂಜೆ

ಕವಿ ಪುಂಗವ ಮತ್ತು

ಕಲ್ಕುಂಟಿ ಕಮಂಗಿ

ನಾಟಕಗಳು ಮತ್ತು

ಸಂಗೀತ ವಿದುಷಿ ಶ್ರೀಮತಿ

ಜಿ. ಚನ್ನಮ್ಮನವರ ಸಂಗೀತ

ನೃತ್ಯ ಮತ್ತು ವಿನೋದಗಳೂ ಉಂಟು

ಕಲೆಗಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ

ಸಹಾಯ ಮಾಡಿ

ಕಳ್ಳಭಟ್ಟಿ ಸಾರಾಯಿಗಾಗಿ ಹೆಂಗಸಿಗೆ ೧೦೦ ರೂ. ದಂಡ

[ಸ್ವಂತ ವರದಿಗಾರರಿಂದ] ಚಾಮರಾಜನಗರ, ಜು.

ಇಲ್ಲಿನ ಅಬ್ಕಾರಿ ಡೀಲ್ಜ್ ಇನ್ಸ್‌ಪೆಕ್ಟರರಾದ ಶ್ರೀ ಎಸ್ ರುದ್ರಪ್ಪನವರು, ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಶ್ರೀ ಕೆ ಸಿ ನರಸಿಂಹಯ್ಯನವರು ಮತ್ತು ಇತರ ಸಿಬ್ಬಂದಿಯೊಡನೆ ಗುಂಡ್ಲುಪೇಟೆ ತಾಲ್ಲೂಕು ತಿಂಕಹಳ್ಳಿ ಗ್ರಾಮಕ್ಕೆ ಕಳೆದ ೨೧ ನೇ ತಾ|| ತೆರಳಿ ಪುಟ್ಟಮ್ಮ ಎಂಬಾಕೆಯು ಕಳ್ಳಭಟ್ಟಿ ಸಾರಾಯಿಯನ್ನು ತಯಾರು ಮಾಡುತ್ತಿದ್ದವನ್ನು ಪತ್ತೆಹಚ್ಚಿ, ೧ ಗ್ಯಾಲನ್ ಸಾರಾಯಿಯನ್ನೂ ಮತ್ತು ಇನ್ನೂ ನಾಲ್ಕು ಗ್ಯಾಲನ್ನಿಗಾಗುವಷ್ಟು ಸಾಮಾನುಗಳನ್ನು ವಶ ಪಡಿಸಿಕೊಂಡು ಆಕೆಯನ್ನು ೨೨ ನೇ ತಾ|| ಸ್ಪೆಷಲ್ ನ್ಯಾಯಾಧೀಶರ ಕೋರ್ಟಿನಲ್ಲಿ ಹಾಜರು ಪಡಿಸಿದರು. ನ್ಯಾಯಾಧೀಶರು ಅಕೆಗೆ ನೂರು ರೂ ದಂಡ ತಪ್ಪಿದರೆ ೧ ತಿಂಗಳು ಸಜಾ ವಿಧಿಸಲಾಯಿತು

ಭಿಕ್ಷುಕತನ ಒಂದು ಕಲೆ

ಬೊಂಬಾಯಿ ನಗರದಲ್ಲಿ ಭಿಕ್ಷುಕರ ಸಂಖ್ಯೆ [illegible] ರೂ ಗಳನ್ನು [illegible] ಸಾವಿರ [illegible] ಕಳೆದ ಒಂದು [illegible] [illegible]

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible] ಸಂಗೀತ [illegible] ಸಂಗೀತ (ವಿವರಣೆ; ಅಕ್ಷರ ಮತ್ತು [illegible] ಸಂಗೀತವನ್ನು ವಿವರಿಸುವುದು. [illegible] ಗಿದೆ)

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ರೋಕ ಪ್ರದರ್ಶನದ ನೂಕು ನುಗ್ಗಲಿನಲ್ಲಿ ಐವರ ಮರಣ

ಅರ್ಜೆಂಟೈನದ ಅಧ್ಯಕ್ಷರ ಪತ್ನಿ ಎವಾ ಪೆರಾನರ ಶವದ ಪೆಟ್ಟಿಗೆ ಬಳಿ ದುಃಖವನ್ನು ವ್ಯಕ್ತಪಡಿಸುತ್ತಿದ್ದಾಗ ವಾಜಿ ಉಪ ಕಾರ್ಯದರ್ಶಿ ಜನರಲ್ ಜ್ಯಾನ್ ಎಸ್ಪಿರ್ಡರವರು ಹೃದಯ ಕ್ರಿಯೆ ನಿಂತು ಮೃತರಾದರು ದಿವಂಗತ ರಾಣಿಯ ಅಂತ್ಯ ದರ್ಶನದ ನೂಕು ನುಗ್ಗಲಿನಲ್ಲಿ ಇವರಲ್ಲದೆ ಮೂವರು ಮಹಿಳೆಯರೂ, ಒಬ್ಬ ಪೋಲೀಸನೂ ಸತ್ತುಹೋದರು

ಕಲ್ಲಿನಿಂದ ಹೊಡೆದು ಕಳ್ಳನ ಕೊಲೆ

ತಿರುಪತಿ ಬಳಿ ಏಕಾಂಬರ ಕುಪ್ಪಂ ಎಂಬ ಹಳ್ಳಿಯವನಾದ ಹೈದರ್ ಎಂಬ ಬಾಲಕ ಕಳ್ಳನು ಮನೆಯೊಂದಕ್ಕೆ ಕನ್ನ ಹಾಕುವ ಪ್ರಯತ್ನದಲ್ಲಿದ್ದಾಗ ಕಲ್ಲಿನಿಂದ ಹೊಡೆದು ಮಾರಣಾಂತಿಕವಾಗುವಂತೆ ಮಾಡಿದರೆಂದೂ, ಆಸ್ಪತ್ರೆಗೆ ಸಾಗಿಸುತ್ತಿದ್ದಾಗ ಅವನು ಮೃತಪಟ್ಟನೆಂದೂ ವರದಿಯಾಗಿದೆ ಈ ಸಂಬಂಧದಲ್ಲಿ ಪೋಲೀಸರು ೧೧ ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ. ೫೦ ವಯಸ್ಸಿನ ಕೈದಿಯನು ಸುಮಾರು ೨೦ ವರ್ಷಗಳ ಕೈದುವಾಸವನ್ನ ನೆ ಅನುಭವಿಸಿದ್ದನು

ನಗೀಬರ ಕೊಲೆಗೆ ಫರೂಕರ ಪಿತೂರಿಯೇ?

ಈಜಿಪ್ಟಿನಲ್ಲಿ ಕ್ರಾಂತಿ ನಡೆಸಿದ ಸೈನ್ಯಾಧಿಕಾರಿ ಜ|| ನಗೀಬ್ ಮತ್ತು ಮುಖ್ಯ ಸಹಚರನ್ನೂ ಇನ್ನೂ ೧೫ ಮಂದಿ ಸೈನ್ಯಾಧಿಕಾರಿಗಳನ್ನೂ ಕೊಲ್ಲಿಸಬೇಕೆಂದು ರಾಜ ದೊರೆ ಫರೂಕರು ಹದಿನೈದು ದಿನಗಳ ಹಿಂದೆ ಆಲೋಚಿಸಿದ್ದರೆಂದು ಅಲ್ಲಿನ ಮಾಜಿ ಪ್ರಧಾನಿ ಹುಸೇನ್ ಸಿರ್ರಿ ಪಾಷಾರವರ ಬಳಿಯ ಡಾ|| ಮಹಮದ್ ಹುಸೇನ್ ಪಾಷಾರವರು ತಿಳಿಸಿರುತ್ತಾರೆ

ಮಹಾರಾಜಾ ಕಾಲೇಜಿನ ಇತಿಹಾಸಿಕ ಸಂಘ

ರಾಜಧಾನಿಯ ಮಹಾರಾಜಾ ಕಾಲೇಜಿನ ಇತಿಹಾಸಿಕ ಸಂಘದ ಅಧಿಕಾರಿ ವರ್ಗದ ಚುನಾವಣೆಯು ಮೊನ್ನೆ ನಡೆದು ಉಪಾಧ್ಯಾಯರ ಪರವಾಗಿ ಡಾ|| ಎಂ ವಿ ಕೃಷ್ಣರಾಯರು ಸಂಘದ ಅಧ್ಯಕ್ಷರಾಗಿಯೂ, ಶ್ರೀ ಕರೂನ್ನಯ್ಯನವರು ಖಜಾಂಚಿಯಾಗಿಯೂ, ವಿದ್ಯಾರ್ಥಿಗಳ ಪರವಾಗಿ ಎಂ ವಿ ಗೋಪಾಲ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಜೆ. ಮರಿಯಪ್ಪನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ವಿಮಾನದಿಂದ ಸಮುದ್ರಕ್ಕೆ ಬಿದ್ದು ಮರಣ

ಟ್ರಿನಿಡಾಡ್‌ದಿಂದ ಬ್ಯೂನೋಸ್ ಏರಿಸ್ಗೆ ೧೫ ಸಾವಿರ ಅಡಿ ಎತ್ತರದಲ್ಲಿ ಹೋಗುತ್ತಿದ್ದ ವಿಮಾನದ ಬಾಗಿಲು ತೆರೆದುಕೊಂಡುದರಿಂದ ಅದರಲ್ಲಿ ಕುಳಿತಿದ್ದ ಅಮೆರಿಕನ್ ಮಹಿಳೆಯೊಬ್ಬಳು ಸಮುದ್ರಕ್ಕೆ ಬಿದ್ದು ಸತ್ತುಹೋದಳೆಂದು ಗೊತ್ತಾಗಿದೆ

ಮೈಸೂರು ಪೇಟೆ ಧಾರಣೆ

		ಪಲ್ಲಕ್ಕೆ ರೂ. ಇಂದ	ರೂ. ಗೆ
ನೆಲಗಡಲೆ	,,	೬.೯.೨	೨೦-೨-೦
ಎಳ್ಳು	,,	೬೭ ೩ ೦	೮೦-೧೪-೦
ಹರಳು ಬೀಜ	,,	೪೨-೧೦-೦	೪೪-೬-೦
ಹುಚ್ಚೆಳ್ಳು	,,	೪೫- -೦	
ಹೊಂಗೆಬೀಜ	,,	೧೫-೦-೦	೧೫-೬-೦
ಹುರುಳಿ	,	೩೯-೧೨-೦	೪೦-೩-೦
ಹೆಸರು	,,	೫೨ ೦ ೮	೫೫-೨-೦
ಅವರೆ	,,	೫೯-೧೪-೦	
ಉದ್ದು	,,	೫೦ ೩ ೦	೬೬-೧೨ ೦
ಹಳಸಂದೆ	,,	೫೨ ೨ ೦	೬೫-೦-೦
ಮೆಣಸಿನಕಾಯಿ			
ಮಣಿ ಗಳ್ಳಿ		೬ ೩ ೦	೧೪-೧೦-೦
ಹುಣಸೇಹಣ್ಣು	,,	೪ ೩-೦	೪-೫-೦
ಸೀಗೆಕಾಯಿ	,,	೩ ೮-೦	೪-೫-೦
ಕೊಬ್ಬರಿ	,,	೫ .೨-೦	೬೪-೧೦-೦
ತೆಂಗಿನಕಾಯಿ ೧೧೦೦		೧೬೩ ೦ ೦	೧೭೬-೦-೦

ಶ್ರೀ ಜಗದಾಂಬಾ ಶಿಶುವಿಹಾರ ಸ್ಥಳ ಬದಲಾವಣೆ

ಇದುವರೆಗೆ ರಾಜಧಾನಿಯ ದಿವಾನರ ರಸ್ತೆಯ ೨೦೫ ನೇ ನಂಬರು ಮನೆಯಲ್ಲಿದ್ದ ಮೇಲ್ಕಂಡ ಶಿಶುವಿಹಾರವನ್ನು ಕಳೆದ ಗುರುವಾರದಿಂದ ಅದೇ ರಸ್ತೆಯಲ್ಲಿ ಸುಮಾರು ಅರ್ಧ ಫರ್ಲಾಂಗು ದಕ್ಷಿಣಕ್ಕಿರುವ ೫೭೮ ನೇ ನಂಬರಿನ ಮನೆಗೆ ವರ್ಗಾಯಿಸಲಾಗಿದೆ. ಮಕ್ಕಳ ಮತ್ತು ಶಾಲಾ ಕಾರ್ಯಕಲಾಪಗಳ ಹಿತದೃಷ್ಟಿಯಿಂದ ಮೇಲ್ಕಂಡ ವಿಶಾಲವಾದ ಭವನಕ್ಕೆ ವರ್ಗಾಯಿಸಲಾಗಿದೆ. ಎಂದಿನಂತೆ ಮಹಾ ಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಬಿ. ಕೃಷ್ಣಮೂರ್ತಿ,
ಡೈರೆಕ್ಟರ್.

SREE GANESHA

TALKIES

From 31-7-52 For 2 Days

Daily 3 Shows

Shakespeare's immortal

Masterpiece

MACBETH

NOTE — Concession for Students and Teachers

NEXT ATTRACTION :—

I WAS A COMMUNIST FOR THE F.B.I

ಒಲಿಂಪಿಯಾ ★ 31-7-52 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಅಜಿತ್ ಪಿಕ್ಚರ್ಸ್‌ರವರ ಮಹೋನ್ನತ ಪೌರಾಣಿಕ ಹಿಂದಿ ಚಿತ್ರ

★ **ವೀರ ಅರ್ಜುನ್** ★

ಪಾತ್ರ:— ನಿರೂಪರಾಯ್, ತ್ರಿಲೋಕ್ ಕಪೂರ್, ಮಹಿಪಾಲ್, ವಸಂತರಾವ್ ಪೈಲ್ವಾನ್ ಮತ್ತು ಅಮೀರ್ ಬಾಯಿ ಕರ್ನಾಟಕಿ

—: ಬೆಳಗಿನ ಪ್ರದರ್ಶನ :— ★ ಮೇಲಾ ★

Edited Printed and Published by A R Nagarajan at Sadhvi Press, D Subbiah Road, Mysore.

ವಿದ್ಯಾಭ್ಯಾಸದ ಸುಧಾರಣೆಗೆ ರಾಧಾಕೃಷ್ಣನ್ನರ ನೆರವು

ಬೆಂಗಳೂರು ೩೧

ಮೈಸೂರು ವಿದ್ಯಾಭ್ಯಾಸದ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ಮಾಡಲು ಸಲಹೆ ಕೊಡುವಂತೆ ಭಾರತದ ಉಪಾಧ್ಯಕ್ಷರಾದ ಡಾ|| ಸರ್ವಪಲ್ಲಿ ರಾಧಾಕೃಷ್ಣನ್‌ರವನ್ನು ಸರ್ಕಾರದವರು ಕೋರುವರೆಂದು ಕೈಗಾರಿಕಾ ಸಚಿವ ಶ್ರೀ ಟಿ ಸಿದ್ಧಲಿಂಗಯ್ಯನವರು ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ತಿಳಿಸಿದರು.

ವಿದ್ಯಾ ಇಲಾಖೆಯ ಹೊಸ ಪ್ರೊಬೇಷನರುಗಳು

ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಶಿಫಾರಸಿನಂತೆ ಶ್ರೀಗಳಾದ ಎಸ್ ಮಂಚಯ್ಯ, ಎಂ.ಸಿ. ಮುನಿಸ್ವಾಮಿ, ಎಸ್ ಹಾಲಪ್ಪ, ಕೆ. ಮಲ್ಲಪ್ಪ, ಜಿ ಎ. ತಿಮ್ಮರಾಯಶೆಟ್ಟಿ, ಟಿ ರಾಮಯ್ಯ, ಕೆ ಪಿ. ಸುರೇಂದ್ರನಾಥ್ ಮತ್ತು ಎ. ನಂಜುಂಡಸ್ವಾಮಿಯವರನ್ನು ಶಿಕ್ಷಣ ಶಾಖೆಯ ಪ್ರೊಬೇಷನರರಾಗಿ ಸರ್ಕಾರದವರು ತೆಗೆದುಕೊಂಡಿರುವರು

ಅಮರನಾಥಕ್ಕೆ ಡಾ|| ರಾಧಾಕೃಷ್ಣನ್

ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ನೂರು ಮೈಲಿ ದೂರದಲ್ಲಿರುವ ಅಮರನಾಥ್ ಎಂಬ ೧೩ ಸಾವಿರದ ಅಡಿ ಎತ್ತರದ ಪರ್ವತ ಕ್ಷೇತ್ರಕ್ಕೆ ಸಧ್ಯದಲ್ಲೇ ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ತೆರಳಲಿರುವರು. ಆ ಕ್ಷೇತ್ರದಲ್ಲಿ ಮಂಜಿನ ಗೆಡ್ಡೆಯು ಕರಗಿ ಶಿವನ ಆಕಾರವಾಗಿ ಪರಿಣಮಿಸುವುದೆಂದು ಹೇಳಲಾಗಿದೆ. ದೇವರ ದರ್ಶನ ಪಡೆಯಲು ಆಗಸ್ಟ್ ೫ ನೇ ತಾ|| ಜಾತ್ರೆಯು ನಡೆಯುವುದು

ಚಾಮರಾಜನಗರದ ಪೌರಸಭಾ ಚುನಾವಣೆ ತಕರಾರು ಅರ್ಜಿ

ಚಾಮರಾಜನಗರದ ಪೌರಸಭಾ ಸದಸ್ಯರಾದ ಶ್ರೀ ಬಿ ನಾರಾಯಣ್‌ರವರ ಚುನಾವಣೆಯು ಕ್ರಮಬದ್ಧವಾಗಿಲ್ಲವೆಂದು ಅವರ ಪ್ರತಿ ಸ್ಪರ್ಧಿಯಾಗಿದ್ದ ಶ್ರೀ ವೆಂಕಟಶೆಟ್ಟರು ಇಲ್ಲಿನ ಸಬಾರ್ಡಿನೇಟ್ ಕೋರ್ಟಿನಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿದ ಬಗ್ಗೆ ಮೊನ್ನೆ ನ್ಯಾಯಾಧೀಶರಾದ ಶ್ರೀ ಗುರುನಂಜಯ್ಯನವರು ತೀರ್ಪಿತ್ತು, ಅರ್ಜಿಯನ್ನು ಖರ್ಚು ಸಮೇತ ವಜಾ ಮಾಡಿರುತ್ತಾರೆ. ಚುನಾವಣೆಯಲ್ಲಿ ಶ್ರೀ ನಾರಾಯಣ್‌ರವರು ಲಂಚ ಕೊಟ್ಟರೆಂದು ದೂರು ಕೊಡಲಾಗಿತ್ತು ಆಪಾದನೆ ಆಧಾರ ರಹಿತವಾದುದೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು

ಸೌರಾಷ್ಟ್ರದಲ್ಲಿ ಪಡಿತರ ರದ್ದು

ಸೌರಾಷ್ಟ್ರ ಸಂಸ್ಥಾನದಲ್ಲಿ ಆಹಾರ ಪಡಿತರವನ್ನು ನಾಳೆಯಿಂದ ಪೂರ್ಣವಾಗಿ ರದ್ದುಗೊಳಿಸಲಾಗುವುದು. ಆಹಾರದ ಹತೋಟಿಯನ್ನು ತೆಗೆಯುವುದರಲ್ಲಿ ಆ ಸಂಸ್ಥಾನವು ನಾಲ್ಕನೆಯದು

ಇಟಲಿಯಲ್ಲಿ ಫರೂಕರು

ಈಜಿಪ್ಟಿನ ಮಾಜಿ ದೊರೆ ಫರೂಕರು ದೇಶಭ್ರಷ್ಟರಾಗಿ ಭಾನುವಾರ ಇಟಲಿಯ ನೇಪಲ್ಸ್ ನಗರದಲ್ಲಿ ಇಳಿದರು ಅಲ್ಲಿ ಒಂದು ವಾರವಿದ್ದು ಅವರು ಅಮೆರಿಕಕ್ಕೆ ತೆರಳುವರೆಂದು ಗೊತ್ತಾಗಿದೆ

ಟೆಲಿಫೋನ್ ನಂ. 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೩೧-೭-೧೯೫೨ [ಸಂಚಿಕೆ ೫

ಮೈಸೂರಿನಲ್ಲೂ ಹಿಂದಿ ವಿರುದ್ಧದ ಸತ್ಯಾಗ್ರಹ

ನೇಪಾಳ ಕಾಂಗ್ರೆಸ್ ಮುಖಂಡರ ಮೇಲೆ ಧಾಳಿ

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿ ನೆನ್ನೆ ಸಂಜೆ ಸೇರಿದ್ದ ೧೦ ಸಹಸ್ರ ಜನರ ಸಭೆಯಲ್ಲಿ ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ಬಿಶ್ವೇಶ್ವರ ಪ್ರಸಾದ ಕೋಯಿರಾಲಾರವರು ವೇದಿಕೆಯನ್ನು ಹತ್ತುತ್ತಿದ್ದಾಗ ಗಲಾಟೆಯಾಗಿ ಜನರು ಅಧ್ಯಕ್ಷರು, ಅವರ ಪತ್ನಿ ಮತ್ತು ಅಲ್ಲಿನ ಮಂತ್ರಿಮಂಡಲಕ್ಕೆ ರಾಜೀನಾಮೆ ಇತ್ತ ಮೂವರು ಸಚಿವರನ್ನು ಬಲವಾಗಿ ಹೊಡೆದರೆಂದು ವರದಿಯಾಗಿದೆ ಕೋಯಿರಾಲಾ ವಿರುದ್ಧವ ಕೂಗು ಹಾಕುತ್ತಾ, ಕಾರುಗಳ ಮೇಲೆ ಕಲ್ಲುಗಳನ್ನು ಎಸೆಯಲಾಯಿತು. ಸಭಾ ವೇದಿಕೆಯನ್ನು ಆಕ್ರಮಿಸಿದ ಜನರು ಅಧ್ಯಕ್ಷರನ್ನು ಕೆಳಕ್ಕೆ ಕೆಡವಿ, ೪ ನಕ್ಷತ್ರಗಳುಳ್ಳ ಆ ಕಾಂಗ್ರೆಸ್ಸಿನ ಬಿಳಿಯ ಬಾವುಟವನ್ನು ಚೂರು ಚೂರಾಗಿ ಹರಿದು, ಕಾಲಿನಲ್ಲಿ ತುಳಿದರೆಂದೂ, ಕಪ್ಪು ಧ್ವಜಗಳನ್ನು ಮೇಲಕ್ಕೆ ಎಸೆದು ಪಾದರಕ್ಷೆಗಳನ್ನು ಮುಖಂಡರಿಗೆ ತೋರಿಸಿ ಹೆದರಿಸಿದರೆಂದೂ ವರದಿಯಾಗಿದೆ ಮುಖಂಡರು ಬಹು ಪ್ರಯಾಸಪಟ್ಟು, ಕಾರಿನಲ್ಲಿ ತಮ್ಮ ಸ್ಥಾನಗಳಿಗೆ ತೆರಳಬೇಕಾಯಿತು ಗಲಭೆಯು ಕಮ್ಯೂನಿಸ್ಟರಿಂದ ಪ್ರಚೋದಿತವಾಗಿರುವುದೆಂದು ಭಾವಿಸಲಾಗಿದೆ

ಕೇಂದ್ರದ ಮಹಿಳಾ ಪಾರ್ಲಿಮೆಂಟರಿ ಕಾರ್ಯದರ್ಶಿ

ಪಾಟ್ನಾದ ಮಹಿಳಾ ಶಿಕ್ಷಣ ಕಾಲೇಜಿನ ಪ್ರಾಧ್ಯಾಪಿಕೆಯಾದ ಲಕ್ಷ್ಮಿ ಮೆನನ್ನರನ್ನು ಕೇಂದ್ರ ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ ತೆಗೆದುಕೊಳ್ಳಲಾಗಿದೆ.

ದಕ್ಷಿಣ ಕೊರಿಯಾ ಮಂತ್ರಿಗಳ ರಾಜೀನಾಮೆ

ಆಹಾರ ಧಾನ್ಯ ಮತ್ತು ಗೊಬ್ಬರದ ಸಂಬಂಧವಾಗಿ ಜನರು ೩ರಿಂದ ೫ ರಷ್ಟು ಅಧಿಕ ಬೆಲೆ ತೆರುವಂತೆ, ಕಾಳ ಸಂತೆಯ ವರ್ತಕರು ಮಾಡಿರುವರೆಂದೂ, ಇದರಲ್ಲಿ ಸರ್ಕಾರದವರ ಪಾತ್ರವೂ ಇರುವುದೆಂದೂ ಒಂದು ಆಪಾದನೆ ಸಂಬಂಧವಾಗಿ ದಕ್ಷಿಣ ಕೊರಿಯದ ೪ ಜನ ಮಂತ್ರಿಗಳು ರಾಜೀನಾಮೆಯಿತ್ತಿರುವರು.

ಹಿಂದಿ ವಿರುದ್ಧವಾಗಿ ಸಂಸ್ಥಾನದಲ್ಲಿ ಸತ್ಯಾಗ್ರಹ

ಬೆಂಗಳೂರು ೩೧

ಇಲ್ಲಿನ ದ್ರಾವಿಡ ಸಂಘದವರು ಹಿಂದಿ ವಿರುದ್ಧ ಚಳುವಳಿಯ ನಾಯಕ ಇ ವಿ ರಾಮಸ್ವಾಮಿ ನಾಯ್ಕರ ಆಜ್ಞೆಯಂತೆ ನಾಳೆ ಹಿಂದಿ ವಿರುದ್ಧದ ಸತ್ಯಾಗ್ರಹವನ್ನು ನಡೆಸಲು ನಿರ್ಧರಿಸಿರುತ್ತಾರೆ ಮೈಸೂರು, ಬೆಂಗಳೂರು ನಗರ ಮತ್ತು ಸಿವಿಲ್ ಪ್ರದೇಶ, ಬೆಂಗಳೂರು ಪೂರ್ವ, ಕೃಷ್ಣರಾಜಪುರ ರೈಲ್ವೆ ನಿಲ್ದಾಣಗಳಿಗೆ ಸಂಘದ ಸತ್ಯಾಗ್ರಹಿಗಳು ಹೋಗಿ ಹಲಗೆಗಳ ಮೇಲೆ ಹಿಂದಿಯಲ್ಲಿ ಬರೆದಿರುವ ಹೆಸರುಗಳನ್ನು ಅಳಿಸುವರೆಂದು ಗೊತ್ತಾಗಿದೆ ಈ ಬಗ್ಗೆ ಸತ್ಯಾಗ್ರಹಿಗಳ ನಾಯಕ ಶ್ರೀ ಆರ್. ರಾಜಗೋಪಾಲ್‌ರವರು ಎ. ಜಿ ಪಿ ಯವರು ಮತ್ತು ಮೇಲ್ಕಂಡ ಸ್ಥಳಗಳ ಸ್ಟೇಷನ್ ಮಾಸ್ಟರುಗಳಿಗೆ ಸೂಚನೆ ಕೊಟ್ಟಿರುವರೆಂದೂ ಹೇಳಲಾಗಿದೆ

ಮಹಾರಾಜಾ ಕಾಲೇಜಿಗೆ ಮದ್ರಾಸಿನ ಪ್ರೊಫೆಸರ್,

ಮದರಾಸಿನ ಪ್ರೊಫೆಸರ್ ಶ್ರೀ ನೀಲಕಂಠಶಾಸ್ತ್ರಿಯವರನ್ನು ೭೦೦ ರೂ ಸಂಬಳ ಮೇಲೆ ಇಲ್ಲಿನ ಮಹಾರಾಜ ಕಾಲೇಜಿನ ಇಂಡಾಲಜಿ ವಿಭಾಗದ ಮುಖ್ಯಾಧಿಕಾರಿಯಾಗಿ ೨ ವರ್ಷ ಕಾಲ ವಿಶ್ವವಿದ್ಯಾನಿಲಯದವರು ನೇಮಿಸಿರುವರೆಂದು ಗೊತ್ತಾಗಿದೆ ಅವರು ನಾಳಿದ್ದು ಅಧಿಕಾರಕ್ಕೆ ಬರುವರೆಂದು ಹೇಳಲಾಗಿದೆ

ಮೈಸೂರಿನ ತುಪ್ಪದಲ್ಲಿ ತುಪ್ಪದ ಅಂಶವೇ ಇಲ್ಲ

ರಾಜಧಾನಿಯಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದವರು ಇಲ್ಲಿ ತಯಾರಾಗುವ ತುಪ್ಪವನ್ನು ಪರೀಕ್ಷಿಸಲಾಗಿ ಶೇ|| ೩೩ ರಷ್ಟು ಮಾದರಿಗಳಲ್ಲಿ ತುಪ್ಪವೇ ಇರಲಿಲ್ಲವೆಂದು ಗೊತ್ತಾಗಿದೆ. ಬೆಂಗಳೂರಿನ ತುಪ್ಪದ ತಯಾರಿಕೆಯ ಕಾಲು ಭಾಗದಷ್ಟರಲ್ಲಿ ಶೇ|| ೫೦ ರಷ್ಟು ಬೆರಿಕೆಯಾಗಿತ್ತೆಂದು ಹೇಳಲಾಗಿದೆ ಶೇ|| ೩೩ ರಷ್ಟರಲ್ಲಿ ಮಾತ್ರ ತುಪ್ಪದ ಅಂಶಗಳು ಕಂಡುಬಂದುದಾಗಿಯೂ ಗೊತ್ತಾಗಿದೆ. ಬೆರಿಕೆ ಮಾಡುವುದರ ಬದಲು ವನಸ್ಪತಿಯಲ್ಲಿ ಬೆಣ್ಣೆ ವಿಟಮಿನ್ನುಗಳನ್ನು ಸೇರಿಸಬೇಕೆಂದು ಆಲಯದವರು ಸಲಹೆ ಮಾಡಿರುತ್ತಾರೆ

ದ|| ಆಫ್ರಿಕದ ಭಾರತ ಕಾಂಗ್ರೆಸ್ ಕಛೇರಿ ಮೇಲೆ ಧಾಳಿ

ದಕ್ಷಿಣ ಆಫ್ರಿಕದಲ್ಲಿರುವ ಏಶಿಯಾ ವ್ಯಾಪಾರಿ ಸಂಸ್ಥೆಗಳ ಕಛೇರಿಗಳನ್ನೆಲ್ಲಾ ನೆನ್ನೆ ಶೋಧಿಸಲಾಯಿತೆಂದು ವರದಿಯಾಗಿದೆ ಅಲ್ಲಿರುವ ಭಾರತೀಯ ಮತ್ತು ಆಫ್ರಿಕಾ ಕಾಂಗ್ರೆಸ್ಸಿನವರ ಕಛೇರಿಗಳಿಗೆ ಪೋಲೀಸರು ನುಗ್ಗಿ ಕಾಗದ ಪತ್ರಗಳನ್ನು ವಶಪಡಿಸಿಕೊಂಡಿರುವರು. ಯಾರ ದಸ್ತಗಿರಿಯೂ ಆಗಿರುವುದಿಲ್ಲ. ಮುಖಂಡರ ನಿವಾಸಗಳಲ್ಲೂ ಶೋಧನೆ ನಡೆಸಲಾಯಿತೆಂದು ಗೊತ್ತಾಗಿದೆ

ಹತ್ತು ವರ್ಷಗಳಲ್ಲಿ ಹಿಂದುಳಿದವರ ಪುರೋಭಿವೃದ್ಧಿ

ರಾಜ್ಯಾಂಗದಲ್ಲಿ ಉಲ್ಲೇಖವಾಗಿರುವಂತೆ ಹತ್ತು ವರ್ಷಗಳಲ್ಲಿ ಹಿಂದುಳಿದ ಜನರನ್ನು ಇತರ ಪ್ರಜೆಗಳ ಮಟ್ಟಕ್ಕೆ ತರಲು ಸಾಧ್ಯವೆಂದು ನಿಮ್ನ ವರ್ಗಗಳ ಕಮಿಷನರಾದ ಶ್ರೀ ಎಲ್. ಎಂ. ಶ್ರೀಕಾಂತ್‌ರವರು ತಿಳಿಸಿರುತ್ತಾರೆ

ಬೆಂಗಳೂರು-ಮೈಸೂರುಗಳಿಗೆ ವಿದ್ಯುಚ್ಛಕ್ತಿ ರೈಲಿಲ್ಲ

ಮೈಸೂರು ಮತ್ತು ಬೆಂಗಳೂರುಗಳ ನಡುವೆ ವಿದ್ಯುಚ್ಛಕ್ತಿ ರೈಲನ್ನು ಹಾಕುವ ಯೋಜನೆಯನ್ನು ಕೈಬಿಡಲಾಗಿದೆಯೆಂದೂ, ಮೈಸೂರು ಸರ್ಕಾರದವರೇ ಈ ನಿರ್ಧಾರಕ್ಕೆ ಬಂದಿದ್ದರೆಂದೂ ಪಾರ್ಲಿಮೆಂಟಿನಲ್ಲಿ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ

ಷೇಕ್ ಅಬ್ದುಲ್ಲಾ ಭೇಟಿ ಬಗ್ಗೆ ಪಾಕ್ ಅಪಪ್ರಚಾರ

ಪಶ್ಚಿಮ ಪಂಜಾಬಿನ ರಾಜಧಾನಿ ಲಾಹೋರಿನ ಒಂದು ಪತ್ರಿಕೆಯು ದೆಹಲಿಯಲ್ಲಿ ಪಂಡಿತ ನೆಹರೂರವರ ಮನೆ ಹೊರಭಾಗದಲ್ಲಿ ಷೇಕ್ ಅಬ್ದುಲ್ಲಾರವರನ್ನು ಕೊಲೆ ಮಾಡುವ ಪ್ರಯತ್ನ ನಡೆಯಿತೆಂದೂ, ಒಂದು ರಿವಾಲ್ವರ್ ಮತ್ತು ಹ್ಯಾಂಡ್ ಗ್ರೆನೇಡುಗಳು ದೊರೆತುವೆಂದೂ ಎರಡು ಕಲಂ ಸುಳ್ಳು ಸುದ್ದಿಯನ್ನು ಕೊಟ್ಟಿರುವುದಾಗಿ ವರದಿಯಾಗಿದೆ.

ಕಾಶ್ಮೀರದ ಮಾತುಕತೆಗೆ ಎನ್. ಜಿ. ಅಯ್ಯಂಗಾರ್

ಕಾಶ್ಮೀರದ ವಿವಾದದ ಬಗ್ಗೆ ವಿಶ್ವಸಂಸ್ಥೆಯ ಪ್ರತಿನಿಧಿ ಡಾ|| ಗ್ರಹಾಂರವರೊಡನೆ ಮಾತುಕತೆ ನಡೆಸಲು ಬರುವ ತಿಂಗಳು ಮೂರನೇ ವಾರದಲ್ಲಿ ಕೇಂದ್ರ ರಕ್ಷಣಾ ಮಂತ್ರಿ ಎನ್ ಜಿ ಅಯ್ಯಂಗಾರ್ಯರು ಜಿನೀವಾ ನಗರಕ್ಕೆ ಪ್ರಯಾಣ ಮಾಡುವರು. ಕಾಶ್ಮೀರದ ಬಗ್ಗೆ ಮಾತುಕತೆಗಳನ್ನು ಉನ್ನತ ಮಟ್ಟದಲ್ಲಿ ನಡೆಸಬೇಕೆಂದು ಗ್ರಹಾಂರವರು ಮಾಡಿದ್ದ ಸಲಹೆಗೆ ಭಾರತವು ಒಪ್ಪಿಕೊಂಡು ಮಂತ್ರಿಯೊಬ್ಬರನ್ನು ಕಳುಹಿಸಲಿದೆ

ಶಿವ ಕಥೆ

ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿಯವರ ದೇವಾಲಯದಲ್ಲಿ ವರ ಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಬೆಂಗಳೂರಿನ ಶ್ರೀ ಪಿ. ರಾಮಸ್ವಾಮಿ ನಾಯ್ಡುರವರಿಂದ "ಭಕ್ತ ಕೋವಲ" ಎಂಬ ಶಿವ ಕಥೆಯು ಏರ್ಪಾಡಾಗಿದೆ.

ರಷ್ಯದ ರಾಯಭಾರಿಯ ವಿರುದ್ಧ ಪ್ರದರ್ಶನ

ಬ್ರಿಟನ್ನಿನಲ್ಲಿ ಹೊಸದಾಗಿ ರಾಯಭಾರಿಯಾಗಿ ನೇಮಕವಾಗಿರುವ ರಷ್ಯದ ರಾಯಭಾರಿ ... ಶ್ರೀ ... ರವರ ತಮ್ಮ ಹುದ್ದೆಯನ್ನು ವಹಿಸಲು ಭಾನುವಾರ ಲಂಡನ್ನಿಗೆ ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ ಗೊಂದಲವಾಯಿತು "ಗಾ ... ಕೋರರವರೇ ಹಿಂತಿರುಗಿ" ಎಂದು ಅನೇಕರು ಕೂಗಿಕೊಂಡು ರಷ್ಯದ ವಿರುದ್ಧವಾಗಿ ಘೋಷಣೆಗಳನ್ನು ಮಾಡಿದರು. ಇದಕ್ಕೆ ಪ್ರತಿಯಾಗಿ ಕಮ್ಯೂನಿಸ್ಟರೂ ಪ್ರದರ್ಶನಗಳನ್ನು ನಡೆಸಿದರು ಗ್ರಾ ... ಕೋರವರ ವಿರುದ್ಧದ ಪ್ರದರ್ಶನದ ಸಂಬಂಧದಲ್ಲಿ ಇಬ್ಬರ ದಸ್ತಗಿರಿಯಾಗಿದೆ

ಹೈದರಾಬಾದಿನ ೨ ಸಾವಿರ ವಿದ್ಯಾರ್ಥಿಗಳಿಗೆ ಸ್ಥಾನವಿಲ್ಲ

ಹೈದರಾಬಾದಿನ ವಿಶ್ವವಿದ್ಯಾಲಯದ ಇಂಟರ್ ಬಿ ಎ ಬಿ ಎಸ್ ಸಿ ತರಗತಿಗಳಲ್ಲಿ ೨ ಸಾವಿರ ವಿದ್ಯಾರ್ಥಿಗಳಿಗೆ ಸ್ಥಾನ ದೊರೆತಿರುವುದಿಲ್ಲ ಅವರ ... ಸಭೆ ನಡೆಸಿ ಹೊಸ ಕಾಲೇಜೊಂದನ್ನು ಸ್ಥಾಪಿಸಬೇಕೆಂದೂ ... ಕಗಳ ... ಶರ್ತಗಳನ್ನು ... ಪ್ರಕಾರ ನಡೆಸಬೇಕೆಂದೂ ಒತ್ತಾಯ ಪಡಿಸಿದರು

ಉಪನ್ಯಾಸ

ರಾಜಧಾನಿಯ ... ಭವ ... ಯಗಳಲ್ಲ ನಾಳೆ ... ಘಂಟೆಗೆ ಸಾಹಿತ್ಯ ... ಶ್ರೀ ... ಸೂರ್ಯನಾರಾಯಣ ಪಂಡಿತರು ತೀರ್ಥ ಯಾತ್ರೆಗಳು ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಸರ್ವರಿಗೂ ಸ್ವಾಗತವುಂಟು

೧೦ ವರ್ಷದ ವಕೀಲರಿಗೆ ಡಿಗ್ರಿ ಪಡೆಯಲಿಚ್ಛೆ

ಹೈದರಾಬಾದಿನ ೭೦ ವರ್ಷದ ಉ ... ಮರ್ ವಕೀಲರೊಬ್ಬರು ವಿಶ್ವವಿದ್ಯಾಲಯದ ಪದವಿಯನ್ನು ಪಡೆಯಬೇಕೆಂಬ ಆಸೆ ಹೊಂದಿರುತ್ತಾರೆ ಅವರು ಕಾಲೇಜಿನಲ್ಲಿ ಓದಲು ಅರ್ಜಿ ಹಾಕಿಕೊಂಡಿದ್ದರೆಂದೂ ಅದು ತಿರಸ್ಕರಿಸಲ್ಪಟ್ಟ ಮುಖ್ಯ ಮಂತ್ರಿ ಬಿ ರಾಮಕೃಷ್ಣರಾಯರ ಸೂಚನೆ ಪ್ರಕಾರ ಅವರಿಗೆ ಸ್ಥಾನ ಕಲ್ಪಿಸಲಾಯಿತೆಂದೂ ಗೊತ್ತಾಗಿದೆ

ಶಿಸ್ತಿನ ಕ್ರಮಕ್ಕೊಳಗಾದವರು ಪುನಃ ಕಾಂಗ್ರೆಸಿಗೆ

ಕಳೆದ ಮಹಾಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ವಿರುದ್ಧವಾಗಿ ಸ್ಪರ್ಧಿಸಿ, ಶಿಸ್ತಿನ ಕ್ರಮಕ್ಕೊಳಗಾದ ಮಾಜಿ ಕಾಂಗ್ರೆಸ್ಸಿನವರನ್ನು ಪುನಃ ಸಂಸ್ಥೆಗೆ ಸೇರಿಸಿಕೊಳ್ಳುವ ವಿಷಯವು ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಪರಿಗಣನೆಯಲ್ಲಿರುವುದೆಂದು ಹೇಳಲಾಗಿದೆ ಆಕಾರ್ಯ ... ಕಾರ್ಯಕ್ರಮ ... [illegible]

SRI GAYATHRI

Daily 2 Shows

ALICE IN WONDERLAND

(R K O)

DODGE CITY

With ... Flynn

ಸ್ಕೌಟ್ ಶಿಬಿರದ ಮುಕ್ತಾಯ

ಶ್ರೀರಂಗಪಟ್ಟಣ ೨೯

ಗ್ರಾಮಾಭಿವೃದ್ಧಿ ಕಾರ್ಯವನ್ನು ಕಲಿಸುವ ಸಲುವಾಗಿ ಸ್ಕೌಟು ಶಿಕ್ಷಣ ಶಿಬಿರವು ಕಳೆದ ... ನೇ ತಾ|| ನಿಂದ ೨೩ ರ ವರೆಗೆ ಇಲ್ಲಿ ನಡೆಯಿತು ಇಲ್ಲಿನ ಪೌರ ಸಭಾ ಹೈಸ್ಕೂಲಿನ ೬ ಮಂದಿ ವಿದ್ಯಾರ್ಥಿಗಳು ಒಬ್ಬ ಉಪಾಧ್ಯಾಯರು, ಮಾಧ್ಯಮಿಕ ಶಾಲೆಯ ೯ ವಿದ್ಯಾರ್ಥಿಗಳು, ಪ್ರಾಥಮಿಕ ಶಾಲೆಯ ೮ ಮಂದಿ ಉಪಾಧ್ಯಾಯರುಗಳು ಭಾಗವಹಿಸಿದರು ಅವರುಗಳಿಗೆ ಸ್ಕೌಟುನಿಯಮಗಳನ್ನೂ ಗ್ರಾಮ ಕೈಗಾರಿಕೆಗಳನ್ನೂ, ಹೇಳಿಕೊಡಲಾಯಿತು ಭೂತಾಳೆಯಿಂದ ಸೆಣಬು ತಯಾರಿಸಿ ಹಗ್ಗ ಹೊಸೆಯುವುದು, ಬಿದಿರಿನ ಪರದೆ ಮಾಡುವುದು, ಜೊಂಡಿನ ಮಂದಲಿಗೆ ಮಾಡುವುದು, ಹ್ಯಾಂಡ್ ಫ್ಲಷ್ ಕಕ್ಕಸು, ಕಾಂಪೋಸ್ಟ್ ಗೊಬ್ಬರದ ತಯಾರಿಕೆ ಜೇನನ್ನು ಸಾಕುವ ವಿಧಾನ ಚರಂಡಿ ಮತ್ತು ರಸ್ತೆಗಳ ದುರಸ್ತಿ, ಹಳ್ಳಿ ನಕ್ಷೆಯ ರಚನೆ, ಇವುಗಳಲ್ಲಿ ಎಲ್ಲರಿಗೂ ತರಪೇತನ್ನು ಕೊಡಲಾಯಿತು

ಬೆಂಗಳೂರು

ಕಲಾ ಮಂದಿರದ

ಸಹಾಯಾರ್ಥವಾಗಿ

ರಂಗ ... ಮೆಮೋರಿಯಲ್ ಹಾಲಿನಲ್ಲಿ

2-8-52 ನೇ ಶನಿವಾರ ಸಂಜೆ

ಕವಿ ಪುಂಗವ

ಮತ್ತು ಶಿವರಾತ್ರಿ

ನಾಟಕಗಳು

ನೃತ್ಯ ಮತ್ತು ವಿನೋದಗಳು

3-8-52 ನೇ ಭಾನುವಾರ ಸಂಜೆ

ಕವಿ ಪುಂಗವ ಮತ್ತು

ಕಲ್ಯಾಣಿ ಕಮಂಗಿ

ನಾಟಕಗಳು ಮತ್ತು

ಸಂಗೀತ ವಿದುಷಿ ಶ್ರೀಮತಿ

ಜಿ ಚನ್ನಮ್ಮನವರ ಸಂಗೀತ

ನೃತ್ಯ ಮತ್ತು ವಿನೋದಗಳೂ ಉಂಟು

ಕಲೆಗಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ

ಸಹಾಯ ಮಾಡಿ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು ,	[illegible]	[illegible]
ಹರಳು ಬೀಜ	[illegible]	[illegible]
ಹುಚ್ಚೆಳ್ಳು ,	[illegible]	
ಹೊಂಗೆಬೀಜ	[illegible]	
ಹುರುಳಿ ,	[illegible]	
ಹೆಸರು ,,	[illegible]	[illegible]
ಅವರೆ ,	[illegible]	[illegible]
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ		
ಮುಚ್ ಗಳ್ಳಿ	[illegible]	[illegible]
ಹುಣಸೇಹಣ್ಣು	[illegible]	[illegible]
ತೆಂಗಿನಕಾಯಿ	[illegible]	
ಕೊಬ್ಬರಿ ,,	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

5 ಜೊತೆ ಭಾರಿ

★ ಕುಸ್ತಿಗಳು ★

ಮೈಸೂರು ಎಗ್ಜಿಬಿಷನ್

ಆವರಣದಲ್ಲಿ

3-8-52 ನೇ

ಭಾನುವಾರ

ಸಂಜೆ 4 ಘಂಟೆಗೆ

ಕರಡಿಯೊಡನೆ ಕಾದಿಗೆದ್ದಿರುವ ಜಯಸಿಂಹ

ಉ|| ಪಂಪಯ್ಯನವರ ಶಾಗಿರ್ದ

ಪೈ|| ಸ್ವಾಮಿ ರಾಮುವಿಗೂ

ಮಂಗಳೂರು ಪೈ|| ಕಾಂಚಿ

ಆನಂದಪ್ಪನಿಗೂ

(ಕೊಪ್ಪಲು ಬಸವಯ್ಯನ ಶಾಗಿರ್ದ)

★

ಕ್ಯಾತ್ಮಾನಹಳ್ಳಿ ಪುಟ್ಟಯ್ಯನವರ ಗರಡಿ

ಉ|| ಪಾಪಯ್ಯನವರ ಶಾಗಿರ್ದ

ವೀರಣ್ಣನವರ ಖಾಸಾ ಪಟ್ಟ ಸ್ಟೂಡೆಂಟ್ ಪೈ|| ಆರ್ ಜವರಪ್ಪನಿಗೂ

ನವಾಬ್ ಬಸಪ್ಪನವರ ಗರಡಿ

ನವಾಬ್ ಬಸಪ್ಪನವರ ಶಾಗಿರ್ದ

ಪೈ|| ಮಹದೇವುಗೂ ಮತ್ತು

ಇತರ ಐದು ಜೊತೆ ಕುಸ್ತಿಗಳು.

2ನೇ ಕುಸ್ತಿಯಲ್ಲಿ ಗದ್ದವರಿಗೆ ಕಂಟ್ರಾಕ್ಟರರು ಬೆಳ್ಳಿ ಕಪ್ಪು ಕೊಡಲಿರುವರು

ಎಂ. ಎಸ್ ನಂಜಪ್ಪ

ಕಂಟ್ರ್ಯಾಕ್ಟರ್

ಚಾಮುಂಡೇಶ್ವರಿ

ಟಾಕೀಸ್

1 8 52 ರಿಂದ ಅನೋಘ 2ನೆ ವಾರ

ಪ್ರತಿ ದಿನ 3 ಆಟಗಳು

ಚೆನ್ನಕೇಶವುಲು

[ತೆಲುಗು]

ಒಲಂಪಿಯಾ ★ 31—7—52 ರಿಂದ ಅನೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

ಅಜಿತ್ ಪಿಕ್ಚರ್ಸ್‌ರವರ ಮಹೋನ್ನತ ಪೌರಾಣಿಕ ಹಿಂದಿ ಚಿತ್ರ

★ ವೀರ ಅರ್ಜುನ್ ★

ನಾತ್ರ – ನಿರೂಪರಾಯ್, ತ್ರಿಲೋಕ್ ಕಪೂರ್ ಮಹಿಪಾಲ್, ವಸಂತರಾವ್ ಪೈಲ್ವಾನ್ ಮತ್ತು ಅಮೀರ್‌ಬಾಯಿ ಕರ್ನಾಟಕಿ

ಬೆಳಗಿನ ಪ್ರದರ್ಶನ:– ★ ನೋ ಲಾ ★

ಪ್ರಭು ದೇವಾ ಟಾಕೀಸ್

1—8—52 ನೇ : ಶುಕ್ರವಾರದಿಂದ : 4 ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಮೂವರು ತನಯರು

[ಮೂರು ಮಕ್ಕಳು]

ಅಬೀದ್‌ರವರ ಅನೋಘ

ಹರಾಜು ಮಾರಾಟ

3-8-52ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ಷೋರೂಂ ಬಳಿ

ಸಿಂಗಲ್ ಮತ್ತು ಡಬ್ಬಲ್ ಮಂಚಗಳು, ಸೋಫಾ ಸೆಟ್ ಗಳು, ಅಲ್ಮೈರಾಗಳು, ಬರೆಯುವ ಮೇಜುಗಳು ಕೈಯುಳ್ಳ ಮತ್ತು ಇಲ್ಲದ ಕುರ್ಚಿಗಳು, ಬೆಂಚುಗಳು, ಸ್ಟೂಲುಗಳು, ಮರದ ಪೆಟ್ಟಿಗೆಗಳು, ಬಾಗಿಲುಗಳುಳ್ಳ ಚಲಿಸುವ ಮರದ ಅಂಗಡಿಗಳು, ಕೀರಂ ಬೋರ್ಡ್, ತೊಟ್ಟಿಲುಗಳು, ಬರೆಯುವ ಡೆಸ್ಕುಗಳು, ಗ್ಯಾಸ್ಪ ಎಲೆಕ್ಟ್ರಿಕ್ ಟೇಬಲ್ ಲ್ಯಾಂಪುಗಳು ಸ್ಟೌವ್‌ಗಳು, ಎಲೆಕ್ಟ್ರಿಕ್ ಟೇಬಲ್ ಫ್ಯಾನ್, ಮೊಸಳೆ, ಎಾಲಿ ಡಬ್ಬಗಳು ಮತ್ತು ಸೀಸೆಗಳು, ಫಿಲಿಪ್ಸ್ ಬೈಸಿಕಲ್ ಹಳೆಯ ಕಾರು ಮತ್ತು ಲಾರಿ ಟೈರುಗಳು ಕ್ರೂಡ್ ಆಯಿಲ್, ಸ್ಪಿರಿಟ್ ಮುಂತಾದವುಗಳನ್ನುಳ್ಳ ಬ್ಯಾರೆಲ್ಲುಗಳು ಇವೇ ಮುಂತಾದ ಫರ್ನಿಚರುಗಳು ಗೃಹೋಪಯುಕ್ತ ಉಪಕರಣಗಳು ಮತ್ತು ಇತರ ಅಗತ್ಯವಾದ ಸಾಮಾನುಗಳಿವೆ

2 8-52ನೇ ಶನಿವಾರ ಮಧ್ಯಾಹ್ನ 3 ರಿಂದ 6 ರ ವರೆಗೆ ಪರೀಕ್ಷಿಸಬಹುದು

Edited Printed and Published by A R Nagarajan at Sadhvi Press, D Subbiah Road, Mysore.

ರಿಜಿಸ್ಟರ್ಡ್ ನಂ 792 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧-೮-೧೯೫೨ [ಸಂಚಿಕೆ ೬

ನಗರದ ಪಡಿತರ ರದ್ದಿಗೆ ಕೇಂದ್ರ ಸರ್ಕಾರದ ಒಪ್ಪಿಗೆ

ಅಧಿಕಾರಿಗಳು ಪತ್ರಿಕೆಗಳಿಗೆ ಸುದ್ದಿ ಕೊಡಕೂಡದು

ಮುಂಬಯಿ ಸರ್ಕಾರದ ಅಧಿಕಾರಿಗಳು ಯಾವುದೇ ಸುದ್ದಿಯನ್ನಾದರೂ ಪತ್ರಿಕೆಗಳಿಗೆ ನೇರವಾಗಿ ಕಳುಹಿಸಕೂಡದೆಂದೂ, ಸರ್ಕಾರದ ವಾರ್ತಾ ಇಲಾಖೆಯ ಮೂಲಕವೇ ಸುದ್ದಿಗಳ ಪ್ರಚಾರವಾಗಬೇಕೆಂದೂ ಇತ್ತೀಚೆ ಸರ್ಕಾರದವರು ಸೂಚನೆಯಿತ್ತಿರುವರು. ಸಣ್ಣ ಪುಟ್ಟ ಅಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿಯನ್ನು ಸಹ ಕೊಡಕೂಡದೆಂದು ಆಜ್ಞೆಯಾಗಿದೆ.

ಡಾ|| ಹರಿಶೇಖರರು ಕೇಂದ್ರ ಹಿರಿಯ ಶಾಸನ ಸಭೆಗೆ

ಬಿಹಾರಿನ ಗೌರ್ನರರಾದ ಆರ್. ಆರ್. ದಿವಾಕರ್‌ರವರ ಸ್ಥಾನದಲ್ಲಿ ಹುಬ್ಬಳ್ಳಿಯ ಡಾ|| ಎಸ್. ಎಸ್. ಹರೀಶರ್ ರವರು ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಯ ಉಪ ಚುನಾವಣೆಗೆ ತಮ್ಮ ಉಮೇದುವಾರಿಕೆ ಪತ್ರವನ್ನು ಸಲ್ಲಿಸಿರುವರು. ಇಂಗ್ಲೆಂಡಿನಲ್ಲಿ ರಾಯಭಾರಿಗಳಾಗಿರುವ ಬಿ. ಜಿ. ಖೇರರ ಸ್ಥಾನಕ್ಕೆ ಮುಂಬಯಿಯ ವಕೀಲರಾದ ಪಿ. ಟಿ. ಲೀವಾರವರು ಅರ್ಜಿ ಸಲ್ಲಿಸಿರುವರು. ಇವರುಗಳಿಗೆ ಪ್ರತಿಸ್ಪರ್ಧಿಗಳ್ಯಾರೂ ಇಲ್ಲ.

ಹೋಟೇಲಿನಲ್ಲಿ ಫರೂಕರು

ಇಟಲಿಯ ನೇಪಲ್ಸ್ ಪಟ್ಟಣದ ಬಳಿಯಿರುವ ಕಾಪ್ರಿ ದ್ವೀಪದ ಹೋಟೇಲೊಂದರಲ್ಲಿ ಈಜಿಪ್ಟಿನ ಮಾಜಿ ದೊರೆ ಫರೂಕರು ಇಳಿದುಕೊಂಡಿರುವರು. ಅವರು ತಮ್ಮ ಮಗ ಗಾದಿಹಕ್ಕುದಾರ ಫರೂಕ್ ಫೌದ್‌ರವರ ಹೆಸರಿನಲ್ಲಿ ಕೊಠಡಿಯನ್ನು ರಿಜಿಸ್ಟರು ಮಾಡಿಸಿಕೊಂಡಿದ್ದಾರೆ.

ಅಂಗಡಿ ಕಾನೂನಿನ ಪ್ರಕಾರ ಕ್ರಮ

ಸಂಸ್ಥಾನದ ಅಂಗಡಿ ಮತ್ತು ಸಿಬ್ಬಂದಿ ಕಾನೂನನ್ನು ಉಲ್ಲಂಘನೆ ಮಾಡಿದರೆಂದು ಯೂನಿವರ್ಸಲ್ ಮೋಟಾರು ಸರ್ವೀಸ್ಸಿನ ಶ್ರೀ ಶಿವಾನಂದಂರವರಿಗೆ ನಗರದ ೨ ನೇ ನ್ಯಾಯಾಧೀಶರು ೧೦ ರೂ. ದಂಡ ವಿಧಿಸುತ್ತಾರೆ. ಅಲ್ಲದೆ ಮಾಡರ್ನ್ ಮೋಟಾರ್ ಸರ್ವೀಸ್ಸಿನ ಮಾಲೀಕರುಗಳಾದ ಶ್ರೀ ಆರ್. ಮುನಿಸ್ವಾಮಿ ನಾಯ್ಡು ಮತ್ತು ಆರ್. ಕುಪ್ಪಸ್ವಾಮಿ ನಾಯ್ಡು, ಕೈಲಾಶ್ ಟಾಕೀಸಿನ ಮ್ಯಾನೇಜರ್, ಮದೀನ ಮತ್ತು ದರ್ಬಾರ್ ಹೋಟೇಲಿನ ಮಾಲೀಕರಾದ ಜ|| ಹಾಜಿ ಅಬೂಬೇಕರ್‌ರವರ ಮೇಲೆ ಸದರಿ ಕಾನೂನಿನ ಉಲ್ಲಂಘನೆಗಾಗಿ ಮೊಕದ್ದಮೆ ಹೂಡಲಾಗಿದೆ.

ಗೋವಧೆ ನಿಷೇಧಕ್ಕಾಗಿ ಆತ್ಮಾರ್ಪಣೆ

ಬಿಹಾರಿನಲ್ಲಿ ಗೋವಧೆಯನ್ನು ನಿಷೇಧಿಸಬೇಕೆಂದು ಒತ್ತಾಯ ಮಾಡಿ, ೬೫ ದಿನಗಳ ಉಪವಾಸವನ್ನು ಕೈಗೊಂಡಿದ್ದ ಹಜಾರಿಬಾಗಿನ ಪಂಡಿತ ರಾಮಚಂದ್ರ ಶರ್ಮರವರು ೬೫ ದಿನಗಳ ಉಪವಾಸದ ನಂತರ ನೆನ್ನೆ ಮೃತಪಟ್ಟರು. ಈ ದೇಶದಲ್ಲಿ ಗೋವುಗಳನ್ನು ಪೂಜಿಸುವುದು ತಪ್ಪಿಹೋಗಿದೆಯೆಂದೂ, ಅವುಗಳಲ್ಲಿ ಪುನಃ ಪ್ರೀತಿಯು ಅಂಕುರಿಸುವಂತೆ ಮಾಡುವುದಕ್ಕಾದರೂ ತಾವು ಪ್ರಾಣಾರ್ಪಣೆ ಮಾಡಲು ಸಿದ್ಧರಿರುವುದಾಗಿಯೂ ಅವರು ಹೇಳಿದ್ದರು.

೨೦,೦೦೦ ರೂ. ಜಾಮೀನಿನ ಮೇಲೆ ಬಿಡುಗಡೆ

ಸ್ವಂ ಸು] ನಂಜನಗೂಡು ೩೧

ಇಲ್ಲಿನ ಭಾನುವಾರ ಶೆಟ್ಟಿಯ ಅಂಗಡಿಯೊಂದರ ಮುಂದೆ ಮೇಲೆ ೩೦ ವರ್ಷದ ವಯಸ್ಸಿನ ಶ್ರೀನಿವಾಸ ಎಂಬಾತನ ಮೃತದೇಹವು ಪತ್ತೆಯಾದ ಸಂಬಂಧದಲ್ಲಿ ೪ ಜನರ ದಸ್ತಗಿರಿಯಾಗಿದೆ. ಅವರಲ್ಲೊಬ್ಬರಾದ ಶ್ರೀ ನಾಗರಾಜ ಎಂಬುವರನ್ನು ೨೦ ಸಾವಿರ ರೂ ಗಳ ಜಾಮೀನು ಮೇಲೆ ಬಿಡಲಾಗಿದೆ. ಶ್ರೀಗಳಾದ ನರಿಯಪ್ಪ, ರಾಮಪ್ಪ, ಮತ್ತು ಗೋವಿಂದ ಎಂಬುವರನ್ನು ಮೈಸೂರಿನ ಸಬ್ ಜೈಲಿಗೆ ರಿಮ್ಯಾಂಡ್ ಮಾಡಲಾಗಿದೆ. ನಾಳೆ ದಿನ ಹಿಯರಿಂಗ್ ಇದೆ.

೪೧ ವರ್ಷಗಳ ಸೇವೆಯಲ್ಲಿ ೧ ದಿನವೂ ರಜಾ ಪಡೆಯಲಿಲ್ಲ

ಮಂಗಳೂರು ಪೌರ ಸಭೆಯಲ್ಲಿ ಜವಾನನಾಗಿದ್ದ ಚೊಗ್ಗು ಶೆಟ್ಟಿ ಎಂಬುವನು ಕಳೆದ ೪೧ ವರ್ಷಗಳಿಂದ ಸೇವೆ ಸಲ್ಲಿಸಿ ಈಗ ತಾನೇ ನಿವೃತ್ತನಾಗಿರುವನು. ಅವನು ಆ ಅವಧಿಯೊಳಗೆ ಒಂದು ದಿನವೂ ರಜಾ ತೆಗೆದುಕೊಂಡಿರುವುದಿಲ್ಲವೆಂದೂ ಇದಕ್ಕಾಗಿ ಅವನಿಗೆ ಈಗ ೩೦ ತಿಂಗಳ ಗ್ರಾಚುಯುಟಿಯನ್ನು ಪೌರಸಭೆಯವರು ಕೊಟ್ಟಿರುವುದಲ್ಲದೆ ಇನ್ನೂ ೧೨ ತಿಂಗಳ ಹಣವನ್ನು ಕೊಡಲು ಸರ್ಕಾರದವರ ಅನುಮತಿಯನ್ನು ಕೇಳಿರುತ್ತಾರೆಂದೂ ಗೊತ್ತಾಗಿದೆ.

ಗೊಂಡಾಲ್ ಮಹಾರಾಜರ ನಿಧನ

ಸೌರಾಷ್ಟ್ರದಲ್ಲಿ ಲೀನವಾದ ಗೊಂಡಾಲ್ ಸಂಸ್ಥಾನದ ಮಹಾರಾಜರು ತಮ್ಮ ೭೧ ನೇ ವಯಸ್ಸಿನಲ್ಲಿ ನೆನ್ನೆ ವೆಲ್ಲೂರಿನಲ್ಲಿ ನಿಧನ ಹೊಂದಿದರು. ಅವರು ಮೈಸೂರಿನ ಹರೇಜರ್ ಮಹಾರಾಣಿಯವರ ಭಾವಂದಿರು. ಅವರು ಗಾದಿ ಹತ್ತುವಾಗ ೬೦ ಲಕ್ಷ ರೂ ಗಳನ್ನು ದಾನ ಮಾಡಿದ್ದರು.

ಪ್ರಬಂಧ ಸ್ಪರ್ಧೆ

ನಂಜನಗೂಡಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ನೇ ತಾ|| ಭಾನುವಾರ ಬೆಳಿಗ್ಗೆ ಅಲ್ಲಿನ ಬಾಲಕಿಯರ ಮಾಧ್ಯಮಿಕ ಶಾಲೆಯಲ್ಲಿ ಪ್ರಬಂಧ ಸ್ಪರ್ಧೆಯೊಂದು ನಿರ್ಧಾರವಾಗಿದೆ. ಭಾಗವಹಿಸಲಿಚ್ಛಿಸುವವರು ಶನಿವಾರ ಸಂಜೆ ೫ ಘಂಟೆಯೊಳಗೆ ತಮ್ಮ ಹೆಸರುಗಳನ್ನು ತಿಳಿಸಿ, ಹೆಚ್ಚಿನ ವಿವರಗಳನ್ನು ಕಾರ್ಯಾಲಯದಲ್ಲಿ ಪಡೆಯಬಹುದು.

ಮೈಸೂರಿನಲ್ಲಿ ಪಡಿತರದ ರದ್ದಿಗೆ ಕೇಂದ್ರದ ಒಪ್ಪಿಗೆ

ಬೆಂಗಳೂರು ೧

ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯರ ಭೇಟಿಗಾಗಿ ತಿರುವಾಂಕೂರಿಗೆ ತೆರಳಿದ್ದ ಸಂಸ್ಥಾನದ ಆಹಾರ ಮಂತ್ರಿ ಶ್ರೀ ಸಿದ್ಧವೀರಪ್ಪನವರು ನೆನ್ನೆ ರಾತ್ರಿ ಇಲ್ಲಿಗೆ ಹಿಂತಿರುಗಿದರು. ಮೈಸೂರು ನಗರದಲ್ಲಿ ಆಹಾರದ ಕಂಟ್ರೋಲನ್ನು ತೆಗೆಯುವುದಕ್ಕೆ ಕೇಂದ್ರ ಸರ್ಕಾರದವರು ಸಮ್ಮತಿಯನ್ನು ಸೂಚಿಸಿರುವರೆಂದು ಅವರು ತಿಳಿಸಿ, ಕಂಟ್ರೋಲ್ ರದ್ದಿನ ಬಗ್ಗೆ ಪ್ರಕಟನೆಯೊಂದನ್ನು ಸಧ್ಯದಲ್ಲೇ ಹೊರಡಿಸಲಾಗುವುದೆಂದು ಹೇಳಿದರು. ಸಂಸ್ಥಾನಕ್ಕೆ ಬೇಕಾಗುವಷ್ಟು ಆಹಾರ ಧಾನ್ಯವನ್ನು ಕೇಂದ್ರದವರು ಒದಗಿಸಲಿರುವರೆಂದೂ ಸಚಿವರು ಸೂಚಿಸಿದರು.

ಹಿಂದಿ ವಿರುದ್ಧದ ಚಳುವಳಿಗಾಗಿ ಮೂವರ ದಸ್ತಗಿರಿ

ಹಿಂದಿ ಭಾಷೆಯ ವಿರುದ್ಧವಾಗಿ ಬೆಂಗಳೂರಿನ ದ್ರಾವಿಡ ಸಂಘದವರು ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಈ ದಿನ ಚಳುವಳಿ ನಡೆಸಿದರು. ೩ ಜನರ ದಸ್ತಗಿರಿಯಾಗಿರುತ್ತದೆ.

ಸೀಮೆಯೆಣ್ಣೆ ಮತ್ತು ಪೆಟ್ರೋಲಿಗೆ ಹೆಚ್ಚು ಬೆಲೆ

ಸೀಮೆಎಣ್ಣೆ ಮತ್ತು ಪೆಟ್ರೋಲುಗಳ ಬೆಲೆಯು ಇಂದಿನಿಂದ ಹೆಚ್ಚುತ್ತದೆ. ೧ ಗ್ಯಾಲನ್ ಸೀಮೆಯೆಣ್ಣೆಗೆ ೬ ಕಾಸಿನಂತೆಯೂ, ಪೆಟ್ರೋಲಿಗೆ ೧ ಆಣೆಯಂತೆಯೂ ಬೆಲೆ ಹೆಚ್ಚಾಗುವುದು.

ಈಜಿಪ್ಟಿನಲ್ಲಿ ಬಿರುದುಗಳ ರದ್ದು

ಈಜಿಪ್ಟಿನ ಧೊರೆಯು ಕೊಡುತ್ತಿದ್ದ ಪಾಷಾ, ಬೇ ಮುಂತಾದ ಬಿರುದುಗಳನ್ನು ಅಲ್ಲಿನ ಸರ್ಕಾರದವರು ರದ್ದುಗೊಳಿಸಿರುತ್ತಾರೆ.

ಚಿನ್ನದ ಗಣಿಗಳಲ್ಲಿ ಸರ್ಕಾರದ ಬಂಡವಾಳ

ಸ್ವಂ ಸು ಫೋ] ಬೆಂಗಳೂರು ೧

ಕೋಲಾರದ ಚಿನ್ನದ ಗಣಿ ಕಂಪೆನಿಯಲ್ಲಿ ಮೈಸೂರು ಸರ್ಕಾರದವರು ಬಂಡವಾಳವನ್ನು ಹಾಕುವ ವಿಷಯವು ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ.

ಹೆಚ್ಚು ಆಹಾರ ಬೆಳೆಗೆ ೧ ಕೋಟಿ ರೂ.ಗೆ ಮನವಿ

ಮುಖ್ಯ ಮಂತ್ರಿ ಹನುಮಂತಯ್ಯನವರ ವಿವರಣೆ

ಸ್ವಂ ಸು. ಫೋ] ಬೆಂಗಳೂರು ೧

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇಂದು ತಿರುವಾಂಕೂರಿನಿಂದ ಹಿಂದಿರುಗಿದರು. ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ, ಅವರು ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯರೊಡನೆ ಚರ್ಚಿಸಿದ ವಿಷಯವನ್ನು ವಿವರಿಸಿ ಸಂಸ್ಥಾನಕ್ಕೆ ಪ್ರತಿ ವರ್ಷವೂ ಹೆಚ್ಚು ಆಹಾರ ಬೆಳೆ ಯೋಜನೆಗಾಗಿ ಒದಗಿಸಲಿರುವ ೩೫ ಲಕ್ಷ ರೂ. ಗಳನ್ನು ೧ ಕೋಟಿಗೆ ಹೆಚ್ಚಿಸಬೇಕೆಂದು ತಾವು ಒತ್ತಾಯಪಡಿಸಿದುದಾಗಿಯೂ, ಕಿದ್ವಾಯಿಯರು ಅದಕ್ಕೆ ಸಹಾನುಭೂತಿಯನ್ನು ಸೂಚಿಸಿದುದಾಗಿಯೂ ತಿಳಿಸಿದರು. ಹಿಂದೆ ಸಂಸ್ಥಾನ ಸರ್ಕಾರದವರು ಬೇಕೆಂದು ತಿಳಿಸಿದ್ದ ೫೬ ಸಾವಿರ ಟನ್ ಧಾನ್ಯವನ್ನು ಕಳುಹಿಸುವಂತೆ ತಾವು ಕೋರಿದುದಕ್ಕೆ ಕಿದ್ವಾಯಿಯರು ಒಪ್ಪಿದರೆಂದೂ ಹೇಳಿದರು.

ತುಂಗಾ ಮತ್ತು ಭದ್ರಾ ಅಣೆಕಟ್ಟುಗಳಿಗೆ ೧ ಕೋಟಿ ರೂ ಗಳನ್ನು ಒದಗಿಸಿದರೆ ೧ ವರ್ಷದಲ್ಲೇ ೨೫ ಸಾವಿರ ಎಕರೆ ಜಮೀನನ್ನು ಸಾಗುವಳಿಗೆ ತಂದು, ಹೊರಗಿನಿಂದ ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳುವುದಿಲ್ಲವೆಂದು ತಾವು ಕೇಂದ್ರ ಮಂತ್ರಿಗೆ ತಿಳಿಸಿದ್ದಾಗಿಯೂ, ಲಕ್ಕವಳ್ಳಿ ಯೋಜನೆಯನ್ನು ಮೈಸೂರು ಸರ್ಕಾರದವರೇ ನಡೆಸಲು ಸಿದ್ಧರಿರುವುದಾಗಿಯೂ, ಹಣವು ಒದಗಿದಾಗ ಅದನ್ನು ಕೈಗೊಳ್ಳುವುದಾಗಿಯೂ ತಿಳಿಸಿದರು. ಈ ಯೋಜನೆಗಳಿಗೆ ಸಾಧ್ಯವಾದಷ್ಟು ಸಹಾಯ ಮಾಡುವುದಾಗಿ ಕಿದ್ವಾಯಿಯವರು ಭರವಸೆಯಿತ್ತಿರುವರೆಂದೂ ಹೇಳಿದರು.

ಕೇಂದ್ರ ಮತ್ತು ಸಂಸ್ಥಾನಗಳ ಹಣಕಾಸಿನ ವಿಭಜನೆ

ಬೆಂಗಳೂರು ೧

ಭಾರತ ಸರ್ಕಾರದ ಹಣಕಾಸಿನ ಸಮಿತಿಗೆ ಸಂಸ್ಥಾನ ಸರ್ಕಾರದವರು ಮನವಿಯೊಂದನ್ನು ಸಲ್ಲಿಸಿ ಕೇಂದ್ರ ಮತ್ತು ಸಂಸ್ಥಾನಗಳ ನಡುವೆ ಹಣಕಾಸಿನ ವಿನಿಯೋಗದ ಬಗ್ಗೆ ಹಲವು ಬೇಡಿಕೆಗಳನ್ನು ಮುಂದಿಡಿರುತ್ತಾರೆ. ಎ ಮತ್ತು ಬಿ ಸಂಸ್ಥಾನಗಳೆಂಬ ಪ್ರಭೇದವನ್ನು ರದ್ದುಗೊಳಿಸುವುದು, ಜನಸಂಖ್ಯೆ ಮತ್ತು ವಿಸ್ತಾರಗಳಿಗನುಗುಣವಾಗಿ ಕೇಂದ್ರ ಮತ್ತು ಸಂಸ್ಥಾನದ ನಡುವೆ ವಿಭಾಜ್ಯವಾಗಲಿರುವ ಒಟ್ಟು ವರಮಾನ ತೆರಿಗೆಯ ಮೊತ್ತದಲ್ಲಿ ಮೈಸೂರು ಸಂಸ್ಥಾನದ ಕೋಟಾವನ್ನು ಶೇ|| ೫೦ ರಿಂದ ೬೦ ಕ್ಕೆ ಹೆಚ್ಚಿಸುವುದು, ಆಹಾರದ ದ್ರವ್ಯ ಸಹಾಯವನ್ನು ಯಾವ ವಿಧದಲ್ಲಾದರೂ ಕೇಂದ್ರದವರು ಒದಗಿಸುವುದು, ರೆವಿನ್ಯು ಖೋತಾವನ್ನು ಸರಿತೂಗಿಸಲು ಗ್ರಾಂಟು ಕೊಡುವುದು, ಆರ್ಥಿಕ ಐಕ್ಯದಿಂದ ಉಂಟಾಗಿರುವ ಅಂತರವನ್ನು ೩.೪೪ ಕೋಟಿಯಿಂದ ೫ ಕೋಟಿಗೆ ಹೆಚ್ಚಿಸುವುದು ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚಿನ ಸಾಲವನ್ನು ಕೊಡುವುದು— ಇವೇ ಮುಂತಾದ ಸೂಚನೆಗಳನ್ನು ಮನವಿಯಲ್ಲಿ ಕಾಣಿಸಲಾಗಿದೆ.

ನಗರದಲ್ಲಿ ಅಭಿವೃದ್ಧಿ ಕಾರ್ಯಗಳು

ಸರ್ಕಾರದವರಲ್ಲಿ ಪುರಸಭೆಯ ನಿಯೋಗ

ಮೈಸೂರು ೧

ನೆನ್ನೆ ನಡೆದ ನಗರದ ಪೌರಸಭೆಯ ಸಾಮಾನ್ಯ ಅಧಿವೇಶನದಲ್ಲಿ ಮಾಜಿ ಸದಸ್ಯರೂ ಮತ್ತು ಪುರ ಪ್ರಮುಖರೂ ಆಗಿದ್ದ ಡಬ್ಲ್ಯು ಹೆಚ್ ದಿಯೋಬಾಲ್ಡ್ ರವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಲಾಯಿತು ಸಭೆಯು ಎರಡು ನಿಮಿಷಗಳ ಕಾಲ ಎದ್ದು ನಿಂತು ಮೌನವನ್ನಾಚರಿಸಿತು

ನಗರದಲ್ಲಿ ಈಗ ಹಾಕಲಾಗುತ್ತಿರುವ ಬಿ ಸಿ ಜಿ ವ್ಯಾಕ್ಸಿನ್ ಬಗ್ಗೆ ಅನೇಕ ದೂರುಗಳು ಬಂದಿವೆಯೆಂದೂ ಇದಕ್ಕಾಗಿ ಪುರಸಭೆಯ ಮುಂದೆ ವಿವರಣೆಯಾಗಬೇಕೆಂದು ತಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕೋರಿರುವುದಾಗಿಯೂ ಅಧ್ಯಕ್ಷರು ತಿಳಿಸಿದರು

ಜನಗಳಿಗೆ ಇದರಿಂದಾಗುವ ಉಪಯೋಗದ ಬಗ್ಗೆ ತಕ್ಕ ರೀತಿಯಲ್ಲಿ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕೆಂದು ಡಾ|| ಬಿ ಜಿ ದಾಸರು ಸಲಹೆ ಮಾಡಿದರು ಈ ವ್ಯಾಕ್ಸಿನ್ ಹಾಕಿಸಿದ್ದರಿಂದ ಜನರಿಗೆ ಉಪಯೋಗವುಂಟೇ ಇಲ್ಲವೇ ಎಂಬುದರ ಬಗ್ಗೆ ನಿಪುಣರ ಅಭಿಪ್ರಾಯವನ್ನು ಪಡೆಯಬೇಕೆಂದು ಕೆಲವು ಸದಸ್ಯರು ಸೂಚಿಸಿದರು

ಅನಂತರ ಜ|| ಅಹಮದ್ ಖಾನರವರು ಮುನಿಸಿಪಲ್ ಆಫೀಸಿನ ಕಛೇರಿಯಲ್ಲಿ ಕಾಗದ ಪತ್ರಗಳ ವಿಲೇವಾರಿಯು ತಡವಾಗುತ್ತಿರುವುದು ನಿಲ್ಲಬೇಕೆಂದು ಕೋರಿದರು

ನಾಳಿದ್ದು ಮೈಸೂರು ಪೌರಸಭೆಯ ೫ ಜನ ಸದಸ್ಯರ ನಿಯೋಗವೊಂದು ಸ್ಥಳೀಯ ಸಂಸ್ಥೆಗಳ ಸಚಿವರನ್ನು ಕಂಡು ಮೈಸೂರು ನಗರದಲ್ಲಿ ಅತ್ಯವಶ್ಯಕವಾಗಿ ಆಗಬೇಕಾದ ಅಭಿವೃದ್ಧಿ ಕಾರ್ಯ

ಬೆಂಗಳೂರು

ಕಲಾ ಮಂದಿರದ

ಸಹಾಯಾರ್ಥವಾಗಿ

ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ

2-8-52 ನೇ ಶನಿವಾರ ಸಂಜೆ

ಕವಿ ಪುಂಗವ

ಮತ್ತು ಆ ರಾತ್ರಿ

ನಾಟಕಗಳು

ನೃತ್ಯ ಮತ್ತು ವಿನೋದಗಳು

3-8-52 ನೇ ಭಾನುವಾರ ಸಂಜೆ

ಕವಿ ಪುಂಗವ ಮತ್ತು

ಕಲ್ಯಾಣಿ ಕಮುಂಗಿ

ನಾಟಕಗಳು ಮತ್ತು

ಸಂಗೀತ ವಿದುಷಿ ಶ್ರೀಮತಿ

ಜಿ. ಚನ್ನಮ್ಮನವರ ಸಂಗೀತ

ನೃತ್ಯ ಮತ್ತು ವಿನೋದಗಳೂ ಉಂಟು

ಕಳೆದಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ ಸಹಾಯ ಮಾಡಿ

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರ ಚುನಾವಣೆಯು ಬರುವ ಡಿಸೆಂಬರ್ ೨೦ರಲ್ಲಿ ನಡೆಯುವುದು ಅಧಿವೇಶನದ ಪ್ರತಿನಿಧಿಗಳ ಚುನಾವಣೆಯು ನವೆಂಬರ್ ೧೭ನೇ ತಾ|| ಆಗುವುದು

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನ

ಬರುವ ನವೆಂಬರ್ ತಿಂಗಳು ಕಡೇ ವಾರದಲ್ಲಿ ಲಂಡನ್ನಿನಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ನಡೆಯುವುದು ಭಾರತ ಮತ್ತು ದಕ್ಷಿಣ ಆಫ್ರಿಕ ಪ್ರಧಾನಿಗಳು ಮಾತ್ರ ಸಮ್ಮೇಳನಕ್ಕೆ ಹೋಗುವುದಿಲ್ಲ ಅವರ ಬದಲು ಬೇರೆ ಮಂತ್ರಿಗಳು ಭಾಗವಹಿಸುವರು

ಧಾರವಾಡದ ರೇಡಿಯೋ ಕೇಂದ್ರದಲ್ಲಿ ಟಿ ಆರ್ ಶ್ರೀನಿವಾಸನ್ನರ ಸಂಗೀತ

ಧಾರವಾಡದ ರೇಡಿಯೋ ಕೇಂದ್ರದಲ್ಲಿ ನ [illegible] ರವರೆಗೆ ಮೈಸೂರಿನ [illegible] ಶ್ರೀನಿವಾಸನ್ನರವರ [illegible]

ಗಳ [illegible] ಮಾಡಿಕೆ [illegible] ದರು

[illegible] ಕೃಷ್ಣಮೂರ್ತಿರಾವ್ [illegible] ಕಲಿದಾಸ [illegible] ಕೃಷ್ಣಯ್ಯ ಮತ್ತು ಜ|| ಅಹ ಮದ್ ಖಾನರವರು ಇರುವರು ಸಭೆಯು ಮತ್ತೆ ೮ ನೇ ತಾರೀಖಿಗೆ ಮುಂದಿಡಲ್ಪಟ್ಟಿತು

ಪ್ರಭಾ 1 8 52 ರಿಂದ ಜನಾಕರ್ಷಣೆಯ ೩ನೇ ವಾರ

[illegible]

ಪರ್ ಛಾಯಿ
[ಛಾಯೆ]

ಫರೂಕರ ಅಕೃತ್ಯಗಳ ಬಗ್ಗೆ ಕಿರು ಪುಸ್ತಕ

ಈಜಿಪ್ಟಿನ ಮಾಜಿ ದೊರೆ ಫರೂಕರ ಅಕೃತ್ಯಗಳನ್ನು ಮತ್ತು ದುರಾಚಾರಗಳನ್ನು ತಿಳಿಸುವ "ಕರಿಯ" ಗ್ರಂಥವೊಂದನ್ನು ಈಜಿಪ್ಟ್ ಸರ್ಕಾರದವರು ಸಧ್ಯದಲ್ಲಿಯೇ ಪ್ರಕಟಿಸಲಿರುವರು

ಸಿಟಿ ಬಸ್ಸು ಸಂಚಾರವು ಸಮರ್ಪಕವಾಗಿಲ್ಲ

ರಾಜಧಾನಿಯ ಸಿಟಿ ಬಸ್ಸು ಸಂಚಾರದ ವ್ಯವಸ್ಥೆಯು ಸಮರ್ಪಕವಾಗಿರುವುದಿಲ್ಲವೆಂದು ಸೂಚಿಸಿ ಶ್ರೀ ಬಿಳಿಗಿರಿ ರಂಗಯ್ಯನವರು ಪತ್ರ ಬರೆದಿರುತ್ತಾರೆ — ಹಳೆಯ ಬಸ್ಸುಗಳನ್ನು ಓಡಿಸಲಾಗುತ್ತಿದೆ ಸಿಟಿ ಬಸ್ಸು ಯಾವುದು, ಹೊರಗೆ ಹೋಗುವುದು ಯಾವುದು ಎಂಬುದು ಗೊತ್ತೇ ಆಗುವುದಿಲ್ಲ ಒಂದರಲ್ಲಿ ಸಿ ಪಿ ಸಿ ಮತ್ತೊಂದರಲ್ಲಿ ಎಕ್ಸ್‌ಟ್ರಾ ಟ್ರಾನ್ಸ್‌ಪೋರ್ಟ್, ಇನ್ನೊಂದರಲ್ಲಿ ಎಕ್ಸ್‌ಪ್ರೆಸ್ ಸರ್ವಿಸ್ ಎಂದು ವಿಧವಿಧವಾಗಿ ಬರೆದಿರುತ್ತದೆ ಅಲ್ಲದೆ ಶಿವಮೊಗ್ಗ, ಊಟಿ ಚಿಕ್ಕಮಗಳೂರು, ಪಾಂಡವಪುರ ಎಂಬ ಸಹ ಬೋರ್ಡುಗಳನ್ನು ಹಾಕಲಾಗಿರುತ್ತದೆ ಇದರಿಂದ ಯಾವ ಬಸ್ಸು ಎಲ್ಲಿಗೆ ಹೋಗುವುದೆಂಬುದು ತಿಳಿಯುವುದಿಲ್ಲ ಮತ್ತು ಸಕಾಲಕ್ಕೆ ಬಸ್ಸುಗಳು ಬರುತ್ತಿಲ್ಲ. ಇದರಿಂದ ಜನರಿಗೆ ಅನಾನುಕೂಲವಾಗಿರುತ್ತದೆ ಈ ವಿಷಯಕ್ಕೆ ಸಂಬಂಧಪಟ್ಟವರು ಸೂಕ್ತ ಗಮನ ಕೊಡಬೇಕೆಂದು ಕೋರಲಾಗಿದೆ - ಎಂದು ಇವರು ತಿಳಿಸಿರುತ್ತಾರೆ

THE CITY TUTORIAL COLLEGE

(New Buildings)

Near V V Market Mysor

TUITION CLASSES

have been arranged for

★ **S S L C Exams. (March 53)**

★ **IV Form Eng Medium only**

M S [illegible] ರಿಂದ ೯ ರ ವರೆಗೆ [illegible] ಹೇಳುವ ಏರ್ಪಾಡು ಮಾಡಲಾಗಿದೆ

ಗ್ರೀಕ್ ಸೈನ್ಯಗಳು ಬಲ್ಗೇರಿಯಾ ಗಡಿ ದಾಟಿದುವು

ಗ್ರೀಕಿನ ಸೈನ್ಯಗಳು ಬಲ್ಗೇರಿಯಾ ಗಡಿಯನ್ನು ಅಕ್ರಮವಾಗಿ ದಾಟಿದುವೆಂದು ಬಲ್ಗೇರಿಯಾವು ವಿಶ್ವಸಂಸ್ಥೆಗೆ ದೂರನ್ನು ಕೊಟ್ಟಿರುತ್ತದೆ

SREE GANESHA

TALKIES

From 2 8 52 For 2 Days

Daily 3 Shows

Warner Brothers

I WAS A COMMUNIST FOR THE F. B. I

(The End of a Nine Year Manhunt or the end of a Hero!

Featuring Frank Love Joy and Dorothy Heart

— NEXT ATTRACTION —

HOMICIDE

Warner Brothers Story of the Murder Bureau

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

5 ಜೊತೆ ಭಾರಿ

★ ಕುಸ್ತಿಗಳು ★

ಮೈಸೂರು ಎಗ್ಜಿಬಿಷನ್ ಆವರಣದಲ್ಲಿ

3-8 52 ನೇ

ಭಾನುವಾರ

ಸಂಜೆ 4 ಘಂಟೆಗೆ

ಕರಡಿಯೊಡನೆ ಕಾಳಗವಾಡಿ ಜಯಿಸಿದ ಉ|| ಪಾಪಯ್ಯನವರ ಶಾಗಿರ್ದ್ ಪೈ|| ಸ್ವಾಂ ರಾಮುವಿಗೂ ಮಂಗಳೂರು ಪೈ|| ಕಾಂಚ್ [illegible] ಆನಂದಪ್ಪನಿಗೂ

(ಕೊಪ್ಪಲು ಬಸವಯ್ಯನ ಶಾಗಿರ್ದ್)

★

ಕ್ಯಾತ್ಮನಹಳ್ಳಿ ಪುಟ್ಟಯ್ಯನವರ ಗರಡಿ ಉ|| ಪಾಪಯ್ಯನವರ ಶಾಗಿರ್ದ್ ವೀರಣ್ಣನವರ ಬಾಸಾ ಪಟ್ಟ ಸ್ಟೂಡೆಂಟ್ ಪೈ|| ಆರ್ ಜವರಪ್ಪನಿಗೂ ನವಾಬ್ ಎಸಪ್ಪನವರ ಗರಡಿ ನವಾಬ್ ಬಸಪ್ಪನವರ ಶಾಗಿರ್ದ್ ಪೈ|| ಮಹದೇವುಗೂ ಮತ್ತು ಇತರ ಮೂರು ಜೊತೆ ಕುಸ್ತಿಗಳು,

2ನೇ ಕುಸ್ತಿಯಲ್ಲಿ ಗೆದ್ದವನಿಗೆ ಕಂಟ್ರಾಕ್ಟರರು ಬೆಳ್ಳಿ ಕಪ್ಪು ಕೊಡಲಿರುವರು

ಎಂ. ಎಸ್ ನಂಜಪ್ಪ, ಕಂಟ್ರಾಕ್ಟರ್

ಜಂಬುಕೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಹಿಷ್ಠೆ (ಮುಟ್ಟಿನ) ಸಂಬಂಧವಾದ ಹೊಟ್ಟೆನೋವಿನಿಂದ ಮಕ್ಕಳಾಗದಿರುವುದು ಅಕ್ರಮ ಸ್ರಾವ ಕ್ರಮತಪ್ಪಿ ಬಹಿಷ್ಠೆ, ಗರ್ಭ ಪತನ ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

3 ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಖಾತ್ರಿ ಸಂತಾನ ಫಲ ಬೇಕಾದರೆ ನೋಲ್ಕಾಂಡ ಸಿದ್ಧೌಷಧವನ್ನು "ಮದನ ವಿಲಾಸ" ಜೊತೆಗೆ ಸೇವಿಸಬೇಕು 1 ಸೆಟ್ ಅನುಪಾನ ಪತ್ರಿಕೆಯ, ಮೇರೆ ಸೇವಿಸಿದ ಸಾಕು, ಫಲ ತಮಗೇ ಗೊತ್ತಾಗುತ್ತೆ ಕ್ರಯ. 1 ಸೆಟ್ 5 ರೂ ಪತ್ರ ವ್ಯವಹಾರ ಗುಪ್ತ ಕ್ಯಾಟಲಾಗು ಉಚಿತ ಹೆಸ್ಸು ಮಾಹಿತಿಗೆ 2 ಅಣೆ ಸ್ಟಾಂಪು ಕಳಿಸಿ

ವಿಶೇಷ ಸೂಚನೆ ಔಷಧದ ಪ್ಯಾಕೆಟ್ ಮೇಲೆ ಶ್ರೀ ಎ ಆರ್ ಅಯ್ಯರ್ ರವರ ಫೋಟೋ ಮತ್ತು ರಾಜು ನೋಡಿ ಇದುವರೆಗೂ ಯಳಂದೂರು ತಾ|| ಅಂಬಳೆ ಮತ್ತು ಮೈಸೂರು ಸೂಪ್ಪಿನ ಕೊಳದ ಬೀದಿಯಲ್ಲಿದ್ದ ಆಫೀಸುಗಳನ್ನು ಕೆಳಗೆ ಕಂಡ ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ

ಹೊಸ ವಿಳಾಸ — ಎ ರಾಮಸ್ವಾಮಿ ಅಯ್ಯರ್ ಸನ್

" ಸಂತಾನ ಸಿಂಧೂರ ಬಿಲ್ಡಿಂಗ್ "

628 ಸೂರದಿ ರಸ್ತೆ, ಪಕ್ಷಿಣ ಕ್ರಾಸ್,

(ಕೃಷ್ಣ ರೈಸ್ ಮಿಲ್ ಪಕ್ಕ) ಮೈಸೂರು

Edited Printed and Published by A R Nagarajan at Sadhvi Press, D Subbiah Road Mysore

ಟೆಲಿಫೋನ್ ನಂ 792 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨-೮ ೧೯೫೨ [ಸಂಚಿಕೆ ೭

ಈಜಿಪ್ಟಿನ ಸಿಂಹಾಸನಕ್ಕೆ - ಪುನಃ ಫರೂಕರು ? -

ಅಭಾವ ಪ್ರದೇಶಗಳಿಗೆ ಸಹಾಯ

ಸಾರ್ವಜನಿಕ ಸಮಿತಿಯ ಸ್ಥಾಪನೆ

ಮೈಸೂರು ೩

ಕೋಲಾರ ಮುಂತಾದ ಅಭಾವ ಪ್ರದೇಶಗಳಲ್ಲಿ ಕಷ್ಟಕ್ಕೀಡಾಗಿರುವ ಜನರಿಗೆ ಧನಧಾನ್ಯ ಮುಂತಾದ ಸಹಾಯ ವಸ್ತು ಒದಗಿಸಲಿ ಏರ್ಪಾಡು ಮಾಡುವ ಸಲುವಾಗಿ ನಗರದ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರ ಸಭೆಯು ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ನಡೆಯಿತು

ಅಧ್ಯಕ್ಷರು ಸಭೆಯನ್ನು ಕರೆದ ಉದ್ದೇಶವನ್ನು ತಿಳಿಸಿ, ಅಭಾವ ಪ್ರದೇಶಗಳಿಗೆ ಸಹಾಯ ಒದಗಿಸಲು ಮುಖ್ಯಮಂತ್ರಿಯವರು ಒಂದು ನಿಧಿಯನ್ನು ಏರ್ಪಡಿಸಿರುವರೆಂದೂ, ಜಿಲ್ಲೆಗಳಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಸಮಿತಿಗಳನ್ನು ರಚಿಸುವಂತೆ ಏರ್ಪಾಡು ಮಾಡಿರುವುದಾಗಿಯೂ, ನಗರದಲ್ಲಿ ಪೌರಸಭೆಯ ಪರಿಗೆ ಈ ಕಾರ್ಯವನ್ನು ವಹಿಸಿರುವುದಾಗಿಯೂ ಅವರು ಹೇಳಿದರು

ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ೪೫ ಜನ ವಿವಿಧ ಸಂಸ್ಥೆ ಮತ್ತು ಪ್ರಾತಿನಿಧ್ಯವುಳ್ಳ ಸದಸ್ಯರ ಸಮಿತಿಯೊಂದನ್ನು ರಚಿಸಲಾಯಿತು ಪೌರಸಭಾ ಕಮಿಷನರರಾದ ಜನಾಬ್ ಎಚ್ ಎಂ ಅಬ್ದುಲ್ ರಹೀಂರವರು ಖಜಾಂಚಿಯಾಗಿರುವರು ಸಮಿತಿಯಲ್ಲಿ ಶ್ರೀಮತಿ ಲೀಲಾವತಿ ಸಂಜೀವಪ್ಪ, ಶ್ರೀಗಳಾದ ಎಚ್ ಚನ್ನಯ್ಯ, ಬಿ ಕೆ ರಾಮಕೃಷ್ಣಯ್ಯ, ಬದರಿ ಪ್ರಸಾದ್, ಚೌಡಯ್ಯ, ಹೆಚ್ ಎಂ ಚನ್ನಬಸಪ್ಪ, ಪಿ ಸೀತಾರಾಮಯ್ಯ, ವಿ ನಾರಾಯಣರಾವ್, ಎಂ ಆರ್ ಸಿ ಬಸಪ್ಪ, ಆರ್ ಗೋಪಾಲಕೃಷ್ಣರಾವ್, ಎ ರಾಮಣ್ಣ, ವರ್ತಕರ ಸಂಘದ ಅಧ್ಯಕ್ಷರು, ಹೋಟೇಲು ಮತ್ತು ರೇಷನ್ ಡಿಪೋ ಮಾಲೀಕರುಗಳ ಸಂಘಗಳ ಅಧ್ಯಕ್ಷರುಗಳು ಸದಸ್ಯರಾಗಿರುವರು

ಕಾಂಗ್ರೆಸ್ ಕಾರ್ಯಕರ್ತರ ಸಭೆ

ರಾಜಧಾನಿಯ ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಕೆಲಸಗಾರರ ಮತ್ತು ಬೆಂಬಲಿಗರ ಸಭೆಯು ನಾಳೆ ಸಂಜೆ ೭ ಘಂಟೆಗೆ ಅಶೋಕಾ ರಸ್ತೆಯ ತುಂಗಾ ಆದಪ್ಪ ಛತ್ರದಲ್ಲಿರುವ ಕಾಂಗ್ರೆಸ್ ಕಛೇರಿ ಕಾರ್ಯಾಲಯದಲ್ಲಿ ಸೇರುವುದು ಇಂದಿನ ಪರಿಸ್ಥಿತಿಯನ್ನು ವಿಮರ್ಶಿಸಲಾಗುವುದು ಸರ್ವರೂ ಭಾಗವಹಿಸಬೇಕೆಂದು ಸಮಿತಿಯ ಅಧ್ಯಕ್ಷರಾದ ಶ್ರೀ ಮೈ ಗ ವೆಂಕಟಪ್ಪನವರು ಪ್ರಾರ್ಥಿಸಿರುತ್ತಾರೆ

ನೆಕ್ ಟೈನಂತೆ ಹಾವನ್ನು ಕಟ್ಟಿದ ಪ್ರಸಂಗ

ಕಳೆದ ಗರುಡ ಪಂಚಮಿ ದಿನ ಆಕೋಲೆಯ ಹಾವಾಡಿಗನೊಬ್ಬನು ಸರ್ಪವನ್ನು ಕುತ್ತಿಗೆ ಪಟ್ಟಿ (ಟೈ) ಯಂತೆ ಕಟ್ಟಿಕೊಂಡು ಬೀದಿಗಳಲ್ಲಿ ತಿರುಗುತ್ತಿದ್ದಾಗ, ಅವನನ್ನು ದಸ್ತಗಿರಿ ಮಾಡಲಾಯಿತು ಹಾವಿನಿಂದ ಜನರಿಗೆ ಭೀತಿ ತರುವ ರೀತಿಯಲ್ಲಿ ಅವನು ಹೋಗುತ್ತಿದ್ದುದೇ ಬಂಧನಕ್ಕೆ ಕಾರಣ.

ಕನ್ನಡ ಸಾಹಿತಿಗಳಿಗೆ ಪ್ರೋತ್ಸಾಹದ ಯೋಜನೆ

೧ ಜನವರಿಯವರಿಂದ ಆರಂಭ

ಬೆಂಗಳೂರು ೩

ಕನ್ನಡದಲ್ಲಿ ಕೀರ್ತನೆ, ಶಿವ ಶರಣ ಹರಿದಾಸ ಮುಂತಾದ ಸಾಹಿತ್ಯಗಳು ನಶಿಸದಂತೆ ಮಾಡಿ ಅವನ್ನು ಬೆಳೆಸಲು ಶ್ರಮ ಪಡುತ್ತಿರುವ ಪಂಡಿತರು ಮತ್ತು ಸಾಹಿತಿಗಳಿಗೆ ಸಹಾಯವೊದಗಿಸಿ, ಸಾಹಿತ್ಯವು ಪ್ರಚಾರವಾಗುವಂತೆ ಮಾಡಲು ಸರ್ಕಾರದವರು ಯೋಜನೆಯೊಂದನ್ನು ಸಿದ್ಧಗೊಳಿಸಿರುವರೆಂದೂ, ಈ ಕಾರ್ಯಕ್ರಮದ ಆರಂಭೋತ್ಸವವನ್ನು ನೆರವೇರಿಸಲು ಮದ್ರಾಸಿನ ಮುಖ್ಯಮಂತ್ರಿ ರಾಜಗೋಪಾಲಾಚಾರಿಯವರನ್ನು ಕರೆಸುವ ಆಲೋಚನೆ ಇದೆಯೆಂದೂ ಗೊತ್ತಾಗಿದೆ

ಪ್ರತಿ ಸಂಸ್ಥಾನದಲ್ಲೂ ವ್ಯವಸಾಯ ಶಿಕ್ಷಣ ಕೇಂದ್ರ

ವಿಶ್ವಸಂಸ್ಥೆಯ ಮೈಸೂರು ಸಂಘದ ಆಶ್ರಯದಲ್ಲಿ ಕಳೆದ ೩ನೇ ತಾ|| ಮಂಡ್ಯದ ವ್ಯವಸಾಯ ವಿಸ್ತರಣ ಪ್ರವೀಣರಾದ ಡಿಕ್ ಫೀಗರರವರು ಭಾಷಣ ಮಾಡಿ, ಭಾರತದ ಪ್ರತಿ ಸಂಸ್ಥಾನದಲ್ಲೂ ಒಂದೊಂದು ವ್ಯವಸಾಯ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ತಿಳಿಸಿದರು ಮೊದಲಿನ ಮೂರು ವರ್ಷಗಳಲ್ಲಿ ಶಿಕ್ಷಣ ಪಡೆಯುವವರಿಗೆ ಫೋರ್ಡ್ ಸಂಸ್ಥೆಯವರು ವೇತನ ಕೊಡುವರೆಂದೂ, ೪ನೇ ವರ್ಷದಲ್ಲಿ ಭಾರತ ಸರ್ಕಾರದವರು ವೆಚ್ಚವನ್ನು ಸ್ವಲ್ಪ ಮಟ್ಟಿಗೆ ವಹಿಸುವರೆಂದೂ, ೫ನೇ ವರ್ಷದಲ್ಲಿ ಫೋರ್ಡ್ ಸಂಸ್ಥೆಯ ಹಣಕಾಸಿನ ಸಹಾಯವು ದೊರೆಯುವುದಿಲ್ಲವೆಂದೂ ಗೊತ್ತಾಗಿದೆ

ಪೂರ್ವ ಪಂಜಾಬಿನಲ್ಲೂ ಧಾನ್ಯ ಹತೋಟಿಯು ರದ್ದು

ಪೂರ್ವ ಪಂಜಾಬಿನಲ್ಲಿ ಆಹಾರದ ಹತೋಟಿಯನ್ನು ರದ್ದುಗೊಳಿಸಲಾಗುವುದೆಂದು ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ತಿಳಿಸಿರುತ್ತಾರೆ ಹತೋಟಿಗಳು ಯುದ್ಧ ಕಾಲದ ಕ್ರಮಗಳೆಂದೂ ಅವುಗಳನ್ನು ರದ್ದುಗೊಳಿಸುವ ಕಾಲವು ಬಂದಿದೆಯೆಂದೂ ಅವರು ಅಭಿಪ್ರಾಯಪಟ್ಟಿರುವರು

ಮೈಸೂರು, ಮದ್ರಾಸುಗಳಲ್ಲಿ ಹಿಂದಿ ವಿರುದ್ಧದ ಚಳುವಳಿ

ಮದ್ರಾಸಿನ ತಿರುಚಿನಾಪಳ್ಳಿ, ಮಧುರೆಗಳಲ್ಲಿ ನೆನ್ನೆ ದ್ರಾವಿಡ ಸಂಘದವರು ಹಿಂದಿ ವಿರುದ್ಧವಾಗಿ ಚಳುವಳಿ ನಡೆಸಿದರು ಅವರ ಮುಖಂಡರಾದ ಇ ವಿ ರಾಮಸ್ವಾಮಿ ನಾಯಕರು ತಿರುಚಿರಾಪಳ್ಳಿಯಲ್ಲಿ ರೈಲ್ವೆ ನಿಲ್ದಾಣದಲ್ಲಿದ್ದ ಬೋರ್ಡಿನ ಹಿಂದಿ ಅಕ್ಷರಗಳನ್ನು ಅಳಿಸಿದರು ಸ್ಥಳದಲ್ಲಿ ಪೋಲೀಸರು ಹಾಜರಿದ್ದರೂ ಯಾರನ್ನೂ ದಸ್ತಗಿರಿ ಮಾಡಲಿಲ್ಲ ಸ್ಟೇಷನ್ನಿಗೆ ನಾಯಕರು ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಅವರ ಹಿಂಬಾಲಕರ ರಸ್ತೆಯ ಪಕ್ಕದಲ್ಲಿದ್ದ ಹಿಂದಿ ಬೋರ್ಡು ಗಳನ್ನು ಅಳಿಸಿದರು ಮಧುರೆಯಿಂದ ದಿಂಡಿಗಲ್ಲಿನ ವರೆಗೆ ಎಲ್ಲಾ ಸ್ಟೇಷನ್ನಿನಲ್ಲೂ ಹಿಂದಿ ಬೋರ್ಡ್ ಅಳಿಸಲಾಗಿತ್ತು ಮಧುರೆಯ ಮಾರ್ವಾಡಿ ಧರ್ಮಶಾಲೆಯ ಹಿಂದಿ ಬೋರ್ಡ್ ಸಹ ಅಳಿಸಲಾಗಿತ್ತು ಅಧಿಕಾರಿಗಳು ತಮ್ಮನ್ನು ದಸ್ತಗಿರಿ ಮಾಡಿದರೆ ಚಳುವಳಿಗೆ ಹೆಚ್ಚು ಪ್ರೋತ್ಸಾಹ ಸಿಗುವುದೆಂದು ಸತ್ಯಾಗ್ರಹಿಗಳು ಭಾವಿಸಿದ್ದರೆಂದೂ ಆದರೆ, ಆ ರೀತಿ ಆಗದೆ ಅವರು ನಿರಾಶಗೊಂಡರೆಂದೂ ಹೇಳಲಾಗಿದೆ

ಬೆಂಗಳೂರಿನ ನಗರ, ಸಿವಿಲ್ ಪ್ರದೇಶ ಮತ್ತು ಕೃಷ್ಣರಾಜ ಪುರಂ ಸ್ಟೇಷನ್ನುಗಳಲ್ಲೂ ಇದೇ ರೀತಿಯ ಚಳುವಳಿ ನಡೆಯಿತು ಒಬ್ಬ ಸ್ತ್ರೀಯೂ ಸೇರಿ ಒಟ್ಟು ೧೭ ಜನರ ದಸ್ತಗಿರಿಯಾಗಿದೆ. ಬೆಂಗಳೂರು ಪೂರ್ವ ಸ್ಟೇಷನ್ನಿನಲ್ಲಿ ಹೊಸದಾಗಿ ಹೆಸರುಗಳನ್ನು ಬರೆಯುವ ನಿಮಿತ್ತ ಹಲಗೆಗಳಿಗೆ ಪೂರ್ತಿಯಾಗಿ ಹಳದಿ ಬಣ್ಣವು ಬಳಿಯಲ್ಪಟ್ಟುದರಿಂದ ಚಳುವಳಿಗಾರರಿಗೆ ಆಶಾಭಂಗವಾಯಿತು ಅವರು ಹಿಂದಿಗೆ ಧಿಕ್ಕಾರ, ಕನ್ನಡ ಚಿರಾಯುವಾಗಲಿ" ಎಂದು ಕೂಗಿದರು

ಶಾಂತಿ ಸಾಗರ ಪ್ರದೇಶದ ರಕ್ಷಣಾ ಮಾತುಕತೆ

ಶಾಂತಿ ಸಾಗರದ ಪ್ರದೇಶಗಳ ರಕ್ಷಣಾ ಸಂಬಂಧವಾದ ಮಾತುಕತೆಗಳು ನಾಳಿದ್ದಿನಿಂದ ಹೊನಲುಲುವಿನಲ್ಲಿ ಪ್ರಾರಂಭವಾಗುವುವು ಅಮೆರಿಕಾ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡುಗಳು ಇದರಲ್ಲಿ ಭಾಗವಹಿಸಿ, ರಕ್ಷಣಾ ಸಂಸ್ಥೆಯೊಂದನ್ನು ಏರ್ಪಡಿಸಲಿರುವುವೆಂದು ಗೊತ್ತಾಗಿದೆ.

ಹಿಂದಿ ಚಳುವಳಿಗಾರರಿಗೆ ಶಿಕ್ಷೆ

ಬೆಂಗಳೂರು ೩

ಇಲ್ಲಿನ ಸಿಟಿ ರೈಲ್ವೆ ನಿಲ್ದಾಣದ ಹಿಂದೀ ಬೋರ್ಡನ್ನು ಅಳಿಸುವ ಚಳುವಳಿ ಸಂಬಂಧವಾಗಿ ದಸ್ತಗಿರಿಯಾಗಿರುವ ದ್ರಾವಿಡ ಸಂಘದ "ಹಿಂದಿ ವಿರೋಧದ ಡಿಕ್ಟೇಟರ್" ಆರ್ ರಾಜಗೋಪಾಲ್ ಮತ್ತು ೫ ಮಂದಿಗೆ ೩೦ ರೂ ದಂಡ ತಪ್ಪಿದರೆ ೩ ವಾರ ಸಜಾ, ಇತರ ಆರು ಮಂದಿಗೆ ೨೦ ರೂ ದಂಡ ತಪ್ಪಿದರೆ ೨ ವಾರ ಸಜಾ ವಿಧಿಸಲಾಯಿತು ಅವರೆಲ್ಲರೂ ದಂಡ ಕೊಡಲೊಪ್ಪದೆ ಜೈಲಿಗೆ ತೆರಳಿದರು ಸಿವಿಲ್ ಪ್ರದೇಶ ಮತ್ತು ಕೃಷ್ಣರಾಜಪುರ ನಿಲ್ದಾಣಗಳಲ್ಲಿ ದಸ್ತಗಿರಿಯಾಗಿರುವವರು ಪೋಲೀಸು ಸ್ಟೇಷನ್ನುಗಳಲ್ಲಿರುವರು

ಶೋಧನೆಗೆ ಫರೂಕರ ಪ್ರತಿಭಟನೆ

ಈಜಿಪ್ಟಿನಿಂದ ಹಡಗಿನಲ್ಲಿ ತೆರಳಿದಾಗ ಮಾಜಿ ದೊರೆ ಫರೂಕರ ಸಾಮಾನುಗಳನ್ನು ಶೋಧಿಸಲು ಅವರು ಪ್ರತಿಭಟಿಸಿದರೆಂದೂ, ಅವರನ್ನು ಭೂಮಿಯ ಮೇಲೆ ಇಳಿಸಕೂಡದೆಂದು ಹಡಗಿನ ಮುಖ್ಯಾಧಿಕಾರಿಗೆ ಸೂಚಿಸಲಾಯಿತೆಂದೂ, ಅಷ್ಟರಲ್ಲಿ ಹಡಗು ನೇಪಲ್ಸ್ ರೇವು ಬಳಿ ಬಂದು ಫರೂಕರು ಇಳಿದರೆಂದೂ, ಅನಂತರ ಅವರ ಸಾಮಾನುಗಳೂ ಇಳಿಸಲ್ಪಟ್ಟುವೆಂದೂ ಹೇಳಲಾಗಿದೆ

ಈಜಿಪ್ಟ್ ಸಿಂಹಾಸನಕ್ಕೆ ಪುನಃ ಫರೂಕರು ?

ಹಲವು ತಿಂಗಳುಗಳ ನಂತರ ಈಜಿಪ್ಟಿನ ಸಿಂಹಾಸನಕ್ಕೆ ಫರೂಕರು ಹಿಂತಿರುಗಬಹುದೆಂದೂ, ಆ ದೇಶದ ರಾಜಕೀಯ ತಂತ್ರಗಳ ಅಂಗವಾಗಿ ಫರೂಕರ ರಾಜತ್ಯಾಗವಾಗಿರುವುದೆಂದೂ ಇಟಲಿಯ ರಾಜಧಾನಿ ರೋಮ್ ನಗರದ ಇಲ್ ಟೆಂಪೊ ಪತ್ರಿಕೆಯು ತಿಳಿಸುತ್ತದೆ

ಮುಸಲ್ಮಾನನೇ ಪಾಕಿಸ್ತಾನದ ಅಧಿಪತಿ !

ಮುಸಲ್ಮಾನನೇ ಪಾಕಿಸ್ತಾನದ ಮುಖ್ಯಾಧಿಪತಿಯಾಗಬೇಕೆಂದು ಪಾಕಿಸ್ತಾನದ ರಾಜ್ಯಾಂಗ ಸಭೆಯ ಮೂಲ ತತ್ವಗಳ ಸಮಿತಿಯು ಆ ಸಭೆಗೆ ಶಿಫಾರಸು ಮಾಡಲಿರುವುದಾಗಿ ಗೊತ್ತಾಗಿದೆ ಅಲ್ಲಿನ ಮುಸಲ್ಮಾನ ಮತಗುರುಗಳ ಸಲಹೆಯಂತೆ ಈ ನಿರ್ಧಾರವನ್ನು ಕೈಗೊಳ್ಳಲಾಗುವುದೆಂದು ಗೊತ್ತಾಗಿದೆ

ಭದ್ರಾವತಿಯಲ್ಲಿ ವಿಶ್ವೇಶ್ವರಯ್ಯನವರ ಪ್ರತಿಮೆ

ಭದ್ರಾವತಿ ಪೌರ ಸಭೆಯವರು ಅಲ್ಲಿ ಸರ್ ಎಂ ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಸ್ಥಾಪಿಸಲು ನಿರ್ಧರಿಸಿರುತ್ತಾರೆ

ಹರಿಕಥೆ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ನಾಳೆ ಸಂಜೆ ೭ ಕ್ಕೆ ಗರುಡ ಗರ್ವಭಂಗವೆಂಬ ಹರಿಕಥೆಯು ಶ್ರೀ ರಾಮನಾಯ್ಡುರವರಿಂದ ನಡೆಯುವುದು

○ ಟರ್ಕಿಯ ಸರ್ಕಾರದವರು ವಿದೇಶೀ ರಾಯಭಾರಿಗಳೊಡನೆ ಭೇಟಿ ಮಾಡುವುದಕ್ಕೆ ಮುಂಚಿತವಾಗಿ ಅಲ್ಲಿನ ಪ್ರಧಾನಿ ಮುಸ್ತಾಫಾ ರವರ ಅನುಮತಿ ಪಡೆಯಬೇಕೆಂದು ವಿಧಾಯಕವಾಗಿದೆ.

ಫರೂಕರ ಸಂಸಾರವೇ ಅವರ ಸಾಮ್ರಾಜ್ಯ

ಈಜಿಪ್ಟಿನ ಮಾಜಿ ದೊರೆ ಫರೂಕರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆಯೊಂದನ್ನು ಇತ್ತು ತಾವು ಇನ್ನು ಮುಂದೆ ಸಾಮಾನ್ಯ ಜೀವನವನ್ನು ನಡೆಸುವುದಾಗಿಯೂ ಸಾಮ್ರಾಜ್ಯವು ಕೈತಪ್ಪಿರುವುದರಿಂದ ತಮ್ಮ ಸಂಸಾರವೇ ಸಾಮ್ರಾಜ್ಯವೆಂದು ತಿಳಿದು ಅವರೊಡನೆ ಶಾಂತಿಯಿಂದ ಇರಲು ಅವಕಾಶ ಬೇಕೆಂದೂ ಕೋರಿರುತ್ತಾರೆ. ದೊರೆಯಾಗಿಲ್ಲದಿರುವುದರಿಂದ ತಾವು ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಕೊಡಲು ಸಾಧ್ಯವಿಲ್ಲವೆಂದು ಅವರು ಹೇಳಿರುವರು. ತಾವು ಇಟಲಿಯಲ್ಲಿರುವುದೂ, ಈಜಿಪ್ಟಿನ ಆರು ತಿಂಗಳ ದೊರೆಯು ತಮ್ಮೊಡನೆ ಇರುವುದೂ, ತಮಗೆ ಭಾರಿ ಜವಾಬ್ದಾರಿಯಾಗಿರುವುದೆಂದೂ, ಆ ಮಗುವಿಗೋಸ್ಕರವಾದರೂ ಸಹಾ ತಾವು ಏನನ್ನೂ ಹೇಳುವಂತಿಲ್ಲವೆಂದೂ ತಿಳಿಸಿದರು. ಈಜಿಪ್ಟಿನ ರಾಜ್ಯಭಾರವನ್ನು ವಹಿಸಿಕೊಂಡವರಿಗೆ ಯಶಸ್ಸು ದೊರೆಯಲೆಂದು ಹಾರೈಸಿದರು. ಇಂದಿನ ರಾಜ್ಯಭಾರಕ್ರಮವು ಹಿಂದಿನಂತಿರುವುದಿಲ್ಲವೆಂದೂ ಇಂತಹ ಕಠಿಣ ದಿನಗಳಲ್ಲಿ ಹೊಸಬರಿಂದ ರಾಜ್ಯಭಾರವು ಸುಲಭಸಾಧ್ಯವಲ್ಲವೆಂದೂ ಅಭಿಪ್ರಾಯಪಟ್ಟರು. ಇಟಲಿಯಲ್ಲಿ ಹಲವು ತಿಂಗಳು ಕಾಲ ತಾವು ಇರುವುದಾಗಿ ಅವರು ಹೇಳಿದರು. ತಾವು ಧನಿಕರಲ್ಲವೆಂದೂ ಸಾಮಾನ್ಯ ಜನರಂತೆ ತವರನ್ನು [illegible] ಬೇಕೆಂದೂ ಅವರು [illegible] ಸಿರುವರು.

ಈಜಿಪ್ಟ್ ದೊರೆ ಚಿತ್ರದ ಬದಲು ಕೊರಾನ್ ಗ್ರಂಥ

ಈಜಿಪ್ಟಿನ ಕ್ರಾಂತಿಕಾರಿ ಮುಖಂಡರಾದ ಜನರಲ್ ನಗಿಬ್‌ರವರ ಕಛೇರಿಯಲ್ಲಿದ್ದ ಫರೂಕರ ಭಾವಚಿತ್ರವನ್ನು ತೆಗೆದುಹಾಕಿ ಅದರ ಜಾಗದಲ್ಲಿ ಪವಿತ್ರ ಕೊರಾನ್ ಗ್ರಂಥವನ್ನು ಇಡಲಾಗಿದೆ.

ಬೆಂಗಳೂರು
ಕಲಾ ಮಂದಿರದ
ಸಹಾಯಾರ್ಥವಾಗಿ
ರಂಗಾಚಾರ್ಲು ಮೆಮೋರಿಯಲ್
ಹಾಲಿನಲ್ಲಿ
2-8-52 ನೇ ಶನಿವಾರ ಸಂಜೆ
ಕವಿ ಪುಂಗವ
ಮತ್ತು **ಚಿತ್ರ ರಾತ್ರಿ**
ನಾಟಕಗಳು
ನೃತ್ಯ ಮತ್ತು ವಿನೋದಗಳು
3-8-52 ನೇ ಭಾನುವಾರ ಸಂಜೆ
ಕವಿ ಪುಂಗವ ಮತ್ತು
ಕಲ್ಯಾಂಟಿ ಕಮಂಗಿ
ನಾಟಕಗಳು ಮತ್ತು
ಸಂಗೀತ ವಿದುಷಿ ಶ್ರೀಮತಿ
ಬಿ. ಚೆನ್ನಮ್ಮನವರ ಸಂಗೀತ
ನೃತ್ಯ ಮತ್ತು ವಿನೋದಗಳೂ ಉಂಟು
ಕಲೆಗಾಗಿ 33 ವರ್ಷಗಳಿಂದ ದುಡಿಯುತ್ತಿರುವ ಕಲಾ ಮಂದಿರಕ್ಕೆ
ಸಹಾಯ ಮಾಡಿ

ಅಣುಬಾಂಬು ಬಿದ್ದ ಹಿರೋಷಿಮಾದಲ್ಲಿ ಜನರು

1945 ರಲ್ಲಿ ಜಪಾನಿನ ಹಿರೋಷಿಮಾ ನಗರದಲ್ಲಿ ಅಣುಬಾಂಬು ಹಾಕಲಾಯಿತಷ್ಟೆ. ಅಲ್ಲಿದ್ದ ೪ ಲಕ್ಷ ಜನರ ಸ್ಥಳಕ್ಕೆ ಈಗ ೨|| ಲಕ್ಷಕ್ಕಿಂತಲೂ ಹೆಚ್ಚು ಜನರು ಇನ್ನೂ ಬದುಕಿರುವರೆಂದು ಗೊತ್ತಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ ರೂ [illegible]

ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಮುಚ್ಚೆಳ್ಳು	[illegible]	[illegible]
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಅವರೆ	[illegible]	[illegible]
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ		
ಮಣಗಳ್ಳೆ	[illegible]	[illegible]
ಹುಣಸೇಹಣ್ಣು	[illegible]	[illegible]
ಸೀಗೆಕಾಯಿ	[illegible]	
ಕೊಬ್ಬರಿ	[illegible]	
[illegible]	[illegible]	[illegible]

ಆಕಾಶವಾಣಿಯ ಕಾರ್ಯಕ್ರಮ [illegible]

5 ಜೊತೆ ಭಾರಿ
★ **ಕುಸ್ತಿಗಳು** ★
ಮೈಸೂರು ಎಗ್ಜಿಬಿಷನ್

ಆವರಣದಲ್ಲಿ
3-8-52 ನೇ
ಭಾನುವಾರ
ಸಂಜೆ 4 ಘಂಟೆಗೆ
ಕರಡಿಯೊಡನೆ ಕಾಳಗವಾಡಿ ಜಯಿಸಿದ
ಉ|| ಪಾಪಣ್ಣನವರ ಶಾಗಿರ್ದು
ಪೈ|| ಸ್ಟಾರ್ ರಾಮುರವರಿಗೂ
ಮಂಗಳೂರು ಪೈ|| ಶಾಂಕೆ
ಆನಂದಪ್ಪನಿಗೂ
(ಕೊಪ್ಪಲು ಬಸವಯ್ಯನವರ ಶಾಗಿರ್ದು)
★
ಕ್ಯಾತ್ಮಾನಹಳ್ಳಿ ಪುಟ್ಟಯ್ಯನವರ ಗರಡಿ
ಉ|| ಪಾಚಯ್ಯನವರ ಶಾಗಿರ್ದು
ವೀರಣ್ಣನವರ ಖಾಸಾ ಪಟ್ಟಿ ಸ್ಟೂಡೆಂಟ್ ಪೈ|| ಆರ್. ಜನರಪ್ಪನಿಗೂ
ನವಾಬ್ ಬಸಪ್ಪನವರ ಗರಡಿ
ನವಾಬ್ ಬಸಪ್ಪನವರ ಶಾಗಿರ್ದು
ಪೈ|| ಮಹದೇವುಗೂ ಮತ್ತು
ಇತರ ಮೂರು ಜೊತೆ ಕುಸ್ತಿಗಳು.
2ನೇ ಕುಸ್ತಿಯಲ್ಲಿ ಗೆದ್ದವರಿಗೆ ಕಂಟ್ರಾಕ್ಟರರು ಬೆಳ್ಳಿ ಕಪ್ಪು ಕೊಡಲಿರುವರು
ಎಂ. ಎಸ್. ನಂಜಪ್ಪ,
ಕಂಟ್ರಾಕ್ಟರ್

ಗಾಜಿನ ವಿಮಾನಗಳು

ಶಬ್ದದ ಚಲಿಸುವ ವೇಗಕ್ಕಿಂತಲೂ ಎರಡರಷ್ಟು ವೇಗವುಳ್ಳ ವಿಮಾನಗಳನ್ನು ಪೂರ್ಣವಾಗಿ ಗಾಜಿನಿಂದಲೇ ತಯಾರಿಸಲಾಗುವುದೆಂದು ಅಮೆರಿಕದ ವಿಮಾನ ತಯಾರಿಕಾ ಸಂಸ್ಥೆಯ ಇಂಜಿನಿಯರರಾದ ದಾನುಯಲ್ ಸ್ಪೈಸರ್‌ರವರು ತಿಳಿಸಿರುವರು. ಉನ್ನತ ಮಟ್ಟದಲ್ಲಿ ಹಾರುವಾಗ ಲೋಹಗಳಿಂದ ಮಾಡಿದ ವಿಮಾನಗಳಿಗಿಂತಲೂ ಗಾಜಿನಿಂದ ತಯಾರಾದುವು ಹೆಚ್ಚು ವೇಗವಾಗಿ ಹೋಗಬಲ್ಲವೆಂದು ಅಭಿಪ್ರಾಯಪಡಲಾಗಿದೆ.

ವಿವಾಹ ಮಹೋತ್ಸವಗಳು

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ ಬಿ. ಎಲ್. ರಾಮಸ್ವಾಮಿಶೆಟ್ಟರವರು ತಮ್ಮ ಕುಮಾರ ಚಿ|| ರಾ|| ಬಿ. ಆರ್. ಲಕ್ಷ್ಮೀನಾರಾಯಣ್‌ರವರಿಗೆ ಶ್ರೀ ವಿ. ಎಸ್. ಕಾಶಿ ಶೆಟ್ಟರ ಮಗಳ ಚಿ|| ಸೌ|| ಇಂದಿರಾ ದೇವಿಯವರನ್ನು ತಂದುಕೊಂಡು ಕೋಲಾರದಲ್ಲಿ ಕಳೆದ ೩೦ ನೇ ತಾ|| ವಿವಾಹವನ್ನು ನೆರವೇರಿಸಿರು.

ರಾಜಧಾನಿಯ ಕೃಷ್ಣಮೂರ್ತಿಪುರದ [illegible]

ಸಿಟಿ ಟ್ಯುಟೋರಿಯಲ್ ಕಾಲೇಜು

ರಾಜಧಾನಿಯ ಸಿಟಿ ಟ್ಯುಟೋರಿಯಲ್ ಕಾಲೇಜನ್ನು ಕೃಷ್ಣರಾಜ ಬೌಲೀನ್ ಸ್ಟ್ರೀಟಿನ [illegible] ಕಟ್ಟಡದಿಂದ ವಾಣಿವಿಲಾಸ ಸರ್ಕಲ್ [illegible] ರದ ಉತ್ತರ ಭಾಗದಲ್ಲಿರುವ ವಿಶಾಲವಾದ ಭವನಕ್ಕೆ ವರ್ಗಾಯಿಸಲಾಗಿದೆ.

ಶ್ರೀ ಜಗದಾಂಬಾ ಶಿಶುವಿಹಾರ ಸ್ಥಳ ಬದಲಾವಣೆ

ರಾಜಧಾನಿಯ ದಿವಾನರ ರಸ್ತೆಯ ೩೦೫ ನೇ ನಂಬರು ಮನೆಯಲ್ಲಿದ್ದ ಮಾಲ್ಯಂಡ ಶಿಶುವಿಹಾರವನ್ನು ಕಳೆದ ಗುರುವಾರದಿಂದ ಅದೇ ರಸ್ತೆಯಲ್ಲಿ ಸುಮಾರು ಅರ್ಧ ಫರ್ಲಾಂಗು ದಕ್ಷಿಣಕ್ಕಿರುವ ೫೮೮ ನೇ ನಂಬರಿನ ಮನೆಗೆ ವರ್ಗಾಯಿಸಲಾಗಿದೆ. ಮಕ್ಕಳ ಮತ್ತು ಶಾಲಾ ಕಾರ್ಯಕಲಾಪಗಳ ಹಿತದೃಷ್ಟಿಯಿಂದ ಮಾಲ್ಯಂಡ ವಿಶಾಲವಾದ ಭವನಕ್ಕೆ ವರ್ಗಾಯಿಸಲಾಗಿದೆ. ಎಂದಿನಂತೆ ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ.

ಬಿ. ಕೃಷ್ಣಮೂರ್ತಿ,
ಸೆಕ್ರೆಟರಿ

ಭೂಮಧ್ಯ ಸಮುದ್ರದ ನೀರಿನ ಮಟ್ಟ ಇಳಿಯುವುದೇ?

ಭೂಮಧ್ಯ ಸಮುದ್ರದಲ್ಲಿ ನೀರಿನ ಮಟ್ಟವು ಬಹಳ ಮಟ್ಟಿಗೆ ಇಳಿಯುವುದೆಂದು ರಷ್ಯದ ಪತ್ರಿಕೆಗಳು ಭಾವಿಸಿರುತ್ತವೆ. ಡಾರ್ಡನಲ್ಸ್ ಮತ್ತು ಜಿಬ್ರಾಲ್ಟರ್ ಜಲಸಂಧಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿ ಅವುಗಳಲ್ಲಿ ಅತ್ಯಂತ ಭಾರಿಯಾದ ವಿದ್ಯುಚ್ಛಕ್ತಿ ಯೋಜನೆಗಳನ್ನು ಈ ಅಣೆಕಟ್ಟುಗಳ ಸಹಾಯದಿಂದ ಕಾರ್ಯಗತ ಮಾಡಬಹುದೆಂದು ಊಹಿಸಲಾಗಿದೆ.

ವಿಜಯನಗಾಚಾರ್ಯರ ಜಯಂತಿ

ರಾಜಧಾನಿಯ ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯ ವೇದ ಮಂದಿರದಲ್ಲಿ ಇದೇ ೫ ನೇ ತಾರೀಖು ಮಂಗಳವಾರ ಶ್ರೀ ವಿಜಯನಗಾಚಾರ್ಯರ ೩೦ ನೇ ಜಯಂತಿ ಮಹೋತ್ಸವವು ನಡೆಯುವುದು. ೬ ಸಂಜೆ ೬ ಘಂಟೆಗೆ ಆ|| ವಿ|| ಪಿಟೀಲ್ ಕೃಷ್ಣಯ್ಯಂಗಾರ್ಯರ ಗಾಯನವೂ, [illegible] ಏವಂ ಮಯ್ಯನವರ ಪಿಟೀಲು ಮತ್ತು ಎಂ. ಎಸ್. ರಾಮಯ್ಯನವರ ಮೃದಂಗದೊಡನೆ ನಡೆಯುವುದು.

ಶಾರದಾ ಯೂನಿಯನ್

ರಾಜಧಾನಿಯ ಶಾರದಾ ಯೂನಿಯನ್ನಿನ ವಾರ್ಷಿಕ ಸಭೆಯು [illegible] ಶಾರದಾ ನಿಕೇತನದಲ್ಲಿ ನಡೆದು, ಪ್ರಸಕ್ತ ಸಾಲಿಗೆ ಶ್ರೀ ಕೆ. ಎನ್. [illegible] ರವರು ಅಧ್ಯಕ್ಷರಾಗಿಯೂ ಶ್ರೀ ಕೆ. ಎನ್. ವೆಂಕಟರಾಮಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ವಿ. ಕೃ. ರಾಮಣ್ಣನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು.

SRI GAYATHRI
TALKIES
Daily 2 Shows
[illegible] Only
ALICE IN WONDERLAND
From [illegible] To 3 Days
Warner Brothers
DODGE CITY
With Errol Flynn and Olivia De Havilland
MORNING SHOW On 3 Aug
CRASH DIVE
Starring — Tyrone Power

Edited Printed and Published by A R Nagarajan at Sadhvi Press, D Subbaiah Road, Mysore

DON'T MISS :: DON'T FORGET
ATTEND ABIDS AUCTION
TOMORROW SUNDAY
THE 3RD AUGUST : AT 10 A M

ರೂ. ನಂ 792 WEEKLY EDITION ಒಂದು ಪ್ರತಿಗೆ ೬ ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೯-೮-೧೯೩೬ [ಸಂಚಿಕೆ ೧

ಸ್ಪೇನಿಗೆ ರಷ್ಯದ ಚಿನ್ನ ಮತ್ತು ಶಸ್ತ್ರ ಸಹಾಯ

ಕ್ಷೇತ್ರಗಳು ಚೊಕ್ಕಟವಾಗಿದ್ದರೆ ಭಕ್ತಿ ಹೆಚ್ಚುವುದು

ಪೌರಸಭಾ ಕಟ್ಟಡದ ಪ್ರವೇಶೋತ್ಸವದಲ್ಲಿ ಪ್ರಭುಗಳ ಭಾಷಣ

ನಂಜನಗೂಡು ೩

ಯಾವ ಊರೇ ಆಗಲಿ, ಶಿವ ಸ್ಥಲವಾಗಿಯೂ ಆರೋಗ್ಯಕರವಾಗಿಯೂ ಇರುವಂತೆ ಅದನ್ನು ನೋಡಿಕೊಳ್ಳುವುದು ಅಗತ್ಯ. ಪ್ರತಿ ವರ್ಷವೂ ಬಹು ಜನ ಯಾತ್ರಿಕರು ಬರುವ ಈ ಊರಿನಂಥ ಪವಿತ್ರ ಕ್ಷೇತ್ರವನ್ನು ಆ ರೀತಿ ನೋಡಿಕೊಳ್ಳುವುದು ಇನ್ನೂ ಹೆಚ್ಚು ಅಗತ್ಯ. ಊರೂ, ದೇವಾಲಯವೂ ಚೊಕ್ಕಟವಾಗಿದ್ದರೆ, ಜನಗಳ ಆರೋಗ್ಯ ಮಾತ್ರವೇ ಅಲ್ಲದೆ, ಅವರ ದೈವಭಕ್ತಿಯೂ ಹೆಚ್ಚಿ ಅವರ ಮನಸ್ಸಿನ ಉಲ್ಲಾಸಕ್ಕೂ ಕಾರಣವಾಗುತ್ತದೆ—ಎಂಬುದಾಗಿ ಶ್ರೀಮನ್ಮಹಾರಾಜರವರು ಇಂದು ಇಲ್ಲಿನ ಪುರಸಭಾ ಭವನದ ಪ್ರವೇಶೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು. ಸಮಾರಂಭಕ್ಕೆ ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಟಿ ಚನ್ನಯ್ಯನವರೂ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ, ಜಿಲ್ಲಾಧಿಕಾರಿಗಳು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್ ಎಂ ಚನ್ನಬಸಪ್ಪ ಮುತ್ತಾ ಇತರ ಪ್ರಮುಖರೂ ಆಗಮಿಸಿದ್ದರು

ಶ್ರೀಮಾನ್ ಕೆ ಆರ್ ಲೀಲಾವತಿಯವರಿಂದ ಪ್ರಾರ್ಥನೆಯಾದ ನಂತರ ಪೌರಸಭಾಧ್ಯಕ್ಷ ಶ್ರೀ ಎಸ್ ಕೆ ನಂಜುಂಡಯ್ಯನವರು ಶ್ರೀಮನ್ಮಹಾರಾಜರವರಿಗೆ ಪುರಸಭೆಯ ಪರವಾಗಿ ಬಿನ್ನವತ್ತಳೆಯನ್ನು ಗಂಧದ ಕರಂಡದಲ್ಲಿ ಒಪ್ಪಿಸಿದರು. ಊರಿನಲ್ಲಿ ಪಾಠಶಾಲೆಯ, ಪುಸ್ತಕಭಂಡಾರ, ಮತ್ತು ಸಾರ್ವತ್ರಿಕ ಭವನದ ಕಟ್ಟಡಗಳನ್ನು ಕಟ್ಟುವುದು, ಪ್ರತ್ಯೇಕ ಬಾಲಕಿಯರ ಪ್ರೌಢಶಾಲೆಯನ್ನು ಸ್ಥಾಪಿಸುವುದು ಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದು ಶ್ರೀಕಂಠೇಶ್ವರಸ್ವಾಮಿಯವರ ಗೋಪುರಕ್ಕೆ ದೀಪಗಳನ್ನು ಒದಗಿಸುವುದು ಮತ್ತು ಕೂಡಲಿ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಮಾಡಿಸುವುದು—ಇವುಗಳಿಗೆ ಸರ್ಕಾರದ ಸಹಾಯಕ್ಕಾಗಿ ಬಿನ್ನವತ್ತಳೆಯಲ್ಲಿ ಪ್ರಾರ್ಥಿಸಲಾಗಿತ್ತು

ಶ್ರೀಮನ್ಮಹಾರಾಜರವರು ಭಾಷಣ ಮಾಡುತ್ತಾ ಭಾರತದ ಪವಿತ್ರ ಯಾತ್ರಾ ಸ್ಥಳಗಳಲ್ಲೊಂದಾಗಿರುವ ನಂಜನಗೂಡು ಕ್ಷೇತ್ರದ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರಲ್ಲಿ ತಮ್ಮ ಪೂರ್ವಜರು ಇಟ್ಟು ಕೊಂಡಿದ್ದ ಭಕ್ತಿಯನ್ನು ಸ್ಮರಿಸಿ ಊರಿನ ಅಭಿವೃದ್ಧಿಯ ಬಗ್ಗೆ ತಮಗಿರುವ ಆಸ್ಥಾಸಕ್ತಿಯನ್ನು ವ್ಯಕ್ತಪಡಿಸಿದರು ಮತ್ತು ಅಲ್ಲಿ ಬಹಳ ಕಾಲದಿಂದಲೂ ರಾಘವೇಂದ್ರಸ್ವಾಮಿಗಳ ಮಠವು ಮನೆಮಾಡಿಕೊಂಡಿರುವುದರ ಬಗ್ಗೆ ಹರ್ಷವನ್ನು ಸೂಚಿಸಿದರು

ಪ್ರತಿ ವರ್ಷವೂ ಸಾವಿರಾರು ಯಾತ್ರಿಕರು ಬರುವ ಈ ಕ್ಷೇತ್ರವನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕಾದುದು ಅಗತ್ಯವೆಂದು ಅವರು ಹೇಳಿದರು ಅವರು ಹಲವು ಪುಣ್ಯ ಕ್ಷೇತ್ರಗಳಲ್ಲಿ ಊರಿನ ಮತ್ತು ದೇವಾಲಯಗಳ ನೈರ್ಮಲ್ಯಕ್ಕೆ ಗಮನ ಕೊಡದಿರುವುದಕ್ಕಾಗಿ ವಿಷಾದವನ್ನು ಸೂಚಿಸಿದರು

ನಂಜನಗೂಡಿನ ಪೌರಸಭೆಯವರು ನಗರ ನೈರ್ಮಲ್ಯ ಮುಂತಾದ ಕಾರ್ಯಗಳಲ್ಲಿ ಆಸಕ್ತಿ ತೋರಿರುವುದಕ್ಕಾಗಿ ಸಂತೋಷವನ್ನು ಸೂಚಿಸಿ, ಅವರ ಬೇಡಿಕೆಗಳನ್ನು ಸರ್ಕಾರದವರು ಪರ್ಯಾಲೋಚಿಸಿ ಸಾಧ್ಯವಿದ್ದಲ್ಲಿ ಸಹಾಯ ಮಾಡುವುದಾಗಿ ಭರವಸೆಯಿತ್ತರು

ಊರಿನ ಮುಖ್ಯ ಬೀದಿಗಳಲ್ಲಿ ಶ್ರೀಮನ್ಮಹಾರಾಜರು ಮೆರವಣಿಗೆಯಲ್ಲಿ ದಯಮಾಡಿಸಿದರು ೩೦ ಕಡೆ ಮನೋಹರವಾದ ಹಸಿರುವಾಣಿ ಚಪ್ಪರಗಳನ್ನು ಹಾಕಿ, ಪ್ರಭುಗಳಿಗೆ ಹಾರ ತುರಾಯಿಗಳನ್ನು ಸಮರ್ಪಿಸಲಾಯಿತು

ಹುದ್ದೆಗಳ ನೇಮಕದ ಬಗ್ಗೆ ಸ್ತ್ರೀಪುರುಷರಿಗೆ ಭೇದ ರದ್ದು

ಬೆಂಗಳೂರು ೩

ಸಂಸ್ಥಾನದ ಸರ್ಕಾರೀ ಹುದ್ದೆಗಳಿಗೆ ನೇಮಿಸುವ ಬಗ್ಗೆ ಗಂಡಸರು ಮತ್ತು ಹೆಂಗಸರುಗಳಿಗೆ ಸ್ಥಾನಗಳನ್ನು ವಿಭಾಗ ಮಾಡುವ ನಿಬಂಧನೆಯನ್ನು ರದ್ದುಗೊಳಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ ವಿದ್ಯಾ ಮತ್ತು ವೈದ್ಯ ಇಲಾಖೆಗಳಲ್ಲಿ ಗಂಡಸರಿಗೂ ಹೆಂಗಸರಿಗೂ ಪ್ರತ್ಯೇಕ ಶಾಖೆಗಳಿದ್ದವು ಹೊಸ ರಾಜ್ಯಾಂಗದಲ್ಲಿ ನೌಕರರ ಸೇವೆ ಕದ ಬಗ್ಗೆ ಸ್ತ್ರೀ ಪುರುಷರಿಗೆ ಭೇದವಿಲ್ಲದಿರುವುದರಿಂದ ಈ ವ್ಯತ್ಯಾಸವನ್ನು ತೆಗೆದು ಹಾಕಲಾಗುವುದು

ಹಿಂದಿ ಚಳುವಳಿಗಾರರಿಗೆ ದಂಡ

ಕೃಷ್ಣರಾಜಪುರ ಮತ್ತು ಸಿವಿಲ್ ಪ್ರದೇಶದ ರೈಲ್ವೆ ನಿಲ್ದಾಣಗಳಲ್ಲಿ ಮೊನ್ನೆ ನಡೆದ ಹಿಂದಿ ವಿರುದ್ಧದ ಚಳುವಳಿ ಸಂಬಂಧವಾಗಿ ೧೩ ಜನರಿಗೆ ತಲಾ ೫೦ ರೂ ದಂಡವನ್ನೂ ತಪ್ಪಿದರೆ ೧೫ ದಿವಸಗಳ ಸಾದಾ ಸಜವನ್ನು ವಿಧಿಸಲಾಯಿತು ಟಿಕೀಟುಗಳಿಲ್ಲದೆ ಪ್ಲಾಟ್‌ಫಾರಂನೊಳಗೆ ಬಂದುದಕ್ಕಾಗಿ ಅವರಿಗೆ ತಲಾ ೨ ರೂ ಜುಲ್ಮಾನೆ ವಿಧಿಸಲಾಯಿತು ಕೆ ಜಿ ಎಫ್ ನಲ್ಲಿ ಇದೇ ಚಳುವಳಿ ಸಂಬಂಧವಾಗಿ ಜನರಿಗೆ ದಂಡ ತಪ್ಪಿದರೆ ೨ ದಿನಗಳ ಸಜಾ ವಿಧಿಸಲಾಗಿದೆ

ಗೋಧಿ ಸರಬರಾಜಿಗೆ ಪುನಃ ಮಿತಿ

ಯಾರು ಬೇಕಾದರೂ ಎಷ್ಟಾದರೂ ಗೋಧಿ ಕೊಳ್ಳಬಹುದೆಂದು ಮಾಡಲಾದ ಆಜ್ಞೆಯನ್ನು ಸರ್ಕಾರದವರು ರದ್ದುಗೊಳಿಸಿರುತ್ತಾರೆ. ಕಾರ್ಡುಗಳಲ್ಲಿ ನಿಗದಿಯಾದಷ್ಟನ್ನು ಮಾತ್ರ ಕೊಳ್ಳಲು ಇನ್ನು ಮುಂದೆ ಅವಕಾಶವಿರುವುದು ಗೋಧಿ, ಗೋಧಿಯ ಪದಾರ್ಥಗಳು ಮತ್ತು ಮೈದಾ ಹಿಟ್ಟಿಗೆ ಈ ಆಜ್ಞೆಯು ಅನ್ವಯಿಸುವುದು

ಚಿನ್ನದ ಗಣಿಯಲ್ಲಿ ಪುನಃ ಬಂಡೆ ಸಿಡಿತ

ಕೋಲಾರದ ಚಾಂಪಿಯನ್ ರೀಫ್ ಚಿನ್ನದ ಗಣಿಯ ಆಸ್ಟರ್ನ್ ಷಿಫ್ಟಿನಲ್ಲಿ ಮೊನ್ನೆ ರಾತ್ರಿ ಪುನಃ ಬಂಡೆ ಸಿಡಿದ ಪರಿಣಾಮವಾಗಿ ಚಿನ್ನಯ್ಯಪ್ಪ ಎಂಬ ಮೇಸ್ತ್ರಿಯು ಮಡಿದು, ಇತರ ೭ ಮಂದಿ ಕೆಲಸಗಾರರಿಗೆ ಗಾಯಗಳಾಗಿವೆ

ಯ ಜು ರು ಪಾ ಕ ರ್ಮ

ಮೈಸೂರು ೩

ಇದೇ ೫ ನೇ ತಾರೀಕು ಮಂಗಳವಾರ ಬೆಳಿಗ್ಗೆ ೯ ಘಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ಕಟ್ಟೆಮಳಲವಾಡಿಯ ವೇ|| ಬ್ರ|| ಶ್ರೀ ವೆಂಕಟರಾಮಾವಧಾನಿಗಳವರಿಂದ ಸಾರ್ವತ್ರಿಕ ಯಜುರುಪಾಕರ್ಮವು ನೆರವೇರಿಸಲ್ಪಡುವುದು. ಆಸ್ತಿಕ ಮಹಾಶಯರು ಅದರಲ್ಲಿ ಭಾಗಿಗಳಾಗಬಹುದೆಂದು ಕೋರಲಾಗಿದೆ

ರಾಜಧಾನಿಯ ಶ್ರೀ ಶಂಕರ ಮಠದಲ್ಲಿ ನಾಳಿದ್ದು ಬೆಳಿಗ್ಗೆ ೭ ೩೦ ಘಂಟೆಗೆ ವೇ|| ಬ್ರಂ|| ಶ್ರೀ ಕೃಷ್ಣದೀಕ್ಷಿತರು ಮತ್ತು ಅವರ ಸಹೋದರರಾದ ವೇ|| ಬ್ರಂ|| ಶ್ರೀ|| ವಿಶ್ವೇಶ್ವರ ದೀಕ್ಷಿತರಿಂದ ಉಪಾಕರ್ಮವು ಆಚರಿಸಲ್ಪಡುವುದು

ಹ ರಿ ಕ ಥೆ

ದೇವರಾಜ ಮೊಹಲ್ಲಾ ಆನೆ ಸಾರೋಟು ಬೀದಿ ಹತ್ತೂ ಜನರ ಭಜನೆ ವೆಂಕಟಪ್ಪನವರ ಶ್ರೀ ರಾಮ ಮಂದಿರದಲ್ಲಿ ತಾ|| ೫-೮-೫೩ ನೇ ಮಂಗಳವಾರ ರಾತ್ರಿ ೯ ಘಂಟೆಗೆ ಶ್ರೀ ಸೇತು ಮಾಧವ ದಾಸರಿಂದ "ಸ ತಿ ಅ ನು ಸೂ ಯ" ಎಂಬ ಕಥೆಯನ್ನು ಏರ್ಪಡಿಸಲಾಗಿದೆ

ಎರಡು ಮೈಲಿ ರಸ್ತೆ ನಿರ್ಮಾಣಕ್ಕೆ ೨೯ ರೂ. ವೆಚ್ಚ

ಲಕ್ನೋ ಬಳಿ ಕರೀಂಗಂಜ್ ಎಂಬಲ್ಲಿ ೨ ಮೈಲಿ ಉದ್ದದ ರಸ್ತೆ ನಿರ್ಮಾಣವನ್ನು ಕೇವಲ ೨೯ ರೂ ಗಳಲ್ಲಿ ಪೂರೈಸಲಾಯಿತೆಂದೂ ೧೫೦೦ ಮಂದಿ ಹಳ್ಳಿಯವರು ಕೂಲಿ ಪಡೆಯದೆ ರಸ್ತೆ ಕೆಲಸವನ್ನು ಪೂರೈಸಿದರೆಂದೂ,ಗುದ್ದಲಿ ಮುಂತಾದ ಸಾಮಗ್ರಿಗಳಿಗೆ ಮಾತ್ರ ವೆಚ್ಚವಾಯಿತೆಂದೂ ಗೊತ್ತಾಗಿದೆ

ಫ್ರೆಂಚರಿಂದ ಟ್ಯೂನಿಸ್ ದೊರೆಯ ಪದಚ್ಯುತಿ

ಟ್ಯೂನಿಸ್ಸಿನ ಅರಸರಾದ ಬೇಯವರನ್ನು ಫ್ರೆಂಚ್ ಸರ್ಕಾರದವರು ಪದಚ್ಯುತರನ್ನಾಗಿ ಮಾಡುವುದರಲ್ಲಿದ್ದಾರೆಂದೂ, ಆ ರಾಜ್ಯಕ್ಕೆ ಫ್ರೆಂಚರು ಕೊಡಬೇಕೆಂದಿರುವ ಸುಧಾರಣೆಗಳಿಗೆ ಬೇಯವರು ಒಪ್ಪದಿರುವುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ

ಸ್ಪೇನಿಗೆ ರಷ್ಯ ಮತ್ತು ಜೆಕೊಸ್ಲವೇಕಿಯಾ ಸಹಾಯ

ಸ್ಪೇನಿಗೆ ರಷ್ಯದ ಚಿನ್ನ ಮತ್ತು ಜೆಕೊಸ್ಲವೇಕಿಯದ ಲಘು ಫಿರಂಗಿ ಶಸ್ತ್ರಾಸ್ತ್ರಗಳ ಸಹಾಯವನ್ನು ಒದಗಿಸಲಾಗಿದೆಯೆಂದು ಯುಗೋಸ್ಲೇವಿಯಾ ಪತ್ರಿಕೆಯೊಂದು ತಿಳಿಸಿರುತ್ತದೆ ಇಟಲಿಯ ವ್ಯಾಪಾರ ಸಂಸ್ಥೆಯೊಂದರ ಮೂಲಕ ಈ ವ್ಯವಸ್ಥೆಯಾಯಿತೆಂದೂ,ಸೋವಿಯಟ್ ರಷ್ಯಕ್ಕಾಗಿ ಅಮೆರಿಕದ ಡಾಲರುಗಳನ್ನು ಕೊಳ್ಳಲು ಆ ಸಂಸ್ಥೆಗೆ ಅಧಿಕಾರವಹಿಸಲಾಗಿತ್ತೆಂದೂ ಹೇಳಲಾಗಿದೆ

ಮಾಂಟ್ರೀಲ್ ಜೈಲಿನಲ್ಲಿ ಖೈದಿಗಳ ದೊಂಬಿ

ಕೆನಡದ ಮಾಂಟ್ರೀಲ್ ನಗರದ ಜೈಲಿನ ೬೦೦ ಮಂದಿ ಖೈದಿಗಳು ಮೊನ್ನೆ ರಾತ್ರಿ ಜೈಲಿನ ಒಂದು ಭಾಗಕ್ಕೆ ಬೆಂಕಿ ಹಚ್ಚಿ, ವಿದ್ಯುಚ್ಛಕ್ತಿಯ ಸ್ವಿಚ್ ಬೋರ್ಡನ್ನು ಪುಡಿಪುಡಿ ಮಾಡಿದರೆಂದು ವರದಿಯಾಗಿದೆ. ಶಸ್ತ್ರಸಜ್ಜಿತ ಪೋಲೀಸರು ಅವರನ್ನು ತಹಬಂದಿಗೆ ತರುವ ಪ್ರಯತ್ನದಲ್ಲಿ ಒಬ್ಬ ಖೈದಿಯು ಮಡಿದು, ಅನೇಕರಿಗೆ ಗಾಯವಾಗಿರುವುದಾಗಿ ಗೊತ್ತಾಗಿದೆ ೩ ತಿಂಗಳ ಹಿಂದೆಯೂ ಇದೇ ರೀತಿ ಗಲಭೆಯಾಗಿತ್ತು ಖೈದಿಗಳಿಗೆ ಕೊಡುವ ಆಹಾರವು ಅತ್ಯಂತ ಕಠಿಣವಾಗಿದ್ದಿತೆಂಬುದೇ ದೊಂಬಿಗೆ ಕಾರಣ

ಫರೂಕರ ಜೀವಕ್ಕೆ ಅ ಪಾ ಯ ವೇ ?

ಈಜಿಪ್ಟಿನ ಮಾಜಿ ದೊರೆ ಫರೂಕರ ಪ್ರಾಣ ಹರಣ ಪ್ರಯತ್ನ ಮಾಡುವ ಉದ್ದೇಶದಿಂದ ಸುಮಾರು ೩ ಜನ ಈಜಿಪ್ಟ್ ಪ್ರಜೆಗಳು ಇಟಲಿಗೆ ಬಂದಿರುವರೆಂದು ವದಂತಿಯಾಗಿದೆ ಆದರೆ ಮಾಜಿ ದೊರೆಯು ತಮ್ಮ ಕ್ಷೇಮ ಚಿಂತನೆಗಿಂತಲೂ ಹೆಚ್ಚಾಗಿ ಈಜಿಪ್ಟಿನ ಹೊಸ ದೊರೆಯಾದ ತಮ್ಮ ಎಳೆಯ ಶಿಶುವಿನ ಜೀವದ ಬಗ್ಗೆ ಕಾತುರರಾಗಿರುವರೆಂದು ಇಟಲಿಯ ಪತ್ರಿಕೆಗಳು ತಿಳಿಸಿರುತ್ತವೆ ಅವರ ಹೋಟೇಲಿನಲ್ಲಿ ನುರಿತಗಾರರಾದ ಅಲ್ಬೇನಿಯಾ ರಕ್ಷಕರನ್ನು ಕಾವಲಿಗಾಗಿ ಇಡಲಾಗಿದೆ

○ ಕಾಶ್ಮೀರದಲ್ಲಿ ರಾಜತ್ವವನ್ನು ರದ್ದು ಮಾಡುವಂತೆಯೇ ಹೈದರಾಬಾದಿನಲ್ಲೂ ರದ್ದು ಮಾಡಬೇಕೆಂದು ಅಲ್ಲಿನ ಸಮಾಜವಾದಿ ಮುಖಂಡರಾದ ಮಹದೇವ್ ಸಿಂಗ್‌ರವರು ತಿಳಿಸಿರುತ್ತಾರೆ

ಕಾವೇರಿ ನೀರಿನ ಹೋತಾಕ್ಕೆ ಮದ್ರಾಸಿನ ಒಪ್ಪಿಗೆ

ಮಂಡ್ಯ ೨

ಕಾವೇರಿ ನೀರಿನ ಸರಬರಾಜು ಬಗ್ಗೆ ೧೯೨೪ ರಲ್ಲಿ ಮೈಸೂರು ಮತ್ತು ಮದ್ರಾಸು ಸರ್ಕಾರಗಳಿಗೆ ಆದ ಒಪ್ಪಂದವನ್ನು ಸಡಿಲಿಸಿ, ನೀರಿನ ಹೋತಾ ಮಾಡಿಕೊಳ್ಳಲು ಮದ್ರಾಸು ಸರ್ಕಾರದವರು ಒಪ್ಪಿರುವರೆಂದು ಸಂಸ್ಥಾನದ ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ತಿಳಿಸಿರುತ್ತಾರೆ ಇದರಿಂದ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ಕಡಿಮೆಯಿದ್ದರೂ, ಇರ್ವಿನ್ ನಾಲಾ ಪ್ರದೇಶಗಳಿಗೆ ಹೆಚ್ಚು ನೀರನ್ನು ಬೇಸಾಯಕ್ಕಾಗಿ ಒದಗಿಸಲು ಸಾಧ್ಯವಾಗುವುದೆಂದೂ ಅವರು ಹೇಳಿರುವರು

ವಾರ ಭವಿಷ್ಯ

ತಾ|| ೩-೮-೫೨ ರಿಂದ ೧೦-೮-೫೨ ರ ವರೆಗೆ

ಮೇಷ — ಕಷ್ಟ ದಿನಗಳ ಸಮಾಪ್ತಿ ಕಾಲ ಆರೋಗ್ಯಕ್ಕೆ ಗಮನ ಕೊಡಿ ನೌಕರಿಯಲ್ಲಿ ನಿಷ್ಕಾರಣ ತೊಂದರೆ ವ್ಯಾಪಾರಾದಿಗಳಲ್ಲಿ ಭಿನ್ನತೆ ತಾ|| ೬, ೭ ಮಿತ್ರ ಸಹಾಯ, ಕುಶಲ ವಾರ್ತೆ.

ವೃಷಭ — ನೆರೆಯವರ ತಪ್ಪು ತಿಳಿವಳಿಕೆ ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಪರಿಸ್ಥಿತಿ ಕೆಡುವ ಘಟನೆ ಗೃಹ ಸೌಖ್ಯ. ಆಕಸ್ಮಿಕ ಪ್ರವಾಸ ತಾ|| ೩, ೪ ಖರ್ಚು, ಆಪ್ತರ ಆಗಮನ

ಮಿಥುನ — ಆರೋಗ್ಯ ಉತ್ತಮ ಮಹತ್ವದ ಕೌಟುಂಬಿಕ ಸಮಸ್ಯೆ ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ಮೇಲ್ಪಟ್ಟವರೊಡನೆ ವಿರಸ ಪ್ರವಾಸ ಬೇಡ ತಾ|| ೬, ೭ ಆಕಸ್ಮಿಕ ಪ್ರವಾಸ, ಮಿತ್ರರ ಭೇಟಿ

ಕರ್ಕ — ಆರೋಗ್ಯ ನೆಟ್ಟಗಿರದು ಹೆಚ್ಚು ಖರ್ಚು ವ್ಯಾಪಾರವಿಲ್ಲ ಉದ್ಯೋಗ ನೌಕರಿಗಳಲ್ಲಿ ಮೇಲ್ಪಟ್ಟವರೊಡನೆ ಭಿನ್ನತೆ ಪ್ರವಾಸ ಬೇಡ, ವಾಹನಾಪಘಾತ. ತಾ|| ೬, ೭ ನೌಕರಿ ಬಂಧಗಳಲ್ಲಿ ತೊಂದರೆ, ಆರೋಗ್ಯಕ್ಕೆ [illegible]

ಸಿಂಹ — ಕಾರ್ಯದಲ್ಲಿ ಉತ್ಸಾಹ ಮಾನ ಸನ್ಮಾನ ಪತ್ನಿಯೊಡನೆ ಸಕ ಮತ ವ್ಯಾಪಾರಾದಿಗಳಲ್ಲಿ ಧನಲಾಭ ತಾ|| ೫, ೬ ಆಪ್ತೇಷ್ಟರಿಗೆ ಸಹಾಯ ಖರ್ಚು

ಕನ್ಯಾ — ಕೈಗೊಂಡ ಕಾರ್ಯ ಅರ್ಧಕ್ಕೆ ನಿಲ್ಲುವುದು ಆರ್ಥಿಕ ಹಾನಿ ಆರೋಗ್ಯ ತೃಪ್ತಿಕರ ವಿಶ್ರಾಂತಿ ಇಲ್ಲ ತಾ|| ೩, ೭ ನ ಸಣ್ಣ ವಸ್ತುವಿನ ಕಳವು ವಿರೋಧ

ತುಲಾ — ಉತ್ಸಾಹ ಬಂಗದ ಘಟನೆ ವ್ಯಾಪಾರಾದಿಗಳಲ್ಲಿ ಕಷ್ಟ ಸ್ತ್ರೀಯರ ನವರ ಉದ್ವಟತನ. ಪತ್ನೀ ಮಾತೆ ಸಂತಾನ ಅನಾರೋಗ್ಯ ಆದಿಕ ಮುಗ್ಗಟ್ಟು ತಾ|| ೪, ೫ ವೃಥಾ ಕಲಹ, ಬೀಳುವ ಪ್ರಸಂಗ

ವೃಶ್ಚಿಕ — ತೊಂದರೆ ಆರೋಗ್ಯ ನೋಡಿಕೊಳ್ಳಿರಿ ನೌಕರಿಯಲ್ಲಿ ಅಡಚಣೆ ಉದ್ಯೋಗದಲ್ಲಿ ಅಂದಾಜು ತಪ್ಪುವುದು ತಾ|| ೬, ೭ ಅಪಮಾನ, ಅಪ್ರಿಯ ವಾರ್ತೆ

ಧನು — ಖರ್ಚು ಅಧಿಕ ವ್ಯಾಪಾರಾದಿಗಳಲ್ಲಿ ಚಿಂತೆ ಪ್ರವಾಸದಲ್ಲಿ ತೊಂದರೆ ತಾ|| ೬ ೭ ಆಕಸ್ಮಿಕ ಪ್ರವಾಸ ಪ್ರಿಯಜನರ ಭೇಟಿ

ಮಕರ — ಉತ್ತಮ ಗ್ರಹಮಾನ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ಆರ್ಥಿಕ ಸ್ಥಿತಿ ಸಮರ್ಪಕ ಸುಖ ಪ್ರವಾಸ ತಾ|| ೩, ೪ ಅತಿಥಿಗಳ ಆಗಮನ [illegible]

ಕುಂಭ — [illegible] ವಾರ ಆರೋಗ್ಯ [illegible] ಸ್ಥಿತಿ ಉತ್ತಮ [illegible] ವ್ಯಾಪಾರಾದಿಗಳಲ್ಲಿ [illegible]

ಮೀನ — [illegible] ಆರ್ಥಿಕ [illegible] ವ್ಯಾಪಾರಾದಿಗಳ [illegible] ಉತ್ತಮ [illegible] ಪ್ರವಾಸ [illegible] ತಾ|| ೬, ೭ ಅಧಿಕ ಖರ್ಚು, ಮಿತ್ರರ ಆಗಮನ

ನೇಪಾಳದ ಮುಖಂಡರನ್ನು ಹೊಡೆದುದಕ್ಕಾಗಿ ದಸ್ತಗಿರಿ

ನೇಪಾಳದ ಕಾಂಗ್ರೆಸ್ಸಿನ ಮುಖಂಡರನ್ನು [illegible] ಸಭೆಯಲ್ಲಿ ಹೊಡೆದ [illegible] ನೇಪಾಳ ರಾಷ್ಟ್ರೀಯ ಕಾಂಗ್ರೆಸ್ಸಿನ ಇಬ್ಬರು, ವಿದ್ಯಾರ್ಥಿ ಸಂಘದ ಒಬ್ಬರು [illegible] ಜನರನ್ನು ದಸ್ತಗಿರಿ ಮಾಡಲಾಗಿದೆ ನೇಪಾಳ ಕಾಂಗ್ರೆಸ್ ಅಧ್ಯಕ್ಷರ ತಲೆ ಮತ್ತು ಹೊಟ್ಟೆ ಮೇಲೆ ಗಾಯಗಳಾಗಿರುವುವೆಂದೂ, [illegible] ಕಮ್ಯೂನಿಸ್ಟರು ಹೊಡೆಯುವುದರಲ್ಲಿ ಭಾಗಿಗಳಾಗಿದ್ದರೆಂದೂ ಹೇಳಲಾಗಿದೆ

ಸಂಸ್ಕೃತ ಸಂಘದ ಆರಂಭ ಭಾಷಣ

ರಾಜಧಾನಿಯ [illegible] ಸ್ಕೂಲಿನ ಮುಖ್ಯೋಪಾಧ್ಯಾಯರ [illegible] ನಿನ್ನೆ [illegible] ಶಾಸನ ಸಭಾ ಸದಸ್ಯರಾದ ಶ್ರೀ ಎಂ ಪಿ ಎಲ್ [illegible] ಶಾಸ್ತ್ರಿಯವರ ಸಂಸ್ಕೃತ ಸಂಘದ ಪ್ರಾರಂಭ ಭಾಷಣ ಮಾಡಿದರು ಅವರು ತಮ್ಮ ಭಾಷಣದಲ್ಲಿ ಭಾರತ ಖಂಡದ ಪ್ರಾಚೀನ ಸಂಸ್ಕೃತಿಯ [illegible] ರಾಮಾಯಣ, ಮಹಾಭಾರತಾದಿಗಳ [illegible]

ರಾಜಕಮಲ್

1-8-52 ರಿಂದ [illegible] ವಾರ

ನನ್ನ ತಂಗಿ

[ತಮಿಳು]

[illegible]

SREE GANESHA

TALKIES

From 1-8-52 [illegible] 2 Days

Wonder

HOMICIDE

With — Robert Alda, Robert Douglas, Helen Westcott

NEXT CHANGE

HOUSE ACROSS THE STREET

[illegible]

THE CITY TUTORIAL COLLEGE

(New Buildings)

Near V V Market, Mysore

TUITION CLASSES

have been arranged for

★ **S.S L C Examn. (March 53)**

★ **IV Form Eng Medium only**

M [illegible] ತರಗತಿ [illegible] ಸಾಯಂಕಾಲ 6 ರಿಂದ 8 ರ ವರೆಗೆ ಪಾಠಗಳನ್ನು ಹೇಳುವ ಏರ್ಪಾಡು ಮಾಡಲಾಗಿದೆ.

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ಇಂಡಾಲಜಿ ಪ್ರಾಧ್ಯಾಪಕರ ನೇಮಕದ ವಿಚಾರ

ಮಹಾರಾಜಾ ಕಾಲೇಜಿನ ಇಂಡಾಲಜಿ ವಿಭಾಗದ ಪ್ರಾಧ್ಯಾಪಕರಾಗಿ ಮದ್ರಾಸಿನ ಶ್ರೀ ನೀಲಕಂಠಶಾಸ್ತ್ರಿಯವರನ್ನು ನೇಮಿಸಿರುವುದು ನ್ಯಾಯವಲ್ಲವೆಂದೂ, ಅದೇ ಕಾಲೇಜಿನಲ್ಲಿರುವ ಎಂ ಎ ಪಿ ಹೆಚ್ ಡಿ, ಡಿ.ಲಿಟ್ ಮುಂತಾದ ಘನವಾದ ಪ್ರಶಸ್ತಿಗಳನ್ನು ಪಡೆದು ಸಂಪೂರ್ಣ ಅರ್ಹತೆಯನ್ನು ಹೊಂದಿರುವವರನ್ನು ನೇಮಿಸಬೇಕಾಗಿತ್ತೆಂದೂ ಕಾಲೇಜಿನ ಹಲವು ವಿದ್ಯಾರ್ಥಿಗಳು ಪತ್ರ ಬರೆದು ತಿಳಿಸಿರುತ್ತಾರೆ ಶಾಸನ ಸಭೆಗಳ ಚರ್ಚೆಯಲ್ಲಿ ಹಣದ ಮುಗ್ಗಟ್ಟಿನ ಕಾರಣ ವಿಶ್ವ ವಿದ್ಯಾಲಯಕ್ಕೆ ಹೆಚ್ಚು ಹಣವನ್ನು ಒದಗಿಸುವುದು ಸಾಧ್ಯವಿಲ್ಲವೆಂಬ ಅಂಶವು ವ್ಯಕ್ತಪಟ್ಟಿರುವಾಗ ಹೊಸದಾಗಿ ಬರುವವರಿಗೆ ಮಾಹೆಯಾನಾ ೭೦೦ ರೂ ವೇತನವನ್ನು ಕೊಡುವುದು ಸರಿಯಲ್ಲವೆಂದೂ, ಅವರು ತಿಳಿಸಿರುತ್ತಾರೆ. ಇದನ್ನು ನೋಡಿದರೆ ವಿಶ್ವ ವಿದ್ಯಾಲಯದವರು "ಹಿತ್ತಲ ಗಿಡ ಮದ್ದಲ್ಲ" ಎಂಬ ಗಾದೆಯಂತೆ ಹಾಗೆ ಮಾಡಿರಬಹುದೆಂದು, ಈ ವಿಷಯಕ್ಕೆ ಸರ್ಕಾರ ಮತ್ತು ವಿಶ್ವ ವಿದ್ಯಾಲಯ ದವರ ಗಮನವನ್ನು ಸೆಳೆಯಲಿಚ್ಛಿಸುವುದಾಗಿಯೂ ಅವರು ಹೇಳಿರುತ್ತಾರೆ

ಜಿಲ್ಲಾ ಬೋರ್ಡು ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಇದೇ ಶನಿ ತಾ|| ಮಧ್ಯಾಹ್ನ ೧ ಗಂಟೆಗೆ ಬೋರ್ಡಿನ ಕಟ್ಟಡದಲ್ಲಿ ನಡೆಯುವುದು

ಮನೆಗಳು ಮಾರಾಟಕ್ಕಿವೆ

1 ಕಿಲ್ಲೆ ಮೊಹಲ್ಲಾ ಶ್ರೀರಾಮ ಬೀದಿಯಲ್ಲಿ 203ನೇ ನಂಬರಿನ ಮನೆ ಇಟ್ಟಿಗೆ ಮತ್ತು ಮಂಗಳೂರು ಹೆಂಚಿನ ಮನೆ, ಕೊಳಾಯಿಗಳು ಮತ್ತು ಭಾವಿ ಸಹ ಇದೆ ರೂ 9500

2 ನಾರಾಯಣವಿಲಾಸ ಮೊಹಲ್ಲಾ ಗೋಕುಲದಲ್ಲಿ ಹೊಸ ಮಾದರಿ ತಾರಸಿ ಕಟ್ಟಡ, ದೀಪ, ಕೊಳಾಯಿ ಭಾವಿ ಮತ್ತು ಮೋಟಾರು ಗ್ಯಾರೇಜಿನಿಂದ ಕೂಡಿದ ವಿಶಾಲವಾದ 3061 ನೇ ನಂಬರು ಮನೆ ರೂ 16500

3 ಕಿಲ್ಲೆ ಮೊಹಲ್ಲಾ ಸಿಮೆಂಟ್ 12ನೇ ಬ್ಲಾಕಿನಲ್ಲಿ ತಾರಸಿ ಮನೆ, 1063/1ನೇ ನಂಬರು ಮನೆ ದೀಪ, ಕೊಳಾಯಿ ಎಲ್ಲಾ ಇದೆ ಸೊಗಸಾದ ಮತ್ತು ಬಂಧೂರವಾದ ಕಟ್ಟಡ ರೂ 12000

4 ರಾಮಸ್ವಾಮಿ ಬ್ಲಾಕಿನಲ್ಲಿ ಕಿಲ್ಲೆ ಮೊಹಲ್ಲಾದಲ್ಲಿ ಹೊಸ ನಮೂನೆ ತಾರಸಿ ಮನೆ, ದೀಪ ನಲ್ಲಿಯಿಂದ ಕೂಡಿದ ರಮ್ಯವಾದ ಕಟ್ಟಡ ರೂ 10500

5 ನಿರಂಜನ ಗಾರ್ಡನ್ನಿನಲ್ಲಿ ಒಂದು ನೂತನವಾದ ಕಟ್ಟಡ (ಶಿವ ಪ್ರಸಾದ) ದೀಪ ಮತ್ತು ಭಾವಿ ಇದೆ ರೂ 6000

ಇವಲ್ಲದೆ ಇನ್ನೂ ಅನೇಕ ಮನೆಗಳು ಭೋಗ್ಯಕ್ಕೂ ಮತ್ತು ಕ್ರಯಕ್ಕೂ 5500 ರಿಂದ 10000 ವರೆಗೂ ನಮ್ಮಲ್ಲಿ ಬಂದಿವೆ. ಹೆಚ್ಚು ವಿಚಾರಗಳಿಗೆ ಬರೆಯುವುದು

ಎಂ ಮಲ್ಲರಾಜೆ ಅರಸ್,

ಎಫ್. 877, ಮಹಾರಾಜರ ಛತ್ರದ ಬೀದಿ, ಮೈಸೂರು

1-8-52 ರಿಂದ :: ಅಪೋಹ್ 2ನೇ ವಾರ

ಮೈಸೂರು ಚಾಮುಂಡೇಶ್ವರಿ

ಚಿತ್ರ ಮಂದಿರ [illegible]

ಪ್ರತಿ ದಿನ [illegible]

[illegible] ಚಿತ್ರ

* ಚಿನ್ನ ಕೋಡ [illegible] *

(ಚಿಕ್ಕ ಸೊಸೆ)

ಕುಮಾರಿ, ಕೃಷ್ಣಕುಮಾರಿ, [illegible]

[KASHRI RELEASE]

ಅಂಬಳೆ ರಾಮಸ್ವಾಮಿ ಅಯ್ಯಂಗಾರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಬಸಿಸ್ (ಮುಟ್ಟಿನ) ಸಂಬಂಧದ ಹೊಟ್ಟೆನೋವಿನಿಂದ ಮಕ್ಕಳಾಗದಿರುವುದು ಅಕ್ರಮ ಸೂತಕ ಕ್ರಮ ತಪ್ಪಿ ಬಹಿಷ್ಠೆ, ಗರ್ಭ ಪತನ ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

[illegible] ದಿನಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಕೊಡುವುದೆ ಮೇಲ್ಕಂಡ [illegible] "ಮದನ ವಿಲಾಸ ಪೂಜೆ [illegible]" 1 ಸೆಟ್ ಅನುಪಾನ ಪತ್ರಿಕೆಯ ಮೇಲೆ [illegible] ಕ್ರಯ 1 ಸೆಟ್ [illegible] ಪತ್ರ [illegible] ಉಚಿತ [illegible] ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿ.

ವಿಶೇಷ ಸೂಚನೆ ಔಷಧದ ಬಾಟಲ್ ಮೇಲೆ ಶ್ರೀ ಎ ಆರ್ ಅಯ್ಯಂಗಾರ್‌ರವರ ಫೋಟೋ ಮತ್ತು ರುಜು ನೋಡಿ ಇದುವರೆಗೂ ಯಳಂದೂರು ತಾ|| ಅಂಬಳೆ ಮತ್ತು ಮೈಸೂರು ಗೂಬ್ಬಿನ ಕೊಳದ ಬೀದಿಯಲ್ಲಿದ್ದ ಆಫೀಸುಗಳನ್ನು ಕೆಳಕಂಡ ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ

ಹೊಸ ವಿಳಾಸ:— ಎ ರಾಮಸ್ವಾಮಿ ಅಯ್ಯಂಗಾರ್ ಸನ್

"ಸಂತಾನ ಸಿಂಧೂರ ಬಿಲ್ಡಿಂಗ್"

628, ನಾರಾಯಣ ಶಾಸ್ತ್ರಿ ರಸ್ತೆ ದಕ್ಷಿಣ ಕ್ರಾಸ್,

(ಕೃಷ್ಣ ಫ್ಲೈರ್ ಮಿಲ್ ಪಕ್ಕ) ಮೈಸೂರು

Edited Printed and Published by A R Nagarajan at Sadhvi Press, D Subbiah Road, Mysore.

[illegible] ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೪-೮-೧೯೫೨ [ಸಂಚಿಕೆ ೮

ರಾಜ್ಯಾಂಗದ ಪ್ರತಿಗಳ - ದಹನದ ಚಳುವಳಿ -

ಭಾರತ ರಾಜ್ಯಾಂಗದ ಮೇಲೆ ದ್ರಾವಿಡರ ಕ್ರೋಧ

ಹಿಂದೀ ಬೋರ್ಡುಗಳನ್ನು ಅಳಿಸುವ ಕಾರ್ಯದಲ್ಲಿ ದ್ರಾವಿಡ ಸಂಘದವರ ಹಿಂದೀ ವಿರುದ್ಧ ಚಳುವಳಿಯು ಯಶಸ್ವಿಯಾದುದರ ಪರಿಣಾಮವಾಗಿ ಇನ್ನು ಮುಂದೆ ತಮಿಳು ನಾಡು ಕೇಂದ್ರಗಳಲ್ಲಿ ಭಾರತ ರಾಜ್ಯಾಂಗದ ಪ್ರತಿಗಳನ್ನು ಸುಡುವ ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ನೆನ್ನೆ ಮದರಾಸಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ದ್ರಾವಿಡ ಸಂಘದ ಅಧ್ಯಕ್ಷ ಇ ವಿ ರಾಮಸ್ವಾಮಿನಾಯಕರು ತಿಳಿಸಿದರು. ಭಾರತ ರಾಜ್ಯಾಂಗವು ತಮಿಳು ನಾಡಿನವರ ಮೇಲೆ ಬಲಾತ್ಕಾರದ ಹಿಂದೀ ಶಿಕ್ಷಣವನ್ನು ಹೇರಿ, ಅವರನ್ನು ಉತ್ತರ ಭಾರತದವರ ಗುಲಾಮರನ್ನಾಗಿ ಮಾಡಿರುವುದೆಂದೂ, ಅದರಿಂದ ಮುಕ್ತರಾಗಬೇಕಾದುದು ಅಗತ್ಯವೆಂದೂ ಶ್ರೀ ನಾಯಕರು ಹೇಳಿರುವರು

ಪರ್ಷಿಯದ ಮಾಜಿ ಪ್ರಧಾನಿ ಆಸ್ತಿಯು ಮುಟ್ಟುಗೋಲು

ಕೇವಲ ಮೂರು ದಿನಗಳ ಕಾಲ ಪರ್ಷಿಯದ ಪ್ರಧಾನಿಯಾಗಿದ್ದು, ಪದಚ್ಯುತಿಗೊಳಿಸಲ್ಪಟ್ಟು, ೧೫ ದಿನಗಳಿಂದಲೂ ಕಣ್ಮರೆಯಾಗಿರುವ ಘವಾಂ ಸುಲ್ತಾನೆಯವರ ಅಪಾರವಾದ ಚರ ಮತ್ತು ಸ್ಥಿರ ಆಸ್ತಿಗಳನ್ನು ಸರ್ಕಾರದ ವಶಪಡಿಸಿಕೊಂಡು ಅವನ್ನ ಪರ್ಷಿಯದ ರಾಷ್ಟ್ರೀಯ ಹುತಾತ್ಮರ ಸಂಸಾರದವರಿಗೆ ಹಂಚಲು ಅಲ್ಲಿನ ಮಜ್ಲಿಸ್ ಸಭೆಯು ನಿರ್ಣಯಿಸಿದೆ. ಘವಾಮರ ಪತ್ನಿ ಮತ್ತು ಏಕಮಾತ್ರ ಪುತ್ರನಿಗಾಗಿ ಸ್ವಲ್ಪ ಸ್ವತ್ತುಗಳನ್ನು ಬಿಡಲಾಗುವುದು

ಪೀಳಿಯದೆಲೆ ತೋಟದ ಪರಿಶೀಲನೆ

ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಟಿ. ಚನ್ನಯ್ಯನವರು ರಾಜಧಾನಿಯ ವೀಳಿಯದೆಲೆ ತೋಟಗಳನ್ನು ಪೌರಸಭೆಯ ವಶಪಡಿಸಿಕೊಳ್ಳುವ ಬಗ್ಗೆ ನೆನ್ನೆ ಪುರಸಭಾಧ್ಯಕ್ಷರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಇತರ ಅಧಿಕಾರಿಗಳೊಡನೆ ಸ್ಥಳದ ಪರಿಶೀಲನೆ ನಡೆಸಿದರು. ತೋಟದಲ್ಲಿ ಹಾದು ಹೋಗುತ್ತಿರುವ ಪೈಪ್ ಲೈನು ಒಡೆದಿರುವುದನ್ನು ಸಚಿವರು ಖುದ್ದಾಗಿ ಕಂಡು ಆ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಭರವಸೆಯಿತ್ತರು

ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಸಭೆ

ಮೇಲ್ಕಂಡ ಮೊಹಲ್ಲಾ ಕಾಂಗ್ರೆಸ್ ಸದಸ್ಯರ ಸಭೆಯು ನೆನ್ನೆ ಮೈ ಜಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಶ್ರೀ ಪಟ್ಟಂ ಶ್ರೀನಿವಾಸ ಸೆಟ್ಟರು ಮತ್ತು ತೆಂಗಿನ ಆದಪ್ಪಶೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಅಂಗೀಕರಿಸಿತು. ಲಷ್ಕರ್ ಮೊಹಲ್ಲೆಯ ಜನ ನಿಬಿಡ ಪ್ರದೇಶಗಳಾದ ಕುಂಬಾರಗೇರಿ, ತೆಂಗಿನ ಆದಪ್ಪಶೆಟ್ಟರ ಮತ್ತು ಚೌಡಪ್ಪಿ ಅಪ್ಪಾಜಯ್ಯಶೆಟ್ಟರ ಛತ್ರಗಳು ಮತ್ತು ವಿದ್ಯಾರ್ಥಿ ನಿಲಯಗಳ ಸಮೀಪದಲ್ಲಿರುವ ಮದ್ಯದ ಅಂಗಡಿಯನ್ನು ಕೂಡಲೇ ತೆಗೆಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯವೂ ಮಂಜೂರಾಯಿತು.

ನಡು ಹಗಲಿನಲ್ಲಿ ಕೊಲೆ ಮತ್ತು ದರೋಡೆ

ಕಾನ್‌ಪುರದ ಒಂದು ಪ್ರಮುಖ ವ್ಯಾಪಾರಿ ಸಂಸ್ಥೆಯವರು ಬ್ಯಾಂಕಿನಿಂದ ಹಣವನ್ನು ತರುವ ಸಲುವಾಗಿ ತಮ್ಮ ಗುಮಾಸ್ತರ ಕೈಲಿ ೫೧ ಸಾವಿರ ರೂಗಳ ಚೆಕ್ಕನ್ನು ಕೊಟ್ಟು ನೆನ್ನೆ ಬೆಳಗ್ಗೆ ತಮ್ಮ ಮೋಟಾರಿನಲ್ಲಿ ಅವನನ್ನು ಬ್ಯಾಂಕಿಗೆ ಕಳುಹಿಸಿದ ಬಹಳ ಹೊತ್ತಿನವರೆಗೆ ಆತನು ಹಿಂದಿರುಗದಿರಲು ಸಂಸ್ಥೆಯವರು ಪೋಲೀಸರಿಗೆ ದೂರು ಕೊಟ್ಟರೆಂದು ವರದಿಯಾಗಿದೆ. ಅಲಹಾಬಾದಿನ ಶ್ರೀಷ್ಪ ನ್ಯಾಯಾಧೀಶರು ನೆನ್ನೆ ಅಲ್ಲಿಂದ ಕಾನ್‌ಪುರಕ್ಕೆ ಮೋಟಾರಿನಲ್ಲಿ ಬರುತ್ತಿದ್ದಾಗ ದಾರಿಯಲ್ಲಿ ಚಕೇರಿ ಎಂಬಲ್ಲಿನ ವಿಮಾನ ನಿಲ್ದಾಣದ ಬಳಿ ಬಹಳ ಗಾಯಗಳಿಂದ ಕೂಡಿದ ಒಂದು ಶವವನ್ನು ಕಂಡು ಕಾನ್‌ಪುರದ ಜಿಲ್ಲಾಧಿಕಾರಿಗಳಿಗೆ ಸುದ್ದಿ ಕೊಡಲು ಪೋಲೀಸರು ಮೇಲ್ಕಂಡ ಸಂಸ್ಥೆಯವರೊಡನೆ ಸ್ಥಳಕ್ಕೆ ಹೋಗಿ ನೋಡಲಾಗಿ ಮೃತ ಶರೀರವು ಸಂಸ್ಥೆಯ ಗುಮಾಸ್ತರದೇ ಎಂದು ಗುರ್ತಿಸಲ್ಪಟ್ಟಿತೆಂದೂ, ಗುಮಾಸ್ತನು ಕರೆದುಕೊಂಡು ಹೋದ ಕಾರಿನ ಡ್ರೈವರನು ಪತ್ತೆಯಿಲ್ಲವೆಂದೂ, ಮೋಟಾರು ರೈಲ್ವೆ ನಿಲ್ದಾಣದ ಬಳಿ ಬಿಡಲ್ಪಟ್ಟಿತ್ತೆಂದೂ ಹೇಳಲಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭.೩೦ ಎಂ ಜೆಚ್ ಜಯಮ್ಮ ವೀಣಾವಾದನ, ಮಧ್ಯಾಹ್ನ ೧೨.೩೦ ಕೊಳಲು, ೨ ಎಂ. ಆರ್ ಗೌತಮ್ ಹಿಂದೂಸ್ತಾನಿ ಸಂಗೀತ ಸಂಜೆ ೫.೩೦ ಎಸ್ ಬಿ ಕೇಶವಮೂರ್ತಿ ಸಂಗೀತ, ೬ ಎಂ ಆರ್ ಗೌತಮ್ ಹಿಂದೂಸ್ತಾನಿ ಸಂಗೀತ, ೭.೩೦ ಜಿ ಪಿ ರಾಜರತ್ನಂರವರಿಂದ ಕನ್ನಡದಲ್ಲಿ ಭಾಷಣ, ೮.೩೦ ಎಂ ಜೆಚ್, ಜಯಮ್ಮ ವೀಣಾ ವಾದನ, ೮.೩೦ ವೃಂದ ಸಂಗೀತ, ೯.೩೦ ಗಾನಾಮೃತ

6-8-52

ಬೆಳಗ್ಗೆ ೭.೩೦ ನಾಗಸ್ವರ ಎಗ್ ಅಬ್ಬಾಯಿದಾಸ್, ಮಧ್ಯಾಹ್ನ ೨ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ಸಂಜೆ ೫.೩೦ ನಾಗಸ್ವರ, ಎಗ್ ಅಬ್ಬಾಯಿದಾಸ್, ೬.೧೦ ಬಾಲಜಗತ್, ಮಕ್ಕಳ ಕಾರ್ಯಕ್ರಮ ೭.೩೦ ಕನ್ನಡದಲ್ಲಿ ಭಾಷಣ, ಕೆ ಎಸ್ ಚಂದ್ರಶೇಖರಯ್ಯ, ೮ ಸಂಗೀತ ಟಿ ಎಸ್ ರಾಮಚಂದ್ರ, ೯.೧೫ ಕೋಲೆಬಸವನ ಆಟ ಹನುಮಂತಪ್ಪ ಮತ್ತು ಪಾರ್ಟಿಯವರಿಂದ, ೯.೩೦ ನಿಮ್ಮ ಮೆಚ್ಚಿನ ಗೀತೆಗಳು

೧೫ನೇ ಒಲಂಪಿಕ್ ಕ್ರೀಡೆಗಳ ಮುಕ್ತಾಯ

ಫಿನ್ಲೆಂಡಿನ ರಾಜಧಾನಿ ಹೆಲ್ಸಿಂಕಿಯಲ್ಲಿ ಕಳೆದ ಎರಡು ವಾರಗಳಿಂದ ನಡೆಯುತ್ತಿದ್ದ ವಿಶ್ವದ ೧೫ ನೇ ಒಲಂಪಿಕ್ ಕ್ರೀಡೆಗಳು ನೆನ್ನೆ ಮುಕ್ತಾಯವಾದುವು. ಕ್ರೀಡಾ ರಂಗದಲ್ಲಿ ನಿರ್ಮಿತವಾಗಿದ್ದ ೨೩೭ ಅಡಿ ಎತ್ತರದ ಗೋಪುರದ ಮೇಲೆ ಕ್ರೀಡೆಗಳು ನಡೆಯುತ್ತಿದ್ದಾಗ ಬೆಳಗುತ್ತಿದ್ದ ಜ್ಯೋತಿಯನ್ನು ನೆನ್ನೆ ಆರಿಸಲಾಯಿತು. ೧೬ ನೇ ಒಲಂಪಿಕ್ ಸ್ಪರ್ಧೆಗಳು ಆಸ್ಟ್ರೇಲಿಯದ ಮೆಲ್ಬೋರ್ನ್‌ನಲ್ಲಿ ನಡೆಯುವುವು

ಹೆಲ್ಸಿಂಕಿಯ ಕ್ರೀಡೆಗಳಲ್ಲಿ ಸಂಯುಕ್ತ ಸಂಸ್ಥಾನವು ೪೦ ಚಿನ್ನದ ಪದಕಗಳನ್ನು ಗೆದ್ದು ಪ್ರಥಮ ಸ್ಥಾನವನ್ನೂ, ರಷ್ಯವು ೨೨ ಚಿನ್ನದ ಪದಕಗಳನ್ನು ಪಡೆದು ದ್ವಿತೀಯ ಸ್ಥಾನವನ್ನೂ ಗಳಿಸಿದವು

ಕ್ಯೂಬಾ ಸರ್ಕಾರದ ವಿರುದ್ಧವಾಗಿ ಪಿತೂರಿ

ಅಟ್ಲಾಂಟಿಕ್ ಸಮುದ್ರದಲ್ಲಿರುವ ಕ್ಯೂಬಾ ದ್ವೀಪದ ಸರ್ಕಾರವನ್ನು ಉರುಳಿಸಿ ಅಲ್ಲಿನ ಅಧ್ಯಕ್ಷರನ್ನು ಕೊಲ್ಲುವ ಪಿತೂರಿಯೊಂದನ್ನು ಪೋಲೀಸರು ಪತ್ತೆ ಹಚ್ಚಿರುತ್ತಾರೆ. ಇದಕ್ಕೆ ಅಲ್ಲಿನ ಮಾಜಿ ಅಧ್ಯಕ್ಷರು ೨೦ ಲಕ್ಷ ಡಾಲರುಗಳ ಸಹಾಯ ಮಾಡಿದ್ದರೆಂದು ಹೇಳಲಾಗಿದೆ

ಸೂಚನೆ

ಯಜುರುಪಾಕರ್ಮದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ — ವ್ಯವಸ್ಥಾಪಕ

ಬೆಂಗಳೂರಿನಲ್ಲಿ ವಿಮಾನ ಚಾಲಕ ಶಿಕ್ಷಣ

ಬೆಂಗಳೂರಿನಲ್ಲಿ ಹಿಂದೂಸ್ತಾನ್ ವಿಮಾನ ಕಾರ್ಖಾನೆ, ಜಾಲಹಳ್ಳಿಯಲ್ಲಿ ಭಾರತದ ವಿಮಾನ ಪಡೆಯ ಕೇಂದ್ರ ಮತ್ತು ಟಾಟಾ ವಿಜ್ಞಾನ ಶಾಲೆಯಲ್ಲಿ ವಿಮಾನ ಹಾರಾಟದ ಶಿಕ್ಷಣ ಕೇಂದ್ರವನ್ನು ತೆರೆಯುವ ಆಲೋಚನೆ ಇರುವುದೆಂದೂ, ಈ ಸಂಬಂಧವಾಗಿ ಮೈಸೂರು ಸರ್ಕಾರದವರೊಡನೆ ಪ್ರವೀಣರ ಸಮಿತಿಯೊಂದು ವ್ಯವಹರಿಸುತ್ತಿರುವುದಾಗಿಯೂ ಗೊತ್ತಾಗಿದೆ

ಪತಿಯನ್ನಗಲಿ ಪುನರ್ವಿವಾಹವಾದ ತರುಣಿಗೆ ಶಿಕ್ಷೆ

ಹೈದರಾಬಾದಿನ ಪಟಾಕಾಸಿನ ಶಾಖೆಯ ಸೂಪರಿಂಟೆಂಡೆಂಟರಾದ ಶ್ರೀ ಶ್ರೀನಿವಾಸ್ ಎಂಬುವರು ಅದೇ ಶಾಖೆಯಲ್ಲಿ ಗುಮಾಸ್ತೆ ಕೆಲಸದಲ್ಲಿದ್ದ ಆಲಿಸ್ ಮೇರಿ ಪ್ರಕಾಶ್ ಎಂಬ ವಿವಾಹಿತ ಮಹಿಳೆಯನ್ನು ಪುನರ್ವಿವಾಹ ಮಾಡಿಕೊಂಡುದಕ್ಕಾಗಿ ಅವರಿಬ್ಬರೂ ತಲಾ ಒಂದು ವರ್ಷ ಸಜಾ ಶಿಕ್ಷೆಗೆ ಗುರಿಯಾಗಿರುವರೆಂದು ತಿಳಿದುಬಂದಿದೆ. ಆಲಿಸ್ ಮೇರಿಯು ಪ್ರಕಾಶ್ ಎಂಬುವರ ಪತ್ನಿಯೆಂದೂ, ಪ್ರಕಾಶರು ೧೯೪೬ರಲ್ಲಿ ಆಕೆಯನ್ನು ವಿವಾಹವಾಗಿ ೧೯೪೮ರಲ್ಲಿ ಒಬ್ಬ ಪುತ್ರನನ್ನು ಪಡೆದರೆಂದೂ ಗೊತ್ತಾಗಿದೆ. ೧೯೫೧ನೇ ಇಸವಿ ಫೆಬ್ರವರಿಯಲ್ಲಿ ಪ್ರಕಾಶ್‌ರವರು ಪತ್ನಿ ಮತ್ತು ಪುತ್ರರನ್ನು ಬಿಟ್ಟು ಕಾಶ್ಮೀರದ ಕಾರ್ಯಾಚರಣೆಗೆ ತೆರಳಿದ್ದಾಗ ಕಳೆದ ಜನವರಿ ತಿಂಗಳಿನಲ್ಲಿ ಮೇಲ್ಕಂಡ ಶ್ರೀನಿವಾಸ್ ಎಂಬುವರು ತಮ್ಮ ಪತ್ನಿಯನ್ನು ಆರ್ಯ ಸಮಾಜದ ವಿಧಿಯಂತೆ ವಿವಾಹವಾದರೆಂದು ತಮಗೆ ತಿಳಿದುಬಂದುದಾಗಿ ಪ್ರಕಾಶರು ಪೋಲೀಸಿಗೆ ದೂರು ಕೊಟ್ಟಿದ್ದರು.

ಉಪಾಕರ್ಮ

ಮೈಸೂರು ೩.

ಮೈಸೂರು ಸೀತಾವಿಲಾಸ ಅಗ್ರಹಾರದ ಶ್ರೀ ರಾಮ ದೇವಸ್ಥಾನದಲ್ಲಿ ನಾಳೆ ಬೆಳಗ್ಗೆ ೮||ಗಂಟೆಗೆ ಮಹಾ ಪಾಠಶಾಲೆಯ ನಿವೃತ್ತ ಯಜುರ್ವೇದ ಪ್ರಧಾನ ಉಪಾಧ್ಯಾಯರಾದ ವೇ|| ಬ್ರ|| ಶ್ರೀ|| ಶ್ರೀನಿವಾಸಾವಧಾನಿಗಳ ಆಚಾರ್ಯತ್ವದಲ್ಲಿ ಉಪಾಕರ್ಮವು ನಡೆಯುವುದು

ರಾಜಧಾನಿಯ ಸುಬ್ಬರಾಯನಕೆರೆ ಮೇಲಿರುವ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ನಾಳೆ ಬೆಳಗ್ಗೆ ಹೆಬ್ಬಾರು ಶ್ರೀ ವೈಷ್ಣವ ಸಭೆಯವರು ಯಜುರುಪಾಕರ್ಮವನ್ನು ಏರ್ಪಡಿಸಿರುವರು.

ಕಳ್ಳತನದಲ್ಲಿ ನಾಟಾ ಸಾಗಾಣಿಕೆ

ಸ್ವಂ. ಸು] ಚಾಮರಾಜನಗರ ೩.

ಕಳೆದ ಗುರುವಾರ ರಾತ್ರಿ ಸುಮಾರು ೧೨ ಘಂಟೆಯಲ್ಲಿ ಚಾಮರಾಜನಗರದ ಕಡೆಗೆ ಬರುತ್ತಿದ್ದ ರಹದಾರಿಯಿಲ್ಲದ ಮರ ತುಂಬಿದ ಮೂರು ಗಾಡಿಗಳನ್ನು ಇಲ್ಲಿನ ರೇಂಜ್ ಫಾರೆಸ್ಟ್ ಆಫೀಸರ್ ಶ್ರೀ ಕೆ ಪಿ ಮಾದಪ್ಪನವರೂ, ಫಾರೆಸ್ಟ್ ಗಾರ್ಡ್ ಸೈಯದ್ ಖಾದರ್‌ರವರೂ ತಡೆದು ತನಿಖೆ ಮಾಡಿ ಮುಂದಿನ ಕ್ರಮದ ಬಗ್ಗೆ ಚಾಮರಾಜನಗರಕ್ಕೆ ಹೊಡೆಸಿಕೊಂಡು ಬರುತ್ತಿದ್ದಾಗ್ಗೆ ನಾಟಾ ಸಾಗಿಸುತ್ತಿದ್ದ ನಾಲ್ವರು ಮೇಲ್ಕಂಡ ಅಧಿಕಾರಿಗಳನ್ನೂ ಮತ್ತು ಇವರ ಸಹಾಯಕ್ಕೆ ಬಂದಿದ್ದವರ ಪೈಕಿ ಬಸಪ್ಪನೆಂಬುವನನ್ನೂ ದೊಣ್ಣೆಗಳಿಂದ ತಲೆಯ ಮೇಲೆ ಹೊಡೆದು ತೀವ್ರ ಗಾಯಗೊಳಿಸಿದ್ದಾರೆ. ಇವರೆಲ್ಲರೂ ಚಾಮರಾಜನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ. ಈ ರೀತಿ ಘರ್ಷಣೆಯಾಗಿರುವುದು ಇದು ಎರಡನೆಯ ಬಾರಿ. ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.

ಜನೋಪಯುಕ್ತ ಕಾರ್ಯಗಳಿಗೆ ಧನಿಕರ ಸಹಾಯ ಅಗತ್ಯ

ಹೈಸ್ಕೂಲು ಕಟ್ಟಡದ ಆರಂಭೋತ್ಸವದಲ್ಲಿ ಪ್ರಭುಗಳ ಭಾಷಣ

ಗುಂಡ್ಲುಪೇಟೆ ೪

ಧನಿಕರು ಜನೋಪಯುಕ್ತ ಕಾರ್ಯಗಳಿಗೆ ಉದಾರವಾಗಿ ಧನಸಹಾಯ ಮಾಡುವುದರಿಂದ ಅವರಿಗೆ ಪುಣ್ಯವೂ, ಪ್ರಜೆಗಳಿಗೆ ಪರಮೋಪಕಾರವೂ ಆಗುವುದು ಎಂದು ಶ್ರೀಮನ್ಮಹಾರಾಜರು ನೆನ್ನೆ ಗುಂಡ್ಲುಪೇಟೆಯಲ್ಲಿ ಶ್ರೀ ದೊಡ್ಡಹುಂಡಿ ಭೋಗಪ್ಪನವರ ಹೈಸ್ಕೂಲಿನ ಆರಂಭೋತ್ಸವವನ್ನು ನೆರವೇರಿಸಿದ ಸಂದರ್ಭದಲ್ಲಿ ತಿಳಿಸಿದರು.

ಶಾಲಾ ಬಾಲಕಿಯರಿಂದ ಪ್ರಾರ್ಥನೆಯಾದನಂತರ ಶ್ರೀ ಘನಪಾಠಿ ನಾರಾಯಣಯ್ಯಂಗಾರ್ಯರು ಸ್ವಾಗತ ಪದ್ಯವನ್ನು ಓದಿದರು. ಆನಂತರ ಪೌರಸಭಾಧ್ಯಕ್ಷರಾದ ಜ॥ ಅಬ್ದುಲ್ ಗಫಾರ್ ರವರು ಪೌರಸಭೆಯವರ ಪರವಾಗಿ ಬಿನ್ನವತ್ತಳೆಯನ್ನು ಒಪ್ಪಿಸಿದರು. ಗುಂಡ್ಲುಪೇಟೆಯಲ್ಲಿ ಬಹುಕಾಲದಿಂದಲೂ ಇರುವ ನೀರಿನ ಅಭಾವವನ್ನು ನೀಗಿಸುವುದಕ್ಕಾಗಿ ಪೌರಸಭೆಯವರು ತಯಾರಿಸಿರುವ ಯೋಜನೆಗೆ ಸರ್ಕಾರದ ಸಹಾಯವನ್ನೊದಗಿಸಬೇಕು, ಬೆಂಗಳೂರು ನೀಲಗಿರಿ ರಸ್ತೆಗೆ ಸಿಮೆಂಟ್ ಕಾಂಕ್ರೀಟ್ ಮಾಡಿಸಿಕೊಡಬೇಕು, ವಿಜಯಾಪುರದ ಅಮಾನಿ ಕೆರೆಯನ್ನು ಅಚ್ಚುಕಟ್ಟುಮಾಡಿಸಿಕೊಡಬೇಕು, ಅರ್ಧಾಂತರವಾಗಿ ನಿಂತಿರುವ ಚರಂಡಿ ವ್ಯವಸ್ಥೆಯನ್ನು ಪೂರೈಸಿಕೊಡಬೇಕು, ಆಸ್ಪತ್ರೆಗೆ ಹಾಸಿಗೆ, ಮಂಚ ಮುಂತಾದುವನ್ನು ಒದಗಿಸಬೇಕು, ಇಲ್ಲಿ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು, ಬಾಲಿಕಾ ಮಾಧ್ಯಮಿಕ ಶಾಲೆಗೆ ಕಟ್ಟಡ ಕಟ್ಟಿಸಿಕೊಡಬೇಕು, ಶಾಲಾ ಉಪಾಧ್ಯಾಯರುಗಳಿಗೆ ಮನೆಗಳನ್ನು ನಿರ್ಮಿಸಬೇಕು ಮತ್ತು ತಾಲ್ಲೂಕಿನ ಸಂಚಾರ ಮಾರ್ಗಗಳನ್ನು ಉತ್ತಮಗೊಳಿಸಿ ಕೊಡಬೇಕು—ಎಂದು ಬಿನ್ನವತ್ತಳೆಯಲ್ಲಿ ಪ್ರಾರ್ಥಿಸಲಾಗಿತ್ತು.

ಪ್ರೌಢಶಾಲೆಯ ಕಟ್ಟಡದ ದಾನಿಗಳಾದ ಶ್ರೀ ದೊಡ್ಡಹುಂಡಿ ಭೋಗಪ್ಪನವರು ಪ್ರಭುಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಶಾಲಾ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸಿದರು.

ಶ್ರೀಮನ್ಮಹಾರಾಜರು ಭಾಷಣ ಮಾಡಿ ಈ ರೀತಿ ನುಡಿದರು —

ಈ ಊರಿನ ಹೆಸರನ್ನು ಮಾರ್ಪಡಿಸಿ ಗುಂಡ್ಲುಪೇಟೆಯೆಂದು ಕರೆದು ಅಭಿವೃದ್ಧಿಗೆ ತಂದವರು, ನಮ್ಮ ಪೂರ್ವಜರೂ ಪೂಜ್ಯರೂ ಪ್ರಖ್ಯಾತರೂ ಆದ ಶ್ರೀ ಚಿಕ್ಕದೇವರಾಜ ಒಡೆಯರವರು. ಈ ಪ್ರಾಂತಕ್ಕೇ ಇದು ದೊಡ್ಡ ವ್ಯಾಪಾರ ಸ್ಥಳವೂ ವಾಣಿಜ್ಯ ಕೇಂದ್ರವೂ ಆಗುವಂತೆ ಅವರು ಪರಿಣಾಮಗೊಳಿಸಿದರು. ಅವರ ಕಾಲದಲ್ಲಿ ಈ ಊರು ಶೀಘ್ರವಾಗಿ ವೃದ್ಧಿ ಹೊಂದಿತು. ಹೀಗೆ ಪುರೋಭಿವೃದ್ಧಿ ಹೊಂದಿರುವ ಈ ಊರಿನಲ್ಲಿ ಹೈಸ್ಕೂಲು ಏರ್ಪಟ್ಟಿರುವುದು ಯುಕ್ತವಾಗಿಯೂ ಆವಶ್ಯಕವಾಗಿಯೂ ಇದೆ. ಶ್ರೀ ಭೋಗಪ್ಪನವರು ಮುನಿಸಿಪಲ್ ಹೈಸ್ಕೂಲಿಗೆ ಸ್ವಂತ ಕಟ್ಟಡವಿಲ್ಲದ ಕೊರತೆಯನ್ನು ಮನಗಂಡು ಉದಾರವಾಗಿ ಧನಸಹಾಯ ಮಾಡಿದರು. ಅವರ ಜೊತೆಗೆ ಪ್ರೋತ್ಸಾಹವನ್ನೂ ನಮ್ಮ ಸರ್ಕಾರದವರು ದ್ರವ್ಯ ಸಹಾಯ ಮಾಡಿದ ಕಾರಣವಾಗಿ ತಯಾರಾದ ಈ ಕಟ್ಟಡವು ಸಿದ್ಧವಾಯಿತು. ವರ್ಗಬುದ್ಧಿಯುಳ್ಳ ಪ್ರಮುಖರಲ್ಲಿ ಶ್ರೀ ದೊಡ್ಡಹುಂಡಿ ಭೋಗಪ್ಪನವರು ಒಬ್ಬರು. ವಿದ್ಯಾಭಿವೃದ್ಧಿಗೆ ಸಹಾಯವಾಗುವಂತೆ ಈ ಕಟ್ಟಡಕ್ಕಾಗಿ ಉದಾರ ದಾನ ಮಾಡಿರುವುದಕ್ಕಾಗಿ ನಾವು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಧನಿಕರು ಈ ರೀತಿ ಜನೋಪಯುಕ್ತ ಕಾರ್ಯಗಳಿಗೆ ದ್ರವ್ಯ ಸಹಾಯ ಮಾಡಿದರೆ, ಅವರಿಗೆ ಪುಣ್ಯ, ಪ್ರಜೆಗಳಿಗೆ ಪರಮೋಪಕಾರ ಆಗುವುದು. ಧನಿಕರಾದುದರ ಸಾರ್ಥಕ ಅಷ್ಟೇ ಅಲ್ಲ, ನಮ್ಮ ಸರ್ಕಾರದವರು ಪ್ರಜೆಗಳಿಗೆ ಬಗೆಬಗೆಯ ಸೌಕರ್ಯಗಳನ್ನು ಕಲ್ಪಿಸುವುದಕ್ಕೂ ಅವರಿಂದ ಸಹಾಯವಾಗುತ್ತದೆ. ಧನಿಕರ ಸಹಕಾರವೂ, ಸಹಾಯವೂ ಎಷ್ಟೆಷ್ಟು ಹೆಚ್ಚಾಗಿ ಲಭಿಸಿದರೆ ಸರ್ಕಾರದವರ ಈ ಕೆಲಸವು ಅಷ್ಟಷ್ಟು ಸುಲಲಿತವಾಗಿ ನೆರವೇರುತ್ತದೆ.

ಪೌರಸಭೆಯವರಿಂದ ಸಮರ್ಪಿತವಾದ ಬಿನ್ನವತ್ತಳೆಯಲ್ಲಿ ಅನೇಕ ಅರಿಕೆಗಳು ಸೂಚಿತವಾಗಿವೆ. ಕುಡಿಯುವ ನೀರಿನ ಸೌಕರ್ಯ, ಬೆಂಗಳೂರು-ನೀಲಗಿರಿ ಸಂಚಾರ ಮಾರ್ಗದ ಮೇಲ್ಪಾಟು, ವಿಜಯಾಪುರದ ಅಮಾನಿ ಕೆರೆ ಕಾಮಗಾರಿ, ಈ ಊರಿನ ಚರಂಡಿ ಏರ್ಪಾಡು ಮುಂತಾದ ಅನೇಕ ಕಾರ್ಯಕಲಾಪಗಳ ಸಂಬಂಧವಾಗಿ ನಮ್ಮ ಸರ್ಕಾರದವರಿಂದ ಸಹಾಯವನ್ನು ಕೋರಿ ಪೌರಸಭೆಯವರು ಅರಿಕೆಗಳನ್ನು ಸೂಚಿಸಿದ್ದಾರೆ. ನಮ್ಮ ಸರ್ಕಾರದವರು ಅವುಗಳನ್ನು ಸಾವಧಾನವಾಗಿ ಪರ್ಯಾಲೋಚಿಸಿ ನೋಡಿ, ಸಾಧ್ಯಕಂಡಲ್ಲಿ ಸಂತೋಷದಿಂದ ಸಹಾಯ ಮಾಡುತ್ತಾರೆಂದು ತಿಳಿಸಲಿಚ್ಛಿಸುತ್ತೇವೆ.

ಮೈಸೂರು ಕೋ-ಆಪರೇಟಿವ್ ಸೊಸೈಟಿ

ಅಪಪ್ರಚಾರದ ಸುರಿಮಳೆ

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಸಾರ್ವಜನಿಕರ ಅವಗಾಹನೆಗಾಗಿ ಈ ರೀತಿ ಹೇಳಿಕೆಯೊಂದನ್ನು ಇತ್ತಿದ್ದಾರೆ —

ಸೊಸೈಟಿಯ ಪ್ರಕೃತ ಆಡಳಿತಾಧಿಕಾರ ವಹಿಸಿರುವ ಶ್ರೀ ಜಿ. ಆರ್. ಜೋಸ್ಯರ್ ರವರು ಮತ್ತು ಇತರರು ಕಳೆದ ಮಾರ್ಚ್ ನೇ ತಾರೀಖು ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು ಸೊಸೈಟಿಯ ವಿಷಯವಾಗಿ ಕೆಲವು ಅಂಶಗಳನ್ನು ಹೇಳಿದುದಾಗಿ ವರದಿಯಾಗಿದೆ. ಅದು ಅವಹೇಳನ ಮತ್ತು ಅಪಪ್ರಚಾರದ ಪರಮಾವಧಿಯನ್ನು ಮುಟ್ಟಿದೆ.

ಕಳೆದ ೧೪ ವರ್ಷಗಳಿಂದಲೂ ಸೊಸೈಟಿಯ ಆಡಳಿತವು ಕೆಲವರ ಒಡೆತನಕ್ಕೆ ಸಿಕ್ಕಿದ್ದಿತೆಂದು ಹೇಳಿದಂತೆ ವರದಿಯಾಗಿದೆ. ನಾನು ಕಾರ್ಯದರ್ಶಿಯಾಗಿದ್ದುದು ಸುಮಾರು ೧೯೩೮ರಿಂದ ೪೧ ಮತ್ತು ೪೩ರಿಂದ ೪೫ರ ವರೆಗೆ. ಆಗ್ಗೆ ಶ್ರೀ ವಿ. ಲಿಂಗಪ್ಪಯ್ಯನವರು, ನಂತರ ಶ್ರೀ ಜಿ. ಆರ್. ಜೋಸ್ಯರ್ ರವರ ಅಧ್ಯಕ್ಷರಾಗಿದ್ದಲ್ಲದೆ, ಶ್ರೀ ಎಂ. ಎ. ದೊರೆಸ್ವಾಮಿ ಐಯ್ಯಂಗಾರ್ಯರು, ಶ್ರೀ [illegible], ಶ್ರೀ ರಂಗರಾಮಯ್ಯನವರು, ಕೆ. ಪುಟ್ಟೂರಾಯರು, ಎ. ಸೀತಾರಾಮಯ್ಯನವರು ಇತ್ಯಾದಿ ಮಹನೀಯರು ಡೈರೆಕ್ಟರುಗಳಾಗಿಯೂ ಇದ್ದರು. ಈ ಮಧ್ಯೆ ಶ್ರೀ ಕೆ. ಪುಟ್ಟೂರಾಯರು ಒಂದು ವರ್ಷ ಕಾರ್ಯದರ್ಶಿಯಾಗಿದ್ದರು. ನಾನು ಅಧ್ಯಕ್ಷನಾದ ಮೇಲೆ ಈಗ ಗೌರ್ನಮೆಂಟ್ ಅಡ್ವೊಕೇಟ್ ಆಗಿರುವ ಶ್ರೀ ಎಚ್. ಚನ್ನಸ್ವಾಮಿ ಶೆಟ್ಟರು ಮತ್ತು ಶ್ರೀ ಜಿ. ವಿ. ದೇಶಿಕಾಚಾರ್ ಬಿ. ಎ., ಬಿ. ಟಿ. ರವರು ಕಾರ್ಯದರ್ಶಿಗಳಾದರು. ಈಗಿನ ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರೇ ಕಳೆದ ಕೆಲವು ವರ್ಷಗಳಿಂದ ಉಪಾಧ್ಯಕ್ಷರಾಗಿದ್ದಾರೆ. ಈಗಿರುವ ಡೈರೆಕ್ಟರುಗಳನೇಕರು ಆಗಿನಿಂದಲೂ ವರ್ಷೇವರ್ಷೇ ಡೈರೆಕ್ಟರುಗಳಾಗಿರುತ್ತಾರೆ. ಇಷ್ಟು ವರ್ಷವೂ ಎಲ್ಲವೂ "ಸಿಹಿ" ಎಂದು ಹೇಳುತ್ತಿದ್ದವರು ಈಗ ಎಲ್ಲವೂ "ಕಹಿ" ಎಂದು ಹೇಳುವುದು ಆಶ್ಚರ್ಯ.

ಅಧಿಕಾರಿ ವರ್ಗದಲ್ಲಿದ್ದವರು ತಮಗೆ ಬೇಕಾದ ಹಾಗೆ ಮನೆಯವರು ಮತ್ತು ಬಂಧುವರ್ಗಕ್ಕೆ ಸಾಲ ಕೊಟ್ಟುಕೊಂಡರೆಂಬ ಅರ್ಥ ಬರುವ ಹಾಗೆ ವರದಿಯಾಗಿದೆ. ೪೦೦ ರೂ. ವರೆವಿಗೆ ಸಾಲ ಕೊಡಬೇಕಾದರೆ ಎಳು ಜನರ ಸಮಿತಿ ಇದೆ. ಅದಕ್ಕೆ ಮೇಲ್ಪಟ್ಟರೆ ೧೫ ಜನ ಡೈರೆಕ್ಟರುಗಳ ಒಪ್ಪಿಗೆಗೆ ಹೋಗಬೇಕು. ಹೀಗೆ ಲೋನ್ ಕಮಿಟಿ, ಜನರಲ್ ಕಮಿಟಿ, [illegible] ಬೋರ್ಡ್, ಆಡಿಟ್ ಕಮಿಟಿ ಇತ್ಯಾದಿ ಸಮಿತಿಗಳಿಂದ ಕಾನೂನುಬದ್ಧವಾಗಿ ಕಾರ್ಯ ನಡೆಯುತ್ತಿದ್ದರೂ ಅಪಾರ್ಥ ಕಲ್ಪನೆಯಾಗುವಂತೆ ಹೇಳಿರುವುದು ಖೇದದ ವಿಷಯ. ಹಾಗೂ ಲೋನ್ ಕಮಿಟಿಯ ಅಧ್ಯಕ್ಷರು ಸಂಘದ ಉಪಾಧ್ಯಕ್ಷರೇ ವಿನಹಾ ಸಂಘದ ಅಧ್ಯಕ್ಷರಲ್ಲ.

ಸ್ಟೋರ್ಸಿನಲ್ಲಿ ಕಾಫಿ ಬೀಜದ ವ್ಯವಹಾರದ ವಿಷಯ ಪ್ರಸ್ತಾಪಿಸಿದ್ದಾರೆ. ಕಾಫಿ ಬೀಜದಲ್ಲಿ ನಷ್ಟ ಹೇರು ಕಂಡುಬಂದ ಕೂಡಲೇ ಒಬ್ಬ ಸ್ಪೆಷಲ್ ಆಡಿಟರನ್ನು ನೇಮಿಸಿ, ಅವರ ವರದಿ ಬಂದ ತಕ್ಷಣ ಮ್ಯಾನೇಜಿಂಗ್ ಕಮಿಟಿಯ ತೀರ್ಮಾನವನ್ನು ಅನುಸರಿಸಿ ಅದಕ್ಕೆ ಕಾರಣರಾದ ನೌಕರರ ಮೇಲೆ ದಾವಾ ಮಾಡಲಾಗಿದೆ. ಈಗ "ಕಹಿ" ಎಂದು ಹೇಳುವವರನೇಕರು ಆಗ್ಗೆ ತೀರ್ಮಾನಕ್ಕೆ ಒಪ್ಪಿಗೆಕೊಂಡ ಹಾಗೆ ಸಮಿತಿಯಲ್ಲಿದ್ದರು, ಅನುಮೋದನೆ ನೀಡಿದರು.

ಕಳೆದ ಹತ್ತು ವರ್ಷಗಳ ಸೊಸೈಟಿ ವಾರ್ಷಿಕ ವರದಿಗಳನ್ನು ನೋಡಿದರೆ ಮೆಂಬರುಗಳ ಷೇರು, ಡಿಪಾಜಿಟ್ಟು, ರಿಜರ್ವ್ ಇತ್ಯಾದಿ ಎಲ್ಲವೂ ಹಿಂದೆಂದೂ ಇಲ್ಲದಷ್ಟು ಅಭಿವೃದ್ಧಿ ಹೊಂದಿರುವುದು ವೇದ್ಯವಾಗುತ್ತದೆ. ಪ್ರತಿ ವರ್ಷವೂ ಎಲ್ಲ ಲೆಕ್ಕವೂ ಸರ್ಕಾರಿ ಆಡಿಟರವರಿಂದ ಪರಿಶೀಲಿಸಲ್ಪಟ್ಟು, ವಾರ್ಷಿಕ ಸಭೆಗಳಲ್ಲಿ ಅನುಮೋದನೆ ಹೊಂದಿ ಎಲ್ಲರ ಮೆಚ್ಚಿಗೆಗೂ ಪಾತ್ರವಾಗಿದೆ. ಹೀಗಿದ್ದರೂ ಈಗ ಪ್ರತಿಪಕ್ಷ ವೈಷಮ್ಯದಿಂದ ಮನಸ್ವೀ ಹೇಳಿಕೆ ಕೊಡುವುದು ತರವಲ್ಲ.

ಅಧ್ಯಕ್ಷ ಸ್ಥಾನಕ್ಕೆ ಯತ್ನಿಸಿದವರೂ, ಉಪಾಧ್ಯಕ್ಷ ಸ್ಥಾನಕ್ಕೆ ಆಸೆಪಟ್ಟವರೂ ಕಾರ್ಯದರ್ಶಿಯಾಗಲು ಪ್ರಯತ್ನಪಟ್ಟು ವಿಫಲರಾದವರೂ ಡೈರೆಕ್ಟರಾಗಲು ಆಶಿಸಿ ನಿರಾಶೆಗೊಂಡವರೂ ಇತ್ಯಾದಿ ಮಹನೀಯರು ಸೇರಿ ಅವಿಶ್ವಾಸ ನಿರ್ಣಯವನ್ನು ತಂದು ಕೇವಲ ಒಂದು ಓಟಿನ ಬಹುಮತದಿಂದ ಉತ್ತೀರ್ಣರಾದುದು ನಿಜ. ಈ ಸಂದರ್ಭದಲ್ಲಿ ಶ್ರೀ ಬಿ. ಎಸ್. ರುದ್ರಪ್ಪನವರು ಕೋರ್ಟಿನಲ್ಲಿ ಹೂಡಿದ್ದ ವ್ಯವಹಾರವು ಏಕಾಏಕಿ ಹಿಂತೆಗೆದುಕೊಳ್ಳಲ್ಪಡದಿದ್ದರೆ, ಮುಂದುವರಿದಿದ್ದರೆ, ನ್ಯಾಯಾನ್ಯಾಯಗಳು ಹೊರಬೀಳುತ್ತಿತ್ತು.

ಆಡಳಿತ ವರ್ಗದವರು ಯಾರೇ ಇರಲಿ ಜನಜೀವನ ಕೀಳು ಮಟ್ಟಕ್ಕೆ ಇಳಿಯಬಾರದು. ಅವಹೇಳನ, ಅಪಪ್ರಚಾರ ಮತ್ತು ನಿಂದೆ ತಾತ್ಕಾಲಿಕವಾಗಿ ಜಯಕರವಾಗಿ ಕಂಡರೂ, ಅಂತ್ಯದಲ್ಲಿ ಸತ್ಯಕ್ಕೇ ಜಯ ಎಂಬುದು ನಮ್ಮೆಲ್ಲರ ಗಮನದಲ್ಲಿರಬೇಕಾದುದು ಅಗತ್ಯ.

ಮೈಸೂರು ನಗರದ ಅಭಿವೃದ್ಧಿಗೆ ಸರ್ಕಾರದ ನೆರವು

ಸ್ಥಳೀಯ ಸಂಸ್ಥೆ ಮಂತ್ರಿಗಳಲ್ಲಿ ಪುರಸಭೆಯವರ ನಿಯೋಗ

ಮೈಸೂರು ೩

ಮೈಸೂರು ನಗರದ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾವ್, ಕಮೀಷನರ್ ಜ॥ ರಹೀಂ, ಸದಸ್ಯರುಗಳಾದ ಶ್ರೀ ಪಿ. ಸೀತಾರಾಮಯ್ಯ, ಟಿ. ವೆಂಕಟರಮಣಯ್ಯ, ಬಿ. ಕೆ. ರಾಮಕೃಷ್ಣಯ್ಯ ಮತ್ತು ಜ॥ ಅಹಮದ್ ಜಾಫರ್ ರವರು ನೆನ್ನೆ ಬೆಂಗಳೂರಿನಲ್ಲಿ ಸ್ಥಳೀಯ ಸಂಸ್ಥೆ ಮಂತ್ರಿ ಶ್ರೀ ಟಿ. ಚನ್ನಯ್ಯನವರ ಬಳಿ ರಾಜಧಾನಿಯ ಹಲವಾರು ಪುರೋಭಿವೃದ್ಧಿ ಕಾರ್ಯಗಳನ್ನು ಕುರಿತು ಅರಿಕೆ ಮಾಡಲು ನಿಯೋಗ ಹೋಗಿದ್ದರು.

ಪೌರರಿಗೆ ನೀರನ್ನು ಒದಗಿಸಲು ಸಭೆಯ ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳನ್ನು ಕುರಿತು ಅವರು ಪ್ರಸ್ತಾಪಿಸಿ, ಅವುಗಳಿಗಾಗಿ ವೆಚ್ಚವಾಗುವ ೩೧.೧ ಲಕ್ಷ ರೂ. ಹಣದಲ್ಲಿ ಸರ್ಕಾರದವರು ೧೩ ಲಕ್ಷ ರೂ. ವನ್ನು ಪೈಪುಗಳಿಗಾಗಿ ಕೊಟ್ಟು ಇನ್ನೂ ೩.೫ ಲಕ್ಷವನ್ನು ಕೊಡಬೇಕಾಗಿರುವುದೆಂದೂ, ಪೌರಸಭೆಯವರು ಉಳಿದ ಹದಿನೈದು ಲಕ್ಷ ರೂ. ವನ್ನು ಕೊಡಲು ಸಾಧ್ಯವಿಲ್ಲದೆ ಇರುವುದರಿಂದ ಸರ್ಕಾರದವರೇ ಅದನ್ನೂ ಒದಗಿಸಿ, ಕಂತುವಾರಾಗಿ ಪೌರಸಭೆಯವರಿಂದ ವಾಪಸು ಪಡೆಯಬಹುದೆಂದೂ, ಕೇಂದ್ರದವರು ಕೊಡಲಿರುವ ಹಣದ ಪೈಕಿ ಸ್ವಲ್ಪವನ್ನು ಇದಕ್ಕಾಗಿ ಉಪಯೋಗಿಸಬೇಕೆಂದೂ ಪ್ರಾರ್ಥಿಸಿದುದಾಗಿ ಗೊತ್ತಾಗಿದೆ. ವಾಹನಗಳು ಈಚೆಗೆ ಬಹಳ ಹೆಚ್ಚಿರುವುವಾದರೂ ಮೋಟಾರು ವಾಹನ ತೆರಿಗೆಯಲ್ಲಿ ಪೌರಸಭೆಗೆ ಮೊದಲಿನಷ್ಟೇ ಹಣವು ಬರುತ್ತಿರುವುದೆಂದೂ, ಅದನ್ನೂ ಹೆಚ್ಚಿಸಬೇಕೆಂದೂ ಕೋರಲಾಯಿತೆಂದು ಗೊತ್ತಾಗಿದೆ.

ಮನರಂಜನೆ ತೆರಿಗೆಯ ವಸೂಲಿ ಕಾರ್ಯವನ್ನು ಪೌರಸಭೆಯವರಿಗೆ ವಹಿಸಬೇಕೆಂದೂ, ೪ ಆಣೆ ಮತ್ತು ಅದಕ್ಕೂ ಕಡಮೆ ಇರುವ ಟಿಕೇಟುಗಳಿಗೂ ತೆರಿಗೆಯನ್ನು ವಿಧಿಸುವುದು ಅಗತ್ಯವೆಂದೂ ಅರಿಕೆ ಮಾಡಿಕೊಳ್ಳಲಾಯಿತೆಂದು ಗೊತ್ತಾಗಿದೆ.

ಜನರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಇಲ್ಲಿನ ವೀಳೆದೆಲೆ ತೋಟಗಳ ಪ್ರದೇಶದಲ್ಲಿ ೫೦ ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಅಲ್ಲಿ ಡ್ರೈಬೆಲ್ಟನ್ನು ಏರ್ಪಡಿಸಲು ಅವಕಾಶ ನೀಡಬೇಕೆಂದೂ ಒತ್ತಾಯಪಡಿಸಲಾಯಿತಲ್ಲದೆ, ರಾಜಧಾನಿಗೆ ಹೊರಗಿನ ಅನೇಕ ಪ್ರೇಕ್ಷಕರು ಬರುವುದರಿಂದ ನಗರದ ಸೌಂದರ್ಯವನ್ನು ಕಾಪಾಡಲು ಸರ್ಕಾರದವರು ವರ್ಷಕ್ಕೆ ೫೦ ಸಾವಿರ ರೂ. ಅಷ್ಟು ವಿಶೇಷ ಗ್ರಾಂಟಾಗಿ ಕೊಡಬೇಕೆಂದು ಕೇಳಿಕೊಳ್ಳಲಾಯಿತೆಂದೂ ವರದಿಯಾಗಿದೆ.

ಸಚಿವರು ನಿಯೋಗದವರ ಕೋರಿಕೆಗಳನ್ನು ಸಾವಧಾನವಾಗಿ ಕೇಳಿ, ತಮ್ಮ ಕೈಲಾದ ಸಹಾಯ ಮಾಡುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

Edited, Printed and Published by A. K. Nagarajan at Sadhvi Press, D. Subbiah Road, Mysore.

ಟೆಲಿಫೋನ್ ನಂ 792 ‖ ವಂದೇ ಮಾತರಂ ‖ ಈ ದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೬-೮-೧೯೫೩ [ಸಂಚಿಕೆ ೯

ಪೋರ್ಚುಗೀಸ್ ಸ್ವಾಸ್ಥ್ಯಗಳಿಗೆ ಸ್ವಾತಂತ್ರ್ಯ!

ನಗರದ ಪತ್ರಿಕೋದ್ಯೋಗಿಗಳಲ್ಲಿ ಪ್ರಭುಗಳ ಆಸಕ್ತಿ

ಮೈಸೂರು ೩

ತಮ್ಮ ಕಿಷ್ಣರಾಜನಗರ, ಪಿರಿಯಾಪಟ್ಟಣಗಳ ಪ್ರವಾಸದ ಕಾಲದಲ್ಲಿ ಮೊನ್ನೆ ಶ್ರೀಮನ್ಮಹಾರಾಜರವರು ಕೃಷ್ಣನಗರ ನ ... ಲ್ಲಿ ಪತ್ರಿಕೋದ್ಯೋಗಿಗಳಿಗೆ ಭೇಟಿಯಿತ್ತಿದ್ದರು. ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲಕೃಷ್ಣರಾಯರು ಪ್ರಭುಗಳಿಗೆ ಅವರುಗಳನ್ನು ಪರಿಚಯ ಮಾಡಿಕೊಟ್ಟರು

ಇತ್ತೀಚೆಗೆ ಪತ್ರಿಕೋದ್ಯಮದ ಜವಾಬ್ದಾರಿಯು ದಿನೇ ದಿನೇ ಹೆಚ್ಚುತ್ತಿರುವುದಾಗಿ ಪ್ರಭುಗಳು ನುಡಿದರು

ಶ್ರೀಗಳಾದ ಗೋಪಾಲಕೃಷ್ಣರಾವ್, ಮತ್ತು ಎಂ.ಎನ್ ಶಾಸ್ತ್ರಿಗಳು ಮಹಾರಾಜರ ಮತ್ತು ಮಂತ್ರಿಗಳ ಪ್ರವಾಸಕಾಲದಲ್ಲಿ ಮೈಸೂರು ನಗರದ ಪತ್ರಿಕೋದ್ಯಮಿಗಳಿಗ ಉಂಟಾಗುತ್ತಿರುವ ಅನಾನುಕೂಲಗಳನ್ನು ಪ್ರಭುಗಳಿಗೆ ವಿವರಿಸಿ, ಮೈಸೂರಿನಲ್ಲಿ ಸರ್ಕಾರದ ಪ್ರಚಾರ ಕಾರ್ಯದ ಇಲಾಖೆಯ ಶಾಖೆಯೊಂದನ್ನು ಸ್ಥಾಪಿಸಬೇಕೆಂದು ಪ್ರಾರ್ಥಿಸಿದರು. ಮಹಾರಾಜರವರು ಸಾವಧಾನವಾಗಿ ಆಲಿಸಿ, ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸಯಿತ್ತರು.

ಕರ್ನಾಟಕ ಪ್ರಾಂತ ರಚನೆಗೆ ಒತ್ತಾಯ

ರಾಜಧಾನಿಯ ಟೌನ್‌ಹಾಲ್ ಪ್ರಾಂಗಣದಲ್ಲಿ ನೆನ್ನೆ ಸಂಜೆ ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಒಂದು ಸಭೆಯು ಶ್ರೀ ಸುಬ್ರಮಣ್ಯರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ನಡೆದು, ಭಾಷಾ ಪ್ರಾಂತ ರಚನೆಯ ಪ್ರಶ್ನೆಯನ್ನು ಬಗೆಹರಿಸಲು ವಿಳಂಬ ಮಾಡುತ್ತಿರುವುದಕ್ಕಾಗಿ ಕಳವಳವನ್ನು ಸೂಚಿಸಿ, ಕನ್ನಡಿಗರು ವಾಸಿಸುತ್ತಿರುವ ಎಲ್ಲ ಪ್ರದೇಶಗಳನ್ನು ಒಂದುಗೂಡಿಸಿ, ಕರ್ನಾಟಕ ಪ್ರಾಂತ ರಚನೆ ಮಾಡಬೇಕೆಂದು ಒತ್ತಾಯಪಡಿಸಿಯೂ, ಪ್ರಾಂತ ರಚನೆಗೆ ವಿರೋಧವನ್ನು ವ್ಯಕ್ತಪಡಿಸಿರುವ ಮೈಸೂರು ಶಾಸನ ಸಭೆಯ ಹಲವು ಸದಸ್ಯರುಗಳ ವರ್ತನೆಯನ್ನು ಉಗ್ರವಾಗಿ ಖಂಡಿಸುವುದಾಗಿ ಸೂಚಿಸಿಯೂ ನಿರ್ಣಯಗಳನ್ನು ಮಾಡಲಾಯಿತು

ದಕ್ಷಿಣ ಕ್ಷೇತ್ರಗಳಿಗೆ ಶ್ರೀಮನ್ಮಹಾರಾಜರ ಯಾತ್ರೆ

ಶ್ರೀಮನ್ ಮಹಾರಾಜರು ಸಂಸಾರ ಸಮೇತರಾಗಿ ಈ ತಿಂಗಳು ೧೭ ರಿಂದ ೨೦ ದಿನಗಳ ಕಾಲ ದಕ್ಷಿಣ ಭಾರತದಲ್ಲಿ ಯಾತ್ರೆ ಮಾಡುವರು. ತಿರುಪತಿ, ತಿರುತ್ತಣಿ, ಮಧುರೆ, ಕಂಚಿ, ಕುಂಭಕೋಣ, ರಾಮೇಶ್ವರ ಮುಂತಾದ ಸ್ಥಳಗಳಿಗೆ ಅವರು ಭೇಟಿ ಕೊಡುವರು

ವಾಲ್ಮೀಕಿ ಹುಟ್ಟಿದ ದಿನ ರಜಾ

ರಾಮಾಯಣವನ್ನು ರಚಿಸಿದ ಮಹರ್ಷಿ ವಾಲ್ಮೀಕಿಯು ಹುಟ್ಟಿದ ಹಬ್ಬದ ಸಾರ್ವತ್ರಿಕ ರಜ ಕೊಡಲು ಹಿಂದೆ ಸರ್ಕಾರದವರು ನಿರ್ಧರಿಸಿದ್ದರೆ. ಇಲ್ಲಿನ ಹರಿಜನ ಸಂಘಗಳವರು ಈ ಬಗ್ಗೆ ಸರ್ಕಾರದವರಲ್ಲಿ ಅರಿಕೆ ಮಾಡಿಕೊಂಡಿದ್ದರು

ಕಪಿನಿ ಜಲಾಶಯಕ್ಕೆ ೨॥ ಕೋಟಿ ರೂ. ಮಂಜೂರಾತಿ

ಮೈಸೂರು ೬

ಹೆಗ್ಗಡದೇವನಕೋಟೆ ತಾಲ್ಲೂಕು ಬಿದರಹಳ್ಳಿ ಗ್ರಾಮದ ಬಳಿ ಕಪಿನಿ ನದಿಗೆ ೮೦ ಅಡಿ ಎತ್ತರದ ಅಣೆಕಟ್ಟನ್ನು ನಿರ್ಮಿಸಿ, ಜಲಾಶಯವೊಂದನ್ನು ಏರ್ಪಡಿಸಲು ಸರ್ಕಾರದವರು ೨॥ ಕೋಟಿ ರೂಗಳ ಯೋಜನೆಯನ್ನು ಮಂಜೂರು ಮಾಡಿರುವರು. ಈ ವರ್ಷದ ಆಯವ್ಯಯದಲ್ಲಿ ಇದಕ್ಕಾಗಿ ೫ ಲಕ್ಷ ರೂಗಳನ್ನು ತೆಗೆದಿಡಲಾಗಿದೆ. ೪ ವರ್ಷಗಳಲ್ಲಿ ಈ ಕೆಲಸವು ಮುಗಿಯುವುದೆಂದು ಅಪೇಕ್ಷಿಸಲಾಗಿದೆ. ಬೇಸಿಗೆ ದಿನಗಳಲ್ಲಿ ಶಿವನಸಮುದ್ರ ಮತ್ತು ಶಿಂಷಾ ವಿದ್ಯುತ್ ಕೇಂದ್ರಗಳಿಗೆ ಕೃಷ್ಣಸಾಗರ ಜಲಾಶಯದ ಬದಲು ಕಪಿನಿ ನೀರನ್ನು ಒದಗಿಸಲು ಉದ್ದೇಶಪಡಲಾಗಿದೆ. ಈ ಜಲಾಶಯದಿಂದ ಒಟ್ಟು ೬೦ ಸಾವಿರ ಎಕರೆ ಜಮೀನಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಬಹುದೆಂದೂ ಅಂದಾಜಾಗಿದೆ. ಈ ಜಲಾಶಯದ ನಿರ್ಮಾಣದಿಂದ ಎರಡು ಹಳ್ಳಿಗಳೂ, ೬ ಸಾವಿರ ಎಕರೆ ಜಮೀನುಗಳೂ ಮುಳುಗಡೆಯಾಗುವುವು. ಈ ಯೋಜನೆಯನ್ನು ಭಾರತದ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ, ಹಣ ಸಹಾಯವನ್ನು ಕೊಡಬೇಕೆಂದು ಸಂಸ್ಥಾನದ ಸರ್ಕಾರದವರು ಕೇಂದ್ರ ಸರ್ಕಾರವನ್ನು ಪ್ರಾರ್ಥಿಸಿರುವರು

ಗಂಡನಿಂದ ಹೆಂಡತಿ ಮತ್ತು ವಿದ್ಯಾರ್ಥಿಯ ಕೊಲೆ

ಓರ್ವ ಜೂನಿಯರ್ ಇಂಟರ್ ತರಗತಿಯ ೨೧ ವರ್ಷದ ವಿದ್ಯಾರ್ಥಿ ಶ್ರೀ ಸೂರ್ಯ ಎಂಬುವನೊಡನೆ ತನ್ನ ಹೆಂಡತಿ ನಂಜಿ ಎಂಬುವಳು ಅಕ್ರಮಸಂಬಂಧ ಹೊಂದಿದ್ದುದನ್ನು ಕಳೆದ ಶನೀ ೩॥ ನೋಡಿದ ಚಿಕ್ಕಮಾದಯ್ಯ ಎಂಬುವನು ನಂಜನಗೂಡಿಗೆ ಸ್ವಲ್ಪ ದೂರವಿರುವ ಹೆಜ್ಜಿಗೆ ಹಳ್ಳಿಯ ಹೊಲದಲ್ಲಿ ಅವರಿಬ್ಬರನ್ನು ಕೊಲೆ ಮಾಡಿರುವನು. ನಂಜನಗೂಡು ಪೊಲೀಸರಿಗೆ ವರ್ತಮಾನ ಸುದ್ದಿಯೂ ಬಂದಿರುತ್ತದೆ. ವಿದ್ಯಾರ್ಥಿಯ ರುಂಡವನ್ನು ಛೇದಿಸಿದನೆಂದು ಹೇಳಲಾಗಿದೆ. ನಂಜಿಯು ಸ್ವಂತ ಸ್ಥಳ ಹೆಜ್ಜಿಗೆ ಹಳ್ಳಿಯಿಂದ ನಂಜನಗೂಡಿಗೆ ಬಂದಿದ್ದಳೆಂದೂ, ಆಗ ಈ ದುರಂತವು ನಡೆಯಿತೆಂದೂ ಗೊತ್ತಾಗಿದೆ. ಆಪಾದಿತರು ಮತ್ತು ಮೃತಪಟ್ಟವರು ಆದಿಕರ್ನಾಟಕರೆಂದು ಹೇಳಲಾಗಿದೆ.

ನಗರ ಕಾಂಗ್ರೆಸ್ ಸಮಿತಿ ನೂತನ ಅಧಿಕಾರಿ ವರ್ಗ

ಮೈಸೂರು ೬

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಸಭೆಯು ನೆನ್ನೆ ದಿನ ಸೇರಿ ಹೊಸ ಅಧಿಕಾರಿ ವರ್ಗದ ಚುನಾವಣೆಯನ್ನು ನಡೆಸಲಾಯಿತು. ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಬಿ ನಾರಾಯಣ ಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಟಿ ವೆಂಕಟರಮಣಯ್ಯ ಮತ್ತು ಕೆ ಎಸ್ ಸೂರ್ಯನಾರಾಯಣರಾಯರು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಎಂ ಆರ್ ಸಿ ಒಸಪ್ಪನವರು ಖಜಾಂಚಿಗಳಾಗಿಯೂ ಚುನಾಯಿತರಾದರು. ಆನೇಕಲ್ ತಾಲ್ಲೂಕಿನ ಕಾಂಗ್ರೆಸ್ ಮುಖಂಡರಾದ ಶ್ರೀ ದೇವರಕೊಂಡಪ್ಪನವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವು ಸಭೆಯಲ್ಲಿ ಅಂಗೀಕೃತವಾಯಿತು

ಹೊಂಗನೂರು ಗಲಭೆಯಲ್ಲಿ ೯ ಮಂದಿಗೆ ಜೀವಾವಧಿ ಶಿಕ್ಷೆ

ಎರಡು ವರ್ಷಗಳ ಹಿಂದೆ ಹೊಂಗನೂರಿನಲ್ಲಿ ಸವರ್ಣೀಯರ ಮತ್ತು ಆದಿಕರ್ನಾಟಕರ ಬಾಲಕರಿಬ್ಬರಿಗೆ ಆದ ಜಗಳದ ಪರಿಣಾಮವಾಗಿ ಎರಡು ಗುಂಪುಗಳಿಗೂ ಜಗಳ ಬೆಳೆದು, ಇಬ್ಬರ ಕೊಲೆಯಾದ ಸಂಬಂಧದಲ್ಲಿ ವಿಚಾರಣೆಗೆ ಗುರಿಯಾಗಿದ್ದ ರಂಗ ಲಕ್ಷ್ಮಣ, ಕಲ್ಯಾಣಿ, ಬಸವ, ಕರಿಬಸವ, ಗಂಗ, ಕಿಟ್ಟಯ್ಯ, ತಂಟಿದಾಸ ಮತ್ತು ಗಂಗ ಇವರುಗಳನ್ನು ನೆನ್ನೆ ಇಲ್ಲಿನ ಡಿ॥ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ತಿಮ್ಮರಾಯಶೆಟ್ಟರು ಜೀವಾವಧಿ ಶಿಕ್ಷೆಗೆ ಗುರಿಪಡಿಸಿದರು

ಮೈಸೂರು ಜಿಲ್ಲೆಯಲ್ಲಿ ಪ್ಲೇಗ್ ವಿರುದ್ಧದ ಕಾರ್ಯಾಚರಣೆ

ಮೈಸೂರು ಜಿಲ್ಲೆಯ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಪ್ಲೇಗು ಸೋಂಕನ್ನು ನಾಶಪಡಿಸಲು ಸಂಸ್ಥಾನದ ಆರೋಗ್ಯ ಇಲಾಖೆಯವರು ಕ್ರಮ ಕೈಗೊಂಡು. ಡಿ ಡಿ ಟಿ ದ್ರಾವಕವನ್ನು ಚಿಮ್ಮುವ ಕೆಲಸವನ್ನು ೧೬೦ ಕೇಂದ್ರಗಳಲ್ಲಿ ಪ್ರಾರಂಭಿಸಿರುತ್ತಾರೆ. ಈ ರೋಗವನ್ನು ಆರು ವಾರಗಳಲ್ಲಿ ನಿವಾರಿಸಬಹುದೆಂದು ಭಾವಿಸಲಾಗಿದೆ. ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಟಿ ನರಸೀಪುರಗಳಲ್ಲಿ ಈ ಸಂಬಂಧವಾದ ಕೇಂದ್ರಗಳ ಸ್ಥಾಪಿಸಲ್ಪಟ್ಟಿವೆ

ಪೋರ್ಚುಗಲ್ಲಿನ ಸ್ವಾಸ್ಥ್ಯಗಳಿಗೆ ಸ್ವಾತಂತ್ರ್ಯ

ಪೋರ್ಚುಗಲ್ಲಿಗೆ ಸೇರಿದ ಎಲ್ಲಾ ಸ್ವಾಸ್ಥ್ಯಗಳಿಗೂ ಸ್ವಾತಂತ್ರ್ಯವನ್ನೀಯುವ ಮಸೂದೆಯೊಂದನ್ನು, ಪೋರ್ಚುಗೀಸ್ ಪಾರ್ಲಿಮೆಂಟಿನಲ್ಲಿ ಬರುವ ಅಕ್ಟೋಬರ್ ತಿಂಗಳಲ್ಲಿ ತರಲಾಗುವುದೆಂದು ಗೊತ್ತಾಗಿದೆ

ಹೆಮ್ಮರಗಾಲದಲ್ಲಿ ದರೋಡೆಗಾಗಿ ದಸ್ತಗಿರಿ

ನಂಜನಗೂಡು ತಾಲ್ಲೂಕು ನೇರಳೆ ಗ್ರಾಮದ ಓರ್ವ ಜವಳಿ ವರ್ತಕರು ಜಾತ್ರೆಯಲ್ಲಿ ಮಾರಾಟಕ್ಕೆ ಇಟ್ಟುಕೊಂಡಿದ್ದ ಸೀರೆಗಳನ್ನು ೧॥ ತಿಂಗಳ ಹಿಂದೆ ಬಲಾತ್ಕಾರವಾಗಿ ಕಿತ್ತುಕೊಂಡು ಹೋದ ಸಂದರ್ಭದಲ್ಲಿ ಕಳೆದ ಶನಿವಾರ ತಾ॥ ರಾತ್ರಿ ಹೆಮ್ಮರಗಾಲದ ಒಂದು ಮನೆಯನ್ನು ಸಬ್‌ಇನ್ಸ್‌ಪೆಕ್ಟರ್ ಶ್ರೀ ಎಂ ಎಸ್ ಶ್ರೀನಿವಾಸಮೂರ್ತಿ ಮತ್ತು ಇತರ ಪೊಲೀಸರು ಸುತ್ತುಗಟ್ಟಿ, ಉಪ್ಪಲಿಗರ ಪುಟ್ಟ ಮಾದಶೆಟ್ಟಿ ಎಂಬುವನನ್ನು ದಸ್ತಗಿರಿ ಮಾಡಿರುವರೆಂದು ವರದಿಯಾಗಿದೆ

ಕೊಳಲು ಕದ್ದ ವಿದ್ಯಾರ್ಥಿಗಳ ಬಿಡುಗಡೆಗಾಗಿ ಪ್ರದರ್ಶನ

ಪಾಟ್ನಾದ ಬಳಿ ಮೊನ್ನೆ ನಡೆದ ಜಾತ್ರೆಯಲ್ಲಿ ಎರಡು ಅಂಗಡಿಗಳಿಂದ ಕೊಳಲು ಮತ್ತು ಇತರ ಸಾಮಾನುಗಳನ್ನು ಕಳುವು ಮಾಡಿ ದಸ್ತಗಿರಿಯಾಗಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯ ಪಡಿಸಿ, ಮೊನ್ನೆ ರಾತ್ರಿ ವಿದ್ಯಾರ್ಥಿಗಳು ಪೊಲೀಸು ಠಾಣೆ ಬಳಿ ಪ್ರದರ್ಶನ ನಡೆಸಲಾಗಿ, ಅವರಿಗೂ ಪೊಲೀಸರಿಗೂ ಘರ್ಷಣೆಯಾಯಿತೆಂದೂ, ೭ ಜನ ಪೊಲೀಸರಿಗೆ ಗಾಯಗಳಾದುವೆಂದೂ ವರದಿಯಾಗಿದೆ. ಪೊಲೀಸು ಸೂಪರಿಂಟೆಂಡೆಂಟರಿಗೂ ಪೆಟ್ಟು ಬಿದ್ದಿದೆ

ಶ್ರೀಮನ್ಮಹಾರಾಜರೊಡನೆ ಮುಖ್ಯ ಮಂತ್ರಿಗಳ ಭೇಟಿ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದು ಶ್ರೀಮನ್ಮಹಾರಾಜರವರನ್ನು ಅರಮನೆಯಲ್ಲಿ ಭೇಟಿ ಮಾಡಿದ್ದರು. ಈ ದಿನ ಮಂತ್ರಿಮಂಡಲದ ಸಭೆಯು ಲೇಕ್‌ವ್ಯೂ ಭವನದಲ್ಲಿ ನಡೆಯಿತು. ನಾಳೆಯ ವರೆಗೂ ಮಂತ್ರಿಗಳು ರಾಜಧಾನಿಯಲ್ಲಿರುವರು

ಬ್ರೆಡ್, ಮೊಟ್ಟೆ ಮತ್ತು ಹಾಲುಗಳಿಗೆ ಮಾರಾಟ ತೆರಿಗೆ

ಬೆಂಗಳೂರು ೬

ಬ್ರೆಡ್, ಮೊಟ್ಟೆ, ಕುರಿಮಾಂಸ, ಹಣ್ಣು ತರಕಾರಿ, ಹೂವು, ಮೊಸರು ಹಾಲು, ಮತ್ತು ವೀಳಯದೆಲೆಗಳ ಮೇಲೆ ಮಾರಾಟ ತೆರಿಗೆಯನ್ನು ಈ ರೀತಿ ವಿಧಿಸಲಾಗುವುದು: ೧೦ ಸಾವಿರ ರೂ ಯಿಂದ ೨೦ ಸಾವಿರದ ವರೆಗೆ ಮಾರಾಟ ಇದ್ದರೆ ವರ್ಷಕ್ಕೆ ೯೬ ರೂ, ೨೦ ಸಾವಿರದಿಂದ ೪೦ ಸಾವಿರದ ವರೆಗೆ, ವರ್ಷಕ್ಕೆ ೧೪೪ ರೂ, ೪೦ ಸಾವಿರ ಮತ್ತು ಅದಕ್ಕೆ ಹೆಚ್ಚಿಗೆ ಇದ್ದರೆ ರೂಪಾಯಿಗೆ ೩ ಕಾಸು ಸೌದೆ, ಇದ್ದಿಲು, ಬೀಡಿ ಕಟ್ಟುವ ಎಲೆ, ಹೊಗೆಸೊಪ್ಪು, ಇವುಗಳ ಮೇಲಿನ ಮಾರಾಟದ ತೆರಿಗೆಯ ವಿನಾಯಿತಿಯನ್ನು ರದ್ದುಗೊಳಿಸಲಾಗಿದೆ. ಒಂದಕ್ಕಿಂತ ಹೆಚ್ಚು ಪಾಯಿಂಟ್‌ನಲ್ಲಿ ಈ ತೆರಿಗೆ ವಿಧಿಸಲ್ಪಡುವುದು

ವಿದ್ಯಾಭ್ಯಾಸದ ಸುಧಾರಣೆಯಿಂದ ದೇಶೋನ್ನತಿಸಾಧನೆ

ಹೈಸ್ಕೂಲು ಕಟ್ಟಡದ ಪ್ರವೇಶೋತ್ಸವ ಸಮಾರಂಭದಲ್ಲಿ ಪ್ರಭುಗಳ ಭಾಷಣ

ಮೈಸೂರು ೫

ಶ್ರೀಮನ್ಮಹಾರಾಜರು ನೆನ್ನೆ ಹುಣಸೂರು ಮತ್ತು ಪಿರಿಯಾಪಟ್ಟಣಗಳಿಗೆ ತೆರಳಿ ಅಲ್ಲಿ ಹೈಸ್ಕೂಲು ಕಟ್ಟಡಗಳ ಪ್ರವೇಶೋತ್ಸವಗಳನ್ನು ನೆರವೇರಿಸಿದರು

ಹುಣಸೂರಿನಲ್ಲಿ ಪೌರ ಸಭೆಯವರು ಶ್ರೀಮನ್ಮಹಾರಾಜರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು ಶ್ರೀಮನ್ಮಹಾರಾಜರು ಭಾಷಣ ಮಾಡಿ, ಹುಣಸೂರು ದಿನೇದಿನೇ ಅಭಿವೃದ್ಧಿಯಾಗುತ್ತಿರುವುದನ್ನು ಕಂಡು ಹರ್ಷಿಸಿ, ಅಲ್ಲಿನ ಕೈಗಾರಿಕೆಗಳು ಇನ್ನೂ ಹೆಚ್ಚು ಯಶಸ್ವಿಯಾಗಲು ಅವಕಾಶವಿರುವುದಾಗಿ ತಿಳಿಸಿದರು ಅಲ್ಲಿನ ಗಾಡಿ ಕೈಗಾರಿಕೆಯಿಂದ ಆ ಊರನ್ನು ಗಾಡಿ ಪಟ್ಟಣವೆಂದು ಕರೆಯುವಷ್ಟು ಮಟ್ಟಿಗೆ ಅದು ಅಭಿವೃದ್ಧಿಯಾದುದಕ್ಕಾಗಿ ಸಂತೋಷಪಟ್ಟರು ಪೌರ ಸಭಾ ಹೈಸ್ಕೂಲಿನ ಕಟ್ಟಡಕ್ಕಾಗಿ ೬೦ ಸಾವಿರ ರೂ.ಗಳನ್ನು ಪೌರಸಭೆಯವರು, ದಾನಿಗಳು ಮತ್ತು ಸರ್ಕಾರದವರು ಒದಗಿಸಿರುವುದಕ್ಕಾಗಿ ಪ್ರಭುಗಳು ಅಭಿನಂದಿಸಿದರು ದೇಶದಲ್ಲಿ ದಾನಿಗಳ ಸಂಖ್ಯೆಯು ಹೆಚ್ಚಿ, ಸಮಾಜ ಸೇವಾ ಕಾರ್ಯವು ನಡೆಯಬೇಕೆಂದು ಅವರು ಹೇಳಿ ಪ್ರಜಾವರ್ಗದವರೇ ಮುಂದೆ ಬಂದು ಈ ರೀತಿಯ ನಾನಾ ಸೌಕರ್ಯಗಳನ್ನು ಕಲ್ಪಿಸಿದಷ್ಟೂ ಅವರ ಸ್ವಾವಲಂಬನವು ಹೆಚ್ಚುವುದೆಂದು ತಿಳಿಸಿದರು ವಿದ್ಯಾ ದಾನವು ಶ್ರೇಷ್ಠ ದಾನಗಳ ಗುಂಪಿಗೆ ಸೇರಿರುವುದಾಗಿಯೂ, ಅಜ್ಞಾನಾಂಧಕಾರದಲ್ಲಿ ಜನರು ತತ್ತರಿಸುವುದನ್ನು ತಪ್ಪಿಸಿ ಜ್ಞಾನ ಜ್ಯೋತಿಯ ತನಿಬೆಳಕನ್ನೊದಗಿಸುವುದು ಶ್ಲಾಘ್ಯ ಕಾರ್ಯವೆಂದೂ ಅವರು ಅಭಿಪ್ರಾಯಪಟ್ಟರು

ಪಿರಿಯಾಪಟ್ಟಣದಲ್ಲಿ ಪ್ರಭುಗಳಿಗೆ ಮೈಸೂರು ಜಿಲ್ಲಾ ಬೋರ್ಡಿನ ಪರವಾಗಿ ಶ್ರೀ ಹೆಚ್ ಎಂ ಚನ್ನಬಸಪ್ಪನವರೂ, ಧರ್ಮಪ್ರವರ್ತ ಬೆಂಗಳೂರು ಸುಬ್ಬಣ್ಣನವರೂ ಮತ್ತು ಪೌರಸಭೆಯವರೂ ಬಿನ್ನವತ್ತಳೆಗಳನ್ನು ಅರ್ಪಿಸಿದರು ಶ್ರೀಮನ್ಮಹಾರಾಜರು ಭಾಷಣ ಮಾಡಿ, ಸಂಸ್ಥಾನದಲ್ಲಿ ವಿದ್ಯಾವಂತರ ಸಂಖ್ಯೆಯು ಬೇಕಾದಷ್ಟಾಗಿ ಇನ್ನೂ ಹೆಚ್ಚಿಲ್ಲವೆಂದೂ ಆ ಸಂಖ್ಯೆಯು ಹೆಚ್ಚಿದಷ್ಟೂ ಈ ನ್ಯೂನತೆಯು ಪರಿಹಾರವಾಗುವುದೆಂದೂ ತಿಳಿಸಿದರು. ವಿದ್ಯಾ ಸಂಸ್ಥೆಗಳು ಹೆಚ್ಚುವುದರ ಜೊತೆಗೆ ಅವು ಸಮರ್ಪಕವಾಗಿ ನಡೆಯಬೇಕಾದುದು ಅಗತ್ಯವೆಂದೂ, ಈಗಿನ ವಿದ್ಯಾಭ್ಯಾಸ ಕ್ರಮವು ಸಮರ್ಪಕವಾಗಿಲ್ಲವೆಂದೂ ಹೇಳಿದರು, ಈ ಬಗ್ಗೆ ಸುಧಾರಣೆಗಳನ್ನು ತರಲು ಸರ್ಕಾರದವರು ಯೋಚಿಸಿ ವಿಧಾನ ಸಭೆಗಳ ಸದಸ್ಯರುಗಳ ಸಲಹೆಗಳನ್ನು ಪಡೆದಿರುವುದಲ್ಲದೆ, ಡಾ|| ಸರ್ವಪಲ್ಲಿ ರಾಧಾಕೃಷ್ಣನವರ ಸಲಹೆಯನ್ನು ಪಡೆಯಲು ಯೋಚಿಸುತ್ತಿರುವರೆಂದೂ ತಿಳಿಸಿದರು. ಯಥಾಕಾಲದಲ್ಲಿ ಉತ್ತಮ ಸುಧಾರಣೆಗಳು ಆಚರಣೆಗೆ ಬಂದು, ದೇಶೋನ್ನತಿ ಸಾಧನೆಗೆ ಸಹಾಯವಾಗಲೆಂದು ಅವರು ಹಾರೈಸಿದರು.

ಸಚಿವರಿಂದ ಕೃಷ್ಣರಾಜೇಂದ್ರ ಆಸ್ಪತ್ರೆಯ ಪರಿಶೀಲನೆ

ಮೈಸೂರು ೬

ಸಂಸ್ಥಾನದ ಆರೋಗ್ಯ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಮೊನ್ನೆ ದಿನ ಇಲ್ಲಿನ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಭೇಟಿಯಿತ್ತು ಎಲ್ಲ ವಾರ್ಡುಗಳನ್ನೂ ಪರಿಶೀಲಿಸಿದರು ಹಲವು ರೋಗಿಗಳನ್ನು ನೆಲದ ಮೇಲೆ ಹಾಸಿಗೆ ಹಾಸಿ ಮಲಗಿಸಿರುವುದನ್ನು ಸಚಿವರು ಕಂಡು ಆ ಕ್ರಮವನ್ನು ತಪ್ಪಿಸಬೇಕೆಂದು ಸೂಚಿಸಿದರು ಸಾಧ್ಯವಾದ ಮಟ್ಟಿಗೂ ಮಂಚಗಳು ಇರುವಷ್ಟು ಮಟ್ಟಿಗೆ ಮಾತ್ರ ರೋಗಿಗಳನ್ನು ಸೇರಿಸಿಕೊಳ್ಳಬೇಕೆಂದು ಅವರು ತಿಳಿಸಿದರು ಆಸ್ಪತ್ರೆಯಲ್ಲಿ ಒದಗಿಸಲಾಗುತ್ತಿರುವ ಆಹಾರದ ಬಗ್ಗೆ ಹಲವು ರೋಗಿಗಳು ಪುಕಾರು ಮಾಡಲಾಗಿ ಸಚಿವರು ಆಸ್ಪತ್ರೆ ಅಡಿಗೆ ಮನೆಯನ್ನು ಪರಿಶೀಲಿಸಿ ಅದರ ಅವ್ಯವಸ್ಥೆ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿ ಉತ್ತಮವಾದ ಆಹಾರ ಕೊಡುವ ಬಗ್ಗೆ ಒತ್ತಾಯ ಪೂರ್ವಕವಾಗಿ ಸೂಚನೆಯಿತ್ತರು

ಕೆ ಸಿ. ಲಿಂಗೇಗೌಡರ ನಿಧನ

ಮೈಸೂರು ಜಿಲ್ಲಾ ನ್ಯಾಯಾಧೀಶರಾಗಿದ್ದ ಶ್ರೀ ಕೆ ಸಿ ಲಿಂಗಯ್ಯಗೌಡರು ನೆನ್ನೆ ಬೆಳಿಗ್ಗೆ ಹೃದಯ ಕ್ರಿಯೆ ನಿಂತು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಪಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ ದಿವಂಗತರ ಗೌರವಾರ್ಥವಾಗಿ ನೆನ್ನೆ ರಾಜಧಾನಿಯ ನ್ಯಾಯಾಲಯಗಳಿಗೆ ರಜಾ ಕೊಡಲಾಗಿತ್ತು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಹಾರೈಸುತ್ತೇವೆ. ನೆನ್ನೆ ಶ್ರೀ ಹೆಚ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ವಕೀಲರುಗಳ ಸಂಘದ ವಿಶೇಷ ಸಭೆಯು ನಡೆದು ಅವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು.

ಯಳಂದೂರು ವಿದ್ಯಾನಿಧಿ

ನರಸಿಂಗರಾವ್ ಪೂರ್ಣಯ್ಯನವರ ಸ್ಮಾರಕಾರ್ಥವಾಗಿ ಸ್ಥಾಪಿತವಾಗಿರುವ ಯಳಂದೂರು ವಿದ್ಯಾನಿಧಿಯ ಕಳೆದ ಸಾಲಿನ ವರದಿಯು ನಮ್ಮ ಹಸ್ತಗತವಾಗಿದೆ ೧೯೨೦ ರಲ್ಲಿ ಸ್ಥಾಪಿತವಾದ ನಿಧಿಗೆ ಒಟ್ಟು ೩೩,೮೨೫ ರೂ ಶೇಖರಣೆಯಾಗಿ ೩೨,೭೩೮ ರೂ. ವೆಚ್ಚವಾಗಿದೆಂದೂ, ೫೭೦ ಮಂದಿ ವಿದ್ಯಾರ್ಥಿಗಳಿಗೆ ೩೦,೫೯೯ ರೂ. ಹಂಚಲಾಯಿತೆಂದೂ ತಿಳಿಸಲಾಗಿದೆ.

ನ್ಯಾಯಾಸ್ಥಾನದಲ್ಲಿ ಹಗಲು ಕಳ್ಳತನ

ಅಹಮದಾಬಾದಿನ ಬಳಿ ಮೆಹಸಾನಾ ಎಂಬಲ್ಲಿನ ನಗರದ ಪ್ರಥಮ ನ್ಯಾಯಾಧೀಶರ ಕೋರ್ಟಿಗೆ ಭಾನುವಾರ ಮಧ್ಯಾಹ್ನ ನಾಲ್ಕು ಮಂದಿ ಡಕಾಯಿತರು ನುಗ್ಗಿ, ಕಾವಲುಗಾರನ ಬಾಯಿಗೆ ಬಟ್ಟೆ ತುರುಕಿ, ಮೂರು ಬಂದೂಕಗಳನ್ನು ಅಪಹರಿಸಿಕೊಂಡುಹೋದರೆಂದು ವರದಿಯಾಗಿದೆ

ಹೈದ್ರಾಬಾದ್ ರಾಜತ್ವದ ರದ್ದಿಗೆ ರಮಾನಂದರ ಬೇಡಿಕೆ

ಹೈದರಾಬಾದಿನ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರವರು ದೆಹಲಿಗೆ ತೆರಳಿದ್ದು, ಮೊನ್ನೆ ಸ್ವದೇಶಕ್ಕೆ ಹಿಂದಿರುಗಿ ಒಂದು ಹೇಳಿಕೆಯಿತ್ತು ಹೈದರಾಬಾದಿನಲ್ಲಿ ರಾಜತ್ವವನ್ನು ರದ್ದುಗೊಳಿಸಬೇಕೆಂಬ ತತ್ವವನ್ನು ತಾವು ಒಪ್ಪುವುದಾಗಿ ತಿಳಿಸಿರುವರು

ಹರಿಕಥೆ

ದೇವರಾಜ ಮಾರ್ಕೆಟ್ ಹಿಂಭಾಗದ ಆನೆ ಸಾರೋಟು ಬೀದಿ ಗಾಡಿ ಚೌಕದ ಬಳಿ ಶ್ರೀ ಪಾಪಣ್ಣನವರ ಕಡ್ಲೆ ಭಟ್ಟಿಯಲ್ಲಿ ನಾಳೆಯಿಂದ ೧೫ ದಿನಗಳ ಕಾಲ ಪ್ರತಿ ದಿನ ಸಂಜೆ ೭ ಘಂಟೆಗೆ ಶ್ರೀ ಆರ್. ಎಸ್ ಶೇಷಗಿರಿ ದಾಸರಿಂದ ಭಕ್ತಿ ರಸಭರಿತವಾದ ಕಥೆಗಳು ನಡೆಸಲ್ಪಡುತ್ತವೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮುಖವೀಣಾ ಎ. ವಿ. ನಾರಾಯಣಪ್ಪ ಮಧ್ಯಾಹ್ನ ೨ ವೇಣು ವಾದನ, ೩ ಟಿ ಶ್ರೀನಿವಾಸಮೂರ್ತಿ. ಸಂಜೆ ೫ ೩೦ ಸುತ್ತು, ೬ ೪೦ ಸಂಗೀತ, ಎಂ. ದಿಲಲಿತ, ೬ ೧೦ ಕನ್ನಡ ಗೀತೆಗಳು. ೭ ಚಿತ್ರಲೋಕ, ೭.೨೦ ವೇಣು ವಾದನ, ೩ ಟಿ ಶ್ರೀನಿವಾಸಮೂರ್ತಿ, ೮ ೧೫ ಭಾರತ ವಾಚನ ಕೆ. ಎಸ್ ವೆಂಕಟೇಶಯ್ಯ, ೯ ೧೫ ರಸನಿಮಿಷ, ೯.೪೦ ರಾಗಲೋಕ

SRI GAYATHRI

TALKIES

Daily 2 Shows

From 6-8-52 :: For 2 Days

M. G. Ms

THE LIGHT TOUCH

NEXT CHANGE

EXCUSE MY DUST

— MORNING SHOWS —

On 9th and 10th

CINDERELLA

ಕಲಾಮಂದಿರದ ವಂದನೆ

ಮೈಸೂರು ನಗರದಲ್ಲಿ ಕಲಾ ಮಂದಿರದ ಸಹಾಯಾರ್ಥವಾಗಿ ಶನಿವಾರ, ಭಾನುವಾರಗಳಲ್ಲಿ ಏರ್ಪಡಿಸಿದ್ದ ಮನರಂಜನೆಯ ಕಾರ್ಯಕ್ರಮಗಳು ಯಶಸ್ವಿಯಾಗಲು ರಾಜಧಾನಿಯ ಅನೇಕ ಮಿತ್ರರೂ, ಕಲಾಭಿಮಾನಿಗಳೂ, ಪತ್ರಿಕಾ ಸಂಪಾದಕರೂ, ಅಪಾರ ಸಹಾಯ ಮಾಡಿದ್ದಾರೆ. ಬೆಂಗಳೂರಿನ ಚಿತ್ರಕಲಾವಿದರು ನಾಟಕ, ನಾಟ್ಯ ಅಭಿನಯದ ವ್ಯವಸ್ಥೆ ಮಾಡಿ ಉಪಕಾರ ಮಾಡಿದ್ದಾರೆ. ಇವರೆಲ್ಲರಿಗೂ ಕಲಾಮಂದಿರದ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸಲು ಆಶಿಸುವೆನು ಪ್ರದರ್ಶನದ ಆರ್ಥಿಕ ಪರಿಸ್ಥಿತಿ ಬಗ್ಗೆ ಸಧ್ಯದಲ್ಲಿ ಬಿನ್ನವಿಸುವೆನು ಈ ನಮ್ಮ ಉದ್ಯಮದಲ್ಲಿ ಸಹಕರಿಸಿದವರೆಲ್ಲರಿಗೂ ವಂದನೆಗಳು

—ಎ ಎಸ್ ಸುಬ್ಬರಾವ್.

○ ಕೇಂದ್ರ ಹಿರಿಯ ಶಾಸನ ಸಭೆಗೆ ನಡೆದ ಉಪ ಚುನಾವಣೆಯಲ್ಲಿ ಕರ್ನಾಟಕದಿಂದ ಡಾ|| ಎನ್ ಎಸ್. ಹರ್ಡೀಕರರೂ, ಬೊಂಬಾಯಿಯಿಂದ ಟಿ. ಟಿ. ಲೂವಾರವರೂ ಆರಿಸಲ್ಪಟ್ಟಿರುವರು.

ಶ್ರೀ ರಾಘವೇಂದ್ರಸ್ವಾಮಿಗಳವರ ಆರಾಧನೆ

ರಾಜಧಾನಿಯ ಸುಬ್ಬರಾಯನ ಕೆರೆ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಇಂದಿನಿಂದ ನಾಲ್ಕು ದಿವಸಗಳವರೆಗೆ ನಡೆಯುವ ಶ್ರೀ ಗುರುಗಳ ಆರಾಧನೆ ಸಂಬಂಧವಾಗಿ ನಾಳೆ ರಾತ್ರಿ ೮|| ಗಂಟೆಗೆ ಸಂ|| ವಿ|| ಎ. ಸುಬ್ಬರಾಯರ ಗಾಯನವೂ ವಿ|| ಬೆಂಗಳೂರು ಅರುಣಾಚಲಪ್ಪನವರ ಹಾರ್ಮೋನಿಯಂ ಮತ್ತಿತರ ಸಲಕರಣೆಗಳೊಡನೆಯೂ, ನಾಳಿದ್ದು ಸಂ|| ರ|| ಟಿ ಚೌಡಯ್ಯನವರು ಮತ್ತು ಪಾರ್ಟಿಯವರಿಂದ ಪಿಟೀಲುವಾದನವೂ ನಡೆಯುವುವು.

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

‡ ಅತ್ಯುತ್ತಮವಾದ ಒಗೆಯುವ ಸಾಬೂನು

‡ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು.

‡ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.

‡ ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

Edited, Printed and Published by A R Nagarajan, at Sadhvi Press, D. Subbiah Road, Mysore.

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೭-೮-೧೯೫೨ [ಸಂಚಿಕೆ ೧೦

ಕಾಂಗ್ರೆಸ್ ಅಧ್ಯಕ್ಷತೆಗೆ ! ಶ್ರೀ ಪುನಃ ನೆಹರೂರವರು

ರಾಜಪ್ರಮುಖರ ಹುದ್ದೆ ರದ್ದಿಗಾಗಿ ಸಮ್ಮೇಳನ

"ಬಿ" ವಿಭಾಗದ ಸಂಸ್ಥಾನಗಳ ರಾಜಪ್ರಮುಖರ ಹುದ್ದೆಯನ್ನೂ, ರಾಜಧನವನ್ನೂ ರದ್ದುಗೊಳಿಸುವ ಸಮಸ್ಯೆ ಬಗ್ಗೆ ಚರ್ಚಿಸಲು ಆಯಾ ಸಂಸ್ಥಾನಗಳ ಪ್ರತಿನಿಧಿಗಳ ಸಮ್ಮೇಳನವನ್ನು ಕರೆಯಲು ಪೂರ್ವ ಪಂಜಾಬು ಪ್ರದೇಶದ ಕಾಂಗ್ರೆಸ್ ಸಮಿತಿಯು ನಿರ್ಧರಿಸಿರುತ್ತದೆ. ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಪಾರ್ಲಿಮೆಂಟಿನ "ಬಿ" ಸಂಸ್ಥಾನಗಳ ಪ್ರತಿನಿಧಿಗಳ ಸಭೆಯೊಂದು ನಡೆದು, ಕಾಶ್ಮೀರದಂತೆಯೇ ಇತರ ಕಡೆಗಳಲ್ಲೆಲ್ಲಾ ಆನುವಂಶಿಕ ರಾಜಪ್ರಮುಖತ್ವವು ರದ್ದಾಗಿ, ಅಲ್ಲಿ ಚುನಾಯಿತ ಅಧಿಪತಿಗಳಿರಬೇಕೆಂದು ನಿರ್ಣಯ ಮಾಡಲಾಗಿದೆ.

ಫರೂಕರ ಆಸ್ತಿ ಸರ್ಕಾರದ ವಶಕ್ಕೆ

ಈಜಿಪ್ಟಿನ ಮಾಜಿ ದೊರೆ ಫರೂಕರ ವಿಶಿಷ್ಟ ಆಸ್ತಿಗಳನ್ನೂ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ಇವುಗಳ ವಿವರಗಳು ತಿಳಿಯುವವರೆಗೂ ಅದರ ವಿಲೇವಾರಿ ಮಾಡಲು ಫರೂಕರಿಗೆ ಅವಕಾಶವಿರುವುದಿಲ್ಲ. ಈ ಬಗ್ಗೆ ಅವರೊಡನೆ ವ್ಯವಹರಿಸುತ್ತಿದ್ದವರೆಲ್ಲರೂ ಸರ್ಕಾರದ ಮುಂದೆ ಡಿಕ್ಲರೇಷನ್ ಕೊಡಬೇಕೆಂದೂ, ತಪ್ಪಿದರೆ ಆರು ತಿಂಗಳ ಜೈಲು ವಾಸ ಮತ್ತು ನೂರು ಪೌಂಡು ಜುಲ್ಮಾನೆಗೆ ಗುರಿಯಾಗಬೇಕೆಂದೂ ಎಚ್ಚರಿಸಲಾಗಿದೆ ಅವರಿಗೆ ಸಾಲ ಕೊಟ್ಟವರೂ ಸಹ ಸರ್ಕಾರಕ್ಕೆ ಅರ್ಜಿ ಹಾಕಿಕೊಳ್ಳಬೇಕಾಗಿದೆ

ವರ್ಷಕ್ಕೆ ೨೪೦ ದಿನಗಳ ಅಧಿವೇಶನ

ಪಾರ್ಲಿಮೆಂಟಿನ ಕೆಳ ಸಭೆಯು ವರುಷಕ್ಕೆ ೨೪೦ ದಿನಗಳೂ, ಮೇಲಿನ ಸಭೆಯು ೧೨೦ ದಿನಗಳೂ ಸೇರುವುವೆಂದು ಭಾವಿಸಲಾಗಿದೆ

ವಾರ್ಷಿಕೋತ್ಸವ

ನಂಜನಗೂಡಿನಲ್ಲಿ ಶ್ರೀಶಂಕರೇಶ್ವರಾದ್ವೈತ ಸಭೆಯ ವಾರ್ಷಿಕೋತ್ಸವವು ಇಂದಿನಿಂದ ೧೧ ನೇ ತಾ|| ನ ವರೆಗೂ ನಡೆಯುವುದು. ಪ್ರತಿದಿನ ಸಂಜೆ ೬ ಗಂಟೆಗೆ ಬೆಂಗಳೂರಿನ ನ್ಯಾಯವೇದಾಂತ ವಿದ್ವಾನ್ ವೇ|| ಬ್ರ|| ಶ್ರೀ|| ಎಂ ಲಕ್ಷ್ಮೀನರಸಿಂಹ ಶಾಸ್ತ್ರಿಗಳವರು ಶ್ರೀಮದ್ರಾಮಾಯಣ ಮತ್ತು ಅದರ ವೈಶಿಷ್ಟ್ಯ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಸೋಮವಾರ ಬೆಳಿಗ್ಗೆ ಶ್ರೀ ಶ್ರೀಶಂಕರೇಶ್ವರ ಸ್ವಾಮಿಯವರ ಮಂಟಪೋತ್ಸವವು ನಡೆಯುವುದು

ಶ್ರೀಮನ್ಮಹಾರಾಜರವರ ಪ್ರಯಾಣ

ದಕ್ಷಿಣ ಭಾರತದ ತೀರ್ಥ ಯಾತ್ರೆಗಾಗಿ ಶ್ರೀಮನ್ಮಹಾರಾಜರು ಇಂದು ಸಂಜೆ ಮಹಾರಾಣಿಯವರು, ಯುವರಾಣಿಯವರು ಇಬ್ಬರು ರಾಜಕುಮಾರಿಯರು ಮತ್ತು ಸಾನಂದ್ ಯುವರಾಣಿಯವರೊಡನೆ ತೆರಳುವರು. ಈ ರಾತ್ರಿ ಅವರು ಬೆಂಗಳೂರಿನಿಂದ ತಿರುಪತಿಗೆ ಹೋಗುವರು. ಅವರು ೧೮ ನೇ ತಾ|| ಮದ್ರಾಸಿಗೆ ಹಿಂತಿರುಗಿ ಮಾರನೇ ದಿನ ಬೆಂಗಳೂರಿಗೆ ಬರುವರು

ಮಾರಾಟ ತೆರಿಗೆ ವಿರುದ್ಧ ಭಾರಿ ಹರತಾಳ

ವಿವಿಧ ಘಟ್ಟಗಳಲ್ಲಿ ಮಾರಾಟ ತೆರಿಗೆ ವಿಧಿಸುವುದನ್ನು ವಿರೋಧಿಸುವ ಸಲುವಾಗಿ ನೆನ್ನೆ ಬೊಂಬಾಯಿಯಲ್ಲಿ ಎರಡನೇ ಬಾರಿ ಪ್ರಚಂಡ ಹರತಾಳವು ನಡೆದು, ೩೦ ಸಾವಿರ ಅಂಗಡಿಗಳುಳ್ಳ ಪ್ರಮುಖ ಪೇಟೆಗಳೆಲ್ಲವೂ ಬಂದಾಗಿದ್ದುವು ೩ ಸಾವಿರ ಟ್ಯಾಕ್ಸಿಗಳವರೂ ಸಹ ಈ ಹರತಾಳದಲ್ಲಿ ಭಾಗವಹಿಸಿದ್ದರು ರೈಲು ಬಸ್ಸುಗಳಲ್ಲಿ ಬಂದ ಪ್ರಯಾಣಿಕರಿಗೆ ವಾಹನಗಳು ದೊರೆಯದೆ ತುಂಬಾ ಕಷ್ಟವಾಯಿತು ಹೋಟೇಲುಗಳು ಬಂದಾಗಿದ್ದುವು ಅಹಮದಾಬಾದು, ಸೂರತ್, ಸೋಲಾಪುರ ಮುಂತಾದ ಕಡೆಗಳಲ್ಲೂ ನೆನ್ನೆ ಹರತಾಳಗಳು ಆದುವು

ಪ್ರಾಂತಗಳ ಸಾಲ ಭರ್ತಿ

ಮದ್ರಾಸು ಸರ್ಕಾರದ ೫ ಕೋಟಿ ರೂ ಸಾಲವು ಭರ್ತಿಯಾಗಿರುತ್ತದೆ ಮುಖ್ಯ ಮಂತ್ರಿ ರಾಜಾಜಿಯವರು ಇದಕ್ಕಾಗಿ ಪ್ರಜೆಗಳನ್ನು ಅಭಿನಂದಿಸಿರುತ್ತಾರೆ. ಅವರೂ, ಅಲ್ಲಿನ ಗೌರ್ನರರೂ ತಲಾ ೧೦ ಸಾವಿರ ರೂ. ಸಾಲವನ್ನು ಕೊಟ್ಟಿರುವರು. ಬಂಗಾಳಾ ಸರ್ಕಾರವೆತ್ತಿದ ೩ ಕೋಟಿ ರೂ. ಸಾಲವೂ ಭರ್ತಿಯಾಗಿದೆ. ಬೊಂಬಾಯಿಯ ೩|| ಕೋಟಿ ರೂ ಸಾಲವೂ ಭರ್ತಿಯಾಗುವುದರಲ್ಲಿದೆ.

ಕೊರಿಯಾ ಚಿನ್ನದ ಗಣಿ ಮೇಲೆ ಬಾಂಬು ಧಾಳಿ

ಉತ್ತರ ಕೊರಿಯದ ಒಂದು ಚಿನ್ನದ ಗಣಿ ಮತ್ತು ಅದುರು ಪ್ರೊಸೆಸಿಂಗ್ ಯಂತ್ರಾಗಾರದ ಮೇಲೆ ವಿಶ್ವ ಸಂಸ್ಥೆ ವಿಮಾನಗಳು ಮೊನ್ನೆ ಬಾಂಬು ಹಾಕಿ ಧ್ವಂಸ ಮಾಡಿದುವು

ಗಂಗೆಯಲ್ಲಿ ದೋಣಿ ಮಗುಚಿ ೨೫ ಜನರ ಮರಣ

ಐವತ್ತು ಜನರಿದ್ದ ದೋಣಿಯೊಂದು ಮೊನ್ನೆ ಕಾಶಿಯ ಬಳಿ ಗಂಗೆಯಲ್ಲಿ ಮಗುಚಿಕೊಂಡಿತೆಂದೂ, ಆರು ಜನರ ಮೃತ ಶರೀರಗಳು ದೊರೆತುವೆಂದೂ, ೨೫ ಜನರನ್ನು ರಕ್ಷಿಸಲಾಯಿತೆಂದೂ, ಉಳಿದವರ ಪತ್ತೆಯಿಲ್ಲವೆಂದೂ ಹೇಳಲಾಗಿದೆ

ಸುಭಾಷ್ ಬೋಸರು ಬದುಕಿರುವರೆಂದು ಹೇಳಿಕೆ

ಸುಭಾಷ್ ಚಂದ್ರ ಬೋಸರು ವಿಮಾನಾಪಘಾತದಲ್ಲಿ ಮೃತಪಟ್ಟರೆಂಬ ವದಂತಿಯು ನಿಜವಲ್ಲವೆಂದೂ, ಅವರು ಈಗ ರಷ್ಯದ ಸ್ವಾಧೀನದಲ್ಲಿರುವ ಮಂಚೂರಿಯಾದಲ್ಲಿರುವರೆಂದೂ ಪಶ್ಚಿಮ ಬಂಗಾಳದ ಶಾಸನ ಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರಾದ ಸುಧೀರ್ ಚಂದ್ರ ಚೌಧುರಿಯವರು ತಿಳಿಸಿರುವರು ನೇತಾಜಿ ಬೋಸರ ಬಗ್ಗೆ ನಿಖರ ವರ್ತಮಾನವನ್ನು ತರಿಸುವಂತೆ ಕೇಂದ್ರ ಸರ್ಕಾರವನ್ನು ಕೋರಬೇಕೆಂಬ ನಿರ್ಣಯವನ್ನು ಸಭೆಯು ಒಮ್ಮತದಿಂದ ಅಂಗೀಕರಿಸಿರುತ್ತದೆ

ಬೊಂಬಾಯಿಯಲ್ಲಿ ಬಹು ಕಡೆ ಮಾರಾಟ ತೆರಿಗೆ ಶಾಸನ

ಪೂನಾದಲ್ಲಿ ಸೇರಿರುವ ಬೊಂಬಾಯಿ ಶಾಸನ ಸಭೆಯು ನೆನ್ನೆ ಬಹು ಕಡೆ ಮಾರಾಟ ತೆರಿಗೆಯನ್ನು ವಿಧಿಸಬೇಕೆಂಬ ಮಸೂದೆಯನ್ನು ಅಂಗೀಕರಿಸಿತು.

ರೈಲಿಗೆ ಕಲ್ಲು ಹೊಡೆದ ಬಾಲಕರ ಮೇಲೆ ಮೊಕದ್ದಮೆ

ಮದ್ದೂರಿನಿಂದ ಮೈಸೂರಿಗೆ ನೆನ್ನೆ ಬರುತ್ತಿದ್ದ ಷಟಲ್ ರೈಲಿನಲ್ಲಿ ಕುಳಿತಿದ್ದ ಪ್ರಯಾಣಿಕರ ಮೇಲೆ ಫ್ರೆಂಚ್‌ರಾಕ್ಸ್ ಬಳಿ ವೆಂಕಟ, ಸುಲೇಮಾನ್, ರಂಗಸ್ವಾಮಿ ಮುಂತಾದ ಹನ್ನೊಂದು ಮಂದಿ ಬಾಲಕರು ಕಲ್ಲು ಹೊಡೆದು ಅವರುಗಳಿಗೆ ತೊಂದರೆ ಮಾಡಿದರೆಂದು ಅವರನ್ನು ರೈಲ್ವೆ ಪೋಲೀಸರು ಬಂಧಿಸಿ, ಅವರ ಮೇಲೆ ರೈಲ್ವೆ ಶಾಸನದ ೧೨೭ ನೇ ನಿಬಂಧನೆ ಪ್ರಕಾರ ಶ್ರೀರಂಗಪಟ್ಟಣದ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಿರುವರು

ಅಮೆರಿಕಕ್ಕೆ ಮೈಸೂರು ಅಧಿಕಾರಿಗಳ ಪ್ರಯಾಣ

ಮೈಸೂರು ಸರ್ಕಾರದ ವ್ಯವಸಾಯ ಇಲಾಖೆಯ ಅಡಿಷನಲ್ ಡೈರೆಕ್ಟರ್ ಮತ್ತು ವಿಶ್ವೇಶ್ವರಯ್ಯ ನಾಲಾ ಅಭಿವೃದ್ಧಿ ಯೋಜನೆ ಮೇಲ್ವಿಚಾರಕರೂ ಆದ ಶ್ರೀ ಬಿ ಟಿ ನಾರಾಯಣ್‌ರವರು ಇದೇ ೧೫ ನೇ ತಾ|| ದೆಹಲಿಗೆ ಹೋಗಿ ಅಲ್ಲಿಂದ ಅಮೆರಿಕಕ್ಕೆ ಭಾರತೀಯ ನಿಯೋಗದ ಸದಸ್ಯರಾಗಿ ತೆರಳುವರು ಭಾರತೀಯ ನಿಯೋಗಕ್ಕೆ ಫೋರ್ಡ್ ಸಂಸ್ಥೆಯ ಆಹ್ವಾನವಿತ್ತು ಅಲ್ಲಿಗೆ ಭೇಟಿ ಕೊಡಬೇಕೆಂದು ಸೂಚಿಸಿದ್ದಿತು.

ನೆಹರೂ ಪುನಃ ಕಾಂಗ್ರೆಸ್ ಅಧ್ಯಕ್ಷರು

ಬರುವ ವಾರ ದೆಹಲಿಯಲ್ಲಿ ಸೇರಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು, ಹೈದರಾಬಾದಿನ ಕಾಂಗ್ರೆಸ್ ಅಧಿವೇಶನಕ್ಕೆ ನೆಹರೂರವರನ್ನೇ ಅಧ್ಯಕ್ಷರಾಗಿ ಆರಿಸಬೇಕೆಂದು ಸೂಚಿಸುವ ನಿರ್ಣಯವನ್ನು ಕೈಗೊಳ್ಳುವುದೆಂದು ತಿಳಿದು ಬಂದಿದೆ. ಅವರಿಗೆ ಸರ್ಕಾರಿ ಮತ್ತು ಸಂಸ್ಥೆಯ ವ್ಯವಸ್ಥಾ ಕೆಲಸಗಳು ಹೆಚ್ಚಾಗಿರುವುದರಿಂದ ಅವರ ಸಹಾಯಕ್ಕಾಗಿ ಒಬ್ಬ ಉಪಾಧ್ಯಕ್ಷರನ್ನು ನೇಮಿಸುವ ಏರ್ಪಾಡು ನಡೆಯುವುದೆಂದು ಗೊತ್ತಾಗಿದೆ.

ಬೊಂಬಾಯಿಯಲ್ಲಿ ಮತ್ತೊಮ್ಮೆ ಹರತಾಳ?

ಬೊಂಬಾಯಿಯಲ್ಲಿ ನೆನ್ನೆ ಸಂಜೆ ೩೦ ಸಾವಿರ ಜನರ ಸಭೆಯು ನಡೆದಾಗ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಅಶೋಕ ಮೆಹತಾರವರು ಭಾಷಣಮಾಡಿ, ಈ ತಿಂಗಳಿನಲ್ಲಿಯೇ ಮಾರಾಟ ತೆರಿಗೆ ವಿರುದ್ಧವಾಗಿ ಮತ್ತೊಂದು ಹರತಾಳ ನಡೆಯುವುದೆಂತಲೂ, ಟ್ಯಾಕ್ಸಿ ಟ್ರಾಂಗಳೂ, ಬಸ್ಸುಗಳೂ ಮತ್ತು ಎಲ್ಲ ಕಾರ್ಮಿಕರೂ, ಕಛೇರಿ ನೌಕರರೂ ಅದರಲ್ಲಿ ಸೇರುವರೆಂದೂ, ತೆರಿಗೆಯನ್ನು ರದ್ದು ಮಾಡುವವರೆಗೆ ಇದು ಮುಂದುವರಿಯುವುದೆಂದೂ ತಿಳಿಸಿರುತ್ತಾರೆ ಪ್ರಧಾನಿ ನೆಹ್ರೂ, ಬೊಂಬಾಯಿ ಗೌರ್ನರ್‌ರವರು, ಬೊಂಬಾಯಿ ಸರ್ಕಾರಕ್ಕೆ ಸೂಚನೆಯಿತ್ತು ಬಹು ಕಡೆ ಮಾರಾಟ ತೆರಿಗೆ ಶಾಸನವನ್ನು ತೆಗೆಯುವಂತೆ ಸರಕಾರವನ್ನು ಒತ್ತಾಯಪಡಿಸಬೇಕೆಂಬ ನಿರ್ಣಯವನ್ನು ಮಾಡಲಾಯಿತು

ಕಾರು ಬಂಪರಿಗೆ ಸಿಕ್ಕಿ ೪ ಮೈಲಿ ಬಾಲಕಿ ಪ್ರಯಾಣ

ಕಲ್ಕತ್ತೆಯಲ್ಲಿ ನೆನ್ನೆ ಮೋಟಾರಿಗೆ ಡಿಕ್ಕಿ ಹೊಡೆದ ಬಾಲಕಿಯೊಬ್ಬಳು, ಆ ಕಾರಿನ ಬಂಪರ್ ಮೇಲೆ ೪ ಮೈಲಿ ವರೆಗೂ ಪ್ರಯಾಣ ಮಾಡಿದ ಪ್ರಸಂಗವೊಂದು ವರದಿಯಾಗಿದೆ ಬಾಲಕಿಯು ಸಿಕ್ಕಿದುದನ್ನು ಕಂಡು ಕಾರಿನವನನ್ನು ಜನರು ಹಿಂಬಾಲಿಸಲಾಗಿ ಅವನು ೬೦ ಮೈಲಿ ವೇಗದಲ್ಲಿ ಮೋಟಾರನ್ನು ಓಡಿಸಿ ರಿಕ್ಷಾವೊಂದಕ್ಕೆ ಡಿಕ್ಕಿ ಹೊಡೆದ, ಮತ್ತೊಬ್ಬನನ್ನು ಕೆಡವಿದನೆಂದೂ, ಮೋಟಾರು ಒಂದು ಮನೆಗೆ ಡಿಕ್ಕಿ ಹೊಡೆಯಿತೆಂದೂ ಗೊತ್ತಾಗಿದೆ. ಬಾಲಕಿಯನ್ನು ರಕ್ಷಿಸಿ, ಆಸ್ಪತ್ರೆಗೆ ಕಳುಹಿಸಲಾಗಿದೆ ಡ್ರೈವರನು ಪರಾರಿಯಾಗಿರುತ್ತಾನೆ

ಮಹಿಳಾ ಸದನಕ್ಕೆ ಉದಾರ ಸಹಾಯ

ರಾಜಧಾನಿಯ ದಿವಾನರ ಅಗ್ರಹಾರದಲ್ಲಿರುವ ಮಹಿಳಾಸದನಕ್ಕೆ ಕಂಟ್ರಾಕ್ಟರ್ ದೊರೆಸ್ವಾಮಿ ಬಸವಯ್ಯ ಸಂಸ್ಥೆಯ ಶ್ರೀ ಬಸವಯ್ಯನವರು ೫೦೦ ರೂ. ಗಳನ್ನೂ, ೧೪೦ರೂ ಬೆಲೆ ಬಾಳುವ ಬೆಂಚು, ಕುರ್ಚಿ ಮುಂತಾದ ಮರದ ಸಾಮಾನುಗಳನ್ನೂ ಉದಾರವಾಗಿ ಕೊಟ್ಟಿರುತ್ತಾರೆ.

● ಇತರ ದೇಶಗಳವರು ರಷ್ಯಾ ಎಷ್ಟೆಯನ್ನು ಕೊಳ್ಳದಿದ್ದರೆ ರಷ್ಯಕ್ಕೆ ಅದನ್ನು ಮಾರಬೇಕಾದ ಪರಿಸ್ಥಿತಿಯೊದಗುವುದೆಂದು ಪರ್ಷಿಯದ ಕಾರ್ಮಿಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಲಂಚ ಪಡೆಯುವ ಗಂಡಂದಿರ ಬಹಿಷ್ಕಾರ !

ಕೇಂದ್ರ ಉರಿಯ ಶಾಸನ ಸಭೆಯಲ್ಲಿ ಬೇಗಂ ಐಜೆಜ್ ರಸೂಲ್‌ರವರು ಮಾತನಾಡುತ್ತಾ, ಗಂಡಸರಿಗಿಂತಲೂ ಹೆಂಗಸರು ಹೆಚ್ಚು ಪ್ರಾಮಾಣಿಕರೆಂದೂ, ಆದ್ದರಿಂದ ಹೆಂಗಸರು ತಮ್ಮ ಗಂಡಂದಿರ ಮತ್ತು ಮಕ್ಕಳು ತಮಗೆ ಕಾನೂನು ಪ್ರಕಾರವಾಗಿ ಬರುವ ವರಮಾನಕ್ಕಿಂತಲೂ ಹೆಚ್ಚು ದುಡ್ಡನ್ನು ತಂದರೆ, ಅವರುಗಳಿಗೆ ಬಹಿಷ್ಕಾರ ಹಾಕಬೇಕೆಂದೂ ತಿಳಿಸಿರುವರು ಸ್ತ್ರೀಯರು ಲಂಚದ ವಿರುದ್ಧವಾಗಿ ಚಳುವಳಿ ನಡೆಸಿದರೆ ಅದು ಯಶಸ್ವಿಯಾಗುವುದೆಂದು ಅವರು ಅಭಿಪ್ರಾಯ ಪಟ್ಟಿರುವರು

ಚದುರಂಗದ ಸಂಘ

ಮೈಸೂರಿನ ಚದುರಂಗ ಪ್ರೇಮಿಗಳ ಸಭೆಯೊಂದು ಕಳೆದ ೩೦ ನೇ ತಾ|| ನಡೆದು ಚದುರಂಗದ ಸಂಘವೊಂದನ್ನು ಸ್ಥಾಪಿಸಲಾಗಿದೆ ಇದಕ್ಕೆ ಡಾ|| ಕೆ ... ಖರ್ ರವರು ಅಧ್ಯಕ್ಷರಾಗಿಯೂ ಶ್ರೀ ಎ ವಿ ಶ್ರೀನಿವಾಸಮೂರ್ತಿಯವರು ಕೋಶಾಧ್ಯಕ್ಷರಾಗಿಯೂ ಶ್ರೀಗಳಾದ ಇ ಸಿ ಅಶ್ವತ್ಥನಾರಾಯಣಂ ಮತ್ತು ಎಸ್ ಬ್ರ... ರಘುನಾಥ್ ರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು ದಸರಾ ಹಬ್ಬದ ಕಾಲದಲ್ಲಿ ಟೂರ್ನಮೆಂಟ್ ಒಂದನ್ನು ನಡೆಸಲಾಗುವುದು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ... ರಿಂದ ನಾಗೇಂದ್ರಪ್ಪ ... ಯೊನೆಟ್ ಮಧ್ಯಾಹ್ನ ... ದಿಲ್ರುಬ ... ನಮ್ಮ ಮೆಚ್ಚಿನ ಕಲಾವಿದರು ಸಂಜೆ ... ಮತ್ತು ... ಧರ್ ... ಯ್ಯ ಸಂಗೀತ ... ಸರೋಜಿನಿ ದಾಟೆ ಹಿಂದೀಗೀತ ... ಗೀತ ಮಾಲಾ ... "ಅನಾಥಭೂತ" ... ವರ್ತಿ ... ರಾಯರ ನಾಟಕ

ವಿಷ ಪ್ರಾಶನ ಮೊಕದ್ದಮೆ ಕಡತಗಳು ಬೊಂಬಾಯಿಗೆ ರವಾನೆ

ವಿಷ ಪ್ರಾಶನ ಪ್ರಯತ್ನದ ಸಂಬಂಧವಾದ ಕೋರ್ಟು ರಿಕಾರ್ಡುಗಳನ್ನು ಸುಪ್ರೀಂ ಕೋರ್ಟಿನ ಅಪ್ಪಣೆ ಮೇರೆ ಬೆಂಗಳೂರಿನಿಂದ ಬೊಂಬಾಯಿ ಹೈಕೋರ್ಟಿಗೆ ರವಾನಿಸಲಾಗಿರುವುದೆಂದು ತಿಳಿದು ಬಂದಿದೆ

ಡ್ರೈವರು ಹಾವುಗಳಿಗೆ ಹೆದರಿ ಬಸ್ಸು ಭಾವಿಗೆ ಬಿತ್ತು

ಕಳೆದ ನಾಗರಪಂಚಮಿಯ ದಿನ ಹೈದರಾಬಾದಿನ ಗುಲ್ಬರ್ಗ ಉಸ್ಮಾನಾಬಾದ್ ರಸ್ತೆಯಲ್ಲಿ ಹೋಗುತ್ತಿದ್ದ ಬಸ್ಸೊಂದರಲ್ಲಿ ಹಲವು ಹಾವಾಡಿಗರು ಹಾವಿನ ಬುಟ್ಟಿಗಳನ್ನು ಇಟ್ಟುಕೊಂಡಿದ್ದರೆಂದೂ, ಬಸ್ಸು ಹೋಗುತ್ತಾ, ಮಾರ್ಗದಲ್ಲಿ ಬುಟ್ಟಿಗಳ ಮುಚ್ಚಳಗಳು ಕಳಚಿ ಹಾವುಗಳು ಡ್ರೈವರನ ಹತ್ತಿರ ಸುಳಿದಾಡಿದುವೆಂದೂ ಇದನ್ನು ನೋಡಿ ಹೆದರಿದ ಡ್ರೈವರನಿಗೆ ಬಸ್ಸಿನ ಹತೋಟಿ ತಪ್ಪಿ ಅದು ಭಾವಿಯೊಳಕ್ಕೆ ಮಗುಚಿಕೊಂಡುದರಿಂದ ಒಳಗಿದ್ದ ೨೪ ಮಂದಿ ಪ್ರಯಾಣಿಕರು ಮೃತಪಟ್ಟರೆಂದೂ ವರದಿಯಾಗಿದೆ ಡ್ರೈವರನು ಪಾರಾಗಿರುತ್ತಾನೆ

ಶ್ರೀ ರಾಘವೇಂದ್ರರ ಜಯಂತಿ

ಶ್ರೀಮದ್ಗುರು ರಾಘವೇಂದ್ರ ಸ್ವಾಮಿಗಳವರ ಜಯಂತಿ ಉತ್ಸವದ ಅಂಗವಾಗಿ ಪ್ರತಿವರ್ಷದಂತೆ ಈ ಸಾರಿಯೂ ರಾಜಧಾನಿಯ ಲಷ್ಕರ್ ಮೊಹಲ್ಲಾ ... ನೇ ಪಶ್ಚಿಮ ಕ್ರಾಸಿನಲ್ಲಿರುವ ಶ್ರೀ ಸರಸ್ವತಿ ವಿಲಾಸ ಸಂಗೀತ ಪಾಠಶಾಲಾ ಸ್ಥಾಪಕ ಸಂ|| ವಿ|| ಶ್ರೀ ವೆಂಕಟರವಣಾಚಾರ್ಯರವರ ... ನೆನ್ನೆಯಿಂದ ... ದಿನಗಳ ಪರ್ಯಂತ ... ಯಾಗಿ ಪ್ರತಿ ರಾತ್ರಿ ... ರಿಂದ ... ವರೆಗೆ ಸಂಗೀತ ವಿದ್ವಾಂಸರುಗಳಿಂದ ಶ್ರೀ ... ವರ ... ನೆರವೇರುವುದು

ಶಿವರಾಂಪೇಟೆಯ ಶ್ರೀ ರಾಮಚಂದ್ರ ದೇವಾಲಯದಲ್ಲಿ ಶ್ರೀ ಗುರುಗಳ ಆರಾಧನೋತ್ಸವವು ನೆನ್ನೆ ಮತ್ತು ಇಂದು ನಡೆದುವು ನಂತರ ಬೆಳಿಗ್ಗೆ ... ಸೇವಾ ನಂತರ ... ಗಂಟೆಗೆ ... ವಿದ್ವಾನ್ ... ಣ್ಣನವರ ವಿದ್ಯಾರ್ಥಿ ... ಅರವಿಂದ ಧರ್ಮಾಧಿಕಾರಿಗಳಾದ ... ಹೆಚ್ ಎಸ್ ರಾಘವೇಂದ್ರ ಚಾರ್ ... ಶ್ರೀ ಗುರುಗಳ ... ವಾಗಿ ಉಪನ್ಯಾಸ ಮಾಡುವರು

ಒಲಂಪಿಯಾ ಟಾಕೀಸ್

7 ... ರಿಂದ ಜನಪ್ರಿಯ ... ನೇ ವಾರ

ಅಜಿತ್ ರವರ

ವೀರಅರ್ಜುನ್

ಪ್ರಸಿದ್ಧ ನಿರ್ಮಾಪಕ ... ಪ್ರೊಡ್ಯೂಸರ್

ಕಪೂರ್ ಮತ್ತು ಮಧುಬಾಲ

—: ಬೆಳಗಿನ ಪ್ರದರ್ಶನ

ಸುಬ್ಬಯ್ಯ ನಾಯ್ಡು ಪಾತ್ರವಹಿಸಿರುವ

★ ಬಾಲನ್ ★

Edited, Printed and Published by A R Nagarajan at Sadhvi Press, D Subbaiah Road Mysore

ಎಲ್ಲಾ ಬಗೆಯ

ಅಲೋಪಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ರೈಲ್ವೆ ನೌಕರರ ಸಂಬಂಧಿಕರಿಗೆ ಇಲಾಖೆಯಿಂದ ಪಡಿತರವಿಲ್ಲ

ಮೈಸೂರು ೭

ಮೈಸೂರು ಸಂಸ್ಥಾನದ ರೈಲ್ವೆ ನೌಕರರ ಸಂಸಾರದ ಐದು ಮಂದಿಗೆ ಮಾತ್ರ ರೈಲ್ವೆಯವರು ಪಡಿತರವನ್ನು ಕೊಡುವ ವ್ಯವಸ್ಥೆ ಮಾಡಿರುವರೆಂದೂ, ಅವರುಗಳ ಸಂಸಾರಕ್ಕೆ ಸೇರಿದ ಮಾತಾಪಿತೃಗಳು ಮತ್ತು ಇತರ ಸಂಬಂಧಿಕರು ತಮ್ಮ ಪಡಿತರಕ್ಕಾಗಿ ಸಿವಿಲ್ ಅಧಿಕಾರಿಗಳ ಹತ್ತಿರ ಹೋಗಬೇಕೆಂದು ಸೂಚಿಸಿರುವರೆಂದೂ ತಿಳಿದುಬಂದಿದೆ ಈ ಬಗ್ಗೆ ಸಂಸ್ಥಾನದ ರೈಲ್ವೆ ನೌಕರರ ಸಂಘದ ದಕ್ಷಿಣ ಶಾಖೆಯವರು ಈ ನಿಂಗಡಣೆಯನ್ನು ತಪ್ಪಿಸಬೇಕೆಂದು ಧಾನ್ಯ ಸರಬರಾಜಿನ ಅಸಿಸ್ಟೆಂಟ್ ಕಂಟ್ರೋಲರ ಬಳಿ ನಿಯೋಗ ಹೋಗಿದ್ದು ಅವರ ಪ್ರಯತ್ನವು ಸಫಲವಾಗಲಿಲ್ಲವೆಂದು ಹೇಳಲಾಗಿದೆ ರೈಲ್ವೆ ನೌಕರರೆಲ್ಲರೂ ತಮ್ಮ ರೇಷನ್ ಕಾರ್ಡುಗಳನ್ನು ಸಿವಿಲ್ ಪಡಿತರ ವ್ಯವಸ್ಥೆಯಲ್ಲೇ ಸೇರಿಸಿಕೊಳ್ಳುವ ಏರ್ಪಾಟಾಗುತ್ತಿರುವುದೆಂದು ಗೊತ್ತಾಗಿದೆ

ಧರ್ಮಶಾಲೆಯ ಶಿಲಾಸ್ಥಾಪನೆ

ರಾಜಧಾನಿಯ ಮಂಡಿ ಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಜಾನಕೀ ರಾಮಮಂದಿರ ಮತ್ತು ಶ್ರೀ ಎಲ್ಲಮ್ಮದೇವರ ಸೇವಾರ್ಥವಾಗಿ ಹುಣಸೂರಿನ ಶ್ರೀ ರುದ್ರಯ್ಯನವರ ಪತ್ನಿ ಶ್ರೀಮತಿ ನಂಜಮ್ಮನವರು ಕಟ್ಟಿಸಿರುವ ಧರ್ಮಶಾಲೆಯ ಸ್ಥಾಪನಾ ಮಹೋತ್ಸವವು ಕಳೆದ ೩ ನೇ ತಾ|| ಶ್ರೀ ಎಂ ಆರ್. ಸಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಪೌರಸಭಾಸದಸ್ಯರಾದ ಡಾ|| ಬಿ ಜಿ ದಾಸ್ ರವರು ಶಿಲಾಸ್ಥಾಪನೆಯ ಅನಾವರಣ ಮಾಡಿದರು

SREE GANESHA

TALKIES

From 8 8 52 For 3 Days

Warner's

UNSUSPECTED

With — Joan Caulfield and Claude Rains

FROM 11—8 52

KEY LARGO

7—8—52 ರಿಂದ :: ಅಮೋಘ ಪ್ರಾರಂಭ

ರಣಜಿತ್ – ಮೈಸೂರು

ಪ್ರತಿ ದಿನ 3 ಆಟಗಳು

ಬೆಂಗಳೂರು ಸಾಗರ್, ರೂಪಮಹಲ್,

ಬ ... ಜಿ ಮಂಗಳೂರು ವಿನಾಯಕ – ಶಿವಮೊಗ್ಗ

ಈ ಮನುಷ್ಯನ ಪ್ರೇಮಕ್ಕಾಗಿ ತನ್ನ ಪ್ರಾಣವನ್ನೇ ನೀಗಿದಳು

ಭೂಮಿಕೆ

ದಿಲೀಪ್ ಕುಮಾರ್

ನಿಮ್ಮಿ · ಪ್ರೇಮನಾಥ್

ನವೀನ ತಾರೆ

ನಾದಿರಾ

ಮೆಹಬೂಬ್ ಪ್ರೊಡಕ್ಷನ್ಸ್ ಲಿಮಿಟೆಡ್

ಕಥೆ ... ಸಿದ್ಧ

ಸಂಗೀತ ನೌಷದ್

ನಿರ್ದೇಶನ ಮೆಹಬೂಬ್

ಛಾಯಾಗ್ರಹಣ ಫರ್ದೂನ್ ಎ. ಇರಾನಿ

ಸಂಭಾಷಣೆ – ಬಿ ಎಸ್ ರಾಮಯ್ಯ ಹಾಡುಗಳು ಕಂಬದಾಸರು

ಎಲ್ಲಾ ವಿಧವಾದ ಫ್ರೀ ಪಾಸ್‌ಗಳನ್ನು ಮನ್ನಾ ಮಾಡಿದ್ದೇವೆ

— AN ALL INDIA FILM CORPN RELEASE —

ಪ್ರಭು ದೇವಾ ಟಾಕೀಸ್

8—8—52 ನೇ : ಶುಕ್ರವಾರದಿಂದ : 5 ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಮೂವರು ತನಯರು

[ಮೂರು ಮಕ್ಕಳು]

ಟೆಲಿಫೋನ್ ನಂ. 798 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೮-೮-೧೯೫೨ [ಸಂಚಿಕೆ ೧೧

ಬಲ್ಗೇರಿಯ ಪಡೆ ಮೇಲೆ ಗ್ರೀಸ್ ಸೈನ್ಯಗಳ ಗುಂಡು

ವಿಜ್ಞಾನ ವಿದ್ಯೆಯನ್ನು ಅಭ್ಯಾಸ ಮಾಡಿದರೂ ಪ್ರಯೋಜನವಿಲ್ಲ

ಕೈಗಾರಿಕಾ ಮಂತ್ರಿ ಟಿ. ಸಿದ್ದಲಿಂಗಯ್ಯನವರ ಹೇಳಿಕೆ

ಮೈಸೂರು ೮

ಕೈಗಾರಿಕಾ ಮಂತ್ರಿ, ಶ್ರೀ ಟಿ. ಸಿದ್ದಲಿಂಗಯ್ಯನವರು ನೆನ್ನೆ ಇಲ್ಲಿನ ಆಹಾರ ಸಂಶೋಧನಾಲಯದ ಹಣ್ಣು ಸಂಶೋಧನಾ ಸಂಘದ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತಾ, ವಿದ್ಯಾರ್ಥಿಗಳು ವಿಜ್ಞಾನ ವಿದ್ಯೆಯನ್ನು ಅಭ್ಯಾಸ ಮಾಡಲು ಅನೇಕ ವರ್ಷಗಳ ಕಾಲ ಶ್ರಮಿಸಿ, ಅದಾದ ನಂತರ ಇತರ ಹುದ್ದೆಗಳಲ್ಲಿ ಸೇರಿ ಹಣ ಸಂಪಾದನೆಯಲ್ಲಿ ನಿರತರಾಗಿರುವರೆಂದೂ, ಇದೊಂದು ದೇಶದ ದೌರ್ಭಾಗ್ಯವೆಂದೂ ತಿಳಿಸಿದರು. ಬೆಂಗಳೂರು ಮತ್ತು ಮೈಸೂರುಗಳಲ್ಲಿ ಎರಡು ಸಂಶೋಧನಾ ಕೇಂದ್ರಗಳಿರುವುದಕ್ಕಾಗಿ ಅವರು ಹರ್ಷವನ್ನು ವ್ಯಕ್ತಪಡಿಸಿ, ದೇಶದ ಆಹಾರ ಸಮಸ್ಯೆಯು ಬಗೆಹರಿಯಲು ಅವುಗಳು ಸಹಾಯಕವಾಗುವುವೆಂದು ಅಭಿಪ್ರಾಯಪಟ್ಟರು

ಮಂತ್ರಿಗಳ ಪ್ರಯಾಣ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಇತರ ನಾಲ್ವರು ಮಂತ್ರಿಗಳು ಬೆಂಗಳೂರಿಗೆ ಈ ದಿನ ಹಿಂದಿರುಗಿದರು. ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ಭದ್ರಾವತಿಗೆ ತೆರಳಿದರು

ಪರೀಕ್ಷಾ ಫಲಿತಾಂಶ

ಎಂ. ಎ., ಎಂ. ಎಸ್‌ಸಿ ಮತ್ತು ಇಂಡಾಲಜಿಯಲ್ಲಿ ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಪರೀಕ್ಷೆಗಳ ಫಲಿತಾಂಶಗಳನ್ನು ನಾಳಿದ್ದು ಬೆಳಗ್ಗೆ ೧೧ ಘಂಟೆಗೆ ಪ್ರಕಟಿಸಲಾಗುವುದು

ಇರಾನಿನೊಡನೆ ಪುನಃ ಬ್ರಿಟನ್ನಿನ ಎಣ್ಣೆ ಸಂಧಾನ

ಬ್ರಿಟನ್ ಮತ್ತು ಪರ್ಷಿಯಗಳ ನಡುವೆ ಉಂಟಾಗಿರುವ ಎಣ್ಣೆ ವ್ಯಾಜ್ಯವನ್ನು ಪರಿಹರಿಸಲು ಬ್ರಿಟನ್ನು ಅಮೆರಿಕದ ಸಹಕಾರ ಪಡೆದು ಪುನಃ ಪರ್ಷಿಯಾದ ಪ್ರಧಾನಿ ಮುಸಾದಿಕ್ ರವರೊಡನೆ ಸಂಧಾನ ನಡೆಸುವ ವಿಷಯವನ್ನು ಬ್ರಿ|| ಮಂತ್ರಿ ಮಂಡಲವು ಪರ್ಯಾಲೋಚಿಸುತ್ತಿರುವುದಾಗಿ ವರದಿಯಾಗಿದೆ. ಪರ್ಷಿಯದ ಕಮ್ಯೂನಿಸ್ಟರ ಕಡೆಯ ಟುಡೇ ಪಕ್ಷವು ಅಲ್ಲಿನ ಆರ್ಥಿಕ ದುಸ್ಥಿತಿಯ ಪರಿಣಾಮವಾಗಿ ಆ ದೇಶದ ಹತೋಟಿ ಪಡೆಯುವುದನ್ನು ತಪ್ಪಿಸಲು ಬ್ರಿಟನ್ನು ಈ ಕ್ರಮ ಕೈಗೊಳ್ಳಲಿದೆಯೆಂದು ಹೇಳಲಾಗಿದೆ

ಗ್ರೀಸ್-ಬಲ್ಗೇರಿಯಾಗಳಲ್ಲಿ ಅಪಾಯದ ಸ್ಥಿತಿ

ಗ್ರೀಸಿಗೆ ಸೇರಿದ ದ್ವೀಪವೊಂದನ್ನು ಬಲ್ಗೇರಿಯವು ಆಕ್ರಮಣ ಮಾಡಿರುವುದೆಂದು ವರದಿಯಾಗಿದೆ. ಎರಡು ದೇಶಗಳ ಸೈನ್ಯಗಳೂ ಹೋರಾಟಕ್ಕೆ ಸನ್ನದ್ಧವಾಗಿ, ಅಲ್ಲಿ ಪರಿಸ್ಥಿತಿಯು ಅಪಾಯಕರವಾಗಿರುವುದೆಂದು ವಿಶ್ವಸಂಸ್ಥೆಯ ವೀಕ್ಷಕರು ವರದಿ ಮಾಡಿರುತ್ತಾರೆ

ಕಾಶ್ಮೀರದಲ್ಲಿ ಪಂಚಾಯಿತಿಗೆ ಭಾರತದ ಒಪ್ಪಿಗೆಯಿಲ್ಲ

ಕಾಶ್ಮೀರದ ಪ್ರಶ್ನೆಯನ್ನು ಪಂಚಾಯಿತಿದಾರರ ತೀರ್ಮಾನಕ್ಕೆ ಬಿಡಲು ಭಾರತ ಸರ್ಕಾರದವರು ಸಿದ್ಧವಿಲ್ಲವೆಂದು ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದರು. ಸರ್ಕಾರದವರು ಕೊಟ್ಟಿರುವ ಆಶ್ವಾಸನೆ ಮತ್ತು ಇತರ ಜವಾಬ್ದಾರಿಗಳಿಗೆ ಕುಂದುಬರುವ ಯಾವ ಕಾರ್ಯಕ್ರಮವನ್ನೂ ಭಾರತವು ಒಪ್ಪುವುದಿಲ್ಲವೆಂದು ಅವರು ಸ್ಪಷ್ಟಪಡಿಸಿ, ಕಾಶ್ಮೀರವು ಭಾರತದ ಪ್ರಾಂತಗಳ ಪೈಕಿ ಒಂದೆಂದು ಹೇಳಿದರು. ಪ್ರಪಂಚ ಸಂಸ್ಥೆ ಬಗ್ಗೆ ಭಾರತದ ನೀತಿಯು ಬದಲಾಯಿಸಿಲ್ಲವೆಂದೂ ತಿಳಿಸಿರುವರು

ದೇವರ ಸಾಕ್ಷಾತ್ಕಾರವಾಗುವವರೆಗೂ ಉಪವಾಸ

ಮಹಾರಾಷ್ಟ್ರ ಪ್ರಾಂತದ ಕರಾಡ್ ಎಂಬಲ್ಲಿ ತಾನಾಜಿ ಪವಾರ್ ಎಂಬ ೨೫ ವರ್ಷದವನು ತನಗೆ ದೇವರು ಸಾಕ್ಷಾತ್ಕಾರವಾಗುವವರೆಗೂ ಉಪವಾಸ ಮಾಡಲು ನಿರ್ಧರಿಸಿ, ಆ ವ್ರತವನ್ನು ಕೈಗೊಂಡಿರುತ್ತಾನೆ

ದಿನಕ್ಕೆ ೫ ಕೊಲೆಗಳು

ಇಟಲಿಯಲ್ಲಿ ಕೊಲೆಗಳ ಸಂಖ್ಯೆಯು ಹೆಚ್ಚಿ ಕಳೆದ ಜನವರಿ, ಫೆಬ್ರವರಿ ಮತ್ತು ಮಾರ್ಚಿ ತಿಂಗಳುಗಳಲ್ಲಿ ದಿನಕ್ಕೆ ೫ ರಂತೆ ಒಟ್ಟು ೪೯೪ ಖೂನಿ ಪ್ರಕರಣಗಳು ನಡೆದಿವೆ

ಪೌರಸಭೆಗಳಿಗೆ ಬ್ಯಾಂಕಿನ ಸಾಲಕ್ಕಾಗಿ ಸರ್ಕಾರದ ವ್ಯವಹಾರ

ಪೌರಸಭೆಗಳು ತಮ್ಮ ಮುಂದಿರುವ ಜರೂರಾದ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಬ್ಯಾಂಕಿನವರು ಮುಂಗಡವನ್ನು ಕೊಡುವಂತೆ ತಾವು ಹಲವು ದೊಡ್ಡ ಬ್ಯಾಂಕುಗಳೊಡನೆ ಪತ್ರ ವ್ಯವಹಾರ ನಡೆಸುತ್ತಿರುವುದಾಗಿ ಮುಖ್ಯ ಮಂತ್ರಿ ಕೆ. ಹನುಮಂತಯ್ಯನವರು ಮೊನ್ನೆ ಕನಕಾನಹಳ್ಳಿಯ ಪೌರಸಭೆಯಲ್ಲಿ ತಿಳಿಸಿರುವರೆಂದು ವರದಿಯಾಗಿದೆ. ಸರ್ಕಾರದವರು ಪೌರಸಭಾ ಸಾಲಗಳಿಗೆ ಖಾತರಿಯಾಗಿರುವರೆಂದು ಅವರು ಬ್ಯಾಂಕಿನವರಿಗೆ ಭರವಸೆ ನೀಡಿರುವರೆಂದೂ ಹೇಳಲಾಗಿದೆ

ಪಾಕಿಸ್ತಾನದ ಮಂತ್ರಿ ಜಫರುಲ್ಲಾರ ರಾಜೀನಾಮೆ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಜಫರುಲ್ಲಾ ಖಾನರವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಕೊಟ್ಟಿರುವರೆಂದೂ, ಅದನ್ನು ವಾಪಸು ಪಡೆಯುವಂತೆ ಅಲ್ಲಿನ ಪ್ರಧಾನಿ ನಾಜಮುದ್ದೀನರು ಅವರನ್ನು ಪ್ರೇರಿಸುತ್ತಿರುವರೆಂದೂ ವರದಿಯಾಗಿದೆ. ಅಹಮದಿಯಾ ಪಂಗಡಕ್ಕೆ ಅವರು ಸೇರಿದ್ದುದರಿಂದ ಅವರು ಮುಸಲ್ಮಾನರಲ್ಲವೆಂದು ಹೇಳಿ, ಮುಸ್ಲಿಂ ಮತಗುರುಗಳಾದ ಅಲ್ಲಿನ ಮೌಲ್ವಿಗಳು ಸಭೆಗಳನ್ನು ನಡೆಸಿ ಅವರನ್ನು ವಜಾ ಮಾಡುವಂತೆ ಒತ್ತಾಯ ಪಡಿಸಿದ್ದರು

೧ ವರ್ಷದಲ್ಲಿ ೧೪ ಸಾವಿರ ಟನ್ ಬಳೆ ಮಾರಾಟ

ಕಳೆದ ವರ್ಷ ಭಾರತದ ಹೆಂಗಸರು ೧೪,೦೦೦ ಟನ್ನಿನಷ್ಟು ಗಾಜಿನ ಬಳೆಗಳನ್ನು ಕೊಂಡಿರುವರು. ಈ ಕೈಗಾರಿಕೆಯಿಂದ ೫೦ ಸಾವಿರ ಜನರು ಜೀವನ ಧಾರಣ ಮಾಡುತ್ತಿರುವರು

ಪೋಲೀಸಿನವರಿಂದಲೇ ಜೂಜಾಟ!

ಅಹಮದಾಬಾದು ಬಳಿ ಖೇಡಾ ಎಂಬಲ್ಲಿ ಅಲ್ಲಿನ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರ ಜವಾನನ ಮನೆಯಲ್ಲಿ ಜೂಜಾಡುತ್ತಿದ್ದ ೯ ಜನ ಪೋಲೀಸರನ್ನೂ ಇತರ [illegible]ರನ್ನೂ ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡಲಾಗಿದೆ

ಅಮೆರಿಕಕ್ಕೆ ಪಿ. ಬಿ. ಶ್ರೀನಿವಾಸರ್

ಬೆಂಗಳೂರಿನ ತಾಯಿನಾಡು ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಬಿ. ಶ್ರೀನಿವಾಸರವರು ಅಮೆರಿಕದ ಸರ್ಕಾರದ ಆಹ್ವಾನದ ಮೇಲೆ ಆ ದೇಶಕ್ಕೆ ಭೇಟಿ ಕೊಡಲು ಈ ತಿಂಗಳು ಕೊನೆಯ ವಾರದಲ್ಲಿ ತೆರಳುವರು. ಅಲ್ಲಿ ಪತ್ರಿಕೋದ್ಯಮದ ಬೆಳವಣಿಗೆಯನ್ನು ಅವರು ಪರಿಶೀಲಿಸುವುದಲ್ಲದೆ ಪ್ರಮುಖ ಪತ್ರಿಕಾಕರ್ತರನ್ನು ಭೇಟಿ ಮಾಡುವರು

ಮೈಸೂರು ಗೀತೆಯು ರದ್ದು

ಮೈಸೂರು ಸಂಸ್ಥಾನದಲ್ಲಿ "ಜನ ಗಣ ಮನ"ವು ರಾಷ್ಟ್ರ ಗೀತೆಯಾಗಿರುವುದರಿಂದ ಮೈಸೂರು ಸಂಸ್ಥಾನದ ಗೀತೆಯನ್ನು ರದ್ದುಗೊಳಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ

ಜನಾಬ್ ಮತ್ತು ಜನಾಬಾ ಪದಗಳ ವಜಾ

ಬೆಂಗಳೂರು ೮

ಸಂಸ್ಥಾನ ಸರ್ಕಾರದ ವ್ಯವಹಾರಗಳಲ್ಲಿ ಜನಾಬ್ ಮತ್ತು ಜನಾಬಾ ಎಂಬ ಪದಗಳ ಪ್ರಯೋಗವನ್ನು ತಪ್ಪಿಸಿ ಶ್ರೀ ಮತ್ತು ಶ್ರೀಮತಿ ಎಂಬುವುಗಳನ್ನು ಇನ್ನು ಮುಂದೆ ಉಪಯೋಗಿಸಲಾಗುವುದೆಂದು ಪ್ರಕಟಿಸಲಾಗಿದೆ. ಕಳೆದ ೧೯೪೮ರಲ್ಲಿ ಸರ್ಕಾರದವರು ಮಿಸ್ಟರ್ ಮತ್ತು ಮಿಸೆಸ್ ಎಂಬ ಪದಗಳನ್ನು ತೆಗೆದು ಹಿಂದುಗಳಾದವರನ್ನು ಶ್ರೀ ಮತ್ತು ಶ್ರೀಮತಿ ಎಂದೂ, ಮುಸಲ್ಮಾನರನ್ನು ಜನಾಬ್ ಮತ್ತು ಜನಾಬಾ ಎಂದು ಕರೆಯಬೇಕೆಂದು ವಿಧಾಯಕ ಮಾಡಿದ್ದರು.

ಕೊರಿಯಾ ಅಧ್ಯಕ್ಷತೆಗೆ ಪುನಃ ರ್ಹೀ ಚುನಾವಣೆ

ದಕ್ಷಿಣ ಕೊರಿಯಾದ ಅಧ್ಯಕ್ಷ ಚುನಾವಣೆಯಲ್ಲಿ ಈಗಿನ ಅಧ್ಯಕ್ಷರಾದ ಸಿಂಗ್ಮನ್ ರ್ಹೀಯವರೇ ಬಹುಮತ ಗಳಿಸಿರುತ್ತಾರೆ. ಅವರಿಗೂ ಅವರ ಪ್ರತಿಸ್ಪರ್ಧಿ, ಮಾಜಿ ಕಮ್ಯೂನಿಸ್ಟರೊಬ್ಬರಿಗೂ ೩೦ ಲಕ್ಷ ಓಟುಗಳ ವ್ಯತ್ಯಾಸವಿದೆ. ರ್ಹೀಯವರೇ ಇನ್ನೂ ನಾಲ್ಕು ವರ್ಷ ಅಲ್ಲಿನ ಅಧ್ಯಕ್ಷರಾಗುವರು

ಪ್ರೊ|| ಸಾಕ್ಸೇನಾರವರ ಉಪವಾಸ

ಉತ್ತರ ಪ್ರದೇಶದ ಕೆ. ಎಂ. ಪಿ. ಪಕ್ಷದ ಮುಖಂಡರಾದ ಪ್ರೊ|| ಸಿಬ್ಬನಲಾಲ್ ಸಾಕ್ಸೇನಾರವರು ಈ ತಿಂಗಳು ೧೫ ರಿಂದ ಅನಿರ್ದಿಷ್ಟ ಕಾಲದವರೆಗೆ ಉಪವಾಸ ಮಾಡಲು ನಿರ್ಧರಿಸಿರುವುದಾಗಿ ವರದಿಯಾಗಿದೆ. ಆ ಪ್ರಾಂತದ ಪೂರ್ವ ಪ್ರದೇಶದಲ್ಲಿ ಹಸಿವಿನ ಸಾವುಗಳ ಭೀಕರ ದೃಶ್ಯವನ್ನು ತಾವು ಸಹಿಸಲು ಸಾಧ್ಯವಿಲ್ಲವೆಂದು ಅವರು ಹೇಳಿರುವರು

ಬಲ್ಗೇರಿಯಾ ಸೈನ್ಯಗಳ ಮೇಲೆ ಗುಂಡು

ಗ್ರೀಸಿಗೆ ಸೇರಿದ ದ್ವೀಪವೊಂದರಲ್ಲಿ ಬಲ್ಗೇರಿಯಾ ಸೈನ್ಯಗಳು ಬಂದಿಳಿದಿರುವುದಕ್ಕಾಗಿ ಗ್ರೀಸಿನ ಸೈನ್ಯಗಳು ಅವುಗಳ ಮೇಲೆ ನೆನ್ನೆ ಗುಂಡು ಹಾರಿಸಿದುವೆಂದೂ, ಮೋರ್ಟರುಗಳನ್ನು ಎಸೆದುವೆಂದೂ ವರದಿಯಾಗಿದೆ. ಬಲ್ಗೇರಿಯನ್ನರು ದ್ವೀಪವನ್ನು ಖಾಲಿ ಮಾಡಿರುವರೆಂದು ಹೇಳಲಾಗಿದೆ

ಕೈಗಾರಿಕಾ ಮಂತ್ರಿಗಳಲ್ಲಿ ಪೌರಸಭಾ ನಿಯೋಗ

ನಗರದ ಪೌರಸಭಾಧ್ಯಕ್ಷ, ಶ್ರೀ ಎ. ಕೃಷ್ಣಮೂರ್ತಿರಾವ್, ಸದಸ್ಯರುಗಳಾದ ಶ್ರೀ ಪಿ. ಸೀತಾರಾಮಯ್ಯ, ಟಿ. ವೆಂಕಟರಮಣಯ್ಯ, ಬಿ. ಕೆ. ರಾಮಕೃಷ್ಣಯ್ಯ ಮತ್ತು ಅಹಮದ್ ಖಾನರವರು ನೆನ್ನೆ ಸಂಜೆ ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರಲ್ಲಿ ನಿಯೋಗ ಹೋಗಿ, ಪೌರಸಭೆಗೆ ಒದಗಿಸುವ ವಿದ್ಯುಚ್ಛಕ್ತಿಯನ್ನು ರಿಯಾಯಿತಿ ದರದಲ್ಲಿ ಕೊಡುವಂತೆ ಪ್ರಾರ್ಥಿಸಿದರೆಂದು ಗೊತ್ತಾಗಿದೆ. ಮಂತ್ರಿಗಳು ಪರ್ಯಾಲೋಚಿಸುವುದಾ [illegible]

ಪಕ್ಷಿತೀರ್ಥದಲ್ಲಿ ಶಂಖಗಳು ಎದ್ದು ಕಾಣಿಸಿದುವು

ಮದ್ರಾಸು ಬಳಿ ತಿರುಕಳಕುಂಡ್ರದ ಪಕ್ಷಿತೀರ್ಥದಲ್ಲಿ ಕಳೆದ ೧ನೇ ತಾರೀಖು ಎರಡು ಬಿಳಿಯ ಶಂಖಗಳು ತೇಲಿಬಂದುವೆಂದು ವರದಿಯಾಗಿದೆ. ೧೨ ವರ್ಷಕ್ಕೆ ಒಂದು ಬಾರಿ ಈ ರೀತಿ ಶಂಖಗಳು ಎದ್ದು ಕಾಣಿಸಿಕೊಳ್ಳುವುವೆಂದು ಹೇಳಲಾಗಿದೆ. ಅವುಗಳನ್ನು ತೆಗೆದು, ಮೆರವಣಿಗೆಯಲ್ಲಿ ಅಲ್ಲಿನ ದೇವಾಲಯಕ್ಕೆ ಕೊಂಡೊಯ್ದು ಅಲ್ಲಿಡಲಾಯಿತು

ಅಗರ-ಮಾಂಬಳ್ಳಿ ಪೌರ ಸಭಾಧ್ಯಕ್ಷರು

ಅಗರ-ಮಾಂಬಳ್ಳಿಯ ಪೌರಸಭಾಧ್ಯಕ್ಷತೆಗೆ ಮಾಂಬಳ್ಳಿಯ ಸಾಹುಕಾರ್ ಶ್ರೀ ಬಿ ಚಿಕ್ಕಣ್ಣಸ್ವಾಮಿಯವರು ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ

ಕಾಶ್ಯಾದ ● ವೈಷ್ಣವ ಯುವಕ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೩ ಘಂಟೆಗೆ ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ವಿದ್ಯಾವರ್ಧಕ ಹೈಸ್ಕೂಲಿನ ಮುಂಭಾಗದಲ್ಲಿ ನಡೆಯುವ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವವು ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರಿಂದಲೂ, ಮತ್ತು ಅದೇ ಸಾಯಂಕಾಲ ೪ ೩೦ ಘಂಟೆಗೆ ಸದರಿ ವಿದ್ಯಾರ್ಥಿನಿಲಯದಲ್ಲಿ ಸಂಘದ ಪ್ರಥಮ ವಾರ್ಷಿಕೋತ್ಸವ ಮತ್ತು ಸರ್ವ ಸದಸ್ಯರ ಸಭೆಯು ಮಹಾರಾಜ ಕಾಲೇಜಿನ ಮನಶ್ಶಾಸ್ತ್ರದ ಅ|| ಪ್ರೊಫೆಸರರಾದ ಶ್ರೀ ಬಿ ಕೃಷ್ಣೇರವರ ಅಧ್ಯಕ್ಷತೆಯಲ್ಲೂ ನಡೆಯುವುದರಿಂದ ಮಿತ್ರ ಬಾಂಧವರು ತಪ್ಪದೆ ದಯಮಾಡಿಸಬೇಕಾಗಿ ಕೋರಲಾಗಿದೆ

ಟೆಲಿಫೋನ್ ಎಕ್ಸ್‌ಚೇಂಜ್‌ನ ಪ್ರಾರಂಭೋತ್ಸವ

ಇದೇ ತಿಂಗಳು ೨೧ನೇ ತಾರೀಖು ಕೇಂದ್ರ ಮಾರ್ಗಾನುಕೂಲ ಮಂತ್ರಿ ಶ್ರೀ ಜಗಜೀವನರಾಂರವರು ರಾಜಧಾನಿಯ ಮೋತೀಖಾನೆಯಲ್ಲಿ ಸ್ಥಾಪಿತವಾಗಿರುವ ಟೆಲಿಫೋನ್ ಎಕ್ಸ್‌ಚೇಂಜಿನ ಪ್ರಾರಂಭೋತ್ಸವವನ್ನು ನೆರವೇರಿಸುವರು

ಈಜಿಪ್ಟಿನ ಮಹಿಳೆಯರು ಸೈನ್ಯಕ್ಕೆ

ಈಜಿಪ್ಟಿನ ಮಹಿಳೆಯರನ್ನು ಸೈನ್ಯಕ್ಕೆ ತೆಗೆದುಕೊಳ್ಳಬಹುದೆಂದು ಈಜಿಪ್ಟಿನ ಕ್ರಾಂತಿ ಮುಖಂಡರಾದ ಜ|| ನಗೀಬ್‌ರವರು ಸ್ತ್ರೀಯರ ಹಕ್ಕು ಬಾಧ್ಯತಾ ಚಳುವಳಿಯ ಮುಖಂಡರಿಗೆ ತಿಳಿಸಿರುತ್ತಾರೆ ಈ ಬಗ್ಗೆ ನಿಬಂಧನೆಗಳಿಗೆ ಸೂಕ್ತ ತಿದ್ದುಪಡಿ ಮಾಡಲೂ ಸಹ ತಾವು ಒಪ್ಪುವುದಾಗಿಯೂ, ಆದರೆ ಸಧ್ಯದಲ್ಲಿ ಮಾತ್ರ ಸರ್ಕಾರದವರು ದೋಷಗಳನ್ನು ಉಚ್ಚಾಟನೆ ಮಾಡುವ ಕಾರ್ಯದಲ್ಲಿ ತೊಡಗಬೇಕಾಗಿರುವುದೆಂದೂ ಅವರು ಹೇಳಿರುವರು

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ		೧೦-೬-೦	೨೧ ೧೨ ೦
ಎಳ್ಳು		೭೩ ೦ ೦	೮೦ ೦ ೦
ಹರಳು ಬೀಜ		೪೦.೧೪ ೦	
ಹುರುಳಿ		೪೩ ೮ ೦	೪೩ ೬ ೮
ಹೆಸರು		೬೧ ೧೪ ೦	೬ [illegible] ೦
ಹಲಸಂದೆ		೫೬-೦ ೦	೬೮ ೧೪ ೦
ಮೆಣಸಿನಕಾಯಿ			
	ಮಣಕ್ಕೆ	೬೦ ೦	೭೬ ೪ ೮
ಹುಣಿಸೇಹಣ್ಣು		೪ ೦-೨	೫ ೧೦ -
ಬೆಲ್ಲ		೪ ೩ ೦	೪ ೮ ೮
ತೆಂಗಿನಕಾಯಿ		ಸಾವಿರಕ್ಕೆ ೧೮೦ ೦	೨೦೦ ೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಚಿತ್ರ ಜಗತ್ತಿನ ಧ್ವನಿ ೧೧-೧೫ ಬಾಲ್ ಸಂಗೀತ ಕಮಲಾ ದರ ಹಿಂದಿ ಗೀತೆಗಳು ೨ ಕೆ. ಎಂ. ಶಾಸ್ತ್ರಿ ೩ ೩೦ ಪ್ರಸ್ತು ಕುಮುದಿನಿ ಬಾಪ್ಟಿಸ್ ಹಿಂದೂಸ್ಥಾನಿ ಸಂಗೀತ ೬ ೧೦ ಸಾವಿತ್ರಿ ೭ ೩೦ ವನಿತಾ ವಿಹಾರ ೮ ಶ್ರೀನಿವಾಸ ಕಲ್ಯಾಣ ಕಥೆ ೯ ೩೦ ನಿಲಯ ವಾದ್ಯ ಕಛೇರಿ ೯ ೪೦ ಗಾನ ವಾರಿಧಿ ೯ ೫೫ ಆರ್ಕೆಸ್ಟ್ರಾ

ಪ್ರಭಾ★ 8-8-52 ರಿಂದ ೯ನೇ ವಾರ ಪ್ರತಿ ದಿನ 3 ಆಟಗಳು

ರಾಜಕಪೂರ್ ಮಧುಬಾಲ್‌ರವರ

ಪರ್ ಛಾಯಿ [ಛಾಯೆ]

ಹಿಂದೂ ಪತಿ ಮತ್ತು ಪಾರ್ಸಿ ಪತ್ನಿಯ ವಿವಾಹದ ಷರತ್ತು

ಹೈದರಾಬಾದಿನ ವಿ ಕೆ ಧಾಗೆ ಎಂಬ ಹಿಂದೂ ಯುವಕನು ಒಬ್ಬ ಪಾರ್ಸಿ ಯುವತಿಯನ್ನು ವಿವಾಹವಾದ ಸಂಬಂಧವಾಗಿ ಆದ ವಿಚಿತ್ರ ನಿಬಂಧನೆಗಳನ್ನು ಳ್ಳ ಕರಾರೊಂದನ್ನು ಕೇಂದ್ರ ನ್ಯಾಯಾಂಗ ಮಂತ್ರಿ ಬಿಸ್ವಾಸ್‌ರವರಿಗೆ ಒಪ್ಪಿಸಲಾಗಿದೆ ವರನು ಹಿಂದೂ ಮತ್ತು ವಧುವು ಪಾರ್ಸಿ ಮತಗಳನ್ನು ತ್ಯಜಿಸುವ ಅವಶ್ಯಕತೆಯಿರುವುದಿಲ್ಲ, ಧೈಹಿಕ ಮತ್ತು ಮಾನಸಿಕ ನಂಬಿಕೆಯು ಪರಸ್ಪರ ಇಟ್ಟುಕೊಳ್ಳಲಾಗುವುದು, ಅವರವರ ಆಸ್ತಿಗಳು ಪ್ರತ್ಯೇಕವಾಗಿಯೇ ಇರುವುವು, ಹೆಸರು, ಕುಲಗೋತ್ರಗಳು ಮೊದಲಿನಂತೆಯೇ ಇರುವುವು, ಅವರುಗಳ ತರುವಾಯ ಅವರ ಆಸ್ತಿಪಾಸ್ತಿಗಳು ತಮ್ಮ ಮಕ್ಕಳಿಗೆ ೨೫ ವರ್ಷವಾಗುವವರೆಗೆ ಸಲಹುವ ಮತ್ತು ಓದಿಸುವ ಹೊರೆಯನ್ನು ಹೊತ್ತುಕೊಳ್ಳುವ ಧರ್ಮದರ್ಶಿಗಳ ಸಮಿತಿ ಅಥವಾ ಸರ್ಕಾರಕ್ಕೆ ಹೋಗಬಹುದು ಅವರಿಗೆ ಮರಣ ಸಂಭವಿಸಿದ ನಂತರ ಕಳೇಬರಗಳನ್ನು ವೈದ್ಯ ವಿದ್ಯಾರ್ಥಿಗಳ ಪರೀಕ್ಷೆಗೆ ಒಳಪಡಿಸಿ ನಂತರ ಅಂತ್ಯ ಕ್ರಿಯೆ ನಡೆಸುವುದು — ಎಂಬ ಷರತ್ತುಗಳನ್ನು ಕರಾರಿನಲ್ಲಿ ಹಾಕಲಾಗಿದೆ

ಕೀಸ್ಟೋನ್ ಕಾರ್ಖಾನೆ ನೌಕರರಿಗೆ ನೇಮಕದ ಬಗ್ಗೆ ತಾರತಮ್ಯ

ರಾಜಧಾನಿಯ ಸರ್ಕಾರಿ ಕೀಸ್ಟೋನ್ ಕಾರ್ಖಾನೆಯಲ್ಲಿ ನೌಕರರುಗಳನ್ನು ನೇಮಿಸಿಕೊಳ್ಳುವ ಬಗ್ಗೆ ತಾರತಮ್ಯವನ್ನು

ಒಲಂಪಿಯಾ ಟಾಕೀಸ್

7 8 52ರಿಂದ ಪ್ರಾರಂಭವಾದ 2ನೇ ವಾರ ಅಜಿತ್‌ರವರ

ವೀರಅರ್ಜುನ್

ಪಾತ್ರ - ನಿರೂಪರಾಯ್, ತ್ರಿಲೋಕ್ ಕಪೂರ್ ಮತ್ತು ಮಹಿಪಾಲ್

—: ಬೆಳಗಿನ ಪ್ರದರ್ಶನ :—

ಸುಪ್ರಿಯಾ ಪಾತ್ರ ವಹಿಸಿರುವ

★ ಬಾಲನ್ ★

ಸ್ಥಾನ ಬದ್ಧತಾ ಶಾಸನಕ್ಕೆ ಅಂಗೀಕಾರ

ಪಾರ್ಲಿಮೆಂಟಿನ ಪ್ರಜಾ ಸಭೆಯು ಮುನ್ನೆಚ್ಚರಿಕೆ ಸ್ಥಾನಬದ್ಧತಾ ಮಸೂದೆಯನ್ನು ೨೫೬-೬೧ ವೋಟುಗಳಿಂದ ಅಂಗೀಕರಿಸಿರುತ್ತದೆ ಅದು ಹಿರಿಯ ಸಭೆಯ ಪರಿಶೀಲನೆಗೆ ಒಪ್ಪಿಸಲ್ಪಡುವುದು

ಸಂತಾಪ ಸೂಚನೆ

ರಾಜಧಾನಿಯ ದೇವಾಂಬ ಅಗ್ರಹಾರದ ಶ್ರೀ ಕಾಶಿ ವಿಶ್ವೇಶ್ವರ ದೇವಸ್ಥಾನದ ಧರ್ಮದರ್ಶಿಗಳ ಸಭೆಯು ಮೊನ್ನೆ ನಡೆದು, ಧರ್ಮದರ್ಶಿಗಳ ಮಂಡಲದ ಅಧ್ಯಕ್ಷರೂ, ಮುಖ್ಯ ಜಿಲ್ಲಾ ನ್ಯಾಯಾಧೀಶರೂ ಆಗಿದ್ದ ಶ್ರೀ ಕೆ ಸಿ. ಲಿಂಗಯ್ಯ ಗೌಡರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಮಾಡಿ, ಅವರ ಕುಟುಂಬ ವರ್ಗದವರು ದುಃಖವನ್ನು ಸೈರಿಸುವ ಶಕ್ತಿಯನ್ನು ಭಗವಂತನು ಅವರಿಗೆ ಕೊಡಲೆಂದು ಕೋರಲಾಯಿತು

ಕೋರಲಾಗುತ್ತಿರುವುದೆಂದು ಇಲ್ಲಿನ ನಿವಾಸಿಯೊಬ್ಬರು ಬರೆದಿರುತ್ತಾರೆ. ಎಲ್ಲಿಂದಲೂ ದರಖಾಸ್ತನ್ನು ತೆಗೆದುಕೊಳ್ಳುತ್ತಿಲ್ಲವಲ್ಲದೆ ಈಚೆಗೆ ನೇಮಿಸಿಕೊಂಡ ಲೇಡಿ ಸೆಕ್ಷನ್ ಅಸಿಸ್ಟೆಂಟರ ದ ತೆಗೆದುಕೊಳ್ಳದಿರುವುದು ಯೋಚನೀಯವೆಂದೂ, ಸಿಬ್ಬಂದಿ ಪೋಷಣಾ ಮಾಡಬೇಕೆಂದಿರುವಾಗಲೇ ತಮಗೆ ಬೇಕಾದವರನ್ನು ನೌಕರಿಗೆ ಸೇರಿಸಿಕೊಳ್ಳುತ್ತಿರುವುದು ಸರಿಯಲ್ಲವೆಂದೂ ಅವರು ತಿಳಿಸಿರುತ್ತಾರೆ

SRI GAYATHRI

TALKIES

Daily 2 Shows

From 8-8-52 For 2 Days

M G M's

EXCUSE MY DUST

With - Red Skelton

MORNING SHOWS —

On 9th and 10th AUG.

R K O's

CINDERELLA

ಅಬೀದ್‌ರವರ ಅಪೇಕ್ಷೆ

ಹ ರಾ ಜು ಮಾ ರಾ ಟ

ಟೆಕ್ನಿಕಲ್ ಇನ್ಸ್‌ಟಿಟ್ಯೂಟ್ ಮತ್ತು ಕರ್ಗ್ ಇಂಡಸ್ಟ್ರೀಸ್ ಮತ್ತು ಸಾ ಮಿಲ್ಲಿನ ಸೀಸಂ ಮಾಡಲ್ಪಟ್ಟ ತೇಗ ಮತ್ತು ದೀಟಿ ಮರದ ಉತ್ತಮ ದರ್ಜೆಯ ನವೀನ ಮಾದರಿಯ ಫರ್ನಿಚರುಗಳು ಮತ್ತು ಇತರ ಗೃಹೋಪಯುಕ್ತ ಪದಾರ್ಥಗಳು.

ಮೈಸೂರು ಒಂಟಿಕೊಪ್ಪಲು, ಸ್ಯಾನಿಟೋರಿಯಮ್ಮಿಗೆ ಹೋಗುವ ಮೇನ್ ರಸ್ತೆಯಲ್ಲಿರುವ

ಸಿಟಿ ಮಿಲ್ಸ್ ಸಪ್ಲೈ ಬಳಿ

10-8-1952 ನೇ :: ಭಾನುವಾರ :: ಬೆಳಿಗ್ಗೆ 10 ಘಂಟೆಗೆ

ಶ್ರೀ ಎಂ. ವಿ. ಕೃಷ್ಣ ಸ್ವಾಮಿಯವರ ಸೂಚನೆ ಮೇರೆ, ಕೆಳಗೆ ಕಂಡ ಪದಾರ್ಥಗಳ ಹರಾಜು ಮಾರಾಟ ನಡೆಸಲಾಗುವುದು

ಸ್ಪ್ರಿಂಗ್ ಕುಷನ್ ಸೋಫಾ ಸೂಟು, ಡ್ರೆಸ್ಸಿಂಗ್ ಮತ್ತು ರೈಟಿಂಗ್ ಟೇಬಲ್ಲುಗಳು, ಟೀಪಾಯಿಗಳು, ಕುರ್ಚಿಗಳು, ಡಿನ್ನರ್ ವ್ಯಾಗನ್ನು, ಮಿಲ್ಕ್ ಸೇಫುಗಳು, ರಿವಾಲ್ವಿಂಗ್ ಪೀಸು ಸಿಂಗಲ್ ಮತ್ತು ಡಬ್ಬಲ್ ಮಂಚಗಳು ಒಳ್ಳೆಯ ಸ್ಥಿತಿಯಲ್ಲಿರುವ ಫಿಲಿಪ್ಸ್ ರೇಡಿಯೋ ಮತ್ತು ಎ ಸಿ ಡಿ ಸಿ ಮಾದರಿಯ ಒಲೆ ಮತ್ತು ಗ್ರಿಲ್ಲುಗಳಿರುವ ಜಿ. ಇ. ಸಿ ಹಾಟ್ ಪ್ಲೇಟು, ಹಾರ್ಮೋನಿಯಂ, ಎಚ್ ಎಂ ವಿ. ಗ್ರಾಮೊಫೋನ್, 6' ಸ್ಟೀಲ್ ಅಲ್ಮೇರಾ ಕೈಗಳು, ಡ್ರಂ ಟೇಬಲ್ ನಂ 17 ಬೆಲ್ ವಾಟರ್ ಸ್ಟೆರಿಲೈಸರ್ ರಂಗವಿರುವ ಹುಲಿಯ ಚರ್ಮ ಮತ್ತು ಇತರ ಅನೇಕ ಉಪಯುಕ್ತ ಪದಾರ್ಥಗಳು

ಪದಾರ್ಥಗಳನ್ನು ಇದೇ 9ನೇ ತಾರೀಖು ಶನಿವಾರ ಬೆಳಿಗ್ಗೆ 9 ರಿಂದ 12ರ ವರೆಗೂ ಮತ್ತು ಮಧ್ಯಾಹ್ನ ೩ ರಿಂದ 6 ಘಂಟೆ ವರೆಗೂ ಅವಲೋಕಿಸಿ ನೋಡಬಹುದು

ಅಂಬಳೆ ರಾಮಸ್ವಾಮಿ ಅಯ್ಯಂಗಾರ್‌ರವರ ಸುಪ್ರಸಿದ್ಧ

ಸಂ ತಾ ನ ಸಿಂ ಧೂ ರ

ಬಹಿಷ್ಟೆ (ಮುಟ್ಟಿನ) ಸಂಬಂಧದ ಹೊಟ್ಟೆನೋವಿನಿಂದ ನರಳುವವರಿಗೂ ಅಕ್ರಮ ಸೂತಕ, ಕ್ರಮತಪ್ಪಿ ಬಹಿಷ್ಟೆ ಗರ್ಭ ಪತನ, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟಿ ಔಷಧ

೩ ದಿವಸಗಳಲ್ಲಿ ಈ ಹೊಟ್ಟೆನೋವು ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕಾದರೆ ಮೇಲ್ಕಂಡ ಔಷಧವನ್ನು "ಸಂಪತ್ ವಿಲಾಸ" ಜೊತೆ ಸೇವಿಸಬಹುದು. ಒಂದು ಸೆಟ್ ಅನುಪಾನ ಪತ್ರಿಕೆಯ ಮೇರೆ ಸೇವಿಸಿದರೆ ಸಾಕು, ಫಲ ತಮಗೇ ಗೊತ್ತಾಗುತ್ತೆ. ಕ್ರಯ 1 ಸೆಟ್ 5 ರೂ ಪತ್ರ ವ್ಯವಹಾರ ಗುಪ್ತ ಕ್ಯಾಟಲಾಗು ಉಚಿತ ಹೆಚ್ಚು ವಿವರಕ್ಕೆ 2 ಅಣೆ ಸ್ಟಾಂಪು ಕಳಿಸಿ

ವಿಶೇಷ ಸೂಚನೆ ವಿಷಯದ ಮ್ಯಾನೇಜರ್ ಮೇಲೆ ಶ್ರೀ ಎ ಆರ್ ಅಯ್ಯಂಗಾರ್‌ರವರ ಫೋಟೋ ಮತ್ತು ರಿ ಜಿ ನಂಬರು ಇದ್ದ ವರೆಗೂ ಯಳಂದೂರು ತಾ|| ಅಂಬಳೆ ಮತ್ತು ಮೈಸೂರು ಸೂಪ್ಪಿನ ಕಾರ್ಖಾನೆ ಬೀದಿಯಲ್ಲಿದ್ದ ಆಫೀಸುಗಳನ್ನು ಕೆಳಗೆ ಕಂಡ ನಮ್ಮ ಸ್ವಂತ ಬಿಲ್ಡಿಂಗಿಗೆ ವರ್ಗಾಯಿಸಿರುತ್ತೆ

ಹೊಸ ವಿಳಾಸ— ಎ ರಾಮಸ್ವಾಮಿ ಅಯ್ಯಂಗಾರ್ ಸನ್

" ಸಂತಾನ ಸಿಂಧೂರ ಬಿಲ್ಡಿಂಗ್ "

628 ನೂರಡಿ ರಸ್ತೆ ದಕ್ಷಿಣ ಭಾಗ ,

(ಕೃಷ್ಣ ರೈಸ್ ಮಿಲ್ ಪಕ್ಕ) ಮೈಸೂರು.

Edited Printed and Published by A R Nagaratan, at Sadhvi Press, D. Subbiah Road, M[illegible]e.

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೯-೮-೧೯೫೨ [ಸಂಚಿಕೆ ೧೨

ಉತ್ತರ ಪ್ರದೇಶದ ೪೦೦೦ ಹಳ್ಳಿಗಳಲ್ಲಿ ಭಾರಿ ಕ್ಷಾಮ

ವಿಶ್ವೇಶ್ವರಯ್ಯ ನಾಲೆ ನೀರು ೩೦,೦೦೦ ಎಕರೆಗೆ ಮಾತ್ರ

ಬೆಂಗಳೂರು ೯

ಸರ್ಕಾರದವರು ಹೊರಡಿಸಿರುವ ಪ್ರಕಟಣೆಯೊಂದರಲ್ಲಿ ವಿಶ್ವೇಶ್ವರಯ್ಯ ನಾಲೆ ಎಲ್ಲಿ ಈ ಸಾರಿ ೮೨,೦೦೦ ಎಕರೆ ಜಮೀನಿನ ಬದಲು ೩೦ ಸಾವಿರ ಎಕರೆಗಳಿಗೆ ಒದಗಿಸುವಷ್ಟು ನೀರು ಮಾತ್ರ ದೊರೆಯುವುದೆಂದು ತಿಳಿಸಲಾಗಿದೆ ನೀರು ಶೇಖರಣೆಯು ಈ ವರ್ಷ ತೃಪ್ತಿಕರವಾಗಿಲ್ಲವೆಂದೂ, ಈಗ ೮೧.೩೯ ಅಡಿಯಷ್ಟು ನೀರು ಮಾತ್ರ ಕೃಷ್ಣರಾಜಸಾಗರದಲ್ಲಿರುವುದೆಂದೂ ಹೇಳಲಾಗಿದೆ ಆದುದರಿಂದ ನೀರಿನ ಬಳಕೆಯಲ್ಲಿ ರೈತರು ಸರ್ಕಾರಕ್ಕೆ ಸಂಪೂರ್ಣ ಸಹಕಾರ ನೀಡಿ ತ್ಯಾಗಕ್ಕೆ ಸಿದ್ಧರಾಗಬೇಕೆಂದು ಕೋರಲಾಗಿದೆ

ಮೈಸೂರಿನ ರೇಷ್ಮೆ ವೇಸ್ಟಿನ ರಫ್ತಿಗೆ ಅವಕಾಶ

ಮೈಸೂರು ಮತ್ತು ಮದ್ರಾಸುಗಳಿಂದ ಈ ವರ್ಷ ೩ ಲಕ್ಷ ಪೌಂಡುಗಳಷ್ಟು ರೇಷ್ಮೆಯ ವೇಸ್ಟನ್ನು (ನಟ್ಟೆ) ವಿದೇಶಗಳಿಗೆ ರಫ್ತು ಮಾಡಲು ಭಾರತ ಸರ್ಕಾರದವರು ಅನುಮತಿ ಕೊಟ್ಟಿರುತ್ತಾರೆ

ಮೈಸೂರು ಗೀತೆಯು ರದ್ದಿಗೆ ಪ್ರಭುಗಳ ಸಮ್ಮತಿ

ಕಾಯ್ ಶ್ರೀ ಗೌರಿ ಗೀತೆಯನ್ನು ರದ್ದುಗೊಳಿಸಲು ಸರ್ಕಾರದವರು ಮಾಡಿರುವ ಆಜ್ಞೆಗೆ ಶ್ರೀಮನ್ಮಹಾರಾಜರು ಸಮ್ಮತಿಸಿರುವರೆಂದು ಗೊತ್ತಾಗಿದೆ

ಟಿಕೆಟ್ ಇಲ್ಲದವಳು ರೈಲಿನಿಂದ ಧುಮುಕಿದಳು

ಉತ್ತರ ಪ್ರದೇಶದ ರಾಯಪುರ-ಬ್ಲೂಂಶಹರ್ ಜಿಲ್ಲಾ ಭಾಗಗಳ ನಡುವೆ ಓಡುತ್ತಿದ್ದ ರೈಲು ಗಾಡಿಯಿಂದ ಟಿಕೆಟ್ಟು ಕೊಳ್ಳದ ಹೆಂಗಸು ಮೊನ್ನೆ ಧುಮುಕಿ ತುಂಬಾ ಗಾಯಗೊಂಡಳೆಂದೂ, ರೈಲನ್ನು ನಿಲ್ಲಿಸಿ ಆಕೆಯನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ

ಜಫರುಲ್ಲಾ ರಾಜೀನಾಮೆ ಅಂಗೀಕರಿಸಲು ನಿರಾಕರಣೆ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಪದವಿಗೆ ಜಫರುಲ್ಲಾರವರು ಕೊಟ್ಟಿರುವ ರಾಜೀನಾಮೆಯನ್ನು ಅಂಗೀಕರಿಸಕೂಡದೆಂದು ಅಲ್ಲಿನ ಮಂತ್ರಿಮಂಡಲವು ನಿರ್ಧರಿಸಿರುತ್ತದೆ

ದೊಡ್ಡವರಂತೆ ೩ ತಿಂಗಳ ಮಗುವಿನ ಮಾತು

ಹೈದರಾಬಾದಿನ ರಾಮಣ್ಣ ಪೇಟೆಯಲ್ಲಿ ೩ ತಿಂಗಳ ಮಗುವೊಂದು ದೊಡ್ಡವರಂತೆ ಮಾತನಾಡುತ್ತಿರುವುದೆಂದು ವರದಿಯಾಗಿದೆ ಈ ವಿಚಿತ್ರವನ್ನು ನೋಡಲು ಅನೇಕರು ಬರುತ್ತಿರುವರು ಇದರ ಕಾರಣವನ್ನು ಹೇಳಲು ಯಾರೂ ಶಕ್ಯರಾಗಿಲ್ಲ

ನೇಪಾಳದ ಪ್ರಧಾನಿಯಿಂದ ರಾಜೀನಾಮೆ

ನೇಪಾಳದ ಪ್ರಧಾನಿ ಎಂ ಪಿ ಕೊಯಿರಾಲಾರವರು ಇನ್ನೆರಡು ದಿನಗಳಲ್ಲಿ ರಾಜೀನಾಮೆಯನ್ನು ಸಲ್ಲಿಸುವರೆಂದು ವರದಿಯಾಗಿದೆ

ಗ್ರಾಮಾಂತರಗಳಲ್ಲಿ ಹೆರಿಗೆ ಆಸ್ಪತ್ರೆಗಳು

ಜಿಲ್ಲಾ ಬೋರ್ಡಿನ ನಿರ್ಣಯ

ಮೈಸೂರು ೯

ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ನೆನ್ನೆ ಶ್ರೀ ಹೆಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು ಮಾಜಿ ಉಪಾಧ್ಯಕ್ಷರಾದ ನಾಗಮಂಗಲದ ಸಾಹುಕಾರ್ ಶ್ರೀ ಬಸವಣ್ಣದೇವರುರವರ ನಿಧನರಾದುದಕ್ಕೆ ಸಭೆಯು ಸಂತಾಪವನ್ನು ವ್ಯಕ್ತಪಡಿಸಿತು

ಜಿಲ್ಲೆಯ ತಾಲ್ಲೂಕುಗಳಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಬೋರ್ಡು ಆಯಾ ತಾಲ್ಲೂಕಿನ ಖಜಾನೆಗಳಿಂದಲೇ ಪಡೆಯಬೇಕೆಂದು ಇತ್ತೀಚೆಗೆ ಸರ್ಕಾರ ಆಜ್ಞೆಯೊಂದು ಬಂದಿರುವುದರಿಂದ ಬೋರ್ಡಿನ ಕಾರ್ಯಕಲಾಪಗಳಿಗೆ ಅಡಚಣೆಯುಂಟಾಗಿರುವುದೆಂದೂ ಇದನ್ನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು

ಚಾಮರಾಜನಗರದ ತಾಲ್ಲೂಕು ಆಲೂರು ಪಿರಿಯಾಪಟ್ಟಣದ ತಾಲ್ಲೂಕು ರಾವಂದೂರಿನಲ್ಲಿ ತಲಾ ೩೦ ಸಾವಿರ ರೂಗಳ ಖರ್ಚಿನಲ್ಲಿ, ಮತ್ತು ಹುಣಸೂರಿನಲ್ಲಿ ೩೩ ಸಾವಿರ ರೂಗಳ ಖರ್ಚಿನಲ್ಲಿ ಮೂರು ಹೆರಿಗೆ ಆಸ್ಪತ್ರೆಗಳನ್ನು ಕಟ್ಟಿಸಲು ತೀರ್ಮಾನಿಸಲಾಯಿತು.

ಹರಿಕಥೆ

ಶ್ರಾವಣ ಶನಿವಾರದ ಪ್ರಯುಕ್ತ ಈ ರಾತ್ರಿ ೯ ಘಂಟೆಗೆ ಈಡಿಗ ಗಾಣಿಗರ ಕೇರಿಯಲ್ಲಿರುವ ಮಿಠಾಯಿ ಅಂಗಡಿ ತಗಡಯ್ಯನವರ ಛತ್ರದಲ್ಲಿ ಹರಿಕಥಾ ವಿ|| ಸೀತಾರಾಮನವರಿಂದ 'ಗರುಡ ಗರ್ವಭಂಗ"ವೆಂಬ ಕಥೆ ಏರ್ಪಾಡಾಗಿರುತ್ತದೆ

ದಕ್ಷಿಣ ಆಫ್ರಿಕಾ ಸತ್ಯಾಗ್ರಹಿಗಳಿಗೆ ಛಡಿ ಏಟು

ಜೊಹಾನೆಸ್‌ಬರ್ಗಿನ ಕೆಲ ಆಫ್ರಿಕನ್ನರು ವರ್ಣ ವಿಭೇದ ಶಾಸನದ ನಿಬಂಧನೆಗಳನ್ನು ಉಲ್ಲಂಘಿಸಿದರೆಂದು ಅವರಿಗೆ ಚಿತ್ರದಲ್ಲಿ ತಲಾ ನಾಲ್ಕು ಏಟು ಕೊಡುವಂತೆ ನ್ಯಾಯಾಧೀಶರು ಆಜ್ಞೆ ಮಾಡಿರುವರು ದಿನ ಕ್ರಮೇಣ ಈ ಶಿಕ್ಷೆಯನ್ನು ಇನ್ನೂ ಕಠಿಣಗೊಳಿಸುವುದಾಗಿ ಅವರು ತಿಳಿಸಿರುವರು

ಉತ್ತರ ಪ್ರದೇಶದಲ್ಲಿ ಘೋರ ಕ್ಷಾಮ

ಉತ್ತರ ಪ್ರದೇಶ ಪ್ರಾಂತದ ಅಜಾಮ್‌ಘಡ ಜಿಲ್ಲೆಯ ೮ ಸಾವಿರ ಹಳ್ಳಿಗಳಲ್ಲಿ ಮಳೆಯಿಲ್ಲದೆ ಆಹಾರ ಮತ್ತು ನೀರಿನ ಅಭಾವದ ಉತ್ಕಟ ಪರಿಸ್ಥಿತಿಯುಂಟಾಗಿರುವುದೆಂದೂ ಆ ಜಿಲ್ಲೆಯ ೩೩೬,೦೦೦ ಎಕರೆ ಭೂಮಿಯು ಬಂಜರು ಬಿದ್ದಿರುವುದೆಂದೂ ವರದಿಯಾಗಿದೆ ಈ ವರ್ಷದಲ್ಲೆಲ್ಲಾ ಅಲ್ಲಿ ೫ ೧೩ ಅಂಗುಲದಷ್ಟು ಮಾತ್ರ ಮಳೆಯಾಗಿ ೩೦ ವರ್ಷಗಳ ಅವಧಿಯಲ್ಲಿ ಅತ್ಯಂತ ಕಡಿಮೆಯದಾಗಿದೆ

ಇಂಗ್ಲಿಷ್ ಬಾರದ ಅಧ್ಯಕ್ಷರಿಗೆ ಗುಮಾಸ್ತರಿಂದ ಮೋಸ

ಉತ್ತರ ಪ್ರದೇಶದ ಸೀತಾಪುರ್ ಜಿಲ್ಲೆಯ ಸ್ಥಳೀಯ ಸಂಸ್ಥೆಯೊಂದರ ಅಧ್ಯಕ್ಷರಿಗೆ ಇಂಗ್ಲಿಷ್ ಭಾಷೆಯು ಬಾರದ ನ್ಯೂನತೆಯನ್ನು ದುರುಪಯೋಗಪಡಿಸಿ ಇಬ್ಬರು ಗುಮಾಸ್ತರು ಒಂದೇ ವಿಷಯವಾಗಿ ಎರಡು ರಶೀತಿಗಳನ್ನು ತಯಾರಿಸಿ, ೨ ಲಕ್ಷ ರೂಗಳನ್ನು ಮೋಸ ಮಾಡಿರುವರೆಂದೂ, ಅವರನ್ನು ಕೆಲಸದಿಂದ ವಜಾ ಮಾಡಿ, ಮುಖ್ಯ ನೌಕರನ ಮೇಲೆ ಕ್ರಮ ಕೈಕೊಳ್ಳಲಾಗಿದೆಯೆಂದೂ ತಿಳಿದುಬಂದಿದೆ

ನೌಕೆ ಮೇಲಿದ್ದ ವಿಮಾನ ಸಿಡಿದು ೮ ಮಂದಿ ಮರಣ

ಕೊರಿಯಾ ತೀರದ ಬಳಿ ಅಮೆರಿಕದ ಒಂದು ವಿಮಾನ ವಾಹಕ ನೌಕೆಯ ಮೇಲಿದ್ದ ಜೆಟ್ ವಿಮಾನವೊಂದು ನೆನ್ನೆ ಸಿಡಿದುದರ ಪರಿಣಾಮವಾಗಿ ಹಡಗಿನಲ್ಲಿ ಬೆಂಕಿಯುಂಟಾಗಿ ೮ ಮಂದಿ ಸತ್ತು, ೨೫ ಜನರಿಗೆ ಗಾಯವಾಗಿರುವುದೆಂದು ವರದಿಯಾಗಿದೆ ಜ್ವಾಲೆಯನ್ನು ತಡೆಯಲಾರದ ೬೩ ಮಂದಿ ನಾವಿಕರು ಸಮುದ್ರಕ್ಕೆ ಹಾರಿದರು. ಅವರನ್ನು ರಕ್ಷಿಸಲಾಯಿತು ೫೦ ಮಂದಿಗೆ ಪ್ರಜ್ಞೆ ತಪ್ಪಿತು ೧೨ ವಿಮಾನಗಳು ಸುಟ್ಟು ಬಸ್ಮವಾದುವು

ಕಾಂಗ್ರೆಸ್ ಅಧ್ಯಕ್ಷರ ಆಗಮನ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್ ಸಿ. ದಾಸಪ್ಪನವರು ನೆನ್ನೆ ರಾತ್ರಿ ಇಲ್ಲಿಗೆ ಆಗಮಿಸಿದರು ಅವರು ಈ ಸಂಜೆ ಬೆಂಗಳೂರಿಗೆ ಪ್ರಯಾಣ ಮಾಡುವರು

ಟೆಲಿಫೋನ್ ವ್ಯವಸ್ಥೆ ಸಮರ್ಪಕವಾಗಬೇಕೆಂದು ನಿರ್ಣಯ

ಮೈಸೂರು ೯

ರಾಜಧಾನಿಯ ಪೌರ ಸಭೆಯ ಮುಂದುವರಿದ ಸಭೆಯು ನೆನ್ನೆ ನಡೆದಾಗ ನಗರದಲ್ಲಿ ಟೆಲಿಫೋನುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ಜನರ ದೂರು ಬರುತ್ತಿರುವುದರಿಂದ, ಅದರ ವ್ಯವಸ್ಥೆಯನ್ನು ಸರಿಪಡಿಸುವಂತೆ ಸರ್ಕಾರವನ್ನು ಕೋರುವ ನಿರ್ಣಯವನ್ನು ಶ್ರೀ ಚೌಡಯ್ಯನವರು ಮಂಡಿಸಿ, ಅದು ಅಂಗೀಕೃತವಾಯಿತು ಕುಂಬಾರಕೊಪ್ಪಲಿನಲ್ಲಿ ಪ್ರಾಥಮಿಕ ಶಾಲೆಯನ್ನು ಕೂಡಲೇ ಸರ್ಕಾರದವರು ತೆರೆಯಬೇಕೆಂಬ ಮತ್ತೊಂದು ನಿರ್ಣಯವೂ ಅಂಗೀಕಾರವಾಯಿತು ನಗರದಲ್ಲಿ ಕಶ್ಮಲ ಪ್ರದೇಶಗಳನ್ನು ತೆಗೆದು ಹಾಕುವ ಬಗ್ಗೆ ಡಾ|| ಬಿ ಜಿ ದಾಸರು ಮಂಡಿಸಿದ ನಿರ್ಣಯವನ್ನು ಆರೋಗ್ಯ ಸಮಿತಿಗೆ ಒಪ್ಪಿಸಲಾಯಿತು

ಬಿ ಸಿ. ಜಿ ವ್ಯಾಕ್ಸಿನೇಷನ್ನಿನ ಬಗ್ಗೆ ಪ್ರವೀಣರಾದ ಡಾ|| ಬಿ. ಸಿ ರಾಮಣ್ಣನವರು ವಿವರವಿತ್ತು, ಅದು ಕ್ಷಯ ರೋಗ ನಿವಾರಣೆಗೆ ಅವಶ್ಯಕವಾದುದೆಂದು ತಿಳಿಸಿದರು. ಪ್ರತಿ ವರ್ಷವೂ ಸಂಸ್ಥಾನದಲ್ಲಿ ಕ್ಷಯದಿಂದ ೩,೦೦೦ ಜನರು ಸಾಯುತ್ತಿರುವರೆಂದು ಅವರು ಹೇಳಿದರು

ಸತ್ಕಾರ ಕೂಟ

ರಾಜಧಾನಿಯ ಪತ್ರಿಕೋದ್ಯಮಿ. ಶ್ರೀ ಎಸ್ ಶಂಕರನಾರಾಯಣ್‌ರವರು ಮೊನ್ನೆ ತಮ್ಮ ಮನೆಯಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ಅದಕ್ಕೆ ಪೌರಸಭಾಧ್ಯಕ್ಷರು, ಜಿಲ್ಲಾಧಿಕಾರಿಗಳು ಮತ್ತು ಇತರರು ಆಗಮಿಸಿದ್ದರು

ಭಾರತ ಮತ್ತು ಪಾಕಿಸ್ತಾನ್ ಪೊಲೀಸರಿಗೆ ಘರ್ಷಣೆ

೩ ಜನ ಪಾಕಿಸ್ತಾನಿ ಧಾಳಿಕಾರರು ಜೋಧಪುರದ ಎಲ್ಲೆಯೊಳಗೆ ನೆನ್ನೆ ನುಗ್ಗಿ ೨೫ ದನಗಳನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ ಅವರನ್ನು ಭಾರತೀಯ ಪೊಲೀಸು ಪಡೆಯು ಅಟ್ಟಿಸಿಕೊಂಡು ಹೋಯಿತೆಂದೂ, ಅದರ ಎದುರಾಗಿ ೪೦ ಮಂದಿ ಪಾಕಿಸ್ತಾನದ ಪೊಲೀಸರು ಬಂದು, ಎರಡು ಗುಂಪುಗಳಿಗೂ ಘರ್ಷಣೆಯಾಯಿತೆಂದೂ ವರದಿಯಾಗಿದೆ ಇಬ್ಬರೂ ಗುಂಡು ಹಾರಿಸಿದರೆಂದು ಹೇಳಲಾಗಿದೆ.

ಫರೂಕರ ಹೆಣ್ಣುಮಕ್ಕಳ ವಶಕ್ಕೆ ಮಾಜಿ ರಾಣಿ ದಾವಾ

ಫರೂಕರು ಈಜಿಪ್ಟಿನ ದೊರೆಯಾಗಿದ್ದಾಗ ಅವರು ವಿಚ್ಛೇದನ ಮಾಡಿಕೊಂಡಿದ್ದ ಮಾಜಿ ರಾಣಿ ಫರೀದಾರವರು ತಮಗೆ ಜನಿಸಿದ ೩ ಹೆಣ್ಣು ಮಕ್ಕಳನ್ನು ತಮ್ಮ ವಶಕ್ಕೆ ಒಪ್ಪಿಸಬೇಕೆಂದು ಇಸ್ಲಾಂ ನ್ಯಾಯಾಲಯಕ್ಕೆ ದೂರು ಕೊಂಡೊಯ್ಯುವರೆಂದು ವರದಿಯಾಗಿದೆ ಆ ಮಕ್ಕಳು ಈಗ ಫರೂಕರ ಬಳಿ ಇರುವರು

● ಟ್ಯೂನಿಸ್ ದೇಶವು ಫ್ರೆಂಚರ ಹತೋಟಿಯಿಂದ ತಪ್ಪಿಸಿಕೊಂಡು ಸ್ವತಂತ್ರವಾಗುವ ಚಳುವಳಿಯ ಸಹಾಯಕ್ಕಾಗಿ ಹೈದರಾಬಾದಿನ ನಿಜಾಮರು ೧೦ ಸಾವಿರ ರೂ. ಗಳ ಸಹಾಯವನ್ನು ನೀಡಲಿರುವರೆಂದು ವರದಿಯಾಗಿದೆ

ಮಾರಾಟ ತೆರಿಗೆ ವಿರುದ್ಧದ ಚಳುವಳಿಯು ಹೊಸ ರೂಪ

ಬೊಂಬಾಯಿ ಪ್ರಾಂತದಲ್ಲಿ ಮಾರಾಟ ತೆರಿಗೆ ವಿರುದ್ಧವಾಗಿ ಹೂಡಿರುವ ಚಳವಳಿಯನ್ನು ಪಾನ ನಿರೋಧದ ವಿರುದ್ಧವಾಗಿ ಶೀಘ್ರದಲ್ಲೇ ಪರಿವರ್ತಿಸಲಾಗುವುದೆಂದು ವರದಿಯಾಗಿದೆ

ವಿದ್ಯಾವರ್ಧಕ ಹೈಸ್ಕೂಲು

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ವಿದ್ಯಾವರ್ಧಕ ಹೈಸ್ಕೂಲು ಕೆಲವು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟು ಬಹು ಯಶಸ್ವಿಯಾಗಿಯೂ, ಸೇವಾಧರ್ಮ ಮನೋಧರ್ಮ ಪೂರ್ಣವಾಗಿಯೂ ಕೆಲಸ ಮಾಡುತ್ತಿರುವುದು ಶಾಲೆಯು ಪ್ರವರ್ಧಮಾನಕ್ಕೆ ಬಂದು, ಹೆಚ್ಚುಮಂದಿ ಜನರು ವಿದ್ಯಾವಂತರಾಗಿ ದೇಶಕ್ಕೆ ಕೀರ್ತಿಯನ್ನು ತರಲು ಸಹಾಯಕರಾಗುವಂತೆ ಮಹಾಜನರು ಆ ವಿದ್ಯಾಮಂದಿರಕ್ಕೆ ಸಹಾಯ ಮಾಡಬೇಕಾದುದು ಅಗತ್ಯವಾಗಿದೆ. ಅದರ ಸಹಾಯಾರ್ಥವಾಗಿ ಪರ್ವತವಾಣಿ ಮತ್ತು ಅವರ ಮಿತ್ರವೃಂದದವರು ನಾಳೆ ಸಂಜೆ ೬|| ಗಂಟೆಗೆ ಟೌನ್‌ಹಾಲಿನಲ್ಲಿ ಅಭಿನಯಿಸುವ ನಾಟಕಗಳನ್ನು ಮಹಾಜನರು ನೋಡಿ, ತಮ್ಮ ಯಥಾಶಕ್ತಿ ಸೇವೆಯನ್ನು ಶಾಲೆಗೆ ಒದಗಿಸಲೆಂದು ನಾವು ಪ್ರಾರ್ಥಿಸುತ್ತೇವೆ

ಕ್ರಿಕೆಟ್‌ನಲ್ಲಿ ಜಯ

ಮೈಸೂರು ಓವಲ್ ಮೈದಾನದಲ್ಲಿ ಕಳೆದ ೩ ಮತ್ತು ೪ ನೇ ತಾ|| ಸನ್ನಿಸೈಡ್ ಕ್ಲಬ್ ಮತ್ತು ಬೆಂಗಳೂರಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸಿನ ಟೀಮುಗಳಿಗೆ ನಡೆದ ಕ್ರಿಕೆಟ್ ಆಟದಲ್ಲಿ ಸನ್ನಿ ಸೈಡಿನವರು ೭ ವಿಕೆಟ್ಟು ಮತ್ತು ೩೧೬ ರನ್ನುಗಳಿಂದ ಜಯಗಳಿಸಿರುತ್ತಾರೆ ಮೊದಲನೇ ಇನಿಂಗ್ಸಿನಲ್ಲಿ ಸನ್ನಿಸೈಡಿನವರು ೧೧೮, ಮತ್ತು ಎರಡನೆಯದರಲ್ಲಿ ೩ ವಿಕೆಟ್ಟಿಗೆ ೩೭೧ ರನ್ನುಗಳನ್ನೂ ಮಾಡಿ ಡಿಕ್ಲೇರ್ ಮಾಡಿಕೊಂಡರು ಪಂದ್ಯವು ಮುಗಿದನಂತರ ಗೆದ್ದವರಿಗೆ ಮೆಟ್ರೋ ಶೀಲ್ಡನ್ನು ಕೊಡಲಾಯಿತು

ತಿರುವಾಂಕೂರಿನಲ್ಲಿ ಗೋಧಿ ಹತೋಟಿ ವಜಾ

ಗೋಧಿಯ ಹತೋಟಿಯನ್ನು ಈ ಕೂಡಲೇ ರದ್ದುಗೊಳಿಸಿ, ಅದರ ಬೆಲೆಯನ್ನು ಇಳಿಸಲು ತಿರುವಾಂಕೂರು ಸರಕಾರದವರು ಒಪ್ಪಿರುವರೆಂದು ವರದಿಯಾಗಿದೆ

ಸಾರ್ವಜನಿಕ ವಿದ್ಯಾರ್ಥಿ ನಿಲಯ ಸಂಘದ ಉದ್ಘಾಟನೆ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಮೇಲ್ಕಂಡ ಸಂಘದ ಹೊಸ ವರ್ಷದ ಉದ್ಘಾಟನಾ ಮಹೋತ್ಸವವು ಕಳೆದ ೭ನೇ ತಾ|| ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಎಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಲ್ ಸೀಬಯ್ಯನವರು ಪ್ರಾರಂಭೋತ್ಸವವನ್ನು ನೆರವೇರಿಸಿದರು ಅವರು ತಮ್ಮ ಭಾಷಣದಲ್ಲಿ ನಿಲಯದ ಸ್ಥಾಪಕರಾದ ಶ್ರೀ ಟಿ ಎಸ್. ಸುಬ್ಬಣ್ಣನವರ ಸೇವೆಯನ್ನು ಪ್ರಶಂಸಿಸಿದರು ಅಧ್ಯಕ್ಷರು ಮಾತನಾಡಿ, ವಿದ್ಯಾರ್ಥಿಗಳು ಸತ್ಯವನ್ನೇ ನುಡಿಯಬೇಕೆಂದೂ, ಧೈರ್ಯಸಾಹಸಿಗಳಾಗಬೇಕೆಂದೂ ಹಿತೋಕ್ತಿಗಳನ್ನು ಹೇಳಿದರು ವಂದನಾರ್ಪಣೆಯೊಡನೆ ಸಮಾರಂಭವು ಮುಗಿಯಿತು

ಪರ್ಷಿಯಾಕ್ಕೆ ರಷ್ಯದ ಶಸ್ತ್ರಗಳ ಕಳ್ಳ ರವಾನೆ

ರಷ್ಯಾ ಪರ್ಷಿಯಾ ಗಡಿಯಲ್ಲಿ ಕಳ್ಳತನದಲ್ಲಿ ಪರ್ಷಿಯಾ ದೇಶಕ್ಕೆ ರವಾನೆಯಾಗುತ್ತಿದ್ದ ಶಸ್ತ್ರಗಳನ್ನು ಪರ್ಷಿಯಾ ಮಿಲಿಟೆರಿಯವರು ವಶಪಡಿಸಿಕೊಂಡಿರುತ್ತಾರೆ ಪರ್ಷಿಯದ ಟೂಡೆ ಪಕ್ಷದವರಿಗಾಗಿ ಈ ರೀತಿ ಶಸ್ತ್ರಗಳು ರಷ್ಯದಿಂದ ಸಾಗಿಸಲ್ಪಡುತ್ತಿರುವುವೆಂದು ಹೇಳಲಾಗಿದೆ

ವಿವಾಹ ಮಹೋತ್ಸವ

ಹೆಜ್ಜಾಲಿನ ಶ್ರೀ ಹೆಚ್. ಸುಬ್ಬರಾಯರ ಮೊಮ್ಮಗ ಚಿ|| ರಾ|| ಹೆಚ್ ಎಸ್ ಕೃಷ್ಣಸ್ವಾಮಿಯವರಿಗೆ ಅಮ್ಮತೂರಿನ ಶ್ರೀ ಎ ಆರ್ ಸುಬ್ಬರಾಯರ ಮಗಳು ಸೌ|| ನಿರ್ಮಲರವರನ್ನು ತಂದುಕೊಂಡು ಬೆಂಗಳೂರಿನಲ್ಲಿ ನಾಳೆ ವಿವಾಹವು ನೆರವೇರುವುದು

ಉಪನ್ಯಾಸ

ನಂಜನಗೂಡು ಭಾರತೀ ಮಂದಿರದ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೯|| ಘಂಟೆಗೆ ಅಲ್ಲಿನ ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ ಬೆಂಗಳೂರಿನ ನ್ಯಾಯವೇದಾಂತ ವಿದ್ವಾನ್ ವೇ|| ಬ್ರಂ|| ಶ್ರೀ ಎಂ ಲಕ್ಷ್ಮೀನರಸಿಂಹಶಾಸ್ತ್ರಿಗಳವರು ಶ್ರೀಮದ್ರಾಮಾಯಣದ ವಿಷಯವಾಗಿ ಉಪನ್ಯಾಸ ಮಾಡುವರು

ಅಬೀದ್‌ರವರ ಭಾರಿ

ಹರಾಜು ಮಾರಾಟ

ನಾಳೆ 10-8-1952 ನೇ :: ಭಾನುವಾರ ಬೆಳಿಗ್ಗೆ 10 ಘಂಟೆಗೆ

ಮೈಸೂರು ಪೊಂಟಿಕೊಪ್ಪಲಿನ ಸಿಟಿ ಮಿಲ್ಕ್ ಸಪ್ಲೈ ಬಳಿ

ಉತ್ತಮ ದರ್ಜೆಯ ಮರ ಮುಟ್ಟು ಮತ್ತು ಗೃಹಕೃತ್ಯದ ಸಾಮಾನುಗಳು

ಹರಾಜು ಸ್ಥಳದಲ್ಲಿ ಸಿಟಿ ಬಸ್ಸು ನಿಲ್ಲುವುದು ಬೆಳಿಗ್ಗೆ 9 ಘಂಟೆಯ

ಬಸ್ಸಿನಲ್ಲಿ ಅಲ್ಲಿಗೆ ಬನ್ನಿರಿ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೦-೪-೦	೩೧ ೧೨ ೦
ಎಳ್ಳು	೭೨ ೮ ೦	೮೦ ೪ ೦
ಹರಳು ಬೀಜ	೪೩ ೦ ೦	
ಹುರುಳಿ	೪೧ ೮ ೦	೪೨ ೦ ೮
ಹೆಸರು	೫೭ ೨-೦	
ಹೊಂಗೇಬೀಜ	೧೩ ೦ ೦	
ಉದ್ದು	೬೭ ೦ ೦	
ಹುಲಸಂದೆ	೫೩-೦-೦	೬೫ ೦
ಮೆಣಸಿನಕಾಯಿ		
ಮಣಿಗಳ್ಳೆ	೧೦ ೩ ೦	೧೫.೧೨-೦
ಹುಣಸೇಹಣ್ಣು	೫ ೭-೦	
ಸೀಗೇಕಾಯಿ	೪-೯ ೦	೪-೧೧-೦
ತೆಂಗಿನಕಾಯಿ ೧೧೦೦	೧೫೧-೦ ೦	೩೦೫ ೦ ೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೦ ಮಿಶ್ರ ಮಾಧುರ್ಯ ಮಧ್ಯಾಹ್ನ ೧ ೪೦ ಜಲತರಂಗ್ ೧೫೦ ನಾವು ಮತ್ತು ನಮ್ಮವರು ೨ ಪುಷ್ಪ ಮಲ್ಲನ ಗೀತೆಗಳು ಸಂಜೆ ೫ ೪೦ ಮತ್ತು ೭ ೩೦ ಪಿ ಎಸ್ ನಾರಾಯಣಯ್ಯಂಗಾರ್ ಸಂಗೀತ ೭ ಚಿತ್ರ ಸಂಗೀತ ೮ ನಾದ ಹೊದಾಮಣಿ ಸಂಗೀತ ೯ ೪೦ ಕನ್ನಡ ಗೀತೆಗಳು ೯ ೪೫ ರಾಷ್ಟ್ರೀಯ ಕಾರ್ಯಕ್ರಮದ ಪುನರ್ ಪ್ರಸಾರ

ಹಿಂದಿ ತರಗತಿಗಳು

ರಾಜಧಾನಿಯ ಚಾಮುಂಡಿಪುರಂ ಪೋಸ್ಟ್ ಆಫೀಸ್ ಬಳಿ ಇರುವ ಅಮೃತ ಹಳ್ಳಿ ಸಿಪಾಯಿನ ಕಟ್ಟಡದ ಮಹಡಿಯ ಮೇಲೆ ಇದೇ ೧೧ ನೇ ತಾ|| ನಿಂದ ಹಿಂದಿ ತರಗತಿಗಳನ್ನು ಅಲ್ಲಿನ ನಿವಾಸಿಗಳಿಗಾಗಿ ಏರ್ಪಡಿಸಲಾಗಿದೆ ಪಾಠಗಳು ಸಂಜೆ ೫|| ಘಂಟೆಯಿಂದ ನಡೆಯುವುವು ಸೇರಲಿಚ್ಛಿಸುವವರು ಅಲ್ಲಿನ ಕಾರ್ಯಾಲಯದಲ್ಲಿ ವಿಚಾರಿಸಬಹುದು

ಜಲಪುರಿಯಲ್ಲಿ ಸಿಡುಬಿನಿಂದ ಇಬ್ಬರ ಮರಣ

ಕಳೆದ ೩೧ ನೇ ತಾ|| ಗೆ ಮುಕ್ತಾಯವಾದ ಹದಿನೈದು ದಿನಗಳಲ್ಲಿ ರಾಜಧಾನಿಯ ಜಲಪುರಿಯಲ್ಲಿ ಸಿಡುಬು ರೋಗವು ೩ ಜನರಿಗೆ ತಗಲಿ ಇಬ್ಬರು ಮರಣ ಹೊಂದಿದರೆಂದು ತಿಳಿದುಬಂದಿದೆ ನಗರದಲ್ಲಿ ಪ್ಲೇಗು ಸೋಂಕು ಇರುವುದಿಲ್ಲವೆಂದೂ, ೧೪೫ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಗಿದೆಯೆಂದೂ ಪೌರಸಭೆಯವರು ತಿಳಿಸಿರುತ್ತಾರೆ

ಮನೋಹರ ನಾಟಕಾಭಿನಯ

ಮೈಸೂರು ಪುರಭವನದಲ್ಲಿ

10 8-52ನೇ ಭಾನುವಾರ ಸಂಜೆ 6 30ಕ್ಕೆ

ಪರ್ವತವಾಣಿ ಮತ್ತು ಅವರ ಗೆಳೆಯರಿಂದ

"ಗಿಳಿಯ ಪಂಜರ"

"ಬಣ್ಣದ ಬೊಂಬೆ"

ಎಂಬ ನಾಟಕಗಳು ಅಭಿನಯಿಸಲ್ಪಡುವುವು

ಪ್ರವೇಶಧನ ರೂ. 2,5,10 ಹೀಗೆ

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

IF YOU LIKE PURE AND BEST COFFEE,
DON'T FORGET TO COME TO

SRI CHAMUNDESWARI
★ Bhavan ★

(Boarding, Lodging and Restaurant)

YELWAL ROAD, MYSORE

DRINK & ENJOY
OUR
Pure and High-Flavoured
PLANTATION 'A' COFFEE

★ Taste Our Sweets
★ Prepared from Pure Ghee
★ Delicious & Wholesome Meals

Edited, Printed and Published by A R. Nagarajan at Sadhvi Press, D. Subbiah Road, Mysore.

ಫೋ. ನಂ 792 WEEKLY EDITION ಇಂದಿನ ಪತ್ರಿಕೆ 6 ಪಾಣೆ

ಸಾಧ್ವಿ

ಸಂಪುಟ ೧೬] ಭಾನುವಾರ ೧೦-೮-೧೯೫೨ [ಸಂಚಿಕೆ ೨

ಈಜಿಪ್ಟ್ ಕ್ರಾಂತಿ ವಿರುದ್ಧ ಫರೂಕರ ಪ್ರತೀಕಾರ

ಅರಮನೆಗೆ ಸರಬರಾಜಾಗುವ ವಸ್ತುಗಳಿಗೆ ತೆರಿಗೆ

ಮೈಸೂರು ೧೦

ಅರಮನೆಗಾಗಿ ಸರಬರಾಜಾಗುತ್ತಿದ್ದ ವಸ್ತುಗಳಿಗೆ ಇದ್ದ ಪರಿಕರ ಇದ ಮಾರಾಟದ ತೆರಿಗೆಯ ವಿನಾಯಿತಿಯನ್ನು ಇನ್ನು ಮುಂದೆ ರದ್ದುಗೊಳಿಸುವ ಆಜ್ಞೆ ಯನ್ನು ಶ್ರೀಮನ್ಮಹಾರಾಜರವರು ಹೊರಡಿಸಿರುತ್ತಾರೆ ಅರಮನೆಯ ಮೋಟಾರು ವಾಹನಗಳಿಗೆ ಉಪಯೋಗಿಸುವ ಎಣ್ಣೆಗೂ ಈ ಆಜ್ಞೆಯು ಅನ್ವಯಿಸುವುದು

ಕೈಗಾರಿಕಾ ಕಾರ್ಮಿಕರಿಗಾಗಿ ೪೦ ಸಾವಿರ ಗೃಹ ನಿರ್ಮಾಣ

ಅಲ್ಪ ವರಮಾನ ಪಡೆಯುತ್ತಿರುವ ಕೈಗಾರಿಕಾ ಕಾರ್ಮಿಕರು ಮತ್ತು ಇತರರ ಸಲುವಾಗಿ ಕೇಂದ್ರ ಸರ್ಕಾರದವರು ಭಾರತದ ಅದ್ಯಂತ ೪೦ ಸಾವಿರ ಮನೆಗಳನ್ನು ಕಟ್ಟುವ ಯೋಜನೆಯನ್ನು ತಯಾರಿಸಿರುವರೆಂದು ತಿಳಿದುಬಂದಿದೆ ಈ ಯೋಜನೆಯ ಪ್ರಕಾರ, ಪ್ರಾಂತ್ಯಗಳ ಸರ್ಕಾರದವರು ಕಟ್ಟಲಿರುವ ಮನೆಗಳಿಗಾಗಿ ಕೇಂದ್ರದಿಂದ ಖರ್ಚಿನ ಅರ್ಧದಷ್ಟು ಮೊಬಲಗನ್ನು ಸಹಾಯದ ರೂಪವಲ್ಲೂ, ಉಳಿದ ಅರ್ಧವನ್ನು ಸಾಲವಾಗಿಯೂ ಕೊಡಲಾಗುವುದು ಕೈಗಾರಿಕಾ ಮಾಲೀಕರು, ಅಥವಾ ಸಹಕಾರ ಸಂಸ್ಥೆಗಳವರು ತಾವೇ ಮನೆ ಕಟ್ಟಿಸುವುದಾದರೆ, ಅಂತಹ ಸಂದರ್ಭಗಳಲ್ಲಿ ಶೇ|| ೨೫ ರಷ್ಟು ಮೊಬಲಗನ್ನು ಸಹಾಯವಾಗಿಯೂ ಮತ್ತು ಶೇ|| ೩೭|| ಯಷ್ಟನ್ನು ಸುಲಭ ದರದ ಬಡ್ಡಿ ಮೇಲೆ ಸಾಲವಾಗಿಯೂ ಕೊಡಲಾಗುವುದು ಉಳಿದ ಮೊಬಲಗನ್ನು ಅವರುಗಳೇ ಹಾಕಬೇಕಾಗುವುದು

ತಿರುಪತಿಯಲ್ಲಿ ಮೈಸೂರು ಮಹಾರಾಜರು

ದಕ್ಷಿಣ ಭಾರತದ ಯಾತ್ರಾ ಪ್ರವಾಸ ಕೈಗೊಂಡಿರುವ ಮೈಸೂರಿನ ಶ್ರೀಮನ್ಮಹಾರಾಜರವರು ಪರಿವಾರ ಸಮೇತ ನೆನ್ನೆ ತಿರುಪತಿ ಕ್ಷೇತ್ರಕ್ಕೆ ಭೇಟಿಯಿತ್ತು, ಶ್ರೀ ವೆಂಕಟೇಶ್ವರ ದೇವರ ದರ್ಶನ ಪಡೆದರು ದೇವಸ್ಥಾನದಲ್ಲಿ ಪ್ರಭುಗಳನ್ನು ರಾಜಗೌರವಗಳೊಡನೆ ಸನ್ಮಾನಿಸಿ ಸ್ವಾಗತಿಸಲಾಯಿತು

ಎಲ್ಲ ವಿಧವಾದ ಬಟ್ಟೆ ರಫ್ತಿಗೂ ರಹದಾರಿ

ಭಾರತದಿಂದ ವಿದೇಶಗಳಿಗೆ ಎಲ್ಲ ವಿಧವಾದ ಬಟ್ಟೆಗಳನ್ನೂ ಇದೇ ಡಿಸೆಂಬರ್ ಆಖೈರಿನ ವರೆಗೆ ನಿರ್ಬಂಧವಿಲ್ಲದೆ ರಫ್ತು ಮಾಡಲು ಕೇಂದ್ರ ಸರ್ಕಾರದವರು ರಹದಾರಿ ಕೊಡಲು ನಿರ್ಧರಿಸಿರುವರು.

ಅಮೆರಿಕನ್ನರಿಂದ ಜಪಾನಿನ ಅಮೂಲ್ಯ ವಸ್ತುಗಳ ಕಳವು

ಕಳೆದ ಮಹಾ ಯುದ್ಧದ ನಂತರ ಜಪಾನನ್ನು ಆಕ್ರಮಿಸಿಕೊಂಡ ಅಮೆರಿಕದ ಅಧಿಕಾರಿಗಳು ವಶಪಡಿಸಿಕೊಂಡಿದ್ದ ಜಪಾನಿನ ವಜ್ರ, ಚಿನ್ನ ಮೊದಲಾದ ಬಲಮುಳ್ಳ ವಸ್ತುಗಳ ಪೈಕಿ ಹತ್ತು ಲಕ್ಷ ಪೌಂಡು ಬೆಲೆ ಬಾಳುವಷ್ಟು ಅಮೂಲ್ಯ ಪದಾರ್ಥಗಳನ್ನು ಇಬ್ಬರು ಅಮೆರಿಕದ ಅಧಿಕಾರಿಗಳು ಕಳುವು ಮಾಡಿರುವುದಾಗಿ ಜಪಾನಿನ ಅಧಿಕಾರಿಗಳು ಆಪಾದಿಸಿರುವರು.

ಅಭಾವ ಪ್ರದೇಶಗಳಿಗೆ ಕೇಂದ್ರದ ಸಹಾಯ ಅಗತ್ಯ

ಪಂಡಿತ ನೆಹರೂರವರಿಗೆ ಸಂಸ್ಥಾನ ಸರ್ಕಾರದ ಕೋರಿಕೆ

ಬೆಂಗಳೂರು ೧೦

ಸಂಸ್ಥಾನದ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಪತ್ರಿಕಾ ಸಮ್ಮೇಳನವನ್ನು ನಡೆಸಿ, ಇಲ್ಲಿನ ಕ್ಷಾಮ ಪೀಡಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರದವರು ತುರ್ತು ಸಹಾಯವನ್ನು ಒದಗಿಸದಿದ್ದಲ್ಲಿ ಪರಿಸ್ಥಿತಿಯು ತುಂಬಾ ಕಷ್ಟಕರವಾಗುವುದೆಂದು ಪ್ರಧಾನ ಮಂತ್ರಿಯವರಿಗೆ ಕಳುಹಿಸಿರುವ ವರದಿಯಲ್ಲಿ ಮೈಸೂರು ಸರ್ಕಾರದವರು ತಿಳಿಸಿರುವರೆಂದು ಹೇಳಿದರು ಕೋಲಾರ ಮುಂತಾದ ಪ್ರದೇಶಗಳಲ್ಲಿ ದಾರುಣ ಪರಿಸ್ಥಿತಿ ಬಗ್ಗೆ ಯಥಾವತ್ತಾದ ವರದಿಯನ್ನು ಅವರಿಗೆ ಕಳುಹಿಸಲಾಗಿದೆಯೆಂದೂ ಅವರು ಹೇಳಿ, ಹೊಟ್ಟೆಗಿಲ್ಲದೆ ಅರು ಮರಣಗಳು ಸಂಭವಿಸಿರುವುವೆಂಬ ವರದಿಗಳನ್ನು ನಿರಾಕರಿಸಿದರು. ಕಳೆದ ಮೂರು ತಿಂಗಳುಗಳಲ್ಲಿ ಕೋಲಾರ ಜಿಲ್ಲೆಯೊಂದರಲ್ಲೇ ಪರಿಹಾರ ಕಾರ್ಯಕ್ಕಾಗಿ ೨೫ ಲಕ್ಷ ರೂ ವೆಚ್ಚ ಮಾಡಿರುವುದಾಗಿಯೂ, ಇತರ ಎಲ್ಲ ಕಡೆಗಳಲ್ಲಿ ಸುಮಾರು ೧೧ ಲಕ್ಷ ರೂ ವೆಚ್ಚ ಮಾಡಿರುವುದಾಗಿಯೂ ಅಭಾವ ಸ್ಥಿತಿಗಾಗಿ ೧೦ ಲಕ್ಷ ರೂಗಳ ಕಂದಾಯದ ವಿನಾಯಿತಿಯನ್ನು ಕೊಡಲಾಗಿದೆಯೆಂದೂ ತಿಳಿಸಿ, ಶೀಘ್ರದಲ್ಲೇ ಮಳೆಯು ಜೋರಾಗಿ ಬಾರದಿದ್ದರೆ ಸಂಸ್ಥಾನದಲ್ಲಿ ಗಾಬರಿಯ ಪರಿಸ್ಥಿತಿಯುಂಟಾಗುವುದೆಂದು ಅವರು ಅಭಿಪ್ರಾಯಪಟ್ಟರು ಅಲ್ಲಿನ ಜನರು ಮಲೆನಾಡಿಗೆ ವಲಸೆ ಹೋಗಲು ಸಿದ್ಧರಿರುವುದಾಗಿ ತಮಗೆ ವರದಿ ಬಂದಿರುವುದೆಂದು ಅವರು ಹೇಳಿದರು

ಐರೋಪ್ಯ ಪಾದ್ರಿ ಕೊಂಡ ತುಳಿದು ಕಾಲು ಸುಟ್ಟಿತು

ಹಿಂದೂ ಸಾಧುಗಳು ಕೊಂಡ ತುಳಿಯುವುದನ್ನು ಅನುಕರಿಸಲು ಹೋದ ಸಿಂಹಳದ ಪಾದ್ರಿ ರೆವರೆಂಡ್ ರಾಬರ್ಟ್‌ಸನ್ ಎಂಬುವರು ನೆನ್ನೆ ಅಲ್ಲಿನ ಹಾಲೂ ಎಂಬ ಊರಿನಲ್ಲಿ ಬೆಂಕಿ ತುಳಿದು ಕಾಲು ಸುಟ್ಟುಕೊಂಡು ಈಗ ಆಸ್ಪತ್ರೆಗೆ ಸೇರಿರುವರು ಅವರ ಕಾಲುಗಳಲ್ಲಿ ಬೊಬ್ಬೆಗಳು ಬಂದಿವೆ.

ಜಾರ್ಡಾನ್ ದೊರೆಯ ಪದತ್ಯಾಗಕ್ಕೆ ಸೂಚನೆ

ಜಾರ್ಡಾನಿನ ಅರಸರಾದ ತಲಾಲರು ತಮ್ಮ ಹದಿನೇಳು ವರ್ಷ ವಯಸ್ಸಿನ ಮಗ ಅಮೀರ್ ಹುಸೇನರ ಪರವಾಗಿ ಸಿಂಹಾಸನ ತ್ಯಾಗ ಮಾಡುವಂತೆ ರಾಜಪ್ರತಿನಿಧಿಗಳ ಮಂಡಲವು ಶೀಘ್ರದಲ್ಲೇ ದೊರೆಗಳಿಗೆ ಸೂಚನೆ ಕೊಡಲಿರುವುದಾಗಿಯೂ, ಅವರಿಗೆ ಆಗಾಗ್ಗೆ ಮೂರ್ಛೆ ರೋಗವು ಬರುತ್ತಿರುವುದೇ ಇದಕ್ಕೆ ಕಾರಣವೆಂದೂ ವರದಿಯಾಗಿದೆ

ಡ್ರೈವರನ ಪಾಯಿಜಾಮದಲ್ಲಿ ಇಲಿ ಸೇರಿ ಜೀಪು ಹಳ್ಳಕ್ಕೆ

ಬಳ್ಳಾರಿ ಬಳಿ ಬುಕ್ಕಸಾಗರ ಎಂಬ ಊರಿನ ಹತ್ತಿರ ನೆನ್ನೆ ಹೋಗುತ್ತಿದ್ದ ಜೀಪು ಕಾರೊಂದರ ಡ್ರೈವರನ ಪಾಯಿಜಾಮದೊಳಗೆ ಇಲಿಯು ಸೇರಿಕೊಂಡು ಅವನಿಗೆ ತೊಂದರೆಯುಂಟು ಮಾಡಿದುದರ ಪರಿಣಾಮವಾಗಿ ಕಾರಿನ ಮೇಲೆ ಅವನ ಹತೋಟಿಯು ತಪ್ಪಿ ಪಕ್ಕದ ಮೋರಿಯೊಳಗೆ ಅದು ಮಗುಚಿಕೊಂಡಿತೆಂದು ವರದಿಯಾಗಿದೆ ಒಬ್ಬರಿಗೆ ತೀವ್ರ ಗಾಯವಾಗಿ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಡ್ರೈವರ್ ಮತ್ತು ಇನ್ನೊಬ್ಬರಿಗೆ ಅಲ್ಪಸ್ವಲ್ಪ ಗಾಯಗಳಾಗಿವೆ

ಗೋಮಟೇಶ್ವರನ ಮಹಾ ಮಸ್ತಕಾಭಿಷೇಕ

ಬರುವ ಫೆಬ್ರವರಿ ತಿಂಗಳಿನಲ್ಲಿ ಶ್ರವಣಬೆಳಗೊಳದಲ್ಲಿ ಶ್ರೀ ಗೋಮಟೇಶ್ವರ ಸ್ವಾಮಿಯವರಿಗೆ ನಡೆಯುವ ಮಹಾ ಮಸ್ತಕಾಭಿಷೇಕದ ಸಂಬಂಧವಾಗಿ ಶ್ರವಣಬೆಳಗೊಳದ ಜೈನ ಮಠದ ಶ್ರೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಠ ಸಂಬಂಧದ ಸಮಿತಿಯನ್ನೂ, ಹಾಸನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾರ್ವತ್ರಿಕ ಸಮಿತಿಯನ್ನೂ ರಚಿಸಲಾಗಿದೆ ಸಾರ್ವತ್ರಿಕ ಸಮಿತಿಯಲ್ಲಿ ರಾಜಧಾನಿಯ ಶ್ರೀಗಳು ಬಿ ಟಿ ಕಾಂತರಾಜಪ್ಪ, ಜಿ ಕೆ ಡಿ ಭರಮಯ್ಯ, ಎಸ್ ಎಸ್ ಪದ್ಮರಾಜಯ್ಯ, ಎಂ ವಿ. ಸನತ್ಕುಮಾರಯ್ಯ ಮುಂತಾದವರು ಇರುವರು ಮಂಗಳೂರಿನ ಶ್ರೀ ಜಿನರಾಜ ಹೆಗ್ಗಡೆ, ಧರ್ಮಸ್ಥಳದ ಶ್ರೀ ಡಿ ಮಂಜಯ್ಯ ಹೆಗ್ಗಡೆಯವರೂ ಇರುವರು

ಈಜಿಪ್ಟಿನ ಸೈನ್ಯ ಕ್ರಾಂತಿ ವಿರುದ್ಧ ಫರೂಕರ ಕ್ರಮ ?

ಈಜಿಪ್ಟಿನ ಸೈನ್ಯಗಳು ಹದಿನೈದು ದಿವಸಗಳ ಹಿಂದೆ ನಡೆಸಿದ ಕ್ರಾಂತಿಗೆ ಪ್ರತೀಕಾರಕ್ಕಾಗಿ ಮಾಜಿ ದೊರೆ ಫರೂಕರು ಏರ್ಪಾಡು ಮಾಡುವ ಯೋಜನೆಯಲ್ಲಿರುವರೆಂದು ವರದಿಗಳು ಬಂದಿವೆ ಕೈರೋವಿನ ಅಹ್ರಾಂ ಪತ್ರಿಕೆಯು ಹೇಳುವ ಪ್ರಕಾರ, ದೊರೆಗಳು ಈಜಿಪ್ಟಿನಲ್ಲಿರುವ ರಾಜ ಸೈನ್ಯಗಳ ಪೈಕಿ ಮುಖ್ಯವಾದ ೩ ಸಾವಿರ ಜನರನ್ನು ಆರಿಸಿ "ಬೆಂಬಲ ಪಡೆ" ಯೊಂದನ್ನು ನಿರ್ಮಿಸುವ ಪ್ರಯತ್ನದಲ್ಲಿರುವರೆಂದೂ, ಆ ಯೋಜನೆಯನ್ನು ಪ್ರಧಾನಿ ಮೆಹರ್‌ಪಾಷಾ ರವರಿಗೆ ಅವರು ಒಪ್ಪಿಸಲಿರುವರೆಂದೂ ತಿಳಿದುಬಂದಿದೆ.

ಶಾಲೆಗಳಲ್ಲಿ ಧೂಮಪಾನದ ನಿಷೇಧ

ಪಶ್ಚಿಮ ಬಂಗಾಳದ ಮಾಧ್ಯಮಿಕ ಶಿಕ್ಷಣ ಸಮಿತಿಯವರು ತಮ್ಮ ಕೈಕೆಳಗಿನ ಎಲ್ಲ ಶಾಲೆಗಳಲ್ಲೂ ಶುಚಿತ್ವವನ್ನು ಏರ್ಪಡಿಸುವ ಉದ್ದಿಶ್ಯ ಹೊಂದಿ, ಶಾಲಾ ಆವರಣಗಳಲ್ಲಿ ಧೂಮಪಾನ ಮಾಡುವುದು, ಉಗುಳುವುದು, ಗಲಾಟೆ ಮಾಡುವುದು, ಉದ್ದಿಶ್ಯವಿಲ್ಲದೇ ತಿರುಗುವುದು, ಬೆಂಚು, ಕುರ್ಚಿ ಇವುಗಳನ್ನು ಊನ ಮಾಡುವುದು ಇವೇ ಮೊದಲಾದುವನ್ನು ನಿಷೇಧಿಸಲು ತೀರ್ಮಾನಿಸಿರುವರು

ನೆಹರೂರವರಿಗೆ ನಿಜಲಿಂಗಪ್ಪನವರ ಪತ್ರ

ಕೋಲಾರ, ತುಮಕೂರು ಮತ್ತು ಚಿತ್ರದುರ್ಗಗಳಲ್ಲಿ ಸಕಾಲದಲ್ಲಿ ಮಳೆ ಬಾರದೆ ಪರಿಸ್ಥಿತಿಯು ವಿಷಮಿಸಿರುವುದರಿಂದ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಸ್ ನಿಜಲಿಂಗಪ್ಪನವರು ನೆಹರೂರವರಿಗೆ ಪತ್ರ ಬರೆದಿರುತ್ತಾರೆ.

ಬರುವ ವರ್ಷದಿಂದ ಕಾರ್ಮಿಕ ವಿಮಾ ಪದ್ಧತಿಯು ಜಾರಿ

ಬರುವ ವರ್ಷದಿಂದ ಕಾರ್ಮಿಕ ವಿಮಾ ಪದ್ಧತಿಯ ಕಾನೂನು ಪೂರ್ತಿಯಾಗಿ ಸಂಸ್ಥಾನದಲ್ಲಿ ಜಾರಿಗೆ ಬರುವುದೆಂದೂ, ಕಾರ್ಮಿಕರ ಪರಿಹಾರ ಶಾಸನ ಮತ್ತು ಹೆರಿಗೆ ಸೌಲಭ್ಯಗಳ ಬಗ್ಗೆ ಶಾಸನಗಳ ರೀತ್ಯಾ ಕೈಗಾರಿಕಾ ಮಾಲೀಕರುಗಳ ವಿಶೇಷ ಸಹಾಯ ದ್ರವ್ಯದ ನಿಧಿ ಸಂಬಂಧವಾದ ನಿಬಂಧನೆಗಳನ್ನು ಕಳೆದ ಫೆಬ್ರವರಿ ೨೪ ರಿಂದಲೇ ಜಾರಿಗೆ ಕೊಡಲಾಗಿದೆಯೆಂದೂ ಸೂಚಿಸಿ, ಸರ್ಕಾರದ ಪ್ರಕಟಣೆಯೊಂದು ಹೊರಟಿದೆ. ಈ ಶಾಸನವು ೨೦ ಅಥವಾ ಹೆಚ್ಚು ಮಂದಿ ಕೆಲಸಗಾರರು ಇರುವ ಕೈಗಾರಿಕೆಗಳಿಗೆ ಅನ್ವಯಿಸುವುದು ೪೦೦ ರೂ ಗೆ ಹೆಚ್ಚಾಗಿ ಸಂಬಳ ಪಡೆಯುವವರಿಗೆ ಈ ಶಾಸನದ ಸೌಲಭ್ಯವು ದೊರೆಯುವುದಿಲ್ಲ ಕಳೆದ ಫೆಬ್ರವರಿ ೨೪ ರಿಂದ ಕಾರ್ಮಿಕರ ಕೂಲಿಯ ಶೇ|| ೧೧ ರಷ್ಟು ದುಡ್ಡನ್ನು ಕೈಗಾರಿಕೆಯವರೂ, ಶೇ|| ೨|| ರಷ್ಟನ್ನು ಕಾರ್ಮಿಕರೂ ನೌಕರರ ವಿಮಾ ಕಾರ್ಪೊರೇಷನ್ನಿಗೆ ಕೊಡಬೇಕೆಂದು ಸೂಚಿಸಲಾಗಿದೆ. ಈ ಯೋಜನೆಯ ಸೌಲಭ್ಯಗಳು ಕಾರ್ಮಿಕರಿಗೆ ಬರುವ ವರ್ಷದಿಂದ ದೊರೆಯುವುವು.

ವಾರ ಭವಿಷ್ಯ

ತಾ|| ೧೦-೮-೫೨ ರಿಂದ ೧೬-೮-೫೨ ರ ವರೆಗೆ

ಮೇಷ — ಆರೋಗ್ಯ ಚೆನ್ನಾಗಿರದು ನೆರೆಹೊರೆಯಲ್ಲಿ ಕಲಹ ಸಂಭವ ಆರ್ಥಿಕ ಮುಗ್ಗಟ್ಟು ನಿರುತ್ಸಾಹ ತಾ|| ೧೩, ೧೪ ಚಿಂತಾ ನಿವಾರಣೆ

ವೃಷಭ — ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ, ವ್ಯವಹಾರಗಳಲ್ಲಿ ತೊಂದರೆ ವಿಶೇಷ ಕಾರ್ಯಗಳಿಗೆ ಸುಸಮಯ. ತಾ|| ೧೧, ೧೨ ಖರ್ಚು, ಆಪ್ತರ ಆಗಮನ

ಮಿಥುನ — ಆರೋಗ್ಯ ಉತ್ತಮ ಎದುರಾಳಿಗಳ ಪರಾಜಯ ನೌಕರಿಯ ಉನ್ನತಿ ಧಾರ್ಮಿಕ ಕೆಲಸಗಳು ಜರುಗುವುವು ತಾ|| ೧೩, ೧೪ ಮನರಂಜನೆ, ಖರ್ಚು

ಕರ್ಕ — ಆರೋಗ್ಯ ಸುಧಾರಿಸುವುದು ಆರ್ಥಿಕ ಸ್ಥಿತಿ ಉತ್ತಮ ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ ತಾ|| ೧೩, ೧೪ ಧನ ಲಾಭ, ಸುವಾರ್ತೆ

ಸಿಂಹ — ಆರೋಗ್ಯ ಚೆನ್ನಾಗಿರದು ವ್ಯವಹಾರಗಳಲ್ಲಿ ಅಡ್ಡಿ ಗೊಂದಲ ಹೆಚ್ಚು ಕಷ್ಟ ಪರಂಪರೆ ತಾ|| ೧೧, ೧೨ ವಿಶೇಷ ಪತ್ರಾಗಮನ

ಕನ್ಯಾ — ಆರೋಗ್ಯ ಚೆನ್ನಾಗಿರವುದು ಶತ್ರುಗಳ ಪರಾಜಯ ಆರ್ಥಿಕ ಸ್ಥಿತಿ ಉತ್ತಮ ತಾ|| ೧೦, ೧೧, ೧೨ ಚೊಕ್ಕ ಭೋಜನ, ಖರ್ಚು

ತುಲಾ — ಆರೋಗ್ಯ ತೃಪ್ತಿಕರವಾಗಿರುವುದು. ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ ಪ್ರವಾಸ ಸಂಭವ ತಾ|| ೧೩, ೧೪ ಆಪ್ತರ ಆಗಮನ, ಖರ್ಚು ಹೆಚ್ಚು

ವೃಶ್ಚಿಕ — ಆರೋಗ್ಯ ಸಾಧಾರಣ ಅನಿರೀಕ್ಷಿತ ಕಲಹ ಪ್ರವಾಸ ಉತ್ತಮ. ಜಗುಪ್ಸೆ ಹೆಚ್ಚು. ಲೇಖಕರಿಗೆ ತೊಂದರೆ ತಾ|| ೧೩, ೧೪ ಮಿತ್ರರ ಸಹಾಯ, ಚಿಂತಾ ನಾಶ

ಧನು — ಆರೋಗ್ಯ ಉತ್ತಮ ಕೈಗೊಂಡ ಕಾರ್ಯಗಳಿಗೆ ವಿಘ್ನ ಬೇಸರಿಕೆ ಹೆಚ್ಚು ಪ್ರವಾಸ ಬೇಡ ಅಪಘಾತ ಸಂಭವ ತಾ|| ೧೩, ೧೪ ವಿಶೇಷ ಪತ್ರಾಗಮನ

ಮಕರ — ಕೈಗೊಂಡ ಕಾರ್ಯ ಸಿದ್ಧಿ. ವ್ಯಾಪಾರಾದಿಗಳಲ್ಲಿ ಲಾಭ ಶತ್ರುಗಳ ಸೋಲು ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಉತ್ತಮ ತಾ|| ೧೧, ೧೨ ಅತಿಥಿಗಳ ಆಗಮನ, ಖರ್ಚು

ಕುಂಭ — ಆರೋಗ್ಯ ಉತ್ತಮ ಸುಖಪ್ರವಾಸ ಆರ್ಥಿಕ ಸ್ಥಿತಿ ಉತ್ತಮ ಕೈಗೊಂಡ ಕಾರ್ಯ ಸಿದ್ಧಿ. ವಿದ್ಯಾರ್ಥಿಗಳಿಗೆ ಯಶಸ್ಸು ತಾ|| ೧೧, ೧೨ ಸುವಾರ್ತೆ, ಚೊಕ್ಕ ಭೋಜನ

ಮೀನ — ಆರೋಗ್ಯ ಉತ್ತಮ ಹಣಕಾಸಿನ ಸ್ಥಿತಿ ಸುಧಾರಿಸುವುದು ನೌಕರಿಯಲ್ಲಿ ಪ್ರಗತಿ ಸುಖಕರ ಪ್ರವಾಸ. ಕೌಟುಂಬಿಕ ಸೌಖ್ಯ ತಾ|| ೧೩, ೧೪ ಸುವಾರ್ತೆ, ಧನಾಗಮನ

Edited, Printed and Published by A R. Nagarajan at Sadhvi Press, D Subbiah Road, Mysore

ಪ್ರತಿ ಬರ್ಮಾಯನಿಗೂ ಮನೆ ಮತ್ತು ಮೋಟಾರು

ಬರ್ಮಾವನ್ನು ಪ್ರಜೆಗಳ ಕ್ಷೇಮಾಭಿಕಸಾ ರಾಜ್ಯವನ್ನಾಗಿ ಮಾಡುವ ಗುರಿಯುಳ್ಳ ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳನ್ನು ತಯಾರಿಸಲು ಅಲ್ಲಿನ ಪ್ರಧಾನಿ ನೂರವರು ೬೦೦ ಜನ ಪ್ರತಿನಿಧಿಗಳ ಸಮ್ಮೇಳನವೊಂದನ್ನು ೪ ನೇ ತಾ|| ರಂಗೂನಿನಲ್ಲಿ ಕರೆದಿದ್ದರು ಪ್ರತಿಯೊಬ್ಬ ಪ್ರಜೆಗೂ ಒಂದು ಮನೆ, ಒಂದು ಕಾರು ಮತ್ತು ತಿಂಗಳಿಗೆ ೮೦೦ ರೂ. ವರಮಾನ ಬರುವಂತೆ ಮಾಡುವುದೇ ರಾಜ್ಯದ ಗುರಿಯೆಂದೂ ಅವರು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

	ಪಲ್ಲ ೧ಕ್ಕೆ ರೂ ಇಂದ	ರೂ ಗೆ
ನೆಲಗಡಲೆ	೯ ೧೩ ೦	೨೧ ೨ ೦
ಎಳ್ಳು	೬೧ ೬ ೦	೮೦ ೦ ೦
ಹರಳು ಬೀಜ	೪೩ ೦ ೦	
ಹುರುಳಿ	೪೨ ೪ ೮	
ಹೆಸರು	೪೭ ೧೪-೦	೫೮ ೨ ೦
ಹೊಂಗೇಬೀಜ	೧೯ ೦ ೦	
ಉದ್ದು	೬೮ ೦ ೦	೭೦-೩ ೮
ಹಲಸಂದೆ	೫೫ [illegible] ೦	೬೭ ೪ ೮
ಮೆಣಸಿನಕಾಯಿ ಮಣ ೧ಕ್ಕೆ	೧೨ ೦ ೦	
ಹುಣಿಸೇಹಣ್ಣು	೩ ೮-೦	೫ ೧೩ ೮
ಸೀಗೆಕಾಯಿ	೪ ೯ ೦	೪ ೧೫ ೮
ತೆಂಗಿನಕಾಯಿ ೧೦೦	೬೪ ೦ ೦	೭೦ ೦ ೦

ಹರಿಕಥೆ

ರಾಜಧಾನಿಯ ...ಸ್ವಾಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಶ್ರೀ ಟಿ ಆರ್ ಗುರುರಾಜ ನಾಯ್ಡು ರವರಿಂದ ಇಂದು ರಾಮಾಂಜನೇಯ ಸಂವಾದ ಮತ್ತು ೧೨ ನೇ ತಾ|| ಗೋಕುಲಾಷ್ಟಮಿ ಪ್ರಯುಕ್ತ ಕೃಷ್ಣಜನನ ಎಂಬ ಹರಿಕಥೆಗಳು ಸಂಜೆ ೭ ಘಂಟೆಗೆ ನಡೆಯುವುವು

ಮೈಸೂರು ಬ್ಯಾಂಕ್ ಶಾಖೆಯ ಮ್ಯಾನೇಜರರ ನಿವೃತ್ತಿ

ರಾಜಧಾನಿಯಲ್ಲಿರುವ ಮೈಸೂರು ಬ್ಯಾಂಕಿನ ಶಾಖೆಯ ಮ್ಯಾನೇಜರರಾದ ಶ್ರೀ ಎಲ್ ಎಸ್ ವಿ ರಾಮಯ್ಯಂಗ್ ರವರು ೩೩ ವರ್ಷಗಳ ಕಾಲ ಸೇವೆ ಸಲ್ಲಿಸಿ, ಸಧ್ಯದಲ್ಲೇ ಕೆಲಸದಿಂದ ನಿವೃತ್ತರಾಗಲಿರುವರೆಂದು ತಿಳಿದುಬಂದಿದೆ

ರಾಜಕಮಲ್

8 8-52 ರಿಂದ ಅಮೋಘ ಪ್ರಾರಂಭ

ತ್ಯಾಗಯ್ಯ

ಶ್ರೀ (ತೆಲುಗು) ಶ್ರೀ

SREE GANESHA

TALKIES

From 11 8 52 For 2 Days

Warner s

KEY LARGO

With Humphrey Bogart, Edward G Robinson and Lionel Barrymore

FROM 13—8—52

ELLEN

ಗಾಂಧಿ ವಿಗ್ರಹ ಚೂರು ಚೂರು

ರಾಯಚೂರು ಜಿಲ್ಲೆಯ ಆಲಂಪುರದಲ್ಲಿರುವ ಗಾಂಧಿಜಿಯವರ ಪ್ರತಿಮೆಯನ್ನು ಕಳೆದ ವಾರ ಕೆಲವು ದುಷ್ಕರ್ಮಿಗಳು ಒಡೆದು ಚೂರು ಚೂರು ಮಾಡಿರುವರೆಂದು ವರದಿಯಾಗಿದೆ ಮಯೂರದಲ್ಲಿ ರಾಜಾಜಿ ಪಾರ್ಕಿನಲ್ಲಿಡಲಾಗಿದ್ದ ಮಹಾತ್ಮರ ಪ್ರತಿಮೆಯು ಕೆಳಗೆ ಬಿದ್ದು ಅದರ ಪಾದಗಳ ಛೇದನವಾಗಿರುವುದೂ ಪತ್ತೆಯಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಅನಂತಲಕ್ಷ್ಮಿ ಪಟಗೋಪನ್ ರಿಕಾರ್ಡ್ ಸಂಗೀತ ಮಧ್ಯಾಹ್ನ ಚಿತ್ರ ಸಂಗೀತ ರಿಕಾರ್ಡುಗಳು ಸಂಜೆ ೫ ೩೦ ಮತ್ತು ೮ ಪಿಟೀಲು ವಾದನ ಎಂ ಶಂಕರಪ್ಪ ೭ ನಟನ ಗಾನ ,ಮಲ್ಲಿಕಾರ್ಜುನಪ್ಪ ೭ ೩೦ ಸ್ಥಳ ಪುರಾಣಗಳು, ಕನ್ನಡದಲ್ಲಿ ಭಾಷಣ ಡಿ ಎಸ್ ಅಚ್ಯುತರಾವ್ ೮ ೩೦ ಮತ್ತು ೯ ೩೦ ಸಂಗೀತ ಎಂ ಆರ್ ಸರೋಜಿನಿ

ಹಿಂದೂ ವಿವಾಹದ ಬಗ್ಗೆ ಮತ್ತೊಂದು ಮಸೂದೆ

ಹಿಂದೂ ವಿವಾಹ ಪದ್ಧತಿಯ ಸಂಬಂಧವಾದ ಹೊಸ ಕಾನೂನಿನ ಮಸೂದೆಯನ್ನು ಮುಂದಿನ ಪಾರ್ಲಿಮೆಂಟಿನ ಅಧಿವೇಶನದಲ್ಲಿ ಮಂಡಿಸಲಾಗುವುದೆಂದು ಕೇಂದ್ರ ನ್ಯಾಯಾಂಗ ಮಂತ್ರಿ ಬಿಸ್ವಾಸ್‌ರವರು ತಿಳಿಸಿರುತ್ತಾರೆ ಈ ಮಸೂದೆಯು ಡಾ|| ಅಂಬೇಡ್ಕರರ ಮಸೂದೆಯ ಪ್ರತಿಬಿಂಬವಲ್ಲವೆಂದೂ, ಬೇರೊಂದು ವಿಧಾನದಲ್ಲಿ ವಿವಾಹದ ಪದ್ಧತಿಯ ಮಾರ್ಪಾಡಿನ ಬಗ್ಗೆ ಸೂಕ್ತ ಶಾಸನ ಮಾಡಲಾಗುವುದೆಂದೂ ಅವರು ಹೇಳುವರು

ಕಂದ

ರಾಜಧಾನಿಯ ಜಯನಗರದಲ್ಲಿರುವ ಶಿಶು ಸಾಹಿತ್ಯ ಮಾಲೆಯವರು ಪ್ರಕಟಿಸಿರುವ ಕಂದ ಮಾಸ ಪತ್ರಿಕೆಯು ನಮ್ಮ ಕೈ ಸೇರಿದೆ ಸಚಿತ್ರವಾಗಿ, ಬೋಧಪ್ರದವಾದ ಕಥೆಗಳನ್ನುಳ್ಳ ಈ ಪತ್ರಿಕೆಯು ಮಕ್ಕಳಿಗೆ ಆಕರ್ಷಣೀಯವಾಗಿದೆ

THE MYSORE CHEMICALS & FERTILISERS Ltd.,

MYSORE

NOTICE

Notice is hereby given that the Sixteenth Ordinary General Meeting of the Shareholders of the Mysore Chemicals and Fertilisers Ltd Mysore, will be held at 4 30 P M on Saturday the 6th September 1952 at the Company's Registered Office at 1129 Vanivilas Road Mysore to transact the following business —

1 To receive and adopt the Directors Report and Audited Balance Sheet and Profit and Loss Account, for the year ending 31st March 1952 with the Auditors Report

2 To declare Dividend

3 To approve the donation of Rs 625/ made to the Vallabhbhai Patel National Memorial Fund

4 To elect Directors in place of
(i) Sri Mooljee Ramji
(ii) Rajah Sir M A Muthiah Chettiar of Chettinad,
(iii) Capt Rao Bahadur [illegible] Mudaliar,
who retire and being eligible offer themselves for re-election

5 To appoint Auditors for the year 1952-53 and to fix up their remuneration. Messrs S R. Mandre and B K Ramadhyani and Co Auditors who retire and being eligible offer themselves for re-election

Under Article 29 of the Articles of Association of the Company, the Share Transfer Books of the Company will be closed from 25th August 1952 to 6th September 1952 (both days inclusive)

By Order of the Board,
C N KEMPANNA
Secretary

Mysore
Dated 24-7-1952

N. B (1) The Directors have recommended the payment of 9 per cent Dividend

(2) The Dividend when sanctioned will be made payable at the Indian Bank, Ltd Bangalore City, on and after 1st October 1952 The dividend warrants will be posted to those Shareholders whose names appear in the Register of the Company as on 23rd August 1952 The Shareholders are requested to intimate the change in the address, if any, immediately.

ಟೆಲಿಫೋನ್ ನಂ 792 || ವರ್ಷ ಪ್ರಾರಂಭ || ಈ ದಿನದ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೧-೮ ೧೯೫೩ [ಸಂಚಿಕೆ ೧೩

ಕಾಂ|| ಅಧ್ಯಕ್ಷರಾಗಲು ! ಶ್ರೀ ಟಿ ! ನೆಹರೂ ಅಸಮ್ಮತಿ

ನೆಹರೂರವರಿಂದ ಕಾಂಗ್ರೆಸ್ ಅಧ್ಯಕ್ಷತೆಯು ನಿರಾಕರಣೆ

ಪುನಃ ಕಾಂಗ್ರೆಸ್ ಅಧ್ಯಕ್ಷರಾಗಿರಲು ತಮಗೆ ಖಂಡಿತವಾಗಿಯೂ ಇಷ್ಟವಿಲ್ಲವೆಂದು ಪಂ|| ನೆಹರೂರವರು ಕಾಂ|| ಕಾರ್ಯಕಾರೀ ಸಮಿತಿಗೆ ತಿಳಿಸಿ ನಿರಾಕರಿಸಿರುವುದು ಗೊತ್ತಾಗಿದೆ ನೆಹರೂರವರು ಪ್ರಧಾನಿಯಾಗಿದ್ದುಕೊಂಡು ಕಾಂಗ್ರೆಸ್ ಅಧ್ಯಕ್ಷರಾಗಿಯೂ ಇರುವ ಸಂದರ್ಭದಲ್ಲಿ ಅವರಿಗೆ ಕೆಲಸದ ಹೊರೆಯನ್ನು ಕಡಿಮೆ ಮಾಡುವ ಸಲುವಾಗಿ ಕಾಂಗ್ರೆಸ್ ಉಪಾಧ್ಯಕ್ಷರನ್ನು ನೇಮಿಸುವ ಆಲೋಚನೆಯಾಗುತ್ತಿದೆಯೆಂದು ತಿಳಿದುಬಂದಿದೆ

ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ದೆಹಲಿಯಲ್ಲಿ ಸಮಾವೇಶಗೊಂಡು ಕಾಂಗ್ರೆಸ್ ಪಕ್ಷದ ಅಂಗರಚನೆಯ ತಿದ್ದುಪಡಿ ಬಗ್ಗೆ ಒಂದು ಸಲಹೆಗಳ ಪರಿಶೀಲನೆ ನಡೆಸಿತು ಕಾಂಗ್ರೆಸ್ಸಿಗೆ ಉಪಾಧ್ಯಕ್ಷರನ್ನು ನೇಮಿಸಬಾರದೆಂದೂ ಸಭೆಯಲ್ಲಿ ತೀರ್ಮಾನಿಸಲಾಯಿತು

ವಿದೇಶೀ ಸಂಸ್ಥೆಗಳ ಭಾರತೀಯ ನೌಕರರ ಉಚ್ಚಾಟನೆ

ಭಾರತದಲ್ಲಿ ಸ್ಥಾಪಿತವಾಗಿರುವ ವಿದೇಶೀ ವ್ಯಾಪಾರ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳವರು ತಮ್ಮಲ್ಲಿರುವ ನೌಕರವರ್ಗದ ಭಾರತೀಯ ನೌಕರರನ್ನು ಕೆಲಸದಿಂದ ತೆಗೆದುಹಾಕಿ ಸ್ಥಾನಗಳಿಗೆ ವಿದೇಶೀಯರನ್ನು ನೇಮಿಸಿಕೊಳ್ಳುತ್ತಿರುವರೆಂಬ ಸಂಗತಿಯು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿರುವುದೆಂದೂ, ಈ ಬಗ್ಗೆ ತನಿಖೆ ನಡೆಸಲು ಕೇಂದ್ರ ಸರ್ಕಾರದವರು ವಾಣಿಜ್ಯ ಮತ್ತು ಕೈಗಾರಿಕಾ ಖಾತೆಗೆ ಸೂಚನೆಯಿತ್ತಿರುವರೆಂದೂ ತಿಳಿದು ಬಂದಿದೆ ಇದರ ಪ್ರಕಾರ ವಿದೇಶೀ ಸಂಸ್ಥೆಗಳಲ್ಲಿನ ಭಾರತೀಯ ನೌಕರರ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತಿದೆಯೆಂದೂ ಹೇಳಲಾಗಿದೆ

ವರುಣನನ್ನು ಒಲಿಸಿ ಕೊಳ್ಳಲು ಕಪ್ಪೆಗಳ ವಿವಾಹ

ದಿಬ್ರುಗಡದಲ್ಲಿ ಬಹಳ ದಿನಗಳಿಂದ ಮಳೆ ಬಾರದಿರುವುದರಿಂದ ಅಲ್ಲಿನ ವ್ಯಕ್ತಿಯೊಬ್ಬನ ಮನೆಯಲ್ಲೆಂದು ಹೇಳಲಾದ ಕಪ್ಪೆಗಳ ವಿವಾಹವನ್ನು ಧಾರ್ಮಿಕ ವಿಧಿಗಳಿಂದಲೂ ನಡೆಸುತ್ತಿರುವರೆಂದೂ ಅದರಿಂದ ವರುಣನು ತನ್ನ ಮುನಿಸಿನ ಕಾರಣ ವರ್ಷಿಸಲು ಪ್ರಾರಂಭಿಸುವನೆಂದು ಜನರು ನಂಬಿರುವರೆಂದೂ ಹೇಳಲಾಗಿದೆ

ಯುವತಿಯ ತಲೆ ಕಂದಲಿಗೆ ೭ ಸಾವಿರ ಪೌಂಡು ಬೆಲೆ

ಬ್ರಿಟನ್ನಿನ ಕಾರ್ನ್‌ವಾಲ್‌ನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಯುವತಿಯೊಬ್ಬಳ ಕೂದಲು ಒಂದು ಯಂತ್ರಕ್ಕೆ ಸಿಕ್ಕಿ ಕಿತ್ತುಬಂದು ಅವಳ ತಲೆಗೆ ಗಾಯವಾಯಿತೆಂದೂ, ಆಕೆಯು ಕೊಟ್ಟ ದಾವೆಯಲ್ಲಿ ಅಲ್ಲಿನ ನ್ಯಾಯಾಲಯವು ೭೦೦೦ ಪೌಂಡು ಪರಿಹಾರವನ್ನು ಕೊಡಬೇಕೆಂದು ಆಜ್ಞೆ ಮಾಡಿತೆಂದೂ ವರದಿಯಾಗಿದೆ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೧

ಭಾರತದ ಸ್ವಾತಂತ್ರ್ಯವು ಇದೇ ೧೫ನೇ ತಾರೀಖು ಶುಕ್ರವಾರ ಆಚರಿಸಲಿರುವ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನೈಸೂರು ಪುರಸಭೆಯವರು ಅಂದು ಬೆಳಗ್ಗೆ ೮ ಘಂಟೆಗೆ ರಂಗಾಚಾರ್ಲು ಸ್ಮಾರಕ ಭವನದ ಆವರಣದಲ್ಲಿ ಧ್ವಜಾರೋಹಣ ಸಮಾರಂಭವನ್ನು ಏರ್ಪಡಿಸಿದ್ದಾರೆ ಪುರಜನರು ಈ ಸಮಾರಂಭದಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ಪುರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಸ್ವಾಮಿ ಅಯ್ಯರು ಪ್ರಾರ್ಥಿಸಿರುತ್ತಾರೆ

ದಂಡತಿಯನ್ನು ಇರಿದು ಪೊಲೀಸರ ವಶಕ್ಕೆ

ಬೆಂಗಳೂರಿನ ಸುಂದರರಾಜು ಎಂಬುವರ ಪತ್ನಿ ಗಂಗಮ್ಮ ಎಂಬಾಕೆಯು ಮನೆಯಿಂದ ಆತನನ್ನು ಬಿಟ್ಟು ಸಾಗರದಲ್ಲಿ ನೆಲಸಿದ್ದಳೆಂದೂ ಸುಂದರರಾಜುವು ಎಷ್ಟು ಹೇಳಿದರೂ ಕೇಳದಿದ್ದುದರಿಂದ ಆತನು ಕೋಪಗೊಂಡು ಚೂರಿಯಿಂದ ಆಕೆಯನ್ನು ತಿವಿದು ರಕ್ತದ ಕಾಲುವೆ ಹರಿಯುವಂತೆ ಮಾಡಿ ತನ್ನ ಮಗುವಿನೊಡನೆ ಪೊಲೀಸರ ವಶವಾದನೆಂದೂ ವರದಿಯಾಗಿದೆ ಗಂಗಮ್ಮನನ್ನು ಆಸ್ಪತ್ರೆಗೆ ಸೇರಿಸಲಾಗಿದೆ

ಸರ್ಕಾರದ ಮೇಲೆ ಪೌರ ಸಭೆಯ ದಾವಾ

ಕಲ್ಕತ್ತಾ ನಗರದ ಪತಿತರ ಅಂಗಡಿಗಳ ರಹದಾರಿ ರುಸುಂ ಅನ್ನು ಸರ್ಕಾರದವರು ಪೌರಸಭೆಗೆ ಮಾಮೂಲಾಗಿ ಕೊಡುತ್ತಿದ್ದು ೧೯೫೦ನೇ ಸಾಲಿನ ರುಸುಂ ಅನ್ನು ಪೌರಸಭೆಯವರು ಕೇಳಲಾಗಿ ಅದನ್ನು ಕೊಡಬೇಕಾಗಿಲ್ಲವೆಂದು ಸರ್ಕಾರದವರು ಬರೆಸಿ, ಆದರ ಬದಲಿಗೆ ತಾವು ಪೌರಸಭೆಗೆ ಕೊಟ್ಟಿದ್ದ ೩೦ ಸಾವಿರ ರೂ ಗಳ ಮೊಬಲಗನ್ನು ಹಿಂದಕ್ಕೆ ಕೊಡಬೇಕೆಂದು ತಿಳಿಸಿರುವ ರೆಂದು ಹೇಳಲಾಗಿದೆ ಈ ಸಂಬಂಧವಾಗಿ ಪೌರಸಭೆಯವರು ಸರ್ಕಾರದ ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ದಾವಾ ಹೂಡಿರುವರೆಂದು ತಿಳಿದುಬಂದಿದೆ

ನೇಪಾಳದ ಸರ್ಕಾರ ರಾಜೀನಾಮೆ ಇತ್ತಿತು

ನೇಪಾಳದ ಪ್ರಧಾನಿ ಶ್ರೀ ಎಂ ಪಿ ಕೊಯಿರಾಲಾರವರು ನೆನ್ನೆ ತಮ್ಮ ಸಹೋದ್ಯೋಗಿಗಳೊಡನೆ, ರಾಜಾ ತ್ರಿಭುವನರಿಗೆ ರಾಜೀನಾಮೆಯನ್ನು ಸಲ್ಲಿಸಿದರು ಈ ಬಗ್ಗೆ ಮುಂದಿನ ತೀರ್ಮಾನ ಕೈಗೊಳ್ಳುವವರೆಗೆ ಶ್ರೀ ಕೊಯಿರಾಲಾರವರೇ ಅಧಿಕಾರದಲ್ಲಿ ಮುಂದುವರಿಯುವಂತೆ ಸೂಚಿಸಲಾಗಿದೆ ನೇಪಾಳದ ಮಂತ್ರಿಮಂಡಲದ ರಾಜೀನಾಮೆ ಸ್ವೀಕಾರವಾಗಬಹುದಲ್ಲವೆಂದೂ ಹೇಳಲಾಗಿದೆ ನೇಪಾಳದ ಕಾಂಗ್ರೆಸ್ಸಿಗೂ ಕೊಯಿರಾಲಾರವರಿಗೂ ಇರುವ ಬಿಕ್ಕಟ್ಟಿನ ಪರಿಣಾಮವಾಗಿ ಕಾಂಗ್ರೆಸ್ಸಿನ ಸೂಚನೆಯ ಪ್ರಕಾರ ರಾಜೀನಾಮೆಯಿತ್ತ ಅವರು ರಾಜ್ಯದ ಉದ್ಧಾರದ ದೃಷ್ಟಿಯಿಂದಲೇ ತಾವು ರಾಜೀನಾಮೆ ಕೊಟ್ಟುದಾಗಿ ಪ್ರಧಾನಿ ಕೊಯಿರಾಲಾರವರು ಬರೆದು ಹೇಳಿದ್ದಾರೆಂದು ತಿಳಿಸಿರುವರು

ಜಪಾನಿನಲ್ಲಿ ಕಾಮನ್ವೆಲ್ತ್ ಸೈನ್ಯ ಶಿಬಿರ

ವಿಶ್ವಸಂಸ್ಥೆಯ ಪರವಾಗಿ ಹೋರಾಟ ನಡೆಸುತ್ತಿರುವ ಎಲ್ಲ ಕಾಮನ್ವೆಲ್ತ್ ರಾಷ್ಟ್ರಗಳು ಜಪಾನಿನಲ್ಲಿ ತಮ್ಮ ಸೈನ್ಯ ಶಿಬಿರವನ್ನು ಸ್ಥಾಪಿಸಿಕೊಳ್ಳುವ ಬಗ್ಗೆ ಜಪಾನಿಗೂ ಮತ್ತು ವಿಶ್ವಸಂಸ್ಥೆಗೂ ಒಂದು ತಾತ್ಕಾಲಿಕ ಒಪ್ಪಂದವಾಗಿರುವುದೆಂದು ತಿಳಿದುಬಂದಿದೆ ಇದರ ಪ್ರಕಾರ ಹಿರೋಷಿಮಾದ ಕೂರೆಯಲ್ಲಿ ಕಾಮನ್ವೆಲ್ತಿನ ಭೂ ಸೈನ್ಯಗಳನ್ನೂ ಮತ್ತು ಕ್ಯೂರೆ ಎಂಬ ಸ್ಥಳದಲ್ಲಿ ನೌಕಾ ಸೈನ್ಯಗಳನ್ನೂ ಇಡಲಾಗುವುದೆಂದು ಹೇಳಲಾಗಿದೆ

ಭಾರತಕ್ಕೆ ಜಮ್ಮುವನ್ನು ಸೇರಿಸಿಕೊಳ್ಳಲು ಮನವಿ

ಕಾಶ್ಮೀರದ ಪ್ರಜಾ ಪರಿಷತ್ತಿನ ಸಮ್ಮೇಳನವು ಜಮ್ಮುವಿನಲ್ಲಿ ಸಮಾವೇಶಗೊಂಡು ಜಮ್ಮು ಮತ್ತು ಕಾಶ್ಮೀರಗಳು ಭಾರತದೊಡನೆ ಪೂರ್ಣವಾಗಿ ಐಕ್ಯಗೊಂಡು, ಅಲ್ಲಿನ ರಾಜ್ಯಾಂಗ ನಿಬಂಧನೆಗೆ ಒಳಪಡಬೇಕೆಂದೂ, ಹಾಗಾಗದ ಪಕ್ಷದಲ್ಲಿ ಕಾಶ್ಮೀರವನ್ನು ಬಿಟ್ಟು ಲಡಕ್ ಮತ್ತು ಜಮ್ಮುವನ್ನು ಪೂರ್ಣವಾಗಿ ಭಾರತಕ್ಕೆ ಸೇರಿಸಿಕೊಳ್ಳಬೇಕೆಂದೂ ಭಾರತ ಸರ್ಕಾರವನ್ನು ಕೋರುವ ನಿರ್ಣಯವನ್ನು ಮಾಡಿತು

ಕ್ಷಾಮವನ್ನು ನಿರ್ಮೂಲಗೊಳಿಸಲು ಯೋಜನೆ

ಬೆಂಗಳೂರು ೧೧

ಸಂಸ್ಥಾನದಲ್ಲಿ ಕ್ಷಾಮ ಬಾಧೆಯನ್ನು ಶಾಶ್ವತವಾಗಿ ನಿರ್ಮೂಲಗೊಳಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರಿಸುವ ಹೊಣೆಯನ್ನು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ರಿವಿನ್ಯೂ ಕಮಿಷನರಾದ ಶ್ರೀ ಎನ್ ಮಾಧವರಾಯರಿಗೆ ಸೂಚನೆಯಿತ್ತಿರುವರೆಂದೂ, ಶ್ರೀ ರಾಯರು ಇದೇ ಕಾರ್ಯದಲ್ಲಿ ನಿರತರಾಗಿರುವರೆಂದೂ ತಿಳಿದು ಬಂದಿದೆ

೨೦ ವರ್ಷಗಳ ಹಿಂದೆ ಅಪಹೃತನಾಗಿದ್ದ ಬಾಲಕ

ಬಂಗಾಳದ ಮುರ್ಶಿದಾಬಾದ್ ಗ್ರಾಮಸ್ಥನೊಬ್ಬನು ಈಗ ೨೦ ವರ್ಷಗಳ ಹಿಂದೆ ತನ್ನ ೮ ವರ್ಷದ ಮಗನೊಡನೆ ಯಾತ್ರೆ ಹೋಗಿದ್ದಾಗ ಸಾಧುಗಳು ಆ ಬಾಲಕನನ್ನು ಅಪಹರಿಸಿ ಭಿಕ್ಷಾಟನೆಯಲ್ಲಿ ತೊಡಗಿಸಿದ್ದರೆಂದೂ ಆ ನಂತರ ಯಾರೊ ಒಬ್ಬರು ಅವನನ್ನು ಸಾಧುಗಳ ಕೈಯಿಂದ ತಪ್ಪಿಸಿ ಶಾಲೆಗೆ ಸೇರಿಸಿದರೆಂದೂ, ಈಗ ಆತನ ತನ್ನ ತಂದೆಯ ವಾಸಸ್ಥಾನವನ್ನು ಪತ್ತೆ ಹಚ್ಚುವುದಕ್ಕಾಗಿ ಅಧಿಕಾರಿಗಳ ಸಹಾಯವನ್ನು ಕೋರಿರುವನೆಂದೂ ವರದಿಯಾಗಿದೆ ಅವನು ತನ್ನ ತಂದೆಯ ಮತ್ತು ಸ್ವಸ್ಥಾನದ ಹೆಸರುಗಳನ್ನು ಮರೆತಿಲ್ಲ

ಕಾಶ್ಮೀರದ ಅಧಿಪತಿಯಾಗಲು ಕರಣಸಿಂಗರ ಒಪ್ಪಿಗೆ

ಕಾಶ್ಮೀರದ ಯುವರಾಜರಾದ ಕರಣಸಿಂಗರನ್ನು ಅಲ್ಲಿನ ಚುನಾಯಿತ ಅಧಿಪತಿಯಾಗಿ ಪ್ರಜೆಗಳು ಆರಿಸಿದಲ್ಲಿ ಅದಕ್ಕೆ ಅವರು ಸಮ್ಮತಿಸುವರೆಂದು ದೆಹಲಿಯ ಆವರಣಗಳಲ್ಲಿ ಹೇಳಲಾಗುತ್ತಿದೆ

ಪ್ರಯಾಣಿಕರ ಬಸ್ಸಿನ ಮೇಲೆ ಧಾಳಿ

ಮಳವಳ್ಳಿ ತಾಲ್ಲೂಕು ಕಿರುಗಾವಲು ಹೋಬಳಿ ಕನ್ನಹಳ್ಳಿ ಗ್ರಾಮದ ಬಳಿ ಮೊನ್ನೆ ದಿನ ಅರಸೀಕೆರೆ ಯೂನಿಯನ್ ಬಸ್ ಸರ್ವಿಸು ಬಂದಾಗ ಹಲವರು ಅದನ್ನು ತಡೆದು ನಿಲ್ಲಿಸಿ ಡ್ರೈವರ್ ಮತ್ತು ಕಂಡಕ್ಟರನ್ನೂ, ಪ್ರಯಾಣಿಕರನ್ನೂ ಹೊಡೆದು ಗಾಯಪಡಿಸಿ ಅವರ ಬಳಿ ಇದ್ದ ಹಣವನ್ನೂ ಮತ್ತು ಬಸ್ಸಿನ ಮೇಲಿದ್ದ ಸಾಮಾನುಗಳನ್ನೂ ಅಪಹರಿಸಿಕೊಂಡು ಪರಾರಿಯಾದರೆಂದು ಹೇಳಲಾಗಿದೆ ಮಳವಳ್ಳಿಯ ಪೊಲೀಸರಿಗೆ ಈ ಬಗ್ಗೆ ದೂರು ಕೊಡಲಾಗಿ ಅವರು ಐದು ಮಂದಿಯನ್ನು ಬಂಧಿಸಿ ತನಿಖೆ ಕ್ರಮ ಜರುಗಿಸುತ್ತಿರುವರೆಂದು ವರದಿಯಾಗಿದೆ

ಉಪಾಧ್ಯಾಯರ ಕಾಲೇಜಿನ ರಜತ ಮಹೋತ್ಸವ

ರಾಜಧಾನಿಯ ಉಪಾಧ್ಯಾಯರ ಶಿಕ್ಷಣ ಕಾಲೇಜಿನ ರಜತ ಮಹೋತ್ಸವವು ಇದೇ ತಿಂಗಳು ೩೦ ಮತ್ತು ೩೧ನೇ ತಾರೀಖುಗಳಲ್ಲಿ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಕಾಲೇಜಿನ ಹಳೇ ವಿದ್ಯಾರ್ಥಿಗಳೆಲ್ಲರೂ ತಮ್ಮ ಚಂದಾಹಣವನ್ನು ಕಾಲೇಜು ಸಂಘದ ಖಜಾಂಚಿಯವರಿಗೆ ಕಳುಹಿಸಬೇಕೆಂದು ಕೋರಲಾಗಿದೆ

ಕಮ್ಯೂನಿಸ್ಟರ ನಿಶ್ಶಸ್ತ್ರೀಕರಣ ಷರತ್ತಿನ ನಿರಾಕರಣೆ

[illegible] ಕಮ್ಯೂನಿಸ್ಟರು ಕೆಲವು ಷರತ್ತುಗಳ [illegible] ಮುಖಂಡರಾದ [illegible] ಸುಂದರಯ್ಯನವರ [illegible] ಉತ್ತರವಿತ್ತು [illegible] ಷರತ್ತುಗಳನ್ನು [illegible] ಒಪ್ಪಲೂ [illegible] ಬಡಿಕೆ ಮಾಡಿಕೊಳ್ಳಲೂ [illegible] ಹಿಂದೆ [illegible] ಶಸ್ತ್ರಾಸ್ತ್ರಗಳನ್ನು ಒಪ್ಪಿಸದೆ [illegible] ಮಾಡಿಕೊಳ್ಳುವುದಿಲ್ಲವೆಂದೂ [illegible]

ಕೇಂದ್ರ [illegible] ಶ್ರೀ ಸುಂದರಯ್ಯನವರು [illegible] ಶ್ರೀ ಸುಂದರಯ್ಯನವರ [illegible] ಮಸೂದೆಯು [illegible] ಸಮುದಾಯ [illegible]

ನೌಕರರ ಕೆಲಸದ ವೇಳೆ ಸಂಘದ ಸಭೆ

ಮೈಸೂರು ಜಿಲ್ಲಾ [illegible] ಶ್ರೀ ಸಿ ಜಿ ದೇವನಾಥರವರ ಅಧ್ಯಕ್ಷತೆಯಲ್ಲಿ ನಡೆದು [illegible] ಶ್ರೀ [illegible] ಉಪಾಧ್ಯಕ್ಷರನ್ನಾಗಿಯೂ ಶ್ರೀ ಕೆ ಪಿ [illegible] ಕಾರ್ಯದರ್ಶಿಯನ್ನಾಗಿಯೂ ಶ್ರೀ [illegible] ಮತ್ತು ಶ್ರೀ [illegible] ರಂಗಸ್ವಾಮಿಯವರನ್ನು [illegible] ಚುನಾಯಿಸಿತು

ರಾಜಧಾನಿಯ ಸಿಟಿ ಬಸ್ಸಿನ ಮಾಲೀಕರು [illegible] ಘಂಟೆ ಕಾಲ ಕೆಲಸ ತೆಗೆದುಕೊಳ್ಳುವುದನ್ನು ಸಭೆಯು ಪರಿಶೀಲಿಸಿ [illegible] ಖಂಡಿಸಿತು [illegible] ಕಾನೂನಿನ ಪ್ರಕಾರ [illegible] ಘಂಟೆ ಮಾತ್ರ ಕೆಲಸ ತೆಗೆದುಕೊಳ್ಳಬೇಕೆಂದು ಮಾಲೀಕರನ್ನು ಒತ್ತಾಯಪಡಿಸುವ [illegible] ಅಂಗೀಕೃತವಾಯಿತು

ಈಜಿಪ್ಟಿನಲ್ಲಿ ಸರ್ಕಾರದ [illegible]

ಈಜಿಪ್ಟಿನ [illegible] ರಾಜ್ಯದಲ್ಲಿ ಸರ್ಕಾರದ [illegible] ಮುಖಂಡರಾದ ಜನರಲ್ [illegible] ತಿಳಿಸಿ [illegible] ಒದಗಿರ ಪ್ರದಿಲ್ಲವೆಂದು [illegible]

ಜ|| ನಗೀಬ್‌ರಿಂದ ಗಾಂಧಿ ತತ್ವದ ಪ್ರಶಂಸ

[illegible] ಪ್ರೇಮ [illegible] ತತ್ವಗಳ [illegible] ಮುಂದಿನ [illegible] ನಗೀಬ್‌ರವರ [illegible] ಹೊಸ ರಾಜ್ಯ [illegible] ತತ್ವಗಳನ್ನು [illegible]

[illegible]

ನಾಟಕೋತ್ಸವ

[illegible] ಸಂಘದ ಅಧ್ಯಕ್ಷ [illegible] ಶ್ರೀ [illegible] ರಾವ್ ರವರ [illegible] ಶ್ರೀ [illegible] ನಾಗಪ್ಪನವರು [illegible] ವಿನೋದಗಳು ನಡೆದವು ಸಂಜೆ ಹಿಂದೀ ಮತ್ತು ಕನ್ನಡ ನಾಟಕಗಳು ನಡೆದು ವಂದನಾರ್ಪಣೆಯೊಡನೆ ಸಭೆಯು ಬರಖಾಸ್ತಾಯಿತು

ಆಕಾಶವಾಣಿ [illegible] [illegible]

ಗೋಧಿಯನ್ನು ವಾಪಸು ಪಡೆಯಲು ಕೇಂದ್ರಕ್ಕೆಕೋರಿಕೆ

[illegible] ಸರ್ಕಾರದವರು ಮದರಾಸಿಗೆ [illegible] ಗೋಧಿ [illegible] ಇರುವುದರಿಂದ [illegible] ಮದ್ರಾಸು ಸರ್ಕಾರದವರು ಕೋರಿರುವರೆಂದೂ ತಿಳಿದು ಬಂದಿದೆ

ನೇಪಾಳದಲ್ಲಿ ರಾಜ್ಯಾಂಗ ಸಲಹಾ ಮಂಡಲಿ

ನೇಪಾಳದ ಮಂತ್ರಿ ಮಂಡಲಕ್ಕೂ ಕಾಂಗ್ರೆಸ್ಸಿಗೂ ಸಂಭವಿಸಿದ್ದ ಬಿಕಟ್ಟಿನ ಪರಿಣಾಮವಾಗಿ ಅಲ್ಲಿನ ಪ್ರಧಾನಿ ಶ್ರೀ [illegible] ರವರು ತಮ್ಮ ಸಹೋದ್ಯೋಗಿಗಳೊಡನೆ [illegible] ನಂತರ ಅಲ್ಲಿನ [illegible] ದಿನಗಳ [illegible]

ಪಾಕಿಸ್ಥಾನದಲ್ಲಿ ಆಹಾರದ ಬಿಕಟ್ಟು

[illegible]

ಭಾರತದಲ್ಲಿ ಅಂತರರಾಷ್ಟ್ರೀಯ ರೆಡ್ ಕ್ರಾಸ್ ಅಧಿವೇಶನ

[illegible] ಅಂತರರಾಷ್ಟ್ರೀಯ ರೆಡ್ ಕ್ರಾಸ್ [illegible] ಅಧಿವೇಶನವು ಭಾರತದಲ್ಲಿ ನಡೆಯುವುದೆಂದೂ [illegible] ರೆಡ್ ಕ್ರಾಸ್ ಸಂಸ್ಥೆಯ [illegible] ವಿಶೇಷ [illegible] ತಿಳಿದು ಬಂದಿದೆ

ಟೆಕ್ನಾಲಾಜಿಕಲ್ ಇನ್ಸ್‌ಟಿಟ್ಯೂಟಿನ ಸದಸ್ಯರು

ಬೆಂಗಳೂರಿನ ಶ್ರೀ [illegible] ಟೆಕ್ನಾಲಾಜಿಕಲ್ ಇನ್ಸ್‌ಟಿಟ್ಯೂಟಿನ [illegible] ನಂಜನಗೂಡಿನ ಶ್ರೀ [illegible] ವಿಶ್ವೇಶ್ವರ [illegible] ಸದಸ್ಯರನ್ನಾಗಿ ನೇಮಿಸಲಾಗಿದೆ

ಚಂದಾದಾರರಲ್ಲಿ ವಿನಂತಿ

ನಮ್ಮ [illegible] ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರು

ನ್ಯೂಸ್ ಪೇಪರ್ ಹೌಸ್,
[illegible] ಮೈಸೂರು

ಹೊಸ ಭಯಂಕರ ವಿಷ ವಾಯು

ಮನುಷ್ಯನ ನರಗಳನ್ನು ನಾಶಪಡಿಸಬಲ್ಲ ಹೊಸ ವಿಷವಾಯುವೊಂದು [illegible] ಕಂಡು ಹಿಡಿಯಲ್ಪಟ್ಟಿರುವುದೆಂದು ಬ್ರಿಟಿಷ್ ವೈದ್ಯಕೀಯ ಪತ್ರಿಕೆಗಳು ತಿಳಿಸುತ್ತವೆ ಈ ವಾಯುವು ದ್ರವ ರೂಪದಲ್ಲಿದ್ದು ಬಿದರೆ ಹಲವು ನಿಮಿಷಗಳಲ್ಲೇ ಮನುಷ್ಯನು ಸಾಯುವನೆಂದು ಹೇಳಲಾಗಿದೆ ಅದನ್ನು ಪತ್ತೆಹಚ್ಚಲು ಬಹಳ ಕಷ್ಟವಾಗುವುದೆಂದೂ, ಅದು ವಾಸನೆಯುಳ್ಳದ್ದಲ್ಲವೆಂದೂ ಹೇಳಲಾಗಿದೆ ಈ [illegible] ವಿಷವಾಯುವಿನಿಂದ ರಕ್ಷಣೆ ಪಡೆಯಲು ವಿಶೇಷ ರೀತಿಯ ಮುಖವಾಡವನ್ನು ತಯಾರಿಸಲಾಗುತ್ತಿರುವುದೆಂದೂ ಹೇಳಲಾಗಿದೆ

ಯಳಂದೂರು ವಿದ್ಯಾರ್ಥಿ ನಿಧಿ

ಮಾಲ್ಯಂಡ ನಿಧಿಯ ವಾರ್ಷಿಕ ಅಧಿವೇಶನವು ನೆನ್ನೆ ಯಳಂದೂರಿನಲ್ಲಿ [illegible] ರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿತು ಕಳೆದ ವರ್ಷದ ವರದಿಯನ್ನೂ, ಜಮಾ ಖರ್ಚಿನ ಪಟ್ಟಿಯನ್ನೂ [illegible] ಮಂಡಿಸಿದ ನಂತರ ಈ [illegible] ವಿದ್ಯಾರ್ಥಿಗಳಿಗೆ [illegible] ವೇತನವು ಮಂಜೂರಾಯಿತು ನಿಧಿಯ [illegible] ಕೆಲವು ಸಲಹೆಗಳನ್ನು ಕೊಟ್ಟು [illegible] ಸಹಾಯವನ್ನು ಕೋರಿದರು

ಹೊಸ ಜನತಾ ಅಂಗಡಿಯ ಆರಂಭೋತ್ಸವ

[illegible] ಪೌರಸಭಾ ಸದಸ್ಯರಾದ ಶ್ರೀ ಯು ಎಲ್ ರಾಮಚಂದ್ರ [illegible] ಸಹೋದರರಾದ ಶ್ರೀ ಯು ಎಲ್ ವಿಶ್ವನಾಥರಾಯರು [illegible] ತೆರೆದಿರುವ ಹೊಸ ಜನತಾ ಅಂಗಡಿಯ ಆರಂಭೋತ್ಸವವನ್ನು [illegible] ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು [illegible] ನೆರವೇರಿಸಿದರು [illegible] ಪೌರಸಭಾಧ್ಯಕ್ಷರು, ಸದಸ್ಯರುಗಳು ಮತ್ತು ಇತರ ಪುರಪ್ರಮುಖರು [illegible]

ನಂಜನಗೂಡು ಡಿಪೋ ಗುಮಾಸ್ತರು [illegible]

ನಂಜನಗೂಡು [illegible] ಗುಮಾಸ್ತರಾಗಿದ್ದ [illegible] ಎಂಬುವರು ಈಗ ೧೦ [illegible] ದಿನಗಳ [illegible] ಮೂ, ಸಂಬಂಧಪಟ್ಟ ಅಧಿಕಾರಿಗಳು [illegible] ಬೇಗ [illegible] ಲೆಕ್ಕ ಪತ್ರಗಳ ಶೀಲನೆ ನಡೆಸುತ್ತಿರುವರೆಂದೂ ತಿಳಿದು ಬಂದಿದೆ

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
407 ಸಯ್ಯಾಜಿರಾವ್ ರೋಡ್
ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೨-೮-೧೯೫೨ [ಸಂಚಿಕೆ ೧೪

- ಕೇಂದ್ರ ಸರ್ಕಾರಕ್ಕೆ - ಹೆಚ್ಚಿನ ಮಂತ್ರಿಗಳು

ಚೂರಿ ಇರಿತದ ಪ್ರಸಂಗ

ಮೈಸೂರು ೧೧

ರಾಜಧಾನಿಯ ಟಾಂಗಾ ಗಾಡಿ ಸಿದ್ದಯ್ಯ ಎಂಬುವರು ಶ್ರೀ ಎಂ ಎಸ್ ನರಸಿಂಹಯ್ಯನವರಿಗೆ ಮಾರಿದ ಒಂದು ಹಸುವಿನ ಸಂಬಂಧವಾಗಿ ಅವರಿಬ್ಬರಿಗೂ ಮೊನ್ನೆ ಮಾತು ಬೆಳೆದು ಶ್ರೀ ನರಸಿಂಹಯ್ಯನವರು ಸದರಿ ಸಿದ್ದಯ್ಯನನ್ನು ಇರಿದರೆಂದೂ, ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ. ಸಿದ್ದಯ್ಯನವರು ಹಸುವನ್ನು ಮಾರುವಾಗ ೧ ಸೇರು ಹಾಲು ಕೊಡುವುದಾಗಿ ತಿಳಿಸಿದ್ದರೆಂದೂ ಆದ್ದನ್ನು ಅದು ಕೊಡಲಿಲ್ಲವೆಂದೂ, ಅದಕ್ಕಾಗಿ ತಮ್ಮ ಹಣವನ್ನು ವಾಪಸು ಕೊಡಬೇಕೆಂದು ಶ್ರೀ ನರಸಿಂಹಯ್ಯನವರು ಒತ್ತಾಯ ಪಡಿಸಿದರೆಂದೂ ಹೇಳಲಾಗಿದೆ. ಶ್ರೀ ನರಸಿಂಹಯ್ಯನವರನ್ನು ದಸ್ತಗಿರಿ ಮಾಡಿ ಈಗ ಜಾಮೀನಿನ ಮೇಲೆ ಬಿಡಲಾಗಿದೆ. ತಾವು ಆಹಾರದ ಇಲಾಖೆಯಲ್ಲಿ ನೌಕರರಾಗಿದ್ದುದಾಗಿ ಪೋಲೀಸರಿಗೆ ಶ್ರೀ ನರಸಿಂಹಯ್ಯನವರು ಹೇಳಿಕೆ ಕೊಟ್ಟಿರುವರೆಂದು ತಿಳಿದು ಬಂದಿದೆ

ಮೈಸೂರಿನಲ್ಲಿ ಅಮೇರಿಕದ ವಿದ್ಯಾರ್ಥಿಗಳು

ಭಾರತದಲ್ಲಿ ಸಂಚರಿಸುತ್ತಿರುವ ಅಮೇರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಒಂದು ತಂಡದವರು ಬೆಂಗಳೂರು ನಗರದ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿ ಮಾಡಿ, ಭಾರತದಲ್ಲಿ ವ್ಯಾಸಂಗಕ್ಕೆ ಮಾತ್ರ ಹೆಚ್ಚು ಗಮನ ಕೊಟ್ಟು ಅನ್ವಯಿಕ ಶಿಕ್ಷಣವನ್ನು ಲಕ್ಷ್ಯ ಮಾಡಲಿಲ್ಲವೆಂದು ಹೇಳಿದರು. ತಮ್ಮ ದೇಶದಲ್ಲಿ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಸಂಬಂಧವು ಚೆನ್ನಾಗಿರುವುದೆಂದು ಅವರು ತಿಳಿಸಿ, ಭಾರತದ ಸಂಚಾರ ಕಾಲದ ತಮ್ಮ ಖರ್ಚನ್ನು ತಾವೇ ದುಡಿದು ಸಂಪಾದಿಸಿಕೊಳ್ಳುತ್ತಿರುವುದಾಗಿಯೂ, ಹಾಗೆಯೇ ಅಮೇರಿಕದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ವ್ಯಾಸಂಗ ಮಾಡುತ್ತಾ ತನ್ನ ಖರ್ಚಿನ ಹಣವನ್ನೂ ಸಂಪಾದಿಸಿಕೊಳ್ಳುತ್ತಾನೆಂದೂ ಅವರು ನುಡಿದರು

ಮಾರಾಟ ತೆರಿಗೆ ವಿರುದ್ಧ ೯೭ ಮಂದಿ ಉಪವಾಸ

ವಿವಿಧ ಕಡೆ ಮಾರಾಟ ತೆರಿಗೆ ವಿಧಿಸುವ ವಿಷಯದಲ್ಲಿ ಬೊಂಬಾಯಿಯ ಹಣಕಾಸಿನ ಮಂತ್ರಿ ಜೀವರಾಜ ಮೆಹತಾರವರ "ಹೃದಯ ಪರಿವರ್ತನೆ ಯಾಗುವಂತೆ ಭಗವಂತನನ್ನು ಪ್ರಾರ್ಥಿಸಲು ಅಹಮದಾಬಾದು ಬಳಿ ಇರುವ ಆಪ್ರೇಲಿಯದ ಐದು ದೇವಾಲಯಗಳಲ್ಲಿ ೯೭ ಮಂದಿ ವೈಶ್ಯರು ಮತ್ತು ಕಾರ್ಮಿಕರು ಮೊನ್ನೆ ೭ನೆ ಉಪವಾಸ ಮಾಡಿದರು

ರಾಯಲಸೀಮೆ ಕ್ಷಾಮ ನಿಧಿಗೆ ಚೀಣಾದಿಂದ ೮ ಲಕ್ಷ ರೂ.

ಕೆಂಪು ಚೀಣದ ೫ ಸಂಸ್ಥೆಗಳು ರಾಯಲಸೀಮಾ ಕ್ಷಾಮ ನಿವಾರಣಾ ನಿಧಿಗೆ ೮ ಲಕ್ಷ ರೂ ಗಳಷ್ಟು ಅಲ್ಲಿನ ರೂಬಲ್ಲುಗಳನ್ನು ಭಾರತದ ರೆಡ್ ಕ್ರಾಸ್ ಸಂಸ್ಥೆ ಮೂಲಕ ಕೊಟ್ಟಿರುವುವೆಂದು ವರದಿಯಾಗಿದೆ ಅದನ್ನು ಆಂಧ್ರದ ಕ್ಷಾಮ ನಿಧಿಗೆ ಕಳುಹಿಸಲಾಗಿದೆ

ನಗರದಲ್ಲಿ ರೇಷನ್ ರದ್ದು

ಮೈಸೂರು ೧೨

ಸರ್ಕಾರದವರು ನೆನ್ನೆ ಹೊರಡಿಸಿರುವ ಪ್ರಕಟಣೆಯಲ್ಲಿ ನಗರದ ಪಡಿತರ ವ್ಯವಸ್ಥೆಯು ಈ ಕೂಡಲೇ ರದ್ದಾಗಿರುವುದೆಂದು ಸೂಚಿಸಿರುತ್ತಾರೆ. ಇನ್ನು ಮುಂದೆ ಪಡಿತರವು ಬೆಂಗಳೂರು ನಗರ ದಾವಣಗೆರೆ ಮತ್ತು ಕೋಲಾರದ ಚಿನ್ನದ ಗಣಿಗಳಲ್ಲಿ ಮಾತ್ರ ಇರುವುದೆಂದು ತಿಳಿಸಲಾಗಿದೆ

ಕೇಂದ್ರ ಡೆಪ್ಯುಟಿ ಮಂತ್ರಿಗಳ ನೇಮಕ

ಎಂ ವಿ ಕೃಷ್ಣಪ್ಪನವರಿಗೂ ಒಂದು ಸ್ಥಾನ

ರಾಷ್ಟ್ರಾಧ್ಯಕ್ಷರು ಮಂತ್ರಿಮಂಡಲದ ಅಂತಸ್ತಿಲ್ಲದ ಇಬ್ಬರು ಮಂತ್ರಿಗಳನ್ನೂ ೧೦ ಜನ ಉಪಮಂತ್ರಿಗಳನ್ನೂ ನೇಮಿಸಿರುತ್ತಾರೆ. ವಾಣಿಜ್ಯ ಮತ್ತು ಕೈಗಾರಿಕೆ ಉಪಮಂತ್ರಿಗಳಾದ ಡಿ ಪಿ ಕರ್ಮಾರ್ಕರ್‌ರವರು ಅದೇ ಇಲಾಖೆಯಲ್ಲೂ, ಡಾ|| ಪಿ ಎಸ್ ದೇಶಮುಖ್‌ರವರು ಆಹಾರ ಮತ್ತು ವ್ಯವಸಾಯ ಇಲಾಖೆಯಲ್ಲೂ ಮಂತ್ರಿಗಳಾಗಿರುವರು. ಡೆಪ್ಯುಟಿ ಮಂತ್ರಿ ದರ್ಜೆಗೆ ಕೋಲಾರದ ಶ್ರೀ ಎಂ ವಿ ಕೃಷ್ಣಪ್ಪನವರನ್ನು ಏರಿಸಲಾಗಿದೆ. ಇದುವರೆಗೆ ಅವರು ಆಹಾರ ಇಲಾಖೆಯ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿದ್ದರು

ಅವರಲ್ಲದೆ ಕೇಶವದೇವ ಮಾಳವೀಯ (ಸಂಶೋಧನೆ) ಸರದಾರ್ ಸುರಜಿತ್ ಸಿಂಗ್ (ರಕ್ಷಣೆ), ಬಿ ಎನ್ ದಾತಾರ್ (ಗೃಹ), ಅಬೀದ್ ಅಲಿ (ಕಾರ್ಮಿಕ), ಎಂ ಸಿ ಷಹಾ (ಹಣಕಾಸು), ಜಿ ಕೆ ಭೋಸ್ಲೆ (ಪುನರ್ವ್ಯವಸ್ಥೆ) ಒ ವಿ ಅಲಗೇಶನ್ (ರೈಲ್ವೆ ಮತ್ತು ಸಂಚಾರ), ಅನಿಲ್ ಕುಮಾರ್ ಚಂದ (ವಿದೇಶಾಂಗ), ಮತ್ತು ಶ್ರೀಮತಿ ಮರಕತಂ ಚಂದ್ರಶೇಖರಯ್ಯ (ಆರೋಗ್ಯ) ಇವರುಗಳೂ ಡೆಪ್ಯುಟಿ ಮಂತ್ರಿಗಳಾಗಿರುವರು

ಲಕ್ಷ್ಮೆನ್ ಷಹನವಾಜ್ ಖಾನ್, ಜೆ ಎನ್ ಹಜಾರಿಕಾ, ಬಿ ಆರ್ ಭಗತ್‌ರವರನ್ನು ವಿದೇಶಾಂಗ, ರೈಲ್ವೆ ಪ್ರಧಾನ ಮಂತ್ರಿ ಮತ್ತು ಹಣಕಾಸು ಇಲಾಖೆಗಳ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ. ಈ ಹೊಸ ನೇಮಕಗಳಿಂದ ಕೇಂದ್ರ ಸರ್ಕಾರದ ಮಂತ್ರಿಗಳ ಸಂಖ್ಯೆಯನ್ನು ೨೭ ರಿಂದ ೩೭ ಕ್ಕೆ ಹೆಚ್ಚಿಸಿದಂತಾಗಿದೆ

ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮ

ಸ್ವಂ ಸು ಫೋ] ಬೆಂಗಳೂರು ೧೧

ಬರುವ ಗುರುವಾರ ೧೫ನೆ ತಾ|| ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮವು ಈ ರೀತಿ ಇದೆ.-

ಬೆಳಿಗ್ಗೆ ೮ ೩೦ ಮುಖ್ಯ ಮಂತ್ರಿಗಳವರಿಂದ ಧ್ವಜಾರೋಹಣ, ಸೆಲ್ಯೂಟ್ ಸ್ವೀಕಾರ ಮತ್ತು ಭಾಷಣ ಸಂಜೆ ೫ ೪೫ ರಿಂದ ೮ ೪೫ ರ ವರೆಗೆ ಮಿಲಿಟರಿಯವರ ಕವಾಯಿತು, ಪ್ರದರ್ಶನ ಮುಂತಾದುವು

ಇಂದೂರಿಗೆ ಕೆ ಹನುಮಂತಯ್ಯನವರು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದೂರಿನಲ್ಲಿ ಸೇರಲಿರುವ ಎ ಐ ಸಿ ಸಿ ಸಭೆಗೆ ತೆರಳಲಿರುವರೆಂದು ಗೊತ್ತಾಗಿದೆ

○ ವಿದ್ಯಾ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ನಾಳಿದ್ದು ಪುದುಚೇರಿಗೆ ತೆರಳಿ ೧೭ ನೇ ತಾ|| ವಾಪಸು ಬರುವರು

ಮುಬಾರಕ್ ಅಲಿಯವರಿಗೆ ೩|| ವರ್ಷ ಶಿಕ್ಷೆ

ಹೈದರಾಬಾದಿನ ಧನಿಕ ವರ್ತಕ ಮುಬಾರಕ್ ಅಲಿಯವರು ಕಾಗದ ಪತ್ರಗಳನ್ನು ಫೋರ್ಜರಿ ಮಾಡಿ ಬೊಂಬಾಯಿಯ ಸಿ ಕೆ ನಗರ್‌ಶೇಟ್ ಎಂಬ ಮತ್ತೊಬ್ಬ ವ್ಯಾಪಾರಸ್ಥರನ್ನು ಮೋಸಗೊಳಿಸಿದರೆಂದು ಅವರಿಗೆ ಬೊಂಬಾಯಿ ನ್ಯಾಯಾಧೀಶರು ಒಟ್ಟು ೩|| ವರುಷ ಕಠಿಣ ಸಜಾ ಮತ್ತು ೧೫ ಸಾವಿರ ರೂ ಗಳ ದಂಡವನ್ನು ವಿಧಿಸಿರುತ್ತಾರೆ. ಯುದ್ಧ ಕಾಲದಲ್ಲಿ ಆಗ್ನೇಯ ಏಷ್ಯಾ ಮಿಲಿಟರಿ ಕಮ್ಯಾಂಡಿನವರೊಡನೆ ತಮ್ಮ ಕಂಟ್ರಾಕ್ಟು ಇರುವುದೆಂದು ಅವರು ಬೊಂಬಾಯಿಯ ವರ್ತಕರನ್ನು ನಂಬಿಸಿ ಮೋಸ ಮಾಡಿದ್ದರೆಂದೂ ಆಪಾದಿಸಲಾಗಿತ್ತು

ಮುಸಾದಿಕ್ಕರಿಗೆ ಪೂರ್ಣಾಧಿಕಾರ -

ಆರು ತಿಂಗಳುಗಳ ವರೆಗೆ ಪೂರ್ಣಾಧಿಕಾರವನ್ನು ಚಲಾಯಿಸಲು ಪರ್ಷಿಯದ ಪ್ರಧಾನಿ ಮುಸ್ಸಾದಿಕ್‌ರವರಿಗೆ ಅಲ್ಲಿನ ಪಾರ್ಲಿಮೆಂಟು ಅನುಮತಿಯಿತ್ತಿರುತ್ತದೆ

ವಯಸ್ಸಿನ ಬಗ್ಗೆ ಗೆಜೆಟೆಡ್ ಅಧಿಕಾರಿಗಳ ಡಿಕ್ಲರೇಷನ್

ಸಂಸ್ಥಾನ ಸರ್ಕಾರದ ಸೂಚನೆ

ಸ್ವಂ ಸು ಫೋ] ಬೆಂಗಳೂರು ೧೧

ಸಂಸ್ಥಾನ ಸರ್ಕಾರದವರು ಎಲ್ಲ ಇಲಾಖೆಗಳಿಗೂ ಸೂಚನೆಯೊಂದನ್ನು ಕಳುಹಿಸಿ, ಎಲ್ಲ ಗೆಜೆಟೆಡ್ ನೌಕರರುಗಳೂ ತಮ್ಮ ನಿಖರವಾದ ವಯಸ್ಸಿನ ಬಗ್ಗೆ ಡಿಕ್ಲರೇಷನ್ ಅನ್ನು ಕೊಡಬೇಕೆಂದು ಆಜ್ಞೆ ಮಾಡಿರುವರೆಂದು ತಿಳಿದು ಬಂದಿದೆ. ಹಿಂದೆ ಇದ್ದ ಮಂತ್ರಿಮಂಡಲದವರು ಅನುಮಾನ ಕಂಡ ಪ್ರಸಂಗಗಳಲ್ಲಿ ಮಾತ್ರ ಅಂತಹವರಿಂದ ವಯಸ್ಸಿನ ಬಗ್ಗೆ ಹೇಳಿಕೆಯನ್ನು ಕೇಳಿದ್ದರೆಂದು ಹೇಳಲಾಗಿದೆ

ಎಲ್ಲ ನಾನ್ ಗೆಜೆಟೆಡ್ ನೌಕರರಿಂದಲೂ ಈ ಬಗ್ಗೆ ಡಿಕ್ಲರೇಷನ್ ತೆಗೆದುಕೊಳ್ಳುವ ವಿಷಯವೂ ಸಹ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಹೇಳಲಾಗಿದೆ

ಮೃತಪಟ್ಟವರ ಆಸ್ತಿ ಮೇಲೆ ತೆರಿಗೆ

ಮೃತಪಟ್ಟವರ ಆಸ್ತಿಗಳ ಮೇಲೆ ತೆರಿಗೆಯನ್ನು ವಿಧಿಸುವ ಬಗ್ಗೆ ಮಸೂದೆಯೊಂದನ್ನು ನೆನ್ನೆ ಕೇಂದ್ರ ಪಾರ್ಲಿಮೆಂಟಿನಲ್ಲಿ ಹಣಕಾಸಿನ ಮಂತ್ರಿ ಮಹಾವೀರ ತ್ಯಾಗಿಯವರು ಮಂಡಿಸಿದರು. ದೇಶದಲ್ಲಿ ಐಶ್ವರ್ಯದ ಹಂಚಿಕೆಯಲ್ಲಿ ಹೆಚ್ಚು ವ್ಯತ್ಯಾಸವಿರುವುದನ್ನು ತಪ್ಪಿಸುವ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿರುವುದೆಂದೂ, ಇದರಿಂದ ಬಂದ ಹಣವನ್ನು ಸಂಸ್ಥಾನಗಳ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಲಾಗುವುದೆಂದೂ ಹೇಳಲಾಗಿದೆ

ಜೋರ್ಡಾನ್ ಅರಸರ ಪದಚ್ಯುತಿ

ಜೋರ್ಡಾನಿನ ಪಾರ್ಲಿಮೆಂಟ್ ಸಭೆಯು ರಹಸ್ಯ ಸಭೆಯನ್ನು ನಡೆಸಿ, ರೋಗ ಪೀಡಿತ ದೊರೆ ತಲಾಲರ ಆಳ್ವಿಕೆಯನ್ನು ಕೊನೆಗಾಣಿಸಿ, ಅವರ ೧೭ ವರ್ಷದ ಮಗ ಹುಸೇನರು ದೊರೆ ಎಂದು ಘೋಷಿಸಿರುತ್ತದೆ. ಹೊಸ ದೊರೆಯು ಇಂಗ್ಲೆಂಡಿನ ಹ್ಯಾರೊ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವರು. ಪದಚ್ಯುತ ದೊರೆಯೊಡನೆ ಇರಲು ಅವರ ಪತ್ನಿಯು ಈ ಹಿಂದೆಯೇ ನಿರಾಕರಿಸಿದ್ದರು

ವರಮಾನ ತೆರಿಗೆ ಹೆಚ್ಚೆಂದು ವರ್ತಕನ ಆತ್ಮಹತ್ಯೆ

ಅದವಾನಿಯ ವರ್ತಕ, ವೈ. ರಂಗ ನರಸಯ್ಯನವರು ಕಳೆದ ಗುರುವಾರ ಜೀವನದಲ್ಲಿ ಬೇಸತ್ತು ಗುಂಡು ಹೊಡೆದುಕೊಂಡು ಮೃತಪಟ್ಟರೆಂದು ವರದಿಯಾಗಿದೆ. ಅವರು ಬರೆದಿಟ್ಟಿದ್ದ ಪತ್ರದಲ್ಲಿ ೫೦ ಸಾವಿರ ರೂ ಗಳ ವರಮಾನ ತೆರಿಗೆಯನ್ನು ತಮ್ಮ ಮೇಲೆ ವಿಧಿಸಿರುವುದು ಹೆಚ್ಚೆಂದೂ, ಅದರಿಂದ ತಾವು ಜಿಗುಪ್ಸೆ ಹೊಂದಿದುದಾಗಿಯೂ ತಿಳಿಸಲ್ಪಟ್ಟಿದೆ

ಸತ್ಕಾರ ಕೂಟ

ರೈಲ್ವೆ ಇಲಾಖೆಯಲ್ಲಿ ಟಿಕೆಟ್ ಎಕ್ಸಾಮಿನರಾಗಿದ್ದು ನಿವೃತ್ತರಾದ ಶ್ರೀ ಅಬ್ದುಲ್ ಗಫಾರ್‌ರವರ ಗೌರವಾರ್ಥವಾಗಿ ಗಾರ್ಡುಗಳು ಗುಮಾಸ್ತರುಗಳು ಮತ್ತು ಟಿಕೆಟ್ ಕಲೆಕ್ಟರುಗಳು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು

ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿದ ಸತ್ಯಾಗ್ರಹಿಗಳ ಮುಷ್ಕರ

ಆಂಧ್ರ ಪ್ರಾಂತ್ಯ ಚಳುವಳಿಯ ಸಂಬಂಧವಾಗಿ ಟಿಕೆಟ್ಟುಗಳನ್ನು ಪಡೆಯದೆ ರೈಲಿನಲ್ಲಿ ಪ್ರಯಾಣ ಮಾಡಿದ ೪೭ ಮಂದಿ ಸತ್ಯಾಗ್ರಹಿಗಳು ಶಿಕ್ಷಿಸಲ್ಪಟ್ಟು ಬೆಜವಾಡಾ ಜೈಲಿನಲ್ಲಿ ಬಂಧಿಸಲ್ಪಟ್ಟಿದ್ದರು ತಮ್ಮನ್ನು ರಾಜಕೀಯ ಖೈದಿಗಳಂತೆ ಪರಿಗಣಿಸಬೇಕೆಂದು ಅವರೆಲ್ಲರೂ ಒತ್ತಾಯಪಡಿಸಿ ಮೊನ್ನೆ ಬೆಳಗಿನಿಂದ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿರುವರೆಂದು ತಿಳಿದುಬಂದಿದೆ

ಯಳಂದೂರು ಪ್ರೌಢಶಾಲೆ ಸಂಘದ ಅಧಿಕಾರ ವರ್ಗ

ಯಳಂದೂರು ಪ್ರೌಢಶಾಲೆಯ ವಿದ್ಯಾರ್ಥಿ ಸಂಘಕ್ಕೆ ಪ್ರಸಕ್ತ ಸಾಲಿಗೆ ಶ್ರೀ ಕೆ ವಿ ಶ್ರೀನಿವಾಸಯ್ಯಂಗಾರ್ಯರು ಅಧ್ಯಕ್ಷರಾಗಿಯೂ ಹೆಚ್ ಸತ್ಯನಾರಾಯಣರಾಯರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಹೆಚ್ ಎಂ ರಂಗನಾಥಯ್ಯ ಮತ್ತು ಡಿ ಎಂ ಚಿನ್ನಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುತ್ತಾರೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ನಾಗಸ್ವರ ವೆಂಕಟಸ್ವಾಮಿ ಮಧ್ಯಾಹ್ನ ೧ ೩೦ ಶಾಂತಾ ಆಪ್ಟೆ ರಿಕಾರ್ಡ್ ಸಂಗೀತ ೨ ವನಿತಾ ವಿಹಾರ, ಸಂಜೆಯ ಕಾರ್ಯಕ್ರಮ ಸಂಜೆ ೬ ೩೦ ನಾಗಸ್ವರ, ವೆಂಕಟಸ್ವಾಮಿ ೬ ೧೦ ಬಾಲ ಜಗತ್ ಮಕ್ಕಳ ಕಾರ್ಯಕ್ರಮ ೭ ಹಿಂದಿ ಗೀತೆಗಳು ಇಂದಿರಾ ರಾಮಣ್ಣ ೮ ಸಂಗೀತ, ಎಂ ಎಸ್ ಗೋವಿಂದಸ್ವಾಮಿ ೯ ೧೫ ಷೇಕ್ಸ್‌ಪಿಯರ್ ಮತ್ತು ಕಾಳಿದಾಸ ಸಂಪರ್ಕ ಎಸ್ ವಿ ರಂಗಣ್ಣ ೯ ೩೦ ನಿಮ್ಮ ಮೆಚ್ಚಿನ ಗೀತೆಗಳು

ಆಹಾರದ ಬೆರಿಕೆ ನಿಷೇಧಕ್ಕೆ ಮಸೂದೆ

ಬೆರಿಕೆ ಆಹಾರವನ್ನು ನಿರೋಧಿಸುವ ಬಗ್ಗೆ ಪಾರ್ಲಿಮೆಂಟಿನ ಮುಂದಿನ ಅಧಿವೇಶನದಲ್ಲಿ ಮಸೂದೆಯೊಂದನ್ನು ತಾವು ತರುವುದಾಗಿ ಭಾರತದ ಆರೋಗ್ಯ ಸಚಿವ ರಾಜಕುಮಾರಿ ಅಮೃತ್‌ಕೌರ್‌ರವರು ತಿಳಿಸಿರುವರು ಈ ಶಾಸನವನ್ನು ಉಲ್ಲಂಘಿಸುವವರಿಗೆ ಉಗ್ರ ಶಿಕ್ಷೆ ವಿಧಿಸಲಾಗುವುದೆಂದೂ ಅವರು ಹೇಳಿರುವರು

ಚಿಯಾಂಗರಿಂದ ಚೀಣಾ ವಶದ ಕಸ ತ್ಯಾಜ್ಯ

ಚೀಣಾ ದೇಶವನ್ನು ಪುನಃ ವಶಪಡಿಸಿಕೊಳ್ಳುವ ಎರಡು ವರ್ಷ ಚಿಯಾಂಗರು ಕೃಷಿ, ಉದ್ಯಮಗಳ ಫಾರ್ಮೋಸಾ ದ್ವೀಪದಲ್ಲೇ ಶಕ್ತಿವರ್ಧನೆ ನೆಲೆಸಲು ನಿರ್ಧರಿಸಿರುವರೆಂದು ವರದಿಯಾಗಿದೆ ಫಾರ್ಮೋಸಾ ಸರ್ಕಾರವು ಈಗ ವ್ಯವಸಾಯವನ್ನು ಅಭಿವೃದ್ಧಿಗೊಳಿಸುತ್ತಿರುವುದೆಂದೂ ಹೇಳಲಾಗಿದೆ

ಮೈಸೂರು ದಸರಾ ವಸ್ತುಪ್ರದರ್ಶನ, 1952.

(20 9-52 ರಿಂದ 5 10 52 ರ ವರೆಗೆ 2 ದಿನಗಳೂ ಸೇರಿ)

1952 ನೇ ಇಸವಿಯ ದಸರಾ ವಸ್ತುಪ್ರದರ್ಶನವು ಮಾಮೂಲಿನಂತೆ ಪ್ರದರ್ಶನದ ಕಟ್ಟಡಗಳು ಮತ್ತು ಜೀವನರಾಯನ ಕಟ್ಟೆಗಳಿರಡರಲ್ಲಿಯೂ ನಡೆಯುತ್ತದೆ

ಅಂಗಡಿಗಳು ಇತ್ಯಾದಿಗಳಿಗೆ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ತಾ 20 8 52

ಕುಶಲ ಮತ್ತು ಲಲಿತಕಲಾ ವಿಭಾಗದ ಪ್ರದರ್ಶನಕ್ಕೆ ವಸ್ತುಗಳನ್ನು ಸ್ವೀಕರಿಸಲು ಕೊನೆಯ ತಾರೀಖು 10 9 1952

ಮಹಿಳೆಯರ ವಿಭಾಗದಲ್ಲಿ ಅಂಗಡಿಗಳಿಗೆ ಅರ್ಜಿಗಳನ್ನು ಸ್ವೀಕರಿಸಲು (ಮಹಿಳೆಯರು ಮತ್ತು ಮಹಿಳಾ ಸಂಸ್ಥೆಗಳ ಪರವಾಗಿ) ಕೊನೆಯ ತಾ 20 8 1952

(1) ವಿ ಪಿಂಗ್ಸನ್ ಲೈಟುಗಳ ಸಂಬಂಧ
(2) ಬೈಸಿಕಲ್ ಸ್ಟ್ಯಾಂಡ್ ಕಂಟ್ರಾಕ್ಟು
(3) ಕಿಯಾಸ್ಕ್ ಮತ್ತು ಕಲ ಸರಬರಾಜು
(4) ಥಿಯೇಟರಿನಲ್ಲಿ ...
( ) ಎಕ್ಸಿಬಿಷನ್ ಆವರಣದಲ್ಲಿ ... ಪ್ರದರ್ಶಿಸುವ ...
( ) ಪ್ರಧಾನ ಕಟ್ಟಡದ ... ವಸ್ತು ... ಬೇಕಾದ ... ವಿವರಗಳನ್ನು ತಿಳಿಯಲು

ಟೆಂಡರುಗಳನ್ನು ಸ್ವೀಕರಿಸಲು ಕೊನೆಯ ತಾರೀಖು 25 8 1952

ಹೆಚ್ಚಿನ ವಿವರಗಳಿಗೆ ... ಪ್ರೋಗ್ರಾಮ್ ... 1952 ನೇ ಇಸವಿಯ ಪ್ರಾಸ್ಪೆಕ್ಟಸ್ಸಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಮೈಸೂರು ಕಾರ್ಯದರ್ಶಿ,
ತಾ|| 4 8 1952 ಮೈಸೂರು ದಸರಾ ವಸ್ತುಪ್ರದರ್ಶನ ಸಮಿತಿ,
ಮೈಸೂರು

ಹೆಚ್ಚು ಬೆಳೆ ಬೆಳೆಯುವವರಿಗೆ ೫೦೦೦ ರೂ. ಬಹುಮಾನ

ಭತ್ತ, ಗೋಧಿ, ಆಲೂಗೆಡ್ಡೆ, ಜೋಳ, ಬಾಜ್ರ ಮತ್ತು ಕಡಲೆ ಈ ಆಹಾರ ಧಾನ್ಯಗಳನ್ನು ಅತಿ ಹೆಚ್ಚಾಗಿ ಬೆಳೆಯುವವರಿಗೆ ಭಾರತ ಸರ್ಕಾರದವರು ತಲಾ ೫,೦೦೦ ರೂ ಬಹುಮಾನ ಕೊಡಲು ಈ ಹಿಂದೆಯೇ ನಿರ್ಧರಿಸಿರುವರು. ಈಗ ಭಾರತದಲ್ಲಿರುವ ಅಮೆರಿಕಾ ಟ್ರ್ಯಾಕ್ಟರ್ ಕಂಪೆನಿಯವರು ೫,೦೦೦ ರೂ ಬದಲು ೭ ಸಾವಿರ ರೂ ಬೆಲೆ ಬಾಳುವ ಫೋರ್ಡ್ ಸಲಕರಣೆಗಳನ್ನೊಳಗೊಂಡ ಟ್ರ್ಯಾಕ್ಟರನ್ನು ಗೆದ್ದವರ ಮನೆಗೆ ತಂದು ಕೊಡಲು ಸಿದ್ಧವಿರುವುದಾಗಿ ತಿಳಿಸುತ್ತಾರೆ ಇದು ಕಳೆದ ವರ್ಷ ಬಹುಮಾನ ಪಡೆದವರಿಗೂ, ಈ ವರ್ಷ ಪಡೆಯುವವರಿಗೂ ಅನ್ವಯಿಸುವುದು ತಮಗೆ ಟ್ರ್ಯಾಕ್ಟರ್ ಬೇಕೋ ಅಥವಾ ದುಡ್ಡು ಬೇಕೋ ಎಂಬುದನ್ನು ಸ್ಪರ್ಧೆಗಾರರು ಮುಂಚೆಯೇ ತಿಳಿಯಪಡಿಸಬೇಕಾಗಿದೆ

ಸ್ವಾತಂತ್ರ್ಯ ದಿನೋತ್ಸವ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಬರುವ ೧೫ ನೇ ತಾ|| ಶುಕ್ರವಾರ ಸಂಜೆ ಸ್ವಾತಂತ್ರ್ಯ ದಿನೋತ್ಸವವನ್ನು ನಡೆಸಲಾಗುವುದು ಸಮಾರಂಭದಲ್ಲಿ ಉಪನ್ಯಾಸ ಮಾಡಲು ಪ್ರಸಿದ್ಧ ಸಾಹಿತಿಗಳನ್ನು ಆಹ್ವಾನಿಸಲಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಂಗಳ್ಕೆ	ರೂ ಇಂದ	ರೂ ಗೆ
ಸೇಂಗಡಲೆ	೧೧ ೪-೦	೨೧ ೧೨ ೦
ಎಳ್ಳು	೩೧ ೧೨ ೦	೪೧ ೦ ೦
ಹುಚ್ಚೆಳ್ಳು	೪೫ ೦ ೦	೪೬ ೦-೦
ಹರಳು ಬೀಜ	೪೨ ೨ ೦	
ಹುರುಳಿ	೪೨ ೧೦	೪ ೮ ೦
ಹೆಸರು	೬೦ ೨ ೦	
ಹೊಂಗೇಬೀಜ	೧೬ ೦ ೦	
ಉದ್ದು	೬೭ ೮ ೦	
ಹಲಸಂದೆ	೬೯-೨-೦	೬೯ ೪ ೦
ಮೆಣಸಿನಕಾಯಿ		
ಮಣಗಳ್ಳಿ	೭ ೮ ೦	೧೬ ೧೨ ೦
ಹುಣಸೇಹಣ್ಣು	೩-೮-೦	೫ ೧೩ ೦
ಸೀಗೆ ಕಾಯಿ	೪ ೯ [illegible]	೪ ೧೦-೦
ತೆಂಗಿನಕಾಯಿ ೧೦೦೦	೧೩೩ ೦ ೦	೧೪೩ ೦ ೦

ಸಿಕ್ಕಿದೆ

ಬೆಳ್ಳಿ ಉಡಿದಾರವೊಂದು ಸಿಕ್ಕಿದೆ ಸರಿಯಾದ ಗುರುತು ಹೇಳಿ ಮತ್ತು ಈ ಜಾಹಿರಾತಿನ ಚಾರ್ಜು ಕೊಟ್ಟು ಪಡೆಯಬಹುದು

ಸಿ ಗಿ ಪೈಲ್ವಾನ್
ಚಾಮರಾಜನಗರ

ಪರಿಶುದ್ಧವಾದ ಮತ್ತು ಉತ್ತಮವಾದ ಕಾಫಿ ಬೇಕಾದಲ್ಲಿ

ಶ್ರೀ ಚಾಮುಂಡೇಶ್ವರಿ ಭವನ

(ಭೋಜನ ಮತ್ತು ವಸತಿ ಗೃಹ, ಮತ್ತು ಫಲಾಹಾರ ಮಂದಿರ, ಇರ್ವಿನ್ ರಸ್ತೆ, ಮೈಸೂರು)

ಇಲ್ಲಿಗೆ ಭೇಟಿ ಕೊಡಲು ಮರೆಯದಿರಿ

ನಮ್ಮ ಪರಿಶುದ್ಧವಾದ ಮತ್ತು ಶ್ರೇಷ್ಠತಮ ರುಚಿಯುಳ್ಳ

ಪ್ಲಾಂಟೇಷನ್ ' ಎ ' ಕಾಫಿಯನ್ನು

ಸೇವಿಸಿ :: ಮತ್ತು :: ಆನಂದಪಡಿರಿ

★ ಅಪ್ಪಟ ತುಪ್ಪದಿಂದ ತಯಾರಾದ
★ ಸಿಹಿ ತಿಂಡಿಗಳು ಮತ್ತು
★ ರುಚಿಯಾದ ಮತ್ತು ತೃಪ್ತಿಕರವಾದ ಊಟಗಳನ್ನು ಸವಿದು ನೋಡಿ

SREE GANESHA

Talkies

From 11 8 52 For 2 Days
United Artists

ELLEN

[A Masterpiece of Suspense Drama]

With — Robert Young
Betsy Drake

From 1—8—52
PORTRAIT OF JENNIE

Edited Printed and Published by A R Nagarajan at Sadhvi Press, D Subbiah Road, Mysore

ರಿಜಿಸ್ಟ್ರೀ ನಂ 793 || ವಂದೇ ಮಾತರಂ || ಬಿಡಿಪ್ರತಿ ಕ್ಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೩-೯-೧೯೫೦ [ಸಂಚಿಕೆ ೧೫

ಕಾನ್ಪುರದ ಮುಸ್ಲಿಮರ - ಭಾರಿ ಪ್ರದರ್ಶನ -

ಎಲ್. ಎಸ್. ರಾಜೂರವರಿಗೆ ಜಾಮೀನಿನ ನಿರಾಕರಣೆ

ಬೆಂಗಳೂರು ೧೩

ಸಂಚಿಕೆ ದ್ರೋಹದ ಆಪಾದನೆ ಸಂಬಂಧವಾಗಿ ೩ ವರ್ಷ ಶಿಕ್ಷೆಗೆ ಗುರಿಯಾಗಿರುವ ಶ್ರೀ ಎಲ್ ಎಸ್ ರಾಜೂರವರನ್ನು ಜಾಮೀನಿನ ಮೇಲೆ ಬಿಡಲು ಸಿವಿಲ್ ಪ್ರಧಾನ ನ್ಯಾಯಾಧೀಶರಾದ ಶ್ರೀ ಬಿ ಜಿ ಶೇಷಗಿರಿರಾಯರವರು ನಿನ್ನೆ ನಿರಾಕರಿಸಿದರು. ಶ್ರೀ ರಾಜೂರವರು ಕೃಷ್ಣನಗರ ಮುನ್ಸಿಫ್ ಕೋರ್ಟಿನಲ್ಲಿ ಹಾಜರಾಗಿದ್ದರು ಸದರಿ ಶಿಕ್ಷೆಯ ಮೇಲೆ ಅವರು ಸುಪ್ರೀಂ ಕೋರ್ಟಿನಲ್ಲಿ ಅಪೀಲು ಮಾಡಿರುವರು

ಪ್ರಭುಗಳು ಸಮುದ್ರದಲ್ಲಿ ಈಜಿದರು

ಮೈಸೂರಿನ ಶ್ರೀಮನ್ಮಹಾರಾಜರವರು ನಿನ್ನೆ ರಾಮೇಶ್ವರಕ್ಕೆ ತೆರಳಿ, ಅಲ್ಲಿನ ಅಗ್ನಿತೀರ್ಥ ಸ್ನಾನಘಟ್ಟದ ಬಳಿ ಸಮುದ್ರದಲ್ಲಿ ೫ ನಿಮಿಷಗಳ ಕಾಲ ಈಜಿದರೆಂದು ವರದಿಯು ಬಂದಿದೆ. ಕಾಲೇಜು ... ಯಲ್ಲಿ ಅವರು ... ದೇವರ ಸೇವೆ ... ದೇವರಿಗೆ ... ಆಭರಣಗಳನ್ನು ಒಪ್ಪಿಸಿದರೆಂದೂ ತಿಳಿದುಬಂದಿದೆ

ಆಂಧ್ರ ಪ್ರಾಂತ ಚಳುವಳಿಯ ಹೊಸ ರೂಪ

ಆಂಧ್ರಪ್ರಾಂತ ರಚನೆ ಸಂಬಂಧವಾಗಿ ಸ್ವಾಮಿ ಸೀತಾರಾಮರವರು ಸತ್ಯಾಗ್ರಹ ಚಳುವಳಿಯನ್ನು ಬಲಪಡಿಸಲು ನಿರ್ಧರಿಸಿ, ... ಗಳ ಸರಪಣಿ ಎಳೆಯುವುದು, ಟಿಕೆಟ್ಟಿಲ್ಲದೆ ಪ್ರಯಾಣ ಮಾಡುವುದು ಮತ್ತು ... ಗಳಿಗೆ ಪ್ರವೇಶಿಸುವುದು ಕೇಂದ್ರ ಮತ್ತು ಪ್ರಾಂತ ಕಛೇರಿಗಳ ಮುಂದೆ ಪಿಕೆಟಿಂಗ್, ಶಾಸನ ಸಭೆಗಳ ಮುಂದೆ ಸತ್ಯಾಗ್ರಹ ಇವೇ ಮುಂತಾದ ಕಾರ್ಯಕ್ರಮಗಳ ... ಹಾಕಿರುತ್ತಾರೆ ಈ ಸಂಬಂಧವಾಗಿ ... ಮತ್ತು ... ಗಳಿಗೆ ಸತ್ಯಾಗ್ರಹಿಗಳ ತಂಡವನ್ನು ಕಳುಹಿಸುವ ವ್ಯವಸ್ಥೆಯಾಗಿದೆ

ಅಬಿಸೀನಿಯಾ ಮತ್ತು ಎರಿಟ್ರಿಯಾಗಳ ಐಕ್ಯ

ಆಫ್ರಿಕದ ಪುರಾತನ ಸಾಮ್ರಾಜ್ಯವಾದ ಅಬಿಸೀನಿಯಾ (ಇಥಿಯೋಪಿಯಾ) ಬಹು ಕಾಲದಿಂದಲೂ ಇಟಲಿಯ ವಶವಾಗಿದ್ದ ಎರಿಟ್ರಿಯಾ ಪ್ರಾಂತವನ್ನು ಪೂರ್ವ ಆಫ್ರಿಕಾ ಫೆಡರೇಶನ್ ಸ್ಥಾಪನೆಗೆ ಅಬಿಸೀನಿಯಾ ದೊರೆ ಹೈಲೆಸೆಲಾಸಿಯವರು ಒಪ್ಪಿ ಕರಾರಿಗೆ ರುಜು ಹಾಕಿರುವರು ಈ ಎರಡು ರಾಜ್ಯಗಳೂ ಒಂದುಗೂಡಲು ೨ ವರ್ಷಗಳ ಹಿಂದೆ ವಿಶ್ವಸಂಸ್ಥೆಯು ಒಪ್ಪಿಗೆಯನ್ನು ಕೊಟ್ಟಿದ್ದಿತು

ಕೋಲಾರದಲ್ಲಿ ರೈತರ ಪ್ರದರ್ಶನ

ಕೋಲಾರದ ಪ್ರಮುಖ ಬೀದಿಗಳಲ್ಲಿ ಸುಮಾರು ೫೦೦ ಮಂದಿ ರೈತರು ಮೆರವಣಿಗೆ ನಡೆಸಿ, ತಮಗೆ ಅನ್ನ ಮತ್ತು ಕೆಲಸ ಬೇಕೆಂದು ಕೂಗುತ್ತಾ ಪ್ರದರ್ಶನ ನಡೆಸಿದರು ಜಿಲ್ಲಾಧಿಕಾರಿಗಳ ಭವನದ ಬಳಿ ಅವರನ್ನು ಪೋಲೀಸರು ತಡೆದು, ಪೈಕಿ ಮೂವರನ್ನು ಜಿಲ್ಲಾಧಿಕಾರಿಗಳೊಡನೆ ಭೇಟಿ ಮಾಡಲು ಅವಕಾಶ ಕೊಟ್ಟರೆಂದು ವರದಿಯಾಗಿದೆ

ಮಠದ ಸ್ವಾಮಿಗಳವರ ನಿಧನ

ಮೈಸೂರು ಅರಮನೆ ಸಂಪಿಗೆ ಗವಿಯ ಶ್ರೀ ಗೌರೀಶಂಕರ ಸ್ವಾಮಿಗಳವರು ನಿನ್ನೆ ರಾತ್ರಿ ಲಿಂಗೈಕ್ಯರಾದರು ಅವರಿಗೆ ... ವರ್ಷಗಳಾಗಿತ್ತು ಈ ದಿನ ಅಂತ್ಯಕ್ರಿಯೆಯು ನಡೆಯುವುದು

ಕಾನ್ಪುರದಲ್ಲಿ ಮುಸ್ಲಿಮರಿಂದ ಪ್ರದರ್ಶನ

ಅಲಹಾಬಾದಿನ ಒಂದು ಪತ್ರಿಕೆಯಲ್ಲಿ ಮಹಮ್ಮದರ ಧರ್ಮಕ್ಕೆ ಅಪಮಾನಕರವಾದ ಲೇಖನವು ಪ್ರಕಟವಾಗಿತ್ತೆಂದು ಹೇಳಲಾದ ಸುದ್ದಿಯ ಪ್ರತಿಭಟನೆಗಾಗಿ ಕಾನ್ಪುರದ ಮುಸಲ್ಮಾನರು ನಿನ್ನೆ ಕಪ್ಪು ಧ್ವಜಗಳನ್ನು ಹಿಡಿದು, ಸರಕಾರದ ವಿರುದ್ಧವಾಗಿ ಘೋಷಣೆ ಮಾಡುತ್ತಾ, ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ನಗರದ ವಿವಿಧ ಕಡೆಗಳಲ್ಲಿ ಸಭೆಗಳನ್ನು ನಡೆಸಿದರೆಂದೂ ಇದರ ಪರಿಣಾಮವಾಗಿ ೨೦೦ ಜನರ ದಸ್ತಗಿರಿಯಾಗಿರುವುದೆಂದೂ ವರದಿಯಾಗಿದೆ ನಿನ್ನೆ ಬೆಳಗ್ಗೆ ಆಜ್ಞೆಯ ವಿರುದ್ಧವಾಗಿ ಮೆರವಣಿಗೆಯನ್ನು ಅವರು ಕೊಂಡೊಯ್ದಾಗ ಮುಖಂಡರನ್ನು ಪೋಲೀಸರು ದಸ್ತಗಿರಿ ಮಾಡಲಾಗಿ ಅದನ್ನು ಪ್ರತಿಭಟಿಸಲು ಇತರ ಕಡೆಗಳಲ್ಲಿ ಸಭೆ ಮೆರವಣಿಗೆಗಳು ನಡೆದುವೆಂದು ಹೇಳಲಾಗಿದೆ ಮುಸ್ಲಿಮರು ಹಲವು ಕಡೆ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಆಚರಿಸಿದರು ನಗರದ ನ್ಯಾಯಾಧೀಶರ ಕಛೇರಿ ಮುಂದೆ ಪ್ರದರ್ಶನ ನಡೆಸಿದ ೩೫ ಮಂದಿಯನ್ನು ದಸ್ತಗಿರಿ ಮಾಡಿ ೧ ತಿಂಗಳ ಕಠಿಣ ಶಿಕ್ಷೆಗೆ ಗುರಿಪಡಿಸಲಾಯಿತು

ಕೇಂದ್ರ ಹಿರಿಯ ಶಾಸನ ಸಭೆಗೆ ಕೆ. ಸಿ. ರೆಡ್ಡಿ ಸ್ಪರ್ಧೆ

ಕೇಂದ್ರ ಹಿರಿಯ ಶಾಸನ ಸಭೆಗೆ ಉತ್ಪಾದನಾ ಮಂತ್ರಿ ಕೆ ಸಿ ರೆಡ್ಡಿಯವರು ಸ್ಪರ್ಧಿಸುವಂತೆ ಕಾಂಗ್ರೆಸ್ ಪಕ್ಷ ಪಾರ್ಲಿಮೆಂಟರಿ ಮಂಡಳಿಯವರು ಸೂಚಿಸಲಿರುವರೆಂದೂ, ಈಗ ಚುನಾಯಿತರಾಗಿರುವ ಶ್ರೀ ಟಿ ಮ್ಯಾದೋರಾಯಪ್ಪನವರು ಪಕ್ಷದಲ್ಲೇ ರಾಜೀನಾಮೆಯಿತ್ತು, ಶ್ರೀ ಕೆ ಸಿ ರೆಡ್ಡಿಯವರಿಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡುವರೆಂದೂ ಹೇಳಲಾಗಿದೆ ಈ ಬಗ್ಗೆ ಮೈಸೂರು ಪ್ರದೇಶ ಕಾಂಗ್ರೆಸ್ ಮತ್ತು ಕೇಂದ್ರದ ಹೈ ಕಮ್ಯಾಂಡುಗಳಿಗೆ ಪತ್ರ ವ್ಯವಹಾರವು ನಡೆದಿರುವುದೆಂದು ಗೊತ್ತಾಗಿದೆ

ಮಾನಭಂಗ ಪ್ರಯತ್ನಕ್ಕಾಗಿ ಶಾಸನ ಸಭಾಸದರ ದಸ್ತಗಿರಿ

ಒಬ್ಬ ಹೆಂಗಸಿನ ಮಾನಭಂಗ ಪ್ರಯತ್ನದಲ್ಲಿ ತೊಡಗಿದ್ದರೆಂದು ಮದ್ರಾಸು ಶಾಸನ ಸಭೆಯ ಸದಸ್ಯರಾದ ಕೆ ಅಡಿಕೇಶವಲುನಾಯ್ಡು ರವರನ್ನು ದಸ್ತಗಿರಿ ಮಾಡಿ, ಜಾಮೀನಿನ ಮೇಲೆ ಬಿಡಲಾಗಿದೆ

ಕಾಂಗ್ರೆಸ್ಸಿನವರ ಅಕ್ರಮ ನಡವಳಿಕೆ ಬಗ್ಗೆ ತನಿಖೆ

ಮೈಸೂರು ೧೩

ಮಹಾ ಚುನಾವಣೆ ಕಾಲದಲ್ಲಿ ಕಾಂಗ್ರೆಸ್ಸಿಗೆ ವಿರುದ್ಧವಾಗಿ ಪ್ರಚಾರ, ಮೊದಲಾದ ಕಾರ್ಯಗಳಲ್ಲಿ ಹಲವು ಕಾಂಗ್ರೆಸ್ಸಿನವರು ತೊಡಗಿದ್ದರೆಂದು ಬಂದ ದೂರುಗಳ ಬಗ್ಗೆ ವಿಚಾರಣೆ ನಡೆಸಲು ಪ್ರದೇಶ ಕಾಂಗ್ರೆಸ್ಸಿನ ವಿಚಾರಣಾ ಸಮಿತಿಯು ಇದೇ ೧೬ ೧೭ ಮತ್ತು ೧೮ ನೇ ತಾರೀಖುಗಳಲ್ಲಿ ಇಲ್ಲಿನ ದೊಡ್ಡ ಗಡಿಯಾರದ ಬಳಿ ಇರುವ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಸೇರುವುದು ಕೃಷ್ಣರಾಜನಗರ, ನಂಜನಗೂಡು, ಹೆಗ್ಗಡದೇವನಕೋಟೆ, ಗುಂಡ್ಲುಪೇಟೆ, ಚಾಮರಾಜ ನಗರ, ಟಿ. ನರಸೀಪುರ, ಯಳಂದೂರು, ಪಿರಿಯಾಪಟ್ಟಣ ಮತ್ತು ಮೈಸೂರು ತಾಲ್ಲೂಕುಗಳಲ್ಲಿ ನಡೆದ ಚುನಾವಣೆಯ ಅಕ್ರಮ ನಡವಳಿಕೆಗಳಿಗೆ ಸಂಬಂಧಪಟ್ಟಂತೆ ಆಪಾದಿಸಲ್ಪಟ್ಟಿರುವವರೂ ಮತ್ತು ದೂರು ಕೊಟ್ಟಿರುವವರೂ ತಕ್ಕ ಸಾಕ್ಷ್ಯ ಸಾಹಿತ್ಯಗಳೊಡನೆ ಆ ದಿನಗಳಲ್ಲಿ ಹಾಜರಾಗಬೇಕೆಂದು ಕೋರಲಾಗಿದೆ

ರಷ್ಯಾ, ಚೀಣಗಳ ಸೈನ್ಯ ಬಲ ತಗ್ಗಿಸಲು ಒತ್ತಾಯ

ಅಮೆರಿಕ, ಬ್ರಿಟನ್ ಮತ್ತು ಫ್ರಾನ್ಸುಗಳ ಪರವಾಗಿ ವಿಶ್ವ ಸಂಸ್ಥೆಯ ನಿಶ್ಶಸ್ತ್ರೀಕರಣ ಸಮಿತಿಗೆ ಒಂದು ಹೊಸ ಯೋಜನೆಯು ಕೊಡಲ್ಪಟ್ಟು, ರಷ್ಯಾ ಮತ್ತು ಚೀಣಾಗಳು ತಮ್ಮ ಶಸ್ತ್ರ ಸಜ್ಜಿತ ಸೈನ್ಯ ಬಲಗಳನ್ನು ತಲಾ ೧೫ ಲಕ್ಷಕ್ಕೆ ಇಳಿಸಬೇಕು ... ರಾಷ್ಟ್ರಗಳ ನಿಶ್ಶಸ್ತ್ರೀಕರಣ ಸಮ್ಮೇಳನವನ್ನು ನಡೆಸಲು ಪಶ್ಚಿಮ ರಾಷ್ಟ್ರಗಳು ಒಪ್ಪಿವೆಯೆಂದು ಸೂಚಿಸಲಾಗಿದೆ

ತಿರುಪತಿಗೆ ಕೊಟ್ಟಿದ್ದ ಮೈಸೂರು ಆನೆಯ ನಿಧನ

ಮೈಸೂರಿನ ಅರಸ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು ೧೫೦ ವರ್ಷಗಳ ಕೆಳಗೆ ತಿರುಪತಿ ದೇವಸ್ಥಾನಕ್ಕೆ ಒಪ್ಪಿಸಿದ್ದ ಆನೆಯು ಮೊನ್ನೆ ಮೃತಪಟ್ಟಿತೆಂದು ತಿಳಿದುಬಂದಿದೆ ಅದಕ್ಕೆ ೭೦ ವರ್ಷ ವಯಸ್ಸಾಗಿದ್ದಿತು

ಜಂಬೂ ಸವಾರಿ

ಬೆಂಗಳೂರು ೧೩

ಈ ವರ್ಷವೂ ಎಂದಿನಂತೆ ನವರಾತ್ರಿಯ ಉತ್ಸವಗಳನ್ನೂ, ವಿಜಯ ದಶಮಿಯ ಜಂಬೂ ಸವಾರಿಯನ್ನೂ ನಡೆಸಲು ಮೈಸೂರು ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ.

ಎಂ. ವಿ ಕೃಷ್ಣಪ್ಪನವರಿಂದ ಕ್ಷಾಮ ಪರಿಶೀಲನೆ

ಸಂಸ್ಥಾನದ ಕ್ಷಾಮಪೀಡಿತ ಪ್ರದೇಶಗಳಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಲು ಭಾರತ ಸರ್ಕಾರದ ಆಹಾರ ಡೈರೆಕ್ಟರ್ ಜನರಲ್ ಶ್ರೀ ಎಸ್ ವೈ ಕೃಷ್ಣಸ್ವಾಮಿ, ಮತ್ತು ಆಹಾರ ಇಲಾಖಾ ಅಡಿಷನಲ್ ಕಾರ್ಯದರ್ಶಿ ಸರ್ದಾರ್ ದಾತಾರ್ ಸಿಂಗ್‌ರವರೊಡನೆ ಕೇಂದ್ರ ಆಹಾರ ಡೆಪ್ಯುಟಿ ಮಂತ್ರಿ, ಶ್ರೀ ಎಂ ವಿ ಕೃಷ್ಣಪ್ಪನವರು ಈ ದಿನ ಇಲ್ಲಿಗೆ ಆಗಮಿಸುವರು ಸಂಸ್ಥಾನದ ಮಂತ್ರಿಗಳು ಮತ್ತು ಅಧಿಕಾರಿಗಳೊಡನೆ ಅವರು ಸಮಾಲೋಚನೆ ನಡೆಸಿ, ಅವಶ್ಯಕವಾದ ಜರೂರು ಪರಿಹಾರ ಕಾರ್ಯಕ್ರಮವನ್ನು ನಿರ್ಧರಿಸುವರು

ಪತ್ರಿಕೆ ಮೇಲೆ ಕೇಂದ್ರ ಮಂತ್ರಿಯ ಮೊಕದ್ದಮೆ

ಬೊಂಬಾಯಿಯ ವಾರಪತ್ರಿಕೆಯೊಂದರಲ್ಲಿ ಬಂದ ಸುದ್ದಿಯು ತಮಗೆ ಮಾನನಷ್ಟಕರವಾಗಿದೆಯೆಂದು ಕೇಂದ್ರದ ಪುನರ್ವಸತಿ ಮಂತ್ರಿಗಳಾದ ಅಜಿತ್ ಪ್ರಸಾದ್ ಜೈನರವರು ಸದರಿ ಪತ್ರಿಕೆ ಮೇಲೆ ಬೊಂಬಾಯಿಯ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುತ್ತಾರೆ ಬಿ ಕೆ ಬಿರ್ಲಾರವರ ಪತ್ನಿಯು ಯೂರೋಪಿಗೆ ತೆರಳುವಾಗ, ಬೊಂಬಾಯಿಯ ಸುಂಕದ ಅಧಿಕಾರಿಗಳು ಅವರಿಂದ ವಶಪಡಿಸಿಕೊಂಡ ಬೆಲೆಬಾಳುವ ಆಭರಣಗಳನ್ನು, ಮಂತ್ರಿಗಳು ಪ್ರಭಾವ ಬೀರಿ ವಾಪಸು ಕೊಡಿಸಿದರೆಂದು ಪತ್ರಿಕೆಯಲ್ಲಿ ಬರೆಯಲಾಗಿದ್ದಿತೆಂದು ಹೇಳಲಾಗಿದೆ

ಅಕ್ರಮ ಧೋತರ ರವಾನೆಗೆ ೩೩ ಸಾವಿರ ರೂ. ದಂಡ

ಅನಂತಪುರ ಜಿಲ್ಲೆಯ ರಘುಲಪಾಡು ಹಳ್ಳಿಯಿಂದ ರಾಜಪತ್ರಿಕೆ ಇಲ್ಲದೆ ಕಳೆದ ನವೆಂಬರಿನಲ್ಲಿ ೫೮ ಜೊತೆ ಧೋತರವನ್ನು ಸಾಗಿಸಿದರೆಂದು ಆಪಾದಿಸಲ್ಪಟ್ಟ ಕೇಶವಯ್ಯಶೆಟ್ಟಿ ಎಂಬುವರಿಗೆ ೩೩,೩೦೦ ರೂ ಗಳ ದಂಡವನ್ನು ವಿಧಿಸಲಾಗಿದೆ

ವ್ಯಾಯಾಮ ಶಾಲೆ ಮತ್ತು ಉಚಿತ ವಾಚನಾಲಯದ ಪ್ರಾರಂಭ

ರಾಜಧಾನಿಯ ಚಾಮುಂಡಿಪುರದ ವ್ಯಾಯಾಮ ಶಾಲೆ ಮತ್ತು ಉಚಿತ ವಾಚನಾಲಯದ ಪ್ರಾರಂಭೋತ್ಸವವು ನಾಳೆ ಮಧ್ಯಾಹ್ನ ೧೨ ಘಂಟೆಗೆ ಶಾಲೆಯ ಕಟ್ಟಡದಲ್ಲಿ ನೆರವೇರುವುದು ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸರಾದ ಶ್ರೀ ಬಿ ಎಸ್ ಸುಬ್ಬರಾಯರು ಅದನ್ನು ನೆರವೇರಿಸುವರು

ಕೇಂದ್ರ ಹಿರಿಯ ಶಾಸನ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ಎ ಕೆ ಗೋಪಾಲನ್‌ರವರು ಪಕ್ಷದಲ್ಲೇ ಪ್ರಪಂಚದ ಪ್ರವಾಸ ಕೈಗೊಳ್ಳಲಿರುವರೆಂದು ಗೊತ್ತಾಗಿದೆ

ಬಿಹಾರಿನ ೧| ಕೋಟಿ ಜನರಿಗೆ ತೊಂದರೆ

ಬಿಹಾರಿನ ದಕ್ಷಿಣ ಭಾಗದಲ್ಲಿ ಮಳೆ ಸು ಬಾರದೆ, ಉತ್ತರ ಭಾಗದಲ್ಲಿ ಅತಿವೃಷ್ಟಿಯಾಗಿರುವುದರಿಂದ ಒಟ್ಟು ಒಂದು ಕೋಟಿಯ ಷ್ಟು ಜನರು ಕಷ್ಟಕ್ಕೆ ಈಡಾಗಿರುವರೆಂದು ವರದಿಯಾಗಿದೆ

ಹೆಚ್ಚು ಮಾತನಾಡುತ್ತಿದ್ದ ರೋಗಿಯ ಬಾಯಿಗೆ ಬೀಗ

ಇಂಗ್ಲೆಂಡಿನ ಬ್ಲಾಕ್‌ಪೂಲ್ ಆಸ್ಪತ್ರೆಯಲ್ಲಿ ಒಬ್ಬ ರೋಗಿಯು ತುಂಬಾ ಮಾತನಾಡುತ್ತಿದ್ದುದನ್ನು ತಪ್ಪಿಸಲು ಆಸ್ಪತ್ರೆಯ ಒಬ್ಬ ಜವಾನ ಮತ್ತು ಇಬ್ಬರು ದಾದಿಯರು ಅವನ ಬಾಯಿಗೆ ಪ್ಲಾಸ್ಟರ್ ಅಂಟು ಹಾಕಿ ಸೀಲು ಮಾಡಿದರೆಂದೂ, ಅಧಿಕಾರಿಗಳು ಇವನ್ನರಿತು ಅವರುಗಳನ್ನು ಕೆಲಸದಿಂದ ವಜಾ ಮಾಡಿದರೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ ರೂ ಗೆ
ನೆಲಗಡಲೆ	೧೧-೪-೦ ೨೧-೮-೦
ಎಳ್ಳು	೭೩ ೦ ೦ ೮೧ ೬ ೦
ಹುಚ್ಚೆಳ್ಳು	೪೫ ೦ ೦ ೪೬-೦-೦
ಹರಳು ಬೀಜ	೪೩ ೦ ೦
ಹುರುಳಿ	೪೨ ೦ ೮ ೪ ೧ ೦
ಹೆಸರು	೬೦ ೨ ೦
ಹೊಂಗೇಬೀಜ	೧೬ ೦ ೦
ಉದ್ದು	೬೭ ೮ ೦
ಹಲಸಂದೆ	೬೮-೧೨-೦ ೭೦ ೦ ೦
ಮೆಣಸಿನಕಾಯಿ	
ಮಣ ೧ಕ್ಕೆ	೭ ೮ ೦ ೧೬ ೧೨ ೦
ಹುಣಸೇಹಣ್ಣು	೪-೧೪-೦ ೫ ೮ ೦
ಸೀಗೇಕಾಯಿ	೪-೨-೦ ೫-೭-೦
ತೆಂಗಿನಕಾಯಿ ೧೦೦೦	೧೧೨ ೦ ೦ ೧೧೪ ೦ ೦

ಶ್ರೀ ಜಗದಾಂಬ ಆಶುವಿಹಾರ

585 ದಿವಾನ್ಸ್ ರಸ್ತೆ, ಮೈಸೂರು

ಶಿಶು ಮನಶ್ಶಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳಿಗನುಸಾರವಾಗಿ ಉತ್ತಮತರವಾದ ಪರಿಸರಕ್ಕನುಗುಣವಾದ ಬಂಗ್ಲೆಯಲ್ಲಿ, ಉತ್ಕೃಷ್ಟವಾದ ವಿದ್ಯಾಭ್ಯಾಸ ಉಪಕರಣಗಳ ಸಹಾಯದಿಂದ ನೃತ್ಯ, ಗೀತ ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಮೇಲ್ಮಂಡ ಶಿಶುವಿಹಾರದಲ್ಲಿ ಕೊಡಲಾಗುತ್ತಿದೆ ಈ ಸುಸಮಯವನ್ನು ಕಳೆದುಕೊಳ್ಳದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ

ಡಿ ಕೃಷ್ಣಮೂರ್ತಿ,
ಡೈರೆಕ್ಟರ್

SRI GAYATHRI
TALKIES
Daily 2 Shows
From 13-8-52 For 2 Days
M G Ms
DIAL 1119
— NEXT CHANGE —
SONS OF THE MUSKETEERS

Edited, Printed and Published by A R Nagarajan at Sadhvi Press, D Subbiah Road, Mysore

ಲಂಡನ್ನಿನಿಂದ ಭಾರತಕ್ಕೆ ೧೨ ಗಂಟೆಗಳಲ್ಲಿ

ಬ್ರಿಟನ್ನಿನ ಜೆಟ್ ಕಾಮೆಟ್ ವಿಮಾನವೊಂದು ನೆನ್ನೆ ಲಂಡನ್ನಿನಿಂದ ಹೊರಟು ೧೧ ಘಂಟೆ ೫೩ ನಿಮಿಷಗಳಲ್ಲಿ ೬೮೫೦ ಮೈಲಿನಷ್ಟು ಯಾನ ಮಾಡಿ ಬೊಂಬಾಯಿಯನ್ನು ತಲುಪಿತೆಂದು ವರದಿಯಾಗಿದೆ ಮಾರ್ಗ ಮಧ್ಯದಲ್ಲಿ ಅದು ನಾಲ್ಕು ಸ್ಥಳಗಳಲ್ಲಿ ಮಾತ್ರ ಒಂದೊಂದು ಘಂಟೆ ಕಾಲ ನಿಂತಿತ್ತೆಂದು ಹೇಳಲಾಗಿದೆ ವಿಮಾನವು ಘಂಟೆಗೆ ೪೮೦ ರಿಂದ ೫೦೦ ಮೈಲಿ ವೇಗದಲ್ಲಿ ಹಾರಿ, ಹಲವು ಸಂದರ್ಭಗಳಲ್ಲಿ ೪೦ ಸಾವಿರ ಅಡಿ ಎತ್ತರದವರೆಗೆ ಹೋಗಿದ್ದಿತೆಂದು ಹೇಳಲಾಗಿದೆ ಒಲಂಪಿಕ್ ಪಂದ್ಯಗಳಿಗೆ ತೆರಳಿದ್ದ ಪಾಕಿಸ್ಥಾನದ ೨೦ ಮಂದಿ ಹಾಕಿ ಆಟಗಾರರು ಅದರಲ್ಲಿ ಕರಾಚಿಗೆ ಬಂದರೆಂದೂ, ಇತರ ಆರು ಮಂದಿ ಪ್ರಯಾಣಿಕರೂ ಅದರಲ್ಲಿದ್ದರೆಂದೂ ಗೊತ್ತಾಗಿದೆ

ಪೂರ್ವ ಮತ್ತು ಪಶ್ಚಿಮ ಜರ್ಮನಿಗಳಿಗೆ ಘರ್ಷಣೆ

ಪೂರ್ವ ಮತ್ತು ಪಶ್ಚಿಮ ಜರ್ಮನಿ ಗಡಿ ಕಾವಲುಗಾರರು ಕಾರ್ಲೇಜ್ ಹಾರ್ಜ್ ಪರ್ವತಶ್ರೇಣಿ ಒಳ ಒಬ್ಬರಮೇಲೊಬ್ಬರು ಗುಂಡು ಹಾರಿಸಿದರೆಂದು ವರದಿಯಾಗಿದೆ ಪರಾಬಂಗಿಗಳ್ಳರನ್ನು ದಸ್ತಗಿರಿ ಮಾಡಲು ಪೂರ್ವ ಜರ್ಮನಿಯ ಕಾವಲುಗಾರರು ಪಶ್ಚಿಮ ಗಡಿ ಎಲ್ಲೆಯೊಳಗೆ ೩೦೦ ಗಜ ದೂರ ಬಂದುದೇ ಘರ್ಷಣೆಗೆ ಕಾರಣವಾಗಿ, ಕೊನೆಗೆ ಪೂರ್ವದವರು ವಾಪಸು ತೆರಳಿದರು

ಮೈಸೂರಿನ ಮುಖ್ಯ ಜಿಲ್ಲಾ ನ್ಯಾಯಾಧೀಶರು

ದಿವಂಗತ ಶ್ರೀ ಕೆ ಸಿ ಲಿಂಗಯ್ಯಗೌಡರ ಸ್ಥಾನದಲ್ಲಿ ಮೈಸೂರಿನ ಅಡಿಷನಲ್ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ ಆರ್ ತಿಮ್ಮರಾಯ ಶೆಟ್ಟರನ್ನು ಜಿಲ್ಲಾ ಮುಖ್ಯ ನ್ಯಾಯಾಧೀಶರಾಗಿ ನೇಮಿಸಲಾಗಿದೆ ರಜದ ಮೇಲಿರುವ ಸಬಾರ್ಡಿನೇಟ್ ಜಡ್ಜರಾದ ಶ್ರೀ ಎಂ ಮುನಿಸ್ವಾಮಯ್ಯನವರು ಮೈಸೂರಿನ ಅಡಿಷನಲ್ ಜಿಲ್ಲಾ ನ್ಯಾಯಾಧೀಶರಾಗಿ ನೇಮಕಪಟ್ಟಿರುವರು

ತಿರುನಲ್ವೇಲಿ ಕಮ್ಯೂನಿಸ್ಟರಿಗೆ ಜೀವಾವಧಿ ಶಿಕ್ಷೆ

ರೈಲ್ವೆ ಸೇತುವೆಗಳನ್ನು ಒಡೆಯುವುದು, ಶಸ್ತ್ರಾಸ್ತ್ರ ಸಂಗ್ರಹಿಸುವುದು, ಕಳುವು, ದರೋಡೆ ಮತ್ತು ಕೊಲೆ ಮಾಡುವುದು ಇವೇ ಮುಂತಾದ ಕಾರ್ಯಗಳಿಂದ ಸರಕಾರವನ್ನು ಬೆದರಿಸುವ ಪಿತೂರಿಯಲ್ಲಿ ತೊಡಗಿದ್ದರೆಂದು ತಿರುನಲ್ವೇಲಿಯ ೯ ಜನ ಕಮ್ಯೂನಿಸ್ಟರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ ಏಳು ಮಂದಿಗೆ ವಿವಿಧ ಶಿಕ್ಷೆಗಳನ್ನು ಕೊಡಲಾಗಿದೆ ೫೧ ಜನರ ಖುಲಾಸೆಯಾಗಿದೆ

ರಾಕೆಟ್ ಮೂಲಕ ಅಂಚೆ ರವಾನೆ

ಅಂಚೆಯನ್ನು ರಾಕೆಟ್ ಮೂಲಕ ರವಾನಿಸುವ ಬಗ್ಗೆ ಪ್ರಥಮವಾಗಿ ೫ ಬಾರಿ ಪ್ರಯೋಗಗಳನ್ನು ಕಳೆದ ಭಾನುವಾರ ಪಶ್ಚಿಮ ಜರ್ಮನಿಯಲ್ಲಿ ನಡೆಸಲಾಯಿತು ಹೊಗೆಯನ್ನುಗುಳುತ್ತಾ ಹಾರಿದ ಈ ರಾಕೆಟ್ಟುಗಳಲ್ಲಿ ಕೆಲವು ತಲೆಕೆಳಗಾದುವು ಉಳಿದುವು ಸ್ವಲ್ಪ ದೂರ ಹೋಯಿತೆಂದು ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎಂ ವಿ ವರಾಹಸ್ವಾಮಿ ಗಿಟಾರ್ ವ ಧ್ಯಾಹ್ನ ೩೦ ವೀಣೆ ೩ ರಂಗಪ್ಪ ವೇಣುಗಾನ ಸಂಜೆ ೫ ೩೦ ಮತ್ತು ೭ ೩೦ ಎಂ ಜೆಜೆ ಅನಜನಪ್ಪ ಸಂಗೀತ ೬ ೦೦ ಕನ್ನಡ ಗೀತೆಗಳು ೭ ಚಿತ್ರಲೋಕ ೨ ಪಾತ್ರಾರು ಸುಬ್ರಹ್ಮಣ್ಯಂ ರಿಕಾರ್ಡ್ ಸಂಗೀತ ೮ ೧೫ ಪಿ ಕಾಳಿಂಗರಾವ್ ಕನ್ನಡ ಗೀತೆಗಳು ೮ ೩೦ ರಂಗಪ್ಪ ವೇಣು ಗಾನ ೯ ೧೫ ರಸ ಪ್ರಸಂಗ ೯ ೩೦ ಕನ್ನಡ ಮುಖ್ಯಾಂಶ ಮಕ್ಕಳ ಕಾರ್ಯಕ್ರಮ.

ಒಲಂಪಿಯಾ ಟಾಕೀಸ್

14-8 52 ರಿಂದ ಅನೇಕ ೩ನೇ ವಾರ ಅಪೂರ್ವದ

ವೀರಅರ್ಜುನ್

ಪಾತ್ರ — ನಿರೂಪರಾಯ್, ತ್ರಿಲೋಕ್ ಕಪೂರ್ ಮತ್ತು ಮಹಿಪಾಲ್

ಬೆಳಗಿನ ಪ್ರದರ್ಶನ 14 8 52 ರಿಂದ ಪ್ರತಿ ದಿನ 10—30 ಕ್ಕೆ

ಅಶೋಕ್ ಕುಮಾರ್ ಪಾತ್ರವಹಿಸಿರುವ

★ ಸಂಗ್ರಾಮ್ ★



★ ರಣಜಿತ್ ★
ಮೈಸೂರು
15-8-52 ರಿಂದ
ಯಶಸ್ವೀ 2 ನೇ ವಾರ
ಸಾವಿರಾರು ಜನರು ನೋಡಿ
ನಲಿಯುತ್ತಿರುವ
ಮೆಹಬೂಬ್ ಪ್ರೊಡಕ್ಷನ್ಸ್‌ರವರ
★ ಆನ್ ★
ಟೆಕ್ನಿ ಕಲರ್ ವರ್ಣರಂಜಿತ ಚಿತ್ರ
★ AAN ★
[AN ALL INDIA FILM CORPORATION RELEASE]

ಕಡಲೆಕಾಯಿ ಹಾಲು ಮತ್ತು ಮೊಸರು

ರಾಜಧಾನಿಯ ಕೇಂದ್ರ ಆಹಾರ ಸಂಶೋಧನಾಲಯದ ಗೋಷ್ಠಿಯಲ್ಲಿ ಕಳೆದ ಶನಿವಾರ ಡಾ|| ಎಂ. ಎಸ್ ಮೂರ್ಜಾನಿಯವರು ಭಾಷಣ ಮಾಡಿ, ದೇಶದಲ್ಲಿ ಹಾಲು ಮತ್ತು ಮೊಸರಿನ ಅಭಾವವು ಬಹಳವಾಗಿರುವುದೆಂದೂ, ಜನರಿಗೆ ಅಗತ್ಯವಾಗಿ ಬೇಕಾಗಿರುವುದರಲ್ಲಿ ಇದು ಕಾಲುಭಾಗ ಮಾತ್ರವಿರುವುದೆಂದೂ ತಿಳಿಸಿದರು ಕಡಲೇಕಾಯಿಯ ಹಾಲಿನ ತಯಾರಿಕೆಯು ಈ ದೃಷ್ಟಿಯಿಂದ ಜನರಿಗೆ ನೆರವು ಪ್ರದವಾಗಿರುವುದೆಂದೂ, ದೇಶದಲ್ಲಿ ಬೆಳೆಯುವ ೩೫ ಲಕ್ಷ ಟನ್ ಕಡಲೆಕಾಯಿಯಲ್ಲಿ ಸ್ವಲ್ಪಭಾಗವನ್ನು ಹಾಲು ಮತ್ತು ಮೊಸರಿನ ತಯಾರಿಕೆಗೆ ಸುಲಭವಾಗಿ ಉಪಯೋಗಿಸಬಹುದೆಂದೂ ಅವರು ಅಭಿಪ್ರಾಯಪಟ್ಟರು ಈ ಹಾಲು ಮತ್ತು ಮೊಸರು ಪುಷ್ಟಿಕರವಾಗಿಯೂ, ಅಗ್ಗವಾಗಿಯೂ ಇರುವುದೆಂದೂ, ಒಂದು ಪೌಂಡಿನಷ್ಟು ಕಡಲೇಕಾಯಿಯಿಂದ ೮ ಪೌಂಡು ಹಾಲನ್ನು ತಯಾರಿಸಬಹುದೆಂದೂ ಅವರು ಹೇಳಿ, ಈಗಾಗಲೇ ಕೇಂದ್ರ ಸಂಶೋಧನಾಲಯದಲ್ಲಿ ತಯಾರಾಗುತ್ತಿರುವ ಕಡಲೇಕಾಯಿ ಹಾಲು ಮೊಸರನ್ನು ಹೋಟಲು ಮತ್ತು ಫಲಾಹಾರ ಮಂದಿರಗಳು ಉಪಯೋಗಿಸುತ್ತಿರುವುದಾಗಿಯೂ ತಿಳಿಸಿದರು

ಸ್ವಾತಂತ್ರ್ಯದಿನೋತ್ಸವದಲ್ಲಿ ಚೇಂಬರಿನ ಕಾರ್ಯಕ್ರಮ

ಸ್ವಾತಂತ್ರ್ಯ ದಿನೋತ್ಸವದ ಸಂಬಂಧವಾಗಿ ಮೈಸೂರಿನ ಚೇಂಬರಿನ ವಿಶೇಷ ಕೂಟವು ಬರುವ ೧೬ ನೇ ತಾ|| ಶನಿವಾರ ನಗರದ ಸ್ಕೌಟ್ ಕೌನ್ಸಿಲ್ಲಿನ ಕಟ್ಟಡದಲ್ಲಿ ನಡೆಯುವುದು ಧ್ವಜಾರೋಹಣ,ಮಾರ್ಚ್‌ಪಾಸ್ಟ್, ಭಾಷಣಗಳು, ಪ್ರದರ್ಶನಗಳು ಇತ್ಯಾದಿ ನಡೆಯುವುವು

ಕಾರ್ಮಿಕ ಗೃಹ ವಸತಿಯ ಸಂಸ್ಥೆ

ಮೈಸೂರು ಸಂಸ್ಥಾನದ ಕಾರ್ಮಿಕ ಗೃಹ ವಸತಿಯ ಕಾರ್ಪೊರೇಷನ್ ಎಂಬ ಸಂಸ್ಥೆಯನ್ನು ಶ್ರೀಮನ್ಮಹಾರಾಜರು ನೆನ್ನೆ ಸ್ಥಾಪಿಸಿರುತ್ತಾರೆ ಇದಕ್ಕೆ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿರುವರು ಇತರೆ ೧೪ ಮಂದಿ ಸದಸ್ಯರಿರುವರು.

ರೈಲ್ವೆ ನೌಕರರ ಸಂಬಳದಲ್ಲಿ ಇನ್ಷೂರೆನ್ಸ್ ಪ್ರೀಮಿಯಂ ಹಿಡಿಯಬೇಕು

ಮೈಸೂರು ಸರ್ಕಾರದ ವಿಮಾ ಸಂಸ್ಥೆಯಲ್ಲಿ ಜೀವವಿಮೆ ಮಾಡಿಸುವ ರೈಲ್ವೆ ನೌಕರರುಗಳ ಪ್ರೀಮಿಯಂಗಳನ್ನು ಅವರ ಸಂಬಳದಲ್ಲಿ ಹಿಡಿಯಬಂತೆ ಶ್ರೀಮನ್ಮಹಾರಾಜರು ಆಜ್ಞೆ ಹೊರಡಿಸಿದ್ದರೂ ಸಹಾ, ಆರೀತಿ ಹಿಡಿಯುತ್ತಿಲ್ಲವೆಂದೂ, ಇನ್ಷೂರೆನ್ಸ್ ಇಲಾಖೆಯವರು ಈ ಬಗ್ಗೆ ಸೂಕ್ತಕ್ರಮ ಕೈಗೊಳ್ಳಬೇಕೆಂದೂ ವಂಚಿಕರೊಬ್ಬರು ಪತ್ರ ಬರೆದಿರುತ್ತಾರೆ.

ಎಲ್ಲಾ ಬಗೆಯ
ಅಲೋಪಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್,
ಮೈಸೂರು.

ರಿಜಿಸ್ಟರ್ಡ್ ನಂ 792 || ವಂದೇ ಮಾತರಂ || ಬಿಡಿಪ್ರತಿ ಒಂದು ಆಣೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೪-೮-೧೯೫೨ [ಸಂಚಿಕೆ ೦೬

ಅಲೆಕ್ಸಾಂಡ್ರಿಯಾ ಗಲಭೆಯಲ್ಲಿ ೧೦ ಮಂದಿ ಸಾವು

ಬೆಂಗಳೂರಿನಲ್ಲಿಯೂ ಪಡಿತರ ರದ್ದಿನ ವಿಷಯ

ಪರ್ಯಾಲೋಚನೆಯಲ್ಲಿರುವುದೆಂದು ಕುಮಾರಾಚಾರರ ಹೇಳಿಕೆ

ಬೆಂಗಳೂರು ನಗರದಲ್ಲಿ ಆಹಾರದ ಪಡಿತರವನ್ನು ರದ್ದುಗೊಳಿಸುವ ವಿಷಯವು ತಮ್ಮ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿರುವುದೆಂದೂ, ಅಲ್ಲಿ ಪಡಿತರವು ಶೀಘ್ರದಲ್ಲೇ ರದ್ದಾಗಲೆಂದು ತಾವು ಆಶಿಸುವುದಾಗಿಯೂ, ಮೈಸೂರಿನ ಶ್ರೀ ಕುಮಾರಾಚಾರರವರು ಧನುಷ್ಕೋಟಿಯಲ್ಲಿ ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ರಾಮೇಶ್ವರದಲ್ಲಿ ಅವರು ಪೂಜೆಯನ್ನು ಸಲ್ಲಿಸಿ ದೇವರಿಗೆ ಮುತ್ತಿನ ಹಾರ ಮತ್ತು ವಸ್ತ್ರದ ತಿರುಪೂಂಗಲ್ಯವನ್ನು ಅರ್ಪಿಸಿದರು.

ದೆಹಲಿಯಲ್ಲಿ ಸ್ವಾತಂತ್ರ್ಯ ದಿನೋತ್ಸವ

ದೆಹಲಿಯಲ್ಲಿ ನಾಳೆ ನಡೆಯಲಿರುವ ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಪ್ರಧಾನಿ ನೆಹರೂರವರು ಅಲ್ಲಿನ ಕೆಂಪು ಕೋಟೆಯ ಮೇಲೆ ರಾಷ್ಟ್ರ ಧ್ವಜಾರೋಹಣ ಮಾಡುವರು. ಅದಕ್ಕೆ ಮುಂಚೆ ಭೂ ಸೇನೆ ನೌಕಾ ಮತ್ತು ವಿಮಾನ ಬಲಗಳು ಮತ್ತು ದೆಹಲಿಯ ಶಸ್ತ್ರ ಸಜ್ಜಿತ ಪೋಲೀಸರ ಪಡೆಗಳಿಂದ ಅವರು ಗಾರ್ಡ್ ಆಫ್ ಆನರ್ ಸ್ವೀಕರಿಸುವರು. ಆ ರಾತ್ರಿ ೮-೩೦ಕ್ಕೆ ಆಲ್ ಇಂಡಿಯಾ ರೇಡಿಯೋದಲ್ಲಿ ರಾಷ್ಟ್ರಾಧ್ಯಕ್ಷರು ದೇಶಕ್ಕೆ ಸಂದೇಶ ಭಾಷಣ ಮಾಡುವರು.

ಆಸ್ಪತ್ರೆಗಳ ಆಹಾರ ತನಿಖೆಗಾಗಿ ಸಮಿತಿ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ, ಚೆಲುವಾಂಬಾ ಮತ್ತು ಕ್ಷಯ ರೋಗ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉತ್ತಮ ಆಹಾರವು ದೊರೆಯುತ್ತಿಲ್ಲವೆಂದು ಬಂದ ದೂರುಗಳ ಬಗ್ಗೆ ತನಿಖೆ ನಡೆಸಲು ಸರಕಾರದವರು, ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್ ಎಂ ಚೆನ್ನಬಸಪ್ಪ, ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿ ರಾವ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣ ಮತ್ತು ಕೃಷ್ಣರಾಜೇಂದ್ರ ಆಸ್ಪತ್ರೆಯ ಸೂಪರಿಂಟೆಂಡೆಂಟರುಗಳುಳ್ಳ ಸಮಿತಿಯೊಂದನ್ನು ರಚಿಸಿ, ೧೫ ದಿನಗಳೊಳಗೆ ಅವರು ವರದಿಯನ್ನೊಪ್ಪಿಸುವಂತೆ ಸೂಚಿಸಿರುವರು.

ಆಕಾಶವಾಣಿ. ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಚಿಂತಲಪಲ್ಲಿ ರಾಮಚಂದ್ರರಾವ್ ಸಂಗೀತ, ಎ ವಿ ಕೃಷ್ಣಮಾಚಾರ್ ಪಿಟೀಲು ಮತ್ತು ವಿ ವಿ ರಂಗನಾಥನ್ ಮೃದಂಗ. ಮಧ್ಯಾಹ್ನ ೧-೩೦ ದಿಲ್ಲಿಯಿಂದ ಸ್ವಾತಂತ್ರ್ಯ ಗೀತೆಗಳು. ಸಂಜೆ ೫-೩೦ ಚಿಂತಲಪಲ್ಲಿ ರಾಮಚಂದ್ರರಾವ್ ಸಂಗೀತ, ಟಿ ಎಸ್ ತಾತಾಚಾರ್ ಪಿಟೀಲು ಮತ್ತು ವಿ ವಿ ರಂಗನಾಥ್ ಮೃದಂಗಂ. ೬ ಕ್ವಿಜ್ ಟೈಮ್. ೬-೧೦ ಗಾನ ವಿಹಾರ. ೬-೩೦ ಸ್ವಾತಂತ್ರ್ಯ ದಿನೋತ್ಸವ. ೭ ಸ್ವರ್ಣಯುಗದಿಂದ ಸಂಗೀತ. ೭-೩೦ ಕೆ ಸಿ ರೆಡ್ಡಿ ಸ್ವಾತಂತ್ರ್ಯ ದಿನದ ಸಂದೇಶ. ೮ ಟಿ ಚೌಡಯ್ಯ ಪಿಟೀಲು. ೮-೩೦ ದೆಹಲಿಯ ಕಾರ್ಯಕ್ರಮದ ಪ್ರಸಾರ. ೯-೧೫ ಕನ್ನಡ ನಾಟಕ

16—8—52

ಬೆಳಿಗ್ಗೆ ೭-೩೦ ಚಿತ್ರ ಜಗತ್. ಮಧ್ಯಾಹ್ನ ೩-೩೦ ಪಿಟೀಲು. 'ಬಾಲ ಜಗತ್' ಸಂಜೆ ೫-೩೦ ಮತ್ತು ೬ ಎ ವಿ ವೇಂಕಟರಾಮಯ್ಯ ಪಿಟೀಲು. ೬-೧೦ ನಾದಶ್ರೀ. ೭-೩೦ ಸಂತ ವಿಹಾರ. ೮ ಕಥಾ ಕಾಲಕ್ಷೇಪ. ೯-೧೫ ತಬಲಾ ವಾದನ. ೯-೩೦ ಗಾನವಾರಿಧಿ

ಎಂ. ವಿ ಕೃಷ್ಣಪ್ಪನವರ ಆಗಮನ

ಬೆಂಗಳೂರು ೧೪

ಕೇಂದ್ರ ಸರ್ಕಾರದ ಆಹಾರ ಶಾಖೆಯ ಉಪಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ನೆನ್ನೆ ಮಧ್ಯಾಹ್ನ ದೆಹಲಿಯಿಂದ ಇಲ್ಲಿಗೆ ಆಗಮಿಸಿದರು. ಅವರು ೧೬ ಮತ್ತು ೧೭ನೇ ತಾ|| ಕೋಲಾರ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಚರಿಸಿ ಪರಿಸ್ಥಿತಿಯನ್ನು ಅರಿತುಕೊಳ್ಳುವರು. ಸಂಸ್ಥಾನದ ತೀವ್ರ ಆಹಾರ ಪರಿಸ್ಥಿತಿ ಮತ್ತು ಕೃಷ್ಣರಾಜ ಸಾಗರದಲ್ಲಿ ನೀರಿನ ಮಟ್ಟವು ಬಹಳವಾಗಿ ಕಡಿಮೆಯಾಗಿರುವುದು ಈ ವಿಷಯಗಳ ಬಗ್ಗೆಯೂ ಅವರು ಪರಿಶೀಲನೆ ನಡೆಸುವರು. ಹಾಸನ ಮತ್ತು ಇತರ ಕೆಲವು ಜಿಲ್ಲೆಗಳಿಂದ ಕೋಲಾರ ಮತ್ತು ಚಿತ್ರದುರ್ಗಗಳಲ್ಲಿ ಕ್ಷಾಮವು ಬರದಂತೆ ಶಾಶ್ವತವಾಗಿ ತಡೆಗಟ್ಟಲು ಕೈಗೊಳ್ಳ ಬೇಕಾಗಿರುವುದೆಂಬುದನ್ನು ಸ್ಥಾಪಿಸುವ ವಿಷಯವೂ ಮೈಸೂರು ಸಂಸ್ಥಾನಕ್ಕೆ ಹೆಚ್ಚು ಆಹಾರ ಬೆಳೆಗೆ ೧ ಕೋಟಿ ರೂ ಅನ್ನು ಸಾಲ ಮತ್ತು ಸಹಾಯವಾಗಿ ಕೊಡುವ ವಿಷಯವೂ ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಶ್ರೀ ಕೃಷ್ಣಪ್ಪನವರು ತಿಳಿಸಿರುತ್ತಾರೆ

ಚಿತ್ರದುರ್ಗದಲ್ಲಿ ಧಾನ್ಯವನ್ನು ಕಿತ್ತುಕೊಂಡ ಪ್ರಸಂಗ

ಚಿತ್ರದುರ್ಗದ ಜಿಲ್ಲೆಯಲ್ಲಿ ಆಹಾರದ ಅಭಾವದ ಪರಿಣಾಮವಾಗಿ, ಅಲ್ಲಿನ ಹಲವು ಹಳ್ಳಿಗರು ಹಸಿವನ್ನು ತಾಳಲಾರದೆ ಕಾನೂನನ್ನು ಅತಿಕ್ರಮಿಸಿ, ದಾಸ್ತಾನುಗಾರರಿಂದ ಆಹಾರ ಧಾನ್ಯವನ್ನು ಕಿತ್ತುಕೊಂಡು ಹೋಗುತ್ತಿರುವರೆಂದೂ, ಕೂಡಲೇ ಆ ಪ್ರದೇಶದಲ್ಲಿ ಪರಿಹಾರ ಕ್ರಮ ಕೈಗೊಳ್ಳದಿದ್ದರೆ ಪರಿಸ್ಥಿತಿಯು ಇನ್ನೂ ಉಲ್ಬಣಿಸುವುದೆಂಬೂ ವರದಿಯಾಗಿದೆ. ವಿಜಯಪುರದ ಹರಿಜನರಿಗೆ ಮೂರು ನಾಲ್ಕು ದಿನಗಳಿಂದ ಆಹಾರವೇ ದೊರೆಯುತ್ತಿಲ್ಲವೆಂದೂ, ಜನರು ಊರನ್ನು ಬಿಡುತ್ತಿರುವರೆಂದೂ ಹೇಳಲಾಗಿದೆ

ಅಖಂಡ ಭಾರತ ದಿನಾಚರಣೆ

ಭಾರತೀಯ ಜನ ಸಂಘದ ಮೈಸೂರು ನಗರದ ಶಾಖೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸುಬ್ಬರಾಯನ ಕೆರೆ ಮೈದಾನದಲ್ಲಿ ಅಖಂಡ ಭಾರತ ದಿನವನ್ನು ಆಚರಿಸುವರು. ಪೌರಸಭಾ ಸದಸ್ಯರಾದ ಡಾ|| ಬಿ ಜಿ ದಾಸ್ ರವರು ಅಧ್ಯಕ್ಷತೆ ವಹಿಸುವರು

ಅಲೆಗ್ಸಾಂಡ್ರಿಯಾ ಕಾರ್ಮಿಕರ ಗಲಭೆ ಮತ್ತು ಪ್ರದರ್ಶನ

ಈಜಿಪ್ಟಿನ ರೇವು ನಗರವಾದ ಅಲೆಗ್ಸಾಂಡ್ರಿಯಾದಲ್ಲಿ ೩೦ ಸಾವಿರ ಬಟ್ಟೆ ಕಾರ್ಮಿಕರು ನೆನ್ನೆ ಪ್ರದರ್ಶನ ನಡೆಸಿ, ಅಲ್ಲಿನ ಭಾರಿ ಬಟ್ಟೆ ಕಾರ್ಖಾನೆಯೊಂದಕ್ಕೆ ಬೆಂಕಿ ಹಚ್ಚಿಸಿದರೆಂದೂ ಗಲಭೆಗಳ ಪರಿಣಾಮವಾಗಿ ೧೦ ಮಂದಿ ಕಾರ್ಮಿಕರೂ, ೨೦ ಮಂದಿ ಪೋಲೀಸರೂ ಸತ್ತು ೨೦೦ ಜನರಿಗೆ ಗಾಯವಾಗಿರುವುದಾಗಿಯೂ ವರದಿಯಾಗಿದೆ. ಕ್ರಾಂತಿಯ ಮುಖಂಡರಾದ ಜ| ನಗೀಬ್‌ರವರು ದಂಗೆಕೋರರಿಗೆ ಎಚ್ಚರಿಕೆಯಿತ್ತು ಅವರನ್ನು ದ್ರೋಹಿಗಳೆಂದು ಘೋಷಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಬಟ್ಟೆ ಕಾರ್ಖಾನೆಯೊಂದನ್ನು ಮಿಲಿಟರಿಯವರು ಈಗ ಆಕ್ರಮಿಸಿಕೊಂಡಿರುವರು.

ಸೂಚನೆ

ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ —ವ್ಯವಸ್ಥಾಪಕ

ಆಫ್ರಿಕನ್ನರ ಮೇಲೆ ಗುಂಡು

ದಕ್ಷಿಣ ಆಫ್ರಿಕಾದ ಪೋರ್ಟ್ ಎಲಿಜಬೆತ್‌ನಲ್ಲಿ ನೆನ್ನೆ ಪೋಲೀಸರು, ವರ್ಣಭೇದದ ಕಾನೂನು ಉಲ್ಲಂಘನೆ ಮಾಡಿದ ಆಫ್ರಿಕನ್ನರ ಮೇಲೆ ಗುಂಡು ಹಾರಿಸಿದರೆಂದೂ, ಒಬ್ಬನಿಗೆ ಗಾಯವಾಯಿತೆಂದೂ ವರದಿಯಾಗಿದೆ. ದಕ್ಷಿಣ ಆಫ್ರಿಕಾ ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷ ಡಾ|| ದಾದೂ ಮತ್ತು ಇತರ ೧೦ ಮಂದಿಯ ದಸ್ತಗಿರಿಯಾಗಿದೆ

ಟೆಹರಾನಿನಲ್ಲಿ ಮಾರ್ಷಲ್ ಲಾ ಮುಕ್ತಾಯ

ಕಳೆದ ಮಾರ್ಚಿ ತಿಂಗಳಲ್ಲಿ ಟೆಹರಾನಿನಲ್ಲಿ ನಡೆದ ದೊಂಬಿ ಸಂಬಂಧವಾಗಿ ಅಲ್ಲಿ ವಿಧಿಸಲಾಗಿದ್ದ ಮಾರ್ಷಲ್ ಲಾವನ್ನು ೩|| ತಿಂಗಳ ನಂತರ ನೆನ್ನೆ ಅಲ್ಲಿನ ನ್ಯಾಷನಲ್ ಫ್ರಂಟಿನವರ ಒತ್ತಾಯದ ಮೇಲೆ ರದ್ದು ಮಾಡಲಾಯಿತು. ಅಗತ್ಯ ಬಿದ್ದಲ್ಲಿ ಅದನ್ನು ಮತ್ತೆ ಜಾರಿ ಮಾಡಲಾಗುವುದೆಂದೂ ಪ್ರಧಾನಿ ಡಾ|| ಮುಸ್ಸಾದಿಕ್‌ರವರು ತಿಳಿಸಿರುವರು

ಧಾನ್ಯದ ರೂಪದಲ್ಲಿ ಕಂದಾಯವಿಲ್ಲ

ಸ್ವಂ. ಸು ಪ್ರೋ] ಬೆಂಗಳೂರು ೧೪

ಭೂ ಕಂದಾಯವನ್ನು ಧಾನ್ಯದ ರೂಪದಲ್ಲಿ ವಸೂಲು ಮಾಡುವ ಬಗ್ಗೆ ಹಲವು ತೊಂದರೆಗಳಿರುವುದರಿಂದ ಆ ಕ್ರಮವನ್ನು ಕೈಬಿಡಲಾಗಿದೆಯೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತೆ. ಬೆಳೆಯುವವರೆಲ್ಲರೂ ನಿಗದಿಯಾದಷ್ಟು ಧಾನ್ಯವನ್ನು ಸರ್ಕಾರಕ್ಕೆ ಕೊಡುವ ಬಗ್ಗೆ ಸಧ್ಯದಲ್ಲೇ ಆಜ್ಞೆ ಹೊರಡಿಸಲಾಗುವುದೆಂದೂ ತಿಳಿಸಲಾಗಿದೆ

ಸಂಸ್ಥಾನ ಸರ್ಕಾರದೊಡನೆ ಎಂ ವಿ ಕೃಷ್ಣಪ್ಪನವರ ಮಾತುಕತೆ

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಮೈಸೂರಿನ ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರೊಡನೆ ಸಂಸ್ಥಾನದ ಆಹಾರದ ಪರಿಸ್ಥಿತಿ ಬಗ್ಗೆ ಈ ದಿನ ಚರ್ಚೆ ನಡೆಸಿದರು. ಮೈಸೂರಿಗೆ ಸಾಲ ಮತ್ತು ಸಹಾಯ ದ್ರವ್ಯ ಒದಗಿಸುವ ವಿಷಯವು ಚರ್ಚಿಸಲ್ಪಟ್ಟಿತೆಂದು ಹೇಳಲಾಗಿದೆ. ಅವರು ಮುಖ್ಯ ಮಂತ್ರಿಯವರೊಡನೆ ಮಾತನಾಡಲು ಈ ದಿನ ಚಿನ್ನದ ಗಣಿಗೆ ತೆರಳಿದರು

ಮೈಸೂರು ಟೆಲಿಫೋನ್ ಎಕ್ಸ್‌ಚೇಂಜ್ ಪ್ರಾರಂಭೋತ್ಸವ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬರುವ ೨೧ ನೇ ತಾ|| ಸಂಜೆ ರಾಜಧಾನಿಯಲ್ಲಿ ಟೆಲಿಫೋನ್ ಎಕ್ಸ್‌ಚೇಂಜಿನ ಪ್ರಾರಂಭೋತ್ಸವದ ಅಧ್ಯಕ್ಷತೆ ವಹಿಸುವರು

○ ಆಹಾರ ಪಡಿತರವು ರದ್ದಾಗಿರುವ ಪ್ರದೇಶಗಳಲ್ಲಿ ತಮಗಾಗಿ ಪಡೆದ ವರ್ತಕರು ಮಾತ್ರ ಧಾನ್ಯವನ್ನು ಸರ್ಕಾರದವರು ನಿಗದಿ ಮಾಡಿರುವ ಪ್ರಕಾರವೇ ಕೊಂಡು ಅದರಂತೆಯೇ ಮಾರಬೇಕೆಂದೂ ಸೂಚಿಸಿ ಸರ್ಕಾರದವರು ಪ್ರಕಟಣೆ ಹೊರಡಿಸಿದ್ದಾರೆ.

● ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಚಿನ್ನದ ಗಣಿಯ ಅಧಿಕಾರಿಗಳೊಡನೆ ಗಣಿಯ ವಿಷಯವಾಗಿ ಮಾತುಕತೆ ನಡೆಸಲು ಅಲ್ಲಿಗೆ ತೆರಳಿದ್ದಾರೆ

ಕಾನ್ಪುರದ ಪ್ರದರ್ಶನಕಾರರ ಮೇಲೆ ಲಾಠಿ ಪ್ರಯೋಗ

ಕಾನ್ಪುರದಲ್ಲಿ ಪ್ರತಿಬಂಧಕಾಜ್ಞೆಯ ಉಲ್ಲಂಘನೆಗಾಗಿ ನೆನ್ನೆ ಮೂರು ಸಾರಿ ಮೆರವಣಿಗೆಗಳನ್ನು ತೆಗೆದುಕೊಂಡು ಹೋಗಲಾಯಿತು. ಪೋಲೀಸರು ಪ್ರದರ್ಶನಕಾರರನ್ನು ಚೆದುರಿಸಲು ಲಾಠಿ ಪ್ರಯೋಗ ಮಾಡಿದರು. ಅಲಹಾಬಾದು ಪತ್ರಿಕೆಯಲ್ಲಿ ಬಂದ ಲೇಖನದ ಸಂಬಂಧವಾಗಿ ಪ್ರದರ್ಶನಗಳನ್ನು ನೆನ್ನೆಯೂ ನಡೆಸಲಾಯಿತು

ಸಹಾಯಾರ್ಥ ಸಿನಿಮಾ ಪ್ರದರ್ಶನ

ರಾಜಧಾನಿಯ ಚಾಮುಂಡಿಪುರದ ವ್ಯಾಯಾಮ ಶಾಲೆಯ ಮತ್ತು ಉಚಿತ ವಾಚನಾಲಯದ ಸಹಾಯಾರ್ಥವಾಗಿ ರಾಜಕಮಲ್ ಟಾಕೀಸಿನಲ್ಲಿ ನಾಳೆ ಬೆಳಿಗ್ಗೆ ೧೦-೩೦ಕ್ಕೆ ಪೌರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ಬಜಾರ್ ಎಂಬ ಚಿತ್ರದ ಪ್ರದರ್ಶನವನ್ನು ಏರ್ಪಡಿಸಲಾಗಿದೆ

ನಗರದಲ್ಲಿ ಸ್ವಾತಂತ್ರ್ಯ ದಿನೋತ್ಸವ

ಮೈಸೂರು ೧೪

ಐನೇ ವರ್ಷದ ಸ್ವಾತಂತ್ರ್ಯ ದಿನೋತ್ಸವವು ನಗರದ ನಾನಾ ಕಡೆಗಳಲ್ಲಿ ನಾಳೆ ವಿಜೃಂಭಣೆಯಿಂದ ನಡೆಯಲೇರ್ಪಾಡಾಗಿದೆ

ಟೌನ್‌ಹಾಲ್ ಮೈದಾನದಲ್ಲಿ ಪೌರಸಭೆಯವರು ಏರ್ಪಡಿಸಿರುವ ಸಮಾರಂಭದಲ್ಲಿ ಬೆಳಿಗ್ಗೆ ೯ ಗಂಟೆಗೆ ರಾಷ್ಟ್ರಧ್ವಜಾರೋಹಣ, ಸ್ಕೌಟುಗಳ ಮತ್ತು ಗರ್ಲ್‌ಗೈಡುಗಳ ಮಾರ್ಚ್‌ಪಾಸ್ಟ್ ಮತ್ತು ಸಂಜೆ ೫ ೩೦ ಕ್ಕೆ ಸೈನ್ಯಗಳಿಂದ ಕವಾಯತು ಪ್ರದರ್ಶನಗಳು ನಡೆಯುವುವು

ಪತ್ರಿಕೋದ್ಯೋಗಿಗಳ ಸಂಘದಲ್ಲಿ ಬೆಳಿಗ್ಗೆ ೭ ೩೦ ಕ್ಕೆ ಧ್ವಜಾರೋಹಣವೂ, ರಾತ್ರಿ ಭೋಜನ ಕೂಟವೂ ಇವೆ

ಲಷ್ಕರ್ ಮೊಹಲ್ಲಾಕ್ಕೆ ಆರ್ ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಎಸ್ ಶ್ರೀಕಂಠಯ್ಯನವರ ಫೌಂಡ್ರಿ ಆಫೀಸ್ಸಿನ ಹತ್ತಿರ ನಾಳೆ ಬೆಳಿಗ್ಗೆ ೮ ಗಂಟೆಗೆ ಧ್ವಜಾರೋಹಣವೂ, ಸಂಜೆ ೭ ೩೦ ಕ್ಕೆ ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ನೇತೃತ್ವದಲ್ಲಿ ಸಭೆಯೂ ಏರ್ಪಾಡಾಗಿವೆ

ನೂರಡಿ ರಸ್ತೆ ಶಾಂತಿಪುರಿ ಬಡಾವಣೆ ಒಂದನೇ ನಂಬರು ಮನೆಯಲ್ಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ನಾಳೆ ಸಂಜೆ ೫ ಗಂಟೆಗೆ ಸ್ವಾತಂತ್ರ್ಯ ದಿನಾಚರಣೆ ಮತ್ತು ಸರಸ್ವತಿ ಪೂಜೆಗಳು ಡಾ|| ಬಿ ಜಿ ದಾಸ್ ರವರ ಅಧ್ಯಕ್ಷತೆಯಲ್ಲಿ ನಡೆಯುವುವು

ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಬೆಳಿಗ್ಗೆ ೭ ಗಂಟೆಗೆ ಧ್ವಜಾರೋಹಣ, ನಂತರ ನಿಲಯದ ಅಧ್ಯಕ್ಷ ಶ್ರೀ ಆರ್. ವಾಸುದೇವಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ಮತ್ತು ಮಹಾರಾಜಾ ಕಾಲೇಜಿನ ಅಸಿ ಪ್ರೊ|| ಶ್ರೀ ಎಂ ಯಾಮುನಾಚಾರ್ಯರಿಂದ ಭಾಷಣ ಇವು ಇವೆ

ನೂರಡಿ ರಸ್ತೆಯಲ್ಲಿರುವ ಛಾಂಪಿಯನ್ ಮೆಟ್ರೋಪಾಲಿಟನ್ ಕಾಮರ್ಸ್ ಕಾಲೇಜಿನಲ್ಲಿ, ಕಾಲೇಜು ಸಂಘದ ಪ್ರಯದಲ್ಲಿ ನಾಳೆ ಬೆಳಿಗ್ಗೆ ೬-೩೦ ಗಂಟೆಗೆ ಸ್ವಾತಂತ್ರ್ಯ ದಿನಾಚರಣೆಯು ನಡೆಯುವುದು

ರಾಜಧಾನಿಯ ೧ ನೇ ಕುದಿನಾದಲ್ಲಿರುವ ಶ್ರೀ ಗಂಗಾ ಪರಮೇಶ್ವರಿ ಯುವಕರ ಸಂಘದ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ಧ್ವಜವಂದನೆ ಮತ್ತು ಕ್ರೀಡಾ ಸ್ಪರ್ಧೆಗಳೂ, ರಾತ್ರಿ ೮ ಗಂಟೆಗೆ ಬಹಿರಂಗ ಸಭೆಯೂ ನಡೆಯುವುವು

ಮೈಸೂರು ನಗರದ ರೇಷನಿಂಗ್ ಆಫೀಸರರ ಕಛೇರಿ

ಪ್ರ ಕ ಟ ಣೆ

ಸ್ವಾತಂತ್ರ್ಯ ದಿನೋತ್ಸವದ ಪ್ರಯುಕ್ತ, 15- 8 1952 ನೇ ಶುಕ್ರವಾರ ಮೈಸೂರು ನಗರದ ಎಲ್ಲ ರೇಷನ್ ಶಾಪುಗಳೂ ಮತ್ತು ಮೊಹಲ್ಲಾ ಸಬ್ ಗೋಡೌನುಗಳೂ ಮುಚ್ಚಲ್ಪಡುವುವೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ

ಎಚ್. ಜಿ. ವಿಜಯರಾಘವ ರೆಡ್ಡಿ,
ರೇಷನಿಂಗ್ ಆಫೀಸರು

ಒಲಂಪಿಯಾ ಟಾಕೀಸ್

14 8 52ರಿಂದ ಅಮೋಘ ೬ನೇ ವಾರ ಅಜಂತಾರವರ

ವೀರಅರ್ಜುನ್

ಪಾತ್ರ — ನಿರೂಪರಾಯ್ ತ್ರಿಲೋಕ್ ಕಪೂರ್ ಮತ್ತು ಮಹಿಪಾಲ್

ಬರುವ ಪ್ರ ... 11 8 52 ರಿಂದ ಪ್ರತಿ ... 10 30 ಕ್ಕೆ

★ ಸಂಗ್ರಾಮ್ ★

SREE GANESHA
TALKIES
From 15 8 52 • For 3 Days
United Artists

Portrait of Jennie
With - Jennifer Jones Joseph Cotten Ethel Barrymoore

FROM 18—8—52
CHAMPION

SRI GAYATHRI
TALKIES
From 15-8-52 Daily 2 show

SONS OF MUSKETEERS
With - Cornel Wilde Maureen O Hara

ಚಾಮುಂಡೇಶ್ವರಿ ಟಾಕೀಸ್

15 8 52 ರಿಂದ : ಅಮೋಘ ಪ್ರಾರಂಭ

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ವಿಶೇಷ ಆಕರ್ಷಣೆ ಓರಿಯಂಟಲ್‌ರವರ ತಮಿಳು ಚಿತ್ರ

★ ಆತ್ಮಶಾಂತಿ ★

ಪಾತ್ರ — ಕುಮಾರಿ ಕೋಮಲಂ, ಕೆ ರಾಮಸ್ವಾಮಿ ಎಸ್ ಡಿ ಸುಬ್ಬಯ್ಯ

※ ರಣಜಿತ್ ※

ಮೈಸೂರು

... ಕ್ರಿ ...

ಮೆಹಬೂಬ್ ಪ್ರೊಡಕ್ಷನ್ಸ್‌ರವರ

ಆನ್

ತಮಿಳು ವರ್ಣರಂಜಿತ ಚಿತ್ರ

★ AAN ★

ಪಾತ್ರ ನಿಮ್ಮಿ ಪ್ರೇಮ್‌ನಾಥ್, ನಾದಿರಾ ದಿಲೀಪ್ ಕುಮಾರ್ ಮತ್ತು ಶಕ್ಕೂ

[AN ALL INDIA FILM CORPORATION RELEASE]

ಸ್ವಾತಂತ್ರ್ಯೋತ್ಸವ ದಿನಾಚರಣೆಯ ಪ್ರಯುಕ್ತ
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

15-8-1952 ನೇ ಶುಕ್ರವಾರ ಮಧ್ಯಾಹ್ನ

ಮಾಮೂಲು ದರಕ್ಕೆ ಸ್ಪೆಷಲ್ ಊಟ

ಏರ್ಪಡಿಸಿರುತ್ತೆ

ಓದುಗರಿಗೆ ಸಿದ್ಧವಾಗಿದೆ — ೦ — ಅಂದವಾದ ಮುದ್ರಣ

ಕಂಪಲ್ಸರೀ ಹಿಂದೀ ಸರಳ ವ್ಯಾಕರಣ

[ಹೊಸ ಸಿಲಬಸ್ ಅನುಸರಿಸಿ]

ಆಗಸ್ಟ್ 15 ರ ನೂತನ ಕಾಣಿಕೆ

ಹೈಸ್ಕೂಲು ವಿದ್ಯಾರ್ಥಿ, ವಿದ್ಯಾರ್ಥಿನಿಯರ ಕಡ್ಡಾಯ ಹಿಂದೀ ಶಿಕ್ಷಣದ ಕೈಗನ್ನಡಿಯಂತಿದೆ

ಮೂರು ವರ್ಷಗಳಿಗಾಗುವ, 52 ಪುಟಗಳುಳ್ಳ, ಕ್ರಿವರ್ಣ ರಕ್ಷಾ ಪತ್ರಗಳನ್ನು ಒಳಗೊಂಡ ಈ ಪುಸ್ತಕಕ್ಕೆ ಕೇವಲ ಆರು ಆಣೆ ಮಾತ್ರ. ಇಂದೇ ಕೊಳ್ಳಲು ಮರೆಯಬೇಡಿ ಎಲ್ಲಾ ಪುಸ್ತಕ ಅಂಗಡಿಗಳಲ್ಲೂ ದೊರಕುತ್ತದೆ

ಲೇಖಕರು:— ಶ್ರೀ ಚಿಕ್ಕನರಸಿಂಹಯ್ಯ, ಸಾಹಿತ್ಯ ವಿಶಾರದ
ಹಿಂದೀ ಅಧ್ಯಾಪಕರು, ಮಹಾರಾಜಾ ಹೈಸ್ಕೂಲು, ಮೈಸೂರು

ಪ್ರಕಾಶಕರು:— ಶ್ರೀ ನರಸಿಂಹಸ್ವಾಮಿ ಏಜನ್ಸೀಸ್,
ಸಾಹಿತ್ಯ ಪ್ರಚಾರ ಮಂದಿರ, ಮೈಸೂರು.

ಹರಾಜು ಮಾರಾಟ

ರಾಜಧಾನಿಯ ಪ್ರಭಾತ್ ಭವನದ ಎದುರಿಗೆ ಒಳ್ಳೆಯ ಪ್ರದೇಶದಲ್ಲಿರುವ ಬಿಲ್ಡಿಂಗ್ ಸೈಟುಗಳ

ಮೂರು ಬಂಗಲೆ ಸೈಟುಗಳು

17—8—52 ನೇ : ಭಾನುವಾರ : ಬೆಳಿಗ್ಗೆ 11 ಘಂಟೆಗೆ

ಸೈಟುಗಳಿಗೆ ಹತ್ತಿರ ಪಾರ್ಕುಗಳೆಲ್ಲೂ ಮೋಟಾರ್ ರಸ್ತೆಗಳೆ ಕಾನ್ವೆಂಟ್, ಸೆಂಟ್ ಫಿಲೋಮಿನಾ ದೇವಾಲಯ ಮತ್ತು ಶಾಲೆಗಳು ಸಮೀಪವಾಗಿವೆ. ಬಂಡವಾಳವನ್ನು ಹಾಕಲು ಯೋಗ್ಯವಾಗಿಯೂ ಮತ್ತು ಒಳ್ಳೆಯ ಭವಿಷ್ಯದ ಕಟ್ಟಡದುದಾಗಿಯೂ ಇವೆ ಯಾವ ವಿಧವಾದ ಸರಭಾರಗೂ ಒಳಗಾಗಿಲ್ಲ ಇತರ ವಿವರಗಳಿಗೆ ಕೆಳಗೆ ಕಂಡವರಿಗೆ ಬರೆಯಿರಿ—

ಮೆಸರ್ಸ್ ಅಬೀದ್ ಅಂಡ್ ಕೋ.,

ಹೌಸ್ ಅಂಡ್ ಎಸ್ಟೇಟ್ ಏಜೆಂಟರ, ಸ್ವಾಮ್ಯು ಛೌಕ ಮೈಸೂರು

ಪ್ರಭುದೇವಾ ಟಾಕೀಸ್

15—8—52 ನೇ : ಶುಕ್ರವಾರದಿಂದ : 6ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಮೂವರು ತನಯರು

[ಮೂರು ಮಕ್ಕಳು]

ಹೊಸಾ ಹೊಸ ರೇಷ್ಮೆ ಸೀರೆಗಳನ್ನು ಗೌರಿ ಹಬ್ಬಕ್ಕಾಗಿ ತರಿಸಿದ್ದೇವೆ ★ **M. V. ಭೋಜಯ್ಯ** ಬಿ ಎ
ಇಂಡಿಯನ್ ಬ್ಯಾಂಕ್ ಎದುರು ಮೈಸೂರು

Edited, Printed and Published by A. R. Nagarajan, at Sadhvi Press, D Subbiah Road, Mysore.

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೬-೮-೧೯೫೨ [ಸಂಚಿಕೆ ೧೬

ನಗರದಲ್ಲಿ ಸ್ವಾತಂತ್ರ್ಯ ದಿನೋತ್ಸವ

ಮೈಸೂರು ೧೬

ರಾಜಧಾನಿಯಲ್ಲಿ ನೆನ್ನೆ ವಿವಿಧ ಕಡೆ ಸ್ವಾತಂತ್ರ್ಯ ದಿನೋತ್ಸವವು ವೈಭವ ಯುತವಾಗಿಯೂ ಉತ್ಸಾಹಪೂರ್ಣವಾಗಿಯೂ ನೆರವೇರಿಸಲ್ಪಟ್ಟಿತು

ಪೌರ ಸಭೆಯವರು ನೆನ್ನೆ ಟೌನ್ ಹಾಲ್ ಮೈದಾನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಬೆಳಗ್ಗೆ ೯ ಘಂಟೆಗೆ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ರಾಷ್ಟ್ರಧ್ವಜಾರೋಹಣ ಮಾಡಿದರು ಭಾರತ ಸೇವಾ ದಳದ ಸೇವಕಿಯರಿಂದ ವಂದೇ ಮಾತರಂ ಗೀತೆಯಾದ ನಂತರ, ಅರಮನೆ ಬ್ಯಾಂಡಿನವರು ಜನಗಣಮನ ಗೀತೆಯನ್ನು ನುಡಿಸಿದರು. ಪೌರಸಭಾಧ್ಯಕ್ಷರು ರಾಷ್ಟ್ರಧ್ವಜದ ಮಹತ್ವವನ್ನು ವಿವರಿಸಿದರು ಸಂಜೆ ೫-೩೦ ಗಂಟೆಗೆ ಕವಾಯಿತು ಮುಂತಾದ ಪ್ರದರ್ಶನಗಳು ನಡೆದುವು.

ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪ್ರೊ॥ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ರಾಷ್ಟ್ರಧ್ವಜಾರೋಹಣ ಮಾಡಿದರು

ಪತ್ರಿಕೋದ್ಯೋಗಿಗಳ ಸಂಘದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲಕೃಷ್ಣರಾಯರು ಧ್ವಜವನ್ನು ಹಾರಿಸಿ ಧ್ವಜದ ಸಂದೇಶದ ಬಗ್ಗೆ ಭಾಷಣ ಮಾಡಿದರು

ಸ್ವಾತಂತ್ರ್ಯ ದಿನೋತ್ಸವದ ಭೋಜನ ಕೂಟ

ಸ್ವಾತಂತ್ರ್ಯ ದಿನೋತ್ಸವದ ಸಂಬಂಧವಾಗಿ ನೆನ್ನೆ ರಾತ್ರಿ ಧನ್ವಂತರಿ ರಸ್ತೆಯಲ್ಲಿರುವ ಇಂದ್ರಭವನದ ಮಾಲೀಕರು ಒಂದು ಭೋಜನ ಕೂಟವನ್ನು ಏರ್ಪಡಿಸಿ, ಮಿತ್ರರನ್ನು ಆಹ್ವಾನಿಸಿದ್ದರು

ವಿಶ್ವವಿದ್ಯಾಲಯದಲ್ಲಿ ಈ ವರ್ಷ ಪತ್ರಿಕೋದ್ಯಮದ ಶಿಕ್ಷಣವಿಲ್ಲ

ಮೈಸೂರು ವಿಶ್ವವಿದ್ಯಾಲಯದವರು ಕಳೆದ ವರ್ಷ ಏರ್ಪಡಿಸಿದ್ದ ಪತ್ರಿಕೋದ್ಯಮದ ಪದವೀಧರರ ತರಗತಿಯನ್ನು ಈ ವರ್ಷ ಅನಿವಾರ್ಯ ಕಾರಣಗಳಿಗಾಗಿ ತಾತ್ಕಾಲಿಕವಾಗಿ ನಿಲ್ಲಿಸಿರುವರು ಸೀನಿಯರ್ ತರಗತಿಯಲ್ಲಿ ೩೦ ಮಂದಿ ವಿದ್ಯಾರ್ಥಿಗಳಿರುವರು ಆದರೆ ಜೂನಿಯರ್ ತರಗತಿಗೆ ೧೨ ಮಂದಿ ಮಾತ್ರ ಓದಲು ಈ ಸಾರಿ ಅರ್ಜಿ ಹಾಕಿಕೊಂಡಿದ್ದರು

ಜೋಗಿಗೆ ವೈದ್ಯರ ವರ್ಗ

ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಶ್ರೀ ಟಿ ಚಂದ್ರಶೇಖರ್ ರವರನ್ನು ಜೋಗಿನ ಮುಂತಾಮತ್ತು ಆಸ್ಪತ್ರೆಗೆ ವರ್ಗಾಯಿಸಲಾಗಿದೆ

ವಿಜಯರಾಘವ ರೆಡ್ಡಿಯವರು ಕೇಂದ್ರ ಸರ್ವಿಸ್ಸಿಗೆ

ನಗರದ ರೇಷನಿಂಗ್ ಅಧಿಕಾರಿಗಳಾದ ಶ್ರೀ ಹೆಚ್ ಜಿ ವಿಜಯರಾಘವ ರೆಡ್ಡಿಯವರನ್ನು ಕೇಂದ್ರ ಆಡಳಿತ ಸರ್ವಿಸ್ಸಿಗೆ ತೆಗೆದುಕೊಳ್ಳಲಾಗಿದೆ ಇವರು ಸಧ್ಯದಲ್ಲೇ ದೆಹಲಿಗೆ ತೆರಳಿ, ಅಲ್ಲಿನ ಆಹಾರ ಇಲಾಖೆಯ ಕಛೇರಿಯಲ್ಲಿ ಹುದ್ದೆಯೊಂದನ್ನು ಸ್ವೀಕರಿಸಲಿರುವರು ಇವರನ್ನು ನಿಯೋಗದ ಮೇಲೆ ಕಳುಹಿಸಲಾಗುವುದು

೫೦೦ ಈಜಿಪ್ಷನ್ನರ ಮೇಲೆ ದೇಶದ್ರೋಹ ಆಪಾದನೆ

೫೦೦ ಪ್ರದರ್ಶನಕಾರರ ಮೇಲೆ ದೇಶದ್ರೋಹದ ಆಪಾದನೆ

ಈಜಿಪ್ಟಿನ ಅಲೆಗ್ಸಾಂಡ್ರಿಯಾದಲ್ಲಿ ಮೊನ್ನೆ ವಿಶೇಷ ಮಿಲಿಟರಿ ನ್ಯಾಯಮಂಡಲವೊಂದು ಏರ್ಪಟ್ಟು, ಅದರ ಹಿಂದಿನ ದಿನ ನಗರದಲ್ಲಿ ನಡೆದ ಪ್ರದರ್ಶನದ ಸಂಬಂಧವಾಗಿ ದಸ್ತಗಿರಿಯಾಗಿರುವ ೫೦೦ ಜನರ ವಿಚಾರಣೆಗೆ ಪ್ರಾರಂಭಿಸಿತು ತಪ್ಪಿತಸ್ಥರಿಗೆ ಮರಣ ದಂಡನೆ ವಿಧಿಸಲು ಮಾರ್ಷಲ್ ಲಾ ಪ್ರಕಾರ ನಿಬಂಧನೆ ಮಾಡಲಾಗಿದೆ ಮೂರು ದಿನಗಳೊಳಗೆ ಶಿಕ್ಷೆಯನ್ನು ಜಾರಿಗೆ ಕೊಡಲಾಗುವುದು

ಪತ್ನಿಯ ಮೇಲೆ ದ್ರಾವಕವನ್ನೆರಚಿದ ಪ್ರಸಂಗ

ಸಿಕಂದರಾಬಾದಿನಲ್ಲಿ ವಿಮಾನ ಚಾಲಕನ ಕೆಲಸದಲ್ಲಿರುವ ಕೃಷ್ಣನ್ ನಾಯರ್ ಎಂಬ ಒಬ್ಬ ತರುಣನು ಕಳೆದ ಮಂಗಳವಾರ ಮದರಾಸಿಗೆ ತೆರಳಿ, ಅಲ್ಲಿನ ಕಲ್ಯಾಣ ಮೊದಲಿ ರಸ್ತೆಯಲ್ಲಿ ತನ್ನ ಪತ್ನಿ ಬಾಲಮ್ಮಾಳ್ ಎಂಬಾಕೆಯು ಹೋಗುತ್ತಿದ್ದುದನ್ನು ಕಂಡು ಆಕೆಯು ತನ್ನೊಡನೆ ಸಿಕಂದರಾಬಾದಿಗೆ ಬರಬೇಕೆಂದು ಕರೆಯಲು ಆವಳು ನಿರಾಕರಿಸಿದಳೆಂದೂ ಇದರಿಂದ ಕೋಪಗೊಂಡ ಆವಳ ಗಂಡನು ಆಕೆಯ ಮೇಲೆ ದ್ರಾವಕವನ್ನು ಎರಚಿದನೆಂದೂ, ಇದರಿಂದ ಆಕೆಗೆ ತೀವ್ರ ಗಾಯವಾಗಿ ಆಸ್ಪತ್ರೆಗೆ ಸೇರಿಸಲಾಯಿತೆಂದೂ ತಿಳಿದುಬಂದಿದೆ ಗಂಡ ಹೆಂಡಿರ ನಡುವೆ ಪ್ರವೇಶಿಸಿದ ಇತರ ಮೂವರ ಮೇಲೂ ಅವನು ದ್ರಾವಕ ಚೆಲ್ಲಿದನೆಂದೂ, ಅವರಿಗೆ ಹೆಚ್ಚು ಗಾಯವೇನೂ ಆಗಿಲ್ಲವೆಂದೂ ವರದಿಯಾಗಿದೆ ಕೃಷ್ಣನ್ ನಾಯರನು ತನ್ನ ಮೇಲೂ ದ್ರಾವಕವನ್ನು ಸುರಿದುಕೊಂಡನು ಅವನನ್ನು ಬಂಧಿಸಲಾಗಿದೆ

ಕುರಿಯನ್ನು ನುಂಗುತ್ತಿದ್ದ ಘಟಸರ್ಪದ ಬಂಧನ

ಮೈಸೂರು ತಾಲ್ಲೂಕು ಮುದ್ದೇನಹಳ್ಳಿ ಎಂಬ ಗ್ರಾಮದಲ್ಲಿ ಕಳೆದ ಸೋಮವಾರ ಒಂದು ಕುರಿ ಮರಿಯನ್ನು ನುಂಗುತ್ತಿದ್ದ ಹತ್ತು ಅಡಿ ಉದ್ದದ ಘಟಸರ್ಪವೊಂದನ್ನು ಹಳ್ಳಿಯವನು ಹಿಡಿದನೆಂದೂ, ಅದನ್ನು ಜಾಸ್ ಬಂಗಲೆಯಲ್ಲಿಡಲಾಗಿದೆಯೆಂದೂ ವರದಿಯಾಗಿದೆ

ಪರ್ಷಿಯಕ್ಕೆ ಜರ್ಮನಿಯ ತೈಲ ಪ್ರವೀಣರು

ಪರ್ಷಿಯದ ಎಣ್ಣೆ ಕೈಗಾರಿಕೆಯನ್ನು ಮುಂದುವರಿಸಲು ಸಧ್ಯದಲ್ಲೇ ಜರ್ಮನಿಯ ಪ್ರವೀಣರನ್ನು ನೇಮಿಸಿಕೊಳ್ಳುವ ಪ್ರಯತ್ನಗಳು ನಡೆಯಲಿವೆಯೆಂದೂ ಮತ್ತು ಈ ಕೈಗಾರಿಕೆಗಾಗಿ ಅಮೆರಿಕದ ಸಾಲ ಪಡೆಯಲೂ ಪ್ರಯತ್ನಿಸಲಾಗುವುದೆಂದೂ ತಿಳಿದುಬಂದಿದೆ ಹಿಟ್ಲರರ ಆರ್ಥಿಕ ಸಲಹಾಗಾರರೂ ಮತ್ತು ಜರ್ಮನಿಯ ರೈಕ್ ಬ್ಯಾಂಕಿನ ಮಾಜಿ ಅಧ್ಯಕ್ಷರೂ ಆದ ಡಾ॥ ಷಾಕ್ಟ್ ರವರು ಟೆಹರಾನಿಗೆ ಬಂದು ಎಣ್ಣೆ ಕೈಗಾರಿಕೆಗೆ ತಮ್ಮ ನೆರವು ನೀಡಲು ಒಪ್ಪಿರುವರೆಂದೂ ಹೇಳಲಾಗಿದೆ.

ಎಲ್. ಜಿ. ಠಟ್ಟೆಯವರ ಬಂಧನ

ಬೊಂಬಾಯಿಯಲ್ಲಿ ಜಾರಿಗೆ ತರಲಾಗಿರುವ ಅನೇಕ ಕಡೆ ಹಾರಾಟ ತೆರಿಗೆಯ ವಿರುದ್ಧವಾಗಿ ಹಿಂದೂ ರಾಜ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಎಲ್ ಜಿ ಠಟ್ಟೆಯವರು ಮತ್ತು ಇತರ ೧೪ ಮಂದಿಯೂ, ಪೂನಾದಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಮೊನ್ನೆ ಮೆರವಣಿಗೆ ನಡೆಸಿದ ದರಿಂದ ಎಲ್ಲರೂ ಬಂಧಿಸಲ್ಪಟ್ಟರೆಂದು ವರದಿಯಾಗಿದೆ

೧೦ ರೂ. ನೋಟಿನ ಹರಾಜಿನಿಂದ ೩೦೦೦ ರೂ. ಉತ್ಪತ್ತಿ

ಪಶ್ಚಿಮ ಬಂಗಾಳದಲ್ಲಿ ಕೂಡಿಕೊಳ್ಳುತ್ತಿರುವ ಕ್ಷಾಮ ನಿವಾರಣಾ ನಿಧಿಯ ಸಹಾಯಾರ್ಥವಾಗಿ ಕಳೆದ ಸೋಮವಾರ ಕಲ್ಕತ್ತೆಯ ಒಂದು ಚಿತ್ರಮಂದಿರದವರು ಚಿತ್ರ ಪ್ರದರ್ಶನವನ್ನು ಏರ್ಪಡಿಸಿ, ವಸೂಲಾದ ೫೬ ಸಾವಿರ ರೂ ಗಳನ್ನು ಅರ್ಪಿಸಿದರು ಪ್ರದರ್ಶನದಲ್ಲಿ ಭಾಗವಹಿಸಿದ ಅಲ್ಲಿನ ಗವರ್ನರ್ ಡಾ॥ ಎಚ್. ಸಿ ಮುಖರ್ಜಿಯವರು, ಪಂಡಿತ ನೆಹರೂರವರ ಸ್ವಹಸ್ತಾಕ್ಷರದಿಂದ ಕೂಡಿದ ಒಂದು ಹತ್ತು ರೂ. ನೋಟನ್ನು ಚಿತ್ರಮಂದಿರದ ಒಳಗೆ ಹರಾಜು ಹಾಕಲಾಗಿ ಅದರಿಂದಲೂ ೩,೦೧೧ ರೂ ಗಳು ಬಂದುವೆಂದು ವರದಿಯಾಗಿದೆ

ಬೆಂಗಳೂರಿನಲ್ಲಿ ಸ್ವಾತಂತ್ರ್ಯೋತ್ಸವ

ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆ

ಸ್ವಂ ಸು ಫೋ] ಬೆಂಗಳೂರು ೧೬

ಭಾರತ ಸ್ವಾತಂತ್ರ್ಯದ ೫ ನೇ ವಾರ್ಷಿಕೋತ್ಸವ ಸಮಾರಂಭದ ಅಂಗವಾಗಿ ನೆನ್ನೆ ಬೆಳಗ್ಗೆ ಇಲ್ಲಿನ ಸ್ಟೇಡಿಯಂ ಮೈದಾನದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ರಾಷ್ಟ್ರಧ್ವಜಾರೋಹಣ ಮಾಡಿದರು ತರುವಾಯ ಮಿಲಿಟರಿ ಮತ್ತು ಪೋಲೀಸ್ ಪಡೆಯವರಿಂದ ಕವಾಯಿತು ಮತ್ತು ಪ್ರದರ್ಶನಗಳು ನಡೆದುವು ಶ್ರೀ ಹನುಮಂತಯ್ಯನವರು ಭಾಷಣ ಮಾಡಿ- ೧೯೪೭ ಕ್ಕೆ ಮುಂಚೆ ಮಿಲಿಟರಿ ಮತ್ತು ಪೋಲೀಸ್ ಪಡೆಗಳವರು ಸ್ವಾತಂತ್ರ್ಯ ವೀರರನ್ನು ಜೈಲಿಗೆ ಕಳುಹಿಸಿ, ಹಲವಾರು ಬಾರಿ ಲಾಠಿ ಪ್ರಯೋಗ ಮೊದಲಾದುವನ್ನು ನಡೆಸಿದರೆಂದೂ, ಭಾರತ ಸ್ವಾತಂತ್ರ್ಯ ಸಾಧನೆಯಾದ ಮೇಲೆ ಪರಿಸ್ಥಿತಿಯು ಬದಲಾಯಿಸಿ ಅವರುಗಳು ಇನ್ನು, ಸಂಯಮಗಳಿಂದ ದೇಶದ ರಕ್ಷಣೆ ಮತ್ತು ಸೇವೆಗಾಗಿ ಶ್ರಮಿಸುತ್ತಿರುವರೆಂದೂ ತಿಳಿಸಿದರು

ನೆನ್ನೆ ಸಂಜೆ ಒಂದು ಲಕ್ಷ ಮಂದಿ ನೆರೆದಿದ್ದ ಬಹಿರಂಗ ಸಭೆಯಲ್ಲಿ ವಿವಿಧ ಮನರಂಜನೆ ಪ್ರದರ್ಶನಗಳಾದ ತರುವಾಯ, ಶ್ರೀ ಹನುಮಂತಯ್ಯನವರು ಭಾಷಣ ಮಾಡಿ,ಇನ್ನು ಮುಂದೆ ಎಲ್ಲರೂ ಸ್ವದೇಶೀ ವಸ್ತುಗಳನ್ನೇ ಕೊಳ್ಳುವುದಾಗಿ ಪ್ರತಿಜ್ಞೆ ಮಾಡಬೇಕೆಂದು ಕೋರಿದರು

ಆಹಾರದ ಪರಿಸ್ಥಿತಿ ಕುರಿತು ಮಾತನಾಡಿ, ಸಂಸ್ಥಾನಕ್ಕೆ ಎಷ್ಟರ ಮಟ್ಟಿಗೆ ಸಹಾಯ ಮಾಡಬೇಕೆಂಬ ಬಗ್ಗೆ ಅಖೈರಾಗಿ ದೆಹಲಿಯಲ್ಲಿ ತೀರ್ಮಾನವಾಗಬೇಕಾಗಿದೆಯೆಂದೂ, ಈ ಸಂಬಂಧವಾಗಿ ತಾವು ಮುಂದಿನ ವಾರ ದೆಹಲಿಗೆ ಹೋಗುವ ಸಂಭವವಿರುವುದಾಗಿಯೂ ಮುಖ್ಯ ಮಂತ್ರಿಗಳು ತಿಳಿಸಿದರು

ಪಡಿತರವಿರುವ ಸ್ಥಳಗಳಿಗೆ ೫ ಸೇರು ಧಾನ್ಯ ತರಬಹುದು

ಪಡಿತರವಿರುವ ಪ್ರದೇಶಗಳಿಗೆ ಒಬ್ಬೊಬ್ಬರು ೫ ಸೇರಿನಂತೆ ಧಾನ್ಯವನ್ನು ರಹದಾರಿಯಿಲ್ಲದೆ ತರಲು ಸರ್ಕಾರದವರು ಅನುಮತಿಯಿತ್ತಿರುವರು ಇದುವರೆಗೆ ಈ ಸಂಬಂಧವಾದ ಆಜ್ಞೆಯ ಪ್ರಕಾರ ೩ ಸೇರನ್ನು ಮಾತ್ರ ಸಾಗಿಸಬಹುದಾಗಿತ್ತು

ದೆಹಲಿಯಲ್ಲಿ ಸ್ವಾತಂತ್ರ್ಯೋತ್ಸವ

ದೆಹಲಿಯಲ್ಲಿ ನೆನ್ನೆ ಸ್ವಾತಂತ್ರ್ಯ ದಿನೋತ್ಸವವು ವಿಜೃಂಭಣೆಯಿಂದ ನಡೆಯಿತು ಬೆಳಗ್ಗೆ ಪ್ರಧಾನಿ ನೆಹರೂರವರು ಮಿಲಿಟರಿ, ವಿಮಾನ ಮತ್ತು ನೌಕಾ ಬಲಗಳ ರಕ್ಷೆಯನ್ನು ಸ್ವೀಕರಿಸಿ ಕೆಂಪು ಕೋಟೆಯ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಿದರು ಅವರು ಭಾಷಣ ಮಾಡಿ, ದೇಶದ ೩೬ ಕೋಟಿ ಪ್ರಜೆಗಳ ಏಳಿಗೆಗೆ ಎಲ್ಲರೂ ಶ್ರಮಿಸಬೇಕೆಂದು ತಿಳಿಸಿದರು ಮೊನ್ನೆ ರಾಷ್ಟ್ರಾಧ್ಯಕ್ಷರು ಸಂದೇಶ ಪ್ರಸಾರ ಭಾಷಣ ಮಾಡಿ ಜನರು ಅತ್ಯುನ್ನತ ಧ್ಯೇಯಗಳನ್ನಿಟ್ಟುಕೊಂಡು ಅದರ ಸಾಧನೆಗಾಗಿ ಶ್ರಮಿಸಬೇಕೆಂದು ನುಡಿದರು

ಗಫಾರ್ ಖಾನ್ ಬಿಡುಗಡೆಗೆ ಇರಾಕಿನ ಮೌಲ್ವಿ ಒತ್ತಾಯ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಇರಾಕಿನ ಪ್ರಮುಖ ಮುಸ್ಲಿಂ ಗುರುಗಳಾದ ಮಹಮದ್ ಬಕರ್ ಅಲ್ ಜವಾಹರಿಯವರು ಪಾಕಿಸ್ತಾನದ ಗೌರ್ನರ್ ಜನರಲ್, ಪ್ರಧಾನ ಮಂತ್ರಿ ಮತ್ತು ವಿದೇಶಾಂಗ ಮಂತ್ರಿಗಳಿಗೆ ಸಂದೇಶವೊಂದನ್ನು ಕಳುಹಿಸಿರುತ್ತಾರೆ

ಟೇಬಲ್ ಟೆನ್ನಿಸ್ ಪಂದ್ಯ

ರಾಜಧಾನಿಯ ಪ್ರಿನ್ಸ್ ಆಫ್ ವೇಲ್ಸ್ ರಸ್ತೆಯಲ್ಲಿರುವ ಅವರ್ ಕ್ಲಬ್ಬಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ನೆನ್ನೆ ನಡೆದ ಟೇಬಲ್ ಟೆನ್ನಿಸ್ ಸಿಂಗಲ್ಸ್ ಪಂದ್ಯದಲ್ಲಿ ಶ್ರೀ ಕೆ ವಿ ಪದ್ಮನಾಭರವರು ಶ್ರೀ ಪಿ ಎಂ ಕಾರಿಯಪ್ಪನವರನ್ನು ೨೧-೧೮, ೨೧-೧೫ ರಿಂದ ಸೋಲಿಸಿದರು ಡಬ್ಬಲ್ಸ್ ಪಂದ್ಯದಲ್ಲಿ ಶ್ರೀಗಳು ಸಿ ಎಸ್ ಈಶ್ವರಮೂರ್ತಿ ಮತ್ತು ಪಿ ಎಂ ಚಂಗಪ್ಪನವರು, ಶ್ರೀಗಳು ಎಸ್ ವಿಶ್ವನಾಥ್ ಮತ್ತು ಬಿ ವಿ ಪಟ್ಟಾಭಿಯವರನ್ನು ೨೧-೧೪, ೨೧-೧೭ ರಿಂದ ಸೋಲಿಸಿದರು ಗೆದ್ದವರಿಗೆ ಸಂಘದ ಅಧ್ಯಕ್ಷ ಶ್ರೀ ಸಿ ಎಸ್ ಈಶ್ವರಮೂರ್ತಿಯವರು ಬಹುಮಾನಗಳನ್ನು ಹಂಚಿದ ತರುವಾಯ ಸಿಹಿ ತಿಂಡಿಯನ್ನು ವಿನಿಯೋಗಿಸಲಾಯಿತು

ಶಾತ್ತಾದ ಶ್ರೀವೈಷ್ಣವ ಯುವಕ ಸಂಘ

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿರುವ ಶ್ರೀ ಶಾತ್ತಾದ ಶ್ರೀವೈಷ್ಣವ ಸಂಘದ ಸಭೆಯು ಕಳೆದ ೯ನೇ ತಾ|| ನಡೆದು ಡಾ|| ಎಸ್ ವಿ ನಾರಾಯಣಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಕೆ ಎ ರಾಜಗೋಪಾಲ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ಹೆಚ್ ವಿ ಜೀಯರ್‌ರವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು ಸಂಘದ ವಿದ್ಯಾರ್ಥಿ ನಿಲಯಕ್ಕೆ ಕೃಷ್ಣರಾಜನಗರದ ಶ್ರೀ ಅಪ್ಪಾಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಟಿ ತಿರುವೆಂಗಡರವರು ವಾರ್ಡನ್ ಆಗಿಯೂ ಆರಿಸಲ್ಪಟ್ಟಿರುವರು

ಟ್ರಾಂ ಬಸ್ ಸರ್ವಿಸ್ ನಡೆಸಲು ಪೌರಸಭೆಗಳಿಗೆ ಅನುಮತಿ

ಮದರಾಸು ಪ್ರಾಂತ್ಯದಲ್ಲಿ ೩೦ ಸಾವಿರಕ್ಕೂ ಹೆಚ್ಚು ಪ್ರಜಾ ಸಂಖ್ಯೆಯುಳ್ಳ ನಗರಗಳಲ್ಲಿ ಪೌರಸಭೆಗಳವರ ಸ್ವಂತವಾಗಿ ಟ್ರಾಂ ಬಸ್ ಸರ್ವಿಸನ್ನು ನಡೆಸಲು ಅನುಮತಿ ಕೊಡುವ ಅಂಶವನ್ನು ಮದ್ರಾಸು ಸರ್ಕಾರದವರು ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ

ಭಾರತೀ ಮಂದಿರ

ನಂಜನಗೂಡಿನಲ್ಲಿರುವ ಮೇಲ್ಕಂಡ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೫|| ಘಂಟೆಗೆ ಅಲ್ಲಿನ ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ ಮೈಸೂರು ವಿಶ್ವ ವಿದ್ಯಾಲಯದ ಹಿಂದೀ ಪ್ರಾಧ್ಯಾಪಕರಾದ ಶ್ರೀ ಎನ್ ನಾಗಪ್ಪನವರು ತುಳಸೀ ರಾಮಾಯಣ' ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಸಂತಾಪ ಸಭೆ

ಶ್ರೀ ರೇಣುಕ ಸಂಘದವರು ಕಳೆದ ಬುಧವಾರ ಸಭೆ ಸೇರಿ ಅರವಿಂದಯ ಗವಿ ಮಠಾಧಿಪತಿಗಳಾದ ವೇ|| ಬ್ರ|| ಶ್ರೀ ಶಿವಯೋಗಿಗಳಾದ ಗೌರೀಶಂಕರ ಸ್ವಾಮಿಗಳು ಶಿವಾಧೀನರಾದದ್ದಕ್ಕಾಗಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಸಂತಾಪವನ್ನು ಸೂಚಿಸಿರುತ್ತಾರೆ

ನಾವ ಜನಿ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಶ್ರೀ ಎ ಸ್ವರ್ ಗೋಪಾಲರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಸ್ವಾಮಿಗಳವರ ಶಿವೈಕ್ಯರಾದರೆಂದು ಆತ್ಮಕ್ಕೆ ಶಾಂತಿ ಕೋರಿ, ಅವರ ಶಿಷ್ಯವೃಂದಕ್ಕೆ ಆಗಿರುವ ಅಪಾರವಾದ ದುಃಖವನ್ನು ಸಹಿಸಲು ಶಕ್ತಿ ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸಿ ಎರಡು ನಿಮಿಷಗಳ ಕಾಲ ಮೌನವನ್ನು ಆಚರಿಸಿದರು

SRI GAYATHRI
TALKIES
From 15-8-52 Daily 3 Shows
SONS OF MUSKETEERS
With Cornel Wilde
Maureen O Hara

೭೨ ದಿನಗಳ ಉಪವಾಸದ ರಿಕಾರ್ಡ್ ಸ್ಥಾಪನೆ

ಸಿಸಿಲಿಯ ಪಾಲೆರ್ಮೊ ಎಂಬಲ್ಲಿ ೭೨ ದಿನಗಳ ಉಪವಾಸವನ್ನು ಮಾಡಲು ಬದ್ಧಕಂಕಣನಾಗಿ ಹೆಬ್ಬಾವುಗಳ ನಡುವೆ ಒಂದು ಗಾಜಿನ ಪೆಟ್ಟಿಗೆಯಲ್ಲಿ ಕುಳಿತಿದ್ದ ಫಕೀರ್ ರೋಜರ್ ಬರ್ಮನು ಕಳೆದ ಭಾನುವಾರ ರಾತ್ರಿ ಯಶಸ್ವಿಯಾಗಿ ಉಪವಾಸ ಮುಕ್ತಾಯ ಮಾಡಿ, ಕೆವಳಿಕೊಂಡು ಪೆಟ್ಟಿಗೆಯಿಂದ ಹೊರಗೆ ಬಂದನೆಂದು ವರದಿಯಾಗಿದೆ ಆತನು ಈ ಹಿಂದೆ ಆರು ಬಾರಿ ಉಪವಾಸ ಮಾಡಿ ರಿಕಾರ್ಡು ಸ್ಥಾಪಿಸಿದ್ದನು

ಹರಿಕಥೆ

ಈ ದಿನ ರಾತ್ರಿ ೯ ಘಂಟೆಗೆ ಕಸಬಾ ಗೋಪಾಲಯ್ಯನವರ ಬೀದಿಯಲ್ಲಿರುವ ಶ್ರೀ ಕೆ. ಆರ್ ನಾಗಪ್ಪನವರ ಮನೆ ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಕಡೇ ಶ್ರಾವಣ ಶನಿವಾರದ ಪ್ರಯುಕ್ತ ಶ್ರೀ ನರಸಿಂಹಮೂರ್ತಿ ದಾಸರಿಂದ "ಶಿರಾತಾರ್ಜುನೀಯ ಎಂಬ ಹರಿಕಥೆಯು ನಡೆಯುತ್ತದೆ

ಪ್ರಾರ್ಥನಾ ಸಭೆ

ವಿವರದ ಪೂಜ್ಯ ಶ್ರೀ ಗೌರೀಶಂಕರ ಸ್ವಾಮಿಗಳವರು ಶಿವೈಕ್ಯರಾದ ಪ್ರಯುಕ್ತ ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಘಂಟೆಯಿಂದ ೭ ಘಂಟೆ ವರೆಗೆ ಸಾರ್ವಜನಿಕ ಪ್ರಾರ್ಥನಾ ಸಭೆಯನ್ನು ಏರ್ಪಡಿಸಲಾಗಿದೆ ಈ ದಿನ ವಿ|| ಶ್ರೀ ಎಂ ಜಿ ನಂಜುಂಡಾರಾಧ್ಯರು 'ಭಕ್ತಿ ಯೋಗ' ಎಂಬ ವಿಷಯದ ಮೇಲೆ ಭಾಷಣ ಮಾಡುವರು ಸಭೆ ಕಾಲಕ್ಕೆ ಸರಿಯಾಗಿ ಪ್ರಾರಂಭವಾಗುವುದರಿಂದ ಮಹಾ ಜನರು ಉತ್ಸವದಲ್ಲಿ ಭಾಗಿಗಳಾಗಬೇಕಾಗಿ ಪ್ರಾರ್ಥಿಸಲಾಗಿದೆ

ಮಹಾಗಣಪತಿ ಉತ್ಸವ

ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದವರು ಮಾಮೂಲಿನಂತೆ ಈ ಸಾರಿಯೂ ಶ್ರೀ ವಿದ್ಯಾಗಣಪತಿ ಉತ್ಸವವನ್ನು ನಡೆಸುವರು. ಈ ಸಂಬಂಧವಾಗಿ ಐದು ದಿನಗಳ ಕಾಲ ಪೂಜೆ ಪುನಸ್ಕಾರಾದಿಗಳು ಮತ್ತು ಸಂಗೀತ ಕಛೇರಿಗಳನ್ನು ಏರ್ಪಡಿಸಲಾಗುವುದು ಈ ಸಮಾರಂಭಕ್ಕೆ ಮಹಾ ಜನರು ಉದಾರವಾಗಿ ದ್ರವ್ಯ ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳ ಕೋರುವರು

ಪ್ರಭಾ★ 15–8–52 ರಿಂದ 6 ನೇ ಮತ್ತು ಕಡೆಯ ವಾರ
ಪರ್ ಛಾಯಿ

ಪ್ಲಾಸ್ಟಿಕ್ ಹಲ್ಲು

ಪ್ಲಾಸ್ಟಿಕ್ಕಿನ ಹಲ್ಲುಗಳನ್ನು ತಯಾರಿಸಲು ಪಶ್ಚಿಮ ಬಂಗಾಳಾ ಸರ್ಕಾರದವರು ೫ ಲಕ್ಷ ರೂ ಬಂಡವಾಳ ಹಾಕಿ ಒಂದು ಕಾರ್ಖಾನೆಯನ್ನು ನಿರ್ಮಾಣ ಮಾಡಿರುತ್ತಾರೆ ಶೀಘ್ರದಲ್ಲೇ ಅದು ಕಾರ್ಯಾರಂಭ ಮಾಡುವುದು ವರ್ಷಕ್ಕೆ ೨೦ ರಿಂದ ೫೦ ಲಕ್ಷ ಹಲ್ಲುಗಳನ್ನು ಕಾರ್ಖಾನೆಯು ತಯಾರಿಸಬಲ್ಲದೆಂದು ಹೇಳಲಾಗಿದೆ

ಸ್ವಾತಂತ್ರ್ಯೋದಯ

ಮೈಸೂರು ವಿಶ್ವ ವಿದ್ಯಾಲಯದ ವಿದ್ಯಾರ್ಥಿ, ಶ್ರೀ ಎಂ ವಿ ಕೃಷ್ಣಸ್ವಾಮಿಯವರು ಸ್ವಾತಂತ್ರ್ಯದ ಬೆಳಕು, ನಾಡಧ್ವಜ, ಪುಣ್ಯದಿನಂ ಮತ್ತು ನಾಡತಂದೆ ಎಂಬ ಶಿರೋನಾಮೆಗಳಲ್ಲಿ ನಾಲ್ಕು ಕವನಗಳನ್ನು ರಚಿಸಿ ಅವನ್ನು ಸ್ವಾತಂತ್ರ್ಯೋದಯವೆಂಬ ಅಭಿಧಾನದಿಂದ ಕೂಡಿದ ಚಿಕ್ಕ ಕವನ ಗ್ರಂಥವನ್ನು ಪ್ರಕಟಿಸಿರುತ್ತಾರೆ ಅದರ ಪ್ರತಿಯೊಂದು ನಮ್ಮ ಕೈಸೇರಿದೆ ಇದನ್ನು ಸ್ವಾತಂತ್ರ್ಯೋತ್ಸವ ದಿನದ ಕಾಣಿಕೆಯಾಗಿ ಅವರು ಅರ್ಪಿಸಿರುತ್ತಾರೆ ಈ ಪುಸ್ತಕವು ಶ್ರೀ ಎಂ ವಿ ಎನ್ ವಾಚ್ ಕಂಪೆನಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು–ಇವರಲ್ಲಿ ದೊರೆಯುವುದು

ಪ್ರಕಟಣೆ

ಮೈಸೂರು ಸಿಟಿ ಅಶೋಕ ರೋಡಿನಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನಕ್ಕೆ ಸೇರಿ ಅದರ ಉತ್ತರ ದಿಕ್ಕಿನಲ್ಲಿರುವ 11' 6"×32'.0" ವಿಸ್ತೀರ್ಣ ಉಳ್ಳ ಅಂಗಡಿ ನಿವೇಶನಗಳ ಪೈಕಿ ಮಧ್ಯೆ ಇರುವ ನಿವೇಶನ ವಿನಹ ಉಳಿದ 4 ನಿವೇಶನಗಳನ್ನು ಮಳಿಗೆಗಳನ್ನು ಕಟ್ಟುವ ಉದ್ದೇಶ್ಯ ಕೆಲವು ಷರತ್ತುಗಳಿಗೆ ಒಳಪಡಿಸಿ ಪ್ರತಿ ಒಂದು ನಿವೇಶನವನ್ನು 5000 ರೂಪಾಯಿಗಳಿಗೆ 5 ವರ್ಷ ವಾಯಿದೆಗೆ ಇಳಿ ಭೋಗ್ಯ ಮಾಡಲು ಏರ್ಪಾಡು ಮಾಡಿರುತ್ತೆ ನಿವೇಶನವನ್ನು ಇಳಿ ಭೋಗ್ಯಕ್ಕೆ ತೆಗೆದುಕೊಳ್ಳಲು ಇಷ್ಟಪಡುವವರು 1000 ರೂ ಮುಂಗಡ ಹಣ ಡಿಪಾಜಿಟ್ಟು ಮಾಡನೆ ತಾ|| 25-8-1952 ರ ಒಳಗಾಗಿ ದೇವಸ್ಥಾನದ ಕಮಿಟಿ ಸಕ್ರೆಟರಿಯವರಿಗೆ ಅರ್ಜಿ ಹಾಕಿಕೊಳ್ಳಬಹುದು. ಷರತ್ತುಗಳನ್ನು ದೇವಸ್ಥಾನದ ಆಫೀಸಿನಲ್ಲಿ ಪ್ರತಿದಿವಸ ಬೆಳಗ್ಗೆ 9 ರಿಂದ 12, ಮಧ್ಯಾಹ್ನ 4 ರಿಂದ 8 ರ ವರೆಗೆ ತಿಳಿದುಕೊಳ್ಳಬಹುದು ಅಲ್ಲದೆ ದೇವಸ್ಥಾನದ ನೋಟೀಸ್ ಬೋರ್ಡಿನ ಮೇಲೆ ಷರತ್ತುಗಳನ್ನು ಪ್ರಕಟಿಸಲಾಗಿದೆ

ಎನ್. ನಾಗರಾಜ ಶೆಟ್ಟಿ,
ಗೌರವ ಕಾರ್ಯದರ್ಶಿ

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

‡ ಅತ್ಯುತ್ತಮವಾದ ಒಗೆಯುವ ಸಾಬೂನು
‡ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು.
‡ ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ.
‡ ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಹರಾಜು ಮಾರಾಟ

ನಾಳೆ ದಿನ · 17–8–52ನೇ ಭಾನುವಾರ ಬೆಳಗ್ಗೆ 11 ಕ್ಕೆ
ಶ್ರೇಷ್ಠವಾದ 3 ಬಂಗಲೊ ಸೈಟುಗಳು
ಮೈಸೂರು ಅಬ್ಬಾ ರಸ್ತೆಯಲ್ಲಿ, ಪ್ರಭುತ್ವ ಭವನದ ಉತ್ತರ ದ್ವಾರದ ಎದುರಿಗೆ ಇರುವುವು

Edited, Printed and Published by A. R. Nagarajan, at Sadhvi Press, D. Subbiah Road, Mysore.

ಪೂ। ಸಂ 792 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೭-೮-೧೯೫೨ [ಸಂಚಿಕೆ ೩

ಸಂಸ್ಥಾನದ ಅಭಾವ ಪ್ರದೇಶಕ್ಕೆ ಕೇಂದ್ರದ ಹಣ

ಕೇಂದ್ರದಿಂದ ಸಂಸ್ಥಾನದ ಅಭಾವ ಪ್ರದೇಶಗಳಿಗೆ ೪೮ ಲಕ್ಷ ರೂ.

ಕೋಲಾರ ೧೫

ಕೋಲಾರ ಮುಂತಾದ ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಜನರಿಗಾಗಿ ಗಂಜಿಯೂಟದ ಕೇಂದ್ರಗಳನ್ನು ತೆರೆಯಲು ಮತ್ತು ಬಡವರಿಗೆ ಹಣವನ್ನು ಕೊಡಲು ಸಂಸ್ಥಾನದ ಸರ್ಕಾರದವರು ಮಾಡುವ ವೆಚ್ಚದಲ್ಲಿ ಅರ್ಧ ಭಾಗವನ್ನು ಕೇಂದ್ರ ಸರ್ಕಾರದವರು ವಹಿಸುವರೆಂದೂ, ಅದಕ್ಕಾಗಿ ಸರ್ಕಾರದವರು ೪೮ ಲಕ್ಷ ರೂ ಗಳನ್ನು ತೆಗೆದಿಟ್ಟಿರುವರೆಂದೂ ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ತಿಳಿಸಿರುತ್ತಾರೆ. ಸುಂದರಪಾಳ್ಯ ಎಂಬ ಹಳ್ಳಿಯಲ್ಲಿ ಉಪಮಂತ್ರಿಗಳು ಜನರಿಗೆ ಆಹಾರ ಧಾನ್ಯವನ್ನು ಹಂಚಿದರು. ಸಂಸ್ಥಾನದ ಅಧಿಕ ಆಹಾರ ಬೆಳೆ ಯೋಜನೆಗೆ ಕೇಂದ್ರ ಸರ್ಕಾರದವರು ೧ ಕೋಟಿ ರೂ ಗಳನ್ನು ಕೊಡಲಿರುವರೆಂದು ಅವರು ಹೇಳಿರುತ್ತಾರೆ.

ಸತ್ಕಾರ ಕೂಟ

ಸಂಸ್ಥಾನದ ಗಾಂಧೀ ಸ್ಮಾರಕ ಟ್ರಸ್ಟಿನ ಕಛೇರಿ ಕಾರ್ಯದರ್ಶಿಯಾಗಿ ನೇಮಕವಾಗಿರುವ ಶ್ರೀ ವಿ ಆರ್ ಶ್ರೀನಿವಾಸರಾಯರನ್ನು ಬೀಳ್ಕೊಡುವ ಸಲುವಾಗಿ ವಿಶ್ವವಾಣಿ ಪತ್ರಿಕಾಲಯದವರು ೧೪ನೇ ತಾ॥ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ವಿಶ್ವವಾಣಿ ಸಂಪಾದಕರಾದ ಶ್ರೀ ಸಿ ಗೋಪಾಲಕೃಷ್ಣ ಶೆಟ್ಟರು ಶ್ರೀ ಶ್ರೀನಿವಾಸರಾಯರು ಪತ್ರಿಕೋದ್ಯಮಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಭಾಷಣ ಮಾಡಿದರು. ಶ್ರೀ ಶ್ರೀನಿವಾಸರಾಯರು ಜವಾಬು ಕೊಟ್ಟು ಕೃತಜ್ಞತೆಯನ್ನು ಸೂಚಿಸಿದರು.

ನಿಧನ

ರಾಜಧಾನಿಯ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿದ್ದ ಪೌರಸಭಾ ಆರೋಗ್ಯ ಓವರ್ಸಿಯರ್ ಶ್ರೀ ವೈ ಬಿ ವೆಂಕೋಬರಾಯರು ನೆನ್ನೆ ತಮ್ಮ ೫೦ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಬಂಧುಗಳಿಗೆ ನಮ್ಮ ಅನುತಾಪವನ್ನು ಸೂಚಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ.

○ ಈ ದಿನ ಮಧ್ಯಾಹ್ನ ಕೃಷ್ಣರಾಜ ಸಾಗರದಲ್ಲಿ ನೀರಿನ ಮಟ್ಟವು ೯೭ ಅಡಿಗಳಿಗೆ ಏರಿದೆಯೆಂದು ತಿಳಿದುಬಂದಿದೆ. ನೆನ್ನೆ ಮಧ್ಯಾಹ್ನ ೯೦ ಅಡಿ ಇದ್ದಿತು.

ನೇಪಾಳದಲ್ಲಿ ರಾಜ ಸಲಹಾ ಮಂಡಲಿ

ಮೂವರು ಮಾಜಿ ಮಂತ್ರಿಗಳನ್ನೊಳಗೊಂಡ ಆರು ಜನ ಸದಸ್ಯರುಳ್ಳ ಸಲಹಾ ಮಂಡಲಿಯೊಂದನ್ನು ನೇಪಾಳದ ದೊರೆ ತ್ರಿಭುವನರು ಅಲ್ಲಿನ ಸರ್ಕಾರದ ಬದಲು ಏರ್ಪಡಿಸಿರುತ್ತಾರೆ. ಸುಸ್ಥಿರತೆಯುಳ್ಳ ಪ್ರಭುತ್ವ ದಕ್ಷತೆಯಿಂದ ಕೂಡಿದ ಮಂತ್ರಿಮಂಡಲ ಸ್ಥಾಪನೆಯಾಗುವವರೆಗೆ ಈ ಸಲಹಾ ಮಂಡಲಿಯು ರಾಜ್ಯಭಾರ ಕ್ರಮದಲ್ಲಿ ದೊರೆಗಳಿಗೆ ಸಲಹೆ ನೀಡುವುದು.

ಕಾಂಗ್ರೆಸ್ ಚುನಾವಣೆ ವಿಚಾರಣಾ ಸಮಿತಿ

ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ವಿರುದ್ಧವಾಗಿ ಕಲವು ಕಾಂಗ್ರೆಸ್ಸಿನವರು ಪ್ರಚಾರ ಮುಂತಾದ ವಿರುದ್ಧ ಕ್ರಮಗಳನ್ನು ಕೈಗೊಂಡರೆಂದು ಬಂದಿದ್ದ ದೂರುಗಳನ್ನು ಪರಿಶೀಲಿಸಲು ನೆನ್ನೆ ವಿಚಾರಣಾ ಸಮಿತಿ ಸದಸ್ಯರಾದ ಶ್ರೀಗಳು ಟಿ ಸುಬ್ರಮಣ್ಯ, ಹೆಚ್. ಎಸ್ ರುದ್ರಪ್ಪ, ಮತ್ತು ಎಸ್ ನಾರಾಯಣರಾಯರ ಮುಂದೆ ಹೆಗ್ಗಡದೇವನಕೋಟೆ, ನಂಜನಗೂಡು ಮತ್ತು ಕೃಷ್ಣರಾಜನಗರದ ಕಾರ್ಯಕರ್ತರು ರುಜುವಾತುಗಳೊಡನೆ ಹೇಳಿಕೆಗಳನ್ನು ಇತ್ತರು. ಇಂದು ಮೈಸೂರು ಜಿಲ್ಲೆಯ ಇತರ ತಾಲ್ಲೂಕಿನವರುಗಳ ವಿಚಾರಣೆಯು ನಡೆಯುವುದು.

ಪಿ ಬಿ ಶ್ರೀನಿವಾಸರವರಿಗೆ ಸತ್ಕಾರ

ತಾಯಿನಾಡು ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಬಿ ಶ್ರೀನಿವಾಸರವರು ಅಮೆರಿಕಕ್ಕೆ ತೆರಳುವ ಸಂಬಂಧದಲ್ಲಿ ಅವರ ಗೌರವಾರ್ಥವಾಗಿ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ನೆನ್ನೆ ತಮ್ಮ ಗೃಹದಲ್ಲಿ ಭೋಜನ ಕೂಟವನ್ನು ಏರ್ಪಡಿಸಿದ್ದರು. ಸಮಾರಂಭಕ್ಕೆ ತುಮಕೂರಿನ ಶ್ರೀ ಸುಬ್ರಮಣ್ಯರವರೂ, ನಗರದ ಅನೇಕ ಗಣ್ಯ ಮಹನೀಯರೂ ಪತ್ರಿಕಾ ಪ್ರತಿನಿಧಿಗಳೂ ಆಗಮಿಸಿದ್ದರು. ಶ್ರೀ ಶ್ರೀನಿವಾಸರವರಿಗೆ ಶುಭಾಶಯಗಳನ್ನು ಕೋರಲಾಯಿತು. ಶ್ರೀಯುತರು ಬರುವ ಶುಕ್ರವಾರ ಅಮೆರಿಕಕ್ಕೆ ತೆರಳುವರು.

ಬರ್ಮಾ ಅಧ್ಯಕ್ಷರ ಬೆಲೆ ೧೦ ರೂ. !

ಬರ್ಮಾ ಅಧ್ಯಕ್ಷರನ್ನು ಹಿಡಿದುಕೊಟ್ಟವರಿಗೆ ೧೦ ರೂ. ವನ್ನು ಕೊಡುವುದಾಗಿ ಅಲ್ಲಿನ ಕರೆನ್ ದಂಗೆಕಾರರು ಪ್ರಕಟಿಸಿರುತ್ತಾರೆ.

ಸಮಾಧಿ ಮಾಡಿದ ಶಿಶುವಿನ ರಕ್ಷಣೆ

ಅಲೆಪ್ಪಿಯ ಪೋಲೀಸರು ಜೀವಸಹಿತ ಸಮಾಧಿಯಾದ ಮಗುವೊಂದನ್ನು ಸಂರಕ್ಷಿಸಿದ ಪ್ರಸಂಗವೊಂದು ವರದಿಯಾಗಿದೆ. ಈ ಸಂಬಂಧವಾಗಿ ಮಗುವಿನ ತಾಯಿಯನ್ನು ದಸ್ತಗಿರಿ ಮಾಡಲಾಗಿದೆ. ಆಗತಾನೇ ಆ ಮಗುವಿಗೆ ಆಕೆಯು ಜನ್ಮವಿತ್ತಿದ್ದಳೆಂದು ಹೇಳಲಾಗಿದೆ.

ಗ್ರಾಮಾಭಿವೃದ್ಧಿ ಸಮಿತಿಗಳ ರದ್ದು

ಗ್ರಾಮಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ಕಾನೂನು ಜಾರಿಗೆ ಬಂದಿರುವುದರಿಂದಲೂ, ಮಿತವ್ಯಯದ ಉದ್ದಿಶ್ಯದಿಂದಲೂ ಸಂಸ್ಥಾನದ ಗ್ರಾಮಾಭಿವೃದ್ಧಿ ಸಮಿತಿಗಳು ರದ್ದಾಗಲಿರುತ್ತವೆ. ಸರ್ಕಾರದವರು ಈ ಬಗ್ಗೆ ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿ, ಕಳೆದ ೩॥ ವರ್ಷಗಳಿಂದಲೂ ಸದರಿ ಸಮಿತಿಗಳು ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿರುವರು.

ಗಮಕಿಗಳಿಗೆ ಪ್ರೋತ್ಸಾಹ

ಸಂಸ್ಥಾನದಲ್ಲೆಲ್ಲಾ ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳನ್ನೂ, ಶಿವಶರಣರ ಮತ್ತು ಸರ್ವಜ್ಞರ ಪದಗಳನ್ನೂ ಸುಶ್ರಾವ್ಯವಾಗಿ ಓದುವ ಗಮಕಿಗಳಿಗೆ ಸರ್ಕಾರದವರು ಶ್ರೀಮನ್ಮಹಾರಾಜರವರ ಹಸ್ತದಿಂದ ಪಾರಿತೋಷಕಗಳನ್ನು ಕೊಡಿಸಲು ಏರ್ಪಡಿಸಿರುತ್ತಾರೆ. ಇಂತಹ ಕೆಲಸದಲ್ಲಿ ತೊಡಗುವವರು ಆಯಾ ಜಿಲ್ಲಾಧಿಕಾರಿಗಳಿಗೆ ಬರೆದುಕೊಳ್ಳಬೇಕೆಂದೂ, ವರದಿಗಳು ಬಂದ ನಂತರ ಸರ್ಕಾರದವರು ಅರ್ಹರ ಪಟ್ಟಿಯನ್ನು ತಯಾರಿಸಿ ಅದರಂತೆ ಅವರನ್ನು ನಿಯೋಜಿಸಿಕೊಳ್ಳುವರೆಂದೂ ಗೊತ್ತಾಗಿದೆ.

ಬೆಟ್ಟದ ಬಳಿ ಬಂಡಿ ಉರುಳಿ ಕಾರಿಗೆ ಜಖಂ

ಚಾಮುಂಡಿಬೆಟ್ಟದ ರಸ್ತೆಯಲ್ಲಿ ಮಧುರೆಯ ಹಲವು ಪ್ರೇಕ್ಷಕರು ಮೋಟಾರಿನಲ್ಲಿ ಮೊನ್ನೆ ಹೋಗುತ್ತಿದ್ದಾಗ ಬಂಡಿಯೊಂದು ಉರುಳಿ ಕಾರಿನ ಮುಂಭಾಗಕ್ಕೆ ತಗುಲಿ ಅದಕ್ಕೆ ವಿಶೇಷವಾಗಿ ಜಖಂ ಆಯಿತೆಂದೂ, ಅದು ಚಲಿಸದೆ, ಬೇರೆ ಟ್ಯಾಕ್ಸಿಯನ್ನು ಮಾಡಿಕೊಂಡು ಅವರು ನಗರಕ್ಕೆ ಹಿಂದಿರುಗಿದರೆಂದೂ ವರದಿಯಾಗಿದೆ. ಯಾರಿಗೂ ಅಪಾಯವಾಗಲಿಲ್ಲ.

ರಾಜಧಾನಿಯಲ್ಲಿ ಮಾರಾಟ ತೆರಿಗೆ ವಿರುದ್ಧ ದಿನಾಚರಣೆ

ಬರುವ ತಿಂಗಳು ೧೫ ನೇ ತಾ॥ ಮೈಸೂರು ನಗರದ ಸಮಾಜವಾದಿ ಪಕ್ಷದವರು ಮಾರಾಟ ತೆರಿಗೆಯ ವಿರುದ್ಧದ ದಿನಾಚರಣೆಯನ್ನು ನಡೆಸಲಿರುವರು.

ಅಮೆರಿಕಕ್ಕೆ ಜಿ. ಎಸ್. ಹಾಲಪ್ಪ

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಅ॥ ಪ್ರೊ॥ ಶ್ರೀ ಜಿ ಎಸ್ ಹಾಲಪ್ಪನವರು ಆ ಶಾಸ್ತ್ರದಲ್ಲಿ ಹೆಚ್ಚು ಪ್ರಾವೀಣ್ಯತೆ ಪಡೆಯಲು ಅಮೆರಿಕಕ್ಕೆ ಈ ತಿಂಗಳು ೨೪ ರಂದು ಪ್ರಯಾಣ ಬೆಳಸುವರು.

...ಗಿಂತಲೂ ವಿದ್ಯಾ ...ಯೋಜನೆ ಅಗತ್ಯ

...ನ್ಸಿಲರ್ ಬಿ. ಎಲ್. ...ರ್ಘರವರ ಭಾಷಣ

ಮೈಸೂರು ೧೭

...ಸಹಾಯ ಪಡೆದ ಪ್ರೌಢ ...ಧ್ಯಾಯರ ಸಂಘದ ಅಧ್ಯಕ್ಷ... ಏರ್ಪಾಡಾಗಿರುವ ಮಾಧ್ಯ... ...ಪದ ಮೂಲ ತತ್ವ ಗೋ... ...ತ್ಸಾಹವನ್ನು ನೆನ್ನೆ ಶ್ರ... ...ದ ಡಾ॥ ಬಿ. ಎಲ್ ಮಂಜು... ...ರದೇರಿಸಿದರು. ಅವರು ಭಾ... ...ಕ್ಷಕ ವರ್ಗಗಳ ಕಾಲ ಅನು... ...ಉಪಾಧ್ಯಾಯರುಗಳಿಗೆ ವಿ... ...ಯೋಜನೆಯು ತಯಾರಾಗ... ...ಗಾರಿಕೆಗಿಂತಲೂ ಹೆಚ್ಚಾಗಿ... ...ದ ಯೋಜನೆಯು ಅಗತ್ಯ... ...ರು ರಾಜಕಾರಣಿಗಳು ವಿ... ...ಷೆಯಿಂದ ದೂರವಿರುವು... ...ಂದು ಅವರು ಅಭಿಪ್ರಾಯ... ...ಶಾಲೆ ಪ್ರವಚನವೇ ವಿದ್ಯಾ... ...ೂ, ಪ್ರತಿ ಗೃಹಗಳಲ್ಲೂ ...ನಡೆಸಬೇಕಾದುದು ಅಗತ್ಯವೆಂ... ...ಳಿದರು.

...ಕ್ಷರಾದ ಶ್ರೀ ರಾಮಶೇಷ... ...ರು ಸ್ವಾಗತ ಭಾಷಣ ಮಾ...

...ಪ್ರೌಢಶಾಲೆಗಳ ...ಧ್ಯಾಯರ ಸಂಘ

...ಪ್ರೌಢಶಾಲಾ ಉಪಾಧ್ಯಾ... ...ಅಧ್ಯಕ್ಷ ಶ್ರೀ ರಾಮಶೇ... ...ರು ೧೪ ನೇ ತಾ॥ ಪತ್ರಿ... ...ಗಳನ್ನು ಬರಮಾಡಿಕೊಂ... ...ಸ್ಥಾಪನೆಯ ಉದ್ದಿಶ್ಯಹ... ...ವರು ಖಾಸಗಿ ಶಾಲೆಗಳ ...ಯರುಗಳಿಗೆ ಸಂಬಳದ ಬಡ್ತಿ, ... ಮತ್ತು ಪರೀಕ್ಷಾ ಬೋ... ...ತಿನಿಧ್ಯ ಇವೇ ಮುಂತಾದ ... ಸರ್ಕಾರೀ ಶಾಲೆಗಳ ಉ... ...ಗೆ ದೊರಕುವಷ್ಟು ಸೌಲ... ...ಕೆ ಇಲ್ಲದಿರುವುದರಿಂದಲೂ ...ಖಾಸಗೀ ಶಾಲೆಗಳಲ್ಲಿ ...ರುಗಳಿಗೆ ಅನಾವಶ್ಯಕವಾ... ...ಗಳುಂಟಾಗುತ್ತಿರುವುದರಿಂ... ...ಗಳ ನಿವಾರಣೆಗಾಗಿ ಸಂಘ... ...ಸಲಾಗಿದೆಯೆಂದು ತಿಳಿಸಿ...

...ಬಾದ್ ಮೊಹಲ್ಲಾ ...ದಿನಾಚರಣೆ

...ಮ ಪೌರ ಸಭೆಯವರು ನಾರಿ... ...ಮೊಹಲ್ಲಾ ದಿನಾಚರಣೆ ...ಡಿಸಿರುವರು. ಇದರ ಅಂಗ... ...೩೦ ರಿಂದ ೬-೩೦ರ ವರೆ... ...ರಡು, ರಸ್ತೆ ವಗೈರೆ ಬೀದಿ... ...ಹಾಕುವುದು ಮಕ್ಕಳ ಪರೀ... ...ರ್ಭಿಣಿಯರ ಪರೀಕ್ಷೆಗಳೂ, ... ಕ್ಯಾತಸಂದ್ರ ಹಳ್ಳಿಯ ಪ್ರಮು... ...ಶಾಲೆಯಲ್ಲಿ ಪೌರ ಸಭಾಧ್ಯಕ್ಷರ... ...ಬಹಿರಂಗ ಸಭೆಯೂ ಜರು...

...ಶೇಷ ಸಂಗೀತ

...ಯ ಬಿಡಾರದ ಕೃಷ್ಣಪ್ಪ... ...ಪ್ರಸನ್ನ ಸೀತಾರಾಮ ಮಂ... ...ಮೋತ್ಸವದ ಪ್ರಯುಕ್ತ ಈ... ...ಟೆಗೆ ಕುಮಾರಿ ಪಣಿಕೇಸರಿ ...ೇತವು ವಿ॥ ಎ ಕೃಷ್ಣಮೂ... ...ರವರ ಪಿಟೀಲು ಮತ್ತು ...ಂದ್ರ ರವರ ಮೃದಂಗಗ... ...ಯುವುದು ಸರ್ವರಿಗೂ...

ವಾರ ಭವಿಷ್ಯ

ತಾ|| ೧೭-೮-೫೨ ರಿಂದ ೨೩-೮-೫೨ ರ ವರೆಗೆ

ಮೇಷ — ಆರೋಗ್ಯ ನೆಟ್ಟಗಿರದು. ಪ್ರವಾಸಕ್ಕೆ ಕಾಲ ಚೆನ್ನಾಗಿಲ್ಲ. ಅಪಘಾತ ಸಂಭವ. ನೌಕರಿಯಲ್ಲಿ ಮೇಲ್ಪಟ್ಟವರ ಭಿನ್ನಾಭಿಪ್ರಾಯ. ವ್ಯಾಪಾರಾದಿಗಳಲ್ಲಿ ನಷ್ಟ. ತಾ|| ೧೮, ೧೯ ಅಗ್ನಿ ಭಯ, ಕಲಹ.

ವೃಷಭ — ಆರೋಗ್ಯ ನೆಟ್ಟಗೆ. ಉದಾಸೀನ ಮನಸ್ಸು. ಪ್ರಿಯ ವ್ಯಕ್ತಿಗೆ. ಗಂಡಾಂತರ ನೌಕರಿಯಲ್ಲಿ ಮೇಲಿನವರ ಅಪೇಕ್ಷಣೆ. ಪತ್ನಿಗೆ ಖಾಯಿಲೆ. ತಾ|| ೨೦, ೨೧ ಚಿಂತೆ, ಅಪ್ರಿಯ ವಾರ್ತೆ.

ಮಿಥುನ—ಆರೋಗ್ಯ ನೆಟ್ಟಗೆ. ವ್ಯಾಪಾರಾದಿಗಳಲ್ಲಿ ಲಾಭ ಪ್ರವಾಸ ಸುಖಪ್ರದ. ನೂತನ ಪರಿಚಯ ನೌಕರಿಯಲ್ಲಿ ಹಿತದಾಯಕ ಘಟನೆ ತಾ|| ೧೮, ೧೯ ಮಹತ್ವದ ಪತ್ರಾಗಮನ, ಶುಭ ವಾರ್ತೆ.

ಕರ್ಕ — ಚಿಂತೆ ದೂರ. ಆರೋಗ್ಯ ನೆಟ್ಟಗೆ ವೈಮನಸ್ಸು ದೂರಾಗುತ್ತೆ. ಹಣದ ಲಾಭ. ತಾ|| ೨೧, ೨೨ ಲಾಭ, ಶುಭವಾರ್ತೆ.

ಸಿಂಹ — ವ್ಯಥೆಯುಂಟುಮಾಡುವ ಅನೇಕ ಘಟನೆ. ಆರೋಗ್ಯ ನೆಟ್ಟಗಿರದು ಹೃದಯ ದೌರ್ಬಲ್ಯ ಹಣಕಾಸಿನ ಸ್ಥಿತಿ ಸಾಧಾರಣ. ಉದ್ಯೋಗ ನೌಕರಿಗಳಲ್ಲಿ ಮನಸ್ತಾಪ. ಪ್ರವಾಸ ಬೇಡ ತಾ|| ೧೮, ೧೯ ಖರ್ಚು, ಶತ್ರುತ್ವ.

ಕನ್ಯಾ — ಕೀರ್ತಿ ತಂದುಕೊಡುವ ವಾರ. ಆರೋಗ್ಯ ನೆಟ್ಟಗೆ. ಶುಭ ಕಾರ್ಯ. ಪ್ರವಾಸ ಯೋಗ. ಶತ್ರುಗಳ ಶರಣಾಗತಿ. ವ್ಯಾಪಾರಾದಿಗಳಲ್ಲಿ ಲಾಭ ತಾ|| ೧೮, ೧೯ ಮೃಷ್ಟಾನ್ನ ಲಾಭ, ಶುಭವಾರ್ತೆ.

ತುಲಾ — ಆರೋಗ್ಯ ನೆಟ್ಟಗೆ. ಹಣಕಾಸಿನ ವೆಚ್ಚ ಹೆಚ್ಚಾಗುವುದು ಕಾಲದ ಪ್ರಕರಣ. ವ್ಯಾಪಾರಾದಿಗಳಲ್ಲಿ ಭರವಸೆ. ನೌಕರಿಯಲ್ಲಿ ಸಾಮರಸ್ಯ. ತಾ|| ೨೦, ೨೧ ಮಿತ್ರ ಸಹಾಯ, ಚಿಂತಾನಾಶ.

ವೃಶ್ಚಿಕ— ಜವಾಬ್ದಾರಿ ಹೆಚ್ಚು. ಮನಸ್ಸಿಗೆ ತಳಮಳ. ಪತ್ನಿಗೆ ಅನಾರೋಗ್ಯ. ಕಲಹ. ನೌಕರಿಯಲ್ಲಿ ಚಿಂತಾಜನಕ ಪ್ರಸಂಗ. ತಾ|| ೧೮, ೧೯ ಮಹತ್ವ ಪತ್ರಾಗಮನ ಚಿಂತಾನಾಶ.

ಧನು — ಪ್ರಿಯ ಜನರ ಅಗಲುವಿಕೆ ವಿಶ್ರಾಂತಿ ದೊರಕದು. ಶತ್ರು ಪೀಡೆ ವ್ಯಾಪಾರಾದಿಗಳಲ್ಲಿ ಪೈಪೋಟಿ ತಾ|| ೧೮, ೧೯ ಪೀಡೆ, ಕಲಹ, ಅಪಹರಣ.

ಮಕರ — ಕೈಕೊಂಡ ಕಾರ್ಯದ ಸಿದ್ಧಿ. ಧನ ಲಾಭ. ಗೆಳೆಯರ ಭೇಟಿ ಮೇಲಧಿಕಾರ ಪ್ರಾಪ್ತಿ ಪ್ರವಾಸ ಯೋಗ. ತಾ|| ೨೦, ೨೧ ಖರ್ಚು ಹೆಚ್ಚು, ಅತಿಥಿಗಳ ಆಗಮನ.

ಕುಂಭ — ಅರ್ಧಕ್ಕೆ ನಿಂತ ಕಾರ್ಯ ಅಕಸ್ಮಿಕವಾಗಿ ಜಯಪ್ರದವಾಗಿ ಪೂರ್ತಿಗೊಳ್ಳುವುದು. ಆರೋಗ್ಯ ನೆಟ್ಟಗೆ. ವ್ಯಾಪಾರಾದಿಗಳಲ್ಲಿ ಹಿತ ಘಟನೆ. ತಾ|| ೧೮, ೧೯ ಖರ್ಚು, ಗೊಂದಲ.

ಮೀನ — ಹಣದ ಲಾಭ. ವ್ಯಾಪಾರಾದಿಗಳಲ್ಲಿ ಸುಧಾರಣೆ ಕೈಗೊಂಡ ಕಾರ್ಯ ಸಿದ್ಧಿ ತಾ|| ೧೮, ೧೯ ಮಹತ್ವದ ಪತ್ರ, ಶುಭ ವಾರ್ತೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೩೦ ಎಂ. ಎಸ್. ಸುಬ್ಬುಲಕ್ಷ್ಮಿ ರೆಕಾರ್ಡ್ ಸಂಗೀತ. ಮಧ್ಯಾಹ್ನ ೧೨.೩೦ ನಾಗಸ್ವರ. ಚಿತ್ರಸಂಗೀತ. ಸಂಜೆ ೫.೩೦ ಮಕ್ಕಳಿಗೆ. ವಿಶ್ವನಾಥ ಚಿಟ್ಟೀಲು. ೬.೧೦ ಗಾನವಿಹಾರ. ೬.೩೦ ಜನರಂಜನಿ, ೭.೩೦ ವಿಶ್ವನಾಥ ವಿಪರೀತ. ೮.೩೦ ಮತ್ತು ೯.೩೦ ಎಂ. ವಿ. ಲೀಲಾ ಸಂಗೀತ ೯.೧೫ ಲಿಯನಾರ್ಡ್ ಸ್ಮಿತ್ ರವರಿಂದ ಇಂಗ್ಲಿಷ್ ಭಾಷಣ.

ಮೈಸೂರು ಪೇಟೆ ಧಾರಣೆ

	ಪಲ್ಲ ಗಳ್ಳೆ	ರೂ. ಇಂದ ರೂ. ಗೆ
ನೆಲಗಡಲೆ	೧೧-೮-೦	೨೩.೮.೦
ಎಳ್ಳು	೭೨.೨.೦	೭೯.೨.೦
ಹುಚ್ಚೆಳ್ಳು	೪೧೩.೮.೦	
ಹರಳು ಬೀಜ	೪೨.೮.೦	೪೩-೧-೦
ಹುರುಳಿ	೪೦೪.೮	೪೩-೨.೦
ಹೆಸರು	೩೩-೦-೦	
ಹೊಂಗೇಬೀಜ	೧೫-೦-೦	
ಉದ್ದು	೭೪-೦-೦	
ಹಲಸಂದೆ	೫೪-೦-೦	೭೫-೪-೦
ಮೆಣಸಿನಕಾಯಿ	—	
ಮೆಣಸಿಗಳ್ಳಿ	೮.೧೪.೦	೧೫-೬-೦
ಹುಣಸೇಹಣ್ಣು	೨-೧೦-೦	೧೩.೬.೦
ಸೀಗೇಕಾಯಿ	೪-೨-೦	
ತೆಂಗಿನಕಾಯಿ ೧೦೦೦	೧೧೭ ೦.೦	೧೮೯.೦.೦

ವ್ಯಾಯಾಮ ಶಾಲೆಯ ಆರಂಭೋತ್ಸವ

ಚಾಮುಂಡಿಪುರಂ ವ್ಯಾಯಾಮ ಶಾಲೆ ಮತ್ತು ಉಚಿತ ವಾಚನಾಲಯದ ಆರಂಭೋತ್ಸವವನ್ನು ಶ್ರೀ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಎಸ್. ಸುಬ್ಬರಾಯರು ೧೪ನೇ ತಾ|| ನೆರವೇರಿಸಿದರು.

SREE GANESHA
TALKIES
From 18-8-52 For 3 Days
United Artist's
CHAMPION
With :- Kirk Douglas & Ruth Roman
FROM 21-8-52
CHAMPAGNE FOR CAESAR

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್,
ಮೈಸೂರು

ರಾಜಕಮಲ್, ಮೈಸೂರು
15-8-52 ರಿಂದ ಪ್ರಾರಂಭ
ಪ್ರತಿ ದಿನ 3 ಆಟಗಳು
ಮರುದನಾಡು
ಇಳವರಸಿ (ತಮಿಳು)
ಪಾತ್ರ:— ಎಂ. ಜಿ. ರಾಮಚಂದ್ರ ಮತ್ತು ವಿ. ಎನ್. ಜಾನಕಿ

ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ, ಲಿಮಿಟೆಡ್
ಮೈಸೂರು —ತಾ|| 14-8-52

ಪ್ರಕಟಣೆ

ಮೈಸೂರು ಸಿಟಿ ಸಾನಂದವಾಡಿ ರಸ್ತೆ ಬಡಾವಣೆಯಲ್ಲಿ ಗೌರ್ನಮೆಂಟ್ ಸಿಲ್ಕ್ ಫ್ಯಾಕ್ಟರಿ ಮತ್ತು ಹಾಲಿ ಕಟ್ಟುತ್ತಿರುವ ನ್ಯಾಷನಲ್ ಇಂಜನಿಯರಿಂಗ್ ಕಾಲೇಜು ಸಮೀಪದಲ್ಲಿ ಸೊಸೈಟಿಯವರು ಕಟ್ಟಿಸಿರುವ ಮಾದರಿ ಮನೆಗಳನ್ನು ಸೊಸೈಟಿಯ ಮೆಂಬರುಗಳಿಗೆ ಸೊಸೈಟಿಯ ಬೈಲಾ ಪ್ರಕಾರ ಹೈರ್ ಪರ್ಚೇಸ್ ರೀತಿಯಲ್ಲಿ ಕ್ರಯಕ್ಕೆ ಕೊಡಲಾಗುತ್ತೆ. ಪ್ರತಿಯೊಂದು ಮನೆಗೂ ಬೆಲೆ ಸುಮಾರು 6000 ರೂಪಾಯಿಗಳು. ಮೆಂಬರುಗಳು ಬೈಲಾ ಪ್ರಕಾರ ಕ್ರಯದ ಮೊದಲಿಗಿನ ಪೈಕಿ ಸೇಕಡ 20 ರಷ್ಟು ಅಂದರೆ 1200 ರೂಪಾಯಿಗಳನ್ನು ಮನೆ ಅಲಾಟ್ ಮಾಡಿದ ನಂತರ ಪಾವತಿ ಮಾಡಬೇಕು. ಅರ್ಜಿ ಹಾಕಲು ಕೊನೆಯ ತಾರೀಖು 25-8-1952. ಹೆಚ್ಚಿನ ವಿವರಗಳನ್ನು ಸೊಸೈಟಿಯ ಆಫೀಸಿನಲ್ಲಿ ತಿಳಿಯಬಹುದು.

ಎಸ್. ಶೇಷಗಿರಿರಾವ್,
ಗೌರವ ಕಾರ್ಯದರ್ಶಿ.

IF YOU LIKE PURE AND BEST COFFEE,
DON'T FORGET TO COME TO
SRI CHAMUNDESWARI BHAVAN
(Boarding, Lodging and Restaurant)
YELWAL ROAD, MYSORE.
DRINK & ENJOY
OUR
Pure and High - Flavoured
PLANTATION 'A' COFFEE
★ Taste Our Sweets
★ Prepared from Pure Ghee
★ Delicious & Wholesome Meals

ಗೌರಿ ಹಬ್ಬಕ್ಕಾಗಿ:— ಹೊಸ ಡಿಸೈನಿನ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಜಾಗಳೂರ, ಕೊಳ್ಳೇಗಾಲ ಸೀರೆಗಳೂ ಬಂದಿವೆ.
★ M. V. ಭೋಜಯ್ಯ ಶೆಟ್ಟಿ
ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

Edited, Printed and Published by A. R. Nagarajan, at Sadhvi Press, D Subbiah Road, Mysore.

ಟೆಲಿಫೋನ್ ನಂ. 792 ॥ ವಂದೇ ಮಾತರಂ ॥ ಇಂದಿನ ಬೆಲೆ ೧ ಆಣೆ

ಸಾಧ್ವಿ

ಸಂಪುಟ ೧೧] ಸೋಮವಾರ ೧೮-೮-೧೯೫೨ [ಸಂಚಿಕೆ ೧೮

ಚಿತ್ರದುರ್ಗ ತಾಲ್ಲೂಕಿನಲ್ಲಿ ಉತ್ಕಟ ಕ್ಷಾಮ

ಅಭಾವ ಜಿಲ್ಲೆಗಳಿಗೆ ಸರ್ಕಾರದ ಧನ ಸಹಾಯ

ಬೆಂಗಳೂರು ೧೮

ಸಂಸ್ಥಾನದ ಅಭಾವ ಪ್ರದೇಶಗಳಾದ ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ಆಹಾರ ಬೆಳೆಗಾಗಿ ತಲಾ ೩ ಲಕ್ಷ ರೂ ಗಳಂತೆಯೂ ಉಳಿದ ಜಿಲ್ಲೆಗಳಿಗೆ ತಲಾ ೧ ಲಕ್ಷ ರೂ. ನಂತೆಯೂ ಧನ ಸಹಾಯವನ್ನು ಸರ್ಕಾರದವರು ಮಂಜೂರು ಮಾಡಿರುವರು.

ದೆಹಲಿಗೆ ೨೮ ನೇ ತಾ॥ ಹನುಮಂತಯ್ಯನವರ ಪ್ರಯಾಣ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ತಿಂಗಳು ೨೮ ನೇ ತಾ॥ ದೆಹಲಿಗೆ ಪ್ರಯಾಣ ಬೆಳೆಸುವರು. ಕೇಂದ್ರ ಉಪ ಆಹಾರ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರೂ ಅದೇ ದಿನ ದೆಹಲಿಗೆ ಹಿಂತಿರುಗುವರು.

ಅಕ್ರಮ ಆಹಾರ ರವಾನೆ ಸೂಕ್ತ ದ್ದಮೆಗೆ ಜಿಲ್ಲಾಧಿಕಾರಿಗಳ ಅನುಮತಿ

ವಿವಾಹ, ಉಪನಯನ ಮುಂತಾದ ಗೃಹಕೃತ್ಯ ಆವಶ್ಯಕತೆಗಳನ್ನುಳಿದು ವಿಶ್ವ ಸಂದರ್ಭಗಳಲ್ಲಿ ಆಹಾರ ಸಾಗಾಣಿಕೆ ಬಗ್ಗೆ ಮೊಕದ್ದಮೆಗಳನ್ನು ಹೂಡುವ ಮುಂಚೆ ಆಯಾ ಜಿಲ್ಲಾಧಿಕಾರಿಗಳ ಅನುಮತಿ ಪಡೆಯಬೇಕೆಂಬ ನಿಯಮವನ್ನು ಮಾಡುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ. ಪಡಿತರವಿಲ್ಲದಿರುವ ಪ್ರದೇಶಗಳಿಗೆ ಆವಶ್ಯವಿದ್ದಷ್ಟು ಧಾನ್ಯ ಸಾಗಿಸಿಕೊಳ್ಳುವ ಅವಕಾಶವನ್ನು ದುರುಪಯೋಗಪಡಿಸಬಾರದೆಂದೂ ಅವರು ಹೇಳಿರುತ್ತಾರೆ.

ಸ್ಟಾಲಿನ್ನರನ್ನು ಹೋಲುವ ಮನುಷ್ಯರ ನಿರ್ಮಾಣ

ರಷ್ಯದ ಪ್ರಧಾನಿ ಮಾರ್ಷಲ್ ಸ್ಟಾಲಿನ್ನರನ್ನು ಹೋಲುವಂತೆ ಮಾಡಲು ೩೦ ಜನರ ಮೇಲೆ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಅವರೆಲ್ಲರೂ ಸ್ಟಾಲಿನ್ನರು ಹುಟ್ಟಿದ ಜಾರ್ಜಿಯಾ ನಗರದವರೇ ಆಗಿರುತ್ತಾರೆ. ಅವರು ಸ್ಟಾಲಿನ್ನರಂತೆ ಕಾಣುತ್ತಿರುವರು. ಈ ಪೈಕಿ ಹಲವರು ಈಗಾಗಲೇ ಮಡಿದಿರುವರೆಂದೂ ಹೇಳಲಾಗಿದೆ.

ಸಾಕ್ಸೇನಾರವರ ಪ್ರತಿಭಟನಾ ಉಪವಾಸ

ಉತ್ತರ ಪ್ರದೇಶ ಪ್ರಾಂತದ ಅಭಾವ ಪ್ರದೇಶಗಳಲ್ಲಿರುವ ತೀವ್ರ ಪರಿಸ್ಥಿತಿಯ ಬಗ್ಗೆ ಅಲ್ಲಿನ ಮಂತ್ರಿಗಳು ತಪ್ಪು ಹೇಳಿಕೆಗಳನ್ನು ಕೊಡುತ್ತಿರುವುದನ್ನು ಪ್ರತಿಭಟಿಸಿ, ಕೆ. ಎಂ. ಪಿ. ಪಕ್ಷದ ಮುಖಂಡರಾದ ಶಿಬ್ಬನಲಾಲ್ ಸಾಕ್ಸೇನಾರವರು ಆಮರಣಾಂತ ಉಪವಾಸವನ್ನು ನೆನ್ನೆಯಿಂದ ಕೈಗೊಂಡಿರುತ್ತಾರೆ.

ಲೆಬನಾನ್‌ನಲ್ಲೂ ಕ್ರಾಂತಿಯೇ?

ಈಜಿಪ್ಟ್ ಮತ್ತು ಸಿರಿಯಾಗಳಲ್ಲಿ ನಡೆದಂತೆಯೇ ಲೆಬನಾನಿನಲ್ಲೂ ಮಿಲಿಟರಿಯವರಿಂದ ಕ್ರಾಂತಿ ನಡೆಯುವುದೆಂದೂ ಈ ಬಗ್ಗೆ ಸನ್ನಾಹಗಳಾಗುತ್ತಿರುವುವೆಂದೂ ವರದಿಯಾಗಿದೆ.

ಚಿತ್ರದುರ್ಗದ ಜನರಿಗೆ ಭೂತಾಳೆ ಗೆಡ್ಡೆಯೇ ಆಹಾರ

ಚಿತ್ರದುರ್ಗ ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿಯು ಅತ್ಯುತ್ಕಟವಾಗಿ ಜನಗಳು ಭೂತಾಳೆ ಗೆಡ್ಡೆ, ಹುಣಿಸೇಬೀಜ, ಜಸೆ ಮತ್ತು ಕಾಚಲು ಮರದ ಎಲೆಗಳನ್ನು ತಿನ್ನುತ್ತಿರುವರೆಂದು ಗೊತ್ತಾಗಿದೆ. ಮಳೆ ಬಾರದೆ ಇರುವುದರಿಂದ ವ್ಯವಸಾಯ ಕಾರ್ಮಿಕರಿಗೆ ಕೆಲಸವಿಲ್ಲದೆ ಸಂಪಾದನೆಯಿಲ್ಲದಾಗಿದೆಯೆಂದೂ ಕೊಳ್ಳಲು ಧಾನ್ಯಗಳು ಸಿಕ್ಕುತ್ತಿದ್ದರೂ ಹಣವಿಲ್ಲದೆ ಅವನ್ನು ಕೊಳ್ಳುತ್ತಿಲ್ಲವೆಂದೂ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕಾದುದು ಅಗತ್ಯವೆಂದೂ ಹೇಳಲಾಗಿದೆ. ಅನೇಕ ಹರಿಜನರ ಮನೆಗಳಲ್ಲಿ ಅಡಿಗೆಗಾಗಿ ಒಲೆಗಳನ್ನು ಹತ್ತಿಸಿ ಹಲವು ದಿನಗಳಾದುವೆಂದು ಗೊತ್ತಾಗಿದೆ.

ಸ್ಥಳೀಯ ಸಂಸ್ಥೆಗಳ ಕರ್ತವ್ಯದ ಬಗ್ಗೆ ಪ್ರಭುಗಳು

ಮೈಸೂರು ಪ್ರಾಂತ ಪರಿಷತ್ತಿನ ಸಭೆಯ ಅಧ್ಯಕ್ಷತೆ ವಹಿಸಿದ್ದ ಮಹಾರಾಜರು, ... ಮೈಸೂರು ಶ್ರೀಮನ್ಮಹಾರಾಜರಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದರು. ಮಹಾರಾಜರು ಉತ್ತರಿಸುತ್ತಾ, ಈಗಿನ ಆಪತ್ತಿನ ಗುರಿಯಿಂದ ದೇಶವನ್ನು ಪಾರುಮಾಡಲು ರಾಷ್ಟ್ರವನ್ನಾಗಿ ಮಾಡುವುದಾಗಿರುವುದೆಂದೂ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ವಹಿಸಿರುವವರು ಈ ಕರ್ತವ್ಯದಲ್ಲಿ ಭಾಗಿಗಳೆಂದೂ, ಅವರು ತಮ್ಮ ಕ್ಷೇತ್ರಗಳಲ್ಲಿ ಪಡೆದಿರುವ ಅನುಭವದ ಆಧಾರದ ಮೇಲೆಯೇ ಯೋಗಕ್ಷೇಮ ರಾಷ್ಟ್ರದ ಅಭಿಪ್ರಾಯವನ್ನು ತಾಳಬೇಕಾಗಿರುವುದೆಂದೂ ತಿಳಿಸಿದರು.

ಚೀಣರಿಂದ ಹಾಂಗ್ ಕಾಂಗ್ ಬಂದರಿನ ವಶ

ಬ್ರಿಟಿಷರ ಕೈಯಲ್ಲಿರುವ ಹಾಂಗ್‌ಕಾಂಗ್ ರೇವು ಪಟ್ಟಣ ಮತ್ತು ಹಡಗುಗಳು ನಿಲ್ಲುವ ಪ್ರದೇಶಗಳನ್ನು ಚೀಣದ ಮಿಲಿಟರಿಯವರು ಆಕ್ರಮಿಸಿರುವರೆಂದು ಪೀಕಿಂಗ್ ರೇಡಿಯೋ ವು ತಿಳಿಸಿದೆ. ಈ ಎರಡು ಸ್ಥಳಗಳ ಬೆಲೆಯು ಸುಮಾರು ೪೦ ಲಕ್ಷ ಪೌಂಡುಗಳಾಗುವುದೆಂದು ಹೇಳಲಾಗಿದೆ. ಹಾಂಗ್‌ಕಾಂಗಿನಲ್ಲಿರುವ ೪೦ ಸರ್ವಿಸ್ಸು ವಿಮಾನಗಳನ್ನು ಅಮೆರಿಕಾಕ್ಕೆ ಒಪ್ಪಿಸಬೇಕೆಂದು ಬ್ರಿಟನ್ನಿನ ನ್ಯಾಯ ಮಂಡಲವೊಂದು ಇತ್ತ ತೀರ್ಪಿನ ಪ್ರತೀಕಾರಕ್ಕಾಗಿ ಚೀಣರು ಈ ಕ್ರಮ ಕೈಗೊಂಡರೆಂದು ಹೇಳಲಾಗಿದೆ.

○ ನ್ಯೂಯಾರ್ಕಿಗೆ ನೆನ್ನೆ ಹೊರಟಿದ್ದ ಅಮೆರಿಕದ ಒಂದು ವಿಮಾನದಲ್ಲಿದ್ದ ಸ್ತ್ರೀಯೊಬ್ಬಳು ಹೆಣ್ಣು ಶಿಶು ವೊಂದನ್ನು ಪ್ರಸವಿಸಿದಳೆಂದು ವರದಿಯಾಗಿದೆ ಅದು ೭ ಪೌಂಡು ತೂಕವುಳ್ಳದ್ದಾಗಿದೆ.

ಮಾಸ್ಕೋವಿಗೆ ಚೀಣಾ ಪ್ರಧಾನಿಯ ಭೇಟಿ

ಚೀಣದ ಪ್ರಧಾನಿ ಚೌ ಎನ್ ಲೈರವರ ಮುಖಂಡತ್ವದಲ್ಲಿ ಆ ದೇಶದ ನಿಯೋಗವೊಂದು ರಷ್ಯದ ರಾಜಧಾನಿ ಮಾಸ್ಕೋವಿಗೆ ಬಂದಿರುವುದಾಗಿ ಮಾಸ್ಕೋ ರೇಡಿಯೋವು ತಿಳಿಸಿರುತ್ತದೆ. ಅವರನ್ನು ರಷ್ಯದ ಉಪ ಮುಖ್ಯ ಮಂತ್ರಿ ಎಂ. ಮಾಲೆಂಕೋವ್ ಮುಂತಾದವರು ಸ್ವಾಗತಿಸಿದರೆಂದು ವರದಿಯಾಗಿದೆ. ಚೀಣದ ಅಧ್ಯಕ್ಷ ಮಾವೋತ್ಸೆಟುಂಗರೂ ಮಾಸ್ಕೋವಿಗೆ ಹೋಗಿಬಂದರೆಂದು ವರದಿಯಾಗಿದೆ.

ಕಬ್ಬಿಣದ ಕಾರ್ಖಾನೆಯಲ್ಲಿ ಉತ್ಪತ್ತಿ ಬೋನಸ್

ಹೆಚ್ಚು ಉತ್ಪತ್ತಿಯನ್ನು ಮಾಡುವಂತೆ ಕಾರ್ಮಿಕರಿಗೆ ಪ್ರೋತ್ಸಾಹವೀಯಲು ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ "ಪ್ರೇರಣಾ ಬೋನಸ್ಸು" ಯೋಜನೆಯನ್ನು ಇದೇ ಪ್ರಥಮವಾಗಿ ಎರಡು ವರ್ಷಗಳ ಕಾಲ ಜಾರಿಗೆ ಕೊಡಲಾಗಿದೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಉದಾರ ಸಹಾಯ

ರಾಜಧಾನಿಯ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಐನೂರು ಎಪ್ಪತ್ತು ರೂ ಬದಲಾಗಿ ಬೆಲೆ ಬಾಳುವ ೨೦೪ ಪುಸ್ತಕಗಳನ್ನು ಉಚಿತವಾಗಿ ಪಿರಿಯಾಪಟ್ಟಣದಲ್ಲಿರುವ ಮದರ್ ಗ್ರೀನ್‌ಪ್ರೈಸ್ ಮತ್ತು ಮದರ್ ಆಂಡ್ರ್ಯೂಸ್‌ರವರು ದಾನಮಾಡಿರುವುದನ್ನು ನಿಲಯದವರು ಕೃತಜ್ಞತೆಯಿಂದ ಸ್ವೀಕರಿಸಿರುತ್ತಾರೆ.

ಕ್ಷಾಮ ಪ್ರದೇಶಕ್ಕೆ ಧಾನ್ಯ ಮತ್ತು ಹುಲ್ಲಿನ ಸಹಾಯ

ಶ್ರೀರಂಗಪಟ್ಟಣ ೧೮

ಕಳೆದ ಮಂಗಳವಾರ ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಇಲ್ಲಿಗೆ ಭೇಟಿಯಿತ್ತು, ಕೋಲಾರದಲ್ಲಿ ಆಹಾರ ಮತ್ತು ಹುಲ್ಲಿನ ಅಭಾವ ನಿವಾರಿಸಲು ೩೦ ಟನ್ ಹುಲ್ಲು ಮತ್ತು ೪ ಪಲ್ಲ ೪೪ ಸೇರು ಭತ್ತವನ್ನು ತುಂಬಿದ್ದ ಸ್ಪೆಷಲ್ ರೈಲನ್ನು ಬಿಡುವ ಉತ್ಸವವನ್ನು ನೆರವೇರಿಸಿದರು. ೧,೧೧೭ ರೂ ಗಳು ಕ್ಷಾಮ ನಿವಾರಣಾ ನಿಧಿಗೆ ಇಲ್ಲಿ ವಸೂಲಾಗಿರುತ್ತದೆ. ಇನ್ನೂ ೧೩೦೦ ರೂ.ಗಳ ಮತ್ತು ೮ ಪಲ್ಲ ಭತ್ತದ ವಾಗ್ದಾನವಾಗಿದೆ.

ಭಾಷಾವಾರು ಪ್ರಾಂತ ನಿರ್ಮಾಣಕ್ಕೆ ಒತ್ತಾಯ

ಅಮರಾವತಿಯಲ್ಲಿ ನೆನ್ನೆ ಸೇರಿದ ಅಖಿಲ ಭಾಷಾವಾರು ಸಮ್ಮೇಳನದಲ್ಲಿ ಕೂಡಲೇ ಭಾಷಾವಾರು ಪ್ರಾಂತಗಳನ್ನು ನಿರ್ಮಿಸಬೇಕೆಂಬ ನಿರ್ಣಯವನ್ನು ಮಾಡಲಾಯಿತು. ದೇಶವನ್ನು ಭಾಷಾವಾರಾಗಿ ವಿಂಗಡಿಸುವ ಭರವಸೆಯನ್ನು ಈಡೇರಿಸದಿದ್ದುದಕ್ಕಾಗಿ ಖಂಡನಾ ನಿರ್ಣಯವೂ ಅಂಗೀಕೃತವಾಯಿತು. ಆಂಧ್ರ ದೇಶದಿಂದ ಪಾರ್ಲಿಮೆಂಟಿಗೆ ಸದಸ್ಯರಾಗಿರುವ ಡಾ॥ ಲಂಕಾ ಸುಂದರಂರವರು ಅಧ್ಯಕ್ಷತೆ ವಹಿಸಿದ್ದರು.

ಗಂಡನೊಡನೆ ಹೆಂಡತಿಯೂ ಮಂತ್ರಿ

ಪೂರ್ವ ಜರ್ಮನಿಯ ಒಳಾಡಳಿತ ಮಂತ್ರಿ ಹೆರ್ ವಿಲ್ಹೆಲ್ಮ್ ಜೈಸರ್‌ರವರ ಪತ್ನಿ ಎಲ್ಸಿ ಜೈಸರ್‌ರವರನ್ನು ಅಲ್ಲಿನ ವಿದ್ಯಾಮಂತ್ರಿಯಾಗಿ ತೆಗೆದುಕೊಳ್ಳಲಾಗಿದೆ.

ಪ್ರಾರ್ಥನಾ ಸಭೆ

ಗವಿಮಠದ ಶ್ರೀ ಗೌರೀಶಂಕರ ಸ್ವಾಮಿಗಳವರು ಶಿವೈಕ್ಯರಾದ ಸಂಬಂಧವಾಗಿ ಶ್ಯಾನಭೋಗ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂಜೆ ೬.೩೦ ಗಂಟೆಗೆ ಸಾಮೂಹಿಕ ಪ್ರಾರ್ಥನೆಯೂ, ನಂತರ ಪಂಡಿತ ಬಸವರಾಜ್‌ರವರಿಂದ "ಸಿದ್ಧರಾಮನ ಕರ್ಮಯೋಗ" ಎಂಬ ವಿಷಯವಾಗಿ ಉಪನ್ಯಾಸವೂ ನಡೆಯುವುವು.

ಮೈಸೂರಿಗೆ ಮದ್ರಾಸಿನ ೧೦ ಸಾವಿರ ಟನ್ ಗೋಧಿ

ಮಾರಾಟವಾಗದೆ ಉಳಿದ ೪೦ ಸಾವಿರ ಟನ್ ಗೋಧಿಯನ್ನು ಮದ್ರಾಸಿನಿಂದ ಕೇಂದ್ರ ಸರ್ಕಾರದವರು ವಾಪಸು ಪಡೆಯಲು ನಿರ್ಧರಿಸಿರುತ್ತಾರೆ. ಅದರ ಪೈಕಿ ೧೦,೦೦೦ ಟನ್ನಷ್ಟು ಗೋಧಿಯನ್ನು ಮೈಸೂರಿಗೆ ಕೂಡಲೇ ಒದಗಿಸಲಾಗುವುದು.

ಚಿದಂಬರ ಭಜನೆ ಸಪ್ತಾಹ

ರಾಜಧಾನಿಯ ಇರ್ವಿನ್ ರಸ್ತೆಯಲ್ಲಿರುವ ಶ್ರೀ ತಿಮ್ಮಯ್ಯಾಚಾರ್ಯರ ಛತ್ರದಲ್ಲಿ ನೆನ್ನೆಯಿಂದ ೭ ದಿನಗಳವರೆಗೆ ತಪಸ್ವಿಗಳಾದ ಶ್ರೀ ಬಾಪೂ ದೀಕ್ಷಿತರು ಪ್ರಪಂಚದ ಕ್ಷೇಮವನ್ನು ಸಾಧಿಸಲು ಏಕಾಸನದಲ್ಲಿ ಕುಳಿತು ನಿದ್ರಾಹಾರಗಳಿಲ್ಲದೆ ಅಖಂಡ ಭಜನ ಸಪ್ತಾಹಗಳನ್ನು ನಡೆಸುತ್ತಿರುವರು. ಇದರ ಅಂಗವಾಗಿ ಈ ರಾತ್ರಿ ೯ ಗಂಟೆಗೆ ಆತ್ಮವಿಚಾರ ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎಲ್. ನಾಗಣ್ಣನವರು ಅಲ್ಲಿ ಧರ್ಮದ ವಿಷಯವಾಗಿ ಭಾಷಣ ಮಾಡುವರು ಧರ್ಮಾಭಿಮಾನಿಗಳೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರ

ಮೇಲ್ಕಂಡ ಮಂದಿರದ ಏಳನೇ ವಾರ್ಷಿಕೋತ್ಸವವು ತಾ॥ ೩೦-೮-೧೯೫೨ ನೇ ಶನಿವಾರ ಸಂಜೆ ರಾಜಧಾನಿಯ ಸಹಕಾರ ಭವನದಲ್ಲಿ ಮೈಸೂರು ಸರ್ಕಾರದ ವಿದ್ಯಾಮಂತ್ರಿಗಳಾದ ಶ್ರೀಮಾನ್ ಎ. ಜಿ. ರಾಮಚಂದ್ರರಾಯರವರ ಘನ ಅಧ್ಯಕ್ಷತೆಯಲ್ಲಿ ನಡೆಯಲೇರ್ಪಾಡಾಗಿರುತ್ತದೆ. ಇದರ ಅಂಗವಾಗಿ ಮಾಮೂಲಿನಂತೆ ಮಂದಿರದ ಆಶ್ರಯದಲ್ಲಿ "ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆ" ಗಳನ್ನು ತಾ॥ ೨೩-೮-೫೨ ನೇ ಶುಕ್ರವಾರದಿಂದ ನಡೆಸಲಾಗುವುದು

ಸ್ವಾತಂತ್ರ್ಯೋತ್ಸವದ ಧ್ವಜ ವಂದನೆ ಪ್ರಕರಣ

ಮೈಸೂರು ೧೭

ರಾಜಧಾನಿಯ ವಕೀಲರೂ ಸಮಾಜ ಸೇವಾ ಕಾರ್ಯಕರ್ತರೂ ಆದ ಶ್ರೀ ಎಸ್ ವಿ ಮಂಜುನಾಥಯ್ಯನವರ ಈ ರೀತಿ ಬರೆದಿರುತ್ತಾರೆ

ಪೌರಸಭೆಯವರ ಆಶ್ರಯದಲ್ಲಿ ೧೫ ನೇ ತಾ|| ನಡೆದ ಧ್ವಜ ವಂದನ ಸಮಾರಂಭದಲ್ಲಿ ಭಾಗವಹಿಸಿದ ಅನೇಕರಿಗೆ ಸ್ವತಂತ್ರ ದಿನಾಚರಣೆಯಲ್ಲಿ ನಡೆದ ಧ್ವಜವಂದನೆಯಲ್ಲಿ ರೀತಿ ನೀತಿ ವ್ಯವಸ್ಥೆ ಬೇಡವೇ ಎಂದೆನ್ನಿಸದೇ ಇರಲಾರದ ಧ್ವಜ ವಂದನೆಗೆ ಬರುವವರ ಸಂಖ್ಯೆಯು ಹೆಚ್ಚುತ್ತಿದೆ ಈ ಸಂದರ್ಭಗಳಲ್ಲಿ ರಾಷ್ಟ್ರ ಧ್ವಜ ಮತ್ತು ಗೀತೆಗೆ ತೋರಿಸಬೇಕಾದ ಗೌರವವನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಅಗತ್ಯ ಒಟ್ಟಿನಲ್ಲಿ ಮೊನ್ನೆ ಆದ ಧ್ವಜವಂದನಾ ವಿಧಾನ ಸಮರ್ಪಕವಾಗಿರಲಿಲ್ಲ ಗೌರವವನ್ನೂ ತರುವಂತಹ ರೀತಿಯಲ್ಲಿರಲಿಲ್ಲ ಧ್ವಜವನ್ನು ಹಾರಿಸುವಾಗ ಅದು ಸರಿಯಾಗಿ ಹಾರದೆ ಅದನ್ನು ಕೆಳಕ್ಕೆ ಇಳಿ[illegible] ಪುನಃ ಹಾರಿಸುವಂತಹ [illegible] ನಾಚಿಕೆಗೇಡು, ಧ್ವಜಕ್ಕೆ ಒಂದು ಅವಮಾನ ಇದರ ಜವಾಬ್ದಾರಿಯನ್ನು ಹೊತ್ತ ಸ್ಕೌಟು ಮಂಡಲಿಯವರಿಗೆ ಗೌರವ ತರುವಂತಹುದಲ್ಲ ಧ್ವಜವಂದನೆಯ ಸಂದರ್ಭದಲ್ಲಿ [illegible] ಅರ್ಥವಿದೆಯೇ? [illegible] ಸಹಕರಿಸುವುದು [illegible] ಸಕಲ ಪ್ರಜೆಗಳ ಕರ್ತವ್ಯ

ಇನ್ನು ಮುಂದಾದರೂ [illegible] ವರು ಸಮಾರಂಭವನ್ನು ಏರ್ಪಡಿಸುವಾಗ ನ್ಯೂನತೆಗಳನ್ನು [illegible] ಕ್ರಮವರಿತು ಅದನ್ನು ನಡೆಸಬೇಕೆಂದು ಕೋರುತ್ತೇನೆ ಅದಕ್ಕಾಗಿ ಈ ಕೆಳಗೆ ಕೆಲವು ಕ್ರಮಗಳನ್ನು [illegible] ಅಗತ್ಯವೆಂಗಿದೆ

ಧ್ವಜವಂದನೆಗೆ [illegible] ದಿನ [illegible] ಚಿತವಾಗಿ ಸೂಕ್ತ ತಿಳುವಳಿಕೆ ಕೊಟ್ಟು ಅದನ್ನು ಅಚ್ಚು ಹಾಕಿ ಹಂಚಿಸುವುದು ಧ್ವಜಸ್ತಂಭದ ಸುತ್ತಲೂ ಸರ್ಕಾರ್ಯರು ಜನರು ನಿಲಲು ಗೆರೆಗಳನ್ನು ಹಾಕಿ ಸ್ವಯಂ ಸೇವಕರ ಸಹಾಯದಿಂದ ಅವರನ್ನು ನಿಲ್ಲಿಸುವುದು ಧ್ವಜದ ಸಮೀಪದಲ್ಲಿ ಮತ್ತು ಎದುರಿಗಿರುವ ಬಯಲಿನಲ್ಲಿ ಸೆಲ್ಯೂಟ್ ಮತ್ತು ಪೆರೇಡ್ ಮಾಡುವವರು, ಇತ್ಯಾದಿ ದಳಗಳು ಧ್ವಜಾರೋಹಣಕ್ಕೆ ಸಂಬಂಧಪಟ್ಟವರು, ಸಲ್ಯೂಟ್ ಸ್ವೀಕರಿಸುವವರು ಇವರ ಇತರರೆಲ್ಲರೂ ಹೊರಗಾಲಾಗಿ ನಿಲ್ಲಬೇಕು, ಸ್ತ್ರೀಯರಿಗೆ ಪ್ರತ್ಯೇಕ ಸ್ಥಳಗಳನ್ನು ಗೊತ್ತುಪಡಿಸಬೇಕು, ಧ್ವಜಾರೋಹಣ ಕೈಗೊಳ್ಳುವ ಸ್ವಯಂಸೇವಕರು ಪೂರ್ವಭಾವಿಯಾದ ರಿಹರ್ಸಲ್ ಮಾಡಿರಬೇಕು. ಭಾಷಣಗಳನ್ನು ನಿಲ್ಲಿಸುವುದು ಉತ್ತಮ, ಅದು ಸಾಧ್ಯವಿಲ್ಲದಿದ್ದರೆ

ಹೈದ್ರಾಬಾದು ಸಚಿವರಿಂದ ಇಂಗ್ಲಿಷ್ ಭಾಷಣವಿಲ್ಲ

ಹೈದರಾಬಾದಿನ ಹಣಕಾಸಿನ ಮಂತ್ರಿ ಡಾ ಮೇಲ್ಕೋಟೆಯವರ ಸಾರ್ವಜನಿಕ ಸಭೆಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವುದಿಲ್ಲವೆಂದು ನಿರ್ಧರಿಸಿರುವುದಾಗಿಯೂ, ತಾನ್ನು ಮಾತೃಭಾಷೆ ಹಿಂದಿ ಭಾಷೆಯನ್ನೇ ಅವರ ಭಾಷಣಗಳಲ್ಲಿ ಬಳಸುವುದಾಗಿಯೂ ತಿಳಿಸಿರುವರು

ಅ|| ಪ್ರೊಫೆಸರರ ನೇಮಕ

ಸರ್ಕಾರದವರು ಈ ಕೆಳಗೆ ಕಂಡವರನ್ನು ಸೂಪರ್ ನ್ಯೂಮರರಿ ಅಸಿಸ್ಟೆಂಟ್ ಪ್ರೊಫೆಸರುಗಳನ್ನಾಗಿ ನೇಮಿಸಿರುತ್ತಾರೆ ಡಾ|| ಎಸ್ ಬಿ ಕೌಸಿಕ್ (ಬಾಟನಿ) ಹೆಚ್ ಎಲ್ ಹರಿಯಪ್ಪ (ಸಂಸ್ಕೃತ) ಶ್ರೀ ಎಸ್ ಲಿಂಗಪ್ಪ (ಹಿಂದಿ) ಶ್ರೀ ಎಸ್ ಶಿವರಾಮಶಾಸ್ತ್ರಿ (ಸಂಸ್ಕೃತ)

ಇಂಗ್ಲೀಷಿನ ಭವಿಷ್ಯದ ಬಗ್ಗೆ ಅಭಿಪ್ರಾಯದ ಕೋರಿಕೆ

ಮೈಸೂರು ವಿಶ್ವ ವಿದ್ಯಾಲಯದ ಮಾಜಿ ತತ್ವಶಾಸ್ತ್ರ ಪ್ರೊಫೆಸರರಾದ ಶ್ರೀ ಎ ಆರ್ ವಾಡಿಯಾರವರು ಭಾರತದಲ್ಲಿರುವ ಎಲ್ಲಾ ಸ್ವಾಧ್ಯಾಯ ಸಕಲ [illegible] ಮನಸಿಯೊ [illegible] ಕಾಲೇಜುಗಳ [illegible] ಇಂಗ್ಲೀಷ್ [illegible] ಭವಿಷ್ಯದ [illegible] ರುವರು

ಕಾಡುಗಳಲ್ಲಿ ಉಚಿತ ಮೇವು

[illegible] ಸರ್ಕಾರದ ಕಾಡುಗಳಲ್ಲಿ [illegible] ಗಳಲ್ಲಿ ದನಕರುಗಳು ಉಚಿತವಾಗಿ ಹುಲ್ಲನ್ನು ಮೇಯಲು ಸರ್ಕಾರದವರು ಅವಕಾಶ ಕಲ್ಪಿಸಿರುತ್ತಾರೆ

ಸಾರ್ವಜನಿಕ ವಿದ್ಯಾರ್ಥಿ ನಿಲಯ

ಭಾರತದಲ್ಲಿ ಪ್ರವಾಸ ಮಾಡುತ್ತಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿಯೋಗದವರು ಕಳೆದ ಶುಕ್ರವಾರ ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಭೇಟಿ ಕೊಟ್ಟಿದ್ದರು ಪರಸ್ಪರ ಪರಿಚಯ ಮಾಡಿಕೊಟ್ಟನಂತರ ನಿಯೋಗದ ನಾಯಕರು ತಮ್ಮ ಪ್ರವಾಸದ ಉದ್ದೇಶ ಮತ್ತು ಅಮೇರಿಕದ ಜೀವನದ ವಿಷಯವಾಗಿ ಭಾಷಣ ಮಾಡಿದರು ಸಭೆಯಿಂದ ಬಂದ ಪ್ರಶ್ನೆಗಳಿಗೆ ಎಲ್ಲರೂ ಸೂಕ್ತ ಉತ್ತರವನ್ನಿತ್ತರು. ನಿಲಯದ ಪ್ರಾರ್ಥನೆಯಲ್ಲಿ ಭಾಗವಹಿಸಿ ಪ್ರಾರ್ಥನೆಯು ಸ್ಫೂರ್ತಿದಾಯಕವಾಗಿದೆಯೆಂದು ತಿಳಿಸಿದರು

ರಾಷ್ಟ್ರಾಧ್ಯಕ್ಷರ ಸಂದೇಶವನ್ನು ಓದಿ ಹೇಳದರೆ ಸಾಕು ಒಂದೇ ರಾಷ್ಟ್ರಗೀತೆಯನ್ನು ಬಾಯಿಯಿಂದಲೂ, ಬ್ಯಾಂಡಿನವರಿಂದಲೂ ಏಕಕಾಲದಲ್ಲಿ ಹೇಳಿಸಬಾರದು, ಧ್ವಜವಂದನೆಯ ಕಾಲದಲ್ಲಿ ಆ ಪ್ರದೇಶದಲ್ಲಿ ವಾಹನ ಸಂಚಾರವನ್ನು ನಿಲ್ಲಿಸುವುದು ಆಗತ್ಯ

ಸ್ವಾತಂತ್ರ್ಯ ದಿನೋತ್ಸವ

ಕಳೆದ ೧೫ ನೇ ತಾ|| ದಿನ ಸ್ವಾತಂತ್ರ್ಯ ದಿನೋತ್ಸವದ ಸಂಬಂಧವಾಗಿ ನಗರದಲ್ಲಿ ನಾನಾ ಕಡೆ ಸಮಾರಂಭಗಳು ನೆರವೇರಿದುವು ನಗರ ವಯಸ್ಕರ ಶಿಕ್ಷಣ ಸಮಿತಿಯವರು ಸುಣ್ಣದ ಕೇರಿಯಲ್ಲಿರುವ ರಾಜಪರಿವಾರ ಸಂಘದ ಭೂತಪ್ಪನ ಗರಡಿಯಲ್ಲೂ, ಗಂಗಾ ಮತಸ್ಥರ ಕಾಟಣ್ಣನವರ ಗರಡಿಯಲ್ಲೂ ಸಮಾರಂಭಗಳನ್ನು ನಡೆಸಿದರು ಶ್ರೀ ಎ ಭದ್ರಯ್ಯ ಮತ್ತು ಎಸ್ ವಿ ಮಂಜುನಾಥರವರುಗಳು ಆಯಾ ಸಮಾರಂಭಗಳಲ್ಲಿ ಅಧ್ಯಕ್ಷತೆ ವಹಿಸಿದ್ದರು

ಅಶೋಕಾ ರಸ್ತೆಯಲ್ಲಿರುವ ಶ್ರೀಮತ್ಸ್ವಕಾಶ ಸಮ್ಮೇಕ್ಯಗಿ ವೈಶ್ಯ ಅನಾದೀಲ ಯದಲ್ಲಿ ವೈಶ್ಯ ಯುವಜನ ಸಂಘದವರು ನಡೆಸಿದ ಸಮಾರಂಭದಲ್ಲಿ ಪೌರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದರು ಶಾರದಾ ವಿಲಾಸ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎಸ್ ರಾಜಗೋಪಾಲಯ್ಯಂಗಾರ್ಯರು ಭಾಷಣ ಮಾಡಿದರು

ಕನ್ನಡ ಮಾಸ ಪತ್ರಿಕೆ 'ತರಾಲೋಕದ ಕಛೇರಿಯಲ್ಲಿ ಹೇ [illegible] ಮತ್ತು ಪಾರ್ಟಿಯವರಿಂದ ಸ್ವತಂತ್ರ್ಯ ಎಂಬ ನಾಟಕವೂ, ಪತ್ರಿಕಾ ಪ್ರವರ್ತಕ, ಶ್ರೀ ಟಿ ಆರ್ ಸತ್ಯನಾರಾಯಣರ ಭಾಷಣವೂ, ಸಂಪಾದಕ ಶ್ರೀ ರಂಗನಾಥ ಎ ರಘ್ವಾಜರ ಅಧ್ಯಕ್ಷತೆಯಲ್ಲಿ ನಡೆದುವು

ಮೈಸೂರು ಜೈಲಿನಲ್ಲಿ ದಿನ ಚರಣೆ ಸಂಬಂಧವಾಗಿ ಶ್ರೀ ಎಸ್ ಡಿ ಓರಣಯ್ಯನವರ ಅಧ್ಯಕ್ಷತೆಯಲ್ಲಿ ೧೫ನೇ ತಾ|| ಶ್ರೀ ಸಿ ರಾಮಸ್ವಾಮಿ ನಾಯ್ಡರವರಿಂದ ತುಳಸಿ ದಾಸ್ ಎಂಬ ಹರಿಕಥೆಯು ನಡೆಯಿತು ಖೈದಿಗಳೆಲ್ಲರೂ ಬಂದಿದ್ದರು ಪ್ರೇಮಮಯ ಹಂಗಾಯಿಗಳ ಶ್ರೀಯುತ ಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಮೊನ್ನೆ ಸ್ವಾತಂತ್ರ್ಯ ದಿನಾಚರಣೆಯು ಸಂಘದ ಅಧ್ಯಕ್ಷ ಶ್ರೀ ಎಸ್ ಎಸ್ ವೆಂಕಟರಾಯರ ನೇತೃತ್ವದಲ್ಲಿ ನಡೆಯಿತು ಕಾವ್ಯ ವಾಚನ, ಮಕ್ಕಳ ಗೀತೆ, ಇಡೆ ಕುಣಿತಗಳು ಜರುಗಿದುವು ಪ್ರಬಂಧ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾ

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರ್ಲು, ಉಬ್ಬಸ,ಪರಿಣಾಮಕಾರಿ ಮತ್ತು (TONSIL) ಗಳಾಯಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್. ಎಸ್ ಪಂಡಿತರು

ರಾಮಗೋಪಾಲ ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೨೦ ನಲ್ಲಿಕ ರಾಜಲಕ್ಷ್ಮಿ ವೀಣೆ ಮಧ್ಯಾಹ್ನ ೧-೩೦ ಕೊಳಲು ಎಸ್ ರಾಮಚಂದ್ರ ಹಿಂದೂಸ್ಥಾನಿ ಸಂಗೀತ ಸಂಜೆ ೫-೩೦ ರಕ್ಷನ್ನು ಕೃಷ್ಣಮೂರ್ತಿ ಸಂಗೀತ ೬-೧೦ ಗಾನವಿಹಾರ ೭ ಎಸ್ ರಾಮಚಂದ್ರ ಹಿಂದೂಸ್ಥಾನಿ ಸಂಗೀತ ೭-೩೦ ಡಿ ಜವರೇಗೌಡರಿಂದ ಕನ್ನಡದಲ್ಲಿ ಭಾಷಣ ೮ ನಲ್ಲಿಕ ರಾಜಲಕ್ಷ್ಮಿ ವೀಣೆ ೮-೩೦ ವೃಂದ ಸಂಗೀತ ೯-೩೦ ಗಾನಾಮೃತ

ರೋವರ್ಸ್ ಫುಟ್‌ಬಾಲ್ ಟೀಂ

ಫೊಂಟಕೊಪ್ಪಲಿನ ರೋವರ್ಸ್ ಫುಟ್‌ಬಾಲ್ ಟೀಮಿನವರು ಆಗಸ್ಟ್ ೧೫ ರಂದು ತಮ್ಮ ಟೀಮಿನ ಸ್ಥಾಪನಾ ಮಹೋತ್ಸವವನ್ನಾಚರಿಸಿ ಅದರ ಅಂಗವಾಗಿ ಅದೇ ದಿನ ಸಂಜೆ ಒಕ್ಕಲಿಗರ ಅನಾಥಾಲಯದವರ ಮೇಲೂ ಮತ್ತು ಅದರ ಮಾರನೆಯ ದಿನ ಸಂಜೆ ಮಂಡ್ಯದ ಫುಟ್‌ಬಾಲ್ ಟೀಮಿನವರ ಮೇಲೂ ಪಂದ್ಯಗಳನ್ನೇರ್ಪಡಿಸಿ ಎರಡರಲ್ಲಿಯೂ ೩-೦, ೩-೦ ಗೋಲುಗಳಿಂದ ಜಯಶಾಲಿಗಳಾದರು

ಮೈಸೂರು

ಒನ್ನೂರು ಹೋಬಳಿ ಕೊಡಗ ಹಳ್ಳಿ ಗ್ರಾಮದಲ್ಲಿ ಸಮಾರಂಭವು ವೈಭವದಿಂದ ನಡೆಯಿತು ಜಿಲ್ಲಾ ರೈತರ ಸಂಘದ ಉಪಾಧ್ಯಕ್ಷ ಶ್ರೀ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಗಾಂಧೀಜಿಯವರ ಭಾವ ಚಿತ್ರವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಗ್ರಾಮ ಪಂಚಾಯಿತಿಯವರು ಚೇರ್ಮನ್ ಶ್ರೀ ಹೆಚ್ ವಿ ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ದಿನೋತ್ಸವವನ್ನು ನೆರವೇರಿಸಿದರು.

ನಂಜನಗೂಡು ತಾಲ್ಲೂಕು ಸುತ್ತೂರು ಗ್ರಾಮದ ಮಾಧ್ಯಮಿಕ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಮಲ್ಲಿಕಾರ್ಜುನ ದೇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಪ್ರಾರ್ಥನೆ ಮತ್ತು ರಾಷ್ಟ್ರಧ್ವಜವಂದನಾನಂತರ, ಶ್ರೀಗಳಾದ ಸುತ್ತೂರು ಪ್ರಭುಸ್ವಾಮಿಯವರೂ ಡಾ || ಪಟೇಲ್‌ರವರೂ, ಅಧ್ಯಾಪಕರುಗಳಾದ ಶ್ರೀ ಬಿ ಸ್ವಾಮಿ ಮತ್ತು ಶ್ರೀ ಸುಬ್ರಹ್ಮಣ್ಯಂ ಇವರುಗಳು ಭಾಷಣ ಮಾಡಿದರು

ಶ್ರೀ ಜಗದಾಂಬ ಶಿಶುವಿಹಾರ

೧೫೭ ದಿವಾನ್ಸ್ ರಸ್ತೆ ಮೈಸೂರು

ಶಿಶು ಮನಶ್ಯಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳನುಸಾರವಾಗಿ ಉತ್ಕೃಷ್ಟತರವಾದ ಶಿಕ್ಷಣಕ್ಕೆ ಗುಣವಾದ ಬಂಗ್ಲೆಯಲ್ಲಿ ಉತ್ತಮೋತ್ತಮವಾದ ವಿದ್ಯಾಭ್ಯಾಸ ಉಪಕರಣಗಳ ಸಹಾಯದಿಂದ ನೃತ್ಯ ಗೀತ ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಹೇಳಿಕೊಡುವ ಶಿಶುವಿಹಾರದಲ್ಲಿ ಕೆಲವೇ ಸ್ಥಳಗಳಿವೆ ಈ ಸುಸಮಯವನ್ನು ಉಪಯೋಗಿಸಿಕೊಂಡು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ

ಡಿ ಕೃಷ್ಣಮೂರ್ತಿ

ಡೈರೆಕ್ಟರ್

ಗೌರಿ ಹಬ್ಬಕ್ಕಾಗಿ:- ಹೊಸ ಡಿಸೈನಿನ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ನಾಗಪುರ ಸೂಪಾ ಸೀರೆಗಳೂ ಬಂದಿವೆ ★ M. V. ಭೋಜಯ್ಯ ಶ್ರೇಷ್ಠಿ ಬಿ ಎ ಇಂಡಿಯನ್ ಬ್ಯಾಂಕ್ ಎದುರು ಮೈಸೂರು

Edited Printed and Published by A R Nagaraja at Sadhvi Press, D Subbiah Road, Mysore.

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೯-೮-೧೯೫೨ [ಸಂಚಿಕೆ ೧೮

ಪ್ರಭುಗಳ ಆಗಮನ

ಮೈಸೂರು ೧೯

ದಕ್ಷಿಣ ಭಾರತದಲ್ಲಿ ತೀರ್ಥಯಾತ್ರೆಯ ಕ್ಷೇತ್ರಗಳಿಗೆ ಪ್ರವಾಸ ಹೊರಟಿದ್ದ ಶ್ರೀಮನ್ಮಹಾರಾಜರವರು, ಶ್ರೀಮನ್ಮಹಾರಾಣಿಯವರು, ಮುಂತಾದ ಪರಿವಾರ ಸಮೇತರಾಗಿ ಈ ದಿನ ಮಧ್ಯಾಹ್ನ ೧೨-೨೦ ಘಂಟೆಗೆ ರಾಜಧಾನಿಗೆ ಹಿಂತಿರುಗಿದರು.

ಕೇಡಿಗೆ ಪುನಃ ಶಿಕ್ಷೆ

ರಾಜಧಾನಿಯಲ್ಲಿ ಹಲವು ಕಳ್ಳತನಗಳನ್ನು ನಡೆಸಿದನೆಂದ ಹೇಳಲಾದ ಜಾನ್ ಅಲಿಯಾಸ್ ಪುಟ್ಟ ಎಂಬ ಕೇಡಿಯನ್ನು ಕ್ರೈಂ ಬ್ರಾಂಚ್ ಪೋಲೀಸರು ಹಿಡಿದು ನಗರದ ೧ ನೇ ನ್ಯಾಯಾಧೀಶರ ಮುಂದೆ ಹಾಜರು ಮಾಡಲಾಗಿ ಸದರಿಯವನಿಗೆ ೩ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ ಅವನು ಕಳೆದ ಜೂನ್ ೨೭ ರಲ್ಲಿ ಜೈಲಿನಿಂದ ಖುಲಾಸೆಯಾಗಿದ್ದನು ಚೌರಂಗ್‌ಪೇಟೆಯಲ್ಲೂ ಅವನು ಕಳ್ಳತನ ನಡೆಸಿರುವನೆಂದೂ ಗೊತ್ತಾಗಿದೆ

ಸರ್ಕಾರಿ ಮುದ್ರಣಾಲಯದ ಕೆಲಸಗಾರರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಸರ್ಕಾರಿ ಮುದ್ರಣಾಲಯದ ಶಾಖೆಯ ಕೆಲಸಗಾರರ ಸಂಘದ ಏಳನೇ ವಾರ್ಷಿಕೋತ್ಸವವು ಮೊನ್ನೆ ಉಪಾಧ್ಯಾಯರುಗಳ ಶಿಕ್ಷಣ ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಎ ಸಿ ದೇವೇಗೌಡರ ಅಧ್ಯಕ್ಷತೆಯಲ್ಲಿ ಮುದ್ರಣಾಲಯದಲ್ಲಿ ಜರುಗಿತು ವ್ಯವಸ್ಥಾಪಕರಾದ ಶ್ರೀ ಗುರುಬಸಪ್ಪನವರಿಂದ ಸ್ವಾಗತ ಭಾಷಣವಾದಮೇಲೆ ಸಂಘದ ಅಧ್ಯಕ್ಷರಾದ ಶ್ರೀ ಕೆ ಎ ಕೊಗನಾರ್ಥರವರು ವರದಿಯನ್ನೊಪ್ಪಿಸಿ ಸರ್ಕಾರದ ಮುದ್ರಣಾಲಯದ ಇತರ ಕೆಲಸಗಾರರಿಗೆ ಕೊಡುತ್ತಿರುವ ಸಂಬಳ ಸಾರಿಗೆಯನ್ನು ತಮ್ಮ ಸಂಘದ ಸದಸ್ಯರಿಗೂ ಕೊಡುವಂತಾಗಬೇಕೆಂದು ಕೋರಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೇಶದ ವಿದ್ಯಾಭ್ಯಾಸದ ಪ್ರಗತಿಯು ಆಗದಿರುವುದಕ್ಕೆ ಮುದ್ರಣಾಲಯಗಳು ಅಭಿವೃದ್ಧಿ ಹೊಂದಿಲ್ಲದಿರುವುದೇ ಕಾರಣವೆಂದು ಅಭಿಪ್ರಾಯಪಟ್ಟು, ಅವುಗಳು ಹೆಚ್ಚಬೇಕೆಂದೂ, ಅದರಿಂದ ಅನಕ್ಷರತೆಯು ತೊಲಗುವುದೆಂದೂ ಹೇಳಿದರು ವಿದ್ಯಾರ್ಥಿಗಳಿಗೆ ಸಾಕಾದಷ್ಟು ಪಠ್ಯ ಪುಸ್ತಕಗಳು ಸಿಗದೆ ಕಷ್ಟವಾಗಿರುವುದೆಂದೂ, ಈ ಕೊರತೆಯನ್ನು ಮುದ್ರಣಾಲಯಗಳು ನಿವಾರಿಸಬೇಕೆಂದೂ ಅವರು ತಿಳಿಸಿದರು ಸಂಘದ ಕಾರ್ಯದರ್ಶಿ ಶ್ರೀ ಗೋಪಾಲರಾಜುರವರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಚಿತ್ರದುರ್ಗದ ಹಳ್ಳಿಯಲ್ಲಿ ನೀರಿನ ಪಡಿತರ !

ಚಿತ್ರದುರ್ಗ ಜಿಲ್ಲೆಯ ಚಿಕ್ಕಪ್ಪನಹಳ್ಳಿಯ ಒಟ್ಟು ೮೦೦ ಜನರು ನೀರಿನ ಪಡಿತರ ಕ್ರಮಕ್ಕೆ ಒಳಗಾಗಬೇಕಾಗಿದೆ ಅಷ್ಟು ಜನರಿಗೂ ೪೪ ಅಡಿ ಆಳವಿರುವ ಒಂದೇ ಬಾವಿಯಲ್ಲಿ ದಿನಕ್ಕೆ ೧೦೦ ಡಬ್ಬಗಳು ನೀರು ಮಾತ್ರವೇ ದೊರೆಯುತ್ತದೆ ನೀರನ್ನು ಪೂರ್ತಿಯಾಗಿ ಸೇದಿದ ನಂತರ ಗ್ರಾಮದ ಮುಖ್ಯಸ್ಥರು ಮನೆಯೊಂದಕ್ಕೆ ೩ ಕೊಡಗಳಂತೆ ಹಂಚುವರು

ಅರಮನೆಗೆ ಕೊಳ್ಳುವ ವಸ್ತುಗಳಿಗೂ ಸುಂಕ

ನಜರ್‌ಬಾದ್ ಮೊಹಲ್ಲಾ ದಿನಾಚರಣೆ

ಮೈಸೂರು ೧೯

ರಾಜಧಾನಿಯ ಪೌರಸಭೆಯವರು ಏರ್ಪಡಿಸಿದ್ದ ನಜರ್‌ಬಾದ್ ಮೊಹಲ್ಲಾ ದಿನಾಚರಣೆಯ ಸಂಬಂಧವಲ್ಲಿ ನೆನ್ನೆ ಸಂಜೆ ಲಕ್ಷ್ಮೀಪುರಂ ಪ್ರಾಥಮಿಕ ಶಾಲೆಯಲ್ಲಿ ಬಹಿರಂಗ ಸಭೆಯೊಂದು ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಶ್ರೀಮಾನ್ ಟಿ ವೆಂಕಟರಮಣಯ್ಯ ಎಸ್ ಲಿಂಗಣ್ಣ ಎ ರಾಮಣ್ಣ ಮತ್ತು ಎಲ್ ರಾಜಯ್ಯನವರು ಭಾಷಣ ಮಾಡಿ ಪೌರರ ಕರ್ತವ್ಯಗಳನ್ನು ವಿವರಿಸಿದರು ಕ್ರೀಡಾಸ್ಪರ್ಧೆಯಲ್ಲಿ ಮಕ್ಕಳಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದ ನಂತರ ವಯಸ್ಕರ ಶಿಕ್ಷಣ ಸಮಿತಿಯವರು ಶೈಕ್ಷಣಿಕ ಚಲನಚಿತ್ರ ಪ್ರದರ್ಶನವನ್ನು ನಡೆಸಿದರು

ಮೊಹಲ್ಲಾ ದಿನಾಚರಣೆಯ ಅಂಗವಾಗಿ ಬೆಳಿಗ್ಗೆ ನಿರ್ಮಲೀಕರಣ ಕಾರ್ಯ ನಡೆಯಿತು ೪೫ ಮಕ್ಕಳಿಗೆ ಟೀಕಾ ಹಾಕಲಾಯಿತಲ್ಲದೆ ರೆಡ್ ಕ್ರಾಸ್ ಸಂಸ್ಥೆಯವರು ೧೦೦ ಮಕ್ಕಳ ಆರೋಗ್ಯ ಪರೀಕ್ಷೆ ನಡೆಸಿದರು ಸುಮಾರು ೪೫೦ ಬಿಲಗಳು ಮತ್ತು ೧೩೫ ಮನೆಗಳಿಗೆ ಕ್ರಿಮಿನಾಶಕವನ್ನು ಮಾಡಲಾಯಿತು ಮೊಹಲ್ಲಾ ನಿವಾಸಿಗಳು ಉತ್ಸಾಹದಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು

ಮೈಸೂರು ಬ್ಯಾಂಕ್ ಮ್ಯಾನೇಜರ್

ರಾಜಧಾನಿಯಲ್ಲಿರುವ ಮೈಸೂರು ಬ್ಯಾಂಕು ಶಾಖೆಯ ಮ್ಯಾನೇಜರಾಗಿ ಶ್ರೀ ಎಸ್ ಪಿ ವೀರಭದ್ರಶೆಟ್ಟರನ್ನು ಶ್ರೀ ಎಲ್ ಎಸ್ ವಿ ರಾಮಯ್ಯರ್‌ರವರ ಸ್ಥಾನದಲ್ಲಿ ನೇಮಿಸಲಾಗಿದೆ. ಅವರು ಬರುವ ವಾರ ಅಧಿಕಾರವನ್ನು ಸ್ವೀಕರಿಸುವರು.

ಭಾರತದ ಶ್ರೇಷ್ಠ ಸೇನಾನಿಯಾಗಿ ರಾಜೇಂದ್ರ ಸಿಂಹಜಿ

ಭಾರತದ ಹೊಸ ಶ್ರೇಷ್ಠ ಸೇನಾನಿಯಾಗಿ ಲೆ|| ಜ|| ಮಹಾರಾಜಾ ರಾಜೇಂದ್ರ ಸಿಂಹಜಿಯವರನ್ನು ಭಾರತ ಸರ್ಕಾರದವರು ನೇಮಿಸಿರುತ್ತಾರೆ ಅವರು ನಿವೃತ್ತರಾಗಲಿರುವ ಜ|| ಕಾರಿಯಪ್ಪನವರಿಂದ ಬರುವ ಜನವರಿ ೧೫ ರಂದು ಅಧಿಕಾರವನ್ನು ಸ್ವೀಕರಿಸುವರು ಅವರಿಗೆ ಇನ್ನೂ ೫೩ ವರ್ಷ ವಯಸ್ಸು ಆರರು ಯುದ್ಧ ಕಾಲದಲ್ಲಿ ಉತ್ತರ ಆಫ್ರಿಕಾಕ್ಕೆ ತೆರಳಿದ್ದರು ಅವರನ್ನು ದಕ್ಷಿಣದ ಅಧಿಪತಿಯಾಗಿ ನೇಮಿಸಿದ ಮೇಲೆ ಹೈದ್ರಾಬಾದಿನಲ್ಲಿ ಪೋಲೀಸು ಕಾರ್ಯಾಚರಣೆಯು ನಡೆಯಿತು

ಅರಮನೆಗೆ ಕೊಳ್ಳುವ ವಸ್ತುಗಳಿಗೂ ಕೇಂದ್ರದ ಸುಂಕ

ಬೆಂಗಳೂರು ೧೯

ಮೈಸೂರಿನ ಅರಮನೆಗಾಗಿ ವಿದೇಶಗಳಿಂದ ತರಿಸಲಾಗುತ್ತಿದ್ದ ಮೋಟಾರು ವಾಹನಗಳು ಮುಂತಾದ ವಸ್ತುಗಳಿಗೆ ಇದುವರೆಗೆ ಕೇಂದ್ರ ಸರ್ಕಾರದ ಸುಂಕದ ವಿನಾಯಿತಿಯು ಇದ್ದು, ಈಗ ಅದು ತೆಗೆಯಲ್ಪಟ್ಟಿರುವುದೆಂದೂ, ಇನ್ನು ಮುಂದೆ ಅವುಗಳಿಗೆ ಬೊಂಬಾಯಿಯಲ್ಲೇ ಸುಂಕವನ್ನು ಕೊಡಬೇಕಾಗುವುದೆಂದೂ ಗೊತ್ತಾಗಿದೆ

ಮುಖ್ಯ ಮಂತ್ರಿಗಳಿಗೆ ದೆಹಲಿಯಲ್ಲಿ ೮ ದಿನಗಳ ಕಾರ್ಯಕ್ರಮ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಆಪ್ತ ಕಾರ್ಯದರ್ಶಿ, ಶ್ರೀ ಜಿ ವಿ ಕೆ ರಾವ್ ಮತ್ತು ಶ್ರೇಷ್ಠ ಕಾರ್ಯದರ್ಶಿ, ಶ್ರೀ ಎನ್ ಪುಟ್ಟರಂಗಸ್ವಾಮಿಯವರೊಡನೆ ಇದೇ ೨೧ ನೇ ತಾ|| ದೆಹಲಿಗೆ ತೆರಳಿ ಅಲ್ಲಿ ೨೮ರ ವರೆಗೆ ಇರುವರು ಕೇಂದ್ರದಿಂದ ಹೆಚ್ಚು ಧನವನ್ನು ಸಂಸ್ಥಾನದ ಅಭಾವ ಪ್ರದೇಶಗಳಿಗೆ ಪಡೆಯುವುದೇ ಅವರ ಭೇಟಿಯ ಉದ್ದೇಶ ಹೆಚ್ಚು ಆಹಾರ ಬೆಳೆಯಲು ೩೭ ಲಕ್ಷ ರೂ ಸಾಲ ಮತ್ತು ೬೭ ಲಕ್ಷ ರೂ ಗ್ರಾಂಟನ್ನು ಕೇಂದ್ರದವರು ಒದಗಿಸುವಂತೆ ಸಂಸ್ಥಾನ ಸರ್ಕಾರದವರು ಕೋರಿರುವರೆಂದು ಹೇಳಲಾಗಿದೆ

ವಸ್ತು ಪ್ರದರ್ಶನದ ಜಂಟಿ ಕಾರ್ಯದರ್ಶಿಯವರು

ದಸರಾ ವಸ್ತು ಪ್ರದರ್ಶನ ಸಮಿತಿಯ ಜಂಟಿ ಕಾರ್ಯದರ್ಶಿಗಳಾಗಿ ರಾಜಧಾನಿಯ ಶ್ರೀ ಎ ಗೋಪಾಲಕೃಷ್ಣಶೆಟ್ಟರು ಮತ್ತು ಬೆಂಗಳೂರಿನ ಶ್ರೀ ವಿ ಎಸ್ ಕೃಷ್ಣಯ್ಯರ್‌ರವರನ್ನು ನೇಮಿಸಲಾಗಿದೆ

ಹ್ಯಾಮಿಲ್ಟನ್ನರ ನಿಧನ

ಮೈಸೂರು ಮತ್ತು ಮದ್ರಾಸುಗಳಲ್ಲಿ ಪೋಲೀಸು ಇನ್ಸ್‌ಪೆಕ್ಟರ್ ಜನರಲ್ಲರಾಗಿ ನಿವೃತ್ತಿಯಾಗಿದ್ದ ಎಫ್ ಎ ಹ್ಯಾಮಿಲ್ಟನ್ನರು ಲಂಡನ್ನಿನಲ್ಲಿ ಕಳೆದ ೧೨ ನೇ ತಾ|| ನಿಧನರಾದರು ಅವರಿಗೆ ೭೭ ವರ್ಷ ವಯಸ್ಸಾಗಿದ್ದಿತು ೧೯೩೫ ರಲ್ಲಿ ಅವರು ಮೈಸೂರು ಸರ್ವಿಸ್ಸಿನಿಂದ ನಿವೃತ್ತರಾಗಿದ್ದರು

ಪುನಃ ಸ್ಪರ್ಶ ಸಿಲ್ಕ್ ಮಿಲ್ಲಿನ ಪ್ರಾರಂಭ

ಸ್ವಂ ಸು ಪ್ರೋ] ಬೆಂಗಳೂರು ೧೯

ಚನ್ನಪಟ್ಟಣದ ಸ್ಪರ್ಶ ಸಿಲ್ಕ್ ಮಿಲ್ಸಿನ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಪಂಸುದ್ದೀನ್ ಖಾನರವರ ನೇತೃತ್ವದಲ್ಲಿ ಹಲವರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಬಳಿ ಈ ದಿನ ನಿಯೋಗ ಹೋಗಿದ್ದರು ಮುಚ್ಚಲಾಗಿದ್ದ ಆ ಮಿಲ್ಲನ್ನು ಪುನಃ ತೆರೆಯುವಂತೆ ಮುಖ್ಯಮಂತ್ರಿಗಳು ಅವರಿಗೆ ತಿಳಿಸಿ, ಸರ್ಕಾರದಿಂದ ೫ ಲಕ್ಷ ರೂ ಗಳನ್ನು ಸಾಲವಾಗಿ ಕೊಡುವುದಾಗಿ ಭರವಸೆಯಿತ್ತರೆಂದು ಗೊತ್ತಾಗಿದೆ.

ರಾಜಧಾನಿಗೆ ತಿರುವಾಂಕೂರು ಮಹಾರಾಜರು

ತಿರುವಾಂಕೂರಿನ ರಾಜಪ್ರಮುಖರು ನೆನ್ನೆ ಬೆಂಗಳೂರಿಗೆ ಆಗಮಿಸಿದರು ಅವರು ನಾಳಿದ್ದು ರಾಜಧಾನಿಗೆ ಆಗಮಿಸಿ, ಇಲ್ಲಿ ೩ ದಿನಗಳ ವರೆಗೆ ಶ್ರೀಮನ್ಮಹಾರಾಜರವರ ಅತಿಥಿಗಳಾಗಿರುವರು

ವೈ. ವಿ. ಗುಂಡೂರಾಯರ ಚುನಾವಣೆ ರದ್ದು

ಕೃಷ್ಣರಾಜನಗರದ ಪೌರಸಭಾ ಸದಸ್ಯರಾದ ಶ್ರೀ ವೈ ವಿ ಗುಂಡೂರಾಯರ ಚುನಾವಣೆ ಬಗ್ಗೆ ಚುನಾವಣೆಯಲ್ಲಿ ಅವರ ಪ್ರತಿಸ್ಪರ್ಧಿಗಳಾಗಿದ್ದ ಶ್ರೀ ಬಿ ಪುಟ್ಟಪ್ಪನವರು ಹೂಡಿದ ಮೊಕದ್ದಮೆಯಲ್ಲಿ ರಾಜಧಾನಿಯ ಸಬಾರ್ಡಿನೇಟ್ ನ್ಯಾಯಾಧೀಶರು ತೀರ್ಪಿತ್ತು, ಚುನಾವಣೆಯನ್ನು ರದ್ದುಗೊಳಿಸಿರುತ್ತಾರೆ

ಎಂ ವಿ ಕೃಷ್ಣಪ್ಪನವರಿಗೆ ಮುಖ್ಯ ಮಂತ್ರಿಗಳ ಸತ್ಕಾರ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕೇಂದ್ರ ಉಪ ಆಹಾರ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರ ಗೌರವಾರ್ಥವಾಗಿ ನೆನ್ನೆ ಬೆಂಗಳೂರಿನಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ತಿರುವಾಂಕೂರಿನ ಮಹಾರಾಜರೂ, ಮೈಸೂರಿನ ಸಚಿವರುಗಳೂ, ಶ್ರೀ ವಿ ಪಿ ಮೆನನ್ ಮುಂತಾದವರೂ ಆಗಮಿಸಿದ್ದರು ತಿರುವಾಂಕೂರು ಅರಸರು ಎಲ್ಲ ಅತಿಥಿಗಳೊಡನೆ ತುಂಬಾ ಸ್ನೇಹಪರವಾಗಿ ಮಾತನಾಡಿ ತಮ್ಮ ಸರಳತೆಯನ್ನು ತೋರ್ಪಡಿಸಿದರು

ಅಂಚೆ ಮತ್ತು ತಂತಿ ನೌಕರರ ಸಮ್ಮೇಳನ

ಕೇಂದ್ರ ಸರ್ಕಾರದ ಮಾರ್ಗಾನುಕೂಲ ಮಂತ್ರಿ ಶ್ರೀ ಜಗಜೀವನರಾಂರವರು ಬರುವ ಶುಕ್ರವಾರ ಸಂಜೆ ೬ ಘಂಟೆಗೆ ರಾಜಧಾನಿಯ ಟೌನ್‌ಹಾಲ್‌ನಲ್ಲಿ ನಡೆಯುವ ಅಂಚೆ ಮತ್ತು ತಂತಿ ಕೆಲಸಗಾರರ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು

ಪೋಲೀಸ್ ಕಾನ್‌ಸ್ಟೇಬಲ್ಲನ ನಿಧನ

ರಾಜಧಾನಿಯ ಕ್ರೈಂ ಬ್ರಾಂಚ್ ಸ್ಟೇಷನ್ನಿನ ಪೋಲೀಸ್ ಕಾನ್‌ಸ್ಟೇಬಲ್ ಶ್ರೀ ಲಿಂಗಣ್ಣ ಎಂಬಾತನು ನೆನ್ನೆ ತನ್ನ ಕೆಲಸದ ಮೇಲೆ ಸ್ಟೇಷನ್ನಿಗೆ ಹೋದಾಗ ಅಲ್ಲಿ ಹೃದಯ ಕ್ರಿಯೆ ನಿಂತು ಮೃತನಾದನೆಂದು ತಿಳಿಸಲು ವಿಷಾದಿಸುತ್ತೇವೆ ಪೋಲೀಸು ಮರ್ಯಾದೆಯೊಡನೆ ಶವಸಂಸ್ಕಾರವು ನಡೆಯಿತು

ಕೃತಕ ಮಳೆ

ಮೈಸೂರು ತ್ಯಾಗರಾಜಾ ರಸ್ತೆಯಲ್ಲಿರುವ ನಿಯೋ ಫಾರ್ಮಸಿಯ ಡಾ|| ಬ್ರಹ್ಮಣ್ಯ ಶಾಸ್ತ್ರಿಗಳವರ ಒರುವ ಪಕ್ಷ ಘಾಂತದಲ್ಲಿ ಕೃತಕ ಮಳೆ ಒರಿಸುವ ಬಗ್ಗೆ ನಡೆಸುತ್ತಿರುವ ಪ್ರಯೋಗವನ್ನು ಕುರಿತು ಕೆಳಗೆ ಕಂಡಂತೆ ಪತ್ರಿಕೆ ಒರೆದಿರುತ್ತಾರೆ —

ಮಳೆಯ ಅಭಾವದಿಂದ ಫಸಲಿಗೆ ನಷ್ಟ ಉಂಟಾಗುತ್ತಿರುವುದನ್ನು ನಿವಾರಿಸಲು, ಅಪಾರ ವೆಚ್ಚವಾದರೂ, ಕೃತಕ ರೀತಿಯಲ್ಲಿ ಮಳೆ ಸುರಿಸುವ ಬಗ್ಗೆ ಆಧುನಿಕ ವಿಜ್ಞಾನಿಗಳು ವಿಮಾನಗಳಲ್ಲಿ ಆಕಾಶಕ್ಕೆ ಹಾರಿ ಮೋಡಗಳ ಮೇಲೆ ಪ್ರಯೋಗ ನಡೆಸುವ ಯೋಜನೆಯನ್ನು ಎಲ್ಲರೂ ಸ್ವಾಗತಿಸಬಹುದು ಆದರೆ ಪಾಶ್ಚಾತ್ಯ ರೀತಿಯ ಮೇಲ್ಕಂಡ ಕ್ರಮಗಳ ಅನುಕರಣೆಗಳನ್ನು ಬಿಟ್ಟು ನಮ್ಮ ಶಾಸ್ತ್ರಗಳಲ್ಲಿ ಉಲ್ಲೇಖಿಸಿರುವ ಪಂಚಭೂತಗಳ ತತ್ವಗಳ (Atoms) ಸಂಯೋಗ ವಿಯೋಗಗಳ ಕ್ರಮಗಳನ್ನರಿತು ಮಳೆ ಗರೆಸಲು ಸುಲಭವಾದ ಮತ್ತು ಖರ್ಚಿಲ್ಲದ ಪ್ರಯೋಗಗಳನ್ನು ನಡೆಸಬಹುದು

ಪೃಥ್ವಿ, ಅಪ್, ತೇಜೋ, ವಾಯು, ಆಕಾಶಗಳೆಂಬ ಪಂಚಭೂತಗಳ ಪೈಕಿ ಆಕಾಶ ತತ್ವವು (Ether Atom) ನಿರಾಕಾರವಾಗಿದ್ದು ಶಬ್ದೈಕ ಗುಣಾದಿಯೂ ಕೂಡಿ, ಇತರ ನಾಲ್ಕು ತತ್ವಗಳಿಗಿಂತಲೂ ಅತಿ ಸೂಕ್ಷ್ಮವಾಗಿಯೂ ಮತ್ತು ಅವುಗಳನ್ನು ಸೃಷ್ಟಿಸತಕ್ಕ ಮೂಲತತ್ವವಾಗಿಯೂ ಇದೆ ಅದ [illegible] ನಿರ್ದಿಷ್ಟ ಕ್ರಮದಲ್ಲಿ [illegible] ಜಪದಿಂದ, ಆಕಾಶ ತತ್ವದ [illegible] ತರಂಗಗಳಿಂದಲೆ [illegible] ಆಕಾಲದಲ್ಲಿ ಮೋಡಗಳಿದ್ದರೆ ಅವುಗಳು [illegible] ಪುಷ್ಟಿಯನ್ನು ಹೊಂದಿ ಬೇಗನೆ ಮಳೆಯಾಗ ಬಹುದೆಂದೂ, ಮೋಡಗಳಿಲ್ಲದಿದ್ದಲ್ಲಿ ಅಪ್ ತತ್ವಗಳು ಜನಿಸಿ, ಮೋಡಗಳಾಗಿ ಅವು ಪುಷ್ಟಿ ಹೊಂದಿ ಮಳೆ ಬರುವುದೆಂದೂ ನಮ್ಮ ಪೂರ್ವಿಕರು ಸ್ಪಷ್ಟಪಡಿಸಿರುತ್ತಾರೆ ಇದನ್ನು ಆ ಕಾಲದಲ್ಲಿ ಮಾಡಬೇಕೆಂದೂ, ಕಾಲಾತೀತವಾದಲ್ಲಿ ಹೆಚ್ಚು ಶ್ರಮದಿಂದ ಕಡಿಮೆ ಫಲವು ಲಭಿಸುವುದೆಂದೂ ಉಕ್ತವಾಗಿದ

ಪಂಚಭೂತಗಳ ಮೂಲ ಅಣುಗಳ ರೂಪಾಂತರಗಳನ್ನು ಇನ್ನೂ ಅರಿಯದ ಪಾಶ್ಚಾತ್ಯರ, ಮೇಲ್ಕಂಡ ಕೃತಕ ಮಳೆ ಪ್ರಯೋಗದ ಮೂಲಕ ಮೋಡವನ್ನು ಸುಮ್ಮನೆ ಉರುಳಿಸಿದರೆ ಮಳೆ ಬರಬಹುದು ಆದು ಮಳೆಯ ಗರ್ಭಪಾತವೆಂದೆನಿಸಿಕೊಳ್ಳುತ್ತದೆ ಇದರಿಂದ ಮುಂದೆ ಸಕಾಲದಲ್ಲಿ ಮಳೆ ಬಾರದೆ ತುಂಬಾ ನಷ್ಟವಾಗುತ್ತದ ನಮ್ಮ ಜ್ಞಾನಿಗಳಾಗಿ ಪಾಶ್ಚಾತ್ಯರ ಕಡೆ ಎದುರು ನೋಡುವ, ಈ ಕ್ರಮಗಳನ್ನು ಸಿದ್ಧಮಸ್ಥ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ ಎಂಬ ಶ್ಲೋಕದ ವಿಧಿಯಲ್ಲ

ಯುವಜನ ಚಾರಣ ಸಂಸ್ಥೆ

ಅಖಿಲ ಭಾರತ ಯುವಜನ ಚಾರಣ ಸಂಸ್ಥೆಯ ಮೈಸೂರು ಶಾಖೆ [illegible] ಸಂಸ್ಥೆಯ ಕಾರ್ಯಕಲಾಪಗಳ [illegible] ಒಂದು ವರದಿಯನ್ನು ಪ್ರಕಟಿಸಿದ್ದಾರೆ ವಿದ್ಯಾರ್ಥಿಗಳು ವಿಶಾಲ ಪ್ರಪಂಚವನ್ನು ಮತ್ತು ಪ್ರಕೃತಿ ಸೌಂದರ್ಯವನ್ನೂ ವಿಶ್ವ ಪರ್ಯಟನದ ಮೂಲಕ ಅರಿಯಲು ಸಹಾಯ ಮಾಡುವುದೇ ಈ ಸಂಸ್ಥೆಯ ಉದ್ದೇಶವೆಂದು ಆ ವರದಿಯಲ್ಲಿ ತಿಳಿಸಲಾಗಿದೆ ಸಂಸ್ಥೆಯು ಮಾಡಿರುವ ಕೆಲಸ ಕಾರ್ಯಗಳನ್ನೂ ಪ್ರಪಂಚದಲ್ಲಿ ಅದು ಪಡೆದಿರುವ ಸ್ಥಾನವನ್ನೂ ಸೂಕ್ತವಾಗಿ ವಿವರಿಸಲಾಗಿದೆ ಸಧ್ಯದಲ್ಲಿಯೇ ಸದಸ್ಯರನ್ನು ಕೂಡಿಸುವ ಚಳುವಳಿಯೊಂದನ್ನು ಆರಂಭಿಸಲಿದ್ದು ಇದಾಗಿಯೂ ಸಾರ್ವಜನಿಕರು ಸಹಕರಿಸಬೇಕಾಗಿಯೂ ಸಂಚಾಲಕರು ಕೋರಿದ್ದಾರೆ

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ದೊರೆಯುತ್ತವೆ
ರಘುನಾಥ್ ಅಂಡ್ ಕೋ
ಔಷಧಿ ವ್ಯಾಪಾರಿಗಳು,
207 [illegible] ರೋಡ್

ನದಿಯಿಂದ ಊರು ಮುಚ್ಚಿತು

ಇಂಗ್ಲೆಂಡಿನ ಲಿನ್ ನದಿಯಲ್ಲಿ ಪ್ರವಾಹವು ಒಂದು ಉತ್ತರ ಡಿವಾನ್ ಎಂಬ ಊರಿನ ಒಂದು ಭಾಗವು ಮುಳುಗಿ, ಕಡೆಯ ಪಕ್ಷ ೨೬ ಜನರು ಮೃತಪಟ್ಟು ೧೦ ಲಕ್ಷ ಪೌಂಡು ನಷ್ಟ ಆಸ್ತಿ ನಷ್ಟವಾಗಿದೆಯೆಂದು ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ನಾಗಸ್ವರ ಎಸ್ ಕೆ ಚೆಲುವಯ್ಯ, ಮಧ್ಯಾಹ್ನ [illegible] ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ಸಂಜೆ ೫-೩೦ ನಾಗಸ್ವರ ಎಸ್ ಕೆ ಚೆಲುವಯ್ಯ, ೬-೧೫ ಬಾಲಜಗತ್ ಮಕ್ಕಳ ಕಾರ್ಯಕ್ರಮ [illegible] ಹಿಂದೀ ಗೀತಗಳು ಸರೋಜಾ ದೇವಿ [illegible] ಸಂಗೀತ, ಎ [illegible] ಸಿಟೀಲು [illegible] ಎಸ್ ಸುಬ್ರಹ್ಮಣ್ಯಂ, ಮೃದಂಗ ವಿ ವಿ ರಂಗನಾಥನ್ ಘಟಂ ಎಸ್ ಎಲ್ ಸೀತಾರಾಮ ಶಾಸ್ತ್ರಿ ಮಿಂಚಿನ ಎಸ್ ಲೇಖ [illegible] ೯-೪೦ ಸಿನಿಮಾ ಹುಟ್ಟಿನ ಗೀತೆಗಳು

ಮೈಸೂರು ಪೇಟೆ ಧಾರಣೆ

ಪಲ್ಲಗಳಿಗೆ	ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	
ಹೊಂಗೇಬೀಜ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
ಮೆಣಸಿನಕಾಯಿ ಮೂಟೆಗೆ	[illegible]	
ಹುಣಿಸೇಹಣ್ಣು	[illegible]	
ಸೀಗೇಕಾಯಿ	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

● ರಾಜಕೋಟೆ ಬಳಿ ಧಾಡಿ ಎಂಬ ಹಳ್ಳಿಯ ೩ ಮಂದಿ ಪೋಲೀಸರು ರಾಣಿಯ ಶಸ್ತ್ರಾಗಾರಕ್ಕೆ ನುಗ್ಗಿ ರೈಫಲ್ಲುಗಳು ಮತ್ತು ತೋಟಾಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾರೆಂದು ವರದಿಯಾಗಿದೆ

ಒಲಿಂಪಿಯಾ
ಅನೋಘ ಪ್ರಾರಂಭ 21—8—52 ರಿಂದ
ಪ್ರತಿದಿನ ಮೂರು ಆಟಗಳು
ದೀಪಕ್ ಪಿಕ್ಚರ್ಸ್‌ರವರ
ಸಿಂದ್‌ಬಾದ್ ದಿ ಸೈಲರ್
[illegible] ಅತ್ಯುತ್ತಮ ಚಿತ್ರಪಟ
[illegible]

ಪರಿಶುದ್ಧವಾದ ಮತ್ತು ಉತ್ತಮವಾದ ಕಾಫಿ
ಬೇಕಾದಲ್ಲಿ
ಶ್ರೀ ಚಾಮುಂಡೇಶ್ವರಿ ಭವನ
(ಭೋಜನ ಮತ್ತು ವಸತಿ ಗೃಹ, ಮತ್ತು ಫಲಾಹಾರ ಮಂದಿರ, ಇರ್ವಿನ್ ರಸ್ತೆ, ಮೈಸೂರು)
ಇಲ್ಲಿಗೆ ಭೇಟಿ ಕೊಡಲು ಮರೆಯದಿರಿ
ನಮ್ಮ ಪರಿಶುದ್ಧವಾದ ಮತ್ತು ಶ್ರೇಷ್ಠತಮ ರುಚಿಯುಳ್ಳ
ಪ್ಲಾಂಟೇಷನ್ 'ಎ' ಕಾಫಿಯನ್ನು
ಸೇವಿಸಿ :: ಮತ್ತು :: ಆನಂದಪಡಿರಿ
★ ಅಪ್ಪಟ ತುಪ್ಪದಿಂದ ತಯಾರಾದ
★ ಸಿಹಿ ತಿಂಡಿಗಳು ಮತ್ತು
★ ರುಚಿಯಾದ ಮತ್ತು ತೃಪ್ತಿಕರವಾದ
ಊಟಗಳನ್ನು ಸವಿದು ನೋಡಿ

ಗೌರಿ ಹಬ್ಬಕ್ಕಾಗಿ:- ಹೊಸ ಡಿಸೈನಿನ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳು, ಧರ್ಮಾವರಂ, ನಾಗಪುರ ಪೂನಾ ಸೀರೆಗಳು ಬಂದಿವೆ ★ M. V. ಭೋಜಯ್ಯ ಇಂಡಿಯನ್ ಬ್ಯಾಂಕ್ ಎದುರು ಮೈಸೂರು

Edited Printed and Published by A. R. Nagarajan at Sadhvi Press, D Subbiah Road, Mysore

ಬಲಿಷ್ಠ ನಂ 792 || ವಂದೇ ಮಾತರಂ || ಕಾಂಗ್ರೆಸ್ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೦-೮-೧೯೫೨ [ಸಂಚಿಕೆ ೨೦

ಸಂಸ್ಥಾನದಲ್ಲಿ ಗೋಧಿ - ಬೆಲೆ ಹೆಚ್ಚಿತು -

ಬಂಡೀಪುರಕ್ಕೆ ತಿರುವಾಂಕೂರು ಮಹಾರಾಜರ ಭೇಟಿ

ಮೈಸೂರು ೧೯

ಶ್ರೀಮನ್ ಮಹಾರಾಜರು ಬಂಡೀಪುರಕ್ಕೆ ತೆರಳಿ ಅಲ್ಲಿ ಹಲವು ದಿನಗಳವರೆಗೆ ಇರುವರೆಂದು ಗೊತ್ತಾಗಿದೆ. ತಿರುವಾಂಕೂರಿನ ಮಹಾರಾಜರು ಇಲ್ಲಿಗೆ ಬಂದ ನಂತರ ಬಂಡೀಪುರಕ್ಕೆ ಭೇಟಿಯಿತ್ತು, ಅಲ್ಲಿ ಏರ್ಪಡಿಸಲಾಗಿರುವ ಶಿಕಾರಿಯಲ್ಲಿ ಭಾಗವಹಿಸುವರು

ವಿದ್ಯಾ ಶಾಲಾ ಪಂಡಿತ ಮಂಡಳಿಯ ವಾರ್ಷಿಕಾಧಿವೇಶನ

ರಾಜಧಾನಿಯ ಶ್ರೀ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾ ಶಾಲಾ ಪಂಡಿತ ಮಂಡಲದ ಮೈಸೂರು ಶಾಖೆಯ ವಾರ್ಷಿಕಾಧಿವೇಶನವು ನಾಳೆ ಸಂಜೆ ೫ ಗಂಟೆಗೆ ನಡೆಯುವುದು. ಸಂಘದ ಅಧ್ಯಕ್ಷರಾದ ಶ್ರೀ [illegible] ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸುವರು. ಸದಸ್ಯರುಗಳು ದಯಮಾಡಿಸಬೇಕೆಂದು ಕೋರಲಾಗಿದೆ

ಹರಿಕಥೆ

ರಾಜಧಾನಿಯ ಕಾಳಮ್ಮನ ಗುಡಿಬೀದಿಯ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ಸಂಜೆ ೬ ರಿಂದ ೭ ಗಂಟೆ ವರೆಗೆ [illegible] ಎಂ ವಿ ಲಕ್ಷ್ಮೀನರಸಿಂಹಯ್ಯನವರ [illegible] ಮತ್ತು ಅವರ ಪಾರ್ಟಿಯವರಿಂದ ಸಂಗೀತ, ಅದಾದನಂತರ ಶ್ರೀ ಸಿ ರಾಮಸ್ವಾಮಿ [illegible] ರಿಂದ ಶ್ರೀನಿವಾಸಕಲ್ಯಾಣ ಎಂಬ ಹರಿಕಥೆ, ತಮ್ಮನವರಿಗೆ ಶ್ರೀನಿವಾಸ ದೇವರ ಅಲಂಕಾರ ಇವು ಏರ್ಪಾಡಾಗಿವೆ

ಸ್ಟೇಟು ಕೌನ್ಸಿಲ್ಲಿನ ಹೊಸ ಅಧಿಕಾರ ವರ್ಗ

ರಾಜಧಾನಿಯ ಸ್ಟೇಟ್ ಕೌನ್ಸಿಲ್ಲಿನ ೨೦ ನೇ ವಾರ್ಷಿಕ ಸಾಮಾನ್ಯ ಸಭೆಯು ನಿನ್ನೆ ಪೌರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆದು, ಪ್ರಕೃತ ಸಾಲಿನ ಅಧಿಕಾರ ವರ್ಗದವರ ಚುನಾವಣೆಯು ಆಯಿತು. ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷರು ಮತ್ತು ಖಜಾಂಚಿಯಾಗಿಯೂ ಶ್ರೀಗಳಾದ ಟಿ ನರಸಿಂಹಯ್ಯಂಗಾರ್ ಮತ್ತು ಟಿ ವೆಂಕಟರಮಣಯ್ಯನವರು ಉಪಾಧ್ಯಕ್ಷರುಗಳಾಗಿಯೂ, ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. [illegible] ಬಿ ಟಿ ಶ್ರೀನಿವಾಸಯ್ಯಂಗಾರ್ಯರು ಸ್ಪೆಷಲ್ ಮಾಸ್ಟರಾಗಿ ನೇಮಿಸಲ್ಪಟ್ಟರು

ಪ್ರಿಂಟರುಗಳ ಸಭೆ ಮುಂದು ವರೆಯಿತು

ಮೈಸೂರು ಜಿಲ್ಲಾಧಿಕಾರಿಗಳು ನಾಳೆ ಕರೆದಿದ್ದ ಜಿಲ್ಲಾ ಪ್ರಿಂಟರುಗಳ ಸಭೆಯು ಮುಂದುವರೆಸಲ್ಪಟ್ಟಿರುವುದಾಗಿ ತಿಳಿಸಲಾಗಿದೆ

ಲಾರಿ ಅಪಘಾತದಲ್ಲಿ ವಿದ್ಯಾರ್ಥಿ ಮರಣ

ರಾಜಧಾನಿಯ ಸಂಟ್ ಫಿಲೋಮಿನಾ ಕಾಲೇಜಿನ ಒಳಿ ಈ ದಿನ ಲಾರಿಯೊಂದಕ್ಕೆ ಪಾಂಡುರಂಗರಟ್ಟಿ ಎಂಬ ವಿದ್ಯಾರ್ಥಿಯು ಸಿಕ್ಕಿ ಗಾಯಗೊಂಡು [illegible] ಆಸ್ಪತ್ರೆಗೆ ಸಾಗಿಸಲ್ಪಟ್ಟು, ಮೃತಪಟ್ಟನೆಂದು ವರದಿಯಾಗಿದೆ

ಗೋಧಿ ಬೆಲೆ ಹೆಚ್ಚಿತು

ಬೆಂಗಳೂರು ೨೦

ಇಂದಿನಿಂದ ಗೋಧಿಯನ್ನು ರೂಪಾಯಿಗೆ ೩ ಸೇರಿನಂತೆ ಮಾರಬೇಕೆಂದು ಮೈಸೂರು ಸರ್ಕಾರದವರು ಆಜ್ಞೆ ಹೊರಡಿಸಿರುವರು. ಗೋಧಿಯ ಪದಾರ್ಥಗಳನ್ನು ರೇಷನ್ ಕಾರ್ಡುದಾರರಿಗೆ ಮಾತ್ರ ಒದಗಿಸಬೇಕೆಂದೂ ಸರ್ಕಾರದವರು ಸೂಚಿಸಲಿರುವರೆಂದೂ ಗೊತ್ತಾಗಿದೆ. ಕಳೆದ ಜುಲೈನಲ್ಲಿ ಗೋಧಿಯನ್ನು ೩ ಸೇರಿನಂತೆ ಮಾರಬೇಕೆಂದು ವಿಧಾಯಕವಾಗಿದ್ದಿತು

ಭವನಗಳಿಗಾಗಿ ಉಪಯೋಗಿಸುವ ಕಬ್ಬಿಣಕ್ಕೆ ರಹದಾರಿ

[illegible] ಸಾವಿರ ಚದುರ ಅಡಿಗಿಂತಲೂ ಹೆಚ್ಚಾಗಿ ಇರುವ ಪ್ಲಿಂತ್ ಅಥವಾ ೬೦೦೦ ಅಡಿಗಿಂತಲೂ ಹೆಚ್ಚಾಗಿರುವ ಫ್ಲೋರ್ ಏರಿಯಾಗಳ ಭವನಗಳ ನಿರ್ಮಾಣಕ್ಕಾಗಿ ಕಬ್ಬಿಣ ಅಥವಾ ಉಕ್ಕನ್ನು ರಹದಾರಿಯಿಲ್ಲದೆ ಉಪಯೋಗಿಸಕೂಡದೆಂದು ಸರ್ಕಾರದವರು ನಿಷೇಧಾಜ್ಞೆಯನ್ನು ಹೊರಡಿಸಿರುವರು. ಈ ಆಜ್ಞೆಯು ಮೊಳೆ, ಸ್ಕ್ರೂ, ಬೋಲ್ಟು, ಮತ್ತು ನಟ್ಟು, ಬಾಗಿಲು, ಕಿಟಕಿಗಳ ಬಿಟ್ಟುಗಳಿಗೆ ಅನ್ವಯಿಸುವುದಿಲ್ಲ. ಧರ್ಮಾರ್ಥ, ವಿದ್ಯಾ, ವೈದ್ಯ ಅಥವಾ ಮತ ಸಂಬಂಧವಾದ ಕಟ್ಟಡಗಳೂ ಮೇಲ್ಕಂಡ ಆಜ್ಞೆಗೆ ಒಳಪಡುವುದಿಲ್ಲ

ಈಜಿಪ್ಟಿನ ವಿದ್ಯಾರ್ಥಿಗಳಿಗೆ ಮಿಲಿಟರಿ ಶಿಕ್ಷಣ

ಈಜಿಪ್ಟಿನ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಬಲಾತ್ಕಾರಪೂರ್ವಕವಾಗಿ ಮಿಲಿಟರಿ ಶಿಕ್ಷಣ ಕೊಡುವಂತೆ ವ್ಯವಸ್ಥೆ ಮಾಡಲಾಗುವುದೆಂದು ಈಜಿಪ್ಟಿನ ಸೇನಾನಿ ನಗೀಬ್‌ರವರು ತಿಳಿಸಿರುತ್ತಾರೆ

ಜಗಜೀವನರಾಂರವರಿಗೆ ಕಿಸಾನ್ ಪಂಚಾಯಿತಿ ತಂತಿ

ಕೇಂದ್ರ ಸಾರಿಗೆ ಸಂಪರ್ಕ ಮಂತ್ರಿ ಶ್ರೀ ಜಗಜ್ಜೀವನರಾಂರವರಿಗೆ, ರಾಜಧಾನಿ ಒಳಿ ಇರುವ ನಾಚನಹಳ್ಳಿಯ ಕಿಸಾನ್ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಸಿದ್ದೇಗೌಡರು ತಂತಿ ಕಳುಹಿಸಿ, ಸದರಿ ಪ್ರದೇಶದಲ್ಲಿರುವ ನಿವಾಸಿಗಳು ದ ಜನರಿಗೆ ಅಲ್ಲಿನ ಜಹಗೀರುದಾರರೊಬ್ಬರಿಂದ ಆಗುತ್ತಿರುವ "ದಬ್ಬಾಳಿಕೆ"ಯನ್ನು ಪರಿಶೀಲಿಸಲು ಇಲ್ಲಿಗೆ ಭೇಟಿ ಕೊಡುವಂತೆ ಪ್ರಾರ್ಥಿಸಿರುತ್ತಾರೆ

ಚಿತ್ರದುರ್ಗ ಜಿಲ್ಲೆಯಲ್ಲಿ ಹಸಿವಿನಿಂದ ಮರಣ?

ಚಿತ್ರದುರ್ಗ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ಹಸಿವಿನ ಬಾಧೆಯಿಂದ ಹಲವರು ಮಡಿದಿರುವರೆಂದೂ, ಬಹು ಸಂಖ್ಯಾತ ಮುಸಲ್ಮಾನರಿರುವ ಗೌರಮ್ಮನ ಹಳ್ಳಿಯಲ್ಲಿ ೧೨ ಜನ ವೃದ್ಧರು ನಿತ್ರಾಣರಾಗಿ ಸಾಯುವ ಸ್ಥಿತಿಯಲ್ಲಿರುವರೆಂದೂ ವರದಿಗಳು ಬಂದಿವೆ. ಜಿಲ್ಲೆಯ ಹಲವು ಕಡೆ ಜನರು ತಂಬಾ ಕೃಶರಾಗಿ ಜೀವನದಲ್ಲಿ ನಿರಾಶೆಗೊಂಡಿರುವರಲ್ಲದೆ ವಿಷ್ಣು [illegible] ಆತ್ಮಹತ್ಯ ಮಾಡಿಕೊಳ್ಳುವುದಾಗಿ ಅವರು ಹೇಳುತ್ತಿರುವರೆಂದೂ ಗೊತ್ತಾಗಿದೆ. ಮಕ್ಕಳುಗಳಿಗೆ ಕೊಳುವುದಕ್ಕೂ ಸಹ ತ್ರಾಣವಿಲ್ಲದೆ ಮೂಕೃತಿ ಹಳ್ಳಿಯ ರಸ್ತೆಯಲ್ಲೂ ಅನೇಕ ದನಕರುಗಳು ಮೇವಿಲ್ಲದೆ ಸತ್ತು ಬಿದ್ದಿರುವುವೆಂದೂ ಹೇಳಲಾಗಿದೆ

ನಾನ್ ಗೆಜೆಟೆಡ್ ನೌಕರರಿಗೆ ಉಚಿತ ವೈದ್ಯ ಚಿಕಿತ್ಸೆ

ಮದ್ರಾಸಿನಲ್ಲಿ ೩೦೦ ರೂ ಗಿಂತಲೂ ಕಡಿಮೆ ಸಂಬಳ ಪಡೆಯುವ ನೌಕರರು ಮತ್ತು ಅವರ ಕುಟುಂಬಗಳವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯ ಕಾಲದಲ್ಲಿ ಉಚಿತ ಆಹಾರ ಮತ್ತು ಔಷಧಿಗಳನ್ನು ಒದಗಿಸುವಂತೆ ಅಲ್ಲಿನ ಸರ್ಕಾರದ ಆಜ್ಞೆಯಾಗಿದೆ

ಎಕರೆಗೆ ೧೨ ಸಾವಿರ ಪೌಂಡು ಭತ್ತ

ಕೊಯಮತ್ತೂರು ಜಿಲ್ಲೆ ಪೊಲ್ಲಾಚಿ ತಾಲ್ಲೂಕಿನ ಪೊನ್ನುಸ್ವಾಮಿ ಗೌಂಡರು ೧ ಎಕರೆಯಲ್ಲಿ ೧೨೦೨೭ ಪೌಂಡು ಭತ್ತವನ್ನು ಬೆಳೆದುದಕ್ಕಾಗಿ ಅವರಿಗೆ ೧೦೦೦ ರೂಪಾಯಿಗಳ ಬಹುಮಾನವು ದೊರೆತಿದೆ

ಸಶಸ್ತ್ರ ಪೊಲೀಸರ ಕಾವಲು

೨ ಸು] ಅಗರ ಮೊಂಬಳ್ಳಿ ೧೯

ಇಲ್ಲಿನ ಎರಡು ಪಂಗಡಗಳವರಲ್ಲಿ ಭಿನ್ನಾಭಿಪ್ರಾಯವು ಬೆಳೆದು ಅದು ತೀವ್ರವಾಗಿರುವುದರಿಂದ ಪೊಲೀಸರು ಮುಂಜಾಗ್ರತೆ ಕ್ರಮ ತೆಗೆದುಕೊಂಡು ೩ ದಿನಗಳಿಂದಲೂ ಮಹಮ್ಮದೀಯರ ಬೀದಿಗೆ ಹೋಗುವ ಎಲ್ಲ ಪ್ರಮುಖ ಚೌಕಗಳಲ್ಲೂ ಸಶಸ್ತ್ರ ಪೊಲೀಸರ ಕಾವಲನ್ನು ಏರ್ಪಡಿಸಿರುತ್ತಾರೆ

ಕೇಂದ್ರದವರು ಪ್ರವೇಶಿಸಿದರೆ ಮೊರಾರ್ಜಿ ರಾಜೀನಾಮೆ?

ಬೊಂಬಾಯಿ ಸರ್ಕಾರದವರು ಅನುಸರಿಸುತ್ತಿರುವ ಪಾನನಿರೋಧ ನೀತಿಯ ವಿಷಯವಾಗಿ ಕೇಂದ್ರ ಸರ್ಕಾರದವರು ಮಧ್ಯೆ ಪ್ರವೇಶಿಸಿದರೆ ತಾವು ರಾಜೀನಾಮೆ ಕೊಡುವುದಾಗಿ ಅಲ್ಲಿನ ಮುಖ್ಯಮಂತ್ರಿ ಮೊರಾರ್ಜಿ ದೇಸಾಯಿಯವರು ನಿರ್ಧರಿಸಿ, ಈ ವಿಷಯವನ್ನು ಅವರು ಈಗಾಗಲೇ ಕೇಂದ್ರಕ್ಕೆ ತಿಳಿಯಪಡಿಸಿರುವರೆಂದು ವರದಿಯಾಗಿದೆ

ರೋಗ ವಾಸಿಮಾಡುವುದಾಗಿ ೪೦,೦೦೦ ರೂ. ಮೋಸ

ಪುಣೆಯ ಮಾರ್ವಾಡಿಯೊಬ್ಬನ ಪತ್ನಿಯ ಕಾಯಿಲೆಯನ್ನು ಗುಣಪಡಿಸುವುದಾಗಿ ಹೇಳಿ, ಒಬ್ಬ ಸಾಧುವು ಅವನಿಂದ ೪೦ ಸಾವಿರ ರೂ ನಗದು ಮತ್ತು ಇತರ ವಸ್ತುಗಳನ್ನು ಪಡೆದು ಪತ್ತೆಯಿಲ್ಲದೆ ಹೋಗಿರುವನೆಂದು ವರದಿಯಾಗಿದೆ. ಯಾವ ವಿಧವಾದ ಔಷಧದಿಂದಲೂ ಪತ್ನಿ ರೋಗವು ಗುಣವಾಗದಿದ್ದುದರಿಂದ ಮಾರ್ವಾಡಿಯು ಸಾಧುವಿನ ಜಾಲಕ್ಕೆ ಬಿದ್ದು ಅವನು ೧೦ ದಿನಗಳ ಪೂಜಾದಿಗಳನ್ನು ನಡೆಸಿ, ಕೊನೆಗೆ ಸಮುದ್ರ ತೀರದಲ್ಲಿ ನಾಗದೇವತೆಯನ್ನು ಪೂಜಿಸುವುದಾಗಿ ಹೇಳಿ ವರ್ತಕನಿಂದ ಹಣ ಕೊಂಡು ಹೋದನೆಂದು ಹೇಳಲಾಗಿದೆ

ಹಗಲು ಕಳ್ಳನಿಗೆ ೮ ತಿಂಗಳು ಕಠಿಣ ಸಜಾ

ಕಳೆದ ೮ ತಿಂಗಳಿಂದಲೂ ಹಗಲಿನಲ್ಲೇ ವಿದ್ಯಾರ್ಥಿಗಳ ಕೊಠಡಿಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಕೇಡಿ ಮರಿಯಪ್ಪ ಉರುಫ್ ಮರಿ ಎಂಬುವನನ್ನು ನಗರದ ಕ್ರೈಂ ಬ್ರಾಂಚ್ ಪೊಲೀಸಿನವರು ಕಳೆದ ೨೯ ನೇ ತಾ॥ ದಸ್ತಗಿರಿ ಮಾಡಿ ನಗರದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಅವನ ಮೇಲೆ ಮೊಕದ್ದಮೆಗಳನ್ನು ಹೂಡಿದ್ದರು. ನ್ಯಾಯಾಧೀಶರು ಅಪರಾಧಿಗೆ ೮ ತಿಂಗಳ ಕಠಿಣ ಸಜವನ್ನು ವಿಧಿಸಿರುವರು

ಧ್ವಜಾರೋಹಣ ಸಮಯದ ಅವಾತುರ್ಯಕ್ಕೆ ಸ್ಕೌಟುಗಳು ಕಾರಣರಲ್ಲ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ಹೊಸಕೇರಿಯಲ್ಲಿರುವ ಶ್ರೀ ಎಂ ಎಸ್ ಶ್ರೀನಿವಾಸಶಾಸ್ತ್ರಿಯವರು ಈ ರೀತಿ ಪತ್ರ ಬರೆದಿರುತ್ತಾರೆ — ತಾ॥ ೧೫-೮-೫೨ ರಲ್ಲಿ ಮೈಸೂರು ಪುರಭವನದ ಮೈದಾನದಲ್ಲಿ ನಡೆದ ಧ್ವಜಾರೋಹಣದ ಬಗ್ಗೆ ಆದ ಅಚಾತುರ್ಯಕ್ಕೆ ಸ್ಕೌಟಿನ ಯುವಕರು ಕಾರಣರೆಂಬುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ. ಇದಕ್ಕೆ ಇವರುಗಳು ಎಳ್ಳಷ್ಟೂ ಕಾರಣರಲ್ಲವೆಂಬುದಾಗಿಯೂ ಯಾವರೀತಿಯಿಂದಲೂ ಜವಾಬುದಾರರಲ್ಲವೆಂಬುದೂ ತಿಳಿಸಬಯಸುತ್ತೇನೆ. ಧ್ವಜಾರೋಹಣ ಕಾಲದಲ್ಲಿ ಸ್ಥಳದ ಅಧಿಕಾರಿಗಳು ನನ್ನನ್ನು ಕರೆದುದರಿಂದ ನಾನು ಆಜ್ಞಾಪಾಲನೆ ಮಾಡಲು ಹೋಗಬೇಕಾಯಿತೇ ಹೊರತು ಸ್ಕೌಟಿನವರ ಭಾಗವು ಅದರಲ್ಲಿ ಯಾವರೀತಿಯಲ್ಲೂ ಇರಲಿಲ್ಲ

● ಅಮೇರಿಕದ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾದ ನಂತರ ಹ್ಯಾರಿ ಟ್ರೂಮನ್ನರು ಪ್ರಪಂಚ ಪರ್ಯಟನ ಮಾಡಲಿರುವರು. ಅವರು ಬರುವ ಜನವರಿ ೨೦ ರಲ್ಲಿ ನಿವೃತ್ತರಾಗುವರು

ಯುವಜನ ಚಾರಣ ಸಂಸ್ಥೆಯ ಸದಸ್ಯತನದ ವಾರ

ಮೈಸೂರು ೨೦

ಮೊನ್ನೆ ದಿನ ಮಹಾರಾಜಾ ಕಾಲೇಜಿನ ಜೂನಿಯರ್ ಬಿ. ಎ ಹಾಲಿನಲ್ಲಿ ಯುವಜನ ಚಾರಣ ಸಂಸ್ಥೆಯ ಸದಸ್ಯತನದ ಚಳುವಳಿಯನ್ನು ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ|| ಎಸ್ ವಿ ರಂಗಣ್ಣನವರು ನೆರವೇರಿಸಿದರು ಶ್ರೀ ಭರತರಾಜ್ ಸಿಂಗ್ ಮತ್ತು ಪ್ರೊ|| ಏಕಾಂಬರಂರವರುಗಳು ಸಂಸ್ಥೆಯ ಉದ್ದೇಶವನ್ನು ಪ್ರಶಂಸಿಸಿ ಭಾಷಣ ಮಾಡಿದರು ಸಂಚಾಲಕರಲ್ಲಿ ಒಬ್ಬರಾದ ಆರ್ ಜಿ ಸದಾಶಿಯವರು ಸಂಸ್ಥೆಯ ಸ್ವರೂಪ, ಉದ್ದೇಶ ಮತ್ತು ಉಪಯೋಗಗಳನ್ನು ವಿವರಿಸಿದರು

ನಾಳೆಯ ದಿನ ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಡಾ|| ಎಲ್ ಸೀಬಯ್ಯನವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಚಳುವಳಿಯ ಅಂಗವಾಗಿ ಒಂದು ಸಭೆಯು ನಡೆಯಲಿದೆಯೆಂದೂ, ಸಾರ್ವಜನಿಕರು ಸಹಕರಿಸಬೇಕೆಂದೂ ಸಂಚಾಲಕರು ಪ್ರಾರ್ಥಿಸಿರುತ್ತಾರೆ

ಸ್ವಾತಂತ್ರ್ಯ ದಿನಾಚರಣೆ

ರಾಜಧಾನಿಯ ಇಲವಾಲದ ರಸ್ತೆಯಲ್ಲಿರುವ ಕುಂಚಿಟಿಗರ ಸಂಘದ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಶುಕ್ರವಾರ ಬೆಳಗ್ಗೆ ಶ್ರೀ ಎಲ್ ನರಸಪ್ಪನವರಿಂದ ಧ್ವಜಾರೋಹಣವೂ, ಮಧ್ಯಾಹ್ನ ದೇವರಾಜ ಮಾರ್ಕೆಟ್ಟಿನ [illegible] ವ್ಯಾಪಾರಿ, ಶ್ರೀ ತಿಮ್ಮಯ್ಯನವರಿಂದ ವಿದ್ಯಾರ್ಥಿಗಳಿಗೆ ಭೋಜನವೂ [illegible] ಸ್ವಾತಂತ್ರ್ಯ ದಿನಾಚರಣೆಯು [illegible] ಜರುಗಿದ್ದಾಯ್ತು.

ನಂಜನಗೂಡು ಕನಕದಾಸ ವಿದ್ಯಾರ್ಥಿ ನಿಲಯದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೋತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು. ಶ್ರೀ ವಿಶ್ವೇಶ್ವರ ಗೌಡರು ಅಧ್ಯಕ್ಷತೆ ವಹಿಸಿದರು ಕಾಂಗ್ರೆಸ್ ಮುಂದಾಳುಗಳ ಭಾಷಣಗಳೂ, ಸುಶ್ರಾವ್ಯವಾದ ಸಂಗೀತವೂ ನಡೆದ ನಂತರ, ಸಾಹುಕಾರ್ ಶ್ರೀ ಪಿ ಮಹದೇವಯ್ಯನವರು ಕಟ್ಟಡಕ್ಕೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಿ ಕೊಡಲು ವಾಗ್ದಾನ ಮಾಡಿದರು ನಂತರ ಮಂಗಳದೊಡನೆ ಸಭೆ ಮುಕ್ತಾಯವಾಯಿತು

ಚಿತ್ರದುರ್ಗಕ್ಕೆ ಟ್ರಂಕ್ ಟೆಲಿಫೋನ್ ಸೌಕರ್ಯ

ಚಿತ್ರದುರ್ಗಕ್ಕೆ ಮೊನ್ನೆಯಿಂದ ಟ್ರಂಕ್ ಟೆಲಿಫೋನ್ ಸೌಕರ್ಯವನ್ನು ಕಲ್ಪಿಸಲಾಗಿದೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಇದರ ಆರಂಭೋತ್ಸವವನ್ನು ನೆರವೇರಿಸಿದರು

ನಗರದಲ್ಲಿ ಟೆಲಿಫೋನ್ ಮಾಡಲು ಹೊಸ ವ್ಯವಸ್ಥೆ

ನಾಳೆಯಿಂದ ರಾಜಧಾನಿಯಲ್ಲಿ ಹೊಸ ಟೆಲಿಫೋನ್ ಕಛೇರಿಯು ಏರ್ಪಡುವುದು. ಅಂದಿನಿಂದ ನಗರದ ಎಲ್ಲಾ ಟೆಲಿಫೋನ್‌ಗಳನ್ನು ಹೊಸ ಪದ್ಧತಿಗೆ ಬದಲಾಯಿಸಲಾಗುವುದು ಟೆಲಿಫೋನ್‌ಗಳನ್ನು ಹೊಂದಿರುವವರು ಇನ್ನು ಮುಂದೆ ರಿಸೀವರನ್ನು ತೆಗೆದರೆ, ಆಪರೇಟರು ನಂಬರನ್ನು ಕೇಳಿ, ಕನೆಕ್ಷನ್ ಕೊಡುವರು

ಮೋಟಾರು ಕೆಲಸಗಾರರ ಹೆಚ್ಚಿನ ಸಂಬಳದ ಅವಾರ್ಡ್

ಸಂಸ್ಥಾನದ ಕೈಗಾರಿಕಾ ನ್ಯಾಯಾಲಯದವರು ಮೈಸೂರು ಜಿಲ್ಲಾ ಮೋಟಾರು [illegible] ಜಾರಿಗೆ ತರಬೇಕೆಂದೂ ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

	[illegible]	[illegible]
ಕಲಗಡಲೆ	[illegible]	[illegible]
ಎಳ್ಳು	[illegible]	[illegible]
[illegible]	[illegible]	
ಸವದ [illegible]	[illegible]	[illegible]
[illegible]	[illegible]	[illegible]
ಹೆಸರು	[illegible]	[illegible]
ಕಡಲೆಬೀಜ	[illegible]	
ಉದ್ದು	[illegible]	[illegible]
ಹಲಸಂದೆ	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ನಿಮ್ನ ವರ್ಗದವರಿಗೆ ನೌಕರಿ

ಪಾರ್ಲಿಮೆಂಟಿನ ಮೈಸೂರು ಹರಿಜನ ಸದಸ್ಯರಾದ ಶ್ರೀ ಎಂ [illegible] ಮತ್ತು ಶ್ರೀ ದೊಡ್ಡತಿಮ್ಮಯ್ಯನವರು ದೇಶದಲ್ಲಿರುವ ನಿಮ್ನ ವರ್ಗದ ಕಮಿಷನರನ್ನು ಭೇಟಿ ಮಾಡಿ ಮೈಸೂರು ಸಂಸ್ಥಾನದ ಹರಿಜನರ ಸಮಸ್ಯೆಗಳನ್ನು ಚರ್ಚಿಸಿದರು. ಸರ್ಕಾರಿ ನೌಕರಿ [illegible] ಹರಿಜನರ ಪರಿಸ್ಥಿತಿಯನ್ನು ತಿಳಿದುಕೊಳ್ಳುವರೆಂದು ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಕ್ಕೆ ತಾರಾ, ಸಂಗೀತ [illegible] ಜಿ ಎಂ ಗೋಪಾಲಕೃಷ್ಣ ಪಟೇಲ್ [illegible] ಹಿಂದೂಸ್ತಾನಿ ಸಂಗೀತ [illegible] ಕನ್ನಡ ಗೀತೆಗಳು [illegible] ಜಿ ಎಂ ಗೋಪಾಲಕೃಷ್ಣ ಪಟೇಲ್ [illegible] ಬೊಂಬಾಯಿ ಆರ್ಕೆಸ್ಟ್ರಾ (ರೆಕಾರ್ಡು), [illegible] ತಾರಾ ಸಂಗೀತ [illegible] ವಿವಿಧ ವಿನೋದಾವಳಿ

ಪುಸ್ತಕಗಳ ದಾನ

ಕಳೆದ ೧೮ ನೇ ತಾ|| ನ ಸಾಧ್ವಿಪತ್ರಿಕೆಯಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಉದಾರ ಸಹಾಯ ಎಂಬ ಶಿರೋನಾಮೆಯ ಸುದ್ದಿಯಲ್ಲಿ ರಾಜಧಾನಿಯ ಸಾರ್ವಜನಿಕ ಪುಸ್ತಕ ಭಂಡಾರಕ್ಕೆ [illegible] ಪುಸ್ತಕಗಳನ್ನು ಉಚಿತವಾಗಿ ದಾನ ಮಾಡಿರುವುದನ್ನು ಎಂಬುದನ್ನು ಸಾರ್ವಜನಿಕ ವಿದ್ಯಾರ್ಥಿ ನಿಲಯದ ಪುಸ್ತಕ ಭಂಡಾರಕ್ಕೆ ಎಂದು ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ

ಶನಿ ದೇವರ ಉತ್ಸವ

ಚಾಮರಾಜನಗರದ ದೊಡ್ಡ ಅರಸಿನಕೆರೆಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಳೆದ [illegible] ಶನಿ ಮಹಾತ್ಮೆ ಪಾರಾಯಣ, ಪುರಾಣ ಶ್ರವಣ, ಮಹಾ ಮಂಗಳಾರತಿ, ದೀಪಾರಾಧನೆಗಳು ನಡೆದುವು ಸಂಜೆ [illegible] ಉತ್ಸವವನ್ನು ಮಾಯಾವರಂ ಶ್ರೀ [illegible] ಸುಬ್ರಹ್ಮಣ್ಯಂ ಮತ್ತು [illegible] ನಾಗಸ್ವರ [illegible] ರತ್ನಸ್ವಾಮಿ ಪಿಳ್ಳೆ ಮತ್ತು [illegible] ಡೋಲು ಮತ್ತು [illegible] ಡೋಲೂ ವಾದ್ಯದೊಡನೆ ನೆರವೇರಿತು

SREE GANESHA
TALKIES
[illegible] 2 Days
Unit [illegible] Artists
CHAMPAGNE FOR CAESAR
(The Bubbliest Comedy)
With Ronald Colman & Barbara Britton
FROM 23—8—52
RIO GRANDE

SRI GAYATHRI
TALKIES
Daily 3 Shows
From 2[illegible] For 2 Days
M G M's
CRISIS
NEXT CHANGE
DAVID & BATHSHEBA
TO DAY - LAST DAY
SONS OF MUSKETEERS

ಪ್ರಭಾ ★ 22 8 52 ರಿಂದ ಪ್ರತಿ ದಿನ 3 ಆಟಗಳು
ಹಿಂದೂಸ್ತಾನಿ ಚಿತ್ರರಂಗದ
★ ಕಾಲಿ ಘಟಾ ★
[illegible]
From 29-8 52 For 4 Days
HOTEL SAHARA
(An International Film Festival Picture)

ಮಾಂಗಲ್ಯ ಕಳೆದುಹೋಗಿದೆ
ಇದೇ 19-8 52 ನೇ ತಾರೀಖು ಮಂಗಳವಾರ ಸಾಯಂಕಾಲ ಸುಮಾರು 6 30 ಘಂಟೆಯಲ್ಲಿ ವಾಣೀವಿಲಾಸ ರಸ್ತೆಯ ಬಳಿ ಒಂದು ಮಾಂಗಲ್ಯ ಮತ್ತು ನಾಲ್ಕು ಗುಂಡುಗಳು ಕಳೆದು ಹೋಗಿರುತ್ತವೆ ಅವು ಯಾರಿಗಾದರೂ ಸಿಕ್ಕಿದ್ದಲ್ಲಿ, ದಯವಿಟ್ಟು ಸಾಧ್ವಿ ಕಛೇರಿಗೆ ತಂದು ಕೊಟ್ಟರೆ ಸೂಕ್ತ ಬಹುಮಾನ ಕೊಡಲಾಗುತ್ತದೆ

SRI CHAMUNDESWARI BHAVAN
BUS STAND ROAD CHAMARAJANAGAR
ರುಚಿಯಾದ ಊಟ [illegible]
ನಮ್ಮ ಈ
ಚಾಮುಂಡೇಶ್ವರೀ ಭವನದಲ್ಲಿ
ಆರೋಗ್ಯಕ್ಕೆ ಮತ್ತು ಶಾಕಾಹಾರಕ್ಕೆ ಅನುಗುಣವಾಗಿ ರುಚಿಯಾದ ಊಟ ಮತ್ತು ತಿಂಡಿಗಳನ್ನು [illegible] ತಯಾರಿಸಿ, ತಮ್ಮ ಸಂತೃಪ್ತಿಗೆ ಪಾತ್ರರಾಗಿರುವ
ಪಿ. ಬಿ. ಸುಬ್ರಹ್ಮಣ್ಯ ಅಯ್ಯರ್, ವ್ಯವಸ್ಥಾಪಕರು

ಪ್ರತಿ ನವರತ್ನ ಮಾಲಾ
ಆರು ಕವಿರತ್ನಂ ಭಾರತಿಗಳಿಂದ ವಿರಚಿತವಾದ [illegible] ಪ್ರತಿಗಳಿಗೆ [illegible]
ⓐ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್ ಬಿಲ್ಡಿಂಗ್ಸ್ [illegible]

ಗೌರಿ ಹಬ್ಬಕ್ಕಾಗಿ:- ಹೊಸ ಡಿಸೈನಿನ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಬೆಂಗಳೂರು ಪೂನಾ, ಬಿಂಡಿಂಗ್ ಸೀರೆಗಳೂ ಬಂದಿವೆ ★ M. V. ಭೋಜಯ್ಯ ಶೆಟ್ಟಿ ಬ. ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

Edited, Printed and Published by A. R. Nagarajan, at Sadhvi Press, D Subbiah Road, Mysore.

ಟೆಲಿಫೋನ್ ನಂ 792 || ವಂದೇ ಮಾತರಂ || ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೧-೮-೧೯೫೨ [ಸಂಚಿಕೆ ೨೧

ಸ್ಟಾಲಿನ್ನರ ಸ್ಥಾನಕ್ಕೆ ಮಾಲೆಂಕಾವ್ ಆಯ್ಕೆ?

ಪಿ ಬಿ. ಶ್ರೀನಿವಾಸ್ ಮತ್ತು ಪಾಲಪ್ಪನವರಿಗೆ ಸತ್ಕಾರ

ಮೈಸೂರು ೨೧

ಅಮೆರಿಕಾ ಸರ್ಕಾರದ ಆಹ್ವಾನದ ಮೇಲೆ ೪ ತಿಂಗಳ ಕಾಲ ಅಲ್ಲಿ ಪ್ರವಾಸ ಮಾಡಲಿರುವ ಬೆಂಗಳೂರಿನ ತಾಯಿನಾಡು ಪತ್ರಿಕೆ ಸಂಪಾದಕ ಶ್ರೀ ಪಿ ಬಿ ಶ್ರೀನಿವಾಸ್ ಮತ್ತು ರಾಜ್ಯ ಶಾಸ್ತ್ರದಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಲಿರುವ ಮಹಾರಾಜಾ ಕಾಲೇಜಿನ ಪ್ರೊ|| ಶ್ರೀ ಗ ಸ ಹಾಲಪ್ಪನವರು ಗೌರವಾರ್ಥವಾಗಿ ಶ್ರೀ ಎಂ ಆರ್ ಸಿ ಬಸಪ್ಪನವರು ಬೊಂಬಾಯಿ ಇಂದ್ರ ಭವನದಲ್ಲಿ ನೆನ್ನೆ ರಾತ್ರಿ ಭಾರಿ ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು. ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ, ಶ್ರೀ ಹೆಚ್ ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಅವರು ಭಾಷಣ ಮಾಡಿ, ಮುಖ್ಯ ಅತಿಥಿಗಳಿಬ್ಬರಿಗೂ ಸುಖ ಪ್ರಯಾಣವನ್ನು ಕೋರಿ, ಅವರುಗಳು ಹೊರ ದೇಶಗಳಲ್ಲಿ ದುರ್ಭಾಗ್ಯ ಅನಧಿಕೃತ ರಾಯಭಾರಿಗಳಂತೆ ಇರುವುದರಿಂದ, ಅವರು ದೇಶದ ಕೀರ್ತಿ ಗೌರವಗಳನ್ನು ಹೆಚ್ಚಿಸುವರೆಂದು ತಾವು ನಂಬಿರುವುದಾಗಿ ಹೇಳಿದರು. ಅವರು ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡು, ಅದರ ಪ್ರಯೋಜನವನ್ನು ನಾಡಿಗೆ ದೊರಕಿಸಿಕೊಡಲೆಂದು ಹಾರೈಸಿದರು.

ಅತಿಥಿಗಳಿಬ್ಬರೂ ಸೂಕ್ತ ಉತ್ತರವಿತ್ತು, ಶ್ರೀ ಎಂ ಆರ್ ಸಿ ಬಸಪ್ಪನವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದರು.

ನಗರದ ಪತ್ರಿಕೋದ್ಯೋಗಿಗಳ ಸಂಘದ ಸಭೆಯಲ್ಲಿ ನೆನ್ನೆ ಶ್ರೀ ಪಿ ಬಿ ಶ್ರೀನಿವಾಸನ್ನರಿಗೆ ಸುಖಪ್ರಯಾಣ ಮತ್ತು ಶುಭಾಶಯಗಳನ್ನು ಕೋರಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲಕೃಷ್ಣರಾಯರು ಅವರನ್ನು ಅಭಿನಂದಿಸಿ ಭಾಷಣ ಮಾಡಿದರು. ಶ್ರೀ ಶ್ರೀನಿವಾಸರವರು ಉತ್ತರವಿತ್ತು, ತಾವು ಅಮೆರಿಕದ ೪ ನೇ ಅಂಶದ ಸಹಾಯ ಯೋಜನೆ ಸಂಬಂಧವಾಗಿ ಅಲ್ಲಿಗೆ ಭೇಟಿ ಕೊಡುವುದಾಗಿ ತಿಳಿಸಿದರು.

ಶ್ರೀ ಪಿ ಬಿ ಶ್ರೀನಿವಾಸರವರ ಗೌರವಾರ್ಥವಾಗಿ ನೆನ್ನೆ ಸಂಜೆ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ, ಶ್ರೀ ಎಸ್ ಲಿಂಗಣ್ಣನವರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀ ಲಿಂಗಣ್ಣನವರು ಮಾತನಾಡಿ ಪತ್ರಿಕಾ ವೃತ್ತಿಯಲ್ಲಿ ಶ್ರೀನಿವಾಸರವರ ಸೇವೆಯನ್ನು ಕೊಂಡಾಡಿ, ಅವರ ವಿದೇಶ ಪ್ರಯಾಣವು ಸುಖಕರವಾಗಿರಲೆಂದು ಹಾರೈಸಿದರು. ಶ್ರೀನಿವಾಸರವರು ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಿದರು.

ಕಳ್ಳತನಕ್ಕಾಗಿ ಶಿಕ್ಷೆ

ನಗರದ ಕ್ರೈಂ ಬ್ರಾಂಚ್ ಪೋಲೀಸರು ಪರ್ವತಪ್ಪ ಗುರುಪಾದ್ ಸಿದ್ದನೆಟ್ಟಿ ಎಂಬುವನ ಮೇಲೆ ಕಳ್ಳತನದ ಅಪಾದನೆಗಾಗಿ ನಗರದ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ೦ ಮೊಕದ್ದಮೆಗಳನ್ನು ಹೂಡಿದ್ದರು. ನ್ಯಾಯಾಧೀಶರು ಮೊನ್ನೆ ಅಪರಾಧಿಗೆ ೧ ತಿಂಗಳ ಕಠಿಣ ಸಜಾ ವಿಧಿಸಿದರು.

ಜಗಜೀವನರಾಂರವರ ಆಗಮನ

ಮೈಸೂರು ೨೧

ಕೇಂದ್ರ ಮಾರ್ಗಾನುಕೂಲ ಮಂತ್ರಿ ಶ್ರೀ ಜಗಜೀವನರಾಂರವರು ಈ ಬೆಳಿಗ್ಗೆ ೧೧ ಘಂಟೆಗೆ ಶ್ರೀ ಕೆ. ಹನುಮಂತಯ್ಯನವರೊಡನೆ ಇಲ್ಲಿಗೆ ಆಗಮಿಸಿದರು. ಪೌರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣ ಮತ್ತು ಪುರ ಸಭೆಯ ಉಪಾಧ್ಯಕ್ಷರಾದ ಶ್ರೀ ಎಂ ರಾಚಯ್ಯ ಮುಂತಾದವರು ಪ್ರಭುಕೃಪ ಭವನದ ಬಳಿ ಅವರನ್ನು ಸ್ವಾಗತಿಸಿದರು. ಶ್ರೀ ಜಗಜೀವನರಾಂರವರು ಆ ಭವನದಲ್ಲಿ ಬಿಡಾರ ಮಾಡಿರುತ್ತಾರೆ.

ಲಾರಿ ಡ್ರೈವರನ ದಸ್ತಗಿರಿ

ಪಾಂಡುರಂಗಶೆಟ್ಟಿ ಎಂಬ ಸೆಂಟ್ ಫಿಲೋಮಿನ ಕಾಲೇಜಿನ ವಿದ್ಯಾರ್ಥಿಯು ನೆನ್ನೆ ಲಾರಿಗೆ ಸಿಕ್ಕಿ ಮೃತಪಟ್ಟ ಸಂಬಂಧವಾಗಿ ಟ್ರಾಫಿಕ್ ಪೋಲೀಸರು ಡ್ರೈವರ್ ಚನ್ನವೀರಯ್ಯನನ್ನು ದಸ್ತಗಿರಿ ಮಾಡಿರುವರು.

ಮೈಸೂರು ಮತ್ತು ತಿರುವಾಂಕೂರು ಮಹಾರಾಜರು ಬಂಡೀಪುರಕ್ಕೆ

ಮೈಸೂರಿನ ಶ್ರೀಮನ್ಮಹಾರಾಜರವರು ನೆನ್ನೆ ಬಂಡಿಪುರಕ್ಕೆ ಪ್ರಯಾಣ ಬೆಳೆಸಿದರು. ತಿರುವಾಂಕೂರು ಮಹಾರಾಜರವರೂ ಅಲ್ಲಿಗೆ ತೆರಳುವರು.

ದಸರಾ ದರ್ಬಾರ್ ಬದಲು ರಾಜಸಭೆ

ಈ ವರ್ಷದ ದಸರಾ ಉತ್ಸವವನ್ನು ಯಥಾವಿಧಿಯಾಗಿ ಆಚರಿಸಲಾಗುವುದಾದರೂ, ಅರಮನೆಯಲ್ಲಿ ನಡೆಯುವ ದರ್ಬಾರನ್ನು ರಾಜಸಭೆ ಯೆಂದು ಕರೆದು ಅದನ್ನು ಏರ್ಪಡಿಸಲಾಗುವುದೆಂದೂ, ಈ ಸಭೆಯ ಕ್ರಮದಲ್ಲಿ ಹಲವು ಮಾರ್ಪಾಟುಗಳಾಗುವುವೆಂದೂ ತಿಳಿದು ಬಂದಿದೆ.

ಮಾರಾಟ ತೆರಿಗೆ ಸಮಸ್ಯೆ ಬಗ್ಗೆ ಸಂಸ್ಥಾನಗಳ ಸಮ್ಮೇಳನ

ಮಾರಾಟ ತೆರಿಗೆಯ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆಸಲು ಮೈಸೂರು, ಮದ್ರಾಸು, ತಿರುವಾಂಕೂರು-ಕೊಚ್ಚಿ ಮತ್ತು ಹೈದರಾಬಾದು ಹಣಕಾಸಿನ ಮಂತ್ರಿಗಳ ಸಮ್ಮೇಳನವು ಬೆಂಗಳೂರಿನಲ್ಲಿ ಈ ತಿಂಗಳು ೨೭ ಮತ್ತು ೨೮ ರಲ್ಲಿ ನಡೆಯುವುದು.

ಬರುವ ಜನವರಿಯಿಂದ ಹೊಸ ಪೌರಸಭೆ

ಮೈಸೂರು ೨೧

ರಾಜಧಾನಿಯ ಪುರಸಭೆಯು ಬರುವ ವರ್ಷ ಜನವರಿ ೩ ರಿಂದ ಪುನರ್‍ರಚನೆಯಾಗತಕ್ಕದ್ದೆಂದು ರಾಜಪ್ರಮುಖರು ಆಜ್ಞೆ ಮಾಡಿರುತ್ತಾರೆ. ಹೊಸ ಸಭೆಯಲ್ಲಿ ಒಟ್ಟು ೪೦ ಸದಸ್ಯರುಗಳಿರುವರು. ಏಕಸದಸ್ಯ ಕ್ಷೇತ್ರಗಳ ೩೬ ಮಂದಿ ಸದಸ್ಯರ ಸಾರ್ವತ್ರಿಕ ಸ್ಥಾನಗಳೂ, ನಿಮ್ನ ವರ್ಗದ ನಾಲ್ಕು ಸ್ಥಾನಗಳೂ ಏರ್ಪಡಾಗಿ ವಯಸ್ಕರ ಮತದಾನದ ಪದ್ಧತಿ ಮೇಲೆ ಚುನಾವಣೆಗಳು ನಡೆಯಲಿವೆ. ಈ ಸಂಬಂಧವಾದ ವೇಳಾಪಟ್ಟಿಯನ್ನು ಪೌರಸಭಾ ಚುನಾವಣಾಧಿಕಾರಿಗಳು ಸಧ್ಯದಲ್ಲೇ ಪ್ರಕಟಿಸಲಿರುವರು.

ಚಿನ್ನದ ಗಣಿಯಲ್ಲಿ ಪುನಃ ಆಸ್ಫೋಟನೆ

ಕೋಲಾರದ ಉರಿಗಂ ಚಿನ್ನದ ಗಣಿಯಲ್ಲಿ ಮೊನ್ನೆ ಶಿಲಾ ಸ್ಫೋಟನೆಯಾಗಿ ಒಬ್ಬ ಕಾರ್ಮಿಕನು ಮಡಿದನೆಂದೂ, ಇನ್ನಿಬ್ಬರಿಗೆ ಗಾಯಗಳಾಗಿರುವುವೆಂದೂ ತಿಳಿದುಬಂದಿದೆ.

ಪ್ಲೀಡರ್ ಪರೀಕ್ಷೆಗೆ ಹೆಚ್ಚು ಶುಲ್ಕ

ಲೋಕಲ್ ಸರ್ವಿಸ್ ಮತ್ತು ಪ್ಲೀಡರು ಪರೀಕ್ಷೆಗಳ ಫೀಜನ್ನು ೧೦ ರಿಂದ ೧೫ ಕ್ಕೂ ಮತ್ತು ೭ ರಿಂದ ೮ ಕ್ಕೂ ಹೆಚ್ಚಿಸಲಾಗಿದೆ. ಇತ್ತೀಚಿಗೆ ಹೆಚ್ಚುವರಿ ಖರ್ಚುಗಳು ಸರ್ಕಾರಕ್ಕೆ ಆಗುತ್ತಿರುವುದರಿಂದ ಈ ರೀತಿ ಶುಲ್ಕದ ದರವನ್ನು ಏರಿಸಲಾಗಿದೆ.

ಕ್ಷಾಮ ಪರಿಹಾರ ನಿಧಿಗೆ ಸಹಾಯ

ಮುಖ್ಯ ಮಂತ್ರಿಗಳ ಕ್ಷಾಮ ಪರಿಹಾರ ನಿಧಿಗಾಗಿ ಮೈಸೂರು ಇಂದ್ರ ಭವನದ ಶ್ರೀ ಬದರೀ ಪ್ರಸಾದ್ ಮತ್ತು ಶ್ರೀ ರಾಮಾಂಜುಲರವರು ತಲಾ ನೂರು ರೂಪಾಯಿಗಳನ್ನು ಉಪಕಾರವಾಗಿ ಕೊಟ್ಟಿರುತ್ತಾರೆ.

ಐದು ಮಕ್ಕಳ ಜನನ

ಬ್ರೆಜಿಲ್ ದೇಶದ ರಾಜಧಾನಿ ರಿಯೊ ಡಿಜನೈರೊವಿನ ಆಸ್ಪತ್ರೆಯೊಂದರಲ್ಲಿ ಒಬ್ಬ ಸ್ತ್ರೀಯು ೫ ಹೆಣ್ಣು ಮಕ್ಕಳನ್ನು ಏಕಕಾಲದಲ್ಲಿ ಪ್ರಸವಿಸಿರುವಳು.

ಸಧ್ಯದಲ್ಲೇ ಮಾ|| ಸ್ಟಾಲಿನ್ನರ ನಿವೃತ್ತಿ ?

ರಷ್ಯದ ಕಮ್ಯೂನಿಸ್ಟ್ ಪಕ್ಷವು ಸಧ್ಯದಲ್ಲೇ ಪುನರ್‍ರಚಿಸಲ್ಪಡುವುದೆಂದೂ, ಮಾರ್ಷಲ್ ಸ್ಟಾಲಿನ್ನರು ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನದಿಂದ ನಿವೃತ್ತಿ ಹೊಂದಿ, ಜಾರ್ಜ ಮಾಲೆಂಕೊವರು ಪ್ರಧಾನ ಕಾರ್ಯದರ್ಶಿಯಾಗಲಿರುವರೆಂದೂ ವರದಿಯಾಗಿದೆ. ಸ್ಟಾಲಿನ್ನರು ಪಕ್ಷದ ಅಧ್ಯಕ್ಷ ಸಮಿತಿಯ ಮುಖ್ಯಸ್ಥರಾಗಿ, ಅವರ ಹಿರಿಯ ಸಲಹೆಗಾರರಾಗಿ ಮಾತ್ರ ಉಳಿಯುವರು. ಆ ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಗೆ ಹೆಚ್ಚು ಅಧಿಕಾರವಿರುತ್ತದೆ.

ಹಿಮಾಲಯದ ಮೇಲೆ ನೆಹರೂ ವಿಮಾನ ಯಾತ್ರೆ

ಪ್ರಧಾನಿ ಪಂಡಿತ ನೆಹರೂರವರು ಬ್ರಿಟನ್ನಿನ ಕಾಮೆಟ್ ಜೆಟ್ ವಿಮಾನದಲ್ಲಿ ಕುಳಿತು ನೆನ್ನೆ ಹಿಮಾಲಯ ಪರ್ವತದ ಮೇಲೆ ೧|| ಘಂಟೆಯ ಕಾಲ ಯಾತ್ರೆ ಮಾಡಿದರು. ಅವರು ಬದರೀನಾಥ ಕ್ಷೇತ್ರವನ್ನು ಬಳಸಿ, ೨೫,೬೪೫ ಅಡಿ ಎತ್ತರವಿರುವ ನಂದಾದೇವಿ ಶಿಖರವನ್ನು ನೋಡಿಬಂದರು. ಅವರೊಡನೆ ಅವರ ಪುತ್ರಿ ಇಂದಿರಾ ಗಾಂಧಿ, ಕೇಂದ್ರ ಆರೋಗ್ಯ ಮಂತ್ರಿ ಅಮೃತ್‍ಕೌರ್‌ರವರೂ ಇದ್ದರು.

ಗೋಲ್ಕೊಂಡದಲ್ಲಿ ಕಾಂಗ್ರೆಸ್ ಅಧಿವೇಶನ

ಹೈದರಾಬಾದಿನ ಸುಪ್ರಸಿದ್ಧ ಗೋಲ್ಕೊಂಡ ಕೋಟೆಯ ಬಳಿ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನವು ಬರುವ ಜನವರಿಯಲ್ಲಿ ನಡೆಯುವುದು.

ಟೆಹರಾನಿನಲ್ಲಿ ಮಾರ್ಷಲ್ ಲಾ ಜಾರಿ

ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿ ಮಾರ್ಷಲ್ ಲಾವನ್ನು ಒಂದು ವಾರ ಕಾಲ ಜಾರಿ ಮಾಡಲಾಗಿದೆ. ಅಲ್ಲಿನ ವಿದೇಶಾಂಗ ಮಂತ್ರಿಯು ರಾಜೀನಾಮೆಯನ್ನು ಸಲ್ಲಿಸಿರುವರು.

ರಾಜಪ್ರಮುಖರ ಸ್ಥಾನದ ರದ್ದಿಗೆ ಗಮನವಿಲ್ಲ

ಬಿ. ಸಂಸ್ಥಾನಗಳಲ್ಲಿ ರಾಜ ಪ್ರಮುಖರ ಹುದ್ದೆಗಳನ್ನು ರದ್ದುಗೊಳಿಸುವ ವಿಷಯವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಗಮನಿಸಿರುವುದಿಲ್ಲವೆಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಬಲವಂತರಾಯ್ ಮೆಹತಾರವರು ತಿಳಿಸಿರುವರು. ಈ ವಿಷಯವನ್ನು ಈಗಲೇ ಗಮನಿಸಬೇಕಾಗಿಲ್ಲವೆಂದು ತಾವು ಅಭಿಪ್ರಾಯ ಪಡುವುದಾಗಿ ಅವರು ಹೇಳಿರುವರು.

ಪಿ ಗೋಪಾಲಕೃಷ್ಣಶೆಟ್ಟರಿಗೆ ಅಭಿನಂದನೆ

ಮೈಸೂರಿನ ಹಿರಿಯ ಶಾಸನಸಭೆಯ ಉಪಾಧ್ಯಕ್ಷರಾಗಿರುವ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರನ್ನು ಅಭಿನಂದಿಸಲು ನೆನ್ನೆ ನಗರದ ಪತ್ರಿಕೋದ್ಯೋಗಿಗಳ ಸಂಘದ ಸಭೆಯು ಶ್ರೀ ಆರ್ ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಮಾತನಾಡಿ ಶ್ರೀ ಶೆಟ್ಟರ ಗುಣಾತಿಶಯಗಳನ್ನು ಹೊಗಳಿದರು. ಅವರು ಉತ್ತರವಿತ್ತು, ತಮ್ಮನ್ನು ಅಭಿನಂದಿಸಿದುದಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ನಗರದಲ್ಲಿ ಪುರಸಭೆಯವರಿಂದಲೇ ಸಿಟಿ ಬಸ್ಸು ವ್ಯವಸ್ಥೆ

ಪುರಸಭಾಧಿವೇಶನದಲ್ಲಿ ಸಲಹೆ

ಮೈಸೂರು ೨೦

ನೆನ್ನೆ ನಡೆದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ಪುರಸಭಾ ಕಮಿಷನರು ಕಳೆದ ಸಾಲಿನ ಆಡಳಿತದ ವರದಿಯನ್ನು ಸಭೆಯ ಮುಂದಿಟ್ಟರು ವರದಿಯಲ್ಲಿ ಕೆಳಗೆ ಕಂಡ ವಿಷಯಗಳನ್ನು ಸೂಚಿಸಲಾಗಿತ್ತು —

ಕಳೆದ ಸಾಲಿನಲ್ಲಿ ಪುರಸಭೆಯು ನಾನಾ ವಿಷಯಗಳ ಬಗ್ಗೆ ಒಟ್ಟು ೬೩ ನಿರ್ಣಯಗಳನ್ನು ಮಾಡಿತು ಆ ವರ್ಷ ಬಂದ [illegible] ರೂ ಗಳ ಪೈಕಿ ಸಾರ್ವಜನಿಕ [illegible] ಕಾರ್ಯಗಳಿಗೆ [illegible] ರೂ ಗಳನ್ನೂ ಮತ್ತು ಸಾರ್ವಜನಿಕ ಆರೋಗ್ಯ ಕಾರ್ಯಗಳಿಗೆ [illegible] ರೂ. ಗಳನ್ನು ಮತ್ತು ಪುರಸಭೆಯು ಮಾರ್ಕೆಟ್ಟು ಸಾಲಗಳನ್ನು ತೀರಿಸಲು [illegible] ರೂ ಗಳನ್ನೂ ಖರ್ಚು ಮಾಡಲಾಗಿದೆ ಕಳೆದ ವರ್ಷ ನಗರದಲ್ಲಿ ಮನೆಗಳ ಸಂಖ್ಯೆ ಹೆಚ್ಚಿದೆ ಮತ್ತು ಬಾಲಿ ನಿವೇಶನಗಳ ಸಂಖ್ಯೆ ಕಡಿಮೆಯಾಗಿದೆ ಹೊಸ ಸುಂಕದ ತೆರಿಗೆಗಳನ್ನು ವಿಧಿಸ್ಸೂ ಹಾಕಿಲ್ಲ ಕಳೆದ ವರ್ಷ ಒಟ್ಟು [illegible] ನಲ್ಲಿ ಕಸಕ್ಕೆ [illegible] ಮತ್ತು [illegible] ನಲ್ಲಿಗಳೂ ಇದ್ದವು ಆರೋಗ್ಯ ಇಲಾಖೆಯವರು ರೋಗ ನಿರೋಧ ಕಾರ್ಯಕ್ರಮವನ್ನು ಕೈಗೊಂಡಿದ್ದರು

ರಾಜಧಾನಿಯಲ್ಲಿ ಹೋದ ವರ್ಷ ಪ್ಲೇಗಿನಿಂದ [illegible] ಜನರೂ, ಕಾಲರಾದಿಂದ [illegible], ಡಿಫ್ತೀರಿಯಾದಿಂದ [illegible] ಮತ್ತು [illegible] ಜ್ವರದಿಂದ [illegible] ಜನರು ಅದು [illegible] ಒಟ್ಟು [illegible] ಜನ ಶಾಲಾ ಬಾಲಕರನ್ನು [illegible] ಪರೀಕ್ಷಿಸಲಾಯಿತು ಕಳೆದ ವರ್ಷ ಮಂಡಿ ಮತ್ತು [illegible] ಬದಲು ಜಲಪೂರೈಯಲ್ಲಿ [illegible] ಯನ್ನು ಕಟ್ಟಲಾಯಿತು

ಮಾಹೆಯಾನ [illegible] ರೂ ಖರ್ಚಿನಲ್ಲಿ [illegible] ಜನ ಬಡವರಿಗೆ ಆಹಾರ ಧಾನ್ಯಗಳನ್ನು ಂಚಲಾಯಿತು ಸುಮಾರು [illegible] ಜನ [illegible] ಕರನ್ನು [illegible] ಕೇಂದ್ರಕ್ಕೆ [illegible]

ಕಥೆಯನ್ನು ಹೇಳುವ ಟೆಲಿಫೋನು

ವಿಯನ್ನಾದಲ್ಲಿ ಸ್ವತಃ ಕತೆಗಳನ್ನು ಹೇಳುವ ಟೆಲಿಫೋನ್ ವ್ಯವಸ್ಥೆಯೊಂದನ್ನು ಏರ್ಪಡಿಸಲಾಗಿದೆಯೆಂದು ವರದಿ ಬಂದಿದೆ ಟೆಲಿಫೋನಿನ ಡಯಲನ್ನು ಗೊತ್ತಾದ ಒಂದು ನಂಬರಿಗೆ ತಿರುಗಿಸಿದರೆ, ಅದು ತಾನಾಗಿಯೇ ಕಥೆ ಹೇಳುವುದೆಂದೂ, ಈ ರೀತಿ ನಾರಕ್ಕೊಂದು ಹೊಸ ಕಥೆಯನ್ನು ಪ್ರತಿ ವಾರದಲ್ಲೂ ಕೇಳಬಹುದೆಂದು ಹೇಳಲಾಗಿದೆ

ಯಿತು

ವರದಿಯ ಬಗ್ಗೆ ಶ್ರೀ ಪಿ ಸೀತಾರಾಮಯ್ಯನವರು ಮಾತನಾಡುತ್ತಾ ಸರ್ಕಾರದವರು ಪುರಸಭೆಯವರ ಕಾಂಟ್ರೋಲ್ ಗೊಟ್ಟರದ ಕರ್ಯಾರಿಕೆಗೆ ಸಹಾಯ ಮಾಡಬೇಕೆಂದು ತಿಳಿಸಿ ನಗರದಲ್ಲಿರುವ ಮೋಟಾರು ಮುಂತಾದ ವಾಹನಗಳ ಮೇಲೆ ಹಾಕಲ್ಪಡುತ್ತಿರುವ ತೆರಿಗೆಯಲ್ಲಿ ಪುರಸಭೆಗೂ ಒಂದು ಭಾಗವನ್ನು ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ಹೇಳಿದರು ಮದ್ರಾಸ್ ಮುಂತಾದ ನಗರಗಳಲ್ಲಿ ನಮ್ಮದಲ್ಲಿಯೇ ಬಾಡಿಗೆ ಬರುವಂತೆ ಮೈಸೂರಿನಲ್ಲೂ ಪುರಸಭೆಯವರೂ ಸಿಟಿ ಬಸ್ ಸರ್ವೀಸನ್ನು ನಡೆಸಬೇಕೆಂದು ಅವರ [illegible] ಶ್ರೀ [illegible] ಶ್ರೀನಿವಾಸಯ [illegible] ರು ಮಾತನಾಡಿ ಪುರಸಭೆಯ [illegible] ಸಲಹಾ [illegible] ಕಟವನ್ನು ಪರನಿಯ [illegible] ನ [illegible] ರಿಪೊ [illegible] ನೇಕ ಸದಸ್ಯರು ಮಾತನಾಡಿ ಹಲವು ಸಲಹೆಗಳನ್ನಿತ್ತರು ಕೊನೆಯಲ್ಲಿ ಸದಸ್ಯರ ಸಲಹೆಗಳೊಡನೆ ಕೂಡಿದ ವರದಿಯನ್ನು ಸಭೆಯು ಒಪ್ಪಬೇಕಾಗಿ ಶ್ರೀ ಪಿ ಸೀತಾರಾಮಯ್ಯನವರು ನಿರ್ಣಯವನ್ನು ತಂದರು ಈ ಆಗದ [illegible] ಅದನ್ನು ಅನುಮೋದಿಸಿದರು ಅದು ಸರ್ವಾನುಮತದಿಂದ ಅಂಗೀಕೃತವಾಯಿತು

ಜೀವನದಲ್ಲಿ ಜಿಗುಪ್ಸೆಪಟ್ಟು ಹೆಂಡತಿ, ಮಕ್ಕಳ ಇರಿತ

ಮದ್ರಾಸಿನ ಆದ್ಯಾರ್‌ನಲ್ಲಿರುವ ಸಾಬೂನು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಅನ್ನಾಮಲೈ ಎಂಬ ೩೦ ವರ್ಷ ವಯಸ್ಸಿನೊಬ್ಬನು ಜೀವನದಲ್ಲಿ ಜಿಗುಪ್ಸೆ ಹೊಂದಿ ತನ್ನ ಎರಡು ಮಕ್ಕಳನ್ನು ಇರಿದು ಕೊಂದುದಲ್ಲದೆ, ಹೆಂಡತಿ ಮತ್ತು ಇನ್ನೊಂದು ಮಗುವನ್ನು ಚಾಕುವಿನಿಂದ ಗಾಯಗೊಳಿಸಿ, ತಾನೂ ಪ್ರಾಣಕ ಕುಡಿದು ಆತ್ಮಹತ್ಯೆ ಮಾಡಿಕೊಳ್ಳಲೆತ್ನಿಸಿದಾಗ ಆತನನ್ನೂ ಅವನ ಪತ್ನಿ ಮತ್ತು ಮಗುವನ್ನೂ ಆಸ್ಪತ್ರೆಗೆ ಸಾಗಿಸಲಾಯಿತೆಂದು ವರದಿಯಾಗಿದೆ

ಸುಹಾಸಮಲ್ಲರ ಮುಖಭಂಗ

ಧಾರವಾಡದ ಜಯಕರ್ನಾಟಕ ಪತ್ರಿಕೆಯ ಮಾಜಿ ಸಂಪಾದಕರೂ ಕರ್ನಾಟಕ ಏಕೀಕರಣದ ಧುರೀಣರೂ ಆದ ಶ್ರೀ ಆಲೂರು ವೆಂಕಟರಾಯರನ್ನು ಪತ್ರಿಕೋದ್ಯಮಿ ಶ್ರೀ ಶ್ರೀನಿವಾಸ [illegible] ರವರ ಭೇಟಿ ಮಾಡಿ ಅವರಿಗೆ ಹಲವು ಮಾಮಿ [illegible] ಪ್ರಶ್ನೆಗಳನ್ನು ಹಾಕಿ ಪಡೆದ [illegible] ಉತ್ತರಗಳನ್ನು ಧಾರವಾಡದ ಸಮಾಚಾರ ಪುಸ್ತಕಾಲಯದವರು ಪುಸ್ತಕರೂಪದಲ್ಲಿ ಪ್ರಕಟಿಸಿರುತ್ತಾರೆ [illegible] ಏಕೀಕರಣದ [illegible] ಶ್ರೀ ಆಲೂರರವರ ತಮ್ಮ [illegible] ಅಭಿಪ್ರಾಯಗಳನ್ನು [illegible] ಏಕೀಕರಣ ವಿಷಯದ [illegible] ತೊಡಗಿರುವವರು ಅವಶ್ಯವಾಗಿ ಓದಲೇಬೇಕಾದ ಗ್ರಂಥವಿದು ಬೆಲೆ ನಾಲ್ಕಾಣೆ

ಮೈಸೂರು ಪೇಟೆ ಧಾರಣೆ

ಕಲ್ಲಂಗಡಿ ನೆಲಗಡಲೆ	೧೦-೦-೦	೩ ೨
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	[illegible]
ಹೊಂಗೆಬೀಜ	[illegible]	
ಉದ್ದು	[illegible]	[illegible]
ಅವರೆ	[illegible]	
ಸಲಸಂದೆ	[illegible]	[illegible]
ಕೊಬ್ಬರಿ ಕಾಯಿ		
ಸಣ್ಣ ಗಿಣ್ಣೆ	[illegible]	[illegible]
ಹುಣಸೇಹಣ್ಣು	[illegible]	[illegible]
ಜಗೆಕಾಯಿ	[illegible]	[illegible]
ತೆಂಗಿನಕಾಯಿ	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಕೆ ಎಸ್ ರಾಮಚಂದ್ರ ಸಂಗೀತ ಮಧ್ಯಾಹ್ನ ೧ ೩೦ ದಿಲ್ರುಬಾ [illegible] ನಮ್ಮ ಮೆಚ್ಚಿನ ಕೇಳುವವರು ಸಂಜೆ [illegible] ಸಂಗೀತ [illegible] ಗಾನ ವಿಹಾರ [illegible] ಬಾಣಿ ಸರ್ಕಾರ ವಿಹಾರಿ ಭಜನೆ [illegible] ಕೃಷ್ಣಮೂರ್ತಿ ಸಂಗೀತ [illegible] ಗೀತಾಮೃತ [illegible] ಚಿತ್ರ ಸಂಗೀತ [illegible] ಸೀತಾರಾಮ ಶಾಸ್ತ್ರಿಯವರ ಕಥೆ ನಾಟಕ

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು.

ಚಾಮುಂಡೇಶ್ವರೀ ಟಾಕೀಸ್
21 8 52 ರಿಂದ ಅಮೋಘ 2 ನೇ ವಾರ
ಸಿಟಾಡೆಲ್‌ರವರ ತಮಿಳು ಚಿತ್ರ
* ಆತ್ಮಶಾಂತಿ *
ಪಾತ್ರ ಕಮಾರಿ ಕೋಮಲಂ ಕೆ ರಾಮಸ್ವಾಮಿ, ಎಸ್ ಟಿ ಪಿಳ್ಳೆ

ಒಲಂಪಿಯಾ ಅಮೋಘ ಪ್ರಾರಂಭ 21-8 52 ರಿಂದ
ಪ್ರತಿ ದಿನ ಮೂರು ಆಟಗಳು
ಬೀ ಪಿ ಪಿಕ್ಚರ್ಸ್‌ರವರ ಸಿಂಬಾದ್ ದಿ ಸೈಲರ್
ಎಂಬ ಅತ್ಯುತ್ಕೃಷ್ಟವಾದ ಚಿತ್ರವರ್ಣಿಯಿಂದಲೂ ಹಾಸ್ಯದಿಂದಲೂ ಕೂಡಿದ ಅತ್ಯುತ್ತಮ ಚಿತ್ರಪಟ
ಪಾತ್ರ:— ನಾಸೀಂ ರಂಜನ್ ಮತ್ತು ಭಗವಾನ್
ಬೆಳಗಿನ ಪ್ರದರ್ಶನ - ದಿಲೀಪ್ ಕುಮಾರ್ ಪಾತ್ರ ವಹಿಸಿರುವ ಷಹೀದ್

ರಾಜಕಮಲ್ ಟಾಕೀಸ್, ಮೈಸೂರು
ಆಗಸ್ಟ್ 22ನೇ ತಾ॥ ಶುಕ್ರವಾರದಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಮಹಾತ್ಮಾರವರ ಕನ್ನಡ ಚಿತ್ರ
ಶ್ರೀ ಶ್ರೀನಿವಾಸ ಕಲ್ಯಾಣ
(ತಿರುಪತಿ ವೆಂಕಟೇಶ ಮಹಾತ್ಮೆ)
ಭೂಮಿಕೆ — ಅಮೀರ್‌ಬಾಯಿ ಕರ್ನಾಟಕಿ ಪ್ರತಿಮಾದೇವಿ, ಹರಿಣಿ ಜಯಶ್ರೀ, ಎ ಕೆ ಶ್ರೀನಿವಾಸರಾವ್, ಸಿಮ್ಮಾನಂದ ದಾಸ್, ವೀರಭದ್ರಪ್ಪ ಕೊಟ್ಟೂರು ಬಸಪ್ಪ, ಮರಿರಾವ್, ಮಹಾಬಲರಾವ್

★ ರಣಜಿತ್, ★
ಮೈಸೂರು
21-8-52 ರಿಂದ
ಅಮೋಘವಾದ
3ನೇ ವಾರ

ಲಕ್ಷಾಂತರ ಜನರು ನೋಡಿ ನಲಿಯುತ್ತಿರುವ
ಮೆಹಬೂಬ್ ಪ್ರೊಡಕ್ಷನ್ಸ್‌ರವರ
★ ಆನ್ ★
ಪಾತ್ರ ನಿಮ್ಮಿ ಪ್ರೇಂನಾಥ್, ನಾದಿರಾ ದಿಲೀಪ್ ಕುಮಾರ್ ಮತ್ತು ಇತರರು
[AN ALL INDIA FILM CORPORATION RELEASE]

ಗೌರಿ ಹಬ್ಬಕ್ಕಾಗಿ:— ಹೊಸ ಡಿಸೈನಿನ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ನಾಗಪುರ, ಪೂನಾ, ಡಿಂಡಿಗಲ್ ಸೀರೆಗಳೂ ಬಂದಿವೆ
★ M. V. ಭೋಜಯ್ಯ ಬಿ ಎ
ಇಂಡಿಯನ್ ಬ್ಯಾಂಕ್ ಎದುರು ಮೈಸೂರು

Edited Printed and Published by A R. Nagarajan at Sadhvi Press, 1½ Subbiah Road Mysore.

ಬಿಲಪ್ಪೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೨ ೮-೧೯೫೨ [ಸಂಚಿಕೆ ೨೨

ಉತ್ತರ ಕೊರಿಯ ರಾಜಧಾನಿ ಮೇಲೆ ಬಾಂಬು

ನೂತನ ಟೆಲಿಫೋನ್ ಕೇಂದ್ರದ ಆರಂಭೋತ್ಸವ

...ದಕೇರಿಗೆ ಟ್ರಂಕ್ ಟೆಲಿಫೋನ್ ಸಂಬಂಧ

ಮೈಸೂರು ೨೨

...ಕೇಂದ್ರ ಸರ್ಕಾರದ ಸಾರ್ವಜನಿಕ ಸಚಿವರಾದ ಶ್ರೀ ಜಗಜೀವನರಾಂರವರು ...ನ ಸಂಜೆ ಇಲ್ಲಿನ ಸರ್ವೀಸಾನೆ ಕಟ್ಟಡದ ...ಟೆಲಿಫೋನ್ ಕೇಂದ್ರದ ಹೊಸ ಕಛೇರಿಯ ...ಭೋತ್ಸವವನ್ನು ನೆರವೇರಿಸಿದರು. ...ಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ...ರು ಅಗ್ರಾಸನವನ್ನು ವಹಿಸಿದ್ದರು

...ಂಚೆ ಮತ್ತು ತಂತಿ ಇಲಾಖೆಯ ಪ್ರಧಾ...ನ್ಯಕ್ಟರವರಾದ ಶ್ರೀ ಕೃಷ್ಣಪ್ರಸಾದ್‌ರವರ ...ಸ್ವಾಗತ ಭಾಷಣ ಮಾಡಿ, ಹೊಸ ಟೆಲಿ...ಫೋನ್ ಕೇಂದ್ರದ ವ್ಯಾಪ್ತಿಯನ್ನು ವಿವರಿಸಿ... ನಗರದಲ್ಲಿ ಇದುವರೆಗೆ ಕೇವಲ ೪೦೦ ...ಫೋನುಗಳು ಮಾತ್ರ ಇದ್ದುವೆಂದೂ, ...ಗಳನ್ನು ಆರು ನೂರಕ್ಕೆ ಹೆಚ್ಚಿಸಲಾಗು...ವೆಂದೂ ಅವರು ತಿಳಿಸಿ ಟೆಲಿಫೋನು ಸ್ಥ...ಯ ಇನ್ನು ಮುಂದೆ ಹೆಚ್ಚು ಸಮರ್ಪ...ಕವಾಗಿ ಕೆಲಸ ಮಾಡುವಂತೆ ಏರ್ಪಡಿಸಲಾ...ವುದೆಂದು ಹೇಳಿದರು. ಈಚೆಗೆ ದಾವಣ...ಗೆರೆ, ಚಿತ್ರದುರ್ಗಗಳಲ್ಲಿಯೂ ಟೆಲಿಫೋನು ...ಗಳನ್ನು ಇಟ್ಟಿರುವ ಅಂಶವನ್ನು ಅವರು ...ತಿ ಮುಂದೆ ಎಲ್ಲಾ ಜಿಲ್ಲಾ ಕೇಂದ್ರಗಳ...ಲ್ಲೂ, ಅರಸೀಕೆರೆ, ರಾಮನಗರ ಕಡೂರು ತಿಪಟೂರು ಭದ್ರಾವತಿ ಹರಿಹರ ...ದನಹುಂಡೆ, ಚೆನ್ನಪಟ್ಟಣ ಮತ್ತು ತು...ಮಕೂರು ಇವುಗಳಲ್ಲಿಯೂ ಸಹ ಈ ಸೌಕರ್ಯ ...ವ ಕಲ್ಪಿಸಲಾಗುವುದೆಂದು ತಿಳಿಸಿದರು ...ಗಳೂರು ನಗರದಲ್ಲಿ ಈಗಿರುವ ೧೬೦೦ ...ಲಿಫೋನುಗಳನ್ನು ನಾಲ್ಕು ಸಾವಿರಕ್ಕೆ ...ಚ್ಚಿಸಲಾಗುವುದೆಂದು ಹೇಳಿದರು ಟೆಲಿ...ಫೋನ್ ಬಾಡಿಗೆ ಮತ್ತು ಟ್ರಂಕ್ ದರಗಳು ...ಇಡೀ ಭಾರತ ಪ್ರಮಾಣದಲ್ಲಿರುತ್ತದರಿಂದ ...ಮೈಸೂರು ಬೆಂಗಳೂರುಗಳಿಗೆ ಸ್ವಲ್ಪ ಹ...ರ ದೀಕ್ಷಾವುದಾದರೂ ನೊರೆಗನ...ನ್ಯವಾಗಿರುವುದೆಂದು ಹೇಳಿದರು ಈ ...ಸ ಉದ್ಯಮದಲ್ಲಿ ಎಲ್ಲರೂ ಸಹಕರಿಸಬೇ...ಕು. ಅವರು ಪ್ರಾರ್ಥಿಸಿದರು

ಶ್ರೀ ಜಗಜೀವನರಾಂರವರು ತಮ್ಮ ಭಾ...ಷಣದಲ್ಲಿ ಟೆಲಿಫೋನ್ ಸಾಧನವು ಬೇಗನೆ ...ಸಮಾಚಾರಗಳನ್ನು ರವಾನಿಸಲು ...ಅಗತ್ಯವಾದ ಆಧುನಿಕ ಉಪಕರಣವಾಗಿ...ರುವುದಾಗಿ ಹೇಳಿದರು ಅದನ್ನು ಸ್ಥಾಪಿಸ...ಲು ...ಲ್ಲಾ ಕಡೆಗಳಿಂದಲೂ ಹೆಚ್ಚು ಹೆಚ್ಚು ...ಅರ್ಜಿಗಳು ಬರುತ್ತಿರುವುದೇ ಇದಕ್ಕೆ ಸಾ...ಕ್ಷಿ ಎಂದು ನುಡಿದರು ಹೊಸ ಟೆಲಿಫೋನು ...ಗಳಿಗಾಗಿ ಜನರು ಈಗಾಗಲೇ ... ಹಣವನ್ನು ಮುಂಗಡವಾಗಿ ಕೊಟ್ಟಿರು...ವ..., ಆದರೆ ಸಾಮಗ್ರಿಗಳ ಅಭಾವದಿಂ...ದ ...ಬೇಡಿಕೆಗಳನ್ನು ಕೂಡಲೇ ಪೂ...ರೈಸಲು ಅವಕಾಶವಿಲ್ಲವೆಂದೂ ತಿಳಿಸಿದರು ...ಗಳೂರಿನ ಕಾರ್ಖಾನೆಯಲ್ಲಿ ತಯಾರಾ...ಗುವ ಸಾಮಗ್ರಿಗಳ ಸಹಾಯದಿಂದ ...ವರ್ಷಗಳಲ್ಲಿ ಈ ಯೋಜನೆಯನ್ನು ವಿಸ್ತ...ರಿಸುವುದೆಂದೂ ಕಾಲಕ್ರಮದಲ್ಲಿ ವಿ...ದೇಶದ ಇತರ ಭಾಗಗಳಿಗೂ ಸಾಮಾ...ಗ್ರಿಗಳನ್ನು ಒದಗಿಸಲಾಗುವುದೆಂದೂ ಅವ...ರು ತಿಳಿಸಿದರು ಅಮೆರಿಕಾ ದೇಶದಲ್ಲಿ ಸಾ...ವಿರ ... ಜನರೂ, ಇಂಗ್ಲೆಂಡಿನಲ್ಲಿ ೧೧... ಟೆಲಿಫೋನುಗಳನ್ನು ಹೊಂದಿರುವಾ...ಗ ...ದೇಶದಲ್ಲಿ ೨ ಸಾವಿರಕ್ಕೆ ಒಬ್ಬರು ...ಅದನ್ನು ಹೊಂದಿರುವರೆಂದು ಅವ...ರು ...ಗೊಳಿಸಿದರು ಟೆಲಿಫೋನ್ ಯೋಜನೆಯ ...ರಿಂದ ಮೈಸೂರು ಸಂಸ್ಥಾನದ ...ರ್ಯ ಮತ್ತು ಅಭ್ಯುದಯದ ಸಾಧ...ನೆ ಸಾಧ್ಯವಾಗಲೆಂದು ಅವರು ಹಾರೈ...ಸಿದರು

...ದಗಿನ ರಾಜಧಾನಿ ಮಡಿಕೇರಿಗೆ ಏರ್ಪ...ಡಿಸಿರುವ ಹೊಸ ಟೆಲಿಫೋನ್ ವ್ಯವಸ್ಥೆ ...ಅವರು ಆರಂಭಗೊಳಿಸಿ ಅದೇ ಕಾ...

ಕಾಂಗ್ರೆಸ್ ಅಧ್ಯಕ್ಷತೆಗೆ ವಿಜಯಲಕ್ಷ್ಮಿ ಪಂಡಿತ್

ಅಖಿಲ ಭಾರತ ಕಾಂಗ್ರೆಸ್ಸಿನ ಬರುವ ಅಧಿವೇಶನದ ಅಧ್ಯಕ್ಷತೆಗೆ ಪ್ರಧಾನಿ ನೆಹರೂರವರ ಸಹೋದರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಹೆಸರನ್ನು ಸೂಚಿಸಲಾಗುವುದೆಂದು ತಿಳಿದುಬಂದಿದೆ

ಜಗಜೀವನರಾಂರವರ ಕಾರ್ಯಕ್ರಮ

ಕೇಂದ್ರ ಮಂತ್ರಿ ಶ್ರೀ ಜಗಜೀವನರಾಂ ಇಂದು ಬೆಳಿಗ್ಗೆ ನಗರದ ಪ್ರಧಾನ ಅಂಚೆ ಕಛೇರಿಗೆ ಭೇಟಿಯಿತ್ತರು ಈ ರಾತ್ರಿ ...ಕ್ಕೆ ಇಲ್ಲಿನ ರೇಡಿಯೋವಿನಲ್ಲಿ ಅವರ ಸಂದೇಶ ಭಾಷಣವು ಇದೆ

ಎಂ ವಿ ಕೃಷ್ಣಪ್ಪನವರು

ಕೇಂದ್ರ ಉಪ ಆಹಾರ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ನೆನ್ನೆ ರಾತ್ರಿ ಇಲ್ಲಿಗೆ ಆಗಮಿಸಿ ಇಂದು ಬೆಂಗಳೂರಿಗೆ ತೆರಳಿದರು ಅವರ ಮೈ|| ಪ್ರ|| ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಸಿ ದಾಸಪ್ಪನವರನ್ನು ಭೇಟಿ ಮಾಡಿದ್ದರು

ಅದಲ್ಲದೆ ಇಲ್ಲಿ ಸಹಯುಕ್ತಿಸ್ತ ಸಮಾರಂಭದ ಬಳಿಕ ಕೊಡಗಿನ ಮಂತ್ರಿ ಶ್ರೀ ಕೆ ಮಲ್ಲಪ್ಪನವರೊಡನೆ ಟೆಲಿಫೋನ್ ಮೂಲಕ ಸಂಭಾಷಣೆ ನಡೆಸಿದರು ನಂತರ ಹೊಸ ಬೆಂಗಳೂರು ಟೆಲಿಫೋನ್ ಎಕ್ಸ್‌ಚೇಂಜಿನ ಆರಂಭೋತ್ಸವವನ್ನು ನೆರವೇರಿಸಿದರು

ಅಧ್ಯಕ್ಷರಾದ ಶ್ರೀ ಕೆ ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ಸೋಷಿಯಲಿಸ್ಟ್ ಕಟ್ಟಡವನ್ನು ಈ ಕೇಂದ್ರಕ್ಕಾಗಿ ಒದಗಿಸಿಕೊಟ್ಟ ಶ್ರೀ ಪರ್ವತರಾಜರಿಗೆ ವಂದನೆಗಳನ್ನರ್ಪಿಸಿದರು ಮೈಸೂರು ಸಂಸ್ಥಾನದಲ್ಲಿ ಒಂದೆ ಕಟ್ಟಡಗಳನ್ನು ಇಲ್ಲಿನ ಕಲೆ ಶಿಲ್ಪ ಮತ್ತು ಸಂಸ್ಕೃತಿಗಳಿಗೆ ಅನುಗುಣವಾಗಿ ಕಟ್ಟಲಾಗುತ್ತಿಲ್ಲವೆಂದೂ ಕಳೆದ ೧೦೦ ವರ್ಷಗಳಿಂದ ಈಚೆಗೆ ಪಾಶ್ಚಿಮಾತ್ಯ ಬರ್ಗರ್ ಎಂಬ ಅರ್ಮೇನಿಯರೊಬ್ಬರ ಸಲಹೆಯಂತೆ ಕಟ್ಟಲಾಗಿರುವ ಕಟ್ಟಡಗಳಾ... ರಚನೆಯೂ, ನಗರಗಳ ಹಲವು ಭಾಗಗಳ ರಚನೆಯೂ ಜಿಗುಪ್ಸೆಯುಂಟುಮಾಡುತ್ತಿರುವುದೆಂದು ಹೇಳಿ ಮುಂದೆ ರಚನೆಯಾಗುವ ಕಟ್ಟಡಗಳು ಸಂಸ್ಥಾನದ ಆದರ್ಶವನ್ನು ಅನುಸರಿಸಲೆಂದು ಹಾರೈಸಿದರು

ಪೋಸ್ಟ್‌ಮಾಸ್ಟರ್ ಜನರಲ್ ಶ್ರೀ ಟಿ ವಿ ರಾಘವರವರಿಂದ ವಂದನಾರ್ಪಣೆಯಾದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ನೂತನ ಕೇಂದ್ರದ ಯಂತ್ರ ಮತ್ತು ಕಾರ್ಯಕಲಾಪಗಳನ್ನು ಅತಿಥಿಗಳು ವೀಕ್ಷಿಸಿದರು

ಶ್ರೀನಗರಕ್ಕೆ ಪಂಡಿತ್ ನೆಹರೂ

ಒಂದು ವಾರದ ವಿಶ್ರಾಂತಿಗಾಗಿ ಪ್ರಧಾನಿ ನೆಹರೂ ಮತ್ತು ವಿದ್ಯಾ ಮಂತ್ರಿ ಆಜಾದ್‌ರವರು ಶ್ರೀನಗರಕ್ಕೆ ತೆರಳಿರುವರು

ಹುಜೂರ್ ಟ್ರೆಜರಿ ಜಾಗಟೆಯ ಕಳುವು

ಬೆಂಗಳೂರಿನ ಅಠಾರಾ ಕಚೇರಿಯ ಕಟ್ಟಡದಲ್ಲಿರುವ ಸ್ಟೇಟ್ ಹುಜೂರು ಟ್ರೆಜರಿಯಲ್ಲಿದ್ದ ...ರಿ ಜಾಗಟೆ, ನಗರದ ಹಳಗೆ ಮತ್ತು ಕೋಲುಗಳ ಸಮೇತ ನೆನ್ನೆ ಮ... ...ವಾಗಿರುವುದೆಂದು ಹೇಳಲಾಗಿದೆ ಈ ...ಳಾದ ಜಾಗಟೆಯು ನೂರಾರು ಜನರು ನೂರು ವಷ್ಟು ಭಾರವಾಗಿದ್ದಿತೆಂದು ಹೇಳಲಾಗಿದೆ. ಈಗ ಅದರ ಬದಲು ರೈಲು ಕಂಬಿಯ ತುಂಡನ್ನು ತಗುಲಿ ಹಾಕಲಾಗಿದೆ

ಲಾಯರ್ ಕೃಷ್ಣಪ್ಪನವರ ಖುಲಾಸೆ

ಬೆಂಗಳೂರಿನ ಮಹಿಳೆಯೊಬ್ಬಳ ಮನೆಗೆ ಅತಿಕ್ರಮ ಪ್ರವೇಶ ಮಾಡಿ ಆಕೆಯ ಮಾನಭಂಗ ಮಾಡಲೆತ್ನಿಸಿದರೆಂದು ಶಿಕ್ಷೆಗೆ ಗುರಿಯಾಗಿದ್ದ ಇಲ್ಲಿನ ವಕೀಲರಾದ ಶ್ರೀ ಎಸ್ ಕೃಷ್ಣಪ್ಪನವರನ್ನು ಹೈಕೋರ್ಟಿನವರು ಖುಲಾಸೆ ಮಾಡಿ, ಅವರ ಶಿಕ್ಷೆಯನ್ನು ವಜಾ ಮಾಡಿರುತ್ತಾರೆ ಸಂದೇಹಕ್ಕೆ ಅವಕಾಶವಿಲ್ಲದಂತೆ ರುಜುವಾತು ಬಂದಿಲ್ಲವೆಂದು ಹೈಕೋರ್ಟಿನ ಅಭಿಪ್ರಾಯವಾಗಿದೆ ಇವರಿಗೆ ಮೊದಲು ೩ ತಿಂಗಳು ಕಠಿಣ ಸಜಾ, ಸಾವಿರ ರೂ. ದಂಡವನ್ನು ವಿಧಿಸಲಾಗಿತ್ತು ಸೆಷನ್ಸಿನಲ್ಲಿ ಈ ಸಜಾವನ್ನು ೧ ತಿಂಗಳಿಗೆ ಕಡಿಮೆ ಮಾಡಿ, ದಂಡವನ್ನು ಖಾಯಂ ಮಾಡಲಾಗಿತ್ತು

ಪ್ರಾರ್ಥನಾ ಸಭೆ

ಅರಮನೆ ಸಂಚಗವಿ ಮಠದ ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ಪುಣ್ಯಸ್ಮರಣಾರ್ಥವಾಗಿ ಪ್ರಾರ್ಥನಾ ಸಭೆಯನ್ನು ನಾಳೆ ಸಂಜೆ ೬ ಗಂಟೆಗೆ ಗಂಗಾಧರಾಚಾರ್ಯ ಸ್ಮಾರಕ ಭವನದಲ್ಲಿ ಏರ್ಪಡಿಸಲಾಗಿದೆ ಸರ್ವ ವರ್ಗಗಳ ಪ್ರಸಿದ್ಧ ವಿದ್ವಾಂಸರುಗಳಿಂದ ಭಾಷಣಗಳು ನಡೆಯುವುವು ಮೈಸೂರು ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಹೆಚ್ ಸಿದ್ದಯ್ಯನವರು ಅಧ್ಯಕ್ಷತೆ ವಹಿಸುವರು

ಪ್ಯೋಂಗ್‌ಯಾಂಗ್ ಮೇಲೆ ಭಾರಿ ಧಾಳಿ

ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್‌ಯಾಂಗ್ ಮೇಲೆ ನೆನ್ನೆ ಅಮೆರಿಕದ ಸೂಪರ್ ವಿಮಾನಗಳು ೩೦೦ ಟನ್ನು ಸ್ಫೋಟಕದ ಬಾಂಬುಗಳನ್ನೂ, ಬೆಂಕಿ ಹತ್ತಿಸುವ ಬಾಂಬುಗಳನ್ನೂ ೪೦೦ ಎಕರೆ ಪ್ರದೇಶಗಳಲ್ಲಿ ಹಾಕಿದುವೆಂದು ವರದಿಯಾಗಿದೆ

ಅಪೂರ್ವ ಶಿವಲಿಂಗ

ಬೆಂಗಳೂರು ಜಿಲ್ಲೆಯ ದೇವನಹಳ್ಳಿ ಬಳಿ ಭೂಮಿಯೊಳಗೆ ಪೀಠ ಸಮೇತವಾದ ೮ ಕೋಣದ ಕರೀಕಲ್ಲಿನ ಒಂದು ಶಿವಲಿಂಗವು ದೊರಕಿದೆ ಶಿಲ್ಪ ಶಾಸ್ತ್ರವನ್ನು ತಿಳಿದವರ ಇದು ಮಹತ್ವದ್ದೆಂದು ಭಾವಿಸಿರುತ್ತಾರೆ ಅದನ್ನು ಊರಿನ ಬಳಿಗೆ ತಂದಂದಿನಿಂದ ಮಳೆಯು ಚೆನ್ನಾಗಿ ಇಲ್ಲಿ ಸುರಿಯುತ್ತಿದೆ

ಅಂಚೆ ನೌಕರರ ಸತ್ಕಾರ

ನಗರದ ಅಂಚೆ ಮತ್ತು ಕೆಳದರ್ಜೆ ನೌಕರರ ಸಂಘದವರು ನೆನ್ನೆ ಸಂಜೆ ಶ್ರೀಗಳಾದ ಜಗಜೀವನರಾಂ, ಕೆ ಹನುಮಂತಯ್ಯ ಮತ್ತು ಅಂಚೆ ಇಲಾಖೆ ಪ್ರಧಾನ ಡೈರೆಕ್ಟರ್ ಮತ್ತು ಮದರಾಸಿನ ಪೋಸ್ಟ್‌ಮಾಸ್ಟರ್ ಜನರಲ್ಲರ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಸಂಘದ ಅಧ್ಯಕ್ಷರಾದ ಡಾ|| ಮಿರ್ಜಾ ಸೂರ್ ಹುಸೇನರು ಎಲ್ಲರನ್ನೂ ಸ್ವಾಗತಿಸಿ, ಅಂಚೆ ನೌಕರರ ಹಿತ ಸಂಧನೆಗೆ ಸಹಕರಿಸಿದವರ ನೆರವನ್ನು ಕೋರಿದರು ಸತ್ಕಾರಕ್ಕಾಗಿ ಶ್ರೀ ಜಗಜೀವನರಾಂರವರು ವಂದನೆಯನ್ನು ಅರ್ಪಿಸಿದರು ಶ್ರೀ ಹನುಮಂತಯ್ಯನವರು ಭಾಷಣ ಮಾಡಿ, ಸಂಸ್ಥಾನದ ನೌಕರರ ಸ್ಥಿತಿಗತಿಗಳು ಅಂಚೆ ಇಲಾಖೆಯವರ ದರ್ಜೆಗಿಂತಲೂ ಬಹಳ ಕಡಿಮೆ ಇರುವುದೆಂದೂ, ಆದುದರಿಂದ ಅವರು ತಮ್ಮ ಬೇಡಿಕೆಗಳನ್ನು ಮುಂದಿಡುವಾಗ ತಾಳ್ಮೆಯನ್ನೂ ಸೋದರ ಭಾವವನ್ನೂ ತೋರಿಸಬೇಕೆಂದೂ ಸೂಚಿಸಿದರು

ನ್ಯಾಯಾಧೀಶರ ವರ್ಗಾವರ್ಗಿ

ಬೆಂಗಳೂರಿನ ಮುಖ್ಯ ಸಬಾರ್ಡಿನೇಟ್ ನ್ಯಾಯಾಧೀಶರಾದ ಶ್ರೀ ಹಬೀಬುಲ್ಲಾ ಖಾನರು ನಿವೃತ್ತರಾಗಲಿರುವುದರಿಂದ, ಮೈಸೂರಿನ ಅಡಿಷನಲ್ ಸಬಾರ್ಡಿನೇಟ್ ನ್ಯಾಯಾಧೀಶರಾದ ಶ್ರೀ ಎಂ ನರಸಿಂಹಸ್ವಾಮಿಯವರನ್ನು ಅವರ ಸ್ಥಾನಕ್ಕೆ ವರ್ಗಾಯಿಸಲಾಗಿದೆ ಶಿವಮೊಗ್ಗದ ಮುನ್ಸೀಫ್ ಶ್ರೀ ಪಿ ಸಿ ರಾಮಚಂದ್ರರವರನ್ನು ಶ್ರೀ ನರಸಿಂಹಸ್ವಾಮಿಯವರ ಸ್ಥಾನಕ್ಕೆ ನೇಮಿಸಲಾಗಿದೆ

ಮಹಾ ಮಸ್ತಕಾಭಿಷೇಕಕ್ಕೆ ಹಣ

ಶ್ರವಣಬೆಳಗೊಳದ ಶ್ರೀ ಗೋಮಟೇಶ್ವರ ಸ್ವಾಮಿಯವರ ಮಹಾ ಮಸ್ತಕಾಭಿಷೇಕಕ್ಕಾಗಿ ಸರ್ಕಾರದವರು ೫೦ ಸಾವಿರ ರೂ ಗಳ ಸಾಲ ಕೊಡಲಿರುವರೆಂದು ವರದಿಯಾಗಿದೆ

ತಿಮ್ಮಾಬೋವಿಯ ರಾಜೀನಾಮೆ

ಕೇಂದ್ರ ಸಂಸ್ಥಾನ ಶಾಸನ ಸಭಾ ಸದಸ್ಯ ಸ್ಥಾನಕ್ಕೆ ಶ್ರೀ ತಿಮ್ಮಾಬೋವಿಯವರು ರಾಜೀನಾಮೆಯಿತ್ತಿರುವರು ಅವರ ಸ್ಥಾನಕ್ಕೆ ಶ್ರೀ ಕೆ ಸಿ ರೆಡ್ಡಿಯವರು ಸ್ಪರ್ಧಿಸಲಿರುವರೆಂದು ಗೊತ್ತಾಗಿದೆ

ವಿಮಾನ ತಯಾರಿಕೆ ಬಗ್ಗೆ ಪ್ರಾಚೀನ ಗ್ರಂಥ

ಮಹರ್ಷಿ ಭಾರದ್ವಾಜರಿಂದ ವಿರಚಿತವಾದುದೆಂದು ಹೇಳಲಾದ ವೈಮಾನಿಕ ಪುರಾತನ ಗ್ರಂಥವೊಂದನ್ನು ಮೈಸೂರಿನ ಸಂಸ್ಕೃತಸಂಶೋಧನಾಲಯ ಡೈರೆಕ್ಟರ್ ಶ್ರೀ ಜಿ ಆರ್ ಜೋಸ್ಯರ್‌ರವರು ಹೊಂದಿರುವರು ಸುಂದರ, ಶಕುನ ಮತ್ತು ರುಕ್ಮ ಎಂಬ ಮೂರು ವಿಧದ ವಿಮಾನಗಳ ನಕ್ಷೆಗಳು ಅದರಲ್ಲಿರುವುವೆಂದು ಹೇಳಲಾಗಿದೆ ಗ್ರಂಥದಲ್ಲಿರುವ ೫೦೦ ಸೂತ್ರಗಳ ಪೈಕಿ ವಿವಿಧ ವಿಮಾನಗಳ ತಯಾರಿಕೆಯನ್ನು ೮ ಅಧ್ಯಾಯಗಳಲ್ಲಿ ಕೊಡಲಾಗಿದೆಯೆಂದೂ, ಈ ವಿಮಾನಗಳು ಮುರಿಯದೆ, ಬೆಂಕಿ ತಗುಲದೆ, ಒಡೆಯದೆ ಇರುವುವೆಂದೂ ಹೇಳಲಾಗಿದೆ ವಿಮಾನದಲ್ಲಿ ೩೧ ಭಾಗವಿರುವುದೆಂದೂ, ಶಾಖ ಮತ್ತು ಬೆಳಕನ್ನು ಗ್ರಹಿಸಬಲ್ಲ ೧೬ ಲೋಹಗಳಿಂದ ಅದನ್ನು ತಯಾರು ಮಾಡಬಹುದೆಂದೂ ಹೇಳಲಾಗಿದೆ

ಇದಲ್ಲದೆ ಕೃತಕ ವಜ್ರಗಳ ತಯಾರಿಕೆಯ ಬಗ್ಗೆಯೂ ಗ್ರಂಥಗಳು ಸಿಕ್ಕಿವೆಯೆಂದು ಹೇಳಲಾಗಿದೆ ಮಹರ್ಷಿ ಭಾರದ್ವಾಜರು ಕೃತಕ ಮಳೆಯನ್ನು ಕರೆಸುವ ವಿಧಾನವನ್ನೂ ತಿಳಿಸಿರುವರೆಂದೂ ವರದಿಯಾಗಿದೆ

ಮಹಿಳಾ ಸದನದ ವಾರ್ಷಿಕೋತ್ಸವ

ರಾಜಧಾನಿಯ ದಿವಾನರ ಅಗ್ರಹಾರದಲ್ಲಿರುವ ಮಹಿಳಾ ಸದನದ ೧೫ ನೇ ವಾರ್ಷಿಕೋತ್ಸವವು ಕಳೆದ ೧೭ ನೇ ತಾ|| ಅ|| ಭಾ|| ಮಹಿಳಾ ಸಮ್ಮೇಳನದ ಕಾರ್ಯದರ್ಶಿ, ಶ್ರೀಮತಿ ಬಿ ಕಾಮೇಶ್ವರಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು ಸ್ವಾಗತ ಭಾಷಣ, ಸಂಗೀತ ವಾರ್ಷಿಕ ವರದಿ, ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರಿಗೆ ಬಹುಮಾನಗಳ ವಿನಿಯೋಗವಾದ ನಂತರ ಅಧ್ಯಕ್ಷರು ಮಾತನಾಡಿ ಸದನದ ಸಂಸ್ಥಾಪಕರಾದ ಶ್ರೀ ಎಂ ಡಿ ಗೋಪಾಲಾಚಾರ್ಯರ ಮತ್ತು ಅವರ ಪತ್ನಿ ಶ್ರೀಮತಿ ಎಂ ಡಿ ರಂಗನಾಯಕಮ್ಮನವರ ಸೇವೆಯನ್ನು ಪ್ರಶಂಸಿಸಿದರು ನಾಟಕ ಪ್ರದರ್ಶನವೊಂದು ಏರ್ಪಡಿಸಲಾಗಿದ್ದಿತು

SRI GAYATHRI

From 23 8 52 Daily 2 Shows

20th Century's Most Powerful Picture

In Technicolor

[For Adults Only]

DAVID & BATHSHEBA

With — Gregory Peck

PLEASE NOTE —

Rates of Admission for this Picture Only

Box 3 9 0 Balcony 2 4 0 and 1 14 0 Ground Floor 1 3 0 0 13 0 and 0 8 0

For Ladies 0 13 0 only

ಮೈಸೂರು ಪೇಟೆ ಧಾರಣೆ

ಪಲ್ಲಗಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೪ ೦ ೦	೨ ೨
ಎಳ್ಳು	೭೫ ೨ ೦	೮೩ ೧೪ ೨
ಹುಚ್ಚೆಳ್ಳು	೪೬ ೨ ೮	
ಹರಳು ಬೀಜ	೪೬ ೦ ೦	
ಹುರುಳಿ	೨೩ ೦ ೮	
ಹೆಸರು	೬೫ ೮ ೦	೬೭ ೮ ೦
ಹೊಂಗೇಬೀಜ	೧೭ ೧೪ ೦	
ಉದ್ದು	೩೩ ೦ ೦	
ಅವರೆ	೭೫ ೦ ೦	
ಹಲಸಂದೆ	೬೮ ೧—೨	೭೬ ೧೨ ೦
ಮೆಣಸಿನಕಾಯಿ ಮುಣಗಿಕ್ಕೆ	೧೩ ೨ ೦	೧೩ ೧೨ ೦
ಹುಣಸೇಹಣ್ಣು	೫—೯—೦	
ಸೀಗೇಕಾಯಿ	೫ ೬ ೦	೫ ೮ ೦
ತೆಂಗಿನಕಾಯಿ ೧೦೦೦	೧೩೫ ೦ ೦	೨೦೨ ೦ ೦

ಮೈಸೂರು ಸಿಟಿ ರೇಷನಿಂಗ್ ಆಫೀಸರರ ಕಛೇರಿ

ಪ್ರ ಕ ಟ ಣೆ

ಶ್ರೀ ಗಣೇಶನ ಹಬ್ಬದ ಸಲುವಾಗಿ 24-8 52ನೇ ತಾರೀಕು ಭಾನುವಾರ ಮೈಸೂರು ನಗರದ ಎಲ್ಲ ರೇಷನ್ ಡಿಪೋಗಳೂ ಮತ್ತು ಮೊಹಲ್ಲಾ ಸಬ್ ಗೋಡೌನುಗಳೂ ಮುಚ್ಚಲ್ಪಡುವುವೆಂದ ಸಾವ ಜನಿಕರಿಗೆ ಈ ಮೂಲಕ ತಿಳಿಸಲಾಗಿದೆ ರೇಷನ್ ಕಾರ್ಡುದಾರರ ಅನುಕೂಲಕ್ಕಾಗಿ 25 8 1952 ನೇ ಸೋಮವಾರ ಬೆಳಗ್ಗೆ ರೇಷನ್ ಡಿಪೋಗಳನ್ನು ತೆರೆಯಲಾಗುವುದು

ಎಚ್ ಜಿ ವಿಜಯರಾಘವ ಶೆಟ್ಟಿ
ರೇಷನಿಂಗ್ ಆಫೀಸರು

ಕಥಾಲೋಕ

ರಾಜಧಾನಿಯ ಶ್ರೀ ಕೆ ವಿ ಅನಂತರಾಮಯ್ಯನವರ ಸಂಪಾದಕತ್ವದಲ್ಲಿ ತೀರ್ಥಹಳ್ಳಿ ಮತ್ತು ಕ ಪೇಟೆಯವರ ಸ್ವಾತಂತ್ರ್ಯೋತ್ಸವದ ದಿನ ಪ್ರಕಟಿಸಿದ ಕಥಾಲೋಕವೆಂಬ ಸಣ್ಣ ಕಥೆಗಳ ಮಾಸ ಪತ್ರಿಕೆಯು ನಮ್ಮ ಕೈ ಸೇರಿದೆ ಸಣ್ಣ ಕಥೆಗಳಿಗಾಗಿಯೇ ಮೀಸಲಾಗಿರುವ ಈ ಪತ್ರಿಕೆಯು ಸುಂದರವಾದ ಕಥೆಗಳನ್ನೊಳಗೊಂಡು ಆಕರ್ಷಣೀಯವಾಗಿದೆ ಇದರ ಬೆಲೆ ೪ ೦

ಸಂಗೀತ ಪಾಠಶಾಲೆ ಶಾಖೆ

ಮಂಡಿ ಮೊಹಲ್ಲಾ ೮೫೯ ನೇ ನಂಬರು ಮನೆಯಲ್ಲಿರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ತೃತೀಯ ಉಪಕೇಂದ್ರವನ್ನು ವಿದ್ಯಾರ್ಥಿನಿಯರಿಗಾಗಿ ಶ್ರೀರಾಮಪೇಟೆಯ ಶ್ರೀ ರಾಜಲಕ್ಷ್ಮಿ ಹಾಲ್ ಪಕ್ಕದ ಮನೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ತೆರೆಯಲಾಗುವುದು ಶಕ್ತಿ ಮಾಸಪತ್ರಿಕೆಯ ಸಂಪಾದಕರು ಶ್ರೀಮತಿ ಎಲ್ ವಿ ಕಾವೇರಮ್ಮನವರು ಅಧ್ಯಕ್ಷತೆ ವಹಿಸುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಚಿತ್ರ ಜಗತ್, ಮಧ್ಯಾಹ್ನ ೧ ೩೦ ಗಿಟಾರ್ ೨ ಬಾಲ ಜಗತ್ ಸಂಜೆ ೬ ೩೦ ಮತ್ತು ೭ ಎಸ್ ರಾಮಚಂದ್ರನ್ ಸಂಗೀತ ೮ ಸಂಗೀತ ೭ ೧೫ ನಾಮಶ್ರೀ ೭ ೩೦ ಮಹಿಳಾ ವಿಹಾರ ಎಲ್ ನರಸಿಂಹಮೂರ್ತಿ ಕಥಾಕಾಲಕ್ಷೇಪ ೯ ೩೦ ಗಾನ ಸಾರಥಿ

SREE GANESHA

TALKIES

From 23 8 52 For 3 Days

Republic's

RIO GRANDE

[The Most Spectacular Action Drama]

With— John Wayne
Maureen O Hara & Ben Johnson

FROM 26 8—52

Columbia's **THE VATICAN**

ಪ್ರಭುದೇವಾ ಟಾಕೀಸ್

22—8—52 ನೇ : ಶುಕ್ರವಾರದಿಂದ : 7ನೇ ವಾರ

ಜೆಮಿನಿಯವರ ತಮಿಳು ಚಿತ್ರ

ಮೂವರು ತನಯರು

[ಮೂರು ಮಕ್ಕಳು]

—: ಮುಂದಿನ ಬದಲಾವಣೆ :—

* ಶ್ರೀ ಕೃಷ್ಣ ಜನ್ಮಾಷ್ಟಮಿ *

IF YOU LIKE PURE AND BEST COFFEE, DON'T FORGET TO COME TO

SRI CHAMUNDESWARI
★ BHAVAN ★

(Boarding, Lodging and Restaurant)

YELWAL ROAD MYSORE

DRINK & ENJOY OUR

Pure and High - Flavoured

PLANTATION 'A' COFFEE

★ **Taste Our Sweets**

★ **Prepared from Pure Ghee**

★ **Delicious & Wholesome Meals**

ಗೌರಿ ಹಬ್ಬಕ್ಕಾಗಿ:- ಹೊಸ ಡಿಸೈನಿನ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ನಾಗಪುರ ಪೂನಾ ಬೆಂಗಳೂರ್ ಸೀರೆಗಳೂ ಬಂದಿವೆ ★ **M. V. ಭೋಜಯ್ಯ** ಇಂಡಿಯನ್ ಬ್ಯಾಂಕ್ ಎದುರು ಮೈಸೂರು ಶ್ರೀ ಬಿ ಎ

Edited Printed and Published by A R Nagarajan at Sadhvi Press D Subbiah Road Mysore

ಟಿಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೩-೮ ೧೯೪೬ [ಸಂಚಿಕೆ ೨೩

ದಕ್ಷಿಣ ಆಫ್ರಿಕಾ ಜೈಲು - ಗಳೆಲ್ಲವೂ ಭರ್ತಿ -

ಸರ್ಕಾರಿ ನೌಕರರು ರಾಜಕೀಯದಲ್ಲಿ ತೊಡಗಬಾರದು

ಅಂಚೆ, ತಂತಿ ನೌಕರರ ಸಮ್ಮೇಳನದಲ್ಲಿ ಜಗಜೀವನರಾಂರವರ ಸೂಚನೆ

ಮೈಸೂರು ೨೩

ಸರ್ಕಾರಿ ನೌಕರರು ಸಾರ್ವಜನಿಕರ [illegible] ತಮ್ಮ ಉದ್ಯೋಗಗಳಲ್ಲಿಯೂ ಪ್ರಾಮಾಣಿಕವಾಗಿ ಬೇರು ತಮ್ಮ ಉದ್ಯಮವನ್ನು ಸಾಧಿಸಬಹುದು ಆದರೆ ಅವರುಗಳು ರಾಜಕೀಯ ಪಂಗಡಗಳನ್ನು ಸೇರಕೂಡದು [illegible] ಪ್ರತಿಪಕ್ಷಗಳ [illegible] ಸರ್ಕಾರವು ಅವಕಾಶವನ್ನು ಕೊಡುವುದಿಲ್ಲ ಎಂಬುದಾಗಿ ಕೇಂದ್ರ ಸಚಿವ ಮಂತ್ರಿ ಶ್ರೀ ಜಗಜೀವನರಾಂರವರ [illegible] ದಿನ ಇಲ್ಲಿ ನಡೆದ ಅಂಚೆ, ತಂತಿ [illegible] ಮತ್ತು ಆರ್ ಎಂ ಎಸ್ ಸರ್ವೀಸ್ [illegible] ಅಧ್ಯಕ್ಷರಾದ ಶ್ರೀ ಜಿ ಆರ್ [illegible] ಸ್ವಾಗತ ಭಾಷಣ ಮಾಡಿ [illegible] ದೇಶಕ್ಕೆ [illegible] ನೌಕರರ [illegible] ಸರ್ಕಾರದವರು [illegible] ಅವರ ಬೇಡಿಕೆಗಳನ್ನು [illegible] ಸಂದೇಹಗಳನ್ನು ತಿಳಿಸಿ [illegible] ಆರ್ ಎಂ ಎಸ್ [illegible] ಸಮ್ಮೇಳನಕ್ಕೆ ಸರ್ಕಾರದವರು [illegible] ಸಹಾನುಭೂತಿಯನ್ನು [illegible] ಮತ್ತು ತಮ್ಮ [illegible] ಪಕ್ಷಕ್ಕೆ [illegible] ನೌಕರರ [illegible] ಸರ್ಕಾರದ ಸೇವಕರೆಂತ [illegible] ಅವರು ಸರ್ಕಾರದ ಸೇವಕರಲ್ಲವೆಂದು ಸಾರ್ವಜನಿಕರ ಸೇವಕರೆಂದೂ ಹೇಳಿ [illegible] ಜನರಿಗೆ ಸಮರ್ಪಕವಾಗಿ ಸೇವೆಯನ್ನು ಸಲ್ಲಿಸಲು ಅವರ ಪರಿಪೂರ್ಣ ಮತ್ತು [illegible] ಶ್ರೀ ಜಗಜೀವನರಾಂರವರು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು

ನಮ್ಮ ಜೀವನವು ನಿರಂತರವಾದ [illegible] ಸಾರ್ವಜನಿಕ ಸೌಕರ್ಯ [illegible] ಪ್ರಯತ್ನಗಳು [illegible] ಕರ್ತವ್ಯದಲ್ಲಿ [illegible] ಸಮಾಜದ ಒಂದು ವರ್ಗದವರ [illegible] ವರ್ಗದವರಿಗೆ [illegible] ನೌಕರರ [illegible] ಬಹಳ ಅಂತರ [illegible] ಇಬ್ಬರ [illegible] ಮುಸ್ತರವಾದ [illegible] ನೌಕರರಿಗೆ [illegible] ಬಹಳ ಸ್ವಲ್ಪವಾಗಿ [illegible]

ನೌಕರರ [illegible] ಕೆಲಸ [illegible] ಸಾರ್ವಜನಿಕರಿಗೆ [illegible] ನಾಗರಿಕರಿಗೆ ಇತರ ಅನೇಕ [illegible] ಕಲ್ಯಾಣ [illegible]

ಹಾವು ಕಡಿದು ೫೦ ಜನರ ಮರಣ

ಉತ್ತರ ಭಾರತದ ವಿಲಾಸಪುರದ ಬಳಿ ಇರುವ ಹಲವು ಹಳ್ಳಿಗಳಿಗೆ ನೀರು ನುಗ್ಗಿ ಬಿಲಗಳಲ್ಲಿದ್ದ ಹಾವುಗಳು ಹೊರಗೆ ಬಂದು ಜನರಿಗೆ ತೊಂದರೆಯುಂಟು ಮಾಡುತ್ತಿವೆಯೆಂದೂ ಈ [illegible] ಹಾವುಗಳಿಂದ ಕಡಿಯಲ್ಪಟ್ಟು ಸುಮಾರು ೫೦ ಮಂದಿ ಮಡಿದಿರುವರೆಂದೂ ವರದಿಯಾಗಿದೆ

[illegible]

ಕೆಲಸಗಾರರು ಸರ್ಕಾರದ ನೌಕರರಲ್ಲ [illegible] ಸಾರ್ವಜನಿಕರ ಸೇವಕರೆಂಬ [illegible] ಸಾರ್ವಜನಿಕರ [illegible] ನೌಕರರಲ್ಲಿರ [illegible] ನ್ಯಾಯ [illegible]

ವಂದನಾರ್ಪಣೆ [illegible] ಯಿತು

ರಾಜಧಾನಿಗೆ ೨೫ನೇ ತಾ|| ತಿರುವಾಂಕೂರಿನ ರಾಜರು

ಸ್ವಂತ ಸುದ್ದಿ] ಬೆಂಗಳೂರ ೨೩

ತಿರುವಾಂಕೂರಿನ ರಾಜರ [illegible] ಬೆಳಗ್ಗೆ ರೈಲಿನಲ್ಲಿ ಇಲ್ಲಿಂದ ಹೊರಟು [illegible] ಮೈಸೂರಿಗೆ ಬರುವ [illegible] ಪರಿಚಯ ಮಾಡಿ [illegible] ಬೆಂಗಳೂರಿನಲ್ಲಿ ಸಂಗೀತ ಕಾಲೇಜು [illegible] ಸಂಗೀತ ಕಾಲೇಜ [illegible]

[illegible] ಶ್ರೀ ಜಗಜೀವನರಾಂರವರು ಇಂದು [illegible] ಕೇಂದ್ರ [illegible] ಶ್ರೀ ಕೃಷ್ಣಪ್ಪನವರು ಇದೇ [illegible] ದೆಹಲಿಗೆ ತೆರಳುವರು

ಸೂಚನೆ

ವಿನಾಯಕ ಚತುರ್ಥಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ — ವ್ಯವಸ್ಥಾಪಕ

ಗೋಣಿಬೀಡಿನಲ್ಲಿ ಜಗಜೀವನರಾಂರವರ ಭೇಟಿ

ಕೇಂದ್ರ ಮಂತ್ರಿ ಶ್ರೀ ಜಗಜೀವನರಾಂರವರು ನೆನ್ನೆ ಶ್ರೀರಂಗಪಟ್ಟಣದ [illegible] ದಾಸಪ್ಪ ಮತ್ತು [illegible] ಮುಂತಾದವರೊಡನೆ [illegible] ದೇವರ ದರ್ಶನ ಪಡೆದರು

ಜಿಲ್ಲೆಯಲ್ಲಿ ಮೈ|| ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಕಾಂಗ್ರೆಸ್ಸಿಗೆ ಸದಸ್ಯರನ್ನು ಕೂಡಿಸಲು ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ [illegible] ದಾಸಪ್ಪನವರು [illegible] ತಲಕಾಡು [illegible] ರಾಜನಗರ [illegible] ನಂಜನಗೂಡು ಮುಂತಾದ [illegible] ಪ್ರವಾಸ ಮಾಡುವರು

ದಕ್ಷಿಣ ಆಫ್ರಿಕಾ ಜೈಲುಗಳೆಲ್ಲವೂ ಭರ್ತಿಯಾಗಿವೆ

[illegible] ವರ್ಣ ಭೇದದ [illegible] ಸಂಬಂಧವಾಗಿ [illegible] ಜೈಲುಗಳೂ [illegible]

ಜಮೀನು ವ್ಯಾಜ್ಯದಲ್ಲಿ ಕಣ್ಣು ಕಿತ್ತು ಕೈಕತ್ತರಿಸಿದರು

ಕಾರ್ಕಳ [illegible] ಶಿವನಹಳ್ಳಿಯ ಕೆಲವರಲ್ಲಿ ಜಮೀನು [illegible] ಜಗಳವುಂಟಾಗಿ [illegible] ಕಣ್ಣುಗಳನ್ನು [illegible] ಕತ್ತರಿಸಿ ಹಾಕಲಾಗಿರುವುದು ತಿಳಿದು ಬಂದಿದೆ

ಜಗಜೀವನರಾಂರವರಿಗೆ ನಿಮ್ನವರ್ಗದ ಜನರ ಸತ್ಕಾರ

ಮೈಸೂರಿನ ನಿಮ್ನ ವರ್ಗದ ಸದಸ್ಯರು ನೆನ್ನೆ ಸರ್ಕಾರಿ ಭವನದಲ್ಲಿ ಕೇಂದ್ರ [illegible] ಮಂತ್ರಿ ಶ್ರೀ ಆರ್ ಜಗಜೀವನರಾಂ ರವರ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು [illegible] ಮೈಸೂರು ಸದಸ್ಯರಾದ ಶ್ರೀ [illegible] ರಾಜಯ್ಯನವರು [illegible] ನಿಮ್ನ ವರ್ಗದವರ ವಿದ್ಯಾಭ್ಯಾಸ [illegible] ಸೌಲಭ್ಯಗಳು [illegible] ಶ್ರೀ ಜಗಜೀವನರಾಂರವರು ಉತ್ತರವಿತ್ತು ನಿಮ್ನ ವರ್ಗದ ಪ್ರತಿನಿಧಿಗಳು [illegible] ವಿವರಗಳನ್ನು [illegible] ಶ್ರೀ ರಾಜಯ್ಯನವರ ಮನೆಗೆ ಮಂತ್ರಿಗಳ ಭೇಟಿಯಿತ್ತಿದ್ದರು

ಗಣಪತಿ ಉತ್ಸವ

ರಾಜಧಾನಿಯಲ್ಲಿ ವಿವಿಧ ಕಡೆ [illegible] ನಾಳೆಯಿಂದ ಗಣಪತಿಯ ಉತ್ಸವವನ್ನು ನಡೆಯುವುದು ಮಾದರಿ ಶಾಲೆಯಲ್ಲಿ [illegible] ತಾ|| ವರೆಗೆ ಪ್ರತಿ ಸಂಜೆ ಸಂಗೀತ, ವೀಣಾ ವಾದನ ನಾಗಸ್ವರ, [illegible] ತಾ|| ಸಂಜೆ [illegible] ಉತ್ಸವವು ನಡೆಯುವುದು

ಶ್ರೀ ಪ್ರಸನ್ನ ಗಣಪತಿ ಮಂಡಳಿಯ [illegible] ನಾಳೆಯಿಂದ [illegible] ವರೆಗೆ [illegible] ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ವಿದ್ವಾಂಸರಿಂದ ಉಪನ್ಯಾಸಗಳು ನಡೆಯುವುವು

[illegible] ಯುವಕರ [illegible] ಸಂಘದಲ್ಲಿ [illegible] ತಾ|| ವರೆಗೆ ಸಂಗೀತವು ಏರ್ಪಾಡಾಗಿವೆ

ನಾಳೆ [illegible] ದೇವರಾಜ ಮಾರ್ಕೆಟ್ [illegible] ಶ್ರೀ [illegible] ವಿಗ್ರಹ [illegible] ಕಾಂಗ್ರೆಸ್ ಸಮಿತಿ ಅಧ್ಯಕ್ಷ [illegible] ನವರ ಅಧ್ಯಕ್ಷತೆಯಲ್ಲಿ ನೆರವೇರಿಸಲು ಮಾರ್ಕೆಟ್ ವರ್ತಕರು ಏರ್ಪಡಿಸಿದ್ದಾರೆ

ಅಠಾರಾ ಕಚೇರಿ ಜಾಗಟೆ ಪತ್ತೆ

ಬೆಂಗಳೂರು ಅಠಾರಾ ಕಚೇರಿಯಲ್ಲಿ ಕಳವಾಗಿದ್ದ ಜಾಗಟೆಯು ನೆನ್ನೆ ಕಬ್ಬನ್ [illegible] ಹತ್ತಿರದ [illegible] ಸಿಕ್ಕಿತು

....ಮುಸಲ್ಮಾನರು ಸ್ಥಾನಗಳು ರಾಜ್ಯಾಂಗಕ್ಕೆ ವಿರೋಧ

ಮುಸ್ಲಿಮರು, ಕ್ರಿಸ್ತರು ಮತ್ತು ಆಂಗ್ಲೋ ಇಂಡಿಯನ್ನರಿಗಾಗಿ ಮದ್ರಾಸು ಪೌರಸಭೆಯಲ್ಲಿ ಸ್ಥಾನ ಮೀಸಲು ಮಾಡಿರುವುದು ರಾಜ್ಯಾಂಗದ ಪ್ರಕಾರ ಪ್ರಜೆಗಳಿಗೆ ದತ್ತವಾಗಿರುವ ಮೂಲಭೂತ ಹಕ್ಕುಗಳಿಗೆ ವಿರೋಧವಾಗಿರುವುದೆಂದು ಮದ್ರಾಸು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಕೆ. ಸುಬ್ಬರಾಯರು ಒಂದು ಮೊಕದ್ದಮೆಯಲ್ಲಿ ತಿಳಿಸಿರುತ್ತಾರೆ. ಮದ್ರಾಸು ಪೌರಸಭೆಯವರು ಮೇಲ್ಕಂಡಂತೆ ಮೀಸಲು ಸ್ಥಾನಗಳನ್ನು ಏರ್ಪಡಿಸಿ, ಚುನಾವಣೆ ನಡೆಯುವುದನ್ನು ನಿಲ್ಲಿಸಬೇಕೆಂದು ಅಲ್ಲಿನ ಪೌರಸಭಾ ಸದಸ್ಯರಾದ ಎ ಆರ್. ವಿ ಆಚಾರ್ಯರು ಅರ್ಜಿ ಸಲ್ಲಿಸಿದ್ದರು. ನಿಮ್ನ ವರ್ಗದವರಿಗೆ ಮಾತ್ರ ಸ್ಥಾನಗಳನ್ನು ಮೀಸಲು ಮಾಡಲು ರಾಜ್ಯಾಂಗದಲ್ಲಿ ಅವಕಾಶವಿರುತ್ತದೆ

ವರ್ಧಂತಿ ದಿನಾಚರಣೆ

ಕಳೆದ ಸೋಮವಾರ ಮೈಸೂರು ಲಕ್ಷ್ಮೀ ವಿಲಾಸ ಅಗ್ರಹಾರದಲ್ಲಿರುವ ಶ್ರೀ ರಾಮಚಂದ್ರ ವಿಸು ವಿಹಾರದಲ್ಲಿ ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವವನ್ನು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ನೃತ್ಯ ಕಲಾ ವಿಶಾರದ ಶ್ರೀ ರಾಜಗೋಪಾಲ್‌ರವರ ಕಲಾಶಾಲೆಯ ಮಕ್ಕಳಿಂದ ನೃತ್ಯವೂ ನಡೆಯಿತು

ಸುಶೀಲಾ ಹಿಂದಿ ಸಮಾಜದ ವಾರ್ಷಿಕೋತ್ಸವ

ರಾಜಧಾನಿಯ ವಳ್ಳದ ಕೇರಿಯಲ್ಲಿರುವ ಶ್ರೀ ಸುಶೀಲಾ ಹಿಂದಿ ಸೇವಾ ಸಮಾಜದ ವಾರ್ಷಿಕೋತ್ಸವ ಮತ್ತು ಶ್ರೀಮನ್ಮಹಾರಾಜರ ವರ್ಧಂತಿ ಮಹೋತ್ಸವವು ನಾಳೆ ಸಂಜೆ ಹಳ್ಳದ ಕೇರಿಯಲ್ಲಿರುವ ಟೀಚರ್ಸ್ ಟ್ರೈನಿಂಗ್ ಕಾಲೇಜಿನಲ್ಲಿ ನೆರವೇರುವುದು. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆ ವಹಿಸುವರು. ಸಂಜೆ ೪ ಗಂಟೆಗೆ ಸಮಾಜದ ಗೃಹದಲ್ಲಿ ಪ್ರದರ್ಶನವು ಇದೆ

ಕೃಷ್ಣರಾಜಸಾಗರದಲ್ಲಿ ೧೦೦ ಅಡಿ ನೀರು

ಕೃಷ್ಣರಾಜ ಸಾಗರದಲ್ಲಿ ನೀರಿನ ಮಟ್ಟವು ಈ ದಿನ ೧೦೦-೨೬ ಅಡಿಯಷ್ಟು ಇರುವುದು

ಮೈಸೂರು ಸಿಟಿ ರೇಷನಿಂಗ್ ಆಫೀಸರರ ಕಛೇರಿ

ಪ್ರ ಕ ಟ ಣೆ

ಶ್ರೀ ಗಣೇಶನ ಹಬ್ಬದ ಸಲುವಾಗಿ 24-8-52 ನೇ ತಾರೀಕು ಭಾನುವಾರ ಮೈಸೂರು ನಗರದ ಎಲ್ಲ ರೇಷನ್ ಡಿಪೋಗಳೂ ಮತ್ತು ಮೊಹಲ್ಲಾ ಸಬ್ ಗೋಡೌನುಗಳೂ ಮುಚ್ಚಲ್ಪಡುವುವೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ರೇಷನ್ ಕಾರ್ಡುದಾರರ ಅನುಕೂಲಕ್ಕಾಗಿ 25-8-1952 ನೇ ಸೋಮವಾರ ಬೆಳಗ್ಗೆ ರೇಷನ್ ಡಿಪೋಗಳನ್ನು ತೆರೆಯಲಾಗುವುದು.

ಎಚ್. ಜಿ ವಿಜಯರಾಘವ ರೆಡ್ಡಿ,
ರೇಷನಿಂಗ್ ಆಫೀಸರು

ನಂಟರನ್ನು ಕೊಂದುದಕ್ಕಾಗಿ ೭ ಜನರಿಗೆ ಮರಣ ದಂಡನೆ

ತಮ್ಮ ಬಂಧುಗಳ ಒಂದು ಇಡೀ ಸಂಸಾರವನ್ನೇ ನಾಶಪಡಿಸುವ ಉದ್ದೇಶದಿಂದ ಸೇಲಂ ಬಳಿ ಇರುವ ಒಂದು ಹಳ್ಳಿಯ ೭ ಜನರು ಇಬ್ಬರು ದೊಡ್ಡವರು ಮತ್ತು ಇಬ್ಬರು ಮಕ್ಕಳನ್ನು ಹೊಲದ ಬಳಿ ಹೊಡೆದು ಕೊಂದುಹಾಕಿದರೆಂದು, ಅವರನ್ನು ಮರಣ ದಂಡನೆಗೆ ಗುರಿಪಡಿಸಲಾಗಿದೆ

ಕೃಷ್ಣಪಿಳ್ಳೆ ದಿನಾಚರಣೆ

ಮಲಬಾರಿನ ಕೃಷ್ಣಪಿಳ್ಳೆಯ ವರ ದಿನಾಚರಣೆಯನ್ನು ಮೈಸೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದವರು ೨೦ ನೇ ತಾ|| ನಡೆಸಿದರು. ಶ್ರೀ ಸೋಮಸುಂದರ ಶಮರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ ಎ ಉಗ್ರಪ್ಪ ಮತ್ತು ಇತರರ ಭಾಷಣ ಮಾಡಿದರು. ಎಳೆ ಯುವರ ಧ್ಯೇಯವನ್ನು ಮುಂದುವರಿಸಿಕೊಂಡು ಬರುವ ಪ್ರತಿಜ್ಞೆಯನ್ನು ಕೈಕೊಳ್ಳಲಾಯಿತು. ವೀಟ್‌ಮಿನ್ ಸರ್ಕಾರದ ಜನ್ಮ ದಿನೋತ್ಸವವನ್ನೂ ಆಚರಿಸಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... [illegible]

2... 8 52

ಬೆಳಿಗ್ಗೆ ... [illegible]

ಚಾಮುಂಡೇಶ್ವರಿ

24-8-52 ರಿಂದ

ಅಮೋಘ ಪ್ರಾರಂಭ

ನಾಜನೀನ್

(ಹಿಂದಿ)

ಮುಖ್ಯಪಾತ್ರ:- ಮಧುಬಾಲ

ಓಂಪ್ರಕಾಶ್, ಕಕ್ಕೋ, ನಜೀರ್‌ಖಾನ್, ಆಗಾ ಮತ್ತು ಚಂಚಲ್

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ವಿದ್ಯಾರ್ಥಿಗಳಿಂದ ಒತ್ತಾಯದ ಸಮಾಜ ಸೇವೆ

ಈ ತಿಂಗಳು ೨೦ರಿಂದ ಅಸ್ಸಾಮಿನ ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲೂ ಕಡ್ಡಾಯವಾಗಿ ವಿದ್ಯಾರ್ಥಿಗಳು ಸಮಾಜ ಸೇವೆಯನ್ನು ಮಾಡುವಂತೆ ಏರ್ಪಾಡು ಆಗಿರುತ್ತದೆ. ಪ್ರತಿವಾರವೂ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ತಮ್ಮ ಶಾಲೆಗಳಿರುವ ಊರಿನ ಪಕ್ಕದ ಹಳ್ಳಿಗಳಿಗೆ ಹೋಗಿ ಅಲ್ಲಿ ನಿರ್ಮಲೀಕರಣ, ಗ್ರಾಮಾಂತರ ರಸ್ತೆಗಳ ನಿರ್ಮಾಣ, ಗೊಬ್ಬರದ ತಯಾರಿ, ಚರಂಡಿಗಳನ್ನು ಶುದ್ಧಮಾಡುವುದು ಇವೇ ಮುಂತಾದ ಕಾರ್ಯಗಳನ್ನು ಮಾಡಬೇಕಾಗಿದೆ. ಸರ್ಕಾರದಲ್ಲಿ ನೌಕರಿಗಳನ್ನು ಒದಗಿಸುವಾಗ ಸಮಾಜ ಸೇವೆಯಲ್ಲೂ ಪ್ರತಿಜೆ ಪಡೆದಿರಬೇಕೆಂಬ ನಿಯಮವನ್ನು ಸೇರಿಸಲಾಗುವುದೆಂದು ಹೇಳಲಾಗಿದೆ

ಸ್ವಾತಂತ್ರ್ಯ ದಿನೋತ್ಸವ

ರಾಜಧಾನಿಯ ಸೋನಾರ್ ಬೀದಿಯಲ್ಲಿರುವ ಜೈಹಿಂದ್ ಸಂಪದದಲ್ಲಿ ಕಳೆದ ೧೫ ನೇ ತಾ|| ಸ್ವಾತಂತ್ರ್ಯ ದಿನೋತ್ಸವವು ಶಾರದಾ ವಿಲಾಸ ಕಾಲೇಜಿನ ಶ್ರೀ ಸ ಬ್ರಹ್ಮಣ್ಯ ಜೋಯಿಸರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಆರ್ ಸುಬ್ರಹ್ಮಣ್ಯಂ ಎಂ ಎ ಕೃಷ್ಣಮೂರ್ತಿ, ವಿ ವೆಂಕಟರಾಮ್, ಎಂ ಎ ಜಯಸಿಂಹರವರುಗಳಿಂದ ಭಾಷಣಗಳಾದವು. ಶ್ರೀ ಪ್ರಹ್ಲಾದರವರ ಸಂಗೀತವೂ ನಡೆಯಿತು

ಸಂತಾಪ ಸೂಚನೆ

ನಂಜನಗೂಡು ತಾಲ್ಲೂಕು ದೇವನೂರಿನ ಶ್ರೀ ಗುರು ಮಲ್ಲೇಶ ಪ್ರೌಢಶಾಲೆಯಲ್ಲಿ ಗ್ರಾಮದ ಜೇರ್ಮನ್ ಶ್ರೀ ಸೂದಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ೧೩ ನೇ ತಾ|| ಸಭೆ ನಡೆದ ಶ್ರೀ ಪಂಚಗವಿ ಮಠದ ಶ್ರೀ ಗೌರೀಶಂಕರ ಸ್ವಾಮಿಗಳವರು ಶಿವೈಕ್ಯರಾದ ಬಗ್ಗೆ ಸಂತಾಪ ಸೂಚನೆಯನ್ನು ಮಾಡಲಾಯಿತು. ಮಾಜಿ ಶಾಸನ ಸಭಾ ಸದಸ್ಯರಾದ ಶ್ರೀ ಡಿ ಎಂ ಸಿದ್ದಯ್ಯನವರು ಭಾಷಣ ಮಾಡಿದರು

SRI GAYATHRI

TALKIES

From 23-8-52 Daily 2 Shows

20th Century's Most

Powerful Picture

In Technicolor

[For Adults Only]

DAVID & BATHSHEBA

With - Gregory Peck

(SPECIAL RATES)

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಸಂಘದ ಅಧಿಕಾರ ವರ್ಗ

ರಾಜಧಾನಿಯ ನ್ಯಾಷನಲ್ ಇನ್ಸ್ಟಿಟ್ಯೂಟಿನ ಸಂಘದ ವಾರ್ಷಿಕ ಚುನಾವಣೆಯು ಕಳೆದ ಬುಧವಾರ ನಡೆದು, ಶ್ರೀ ವಿ ಚಂದ್ರಶೇಖರರವರು ಅಧ್ಯಕ್ಷರಾಗಿಯೂ, ಶ್ರೀ ಜಿ. ಎ ಪುಟ್ಟಣ್ಣಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎ ಕೃಷ್ಣಮೂರ್ತಿ ಮತ್ತು ಶ್ರೀ ಜಿ ಎಸ್ ರಾಮಚಂದ್ರರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು

ಗೋಮಟಗಿರಿ ಕ್ಷೇತ್ರದಲ್ಲಿ ಮಸ್ತಕಾಭಿಷೇಕ

ರಾಜಧಾನಿಗೆ ೧೬ ಮೈಲಿ ದೂರದಲ್ಲಿರುವ ಶ್ರೀ ಗೋಮಟಗಿರಿ ಕ್ಷೇತ್ರದಲ್ಲಿ ಬರುವ ತಿಂಗಳು ೭ ನೇ ತಾ|| ಮಧ್ಯಾಹ್ನ ೧೨ ಗಂಟೆಗೆ ಶ್ರೀ ಗೋಮಟೇಶ್ವರ ಸ್ವಾಮಿಯವರಿಗೆ ತೃತೀಯ ಮಸ್ತಕಾಭಿಷೇಕವು ನಡೆಯುವುದು. ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ. ವಿದ್ವಾಂಸರುಗಳಿಂದ ಅಂದು ಉಪನ್ಯಾಸಗಳನ್ನು ಏರ್ಪಡಿಸಲಾಗಿದೆ

ಮೈಸೂರು ಸರ್ಕಾರದ ಆಡಳಿತ: ಅಂಕಿ ಅಂಶಗಳು

ಮೈಸೂರು ಸರ್ಕಾರದ ವಾರ್ತಾ ಶಾಖೆಯು ಮುಖ್ಯಾಧಿಕಾರಿಗಳು ಆಡಳಿತದ ಅಂಕಿ ಅಂಶಗಳು ಎಂಬ ಕನ್ನಡ ಗ್ರಂಥವನ್ನು ಪ್ರಕಟಿಸಿರುತ್ತಾರೆ. ಅದರಲ್ಲಿ ಶ್ರೀಮನ್ ಮಹಾರಾಜರು, ನೂತನ ಮಂತ್ರಿಮಂಡಲದ ಸದಸ್ಯರು ಮತ್ತು ಚಾಮರಾಜ ಒಡೆಯರ ವಿಗ್ರಹ, ಅರಮನೆ ಕಛೇರಿ ಬೃಂದಾವನ ಮುಂತಾದ ಚಿತ್ರಗಳನ್ನು ಕೊಡಲಾಗಿದೆ. ವಿಧಾನ ಸಭೆಗಳ ಸದಸ್ಯರ ಪಟ್ಟಿಯನ್ನೂ, ಇತರ ಆಡಳಿತದ ಸೂಕ್ಷ್ಮವಾದ ವಿವರಗಳನ್ನೂ ನಮೂದಿಸಲಾಗಿದೆ

ಮೈಸೂರು ಪೇಟೆ ಧಾರಣೆ

	ಹಳೆ ರಕ್ಮ	ಹೊಸ ಇಂದ ರೂ
ನೆಲಗಡಲೆ	೬-೪-೦	[illegible]
ಎಳ್ಳು	೩೩ ೧೪-೦	೬೦ ೦-೦
ಹುಚ್ಚೆಳ್ಳು	೪೬ ೦ ೦	
ಹರಳು ಬೀಜ	೪೬ ೦ ೦	
ಹುರುಳಿ	೪ -೦ ೦	೪೪-೦
ಹೆಸರು	೬೫ ೮-೦	೬೬ ೦
ಹೊಂಗೇಬೀಜ	೧೭ ೧೪ ೦	
ಉಪ್ಪು	೭೪ ೬ ೦	
ಅವರೆ	೭೫ ೦ ೦	
ಕಲಸಂಪೆ	೬೭-೮-೦	೭೫ ೦
ಮೆಣಸಿನಕಾಯಿ		
ಮೂಟ ರಕ್ಮ	೧೧ ೧೪ ೦	೧೪-೧೦
ಹುಣಸೇಹಣ್ಣು	೫-೧-೦	
ಸಿಗೇಕಾಯಿ	೪-೦-೦	೪ ೦೦
ತೆಂಗಿನಕಾಯಿ	೧೧೦೦	೦ ೧೮-೩೦

Edited Printed and Published by A R Nagarajan at Sadhvi Press, D Subbiah Road, Mysore.

ಅ ಬೀ ದ್ ರ ವ ರ

ಔಟ್‌ರೈಟ್ ಹರಾಜು ಮಾರಾಟ

24—8—52 ನೇ : ಭಾನುವಾರ : ಬೆಳಿಗ್ಗೆ 10 ಘಂಟೆಗೆ

ಫರ್ನಿಚರುಗಳು ಮತ್ತು ಗೃಹಕೃತ್ಯಕ್ಕೆ ಉಪಯುಕ್ತವಾದ ಸಾಮಾನುಗಳು ನಾಳೆ ಪರಿಶೀಲನೆಗಾಗಿ ಇಡಲ್ಪಡುವುವು ನಗದು ವ್ಯಾಪಾರ

ನಿಮಗೆ ಬೇಕಾದ ಸಾಮಾನುಗಳನ್ನು ಆರಿಸಿಕೊಳ್ಳಲು

ಬನ್ನಿ ರಿ

ಎಲ್. ಪ್ರೀ. ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೫-೮-೧೯೫೨ [ಸಂಚಿಕೆ ೨೪

ತಿರುವಾಂಕೂರು ಮಹಾರಾಜರ ಆಗಮನ

ಮೈಸೂರು ೨೪

ತಿರುವಾಂಕೂರಿನ ಮಹಾರಾಜರಾದ ಪದ್ಮನಾಭದಾಸ ಶ್ರೀ ಬಲರಾಮವರ್ಮ ರವರು ಈ ದಿನ ಬೆಳಗ್ಗೆ ೧೧-೩೦ ಘಂಟೆಗೆ ವಿಶೇಷ ಸೆಲೂನಿನಲ್ಲಿ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಅವರೊಡನೆ ಅವರ ಸಹೋದರಿಯವರೂ, ಭಾವನವರೂ ಮತ್ತು ಆಪ್ತ ಕಾರ್ಯದರ್ಶಿಯವರೂ ಬಂದಿರುವರು. ರೈಲ್ವೆ ಸ್ಟೇಷನ್ನಿನಲ್ಲಿ ಮೈಸೂರಿನ ಶ್ರೀಮನ್ಮಹಾರಾಜರು ಅವರನ್ನು ಸ್ವಾಗತಿಸಿ ಸಂಸ್ಥಾನದ ಸಚಿವರುಗಳು, ಹಿರಿಯ ಮತ್ತು ಕಿರಿಯ ಶಾಸನಸಭೆಗಳ ಅಧ್ಯಕ್ಷರು, ಪ್ರದೇಶ ಮತ್ತು ನಗರ ಕಾಂಗ್ರೆಸ್ ಅಧ್ಯಕ್ಷರು, ಪೌರಸಭಾ ಅಧ್ಯಕ್ಷರು, ಮತ್ತು ಕಮಿಷನರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು, ಜಿಲ್ಲಾಧಿಕಾರಿಗಳು, ಡಿ ಎಸ್ ಪಿ. ಮತ್ತು ಡಿ ಐ ಜಿ. ಮೊದಲಾದ ಪ್ರಮುಖ ವ್ಯಕ್ತಿಗಳ ಪರಿಚಯ ಮಾಡಿಕೊಟ್ಟರು. ಅನಂತರ ರಾಜಾ ಬಲರಾಮವರ್ಮರವರು ಮೆರವಣಿಗೆಯಲ್ಲಿ, ಸಯ್ಯಾಜಿರಾವ್ ರಸ್ತೆ ಮೂಲಕ ಲಲಿತ ಮಹಲಿಗೆ ತೆರಳಿದರು. ನಾಳಿದ್ದು ಅವರು ಒಂಟೀಪುರಕ್ಕೆ ಭೇಟಿ ಕೊಡುವರೆಂದು ಗೊತ್ತಾಗಿದೆ.

ಶಾರದಾವಿಲಾಸ ಕಾಲೇಜಿನಲ್ಲಿ ಬಿ ಎಸ್‌ಸಿ ಡಿಗ್ರಿ ಶಿಕ್ಷಣ

ರಾಜಧಾನಿಯ ಶಾರದಾವಿಲಾಸ ಕಾಲೇಜಿನಲ್ಲಿ ಬಿ. ಎಸ್‌ಸಿ ಡಿಗ್ರಿ ಶಿಕ್ಷಣದ ವ್ಯವಸ್ಥೆಯನ್ನು ಏರ್ಪಡಿಸಲು ವಿಶ್ವವಿದ್ಯಾನಿಲಯದವರು ಅನುಮತಿ ಕೊಟ್ಟಿರುವರೆಂದೂ, ಈ ದಿನದಿಂದ ಜೂನಿಯರ್ ಬಿ ಎಸ್‌ಸಿ ತರಗತಿಯು ಆರಂಭವಾಗಿರುವುದೆಂದೂ ತಿಳಿದುಬಂದಿದೆ.

ಹೊಲ ಉಳುವುದಕ್ಕೆ ಕಾಡಾನೆಗಳು

ಹಿಂದುಹಿಂದಾಗಿ ಜಮೀನುಗಳಿಗೆ ನುಗ್ಗಿ ಪೈರುಗಳನ್ನು ಹಾಳುಮಾಡುವ ಕಾಡಾನೆಗಳನ್ನು ಹಿಡಿದು ಪಳಗಿಸಿ ದೊಡ್ಡ ದೊಡ್ಡ ನೇಗಿಲುಗಳನ್ನು ಎಳೆಯಲು ಉಪಯೋಗಿಸುವ ಯೋಜನೆಯೊಂದನ್ನು ಉತ್ತರ ಪ್ರದೇಶ ಸರ್ಕಾರವು ತಯಾರಿಸಿದೆ. ಕೆಟ್ಟು ಹೋಗಿ ದುರಸ್ತು ಮಾಡಲಾಗದ ಟ್ರಾಕ್ಟರುಗಳನ್ನು ಎಳೆಯಲು ಸಹಾ ಆನೆಗಳನ್ನು ಉಪಯೋಗಿಸಬಹುದೆಂದೂ, ಪೆಟ್ರೋಲಿನಿಂದ ಟ್ರಾಕ್ಟರುಗಳನ್ನು ನಡೆಸುವುದಕ್ಕಿಂತ ಇದು ಸುಲಭವಾಗುವುದೆಂದೂ ಗೊತ್ತಾಗಿದೆ. ಆನೆಯಿಂದ ಎಳೆಸಬಹುದಾದಂತಹ ಗಾಡಿಯೊಂದನ್ನು ತಯಾರಿಸುವುದಕ್ಕೂ ವಿಚಾರಮಾಡಲಾಗುತ್ತಿದೆಯೆಂದು ವರದಿಯಾಗಿದೆ.

ಹೈಸ್ಕೂಲು ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವ

ಯಳಂದೂರಿನ ಪೌರಸಭಾ ಪ್ರೌಢಶಾಲೆಯ ಸಂಘದ ಆರಂಭೋತ್ಸವವು ಪೌರಸಭಾಧ್ಯಕ್ಷರಾದ ಶ್ರೀ ಎಸ್ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕಳೆದ ೧೮ ನೇ ತಾ|| ಮೈಸೂರು ಮಹಾರಾಜಾ ಕಾಲೇಜಿನ ಇತಿಹಾಸದ ಪ್ರೊ|| ಶ್ರೀ ಎಂ ವಿ. ಕೃಷ್ಣರಾಯರಿಂದ ನೆರವೇರಿಸಲ್ಪಟ್ಟಿತು. ಪ್ರಾರ್ಥನೆ, ಸಂಗೀತ ಮತ್ತು ಹೈಸ್ಕೂಲ್ ಹೆಡ್ಮಾಸ್ಟರ್, ಶ್ರೀ ಕೆ ವಿ ಶ್ರೀನಿವಾಸಯ್ಯಂಗಾರ್ಯರಿಂದ ಸ್ವಾಗತ ಭಾಷಣಗಳಾದುವು.

ಮಲಾನರ ನೀತಿ ಬಗ್ಗೆ ವಿಶ್ವಸಂಸ್ಥೆಗೆ ದೂರು

ಕೇಂದ್ರ ಗೃಹ ಸಚಿವರ ರಾಜೀನಾಮೆ

ಕೇಂದ್ರ ಗೃಹ ಶಾಖಾ ಸಚಿವ ಶ್ರೀ ಕೈಲಾಸನಾಥ ಕಟ್ಜುರವರು ಪ್ರಧಾನಿ ನೆಹರೂರವರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿರುವರೆಂದೂ, ಈ ಬಗ್ಗೆ ನೆಹರೂರವರು ಯಾವ ಪ್ರತಿಕ್ರಿಯೆಯನ್ನೂ ಕೈಗೊಂಡಿಲ್ಲವೆಂದೂ ವರದಿಯಾಗಿದೆ. ಕಳೆದ ಸಾರಿ ಸೇರಿದ್ದ ಪಾರ್ಲಿಮೆಂಟ್ ಸಭೆಯಲ್ಲಿ ಪ್ರಿವೆಂಟಿವ್ ಡಿಟೆಂಷನ್ ಮಸೂದೆ ಮೇಲೆ ನಡೆದ ಚರ್ಚೆ ಸಂಬಂಧವಾಗಿ ಭಿನ್ನಾಭಿಪ್ರಾಯವುಂಟಾದುದರಿಂದ ಶ್ರೀ ಕಟ್ಜುರವರು ರಾಜೀನಾಮೆ ಕೊಡಲು ನಿರ್ಧರಿಸಿದರೆಂದು ಹೇಳಲಾಗಿದೆ. ಇವರ ರಾಜೀನಾಮೆಯನ್ನು ವಾಪಸು ತೆಗೆದುಕೊಳ್ಳುವಂತೆ ಒತ್ತಾಯಪಡಿಸಲಾಗುವುದೆಂದೂ ತಿಳಿದುಬಂದಿದೆ.

ಪುಣೆಯ ರಕ್ಷಣಾ ಶಾಖೆಯ ೨೯,೦೦೦ ನೌಕರರ ಮುಷ್ಕರ

ಪೂನಾದಲ್ಲಿರುವ ಕೇಂದ್ರ ಸರ್ಕಾರದ ವಿವಿಧ ರಕ್ಷಣಾ ಶಿಬಿರಗಳ ೧೫೦೦ ಮಂದಿ ಸಿವಿಲ್ ನೌಕರರನ್ನು ಕೆಲಸದಿಂದ ತೆಗೆಯಲು ನಿರ್ಧರಿಸಿ, ೨೫೦ ಮಂದಿ ನೌಕರರು ಬರುವ ತಿಂಗಳು ಒಂದನೇ ತಾರೀಕಿನಿಂದ ಕೆಲಸ ಬಿಟ್ಟು ಹೋಗಲು ಸಿದ್ಧರಾಗಿರಬೇಕೆಂದು ನೋಟೀಸು ಜಾರಿ ಮಾಡಿರುವುದನ್ನು ಪ್ರತಿಭಟಿಸಿ ಪೋಲ್ಯಾಂಡ ನೌಕರರ ಸಂಘದವರು ಬರುವ ೩ನೇ ತಾರೀಕಿನಿಂದ ಮುಷ್ಕರವನ್ನಾಚರಿಸಲು ನಿರ್ಧರಿಸಿರುವರೆಂದು ತಿಳಿದುಬಂದಿದೆ. ರಕ್ಷಣಾ ಶಾಖೆಯ ಸುಮಾರು ೨೯ ಸಾವಿರ ಸಿವಿಲ್ ನೌಕರರು ಮುಷ್ಕರದಲ್ಲಿ ಭಾಗವಹಿಸುವರೆಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ಗ್ಲೈಡರ್ ವಿಮಾನದ ತಯಾರಿಕೆ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಲ್ಲಿ ಇನ್ನು ಮುಂದೆ ಗ್ಲೈಡರ್ ವಿಮಾನಗಳನ್ನು ತಯಾರಿಸುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆಯೆಂದೂ, ಇದಕ್ಕಾಗಿ ತಗಲುವ ವೆಚ್ಚ ಮತ್ತು ಇತರ ವಿವರಗಳನ್ನು ಕುರಿತು ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತಿದೆಯೆಂದೂ ತಿಳಿದುಬಂದಿದೆ.

ಮಲಾನರ ವರ್ಣಭೇದ ನೀತಿ ಬಗ್ಗೆ ವಿಶ್ವ ಸಂಸ್ಥೆಗೆ ದೂರು

ದಕ್ಷಿಣ ಆಫ್ರಿಕದಲ್ಲಿ ಮಲಾನ್ ಸರ್ಕಾರದವರು ಅನುಸರಿಸುತ್ತಿರುವ ವರ್ಣಭೇದ ನೀತಿಯ ಬಗ್ಗೆ ಭಾರತ ಸರ್ಕಾರದವರು ವಿಶ್ವಸಂಸ್ಥೆಯಲ್ಲಿ ದೂರು ಮಂಡಿಸಲಿರುವರೆಂದು ಗೊತ್ತಾಗಿದೆ. ದಕ್ಷಿಣ ಆಫ್ರಿಕದ ಭಾರತೀಯರ ಸಮಸ್ಯೆಯೇ ಅಲ್ಲದೆ ಇದನ್ನೇ ಪ್ರತ್ಯೇಕ ಸಮಸ್ಯೆಯನ್ನಾಗಿ ಮಂಡಿಸಲು ಭಾರತವು ನಿರ್ಧರಿಸಿದೆ. ಮಲಾನ್ ಸರ್ಕಾರದ ನೀತಿಯಿಂದ ವಿಶ್ವದ ಶಾಂತಿಗೆ ಧಕ್ಕೆ ಬರುವುದಲ್ಲದೆ ವಿಶ್ವದಲ್ಲಿ ವರ್ಣದ್ವೇಷವು ಹೆಚ್ಚಲು ಅವಕಾಶವಾಗುವುದೆಂದು ಭಾರತ ಸರ್ಕಾರವು ಅಭಿಪ್ರಾಯಪಟ್ಟಿದೆ. ಮಾನವನ ಮೂಲಭೂತ ಹಕ್ಕಿನ ಸಾಧನೆಗಾಗಿ ದಕ್ಷಿಣ ಆಫ್ರಿಕದಲ್ಲಿ ನಡೆಯುತ್ತಿರುವ ನ್ಯಾಯವಾದ ಚಳುವಳಿಯನ್ನು ಮಟ್ಟಹಾಕಲು ಚಳುವಳಿಕಾರರನ್ನು ಛಡಿಶಿಕ್ಷೆ ಚಾವಟಿ ಏಟು ಮೊದಲಾದ ಶಿಕ್ಷೆಗಳಿಗೆ ಗುರಿಪಡಿಸುತ್ತಿರುವುದಲ್ಲದೆ, ಆ ಜನರು ತಮ್ಮ ದಿನಚರಿ ಕೆಲಸಗಳಿಗಾಗಿ ತಿರುಗಾಡುವಾಗ ಹತ್ತು ವಿಧದ ರಹದಾರಿಯನ್ನು ಪಡೆದಿರಬೇಕೆಂದೂ ವಿಧಾಯಕ ಮಾಡಲಾಗಿದೆ. ರೈಲು ಅಂಚೆ ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ವರ್ಣವಿಭೇದ ಶಾಸನದ ವಿರುದ್ಧವಾಗಿ ಶಾಂತಿಯುತ ಚಳುವಳಿಯು ಮುಂದುವರಿಯುತ್ತಲೇ ಇರುವುದೆಂದೂ ತಿಳಿದುಬಂದಿದೆ.

ಬ್ರಿಟಿಷ್ ರಾಣಿ ಪಟ್ಟಾಭಿಷೇಕ ಮಹೋತ್ಸವಕ್ಕೆ ನೆಹರೂ

ಲಂಡನ್ನಿನಲ್ಲಿ, ಬರುವ ವರ್ಷ ಜೂನ್ ತಿಂಗಳಿನಲ್ಲಿ ನಡೆಯಲಿರುವ ರಾಣಿ ಎಲಿಜಬೆತ್ತರ ಪಟ್ಟಾಭಿಷೇಕೋತ್ಸವದಲ್ಲಿ ಭಾಗವಹಿಸಲು ಪಂಡಿತ ನೆಹರೂರವರು ತೆರಳಲಿರುವರೆಂದು ಗೊತ್ತಾಗಿದೆ.

ಉರಿಯುವ ಸುಣ್ಣದ ಗೂಡಿಗೆ ಹಾಕಿ ಕೊಲೆ

ತಿರುಚನಾಪಳ್ಳಿಯ ಬಳಿ ಮೇಲಕಲ್ಯಾಪಾರೈ ಎಂಬ ಗ್ರಾಮದಲ್ಲಿ ಹೆಂಗಸೊಬ್ಬಳ ವಿಷಯವಾಗಿ ಉಂಟಾದ ಭಿನ್ನಾಭಿಪ್ರಾಯದ ಪರಿಣಾಮವಾಗಿ ಕೆಲವರು ಸುಬ್ರಹ್ಮಣ್ಯ ಪಡಯಾಚಿ ಎಂಬುವವನನ್ನು ಭರ್ಜಿಯಿಂದ ಇರಿದು ಉರಿಯುತ್ತಿದ್ದ ಸುಣ್ಣದ ಗೂಡಿನೊಳಗೆ

ಪ್ರಣಯ ಪ್ರಸಂಗದಲ್ಲಿ ೮ ಮಂದಿಯ ಕೊಲೆ

ಸ್ಟಾಕ್‌ಹೋಮಿನ ಬಳಿ ಒಂದು ಹಳ್ಳಿಯ ಪೊಲೀಸ್ ಕಾನ್ಸ್ಟೇಬಲನ ವಿವಾಹವು ಉಲ್ಲ ಒಸ್ಟ್‌ಬರ್ಗ್ ಎಂಬಾಕೆಯೊಡನೆ ಕೆಲವು ದಿನಗಳ ಹಿಂದೆ ನಿಶ್ಚಯವಾಗಿ ಇತ್ತೀಚೆಗೆ ರದ್ದು ಮಾಡಲ್ಪಟ್ಟುದರಿಂದ ಕಾನ್ಸ್ಟೇಬಲನು ತನ್ನ ಪ್ರೇಯಸಿಯನ್ನು ಬೆದರಿಸುತ್ತಿದ್ದನೆಂದೂ, ಆ ಕಾರಣಕ್ಕಾಗಿ ಅವನು ಕೆಲಸದಿಂದ ವಜಾ ಮಾಡಲ್ಪಟ್ಟನೆಂದೂ ವರದಿಯಾಗಿದೆ. ಇದರಿಂದ ರೋಷಗೊಂಡ ಕಾನ್ಸ್ಟೇಬಲನು ಆಕೆಯನ್ನು ಕೊಂದು, ಅವಳು ಕೆಲಸ ಮಾಡುತ್ತಿದ್ದ ಮನೆಯ ಯಜಮಾನ ಮತ್ತು ಇತರ ಮೂವರು ಹೆಂಗಸರನ್ನೂ ಅವರ ಮನೆಗೆ ಬೆಂಕಿ ಇಟ್ಟು ಕೊಲೆ ಮಾಡಿ, ಪ್ರೇಯಸಿಯ ತಂದೆ ತಾಯಿಗಳನ್ನು ಕೊಂದನೆಂದು ಹೇಳಲಾಗಿದೆ. ಕಡೆಗೆ ಅವನೂ ಆತ್ಮಹತ್ಯ ಮಾಡಿಕೊಂಡನು.

ಆಂಧ್ರ ಪ್ರಾಂತ್ಯಕ್ಕೆ ಮದ್ರಾಸನ್ನು ಕೇಳಲಾಗದು

ಮದರಾಸಿನಲ್ಲಿ ಮೊನ್ನೆ ದಿನ ಜರುಗಿದ ಐದನೆಯ ತಮಿಳು ಹಬ್ಬದ ಆರಂಭೋತ್ಸವವನ್ನು ರಾಜಾಜಿಯವರು ನೆರವೇರಿಸುತ್ತಾ ಆಂಧ್ರರು ಮದ್ರಾಸು ನಗರದ ಹಂಬಲನ್ನು ಬಿಟ್ಟಲ್ಲಿ ಆಂಧ್ರ ಪ್ರಾಂತ್ಯದ ಸ್ಥಾಪನೆಯು ಕೂಡಲೇ ಆಗುವುದೆಂದೂ, ಆ ನಗರವನ್ನು ಆಂಧ್ರ ಪ್ರಾಂತ್ಯಕ್ಕೆ ಸೇರಿಸಬೇಕೆಂಬ ಬೇಡಿಕೆಯು ಆ ಪ್ರಾಂತ್ಯದ ರಚನೆಗೆ ಅಡ್ಡಿಯಾಗಿರುವುದೆಂದೂ ತಿಳಿಸಿದರು.

ಗೌರೀಶಂಕರ ಸ್ವಾಮಿಗಳಿಗೆ ಶ್ರದ್ಧಾಂಜಲಿ

ಮೈಸೂರು ೨೪

ಮೊನ್ನೆ ಸಂಜೆ ಪುರಭವನದಲ್ಲಿ ಭಾರಿ ಬಹಿರಂಗ ಸಭೆ ನಡೆದು ಶಿವೈಕ್ಯರಾದ ಗವಿ ಮಠದ ಶ್ರೀ ಗೌರೀಶಂಕರ ಸ್ವಾಮಿಗಳವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಹೆಚ್. ಸಿದ್ದಯ್ಯನವರು ಅಗ್ರಾಸನವನ್ನು ವಹಿಸಿದ್ದರು.

ಪ್ರಾರ್ಥನೆ ಹಸನವಾದ ನಂತರ ಶ್ರೀ ಸ್ವಾಮಿಗಳವರ ಗುಣಕಥನ ಮಾಡಿ ಡಾ|| ವಿ|| ಎಂ ಜಿ ನಂಜುಂಡಾರಾಧ್ಯರು ರಚಿಸಿದ್ದ ವಾಙ್ಮಯಾಂಜಲಿಯ ಪದ್ಯಗಳನ್ನು ಶ್ರೀ ಎಂ ಸಿ ಮಹಾದೇವಸ್ವಾಮಿಗಳವರು ಹಾಡಿದರು.

ಶ್ರೀಗಳಾದ ಎ ಕೃಷ್ಣಮೂರ್ತಿರಾವ್ ಹೆಚ್ ಗಂಗಾಧರ್, ಹೆಚ್ ಸಿ ದಾಸಪ್ಪ, ಶಾನುಭೋಗ್ ಚಂದ್ರಶೇಖರಭಟ್ಟರು, ಹೆಚ್ ಎಲ್ ಹರಿಯಪ್ಪ, ಡಾ|| ಪುರುಷೋತ್ತಮ ಸಿಂಗ್ ನೂರ್ ಹುಸೇನ್, ಡಾ|| ಅಗ್ನಾಜಪ್ಪ ಎಸ್ ರಾಚಯ್ಯ, ಶಾಂತವೀರಪ್ಪ ಬಿ ಶಿವಮೂರ್ತಿಶಾಸ್ತ್ರಿಗಳೇ ಮುಂತಾದವರು ಭಾಷಣ ಮಾಡಿ ದಿವಂಗತ ಸ್ವಾಮಿಗಳ ಪಾಂಡಿತ್ಯ ಸರಳತೆ, ವೈರಾಗ್ಯ ಭೂತದಯೆ ಪಶ್ಚಾತ್ತಾಪ ಮುಂತಾದ ಸದ್ಗುಣಗಳನ್ನು ವಿವರಿಸಿದರು.

ಅಧ್ಯಕ್ಷರ ಭಾಷಣವಾದ ನಂತರ ಸಭೆಯು ೨ ನಿಮಿಷ ಮೌನದಿಂದ ಎದ್ದು ನಿಂತು ಶ್ರೀ ಸ್ವಾಮಿಗಳವರಿಗೆ ಗೌರವವನ್ನು ಸೂಚಿಸಿತು.

ಎಸೆದರೆಂದು ವರದಿಯಾಗಿದೆ. ಈ ಸಂಬಂಧವಲ್ಲಿ ಮೂವರನ್ನು ದಸ್ತಗಿರಿ ಮಾಡಲಾಗಿದೆ. ಪೋಲೀಸಿನವರು ಸುಣ್ಣದ ಗೂಡಿನಿಂದ ಮೃತನ ಮೂಳೆಗಳನ್ನು ತೆಗೆಸಿ ಪರೀಕ್ಷೆಗಾಗಿ ಕಳುಹಿಸಿರುವರು.

ಶ್ರೀ ಗಣಪತಿ ಮಹೋತ್ಸವ ಸಮಾರಂಭಗಳು

ಮೈಸೂರು ೨೫

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯ ಶ್ರೀ ವಿದ್ಯಾ ಗಣಪತಿ ಸಭೆಯ ಆಶ್ರಯದಲ್ಲಿ ನೆನ್ನೆಯಿಂದ ಇದೇ ೩೦ ನೇ ತಾರೀಖಿನವರೆಗೆ ಶ್ರೀ ವಿದ್ಯಾಗಣಪತಿ ಮಂಗಳಾರತಿ ಮಹೋತ್ಸವವನ್ನು ಏರ್ಪಡಿಸಲಾಗಿದೆ. ಈ ಸಂಬಂಧವಾಗಿ ಪ್ರತಿದಿನ ಸಂಜೆ ೬ ಗಂಟೆಯಿಂದ ಸಂಗೀತ, ಹರಿಕಥೆ ಮತ್ತು ಉಪನ್ಯಾಸಗಳು ಜರುಗುವುವು ೩೧ ನೇ ತಾ|| ಸಂಜೆ ಗಣಪತಿ ಉದ್ವಾಸನೆ ಮತ್ತು ಮೆರವಣಿಗೆಗಳು ನಡೆಯಲಿವೆ ಈ ಸಂಜೆ ಶ್ರೀ|| ವಿ|| ಎಸ್ ಎಂ ಮರಿಯಪ್ಪನವರ ಗಾಯನವೂ ಮತ್ತು ನಾಳೆ ಸಂಜೆ ಬ್ರ|| ಶ್ರೀ|| ವೆಂಕಟೇಶ ಶಾಸ್ತ್ರಿಗಳವರಿಂದ ಗೀತಾ ತಾತ್ಪರ್ಯ ಎಂಬ ವಿಷಯವಾಗಿ ಉಪನ್ಯಾಸವೂ ಏರ್ಪಾಡಾಗಿವೆ.

ರಮಾವಿಳಾಸ ಅಗ್ರಹಾರದ ಯುವಕರ ಸಾಂಸ್ಕೃತಿಕ ಸಂಘದಲ್ಲಿ ಈ ರಾತ್ರಿ ಶ್ರೀಮತಿ ಗೌರಿ ಕುಪ್ಪುಸ್ವಾಮಿಯವರ ಗಾಯನವೂ, ನಾಳೆ ವಿ|| ಆರ್. ಕೆ ಶ್ರೀಕಂಠೇರವರ ಸಂಗೀತವೂ ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯುವುವು.

ಜಗನ್ಮೋಹನ ಬಂಗಲೆ ಬಳಿ ಇರುವ ಮಾದಂ ಶಾಲೆಯಲ್ಲಿ ನಾಳೆ ಸಂಜೆ ೫ ರಿಂದ ೭-೩೦ರ ವರೆಗೆ ವಿ|| ಎ. ಎ ನರಸಿಂಹಾಚಾರ್ಯರ ಗಾಯನವು ಏರ್ಪಾಡಾಗಿದೆ

ಶ್ರೀರಾಮಪೇಟೆಯ ಪ್ರಸನ್ನ ಗಣಪತಿ ಮಂಡಲಿಯ ಆಶ್ರಯದಲ್ಲಿ ಈ ಸಂಜೆ ೭ ಗಂಟೆಗೆ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಶ್ರೀ ಎಸ್ ವಿ ಪರಮೇಶ್ವರ ಭಟ್ಟರಿಂದ "ವಿದ್ಯಾ ಗಣಪತಿ ನಮ್ಮ ರಾಷ್ಟ್ರೀಯ ಜೀವನದ ಆದರ್ಶ ಬಿಂದು" ಎಂಬ ವಿಷಯವಾಗಿ ಉಪನ್ಯಾಸವು ಜರುಗುವುದು

ಛತ್ರಿ ಬಸಪ್ಪಾಜಿ ತೋಟದ ಶ್ರೀ ವಿದ್ಯಾ ಗಣಪತಿ ಮಂಡಲಿಯ ಆಶ್ರಯದಲ್ಲಿ ರಾಮಾನುಜಾ ರಸ್ತೆಯ ಶ್ರೀ ವಾಸುದೇವರಾಜು ರವರ ಮನೆಯ ಮುಂದೆ ಈ ಸಂಜೆ ೭ ಘಂಟೆಗೆ ಶ್ರೀ ಸೋಮನಾಥಾನಂದಜಿಯವರು "ಪ್ರಗತಿಯೇ ಹಿಂದೂ ಸಂಸ್ಕೃತಿಯ ವೈಶಿಷ್ಟ್ಯ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಶ್ರೀ ಬಿ ನಾರಾಯಣಸ್ವಾಮಿ ಯವರು ಅಧ್ಯಕ್ಷತೆ ವಹಿಸುವರು.

ಶ್ರೀ ಮಹಾಗಣಪತಿ ಮಂಡಲಿಯ ಆಶ್ರಯದಲ್ಲಿ ರಾಜಧಾನಿಯ, ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯ ಶ್ರೀ ತಿಪ್ಪಯ್ಯನವರ ದಶರಥ ರಾಮ ಮಂದಿರದಲ್ಲಿ ಈ ಸಂಜೆ ೭ ಘಂಟೆಗೆ ಅರುಣ ಪತ್ರಿಕೆ ಸಂಪಾದಕರಾದ ಶ್ರೀ ಎಚ್. ಕೆ ಕುಮಾರಸ್ವಾಮಿಯವರು "ಗಣೇಶೋತ್ಸವ ನಮ್ಮ ಸಾಂಸ್ಕೃತಿಕ ಜೀವನದ ಪ್ರತೀಕ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ದಿವಾನರ ರಸ್ತೆಯಲ್ಲಿರುವ ವೆಲ್‌ಕಂ ಲಾಡ್ಜಿನಲ್ಲಿ ನೆನ್ನೆದಿನ ಗಣಪತಿ ಮಂಗಳಾರತಿಯು ಜರುಗಿದ ಸಂದರ್ಭದಲ್ಲಿ ರಾತ್ರಿ ಯಕ್ಷಗಾನವು ಏರ್ಪಾಡಾಗಿತ್ತು

ಬೊಂಬಾಯಿ ಸಂಪಾದಕರಿಂದ ಕ್ಷಮಾಪಣೆ

ಕೇಂದ್ರ ಪುನರ್ವ್ಯವಸ್ಥಾ ಮಂತ್ರಿ ಶ್ರೀ ಎ ಪಿ ಜೈನರನ್ನು ಅಪಮಾನ ಮಾಡಿದರೆಂದು ದಸ್ತಗಿರಿಯಾಗಿರುವ ಬೊಂಬಾಯಿಯ ಕರೆಂಟ್ ಪತ್ರಿಕೆಯ ಸಂಪಾದಕ ಡಿ.ಎಫ್ ಕಾರಕಾರವರು ಕ್ಷಮಾಪಣೆಯನ್ನು ಕೇಳಿರುವುದರಿಂದ ಅವರ ಮೇಲಿನ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಲಾಗುವುದೆಂದು ಗೊತ್ತಾಗಿದೆ

ಸರ್ವೆ ಟ್ರೈನಿಂಗಿಗೆ ಅಮಲ್ದಾರರು

ಸರ್ವೆ ಶಿಕ್ಷಣ ಪಡೆಯಲು ಸರ್ಕಾರದವರು ೧೦ ಜನ ಅಮಲ್ದಾರರುಗಳನ್ನು ಕಳುಹಿಸಲಿರುವರು ಅವರ ಸ್ಥಾನಗಳ ಪೈಕಿ ಎರಡಕ್ಕೆ ರಾಜಧಾನಿಯ ತಾಲ್ಲೂಕು ಶಿರಸ್ತೆದಾರರಾದ ಶ್ರೀ ಹೆಚ್ ಎಸ್ ರಾಮರಾವ್ ಮತ್ತು ಮತ್ತೊಬ್ಬ ಶಿರಸ್ತೆದಾರ್ ಶ್ರೀ ರಷೀದ್‌ರವರನ್ನು ಅಮಲ್ದಾರರನ್ನಾಗಿ ನೇಮಿಸಿ ಸಾಗರ ಮತ್ತು ಹೆಗ್ಗಡದೇವನಕೋಟೆಗೆ ವರ್ಗಾಯಿಸಲಾಗಿದೆ

ಹರಿಕಥೆಯ ಮಂಗಳ

ರಾಜಧಾನಿಯ ಚಾಮರಾಜ ಜೋಡಿ ಶ್ರೀ ನಾಗಣ್ಣನವರ ಕಡ್ಲೆಬಟ್ಟಿಯಲ್ಲಿ ಕಳೆದ ೭ ನೇ ತಾ|| ಆರಂಭವಾಗಿ ಪ್ರತಿನಿತ್ಯವೂ ಸಂಜೆ ೭ ಗಂಟೆಗೆ ಶ್ರೀ ಆರ್ ಎಸ್ ಶಿವಗಿರಿ ದಾಸರಿಂದ ನಡೆಸಲ್ಪಡುತ್ತಿದ್ದ ಹರಿಕಥೆ ಸಮಾರಂಭವು ಮಂಗಳವಾರ ದಿವಸ ಶ್ರೀ ಶ್ರೀನಿವಾಸ ಕಲ್ಯಾಣ ಹರಿಕಥೆಯೊಡನೆ ಮುಕ್ತಾಯಗೊಳ್ಳುವುದು ಡಾ|| ಬಿ ಜಿ ದಾಸರು ಭಾಷಣ ಮಾಡುವರು

ಮೈಸೂರು ಸಂಸ್ಥಾನದ ರೈಲ್ವೆ ನೌಕರರ ಸಂಘ

ಮೈಸೂರು ಸಂಘದ ಮೈಸೂರು ಶಾಖೆಯ ಕಛೇರಿಯನ್ನು ಈಗ ಇರ್ವಿನ್ ರಸ್ತೆಯ ೧೫೭ನೇ ನಂಬರಿನ ಕಟ್ಟಡದಲ್ಲಿ ಸ್ಥಾಪಿಸಲಾಗಿದೆ ಕಛೇರಿಗೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳನ್ನೂ ಇನ್ನು ಮುಂದೆ ಮೇಲ್ಕಂಡ ವಿಳಾಸಕ್ಕೆ ಬರೆಯಬೇಕೆಂದು ಸೂಚಿಸಲಾಗಿದೆ

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ವೆಂಕಟಾದ್ರಿಪಂಡಿತರ ನಿಧನ

ಮೈಸೂರು ೨೫

ಆಗರದ ಪುಟ್ಟಸ್ವಾಮಿ ಪಂಡಿತರ ಮಕ್ಕಳು ಶ್ರೀ ಎ ವೆಂಕಟಾದ್ರಿ ಪಂಡಿತರು ಕಳೆದ ಶುಕ್ರವಾರ ರಾತ್ರಿ ೮ ಘಂಟೆ ಸಮಯದಲ್ಲಿ ರಾಜಧಾನಿಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ದಿವಂಗತರು ಒಳ್ಳೆಯ ಆಸ್ತಿಕರೂ, ಸಾಹಿತಿಗಳೂ ಆಗಿದ್ದು ಸ್ವತಃ ಅನೇಕ ಕನ್ನಡ ಕವಿತೆಗಳನ್ನು ರಚಿಸಿದ್ದರು ಅವರು ಶಾಲಾ ಅಧ್ಯಾಪಕರಾಗಿದ್ದು ಕೆಲವು ವರ್ಷಗಳ ಹಿಂದೆ ನಿವೃತ್ತರಾಗಿದ್ದರು ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಕೋರುತ್ತೇವೆ.

ಕೇಂದ್ರ ಉಪ ಆಹಾರ ಮಂತ್ರಿಗಳಿಂದ ಡಿಪ್ಪೋ ಪರಿಶೀಲನೆ

ಕೇಂದ್ರ ಉಪ ಆಹಾರ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಜಿಲ್ಲಾಧಿಕಾರಿಗಳಿಂದ ಜ|| ಮಹಮದ್ ಅಹಮದ್ ಮತ್ತು ರೇಷನಿಂಗ್ ಅಧಿಕಾರಿ. ಶ್ರೀ ಹೆಚ್ ಜಿ ವಿಜಯರಾಘವರೆಡ್ಡಿ ಮುಂತಾದವರೊಡನೆ ಶುಕ್ರವಾರ ನಗರದ ಹಲವು ಆಹಾರ ಡಿಪ್ಪೋಗಳನ್ನು ಪರಿಶೀಲಿಸಿದರು ನಂತರ ಜೈಲಿಗೂ ಭೇಟಿಯಿತ್ತಿದ್ದರು

ಹೊಸ ಸೈನಿಕ ವಿಮಾನ

ಹಿಂದೂಸ್ಥಾನ ವಿಮಾನ ಕಾರ್ಖಾನೆಯವರು, ಸೈನ್ಯಗಳಿಗೆ ಬೇಕಾಗುವ ಹೆಚ್ ಟಿ ೧೦ ಎ ಬ ವಿಮಾನವನ್ನು ತಯಾರಿಸಿರುತ್ತಾರೆ

ಲಂಡನ್ ಫಲ ಪುಷ್ಪ ಪ್ರದರ್ಶನದಲ್ಲಿ ಮೈಸೂರಿನ ಪಾಗ

ಈ ತಿಂಗಳು ೨೦, ೨೯ ಮತ್ತು ೩೦ ರಲ್ಲಿ ಲಂಡನ್ನಿನಲ್ಲಿ ನಡೆಯುವ ಫಲ ಪುಷ್ಪ ಪ್ರದರ್ಶನದಲ್ಲಿ ಮೈಸೂರಿನ ತೋಟಗಳ ಇಲಾಖೆಯವರೂ, ಖಾಸಗಿಯವರೂ ಭಾಗವಹಿಸಲಿರುವರು

SHARADA VILASA COLLEGE,

MYSORE

As the University has kindly granted permission to start B. Sc. Degree Course in this College, Junior B Sc Class with P C.M as Optional Subjects is opened from today. APPLICATIONS FOR SEATS WILL BE RECEIVED FROM TO-DAY.

Mysore
25-8-52

PRINCIPAL

ರಂಗೂನಿನಲ್ಲಿ ಒಂದು ಬಕೆಟ್ ನೀರಿಗೆ ೧|| ರೂ.

ರಂಗೂನ್ ನಗರಕ್ಕೆ ನೀರು ಸರಬರಾಜಾಗುತ್ತಿದ್ದ ಕೊಳಾಯಿ ವ್ಯವಸ್ಥೆಯನ್ನು ಕಮ್ಯೂನಿಸ್ಟರು ಕಳೆದವಾರ ಕಡಿದುಹಾಕಿದುದರಿಂದ ಅಲ್ಲಿ ನೀರನ್ನು ಈಗ ಒಂದು ಬಕೆಟ್ಟಿಗೆ ಒಂದೂವರೆ ರೂ ನಂತೆ ತಂದು ಮಾರಲಾಗುತ್ತಿದೆಯೆಂದು ವರದಿಯಾಗಿದೆ

ಪ್ರಭುಗಳ ಪಟ್ಟಾಭಿಷೇಕ ದಿನೋತ್ಸವ

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ಮಹೋತ್ಸವ ದಿವಸದ ಸಂದರ್ಭದಲ್ಲಿ ಅರಮನೆ ಮುಜರಾಯಿ ದೇವಸ್ಥಾನಗಳ ದೇವರ ಉತ್ಸವಗಳು ತಾರೀಖು ೨೭-೮-೫೨ ನೇ ಬುಧವಾರ ಸಾಯಂಕಾಲ ೫ ೩೦ ಘಂಟೆಗೆ ಅರಮನೆ ಕೋಟೆಯೊಳಗೆ ಸಕಲ ಮರ್ಯಾದೆಗಳೊಡನೆ ಬೆಳೆಯುವುವು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೨೦ ಜಿ ಎಸ್. ಸುಬ್ರಹ್ಮಣ್ಯ ವೀಣೆ ಸಾಧ್ಯಾಪ್ನ ೧.೩೦ ಕೊಳಲು ತ ಹಯಗ್ರೀವಾಚಾರ್ ಸಂಗೀತ. ಸಂಜೆ ೬ ೩೦ ಎಸ್ ಡಿ ಕೇಶವಮೂರ್ತಿ ಸಂಗೀತ ೬ ೧೦ ಗಾನ ವಿಹಾರ ೭ ಹಯಗ್ರೀವಾಚಾರ್ ಹಿಂದೂಸ್ಥಾನಿ ಸಂಗೀತ ೭ ೩ ಕೆ. ಕೃಷ್ಣಮೂರ್ತಿಯವರ ಭಾಷಣ ೮ ಜಿ ಎಸ್ ಸುಬ್ರಹ್ಮಣ್ಯಂ ವೀಣೆ ಅಧ್ಯಕ್ಷ ಸಂದ ಸಂಗೀತ ೯ ೧೫ ಆಟಗಳ ವಿವರ ೯ ೩೦ ಗಾನಾಮೃತ

SREE GANESHA

TALKIES

From 26—8—52

Columbia's

THE VATICAN

A Wonderful substitute for Personal Visit A Technicolor Picture of the smallest and most colourful State in the World. Of Special Interest to Roman Catholics

FROM 29-8-52

THE FANTASTIC ADVENTURES OF BARON MANCHUSSEN

[Agfacolor]

ಶ್ರೀ ಜಗದಾಂಬ ಶಿಶುವಿಹಾರ

553, ದಿವಾನ್ಸ್ ರಸ್ತೆ, ಮೈಸೂರು

ಶಿಶು ಮನಶ್ಶಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳಿಗನುಸಾರವಾಗಿ, ಉತ್ತಮತರವಾದ ಪರಿಸರಣಕ್ಕನುಗುಣವಾದ ಬಂಗಲೆಯಲ್ಲಿ, ಉತ್ತಮೋತ್ತಮರಾದ ವಿದ್ಯಾಭ್ಯಾಸದ ಉಪಕರಣಗಳ ಸಹಾಯದಿಂದ ನೃತ್ಯ, ಗೀತ, ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಮೇಲ್ಕಂಡ ಶಿಶುವಿಹಾರದಲ್ಲಿ ಕೊಡಲಾಗುತ್ತಿದೆ ಈ ಸುಸಮಯವನ್ನು ಉಪಯೋಗಿಸಿಕೊಳ್ಳಲು ತಮ್ಮ ಮಕ್ಕಳನ್ನು ಶಾಲೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ

ಡಿ ಕೃಷ್ಣಮೂರ್ತಿ
ಡೈರೆಕ್ಟರ್.

ಸ್ಪೋರ್ಟ್ಸ್‌ಗಳು ತಲೆದಿಂಬುಗಳು, ಕುರ್ಚಿ ಮತ್ತು ಸೋಫಾ ಸೀಟುಗಳಿಂದ ಕೂಡಿದ

ಗುಡ್ ಇಯರ್ ಪ್ಲಯೊಫೋಮ್ ಮತ್ತು ಏರ್‌ಫ್ಲೋ ನ್

ಸೂಪರ್ ಕುಷನಿಂಗುಗಳು

ಮೈಸೂರಿಗೆ ಏಕಮಾತ್ರ ಅಧಿಕೃತ ಡೀಲರುಗಳಾದ

ಮೆಸರ್ಸ್ ಅಬೀದ್ ಅಂಡ್ ಕೋ.,

ಸಯ್ಯಾಜಿ ಬಾರ —0— ಮೈಸೂರು.

ಇವರಲ್ಲಿ ಈಗ ಸ್ಟಾಕಿನಲ್ಲಿ ದೊರೆಯುತ್ತವೆ. ಬಂದು ನೋಡಬಹುದು.

Edited, Printed and Published by A. R Nagaraja at Sadhvi Press, D Subbaiah Road, Mysore.

ಟೆಲಿಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೬-೮-೧೯೫೨ [ಸಂಚಿಕೆ ೨೫

ಭಾರತ ಮತ್ತು ಚೀಣಾ ಕಮ್ಯೂನಿಸ್ಟರ ಒಪ್ಪಂದ!

ನವರಾತ್ರಿಯಲ್ಲಿ ವಿಹಾರಾರ್ಥ ವಿಮಾನ ಹಾರಾಟ

ಮೈಸೂರು ೨೫

ಸಾರ್ವಜನಿಕರಲ್ಲಿ ವಿಮಾನ ಹಾರಾಟದ ಅಭಿರುಚಿಯನ್ನು ಹುಟ್ಟಿಸಲು ಬೆಂಗಳೂರಿನ ವಿಮಾನ ಶಿಕ್ಷಣ ಶಾಲೆಯವರು ದಸರಾ ಉತ್ಸವ ಕಾಲದಲ್ಲಿ ಬರುವ ತಿಂಗಳು ೨೦ ರಿಂದ ಅಕ್ಟೋಬರ್ ೫ ರ ವರೆಗೆ ರಾಜಧಾನಿಯಲ್ಲಿ ವಿಹಾರಾರ್ಥವಾಗಿ ವಿಮಾನ ಹಾರಾಟವನ್ನು ಏರ್ಪಡಿಸುವುದಕ್ಕೆ ಸರ್ಕಾರದವರು ಅನುಮತಿಯನ್ನಿತ್ತಿರುವರು. ವಸ್ತು ಪ್ರದರ್ಶನದ ಜನರ ನೋಟಕ್ಕಾಗಿ ವಿಮಾನವೊಂದನ್ನು ಇಡಲಾಗುವುದು. ವಿಮಾನ ಹಾರಾಟವನ್ನು ಮಂಡಕಳ್ಳಿ ನಿಲ್ದಾಣದಲ್ಲಿ ಏರ್ಪಡಿಸಲಾಗುವುದು. ಸ್ವಲ್ಪ ದೂರ ಹೋಗಿಬರಲು ೫ ರೂ., ಚಾಮುಂಡಿ ಬೆಟ್ಟವನ್ನು ಬಳಸಿ ಬರಲು ೧೦ ರೂ. ನಗರದ ಮೇಲೆಲ್ಲಾ ಹಾರಾಡಲು ೧೫ ರೂ., ಬೃಂದಾವನ ಅಥವಾ ಶ್ರೀರಂಗಪಟ್ಟಣಕ್ಕೆ ಹೋಗಿಬರಲು ೨೫ ರೂ., ಹೀಗೆ ದರಗಳನ್ನು ಗೊತ್ತುಪಡಿಸಲಾಗಿದೆ.

ಕೆ. ಎಂ. ಕಾರಿಯಪ್ಪ

ಭಾರತದ ಶ್ರೇಷ್ಠ ಸೇನಾನಿ ಜ|| ಕೆ. ಎಂ. ಕಾರಿಯಪ್ಪನವರು ಈ ದಿನ ಬೆಳಗ್ಗೆ ಮಡಿಕೇರಿಯಿಂದ ರಾಜಧಾನಿಗೆ ಆಗಮಿಸಿ, ಇಲ್ಲಿ ಸ್ವಲ್ಪ ಹೊತ್ತು ಇದ್ದು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು

ಆಹಾರ ಕಛೇರಿಗೆ ಮಂತ್ರಿಗಳ ಅನಿರೀಕ್ಷಿತ ಭೇಟಿ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ, ಸಚಿವರುಗಳಾದ ಶ್ರೀ ಟಿ. ಸಿದ್ದಲಿಂಗಯ್ಯ, ಶ್ರೀ ಎ. ಜಿ. ರಾಮಚಂದ್ರರಾವ್, ಮತ್ತು ಶ್ರೀ ಟಿ. ಚನ್ನಯ್ಯನವರು ನಿನ್ನೆ ಇಲ್ಲಿನ ಆಹಾರ ಕಛೇರಿಗೆ ಅನಿರೀಕ್ಷಿತವಾಗಿ ಭೇಟಿಯಿತ್ತು, ಪರಿಶೀಲನೆ ನಡೆಸಿದರು. ಗುಮಾಸ್ತೆ ಶ್ರೀ ಹೆಚ್. ಟಿ. ಅನಂತರಾಮಯ್ಯನವರನ್ನು ಸಚಿವರು ಮಾತನಾಡಿಸಿದರು

ಬಂಡೀಪುರಕ್ಕೆ ರಾಜರುಗಳ ಪ್ರಯಾಣ

ಮೈಸೂರಿನ ಮತ್ತು ತಿರುವಾಂಕೂರಿನ ಮಹಾರಾಜರು ಈ ಬೆಳಗ್ಗೆ ಬಂಡೀಪುರಕ್ಕೆ ತೆರಳಿದರು. ಸಂಜೆ ವಾಪಸು ಬರುವರು

ಯಮುನಾ ನದಿಯ ಪ್ರವಾಹ ಹೆಚ್ಚುತ್ತಿದೆ

ಯಮುನಾ ನದಿಯ ಪ್ರವಾಹವು ಈಗ ಮಿತಿಮೀರಿ ಹೆಚ್ಚುತ್ತಿದೆಯೆಂದೂ, ಇದರ ಪರಿಣಾಮವಾಗಿ ೧೨ ಗ್ರಾಮಗಳಿಗೆ ವಿಪತ್ತು ಒದಗಿ ಅಲ್ಲಿನ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ರವಾನಿಸುವ ಕಾರ್ಯವು ಆರಂಭವಾಗಿದೆಯೆಂದೂ ತಿಳಿದುಬಂದಿದೆ. ಇನ್ನು ಅರ್ಧ ಅಡಿ ನೀರು ಹೆಚ್ಚಿದರೆ ಅಪಾಯದ ಮಟ್ಟವನ್ನು ಮುಟ್ಟುತ್ತದೆ.

ಕೆಂಪು ಚೀಣಾ ಮೇಲೆ ರಾಷ್ಟ್ರೀಯರ ಧಾಳಿ

ಹಾಂಗ್‌ಕಾಂಗಿಗೆ ದಕ್ಷಿಣದ ಬಳಿ ರಾಷ್ಟ್ರೀಯ ಚೀಣ ಗೆರಿಲ್ಲಾ ಪಡೆಗಳು ಕಳೆದ ೧೪ ನೇ ತಾ|| ಚೀಣಾ ತೀರದಲ್ಲಿ ಇರುವ ತೇಂಗ್ ಚೇನ್ಶ್ಯ ಎಂಬ ರೇವು ನಗರದ ಮೇಲೆ ೯ ದಿನಗಳ ಧಾಳಿ ನಡೆಸಿ ೬೫ ಜನರನ್ನು ಸೆರೆ ಹಿಡಿದುವೆಂದು ವರದಿಯಾಗಿದೆ

ನಿವೃತ್ತ ವೈದ್ಯರುಗಳ ಪುನರ್ನೇಮಕ

ಬೆಂಗಳೂರು, ೨೫

ಸಂಸ್ಥಾನದ ಗ್ರಾಮಾಂತರ ಪ್ರದೇಶಗಳ ಆಸ್ಪತ್ರೆಗಳಲ್ಲಿ ವೈದ್ಯರ ಅಭಾವವನ್ನು ನಿವಾರಿಸಲು ವಿಶೇಷ ಅನುಭವವುಳ್ಳ ನಿವೃತ್ತ ಸಬ್ ಅಸಿಸ್ಟೆಂಟ್ ಸರ್ಜನ್ನರನ್ನು ಪುನಃ ಕೆಲಸಕ್ಕೆ ನೇಮಿಸಲು ಸರ್ಕಾರದವರು ಆಲೋಚಿಸುತ್ತಿರುತ್ತಾರೆ. ಈ ಸಂಬಂಧವಾಗಿ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಉಮೇದುವಾರರ ನೇಮಕದ ಬಗ್ಗೆ ಸಮಿತಿಯೊಂದನ್ನು ನಿರ್ಮಿಸಲಾಗಿದೆ. ಅದರಲ್ಲಿ ಡಾ|| ಗಳಾದ ಟಿ. ಶೇಷಾಚಲಂ, ಲಕ್ಷ್ಮಣರಾವ್, ಪಡಿಕೆ ಚಂದ್ರಶೇಖರಯ್ಯ, ಎಸ್. ಸುಬ್ಬರಾವ್, ಎಸ್. ಎ. ಐಯ್ಯಂಗಾರ್ ಮತ್ತು ನಾಗೇಂದ್ರರವರುಗಳು ಸದಸ್ಯರಾಗಿರುವರು. ಗೃಹ ಕಾರ್ಯದರ್ಶಿಯವರು ಸಮಿತಿಯ ಕಾರ್ಯದರ್ಶಿಗಳಾಗಿರುವರೆಂದು ಹೇಳಲಾಗಿದೆ

ಕೆ. ಎಂ. ಪಿ., ಸೋಷಲಿಸ್ಟ್ ಪಕ್ಷಗಳ ಪೂರ್ಣ ಐಕ್ಯ

ಭಾರತದ ಸಮಾಜವಾದಿ ಮತ್ತು ಕೆ. ಎಂ. ಪಿ. ಪಕ್ಷಗಳು ಸಂಪೂರ್ಣವಾಗಿ ಐಕ್ಯ ಹೊಂದಿ, ಒಂದೇ ರಾಜಕೀಯ ಸಂಘವಾಗಿ ಕಾರ್ಯಕ್ರಮ ನಡೆಸಲು ನಿರ್ಧರಿಸಿರುವುವೆಂದು ವರದಿಯಾಗಿದೆ. ಎರಡು ಪಕ್ಷಗಳ ಅಧ್ಯಕ್ಷರುಗಳಾದ ಆಚಾರ್ಯ ನರೇಂದ್ರ ದೇವ್ ಮತ್ತು ಆಚಾರ್ಯ ಕೃಪಲಾನಿಯವರು ನೆನ್ನೆ ಲಕ್ನೋವಿನಲ್ಲಿ ಆರು ಗಂಟೆ ಕಾಲ ಚರ್ಚಿಸಿ, ಪರಸ್ಪರ ಐಕ್ಯದ ಬಗ್ಗೆ ಜಂಟಿ ಹೇಳಿಕೆ ಹೊರಡಿಸಿರುವರು. ಕಮ್ಯೂನಿಸ್ಟರೊಡನೆ ಯಾವುದೇ ವಿಷಯದಲ್ಲಾದರೂ ಮಿತ್ರತ್ವವನ್ನು ಬೆಳೆಸಕೂಡದೆಂಬ ಸಮಾಜವಾದಿ ಪಕ್ಷದ ಷರತ್ತನ್ನು ಒಪ್ಪಲಾಗಿದೆ. ಐಕ್ಯ ಹೊಂದಿದ ಎರಡು ಪಕ್ಷಗಳ ಕಾರ್ಯಕಾರಿ ಸಮಿತಿಯು ಭವಿಷ್ಯದ ಕಾರ್ಯಕ್ರಮವನ್ನು ಗೊತ್ತುಪಡಿಸಲಿದೆ. ಹೊಸ ಪಕ್ಷದ ರಾಷ್ಟ್ರೀಯ ಸಮ್ಮೇಳನವು ಬರುವ ಮಾರ್ಚಿಯಲ್ಲಿ ಸೇರುವುದು

ಸಮುದ್ರಕ್ಕೆ ವಿಮಾನ ಬಿದ್ದು ೧೨ ಜನರ ಮರಣ

ಬ್ರಿಟನ್ನಿನ ೪ ಇಂಜನ್ನಿನ ವಿಮಾನವೊಂದು ನೆನ್ನೆ ಸಿಸಿಲಿ ಬಳಿ ಸಮುದ್ರಕ್ಕೆ ಬಿದ್ದು, ೧೨ ಜನರು ಮುಳುಗಿಹೋದರೆಂದೂ, ೩೯ ಮಂದಿಯನ್ನು ರಕ್ಷಿಸಲಾಯಿತೆಂದೂ ವರದಿಯಾಗಿದೆ

ಕಂಟ್ರಾಕ್ಟರ್ ಮತ್ತು ಅವನ ಸಂಸಾರದ ಅಪಹಾರ

ಮಿಡ್ನಾಪುರದ ಕಂಟ್ರಾಕ್ಟರೊಬ್ಬನಿಗೆ ಕಳೆದ ೧೯ ನೇ ತಾರೀಖು ರಾತ್ರಿ ಆತನ ತಾಯಿಯು ಸಖತ್ ಕಾಯಿಲೆಯಿಂದಿರುವುದಾಗಿ ತಂತಿ ಬಂದಿತೆಂದೂ ಆತನು ಕೂಡಲೇ ಟ್ಯಾಕ್ಸಿ ಮಾಡಿಕೊಂಡು ಹೆಂಡತಿ ಮತ್ತು ಮಗನೊಡನೆ ಜಾರ್‌ಗ್ರಾಮ್ ಎಂಬ ಊರಿಗೆ ಹೊರಟನೆಂದೂ ಅಂದಿನಿಂದ ಟ್ಯಾಕ್ಸಿ ಮತ್ತು ಪ್ರಯಾಣಿಕರು ಪತ್ತೆಯಿಲ್ಲವಾಗಿದ್ದಾರೆಂದೂ ವರದಿಯಾಗಿದೆ. ಆತನ ತಾಯಿಯು ಆರೋಗ್ಯವಾಗಿಯೇ ಇದ್ದಾಳೆಂದೂ ಅವಳಿಗೆ ಈ ವಿಚಾರವೇ ತಿಳಿಯದೆಂದೂ ಹೇಳಲಾಗಿದೆ. ಮೊನ್ನೆ ಕಂಟ್ರಾಕ್ಟರನ ಸಹೋದರನಿಗೆ ಬಂದಿರುವ ಪತ್ರದಲ್ಲಿ ತನ್ನ ಸಹೋದರ ಮತ್ತು ಅವನ ಪತ್ನಿ ಪುತ್ರರು ಹಿಂತಿರುಗಬೇಕೆಂಬ ಅಭಿಲಾಷೆಯಿದ್ದಲ್ಲಿ ಕಾಗದದಲ್ಲಿ ಕಾಣಿಸಿರುವ ರಸ್ತೆಯ ಮೂಲಕ ಯಾರಿಗೂ ತಿಳಿಯದಂತೆ ೫೦ ಸಾವಿರ ರೂಗಳನ್ನು ಕಳುಹಿಸಿಕೊಡಬೇಕೆಂದೂ ಪೋಲೀಸರಿಗೆ ಈ ವಿಷಯವನ್ನು ತಿಳಿಸಿದಲ್ಲಿ ಕಂಟ್ರಾಕ್ಟರ್ ಮತ್ತು ಇತರರ ಮೃತ ಶರೀರಗಳು ಮಾತ್ರ ದೊರೆಯುವುವೆಂದೂ ತಿಳಿಸಲಾಗಿದೆ.

ಕಳ್ಳರವಾನೆಯ ತಡೆಗೆ ಸೈನಿಕರ ನೆರವು

ಪೂರ್ವ ಬಂಗಾಳದಿಂದ ಕಳ್ಳತನದಲ್ಲಿ ಸೆಣಬು, ಔಷಧಿ ಮೊದಲಾದ ವಸ್ತುಗಳು ಹೊರಕ್ಕೆ ಸಾಗುವುದನ್ನು ತಡೆಗಟ್ಟಲು ಪಾಕಿಸ್ತಾನ ಸರ್ಕಾರದವರು ಸಧ್ಯದಲ್ಲೇ ಶಾಸನವನ್ನು ಮಾಡಲಿರುವರು. ಅದನ್ನು ಉಲ್ಲಂಘಿಸುವವರನ್ನು ಕಂಡಕಡೆ ಗುಂಡಿಕ್ಕಿ ಕೊಲ್ಲುವುದೇ ಮೊದಲಾದ ಉಗ್ರ ಕ್ರಮ ಕೈಗೊಳ್ಳಲಾಗುವುದು. ಅಕ್ರಮ ರವಾನೆಯನ್ನು ತಡೆಯಲು ಸೈನಿಕರ ನೆರವನ್ನು ತೆಗೆದುಕೊಳ್ಳಲಾಗುವುದು

ನಿಜಾಮರಿಂದ ೩೭೦೦ ಎಕರೆ ಭೂದಾನ

ಹೈದರಾಬಾದಿನ ನಿಜಾಮರು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞ ಸಮಿತಿಗೆ ೩೭೦೦ ಎಕರೆ ಜಮೀನನ್ನು ದಾನವಾಗಿ ಕೊಡಲಿರುವರೆಂದು ಗೊತ್ತಾಗಿದೆ

ಭಾರತದ ವಿಮೋಚನೆಗಾಗಿ ಕಮ್ಯೂನಿಸ್ಟರ ಒಪ್ಪಂದ

ಭಾರತ ಮತ್ತು ಚೀಣಾ ಕಮ್ಯೂನಿಸ್ಟರುಗಳು ರಹಸ್ಯ ಒಪ್ಪಂದವನ್ನು ಮಾಡಿಕೊಂಡು ಭಾರತದ ವಿಮೋಚನೆಗಾಗಿ ಯೋಜನೆ ತಯಾರು ಮಾಡುತ್ತಿರುವರೆಂದು ರಾಷ್ಟ್ರೀಯ ಚೀಣರು ತಿಳಿಸಿರುತ್ತಾರೆ. ಈ ಒಪ್ಪಂದದ ಪ್ರಕಾರ ಭಾರತೀಯ ಕಮ್ಯೂನಿಸ್ಟರಿಗೆ ಚೀಣಾ ಕಮ್ಯೂನಿಸ್ಟರು ಶಸ್ತ್ರಾಸ್ತ್ರ, ಮದ್ದು ಗುಂಡು ಮತ್ತು ಇತರ ಯುದ್ಧ ಸಾಮಗ್ರಿಗಳನ್ನು ಒದಗಿಸಲಿರುವರೆಂದು ವರದಿಯಾಗಿದೆ. ಭಾರತದಲ್ಲಿರುವ ಸರ್ಕಾರವನ್ನು ಉರುಳಿಸಲು ಹಣ ಸಹಾಯವನ್ನು ಸಹಾ ಮಾಡಲು ಚೀಣರು ಒಪ್ಪಿರುವರೆಂದು ಹೇಳಲಾಗಿದೆ

ಭಾರತದಲ್ಲಿ ಗೂರ್ಖಾ ಸೈನ್ಯ ಜಮಾವಣೆ ಕೂಡದು

ಬ್ರಿಟಿಷ್ ಸೈನ್ಯಗಳಿಗಾಗಿ ಭಾರತದ ಪ್ರದೇಶದಲ್ಲಿ ಗೂರ್ಖಾ ಸೈನಿಕರನ್ನು ಜಮಾವಣೆ ಮಾಡುವ ಪದ್ಧತಿಯನ್ನು ಶೀಘ್ರದಲ್ಲಿ ಮುಕ್ತಾಯಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿ ಭಾರತ ಸರ್ಕಾರದವರು ನೇಪಾಳ ಮತ್ತು ಬ್ರಿಟಿಷ್ ಸರ್ಕಾರಗಳಿಗೆ ಸೂಚನೆ ಕಳುಹಿಸಿರುವರೆಂದು ವರದಿಯಾಗಿದೆ

ರುಮೇನಿಯಾದಲ್ಲಿ ಇಬ್ಬರು ಸಚಿವರ ವಜಾ

ಸಚಿವ ಪದವಿಗೆ ಅನರ್ಹರೆಂದೂ ಮತ್ತು ಉದಾಸೀನ ಮನೋವೃತ್ತಿಯಿಂದ ಕೂಡಿದವರೆಂದೂ ಭಾವಿಸಿ, ರುಮೇನಿಯಾ ಸರ್ಕಾರದ ಆರೋಗ್ಯ ಸಚಿವ ವಸಿಲೆ ಮಾರ್ಜಾರವರನ್ನು ವಜಾ ಮಾಡಲಾಗಿದೆ. ಕಳೆದ ಮೇ ತಿಂಗಳಿನಲ್ಲಿ ಸಚಿವ ಪದವಿಯಿಂದ ಹೊರ ಹಾಕಲ್ಪಟ್ಟ ಆನಾ ಪೌಕರ್ ಎಂಬುವರೊಡನೆ ಸಂಪರ್ಕವನ್ನಿಟ್ಟುಕೊಂಡಿದ್ದರೆಂಬ ಕಾರಣಕ್ಕಾಗಿ ಅವ್‌ರಾಮ್ ಬುನಾಸಿಲ್ ಎಂಬ ವಿದೇಶಾಂಗ ಉಪ ಸಚಿವರನ್ನೂ ತೆಗೆದು ಹಾಕಲಾಗಿದೆ

ಭಾರತ-ಕಾಶ್ಮೀರದ ಒಪ್ಪಂದದ ಬಗ್ಗೆ ವಿಶ್ವಸಂಸ್ಥೆ ಪ್ರವೇಶ ಕೂಡದು

ಭಾರತ ಮತ್ತು ಕಾಶ್ಮೀರಗಳ ನಡುವೆ ಆಗಿರುವ ಒಪ್ಪಂದದ ಮೇಲೆ ವಿಶ್ವಸಂಸ್ಥೆಯ ಅಧಿಕಾರ ವ್ಯಾಪ್ತಿಯಿಲ್ಲವೆಂದೂ, ಜಿನೀವಾ ಸಮ್ಮೇಳನದಲ್ಲಿ ಪಾಕಿಸ್ತಾನವು ಸದರಿ ವಿಷಯವನ್ನು ಪ್ರಸ್ತಾಪಿಸಿದರೆ ಭಾರತವು ವಿರೋಧಿಸುವುದೆಂದೂ ಕೇಂದ್ರ ರಕ್ಷಣಾ ಮಂತ್ರಿ ಎನ್. ಜಿ. ಅಯ್ಯಂಗಾರ್ಯರು ತಿಳಿಸಿರುತ್ತಾರೆ. ವಿಶ್ವಸಂಸ್ಥೆ ಪ್ರತಿನಿಧಿಗೂ ಆ ಒಪ್ಪಂದಕ್ಕೂ ಸಂಬಂಧವಿಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು

ಇಡೀ ಹಳ್ಳಿ ಜನರೆಲ್ಲರ ಸ್ಥಾನಬದ್ಧತೆ

ಮಲಯದ ನೆಗ್ರಿಸ್ಲಿ ಪ್ರಾಂತದ ಒಂದು ಹಳ್ಳಿಯಲ್ಲಿ ಕಮ್ಯೂನಿಸ್ಟ್ ಚಟುವಟಿಕೆಯನ್ನು ದಮನ ಮಾಡಲು ಆ ಹಳ್ಳಿಯ ಜನರೆಲ್ಲರನ್ನೂ ಸ್ಥಾನಬದ್ಧರನ್ನಾಗಿ ಮಾಡಿ, ಶಿಬಿರಗಳಿಗೆ ಕೊಂಡೊಯ್ಯಲಾಗಿದೆ. ಆ ಗ್ರಾಮವನ್ನು ನೆಲಸಮ ಮಾಡಲಾಗುವುದೆಂದೂ ಗೊತ್ತಾಗಿದೆ.

ಗಣಪತಿ ಮಹೋತ್ಸವ ಸಮಾರಂಭಗಳು

ಮೈಸೂರು ೨೬

ರಾಜಧಾನಿಯ ಶ್ರೀಮನ್ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಏರ್ಪಡಿಸಿರುವ ಉತ್ಸವದ ಅಂಗವಾಗಿ ಈ ಸಂಜೆ ೬ ಗಂಟೆಗೆ ಗೀತಾ ತಾತ್ಪರ್ಯ ಎಂಬ ವಿಷಯವಾಗಿ ಮಹಾ ವಿದ್ವಾನ್ ಬ್ರ|| ಶ್ರೀ|| ಎಂ ಎಸ್ ವೆಂಕಟೇಶ ಶಾಸ್ತ್ರಿಯವರಿಂದ ಉಪನ್ಯಾಸವು ನಡೆಯುವುದು

ಜಗನ್ಮೋಹನ ಬಂಗಲೆಯ ಬಳಿ ಇರುವ ಮಾದರಿ ಶಾಲೆಯಲ್ಲಿ ನಾಳೆ ಸಂಜೆ ಆ|| ವಿ|| ದೊರೆಸ್ವಾಮಿ ಅಯ್ಯಂಗಾರ್‌ರವರ ವೀಣಾ ವಾದನವು ಏರ್ಪಾಡಾಗಿದೆ

ರಮಾ ವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದಲ್ಲಿ ಈ ರಾತ್ರಿ ೧೦|| ಘಂ|| ಆರ್ ಕೆ ಶ್ರೀಕಂಠರವರ ಸಂಗೀತವು ಇದೆ

ಶ್ರೀರಾಂಪೇಟೆಯ ಶ್ರೀ ಪ್ರಸನ್ನ ಗಣಪತಿ ಮಂಡಲಿಯ ಆಶ್ರಯದಲ್ಲಿ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಶ್ರೀ ಕೆ ಸೂರ್ಯನಾರಾಯಣರಾವ್‌ರವರಿಂದ ಭಾರತೀಯ ರಾಷ್ಟ್ರ ಜೀವನದಲ್ಲಿ ಗಣಪತಿಯ ಸ್ಥಾನ ಎಂಬ ವಿಷಯವಾಗಿ ಉಪನ್ಯಾಸವು ಉಂಟು

ಕೃಷ್ಣರಾಜಾ ಮೊಹಲ್ಲಾ ನಾಲಾ ಬೀದಿಯ ಶ್ರೀ ತಿಪ್ಪಯ್ಯನವರ ಛತ್ರದ ರಾಮ ಮಂದಿರದಲ್ಲಿ ಈ ಸಂಜೆ ೭ಕ್ಕೆ ಮಹಾರಾಜಾ ಕಾಲೇಜಿನ ಶ್ರೀ ಎಸ್ ಶ್ರೀಕಂಠಶಾಸ್ತ್ರಿಯವರಿಂದ ಗಣಪತಿಯು ನಮ್ಮ ರಾಷ್ಟ್ರೀಯ ಜೀವನದ ಆದರ್ಶ ಬಿಂದು ಎಂಬ ವಿಷಯವಾಗಿ ಉಪನ್ಯಾಸವು ಪೌರಸಭಾ ಸದಸ್ಯ ಡಾ|| ಬಿ ಜಿ ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು

ರಾಮಾನುಜಾ ರಸ್ತೆಯಲ್ಲಿರುವ ಶ್ರೀ ವಾಸುದೇವರಾಜುರವರ ಮನೆ ಮಹಾಭಾಗದಲ್ಲಿ ಈ ಸಂಜೆ ೭ ಘಂಟೆಗೆ ಶಾ|| ಗ್ರೀ|| ಕಾಲೇಜಿನ ಡಾ|| ಎಲ್ ಸೀಬಯ್ಯನವರ ಅಧ್ಯಕ್ಷತೆಯಲ್ಲಿ ಮಹಾರಾಜಾ ಕಾಲೇಜಿನ ಶ್ರೀ ಎನ್ ವಿ ಪರಮೇಶ್ವರ ಭಟ್ಟರಿಂದ 'ಗಣಪತಿಯು ನಮ್ಮ ರಾಷ್ಟ್ರೀಯ ಆದರ್ಶದ ಬಿಂದು ಎಂಬ ವಿಷಯವಾಗಿ ಉಪನ್ಯಾಸವು ಇದೆ

ಗಣಪತಿ ಮಂಗಳಾರತಿ

ರಾಜಧಾನಿಯ ಖಿಲ್ಲೆ ಮೊಹಲ್ಲಾದಲ್ಲಿರುವ ಶ್ರೀ ವಿನಾಯಕ ಸಂಘದವರು ಮೊನ್ನೆ ಬೆಳಗ್ಗೆ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ನೇತೃತ್ವದಲ್ಲಿ ಪ್ರತಿಷ್ಠಾಪನೆ, ಮಧ್ಯಾಹ್ನ ಮಕ್ಕಳ ಆಟ ಪಾಠಗಳನ್ನು ಏರ್ಪಡಿಸಿದ್ದರು ಸಂಜೆ ೮ ಘಂಟೆಗೆ ಶ್ರೀ ಎಚ್ ಪಿ ದೇವರಾಜ ಅರಸರ ನೇತೃತ್ವದಲ್ಲಿ ಗಣಪತಿಯ ಮಂಗಳಾರತಿಯನ್ನೂ, ರಾತ್ರಿ ೧೦ ಗಂಟೆಗೆ ಶ್ರೀಮತಿ ಲಕ್ಷ್ಮಮ್ಮನವರಿಂದ ಭೂಕೈಲಾಸ ಎಂಬ ಹರಿಕಥೆಯನ್ನೂ ಏರ್ಪಡಿಸಲಾಗಿತ್ತು

ಕಾಂಗ್ರೆಸ್ ಸದಸ್ಯತನದ ಪುಸ್ತಕ ವಾಪಸು ಮಾಡಲು ಮನವಿ

ಅ|| ಭಾ|| ಕಾಂಗ್ರೆಸ್ಸಿನ ಸದಸ್ಯರನ್ನು ಕೂಡಿಸುವ ಸಲುವಾಗಿ ತೆಗೆದುಕೊಳ್ಳಲಾಗಿರುವ ಸದಸ್ಯತನದ ಪುಸ್ತಕಗಳನ್ನು ಈ ತಿಂಗಳು ೩೧ ರೊಳಗೆ ಕಾಂಗ್ರೆಸ್ ಕಾರ್ಯಕರ್ತರು ವಾಪಸು ಕೊಡಬೇಕೆಂದೂ, ಅಲ್ಲಿಯವರೆಗೆ ಹೆಚ್ಚು ಸದಸ್ಯರನ್ನು ಶೇಖರಿಸುವ ಕಾರ್ಯವನ್ನು ತ್ವರಿತಗೊಳಿಸಬೇಕೆಂದೂ ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಟಿ. ವೆಂಕಟರಮಣಯ್ಯನವರು ಕೋರಿರುತ್ತಾರೆ

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

ಅತ್ಯುತ್ತಮವಾದ ಒಗೆಯುವ ಸಾಬೂನು

ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು

ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ

ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ಬಾಲ ಸಾಹಿತ್ಯ ಬಳಗದ "ಹೂ"

ರಾಜಧಾನಿಯ ಚಾಮುಂಡಿ ಪುರದ ಬಾಲ ಸಾಹಿತ್ಯ ಬಳಗದವರು ಪ್ರಕಟಿಸಿರುವ "ಹೂ" ಎಂಬ ಪುಟ್ಟ ಪುಸ್ತಕವನ್ನು ಆದರದಿಂದ ಸ್ವೀಕರಿಸಿದ್ದೇವೆ. ಸಣ್ಣ ಮಕ್ಕಳಿಗೆ ಉಪಯುಕ್ತವಾದ ಲೇಖನಗಳನ್ನೊಳಗೊಂಡು ಇದು ಆಕರ್ಷಣೀಯವಾಗಿದೆ ಇದರ ಬೆಲೆ ೦-೧-೬

ಮೈಸೂರು ಪೇಟೆ ಧಾರಣೆ

	ಪಲ್ಲ ೧ಕ್ಕೆ ರೂ ಇಂದ	ರೂ ಗೆ
ನೆಲಗಡಲೆ	೧೩-೦-೦	೨೪-೦-೦
ಎಳ್ಳು	೩೧ ೨ ೬	೪೨-೧೦-೦
ಹರಳು ಬೀಜ	೪೬ ೦-೦	
ಹುರುಳಿ	೪೩-೪ ೮	
ಹೆಸರು	೬೫ ೪-೦	೬೭ ೮ ೦
ಹೊಂಗೇಬೀಜ	೧೭ ೧೪ ೦	
ಉದ್ದು	೭೩ ೬ ೬	
ಅವರೆ	೭೫ ೦-೦	
ಹಲಸಂದೆ	೬೭-೮-೦	೭೫ ೦-೦
ಮೆಣಸಿನಕಾಯಿ ಮಣ ೧ಕ್ಕೆ	೧೦ ೧೪ ೦	೧೪-೧೦-೦
ಹುಣಸೇಹಣ್ಣು	೫-೧-೦	
ಸೀಗೇಕಾಯಿ	೪-೦ ೦	೪ ೧೦ ೦
ತೆಂಗಿನಕಾಯಿ ೧೦೦೦	೧೭೫ ೦ ೦	೧೯೭ ೦ ೦

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೦ ನಾಗಸ್ವರ ಎಂ ಜಿ ನಾಗರಾಜಪ್ಪ ಮಧ್ಯಾಹ್ನ ೨ ವನಿತಾ ವಿಹಾರ, ಮಹಿಳೆಯರ ಕಾರ್ಯಕ್ರಮ ಕನ್ನಡ ನಾಟಕ. ಸಂಜೆ ೫ ೩೦ ನಾಗಸ್ವರ, ಎಂ ಜಿ ನಾಗರಾಜಪ್ಪ ೬ ೦೦ ಬಾಲ ಜಗತ್, ಮಕ್ಕಳ ಕಾರ್ಯಕ್ರಮ ೭ ಹಿಂದಿ ಗೀತೆಗಳು, ಎಂ ಜಿ ಸಲೀಂಜ ಅ ಸಂಗೀತ, ೮ ನಾನಮ್ಮ "ಸಂತೋಷ ಪಟ್ಟರು" ಶ್ರೀ ಕಸ್ತೂರಿಯವರ ಕನ್ನಡ ನಾಟಕ ೯ ೩೦ ನಿಮ್ಮ ಮೆಚ್ಚಿನ ಗೀತೆಗಳು

ಪರಿಶುದ್ಧವಾದ ಮತ್ತು ಉತ್ತಮವಾದ ಕಾಫಿ ಬೇಕಾದಲ್ಲಿ

ಶ್ರೀ ಚಾಮುಂಡೇಶ್ವರಿ ಭವನ

(ಭೋಜನ ಮತ್ತು ವಸತಿ ಗೃಹ, ಮತ್ತು ಫಲಾಹಾರ ಮಂದಿರ, ಇರ್ವಿನ್ ರಸ್ತೆ, ಮೈಸೂರು)

ಇಲ್ಲಿಗೆ ಭೇಟಿ ಕೊಡಲು ಮರೆಯದಿರಿ

ನಮ್ಮ ಪರಿಶುದ್ಧವಾದ ಮತ್ತು ಶ್ರೇಷ್ಠತಮ ರುಚಿಯನ್ನುಳ್ಳ

ಪ್ಲಾಂಟೇಷನ್ 'ಎ' ಕಾಫಿಯನ್ನು

ಸೇವಿಸಿ :: ಮತ್ತು :: ಆನಂದಪಡಿರಿ

★ ಅಪ್ಪಟ ತುಪ್ಪದಿಂದ ತಯಾರಾದ

★ ಸಿಹಿ ತಿಂಡಿಗಳು ಮತ್ತು

★ ರುಚಿಯಾದ ಮತ್ತು ತೃಪ್ತಿಕರವಾದ ಊಟಗಳನ್ನು ಸವಿದು ನೋಡಿ

SHARADA VILASA COLLEGE, MYSORE

As the University has kindly granted permission to start B. Sc. Degree Course in this College, Junior B Sc Class with P C M as Optional Subjects is opened from today. Applications for Seats will be Received from To-Day.

Mysore 25—8—52 } **PRINCIPAL**

Edited, Printed and Published by A R Nagarajan at Sadhvi Press, D Subbiah Road, Mysore.

ಟೆಲಿಫೋನ್ ನಂ 792 ||ವಂದೇ ಮಾತರಂ|| ಬಿಡಿಪ್ರತಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೩-೮-೧೯೫೦ [ಸಂಚಿಕೆ ೨೩

ಕೊರಿಯಾ ಮಾತುಕತೆಯಲ್ಲಿ ರಷ್ಯದ ಪ್ರವೇಶ

ಮಹಾರಾಜರ ಪಟ್ಟಾಭಿಷೇಕೋತ್ಸವ

ಮೈಸೂರು ೨೨

ಮೈಸೂರಿನ ಶ್ರೀಮನ್ಮಹಾರಾಜರ ಪಟ್ಟಾಭಿಷೇಕೋತ್ಸವವು ಇಂದು ಜಗನ್ಮೋಹನ ಭವನದಲ್ಲಿ ನಡೆಯಿತು. ಮಹಾರಾಜರವರ ಆಪ್ತ ಕಾರ್ಯದರ್ಶಿಯವರಾದ ಶ್ರೀ ಕೆ. ಶೇಷಗಿರಿರಾಯರು ಅಧ್ಯಕ್ಷತೆ ವಹಿಸಿದ್ದರು

ಸ್ವಾಗತ ಗೀತೆಯಾದನಂತರ ಅಧ್ಯಕ್ಷರು ಭಾಷಣ ಮಾಡಿ, ಶ್ರೀಮನ್ಮಹಾರಾಜರವರ ಗುಣಾತಿಶಯಗಳನ್ನು ಹೊಗಳಿದರು. ಮೈಸೂರಿನ ಅರಸು ಮನೆತನದ ಚರಿತ್ರೆಯನ್ನೂ ಅದರ ಹಿರಿಮೆಯನ್ನೂ ವರ್ಣಿಸಿದರು

ಶ್ರೀ ಎಸ್ ಎಂ ಮರಿಯಪ್ಪನವರ ಸಂಗೀತವು, ವಿ|| ಹೆಚ್. ವಿ. ರಾಮರಾಯರ ಪಿಟೀಲು ಮತ್ತು ವಿ|| ಮೈಸೂರು ದೇವರುರವರ ಮೃದಂಗದೊಡನೆ ನಡೆಯಿತು

ಶ್ರೀಮನ್ಮಹಾರಾಜರಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು

ಈ ಬೆಳಗ್ಗೆ ೭ ಘಂಟೆಗೆ ಅರಮನೆಯ ತೋಪುಖಾನೆಯಿಂದ ೨೧ ಗುಂಡುಗಳನ್ನು ಹಾರಿಸಲಾಯಿತು

ಸಂಗೀತ ಮತ್ತು ಭರತನಾಟ್ಯ

ರಾಜಧಾನಿಯ ರಾಮಲಿಂಗೇಶ್ವರ ಚೌಡೇಶ್ವರಿ ಗುಡಿ ಬೀದಿಯಲ್ಲಿರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ಶಾಲೆಯಲ್ಲಿ ಈ ಸಂಜೆ ೬|| ಗಂಟೆಗೆ ಶ್ರೀ ವಿದ್ಯಾ ಗಣಪತಿ ಮಹಾ ಮಂಗಳಾರತಿಯು ಲೋಕಸೇವಾನಿರತ ಶ್ರೀ ವಿ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು. ನಂತರ ಶ್ರೀ ಎಂ ಆರ್ ರಾಮಕೃಷ್ಣ ಭಾಗವತರ ಸಂಗೀತವೂ ಶ್ರೀ ಟಿ ಎ ಕೃಷ್ಣರಾಯರಿಂದ ಜಾಂಬವತಿ ವಿವಾಹ ಎಂಬ ಹರಿಕಥೆಯೂ ಭರತ ನಾಟ್ಯವೂ ಏರ್ಪಾಡಾಗಿದೆ.

ಅಕ್ಸಾಯ್ ಇರುವ ವಸ್ತುಗಳಿಗೆ ಸುಂಕಾಟ ತೆರಿಗೆ ವಿನಾಯಿತಿ ಇಲ್ಲ

ರಾಜಧಾನಿಯಲ್ಲಿ ಆಕ್ಸಾಯ್ ಸುಂಕವನ್ನು ವಿಧಿಸುವ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ರದ್ದು ಮಾಡಬೇಕೆಂದು ನಗರದ ಪೌರಸಭೆಯವರು ಮಾಡಿದ್ದ ನಿರ್ಣಯವನ್ನು ಸರ್ಕಾರದವರು ತಿಳ್ಳಿಹಾಕಿರುವರು

ಕಲ್ಲುಗಳನ್ನು ಉತ್ತಮಗೊಳಿಸಲು ಅವಕಾಶ

ವಿಧಿವತ್ತಾದ ರೀತಿಯಲ್ಲಿ ಹಲ್ಲುಗಳನ್ನು ಉತ್ತಮಗೊಳಿಸಲು ಮಾಲೀಕರುಗಳಿಗೆ ಇನ್ನೂ ೬ ತಿಂಗಳ ಕಾಲಾವಕಾಶವನ್ನು ಕೊಡಲಾಗಿದೆಯೆಂದೂ, ಅ ಸ್ಸರೊಳಗೆ ಸೂಕ್ತ ಬದಲಾವಣೆಗಳನ್ನು ಮಾಡದಿದ್ದರೆ ಅಂತಹವರ ರಹದಾರಿಯನ್ನು ರದ್ದುಗೊಳಿಸಬೇಕೆಂದೂ ಸರಕಾರದವರು ಪೌರಸಭೆಗೆ ತಿಳಿಸಿರುತ್ತಾರೆ.

ಏಕಕಾಲದಲ್ಲಿ ನಾಲ್ಕು ಗಂಡು ಶಿಶುಗಳ ಜನನ

ದಕ್ಷಿಣ ಆಫ್ರಿಕದ ಕ್ರೀನ್ಸ್‌ಟೌನಿನ ಹೆಂಗಸೊಬ್ಬಳು ಮೊನ್ನೆ ದಿನ ಏಕಕಾಲದಲ್ಲಿ ೪ ಗಂಡು ಮಕ್ಕಳನ್ನು ಪ್ರಸವಿಸಿದಳೆಂದೂ, ತಾಯಿ ಮತ್ತು ಮಕ್ಕಳು ಆರೋಗ್ಯವಂತರಾಗಿದ್ದಾರೆಂದೂ ವರದಿಯಾಗಿದೆ.

ತಿರುವಾಂಕೂರು ಮಹಾರಾಜರು

ಮೈಸೂರು ೨೨

ತಿರುವಾಂಕೂರಿನ ಮಹಾರಾಜರಾದ ಪದ್ಮನಾಭದಾಸ ಬಲರಾಮವರ್ಮರು ನೆನ್ನೆ ಶ್ರೀಮನ್ಮಹಾರಾಜರೊಡನೆ ಬಂಡೀಪುರಕ್ಕೆ ತೆರಳಿ ಸಂಜೆ ಹಿಂತಿರುಗಿದರು

ಈ ದಿನ ಬೆಳಗ್ಗೆ ಅವರು ಚಾಮುಂಡಿ ಬೆಟ್ಟಕ್ಕೆ ದಯಮಾಡಿಸಿ ದೇವರ ದರ್ಶನ ಪಡೆದರು. ಈ ಸಂಜೆ ಕೃಷ್ಣರಾಜ ಸಾಗರಕ್ಕೆ ಭೇಟಿ ಕೊಡುವರು. ಅವರು ನಾಳೆ ಬೆಳಗ್ಗೆ ೧೧|| ಘಂಟೆಗೆ ಇಲ್ಲಿಂದ ಪ್ರಯಾಣ ಬೆಳೆಸುವರು

ಗಾಂಧಿ ತತ್ವವೇ ಭಾರತಕ್ಕೆ ಸಾಕು

ವಿದೇಶೀ ಧ್ಯೇಯಗಳಿಗೆ ಮಾನಸೋಲಬಾರದೆಂದು ಡಾ|| ಕಾರಿಯಪ್ಪ

ಬೆಂಗಳೂರು ೨೨

ಇಲ್ಲಿನ ಇಂಜನಿಯರಿಂಗ್ ಕಾಲೇಜಿನಲ್ಲಿ ನೆನ್ನೆ ಕ್ರೀಷ್ಮ ಸೇನಾನಿ ಜ|| ಕಾರಿಯಪ್ಪನವರು ಭಾಷಣ ಮಾಡುತ್ತಾ, ನಮ್ಮ ದೇಶದಲ್ಲಿ ಗಾಂಧಿ ತತ್ವವು ಇದೆ. ಅದರ ಆಧಾರದ ಮೇಲೆ ನೇಶವನ್ನು ಕಟ್ಟೋಣ, ವಿದೇಶೀ ತತ್ವಗಳ ಜಾಲಕ್ಕೆ ಸಿಕ್ಕಿಬಿದ್ದ, ಅವುಗಳು ತೋರಿಸುವ ಆಸೆಗಳಿಗೆ ಮನಸೋತರೆ, ನಾವು ಪುನಃ ಚೇತರಿಸಿಕೊಳ್ಳಲು ಸಾಧ್ಯವಿಲ್ಲದೆ ಹೋಗುವುದು. ಆಗ ದೇವರು ಮತ್ತು ಜನರು ನಮ್ಮನ್ನು ಕ್ಷಮಿಸುವುದಿಲ್ಲ- ಎಂದು ತಿಳಿಸಿದರು. ಗಾಂಧಿ ತತ್ವದ ಸಹಾಯದಿಂದ ಒಬ್ಬರನ್ನೂ ಕೊಲ್ಲದೆ, ಭಾರತವು ಸ್ವಾತಂತ್ರ್ಯವನ್ನು ಗಳಿಸಿತೆಂದೂ, ಗಾಂಧಿಜಿಯವರ ಬೋಧನೆಗಳನ್ನು ಪ್ರಾಮಾಣಿಕವಾಗಿ ಆಚರಣೆಗೆ ಎಲ್ಲರೂ ತರಬೇಕೆಂದೂ ಅವರು ಹೇಳಿದರು

ರಷ್ಯಾ ಪ್ರವೇಶದಿಂದ ಕೊರಿಯಾ ಯುದ್ಧ ಮುಕ್ತಾಯ?

ಕೊರಿಯಾ ಯುದ್ಧವು ರಷ್ಯದ ಪ್ರವೇಶದಿಂದ ಶಾಂತಿಯುತವಾಗಿ ಮುಕ್ತಾಯವಾಗುವುದೆಂದು ಪೀಕಿಂಗ್ ರೇಡಿಯೋವು ಪ್ರಚಾರ ಮಾಡಿದೆ. ಬರುವ ತಿಂಗಳು ನಡೆಯಲಿರುವ ಏಷ್ಯಾ ಮತ್ತು ಪೆಸಿಫಿಕ್ ಸಮ್ಮೇಳನದಲ್ಲಿ ಈ ಬಗ್ಗೆ ಒಪ್ಪಂದವಾಗಲಿರುವುದೆಂದೂ, ಕೊರಿಯಾ ಯುದ್ಧ ಅಥವಾ ಶಾಂತಿಯ ಬಗ್ಗೆ ರಷ್ಯವು ಇದೇ ಮೊದಲಾಗಿ ಪ್ರವೇಶಿಸಲಿರುವುದೆಂದೂ ಆ ರೇಡಿಯೋವು ತಿಳಿಸುತ್ತದೆ

ರೈಲ್ವೆ ನೌಕರರಿಗೆ ಉತ್ತರ ದೊರೆಯದಿದ್ದರೆ ಮುಷ್ಕರ

ರೈಲ್ವೆ ನೌಕರರ ಬೇಡಿಕೆಗಳ ಬಗ್ಗೆ ಬರುವ ತಿಂಗಳೊಳಗೆ ಸರ್ಕಾರದವರು ಉತ್ತರ ಕೊಡದಿದ್ದಲ್ಲಿ ನೌಕರರು ಮುಷ್ಕರ ಹೂಡಬೇಕಾಗುವುದೆಂದು ಅಖಿಲ ಭಾರತ ರೈಲ್ವೆ ನೌಕರರ ಸಂಘದ ಕಾರ್ಯದರ್ಶಿಯವರಾದ ಶ್ರೀ ಎಸ್. ಗುರುಸ್ವಾಮಿಯವರು ತಿಳಿಸಿರುತ್ತಾರೆ

ಎಲ್ಲಾ ಘಟ್ಟಗಳಲ್ಲೂ ವಿದ್ಯಾಭ್ಯಾಸದ ಸುಧಾರಣೆ

ವಿದ್ಯಾಮಂತ್ರಿ ಎ ಜಿ ರಾಮಚಂದ್ರರಾಯರ ಪತ್ರಿಕಾ ಗೋಷ್ಠಿ

ಸ್ವಂ ಸು ಫೋನ್] ಬೆಂಗಳೂರು ೨೨

ವಿದ್ಯಾ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ಕರೆದು ಸರ್ಕಾರದವರು ವಿದ್ಯಾಭ್ಯಾಸದ ಪುನರ್ವ್ಯವಸ್ಥೆ ವಿಷಯವನ್ನು ತೀವ್ರವಾಗಿ ಪರ್ಯಾಲೋಚಿಸುತ್ತಿರುವರೆಂದೂ, ಈ ಬಗ್ಗೆ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಮುಖ್ಯ ಅಧಿಕಾರಿಗಳಾದ ಶ್ರೀ ಟಿ. ಎ ಕೃಷ್ಣರಾಯರನ್ನು ಪೂರ್ವಭಾವಿಯಾದ ಕೆಲಸ ಕಾರ್ಯಗಳ ಅಧಿಕಾರಿಗಳಾಗಿ ನೇಮಿಸಲಾಗಿದೆ. ಪುದೆಂದೂ ತಿಳಿಸಿದರು. ಪುನರ್ವ್ಯವಸ್ಥೆ ಯೋಜನೆಗಾಗಿ ಪ್ರವೀಣರ ಸಮಿತಿಯೊಂದನ್ನು ನೇಮಿಸಲಾಗುವುದೆಂದೂ, ವಿದ್ಯಾಭ್ಯಾಸದ ಎಲ್ಲಾ ಘಟ್ಟಗಳಲ್ಲೂ ಪುನರ್ವ್ಯವಸ್ಥೆ ಮಾಡಲಾಗುವುದೆಂದೂ, ಇದಕ್ಕಾಗಿ ಹೆಚ್ಚಿನ ವೆಚ್ಚವು ತಗಲುವುದಿಲ್ಲವೆಂದೂ ಮಂತ್ರಿಗಳು ತಿಳಿಸಿದರು.

ಡಾ|| ರಾಧಾಕೃಷ್ಣರವರು ಸಂಸ್ಥಾನಕ್ಕೆ ನವೆಂಬರ್‌ನಲ್ಲಿ ಬರುವ ನಿರೀಕ್ಷೆಯಿದೆಯೆಂದೂ, ವಿದ್ಯಾಭ್ಯಾಸದ ಪುನರ್ವ್ಯವಸ್ಥೆಯಿಂದ ಅದಕ್ಕೆ ಹೊಸ ತೇಜಸ್ಸು ಬರುವಂತೆ ಮಾಡಲಾಗುವುದೆಂದೂ ಅವರು ಹೇಳಿದರು

ಕಾರ್ಮಿಕರ ಗೃಹಗಳಿಗಾಗಿ ೩೦ ಲಕ್ಷ ರೂ.

ಕಾರ್ಮಿಕರಿಗಾಗಿ ಗೃಹಗಳನ್ನು ನಿರ್ಮಿಸಲು ಸರ್ಕಾರದವರು ಸ್ಥಾಪಿಸಿರುವ ಕಾರ್ಮಿಕ ಗೃಹ ಕಾರ್ಪೊರೇಷನ್ನಿಗೆ ೩೦ ಲಕ್ಷ ರೂ ಒದಗಿಸಲಾಗುವುದೆಂದೂ, ಈ ಪೈಕಿ ೨೦ ಲಕ್ಷ ರೂ ಗಳನ್ನು ಕೇಂದ್ರದವರು ಕೊಡಲಿರುವರೆಂದೂ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಪತ್ರಿಕಾ ಗೋಷ್ಠಿಯಲ್ಲಿ ಈ ದಿನ ತಿಳಿಸಿದರು

ಬೆಂಚು ಕೋರ್ಟುಗಳ ರದ್ದು

ಸಂಸ್ಥಾನದಲ್ಲಿ ಬೆಂಚು ಕೋರ್ಟುಗಳನ್ನು ರದ್ದು ಮಾಡಲಾಗುವುದೆಂದು ಸಚಿವರು ತಿಳಿಸಿರುತ್ತಾರೆ

ದ|| ಆಫ್ರಿಕಾ ಸತ್ಯಾಗ್ರಹದಲ್ಲಿ ಮಹಿಳೆಯರ ಪಾತ್ರ

ದಕ್ಷಿಣ ಆಫ್ರಿಕದ ವರ್ಣಭೇದದ ಶಾಸನೋಲ್ಲಂಘನೆ ಮಾಡಲು ಅಲ್ಲಿನ ಭಾರತೀಯ ಸ್ತ್ರೀಯರು ಇದೇ ಮೊದಲಾಗಿ ಮುಂದೆ ಬಂದು ಸ್ಥಳೀಯ ವರ್ಣೀಯರೊಡನೆ ಅವರೂ ದಸ್ತಗಿರಿಯಾಗಿರುವರು ಎಲಿಜಬೆತ್ ರೇವಿನಲ್ಲಿ ರೈಲ್ವೆ ನಿಯಮಗಳನ್ನು ಮುರಿದುದಕ್ಕಾಗಿ ೨೪೫ ಮಂದಿ ದಸ್ತಗಿರಿಯಾಗಿರುವರು. ಆ ದೇಶದಲ್ಲಿ ಸತ್ಯಾಗ್ರಹದ ಬಿಸಿಯು ವಿಪರೀತವಾಗಿ ಏರಿ ಈಗಾಗಲೇ ೩,೦೦೦ ಜನರು ಬಂಧಿಸಲ್ಪಟ್ಟಿರುವರು. ದಕ್ಷಿಣ ಆಫ್ರಿಕಾ ಕಾಂಗ್ರೆಸ್ ಮತ್ತು ಅಲ್ಲಿನ ಭಾರತೀಯ ಕಾಂಗ್ರೆಸ್ ಮುಖಂಡರುಗಳ ಮೇಲೆ ನ್ಯಾಯಾಸ್ಥಾನದಲ್ಲಿ " ಕಮ್ಯೂನಿಸ್ಟರ ತತ್ವ ಪ್ರೇರಕ" ರೆಂಬ ಅಪಾದನೆಗಾಗಿ ಮೊಕದ್ದಮೆ ಹೂಡಲಾಗಿದೆ. ನ್ಯಾಯಾಲಯದ ಹೊರಗಡೆ ಸಹಸ್ರಾರು ಜನರು ಸೇರಿ ಪ್ರದರ್ಶನ ನಡೆಸಿದರು

ಕೋಲಾರದಲ್ಲಿ ಕಾಲರಾದಿಂದ ೨೪ ಮಂದಿ ಮರಣ

ಕೋಲಾರ ಟೌನ್, ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲ್ಲೂಕುಗಳ ಹಳ್ಳಿಗಳಲ್ಲಿ ಕಾಲರಾದಿಂದ ಕಳೆದ ಎರಡು ದಿನಗಳಲ್ಲಿ ೨೪ ಮಂದಿ ಮಡಿದಿರುವರೆಂದು ಹೇಳಲಾಗಿದೆ

ಗಣಪತಿ ಮಹೋತ್ಸವ ಸಮಾರಂಭಗಳು

ಮೈಸೂರು ೨೭

ಗಣಪತಿ ಮಹೋತ್ಸವದ ಸಮಾರಂಭದ ಅಂಗವಾಗಿ ಇಂದು ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಶಾಲೆಯ ಮೀಮಾಂಸದ ಪ್ರಧಾನೋಪಾಧ್ಯಾಯರಾದ ಬ್ರಂ|| ಶ್ರೀ|| ಸಿ. ರಾಮಚಂದ್ರಾಚಾರ್ಯರಿಂದ ಪುನರ್ಜನ್ಮ ಎಂಬ ವಿಷಯವಾಗಿ ಉಪನ್ಯಾಸವು ಏರ್ಪಾಡಾಗಿದೆ

ಜಗನ್ಮೋಹನ ಭವನದ ಬಳಿ ಇರುವ ಸುಂದರಿ ಶಾಲೆಯಲ್ಲಿ ನಾಳೆ ಮಹಾ ಮಂಗಳಾರತಿಯು ನಡೆದು, ಸಂಜೆ ೪-೪೫ ರಿಂದ ೬|| ಗಂಟೆ ವರೆಗೆ ವಿ|| ಎ.ವಿ. ನಾರಣಪ್ಪ ಮತ್ತು ಪಾರ್ಟಿಯವರಿಂದ ನಾಗಸ್ವರ ಕಛೇರಿಯೂ, ೬-೩೦ಕ್ಕೆ ಗಣಪತಿಯ ಉತ್ಸವವೂ ನಡೆಯುವುವು

ರಮಾವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದಲ್ಲಿ ಇಂದು ಸಂಜೆ ೬-೩೦ ರಿಂದ ೮ ಗಂಟೆ ವರೆಗೆ ಶ್ರೀ ಮಧುಸೂದನರವರಿಂದ ಬ್ಯಾಂಜೊ ವಾದನ, ಶ್ರೀಮತಿ ಆರ್ ಪದ್ಮಾರವರಿಂದ ಗಾಯನವೂ ಇದೆ ಗಣಪತಿಯ ಮೆರವಣಿಗೆಯೂ ನಡೆಯುವುದು

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಶ್ರೀ ಪ್ರಸನ್ನ ಗಣಪತಿ ಮಂಡಲಿಯವರಿಂದ ಇಂದು ೬ ಗಂಟೆಗೆ ಗಣಪತಿಯ ಮಹಾ ಮಂಗಳಾರತಿಯೂ ಕೃಷ್ಣಮೂರ್ತಿಪುರಂ, ವಿಲ್ಲೆ ಮೊಹಲ್ಲಾ ರಸ್ತೆಗಳ ಮೂಲಕ ಮೆರವಣಿಗೆಯೂ ಉಂಟು.

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ದಶರಥ ರಾಮಮಂದಿರದವರೂ, ರಾಮಾನುಜಾ ರಸ್ತೆಯಲ್ಲಿರುವ ವಿದ್ಯಾಗಣಪತಿ ಮಂಡಲಿಯವರೂ ಇಂದು ಉತ್ಸವಗಳನ್ನು ನಡೆಸುವರು

ನಿವೃತ್ತ ಬ್ಯಾಂಕ್ ಮ್ಯಾನೇಜರರಿಗೆ ಸನ್ಮಾನ

ಮೈಸೂರು ಬ್ಯಾಂಕಿನ ಶಾಖೆ ಮ್ಯಾನೇಜರಾಗಿದ್ದು ನಿವೃತ್ತರಾಗಲಿರುವ ಶ್ರೀ ಎಲ್. ಎಸ್. ವಿ. ರಾಮಯ್ಯರ್‌ರವರಿಗೆ ಸದರಿ ಬ್ಯಾಂಕಿನ ಜನರಲ್ ಮ್ಯಾನೇಜರ್ ಶ್ರೀ ಟಿ. ವಿ. ನಾರಾಯಣ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಿನ್ನವತ್ತಳೆಯನ್ನು ಒಪ್ಪಿಸಿ ಗೌರವಿಸಲು ಪುರಪ್ರಮುಖರು ಸಮಾರಂಭವೊಂದನ್ನು ಸೆಪ್ಟಂಬರ್ ೧೩ನೇ ಶನಿವಾರ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಏರ್ಪಡಿಸಿದ್ದಾರೆಂದು ಕನ್ವೀನರಾದ ಶ್ರೀ ಬಿ. ಎಸ್ ಸುಬ್ಬರಾಯರು ತಿಳಿಸಿರುತ್ತಾರೆ.

೧೦ ಲಕ್ಷ ಎಕರೆ ಬಂಜರು ಜಮೀನು ಸಾಗುವಳಿಗೆ

ಬರುವ ಐದು ವರ್ಷಗಳಲ್ಲಿ ಉತ್ತರ ಪ್ರದೇಶದ ೧೦ ಲಕ್ಷ ಎಕರೆ ಬಂಜರು ಜಮೀನನ್ನು ಸಾಗುವಳಿಗೆ ಯೋಗ್ಯವಾಗಿ ಮಾಡಲು ಅಲ್ಲಿನ ಸರ್ಕಾರದವರು ಯೋಜನೆ ಕೈಗೊಂಡಿರುವರು

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಕಾಂಗ್ರೆಸ್ ಸಂಸ್ಥೆಗೆ ಸದಸ್ಯರನ್ನು ಕೂಡಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್ ಸಿ ದಾಸಪ್ಪನವರು ನಾಳೆ ಮಳ್ಳಳ್ಳಿ, ಕುಪ್ಪೇಗಾಲ, ಸಿದ್ದರಾಮನ ಹುಂಡಿ, ಕಡಕೊಳ, ಸಿಂಧುವಳ್ಳಿ, ಉದ್ಬೂರು, ಹೊಮ್ಮರಗಹಳ್ಳಿ, ಹೆಗ್ಗಡದೇವನಕೋಟೆ, ಮಳಲಿ ಮತ್ತು ಸರಗೂರುಗಳಿಗೆ ಭೇಟಿ ಕೊಡುವರು. ಅವರು ಮೊನ್ನೆ ಶ್ರೀ ಹೆಚ್ ಎಂ ಚನ್ನಬಸಪ್ಪ ಮತ್ತು ಶ್ರೀ ಸಿ ಜೆ. ದೇವನಾಥ್‌ರವರೊಡನೆ ಚಾಮರಾಜನಗರ, ತೆರಕಣಾಂಬಿ, ಕಬ್ಬಳ್ಳಿ, ನಂಜನಗೂಡುಗಳಿಗೆ ಭೇಟಿಯಿತ್ತಿದ್ದರು

ಸಂಸ್ಕೃತ ಕಾಲೇಜು ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿ ಸಂಘದ ೨೧ನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ಘಂಟೆಗೆ ರ್ಯಾಷನಲಿಸ್ಟ್ ಪತ್ರಿಕೆಯ ಸಂಪಾದಕರಾದ ಶ್ರೀ ಜಿ ಆರ್ ಜೋಸ್ಯರ್‌ರವರ ಅಧ್ಯಕ್ಷತೆಯಲ್ಲಿ ನೆರವೇರುವುದು ಮಹಾರಾಜಾ ಕಾಲೇಜಿನ ಸಂಸ್ಕೃತದ ಪ್ರೊ|| ಡಾ|| ಎಚ್. ಎಲ್. ಹರಿಯಪ್ಪನವರು ಭಾಷಣ ಮಾಡುವರು.

ವಿದ್ಯಾಶಾಲಾ ಪಂಡಿತ ಮಂಡಲ

ಮೇಲ್ಕಂಡ ಮಂಡಲದ ವಾರ್ಷಿಕಾಧಿವೇಶನವು ಕಳೆದ ೨೧ನೇ ತಾ|| ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಡೆದು ಪ್ರಸಕ್ತ ಸಾಲಿಗೆ ರಾಜಸೇವಾಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷರಾಗಿಯೂ, ವಿದ್ವಾನ್ ಬಿ ಎಸ್. ಕೃಷ್ಣಪ್ಪ ಮತ್ತು ಆಸ್ಥಾನ ಮಹಾ ವಿದ್ವಾನ್, ಪಂಡಿತರತ್ನಂ ಡಿ ವಾಸುದೇವಾಚಾರ್ಯರು ಕಾರ್ಯದರ್ಶಿಗಳಾಗಿಯೂ ಶ್ರೀ ಬಿ ಎಸ್. ವೆಂಕಟರಾಮಯ್ಯನವರು ಸಹ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು

ವಸ್ತು ಪ್ರದರ್ಶನದ ಕೈಪಿಡಿ

ಮೈಸೂರು ದಸರಾ ವಸ್ತುಪ್ರದರ್ಶನದ ಕೈಪಿಡಿಯು ನಮ್ಮ ಕೈ ಸೇರಿದೆ ವಸ್ತು ಪ್ರದರ್ಶನದ ವಿವರಗಳನ್ನು ನಕ್ಷೆಯೊಡನೆ ಅದರಲ್ಲಿ ಕೊಡಲಾಗಿದೆ

೧೦ ಘಂಟೆಯಲ್ಲಿ ೧೭ ಅಂಗುಲ ಮಳೆ

ಜಬ್ಬಲ್ಪುರದಲ್ಲಿ ಮೊನ್ನೆ ಮಧ್ಯಾಹ್ನದ ಹೊತ್ತಿಗೆ ೧೦ ಗಂಟೆಗಿಂತ ಸ್ವಲ್ಪ ಕಡಿಮೆ ಅವಧಿಯಲ್ಲಿ ೧೭ ಅಂಗುಲದಷ್ಟು ಮಳೆಯಾಗಿ ಊರು ನೀರಿನಿಂದ ತುಂಬಿಹೋಗಿತ್ತು. ತಂತಿ ಇಲಾಖೆಗೆ ೧ ಲಕ್ಷ ರೂ. ಗಳ ಮೇಲ್ಪಟ್ಟು ನಷ್ಟವಾಗಿರುವುದೆಂದು ಅಂದಾಜಾಗಿದೆ. ಕಛೇರಿಗಳು ಮತ್ತು ಶಾಲೆಗಳು ಬಂದಾಗಿದ್ದುವು. ಹೊಟೇಲುಗಳಿಗೆ ಹಾಲಿನ ಸರಬರಾಜು ನಿಂತುಹೋಗಿತ್ತು

ವಿದ್ಯಾರ್ಥಿ ಸಂಘದ ಆರಂಭ ಭಾಷಣ

ನಂಜನಗೂಡು ತಾಲ್ಲೂಕು ದೇವನೂರಿನ ಶ್ರೀ ಗುರುಮಲ್ಲೇಶ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ಆರಂಭೋತ್ಸವವು ಕಳೆದ ೧೮ನೇ ತಾ|| ಶ್ರೀ ತೋಂಟದಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಡಿ. ಎಂ ಸಿದ್ದಯ್ಯನವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ತ ಸು ಶಾಮರಾಯರು ಆರಂಭ ಭಾಷಣ ಮಾಡಿದರು.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಎಂ. ವಿ. ವರಾಹಸ್ವಾಮಿ, ಗಿಟಾರ್ ಮಧ್ಯಾಹ್ನ ೧.೩೦ ವೀಣೆ ತಿ ಬಿ ಆರ್ ರಾಮಾಚಾರ್, ಕೊಳಲು. ಸಂಜೆ ೫.೩೦ ಮತ್ತು ೭.೧೦ ಹೆಚ್. ಎಲ್. ಲಲಿತಮ್ಮ, ಸಂಗೀತ. ೭ ಚಿತ್ರವಾಣಿ ೮ ನಾಗಾ ವೆಂಕಟರಾಮಯ್ಯ ಮತ್ತು ವಿ. ತ್ಯಾಗರಾಜ [illegible] ಪಿಟೀಲು, ೮.೧೫ ಮಾದೇಗೌಡ, ಗ್ರಾಮಾಂತರ ವಾಚನ ೮.೩೦ ಬಿ ಆರ್. ರಾಮಾಚಾರ್ ಕೊಳಲು, ೯.೧೫ ರಸನಿಮಿಷ, ೯.೪೦ "ವಿಧಾನ ಸಭೆಯ ಒಂದು ನೋಟ" ವಿಶೇಷ ಕಾರ್ಯಕ್ರಮ

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ.ಗೆ
ಪಲ್ಲ ೧ಕ್ಕೆ		
ನೆಲಗಡಲೆ	೧೩-೮-೦	೨೨ ೧೨.೦
ಎಳ್ಳು	೭೪-೪-೦	೮೦-೧೪-೦
ಹುಚ್ಚೆಳ್ಳು	೫೧-೨-೦	
ಹರಳು ಬೀಜ	೪೬.೦.೦	
ಹುರುಳಿ	೪೪-೮-೦	೪೬-೨-೦
ಹೆಸರು	೬೭-೦-೦	
ಹೊಂಗೇಬೀಜ	೨೦-೪-೦	
ಉದ್ದು	೬೭-೦-೦	
ಅವರೆ	೭೫-೦-೦	
ಹಲಸಂದೆ	೬೭-೮-೦	೭೫-೦-೦
ಮೆಣಸಿನಕಾಯಿ		
ಮೂಟೆ ೧ಕ್ಕೆ	೧೦೮-೦	೧೩-೦-೦
ಹುಣಸೇಹಣ್ಣು	೫-೧೨-೦	
ಸೀಗೇಕಾಯಿ	೪-೨-೦	೪-೧೦-೦
ತೆಂಗಿನಕಾಯಿ ೧೧೦೦	೧೬೬-೦-೦	೧೭೭-೦-೦

ನಾಟ್ಯಕಾರನ ೧೬ನೇ ಮದುವೆ

ಕ್ಯಾಲಿಫೋರ್ನಿಯದ ಓಕ್ಲೆಂಡ್ ನಗರದಲ್ಲಿ ೬೬ ವರ್ಷ ವಯಸ್ಸಿನ ಫ್ರಾನ್ಸಿಸ್ ವಾರ್ನ್ ಎಂಬ ನಾಟ್ಯಕಾರನು ತನ್ನ ೧೫ನೇ ಹೆಂಡತಿಯಿಂದ ವಿಚ್ಛೇದನ ಪಡೆಯದೆ, ೧೬ನೆಯವಳನ್ನು ವಿವಾಹವಾದುದಕ್ಕಾಗಿ, ಅವನನ್ನು ದಸ್ತಗಿರಿ ಮಾಡಲಾಗಿದೆ. ಅವನು ಒಂದು ನಾಟಕದಲ್ಲಿ ಪಾತ್ರವಹಿಸುತ್ತಿದ್ದಾಗ ರಂಗದಲ್ಲಿಯೇ ಪೋಲೀಸರು ಬಂಧಿಸಿದರು

ಕೊಡಲಿಯಿಂದ ಹೊಡೆದು ವೈದ್ಯರ ಕೊಲೆ

ಬಳ್ಳಾರಿಯ ವೈದ್ಯರಾದ ಶ್ರೀ ಎಲ್. ವೀರಸ್ವಾಮಿಯವರ ಮನೆಗೆ ಮೊನ್ನೆ ರಾತ್ರಿ ಯಾರೋ ದುರಾತ್ಮರು ಪ್ರವೇಶಿಸಿ ಅವರ ತಲೆಯ ಮೇಲೆ ಕೊಡಲಿಯಿಂದ ಹೊಡೆದುದಲ್ಲದೆ ಅವರ ಮಗಳನ್ನು ಗಾಯಗೊಳಿಸಿರುವರೆಂದು ವರದಿಯಾಗಿದೆ ವೈದ್ಯರು ಆಸ್ಪತ್ರೆಯಲ್ಲಿ ಮಡಿದಿದ್ದಾರೆ ಅವರ ಮಗಳು ಗುಣ ಹೊಂದುತ್ತಿರುವಳು.

ವಿವಾಹ ಮಹೋತ್ಸವ

ಮೈಸೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಮತ್ತು ಅಡ್ವೋಕೇಟರಾದ ಶ್ರೀ ಜಿ. ಶಂಕರ ಶೆಟ್ಟಿಯವರು ತಮ್ಮ ಹಿರಿಯ ಕುಮಾರ ಚಿ|| ರಾ|| ಜಿ ಎಸ್. ಸಚ್ಚಿದಾನಂದರವರಿಗೆ ಕೊಳ್ಳೇಗಾಲ ತಾಲ್ಲೂಕು ರಾಮಾಪುರದ ಶ್ರೀ ಸಿ. ಎಂ ಪುಟ್ಟಪ್ಪನವರ ಮಗಳು ಚಿ|| ಸೌಭಾಗ್ಯಮ್ಮನನ್ನು ತಂದುಕೊಂಡು ಮೊನ್ನೆ ರಾಜಧಾನಿಯಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದರು. ಸಂಜೆ ಸ್ವಾಗತ ಸಮಾರಂಭವೂ ಏರ್ಪಾಡಾಗಿದ್ದಿತು.

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ.
ಔಷಧಿ ವ್ಯಾಪಾರಿಗಳು,
207, ಸಯ್ಯಾಜಿರಾವ್ ರೋಡ್,
ಮೈಸೂರು.

Edited, Printed and Published by A R Nagarajan at Sadhvi Press, D Subbiah Road, Mysore

ಒಲಂಪಿಯಾ
28—8—52 ರಿಂದ 2 ನೇ ವಾರ
ಪ್ರತಿ ದಿನ ಮೂರು ಆಟಗಳು
ಕಿಕ್ಕಿರಿದ ಜನ ಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ.
★ ಸಿಂಬಾದ್ ದಿ ಸೈಲರ್ ★
ರಂಜನ್ ನಟಿಸಿರುವ ಇಂಡಿಯಾದ ದೊಡ್ಡ ಮೊದಲನೆಯ
ಸಮುದ್ರಯಾನದ ಸಾಹಸದ ಚಿತ್ರ
ಬೆಳಗಿನ ಪ್ರದರ್ಶನ:- ಭಗವಾನ್ ನಟಿಸಿರುವ ಜೋಡೀದಾರ್

ಪ್ರಭುದೇವ ಟಾಕೀಸ್
ಮೈಸೂರು
29—8—52 ನೇ ಶುಕ್ರವಾರದಿಂದ ; ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಕಿಶೋರ್ ಸಾಹುರವರ ಹಿಂದಿ ಚಿತ್ರ :
ಶ್ರೀ ಕೃಷ್ಣ ಜನ್ಮಾಷ್ಟಮಿ
ಪಾತ್ರ:— ನಿರ್ಮಲಾ, ಶೋಭನಾ ಸಮರ್ಥ್, ಜೀವನ್, ಭಾರತ್ ಭೂಷಣ್,
ರಾಜಕುಮಾರ್, [illegible], [illegible], ಕಾಂತ್ ಕುಮಾರ್

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೮-೮-೧೯೫೨ [ಸಂಚಿಕೆ ೨೭

ಈಜಿಪ್ಟ್ ಪ್ರಧಾನಿಯ –ರಾಜೀನಾಮೆಯೇ ?–

ಹರಿತವಾದ ಆಯುಧದ ಸಮೇತ ದಸ್ತಗಿರಿ

ಮೈಸೂರು ೨೮

ರಾಜಧಾನಿಯ ದೇವರಾಜ ಪೋಲೀಸರು ನೆನ್ನೆ ರಾತ್ರಿ ಸುಮಾರು ೧೦ ಘಂಟೆ ಸಮಯದಲ್ಲಿ ಮಲ್ಲಿಗೆರೆ ಸಂಜುಂಡ ಎಂಬ ಭಾರಿ ಕೇಡಿಯನ್ನು ಹಿಡಿದು ಸ್ಟೇಷನ್ನಿಗೆ ಕರೆದೊಯ್ದಿರುತ್ತಾರೆ. ಅವನ ಬಳಿ ಹರಿತವಾದ ಆಯುಧವೂ ಇದ್ದಿತೆಂದು ಹೇಳಲಾಗಿದೆ

ಹಿಂದಿ ಪರೀಕ್ಷೆಗಳು

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಹಿಂದಿ ಪರೀಕ್ಷೆಗಳು ಇದೇ ೩೦ ನೇ ತಾ|| ಪ್ರಾರಂಭವಾಗುವುವು ೩೧ ನೇ ತಾ|| ಪ್ರಾಥಮಿಕ ಮತ್ತು ಮಾಧ್ಯಮಿಕ ಪರೀಕ್ಷೆಗಳು ಹೆಂಗಸರು ಮತ್ತು ಗಂಡಸರು ಇಬ್ಬರಿಗೂ ಶಾರದಾವಿಲಾಸ ಹೈಸ್ಕೂಲಿನಲ್ಲೂ ರಾಷ್ಟ್ರಭಾಷಾ, ಪ್ರವೇಶಿಕ, ವಿಶಾರದ ಮತ್ತು ಪ್ರವೀಣರ ಪರೀಕ್ಷೆಗಳು ೩೦ ನೇ ತಾ|| ನಿಂದ ಡಿ ಬನುಮಯ್ಯ ಹೈಸ್ಕೂಲಿನಲ್ಲೂ ನಡೆಯುವುವು ಪ್ರವೇಶ ಪತ್ರಗಳು ನೂರಡಿ ರಸ್ತೆಯಲ್ಲಿರುವ ಪ್ರಚಾರ ಸಭೆಯಲ್ಲಿ ದೊರೆಯುವುವು

ತಿರುವಾಂಕೂರು ಮಹಾರಾಜರ ಪ್ರಯಾಣ

ತಿರುವಾಂಕೂರು ಮಹಾರಾಜರು ತಮ್ಮ ಸಹೋದರಿ ಕಾರ್ತೀಕೈ ತಿರುನಾಳ್ ಮತ್ತು ಭಾವನೈದುನ ಎಲಿಯಾರಾಜರೊಡನೆ ಈ ಬೆಳಿಗ್ಗೆ ೧೧ ೩೦ ಕ್ಕೆ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದರು ಮೈಸೂರಿನ ರಾಜಪ್ರಮುಖರು ಅವರನ್ನು ನಿಲ್ದಾಣದಲ್ಲಿ ಬೀಳ್ಕೊಟ್ಟರು

ಶ್ರೀ ಧನಲಕ್ಷ್ಮಿ ಮತ್ತು ಸರಸ್ವತಿ ಪೂಜೆ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜಲತಾರಿ ಮತ್ತು ರೇಷ್ಮೆ ವಸ್ತ್ರಗಳ ವ್ಯಾಪಾರಿಗಳಾದ ಶ್ರೀ ಕೃಷ್ಣಾ ಹಾಲಿನವರು ನೆನ್ನೆ ತಮ್ಮ ಅಂಗಡಿಯ ಹೊಸ ಲೆಕ್ಕಗಳನ್ನು ಪ್ರಾರಂಭಿಸುವ ಪೂರ್ವಭಾವಿಯಾಗಿ ಶ್ರೀ ಧನಲಕ್ಷ್ಮಿ ಮತ್ತು ಸರಸ್ವತಿ ಪೂಜೆಯನ್ನು ನೆರವೇರಿಸಿ ಇಷ್ಟಮಿತ್ರರನ್ನು ಕರೆದು ಸತ್ಕರಿಸಿದರು.

ಬೊಂಬಾಯಿಂದ ತಿರುವಾಂಕೂರಿಗೆ ರೈಲು

ತಿರುವಾಂಕೂರು–ಕೊಚ್ಚಿಗೆ ಬೊಂಬಾಯಿಯಿಂದ ನೇರವಾದ ರೈಲು ಸಂಪರ್ಕವನ್ನು ಪಶ್ಚಿಮ ತೀರದ ಕಡೆಯಿಂದ ಏರ್ಪಡಿಸಲು ಆಯಾ ಪ್ರಾಂತ ಸರ್ಕಾರಗಳು ಸಹಾಯ ಮಾಡಿದರೆ ಸಾಧ್ಯವಾಗುವುದೆಂದು ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ತಿಳಿಸಿರುವರು.

ಸಮಾಜವಾದಿ ಮತ್ತು ಕೆ. ಎಂ. ಪಿ. ಪಕ್ಷದ ಹೆಸರು

ಐಕ್ಯವಾದ ಸಮಾಜವಾದಿ ಮತ್ತು ಕೆ. ಎಂ ಪಿ ಪಕ್ಷವನ್ನು ಇನ್ನು ಮುಂದೆ ಪ್ರಜಾ ಸೋಷಲಿಸ್ಟ್ ಪಕ್ಷವೆಂದು ಕರೆಯಲಾಗುವುದೆಂದೂ, ಸಮಾಜವಾದಿ ಪಕ್ಷದ ಕೆಂಪು ಧ್ವಜಕ್ಕೆ ಸ್ವಲ್ಪ ಮಟ್ಟಿನ ಬದಲಾವಣೆ ಮಾಡಿ ಹೊಸ ಪಕ್ಷವು ಅದನ್ನು ಅಂಗೀಕರಿಸುವುದೆಂದೂ ಹೇಳಲಾಗಿದೆ.

ಹೈದರಾಬಾದು ಭಾರತದ ಉಪ ರಾಜಧಾನಿ ?

ಹೈದರಾಬಾದು ನಗರವನ್ನು ಭಾರತದ ಉಪ ರಾಜಧಾನಿಯಾಗಿ ಮಾಡುವ ಯೋಜನೆಯೊಂದು ಇರುವುದೆಂದು ಭಾರತದ ಹಿರಿಯ ಶಾಸನ ಸಭೆಯ ಹೈದರಾಬಾದು ಸದಸ್ಯರುಗಳಾದ ವಿ.ಕೆ ದಾಗೆ ಮತ್ತು ರಾಜ್ ಬಹದ್ದೂರ್ ಗೌಡ್ ರವರು ತಿಳಿಸಿರುವರು. ಭಾರತ ಸರ್ಕಾರದ ಹಲವು ಇಲಾಖೆಗಳನ್ನೂ ಅಲ್ಲಿಗೆ ಸಾಗಿಸಲಾಗುವುದೆಂದೂ, ಆ ನಗರವನ್ನು ಕೇಂದ್ರದ ನೇರ ಆಡಳಿತಕ್ಕೆ ಒಳಪಡಿಸಿಕೊಳ್ಳಲಾಗುವುದೆಂದೂ ಅವರು ತಿಳಿಸಿರುತ್ತಾರೆ.

ಈಜಿಪ್ಟಿನ ಸಚಿವರ ಆಸ್ತಿಗಳ ಪಟ್ಟಿ

ಈಜಿಪ್ಟಿನ ಈಗಿನ ಮತ್ತು ಹಿಂದಿದ್ದ ಪ್ರಧಾನಿಗಳು ಮತ್ತು ಮಂತ್ರಿಗಳು ತಮ್ಮ ಖಾಸಗೀ ಐಶ್ವರ್ಯದ ಬಗ್ಗೆ ಹೇಳಿಕೆಗಳನ್ನು ಕೊಡಬೇಕೆಂದು ಆಜ್ಞೆಯಾಗಿದೆ ಸರ್ಕಾರದ ಶುದ್ಧೀಕರಣದ ಕಾರ್ಯವನ್ನು ಅದಕ್ಕಾಗಿಯೇ ಸ್ಥಾಪಿತವಾಗಿರುವ ಏಳು ಸಮಿತಿಗಳು ನಡೆಸುತ್ತಿರುವುವೆಂದು ಹೇಳಲಾಗಿದೆ ಹಿರಿಯ ಮತ್ತು ಕಿರಿಯ ನೌಕರರೂ ತಮ್ಮ ಆಸ್ತಿಗಳ ಬಗ್ಗೆ ಸೂಕ್ತ ವಿವರಣೆಗಳನ್ನು ಕೊಡಬೇಕೆಂದು ಸೂಚಿಸಲಾಗಿದೆ.

ಪಾಕಿಸ್ತಾನದ ವಿಮಾನ ಮುರಿದು ೧೮ ಜನರ ಮರಣ

ಪಾಕಿಸ್ತಾನಕ್ಕೆ ಸೇರಿದ ವಿಮಾನವು ನೊನ್ನೆ ಜೇಲಂ ಜಿಲ್ಲೆಯಲ್ಲಿ ಒಂದು ಕಡೆ ಮುರಿದು ಬಿದ್ದು ಅದರಲ್ಲಿದ್ದ ೧೮ ಮಂದಿಯೂ ಮಡಿದರೆಂದೂ, ಆ ಪೈಕಿ ಮಾಜಿ ಪ್ರಧಾನಿ ಲಿಯಾಖತ್ತರ ಕೊಲೆಯ ತನಿಖೆ ನಡೆಸುತ್ತಿದ್ದ ಅಧಿಕಾರಿಯೂ ಒಬ್ಬರೆಂದೂ ವರದಿಯಾಗಿದೆ

ಇಂದೋರಿನಲ್ಲಿ ಪಡಿತರ ರದ್ದು

ಇಂದೂರು ಮತ್ತು ಮ್ಹೌ ನಗರಗಳಲ್ಲಿ ಪಡಿತರವನ್ನು ರದ್ದು ಮಾಡಲಾಗಿದೆ ಅಲ್ಲೂ ಮತ್ತು ಇತರ ಕಡೆಗಳಲ್ಲೂ ಫೇರ್ ಪ್ರೈಸ್ ಡಿಪೋಗಳ ಮೂಲಕ ಆಹಾರ ಧಾನ್ಯಗಳನ್ನು ಹತೋಟಿ ಬೆಲೆಗೆ ಮಾರಲು ವ್ಯವಸ್ಥೆಯಾಗಿದೆ.

ಕಾಶ್ಮೀರದ ಬಗ್ಗೆ ಜಿನೀವಾ ಮಾತುಕತೆಯು ಆರಂಭ

ಕಾಶ್ಮೀರದಲ್ಲಿ ಜನಮತ ಗಣನೆಗೆ ಮುಂಚಿತವಾಗಿ ಅಲ್ಲಿರುವ ಸೈನ್ಯಗಳನ್ನು ಕಡಿಮೆ ಮಾಡುವ ವಿಷಯವಾಗಿ ನೊನ್ನೆ ಜಿನೀವಾ ನಗರದಲ್ಲಿ ಭಾರತ ಮತ್ತು ಪಾಕೀಸ್ತಾನಗಳ ಮಂತ್ರಿಗಳಿಗೂ ವಿಶ್ವಸಂಸ್ಥೆಯ ಕಾಶ್ಮೀರ ಪ್ರತಿನಿಧಿ ಫ್ರಾಂಕ್ ಗ್ರಹಾಂರವರಿಗೂ ಮಾತುಕತೆಗಳು ಆರಂಭವಾದುವು. ಸೀಸ್ ಫೈರ್ ಪ್ರದೇಶದ ಉಭಯ ಭಾಗಗಳಲ್ಲೂ ಎಷ್ಟೆಷ್ಟು ಸೈನ್ಯಗಳನ್ನು ಇಟ್ಟಿರಬೇಕೆಂಬ ಮತ್ತು ಜನಮತ ಗಣನೆ ಅಧಿಕಾರಿಗಳಾದ ಅಡ್ಮಿರಲ್ ನಿಮಿಟ್ಜ್ ರವರು ಕೆಲಸಕ್ಕೆ ಪ್ರಾರಂಭಿಸುವ ವಿಷಯಗಳ ಬಗ್ಗೆ ಗ್ರಹಾಂರವರು ಹೊಸ ಸಲಹೆಗಳನ್ನು ಮಂತ್ರಿಗಳ ಮುಂದೆ ಮಂಡಿಸಿದರೆಂದೂ ೮೫ ನಿಮಿಷಗಳ ಕಾಲ ಚರ್ಚೆಯು ನಡೆಯಿತೆಂದೂ ಹೇಳಲಾಗಿದೆ

ಕ್ಲೋರೋಫಾರಂ ಕೊಟ್ಟು ತರುಣಿಯರ ಅಪಹಾರ

ವಯಸ್ಸು ಬಂದ ತರುಣಿಯರಿಗೆ ಕ್ಲೋರೋಫಾರಂ ಕೊಟ್ಟು ಪ್ರಜ್ಞೆ ತಪ್ಪಿಸಿ ಅಥವಾ ಆಸೆ ತೋರಿಸಿ ಪುಸಲಾಯಿಸಿ ಅಪಹರಿಸಿಕೊಂಡು ಬಂದು "ರಕ್ಷಣಾ ಗೃಹ" ಎಂಬ ಹೆಸರಿನಲ್ಲಿ ತರುಣಿಯರ ಮಾರಾಟ ನಡೆಸುತ್ತಿದ್ದ ಭಾರಿ ಗ್ಯಾಂಗೊಂದನ್ನು ಲಕ್ನೋ ಪೋಲೀಸರು ಪತ್ತೆಹಚ್ಚಿರುತ್ತಾರೆ ಆ ಗೃಹದಲ್ಲಿ ಕೂಡಿಸಲಾಗಿದ್ದ ೪೦ ಮಂದಿ ಸ್ತ್ರೀಯರನ್ನು ಅವರು ರಕ್ಷಿಸಿರುತ್ತಾರೆ. ಗ್ಯಾಂಗಿನ ಇಬ್ಬರನ್ನು ದಸ್ತಗಿರಿ ಮಾಡಲಾಗಿದೆ

ರಾಜೀನಾಮೆ ಕೊಡುವುದಾಗಿ ಈಜಿಪ್ಟ್ ಪ್ರಧಾನಿ

ಭೂ ಸುಧಾರಣೆಯ ಸಂಬಂಧದಲ್ಲಿ ಈಜಿಪ್ಟಿನ ಪ್ರಧಾನಿ ಅಲಿ ಮಹರ್ ಪಾಷಾರವರಿಗೂ ಪ್ರಧಾನ ಸೇನಾಪತಿ ಜ|| ನಗೀಬರಿಗೂ ಭಿನ್ನಾಭಿಪ್ರಾಯವುಂಟಾಗಿರುವುದರಿಂದ ಅಲಿ ಮಹರ್ ಪಾಷಾರವರು ರಾಜೀನಾಮೆ ಕೊಡುವುದಾಗಿ ತಿಳಿಸಿದ್ದಾರೆಂದು ಗೊತ್ತಾಗಿದೆ ಜ|| ನಗೀಬರ ಭೂ ಸುಧಾರಣೆಗೆ ಬೆಂಬಲ ನೀಡುವ ಡಾ|| ಅಬ್ದೆಲ್ ರಜಾಕ್‌ಸನ್ಹೂರಿಯವರು ಪ್ರಧಾನಿಯಾಗಬಹುದೆಂದು ಹೇಳಲಾಗಿದೆ

ಅಕ್ಟೋಬರ್ ೧ರಿಂದ ೨೫೦ ಮೈಲಿ ರಸ್ತೆ ರಾಷ್ಟ್ರೀಕರಣ

ಬೆಂಗಳೂರು ೨೮

ಸಂಸ್ಥಾನದ ಆರು ಮುಖ್ಯ ಮಾರ್ಗಗಳಲ್ಲಿ ಸುಮಾರು ೨೫೦ ಮೈಲಿಗಳಷ್ಟು ರಸ್ತೆ ಸಂಚಾರದ ರಾಷ್ಟ್ರೀಕರಣವನ್ನು ಬರುವ ಅಕ್ಟೋಬರ್ ೧ ರಿಂದ ಜಾರಿಗೆ ತರಲು ಸರ್ಕಾರವು ನಿರ್ಧರಿಸಿದೆಯೆಂದು ಗೊತ್ತಾಗಿದೆ. ಬೆಂಗಳೂರಿನಿಂದ ಮೈಸೂರು, ತುಮಕೂರು, ಕೋಲಾರ- ಇವೇ ಮೊದಲಾದ ಕಡೆಗಳಿಗೆ ಹೋಗುವ ರಸ್ತೆಗಳಲ್ಲಿ ಸರ್ಕಾರಿ ಬಸ್ಸುಗಳಿಂದ ವರಮಾನವು ಹೆಚ್ಚುತ್ತಿದೆಯಾದ್ದರಿಂದ ಈ ರಸ್ತೆಗಳನ್ನು ರಾಷ್ಟ್ರೀಕರಿಸಲಾಗುವುದೆಂದು ತಿಳಿದುಬಂದಿದೆ.

ಬೆರಿಕೆ ಬೆಣ್ಣೆ ಮತ್ತು ತುಪ್ಪದ ಮಾರಾಟಕ್ಕೆ ಕಠಿಣ ಸಜಾ

ಬೆರಿಕೆ ತುಪ್ಪವನ್ನು ಮಾರಿದರೆಂಬ ಅಪಾದನೆಗಾಗಿ ಬೆಂಗಳೂರು ಚಾಮರಾಜ ಪೇಟೆಯ ವರ್ತಕರಾದ ಶ್ರೀ ಕೆ. ಜಿ ಶ್ರೀನಿವಾಸ ಶೆಟ್ಟರಿಗೂ ಮತ್ತು ಬೆರಿಕೆ ಬೆಣ್ಣೆಯನ್ನು ಮಾರಿದುದಕ್ಕಾಗಿ ವಿಶ್ವೇಶ್ವರ ಪುರದ ಶ್ರೀ ಕೆ. ಪಿ. ಅನಂತರಾಮಯ್ಯರವರಿಗೂ ಬೆಂಗಳೂರು ನಗರ ನ್ಯಾಯಾಧೀಶರು ತಲಾ ೨ ತಿಂಗಳ ಕಠಿಣ ಸಜಾ ಮತ್ತು ೨೦೦ ರೂ. ದಂಡವನ್ನು ವಿಧಿಸಿರುತ್ತಾರೆ.

ಪೂನಾ ಶಸ್ತ್ರಸಜ್ಜಿತ ವಾಹನ ಠಾಣೆ ನೌಕರರ ಮುಷ್ಕರ

ಪೂನಾದ ಕೇಂದ್ರ ಶಸ್ತ್ರಸಜ್ಜಿತ ವಾಹನಗಳ ಡಿಪೋವಿನ ೨೧೩ ಮಂದಿ ನೌಕರರನ್ನು ಕೆಲಸದಿಂದ ವಜಾ ಮಾಡಿರುವ ಬಗ್ಗೆ ಕಾರ್ಮಿಕರಿಗೂ ರಕ್ಷಣಾ ಶಾಖೆಯ ಅಧಿಕಾರಿಗಳಿಗೂ ನಡೆದ ಸಂಧಾನವು ನಿಷ್ಫಲವಾದುದರಿಂದ ಆ ಡಿಪೋವಿನ ೨೪೦೦ ಮಂದಿ ನೌಕರರು ನಾಳೆಯಿಂದ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ ಕಳೆದ ಭಾನುವಾರವೇ ಅವರು ಮುಷ್ಕರದ ನೋಟೀಸನ್ನು ಕೊಟ್ಟಿದ್ದರು.

೨೦೦ ಹಳ್ಳಿಗಳಿಗೆ ನೀರು ನುಗ್ಗಿ ೧೦೦೦ ಮನೆಗಳ ನಾಶ

ಆಗ್ರಾ ಜಿಲ್ಲೆಯ ಸುಮಾರು ೨೦೦ ಹಳ್ಳಿಗಳಿಗೆ ಪ್ರವಾಹದ ನೀರು ನುಗ್ಗಿ ಆದ ನಷ್ಟವಾಗಿ ಸಾವಿರ ಮನೆಗಳು ಉರುಳಿರುವುವೆಂದೂ, ಅನೇಕ ಕಡೆ ಪೈರುಗಳೆಲ್ಲವೂ ಹಾಳಾಗಿರುವುವೆಂದೂ ವರದಿಯಾಗಿದೆ.

ಅಟ್ಲಾಂಟಿಕ್ ರಕ್ಷಣಾ ಯೋಜನೆಗೆ ರಷ್ಯದ ಪ್ರತಿಕ್ರಿಯೆ

ಅಟ್ಲಾಂಟಿಕ್ ರಕ್ಷಣಾ ದಳಗಳನ್ನು ಎದುರಿಸಲು ರಷ್ಯಾವು ಪೋಲೆಂಡ್, ಜೆಕೊಸ್ಲೊವೇಕಿಯಾ ಮತ್ತು ಪೂರ್ವ ಜರ್ಮನಿಗಳ ಸಂಯುಕ್ತ ಸೈನ್ಯವನ್ನು ರಚಿಸುತ್ತಿದೆಯೆಂದು ಗೊತ್ತಾಗಿದೆ. ಆ ದೇಶಗಳಲ್ಲಿ ಬರುವ ಶಿಶಿರ ಋತುವಿನಲ್ಲಿ ಈ ಸೈನ್ಯ ಕಾರ್ಯಾಚರಣೆಗಳನ್ನು ನಡೆಸಲು ಸಿದ್ಧತೆಗಳು ಆಗುತ್ತಿರುವುದರಿಂದ ಇದು ಸ್ಪಷ್ಟವಾಗುತ್ತದೆ.

○ ಅಸ್ಸಾಮಿನಲ್ಲಿರುವ ಮುಕ್ಕಾಲು ಭಾಗದ ಜನರು ಪ್ರವಾಹದಿಂದ ಪೀಡಿತರಾಗಿರುವರೆಂದೂ, ಅಲ್ಲಿ ೩೦ ಸಾವಿರ ಜನರು ಹತೋಟಿ ಬೆಲೆಗೆ ಧಾನ್ಯಕೊಳ್ಳಲು ಅಶಕ್ತರಾಗಿರುವರೆಂದೂ ಗೊತ್ತಾಗಿದೆ.

ಮಾಧ್ವ ತತ್ವ ಜ್ಞಾನ ಸಮ್ಮೇಳನ

ಉಡುಪಿಯಲ್ಲಿ ಇದೇ ನಂದನ ಸಂವತ್ಸರದ ನವೆಂಬರ್ ತಿಂಗಳಲ್ಲಿ ಅಖಿಲ ಭಾರತೀಯ ಮಾಧ್ವ ಪೀಠಾಧಿಪತಿ ಸಮ್ಮೇಳನ ಮತ್ತು ಅಖಿಲ ಭಾರತೀಯ ಮಾಧ್ವ ಸಮ್ಮೇಳನಗಳನ್ನೊಳಗೊಂಡ ಮಾಧ್ವ ತತ್ವಜ್ಞಾನ ಸಮ್ಮೇಳನವನ್ನು ನಡೆಸಲಾಗುವುದು. ಸಮಗ್ರ ಮಾಧ್ವ ಸಮಾಜದ ಸಾಂಸ್ಕೃತಿಕ-ಧಾರ್ಮಿಕ, ಸಾಮಾಜಿಕ ಏಳಿಗೆಗಾಗಿ ವಿಧಾಯಕ ಕಾರ್ಯಕ್ರಮಗಳನ್ನು ರೂಪಿಸುವುದು, ಶ್ರೀಮದಾನಂದ ತೀರ್ಥರ ತತ್ವಜ್ಞಾನವನ್ನು ಪ್ರಚಾರಗೊಳಿಸುವುದು, ಮಾಧ್ವ ತತ್ವಗಳ ಹಿರಿಮೆ ಮತ್ತು ವೈಶಿಷ್ಟ್ಯವನ್ನು ವಿದಿತಗೊಳಿಸಿ ವೈಮನಸ್ಯವು ಅಳಿದು ಪರಸ್ಪರ ಸ್ನೇಹ ಸಹಕಾರಗಳು ಬೆಳೆದು ಬರುವಂತೆ ಸಮಾಜವನ್ನು ಸಂಘಟಿಸುವುದು, ಸನಾತನ ಧರ್ಮದ ಆಚರಣೆಗಳನ್ನು ನಿತ್ಯಜೀವನದಲ್ಲಿ ತರಲು ಮಾರ್ಗಗಳನ್ನು ಗೊತ್ತುಪಡಿಸುವುದು, ಗುರು ಹಿರಿಯರ ಮತ್ತು ತಿಳುವಳಿಕೆಯವರ ಸಹಕಾರವನ್ನು ಸುದೃಢ ಮತ್ತು ಸುವ್ಯವಸ್ಥಿತವಾಗಿರಿಸುವುದಲ್ಲದೆ, ಪರಸ್ಪರ ಸಹಕಾರದಿಂದ ಸಮಾಜದ ಪುನರ್ರಚನೆಗೆ ಪ್ರಯತ್ನಿಸುವುದು — ಈ ಧ್ಯೇಯಗಳನ್ನು ಸಮ್ಮೇಳನವು ಇಟ್ಟುಕೊಂಡಿದೆ. [illegible] ಶ್ರೀ [illegible] ತೀರ್ಥ ಶ್ರೀ [illegible] ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿ [illegible] ಕಾರ್ಯಕಾರಿ ಸಮಿತಿ [illegible]

ಆಕಾಶವಾಣಿ [illegible] ಕಾರ್ಯಕ್ರಮ

[illegible] ಸಂಗೀತ, [illegible] ಮತ್ತು [illegible] ಗೀತ. [illegible] ಶ್ರೀ [illegible] ಚಿತ್ರ ಸಂಗೀತ [illegible] ಅಪೂರ್ವ [illegible] ನಾಟಕ

ಗಣಪತಿ ಮಹೋತ್ಸವ ಸಮಾರಂಭಗಳು

ಮೈಸೂರು ೨೭

ರಾಜಧಾನಿಯ ಇಲವಾಲದ ರಸ್ತೆಯಲ್ಲಿರುವ [illegible] ವಿದ್ಯಾರ್ಥಿ ನಿಲಯದಲ್ಲಿ ಈ ಸಂಜೆ ೬|| ಘಂಟೆಗೆ ಶ್ರೀ ವಿದ್ಯಾಗಣಪತಿಯ ಮಹಾ ಮಂಗಳಾರತಿಯು ಪಸ್ಟ್‌ಗ್ರೇಡ್ ಕಾಲೇಜು ಪ್ರಿನ್ಸಿಪಾಲರಾದ ಡಾ|| ಎಲ್ [illegible]ನವರ ಅಧ್ಯಕ್ಷತೆಯಲ್ಲಿ ನಡೆಯುವುದು. [illegible] ದೊರೆಸ್ವಾಮಿ ಐಯ್ಯಂಗಾರ್ ರವರ ವೀಣಾ ವಾದನವು ಏರ್ಪಾಡಾಗಿದೆ.

ರಮಾವಿಲಾಸ ಅಗ್ರಹಾರದಲ್ಲಿರುವ [illegible]ರ ಸಾಂಸ್ಕೃತಿಕ ಸಂಘದಲ್ಲಿ ಈ ರಾತ್ರಿ ಸಂ|| ೮|| ಕ್ಕೆ ಚೌಡಯ್ಯ ಮತ್ತು ಪಾರ್ಟಿಯವರ ಸಂಗೀತವು ಏರ್ಪಟ್ಟಿರುವುದು.

ರಾಜಧಾನಿಯ ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ [illegible] ರಿಂದ ರುಕ್ಮಿಣೀ ಕಲ್ಯಾಣ ಎಂಬ ಹರಿಕಥೆ ನಡೆಯುವುದು.

[illegible] ವಿದ್ಯಾರ್ಥಿ [illegible] ಸಾತ್ವಿಕವಾಗಿ ವಿದ್ಯಾವಂತರಾಗಿ [illegible] ಹಾರೈಸಿದರು.

Edited, Printed and Published by A. R. Nagarajan at Sadhvi Press, D. Subbiah Road Mysore

ಗೌರ್ನರರಿಂದ ಆಭರಣಗಳಿಗೆ ತೆರಿಗೆಗಳ ಹೋಲಿಕೆ

ಮದ್ರಾಸಿನ ಗೌರ್ನರ್ ಶ್ರೀ ಶ್ರೀಪ್ರಕಾಶರು ಕಾಫಿ ತೋಟಗಳ ಪ್ಲಾಂಟರುಗಳ ಸಮ್ಮೇಳನದಲ್ಲಿ ನೆನ್ನೆ ಭಾಷಣ ಮಾಡಿ, ಪತ್ನಿಯು ಗಂಡನಿಂದ ಕೋರುವ ಆಭರಣಗಳ ಮಾದರಿಯಲ್ಲಿ ತೆರಿಗೆಗಳು ಇರುವುದಾಗಿಯೂ, ಹೆಂಡತಿಯರ ಕೋರಿಕೆಗಳನ್ನು ಈಡೇರಿಸುವಂತೆ ಪ್ರಜೆಗಳು ಸರ್ಕಾರದ ತೆರಿಗೆಗಳನ್ನು ಕೊಡಬೇಕೆಂದೂ ತಿಳಿಸಿದರು.

ಶ್ರೇಷ್ಠ ಸೇನಾನಿ ಮುಂದೆ ವಿಸರ್ಜಿತ ಸೈನಿಕರ ಅರಿಕೆ

ಭಾರತದ ಶ್ರೇಷ್ಠ ಸೇನಾನಿ ಜ|| ಕೆ. ಎಂ. ಕಾರಿಯಪ್ಪನವರ ಬಳಿ ನೆನ್ನೆ ಮೈಸೂರು ಸೈನ್ಯದವರ ಮಾಜಿ ನೌಕರರ ಸಂಘದ ಅಧ್ಯಕ್ಷ ಶ್ರೀ ಸಿ ಜೆ ದೇವನಾಥ್, ಕರ್ನಲ್ ಪಿ. ಬಸವರಾಜೆ ಅರಸ್, ಲೆ|| ಕರ್ನಲ್ ಬಿ ಎ. ಅಜೀವರ್, ಮೇಜರ್ ಎಂ ಸುಕೇತರಾಜ್, ಕ್ಯಾಪ್ಟನ್ ಫಜಲು ರಹಮಾನ್ ಮತ್ತು ಕ್ಯಾಪ್ಟನ್ ಎಸ್ ಜಿ ಗಣೇಶರಾವ್ ಇವರುಗಳು ನಿಯೋಗ ಹೋಗಿ ವಿಸರ್ಜಿತ ಮೈಸೂರು ಸೈನ್ಯದವರ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಂಡರು. ವಸತಿ ಸೌಕರ್ಯ, ಜಮೀನು ಸರಬರಾಜು, ಲಾರಿ ಸರ್ವಿಸ್ ಮತ್ತು ಲ್ಯಾಂಡ್ ಕಾಲೊನೈಸೇಷನ್ ಈ ವಿಷಯಗಳನ್ನು ಅವರ ಗಮನಕ್ಕೆ ತರಲಾಯಿತು. ಶ್ರೇಷ್ಠ ಸೇನಾನಿಯವರು ಅವರ ಕೋರಿಕೆಗಳನ್ನು ಸಾವಧಾನದಿಂದ ಆಲಿಸಿ, ಅವನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು.

ಹಡಗಿನ ಕ್ಯಾಪ್ಟನ್ನಿಗೆ ೬ ಸಾವಿರ ರೂ. ದಂಡ

ಅಮೆರಿಕದ ಸೀಗೇಟ್ ಎಂಬ ಹ[ಡಗಿ]ನ ಕ್ಯಾಪ್ಟನ್ ಡೇವಿಡ್ ಹ್ಯಾಟ್[illegible] ಎಂಬಾತನಿಗೆ ಮದ್ರಾಸಿನ [illegible] [ನ್ಯಾ]ಯಾಧೀಶರು, ಓವರ್ ಲೋಡ್ [ಮಾ]ಡಿದುದಕ್ಕಾಗಿ ೬ ಸಾವಿರ ರೂ. ಗಳ [ದಂ]ಡವನ್ನು ವಿಧಿಸಿರುತ್ತಾರೆ. ಮದ್ರಾ[ಸ್] ಬಂದರಿಗೆ ಹಡಗು ಬಂದಾಗ [illegible] ನೂರಿನಲ್ಲಿ ನಿಗದಿಯಾದುದಕ್ಕಿಂತ [illegible] ಹೆಚ್ಚು ಗೋಧಿಯನ್ನು ಅದರಲ್ಲಿ [ತರ]ಲಾಗಿತ್ತು. ಭಾರತದಲ್ಲಿ ಅಮೆರಿಕ[ನ್ನ]ರಿಗೆ ದಂಡ ವಿಧಿಸಿರುವುದು ಇದು [ಮೊದಲ]ನೇ ಬಾರಿ.

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	
ಹುರುಳಿ	[illegible]	[illegible]
ಹೆಸರು	[illegible]	
ಹೊಂಗೆ ಬೀಜ	[illegible]	
ಉಪ್ಪು	[illegible]	
ಅವರೆ	[illegible]	
ಹಲಸಂದೆ	[illegible]	[illegible]
ಮೆಣಸಿನಕಾಯಿ ಮಣಕ್ಕೆ	[illegible]	
ಹುಣಸೇಹಣ್ಣು	[illegible]	
ಸೀಗೇಕಾಯಿ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]

SRI GAYATHR[I]
TALKIES
Daily 2 Shows
FROM 29 8—52 For 2 D[ays]
20th Century's
THE SECRET OF
CONVICT LAK[E]
Starring Glenn Ford and
Gene Tierney
TO-DAY — LAST DA[Y]
DAVID & BATHSHEB[A]

PRABHA
29 8-52 For 4 Days Only
Daily 3 Shows
HOTEL SAHARA
An International Film
Festival Picture
With Yvonne Decarlo
From 2 9 52 For 3 Days
SECRETS OF LIFE

ಪ್ರಭುದೇವಾ ಟಾಕೀಸ್
ಮೈಸೂರು
29-8-52 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
[illegible] ಹಿಂದಿ ಚಿತ್ರ
ಶ್ರೀ ಕೃಷ್ಣ ಜನ್ಮಾಷ್ಟಮಿ
ಪಾತ್ರ: ನಿರುಪಾರಾಯ್, ತ್ರಿಲೋಚನಾ [illegible] ಭಾರತ್ ಭೂಷಣ್ ರಾಜಕುಮಾರ್, [illegible] ಕರ್ನಾಟಕಿ [illegible]

SREE GANESHA TALKIES
FROM 29-8-52 —— For 4 Days
The Fantastic Adventures Of Baron Manchussen
[Agfa Color]
An Adventure Drama of Arabian Nights Type
With Top Rank French Stars
FROM 5—9—52
Fantastic First Technicolor Picture Made in India
United Artists' THE RIVER In Technicolor

ಒಲಿಂಪಿಯಾ
23-8-52 ರಿಂದ 2 ನೇ ವಾರ
ಪ್ರತಿ ದಿನ ಮೂರು ಆಟಗಳು
ಚಿಕ್ಕಂದಿನ ಜನ ಸಂದಣಿಗೆ ಪ್ರದರ್ಶಿಸಲ್ಪಡುತ್ತಿದೆ
★ ಸಿಂಬಾದ್ ದಿ ಸೈಲರ್ ★
ರಂಜನ್ ನಟಿಸಿರುವ [illegible] ಮೊದಲನೆಯ ಸಮುದ್ರಯಾನ [illegible] ಚಿತ್ರ
ಬೆಳಗಿನ ಪ್ರದರ್ಶನ - ಭಗವಾನ್ ನಟಿಸಿರುವ ಜೋಡೀದಾರ್

ಚಾಮುಂಡೇಶ್ವರಿ ಟಾಕೀಸ್
30-8-52 ನೇ ಶನಿವಾರದಿಂದ ಅಮೋಘ ಪ್ರಾರಂಭ
ಜ್ಯುಪಿಟರ್ ನೂತನ ಸಾಮಾಜಿಕ ತಮಿಳು ಚಿತ್ರ
ಜಮೀನ್‌ದಾರ್
ತಾರಾಗಣ:— ಮಾಧುರಿ ದೇವಿ, ಎಂ ವಿ ರಾಜಮ್ಮ, ಬಾಲಸುಬ್ರಹ್ಮಣ್ಯಂ, ನಟರಾಜನ್ ಮುಂತಾದವರು

ಟೆಲಿಫೋನ್ ನಂ 792 ॥ವಂದೇ ಮಾತರಂ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೯-೮-೧೯೫೨ [ಸಂಚಿಕೆ ೨೮

ಮಧ್ಯ ಏಷ್ಯಾವಿಗೆ – ಸ್ಟಾಲಿನ್ ಯೋಜನೆ –

ಮೈಸೂರು ನಗರಕ್ಕೆ ಚಲಿಸುವ ನ್ಯಾಯಾಸ್ಥಾನ

ಪುರಸಭಾಧಿವೇಶನದಲ್ಲಿ ಸಲಹೆ

ಮೈಸೂರು ೨೮

ನೆನ್ನೆ ದಿನ ಪುರಸಭೆಯ ಸಾಮಾನ್ಯ ಅಧಿವೇಶನವು ಸೇರಿದ್ದಿತು. ನಗರದಲ್ಲಿ ಅನೇಕ ಮಾಂಸ, ತರಕಾರಿಗಳನ್ನು ಜನರು ಗಲೀಜು ಮಾಡುತ್ತಿರುವ ವಿಷಯವನ್ನು ಶ್ರೀ ಬಿ.ಜಿ. ದಾಸರು ಅಧ್ಯಕ್ಷರ ಗಮನಕ್ಕೆ ತಂದಾಗ ಈ ಬಗ್ಗೆ ಯಾವ ವಿಧವಾದ ಕ್ರಮಕ್ಕೂ ಜನರ ಸಹಕಾರ ಬೇಕೆಂದು ಅವರು ತಿಳಿಸಿದರು.

ಈ ರೀತಿ ಗಲೀಜು ಮಾಡುವವರನ್ನು ಶೀಘ್ರವಾಗಿ ಅಯಾ ಸ್ಥಳಗಳಲ್ಲಿಯೇ ಶಿಕ್ಷಿಸಿ ಶಿಕ್ಷೆನ್ನುಂಟುಮಾಡಲು ಪುರಸಭೆಯವರು ಸರ್ಕಾರವನ್ನು ಪ್ರಾರ್ಥಿಸಿ ಚಲಿಸುವ ನ್ಯಾಯಾಲಯಗಳನ್ನು ನಗರದಲ್ಲಿ ಏರ್ಪಡಿಸಬೇಕೆಂದು ಶ್ರೀ ಎ ವೆಂಕಟೇಶಯ್ಯನವರು ಸಲಹೆಯಿತ್ತರು.

ನಗರದ ಅನೇಕ ಕಡೆಗಳಲ್ಲಿ ಉಪಯೋಗವಾಗದೆ ನೆಲದಲ್ಲೇ ಇರುವ ಸಾವಿರಾರು ಅಡಿ ಹಳೆ ನಲ್ಲಿ ಪೈಪುಗಳನ್ನು ನಮಗೆ ಕೂಲಿಯ ಖರ್ಚನ್ನು ಕೊಟ್ಟ[ರೆ] ತೆಗಿಸಿಕೊಡುವುದಾಗಿಯೂ ಇವನ್ನು ಪುರಸಭೆಯು ನೀರು ಸರಬರಾಜಿಗೆ ಉಪಯೋಗಿಸಬಹುದೆಂದೂ ಒಬ್ಬ ಕ[ಂಟ್ರಾಕ್ಟ]ರ್ ಸಲಹೆ ಇತ್ತಿದ್ದಾರೆಂದು ಅಧ್ಯಕ್ಷರು [ತಿ]ಳಿಸಿ ತಕ್ಕ ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಅನಂತರ ಶ್ರೀ ಚೌಡಯ್ಯನವರು ಸಾಧಾರಣವಾಗಿ ಭಾರತದಲ್ಲೆಲ್ಲಾ ಮೈಸೂರು ನಗರದಲ್ಲಿ ಮಾತ್ರ ೧೯೫೧ ರಿಂದ ... ಬಡ ವಿದ್ಯಾರ್ಥಿಗಳ ಸೌಕರ್ಯಕ್ಕಾ[ಗಿ] ಅನೇಕ ಗಣ್ಯ ವ್ಯಕ್ತಿಗಳಿಂದ ಕೂಡಿ[ದ] ಸಮಿತಿಯೊಂದು ಕೆಲಸ ಮಾಡುತ್ತಿ[ದೆ]ಯೆಂದೂ, ಸಮಿತಿಯ ಕಾರ್ಯವನ್ನು ಮೆಚ್ಚಿ ಎಷ್ಟೋ ಜನರು ಉದಾರವಾಗಿ [ಸ]ಹಾಯ ಮಾಡಿದ್ದಾರೆಂದೂ ತಿಳಿಸಿದ[ರು]. ಹೀಗಿರುವಾಗ ಕಳೆದ ವರ್ಷದ ಪುರಸಭೆಯ ಆಡಳಿತದ ವರದಿಯನ್ನು ಪರಿ[ಶೀ]ಲಿಸಲಾದ ಅಧಿವೇಶನದಲ್ಲಿ ಉಪಾಧ್ಯ[ಕ್ಷ]ರಾದ ಶ್ರೀ ಎಗ ರಾಜಯ್ಯನವರು ಸ[ಮಿ]ತಿಯಲ್ಲಿ ಕೋಮುವಾರು ಭಾವನೆಯ[ಿದೆ]ಯೆಂದು ಮಾಡಿದ ಅಪಾದನೆಯನ್ನು [ಅ]ವರು ವಾಪಸು ಪಡೆಯಬೇಕೆಂದು [ಕ]ೋರಿದರು.

ವಿದ್ಯಾರ್ಥಿಗಳನ್ನು ಕೋಮುವಾರು ವಿಂಗಡಿಸಿ ಪಟ್ಟಿ ಮಾಡಿದ್ದುದನ್ನು ... ಈ ರೀತಿ ಮಾಡಕೂಡದೆಂದು ತಾವು ಹೇಳಿದುದಾಗಿ ಶ್ರೀ ರಾಜಯ್ಯನವರು [ತಿ]ಳಿಸಿದರು. ಶ್ರೀ ಪಿ. ಸೀತಾರಾಮಯ್ಯ[ನ]ವರು ವಿಂಗಡನೆಗೆ ವಿದ್ಯಾರ್ಥಿಗಳ ಆ[ಹ]ಾರ ವಿಹಾರಗಳಲ್ಲಿನ ವ್ಯತ್ಯಾಸವೇ [ಕಾ]ರಣವೆಂದು ತಿಳಿಸಿದರು.

ಆದರೆ ಪಟ್ಟಿಯಲ್ಲಿ ವಿಂಗಡಣೆಯಿರು[ವ]ವರೆಗೂ ಸಮಿತಿಯಲ್ಲಿ ಕೋಮುವಾ[ರ]ು ಭಾವನೆಯಿರುವುದೆಂದು ತಾವು ಭಾ[ವ]ಿಸುವುದಾಗಿ ಶ್ರೀ ರಾಜಯ್ಯನವರು [ನ]ುಡಿದರು. ಅಧ್ಯಕ್ಷರ ಸೂಚನೆಯಂತೆ [ಅ]ವರು ತಮ್ಮ ಅಪಾದನೆಯನ್ನು ಹಿಂ[ದ]ಕ್ಕೆ ತೆಗೆದುಕೊಂಡರು.

[ಈ] ಮದ್ರಾಸು ಪ್ರಾಂತದಲ್ಲಿ ಪುನಃ ... ಡೋರ್ಡುಗಳನ್ನು ಸ್ಥಾಪಿಸುವ ...ಯವು ಅಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಗೊತ್ತಾಗಿದೆ.

ಆಫ್ರಿಕದಲ್ಲಿ ಮೈಸೂರು ಮಹಾರಾಜರ ಪ್ರವಾಸ

ಬೆಂಗಳೂರು ೨೮

ದಸರಾ ಮಹೋತ್ಸವವು ಮುಗಿದ ನಂತರ ಶ್ರೀಮನ್ಮಹಾರಾಜರವರು ಆಫ್ರಿಕಾ ಖಂಡದ ಹಲವು ಭಾಗಗಳಲ್ಲಿ ಪ್ರವಾಸ ಕೈಗೊಳ್ಳಲು ಏರ್ಪಾಡಾಗುತ್ತಿರುವುದೆಂದು ವರದಿಯಾಗಿದೆ. ಭಾರತದ ವನಮೃಗ ರಕ್ಷಣಾ ಸಮಿತಿಯ ಅಧ್ಯಕ್ಷರಾಗಿರುವ ಮೈಸೂರು ರಾಜಪ್ರಮುಖರು ಆಫ್ರಿಕದ ಹಲವು ಅರಣ್ಯಗಳ ಮೃಗ ಸಂಪತ್ತಿನ ಪರಿಚಯ ಮತ್ತು ಅವುಗಳನ್ನು ರಕ್ಷಿಸಲು ಅಲ್ಲಿ ಮಾಡಿರುವ ವ್ಯವಸ್ಥೆ ಇವುಗಳನ್ನು ಪರಿಶೀಲಿಸಿಕೊಂಡು ಬರಲು ಅಲ್ಲಿಗೆ ಪ್ರವಾಸ ಹೋಗುವರೆಂದು ಹೇಳಲಾಗಿದೆ.

ಶ್ರೀ ಎಲ್. ಎಸ್. ವಿ ರಾಮಯ್ಯರ್ ರವರಿಗೆ ಸತ್ಕಾರ

ಮೈಸೂರು ಬ್ಯಾಂಕಿನ ರಾಜಧಾನಿಯ ಶಾಖೆ ಮ್ಯಾನೇಜರಾದ ಶ್ರೀ ಎಲ್ ಎಸ್ ವಿ. ರಾಮಯ್ಯರ್‌ರವರ ಗೌರವಾರ್ಥವಾಗಿ ನಗರದ ವರ್ತಕರಾದ ಶ್ರೀ ಇ. ಪಿ ನಂಜಪ್ಪನವರು ದಾಸಪ್ರಕಾಶ ಭವನದಲ್ಲಿ ಸತ್ಕಾರ ಕೂಟವೊಂದನ್ನು ನೆನ್ನೆ ಏರ್ಪಡಿಸಿದ್ದರು. ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಉಪಾಹಾರಾನಂತರ ಶ್ರೀ ಮಾಯಿಗ ಗೌಡರಿಂದ ಭಾರತವಾಚನವು ನಡೆಯಿತು. ಶ್ರೀ ಇ. ಪಿ. ನಂಜಪ್ಪನವರು ಶ್ರೀ ರಾಮಯ್ಯರ್‌ರವರ ಗುಣಗಾನ ಮಾಡಿ, ಅವರಿಂದ ಬ್ಯಾಂಕಿಗೂ ಸಾರ್ವಜನಿಕರಿಗೂ ಆಗಿರುವ ಸೇವೆಯನ್ನು ಪ್ರಶಂಸಿಸಿದರು. ಹೊಸ ಮ್ಯಾನೇಜರಾದ ಶ್ರೀ ವೀರಭದ್ರಶೆಟ್ಟಿಯವರನ್ನು ಅವರು ಸ್ವಾಗತಿಸಿ ಅವರಿಗೆ ಶುಭಾಶಯಗಳನ್ನು ಕೋರಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಖ್ಯ ಅತಿಥಿಗಳು ನಿವೃತ್ತಿ ಕಾಲದಲ್ಲೂ ಸಹ ತಮ್ಮ ಅನುಭವವನ್ನು ಸಾರ್ವಜನಿಕರಿಗೆ ದೊರಕಿಸಿ ಕೊಡಬೇಕೆಂದು ಹಾರೈಸಿದರು.

ಶ್ರೀ ರಾಮಯ್ಯರ್‌ರವರೂ, ಶ್ರೀ ವೀರಭದ್ರಶೆಟ್ಟರೂ ಸೂಕ್ತ ಉತ್ತರವಿತ್ತು, ಶ್ರೀ ನಂಜಪ್ಪನವರಿಗೆ ಕೃತಜ್ಞತೆಯನ್ನು ಸೂಚಿಸಿದರು.

ಮಧ್ಯ ಏಷ್ಯದ ಗುಡ್ಡಗಾಡು ಜನರಿಗೆ ಸ್ವಪ್ರಭುತ್ವಾಧಿಕಾರ

ಮಧ್ಯ ಏಷ್ಯದ ಸುಮಾರು ನಾಲ್ಕು ಕೋಟಿ ಗುಡ್ಡಗಾಡು ಜನರಿಗೆ ಸ್ವಪ್ರಭುತ್ವಾಧಿಕಾರದ ವ್ಯವಸ್ಥೆಯನ್ನು ಕಲ್ಪಿಸುವ ಬಗ್ಗೆ ಚೀನಾದ ಜನತಾ ಸರ್ಕಾರವು ರಷ್ಯದ ಮಾದರಿಯಲ್ಲಿ ಒಂದು ಯೋಜನೆಯನ್ನು ತಯಾರಿಸಲಿದೆಯೆಂದು ಹೇಳಲಾಗಿದೆ. ಭಾರತ ಮತ್ತು ಬರ್ಮಾಗಳ ಉತ್ತರ ಗಡಿ ಪ್ರದೇಶದಲ್ಲಿರುವ ಟಿಬೆಟ್ ಮೊದಲಾದ ಕಡೆಗಳಲ್ಲೂ ಈ ವ್ಯವಸ್ಥೆಯು ಜಾರಿಗೆ ಬರುವುದೆಂದು ಹೇಳಲಾಗಿದೆ. ಏಷ್ಯಾಕ್ಕೆ ಸ್ಟಾಲಿನ್ ಯೋಜನೆಯ ಅಂಗವಾಗಿ ಈ ವ್ಯವಸ್ಥೆಯನ್ನು ಮಾಡಲಾಗುವುದು.

ರೈಲಿಗೆ ಸಿಕ್ಕಿ ಆನೆಯ ಮರಣ

ಬೇಲಾಪುರ ಮತ್ತು ವಿರಾಜನಗರಗಳ ನಡುವೆ ರೈಲು ರಸ್ತೆಯಲ್ಲಿ ಕಳೆದ ಭಾನುವಾರ ನಾಗಪುರ-ಹೌರಾ ರೈಲು ಹೋಗುತ್ತಿದ್ದಾಗ ಆನೆಯೊಂದು ಅಡ್ಡವಾಗಿ ಬಂದ ಪ್ರಯುಕ್ತ ಢಿಕ್ಕಿ ಹೊಡೆದು ಅದು ಮಡಿಯಿತೆಂದು ವರದಿಯಾಗಿದೆ.

ಬಿ. ಎಸ್‌ಸಿ. ಡಿಗ್ರಿ ತರಗತಿಯ ಆರಂಭೋತ್ಸವ

ಸಂಸ್ಥಾನದ ವಿದ್ಯಾ ಸಚಿವ ಶ್ರೀ ಎ ಜಿ ರಾಮಚಂದ್ರರಾಯರು ನಾಳಿದ್ದು ಬೆಳಗ್ಗೆ ೧೦ ಘಂಟೆಗೆ ಮೈಸೂರು ಶಾರದಾವಿಲಾಸ ಕಾಲೇಜಿನಲ್ಲಿ ಬಿ ಎಸ್‌ಸಿ ಡಿಗ್ರಿ ಪ್ರಥಮ ತರಗತಿಯ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಸಮಾಜ ಸೇವಾ ಸಂಘದ ಸ್ಥಾಪನೆ

ಮಹಾರಾಜಾ ಕಾಲೇಜಿನ ಹಲವು ವಿದ್ಯಾರ್ಥಿಗಳು ರಚನಾತ್ಮಕ ಕೆಲಸಗಳನ್ನು ನಡೆಸುವ ಧ್ಯೇಯವುಳ್ಳವರಾಗಿ ಕಳೆದ ೨೦ ನೇ ತಾ॥ ಕಾಲೇಜಿನಲ್ಲಿ ಸಭೆ ಸೇರಿ, ಸಮಾಜ ಸೇವಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಪ್ರಿನ್ಸಿಪಾಲರಾದ ಶ್ರೀ ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು. ತರ್ಕ ಶಾಸ್ತ್ರ ಉಪಾಧ್ಯಾಯರಾದ ಶ್ರೀ ಎಂ ಯಾಮುನಾಚಾರ್ಯರು ಸಂಘದ ಧ್ಯೇಯಗಳನ್ನು ವಿವರಿಸಿದರು. ನಂತರ ಅಧಿಕಾರ ವರ್ಗಕ್ಕೆ ಶ್ರೀ ಎಸ್ ವಿ. ರಂಗಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಎ. ವಿ ರಾಮಚಂದ್ರ ಮತ್ತು ಶ್ರೀ ಬಿ. ಕೆ. ನಾರಾಯಣ್‌ರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಮೈಸೂರು ಪ್ರಭುಗಳಿಂದ ಸಮ್ಮೇಳನದ ಆರಂಭ

ಉಡುಪಿ ೨೮

ಬರುವ ನವೆಂಬರ್ ತಿಂಗಳು ೧೬ ನೇ ತಾ॥ ಸೇರುವ ಅಖಿಲ ಭಾರತ ಮಾಧ್ವ ತತ್ವ ಜ್ಞಾನ ಸಮ್ಮೇಳನದ ಪ್ರಾರಂಭೋತ್ಸವವನ್ನು ಮದ್ರಾಸಿನ ಗೌರ್ನರರಾದ ಶ್ರೀ ಶ್ರೀಪ್ರಕಾಶರವರೂ, ಅದೇ ತಿಂಗಳು ೧೮ ನೇ ತಾ॥ ನಡೆಯುವ ಮಾಧ್ವ ಪೀಠಾಧಿಪತಿ ಸಮ್ಮೇಳನದ ಆರಂಭೋತ್ಸವವನ್ನು ಮೈಸೂರಿನ ಶ್ರೀಮನ್ಮಹಾರಾಜರವರೂ ನೆರವೇರಿಸಲಿರುವರೆಂದು ತಿಳಿದುಬಂದಿದೆ.

ಭಾರತ ಮತ್ತು ಟಿಬೆಟ್ ಗಡಿಯಲ್ಲಿ ೨ ಲಕ್ಷ ಚೀನಾ ಸೈನ್ಯ

ಭಾರತ ಮತ್ತು ಟಿಬೆಟ್ ಗಡಿಯಲ್ಲಿ ೨ ಲಕ್ಷ ಮಂದಿ ಶಸ್ತ್ರಸಜ್ಜಿತ ಭಾರಿ ಸೇನೆಯೊಂದನ್ನಿಡಲು ಚೀನಾ ಕಮ್ಯೂನಿಸ್ಟರು ಏರ್ಪಾಟು ಮಾಡಿರುವರೆಂದು ಒಂದು ವರದಿಯು ತಿಳಿಸುತ್ತದೆ.

ತೃತೀಯ ಮಹಾ ಯುದ್ಧ ನಡೆಯುವುದಿಲ್ಲ

ಅಮೆರಿಕದ ಪ್ರಖ್ಯಾತ ಪತ್ರಿಕೋದ್ಯೋಗಿಯಾದ ಲೂಯಿ ಫಿಷರ್‌ರವರು ತೃತೀಯ ಪ್ರಪಂಚ ಯುದ್ಧವು ನಡೆಯುವ ಸಂಭವವೇ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ತೋಪುಗಳು ತಾವಾಗಿಯೇ ಗುಂಡು ಹಾರಿಸುವುದಿಲ್ಲವೆಂದೂ, ಸರ್ಕಾರಗಳೇ ಯುದ್ಧಕ್ಕೆ ಪ್ರವೇಶಿಸುವವೆಂದೂ, ಆದರೆ ಈಗಿನ ಅಣು ಶಕ್ತಿಯ ಆಯುಧಗಳ ಯುದ್ಧದಲ್ಲಿ ಯಾರಿಗೆ ಗೆಲುವಾಗುವುದೆಂಬ ಬಗ್ಗೆ ಭೀತಿಯು ಸರ್ಕಾರಗಳಿಗೆ ಬಂದಿರುವುದರಿಂದ ಮತ್ತೊಂದು ಯುದ್ಧವು ನಡೆಯುವ ಸಂಭವವಿಲ್ಲವೆಂದೂ ಅವರು ನುಡಿದಿರುವರು.

ಪರಕೆಯಿಂದ ಹೊಡೆದುದಕ್ಕೆ ಜುಲ್ಮಾನೆ

ರಾಜಧಾನಿಯ ಕೆ.ಆರ್. ಮೊಹಲ್ಲಾದಲ್ಲಿರುವ ಅಂಗಡಿ ನಾರಾಯಣಮ್ಮ ಎಂಬಾಕೆಯು ಟೈಲರ್ ಎಂ. ವಿ. ಶ್ರೀನಿವಾಸರಾವ್ ಎಂಬುವರನ್ನು ೧೭-೧-೫೨ರಲ್ಲಿ ಪರಬರಿಗೆಯಿಂದ ಹೊಡೆದುದಕ್ಕಾಗಿ ಈ ದಿನ ಅಪಾದಿತಳು ೩೦ ರೂ ಜುಲ್ಮಾನೆ ತಪ್ಪಿದರೆ, ೧೦ ದಿನ ಸಾದಾ ಸಜಾ ಶಿಕ್ಷೆಗೆ ಗುರಿಯಾಗಿರುತ್ತಾಳೆ.

ಶ್ರೀ ಶಾರದಾ ಸ್ಟೋರ್ಸ್

ಕನ್ನೇಗೌಡನ ಕೊಪ್ಪಲಿನಲ್ಲಿ ಶ್ರೀ ಎಗ. ಎಸ್. ನಾರಾಯಣ ಸ್ವಾಮಿಯವರು ತೆರೆದಿರುವ ಶ್ರೀ ಶಾರದಾ ಸ್ಟೋರ್ಸ್ ಎಂಬ ದಿನಸಿ ಅಂಗಡಿಯ ಆರಂಭೋತ್ಸವವನ್ನು ನಗರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿ ರಾಯರು ಮೊನ್ನೆ ಸಂಜೆ ನೆರವೇರಿಸಿದರು. ಶ್ರೀ ಎಂ ಆರ್. ಸಿ ಬಸಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಿ ಶ್ರೀಕಂಠಪ್ಪ, ಕೆ. ಪಿ. ಶಾಂತಮೂರ್ತಿ, ಎಸ್. ಅನಂತಶೆಟ್ಟಿ, ಗಂಗಾಧರಮೂರ್ತಿ ಮತ್ತು ಬಸವೇಗೌಡರು ಭಾಷಣ ಮಾಡಿ, ನಾರಾಯಣಸ್ವಾಮಿಯವರಿಗೆ ಅವರ ಹೊಸ ಉದ್ಯಮದಲ್ಲಿ ಯಶಸ್ಸನ್ನು ಕೋರಿದರು.

ಮಾಜಿ ದೊರೆ ಫರೂಕರ ಅತುಲೈಶ್ವರ್ಯ

ಈಜಿಪ್ಟಿನ ಮಾಜಿ ದೊರೆ ಫರೂಕರು ಕೈರೋವಿನ ಅರಮನೆಯಲ್ಲಿ ತಮ್ಮ ಉಪಭೋಗಕ್ಕಾಗಿ ಇಟ್ಟುಕೊಂಡಿದ್ದ ವಸ್ತುಗಳನ್ನು ಇತ್ತೀಚೆಗೆ ವಿದೇಶೀ ಪತ್ರಿಕಾ ಪ್ರತಿನಿಧಿಗಳಿಗಾಗಿ ಪ್ರದರ್ಶಿಸಲಾಗಿದೆ. ಒಂದು ಕೊಠಡಿಯಲ್ಲಿ ಫರೂಕರು ಧರಿಸುತ್ತಿದ್ದ ೨ ಸಾವಿರ ರೇಷ್ಮೆ ಷರಟುಗಳು, ೧೫೦೦ ರೇಷ್ಮೆ ಟೈಗಳು ಮತ್ತು ೩೦ ಜೊತೆ ಸ್ಟೈಲರ್ ಸ್ಲಿಪ್ಪರುಗಳಿದ್ದುವು. ಅತ್ಯಂತ ಬೆಲೆಯುಳ್ಳ ೫೦ ಪ್ಯಾರಿಸ್ ಸುಗಂಧ ದ್ರವ್ಯಗಳ ಪೆಟ್ಟಿಗೆಗಳಿದ್ದುವು. ಯುವತಿಯರ ಚಿತ್ರಗಳಿಗಾಗಿಯೇ ಒಂದು ಕೊಠಡಿಯು ಮೀಸಲಾಗಿದ್ದಿತು. ಅವರ ಪುಸ್ತಕ ಶಾಲೆಯಲ್ಲಿ ಹಿಟ್ಲರನ ರುಜುವಿದ್ದ ಅವನ ಚಿತ್ರಗಳೂ ಹಿಟ್ಲರನ ಪ್ರತಿಮೆಯೂ ಇದ್ದುವು. ಅವರು ತೊಟ್ಟು ಬಿಟ್ಟು ಹೋಗಿದ್ದ ವಸ್ತ್ರಗಳಿಂದ ಒಂದು ಭಾರಿ ಬಟ್ಟೆ ಅಂಗಡಿಯನ್ನೇ ತೆರೆಯಬಹುದಾಗಿತ್ತು. ಫರೂಕರು ಆಗಾಗ್ಗೆ ಭೇಟಿ ಕೊಡುತ್ತಿದ್ದ ಕೈರೋ ನಗರಗಳಲ್ಲಿರುವ ಹೊಟೇಲು ಮತ್ತು ಗೃಹಗಳ ಕೊಠಡಿಗಳ ಬೀಗದಕ್ಕೆಗಳನ್ನು ನೋಡಿಕೊಳ್ಳಲು ಇಬ್ಬರು ಗುಮಾಸ್ತರಿದ್ದರು.

ಪ್ರೇಮದ ಪ್ರಸಂಗಗಳಿಗಾಗಿ ಫರೂಕರು ಬಹಳ ಹಣವನ್ನು ವ್ಯಯ ಮಾಡುತ್ತಿದ್ದರು. ಅವರ ಅರಮನೆಯಲ್ಲಿ ೨೦೦೦ ಗಲೀಟಿನ ಕುರ್ಚಿಗಳಿದ್ದುವು.

ಫರೂಕರು ಸಿಂಹಾಸನ ತ್ಯಾಗ ಮಾಡುವುದಕ್ಕೆ ಸ್ವಲ್ಪ ದಿನಗಳ ಮುಂಚೆ ಪ್ಯಾರಿಸ್ಸಿನಿಂದ ಸ್ನಾನದಲ್ಲಿ ತೊಡಗಿದ್ದ ಸ್ತ್ರೀಯರ ಚಿತ್ರಗಳನ್ನು ತೋರಿಸುವ ಮ್ಯಾಜಿಕ್ ಲ್ಯಾಂಟರನ್ನುಗಳು ಬಂದಿದ್ದುವು.

ಫರೂಕರ ದಿವಾನಖಾನೆಯಲ್ಲಿ ಗಳ ಕಾಗದ ಕತ್ತರಿಸುವ ಚಾಕುಗಳಿದ್ದುವು. ಅವುಗಳ ಹಿಡಿಗಳ ಮೇಲೆ ವಜ್ರಗಳನ್ನು ಕೆತ್ತಲಾಗಿತ್ತು. ಚಿನ್ನದಿಂದ ಮಾಡಿದ ೪ ಭಾರಿ ಕಾಯಿ ಕುಡಿಕೆಗಳಿದ್ದುವು. ೪ ಡ್ರಾಯರುಗಳು ತುಂಬುವಷ್ಟು ಚಿನ್ನದ ಫೌಂಟೇನ್ ಪೆನ್ನುಗಳಿದ್ದುವು.

ಫರೂಕರ ಹಾಸಿಗೆಯಿಂದ ಸ್ವಲ್ಪ ದೂರದಲ್ಲಿ ಒಂದು ಸಂಚಾರದ ಸಿನಿಮಾ ಏರ್ಪಾಡಾಗಿತ್ತು. ಮಲಗಿಕೊಂಡಿದ್ದ ಮನುಷ್ಯನೊಬ್ಬನೇ ಸಿನಿಮಾ ಚಿತ್ರವನ್ನು ಪ್ರದರ್ಶಿಸಿ, ನೋಡುವಂತೆ ಅದನ್ನು ಸಜ್ಜುಗೊಳಿಸಲಾಗಿತ್ತು.

ಫರೂಕರ ಬಳಿ ಒಂದು ದೊಡ್ಡ ಗೂಡಿನಲ್ಲಿರುವಷ್ಟು ಭೂತಕನ್ನಡಿಗಳಿದ್ದವು. ಅಲ್ಲಿನ ಸೈನ್ಯದ ಬಹು ಭಾಗಗಳಿಗೆ ಅವುಗಳನ್ನು ಒದಗಿಸಬಹುದಾಗಿತ್ತು.

ಅವರ ಬಳಿ ಚಿನ್ನ ಮತ್ತು ವಜ್ರದ ಕೈಕೋಲುಗಳಿದ್ದುವು. ಅವರ ಆಟದ ಪಗಡೆಯ ದಾಳಗಳು ವಜ್ರಗಳಿಂದ ಅಲಂಕೃತವಾಗಿದ್ದುವು.

೪೦೦ ಜನ ತೋಟದ ಆಳುಗಳಿರುವ ಅವರ ಉದ್ಯಾನ ವನದಲ್ಲಿ ನರ್ತಕಿಯರ ಸ್ವರೂಪವುಳ್ಳ ನೂರಾರು ಗಾಜಿನ ಪ್ರತಿಮೆಗಳಿದ್ದುವು.

ಅರಮನೆಯ ಒಂದು ಕಡೆ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಪ್ರಪಂಚದ ಎಲ್ಲ ಕಡೆಗಳಲ್ಲಿರುವ ಚಿನ್ನದ ನಾಣ್ಯಗಳನ್ನು ಶೇಖರಿಸಲಾಗಿದ್ದಿತು.

೨೦೦ ಮೋಟಾರು ಗಾಡಿಗಳು ಅವರ ಸ್ವಂತ ಉಪಯೋಗಕ್ಕಾಗಿಯೇ ಇದ್ದುವು.

ಮೊಣಕಾಲು ಮೂಲಕ ಮಗುವಿಗೆ ಆಹಾರ

ಇಂಗ್ಲೆಂಡಿನ ಹಿಲ್ಲಿಂಗ್ಡನ್ ಎಂಬ ಊರಿನಲ್ಲಿ ಜನಿಸಿರುವ ಮಗುವೊಂದಕ್ಕೆ ಮೊಣಕಾಲಿನಲ್ಲಿ ರಂಧ್ರ ಮಾಡಿ ಅದರ ಮೂಲಕ ಆಹಾರವನ್ನು ಕೊಡಲಾಗುತ್ತಿರುವುದೆಂದು ವರದಿಯಾಗಿದೆ. ಮಗುವು ಹುಟ್ಟಿದಾಗ ಅದರ ಅನ್ನನಾಳ ಮತ್ತು ಶ್ವಾಸನಾಳಗಳು ಒಟ್ಟಿಗೆ ಸೇರಿ, ಅವನ್ನು ಸರಿಪಡಿಸಲು ಶಸ್ತ್ರ ಚಿಕಿತ್ಸೆ ನಡೆಸಲಾಗಿತ್ತು. ಅದಕ್ಕಾಗಿ ಆಹಾರವನ್ನು ಆ ರೀತಿ ಕೊಡಲಾಗುತ್ತಿದೆ.

ಚಲನಚಿತ್ರ ಪ್ರೇಮಿಗಳ ಸಭೆ

ಮೈಸೂರು ಸಂಸ್ಥಾನದ ಚಲನಚಿತ್ರ ಪ್ರೇಮಿಗಳ ಸಂಘದ ಸಭೆಯೊಂದು ಇದೇ ೩೧ ನೇ ತಾ|| ಸಂಜೆ ೫ ಗಂಟೆಗೆ ಬೆಂಗಳೂರಿನ ಚಿತ್ರ ಸಮಾಚಾರ ಪತ್ರಿಕಾ ಕಛೇರಿಯಲ್ಲಿ ಸೇರುವುದು. "ಶ್ರೀನಿವಾಸ ಕಲ್ಯಾಣ' ಎಂಬ ಕನ್ನಡ ಚಲನಚಿತ್ರದ ಬಗ್ಗೆ ವಿಮರ್ಶಾತ್ಮಕ ಚರ್ಚೆಯು ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಕೂಟದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ಸಭೆಗೆ ಬರಲು ಅನಾನುಕೂಲವಿರುವ ಹೊರ ಊರುಗಳ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿಸಬಹುದೆಂದೂ ತಿಳಿಸಲಾಗಿದೆ.

ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ವಾರ್ಷಿಕೋತ್ಸವ

ರಾಜಧಾನಿಯ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಏಳನೆಯ ವಾರ್ಷಿಕೋತ್ಸವವು ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಾಳೆ ಸಂಜೆ ೬ ಘಂಟೆಗೆ ನಡೆಯುವುದು. ವಿದ್ಯಾಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು.

ಗಣಪತಿ ಮಹೋತ್ಸವ

ರಾಜಧಾನಿಯ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಆ|| ವಿ|| ಚಂದ್ರಶೇಖರಯ್ಯನವರ ಸಂಗೀತವೂ, ನಾಳಿದ್ದು ಗಣಪತಿಯ ಉದ್ವಾಸನೆ ಮತ್ತು ಮೆರವಣಿಗೆಯೂ ನಡೆಯುವುವು.

ಸೈಯದ್ ರಾಯ್ ರಸ್ತೆಯಲ್ಲಿರುವ ಬೆಟ್ಟದಪುರದ ಚಿಕ್ಕ ವೀರದೇಶಿಕೇಂದ್ರ ಸ್ವಾಮಿಯವರ ವಿದ್ಯಾರ್ಥಿ ನಿಲಯದಲ್ಲಿ ನೆನ್ನೆ ಸಂಜೆ ಗಣಪತಿ ಮಂಗಳಾರತಿಯು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ರಾಜಧಾನಿಯ ವಿದ್ಯುಚ್ಛಕ್ತಿ ನೆಯ್ಗೆ ಕಾರ್ಮಿಕರ ಸಂಘದ ಕಛೇರಿಯಲ್ಲಿ ಮೊನ್ನೆ ಮಹಾ ಗಣಪತಿ ಮಂಗಳಾರತಿಯು ನಡೆಯಿತು. ಶ್ರೀ ಎಂ ಎ ನಾಗಪ್ಪ ಮತ್ತು ಪಾರ್ಟಿಯವರಿಂದ ಸ್ಯಾಕ್ಸೋಫೋನ್ ವಾದನವು ಏರ್ಪಾಡಾಗಿದ್ದಿತು.

Edited, Printed and Published by A R Nagarajan at Sadhvi Press, D Subbiah Road, Mysore

ಪಾಕಿಸ್ಥಾನದ ಮುಸ್ಲಿಮೇತರರಿಗೆ ಶೇ|| ೨೪ ರಷ್ಟು ನೌಕರಿ

ಪೂರ್ವ ಪಾಕಿಸ್ಥಾನ ಸರ್ಕಾರದವರು ಪ್ರಾಂತೀಯ ಮತ್ತು ಕೆಳ ದರ್ಜೆ ನೌಕರಿಗಳಲ್ಲಿ ಮುಸ್ಲಿಮೇತರರಿಗೆ ಶೇ|| ೨೪ ರಷ್ಟು ಸ್ಥಾನಗಳನ್ನು ಮೀಸಲಾಗಿಡುವಂತೆ ಸೂಚಿಸಿರುತ್ತಾರೆ. ಈ ಪೈಕಿ ಶೇ|| ೧೯ರಷ್ಟು ನಿಮ್ನ ವರ್ಗದವರಿಗೆ ಕಾದಿಡಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಚಿತ್ರಗೀತ, ರೆಕಾರ್ಡ ಕಾರ್ಯಕ್ರಮ. ಮಧ್ಯಾಹ್ನ ೨ ಬಾಲಜಗತ್ ಮಕ್ಕಳ ಕಾರ್ಯಕ್ರಮ. ಸಂಜೆ ೫ ೩೦ ಮತ್ತು ೭ ಪಿಟೀಲು ಟಿ ಎಸ್. ತಾತಾಚಾರ್ ೭ ೧೦ ಸಾವಿತ್ರೀ ರೆಕಾರ್ಡ ಕಾರ್ಯಕ್ರಮ ೭ ೩೦ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ೮ ಕಥಾ ಕಾಲಕ್ಷೇಪ ಎಚ್ ಕೆ ಅನಂತ ಪದ್ಮನಾಭ ೯ ಗಾಯನ ಕಛೇರಿ ವೆಂಕಟೇಶದೇವರು ಮೃದಂಗ, ಶೇಷಗಿರಿ ರಾವ್ ಖಂಜರಿ, ರಾಮ ಶಾಸ್ತ್ರಿ ಘಟಂ, ಗೋಪಾಲರಾವ್ ಕೊನೆಗೋಲು

ಪ್ರಭುದೇವಾ ಟಾಕೀಸ್
ಮೈಸೂರು
29—8—52 ನೇ ಶುಕ್ರವಾರದಿಂದ ಅನೋಖ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಕಿಶೋರ್ ಸಾಹುರವರ ಹಿಂದಿ ಚಿತ್ರ
ಶ್ರೀ ಕೃಷ್ಣ ಜನ್ಮಾಷ್ಟಮಿ
ಪಾತ್ರ ನಿರ್ಮಲಾ, ಶೋಭನಾ ಸಮರ್ಥ್, ಜೀವನ್ ಭಾರತ್ ಭೂಷಣ್, ರಾಜಕುಮಾರ್, ಶ್ಯಾಂಸುಂದರ್ ಅವಿನಾಶ್ ಮತ್ತು ಕರ್ನಾಟಕಿ ಕಾಂತ್ ಕುಮಾರ್

ಚಾಮುಂಡೇಶ್ವರಿ ಟಾಕೀಸ್
30-8-52 ನೇ ಶನಿವಾರದಿಂದ ಅನೋಖ ಪ್ರಾರಂಭ
ಜ್ಯುಪಿಟರ್ ನೂತನ ಸಾಮಾಜಿಕ ತಮಿಳು ಚಿತ್ರ
* ಜಮೀನ್ ದಾರ್ *
ತಾರಾಗಣ — ಮಾಧುರಿ ದೇವಿ, ಎಂ ವಿ ರಾಜಮ್ಮ, ಬಾಲಸುಬ್ರಹ್ಮಣ್ಯಂ, ನಟರಾಜ ಮುಂತಾದವರು

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

If You Like Pure & Best Coffee, Don't Forget To Come To
SRI CHAMUNDESWARI BHAVAN
Boarding, Lodging & Restaurant, Yelwal Road, Mysore
DRINK & ENJOY
OUR PURE AND HIGH-FLAVOURED
PLANTATION 'A' COFFEE
Taste Our Sweets Prepared From Pure Ghee and Delicious and Wholesome Meals
PORTABLE REMINGTON TYPEWRITERS
AVAILABLE FROM READY STOCK AT
C. B. General Stores :: Yelwal Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೩೦-೮-೧೯೫೨ [ಸಂಚಿಕೆ ೨೯

ಈ ಸಾರಿ ಎಂದಿನಂತೆ ಜಂಬೂಸವಾರಿ ಉತ್ಸವ

ಪತ್ನಿ, ಮಗುವಿನ ಕೊಲೆ ಮತ್ತು ಆತ್ಮಹತ್ಯಾ ಪ್ರಯತ್ನ

ಬೆಂಗಳೂರು ೨೦

ಇಲ್ಲಿನ ಸಿವಿಲ್ ಪ್ರದೇಶದಲ್ಲಿ ನೆನ್ನೆ ಕೆ ಮುನಿಸ್ವಾಮಪ್ಪ ಎಂಬುವನು ತನ್ನ ೧೬ ವರ್ಷದ ಪತ್ನಿ ಮತ್ತು ೩ ವರ್ಷದ ಮಗುವಿನ ಕುತ್ತಿಗೆ ಕತ್ತರಿಸಿ ಕೊಂದು, ತಾನೂ ಕತ್ತು ಕುಯ್ದುಕೊಂಡು ಆತ್ಮಹತ್ಯ ಮಾಡಿಕೊಳ್ಳಲೆತ್ನಿಸಿದನೆಂದು ವರದಿಯಾಗಿದೆ ಅವರಿದ್ದ ಮನೆಯಿಂದ ಒಂದು ವಿಧವಾದ ಧ್ವನಿ ಕೇಳಿ ಬರುತ್ತಿದ್ದುದನ್ನು ತಿಳಿದು, ಪೊಲೀಸರು ಬಾಗಿಲನ್ನು ಒಡೆದು ಒಳಗೆ ನೋಡಲಾಗಿ ಆ ಶವಗಳೂ, ಮುನಿಸ್ವಾಮಿಯೂ ಬಿದ್ದಿದ್ದುದು ಕಾಣಬಂದಿತು ಆತನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಅವನ ಜೀವಕ್ಕೆ ಅಪಾಯವಿಲ್ಲವೆಂದು ಹೇಳಲಾಗಿದೆ

ಮೈಸೂರು ಜಿಲ್ಲೆಯಲ್ಲಿ ಮುಖ್ಯ ಮಂತ್ರಿಯವರ ಪ್ರವಾಸ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸೆಪ್ಟೆಂಬರ್ ೭ನೇ ತಾ|| ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಹಲವು ಪ್ರದೇಶಗಳಿಗೆ ಭೇಟಿಯಾಗುವರು

ವಿಶ್ವ ವಿದ್ಯಾಲಯಕ್ಕೆ ಅಲ್ಬಿಯನ್ ಬ್ಯಾನರ್ಜಿಯವರ ೨೬೦೦೦ ರೂ

ಮೈಸೂರಿನ ಮಾಜಿ ದಿವಾನರಾಗಿದ್ದ ದಿವಂಗತ ಸರ್ ಅಲ್ಬಿಯನ್ ಬ್ಯಾನರ್ಜಿಯವರು ತಮ್ಮ ಆಸ್ತಿಯ ಮೂರನೇ ಒಂದು ಭಾಗವಾದ ಸುಮಾರು ೨೬೭೭೯ ರೂ ಗಳನ್ನು ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಬಿಟ್ಟುಹೋಗಿದ್ದಾರೆಂದು ಗೊತ್ತಾಗಿದೆ

ಸರ್ಕಾರಿ ನೌಕರರು ಕಾಲೇಜುಗಳಲ್ಲಿ ಓದಲು ರಜಾ ಪಡೆಯಬೇಕು

ರಜಾ ಪಡೆಯದೆ ಸರ್ಕಾರಿ ನೌಕರರು ಸಂಜೆ ಕಾಲೇಜುಗಳಲ್ಲಿ ಓದಲು ಅವಕಾಶ ಕೊಡಲಾಗುವುದಿಲ್ಲವೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ನ್ಯಾಯಾಂಗ ಮತ್ತು ಕಾಮರ್ಸ್ ಕಾಲೇಜುಗಳಲ್ಲಿ ಓದಲು ನೌಕರರುಗಳಿಗೆ ಅನುಮತಿಯನ್ನು ಹಿಂದೆ ಕೊಡಲಾಗಿತ್ತು

ದೆಹಲಿಗೆ ಮುಖ್ಯ ಮಂತ್ರಿಗಳು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬರುವ ೮ ನೇ ತಾ|| ದೆಹಲಿಗೆ ತೆರಳಿ ಅಲ್ಲಿಂದ ೧೧ ನೇ ತಾ|| ಹೈದರಾಬಾದಿಗೆ ಹೋಗಿ ಅಲ್ಲಿ ೧೩, ೧೪ ನೇ ತಾ|| ನಡೆಯುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಭಾಗವಹಿಸುವರು ಅವರು ೧೭ ನೇ ತಾ|| ಬೆಂಗಳೂರಿಗೆ ಬೊಂಬಾಯಿ ಮಾರ್ಗವಾಗಿ ವಾಪಸು ಬರುವರು

ಅಮೆರಿಕಕ್ಕೆ ಭಾರತದ ನಟ ನಟಿಯರು

ಅಮೆರಿಕದ ಸಿನಿಮಾ ಕೈಗಾರಿಕೆಯ ಪರಿಶೀಲನೆಗಾಗಿ ಭಾರತದ ಸಿನಿಮಾ ಕೈಗಾರಿಕೆಯ ೧೪ ಪ್ರತಿನಿಧಿಗಳು ಬರುವ ೫ ನೇ ತಾ|| ಅಲ್ಲಿಗೆ ತೆರಳಲಿರುವರು ಪ್ರಸಿದ್ಧ ವ್ಯಕ್ತಿ ರಾಜಕಪೂರ್, ನರ್ಗೀಸ್, ದುರ್ಗಾಖೋಟೆ, ಬಿನಾರಾಯ್, ಪ್ರೇಮ ನಾಥ್ ಅರುಂಧತಿ ಮುಖರ್ಜಿ ಮುಂತಾದ ನಟ ನಟಿಯರೂ, ಚಂದೂಲಾಲ್ ಷಾ, ನಿತಿನ್ ಬೋಸ್, ಬಿ ಎನ್ ಸರ್ಕಾರ್, ಕೆ ಸುಬ್ರಹ್ಮಣ್ಯಂ ಮುಂತಾದ ನಿರ್ಮಾಪಕರೂ ಇರುವರು

ಕಲ್ಕತ್ತದಲ್ಲಿ ಮಹಿಳಾ ದರೋಡೆಕಾರರು

ದಕ್ಷಿಣ ಕಲ್ಕತ್ತದ ವಾಟ್‌ಗಂಜಿನಲ್ಲಿ ನೆನ್ನೆ ಹಗಲು ಹೊತ್ತು ಇಬ್ಬರು ಶಸ್ತ್ರಸಜ್ಜಿತ ಸ್ತ್ರೀಯರು ಒಂದು ಮನೆಗೆ ನುಗ್ಗಿ ೨೦೦೦ ರೂ ಗಿಂತಲೂ ಹೆಚ್ಚು ಬೆಲೆ ಬಾಳುವ ಆಭರಣ ಮತ್ತು ಸೀರೆಗಳನ್ನು ದರೋಡೆ ಮಾಡಿಕೊಂಡು ಹೋದರೆಂದು ವರದಿಯಾಗಿದೆ ಗಂಡಸರು ಮನೆಯಲ್ಲಿಲ್ಲದಿರುವಾಗ ಈ ಸ್ತ್ರೀಯರು ಚಾಕುಗಳನ್ನು ಬಚ್ಚಿಟ್ಟುಕೊಂಡು ಮನೆ ಬಾಗಿಲುಗಳನ್ನು ತಟ್ಟಿ ಒಳಗೆ ನೋಡೋಣ ನೆ ಮನೆಯಲ್ಲಿರುವವರನ್ನು ಬೆದರಿಸಿ ತಮ್ಮ ಕಾರ್ಯವನ್ನು ಸಾಧಿಸಿ ಪರಾರಿಯಾಗುವರೆಂದು ಹೇಳಲಾಗಿದೆ

ಮದುವೆ ಖರ್ಚಿಗೆ ಹಣವಿಲ್ಲದೆ ತಾಯಿ ಮಕ್ಕಳ ಆತ್ಮಹತ್ಯೆ

ಉತ್ತರ ಪ್ರದೇಶದ ಭಾಗಿಯಾ ಎಂಬ ಹಳ್ಳಿಯ ಒಬ್ಬ ಗೃಹಸ್ಥನು ತನ್ನ ಹಿರಿಯ ಮಗಳ ಮದುವೆಯನ್ನು ನಿಶ್ಚಯಿಸಿದ ನಂತರ ಖರ್ಚಿಗೆ ಹಣವಿಲ್ಲದುದರಿಂದ ಗಂಡ ಹೆಂಡರಿಗೆ ಜಗಳವುಂಟಾಗಿ ಆತನು ತನ್ನ ಹೆಂಡತಿಯನ್ನು ಹೊಡೆದು ಮನೆ ಬಿಟ್ಟು ಹೊರಟುಹೋದನೆಂದೂ, ಗಂಡಸು ಮನೆಯಲ್ಲಿಲ್ಲದಾಗ ವರನು ತನ್ನ ಬಳಗದವರೊಡನೆ ಬಂದಿಳಿಯಲು ಆ ಗೃಹಸ್ಥನ ಹೆಂಡತಿ ಮತ್ತು ಇಬ್ಬರು ಹೆಣ್ಣು ಮಕ್ಕಳಿಗೆ ಏನು ಮಾಡಬೇಕೆಂದು ದಾರಿ ಕಾಣದೆ ಮೂವರೂ ನೀರಿಗೆ ಬಿದ್ದು ಪ್ರಾಣ ಬಿಡಲು ನಿರ್ಧರಿಸಿ ಹತ್ತಿರವಲ್ಲಿದ್ದ ಕೊಳಕ್ಕೆ ಬಿದ್ದರೆಂದೂ ವರದಿಯಾಗಿದೆ ಮದುವೆಯ ಹೆಣ್ಣನ್ನು ರಕ್ಷಿಸಲಾಯಿತೆಂದೂ ಇನ್ನಿಬ್ಬರು ಮೃತಪಟ್ಟರೆಂದೂ ಗೊತ್ತಾಗಿದೆ

ದಿನ ಒಂದಕ್ಕೆ ೨೦೦ ರೂ. ಸಂಪಾದಿಸುವ ಭಿಕ್ಷುಕರು

ಕ್ಲೀವ್‌ಲ್ಯಾಂಡಿನ ಒಬ್ಬ ಕುರುಡ ಮತ್ತು ಅವನ ಪತ್ನಿಯನ್ನು ಭಿಕ್ಷೆ ಬೇಡುತ್ತಿದ್ದುದಕ್ಕಾಗಿ ದಸ್ತಗಿರಿ ಮಾಡಿದಾಗ, ಅವರು ಬೇಸಿಗೆ ಕಾಲದಲ್ಲಿ ತಾವು ದಿನ ಒಂದಕ್ಕೆ ೨೦೦ ರೂ ನಂತೆ ಭಿಕ್ಷೆಯ ಮೂಲಕ ಸಂಪಾದಿಸಿ ಚಳಿಗಾಲದಲ್ಲಿ ಮನೆಯಲ್ಲಿಯೇ ಉಳಿಯುವುದಾಗಿ ತಿಳಿಸಿದರೆಂದು ಗೊತ್ತಾಗಿದೆ

ವೈದ್ಯರ ಪತ್ನಿಯಿಂದ ಆಸ್ಪತ್ರೆಯಲ್ಲಿ ಮಗುವಿನ ಕಳುವು

ದೆಹಲಿಯ ಆಸ್ಪತ್ರೆಯೊಂದರ ವೈದ್ಯರೊಬ್ಬರ ಹೆಂಡತಿಗೆ ಮಕ್ಕಳಿಲ್ಲದುದರಿಂದ ಪತಿಯು ಬೇರೆ ಮದುವೆಯಾಗಬಹುದೆಂಬ ಭೀತಿಯಿಂದ ಆಕೆಯು ಕೆಲವು ಕಾಲ ಗರ್ಭಿಣಿಯಂತೆ ತೋರ್ಪಡಿಸಿಕೊಂಡು ನಂತರ ಆಸ್ಪತ್ರೆಯಲ್ಲಿ ಜನಿಸಿದ ಒಂದು ಮಗುವನ್ನು ಅಪಹರಿಸಿದಳೆಂದೂ ಈ ಬಗ್ಗೆ ಮೊಕದ್ದಮೆ ನಡೆದು ನ್ಯಾಯಾಧೀಶರು ಆಕೆಯಲ್ಲಿ ಕರುಣೆಗೊಂಡು ಒಂದು ವರ್ಷಕಾಲ ಒಳ್ಳೆಯ ನಡತೆಯಿಂದ ಇರಲು ಮುಚ್ಚಳಿಕೆ ಪಡೆದುಕೊಂಡು ಖುಲಾಸೆ ಮಾಡಿದರೆಂದೂ ವರದಿಯಾಗಿದೆ

ಈಜಿಪ್ಟಿನ ಸಿಪಾಯಿ ಧೊರೆಗೆ ಜೀವನಾಂಶದ ಬೇಡಿಕೆ

ಮಾಜಿ ಧೊರೆ ಫರೂಕರ ಬಳಿ ಇರುವ ಏಳು ತಿಂಗಳಿನ ಮಗ, ಧೊರೆ ಫೌದ್‌ರವರ ಜೀವನ ನಿರ್ವಹಣೆಗಾಗಿ ಈಜಿಪ್ಟ್ ಸರ್ಕಾರವು ಹಣವನ್ನು ಕೊಡುವಂತೆ ಫರೂಕರು ಕೇಳಿರುತ್ತಾರೆ

ಸಾಬೂನು ಕಾರ್ಖಾನೆಗಳ ಕೆಲಸಗಾರರ ಸಂಘ

ಮೈಸೂರು ನಗರದ ಸಾಬೂನು ಕಾರ್ಖಾನೆಗಳ ಕೆಲಸಗಾರರ ಸಭೆಯು ನೆನ್ನೆ ಕೃಷ್ಣರಾಜೇಂದ್ರ ಹತ್ತಿಗಿರಣಿ ಕಾರ್ಮಿಕರ ಸಂಘದ ಕಟ್ಟಡದಲ್ಲಿ ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು ಸಾಬೂನು ಕಾರ್ಮಿಕರುಗಳ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು ಅದಕ್ಕೆ ನಗರ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಕೆ ಎಸ್ ಸೂರ್ಯನಾರಾಯಣ ರಾಯರು ಅಧ್ಯಕ್ಷರಾಗಿಯೂ, ಎನ್ ನಂಜಪ್ಪನವರು ಉಪಾಧ್ಯಕ್ಷರಾಗಿಯೂ, ಸೈಯದ್ ಮಸೂದ್‌ರವರು ಕಾರ್ಯದರ್ಶಿಯವರಾಗಿಯೂ ಆರಿಸಲ್ಪಟ್ಟರು ಶ್ರೀಗಳಾದ ಎಲ್ ರಾಮಯ್ಯ, ಕೆ ಪುಟ್ಟಸ್ವಾಮಿ ಮುಂತಾದವರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು ನಗರದ ರಾಜಾ ಸೋಪು ಕಾರ್ಖಾನೆಯವರು ಕೆಲಸಗಾರರಿಗೆ ಕೊಡುತ್ತಿರುವ ತೊಂದರೆಯ ಬಗ್ಗೆ ಕಾರ್ಮಿಕ ಅಧಿಕಾರಿಗಳ ಗಮನವನ್ನು ಸೆಳೆಯಬೇಕೆಂದು ತೀರ್ಮಾನಿಸಲಾಯಿತು

ಈ ಸಾರಿ ನವರಾತ್ರಿಯಲ್ಲಿ ಹೊಸ ಕಾರ್ಯಕ್ರಮ

ದರ್ಬಾರ್ ಬದಲು ರಾಜಸಭೆ

ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿಯವರ ವಿವರಣೆ

(ಸ್ವಂತ ಫೋನ್] ಬೆಂಗಳೂರು ೨೦

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ಈ ಸಾರಿ ನವರಾತ್ರಿ ಕಾಲದಲ್ಲಿ ಮೈಸೂರಿನ ಅರಮನೆಯಲ್ಲಿ ಉತ್ಸವಗಳನ್ನು ಹೊಸ ರೀತಿಯಲ್ಲಿ ನಡೆಸಲಾಗುವುದೆಂದು ತಿಳಿಸಿದರು ದರ್ಬಾರು ಬದಲು ರಾಜಸಭೆಯೊಂದನ್ನು ಏರ್ಪಡಿಸಿ, ಅದರಲ್ಲಿ ವಿದ್ಯಾವಂತರು, ವಿಜ್ಞಾನಿಗಳು, ಲಲಿತ ಕಲಾ ಪ್ರವೀಣರು ಭಾಗವಹಿಸುವಂತೆ ಮಾಡಲಾಗುವುದು ಕನ್ನಡ ಗದ್ಯ, ಪದ್ಯ, ಹಾಸ್ಯ ಲಾವಣಿ, ಭಾರತ ವಾಚನ, ಸಂಗೀತ, ಚಿತ್ರ ಬರೆಯುವುದು, ಭರತ ನಾಟ್ಯ, ಸಮಾಜ ಸೇವೆ, ದಾನ ಧರ್ಮ ಮುಂತಾದುವುಗಳಲ್ಲಿ ಖ್ಯಾತಿ ಪಡೆದಿರುವವರಿಗೆ ಬಹುಮಾನ ಕೊಡುವ ವ್ಯವಸ್ಥೆಯಾಗಿದೆ ಅವುಗಳಿಗಾಗಿ ಒಂದೊಂದು ಉಪಸಮಿತಿಯನ್ನು ರಚಿಸಲಾಗುವುದು

ದಸರಾ ಉತ್ಸವದಲ್ಲಿ ೪-೫ ಜನ ಮುಖ್ಯ ಅತಿಥಿಗಳಿಗೆ ಮಾತ್ರ ಆಹ್ವಾನವಿರುವುದು ಸ್ವಂತ ವೆಚ್ಚದಿಂದ ಬರುವ ಹಲವರನ್ನು ರಾಜ ಸಭೆಗೆ ಆಹ್ವಾನಿಸಲಾಗುವುದು ದಸರಾ ಉತ್ಸವಕ್ಕಾಗಿ ೫೦ ಸಾವಿರ ರೂ ಗಳನ್ನು ತೆಗೆದಿಡಲಾಗಿದೆ ಹೆಚ್ಚು ವೆಚ್ಚಕ್ಕೂ ಸರ್ಕಾರದವರು ಸಿದ್ಧರಿರುವರು ಈ ಸಾರಿ ಜಂಬೂ ಸವಾರಿಯು ಮಾಮೂಲಿನಂತೆ ಮಿಲಿಟರಿಯವರ ಸಹಕಾರದಿಂದ ನಡೆಯುವುದು ಈ ಎಲ್ಲ ಕಾರ್ಯಕ್ರಮಗಳ ಬಗ್ಗೆ ಶ್ರೀಮನ್ಮಹಾರಾಜರೊಡನೆ ಚರ್ಚಿಸಿ ಸರ್ಕಾರದವರು ಅವರ ಅನುಮತಿ ಪಡೆದಿರುವರು ದಸರಾ ಉತ್ಸವವು ರಾಷ್ಟ್ರೀಯ ಹಬ್ಬವೆಂದು ಸರ್ಕಾರದವರು ಭಾವಿಸಿರುವರು

೨೬ ನೇ ತಾ|| ವಿದ್ಯಾ ಸುಧಾರಣಾ ಸಮಿತಿ ಸಭೆ

ಬರುವ ೨೬ ನೇ ತಾ|| ವಿದ್ಯಾ ಸುಧಾರಣಾ ಸಮಿತಿಯ ಸಭೆಯು ರಾಜಧಾನಿಯಲ್ಲಿ ನಡೆಯುವುದು ಅದರ ಪ್ರಾರಂಭೋತ್ಸವವನ್ನು ಮುಖ್ಯ ಮಂತ್ರಿಯವರು ನೆರವೇರಿಸುವರು ಡಾ|| ರಾಧಾಕೃಷ್ಣನ್ ಮತ್ತು ರೆಡ್ಡಿಯವರ ವರದಿಗಳ ಮುಖ್ಯವಾದ ಅಂಶಗಳ ಬಗ್ಗೆ ಸಮಿತಿಯವರು ತಮ್ಮ ವರದಿಯನ್ನು ಡಾ|| ರಾಧಾಕೃಷ್ಣನ್‌ರವರ ಒಪ್ಪಿಗೆಗಾಗಿ ಕಳುಹಿಸಲಿರುವರು

ಭಾರತ ಸೇವಾದಳದ ಸರ್ವ ಸದಸ್ಯರ ಸಭೆ

ಭಾರತ ಸೇವಾದಳದ ಸಕಲ ಸದಸ್ಯರ ಸಭೆಯನ್ನು ಬೆಂಗಳೂರಿನಲ್ಲಿ ಬರುವ ಅಕ್ಟೋಬರ್ ೧೨ ರಂದು ನಡೆಸಲಾಗುವುದು ಸೇವಾ ದಳದ ಅಂಗ ರಚನೆ ತಿದ್ದುಪಡಿಗಳನ್ನು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಂ ೧ ನೆಹರೂ ನಗರ ಬೆಂಗಳೂರು ೩ ಈ ವಿಳಾಸಕ್ಕೆ ಬರೆದು ಕಳುಹಿಸಬಹುದೆಂದು ತಿಳಿಸಲಾಗಿದೆ ಸಕಲ ಸದಸ್ಯರ ಸಭೆಗೆ ಸೇವಾದಳದ ಸ್ಥಾಪಕರಾದ ಡಾ|| ಎನ್ ಎಸ್ ಹರ್ಡೀಕರರು ಆಗಮಿಸುವರು

ಸ್ತ್ರೀಯರಿಂದ ಪುರುಷರ ಅನುಕರಣೆ ಬೇಡ

ಎಲ್ಲ ವಿಷಯಗಳಲ್ಲೂ ಸ್ತ್ರೀಯರು ಪುರುಷರನ್ನು ಅನುಕರಿಸಕೂಡದೆಂದೂ, ಗಂಡಸರಂತೆ ಸ್ತ್ರೀಯರು ಉಡುಪು ಧರಿಸಿ, ಅದೇ ರೀತಿಯಲ್ಲಿ ಧೂಮಪಾನ ಮಾಡುವುದಲ್ಲದೆ, ಕೂದಲುಗಳನ್ನು ಕತ್ತರಿಸಿಕೊಳ್ಳುತ್ತಿರುವುದನ್ನು ತಾವು ನೋಡಿರುವುದಾಗಿಯೂ ಭಾರತದ ಉಪಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರವರು ತಿಳಿಸಿ, ಇದರಿಂದ ಗಂಡಸರು ಮತ್ತು ಹೆಂಗಸರ ವಿಂಗಡಣೆಯೇ ಕಷ್ಟಕರವಾಗಿ ಪರಿಣಮಿಸಿದೆಯೆಂದು ಹೇಳಿರುತ್ತಾರೆ

ಕರ್ನಾಟಕ ಸಂಘಕ್ಕೆ ಪೌರಸಭೆಯ ಸಹಾಯ

ನಂಜನಗೂಡಿನ ಕರ್ನಾಟಕ ಸಂಘದ ಅಭಿವೃದ್ಧಿಗಾಗಿಯೂ, ಅಲ್ಲಿನ ಪೌರರಿಗೆ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಗಳಲ್ಲಿ ಅಭಿರುಚಿ ಹುಟ್ಟಿಸುವ ಸಲುವಾಗಿಯೂ ಸಂಘಕ್ಕೆ ಅಲ್ಲಿನ ಪೌರ ಸಭೆಯವರು ಮಾಹೆಯಾನಾ ೨೦ ರೂ ಗಳನ್ನು ಕಳೆದ ಡಿಸೆಂಬರ್ ತಿಂಗಳಿನಿಂದ ಕೊಡಲು ನಿರ್ಧರಿಸಿರುತ್ತಾರೆ

ಸೀರಂ ಇನ್‌ಸ್ಟಿಟ್ಯೂಟಿನ ರಜತ ಮಹೋತ್ಸವ

ಮೈಸೂರಿನ ಪಶು ವೈದ್ಯ ಸಂಘದವರು ಈ ವರ್ಷ ಬೆಂಗಳೂರಿನಲ್ಲಿ ಸೀರಂ ಇನ್‌ಸ್ಟಿಟ್ಯೂಟಿನ ರಜತ ಮಹೋತ್ಸವವನ್ನು ನಡೆಸಲು ನಿರ್ಧರಿಸಿರುತ್ತಾರೆ ಅದಕ್ಕಾಗಿ ಪಶುಪಾಲನಾ ಇಲಾಖೆಯ ಡೈರೆಕ್ಟರ್ ಶ್ರೀ ಪಿ ಮು ನಾರಾಯಣಸ್ವಾಮಿ ನಾಯ್ಡುರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ ರಜತ ಮಹೋತ್ಸವದ ನೆನಪಿಗಾಗಿ ಒಂದು ಸೂಕ್ತ ಸ್ಮಾರಕವನ್ನು ಏರ್ಪಡಿಸಲು ಯೋಚಿಸಲಾಗಿದೆ ಜಾನುವಾರುಗಳಿಗೆ ಅಂಟು ರೋಗಗಳು ತಗಲಿದೊಡನೆಯೇ ಸೋಂಕಿನ ಬೀಡಿಗೆ ನೇರವಾಗಿ ಪ್ರವೀಣರನ್ನೂ, ಉಪಕರಣಗಳನ್ನೂ, ಔಷಧಿಗಳನ್ನೂ ಸಾಗಿಸಲು ರಜತೋತ್ಸವದ ಸ್ಮಾರಕ ವಾಹನವನ್ನು ಇಟ್ಟುಕೊಳ್ಳಲಾಗುವುದು ಅಂತಹ ಸುಸಜ್ಜಿತ ವಾಹನಕ್ಕೆ ಕನಿಷ್ಠವಾಗಿ ೫೦ ಸಾವಿರ ರೂ ಗಳಾದರೂ ಬೇಕಾಗಬಹುದೆಂದು ಅಂದಾಜಾಗಿದೆ ಮೂಕ ಪ್ರಾಣಿಗಳಲ್ಲಿ ದಯೆಯಿಟ್ಟು, ಮಹಾಜನರು ಉದಾರವಾಗಿ ಧನ ಸಹಾಯ ಮಾಡಬೇಕೆಂದೂ, ಬೆಂಗಳೂರಿನಲ್ಲಿ ಮಲ್ಲೇಶ್ವರದಲ್ಲಿರುವ ಸಮಿತಿ ಅಧ್ಯಕ್ಷರಿಗಾಗಲೀ, ಅಥವಾ ಕಾರ್ಯದರ್ಶಿಯವರಿಗಾಗಲೀ ಹಣವನ್ನು ಕಳುಹಿಸಬೇಕೆಂದೂ ಪ್ರಾರ್ಥಿಸಲಾಗಿದೆ

ಚಂದಾದಾರರಲ್ಲಿ ವಿನಂತಿ

ನಮ್ಮ ರಶೀತಿಯನ್ನು ಪಡೆಯದೆ ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,
ಏಜೆಂಟರು, "ಸಾಧ್ವಿ" ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ತನ್ನಷ್ಟಕ್ಕೆ ತಾನೇ ಹತ್ತುವ ದೀಪ

ಜರ್ಮನಿಯ ಮನ್‌ಸ್ಟರ್ ನಗರದ ಇಂಜನಿಯರೊಬ್ಬರು ಅಂಗಡಿಯ ವ್ಯಾಪಾರದ ಕೋಣೆಯ ಬಳಿ ಯಾರಾದರೂ ಬಂದರೆ ತನ್ನಷ್ಟಕ್ಕೆ ತಾನೇ ಬೆಳಕಾಗುವ ಮತ್ತು ವಾಪಸು ಹೋದರೆ ಆರಿ ಹೋಗುವ ಸಾಧನವನ್ನು ಕಂಡು ಹಿಡಿದಿರುತ್ತಾರೆ

ಆಸ್ಪತ್ರೆ ಕೆಲಸಗಾರರ ಸಭೆ

ಮೈಸೂರು ನಗರದ ಸರ್ಕಾರಿ ಆಸ್ಪತ್ರೆ ಕೆಲಸಗಾರರ ಸಂಘದ ಸಕಲ ಸದಸ್ಯರ ಸಭೆಯು ಮೊನ್ನೆ ಸಂಜೆ ಕೃಷ್ಣರಾಜೇಂದ್ರ ಆಸ್ಪತ್ರೆಯ ಕಟ್ಟಡದಲ್ಲಿ ನಡೆಯಿತು ಶ್ರೀ ಎ ರಾಮಣ್ಣನವರು ಅಧ್ಯಕ್ಷತೆ ವಹಿಸಿದ್ದರು ಆಸ್ಪತ್ರೆಯ ವೈದ್ಯರಾದ ಡಾ|| ಬಿ ಆರ್ ರಾಮಲಿಂಗ ರೆಡ್ಡಿಯವರು ನೌಕರರಿಗೆ ಹಿತೋಕ್ತಿಗಳನ್ನು ಹೇಳಿ, ಅವರು ಮುಷ್ಕರ ಮುಂತಾದ ಕಾರ್ಯಕ್ರಮಗಳಿಗೆ ಕೈ ಹಾಕಬಾರದೆಂದು ತಿಳಿಸಿದರು ನೌಕರರ ಸ್ಥಿತಿಗಳನ್ನು ಉತ್ತಮಪಡಿಸಬೇಕೆಂಬ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿಯೂ ಅವರು ಹೇಳಿದರು ಶ್ರೀ ಟಿ ಎಸ್ ಸುಬ್ಬಣ್ಣ ನರಸಿಂಗರಾವ್, ಡಾ|| ರಾಜಣ್ಣನವರೂ, ಅಧ್ಯಕ್ಷರೂ ಭಾಷಣ ಮಾಡಿದರು ನಂತರ ನೌಕರರ ಸಂಘವನ್ನು ಐ ಎನ್ ಟಿ ಯು ಸಿ ಸಂಘಕ್ಕೆ ಸೇರಿಸಬೇಕೆಂದು ನಿರ್ಣಯ ಮಾಡಲಾಯಿತು ಕೆಲಸಗಾರರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದೂ ಅಲ್ಲಿಯವರೆಗೆ ಮನೆ ಬತ್ಯವನ್ನು ಕೊಡಬೇಕೆಂದೂ ಕೋರುವ ನಿರ್ಣಯಗಳೂ ಆದವು

ಗಣಪತಿ ಮಂಗಳಾರತಿ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಭಾರತೀ ಸ್ತ್ರೀ ಸಮಾಜದಲ್ಲಿ ಗಣಪತಿ ಮಂಗಳಾರತಿಯು ನೆನ್ನೆ ನಡೆಯಿತು ಶ್ರೀಮತಿ ಎಸ್ ಆರ್ ರಂಗಮಣಿಯವರಿಂದ ಸಂಗೀತವಾದ ನಂತರ ಮಹಾರಾಜಾ ಕಾಲೇಜಿನ ಶ್ರೀ ಮುದ್ದಲಿಂಗಣ್ಣನವರೂ, ರಾಮಕೃಷ್ಣಾಶ್ರಮದ ಸ್ವಾಮಿ ಸೋಮನಾಥಾನಂದಜಿಯವರೂ ಭಾಷಣ ಮಾಡಿ ಗಣಪತಿಯ ಉತ್ಸವದ ಮಹತ್ವವನ್ನು ವಿವರಿಸಿದರು ಮಂಗಳಾರತಿ ಪ್ರಸಾದ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು

ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಯಾಜ್ಞವಲ್ಕ್ಯ ಕ್ರಮದ ವಿದ್ಯಾರ್ಥಿಗಳು ಮೊನ್ನೆ ಗಣಪತಿ ಮಂಗಳಾರತಿಯನ್ನು ವಿಜೃಂಭಣೆಯಿಂದ ನೆರವೇರಿಸಿದರು

ನಾಯಿ ಕೆಮ್ಮಿಗೆ ಔಷಧಿ
(WHOOPING COUGH REMEDY)
ಗೂರಲು, ಉಬ್ಬಸ ಪರಿಣಾಮಕಾರಿ ಮತ್ತು (TONSIL) ಗಲಾಯಿಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0
ಆರ್. ಎಸ್. ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ಬ್ಲೇಡುಗಳ ಜಾಹಿರಾತಿನ ಬಗ್ಗೆ ಕ್ಷೌರಿಕರ ಪ್ರತಿಭಟನೆ

ನಾಗಪುರದ ಪತ್ರಿಕೆಯೊಂದರಲ್ಲಿ ಕ್ಷೌರದ ಬ್ಲೇಡುಗಳ ಜಾಹಿರಾತಿನ ಬಗ್ಗೆ ವಿರೋಧವನ್ನು ಸೂಚಿಸಲು ಕಳೆದ ೨೬ನೇ ತಾ|| ನಿಂದ ಅಲ್ಲಿನ ಕ್ಷೌರಿಕರು ಚಳುವಳಿ ಹೂಡಿರುತ್ತಾರೆ ನಾಯಿಂದನ ಕೈಯಿಂದ ಕ್ಷೌರ ಮಾಡಿಸಿಕೊಂಡು ಹೋದ ಯುವಕನೊಬ್ಬನಿಗೆ ಕೆಲಸ ಸಿಗಲಿಲ್ಲವೆಂದೂ, ಆತನು ಮಾರನೆ ದಿನ ಬ್ಲೇಡಿನಲ್ಲಿ ಮುಖ ಕ್ಷೌರ ಮಾಡಿಕೊಂಡು ಹೋದಾಗ ನೌಕರಿ ದೊರೆಯಿತೆಂದೂ ಜಾಹಿರಾತಿನ ಚಿತ್ರದಲ್ಲಿ ಪ್ರಕಟಿಸಲಾಗಿರುವುದನ್ನು ಕ್ಷೌರಿಕರು ಪ್ರತಿಭಟಿಸಿರುತ್ತಾರೆ

ಯುವಜನ ಚಾರಣ ಸಂಸ್ಥೆಯ ಪ್ರದರ್ಶನ

ಭಾರತದ ಯುವಜನ ಚಾರಣ ಸಂಸ್ಥೆಯ ಮೈಸೂರು ಶಾಖೆಯ ಆಶ್ರಯದಲ್ಲಿ ಕಳೆದ ೨೪ನೇ ತಾ|| ಮಹಾರಾಜಾ ಕಾಲೇಜು ಹಾಸ್ಟಲಿನಲ್ಲಿ ಪ್ರದರ್ಶನವೊಂದನ್ನು ಏರ್ಪಡಿಸಲಾಗಿತ್ತು ನಂತರ ಹಾಸ್ಟೆಲು ವಾರ್ಡನ್ ಡಾ|| ಸಿ ವಿ ಕೃಷ್ಣಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಭಾಷಣಗಳು ನಡೆದುವು ಶ್ರೀಗಳಾದ ಆರ್ ಜಿ ಪದಕಿ ಹೆಚ್ ಎಲ್ ಪರಿಯಪ್ಪ ಪ್ರೊ|| ಯಾಮುನಾಚಾರ್ಯ ಮತ್ತು ಹೆಚ್ ಆರ್ ಅಬ್ದುಲ್ ಮಜೀದ್‌ರವರು ಚಾರಣ ಸಂಸ್ಥೆಯ ಉಪಯೋಗಗಳ ಬಗ್ಗೆ ಮಾತನಾಡಿದರು ಸೇಂಟ್ ಫಿಲೊಮಿನಾ ಕಾಲೇಜಿನಲ್ಲೂ ಇದೇ ರೀತಿಯ ಸಮಾರಂಭವು ಏರ್ಪಾಟಾಗಿದ್ದಿತು ಬಳವಾಯ್ ಹೈಸ್ಕೂಲಿನಲ್ಲಿ ಅಮೆರಿಕಾ ವಾರ್ತಾ ಸಂಸ್ಥೆಯವರು ತೆಗೆದಿದ್ದ ಹಲವು ಚಿತ್ರಗಳನ್ನೂ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರು ತೆಗೆದಿರುವ ಹಲವು ಚಿತ್ರಗಳನ್ನೂ ಪ್ರದರ್ಶಿಸಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ವಿಶ್ವ ಮಾಧುರ್ಯ ಮಧ್ಯಾಹ್ನ ೧ ೫ ಜಲತರಂಗ ೧ ೩೦ ನಾವು ಮತ್ತು ನಮ್ಮವರು ೩ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫ ೩೦ ನಂತರ ೬ ೩೦ ಪ್ರಕಾರದ ಮತ್ತು ಪಿ ಸರಸ್ವತಿ ಸಂಗೀತ ೭ ೧೦ ಆರ್ಕೆಸ್ಟ್ರಾ ೭ ಚಿತ್ರ ಸಂಗೀತ ೮ ಪರ್ವತ ಪಥದಿಂದ ವೀಕ್ಷೆ ಮತ್ತು ಸಂಗೀತ ೯ ಸುಶೀಲಾ ಟಿಂಬೇ ರಿಕಾರ್ಡು ಸಂಗೀತ ೯ ೩೦ ರತ್ನಮ್ಮ ಕೃಷ್ಣಮೂರ್ತಿ ಕನ್ನಡ ಗೀತೆಗಳು ೯ ೪೫ ರಾಷ್ಟ್ರೀಯ ಕಾರ್ಯಕ್ರಮ ದೆಹಲಿ ಪ್ರಸಾರ

SRI GAYATHRI
TALKIES
Daily 2 Shows
FROM 31—8—52 1 or 3 Days
THE DAY THE EARTH STOOD STILL
An Unforgettable Motion Picture
World Threatened with Destruction by Distant Planet
Terrible Atomic Man
Disintegrates Tanks Guns & Men with his X-Ray Eye

ಜಪಾನ್ ಶಾಸನ ಸಭೆಯ ವಿಸರ್ಜನೆ

ಜಪಾನಿನ ಶಾಸನ ಸಭೆಯಲ್ಲಿ ಅತ್ಯಂತ ಬಲಯುತವೂ ಮತ್ತು ಪ್ರಭಾವಯುತವೂ ಆದ ಲಿಬರಲ್ ಪಕ್ಷದ ನಾಯಕರ ಆಯ್ಕೆ ಸಂಬಂಧವಾಗಿ ಬಿಕ್ಕಟ್ಟು ಸಂಭವಿಸಿರುವುದರಿಂದ ಕೂಡಲೇ ಅಲ್ಲಿನ ಪಾರ್ಲಿಮೆಂಟನ್ನೇ ವಿಸರ್ಜಿಸಿ ಬರುವ ಅಕ್ಟೋಬರ್ ತಿಂಗಳಲ್ಲಿ ಹೊಸ ಚುನಾವಣೆ ನಡೆಸಲು ಜಪಾನ್ ಮಂತ್ರಿ ಮಂಡಲವು ನಿರ್ಧರಿಸಿರುವುದೆಂದು ತಿಳಿದು ಬಂದಿದೆ ಪ್ರಧಾನಿ ಯೋಷಿಡಾರವರು ಇದುವರೆಗೆ ಲಿಬರಲ್ ಪಕ್ಷದ ನಾಯಕರಾಗಿದ್ದು ಪಾರ್ಲಿಮೆಂಟನ್ನು ವಿಸರ್ಜಿಸುವ ಬಗ್ಗೆ ಪಕ್ಷದ ಒಳಗಿನಿಂದಲೂ ಮತ್ತು ಹೊರಗಿನಿಂದಲೂ ಬರಬಹುದಾದ ಒತ್ತಾಯವನ್ನು ನಿವಾರಿಸಿಕೊಳ್ಳುವ ಸಲುವಾಗಿ ಈ ಕ್ರಮ ಕೈಗೊಂಡಿರುವರೆಂದು ಹೇಳಲಾಗಿದೆ ಈಗ ನಾಯಕ ಸ್ಥಾನಕ್ಕೆ ಹಟೋಯಾಮ ಎಂಬ ಪ್ರಮುಖರೊಬ್ಬರು ಸ್ಪರ್ಧಿಸಲಿರುವರೆಂದು ವರದಿಯಾಗಿದೆ

ವಿದ್ಯಾರ್ಥಿಗಳಿಗೆ ಸೇವಾದಳದ ನಾಯಕರ ಹಿತನುಡಿ

ಹುಣಸೂರಿನ ಪ್ರೌಢ ಶಾಲೆಯಲ್ಲಿ ಮೊನ್ನೆ ಭಾರತ ಸೇವಾದಳದ ಶ್ರೀ ರಾಮರಾಯರು (ಬಿ ಎ) ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು ಮುಖ್ಯೋಪಾಧ್ಯಾಯರಾದ ಶ್ರೀ ಜಿ ಸಿ ಬಸವರಾಜೆ ಅರಸರು ಅಧ್ಯಕ್ಷತೆ ವಹಿಸಿದ್ದರು ಶ್ರೀ ರಾಮರಾಯರು ಮಾತನಾಡುತ್ತಾ, ಸೇವಾ ದಳದ ಶಿಸ್ತು, ಬರ್ಮಾದಲ್ಲಿದ್ದ ಭಾರತ ರಾಷ್ಟ್ರೀಯ ಸೈನ್ಯದ ಚರಿತ್ರೆ ಮತ್ತು ವಿದ್ಯಾರ್ಥಿಗಳ ಕರ್ತವ್ಯ ಮುಂತಾದ ವಿಷಯಗಳ ಬಗ್ಗೆ ವಿವರಣೆಯಿತ್ತರು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ
ನೆಲಗಡಲೆ	೧೧ ೦ ೦	೨೧ ೦ ೦
ಎಳ್ಳು	೭೨ ೩ ೦	೭೯ ೮ ೦
ಹುಚ್ಚೆಳ್ಳು	೫೧ ೦ ೦	
ಹರಳು ಬೀಜ	೫೦ ೧೨ ೦	
ಹುರುಳಿ	೪೫ ೧೨ ೦	೪೯-೩-೦
ಹೆಸರು	೬೭ ೦ ೦	
ಹೊಂಗೇಬೀಜ	೩೫ ೩ ೦	
ಉದ್ದು	೭೬ ೪ ೦	
ಅವರೆ	೭೫ ೦ ೦	
ಹಲಸಂದೆ	೭೪ ೦-೦	೭೬ ೬ ೦
ಮೆಣಸಿನಕಾಯಿ ಮಣಕ್ಕೆ	೭ ೮ ೦	
ಹುಣಸೇಹಣ್ಣು	೧-೧೨-೦	೫-೧೨-೦
ಸೀಗೇಕಾಯಿ	೪-೮ ೦	೫ ೮ ೦
ತೆಂಗಿನಕಾಯಿ ೧೦೦ ಕ್ಕೆ	೦ ೦	೨೨ ೦ ೦

ಶ್ರೀ ಜಗದಾಂಬ ಶಿಶುವಿಹಾರ
583 ದಿವಾನ್ಸ್ ರಸ್ತೆ, ಮೈಸೂರು
ಶಿಶು ಮನಶ್ಶಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳಿಗನುಸಾರವಾಗಿ ಉತ್ತಮತರವಾದ ಪರಿಸರಣಕ್ಕನುಗುಣವಾದ ಬಂಗಲೆಯಲ್ಲಿ, ಉತ್ತಮೋತ್ತಮವಾದ ವಿದ್ಯಾಭ್ಯಾಸದ ಉಪಕರಣಗಳ ಸಹಾಯದಿಂದ ನೃತ್ಯ ಗೀತ ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಮೇಲ್ಕಂಡ ಶಿಶುವಿಹಾರದಲ್ಲಿ ಕೊಡಲಾಗುತ್ತದೆ ಈ ಸುಸಮಯವನ್ನು ಕಳೆದುಕೊಳ್ಳದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ
ಪಿ ಕೃಷ್ಣಮೂರ್ತಿ
ಡೈರೆಕ್ಟರ್

... 792 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೭]   ಭಾನುವಾರ ೩೧ ೮ ೧೯೫೨   [ಸಂಚಿಕೆ ೪

ಹೈದರಾಬಾದು ರೈತರ ರಕ್ಷಣೆಗಾಗಿ ಆರ್ಡಿನೆನ್ಸ್

ಫ್ರೆಂಚ್ ಭಾಷೆ ಮತ್ತು ಸಂಸ್ಕೃತಿಯ ಹಿರಿಮೆ

ಫ್ರೆಂಚ್ ಸಂಘದ ಆರಂಭೋತ್ಸವದಲ್ಲಿ ಪ ಭುಗಳ ಭಾಷಣ

ಮೈಸೂರು ೩೧

ಶ್ರೀಮನ್ಮಹಾರಾಜರವರು ನೆನ್ನೆ ಜಲು ... ಭವನದಲ್ಲಿ ಲೀ ಸರ್ಕಲ್ ಫ್ರಾಂ ... ದಿ ಮೈಸೂರ್ ಎಂಬ ಸಂಸ್ಥೆಯ ... ರಂಭೋತ್ಸವವನ್ನು ನೆರವೇರಿಸಿದರು

ಕೇಂದ್ರ ಆಹಾರ ಸಂಶೋಧನಾಲಯದ ... ರೆಕ್ಟರ್ ಡಾ|| ವಿ ಸುಬ್ರಹ್ಮಣ್ಯಂರವರಿಂ ... ಸ್ವಾಗತ ಭಾಷಣವಾದ ನಂತರ ರೆ| ಫಾ ... ಆಡಿಯೆರವರು ಪರಿಚಯ ಭಾಷಣ ... ಅಲ್ ... ಯಾ ಶೀಡಿಯೆ ... ಡಾ|| ಸಟೀರ್‌ರವರು ಸಂದೇಶಗಳನ್ನು ... ಓದಿದರು

ಶ್ರೀಮನ್ಮಹಾರಾಜರವರು ತಮ್ಮ ಭಾಷಣದಲ್ಲಿ ಸಂಸ್ಥೆಯ ಉದ್ದೇಶವನ್ನು ಪ್ರಶಂ... ಅವರಿಂದ ಫ್ರೆಂಚ್ ಸಂಸ್ಕೃತಿಯಲ್ಲಿರು ... ಜ್ಞಾನವನ್ನು ನಮ್ಮ ದೇಶದ ... ತಿಳಿಸಲು ಸುಲಭವಾಗುವುದೆಂದೂ ಫ್ರೆಂಚ್ ಭಾಷೆ ಮತ್ತು ಸಂಸ್ಕೃತಿಯು ... ಪ್ರಖ್ಯಾತವಾಗಿರುವುದೆಂದೂ ಹೇಳಿದರು ... ದ್ವಿತೀಯ ಯುದ್ಧದಿಂದ ಈಗ ... ಚೇತರಿಸಿಕೊಳ್ಳುತ್ತಿರುವುದ ... ಕಲೆ ಸಂಗೀತ, ವಾಸ್ತುಶಿಲ್ಪ ... ಸಾಹಿತ್ಯಗಳಲ್ಲಿ ಅದು ಜಾಗೃತೆ ತನ್ನ ... ತನ್ನು ನಡೆಯುವುದರಲ್ಲಿ ಸಂದೇಹ ... ವೆ ಮಾಡಿದರು ತಿಳಿ ... ಪ್ರಸಂಗದಲ್ಲಿ ... ನೆಲೆಸಬೇಕಾದರೆ ಒಂದು ನಾ... ರು ಪರಸ್ಪರದ ಜನರ ಸಮಸ್ಯೆಗ... ನ್ನು ಅರಿಯುವುದು ಅಗತ್ಯವೆಂದೂ ಆಗ ... ಗಳಲ್ಲಿ ಪರಸ್ಪರ ಸಹೋದರ ಭಾ... ವು ಉಂಟು ಗುವುದೆಂದೂ ಹೇಳಿದರು

ಡಾ|| ಕಾಳೆಯವರು ವಂದನಾರ್ಪಣೆ ಮಾ... ನಂತರ, ಫ್ರಾಂಚಿನ ಜೀವನದ ಬಗ್ಗೆ ... ಚಿತ್ರದ ಪ್ರದರ್ಶನದೊಡನೆ ಸಮಾ... ರಂಭವು ವಿಸರ್ಜನೆಯಾಯಿತು

ರಾಜಧಾನಿಯಲ್ಲೂ ಮಕ್ಕಳ ಮಾರಾಟ ಪ್ರಯತ್ನವೇ ?

... ಕಂದೂರು ತಾಲ್ಲೂಕಿಗೆ ಸೇರಿದವ... ನೆಂದು ಹೇಳಲಾದ ಉಪ್ಪಲಿಗರ ಮತದ ... ಹೆಂಗಸು ಮೊನ್ನೆ ಇಲ್ಲಿನ ದೇವ... ರಾಜ ಮಾರ್ಕೆಟ್ಟಿನ ಮುಂಭಾಗದಲ್ಲಿ ತನ್ನ ... ಮತ್ತು ೩ ವರ್ಷದ ಮಕ್ಕಳನ್ನು ... ಯಾರಿಗಾದರೂ ಮಾರಲು ತಾನು ಸಿದ್ಧ... ವಾಗಿರುವುದಾಗಿ ಹೇಳಿ, ಈ ಬಗ್ಗೆ ಜನರನ್ನು ... ಕೇಳಿಕೊಳ್ಳುತ್ತಿದ್ದಳೆಂದೂ ಇದನ್ನು ಕಂ... ಪೊಲೀಸರು ಮಧ್ಯೆಕರಗೊಂಡು ಆಕೆಗೆ ಸ್ವ... ಉಡ್ಡನ್ನು ಕೊಟ್ಟರೆಂದೂ ವರದಿ... ಯಾಗಿದೆ ಎಂದು ತಿಳಿಸಿರುತ್ತದೆ ಆಕೆಯ ಗಂಡ ... ರ ಎಂಬುವನು ಊರಿನಲ್ಲಿ ಕೆಲಸ ಸಿಗ... ದೆ ರಾಜಧಾನಿಗೆ ಸಂಸಾರ ಸಮೇತ ಆಗ... ಮಿಸಿದನೆಂದೂ ಹೇಳಲಾಗಿದೆ

ಗತ್ತಿನ ಅತ್ಯಂತ ಎತ್ತರದ ಮಾನ ನಿಲ್ದಾಣಕ್ಕೆ ನೆಹರೂ

ಜಗತ್ತಿನಲ್ಲೇ ಅತ್ಯಂತ ಎತ್ತರದಲ್ಲಿರು... ವೆಂದು ಪ್ರಸಿದ್ಧವಾದ ಪ್ಲೋರ್ ಲಡಕ್‌... ದ ... ಒಂದು ನಿಲ್ದಾಣದಲ್ಲಿ ಪಂಡಿ... ತ ನೆಹರೂರವರು ಮೊನ್ನೆ ವಿಮಾನದಿಂ... ದ ಇಳಿದರು ನಿಲ್ದಾಣವು ಸಮುದ್ರಮ... ಟ್ಟಕ್ಕೆ ... ಅಡಿ ಎತ್ತರದಲ್ಲಿದೆ ಅ... ವರೊಡನೆ ಯುವರಾಜ ಕರಣ್ ಸಿಂಗ್, ಷೇಕ್ ಅಬ್ದುಲ್ಲಾ, ಏರ್ ವೈಸ್ ಮಾರ್ಷಲ್ ಮುಖರ್ಜಿ ಮತ್ತು ಇಂದಿರಾ ಗಾಂ... ಧಿಯವರೂ ಇದ್ದರು ಅವರು ಉನ್ನತ ... ದ ನಂಗ ಪದೇ, ತವನ್ನೂ ವೀಕ್ಷಿಸಿದ

ಉಪಾಧ್ಯಾಯರುಗಳ ಕಾಲೇಜಿನ ರಜತೋತ್ಸವ

ವಿದ್ಯಾ ಮಂತ್ರಿ ರಾಮಚಂದ್ರ ರಾಯರಿಂದ ಆರಂಭ ಭಾಷಣ

ಮೈಸೂರು ೩೧

ರಾಜಧಾನಿಯಲ್ಲಿರುವ ವಿಶ್ವವಿದ್ಯಾಲಯದ ಉಪಾಧ್ಯಾಯರುಗಳ ಕಾಲೇಜಿನ ರಜತ ಮಹೋತ್ಸವವನ್ನು ನೆನ್ನೆ ಸಂಜೆ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಪ್ರಾರಂಭಗೊಳಿಸಿದರು

ನನ್ನೆ ಬೆಳಗ್ಗೆ ಕಾಲೇಜಿನ ಕಟ್ಟಡದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಪ್ರದರ್ಶನವೂ ಗಂಡಸರ ಕ್ರೀಡೆಗಳೂ ಆದುವು ಮಧ್ಯಾಹ್ನ ಹಳೆಯ ಮತ್ತು ಈಗಿನ ವಿದ್ಯಾರ್ಥಿಗಳ ಕ್ರಿಕೆಟ್ ಪಂದ್ಯವು ಜರಗಿತು ಸಂಜೆ ವಿದ್ಯಾಭ್ಯಾಸದ ಫಿಲಂ ಪ್ರದರ್ಶನವೂ ಏರ್ಪಾಡಾಗಿದ್ದಿತು

ಅನಂತರ ಸಭೆಯು ಜರುಗಿ ಶ್ರೀ ಡಿ ಎಂ ಸುಬ್ಬರಾಮಯ್ಯನವರಿಂದ ಪ್ರಾರ್ಥನೆ, ಶ್ರೀ ಎಂ ? ಮಹದೇವಸ್ವಾಮಿಯವರಿಂದ ಸ್ವಾಗತ ಗೀತೆಗಳಾದ ನಂತರ, ಶ್ರೀ ಕೆ ಆರ್ ಕೆ ಅನಂತನ್‌ರವರು ಉತ್ಸವಕ್ಕೆ ಯಶಸ್ಸನ್ನು ಕೋರಿ ಬಂದಿದ್ದ ಸಂದೇಶಗಳನ್ನು ಓದಿದರು ರಜತೋತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಎ ಸಿ ದೇವೇಗೌಡರು ಸ್ವಾಗತ ಭಾಷಣ ಮಾಡಿದನಂತರ, ಸಚಿವರು ಭಾಷಣ ಮಾಡಿದರು

ಹೊಸ ರಾಜ್ಯಾಂಗದಲ್ಲಿ ವಿದ್ಯಾಭ್ಯಾಸಕ್ಕೆ ಪ್ರಥಮ ಸ್ಥಾನವನ್ನು ಕೊಡಲಾಗಿರುವುದೆಂದೂ ಉಪಾಧ್ಯಾಯರುಗಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನೀಯಲಾಗಿದೆಯೆಂದೂ ಸಚಿವರು ತಿಳಿಸಿದರು ವಿದ್ಯಾಭ್ಯಾಸದ ಸುಧಾರಣೆ ಮುಂತಾದುವನ್ನು ಅವರು ಪ್ರಸ್ತಾಪಿಸಿ, ಮೂಲ ಶಿಕ್ಷಣ ಪದ್ಧತಿಯ "ಸಂಪಾದಿಸು ಮತ್ತು ಕಲಿ ಎಂಬ ವಿಧಾನದ ಮಹತ್ವವನ್ನು ಒತ್ತಿ ಹೇಳಿದರು ವಿದ್ಯಾರ್ಥಿಗಳು ರಚನಾತ್ಮಕ ಕಾರ್ಯಗಳನ್ನು ಕೈಗೊಂಡು ಅವುಗಳಿಂದ ಬರುವ ಹಣವನ್ನು ಉಪಾಧ್ಯಾಯರ ವೇತನದ ಜೊತೆಗೆ ಕೂಡಿಸಿ ಕೊಡಬಹುದೆಂದು ಸಲಹೆ ಮಾಡಿದರು

ನಂತರ ಮಹಾರಾಣಿ ಹೈಸ್ಕೂಲಿನ ವಿದ್ಯಾರ್ಥಿನಿಯರಿಂದ ಸಂಗೀತ ಮತ್ತು ನೃತ್ಯಗಳಾದ ನಂತರ ಶ್ರೀ ಕೆ ಎ ದೊ... ರೆಸ್ವಾಮಿಯವರು ವಂದನಾರ್ಪಣೆ ಮಾಡಿದರು ಮನರಂಜನೆಯೊಡನೆ ನೆನ್ನೆಯ ಸಮಾರಂಭವು ಮುಕ್ತಾಯವಾಯಿತು

ಪ್ಯೋಂಗ್‌ಯಾಂಗ್ ಮೇಲೆ ೧೪೦೩ ಸಲ ಧಾಳಿ

ಉತ್ತರ ಕೊರಿಯದ ರಾಜಧಾನಿ ಪ್ಯೋಂಗ್‌ಯಾಂಗ್ ಮೇಲೆ ೧೪೦೩ ಸಲ ವಿಮಾನಧಾಳಿಗಳನ್ನು ನಡೆಸಲಾಯಿತೆಂದೂ ಇದು ಆ ಯುದ್ಧದಲ್ಲೇ ಅತ್ಯಂತ ಬಾರಿ ಧಾಳಿಯೆಂದೂ ವರದಿಯಾಗಿದೆ ಪ್ಯೋಂಗ್‌ಯಾಂಗ್ ಬಳಿ ಇರುವ ನೆಲೆಗಳ ಮೇಲೆ ಬಾಂಬುಗಳನ್ನು ಯಥೇಚ್ಛವಾಗಿ ಹಾಕುವ ಮುಂಚೆ ನಾಗರಿಕರಿಗೆ ಎಚ್ಚರಿಕೆ ಕೊಡುವ ಬಗ್ಗೆ ಹಸ್ತ ಪತ್ರಿಕೆಗಳನ್ನು ಹಾಕಲಾಗಿತ್ತು

ಸರ್ಪ ಮತ್ತು ಕೋಳಿ ಕಾಳಗದಲ್ಲಿ ಹಾವಿನ ಮರಣ

ಕಾನ್ಪುರದ ಜಿಲ್ಲಾ ಮ್ಯಾಜಿಸ್ಟ್ರೇಟರ ಮನೆಯ ಕಾಂಪೌಂಡಿನಲ್ಲಿ ಮೊನ್ನೆ ಒಂದು ಕೋಳಿಗೂ ಒಂದು ಹಾವಿಗೂ ಬಲವಾದ ಕಾಳಗ ನಡೆದು ಕೊನೆಗೆ ಹಾವು ಮೃತಪಟ್ಟಿತೆಂದು ವರದಿಯಾಗಿದೆ ಪುಲ್ಲಿನೊಳಗಿಂದ ಬಂದ ಹಾವನ್ನು ನೋಡಿ ಅಲ್ಲಿ ಓಡಾಡುತ್ತಿದ್ದ ಕೋಳಿಯು ಅದನ್ನು ಕಾಲಿನಲ್ಲಿ ಹಿಡಿದು ಕೊಕ್ಕಿನಿಂದ ಕುಟುಕಿದಾಗ ಹಾವು ತಪ್ಪಿಸಿಕೊಂಡು ಓಡಿ ಪುನಃ ವಾಪಸು ಬಂದು ಕಾಳಗಕ್ಕೆ ನಿಂತಿತೆಂದೂ ಆದರೆ ಕೋಳಿಯು ಎರಡನೆ ಬಾರಿಗೆ ಹಾವನ್ನೇ ಹೊಡೆದು ಕೊಂದುಹಾಕಿತೆಂದೂ ಹೇಳಲಾಗಿದೆ

ಕಾನ್ಸ್ಟೇಬಲ್ಲನಿಂದ ಪತ್ನಿ ಕೊಲೆ

ರಾಜಧಾನಿಯ ರಿಸರ್ವ್ ಕಾನ್ಸ್ಟೇಬಲ್ ಮುನಿಸ್ವಾಮಿ ಎಂಬುವನು ಬೆಂಗಳೂರಿಗೆ ಹೋಗಿ ತನ್ನ ಮಾವನ ಮನೆಯಲ್ಲಿದ್ದ ೧೮ ವರ್ಷದ ತನ್ನ ಪತ್ನಿ ನಾಗಮ್ಮನನ್ನು ನೆನ್ನೆ ರಾತ್ರಿ ಇರಿದು ಪರಾರಿಯಾದನೆಂದು ವರದಿಯಾಗಿದೆ ಆಕೆಯನ್ನು ಆಸ್ಪತ್ರೆಗೆ ಸಾಗಿಸುವಾಗ ದಾರಿಯಲ್ಲಿ ಅವಳು ಮೃತಪಟ್ಟಳೆಂದು ಹೇಳಲಾಗಿದೆ

○ ಈದ್ ಹಬ್ಬಕ್ಕಾಗಿ ಗೋವಧೆ ನಡೆಸಕೂಡದೆಂದು ಅಲಹಾಬಾದಿನ ಜಿಲ್ಲಾಧಿಕಾರಿಗಳು ೧ ವಾರದ ಪ್ರತಿಬಂಧಕವನ್ನು ಹಾಕಿರುತ್ತಾರೆ

ನ್ಯಾಯಾಂಗ ಅಧಿಕಾರಿಗಳ ವೇತನದ ಪುನರ್ವಿಮರ್ಶೆ

ಸಮ್ಮೇಳನದಲ್ಲಿ ಮುಖ್ಯಮಂತ್ರಿ ಹನುಮಂತಯ್ಯನವರ ಭರವಸೆ

ಬೆಂಗಳೂರು ೩೧

ನ್ಯಾಯಾಂಗ ಇಲಾಖೆಯ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಹಲವು ತಿಂಗಳೊಳಗೆ ಪುನರ್ವಿಮರ್ಶೆ ಮಾಡುವುದಾಗಿಯೂ, ಆಯವ್ಯಯದಲ್ಲಿ ಭಾರಿ ಕೊರತೆ ಆಗಿರುವುದರಿಂದ ಅಧಿಕಾರಿಗಳು ಸ್ವಲ್ಪ ಮಟ್ಟಿನ ತಾಳ್ಮೆ ವಹಿಸಬೇಕೆಂದೂ ನೆನ್ನೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಲ್ಲಿ ನಡೆದ ನ್ಯಾಯಾಂಗ ಅಧಿಕಾರಿಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿ ತಿಳಿಸಿದರು

ನ್ಯಾಯಾಂಗದಲ್ಲಿ ಸುಧಾರಣೆಗಳ ಆವಶ್ಯಕತೆಯನ್ನು ಅವರು ಒತ್ತಿ ಹೇಳಿ, ನ್ಯಾಯಾಸ್ಥಾನಗಳ ಸಾಕ್ಷಿ ಪೆಟ್ಟಿಗೆಯನ್ನು ಹತ್ತಿದ ಕೂಡಲೇ ನಿಜವನ್ನು ಹೇಳುವ ಮನುಷ್ಯನೂ ಸುಳ್ಳುಗಾರನಾಗುವನೆಂದೂ, ಈ ದೋಷವು ಪರಿಹಾರವಾಗಬೇಕೆಂದೂ ತಿಳಿಸಿದರು ಸುಪ್ರೀಂ ಕೋರ್ಟು ಪ್ರತಿ ಸಂಸ್ಥಾನದ ಕೇಂದ್ರದಲ್ಲೂ ಒಂದೊಂದು ಬಾರಿ ಅಧಿವೇಶನ ನಡೆಸುವುದರಿಂದ ಕಕ್ಷಿಗಾರರ ಹಣವು ಉಳಿಯಲು ಅವಕಾಶವಾಗುವುದೆಂದು ಅವರು ಹೇಳಿದರು ಕೋರ್ಟುಗಳಲ್ಲಿ ಅಡ್ಜರ್ನಮೆಂಟುಗಳು ಕಡಿಮೆಯಾಗಬೇಕೆಂದು ಅಭಿಪ್ರಾಯ ಪಟ್ಟರು ಮುನ್ಸೀಫರಿಂದ ಜಿಲ್ಲಾ ನ್ಯಾಯಾಧೀಶರ ವರೆಗೆ ವಕೀಲ ವೃಂದದಿಂದ ಯಾರನ್ನೂ ತೆಗೆದುಕೊಳ್ಳುವುದಿಲ್ಲವೆಂದೂ, ಜಿಲ್ಲಾ ನ್ಯಾಯಾಧೀಶರು ಮತ್ತು ಹೈಕೋರ್ಟು ಜಡ್ಜರ ಸ್ಥಾನಗಳಿಗೆ ದಾಖಲಾತಿ ಪ್ರಕಾರ ವಕೀಲರನ್ನು ತೆಗೆದುಕೊಳ್ಳುವ ವಿಷಯವನ್ನು ಪರ್ಯಾಲೋಚಿಸಲಾಗುವುದೆಂದೂ ಅವರು ಹೇಳಿದರು

ಶಾಸನ ಸಭೆಗಳ ಅಧಿವೇಶನ

ಬೆಂಗಳೂರಿನಲ್ಲಿ ಕಿರಿಯ ಮತ್ತು ಹಿರಿಯ ಶಾಸನ ಸಭೆಗಳ ಅಧಿವೇಶನಗಳು ಇದೇ ಅಕ್ಟೋಬರ್ ತಿಂಗಳಿನ ಕೊನೆಯ ಭಾಗದಲ್ಲಿ ನಡೆಯುವುವು ಏಕ ಕಾಲದಲ್ಲಿ ಎರಡು ಅಧಿವೇಶನಗಳನ್ನೂ ನಡೆಸಬೇಕೆಂಬುದೇ ತಮ್ಮ ಆಶಯವಾಗಿರುವುದೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ

ನಿಜಾಮರಿಂದ ರೈತರ ರಕ್ಷಣಾ ಆರ್ಡಿನೆನ್ಸ್

ಹೈದರಾಬಾದಿನಲ್ಲಿ ಬೇಸಾಯಗಾರರಿಂದ ಜಮೀನು ಹಿಡುವಳಿಯನ್ನು ಕಿತ್ತು ಹಾಕುವುದನ್ನು ತಪ್ಪಿಸುವ ಸಲುವಾಗಿ ನಿಜಾಮರು ಆರ್ಡಿನೆನ್ಸ್ ಒಂದನ್ನು ಹೊರಡಿಸಿದ್ದಾರೆ ಅದು ಕೂಡಲೆ ಜಾರಿಗೆ ಬರುವುದು ಈ ಕಾನೂನು ಪ್ರಕಾರ ರಕ್ಷಣೆಗೆ ಒಳಗಾಗುವ ರೈತರ ಬೇಸಾಯ ಮಾಡುವ ಜಮೀನುಗಳ ಮಾರಾಟವನ್ನು ಕಾನೂನು ಬಾಹಿರವೆಂದು ಸಾರಲಾಗುವುದು

○ ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳ ಅಧಿಕಾರಿಗಳಾದ ಎಂ ಮೇನಾರ್ಡ್‌ರವರು ಕಡಲೂರಿಗೆ ೨೭ ನೇ ತಾ|| ಹೋಗುತ್ತಿದ್ದಾಗ ತಮ್ಮ ಪ್ರದೇಶದ ಎಲ್ಲೆಯಲ್ಲೇ ಯಾರಿಂದಲೋ ಹೊಡೆಯಲ್ಪಟ್ಟರೆಂದು ವರದಿಯಾಗಿದೆ.

ವಾರ ಭವಿಷ್ಯ

ತಾ|| ೩೧-೮-೫೨ ರಿಂದ ೬-೯-೫೨ ರ ವರೆಗೆ

ಮೇಷ—ಅಜೀರ್ಣ ಆರೋಗ್ಯ ಉತ್ತಮವಿಲ್ಲ ಆದಾಯಕ್ಕಿಂತ ವ್ಯಯಾಧಿಕ್ಯ ಪತ್ರಿಸಂಚಿಕ ಕೊಂಡರೆ ಮೇಲ್ಪಟ್ಟವರೊಡನೆ ವಿವಾದ ತಾ|| ೩, ೪ ಮಹತ್ವದ ಪತ್ರ, ಚಿಂತಾನಾಶ

ವೃಷಭ—ಆರೋಗ್ಯ ಉತ್ತಮ ಮನಸ್ಸಿಗೆ ಅಸಮಾಧಾನ. ಹಣದ ವೆಚ್ಚ ಅಧಿಕ ಮೇಲಧಿಕಾರಿಗಳ ತಪ್ಪು ತಿಳುವಳಿಕೆ ಪತ್ನಿಯ ಅನಾರೋಗ್ಯ ವ್ಯಾಪಾರದಲ್ಲಿ ಗುಪ್ತ ಚಿಂತೆ. ತಾ|| ೧, ೫ ಧನ ಲಾಭ, ಮಿತ್ರ ಸಹಾಯ

ಮಿಥುನ — ಮನಸ್ಸಿನ ತಳಮಳದ ಕೊನೆ ಎದುರಾಳಿಗೆ ಮುಖ ಭಂಗ ಮಾನ ಸನ್ಮಾನ ಪ್ರವಾಸದಲ್ಲಿ ಹೊಸ ಪರಿಚಯ ವ್ಯಾಪಾರಾದಿಗಳಲ್ಲಿ ಹಿತದಾಯಕ ಘಟನೆ. ತಾ|| ೩, ೪ ಮಹತ್ವದ ಪತ್ರಗಳಿಗೆ ಶುಭ ದಿನ, ಪ್ರಿಯ ಜನರ ಸಹವಾಸ

ಕರ್ಕ — ಆರೋಗ್ಯ ಉತ್ತಮ. ವ್ಯಾಪಾರಾದಿಗಳಲ್ಲಿ ವಿವಂಚನೆ ದೂರವಾಗುವುದು ಮಕ್ಕಳ ಕ್ಷೇಮಕ್ಕೆ ಧಕ್ಕೆ ಹಣ ಕಾಸಿನ ಅಪೂರ್ವ ಲಾಭ ತಾ|| ೩, ೪ ಅತಿಥಿಗಳ ಹಾವಳಿ, ಖರ್ಚು ಹೆಚ್ಚು

ಸಿಂಹ — ಕಲಹಕರ ವಾರ ಪಿತ್ರಾರ್ಜಿತ ಆಸ್ತಿ ಬಗ್ಗೆ ವ್ಯಾಜ್ಯ ಕೋಪಕ್ಕೆ ಕಾರಣವಾಗುವುದು ಆರೋಗ್ಯ ನೆಟ್ಟಗಿರದು. ತಾ|| ೧, ೨ ಪ್ರಿಯ ಜನ ವಿಯೋಗ, ಎತ್ತರದಿಂದ ಬೀಳುವ ಪ್ರಸಂಗ

ಕನ್ಯಾ - ದೂರ ಪ್ರವಾಸದ ಯೋಗ ಪ್ರವಾಸ ಕಾಲದಲ್ಲಿ ನೂತನ ಪರಿಚಯ ಆರೋಗ್ಯ ನೆಟ್ಟಗೆ ಹಣ ಕಾಸಿನ ಲಾಭ ತಾ|| ೧, ೨ ಜಾಗರಣೆ ಕಣ್ಣಾರಿ

ತುಲ — ಆರೋಗ್ಯ ಉತ್ತಮ ಪರೋಪಕಾರ ಕಾರ್ಯ ಜರುಗುವುದು ಪ್ರವಾಸ ಫಲ ಪ್ರದವಾಗುವುದು ಆರ್ಥಿಕ ಸ್ಥಿತಿ ಉತ್ತಮ ತಾ|| ೧, ೨ ನಿದ್ರಾನಾಶ, ಆಪ್ತರಿಗೆ ಸತ್ಕಾರ

ವೃಶ್ಚಿಕ — ಚಿತ್ತ ವೃತ್ತಿಯ ಪ್ರಕ್ಷುಬ್ಧತ ಆರೋಗ್ಯ ನೆಟ್ಟಗಿರದು ನೌಕರಿಯಲ್ಲಿ ಮೇಲ್ಪಟ್ಟವರ ಅಸಂತೃಪ್ತಿ ವರ್ತನೆ ವ್ಯಾಪಾರಾದಿಗಳಲ್ಲಿ ಕ್ಲೇಶ ತಾ|| ೩, ೪ ಅಪಘಾತ ಭಯ, ಧನ ಚಿಂತೆ

ಧನು — ಕೆಮ್ಮು, ನೆಗಡಿ ಬಾಧೆ ವ್ಯಾಪಾರಾದಿಗಳಲ್ಲಿ ನಿರುತ್ಸಾಹ ನೌಕರಿಯಲ್ಲಿ ಕಲಹ. ಅನಿರೀಕ್ಷಿತ ವರ್ತನೆ ತಾ|| ೧, ೩ ಆರ್ಥಿಕ ಚಿಂತೆ ನಿವಾರಣೆ, ಸಜ್ಜನರ ಸಹಾಯ

ಮಕರ — ಅನೇಕ ಮಹತ್ವ ಕಾರ್ಯಗಳ ಸಾಧನೆ ಆರೋಗ್ಯ ನೆಟ್ಟಗೆ ಧನಾದಾಯ ಮಾನ ಸನ್ಮಾನ ಪ್ರವಾಸ ಸ್ವಕರ ತಾ|| ೩, ೫ ಸ್ತ್ರೀಯರಿಂದ ಉತ್ತೇಜನ, ಮಹತ್ವದ ಪತ್ರ

ಕುಂಭ — ಆರೋಗ್ಯ ಉತ್ತಮ ಚಿತ್ತ ಚಾಂಚಲ್ಯ ವಿದ್ಯಾಂಸರಿಗೆ ಸತ್ಕಾರ ಹಣ ಕಾಸಿನ ಸ್ಥಿತಿ ಸುಧಾರಣೆ ನೌಕರಿಯಲ್ಲಿ ಪ್ರಶಂಸೆ ತಾ|| ೧, ೨ ಪರೋಪಕಾರ, ಗೊಂದಲ

ಮೀನ—ಯೋಚಿಸಿದ ಕಾರ್ಯ ಜಯ ಆರೋಗ್ಯ ನೆಟ್ಟಗೆ ಚಿಂತಾ ನಿವಾರಣೆ ಪರೋಪಕಾರ ಕಾರ್ಯ ತಾ|| ೩, ೪ ಖರ್ಚು, ಗೊಂದಲ

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ಸಂಸ್ಥಾನಗಳ ಕಾರ್ಮಿಕ ಸಚಿವರ ಸಮ್ಮೇಳನ

ಭಾರತದ ಎಲ್ಲ ಪ್ರದೇಶಗಳಲ್ಲಿನ ಕಾರ್ಮಿಕರಿಗೂ ಅನ್ವಯಿಸುವಂತಹ ಶಾಸನವನ್ನು ಜಾರಿಗೆ ತರುವ ಬಗ್ಗೆ ಪರಿಶೀಲನೆ ನಡೆಸಲು ಬರುವ ಅಕ್ಟೋಬರ್ ತಿಂಗಳಲ್ಲಿ ಭಾರತದ ಸರ್ಕಾರದವರು ನೈನಿಟಾಲಿನಲ್ಲಿ ಎಲ್ಲ ಸಂಸ್ಥಾನಗಳ ಕಾರ್ಮಿಕ ಸಚಿವರ ಸಮ್ಮೇಳನವನ್ನು ಕರೆದಿರುವರೆಂದು ತಿಳಿದುಬಂದಿದೆ

ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾಮಂದಿರದ ಏಳನೇ ವಾರ್ಷಿಕೋತ್ಸವವು ನೆನ್ನೆ ಸಹಕಾರ ಭವನದಲ್ಲಿ ಬಹು ವೈಭವದಿಂದ ಜರುಗಿತು ವಿದ್ಯಾ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು ಮಂದಿರದ ವಿದ್ಯಾರ್ಥಿಗಳಿಂದ ಪ್ರಾರ್ಥನೆ ಶ್ರೀ ಆರ್. ಸೀತಾರಾಂರವರಿಂದ ಸ್ವಾಗತ ಗೀತೆ, ಸಂಸ್ಥೆಯ ಅಧ್ಯಕ್ಷರಾದ ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರ ಸ್ವಾಗತ ಭಾಷಣ ಶಾಲಾ ವಿದ್ಯಾರ್ಥಿಗಳಿಂದ ಸಂಗೀತ ಮೈಸೂರು ಸಹೋದರರಲ್ಲೊಬ್ಬರಾದ ಶ್ರೀ ಆರ್ ಸತ್ಯನಾರಾಯಣರವರಿಂದ ಸಾಮಾನ್ಯ ವರದಿಗಳಾದನಂತರ ವಿದ್ಯಾಮಂದಿರದ ಸಂಶೋಧನಾ ಸಮಿತಿ ಅಧ್ಯಕ್ಷರಾದ ಡಾ|| ಎಸ್ ಶ್ರೀಕಂಠಶಾಸ್ತ್ರಿಯವರು ಸಮಿತಿಯ ವರದಿಯನ್ನೊಪ್ಪಿಸಿದರು ತರುವಾಯ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು ಅವರು ಭಾಷಣ ಮಾಡಿ ಮಂದಿರಕ್ಕೆ ಯಶಸ್ಸನ್ನು ಕೋರಿ, ಸಂಗೀತ ಕಲೆಯ ಮಹತ್ವವನ್ನು ವಿವರಿಸಿದರು ಸಂಗೀತ ಮಂದಿರಕ್ಕೆ ಸರ್ಕಾರದವರು ಪ್ರೋತ್ಸಾಹ ಕೊಡುವುದಾಗಿಯೂ ಅವರು ಆಶ್ವಾಸನೆಯನ್ನು ಇತ್ತರು ಶ್ರೀ ಆರ್ ಚಂದ್ರಶೇಖರಯ್ಯನವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು

ರಾಜಕಮಲ್, ಮೈಸೂರು

29-8-52 ರಿಂದ : 2 ನೇ ವಾರ

ಶ್ರೀನಿವಾಸ ಕಲ್ಯಾಣ

ಪಾತ್ರ ಅಮೀರ್ ಬಾಯಿ ಕರ್ನಾಟಕಿ

ಪ್ರತಿಮಾದೇವಿ, ಹರಿಣಿ ಜಯಶ್ರೀ

ಎ ಕೆ ಶ್ರೀನಿವಾಸರಾವ್ ಸಿಮಹಾನಂದ

ದಾಸ್, ವೀರಭದ್ರಪ್ಪ ಕೊಟ್ಟೂರು ಬಸಪ್ಪ

ಮರಿರಾವ್, ಮಹಾಬಲರಾವ್

ಮೀನುಗಳಿಂದ ನದಿಗೆ ಎಳೆಯಲ್ಪಟ್ಟ ಬೆಸ್ತರು

ಕಾನ್ಪುರದ ಬಳಿ ಗಂಗೆಯಲ್ಲಿ ಮೀನು ಹಿಡಿಯಲು ಹೋದ ಇಬ್ಬರು ನದಿಗೆ ಎಳೆಯಲ್ಪಟ್ಟ ಪ್ರಸಂಗವೊಂದು ವರದಿಯಾಗಿದೆ ಅವರ ಗಾಳಕ್ಕೆ ಒಂದು ಮಣ ತೂಕದ ಮೀನು ಸಿಕ್ಕಿತೆಂದೂ, ಅದನ್ನು ಎಳೆಯುವ ಪ್ರಯತ್ನದಲ್ಲಿ ಅವರುಗಳೇ ನದಿಗೆ ಎಳೆಯಲ್ಪಟ್ಟು ಮೀನು ತಪ್ಪಿಸಿಕೊಂಡು ಹೋಯಿತೆಂದೂ ಹೇಳಲಾಗಿದೆ ಹತ್ತಿರದಲ್ಲಿದ್ದ ಪೌರಸಭೆ ನೌಕರರು ಅವರನ್ನು ರಕ್ಷಿಸಿದರೆಂದು ಹೇಳಲಾಗಿದೆ

ಗಣಪತಿಯ ಮಂಗಳಾರತಿ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಭಾವಸಾರ ಕ್ಷತ್ರಿಯರ ಸೋಷಿಯಲ್ ಇನ್ಸ್ಟಿಟ್ಯೂಟಿನಲ್ಲಿ ನಾಳೆ ಸಂಜೆ ೬|| ಗಂಟೆಗೆ ಗಣಪತಿ ಮಂಗಳಾರತಿಯು ನಡೆಯುವುದು ಪೌರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು ನಂತರ ಸಯ್ಯಾಜಿರಾವ್ ರಸ್ತೆ ಅಶೋಕಾ ರಸ್ತೆಗಳ ಮೂಲಕ ಗಣಪತಿಯ ಉತ್ಸವವನ್ನು ಕಪ್ಪಣ್ಣನ ತೊಟ್ಟಿಗೆ ಕೊಂಡೊಯ್ಯಲಾಗುವುದು

ಶಾರದಾಪೂಜೆ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಸುಗುಣಾ ಹಿಂದೀ ಸಮಾಜದಲ್ಲಿ ಶಾರದಾ ಪೂಜೆಯು ಮಹಾರಾಜಾ ಕಾಲೇಜಿನ ಉಪಾಧ್ಯಾಯರಾದ ಶ್ರೀ ವೇ ರಾಜೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ಜರುಗಿತು ವಿದ್ಯಾರ್ಥಿನಿಯರಿಂದ ಸ್ವಾಗತ, ಪ್ರಾರ್ಥನೆಗಳಾದ ನಂತರ ಶ್ರೀಮತಿ ಬಿ ವಿ ಪದ್ಮಾರವರಿಂದ ಸಂಗೀತವು ನಡೆಯಿತು ಅಧ್ಯಕ್ಷರು ವಿದ್ಯಾರ್ಥಿನಿಯರಿಗೆ ಹಿಂದೀ ಪರೀಕ್ಷೆಗಳ ಪ್ರವೇಶ ಪತ್ರಗಳನ್ನು ಹಂಚಿದರು ಹಿಂದಿ ಭಾಷೆಯ ಪ್ರಚಾರದ ಅವಶ್ಯಕತೆಯನ್ನು ಅವರು ವಿವರಿಸಿ, ಇಂತಹ ಸಮಾಜಗಳು ಇನ್ನೂ ಹೆಚ್ಚಾಗಿ ಸ್ಥಾಪಿತವಾಗಬೇಕೆಂದು ತಿಳಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರ ಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಚಂಪೈ ವೈದ್ಯನಾಥ ಭಾಗವತರ ಕರ್ನಾಟಕ ಸಂಗೀತ ಮಧ್ಯಾಹ್ನ ೧ ೩೦ ನಾಗಸ್ವರ, ೨ ಚಿತ್ರಸ ಗೀತ ಸಂಜೆ ೫ ೦೫ ಹೆಚ್ ಟಿ ವೆಂಕಟರಾಮಯ್ಯ ಸಿಟೀಲು, ೬ ೧೦ ಗಾನ ವಿಹಾರ, ೭ ಕೃಷಿಕರ ಪಠಣ ೭ ೧೫ ಕನ್ನಡ ಪದ್ಯ ವಾಚನ, ೭ ೪೦ ಪುಸ್ತಕ ವಿಮರ್ಶೆ, ೮ ಹೆಚ್ ಟಿ ವೆಂಕಟರಾಮಯ್ಯ ಪಿಟೀಲು ೮ ೩೦ ಮತ್ತು ೯ ೩೦ ಎಂ. ಎ ಮಾಲತಿ ಸಂಗೀತ ೯ ೧೫ ಇಂಗ್ಲೀಷ್ ಭಾಷಣ

ತತ್ವ ಶಾಸ್ತ್ರ ಸಮ್ಮೇಳನ

ಬರುವ ಡಿಸೆಂಬರಿನ ಕಡೆಯ ವಾರದಲ್ಲಿ ರಾಜಧಾನಿಯಲ್ಲಿ ಭಾರತೀಯ ತತ್ವ ಶಾಸ್ತ್ರ ಸಮ್ಮೇಳನದ ೨೭ ನೇ ಅಧಿವೇಶನವು ನಡೆಯುವುದು ಭಾರತದ ಉಪಾಧ್ಯಕ್ಷರಾದ ಡಾ|| ರಾಧಾಕೃಷ್ಣನ್ ರವರು ಅದರಲ್ಲಿ ಭಾಗವಹಿಸುವರು

ಚಂದಾದಾರರಲ್ಲಿ ವಿನಂತಿ

ನಮ್ಮ ರಶೀತಿಯನ್ನು ಪಡೆಯದೆ ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,

ಏಜೆಂಟರು, "ಸಾಧ್ವಿ" ಮೈಸೂರು

ಅಕ್ರಮ ನಾಟಾ ದಾಸ್ತಾನಿನ ಪತ್ತೆ

ಸ್ವಂ ಸು] ಚಾಮರಾಜನಗರ ೨೯

ಈ ತಾಲ್ಲೂಕಿನ ಹಲವು ಗ್ರಾಮಗಳಿಗೆ ಅಕ್ರಮವಾಗಿ ಸಾಗಿಸಿ ದಾಸ್ತಾನು ಮಾಡಲಾಗಿತ್ತೆಂದು ಹೇಳಲಾದ ಅನೇಕ ನಾಟಾ ಮರಗಳು ಪತ್ತೆಯಾಗಿವೆ ಅರಣ್ಯ ಇಲಾಖಾಧಿಕಾರಿಗಳೂ, ನೌಕರರೂ ಪತ್ತೆ ತರದೂದಿನಲ್ಲಿ ತುಂಬಾ ಶ್ರದ್ಧೆವಹಿಸಿ ಕ್ರಮ ಜರುಗಿಸುತ್ತಿರುವರು ಸರಗೂರು, ಮಸಣಾಪುರ, ಹೊಂಗನೂರು, ಯಳಂದೂರು ಮುಂತಾದೆಡೆಗಳಲ್ಲಿ ಹೆಚ್ಚು ಮಾಲು ಸಿಕ್ಕಿರುತ್ತವೆ ಹೊಂಗನೂರಿನಲ್ಲಿ ವಾರಸುದಾರರಿಲ್ಲದೆ ಸುಮಾರು ೭-೮ ಲಾರಿಗಳಲ್ಲಿ ತುಂಬುವಷ್ಟು ಮರವು ಬಿದ್ದಿದ್ದುದನ್ನು ಇಲಾಖೆಯವರು ವಶಪಡಿಸಿಕೊಂಡಿರುವರು ಸಾವಿರಾರು ರೂಪಾಯಿಗಳು ಇದರಿಂದ ಸರ್ಕಾರಕ್ಕೆ ಉಳಿತಾಯವಾಗಿರುತ್ತದೆ ಇತ್ತೀಚಿಗೆ ಹಲವು ಜನರು ಅರಣ್ಯಾಧಿಕಾರಿಗಳ ಮೇಲೆ ಕೈ ಮಾಡಿದರೆಂದೂ ತಿಳಿದುಬಂದಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೮-೦ ೦	೨೦ ೧೨ ೦
ಎಳ್ಳು	೭೦ ೦ ೦	೭೬-೧೦ ೦
ಹುಚ್ಚೆಳ್ಳು	೫೩ ೦ ೦	
ಹರಳು ಬೀಜ	೪೮ ೦ ೦	
ಹುರುಳಿ	೪೨ ೦ ೦	
ಹೆಸರು	೬೭ ೦-೦	
ಹೊಂಗೇಬೀಜ	೨೫ ೨ ೦	
ಉದ್ದು	೭೩ ೪ ೦	
ಅವರೆ	೭೫ ೦ ೦	
ಹಲಸಂದೆ	೭೪ ೦-೦	೭೬ ೬ ೦
ಮೆಣಸಿನಕಾಯಿ ಮಣಕ್ಕೆ	೧೧ ೧೨ ೦	
ಮಾಂಸೇಹಣ್ಣು	೫-೧-೦	೫-೬-೦
ಶುಂಗೇಕಾಯಿ	೫-೬ ೦	
ತೆಂಗಿನಕಾಯಿ ೧೦೦೦	೧೬೫ ೦ ೦	೨೨೯ ೦ ೦

ವರದಕ್ಷಿಣೆ

ಹುಬ್ಬಳ್ಳಿಯ ಆರ್ಯ ಸಮಾಜದವರು ಪ್ರಕಟಿಸುತ್ತಲಿರುವ ಸದ್ಧರ್ಮ ಪ್ರಚಾರಕ ಗ್ರಂಥ ಮಾಲೆಯ ಅಂಗವಾಗಿ ವರದಕ್ಷಿಣೆ ಎಂಬ ಚಿಕ್ಕ ಗ್ರಂಥವೊಂದನ್ನು ಹೊರಡಿಸಲಾಗಿದೆ. ವರದಕ್ಷಿಣೆ ಪದ್ಧತಿಯಿಂದ ಸಮಾಜಕ್ಕೆ ಆಗುವ ತೊಂದರೆಗಳನ್ನು ಅದರಲ್ಲಿ ಸೂಕ್ಷ್ಮವಾಗಿ ವರ್ಣಿಸಲಾಗಿದೆ ಸಾಮಾಜಿಕ ಸುಧಾರಣೆಯಲ್ಲಿ ಹೆಚ್ಚು ಆಸಕ್ತಿಯುಳ್ಳವರು ಓದಬೇಕಾದ ಗ್ರಂಥವಿದು ಬೆಲೆ ೦-೨-೦

ಶ್ರೀ ಜಗದಾಂಬ ಶಿಶುವಿಹಾರ

585, ದಿವಾನ್ಸ್ ರಸ್ತೆ ಮೈಸೂರು

ಶಿಶು ಮನಶ್ಶಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳಿಗನುಸಾರವಾಗಿ ಉತ್ತಮ ಕರವಾದ ಪರಿಸರಣಕ್ಕನುಗುಣವಾದ ಬಂಗಲೆಯಲ್ಲಿ, ಉತ್ತಮೋತ್ತಮವಾದ ವಿದ್ಯಾಭ್ಯಾಸದ ಉಪಕರಣಗಳ ಸಹಾಯದಿಂದ ನೃತ್ಯ ಗೀತ ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಮೇಲ್ಮಟ್ಟದ ಶಿಶುವಿಹಾರದಲ್ಲಿ ಕೊಡಲಾಗುತ್ತಿದೆ ಈ ಸುಸಮಯವನ್ನು ಕಳೆದುಕೊಳ್ಳದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ

ಡಿ ಕೃಷ್ಣಮೂರ್ತಿ,

ಡೈರೆಕ್ಟರ್

Edited, Printed and Published by A. R Nagarajan at Sadhvi Press, D Subbiah Road, Mysore.

ಟೆಲಿಫೋನ್ ನಂ. 792 ||ವಂದೇ ಮಾತರಂ|| ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧-೯-೧೯೫೨ [ಸಂಚಿಕೆ ೩೦

ಖಾಸಗಿ ಶಾಲಾಧ್ಯಾಪಕ – ರಿಗೆ ಹೆಚ್ಚಿನ ಸಂಬಳ –

ನೇಪಾಳದ ಮಾಜಿ ಪ್ರಧಾನಿಗೆ ಬಹಿಷ್ಕಾರ

ನೇಪಾಳದ ಮಾಜಿ ಮುಖ್ಯ ಮಂತ್ರಿ ಎಂ. ಪಿ. ಕೊಯಿರಾಲಾ ಮತ್ತು ಅವರ ಇಬ್ಬರು ಅನುಯಾಯಿಗಳನ್ನು ಮೂರು ವರ್ಷ ಕಾಲ ಕಾಂಗ್ರೆಸ್ಸಿನಿಂದ ಹೊರಗೆ ಹಾಕಬೇಕೆಂಬ ಕಾರ್ಯಕಾರಿ ಸಮಿತಿಯ ಸಲಹೆಯನ್ನು ಅಲ್ಲಿನ ಕಾಂಗ್ರೆಸ್ ಸಮಿತಿಯು ಅಂಗೀಕರಿಸಿದೆ.

ಬಾಲಕಿಯ ಕೈ ಕತ್ತರಿಸಿದ ಅಧ್ಯಾಪಕರಿಗೆ ಸಜಾ

ತಿರುನಲ್ವೇಲಿಯ ಕದಂಬೂರ್ ಬಳಿ ಪ್ಪುಕುಳಂ ಎಂಬ ಗ್ರಾಮದ ಹರಿಜನರ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಕೋವಿಲ್‌ಪಿಳ್ಳೈ ಎಂಬುವರು ವಳ್ಳಿಯಮ್ಮಾಳ್ ಎಂಬ ೧೩ ವರ್ಷದ, ಶಾಲಾ ಬಾಲಕಿಯ ಕೈಯನ್ನು ಕತ್ತರಿಸಿದ ಅಪರಾಧಕ್ಕಾಗಿ ಐದು ವರ್ಷ ಕಠಿಣ ಸಜಾ ಮತ್ತು ೨೦೦ ರೂ. ಜುಲ್ಮಾನೆ ತಪ್ಪಿದರೆ ಮತ್ತೆ ೬ ತಿಂಗಳು ಕಠಿಣ ಸಜಾ ಶಿಕ್ಷೆಗೆ ಗುರಿಯಾಗಿರುವರು. ಬಾಲಕಿಯನ್ನು ಶಾಲೆಯಲ್ಲಿ ದಂಡಿಸುತ್ತಿದ್ದ ಬಗ್ಗೆ ಅವಳು ತನ್ನ ತಂದೆಯೊಡನೆ ಮಾತು ಹೇಳುತ್ತಿದ್ದುದನ್ನು ಮುಖ್ಯೋಪಾಧ್ಯಾಯರು ಸಹಿಸದೆ ಕಳೆದ ಅಕ್ಟೋಬರ್ ೨೭ ನೇ ತಾ|| ಕುಡುಗೋಲಿನಿಂದ ಹೊಡೆದು ಅವಳ ಬಲಗೈಯನ್ನು ಕತ್ತರಿಸಿದರೆಂದು ಆಪಾದಿಸಲಾಗಿತ್ತು. ಜಡ್ಜ್‌ರವರು ಈ ಆಪಾದನೆಯನ್ನು ಸಿದ್ಧಪಡಿಸಿ ಘಟನೆಯು ನಡೆಯಿತೆಂದು ಹೇಳಿ ಇನ್ನು ಮುಂದೆ ಆ ದಿನ ತಾವು ಆ ಗ್ರಾಮದಲ್ಲಿ ಇರಲೇ ಇಲ್ಲ ಎಂದು ತಿಳಿಸಿದರು. ಜುಲ್ಮಾನೆಯ ಹಣದಲ್ಲಿ ೧೫೦ ರೂ ಗಳನ್ನು ಆ ಬಾಲಕಿಗೆ ಪರಿಹಾರವಾಗಿ ಕೊಡಬೇಕೆಂದು ನ್ಯಾಯಾಧೀಶರು ಆಜ್ಞೆ ಮಾಡಿರುವರು.

ಭೂಮಿಯಿಂದ ಮಾನವನ ಕೈಯಿನ ಮೊಳಕೆ

ಹೈದರಾಬಾದಿನ ನಲಗೊಂಡ ಜಿಲ್ಲೆಯ ಜನಗಾಂವ ತಾಲ್ಲೂಕಿಗೆ ಸೇರಿದ ದುರ್ಗಲಗುಡ ಎಂಬಲ್ಲಿ ಮಾನವನ ಕೈ ಒಂದು ಭೂಮಿಯಿಂದ ಮೊಳೆಯುತ್ತಿರುವುದೆಂದು ವರದಿಯಾಗಿದೆ. ಇದು ಬಹು ಜನರ ಗಮನವನ್ನು ಸೆಳೆದಿದೆ. ಒಬ್ಬ ಹುಡುಗನ ಮಾತೃಹತ್ಯೆ ನಡೆದು ಆ ವಿಚಿತ್ರ ಸಂಗತಿ ತಲೆದೋರಿರುವುದೆಂದೂ, ಅದು ದೇವರ ಮಹಿಮೆ ಎಂದು ಹೇಯವಾದುದೆಂದೂ ಸ್ಥಳೀಯ ಜನರು ಭಾವಿಸಿರುವರು.

ಬೆಂಕಿ ಬಿದ್ದು ೬ ಜನರ ಮರಣ

ಉತ್ತರ ಪ್ರದೇಶದ ದಯಾಳ್‌ಗಂಜ್ ಪ್ರದೇಶದಲ್ಲಿ ಒಂದು ಮನೆಯಲ್ಲಿ ಇದ್ದಕ್ಕಿದ್ದ ಹಾಗೆ ಮೊನ್ನೆ ರಾತ್ರಿ ಬೆಂಕಿ ಬಿದ್ದು ಹತ್ತಿ ಉರಿದು ಉರುಳಿ ಹೋಯಿತೆಂದೂ, ಮನೆಯಲ್ಲಿದ್ದ ೬ ಜನರೂ ಜೀವ ಸಹಿತ ಸುಟ್ಟು ಬೆಂದು ಹೋದರೆಂದೂ ವರದಿಯಾಗಿದೆ.

ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಪಡಿಸಲು ಪುರಸಭೆಗಳಿಗೆ ಸರ್ಕಾರದ ಧನ ಸಹಾಯ

ಸಂಸ್ಥಾನದ ಹಲವು ನಗರಗಳಲ್ಲಿ ನೀರು ಸರಬರಾಜು ಮತ್ತು ಚರಂಡಿ ವ್ಯವಸ್ಥೆಗಳನ್ನು ಉತ್ತಮಪಡಿಸುವ ಸಲುವಾಗಿ ಸರ್ಕಾರವು ೩೦ ಲಕ್ಷ ರೂ. ಸಾಲವನ್ನು ಕೊಡುವ ಅಂಶವು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿರುವುದೆಂದು ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಟಿ. ಚನ್ನಯ್ಯನವರು ಕಳೆದ ೨೩ ನೇ ತಾರೀಖು ಭದ್ರಾವತಿ ಪುರಸಭೆಯ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದರು.

ನೆಟಾಲ್ ನಗರದ ಮೇಲೆ ಭಾರತೀಯರ ಕಣ್ಣು !

ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲಿನ ಬೆನೋನಿ ಎಂಬಲ್ಲಿ ಪ್ರಧಾನಿ ಡಾ|| ಮಲಾನರು ಮೊನ್ನೆ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ನೆಟಾಲಿನಿಂದ ಬಿಳಿಯ ವರ್ಣೀಯರು ಹೊರ ಹೊರಟು ಸುಂದರವಾದ ಆ ನಗರವನ್ನು ಭಾರತೀಯರಿಗೆ ವಹಿಸಿಕೊಟ್ಟಲ್ಲಿ ತಮಗೆ ಭಾರತದ ಸ್ನೇಹ ಹಸ್ತವು ದೊರೆಯುವುದೆಂದು ಆಪಾದಿಸಿದ್ದಾರೆ. ಆದರೆ ಅಂತಹ ಸ್ನೇಹವನ್ನು ದಕ್ಷಿಣ ಆಫ್ರಿಕವು ಬಯಸುವುದಿಲ್ಲವೆಂದು ಹೇಳಿ, ಬ್ರಿಟನ್ ಮತ್ತು ಅಮೆರಿಕಗಳು ಸಂಸ್ಥಾನಗಳು ರಾಷ್ಟ್ರಗಳಿಗೆ ಭಾರತದ ಬೆಂಬಲವನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಅದರೊಡನೆ ನಲಿಯುತ್ತಿವೆಯೆಂದೂ, ಬ್ರಿಟನ್ನು ಆಫ್ರಿಕದ ಬಗ್ಗೆ ತನ್ನ ಹಿಂದಿನ ನೀತಿಯನ್ನೇ ಮುಂದುವರಿಸಿದರೆ ಅಲ್ಲಿ ತನ್ನ ಅಳಿವನ್ನು ಕಾಣುವುದು ಸಿದ್ಧವೆಂದೂ ಎಚ್ಚರಿಸಿರುವರು.

ರಾಜಪ್ರಮುಖರ ರದ್ದಿಗೆ ಕಾಂಗ್ರೆಸ್ ಕೂಟ

ಇಂದೂರಿನಲ್ಲಿ ಈ ತಿಂಗಳು ೧೩ ನೇ ತಾ|| 'ಬಿ' ಸಂಸ್ಥಾನಗಳ ಕಾಂಗ್ರೆಸ್ ಪ್ರತಿನಿಧಿಗಳ ಕೂಟವೊಂದನ್ನು ಸೇರಿಸಿ ರಾಜ ಪ್ರಮುಖರುಗಳ ಹುದ್ದೆಗಳನ್ನು ರದ್ದುಗೊಳಿಸುವ ವಿಷಯವನ್ನು ಅಲ್ಲಿ ಪರಿಶೀಲಿಸಲಾಗುವುದೆಂದು ವರದಿಯಾಗಿದೆ. ಈ ಕೂಟವನ್ನು ಪೆಪ್ಸುವಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಸರ್ದಾರ್ ಹರಚರಣ್ ಸಿಂಗ್‌ರವರು ಕರೆದಿರುವರು.

ಕಾರ್ಖಾನೆಯ ಬಂಡವಾಳದಲ್ಲಿ ಕಾರ್ಮಿಕರ ಭಾಗ

ಹೈದರಾಬಾದಿನ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯೊಂದರ ಆರ್ಥಿಕ ಸ್ಥಿತಿಯು ತೀರಾ ಕೆಟ್ಟು ಇಂದಿನಿಂದ ಅದು ಮುಚ್ಚುವ ಸ್ಥಿತಿಗೆ ಬಂದಿದ್ದಿತೆಂದೂ, ಆದರೆ ಸಂಸ್ಥಾನದ ಕಾರ್ಮಿಕ ಸಚಿವರ ಸಲಹೆ ಮೇರೆ ಸಂಸ್ಥೆಯ ಆಡಳಿತ ವರ್ಗದವರೂ ಮತ್ತು ಕಾರ್ಮಿಕರೂ ಬಂಡವಾಳದಲ್ಲಿ ಭಾಗ ಹೊಂದಿ ಕಾರ್ಖಾನೆಯನ್ನು ಮುಂದುವರಿಸಲು ನಿರ್ಧರಿಸಿ ಸೂಕ್ತ ವ್ಯವಸ್ಥೆ ಮಾಡಿರುವರೆಂದೂ ತಿಳಿದುಬಂದಿದೆ.

ಹೈದರಾಬಾದ್ ಸರ್ಕಾರದಲ್ಲಿ ಹೊರಗಿನವರ ನೇಮಕಕ್ಕೆ ವಿರೋಧ

ಹೈದರಾಬಾದಿನಲ್ಲಿ ಹೊರಗಿನಿಂದ ಬಂದು ನೆಲೆಸಿರುವವರನ್ನು ಸರ್ಕಾರೀ ಕೆಲಸಗಳಿಗೆ ಹೆಚ್ಚು ಹೆಚ್ಚಾಗಿ ನೇಮಿಸಿಕೊಳ್ಳಲಾಗುತ್ತಿರುವುದನ್ನು ವಿರೋಧಿಸಲು ಅಲ್ಲಿನ 'ಅಜಾದ್ ಹೈದರಾಬಾದ್' ಸಂಘದವರು ಪ್ರದರ್ಶನ ಮತ್ತು ಹರತಾಳಗಳನ್ನು ಏರ್ಪಡಿಸಿದ್ದರೆಂದೂ, ಅಲ್ಲಿನ ವಿದ್ಯಾರ್ಥಿಗಳು ಅವರಲ್ಲಿ ಭಾಗವಹಿಸಿದ್ದರೆಂದೂ ಹೇಳಲಾಗಿದೆ. ಈ ಬಗ್ಗೆ ಸರ್ಕಾರದವರು ಒಂದು ಎಚ್ಚರಿಕೆಯ ಸೂಚನೆಯನ್ನಿತ್ತು ಅಂತಹ ಪ್ರದರ್ಶನಗಳು ಭಾರತ ರಾಜ್ಯಾಂಗಕ್ಕೆ ವಿರುದ್ಧವಾದುವೆಂದೂ, ಭಾರತದ ಯಾವ ಪ್ರದೇಶದ ಪ್ರಜೆಯಾದರೂ ಎಲ್ಲಿ ಬೇಕಾದರೂ ಕೆಲಸಕ್ಕೆ ಸೇರಬಹುದೆಂದೂ ಮತ್ತು ವ್ಯಾಪಾರ ವ್ಯವಹಾರವನ್ನು ನಡೆಸಬಹುದೆಂದೂ ತಿಳಿಸಿ ಇದರ ವಿರುದ್ಧ ಪ್ರದರ್ಶನ ನಡೆಸುವವರ ಮೇಲೆ ಉಗ್ರ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುವರು.

'ಹಿಂದಿಗೆ' ಬದಲು 'ಭಾರತಿ'

ಬೊಂಬಾಯಿಯಲ್ಲಿ ನೆನ್ನೆ ನಡೆದ ಪ್ರದೇಶ ರಾಷ್ಟ್ರಭಾಷಾ ಪ್ರಚಾರ ಸಭೆಯ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದ ಮಧ್ಯಪ್ರದೇಶದ ಮಾಜಿ ಗವರ್ನರ್ ಶ್ರೀ ಮಂಗಳದಾಸ್ ಪಕ್ವಾಸಾರವರು ಭಾಷಣ ಮಾಡಿ ಇನ್ನು ಮುಂದೆ ಭಾರತದ ರಾಷ್ಟ್ರಭಾಷೆಯಾದ ಹಿಂದೀ ಆ ಹೆಸರಿಗೆ ಬದಲಾಗಿ "ಭಾರತಿ" ಎಂದು ನಾಮಕರಣ ಮಾಡಬೇಕೆಂದು ಸಲಹೆ ಮಾಡಿದರು.

ಮೆಟ್ರೊಪಾಲಿಟನ್ ಕಾಲೇಜ್

ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನೆನ್ನೆ ರಾಜಧಾನಿಯ ಭಾಂಪಿಯರ್ ಮೆಟ್ರೊಪಾಲಿಟನ್ ಕಾಲೇಜ್ ಆಫ್ ಕಾಮರ್ಸ್ ಸಂಸ್ಥೆಗೆ ಭೇಟಿಯಿತ್ತು ಅಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು ನೋಡಿ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಪ್ರಿನ್ಸಿಪಾಲರಾದ ಶ್ರೀ ಪಿ. ಸುಬ್ಬರಾಯಶಾಸ್ತ್ರಿಯವರು ಸಚಿವರನ್ನು ಸ್ವಾಗತಿಸಿ ಕಾಲೇಜಿನ ಅಭಿವೃದ್ಧಿಯನ್ನು ವಿವರಿಸಿದರು.

ಖಾಸಗೀ ಶಾಲೆಗಳ ಶಿಕ್ಷಕರಿಗೆ ಹೆಚ್ಚಿನ ಸಂಬಳ

ಭಾರತ ಸರ್ಕಾರದ ವಿದ್ಯಾ ಇಲಾಖೆಯವರು ಒಂದು ಪ್ರಕಟಣೆಯನ್ನು ಹೊರಡಿಸಿ, ಸರ್ಕಾರದಿಂದ ಸಹಾಯ ಧನವನ್ನು ಪಡೆಯುತ್ತಿರುವ, ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಮತ್ತು ಖಾಸಗಿ ಶಾಲೆಗಳ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಿ, ಸರ್ಕಾರಿ ಶಾಲೆಗಳ ಉಪಾಧ್ಯಾಯರ ಸಂಬಳದ ಮಟ್ಟಕ್ಕೆ ತರಬೇಕೆಂದು ಸೂಚಿಸಿರುವರು. ಈ ಸೂಚನೆಯನ್ನು ಎಲ್ಲ ಸಂಸ್ಥಾನಗಳ ಸರ್ಕಾರಗಳಿಗೂ ಕಳುಹಿಸಲಾಗಿದೆ. ಶಾಲೆಗಳ ಮುಖ್ಯೋಪಾಧ್ಯಾಯರಿಗೆ ವಿಶೇಷ ಜವಾಬ್ದಾರಿಯಿರುವುದರಿಂದ ಅವರಿಗೆ ಹೆಚ್ಚಿನ ಸಂಬಳ ಅಥವಾ ಭತ್ಯವನ್ನು ಕೊಡಬೇಕೆಂದೂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇವಾಲಯಗಳ ಆಶ್ರಯದಲ್ಲಿ ಅನಾಥಾಲಯಗಳು

ಮದ್ರಾಸಿನ ಹಿಂದೂ ಧಾರ್ಮಿಕ ಸಹಾಯ ನಿಧಿ ಸಂಸ್ಥೆಯವರು ಇನ್ನು ಮುಂದೆ ಸಂಸ್ಥಾನದ ದೇವಾಲಯಗಳ ಆಶ್ರಯದಲ್ಲಿ ಹಲವಾರು ಅನಾಥಾಲಯಗಳನ್ನು ಸ್ಥಾಪಿಸಲು ಯೋಚಿಸಿ, ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಮೊದಲು ಒಂದೊಂದನ್ನು ತೆರೆಯಲು ನಿರ್ಧರಿಸಿರುವರು. ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ೫ ವರ್ಷದಿಂದ ೮ ವರ್ಷದೊಳಗಿನ ಅನಾಥರನ್ನು ಅನಾಥಾಲಯಕ್ಕೆ ಸೇರಿಸಿಕೊಂಡು ಅವರಿಗೆ ೩ನೇ ಫಾರಂವರೆಗೆ ಶಿಕ್ಷಣವನ್ನು ಕೊಟ್ಟು, ಯಾವುದಾದರೂ ಕೈ ಕಸಬಿನಲ್ಲಿ ಅವರನ್ನು ತರಪೇತು ಮಾಡಿ ೧೬ ನೇ ವಯಸ್ಸಿನ ನಂತರ ಹೊರಕ್ಕೆ ಕಳುಹಿಸಲಾಗುವುದೆಂದು ವರದಿಯಾಗಿದೆ.

ಕವಿಗಳ ಚಿತ್ರಗಳಿರುವ ಸ್ಟಾಂಪುಗಳು

ಗಾಂಧಿಜಯಂತಿ ಜನ್ಮ ದಿನದ ಪೂರ್ವಭಾವಿಯಾಗಿ, ಅಕ್ಟೋಬರ್ ೧ ನೇ ತಾ|| ನಿಂದ ಭಾರತ ಸರ್ಕಾರದವರು ಕಬೀರ್‌ದಾಸ್ (೯ ಕಾಸು), ತುಳಸಿ ದಾಸ್ (೧ ಆಣೆ), ಮೀರಾಬಾಯಿ (೨ ಆಣೆ), ಸೂರದಾಸ್ (೪ ಆಣೆ), ಗಲೀಬ್ (೪|| ಆಣೆ) ಮತ್ತು ಟಾಗೋರ್ (೧೨ ಆಣೆ) ರವರ ಚಿತ್ರದಿಂದ ಕೂಡಿದ ಅಂಚೆ ಸ್ಟಾಂಪುಗಳನ್ನು ಮಾರಾಟಕ್ಕೆ ಕೊಡಲಿರುವರು.

ಕೋರ್ಟಿಗೆ ಹಾಜರಾಗದ ಅಸೆಸರಿಗೆ ಜುಲ್ಮಾನೆ

ಅಸೆಸರಾಗಿ ಸರ್ವ ಜಾಂ ಮಾಡಲ್ಪಟ್ಟ ರಾಜಧಾನಿಯ ಹಾರ್ಮೋನಿಯಂ ವ್ಯಾಪಾರಿ ಶ್ರೀ ಎಂ. ಪುಟ್ಟಯ್ಯ ಎಂಬುವರು ಆ ದಿನ ಕೋರ್ಟಿಗೆ ಹಾಜರಾಗದ ಪ್ರಯುಕ್ತ ಸೆಷನ್ಸ್ ನ್ಯಾಯಾಧೀಶರು ಅವರಿಗೆ ೧ ನೂರು ರೂ. ಜುಲ್ಮಾನೆ ವಿಧಿಸಿರುವರು.

ನಾಗನಹಳ್ಳಿ ರೈತರ ದಿನಾಚರಣೆ

ನಾಗನಹಳ್ಳಿಯ ಕಿಸಾನ್ ಪಂಚಾಯಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ "ರೈತರ ದಿನಾಚರಣೆ" ಯು ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ನಡೆಯುವುದು.

ಶಾರದಾವಿಲಾಸ ಕಾಲೇಜಿನಲ್ಲಿ ಬಿ. ಎಸ್‌ಸಿ ತರಗತಿ

ವಿದ್ಯಾ ಸಚಿವರಿಂದ ಆರಂಭೋತ್ಸವ

ಮೈಸೂರು ೧

ಇಲ್ಲಿನ ಶಾರದಾ ವಿಲಾಸ ಕಾಲೇಜಿನಲ್ಲಿ ಹೊಸದಾಗಿ ಏರ್ಪಾಡಾಗಿರುವ ಜೂನಿಯರ್ ಬಿ ಎಸ್‌ಸಿ ತರಗತಿಯ ಆರಂಭೋತ್ಸವವನ್ನು ನೆನ್ನೆ ಬೆಳಗ್ಗೆ ವಿದ್ಯಾ ಮಂತ್ರಿ ಶ್ರೀ ಎ ಜಿ. ರಾಮಚಂದ್ರರಾಯರು ನೆರವೇರಿಸಿದರು. ಸರಸ್ವತಿ ಪೂಜೆ ಮತ್ತು ಪ್ರಾರ್ಥನೆಯ ನಂತರ ಶಾರದಾ ವಿಲಾಸ ಸಂಸ್ಥೆಗಳ ಸಮಿತಿ ಅಧ್ಯಕ್ಷರಾದ ರಾಜಸೇವಾಸಕ್ತ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಭಾಷಣ ಮಾಡಿ, ಸುಮಾರು ಒಂದು ಶತಮಾನದ ಹಿಂದೆ ಶ್ರೀ ಭಕ್ಷಿ ನರಸಪ್ಪನವರಿಂದ ಒಂದು ಸಣ್ಣ ಸಂಸ್ಕೃತ ಪಾಠಶಾಲೆಯಾಗಿ ಪ್ರಾರಂಭವಾದ ಈ ಸಂಸ್ಥೆಯು ಇಂದು ಕಾಲೇಜಿನ ಮಟ್ಟವನ್ನು ಮುಟ್ಟಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು. ಈ ಸಂಸ್ಥೆಗಾಗಿ ಯಾವಜ್ಜೀವವೂ ಶ್ರಮಿಸಿದ ವೃದ್ಧ ಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಗುಣಗಾನ ಮಾಡಿದರು.

ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಸಿ. ಗೋಪಾಲಕೃಷ್ಣ ಶೆಟ್ಟರು ವರದಿಯನ್ನೊಪ್ಪಿಸಿ ಸರ್ಕಾರದ ಮತ್ತು ಸಾರ್ವಜನಿಕರ ಸಹಕಾರದಿಂದ ಶಾಲೆಯು ಸಂಸ್ಥಾನದಲ್ಲೇ ಆದರ್ಶಪ್ರಾಯವಾಗಿ ನಡೆದುಕೊಂಡು ಬರುತ್ತಿರುವ ಅಂಶವನ್ನು ವಿವರಿಸಿದರು. ಸಧ್ಯದಲ್ಲಿಯೇ ಇಲ್ಲಿ ಒಂದು ಲಾ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಪರ್ಯಾಲೋಚನೆ ನಡೆಸುತ್ತಿದೆಯೆಂದೂ ಸೂಚಿಸಿದರು.

ವಿದ್ಯಾ ಮಂತ್ರಿಗಳು ತಮ್ಮ ಭಾಷಣದಲ್ಲಿ ಶಾಲೆಯ ಪುರೋಭಿವೃದ್ಧಿಗಾಗಿ ಸಂತೋಷವನ್ನು ಸೂಚಿಸಿ ಸ್ವಾರ್ಥತ್ಯಾಗಿಗಳೂ, ದೇಶ ಭಕ್ತರೂ ಆದ ಮಹನೀಯರ ಆಶೀರ್ವಾದ ಬಲದಿಂದ ಇದು ಇನ್ನೂ ಹೆಚ್ಚು ಯಶಸ್ವಿಯಾಗುವುದೆಂದು ನುಡಿದರು. ಮಹಾ ಜನರು ಈ ಸಂಸ್ಥೆಗೆ ಹೆಚ್ಚುಹೆಚ್ಚಾದ ಬೆಂಬಲನೀಡಬೇಕೆಂದು ಕೋರಿ ಸರ್ಕಾರದಿಂದ ಅಗತ್ಯವಾದ ಸಕಲ ಸಹಾಯಗಳನ್ನೂ ನೀಡುವುದಾಗಿ ಭರವಸೆಯಿತ್ತರು.

ಪ್ರಿನ್ಸಿಪಾಲರಾದ ಶ್ರೀ ಎಂ ಎಸ್ ರಾಮಸ್ವಾಮಿಯವರಿಂದ ಧನ್ಯವಾದಗಳಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಫುಟ್‌ಬಾಲ್ ಪಂದ್ಯ

ಶ್ರೀಮನ್ಮಹಾರಾಜರ ವರ್ಧಂತಿ ಸಂಬಂಧದಲ್ಲಿ ಏರ್ಪಾಡಾಗಿದ್ದ ಫುಟ್‌ಬಾಲ್ ಪಂದ್ಯದ ಫೈನಲ್ಸ್ ಆಟವು ನೆನ್ನೆ ರಾಜಧಾನಿಯ ದೊಡ್ಡ ಕೆರೆ ಮೈದಾನದಲ್ಲಿ ನಡೆದು ಸದರ್ನ ರೈಲ್ವೆಯವರು ನೇತಾಜಿ ಕ್ಲಬ್ಬಿನವರನ್ನು ಒಂದು ಗೋಲಿನಿಂದ ಸೋಲಿಸಿದರು.

ಚಂದಾದಾರರಲ್ಲಿ ವಿನಂತಿ

ನಮ್ಮ ರಶೀತಿಯನ್ನು ಪಡೆಯದೆ ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,

ಏಜೆಂಟರು, "ಸಾಧ್ವಿ" ಮೈಸೂರು

ಅಂಚೆ ಮೂಲಕ ಲಾಟರಿ ಟಿಕೆಟ್ಟು ಕಳುಹಿಸಲಾಗದು

ಲಾಟರಿ ಟಿಕೆಟ್ಟುಗಳು ಮತ್ತಿತರ ಲಾಟರಿಗೆ ಸಂಬಂಧಪಟ್ಟ ಸಾಹಿತ್ಯಗಳನ್ನು ಅಂಚೆ ಮೂಲಕ ಕಳುಹಿಸಬಾರದೆಂದು ಕೇಂದ್ರ ಸರ್ಕಾರದವರು ನಿಷೇಧಿಸಿರುವರು. ಸಂಸ್ಥಾನಗಳು ನಡೆಸುವ ಅಥವಾ ಸಂಸ್ಥಾನ ಸರ್ಕಾರಗಳ ಅನುಮೋದನೆ ಪಡೆದ ಲಾಟರಿಗಳ ಬಗ್ಗೆ ಈ ನಿಯಮದ ವಿನಾಯಿತಿ ತೋರಿಸಲಾಗಿದೆ.

ವೈಶ್ಯ ಪತ್ರಿಕೆಯ ೧೨ ನೇ ಜನ್ಮದಿನೋತ್ಸವ

ಮೈಸೂರು ವೈಶ್ಯ ಪತ್ರಿಕೆಯ ೧೨ ನೆ ಜನ್ಮದಿನೋತ್ಸವದ ಸಂಬಂಧವಾಗಿ ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ಭಾರಿ ಸಮಾರಂಭವೊಂದು ಏರ್ಪಾಡಾಗಿದ್ದಿತು. ರಾಜಸೇವಾಸಕ್ತ ಶ್ರೀ ಪಾಮಿಡಿ ಸುಬ್ಬರಾಮ ಶ್ರೇಷ್ಠಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ, ವಿದ್ವಾನ್ ವೆಂಕಟೇಶಯ್ಯನವರಿಂದ ಸ್ವಾಗತ, ಶ್ರೀ ಸುಬ್ಬರಾಮಯ್ಯನವರಿಂದ ತೆಲುಗು ಪದ್ಯ ಪಠಣಗಳಾದನಂತರ ಸಂಗೀತ ವಿದುಷಿ ಆರ್ ಜಲಜಾಕ್ಷಿಯವರ ಮತ್ತು ಪಾರ್ಟಿಯವರ ಸುಶ್ರಾವ್ಯವಾದ ಸಂಗೀತವು ನಡೆಯಿತು. ಶ್ರೀ ಅಗರಂ ರಂಗಯ್ಯನವರು ಭಾಷಣ ಮಾಡಿ ಕಳೆದ ೧೨ ವರ್ಷಗಳಿಂದ ಶ್ರೀ ಗೋಪಾಲಕೃಷ್ಣಶೆಟ್ಟರು ವೈಶ್ಯ ಪತ್ರಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿದರು. ಈ ಪತ್ರಿಕೆಯು ಬಹುಕಾಲ ನಾಡಿನ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯವನ್ನು ಸಾಧಿಸಲು ಸಹಕಾರಿಯಾಗಲೆಂದು ಹಾರೈಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪತ್ರಿಕಾ ವೃತ್ತಿಯ ಆವಶ್ಯಕತೆಯನ್ನು ವಿವರಿಸಿ ಉತ್ತಮ ವರ್ಗದ ಪತ್ರಿಕೆಗಳಿಗೆ ಮಹಾಜನರು ಬೆಂಬಲ ನೀಡಬೇಕೆಂದು ಕೋರಿ ವೈಶ್ಯ ಪತ್ರಿಕೆಗೆ ಶುಭಾಶಯವನ್ನು ಸಲ್ಲಿಸಿದರು. ಅಜ್ಜಂಪುರದ ಪೌರ ಸಭಾಧ್ಯಕ್ಷರಾದ ಶ್ರೀ ಸುಬ್ರಹ್ಮಣ್ಯ ಶ್ರೇಷ್ಠಿಯವರು ಮಾತನಾಡಿ ದೇಶಸೇವೆಯಲ್ಲಿ ತೊಡಗಿರುವ ವೈಶ್ಯ ಪತ್ರಿಕೆಗೂ ಮತ್ತು ಇತರ ಎಲ್ಲಾ ಪತ್ರಿಕೆಗಳಿಗೂ ಸಾರ್ವಜನಿಕರು ಸಹಕಾರ ನೀಡಬೇಕೆಂದು ಕೋರಿದರು. ಯೂನಿವರ್ಸಲ್ ವ್ಯಾಯಾಮ ಶಾಲೆಯವರಿಂದ ವ್ಯಾಯಾಮ ಪ್ರದರ್ಶನವೂ, ಕಾವೇರಿಪಟ್ಟಂ ವಿದ್ಯಾರ್ಥಿನಿಯವರಿಂದ ಪ್ರೇಮ ಬಲಿ ಎಂಬ ನಾಟಕವೂ ನಡೆದುವು.

ವೇದದಲ್ಲಿ ಗಣಿತ ಸೂತ್ರಗಳು

ನೂತನ ಸ್ವತಂತ್ರ ಭಾರತ ರಾಜ್ಯದಲ್ಲಿ ಪುರಿಯ ಜಗದ್ಗುರು ಶಂಕರಾಚಾರ್ಯರ ಬಳಿ, ವೇದದಲ್ಲಿರುವ ಗಣಿತಶಾಸ್ತ್ರದ ಸೂತ್ರಗಳ ವ್ಯಾಖ್ಯಾನವನ್ನು ತಿಳಿಯಲು ಜನರು ಕಾತರರಾಗಿರುವರೆಂದು ವರದಿಯಾಗಿದೆ. ಅಥರ್ವಣ ವೇದದಲ್ಲಿ, ಗಣಿತದ ಎಲ್ಲಾ ವಿಭಾಗಗಳ ಬಗ್ಗೆ ವಿಶೇಷ ಜ್ಞಾನವನ್ನು ತಂದುಕೊಡುವ ೧೬ ಸೂತ್ರಗಳಿರುವುವಾಗಿಯೂ, ಈ ಸೂತ್ರಗಳ ಬಗ್ಗೆ ಸಂಶೋಧನೆ ನಡೆಸಿ ೮ ವರ್ಷದ ನಂತರ ಅವುಗಳ ಅರ್ಥವನ್ನು ತಾವು ಗ್ರಹಿಸಿದುದಾಗಿಯೂ, ೮ ತಿಂಗಳುಗಳಲ್ಲಿ ಗಣಿತ ಶಾಸ್ತ್ರಾಭ್ಯಾಸವನ್ನು ಎಲ್ಲರೂ ಮಾಡಬಹುದೆಂದೂ ಶಂಕರಾಚಾರ್ಯರು ತಿಳಿಸಿರುವರು.

ಆರ್ಯ ವೈಶ್ಯ ಪ್ರಮುಖರಿಗೆ ಸತ್ಕಾರ

ಮೈಸೂರು ಶಾಸನ ಸಭೆಗಳೂ ಮತ್ತು ವಿವಿಧ ಪೌರ ಸಭೆಗಳ ಸದಸ್ಯರಾಗಿಯೂ, ಅಧ್ಯಕ್ಷ ಉಪಾಧ್ಯಕ್ಷರುಗಳಾಗಿಯೂ ಚುನಾಯಿತರಾಗಿರುವ ಆರ್ಯ ವೈಶ್ಯ ಪ್ರಮುಖರ ಗೌರವಾರ್ಥವಾಗಿ ಸಂಸ್ಥಾನದ ವೈಶ್ಯ ಯುವಜನ ಮಹಾಸಭೆಯವರು ನೆನ್ನೆ ಸಂಜೆ ನಗರದ ಶ್ರೀ ವಾಸವಾಂಬಾ ಭವನದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ರಾಜಸೇವಾಸಕ್ತ ಪಾಮಿಡಿ ಸುಬ್ಬರಾಮಶೆಟ್ಟರು ಅಗ್ರಾಸನ ವಹಿಸಿದ್ದರು. ಪ್ರಾರ್ಥನೆ, ಭಾರತ ವಾಚನ ಮತ್ತು ಸಂಗೀತಗಳಾದ ನಂತರ ಸಭೆಯ ಅಧ್ಯಕ್ಷರಾದ ಶ್ರೀ ಕೆ ಗೋಪಾಲಕೃಷ್ಣ ಶೆಟ್ಟರು ಸಂಸ್ಥಾನದ ವಿವಿಧ ಭಾಗಗಳಿಂದ ಬಂದಿದ್ದ ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಅವರ ಸೇವೆಗಾಗಿ ಅಭಿನಂದನೆಯನ್ನು ಸಲ್ಲಿಸಿದರು. ಸತ್ಕಾರಕ್ಕಾಗಿ ಅತಿಥಿಗಳು ಧನ್ಯವಾದಗಳನ್ನು ಸಮರ್ಪಿಸಿ ಇನ್ನು ಮುಂದೆಯೂ ತಾವು ದೇಶಸೇವೆ ಮಾಡಲು ಎಲ್ಲರೂ ಸಹಕರಿಸಬೇಕೆಂದು ಕೋರಿದರು. ಅಧ್ಯಕ್ಷರ ತಮ್ಮ ಭಾಷಣದಲ್ಲಿ ಪೌರ ಸಭಾ ಸದಸ್ಯರುಗಳ ಕರ್ತವ್ಯವನ್ನು ವಿವರಿಸಿದರು. ಪೌರ ಸಭೆಗಳಲ್ಲಿ ರಾಜಕೀಯ ಪಕ್ಷಗಳಿಗೆ ಅವಕಾಶವಿರಬಾರದೆಂದು ಅವರು ಅಭಿಪ್ರಾಯಪಟ್ಟರು. ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

Edited, Printed and Published by A R Nagaraja at Sadhvi Press, D Subbaiah Road, Mysore

೧೦ ಕೋಟಿ ರೂ. ವೆಚ್ಚದಲ್ಲಿ ಗಂಗಾ ನದಿಗೆ ಸೇತುವೆ

ಬಿಹಾರಿನ ಮೋಕಾಮೆ ಎಂಬಲ್ಲಿ ಗಂಗಾ ನದಿಗೆ ೧೦ ಕೋಟಿ ರೂ ವೆಚ್ಚದಲ್ಲಿ ಒಂದು ಸೇತುವೆಯನ್ನು ನಿರ್ಮಿಸಲಾಗುವುದೆಂದು ವರದಿಯಾಗಿದೆ. ಈ ಬಗ್ಗೆ ಸರ್ ಎಂ ವಿಶ್ವೇಶ್ವರಯ್ಯನವರು ತಯಾರಿಸಿದ್ದ ಯೋಜನೆಯೊಂದನ್ನು ಕೇಂದ್ರ ಸರ್ಕಾರದವರು ಅಂಗೀಕರಿಸಿರುತ್ತಾರೆ.

ಗಣಪತಿ ಮಂಗಳಾರತಿ

ರಾಜಧಾನಿಯ ವೈಸ್‌ರಾಯ್ ರಸ್ತೆಯಲ್ಲಿರುವ ಬೆಟ್ಟದಪುರದ ವಿದ್ಯಾರ್ಥಿನಿಲಯದಲ್ಲಿ ಕಳೆದ ೨೮ ನೇ ತಾ॥ ಗಣಪತಿಯ ಮಹಾ ಮಂಗಳಾರತಿಯು ಆ॥ ವಿ॥ ಬಿ ಶಿವಮೂರ್ತಿ ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ॥ ಪ್ರೊ॥ ಶ್ರೀಕಂಠಶಾಸ್ತ್ರಿಗಳು ಭಾಷಣ ಮಾಡಿದರು. ಶ್ರೀ ಚಿಕ್ಕವೀರದೇಶಿಕೇಂದ್ರ ಸ್ವಾಮಿಗಳು ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ನುಡಿದರು.

ಒಂಟಿಕೊಪ್ಪಲು ಭಾರತೀ ಶ್ರೀ ಸಮಾಜದಲ್ಲಿ ಮೊನ್ನೆ ವಿಶ್ವ ವಿದ್ಯಾಲಯದ ಶ್ರೀ ಸಿ ಎಲ್ ಸ್ವಾಮಿಯವರ ಭಾಷಣವೂ, ವಿದ್ವಾನ್ ಟಿ ನಾರಾಯಣ ಮತ್ತು ಇತರ ಪಾರ್ಟಿಯವರ ಸಂಗೀತವೂ, ಬೇಬಿ ಬನಶಂಕರಿಯವರಿಂದ ನೃತ್ಯವೂ, ಗಣಪತಿ ಮಂಗಳಾರತಿಯ ಅಂಗವಾಗಿ ನಡೆದುವು.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಸ್ ವಿ. ಶ್ರೀನಿವಾಸ ಐಯ್ಯಂಗಾರ್ ವೀಣೆ ಮಧ್ಯಾಹ್ನ ೧-೪೦ ಕೊಳಲು ೩ ಆರ್ ಲೀಲಾಬಾಯಿ, ಹಿಂದೂಸ್ತಾನಿ ಸಂಗೀತ ಸಂಜೆ ೫-೩೦ ಬೇಬ್ ಎಸ್ ಅನುಸೂಯ, ಸಂಗೀತ ೬-೧೦ ಗಾನ ವಿಹಾರ ೭ ಆರ್. ಲೀಲಾಬಾಯಿ, ಹಿಂದೂಸ್ತಾನಿ ಸಂಗೀತ ೭-೪೦ ಕನ್ನಡದಲ್ಲಿ ಭಾಷಣ ೮ ಎಸ್ ವಿ ಶ್ರೀನಿವಾಸ ಐಯ್ಯಂಗಾರ್ ವೀಣೆ. ೮-೩೦ ವೃಂದ ಸಂಗೀತ, ೯ ೧೫ ವಾರ್ತೆಗಳು ಇಂಗ್ಲಿಷ್ ಭಾಷೆ ೯ ೩೦ ಗಾನಾಮೃತ

WANTED COLLECTORS

IN

MYSORE, MANDYA and HASSAN Districts

ALL INDIA COMPETITIONS,

COIMBATORE

ENGLISH & TAMIL

Apply To –

C GURUNATHAN

Asoka Last Cross 42

MYSORE

ಶ್ರೀ ಜಗದಾಂಬ ಶಿಶುವಿಹಾರ

೨೬೨, ದಿವಾನ್ಸ್ ರಸ್ತೆ, ಮೈಸೂರು.

ಶಿಶು ಮನಶ್ಶಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳ ಅನುಸಾರವಾಗಿ ಉತ್ತಮತರವಾದ ಪರಿಸರಕ್ಕನುಗುಣವಾದ ಬಂಗಲೆಯಲ್ಲಿ ಉತ್ತಮೋತ್ತಮವಾದ ವಿದ್ಯಾಭ್ಯಾಸದ ಉಪಕರಣಗಳ ಸಹಾಯದಿಂದ ನೃತ್ಯಗೀತ ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಮೇಲ್ಕಂಡ ಶಿಶುವಿಹಾರದಲ್ಲಿ ಕೊಡಲಾಗುತ್ತಿದೆ. ಈ ಸುಸಮಯವನ್ನು ಕಳೆದುಕೊಳ್ಳದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ

ಬಿ ಕೃಷ್ಣಮೂರ್ತಿ,

ಸೈಕ್ರೆಟರಿ

A Golden opportunity for the Students appearing for the Sept Examinations Benefit yourselves & make sure of your success by seeing the following Classics at

SREE GANESHA TALKIES, MYSORE

2—9—52	**HAMLET**
3—9—52	**HENRY V** (Technicolor)
4—9—52	**OLIVER TWIST**

Each for a day only

GALA RELEASE **THE RIVER** ON 5-9-52

The First Technicolor Picture of India

ಒಲಿಪೂ॥ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨-೯ ೧೯೫೨ [ಸಂಚಿಕೆ ೩೧

ರಷ್ಯಾ-ಮಂಚೂರಿಯಾ ಗಡಿ ಬಳಿ ವಿಮಾನ ಧಾಳಿ

ಕಾಶ್ಮೀರದ ಮೇಲೆ ಪುನಃ ಪಾಕಿಸ್ತಾನದ ಧಾಳಿಯೇ ?

ಕಾಶ್ಮೀರದ ಮೇಲೆ ಪುನಃ ಗುಡ್ಡಗಾಡಿನವರು ಈ ತಿಂಗಳ ಮುಗಿಯುವುದರಲ್ಲೇ ಆಕ್ರಮಣ ಧಾಳಿ ನಡೆಸುವಂತೆ ಪಾಕಿಸ್ತಾನದ ಪತ್ರಗುಪ್ತರಾಗಿ ಸಿದ್ಧಗೊಳಿಸುತ್ತಿರುತ್ತಾರೆಂದು ದಿಹಲಿಯ ಅಧಿಕೃತ ವೃತ್ತಗಳಲ್ಲಿ ಅಭಿಪ್ರಾಯಪಡಲಾಗಿದೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಕಳೆದ ೨೯ ನೇ ತಾ॥ ಬರೆದಿರುವ ಲೇಖನವೊಂದರ ಆಧಾರದ ಮೇಲೆ ಈ ರೀತಿಯ ಅಭಿಪ್ರಾಯವು ಹುಟ್ಟಿರುತ್ತದೆ ಪಾಕಿಸ್ತಾನಕ್ಕೆ ಒಪ್ಪಿಗೆಯಾಗುವ ಜನಮತಗಣನೆ ಅಲ್ಲಿ ನಡೆಯದಿರುವುದು, ಅದರಿಂದ ಆಜಾದ್ ಕಾಶ್ಮೀರಿಗಳು ಮತ್ತು ಗುಡ್ಡಗಾಡಿನವರು ಸೀಸ್‌ಫೈರ್ ಆಜ್ಞೆಯನ್ನು ಉಲ್ಲಂಘಿಸುವುದು, ಗಡಿನಾಡು ಜನರು ಆಜಾದ್ ಕಾಶ್ಮೀರದಲ್ಲಿ ಶ್ರೀನಗರದ "ವಿಮೋಚನೆ" ಗೆಂದು ಓಡಾಡುತ್ತಿರುವುದು ಇವೇ ಸೂಚಕಗಳಾಗಿವೆಯೆಂದೂ ಪಾಕಿಸ್ತಾನವು ಸೀಸ್‌ಫೈರ್ ಉಲ್ಲಂಘನೆ ಪ್ರಯತ್ನವನ್ನು ತಡೆಯುವುದಿಲ್ಲವೆಂದೂ ಹೇಳಲಾಗಿದೆ

೩೫ ಸಾವಿರ ನೌಕಾ ಕಾರ್ಮಿಕರ ಮುಷ್ಕರ

ನಾವಿಕರನ್ನು ಸೇರಿಸಿಕೊಳ್ಳಲು ಈಗಿರುವ ಕಾಂಟ್ರ್ಯಾಕ್ಟ್ ಪದ್ಧತಿಯನ್ನು ರದ್ದುಗೊಳಿಸಿ ಕಂಪೆನಿಗಳೇ ನೇರವಾಗಿ ಸೇರಿಸಿಕೊಳ್ಳತಕ್ಕದ್ದು, ಮಾಸ್ತರು, ಡ್ರೈವರು ಮತ್ತು ಇತರರಿಗೆ ಸಂಬಳವನ್ನು ಹೆಚ್ಚಿಸುವುದು, ತುಟ್ಟಿ ಭತ್ಯವನ್ನು ಹೆಚ್ಚಿಸುವುದಲ್ಲದೆ ಕೆಲಸಗಾರರಿಗೆ ಬೋನಸ್ ಕೊಡುವುದು, ಇವೇ ಮುಂತಾದ ಬೇಡಿಕೆಗಳನ್ನು ಒಟ್ಟು ಅರ್ಜಿಗಳನ್ನು ಸಲ್ಲಿಸದಿದ್ದರೆ ಬರುವ ತಿಂಗಳು ೨೦ರಿಂದ ಮುಷ್ಕರ ನಡೆಸುವುದಾಗಿ ಕಲ್ಕತ್ತೆಯ ೩೫ ಸಾವಿರ ಮಂದಿ ಒಳನಾಡಿನ ನಾವಿಕರು ಅಲ್ಲಿನ ಐ ಜಿ ಎನ್ ಮತ್ತು ಆರ್ ಎಸ್ ಎನ್. ನೌಕಾ ಕಂಪೆನಿಗಳಿಗೆ ಸೂಚನೆ ಕೊಟ್ಟಿರುತ್ತಾರೆ

ಪಂದ್ಯದ ಮೋಟಾರು ಪ್ರೇಕ್ಷಕರ ಮೇಲೆ ನುಗ್ಗಿ ೬ ಮರಣ

ಪಶ್ಚಿಮ ಜರ್ಮನಿಯ ವೆರ್ನ್‌ಬರ್ಗ್‌ನಲ್ಲಿ ನೆನ್ನೆ ನಡೆದ ಅಂತರ ರಾಷ್ಟ್ರೀಯ ಮೋಟಾರು ಪಂದ್ಯದಲ್ಲಿ ಭಾಗವಹಿಸಿದ್ದ ಕಾರೊಂದು ದಾರಿ ತಪ್ಪಿ ಪ್ರೇಕ್ಷಕರ ಮೇಲೆ ನುಗ್ಗಿ ೬ ಜನರು ಸತ್ತು ೪೦ ಮಂದಿ ಗಾಯಗೊಂಡರೆಂದು ವರದಿಯಾಗಿದೆ. ಕಾರಿನ ಟೈರಿನಲ್ಲಿ ಪಂಕ್ಚರ್ ಆದುದರಿಂದ ಅಪಘಾತವುಂಟಾಯಿತೆಂದು ಹೇಳಲಾಗಿದೆ.

ಫಿಲಿಪ್ಪೈನ್ಸಿನಲ್ಲಿ ಪ್ರವಾಹದಿಂದ ೭೪ ಮರಣ

ಫಿಲಿಪ್ಪೈನಿನ ಮಿಂಡನಾವೊ ದ್ವೀಪದಲ್ಲಿ ಎರಡು ದಿನಗಳ ಮಳೆಯಿಂದ ಭಾರಿ ಪ್ರವಾಹ ಮತ್ತು ಭೂಪಾತಗಳಾಗಿ ೭೪ ಮಂದಿ ಮೃತಪಟ್ಟಿರುವರೆಂದು ವರದಿಯಾಗಿದೆ ಸಂಚಾರಾನುಕೂಲವು ಕೆಟ್ಟುಹೋಗಿದೆ ೩೦೦ ಜನರು ಸತ್ತಿರಬಹುದೆಂದೂ ಹೇಳಲಾಗಿದೆ

ಡಿಪೋ ಅಕ್ಕಿಯಲ್ಲಿ ಹುಳು

ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿರುವ ೧೫ ನೇ ನಂಬರು ರೇಷನ್ ಡಿಪೋವಿನಲ್ಲಿಡಲಾಗಿದ್ದ ಅಕ್ಕಿಯು ಮಾದರಿಯನ್ನು ಹಳ್ಳದಕೇರಿಯ ನಿವಾಸಿ ಶ್ರೀ ವೆಂಕಟರಾಮಯ್ಯ ಎಂಬುವರು ರೇಷನ್ ಕಂಟ್ರೋಲರವರಿಗೂ, ನಮಗೂ ತಂದು ತೋರಿಸಿರುತ್ತಾರೆ ಅದರಲ್ಲಿ ಹುಳುಗಳು ಬಹಳವಾಗಿದ್ದುವು. ಅಕ್ಕಿಯು ಉಪಯೋಗಿಸುವ ಸ್ಥಿತಿಯಲ್ಲಿರಲಿಲ್ಲ. ಇದನ್ನು ಮಾರಾಟಕ್ಕೆ ಕೊಡದೆ ಇರುವಂತೆ ಅಧಿಕಾರಿಗಳು ವ್ಯವಸ್ಥೆ ಮಾಡಬೇಕೆಂದು ಕೋರಲಾಗಿದೆ

ರಷ್ಯಾ ಗಡಿ ಬಳಿ ವಿಮಾನ ಧಾಳಿ

ರಷ್ಯಾ ಮತ್ತು ಮಂಚೂರಿಯಾ ಗಡಿ ಬಳಿ ಇರುವ ಉತ್ತರ ಕೊರಿಯದ ಪ್ರದೇಶದ ಮೇಲೆ ಅಮೆರಿಕದ ನೌಕಾಪಡೆಯ ೧೪೦ ವಿಮಾನಗಳು ಅತ್ಯಂತ ಭಾರಿ ಧಾಳಿಯನ್ನು ನಡಸಿ, ಜಲಜನಕ ಉತ್ಪನ್ನದ ಕಾರ್ಖಾನೆ ಮತ್ತು ಕಬ್ಬಿಣದ ಗಣಿ ಮೇಲೆ ಬಾಂಬು ಹಾಕಿದುವೆಂದೂ, ಅದರಿಂದ ೩೦ ಸಾವಿರ ಅಡಿ ಎತ್ತರದ ವರೆಗೆ ಕಪ್ಪು ಹೊಗೆಯು ಆಕಾಶಕ್ಕೆ ಹಬ್ಬಿತೆಂದೂ ವರದಿಯಾಗಿದೆ ರಷ್ಯಾದ ಗಡಿ ಬಳಿ ಹಿಂದೆ ಇಷ್ಟು ಹತ್ತಿರದಲ್ಲಿ ಧಾಳಿ ನಡೆದಿರಲಿಲ್ಲವೆಂದು ಹೇಳಲಾಗಿದೆ

ಸ್ವಾಮಿ ಸೀತಾರಾಮರವರಿಂದ ಆಮರಣಾಂತ ಉಪವಾಸ

ಬರುವ ತಿಂಗಳು ೨ ನೇ ತಾ॥ ನೊಳಗೆ ಆಂಧ್ರ ಪ್ರಾಂತ ರಚನೆಯಾಗದಿದ್ದರೆ ಸ್ವಾಮಿ ಸೀತಾರಾಮರವರು ದೆಹಲಿಯ ರಾಜಘಾಟಿನಲ್ಲಿ ಆಮರಣಾಂತ ಉಪವಾಸವನ್ನು ಕೈಗೊಳ್ಳಲಿರುವರೆಂದು ವರದಿಯಾಗಿದೆ ಮದ್ರಾಸು ಅಸೆಂಬ್ಲಿ ಕಚೇರಿ ಬಳಿ ನಡೆಯುತ್ತಿರುವ ವೈಯುಕ್ತಿಕ ಸತ್ಯಾಗ್ರಹವು ಅಕ್ಟೋಬರ್ ೨ರ ಹೊತ್ತಿಗೆ ಮುಕ್ತಾಯಗೊಂಡು, ಅದರಲ್ಲಿ ಭಾಗವಹಿಸಿದ್ದ ಸತ್ಯಾಗ್ರಹಿಗಳೆಲ್ಲರೂ ದೆಹಲಿಗೆ ಸೀತಾರಾಮರೊಡನೆ ತೆರಳುವರೆಂದೂ ಹೇಳಲಾಗಿದೆ

ಹೆಂಗಸಿನ ಕೈ ಕತ್ತರಿಸಿದ ಪ್ರಸಂಗ

ಚನ್ನರಾಯಪಟ್ಟಣದ ತಾಲ್ಲೂಕು ನಂಜುಂಡೇಗೌಡನ ಕೊಪ್ಪಲಿನಲ್ಲಿ ಹೊಲದ ಮಾತಿನ ಜಗಳಕ್ಕಾಗಿ ಶಿವ ಉರುಫ್ ಭಂಗಿ ಎಂಬುವನು ನಂಜಮ್ಮ ಎಂಬುವಳ ಕೈಯನ್ನು ಮಚ್ಚಿನಿಂದ ಕತ್ತರಿಸಿರುವುದಾಗಿ ವರದಿಯಾಗಿದೆ

ಸಂಗೀತ

ರಾಜಧಾನಿಯ ಸಂಜೀವಪೇಟೆಯಲ್ಲಿರುವ ಕುಂಚಿಟಿಗರ ಶ್ರೀರಾಮ ಮಂದಿರದಲ್ಲಿ ನಾಳೆ ಸಂಜೆ ೬॥ ಘಂಟೆಗೆ ಶ್ರೀ ಗಣಪತಿ ಮಂಗಳಾರತಿ ಪ್ರಯುಕ್ತ, ಶ್ರೀಮತಿ ಜಲಜಾಕ್ಷಮ್ಮನವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು ರಾತ್ರಿ ಗಣಪತಿಯ ಮೆರವಣಿಗೆಯೂ ಏರ್ಪಾಡಾಗಿದೆ

ಉಪಾಧ್ಯಾಯರುಗಳಿಗೆ ಔದ್ಯೋಗಿಕ ಶಿಕ್ಷಣ

ಉಪಕುಲಪತಿಗಳ ಸೂಚನೆ

ಮೈಸೂರು ೨

ರಾಜಧಾನಿಯ ಉಪಾಧ್ಯಾಯರುಗಳ ಕಾಲೇಜಿನ ರಜತೋತ್ಸವದ ಅಂಗವಾಗಿ ನೆನ್ನೆಯೂ ಸಮಾರಂಭವೊಂದು ಏರ್ಪಾಡಾಗಿದ್ದಿತು ಬೆಳಿಗ್ಗೆ ೮ ೩೦ ಘಂಟೆಗೆ ಕಾಲೇಜಿನ ಸಂಘದ ಸಾಧಾರಣ ಸಭೆಯೂ, ನಂತರ ವಿದ್ಯಾರ್ಥಿನಿಯರ ಕ್ರೀಡೆಗಳೂ ನಡೆದುವು ಸಂಜೆ ಸೀತಾ ಸ್ಪರ್ಧೆ ಮತ್ತು ಲಕ್ಕಿ ಡಿಪ್ ಆದ ಮೇಲೆ ಸಭೆಯು ವೈಸ್ ಚಾನ್ಸೆಲರ್, ಡಾ॥ ಬಿ ಎಲ್ ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ಸೇರಿತು

ಶ್ರೀ ಹೆಚ್ ಎಸ್ ನಾರಾಯಣರವರಿಂದ ಪ್ರಾರ್ಥನೆ, ಶ್ರೀ ಮಾಯಿಗೌಡರಿಂದ ಸ್ವಾಗತ ಗೀತೆಯಾದುವು ಸಂಘದ ಕಾರ್ಯದರ್ಶಿ ಶ್ರೀ ಕೆ ವಿ ದೊರೆಸ್ವಾಮಿಯವರು ವರದಿಯನ್ನೊಪ್ಪಿಸಿದ ನಂತರ ಶ್ರೀ ಎ. ಸಿ ದೇವೇಗೌಡರು ಭಾಷಣ ಮಾಡಿ, ಸ್ವಾಗತ ಬಯಸಿದರು ಶ್ರೀಮತಿಗಳಾದ ಶಾಂತ ರೀಟಾ ಲೋಬೋ ಮತ್ತು ಶಾಂತಾರವರ ಗಾಯನವೂ, ಗುಡ್‌ಷೆಪರ್ಡ್ ಕಾನ್ವೆಂಟ್ ಶಾಲೆಯ ವಿದ್ಯಾರ್ಥಿನಿಯರಿಂದ ನೃತ್ಯವೂ, ಡಾ॥ ಡಿ ಎಸ್ ಗಾರ್ಡನ್‌ರವರಿಂದ ಕಾಲೇಜಿನ ಪರವಾಗಿಯೂ ಮತ್ತು ಶ್ರೀ ಎಸ್. ಕಾಳಪ್ಪ ಮತ್ತು ಶ್ರೀಮತಿ ವಿ ಲಿಂಗಾಜಮ್ಮಣ್ಣಿಯವರಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪರವಾಗಿಯೂ ಭಾಷಣಗೂ ಆದುವು ಶ್ರೀ ಎಸ್ ವಿ ಅನಂತ ಪದ್ಮನಾಭಾಚಾರ್ಯರು, ಶ್ರೀ ಸಿ ಎಲ್ ಗೋಪೀನಾಥರಾವ್ ಮತ್ತು ಶ್ರೀಮತಿ ಆರ್ ಶಾರದಮ್ಮನವರು ಉತ್ತರವಿತ್ತರು ಅಧ್ಯಕ್ಷರು ಬಹುಮಾನವನ್ನು ಹಂಚಿದರು

ಅವರು ಭಾಷಣ ಮಾಡಿ, ಶಿಕ್ಷಣ ಕ್ರಮದ ಪ್ರಮಾಣವು ಈಗ ಹೆಚ್ಚಾಗಿರುವುದೆಂದೂ, ಅದು ಓದುವವರಿಗೆ ಕಷ್ಟವಾಗಿರುವುದರಿಂದ ಅದರ ಅವಧಿಯನ್ನು ಒಂದರಿಂದ ೨ ವರ್ಷಕ್ಕೆ ಹೆಚ್ಚಿಸಲು ವಿಶ್ವ ವಿದ್ಯಾಲಯದವರು ಆಲೋಚಿಸಿರುವರೆಂದೂ ತಿಳಿಸಿದರು ವಿದ್ಯೆಯು ದೇಶದಲ್ಲಿ ಹೆಚ್ಚಬೇಕಾದರೆ, ಧನವನ್ನು ವೆಚ್ಚ ಮಾಡಬೇಕಾದ ಅವಶ್ಯಕತೆಯನ್ನು ಅವರು ಒತ್ತಿ ಹೇಳಿದರು ದಿ॥ ಪೆರುಮಾಳ್ ಚೆಟ್ಟಿಯವರು ಕಟ್ಟಿಸಿರುವ ವೃತ್ತಿ ಶಿಕ್ಷಣ ಶಾಲಾ ಕಟ್ಟಡದಲ್ಲಿ ಉಪಾಧ್ಯಾಯರುಗಳಿಗಾಗಿ ಔದ್ಯೋಗಿಕ ಶಿಕ್ಷಣ ಶಾಲೆಯೊಂದನ್ನು ಸ್ಥಾಪಿಸುವ ಆಲೋಚನೆಯು ವಿಶ್ವ ವಿದ್ಯಾಲಯಕ್ಕಿರುವುದೆಂದೂ ಅವರು ಹೊರಗೆಡಹಿದರು

ನಂಬಿಕೆ ದ್ರೋಹಕ್ಕಾಗಿ ಅಧಿಕಾರಿಗೆ ೨ ತಿಂಗಳು ಸಜಾ

ಬೆಂಗಳೂರು -

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಅಸಿಸ್ಟೆಂಟ್ ಆಡಿಟರ್ ಆಗಿದ್ದ ಶ್ರೀ ಅಬ್ದುಲ್ ಹೈ ಎಂಬ ಒಬ್ಬ ಮಾಜಿ ಅಧಿಕಾರಿಯು ಮೂರು ವರ್ಷಗಳ ಹಿಂದೆ ಬಾಡಿಗೆಗಾಗಿ ಸೈಕಲ್ ಪಡೆದು ಅದನ್ನು ೭೦ ರೂ ಗಳಿಗೆ ಮಾರಿದುದು ಸ್ಥಿರಪಟ್ಟಿರುವುದೆಂದು ಹೈಕೋರ್ಟಿನವರು ನೆನ್ನೆ ಅವರಿಗೆ ೨ ತಿಂಗಳು ಸಾದಾ ಸಜಾ ಮತ್ತು ೧೦೦ ರೂ ಗಳ ದಂಡವನ್ನು ವಿಧಿಸಿದರು ನಗರದ ನ್ಯಾಯಾಧೀಶರು ಅವರಿಗೆ ನೂರು ರೂ ದಂಡವನ್ನು ವಿಧಿಸಿದ್ದುದರ ಮೇಲೆ ಸೆಷನ್ಸ್ ಕೋರ್ಟಿನಲ್ಲಿ ಅಪೀಲಾಗಿ ಅವರನ್ನು ಖುಲಾಸ ಮಾಡಲಾಗಿದ್ದುದನ್ನು ಈಗ ರದ್ದುಗೊಳಿಸಲಾಗಿದೆ

ರೆವಿನ್ಯೂ ಇಲಾಖಾ ಕಾರ್ಯದರ್ಶಿ ಹುದ್ದೆಯು ರದ್ದು

ರೆವಿನ್ಯೂ ಇಲಾಖಾ ಕಾರ್ಯದರ್ಶಿ ಹುದ್ದೆಯು ರದ್ದಾಗಿದ್ದುದು ಈಗ ಪುನಃ ಮುಂದುವರಿಸಿಕೊಂಡು ಬರುವಂತೆ ಸರ್ಕಾರದವರು ಸೂಚಿಸಿ, ಆ ಇಲಾಖಾ ಕಾರ್ಯದರ್ಶಿಯ ಸ್ಥಾನಕ್ಕೆ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರನ್ನು ನೇಮಿಸಿರುವರು ರೆವಿನ್ಯೂ ಸೆಕ್ರೆಟರಿ ಹುದ್ದೆಯನ್ನು ರದ್ದುಮಾಡಿ, ಆ ಇಲಾಖಾ ಕಾರ್ಯಗಳನ್ನು ಗೃಹ ಕಾರ್ಯದರ್ಶಿಯ ವರಿಗೆ ವಹಿಸಲಾಗಿದೆ

೬ ಸಾವಿರ ರೂ. ಇನ್ಷೂರ್ ಹಣ ಪತ್ತೆಯಿಲ್ಲ

ಬೆಂಗಳೂರಿನ ಸಿವಿಲ್ ಪ್ರದೇಶದ ಕ್ವೀನ್ಸ್‌ಟ್ರೆಂಟ್ ಚೌಕದ ಅಂಚೆ ಕಛೇರಿಯಿಂದ ಆರ್ ಎಂ ಎಸ್ ಗೆ ಟಪಾಲನ್ನು ಕಳೆದ ಶನಿವಾರ ಸಾಗಿಸುತ್ತಿದ್ದಾಗ ಆರು ಸಾವಿರ ರೂ ಗಳ ಹದಿನೇಳು ಇನ್ಷೂರೆನ್ಸ್ ಕವರುಗಳು ಕಳೆದುಹೋಗಿರುವುದಾಗಿ ವರದಿಯಾಗಿದೆ

ಬೆಂಗಳೂರಿನಲ್ಲಿ ಎ ಐ.ಸಿ.ಸಿ ಕಾರ್ಯದರ್ಶಿ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಯು. ಶ್ರೀನಿವಾಸಮಲ್ಯರವರು ನೆನ್ನೆ ಬೆಂಗಳೂರಿಗೆ ಆಗಮಿಸಿ, ಮುಖ್ಯ ಮಂತ್ರಿಗಳ ಅತಿಥಿಗಳಾಗಿ ಕುಮಾರ ಕೃಪಾದಲ್ಲಿ ಇಳಿದುಕೊಂಡಿರುತ್ತಾರೆ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೂ ಸಹ ಅವರೊಡನೆ ಆಗಮಿಸಿರುವರು

ಮುಖ್ಯ ಮಂತ್ರಿಗಳಲ್ಲಿ ವೈದ್ಯ ಪದವೀಧರರ ನಿಯೋಗ

ಮೈಸೂರು ವಿಶ್ವವಿದ್ಯಾಲಯದ ವೈದ್ಯ ಪದವೀಧರರಾಗಿರುವ ನಿರುದ್ಯೋಗಿ ತರುಣರ ನಿಯೋಗವೊಂದು ನೆನ್ನೆ ಮುಖ್ಯಮಂತ್ರಿಯವರಲ್ಲಿ ಹೋಗಿ, ಸಂಸ್ಥಾನದಲ್ಲಿ ಡಾಕ್ಟರುಗಳ ಅಭಾವವನ್ನು ನೀಗಲು, ಸರ್ಕಾರದವರು ನಿವೃತ್ತರಾದ ವೈದ್ಯರುಗಳ ಸೇವೆಯನ್ನು ಪುನಃ ತೆಗೆದುಕೊಳ್ಳುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿ, ನಿರುದ್ಯೋಗಿಗಳಾದ ತರುಣ ಪದವೀಧರರುಗಳಿಗೆ ಸೇವೆ ಸಲ್ಲಿಸಲು ಅವಕಾಶ ಕೊಡಬೇಕೆಂದು ಕೋರಿದರು ಮುಖ್ಯ ಮಂತ್ರಿಯವರು ಈ ವಿಷಯವನ್ನು ಸೂಕ್ತ ರೀತಿಯಲ್ಲಿ ಪರ್ಯಾಲೋಚಿಸುವುದಾಗಿ ಭರವಸೆಯಿತ್ತರು

ಫ್ರೆಂಚ್ ಭಾರತದ ನಾಯಕರಿಗೆ ಬೆದರಿಕೆ ಪತ್ರಗಳು

ಭಾರತದ ಫ್ರೆಂಚ್ ಸ್ವಾಸ್ಥ್ಯಗಳಾದ ಪುದುಚೇರಿ ಮತ್ತು ಕಾರೈಕಲ್ಲುಗಳಲ್ಲಿ, ಭಾರತದೊಡನೆ ವಸಾಹತುಗಳು ಐಕ್ಯವಾಗಬೇಕೆಂದು ಪ್ರತಿಪಾದಿಸುವ ರಾಷ್ಟ್ರನಾಯಕರಿಗೆ ಪುಂಡರಿಂದ ಹೆಚ್ಚುಹೆಚ್ಚಾಗಿ ಬೆದರಿಕೆ ಪತ್ರಗಳು ಬರುತ್ತಿರುವುದೆಂದೂ, ಐಕ್ಯತೆಯನ್ನು ಸಾರುವ "ವಿರೋಚನಂ" ಪತ್ರಿಕೆಯನ್ನು ಹಂಚುವವರಿಗೂ ಬೆದರಿಕೆ ಪತ್ರಗಳನ್ನು ಬರೆದು ಆ ಪತ್ರಿಕೆಯನ್ನು ಮಾರುವವರ ಕೈಗಳನ್ನು ಕತ್ತರಿಸಲಾಗುವುದೆಂದು ತಿಳಿಸಿರುವುದಾಗಿಯೂ ಗೊತ್ತಾಗಿದೆ

ಗಣಪತಿ ಮಂಗಳಾರತಿ

ರಾಜಧಾನಿಯ ಪವರ್‌ಲೂಂ ಕೆಲಸಗಾರರ ಸಂಘದ ಆಶ್ರಯದಲ್ಲಿ ಈ ಸಂಜೆ ೭ ಗಂಟೆಗೆ ವಿದ್ಯುಚ್ಛಕ್ತಿ ನೇಯ್ಗೆ ಕಾರ್ಮಿಕರುಗಳ ಸಂಘದ ಕಟ್ಟಡದಲ್ಲಿ ವಿದ್ಯುಚ್ಛಕ್ತಿ ನೇಯ್ಗೆ ಮಾಲೀಕರುಗಳಿಗಾಗಿ ಮಹಾ ಮಂಗಳಾರತಿಯನ್ನು ಏರ್ಪಡಿಸಲಾಗಿದೆ ಶಾಸನ ಸಭಾ ಸದಸ್ಯರಾದ ಶ್ರೀ ಕೆ ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ನೇಯ್ಗೆ ಮಾಲೀಕರುಗಳು ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ ಶ್ರೀ ಎಂ. ಎ ನಾಗಪ್ಪ ಮತ್ತು ಪಾರ್ಟಿಯವರಿಂದ ಸ್ಯಾಕ್ಸೊಫೋನ್ ಕಛೇರಿಯು ನಡೆಯುತ್ತದೆ

ರಾಜಧಾನಿಯ ಫ್ರೆಂಡ್ಸ್ ಯೂನಿಯನ್ ಸ್ಪೋರ್ಟ್ಸ್ ಕ್ಲಬ್ಬಿನವರು ಶ್ರೀ ಗಣೇಶನ ಮಂಗಳಾರತಿಯನ್ನು ಡಿ ಬನುಮಯ್ಯನವರ ಕಾಮರ್ಸ್ ಕಾಲೇಜಿನಲ್ಲಿ ನೆನ್ನೆ ನೆರವೇರಿಸಿದರು ಶ್ರೀ ಬಿ ಸಿ ರಂಗನಾಥ ಅಯ್ಯಂಗಾರ್ಯರು ಮತ್ತು ಅವರ ಮಿತ್ರರಿಂದ ಸಂಗೀತವು ಏರ್ಪಾಡಾಗಿದ್ದಿತು

ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ ನಾರಾಯಣಾಚಾರ್ಯರ ಹೊಟೇಲಿನಲ್ಲಿ ಮಾಲೀಕರಾದ ಶ್ರೀ ಡಿ ವಿ ರಾಜುಅಯ್ಯರ್‌ರವರು ಮಹಾ ಗಣಪತಿ ಪೂಜೆಯನ್ನು ನೆನ್ನೆ ನಡಸಿದರು. ಶ್ರೀ ಆರ್ ಕೆ ಶ್ರೀಕಂಠರವರ ಸಂಗೀತವು ಏರ್ಪಾಡಾಗಿದ್ದಿತ

ಭೋಗ್ಯಕ್ಕೆ ಮನೆ

2996, 7ನೇ ಕ್ರಾಸ್ ವಾ.ವಿ ಮೊಹಲ್ಲಾ ಲೈಟ್ ಹಾಕಿಸಲಾಗಿದೆ ಪಬ್ಲಿಕ್ ನಲ್ಲಿ ಮುಂಭಾಗದಲ್ಲಿದೆ ರೂ 1500

ಎ ಎಸ್. ಹರಿನಾರಾಯಣನ್,
ಕೀರ್ತನಕಾರರು

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ದಂಗೆಕೋರರನ್ನು ಅಡಗಿಸಲು ನಗರಕ್ಕೆ ದಿಗ್ಬಂಧನ

ಮಲಯಾದಲ್ಲಿ ಕಮ್ಯೂನಿಸ್ಟ್ ದಂಗೆಕೋರರ ಹಾವಳಿಯನ್ನು ತಡೆಗಟ್ಟಲು ಉಗ್ರಕ್ರಮ ಕೈಗೊಂಡು ನೆಗ್ರಿ ಸೆಂಬಿಲಾನಿನ ರಾಜಧಾನಿ ಸೆರೆಂಬಾನ್ ಎಂಬ ನಗರದ ಸುತ್ತ ನೊನ್ನೆ ಬಲವಾದ ಮಿಲಿಟರಿ ಮತ್ತು ಪೊಲೀಸ್ ಕಾವಲನ್ನು ಹಾಕಿ, ಅಲ್ಲಿಗೆ ಹೋಗುವ ಎಲ್ಲ ವಾಹನಗಳನ್ನೂ ಶೋಧಿಸಿ, ಅವುಗಳ ಮೂಲಕ ಆ ನಗರದಲ್ಲಿರುವ ದಂಗೆಕೋರರಿಗೆ ಆಹಾರ ಸರಬರಾಜಾಗುತ್ತಿರುವುದನ್ನು ತಡೆಗಟ್ಟಿ ಅವರು ಉಪವಾಸ ಬೀಳುವಂತೆ ಮಾಡಲಾಗಿತ್ತೆಂದು ವರದಿಯಾಗಿದೆ ಅವರಿಗೆ ಯಾವ ವಿಧವಾದ ಸಹಾಯವನ್ನೂ ಒದಗಿಸಬಾರದೆಂದು ಆಜ್ಞೆಯನ್ನೂ ಹೊರಡಿಸಲಾಗಿದೆ

ನಾಗಸ್ವರ ವಿದ್ವಾಂಸರ ಸಂಘ

ದಕ್ಷಿಣ ಭಾರತದ ನಾಗಸ್ವರ ವಿದ್ವಾಂಸರು ಕಳೆದ ಶನಿವಾರ ಮದರಾಸಿನಲ್ಲಿ ಸಭೆ ಸೇರಿ ತಮ್ಮದೇ ಆದ ಒಂದು ಸಂಘವನ್ನು ಸ್ಥಾಪಿಸಿಕೊಂಡು [illegible] ನಾಗಸ್ವರ ವಿದ್ವಾಂಸರು ಸಭೆಯಲ್ಲಿ [illegible] ಸಂಗೀತ ಕಾಲೇಜುಗಳಲ್ಲಿ ನಾಗಸ್ವರದ ಶಿಕ್ಷಣಕ್ಕೆ ವ್ಯವಸ್ಥೆ ಮಾಡಬೇಕೆಂದು [illegible] ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು

ಕಲಾವಿದರಿಗೆ ರೈಲು ಛಾರ್ಜಿನಲ್ಲಿ ರಿಯಾಯಿತಿ

ಭಾರತದ ರೈಲ್ವೆ ಖಾತೆಯ ಉಪಸಚಿವ ಶ್ರೀ ಒ ವಿ ಅಳಗೇಶನ್‌ರವರ ಗೌರವಾರ್ಥವಾಗಿ ನೆನ್ನೆ ಮದರಾಸಿನಲ್ಲಿ ದಕ್ಷಿಣ ಭಾರತದ ಚಲನ ಚಿತ್ರ ಸಂಸ್ಥೆಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದ ಸಂದರ್ಭದಲ್ಲಿ, ಸಚಿವರು ಮಾತನಾಡಿ ಕಲಾವಿದರಿಗೆ ರೈಲ್ವೆ ಪ್ರಯಾಣದ ಛಾರ್ಜಿನಲ್ಲಿ ರಿಯಾಯಿತಿ ಕೊಡಬೇಕಾದುದು ಅಗತ್ಯವೆಂದೂ, ಈ ವಿಷಯವು ಕೇಂದ್ರ ಸರ್ಕಾರದ ಗಮನದಲ್ಲಿರುವುದೆಂದೂ, ಸಧ್ಯದಲ್ಲೇ ಈ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಾಗುವುದೆಂದೂ ತಿಳಿಸಿದರು

PRABHA

From 2 9 52 Daily 3 Shows
Bold ! Powerful Amazing !
You will Laugh, Cry and
Learn Facts

SECRETS OF LIFE

(With All Star Hollywood Cast)
To miss it is a Sin

From 5-9-52 For 4 Days
PANDORA & THE FLYING DUTCH MAN
(Technicolor)

ಸಗಣಿಯಿಂದ ಜ್ವಾಲೆಯನ್ನು ಗ್ರಹಿಸುವ ವಾಯು

ದೆಹಲಿಯ ವ್ಯವಸಾಯ ಸಂಶೋಧನಾಲಯದವರು, ಜ್ವಾಲೆಯನ್ನು ಗ್ರಹಿಸುವಂತಹ ಒಂದು ವಿಧವಾದ ವಾಯುವನ್ನು ಹಸುವಿನ ಸಗಣಿಯಿಂದ ಉತ್ಪನ್ನ ಮಾಡುವ ಬಗ್ಗೆ ಪ್ರಯೋಗ ನಡೆಸಿ ಯಶಸ್ವಿಯಾಗಿರುವರೆಂದು ವರದಿಯಾಗಿದೆ ಸಾಧ್ಯವು ರಾಸುಗಳು ಹಾಕಿದ ಸಗಣಿಯಿಂದ ಸುಮಾರು ೮೦ ಘನ ಅಡಿಯಷ್ಟು ಅಂತಹ ವಾಯುವನ್ನು ತಯಾರಿಸಬಹುದೆಂದೂ, ಇದು ಸಾಮಾನ್ಯವಾದ ಒಂದು ಸಂಸಾರದ ದಿನಚರಿ ಉಪಯೋಗಕ್ಕೆ ಬೇಕಾದಷ್ಟು ಶಾಖವನ್ನು ಒದಗಿಸಬಲ್ಲುದೆಂದೂ ಅಂದಾಜು ಮಾಡಲಾಗಿದೆ

ಕ್ಷಾಮ ಪೀಡಿತ ಆಂಧ್ರರಿಗೆ ರಷ್ಯದ ನೆರವು

ಆಂಧ್ರ ಪ್ರದೇಶದಲ್ಲಿ ಕ್ಷಾಮಪೀಡಿತ ಜನರ ಸಹಾಯಕ್ಕಾಗಿ ರಷ್ಯದ ಕಾರ್ಮಿಕ ಸಂಸ್ಥೆಗಳು ೧೧ ಸಾವಿರ ಟನ್ ಅಕ್ಕಿ, ೨೦ ಸಾವಿರ ಹಾಲಿನ ಡಬ್ಬಗಳು ಮತ್ತು ೩ ಲಕ್ಷ ರೂಪಾಯಿ ನಗದು ಹಣವನ್ನು ಕಳುಹಿಸಲಿರುವುದೆಂದು ವರದಿಯಾಗಿದೆ

ಹರಿಕಥೆ

ಸುಬ್ಬರಾಯನ ಕೆರೆ ಬಳಿಯಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ತಾ|| ೬-೯-೫೨ ನೇ ಮಂಗಳವಾರದ ಪ್ರತಿನಿತ್ಯವೂ ಸಂಜೆ ೬-೩೦ಕ್ಕೆ ಶ್ರೀ ಟಿ ಕೆ ವೇಣುಗೋಪಾಲದಾಸರಿಂದ ಹರಿಕಥೆಯು ನಡೆಯುತ್ತದೆ

ಯಜುರ್ವೇದ ಉಪಾಕರ್ಮ

ರಾಜಧಾನಿಯ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ನಾಳಿದ್ದು ಗುರುವಾರ ಬೆಳಿಗ್ಗೆ ೭ ಗಂಟೆಗೆ ಯಜುರ್ವೇದಿಗಳಿಗೆ ಪ್ರಥಮೋಪಾಕರ್ಮವೂ ಮತ್ತು ಸರ್ವ ಯಜುರ್ವೇದಿಗಳಿಗೆ ಉಪಾಕರ್ಮವೂ ಜರುಗುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ನಾಗಸ್ವರ ಬಿ ಪಾಪಯ್ಯ ಮಧ್ಯಾಹ್ನ [illegible] ವಿಶೇಷ [illegible] ರ ಕಾರ್ಯಕ್ರಮ ಸಂಜೆ ೫-೧೫ ನಾಗಸ್ವರ, ಬಿ ಪಾಪಯ್ಯ ೬-೧೫ [illegible], ಮಕ್ಕಳ ಕಾರ್ಯಕ್ರಮ ೭ ಹಿಂದೀ ಗೀತೆಗಳು ಸರೋಜಾದೇವಿ ೭-೩೦ ನಮ್ಮ ಪುಸ್ತಕ ಭಂಡಾರ ಪುಸ್ತಕ ವಿಮರ್ಶೆ ಬಿ ವಿ ಕೆ ಮೂರ್ತಿ [illegible] ಸಂಗೀತ ಎ ಎಸ್ ಪಲ್ಲಿ [illegible] ಅಯ್ಯಂಗಾರ್ [illegible] ೯-೩೦ ನಮ್ಮ [illegible] ನ ಗೀತೆಗಳು

ಚಂದಾದಾರರಲ್ಲಿ ವಿನಂತಿ

ನಮ್ಮ ರಶೀತಿಯನ್ನು ಪಡೆದು ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,
ಏಜೆಂಟರು, ಸಾಧ್ವಿ ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore.

ಪರ್ಷಿಯಕ್ಕೆ ಇರಾನ್ ಎಣ್ಣೆ ಗಣಿ ಒಡೆತನ

ಪರ್ಷಿಯದ ಎಣ್ಣೆ ಕೈಗಾರಿಕೆಯಲ್ಲಿ ಬ್ರಿಟನ್ನು ತನ್ನ ೨೦ ಕೋಟಿ ಪೌಂಡು ಬಂಡವಾಳದ ಹಕ್ಕನ್ನು ತೊರೆಯಲು ಒಪ್ಪಿಕೊಂಡು ಕೈಗಾರಿಕೆಯ ಒಡೆತನವನ್ನು ಪೂರ್ಣವಾಗಿ ಪರ್ಷಿಯಕ್ಕೆ ಬಿಟ್ಟುಕೊಟ್ಟಿರುವುದೆಂದೂ, ಈಗ ಆಂಗ್ಲೊ ಇರಾನಿಯನ್ ಕಂಪೆನಿಗೆ ಮಾತ್ರ ಪರ್ಷಿಯಾ ಸರ್ಕಾರವು ಪರಿಹಾರ ಕೊಡಬೇಕಾಗಿದೆಯೆಂದೂ ವರದಿಯಾಗಿದೆ.

ವಿವಾಹ ಮಹೋತ್ಸವ

ಮೈಸೂರು ಆರೋಗ್ಯ ಇಲಾಖೆಯ ಡೈರೆಕ್ಟರ್, ಡಾ|| ಟಿ. ಚಂದ್ರಶೇಖರಯನವರ ಸಹೋದರರಾದ ಬೆಂಗಳೂರು ಶ್ರೀ ಟಿ ಶಿವಲಿಂಗಯ್ಯನವರ ಮಗ [illegible] ಟಿ ಶ್ರೀನಿವಾಸಯ್ಯನವರಿಗೆ ಬೆಂಗಳೂರು ಸಿಟಿ ಮಾರ್ಕೆಟ್ಟಿನ ಹಣ್ಣಿನ ವ್ಯಾಪಾರಿಗಳಾದ ಶ್ರೀ ಎಂ. ಮುನಿಸ್ವಾಮಯನವರ ನಾದಿನಿ ಚಿ|| ಸೌ|| ನಾಗರತ್ನ ಎಂಬ ಕನ್ಯೆಯನ್ನು ತಂದುಕೊಂಡು ನೊನ್ನೆ ಪಶ್ಚಿಮವಾಹಿನಿಯಲ್ಲಿ ವಿವಾಹವನ್ನು ನೆರವೇರಿಸಲಾಯಿತು

ಅನುಚವಾಡಿ ಸೊಸೈಟಿ ಹಣದ ದುರುಪಯೋಗದ ದೂರು

ಚಾಮರಾಜ ನಗರದ ತಾಲ್ಲೂಕಿನ ಅನುಚವಾಡಿ ಗ್ರಾಮದ ಶ್ರೀ ಎ. ವೀ[illegible] ಭದ್ರಯ್ಯನವರು ಪತ್ರವೊಂದನ್ನು [illegible] ದು, ಸದರಿ ಗ್ರಾಮದ ಶ್ರೀ ರಾಮ[illegible] ಪ್ರ ಸಹಕಾರ ಸಂಘಕ್ಕೆ ೪ ವರ್ಷಗ[illegible] ಹಿಂದೆ ಸರ್ಕಾರದಿಂದ ಬಂದ ಬಾಡಿ[illegible] ಬಾಬ್ತು ರೂಪಾಯಿಗಳು ೩೫-೧-[illegible] ನ್ನು ದುರುಪಯೋಗಪಡಿಸಲಾಗಿರು[illegible] ದೆಂದು ತಿಳಿಸಿರುತ್ತಾರೆ ಸಂಬಂಧಪಟ್ಟ ಇಲಾಖೆಯವರು ಈ ಅಕ್ರಮದ ಬಗ್ಗೆ ತನಿಖೆ ನಡಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಅವರು ಕೋರಿರುತ್ತಾರೆ

ಸೈಕಲ್ ಕಳೆದು ಹೋಗಿದೆ

ರ್‍ಯಾಲಿ ಸೈಕಲ್ (ಹಸುರುಬಣ್ಣದ್ದು) ಎ ಜಿ 32125 ನೇ ನಂಬರು ಉಳ್ಳದ್ದು ನೆನ್ನೆ ಸಂಜೆ ೪|| ಘಂಟೆ ಸಮಯದಲ್ಲಿ ಮುನಿಸಿಪಲ್ ಆಫೀಸು ಬಳಿ ಕಳುವಾಗಿರುತ್ತೆ ಯಾರಿಗಾದರೂ ಪತ್ತೆಯಾದರೆ ಕೆಳಗಿನ ವಿಳಾಸಕ್ಕೆ ತಲುಪಿಸಿದರೆ ಸೂಕ್ತ ಬಹುಮಾನ ಕೊಡಲಾಗುತ್ತೆ

ಕೆ. ಬೋರಯ್ಯ,
ಕಂಟ್ರ್ಯಾಕ್ಟರ್,
ನಂ 1179/2 ಇಟ್ಟಿಗೆಗೂಡು,
ನಜರ್‌ಬಾದ್, ಮೈಸೂರು

SRI GAYATHRI
TALKIES
Daily 2 Shows
From 3-9-52 For 2 Days
20th Century Fox's
FOR HEAVEN'S SAKE

TO DAY — LAST DAY
THE DAY THE EARTH STOOD STILL

ರಿಜಿಸ್ಟರ್ಡ್ ನಂ. 792 ||ಚಂದಾ ಮಾಸಕ್ಕೆ|| ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧]   ಬುಧವಾರ ೩-೯-೧೯೫೨   [ಸಂಚಿಕೆ ೬೩

ಈಜಿಪ್ಟ್ ದೊರೆ ಸುಡಾನ್ ರಾಜರೆಂದು ಭಾರತ

ರಾಜಧಾನಿಯಲ್ಲಿ ಉಲ್ಕಾ ದರ್ಶನ

ಮೈಸೂರು ೩.

ನಿನ್ನೆ ಸಂಜೆ ಸುಮಾರು ೫ ಗಂಟೆ ಸಮಯದಲ್ಲಿ ರಾಜಧಾನಿಯ ವಾಯವ್ಯ ದಿಕ್ಕಿನಿಂದ ಆಗ್ನೇಯಾಭಿಮುಖವಾಗಿ ಚೆಂಡಿನಾಕಾರದ ವಸ್ತುವೊಂದು ಆಕಾಶದಲ್ಲಿ ಹೊಗೆಯುಗುಳುತ್ತಾ ಹೋಗುತ್ತಿದ್ದುದನ್ನು ಅನೇಕರು ಕಂಡು ಕುತೂಹಲಭರಿತರಾದರು. ಈ ವಸ್ತುವು ಮುಂದುವರಿದಂತೆಲ್ಲಾ ಅದರಿಂದ ಉಗುಳಲ್ಪಡುತ್ತಿದ್ದ ಹೊಗೆಯು ಒಂದು ಸರಳರೇಖೆಯಂತೆ ಭಾಸವಾಗುತ್ತಿತ್ತು. ಸುಮಾರು ೧೦ ನಿಮಿಷಗಳ ನಂತರ ವಸ್ತುವು ಮತ್ತು ಹೊಗೆಯೂ ಅದೃಶ್ಯವಾಗಿ ಹೋದುವು. ಆ ವಸ್ತುವು ಉಲ್ಕೆಯಿರಬಹುದೆಂದು ಭಾವಿಸಲಾಗಿದೆ.

ಯಜುರ್ವೇದ ಉಪಾಕರ್ಮ

ರಾಜಧಾನಿಯ ನೂರಡಿ ರಸ್ತೆ ಬಳಿ ಕಾಶಿಪತಿ ಲಾಯದಲ್ಲಿರುವ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಕಟ್ಟಡದಲ್ಲಿ ನಾಳೆ ಬೆಳಗ್ಗೆ ೯ ಗಂಟೆಗೆ ಯಜುರ್ವೇದಿಗಳಿಗಾಗಿ ಉಪಾಕರ್ಮವು ನಡೆಯುವುದು.

ವಿಶ್ವ ವಿದ್ಯಾಲಯದಲ್ಲಿ ನಾಟಕಾಭಿನಯದ ವಿಭಾಗ

ಚಿತ್ರಕಲೋದ್ಯಮ, ಸಂಗೀತ ಮುಂತಾದವುಗಳಂತೆ ನಾಟಕಾಭಿನಯದ ಅಧ್ಯಯನವನ್ನು ಬಿ. ಎ. ಪರೀಕ್ಷೆಗೆ ಐಚ್ಛಿಕ ವಿಷಯವನ್ನಾಗಿ ಸೇರಿಸಿ, ಅದರಲ್ಲಿ ಶಿಕ್ಷಣ ಕೊಡಲು ಮೈಸೂರು ವಿಶ್ವವಿದ್ಯಾಲಯದವರು ಏರ್ಪಾಡು ಮಾಡುತ್ತಿರುವರೆಂದು ಗೊತ್ತಾಗಿದೆ. ಅಠಾರಾ ಕಛೇರಿ ಬಳಿ ಇರುವ ಸ್ಕೌಟ್ ಭವನದಲ್ಲಿ ರಂಗಮಂಟಪದ ಸೌಕರ್ಯವಿರುವುದರಿಂದ ಅದರ ಉಪಯೋಗವನ್ನು ಪಡೆದುಕೊಳ್ಳಲಾಗುವುದೆಂದು ಹೇಳಲಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯೇ ಇಲ್ಲವಾಗಿದೆ

ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯು ಬಾರದೆ ಪರಿಸ್ಥಿತಿಯು ತುಂಬಾ ತೀವ್ರವಾಗಿರುವುದೆಂದು ಅಲ್ಲಿನ ಜಿಲ್ಲಾಧಿಕಾರಿಗಳಾದ ಶ್ರೀ ಪಿ. ಚಿಕ್ಕನಾರಾಯಣಸ್ವಾಮಿಯವರು ಆಹಾರ ಮಂತ್ರಿ ಶ್ರೀ ಸಿದ್ಧವೀರಪ್ಪನವರಿಗೆ ವರದಿ ಮಾಡಿಕೊಂಡಿರುತ್ತಾರೆ. ಎರಡು ಅಂಗುಲವಷ್ಟು ಮಳೆಯಾದರೂ ಹೊಲವನ್ನು ಉತ್ತಬಹುದೆಂದೂ, ಅದೂ ಆಗದಿದ್ದರೆ ಈ ಸಲದ ಫಸಲೇ ಇಲ್ಲದಂತಾಗುವುದೆಂದೂ, ಉಳಿದ ಧಾನ್ಯಗಳ ಬೆಳೆಯು ಒಣಗಿ ಒಣಗಿ ಹೋಗುತ್ತಿರುವುದೆಂದೂ ಅವರು ತಿಳಿಯಪಡಿಸಿರುತ್ತಾರೆ.

ಹೈದರಾಬಾದಿನ ಹೊಸ ಶ್ರೇಷ್ಠ ನ್ಯಾಯಾಧೀಶರು

ಅಲಹಾಬಾದಿನ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀಶಂಕರ ಮಿಶ್ರರವರು ಹೈದರಾಬಾದಿನ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಕವಾಗಿರುವರೆಂದು ವರದಿಯಾಗಿದೆ.

ಕೆ. ಎಂ. ಪಣಿಕ್ಕರ್ ಈಜಿಪ್ಟಿನಲ್ಲಿ ಭಾರತದ ರಾಯಭಾರಿ

ಚೀನಾದಲ್ಲಿ ಭಾರತದ ರಾಯಭಾರಿಯಾಗಿದ್ದು ವಾಪಸು ಬಂದಿದ್ದ ಸರ್ದಾರ್ ಕೆ. ಎಂ. ಪಣಿಕ್ಕರ್‌ರವರನ್ನು ಈಜಿಪ್ಟಿನಲ್ಲಿ ರಾಯಭಾರಿಯಾಗಿ ನೇಮಿಸಲಾಗಿದೆ.

ದಕ್ಷಿಣ ಕನ್ನಡಕ್ಕೆ ಜೋಗಿನ ವಿದ್ಯುಚ್ಛಕ್ತಿ

ಬೆಂಗಳೂರು ೩.

ದಕ್ಷಿಣ ಕನ್ನಡಕ್ಕೆ ಜೋಗಿನಿಂದ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯೂ ಮತ್ತು ದಕ್ಷಿಣ ಕನ್ನಡದ ಮುಖಂಡರೂ ಆದ ಶ್ರೀಯುತ ಶ್ರೀನಿವಾಸ ಮಲ್ಯರವರ ನಾಯಕತ್ವದಲ್ಲಿ ನಿಯೋಗವೊಂದು ಮೊನ್ನೆ ಇಲ್ಲಿಗೆ ಆಗಮಿಸಿ ಸಂಸ್ಥಾನದ ಪ್ರಧಾನ ಕಾರ್ಯದರ್ಶಿಯವರನ್ನೂ, ಸಚಿವರುಗಳಾದ ಶ್ರೀಗಳು ಟಿ. ಸಿದ್ಧಲಿಂಗಯ್ಯ ಮತ್ತು ಎ. ಜಿ. ರಾಮಚಂದ್ರರಾಯರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದರು. ಅವರು ಸರ್ಕಾರದ ಹಲವು ಉನ್ನತಾಧಿಕಾರಿಗಳೊಡನೆಯೂ ಮಾತುಕತೆ ನಡೆಸಿ, ಅನಂತರ ಮದರಾಸಿಗೆ ತೆರಳಿದರು.

ಮುಷ್ಕರಗಾರರ ಮೇಲೆ ಫಿರಂಗಿ ಗುಂಡು !

ಬ್ರೆಜಿಲ್ಲಿನ ರಿಘೂಸೊಘೋರೆಸ್ ಎಂಬಲ್ಲಿ ರೈಲ್ವೆ ಕೆಲಸಗಾರರು ಮುಷ್ಕರ ನಡೆಸಿದ ಸಂಬಂಧವಾಗಿ ಪೊಲೀಸರು ಕಳೆದ ೩೧ ನೇ ತಾ|| ಅವರ ಮೇಲೆ ಫಿರಂಗಿಗಳನ್ನು ಹಾರಿಸಿದರೆಂದು ವರದಿಯಾಗಿದೆ.

ತುಮಕೂರು ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ಕಾರ್ಯ

ಜಿಲ್ಲಾ ಜನಸಂಘದ ವ್ಯವಸ್ಥೆ

ಓ. ಟಾ]   ತುಮಕೂರು ೩೦

ಭಾರತೀಯ ಜನಸಂಘದ ಜಿಲ್ಲಾ ಸಮಿತಿಯ ಸಾಧಾರಣ ಸಭೆಯು ಕಳೆದ ೩೦ ನೇ ತಾ|| ಇಲ್ಲಿ ನಡೆಯಿತು. ಜಿಲ್ಲೆಯ ಕ್ಷಾಮ ಪರಿಸ್ಥಿತಿಗಳ ಪರಿಶೀಲನೆ ನಡೆಸಲಾಯಿತು. ಈ ಕೂಡಲೇ ಅಲ್ಲಿ ಪರಿಹಾರ ಕಾರ್ಯಕ್ರಮವನ್ನು ಜಿಲ್ಲಾ ಸಮಿತಿಯು ಕೈಗೊಳ್ಳಬೇಕೆಂದೂ, ಸಂಸ್ಥಾನದ ಇತರ ಸಮಿತಿಗಳು ಧನ, ಧಾನ್ಯ ಮತ್ತು ಬಟ್ಟೆಗಳನ್ನು ವಸೂಲು ಮಾಡಿ ಕಳುಹಿಸಿಕೊಡಬೇಕೆಂದೂ ಕೋರುವ ನಿರ್ಣಯಗಳಾದುವು. ಒಂದು ವಾರದೊಳಗೆ ಶ್ರೀ ರುದ್ರಪ್ಪ ಮತ್ತು ಶ್ರೀ ನಾಗೇಶ ಭಟ್ಟರವರು ಕ್ಷಾಮ ಪರಿಸ್ಥಿತಿ ಬಗ್ಗೆ ತಮ್ಮ ವರದಿಯನ್ನೊಪ್ಪಿಸಬೇಕೆಂದೂ ಗೊತ್ತಾಯಿತು. ಸಮಿತಿಯು ಪುನಃ ೯ ನೇ ತಾ|| ಸೇರಲಿದೆ.

ಅಕ್ಟೋಬರ್ ೧ ರಿಂದ ಫಸ್ಟ್ ಕ್ಲಾಸ್ ಬೋಗಿ ವಜಾ

ಭಾರತ ಸರ್ಕಾರದ ರೈಲ್ವೆ ಖಾತೆಯ ಉಪ ಸಚಿವ ಶ್ರೀ ಓ. ವಿ. ಅಳಗೇಶನ್‌ರವರು ನಿನ್ನೆ ಮದರಾಸಿನಲ್ಲಿ ಪತ್ರಿಕೋದ್ಯೋಗಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ಇದೇ ಅಕ್ಟೋಬರ್ ಒಂದನೇ ತಾರೀಖಿನಿಂದ ದೇಶದ ಹಲವಾರು ಬ್ರಾಂಚ್ ಲೈನುಗಳಲ್ಲಿ ಫಸ್ಟ್ ಕ್ಲಾಸ್ ಗಾಡಿಗಳನ್ನು ವಜಾ ಮಾಡಲಾಗುವುದೆಂದೂ ಮತ್ತು ಬರುವ ವರ್ಷದ ಅಕ್ಟೋಬರ್ ೧ ರಿಂದ ಭಾರತದ ಆದ್ಯಂತ ಈ ವ್ಯವಸ್ಥೆಯನ್ನು ಪೂರ್ಣವಾಗಿ ರದ್ದುಗೊಳಿಸಲಾಗುವುದೆಂದೂ ತಿಳಿಸಿದರು.

ರೈಲ್ವೆ ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯವನ್ನು ಒದಗಿಸುವ ಗುರಿಯಲ್ಲಿ ಇನ್ನು ಮುಂದೆ ಎಲ್ಲ ಸಣ್ಣ ನಿಲ್ದಾಣಗಳ ಬಗ್ಗೆ ಹೆಚ್ಚಿನ ನಿಗಾ ಕೊಟ್ಟು, ತಂಗುವ ಸ್ಥಳ, ಬೆಂಚುಗಳು, ಕುಡಿಯುವ ನೀರಿನ ವ್ಯವಸ್ಥೆ, ಉತ್ತಮ ರೀತಿಯ ಕಕ್ಕಸು ಇವೇ ಮೊದಲಾದ ಸೌಕರ್ಯಗಳನ್ನು ಕಲ್ಪಿಸಲಾಗುವುದೆಂದೂ, ಇದಕ್ಕಾಗಿ ಬಹು ಭಾಗ ಹಣವನ್ನು ವೆಚ್ಚ ಮಾಡಲಾಗುವುದೆಂದೂ ತಿಳಿಸಿದರು.

ಕುಸ್ತಿ ಪ್ರೇಕ್ಷಕರಲ್ಲಿ ಹೊಡೆದಾಟವಾಗಿ ಒಬ್ಬನ ಮರಣ

ಮೊರಾದಾಬಾದಿನ ಬಳಿ ಒಂದು ಗ್ರಾಮದಲ್ಲಿ ಮೊನ್ನೆ ನಡೆದ ಕುಸ್ತಿಯಲ್ಲಿ ರೆಫರಿಯವರು ಕುಸ್ತಿಯನ್ನು ಮುಗಿಸಲು ನಾಲ್ಕು ನಿಮಿಷ ಹೆಚ್ಚಿನ ಅವಧಿಯನ್ನು ಕೊಟ್ಟುದರಿಂದ ಪ್ರೇಕ್ಷಕರಲ್ಲಿ ಅಸಮಾಧಾನ ಹುಟ್ಟಿ ಘರ್ಷಣೆ ನಡೆದು, ಒಬ್ಬನು ಮೃತಪಟ್ಟು, ಹಲವರು ಗಾಯಗೊಂಡರೆಂದು ವರದಿಯಾಗಿದೆ.

ನೇಪಾಳ ಸರ್ಕಾರದ ಸಲಹೆಗಾರರ ರದ್ದಿಗೆ ಒತ್ತಾಯ

ಅಖಿಲ ನೇಪಾಳ ಕಾಂಗ್ರೆಸ್ ಸಮಿತಿ ಸಭೆಯು ನಿನ್ನೆ ದಿನ ಸೇರಿ ರಾಜಾ ತ್ರಿಭುವನರು, ಸಂಸ್ಥಾನದಲ್ಲಿ ರಾಜ್ಯಾಡಳಿತದ ಬಗ್ಗೆ ನೇಮಿಸಲ್ಪಟ್ಟಿರುವ ಸಲಹೆಗಾರರನ್ನು ರದ್ದು ಮಾಡಿ ಪ್ರಜೆಗಳ ಮನ್ನಣೆಗೆ ಪಾತ್ರವಾದ ಸರ್ಕಾರವನ್ನು ರಚಿಸಲು ನೇಪಾಳ ಕಾಂಗ್ರೆಸ್ಸಿಗೆ ಸೂಚನೆ ಕೊಡಬೇಕೆಂದು ಒತ್ತಾಯ ಪಡಿಸುವ ನಿರ್ಣಯವನ್ನು ಅಂಗೀಕರಿಸಿತು.

ಈಜಿಪ್ಟಿನ ಶಿಶು ದೊರೆ ಸುಡಾನಿಗೂ ಅಧಿಪತಿ

ಈಜಿಪ್ಟಿನ ೭ ತಿಂಗಳಿನ ರಾಜಕುಮಾರ ಎರಡನೇ ಫೌದ್ ಅಹಮದ್‌ರವರು ಈಜಿಪ್ಟ್ ಮತ್ತು ಸುಡಾನ್‌ಗಳ ಅಧಿಪತಿಯೆಂಬ ಬಗ್ಗೆ ಭಾರತ ಸರ್ಕಾರದವರು ಮನ್ನಣೆಯನ್ನು ಸೂಚಿಸಿ ನಿನ್ನೆ ಪ್ರಕಟಣೆಯೊಂದನ್ನು ಹೊರಡಿಸಿರುವರು.

ದೇವರ ಉತ್ಸವದ ಸಮಯದಲ್ಲಿ ಗಲಭೆ

ಜಯಪುರದ ಬಳಿ ಕಿಷಾನ್‌ಗರ್ ಎಂಬಲ್ಲಿ ನಿನ್ನೆ ದಿನ ಬಾಲಾಜಿ ಮೇಳವೆಂಬ ಸಮಾರಂಭದಲ್ಲಿ ನೆರೆದಿದ್ದ ಎರಡು ತಂಡಗಳಿಗೆ ಜಗಳವುಂಟಾಗಿ ಕಲ್ಲೇಟುಗಳು ಬೀಳಲು ಪೊಲೀಸರು ಬಂದು ಗುಂಪಿನವರು ಚದುರಬೇಕೆಂದು ತಿಳಿಸಿದ್ದನ್ನು ಅವರು ಅಲಕ್ಷಿಸಲು ಪೊಲೀಸರು ಲಾಠಿ ಪ್ರಯೋಗ ಮಾಡಿದರು. ಅನಂತರ ಗುಂಪಿನವರು ಪೊಲೀಸರ ಕಡೆ ಕಲ್ಲುಗಳನ್ನು ಹೊಡೆಯಲಾಗಿ ಪೊಲೀಸರು ಗುಂಡು ಹಾರಿಸಿದರು. ಇದರ ಪರಿಣಾಮವಾಗಿ ಒಬ್ಬನು ಮಡಿದು, ೯ ಮಂದಿ ಪೊಲೀಸರೂ ಗುಂಪಿನ ಎಂಟು ಮಂದಿಯೂ ಗಾಯಗೊಂಡರು. ೩೦ ಜನರನ್ನು ಬಂಧಿಸಲಾಗಿದೆ.

ದೋಣಿ ಮುಳುಗಿ ೮೦ ಜನರ ಮರಣ

ಉತ್ತರ ಪ್ರದೇಶದ ಬಲ್ಲಿಯಾ ಜಿಲ್ಲೆಯ ಬಿಸ್ತ್ರಾಂಪುರ್‌ಘಾಟ್ ಎಂಬಲ್ಲಿ ೮೦ ಮಂದಿ ಪ್ರಯಾಣಿಕರೊಡನೆ ಗಂಗಾನದಿಯನ್ನು ದಾಟುತ್ತಿದ್ದ ಒಂದು ದೋಣಿಯು ಮುಗುಚಿಕೊಂಡು ಎಲ್ಲರೂ ಮೃತಪಟ್ಟರೆಂದು ವರದಿಯಾಗಿದೆ.

ಭಾರತದಲ್ಲಿ ವಿಶ್ವ ಕಿರಣಗಳ ಸಂಶೋಧನೆ

ಅಲಿಘಡದ ವಿಶ್ವವಿದ್ಯಾನಿಲಯವನ್ನು ಕೇಂದ್ರವನ್ನಾಗಿಟ್ಟುಕೊಂಡು ಅತ್ಯಂತ ಎತ್ತರದ ಆಕಾಶದಲ್ಲಿ ವಿಶ್ವ ಕಿರಣಗಳ ಬಗ್ಗೆ ಅಧ್ಯಯನ ನಡೆಸಲು ಅಮೆರಿಕಾ, ಮತ್ತು ಭಾರತೀಯ ವಿಜ್ಞಾನಿಗಳು ವ್ಯವಸ್ಥೆ ಮಾಡಿರುತ್ತಾರೆ. ಈ ಸಂಬಂಧವಾಗಿ ವಿಶ್ವ ಕಿರಣದ ಪ್ರವೀಣರಾದ ಡಾ|| ಮಾರ್ಸೆಲ್ [illegible] ಮಿರಾಂಟ್ಸ್‌ರವರು ಭಾರತಕ್ಕೆ ಬರುವ ೩೦ ರಂದು ಆಗಮಿಸುವರು.

ಯುವರಾಜರ ಹೆಸರಿನಲ್ಲಿ ಭಾರಿ ಕ್ರೀಡಾಂಗಣ

ದಿವಂಗತ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡ ಸ್ಟೇಡಿಯಂ ಒಂದನ್ನು ೫ ಲಕ್ಷ ರೂ ಗಳ ವೆಚ್ಚದಲ್ಲಿ ನಿರ್ಮಿಸಬೇಕೆಂದು ಕಂಠೀರವ ನರಸಿಂಹರಾಜ ಒಡೆಯರ್‌ರವರ ಸ್ಮಾರಕ ಸಮಿತಿಯವರು ತೀರ್ಮಾನಿಸಿರುತ್ತಾರೆ. ಇದಕ್ಕಾಗಿ ಸಮಿತಿಯಿಂದ ೨ ಲಕ್ಷ ರೂ ಗಳನ್ನು ಕೊಡಲಿರುವರೆಂದೂ, ಉಳಿದ ೩ ಲಕ್ಷ ರೂ. ಗಳನ್ನು ಸರ್ಕಾರದವರು ಕೊಡುವಂತೆ ಪ್ರಾರ್ಥಿಸಲಾಗುವುದೆಂದೂ ಗೊತ್ತಾಗಿದೆ. ಈ ಸ್ಟೇಡಿಯಂನಲ್ಲಿ ೫೦ ಸಾವಿರ ಜನರು ಕುಳಿತುಕೊಳ್ಳಲು ಅವಕಾಶ ಕಲ್ಪಿಸಲಾಗುವುದೆಂದು ತಿಳಿದುಬಂದಿದೆ.

ನಗ್ನ ಜನರಿಗೊಂದು ವಿಶ್ವಸಂಸ್ಥೆ

ಯೂರೋಪಿನಲ್ಲಿ ಒಂದುಕಡೆ ಪ್ರಪಂಚದ ಎಲ್ಲ ಭಾಗದ ನಗ್ನ ಜನಗಳ ಪ್ರತಿನಿಧಿಗಳೂ ಸೇರಿ, ತಮ್ಮಲ್ಲಿಯೇ ಅದ ಅಂತರರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಿಕೊಂಡಿರುತ್ತಾರೆ.

ವಿಶ್ವ ವಿದ್ಯಾಲಯಗಳ ಸಹಾಯಕ್ಕಾಗಿ ನಿಧಿ

ಭಾರತದ ವಿಶ್ವ ವಿದ್ಯಾಲಯಗಳಿಗೆ ಹಣ ಕಾಸಿನ ಸಹಾಯ ಒದಗಿಸಲು ಭಾರತ ಸರ್ಕಾರದವರು ಪ್ರಧಾನಿಯವರ ಹೆಸರಿನಲ್ಲಿ ಒಂದು ನಿಧಿಯನ್ನು ಸ್ಥಾಪಿಸುತ್ತಾರೆ ಸಾರ್ವಜನಿಕ ಸಂಸ್ಥೆಗಳೂ, ಜನರೂ ಕೊಡುವ ದ್ರವ್ಯ ಸಹಾಯವನ್ನು ನಿಧಿಗೆ ತೆಗೆದುಕೊಳ್ಳಲಾಗುವುದು

ಮಿಸೆಸ್ ಥಿಯೋಬಾಲ್ಡ್‌ರವರು

ರಾಜಧಾನಿಯಲ್ಲಿ ಅನೇಕ ವರ್ಷ ಕಾಲ ಪೌರಸಭಾ ಸದಸ್ಯರೂ ಸಮಾಜ ಸೇವಕರೂ ಆಗಿದ್ದು, ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ನರ್ಸರಿ ಶಾಲೆಯ ಸ್ಥಾಪಕರೂ ಆಗಿರುವ ಮಿಸೆಸ್ ಥಿಯೋಬಾಲ್ಡ್‌ರವರು ಈ ತಿಂಗಳು ೧೫ ನೇ ತಾರೀಖು ದಕ್ಷಿಣ ಆಫ್ರಿಕಕ್ಕೆ ತೆರಳಿ ಅಲ್ಲಿ ತಮ್ಮ ಮಗಳೊಡನೆ ನೆಲೆಸಲಿರುವರು. ಅವರು ಮೇಲ್ಕಂಡ ನರ್ಸರಿ ಸ್ಕೂಲಿಗೆ ಇದೇ ೫ ನೇ ತಾ॥ ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ಭೇಟಿಯಿತ್ತು ೪ ಘಂಟೆ ವರೆಗೆ ಇರುವರು ಅವರನ್ನು ಸ್ನೇಹಿತರೂ ಹಿತೈಷಿಗಳೂ ಅಲ್ಲಿ ಬಂದು ಭೇಟಿ ಮಾಡಬಹುದೆಂದು ಸೂಚಿಸಲಾಗಿದೆ

ಮುದ್ರಣಾಲಯದ ಶಾಸನದ ಬಗ್ಗೆ ಅಧಿಕಾರ

ಆಕ್ಷೇಪಕರವಾದವಿಷಯಗಳ ಪ್ರಕಟಣೆ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರದವರು ಸಂಸ್ಥಾನದಾದ್ಯಂತ ಎಲ್ಲ ಇಲಾಖಾ ಕಾರ್ಯದರ್ಶಿಗಳಿಗೂ ಮತ್ತು ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಗೂ ಅಧಿಕಾರ ಕೊಟ್ಟಿರುತ್ತಾರೆ

ಡಾ॥ ನಾಯಕರ್‌ರ ದಸ್ತಗಿರಿ

ದಕ್ಷಿಣ ಆಫ್ರಿಕದ ವರ್ಣಭೇದ ವಿರುದ್ಧದ ಚಳುವಳಿಯು ನೆಟಾಲಿಗೂ ಹರಡಿ, ೨೧ ಜನ ಆಫ್ರಿಕನ್ನರು ಮತ್ತು ಭಾರತೀಯರು ವೈಷ್ಯ ಕಾನೂನುಗಳನ್ನುಲ್ಲಂಘಿಸಿರುತ್ತಾರೆ ನೆಟಾಲಿನ ಭಾರತೀಯ ಕಾಂಗ್ರೆಸ್ ಅಧ್ಯಕ್ಷ ಡಾ॥ ಜಿ ಎಂ ನಾಯಕರ್ ಮತ್ತು ಆಫ್ರಿಕಾ ಕಾಂಗ್ರೆಸ್ಸಿನ ಮುಖಂಡ, ಜಿ ಜೆ ಸಿಮಲೀನೆಯವರ ದಸ್ತಗಿರಿಯಾಗಿದೆ

ವಿಷ ಮಿಶ್ರಿತ ಆಹಾರ ತಿಂದು ೩ ಮಕ್ಕಳ ಮರಣ

ಕಲ್ಲಿಕೋಟೆಯ ಬಳಿ ವಲುವನಾಡು ತಾಲ್ಲೂಕಿನ ಒಂದು ಗ್ರಾಮದಲ್ಲಿ ವಿಷ ಮಿಶ್ರ ಆಹಾರ ಸೇವನೆಯಿಂದ ಮೂರು ಮಕ್ಕಳು ಮರಣ ಹೊಂದಿದುವೆಂದು ವರದಿಯಾಗಿದೆ "ಪುಳುಕ್ಕ" ಎಂಬ ತಿಂಡಿ ಪದಾರ್ಥವನ್ನು ತಿಂದದ್ದರಿಂದ ವಾಂತಿ ಮತ್ತು ಬೇಧಿಯಾಗಿ ಅವು ಮಡಿದುವೆಂದು ಹೇಳಲಾಗಿದೆ

ಕೊಡಗಿಗೆ ಮೈಸೂರಿನಿಂದ ವಿದ್ಯುಚ್ಛಕ್ತಿ

ಕೊಡಗಿಗೆ ಮೈಸೂರಿನಿಂದ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಇಲ್ಲಿನ ಸರ್ಕಾರದೊಡನೆ ಚರ್ಚಿಸುವ ಸಲುವಾಗಿ, ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ ಎಂ ಪೂಣಾಚರವರು ಸಧ್ಯದಲ್ಲೇ ಬೆಂಗಳೂರಿಗೆ ಬರಲಿರುವರೆಂದು ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೨೦ ಎಸ್ ರಾಮಚಂದ್ರರಾವ್ ಸಂಗೀತ ಮಧ್ಯಾಹ್ನ ೧-೩೦ ವೀಣೆ ೨ ಜಿ, ನಾಗೇಂದ್ರಪ್ಪ ಕ್ಲಾರಿಯೋನೆಟ್ ಸಂಜೆ ೫-೩೦ ಮತ್ತು ೩-೨೦ ಟಿ ಸುಂದರರಾಜಯ್ಯಂಗಾರ್ ಸಂಗೀತ ೬-೧೦ ಕನ್ನಡ ಗೀತೆಗಳು ೭ ಚಿತ್ರಲೋಕ. ೮ ಗಂಗೂಬಾಯಿ ಹಾನಗಲ್ ಸುಧಾ ಕಲ್ಯಾಣ್. ೮-೧೫ ಭಾರತ ವಾಚನ ಕಮಲಾಕ್ಷಮ್ಮ ೮-೩೦ ಜಿ. ನಾಗೇಂದ್ರಪ್ಪ ಕ್ಲಾರಿಯೋನೆಟ್. ೯-೧೫ ಕ್ರಿಕೆಟ್ ವಿಮರ್ಶೆ ೯-೩೦ ರಾಗ ಲೋಕ

ಮದ್ರಾಸಿನಲ್ಲಿ ಕೇಂದ್ರ ಕೈಗಾರಿಕಾ ಇಲಾಖೆ ಶಾಖೆ

ಕೇಂದ್ರ ಕೈಗಾರಿಕಾ ಇಲಾಖೆಯ ಉಪ ಶಾಖೆಯೊಂದನ್ನು ಮದ್ರಾಸು ಪ್ರಾಂತದಲ್ಲಿ ಸ್ಥಾಪಿಸಿ, ಖಾದಿ, ಕೈ ಮಗ್ಗ, ಹಳ್ಳಿ ಕೈಗಾರಿಕೆ ಮತ್ತು ಇತರ ಚಿಕ್ಕ ಪುಟ್ಟ ಕೈಗಾರಿಕೆಗಳಿಗೆ ಗಮನಕೊಡುವಂತೆ ಮಾಡಲಾಗುವುದೆಂದು ಕೇಂದ್ರ ಸರ್ಕಾರದ ಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ

೧ ಕೊಡ ನೀರಿಗೆ ೩ ಕಾಸು

ರಾಯಲಸೀಮೆಯ ರಾಣಿಪೇಟೆಯಲ್ಲಿ ಕೊಡ ನೀರಿಗೆ ೩ ಕಾಸಿನಂತೆ ರುಸುಂ ಕೊಡಬೇಕೆಂದು ಅಲ್ಲಿನ ಪಂಚಾಯಿತಿಯು ನಿರ್ಧರಿಸಿರುತ್ತದೆ ಜನರಿಗೆ ನೀರಿನ ಅಭಾವವುಂಟಾಗಿರುವುದೆಂದೂ, ಅದನ್ನು ನೀಗಲು ೫೦ ಭಾವಿಗಳ ಹೂಳನ್ನು ತೋಡಿಸಿರುವುದಾಗಿಯೂ ಹೇಳಲಾಗಿದೆ

ಕ್ಷಾಮ ಪರಿಹಾರ ನಿಧಿಗೆ ಸಹಾಯ ಒದಗಿಸುವಂತೆ ಪೌರರಿಗೆ ಪ್ರಾರ್ಥನೆ

ಮೈಸೂರಿನ ಪೌರಸಭಾಧ್ಯಕ್ಷರೂ, ನಗರದ ಅಭಾವ ಪರಿಹಾರ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಕೃಷ್ಣಮೂರ್ತಿಯವರು ಮನವಿಯೊಂದನ್ನು ಹೊರಡಿಸಿ, ನಗರದಲ್ಲಿರುವ ನಾಗರಿಕರು ಮುಖ್ಯ ಮಂತ್ರಿಯವರ ಹೆಸರಿನಲ್ಲಿ ಏರ್ಪಟ್ಟಿರುವ ಅಭಾವ ಪರಿಹಾರ ನಿಧಿಗೆ ಸಹಾಯ ಮಾಡಬೇಕೆಂದು ಕೋರಿರುತ್ತಾರೆ ಅಭಾವ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಸರ್ಕಾರದವರು ಈಗಾಗಲೇ ಸುಮಾರು ೨೭॥ ಲಕ್ಷ ರೂ ಗಳನ್ನು ವೆಚ್ಚ ಮಾಡಿರುವರೆಂದೂ, ಕ್ಷಾಮ ಪೀಡಿತ ಜನರಿಗೆ ಸಹಾಯಕ್ಕಾಗಿ ನಗರದಲ್ಲಿ ೫೦ ಜನರ ಸಮಿತಿಯೊಂದನ್ನು ಸ್ಥಾಪಿಸಲಾಗಿರುವುದೆಂದೂ ಅವರು ತಿಳಿಸಿ, ಜನರು ಧನ ಧಾನ್ಯವನ್ನು ಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ ರಾಜಕೀಯ ಪಕ್ಷಗಳೂ, ಸಮಾಜ ಸುಧಾರಣಾ ಸಂಸ್ಥೆಗಳೂ, ಸರ್ಕಾರಿ ನೌಕರರೂ ಈ ಕಾರ್ಯವನ್ನು ಜಯಪ್ರದವಾಗಿ ನಡೆಸಬೇಕೆಂದು ಅವರು ಮನವಿ ಮಾಡಿಕೊಂಡಿರುವರು.

ಚಂದಾದಾರರಲ್ಲಿ ವಿನಂತಿ

ನಮ್ಮ ರಶೀತಿಯನ್ನು ಪಡೆಯದೆ ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲ.

ನ್ಯೂಸ್ ಪೇಪರ್ ಹೌಸ್,
ಏಜೆಂಟರು, "ಸಾಧ್ವಿ" ಮೈಸೂರು

ಶ್ರೀ ಜಗದಾಂಬ ಶಿಶುವಿಹಾರ

583 ದಿವಾನ್ಸ್ ರಸ್ತೆ, ಮೈಸೂರು

ಶಿಶು ಮನಶ್ಶಾಸ್ತ್ರ ಮತ್ತು ಶಿಶು ವಿದ್ಯಾಭ್ಯಾಸ ಪದ್ಧತಿಗಳಿಗನುಸಾರವಾಗಿ, ಉತ್ತಮ ತರವಾದ ಪರಿಸರಣಕ್ಕನುಗುಣವಾದ ಬಂಗಲೆಯಲ್ಲಿ, ಉತ್ತಮೋತ್ತಮವಾದ ವಿದ್ಯಾಭ್ಯಾಸದ ಉಪಕರಣಗಳ ಸಹಾಯದಿಂದ ನೃತ್ಯ, ಗೀತ ವಾದ್ಯಾದಿಗಳ ಮೂಲಕ ಶಿಶು ವಿದ್ಯಾಭ್ಯಾಸವನ್ನು ಮೇಲ್ಕಂಡ ಶಿಶುವಿಹಾರದಲ್ಲಿ ಕೊಡಲಾಗುತ್ತಿದೆ. ಈ ಸುಸಮಯವನ್ನು ಕಳೆದುಕೊಳ್ಳದೆ ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದರ ಮೂಲಕ ಶಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಡಿ. ಕೃಷ್ಣಮೂರ್ತಿ,
ಸೆಕ್ರೆಟರಿ

ಕಣಜದ ಹುಳುಗಳು ಕಡಿದು ಅನಾಹುತ

ಫ್ರಾನ್ಸಿನ ಡಿಜಾನ್ ಎಂಬಲ್ಲಿ ಒ[illegible] ರೈತನು ಹೊಲವನ್ನು ಟ್ರಾಕ್ಟರ್ ಸ[illegible] ಯದಿಂದ ಮೊನ್ನೆ ಉಳುತ್ತಿದ್ದಾಗ, [illegible] ಜಗಳ ಸಮೂಹವು ಅವನನ್ನು ಮು[illegible] ಕಡಿದುವೆಂದೂ; ಅದರ ಪರಿಣಾಮ[illegible] ಗಿ ಟ್ರಾಕ್ಟರ್ ಅವನ ಹತೋಟಿ [illegible] ಹುಲ್ಲಿನ ಮೆದೆಯ ಮೇಲೆ ಮಗುಚಿಕೊ[illegible] ಆ ಮೆದೆಗೆ ಬೆಂಕಿ ಬಿತ್ತೆಂದೂ, ಅದ[illegible] ದ ಅವನು ಸುಟ್ಟು ಸತ್ತುಹೋದ[illegible] ದೂ ವರದಿಯಾಗಿದೆ

ಒಂದು ಸರ್ಕಾರದಲ್ಲಿ ಇಬ್ಬ[illegible] ವಿದೇಶಾಂಗ ಮಂತ್ರಿಗಳ[illegible]

ಹಾಲೆಂಡಿನಲ್ಲಿ ೯ ವಾರಗಳಿಂದ [illegible] ರಾಜಕೀಯ ಬಿಕ್ಕಟ್ಟು ಈಗ ಕೊನೆಗೆ[illegible] ದು, ಅಲ್ಲಿನ ರಾಣಿಯು ಅಕ್ಷ್ಮರೊ[illegible] ನ್ನು ಹೊಸದಾಗಿ ನೂತನ ಸರ್ಕಾರ [illegible] ಪನೆಯಾಗಿರುವುದೆಂದು ತಿಳಿಸಿರುತ್ತಾ[illegible] ಆ ಸರ್ಕಾರದಲ್ಲಿ ಕ್ಯಾಥೊಲಿಕ್ ಪ[illegible] ಸೇರಿದ ಒಬ್ಬರು ಮತ್ತು ಯಾವ [illegible] ಕ್ಷಕ್ಕೆ ಸೇರದಿರುವ ಇನ್ನೊಬ್ಬರು ವಿ[illegible] ಶಾಂಗ ಮಂತ್ರಿಗಳಿರುವರು

ಗಣಪತಿ ಮಂಗಳಾರತಿ

ರಾಜಧಾನಿಯ ಮಹಾರಾಜಾ ಕಾ[illegible] ಜು ವಿದ್ಯಾರ್ಥಿ ನಿಲಯದಲ್ಲಿ ನೆನ್ನೆ[illegible] ಜೆ ಪ್ರೊ॥ ಎಸ್. ವಿ. ರಂಗಣ್ಣನವರ[illegible] ಧ್ಯಕ್ಷತೆಯಲ್ಲಿ ಗಣಪತಿಯ ಮಹಾ [illegible] ಗಳಾರತಿಯು ನಡೆಯಿತು. ವಿ[illegible] ಜೊಕ್ಕಮ್ಮಾಳ್ ಮತ್ತು ಪಾರ್ಟಿಯವ[illegible] ದ ಸಂಗೀತವು ಏರ್ಪಾಡಾಗಿದ್ದಿತು

ಮೈಸೂರು ಪೇಟೆ ಧಾರ[illegible]

ಪಲ್ಲಂಕ್ಕೆ	ರೂ ಇಂದ	ರೂ[illegible]
ನೆಲಗಡಲೆ	೭-೨-೦	೧೬-[illegible]
ಎಳ್ಳು	೩೬ ೪ ೦	೭೪-[illegible]
ಹುಚ್ಚೆಳ್ಳು	೫೧ ೧೨ ೦	
ಹರಳು ಬೀಜ	೪೭-೮-೦	೫೦-[illegible]
ಹುರುಳಿ	೪೮ ೮ ೮	೫[illegible]
ಹೆಸರು	೩೭ ೦-೦	
ಹೊಂಗೇಬೀಜ	೨೫-೨ ೦	
ಉದ್ದು	೩೩ ೧೦ ೮	
ಅವರೆ	೭೩-೧೨ ೦	
ಹಲಸಂದೆ	೭೩-೦-೦	೭೭[illegible]
ಮೆಣಸಿನಕಾಯಿ		
ಮಣಿಗೆ	೧೨-೮ ೦	೧೫ [illegible]
ಹುಣಸೇಹಣ್ಣು	೩ ೫ ೦	೫ [illegible]
ಸೀಗೇಕಾಯಿ	೫ ೪ ೦	೫-[illegible]
ತೆಂಗಿನಕಾಯಿ ೧೧೦೦ ಕ್ಕೆ	೦ ೦	೨೪೮[illegible]

ಒ ಲಂ ಪಿ ಯಾ

4-9-52ರಿಂದ ಚಿಕ್ಕಂದ ಜವನಿಕ್ಕೇನ[illegible]
ಪ್ರದರ್ಶಿಸಲ್ಪಡುತ್ತಿರುವ
ಅದ್ಭುತವಾದ 3 ನೇ ವಾರ
ದೀಪಕ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ[illegible]

ಸಿಂದ್‌ಬಾದ್ ದಿ ಸೈಲರ್[illegible]

ಪಾತ್ರ-ರಂಜನ್, ನಾಸಿಂ, ಮತ್ತು ಭಗವ[illegible]

—: ಬೆಳಗಿನ ಪ್ರದರ್ಶನ :—
5 9 52ರಿಂದ :: 2 ದಿನಗಳು ಮಾ[illegible]
ಟಾರ್ಜಾನ್ಸ್ ಅಡ್ವೆಂಚರ್[illegible]

Edited, Printed and Pub[lished] by A. R. Nagaraja[illegible] at Sadhvi Press, D. Subb[aya]h Road, Mysore.

ಅತ್ಯಮೋಘವಾದ ಹರಾಜು ಮಾರಾಟ

ಮರಮುಟ್ಟು ಮತ್ತು ಗೃಹಕೃತ್ಯದ ಸಾಮಾನುಗಳಿಂದ ಭರ್ತಿಯಾಗಿರುವ ಒಂದು ಬಂಗಲೆ

ಇದೇ 6ನೇ ತಾ॥ ಶನಿವಾರ, 7ನೇ ತಾ॥ ಭಾನುವಾರ ಮತ್ತು ಮುಂದಿನ ದಿನಗಳಲ್ಲಿ

ಬೆಳಗ್ಗೆ 9 ಘಂಟೆಯಿಂದ ಮಧ್ಯಾಹ್ನ 2ರ ವರೆಗೂ ಮತ್ತು 4 ರಿಂದ 6ರ ವರೆಗೂ ನಿತ್ಯವೂ (ಭಾರತವನ್ನು ಬಿಡಲಿರುವ) ಶ್ರೀಮತಿ ಡಬ್ಲ್ಯು. ಜೆ. ಥಿಯೋಬಾಲ್ಡ್‌ರವರ ಸೂಚನೆ ಪ್ರಕಾರ ಹರಾಜು ನಡೆಯುವುದು
ಸಾಮಾನುಗಳನ್ನು ಮೈಸೂರಿನ ನರಸಿಂಹರಾಜ ಮೊಹಲ್ಲಾ, ಶಿವಾಜಿ ರಸ್ತೆಯ 2552ನೇ ನಂಬರ್ ಮನೆಯಲ್ಲಿ ಮಾರಲಾಗುವುದು.
ಸಾಮಾನುಗಳ ಪಟ್ಟಿಯನ್ನು ಹಂಚಲಾಗುತ್ತಿದೆ ಈಗಲೇ ಒಂದನ್ನು ಕೆಳಗಿನ ವಿಳಾಸದವರಿಂದ ಪಡೆಯಿರಿ –

ಮೆ॥ ಅಬೀದ್ಸ್, ಸರ್ಕಾರದ ಮತ್ತು ಸಿವಿಲ್ ಹರಾಜು ಮಾರಾಟಗಾರರು, ಮೈಸೂರು

ಸಾಮಾನುಗಳನ್ನು ನಿತ್ಯವೂ ಬೆಳಗ್ಗೆ 10 ಘಂಟೆಯಿಂದ 12ರ ವರೆಗೂ ಮಧ್ಯಾಹ್ನ 4 ರಿಂದ ಸಂಜೆ 6ರ ವರೆಗೂ ಪರೀಕ್ಷಿಸಿ ನೋಡಬಹುದು.
ಡಿಪಾಸಿಟ್ ಕೊಡುವವರಿಗೆ ಮಾತ್ರ ಬಂಗಲೆಯೊಳಗೆ ಪ್ರವೇಶ. ಹರಾಜು ಕಾಲದಲ್ಲಿ ಉಪಾಹಾರಕ್ಕಾಗಿ ಪ್ರತ್ಯೇಕ ಏರ್ಪಾಡು ಮಾಡಲಾಗಿದೆ.

ಟೆಲಿಫೋನ್ ನಂ 792 ||ವಂದೇ ಮಾತರಂ|| ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೯-೮-೧೯೫೧ [ಸಂಚಿಕೆ ೩೩

ಹೈದ್ರಾಬಾದ್ ಪೋಲಿಸರ ಗುಂಡಿನಿಂದ ೨ ಮರಣ

ಪ್ರಭುಗಳ ಅಧ್ಯಕ್ಷತೆಯಲ್ಲಿ ವಿಶ್ವೇಶ್ವರಯ್ಯನವರ ವರ್ಧಂತಿ

ಮೈಸೂರು ೪

ಈ ತಿಂಗಳು ೧೫ ನೇ ತಾ|| ಬೆಳಗ್ಗೆ ೧೦ ಗಂಟೆಗೆ ಬೆಂಗಳೂರಿನ ಪುರಭವನದಲ್ಲಿ ನಡೆಯಲಿರುವ ಸರ್ ಎಂ ವಿಶ್ವೇಶ್ವರಯ್ಯನವರ ೯೧ ನೇ ವರ್ಷ ವರ್ಧಂತಿಯ ಅಧ್ಯಕ್ಷತೆಯನ್ನು ಶ್ರೀಮನ್ಮಹಾರಾಜರವರು ವಹಿಸುವರು ಪ್ರಭುಗಳು ೧೭ ನೇ ತಾ|| ಮಂಡ್ಯಕ್ಕೆ ಭೇಟಿಯಿತ್ತು ಸಕ್ಕರೆ ಕಂಪೆನಿಯ ಕೆಲಸ ಕಾರ್ಯಗಳನ್ನು ಪರಿಶೀಲಿಸುವರು ಕೋಡಿಹಳ್ಳಿಯಲ್ಲಿರುವ ಪ್ರಯೋಗಾರ್ಥ ಕಬ್ಬಿನ ಬೆಳೆಯ ಸ್ಥಿತಿಯನ್ನು ಶ್ರೀಮನ್ಮಹಾರಾಜರವರು ನೋಡಲಿರುವರು

ಭಾರತದ ಮೇಲೆ ಯುದ್ಧಕ್ಕೆ ಪಾಕಿಸ್ತಾನಕ್ಕೆ ಸೂಚನೆ

ಪಾಕಿಸ್ತಾನದ ಹಕೋಟೆಯಲ್ಲಿರುವ ಆಜಾದ್ ಕಾಶ್ಮೀರದ ಜನರು ಪುನಃ ಕದನವನ್ನು ಪ್ರಾರಂಭಿಸಲು ಪಾಕಿಸ್ತಾನವು ಅವಕಾಶವೀಯಬೇಕೆಂದು ಜಮ್ಮು ಮತ್ತು ಕಾಶ್ಮೀರ ಮುಸ್ಲಿಂ ಸಮ್ಮೇಳನದ ಅಧ್ಯಕ್ಷರಾದ ಸರ್ದಾರ್ ಇಬ್ರಾಹಿಂರವರು ಕೋರಿರುತ್ತಾರೆ ವಿಶ್ವ ಸಂಸ್ಥೆಯು ಕಾಶ್ಮೀರ ಸಂಧಾನದಲ್ಲಿ ವಿಫಲಗೊಂಡಿರುವುದೆಂದೂ, ಈ ವಿಷಯವನ್ನು ಕಾಶ್ಮೀರಿಗಳೇ ತಮ್ಮ ಕೈಗೆ ತೆಗೆದುಕೊಂಡು ಬಗೆಹರಿಸಬೇಕೆಂದೂ ಅವರು ತಿಳಿಸಿರುತ್ತಾರೆ ಷೇಕ್ ಅಬ್ದುಲ್ಲಾರವರು ಕಾಶ್ಮೀರದಲ್ಲಿ ಕೈಗೊಂಡಿರುವ ಭೂ ಸುಧಾರಣೆಗಳನ್ನು ಅವರು ಸ್ವಾಗತಿಸಿ, ಇದರಿಂದ ಡೋಗ್ರಾ ಹಿಂದುಗಳ ಆಡಳಿತವು ಕೊನೆಗೊಂಡಿದೆಯೆಂದು ಹೇಳಿರುವರು

ಮಂಗ್ಳೂರಿಗೆ ರೈಲುರಸ್ತೆ ಇಲ್ಲ

ಚಿಕ್ಕಮಗಳೂರು ಮತ್ತು ಮಂಗಳೂರುಗಳಿಗೆ ರೈಲ್ವೆಯನ್ನು ಹಾಕಲು ಹಣಕಾಸಿನ ಅಡಚಣೆಯಿಂದ ಸಧ್ಯಕ್ಕೆ ಸಾಧ್ಯವಿಲ್ಲವೆಂದೂ, ಕೇಂದ್ರ ಸರ್ಕಾರದವರು ಕಡೂರು ಜಿಲ್ಲಾ ಬೋರ್ಡಿಗೆ ಉತ್ತರವಿತ್ತಿರುವರೆಂದು ಗೊತ್ತಾಗಿದೆ ಕಡೂರಿನಿಂದ ಚಿಕ್ಕಮಗಳೂರಿಗೆ ರೈಲು ಮಾರ್ಗವನ್ನು ಹಾಕುವ ಯೋಜನೆಯು ಕಾರ್ಯಸಾಧ್ಯವಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರೆಂದು ಹೇಳಲಾಗಿದೆ

ಶ್ರೀ ಸ್ವಾಮಿಗಳವರ ಜನ್ಮ ದಿನೋತ್ಸವ

ರಾಜಧಾನಿಯ ಜಯಲಕ್ಷ್ಮಿ ಪುರದ ಬಡಾವಣೆಯಲ್ಲಿರುವ ಶ್ರೀ ಅನಂತಾಶ್ರಮದಲ್ಲಿ ಶ್ರೀ ಸ್ವಾಮಿಗಳವರ ಜನ್ಮೋತ್ಸವವು ನೆನ್ನೆಯಿಂದ ಪ್ರಾರಂಭವಾಗಿ ಭಾನುವಾರದವರೆಗೂ ನೆರವೇರುವುದು ಪ್ರತಿದಿನ ಬೆಳಗ್ಗೆ ೭ ರಿಂದ ೮ ರ ವರೆಗೆ ಗೀತಾ ಪಾರಾಯಣ ಸಂಜೆ ೫ ರಿಂದ ೭|| ವರೆಗೆ ಹರಿಕಥೆ, ಉಪನ್ಯಾಸ, ಸಂಗೀತ ಮುಂತಾದುವೂ ಅಖಂಡ ಭಜನೆಯೊಡನೆ ನಡೆಯುವುವು. ಈ ಸಂಜೆ ಶ್ರೀ ಅನಂತ ಪದ್ಮನಾಭ ಸ್ವಾಮಿಗಳವರಿಂದ ಉಪನ್ಯಾಸವೂ, ನಾಳೆ ಸಂಜೆ ಶ್ರೀ ಸಂಬಂಧ ಮೂರ್ತಿ ಭಾಗವತರಿಂದ ಹರಿಕಥೆಯೂ, ನಾಳಿದ್ದು ಸಂಜೆ ಪಿ|| ಎಸ್ ಚೊಕ್ಕಮ್ಮ ಮತ್ತು ಪಾರ್ಟಿಯವರಿಂದ ಸಂಗೀತವೂ, ಭಾನುವಾರ ಸಂಜೆ ಶ್ರೀ ಹರಿಹರನಾಥ ಭಾಗವತರಿಂದ ಹರಿಕಥೆಯೂ ಏರ್ಪಾಡಾಗಿವೆ.

ಹ ರಿ ಕ ಥೆ

ಮೈಸೂರು ೪

ಮೈಸೂರು ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾ ಕಛೇರಿ ಮಹಡಿ ಮೇಲೆ ಹುಣ್ಣಿಮೆ ಪ್ರಯುಕ್ತ ಈ ದಿನ ರಾತ್ರಿ ಒಂಭತ್ತು ಗಂಟೆಗೆ ವೇ|| ಬ್ರ|| ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ "ಲವ ಕುಶ" ಎಂಬ ಹರಿಕಥೆ ನಡೆಯುತ್ತದೆ ಸರ್ವರಿಗೂ ಸ್ವಾಗತವುಂಟು.

ಕಾಂ|| ಸದಸ್ಯತನದ ಅವಧಿ ಇನ್ನೂ ಹೆಚ್ಚಿತು

ಕಾಂಗ್ರೆಸ್ಸಿಗೆ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಅವಧಿಯನ್ನು ಈ ತಿಂಗಳು ೧೫ರ ವರೆಗೆ ಹೆಚ್ಚಿಸಲಾಗಿದೆ. ಕಾಂಗ್ರೆಸ್ ಚುನಾವಣಾ ಕಾರ್ಯಕ್ರಮದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ.

ಲಂಡನ್ನಿನಲ್ಲಿ ಸಾವಿರ ಪೌಂಡು ಹಗಲು ದರೋಡೆ

ಪಶ್ಚಿಮ ಲಂಡನ್ನಿನಲ್ಲಿ ನೆನ್ನೆ ದಿನ ನಸುಕಿನಲ್ಲಿ ಮುಖವಾಡ ಧರಿಸಿದ ನಾಲ್ಕು ಮಂದಿ ಕಳ್ಳರು ಅಂಗಡಿಯಿಂದ ಬ್ಯಾಂಕಿಗೆ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದ ಒಂದು ಮೋಟಾರನ್ನು ತಡೆದು ೧ ಸಾವಿರ ಪೌಂಡನ್ನು ಅಪಹರಿಸಿದ ಪ್ರಸಂಗವು ವರದಿಯಾಗಿದೆ. ಅವರ ಗುಂಪಿನಲ್ಲಿ ಒಬ್ಬ ಸ್ಫುರದ್ರೂಪಿಯಾದ ತರುಣಿಯೂ ಇದ್ದಳೆಂದೂ ಈ ಕಾರ್ಯಕ್ಕಾಗಿ ಕಳ್ಳರು ಮೂರು ಕಾರುಗಳನ್ನು ಉಪಯೋಗಿಸಿದರೆಂದೂ ಹೇಳಲಾಗಿದೆ

ಡ್ರೈವರನ ನಿದ್ದೆ ಫಲವಾಗಿ ೨೦ ಜನರ ಮರಣ

ದಕ್ಷಿಣ ಅಮೆರಿಕದ ಪೆರು ರಾಜ್ಯದ ರಾಜಧಾನಿ ಲಿಮಾ ಬಳಿ ಮೊನ್ನೆ ಹೋಗುತ್ತಿದ್ದ ಒಂದು ಲಾರಿಯನ್ನು ನಡೆಸುತ್ತಿದ್ದಂತೆಯೇ ಡ್ರೈವರನು ನಿದ್ದೆ ಹೋದುದರ ಪರಿಣಾಮವಾಗಿ ಲಾರಿಯು ೫೦೦ ಅಡಿ ಆಳದ ಕೊರಕಲಿಗೆ ಬಿದ್ದು ಅದರಲ್ಲಿದ್ದ ೨೦ ಜನರು ಮಡಿದರೆಂದು ವರದಿಯಾಗಿದೆ. ಆದರೆ ಡ್ರೈವರನಿಗೆ ಗಾಯವಾಗಲಿಲ್ಲ ಐದು ದಿನಗಳಿಂದ ಅವನಿಗೆ ನಿದ್ದೆ ಇರಲಿಲ್ಲವೆಂದೂ, ವಿಶ್ರಾಂತಿಗಾಗಿ ಅವನು ಮನೆಗೆ ಹೋಗುವ ಆತುರದಲ್ಲಿದ್ದನೆಂದೂ ಹೇಳಲಾಗಿದೆ

ಹೈದರಾಬಾದಿನಲ್ಲಿ ಗುಂಡಿ ನೇಟಿನಿಂದ ಇಬ್ಬರ ಮರಣ

ಬೆಂಕಿಯಿಂದ ಮುಖ್ಯ ಮಂತ್ರಿ ಮೋಟಾರು ಕಾರು ಭಸ್ಮ

ಹೈದರಾಬಾದ್ ಸರ್ಕಾರಿ ನೌಕರಿಗಳಿಗೆ ಹೊರಗಿನವರನ್ನು ನೇಮಿಸಿಕೊಳ್ಳುವುದರ ವಿರುದ್ಧವಾಗಿ ಅಲ್ಲಿನ ಆಜಾದ್ ಹೈದರಾಬಾದ್ ಸಂಗಡದವರು ಆರಂಭಿಸಿರುವ ಚಳುವಳಿಯು ಉಗ್ರರೂಪವನ್ನು ತಾಳಿರುವುದೆಂದು ವರದಿಯಾಗಿದೆ. ನಗರದಲ್ಲಿ ಜಾರಿಯಲ್ಲಿರುವ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಪ್ರದರ್ಶನಕಾರರು ಗುಂಪು ಕೂಡಿದ್ದುದನ್ನು ಚದುರಿಸಲು ಪೋಲೀಸರು ಆರು ಬಾರಿ ಅಶ್ರುವಾಯು ಮತ್ತು ಲಾಠಿ ಪ್ರಯೋಗ ಮಾಡಿದುದು ವಿಫಲವಾಗಿ, ಗುಂಪಿನವರು ಪೋಲೀಸರ ಮೇಲೆ ಕಲ್ಲನ್ನೆಸೆದು, ಒಂದು ಪೋಲೀಸ್ ಠಾಣೆ ಮೇಲೆ ಧಾಳಿ ನಡೆಸಿ ಮತ್ತೊಂದಕ್ಕೆ ಬೆಂಕಿ ಹಚ್ಚಿದರು ತರುವಾಯ ಪೋಲೀಸರು ಗುಂಡು ಹಾರಿಸಲಾಗಿ ಒಬ್ಬನು ಸ್ಥಳದಲ್ಲೇ ಮೃತಪಟ್ಟನು, ೪ ಜನರು ತೀವ್ರವಾಗಿ ಗಾಯಗೊಂಡರು ಆಸ್ಪತ್ರೆಯಲ್ಲಿ ಮತ್ತೊಬ್ಬನು ಮೃತಪಟ್ಟನು. ಕಲ್ಲೇಟಿನಿಂದ ೩೦ ಮಂದಿ ಪೋಲೀಸರೂ, ೧೦ ಮಂದಿ ಪ್ರದರ್ಶನಕಾರರೂ ಗಾಯಗೊಂಡರು

ಪ್ರದರ್ಶನಕಾರರು ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣರಾಯರ ಮೋಟಾರು ಕಾರಿಗೆ ಬೆಂಕಿ ಹಚ್ಚಿ ಸುಟ್ಟರು. ೫ ಬಸ್ಸುಗಳೂ ಮತ್ತು ನಾಲ್ಕು ಪೋಲೀಸ್ ವ್ಯಾನುಗಳೂ ಸುಟ್ಟುಹೋದುವು.

ಶಸ್ತ್ರಸಜ್ಜಿತ ಪೋಲೀಸರು ನಗರದ ಮುಖ್ಯ ಬೀದಿಗಳಲ್ಲಿ ಕಾವಲು ಕಾಯುತ್ತಿರುವರು

ಹೈದರಾಬಾದು ಮತ್ತು ಸಿಕಂದರಾಬಾದುಗಳಲ್ಲಿ ಒಂದು ವಾರ ಕಾಲ ಸಭೆ, ಮೆರವಣಿಗೆಗಳನ್ನೂ ಮತ್ತು ಆಯುಧಗಳೊಡನೆ ತಿರುಗಾಡುವುದನ್ನೂ ನಿಷೇಧಿಸಲಾಗಿದೆ ಶಾಲಾ ಕಾಲೇಜುಗಳನ್ನು ಮೂರು ದಿನಗಳ ಕಾಲ ಮುಚ್ಚಲು ಆಜ್ಞೆ ಮಾಡಲಾಗಿದೆ

ಸಂಸ್ಥಾನದ ಸೋಷಲಿಸ್ಟ್ ಡೆಮೊಕ್ರಾಟಿಕ್ ಪಕ್ಷದ ನಾಯಕರೂ ಶಾಸನ ಸಭಾ ಸದಸ್ಯರೂ ಆದ ಶ್ರೀ ವಿ. ಡಿ. ದೇಶಪಾಂಡೆಯವರು ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡಿ ಸರ್ಕಾರದವರು ಆಜಾದ್ ಹೈದರಾಬಾದ್ ಸಂಘದವರ ಬೇಡಿಕೆಯನ್ನು ಈಡೇರಿಸಬೇಕೆಂದು ತಿಳಿಸಿದರು. ಪ್ರದರ್ಶನದಲ್ಲಿ ಬಹು ಮಂದಿ ವಿದ್ಯಾರ್ಥಿಗಳೂ ಭಾಗವಹಿಸಿದರು

ಕಾಂ|| ಅಂಗರಚನೆ ಬಗ್ಗೆ ಪ್ರದೇಶ ಸಮಿತಿಯ ಚರ್ಚೆ

ಸ್ವಂ ಸು ಪ್ರೋ] ಬೆಂಗಳೂರು ೬

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈದಿನ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಸಂಸ್ಥೆಯ ಅಂಗರಚನೆ ಬಗ್ಗೆ ಸೂಚಿಸಲಾಗಿರುವ ತಿದ್ದುಪಡಿಗಳನ್ನು ಪರಿಶೀಲಿಸಿತೆಂದು ಗೊತ್ತಾಗಿದೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ತಿದ್ದುಪಡಿಯನ್ನೂ ಚರ್ಚಿಸಲಾಯಿತು ಸಭೆಗೆ ಶ್ರೀ ಎಸ್ ನಿಜಲಿಂಗಪ್ಪನವರೂ, ಎಲ್ಲ ಮಂತ್ರಿಗಳೂ ಬಂದಿದ್ದರು ಈ ಸಂಜೆಯೂ ಮತ್ತು ನಾಳೆಯೂ ಸಮಿತಿಯು ಸೇರುವುದು. ಇಂದೂರು ಎ.ಐ.ಸಿ.ಸಿ. ಸಭೆಗೆ ಎಲ್ಲ ಮಂತ್ರಿಗಳೂ, ಪ್ರದೇಶ ಕಾರ್ಯ ಸಮಿತಿಯ ಸದಸ್ಯರೂ ಹೋಗುವರು.

ಅ|| ಭಾ|| ತಯಾರಕರ ಸಂಘದ ಸಭೆ

ಅಖಿಲ ಭಾರತ ತಯಾರಕರ ಸಂಘದ ತ್ರೈಮಾಸಿಕ ಸಭೆಯು ಇಲ್ಲಿನ ಟೌನ್ ಹಾಲಿನಲ್ಲಿ ೧೬ ನೇ ತಾ|| ಸರ್ ಎಂ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಶ್ರೀಮನ್ಮಹಾರಾಜರವರು ಅದರ ಆರಂಭೋತ್ಸವವನ್ನು ನೆರವೇರಿಸುವರು

ನಾಯಿಯ ಸ್ವಾಮಿಭಕ್ತಿಯಿಂದ ಇಡೀ ಸಂಸಾರದ ರಕ್ಷಣೆ

ಕೂಚ್‌ಬಿಹಾರಿನ ಮನೆಯೊಂದರಲ್ಲಿ ಕಳೆದ ಭಾನುವಾರ ಎಲ್ಲರೂ ಮಲಗಿದ್ದಾಗ ಘಟಸರ್ಪವೊಂದು ಅವರುಗಳಿದ್ದ ಕೋಣೆಯೊಳಕ್ಕೆ ಹೋಗುತ್ತಿದ್ದುದನ್ನು ಕಂಡ ಆ ಮನೆಯ ನಾಯಿಯು ಸರ್ಪದ ಮೇಲೆ ಬಿದ್ದಿತೆಂದೂ ಎರಡು ಕಪ್ಪ ಭೀಕರವಾದ ಕಾಳಗ ನಡೆದು ಕಡೆಗೆ ಸರ್ಪವನ್ನು ನಾಯಿಯು ಕೊಂದುಹಾಕಿ ಸ್ವಲ್ಪ ಕಾಲಾನಂತರ ತಾನೂ ವಿಷವೇರಿ ಪ್ರಾಣ ಬಿಟ್ಟಿತೆಂದೂ ವರದಿಯಾಗಿದೆ ನಾಯಿಯ ಕೃತಜ್ಞತೆಯನ್ನು ಮೆಚ್ಚಿ ಯಜಮಾನನು ಮಾರನೇ ದಿನ ಅದಕ್ಕೆ ಗೌರವದಿಂದ ಶವ ಸಂಸ್ಕಾರವನ್ನು ಮಾಡಿಸಿದನು

ಕನಸಿನಲ್ಲಿ ದೇವರ ಆಜ್ಞೆಯಾಯಿತೆಂದು ಮಗಳ ಬಲಿ

ಕಳೆದ ಬಕ್ರೀದ್ ಹಬ್ಬದಲ್ಲಿ ಸಿಂಧೂ ದೇಶದ ನವಾಬ್ ಷಹಾ ಎಂಬ ಊರಿನಲ್ಲಿ ಅಹಮದ್ ಎಂಬ ಆಗಸನು ತನ್ನ ೮ ತಿಂಗಳ ಏಕಮಾತ್ರ ಹೆಣ್ಣು ಶಿಶುವಿನ ಕತ್ತನ್ನು ಕುಯ್ದು ದೇವರಿಗೆ ಬಲಿ ಕೊಟ್ಟನೆಂದು ವರದಿಯಾಗಿದೆ. ಪೋಲೀಸರು ಅವನನ್ನು ಬಂಧಿಸಿ ಪ್ರಶ್ನಿಸಲಾಗಿ ತನಗೆ ಬಹು ಪ್ರಿಯವಾದ ವಸ್ತುವನ್ನು ಅರ್ಪಿಸಬೇಕೆಂದು ದೇವರು ಅಪೇಕ್ಷೆ ಪಟ್ಟುದಾಗಿ ಕನಸಾಗಿತ್ತೆಂದು ಅವನು ತಿಳಿಸಿದನು

ಸೋಡಾ ಉಪಯೋಗದಿಂದ ೧೫೦ ವರ್ಷ ಆಯುಸ್ಸು

ಸೋಡಾವನ್ನು ಹೆಚ್ಚಾಗಿ ಬಳಸುವುದರಿಂದ ಮನುಷ್ಯನ ಆಯುಸ್ಸು ಹೆಚ್ಚುವುದೆಂದೂ, ಅದನ್ನು ಇಂಜೆಕ್ಷನ್ ಮೂಲಕ ರಕ್ತಕಣಗಳಿಗೆ ಬಿಟ್ಟರೆ, ಮನುಷ್ಯನು ೧೫೦ ವರ್ಷ ಕಾಲ ಜೀವಿಸಬಹುದೆಂದೂ ರಷ್ಯದ ಸುಪ್ರಸಿದ್ಧ ವಿಜ್ಞಾನಿಯೊಬ್ಬರು ತಿಳಿಸಿರುತ್ತಾರೆ

ಮೋಟಾರು ಭಾಗಗಳ ಮಾರಾಟದಮೇಲೆ ಹತೋಟಿ

ವಿದೇಶಗಳಿಂದ ಆಮದಾದ ಮೋಟಾರು ಬಿಡಿ ಭಾಗಗಳ ಬೆಲೆಯು ನ್ಯಾಯವಾದ ಖರೀದಿಗಿಂತ ಶೇ|| ೧೦೦ ರಿಂದ ೧೫೦ ರಷ್ಟು ಹೆಚ್ಚಿರುವುದರಿಂದ ಆ ಬಗ್ಗೆ ಹತೋಟಿಯನ್ನು ವಿಧಿಸುವ ಅಂಶವು ತಮ್ಮ ಪರ್ಯಾಲೋಚನೆಯಲ್ಲಿರುವುದೆಂದು ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವ, ಶ್ರೀ ಟಿ ಕೃಷ್ಣಮಾಚಾರಿಯವರು ತಿಳಿಸಿರುವರು

ಒಂದೇ ಸಮನೆ ೩೬೫ ಮೈಲಿಗಳ ನಡಿಗೆ

ಜಾರ್ಜ್ ಡಿಕ್ಸನ್ ಎಂಬ ೩೯ ವರ್ಷದ ಇಂಗ್ಲಿಷ್ ಇಂಜನಿಯರು ಬರ್ವಿಕ್ಕಿನಿಂದ ಲಂಡನ್ನಿಗೆ ೩೬೫ ಮೈಲಿ ದೂರವನ್ನು ಕಾಲ್ನಡಿಗೆಯಲ್ಲೇ ಎಲ್ಲೂ ನಿಲ್ಲದೆ ಪ್ರಯಾಣ ಮಾಡಿದರೆಂದು ವರದಿಯಾಗಿದೆ ಈ ಪ್ರಯಾಣಕ್ಕಾಗಿ ಅವರಿಗೆ ೧೩೩ ಘಂಟೆ ೫೦ ನಿಮಿಷ ಹಿಡಿಯಿತೆಂದೂ ಪ್ರಯಾಣ ಮಧ್ಯದಲ್ಲಿ ಅವರು ೭ ದೊಡ್ಡ ನಿಮಿಷ ಮಾತ್ರ ನಿಲ್ಲುತ್ತಿದ್ದರೆಂದೂ ಆದರೆ ಎಲ್ಲೂ ಕುಳಿತುಕೊಳ್ಳಲಿಲ್ಲವೆಂದೂ ಹೇಳಲಾಗಿದೆ

ಪಿಂಗ್‌ಪಾಂಗ್ ಚೆಂಡುಗಳ ಮೇಲೆ ಸಮುದ್ರದಲ್ಲಿ ತೆಪ್ಪ

ಸಾವಿರಗಟ್ಟಲೆ ಪಿಂಗ್‌ಪಾಂಗ್ ಚೆಂಡುಗಳ ಮೇಲೆ ಕಟ್ಟಲ್ಪಟ್ಟ, ತೆಪ್ಪವೊಂದನ್ನು ಸಮುದ್ರದಲ್ಲಿ ೫ ಮಂದಿ ಫ್ರೆಂಚ್ ತರುಣರು ಮತ್ತು ಒಬ್ಬ ತರುಣಿಯು ಬಿಟ್ಟುಕೊಂಡು ಹೋಗುತ್ತಿದ್ದಾಗ ಮಾರ್ಸೇಲ್ಸ್ ಬಳಿ ತೀರದ ರಕ್ಷಣಾ ದೋಣಿಯೊಂದು ತಡೆದು ತೆಪ್ಪವನ್ನು ವಾಪಸು ಕರೆತಂದಿರುವುದು ನೌಕಾ ಯಾನಕ್ಕೆ ಆ ತೆಪ್ಪವು ಅಪಾಯಕಾರಿಯೆಂದು ಭಾವಿಸಲಾಗಿದೆ

ಗಣಪತಿ ಮಂಗಳಾರತಿ

ರಾಜಧಾನಿಯ ವಿವಿಧ ಕಡೆಗಳಲ್ಲಿ ಗಣಪತಿ ಮಹಾ ಮಂಗಳಾರತಿಯು ನೆನ್ನೆ ಜರುಗಿತು ಡಿ ಬನುಮಯ್ಯನವರ ವಿದ್ಯಾ ಸಂಸ್ಥೆ ಆಶ್ರಯದಲ್ಲಿ ಈ ಸಂಬಂಧವಾಗಿ ಶ್ರೀ ವೈ ಎನ್ ಶ್ರೀನಿವಾಸಮೂರ್ತಿಯವರ ಸಂಗೀತವು ಏರ್ಪಾಡಾಗಿದ್ದಿತು. ದಳವಾಯಿ ಹೈಸ್ಕೂಲಿನಲ್ಲಿ ನಡೆದ ಸಮಾರಂಭದಲ್ಲಿ ಮಹಾರಾಜಾ ಕಾಲೇಜಿನ ಡಾ|| ಹೆಚ್ ಎನ್ ಹರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ವಿಠ್ಠಲರಾವ್ ಶೇಷಣ್ಣನವರ ವಿದ್ಯಾರ್ಥಿ ನಿಲಯದಲ್ಲಿ ಸಮಾರಂಭವು ಶ್ರೀ ಎಂ ಎನ್ ಜೋಯಿಸರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ನಜರ್‌ಬಾದಿನ ಮಾಡರ್ನ್ ಆರ್ಕೆಸ್ಟ್ರಾ ರವರಿಂದ ಸಂಗೀತವು ಏರ್ಪಾಡಾಗಿದ್ದಿತು

ಭಾರತಕ್ಕೆಲ್ಲಾ ಒಂದೇ ಅಂಗಡಿ ಕಾನೂನು

ಭಾರತದ ನಾನಾ ಪ್ರಾಂತಗಳಲ್ಲಿರುವ ಅಂಗಡಿ ಸಿಬ್ಬಂದಿ ಕಾನೂನುಗಳ ಬದಲು ದೇಶಕ್ಕೆಲ್ಲಾ ಅನ್ವಯಿಸುವ ಒಂದೇ ಕಾನೂನನ್ನು ಮಾಡುವ ವಿಷಯವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಕೇಂದ್ರ ಕಾರ್ಮಿಕ ಮಂತ್ರಿ ವಿ ವಿ ಗಿರಿಯವರು ತಿಳಿಸಿರುತ್ತಾರೆ

ಈಜಿಪ್ಟ್ ಮಂತ್ರಿಮಂಡಲದ ಪುನರ್ರಚನೆ

ಈಜಿಪ್ಟಿನಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳ ಅಭಿವೃದ್ಧಿಯ ದೃಷ್ಟಿಯಿಂದ ರಾಷ್ಟ್ರೀಯ ಪುನರ್ರಚನಾ ಸರ್ಕಾರವನ್ನು ಸ್ಥಾಪಿಸಲು ಅಲ್ಲಿನ ಪ್ರಧಾನಿ ಅಲಿ ಮಹೇರ್‌ರವರು ಬರುವ ವಾರ ಹೊಸ ಮಂತ್ರಿಮಂಡಲವನ್ನು ರಚಿಸಲಿರುವರೆಂದೂ ಅದರಲ್ಲಿ ಈಗಿರುವವರ ಪೈಕಿ ಮೂವರನ್ನು ತೆಗೆದುಹಾಕಿ, ಹೊಸದಾಗಿ ನಾಲ್ವರನ್ನು ಸೇರಿಸಿಕೊಳ್ಳಲಾಗುವುದೆಂದೂ ತಿಳಿದುಬಂದಿದೆ

ಕಂಪಲ್ಸರೀ ಹಿಂದಿ ಸರಳ ವ್ಯಾಕರಣ

ರಾಜಧಾನಿಯ ಮಹಾರಾಜಾ ಹೈಸ್ಕೂಲಿನ ಹಿಂದಿ ಪ್ರಾಧ್ಯಾಪಕರೂ ಸಾಹಿತ್ಯ ಪ್ರವೀಣರೂ ಆದ ಶ್ರೀ ಜೆಕ್ಕ ನರಸಿಂಹಯ್ಯನವರು ರಚಿಸಿರುವ ಮೇಲ್ಕಂಡ ಪುಸ್ತಕವು ಸಪ್ಟೆಂಬರ್ ದೆ ಹೈಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಒಸರ ಪಾಠಕ್ರಮವನ್ನನುಸರಿಸಿ ರಚಿಸಿರುವ ಈ ಪುಸ್ತಕವು ಸರಳವಾದ ವಿಷಯಗಳನ್ನೊಳಗೊಂಡು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ ಶ್ರೀ ಹೆಚ್ ಬಿ ದಾಸಪ್ಪನವರು ಇದಕ್ಕೆ ಮುನ್ನುಡಿ ಬರೆದಿರುತ್ತಾರೆ ಇದರ ಬೆಲೆ ೦–೭–೦ ಇದರ ಪ್ರಕಾಶಕರು ನರಸಿಂಹ ಸ್ವಾಮಿ ಏಜನ್ಸೀಸ್ ಸಾಹಿತ್ಯ ಪ್ರಸಾರ ಮಂದಿರ ನಜರಬಾದ್, ಮೈಸೂರು ಹಿಂದೀ ಭಾಷೆಯನ್ನು ಕಲಿಯುವವರೆಲ್ಲರೂ ಇದರ ಪ್ರಯೋಜನವನ್ನು ಪಡೆಯಲೆಂದು ನಾವು ಹಾರೈಸುತ್ತೇವೆ

SRI GAYATHRI

TALKIES

Daily 2 Shows

From 5-9-52 For 2 Days

Paramount's

SAILOR BEWARE

With — Dean Martin &

Jerry Lewis

ಕಾಲರಾಕ್ಕೆ ೧೫೩೨ ಜನರು ತುತ್ತು

ಮಧ್ಯ ಭಾರತದ ನಾಲ್ಕು ಜಿಲ್ಲೆಗಳಲ್ಲಿ ೪ ಕಳೆದ ಏಪ್ರಿಲ್ ನಿಂದ ಆಗಸ್ಟ್ ವರೆಗೆ ಕಾಲರಾ ವ್ಯಾಧಿಯಿಂದ ಒಟ್ಟು ೧೫೩೨ ಜನರು ಬಲಿಯಾಗಿರುವರೆಂದು ವರದಿಯಾಗಿದೆ ೧೪೭ ಹಳ್ಳಿಗಳಿಗೆ ಹರಡಿದ ಈ ವ್ಯಾಧಿಯು, ಈಗ ಹತೋಟಿಗೆ ಬಂದಿದೆ ೨೪೦ ಸಾವಿರ ಮಂದಿಗೆ ಇನಾಕ್ಯುಲೇಷನ್ ಮಾಡಲಾಗಿದೆ

ರಕ್ಷಣಾ ಶಾಖೆ ನೌಕರರ ಮುಷ್ಕರ ಬಲವಾಗುತ್ತಿದೆ

ಪೂನಾದಲ್ಲಿ ರಕ್ಷಣಾ ಇಲಾಖೆಯ ನೌಕರರ ಮುಷ್ಕರವು ಮುಂದುವರಿಯುತ್ತಲೇ ಇರುವುದೆಂದೂ, ೩ ಸಾವಿರ ಕೆಲಸಗಾರರಿರುವ ಮತ್ತೊಂದು ಶಾಖೆಯ ಕಾರ್ಮಿಕ ಸಂಘದವರು ನಾಳಿದ್ದಿನಿಂದ ಮುಷ್ಕರ ಕೈಗೊಳ್ಳುವುದಾಗಿ ನೋಟೀಸು ಕೊಟ್ಟಿರುವುದಾಗಿಯೂ ತಿಳಿದುಬಂದಿದೆ

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಕಾರ್ಮಿಕರ ಸಂಘದ ವಾರ್ಷಿಕೋತ್ಸವವು ಬರುವ ಭಾನುವಾರ ಸಂಜೆ ೫ ಗಂಟೆಗೆ ನಗರದ ಟೌನ್‌ಹಾಲಿನಲ್ಲಿ ನಡೆಯುವುದು ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆಯನ್ನು ವಹಿಸುವರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡುವರು

ಹಾಲು ಸರಬರಾಜು ಸಹಕಾರ ಸಂಘದ ವಾರ್ಷಿಕ ಸಭೆ

ರಾಜಧಾನಿಯ ಹಾಲು ಸರಬರಾಜು ಸಹಕಾರ ಸಂಘದ ವಾರ್ಷಿಕ ಸಭೆಯು ಬರುವ ಭಾನುವಾರ ಬೆಳಗ್ಗೆ ೯ ಗಂಟೆಗೆ ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಡೆಯುವುದು ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್, ಶ್ರೀ ಕೆ ಆರ್ ಮರುದೇವೇಗೌಡರು ಅಧ್ಯಕ್ಷತೆ ವಹಿಸುವರು

SREE GANESHA

TALKILS

GALA RELEASE

FROM 5—9—52

—THE RIVER—

The First

Technicolor Picture of India

One of the Most Satisfying Motion Pictures Ever Produced

ಮೈಸೂರು ಪೇಟೆ ಧಾರಣೆ

	ಪಲ್ಲ ಒಂದಕ್ಕೆ ರೂ ಇಂದ	ರೂ
ನೆಲಗಡಲೆ	೧೩ ೬–೦	೧೫ ೧೩
ಎಳ್ಳು	೭೦ ೦ ೦	೭೪–೧೩
ಹುಚ್ಚೆಳ್ಳು	೫೧ ೧೨ ೦	
ಹರಳು ಬೀಜ	೪೭ ೮ ೦	೫೦–೮
ಹುರುಳಿ	೪೬ ೮ ೦	೫೦ ೦
ಹೆಸರು	೩೭ ೦–೦	
ಹೊಂಗೆಬೀಜ	೨೫–೨ ೦	
ಉದ್ದು	೭೩ ೧೦ ೦	
ಅವರೆ	೭೩ ೧೦–೦	
ಹಲಸಂದೆ	೭೬–೦–೦	೭೭ ೮
ಮೆಣಸಿನಕಾಯಿ ಮಣ ಒಂದಕ್ಕೆ	೭ ೧೪ ೦	
ಹುಣಸೇಹಣ್ಣು	೧ ೧೨ ೦	೫ ೧
ಸೀಗೇಕಾಯಿ	೫ ೪–೦	೫–೧
ತೆಂಗಿನಕಾಯಿ ೧೦೦೦ ಕ್ಕೆ	೨ ೦ ೩೯ ೦	

ಪಾಂಡವಪುರದಲ್ಲಿ ಆರೋಗ್ಯ ಶಿ...

ಪಾಂಡವಪುರದ ಪುರಸಭೆಯವರು ಇನ್ನು ಮುಂದೆ ಕಂದಾಯದ ಮೇಲೆ ರೂ ೧೧ ರ ಆಣೆಯಂತೆ ಆರೋಗ್ಯ ತೆರಿಗೆಯನ್ನು ವಿಧಿಸಲು ನಿರ್ಧರಿಸಿರುವರು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೨೦ ಗಿಟಾರ್ ವಾದನ ಎಂ ... ವರಾಹಸ್ವಾಮಿ ಮಧ್ಯಾಹ್ನ ೨ ತಿಮ್ಮ... ಪ್ಪನ ಕಲಾವಿದರು ರಿಕಾರ್ಡ್ ಕಾರ್ಯಕ್ರಮ ಸಂಜೆ ೫ ೪೨ ಮತ್ತು ... ಗೀತ, ಎಸ್ ಆರ್ ತಂಗ ೭ ... ಯಣ ಪಾಠಕ, ಶಿವಪ್ರಸಾದ್ ... ಪಿಟೀಲು ಎಂ ಎಸ್ ಸುಬ್ರಹ್ಮಣ್ಯ, ಮೃದಂಗ ಎಂ ಎಸ್ ರಾಮಯ್ಯ ... ೫೦ ಎಸ್ ಕೇಶಗಿರಿದಾಸ್ ... ಗೌತಮ, ಕೆ ಎಸ್, ಕಾರಂತರ ... ನಾಟಕ

ಸುಸಮಯ ! ಸುಲಭ ಬೆಲೆ ! ಸುಸರಕು

ಮೈಸೂರು ಸಿಲ್ಕ್ ಫಿಲೇಚರ್ ಕಂಪೆ...

ಅಪ್ಪಟ ಸಿಲ್ಕ್ ಸೀರೆಗಳಿಗೆ

ವಿಚಾರಿಸಿರಿ

ಶ್ರೀ ಕೆ ಎಸ್ ಸತ್ಯನಾರಾಯಣರಾವ್, ಜವಳಿ ವ್ಯಾಪಾರಿಗಳು,

203 ಸಯ್ಯಾಜಿರಾವ್ ರಸ್ತೆ,

(ಶ್ರೀ ಚಾಮುಂಡೇಶ್ವರಿ ಸಿನಿಮಾ ಹತ್ತಿರ)

ಮೈಸೂರು

ಒಲಿಂಪಿಯಾ

4—9—52 ರಿಂದ ತಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲ್ಪಡುತ್ತಿರುವ

ಅದ್ಭುತವಾದ 3 ನೇ ವಾರ

ದೇವಕಿ ಬೋಸ್‌ರವರ ಹಿಂದಿ ಚಿತ್ರ

ಸಿಂಬಾದ್ ದಿ ಸೈಲರ

ಪಾತ್ರ: ರಂಜನ್, ನಾಸಿಂ ಮತ್ತು ಭಗವಾ...

—: ಬೆಳಗಿನ ಪ್ರದರ್ಶನ :—

5 9 52 ರಿಂದ 2 ದಿನಗಳು ಮಾ...

ಟಾರ್ಜಾನ್ಸ್ ಅಡ್ವೆಂಚರ್ಸ್

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳು

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೊ

ಔಷಧಿ ವ್ಯಾಪಾರಿಗಳು,

407 ಸಯ್ಯಾಜಿರಾವ್ ರೋಡ್

ಮೈಸೂರು

ಪ್ರಭುದೇವಾ ಟಾಕೀಸ್

ಮೈಸೂರು

5—9—52 ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ಋಷ್ಯಶೃಂಗರ್

ರಂಜನ್, ವಸುಂಧರಾ ಕುಮಾರಿ ರುಕ್ಮಿಣಿ, ಬಾಲಚಂದ್ರರ್ ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

Edited, Printed and Published by A R Nagaraja at Sadhvi Press, D Subbiah Road Mysore

ಬೆಲೆ: ಶ್ರೀ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು.

ಸಾಧ್ವಿ

ಸಂಪುಟ ೧೧] ಶುಕ್ರವಾರ ೫-೯-೧೯೪೭ [ಸಂಚಿಕೆ ೭೪

ಹೈದರಾಬಾದಿನಲ್ಲಿ ಮತ್ತೆ ರಜಾಕಾರರ ಕೈವಾಡ ?

ವಿದ್ಯಾ ಪ್ರಸರಣಾರ ಸಮಿತಿಗೆ ಮದ್ರಾಸಿನವರು

ಸ್ವಂ ಸು] ಬೆಂಗಳೂರು ೪

ವಿದ್ಯಾಭ್ಯಾಸದಲ್ಲಿ ಸುಧಾರಣೆಗಳನ್ನು ತರುವ ಬಗ್ಗೆ ಸರ್ಕಾರದವರು ರಚಿಸಲಿರುವ ಪ್ರವೀಣರ ಸಮಿತಿಗೆ ಮದ್ರಾಸು ವಿಶ್ವವಿದ್ಯಾನಿಲಯದ ಮಾಜಿ ವೈಸ್ ಚಾನ್ಸೆಲರ್ ಡಾ|| ಎಂ ರತ್ನಸ್ವಾಮಿಯವರನ್ನಾಗಲೀ ಅಥವಾ ಮಾಜಿ ಹೈಕಮಿಷನರ್ ಸರ್ ಸಾಮ್ಯುಯಲ್ ರಂಗನಾಥನ್‌ರವರನ್ನಾಗಲೀ ತೆಗೆದುಕೊಳ್ಳಲಾಗುವುದೆಂದು ತಿಳಿದುಬಂದಿದೆ ಹತ್ತು ವರ್ಷಗಳ ಯೋಜನೆಯೊಂದನ್ನು ತಯಾರಿಸುವಂತೆ ಸಮಿತಿಯನ್ನು ಕೋರಲಾಗುವುದೆಂದು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ತಿಳಿಸಿರುತ್ತಾರೆ

ಗಾಂಧಿಜಿ ಜನ್ಮ ದಿನ ಸಂಸ್ಥಾನದಲ್ಲೆಲ್ಲಾ ನೂಲುವ ಸ್ಪರ್ಧೆ

ಬರುವ ತಿಂಗಳು ೨ ನೇ ತಾ|| ಗಾಂಧಿಜಿಯವರ ಜನ್ಮ ದಿನದಲ್ಲಿ ಸಂಸ್ಥಾನಾದ್ಯಂತ ನೂಲುವ ಸ್ಪರ್ಧೆಯನ್ನೇರ್ಪಡಿಸಬೇಕೆಂದೂ, ೨ ರಿಂದ ೯ರ ವರೆಗೆ ಮೈಸೂರು ಚರಖಾ ಸಂಘದ ಕೇಂದ್ರವಾದ ಬದನವಾಳು ಪುರದಲ್ಲಿ ಸಂಸ್ಥಾನದ ಖಾದಿ ಸ್ಪರ್ಧೆಗಳನ್ನು ನಡೆಯಿಸಬೇಕೆಂದೂ ಕಳೆದ ವಾರ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಖಾದಿ ಪ್ರಚಾರ ಸಮಿತಿಯ ಸಭೆಯಲ್ಲಿ ಗೊತ್ತುಪಡಿಸಲಾಯಿತು

ಆಕಾಶದಲ್ಲಿ ವಿಚಿತ್ರ ವಸ್ತುವಿನ ಚಲನ

ಮೈಸೂರು ನಗರದಲ್ಲಿ ಕಂಠೀರವ ನರಸಿಂಹರಾಜ ಕಾಲೋನಿಯ ಬಳಿ ಪಾಲಯಂಕೋಟೆಯ ಬಳಿ ಆಕಾಶದಲ್ಲಿ ಕಳೆದ ಮಂಗಳವಾರ ಸಂಜೆ ಹಾವಿನ ಆಕಾರದ ಬಿಳಿಯ ಪ್ರಕಾಶಮಾನವಾದ ವಸ್ತುವೊಂದು ಮಿಂಚಿನ ವೇಗದಲ್ಲಿ ವಾಯುವ್ಯದಿಂದ ಆಗ್ನೇಯ ದಿಕ್ಕಿಗೆ ಹೋಯಿತೆಂದೂ, ೩ ಅಡಿ ಉದ್ದವಿದ್ದ ಆ ವಸ್ತುವು ನಂತರ ೩೦ ಅಡಿ ಉದ್ದದಷ್ಟಾಯಿತೆಂದೂ ವರದಿಯಾಗಿದೆ ಅದು ಉಲ್ಕೆಯೋ ಆಕಾಶಚಾರಿ ವಸ್ತುವೇ ಎಂಬುದು ಗೊತ್ತಾಗಲಿಲ್ಲ ಇಂತಹ ವಿಚಿತ್ರ ದೃಶ್ಯವನ್ನು ಕಂಡು ಹಳ್ಳಿಯವರು ಕೆಟ್ಟ ಭವಿಷ್ಯವಿರುವುದೆಂದು ಹೇಳುತ್ತಿರುವರು

೨ ಸಾವಿರ ರೈತರ ಉಪವಾಸ ಸತ್ಯಾಗ್ರಹ

ಪುಂಗನೂರಿನ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ೭ ಸಾವಿರ ರೈತರು ನೆನ್ನೆಯಿಂದ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿರುತ್ತಾರೆ ಅಲ್ಲಿರುವ ಅಭಾವ ಪರಿಸ್ಥಿತಿಯ ಪರಿಣಾಮದ ಬಗ್ಗೆ ರೈತರಿಗೆ ಕೆಲಸ ಮತ್ತು ಸಾಲ ಕೊಡಬೇಕೆಂಬುದೇ ಅವರ ಬೇಡಿಕೆ

ಗಣಪತಿ ಪೂಜೆ ಸಮಾರಂಭದಲ್ಲಿ ಗುಳ್ಳೆ ನರಿ

ನಾಗಪುರದ ಬಳಿ ಉಮ್ರೇರ್ ಎಂಬಲ್ಲಿ ಕಳೆದ ೨೮ ನೇ ತಾ|| ಗಣಪತಿ ಪೂಜಾ ಸಂದರ್ಭಕ್ಕೆ ಗುಳ್ಳೆನರಿಯೊಂದು ನುಗ್ಗಿ ಒಬ್ಬ ಬಾಲಕನನ್ನು ಪರಚಿತೆಂದೂ ಅದನ್ನು ಕೊಲ್ಲಲು ಜನರು ಅದನ್ನು ಹಿಡಿದುಹಾಕಿದರೆಂದೂ ವರದಿಯಾಗಿದೆ. ಐದು ಮಂದಿಗೆ ಆ ಪ್ರಾಣಿಯು ಗಾಯ ಮಾಡಿದೆ

ಗೋಮಟಗಿರಿಗೆ ಮಹಾರಾಜರ ಭೇಟಿ

ಮೈಸೂರು ೫

ಇಲವಾಲದ ಬಳಿ ಗೋಮಟಗಿರಿ ಕ್ಷೇತ್ರದಲ್ಲಿರುವ ಶ್ರೀ ಗೋಮಟೇಶ್ವರ ಸ್ವಾಮಿಯವರ ತೃತೀಯ ಮಸ್ತಕಾಭಿಷೇಕವು ನಾಳೆದ್ದು ಮಧ್ಯಾಹ್ನ ೧೨ ಗಂಟೆಗೆ ಶ್ರೀಮನ್ ಮಹಾರಾಜರ ಸಮ್ಮುಖದಲ್ಲಿ ನೆರವೇರುವುದು

ಹಸಿವಿನ ಬಾಧೆಯಿಂದ ಉಳುವ ಎತ್ತನ್ನೇ ತಿಂದ

ಮದರಾಸಿನ ಸ್ಥಳೀಯ ಸಂಸ್ಥೆಗಳ ಮಂತ್ರಿ ಎಸ್ ವಂಕಟರೆಡ್ಡಿಯವರು ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ವಾರ ಸಂಚರಿಸುತ್ತಿದ್ದಾಗ, ಒಂದು ಕಡೆ ಬೋರಯ್ಯ ಲಿಂಗಡು ಎಂಬುವನು ಮಂತ್ರಿಗಳಿಗೆ ತನ್ನ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಳ್ಳುವಾಗ ೩ ದಿನಗಳ ಹಿಂದೆ, ಹಸಿವನ್ನು ತಡೆಯಲಾರದೆ ತಾನು ತನ್ನ ಉಳುವ ಎತ್ತನ್ನು ಕೊಂದು, ಅದರ ಮಾಂಸವನ್ನು ತಿಂದುದಾಗಿ ತಿಳಿಸಿದನೆಂದು ವರದಿಯಾಗಿದೆ

ಎಣ್ಣೆ ಗಣಿ ರಾಷ್ಟ್ರೀಕರಣಕ್ಕೆ ಅಮೆರಿಕಾ ಬ್ರಿಟನ್ ಒಪ್ಪಿಗೆ

ಪರ್ಷಿಯದಲ್ಲಿರುವ ಬ್ರಿಟನ್ನಿನ ಎಣ್ಣೆ ಗಣಿಗಳ ರಾಷ್ಟ್ರೀಕರಣಕ್ಕೆ ಅಮೆರಿಕಾ ಮತ್ತು ಬ್ರಿಟನ್ನು ಒಪ್ಪಿಗೆಯನ್ನು ಸೂಚಿಸಿರುವುದಾಗಿ ಅಮೆರಿಕದ ವಿದೇಶಾಂಗ ಮಂತ್ರಿ ಡೀನ್ ಏಚಿಸನ್ನರು ತಿಳಿಸಿರುತ್ತಾರೆ ಎಣ್ಣೆ ಗಣಿಯ ಎಲ್ಲ ವಿಷಯಗಳನ್ನೂ ಅಂತರ ರಾಷ್ಟ್ರೀಯ ನ್ಯಾಯಾಲಯಕ್ಕೆ ಪರ್ಷಿಯವು ಒಪ್ಪಿಸಬೇಕೆಂದು ಅವರು ಮನವಿ ಮಾಡಿಕೊಂಡಿರುತ್ತಾರೆ

ರೇಡಿಯೊ ಮೂಲಕ ಚಲಿಸುವ ಚಾಲಕನಿಲ್ಲದವಿಮಾನ

ಗಂಟೆಗೆ ೨೦೦ ಮೈಲಿ ವೇಗದಲ್ಲಿ ಹೋಗುವ ಚಾಲಕನಿಲ್ಲದ ವಿಮಾನವೊಂದನ್ನು ಇಂಗ್ಲೆಂಡಿನ ಒಂದು ಸ್ಥಳದಲ್ಲಿ ಪ್ರದರ್ಶಿಸಲಾಯಿತು ಅದನ್ನು ಆಕಾಶದಲ್ಲಿ ಬಿಟ್ಟು, ಅದು ಇಳಿಯುವವರೆಗೆ ಪ್ರತಿ ಹೆಜ್ಜೆಗೂ ನೆಲದ ಮೇಲಿನಿಂದಲೇ ರೇಡಿಯೋ ಮೂಲಕ ನಡೆಸುತ್ತಿದ್ದುದನ್ನು ಜನರು ನೋಡಿದರು

ಹರತಾಳಕ್ಕೆ ಸೇರಿದ ಕಾಂಗ್ರೆಸ್ಸಿನವರ ಮೇಲೆ ಕ್ರಮ

ಬಹು ಕಡೆಗಳಲ್ಲಿ ಪ್ರತಿ ರಾಜಿ ತಿಂಗಳ ವಿಧಿಸಿದ್ದನ್ನು ಪ್ರತಿಭಟಿಸಲು ಅಹಮದಾಬಾದಿನಲ್ಲಿ ನಡೆದ ಹರತಾಳದಲ್ಲಿ ಭಾಗವಹಿಸಿದ ನೂರಾರು ಜನ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಗುಜರಾತಿನ ಪ್ರದೇಶ ಕಾಂಗ್ರೆಸ್ ಸಮಿತಿಯು ಶಿಸ್ತಿನ ಕ್ರಮ ಕೈಗೊಂಡು ಅವರೆಲ್ಲರು ತಮ್ಮ ಅಧಿಕಾರ ಸ್ಥಾನಗಳಿಗೆ ರಾಜೀನಾಮೆ ಕೊಡುವಂತೆ ಸೂಚಿಸಿರುತ್ತವೆ ಸಮಿತಿಯು ಸಭಾಧ್ಯಕ್ಷತೆಯನ್ನು ಮಣಿಬೇನ್ ಪಟೇಲರು ವಹಿಸಿದ್ದರು

ಅಕ್ರಮವಾಗಿ ಹಣ ಗಳಿಸಿದ ಸಬ್‌ಇನ್ಸ್‌ಪೆಕ್ಟರರ ಸಸ್ಪೆಂಡ್

ಆನೇಕಲ್ ಬಳಿ ಪ್ರಾಂತ್ಯದ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಅಕ್ರಮವಾಗಿ ಹಣವನ್ನು ಪಡೆದು ಬೇಗನೆ ಅನುಕೂಲ ಸ್ಥಿತಿಗೆ ಬಂದ ಬಗ್ಗೆ ಅಲ್ಲಿನ ಸಿ ಐ ಡಿ ಶಾಖೆಯವರಿಗೆ ದೂರು ಬಂದು ಅವರ ಮನೆಯನ್ನು ಶೋಧಿಸಲಾಗಿ ೨ ಸಾವಿರ ರೂ ಪತ್ತೆಯಾಯಿತೆಂದೂ, ಸಬ್ ಇನ್ಸ್‌ಪೆಕ್ಟರರ ಪೆಂಡತಿಯ ಚೇರ್ ಬಗ್ಗೆಯೂ ಅನುಮಾನ ಹುಟ್ಟಿಸುವುದರಿಂದ ಒಬ್ಬ ದಾದಿಯ ಮೂಲಕ ಅಳೆಯನ್ನು ಶೋಧಿಸಲಾಗಿ ಮತ್ತೆ ೨೨ ಸಾವಿರ ರೂ ಕರೆನ್ಸಿ ನೋಟುಗಳು ದೊರೆತುವೆಂದೂ ವರದಿಯಾಗಿದೆ ಸಬ್ ಇನ್ಸ್‌ಪೆಕ್ಟರರನ್ನು ಸಸ್ಪೆಂಡ್ ಮಾಡಿ ಮುಂದಿನ ತನಿಖೆ ನಡೆಸಲಾಗುತ್ತಿದೆ

ಸರ್ಕಾರ ಮತ್ತು ಕಾಂಗ್ರೆಸ್ ನಡುವೆ ಮಧುರ ಬಾಂಧವ್ಯ

ಸಲಹೆ ನೀಡಲು ಸಮಿತಿಯ ರಚನೆ

ಸ್ವಂ ಸು ಪ್ರೋ] ಬೆಂಗಳೂರು ೪

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್ ಸಿ ದಾಸಪ್ಪನವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ಸಂಸ್ಥಾನದಲ್ಲಿ ಸರಕಾರ ಮತ್ತು ಕಾಂಗ್ರೆಸ್ ಸಂಸ್ಥೆಗಳ ನಡುವೆ ಬಾಂಧವ್ಯವು ಮಧುರವಾಗಿದ್ದರೂ ಸಹ, ಇನ್ನೂ ಅದು ಹೆಚ್ಚಬೇಕೆಂದೂ ಈ ಬಗ್ಗೆ ಸಲಹೆ ನೀಡಲು ಸಮಿತಿಯ ಕಾರ್ಯಕಾರಿ ಸಮಿತಿಯ ಶ್ರೀಗಳಾದ ಹೆಚ್ ಸಿ ದಾಸಪ್ಪ, ಹೆಚ್ ಸಿದ್ದಯ್ಯ, ಟಿ ಸುಬ್ರಹ್ಮಣ್ಯಂ, ಎಸ್ ಚನ್ನಯ್ಯ, ಆರ್ ಚನ್ನಿಗರಾಮಯ್ಯ, ಹೆಚ್ ಎಸ್ ರುದ್ರಪ್ಪ, ಕೆ ಟಿ ಭಾಷ್ಯಂ, ಎಲ್ ಎಸ್ ವೆಂಕಾಜಿರಾವ್‌ರವರುಗಳುಳ್ಳ ಸಮಿತಿಯೊಂದನ್ನು ರಚಿಸಿರುವುದಾಗಿಯೂ ತಿಳಿಸಿದರು

ಹೈದರಾಬಾದಿನಲ್ಲಿ ಪುನಃ ಮೂರು ಸಲ ಗುಂಡು

೧೬ ಗಂಟೆಯ ಕರ್ಫ್ಯೂ ಆಜ್ಞೆ ಜಾರಿ

ಹೈದರಾಬಾದಿನಲ್ಲಿ ನೆನ್ನೆಯೂ ಸಹ ಪೋಲೀಸರು ಮೂರು ಕಡೆ ಗುಂಡು ಹಾರಿಸಿದುದರ ಪರಿಣಾಮವಾಗಿ ಒಬ್ಬನು ಸ್ಥಳದಲ್ಲೂ, ಮತ್ತೊಬ್ಬನು ಆಸ್ಪತ್ರೆಯಲ್ಲೂ ಮಡಿದರೆಂದು ವರದಿಯಾಗಿದೆ ಒಟ್ಟು ಸತ್ತವರ ಸಂಖ್ಯೆ ೪ ಕಲ್ಲೀ ಹೊಡೆತ, ಬೆತ್ತ ಮತ್ತು ಗುಂಡಿನೇಟುಗಳಿಂದ ೪೦ ಜನರು ಗಾಯಗೊಂಡರು ಆ ಪೈಕಿ ೪ ಜನರ ಸ್ಥಿತಿಯು ವಿಷಮವಾಗಿದೆ ಒಂದು ಮಿಲಿಟರಿ ವ್ಯಾನು ಮತ್ತು ಒಂದು ಪೋಲೀಸ್ ವ್ಯಾನುಗಳಿಗೆ ಜನರು ಬೆಂಕಿ ಹತ್ತಿಸಿ ಸುಟ್ಟರು. ಒಂದು ಅಂಚೆ ಕಛೇರಿಗೂ ಬೆಂಕಿ ಇಡಲಾಯಿತು

ಹಿಂದಿನ ದಿನದ ಘಟನೆಯಲ್ಲಿ ಸತ್ತ ಇಬ್ಬರ ಶವಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲು ಕೊಡಬೇಕೆಂದು ಕೇಳಿ ನೆನ್ನೆ ಅಲ್ಲಿನ ಉಸ್ಮಾನಿಯಾ ಆಸ್ಪತ್ರೆ ಮತ್ತು ಪಕ್ಕದಲ್ಲಿದ್ದ ಪೋಲೀಸು ಸ್ಟೇಷನ್ನಿಗೆ ಜನರು ನುಗ್ಗಿದರೆಂದೂ, ವ್ಯಾಪರ ಬಂಧುಗಳಿಗೆ ಅವನ್ನು ಕೊಡುವುದಾಗಿ ತಿಳಿಸಿದರೂ ಸಹ ಅವರು ಒಪ್ಪಲಿಲ್ಲವೆಂದೂ, ಗುಂಪಿನವರು ಚದುರಬೇಕೆಂದು ಪೋಲೀಸರು ಕೋರಲಾಗಿ ಅವರು ಕೇಳದೆ ಕಲ್ಲು ಬೀರಿದರೆಂದೂ ಹೇಳಲಾಗಿದೆ ಪೋಲೀಸರು ಬೆತ್ತದ ಪ್ರಹಾರ ಮಾಡಿದಾಗ, ಜನರು ಪೋಲೀಸು ವ್ಯಾನುಗಳಿಗೆ ಬೆಂಕಿ ಹತ್ತಿಸಲಾಗಿ ಎರಡು ಬಾರಿ ಗುಂಡು ಹಾರಿಸಲಾಯಿತು ಮತ್ತೊಂದು ಕಡೆ ಅಂಚೆ ಕಛೇರಿಗೆ ಬೆಂಕಿ ಹತ್ತಿಸಿದಾಗಲೂ ಜನರ ಮೇಲೆ ಪೋಲೀಸರು ಗುಂಡು ಹಾರಿಸಿದರು ಹೈದ್ರಾಬಾದು, ಸಿಕಂದರಾಬಾದುಗಳಲ್ಲಿ ೧೬ ಘಂಟೆಯ ಕಾಲ ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಗಿದೆ ಸಿಕಂದರಾಬಾದಿನಲ್ಲಿ ನೆನ್ನೆ ವಿದ್ಯಾರ್ಥಿಗಳು ಶಾಂತಿಯುತ ಮೆರವಣಿಗೆ ನಡೆಸಿದರು ಜರೂರು ಪರಿಸ್ಥಿತಿಯನ್ನೆದುರಿಸಲು ಸೈನಿಕರು ಸಿದ್ಧವಾಗಿರಬೇಕೆಂದು ತಿಳಿಸಲಾಗಿದೆ

ಈ ಗಲಭೆಗಳಲ್ಲಿ ಕಮ್ಯೂನಿಸ್ಟರು, ರಜಾಕಾರರು ಮತ್ತು ಪ್ರಜಾ ಸಂಯುಕ್ತ ರಂಗದವರ ಕೈವಾಡವಿರುವುದೆಂದು ಹೇಳಲಾಗಿದೆ

ಬಾಲಿಕಾ ಶಾಲೆಗಳಲ್ಲಿ ಸುಗಂಧ ದ್ರವ್ಯ ಕೂಡದು

ಮಹಿಳೆಯರ ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರಾಗಲೀ, ಅಧ್ಯಾಪಕವರ್ಗದವರಾಗಲೀ ಸುಗಂಧ ದ್ರವ್ಯಗಳನ್ನು ಹಚ್ಚಿಕೊಂಡು ತರಗತಿಗಳಿಗೆ ಬರಬಾರದೆಂದು ರಾಜಸ್ತಾನದ ಗಡಿನಾಡು ಸರ್ಕಾರದವರು ಆಜ್ಞೆ ನೂರಡಿಸಿರುವರು

ಸಿಡಿತದಿಂದ ೨೦ ಜನರ ಮರಣ

ಸೂರ್ಸೆಲ್ಲಿನ ಎಣ್ಣೆ ಮತ್ತು ಸಾಬೂನಿನ ಕಾರ್ಖಾನೆಯಲ್ಲಿ ಮೊನ್ನೆ ರಾತ್ರಿ ಸಿಡಿತ ಉಂಟಾಗಿ ೨೦ ಮಂದಿ ಮಡಿದರೆಂದೂ ೮ ನೇಕರಿಗೆ ಗಾಯವಾಗಿರುವುದೆಂದೂ ವರದಿಯಾಗಿದೆ ಕಟ್ಟಡವು ಕುಸಿದು, ಅದರಲ್ಲಿ ಅನೇಕರು ಸಿಕ್ಕಿಕೊಂಡಿರಬೇಕೆಂದು ಭಾವಿಸಲಾಗಿದೆ

ದ॥ ಆಫ್ರಿಕಾ ಭಾರತೀಯ ಮುಖಂಡರಿಗೆ ದಂಡ

ದಕ್ಷಿಣ ಆಫ್ರಿಕದ ನೆಟಾಲ್ ಪ್ರಾಂತದ ಭಾರತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ॥ ಜಿ. ಎಂ. ನಾಯಕರ್‌ರವರು ವರ್ಣ ಭೇದದ ನಿಯಮವನ್ನುಲ್ಲಂಘಿಸಿದರೆಂದು ಅವರಿಗೆ ೭ ಪೌಂಡು ೧೧ ಷಿಲಿಂಗ್ ದಂಡ, ಅದನ್ನು ಕೊಡಲು ತಪ್ಪಿದರೆ ೧ ತಿಂಗಳ ಸಜಾ ವಿಧಿಸಲಾಗಿದೆ

ಬೆಂಗಳೂರಿಗೆ ವಿ ವಿ. ಗಿರಿ

ಕೇಂದ್ರದ ಕಾರ್ಮಿಕ ಮಂತ್ರಿ ಶ್ರೀ ವಿ ವಿ ಗಿರಿಯವರು ಇದೇ ೭ ನೇ ತಾ॥ ಬೆಂಗಳೂರಿಗೆ ಆಗಮಿಸಿ, ೮ನೇ ತಾ॥ ಚಿಕ್ಕಪೇಟೆ ಗಣಿಯಲ್ಲಿ ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡುವರು

ಮುದ್ರಣ ಕೆಲಸಗಾರರ ಸಭೆ

ಮೈಸೂರು ಜಿಲ್ಲೆಯ ಮುದ್ರಣಾಲಯಗಳ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಈ ಸಂಜೆ ೭ ಘಂಟೆಗೆ ಸಂಘದ ಕಟ್ಟಡದಲ್ಲಿ ನಡೆಯುವುದು ಸದಸ್ಯರೆಲ್ಲರೂ ಬರಬೇಕೆಂದು ಕೋರಲಾಗಿದೆ

ಗಣಪತಿ ಮಂಗಳಾರತಿ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಕೆ ಹೆಚ್ ರಾಮಯ್ಯನವರ ವಿದ್ಯಾರ್ಥಿ ನಿಲಯದಲ್ಲಿ ಶ್ರೀ ವರಸಿದ್ಧಿ ವಿನಾಯಕನ ಪೂಜೆಯು ೧೧ ದಿನಗಳ ವರೆಗೆ ನಡೆದು ನೊನ್ನೆ ಮಹಾ ಮಂಗಳಾರತಿಯು ಜರುಗಿತು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು. ರಾಮ ಕೃಷ್ಣಾಶ್ರಮದ ಶ್ರೀ ಸ್ವಾಮಿ ವಿಮಲಾನಂದಜಿಯವರಿಂದ ಉಪನ್ಯಾಸವೂ ಶ್ರೀ ಬಿ ಎಸ್ ಶ್ರೀನಿವಾಸಯ್ಯಂಗಾರ್ ಮತ್ತು ಪಾರ್ಟಿಯವರಿಂದ ಸಂಗೀತವೂ ಏರ್ಪಾಡಾಗಿದ್ದುವು

ಸುಸಮಯ! ಸುಲಭ ಬೆಲೆ! ಸುಸಮಯ!

ಮೈಸೂರು ಸಿಲ್ಕ್ ಫಿಲೇಚರ್ ಕಂಪೆನಿ

ಅಪ್ಪಟ ಸಿಲ್ಕ್ ಸೀರೆಗಳಿಗೆ

ವಿ ಚಾ ರಿ ಸಿ ರಿ

ಶ್ರೀ ಕೆ ಎಸ್. ಸತ್ಯನಾರಾಯಣ ರಾವ್, ಜವಳಿ ವ್ಯಾಪಾರಿಗಳು,

203 ಸಯ್ಯಾಜಿರಾವ್ ರಸ್ತೆ,

(ಶ್ರೀ ಚಾಮುಂಡೇಶ್ವರಿ ಸಿನಿಮಾ ಕಟ್ಟಡ)

ಮೈ ಸೂ ರು

ಶಬ್ದಕ್ಕಿಂತಲೂ ವೇಗವುಳ್ಳ ವಿ ಮಾ ನ

ಬ್ರಿಟನ್ನಿನ ಫಾರ್ನ್‌ಬರೋವಿನಲ್ಲಿ ನೊನ್ನೆ ಜೆಟ್ ಹ್ಯಾವಿಲ್ಯಾಂಡ್ ವಿಮಾನವೊಂದನ್ನು ಪ್ರಯೋಗಾರ್ಥವಾಗಿ ಬಿಡಲಾಯಿತು ಶಬ್ದಕ್ಕಿಂತಲೂ ಹೆಚ್ಚಿನ ವೇಗದಲ್ಲಿ ಅದು ಹೋಗಿ, ಅಂತರಿಕ್ಷದಲ್ಲಿ ೮ ಮೈಲಿ ಎತ್ತರದಲ್ಲಿ ನೇರವಾಗಿ ಕೆಳಗಿಳಿಯುವಾಗ ಅದರ ಬಾಲದ ಕಡೆಯಿಂದ ಹೊರಡುತ್ತಿದ್ದ ಹೊಗೆಯು ಮಾತ್ರ ಕಾಣುತ್ತಿತ್ತೆಂದೂ, ಎಷ್ಟೋ ಹೊತ್ತಿನ ಮೇಲೆ ಶಬ್ದವು ಕೇಳಿ ಬರುತ್ತಿತ್ತೆಂದೂ ವರದಿಯಾಗಿದೆ

ಗಮಕ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ಗಮಕ ಗೋಷ್ಠಿಯು ನಾಳೆ ಶನಿವಾರ ಸಂಜೆ ೫.೩೦ ಘಂಟೆಗೆ ಸೊಪ್ಪಿನ ಕೊಳದ ಬೀದಿಯಲ್ಲಿರುವ ಗಮಕ ವಿದ್ವಾನ್ ಶ್ರೀ ಬಿ ಎಸ್ ವೆಂಕಟೇಶಯ್ಯನವರ ಮನೆಯಲ್ಲಿ ನಡೆಯಲು ಏರ್ಪಾಡಾಗಿರುತ್ತದೆ ಎಲ್ಲ ಗಮಕಿಗಳೂ, ಹಾಗೂ ಕಲಾಭಿಮಾನಿಗಳೂ ದಯಮಾಡಿಸಬೇಕಾಗಿ ಕೋರಲಾಗಿದೆ

ಹಿಂದೀ ತರಗತಿಗಳು

ಬರುವ ಫೆಬ್ರವರಿ ತಿಂಗಳು ನಡೆಯುವ ಪ್ರಾರಂಭ ಮತ್ತು ಉಚ್ಚ ಹಿಂದೀ ಪರೀಕ್ಷೆಗಳಿಗೆ ನಗರದ ಹಿಂದೀ ಪ್ರಚಾರ ಸಭೆಯು ಆಶ್ರಯದಲ್ಲಿ ಇದೇ ೧೦ ನೇ ತಾ॥ ಬುಧವಾರದಿಂದ ತರಗತಿಗಳು ಸೊಪ್ಪಿನ ಕೊಳದ ಬೀದಿಯಲ್ಲಿರುವ ಸಭೆಯ ಕಟ್ಟಡ, ನಗರ ಕಾಂಗ್ರೆಸ್ ಸಮಿತಿ ಕಛೇರಿ, ಚಾಮರಾಜಪುರದ ಅಮೃತವಲ್ಲಿ ಸ್ಟೋರ್ಸ್ ಒಂಟಿಕೊಪ್ಪಲಿನ ಗೋಪಾಲ ರಾವ್ ಬಳಿ ೩೦೪೭/೧ ನೇ ಮನೆಯಲ್ಲಿರುವ ಹಿಂದಿ ಕೇಂದ್ರ – ಈ ಕಡೆಗಳಲ್ಲಿ ನಡೆಯುವುವು

ಚಾಮುಂಡೇಶ್ವರಿ

ಟಾ ಕೀ ಸ್ ನ

6–9–52ರಿಂದ ಅಮೋಘ 2ನೇ ವಾರ

ಜೂಪಿಟರ್ ನೂತನ ಸಾಮಾಜಿಕ ಚಿತ್ರ

ಜಮೀನ್‌ದಾರ್

ತಾರಾಗಣ – ಮಾಧುರಿ ದೇವಿ,

ಎಂ ವಿ ರಾಜಮ್ಮ, ಬಾಲಸುಬ್ರಹ್ಮಣ್ಯಂ,

ನಟರಾಜ್ ಮುಂತಾದವರು

ಆಕಾಶದಲ್ಲಿ ವಿಚಿತ್ರ ವಸ್ತು

ಚಿಕ್ಕಮಗಳೂರಿನಲ್ಲೂ ಕಳೆದ ಮಂಗಳವಾರ ಮಧ್ಯಾಹ್ನ ಸುಮಾರು ಎರಡು ನೂರು ಉದ್ದದ ಕೋಲಿನಂತಹ ವಸ್ತುವು ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದುದನ್ನು ಅಲ್ಲಿನ ಜನರು ನೋಡಿ ವಿಸ್ಮಯ ಭರಿತರಾದರೆಂದು ವರದಿಯಾಗಿದೆ

ಕಮರಿಗೆ ಬಸ್ಸು ಬಿದ್ದು ೧೧ ಜನರ ಮರಣ

ಮಧ್ಯ ಫಿಲಿಪೈನಿನ ಸೆಬು ದ್ವೀಪದಲ್ಲಿ ೧೫೦೦ ಅಡಿ ಎತ್ತರದ ಗುಡ್ಡದ ಮೇಲಿನಿಂದ ಬಸ್ಸೊಂದು ಕಮರಿಗೆ ಮುಗುಚಿಕೊಳ್ಳಲಾಗಿ, ೧೧ ಜನರು ಮೃತಿ ಹೊಂದಿದರಲ್ಲದೆ ೨೪ ಮಂದಿಗೆ ಗಾಯವಾಗಿರುತ್ತದೆ

ಪ್ರಾ ರಂ ಭ ಭಾ ಷ ಣ

ರಾಜಧಾನಿಯ ಎಸ್ ಎನ್ ಹಾಸ್ಟೆಲಿನಲ್ಲಿರುವ ಶ್ರೀ ಶಾರದಾ ಯೂನಿಯನ್ನಿನಲ್ಲಿ ಪ್ರಸಕ್ತ ಸಾಲಿನ ಆರಂಭ ಭಾಷಣವನ್ನು ನಾಳಿದ್ದು ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನ ಪ್ರೊ॥ ಶ್ರೀ ಎಲ್ ಶ್ರೀಕಂಠಯ್ಯನವರು ಮಾಡುವರು ಸಂಘದ ಅಧ್ಯಕ್ಷರಾದ ಶ್ರೀ ಕೆ ಎನ್ ಸೋಮಸುಂದರಂ ರವರು ಅಗ್ರಾಸನವನ್ನು ವಹಿಸುವರು

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು

ಗ್ರಾಮಾಂತರ ಪ್ರದೇಶಗಳಲ್ಲಿ ದೀಪ ಮತ್ತು ನೀರಾವರಿ ಸೌಕರ್ಯಗಳಿಗಾಗಿ ವಿದ್ಯುಚ್ಛಕ್ತಿಯನ್ನು ಕೊಡಲು ಸರ್ಕಾರದವರು ಹಲವು ವಿಧಿಗಳನ್ನು ಸೂಚಿಸಿರುವರು ಬಂಡವಾಳದಲ್ಲಿ ಶೇ॥ ೨ ರಷ್ಟು ಒಟ್ಟು ಉತ್ಪನ್ನವು ಬಂದರೆ ಅಂತಹ ಕಡೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಾಗಿಯೂ, ನಷ್ಟವಾಗುವ ಎಡೆಗಳಲ್ಲಿ ಒದಗಿಸಲು ಬರುವ ಅರ್ಜಿಗಳನ್ನು ಗಮನಿಸುವುದಿಲ್ಲವೆಂದೂ ಅವರು ತಿಳಿಸಿರುವರು

SREE GANESHA

TALKIES

GALA RELEASE

FROM 5 9—52

THE RIVER

The First

Technicolor Picture of India

One of the Most Satisfying Motion Pictures Ever Produced

Edited, Printed and Published by A R Nagarajan at Sadhvi Press, D Subbiah Road, Mysore

೧೧೦ ವರ್ಷದ ಮುದುಕಿಯ ಮರಣ

ಹೊನ್ನಾಳಿ ತಾಲ್ಲೂಕಿನ ಕೋಟೆ ಹಾಳಿನಲ್ಲಿ ಶ್ರೀಮತಿ ಪುಟ್ಟಮ್ಮ ಎಂಬ ೧೧೦ ವರ್ಷದ ಮುದುಕಿಯೊಬ್ಬಳು ಕಳೆದ ಸೋಮವಾರ ಮೃತಪಟ್ಟಳು ಇಷ್ಟು ವಯಸ್ಸಿನ ವರೆಗೆ ಬದುಕಿರುವವರು ಪ್ರಾಂತ್ಯದಲ್ಲಿ ಯಾರೂ ಇಲ್ಲ. ೧೦ ವರ್ಷದ ವೃದ್ಧನೊಬ್ಬನು ಭದ್ರಾ ಕಾಲೋನಿಯ ಸಮೀಪದಲ್ಲಿರುವನು. ಹೊ ದ ವರ್ಷದವರೆಗೂ ಆತನು ಹೊಲಕ್ಕೆ ಹೋಗಿ ಕೆಲಸ ಮಾಡುತ್ತಿದ್ದನೆಂದು ಹೇಳಲಾಗಿದೆ

ಕೋಲಾರ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯನವರ ಪ್ರವಾಸ

ಗ್ರಾಮ ಕೈಗಾರಿಕಾ ಯೋಜನೆಯ ಕರ್ತೃಗಳಾದ ಸರ್ ಎಂ ವಿಶ್ವೇಶ್ವರಯ್ಯನವರು ಇದೇ ೬ ನೇ ತಾರೀಖು ಕೋಲಾರದ ಹಲವು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ, ಅಲ್ಲಿನ ಗ್ರಾಮ ಕೈಗಾರಿಕೆಗಳ ಪರಿಶೀಲನೆ ನಡೆಸುವರೆಂದು ತಿಳಿದು ಬಂದಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭.೨೦ ಚಿತ್ರ ಜಗತ್ ಮಧ್ಯಾಹ್ನ ೧ ೪೦ ಗಿಟಾರ್ ವಾದನ ೨ ಚಿತ್ರ ಜಗತ್, ಮಕ್ಕಳ ಕಾರ್ಯಕ್ರಮ ೫ ೪೦ ಮತ್ತು ೭ ಹೆಚ್ ಆರ್ ನಾಗರಾಜ ಶಾಸ್ತ್ರಿ ದಿಲ್ರುಬಾ ೬ ಸಂಗೀತ ೬ ರಾತ್ರಿ ೭.೨೦ ವನಿತಾ ವಿಹಾರ ಸ್ತ್ರೀಯ ಕಾರ್ಯಕ್ರಮ ೮ ಟಿ ವಿ ಗುರುದಾಸ್ ಕಥಾ ಕಾಲಕ್ಷೇಪ ೯ ೧೫ ವಾದ್ಯ ೯ ೪೦ ಗಾನ ವಾರಿಧಿ ೯ ಆರ್ಕೆಸ್ಟ್ರಾ

ಮೈಸೂರು ಪೇಟೆ ಧಾರಣೆ

ಪಲ್ಲಗಟ್ಟೆ	ರೂ ಇಂದ	ರೂ
ನೆಲಗಡಲೆ	೧೦ ೪–೦	೨೦ ೮
ಎಳ್ಳು	೬೬ ೨ ೦	೭೬–೮
ಹುಚ್ಚೆಳ್ಳು	೫೦ ೪ ೦	೫೧ ೧೨
ಹರಳು ಬೀಜ	೪೬ ೮ ೦	೫೦–೦
ಹುರುಳಿ	೫೨ ೦ ೮	೫೨ ೪
ಹೆಸರು	೬೫ ೪–೦	
ಪುಂಗೇಬೀಜ	೨೫ ೨ ೦	
ಉದ್ದು	೬೭ ೧೦ ೦	
ಅವರೆ	೬೭ ೧೦–೦	
ಹಲಸಂದೆ	೩೭ ೧೨–೦	೬೩ ೮
ಕೊಬ್ಬರಿಕಾಯಿ		
ಮಣ ಗಟ್ಟೆ	೭ ೮ ೦	೧೪ ೪
ಹುಣಸೇಹಣ್ಣು	೨ ೧೪ ೦	
ಸೀಗೇಕಾಯಿ	೫ ೪ ೦	೬–೧
ತೆಂಗಿನಕಾಯಿ ೧೧೦೦	೧೩೮ ೦ ೦	೨೧೩ ೦

Wanted a Part time distributor, knowing Cycling on Salary to work from 6-30 8-30 a m & 5 to 7 p m

Apply – X, C/o SADHVI, Mysore

ಅತ್ಯಮೋಘವಾದ ಈ ಭಾರಿ ಹರಾಜು ಮಾರಾಟಕ್ಕೆ ತಪ್ಪಿಸಿಕೊಂಡರೆ

ನೀವೇ ವಿಷಾದ ಪಡುವಿರಿ

ನಾಳೆ, ನಾಳಿದ್ದು ಮತ್ತು ಮುಂದಿನ ದಿನಗಳಲ್ಲಿ

ನಿತ್ಯವೂ ಬೆಳಗ್ಗೆ 9 ರಿಂದ ಮಧ್ಯಾಹ್ನ 2ರ ವರೆಗೂ,

ಮಧ್ಯಾಹ್ನ 4 ರಿಂದ ಸಂಜೆ 6ರ ವರೆಗೂ

ಭಾರತವನ್ನು ಬಿಡಲಿರುವ ಶ್ರೀಮತಿ ಡಬ್ಲ್ಯೂ ಹೆಚ್ ಥಿಯೋಬಾಲ್ಡ್‌ರವರ ಮನೆ, ನಂಬರು 2552 ಶಿವಾಜಿ ರಸ್ತೆ, ನರಸಿಂಹರಾಜ ಮೊಹಲ್ಲಾ, ಮೈಸೂರು, ಈ ವಿಳಾಸದ ಬಳಿ ನಡೆಯುವುದು

ಮರಮುಟ್ಟುಗಳ ಮತ್ತು ಗೃಹಕೃತ್ಯ ಸಾಮಾನುಗಳ ಪಟ್ಟಿಯು ಹಂಚಲ್ಪಡುತ್ತಿದೆ ನಿಮಗೆ ಅದು ಇನ್ನೂ ದೊರೆಯದಿದ್ದರೆ ಈಗಲೇ ಇವರಿಂದ ಪಡೆದುಕೊಳ್ಳಿರಿ —

ಅಬೀದ್ಸ್, ಸರ್ಕಾರಿ ಮತ್ತು ಸಿವಿಲ್ ಹರಾಜು ಮಾರಾಟಗಾರರು, ಮೈಸೂರು.

ಪ್ರಭು ದೇವ್ಯಾ ಟಾಕೀಸ್

ಮೈ ಸೂ ರು

5—9—52 ನೇ ಶುಕ್ರವಾರದಿಂದ ಪ್ರತಿ ದಿನ 3 ಆಟಗಳು

ಋಷ್ಯಶೃಂಗರ್

ರಂಜನ್, ವಸುಂಧರಾ, ಕುಮಾರಿ ರುಕ್ಮಿಣಿ, ಬಾಲಚಂದ್ರ ಮುಂತಾದವರು ಪಾತ್ರವಹಿಸಿರುವ ಕೌತುಕ ಚಿತ್ರ

... ನಂ ೧೯೪ ||ವಂದೇ ಮಾತರಂ|| ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೬-೯ ೧೯೫೨ [ಸಂಚಿಕೆ ೪೫

ದಕ್ಷಿಣ ಆಫ್ರಿಕದಲ್ಲಿ ಕರ ನಿರಾಕರಣೆಯೇ ?

... ಕ್ಷಾಮ ನಿಧಿಗೆ ಮಂತ್ರಿಗಳಿಂದ ೫೦೦೦ ರೂ.

ಬೆಂಗಳೂರು ೬

...ಕ್ಷಾಮ ಪರಿಹಾರಕ್ಕಾಗಿ ಏರ್ಪಡಿಸಲಾಗಿರುವ ನಿಧಿಗೆ ಸಂಸ್ಥಾನದ ಮುಖ್ಯ ಮಂತ್ರಿ ...ರೂ ಇತರ ಸಚಿವರುಗಳೂ ತಲಾ ೫೦೦ ರೂ ಗಳನ್ನು ಸಹಾಯಧನವಾಗಿ ಕೊಡ ಲು ...ನಿರ್ಧರಿಸಿರುತ್ತಾರೆ ... ೦ ರೂ ಉನ್ನನ್ನು ...ಹಾರ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ... ರು ರೂಪಾಯಿಗಳನ್ನು ಕೊಟ್ಟಿರುತ್ತಾರೆ

ಮೈಸೂರು ಧ್ವಜ ತೆಗೆದ ಬಗ್ಗೆ ಅಧ್ಯಕ್ಷ ದಾಸಪ್ಪನವರ ಟೀಕೆ

ಮೈಸೂರಿನ ಧ್ವಜವನ್ನು ತೆಗೆದುಹಾಕಿದ ...ರ್ಣಕ್ಕೆ ಸಂಬಂಧಿಸಿದ ವಿಷಯ ...ಗಿರುವುದರಿಂದ ಅದನ್ನು ಮೈಸೂರು ಪ್ರ...ೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ವಿಚಾರಿಸಬೇಕಿದ್ದುದು ಕೋಚನೀಯವೆಂದೂ, ...ಹಿನ ಮಂತ್ರಿಮಂಡಲದವರು ಇಂತಹ ...ಷಯ ಗಳನ್ನು ಸಮಿತಿಯ ಗಮನಕ್ಕೆ ತರು...ದ್ದರಿಂದೂ, ಈಗಿನ ಮುಖ್ಯಮಂತ್ರಿಗಳೇ ...ಗೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದರಿಂದೂ ಅ...ಸಂಪ್ರದಾಯವನ್ನು ಈಗಲೂ ಅನುಸ...ಸುವುದು ಅಗತ್ಯವೆಂದೂ ಮೈಸೂರು ಪ್ರ...ೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ... ಸಿ ದಾಸಪ್ಪನವರು ತಿಳಿಸಿರುತ್ತಾರೆ

ನವರಾತ್ರಿ ದರ್ಬಾರಿಗಾಗಿ ಬಿರುದಾಂಕಿತರಿಗೆ ಆಹ್ವಾನವಿಲ್ಲ

ಸಂಸ್ಥಾನದಲ್ಲಿ ಹಿಂದೆ ಕೊಡಲಾದ ಬಿರುದುಗಳಿಗೆ ಈಗ ಮಾನ್ಯತೆಯಿಲ್ಲದಿರುವುದರಿಂದ, ಅಗಿನ ಬಿರುದಾಂಕಿತರನ್ನು ...ಸಾರಿಯ ನವರಾತ್ರಿ ದರ್ಬಾರಿಗೆ ...ಹ್ವಾನಿಸಲಾಗುವುದಿಲ್ಲವೆಂದು ತಿಳಿದು ...ಂದಿದೆ

ದಕ್ಷಿಣ ಆಫ್ರಿಕದಲ್ಲಿ ತೆರಿಗೆ ನಿರಾಕರಣೆ ಚಳುವಳಿ

ಕೇಪ್ ಪ್ರಾಂತದಲ್ಲಿರುವ ಆಫ್ರಿಕದ ...ಷ್ಟ್ರೀಯ ಕಾಂಗ್ರೆಸ್ಸಿನ ಶಾಖೆಯ ಕಾ...ರ್ದರ್ಶಿ ಜೋಸೆಫ್ ಕಾಟ್ಲೋರವರು ...ನ್ನೆ ಭಾಷಣ ಮಾಡುತ್ತಾ, ದಕ್ಷಿಣ ...ಫ್ರಿಕದ ವರ್ಣಭೇದದ ಶಾಸನಗಳನ್ನು ...ಲ್ಲಂಘಿಸಿ ಜೈಲುಗಳಿಗೆ ಹೋಗಲು ಬ...ಮಂದಿ ಆಫ್ರಿಕನ್ನರು ಸಿದ್ಧವಾಗಿರು...ರಾಗಿಯೂ, ಈ ಚಳುವಳಿಗೆ ಎಲ್ಲಾ ಆ...ಫ್ರಿಕನ್ನರ ಬೆಂಬಲವಿರುವುದೆಂದೂ ಇ...ನ್ನು ಮುಂದೆ ಸಾಮೂಹಿಕ ಮುಷ್ಕರ ಮ...ತೆರಿಗೆಯ ನಿರಾಕರಣೆ ಚಳುವಳಿಗ...ಳಾರಂಭವಾಗುವುವೆಂದೂ ನುಡಿದರು

ಆರೋಗ್ಯಾಧಿಕಾರಿಗಳ ವರ್ಗ

ಮೈಸೂರು ೬

ನಗರದ ಪೌರಸಭೆಯ ಆರೋಗ್ಯಾಧಿಕಾರಿಗಳಾದ ಶ್ರೀ ಎಸ್ ಶೇಷಗಿರಿರಾ...ರನ್ನು ಬೀರೂರಿನ ಸಾಂಕ್ರಾಮಿಕ ...ೋಗಗಳ ಆಸ್ಪತ್ರೆಗೆ ವರ್ಗಾಯಿಸಲಾ...ದೆ ಅವರ ಸ್ಥಾನದಲ್ಲಿ ಶ್ರೀ ಎ ...ಸ್ ವೆಂಕಟಾಚಲಂರವರನ್ನು ನೇಮಿ...ಲಾಗಿದೆ

ವಿದ್ವಾನ್ ಗಣಪತಿ ಸಂಗೀತೋತ್ಸವ

...ರಾಜಧಾನಿಯ ಶ್ರೀ ವರಲಕ್ಷ್ಮಿ ಸಂ...ತ ವಿದ್ಯಾ ಮಂದಿರದ ಕೃಷ್ಣಮೂರ್ತಿ ...ೆ ಹಿ ಬಯಲ್ಲಿ ವಿದ್ವಾನ್ ಗಣಪತಿಯ ...ೀತೋತ್ಸವದ ಅಂಗವಾಗಿ ನಾಳೆ ...ಲ್| ಆರ್ ವಿಶ್ವೇಶ್ವರರವರ ವೀ...ಣಾವಾದನವು ನಡೆಯುವುದು ಪೌರಸ...ಸದಸ್ಯರಾದ ಶ್ರೀ ಬಿ. ಕೆ ರಾಮಕೃ...ಷ್ಣನವರು ಅಧ್ಯಕ್ಷತೆ ವಹಿಸುವರು.

ಗಾಂಧಿ ಸ್ಮಾರಕ ಸ್ತಂಭದ ಅನಾವರಣೋತ್ಸವ

ಮೈಸೂರು ೬

ರಾಜಧಾನಿಯ ಗಾಂಧಿ ಚೌಕದಲ್ಲಿ ಮಹಾತ್ಮ ಗಾಂಧಿ ಸ್ಮಾರಕ ಸ್ತಂಭದ ಅನಾವರಣೋತ್ಸವವನ್ನು ಶ್ರೀಮನ್ಮಹಾರಾಜರು ಇದೇ ೮ನೇ ತಾರೀಕು ಸೋಮವಾರ ಬೆಳಿಗ್ಗೆ ೧೦ ಘಂಟೆಗೆ ನೆರವೇರಿಸುವರು

ಸಾಕಲಾರದೆ ೩ ಮಕ್ಕಳ ಮಾರಾಟ

ಆಸ್ಸಾಮಿನ ಒಂದು ಹಳ್ಳಿಯ ಒಬ್ಬ ವೃದ್ಧನು ೬೫ ಮತ್ತು ೩ ವರ್ಷ ವಯಸ್ಸಿನ ತನ್ನ ಗಂಡು ಮಕ್ಕಳನ್ನು ಸಾಕಲಾರದೆ ಅಂಗಡಿ ಬೀದಿಯಲ್ಲಿ ತಂದು ಮಾರಲು ಉದ್ಯುಕ್ತನಾದನೆಂದೂ ಮೂವರು ವರ್ತಕರು ಆ ಮಕ್ಕಳ ಬಗ್ಗೆ ಕನಿಕರಪಟ್ಟು ಅವುಗಳನ್ನು ತಾವು ಸಾಕಿಕೊಳ್ಳುವುದಾಗಿ ಮುಂದೆ ಬರಲು ಮಕ್ಕಳು ತಮ್ಮ ತಂದೆಯಿಂದ ಒಬ್ಬನನ್ನು ಬಿಟ್ಟು ಇರಲೊಪ್ಪದೆ ಅಳಲಾರಂಭಿಸಿದುವೆಂದೂ, ಕೆಲವಾಯ ಮತ್ತೊಬ್ಬ ವ್ಯಾಪಾರಿಯು ಮೂವರನ್ನೂ ಸಾಕಿಕೊಳ್ಳುವುದಾಗಿ ಹೇಳಿ, ಅವನ್ನು ಕರೆದುಕೊಂಡುಹೋದನೆಂದೂ ವರದಿಯಾಗಿದೆ

ಶಿವ ದೇವಾಲಯ ನೆಲಸಮ

ಕಲ್ಕತ್ತ ನಗರಕ್ಕೆ ೮೦ ಮೈಲಿ ದೂರದ ಬಡೂರಿಯಾ ಎಂಬ ಗ್ರಾಮದ ಶಿವ ಮತ್ತು ಪಾರ್ವತಿ ದೇವಾಲಯವನ್ನು ಒಂದು ಕೋಮಿನವರು ಕಳೆದ ತಿಂಗಳು ೨೭ ನೇ ತಾರೀಕು ಕೆಡವಿ ನೆಲಸಮ ಮಾಡಿದರೆಂದೂ ಈ ಸಂಬಂಧವಾಗಿ ೧೧ ಮಂದಿಯನ್ನು ಬಂಧಿಸಲಾಗಿದೆಯೆಂದೂ ವರದಿಯಾಗಿದೆ

ಸಂಸ್ಥಾನದಲ್ಲಿ ಸೌದೆ ಸರಬರಾಜಿನ ಸಮಿತಿ

ಸ್ವಂ ಸು ಪ್ರೆ(] ಬೆಂಗಳೂರು ೬

ಸಂಸ್ಥಾನದ ವಿವಿಧ ಊರುಗಳಿಗೆ ಸೌದೆಯನ್ನು ಸರಿಯಾಗಿ ಸರಬರಾಜು ಮಾಡುವ ಏರ್ಪಾಟು ಸರ್ಕಾರದವರು ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ, ಮೂರು ತಿಂಗಳೊಳಗೆ ವರದಿಯೊಪ್ಪಿಸಬೇಕೆಂದು ಸೂಚಿಸಿರುತ್ತಾರೆ

ನಂದೀಬಸಪ್ಪನವರಿಗೆ ಸಾವಿರ ರೂ ಜುಲ್ಮಾನೆ

ಬೆಂಗಳೂರು ೬

ರಾಜಧಾನಿಯ ಪ್ರಮುಖ ವರ್ತಕರಾದ ಧರ್ಮರತ್ನಾಕರ ಕೆ ನಂದೀಬಸಪ್ಪನವರು ಅಕ್ರಮವಾಗಿ ಧಾನ್ಯವನ್ನು ಶೇಖರಿಸಿಟ್ಟಿದ್ದ ಬಗ್ಗೆ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಯಾಗಿ ಒಂದು ವಾರ ಸಜಾ ಮತ್ತು ೧೦೦೦ ರೂ ಜುಲ್ಮಾನೆ ವಿಧಿಸಲ್ಪಟ್ಟು ಅದರ ಮೇಲೆ ಅವರು ಸೆಷನ್ಸ್ ಕೋರ್ಟಿನಲ್ಲಿ ಅಪೀಲು ಹೂಡಿ ಖುಲಾಸೆ ಮಾಡಲ್ಪಟ್ಟಿದ್ದರಷ್ಟೆ ಈ ತೀರ್ಪಿನ ಮೇಲೆ ಸರ್ಕಾರದವರು ಮತ್ತೆ ಇಲ್ಲಿನ ಹೈಕೋರ್ಟಿನಲ್ಲಿ ಅಪೀಲು ಹೂಡಲಾಗಿ ವಿಚಾರಣೆ ನಡೆದು ನ್ಯಾಯಮೂರ್ತಿಗಳಾದ ಶ್ರೀಗಳು ಪಿ ಮೇದಪ್ಪ ಮತ್ತು ಬಿ ವಾಸುದೇವ ಮೂರ್ತಿಯವರುಗಳು ಸೆಷನ್ಸ್ ಜಡ್ಜರ ತೀರ್ಪನ್ನು ಬದಿಗಿಟ್ಟು ಶ್ರೀ ನಂದೀಬಸಪ್ಪನವರಿಗೆ ಒಂದು ಸಾವಿರ ರೂ ಜುಲ್ಮಾನೆ, ತಪ್ಪಿದರೆ ಒಂದು ತಿಂಗಳ ಸಾದಾ ಸಜವನ್ನು ನೆನ್ನೆ ವಿಧಿಸಿದರು

ನ್ಯಾಯಾಧೀಶರುಗಳು ತಮ್ಮ ತೀರ್ಪಿನಲ್ಲಿ ನಗರದ ನ್ಯಾಯಾಧೀಶರು ಮಾಡಿದ ಟೀಕೆಗಳನ್ನು ಪ್ರಸ್ತಾಪಿಸಿ ಸದರಿ ಅಪರಾಧವು ಬಹು ಘೋರವಾದುದೆಂದೂ ಆಪಾದಿತರು ತಮ್ಮ ತಪ್ಪನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳುವ ಬದಲು ಅನುಮಾನಾಸ್ಪದ ರೀತಿಯಲ್ಲಿ ತಾವು ಜಿಲ್ಲಾಧಿಕಾರಿಗಳ ಆಫೀಸಿನ ಅಸಿಸ್ಟೆಂಟರಿಗೆ ಬರೆದ ಪತ್ರವನ್ನು ಹಾಜರು ಮಾಡಿ ವಿಷಯವು ಮುಚ್ಚಿಹೋಗಿ ಹಾಳು ಮಾಡಲೆತ್ನಿಸಿದರೆಂದೂ ಹೇಳಿ ಧನಿಕ ಮತ್ತು ಪ್ರಭಾವಯುತ ಜನರು ಅಪರಾಧ ಮಾಡಿದರೆ ಅಂತಹವರ ವಿಷಯದಲ್ಲಿ ಲಘುವಾಗಿ ವರ್ತಿಸಿದರೆ ಕಾನೂನಿನ ಘನತೆಗೆ ಕುಂದಕ ಬರುವುದೆಂದು ಅಭಿಪ್ರಾಯಪಟ್ಟಿರುತ್ತಾರೆ

ಆತ್ಮಶುದ್ಧಿಗಾಗಿ ೬೦ ದಿನಗಳ ಉಪವಾಸ

ದೆಹಲಿಯ ೬೫ ವರ್ಷ ವಯಸ್ಸಿನ ಶ್ರೀ ಟೆಕಂಚಂದ್ ಜೈನ್ ಎಂಬ ಕಾಂಗ್ರೆಸ್ ಕೆಲಸಗಾರರು ಆತ್ಮಶುದ್ಧಿಗಾಗಿ ೬೦ ದಿನಗಳ ಉಪವಾಸ ಮಾಡಲು ಸಂಕಲ್ಪಿಸಿ, ಕಳೆದ ಜುಲೈ ೫ ನೇ ತಾ|| ಅದನ್ನು ಆರಂಭಿಸಿ ಮೊನ್ನೆ ದಿನ ಯಶಸ್ವಿಯಾಗಿ ಮುಕ್ತಾಯಗೊಳಿಸಿದರು ಉಪವಾಸದ ಕಾಲದಲ್ಲಿ ಅವರು ಬಿಸಿ ನೀರನ್ನು ಮಾತ್ರ ಸೇವಿಸುತ್ತಿದ್ದರೆಂದೂ, ಅವರು ಆರೋಗ್ಯವಾಗಿಯೂ, ಹರ್ಷಚಿತ್ತರಾಗಿಯೂ ಇರುವರೆಂದೂ ಹೇಳಲಾಗಿದೆ

ಹೈದರಾಬಾದಿನಲ್ಲಿ ಶಾಂತಿ ಪರಿಸ್ಥಿತಿ

೪೦೦ ಜನರ ದಸ್ತಗಿರಿ

ಮೂರು ದಿನಗಳ ಹಿಂದೆ ಹೈದರಾಬಾದಿನಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯು ನೆನ್ನೆ ತಿಳಿಗೊಂಡು ಈಗ ಶಾಂತಿಯು ಏರ್ಪಟ್ಟಿರುವುದೆಂದು ವರದಿಯಾಗಿದೆ ಚಳುವಳಿಯ ನಾಯಕತ್ವವನ್ನು ಸಮಾಜ ಘಾತುಕ ಜನರು ವಹಿಸಿಕೊಂಡಿರುವ ಕಾರಣ, ಸಿಕಂದರಾಬಾದಿನ ವಿದ್ಯಾರ್ಥಿಗಳು ಹೈದರಾಬಾದೇತರರುಗಳ ನೇಮಕಗಳಿಗೆ ವಿರೋಧ ಸೂಚಿಸುವ ತಮ್ಮ ಚಳುವಳಿಯನ್ನು ವಾಪಸು ತೆಗೆದುಕೊಂಡಿರುತ್ತಾರೆ ಈ ಘಟನೆಗಳ ಸಂಬಂಧವಾಗಿ ಇದುವರೆಗೆ ೪೦೦ ಜನರ ದಸ್ತಗಿರಿಯಾಗಿದೆ

ಗುಂಡಿನೇಟಿನಿಂದ ಮಡಿದವರ ಸಂಖ್ಯೆ ಒಟ್ಟು ೭ ಕ್ಕೆ ಏರಿದೆ ಸುಮಾರು ೧೧೦ ಮಂದಿ ಪೋಲೀಸರು ಗಾಯಗೊಂಡು, ಆ ಪೈಕಿ ೨೩ ಜನರು ಆಸ್ಪತ್ರೆಗೆ ಸೇರಿರುವರೆಂದೂ, ಒಬ್ಬನ ಸ್ಥಿತಿಯು ಚಿಂತಾಜನಕವಾಗಿರುವುದೆಂದೂ ಹೇಳಲಾಗಿದೆ ಲಾಠಿ ಏಟು, ಗುಂಡು ಮತ್ತು ಕಲ್ಲೇಟಿನಿಂದ ೭೮ ಮಂದಿ ಪ್ರದರ್ಶನಕಾರರು ಗಾಯಗೊಂಡಿರುವರು ೨೪ ಗಂಟೆಗಳ ಕಾಲ ವಿಧಿಸಲಾಗಿದ್ದ ಕರ್ಫ್ಯೂ ಆಜ್ಞೆಯು ನೆನ್ನೆ ರಾತ್ರಿ ೧೦ ಗಂಟೆಗೆ ಮುಕ್ತಾಯಗೊಂಡಿತು

ಈ ಘಟನೆಗಳ ಹಿಂಬದಿಯಲ್ಲಿ ಮಾಜಿ ರಜಾಕಾರರೂ, ಪಾಕಿಸ್ತಾನಿಗಳ ಪರವಿರುವ ವ್ಯಕ್ತಿಗಳ ಕೈವಾಡವೂ ಇರುವುದೆಂದೂ, ಪೋಲೀಸು ಕಾರ್ಯಾಚರಣೆ ಸಮಯದಲ್ಲಿ ವಿಫಲಗೊಂಡ ರಜಾಕಾರರು ಈಗ ಅಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಜನರನ್ನು ಹೈದರಾಬಾದೇತರರ ಮೇಲೆ ಗಲಭೆಗೆ ಪ್ರೇರಿಸಿರುವರೆಂದೂ ವರದಿಯಾಗಿದೆ ಮೊನ್ನೆಯ ಗಲಭೆಗಳಿಗೆ ಮುಖಂಡತ್ವವನ್ನು ಇಬ್ಬರು ಪಾಕಿಸ್ತಾನಿ ಗೂಢಚಾರರು ವಹಿಸಿದ್ದರೆಂದು ಹೇಳಲಾಗಿದೆ

ಗುಂಡ್ಲುಪೇಟೆಗೆ ಖಾಸಗಿ ಬಸ್ಸು ಸಂಚಾರ ರದ್ದು

ಬೆಂಗಳೂರಿನಿಂದ ಗುಂಡ್ಲುಪೇಟೆಗೆ, ಮೈಸೂರಿನ ಮಾರ್ಗವಾಗಿ ಸರ್ಕಾರಿ ಬಸ್ಸುಗಳು ಮಾತ್ರ ಓಡಾಡುವುವೆಂದು ಸರ್ಕಾರದ ಪ್ರಕಟನೆಯೊಂದು ತಿಳಿಸಿದೆ. ಅಲ್ಲದೆ ಇತರ ಐದು ಮಾರ್ಗಗಳಲ್ಲೂ ಸರ್ಕಾರಿ ಬಸ್ಸುಗಳು ಮಾತ್ರ ಸಂಚರಿಸಲಿರುವುವು ಈ ಮಾರ್ಗಗಳಲ್ಲಿ ಖಾಸಗಿ ಬಸ್ಸು ಸಂಚಾರವನ್ನು ರದ್ದುಗೊಳಿಸಲಾಗುವುದೆಂದು ಹೇಳಲಾಗಿದೆ

ಕೇಂದ್ರ ಕಾರ್ಮಿಕ ಮಂತ್ರಿ ವಿ ವಿ ಗಿರಿಯವರು ನಾಳೆ ಮಧ್ಯಾಹ್ನ ಬಾಲ ಹಳ್ಳಿಯಲ್ಲಿ ಶಿಕ್ಷಣ ಪಡೆದವರಿಗೆ ಡಿಪ್ಲೋಮಾಗಳನ್ನು ಹಂಚುವರು

೦ ಸಾವಿರ ರೂ.ಗೆ ಪೌರ ಸಭಾ ಸ್ಥಾನಗಳ ಹರಾಜು

ಶಿವಕಾಶಿಯ ಪೌರಸಭೆಗೆ ಉಮೇದುವಾರರಾಗಿ ನಿಂತ ಮೂರು ಪಕ್ಷಗಳಲ್ಲಿ ಸ್ಪರ್ಧೆ ತಪ್ಪಿಸಲು ಅಲ್ಲಿನ ಹಲವು ಪ್ರಮುಖ ಖಾಸಗಿ ಜನರು, ಊರಿನ ಮುಖ್ಯ ಅವಶ್ಯಕತೆಗಳಾದ ನೀರಿನ ಸೌಕರ್ಯ ಮತ್ತು ಬಾಲಕಿಯರ ಪ್ರಾಥಮಿಕ ಶಾಲೆಯನ್ನು ಹೈಸ್ಕೂಲಾಗಿ ಪರಿವರ್ತಿಸುವುದು-ಈ ಎರಡು ಸೌಲಭ್ಯಗಳನ್ನು ಕಲ್ಪಿಸುವವರಿಗೆ ಓಟುಗಳನ್ನು ಕೊಡಿಸುವುದಾಗಿ ಹೇಳಿ ಈ ಬಗ್ಗೆ ಒಂದು ಹರಾಜನ್ನು ಏರ್ಪಡಿಸಿದ್ದರೆಂದೂ ಒಂದು ಪಕ್ಷದವರು ೫೦ ಸಾವಿರ ರೂ ಗಳಿಗೆ ಬಿಡ್ಡು ಮಾಡಿ ಪೌರಸಭಾ ಸ್ಥಾನಗಳ ಹಕ್ಕನ್ನು ಪಡೆದರೆಂದೂ ತಿಳಿದುಬಂದಿದೆ ಉಳಿದ ಎರಡು ಪಕ್ಷಗಳವರು ತಮ್ಮ ಉಮೇದವಾರಿಕೆಗಳನ್ನ ವಾಪಸು ಪಡೆಯುವಂತೆ ಒಪ್ಪಂದವಾಗಿರುತ್ತದೆ

ಸೂರ್ಯರಶ್ಮಿಯ ಉಪಯೋಗ

ಪರ್ಷಿಯದ ಹತ್ತಿರ ಇರುವ ಓರ್ ಮೂಸಿರ್ಯ ಕಾಲುವೆ ಪ್ರದೇಶದಲ್ಲಿ ರಷ್ಯನರು ಸೂರ್ಯ ರಶ್ಮಿಯನ್ನು ವಿದ್ಯುಚ್ಛಕ್ತಿ ಯಂತ್ರ ತಯಾರಿಕಾ ಕಾರ್ಖಾನೆಯ ಶಾಖೋತ್ಪತ್ತಿ ಕೆಲಸ ಕಾರ್ಯಗಳಿಗೆ ಬಳಸುತ್ತಿರುವುದಾಗಿ ಗೊತ್ತಾಗಿದೆ ಅಲ್ಲದೆ ಉಪ್ಪು ನೀರನ್ನು ತಿಳಿಯಾದ ನೀರಾಗಿ ಪರಿವರ್ತಿಸುವುದಕ್ಕೂ ಔಷಧೋಪಚಾರ ಸಮಯದಲ್ಲಿ ಬೆಳಕಿನ ದೀಪಗಳಾಗಿಯೂ ಅದನ್ನು ಉಪಯೋಗಿಸುತ್ತಿರುವರು

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ ಸ ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

Edited, Printed and Published by A R Nagrajan at Sadhvi Press, D Subbiah Road, Mysore

ಶಾಸನ ಸಭಾ ಭವನದಲ್ಲಿ ವಿಶ್ವಸಂಸ್ಥೆ ಧ್ವಜ ಕೂಡದು

ಬರುವ ತಿಂಗಳು ೨೪ರಂದು ನಡೆಯುವ ವಿಶ್ವಸಂಸ್ಥೆಯ ದಿನಾಚರಣೆಯಲ್ಲಿ ಆ ಸಂಸ್ಥೆಯ ಧ್ವಜವನ್ನು ಶಾಸನಸಭಾ ಕಟ್ಟಡಗಳ ಮೇಲೆ ಹಾರಿಸಬೇಕಾಗಿಲ್ಲವೆಂದು ಭಾರತ ಸರ್ಕಾರದವರು ಸೂಚನೆಯಿತ್ತಿರುವರು

ರೈಲು ಪಾರ್ಸಲಿನಲ್ಲಿ ಅಂಚೆ ಸ್ಟಾಂಪುಗಳ ಕಳುವು

ಬೊಂಬಾಯಿಯಿಂದ ಕಲ್ಕತ್ತಾವಿಗೆ ಹೋಗುತ್ತಿದ್ದ ಒಂದು ಪಾರ್ಸಲ್ ಎಕ್ಸ್‌ಪ್ರೆಸ್ ರೈಲಿನಿಂದ ಕಳೆದ ೨ನೇ ತಾರೀಕು ೧೧ ಪಾರ್ಸಲ್‌ಗಳು ಕಳುವಾಗಿ ಸಾವಿರಾರು ರೂ ಬೆಲೆಯ ಅಂಚೆ ಸ್ಟಾಂಪುಗಳು, ಮುಖ್ಯವಾದ ಸರ್ಕಾರಿ ಕಾಗದ ಪತ್ರಗಳು ಮತ್ತು ಇತರ ಭಾಂಗಿಲ ತೋಟಿಗಳು ಕಳೆದುಹೋಗಿರುವುವೆಂದು ವರದಿಯಾಗಿದೆ

GUIDE TO
ACCOUNTS HIGHER EXAMINATION
THEORY & PROBLEMS
J Nanumal & Sons, Mysore
Sri Ramachandra Book Depot,
Mysore

ಔಷಧಿಗಳ ಮಾರಾಟಗಾರರಿಗೆ ಎಚ್ಚರಿಕೆ

ಔಷಧಿಗಳನ್ನು ಮಾರುವ ವಿದೇಶೀ ಅಂಗಡಿಗಳು ಭಾರತದಲ್ಲಿ ಅಗಾಧವಾದ ಲಾಭವನ್ನು ಗಳಿಸುತ್ತಿರುವುವೆಂದೂ, ಅದನ್ನು ನಿಲ್ಲಿಸದಿದ್ದರೆ ತಾವು ಕ್ರಮ ಕೈಗೊಳ್ಳಬೇಕಾಗುವುವೆಂದೂ ಕೇಂದ್ರ ವಾಣಿಜ್ಯ ಮಂತ್ರಿ ಟಿ ಟಿ ಕೃಷ್ಣಮಾಚಾರ್ಯರು ಎಚ್ಚರಿಕೆ ಇತ್ತಿರುವರು ಈ ಅಂಗಡಿಗಳವರು ಮಾರುತ್ತಿರುವ ಔಷಧಿಗಳ ನಿಖರವಾದ ಬೆಲೆಯ ಬಗ್ಗೆ ತನಿಖೆ ನಡೆಸುವಂತೆ ತಾವು ಆರೋಗ್ಯ ಮಂತ್ರಿಗಳನ್ನು ಪ್ರಾರ್ಥಿಸಿರುವುದಾಗಿಯೂ ಅವರು ಹೇಳಿರುತ್ತಾರೆ

SRI GAYATHRI
TALKIES
Daily 2 Shows
FROM 7—9 52
M G M's
AN AMERICAN
IN PARIS
(Technicolor)

ಸಿಡಿಲು ಬಡಿದು ವಿಮಾನದ ಆಸ್ಫೋಟನೆ

ಆಸ್ಟ್ರೇಲಿಯದ ವಿಮಾನ ಪಡೆಗೆ ಸೇರಿದ ಒಂದು ವಿಮಾನವು ಕಳೆದ ಬುಧವಾರ ಸಿಡಿಲಿನ ಹೊಡೆತಕ್ಕೆ ಸಿಕ್ಕಿ ಆಸ್ಫೋಟಿಸಿದ ಪರಿಣಾಮವಾಗಿ ಅದರಲ್ಲಿದ್ದ ಇಬ್ಬರು ಚಾಲಕರೂ ಮೃತಪಟ್ಟರೆಂದು ದಕ್ಷಿಣ ಜಪಾನಿಗೆ ಸುದ್ದಿ ಬಂದಿರುವುದಾಗಿ ಗೊತ್ತಾಗಿದೆ

ಸೇವಾದಳದವರಿಂದ ವಿಶ್ವೇಶ್ವರಯ್ಯನವರ ವರ್ಧಂತಿ ಆಚರಣೆ

ಸಂಸ್ಥಾನದಲ್ಲಿರುವ ಭಾರತ ಸೇವಾದಳದ ಶಾಖೆಗಳು ಇದೇ ೧೫ ನೇ ತಾ|| ಸೋಮವಾರ ಸರ್ ಎಂ ವಿಶ್ವೇಶ್ವರಯ್ಯನವರ ೯೨ ನೇ ವರ್ಷ ವರ್ಧಂತಿಯನ್ನು ಆಚರಿಸಬೇಕೆಂದೂ ಆಯಾ ಸ್ಥಳಗಳ ಸನ್ನಿವೇಶಕ್ಕೆ ತಕ್ಕಂತೆ ಆ ದಿನ ಪ್ರಭಾತ ಫೇರಿ, ಸರ್ ಎಂ ವಿ ಯವರ ಭಾವಚಿತ್ರದ ಮೆರವಣಿಗೆ, ಸಭೆ ಮುಂತಾದ ಕಾರ್ಯಕ್ರಮಗಳನ್ನು ಆಯಾ ಊರುಗಳ ನಾಗರಿಕರೊಡನೆ ಸೇರಿ ನಡೆಸಬೇಕೆಂದೂ, ಸೇವಾದಳದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎಸ್ ಆರ್ ಗುರುರವರು ತಿಳಿಸಿರುತ್ತಾರೆ

ಹರಿಕಥೆ

ರಾಜಧಾನಿಯ ಶಿವರಾಂಪೇಟೆ ಸ್ವಸ್ತಿಕ ನ ರಾಣಾ ರಾಮ ಮಂದಿರದಲ್ಲಿ ಸಂಜೆ ೭ ಘಂಟೆಗೆ ಶ್ರೀ ಹರಿನಾರಾಯಣದಾಸರಿಂದ ಬಾಲಭಕ್ತ ಧ್ರುವ ಎಂಬ ಹರಿಕಥೆಯು ನಡೆಯುವುದು

ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದವರು ಏರ್ಪಡಿಸಿದ್ದ ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆಯಲ್ಲಿ ಈ ಕೆಳಗೆ ಕಂಡವರು ಬಹುಮಾನ ಪಡೆದಿರುತ್ತಾರೆ:—ಪ್ರೌಢ ಎ ಪ್ರಥಮ ಬಹುಮಾನ ಶ್ರೀ ಡಿ ವಿ ಶ್ರೀನಿವಾಸಾಚಾರ್, ವಿಶೇಷ ಬಹುಮಾನ ಶ್ರೀಮತಿ ಎಸ್ ಜಿ ಭಾರತಮಾತೆ ಪ್ರೌಢ-ಬಿ ಪ್ರಥಮ ಶ್ರೀಮತಿ ಎಂ ವಿ ನಾಗರತ್ನ ಮಾಧ್ಯಮ ಎ ಶ್ರೀಮತಿ ಡಿ ವತ್ಸಲ ಮಾಧ್ಯಮ ಬಿ ಮಾಲತಿ ಪ್ರಾಥಮಿಕ ಶ್ರೀ ಎಂ ಆರ್ ಕೃಷ್ಣ ವೀಣೆ-ಮಾಧ್ಯಮ ಎ. ಶ್ರೀಮತಿ ಬಿ ಎಲ್ ಸುಶೀಲಾ ಮಾಧ್ಯಮ ಕೆ ಬಿ ಸಿ ಎರ್ ರಮಾಮಣಿ ಪ್ರಥಮ ಶ್ರೀಮತಿ ಎಂ ಎಸ್ ಲೀಲಾವತಿ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ	ರೂ ಇಂದ ರೂ
ನೆಲಗಡಲೆ	೧೩ ೪-೦	೨೧ ೦
ಎಳ್ಳು	೬೧ ೨ ೦	೬೭ ೭
ಹುಚ್ಚೆಳ್ಳು	೫೦ ೪	೫೧ ೯
ಹರಳು ಬೀಜ	೪೭ ೮ ೦	೫೦-೮-
ತೊಗರಿ	೪೭ ೩ ೭	೫೩ ೧೪
ಹೆಸರು	೬೫ ೪ ೦	
ಹೊಂಗೇಬೀಜ	೨೦ ೨ ೦	೨೫ ೪
ಉದ್ದು	೭೩ ೧೨	
ಅವರೆ	೭೩ ೧೦ ೦	
ಬೆಲ್ಲಸಂಡೆ	೬೬ ೨-೦	೭ ೧೦
ಹೊಣಸಿನಕಾಯಿ		
ಮಣಗಳ್ಳೆ	೭ ೮ ೦	೧೪ ೪
ಹುಣಸೇಹಣ್ಣು	೫ ೧೩ ೦	
ಸೀಗೇಕಾಯಿ	೫-೨-೦	೫ ೮
ಬೆಲ್ಲ	೨ ೯	೩ ೧೮
ತೆಂಗಿನಕಾಯಿ ೧೧೦೦	೧೩೬ ೦ ೦	೭೫೯ ೦

TO ALL THOSE WHO ARE ENGAGED IN
TRADE & COMMERCE IN MYSORE
COMMERCIAL & FINANCIAL ADVICE
Avail yourself of the services of a smart, efficient and pains taking Senior Officer of vast and varied experience of 33 years just retired from the service of the Bank of Mysore, Limited, the premier and out-standing Banking Institution in the State Expert advices in various capacities, at the disposal of Companies Firms and individual merchants in Mysore
VERY REASONABLE TERMS
Please apply to —
Sri L. S. V. Rama Iyer, Dip-in-Com ,
Associate Member of the Indian Institute of Bankers,
PANCHAVATI , No 3107, Gokulam Road, Jayalaxmipuram Extn ,
V V Mohalla, Mysore

ಪರಿಶುದ್ಧವಾದ ಮತ್ತು ಉತ್ತಮವಾದ ಕಾಫಿ ಬೇಕಾದಲ್ಲಿ
ಶ್ರೀ ಚಾಮುಂಡೇಶ್ವರಿ ಭವನ
(ಭೋಜನ ಮತ್ತು ವಸತಿ ಗೃಹ, ಮತ್ತು ಫಲಾಹಾರ ಮಂದಿರ, ಇರ್ವಿನ್ ರಸ್ತೆ, ಮೈಸೂರು)
ಇಲ್ಲಿಗೆ ಭೇಟಿ ಕೊಡಲು ಮರೆಯದಿರಿ
ನಮ್ಮ ಪರಿಶುದ್ಧವಾದ ಮತ್ತು ಶ್ರೇಷ್ಠತಮ ರುಚಿಯುಳ್ಳ
ಪ್ಲಾಂಟೇಷನ್ 'ಎ' ಕಾಫಿಯನ್ನು ಸೇವಿಸಿ ಆನಂದಿಸಿರಿ
★ ಅಪ್ಪಟ ತುಪ್ಪದಿಂದ ತಯಾರಾದ ಸಿಹಿ ತಿಂಡಿಗಳು ಮತ್ತು
★ ರುಚಿಯಾದ ಮತ್ತು ತೃಪ್ತಿಕರವಾದ ಊಟಗಳನ್ನು ಸವಿದು ನೋಡಿ
ಪೋರ್ಟಬಲ್ ರೆಮಿಂಗ್ಟನ್ ಟೈಪ್‌ರೈಟರುಗಳು
ರೆಡಿ ಸ್ಟಾಕಿನಿಂದ ದೊರೆಯುತ್ತವೆ
ಪಿ ಬಿ ಜನರಲ್ ಸ್ಟೋರ್ಸ್ · ಇರ್ವಿನ್ ರಸ್ತೆ, ಮೈಸೂರು

ಫೋ ನಂ 792 WEEKLY EDITION ಒಂದಿನ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೭-೯-೧೯೫೯ [ಸಂಚಿಕೆ ೩

ಭಾರತದ ಗಡಿಯಲ್ಲಿ ಚೀಣಾ ಸೈನ್ಯಗಳಿಲ್ಲ

ಭಾರತ-ಪಾಕಿಸ್ತಾನಗಳಿಗೆ ಯುದ್ಧವಾದಲ್ಲಿ ಭಾರತದ ಮುಸ್ಲಿಮರ ಪಾತ್ರ

ಮುಖ್ಯಮಂತ್ರಿ ಹನುಮಂತಯ್ಯನವರ ಭಾಷಣ

ಬೆಂಗಳೂರು ೭

ಇಲ್ಲಿನ ಕೇಂದ್ರ ಮುಸ್ಲಿಂ ಸಂಘದವರು ನೆನ್ನೆ ಏರ್ಪಡಿಸಿದ್ದ ಸಮಾರಂಭದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ, ಭಾರತ ಮತ್ತು ಪಾಕಿಸ್ತಾನಗಳಿಗೆ ಯುದ್ಧ ಸಂಭವಿಸಿದರೆ ಇಲ್ಲಿನ ಮುಸಲ್ಮಾನರು ಭಾರತದೊಡನೆ ನಿಲ್ಲುವುದಾಗಿ ಭರವಸೆಯಂತಾಗುವಂತೆ ಮಾಡಬೇಕಾದುದು ಅವರ ಕರ್ತವ್ಯವೆಂದು ಸೂಚಿಸಿದರು. ಭಾರತವು ಬ್ಯಾಗವಾದ ನಂತರ ಮುಸ್ಲಿಮರ ಭಾವನೆಯು ಬದಲಾಗಿರುವುದೆಂಬುದನ್ನು ಅವರು ಮನಗಂಡಿರುವುದಾಗಿಯೂ, ಈ ನ ಮಂತ್ರಿಮಂಡಲದಿಂದ ಮುಸ್ಲಿಂ ಅಲ್ಪಸಂಖ್ಯಾತರಿಗೆ ಯಾವ ತೊಂದರೆಯೂ ಇಲ್ಲವೆಂದೂ, ಭಾರತದಲ್ಲಿ ಮುಸಲ್ಮಾನರ ಹಿತವು ಸಂರಕ್ಷಿಸಲ್ಪಡುತ್ತಿರುವುದೆಂದು ಅವರು ತಿಳಿಸಿ, ಪಾಕಿಸ್ತಾನದಲ್ಲಿ ಹಿಂದುಗಳ ಬಗ್ಗೆ ತೋರಲಾಗುತ್ತಿರುವ ವರ್ತನೆಯನ್ನು ಅವರು ಖಂಡಿಸಿದರು.

ಭಾರತದ ಗಡಿ ಬಳಿ ಚೀಣಾ ಸೈನ್ಯಗಳ ಶೇಖರಣೆ ಇಲ್ಲ

ಭಾರತದ ಉತ್ತರ ಗಡಿಯಲ್ಲಿ ಚೀಣಾ ಸೈನ್ಯಗಳ ಶೇಖರಣೆಯಾಗಿಲ್ಲವೆಂದೂ ಅಲ್ಲಿ ಗಡಿಯ ಉದ್ದಕ್ಕೂ ಇರುವ ಸಾವಿರ ಮೈಲಿ ಪ್ರದೇಶದ ಚೀಣಾ ಸೈನಿಕರ ಸಂಖ್ಯೆ ೫ ಸಾವಿರಕ್ಕೂ ಹೆಚ್ಚಿಲ್ಲವೆಂದೂ, ಸೈನ್ಯ ಶೇಖರಣೆಯಾಗಿರುವುದೆಂದು ಹೇಳುವುದು ಶುದ್ಧ ಸುಳ್ಳೆಂದೂ ಈಜಿಪ್ಟಿಗೆ ಭಾರತದ ರಾಯಭಾರಿಯಾಗಿರುವ ಸರ್ದಾರ್ ಕೆ ಎಂ ಪಣಿಕ್ಕರ್‌ರವರು ತಿಳಿಸಿರುತ್ತಾರೆ. ಅವರು ಚೀಣಾದಲ್ಲಿ ಇದುವರೆಗೆ ಭಾರತದ ರಾಯಭಾರಿಯಾಗಿದ್ದರು. ಭಾರತದಲ್ಲಿರುವ ಫ್ರೆಂಚ್ ಮತ್ತು ಪೋರ್ಚುಗೀಸರು ತಮ್ಮ ಸ್ವಾಸ್ತ್ಯಗಳನ್ನು ಬಿಟ್ಟು ವಾಪಸು ಹೋಗುವಂತೆ ಮಾಡಲಾಗುವುದೆಂದೂ ಅವರು ಸೂಚಿಸಿರುತ್ತಾರೆ.

ಅಬ್ಕಾರಿ ಸಮಿತಿಯೊಡನೆ ಪೌರಸಭೆಯ ಅಸಹಕಾರ

ನಗರದ ಪೌರ ಸಭಾಧಿಪತಿಗಳಾದ ಮೊ ॥ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆದ್ಯುಕುಬುಗ್ಗೇರಿಯ ಲ್ಲಿರುವ ಸರಾಬು ಅಂಗಡಿಯನ್ನು ಮತ್ತೊಂದು ಸ್ಥಳಕ್ಕೆ ವರ್ಗಾಯಿಸಬೇಕೆಂದು ಸಭೆಯು ಮಾಡಿದ ಪ್ರಾರ್ಥನೆ ಸಂಬಂಧವಾಗಿ ಸರಿಯಾದ ಸ್ಥಳ ವಹಿಸಿ ದೊರೆಯುವವರೆಗೂ ಅಂಗಡಿಯು ಅಲ್ಲೇ ಇರಬೇಕೆಂದೂ, ಪೌರಸಭೆಯು ಬೇರೆ ಸೂಕ್ತ ಸ್ಥಳವನ್ನು ಗೊತ್ತುಪಡಿಸಬೇಕೆಂದೂ ನಗರದ ಅಬ್ಕಾರಿ ಸಲಹಾ ಸಮಿತಿಯು ಮಾಡಿದ ಸೂಚನೆಯ ಬಗ್ಗೆ ಸಭೆಯು ಅತೃಪ್ತಿಯನ್ನು ಸೂಚಿಸಿ ಸಮಿತಿಯ ವರ್ತನೆ ಬಗ್ಗೆ ಪ್ರತಿಭಟನೆ ಸೂಚಿಸಲು ಆ ಸಮಿತಿಯಲ್ಲಿರುವ ತನ್ನ ಪ್ರತಿನಿಧಿಗಳನ್ನು ವಾಪಸು ಕರೆಸಿಕೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಣಯ ಮಾಡಿತು.

ಹೈದರಾಬಾದು ಗಲಭೆಯಲ್ಲಿ ೩ ಲಕ್ಷ ರೂ. ಆಸ್ತಿ ನಷ್ಟ

ಹೈದರಾಬಾದಿನಲ್ಲಿ ಮೊನ್ನೆಯಿಂದ ಶಾಂತಿಯು ನೆಲೆಸಿರುವುದೆಂದೂ, ಹಲವು ಪ್ರಮುಖ ರಸ್ತೆಗಳಲ್ಲಿ ಶಸ್ತ್ರಸಜ್ಜಿತ ಪೋಲೀಸರು ಕಾವಲು ಕಾಯುತ್ತಿರುವರೆಂದೂ ವರದಿಯಾಗಿದೆ. ಕಾರ್ಖಾನೆ, ಅಂಗಡಿ ಮುಂತಾದುವು ತಮ್ಮ ದಿನಚರಿ ವ್ಯವಹಾರಗಳನ್ನು ಆರಂಭಿಸಿವೆ. ಸಿಕಂದರಾಬಾದು ನಗರದಲ್ಲಿ ೧೧ ವಾರ್ಡುಗಳಲ್ಲಿ ಸಭೆ ಮತ್ತು ಮೆರವಣಿಗೆಗಳನ್ನು ಪ್ರತಿಬಂಧಿಸಲಾಗಿದೆ. ಎರಡು ದಿನಗಳ ಗಲಭೆಗಳಿಂದ ಇಲ್ಲಿನ ರಾಜಧಾನಿಯಲ್ಲಿ ೩ ಲಕ್ಷ ರೂ ಆಸ್ತಿಯು ನಷ್ಟವಾಗಿರುವುದೆಂದು ಗೊತ್ತಾಗಿದೆ.

ಈಜಿಪ್ಟಿನ ಪ್ರತಿ ಕ್ರಾಂತಿ ಮುಖಂಡನಿಗೆ ಗಲ್ಲು

ಈಜಿಪ್ಟಿನ ಅಲೆಕ್ಸಾಂಡ್ರಿಯಾ ಬಳಿ ಇರುವ ಕಫಾರ್ ಎಲ್ ಡವಾರ್‌ನಲ್ಲಿ ಕಳೆದ ತಿಂಗಳು ಆದ ದಂಗೆ ಸಂಬಂಧದಲ್ಲಿ ೨೦ ವರ್ಷದ ಪ್ರತಿ ಕ್ರಾಂತಿಯ ನಾಯಕ ಖಾಮಿಸ್‌ನನ್ನು ಇಂದು ಗಲ್ಲಿಗೆ ಹಾಕಲಾಗುವುದೆಂದು ವರದಿಯಾಗಿದೆ. ಮತ್ತೊಬ್ಬ ಕಾರ್ಮಿಕ ಮುಸ್ತೀ ಬಕ್ರಿ ಎಂಬುವನಿಗೆ ಅಲ್ಲಿನ ಮಿಲಿಟರಿ ನ್ಯಾಯಮಂಡಲವು ಗಲ್ಲಿನ ಶಿಕ್ಷೆ ವಿಧಿಸಿರುತ್ತದೆ.

ಪ್ರವಾಹದಲ್ಲಿ ಆನೆ ಸಮೇತ ಮರ ಕೊಚ್ಚಿಹೋಯಿತು

ಜಬ್ಬಲ್ಪುರದ ಬಳಿ ಹಿರಾಣ್ ನದಿಯಲ್ಲಿ ವಿಪರೀತ ಪ್ರವಾಹ ಬಂದು ಒಂದು ಭಾರಿ ಮರವನ್ನು, ಅದಕ್ಕೆ ಕಟ್ಟಲಾಗಿದ್ದ ಆನೆಯ ಸಮೇತ ಕೊಚ್ಚಿಕೊಂಡು ಹೋಯಿತೆಂದು ವರದಿಯಾಗಿದೆ.

ವಿವಾಹ ಮಹೋತ್ಸವ

ರಾಜಧಾನಿಯ ವೈದ್ಯರಾದ ಡಾ॥ ಎ ಜಿ ರಾಂರವರ ಪುತ್ರ ಡಾ॥ ಎ ಜಿ ರಾಜಗೋಪಾಲ್‌ರವರ ಮಗಳು ಸೌ॥ ಶಾರದಾಬಾಯಿಯವರ್ನು ಹೈದರಾಬಾದಿನ ಸಿವಿಲ್ ಇಂಜನಿಯರ್ ಶ್ರೀ ಪಿ ಸಿ ಮುದಲಿಯಾರರ ಮಕ್ಕಳೂ, ಅಲ್ಲಿನ ತಾಲ್ಲೂಕು ಸರಬರಾಜು ಅಧಿಕಾರಿಗಳೂ ಆದ ಶ್ರೀ ಪಿ ಎಂ ಭಾಸ್ಕರ್‌ರವರಿಗೆ ಕೊಟ್ಟು ನೊನ್ನೆ ರಾಜಧಾನಿಯ ತಿಮ್ಮಯ್ಯಾಚಾರ್ಯರ ಛತ್ರದಲ್ಲಿ ವಿವಾಹವನ್ನು ನೆರವೇರಿಸಿದರು.

ಮದ್ರಾಸು ಸಿನಿಮಾ ಮ್ಯಾನೇಜರಿಗೆ ಚೂರಿ ಇರಿತ

ಮದ್ರಾಸಿನ ಚಿತ್ರಾ ಟಾಕೀಸಿನ ಬಳಿ ರಂಗ ಎಂಬುವನು ದಿನವೂ ಟಿಕೆಟ್ಟುಗಳನ್ನು ಕೊಂಡು, ಅವನ್ನು ಕಾಳ ಸಂತೆಯಲ್ಲಿ ಮಾರುತ್ತಿದ್ದುದನ್ನು ಕಂಡು ಸಿನಿಮಾ ವ್ಯವಸ್ಥಾಪಕ ಸುಂದರಂ ಎಂಬುವರು ಅವನನ್ನು ಪೋಲೀಸಿಗೆ ಹಿಡಿದು ಕೊಡುವುದಾಗಿ ಎಚ್ಚರಿಕೆ ಇತ್ತರೆಂದೂ, ಆತನು ಇನ್ನಿಬ್ಬರ ಸಹಾಯದೊಡನೆ ಚೂರಿಯಿಂದ ಸುಂದರಂರವರನ್ನು ಇರಿದನೆಂದೂ, ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ.

ಮದ್ರಾಸಿನಲ್ಲಿ ೧೧೧ ವರ್ಷದ ಮುದುಕಿಯ ಮರಣ

ಮದ್ರಾಸಿನ ಬಹು ಹಳೆಯ ನಿವಾಸಿ ಎಂದು ಹೇಳಲಾದ ಮರ್ಗಾಬಾಯಿ ಎಂಬಾಕೆಯು ತನ್ನ ೧೧೧ ನೇ ವಯಸ್ಸಿನಲ್ಲಿ ನೊನ್ನೆ ಮೃತಪಟ್ಟಳು. ಆಕೆಗೆ ೫೩ ಜನ ಮೊಮ್ಮಕ್ಕಳಿರುವರು. ಸಾಯುವವರೆಗೆ ಆಕೆಯು ಕೋಲನ್ನು ಊರದೇ ನಡೆಯುತ್ತಿದ್ದಳೆಂದು ಹೇಳಲಾಗಿದೆ.

ಮುಖ್ಯ ಮಂತ್ರಿಗಳು ಕಾಂಗ್ರೆಸ್ ಅಧ್ಯಕ್ಷರಾಗುವುದಕ್ಕೆ ವಿರೋಧ

ಮೈಸೂರಿನ ಶ್ರೀ ಎಂ ಆರ್ ಸಿ ಬಸಪ್ಪನವರು ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂ ಮತ್ತು ಪ್ರಧಾನ ಕಾರ್ಯದರ್ಶಿ, ಶ್ರೀನಿವಾಸ ಮಲ್ಯರವರುಗಳಿಗೆ ತಂತಿ ಕಳುಹಿಸಿ, ಹಲವು ಎ.ಐ ಸಿ ಸಿ ಸದಸ್ಯರು ಮತ್ತು ಮುಖ್ಯ ಮಂತ್ರಿಗಳು ಪ್ರತಿಪಾದಿಸುತ್ತಿರುವಂತೆ ಪ್ರಾಂತೀಯ ಮುಖ್ಯ ಮಂತ್ರಿಗಳು ಆಯಾ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರಾಗಬೇಕೆಂಬ ಸಲಹೆಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಒಬ್ಬರೇ ಆ ಎರಡು ಸ್ಥಾನಗಳನ್ನೂ ಹೊಂದುವುದು ಪ್ರಜಾ ಪ್ರಭುತ್ವದ ತತ್ವಗಳಿಗೆ ವಿರೋಧವಾದುದೆಂದೂ, ಎರಡು ಸ್ಥಾನಗಳಿಗೆ ಬೇರೆ ಬೇರೆಯವರಿದ್ದು ಪಕ್ಷವು ನೀಡಿರುವ ಭರವಸೆ ಮತ್ತು ಅದರ ನೀತಿಗಳಿಗೆ ಅನುಸಾರವಾಗಿ ಮುಖ್ಯಮಂತ್ರಿಯವರು ನಡೆಯುತ್ತಿರ ವರೇ ಎಂಬುದನ್ನು ಪಕ್ಷದ ಅಧ್ಯಕ್ಷರು ಪರಿಶೀಲಿಸುತ್ತಿರಬೇಕೆಂದೂ ಅವರು ತಿಳಿಸಿರುತ್ತಾರೆ.

ದರೋಡೆಕೋರರಿಂದ ೪ ಜನರ ಕೊಲೆ

ಅಂಬಾಲಾ ಬಳಿ ಬರಾರಾ ಎಂಬ ಹಳ್ಳಿಯಲ್ಲಿ ಕಳೆದ ಬುಧವಾರ ರಾತ್ರಿ ಹಲವು ದರೋಡೆಕೋರರು ಮುಖವಾಡವನ್ನು ಧರಿಸಿ, ನಾಲ್ಕು ಜನರನ್ನು ಗುಂಡಿನಿಂದ ಹೊಡೆದು ಸಾಯಿಸಿ, ಇತರ ನಾಲ್ವರನ್ನು ಗಾಯಗೊಳಿಸಿ, ತರುವಾಯ ಭಾಂಗ್ರ ಎಂಬ ಸ್ಥಳವನ್ನು ಕೊಳ್ಳೆಹೊಡೆದರೆಂದೂ ಹೇಳಲಾಗಿದೆ.

ಸೈಕಲ್ಲಿನಿಂದ ಬಿದ್ದವರಿಗೆ ಪೌರಸಭೆಯ ಪರಿಹಾರ

ಗ್ವಾಲಿಯರಿನ ವಕೀಲರೊಬ್ಬರು ಒಂದು ದಿನ ರಾತ್ರಿ ಬೈಸಿಕಲ್ಲಿನ ಮೇಲೆ ರಸ್ತೆಯಲ್ಲಿ ಹೋಗುತ್ತಿದ್ದಾಗ, ಕತ್ತಲಲ್ಲಿ ಒಂದು ಹಳ್ಳಕ್ಕೆ ಬಿದ್ದು ಗಾಯಗೊಂಡು, ಆವರ ಬೈಸಿಕಲ್ಲಿಗೂ ಜಖಂ ಆದುದರಿಂದ ಅದಕ್ಕಾಗಿ ಪೌರಸಭೆಯವರ ಮೇಲೆ ಕೋರ್ಟಿನಲ್ಲಿ ದಾವ ಹೂಡಿ, ೭೫ ರೂ ಪರಿಹಾರ ಪಡೆದರೆಂದು ವರದಿಯಾಗಿದೆ.

೭೦೦ ಜನರಿಗೆ ಒಂದು ಶಾಲೆ

ಸಂಸ್ಥಾನದಲ್ಲಿ ಪ್ರತಿ ೩೫೭ ಚದುರ ಮೈಲಿ ಮತ್ತು ೭೦೦ ಜನರಿಗೆ ಒಂದು ಶಾಲೆ ಇರುವುದೆಂದೂ, ಪ್ರತಿ ೧೩ ಪ್ರಾಥಮಿಕ ಶಾಲೆಗಳಿಗೆ ಒಂದು ಮಾಧ್ಯಮಿಕ ಶಾಲೆ ಮತ್ತು ಮೂರು ಮಾಧ್ಯಮಿಕ ಶಾಲೆಗಳಿಗೆ ಒಂದ ಪ್ರೌಢ ಶಾಲೆಯಿರುವುದೆಂದೂ ತಿಳಿದುಬಂದಿದೆ.

ಮಿಡತೆಗಳಿಂದ ರೈಲಿಗೆ ಅಡ್ಡಿ

ಕರಾಚಿಯಿಂದ ನೊನ್ನೆ ಹೊರಟ ಗೂಡ್ಸ್ ರೈಲು ಅಲ್ಲಿಗೆ ೫೦ ಮೈಲಿ ದೂರದಲ್ಲಿ ಒಂದು ಕಡೆ ನಿಲ್ಲಬೇಕಾಯಿತೆಂದೂ ರಸ್ತೆಯನ್ನು ಮಿಡತೆಗಳ ಸಮೂಹವು ಮುತ್ತಿಗೆ ಹಾಕಿದ್ದುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ. ಮಿಡತೆ ವಿರುದ್ಧವಾಗಿ ಮಲಿಟರಿಯವರು ಕಾರ್ಯಕ್ರಮವನ್ನು ತೆಗೆದುಕೊಂಡನಂತರ, ಒಂದು ಗಂಟೆ ಮೇಲೆ ರೈಲು ಚಲಿಸಿತು.

ಸಂಗೀತೋತ್ಸವ

ರಾಜಧಾನಿಯ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ನಾಳೆ ಸಂಜೆ ೬ ಘಂಟೆಗೆ ವಿದ್ಯಾ ಗಣಪತಿ ಸಂಗೀತೋತ್ಸವದ ಅಂಗವಾಗಿ ವಿ॥ ಬಿ ಕೆ ಪದ್ಮನಾಭರಾವ್‌ರವರ ಸಂಗೀತವು ನಡೆಯುವುದು. ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ ಆರ್ ತಿಮ್ಮರಾಯ ಶೆಟ್ಟರು ಅಧ್ಯಕ್ಷತೆ ವಹಿಸುವರು.

ಅಮೃತಮಹಲ್ ಕಾವಲಿನಲ್ಲಿ ಉಚಿತ ಮೇವು

ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ ಮತ್ತು ತುಮಕೂರು ಜಿಲ್ಲೆಗಳ ಅಮೃತ ಮಹಲ್ ಕಾವಲಿನ ೨೪,೬೦೦ ಎಕರೆ ಜಮೀನುಗಳಲ್ಲಿ ಸಾರ್ವಜನಿಕರು ದನಕರುಗಳನ್ನ ಉಚಿತವಾಗಿ ಮೇಯಿಸಲು ಸರ್ಕಾರದವರು ಅವಕಾಶ ಕಲ್ಪಿಸಿರುತ್ತಾರೆ.

ಉಪನ್ಯಾಸಗಳು

ರಾಜಧಾನಿಯ ತಿಪ್ಪಸಂದ್ರದಲ್ಲಿ ರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ೩ನೇ ಉತ್ಸವ ಕೇಂದ್ರದಲ್ಲಿ ಈ ದಿನದಿಂದ ೧೧ನೇ ತಾ॥ ವರೆಗೂ ಪ್ರತಿ ಸಂಜೆ ೬॥ ಗಂಟೆಗೆ ವಿದ್ವಾಂಸರುಗಳಿಂದ ಉಪನ್ಯಾಸಗಳು ನಡೆಯುವವು

ವಾರ ಭವಿಷ್ಯ

ತಾ|| ೭-೯-೫೨ ರಿಂದ ೧೪-೯-೫೨ ರ ವರೆಗೆ

ಮೇಷ — ಮಾನಸಿಕ ಸ್ಥಿತಿ ನೆಟ್ಟಗಿಲ್ಲ ಅಪಮಾನಕರ ನೌಕರಿ ಲಭ್ಯ, ವ್ಯಾಪಾರ, ವ್ಯವಹಾರಗಳಲ್ಲಿ ತೊಂದರೆ ಪತ್ನಿಯೊಡನೆ ಭಿನ್ನತೆ ತಾ|| ೧೦, ೧೨ ಅಪ್ರಿಯ್ಯರ ಸಮಾಚಾರ, ಚಿಂತಾ ನಿವಾರಣೆ

ವೃಷಭ — ಪ್ರಕ್ಷುಬ್ಧ ಮನಸ್ಥಿತಿ ಪತ್ನಿಗೆ ಖಾಯಿಲೆ ವ್ಯಾಪಾರಾದಿಗಳ ಸ್ಥಿತಿ ಕೆಡುವುದು. ಅಳತೆ ಮೀರಿದ ಖರ್ಚು ಕಲಹ ತಾ|| ೭, ೮ ಶೋಕ ವಾರ್ತೆ, ಗುಪ್ತ ಚಿಂತೆ

ಮಿಥುನ — ಆರೋಗ್ಯ ನೆಟ್ಟಗೆ ಮನಸ್ಸಿನಲ್ಲಿ ಹೊಸ ಯೋಜನೆ ಹಣ ಕಾಸಿನ ಸ್ಥಿತಿ ಉತ್ತಮ ವ್ಯಾಪಾರಾದಿಗಳಲ್ಲಿ ಮಿತ್ರರ ಸಹಾಯ ಸುಖ ಪ್ರವಾಸ ತಾ|| ೭,೮ ಮಹತ್ಕಾರ್ಯಕ್ಕೆ ಒಳ್ಳೇ ದಿನ

ಕರ್ಕ — ಆರೋಗ್ಯ ನೆಟ್ಟಗೆ ಹಣ ಕಾಸಿನ ಸ್ಥಿತಿ ಸುಧಾರಣೆ ತಾ|| ೧೧, ೧೨ ಅತಿಥಿಗಳ ಆಗಮನ, ಖರ್ಚು

ಸಿಂಹ — ವ್ಯರ್ಥ ಕಲಹ ಆರೋಗ್ಯ ನೆಟ್ಟಗಿರದು ವಾಹನಗಳಿಂದ ಅಪಘಾತ, ಅಗ್ನಿ ಶಸ್ತ್ರಗಳಿಂದ ಭಯ ತಾ|| ೭, ೮ ಇದ್ದುದರಲ್ಲಿ ಮನಶ್ಶಾಂತಿ, ಸಜ್ಜನರ ಸಹಾನುಭೂತಿ

ಕನ್ಯಾ — ನವ ಚೈತನ್ಯ ಪ್ರಿಯಜನರ ಭೇಟಿ ಕೋರ್ಟು ಕಾರ್ಯ ಅನುಕೂಲ ವ್ಯಾಪಾರಾದಿಗಳಲ್ಲಿ ಅಡಚಣೆ ಇರದು ತಾ|| ೯, ೧೦ ಅಲ್ಪ ಪ್ರವಾಸ ಮಹತ್ವದ ಪತ್ರಾಗಮನ

ತುಲಾ — ವಿಶೇಷ ಖರ್ಚು ವ್ಯಾಪಾರಾದಿಗಳಲ್ಲಿ ಸ್ಥಿತಿ ಉತ್ತಮ ಪ್ರವಾಸ ಯೋಗ. ತಾ|| ೯, ೧೦ ಸಂಕೋಚ, ಚರ್ಚೆ

ವೃಶ್ಚಿಕ — ೬ ನೇ ತಿಂಗಳಿಂದ ಆರು ಆರೋಗ್ಯದ ಕಡೆ ಹೆಚ್ಚು ಗಮನವಿಡಿ ಪ್ರವಾಸ ಬೇಡ ಖರ್ಚು ಹೆಚ್ಚು ಸಾಲ ಕೊಡ ಹೋಗಬೇಡಿರಿ. ತಾ|| ೧೧ ವ್ಯಾಪಾರ, ಉದ್ಯೋಗಗಳ ಬಗ್ಗೆ ಚಿಂತೆ, ಶತ್ರು ಪೀಡೆ

ಧನು — ಯೋಜಿತ ಕಾರ್ಯ ಸಿದ್ಧಿಗೆ ಅಡಚಣೆ ಮನಸ್ತಾಪ ಸಂಭವ ಕೈ ಕಾಲಿಗೆ ಜಖಂ ವಾಹನದಿಂದ ಭಯ ತಾ|| ೯, ೧೦ ನೇತ್ರ ಪೀಡೆ, ವ್ಯಾಪಾರ,ವ್ಯವಹಾರಗಳಲ್ಲಿ ಹಾನಿ,ಆರೋಪ

ಮಕರ — ಸುಖ ಪ್ರವಾಸ ಆರೋಗ್ಯ ನೆಟ್ಟಗೆ ಪ್ರಿಯ ಮಿತ್ರರ ಭೇಟಿ ಶುಭ ವಾರ್ತೆ ವ್ಯಾಪಾರಾದಿಗಳಲ್ಲಿ ಆಕಸ್ಮಿಕ ಲಾಭ ತಾ|| ೭, ೮ ಅಲ್ಪ ಗೊಂದಲ, ಖರ್ಚು

ಕುಂಭ — ಇಷ್ಟಪ್ರದ ಗ್ರಹಮಾನ ಆರೋಗ್ಯ ನೆಟ್ಟಗೆ ನೌಕರಿಯಲ್ಲಿ ಲಾಭ ತಾ|| ೭, ೮ ಮಹತ್ವದ ಕರಾರಿಗೆ ಶುಭ ದಿನ, ಆನಂದದಾಯಕ ಪತ್ರ

ಮೀನ — ಮಹತ್ವದ ಕಾರ್ಯ ಸಿದ್ಧಿ ಆಪ್ತರ ಸಹವಾಸ ಧಾರ್ಮಿಕ ಕಾರ್ಯ ಜರುಗುವುದು ವ್ಯಾಪಾರಾದಿಗಳಲ್ಲಿ ಲಾಭ ಸುಖ ಪ್ರವಾಸ ತಾ|| ೧೧, ೧೨ ವಿಶೇಷ ಖರ್ಚು, ಔಷಧ

ಕಣ್ಣಿನ ಗುಡ್ಡೆ ಬದಲು ಪ್ಲಾಸ್ಟಿಕ್ ಕನ್ನಡಿ

ಕಣ್ಣಿಗೆ ಪೂರೆ ಬಂದು ಕುರುಡಾಗುವುದನ್ನು ತಪ್ಪಿಸಲು ಲಂಡನ್ನಿನ ನೇತ್ರ ಶಸ್ತ್ರ ವೈದ್ಯರಾದ ಡಾ|| ಹೆರಾಲ್ಡ್ ರಿಡ್ಲೆಯವರು ಕಣ್ಣಿನ ಗುಡ್ಡೆಗಳ ಬದಲು ಪ್ಲಾಸ್ಟಿಕ್ಕಿನಿಂದ ಮಾಡಿದ ಸ್ವಚ್ಛವಾದ ಕನ್ನಡಿಗಳನ್ನು ಜೋಡಿಸಿ, ಕಣ್ಣು ಚೆನ್ನಾಗಿ ಕಾಣಿಸುವಂತೆ ಚಿಕಿತ್ಸೆ ನಡೆಸಿರುವರೆಂದು ಹೇಳಲಾಗಿದೆ ಈಗಾಗಲೇ ಸುಮಾರು ೭೫ ಮಂದಿಗೆ ಇಂತಹ ಚಿಕಿತ್ಸೆಯಾಗಿದೆ

ಸಿನಿಮಾ ಮುಂತಾದ ಮನರಂಜನೆ ಕಟ್ಟಡಗಳಿಗೆ ಉಕ್ಕಿನ ಸರಬರಾಜಿಲ್ಲ

ಸಿನಿಮಾ, ನೃತ್ಯಶಾಲೆ ರಂಗ ಮಂಟಪ, ಸ್ಟುಡಿಯೋ ಮುಂತಾದ ಕಟ್ಟಡಗಳನ್ನು ಕಟ್ಟಲು ಉಕ್ಕಿನ ಸರಬರಾಜನ್ನು ಸರ್ಕಾರದವರು ತಾತ್ಕಾಲಿಕವಾಗಿ ನಿಲ್ಲಿಸಿರುತ್ತಾರೆ ವಿದ್ಯಾಭ್ಯಾಸ ವೈದ್ಯಕೀಯ, ಮತ ಮತ್ತು ಸರ್ಕಾರದ ಸ್ಥಳೀಯ ಸಂಸ್ಥೆಗಳ ಭವನಗಳಿಗೂ ಉಕ್ಕಿನ ಉಪಯೋಗದ ನಿರ್ಬಂಧವನ್ನು ಸಡಿಲಿಸಿರುತ್ತಾರೆ

ಹನುಮಂತಯ್ಯನವರು ತಿದ್ದುಪಡಿ ತರಕೂಡದೆಂದು ನಿರ್ಧಾರ

ಭಾರತದ ಪ್ರಧಾನಿಯೂ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ನೆಹರೂ ರವರ ಸ್ಥಾನದಲ್ಲಿ ಮುಖ್ಯಮಂತ್ರಿಗಳೇ ಆಯಾ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಬೇಕೆಂಬ ಸೂಚನೆ ಶ್ರೀ ಕೆ ಹನುಮಂತಯ್ಯನವರು ಕಳುಹಿಸಿದ ತಿದ್ದುಪಡಿಯನ್ನು ಅವರು ಎ ಐ ಸಿ ಸಿ ಯಲ್ಲಿ ಮಂಡಿಸಕೂಡದೆಂದು ನೆನ್ನೆ ನಡೆದ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ನಿರ್ಣಯ ಮಾಡಲಾಯಿತೆಂದು ಗೊತ್ತಾಗಿದೆ

ಆಕಾಶವಾಣಿ ಕಾರ್ಯಕ್ರಮ

ರಾಜಧಾನಿಯ ಆಲ್ ಇಂಡಿಯಾ ರೇಡಿಯೋದವರು ಈ ರಾತ್ರಿ ೮ ಗಂಟೆಗೆ ದೆಹಲಿಯಲ್ಲಿ ಕೇಂದ್ರ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮಾಡುವ ಭಾಷಣವನ್ನು ಪುನಃ ಪ್ರಸಾರ ಮಾಡುವರು ನಾಳೆ ರಾತ್ರಿ ೭ ಗಂಟೆಗೆ ಮೈಸೂರು ರೇಡಿಯೋದವರಿಂದ ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ ಎಂ ಪೂಣಾಚರವರ ಭಾಷಣದ ಪ್ರಸಾರವು ಏರ್ಪಾಡಾಗಿದೆ

ಪರ್ಷಿಯಾ ಸೈನಿಕರಿಗೂ, ಕಾರ್ಮಿಕರಿಗೂ ಘರ್ಷಣೆ

ಪರ್ಷಿಯದ ರಾಜಧಾನಿ ಟೆಹರಾನಿಗೆ ಪೂರ್ವದಲ್ಲಿ ಸಿಮ್ನಾನ್ ಎಂಬಲ್ಲಿ ಮುಷ್ಕರ ಹೂಡಿರುವ ಕಾರ್ಖಾನೆ ಕೆಲಸಗಾರರಿಗೂ, ಸೈನಿಕರಿಗೂ ನೆನ್ನೆ ಘರ್ಷಣೆ ನಡೆದು, ೫ ಮಂದಿ ಮೃತಪಟ್ಟು, ೧೨ ಜನರು ಗಾಯಗೊಂಡರೆಂದು ವರದಿಯಾಗಿದೆ

ನಗರ ಆಹಾರ ಸಲಹಾ ಸಮಿತಿ ಸದಸ್ಯರಿಗೆ ಸತ್ಕಾರ

ನಿವೃತ್ತರಾಗಲಿರುವ ಮೈಸೂರು ನಗರದ ಆಹಾರ ಸಲಹಾ ಸಮಿತಿ ಸದಸ್ಯರ ಗೌರವಾರ್ಥವಾಗಿ ರೇಷನಿಂಗ್ ಅಧಿಕಾರಿಗಳಾದ ಶ್ರೀ ಹೆಚ್ ಜಿ ವಿಜಯರಾಘವ ರೆಡ್ಡಿಯವರು ನೆನ್ನೆ ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು ತಮಗೆ ಇತ್ತ ಸಹಕಾರಕ್ಕಾಗಿ ಶ್ರೀ ರೆಡ್ಡಿಯವರು ಸದಸ್ಯರನ್ನು ವಂದಿಸಿದರು ಅತಿಥಿಗಳ ಪರವಾಗಿ ಶ್ರೀ ಹೆಚ್ ಸುಬ್ಬರಾಯರು ಕೃತಜ್ಞತೆಯನ್ನು ಸೂಚಿಸಿದರು.

೩೦೯೧ ಜನರಿಗೆ ಉದ್ಯೋಗ

ಸಂಸ್ಥಾನದಲ್ಲಿ ಉದ್ಯೋಗ ಒದಗಿಸುವ ಕೇಂದ್ರವು ಸ್ಥಾಪನೆಯಾದಂದಿನಿಂದ ಕಳೆದ ಆಗಸ್ಟ್ ತಿಂಗಳವರೆಗೆ ೬೪,೩೭೪ ಜನರು ಉದ್ಯೋಗಗಳಿಗಾಗಿ ಅರ್ಜಿಗಳನ್ನು ಸಲ್ಲಿಸಿದ್ದರೆಂದೂ,ಇವುಗಳಲ್ಲಿ ೨೦,೩೦೯ ಅರ್ಜಿಗಳಿಗೆ ಶಿಫಾರಸು ಮಾಡಲಾಗಿತ್ತೆಂದೂ, ೩೦೯೧ ಮಂದಿಗೆ ಉದ್ಯೋಗಗಳು ದೊರೆತುವೆಂದೂ ವರದಿಯಾಗಿದೆ

ಹರಿಕಥಾ ವಿದ್ವಾಂಸರಿಗೆ ಕಂಠಾಭರಣ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಈ ಸಂಜೆ ೮ ಗಂಟೆಗೆ ಬೆಂಗಳೂರಿನ ಶ್ರೀ ಪಿ ರಾಮಸ್ವಾಮಿ ನಾಯ್ಡುರವರಿಂದ ಲವಕುಶ ಎಂಬ ಹರಿಕಥೆಯು ದರ್ಬಾರ್ ಭಕ್ಷಿ ಶ್ರೀ ಹೆಚ್ ಎಲ್ ದೇವರಾಜ ಅರಸಿನವರ ಸಮ್ಮುಖದಲ್ಲಿ ನಡೆಯುವುದು ಈ ನಾಯ್ಡುರವರಿಗೆ ಬಂಗಾರದ ಕಂಠಾಭರಣವೊಂದನ್ನು ಅರ್ಪಿಸಲಾಗುವುದು

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

* ಅತ್ಯುತ್ತಮವಾದ ಒಗೆಯುವ ಸಾಬೂನು
* ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ, ಮತ್ತು ಮಿಶ್ರಿತವಲ್ಲದುದು.
* ಹೆಚ್ಚು ತೊಂದರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ
* ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಪತ್ನಿ, ಪುತ್ರಿಯರನ್ನು ಕೊಂದು ಕಾನ್‌ಸ್ಟೇಬಲ್ಲನ ಆತ್ಮಹತ್ಯೆ

ತಿರುಚಿರಾಪಳ್ಳಿಯ ರಿಸರ್ವ್ ಕಾನ್‌ಸ್ಟೇಬಲ್ ಸೆಂಗುಪಿಳ್ಳೆ ಎಂಬುವನು ಜೀವನದಲ್ಲಿ ಜಿಗುಪ್ಸೆ ಹೊಂದಿ, ನೆನ್ನೆ ರಾತ್ರಿ ರೋಷಗೊಂಡು ಮನೆಯ ಹೊರಗಿದ್ದ ತನ್ನ ಪತ್ನಿಯನ್ನು ಒಳಕ್ಕೆ ಕರೆದನೆಂದೂ, ಆಕೆಯನ್ನು ಹಿಂಬಾಲಿಸಿ ಅವಳ ತಾಯಿಯೂ ಮನೆಗೆ ಬರಲಾಗಿ ಒಳಗಿನಿಂದ ಬಾಗಿಲು ಅಗಳೆ ಹಚ್ಚಿ ಅವರಿಬ್ಬರನ್ನೂ ಗುಂಡಿನಿಂದ ಹೊಡೆದು ಸಾಯಿಸಿ, ತಾನೂ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೨-೩-೦	೨೦
ಎಳ್ಳು	೬೮ ೦ ೦	೭೭-೧-
ಹುಚ್ಚೆಳ್ಳು	೫೦ ೪ ೦	೫೧ ೧೨
ಹರಳು ಬೀಜ	೫೪ ೧೨ ೦	
ಹುರುಳಿ	೫೨ ೧೦ ೮	೫೪ ೮
ಹೆಸರು	೬೫ ೪-೦	
ಹೊಂಗೇಬೀಜ	೨೦ ೨ ೦	೨೫ ೪ ೦
ಉದ್ದು	೬೩ ೧೨ ೧	
ಅವರೆ	೬೩ ೧೦ ೦	
ಕಲಸಂದೆ	೭೨-೮-೦	೬೫ ೦
ಮೆಣಸಿನಕಾಯಿ		
ಮಣ ೧ಕ್ಕೆ	೧೫ ೬ ೦	೧೫ ೧೪ ೦
[illegible]	೫ ೧೩ ೦	೬-೩ ೦
ಸೀಗೆಕಾಯಿ	೫-೮ ೦	
[illegible]	೨-೮-೧	
ತೆಂಗಿನಕಾಯಿ ೧೧೦೦	೧೩೦ ೦ ೦	೨೦೬ ೦

ಹರಾಜು ನೋಟೀಸು

ಈ ಕೆಳಗೆ ನಮೂದಿಸುವ ಪದ್ಮಾವತಿ ಸ್ವತ್ತನ್ನು ಮೈಸೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟು 51-52 ನೇ ಸಾಲು ಜಾರಿ 108ನೇ ನಂಬರು ಕೇಸಿನಲ್ಲಿ ಆಗಿರುವ ಆರ್ಡರಿನಂತೆ ತಾರೀಖು 9-9-1952 ನೇ ದಿವಸ ಬೆಳಗ್ಗೆ ಹನ್ನೊಂದು ಗಂಟೆ ಆಗಾಯ್ತು ಸ್ವತ್ತಿನ ಸ್ಥಳದಲ್ಲಿ ಹರಾಜು ಮಾಡಲಾಗುತ್ತೆ ಯಾರು ಬೇಕಾದರೂ ಬಿಡ್ಡು ಮಾಡಬಹುದು:-ಪದ್ಮಾವತಿ ಮೈಸೂರು ಸಿಟಿ ನರಸಿಂಹರಾಜ ಮೊಹಲ್ಲಾ ರಾಜಪುಟ್ ಬ್ಲಾಕಿನಲ್ಲಿರುವ 4662 ನೇ ಡೋರ್ ನಂಬರು ಮನೆ. ಲೈಟು, ನಲ್ಲಿ ಮತ್ತು ಕಾರಸಿ ಇವೆ

ಮೈಸೂರು 20 5-52 } (ರುಜು) ರಾಜಾರಾವ್ 5 ನೇ ಪ್ರತಿವಾದಿ

ರಾಜಕಮಲ್, ಮೈಸೂರು

5-9 52 ರಿಂದ : 3 ನೇ ವಾರ

ಶ್ರೀನಿವಾಸ ಕಲ್ಯಾಣ

ಪಾತ್ರ ಅಭಿನಯದಲ್ಲಿ ಕರ್ನಾಟಕ ಪ್ರತಿಮಾದೇವಿ, ಹರಿಣಿ, ಜಯಶ್ರೀ ಎ ಕೆ ಶ್ರೀನಿವಾಸರಾವ್, ವಿಮಲಾನಂದದಾಸ್, ವೀರಭದ್ರಪ್ಪ ಕೊಟ್ಟೂರು ಬಸಪ್ಪ ಮಹಾದೇವ ಮಹಾಬಲರಾವ್

Edited, Printed and Published by A R Nagaraju at Sadhvi Press, D Subbiah Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೮-೯-೧೯೫೨ [ಸಂಚಿಕೆ ೩೩

ಈಜಿಪ್ಟಿನಲ್ಲಿ ಮಿಲಿಟರಿ ಸರ್ಕಾರದ ಸ್ಥಾಪನೆ

ಮಹಾತ್ಮ ಗಾಂಧಿ ಸ್ಮಾರಕ ಸ್ತಂಭ

ಶ್ರೀಮನ್ಮಹಾರಾಜರಿಂದ ಅನಾವರಣ

ಮೈಸೂರು ೮

ರಾಜಧಾನಿಯ ಗಾಂಧಿ ಚೌಕದಲ್ಲಿ ನಿರ್ಮಿಸಲಾಗಿರುವ ಮಹಾತ್ಮಾ ಗಾಂಧಿ ಸ್ಮಾರಕ ಸ್ತಂಭದ ಅನಾವರಣ ಮಹೋತ್ಸವವನ್ನು ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ನೆರವೇರಿಸಿದರು. ಇದಕ್ಕಾಗಿ ಪೌರಸಭೆಯವರು ಒಂದು ಭಾರಿ ಸಮಾರಂಭವನ್ನು ಏರ್ಪಡಿಸಿದ್ದರು. ಮೂರೂವರೆ ವರ್ಷಗಳ ಹಿಂದೆ ಸರ್ದಾರ್ ವಲ್ಲಭಾಯಿ ಪಟೇಲರಿಂದ ಶಂಕುಸ್ಥಾಪನೆ ಮಾಡಲ್ಪಟ್ಟ ಈ ಸ್ತಂಭದ ಕಾರ್ಯವು ಈಗ ತಾನೇ ಪೂರೈಸಿ, ಗಾಂಧಿ ಚೌಕದಲ್ಲಿ ಮಹಾತ್ಮಾ ಗಾಂಧಿಯವರ ಸಂದೇಶವನ್ನು ಸಾರುತ್ತಾ ಇಂದಿನಿಂದ ಚೌಕದ ಹೆಸರನ್ನು ಅನ್ವರ್ಥನಾಮಗೊಳಿಸಿ ಮಾಡಿ ವಿರಾಜಿಸುತ್ತಾ ಇದೆ ತ್ತದೆ.

ಶ್ರೀಮಂತಿಗಳಾದ ಇಂದಿರಮ್ಮ ಮತ್ತು ಸರೋಜಮ್ಮನವರಿಂದ ಪ್ರಾರ್ಥನೆಯೂ, ಶ್ರೀಮತಿ ಸ್ವಮಂತಕಮಣಿಯವರಿಂದ ಪುಷ್ಪ ಮಾಲಿಕಾ ಅರ್ಪಣವೂ ಆದ ನಂತರ ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿ ರಾಯರು ಶ್ರೀಮನ್ಮಹಾರಾಜರವರಿಗೆ ಬಿನ್ನವತ್ತಳೆಯನ್ನು ಓದಿ ರಜತಕರಂಡದಲ್ಲಿ ಸಮರ್ಪಿಸಿದರು. ಸ್ಮಾರಕಸ್ತಂಭದ ಸ್ಥಾಪನೆಗೆ ನಗರದ ಗಣ್ಯ ವರ್ತಕರಾದ ಶ್ರೀ ಸಿ ಆರ್ ವೆಂಕಟಸುಬ್ಬಯ್ಯ ಶೆಟ್ಟರಿಂದ ೧೨ ಸಾವಿರ ರೂ., ಸರ್ಕಾರದವರಿಂದ ೩,೫೦೦ ರೂ., ಮತ್ತು ಪೌರಸಭೆಯವರಿಂದ ೩,೫೦೦ ರೂ. ಒದಗಿರುವ ಅಂಶವನ್ನು ಅವರು ಬಿನ್ನವತ್ತಳೆಯಲ್ಲಿ ಉಲ್ಲೇಖ ಮಾಡಿದರು.

ಶ್ರೀ ಸಿ ಆರ್ ವೆಂಕಟಸುಬ್ಬಯ್ಯ ಶೆಟ್ಟರು ಪ್ರಭುಗಳಿಗೆ ಮಾನಪತ್ರವನ್ನು ಬೆಳ್ಳಿಯಿಂದ ಕೆತ್ತಿದ ಅಶೋಕ ಸ್ತಂಭದ ಮತ್ತು ಗಂಧದ ಮರದ ಚಿತ್ರ ಸಹಿತ ಸಮರ್ಪಿಸಿದರು.

ಶ್ರೀಮನ್ಮಹಾರಾಜರು ಈ ಕೆಳಗೆ ಕಂಡಂತೆ ಭಾಷಣ ಮಾಡಿ ಸ್ಮಾರಕ ಸ್ತಂಭವನ್ನು ಅನಾವರಣ ಮಾಡಿದರು —

ಈ ಸುದಿನವು, ಮೈಸೂರು ನಗರದ ಇತಿಹಾಸದಲ್ಲೇ ಅತ್ಯಂತ ಪವಿತ್ರವಾದ ದಿನಗಳಲ್ಲೊಂದೆಂದು ಧಾರಾಳವಾಗಿ ಹೇಳಬಹುದು. ಮೈಸೂರು ನಗರದ ಇತಿಹಾಸದಲ್ಲಿ, ಇದು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಶ್ರೇಷ್ಠ ದಿನವೆಂದು ಹೇಳಿದರೆ ಅದರಲ್ಲಿ ಅತಿಶಯೋಕ್ತಿಯಿಲ್ಲ.

ನಮ್ಮ ರಾಷ್ಟ್ರದ ತಂದೆಯೆನಿಸಿದ್ದ ಮಹಾತ್ಮ ಗಾಂಧಿಯವರು ಸಮಸ್ತರಲ್ಲೂ ಸಹೋದರರಾಗಿದ್ದ ಕರ್ಮಯೋಗಿಗಳು. ಅವರು ಎಲ್ಲ ಸ್ವಪಕ್ಷದವರೆಂಬ ಅಥವಾ ಪ್ರತಿಪಕ್ಷದವರೆಂಬ ಭೇದವನ್ನೇ ಅರಿಯದೆ ಎಲ್ಲರನ್ನೂ ಸಮ್ಯಕ್ ಪ್ರೇಮದಿಂದ ಕಾಣುತ್ತಿದ್ದ ಮಹಾ ಪುರುಷರು. ಮಹಾತ್ಮಾ ಗಾಂಧಿಯವರು ಜೀವಿಸಿದ್ದುದರಿಂದಲೇ ಮತ್ತು ಜೀವಿಸಿ ತೋರಿದ ಹುಟ್ಟಿಗೆ ಭಾಜನರಾದವರೇ ಇತಿಹಾಸದಲ್ಲಿ, ವಿಶ್ವಾಸ ತೋರಿಸಿದ ಕ್ಷಮಾಶೀಲರು ಮಹಾತ್ಮಾ ಗಾಂಧಿಯವರು. ಈ ವಿಷಯದಲ್ಲಿ ಮಹಾತ್ಮಾ ಗಾಂಧಿಯವರನ್ನು ಬುದ್ಧ, ಸಾಕ್ರಟೀಸ್, ಗೌತಮ ಬುದ್ಧ, ಯೇಸು ಕ್ರಿಸ್ತ, ಮುಂತಾದ ವಿಶ್ವಪ್ರೇಮಿಗಳ ಹೆಸರು ಬರುತ್ತದೆ. ಮಹಾತ್ಮಾ ಗಾಂಧಿಯವರೂ ಅವರ ಶ್ರೇಣಿಗೆ ಸೇರಿದ ಪುಣ್ಯ ಶ್ಲೋಕರೆಂದು ತೋರಿ, ಮನಸ್ಸಿಗೆ ಹರ್ಷವುಂಟಾಗುತ್ತದೆ.

ಇತರರು ಬುದ್ಧನನ್ನು ಪ್ರೇಮಿಸುತ್ತಿದ್ದ ಕಾಲದಲ್ಲೂ ಅವರು ಮಹಾತ್ಮರೆಂಬುವುದನ್ನು ಅರಿತಿದ್ದರು. ಪೂಜ್ಯರಾದ ಗಾಂಧಿಯವರನ್ನು ದ್ವೇಷಿಸುತ್ತಿದ್ದವರು ಕೂಡ ಅವರು ಮಹಾತ್ಮರೆಂಬುವುದನ್ನು ಮರೆಯುವುದು ಸಾಧ್ಯವಿರಲಿಲ್ಲ. ಮಹಾತ್ಮಾ ಗಾಂಧಿಯವರನ್ನು ಪ್ರೀತಿಸುತ್ತಿದ್ದವರು, ಪ್ರಪಂಚದಲ್ಲೇ ಶ್ರೇಷ್ಠರಾದ ಮಹಾ ಪುರುಷರೆಂದು ಭಾವಿಸಿ ಅವರಲ್ಲಿ ಗೌರವ ತೋರುತ್ತಿದ್ದರೆಂಬುದನ್ನು ಹೊಸದಾಗಿ ತಿಳಿಸಬೇಕಾದ ಅಗತ್ಯವೇ ಇಲ್ಲ. ಕ್ರೈಸ್ತ ಧರ್ಮ ಸಂಬಂಧವಾಗಿ ಮಾರ್ಗ ಪದವಿಗಳನ್ನಲಂಕರಿಸಿದವರು ಕೂಡ ಮಹಾತ್ಮಾ ಗಾಂಧಿಯವರನ್ನು ಯೇಸು ಕ್ರಿಸ್ತನಿಗೆ ಹೋಲಿಸಿದ್ದಾರೆ.

ಭಾರತವು ಯೂರೋಪು ಖಂಡದಲ್ಲಿ "ಗಾಂಧಿಯವರ ನಾಡು" ಎಂದು ಪ್ರಸಿದ್ಧವಾಗಿದೆ. ನಮ್ಮ ದೇಶದಲ್ಲಿರುವಂತೆಯೇ ಇತರ ದೇಶಗಳಲ್ಲಿ ಕೂಡ, ಮಹಾತ್ಮಾ ಗಾಂಧಿಯವರ ವಿಚಾರದಲ್ಲಿ ಜನರಿಗೆ ಪೂಜ್ಯ ಬುದ್ಧಿ ಇದೆ. ಮಹಾತ್ಮಾ ಗಾಂಧಿಯವರ ಪವಿತ್ರ ಜೀವನಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ತಿಳಿದುಕೊಳ್ಳಲು ಜಗತ್ತಿಗೆ ತೀವ್ರಾಸಕ್ತಿ ಇದೆ. ಅಲ್ಲಿ ಪಂಡಿತ ಪಾಮರರೆಂಬ ಭೇದವಿಲ್ಲದೆ, ಧನಿಕರು ಬಡವರೆಂಬ ಭೇದವಿಲ್ಲದೆ, ಚಿಕ್ಕವರು ದೊಡ್ಡವರೆಂಬ ಭೇದವಿಲ್ಲದೆ ಸಮಸ್ತರಿಗೂ ಮಹಾತ್ಮಾ ಗಾಂಧಿಯವರ ಉದಾತ್ತ ತತ್ವಗಳನ್ನೂ ಜೀವನ ಚರಿತ್ರೆಯನ್ನೂ ಪರಿಚಯ ಮಾಡಿಕೊಳ್ಳುವ ಕುತೂಹಲವಿದೆ. ನಮ್ಮ ದೇಶಬಾಂಧವರಿಗಂತೂ, ಮಹಾತ್ಮಾ ಗಾಂಧಿಯವರ ವಿಷಯದಲ್ಲಿ ಅಪಾರವಾದ ಪ್ರೀತಿಭಕ್ತಿಗಳಿವೆ.

ಮಹಾತ್ಮಾ ಗಾಂಧಿಯವರು ಉದಾರ ಚರಿತರಾಗಿದ್ದುದೇ ಅದಕ್ಕೆ ಮುಖ್ಯ ಕಾರಣ. ಎಲ್ಲ ಜಾತಿ ಪಂಗಡಗಳ, ಎಲ್ಲ ರೀತಿ ನೀತಿಗಳ, ಎಲ್ಲ ಸ್ಥಿತಿಗತಿಗಳ, ಎಲ್ಲ ಧರ್ಮಗಳ ಮತ್ತು ಜನಾಂಗಗಳ ಜನರಲ್ಲೂ ಅವರಿಗೆ ಗಾಢವಾದ ಸಹಾನುಭೂತಿ. ಒಟ್ಟು ಮಾನವ ವರ್ಗಕ್ಕೆ ಮಂಗಳವಾಗಬೇಕೆಂದು ಬಯಸುತ್ತಿದ್ದವರು, ಮಹಾತ್ಮಾ ಗಾಂಧಿಯವರು ದೀನದಲಿತರಲ್ಲಂತೂ, ಅವರಿಗೆ ವಿಶೇಷ ಕರುಣೆ. ಪ್ರಾಣಿ ಮಾತ್ರದಲ್ಲಿ ದಯೆ ತೋರಿ ಹಿತ ಚಿಂತನೆ ಮಾಡುತ್ತಿದ್ದ ವಿಶ್ವಪ್ರೇಮಿಗಳು ಅವರು.

ಉದಾರ ಚರಿತರಿಗೆ ವಸುಧೆಯೇ ಕುಟುಂಬವೆಂಬುದು ಅವರಿಗೆ ಅಕ್ಷರಶಃ ಅನ್ವಯಿಸುತ್ತಿತ್ತೆಂದು ಧಾರಾಳವಾಗಿ ಹೇಳಬಹುದು. "ಬಾಪು" ಎಂಬ ಮಾತು ಭಾರತೀಯರ ಕಿವಿಗಳಿಗೆ ಅಮೃತವನ್ನೆರೆಯುತ್ತದೆ. ಮಹಾತ್ಮಾ ಗಾಂಧಿಯವರು ಅಕಾಲದಲ್ಲಿ ನಮ್ಮನ್ನಗಲಿ ಹೋದರೆಂಬ ವಿಷಾದವೇ ನಮ್ಮೆಲ್ಲರ ಹೃದಯದಲ್ಲೂ ತುಂಬಿದೆ. ಆ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಹೋಗಲಾಡಿಸಲು ಅವರ ಉಪದೇಶವಾಣಿಗಳ ಬೆಳುದಿಂಗಳೇ ಅವಲಂಬನವಿದೆ. ಅವರ ಸಹವಾಸದ ಸುಯೋಗವನ್ನು ಪಡೆದು ಅವರ ಸಹೋದ್ಯೋಗಿಗಳಾಗಿ ಕೆಲಸ ಮಾಡಿ, ಅವರ ಪ್ರೇಮಾದರಗಳಿಗೆ ಪಾತ್ರರಾಗಿದ್ದ ನಾಯಕ ಶ್ರೇಷ್ಠರುಗಳ ಸಹಾಯವಿದೆ. ಈ ಸಹಾಯದ ಪೂರ್ಣ ಪ್ರಯೋಜನವನ್ನು ಪಡೆದು ಮಹಾತ್ಮಾ ಗಾಂಧಿಯವರಿಗೆ ಪ್ರಿಯವಾಗಿದ್ದ ಸತ್ಯ ಅಹಿಂಸೆ ಮತ್ತು ದೈವ ಭಕ್ತಿಯೆಂಬ ತ್ರಿವೇಣಿಯಲ್ಲಿ ಮಿಂದು, ಶ್ರದ್ಧೆಯಿಂದ ಕರ್ತವ್ಯಪಾಲನೆ ಮಾಡಿದರೆ, ಭಾರತದ ಭಾಗ್ಯ ಸಂಪತ್ತು ಮತ್ತಷ್ಟು ಮೇಲಕ್ಕೇರುವುದರಲ್ಲಿ ಸಂದೇಹವಿಲ್ಲ.

ಮಹಾತ್ಮಾ ಗಾಂಧಿಯವರ ನಾಮಾಂಕಿತದಲ್ಲಿ ನಿರ್ಮಿತವಾಗಿರುವ ಈ ಸ್ಮಾರಕ ಸ್ತಂಭದ ಮೇಲೆ ಕೆತ್ತಿರುವ ಮಾತು, ಆ ಮಹಾಪುರುಷರಿಗೆ ಪ್ರಿಯವಾಗಿದ್ದ ಉದಾತ್ತ ತತ್ವಗಳಂದ ದೇಶಭಕ್ತರೆಲ್ಲರಿಗೂ ಚಿರಕಾಲ ಸ್ಫೂರ್ತಿಯನ್ನು ನೀಡಲಿ. ಅವರ ಕರ್ತವ್ಯನಿಷ್ಠೆಯು ಹೆಚ್ಚುವಂತೆ ಭಗವಂತನು ಅನುಗ್ರಹಿಸಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಶಿಕ್ಷಣ ಪದ್ಧತಿಯ ಸುಧಾರಣೆಗೆ ಸಲಹಾ ಸಮಿತಿ

ಸ್ವಂ ಸು ಫೋ] ಬೆಂಗಳೂರು ೮

ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸುಧಾರಣೆಗಳನ್ನು ಸೂಚಿಸಲು ಸುಮಾರು ೪೦ ಜನ ನಿಪುಣರನ್ನುಳ್ಳ ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆ. ಇದಕ್ಕೆ ಮುಖ್ಯ ಮಂತ್ರಿ ಹನುಮಂತಯ್ಯನವರು ಅಧ್ಯಕ್ಷರು. ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಉಪಾಧ್ಯಕ್ಷರು. ಉಪಸ್ಥಾನಪತಿ, ಡಿ ಪಿ ಐ, ವಿಧಾನ ಸಭಾ ಸದಸ್ಯರೇ ಮುಂತಾದವರು ಸಲಹೆಗಾರರು.

○ ಈ ದಿನ ಶ್ರೀ ಹನುಮಂತಯ್ಯನವರು ದೆಹಲಿಗೆ ತೆರಳಿದರು. ೧೭ ನೇ ತಾರೀಕು ಹಿಂದಿರುಗುವರು.

○ ಶ್ರೀ ದಾಸಪ್ಪನವರೂ, ಶ್ರೀ ವೆಂಕಟಪ್ಪ ರಾಯರೂ ಇಂದೂರಿಗೆ ತೆರಳಿದರು.

ಜೆಟ್ ವಿಮಾನ ಸಿಡಿದುಬಿದ್ದು ೩೦ ಜನರ ಮರಣ

ಬ್ರಿಟನ್ನಿನ ಫಾರ್ನ್‌ಬರೋ ಎಂಬಲ್ಲಿ ಮೊನ್ನೆ ದಿನ ಅತ್ಯಾಧುನಿಕ ವಿಮಾನಗಳ ಪ್ರದರ್ಶನವೊಂದು ಏರ್ಪಾಡಾಗಿದ್ದಾಗ ಒಂದು ಜೆಟ್ ವಿಮಾನವು ಗಂಟೆಗೆ ೭೦೦ ಮೈಲಿ ವೇಗದಲ್ಲಿ ಹಾರುತ್ತಿದ್ದು ಆಕಾಶದಲ್ಲೇ ಸಿಡಿದು ನುಚ್ಚುನೂರಾಯಿತೆಂದೂ, ಅದರ ಚಾಲಕನೂ ಮತ್ತು ಅವನೊಡನಿದ್ದ ವೀಕ್ಷಕನೂ ಮೃತಪಟ್ಟರೆಂದೂ ವರದಿಯಾಗಿದೆ. ಸಿಡಿದ ವಿಮಾನದ ಭಾಗಗಳು ಪ್ರೇಕ್ಷಕರ ಮೇಲೆ ಬಿದ್ದು ೧೮ ಮಂದಿ ಮೃತಪಟ್ಟರೆಂದು ತಿಳಿದುಬಂದಿದೆ. ಪ್ರದರ್ಶನವನ್ನು ನೋಡಲು ೧,೩೦,೦೦೦ ಜನರು ನೆರೆದಿದ್ದರು.

ಈಜಿಪ್ಟಿನಲ್ಲಿ ಜನರಲ್ ನಗೀಬರ ಸರ್ವಾಧಿಕಾರ

ಕಳೆದ ಜನವರಿ ೨೬ ನೇ ತಾರೀಖು ಕೈರೋವಿನಲ್ಲಿ ನಡೆದ ದಂಗೆಯ ಸಂಬಂಧವಾಗಿ ಈಜಿಪ್ಟಿನ ವಾಫ್ಡ್ ಮೊದಲಾದ ರಾಜಕೀಯ ಪಕ್ಷಗಳ ಹಲವ್ ನಾಯಕರನ್ನು ಹೊರದೂಡಬೇಕೆಂದು ಅಲ್ಲಿನ ಕ್ರಾಂತಿಕಾರ ನಾಯಕ ಜನರಲ್ ನಗೀಬರು ಆಜ್ಞೆ ಮಾಡಿದ್ದರೂ ಅದನ್ನು ಇದುವರೆಗೂ ಜಾರಿಗೆ ತರದಿದ್ದ ಪ್ರಯುಕ್ತ ನಗೀಬರು ನೆನ್ನೆ ಬೆಳಗಿನಜಾವ ಕೈರೋ ನಗರದಲ್ಲಿ ಎಲ್ಲರೂ ನಿದ್ರಿಸುತ್ತಿದ್ದಾಗ ಹಠಾತ್ತನೆ ಮಿಲಿಟರಿ ಮತ್ತು ಶಸ್ತ್ರಸಜ್ಜಿತ ಕಾರುಗಳೊಡನೆ ಹೊರಟು ಸುಮಾರು ೫೦ ಮಂದಿ ರಾಜಕೀಯ ಮುಖಂಡರನ್ನು ಬಂಧಿಸಿದರೆಂದೂ, ಇದರ ಪರಿಣಾಮವಾಗಿ ಅಲ್ಲಿನ ಪ್ರಧಾನಿ ಅಲಿ ಮೆಹರ್‌ರವರು ರಾಜೀನಾಮೆ ಕೊಡಲು ನಗೀಬರು ಅದನ್ನು ಅಂಗೀಕರಿಸಿ ತಾವೇ ಸರ್ವಾಧಿಕಾರ ವಹಿಸಿ ನೆನ್ನೆ ರಾತ್ರಿ ೧೬ ಜನರಿಂದ ಕೂಡಿದ ಹೊಸ ಮಿಲಿಟರಿ ಸರ್ಕಾರವನ್ನು ರಚಿಸಿದರೆಂದೂ ವರದಿಯಾಗಿದೆ.

ಬಂಧಿತರೆಲ್ಲರನ್ನೂ ನಗೀಬರ ಭವನದ ಬಳಿ ಒಂದು ದೊಡ್ಡ ಕಟ್ಟಡದಲ್ಲಿರುವ ಸೈನಿಕ ಶಾಲೆಗೆ ಸೇರಿಸಿ ಶಸ್ತ್ರ ಸಜ್ಜಿತ ಕಾವಲುಗಾರರನ್ನು ನೇಮಿಸಲಾಗಿದೆ. ಅಲ್ಲಿನ ಮಾಜಿ ರಾಜರ ವತ್ತ ದೇಶದಲ್ಲಿ ನಡೆಯುತ್ತಿದ್ದ ಅನ್ಯಾಯದ ವಿರುದ್ಧವಾಗಿ ಈ ಕ್ರಾಂತಿಯು ನಡೆದಿರುವುದಾಗಿ ಜನರಲ್ ನಗೀಬರ ಕೇಂದ್ರ ಕಛೇರಿಯ ಪ್ರಕಟಣೆಯು ತಿಳಿಸಿದೆ. ದಸ್ತಗಿರಿಯಾದವರ ಪೈಕಿ ಮಾಜಿ ಪ್ರಧಾನಿಗಳು ಅಹಮದ್ ನಗೀಬ್ ಹಿಲಾಲಿ, ಇಬ್ರಾಹಿಂ ಅಬ್ದುಲ್ ಹಾದಿ ಮತ್ತು ಇತರ ಮಾಜಿ ಸಚಿವರೂ ಇರುವರು.

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ವಾರ್ಷಿಕೋತ್ಸವ

ಮೈಸೂರು ೮

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ವಾರ್ಷಿಕೋತ್ಸವವು ನೆನ್ನೆ ಟೌನ್ ಹಾಲಿನಲ್ಲಿ ಪೌರ ಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರ್ಥನೆಯಾದ ನಂತರ ಸಂಘದ ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬಹುಮಾನಗಳನ್ನು ಹಂಚಿ, ಭಾಷಣ ಮಾಡಿ ಕಾರ್ಮಿಕರಿಗೂ ಮಾಲೀಕರಿಗೂ ಇರಬೇಕಾದ ಮಧುರ ಬಾಂಧವ್ಯದ ಆವಶ್ಯಕತೆಯನ್ನು ವಿವರಿಸಿ ಉಭಯತ್ರರೂ ಒಂದೇ ಕುಟುಂಬಕ್ಕೆ ಸೇರಿದವರಂತೆ ವರ್ತಿಸಿ ದೇಶದ ಸಂಪತ್ತನ್ನು ಹೆಚ್ಚಿಸಲು ನೆರವಾಗಬೇಕೆಂದೂ, ಸ್ಟ್ರೈಕ್ ಮಾಡಬಾರದೆಂದೂ ಹೇಳಿ ಈಗಿನ ಕಾರ್ಮಿಕ ಶಾಸನದಲ್ಲಿ ಸುಧಾರಣೆಯು ಅಗತ್ಯವೆಂದು ನುಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಕೃಷ್ಣಮೂರ್ತಿ ರಾಯರು ಸಂಘದ ಪುರೋಭಿವೃದ್ಧಿಗಾಗಿ ಅಭಿನಂದಿಸಿದರು. ಶ್ರೀ ರಾಮಯ್ಯನವರಿಂದ ಧನ್ಯವಾದದ ನಂತರ ಸಮಾರಂಭವು ಮುಕ್ತಾಯಗೊಂಡಿತು.

ಅಂಗಡಿಗಳಿಗೆ ಮುಖಂಡರ ಹೆಸರು ಕೊಡದು

ರಾಷ್ಟ್ರೀಯ ಮುಖಂಡರುಗಳಾದ ಮಹಾತ್ಮಾ ಗಾಂಧಿ, ಜವಾಹರಲಾಲ್ ನೆಹರೂ ಮುಂತಾದವರ ಹೆಸರುಗಳನ್ನು ಅಂಗಡಿಗಳಿಗೆ ಉಪಯೋಗಿಸುವುದನ್ನು ಮದ್ರಾಸಿನಲ್ಲಿ ತಪ್ಪಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳಲಿರುವರೆಂದೂ, ಮದ್ರಾಸು ನಗರದಲ್ಲಿರುವ ಅಂತಹ ಅಂಗಡಿಗಳು, ಹೊಟೇಲುಗಳ ಹೆಸರುಗಳ ಪಟ್ಟಿಯನ್ನು ಒದಗಿಸುವಂತೆ ಅಲ್ಲಿನ ಪೌರ ಸಭೆಯನ್ನು ಸರ್ಕಾರದವರು ಕೇಳಿರುವುದಾಗಿಯೂ ಗೊತ್ತಾಗಿದೆ

ಕೈಲಾಸಿನಲ್ಲಿ ಭಿಕ್ಷೆ ಬೇಡುವುದಕ್ಕೂ, ಭಿಕ್ಷೆ ನೀಡುವುದಕ್ಕೂ ನಿಷೇಧ

ಕೈಲಾಸಿನಲ್ಲಿ ನೆನ್ನೆಯಿಂದ ಭಿಕ್ಷುಕರ ಪರಿಹಾರ ಶಾಸನವು ಜಾರಿಗೆ ಬಂದಿರುತ್ತದೆ ನಗರ ಪ್ರದೇಶದಲ್ಲಿ ಭಿಕ್ಷ ಬೇಡುವುದಾಗಲೀ ನೀಡುವುದಾಗಲೀ ಅಪರಾಧವಾಗುವುದೆಂದು ಸಾರಲಾಗಿದೆ ಭಿಕ್ಷುಕರಿಗಾಗಿ ನಗರದಲ್ಲಿ ಒಂದು ವಸತಿ ಗೃಹವನ್ನು ತೆರೆಯಲು ನಿರ್ಧರಿಸಲಾಗಿದೆ

ಗಣಪತಿ ಮಂಗಳಾರತಿ

ದಳವಾಯಿ ಹೈಸ್ಕೂಲು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ಬುಧವಾರ ವಿದ್ಯಾ ಗಣಪತಿ ಮಂಗಳಾರತಿಯು ಮಹಾರಾಜಾ ಕಾಲೇಜು ಸಂಸ್ಕೃತ ಅಸಿಸ್ಟೆಂಟ್ ಪ್ರೊಫೆಸರಾಗಿರುವ ಶ್ರೀ ಎಚ್ ಎಲ್ ಹರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಚ್ ನಾಗಪ್ಪನವರು ಭಾಷಣ ಮಾಡಿ ಗಣಪತಿಯು ಜಾತ್ಯತೀತ ದೇವರೆಂಬುದನ್ನೂ, ಗಣಪತಿ ಪೂಜೆಯ ನಿಜವಾದ ಅರ್ಥವನ್ನೂ ಸ್ಪಷ್ಟೀಕರಿಸಿದರು ಶ್ರೀ ಸುಬ್ಬಯ್ಯ ಶಾಸ್ತ್ರಿಗಳವರಿಂದ ಕೃಷ್ಣ ಸಂಧಾನ ಕಾವ್ಯ ವಾಚನವೂ, ಶ್ರೀ ವೆಂಕಟಸುಬ್ಬಯ್ಯನವರಿಂದ ವ್ಯಾಖ್ಯಾನವೂ ಆದುವು ಅಧ್ಯಕ್ಷರು ಗಣಪತಿಯ ಮಹಿಮೆಯನ್ನು ವಿವರಿಸಿ, ಭಾರತದ ಸಂಸ್ಕೃತಿಯ ಅಭಿವೃದ್ಧಿಗೆ ಪ್ರತಿಯೊಬ್ಬ ಪ್ರಜೆಯೂ ಸಂಸ್ಕೃತ ವ್ಯಾಸಂಗ ಮಾಡಬೇಕೆಂದು ಒತ್ತಿ ಹೇಳಿದರು

ಎಲ್ ಎಸ್ ವಿ. ರಾಮಯ್ಯರ್ ರವರಿಗೆ ಸತ್ಕಾರ

ರಾಜಧಾನಿಯ ಸಿಂಧೀ ಬ್ಯಾಂಕರುಗಳ ಸಂಘದವರು ಮೊನ್ನೆ ಚಾಮುಂಡೇಶ್ವರಿ ಭವನದಲ್ಲಿ, ನಿವೃತ್ತರಾದ ಮೈಸೂರು ಬ್ಯಾಂಕಿನ ಶಾಖೆಯ ಮ್ಯಾನೇಜರ್ ಶ್ರೀ ಎಲ್ ಎಸ್ ವಿ ರಾಮಯ್ಯರ್‌ರವರ ಗೌರವಾರ್ಥವಾಗಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು ಸಂಘದ ಪರವಾಗಿ ಶ್ರೀ ರಾಮಯ್ಯರ್‌ರವರಿಗೆ ಬೆಳ್ಳಿ ತಟ್ಟೆಯೊಂದನ್ನು ಅರ್ಪಿಸಲಾಯಿತು. ಓರಿಯಂಟಲ್ ಇಂಡಸ್ಟ್ರೀಸಿನ ಮಾಲೀಕರಾದ ಶ್ರೀ ಬಿ ಎಸ್ ಸುಬ್ಬರಾಯರು ಮುಖ್ಯ ಅತಿಥಿಗಳ ಗುಣಗಾನ ಮಾಡಿದರು ಶ್ರೀ ರಾಮಯ್ಯರ್ ರವರೂ, ನೂತನ ಮ್ಯಾನೇಜರರಾದ ಶ್ರೀ ವೀರಭದ್ರ ಶೆಟ್ಟರೂ ಮಾತನಾಡಿ, ತಮ್ಮನ್ನು ಸತ್ಕರಿಸಿದುದಕ್ಕಾಗಿ ಧನ್ಯವಾದಗಳನ್ನರ್ಪಿಸಿದರು

ಇಂಗ್ಲಿಷ್ ಭಾಷೆ ಬಗ್ಗೆ ಪ್ರವೀಣರ ಅಭಿಪ್ರಾಯ

ಭಾರತದ ಪ್ರಧಾನಿ ನೆಹ್ರೂ ಮತ್ತು ವಿದ್ಯಾ ಮಂತ್ರಿ ಮೌಲಾನ ಆಜಾದ್ ರವರುಗಳಿಗೆ ದೇಶದ ೨೭ ಮಂದಿ ವಿದ್ಯಾ ಪ್ರವೀಣರು ಮತ್ತು ವಿಜ್ಞಾನಿಗಳು ಪತ್ರವೊಂದನ್ನು ಬರೆದು ಇಂಗ್ಲಿಷು ಮಾಧ್ಯಮವು ತಪ್ಪಿದರೂ ಆ ಭಾಷೆಯು ಉನ್ನತ ದರ್ಜೆಯನ್ನು ಉಳಿಸಿಕೊಂಡು ಬರಬೇಕೆಂದು ಕೋರಿರುತ್ತಾರೆ ಇಂಗ್ಲಿಷ್ ಭಾಷೆಯ ಅಭ್ಯಾಸವನ್ನು ಆತುರವಾಗಿ ಕೊಲೆ ಮಾಡಿದರೆ ನೂರು ವರ್ಷಗಳಿಂದ ಗಳಿಸಿದ ಲಾಭವು ಹಲವು ವರ್ಷಗಳಲ್ಲೇ ಹಾಳಾಗುವುದೆಂದು ಅವರು ಅಭಿಪ್ರಾಯಪಟ್ಟು ಪದವೀಧರ ವಿದ್ಯಾರ್ಥಿಗಳು ಬರೆಯುವ ಇಂಗ್ಲಿಷಿನ ಮಟ್ಟವು ಇಳಿದುಹೋಗಿರುವುದೆಂದು ವ್ಯಥೆಪಟ್ಟಿರುತ್ತಾರೆ ಪತ್ರಕ್ಕೆ ಡಾ॥ ಸಿ ವಿ ರಾಮನ್ ಹೆಚ್ ಜೆ ಭಾಬಾ ಮುಂತಾದವರು ರುಜು ಮಾಡಿರುವರು

ಟೌನ್ ಹಾಲ್ ಕಮಿಟಿ ಛೇರ್‌ಮನ್‌ರವರ ಆಫೀಸಿನಿಂದಾ ಮೈಸೂರು

ಪ್ರಕಟಣೆ

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ

ಟೌನ್ ಹಾಲಿನಲ್ಲಿ ದಸರಾ ಪ್ರಯುಕ್ತ ಅಂದರೆ ತಾರೀಖು 20-9 52 ರಿಂದ ೩ 10 52ರ ಪೂರ್ತಾ ವಿಜಯ ದಶಮಿ ವಿನಹ ಬಾಕಿ ಎಲ್ಲಾ ದಿನಗಳೂ ನಾಟಕಗಳನ್ನು ನಡೆಸಲು ತಾರೀಖು 11 9 52 ನೇ ಗುರುವಾರ ಬೆಳಿಗ್ಗೆ 10-30 ಘಂಟೆಗೆ ಸರಿಯಾಗಿ ಟವನ್ ಹಾಲಿನಲ್ಲಿ ಬಹಿರಂಗವಾಗಿ ಹರಾಜ ಮಾಡಲಾಗುತ್ತೆ ಹೆಚ್ಚಿನ ವಿವರಗಳಿಗೆ ಟೌನ್ ಹಾಲಿನಲ್ಲಿರುವ ನೋಟಿಸು ಬೋರ್ಡ್ ನೋಡುವುದು

ವಿ ಕೆ ಮುಕುಂದನ್,
ಛೇರ್ಮನ್ನರಿಗಾಗಿ

ಗಾಂಧಿಜಿಯವರ ಜೀವನದ ಬಗ್ಗೆ ಚಲನ ಚಿತ್ರ

ಮಹಾತ್ಮಾ ಗಾಂಧಿಜಿಯವರ ಜೀವನವನ್ನು ಬಿಂಬಿಸುವ ಬಗ್ಗೆ ತೆಗೆಯಲಾಗಿರುವ ೨ ಚಲನ ಚಿತ್ರಗಳನ್ನು ಸಧ್ಯದಲ್ಲೇ ಪ್ರದರ್ಶಿಸಲಾಗುವುದು ಯೂರೋಪಿಗೆ ಅವರ ಪ್ರಯಾಣ ಬೊಂಬಾಯಿ ನಗರದ ಸಮುದ್ರ ತೀರದಲ್ಲಿ ಅವರು ನಡೆಸಿದ ಪ್ರಾರ್ಥನೆ, ಪೂರ್ವ ಆಫ್ರಿಕಾಕ್ಕೆ ಸೇರಿರುವ ನವಾಖಾಲಿಯಲ್ಲಿ ಅವರ ಕಾಲ್ನಡಿಗೆ ಯಾತ್ರೆ ಇವುಗಳ ಚಿತ್ರಗಳನ್ನು ತೆಗೆದುಕೊಳ್ಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಸಿ ಕೃಷ್ಣಮೂರ್ತಿ ವೀಣಾ ವಾದನ ಮಧ್ಯಾಹ್ನ ೧ ೩೦ ಕೊಳಲು ೨ ಡಿ ಪಿ ಬಾರ್ಜೆ, ದಿಲ್ರುಬಾ ಸಂಜೆ ೫ ೩೦ ಕೆ ಆರ್ ವೆಂಕಟದಾಸಪ್ಪ ಸಂಗೀತ ೬ ೧೦ ಗಾನ ವಿಹಾರ ೭ ಡಿ ಪಿ ಬಾರ್ಜೆ, ದಿಲ್ರುಬಾ ೭ ೩೦ ಟಿ ತಿಪ್ಪೇಸ್ವಾಮಿ ಕನ್ನಡದಲ್ಲಿ ಭಾಷಣ ೮ ಸಿ ಕೃಷ್ಣಮೂರ್ತಿ ವೀಣಾ ವಾದನ ೮ ೩೦ ವೃಂದ ಸಂಗೀತ ೯ ೨೫ ಇಂಗ್ಲಿಷ್ ಭಾಷಣ ೯ ೪೦ ಗಾನಾಮೃತ

ಹರಾಜು ನೋಟೀಸು

ಈ ಕೆಳಗೆ ನಮೂದಿಸುವ ಷೆಡ್ಯೂಲು ಸ್ವತ್ತನ್ನು ಮೈಸೂರು ಸಬಾರ್ಡಿನೇಟ್ ಜಡ್ಜಿಯವರ ಕೋರ್ಟ್ 51 52 ನೇ ಸಾಲು ಜಾರಿ 108ನೇ ನಂಬರು ಕೇಸಿನಲ್ಲಿ ಆಗಿರುವ ಆರ್ಡರಿನಂತೆ ಸಂ೦ಗು 9-9-1952 ನೇ ದಿವಸ ಬೆಳಿಗ್ಗೆ ಹನ್ನೊಂದು ಗಂಟೆ ಅನಂತರ ಸ್ವತ್ತಿರುವ ಸ್ಥಳದಲ್ಲಿ ಹರಾಜು ಮಾಡಲಾಗುತ್ತೆ ಯಾರು ಬೇಕಾದರೂ ಬಿಡ್ಡು ಮಾಡಬಹುದು ಷೆಡ್ಯೂಲು ಮೈಸೂರು ಸಿಟಿ ನರಸಿಂಹರಾಜ ಮೊಹಲ್ಲಾ ರಜಪುಟ್ ಬ್ಲಾಕಿನಲ್ಲಿರುವ 4662 ನೇ ಡೋರ್ ನಂಬರು ಮನೆ ಸೈಟು ನಲ್ಲಿ ಮತು ತಾರಸಿ ಇವೆ

ಮೈಸೂರು 20 5 52 (ರುಜು) ರಾಜಗೋಪಾಲ್ 5 ನೇ ಪ್ರತಿವಾದಿ

ಮೈಸೂರು ಸಿಟಿ ಮುನಿಸಿಪಲ್ ಕಮಿಷನರವರ ಆಫೀಸಿನಿಂದಾ

ನೋಟಿಫಿಕೇಷನ್

ತಾರೀಖು 2-9-52 ನಂ ಆರ್ 8 ಪಿ ಆರ್ 146/52-53

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ

ಶ್ರೀಮನ್ ಮಹಾರಾಜರವರ ವಿಜಯದಶಮಿಯ ಜಂಬೂ ಸವಾರಿಯ ಮೆರವಣಿಗೆಯನ್ನು ನೋಡಲು ದೇವರಾಜ ಮಾರ್ಕೆಟ್ ಮಹಡಿಯ ಮೇಲಕ್ಕೆ ಹೆಂಗಸರು ಮತ್ತು 10 ವರ್ಷಕ್ಕೆ ಒಳಪಟ್ಟ ಹುಡುಗರನ್ನು ಬಿಡಲು ವಿಧಾಯಕವಾದ ದರದಂತೆ ಫೀ ವಸೂಲು ಮಾಡುವ ಹಕ್ಕನ್ನು ದೇವರಾಜ ಮಾರ್ಕೆಟ್ ಆಫೀಸಿನಲ್ಲಿ 10 9 52ನೇ ತಾರೀಖು ದಿವಿ 10 ಘಂಟೆಗೂ ಶ್ರೀ ಚಾಮುಂಡೇಶ್ವರೀ ಅಮ್ಮನವರ ರಥೋತ್ಸವವು 3-10-52 ರಲ್ಲೂ ನಡೆಯುವ ಕಾಲದಲ್ಲಿ ಬೆಟ್ಟದ ತಪ್ಪಲಿನಲ್ಲಿ ಅಂಗಡಿಗಳನ್ನಿಡುವ ಜನರಿಂದ ವಿಧಾಯಕವಾದ ದರದಂತೆ ಫೀ ವಸೂಲು ಮಾಡುವ ಹಕ್ಕನ್ನು 15-9-52 ರಲ್ಲೂ ಮಧ್ಯಾಹ್ನ 4 ಘಂಟೆಗೆ ಮುನಿಸಿಪಲ್ ಆಫೀಸು ಬಳಿಯಲ್ಲೂ ಬಹಿರಂಗವಾಗಿ ಹರಾಜು ಮಾಡಿಸಲಾಗುತ್ತೆ ಬಾಬನ್ನು ಪಡೆಯಲು ಇಷ್ಟವುಳ್ಳವರು ಮಿಡ್ದ್ದಾಗಿ ಸಕಾಲಕ್ಕೆ ಹಾಜರಾಗಿ ಬಾಬು ಪಡೆಯಬಹುದು ಹೆಚ್ಚಿಗೆ ಅಂಶ ತಿಳಿಯಲಪೇಕ್ಷೆಯುಳ್ಳವರು ರಜಾ ದಿವಸವಲ್ಲದ ಇತರ ದಿವಸಗಳಲ್ಲಿ ಬೆಳಿಗ್ಗೆ 11 ಘಂಟೆ ಲಾಗಾಯ್ತು ಸಾಯಂಕಾಲ 5 ಘಂಟೆ ವರೆವಿಗೆ ಮುನಿಸಿಪಲ್ ರೆವಿನ್ಯೂ ಆಫೀಸಿನಲ್ಲಿ ಬಂದು ತಿಳಿದುಕೊಳ್ಳಬಹುದು

ಬಿ ತಿಮ್ಮಯ್ಯ,
ಫಾ॥ ಮುನಿಸಿಪಲ್ ಕಮಿಷನರ್
ಸಿಟಿ ಮುನಿಸಿಪಲ್ ಆಫೀಸ್, ಮೈಸೂರು

ಸದರ್ನ್ ರೈಲ್ವೆ ಟಿಕೆಟ್ ಚೆಕಿಂಗ್ ಸ್ಟಾಫಿನ ಸಮ್ಮೇಳನ

ಸದರನ್ ರೈಲ್ವೆ ಟಿಕೆಟ್ ಚೆಕ್ಕಿಂಗ್ ಸ್ಟಾಫಿನ ಸಮ್ಮೇಳನದ ಆರಂಭೋತ್ಸವವನ್ನು ಇದೇ ೧೩ ಮತ್ತು ೧೪ ನೇ ತಾ ಗಳಲ್ಲಿ ಮದರಾಸಿನಲ್ಲಿ ಕೇಂದ್ರ ಶಾಖೆ ಸಚಿವ ಶ್ರೀ ವಿ ವಿ ಗಿರಿಯವರು ನೆರವೇರಿಸುವರು ಸಮ್ಮೇಳನಕ್ಕೆ ಮೈಸೂರು ಸ್ಟೇಟ್ ರೈಲ್ವೆ ಪರವಾಗಿ ಶ್ರೀಗಳಾದ ಎಸ್ ಎ ಹಮೀದ್, ಕೆ ವಿ ಆರ ಬಲಿಜ ಮತ್ತು ಸಿ ಚಲುವಯ್ಯನವ ಪ್ರತಿನಿಧಿಗಳಾಗಿ ಹೋಗುವರು

ಗೋಪಾಲಕೃಷ್ಣ ಶೆಟ್ಟರಿಗೆ ಸತ್ಕಾ

ಮೈಸೂರು ಶಾಸನ ಸಭೆಯ ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟಿರುವ ಶ್ರೀ ಗೋಪಾಲಕೃಷ್ಣ ಶೆಟ್ಟರ ಗೌರವಾರ್ಥವಾಗಿ ಮಿತ್ರ ಮಂಡಲಿಯವ ನೆನ್ನೆ ರಾತ್ರಿ ಒಂದು ಭೋಜನ ಕೂಟವನ್ನು ಏರ್ಪಡಿಸಿ ಸತ್ಕರಿಸಿದರು ಮಿತ್ರಮಂಡಲಿಯ ಪರವಾಗಿ ಶ್ರೀ ರಾಮಣ್ಣನವರು ಶ್ರೀ ಶೆಟ್ಟರ ಸೇವೆಯನ್ನು ಪ್ರಶಂಸಿಸಿ, ಅವರು ಶಾಸನ ಸಭೆಯ ಉಪಾಧ್ಯಕ್ಷರಾಗಿ ನೇಮಿತರಾದ ಗ್ಗೆ ಅಭಿನಂದನೆಯನ್ನು ಸಲ್ಲಿಸಿದರು ಪೌರಸಭಾಧ್ಯಕ್ಷರಾದ ಶ್ರೀ ಎ. ಕೃ ವ ಮೂರ್ತಿರಾಯರು ಮಾತನಾಡಿ ಶ್ರೀ ಟ್ಟರ ಸರ್ವತೋಮುಖವಾದ ಸೇವೆ ಗ್ಯ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಶ್ರೀ ಗೋಪಾಲಕೃಷ್ಣಶೆಟ್ಟರು ಸತ್ಕಾರಕ್ಕಾಗಿ ಧನ್ಯವಾದಗಳನ್ನರ್ಪಿಸಿದನಂ ಶ್ರೀ ಟಿ ಎಸ್ ಸುಬ್ಬಣ್ಣನವರಿಂದ ವಂದನಾರ್ಪಣೆಯೊಡನೆ ಸಮಾರಂಭ ಮುಗಿಯಿತು

SRI GAYATHR
TALKIES
Daily 3 Shows
Special Matinee Shows
On 8 th Mond y and 9 th
Tuesday, September 1952
At 3—30 p m
M G M s Technicolor,
Spectac ll r, the Musical Sto
of An Ex—G I
In the City of Romance
AN AMERICAN
IN PARIS
Starring — James Kelly
NEXT CHANGE
KIND LADY

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೊ
ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್
ಮೈಸೂರು

Edited, Printed and Published by A R Nagaraj at Sadhvi Press, D Subiah Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೯-೯-೧೯೫೩ [ಸಂಚಿಕೆ ೩೭

ನೆಹರೂರವರೇ ಮತ್ತೆ ೨ ವರ್ಷ ಕಾಂ|| ಅಧ್ಯಕ್ಷರು

ನಲ್ಲಿ ಕೆಲಸಗಾರರ ಒಂದು ದಿನದ ಮುಷ್ಕರ

ಇದೇ ೨೦ ನೇ ತಾ|| ನಡೆಸಲು ನಿರ್ಧಾರ

ಮೈಸೂರು ೯

ತಮ್ಮ ಬೇಡಿಕೆಗಳನ್ನು ಸರ್ಕಾರದವ ... ಈಡೇರಿಸದಿದ್ದರೆ ಇದೇ ೨೦ ನೇ ... ನವರಾತ್ರಿ ಆರಂಭದ ದಿನ ಒಂದು ... ವಸದ ಮಟ್ಟಿಗೆ ಸಾಂಕೇತಿಕ ಮುಷ್ಕರ ... ನ್ನು ಹೂಡಬೇಕಾಗಿ ರಾಜಧಾನಿಯ ... ವಾಣಿವಿಲಾಸ ವಾಟರ್ ವರ್ಕ್ಸಿನ ನಲ್ಲಿ ... ಕೆಲಸಗಾರರು ನೆನ್ನೆ ದಿನ ಸಭೆ ನಡೆಸಿ ... ರ್ಣಯ ಮಾಡಿದರು. ಜ|| ವಿನಾಯ್ ... ರ್‌ಹುಸೇನರವರು ಅಧ್ಯಕ್ಷತೆ ವಹಿಸಿ ... ರು

ಸಂಘದ ಅಧ್ಯಕ್ಷರಾದ ಶ್ರೀ ಚಂದ್ರ ... ಶೇಖರಯ್ಯನವರು ಭಾಷಣ ಮಾಡಿ, ... ೭ ನೇ ಇಸವಿಯಿಂದಲೂ ತಮ್ಮ ... ಳ ಮತ್ತು ಇತರ ಸೌಲಭ್ಯಗಳ ಬ ... ಬೇಡಿಕೆಗಳನ್ನು ಮುಂದಿಡುತ್ತಿದ್ದರೂ, ... ಯಾವ ಪ್ರಯೋಜನವೂ ಆಗಿಲ್ಲವೆಂದ ... ರು ನೌಕರರಿಗೆ ಏರಿಸುವ ವೇತ ... ವನ್ನು ಕೊಡುವಂತೆ ೧೯೪೭ ನೇ ಇಸ ... ವಿಯಲ್ಲಿಯೇ ಇತ್ಯರ್ಥವಾಗಿದ್ದರೂ ಇ ... ಅದು ಕಾರ್ಯರೂಪಕ್ಕೆ ಬಂದಿಲ್ಲವೆಂ ... ಏರಿಸುವ ವೇತನಕ್ಕೆ ಅರ್ಹರಾದ ... ಜನರ ಪೈಕಿ ಈಗಾಗಲೇ ೩ ಜನರು ... ಸ್ವರ್ಗಸ್ಥರಾದರೆಂದೂ ಅವರು ಹೇಳಿದ ... ಕೆಲಸಗಾರರಿಗೆ ಸಮವಸ್ತ್ರವನ್ನೂ ... ಒದಗಿಸಿಲ್ಲವೆಂದು ತಿಳಿಸಿದರು

ಸಮಾಜವಾದಿಗಳಾದ ಶ್ರೀಗಳು ಶ್ರೀ ... ಪ್ಪ, ವೇದಾಂತಂ ಹೆಮ್ಮಿಗೆ ಶ್ರೀ ... ಕಮು ್, ವಿಶ್ವನಾಥ್‌ರವರು ಭಾಷ ... ಮಾಡಿ ಸರ್ಕಾರದ ಮನೋಭಾವ ... ವನ್ನು ಟೀಕಿಸಿದರು

ಸಂಘದ ಅಧಿಕಾರ ವರ್ಗದ ಚುನಾ ... ವಣೆಯು ನಡೆದು, ಜ|| ಮೀರ್‌ನೂರ್ ... ಹುಸೇನರವರು ಅಧ್ಯಕ್ಷರಾಗಿಯೂ, ಶ್ರೀ ... ಚಂದ್ರಶೇಖರಯ್ಯನವರು ಉಪಾಧ್ಯಕ್ಷ ... ರಾಗಿಯೂ, ಶ್ರೀ ವೇದಾಂತಂ ಹೆಮ್ಮಿಗೆ ... ಪ್ರಧಾನ ಮತ್ತು ಶ್ರೀ ರಾಮಾಶಾಸ್ತ್ರಿ ಸ ... ಹಾಯ ಕಾರ್ಯದರ್ಶಿಗಳಾಗಿಯೂ, ಜ|| ... ಖಜಾಂಚಿಯಾಗಿಯೂ ಆ ... ಯ್ಕೆಯಾಗಿದ್ದಾರೆ

... ವಾಸ ಪ್ರದೇಶಗಳಿಗೆ ರಸಾಯನಿಕ ಆಹಾರ

... ಜಧಾನಿಯ ಆಹಾರ ಸಂಶೋಧ ... ನಾಲೆಯಲ್ಲಿ ತಯಾರಿಸಲಾಗುತ್ತಿರು ... ರಸಾಯನಿಕ ಆಹಾರ ಮತ್ತು ಕಡ್ಲೆ ... ಯ ಮೊಸರನ್ನು ದಿನಕ್ಕೆ ೫೦೦ ... ದಿನಂತೆ ಸಂಸ್ಥಾನದ ಅಭಾವ ಪ್ರ ... ದೇಶಗಳಿಗೆ ಒದಗಿಸಲು ನಿಲಯದ ಸಲ ... ಹಾ ಸಮಿತಿಯು ನಿರ್ಧರಿಸಿರುತ್ತದೆ ... ನ ವಿದ್ಯಾರ್ಥಿಗಳು ಆ ಪ್ರದೇಶಗಳ ... ಪ್ರಟಿಯತ್ತು, ಈ ಆಹಾರಗಳ ಉಪ ... ಯೋಗದ ವಿಧಾನವನ್ನು ಜನರಿಗೆ ತಿಳಿ ... ಸುವರು ಅಭಾವ ಪರಿಹಾರಾರ್ಥವಾ ಗಿ ... ಮ ಜಮಖಂಡಿ ... ಪ್ಪನವರು ... ರೂ ಗಳನ್ನು ಉದಾರವಾಗಿ ಕೊ ... ಟ್ಟಿದ್ದಾರೆ ಶಾಲೆಯ ಸಲಹಾ ಸಮಿ ... ತಿ ಸದಸ್ಯರಾದ ಶ್ರೀ ಕೆ ಕೆ ಬಿರ್ಲಾ ... ೧೦ ಸಾವಿರ ರೂ ಗಳನ್ನು ಕೊಡು ... ವುದಾಗಿ ವಾಗ್ದಾನ ಮಾಡಿರುತ್ತಾರೆ

ಈಜಿಪ್ಟಿನಲ್ಲಿ ಇನ್ನೂ ಹೆಚ್ಚಿನ ದಸ್ತಗಿರಿಗಳು

ಈಜಿಪ್ಟಿನಲ್ಲಿ ರಾಜಕೀಯ ಮುಖಂಡರ ದಸ್ತಗಿರಿಗಳು ಇನ್ನೂ ಆಗುತ್ತಿವೆ ನೆನ್ನೆಯವರೆಗೆ ದಸ್ತಗಿರಿಯಾದವರಲ್ಲಿ ಮಾಜಿ ಲಿಬರಲ್ ಮಂತ್ರಿ ಅಬ್ದೆಲ್ ಸೆಗಿಬ್ ಇಬ್ರಾಹಿಂ ಪಲಾ ಎಂಬುವರೂ, ವಾಫ್ಡ್ ಪಕ್ಷದ ಮುಖಂಡರಾದ ಕೆಪಜ್ ಪಿಹಾರವರೂ ಇರುವರು ಆ ಪಕ್ಷದ ಮುಖಂಡರಾದ ನಹಾಸ್ ಪಾಷಾರವರು ಇನ್ನೂ ಸ್ವತಂತ್ರರಾಗಿರುವರು ದಸ್ತಗಿರಿಯಾದವರೆಲ್ಲರೂ ಫರೂಕರ ಆಳಿಕೆ ಕಾಲದಲ್ಲಿ ಅಕ್ರಮವಾಗಿ ಐಶ್ವರ್ಯವನ್ನು ಶೇಖರಿಸಿದರೆಂಬ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಲಿರುವರು ಜ|| ನಗೀಬರ ಕೋರಿಕೆಯಂತೆ ವಾಫ್ಡ್ ಪಕ್ಷದಲ್ಲಿನ ವಿರೋಧ ಗುಂಪಿನವರು ತಮ್ಮ ಪಕ್ಷದ ಶುದ್ಧೀಕರಣವನ್ನು ಮಾಡಿಕೊಳ್ಳಲು ಸಿದ್ಧರಾಗಿರುತ್ತಾರೆ

ಭೂ ದಾನ ಯಜ್ಞಕ್ಕೆ ೩|| ಲಕ್ಷ ಎಕರೆ ಜಮೀನು

ಆಚಾರ್ಯ ವಿನೋಬಾ ಭಾವೆಯವರ ಭೂ ದಾನ ಯಜ್ಞಕ್ಕೆ ಇದುವರೆಗೆ ೧೨ ಸಾವಿರ ಜನರು ಒಟ್ಟು ೩ ಲಕ್ಷದ ೫೦ ಸಾವಿರ ಎಕರೆ ಜಮೀನುಗಳನ್ನು ದಾನವಾಗಿ ಕೊಟ್ಟಿರುತ್ತಾರೆ ಭೂಮಿಯನ್ನು ಕೊಟ್ಟಿರುವವರಲ್ಲಿ ೧ ಸೆಂಟ್‌ನಷ್ಟು ಕೊಟ್ಟ ಹರಿಜನನೊಬ್ಬನೂ, ೧೦ ಸಾವಿರ ಎಕರೆ ಕೊಟ್ಟ ಶಾಗಿಯರಾಜರೂ ಇರುವರು ಜಮೀನು ಇಲ್ಲದ ೫೦೦೦ ಮಂದಿಗೆ ಹೈದರಾಬಾದಿನಲ್ಲಿ ೧೦ ಸಾವಿರ ಎಕರೆ, ಉತ್ತರ ಪ್ರದೇಶ ಪ್ರಾಂತದಲ್ಲಿ ೧೦ ಸಾವಿರ ಎಕರೆ, ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳಲ್ಲಿ ಒಂದೊಂದು ಸಾವಿರ ಎಕರೆ ಜಮೀನುಗಳನ್ನು ಹಂಚಲಾಗಿದೆ

ಮಲಯದ ತಮಿಳನ ತಲೆ ತಂದವರಿಗೆ ೭ ಸಾವಿರ ರೂ.

ಕಳೆದ ಆಗಸ್ಟ್ ೧೧ ರಲ್ಲಿ ಪೀನಾಂಗ್ ಕೌಲಾಲಂಪೂರ್‌ಗಳ ನಡುವೆ ಹೋಗುತ್ತಿದ್ದ ಮೇಲ್ ರೈಲನ್ನು ಉರುಳಿಸಲು ಕಾರಣನಾದ ನಾದೇಶನ್ ಎಂಬ ತಮಿಳನ ತಲೆ ತಂದುಕೊಟ್ಟವರಿಗೆ ೭ ಸಾವಿರ ರೂ ಗಳನ್ನು ಕೊಡಲಾಗುವುದೆಂದು ಮಲಯಾ ಸರ್ಕಾರದವರು ಘೋಷಿಸಿರುತ್ತಾರೆ

ಇನ್ನೂ ೨ ವರ್ಷ ನೆಹರೂರವರೇ ಕಾಂಗ್ರೆಸ್ ಅಧ್ಯಕ್ಷರು

ಕಾಂಗ್ರೆಸ್ ಪಕ್ಷದ ಹಿರಿಯ ಶ್ರೇಣಿಯ ಮುಖಂಡರು ಕಳೆದ ವಾರಾಂತ್ಯದಲ್ಲಿ ಚರ್ಚೆ ನಡಸಿದ ಪರಿಣಾಮವಾಗಿ ಇನ್ನೆರಡು ವರ್ಷಗಳ ಕಾಲ ಕಾಂಗ್ರೆಸ್ ಅಧ್ಯಕ್ಷರಾಗಿ ಪಂಡಿತ ನೆಹರೂರವರೇ ಇರುವುದು ಖಚಿತವೆಂದು ವರದಿಯಾಗಿದೆ ಕಾಂಗ್ರೆಸ್ ಅಧ್ಯಕ್ಷರ ಜೊತೆಗೆ ಸಂಸ್ಥೆಯ ವ್ಯವಸ್ಥಾ ಕಾರ್ಯಗಳ ಕಡೆ ಎಗ್ಗೆ ಗಮನವೀಯಲು ಒಬ್ಬ ಉಪಾಧ್ಯಕ್ಷರನ್ನೂ ನಹ ನೇಮಿಸುವ ವಿಷಯವು ಪುನ ಪರಿಶೀಲಿಸಲ್ಪಡುತ್ತಿರುವುದೆಂದು ಹೇಳಲಾಗಿದೆ

ಕೊರಿಯಾದಲ್ಲಿ ಕಮ್ಯೂನಿಸ್ಟರ ಉಗ್ರ ಧಾಳಿ

ಕೊರಿಯಾ ರಣರಂಗದಲ್ಲಿ ಶಾಂತಿಸಂಧಾನ ನಡೆಯುತ್ತಿದ್ದ ಕ್ಷೇತ್ರದ ಬಳಿ ಕಮ್ಯೂನಿಸ್ಟರು ಮೊನ್ನೆ ರಾತ್ರಿಯಿಂದ ಉಗ್ರ ಧಾಳಿಯನ್ನಾರಂಭಿಸಿರುವರು ೨೧ ಸಾವಿರ ಫಿರಂಗಿ ಮತ್ತು ತೋಪು ಗುಂಡುಗಳನ್ನು ಈಗಾಗಲೇ ಅವರು ಹಾರಿಸಿರುತ್ತಾರೆ ವಿಶ್ವಸಂಸ್ಥೆಯ ಸೈನ್ಯಗಳಿರುವ ಐದು ಪ್ರದೇಶಗಳ ಮೇಲೆ ಧಾಳಿಯು ನಡೆದಿರುತ್ತದೆ

ಮಳೆಗಾಗಿ ಆಮರಣಾಂತ ಉಪವಾಸ

ಮಧ್ಯ ಭಾರತದ ಒಬ್ಬ ಪ್ರಾರ್ಥಕನು ಸೌಂಧ್ವ ಎಂಬಲ್ಲಿನ ದೇವಾಲಯವೊಂದರಲ್ಲಿ ಮಳೆಗಾಗಿ ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾನೆ ನಿದ್ರಾಹಾರಗಳಿಲ್ಲದೆ ಆತನು ೪ ದಿನಗಳಿಂದಲೂ, ಕಣ್ಣು ಮುಚ್ಚಿಕೊಂಡು ನಿಂತು ಪ್ರಾರ್ಥನೆ ನಡೆಸುತ್ತಿರುವನು

ಕುಡಿಯುವ ನೀರಿನ ಸೌಕರ್ಯಕ್ಕಾಗಿ ಸರ್ಕಾರದ ಸಾಲ

ಸಂಸ್ಥಾನದಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಕಲ್ಪಿಸಲು ಮೈಸೂರು ಸರ್ಕಾರದವರು ಸಾಲವೊಂದನ್ನು ಎತ್ತುವರೆಂದು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ ಬರುವ ತಿಂಗಳು ನಡೆಯುವ ಶಾಸನ ಸಭೆಗಳಲ್ಲಿ ಈ ಬಗ್ಗೆ ಯೋಜನೆಯೊಂದನ್ನು ಮಂಡಿಸಲಾಗುವುದೆಂದೂ ಅವರು ಹೇಳಿರುವರು

ಆಂಧ್ರ ಪ್ರಾಂತಕ್ಕಾಗಿ ಕಂದಾಯದ ನಿರಾಕರಣೆ

ಸರ್ಕಾರದವರು ಇದುವರೆಗೆ ಆಂಧ್ರ ಪ್ರಾಂತ ನಿರ್ಮಾಣದ ಬಗ್ಗೆ ಜನರ ಬೇಡಿಕೆಯನ್ನು ಈಡೇರಿಸದಿರುವುದರಿಂದ, ಸ್ವಾಮಿ ಸೀತಾರಾಮರವರು ಅದರ ನಿರ್ಮಾಣಕ್ಕಾಗಿ ಸತ್ಯಾಗ್ರಹದ ಪಟ್ಟಿಯೊಂದನ್ನು ಪ್ರಕಟಿಸಿರುತ್ತಾರೆ ವಿದ್ಯಾರ್ಥಿಗಳು ಉಪಾಧ್ಯಾಯರು ವಕೀಲರು, ವೈದ್ಯರು ಮತ್ತು ಇತರ ನೌಕರರು ತಮ್ಮ ಕೆಲಸ ಮತ್ತು ಹುದ್ದೆಗಳನ್ನು ಬಿಟ್ಟು ಬಿಡುವುದು, ಅಕ್ಟೋಬರ್‌ರೊಳಗೆ ಪ್ರಾಂತ ನಿರ್ಮಾಣವಾಗದಿದ್ದರೆ ದೆಹಲಿಯ ಆಡಳಿತ ಕಛೇರಿ ಮುಂಭಾಗದಲ್ಲಿ ಶಾಂತಿಯುತ ಸತ್ಯಾಗ್ರಹ ನಡೆಸುವುದು, ಬರುವ ಡಿಸೆಂಬರಿನೊಳಗೂ ಪ್ರಾಂತ ನಿರ್ಮಾಣವಾಗದಿದ್ದರೆ, ಕಂದಾಯವನ್ನು ಕೊಡಲು ನಿರಾಕರಿಸುವುದು, ನೋಟುಗಳ ಚಲಾವಣೆಗೆ ವಿರೋಧವಾಗಿಯೂ, ರೈಲ್ವೆ ಆಡಳಿತವನ್ನು ಕುಂಠಿಸಲೂ, ಚಳುವಳಿಯನ್ನು ನಡೆಸುವುದು – ಇವೇ ಮುಂತಾದ ಕಾರ್ಯಕ್ರಮಗಳನ್ನು ಅವರು ಹಾಕಿರುವರು

ಕೊರಿಯಾ ಸಂಧಾನದ ಆಶಾಭಂಗ

ಕೊರಿಯಾದಲ್ಲಿ ಶಾಂತಿ ಸ್ಥಾಪನೆ ಸಂಬಂಧವಾಗಿ ನಡೆಯತಕ್ಕ ಸಂಧಾನದ ಬಗ್ಗೆ ಅಮೆರಿಕನ್ನರು ನಿರಾಶೆ ಹೊಂದಿರುವರೆಂದೂ, ತ ಯುದ್ಧವು ಅನಿರ್ದಿಷ್ಟ ಕಾಲದ ವರೆಗೂ ನಡೆಯುವುದೆಂದು ಅವರ ಭಾವಿಸಿ, ಅದಕ್ಕೆ ತಕ್ಕಂತೆ ಸಿದ್ಧತೆ ಮಾಡಿಕೊಳ್ಳುತ್ತಿರುವರೆಂದೂ ವರದಿಯಾಗಿದೆ

ಚಂದ್ರಶೇಖರ ನಗರವೆಂದು ಎ.ಐ.ಸಿ.ಸಿ. ಗೆ ಹೆಸರು

ಇಂದೂರಿನ ಕ್ರಾಂತಿಕಾರರ ಹುತಾತ್ಮರ ಪೈಕಿ ಒಬ್ಬರಾದ ಚಂದ್ರಶೇಖರ ಆಜಾದರ ಹೆಸರನ್ನು, ಅಲ್ಲಿ ಎ ಐ ಸಿ ಸಿ ಯು ಸೇರುವ ಸ್ಥಳಕ್ಕೆ ಇಡಲಾಗಿದೆ ಸಭೆಗಾಗಿ ಈಗಾಗಲೇ ಏರ್ಪಾಡುಗಳು ಬಹು ತ್ವರಿತವಾಗಿ ನಡೆಯುತ್ತಿವೆ ೧೫ ಸಾವಿರ ಜನರು ಕೂಡಬಹುದಾದ ಮಂಟಪವನ್ನು ನಿರ್ಮಾಣ ಮಾಡಲಾಗುತ್ತಿದೆ

ಸಂಗೀತೋತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದವರು ಏರ್ಪಡಿಸಿರುವ ಮೇಲ್ಕಂಡ ಉತ್ಸವದ ಅಂಗವಾಗಿ ಈ ಸಂಜೆ ೭ ಘಂಟೆಗೆ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ವಿ|| ಎಂ ಎ ಲಕ್ಷ್ಮೀನರಸಿಂಹಯ್ಯನವರ ಹ್ಯಾಕ್ಸೊಫೋನ್ ವಾದನವು ಜರುಗುವುದು. ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸುವರು ನಾಳೆ ಸಂಜೆ ೭ ಘಂಟೆಗೆ ಚಾಮುಂಡಿಪುರಂ ಶಾಖೆಯಲ್ಲಿ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಮಂದಿರದ ಶಿಷ್ಯವರ್ಗದವರಿಂದ ಗಾಯನವು ಏರ್ಪಾಡಾಗಿದೆ ಡಾ|| ಎಸ್ ಶ್ರೀಕಂಠ ಶಾಸ್ತ್ರಿಗಳವರು ಭಾಷಣ ಮಾಡುವರು

ಕಬ್ಬಿನ ಮೇಲೆ ತೆರಿಗೆ

ಸಕ್ಕರೆ ಕಾರ್ಖಾನೆಗಳಲ್ಲಿ ಅರೆಯುವ ಪಕ್ಕೆ ತರವ ಕಬ್ಬಿನ ಮೇಲೆ ಟನ್ನಿಗೆ ೭ ರೂ ಪಿನಂತೆ ಸೆಸ್ಸನ್ನು ಸರ್ಕಾರದವರು ವಿಧಿಸಿರುತ್ತಾರೆ

ಗಾಂಧಿ ಸ್ತೂಪದಲ್ಲಿರುವ ವಚನಾಮೃತ

ನೆನ್ನೆ ದಿನ ಗಾಂಧಿ ಚೌಕದಲ್ಲಿ ಸ್ಥಾಪಿತವಾದ ಸ್ಮಾರಕ ಸ್ತಂಭದಲ್ಲಿ ಈ ಕೆಳಗೆ ಕಂಡ ವಾಕ್ಯಗಳು ನಿರೂಪಿಸಲ್ಪಟ್ಟಿವೆ–

೧ ಸತ್ಯವೇ ದೇವರು, ಬೇರೆ ದೇವರಿಲ್ಲ
೨ ಸತ್ಯಸಾಧನೆಗೆ ಒಂದೇ ಮಾರ್ಗ–ಅಹಿಂಸೆ
೩ ಕ್ಷಮೆ ದಯೆ ಆತ್ಮದ ಗುಣ, ಅಕ್ರೋಧವೇ ಕ್ಷಮೆ
೪ ಪ್ರೀತಿಯಿದ್ದಲ್ಲಿ ಬಾಳು, ಹಗೆಯಿದ್ದಲ್ಲಿ ಹಾಳು
೫ ಹೆಣ್ಣು ಅಹಿಂಸೆಯ ಅವತಾರ ಪುರುಷ ಳ
೬ ಸತ್ಯಾಗ್ರಹವೇ ಸತ್ಯಶೋಧನೆಯ ದಾರಿ
೭ ಸತ್ಯಾಗ್ರಹ ಧರ್ಮಯುದ್ಧ, ಯುದ್ಧ ವಿರುದ್ಧ
೮ ಎಲ್ಲ ಧರ್ಮಗಳೂ ಸತ್ಯ, ಸಮ
೯ ಮನುಷ್ಯನಿಗೆ ಸ್ವಧರ್ಮವೇ ಶ್ರೇಯ, ಶ್ರೇಷ್ಠ
೧೦ ಮನುಷ್ಯ ಮನುಷ್ಯರಲ್ಲಿ ಭೇದ ಸಲ್ಲದು
೧೧ ರಾಟೆಯೇ ರೈತನ ಕಾಮಧೇನು, ಅನ್ನಪೂರ್ಣೆ
೧೨ ನೂತವಗೆ ಬಟ್ಟೆ, ದುಡಿದವಗೆ ಹಿಟ್ಟು
೧೩. ಸ್ವಾವಲಂಬನೆ ಬಾಳು ಪರಾವಲಂಬನೆ ಸಾವು
೧೪ ಕೈಗೆಲಸ ಕಲಿಸದ ವಿದ್ಯೆ ವ್ಯರ್ಥ
೧೫. ಯಂತ್ರ ನಗರ ಗುಲಾಮ, ನರ ಯಂತ್ರದಾಳಲ್ಲ
೧೬ ಗ್ರಾಮ ಸ್ವರಾಜ್ಯವೆ ನಿಜ ಸ್ವರಾಜ್ಯ
೧೭ ಅರ್ಥಶಾಸ್ತ್ರದ ಗುರಿ ಹಣವಲ್ಲ ಶಾಂತಿ
೧೮ ಹಸು ಭಾರತೀಯ ಜೀವನದ ಆಧಾರ

ಗಾಂಧಿ ರಾಮರಾಜ್ಯ

ರಾಮರಾಜ್ಯವೆಂದರೆ ಪಾರಮಾರ್ಥಿಕವಾಗಿ ಭೂಸ್ವರ್ಗ
ರಾಜಕೀಯವಾಗಿ ಪರಿಪೂರ್ಣ ಪ್ರಜಾತಂತ್ರ
ಅದರಲ್ಲಿ ಭಾಗ್ಯವಂತರಿಲ್ಲ, ನಿರ್ಭಾಗ್ಯರಿಲ್ಲ
ಜಾತಿ ಭೇದವಿಲ್ಲ, ಲಿಂಗ ಭೇದವಿಲ್ಲ
ರಾಮ ರಾಜ್ಯದಲ್ಲಿ ಭೂಮಿ, ರಾಷ್ಟ್ರ-ಎಲ್ಲವೂ ಜನತೆಯದು
ನ್ಯಾಯತ್ವೋ ಸಿದ್ಧಾಂತ ಪರಿಪೂರ್ಣ
ಅದರಲ್ಲಿ ವಾಕ್, ಪೂಜಾ ಸ್ವಾತಂತ್ರ್ಯವುಂಟು
ಕಾರಣ ಅದು ಸ್ವಯಂ ಸ್ಥಾಪಿತ ಶಾಸನ ಪ್ರಭುತ್ವ
ಅದರಲ್ಲಿ ನೈತಿಕ ಸಂಯಮವುಂಟು
ಇಂಥ ರಾಷ್ಟ್ರಕ್ಕೆ ಅಸ್ತಿಭಾರ ಸತ್ಯ ಅಹಿಂಸೆಗಳೇ
ಅದರಲ್ಲಿ ಸುಖ ಸಂಪದ್ಯುಕ್ತ ಗ್ರಾಮಗಳೂ, ಗ್ರಾಮ ಕೂಟಗಳೂ ಇರಬೇಕು.
ಇದನ್ನು ಸಾಧಿಸಲು ಪ್ರಯತ್ನಿಸುವುದೇ ನನಗೆ ಆನಂದ

—ಮಹಾತ್ಮಾ ಗಾಂಧಿ

ಸಹರಾ ಮರುಭೂಮಿಯಲ್ಲಿ ವನ ಮಹೋತ್ಸವ

ಆಫ್ರಿಕದ ಸಹರಾ ಮರುಭೂಮಿಯ ೧೧,೦೦೦ ಮೈಲಿ ಪ್ರದೇಶದಲ್ಲಿ ಗಿಡಗಳನ್ನು ನೆಡುವ ಕಾರ್ಯಕ್ರಮದ ಬಗ್ಗೆ ಪೂರ್ವಭಾವಿಯಾದ ಸರ್ವೆ ನಡೆಸಲು ಇಂಗ್ಲೆಂಡಿನ ರಿಚರ್ಡ್ ಬಾರ್ಬ್ ಬೇಕರ್ ಎಂಬುವರು ಅಲ್ಲಿಗೆ ಪ್ರಯಾಣ ಬೆಳಸಿದ್ದಾರೆ ಪ್ರಪಂಚದಲ್ಲೆಲ್ಲಾ ವೃಕ್ಷಗಳನ್ನು ಬೆಳೆಸಬೇಕೆಂದು ಅವರ ಹೆಬ್ಬಯಕೆ ಸಹರಾ ಮರುಭೂಮಿಯು ವರ್ಷಕ್ಕೆ ೩೦ ಮೈಲಿ ಭೂ ಪ್ರದೇಶವನ್ನು ಆಕ್ರಮಿಸುತ್ತಿರುವುದೆಂದು ಹೇಳಲಾಗಿದೆ

ವಿಶ್ವವಿದ್ಯಾಲಯದ ಚರಿತ್ರೆ ಸಂಘ

ಸೋಲ್ಯಂಡ ಸಂಘದ ಆರಂಭ ಭಾಷಣವನ್ನು ವಿದ್ಯಾ ಸಚಿವ ಶ್ರೀ ಎ ಜಿ ರಾಮಚಂದ್ರರಾಯರು ನೆನ್ನೆ ದಿನ ಮಹಾರಾಜಾ ಕಾಲೇಜಿನಲ್ಲಿ ಮಾಡಿದರು ಪ್ರಿನ್ಸಿಪಾಲರಾದ ಶ್ರೀ ಎಸ್ ವಿ ರಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು ಸಂಘದ ಅಧ್ಯಕ್ಷರಾದ ಡಾ॥ ಎಂ ವಿ ಕೃಷ್ಣರಾಯರು ಸ್ವಾಗತ ಭಾಷಣವನ್ನು ಮಾಡಿದ ಮೇಲೆ ಮಾನ್ಯ ಸಚಿವರು ಪಂಡಿತ ನೆಹರೂರವರ ಭಾವಚಿತ್ರವನ್ನು ಅನಾವರಣ ಮಾಡಿ, ವಿದ್ಯಾರ್ಥಿಗಳಿಗೆ ಉತ್ತೇಜಕ ಮಾತುಗಳನ್ನಾಡಿದರು ಸಂಘದ ಉಪಾಧ್ಯಕ್ಷರಾದ ಎ ವಿ ಗೋಪಾಲರವರು ಅತಿಥಿಗಳಿಗೆ ಪುಷ್ಪ ಮಾಲೆಯನ್ನು ಅರ್ಪಿಸಿದರು ಸಂಘದ ಕಾರ್ಯದರ್ಶಿ ಜೆ ಎಚ್. ಪ ರಿಯಪ್ಪನವರು ವಂದನಾರ್ಪಣೆ ಮಾಡಿದರು

ಪುಸ್ತಕ ಕಳೆದುಹೋಗಿದೆ

ಕಳೆದ ತಾ॥ ೯ ರ ಸಾಯಂಕಾಲ H7 977 "Introduction to the Theory of Public Administration" -By White ಎಂಬ ಮಹಾರಾಜಾ ಕಾಲೇಜು ಲೈಬ್ರರಿ ಪುಸ್ತಕವು ಕಳೆದುಹೋಗಿದ ಯಾರಾದರೂ ಸಿಕ್ಕಿದವರು ಈ ವಿಳಾಸಕ್ಕೆ ತಲಪಿಸಿ ಉಪಕಾರ ಮಾಡಿ ತಕ್ಕ ಬಹುಮಾನ ಪಡೆಯಬೇಕಾಗಿ ಕೋರಿದೆ

ಎಲ್. ಮಹದೇವಪ್ಪ, ಸೀನಿಯರ್ ಬಿ ಎ ಮಹಾರಾಜಾ ಕಾಲೇಜು, ಮೈಸೂರು.

ಗಣಪತಿ ಮಂಗಳಾರತಿ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾದಲ್ಲಿರುವ ಶ್ರೀ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ರಾಜ ಪರಿವಾರ ಸಂಘದವರು ನೆನ್ನೆ ಮಧ್ಯಾಹ್ನ ಒರಿಯ ಶಾಸನ ಸಭಾ ಸದಸ್ಯರೂ, ಸಂಘದ ಅಧ್ಯಕ್ಷರೂ ಆದ ಶ್ರೀ ಪಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ವಿದ್ಯಾ ಗಣಪತಿಯ ಮಂಗಳಾರತಿಯನ್ನು ನೆರವೇರಿಸಿದರು

ಶಾರದಾ ವಿಲಾಸ ಮಾಧ್ಯಮಿಕ ಶಾಲೆಯಲ್ಲಿ ನೆನ್ನೆ ಸಂಜೆ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಸಮ್ಮುಖದಲ್ಲಿ ಗಣಪತಿ ಮಂಗಳಾರತಿಯು ನಡೆಯಿತು

ಶಾರದಾ ವಿಲಾಸ ಹೈಸ್ಕೂಲಿನ ಕಮರ್ಶಿಯಲ್ ಶಾಲೆಯ ಲ್ಲಿ ನೆನ್ನೆ ಸಮಾರಂಭವು ಏರ್ಪಾಡಾಗಿದ್ದಿತು

ವಾಣಿವಿಲಾಸ ರಸ್ತೆಯಲ್ಲಿರುವ ರ್‍ಾ॥ ಸಾ॥ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದವರು ಕಳೆದ ೬ ನೇ ತಾ॥ ಮತ್ತು ನೆನ್ನೆ ಗಣಪತಿ ಮಂಗಳಾರತಿಯನ್ನು ನಡೆಸಿದರು

ಫುಟ್ ಬಾಲ್ ಪಂದ್ಯ

ರಾಜಧಾನಿಯಲ್ಲಿ ನ್ಯೂ ಫಂಡ್ ಫುಟ್‌ಬಾಲ್ ಟೂರ್ನಮೆಂಟಿನ ಅಂಗವಾಗಿ ನೆನ್ನೆ ನಡೆದ ತಕ್ಷೀರ ಪಂದ್ಯದಲ್ಲಿ ನಜರ್‌ಬಾದ್ ದಿನ ಗೋಲ್ಡ್‌ಬಾರ್ಗ್ ಕ್ಲಬ್ಬಿನವರು ರ್ಯಾಂಬ್ಲರ್ಸ್ ಕ್ಲಬ್ಬಿನವರನ್ನು ೧-೦ ಗೋಲಿನಿಂದ ಸೋಲಿಸಿದರು

SRI GAYATHRI TALKIES
Daily 2 Shows
From 1 . 9-52 To 5 Days
M G Ms
KIND LADY
With Ethel Barrymore
— NEXT CHANGE
FORT WORTH

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಬಿ ವಿ ರಾಮಚಂದ್ರ ಶಾಸ್ತ್ರಿ ಸಂಗೀತ ಸುಧಾಸ್ನಾನ ೧ ೪೦ ಪಿಟೀ ೨ ವಸಂತ ವಿಹಾರ, ಮಹಿಳೆಯರ ಕಾರ್ಯಕ್ರಮ ಸಂಜೆ ೫ ೩೦ ಬಿ ವಿ ರಾಮಚಂದ್ರ ಶಾಸ್ತ್ರಿ, ಸಂಗೀತ ೬ ೧೦ ಬಾಲ ಜಗತ್ ಕೃಷಿ ಕಾರ್ಯಕ್ರಮ ೭ ಹೆಚ್ ಆರ್ ಲಾವಣಿ ಹಿಂದಿ ಗೀತೆಗಳು ೭ ೦ ಗೀತ ಹಲಿ ೭ ೪೦ ವಿಚಾರ ವೇದಿಕೆ, ಕನ್ನಡ ಚರ್ಚೆ ೮ ಬಿ. ಆರ್ ಗೋವಿಂದ ಸ್ವಾಮಿ ಪಿಟೀಲು ೯ ೧೫ ಸಣ್ಣ ಕಥೆ ೯ ೪೦ ಜನಪ್ರಿಯ ಗೀತೆಗಳು

ಮೈಸೂರು ಪೇಟೆ ಧಾರಣೆ

	ಪಲ್ಲಗಳಿಗೆ ರೂ	ಇಂದ ರೂ.
ನೆಲಗಡಲೆ	೧೨-೮-೦	೨೨ ೪
ಎಳ್ಳು	೬೮ ೦ ೦	೭೫ ೦
ಹುಚ್ಚೆಳ್ಳು	೫೧ ೧೪ ೦	
ಹರಳು ಬೀಜ	೫೪ ೧೨ ೦	
ಹುರುಳಿ	೫೦ ೦ ೦	೫೪ ೦
ಹೆಸರು	೬೯ ೦ ೦	
ಹೊಂಗೇಬೀಜ	೨೫ ೦ ೦	
ಉದ್ದು	೭೫ ೧೨ ೦	೭೮ ೦
ಅವರೆ	೭೯ ೧೦-೦	
ಹಲಸಂದೆ	೬೭-೨-೦	೭೭
ಹುಣಿಸೇ ಹಣ್ಣು		
ಹುಣ ಗಿಕ್ಕೆ	೧೪ ೧೨ ೦	
ಹ ಣಸೇಹಣ್ಣು	೩ ೨ ೦	೫-೦
ಸೀಗೇಕಾಯಿ	೫ ೨ ೦	
ಬೆಲ್ಲ	೩ ೧೦-೦	
ತೆಂಗಿನ ಕಾಯಿ ೧೦೦೦ ಕ್ಕೆ	೧೫ ೦ ೦	೨೨ ೦ ೦

PRABHA
From 9-9-52 For 3 Days
Daily 3 Shows
Italian Picture Produced by
English Director Producer of
the Famous Film Bicycle Thief
BITTER RICE
With Silvana Mangano
Vittorio Gassmann

Edited, Printed and Published by A R Nagaraja at Sadhvi Press, D Subbaiah Road, Mysore

ಬಜಾರಾ ಮತ್ತು ಕಲ್ಲು ಸಕ್ಕರೆ, ಲಿಲ್ಲೀ ಬ್ರಾಂಡ್ ಕಾಫಿ ಮಾರಾಟಕ್ಕಿವೆ
ನಮ್ಮಲ್ಲಿ ತಯಾರಾಗ ವ ಪರ ಪ್ರಿ ಬಜಾರಾ, ಕಲ್ಲು ಸಕ್ಕರೆ ಲಿಲ್ಲೀ ಬ್ರಾಂಡ್ ಕಾಫಿ ಪುಡಿ ಪಟ್ಟಣಿಗಳು ಚಿಲ್ಲರೆಯಾಗಿಯೂ ದೊರೆಯುತ್ತವೆ ಕಂಟ್ರೋಲು ಇಲ್ಲ ವ್ಯಾಪಾರಸ್ಥರಿಗೆ ರಿಯಾಯಿತಿ ದೊರೆಯುತ್ತೆ
ಡಿ ಪುಟ್ಟಯ್ಯ, ಸಕ್ಕರೆ ಮಂಡಿ ಸಂತೇಪೇಟೆ, ಮೈಸೂರು

If You Like Pure & Best Coffee, Don't Forget To Come To
SRI CHAMUNDESWARI BHAVAN
Boarding, Lodging & Restaurant, Yelwal Road, Mysore
DRINK & ENJOY
OUR PURE AND HIGH-FLAVOURED
PLANTATION 'A' COFFEE
Taste Our Sweets Prepared From Pure Ghee and Delicious and Wholesome Meals

PORTABLE REMINGTON TYPEWRITERS
AVAILABLE FROM READY STOCK AT
C. B. General Stores : Yelwal Road, Mysore

ಲಿಪೂ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೦-೯-೧೯೫೩ [ಸಂಚಿಕೆ ೩೪

ಕೃಷ್ಣಾ ನದಿಯಲ್ಲಿ ಭಾರಿ -ದೋಣಿ ಅನಾಹುತ-

ಕಾರ್ಮಿಕರುಗಳಿಗೆ ಗೃಹ ವಸತಿ ಸೌಕರ್ಯ

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರಿಂದ ಸರ್ಕಾರಕ್ಕೆ ಮನವಿ

ಮೈಸೂರು ೧೦

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ... ಹಾಲಿನಲ್ಲಿ ನಡೆಯಿತು ಶಾಸನ ಸಭಾ ಸದಸ್ಯರೂ, ಸಂಘದ ಅಧ್ಯಕ್ಷರೂ ಆದ ಶ್ರೀ ಕೆ ಪುಟ್ಟಸ್ವಾಮಿಯವರು ... ವಹಿಸಿದ್ದರು

... ಗಾರಿಕಾ ನ್ಯಾಯಾಲಯದ ಬದಲು ಕಾರ್ಮಿಕ ಸಂಘಗಳು ಮತ್ತು ಆಡಳಿತ ಮಂಡಲಿಯ ಪ್ರತಿನಿಧಿಗಳುಳ್ಳ ಸ್ವಯಂ ಪ್ರೇರಿತ ಪಂಚಾಯಿತಿಗಳನ್ನು ... ಡಿಸುವ ಕಾನೂನನ್ನು ಭಾರತ ಸರ್ಕಾರದವರು ಕೈಗೊಳ್ಳುವಂತೆ ಕೋರುವ ನಿರ್ಣಯವನ್ನು ಮಾಡಲಾಯಿತು ... ಮಿಕರುಗಳಿಗಾಗಿ ವಸತಿ ಗೃಹಗಳ ಕಟ್ಟಿಸಲು ಭಾರತ ಸರ್ಕಾರದವ ... ಮೈಸೂರು ಸರ್ಕಾರದವರೂ ಒದಗಿಸಲಿರುವ ಒಟ್ಟು ೩೦ ಲಕ್ಷ ರೂ ... ಗಿನಲ್ಲಿ ಜಾಗ್ರತೆಯಾಗಿ ರಾಜಧಾನಿ ... ರ್ಮಿಕರುಗಳಿಗಾಗಿ ಮನೆಗಳನ್ನು ... ರ್ಮಾಣ ಮಾಡುವಂತೆ ಸರ್ಕಾರವನ್ನು ... ಸಲಾಯಿತು

... ನಸಗೀ ಕೈಗಾರಿಕೆಗಳ ಕಾರ್ಮಿಕರಿಗೆ ... ರಾಷ್ಟ್ರೀಯ ಹಬ್ಬದ ದಿನಗಳಲ್ಲಿ ಸಂಬಳ ಸಹಿತದ ರಜವು ದೊರೆಯುವಂತೆ ... ತ ಸರ್ಕಾರದವರು ಕಾನೂನು ಮಾಡಬೇಕೆಂದು ಕೋರಲಾಯಿತು

ನೂತನ ಅಧಿಕಾರ ವರ್ಗದ ಚುನಾ... ಯು ನಡದು ಶ್ರೀ ಕೆ ಪುಟ್ಟಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ... ರಾಮಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎ ಸಿ ಒಬ್ಳೇಗೌಡರು ... ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀ ಎಸ್ ... ವಿಂದರಾಜುರವರು ಸಹಾಯಕ ಕಾರ್ಯದರ್ಶಿಯಾಗಿಯೂ, ಮತ್ತು ಶ್ರೀ ... ಸಿ ಚಲುವಯ್ಯನವರು ಖಜಾಂಚಿ ... ಗಿಯೂ ಆರಿಸಲ್ಪಟ್ಟರು

... ಕೇಶವ ಸಂಗೀತ ಮಂದಿರದ ವಾರ್ಷಿಕೋತ್ಸವ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀ ಕೇಶವ ಸಂಗೀತ ಮಂದಿರದ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ನಡೆಯುವುದು ಸಂಗೀತ ಶಾಸ್ತ್ರವಿಶಾರದ ಶ್ರೀ ಕೆ. ವಾಸುದೇವಾಚಾರ್ಯರು ಅಧ್ಯಕ್ಷತೆ ವಹಿಸುವರು ... ಸಂ॥ ರ॥ ಟಿ ಚೌಡಯ್ಯನವರಿಗೆ ... ಸನ್ಮಾನ ಮಾಡಲೇರ್ಪಾಡಾಗಿದೆ

ಸಂಗೀತ ಮತ್ತು ಹರಿಕಥೆ

ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿರುವ ದೇವಾಂಗ ಸಂಘದ ಕಟ್ಟಡದಲ್ಲಿ ಗಣಪತಿ ಮಂಗಳಾರತಿ ಅಂಗವಾಗಿ ಈ ರಾತ್ರಿ ೮ ಗಂಟೆಗೆ ವಿ॥ ಆರ್ ... ಯ್ಯನವರ ಸಂಗೀತ, ನಾಳೆ ರಾತ್ರಿ ... ಲ॥ ವಿ॥ ಎಸ್. ಎಂ ಮರಿಯಪ್ಪನವರ ಸಂಗೀತ, ನಾಳಿದ್ದು ಸಂಜೆ ೬ ಗಂಟೆಗೆ ಬೆಂಗಳೂರಿನ ಶ್ರೀ ಸಿ ರಾಮಸ್ವಾಮಿ ನಾಯ್ಡುರವರಿಂದ 'ಗಜಗೌರೀವ್ರತ' ... ಹರಿಕಥೆ, ಅದೇ ರಾತ್ರಿ ೮ ಗಂಟೆಗೆ ... ದರ ಕಲಾ ಮಂಡಲಿಯವರ ... ವಾರದ ದಿನ ಸಂಜೆ ೬ಕ್ಕೆ ಗಣ... ಉತ್ಸವವೂ ಏರ್ಪಾಡಾಗಿದೆ

ಸ್ಟ್ಯಾಲಿನರು ೧೫೦ ವರ್ಷ ಬದುಕುವರೇ ?

ರಷ್ಯದ ಪ್ರಧಾನಿ ಮಾರ್ಷಲ್ ಸ್ಟ್ಯಾಲಿನ್ನರು ೧೫೦ ವರ್ಷ ಅಥವಾ ಅದಕ್ಕೂ ಹೆಚ್ಚು ಕಾಲ ಬದುಕಲು ಸಾಧ್ಯವಿರುವುದೆಂದು ಅವರಿಗೆ ಅಲ್ಲಿನ ವೈಜ್ಞಾನಿಕರು ತಿಳಿಸುತ್ತಿರುವುದಾಗಿ ವರದಿಯಾಗಿದೆ. ಈ ವಿಜ್ಞಾನಿಗಳು ಶರೀರದ ಕೆಂಪು ರಕ್ತಕಣಗಳು ಹೆಚ್ಚು ಕಾಲ ಚಟುವಟಿಕೆಯಿಂದಿರುವಂತೆ ಮಾಡಲು ಸ್ಟ್ಯಾಲಿನ್ನರಿಗೆ ಸೋಡಾ ಸ್ನಾನವನ್ನು ಮಾಡಿಸುತ್ತಿರುವರು

ಮಶ್ರೂವಾಲಾರವರ ನಿಧನ

ಹರಿಜನ ಪತ್ರಿಕೆಯ ಸಂಪಾದಕರೂ ಮಹಾತ್ಮಾ ಗಾಂಧಿಜಿಯವರ ತತ್ವಗಳನ್ನು ಚೆನ್ನಾಗಿ ಪ್ರತಿಪಾದಿಸುವವರೂ ಆದ ಶ್ರೀ ಕಿಶೋರಿಲಾಲ್ ಮಶ್ರೂವಾಲಾರವರು ನೆನ್ನೆ ವಾರ್ಧಾವಿನಲ್ಲಿ ಮೃತಿ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೬೧ ವರ್ಷ ವಯಸ್ಸಾಗಿದ್ದಿತು ಕಳೆದ ಶನಿವಾರ ಅವರಿಗೆ ಉಬ್ಬಸದ ವ್ಯಾಧಿಯುಂಟಾಯಿತು ಗುಜರಾತಿನ ಪ್ರಖ್ಯಾತ ಧಾರ್ಮಿಕ ಮನೆತನಕ್ಕೆ ಜನರು ಸೇರಿದವರಾಗಿದ್ದು, ಅವರ ಜೀವನದ ಮೇಲೆ ಗೋಖಲೆ ಮತ್ತು ಎ ವಿ ಠಕ್ಕರ್‌ರವರ ತತ್ವ ಪ್ರತಿಪಾದನೆಗಳು ಹೆಚ್ಚು ಪರಿಣಾಮವನ್ನುಂಟುಮಾಡಿದ್ದುವು ಅವರು ೧೯೧೭ರಲ್ಲಿ ಗಾಂಧಿಜಿಯವರನ್ನು ಸಂದರ್ಶಿಸಿ, ಅಂದಿನಿಂದಲೂ ಗಾಂಧಿಜಿಯವರೊಡನೆ ಸೇರಿದ್ದರು

ಬಹಿರಂಗ ಸಭೆ

ರಾಜಧಾನಿಯ ಪುರಭವನದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ ಬೆಂಗಳೂರಿನ ಶ್ರೀ ಡಿ ಎಸ್ ಕೃಷ್ಣಯ್ಯಶೆಟ್ಟರು ಅಧ್ಯಕ್ಷತೆ ವಹಿಸುವರು ಶ್ರೀಗಳಾದ ಬಿ ಜಿ ದಾಸ್, ಎಂ ಆರ್ ಸಿ ಬಸಪ್ಪ, ಮತ್ತು ಎಂ, ಎಸ್ ತಿಮ್ಮಯ್ಯನವರು ಭಾಷಣ ಮಾಡುವರು ಗಂಡಭೇರುಂಡ ಧ್ವಜವನ್ನು ತೆಗೆದುದು, ಕಾಂಗ್ರೆಸ್ ಶ್ರೀ ... ಗೌರಿ ಹಾಡನ್ನು ನಿಷೇಧಿಸಿದ್ದುದು, ದಸರಾ ದರ್ಬಾರಿನ ಬದಲು ರಾಜಸಭೆಯನ್ನು ಏರ್ಪಡಿಸಿರುವುದು, ಇವೇ ಮುಂತಾದ ವಿಷಯಗಳನ್ನು ಕುರಿತು ಭಾಷಣಗಳಾಗುವುವು

ಕೃಷ್ಣಾ ನದಿಯಲ್ಲಿ ಭಾರಿ ದೋಣಿ ಅನಾಹುತ

ಮೂವರು ಇಂಜನಿಯರುಗಳು ಮತ್ತು ಇಪ್ಪತ್ತೆರಡು ಜನರ ಮರಣ

ವಿಜಯವಾಡದ ಬಳಿ ಕೃಷ್ಣಾ ನದಿಯ ಅಣೆಕಟ್ಟಿನ ಸಮೀಪದಲ್ಲಿ ನೆನ್ನೆ ಸಂಜೆ ಎರಡು ದೋಣಿಗಳು ಅನಾಹುತಕ್ಕೆ ಒಳಗಾಗಿ ಅವುಗಳಲ್ಲಿದ್ದ ಮೂರು ಜನ ಇಂಜನಿಯರುಗಳೂ, ಇಪ್ಪತ್ತು ಜನ ಕೆಲಸಗಾರರೂ ನದಿಯಲ್ಲಿ ಮುಳುಗಿ ಮೃತರಾದರೆಂದು ತಿಳಿದು ಬಂದಿದೆ ಕೆಲಸಗಾರರ ಪೈಕಿ ನಾಲ್ವರೂ, ಅಧಿಕಾರಿಗಳ ಪೈಕಿ ಒಬ್ಬ ಅಸಿಸ್ಟೆಂಟ್ ಇಂಜನಿಯರೂ ಒಹಳ ಕಷ್ಟಪಟ್ಟು ಈಜಿಕೊಂಡು ದಡವನ್ನು ಸೇರಿದರು ಅಣೆಕಟ್ಟಿನ ರಿಪೇರಿಗಾಗಿ ಮರಳು ಚೀಲಗಳನ್ನು ತುಂಬಿಕೊಂಡು ಹೋಗುತ್ತಿದ್ದ ಸ್ಟೀಂ ಲಾಂಚಿಗೆ ಕಟ್ಟಿದ ಎರಡು ದೋಣಿಗಳಲ್ಲಿ ಅಧಿಕಾರಿಗಳೂ, ಕೆಲಸಗಾರರೂ ಕುಳಿತಿದ್ದಾಗ, ಹಠಾತ್ತನೆ ಸ್ಟೀಂ ಲಾಂಚು ಒಂದು ದೋಣಿಗೆ ಬಲವಾಗಿ ಡಿಕ್ಕಿ ಹೊಡೆದುದರಿಂದ ಅದು ಮುಳುಗಿ ಅದರಲ್ಲಿದ್ದ ಸೂಪರಿಂಟೆಂಡಿಂಗ್ ಇಂಜನಿಯರ್ ವೇ ಪಾ ಕೃಷ್ಣಮೂರ್ತಿ, ಎಗ್ಸಿಕ್ಯುಟಿವ್ ಇಂಜನಿಯರ್ ಬಿ ಕೃಷ್ಣಮಾಚಾರಿ, ಅಣೆಕಟ್ಟು ಸೂಪರಿಂಟೆಂಡೆಂಟ್ ವಿ ಸೀತಾರಾಮಯ್ಯ ಮತ್ತು ಅವರ ಬಾವಮೈದುನರು ಮುಳುಗಿದರು ಅದೇ ವೇಳೆಯೇ ಈ ದೋಣಿಯು ಇನ್ನೊಂದು ದೋಣಿಗೆ ಡಿಕ್ಕಿ ಹೊಡೆದುದರಿಂದ ಅದರಲ್ಲಿದ್ದ ೨೦ ಜನ ಕೆಲಸಗಾರರ ಪೈಕಿ ೧೮ ಜನರು ನೀರಿನ ಪಾಲಾದರು

-ಜಗಳೂರು ಹಳ್ಳಿಗರಿಗೆ ಹುಣಿಸೇ ಬೀಜವೇ ಆಹಾರ

ಜಗಳೂರು ತಾಲ್ಲೂಕಿನಲ್ಲಿ ಬೀಕರ ಅಭಾವವು ತಲೆದೋರಿದೆಯೆಂದೂ ಭಾವಿ ಕೆರೆಗಳು ಬತ್ತಿಹೋಗಿ ಕುಡಿಯಲು ನೀರಿಲ್ಲದಾಗಿರುವುದೆಂದೂ, ಜನರು ಗೆಡ್ಡೆ ಗೆಣಸು, ಸೊಪ್ಪು, ಹುಣಿಸೇಬೀಜ ಇವುಗಳನ್ನು ತಿನ್ನುತ್ತಿರುವರೆಂದೂ ಹೇಳಲಾಗಿದೆ ದನಗಳಿಗೆ ಈಚಲು ಗರಿಗಳು ಆಹಾರವಾಗಿವೆ ಹಳ್ಳಿಗಳಲ್ಲಿ "ಹಗೇವುಗಳನ್ನು ಲೂಟ" ಮಾಡಲಾಗುತ್ತಿರುವುದೆಂದೂ ವರದಿಯಾಗಿದೆ. ಕೆಲ್ಲೋನ ಹಳ್ಳಿಯಲ್ಲಿ ಒಬ್ಬನು ಆಹಾರವಿಲ್ಲದೆ ಮೃತ್ಯುವಶನಾದನೆಂದೂ ಹೇಳಲಾಗಿದೆ

೧೦ ಲಕ್ಷ ಎಕರೆ ಜಮೀನು ಈಜಿಪ್ಟ್ ಸರ್ಕಾರದ ವಶ

ಈಜಿಪ್ಟಿನ ಮಿಲಿಟರಿ ಗೌರ್ನರ್ ಜನರಲ್ಲರಾದ ನಗೀಬ್‌ರವರು ಜಮೀನುದಾರರಿಂದ ೧೦ ಲಕ್ಷ ಎಕರೆಯಷ್ಟು ಭೂಮಿಯನ್ನು ವಶಪಡಿಸಿಕೊಳ್ಳುವಂತೆ ಆಜ್ಞೆ ಮಾಡಿರುತ್ತಾರೆ ಅವರುಗಳಿಗೆ ಶೇ॥ ೩ ರಂತೆ ಬಡ್ಡಿ ದೊರೆಯುವ ೩೦ ವರ್ಷಗಳ ಅವಧಿಯ ಸಾಲಪತ್ರಗಳನ್ನು ಕೊಡಲಾಗುವುದು ೨೦೦ ಫೆಡ್ಡಾನು (ಈಜಿಪ್ಟಿನ ಭೂಮಿ ಅಳತೆ) ಗಳಿಗಿಂತ ಹೆಚ್ಚು ಜಮೀನು ಇರುವವರು ತಮ್ಮ ಜಮೀನನ್ನು ಇತರರಿಗೆ ಮಾರಲು ಅನುಕೂಲವೀಯಲಾಗಿದೆ

ಅಲ್ಲಿನ ಹೊಸ ರಾಜಕೀಯ ಪಕ್ಷಗಳು ಇನ್ನು ಮುಂದೆ ಸರ್ಕಾರದವರಿಗೆ ತಮ್ಮ ಸಂಸ್ಥೆಗಳ ಧ್ಯೇಯ, ಸದಸ್ಯರು, ಹಣಕಾಸಿನ ಸ್ಥಿತಿ ಇವೇ ಮುಂತಾದ ... ಗ್ಗೆ ವಿವರವನ್ನು ಕೊಡಬೇಕೆಂದು ಸೂಚಿಸಲಾಗಿದೆ ಈಗಿರುವ ಪಕ್ಷಗಳು ಸರ್ಕಾರದ ಸೂಚನೆ ಪ್ರಕಾರ ತಮ್ಮ ಸಂಸ್ಥೆಗಳಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುವುದು

ಫೌದ್‌ದೊರೆ ಚಿತ್ರದ ಬದಲು ಅಲ್ಲಾ ಎಂಬ ಹೆಸರು

ಈಜಿಪ್ಟ್ ಪ್ರಧಾನಿಯು ಕಛೇರಿಯಲ್ಲಿದ್ದ ದೊರೆ ಫೌದರ ಚಿತ್ರವನ್ನು ಜ॥ ನಗೀಬರು ತೆಗೆಸಿ ಅದರ ಸ್ಥಾನದಲ್ಲಿ ಅಲ್ಲಾ ಎಂದು ಬರೆದಿರುವ ಬೋರ್ಡನ್ನು ತಗುಲಿಹಾಕಿಸಿರುವರು

ಹೊಟ್ಟೆ ಬಳಿ ಅಂಟಿರುವ ಅವಳಿ ಮಕ್ಕಳು

ಮಲಯಾಳದ ತಂದೆ ತಾಯಿಗಳಿಬ್ಬರು ಮದ್ರಾಸಿನ ಆಸ್ಪತ್ರೆಗೆ ಪಿತ್ತಕೋಶವಿರುವ ಭಾಗದಲ್ಲಿ ಅಂಟಿಕೊಂಡಿರುವ ಎರಡೂ ೭ ತಿಂಗಳಿನ ಅವಳಿ ಮಕ್ಕಳನ್ನು ಶಸ್ತ್ರಚಿಕಿತ್ಸೆಗೆ ತಂದಿರುತ್ತಾರೆ ಬೆನ್ನಿನ ಕಡೆಯಲ್ಲಿ ಅಂಟಿರುವ ಮಕ್ಕಳು ವೈದ್ಯರಿಗೆ ಸಾಮಾನ್ಯವಾಗಿರ ವುವಾದರೂ, ಈ ಅವಳಿ ಮಕ್ಕಳಿನ ಬಗ್ಗೆ ಅವರು ಆಶ್ಚರ್ಯವನ್ನು ವ್ಯಕ್ತಪಡಿಸಿರುತ್ತಾರೆ ಎರಡು ಮಕ್ಕಳೂ ಒಂದೇ ಪಿತ್ತಕೋಶವನ್ನು ಹೊಂದಿವೆ ಅವುಗಳನ್ನು ಬೇರ್ಪಡಿಸಲು ಶಸ್ತ್ರ ಚಿಕಿತ್ಸೆ ನಡೆಸಿದರೆ ಒಂದು ಅಥವಾ ಎರಡು ಮಕ್ಕಳೂ ಸಾಯಬಹುದೆಂದು ವೈದ್ಯರ ಅಭಿಪ್ರಾಯವಾಗಿದೆ

ಡಾನ್ಯೂಬ್ ನದಿಯಲ್ಲಿ ೫೦ ಜನರ ಮರಣ

ಪೂರ್ವ ಯೂರೋಪಿನ ಡಾನ್ಯೂಬ್ ನದಿಯಲ್ಲಿ ಒಂದು ದೋಣಿಯು ಬಿರುಗಾಳಿಯ ದೆಸೆಯಿಂದ ತಲೆಕೆಳಗಾಗಿ ೫೦ ಮಂದಿ ಮೃತಪಟ್ಟರೆಂದೂ, ೩೦ ಜನರು ನೀರಿಗೆ ಹಾರಿ ಈಜಿ ಬದುಕಿಕೊಂಡರೆಂದೂ ವರದಿಯಾಗಿದೆ

ಶ್ರೀ ಕೃಷ್ಣೋತ್ಸವ

ಟಿ ನರಸೀಪುರದ ತಾಲ್ಲೂಕು ಕೃಷ್ಣಾಪುರದಲ್ಲಿ ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿಯವರಿಗೆ ನಾಳೆಯಿಂದ ಇದೇ ... ನೇ ತಾ॥ ವರೆಗೆ ಕೃಷ್ಣೋತ್ಸವವು ನಡೆಯುವುದು ೧೯ ನೇ ತಾ॥ ಶುಕ್ರವಾರ ಗೋವಿಂದರಾಜ ಪಟ್ಟಾಭಿಷೇಕ ಮಹೋತ್ಸವವೂ, ಶ್ರೀ ರುಕ್ಮಿಣಿ ಕಲ್ಯಾಣ ಮಹೋತ್ಸವ ಏರ್ಪಾಡಾಗಿದೆ

ಗೊಮ್ಮಟಗಿರಿಯಲ್ಲಿ ಮಸ್ತಕಾಭಿಷೇಕ

ಇಲವಾಲದ ಬಳಿ ಇರುವ ಗೊಮ್ಮಟಗಿರಿಯ ಶ್ರೀ ಗೋಮಟೇಶ್ವರ ಸ್ವಾಮಿಯವರ ತೃತೀಯ ಮಸ್ತಕಾಭಿಷೇಕವು ಭಾನುವಾರ ಶ್ರೀಮನ್ಮಹಾರಾಜರ ನೇತೃತ್ವದಲ್ಲಿ ವೈಭವದಿಂದ ಜರುಗಿತು ಪ್ರಭುಗಳು ಅಂದು ಬೆಳಿಗ್ಗೆ ೧೦ ಘಂಟೆಗೆ ಸರಿಯಾಗಿ ಮೋಟಾರಿನಲ್ಲಿ ಆಗಮಿಸಿ, ಬೆಟ್ಟವನ್ನು ಹತ್ತುತ್ತಾ, ಮಧ್ಯದಲ್ಲಿ ನಿಂತು ಪ್ರಜೆಗಳಿಗೆ ಸಂದರ್ಶನವನ್ನಿತ್ತರು ತರುವಾಯ ದೇವಸ್ಥಾನದಲ್ಲಿ ನಡೆದ ಅಭಿಷೇಕ ಅರ್ಚನಾದಿಗಳನ್ನು ಪ್ರಭುಗಳು ವೀಕ್ಷಿಸಿ ಆನಂದಭರಿತರಾದರು ಶ್ರೀಗಳಾದ ಜಿ ಕೆ ಡಿ ಭರಮಯ್ಯ, ಎಂ ವಿ ವಸುಪಾಲ್ ಮತ್ತು ಸಿ ಬಿ ಎಂ ಚಂದ್ರಯ್ಯನವರು ಬೆಟ್ಟದ ಬಳಿ ಪ್ರಭುಗಳಿಗೆ ಸ್ವಾಗತ ನೀಡಿದರು

೧೩೦ ವರ್ಷದವನ ಮರಣ

ಲಾಹೋರಿನ ಅತ್ಯಂತ ವಯಸ್ಕನೆಂದು ಹೇಳಲಾದ ಮಿಯ್ಯಾ ಮಹಮದ್ ಅಬ್ದುಲ್ಲಾ ಎಂಬುವನು ಕಳೆದ ೯ನೆ ತಾ|| ತನ್ನ ೧೩೦ನೇ ವಯಸಿನಲ್ಲಿ ಮೃತಪಟ್ಟನು ಅವನಿಗೆ ೨೭ ಜನ ಮೊಮ್ಮಕ್ಕಳೂ, ೬೨ ಮಂದಿ ಮರಿಮಕ್ಕಳೂ ಮೂವರು ಮಕ್ಕಳ ಮರಿ ಮಕ್ಕಳೂ ಇರುವರು

ರಾಷ್ಟ್ರೀಯ ಟ್ರೇಡ್ ಯೂನಿಯನ್ನಿಗೆ ವಿದ್ಯುಚ್ಛಕ್ತಿ ಕಾರ್ಮಿಕರ ಸಂಸ್ಥೆ

ಅಖಿಲ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಸಂಸ್ಥೆಗೆ ನಗರದ ವಿದ್ಯುಚ್ಛಕ್ತಿ ನೌಕರರ ಕೆಲಸಗಾರರ ಸಂಸ್ಥೆ ಸೇರಬೇಕೆಂದು ಸಂಘದ ಸದಸ್ಯರ ಸಭೆಯಲ್ಲಿ ಮೊನ್ನೆ ತೀರ್ಮಾನವಾಯಿತು.

ಗಮಕ ಸಂಘ, ಮೈಸೂರು

ಮೇಲ್ಕಂಡ ಸಂಘದ ಆಶ್ರಯದಲ್ಲಿ ತಾ|| ೬-೮-೫೨ ನೇ ಶನಿವಾರ ಸಂಜೆ ರಾಜಧಾನಿಯ ಸೊಪ್ಪಿನ ಕೊಳದ ಬೀದಿಯಲ್ಲಿರುವ ಗಮಕಿ ಶ್ರೀ ಬಿ ಎಸ್ ವೆಂಕಟೇಶಯ್ಯನವರ ಮನೆಯಲ್ಲಿ ಶ್ರೀ ಕೃಷ್ಣಗಿರಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಗೋಷ್ಠಿಯೊಂದು ಸೇರಿದ್ದಿತು. ಪ್ರಾರ್ಥನೆ ಮತ್ತು ಸ್ವಾಗತಗಳಾದ ನಂತರ, ಶ್ರೀ ಅಶ್ವತ್ಥನಾರಾಯಣ್‌ರವರು ಗಮಕ ಕಲೆಯ ಮಹತ್ವವನ್ನು ಕುರಿತು, ವಿಚಾರ ಪೂರಿತ ಭಾಷಣ ಮಾಡಿದರು ನಗರದಲ್ಲಿರುವ ಎಲ್ಲ ಗಮಕಿಗಳೂ ಸದಸ್ಯರಾಗಬೇಕೆಂದು ಕೋರಲಾಯಿತು ಸಂಘಕ್ಕೆ ಶ್ರೀ ಚಿಗರಂ ರಂಗಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಕೃ ರಾಮಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಕೃಷ್ಣಗಿರಿ ಕೃಷ್ಣರಾಯರು, ಶಿ ರ ಶ್ರೀನಿವಾಸಾಚಾರ್ಯರು ಮತ್ತು ಶ್ರೀಮತಿ ಚಂದ್ರ ಇವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಆರಿಸಲ್ಪಟ್ಟರು ವಾಚನ ಮತ್ತು ಅಧ್ಯಕ್ಷರ ಭಾಷಣಗಳಾದ ನಂತರ, ಸಂತಾರ್ಪಣೆ ಮತ್ತು ಪ್ರಸಾದ ವಿನಿಯೋಗಗಳೊಡನೆ ಸಭೆ ಮುಕ್ತಾಯವಾಯಿತು

ಬೊಂಬಾಯಿ ದೇವಸ್ಥಾನದಲ್ಲಿ ಇರಿತದ ಪ್ರಸಂಗ

ಬೊಂಬಾಯಿಯ ಮುಂಬಾದೇವಿ ದೇವಾಲಯದಲ್ಲಿ ಕಳೆದ ಭಾನುವಾರ ರಾತ್ರಿ ಭಜನ ನಡೆಯುವ ವೇಳೆಯಲ್ಲಿ ಒಂದು ಪಕ್ಷದವರು ಹಾಡಲು ಒಪ್ಪಿದ್ದ ಯಾವುದೋ ಒಂದು ಕೀರ್ತನೆಯ ಬಗ್ಗೆ ಇನ್ನೊಂದು ಪಕ್ಷದವರಿಗೆ ಹಿಡಿಸದೇ ಎರಡು ಪಕ್ಷಗಳವರಿಗೂ ಮಾತು ಬೆಳೆದು ಹೊಡೆದಾಟವಾಗಿ ಒಬ್ಬನು ಸ್ಥಳದಲ್ಲೇ ಇರಿಯಲ್ಪಟ್ಟನೆಂದೂ ಪೋಲೀಸರು [illegible] ನನ್ನು ಬಂಧಿಸಿ ಪಂಕ್ತಿಯ [illegible] ಕೋರ್ಟಿಗೆ ತಂದರೆಂದೂ ವರದಿಯಾಗಿದೆ

ತುಟಿ ಅಲುಗುವುದನ್ನು ನೋಡಿ ವಿಷಯ ಗ್ರಹಣ

ಲಂಡನಿನಲ್ಲಿ [illegible] ವರ್ಷದ [illegible] ಲ್ಲಿ ರೋಗಗ್ರಸ್ತಳಾದ [illegible] ನಾಲಿಗೆಯನ್ನು [illegible] ತಂದೆ [illegible] ಕೊಡ [illegible]

ಸೋಷಲಿಸ್ಟರ ಸಭೆ

[illegible]

ಬಾಳೆ ಕಾಯಿಯಿಂದ ಗಂಜಿ ಹಿಟ್ಟು

ಚಿತ್ರದುರ್ಗ ಜಿಲ್ಲೆಯ [illegible] ಯಲ್ಲಿ [illegible] ಬಾಳೆ ಕಾಯಿಯಿಂದ ಗಂಜಿ ಹಿಟ್ಟನ್ನು ತಯಾರಿಸುವ ಯಂತ್ರವೊಂದನ್ನು [illegible] ಗುವುದು ಈ [illegible] ಬಗ್ಗೆ ಹಳ್ಳಿಯವರಿಗೆ ಪ್ರದರ್ಶನ ಮಾಡಲು ಹಲವು ಕಾರ್ಯಕರ್ತರನ್ನು ಅಲ್ಲಿಗೆ ಕಳುಹಿಸಲಾಗುವುದು

ಉಪಾಧ್ಯಾಯರುಗಳ ಸಹಕಾರ ಸಂಘ

ಕಳೆದ ಭಾನುವಾರ ನಂಜನಗೂಡಿನ [illegible] ಉಪಾಧ್ಯಾಯರ [illegible] ಸಭೆಯು ನಡೆದು ಅವರ ಅನುಕೂಲಕ್ಕಾಗಿ ಸಹಕಾರ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು ಶಾಸನ ಸಭಾಸದಸ್ಯರಾದ ಶ್ರೀ ಹೆಜ್ಜಿಗೆ ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು

ನಗೀಬರು ಈಜಿಪ್ಟಿನ ಮಿಲಿಟರಿ ಗವರ್ನರ್‌ಜನರಲ್

ಈಜಿಪ್ಟಿನ ಕ್ರಾಂತಿಕಾರ ನಾಯಕ ಜನರಲ್ ನಗೀಬರನ್ನು ಅಲ್ಲಿ ಸ್ಥಾಪಿತವಾಗಿರುವ ಹೊಸ ಮಿಲಿಟರಿ ಸರ್ಕಾರದ ಗವರ್ನರ್ ಜನರಲ್ಲರನ್ನಾಗಿ ನೇಮಕ ಮಾಡಲಾಗಿದೆಯೆಂದು ವರದಿಯಾಗಿದೆ ನೊನ್ನೆ ರಾತ್ರಿ ಅಲ್ಲಿನ ಹೊಸ ಮಂತ್ರಿ ಮಂಡಲದ ಸಭೆಯು ಸಮಾವೇಶಗೊಂಡು ಯಾವ ಒಬ್ಬ ವ್ಯಕ್ತಿಯೂ ೨೦೦ ಎಕರೆಗಿಂತ ಹೆಚ್ಚು ಜಮೀನನ್ನು ಹೊಂದಿರಬಾರದೆಂಬ ಮತ್ತು ಎಲ್ಲ ದೇಶದ ಎಲ್ಲ ರಾಜಕೀಯ ಪಕ್ಷಗಳನ್ನೂ ಶುದ್ಧೀಕರಣ ಮಾಡಬೇಕೆಂಬ ಎರಡು ಶಾಸನಗಳನ್ನು ಮಂಜೂರು ಮಾಡಿತು

ಸ್ವಚ್ಛ ಭಾರತದ ಚಳುವಳಿಯ ಆರಂಭ

ಆಚಾರ್ಯ ವಿನೋಬಾಭಾವೆಯವರು ನಿನ್ನೆ ಕಾಶಿಯಲ್ಲಿ ಸ್ವಚ್ಛ ಭಾರತದ ಚಳುವಳಿಯನ್ನು ಆರಂಭಿಸಿದರು ನೂರಾರು ವಿದ್ಯಾರ್ಥಿಗಳೂ ಸಮಾಜ [illegible] ಪೌರಸ [illegible] ಮತ್ತು [illegible] ನಗರದ [illegible] ಪಟ್ಟಿಗಳ [illegible] ನಡೆಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಶಕುಂತ ಶೃಂಗಾರ ವಿಲಾಸ

ರಾಜಧಾನಿಯ ಜೈನ ಸಾಹಿತ್ಯ ಪ್ರಚಾರಕ ಸಮಿತಿಯವರ [illegible] ಗ್ರಂಥ ಮಾಲೆಯ [illegible] ಶಕುಂತ ಶೃಂಗಾರ ವಿಲಾಸ ಎಂಬ ಚಿಕ್ಕ ಗ್ರಂಥವು [illegible] ಇದನ್ನು [illegible] ಪಂಡಿತ ಕೆ ಬಿ ಜಬಲಿ ಶಾಸ್ತ್ರಿಯವರು [illegible] ಶೃಂಗಾರ ವಿಲಾಸವನ್ನು [illegible] ರೀತಿಯಲ್ಲಿ, ಕೋಮಲವಾಗಿ ವರ್ಣಿಸಲಾಗಿದೆ ಇದರ ಬೆಲೆ ೦ ೫-೦

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರಲ್, ಕೆಮ್ಮು, ಪರಿಣಾಮಕಾರಿ ಮತ್ತು (ASTH) ಗಳಾಯಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2-8-0

ಆರ್ ಎಸ್ ಪಂಡಿತರು
ರಾಮಗೋಪಾಲ ವೈದ್ಯಶಾಲಾ,
ದಿವಾನರ ರಸ್ತೆ, ಮೈಸೂರು

ಲಾಹೋರಿನಲ್ಲಿ ವಿಳ್ಳೇದೆಲೆಯ ಕ್ಷಾಮ

ಪಶ್ಚಿಮ ಪಂಜಾಬಿನ ರಾಜಧಾನಿ ಲಾಹೋರಿನಲ್ಲಿ ವಿಳ್ಳೇದೆಲೆಯ ಕ್ಷಾಮವು ಉಂಟಾಗಿದೆ ಅದನ್ನು ನಿವಾರಿಸಲು ಪೂರ್ವ ಬಂಗಾಳದಿಂದ ವಿಳ್ಳೇದೆಲೆಯ ಕಟ್ಟುಗಳನ್ನು ವಿಮಾನದಲ್ಲಿ ಲಾಹೋರಿಗೆ ಸಾಗಿಸಲಾಗುತ್ತಿದೆ ಆ ನಗರದಲ್ಲಿ ಮಾತ್ರವಲ್ಲದೆ, ನೆರೆಯ ಇತರ ಊರುಗಳಲ್ಲೂ ಈ ಅಭಾವವುಂಟಾಗಿರುವುದೆಂದೂ, ಪಾಕಿಸ್ತಾನ್ ಸರ್ಕಾರದವರು ವಿಳ್ಳೇದೆಲೆಯ ಆಮದಿಗೆ ಹಾಕಿರುವ ನಿರ್ಬಂಧದ ಪರಿಣಾಮವಾಗಿ, ಭಾರತದಿಂದ ಅಲ್ಲಿಗೆ ಅದರ ರವಾನೆಯು ನಿಂತುಹೋಗಿರುವುದೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಂಕ್ಕೆ	ರೂ ಇಂದ	ರೂ
ನೆಲಗಡಲೆ	೮ ೩-೦	೧೯ ೬
ಎಳ್ಳು	೬೨ ೪ ೦	೭೩-೮-
ಹುಚ್ಚೆಳ್ಳು	೫೧ ೧೪ ೦	
ಹರಳು ಬೀಜ	೫೭ ೮ ೦	
ಹುರುಳಿ	೬೩ ೨ ೮	೫೪
ಹೆಸರು	೭೦ ೪-೦	
ಹೊಂಗೆಬೀಜ	೨೪ ೦ ೦	
ಗುಡ್ಡು	೬೫ ೧೨ ೮	೭೮
ಅವರೆ	೭೯ ೧೦ ೦	
ಹುಲಸಂದೆ	೭೨-೧೨-೦	೭೩ ೧೮
ಮೆಣಸಿನಕಾಯಿ		
ಮಣಕ್ಕೆ	೧೪ ೦	
ಹುಣಸೇಹಣ್ಣು	೪ ೦ ೦	೬-೮
ಸೀಗೆಕಾಯಿ	೫ ೪-೦	೫ ೧೮
ಬೆಲ್ಲ	೪ ೨-೦	
ತೆಂಗಿನ ಕಾಯಿ ೧೦೦ಕ್ಕೆ	೦ ೦	೨೨೫

ಸುಧಾ

ಶ್ರೀ ಡಿ ಎನ್ ಅಶ್ವತ್ಥನಾರಾಯಣರಾಯರ ಸಂಪಾದಕತ್ವದಲ್ಲಿ ಹೊರಡುವ ಸುಧಾ ಎಂಬ ಕನ್ನಡ ತ್ರೈಮಾಸಿಕ ಪತ್ರಿಕೆಯ ಮೊದಲನೇ ಸಂಚಿಕೆ ನಮ್ಮ ಕೈಸೇರಿದೆ ಪ್ರಗತಿಶೀಲ [illegible] ಣ ಜನಾಂಗದ ಕೊರಳ್ದನಿಯನ್ನು [illegible] ಬಿಂಬಿಸಲು ಇದು ಸಂಕಲ್ಪಿಸಿದೆ [illegible] ಷನ ಡಿನ ಏಕೀಕರಣವಾಗದೇ ಬ[illegible] ಕೆಲ್ಲವೆಂದು ಇದು ಸಾರಿದೆ ಪತ್ರಿಕೆ [illegible] ತನ್ನ ಅಭೀಷ್ಟವನ್ನು ಬೇಗ ನೆರವೇರಿಸಿಕೊಳ್ಳಲೆಂದು ನಾವು ಹಾರೈಸುತ್ತೇವೆ ವಾರ್ಷಿಕ ಚಂದಾ ೧ ರೂ ಬಿಡಿ ಪ್ರತಿ ೦-೨ ೦

ಎಲ್ಲಾ ಬಗೆಯ
ಅಲೋಪಥಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಫೀಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು

Edited, Printed and Published by A R. Nagaraja at Sadhvi Press, D Subbaiah Road, Mysore

ದಸರಾ ಮಹೋತ್ಸವಕ್ಕಾಗಿ:- [illegible]
ಧರ್ಮಾವರಂ, ಆರ್ನಿ ಸೀರೆಗಳೂ ದಿಂಡಿಗಲ್, ಬೊಂಬಾಯಿ [illegible] ಸೀರೆಗಳ [illegible]
★ M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು ಮೈಸೂರು

[illegible] ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೧-೯-೧೯೫೨ [ಸಂಚಿಕೆ ೩೯

ಕೃಷ್ಣರಾಜನಗರದಲ್ಲಿ ೪ ಜನರ ಭೀಕರ ಕೊಲೆ

ಶಿಕ್ಷಣ ಸುಧಾರಣಾ ಸಮಿತಿ ಸದಸ್ಯರು

ಬೆಂಗಳೂರು ೧೧

ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣೆಯನ್ನು ಕುರಿತು ಸೂಕ್ತ ಸಲಹೆಗಳನ್ನು ಕೊಡುವಂತೆ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿದ್ದಾರೆ. ಅದರ ಅಧ್ಯಕ್ಷ ಉಪಾಧ್ಯಕ್ಷರಾಗಿ ಮುಖ್ಯಮಂತ್ರಿ ಮತ್ತು ವಿದ್ಯಾ ಮಂತ್ರಿಗಳು ಇರುವರು. ಸಮಿತಿಯಲ್ಲಿ ಮದ್ರಾಸಿನ ವಿದ್ಯಾಪ್ರವೀಣರುಗಳಾದ ಸರ್ ಸ್ಯಾಮ್ಯುಯಲ್ ರಂಗನಾಥನ್, ಡಾ|| ಎಂ ರತ್ನಸ್ವಾಮಿಯವರೂ ಬನೋರೇ ಡೆಯ ಪ್ರೊ|| ಎ ಆರ್ ವಾಡಿಯಾ, ಮೈಸೂರು ವಿಶ್ವವಿದ್ಯಾಲಯದ ಡಾ|| ಬಿ ಎಲ್ ಮಂಜುನಾಥ್, ಡಾ|| ಪಿ ನರಸಿಂಹಯ್ಯ, ಡಾ|| ಎಂ ವಿ ಗೋಪಾಲಸ್ವಾಮಿ, ಪ್ರೊ|| ಎಂ ಎಸ್ ಠಾಕರ್ ಮುಂತಾದ ಒಟ್ಟು ೩೯ ಮಂದಿ ಸದಸ್ಯರಿರುವರು. ಪ್ರಾಥಮಿಕ ಶಿಕ್ಷಣದ ಕಡ್ಡಾಯ ಪದ್ಧತಿಯ ಪರಿಶೀಲನೆ ಮತ್ತು ಸುಧಾರಣೆ, ಶೈಕ್ಷಣಿಕ ಶಿಕ್ಷಣ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಸಾರ್ವತ್ರಿಕ ವಿದ್ಯಾಭ್ಯಾಸದಲ್ಲಿ ಹೊಸ ರೀತಿಯ ಪಾಠಕ್ರಮ, ವಿಶ್ವವಿದ್ಯಾಲಯದ ಸುಧಾರಣೆ, ಎಸ್ ಎಸ್ ಎಲ್ ಸಿ ಮತ್ತು ಇಂಟರ್‌ಮೀಡಿಯಟ್ ಕ್ರಮಗಳ ಪುನರ್ವಿಮರ್ಶೆ, ದೈಹಿಕ ಕ್ರಮ ಶಿಕ್ಷಣ, ಕೆಲಸದ ಕಾಲದ ಯುಕ್ತ ಉಪಯೋಗ, ಶಿಕ್ಷಕರ ದಕ್ಷತೆ, ಕನ್ನಡ ಶಿಕ್ಷಣದ ಮಾಧ್ಯಮದ ಅಭಿವೃದ್ಧಿ ಇವೇ ಮುಂತಾದ ೧೨ ವಿಷಯಗಳ ಬಗ್ಗೆ ಸಲಹೆಗಳನ್ನು ಮಂಡಿಸಬೇಕೆಂದು ಸರ್ಕಾರದವರು ಸಮಿತಿಯವರನ್ನು ಕೋರಿರುತ್ತಾರೆ.

ಬುಕ್‌ಪೋಸ್ಟ್ ರಿಯಾಯಿತಿ

ಸ್ವಾಮಿ, ತಮ್ಮ ವಿಧೇಯ ಎಂಬುದು ಮಾತ್ರ ಮುದ್ರಿತವಾಗಿಯಾಗಲಿ, ಸೈಕ್ಲೋಸ್ಟೈಲಿನಲ್ಲಿ ಅಚ್ಚಾಗಿಯಾಗಲಿ ಇರುವ ಕಾಗದಗಳನ್ನು ಬುಕ್ ಪೋಸ್ಟ್ ಮೂಲಕ ರವಾನಿಸಲಾಗದೆಂದೂ, ಅವುಗಳನ್ನು ಖಾಸಗಿ ಪತ್ರವ್ಯವಹಾರವೆಂದು ಪರಿಗಣಿಸಿ ೨ ಆಣೆ ಲಕೋಟೆಯಲ್ಲಿ ಹಾಕಬೇಕೆಂದೂ ಸೂಚಿಸಿ ಅಂಚೆ ಇಲಾಖೆಯವರು ಕಳೆದ ಮಾರ್ಚಿ ತಿಂಗಳಿನಲ್ಲಿ ಹೊರಡಿಸಿದ್ದ ಆಜ್ಞೆಯನ್ನು ಈಗ ರದ್ದು ಮಾಡಿ ಇಂತಹ ಪತ್ರಗಳನ್ನು ಬುಕ್ ಪೋಸ್ಟ್ ಮೂಲಕವೇ ೯ ಕಾಸು ಸ್ಟಾಂಪು ಹಾಕಿ ರವಾನಿಸಬಹುದೆಂದು ತಿಳಿಸಿರುತ್ತಾರೆ.

ಸಂಗೀತ ಕಛೇರಿ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯ ಚೌಲ್ಟ್ರಿಯಲ್ಲಿರುವ ಶ್ರೀ ಮುದ್ದುಕೃಷ್ಣನವರ ಕಾಶಿ ವಿಶ್ವನಾಥ ಸ್ವಾಮಿ ದೇವ ಮಂದಿರದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ ೭|| ಗಂಟೆಗೆ ವಿದ್ವಾನ್ ಟಿ. ಪುಟ್ಟಸ್ವಾಮಯ್ಯನವರ ಸಂಗೀತವು ವಿದ್ವಾನ್ ಮಹದೇವಸ್ವಾಮಿಯವರ ಪಿಟೀಲು ಮತ್ತು ವಿದ್ವಾನ್ ಕೆ ಎಸ್ ಗೋಪಾಲಾಚಾರ್ಯರ ಮೃದಂಗ ಜೊತೆನೆ ನಡೆಯಲೇರ್ಪಾಡಾಗಿದೆ. ನಾಳೆ ವಿದ್ವಾನ್ ಸಂಗೀತ ಭೂಷಣ ಎಂ ಎ ನರಸಿಂಹಾಚಾರ್ಯರ ಸಂಗೀತವೂ ನಾಡಿದ್ದು ವಿದ್ವಾನ್ ಎನ್ ವಿಶ್ವನಾಥನ್‌ರವರ ಸಂಗೀತವೂ ನಡೆಯುತ್ತವೆ.

ಕೃಷ್ಣರಾಜನಗರದ ರೈಲ್ವೆ ನಿಲ್ದಾಣದ ಬಳಿ ೪ ಕೊಲೆ

೪ ಜನರಿಗೆ ಗಾಯ, ಒಬ್ಬನ ದಸ್ತಗಿರಿ

ಮೈಸೂರು ೧೧

ಕೃಷ್ಣರಾಜನಗರದ ರೈಲ್ವೆ ಸ್ಟೇಷನ್ ಬಳಿ ನೆನ್ನೆ ೪ ಘೋರ ಕೊಲೆಗಳ ಪ್ರಕರಣವೊಂದು ನಡೆಯಿತೆಂದು ವರದಿಯಾಗಿದೆ. ಹೊಳೆನರಸೀಪುರದ ಸಣ್ಣ ಎಂಬುವನೊಬ್ಬನು ನೆನ್ನೆ ದಿನ ಮಧ್ಯಾಹ್ನ ಕೃಷ್ಣರಾಜನಗರಕ್ಕೆ ಬಂದು, ತನ್ನ ಸಂಬಂಧಿಕನಾದ ರೈಲ್ವೆ ಗ್ಯಾಂಗ್ ಮನ್ ಚಿಕ್ಕ ಎಂಬುವನ ಜೊತೆಯಲ್ಲಿ ಊಟ ಮಾಡಿ, ನಂತರ ಇಬ್ಬರೂ ಮಾತನಾಡಿಕೊಂಡು ಕುಳಿತಿರಲಾಗಿ, ಸ್ವಲ್ಪ ಹೊತ್ತಿನ ಮೇಲೆ ಅವನು ಚಿಕ್ಕನ ಮನೆಗೆ ನುಗ್ಗಿ ಅವನ ಹೆಂಡತಿ ಸಣ್ಣಮ್ಮನನ್ನು ಅಲ್ಲಿಯೇ ಬಿದ್ದಿದ್ದ ಮಚ್ಚಿನಿಂದ ಹೊಡೆದನೆಂದೂ, ಅದನ್ನು ನೋಡಿ ಮೂರು ವರ್ಷದ ಜಯಮ್ಮನೆಂಬ ಚಿಕ್ಕನ ಮಗಳು ಕೂಗಿಕೊಳ್ಳಲಾಗಿ ಆ ಮಗುವನ್ನು ಹೊಡೆದುದರಿಂದ ಅವಳು ಅಲ್ಲಿಯೇ ಮಡಿದಳೆಂದೂ, ಗಲಾಟೆಯ ಶಬ್ದವನ್ನು ಕೇಳಿ ಅಲ್ಲಿಗೆ ಓಡಿಬಂದ ಸುಬ್ಬಣ್ಣ ಎಂಬ ರೈಲ್ವೆ ಕಾನ್ಸ್ಟೇಬಲ್ಲನಿಗೆ ಅದೇ ಮಚ್ಚಿನಿಂದ ಹೊಡೆಯಲಾಗಿ ಅವನೂ ಅಲ್ಲಿಯೇ ಸತ್ತನೆಂದೂ ವರದಿಯಾಗಿದೆ.

ಅಷ್ಟರಲ್ಲಿ ಕೃಷ್ಣರಾಜನಗರದ ಪರ್ಮನೆಂಟ್ ವೇ ಇನ್ಸ್‌ಪೆಕ್ಟರರ ಮಾವಂದಿರಾದ ಖಾದರ್ ಮೊಹಿದ್ದೀನ್ ಎಂಬ ೭೦ ವರ್ಷದ ವೃದ್ಧರು ಅಲ್ಲಿಗೆ ಬರಲು, ಅವರನ್ನೂ ಅದರಿಂದ ಹೊಡೆದುಹಾಕಲಾಯಿತೆಂದೂ, ಟ್ರಾಲಿ ಮನ್ ರಂಗನಾಯಕನಿಗೂ ಮಚ್ಚಿನ ಪೆಟ್ಟು ಬಿದ್ದು ಅವನು ಅಲ್ಲಿನ ಆಸ್ಪತ್ರೆಯಲ್ಲೇ ಮಡಿದನೆಂದೂ ಗೊತ್ತಾಗಿದೆ.

ನಂತರ ತನ್ನನ್ನು ಹಿಡಿಯಲು ಬಂದ ಹನುಮ ಎಂಬ ಜವಾನ್ ಕಾರ್ಟಕನನ್ನೂ, ಲಿಂಗ ಎಂಬುವನನ್ನೂ ಸಣ್ಣನು ಗಾಯಗೊಳಿಸಿದನೆಂದೂ, ರೈಲ್ವೆ ಕಾನ್ಸ್ಟೇಬಲ್ ಸುಬ್ಬಣ್ಣನ ಪತ್ನಿಯನ್ನೂ ಮಚ್ಚಿನಿಂದ ಹೊಡೆದನೆಂದೂ ಹೇಳಲಾಗಿದೆ.

ಅಲ್ಲಿಂದ ಸಣ್ಣನು ತಪ್ಪಿಸಿಕೊಂಡು ಓಡಿಹೋಗುತ್ತಿದ್ದನೆಂದೂ, ಸುತ್ತಮುತ್ತಲೂ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದವರು ಅವನನ್ನು ಬಂಧಿಸಿ ಪೋಲೀಸರ ವಶಕ್ಕೆ ಒಪ್ಪಿಸಿದರೆಂದೂ ಗೊತ್ತಾಗಿದೆ. ಅವನನ್ನು ಅಲ್ಲಿನ ಲಾಕಪ್ಪಿನಲ್ಲಿಡಲಾಗಿದೆ.

ಗಾಯಗೊಂಡಿರುವ ಚಿಕ್ಕನ ಹೆಂಡತಿ ಸಣ್ಣಮ್ಮ, ಹನುಮ, ಕಾನ್ಸ್ಟೇಬಲ್ ಸುಬ್ಬಣ್ಣನ ಹೆಂಡತಿ ಮತ್ತು ಲಿಂಗ ಇವರನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ. ಸಣ್ಣಮ್ಮನ ಸ್ಥಿತಿಯು ಚಿಂತಾಜನಕವಾಗಿದೆ.

ಈ ಘೋರ ಕೃತ್ಯಗಳಿಗೆ ಕಾರಣವೇನೆಂಬುದು ಇನ್ನೂ ಗೊತ್ತಾಗಿಲ್ಲ.

ಮಗುವನ್ನು ಸಾಕಲಾರದೆ ಪರರಿಗೆ ಒಪ್ಪಿಸಿದ ಪ್ರಸಂಗ

ಅಭಾವ ಪೀಡಿತವಾದ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್ ಸಿ ಲಿಂಗಾರೆಡ್ಡಿಯವರು ಪ್ರವಾಸ ಮಾಡಿ ಅಲ್ಲಿನ ಪರಿಸ್ಥಿತಿಯನ್ನು ತಿಳಿದುಕೊಂಡು ಬಂದಿರುತ್ತಾರೆ. ಆಹಾರವಿಲ್ಲದೆ ಒಂದು ಹಳ್ಳಿಯಲ್ಲಿ ಇಬ್ಬರು ಮಡಿದರೆಂದೂ, ಮತ್ತೊಂದು ಗ್ರಾಮದಲ್ಲಿ ನಿರುದ್ಯೋಗಿಗಳಾದ ಒಂದು ಸಂಸಾರದವರು ಕತ್ತಾಳೆ ಗೆಡ್ಡೆಯನ್ನು ಸಣ್ಣದಾಗಿ ಹಚ್ಚಿ ಉಪ್ಪಿಟ್ಟು ಮಾಡಿ ತಿಂದುದರಿಂದ, ಮರುಘಳಿಗೆಯಲ್ಲಿ ಅವರ ಪೈಕಿ ಕೆಲವರು ಖಾಯಿಲೆಗೆ ತುತ್ತಾಗಿ ೨ ಮಕ್ಕಳು ಸತ್ತುವೆಂದೂ ವರದಿಯಾಗಿದೆ. ಮತ್ತೊಂದು ಕಡೆ ಒಬ್ಬನು ತನ್ನ ೬-೭ ತಿಂಗಳಿನ ಮಗುವನ್ನು ಸಾಕಲಾರದೆ ಅದನ್ನು ಯಾರಿಗಾದರೂ ಒಪ್ಪಿಸಲು ಮುಂದೆ ಬಂದನೆಂದೂ, ಮಗುವನ್ನು ಒಬ್ಬ ಪೋಲೀಸು ಅಧಿಕಾರಿಯು ಮಕ್ಕಳಿಲ್ಲದ ಮತ್ತೊಬ್ಬರ ವಶಕ್ಕೆ ಒಪ್ಪಿಸಿದರೆಂದೂ ವರದಿಯಾಗಿದೆ.

ಪರಿಹಾರ ನಿಧಿಗೆ ಸಹಾಯ

ಕ್ಷಾಮ ಪರಿಹಾರ ನಿಧಿಗೆ ಈ ಕೆಳಗೆ ಕಂಡಂತೆ ಮಹನೀಯರುಗಳು ಧನ ಸಹಾಯ ಮಾಡಿರುತ್ತಾರೆ. ಶ್ರೀಗಳಾದ ಇ ಪಿ ನಂಜಪ್ಪ ೧೧ ರೂ ಇಂದ್ರ ಭವನ ೨೦೦ ರೂ, ಹೋಟೇಲು ಕೆಲಸಗಾರರ ಸಂಘದ ನಾಟಕದಿಂದ ೩೯೭ ರೂ ಡಿ ಪುಟ್ಟಯ್ಯನವರು ೧೦೧ ರೂ, ಚಾಮುಂಡೇಶ್ವರಿ ಭವನ ೨೦೦ ರೂ., ಪಿ ವಿ ಸುಬ್ರಹ್ಮಣ್ಯ ಅಯ್ಯರ್ ೫೦ ರೂ, ಬೊಂಬಾಯಿ ಆನಂದಭವನ ೬೧ ರೂ.

ಕಾಶ್ಮೀರದರಸರಿಗೆ ೧೦ ಲಕ್ಷ ರೂ. ವಿರಾಮ ವೇತನ

ಕಾಶ್ಮೀರದಲ್ಲಿ ರಾಜತ್ವ ರದ್ದಾದ ನಂತರ ಅಲ್ಲಿನ ಮಹಾರಾಜರಾದ ಹರಿಸಿಂಗರಿಗೆ ೧೦ ಲಕ್ಷ ರೂ ವಿರಾಮ ವೇತನ ಅಥವಾ ರಾಜಧನವನ್ನು ಕೊಡಲಾಗುವುದೆಂದು ತಿಳಿದುಬಂದಿದೆ. ಕಾಶ್ಮೀರದ ಮಹಾರಾಜರು ರಾಷ್ಟ್ರಾಧ್ಯಕ್ಷರಿಗೆ ಪತ್ರವೊಂದನ್ನು ಬರೆದು ಕಾಶ್ಮೀರದಲ್ಲಿ ರಾಜತ್ವದ ರದ್ದಿನ ಬಗ್ಗೆ ಬದಲಾವಣೆಯನ್ನು ರಾಜ್ಯಾಂಗದ ಹೆಸರಿನಲ್ಲಿ ಅಧ್ಯಕ್ಷರು ಅಂಗೀಕರಿಸಕೂಡದೆಂದು ಕೋರಿರುವರೆಂದೂ ಹೇಳಲಾಗಿದೆ.

ಈಜಿಪ್ಟಿನಲ್ಲಿ ಫೆಜ್ ಟೋಪಿಗೆ ನಿಷೇಧ

ಈಜಿಪ್ಟಿನ ಕ್ರಾಂತಿಪುರುಷ ಜ|| ನಗೀಬ್‌ರವರು ಹಲವು ಮಾರ್ಪಾಡುಗಳನ್ನು ಜಾರಿಗೆ ತಂದಿರುತ್ತಾರೆ. ಅಧಿಕಾರಿ ಸಮಾರಂಭಗಳಲ್ಲಿ ಧರಿಸುತ್ತಿದ್ದ ಅಂಗಿಯನ್ನು ತೊಡಕೂಡದೆಂದೂ, ಹಿಂದುಳಿದವರ ಲಾಂಛನವೆಂದು ಭಾವಿಸಲಾದ ಫೆಜ್ ಟೋಪಿಯನ್ನು ಹಾಕಕೂಡದೆಂದೂ ಅವರು ಸೂಚಿಸಿರುತ್ತಾರೆ. ಸಚಿವರು ಕೆಲಸಕ್ಕೆ ದಿನವೂ ಬೆಳಿಗ್ಗೆ ೯ ಗಂಟೆಗೆ ಬದಲು ೭|| ಘಂಟೆಗೆ ಬರಬೇಕಾಗಿದೆ. "ನಾನು ಇಂತಹ ಕಾರ್ಯ ಮಾಡುತ್ತೇನೆ" ಎಂದು ಹೇಳುವ ಬದಲು ಪ್ರತಿಯೊಬ್ಬ ಮಂತ್ರಿಯೂ "ಇಂತಹುದನ್ನು ಮಾಡಿದೆ" ಎಂದು ಹೇಳಬೇಕೆಂದು ಸೂಚಿಸಲಾಗಿದೆ. ನಗೀಬರ ಸರ್ಕಾರವು ಕ್ರಾಂತಿಯ ಸರ್ಕಾರವೆಂದು ಕರೆಯಲ್ಪಡುವುದು.

ಕೊಲೆ ಆಪಾದನೆಗಾಗಿ ೧೩ ವರ್ಷದ ತರುಣಿಗೆ ಜೀವಾವಧಿ ಶಿಕ್ಷೆ

ಕಳೆದ ವರ್ಷ ಜುಲೈ ೩೧ ರಲ್ಲಿ ಚನ್ನಪಟ್ಟಣದ ತಾ|| ಮಂಗಳವಾರಪೇಟೆಯ ಗೌರಮ್ಮ ಎಂಬ ೧೩ ವರ್ಷದ ತರುಣಿಯು ನಿಂಗಮ್ಮ ಎಂಬ ಇನ್ನೊಬ್ಬ ಹುಡುಗಿಯನ್ನು ಬಟ್ಟೆ ಒಗೆಯುವುದಕ್ಕೆಂದು ಕೊಳಕ್ಕೆ ಕರೆದುಕೊಂಡು ಹೋಗಿ ನಿಂಗಮ್ಮನ ಕಿವಿಯ ಓಲೆಗಳನ್ನು ತೊಳೆದು ಕೊಡುವುದಾಗಿ ತಿಳಿಸಿ ಅವುಗಳನ್ನು ತೆಗೆದುಕೊಂಡು ಅವಳನ್ನು ಕೊಳಕ್ಕೆ ತಳ್ಳಿ ಸಾಯಿಸಿದಳೆಂಬ ಆಪಾದನೆಗಾಗಿ ಸದರಿ ಗೌರಮ್ಮನಿಗೆ ಜೀವಾವಧಿ ಶಿಕ್ಷೆಯನ್ನೂ, ಓಲೆಗಳನ್ನು ಕದ್ದುದಕ್ಕಾಗಿ ೫ ವರ್ಷ ಕಠಿಣ ಶಿಕ್ಷೆಯನ್ನೂ ಬೆಂಗಳೂರಿನ ಪ್ರಥಮ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ವಿಧಿಸಿ ಎರಡು ಶಿಕ್ಷೆಗಳನ್ನೂ ಏಕ ಕಾಲದಲ್ಲಿ ಅನುಭವಿಸುವಂತೆ ಆಜ್ಞೆ ಮಾಡಿರುತ್ತಾರೆ.

ಶ್ರೀ ಕೃಷ್ಣ ಜಯಂತಿ ಮಹೋತ್ಸವದ ಸಂಗೀತ

ಶ್ರೀ ಕೃಷ್ಣ ಜಯಂತಿ ಮಹೋತ್ಸವದ ಪ್ರಯುಕ್ತ ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ಸಂಜೆ ೬-೩೦ಕ್ಕೆ ವಿದ್ವಾನ್ ಎ ದೊರೆಸ್ವಾಮಯ್ಯಂಗಾರ್ ಮತ್ತು ವಿದ್ವಾನ್ ಆರ್ ಎನ್ ದೊರೆಸ್ವಾಮಿಯವರ ವೀಣಾ ವಾದನವೂ, ವಿದ್ವಾನ್ ವಿ ದೇಶಿಕಾಚಾರ್‌ರವರ ಕೊಳಲು ವಾದನವೂ ಮತ್ತು ವಿದ್ವಾನ್ ಹೆಚ್ ಟಿ ನಾಗಣ್ಣನವರ ಮೃದಂಗವೂ ನಡೆಯುತ್ತವೆ.

ಅಮೆರಿಕದ ಸೈನಿಕರೆಲ್ಲರಿಗೂ ಅಣು ಶಸ್ತ್ರದಲ್ಲಿ ಶಿಕ್ಷಣ

ಅಮೆರಿಕದ ಪ್ರತಿಯೊಬ್ಬ ಸೈನಿಕನಿಗೂ ಅಣು ಶಸ್ತ್ರಗಳ ಪ್ರಯೋಗದ ಶಿಕ್ಷಣವಾಗಿರುವುದೆಂದೂ, ಅಲ್ಲಿನ ಸೈನ್ಯವು ಪೂರ್ಣವಾಗಿ ಆ ವಿಧಾನವನ್ನು ಅರಿತಿರುವುದೆಂದೂ ಅಲ್ಲಿನ ಸೈನ್ಯಗಳ ಮಂತ್ರಿ ಫ್ರಾಂಕ್ ಪೇಸ್ ರವರು ತಿಳಿಸಿರುತ್ತಾರೆ ರಷ್ಯವು ಧಾಳಿ ನಡೆಸಿದರೆ, ಅಣುಬಾಂಬನ್ನು ತಮ್ಮ ಸೈನ್ಯವು ಉಪಯೋಗಿಸುವ ಮನೋಭಾವವನ್ನು ಹೊಂದಿರುವುದೆಂದೂ, ಆದರೆ ಅದಕ್ಕೆ ಮುಂಚೆ ಅಲ್ಲಿನ ಅಧ್ಯಕ್ಷರ ಅನುಮತಿಯನ್ನು ಪಡೆಯಬೇಕಾಗಿರುವುದೆಂದೂ ಅವರು ಹೇಳಿರುವರು

೩ ಟನ್ ತೂಕವನ್ನು ತಡೆಯಬಲ್ಲ ಪಾದರಕ್ಷೆ

ಬ್ರಿಟನ್ನಿನ ಕಂಪೆನಿಯೊಂದರಲ್ಲಿ ತಯಾರಾದ ಒಂದು ಬೂಟ್ಸನ್ನು ಹಾಕಿಕೊಂಡು ಒಬ್ಬನು ನಿಂತಾಗ ಅವನ ಕಾಲಿನಮೇಲೆ ೩ ಟನ್ ತೂಕದ ಎರಡು ಅಂತಸ್ತಿನ ಒಂದು ಬಸ್ಸನ್ನು ಬಿಡಲಾಯಿತೆಂದೂ, ಆದರೂ ಅವನಿಗೆ ಪೆಟ್ಟು ತಗುಲಲಿಲ್ಲವೆಂದೂ ಹೇಳಲಾಗಿದೆ ಪಾದದ ಮುಂಭಾಗದಲ್ಲಿ ೩ ಟನ್ನು ತೂಕದ ಉಕ್ಕಿನ ಹೊದಿಕೆಯನ್ನು ಕೊಡಲಾಗಿದೆ ೫|| ಅಡಿ ಎತ್ತರದಿಂದ ೬೦ ಪೌಂಡಿನಷ್ಟು ಭಾರದ ವಸ್ತುವನ್ನು ಅವರ ಮೇಲೆ ಎತ್ತಿ ಹಾಕಿದರೂ ಅದು ತಡೆಯಬಲ್ಲುದಾಗಿದೆ ಅವರ ತಯಾರಿಗೆ ೧೮ ತಿಂಗಳು ಕಾಲ ಹಿಡಿಯಿತು

ಮರದ ಪೆಟ್ಟಿಗೆಯಲ್ಲಿ ರಕ್ತ ಸೋರುತ್ತಿದ್ದ ಶವ

ಕಲ್ಕತ್ತೆಯ ಒಂದು ಹೊಟೇಲಿನ ಮುಂಭಾಗದಲ್ಲಿ ಇಳಿಸಲ್ಪಟ್ಟ ಹಲವು ಮರದ ಪೆಟ್ಟಿಗೆಗಳ ಪೈಕಿ ರಕ್ತವು ಸುರಿಯುತ್ತಿದ್ದ ಒಂದು ಪೆಟ್ಟಿಗೆಯು ಕಾಣಬಂದಿತೆಂದು ವರದಿಯಾಗಿದೆ ಒಂದು ಲಾರಿಯು ಆ ಪೆಟ್ಟಿಗೆಯನ್ನು ಎಸೆದು ಓಡಿಹೋಯಿತೆಂದು ಹೇಳಲಾಗಿದೆ ಒಬ್ಬ ಯುವಕನನ್ನು ಕೊಂದು, ಅವನ ಶರೀರವನ್ನು ಚೂರುಚೂರು ಮಾಡಿ, ಅದರೊಳಗೆ ತುಂಬಿತ್ತೆಂದು ಹೇಳಲಾಗಿದೆ ಈ ಸಂಬಂಧವಾಗಿ ಹಲವರ ದಸ್ತಗಿರಿಯಾಗಿದೆ

ಪ್ರಭುಗಳೊಡನೆ ಭೇಟಿ

ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಚನ್ನಯ್ಯನವರು, ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಟಿ ಗೋಪಾಲಕೃಷ್ಣ ಶೆಟ್ಟರು ಮತ್ತು ಅಂತರ ವಿಶ್ವವಿದ್ಯಾಲಯಗಳ ಬೋರ್ಡಿನ ಮಾಜಿ ಅಧಿಕಾರಿಗಳಾದ ಶ್ರೀ ಸಿ ಡಿ ನರಸಿಂಹಯ್ಯನವರು ಇವರುಗಳಿಗೆ ಶ್ರೀಮನ್ ಮಹಾರಾಜರು ನೆನ್ನೆ ಭೇಟಿಯಿತ್ತರು

ಗಣ್ಯ ವರ್ತಕರ ನಿಧನ

ರಾಜಧಾನಿಯ ಸಂತೇಪೇಟೆ ವರ್ತಕರಾದ ಶ್ರೀ ಶಿವನಂಜಪ್ಪನವರು ನೆನ್ನೆ ಪಾರ್ಶ್ವ ವಾಯು ತಗುಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಇನ್ನೂ ತರುಣ ವಯಸ್ಕರು. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಬೇಡುತ್ತೇವೆ

ಒಡವೆಗಳನ್ನು ಮಾರಿ ಧಾನ್ಯ ಕೊಂಡ ಪ್ರಸಂಗ

ತುಮಕೂರಿನ ಬಳಿ ಬೆಳ್ಳಾವಿ ಹೋಬಳಿಯ ದೊಡ್ಡವೀರನಹಳ್ಳಿಯಲ್ಲಿ ರೇಷನ್ ಪದಾರ್ಥಗಳನ್ನು ಕೊಳ್ಳಲು ಜನರಲ್ಲಿ ಹಣವಿಲ್ಲದೆ ಅನೇಕ ಸ್ತ್ರೀಯರು ತಾವು ಧರಿಸಿದ್ದ ಓಲೆ ಮತ್ತು ಮೂಗುಬಟ್ಟುಗಳನ್ನು ಮಾರಿ ಧಾನ್ಯವನ್ನು ಕೊಂಡುಕೊಂಡರೆಂದು ಹೇಳಲಾಗಿದೆ

ಪ್ರಪಂಚದ ಕುಡುಕರಲ್ಲಿ ಫ್ರೆಂಚರಿಗೆ ಅಗ್ರ ಸ್ಥಾನ

ಪ್ರಪಂಚದಲ್ಲೆಲ್ಲಾ ಫ್ರೆಂಚರೇ ಹೆಚ್ಚು ಕುಡಿಯುವವರೆಂದು ಸಾಮಾಜಿಕ ಸಂಶೋಧನಾ ಪ್ರವೀಣರ ತನಿಖೆಯಿಂದ ವ್ಯಕ್ತವಾಗಿದೆ ಸರಾಸರಿ ಒಬ್ಬ ಫ್ರೆಂಚನು ವರ್ಷಕ್ಕೆ ೨೭ ಲೀಟರಿನಷ್ಟು ಮದ್ಯವನ್ನು ಸೇವಿಸುವನು ಪ್ರತಿ ಸಾವಿರಕ್ಕೂ ೩೩ ಜನ ಫ್ರೆಂಚರು, ೧೬ ಸ್ವಿಸ್ಸರು, ೧೫ ಚಿಲಿಯನ್ನರು, ೧೦ ಜನ ಅಮೆರಿಕನ್ನರು ಮತ್ತು ಮೂವರು ಬ್ರಿಟಿಷರು ಕುಡಿತವನ್ನು ಅಭ್ಯಾಸ ಮಾಡಿರುವರು

ಶ್ರೀ ದೇವೀ ಯಜ್ಞ ರುದ್ರ ಸ್ವಾಹಾಕಾರ

ರಾಜಧಾನಿಯ ರಾಮಾನುಜಾ ರಸ್ತೆಯಲ್ಲಿರುವ ೬೫ನೇ ನಂಬರು ಮನೆಯಲ್ಲಿ ಶ್ರೀ ಕಡಾಂಬಿ ವೆಂಕಟರಮಣ ಶಾಸ್ತ್ರಿಗಳವರು ಇದೇ ೨೦ನೇ ತಾ|| ನಿಂದ ೩೦ರವರೆಗೆ ಉಪಚಾರ ಪೂಜಾ ಯುತ್ಪತ್ತಿ ಪೂಜಾಯುಕ್ತ ಪಾರಾಯಣಗಳನ್ನೂ, ಒದುವ ತಿಂಗಳು ೩ನೇ ತಾ|| ಶುಕ್ರವಾರ ದೇವೀ ಯಜ್ಞ ಪೂರ್ಣಾಹುತಿಯನ್ನೂ ಮಾರನೇ ದಿನ ರುದ್ರ ಸ್ವಾಹಾಕಾರವ ತ್ತು ಪೂರ್ಣಾಹುತಿಯನ್ನೂ ಜಗತ್ಕಲ್ಯಾಣಾರ್ಥವಾಗಿ ನಡೆಸಲಿರುವರು ೬ನೇ ತಾ|| ವರೆಗೂ ವಿಶೇಷ ಸೇವೆಗಳು ಇವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಎ ವಿ ನಾರಾಯಣಪ್ಪ ಮುಖವೀಣೆ ಮಧ್ಯಾಹ್ನ ೧.೩೦ ದಿಲ್ರುಬ, ೩ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫ ೩೦ ಮತ್ತು ೭ ೩೦ ಎಂ ವಿ ಲೀಲಾ ಮತ್ತು ಎಂ ಎ ಕಲ್ಯಾಣಿ ಸಂಗೀತ, ೭ ೧೦ ಗಾನ ವಿಹಾರ, ೭ ಅಬ್ದುಲ್ ಗಫಾರ್ ಗಜಲ್ ಮತ್ ಠಾಟ್, ೮ ಗೀತಾಕುಮಾರಿ ೯ ೧೫ ಬಡೇ ಗುಲಾಂ ಅಲಿ ರೆಕಾರ್ಡ್ ಸಂಗೀತ ೯ ೪೦ ಕನ್ನಡದಲ್ಲಿ ನಾಟಕ

ಮೈಸೂರು ಪೇಟೆ ಧಾರಣೆ

	ಪಲ್ಲ ಒಂದ್ಕೆ	ರೂ ಇಂದ ರೂ ಗೆ
ನೆಲಗಡಲೆ	೧೧ ೦ ೦	೩೦ ೩ ೦
ಎಳ್ಳು	೬೩ ೦ ೦	೭೪ ೦–೦
ಹುಚ್ಚೆಳ್ಳು	೫೧ ೧೪ ೦	
ಹರಳು ಬೀಜ	೬೪ ೮ ೦	
ಹುರುಳಿ	೫೨ ೧೪ ೦	
ಹೆಸರು	೬೮ ೪ ೦	
ಹೊಂಗೇಬೀಜ	೨೬ ೬ ೦	೨೬ ೧೪ ೦
ಉದ್ದು	೭೫ ೧೨ ೦	೭೪ ೦ ೦
ಅವರೆ	೭೯–೧೦–೦	
ಹಲಸಂದೆ	೭೨–೬–೦	೬೭ ೧೬ ೦
ಮೆಣಸಿನಕಾಯಿ		
ಮುಟಗಳ್ಳೆ	೬ ೦ ೦	೧೧ ೨ ೦
ಹುಣಸೇಹಣ್ಣು	೨ ೨ ೦	೬–೨–೦
ಸೀಗೇಕಾಯಿ	೫–೫–೦	೫ ೮ ೦
ಬೆಲ್ಲ	೪–೦–೦	೪–೮–೦
ತೆಂಗಿನಕಾಯಿ ೧೧೦೦	೧೫ ೦ ೦	೨೫ ೦.೦

೨ ಗಂಟೆಗೊಂದು ಬಾರಿ ಭೂಮಿ ಸುತ್ತುವ ರಾಕೆಟ್ಟು

ಅಮೆರಿಕದಲ್ಲಿ ಒಂದು ಕಡೆ ಆಕಾಶಕ್ಕೆ ಬಿಡಲಾದ ವಿ ೨ ರಾಕೆಟ್ಟು ಪ್ರತಿ ಎರಡು ಘಂಟೆಗೊಂದು ಬಾರಿ ಇಡೀ ಭೂಮಿಯನ್ನು ಸುತ್ತುತ್ತಿರುವುದೆಂದೂ, ಅದು ಭೂಮಿಗೆ ವಾಪಸು ಬರುತ್ತಿಲ್ಲವೆಂದೂ ವರದಿಯಾಗಿದೆ. ಜರ್ಮನ್ ವಿಜ್ಞಾನಿಯೊಬ್ಬರು, ಅದು ಅಸಂಭವವಲ್ಲವೆಂದು ತಿಳಿಸಿ, ಆ ರಾಕೆಟ್ಟಿನಲ್ಲಿರುವ ಎಣ್ಣೆಯು ಮುಗಿದುಹೋದರೂ ಅದು ಭೂಮಿಗೆ ಹಿಂದಿರುಗುವ ಸಂಭವವಿಲ್ಲವೆಂದು ಹೇಳಿರುತ್ತಾರೆ

ಗೋಖಲೆ ಹಿಂದೀ ವಿದ್ಯಾಲಯ

ಮೇಲ್ಕಂಡ ವಿದ್ಯಾಲಯದವರು ಗೌ|| ಚಾಮುಂಡಿಪುರಂ ಲೋಯರ್ ಪ್ರೈಮರಿ ಸ್ಕೂಲ್ ಕಟ್ಟಡದಲ್ಲಿ ಪ್ರತಿದಿನ ಸಂಜೆ ೫ರಿಂದ ೭|| ವರೆಗೆ ವಿದ್ಯಾರ್ಥಿನಿಯರಿಗಾಗಿ ಹಿಂದೀ ತರಗತಿಗಳನ್ನು ತೆರೆದಿದ್ದಾರೆ ಸೇರಬಿಚ್ಛಿಸುವ ವಿದ್ಯಾರ್ಥಿನಿಯರು ಇದೇ ತಿಂಗಳು ೨೦ನೇ ತಾರೀಖಿನೊಳಗೆ ಸೇರಬಹುದೆಂದು ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಎಲ್ ಎಸ್ ವಿ ರಾಮಯ್ಯರ್ ರವರಿಗೆ ಸತ್ಕಾರ

ನಿನ್ನೆ ಸಂಜೆ ನಗರದ ವರ್ತಕರು ಮೈಸೂರು ಬ್ಯಾಂಕಿನ ಮಾಜಿ ಮ್ಯಾನೇಜರ್ ಶ್ರೀ ಎಲ್ ಎಸ್ ವಿ ರಾಮಯ್ಯರ್ ರವರ ಗೌರವಾರ್ಥವಾಗಿ ಹೊಸ ಸಂತೆಪೇಟೆಯಲ್ಲಿ ಭಾರಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು ಉಪಾಹಾರಾನಂತರ ಶ್ರೀಮತಿ ಚೊಕ್ಕಮ್ಮನವರ ಸುಶ್ರಾವ್ಯವಾದ ಸಂಗೀತವು ನಡೆಯಿತು ವರ್ತಕರ ಪರವಾಗಿ ಶ್ರೀ ಟಿ ಶಾಂತರಾಜಪ್ಪನವರು ರಾಮಯ್ಯರ್ ರವರಿಗೆ ರಜತ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿದರು ತಮ್ಮನ್ನು ಗೌರವಿಸಿದುದಕ್ಕಾಗಿ ಶ್ರೀ ರಾಮಯ್ಯರ್ ರವರು ಧನ್ಯವಾದಗಳನ್ನು ಸಲ್ಲಿಸಿದರು

SREE GANESHA

TALKIES

From 12-9-52

Grand Opening of

Columbia's

LORNA DOONE

(In Technicolor)

Featuring Barbara Hale and Richard Greene

SRI GAYATHRI

TALKIES

Daily 2 Shows

From 12-9-52 " For 2 Days

Warner's

FORT WORTH

(In Technicolor)

With David Brian and Philips Thaxter

Edited, Printed and Published by A R Nagarajan at Sadhvi Press, D Subbaiah Road, Mysore

ಸೈನ್ಯಾಧಿಕಾರಿ ಮನೆಗೆ ನುಗ್ಗಿ ಕಳುವು

ದೆಹಲಿಯಲ್ಲಿರುವ ಭಾರತ ಸೈನ್ಯಗಳ ಮುಖ್ಯ ಇಲಾಖಾಧಿಕಾರಿಗಳಾದ ಮೇಜರ್ ಜನರಲ್ ಥೋರಟ್ ರವರ ಮನೆಗೆ ಕಳ್ಳರು ನುಗ್ಗಿ ೫೦ ಸಾವಿರ ರೂ. ಬೆಲೆ ಬಾಳುವ ನಗದು ಸರ್ಟಿಫಿಕೇಟ್ ಗಳನ್ನೂ, ಆಭರಣಗಳನ್ನೂ, ಬಟ್ಟೆಗಳನ್ನೂ ಕಳುವು ಮಾಡಿರುವರೆಂದು ವರದಿಯಾಗಿದೆ

ಮುನಿಸಿಪಲ್ ಕೆಲಸಗಾರರ ಸಭೆ

ರಾಜಧಾನಿಯ ಜೀವಣರಾಯನ ಕಟ್ಟೆಯ ಮೈದಾನದಲ್ಲಿ ಮೊನ್ನೆ ನಗರದ ಪೌರಸಭಾ ಕೆಲಸಗಾರರ ಸಭೆಯು ಶ್ರೀ ಸೋಮಸುಂದರ ಶರ್ಮರವರ ಅಧ್ಯಕ್ಷತೆಯಲ್ಲಿ ನಡೆಯಿತು ಕೆಲಸಗಾರರ ಮುಂದಾಳುಗಳು ಭಾಷಣ ಮಾಡಿ, ತಮ್ಮ ಕುಂದುಕೊರತೆಗಳನ್ನು ವಿವರಿಸಿದರು. ಶ್ರೀ ಎಂ ಎನ್ ಉಗ್ರಪ್ಪನವರು ತಮ್ಮ ಭಾಷಣದಲ್ಲಿ, ಕೆಲಸಗಾರರೆಲ್ಲರೂ ಐಕಮತ್ಯದಿಂದ ಇರುವಂತೆ ಸೂಚಿಸಿದರು ನಗರದ ಪೌರಸಭಾ ಕೆಲಸಗಾರರ ಸಂಘವೊಂದನ್ನು ಸ್ಥಾಪಿಸಲಾಯಿತು ಶ್ರೀ ಬಿ ಎ ಬೆಳ್ಳಿಯಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎನ್ ಉಗ್ರಪ್ಪನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಚಂದಾದಾರರಲ್ಲಿ ವಿನಂತಿ

ನಮ್ಮ ರಶೀತಿಯನ್ನು ಪಡೆಯದೆ ಕೊಟ್ಟ ಚಂದಾ ಹಣಕ್ಕೆ ನಾವು ಜವಾಬ್ದಾರರಲ್ಲ

ನ್ಯೂಸ್ ಪೇಪರ್ ಹೌಸ್,

ಚಾಮುಂಡೇಶ್ವರಿ

ಟಾಕೀಸ್

12 9-52ರಿಂದ ಆಮೋಘ3ನೇವಾರ

ಜೂಪಿಟರ್ ನೂತನ ಸಾಮಾಜಿಕ ಚಿತ್ರ

ಜಮೀನ್‌ದಾರ್

ತಾರಾಗಣ – ಮಾಧುರಿ ದೇವಿ, ಎಂ ವಿ ರಾಜಮ್ಮ, ಬಾಲಸುಬ್ರಹ್ಮಣ್ಯಂ, ನಟರಾಜನ್ ಮುಂತಾದವರು

ಒಲಂಪಿಯಾ

11 9-52ರಿಂದ ಜಯಭೇರಿ 1ನೇ ವಾರ ದೀಪಕ್ ಪಿಕ್ಚರ್ಸ್ ರವರ ಹಿಂದಿ ಚಿತ್ರ

ಸಿಂದಬಾದ್‌ದಿ ಸೈಲರ್

ಪಾತ್ರ ರಂಜನ್ ನಾಸಿಂ, ಮತ್ತು ಭಗವಾನ್

ಬೆಳಗಿನ ಪ್ರದರ್ಶನ 3 ದಿನ ಮಾತ್ರ ಸೂರ್ಯಕುಮಾರ್, ಸುರೇಂದ್ರ ಪಾತ್ರವಹಿಸಿರುವ

ಅನ್ಮೋಲ್ ಘಡಿ

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರ್ಲು, ಉಬ್ಬಸ, ಪರಿಣಾಮಕಾರಿ ಮತ್ತು (TONSIL) ಗಲಾಯಿಗಳಿಗೆ ಖಾತರಿಯಾದ ಔಷಧಿ ದೊರೆಯುತ್ತದೆ.

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು.

ರಿಜಿಸ್ಟರ್ಡ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೨-೯-೧೯೫೨ [ಸಂಚಿಕೆ ೪೦

ವೈಸ್ ಚಾನ್ಸೆಲರ್ ವರ್ತನೆ ಬಗ್ಗೆ ವಿಚಾರಣೆಯೇ?

ನವರಾತ್ರಿ ಉತ್ಸವದ ಏರ್ಪಾಡು

ನೆಹರೂ, ರಾಜಾಜಿ, ಶೇಕ್ ಅಬ್ದುಲ್ಲಾ ಇವರುಗಳಿಗೆ ಆಹ್ವಾನ

ಮೈಸೂರು ೧೨

ಈ ಸಾರಿ ನವರಾತ್ರಿಯಲ್ಲಿ ಮಾಮೂಲಿನಂತೆ ಒಂಭತ್ತು ದಿನಗಳ ರಾಜಸಭೆಯೂ, ವಿಜಯದಶಮಿ ದಿನ ಜಂಬೂಸವಾರಿಯೂ ನಡೆಯಲೇರ್ಪಾಡಾಗಿದೆಯೆಂದು ಗೊತ್ತಾಗಿದೆ. ಗೃಹಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಗೃಹಕಾರ್ಯದರ್ಶಿ ಶ್ರೀ ಜಿ ಎಸ್ ನಾಗರಾಜರಾವ್, ಶ್ರೇಷ್ಠ ಕಾರ್ಯದರ್ಶಿ ಶ್ರೀ ಎಸ್. ಪುಟ್ಟರಂಗಸ್ವಾಮಿ ಹುಜೂರು ಸಕ್ರೆಟರಿ ಶ್ರೀ ಹೆಚ್ ಎಸ್. ಸಾರ್ಗೋರರುಗಳುಳ್ಳ ಸಮಿತಿಯ ಸಭೆಯು ಬೆಂಗಳೂರಿನಲ್ಲಿ ನಡೆದು ದಸರಾ ಉತ್ಸವದ ಬಗ್ಗೆ ಅಖೈರು ಏರ್ಪಾಡುಗಳನ್ನು ಮಾಡಿಕೊಳ್ಳಲಾಗಿದೆ. ಸಭೆಗೆ ವಿಶೇಷ ಆಹ್ವಾನದ ಮೇಲೆ ದರ್ಬಾರು ಭಕ್ಷಿ ಶ್ರೀ ಹೆಚ್ ಎಲ್ ದೇವರಾಜೇಅರಸಿನವರೂ ಹೋಗಿದ್ದರು.

ಎಲ್ಲ ಆಹ್ವಾನಿತರುಗಳಿಗೂ ಯಾವ ತಾರತಮ್ಯವನ್ನೂ ಎಣಿಸದೆ, ಕೂಡಲು ಕುರ್ಚಿಗಳನ್ನು ಹಾಕಲಾಗುವುದು. ಮಾಮೂಲಿನಂತೆ ಅತಿಥಿಗಳಿಗೆ ಆಹ್ವಾನವು ಹೋಗುವುದು. ಬಿರುದಾಂಕಿತರು, ಶಾಸನಸಭಾ ಸದಸ್ಯರು ಮತ್ತು ಪ್ರಮುಖ ವ್ಯಕ್ತಿಗಳಿಗೆ ಆಹ್ವಾನವಿರುವುದು.

ಸುಮಾರು ೨೫ ಜನರು ಸರ್ಕಾರದ ಅತಿಥಿಗಳಾಗುವರು. ಉಳಿದವರು ಸ್ವಂತ ಖರ್ಚಿನಿಂದ ಬರಬೇಕು.

ಪಂ|| ನೆಹರೂ, ತಿರುವಾಂಕೂರು ರಾಜಪ್ರಮುಖರು, ಮದ್ರಾಸು ಗೌರ್ನರ್ ರಾಜಾಜಿ, ಶೇಕ್ ಅಬ್ದುಲ್ಲಾ, ಬ್ರಿಗೇಡಿಯರ್ ಧಿಲ್ಲಾನ್, ಭಾವನಗರದ ಮಹಾರಾಜರು, ಮುಂತಾದವರನ್ನು ಆಹ್ವಾನಿಸಲಾಗುವುದೆಂದು ಗೊತ್ತಾಗಿದೆ.

ರಾಜಸಭೆಗೆ ಆಹ್ವಾನಿಸಲ್ಪಡುವವರು ಕರಿಯ ಟೋಪಿ, ಉದ್ದನೆಯ ಕಪ್ಪು ಅಂಗಿ, ರುಮಾಲು, ಏಳು ಮೊಳದ ಉತ್ತರೀಯ ಇವುಗಳನ್ನು ಧರಿಸಬೇಕೆಂದು ಗೊತ್ತುಮಾಡಿರುವಂತೆ ಹೇಳಲಾಗಿದೆ.

ವಿವಿಧ ಘಟ್ಟಗಳ ಮಾರಾಟ ತೆರಿಗೆಗೆ ಪ್ರತಿಭಟನೆ

ನೆನ್ನೆ ಸಂಜೆ ಟರ್ವಹಾಲ್ ಮೈದಾನದಲ್ಲಿ ಸಮಾಜವಾದಿ ನಾಯಕರಾದ ಶ್ರೀ ಸಿ ಜಿ ಕೆ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆದು ವಿವಿಧ ಘಟ್ಟಗಳ ಮಾರಾಟ ತೆರಿಗೆಯನ್ನು ಟೀಕಿಸಿ ಪ್ರಮುಖರಾದ ಬಿ ಶ್ರೀಕಂಠಪ್ಪ ಮತ್ತು ಮಾರ್ ನೂರ್ ಹುಸೇನವರು ಭಾಷಣ ಮಾಡಿದರು. ಈ ತೆರಿಗೆಯಿಂದ ಮಾರುವವರಿಗಿಂತಲೂ ಕೊಳ್ಳುವವರಿಗೇ ಹೆಚ್ಚು ತೊಂದರೆಯಾಗುವುದೆಂದು ಭಾಷಣಕಾರರು ನುಡಿದರು. ಜನರ ತೊಂದರೆಗೆ ಕಾರಣವಾಗಿರುವ ಈ ತೆರಿಗೆಯನ್ನು ಸರ್ಕಾರದವರು ಕೂಡಲೇ ರದ್ದು ಮಾಡಿ ಒಂದೇ ಘಟ್ಟದ ತೆರಿಗೆ ಹಾಕಬೇಕೆಂದೂ ಇಲ್ಲವಾದಲ್ಲಿ ತೀವ್ರ ಪ್ರತಿಭಟನೆಯು ಬರುವುದೆಂದೂ ಸೂಚಿಸುವ ನಿರ್ಣಯವನ್ನು ಮಾಡಲಾಯಿತು.

ವೈಸ್ ಚಾನ್ಸಲರ ವರ್ತನೆ ಬಗ್ಗೆ ವಿಚಾರಣೆ

ಮೈಸೂರು ೧೨

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಪತ್ರಿಕೆಗಳ ಸಂಬಂಧದಲ್ಲಿ ವೈಸ್ ಚಾನ್ಸಲರು ಹಲವು ಅಕ್ರಮಗಳನ್ನು ನಡೆಸಿರುವರೆಂದು ಕೋಲಾರ ಜಿಲ್ಲೆಯ ಶ್ರೀ ಎಸ್ ಸಿ ನಾಗಯ್ಯರೆಡ್ಡಿ ಮುಂತಾದವರು ಮಾಡಿರುವ ಆರೋಪಣೆಗಳ ಬಗ್ಗೆ ನಿಜಾಂಶವನ್ನು ತಿಳಿಯಲು ಸರ್ಕಾರದವರು ಹೈಕೋರ್ಟ್ ನ್ಯಾಯಾಧೀಶರಿಂದ ವಿಚಾರಣೆ ನಡೆಸಲು ನಿರ್ಧರಿಸಿರುವರೆಂದು ವರದಿಯಾಗಿದೆ.

ಗಣಪತಿ ಮಂಗಳಾರತಿ

ರಾಜಧಾನಿಯ ಡಿ ಸುಬ್ಬಯ್ಯರಸ್ತೆ ಕ್ರಾಸಿನಲ್ಲಿರುವ ಶ್ರೀ ಕಾಶಿ ವಿಶ್ವನಾಥ ಸ್ವಾಮಿ ಶ್ರೀರಾಮ ಮಂದಿರದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ ೭|| ಗಂಟೆಗೆ ಸಂ|| ಭೂ|| ಎಂ ಎ ನರಸಿಂಹಾಚಾರ್ಯರ ಸಂಗೀತವು ವಿ|| ಮಹದೇವ ಸ್ವಾಮಿಯವರ ಪಿಟೀಲು ಮತ್ತು ವಿ|| ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗದೊಡನೆ ನಡೆಯುವುದು.

ಭಗಿನೀ ಸೇವಾ ಸಮಾಜ

ರಾಜಧಾನಿಯ ಭಗಿನೀ ಸೇವಾ ಸಮಾಜದಲ್ಲಿ ಈ ಸಂಜೆ ಶ್ರೀ ಗಣೇಶೋತ್ಸವವನ್ನು ಏರ್ಪಡಿಸಲಾಗಿದೆ. ವಿದ್ವಾನ್ ಪಲ್ಲಡಂ ಕೆ ನಾಗರಾಜರಾಯರ ವೇಣುಗಾನವು, ವಿ|| ಹೆಚ್ ವಿ ರಾಮರಾಯರ ಪಿಟೀಲು ಮತ್ತು ವಿ|| ಎಂ ವೆಂಕಟೇಶದೇವರುರವರ ಮೃದಂಗದೊಡನೆ ನಡೆಯುವುದು.

ಮುಲ್ತಾನ್ ಜಿಲ್ಲೆಯ ೧೬೦ ಜಮೀನುದಾರರ ದಸ್ತಗಿರಿ

ಗೋಧಿಯ ದಾಸ್ತಾನಿನ ಬಗ್ಗೆ ಸರಕಾರಕ್ಕೆ ಹೇಳಿಕೆಯನ್ನು ಕೊಡದಿದ್ದುದಕ್ಕಾಗಿ ಮುಲ್ತಾನ್ ಜಿಲ್ಲೆಯ ೧೬೦ ಮಂದಿ ಜಮೀನುದಾರರನ್ನು ಪಾಕಿಸ್ತಾನ್ ಪಂಜಾಬಿನ ಪೋಲೀಸರು ದಸ್ತಗಿರಿ ಮಾಡಿರುವರೆಂದು ವರದಿಯಾಗಿದೆ.

ಹುಚ್ಚರಿಂದ ಉಪವಾಸ ಮುಷ್ಕರ

ಫ್ಲಾರೆನ್ಸಿನ ಹುಚ್ಚರ ಆಸ್ಪತ್ರೆಯಲ್ಲಿರುವ ಕಠಿಣವಾದ ಶಿಸ್ತಿನ ಬಗ್ಗೆ ಪ್ರತಿಭಟನೆ ಸೂಚಿಸಲು ೬೦ ಮಂದಿ ಹುಚ್ಚರು ಉಪವಾಸ ಮುಷ್ಕರ ಹೂಡಿರುತ್ತಾರೆ.

೫೫ ದಿನಗಳ ಉಪವಾಸ ಮಾಡಿ ಮರಣ

ರಾಜಾಸ್ಥಾನದ ಅಸ್ಸಿಸಾರ ಎಂಬ ಊರಿನಲ್ಲಿ ಶ್ರೀ ಧರಮ್ ಚಂದ್ ಜಿಯವರ ಪತ್ನಿ ಸುಮಾರು ೫೦ ವರ್ಷ ವಯಸ್ಸಿನ ಸರಾಬಾಯಿಯವರು ೫೫ ದಿನಗಳವರೆಗೆ ಮಹೋಪವಾಸವನ್ನು ಮಾಡಿ ಕಳೆದ ೩ನೇ ತಾ|| ಪ್ರಾಣ ಬಿಟ್ಟರೆಂದು ವರದಿಯಾಗಿದೆ. ಹಿಂದೆ ಅವರು ಅನೇಕ ಕಠಿಣ ವ್ರತಗಳನ್ನು ಆಚರಿಸಿದ್ದರೆಂದು ಹೇಳಲಾಗಿದೆ.

ಕಾಶ್ಮೀರದ ಸಂಧಾನದ ಬಗ್ಗೆ ನಿರಾಶೆ

ಕಾಶ್ಮೀರದ ವಿಷಯವನ್ನು ಕುರಿತು ಜಿನಿವಾ ನಗರದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿ ಡಾ|| ಗ್ರಹಾಂ ಮತ್ತು ಪಾಕೀಸ್ತಾನದ ವಿದೇಶಾಂಗ ಮಂತ್ರಿ ಜಫರುಲ್ಲಾರವರೊಡನೆ ಮಾತುಕತೆ ನಡೆಸಿದ ಭಾರತದ ರಕ್ಷಣಾ ಮಂತ್ರಿ ಎನ್ ಜಿ ಅಯ್ಯಂಗಾರ್ಯರು, ಮಾತುಕತೆಗಳು ನಡೆದ ರೀತಿಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿರುವರಾದರೂ ಮೂಲಭೂತ ಅಂಶಗಳು ತೀರ್ಮಾನವಾಗದೆ ಇರುವುದರಿಂದ ತಮಗೆ ತುಂಬಾ ನಿರಾಶೆಯಾಗಿರುವುದಾಗಿ ತಿಳಿಸಿರುತ್ತಾರೆ. ಸೀಸ್ ಫೈರ್ ರೇಖೆಯ ಉಭಯ ಪಾರ್ಶ್ವಗಳಲ್ಲೂ ಇರಬೇಕಾದ ಸೈನ್ಯ ಸಂಖ್ಯಾ ಬಲದ ವಿಷಯವು ಇನ್ನೂ ಇತ್ಯರ್ಥವಾಗಿಲ್ಲವೆಂದು ಅವರು ಸೂಚಿಸಿರುತ್ತಾರೆ.

ಇಂದೂರಿಗೆ ನೆಹರೂ ಪ್ರಯಾಣ

ಎ ಐ ಸಿ ಸಿ ಅಧಿವೇಶನದ ಅಧ್ಯಕ್ಷತೆ ವಹಿಸುವ ಸಲುವಾಗಿ ನೆಹರೂರವರು ನೆನ್ನೆ ಇಂದೂರಿಗೆ ಪ್ರಯಾಣ ಬೆಳೆಸಿದರು. ಅವರೊಡನೆ ಶೇಕ್ ಅಬ್ದುಲ್ಲಾ, ಕೆ ಎಸ್ ಕಿಟ್ಟು, ಗುಲ್ಜಾರಿಲಾಲ್ ನಂದಾ ಮುಂತಾದವರೂ ತೆರಳಿದರು. ನೆಹರೂರವರನ್ನು ಇಂದೂರಿನಲ್ಲಿ ಮಧ್ಯಭಾರತ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾದ ಖಾದಿವಾಲಾರವರು ಸ್ವಾಗತಿಸಿ ಪುಷ್ಪಮಾಲಿಕೆಯನ್ನು ಅರ್ಪಿಸಿದರು. ನೆಹರೂರವರು ಅಲ್ಲಿನ ರಾಜಪ್ರಮುಖರ ಗೃಹದಲ್ಲಿ ಬಿಡಾರ ಮಾಡಿರುವರು. ಎ ಐ ಸಿ. ಸಿ ಅಧಿವೇಶನದ ಜೊತೆಗೆ ಭಾರತದ ೨೨ ಶಾಸನಸಭೆಗಳ ಕಾಂಗ್ರೆಸ್ ಸದಸ್ಯರ ಸಭೆಯೂ ನಡೆಯುತ್ತದೆ.

ಸಣ್ಣನಿಂದ ಇನ್ನೂ ಇಬ್ಬರ ಕೊಲೆಯೇ?

ಮೈಸೂರು ೧೨

ಕೃಷ್ಣರಾಜನಗರದ ರೈಲ್ವೆ ನಿಲ್ದಾಣದ ಬಳಿ ಮೊನ್ನೆ ನಾಲ್ಕು ಕೊಲೆ ಪ್ರಕರಣಗಳಿಗೆ ಕಾರಣನಾದ 'ಸಣ್ಣ' ಎಂಬ ಹೊಳೆನರಸೀಪುರದ ಪೋಲೀಸನು ತಾನು, ತನ್ನ ಊರಿನಲ್ಲಿ ಹಿಂದಿನ ದಿನ ತನ್ನ ಹೆಂಡತಿ ಮತ್ತು ಮಗುವನ್ನು ಕೊಂದು ಶವಗಳನ್ನು ಮನೆಯಲ್ಲಿಯೇ ಇಟ್ಟು ಬೀಗ ಹಾಕಿಕೊಂಡು ಕೃಷ್ಣರಾಜನಗರಕ್ಕೆ ಬಂದುದಾಗಿ ಪೋಲೀಸರಿಗೆ ತಿಳಿಸಿರುವನೆಂದೂ, ಪೋಲೀಸರು ಅವನನ್ನು ಕರೆದುಕೊಂಡು ಹೊಳೇನರಸೀಪುರಕ್ಕೆ ಹೋಗಿರುವರೆಂದೂ ವರದಿಯಾಗಿದೆ.

ದಸರಾ ಹಬ್ಬದ ವಿಶೇಷಾಧಿಕಾರಿ

ದಸರಾ ಉತ್ಸವದ ಸಂಬಂಧದಲ್ಲಿ ಆಹ್ವಾನಿತರ ಸೌಕರ್ಯಗಳ ಬಗ್ಗೆ ವ್ಯವಸ್ಥೆ ಮಾಡಲು ಬೆಂಗಳೂರು ಅರಮನೆ ಕಛೇರಿಯ ರಿಜಿಸ್ಟ್ರಾರ್ ಶ್ರೀ ವೇಣುಗೋಪಾಲ ನಾಯ್ಡುರವರನ್ನು ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ.

ವಿಜಯ ರಾಘವ ರೆಡ್ಡಿಯವರು ಕೇಂದ್ರ ಆಹಾರ ಶಾಖೆಗೆ

ಮೈಸೂರು ನಗರದ ರೇಷನ್ ಅಧಿಕಾರಿಗಳಾದ ಶ್ರೀ ಹೆಚ್ ಜಿ ವಿಜಯರಾಘವರೆಡ್ಡಿಯವರನ್ನು ಕೇಂದ್ರ ಸರ್ಕಾರದ ಆಹಾರ ಶಾಖೆಯ ಅಂಡರ್ ಸೆಕ್ರೆಟರಿಯಾಗಿ ನೇಮಿಸಲಾಗಿರುವುದೆಂದು ತಿಳಿದುಬಂದಿದೆ. ಅವರು ಅಕ್ಟೋಬರ್ ಮೊದಲನೇ ವಾರದಲ್ಲಿ ತಮ್ಮ ಅಧಿಕಾರ ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಈಜಿಪ್ಟ್ ಅಧಿಕಾರಿಗಳ ಮನೆ ಮತ್ತು ಕಛೇರಿಗಳ ಮೊಹರು

ಪ್ಯಾಲಸ್ಟೈನ್ ಯುದ್ಧದ ಸಂಬಂಧವಾಗಿ ಈಜಿಪ್ಟಿನ ಸೈನ್ಯಗಳಿಗಾಗಿ ಹಳೆಯ ಮತ್ತು ಅನುಪಯುಕ್ತ ಶಸ್ತ್ರಾಸ್ತ್ರಗಳನ್ನು ಕೊಂಡುಕೊಂಡ ಬಗ್ಗೆ ಈಜಿಪ್ಟ್ ಸರ್ಕಾರದವರು ತನಿಖೆಯನ್ನು ನಡೆಸಲು ಪ್ರಾರಂಭಿಸಿ, ಈಗಾಗಲೇ ಅನೇಕ ಹಿರಿಯ ಅಧಿಕಾರಿಗಳ ಕಛೇರಿ ಮತ್ತು ಮನೆಗಳನ್ನು ಮೊಹರು ಮಾಡಿಸಿರುವರು. ಅಲ್ಲಿನ ಯುದ್ಧ ಇಲಾಖೆಯ ಉಪಮಂತ್ರಿಯೊಬ್ಬರಿಗೆ ೩ ತಿಂಗಳ ರಜವನ್ನು ಕೊಡಲಾಗಿದೆ. ಈಜಿಪ್ಟಿನ ಸೈನ್ಯ ತಂಡವೊಂದು ಸರ್ಕಾರದ ವಾಣಿಜ್ಯ ಇಲಾಖೆಗೆ ಪ್ರವೇಶಿಸಿ, ಕಂಟ್ರೋಲರ್ ಜನರಲ್ಲರಾದ ಸೈಯದ್ ಫಾಹಮಿಯವರ ಹತ್ತಿರ ಇದ್ದ ೨೪ ಕಾಗದಪತ್ರಗಳ ಕಡತಗಳನ್ನು ವಶಪಡಿಸಿಕೊಂಡಿರುವುದಾಗಿ ಗೊತ್ತಾಗಿದೆ. ಮಾಜಿ ದೊರೆ ಫರೂಕರ ಅಂಗರಕ್ಷಕರಾಗಿದ್ದ ಜನರಲ್ ಓಮಾರ್ ಫಾತಿಯವರ ಮನೆಯನ್ನು ಶೋಧಿಸಲಾಗಿದೆ.

ಮಂಡ್ಯದ ಡಿಪೋವಿನಲ್ಲಿ ೨೫,೦೦೦ ರೂ ದುರುಪಯೋಗ

ಮಂಡ್ಯದಲ್ಲಿರುವ ಸಕ್ಕರೆ ಕಂಪೆನಿಯ ಆಶ್ರಯದಲ್ಲಿ ನಡೆಯುತ್ತಿರುವ ಆಹಾರದ ಡಿಪೋವಿನಲ್ಲಿ ಸುಮಾರು ೨೫ ಸಾವಿರ ರೂಪಾಯಿಗಳ ವರೆಗೆ ದುರುಪಯೋಗವಾಗಿರುವುದೆಂದು ಶ್ರೀನಿವಾಸಯ್ಯ ಎಂಬುವರನ್ನು ಪೋಲೀಸರು ದಸ್ತಗಿರಿ ಮಾಡಿ ರಿಮ್ಯಾಂಡಿನಲ್ಲಿಟ್ಟುಕೊಂಡಿರುವರೆಂದು ವರದಿಯಾಗಿದೆ.

ಕೃಷ್ಣಾ ನದಿಯಲ್ಲಿ ೭ ಜನರ ಮರಣ ಮಾತ್ರ

ಕಳೆದ ೯ ನೇ ತಾ|| ಕೃಷ್ಣಾನದಿಯಲ್ಲಿ ಎರಡು ದೋಣಿಗಳು ಮುಳುಗಿದ ಪರಿಣಾಮವಾಗಿ ಮೂವರು ಇಂಜನಿಯರುಗಳೂ, ಒಬ್ಬ ಇಂಜನಿಯರರ ಸಂಬಂಧಿಕರೂ, ಇನ್ನೊಬ್ಬರು ಕಟ್ಟಡದ ಕೆಲಸಗಾರರೂ ಮತ್ತೊಬ್ಬ ಕೆಲಸಗಾರರೂ ನೀರಿನ ಪಾಲಾದರೆಂದೂ, ಒಬ್ಬರು ಮಾತ್ರ ನೀರಿನಲ್ಲಿ ಮುಳುಗಿದ ನಂತರ ರಕ್ಷಿಸಲ್ಪಟ್ಟು ಆಸ್ಪತ್ರೆಯಲ್ಲಿ ಸತ್ತರೆಂದೂ, ಇನ್ನೂ ೨೦ ಜನರು ಸತ್ತರೆಂಬುದು ಸರಿಯಲ್ಲವೆಂದೂ ಕೃಷ್ಣ ಜಿಲ್ಲೆಯ ಕಲೆಕ್ಟರರು ತಿಳಿಸಿರುತ್ತಾರೆ

೩೬ ಪೌರ ಸಭಾ ಸ್ಥಾನಗಳಿಗೆ ೭೧೪ ಉಮೇದುವಾರರು

ತಿರುಚನಾಪಳ್ಳಿಯ ಪೌರ ಸಭಾ ಚುನಾವಣೆ ಸಂಬಂಧವಾಗಿ ೩೬ ಸ್ಥಾನಗಳಿಗೆ ೨೩೫ ಜನರು ಸ್ಪರ್ಧಿಸಿರುವರು. ಒಟ್ಟು ೭೧೪ ನಾಮಪತ್ರಗಳನ್ನು ಸಲ್ಲಿಸಲಾಗಿದೆ ಶ್ರೀರಂಗದಲ್ಲಿ ೨೨ ಸ್ಥಾನಗಳಿಗೆ ೩೩೮ ನಾಮಪತ್ರಗಳು ಕೊಡಲ್ಪಟ್ಟಿವೆ ಒಬ್ಬೊಬ್ಬ ಸ್ಪರ್ಧಿಯೂ ನಾಲ್ಕಾರು ಕಡೆ ಅರ್ಜಿಗಳನ್ನು ಸಲ್ಲಿಸಿರುವರು

ತಲಕಾಡು ಪ್ರೌಢಶಾಲಾ ವಿದ್ಯಾರ್ಥಿ ಸಂಘದಲ್ಲಿ ಗಣಪತಿ ಮಹೋತ್ಸವ

ತಲಕಾಡಿನ ಜಿಲ್ಲಾಬೋರ್ಡು ಪ್ರೌಢಶಾಲಾ ವಿದ್ಯಾರ್ಥಿ ಸಂಘದವರು ಕಳೆದ ೪ನೇ ತಾ|| ವಿದ್ಯಾಗಣಪತಿ ಮಹೋತ್ಸವವನ್ನು ನೆರವೇರಿಸಿದರು ಮೈಸೂರಿನ ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಸೋಮನಾಥಾನಂದಜಿಯವರ ಉಪನ್ಯಾಸವು ಏರ್ಪಾಡಾಗಿದ್ದಿತು ಶ್ರೀ ಟಿ ಕೆ ವೆಂಕಟಾಚಲರವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ರಾಮಕೃಷ್ಣಪರಮಹಂಸರ ಭಾವಚಿತ್ರ ಅನಾವರಣವನ್ನೂ ನೆರವೇರಿಸಲಾಯಿತು

ಶ್ರೀ ಕೃಷ್ಣಜಯಂತಿ ಮಹೋತ್ಸವ ಸಂಗೀತ

ರಾಜಧಾನಿಯ ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀ ಕೃಷ್ಣಜಯಂತಿ ಮಹೋತ್ಸವದ ಪ್ರಯುಕ್ತ ನಾಳೆ ಸಂಜೆ ೭|| ಗಂಟೆಗೆ ವಿ|| ಬಿ ಕೆ ಪದ್ಮನಾಭರಾಯರ ಸಂಗೀತವು, ವಿ|| ಎ ವಿ ಕೃಷ್ಣಮಾಚಾರ್ಯರ ಪಿಟೀಲು, ಸಂ|| ರ|| ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗಗಳೊಡನೆ ನಡೆಯುವುದು

ಕಾಶ್ಮೀರ ಸಂಧಾನದ ಮಾತುಕತೆ ಮುಕ್ತಾಯ

ಕಾಶ್ಮೀರದ ಭವಿಷ್ಯದ ಬಗ್ಗೆ ಆಖೈರು ಜಂಟಿ ಸಭೆಯು ಮೊನ್ನೆ ರಾತ್ರಿ ನಡೆಯಿತು. ಭದ್ರತಾ ಸಮಿತಿಗೆ ಅಲ್ಲಿ ನಡೆದ ಮಾತುಕತೆಗಳ ಫಲಿತಾಂಶವನ್ನು ಡಾ|| ಗ್ರಹಾಂರವರು ವರದಿ ಮಾಡಲಿರುವರು ಪ್ರತಿನಿಧಿಗಳೆಲ್ಲರೂ ಜಿನೀವಾದಿಂದ ಹೊರಟಿರುತ್ತಾರೆ

ಪ್ರಪಂಚದಲ್ಲಿ ಅರ್ಧಭಾಗದ ಜನರು ಅನಕ್ಷರಸ್ಥರು

ವಿಶ್ವಸಂಸ್ಥೆಯ ವಿದ್ಯಾ, ವಿಜ್ಞಾನ ಮತ್ತು ಸಾಂಸ್ಕೃತಿಕ ಸಂಘದ ವರದಿ ಪ್ರಕಾರ ಪ್ರಪಂಚದಲ್ಲಿ ೧೨೦ ಕೋಟಿ ಜನರು ಓದಲು ಮತ್ತು ಬರೆಯಲು ಬಾರದವರೆಂದು ಗೊತ್ತಾಗಿದೆ ಪ್ರಪಂಚದ ಜನಸಂಖ್ಯೆಯಲ್ಲಿ ಇದು ಅರ್ಧಭಾಗಕ್ಕಿಂತಲೂ ಹೆಚ್ಚೆಂದು ಹೇಳಲಾಗಿದೆ

ಯುನೆಸ್ಕೊ ಮಕ್ಕಳ ಸಮ್ಮೇಳನಕ್ಕೆ ಡಾ|| ಎಂ. ವಿ ಗೋಪಾಲಸ್ವಾಮಿ

ಬರುವ ನವೆಂಬರ್ ೨೭ ರಿಂದ ೩ ವಾರ ಕಾಲ ಪ್ಯಾರಿಸ್ಸಿನಲ್ಲಿ ನಡೆಯುವ ಯೂರೋಪಿನ ಮಕ್ಕಳ ಶಿಕ್ಷಣ ಮತ್ತು ಮಾನಸಿಕ ಆರೋಗ್ಯ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸುವ ಶ್ರೀ ಡಾ|| ಎಂ ವಿ ಗೋಪಾಲಸ್ವಾಮಿಯವರನ್ನು ಯುನೆಸ್ಕೋ ಡೈರೆಕ್ಟರ್ ಜನರಲ್‌ರವರ ಆಹ್ವಾನಿಸಿರುತ್ತಾರೆ ಡಾ|| ಗೋಪಾಲಸ್ವಾಮಿಯವರು ಪ್ಯಾರಿಸ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡಲೂ ಸಹಾ ಆಹ್ವಾನಿತರಾಗಿದ್ದಾರೆ

ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಸ್ಥಳೀಯ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ಶ್ರೀ ಎಸ್ ರುದ್ರಪಟಿಯವರಿಂದ ಕಂಬ ರಾಮಾಯಣದ ಬಗ್ಗೆ ಕನ್ನಡದಲ್ಲಿ ಉಪನ್ಯಾಸವು ನಡೆಯುವುದು

ನಾಗಸ್ವರ

ರಾಜಧಾನಿಯ ಕಾಶಿಪತಿಅಗ್ರಹಾರದಲ್ಲಿರುವ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೇಂದ್ರದಲ್ಲಿ ಗಣಪತಿ ಸಂಗೀತೋತ್ಸವದ ಅಂಗವಾಗಿ ನಾಳೆ ಸಂಜೆ ಆರು ಗಂಟೆಗೆ ಪೌರಸಭಾ ಸದಸ್ಯರಾದ ಶ್ರೀ ಪಿ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ವಿದ್ವಾನ್ ಎ ವಿ ನಾರಾಯಣಪ್ಪನವರ ನಾಗಸ್ವರವು ಶ್ರೀ ರಾಮಯ್ಯನವರ ತವಿಲ್ ನೊಡನೆ ನಡೆಯುವುದು

ಡಕಾಯಿತರಿಂದ ೬ ಜನರ ಕೊಲೆ

ಪೂರ್ವ ಪಂಜಾಬಿನ ಭಾಟಿಂಡಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಕಳೆದ ಮಂಗಳವಾರ ಸಂಜೆಯ ನಂತರ ಹಲವು ಡಕಾಯಿತರು ಒಂದು ಮನೆಗೆ ನುಗ್ಗಿ ೪ ಮಕ್ಕಳನ್ನೂ, ಇಬ್ಬರು ದೊಡ್ಡವರನ್ನೂ ಕೊಂದು ಹಾಕಿದರೆಂದು ವರದಿಯಾಗಿದೆ ಒಂದು ಎಮ್ಮೆ ಮತ್ತು ಒಂದು ಒಂಟೆ ಇವುಗಳನ್ನೂ ಕೊಲ್ಲಲಾಯಿತು.

ಕೋಳಿ ಜಗಳ ತಪ್ಪಿಸಲು ಕರಿಯ ಕನ್ನಡಕ

ಇಸ್ರೇಲಿನ ಕೋಳಿ ಪೌಲ್ಟ್ರಿ ಫಾರಂಗಳಲ್ಲಿರುವ ಕೋಳಿಗಳು ಒಂದರ ಮೇಲೊಂದು ಬಿದ್ದು ಸಾಯುವವರೆಗೂ ಕಾಳಗ ಮಾಡುವುದನ್ನು ತಪ್ಪಿಸಲು ಅವುಗಳಿಗೆ ವಿಶೇಷ ರೀತಿಯ ಕಪ್ಪು ಕನ್ನಡಕಗಳನ್ನು ತಯಾರಿಸಿ ಹಾಕಲಾಗಿದೆ ಈ ಕನ್ನಡಕದಿಂದ ಅವುಗಳ ರಕ್ತದಾಹವು ಅಡಗುವುದೆಂದು ಹೇಳಲಾಗಿದೆ

ಕನ್ನಡ ಟೈಪ್‌ರೈಟರ್ ಕೈಮಣೆಗಳ ರಚನೆ

ಕನ್ನಡ ಟೈಪ್‌ರೈಟರ್, ಲೈನೋಟೈಪ್ ಮತ್ತು ಮಾನೋಟೈಪ್ ಕೈಮಣೆಗಳ ರಚನೆ ಎಂಬ ಹೆಸರಿನ ಪುಸ್ತಕವನ್ನು ಸರ್ಕಾರದವರು ಪ್ರಕಟಿಸಿರುತ್ತಾರೆ ಕನ್ನಡ ಟೈಪ್‌ರೈಟರ್ ಸಮಿತಿಯ ಸದಸ್ಯರಾದ ಶ್ರೀ ಕೆ ವಿಜಯಪಾಲಯ್ಯನವರು ಅವರ ಗ್ರಂಥಕರ್ತರು ಟೈಪ್‌ರೈಟರುಗಳ ಅಕ್ಷರ ಸಂಯೋಜನಾ ಕ್ರಮ ಮತ್ತು ಯಂತ್ರದ ಜೋಡಣೆ ಈ ಬಗ್ಗೆ ವಿಮರ್ಶೆ ಮಾಡಲಾಗಿದೆ ಶ್ರೀ ಅನಂತ ಸುಬ್ಬರಾಯರು ಮತ್ತು ಇತರರು ತಯಾರಿಸಿರುವ ವಿಧಾನಗಳನ್ನೂ ವಿಮರ್ಶಿಸಲಾಗಿದೆ

ಒಲಂಪಿಯಾ

11 9-52ರಿಂದ ಯಶಸ್ವಿ 4ನೇ ವಾರ

ರಂಜನ್ ಪಾತ್ರ ವಹಿಸಿರುವ

ಸಿಂಬಾದ್ ದಿ ಸೈಲರ್

ಮುಂದಿನ ಬದಲಾವಣೆ

ಅಶೋಕ್ ಕುಮಾರ್ ಕಾಮಿನಿ ಕೌಶಲ್ ಪಾತ್ರ ವಹಿಸಿರುವ

ಪೂನಂ

ಲಾರಿ ಕೆರೆಗೆ ಬಿದ್ದರೂ ಜನರ ಪಾರು

ಹಾರೋಹಳ್ಳಿ ಬಳಿಯ ಕೆರೆಗೆ … ೭ ನೇ ತಾ|| ಕಡಲೆಕಾಯಿ ಮೂಟೆ… ಬಿದ ಒಂದು ಲಾರಿಯು ಮಗುಚಿಕೊ…ಡಿತೆಂದೂ, ಆದರೆ ಅದರಲ್ಲಿದ್ದ ೯ ಮ…ಯು ನೀರಿನಲ್ಲಿ ಮುಳುಗಿದರೂ ಸು…ತವಾಗಿ ಮೇಲಕ್ಕೆ ಬಂದರೆಂದೂ ವ…ಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಚಿತ್ರಗೀತ್ ಸುಪ್ರ… ೧ ೪೦ ಗಿಟಾರ್ ವಾದನ ೨ ಬಾಲಕ… ಮಕ್ಕಳ ಕಾರ್ಯಕ್ರಮ ಸಂಜೆ ೫ ೪೦ ಮ… ೭ ಎಸ್ ವೆಂಕಟರಮಣಯ್ಯ ಪಿಟೀ… ೬ ೧೦ ನಾದಶ್ರೀ ೭ ೦ ವನಿತಾವಿಭಾ… ಸ್ತ್ರೀಯರ ಕಾರ್ಯಕ್ರಮ ೮ ಆರ್ … ಕೇಶಗಿರಿದಾಸ್ ಹರಿಕಥೆ ೯ ೧೫ ಕಟು… ವನ ೯ ೪೦ ಗಾನವಾರಿಧಿ ೯ ೪೫ ಅರ್ಕೆ…

ಮೈಸೂರು ಪೇಟೆ ಧಾರ…

	ಪಲ್ಲ ೧ಕ್ಕೆ ರೂ	ಇಂದ ರೂ
ನೆಲಗಡಲೆ	೬-೪ ೦	೨೦…
ಎಳ್ಳು	೬೧ ೦ ೦	೬೩ ೧…
ಹುಚ್ಚೆಳ್ಳು	೪೬ ೮ ೦	
ಹರಳು ಬೀಜ	೪೪ ೨ ೦	
ಹುರುಳಿ	೫೩ ೮ ೭	೫೪
ಹೆಸರು	೬೧ ೨ ೦	
ಹೊಂಗೆಬೀಜ	೨೬ ೬ ೦	೨೬ …
ಉದ್ದು	೭೫ ೧೨ ೮	೭೮ …
ಅವರೆ	೭೯ ೧೦-೦	
ಹಲಸಂದೆ	೭೨-೦-೦	೭೬ …
ಮೆಣಸಿನಕಾಯಿ		
ಮಣ ೧ಕ್ಕೆ	೧೫ ೧ ೦	
ಹುಣಿಸೇಹಣ್ಣು	೪ ೯ ೦	೫ …
ಸೀಗೇಕಾಯಿ	೫-೧-೬	೫ …
ಬೆಲ್ಲ	೪-೦-೮	೪-…
ತೆಂಗಿನಕಾಯಿ ೧೦೦೦	೧೫೯ ೦ ೦	೨೫೯

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗ…

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೊ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

Edited, Printed and Pu… lished by A R Nagara… at Sadhvi Press, D Sub… iah Road, Mysore

ಪ್ರಭುದೇವಾ ಟಾಕೀಸ್

ಮೈಸೂರು

13—9—52 ನೇ ಶನಿವಾರದಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು

★ ಭೂ ಕೈಲಾಸ ★

(ತೆಲುಗು)

ಪಾತ್ರ ಸುಬ್ಬಯ್ಯನಾಯ್ಡು, ನಾಗೇಶ್ವರರಾವ್, ಲಕ್ಷ್ಮಿಬಾಯಿ ಮತ್ತು ಇತರರು

PRABHA ★ From 12-9 52 Daily 3 Shows

A Historical Documentary Film of the Last & Decisive Battle in

FASCIST GERMANY

Of the Capture and FALL of BERLIN and the Unconditional Surrender of the German Armed Forces

★ BERLIN ★

Directed by Y RAIZMAN (Stalin's Prize Winner)

Along with 1) May Day Parade [English] and 2) Stars of To-morrow

ದಸರಾ ಮಹೋತ್ಸವಕ್ಕಾಗಿ:- ಹೊಸ ಮಾದರಿಯ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ಟ್ ಸೀರೆಗಳೂ ಡಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ

★ M. V. ಭೋಜಯ್ಯ

ಇಂಡಿಯನ್ ಬ್ಯಾಂಕ್ ಎದುರು ಮೈಸೂರು

ಬಲಿಪೂ।। ನಂ 792 ।।ವಂದೇ ಮಾತರಂ, ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೩-೯-೧೯೫೨ [ಸಂಚಿಕೆ ೪೧

ಬಾಣ ಬಿರುಸು ಕಾರ್ಖಾನೆ ಸಿಡಿತದಲ್ಲಿ ೧೨ ಮರಣ

...ರ್ವಾರಿನ ಬದಲು ರಾಜಸಭೆ ಏರ್ಪಾಡು ಸರಿಯಲ್ಲ

ಬಹಿರಂಗ ಸಭೆಯಲ್ಲಿ ನಿರ್ಣಯ

ನ್ಯೈ...

...ನ್ನೆ ಸಂಜೆ ...ಹಾಲಿನಲ್ಲಿ ನ...ರ ವಾಸಿಗಳ ಬಹಿರಂಗ ...ಸಭೆಯು ...ಗಳೂರಿನ ಶ್ರೀ ಡಿ ಎ... ಕೃಷ್ಣಯ್ಯ ...ರ ಅಧ್ಯಕ್ಷತೆಯಲ್ಲಿ ನಡೆಯಿತು ...ರಂಭದಲ್ಲಿ ಗಾಂಧಿಜಯ ವರ ಶಿಷ್ಯ ...ರೋಲಾಲ್ ಮಶ್ರುವಾಲಾರ ...ಧನಕ್ಕಾಗಿ ಸಂತಾಪವನ್ನು ವ್ಯಕ್ತ ...ಪಡಿಸಲಾಯಿತು

...ಗೆ ಶ್ರೀ ಸ್ವಾಮಿ ದಾಸ್, ಎಂ ...ಚಂದ್ರಶೇಖರ ಜೋಯಿಸ್, ... ಜ ದಾಸ್, ಕೋದಂಡರಾ... ಎಂ ಎ ತಿಮ್ಮಯ್ಯ ಮತ್ತು ...ರ್ ಸಿ ಬಸಪ್ಪನವರು ಭಾಷಣ ...ಸರ್ಕಾರದ ನೀತಿನೀತಿಗಳನ್ನು ಕ...ವಾಗಿ ಟೀಕಿಸಿದರು

...ಡಿ ಎ ಕೃಷ್ಣಯ್ಯ ಪಟ್ಟದ ...ಭಾಷಣದಲ್ಲಿ ಮುಖ್ಯ ಮಂತ್ರಿ ಶ್ರೀ ...ನ ಹನುಮಂತಯ್ಯನವರು ಶ್ರೀಮಾನ್ ಮ... ಜರ ಬಗ್ಗೆ ತುಂಬಾ ಅನಾದರಣೆ ...ತೋರುತ್ತಿರುವರೆಂದೂ ...ಅದಲ್ಲಿ ನಡೆಯುವ ದರ್ಬಾರನ್ನು ...ಸಭೆಯೆಂದು ನಾಮಕರಣ ಮಾ... ಗಂಭೀರವಾದ ಸಮಾರಂಭವನ್ನು ...ಕದಂತೆ ಪರಿವರ್ತಿಸಿರ ವುದು ಸರಿ... ವೆಂದೂ ತಿಳಿಸಿದರು

...ಭಿಪ್ರಾಯವನ್ನು ಪಡೆಯದ ...ಧ್ವಜ ಮತ್ತು ರಾಷ್ಟ್ರ ...ಗೀತೆಗಳನ್ನು ನಿಷೇಧಿಸಿರು... ವ್ಯಸನವನ್ನು ಸೂಚಿಸಿ, ಆ ...ಗಳನ್ನು ತೆಗೆಯುವಂತೆ ಸರ್ಕಾರ ...ಒತ್ತಾಯಿಸುವ ನಿರ್ಣಯವನ್ನು ...ಡಲಾಯಿತು

ನವರಾತ್ರಿ ಉತ್ಸವ ಕಾಲದ ದರ್ಬಾರ್ ಮತ್ತು ಇತರ ಅನೂಚಾನವಾದ ಕಾರ್ಯಕ್ರಮಗಳನ್ನು ಬದಲಾಯಿಸಿ ಪ್ರಜಾ...ತ್ಸವದ ಹೆಸರಿನಲ್ಲಿ ರಾಜಸಭೆ ಎಂ... ಕರೆದಿರುವುದು ಪ್ರಜೆಗಳ ಧಾರ್ಮಿಕ ...ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿರುವ ...ಸಂವಿಧಾನಕ್ಕೆ ವಿರೋಧವಾಗಿರುವುದೆಂ... ಆದುದರಿಂದ ರಾಜಸಭೆಯನ್ನು ...ಗೊಳಿಸಿ ಪೂರ್ವದಂತೆ ಉತ್ಸವಗಳು ನಡೆಯಬೇಕೆಂದೂ ಕೋರಲಾಯಿತು

ಶಾಸನ ಸಭಾ ಸದಸ್ಯರು ಸಂಬಳ ...ವನ್ನು ಪಡೆಯಕೂಡದೆಂದೂ ಈಗ ಬ...ರುವ ಸಂಬಳಗಳನ್ನು ಅವರುಗಳು ...ಪರಿಹಾರ ನಿಧಿಗೆ ಕೊಡಬೇಕೆಂ... ಪ್ರಾರ್ಥಿಸಲಾಯಿತು ಮಂತ್ರಿಗಳ ...ಬಳಗಳು ೫೦೦ ರೂ ಗಳಿಗೆ ಇಳಿ... ಬೇಕೆಂದು ಕೋರ ವ ನಿರ್ಣಯವು ...ಗೀಕರಿಸಲ್ಪಟ್ಟಿತು

...ರ ಸಂಸ್ಥಾನಗಳಲ್ಲೂ ವಿಶ್ವೇಶ್ವರ...ಯ್ಯನವರ ಗ್ರಾಮ ಕೈಗಾರಿಕಾ ಯೋಜನೆ

...ನ ಕೈಗಾರಿಕೆಗಳನ್ನು ಅಭಿವೃದ್ಧಿ ...ಸುವ ಬಗ್ಗೆ ಸರ್ ಎಂ ವಿಶ್ವೇಶ್ವರ...ಯ್ಯನವರು ತಯಾರಿಸಿರುವ ಯೋಜನೆ...ಯನ್ನು ಮೈಸೂರು ಸರ್ಕಾರದವರ ...ಜಾರಿಗೆ ತಂದಿರುವಂತೆಯೇ ಮದ್ರಾಸು ಮ... ಮುಂಬಯಿ ಸರ್ಕಾರದವರೂ ಸಹ ಜಾ...ರಿಗೆ ತರಲಿರುವರೆಂದು ಗೊತ್ತಾಗಿದೆ

ದಸರಾ ಪ್ರೇಕ್ಷಕರಿಗೆ ಪಡಿತರವಿಲ್ಲ

ಬೆಂಗಳೂರು ...

ಸರ್ಕಾರದವರು ಪ ಕಟನೆಯೊಂದನ್ನು ಹೊರಡಿಸಿ ರಾಜಧಾನಿಯಲ್ಲಿ ನಡೆಯುವ ದಸರಾ ಹಬ್ಬಕ್ಕಾಗಿ ಬರುವ ಪ್ರೇಕ್ಷಕರಿಗೆ ಪಡಿತರವನ್ನು ಒದಗಿಸುವುದಿಲ್ಲವೆಂದು ತಿಳಿಸಿರುತ್ತಾರೆ ಪ್ರೇಕ್ಷಕರು ತಮ್ಮ ರೇಷನ್ನುಗಳನ್ನು ತಾವೇ ಒದಗಿಸಿಕೊಳ್ಳಬೇಕೆಂದು ಸರ್ಕಾರದವರು ಸೂಚಿಸಿರುತ್ತಾರೆ ಆಹಾರದ ಸಾಗಾಣಿಕೆಗೆ ಯಾವ ನಿರ್ಬಂಧವೂ ಇರುವುದಿಲ್ಲವಾದರೂ ಶೀಘ್ರ ಬಾಗಿಲ ...ಜಿಲ್ಲೆಗಳ ... ಅಭಾವ ಪರಿಸ್ಥಿತಿಯು ಎಂದಿಗೆ ಜನರಿಗೆ ಸಾಮಾನ್ಯವಾಗಿಯೇ ಒದಗಿಸಲು ಆಹಾರವು ಸಾಲದೆಂದೂ ಸರ್ಕಾರದವರು ತಿಳಿಸಿರುತ್ತಾರೆ

ಬಾಣ ಬಿರುಸು ಕಾರ್ಖಾನೆಯಲ್ಲಿ ಭಾರಿ ಸಿಡಿತ

೧೨ ಜನರ ಮರಣ

ಮಚಲೀಪಟ್ಟಣದ ಕಲ್ಯಾಣ ಎಂಬ ಬಾಣ ಬಿರುಸಿನ ವ್ಯಾಪಾರಿಯೊಬ್ಬನು ರಹಸ್ಯವಾಗಿ ದಾಸ್ತಾನು ಮಾಡಿದ್ದ ಸಿಡಿಯುವ ಮದ್ದುಗಳಿಗೆ ನೆನ್ನೆ ಆಕಸ್ಮಾತ್ ಬೆಂಕಿ ತಗುಲಿ, ಅವು ಸಿಡಿದುದರ ಪರಿಣಾಮವಾಗಿ, ಅಲ್ಲಿಯೇ ಕೆಲಸ ಮಾಡುತ್ತಿದ್ದ ಹತ್ತು ಜನ ಕಾರ್ಮಿಕರು ಮಡಿದು ೮ ಜನರಿಗೆ ಗಾಯಗಳಾದುವೆಂದೂ ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಇಬ್ಬರು ಮೃತರಾದರೆಂದೂ ವರದಿಯಾಗಿದೆ ಸತ್ತವರಲ್ಲಿ ಮಂದಿ ಸ್ತ್ರೀಯರೇ ಇರುವರು ಸಿಡಿತದ ಸದ್ದು ಊರಿನ ಬಹು ದೂರದ ಪ್ರದೇಶಗಳಿಗೂ ಕೇಳಿಸಿತೆಂದು ಹೇಳಲಾಗಿದೆ ಬೆಂಕಿಯನ್ನು ಸ್ಫೋಟಿಸಿದಿನವರು ಆರಿಸಿರುತ್ತಾರೆ ಕಾರ್ಖಾನೆಯ ಮಾಲೀಕ ಕಲ್ಯಾಣರವರು ಪತ್ತೆಯಿಲ್ಲವೆಂದು ಹೇಳಲಾಗಿದೆ

ಭಾರತೀ ಸ್ತ್ರೀ ಸಮಾಜ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಭಾರತೀ ಸ್ತ್ರೀಸಮಾಜದಲ್ಲಿ ಶ್ರೀ ಕೃಷ್ಣ ಜಯಂತಿ ಮಹೋತ್ಸವವು ನನ್ನ ಆಚರಿಸಲ್ಪಟ್ಟಿತು ಶ್ರೀಮತಿ ಕೆ ಎಸ್ ನರಸಮ್ಮನವರ ಸಂಗೀತವು ಏರ್ಪಾಡಾಗಿದ್ದಿತು

ಭಾರತದ ಗಡಿ ಬಳಿ ಹೆಚ್ಚು ಚೀಣಾ ಸೈನ್ಯ

ಭಾರತ ಮತ್ತು ಟಿಬೆಟುಗಳ ಗಡಿ ಬಳಿ ಟಿಬೆಟ್ಟಿನ ಪ್ರದೇಶದಲ್ಲಿರುವ ಚಕ್ರಾ ಕೋಟ್ ಎಂಬಲ್ಲಿ ಚೀಣಾ ಸೈನಿಕರನ್ನು ಹೆಚ್ಚಾಗಿ ...ಇರಿಸಲಾಗಿರುವುದೆಂದು ವರದಿಯಾಗಿದೆ ಟಿಬೆಟ್ಟಿನ ಗ್ಯಾಂಗ್ ಟಾಕ್ ಕೋರ್ ಮತ್ತು ಗಟೋಕ್ ಎಂಬ ವ್ಯಾಪಾರಿ ಸ್ಥಳಗಳಲ್ಲೂ ಚೀಣಾ ಸೈನ್ಯಗಳು ಬಲಗೊಂಡಿರುವುವೆಂದೂ ಟಿಬೆಟ್ ಮತ್ತು ಭಾರತಗಳ ನಡುವೆ ಪ್ರಯಾಣ ಮಾಡುವ ವ್ಯಾಪಾರಿಗಳ ಮತ್ತು ಯಾತ್ರಿಕರ ಮೇಲೆ ಸೈನಿಕರು ಹೆಚ್ಚು ಗಮನವಿಡುತ್ತಿರುವರೆಂದೂ ಹೇಳಲಾಗಿದೆ

ತಮ್ಮ ಕಾನೂನನ್ನೇ ಮುರಿದುದಕ್ಕೆ ಜ।। ನಗೀಬರಿಗೆ ದಂಡ

ತಾವು ಮಾಡಿದ ಕಾನೂನುಗಳ ಪೈಕಿ ಒಂದನ್ನು ತಾವೇ ಮುರಿದ ದಕ್ಕಾಗಿ ಈ ಜಿಪ್ಟಿನ ಗವರ್ನರ್ ಜನರಲ್ಲರಾದ ನಗೀಬ್ ರವರಿಗೆ ೪।। ಪೆನ್ನಿಗಳ ದಂಡವನ್ನು ವಿಧಿಸಲಾಗಿದೆ ಫರೂಕರ ಸಿಂಹಾಸನ ತ್ಯಾಗದ ನಂತರ ಬಿರುದುಗಳನ್ನು ಅಳಿಸಿದ್ದ ಗೊಳಿಸಿದ್ದರೂ ಸಹ ನಗೀಬರು ಮಾಜಿ ಪ್ರಧಾನಿ ನೆಹಸ್‌ರವರನ್ನು ಉದ್ದೇಶಿಸಿ ಮಾತನಾಡುತ್ತಾ ಅವರನ್ನು ಕುರಿತು ಹಿಸ್ ಎಕ್ಸಲೆನ್ಸಿ ಎಂದು ಹೇಳಿದುದಕ್ಕಾಗಿ ಮೇಲ್ಕಂಡಂತೆ ಶಿಕ್ಷೆಯನ್ನು ಕೊಡಲಾಗಿದೆ ನಗೀಬರಿಗೆ ೩ ಪೆನ್ನಿ ದಂಡವನ್ನು ವಿಧಿಸಲಾಯಿತಾದರೂ, ತಾವು ಮಾಡಿದುದು ಹೆಚ್ಚಿನ ಅಪರಾಧವೆಂದು ತಿಳಿಸಿ, ದಂಡದ ಮೊಬಲಗಿನ ಎರಡರಷ್ಟು ಹಣವನ್ನು ತಾವಾಗಿಯೇ ಕೊಟ್ಟಿರುತ್ತಾರೆ

ಬೆಂಗಳೂರಿನಲ್ಲಿ ಇನ್ಷೂರೆನ್ಸ್ ಲಕೋಟೆ ಕಳುವು

ಬೆಂಗಳೂರಿನ ಸಿಟಿ ಮಾರ್ಕೆಟ್ಟಿನ ಅಂಚೆ ಕಛೇರಿಯಲ್ಲಿ ನೆನ್ನೆ ಇನ್ಷೂರೆನ್ಸ್ ಲಕೋಟೆಗೆ ಸ್ಟಾಂಪು ಹಚ್ಚುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬನು ಗಮನವನ್ನು ಬೇರೆ ಕಡೆಗೆ ಸೆಳೆದು ಅದನ್ನು ಅಪಹರಿಸಿ ಪರಾರಿಯಾಗಿರುವನೆಂದು ವರದಿಯಾಗಿದೆ ಕವರಿನಲ್ಲಿ ೩ ಸಾವಿರ ರೂ ...ನೋಟುಗಳಿದ್ದುವೆಂದು ಹೇಳಲಾಗಿದೆ

ಶಾಸನಸಭಾ ಕಾಂ।।ಸದಸ್ಯರು ಕಾಂಗ್ರೆಸ್ ಸಮಿತಿಗಳಿಗೆ

ಇ...ದಿನಗಳಲ್ಲಿ ನೆನ್ನೆ ನಡೆದ ಶಾಸನ ಸಭೆಗಳ ಕಾಂಗ್ರೆಸ್ ಸದಸ್ಯರ ಕೂಟದಲ್ಲಿ ಪಂಡಿತ ನೆಹರೂರವರು ಭಾಷಣ ಮಾಡಿ, ಪ ರ್ಲಿಮೆಂಟ್ ಮತ್ತು ಶಾಸನ ಸಭೆಗಳಲ್ಲಿರುವ ಕಾಂಗ್ರೆಸ್ ಸದಸ್ಯರುಗಳು ಆಯಾ ಪ್ರದೇಶಗಳ ಕಾಂಗ್ರೆಸ್ ಸಮಿತಿಗಳ ಸಹಭಾಗಿ ಸದಸ್ಯರಾಗುವಂತೆ ನಿಬಂಧನೆ ಮಾಡಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುವುದೆಂದು ಹೇಳಿದರು ಶಾಸನ ಸಭಾ ಸದಸ್ಯರು ಮತ್ತು ಕಾಂಗ್ರೆಸ್ಸಿನ ರಚನಾತ್ಮಕ ಕೆಲಸಗಾರರು ಎಂಬ ಭೇದಭಾವಕ್ಕೆ ಅವಕಾಶ ವಿರಕೂಡದೆಂದು ಅವರು ಎಚ್ಚರಿಸಿರುತ್ತಾರೆ

ಬರ್ಮಾದಲ್ಲಿ ಕರೆನ್ನರಿಗಾಗಿ ಪ್ರತ್ಯೇಕ ರಾಜ್ಯ

ಬರ್ಮಾದ ಸಾಲ್ವೀನ್ ನದಿಯ ಬಳಿ ಬೆಟ್ಟಗುಡ್ಡಗಳ ೪ ಜಿಲ್ಲೆಗಳನ್ನು ಪ್ರತ್ಯೇಕ ರಾಜ್ಯವೆಂದು ಬರ್ಮಾ ಸರ್ಕಾರದವರು ಒಪ್ಪಿ ಆ ರಾಜ್ಯದ ಗಡಿಯನ್ನು ಗೊತ್ತುಪಡಿಸಿರುತ್ತಾರೆ ೪೦೦೦ ಚದುರ ಮೈಲಿ ಪ್ರದೇಶವುಳ್ಳ ೪ ಜಿಲ್ಲೆಗಳನ್ನು ಆ ಸಂಸ್ಥಾನವು ಹೊಂದಿರುತ್ತದೆ ಪ್ರತ್ಯೇಕ ಸಂಸ್ಥಾನಕ್ಕಾಗಿ ಕರೆನ್ನರು ೧೯೪೮ ರಿಂದಲೂ ಬರ್ಮಾ ಸರ್ಕಾರದ ವಿರುದ್ಧವಾಗಿ ದಂಗೆ ನಡೆಸುತ್ತಿದ್ದರು

ತಪ್ಪಿಸಿಕೊಂಡವರ ದಸ್ತಗಿರಿ

ಇಂದೂರಿನಲ್ಲಿ ಸೇರಿರುವ ಎ ಐ ಸಿ ಸಿ ಮುಂದೆ ಪ್ರದರ್ಶನ ನಡೆಸಲು ಗ್ವಾಲಿಯರಿನಿಂದ ಹೊರಟಿದ್ದ ಹಿಂದೂ ಮಹಾ ಸಭಾ ನಾಯಕರಾದ ಎಲ್ ಜಿ ತಟ್ಟೆಯವರನ್ನು ದಸ್ತಗಿರಿ ಮಾಡಲಾಗಿದೆ

ಶಾಲೆಗಳಲ್ಲಿ ವಿಶ್ವೇಶ್ವರಯ್ಯನವರ ಜೀವನ ಚರಿತ್ರೆಯ ಪಠಣ

ಇದೇ ೧೫ ನೇ ತಾ।। ಸರ್ ಎಂ ವಿಶ್ವೇಶ್ವರಯ್ಯನವರ ಜನ್ಮ ದಿನೋತ್ಸವವನ್ನು ಆಚರಿಸಬೇಕೆಂದು ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ಸಾರ್ವಜನಿಕರನ್ನು ಕುರಿತು ಪ್ರಾರ್ಥನೆಯೊಂದನ್ನು ಪ್ರಕಟಿಸಿರುತ್ತಾರೆ ಅಂದು ಸಂಸ್ಥಾನದ ಎಲ್ಲಾ ಶಾಲೆಗಳಲ್ಲೂ ಅವರ ಜೀವನದ ಸೂಕ್ಷ್ಮ ಪರಿಚಯವನ್ನು ಮಾಡಿ ಕೊಡುವ ಪಠ್ಯ ಪತ್ರಿಕೆಗಳ ಪಠಣ ಮಾಡುವ ವ್ಯವಸ್ಥೆಯನ್ನು ಮಾಡಲಾಗುತ್ತಿರುವುದೆಂದು ಅವರು ಹೇಳಿರುತ್ತಾರೆ.

ರಾಜಸಭೆ ನಿಲ್ಲಿಸುವಂತೆ ನೆಹರೂರವರಿಗೆ ತಂತಿ

ಶ್ರೀ ಎಂ. ಆರ್ ಸಿ ಬಸಪ್ಪನವರು ಈ ಏನ ಪ್ರಧಾನಿ ನೆಹರೂರವರಿಗೆ ಈ ರೀತಿ ತಂತಿಯೊಂದನ್ನು ಕಳುಹಿಸಿರುತ್ತಾರೆ — ಮಳೆಯಿಲ್ಲದೆ ಪೈರುಗಳು ಒಣಗಿ ಹೋಗುತ್ತಿವೆ, ದನಕರುಗಳು ಮೇವಿಲ್ಲದೆ ಸಾಯುತ್ತಿವೆ, ಸಂಸ್ಥಾನದ ಎಲ್ಲಾ ಕ್ಷಾಮ ಪರಿಸ್ಥಿತಿಯುಂಟಾಗಿ, ಕಾರ್ಮಿಕರು ತಮ್ಮ ಮಕ್ಕಳನ್ನು ಆಹಾರಕ್ಕಾಗಿ ಮಾರಿಕೊಳ್ಳುತ್ತಿರುವರು, ಜನಗಳ ಇಚ್ಛೆಗೆ ವಿರೋಧವಾಗಿ ಇಲ್ಲಿನ ಮಂತ್ರಿಗಳು ರಾಜಸಭೆಯನ್ನು ಏರ್ಪಡಿಸಿರುವರು, ಜನರು ಆಹಾರವಿಲ್ಲದೆ ಸಾಯುವುದಕ್ಕೆ ಅವಕಾಶ ಕೊಡದಂತೆ ಇಲ್ಲಿನ ಮಂತ್ರಿಗಳಿಗೆ ಹೆಚ್ಚಿನ ಗಮನ ಕೊಡಬೇಕೆಂದು ನೀವು ಸೂಚಿಸಬೇಕು.

ನ್ಯಾಯಾಧೀಶರಿಗೆ ಲಂಚ ಕೊಡುವ ಪ್ರಯತ್ನ

ಕಳೆದ ತಿಂಗಳು [illegible] ನೇ ತಾ॥ ಹೊಸದುರ್ಗ ತಾಲೂಕು ಪೊನ್ನಕೆರೆಯ ನಿವಾಸಿ ಹನುಮಣ್ಣ ಎಂಬುವನು ದಾವಣಗೆರೆಯ ಮೆಜಿಸ್ಟ್ರೇಟರಲ್ಲಿಗೆ ಹೋಗಿ ತನ್ನ [illegible] ಹನುಮಂತಪ್ಪ ಎಂಬುವರ ಸಿವಿಲ್ ದಾವೆಯಲ್ಲಿ ಅವರ ಪರವಾಗಿ ತೀರ್ಪು ಕೊಡಬೇಕೆಂದು ಕೋರಿ ಅವರಿಗೆ [illegible] ರೂ ಲಂಚವನ್ನು ಕೊಡಲು ಹೋದಾಗ, ಹಣದ ಸಮೇತ ಹನುಮಣ್ಣನನ್ನು ಪೋಲೀಸರ ವಶಕ್ಕೆ ಒಪ್ಪಿಸಲಾಯಿತೆಂದು ವರದಿಯಾಗಿದೆ. ದಾವಣಗೆರೆ ಮ್ಯಾ॥ ರ ಕೋರ್ಟಿನಲ್ಲಿ ಅವನಮೇಲೆ ಮೊಕದ್ದಮೆ ಹೂಡಲಾಗಿದೆ.

೧೪೦ ತೊಲ ಗಾಂಜಾ ಪತ್ತೆ

ಗೋರಿಬಿದನೂರಿನ ಶ್ರೀ ಎ. ಓ. ವೆಂಕಟಪ್ಪ ಎಂಬುವನು ಮೈಸೂರ ವತ್ತು ನಂಜನಗೂಡು [illegible] ಮಾರಲು ತದಿದ್ದ [illegible] ಮಾರು [illegible] ತೊಲಾ [illegible] ವನ್ನು ಎಕ್ಸೈಜ್ ಇನ್ಸ್‌ಪೆಕ್ಟರ್ [illegible] ಪತ್ತೆ ಮಾಡಿದ ತರುವಾಯ ನಂಜನಗೂಡ [illegible] ನ್ಯಾಯಾಧೀಶರ ಕೋರ್ಟಿನ ಆಪಾದಿತನಿಗೆ [illegible] ಒಂದು ತಿಂಗಳು ಸಜಾ [illegible] ವಿಧಿಸಲಾಗಿದೆ. [illegible] ಕೊಡದೆ ತಪ್ಪಿದ [illegible] ದಿವಸಗಳ [illegible] ಕಾಗುವುದು

ರಕ್ಷಣಾ ಇಲಾಖಾ ಮುಷ್ಕರಗಾರರ ಸಂಖ್ಯೆ ೩೭ ಸಾವಿರ

ಪೂನಾ [illegible] ದ್ದು ಗುಂಡು ತಯಾರಿಕೆ [illegible] ಯ ಕೆಲಸಗಾರರು [illegible] ರ ಹೂಡಿ [illegible] ದಿನಗಳಾಗಿವೆ [illegible] ಖಾರ್ಖಾನೆಯ [illegible] ಸಾವಿರ ಕೆಲಸಗಾರರೂ ಮುಷ್ಕರದಲ್ಲಿ ಸೇರಿರುವುದರಿಂದ ಅವರ ಸಂಖ್ಯೆಯ ಒಟ್ಟು ೩೭ ಸಾವಿರಕ್ಕೇರಿದೆ

ಶ್ರೀ ಕೃಷ್ಣಜಯಂತಿ ಮಹೋತ್ಸವದ ಸಂಗೀತ

ರಾಜಧಾನಿಯ ಚಲುವ [illegible] ಅಗ್ರಹಾರದ [illegible] ಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಜಯಂತಿ ಮಹೋತ್ಸವದ ಪ್ರಯುಕ್ತ ನಾಳೆ ಸಂಜೆ [illegible] ಗಂಟೆಗೆ ವಿ॥ ವಿ ರಾಮರತ್ನಂರವರ ಸಂಗೀತವು ಶ್ರೀಗಳಾದ ಟಿ ಎಸ್ ತಾತಾಚಾರ್ ಪಿಟೀಲು ಮತ್ತು ವಿ ವಿ ರಂಗನಾಥನ್‌ರವರ ಮೃದಂಗದೊಡನೆ ನಡೆಯುವುವು ಶ್ರೀ ಚಾಮುಂಡೇಶ್ವರಿ ಯಕ್ಷಗಾನ ಮಂಡಲಿಯವರಿಂದ ಭೀಷ್ಮಾರ್ಜುನ ಎಂಬ ಯಕ್ಷಗಾನವೂ ಏರ್ಪಾಡಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಕ್ಕೆ [illegible] ವ್ಯಾಖ್ಯಾನ [illegible] ಜಲತರಂಗ [illegible] ಬ್ಬನ ಗೀತೆಗಳು ಸಂಜೆ [illegible] ಎಚ್ ಶ್ರೀನಿವಾಸನ್ ಸಂಗೀತ [illegible] ಎಸ್ [illegible] ಲಕ್ಷ್ಮಿ [illegible] ಸಂಗೀತ [illegible] ಚಿತ್ರ ಸಂಗೀತ [illegible] ರವರಿಂದ [illegible] ಕನ್ನಡ [illegible] ರಾಷ್ಟ್ರೀಯ ಕಾರ್ಯಕ್ರಮ [illegible] ಕಾರ್ಯಕ್ರಮದ ಪ್ರಸಾರ ಪ್ರಸಾರ

ಈಜಿಪ್ಟಿನಲ್ಲಿ ರಾಜಕೀಯ ಖೈದಿಗಳ ಬಿಡುಗಡೆ

[illegible] ರಿಂದ [illegible] ವರೆಗೆ ರಾಜಕೀಯ ಅಪರಾಧಗಳ [illegible] ಶಿಕ್ಷೆಗೆ ಗುರಿಯಾಗಿದ್ದ [illegible] ಜನರನ್ನು ಬಿಡುಗಡೆ ಮಾಡಲು ಈಜಿಪ್ಟ್ ಸರ್ಕಾರದವರು ಆಲೋಚಿಸುತ್ತಿರುವರೆಂದು ವರದಿಯಾಗಿದೆ

ಪೌರಸಭೆಯಿಂದ ನದಿಯ ಹರಾಜು!

ಫಿಲಿಪ್ಪೈನ್ ದ್ವೀಪಗಳ ಪಂಪಾಂಗ ಎಂಬ ಹಳ್ಳಿಯ ಪೌರಸಭೆಗೆ ಹಣದ ಅಭಾವವು ವಿಪರೀತವಾಗಿ ಬೇರೆ ಯಾವ ವಿಧಾನವೂ ತೋರದೆ [illegible] ಹರಿಯುವ ನದಿಯನ್ನು ಹರಾಜಿಗೆ [illegible] ಮಾಡಿಸಿದ್ದರೆಂದು ಹೇಳಲಾಗಿದೆ. ನದಿಯನ್ನು [illegible] ಹಿಡಿಯುವ [illegible] ನ್ನು ಮಾತ್ರ [illegible] ಪ್ರಕಟ [illegible] ಯಾವ ಒಪ್ಪಂದದಾರರೂ [illegible] ವರದಿಯಾಗಿದೆ ಅರಸು ಬೋರ್ಡಿಂಗ್ ಶಾಲಾ ಸಂಸ್ [illegible]

[illegible]

Edited Printed and Published by V. K. Nagaraj[illegible] at Sadhvi Press D[illegible] Subbaiah Road Mysore

ತಾಂಬೂಲವನ್ನು ಸೇವಿಸಿ ಮೂಕನಾದ ಪ್ರಸಂಗ

ಪಶ್ಚಿಮ ಬಂಗಾಳದ ನವದ್ವೀಪದ ಕಾಲೇಜೊಂದರ ವಿದ್ಯಾರ್ಥಿ ಹರಿದಾಸ್ [illegible] ಎಂಬುವನಿಗೆ ಅವನ ಹಳೆಯ ಮಿತ್ರನೊಬ್ಬನು ಕೊಟ್ಟ ತಾಂಬೂಲವನ್ನು ಸೇವಿಸಿದ ನಂತರ ಮಾತುಬಾರದೆ ಅವನು ಮೂಕನಾದನೆಂದೂ ವೈದ್ಯರು [illegible] ಪರೀಕ್ಷಿಸಲಾಗಿ ವಿಷಪೂರಿತ ವಸ್ತುವಿನಿಂದ ನಾಲಿಗೆಯು ಹೋಯಿತೆಂದು ಅವರು ತಿಳಿಸಿದರೆಂದೂ ವರದಿಯಾಗಿದೆ ಆಗಿನಿಂದಲೂ ತಾಂಬೂಲವನ್ನು ಕೊಟ್ಟವನು ಪತ್ತೆಯಿಲ್ಲವೆಂದು ಹೇಳಲಾಗಿದೆ

ಮಶ್ರುವಾಲಾರವರ ನಿಧನಕ್ಕಾಗಿ ಪ್ರಾರ್ಥನಾ ಸಭೆ

ಸರ್ವೋದಯ ಸಂಘದ ಪ್ರತಿಭಾಶಾಲಿ ಸೇವಕರೂ, ಹರಿಜನ ಪತ್ರಿಕೆಯ ಸಂಪಾದಕರೂ ಆಗಿದ್ದ ಕಿಶೋರಿಲಾಲ್ ಮಶ್ರುವಾಲಾರವರ ನಿಧನಕ್ಕಾಗಿ, ರಾಜಧಾನಿಯ ಸರ್ವೋದಯ ಸಮಾಜದವರು ನಾಳೆ ಬೆಳಗ್ಗೆ [illegible] ಗಂಟೆಗೆ ದೇವರಾಜ [illegible] ಸದನದಲ್ಲಿ [illegible] ಸಭೆಯನ್ನು ಏರ್ಪಡಿಸಿರುತ್ತಾರೆ [illegible] ಭಾಗವಹಿಸಬೇಕೆಂದು [illegible] ಸಲಾಗಿದೆ

SRI GAYATHRI
TALKIES
[illegible]
[illegible] Days
[illegible]
[illegible] Much
[illegible]
OUR VERY OWN
[illegible] Ann Blyth
[illegible] Farley Granger

ಕಾಶ್ಮೀರ ರಾಜರ ಸಿಂಹಾಸನ ತ್ಯಾಗಕ್ಕೆ ನೆಹರೂ ಸಲಹೆ

ಕಾಶ್ಮೀರದ ಅರಸ ಪದವನ್ನು ತ್ಯಜಿಸುವಂತೆ ಅಲ್ಲಿನ ಮಹಾರಾಜರಾದ ಹರಿಸಿಂಗ್‌ರವರಿಗೆ ಪ್ರಧಾನಿ ನೆಹರೂರವರು ಪತ್ರವನ್ನು ಬರೆದಿರುವರೆಂದೂ, [illegible] ದನ್ನು ಕೇಂದ್ರ ಸರ್ಕಾರದ ಸಂಸ್ಥಾನ [illegible] ಖಾತಾ ಕಾರ್ಯದರ್ಶಿ, ಸಿ ಎಸ್ ವೆಂ[illegible] ಟಾಚಾರ್ಯರು ಮಹಾರಾಜರಿಗೆ ಖುದ್ದಾಗಿ ಒಪ್ಪಿಸಿರುವರೆಂದೂ ವರದಿಯಾಗಿದೆ

ಗಣಪತಿ ಮಂಗಳಾರತಿ

ರಾಜಧಾನಿಯನ್ನು ಸೆಂಟ್ರಲ್ ಕಾಲೇಜ್ ಆಫ್ ಕಾಮರ್ಸ್‌ನವರು ನ್ಯೂ ವಿಲಾಸ ಮಾರ್ಕೆಟ್ಟಿನ ಮಹಡಿಯ ಮೇಲಿರುವ ತಮ್ಮ ಕಛೇರಿಯಲ್ಲಿ ಗಣಪತಿ ಮಂಗಳಾರತಿಯನ್ನು ನಾಳೆ ಸಂಜೆ [illegible] ಗೆ ನೆರವೇರಿಸುವರು ವಿದ್ವಾನ್ ಹೆಚ್ ಟಿ ರಾಮಸ್ವಾಮಿಯವರ ಸಂಗೀತವು ವಿ॥ ಹೆಚ್ ಕೃಷ್ಣಮೂರ್ತಿಯವರ ಪಿಟೀಲು ಮತ್ತು ವಿ॥ ಹೆಚ್ ಟಿ ನಾಗಣ್ಣನವರ ಮೃದಂಗದೊಡನೆ ನಡೆಯುವುದು

ಸಂಗೀತೋತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಶ್ರೀ ಕೃಷ್ಣ ಜಯಂತಿ [illegible] ಗಣಪತಿ ಸಂಗೀತೋತ್ಸವದ ಪ್ರಯುಕ್ತ ನಾಳೆ [illegible] ಘಂಟೆಗೆ ಮಂದಿರದ ಶಿಷ್ಯ ವರ್ಗದವರಿಂದ ಸಂಗೀತವು ಏರ್ಪಾಡಾಗಿದೆ [illegible] ಗಂಟೆಗೆ ಮೈಸೂರು ಸರ್ವೋದರ ಗೀತಪ್ಪ [illegible] ಪುಟ್ಟಸ್ವಾಮಯ್ಯನವರ ಮೃದಂಗ ಮತ್ತು ವಿ॥ ಬಿ ಕೇಶವಮೂರ್ತಿಯವರ ಪಿಟೀಲುಗಳೊಡನೆ ನಡೆಯುವುದು ಶ್ರೀ [illegible] ಎಂ ಆರ್ [illegible] ಬಸಪ್ಪನವರು ಅಧ್ಯಕ್ಷತೆ ವಹಿಸುವರು

ಸಂಗೀತ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯ ಕ್ರಾಸಿನಲ್ಲಿರುವ ಶ್ರೀ ಮುದ್ದಾಪ್ಪನವರ ಶ್ರೀ ಕಾಶೀ ವಿಶ್ವನಾಥಸ್ವಾಮಿ [illegible] ಮಂದಿರದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ [illegible] ಘಂಟೆಗೆ ವಿ॥ ಎ ವಿಶ್ವನಾಥರವರ ಸಂಗೀತವು ನಡೆಯುವುದು

ವಿದ್ಯಾ ಗಣಪತಿ ಉತ್ಸವ

ತಲಕಾಡಿನ ಜಿಲ್ಲಾಬೋರ್ಡ್ ಪ್ರಾ[illegible] ವಿದ್ಯಾರ್ಥಿ ಸಂಘದವರು ತಮ್ಮ ಶಾಲೆಯಲ್ಲಿ ಕಳೆದ ವಾರ [illegible] ವಿದ್ಯಾ ಗಣಪತಿಯ ಉತ್ಸವವನ್ನು ನಡೆಸಿದರು ಗಣಪತಿಯನ್ನು [illegible] ನದಿಯಲ್ಲಿ ವಿಸರ್ಜಿಸಲಾಯಿತು ಅಂದಿನ ಭಾರತ [illegible] ದಂಪತಿ ಶ್ರೀ ರಾಮರಾಯರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡಿ, ದೇಶಕ್ಕೆ ದೊರೆತಿರುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳು [illegible] ಳಿಸಿಕೊಳ್ಳಲು ಮಾಡಬೇಕಾದ ಕಾರ್ಯಗಳನ್ನು ವಿವರಿಸಿದರು

ಚಂದಾದಾರರಲ್ಲಿ ವಿನಂತಿ

ನಮ್ಮ [illegible] ತಿಯನ್ನು ಕಡೆಯತೆ ಕೊಟ್ಟ ಚಂದಾ ಹಣಕ್ಕೆ ನಾವು [illegible] ದಾರರಲ್ಲ

ನ್ಯೂಸ್ ಪೇಪರ್ ಹೌಸ್ ಮೈಸೂರು

ಅಬೀದ್ ರವರ
ಅಮೋಘ ಹರಾಜು ಮಾರಾಟ
ಶ್ರೀ ಎಲ್ [illegible] ರಾವ್ ಮತ್ತು ಇತರರ ಸೂಚನೆ ಪ್ರಕಾರ
14 9-1952ನೇ ಭಾನುವಾರ ಬೆಳಗ್ಗೆ 10 ಗಂಟೆಗೆ
[illegible]
[illegible]
ಹಂಚಿನ ಕಾರ್ಖಾನೆ ಮತ್ತು ನೀಲಿಯನ್ನು [illegible] ದಲ್ಲಿರಿ
ಮತ್ತು ಒಸಕ್ಕೆ ತಪ್ಪದೆ ಬನ್ನಿರಿ

ಪ್ರಭುದೇವಾ ಟಾಕೀಸ್
ಮೈಸೂರು
13—9 52 ನೇ ಶನಿವಾರದಿಂದ ಅನೇಕ ಪ್ರಾರಂಭ
ಪ್ರತಿ ದಿನ 3 ಆಟಗಳು
ಭೂ ಕೈಲಾಸ
(ತೆಲುಗು)
[illegible] ಲಕ್ಷ್ಮಿ [illegible]

ಫೋ ನಂ ೨೯೭ WEEKLY EDITION ಬಿಡಿಯ ಪತ್ರಿಕೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೧೪-೯ ೧೯೫೩ [ಸಂಚಿಕೆ ೬

ಪಶ್ಚಿಮ ಬಂಗಾಳಾ ಗಡಿ ಬಳಿ ಪಾಕಿಸ್ತಾನ ಸೈನ್ಯ

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ಅಭಿನಂದನೆ

ಸತ್ಕಾರ ಸಭೆಯಲ್ಲಿ ನಿರ್ಣಯ

ಮೈಸೂರು ೧೪

ಮೈಸೂರು ಬ್ಯಾಂಕಿನ ನಿವೃತ್ತ ಮ್ಯಾನೇಜರಾದ ಶ್ರೀ ಎಲ್ ಎಸ್ ವಿ ರಾಮಯ್ಯರ್ ಮತ್ತು ಹೊಸ ಮ್ಯಾನೇಜರಾದ ಶ್ರೀ ಎಸ್ ಪಿ ವೀರಭದ್ರಶೆಟ್ಟರ ಗೌರವಾರ್ಥವಾಗಿ ನೆನ್ನೆ ಟೌನ್ ಹಾಲಿನಲ್ಲಿ ಭಾರಿ ಸಮಾರಂಭವು ಏರ್ಪಾಡಾಗಿದ್ದಿತು. ಬ್ಯಾಂಕಿನ ಸ್ಥಾಪಕರಾದ ಮಾಜಿ ದಿವಾನ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ೯೩ ನೇ ವರ್ಷ ವರ್ಧಂತಿ ಸಂಬಂಧದಲ್ಲಿ ಅವರಿಗೆ ಪುರನಿವಾಸಿಗಳ ಹೃತ್ಪೂರ್ವಕವಾದ ಶುಭಾಶಯಗಳನ್ನು ಕಳುಹಿಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಮೈಸೂರು ಬ್ಯಾಂಕಿನ ಜನರಲ್ ಮ್ಯಾನೇಜರಾದ ಶ್ರೀ ಬಿ ವಿ ನಾರಾಯಣರೆಡ್ಡಿಯವರು ಅಗ್ರಾಸನವನ್ನು ವಹಿಸಿದ್ದರು.

ನಾಟ್ಯಕಲಾವಿಶಾರದ ಎಂ ಸಿ ಮಹದೇವಸ್ವಾಮಿಯವರಿಂದ ಸ್ವಾಗತಪದ್ಯ ಪಠಣವಾದ ನಂತರ ಶ್ರೀ ಜಿ ಕೃಷ್ಣಸ್ವಾಮಿಯವರು ಸಕಲರನ್ನೂ ಸ್ವಾಗತಿಸಿ ಭಾಷಣ ಮಾಡಿದರು.

ಶ್ರೀಗಳಾದ ಸಿ ಕೆ ಸುಂದರಮೂರ್ತಿ ಮತ್ತು ಮಂಡಲಿಯವರಿಂದ ಗಾನಗೋಷ್ಠಿಯೂ, ಶ್ರೀಮತಿ ಜಲಜಾಕ್ಷಿಯವರ ಗಾಯನವೂ ಆದ ನಂತರ ಶ್ರೀಗಳಾದ ಕೃಷ್ಣಮೂರ್ತಿರಾವ್, ಎಂ ಆರ್ ಎಸಪ್ಪ, ಮತ್ತು ಯು ಎಲ್ ರಾಮಚಂದ್ರರಾಯರು ಭಾಷಣ ಮಾಡಿ ಉಭಯ ಅತಿಥಿಗಳ ಗುಣಾತಿಶಯಗಳನ್ನು ಪ್ರಶಂಸಿಸಿದರು.

ಪುರನಿವಾಸಿಗಳ ಪರವಾಗಿ ಶ್ರೀ ಜಿ. ಆರ್ ಜೋಯ್ಸರ್‌ರವರು ಬಿನ್ನವತ್ತಳೆಯನ್ನು ಓದಿ ಒಪ್ಪಿಸಿದರು. ಅತಿಥಿಗಳು ತಮ್ಮ ಕೃತಜ್ಞತೆಯನ್ನು ಸೂಚಿಸಿ ಭಾಷಣ ಮಾಡಿದರು.

ಅಧ್ಯಕ್ಷರ ಭಾಷಣಾನಂತರ ಕುಮಾರಿಗಳಾದ ಲೀಲಾಗಿರಿ ಮತ್ತು ಚಂಚಲಾರವರಿಂದ ನೃತ್ಯವೂ ಶ್ರೀ ಬಿ ಎಸ್ ಸುಬ್ಬರಾಯರಿಂದ ವಂದನಾರ್ಪಣೆಯೂ ನಡೆದುವು. ಆನಂತರ ರಾತ್ರಿ ಭಾರಿ ಭೋಜನಕೂಟವೂ ಏರ್ಪಾಡಾಗಿದ್ದಿತು.

ನಗರದಲ್ಲಿ ನೀರು ಸರಬರಾಜಿನ ತೊಂದರೆ

ರಾಜಧಾನಿಯಲ್ಲಿ ಇತ್ತೀಚೆಗೆ ನೀರು ಸರಬರಾಜಿನ ಬಗ್ಗೆ ಜನರಿಗೆ ಅಸೌಕರ್ಯವಾಗಿರುವುದಾಗಿ ಪೌರಸಭೆಯವರಿಗೆ ದೂರುಗಳು ಬರುತ್ತಿರುವುವು. ಮೂರು ದಿನಗಳ ಹಿಂದೆ ಬೆಳಗೊಳದಲ್ಲಿರುವ ಪಂಪಿಂಗ್ ಸೆಟ್ಟುಗಳ ಪೈಕಿ ಒಂದರ ಆಯಿಲ್ ಟ್ರಾನ್ಸ್‌ಫಾರ್ಮರ್ ಯಂತ್ರವು ಸುಟ್ಟುಹೋಗಿ, ಅದನ್ನು ಸರಿಪಡಿಸಲು ಬೆಂಗಳೂರಿನ ವಿದ್ಯುತ್ ಕಾರ್ಖಾನೆಯಿಂದ ಸಾಮಾನುಗಳನ್ನು ತರಿಸಬೇಕಾಗಿದೆ. ಅಲ್ಲಿವರೆಗೂ ನಗರದಲ್ಲಿರುವ ಎತ್ತರದ ಪ್ರದೇಶಗಳಿಗೆ ನೀರು ಹತ್ತುವುದು ಸ್ವಲ್ಪ ಕಷ್ಟವಾಗುವುದು. ಮೂರು ನಾಲ್ಕು ದಿನಗಳಲ್ಲಿ ಸರಿಯಾದ ವ್ಯವಸ್ಥೆ ಮಾಡಲಾಗುವುದು—ಎಂಬುದಾಗಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ತಿಳಿಸಿರುತ್ತಾರೆ.

೨ ಸೇರು ರಾಗಿಗೆ ಮಗುವಿನ ಮಾರಾಟ

ಚಿತ್ರದುರ್ಗ ಜಿಲ್ಲೆಯ ಹುಲಿಯೂರು ದುರ್ಗದಲ್ಲಿ ಚಿನ್ನಿ ಎಂಬಾಕೆಯು ತನ್ನ ೫ ವರ್ಷದ ಮಗುವನ್ನು ಸಾಕಲಾರದೆ ೨ ಸೇರು ರಾಗಿಗೆ ಅದನ್ನು ಮಾರುವುದಾಗಿ ತಿಳಿಸಿ, ಅದನ್ನು ಕೊಂಡುಕೊಳ್ಳುವಂತೆ ಜನರನ್ನು ದೈನ್ಯದಿಂದ ಬೇಡಿಕೊಳ್ಳುತ್ತಿದ್ದಳೆಂದು ವರದಿಯಾಗಿದೆ.

ಫರೂಕರು ಕೊಂಡ ಉಂಗುರಗಳಿಗೆ ೫ ಲಕ್ಷ ಪೌಂಡು

ಮಾಜಿ ದೊರೆ ಫರೂಕರು ಕೊಂಡ ಉಂಗುರಗಳಿಗಾಗಿ ೫ ಲಕ್ಷ ಪೌಂಡುಗಳನ್ನು ತೆರಬೇಕೆಂದು ನ್ಯೂಯಾರ್ಕಿನ ರತ್ನಪಡಿ ವ್ಯಾಪಾರಿಯು ಈಜಿಪ್ಟ್ ಸರ್ಕಾರಕ್ಕೆ ಕೊಟ್ಟಿದ್ದ ಬೇಡಿಕೆಯನ್ನು ನಿರಾಕರಿಸಲಾಗಿದೆ. ಸಿಂಹಾಸನ ತ್ಯಾಗಕ್ಕೆ ಕೆಲವು ದಿನಗಳ ಮುಂಚೆ ಅವನ್ನು ಫರೂಕರು ಆತನಿಂದ ಕೊಂಡುಕೊಂಡಿದ್ದರೆಂದು ಹೇಳಲಾಗಿದೆ.

ಆಹಾರಕ್ಕಾಗಿ ಗೋವಧೆ

ಚಿಂತಾಮಣಿ ತಾಲ್ಲೂಕಿನ ಮುಂಗಾನಹಳ್ಳಿಯಲ್ಲಿ ಹರಿಜನರು ಮತ್ತು ಇತರರ ಪರಿಸ್ಥಿತಿಯು ಚಿಂತಾಜನಕವಾಗಿ ಅವರು ಆಹಾರವಿಲ್ಲದೆ, ಗೋವುಗಳನ್ನು ಕೊಂದು ಮನೆಗಳ ಮುಂದೆ ಮಾಂಸದ ಮುದ್ದೆಗಳನ್ನು ಇಟ್ಟುಕೊಂಡು ತಿನ್ನುತ್ತಿರುವ ದೃಶ್ಯಗಳ ಕಾಣಬಂದಿರುವುವೆಂದು ವರದಿಯಾಗಿದೆ. ಹಿಪ್ಪೆ, ಗೋಣಿ, ಬೇವಿನಸೊಪ್ಪುಗಳು ಮುಗಿದುಹೋಗಿ ಈಗ ದನಕರುಗಳಿಗೆ ಹೊಂಗೆಸೊಪ್ಪನ್ನು ಹಾಕಲಾಗುತ್ತಿದೆಯೆಂದೂ ಗೊತ್ತಾಗಿದೆ.

ಸ್ತ್ರೀ ವೈದ್ಯಳು ಪುರುಷನಾದುದು

೪೦ ವರ್ಷ ವಯಸ್ಸಿನ ಸ್ಕಾಟಿಷ್ ಮಹಿಳಾ ವೈದ್ಯರಾದ ಡಾ|| ಎಲಿಜಬೆತ್ ಫೋರ್ಬ್ಸ್ ಸಂಪಿಲ್ ಎಂಬುವರು ಈಗ ಗಂಡಸಾಗಿ ಪರಿವರ್ತಿತರಾಗಿದ್ದಾರೆ. ತಮ್ಮ ಹೆಸರನ್ನು ಈವನ್ ಎಂದು ಬದಲಾಯಿಸಿಕೊಂಡಿರುತ್ತಾರೆ. ಇತ್ತೀಚೆಗೆ ಆಕೆಯಲ್ಲಿ ಲೈಂಗಿಕ ಮಾರ್ಪಾಡಾಗಿ ಸ್ತ್ರೀ ಉಡುಪನ್ನು ತೆಗೆದು ಪುರುಷರ ವೇಷವನ್ನು ಧರಿಸಲುಪಕ್ರಮಿಸಿರುವರು.

ಕಾಡುಜನರ ಪುರೋಭಿವೃದ್ಧಿಗೆ ೨ ಲಕ್ಷ ರೂ

ಬೆಂಗಳೂರು ೧೪

ಮೈಸೂರು ಸಂಸ್ಥಾನದಲ್ಲಿರುವ ಗುಡ್ಡಗಾಡಿನ ಜನರ ಪುರೋಭಿವೃದ್ಧಿಗಾಗಿ ಕೇಂದ್ರ ಮತ್ತು ಇಲ್ಲಿನ ಸರ್ಕಾರದವರು ತಲಾ ೧ ಲಕ್ಷ ರೂ ಗಳನ್ನು ಮಂಜೂರು ಮಾಡಿ ಪ್ರಾಪ್ತ ಹಣವನ್ನು ಈ ವರ್ಷ ವೆಚ್ಚಮಾಡಲಿರುವರು. ಕಾಡು ಕುರುಬರು, ಜೇನು ಕುರುಬರು, ಸೋಲಿಗರು, ಇರಳಿಗರು ಮೊದಲಾದವರು ಮತ್ತು ಮಲೆಯರುಗಳ ವಿದ್ಯಾಭ್ಯಾಸಕ್ಕಾಗಿ ೩೫ ಸಾವಿರ ರೂ ಆರೋಗ್ಯಕ್ಕಾಗಿ ೩೫ ಸಾವಿರ ರೂ ಮನೆಗಳ ನಿರ್ಮಾಣಕ್ಕಾಗಿ ೧ ಲಕ್ಷ ೧೫ ಸಾವಿರ ರೂ ಗೃಹಕೈಗಾರಿಕೆಗಳಿಗಾಗಿ ೧೫ ಸಾವಿರ ರೂ ಗಳನ್ನು ವೆಚ್ಚ ಮಾಡಲಾಗುವುದು.

ಉರ್ದು ಪತ್ರಿಕೆಯ ಕಛೇರಿ ಶೋಧನೆ

ಬೆಂಗಳೂರಿನ ಡೈಲಿ ಅಜಾದ್ ಎಂಬ ಉರ್ದು ಪತ್ರಿಕೆಯ ಕಛೇರಿ ಮತ್ತು ಕಾಂ ಪ್ರಿಂಟಿಂಗ್ ಪ್ರೆಸ್ಸಿಗೆ ನೆನ್ನೆ ಪೋಲೀಸರು ಪ್ರವೇಶಿಸಿ ಶೋಧನೆ ನಡೆಸಿದರೆಂದೂ, ಆಕ್ಷೇಪಣೀಯವಾದ ಹಲವು ಪ್ರಕಟಣೆಗಳನ್ನು ವಶಪಡಿಸಿಕೊಂಡರೆಂದೂ ವರದಿಯಾಗಿದೆ. ಜಾತಿ ಮತಗಳಲ್ಲಿ ಮಧುರವಾತಾವರಣಕ್ಕೆ ಕುಂದುಕವನ್ನು ತರುವ ರೀತಿಯಲ್ಲಿ ಪ್ರಕಟಣೆಗಳನ್ನು ಮಾಡಲಾಗುತ್ತಿತ್ತೆಂದು ಹೇಳಲಾಗಿದೆ.

ಹೊಟ್ಟೆಗಿಲ್ಲದವನಿಂದ ರಾಗಿ ಮುದ್ದೆಗಳ ಅಪಹಾರ

ಮಧುಗಿರಿ ಬಳಿ ಸಿದ್ದಾಪುರ ಗ್ರಾಮದ ಹಂಗಸೊಬ್ಬಳು ನೊನ್ನೆ ತಟ್ಟೆಯಲ್ಲಿ ಮುದ್ದೆಗಳನ್ನು ಇಟ್ಟುಕೊಂಡು ಹೊಲಕ್ಕೆ ಹೋಗುತ್ತಿದ್ದಾಗ, ೪ ದಿನಗಳಿಂದಲೂ ಆಹಾರವಿಲ್ಲದವನೊಬ್ಬನು ಆಕೆಯನ್ನು ಹೆದರಿಸಿ, ರಾಗಿ ಮುದ್ದೆಯ ತಟ್ಟೆಯನ್ನು ಅಪಹರಿಸಿಕೊಂಡುಹೋದನೆಂದು ವರದಿಯೊಂದು ತಿಳಿಸಿದೆ.

ಬೆಳಗೊಳದ ಕಾರ್ಖಾನೆ ವ್ಯಾಜ್ಯ ಕೈಗಾರಿಕಾ ನ್ಯಾಯಾಲಯಕ್ಕೆ

ಬೆಳಗೊಳದ ಡೈಕ್ರೊಮೇಟ್ ಕಾರ್ಖಾನೆಯವರಿಗೂ ಕೆಲಸಗಾರರಿಗೂ ಇದ್ದ ವ್ಯಾಜ್ಯವನ್ನು ಸರ್ಕಾರದವರ ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಲು ನಿರ್ಧರಿಸಿರುತ್ತಾರೆ.

ದೇಶದ ಹಿತಕ್ಕಾಗಿ ಪ್ರತಿಯೊಬ್ಬರೂ ದುಡಿಯಬೇಕು

ಎ ಐ ಸಿ ಸಿ ಯ ಅಧಿವೇಶನದಲ್ಲಿ ನೆಹರೂರವರ ಭಾಷಣ

ಇಂದೂರಿನ ಚಂದ್ರಶೇಖರ ನಗರದಲ್ಲಿ ನೆನ್ನೆ ಎ ಐ ಸಿ ಸಿ ಸಭೆಯು ನೆಹರೂರವರ ಅಧ್ಯಕ್ಷತೆಯಲ್ಲಿ ಸೇರಿತು. ಬೆಳಿಗ್ಗೆ ಅವರು ಧ್ವಜಾರೋಹಣ ಮಾಡಿ, ದೇಶದಲ್ಲಿ ದಾರಿದ್ರ್ಯವನ್ನು ತೊಲಗಿಸಲು ಜನತೆಯು ಸರ್ಕಾರದೊಡನೆ ಸಹಕರಿಸಿ ಶ್ರಮ ಪಡಬೇಕೆಂದು ಸೂಚಿಸಿದರು. ಸರ್ಕಾರವು ತಪ್ಪು ಮಾಡಿದರೆ, ಅದನ್ನು ಎತ್ತಿತೋರಿಸುವುದು ಕರ್ತವ್ಯವಾದರೂ, ಅದಕ್ಕಿಂತಲೂ ಹೆಚ್ಚಾಗಿ ಪ್ರತಿಯೊಬ್ಬನೂ ದೇಶಕ್ಕಾಗಿ ದುಡಿಯಬೇಕಾದುದು ಅಗತ್ಯವೆಂದು ಅವರು ಭಾವಿಸಿದರು. ಕಾಂಗ್ರೆಸ್ ಧ್ವಜವು ರಾಷ್ಟ್ರೀಯ ಗೌರವ ಪ್ರತಿಷ್ಠೆಗಳ ಸಂಕೇತ ಮಾತ್ರವಲ್ಲದೆ, ರಾಷ್ಟ್ರಾಭಿವೃದ್ಧಿಗಾಗಿ ಸಮಸ್ತ ಜನರ ಸಂಯುಕ್ತ ಪ್ರಯತ್ನದ ಚಿಹ್ನೆಯಾಗಿರುವುದೆಂದು ಅವರು ಹೇಳಿದರು.

ಎ ಐ ಸಿ ಸಿ ಸಭೆಗೆ ೩೦೦ ಸದಸ್ಯರ ಪೈಕಿ ೨೩೦ ಜನರೂ, ೬ ಸಾವಿರ ಪ್ರೇಕ್ಷಕರೂ ಆಗಮಿಸಿದ್ದರು. ವಂದೇ ಮಾತರಂ ಗೀತೆಯಾದ ನಂತರ ಸ್ವಾಗತಾಧ್ಯಕ್ಷ ಕನ್ನಯಲಾಲ್ ಖಾದಿವಾಲಾರವರು ಭಾಷಣ ಮಾಡಿ ಸಂಸ್ಥಾನಾಧೀಶರುಗಳ ಛತ್ರಛಾಯೆಯಲ್ಲಿ ಸಿಕ್ಕಿದ್ದ ದಳಿತ ಜನಾಂಗದ ಉದ್ಧಾರಕ್ಕಾಗಿ ಮೊದಲಿನಿಂದಲೂ ಶ್ರಮಪಟ್ಟವರಲ್ಲಿ ನೆಹರೂರವರು ಅಗ್ರಗಣ್ಯರೆಂದು ಹೇಳಿದರು.

ಬಂಗಾಳದ ೪೦೦ ಮೈಲಿ ಗಡಿ ಉದ್ದಕ್ಕೂ ಪಾಕಿಸ್ತಾನ ಸೈನ್ಯ

ಕಳ್ಳ ಸಾಗಾಣಿಕೆಯ ವಿರುದ್ಧವಾಗಿ ಹೂಡಿರುವ ಚಳುವಳಿಯ ಅಂಗವೆಂದು ಹೇಳಿ ಪಾಕಿಸ್ತಾನ ಸರ್ಕಾರದವರು ಪಶ್ಚಿಮ ಬಂಗಾಳದ ಪೂರ್ವ ಗಡಿಯ ೪೦೦ ಮೈಲಿ ಉದ್ದಕ್ಕೂ ಸೈನ್ಯಗಳನ್ನು ಕೇಂದ್ರೀಕರಿಸಿರುವರೆಂದು ವರದಿಗಳು ಬರುತ್ತಿವೆ. ಅವುಗಳೊಡನೆ ಸಹಾಯಕ ಪಡೆಗಳೂ ಇವೆಯೆಂದೂ ಗಡಿ ಬಳಿ ಅನ್ಸಾರರೆಂಬ ಮುಸ್ಲಿಂ ಲೀಗಿನ ಸ್ವಯಂಸೇವಕರುಗಳೂ ಇರುವರೆಂದೂ ಹೇಳಲಾಗಿದೆ. ಕಳೆದ ೩ನೇ ತಾ|| ಗಡಿ ಕಡೆಗೆ ತೆರಳುವಂತೆ ಆ ಸೈನ್ಯಗಳಿಗೆ ಆಜ್ಞೆಯಾಗಿ ಅಂದಿನಿಂದಲೂ ಪಾಕಿಸ್ತಾನ ಸೈನ್ಯವೇ ಗಡಿ ಕಾವಲು ಕೆಲಸವನ್ನು ಕೈಗೊಂಡಿರುವುದಾಗಿ ಗೊತ್ತಾಗಿದೆ. ಹಳ್ಳಿಗಳಿಂದ ಜನರನ್ನು ಖಾಲಿ ಮಾಡಿಸಲಾಗಿದೆ. ಆ ಗುಡ್ಡಗಳ ಪ್ರದೇಶದ ಕಾಡು ಜನರನ್ನು ಹೊರದೂಡಲಾಗಿರುವುದೆಂದೂ ಅವರು ಭಾರತದ ಎಲ್ಲೆಯೊಳಗೆ ಬರುತ್ತಿರುವರೆಂದೂ ಹೇಳಲಾಗಿದೆ. ಕೇಂದ್ರ ಮತ್ತು ಪಶ್ಚಿಮ ಬಂಗಾಳ ಸರ್ಕಾರದವರು ಈ ಬಗ್ಗೆ ಅವಶ್ಯಕವಾದ ಕ್ರಮಗಳನ್ನು ಕೈಗೊಂಡಿರುವರೆಂದೂ ಗೊತ್ತಾಗಿದೆ.

ಈಜಿಪ್ಟ್ ಸಿಂಹಾಸನದ ಹಕ್ಕುದಾರಿಯ ತ್ಯಾಗ

ಈಜಿಪ್ಟಿನ ಸಿಂಹಾಸನಕ್ಕೆ ಹಕ್ಕುದಾರರೆಂದು ಹೇಳಲಾದ ರಾಜಕುಮಾರ ಮಹಮದ್ ಅಲಿ ಎಂಬ ೭೭ ವರ್ಷದ ವೃದ್ಧರೊಬ್ಬರು ಸಿಂಹಾಸನ ಹತ್ತಲು ತಮಗೆ ಇರುವ ಹಕ್ಕನ್ನು ತ್ಯಜಿಸಿರುವುದಾಗಿ ಬರೆದುಕೊಟ್ಟಿರುತ್ತಾರೆ. ಬರುವ ವಾರ ಅವರು ಈಜಿಪ್ಟಿನಿಂದ ಸ್ವಿಟ್ಜರ್ಲೆಂಡಿಗೆ ತೆರಳಿ ಅಲ್ಲಿ ಖಾಯಮ್ಮಾಗಿ ನೆಲೆಸುವರೆಂದು ಹೇಳಲಾಗಿದೆ.

ವಾರ ಭವಿಷ್ಯ

ತಾ|| ೧೪–೯–೫೨ ರಿಂದ ೨೧–೯–೫೨ ರ ವರೆಗೆ

ಮೇಷ — ಪರಿಸ್ಥಿತಿ ಕೆಡಬಹುದು ಆರೋಗ್ಯ ನೆಟ್ಟಗಿರದು ವ್ಯಾಪಾರಾದಿಗಳಲ್ಲಿ ಚಮತ್ಕಾರಿಕ ಪರಿಸ್ಥಿತಿ ತಾ|| ೧೬, ೧೯ ಪತ್ನಿಯೊಡನೆ ಭಿನ್ನಾಭಿಪ್ರಾಯ, ಅಪ್ರಿಯ ವಾರ್ತೆ

ವೃಷಭ — ಆರೋಗ್ಯ ನೆಟ್ಟಗೆ ನ [illegible] ಕರಿಯಲ್ಲಿ ಅಸಮಾನಕರ ಘಟನೆ ಪತ್ನಿಗೆ ಅಪಘಾತ ಮನಸ್ಸಿಗೆ ವ್ಯಥೆ ವಿಶ್ವಾಸಘಾತ ಅಪೇಕ್ಷಾಭಂಗ ತಾ|| ೧೭ ೧೮ ಪ್ರಿಯಜನ ವಿಯೋಗ, ಚಿಂತಾಜನಕ ವಾರ್ತೆ

ಮಿಥುನ — ಆನಂದದಾಯಕ ವಾರ ದುಡ್ಡಿನ ಚಿಂತೆ ಇರದು ಹಣದ ಲಾಭ ಕಾರ್ಮಿಕ ಕಾರ್ಯ ಜರಗುವುದು ವ್ಯಾಪಾರಾದಿಗಳಲ್ಲಿ ಉತ್ಸಾಹ ನೂತನ ಪರಿಚಯ ತಾ|| ೧೪ ೧೫ ಧನ ಲಾಭ ಮಹತ್ವದ ಭೇಟಿ

ಕರ್ಕ — ಆರೋಗ್ಯದ ದೃಷ್ಟಿಯಿಂದ ಉತ್ತಮ ವಾರ ಸಹಕಾರಿಗಳಿಂದ ಕೆಟ್ಟ ಮಾತು ತಾ|| ೧೭ ೧೬ ಧನ ಲಾಭ ಮೃಷ್ಟಾನ್ನ ಭೋಜನ

ಸಿಂಹ — ಆರೋಗ್ಯದ ಕಡೆ ಗಮನ ಬೇಕು ಅಸಮಾನಕರ ಘಟನೆ ಪ [illegible] ದಲ್ಲಿ ಸಂಕಟ ಪ್ರಿಯಜನ [illegible] ಕುಟುಂಬದಲ್ಲಿ ಕಲಹ ತಾ [illegible] ಜಲ ಭಯ ಅಪ್ರಿಯ ವಾರ್ತೆ

ಕನ್ಯಾ — ಹಣದ [illegible] ಗ್ಯ ನೆಟ್ಟಗೆ ಸುಖ ಪ್ರವಾಸ [illegible] ಕ ಕಾರ್ಯ ನೆರವೇರುವುದು ತಾ [illegible] ೧೫ ಗೆಳೆಯರಿಂದ ಲಾಭ

ತುಲಾ — ಕಲಹೋರಕ ವಾರ ಹಣ ಕಾಸಿನ ವೃಷ್ಟಿಯಿಂದ ತೊಂದರೆ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳ ಪರಿಸ್ಥಿತಿ ಸುಧಾರಣೆ ತಾ|| ೧೯ ೨೦ ಸುಗ್ರಾಸ ಭೋಜನ ಹಣದ ಲಾಭ

ವೃಶ್ಚಿಕ — ತ್ರಾಸದಾಯಕ ವಾರ ವಿರುದ್ಧ ಘಟನೆ ಹಣದ ಮುಗ್ಗಟ್ಟು ಪರಿಸ್ಥಿತಿ ವ್ಯಾಪಾರಾದಿಗಳ ಪರಿಸ್ಥಿತಿ ಕೆಡುವುದು ನೌಕರಿಯಲ್ಲಿ ಕಲಹ ತಾ|| ೧೯ ೨೦ ಸಂಕಟದಿಂದ ಪಾರು ಮಿತ್ರ ಸಹಾಯ

ಎಲ್ಲಾ ಬಗೆಯ

ಅಲೋಪಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತದೆ

ರಘುಲಾಲ್ ಅಂಡ್ ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

Edited Printed and Published by A R Nagarajan at Sadhvi Press D Subbiah Road, Mysore

ಪಂಜಾಬಿನಲ್ಲಿ ತೆರಿಗೆ ವಿರುದ್ಧ ಹರತಾಳ

ಮಾರಾಟ ತೆರಿಗೆ ತಿದ್ದುಪಡಿ ಶಾಸನದ ವಿರುದ್ಧವಾಗಿ ಪೂರ್ವ ಪ [illegible] ಸಿಂಲಾ ಅಂಬಾಲಾ [illegible] ಮುಂತಾದ ನಾನಾ ನಗರಗ [illegible] ನ್ನೆ ಒಂದು ದಿನದ ಹರತಾಳವು ನಡೆದು ಎಲ್ಲಾ ಕೆಲಸ ಕಾರ್ಯಗಳೂ ನಿಂತು ಹೋಗಿದ್ದುವು ಮೋಟಾರು ವಾಹನಗಳಲ್ಲಿ ರವಾನಿಸುವ ಸಾಮಾನುಗಳಿಗೆ ವಿಧಿಸಲಾಗಿರುವ ತೆರಿಗೆಯ ವಿರುದ್ಧವಾಗಿ ಲಾರಿಗಳವರು ಮುಷ್ಕರವನ್ನು ಹೂಡಿರುತ್ತಾರೆ

ತ್ರಿವಳಿಗಳ ಜನನ

ಬಂಗಾರುಪೇಟೆ ತಾಲ್ಲೂಕಿನ [illegible] ಮುಂದೆ ಗ್ರಾಮದಲ್ಲಿ ಮುನಿವೆಂಕಟವ್ವ ಎಂಬಾಕೆಗೆ ಕಳೆದ [illegible] ತಾ [illegible] ರು ಗಂಡು ಶಿಶುಗಳು ಜನಿಸಿದ ನಂತರ ಅನಂತರ ಎರಡು ಮಕ್ಕಳು ಮೃತಪಟ್ಟು ತಾಯಿ ಮತ್ತು ಇನ್ನೊಂದು ಮಗುವು ಆರೋಗ್ಯವಾಗಿರುವರೆಂದೂ ಹೇಳಲಾಗಿದೆ

ದೋಣಿ ಮುಗುಚಿ ೩೦ ಜನರ ಮರಣ

[illegible]

ಮುಕರ [illegible] ಆರೋಗ್ಯ [illegible] ನೌಕರಿಯಲ್ಲಿ [illegible]

[illegible] ಉತ್ತೇಜಕ [illegible] ಆರೋಗ್ಯ ನೆಟ್ಟಗೆ [illegible] ತಾ|| ೧೪ ೧೫ ಲಾಭ ನೌಕರಿಯಲ್ಲಿ [illegible]

ಕಾಲೇಜುಗಳಲ್ಲಿ ನೈತಿಕ ಶಿಕ್ಷಣ

ಪ್ರಾಂತ್ಯದ ಕಾಲೇಜುಗಳಲ್ಲಿ [illegible] ಕಾಲ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ [illegible] ಕೊಡಬೇಕೆಂದ ಮದ್ರಾಸ ವಿಶ್ವವಿದ್ಯಾಲಯದ ಆಡಳಿತ [illegible] ಸಭೆಯು ನಿರ್ಧರಿಸಿರುತ್ತದೆ [illegible] ನಾಗರೀಕನಾಗಲೂ ಮತ್ತು ಮುಖಂಡನಾಗಲೂ ವಿದ್ಯಾರ್ಥಿಗೆ [illegible] ಪ್ರವೃತ್ತಿಯನ್ನು [illegible] ಅವನಲ್ಲಿ [illegible] ವಾಗಿದೆ

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೈಸೂರ ಜಿಲ್ಲಾ [illegible] ರು ಕೆಲಸಗಾರರ ಸಂಘವ ಕಟ್ಟಡದಲ್ಲಿ ನೆನ್ನೆ ಶ್ರೀ [illegible] ಮಂಗಳಾರತಿ [illegible] ಶ್ರೀ ಕೃಷ್ಣ ಜಯಂತಿ ಮಹೋತ್ಸವ ಉಪನ್ಯಾಸ ಮತ್ತು ಸಂಗೀತ

[illegible]

ದೊಡ್ಡ [illegible] ನಡೆಯುವುದು

ರಾಜಕಮಲ್, ಮೈಸೂರು

12–9–52 ರಿಂದ 4ನೇ ವಾರ

ಶ್ರೀನಿವಾಸ ಕಲ್ಯಾಣ

[illegible]

ಸಂಸ್ಥಾನದಲ್ಲಿ ಅಧಿಕ ನಿರುದ್ಯೋಗ

ಮೈಸೂರ [illegible] ಕಾರ್ಖಾನೆ ಮುಚ್ಚಿದ ಸಂಸ್ಥಾನಗಳಲ್ಲಿ [illegible] ಕಾರ್ಮಿಕ ಉದ್ಯೋಗ [illegible] ಪರಿಣಾಮಕರವಾಗಿರುವುದೆಂದು [illegible] ವರದಿಯೊಂದು [illegible] ರುತ್ತದೆ ಕೆಲಸಕ್ಕಾಗಿ ಒಟ್ಟು [illegible] ಜನರು ಅರ್ಜಿ ಹಾಕಿದ್ದರೆಂದೂ [illegible] ಮುಂದಿಗೆ ಉದ್ಯೋಗಗಳು [illegible] ರೆತುವೆಂದೂ ಹೇಳಲಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲ ಒಂದಕ್ಕೆ	
ನೆಲಗಡಲೆ	೨೦೦	[illegible]
ಎಳ್ಳು	೩೦೦	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	
ತೊಗರಿ	[illegible]	
ಹೆಸರು	[illegible]	
ಹೊಂಗೆ ಬೀಜ	[illegible]	
ಉದ್ದು	[illegible]	[illegible]
ಅವರೆ	[illegible]	
ಹುರುಳಿ	[illegible]	
ಮೆಣಸಿನಕಾಯಿ		
[illegible]	[illegible]	
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	

SREE GANESH

[illegible]

JUNGLE MAN HUNT

[illegible]

ಮೈಸೂರು ದಸರಾ ವಸ್ತು ಪ್ರದರ್ಶನ - 1952

ತಾ|| 30 9–1952 ರಿಂದ 10 1952 ರ ವರೆಗೆ

ಎಲ್ಲಿಂದ ವಸ್ತು ಪ್ರದರ್ಶನದ [illegible] ಸ್ಪರ್ಧೆಗಳನ್ನು [illegible]

1 ರಂಗೋಲೆ ಸ್ಪರ್ಧೆ,

[illegible]

2 ಜಡೆ ಶೃಂಗಾರ ಸ್ಪರ್ಧೆ

[illegible]

ಸ್ಪರ್ಧೆಗಳಲ್ಲಿ ಭಾಗವಹಿಸಲು [illegible] 15 [illegible] ಬರೆದುಕೊಳ್ಳಬೇಕಾಗಿದೆ

ಕಾರ್ಯದರ್ಶಿ

ಮೈಸೂರು ದಸರಾ ವಸ್ತು ಪ್ರದರ್ಶನ ಸಮಿತಿ ಮೈಸೂರು

PRABHA ★ From 16 9 52 Daily 3 Shows

[illegible]

THE RUSSIAN STORY

(The History of Russia English)

[illegible]

Along With

1) SOVIET ART SERIES No 1 2) VICTORY PARADE

You cannot [illegible]

P S Concession for School Students

ದಸರಾ ಮಹೋತ್ಸವಕ್ಕಾಗಿ:– ಹೊಸ ಮಾದರಿಯ ಮೈಸೂರು [illegible] ಸೀರೆಗಳೂ [illegible] ★ **M. V. ಭೋಜಯ್ಯ** [illegible] ಎದುರು ಮೈಸೂರು

ಸಂಪುಟ ೧೧] ಸೋಮವಾರ ೧೫-೯-೧೯೫೯ [ಸಂಚಿಕೆ ೪೩

ನೋಂದಣಿ ನಂ. 792 [ವಂದೇ ಮಾತರಂ] ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ವಿಶ್ವೇಶ್ವರಯ್ಯನವರು ಚಿರ ಕಾಲ ಬಾಳಲಿ!

ಪ್ರಭುಗಳಿಂದ ವಿಶ್ವೇಶ್ವರಯ್ಯನವರ ಸೇವೆಯ ಪ್ರಶಂಸೆ

ವರ್ಧಂತಿ ಸಮಾರಂಭದಲ್ಲಿ ಭಾಷಣ

ಮೈಸೂರು ... ಈ ದಿನ ಬೆಳಗ್ಗೆ ... ಮಾಜಿ ದಿವಾನ ... ಎಂ. ವಿಶ್ವೇಶ್ವರಯ್ಯನವರ ... ವರ್ಧಂತಿ ಸಮಾರಂಭವು ವೈಭವದ ಆಚರಿಸಲ್ಪಟ್ಟಿತು ... ಪ್ರಮುಖರಾದ ... ಆದರ ... ತೆ ವಹಿಸಿ ... ಕಳಗೆ ಕಂಡಂತೆ ಭಾಷಣ ಮಾಡಿದರು —

ಸರ್ ಎಂ. ವಿಶ್ವೇಶ್ವರಯ್ಯನವರ ವಿ... ನಾನು ಯಾವಾಗಲೂ ... ಸ್ವತವಾದ ಪ್ರೀತಿ ವಿಶ್ವಾಸಗಳನ್ನು ... ದಿರುತ್ತೇನೆ. ಅವರನ್ನು ಕಂಡ ... ಗೆ ದೀರ್ಘಾಯುರಾರೋಗ್ಯವನ್ನು ... ರಲು ನನಗೆ ಪರಮ ಆನಂದವಾಗುತ್ತದೆ. ಅವರು ಅತ್ಯಂತ ಉನ್ನತ ವ... ಯುವ ಹಾಗೂ ವ್ಯಕ್ತಿಗಳಲ್ಲಿ ... ... ರಿನ ಸುಪುತ್ರರಲ್ಲಿ ... ವರ್ಷದ ಅವರ ಸಾವ ಜನಿಕ ಜೀ... ನಿಸ್ವಾರ್ಥ ಮತ್ತು ನಿಷ್ಕಳಂಕ ... ದಿಂದ ಮತ್ತು ಅತ್ಯಂತ ... ವ ನಿರಂತರ ... ಯುತವಾಗಿರುತ್ತದೆ.

... ಕೈಗಾರಿಕ ... ಇತರ ... ಮಾಡಿರುವ ... ಲಸವು ... ತವಾಗಿದ ... ದೂರದೃಷ್ಟಿ ... ಭಿವೃದ್ಧಿಯು ... ರವೇ ಇಂದಿನ ನಮ್ಮ ಸಂಸ್ಥಾ... ಭ್ಯುದಯಕ್ಕೆ ಆಧಾರಸ್ತಂಭವಾಗಿದೆ. ... ಅವರು ದೂರೀಕರಿಸಿ ... ವರಿಂದ ಕಾರ್ಯಸಾಧನೆ ಮಾಡುತ್ತಿದೆ.

ಅವರ ಜೀವನದ ಅತ್ಯಂತ ಮಹತ್ವದ ಯೋಜನೆಗಳಲ್ಲಿ ಕನ್ನಂಬಾಡಿ ಕಟ್ಟೆಗೆ ಅಗ್ರಸ್ಥಾನವಿರುತ್ತದೆ ... ಆರಂಭಿಸಿದ ... ಇಡೀ ಭಾರತ ... ತಂತ ಘಾರಿ ಜಲಾಶಯವ ಗಿದ್ದಿತು ... ಮುಖ್ಯವಾದ ಹಲವಾರು ಯೋಜನೆಗಳನ್ನು ... ಕೊಂಡು ನಮ್ಮ ... ಯೋಜನೆ ... ಇದರಿಂದ ರೈತರಿಗೆ ವರ್ಷಕ್ಕೆ ... ಕೋಟಿ ರೂ ... ರುತ್ತದೆ ... ಸಹ ... ಸವಾದ ಆದಾಯ ... ಈ ಯೋಜನೆಯ ಸಂಪೂರ್ಣ ... ವಿಶ್ವೇಶ್ವರಯ್ಯನವರಿಗೆ ಸ...

... ಕಾರ್ಖಾನೆ ... ವಿಶ್ವೇಶ್ವರಯ್ಯನವರ ದೊಡ್ಡ ... ಗಳಲ್ಲಿ ಎರಡನೆಯದು ... ಇಡೀ ದೇಶದ ಸಂಪದಭಿವೃದ್ಧಿ ... ಮಾನ್ಯ ಮತ್ತು ... ಶಿಕ್ಷಣ ... ಕೈಗಾರಿಕೆಗಳು ... ಸ್ಥಾಪನೆಯ ... ಮುಗಳು ... ಕೈಗಾರಿಕೆಗಳು ... ಮತ್ತು ನಗರಾಭಿವೃದ್ಧಿ ಕಾರ್ಯ ... ಇವುಗಳೆಲ್ಲದರಲ್ಲಿಯೂ ವಿಶ್ವೇಶ್ವರಯ್ಯನವರ ಆಸಕ್ತಿಯು ... ತನ್ನ ... ಪೂರ್ಣವಾದ ... ಶಕ್ತಿ ... ವಾದ ದೇಶಭಕ್ತಿ ಇವುಗಳಿಂದ ಅವರು ಸಂಸ್ಥಾನಕ್ಕೆ ಮಾಡಿರುವ ... ಸಕಲ ಪ್ರಜೆಗಳೂ ಅವರಿಗೆ ಚಿರ ಋಣಿಗಳು.

ಅವರ ಸ್ವಂತ ಸಾಹಸದಿಂದ ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಅಂಶವು ಇತಿಹಾಸ ಪ್ರಸಿದ್ಧವಾದ ವಿಷಯವಾಗಿದೆ. ಆವರು ನಿವೃತ್ತರಾದ ಮೇಲೂ ಸಹಾ ಸರ್ಕಾರದವರೂ ಸಾರ್ವಜನಿಕರೂ ಅವರ ಸಲಹೆ ಮತ್ತು ಮಾರ್ಗದರ್ಶನದಿಂದ ಉಪಯೋಗ ಹೊಂದುತ್ತಿರುವರು. ಅವರ ಸಾರ್ವಜನಿಕ ಸೇವೆ ಮತ್ತು ದೇಶಾಭಿಮಾನ ... ಪ್ರವರ್ತನೆಗಳು ನಿಮಗೆಲ್ಲಾ ಜೀವನದ ಆದರ್ಶವನ್ನು ಸೂಚಿಸುವ ದಿವ್ಯ ಜ್ಯೋತಿಗಳಾಗಿರುತ್ತವೆ ... ಮನೋಭಾವವು ಲವಲೇಶವೂ ಇಲ್ಲದೆ ... ಸದಾ ಕಾಲದಲ್ಲಿಯೂ ... ಕಾರವನ್ನು ಬಯಸುವುದೇ ಅವರ ... ಗಿರುತ್ತದೆ ... ಜನರ ... ನವನ್ನು ಉತ್ತಮಪಡಿಸುವುದು ಅವರಿಗೆ ಅತ್ಯಂತ ಪ್ರಿಯವಾದ ... ಗ್ರಾಮಾಭಿವೃದ್ಧಿ ಕಾರ್ಯದ ... ಅವರ ಸ್ವತಃ ಆಸಕ್ತಿ ವಹಿಸಿ ಸತತವಾಗಿ ಶ್ರಮಿಸುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾದ ವಿಚಾರವಾಗಿದೆ.

ಹೋಳಿಕೆಯ ... ಅವರಿಗೆ ಉಚಿತವಾದ ... ಅವರ ಉದಾತ್ತ ... ಯ ಸಂಕಲ್ಪದ ... ಜೀವನ ... ಇನ್ನೇ... ಮುಂತಾದ ಸದ್ಗುಣಗಳಿಗೆ ಅವರ ಸಹೋದ್ಯೋಗಿಗಳು ವಿಶೇಷ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತಾರೆ.

ಸ್ವಾತಂತ್ರ್ಯದಿಂದ ದೇಶಕ್ಕೆ ಉಪಯೋಗವಾಗಬೇಕಾದರೆ ಮಹಾ ಜನರ ನಡೆ ನುಡಿ ಜ್ಞಾನ ಇವುಗಳೆಲ್ಲ ತೀವ್ರ ... ಮಾರ್ಗದರ್ಶಕಗಳಾಗಬೇಕೆಂದು ಅವರು ಭಾವಿಸಿದ್ದಾರೆ. ದೇಶದಲ್ಲೆಲ್ಲಾ ಕೈಗಾರಿಕೋದ್ಯಮವು ತನ್ನಯವ ಗಬೇಕೆಂದು ಅವರು ... ಹೇಳಿದ್ದಾರೆ.

ಭಗವಂತನು ವಿಶ್ವೇಶ್ವರಯ್ಯನವರಿಗೆ ದೀರ್ಘಾಯುರಾರೋಗ್ಯಗಳನ್ನು ಕರುಣಿಸಲೆಂದು ಇನ್ನೂ ಹೆಚ್ಚಿನ ಸೇವೆಯನ್ನು ... ರಕ್ಷಿಸಲು ... ವೆಂದು ಪ್ರಾರ್ಥಿಸೋಣ.

ಸಂದೇಶಗಳು

ಸಮಾರಂಭಕ್ಕೆ ಸುಮಾರು ... ಸಾವಿರ ಜನರು ಬಂದಿದ್ದರು. ಮಾಜಿ ದಿವಾನರಾದ ಮಿರ್ಜಾ ಇಸ್ಮೇಲ್, ನ್ಯಾಪತಿ ಮಾಧವರಾವ್, ಮಾಜಿ ಕೌನ್ಸಿಲರಾದ ಎಸ್. ... ರಾಜಗೋಪಾಲಾಚಾರಿ, ಶ್ರೀ ವಿ. ಪಿ. ಮೆನನ್, ಶ್ರೀ ಸಾಮ್ಯುಯೆಲ್ ರಂಗನಾಥನ್ ಮುಂತಾದವರು ಎಂದಿದ್ದರು. ಶ್ರೀ ವಿಶ್ವೇಶ್ವರಯ್ಯನವರು ಮುಖ್ಯ ಅತಿಥಿಗಳಾಗಿ ದಯಮಾಡಿಸಿದ್ದರು.

ಸಂಸ್ಥಾನದ ವಾಣಿಜ್ಯ ಸಂಘ ಮತ್ತು ಇತರ ಅನೇಕ ಸಂಘಗಳ ಪರವಾಗಿ ಧರ್ಮ ಪ್ರಕಾಶ ಕುಪ್ಪಸ್ವಾಮಿನಾಯ್ಡುರವರು ವಿಶ್ವೇಶ್ವರಯ್ಯನವರಿಗೆ ಬಿನ್ನವತ್ತಳೆಯನ್ನು ಗಂಧದ ಕರಂಡದಲ್ಲಿ ಅರ್ಪಿಸಿದರು.

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದ್, ಉಪ ರಾಷ್ಟ್ರಾಧ್ಯಕ್ಷ ಡಾ॥ ರಾಧಾಕೃಷ್ಣನ್, ... ಮತ್ತು ವಿವಿಧ ಪ್ರಾಂತ್ಯಗಳ ಗವರ್ನರುಗಳು, ಮಂತ್ರಿಗಳೇ ಮುಂತಾದವರಿಂದ ಅಭಿನಂದನಾ ಸಂದೇಶಗಳು ಬಂದಿದ್ದುವು.

ವಿಶ್ವೇಶ್ವರಯ್ಯನವರ ಉತ್ತರ

ಬಿನ್ನವತ್ತಳೆಗೆ ಉತ್ತರವಾಗಿ ವಿಶ್ವೇಶ್ವರಯ್ಯನವರು ಈ ರೀತಿ ನುಡಿದರು:

ಸ್ವಲ್ಪವೂ ಪ್ರಾಮುಖ್ಯತೆಯಿಲ್ಲದ ನನ್ನ ಜನ್ಮ ದಿನದಂತಹ ಒಂದು ಸಣ್ಣ ಸಮಾರಂಭಕ್ಕೆ ಮಹಾಸ್ವಾಮಿಯವರು ದಯಮಾಡಿಸಿ ಅಪೂರ್ವವಾದ ಗೌರವವನ್ನು ನನಗೆ ಕೊಟ್ಟು ನನನು ಋಣಿಯಾಗಿ ಮಾಡಿರುವುದಕ್ಕೆ ಕೃತಜ್ಞತೆಯನ್ನು ಸೂಚಿಸಲು ನನ್ನಲ್ಲಿ ಶಬ್ದಗಳೇ ಇಲ್ಲ. ಈ ಸಮಾರಂಭವನ್ನು ಏರ್ಪಡಿಸಿದ ಎಲ್ಲ ಪ್ರಮುಖರುಗಳಿಗೂ ನನ್ನ ವಂದನೆಗಳು. ನನ್ನ ಬಗ್ಗೆ ಇಂತಹ ಸಮಾರಂಭಗಳು ನಡೆಯುವುದು ನನಗೆ ಸ್ವಲ್ಪವೂ ರುಚಿಸುವುದಿಲ್ಲ. ಆದರೂ ಇತ್ತೀಚಿ... ತ್ತರು ನನ್ನಲ್ಲಿ ಹೊಂದಿರುವ ಸೌಹಾರ್ದವನ್ನು ಕಂಡು ಅದನ್ನು ಅರಿಯುವ ... ಕಾಶವನ್ನು ಕಳೆದುಕೊಳ್ಳಲೂ ನಾನು ಬಯಸುವುದಿಲ್ಲ.

ಆಹಾರ ವಿಹಾರಗಳಲ್ಲಿ ಕ್ಲಿಷ್ಟತೆ, ದಿನಪೂ ಆರ ರಿಂದ ೮ ಗಂಟೆವರೆಗೆ ಓದುವುದು ... ಗಂಟೆ ಕಾಲ ಹೊರಗಡೆ ಕೆಲಸ ಮತ್ತು ಪ್ರತಿದಿನವೂ ... ಮೈಲಿ ... ಲ್ನಡಿಗೆ ಇವೇ ನನ್ನ ಆರೋಗ್ಯ ರಹಸ್ಯಗಳು. ... ನೇ ವಯಸ್ಸಿನಲ್ಲಿಯೂ ನಾನು ಓದಲು ಕನ್ನಡಕವನ್ನು ಹಾಕುತ್ತಿಲ್ಲ. ನನ್ನ ಕಿವಿಯು ಸಹ ಚೆನ್ನಾಗಿ ಕೇಳಿಸುತ್ತಿದೆ. ಕೈಗಳಾಗಲೀ, ಬೆರಳುಗಳಾಗಲೀ ನಡುಗುತ್ತಿಲ್ಲ. ಅರುಳು ಮರುಳು ನನ್ನನ್ನು ಆಕ್ರಮಿಸಿಲ್ಲ.

ನನ್ನ ಯೋಜನೆಗಳನ್ನು ಕೈಗೊಂಡಾಗ ಸ್ವಜನರಿಂದಲೇ ತೀವ್ರವಿರೋಧ ಬಂದಿತು. ಆದರೂ ನ್ಯಾಯವಾದ ಕಾರ್ಯದಲ್ಲಿ ಧೈರ್ಯದಿಂದ ಮುಂದುವರಿದೆನು. ಅದರ ಔಚಿತ್ಯವನ್ನು ಈಗ ಮನಗಾಣಲಾಗಿದೆ.

ಮಳೆಬೆಳೆಗಳು ತಪ್ಪಿ ಜನರು ಕಂಗೆಟ್ಟಿರುವರು. ಈ ಸಮಯವು ಆನಂದೋತ್ಸಾಹಕ್ಕೆ ಸರಿಯಾದುದಲ್ಲವೆಂದು ನೇ... ಬಯಸುತ್ತೇನೆ.

ವಿಶ್ವೇಶ್ವರಯ್ಯನವರಿಗೆ ಪೌರಸಭಾಧ್ಯಕ್ಷರ ಶುಭಾಶಯ

ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಈ ದಿನ ಮಾಜಿ ದಿವಾನ್ ವಿಶ್ವೇಶ್ವರಯ್ಯನವರಿಗೆ ತಂತಿಯನ್ನು ಕಳಹಿಸಿ ಪುರನಿವಾಸಿಗಳ ಪರವಾಗಿ ಶುಭಾಶಯಗಳನ್ನು ಸೂಚಿಸಿರುತ್ತಾರೆ. ಮತ್ತು ಭಗವಂತನು ಅವರಿಗೆ ದೀರ್ಘಾಯುರಾರೋಗ್ಯಾದಿಗಳನ್ನು ಕೊಟ್ಟು ದೇಶದ ಅಭ್ಯುದಯವನ್ನು ಇನ್ನೂ ಹೆಚ್ಚಾಗಿ ಸಾಧಿಸಲು ಶಕ್ತಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸಿರುತ್ತಾರೆ.

ಡಾ॥ ರಾಮಲಿಂಗ ರೆಡ್ಡಿಯವರು ಸೀನಿಯರ್ ಸರ್ಜನ್

ಬೆಂಗಳೂರು ೧೫

ಕೃಷ್ಣರಾಜೇಂದ್ರ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿದ್ದ ಡಾ॥ ರಾಮಲಿಂಗ ರೆಡ್ಡಿಯವರನ್ನು ಸೀನಿಯರ್ ಸರ್ಜನರಾಗಿ ನೇಮಕ ಮಾಡಲಾಗಿದೆ. ಶ್ರೀಯುತರು ಡಾ॥ ಪದಕಿಯವರಿಂದ ಈ ದಿನ ಅಧಿಕಾರವನ್ನು ವಹಿಸಿಕೊಂಡರು.

ಗೋಪಾಲಪುರದ ಬಳಿ ಕೊಲೆ

ಮೈಸೂರು ತಾಲ್ಲೂಕು ಗೋಪಾಲಪುರದ ಬಳಿ ಈ ದಿನ ಬೆಳಗಿನ ಝಾವ ಇಬ್ಬರ ಕೊಲೆ ನಡೆದಿರುವುದೆಂದು ತಿಳಿದುಬಂದಿದೆ. ಪೋಲೀಸರು ಸ್ಥಳಕ್ಕೆ ಭೇಟಿಯಿತ್ತು ತನಿಖೆ ನಡೆಸುತ್ತಿದ್ದಾರೆ.

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು

ಮೈಸೂರು ಸಂಸ್ಥಾನದ ಆದರ್ಶ ದೇಶಭಕ್ತರು

ಇಂದು ನಾಡಿನಲ್ಲೆಲ್ಲಾ ಅವರ ೯೨ ನೇ ಜನ್ಮೋತ್ಸವದ ಆಚರಣೆ

ಈ ಶುಭ ದಿನ(೧೫-೯-೧೯೫೨) ಸರ್ ಎಂ ವಿಶ್ವೇಶ್ವರಯ್ಯನವರ ತೊಂಭತ್ತೆರಡನೆಯ ವರ್ಧಂತಿ ಇಂದು ನಮ್ಮೆಲ್ಲರಿಗೂ ದೊಡ್ಡ ಹಬ್ಬ, ಏಕೆಂದರೆ, ಅವರು ನಮ್ಮ ದೇಶದ ದೊಡ್ಡದೊಂದು ಭಾಗ್ಯ

ಸರ್ ಎಂ ವಿಶ್ವೇಶ್ವರಯ್ಯನವರು ಒಟ್ಟು ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠರಾದ ಇಂಜನಿಯರುಗಳಲ್ಲೊಬ್ಬರು ಅಂತರ ರಾಷ್ಟ್ರ ಖ್ಯಾತಿಯನ್ನು ಪಡೆದಿರುವ ಮಹಾನುಭಾವರು. ಅದ್ಭುತವಾದ ಶಿಲ್ಪ ಕಾರ್ಯಗಳನ್ನು ನೆರವೇರಿಸಿಯೂ, ಅಸಾಧಾರಣವಾದ ಕೈಗಾರಿಕೆಗಳನ್ನು ಕಂಡುಹಿಡಿಯೂ, ದೇಶೋನ್ನತಿ ಸಾಧನೆಗೆ ಅಮೋಘವಾದ ಸಲಹೆಗಳನ್ನು ಸೂಚಿಸಿಯೂ, ಅವರು ಅನೇಕ ಪ್ರಾಂತಗಳಿಗೂ ಸಂಸ್ಥಾನಗಳಿಗೂ ಪರಮೋಪಕಾರ ಮಾಡಿದ್ದಾರೆ. ಮೈಸೂರು ಸಂಸ್ಥಾನಕ್ಕೆ ಅವರಿಂದ ಆಗಿರುವ ಉಪಕಾರಗಳು ಇಷ್ಟೆಂದು ವರ್ಣಿಸುವುದು ಸಾಧ್ಯವೇ ಇಲ್ಲ. ಕೃಷ್ಣರಾಜಸಾಗರ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮೈಸೂರು ವಿಶ್ವ ವಿದ್ಯಾನಿಲಯ, ಉತ್ತಮವಾದ ರೈಲ್ವೆ ವ್ಯವಸ್ಥೆ ಮುಂತಾದುವು ಅವರ ಉಪಕಾರದ ಕೆಲವು ನಿದರ್ಶನಗಳು ಅವರಿಗೆ ಪಂಡಿತರಲ್ಲೂ, ಪಾಮರರಲ್ಲೂ, ದೊಡ್ಡವರಲ್ಲೂ ಚಿಕ್ಕವರಲ್ಲೂ ಹಣಗಾರರಲ್ಲೂ, ಬಡವರಲ್ಲೂ ಎಲ್ಲರಲ್ಲೂ ಪ್ರೀತಿ. ಅವರೆಲ್ಲರ ಜೀವನವೂ ಉತ್ತಮವಾಗಬೇಕೆಂಬುದು ಅವರ ಅಭಿಲಾಷೆ, ಒಟ್ಟು ಜನಜೀವನದ ಮಟ್ಟವೇ ದಿನದಿನವೂ ಮೇಲಕ್ಕೇರಬೇಕೆಂಬುದು ಅವರ ಆಕಾಂಕ್ಷೆ ವಿದ್ಯಾಭಿವೃದ್ಧಿಯಿಂದಲೂ ಕೈಗಾರಿಕೆಗಳ ಅಭಿವೃದ್ಧಿಯಿಂದಲೂ ಅದು ನೆರವೇರಬೇಕೆಂಬುದು ಅವರ ಧ್ಯೇಯ ವಿದ್ಯಾಭಿವೃದ್ಧಿ, ಕಲಾಭಿವೃದ್ಧಿ ಮತ್ತು ಸಂಪದಭಿವೃದ್ಧಿ ಇವು ಮೂರನ್ನೂ ಯಥೇಷ್ಟವಾಗಿ ಸಾಧಿಸುವುದಕ್ಕಾಗಿ ಒಟ್ಟು ದೇಶವೇ ಜೇನು ಗೂಡಿನಂತಾಗಿ ಜನರೆಲ್ಲರೂ ಜೇನು ನೊಣಗಳಂತೆ ದುಡಿಯಬೇಕೆಂಬುದು ಅವರ ಅಭಿಮತ ದೊಡ್ಡ ದೊಡ್ಡ ಧ್ಯೇಯಗಳನ್ನು ಸಾಧಿಸುವುದಕ್ಕಾಗಿ ಅವರು ಈಗಲೂ ಯುವಕರನ್ನೂ ನಾಚಿಸುವಂತೆ ದುಡಿಯುತ್ತಿದ್ದಾರೆ ಪ್ರಚಂಡ ಮೇಧಾವಿಗಳಾದ ಸರ್ ಎಂ ವಿಶ್ವೇಶ್ವರಯ್ಯನವರು ದೇಶಾಭಿಮಾನದಿಂದ ಈ ರೀತಿ ಶ್ರಮಿಸಿಯೂ ಶ್ರಮಿಸುತ್ತಲೂ ಇರುವುದೇ ಅವರು ಕೀರ್ತಿ ಶಿಖರವನ್ನೇರಿರುವುದರ ಕಾರಣ ಮುಂಬಯಿ ಪ್ರಾಂತದಲ್ಲೂ ಹೈದರಾಬಾದು ಸಂಸ್ಥಾನದಲ್ಲೂ ಇಂಜನಿಯರಾಗಿ ಅವರು ಸಾಧಿಸಿದ ಮಹತ್ತರ ಕಾರ್ಯಗಳನ್ನೂ ಮೈಸೂರು ಸಂಸ್ಥಾನದ ಚೀಫ್ ಇಂಜನಿಯರ್ ಮತ್ತು ದಿವಾನ್ ಹುದ್ದೆಗಳನ್ನು ಅಲಂಕರಿಸಿ ನೆರವೇರಿಸಿದ ಮಹತ್ತರ ಕಾರ್ಯಗಳನ್ನೂ ಕೊಂಡಾಡದವರೇ ಇಲ್ಲ ಅವರಂಥ ರಾಜನೀತಿ ಕೋವಿದರನ್ನೂ, ಆಡಳಿತಗಾರರನ್ನೂ ಪಡೆದಿರುವುದು ಮೈಸೂರು ಸಂಸ್ಥಾನದ ಭಾಗ್ಯವೆಂದು ಮಹಾತ್ಮ ಗಾಂಧಿಯವರು ಶ್ಲಾಘಿಸಿ ಅಭಿನಂದಿಸಿದರು ದೇಶ ಸೇವಾ ದೀಕ್ಷೆಯನ್ನು ತಳೆದು ಶ್ರಮಿಸಿದುದಕ್ಕೆ ಇದಕ್ಕಿಂತ ಹೆಚ್ಚಿನ ಪ್ರತಿಫಲವು ಮತ್ತಾವುದೂ ಇಲ್ಲ

ಸರ್ ಎಂ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನ್ ಪದವಿಯನ್ನು ಬಿಟ್ಟ ಮೇಲೆ ಅವರ ಕಾರ್ಯ ಕ್ಷೇತ್ರವು ಇನ್ನೂ ವಿಶಾಲವಾಯಿತು ಮೈಸೂರು ಸಂಸ್ಥಾನಕ್ಕೂ ಭಾರತದ ಇತರ ಪ್ರದೇಶಗಳಿಗೂ ಅವರಿಂದ ಅನೇಕ ಉಪಕಾರಗಳಾದುವು ಭದ್ರಾವತಿ ಕಾರ್ಖಾನೆಯು ಸಂಪಾದನಾ ಕೆಲಸ ಮಾಡಿದುದಕ್ಕಾಗಿ ತಮಗೆ ಸಲ್ಲಬೇಕಾಗಿದ್ದ ಸಂಭಾವನೆಯ ಮೊತ್ತವನ್ನು ಪೂರ್ತಿಯಾಗಿ ಶ್ರೀ ಜಯಚಾಮರಾಜೇಂದ್ರ ಔದ್ಯೋಗಿಕ ಶಿಕ್ಷಣ ಶಾಲೆಗೆ ಅವರು ದಾನ ಮಾಡಿದರು ಒಟ್ಟು ಭಾರತದ ಪುರೋಭಿವೃದ್ಧಿಗಾಗಿ ಉಜ್ವಲ ದೇಶಾಭಿಮಾನದಿಂದ ಅವರು ಶ್ರಮಿಸುತ್ತಿದ್ದಾರೆ ಭಾರತೀಯರು ಕೈಗಾರಿಕೆ ಮುಂತಾದುವುಗಳಲ್ಲಿ ಪಾಶ್ಚಾತ್ಯರಿಗೆ ಸಮನಾಗಬೇಕೆಂಬುದು ಅವರ ದೊಡ್ಡ ಕನಸು ಅದಕ್ಕಾಗಿ ಅಖಿಲ ಭಾರತದ ತಯಾರಿಕೆಗಾರರ ಸಂಸ್ಥೆಯು ಅಶ್ರಾಂತವಾಗಿ ಕೆಲಸ ಮಾಡುತ್ತಿದ್ದಾರೆ " ಭಾರತದ ಮೇಲ್ಮೆಯೇ ತಮ್ಮ ಮೇಲ್ಮೆ ಭಾರತೀಯರ ಸುಖವೇ ತಮ್ಮ ಸುಖ " ಎಂಬುದೇ ಅವರ ಜಪ

ಅವರು ಸಿದ್ಧಗೊಳಿಸಿದ ಪಂಚವಾರ್ಷಿಕ ಕೈಗಾರಿಕೆ ಯೋಜನೆಯು ಕೆಲವು ಪ್ರಾಂತ್ಯಗಳಲ್ಲಿ ಆಚರಣೆಗೆ ಬಂದಿದೆ ದೇಶಭಕ್ತಿ, ಶೀಲಸಂಪತ್ತು, ತ್ಯಾಗ ಬುದ್ಧಿ ವಿಧೇಯತೆ ಮಹತ್ವ, ಸರಳವರ್ತನೆ ಉದಾತ್ತ ಧ್ಯೇಯ ಈ ಸದ್ಗುಣಗಳಿಗೆ ಅವರು ಮೂರ್ತಿಸ್ವರೂಪರಾಗಿ ಪ್ರಸಿದ್ಧರಾಗಿದ್ದಾರೆ ಒಟ್ಟು ದೇಶಕ್ಕೆ ಆದರ್ಶಪ್ರಾಯರಾದ ಮಹಾಪುರುಷರಲ್ಲಿ ಮುಖ್ಯರೆನಿಸಿದವರಲ್ಲಿ ಅವರೂ ಒಬ್ಬರು

ಅವರು ಸೂಚಿಸಿರುವ ನಾಲ್ಕು ಕಾರ್ಯಸೂತ್ರಗಳೂ ಅಮೋಘವಾಗಿವೆ ಎಲ್ಲರೂ ಕಷ್ಟಪಟ್ಟು ಇನ್ನೂ ಹೆಚ್ಚುಹೆಚ್ಚಾಗಿ ಕಾರ್ಯ ಯೋಜನೆಯನ್ನೇರ್ಪಡಿಸಿಕೊಂಡು ಉತ್ಸಾಹದಿಂದ ಶ್ರಮಿಸಬೇಕು ದಿನದಿನವೂ ಕಾರ್ಯದಕ್ಷತೆಯನ್ನು ವೃದ್ಧಿಪಡಿಸಿಕೊಳ್ಳಬೇಕು ಅನುಭವದಿಂದಲೂ ಸೇವಾಬುದ್ಧಿ ಎಂದಲೂ ಕೂಡಿ, ವಿನಯ ಧನರಾಗಿ ವರ್ತಿಸಬೇಕು ಅವರು ಈ ನಾಲ್ಕು ಕಾರ್ಯ ಸೂತ್ರಗಳನ್ನು ಅಕ್ಷರಶಃ ಅನುಸರಿಸುತ್ತಾ ಬಂದಿದ್ದಾರೆ ಅವರದು ನುಡಿಯಂತೆ ನಡೆ ಅವರ ಮೇಲ್ಪಂಕ್ತಿಯನ್ನನುಸರಿಸಿದವರಿಗೆ ಕಾರ್ಯ ಸಿದ್ಧಿಯೆಂಬುದು ಕಟ್ಟಿದ ಬುತ್ತಿ

ದೇಶವತ್ಸಲರಾದ ಮೇಧಾವಿ ಶ್ರೇಷ್ಠರಲ್ಲಿ ಅಗ್ರಗಣ್ಯರಾದವರ ಗುಂಪಿಗೆ ಸೇರುವ ಮಹಾಪುರುಷರಾದ ಸರ್ ಎಂ ವಿಶ್ವೇಶ್ವರಯ್ಯನವರು ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ ಚಿರಕಾಲ ಸುಖವಾಗಿರುವಂತೆ ಭಗವಂತನು ಅನುಗ್ರಹಿಸಲಿ !

ವಿಶ್ವೇಶ್ವರಯ್ಯನವರ ಯೋಜನೆ ಬಗ್ಗೆ ಪರ್ಷಿಯದ ಆಸಕ್ತಿ

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಸರ್ ಎಂ ವಿಶ್ವೇಶ್ವರಯ್ಯನವರು ತಯಾರಿಸಿರುವ ಯೋಜನೆಯ ವಿವರಗಳು ಬೇಕೆಂದು ಪರ್ಷಿಯವು ಅಖಿಲ ಭಾರತ ತಯಾರಿಕಾಗಾರರ ಸಂಘದವರನ್ನು ಕೋರಿರುವುದೆಂದು ಗೊತ್ತಾಗಿದೆ

ಕಾಂ॥ ಕಾರ್ಯ ಸಮಿತಿಯಲ್ಲಿ ಮಂತ್ರಿಗಳ ಸಂಖ್ಯೆ

ಎ. ಐ ಸಿ ಸಿ. ಯಲ್ಲಿ ನಿರ್ಣಯ

ಇಂದೂರಿನಲ್ಲಿ ಸೇರಿರುವ ಎ ಐ ಸಿ ಸಿ ಸಭೆಯು ಕಾಂಗ್ರೆಸ್ಸಿನ ಅಂಗರಚನೆಯ ೩೦ ನಿಬಂಧನೆಗಳ ಪೈಕಿ ೧೭ಕ್ಕೆ ತಿದ್ದುಪಡಿಗಳನ್ನು ಅಂಗೀಕರಿಸಿರುತ್ತದೆ. ಪಾರ್ಲಿಮೆಂಟ್ ಮತ್ತು ಶಾಸನ ಸಭಾ ಸದಸ್ಯರುಗಳು ಪ್ರಾದೇಶಿಕ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಸಹಭಾಗಿ ಸದಸ್ಯರಾಗಿರಲು ಅವಕಾಶವನ್ನು ಕೊಡಲಾಗಿದೆ. ಆದರೆ ಅವರಿಗೆ ಓಟಿನ ಅಧಿಕಾರವಿರುವುದಿಲ್ಲ ಮತ್ತೊಂದು ತಿದ್ದುಪಡಿಯ ಪ್ರಕಾರ ಕಾರ್ಯಕಾರಿ ಸಮಿತಿಯಲ್ಲಿರುವ ಸದಸ್ಯರ ಮೂರನೇ ಒಂದು ಭಾಗದಷ್ಟು ಮಾತ್ರ ಮಂತ್ರಿಗಳಿರಬೇಕೆಂಬ ನಿಬಂಧನೆಯನ್ನು ತೆಗೆದು, ಕಾಂಗ್ರೆಸ್ ಅಧ್ಯಕ್ಷರು ಎಷ್ಟು ಜನ ಮಂತ್ರಿಗಳನ್ನಾದರೂ ನೇಮಿಸಿಕೊಳ್ಳುವ ಅಧಿಕಾರವನ್ನೀಯಲಾಗಿದೆ ನೆಹರೂ ರವರು ೯ ಜನ ಮಂತ್ರಿಗಳನ್ನೂ, ೧೨ ಜನ ಇತರರನ್ನೂ ಸಮಿತಿಗೆ ನೇಮಿಸಿಕೊಳ್ಳಲಿರುವರೆಂದು ಹೇಳಲಾಗಿದೆ

ಕಾಂಗ್ರೆಸ್ ಸಂಸ್ಥೆಗೆ ಒಬ್ಬ ಉಪಾಧ್ಯಕ್ಷರಿರಬೇಕೆಂದು ಮೈಸೂರಿನ ಶ್ರೀ ಕೆ ಹನುಮಂತಯ್ಯನವರು ತಿದ್ದುಪಡಿಯನ್ನು ಸೂಚಿಸಿ, ನೆಹರೂರವರ ಒತ್ತಾಯದ ಮೇಲೆ ಅದನ್ನು ಹಿಂದಕ್ಕೆ ತೆಗೆದುಕೊಂಡರು.

ಹಬ್ಬಕ್ಕಾಗಿ ದುಡ್ಡಿಲ್ಲದೆ ಮಗುವಿನ ವಿಕ್ರಯ

ತುಮಕೂರಿನ ಬಳಿ ಬಟ್ಟೆಕಲ್ಲಿಯ ಪೀರ್ ಸಾಬ್ ಎಂಬಾತನು ಬಕ್ರೀದ್ ಹಬ್ಬವನ್ನು ಆಚರಿಸಲು ಕೈಲಿ ಹಣವಿಲ್ಲದೆ, ತನ್ನ ೧॥ ವರ್ಷದ ಹೆಣ್ಣು ಮಗುವನ್ನು ಫಕೀರನೊಬ್ಬನಿಗೆ ಮಾರಿ ಹತ್ತು ರೂ ಪಡೆದು ಹಬ್ಬವನ್ನು ನೆರವೇರಿಸಿದನೆಂದು ವರದಿಯಾಗಿದೆ.

ಬ್ಯಾಡ್ಮಿಂಟನ್ ಪಂದ್ಯ

ರಾಜಧಾನಿಯ ಇಟ್ಟಿಗೆಗೂಡು ಯುವಕರ ಸಂಘದವರು ರೈಲ್ವೆ ಇನ್ಸ್ಟಿಟ್ಯೂಟಿನ ಬ್ಯಾಡ್ಮಿಂಟನ್ ಕ್ಲಬ್ಬಿನ ಆಟಗಾರರನ್ನು ಮೊನ್ನೆ ೨೯-೧೫, ೨೦-೨೯, ಮತ್ತು ೨೯-೨೪ ಪಾಯಿಂಟುಗಳಿಂದ ಸೋಲಿಸಿದರು

ಪೊಲೀಸ್ ಅಧಿಕಾರಿ ಮೇಲೆ ವಿದ್ಯಾರ್ಥಿಗಳ ಮುಂಡಾವರ್ತಿ

ಫತೇಗಡದ ಕಾಲೇಜಿನಲ್ಲಿ ಓದುತ್ತಿರುವ ಒಬ್ಬ ವಿದ್ಯಾರ್ಥಿನಿಯನ್ನು ಮನೆಗೆ ಕರೆದುಕೊಂಡು ಹೋಗಲು ಬಂದ ಆಕೆಯ ಸಂಬಂಧಿಕನಾದ ಒಬ್ಬ ಪೊಲೀಸು ಅಧಿಕಾರಿಯನ್ನು ಮೊನ್ನೆ ೩೦ ಮಂದಿ ವಿದ್ಯಾರ್ಥಿಗಳು ಸುತ್ತುಗಟ್ಟಿ ಬಲವಾಗಿ ಲಾಠಿಯಿಂದ ಹೊಡೆದರೆಂದೂ ಅವರ ತಲೆಯಿಂದ ರಕ್ತವು ಧಾರಾಕಾರವಾಗಿ ಹರಿಯಿತೆಂದೂ ವರದಿಯಾಗಿದೆ ಅಧಿಕಾರಿಯ ನೆರವಿಗೆ ಬಂದ ಮತ್ತೊಬ್ಬ ಅಧಿಕಾರಿಗೂ ಪೆಟ್ಟು ಬಿದ್ದಿತೆಂದು ಗೊತ್ತಾಗಿದೆ ವಿದ್ಯಾರ್ಥಿನಿಯನ್ನು ಪದೇ ಪದೇ ಒಬ್ಬ ವಿದ್ಯಾರ್ಥಿಯು ಹಿಂಬಾಲಿಸುತ್ತಿದ್ದನೆಂದೂ, ಅವನನ್ನು ದಸ್ತಗಿರಿ ಮಾಡಲು ಪೊಲೀಸರು ಬಂದುದಾಗಿ ವಿದ್ಯಾರ್ಥಿಗಳು ತಪ್ಪಾಗಿ ಭಾವಿಸಿ ಅಧಿಕಾರಿಗಳನ್ನು ಹೊಡೆದರೆಂದೂ ಹೇಳಲಾಗಿದೆ ಇದುವರೆಗೆಯಾರನ್ನೂ ದಸ್ತಗಿರಿ ಮಾಡಿರುವುದಿಲ್ಲ ಸಶಸ್ತ್ರ ಪೊಲೀಸರು ಆ ಪ್ರದೇಶದಲ್ಲಿ ಕಾವಲು ಕಾಯುತ್ತಿದ್ದಾರೆ

ಮಚಲೀಪಟ್ಟಣದ ಪಟಾಕಿ ಕಾರ್ಖಾನೆಗಳಿಗೆ ಮೊಹರು

ಮಚಲೀಪಟ್ಟಣದ ಪಟಾಕಿ ಕಾರ್ಖಾನೆಯಲ್ಲಿ ಕಳೆದ ಶುಕ್ರವಾರ ಆದ ಸಿಡಿತದ ಪರಿಣಾಮವಾಗಿ ಇನ್ನೂ ಒಬ್ಬ ಹೆಂಗಸು ಮತ್ತೊಬ್ಬ ಗಂಡಸು ಮಡಿದ ಒಟ್ಟು ೧೦ ಜನರು ಸತ್ತಿರುವರೆಂದು ಹೇಳಲಾಗಿದೆ ಆ ಊರಿನಲ್ಲಿ ಆದ ಪಟಾಕಿ ಕಾರ್ಖಾನೆಗಳನ್ನು ಪೊಲೀಸರು ಮೊಹರು ಮಾಡಿರುತ್ತಾರೆ.

ಕಲ್ಕತ್ತೆಯ ಬಳಿ ಕೃತಕ ಮಳೆಯ ಪ್ರಯೋಗ

ಭಾರತ ಸರ್ಕಾರದ ಅಬ್ಸರ್ವೇಟರಿಯ ಮಾಜಿ ಡೈರೆಕ್ಟರರಾದ ಡಾ॥ ಎಸ್ ಕೆ ಬ್ಯಾನರ್ಜಿಯವರು ಕೃತಕ ಮಳೆ ಕರೆಯುವ ಬಗ್ಗೆ ಕಲ್ಕತ್ತೆಯ ಬಳಿ ಯಾದವಪುರದಲ್ಲಿ ಕಳೆದ ೪॥ ತಿಂಗಳಿಂದ ೬೦ ಬಾರಿ ಪ್ರಯೋಗ ನಡೆಸಿ ೩೫ ಸಲ ಯಶಸ್ವಿಯಾಗಿರುವರೆಂದು ಹೇಳಲಾಗಿದೆ ಕೆಲವು ಕಡೆ ಅತಿ ವೃಷ್ಟಿಯಾಗಿರುವುದೆಂದ ವರದಿಯಾಗಿದೆ

SRI GAYATHRI

TALKIES

Daily 2 Shows

From 16-9-52 · For 2 Days

R K Os

SLAUGHTER TRIAL

(Cine Colour)

Starring -Brian Don Levy

Gig Young

NEXT CHANGE

MAN OF BRONZE

Edited, Printed and Published by A. R Nagarajan at Sadhvi Press, D Subbiah Road, Mysore

ಮೈಸೂರು ಸಿಟಿ ಮುನಿಸಿಪಲ್ ಕಮೀಷನರ್ ರವರ ಆಫೀಸ್

ಹರಾಜು ಇಸ್ತಿಹಾರ್

ತಾ॥ 3-9-1952

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ —

ಇದೇ ಮುನಿಸಿಪಲ್ ಫಾರಂನಲ್ಲಿರುವ "ಡಿಕೆ ವ-ತ್ತು ಸಂಪಿಗೆ ಹೂವಿನ ಫಸಲನ್ನು ತಾ॥ 1 10 1952 ರಿಂದ 30 6 1955 ರ ವರೆಗೆ ರೂಢಿಸಿಕೊಳ್ಳುವ ಹಕ್ಕನ್ನು ತಾ॥ 19-9 1952 ನೇ ಶುಕ್ರವಾರ ಬೆಳಗ್ಗೆ 9 ಘಂಟೆಗೆ ಮುನಿಸಿಪಲ್ ಫಾರಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ ಇಷ್ಟವುಳ್ಳವರು ರೂ 50 ನ್ನು ಠೇವಣಾತಿ ಬಗ್ಗೆ ಫಾರಂ ಮೇನೇಜರಲ್ಲಿ ಪಾವತಿ ಮಾಡಿ ರಸೀದಿ ಪಡೆದು ಹರಾಜಿನಲ್ಲಿ ಸವಾಲು ಮಾಡಬಹುದು

ಹೆಚ್ಚಿನ ವಿವರಗಳನ್ನು ಮುನಿಸಿಪಲ್ ಆಫೀಸಿನಲ್ಲಾಗಲಿ, ಮುನಿಸಿಪಲ್ ಫಾರಂನಲ್ಲಾಗಲಿ ತಿಳಿಯಬಹುದು

ಎಸ್. ಎಂ. ಅಬ್ದುಲ್ ರಹೀಂ,
ಮುನಿಸಿಪಲ್ ಕಮೀಷನರ್

ಎಲ್‌ಪೋ। ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 2 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೬-೯-೧೯೫೨ [ಸಂಚಿಕೆ ೪೩

ಭಾರತದ ಮೇಲೆ ಚೀಣ ಆಕ್ರಮಣ ಭೀತಿಯೋ ?

ಪ್ರತಿಯೊಬ್ಬರೂ ದುಡಿಯುವುದರಿಂದಲೇ ದೇಶಾಭ್ಯುದಯದ ಸಾಧನೆ

ತಯಾರಿಕೆಗಾರರ ಸಭೆಯಲ್ಲಿ ಶ್ರೀ ವಿಶ್ವೇಶ್ವರಯ್ಯನವರ ಭಾಷಣ

ಶ್ರೀಮನ್ಮಹಾರಾಜರಿಂದ ಆರಂಭೋತ್ಸವ

[ಸು ಪ್ರೋ॥] ಬೆಂಗಳೂರು ೧೬. ... ಶ್ರಮಪಟ್ಟು ಕೆಲಸ ಮಾಡುವುದರಿಂದ ... ಪಕ್ಕೆ ಯಾತನೆಯ ... ಕಲ್ಪನೆಯು ಕಲವರಲ್ಲಿದೆ ಇದು ... ತಪ್ಪು ದುಡಿಮೆಯು ಮನುಷ್ಯ ... ಸಾಸಿರುನ್ನು ನೂಡಡೆ ಅವನ ... ದಯದ ಸಾಧನೆಗೆ ಸಹಕಾರಿಯೇ ... ತ್ತದೆ ಎಂಬುದಾಗಿ ಮಾಜಿ ದಿ ... ಮೋಕ್ಷಗುಂಡಂ ವಿಶ್ವೇಶ್ವರಯ್ಯ ... ರು ಈ ದಿನ ಬೆಳಗ್ಗೆ ಇಲ್ಲಿನ ಪುರಭ ... ನದಲ್ಲಿ ನಡೆದ ೫೫ ಭಾ॥ ತಯಾರಿಕೆ ... ರ ತ್ರೈಮಾಸಿಕ ಸಭೆಯ ಅಧ್ಯಕ್ಷ ... ವಹಿಸಿ ಭಾಷಣ ಕೂಡಿಸಿದರು.

ಶ್ರೀಮನ್ಮಹಾರಾಜರವರು ಸಭೆಯ ... ಆರಂಭೋತ್ಸವವನ್ನು ನೆರವೇರಿಸಿದರು ... ಮೈಸೂರು ಶಾಖೆಯ ಅಧ್ಯಕ್ಷರಾದ ... ಸಿದ್ದಲಿಂಗಯ್ಯನವರು ಅತಿಥಿಗ ... ಸ್ವಾಗತಿಸಿ ಭಾಷಣ ಮಾಡಿದರು.

... ದೇಶದ ಕೈಗಾರಿಕ ಮತ್ತು ... ಅಭಿವೃದ್ಧಿಗಳಿಗಿರುವ ಸಾಧಕ ಬಾ ... ಗಳನ್ನು ಕುರಿತು, ಶ್ರೀ ವಿಶ್ವೇಶ್ವರ ... ಯ್ಯನವರು ಈ ರೀತಿ ತಿಳಿಸಿದರು :-

... ಮತ್ತು ಉಕ್ಕು ನೋಟಾರು ತ ... ಕಯಾರಿಕೆ ಉದ್ಯಮ ... ಕಾರ್ಯಕ್ರಮ, ವಿದ್ಯುಚ್ಛಕ್ತಿ ಉ ... ಕಲ್ಪಿಸಲು ... ಸಾಧನ ... ಸಂಗ್ರಹ, ಎಣ್ಣೆ ಉತ್ಪತ್ತಿ, ... ಗೊಬ್ಬರ ಕೃತಕ ರೇಷ್ಮೆ ... ಯಂತ್ರೋಪಕರಣಗಳ ತಯಾರಿ ಇವು ... ಸಂಬಂಧಪಟ್ಟ ಹಲವಾರು ಉದ್ಯಮ ... ಲಾಭದಾಯಕವಾಗಿ ನಮ್ಮ ದೇಶ ... ಕೈಗೊಳ್ಳಬಹುದು

... ಸರ್ಕಾರದವರಿಗೆ ... ಗಳ ಬಗ್ಗೆ ... ತಿಳುವಳಿಕೆಗಳನ್ನು ಕೊಡುವ ... ಇಲ್ಲದಿರುವುದು ಒಂದು ಕೊರತೆ ... ರಿಕೆಯ ಬೆಳವಣಿಗೆಗೆ ಸರ್ಕಾರದ ... ರೀತಿಯಲ್ಲಿಯೂ ಜನರ ಅಭ್ಯಾಸಗ ... ಬದಲಾವಣೆಗಳಾಗುವುದು ... ಆತ್ಮಾವಲಂಬನೆ, ದಾಕ್ಷ್ಯ, ಮತ್ತು ... ಗಳು ಅಗತ್ಯವಾಗಿ ಬೇಕು

... ದೇಶ ಪೂರ್ವದಲ್ಲಿ ಸಾಕಾದಷ್ಟು ಪ್ರ ... ಹೊಂದದಿರುವುದು ನಮ್ಮ ದೌ ... ಲ್ಲಿ ಒಂದಾಗಿದೆ ಸರ್ಕಾರದವ ... ಕೆಲವು ... ಗಳ ಅಭಿವೃದ್ಧಿಗೆ ... ಗಮನ ಕೊಡುತ್ತಿದ್ದಾರೆ ಸರ್ವ ... ಯುತವಾದ ಬೆಳವಣಿಗೆಗೆ ಅವರು ಗ ... ಕೊಡಬೇಕು ಕೈಗಾರಿಕೆಗಳನ್ನು ಬ ... ಕ್ಕಂತೆ ಅವರು ಕಾಣಬಾರದು ನೂ ... ಮಗಳಿಗೆ ಸೂಕ್ತ ಉತ್ತೇಜನವ ... ನಬೇಕು

... ಹಲವಾರು ಉದ್ಯಮಗಳಲ್ಲಿ ಇರ ... ತಗಳನ್ನು ತಿದ್ದಿಕೊಳ್ಳುವುದು ... ಅವು ಸಂಸ್ಥೆಗಳಲ್ಲಿ ... ಯುವನರೂ ವ್ಯವಸ್ಥಾಪಕರೂ ... ಸ್ವಂತ ... ವೈಯಕ್ತಿಕ ಪ್ರಾಬಲ್ಯ ... ಸ್ವಂತ ಆಸಕ್ತಿಗಳನ್ನು ತ್ಯಜಿಸಿ ... ಮತ್ತು ಸಾರ್ವಜನಿಕ ಹಿತವನ್ನು ... ರಕ್ಷಿಸಬೇಕು ಇದಕ್ಕೆ ಜನರ ... ಬದಲಾವಣೆ ಹೊಂದಬೇಕು ... ವಾಗಿ ಸರ್ಕಾರದವರು ನಿಷ್ಣಾ ... ಮತ್ತು ಅನುಭವಸ್ಥರ ಸಲಹೆಗಳನ್ನು ಧಾರಾಳವಾಗಿ ಸ್ವಾಗತಿಸಿ ಅದರ ಪ್ರಯೋಜನವನ್ನು ಪಡೆಯಬೇಕು.

ಅರಿತುನುರಿತ ಇಂಜನಿಯರುಗಳು ಸಾರ್ವಜನಿಕ ಉದ್ಯಮಗಳ ಬಗ್ಗೆ ಅನುಭವಪೂರ್ಣವಾದ ಸಲಹೆಗಳನ್ನು ನೀಡಲು ಸಹಾಯಕವಾಗುವಂತೆ ಒಂದು ನಿಪುಣರ ಮಂಡಲಿಯನ್ನು ರಚಿಸಬೇಕೆಂಬ ಅಭಿಪ್ರಾಯವನ್ನು ಅನೇಕ ವರ್ಷಗಳಿಂದಲೂ ನಾನು ಸೂಚಿಸುತ್ತಿದ್ದೇನೆ ಪಕ್ಷತೆಯಿಂದಲೂ ಉಪಯುಕ್ತವಾದ ರೀತಿಯಲ್ಲಿಯೂ ಕೆಲಸ ... ತೆಯ ಬೇಕಾದರೆ ಇದು ಅತ್ಯವಶ್ಯಕ ಆದರೆ ಈ ಬಗ್ಗೆ ಸರ್ಕಾರದವರ ಯಾವ ... ಕ್ರಮವನ್ನು ಕೈಗೊಂಡಿರುವುದಿಲ್ಲ ಸರಕೀಯರ ಆಡಳಿತದಲ್ಲಿ ಹೀಗಾಗಬಹುದು ... ಆದರೆ ಸ್ವತಂತ್ರ ರಾಷ್ಟ್ರೀಯ ಪ್ರಭುತ್ವವಿರುವ ಈ ಕಾಲದಲ್ಲಿಯೂ ಈ ಪರಿಸ್ಥಿತಿ ಇರಲು ಕಾರಣವಿಲ್ಲ

ಒಂದೆರಡು ಜಿಲ್ಲೆಯಲ್ಲಿಯೂ ಮೇಲೆ ಹೇಳಿದಂತೆ ಸಲಹಾ ಸಮಿತಿಗಳಿರುವುದು ಬಹಳ ಒಳ್ಳೆಯದು ಮಹಾಜನರಿಗೂ ಸಹ ಸರ್ಕಾರದವರು ಆಗಿಂದಾಗ್ಗೆ ಸೂಕ್ತವಾದ ಎಚ್ಚರಿಕೆಯನ್ನಿತ್ತು ಅವರಿಂದ ಸಂಪೂರ್ಣವಾದ ದುಡಿಮೆಯು ಆಗುವಂತೆ ಪ್ರೇರೇಪಿಸಬೇಕು ಇಲ್ಲದಿದ್ದರೆ ನಮ್ಮ ದೇಶದ ಭವಿಷ್ಯವು ಉತ್ತಮವಾಗುವುದು ಕಷ್ಟ ಜನಸಂಖ್ಯೆಯು ಬಹಳವಾಗಿ ಹೆಚ್ಚುತ್ತಿರುವ ನಮ್ಮ ದೇಶದಲ್ಲಿ ಪ್ರಗತಿಪರ ಉದ್ಯಮಗಳನ್ನು ಕೈಗೊಳ್ಳುವುದು ಅವಶ್ಯಕ ನನ್ನ ಈ ಸಲಹೆಗಳನ್ನು ಸರ್ಕಾರದವರು ಅಂಗೀಕರಿಸಿ ಅದರಂತೆ ಏರ್ಪಾಡು ಮಾಡಿದರೆ ಎಲ್ಲರೂ ಸಂತೋಷದಿಂದ ನಲಿಯುವ ಕಾಲವು ಸಮೀಪದಲ್ಲಿಯೇ ಸಂಪ್ರಾಪ್ತವಾಗುವುದರಲ್ಲಿ ಸಂದೇಹವಿರುವುದಿಲ್ಲ

ಶ್ರೀಮನ್ಮಹಾರಾಜರ ಭಾಷಣ

ಈ ಸಭೆಯು ನೊಟ್ಟ ಮೊದಲನೆ ಬಾರಿ ಈ ಸಂಸ್ಥಾನದಲ್ಲಿ ನಡೆಯುವುದರಿತ್ತು ಶ್ರೀಮನ್ಮಹಾರಾಜರು ಸಂತೋಷವನ್ನು ವ್ಯಕ್ತಪಡಿಸಿ ಇಲ್ಲಿ ಕಬ್ಬಿಣ, ಉಕ್ಕು, ವಿಮಾನ ಶಾಖೆ, ವಿದ್ಯುಚ್ಛಕ್ತಿ ಯಂತ್ರೋಪಕರಣ, ರೇಡಿಯೋ, ಟೆಲಿಫೋನ್, ಬಟ್ಟೆ, ಸಕ್ಕರೆ, ಕಾಗದ, ಸಿಮೆಂಟು, ಸಾಬೂನು ರೇಷ್ಮೆ ಮತ್ತು ಚಿನ್ನದಗಣಿ ಮುಂತಾದ ಉದ್ಯಮಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ವಿವರಿಸಿದರು ಗ್ರಾಮಾಂತರ ಪ್ರದೇಶಗಳಲ್ಲಿ ಆತ್ಮಾವಲಂಬನೆ ಮತ್ತು ಸ್ವಾವಲಂಬನೆ ಪ್ರಯತ್ನಗಳನ್ನೂ ಪ್ರೋತ್ಸಾಹಿಸಲು ಈ ಸಂಘದವರು ಕೈಗೊಂಡಿರುವ ಕಾರ್ಯಗಳಿಗಾಗಿ ಅವರು ತಮ್ಮ ವಿಶೇಷವಾದ ಮೆಚ್ಚಿಗೆಯನ್ನು ಸೂಚಿಸಿದರು

ಕಾಶ್ಮೀರದ ಗಡಿ ಬಳಿ ಪಾಕಿಸ್ತಾನದ ಯುದ್ಧ ಸಿದ್ಧತೆ

ಜಿನೀವಾದಲ್ಲಿ ನಡೆಯುತ್ತಿದ್ದ ಕಾಶ್ಮೀರದ ಮಾತುಕತೆಗಳು ವಿಫಲಗೊಂಡಂದಿನಿಂದ ಕಾಶ್ಮೀರದ ಸೀಜ್ ಫೈರ್ ರೇಖೆಯ ಬಳಿ ಆಜಾದ್ ಕಾಶ್ಮೀರದ ಪ್ರದೇಶದಲ್ಲಿ ಪಾಕಿಸ್ತಾನದವರು ಅಗಾಧವಾಗಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ (ಜಿಹಾದ್) ಧರ್ಮಯುದ್ಧಕ್ಕಾಗಿ ಸರ್ವ ಸಿದ್ಧತೆಗಳನ್ನೂ ಮಾಡಿಕೊಂಡಿರುವರೆಂದೂ, ಜಮ್ಮು ಗಡಿ ಬಳಿ ಸಿಯಾಲ್‌ಕೋಟೆಯಲ್ಲಿ ಅವರು ಎರಡು ವಿಮಾನ ನಿಲ್ದಾಣಗಳನ್ನು ನಿರ್ಮಿಸಿ, ಅಲ್ಲಿಗೆ ಸೈನ್ಯ ಮತ್ತು ಯುದ್ಧ ಸಾಮಗ್ರಿಗಳನ್ನು ರವಾನಿಸುತ್ತಿರುವರೆಂದೂ ಹೇಳಲಾಗಿದೆ ಗಡಿ ಬಳಿ ಯಾವ ಘಳಿಗೆಯಲ್ಲಾದರೂ ಯುದ್ಧವು ಆರಂಭವಾಗಬಹುದೆಂದು ಜನರು ಗಾಬರಿಗೊಂಡು ಸ್ವಸ್ಥಾನಗಳನ್ನು ಬಿಟ್ಟು ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿರುವರೆಂದು ವರದಿಯಾಗಿದೆ

ಎಂಟು ರೂಪಾಯಿಗೆ ಮಗುವಿನ ಮಾರಾಟ

ಚಿಂತಾಮಣಿಯ ೨೮ ವಯಸ್ಸಿನ ಮಹಿಳೆಯೊಬ್ಬಳು ತನ್ನ ಮೂರು ಮಕ್ಕಳನ್ನು ಸಾಕಲಾರದೆ ಅವರ ಪೈಕಿ ಚಿಕ್ಕವನಾದ ಕೃಷ್ಣ ಎಂಬ ಮುದ್ದಾದ ಬಾಲಕನನ್ನು ೮ ರೂಪಾಯಿಗೆ ಮಕ್ಕಳಿಲ್ಲದ ಮಹಿಳೆಯೊಬ್ಬಳಿಗೆ ಮಾರಿದಳೆಂದು ತಿಳಿದುಬಂದಿದೆ

೨೦ ನೇ ತಾ॥ ಮುಷ್ಕರ ಹೂಡಲು ನೀರಿನ ಕೆಲಸಗಾರರ ಪ್ರತಿಜ್ಞೆ

ರಾಜಧಾನಿಯ ವಾಣಿವಿಲಾಸ ವಾಟರ್ ವರ್ಕ್ಸ್ ಕೆಲಸಗಾರರ ಸಭೆಯು ಕಳೆದ ಶನಿವಾರ ಸಂಜೆ ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಬರುವ ೨೦ನೇ ತಾರೀಖು ಸಾಂಕೇತಿಕ ಮುಷ್ಕರ ಹೂಡಬೇಕೆಂದು ಕೆಲಸಗಾರರೆಲ್ಲರೂ ಪ್ರತಿಜ್ಞೆ ಸ್ವೀಕರಿಸಿದರು

ಕೃಷ್ಣರಾಜೇಂದ್ರ ಆಸ್ಪತ್ರೆಯ ಸೂಪರಿಂಟೆಂಡೆಂಟರು

ರಾಜಧಾನಿಯ ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ॥ ವಿ ಆರ್. ನಾಯ್ಡುರವರನ್ನು ಡಾ॥ ರಾಮಲಿಂಗರೆಡ್ಡಿಯವರ ಸ್ಥಾನದಲ್ಲಿ ಮೇಲ್ಕಂಡ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿ ನೇಮಿಸಲಾಗಿದೆ.

ಭಾರತದ ಮೇಲೆ ಚೀಣ ಬೀಳುವುದಾಗಿ ಹೇಳಿಕೆ

ಅಮೇರಿಕದ ಸುಪ್ರಸಿದ್ಧ ಪತ್ರಿಕೋದ್ಯೋಗಿಯೂ, ಗ್ರಂಥಕರ್ತರೂ ಆದ ಲೂಯಿಫಿಷರ್‌ರವರು ಮದ್ರಾಸಿನಲ್ಲಿ ನೆನ್ನೆ ಭಾಷಣ ಮಾಡಿ, ಚೀಣವು ಭಾರತದ ಮೇಲೆ ಆಕ್ರಮಣ ನಡೆಸುವ ಸಂಭವವಿರುವುದರಿಂದ, ಭಾರತವು ತನ್ನ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದುದು ಅಗತ್ಯವೆಂದು ತಿಳಿಸಿದರು. ಭಾರತದ ಸೈನ್ಯವು ಸಣ್ಣದೆಂದೂ, ಆದ್ದರಿಂದ ಅದರ ಭದ್ರತೆ ಮತ್ತು ರಕ್ಷಣೆಯು ಪಾಶ್ಚಾತ್ಯ ದೇಶಗಳ ಶಕ್ತಿಯನ್ನು ಅವಲಂಬಿಸಿರುವುದೆಂದೂ ಅವರು ಹೇಳಿರುತ್ತಾರೆ. ಚೀಣವು ಇದುವರೆಗೆ ಭಾರತಕ್ಕೆ ಸಹಾಯವಾಗುವ ಒಂದು ಕೆಲಸವನ್ನೂ ಮಾಡಿಲ್ಲವೆಂದೂ, ಅನೇಕ ಸ್ನೇಹ ವಿರುದ್ಧವಾದ ಕೆಲಸಗಳನ್ನು ಮಾಡಿರುವುದೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ

ಹೊಳೆನರಸೀಪುರದ ಕೊಲೆ ಸುದ್ದಿ ನಿರಾಧಾರ

ಕೃಷ್ಣರಾಜನಗರದಲ್ಲಿ ಕಳೆದ ೧೦ನೇ ತಾರೀಖು ಗಣ್ಣಾನಿಂದ ಹೊಡೆಯಲ್ಪಟ್ಟು ಇಲ್ಲಿನ ಆಸ್ಪತ್ರೆಗೆ ಸೇರಿಸಲಾಗಿದ್ದ ಸಣ್ಣಮ್ಮ ಎಂಬಾಕೆಯು ಮೊನ್ನೆ ರಾತ್ರಿ ಆಸ್ಪತ್ರೆಯಲ್ಲಿ ಸತ್ತುಹೋದಳೆಂದು ಗೊತ್ತಾಗಿದೆ. ಹೊಳೆನರಸೀಪುರದ ಬಳಿ ಗ್ರಾಮ ಒಂದರಲ್ಲಿ ಸಣ್ಣನು ತನ್ನ ಹೆಂಡತಿ ಮತ್ತು ಮಗುವನ್ನು ಕೊಂದನೆಂಬ ಸುದ್ದಿ ನಿರಾಧಾರವಾದುದೆಂದು ಹೇಳಲಾಗಿದೆ ಈ ಪ್ರಕರಣದಲ್ಲಿ ಒಟ್ಟು ಸತ್ತವರ ಸಂಖ್ಯೆ ೫

ಶ್ರೀ ಕೃಷ್ಣ ಜಯಂತಿ ಸಂಗೀತ

ಶ್ರೀ ಕೃಷ್ಣಜಯಂತಿ ಪ್ರಯುಕ್ತ ಚಾಮರಾಜಪೇಟೆ ಅಗ್ರಹಾರದ ಹಿಂಭಾಗದಲ್ಲಿರುವ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಂಜೆ ೬-೩೦ ಕ್ಕೆ ವಿದ್ವಾನ್ ಚೆಳಕವಾಡಿ ಶ್ರೀನಿವಾಸಯ್ಯಂಗಾರ್ಯರ ಸಂಗೀತವು ವಿ॥ ಬಿ. ಕೇಶವಮೂರ್ತಿಯವರ ಪಿಟೀಲು ಮತ್ತು ವಿ॥ ಎಸ್ ಗೋಪಾಲರಾಯರ ಮೃದಂಗದೊಡನೆ ನಡೆಯುವುದು

ಮಿರ್ಜಾ ಇಸ್ಮೇಲರ ಮಧ್ಯ ಪ್ರಾಚ್ಯ ಪ್ರವಾಸ

ಮಧ್ಯ ಪ್ರಾಚ್ಯದಲ್ಲಿನ ಸ್ಥಿತಿಗತಿಗಳ ಬಗ್ಗೆ ಅರಿವನ್ನುಂಟುಮಾಡಿಕೊಂಡು ಬರುವ ಸಲುವಾಗಿ ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲರು ಇದೇ ೧೮ ನೇ ತಾರೀಕು ಅಲ್ಲಿಗೆ ತೆರಳುವರೆಂದು ತಿಳಿದುಬಂದಿದೆ.

ಜೈನ ಶ್ವೇತಾಂಬರರಿಂದ ಮಹಾರಾಜರಿಗೆ ಬಿನ್ನವತ್ತಳೆ

ನೆನ್ನೆ ಬೆಂಗಳೂರಿನ ಪುರ ಭವನದಲ್ಲಿ ದಕ್ಷಿಣ ಭಾರತದ ಜೈನ ಶ್ವೇತಾಂಬರ ತೇರಾ ಪಂಥಿ ಸಭೆಯವರು ಶ್ರೀಮನ್ಮಹಾರಾಜರಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದರು ಇದೇ ಸಮಯದಲ್ಲಿ ಶ್ರೀ ಜಯಚಾಮರಾಜ ಮಹಾರಾಜರಿಗೂ ಬಿನ್ನವತ್ತಳೆಯೊಂದನ್ನು ಅರ್ಪಿಸಲಾಯಿತು

ಮಳೆಯಾಗದೆ ಈ ಬಾರಿ ಕೃಷ್ಣರಾಜಸಾಗರದಿಂದ ಮಂಡ್ಯ ಜಿಲ್ಲೆಯ ಸುಮಾರು ೧೦ ಸಾವಿರ ಎಕರೆ ಜಮೀನುಗಳಿಗೆ ನೀರು ಒದಗಿಸಲು ಸಾಧ್ಯವಾಗಲಿಲ್ಲವೆಂದು ಹೇಳಲಾಗಿದೆ.

ನಾಗರಹಾವು ಮತ್ತು ನಾಯಿಯ ಪ್ರಚಂಡ ಕಾಳಗ

ಲಕ್ನೋ ಬಳಿ ಯಾಸಿಂಗಂಜ್ ಎಂಬಲ್ಲಿ ಕಳೆದ ಭಾನುವಾರ ಒಂದು ನಾಯಿಗೂ ಮತ್ತು ನಾಗರಹಾವಿಗೂ ಪ್ರಚಂಡ ಕಾಳಗವು ನಡೆದು ಕೊನೆಗೆ ಎರಡೂ ಪ್ರಾಣಬಿಟ್ಟುವೆಂದು ಹೇಳಲಾಗಿದೆ. ಹೊಲದ ಬಳಿ ಇದ್ದ ನಾಯಿಯ ಕಣ್ಣಿಗೆ ಹತ್ತಿರದ ಬಿಲವೊಂದರಿಂದ ನಾಗರಹಾವು ಈಚೆಗೆ ಬಂದುದು ಕಾಣಿಸಿ, ಅದು ಕೂಡಲೇ ಹಾವಿನ ಮೇಲೆ ಧಾಳಿ ನಡೆಸಿತು. ಮೊದಲು ಹಾವು ಬಿಲವನ್ನು ಸೇರಲು ಪ್ರಯತ್ನಿಸಿತಾದರೂ ನಾಯಿಯು ಬಿಲದ ಬಾಯಿಯ ಬಳಿ ನಿಂತುದರಿಂದ ಅದರೊಡನೆ ಸರ್ಪವು ಕಾಳಗಕ್ಕೆ ಸಿದ್ಧವಾಗಿ ಹೆಡೆಯೆತ್ತಿ ನಾಯಿಯನ್ನು ಕಚ್ಚಲು ಬಂದಾಗ, ಅದು ತಪ್ಪಿಸಿಕೊಂಡಿತು. ನಾಯಿಯು ಕ್ಷಣಕ್ಷಣಕ್ಕೂ ತನ್ನ ಸ್ಥಾನವನ್ನು ಬದಲಿಸುತ್ತಾ ಹಾವಿನ ಕತ್ತನ್ನು ಕಚ್ಚಲು ಪ್ರಯತ್ನಿಸಿದಂತೆಲ್ಲಾ ಹಾವು ಸರ್ರನೆ ನಾಯಿಯ ಕಡೆ ತಿರುಗುತ್ತಿತ್ತು. ಕೊನೆಗೆ ಹಾವು ನಾಯಿಯ ಕತ್ತನ್ನು ಕಚ್ಚಿತಾಗಿ, ನಾಯಿಯು ಹಾವಿನ ಕತ್ತನ್ನು ಕಚ್ಚಿ ಅದರ ಹೆಡೆಯನ್ನು ಶರೀರದಿಂದ ಪ್ರತ್ಯೇಕ ಮಾಡಿತೆಂದೂ, ನಂತರ ಅದರ ಶರೀರವನ್ನು ಹರಿದುಹಾಕಿತೆಂದೂ ಹೇಳಲಾಗಿದೆ. ಸ್ವಲ್ಪ ಹೊತ್ತಿನ ಮೇಲೆ ವಿಷವೇರಿ ನಾಯಿಯೂ ಹತ್ತಿರದಲ್ಲೇ ಮೃತಪಟ್ಟಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ, ಆರ್ ಕೆ ಶ್ರೀಕಂಠನ್, [illegible] ರಂಗಸ್ವಾಮಿ, [illegible] ಸಗಿರದಾಸ್ [illegible] ನಿಮ್ಮ ಮೆಚ್ಚಿನ ಗೀತೆಗಳು

ಷಹಾ ಆಲಂ ಚಕ್ರವರ್ತಿ ಕಾಲದ ನಾಣ್ಯಗಳು

ಲಕ್ನೋವಿನ ಒಬ್ಬ ರೈತನು ತನ್ನ ಭೂಮಿಯನ್ನು ಉಳುತ್ತಿದ್ದಾಗ ಒಂದು ಬಟ್ಟಲಿನಲ್ಲಿ ಕಟ್ಟಿದ್ದ ಎಂಟು ಚಿನ್ನದ ನಾಣ್ಯಗಳ ಒಂದು ಗಂಟು ನೇಗಿಲಿಗೆ ಸಿಕ್ಕಿತೆಂದೂ, ಅವನು ನಾಣ್ಯಗಳನ್ನು ಸರ್ಕಾರದ ವಶಕ್ಕೆ ಒಪ್ಪಿಸಿದನೆಂದೂ ವರದಿಯಾಗಿದೆ. ಆ ನಾಣ್ಯಗಳು ಷಹಾ ಆಲಂ ಚಕ್ರವರ್ತಿಯ ಕಾಲದ್ದೆಂದು ಹೇಳಲಾಗಿದೆ.

ಚಿಕ್ಕಬಳ್ಳಾಪುರದಲ್ಲಿ ತೀವ್ರ ಅಭಾವ ಪರಿಸ್ಥಿತಿ

ಬೆಂಗಳೂರು ನಗರದ ಆಹಾರ ಪರಿಹಾರ ಸಮಿತಿ ಸದಸ್ಯರು ಮೊನ್ನೆ ದಿನ ಚಿಕ್ಕಬಳ್ಳಾಪುರ ಸಬ್ ಡಿವಿಜನ್ನಿನ ನಾಲ್ಕು ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ ಅಲ್ಲಿನ ಅಭಾವ ಪರಿಸ್ಥಿತಿಯನ್ನು ಸ್ವತಃ ಪರಿಶೀಲಿಸಿದರೆಂದೂ ಅವರು ಹೋದ ಕಡೆಗಳಲ್ಲಿ ಅನೇಕರು ನಿರುದ್ಯೋಗ ಹಣದ ತೊಂದರೆಗೆ ಸಿಕ್ಕಿ ತಿನ್ನಲು ತಿಂಡಿ ದೊರೆಯದೆ ಸೊಪ್ಪು ಸದೆ [illegible] ಗೆಡ್ಡೆಗೆಣಸುಗಳನ್ನು ತಿಂದು ಪ್ರಾಣಧಾರಣೆ ಮಾಡಿಕೊಂಡಿರುವುದನ್ನು ಪ್ರತ್ಯಕ್ಷವಾಗಿ ಕಂಡರೆಂದೂ ವರದಿಯಾಗಿದೆ.

ದಳವಾಯಿ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಸಂಘ

[illegible] ಹಳೆಯ ವಿದ್ಯಾರ್ಥಿಗಳ ಸಮ್ಮೇಳನವನ್ನು [illegible] ಸಲಾಗುವುದೆಂದೂ, ಸಮ್ಮೇಳನದ ಕಾರ್ಯದರ್ಶಿಯಾದ [illegible] ಕೂಡಲೇ ಹಳೆ ವಿದ್ಯಾರ್ಥಿಗಳೆಲ್ಲರ ಸಭೆಯೊಂದನ್ನು ಕರೆಯಬೇಕಾಗಿರುವುದರಿಂದ ಎಲ್ಲ ಹಳೇ ವಿದ್ಯಾರ್ಥಿಗಳೂ ಸದಸ್ಯರಾಗಿ ಸೇರಬೇಕೆಂದೂ ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ಶಾಲೆಯ ಮುಖ್ಯೋಪಾಧ್ಯಾಯರಿಂದಲಾಗಲೀ ಸಂಚಾಲಕರಾದ ಶ್ರೀ ಆರ್. ಜಿ. ಶಿವಶೆಟ್ಟಿಯವರಿಂದಲಾಗಲೀ ತಿಳಿಯಬಹುದೆಂದು ಸೂಚಿಸಲಾಗಿದೆ.

ರಾಜಪ್ರಮುಖರ ಹುದ್ದೆ ಈಗ ರದ್ದಾಗುವುದಿಲ್ಲ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯ

ರಾಜಪ್ರಮುಖತ್ವ ಮತ್ತು ರಾಜಧನವನ್ನು ರದ್ದುಮಾಡಬೇಕೆಂದೂ ಮತ್ತು ಸಿವಿಲ್ ನೌಕರರ ಸಂಬಳವನ್ನು ಕಡಿಮೆ ಮಾಡಬೇಕೆಂದೂ ಇಂದೂರಿನಲ್ಲಿ ಸೇರಿದ್ದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದ ಮುಂದೆ ಮಂಡಿಸಲಾದ ಎರಡು ಖಾಸಗೀ ನಿರ್ಣಯಗಳಿಗೆ ಬೆಂಬಲ ದೊರೆಯಲಿಲ್ಲ. ಅಧ್ಯಕ್ಷ ಪಂಡಿತ ನೆಹರೂರವರು ನಿರ್ಣಯವನ್ನು ಕುರಿತು ಮಾತನಾಡಿ ಆ ಎರಡು ಅಂಶಗಳೂ ಗಮನಾರ್ಹವಾದವಾದರೂ, ಆ ಬಗ್ಗೆ ಒಮ್ಮತವು ದೊರೆಯುವುದಿಲ್ಲವೆಂದು ಹೇಳಿದರು. ರಾಜ್ಯಾಂಗದ ನಿಯಮಗಳ ಪ್ರಕಾರ ರಾಜಪ್ರಮುಖತ್ವ ಮತ್ತು ರಾಜಧನದ ಬಗ್ಗೆ ನರೇಂದ್ರರಿಗೆ ಭರವಸೆಯನ್ನು ಕೊಡಲಾಗಿರುವುದರಿಂದ ಅವುಗಳನ್ನು ತ್ವರಿತವಾಗಿ ರದ್ದುಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಭಾರತವು ಈಗ ಇರುವ [illegible] ರಾಜಪ್ರಮುಖರ ಬಗ್ಗೆ ಈ ಉಗ್ರ ಕ್ರಮ ಜರುಗಿಸುವುದು, ಕಾಂಗ್ರೆಸ್ ಸಂಸ್ಥೆಗಳೇ, ಸರ್ಕಾರಗಳೇ [illegible] ವಲ್ಲವೆಂದ ಅಧ್ಯಕ್ಷ ನೆಹರೂರವರು ತಿಳಿಸಿದಮೇಲೆ ನಿರ್ಣಯವು ವಾಪಸು ತೆಗೆದುಕೊಳ್ಳಲ್ಪಟ್ಟಿತು.

ನೇತಾಜಿ ಬೋಸರ ಸಂಸಾರಕ್ಕೆ ೧॥ ಲಕ್ಷ ರೂ. ನಿಧಿ

ನೇತಾಜಿ ಸುಭಾಷ್ ಚಂದ್ರ ಬೋಸರ ಸಂಸಾರದವರ ಸಹಾಯಾರ್ಥವಾಗಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ೧॥ ಲಕ್ಷ ರೂ. ನಿಧಿಯನ್ನು ಕಳುಹಿಸಲು ನಿರ್ಧರಿಸಿರುವರು. ಸರ್ದಾರ್ ವಲ್ಲಭಾಯಿ ಪಟೇಲರು ಜೀವಂತರಾಗಿದ್ದಾಗ ಮೊಲ್ಲೊಂದು ನಿಧಿಯನ್ನು ಕೂಡಿಸಿ ಶ್ರೀ ಶರತ್ ಚಂದ್ರ ಬೋಸರಿಗೆ ಕಳುಹಿಸಿದ್ದರೆಂದು ಅವರು ಅದನ್ನು ತೆಗೆದು ಕೊಳ್ಳಲು ನಿರಾಕರಿಸಿದ್ದರು.

ಮೈಸೂರು ಪೇಟೆ ಧಾರಣೆ

ಪಲ್ಲಂಗಿ	ರೂ ಇಂದ	ರೂ
ನೆಲಗಡಲೆ	೧೩ ೦ ೦	೨೨ ೮
ಎಳ್ಳು	೫೦-೨-೦	೭೦-೧೦-
ಹುಚ್ಚೆಳ್ಳು	೫೪ ೩ ೦	
ಹರಳು ಬೀಜ	೫೨ ೦ ೦	೫೪-೪-
ಹುರುಳಿ	೨೩ ೧೦ ೮	೫೩-೧೫-
ಹೆಸರು	೬೧ ೨-೦	
ಹೊಂಗೇಬೀಜ	೨೩ ೪ ೦	
ಉದ್ದು	೭೫ ೧೨ ೦	೭೮ ೦
ಅವರೆ	೭೯-೧೦-೦	
ಹಲಸಂದೆ	೭೪-೨ ೦	೭೭-೨
ಮೆಣಸಿನಕಾಯಿ ಸಣ್ಣಗಿಡ್ಡೆ	೨೨ ೦ ೦	
ಮೆಣಸೇಲಮ್ಮು	೧ ೧೩ ೦	೬-೬-
ಸೀಗೇಕಾಯಿ	೫ ೩೦	
ಬೆಲ್ಲ	೩ ೪-೦	೪-೮
ತೆಂಗಿನಕಾಯಿ ೧೦೦೦ಕ್ಕೆ	೧೪೩ ೦ ೦	೨೦೪ ೦

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

SREE GANESHA
TALKIES
Gala Release of Columbia's
LORNA DOONE
In Glorious Technicolor
On 17-9-52
A Masterpiece of Edward
Small Production
An Immortal Classic of
Old England

ಚಾಮುಂಡೇಶ್ವರೀ ಟಾಕೀಸ್
18 9-52 ರಿಂದ ಅಮೋಘ ಪ್ರಾರಂಭ
ನೀಲಾ ಪ್ರೊಡಕ್ಷನ್ಸ್ ರವರ ಸಂಗೀತಮಯ ತಮಿಳು ಚಿತ್ರ
★ ಪ್ರಿಯಸಖಿ ★
ಭೂಮಿಕೆಯಲ್ಲಿ ಬಿ [illegible] ಸರೋಜ, ಕುಮಾರಿ, ರಾಮಸ್ವಾಮಿ, ನಂಬಿಯಾರ್ ಮುಂತಾದವರು

ಒಲಂಪಿಯಾ 18—9—52 ರಿಂದ ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಅಂತರ್ಜಗತ್ತಿನ ಜನರ ಮನ ಮೆಚ್ಚಿನ [illegible] ಸಹಾಯಕ ನಟ ಅಶೋಕ್ ಕುಮಾರ್ ನರ್ಗಿಸ್, [illegible] ಮತ್ತು [illegible] ಪಾತ್ರವಹಿಸಿರುವ [illegible] ರವರ
* ಫ್ರಾನಮ್ *
ಸಂಗೀತ ಶಂಕರ್ ಜೈಕಿಷನ್ ದಿಗ್ದರ್ಶನ ಎಂ ಸಾದಿಕ್

ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಿಂದ, ತಾ|| 2-9-1952

ಪ್ರಕಟಣೆ

ಈ ಕೆಳಗೆ ಕಂಡ ತಾರೀಖುಗಳಲ್ಲಿ ಈ ಜಿಲ್ಲೆಯಲ್ಲಿಯ ಅಪಯೋಗವಾದ ಗೋಣಿಚೀಲಗಳ ಹರಾಜು ನಡೆಯುತ್ತದೆ. ಇಷ್ಟವುಳ್ಳವರು ಹರಾಜಿನಲ್ಲಿ ಭಾಗವಹಿಸಬಹುದು.

	ಹರಾಜು ನಡೆಯುವ ಸ್ಥಳ	ಗೋಣಿಚೀಲಗಳ ಸಂಖ್ಯೆ	ತಾರೀಖು
1	ಗೌರ್ನಮೆಂಟ್ ಸೆಂಟ್ರಲ್ ಡಿಪೋ, ಮೈಸೂರು (ಮೈಸೂರು ಸಿಟಿ ಮಿಲ್ಲುಗಳಲ್ಲಿರುವ ಚೀಲ)	14,963	25 9 1952
2	ಗೌರ್ನಮೆಂಟ್ ಸೆಂಟ್ರಲ್ ಡಿಪೋ, ಮೈಸೂರು	1,120	1 10 1952
3	ಹೆಗ್ಗಡದೇವನಕೋಟೆ ತಾಲ್ಲೂಕು	6 632	3 10 1952
4	ಹುಣಸೂರು ತಾಲ್ಲೂಕು	725	6 10 1952
5	ಗುಂಡ್ಲುಪೇಟೆ ತಾಲ್ಲೂಕು	1 358	9 10 1952

ಹೆಚ್ಚಿನ ವಿವರಗಳನ್ನು ಆಯಾಯಾ ತಾಲ್ಲೂಕು ಕಛೇರಿಗಳಿಂದ ಪಡೆಯಬಹುದು.

(ಸಹಿ) ಕೆ. ಮಹಮದ್ ಅಹಮದ್,
ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ

Edited Printed and Published by A. R. Nagarajan at Sadhvi Press, D Subbiah Road Mysore

ದಸರಾ ಮಹೋತ್ಸವಕ್ಕಾಗಿ:— ಹೊಸ ಮಾದರಿಯ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ಟ್ ಸೀರೆಗಳೂ, ದಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ.
★ M. V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು ಮೈಸೂರು ಶ್ರೀ ಬಿ ಎ

ಟೆಲಿಫೋನ್ ನಂ 792 ||ವಂದೇ ಮಾತರಂ|| ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೭-೯-೧೯೫೨ [ಸಂಚಿಕೆ ೪೪

ಸಂಸ್ಥಾನದಲ್ಲಿ ನೆಹರೂ, ಕಿದ್ವಾಯರ ಪ್ರವಾಸ

ಅರಮನೆಯಲ್ಲಿ ನವರಾತ್ರಿ ಉತ್ಸವದ ಕಾರ್ಯಕ್ರಮ

೨೯ನೇ ತಾ|| ಸಂಜೆ ೪ ಘಂಟೆಗೆ ಜಂಬೂ ಸವಾರಿ

ಮೈಸೂರು ೧೭

ಬರುವ ೨೦ನೇ ತಾರೀಖಿನಿಂದ ಅರಮನೆಯಲ್ಲಿ ನಡೆಯುವ ದಸರಾ ಮಹೋತ್ಸವದ ಕಾರ್ಯಕ್ರಮಗಳು ಈ ಕೆಳಗೆ ಕಂಡಂತಿವೆ —

೨೦ ನೇ ತಾ|| ಶನಿವಾರ ಬೆಳಿಗ್ಗೆ ೧೧-೪೫ಕ್ಕೆ ಶ್ರೀಮನ್ಮಹಾರಾಜರವರು ಅರಮನೆ ಸಿಂಹಾಸನಾರೋಹಣ ಮಾಡಿಸುವರು ೧೨ ಘಂಟೆಗೆ ಸಿಂಹಾಸನಾರೋಹಣ. ಸರ್ಕಾರದ ವಿಶೇಷ ದರ್ಜೆ ಅಧಿಕಾರಿಗಳು ಮತ್ತು ಸರ್ದಾರರುಗಳಿಂದ ನಜರು. ಸಂಜೆ ೬ ಘಂಟೆಗೆ ಪಟ್ಟದ ಆನೆ ಮತ್ತು ಕುದುರೆಗಳು ಸೋಮೇಶ್ವರ ದೇವಸ್ಥಾನಕ್ಕೆ ಹೋಗುವುವು ೭ ಘಂಟೆಗೆ ರಾಜಸಭೆ ಸಿವಿಲ್ ಅಧಿಕಾರಿಗಳು ಮತ್ತು ಅರಸುಗಳಿಂದ ನಜರು

೨೧ ನೇ ತಾ|| ಭಾನುವಾರದಿಂದ ೨೭ ನೇ ತಾ|| ಶನಿವಾರದ ವರೆಗೆ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಪಟ್ಟದ ಆನೆ ಮತ್ತು ಕುದುರೆಗಳು ಸೋಮೇಶ್ವರ ದೇವಸ್ಥಾನಕ್ಕೆ ಹೋಗಿಬರುವುವು. ಪ್ರತಿದಿನ ಸಂಜೆ ೭ ಘಂಟೆಗೆ ರಾಜಸಭೆ ಮಿಲಿಟರಿ ಮತ್ತು ಪೋಲೀಸು ಅಧಿಕಾರಿಗಳು ಮತ್ತು ಇತರರಿಂದ ನಜರು

೨೮ ನೇ ತಾ|| ಭಾನುವಾರ ಬೆಳಿಗ್ಗೆ ೬ ಘಂಟೆಗೆ ಪಟ್ಟದ ಆನೆ ಮತ್ತು ಕುದುರೆಗಳು ಸೋಮೇಶ್ವರ ದೇವಸ್ಥಾನಕ್ಕೆ ಹೋಗಿಬರುವುವು ೭ ಘಂಟೆಗೆ ಆಯುಧ, ಆನೆ, ಕುದುರೆ ಮತ್ತು ವಾಹನಗಳ ಪೂಜೆ ಸಂಜೆ ೭ ಘಂಟೆಗೆ ರಾಜಸಭೆ

೨೯ ನೇ ತಾ|| ಸೋಮವಾರ ಬೆಳಿಗ್ಗೆ ೯ ಘಂಟೆಗೆ ಪಟ್ಟದ ಆನೆ ಮತ್ತು ಕುದುರೆಗಳು ಭುವನೇಶ್ವರಿ ದೇವಸ್ಥಾನಕ್ಕೆ ಹೋಗುವುವು ಮಧ್ಯಾಹ್ನ ೪ ಘಂಟೆಗೆ ಶ್ರೀಮನ್ಮಹಾರಾಜರವರ ಜಂಬೂ ಸವಾರಿಯು ಅರಮನೆಯಿಂದ ಹೊರಟು ಸಯ್ಯಾಜಿರಾವ್ ರಸ್ತೆಯಲ್ಲಿ ಬನ್ನಿಮಂಟಪಕ್ಕೆ ತೆರಳಿ, ಅದೇ ರಸ್ತೆಯಲ್ಲಿ ವಾಪಸು ಬರುವುದು

ಯಕ್ಷಗಾನ

ರಾಜಧಾನಿಯ ಶಿವರಾಂಪೇಟೆಯಲ್ಲಿರುವ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ೩ನೇ ಉತ್ಸವದ ಪ್ರಸಂಗದಲ್ಲಿ ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ ಸಂಜೆ ೭|| ಘಂಟೆಗೆ ಶ್ರೀ ಕೃಷ್ಣ ಪ್ರಸಾದ ಯಕ್ಷಗಾನ ಮಂಡಲಿಯವರಿಂದ ಭಕ್ತ ಸುಧನ್ವ ಕಾಳಗ ಎಂಬ ಯಕ್ಷಗಾನವು ಏರ್ಪಾಡಾಗಿದೆ.

ಶ್ರೀ ಕೃಷ್ಣ ಜಯಂತಿ ಸಂಗೀತ

ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಶ್ರೀ ಕೃಷ್ಣ ಜಯಂತಿ ಪ್ರಯುಕ್ತ ನಾಳೆ ಸಂಜೆ ವಿ|| ಆರ್ ಕೆ ರಾಮಸ್ವಾಮಿಯವರ ಸಂಗೀತವು ವಿ|| ಬಿ ಕೇಶವಮೂರ್ತಿಯವರ ಪಿಟೀಲು ಮತ್ತು ವಿ|| ಆರ್ ಟಿ ನಾಗಣ್ಣನವರ ಮೃದಂಗ ಮತ್ತು ಎಸ್ ಕೇಶವದಾಸರ ಖಂಜರಿಯೊಡನೆಯೂ, ನಾಳಿದ್ದು ಸಂಜೆ ೬||ಗೆ ವಿ|| ಸುಬ್ಬಕೃಷ್ಣಯ್ಯನವರ ಗಾಯನವು ವಿ|| ಬಿ ಕೇಶವಮೂರ್ತಿಯವರ ಪಿಟೀಲು ಮತ್ತು ಶ್ರೀ ಆರ್ ಟಿ. ನಾಗಣ್ಣನವರ ಮೃದಂಗದೊಡನೆಯೂ ನಡೆಯುವುವು

ಜಿಲ್ಲಾ ನ್ಯಾಯಾಧೀಶರ ವರ್ಗ

ಮೈಸೂರಿನ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ ಮುನಿಸ್ವಾಮಿಯವರನ್ನು ಬರುವ ತಿಂಗಳು ೬ ನೇ ತಾ|| ನಿಂದ ಶಿವಮೊಗ್ಗೆಯ ಅಡಿಷನಲ್ ಜಿಲ್ಲಾ ನ್ಯಾಯಾಧೀಶರಾಗಿ ವರ್ಗಾಯಿಸಲಾಗಿದೆ

ನಗರದಲ್ಲಿ ಐ. ಎನ್. ಟಿ. ಯು. ಸಿ. ಸಂಸ್ಥೆಯ ಅಧಿವೇಶನ

ಮೈಸೂರು ೧೭

ಅಖಿಲ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಸಾಧಾರಣ ಅಧಿವೇಶನವು ಇದೇ ೨೧ ನೇ ತಾ|| ನಗರದಲ್ಲಿ ನಡೆಯುವುದು. ನಗರದಲ್ಲಿರುವ ಸಂಸ್ಥೆಯ ಉಪಶಾಖೆಗಳ ಪ್ರತಿನಿಧಿಗಳ ಸಭೆಯು ನೆನ್ನೆ ಶ್ರೀ ಎಂ. ಮಾದಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಅಧಿವೇಶನವನ್ನು ವಿಜೃಂಭಣೆಯಿಂದ ನಡೆಸುವಂತೆ ತೀರ್ಮಾನಿಸಿ, ಈ ಬಗ್ಗೆ ಸೂಕ್ತ ಕೆಲಸ ಕಾರ್ಯಗಳನ್ನು ನಡಸಲು ಶ್ರೀಗಳಾದ ಟಿ ಎಸ್ ಸುಬ್ಬಣ್ಣ, ಎ ರಾಮಣ್ಣ, ಎಂ ಸಿ ವಗ್ಗಪ್ಪ, ಎಲ್ ರಾಮಯ್ಯ, ಎಂ. ಮಾದಯ್ಯ, ಮತ್ತು ಜಿ|| ಮಹಮದ್ ಖಾಸಿಂರವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು

ಸಿಂಹಾಸನ ತ್ಯಾಗಕ್ಕೆ ಕಾಶ್ಮೀರ ರಾಜರ ಒಪ್ಪಿಗೆ

ಕಾಶ್ಮೀರದ ರಾಜತ್ವವನ್ನು ತಮ್ಮ ಪುತ್ರ ಯುವರಾಜರಾದ ಕರಣಸಿಂಗ್ ರವರಿಗೆ ಪೂರ್ಣವಾಗಿ ಬಿಟ್ಟುಕೊಡಲು ಹರಿಸಿಂಗ್ ಮಹಾರಾಜರು ಒಪ್ಪಿರುವರೆಂದೂ, ಹಾಗೆ ಮಾಡುವಂತೆ ನೆಹರೂರವರು ಸಲಹೆ ಮಾಡಿದ್ದರೆಂದೂ ವರದಿಯಾಗಿದೆ

ತರುಣಿಯ ಕಣ್ಣಿನಲ್ಲಿ ಗರ್ಭ ಪಿಂಡ

ಟೋಕಿಯೋವಿನ ನೇತ್ರ ವೈದ್ಯರೊಬ್ಬರು ೧೯ ವರ್ಷದ ಕೊರಿಯಾ ಯುವತಿಯೊಬ್ಬಳ ಕಣ್ಣಿನ ಮೇಲೆ ಬೆಳೆದಿದ್ದ ಗ್ರಂಥಿಯೊಂದನ್ನು ಶಸ್ತ್ರ ಚಿಕಿತ್ಸೆ ಮಾಡಿ ತೆಗೆದಾಗ, ಅದು ಒಂದು ಗರ್ಭ ಪಿಂಡವಾಗಿದ್ದಿತೆಂದು ಗೊತ್ತಾಯಿತು. ಈ ಪಿಂಡವು ಯುವತಿಯ ಅವಳಿಯೆಂದೂ, ಆಕೆಯು ಹುಟ್ಟುವ ಮುಂಚೆ ಅದು ಆಕೆಯ ಕಣ್ಣಿನಲ್ಲಿ ಸೇರಿರಬೇಕೆಂದೂ ಊಹಿಸಲಾಗಿದೆ.

ಸೂಚನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ. —ವ್ಯವಸ್ಥಾಪಕ

ಸಂಸ್ಥಾನದ ಆಹಾರ ಪರಿಸ್ಥಿತಿ ಪರಿಶೀಲನೆಗೆ ನೆಹ್ರೂ ಮತ್ತು ಕಿದ್ವಾಯರ ಪ್ರವಾಸ

ಬೊಂಬಾಯಿಯ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಣೆ ನಡೆಸಿದಾಗ ನೆನ್ನೆ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು, ಮೈಸೂರು ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿಯನ್ನು ಖುದ್ದು ಪರಿಶೀಲಿಸಲು ಪ್ರಧಾನಿ ನೆಹರೂ ಮತ್ತು ಕೇಂದ್ರ ಆಹಾರ ಮಂತ್ರಿ ಕಿದ್ವಾಯರು ಶೀಘ್ರದಲ್ಲೇ ಸಂಸ್ಥಾನದಲ್ಲಿ ಪ್ರವಾಸ ಮಾಡಲಿರುವರೆಂದು ತಿಳಿಸಿದರು

ಕುದುರೆ ಜೂಜು ಮತ್ತು ಚಕ್ರಬಂಧ ಸ್ಪರ್ಧೆಗಳ ಸಮರ್ಥನೆ

ಬರುವ ವರ್ಷ ಸಂಸ್ಥಾನದ ಆಯವ್ಯಯದಲ್ಲಿ ೧ ಕೋಟಿ ರೂ ಕೊರತೆಬರುವುದೆಂದೂ, ಅದನ್ನು ಸರಿದೂಗಿಸಲು ಕುದುರೆ ಜೂಜು ಮತ್ತು ಚಕ್ರಬಂಧ ಸ್ಪರ್ಧೆಗಳ ಮೇಲಿನ ತೆರಿಗೆಗಳು ಬಹುಮಟ್ಟಿಗೆ ಸಹಕಾರಿಯಾಗುವುವೆಂದು ತಾವು ಆಶಿಸುವುದಾಗಿಯೂ ಅವರು ಹೇಳಿದರು ಕುದುರೆ ಜೂಜಿನಿಂದ ಮಾನವನ ಪತನವಾಗುವುದೆಂಬ ಅಭಿಪ್ರಾಯವನ್ನು ತಾವು ಒಪ್ಪುದಿಲ್ಲವೆಂತೂ ಅದಕ್ಕೆ ಬದಲಾಗಿ ಸಂಸ್ಥಾನದ ಆಯವ್ಯಯದ ಮೇಲೆ ಅದು ಉತ್ತೇಜನಕರವಾದ ಪರಿಣಾಮವನ್ನುಂಟುಮಾಡುವುದೆಂದೂ ಅವರು ಹೇಳಿದರು

ಪಾನ ನಿರೋಧದ ಬಗ್ಗೆ ನಿರ್ದಿಷ್ಟ ನೀತಿ ಅವಶ್ಯಕ

ಕೇಂದ್ರ ಸರ್ಕಾರದವರು ಪಾನ ನಿರೋಧದ ಬಗ್ಗೆ ನೀತಿಯನ್ನು ಸ್ಪಷ್ಟವಾಗಿ ನಿರೂಪಿಸಬೇಕೆಂದು ಅವರು ಹೇಳಿದರು ಈ ಕಾರ್ಯವನ್ನು ಸಾರ್ವತ್ರಿಕವಾಗಿಯೂ ಸಂಪೂರ್ಣವಾಗಿಯೂ ಜಾರಿ ಮಾಡಲಾಗದಿದ್ದರೆ ಅದನ್ನು ಬಿಟ್ಟುಬಿಡುವುದೇ ಸೂಕ್ತವೆಂಬುದು ಕಾಂಗ್ರೆಸ್ ವಲಯಗಳ ಅಭಿಪ್ರಾಯವೆಂದು ಅವರು ಸೂಚಿಸಿದರು

ಇಡೀ ಭರತಖಂಡಕ್ಕೆಲ್ಲಾ ಪಾನನಿರೋಧದ ಬಗ್ಗೆ ಒಂದೇ ನೀತಿ ಇರಬೇಕು, ಇಲ್ಲವೇ ಅದು ಸಂಪೂರ್ಣವಾಗಿ ರದ್ದಾಗಬೇಕು—ಎಂದು ಅವರು ಅಭಿಪ್ರಾಯಪಟ್ಟರು ಅರ್ಧಾಂಶದ ಪ್ರಯತ್ನಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ಅವರು ತಿಳಿಸಿದರು

ನಂಜನಗೂಡು ಬಳಿ ೬ ಜನ ದರೋಡೆಕೋರರ ಬಂಧನ

ನಂಜನಗೂಡು-ಗುಂಡ್ಲುಪೇಟೆ ರಸ್ತೆಯಲ್ಲಿ ಬಹುದಿನಗಳಿಂದ ಪ್ರಯಾಣಿಕರನ್ನು ಸುಲಿಯುತ್ತಿದ್ದರೆಂದು ಹೇಳಲಾದ ಕೊಡ್ಡಾಪುರ ಮತ್ತು ಎಲಚಕೆರೆಯ ಚಿಕ್ಕಮಾದ, ಕಿಂಚ, ಮಾದ, ರಾಚ, ರಂಗ, ಮೇಲ ಎಂಬುವರನ್ನು ಅವರ ಬಳಿ ಇದ್ದ ದೊಣ್ಣೆ, ಮಚ್ಚು, ಕೊಡಲಿ, ಪಿಕಾಸಿ, ಬ್ಯಾಟರಿ, ಲಾಂದ್ರಗಳ ಸಮೇತ ನಂಜನಗೂಡು ಪೋಲೀಸರು ಹೊಂಚು ಕಾಯ್ದು ಪ್ರಯಾಸದಿಂದ ದಸ್ತಗಿರಿ ಮಾಡಿರುವರು. ದರೋಡೆಕಾರರು ಗಾಡಿಹೊಡೆಯುತ್ತಿದ್ದ ಪುಟ್ಟಯ್ಯ ಎಂಬುವನ ಕಾಲುಗಳನ್ನು ಕತ್ತರಿಸಿ ಅವನ ಸಾಮಾನುಗಳನ್ನು ದೋಚಿದ್ದರೆಂದೂ ಹೇಳಲಾಗಿದೆ.

ಸೀರೆಗಾಗಿ ಮಗುವಿನ ಮಾರಾಟ

ತರೀಕೆರೆ ತಾಲ್ಲೂಕಿನ ತಿಮ್ಮಾಪುರದ ಕೂಲಿಕಾರ ಹನುಮಂತಪ್ಪ ಎಂಬುವನ ಪತ್ನಿ ಗೌರಮ್ಮನು ಬಾಣಾವರಕ್ಕೆ ತೆರಳಿ, ಅಲ್ಲಿ ಒಂದು ಸೀರೆಗಾಗಿ ತನ್ನ ೪ ತಿಂಗಳ ಗಂಡು ಮಗುವನ್ನು ಮಾರಿದಳೆಂದು ವದಂತಿಯಾಗಿದೆ.

ಮುಂದುವರಿಯುತ್ತಾ, ದೊಡ್ಡ ದೊಡ್ಡ ನಗರಗಳಲ್ಲಿ ಧಾರಾಳವಾಗಿ ಪರವಾನಗಿ ಕೊಟ್ಟು, ಮಧ್ಯಮ ವರ್ಗದವರ ಆರೋಗ್ಯಕ್ಕಾಗಿಯೂ, ಆನಂದಕ್ಕಾಗಿಯೂ ಮದ್ಯಪಾನ ಮಾಡಲು ಅವಕಾಶ ಕಲ್ಪಿಸಬಹುದೆಂದು ಅವರು ಸೂಚಿಸಿದರು

ಕನ್ನಡಕ್ಕಿಂತ ಇಂಗ್ಲಿಷಿಗೇ ಹೆಚ್ಚು ಪ್ರಾಶಸ್ತ್ಯ

ಶಿಕ್ಷಣ ಮಾಧ್ಯಮದ ವಿಚಾರವಾಗಿ ಮಾತನಾಡುತ್ತಾ, ಸಂಸ್ಥಾನದ ಜನರು ಕನ್ನಡಕ್ಕಿಂತ ಇಂಗ್ಲಿಷಿಗೇ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿರುವರೆಂದು ಅವರು ನುಡಿದರು ಅನೇಕ ಸಂಸ್ಥೆಗಳ ವಿದ್ಯಾರ್ಥಿಗಳು ಇದೇ ಮನೋಭಾವವನ್ನು ತೋರಿಸಿರುವುದಾಗಿಯೂ ಅವರು ಹೇಳಿದರು

ರಾಜಪ್ರಮುಖರ ರದ್ದಿನ ಪ್ರಶ್ನೆ

ರಾಜ ಪ್ರಮುಖರುಗಳನ್ನು ವಜಾ ಮಾಡುವ ಬಗ್ಗೆ ಅಭಿಪ್ರಾಯವನ್ನು ಕೇಳಲು ಶ್ರೀ ಹನುಮಂತಯ್ಯನವರು "ಮೈಸೂರಿನ ಮಟ್ಟಿಗೆ ಹೇಳುವುದಾದರೆ, ನಮ್ಮ ರಾಜಪ್ರಮುಖರು ನನಗೆ ಸ್ವಲ್ಪವೂ ತೊಂದರೆ ಕೊಡುತ್ತಿಲ್ಲ. ಅವರು ಒಬ್ಬ ಸಾಂಕುಶ ಪ್ರಭುವಿನಂತೆ ಪ್ರವರ್ತಿಸುತ್ತಿರುವರು ' ಎಂದು ನುಡಿದರು

ಕರ್ನಾಟಕದ ಏಕೀಕರಣದ ಬಗ್ಗೆ ತಾತ್ಸಾರ

ಕರ್ನಾಟಕ ಏಕೀಕರಣದ ಬಗ್ಗೆ ಸಂಸ್ಥಾನದ ಜನರಿಗೆ ಆಸಕ್ತಿಯಿರುವುದಿಲ್ಲವಾದುದರಿಂದ ಮೈಸೂರು ಸಂಸ್ಥಾನವು ಈ ವಿಷಯದಲ್ಲಿ ಕುತೂಹಲ ಹೊಂದಿರುವುದಿಲ್ಲವೆಂದು ಅವರು ನುಡಿದರು ಭಾಷಾವಾರು ಪ್ರಾಂತವು ಬಾರನಾಗಿಯೇ ಬಂದರೆ, ಬರಲಿ ಬಾರದಿದ್ದರೆ, ಅದಕ್ಕಾಗಿ ಆತಂಕಪಡುವುದಿಲ್ಲ- ಎಂಬುದೇ ಸಂಸ್ಥಾನದ ಪ್ರಜೆಗಳ ಮನೋಭಾವವಾಗಿರುತ್ತದೆ ಆದರೂ ಮೈಸೂರಿನವರಾಗಲಿ, ಅಲ್ಲಿನ ಸರ್ಕಾರದವರಾಗಲಿ ಭಾಷಾವಾರು ಪ್ರಾಂತ ರಚನೆಗೆ ವಿರೋಧವಾಗಿಲ್ಲ—ಎಂದು ಅವರು ತಿಳಿಸಿದರು.

ಸಂಸ್ಥಾನದಲ್ಲಿ ಧಾನ್ಯ ವಸೂಲಿ ಬಗ್ಗೆ ಹೊಸ ವಿಧಾನ

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸಭೆಯು ಕಳೆದ ಮಂಗಳವಾರ ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಧಾನ್ಯ ವಸೂಲಿ ಬಗ್ಗೆ ಸರ್ಕಾರದವರು ಜಾರಿಗೆ ತರಬೇಕೆಂದಿರುವ ಲೆವಿ ಪದ್ಧತಿಯ ಸೂತ್ರಗಳನ್ನು ಪರಿಶೀಲಿಸಲಾಯಿತು ಹಳೇ ನಾಲಾ ಅಚ್ಚುಕಟ್ಟಿನ ಬೈಲುಗಳಲ್ಲಿ ಎಕರೆ ಒಂದಕ್ಕೆ ೩ ಪಲ್ಲ, ಹೊಸ ನಾಲಾ ಅಚ್ಚುಕಟ್ಟಿನ ಬೈಲುಗಳಲ್ಲಿ ೧ ಪಲ್ಲ, ಭಾವಿ ಮತ್ತು ಕೆರೆ ಕೆಳಗಿನ ಜಮೀನುಗಳಲ್ಲಿ ಎಕರೆಗೆ ೨ ಪಲ್ಲದಂತೆ ಧಾನ್ಯ ವಸೂಲು ಮಾಡಬೇಕೆಂದು ಸೂಚಿಸಲಾಗಿದ್ದಿತು. ಖುಷ್ಕಿ ಜಮೀನುಗಳಲ್ಲಿ ಎಕರೆಗೆ ೧೦ ಸೇರು ರಾಗಿ ಅಥವಾ ಜೋಳವನ್ನು ವಸೂಲು ಮಾಡಬೇಕೆಂದು ಸೂಚಿಸಲಾಗಿದ್ದಿತು ಈ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಲಹೆ ಮಾಡುವಂತೆ ಸಭೆಯು ಶ್ರೀಗಳಾದ ಸಿದ್ದವೀರಪ್ಪ, ಕಡಿದಾಳ್ ಮಂಜಪ್ಪ, ವಿ ವೆಂಕಟಪ್ಪ, ಟಿ.ಮರಿಯಪ್ಪ, ಹೆಚ್ ಎಸ್. ರುದ್ರಪ್ಪ, ಒುಚ್ಚ ಮಾಸ್ತಿ ಗೌಡ, ಶಂಕರೇ ಗೌಡ, ಇವರುಗಳುಳ್ಳ ಸಮಿತಿಯನ್ನು ರಚಿಸಿತು

ಯುವಕರ ಸಾಂಸ್ಕೃತಿಕ ಸಂಘದ ಹೊಸ ಅಧಿಕಾರ ವರ್ಗ

ರಮಾವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದ ಸರ್ವ ಸದಸ್ಯರ ಸಭೆಯು ದಾಸಪ್ರಕಾಶ ಭವನದಲ್ಲಿ ಕಳೆದ ಶನಿವಾರ ನಡೆದು, ಸಂಘದ ೧೩ ನೇ ವಾರ್ಷಿಕೋತ್ಸವವನ್ನೂ, ಪ್ರಸಕ್ತ ಸಾಲಿನ ಅಧಿಕಾರ ವರ್ಗದ ಚುನಾವಣೆಯನ್ನೂ ನಡೆಸಲಾಯಿತು ಡಾ|| ಬಿ. ಎಂ ವೆಂಕಟದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು ಡಾ|| ಬಿ ಎಂ ವೆಂಕಟದಾಸಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಎಸ್. ನಾರಾಯಣ್, ಉಪಾಧ್ಯಕ್ಷರಾಗಿಯೂ, ಶ್ರೀ ಗಳಾದ ಎನ್ ಎಸ್ ವಿಶ್ವೇಶ್ವರ್ ಮತ್ತು ಜಿ ಚಿಕ್ಕಮಲ್ಲಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ದೇವರ ತೀರ್ಥವೆಂದು ಹೆಂಡದ ವಿನಿಯೋಗ

ಬೊಂಬಾಯಿಯ ಕಾಮಾಟಿಪುರದ ಒಂದು ಗುಡಿಯಲ್ಲಿ ಪೋಲೀಸರು ಶೋಧನೆ ನಡೆಸಲಾಗಿ ೩ ಸೀಸೆ ಮಾದಕ ದ್ರವ್ಯವು ದೊರೆಯಿತೆಂದೂ, ನಿತ್ಯವೂ ೭೦ ಭಕ್ತರು ಅಲ್ಲಿಗೆ ಹೋಗಿ ಪೂಜಾರಿ ಕೈಯಿಂದ ತೀರ್ಥದ ನೆಪದಲ್ಲಿ ಅದನ್ನು ಸೇವಿಸುತ್ತಿದ್ದರೆಂದೂ, ಆದ್ದರಿಂದ ಅನುಮಾನವು ಎಟ್ಟಿ ಪೋಲೀಸರು ಆ ಭಕ್ತನನ್ನು ದಸ್ತಗಿರಿ ಮಾಡಿರುವರೆಂದೂ ಹೇಳಲಾಗಿದೆ ಅಂದಿನಿಂದಲೂ ಪೂಜಾರಿಯು ಪತ್ತೆಯಿಲ್ಲ.

ಕೋಲಾರದಲ್ಲಿ ಕಾಡು ಎಲೆ ತಿಂದು ೪ ಜನರ ಮರಣ

ಕೋಲಾರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಆಹಾರವಿಲ್ಲದೆ ಸೊಪ್ಪು ಸದೆ ಮತ್ತು ಬೇರುಗಳನ್ನು ತಿಂದು ೪ ಜನರು ಮಡಿದರೆಂದು ವರದಿಯಾಗಿದೆ ಇನ್ನೂ ೯ ಜನರು ಇದೇ ರೀತಿ ಸಾಯುವ ಸ್ಥಿತಿಯಲ್ಲಿರುವರೆಂದು ಹೇಳಲಾಗಿದೆ

ವಿಶ್ವೇಶ್ವರಯ್ಯನವರ ವರ್ಧಂತಿ ದಿನಾಚರಣೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ೧೫ ನೇ ತಾ|| ಎಂ ವಿಶ್ವೇಶ್ವರಯ್ಯನವರ ವರ್ಧಂತಿ ದಿನಾಚರಣೆಯು ನೆರವೇರಿಸಲ್ಪಟ್ಟಿತು. ಶ್ರೀ ಕೆ ಎಸ್ ಬೋರೇಗೌಡರು ಅಧ್ಯಕ್ಷತೆ ವಹಿಸಿದ್ದರು, ಶ್ರೀ ಆರ್ ಕೆಣ್ಣನ್ ರವರು ಭಾಷಣ ಮಾಡಿ, ಸರ್ ಎಂ ವಿ ಯವರ ಜೀವನ ಚರಿತ್ರೆಯನ್ನು ವಿವರಿಸಿದರು. ಮಂತ್ರಿಗಳಾದ ಶ್ರೀ ಟಿ ಸಿದ್ದಲಿಂಗಯ್ಯನವರ ಪತ್ರಿಕಾ ಸಂದೇಶವನ್ನು ಓದಿ, ವಿಶ್ವೇಶ್ವರಯ್ಯನವರಿಗೆ ಯಶಸ್ಸನ್ನು ಕೋರಲಾಯಿತು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಚಿತ್ರಜಗತ್ತು ಮಧ್ಯಾಹ್ನ ೧ ೩೦ ಗಿಟಾರ್ ವಾದನ ೨ ಬಾಲಜಗತ್ತು ಮಕ್ಕಳ ಕಾರ್ಯಕ್ರಮ ಸಂಜೆ ೫ ೩೦ ಮತ್ತು ೭ ೩ ರಂಗರಾವ್ ಕೊಳಲು ೭ ೧೦ ನಾದಶ್ರೀ. ೭ ೩೦ ವನಿತಾವಿಹಾರ ಮಹಿಳೆಯರ ಕಾರ್ಯಕ್ರಮ. ೮ ಕಥಾ ಕಾಲಕ್ಷೇಪ. ೯ ೩೦ ಗಾನಸಾರಥಿ ೯.೪೫ ಆರ್ಕೆಸ್ಟ್ರಾ

ಬಿನ್ನವತ್ತಳೆ ಬದಲು ೮ ಕಾಸಿನ ಕಾರ್ಡು

ಹೆಚ್ಚು ವೆಚ್ಚ ತಗಲುವ ಪುಷ್ಪ ಮಾಲಿಕೆ ಮತ್ತು ಕಟ್ಟುಹಾಕಿಸಿದ ಬಿನ್ನವತ್ತಳೆಗಳನ್ನು ತಮಗೆ ಕೊಡುವುದರಬದಲು ಜನರು ತಮ್ಮಲ್ಲಿ ಪ್ರೀತಿಯನ್ನು ವ್ಯಕ್ತಪಡಿಸಲು ೮ ಕಾಸಿನ ಅಂಚೆ ಕಾರ್ಡನ್ನು ಕಳುಹಿಸಿದರೆ ಸಾಕೆಂದು ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಹೇಳಿರುತ್ತಾರೆ.

ಎರಡು ತಲೆ ಕರು

ರಾಮನಗರದ ತಾಲ್ಲೂಕಿನ ದಾಸೇಗೌಡನ ದೊಡ್ಡಲಿಂಗಯ್ಯನವರ ಮನೆಯಲ್ಲಿ ಒಂದು ಗಬ್ಬದ ಹಸುವು ವೇದನೆ ಪಡುತ್ತಿರಲು, ಪಶು ವೈದ್ಯ ಶಾಲೆಯವರು ಶ್ರಮಪಟ್ಟು ಅದರ ಹೊಟ್ಟೆಯಿಂದ ಕರುವನ್ನು ತೆಗೆದರೆಂದೂ,ಅದಕ್ಕೆ ಎರಡು ತಲೆಗಳಿದ್ದುವೆಂದೂ ಗೊತ್ತಾಗಿದೆ

ಚಾಮರಾಜನಗರದ ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ

ಚಾಮರಾಜನಗರದ ಟವನ್ನಿನ ಕೆ. ಎಂ ಪಿ ಪಕ್ಷದ ಆಶ್ರಯದಲ್ಲಿ ಕಳೆದ ಭಾನುವಾರ ಬಹಿರಂಗ ಸಭೆಯೊಂದು ನಡೆದು ಆ ತಾಲ್ಲೂಕಿನ ಕ್ಷಾಮ ಪರಿಸ್ಥಿತಿಯ ಬಗ್ಗೆ ಭಾಷಣಗಳಾದುವು ಹಿರಿಯ ಶಾಸನ ಸಭಾ ಸದಸ್ಯರಾದ ಆರ್. ಪಿ. ರೇವಣ್ಣನವರು ತಮ್ಮ ಭಾಷಣದಲ್ಲಿ ಮೈಸೂರು ಜಿಲ್ಲೆಯ ಪರಿಸ್ಥಿತಿ ಬಗ್ಗೆ ಸರ್ಕಾರದವರು ಔದಾಸೀನ್ಯ ಮನೋಭಾವವನ್ನು ಹೊಂದಿರುವರೆಂದು ಟೀಕಿಸಿದರು ಕೂಡಲೇ ಈ ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾರ್ಯವನ್ನು ಕೈಗೊಳ್ಳಬೇಕೆಂದು ಸೂಚಿಸಿದರು ಕಿರಿಯ ಶಾಸನ ಸಭಾ ಸದಸ್ಯರಾದ ಶ್ರೀ ಯು. ಎಂ. ಮಾದಪ್ಪನವರು ಮಾತನಾಡಿ, ಜನರ ತೊಂದರೆಗಳನ್ನು ವಿವರಿಸಿದರು

ಖಾದಿ ಸ್ಪರ್ಧೆಗಳು

ಬರುವ ತಿಂಗಳು ೨ ನೇ ತಾ|| ನಿಂದ ೮ ನೇ ತಾ|| ನ ವರೆಗೆ ೧ ವಾರ ನಡೆಯುವ ಗಾಂಧಿ ಜಯಂತಿ ಕಾಲದಲ್ಲಿ ಮೈಸೂರು ಚರಖಾ ಪ್ರಚಾರ ಸಂಘದವರು ನೂಲುವುದು, ಹಂಜಿ ಮಾಡುವುದು ಮತ್ತು ನೇಯುವ ಸ್ಪರ್ಧೆಗಳನ್ನು ನಡೆಸಲು ನಿರ್ಧರಿಸಿರುತ್ತಾರೆ ಇದಕ್ಕಾಗಿ ಸರ್ಕಾರದ ಖಾದಿ ಸಮಿತಿಯವರು ೧|| ಸಾವಿರ ರೂ. ಗಳನ್ನು ಕೊಟ್ಟಿರುತ್ತಾರೆ. ಸ್ಪರ್ಧೆಗಳು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರುಪುರದಲ್ಲಿ ನಡೆಯುವುವು. ವೇಗವಾಗಿ ನೂಲುವುದು, ಹಂಜಿಯನ್ನು ಸ್ವತಃ ಮಾಡಿ ನೂಲುವುದು, ತೆಳುವಾಗಿ ನೂಲುವುದು, ತಕಲಿಯಿಂದ ವೇಗವಾಗಿ ದಾರ ತೆಗೆಯುವುದು, ಹತ್ತಿ ಅರೆಯುವುದು, ಹಂಜಿ ಮಾಡುವುದು, ಕೈಮಗ್ಗ ಮತ್ತು ಪಟಲ್ ಮಗ್ಗಗಳಲ್ಲಿ ನೇಯುವುದು ಈ ಬಗ್ಗೆ ಸ್ಪರ್ಧೆಗಳಾಗುವುವು. ಇದರಲ್ಲಿ ಭಾಗವಹಿಸುವವರು ಮೊದಲೇ ತಿಳಿಸಬೇಕು ಸಂಘದವರು ಸೂಚಿಸಿರುವ ಕನಿಷ್ಠ ವೇಗ ಇದ್ದವರಿಗೆ ಪ್ರಯಾಣದ ವೆಚ್ಚವನ್ನು ಕೊಡಲಾಗುವುದು ಸ್ಪರ್ಧೆ ನಿಯಮಗಳನ್ನು ಎಲ್ಲ ಖಾದಿ ಭಂಡಾರಗಳಿಗೂ ಕಳುಹಿಸಲಾಗಿದೆ ಅಕ್ಟೋಬರ್ ೩ ನೇ ತಾ|| ನಡೆಯುತ್ತಿರುವ ನೂಲುವ ಸ್ಪರ್ಧೆಗಳನ್ನು ಏರ್ಪಡಿಸಬಹುದಾಗಿದೆ

SREE GANESHA
TALKIES
From 19-9-52
M G M's
THE PIRATE
(Technicolour)
Featuring – Judy Garland & Gene Kelly.

ಒಲಂಪಿಯಾ 卐 18—9—52 ರಿಂದ ಅನೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಲಕ್ಷಾಂತರ ಜನರ ಮನ ಮೆಚ್ಚಿನ ತಾರೆ ಕಾಮಿನಿಕೌಶಲ್, ಸಹಾಯಕ ನಟ ಅಶೋಕ್ ಕುಮಾರ್ ಸಜ್ಜನ್, ಆಶಾ ಮಥುರ್, ಬೇಬಿ ಚಂದ್ರಮಾ ಮತ್ತು ಓಂ ಪ್ರಕಾಶ್ ಪಾತ್ರವಹಿಸಿರುವ ಕೆ ಅಮರನಾಥರವರ
* ಪೂನಮ್ *
ಸಂಗೀತ. ಶಂಕರ್ ಜೈಕಿಷನ್ . ದಿಗ್ದರ್ಶನ : ಎಂ ಸಾದಿಕ್
ಪ್ರತಿದಿನ 10-30ಕ್ಕೆ ದಿಲೀಪ್ ಕುಮಾರ್ ಪಾತ್ರವಹಿಸಿರುವ ಷಬ್‌ನಂ

ಪರಿಶುದ್ಧವಾದ ಮತ್ತು ಉತ್ತಮವಾದ ಕಾಫಿ ಬೇಕಾದಲ್ಲಿ
ಶ್ರೀ ಚಾಮುಂಡೇಶ್ವರಿ ಭವನ
(ಭೋಜನ ಮತ್ತು ವಸತಿ ಗೃಹ, ಮತ್ತು ಫಲಾಹಾರ ಮಂದಿರ, ಇರ್ವಿನ್ ರಸ್ತೆ, ಮೈಸೂರು)
ಇಲ್ಲಿಗೆ ಭೇಟಿ ಕೊಡಲು ಮರೆಯದಿರಿ
ನಮ್ಮ ಪರಿಶುದ್ಧವಾದ ಮತ್ತು ಶ್ರೇಷ್ಠತಮ ರುಚಿಯನ್ನುಳ್ಳ
ಪ್ಲಾಂಟೇಷನ್ 'ಎ' ಕಾಫಿಯನ್ನು ಸೇವಿಸಿ ಆನಂದಿಸಿರಿ
★ ಅಪ್ಪಟ ತುಪ್ಪದಿಂದ ತಯಾರಾದ ಸಿಹಿ ತಿಂಡಿಗಳು ಮತ್ತು
★ ರುಚಿಯಾದ ಮತ್ತು ತೃಪ್ತಿಕರವಾದ
ಊಟಗಳನ್ನು ಸವಿದು ನೋಡಿ
ಪೋರ್ಟೆಬಲ್ ರೆಮಿಂಗ್ಟನ್ ಟೈಪ್‌ರೈಟರುಗಳು
ರೆಡಿ ಸ್ಟಾಕಿನಿಂದ ದೊರೆಯುತ್ತವೆ
ಸಿ. ಬಿ. ಜನರಲ್ ಸ್ಟೋರ್ಸ್ :: ಇರ್ವಿನ್ ರಸ್ತೆ, ಮೈಸೂರು

ಪ್ರಭುದೇವಾ ಟಾಕೀಸ್
ಮೈಸೂರು
20—9—52 ನೇ : ಶನಿವಾರದಿಂದ ಅನೋಘ 2ನೇ ವಾರ
ಪ್ರತಿ ದಿನ 3 ಆಟಗಳು
• ಭೂ ಕೈಲಾಸ •
(ತೆಲುಗು)
ಪಾತ್ರ - ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮಿಬಾಯಿ ಮತ್ತು ಇತರರು

Edited. Printed and Published by A R. Nagarajan. at Sadhvi Press. D. Subbiah Road Mysore

ದಸರಾ ಮಹೋತ್ಸವಕ್ಕಾಗಿ :— ಹೊಸ ಮಾದರಿಯ, ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ಣಿ ಸೀರೆಗಳೂ, ದಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ ★ M. V. ಭೋಜಯ್ಯ ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು ಬಿ ಎ

ಟೆಲಿಫೋನ್ ನಂ. 792 ||ವಂದೇ ಮಾತರಂ|| ಒಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೦-೯-೧೯೫೦ [ಸಂಚಿಕೆ ೪೬

ಮಾಜಿ ಹೈದರಾಬಾದ್ – ಮಂತ್ರಿಗಳ ಪರಾರಿ –

ಆಕ್ರಮ ಸೇಂದಿ ಮಾರಾಟಕ್ಕಾಗಿ ಶಿಕ್ಷೆ

ಮೈಸೂರು ೨೦

ಶ್ರೀರಂಗಪಟ್ಟಣದ ತಾಲ್ಲೂಕು ಬೆಳಗೊಳ ದ ಬಳಿ ಕುಳಿಲು ಹನದಲ್ಲಿ ಮಂಡ್ಯ ಮತ್ತು ನಂಜನಗೂಡು ತಾಲ್ಲೂಕು ಸೇಂದಿ ಅಂಗಡಿಗಳಿ ಗಾಗಿ ಇಳಿಸಲಾಗುತ್ತಿದ್ದ ಸೇಂದಿಯನ್ನು ಇ ಲ್ಲಿನ ಅಬಕಾರಿ ಅಧಿಕಾರಿಗಳು ಕಾಶ, ರಾಮು, ಕನ್ನಯ್ಯ, ಸಿದ್ದ ಮತ್ತು ಚಿಕ್ಕಣ್ಣ ಎಂ ಬುವರು, ಸುಮಾರು ಎರಡು ತಿಂಗಳಿಂದ ಅಕ್ರಮವಾಗಿ ರಾಜಧಾನಿಗೆ ತಂದು ಮಾರುತ್ತಿದ್ದರೆಂದು, ನಗರದ ಆ ಚಾರ್ಜ್ ಇನ್ಸ್‌ಪೆಕ್ಟರ್ ಶ್ರೀ ಬಾಸಿಲ್ ಹರೀಕ್ಷರವರು ಅನ್ನ ಮೇಲ್ಕಂಡವರನ್ನು ಬಂಧಿಸಿ ನಗರದ ಎರಡನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ಮಾಡಿದ್ದರು. ಅಪರಾಧಿಗಳಿಗೆ ತ ಲಾ ೬ ತಿಂಗಳು ಕಠಿಣ ಸಜಾ ಮತ್ತು ೨೦ ೦ ಜುಲ್ಮಾನೆ ವಿಧಿಸಲಾಗಿದೆ.

ದಕ್ಷಿಣ ಆಫ್ರಿಕಕ್ಕೆ ಸಖಿ ದಾದಾಬಾ

ಭಾರತದ ವನ ಮೃಗಗಳ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಶ್ರೀಮನ್ ಮ ಹಾರಾಜರೊಡನೆ ಚಿಕ್ಕಮಗಳೂರಿನ ಜಿ ಲ್ಲಾಧಿಕಾರಿಗಳಾಗಿರುವ ಶ್ರೀ ಸಖಿ ದಾ ದಾಭಾರವರು ನಿಯೋಗದ ಮೇಲೆ ದ ಕ್ಷಿಣ ಆಫ್ರಿಕಕ್ಕೆ ತೆರಳಿ, ಅಲ್ಲಿ ವನ ಮೃ ಗಗಳನ್ನು ಕಾಪಾಡುವ ಬಗ್ಗೆ ಕ್ರಮಗಳ ನ್ನು ಪರಿಶೀಲಿಸುವರೆಂದು ಹೇಳಲಾಗಿದೆ.

ಸಂಸ್ಥಾನದ ಅಭಾವ ಪರಿಹಾರ ಕಮಿಷನರ್

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕೈಗೊಳ್ಳಲು ಸರ್ಕಾರದವರು ಒಬ್ಬ ಪ್ರತ್ಯೇಕ ಅಧಿಕಾರಿಯು ಅವಶ್ಯಕ ವೆಂದು ಭಾವಿಸಿ, ಕೋಲಾರದ ಜಿಲ್ಲಾಧಿ ಕಾರಿಗಳಾದ ಶ್ರೀ ಕೆ. ಪಿ. ರಾಮನಾಥ ಯ್ಯರವರನ್ನು ಅಭಾವ ಪರಿಹಾರದ ಕ ಮಿಷನರ್ ಆಗಿ ನೇಮಿಸಿರುತ್ತಾರೆ.

ವಸ್ತು ಪ್ರದರ್ಶನದಲ್ಲಿ ಧ್ವಜಾರೋಹಣ

ದಸರಾ ವಸ್ತುಪ್ರದರ್ಶನದ ಅಂಗವಾ ಗಿ ಜೀವನರಾಯನ ಕಟ್ಟೆಯಲ್ಲಿ ಈ ಬೆಳಿ ಗ್ಗೆ ಸೌಂಸಭಾಧ್ಯಕ್ಷರಾದ ಶ್ರೀ ಎ ಕೃಷ್ಣ ಮೂರ್ತಿರಾಯರು ರಾಷ್ಟ್ರಧ್ವಜಾರೋಹ ಣ ಸಮಾರಂಭವನ್ನು ನೆರವೇರಿಸಿದರು. ಈ ಸಂಬಂಧವಾಗಿ ನಡೆಯು ವ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶ ನದ ಕಾರ್ಯದರ್ಶಿಗಳಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟಿಯವರು ಮತ್ತು ಶ್ರೀ ಪಿ ಎಸ್. ಕೃಷ್ಣಯ್ಯಂಗಾರ್ ರವರು ಪತ್ರಿಕಾ ಪ್ರತಿನಿಧಿಗಳಿಗೆ ಮೊನ್ನೆ ವಿವರ ಣಾತ್ಮಕ ಹೇಳಿಕೆಯನ್ನಿತ್ತರು. ಪಶ್ಚಿಮ ಬಂಗಾಳ, ಒರಿಸ್ಸಾ ಮತ್ತು ಮೈಸೂರು ಸರ್ಕಾರದವರು ವಸ್ತುಪ್ರದರ್ಶನದಲ್ಲಿ ಭಾಗವಹಿಸುವರೆಂದೂ, ಜಪಾನಿನಿಂದ ಸಂಸ್ಥಾನಕ್ಕೆ ಬಂದಿರುವ ಸುಮಾರು ೧೫ ಸಾವಿರ ರೂ. ಬೆಲೆಯ ಪದಾರ್ಥಗಳನ್ನು ಪ್ರದರ್ಶಿಸಲು ಮೈಸೂರು ಸರ್ಕಾರದವ ರು ಮುಂದೆ ಬಂದಿರುವರೆಂದೂ, ಅನೇಕ ಕಲಾ ಸಂಘಗಳು ಚಿತ್ರಗಳನ್ನು ಪ್ರದ ರ್ಶಿಸಲಿವೆಯೆಂದೂ ಅವರು ತಿಳಿಸಿದರು ಪ್ರದರ್ಶನದ ಮಹಿಳಾ ವಿಭಾಗದಲ್ಲಿ ಅ ಸ್ಪೃಶ್ಯರ ಕ್ಯಾಂಟೀನ್ ಅನ್ನು ತೆರೆಯ ಲಾಗುವುದು. ಜೀವನರಾಯನ ಕಟ್ಟೆ ಯಲ್ಲಿ ಮನರಂಜನೆ, ಆಟಪಾಟ ಇವು ಗಳನ್ನು ಏರ್ಪಡಿಸಲಾಗುವುದು ವಿಮಾ ನಪ್ರಯಾಣವನ್ನು ಇಡಲಾಗುವುದು—ಎಂದು ಅವರು ಹೇಳಿರುತ್ತಾರೆ.

ಸ್ಕೌಟ್ ಸಂಸ್ಥೆಗೆ ೫೦ ಸಾವಿರ ರೂ. ಗ್ರಾಂಟು

ಬೆಂಗಳೂರು ೨೦

ಸಂಸ್ಥಾನದಲ್ಲಿ ಸ್ಕೌಟ್ ಸಂಸ್ಥೆಯ ಸ ಹಾಯಾರ್ಥವಾಗಿ ಸರ್ಕಾರದವರು ಹಿಂ ದಿನ ವರ್ಷಗಳಲ್ಲಿ ಕೊಡುತ್ತಿದ್ದ ೫೦ ಸಾ ವಿರ ರೂಪಾಯಿನ ಗ್ರಾಂಟನ್ನು ಈ ವರ್ಷ ೨೫ ಸಾವಿರರೂ ಗೆ ಇಳಿಸಿದ್ದರಷ್ಟೆ ಈಗ ಅದನ್ನು ಪುನಃ ೫೦,೦೦೦ ರೂ.ಗಳಿಗೆ ಹೆಚ್ಚಿ ಸಿರುವುದಾಗಿ ಮುಖ್ಯಮಂತ್ರಿ ಹನುಮಂ ತಯ್ಯನವರು ನೆನ್ನೆ ಕೆಂಗಲ್ಲಿನಲ್ಲಿ ನಡೆದ ಸ್ಕೌಟ್ ಸಮಾರಂಭದಲ್ಲಿ ತಿಳಿಸಿದರು. ತಮ್ಮ ಕಾರ್ಯಶ್ರದ್ಧೆ ಮತ್ತು ಸೇವಾಸ ಕ್ತಿಗಳಿಂದ ಸ್ಕೌಟುಗಳು ಬರುವ ವರ್ಷ ಹೆಚ್ಚಿನ ಗ್ರಾಂಟಿಗೆ ಅರ್ಹರಾಗಿರುವರೆಂ ಬುದನ್ನು ತೋರ್ಪಡಿಸಬೇಕೆಂದೂ ಇಲ್ಲ ವಾದಲ್ಲಿ ಇದೇ ಗ್ರಾಂಟನ್ನೇ ರದ್ದು ಮಾ ಡುವುದಾಗಿಯೂ ಸಹ ಶ್ರೀ ಹನುಮಂ ತಯ್ಯನವರು ಎಚ್ಚರಿಸಿದರು

ಬರುವ ವರ್ಷದಿಂದ ರಾಜ ಸಭೆ ಪ್ರಶಸ್ತಿಗಳು

ದಸರಾ ಮಹೋತ್ಸವ ಕಾಲದ ರಾಜ ಸಭೆಯಲ್ಲಿ ಸಾಹಿತ್ಯ, ಕಲೆ ಮುಂತಾದ ವಿಷಯಗಳ ಪ್ರವೀಣರನ್ನು ಸನ್ಮಾನಿಸ ಲು ಪ್ರಶಸ್ತಿಗಳನ್ನು ಕೊಡುವ ಏರ್ಪಾ ಡು ಮುಂದಿನ ವರ್ಷದ ದಸರಾ ಹಬ್ಬದ ಲ್ಲಿ ಜಗಲಿರುವುದೆಂದೂ, ಅದಕ್ಕೆ ಈ ವರ್ಷ ಕಾಲಾವಕಾಶವಾಗಲಿಲ್ಲವೆಂದೂ ತಿಳಿಸ ಲಾಗಿದೆ

ಮೈಸೂರಿಗೆ ಕೇಂದ್ರದಿಂದ ೬೦ ಲಕ್ಷ ರೂ.

ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಆ ಹಾರ ಬೆಳೆ ತೆಗೆಯಲು ೬೦ ಲಕ್ಷ ರೂ ಸಹಾಯವನ್ನು ಕೊಡಲು ಭಾರತ ಸರ ಕಾರದವರು ನಿರ್ಧರಿಸಿರುವರೆಂದು ತಿಳಿ ಮುಬಂದಿದೆ

ಉಪ್ಪಿನ ಮೇಲೆ ತೆರಿಗೆ

ಶೀಘ್ರದಲ್ಲೇ ಉಪ್ಪಿನ ಮೇಲೆ ತೆರಿಗೆ ಯನ್ನು ವಿಧಿಸಲಾಗುವುದೆಂಗು ಕೇಂದ್ರ ಉತ್ಪಾದನಾ ಮಂತ್ರಿ ಕೆ ಸಿ. ರೆಡ್ಡಿಯ ವರು ತಿಳಿಸಿರುತ್ತಾರೆ ಖಾಸಗಿಯಾಗಿ ತ ಯಾರಾಗುವ ಉಪ್ಪಿಗೆ ಮಣಕ್ಕೆ ೩ ಆ ಣೆಯಂತೆಯೂ, ಸರ್ಕಾರಿ ಕಾರ್ಖಾನೆಯ ಲ್ಲಿ ತಯಾರಾಗುವುದಕ್ಕೆ ೩|| ಆಣೆಯಂತೆ ಯೂ ಸೆಸ್ಸನ್ನು ಹಾಕಲಾಗುವುದು.

ಶ್ರೀಮನ್ ಮಹಾರಾಜರಿಂದ ಸಿಂಹಾಸನಾರೋಹಣ

ಅರಮನೆಯಲ್ಲಿ ಸಮಾರಂಭ

ಮೈಸೂರು ೨೦

ನವರಾತ್ರಿಯ ಉತ್ಸವವು ಇಂದು ಇ ಲ್ಲಿನ ಅರಮನೆಯಲ್ಲಿ ಆರಂಭವಾಯಿತು ಈ ಬೆಳಗ್ಗೆ ಶ್ರೀಮನ್ ಮಹಾರಾಜರು ಸಿಂಹಾಸನದ ಪೂಜೆಯನ್ನು ಶಾಸ್ತ್ರೋ ಕ್ತವಾಗಿ ನೆರವೇರಿಸಿ. ೧೧ ಗಂಟೆಗೆ ಸರಿ ಯಾಗಿ ಸಿಂಹಾಸನಾರೋಹಣವನ್ನು ಮಾಡಿದರು ಅರಮನೆ ಬತೇರಿಯಿಂದ ೨೧ ಕುಶಾಲ ತೋಪುಗಳನ್ನು ಹಾರಿಸ ಲಾಯಿತು ಸೇನಾದಳದವರು ಪ್ರಭುಗ ಳಿಗೆ ಗೌರವವನ್ನು ಸೂಚಿಸಿದರು

ದೇವಾಲಯ ಮತ್ತು ಮಠಗಳಿಂದ ಬಂದ ಫಲ ಮಂತ್ರಾಕ್ಷತೆಗಳನ್ನು ಶ್ರೀ ಮನ್ ಮಹಾರಾಜರಿಗೆ ಅರ್ಪಿಸಲಾಯಿ ತು ವೈದಿಕರುಗಳು ಫಲ ಮಂತ್ರಾಕ್ಷತೆಗ ಳನ್ನು ಒಪ್ಪಿಸಿದರು ನಂತರ ಶ್ರೇಷ್ಠ ನ್ಯಾ ಯಾಧೀಶರಾದ ಶ್ರೀ ಪಿ ಮೇದಪ್ಪ, ಹಿ ರಿಯ ಮತ್ತು ಕಿರಿಯ ಶಾಸನ ಸಭೆ ಗಳ ಅಧ್ಯಕ್ಷರುಗಳಾದ ಶ್ರೀಗಳು ಕೆ. ಟಿ ಭಾಷ್ಯಂ ಮತ್ತು ಹೆಚ್. ಸಿದ್ದಯ್ಯನವರು ಕ್ರಮಶಃ ನಜರನ್ನು ಒಪ್ಪಿಸಿದರು. ಇತರ ವಿಶೇಷ ಅಧಿಕಾರಿಗಳು ಮತ್ತು ಸ ರದಾರರುಗಳಿಂದ ನಜರು ಆಯಿತು

ಸಿಂಹಾಸನದ ಎಡಭಾಗದಲ್ಲಿ ವಿಶೇಷ ಸಿವಿಲ್ ಅಧಿಕಾರಿಗಳೂ, ಸರದಾರರೂ, ಬಲ ಭಾಗದಲ್ಲಿ ಇತರ ಆಹ್ವಾನಿತರೂ ಕುಳಿತಿದ್ದರು. ಎಲ್ಲರಿಗೂ ಆಸನಕ್ಕಾಗಿ ಟಿಕೆಟುಗಳನ್ನು ಹಾಕಲಾಗಿದ್ದಿತು. ಸಂ ಸ್ಥಾನದ ಮಂತ್ರಿಗಳು, ಶ್ರೇಷ್ಠ ನ್ಯಾ ಯಾಧೀಶರು, ಶಾಸನ ಸಭಾಧ್ಯಕ್ಷರುಗ ಳು ವಿಶೇಷ ಅಲಂಕೃತ ಆಸನಗಳ ಮೇ ಲೆ ಸಿಂಹಾಸನದ ಬಲ ಭಾಗದಲ್ಲಿ ಪೂ ರ್ವಾಭಿಮುಖವಾಗಿ ಮಂಡಿಸಿದ್ದರು ಇ ದು ವಿನಹ ಹಳೆಯ ದರ್ಬಾರಿಗೂ, ಇ ದಕ್ಕೂ ಯಾವ ವ್ಯತ್ಯಾಸವೂ ಇರಲಿಲ್ಲ ಪತ್ರಿಕಾ ಪ್ರತಿನಿಧಿಗಳಿಗೂ ಇದೇ ಮೊದ ಲಾಗಿ ಅರಮನೆಯ ಈ ಸಮಾರಂಭಕ್ಕೆ ಆಹ್ವಾನವು ಬಂದಿದ್ದಿತು. ನಜರು ಒಪ್ಪಿ ಸುವುದನ್ನು ಆಹ್ವಾನಿತರ ಇಚ್ಛೆಗೆ ಬಿಡ ಲಾಗಿದೆ

○ ಅರಮನೆಯ ಗಜಶಾಲೆಗೆ ಸೇರಿರುವ ವೀರಭದ್ರ ಎಂಬ ಆನೆಯು ಈ ಸಲ ಜಂಬೂ ಸವಾರಿ ಕಾಲದಲ್ಲಿ ಅಂಬಾರಿ ಯನ್ನು ಹೊರುವುದು.

ಹೈದರಾಬಾದಿನ ಮಾಜಿ ಮಂತ್ರಿಗಳ ಪಲಾಯನ

ಮೀರ್ ಲಾಯಿಕ್ ಅಲಿಯವರು ಹೈ ದರಾಬಾದಿನ ಮುಖ್ಯಮಂತ್ರಿಗಳಾಗಿದ್ದಾ ಗ ಅಲ್ಲಿ ಸಚಿವರಾಗಿದ್ದ ಅಬ್ದುಲ್ ರಹೀಂ, ಮೊಯಿನ್ ಜುಬೇರಿ ಮತ್ತು ಅಬ್ದುಲ್ ರವೂಫ್ ರವರು ಈಗ ಪಾಕಿಸ್ತಾನಕ್ಕೆ ಪ ರಾರಿಯಾಗಿರುವರೆಂದು ವರದಿಯಾಗಿದೆ. ಹೈದರಾಬಾದಿನಲ್ಲಿ ಪೋಲೀಸು ಕಾರ್ಯಾ ಚರಣೆಯ ನಂತರ ಅವರುಗಳನ್ನು ದಸ್ತ ಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ಹೂಡಲಾಗಿದ್ದಿತು ಕಳೆದ ವರ್ಷ ಮೊಕ ದ್ದಮೆಗಳನ್ನು ವಾಪಸು ತೆಗೆದುಕೊಂಡು ಅವರನ್ನು ಬಿಡುಗಡೆ ಮಾಡಲಾಗಿದ್ದಿತು ಇತ್ತೀಚೆಗೆ ನಡೆದ ಹೈದರಾಬಾದೀಶರ ವಿರುದ್ಧವಾದ ಚಳುವಳಿಯಲ್ಲಿ ಇವರುಗ ಳ ಕೈವಾಡವಿದ್ದಿತೆಂದು ಹೇಳಲಾಗಿದೆ. ಈ ಮೂವರೂ ತಮ್ಮ ಬಿಡುಗಡೆಯ ನಂ ತರ ಹೈಕೋರ್ಟ್ ವಕೀಲರಾಗಿ ದಾಖ ಲಾಗಿದ್ದರು.

ಶಿವಮೊಗ್ಗಾ ಜಿಲ್ಲೆಯಲ್ಲಿ ಭೂಕಂಪ

ಶಿವಮೊಗ್ಗೆಗೆ ೪೫ ಮೈಲಿ ದೂರದಲ್ಲಿ ರುವ ನಗರ ಮತ್ತು ಹೊಸ ನಗರಗ ಳಲ್ಲಿ ಕಳೆದ ಬುಧವಾರ ರಾತ್ರಿ ೧೧ ಗಂ ಟೆ ಸಮಯದಲ್ಲಿ ಕೆಲವು ಸೆಕೆಂಡುಗಳ ಕಾಲ ಭೂಮಿಯು ಅದುರಿ ಮನೆಗಳು ಅಲುಗಾಡಿದಂತಾಗಿ ಜನರು ಹೊರಕ್ಕೆ ಬಂದರೆಂದೂ, ಆದರೆ ಯಾರಿಗೂ ಅಪಾ ಯವು ಸಂಭವಿಸಲಿಲ್ಲವೆಂದೂ ಹೇಳಲಾ ಗಿದೆ

ರಾಜಧಾನಿಗೆ ಗುರುಸ್ವಾಮಿಯವರ ಭೇಟಿ

ಅಖಿಲಭಾರತ ರೈಲ್ವೆ ಕೆಲಸಗಾರರ ಸಂ ಘದ ಪ್ರಧಾನ ಕಾರ್ಯದರ್ಶಿ, ಶ್ರೀ ಎಸ್. ಗುರುಸ್ವಾಮಿಯವರು ನಾಳೆ ಸಂಜೆ ೬ ಘಂ ಟೆಗೆ ಇಲ್ಲಿಗೆ ಆಗಮಿಸುವರು. ನಾಳಿದ್ದು ಸಂ ಜೆ ೬-೩೦ ಘಂಟೆಗೆ ಅವರು ರೈಲ್ವೆ ಇನ್ಸ್ ಟಿಟ್ಯೂಟಿನ ಬಳಿ ಕಾರ್ಮಿಕರನ್ನುದ್ದೇಶಿಸಿ ಭಾ ಷಣ ಮಾಡುವರು. ಕಾರ್ಮಿಕರು ತಮಗಿ ರುವ ಕುಂದುಕೊರತೆಗಳನ್ನು ಲಿಖಿತ ಮೂ ಲಕ ಶ್ರೀಯುತರಿಗೆ ಅರಿಕೆ ಮಾಡಿಕೊಳ್ಳಬೇ ಕೆಂದು ಸೂಚಿಸಲಾಗಿದೆ, ಶ್ರೀ ಗುರುಸ್ವಾಮಿ ಯವರು ನಾಳಿದ್ದಿನಿಂದ ೨೬ ನೇ ತಾರೀಖಿನ ವರೆಗೆ ಅರಸೀಕೆರೆ, ಭದ್ರಾವತಿ, ಶಿವಮೊಗ್ಗ ಮತ್ತು ಬೆಂಗಳೂರುಗಳಲ್ಲಿ ಪ್ರವಾಸ ಮಾಡಿ ರೈಲ್ವೆ ಕೆಲಸಗಾರರ ಕುಂದುಕೊರತೆಗಳನ್ನು ಪರಿಶೀಲಿಸಿ, ಅವುಗಳನ್ನು ಕೇಂದ್ರ ರೈಲ್ವೆ ಸಮಿತಿ ಮುಂದೆ ಮಂಡಿಸುವರೆಂದು ಹೇಳ ಲಾಗಿದೆ

ಮುಕ್ಕಾಲು ಗಂಟೆ ಕಾಲ ರೈಲ್ವೆ ಕಾರ್ಮಿಕರ ಮುಷ್ಕರ.

ಮೈಸೂರು ಸಿಟಿ ರೈಲ್ವೆ ವರ್ಕ್‌ಷಾಪಿನ ಕೆಲಸಗಾರರು ಮೊನ್ನೆ ರಾತ್ರಿ ಮುಕ್ಕಾ ಲು ಗಂಟೆ ಕಾಲ ಸ್ಟೇ ಇನ್ ಸ್ಟ್ರೈಕ್ ಮು ಷ್ಕರ ನಡೆಸಿ. ನಂತರ ವರ್ಕ್ಸ್ ಮ್ಯಾನೇ ಜರರು ಅವರ ಕುಂದುಕೊರತೆಗಳನ್ನು ನಿವಾರಿಸುವ ಬಗ್ಗೆ ಪರಿಶೀಲನೆ ನಡೆಸು ವುದಾಗಿ ಭರವಸೆಯಿತ್ತ ಮೇಲೆ ಕೆಲಸ ಕ್ಕೆ ಹಿಂತಿರುಗಿದರೆಂದು ಗೊತ್ತಾಗಿದೆ ೧೯ ಜನ ಕೆಲಸಗಾರರನ್ನು ಕೆಳಗಿನ ದ ರ್ಜೆಗೆ ಇಳುಹಿಸಿದ ಬಗ್ಗೆ, ಕೆಲಸಗಾರರು ಅರಿಕೆ ಸಲ್ಲಿಸಿದ್ದರು.

ಆಸ್ಪತ್ರೆ ಕಾರ್ಯದರ್ಶಿಗಳ ವರ್ಗ

ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಕಾರ್ಯದರ್ಶಿ ಶ್ರೀ ಎಂ. ಆರ್. ನರಸಿಂ ಗರಾಯರನ್ನು ಕುಣಿಗಲಿನ ಅಮಲ್ದಾರ ರನ್ನಾಗಿ ವರ್ಗಾಯಿಸಲಾಗಿದೆ.

೩೮ ವರ್ಷ ಕಾಲ ಅಂಚೆ ಕಛೇರಿಯಲ್ಲಿ ಕಾರ್ಡಿನ ನಿದ್ರೆ

ಡೆ ಲಿಯ ನಿವಾಸಿಯೊಬ್ಬರಿಗೆ ರಾಮಪುರದ ಅವರ ಮಿತ್ರರು ೩೮ ವರ್ಷಗಳ ಕೆಳಗೆ ಬರೆದ ಕಾರ್ಡು ಈಗ ತಲುಪಿರುತ್ತದೆ. ೧೯೧೪ ನೇ ಅಕ್ಟೋಬರ್ ೧೯ ನೇ ತಾ|| ಇದನ್ನು ಪೋಸ್ಟ್ ಮಾಡಿ, ೩ ದಿನಗಳ ನಂತರ ಅದು ದೆಹಲಿ ಕಛೇರಿಗೆ ತಲುಪಿತಂತೆ. ಇದುವರೆಗೂ ಅದು ಅಲ್ಲಿಯೇ ಇದ್ದು ಮೊನ್ನೆ ವಿಳಾಸವನ್ನು ಮುಟ್ಟಿತೆಂದೂ ವರದಿಯಾಗಿದೆ

ಉಪಾಧ್ಯಾಯರ ಕುಟುಂಬಕ್ಕೆ ವಿದ್ಯಾರ್ಥಿಗಳ ಸಹಾಯ

ಪಶ್ಚಿಮ ಬಂಗಾಳದ ಬಲ್ಲಿ ಎಂಬಲ್ಲಿನ ನಿರಾಶ್ರಿತರ ಉಚಿತ ಶಾಲೆಯೊಂದರ ಮುಖ್ಯೋಪಾಧ್ಯಾಯರು, ಅವರ ಪತ್ನಿ ಮತ್ತು ಮೂವರು ಮಕ್ಕಳಿಗೆ ೩ ದಿನಗಳಿಂದ ತಿನ್ನಲು ಆಹಾರವಿಲ್ಲದೆ ಇರುವುದನ್ನು ಕೇಳಿ ಶಾಲೆಯ ವಿದ್ಯಾರ್ಥಿಗಳು ತಮ್ಮ ಉಪಾಹಾರದ ದುಡ್ಡಿನ ಸ್ವಲ್ಪ ಭಾಗವನ್ನು ಶೇಖರಿಸಿ ಉಪಾಧ್ಯಾಯರಿಗೆ ಒಪ್ಪಿಸಿದರೆಂದು ಹೇಳಲಾಗಿದೆ. ಕಳೆದ ಜುಲೈ ತಿಂಗಳಿನಿಂದ ಉಪಾಧ್ಯಾಯರಿಗೆ ಸಂಬಳವು ದೊರೆತಿಲ್ಲ

ಗೋಪಾಲಕೃಷ್ಣ ಶೆಟ್ಟರಿಗೆ ಸತ್ಕಾರ

ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರ ಗೌರವಾರ್ಥವಾಗಿ ಇಲ್ಲಿ ಶಾರದಾ ವಿಲಾಸ ಹೈಸ್ಕೂಲಿನ ಉಪಾಧ್ಯಾಯರ ವರ್ಗದವರು ಔತಣ ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು. ಪೌರಸಭಾಧ್ಯಕ್ಷ ಶ್ರೀ ... ಕೃಷ್ಣಮೂರ್ತಿ ... ಸಭೆ ನಡೆದು, ಶ್ರೀ ಶೆಟ್ಟರ ... ಗಳ ಬಗ್ಗೆ ಶ್ರೀ ಎಸ್. ... ಗೋಪಾಲಯ್ಯಂಗಾರ್ಯರು ... ಶೆಟ್ಟರು ಸೂಕ್ತ ಉತ್ತರವಿತ್ತು ಕೃತಜ್ಞತೆಯನ್ನು ಸೂಚಿಸಿದರು

ಸಹಕಾರ ಶಿಕ್ಷಣ ತರಗತಿಗಳು

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಉಚಿತ ಶಿಕ್ಷಣ ತರಗತಿಗಳು ಬರುವ ಅಕ್ಟೋಬರ್ ... ತಿಂಗಳ ... ರಾಜಧಾನಿಯ ಸಹಕಾರ ಭವನದಲ್ಲಿ ನಡೆಯುವುವು. ಹಲವು ವಿದ್ಯಾ ... ಸಹಕಾರಿಗಳೂ, ಸಂಘಗಳ ಸದಸ್ಯರೂ ... ವರ್ಗದವರೂ, ನೌಕರರೂ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಎಸ್ ಎಸ್ ಎಲ್ ಸಿ ... ಮಾತ್ರ ಅರ್ಜಿಗಳನ್ನು ಇದೇ ತಿಂಗಳು ... ಸಲ್ಲಿಸಬಹುದು

ಹರಿಕಥೆ

ರಾಜಧಾನಿಯ ಬಿ ಸುಬ್ಬಯ್ಯ ಶೆಟ್ಟಿಯವರ ಮಹಾತ್ಮಾ ಗಾಂಧಿ ಸೇವಾ ಸಂಘದ ಈ ರಾತ್ರಿ ... ಗಂಟೆಗೆ ಶ್ರೀ ... ... ಎಂಬ ಹರಿಕಥೆಯು ನಡೆಯುವುದು

ಜಪಾನಿಗೆ ೭೫ ಲಕ್ಷ ಟನ್ ಭಾರತದ ಉಪ್ಪು

ಈ ವರ್ಷದೊಳಗಾಗಿ ಜಪಾನಿಗೆ ಭಾರತದಿಂದ ಒಟ್ಟು ೭೫ ಲಕ್ಷ ಟನ್ ಉಪ್ಪನ್ನು ರವಾನಿಸಲಾಗುವುದು. ಈಗಾಗಲೇ ೪೦ ಲಕ್ಷ ಟನ್ನಿನಷ್ಟು ಉಪ್ಪನ್ನು ರವಾನಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವಿಶ್ವನಾಥಯ್ಯರ್ ... ಧ್ಯಾಹ್ನ ೧ ೪೦ ಜಲತರಂಗ ... ೩ ... ಗೀತೆಗಳು ಸಂಜೆ ೫ ೩೦ ಮತ್ತು ೭ ೩೦ ಪುದುಕೋಟೆ ವಿ ಸುಬ್ರಹ್ಮಣ್ಯ ಅಯ್ಯರ್ ಸಂಗೀತ ೯ ೧೫ ಆರ್ಕೆಸ್ಟ್ರಾ ... ಸಂಗೀತ ... ಎಸ್ ... ಅಯ್ಯಂಗಾರ್ ಸಂಗೀತ ... ಚಿತ್ರವಾಣಿ ... ರತ್ನಮ್ಮ ಕೃಷ್ಣಮೂರ್ತಿ ದೇವರನಾಮ.

ಸರ್ ಎಂ. ವಿ. ಯವರ ೯೨ ನೇ ವರ್ಧಂತಿ

ಸ್ವಂ ವ] ಚಾಮರಾಜನಗರ ೧೬

ಇಲ್ಲಿನ ಪುರಸಭಾ ಅಧ್ಯಕ್ಷರಾದ ಶ್ರೀ ... ವೆಂಕಟೇಶ್ವರವರ ಅಧ್ಯಕ್ಷತೆಯಲ್ಲಿ ... ಸಂಘದಲ್ಲಿ ನೆನ್ನೆ ಸರ್ ಎಂ ವಿಶ್ವೇಶ್ವರಯ್ಯನವರ ... ವರ್ಧಂತಿ ಉತ್ಸವವು ನಡೆಯಿತು. ಅನೇಕ ಗಣ್ಯ ವ್ಯಕ್ತಿಗಳು ಸರ್ ಎಂ ವಿ ಅವರ ಗುಣಗಾನ ಮಾಡಿ ಅವರಿಗೆ ಭಗವಂತನು ... ಭರತಖಂಡಕ್ಕೆ ... ಸೇವೆ ಸಲ್ಲಿಸಲ್ಪಡಲಿ ... ಮಾಡಿದನು ... ಸಭೆಯು ... ಮುಕ್ತಾಯವಾಯಿತು.

ಮೈಸೂರು ಪೇಟೆ ಧಾರಣೆ

[illegible]	[illegible]	[illegible]
ಎಳ್ಳು	[illegible]	[illegible]
[illegible]	[illegible]	
ಹರಳು ಬೀಜ	[illegible]	[illegible]
ಹತ್ತಿ	[illegible]	[illegible]
ಹೆಸರು	[illegible]	
[illegible]	[illegible]	
ಉದ್ದು	[illegible]	[illegible]
ಅವರೆ	[illegible]	
ಹುರುಳಿ	[illegible]	[illegible]
[illegible]	[illegible]	[illegible]
[illegible]	[illegible]	
[illegible]	[illegible]	
ಬೆಲ್ಲ	[illegible]	[illegible]
[illegible]	[illegible]	[illegible]

SREE GANESHA
TALKIES
From 21-9-52
Warner's
PRETTY BABY
(Betsy Drake)
NEXT CHANGE
DAMNED DON'T CRY
Joan Crawford

Edited, Printed and Published by A R Nagarajan at Sadhvi Press, D Subbiah Road, Mysore

ರೈಲು ಇಂಜನ್ನು ಸಿಡಿದು ೧೧ ಜನರ ಮರಣ

ಪಶ್ಚಿಮ ಕೊರಿಯದ ಒಂದು ಕಡೆ ಕಳೆದ ಬುಧವಾರ ... ರೈಲು ಇಂಜನ್ನು ಸಿಡಿದ ದರ ಪರಿಣಾಮವಾಗಿ ೧೧ ಜನರು ಮಡಿದು ೩೦ ಮಂದಿಗೆ ಗಾಯಗಳಾದುವೆಂದು ಗೊತ್ತಾಗಿದೆ. ಇಂಜನ್ನಿಗೆ ಲಗತ್ತಿಸಿದ್ದ ... ಮೂರು ... ಕಂಬಿ ತಪ್ಪಿವೆ

ಕೈರೊ ನಗರವನ್ನು ಭಸ್ಮಮಾಡಲು ಫರೂಕರ ಹಂಚಿಕೆ!

ಈಜಿಪ್ಟಿನ ವಿಶೇಷ ನ್ಯಾಯಸ್ಥಲದ ಎದುರಿನಲ್ಲಿ ವಿಚಾರಣೆಗೆ ಗುರಿಯಾಗಿರುವ ಅಹಮದ್ ಹುಸೇನ್ ಎಂಬ ವಕೀಲರು ಹೇಳಿಕೆಯಿತ್ತು, ಮಾಜಿ ದೊರೆ ಫರೂಕರು ಮತ್ತು ಅವರ ಕಡೆಯವರು ಕೈರೋ ನಗರವನ್ನು ಸುಡುವ ಪ್ರಯತ್ನದಲ್ಲಿದ್ದರೆಂದು ತಿಳಿಸಿದ್ದಾರೆ

ಎಲ್ಲಾ ಬಗೆಯ
ಅಲೋಪಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು

SRI GAYATHRI
TALKIES
Daily 2 Shows
From 21-9-52 [illegible]
TWO WEEKS WITH LOVE
(In Technicolor)
Starring — Jane Powell

ದಸರಾ ಹಬ್ಬದ ವಿಶೇಷ ಆಕರ್ಷಣೆ!
26-9-52ರಿಂದ :: ಪ್ರದರ್ಶನಾರಂಭ
ಬೆಂಗಳೂರು
ಶಾರದ — ಸೆಂಟ್ರಲ್ — ರೂಪನುಹಲ್
ಮೈಸೂರು— ಪ್ರಭಾ ಚಿತ್ರ ಮಂದಿರಗಳಲ್ಲಿ
ಇದೇ ...

ತಾರಾಗಣ :- ಶಾಂತಕುಮಾರಿ, ಶ್ರೀರಂಜನಿ (ಜೂ), ಸಾವಿತ್ರಿ, ಆಶಾಲತ, ಚಂದ್ರಶೇಖರ್, ಸದಾಶಿವರಾವ್, ಶಿವರಾವ್
CHAMRIA TALKIE DISTRIBUTORS RELEASE

ದಸರಾ ಮಹೋತ್ಸವಕ್ಕಾಗಿ:- ಹೊಸ ಮಾದರಿಯ ವೈನರಿ, ಸಿಲ್ಕ್ ... ಸೀರೆಗಳೂ, ಧರ್ಮಾವರಂ, ಆರ್ಣಿ ಸೀರೆಗಳೂ, ಇಂಡಿಗಲ್ ... ಬೊಂಬಾಯಿ ವಿ ... ಸೀರೆಗಳೂ ಬಂದಿವೆ.
★ M. V. ಭೋಜಯ್ಯ
... ಮೈಸೂರು.

ಪೋ. ನಂ. 792 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೨೧-೯-೧೯೪೭ [ಸಂಚಿಕೆ ೭

ಸಿಂಹಾಸನ ತ್ಯಾಗಕ್ಕೆ ಕಾಶ್ಮೀರ ರಾಜರ ಷರತ್ತು

ವಸ್ತು ಪ್ರದರ್ಶನಗಳಿಂದ ಸ್ವದೇಶೀಭಾವನೆ ಬೆಳೆಯಬೇಕು

ವಸ್ತು ಪ್ರದರ್ಶನದ ಆರಂಭೋತ್ಸವದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಮೈಸೂರು ೨೧

ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆನ್ನೆ ಸಂಜೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ನೆರವೇರಿಸಿದರು. ಈ ಸಂಬಂಧವಾಗಿ ನಾಟ್ಯ ಕಲಾವಿಶಾರದ ಎಂ. ಸಿ. ಮಹದೇವಸ್ವಾಮಿಯವರಿಂದ ಪ್ರಾರ್ಥನೆ ಮತ್ತು ಜೂರ್ಕ್ಯಮ್ಮ ಮತ್ತು ಪಾರ್ಟಿಯವರ ಸಂಗೀತವಾದನಂತರ ಕಾರ್ಯದರ್ಶಿ ವಿ. ಎಸ್. ಕೃಷ್ಣಯ್ಯರ್‌ರವರು ಸಮಾರಂಭಕ್ಕೆ ಯಶಸ್ಸು ಕೋರಿಬಂದಿದ್ದ ಸಂದೇಶಗಳನ್ನು ಓದಿದರು.

ವಿದ್ಯಾ ಮಂತ್ರಿಗಳೂ ಮತ್ತು ಪ್ರದರ್ಶನ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಜ. ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿ ದಸರಾ ವಸ್ತು ಪ್ರದರ್ಶನವು ಬಹು ಹಿಂದಿನಿಂದಲೂ ನಡೆದುಕೊಂಡುಬಂದಿರುವ ವಿಷಯವನ್ನು ವಿವರಿಸಿ, ರಾಜ ಮನೆತನದವರು ಪ್ರದರ್ಶನದ ಬಗ್ಗೆ ವಹಿಸಿರುವ ಆಸಕ್ತಿಯನ್ನು ತಿಳಿಸಿದರು.

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಭಾಷಣ ಮಾಡಿ, ಈ ರೀತಿ ಹೇಳಿದರು —

ಮೈಸೂರು ಸಂಸ್ಥಾನದಲ್ಲಿ ಈ ದಸರಾ ವಸ್ತು ಪ್ರದರ್ಶನ ಸಮಾರಂಭವು ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿರುವುದು ಬಹಳ ಶ್ಲಾಘನೀಯವಾದುದು. ಸ್ವದೇಶೀ ಮಂತ್ರದ ಕಾರ್ಯರೂಪವೆನಿಸಿದ ಉದ್ಯಮವು ಇದು ಆಗುತ್ತಾ ಬರುತ್ತಿದೆ. ಈ ವಸ್ತು ಪ್ರದರ್ಶನವು ಕೃಷಿ, ಕೈಗಾರಿಕೆ, ಕುಶಲ ಕಲೆ, ಇಂತಹದ ಮಾನವನ ಕೈವಾಡದ ಹಿರಿಮೆಯ ಮತ್ತು ಕೌಶಲ್ಯದ ಒಂದು ಕೇಂದ್ರವಾಗಿ ಪರಿಣಮಿಸುತ್ತಿದೆ. ಈ ಪ್ರದರ್ಶನವು ಬಹುಮಟ್ಟಿಗೆ ಬೋಧಕ ಅಂಶದಲ್ಲಿ ಇರಬೇಕು. ನಮ್ಮ ಜನರ ಉದ್ಯಮದ ಉತ್ಪತ್ತಿ ಶಕ್ತಿಯನ್ನು ಪ್ರಚೋದನೆಗೊಳಿಸುವ ಮತ್ತು ಅದಕ್ಕೆ ಪ್ರೋತ್ಸಾಹನ ಕೊಡುವ ರಂಗವು ಇದಾಗಬೇಕು. ಇದು ಕೇವಲ ಮಾರಾಟದ ಪೇಟೆಯಾಗಬಾರದು. ಮಾರಾಟವಾದರೆ ಸ್ವದೇಶೀ ವಸ್ತುಗಳನ್ನು ಜನರು ಕೊಂಡು ನಮ್ಮ ಉದ್ಯಮಗಳಿಗೆ ಉತ್ತೇಜನ ಕೊಡುವಂತೆ ಮಾತ್ರ ಆಗಬೇಕು. ಪ್ರದರ್ಶನಕ್ಕೆ ಕಾಲಿಡುವ ಪ್ರತಿಯೊಬ್ಬರೂ ಸ್ವದೇಶೀ ಮಂತ್ರ ಜಪಿಸಿ, ಗಳಿಸುವ ಸ್ವರಾಜ್ಯವು ಸುಭಿಕ್ಷಮಯವಾದ ಸ್ವರಾಜ್ಯವಾಗಬೇಕು.

ಈ ಪ್ರದರ್ಶನವು ಕೇವಲ ಮನರಂಜನೆಯ ರಂಗಸ್ಥಳವೂ ಆಗಬಾರದು. ಮನರಂಜನೆಗೆ ಪ್ರದರ್ಶನದಲ್ಲೇನೋ ಅವಕಾಶವಿರಬೇಕು. ಆದರೆ ಅದು ಊಟಕ್ಕೆ ಉಪ್ಪಿನಕಾಯಿ ಇರುವಂತೆ ಮಾತ್ರ ಇದ್ದರೆ ಸಾಕು. ಪ್ರದರ್ಶನದ ಉದ್ದೇಶವು ಮನರಂಜನೆಗೆ ವಿಶಾರದುದು, ಮಾರಾಟಕ್ಕೆ ಮಿಗಿಲಾದುದು ನಮ್ಮ ಕೃಷಿ, ಕೈಗಾರಿಕೆ, ಕುಶಲ ಕಲೆಗಳ ಬೋಧಕ ಮತ್ತು ಸಾಧಕ ಕೇಂದ್ರವು ಇದಾಗಬೇಕು.

ಪ್ರದರ್ಶನ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು ವಂದನಾರ್ಪಣೆ ಮಾಡಿದರು. ಪ್ರದರ್ಶನವು ಇನ್ನೂ ಹೆಚ್ಚು ಯಶಸ್ವಿಯಾಗುವಂತೆ ಮಾಡುವ ಅತ್ಯುತ್ತಮ ಸಲಹೆಗಳನ್ನು ಒಂದು ವಾರದಲ್ಲಿ ಕಳುಹಿಸಿಕೊಡುವವರಿಗೆ ಒಂದು ವಿಶೇಷ ಬಹುಮಾನವನ್ನು ಕೊಡಲಾಗುವುದೆಂದೂ ಅವರು ಸೂಚಿಸಿದರು.

ದೆಹಲಿ ಚಲೋ ನಿಧಿಗಾಗಿ ಸೀತಾರಾಮರವರ ಮನವಿ

ಆಂಧ್ರ ಪ್ರಾಂತ ಸತ್ಯಾಗ್ರಹ ಚಳುವಳಿಯಲ್ಲಿ ಸಹಾನುಭೂತಿಯುಳ್ಳವರು ದೆಹಲಿ ಚಲೋ ನಿಧಿಗೆ ೧೦ ಸಾವಿರ ರೂಗಳನ್ನು ಒದಗಿಸಬೇಕೆಂದು ಸ್ವಾಮಿ ಸೀತಾರಾಮರವರು ಮನವಿ ಮಾಡಿಕೊಂಡಿರುತ್ತಾರೆ. ಅಕ್ಟೋಬರ್ ೨ರೊಳಗೆ ಆಂಧ್ರ ಪ್ರಾಂತ ನಿರ್ಮಾಣದ ಬೇಡಿಕೆಯನ್ನು ಕೇಂದ್ರ ಸರ್ಕಾರದವರು ಈಡೇರಿಸುವ ಸೂಚನೆಗಳಿಲ್ಲದಿರುವುದರಿಂದ ತಾವು ೨೫ ಜನ ಇತರ ಸತ್ಯಾಗ್ರಹಿಗಳೊಡನೆ ದೆಹಲಿಗೆ ತೆರಳಿ, ಕೇಂದ್ರ ಸರ್ಕಾರದ ಕಛೇರಿ ಮುಂದೆ ಸತ್ಯಾಗ್ರಹ ಮಾಡುವುದಾಗಿ ಅವರು ತಿಳಿಸಿರುವರು.

ಉಪಾಹಾರ ಗೃಹದ ಪ್ರಾರಂಭೋತ್ಸವ

ನೂರಡಿ ರಸ್ತೆಯಲ್ಲಿರುವ ಶ್ರೀ ಸತ್ಯ ಗಣಪತಿ ಪ್ರಸನ್ನ ಫಲಾಹಾರ ಮಂದಿರದ ಪ್ರಾರಂಭೋತ್ಸವವು ನೆನ್ನೆ ಸಂಜೆ ಪೌರಸಭಾ ಸದಸ್ಯರಾದ ಡಾ|| ಬಿ. ಜಿ. ದಾಸರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಹಾರವೂ, ಶ್ರೀ ಬಿ. ಎಸ್. ರಾಮಯ್ಯರ್‌ರವರ ಗಾಯನವೂ ಏರ್ಪಾಡಾಗಿದ್ದವು.

ವಸ್ತು ಪ್ರದರ್ಶನದಲ್ಲಿ ನಾಟಕ

ದಸರಾ ವಸ್ತು ಪ್ರದರ್ಶನದ ಅಂಗವಾಗಿ ನಾಳೆ ರಾತ್ರಿ ೮|| ಘಂಟೆಗೆ ಜೀವನರಾಯನ ಕಟ್ಟೆಯ ರಂಗಮಂಟಪದಲ್ಲಿ ವಾಣೀ ವಿಲಾಸ ಮೊಹಲ್ಲದ ಪ್ರತಾಪ ನಾಟಕ ಮಂಡಲಿಯವರಿಂದ "ರಾಯರ ಸೌಭಾಗ್ಯ" ಎಂಬ ನಾಟಕವು ಅಭಿನಯಿಸಲ್ಪಡುವುದು.

ಮದ್ರಾಸು ಪ್ರಾಂತವೆಲ್ಲಾ ಕ್ಷಾಮ ಪ್ರದೇಶ

ಮದ್ರಾಸಿನ ಎಲ್ಲಾ ಜಿಲ್ಲೆಗಳಲ್ಲೂ ಕ್ಷಾಮ ಸಂಭವಿಸಿರುವುದೆಂದು ಹೇಳಬಹುದಾದ ಪರಿಸ್ಥಿತಿಯುಂಟಾಗಿರುವುದೆಂದು ಅಲ್ಲಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಿಳಿಸಿರುತ್ತಾರೆ. ತಂಜಾವೂರೂ ಸೇರಿ ಎಲ್ಲ ಪ್ರದೇಶಗಳಲ್ಲೂ ಗಂಜಿ ಊಟದ ಕೇಂದ್ರಗಳ ಸ್ಥಾಪನೆಯಾಗಬೇಕೆಂದು ಸರ್ಕಾರಕ್ಕೆ ವರದಿಗಳು ಬಂದಿರುವುದಾಗಿಯೂ, ಪರಿಹಾರ ಕ್ರಮ ಕೈಗೊಳ್ಳಲು ಎಷ್ಟೊಂದು ಹಣವೊದಗಿಸಬೇಕೋ ದೇವರಿಗೆ ಮಾತ್ರ ಗೊತ್ತೆಂದೂ ಅವರು ಹೇಳಿರುತ್ತಾರೆ. ಆದರೆ ಜನರಲ್ಲಿ ಕಾತುರತೆ ಇಲ್ಲದಿರುವುದೊಂದು ಸೌಭಾಗ್ಯವೆಂದೂ ಅವರು ಹರ್ಷಪಟ್ಟಿರುತ್ತಾರೆ.

ಕೆನರಾ ಬ್ಯಾಂಕಿನ ಮ್ಯಾನೇಜರಿಗೆ ಸತ್ಕಾರ

ಮೈಸೂರು ೨೧

ಮಂಗಳೂರು ಕೆನರಾ ಬ್ಯಾಂಕಿನ ಮೈಸೂರು ಸಂಸ್ಥಾನದ ಮತ್ತು ಕರ್ನಾಟಕ ಶಾಖೆಗಳ ಜಿಲ್ಲಾ ಮ್ಯಾನೇಜರಾದ ಶ್ರೀ ಬಿ. ವಿ. ಭಂಡಾರಿಯವರು ಇಂಗ್ಲೆಂಡಿಗೆ ತೆರಳುವ ಸಂದರ್ಭದಲ್ಲಿ ಅವರ ಗೌರವಾರ್ಥವಾಗಿ ಇಲ್ಲಿನ ಕೆನರಾ ಬ್ಯಾಂಕಿನ ಮ್ಯಾನೇಜರ್ ಶ್ರೀ ಹರಿಶೆಣೈರವರು ದಾಸಪ್ರಕಾಶದಲ್ಲಿ ಮೊನ್ನೆ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಹರಿಶೆಣೈರವರು ಸ್ವಾಗತ ಭಾಷಣ ಮಾಡಿ, ಬ್ಯಾಂಕಿಂಗ್ ವಿಷಯದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ವಿದೇಶಕ್ಕೆ ತೆರಳಲಿರುವ ಶ್ರೀ ಭಂಡಾರಿಯವರ ಸೇವೆಯನ್ನು ಪ್ರಶಂಸಿಸಿ ಅವರಿಗೆ ಶುಭವನ್ನು ಕೋರಿದರು. ಕೆನರಾ ಬ್ಯಾಂಕ್ ಡೈರೆಕ್ಟರ್, ಶ್ರೀ ಶ್ರೀನಿವಾಸರಾವ್, ಶ್ರೀ ಯು. ಎಲ್. ರಾಮಚಂದ್ರರಾವ್, ಡಾ|| ರಾಮಾಶಾಸ್ತ್ರಿ, ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ ಮತ್ತು ಶ್ರೀ ಬಿ. ಎಸ್. ಸುಬ್ಬರಾಯರು ಭಾಷಣ ಮಾಡಿದರು. ಶ್ರೀ ಭಂಡಾರಿಯವರು ಸೂಕ್ತ ಉತ್ತರವಿತ್ತು, ಕೃತಜ್ಞತೆಯನ್ನು ಸೂಚಿಸಿದರು.

ಸಿಂಹಾಸನ ಬಿಡಲು ಕಾಶ್ಮೀರದ ಅರಸರ ಷರತ್ತು

ಕಾಶ್ಮೀರದ ಸಿಂಹಾಸನವನ್ನು ತ್ಯಜಿಸುವ ಬಗ್ಗೆ ಮಹಾರಾಜಾ ಹರಿಸಿಂಗ್‌ರವರು ಹಲವು ಷರತ್ತುಗಳನ್ನು ಹಾಕಿರುವರೆಂದು ವರದಿಯಾಗಿದೆ. ರಾಜಕುಮಾರರ ಹಕ್ಕು ಬಾಧ್ಯತೆ, ಗೌರವ, ರಾಜಧನ, ಆಭರಣಗಳು ಮತ್ತು ಆಸ್ತಿ ಇವುಗಳ ಜಹಗೀರಿ ಮತ್ತು ಇತರ ರಾಜಕುಮಾರರಿಗೆ ಕೊಡಲಾಗಿರುವಂತೆ ಕೋರ್ಟು ಕ್ರಮಗಳನ್ನು ಜರುಗಿಸದಿರಲು ವಿನಾಯಿತಿ ಬಗ್ಗೆ ಭರವಸೆಗಳನ್ನು ಅವರು ಕೇಳಿರುತ್ತಾರೆ. ಎಲ್ಲ ವಿಧವಾದ ತೆರಿಗೆಗಳ ವಿನಾಯಿತಿಯೂ ಸಹ ಬೇಕೆಂದು ಅವರು ಕೇಳಿರುತ್ತಾರೆ. ಅವರಿಗೆ ಈಗ ೧೫ ಲಕ್ಷ ರೂ ರಾಜಧನವು ಸಲ್ಲುತ್ತಿದೆ. ಆ ಪೈಕಿ ಕೇಂದ್ರ ಸರ್ಕಾರದವರು ೯ ಲಕ್ಷವನ್ನು ಕೊಟ್ಟು, ಉಳಿದುದನ್ನು ಸ್ಥಳೀಯ ಸರ್ಕಾರದವರು ಒದಗಿಸುತ್ತಿರುವರು. ಕಾಶ್ಮೀರದಲ್ಲಿ ರಾಜತ್ವವು ರದ್ದಾಗುವುದರಿಂದ ಇನ್ನು ಮುಂದೆ ಅಲ್ಲಿನ ಸರ್ಕಾರದವರು ತಮ್ಮ ಭಾಗದ ರಾಜಧನವನ್ನು ನಿಲ್ಲಿಸುವರೆಂದೂ, ಕೇಂದ್ರ ಸರ್ಕಾರದವರೇ ಮಹಾರಾಜರಿಗೆ ಒಟ್ಟಾಗಿ ೧೦ ಲಕ್ಷ ರೂ ಗಳನ್ನು ರಾಜಧನವಾಗಿ ಕೊಡಲಿರುವರೆಂದೂ ಹೇಳಲಾಗಿದೆ.

ಪರಿಹಾರ ನಿಧಿಯ ದುರುಪಯೋಗಕ್ಕಾಗಿ ಸಸ್ಪೆಂಡ್

ಚಿಂತಾಮಣಿ ತಾಲ್ಲೂಕಿನ ರೆವಿನ್ಯೂ ಇನ್ಸ್‌ಪೆಕ್ಟರುಗಳಾದ ಶ್ರೀಗಳು ಮುನಿಸ್ವಾಮಿ, ಶ್ರೀನಿವಾಸಶೆಟ್ಟಿ ಮತ್ತು ಸೂರ್ಯನಾರಾಯಣರಾವ್ ಎಂಬುವರು ಅಭಾವ ಪರಿಹಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವರೆಂಬ ಕಾರಣದ ಮೇಲೆ ಸಸ್ಪೆಂಡ್ ಮಾಡಲ್ಪಟ್ಟಿರುವರು. ಕೇಂದ್ರದ ಆಡಿಟ್ ಇಲಾಖೆಯವರು ಸಂಬಂಧಪಟ್ಟ ಲೆಕ್ಕಗಳ ಪರಿಶೀಲನೆ ನಡೆಸುತ್ತಿರುವರೆಂದು ತಿಳಿದುಬಂದಿದೆ.

ಪೂರ್ವ ಆಫ್ರಿಕದಲ್ಲಿ ಗಾಂಧಿ ಸ್ಮಾರಕ ಕಾಲೇಜು

ಪೂರ್ವ ಆಫ್ರಿಕದಲ್ಲಿ ಗಾಂಧೀಜಿಯವರ ಸ್ಮಾರಕಾರ್ಥವಾಗಿ ಕಾಲೇಜೊಂದನ್ನು ನಿರ್ಮಿಸಲು ಕೆನಿಯಾದಲ್ಲಿರುವ ಭಾರತದ ಶಿಕ್ಷಣ ಪ್ರವೀಣರಾದ ಆರ್. ಕೆ. ರಜನೀಶ್‌ರವರು ಆಲೋಚಿಸಿರುವರು. ಅದನ್ನು ಪೂರ್ವ ಆಫ್ರಿಕದ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸುವ ವಿಷಯವು ಪರಿಶೀಲನೆಯಲ್ಲಿದೆ.

ಕಾಲಿಗೆ ಗಾಯ ಮಾಡಿ ಹಣದ ಅಪಹಾರ

ದಸರಾ ಉತ್ಸವಕ್ಕಾಗಿ ರಾಜಧಾನಿಗೆ ಕೆಲವು ದಿನಗಳ ಹಿಂದೆ ಬಂದಿದ್ದ ಜಗಳೂರಿನ ಗೋವಿಂದರಾವ್ ಎಂಬ ೨೧ ವರ್ಷದ ಯುವಕನೊಬ್ಬನು ಮೊನ್ನೆ ಮಧ್ಯಾಹ್ನ ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರ ವಿಗ್ರಹವನ್ನು ನೋಡುತ್ತಿದ್ದಾಗ ಯಾರೋ ದುರಾತ್ಮರು ಅವನ ಕಾಲಿಗೆ ಘಾಸಿ ಮಾಡಿ ಅವನ ಬಳಿ ಇದ್ದ ೪೯ ರೂ ಗಳನ್ನೂ, ಬಟ್ಟೆಗಳನ್ನೂ ಅಪಹರಿಸಿಕೊಂಡುಹೋಗಿರುವರೆಂದು ವರದಿಯಾಗಿದೆ. ಯುವಕನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ [illegible]

ವಾರ ಭವಿಷ್ಯ

ತಾ|| ೨೧ ೯ ೫೨ ರಿಂದ ತಾ|| ೨೮ ೯ ೫೨ ರ ವರೆಗೆ

ಮೇಷ — ಆರೋಗ್ಯ ಸಾಧಾರಣ ಆರ್ಥಿಕ ಮುಗ್ಗಟ್ಟು ಹೆಚ್ಚು ಪ್ರವಾಸ ಬೇಡ ಪ್ರಾಣಿಗಳಿಂದ ಹಾನಿ ಸಂಭವ ತಾ|| ೨೪, ೨೫ ಕೆಟ್ಟ ಸುದ್ದಿ, ವೃಥಾ ಕಲಹ

ವೃಷಭ — ಆರೋಗ್ಯ ಉತ್ತಮ ಚಿಂತೆ ಹೆಚ್ಚು ಅಪವಾದ ಉಂಟಾಗಬಹುದು ನೌಕರಿಯಲ್ಲಿ ಸ್ಥಳಾಂತರ ಖರ್ಚು ಹೆಚ್ಚು. ತಾ|| ೨೨, ೨೬ ದುಸ್ಸಹವಾಸ, ಅಪ್ರಿಯ ವಾರ್ತೆ

ಮಿಥುನ — ಸಮಾಜ ಸೇವೆ ನಿಮಿತ್ತಾಂಗ ಜರುಗುವುದು ಆರೋಗ್ಯ ಉತ್ತಮ ಆಪ್ತ ಮಿತ್ರರ ಸಹವಾಸ ಲಭ್ಯ ಸಮಸ್ಯೆಗಳ ಪರಿಹಾರ ತಾ|| ೨೫, ೨೬ ಅಧಿಕ ಖರ್ಚು, ನೆಂಟರ ಆಗಮನ

ಕರ್ಕ — ಆರೋಗ್ಯ ಉತ್ತಮ ನೌಕರಿಯಲ್ಲಿ ಉನ್ನತಿ ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ಪ್ರವಾಸ ಸುಖಕರ ತಾ|| ೨೨ ೨೩ ಆರ್ಥಿಕ ಮುಗ್ಗಟ್ಟು, ದೇಹಾಲಸ್ಯ

ಸಿಂಹ — ಆರೋಗ್ಯ ಸಾಧಾರಣ ಪ್ರಿಯ ಜನರ ವಿಯೋಗ ವ್ಯಾಪಾರಾದಿಗಳಲ್ಲಿ ಉತ್ಸಾಹ ಕಡಿಮೆ ಅಧಿಕ ಖರ್ಚು ತಾ|| ೨೪ ೨೫ ಅಗ್ನಿ ಭಯ ಧನ ನಷ್ಟ

ಕನ್ಯಾ — ಶರೀರ ಪ್ರಕೃತಿ ಚೆನ್ನಾಗಿರುವುದು ದ್ರೋಹಿಗಳಿಗೆ ಎಚ್ಚರಿಕೆ ಧಾರ್ಮಿಕ ಕಾರ್ಯಗಳು ಜರುಗುವುವು. ತಾ|| ೨೧, ೨೭ ಹರ್ಷದಾಯಕ ವಾತಾವರಣ, ಪ್ರಿಯ ವಾರ್ತೆ

ತುಲ — ಆರೋಗ್ಯ ಉತ್ತಮ ಆರ್ಥಿಕ ತೊಂದರೆ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಶತ್ರುಗಳ ಪರಾಭವ ತಾ|| ೨೫, ೨೬ ಪ್ರವಾಸ ಸಂಭವ, ಶುಭ ವಾರ್ತೆ

ವೃಶ್ಚಿಕ — ಆರೋಗ್ಯ ಅಸಮರ್ಪಕ ವಿಷಾದಕರ ಘಟನೆ ಜರುಗುವುದು ಕುಟುಂಬದಲ್ಲಿ ಕಲಹ ವ್ಯಾಪಾರಾದಿಗಳಲ್ಲಿ ವೃದ್ಧಿ ತಾ|| ೨೧, ೨೨ ಅಪಘಾತ ಭಯ ಖರ್ಚು ಹೆಚ್ಚು

ಧನು — ಆರೋಗ್ಯ ಸಾಧಾರಣ ನಂಬಿಕೆ ದ್ರೋಹಿಗಳ ಬಗ್ಗೆ ಎಚ್ಚರಿಕೆ ಆರ್ಥಿಕ ಬಿಕ್ಕಟ್ಟು ತಾ|| ೨೪, ೨೫ ಧನ ನಷ್ಟ, ವ್ಯವಹಾರದಲ್ಲಿ ವೃದ್ಧಿ

ಮಕರ — ಆರೋಗ್ಯ ಉತ್ತಮ ಸಜ್ಜನರ ಸಹವಾಸ ವ್ಯವಹಾರಾದಿಗಳಲ್ಲಿ ಯಶಸ್ಸು ಆರ್ಥಿಕ ಸ್ಥಿತಿ ಉತ್ತಮ, ತಾ|| ೨೪, ೨೫ ಸುವಾರ್ತೆ, ಪ್ರವಾಸ ಸಂಭವ

ಕುಂಭ — ಶರೀರ ಪ್ರಕೃತಿ ಉತ್ತಮ ಪರಾಕ್ರಮದ ಕಾರ್ಯಗಳು ಜರುಗುವುವು ನೌಕರಿಯಲ್ಲಿ ವರಮಾನ ಹೆಚ್ಚುವುದು ತಾ|| ೨೫, ೨೬ ಆಪ್ತರ ಭೇಟಿ

ಮೀನ — ಆರೋಗ್ಯ ಉತ್ತಮ ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಸಜ್ಜನರ ಸಹವಾಸ ಸ್ತ್ರೀಯರಿಂದ ಧನಾಗಮ. ತಾ|| ೨೧, ೨೬ ಪ್ರವಾಸ ಸಂಭವ

ರಾಜಕಮಲ್, ಮೈಸೂರು

19-9-52 ರಿಂದ 5ನೇ ವಾರ

ಶ್ರೀನಿವಾಸ ಕಲ್ಯಾಣ

ಪಾತ್ರ ಅಮೀರ್ ಬಾಯಿ ಕರ್ನಾಟಕಿ ಪ್ರತಿಮಾದೇವಿ, ಹರಿಣಿ, ಜಯಶ್ರೀ, ಎ ಕೆ ಶ್ರೀನಿವಾಸರಾವ್, ವಿಮಲಾನಂದ ದಾಸ್, ವೀರಭದ್ರಪ್ಪ, ಕೊಟ್ಟೂರು ಬಸಪ್ಪ ಮರಿರಾವ್ [illegible]

ಕೋರ್ಟ ಮುಂದೆ ೧೦೦ ಕೋತಿಗಳ ಹಾಜರಾತಿ

ಅಮೇರಿಕಕ್ಕೆ ರವಾನಿಸಲು ಲಕ್ನೋವಿನಿಂದ ಬೊಂಬಾಯಿಗೆ ಕಳೆದ ಬುಧವಾರ ೪ ಬೋನುಗಳಲ್ಲಿ ತರಲಾದ ೧೦೦ ಕೋತಿಗಳನ್ನು, ಅಲ್ಲಿನ ಪ್ರಾಣಿ ದಯಾ ಸಂಘದವರ ದೂರಿನ ಮೇಲೆ, ಬೊಂಬಾಯಿ ಪೊಲೀಸರು ಅವುಗಳನ್ನು ಹಿಡಿದು ತಂದವನ ಸಮೇತ ಅಲ್ಲಿನ ನ್ಯಾಯಾಧೀಶರ ಸಮ್ಮುಖದಲ್ಲಿ ಹಾಜರು ಪಡಿಸಿದರು. ಕೋರ್ಟಿಗೆ ಕೋತಿಗಳನ್ನು ಎಳೆದು ತರುವಾಗ ಅವು ಕೂಗಿಕೊಳ್ಳಲಾಗಿ ಅಲ್ಲಿ ಸ್ವಲ್ಪ ಕಾಲ ಗೊಂದಲವೇ ಆಯಿತು ಕೋತಿಗಳನ್ನು ತಂದವನ ಮೇಲೆ ಪ್ರಾಣಿಗಳಿಗೆ ಕ್ರೌರ್ಯವನ್ನು ತೋರಿಸಿದನೆಂದು ಮೊಕದ್ದಮೆ ಹೂಡಲಾಗಿದೆ ಈಗ ಕಪಿಗಳನ್ನು ಬೊಂಬಾಯಿಯ ಮೃಗಾಲಯದಲ್ಲಿ ವಿಶ್ರಾಂತಿಗಾಗಿ ಇಡಲಾಗಿದೆ

೩ ಮಕ್ಕಳ ಜನನ

ಗೋರಖಪುರದ ನಿವಾಸಿಯೊಬ್ಬಳು ಗುರುವಾರ ಏಕ ಕಾಲದಲ್ಲಿ ೩ ಮಕ್ಕಳಿಗೆ ಜನ್ಮವಿತ್ತಳೆಂದು ವರದಿಯಾಗಿದೆ ಅವು ಮೂರೂ ಸುರಕ್ಷಿತವಾಗಿವೆ

ರೇಷ್ಮೆ ನೆಯ್ಗೆ ಕೆಲಸಗಾರರ ಸಂಘ

ಮೈಸೂರು ಸರ್ಕಾರದ ರೇಷ್ಮೆ ಕಾರ್ಖಾನೆಯ ಕಾರ್ಮಿಕರ ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆಯು ನಡೆದು ಶ್ರೀ ಕೆ ಆರ್ ಪ್ರಸಾದ್‌ರವರು ಅಧ್ಯಕ್ಷರಾಗಿಯೂ, ಶ್ರೀ ಎಸ್ ರಂಗಯ್ಯನವರು ಮತ್ತು ಶ್ರೀ ಡಿ ಪುಟ್ಟಯ್ಯನವರು ಕಾರ್ಯದರ್ಶಿ, ಉಪ ಕಾರ್ಯದರ್ಶಿಗಳಾಗಿಯೂ ಶ್ರೀ ಲಿಂಗಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

ಗಣಪತಿ ಮಂಗಳಾರತಿ

ನಂಜನಗೂಡಿನ ಕಬ್ಬಹಳ್ಳಿ ಜವನಪ್ಪನವರ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ೧೫ನೇ ತಾ|| ವಿದ್ಯಾ ಗಣಪತಿ ಮಂಗಳಾರತಿಯು ನಡೆಯಿತು ಶಾಸನ ಸಭಾ ಸದಸ್ಯರಾದ ಶ್ರೀ ಹೆಜ್ಜಿಗೆ ಲಿಂಗಣ್ಣನವರ ಅಧ್ಯಕ್ಷತೆ ವಹಿಸಿದ್ದರು ಶ್ರೀ ಕೆ ರಾ ಸುಬ್ಬರಾಯರು ಭಾಷಣ ಮಾಡಿದರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

SRI GAYATHRI

TALKIES

On Monday 22-9-52

At 10-30 A M

20th Century Fox Presents

Mr. BELVEDERE GOES TO COLLEGE

Starring Clifton Web & Shirely Temple

ಜಪಾನಿನ ಬಗ್ಗೆ ರಷ್ಯದ ವೀಟೋ.

ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಜಪಾನನ್ನು ಸೇರಿಸಿಕೊಳ್ಳಲು ಭದ್ರತಾ ಸಮಿತಿಯ ೧೦ ಸದಸ್ಯ ರಾಷ್ಟ್ರಗಳು ಅಭಿಮತವಿತ್ತುವೆಂದೂ, ಆದರೆ ರಷ್ಯವು ವೀಟೋ ಅಧಿಕಾರವನ್ನು ಪ್ರಯೋಗಿಸಿ ಅದಕ್ಕೆ ಅಡ್ಡಿಯನ್ನುಂಟುಮಾಡಿತೆಂದೂ ವರದಿಯಾಗಿದೆ

ಜ್ವಾಲಾಮುಖಿಯಿಂದ ವಿದ್ಯುಚ್ಛಕ್ತಿ

ಜಪಾನಿನ ಕಿಯೂಷು ದ್ವೀಪದಲ್ಲಿ ಜ್ವಾಲಾಮುಖಿಯನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸಲು ಏರ್ಪಾಡಾಗಿದೆ. ಈಗ ೩ ಸಾವಿರ ಕಿಲೋವಾಟುಗಳ ಶಕ್ತಿಯನ್ನು ತಯಾರಿಸಲಾಗುವುದು ಈ ಬಗ್ಗೆ ಒಂದು ಯಂತ್ರವನ್ನು ನಿರ್ಮಿಸಲಾಗುವುದು ಕ್ರಮೇಣ ೧|| ಲಕ್ಷ ಕಿಲೋವಾಟು ಶಕ್ತಿಯನ್ನು ತಯಾರಿಸುವ ಆಲೋಚನೆ ಇರುತ್ತದೆ

ರೇಷನ್ ಕಾರ್ಡು ದುರುಪಯೋಗಕ್ಕಾಗಿ ಪಟೇಲರ ಸಸ್ಪೆಂಡು

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಸಣ್ಣಸಂದ್ರ ಗ್ರಾಮದಲ್ಲಿ ಒಂದೇದಿನ ೮ ಜನರು ಬರಗಾಲದ ಪರಿಣಾಮವಾಗಿ ಸಾವಿಗೆ ಈಡಾಗಿರುತ್ತಾರೆ ಕೋಲಾರ ತಾಲ್ಲೂಕಿನ ಸಂಗೊಂಡಹಳ್ಳಿಯ ಪಟೇಲ ಬೋರೇಗೌಡ ಎಂಬವರನ್ನು ಪಟೇಲತನದಿಂದ ಎರಡು ವರ್ಷ ಕಾಲ ಸಸ್ಪೆಂಡ್ ಮಾಡಲಾಗಿದೆ ಹಳ್ಳಿಯ ಹಲವು ಜನರ ರೇಷನ್ ಕಾರ್ಡುಗಳನ್ನು ಅವರುಗಳಿಗೆ ತಲುಪಿಸುವಂತೆ ಪಟೇಲರಿಗ ಕೊಟ್ಟಿದ್ದನ್ನು ಅವರು ದುರುಪಯೋಗಪಡಿಸಿಕೊಂಡಿದ್ದರೆಂದು ಹೇಳಲಾಗಿದೆ .

ಆಕಾಶವಾಣಿ ನಾಳೆ ಕಾರ್ಯಕ್ರಮ

೭ ೦೧ ಕೆ ಪಟ್ಟಮ್ಮಾಳ್ ರಿಕಾರ್ಡು ಸಂಗೀತ ಮಧ್ಯಾಹ್ನ ೧ ೪೦ ನಾಗಸ್ವರ ೨ ಚಿತ್ರ ಸಂಗೀತ ೨ ೧೫ ಆರ್ಕೆಸ್ಟ್ರಾ ಸಂಜೆ ೫ ೦ ಮುತ್ತಯ್ಯ ಭಾಗವತರ್, ವಿ ಕೃಷ್ಣರಾವ್, ಪಿಟೀಲು ೩ ೧೦ ಗಾನ ವಿಹಾರ ೭ ವೈಣಿಕ ಸರಸ್ವತಿ ೭ ೨೦ ಜೆ ಬಿ ಮಲ್ಲಾರಾಧ್ಯರ ಭಾಷಣ ೮ ೩೦ ಮುತ್ತಯ್ಯ [illegible] ಪದ್ಯಾವಳಿ ಸಂಗೀತ ೯ ೦೫ ಡಾ|| ಡಿ ಆರ್ ಅಯ್ಯಂಗಾರ್ ಇಂಗ್ಲಿಷ್ ಭಾಷಣ

ಮೈಸೂರು ಸರ್ಕಾರದ ವಿಮಾ ಶಾಖೆ,

(ಪಬ್ಲಿಕ್ ಬ್ರಾಂಚ್)

ಶ್ರೀ ಹೆಚ್ ರಾಮಶಾಸ್ತ್ರಿ C/o ಶ್ರೀ ಎಂ ಸುಬ್ರಹ್ಮಣ್ಯಮ್ಮ, ಕಣಜದ ಬೀದಿ, ನಂಜನಗೂಡು, ಇವರ 89631/c ನಂಬರುಳ್ಳ ಪಾಲಿಸಿಯು ಕಳೆದುಹೋಗಿರುವುದರಿಂದ ಡೂಪ್ಲಿಕೇಟ್ ಪಾಲಿಸಿಯನ್ನು ಕೊಡಬೇಕೆಂದೂ ಪ್ರಾರ್ಥನೆ ಬಂದಿದೆ ಇವರಿಗೆ ಹೊಸ ಪಾಲಿಸಿಯನ್ನು ಕೊಡುವುವರಲ್ಲಿ ಯಾರದಾದರೂ, ಏನಾದರೂ ತಕರಾರು ಇದ್ದಲ್ಲಿ ಈ ಜಾಹಿರಾತು ತಾರೀಖಿನ ಒಂದು ತಿಂಗಳೊಳಗಾಗಿ ಈ ಕೆಳಗೆ ಕಂಡವರಿಗೆ ತಿಳಿಸುವುದು

ಬಿ ಎಂ. ಕೃಷ್ಣನ್,

ನವರಾತ್ರಿಗಾಗಿ ಬರುವವರಿಗೆ ಪಡಿತರ ಕೊಡಬೇಕು

ರೇಷನ್ ಕಾರ್ಡುದಾರರ ಸಭೆಯಲ್ಲಿ ಒತ್ತಾಯ

ಮೈಸೂರು ೨೧

ರಾಜಧಾನಿಯ ರೇಷನ್ ಕಾರ್ಡುದಾರರ ಸಂಘದ ಆಶ್ರಯದಲ್ಲಿ ಮೊನ್ನೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ಡಾ|| ಎಂ ಅಣ್ಣಾಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀಗಳಾದ ಬಿ ಜಿ ದಾಸ್, ಎಂ ಆರ್ [illegible]ಬಸಪ್ಪ, ಡಿ. ಎನ್ ಕೃಷ್ಣಯ್ಯಶೆಟ್ಟಿ, ಕೋದಂಡರಾಮಪಿಳ್ಳೆ, ಚಂದ್ರಶೇಖರ ಜೋಯಿಸ್, ಮತ್ತು ಜಿ ಸ್ವಾಮಿದಾಸ್‌ರವರು ಭಾಷಣ ಮಾಡಿದರು

ರಾಜಪ್ರಮುಖರುಗಳಿಗೆ ಸರ್ದಾರ್ ಪಟೇಲರು ಇತ್ತಿರುವ ಭರವಸೆಯನ್ನು ಪಾಲಿಸಬೇಕು, ಅರಮನೆಗೂ ಮಾಂ[illegible]ಕೆಂಗೆ ಅನ್ವಯಿಸುತ್ತದನ್ನು ರದ್ದುಗೊಳಿಸಬೇಕು, ಆಹಾರ ಧಾನ್ಯವನ್ನು ಕಡಿಮೆ ಬೆಲೆಗೆ ಮಾರಲು ಏರ್ಪಾಡಾಗಬೇಕು, ರಾಜಧಾನಿಗೆ ಹೊರಗಿನಿಂದ ಬಂದು ನೆಲೆಸುವವರಿಗೆ ರೇಷನ್ ಕಾರ್ಡುಗಳನ್ನು ಒದಗಿಸಬೇಕು, ದಸರಾಕ್ಕಾಗಿ ಬರುವವರಿಗೆ ಪಡಿತರವನ್ನು ಕೊಡುವ ವ್ಯವಸ್ಥೆಯಾಗಬೇಕು—ಎಂಬ ನಿರ್ಣಯಗಳನ್ನು ಅಂಗೀಕರಿಸಲಾಯಿತು

ವಿದ್ಯುಚ್ಛಕ್ತಿ ತಂತಿಯಿಂದ ೪ ಜನರ ಮರಣ

ತಿರುವನಂತಪುರದ ಬಳಿ ಒಂದೆಡೆ ತೆಂಗಿನ ಮರಕ್ಕೆ ತಡೆಯಾಗಿ ಕಟ್ಟಿದ್ದ ಒಂದು ಕಬ್ಬಿಣದ ತಂತಿಯು ಮುರಿದು ವಿದ್ಯುಚ್ಛಕ್ತಿ ಪ್ರವಹಿಸುವ ತಂತಿಗೆ [illegible]ಮ ತಗುಲಿದ ಪರಿಣಾಮವಾಗಿ ಒಂದು ಎಳೆಯ ಮಗು ಮತ್ತು ಮೂವರು ಹೆಂಗಸರು ಸುಟ್ಟುಹೋಗಿ, ಒಬ್ಬಾತನಿಗೆ ತುಂಬಾ ಗಾಯವಾಗಿರುವುದೆಂದು ವರದಿಯಾಗಿದೆ

○ ಭಾರತ ಸರ್ಕಾರದ ವಿಜ್ಞಾನ ಸಂಶೋಧನಾ ಶಾಖೆಯ ಉಪಸಚಿವ ಶ್ರೀ ಕೇಶವದೇವ ಮಾಳವೀಯರು ಸದ್ಯದಲ್ಲೇ ಬೆಂಗಳೂರಿಗೆ ಆಗಮಿಸಿ, ರಾಜಧಾನಿಗೂ ಭೇಟಿ ಕೊಡುವರೆಂದು ತಿಳಿದುಬಂದಿದೆ

ಹಂಸಾ ಫುಡ್ ಪ್ರಾಡಕ್ಟ್ಸ್

ರಾಜಾರಾಂ ಅಗ್ರಹಾರ, ಮೈಸೂರು

ಎ ಎನ್ ಆರ್ ಶಾಸ್ತ್ರಿಯವರಿಂದ ಶಾಸ್ತ್ರೀಯ ರೀತಿ ತಯಾರಾದ ಹಂಸಾ ಮಾರ್ಕಿನ ಹುರಿಗಾಳು, ಸಾರಿನ ಮೆಣಸಿನ ಪುಡಿ, ಚಟ್ನಿ ಪುಡಿ, ಹುಳಿ ಅನ್ನದ ಪುಡಿ, ವಾಂಗೀಭಾತ್ ಪುಡಿ, ನಿಂಬೆ ಉಪ್ಪಿನಕಾಯಿ, ಹಪ್ಪಳಗಳು ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ ಒಂದಾವರ್ತಿ ಪರೀಕ್ಷಿಸಿ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ

ವ್ಯಾಪಾರಸ್ಥರಿಗೆ ಧಾರಾಳವಾದ ವಿನಾಯಿತಿ ಕೊಡಲಾಗುತ್ತೆ

ಸ್ಟಾಕಿಸ್ಟ್ಸ್ ನಂ 347 ದೇವರಾಜ ಮಾರ್ಕೆಟ್ ಒಳ ಭಾಗದಲ್ಲಿ ಜನತಾ ಕಾಫಿ ವರ್ಕ್ಸ್ ಪಕ್ಕ, ಮೈಸೂರು

Edited, Printed and Published by A R Nagarajan at Sadhvi Press, D. S. [illegible] Road [illegible]

ಲಿಲಿಪ್ರೂ। ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೨-೯-೧೯೫೨ [ಸಂಚಿಕೆ ೪೭

ಕೊರಿಯಾ ರಣರಂಗಕ್ಕೆ ರಾಷ್ಟ್ರೀಯ ಚೀಣಾ ಸೈನ್ಯ

ಶಿಕ್ಷಣ ಮಾಧ್ಯಮದ ಬಗ್ಗೆ ಮುಖ್ಯ ಮಂತ್ರಿಗಳ ಹೇಳಿಕೆ

ಕೆ. ಪುಟ್ಟಸ್ವಾಮಿಯವರ ಖಂಡನೆ

ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಈ ಕೆಳಗೆ ಕಂಡಂತೆ ಹೇಳಿಕೆಯನ್ನಿತ್ತಿದ್ದಾರೆ —

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬೊಂಬಾಯಿಯಲ್ಲಿ ಶಿಕ್ಷಣ ಮಾಧ್ಯಮ ಕುರಿತು ತಮ್ಮ ಅಭಿಪ್ರಾಯ ಸೂಚಿಸಿದ್ದಾರೆ. ಈ ಅಭಿಪ್ರಾಯ ವಿಷಾದಕರ. ವಿದ್ಯಾಭ್ಯಾಸ ಸುಧಾರಣೆಗೆ ಸಮಿತಿಯೊಂದನ್ನು ನೇಮಿಸಿ ಅದರ ಅಧ್ಯಕ್ಷರಾಗಿದ್ದುಕೊಂಡು ಅದಿನ್ನೂ ಕಾರ್ಯಾರಂಭ ಮಾಡುವ ಮೊದಲು ಇವರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿರುವುದು ತರವಲ್ಲ. ಮೈಸೂರು ಜನ ಕನ್ನಡಕ್ಕಿಂತ ಇಂಗ್ಲೀಷನ್ನೇ ಅಪೇಕ್ಷಿಸುತ್ತಾರೆಂದು ಇವರು ಹೇಳಿದಾಗ ಬಹು ಜನತೆಯ ಅಲ್ಪ ಭಾಗದ ಜನರ ಅಭಿಪ್ರಾಯವನ್ನು ಮಾತ್ರ ಗಣನೆಗೆ ತಂದು ಕೊಂಡಿರಬೇಕು. ವಿದ್ಯಾರ್ಥಿಗಳಿಗೆ ಅವಕಾಶ ಕೊಟ್ಟಾಗ ಅವರೂ ಇಂಗ್ಲೀಷನ್ನೇ ಅಪೇಕ್ಷಿಸುತ್ತಾರೆಂದು ಅವರು ಹೇಳಿದ್ದು ಸರಿಯಲ್ಲ. ಈ ಜನರ ಭ್ರಮೆ ಇನ್ನೂ ಹೋಗದಿರುವುದು ನಮ್ಮ ಮುಖ್ಯಮಂತ್ರಿಗಳಂಥವರು ಇಂತಹ ಮುಖ್ಯ ವಿಷಯದಲ್ಲಿ ಯೋಗ್ಯ ತೀರ್ಮಾನಕ್ಕೆ ಬರದೆ ಹಳೆಯ ಜಾಡಿನಲ್ಲಿ ಚಲಿಸುತ್ತಿರುವುದರ ಪರಿಣಾಮ.

ಪ್ರಥಮ ಹಂತದಲ್ಲಿ ವಿದ್ಯಾಭ್ಯಾಸ ಕೊಡುವುದು ನಾಡಿಗೆ ಆಗುತ್ತಿರುವ ದೊಡ್ಡ ನಷ್ಟವೆಂದು ರಾಷ್ಟ್ರಪತಿ ಮೊನ್ನೆ ತಾನೆ ಹೇಳಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲೂ ಕೂಡ ಶಿಕ್ಷಣ ಮಾಧ್ಯಮ ದೇಶಭಾಷೆಯಾದ ಕನ್ನಡವಲ್ಲದೆ ಬೇರೆ ಬೇಕೆಂದು ಮತ್ತ ಮತ್ತೆ ತೀರ್ಮಾನವಾಗಿದೆ. ಈ ವಿಷಯ ಅಸೆಂಬ್ಲಿಯ ಮುಂದೆ ಬರಬೇಕಾಗಿದೆ. ಹಲವು ವೇದಿಕೆಗಳಲ್ಲಿ ಈ ವಿಷಯದ ಪ್ರತಿಪಾದನೆ ನಡೆದಿದೆ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಒಂದು ಚಳವಳಿಯನ್ನೇ ನಡೆಸಿದ್ದಾರೆ. ಮೊನ್ನೆ ತಾನೆ ಹಾಸನದಲ್ಲಿ ಸೇರಿದ್ದ ಹೈಸ್ಕೂಲು ಅಧ್ಯಾಪಕರ ಗೋಷ್ಠಿಯಲ್ಲಿ ಶಿಕ್ಷಣ ಕನ್ನಡದಲ್ಲೇ ಇರಬೇಕೆಂದು ತೀರ್ಮಾನವಾಗಿದೆ.

ಈ ರೀತಿಯಲ್ಲಿ ಮೈಸೂರಿನ ಜನತೆ, ಶಿಕ್ಷಣ ಕನ್ನಡದಲ್ಲೇ ನಡೆಯಬೇಕೆಂಬ ತೀರ್ಮಾನಕ್ಕೆ ಬರಲು ಕಾಲ ವಿಳಂಬ ಮಾಡದೆ ಬಯಸುವುದನ್ನು ಅಪೇಕ್ಷಿಸುತ್ತಾರೆ. ಭಾರತದ ಹಲವು ಪ್ರಾಂತಗಳಲ್ಲಿ ಶಿಕ್ಷಣ ದೇಶಭಾಷೆಯಲ್ಲಿ ನಡೆಯುತ್ತಿದೆ. ಹಾಗಿದ್ದೂ ಶ್ರೀ ಹನುಮಂತಯ್ಯನವರು ಜನರು ಕನ್ನಡಕ್ಕಿಂತ ಇಂಗ್ಲೀಷನ್ನೇ ಅಪೇಕ್ಷಿಸುತ್ತಾರೆನ್ನುವುದು ಅಲ್ಲದೆ ಹಾಗೆ ಹೇಳುವುದು ತರವಲ್ಲ. ನ್ಯಾಯವಲ್ಲ; ದೇಶದ ಹಿತಸಾಧಿಸುವುದಲ್ಲ.

ಶಿಕ್ಷಣವು ದೇಶಭಾಷೆಯಲ್ಲಾಗುವುದರಿಂದ ದೇಶದ ಉದ್ಧಾರಕ್ಕೆ, ಬೆಳವಣಿಗೆಗೆ ವಿದ್ಯೆ ಸಂಪೂರ್ಣ ಉಪಯೋಗಕ್ಕೆ ಬರುತ್ತದೆಂದು ಸ್ವಾಮಿ ಘೋಷಿಸಿದ್ದಾರೆ, ರಾಷ್ಟ್ರಪತಿ ಪದೇ ಪದೇ ಹೇಳುತ್ತಿದ್ದಾರೆ. ಅಷ್ಟಲ್ಲದೆ ನಾನಾ ದೇಶದ ವಿದ್ಯಾವೇತ್ತರು ಇದೇ ಅಭಿಪ್ರಾಯಪಟ್ಟಿದ್ದಾರೆ. ಇದೆಲ್ಲದರ ಪರಿಶೀಲನೆ ಹೊಂದಿ ನಮ್ಮ ಮುಖ್ಯ ಮಂತ್ರಿಗಳು ತಮ್ಮ ಆತುರದ ಅಭಿಪ್ರಾಯ ಬಿಟ್ಟು ಸರಿಯಾದ ರೀತಿಯ ಕಾರ್ಯವನ್ನು ನಡೆಸಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಸಂಸ್ಥಾನದ ಕ್ಷಾಮ ನಿವಾರಣೆಗೆ ಮತ್ತೆ ೧೫,೦೦೦ ರೂ

ಭಾರತದ ಪ್ರಧಾನ ಮಂತ್ರಿಯವರು ಕ್ಷಾಮ ಪರಿಹಾರ ನಿವಾರಣಾ ಕಾರ್ಯಕ್ಕಾಗಿ ಮತ್ತೆ ೧೫,೦೦೦ ರೂ ಅನ್ನು ಕೊಟ್ಟಿರುವರೆಂದೂ, ಇದಕ್ಕಾಗಿ ಪ್ರಧಾನಿಯವರ ನಿಧಿಯಿಂದ ಒಟ್ಟು ೬೫,೦೦೦ ರೂ ಬಂದಂತಾಗಿದೆಯೆಂದೂ ಗೊತ್ತಾಗಿದೆ.

ಕನ್ಯಕಾಪರಮೇಶ್ವರಿ ಸೊಸೈಟಿಯ ವಾರ್ಷಿಕೋತ್ಸವ

ಮೈಸೂರು ೨೨

ರಾಜಧಾನಿಯ ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿಯ ೨೧ ನೇ ವಾರ್ಷಿಕೋತ್ಸವವು ನೆನ್ನೆ ದಿನ ಟೌನ್‌ಹಾಲಿನಲ್ಲಿ ಜರುಗಿತು. ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಚ್ ಸಿ ದಾಸಪ್ಪನವರು ಅಗ್ರಾಸನವನ್ನು ಅಲಂಕರಿಸಿದ್ದರು. ಶ್ರೀಗಳಾದ ಜಯಚಂದ್ರ ಮತ್ತು ನಾರಾಯಣ ಶೆಟ್ಟರಿಂದ ಪ್ರಾರ್ಥನೆಯಾದನಂತರ ವಿ|| ಸರಸಕವಿ ಭಾರತಿಯವರು ಸ್ವಾಗತ ಪದ್ಯ ಪಠಣ ಮಾಡಿದರು. ಸೊಸೈಟಿ ಉಪಾಧ್ಯಕ್ಷರಾದ ಶ್ರೀ ಬಿ. ಎಲ್ ನಾರಾಯಣಸ್ವಾಮಿ ಶೆಟ್ಟರು ಸ್ವಾಗತ ಭಾಷಣ ಮಾಡಿದ ತರುವಾಯ ಸೊಸೈಟಿಯ ಕಾರ್ಯದರ್ಶಿ ಶ್ರೀ ಡಿ ಪುಟ್ಟರಶೆಟ್ಟರು ವರದಿಯನ್ನೊಪ್ಪಿಸಿದರು. ಸಂಗೀತ ವಿದುಷಿ ಆರ್ ಜಲಜಾಕ್ಷಮ್ಮ ಮತ್ತು ಪಾರ್ಟಿಯವರ ಪುಷ್ಪಾರ್ಚನವಾದ ಗಾಯನವಾಯಿತು. ಈ ಸಂದರ್ಭದಲ್ಲಿ, ಸಂಸ್ಥೆಗೆ ಅನೇಕ ರೀತಿ ಸೇವೆ ಸಲ್ಲಿಸಿ, ಅದರ ಪುರೋಭಿವೃದ್ಧಿಗೆ ಕಾರಣರಾಗಿರುವ ಪಿ ಗೋಪಾಲಕೃಷ್ಣ ಶೆಟ್ಟರಿಗೆ ಬಿನ್ನವತ್ತಳೆಯನ್ನು ಅರ್ಪಿಸುವ ಸಮಾರಂಭವೂ ಏರ್ಪಾಡಾಗಿತ್ತು.

ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿ ರಾಯರು ಮಾತನಾಡಿ ಶ್ರೀ ಗೋಪಾಲಕೃಷ್ಣ ಶೆಟ್ಟರ ಸೇವಾತತ್ಪರತೆಯನ್ನು ಶ್ಲಾಘಿಸಿ, ಸೊಸೈಟಿಯು ಅವರ ನೇತೃತ್ವದಲ್ಲಿ ಹೆಚ್ಚುಹೆಚ್ಚು ಅಭಿವೃದ್ಧಿ ಹೊಂದಿರುವುದನ್ನು ಪ್ರಶಂಸಿಸಿದರು. ತರುವಾಯ ಶ್ರೀ ಬಿ ಎಲ್ ರಾಮಸ್ವಾಮಿ ಶೆಟ್ಟರು ಬಿನ್ನವತ್ತಳೆಯನ್ನು ಓದಿ ರಜತ ಕರಂಡದಲ್ಲಿ ಅದನ್ನು ಶ್ರೀ ಗೋಪಾಲಕೃಷ್ಣ ಶೆಟ್ಟರಿಗೆ ಅರ್ಪಿಸಿದರು. ಶ್ರೀ ಗೋಪಾಲಕೃಷ್ಣ ಶೆಟ್ಟರು ಸೂಕ್ತ ಉತ್ತರವಿತ್ತು ತಮ್ಮನ್ನು ಗೌರವಿಸಿದ ಬಗ್ಗೆ ಕೃತಜ್ಞತೆ ಸಲ್ಲಿಸಿದರು. ಅಧ್ಯಕ್ಷ ಶ್ರೀ ಎಚ್ ಸಿ ದಾಸಪ್ಪನವರು ಮಾತನಾಡಿ ಶ್ರೀ ಗೋಪಾಲಕೃಷ್ಣ ಶೆಟ್ಟರು ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಶ್ಲಾಘಿಸಿ, ಸೊಸೈಟಿಯು ಅವರ ನೇತೃತ್ವದಲ್ಲಿ ಹೆಚ್ಚು ಪುರೋಭಿವೃದ್ಧಿ ಹೊಂದುವುದರಲ್ಲಿ ಸಂದೇಹವಿಲ್ಲವೆಂದು ನುಡಿದರು. ವಂದನಾರ್ಪಣೆ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕೊರಿಯಾದಿಂದ ಅಮೆರಿಕದ ಸೈನ್ಯಗಳ ವಾಪಸು

ಕೊರಿಯಾ ಯುದ್ಧ ಕಾರ್ಯಾಚರಣೆಯಲ್ಲಿ ನಿರತವಾಗಿರುವ ಅಮೆರಿಕದ ಸೈನ್ಯಗಳನ್ನು ತಾತ್ಕಾಲಿಕವಾಗಿ ಹಿಂದಕ್ಕೆ ಕರೆಸಿ ಅವುಗಳ ಸ್ಥಾನದಲ್ಲಿ ರಾಷ್ಟ್ರೀಯ ಚೀಣಾ ಮತ್ತು ದಕ್ಷಿಣ ಕೊರಿಯದ ಸೈನ್ಯಗಳನ್ನು ರಣಾಂಗಣಕ್ಕೆ ಕಳುಹಿಸಲು ಕಾಂಗ್ರೆಷ್ನಲ್ ಸಮಿತಿಯು ಒಪ್ಪಿರುವುದಾಗಿಯೂ, ಸದರಿ ಸಮಿತಿಯ ಹತ್ತು ಮಂದಿ ಸದಸ್ಯರು ಯುದ್ಧ ಪ್ರದೇಶದಲ್ಲಿ ಸಂಚರಿಸಿ ಮೇಲ್ಕಂಡ ತೀರ್ಮಾನಕ್ಕೆ ಬಂದಿರುವರೆಂದೂ ವರದಿಯಾಗಿದೆ.

ಅಂತರ್ಜಾತೀಯ ವಿವಾಹಕ್ಕೆ ರಾಜಾಜಿ ಪ್ರೇರಣೆ

ಕಡಲೂರಿನ ದ್ವಿತೀಯ ರಾಜಕೀಯ ಸಮ್ಮೇಳನವು ನೆನ್ನೆ ಸಮಾವೇಶಗೊಂಡಿದ್ದಾಗ ರಾಜಾಜಿಯವರು ಭಾಷಣ ಮಾಡುತ್ತಾ ದಕ್ಷಿಣ ಭಾರತದ ಅಭಿವೃದ್ಧಿಗೆ ವರ್ಣ ಭೇದವು ಒಂದು ಅಡಚಣೆಯಾಗಿರುವುದೆಂದೂ, ಇದನ್ನು ನಿವಾರಿಸಲು ಅಂತರ್ಜಾತೀಯ ವಿವಾಹವನ್ನು ಜಾರಿಗೆ ತರಬೇಕೆಂದೂ ತಿಳಿಸಿದರು.

ಜೇನಿನ ಮೇಲೆ ಸೇಡು ತೀರಿಸಲು ಹೋಗಿ ಮರಣ

ತಿರುಚೂರು ಬಳಿ ಪಲ್ಲಿಸೇರಿಯಲ್ಲಿ ಪೈಲೋಕ್ ಎಂಬ ಒಬ್ಬ ವೃದ್ಧನ ಎಳೆಯ ಮಗುವನ್ನು ವಿಷಪೂರಿತ ಜೇನು ಹುಳುಗಳು ಕಡಿದುವೆಂದೂ, ಅದರಿಂದ ಮಗುವು ಸಾಯಲಾಗಿ, ವೃದ್ಧನಿಗೆ ಕೋಪ ಬಂದು ಅವನು ಹತ್ತಿರವಿದ್ದ ಜೇನುಗೂಡನ್ನು ಕೋಲಿನಿಂದ ಕೆಡವಲು, ಹುಳುಗಳು ಅವನನ್ನು ಕಡಿದುದರಿಂದ ಅವನೂ ಮಡಿದನೆಂದೂ ವರದಿಯಾಗಿದೆ.

ವಸ್ತು ಪ್ರದರ್ಶನದಲ್ಲಿ ನವ ಚೀಣದ ಪ್ರಗತಿಯ ಬಗ್ಗೆ ಚಿತ್ರಪಟಗಳು

ರಾಜಧಾನಿಯ ಇಂಡಿಯಾ- ಚೀಣಾ ಸ್ನೇಹ ಸಂಘದವರು ದಸರಾ ವಸ್ತು ಪ್ರದರ್ಶನದ ಪ್ರಧಾನ ಕಟ್ಟಡದ ಒಳಗಡೆ 'ಜ' ಬ್ಲಾಕಿನಲ್ಲಿ ನವಚೀಣಾದ ಜನಜೀವನ ಭೂಸುಧಾರಣೆ, ವಿದ್ಯಾಭ್ಯಾಸ, ಕಾರ್ಮಿಕರ ಹಿತರಕ್ಷಣೆ ಇವೇ ಮೊದಲಾದ ವಿಷಯಗಳ ಬಗ್ಗೆ ಚಿತ್ರಪಟಗಳಿಂದ ಕೂಡಿದ ಪ್ರದರ್ಶನವೊಂದನ್ನು ಉಚಿತವಾಗಿ ಏರ್ಪಡಿಸುತ್ತಾರೆ.

ಶಸ್ತ್ರಾಸ್ತ್ರಗಳನ್ನು ಒಪ್ಪಿಸಲು ಈಜಿಪ್ಟ್ ಪ್ರಜೆಗಳಿಗೆ ಆಜ್ಞೆ

ಸೂಯೆಜ್ ಕಾಲುವೆ ಪ್ರದೇಶವನ್ನು ಬ್ರಿಟಿಷರಿಂದ ವಿಮುಕ್ತಗೊಳಿಸಿ ಈಜಿಪ್ಟಿನ ಪೂರ್ಣಾಧಿಕಾರಕ್ಕೆ ಒಳಪಡಿಸುವ ಗುರಿಯಿಂದ ಈಜಿಪ್ಟಿನ ಎಲ್ಲ ಪ್ರಜೆಗಳೂ ಶಸ್ತ್ರಾಸ್ತ್ರ ಧಾರಣೆ ಮಾಡಬಹುದೆಂದು ಕಳೆದ ವರ್ಷ ಅಲ್ಲಿನ ವಾಫ್ಡ್ ಪಕ್ಷದ ಸರ್ಕಾರವು ಆಜ್ಞೆ ಮಾಡಿತ್ತಷ್ಟೆ. ಈಗ ಈಜಿಪ್ಟಿನ ಮಿಲಿಟರಿ ಗವರ್ನರಾಗಿರುವ ಜನರಲ್ ನಗೀಬರು ನೆನ್ನೆ ಒಂದು ಆಜ್ಞೆಯನ್ನು ಹೊರಡಿಸಿ ಪರವಾನಗಿ ಪಡೆದಾಗಲೀ ಇಲ್ಲದೆಯಾಗಲೀ ಶಸ್ತ್ರಾಸ್ತ್ರಗಳನ್ನು ಹೊಂದಿರುವ ಖಾಸಗೀ ಜನರೆಲ್ಲರೂ ಒಂದು ವಾರದೊಳಗೆ ಅವನ್ನು ಸರ್ಕಾರದ ವಶಕ್ಕೆ ಒಪ್ಪಿಸಬೇಕೆಂದು ಸೂಚಿಸಿರುವರು. ನ್ಯಾಯ ಮತ್ತು ಶಿಸ್ತುಗಳ ಪಾಲನೆಗಾಗಿ ಪೋಲೀಸರು ಮಿಲಿಟರಿ ಸಹಾಯವನ್ನು ಪಡೆಯಬಹುದೆಂದೂ ತಿಳಿಸಲಾಗಿದೆ.

ಭಾನುವಾರಗಳಲ್ಲಿ ಅಂಚೆ ಕಛೇರಿ ವ್ಯವಹಾರ

ಪೂನಾದಲ್ಲಿ ನೆನ್ನೆ ಸಮಾವೇಶಗೊಂಡಿದ್ದ ಮರಾಠಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದಲ್ಲಿ ಕೇಂದ್ರ ಸರ್ಕಾರದ ವಾರ್ತಾ ಸಚಿವ ಶ್ರೀ ಜಗಜೀವನ್ ರಾಂರವರು ಮಾತನಾಡುತ್ತಾ, ಎರಡು ಲಕ್ಷಕ್ಕೂ ಮೇಲ್ಪಟ್ಟು ಪ್ರಜಾ ಸಂಖ್ಯೆಯಿರುವ ನಗರಗಳ ಅಂಚೆ ಕಛೇರಿಗಳಲ್ಲಿ ಭಾನುವಾರಗಳಲ್ಲೂ ವ್ಯವಹಾರ ನಡೆಸುವಂತೆ ವ್ಯವಸ್ಥೆ ಮಾಡುವ ಅಂಶವನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ಭರವಸೆಯಿತ್ತುದಾಗಿ ತಿಳಿದು ಬಂದಿದೆ.

ಸ್ಥಾನಬದ್ಧತಾ ಶಾಸನದ ಬಗ್ಗೆ ಸಂಸ್ಥಾನಗಳಿಗೆ ಸೂಚನೆ

ಬರುವ ತಿಂಗಳು ೧ ನೇ ತಾರೀಖಿನಿಂದ ಜಾರಿಗೆ ಬರಲಿರುವ ಮುನ್ನೆಚ್ಚರಿಕೆ ಸ್ಥಾನಬದ್ಧತಾ ಶಾಸನವನ್ನು ಕುರಿತು ಕೇಂದ್ರ ಸರ್ಕಾರದವರು ಎಲ್ಲಾ ಸಂಸ್ಥಾನಗಳಿಗೂ ಕೆಳಗೆ ಕಂಡಂತೆ ಸೂಚನೆಯನ್ನು ಕಳುಹಿಸಿರುವರೆಂದು ತಿಳಿದು ಬಂದಿದೆ - ಸ್ಥಾನಬದ್ಧರ ಸಂಸಾರದವರಿಗೆ ಒಂದೇ ಸಮನಾದ ಸಹಾಯಧನ ಕೊಡಬೇಕು, ಸ್ಥಾನಬದ್ಧರ ಕುಂದುಕೊರತೆಗಳ ಬಗ್ಗೆ ಅವರು ಸಲಹಾ ಸಮಿತಿಗೆ ಅರಿಕೆ ಮಾಡಿಕೊಳ್ಳಲು ವಕೀಲರ ಸಲಹೆ ಪಡೆಯುವ ಅವಕಾಶ ಕಲ್ಪಿಸಬೇಕು. ಸ್ಥಾನಬದ್ಧತೆಯ ಆಜ್ಞೆಗೆ ಗೃಹ ಸಚಿವರ ಅಥವಾ ಇತರ ಬೇರೆ ಸಚಿವರ ರುಜು ಇರಬೇಕಾದುದು ಅಗತ್ಯ.

ಹಾವಿನ ಹಿಡಿತದಿಂದ ಮಗುವಿನ ಪಾರು

ಲಕ್ನೋ ಬಳಿ ಫೂಲ್‌ಬಾಗ್ ಎಂಬಲ್ಲಿ ಕಳೆದ ಶುಕ್ರವಾರ ಒಂದು ಹಾವು ಮೂರು ವರ್ಷದ ಮಗುವಿನ ತೋಳಿಗೆ ಸುತ್ತಿಕೊಂಡು ಬಹಳ ಹೊತ್ತಾದರೂ ಬಿಡದಿರಲು, ಮಗುವಿನೊಡನಿದ್ದ ಆಳು ಉಪಾಯವನ್ನು ಹೂಡಿ, ಒಂದು ಬಟ್ಟಲಿನಲ್ಲಿ ಹಾಲನ್ನು ತರಿಸಿ ಹಾವಿಗೆ ಕಾಣುವಂತೆ ಸಮೀಪದಲ್ಲಿ ಇಟ್ಟನೆಂದೂ, ತರುವಾಯ ಹಾವು ಮಗುವನ್ನು ಬಿಟ್ಟು ಹಾಲಿನ ಬಟ್ಟಲಿನ ಕಡೆ ಓಡಿಹೋದ ನಂತರ ಮಗುವನ್ನು ಕರೆದುಕೊಂಡನೆಂದೂ ವರದಿಯಾಗಿದೆ.

ಮದ್ರಾಸು ನೆಯ್ಗೆಯವರ ಸತ್ಯಾಗ್ರಹ

ಪಂಚೆ ಮತ್ತು ಸೀರೆಗಳನ್ನು ನೇಯಲು ಕೈ ಮಗ್ಗದವರಿಗೆ ಮಾತ್ರ ಅವಕಾಶವನ್ನು ಕೊಡುವಂತೆ ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಕೊಟ್ಟಿರುವ ಸೂಚನೆಯನ್ನು ಕೇಂದ್ರ ಸರ್ಕಾರದವರು ಒಪ್ಪದಿದ್ದರೆ, ಮದ್ರಾಸು ಪ್ರಾಂತಾದ್ಯಂತ ಗಿರಣಿ ಬಟ್ಟೆಗಳನ್ನು ಬಹಿಷ್ಕರಿಸಲು ಸತ್ಯಾಗ್ರಹ ಹೂಡುವಂತೆ ತಮಿಳು ನಾಡು ಕೈಮಗ್ಗದ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ ಪ್ರಧಾನಿ ನೆಹರೂರವರನ್ನು ಕೈಮಗ್ಗದ ೪ ಜನ ಪ್ರತಿನಿಧಿಗಳು ದೆಹಲಿಯಲ್ಲಿ ಭೇಟಿ ಮಾಡಿದ್ದರೆಂದೂ ಹೇಳಲಾಗಿದೆ

ಅಂಚೆ ನೌಕರರ ಬೇಡಿಕೆಗಳು

ಮೈಸೂರು ಡಿವಿಜನ್ನಿನ ಅಂಚೆ ಮತ್ತು ಕೆಳದರ್ಜೆ ನೌಕರರ ಸಂಘದ ಸಭೆಯು ಶುಕ್ರವಾರ ಸಂಘದ ಉಪಾಧ್ಯಕ್ಷರಾದ ಶ್ರೀ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು ಕಾರ್ಯದರ್ಶಿ ಶ್ರೀ ಕೆ ವಿ ಶ್ರೀನಾಥ್, ಶ್ರೀ ಗುರುರಾಜಾಚಾರ್, ಮತ್ತು ಶ್ರೀ ಶಾಸ್ತ್ರಿಯವರು ಭಾಷಣ ಮಾಡಿ ಸಂಘದ ಪುರೋಭಿವೃದ್ಧಿ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ಅಂಚೆ ನೌಕರರನ್ನು ಖಾಯಂಗೊಳಿಸುವುದು, ಕೆಲಸದಿಂದ ವಜಾ ಮಾಡಿರುವ ಪೋಸ್ಟ್‌ಮನ್ನುಗಳ ಸರ್ವಿಸ್ಸನ್ನು ಪರಿಶೀಲಿಸಿ ಅವರನ್ನು ಕೂಡಲೇ ಕೆಲಸದ ಮೇಲೆ ತೆಗೆದುಕೊಳ್ಳುವುದು, ಗ್ರಾಮಾಂತರದಲ್ಲಿ ನಡೆದ ಅಂಚೆ ಮತ್ತು ತಂತಿ ಮುಷ್ಕರದ ಕಾಲದ ಸಂಬಳವನ್ನು ಕೊಡದಿರುವವರಿಗೆ ಕೊಡುವ ವ್ಯವಸ್ಥೆ ಮಾಡುವುದು—ಎಂಬ ನಿರ್ಣಯಗಳನ್ನು ಮಾಡಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ವಿ ನಾರಾಯಣ ಅಯ್ಯರ್ ವೀಣಾವಾದನ ಮಧ್ಯಾಹ್ನ ೧೨೦ ಕೆಲಸ ಶ್ರೀಮತಿ ಎಸ್ ಸಿಂಗ್ ಸಿತಾರ್ ಸಂಜೆ ೬ ೧೦ ವಸುಮತಿ ರಾಮಚಂದ್ರ ಸಂಗೀತ ೬ ೪೦ ಗಾನಸಿಹಾವ್ವ ೭ ಶ್ರೀ ಎಸ್ ೮ ೦ ಹ ಸಿತಾರ್ ಆ ವಿ ನಾರಾಯಣ ಅಯ್ಯರ್ ವೀಣಾವಾದನ ೮ ೪೦ ವೃಂದ ಸಂಗೀತ ೯ ೦೫ ಇಂಗ್ಲಿಷಿನಲ್ಲಿ ಸಂಭಾಷಣೆ ೯ ೩೦ ಗಾನಾಮೃತ

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್,
ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ಸರ್ಕಾರದಿಂದ ಆಹಾರ ಕೇಳ ಕೂಡದೆಂದು ನಿರ್ಧಾರ

ಬೊಪಾಲ್ ಸಂಸ್ಥಾನದ ದೇವಾರಿ ತಹಶೀಲಿನ ಪ್ರಮುಖರು ಸಭೆ ನಡೆಸಿ ಸರ್ಕಾರದಿಂದ ಆಹಾರ ಧಾನ್ಯವನ್ನು ಕೇಳಕೂಡದೆಂದೂ, ತಾವೇ ಬೇರೆ ಕಡೆಗಳಿಂದ ಧಾನ್ಯವನ್ನು ಒದಗಿಸಿಕೊಳ್ಳಬೇಕೆಂದೂ ನಿರ್ಧರಿಸಿರುತ್ತಾರೆ ಧಾನ್ಯವನ್ನು ಬಡವರಿಗೆ ರಿಯಾಯಿತಿ ಧಾರಣೆಯ ಪ್ರಕಾರ ಮಾರಬೇಕೆಂದೂ ಗೊತ್ತು ಮಾಡಿದ್ದಾರೆ

ಸಾಲುಮರದ ರೆಂಬೆ ತಗುಲಿ ಲಾರಿ ಪ್ರಯಾಣಿಕರ ಮರಣ

ಮದ್ರಾಸಿನ ಬಳಿ ನೊನ್ನೆ ೫ ಜನರಿದ್ದ ಲಾರಿಯೊಂದು ಹೋಗುತ್ತಿದ್ದಾಗ ರಸ್ತೆ ಪಕ್ಕದ ಸಾಲು ಮರಗಳ ರೆಂಬೆಗಳು ತಗುಲಿ ಒಬ್ಬನು ಲಾರಿಯೊಳಗೆ ಬಿದ್ದನೆಂದೂ, ಇನ್ನಿಬ್ಬರು ಹೊರಕ್ಕೆ ಹಾಕಲ್ಪಟ್ಟರೆಂದೂ, ಇದರಿಂದ ಅವರಿಗೆ ಗಾಯಗಳಾಗಿ ಆಸ್ಪತ್ರೆಯಲ್ಲಿ ಮೂವರು ಮಡಿದರೆಂದು ಹೇಳಲಾಗಿದೆ

ವಿಶ್ವೇಶ್ವರಯ್ಯನವರ ವರ್ಧಂತಿ

ನಂಜನಗೂಡು ತಾ॥ ಮುತ್ತೂರಿನ ಮಾಧ್ಯಮಿಕ ಶಾಲೆಯಲ್ಲಿ ಕಳೆದ ಸೋಮವಾರ ಸರ್ ಎಂ ವಿಶ್ವೇಶ್ವರಯ್ಯನವರ ೯೨ನೇ ವರ್ಷದ ವರ್ಧಂತಿಯನ್ನು ಶ್ರೀ [illegible] ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಪ್ರಾರ್ಥನೆಯಾದನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸುಬ್ಬರಾಯರು ಸರ್ ಎಂ ವಿ ಯವರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ವಿದ್ಯಾರ್ಥಿಗಳಿಗೆ ತಿಳಿಸಿದರು ಅಧ್ಯಕ್ಷರು ಮಾತನಾಡುತ್ತಾ ಸರ್ ಎಂ ವಿ ಯವರು ಇಡೀ ಜಗತ್ತಿನಲ್ಲೇ ಒಬ್ಬ ಆದರ್ಶ ಪುರುಷರೆಂದೂ, ಅವರ ಜೀವನದಲ್ಲಿ ಕಂಡುಬರುವ ಶಿಸ್ತು, ಸಂಘಟನೆ, ಕಾರ್ಯದಕ್ಷತೆ ಮತ್ತು ದೇಶಪ್ರೇಮಗಳು ಪ್ರತಿಯೊಬ್ಬ ಯುವಕನಿಗೂ ಮಾರ್ಗದರ್ಶಕವಾಗಿವೆಯೆಂದೂ ತಿಳಿಸಿದರು ನಂತರ ರಾಷ್ಟ್ರಗೀತೆಯೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು

ಹಂಸಾ ಫುಡ್ ಪ್ರಾಡಕ್ಟ್ಸ್
ರಾಜಾರಾಂ ಅಗ್ರಹಾರ, ಮೈಸೂರು
ಎ ಎನ್ ಆರ್ ಶಾಸ್ತ್ರಿಯವರಿಂದ ಶಾಸ್ತ್ರೀಯ ರೀತಿ ತಯಾರಾದ ಹಂಸಾ ಮಾರ್ಕಿನ ಹುರಿಗಾಳು, ಸಾರಿನ ಪುಡಿ, ಚಟ್ನಿ ಪುಡಿ, ಹುಳಿ ಅನ್ನದ ಪುಡಿ, ವಾಂಗೀಬಾತ್ ಪುಡಿ, ನಿಂಬೇ ಉಪ್ಪಿನಕಾಯಿ, ಹಪ್ಪಳಗಳು ಬಿಡಿಯಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ ಒಂದಾವರ್ತಿ ಪರೀಕ್ಷಿಸಿ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ
ವ್ಯಾಪಾರಸ್ಥರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ
ಸ್ಟಾಕಿಸ್ಟ್: ನಂ 347 ದೇವರಾಜ ಮಾರ್ಕೆಟ್ ಒಳ ಭಾಗದಲ್ಲಿ ಸಾಹುಕಾರ್ ಕಾಫಿ ವರ್ಕ್ಸ್ ಪಕ್ಕ, ಮೈಸೂರು

ಮನಿಯಾರ್ಡರ್ ಕೂಪನ್ನಲ್ಲಿ ಕಳುಹಿಸುವವರ ವಿಳಾಸ

ಬರುವ ತಿಂಗಳು ೧ನೇ ತಾ॥ನಿಂದ ಮನಿಯಾರ್ಡರುಗಳನ್ನು ಕಳುಹಿಸುವವರು ಕೂಪನ್ನಿನ ಹಿಂಭಾಗದಲ್ಲಿರುವ ಸ್ಥಳದಲ್ಲಿ ತಮ್ಮ ವಿಳಾಸವನ್ನು ಬರೆಯಬೇಕೆಂದು ಸೂಚಿಸಲಾಗಿದೆ ಇದರಿಂದ ಕೆಲಸವು ಹೆಚ್ಚು ಸುಗಮವಾಗುವುದೆಂದೂ, ವ್ಯಾಪಾರ ಮುಂತಾದುವನ್ನು ಮಾಡುವವರಿಗೆ ಇದರಿಂದ ಸೌಲಭ್ಯವುಂಟಾಗುವುದೆಂದೂ ತಿಳಿಸಲಾಗಿದೆ

ವನ ಮೃಗ ರಕ್ಷಣೆಗೆ ಸಂಸ್ಥಾನದ ಸಮಿತಿ

ವನಮೃಗಗಳನ್ನು ರಕ್ಷಿಸುವ ಬಗ್ಗೆ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ೧೩ ಜನ ಸದಸ್ಯರುಳ್ಳ ಸಮಿತಿಯೊಂದನ್ನು ಸರ್ಕಾರದವರು ರಚಿಸಿರುತ್ತಾರೆ. ಕಾಡು ಮೃಗಗಳ ರಕ್ಷಣೆ, ಹೊಸ ವನಗಳ ನಿರ್ಮಾಣ, ಹೊಸಹೊಸ ಪ್ರಾಣಿಗಳ ಶೇಖರಣೆ, ಅರಣ್ಯ ನೀತಿ ಇವೇ ಮುಂತಾದ ವಿಷಯಗಳನ್ನು ಸಮಿತಿಯು ಪರಿಶೀಲಿಸುವುದು. ವರ್ಷಕ್ಕೆ ೨ ಬಾರಿ ಎದು ಸಮಾವೇಶಗೊಂಡು ಸರಕಾರಕ್ಕೆ ಶಿಫಾರಸು ಮಾಡಲಿರುವುದು

ಜನತಾ ಶಿಕ್ಷಣ ಕೇಂದ್ರದ ಪ್ರಾರಂಭೋತ್ಸವ

ಮೈಸೂರು ನಗರದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಕಳೆದ ಸೋಮವಾರ ಶಾಂತಮೂರ್ತಿಯ ಜನತಾ ಶಿಕ್ಷಣ [illegible] ಪ್ರಾರಂಭೋತ್ಸವವನ್ನು ಶ್ರೀ [illegible] ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ನೆರವೇರಿಸಿದರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ನ ಚನ್ನಯ್ಯನವರು ಜನತಾ ಶಿಕ್ಷಣ ಕೇಂದ್ರದ ಉದ್ದಿಶ್ಯವನ್ನೂ [illegible] ನಡವಳಿಕೆಗಳನ್ನೂ ವಿವರಿಸಿದರು

SREE GANESHA
TALKIES
From 23-9—
Warners
DAMNED DON'T CRY
Joan Crawford

ಕುಡುಗೋಲಿನಿಂದ ೩ ಮಕ್ಕಳ ಕೊಲೆ

ಈರೋಡಿನ ಬಳಿ ಕರುಮಗೌಂಡನ್ ಪಾಳಯಂ ಎಂಬಲ್ಲಿ ರಂಗಸ್ವಾಮಿನಾಯ್ಡು ಎಂಬಾತನು ಕಳೆದ ಸೋಮವಾರ ರಾತ್ರಿ, ತನ್ನ ಪತ್ನಿಯು ಮನೆಯಲ್ಲಿಲ್ಲದ ವೇಳೆಯಲ್ಲಿ ಕುಡುಗೋಲಿನಿಂದ ತನ್ನ ಮೂರು ಮಕ್ಕಳನ್ನು ಕಡಿದು ಸಾಯಿಸಿದನೆಂದೂ, ಅವನಿಂದ ಕಡಿಯಲ್ಪಟ್ಟ ೯ ವರ್ಷದ ಇನ್ನೊಬ್ಬ ಮಗಳು ಆಸ್ಪತ್ರೆಯಲ್ಲಿ ಗುಣ ಹೊಂದುತ್ತಿರುವಳೆಂದೂ ಹೇಳಲಾಗಿದೆ ಈ ಕೃತ್ಯವನ್ನು ನಡೆಸಿ ರಂಗಸ್ವಾಮಿ ನಾಯ್ಡುವು ನೇಣುಹಾಕಿಕೊಳ್ಳಲು ಪ್ರಯತ್ನ ಪಟ್ಟನೆಂದೂ, ಆದರೆ ಅವನ ಸಹೋದರರಿಂದ ತಡೆಯಲ್ಪಟ್ಟನೆಂದೂ, ಪೋಲೀಸರು ಅವನನ್ನು ಬಂಧಿಸಿ ತನಿಖೆ ನಡೆಸುತ್ತಿರುವರೆಂದೂ ವರದಿಯಾಗಿದೆ

ಕ್ಷಾಮ ನಿವಾರಣೆಗೆ ಸಹಾಯಕ್ಕಾಗಿ ಮನವಿ

ಮೈಸೂರು ಸಂಸ್ಥಾನದ ಹಲವು ಕಡೆಗಳಲ್ಲಿ ತಲೆದೋರಿರುವ ಕ್ಷಾಮ ಪರಿಸ್ಥಿತಿಯನ್ನು ನಿವಾರಿಸುವ ಸಲುವಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಮೈಸೂರ ಕ್ಷಾಮ ನಿವಾರಣಾ ಸಮಿತಿಯೊಂದನ್ನು ರಚಿಸಿರುವರೆಂದೂ, ಸಂಘದ ಸ್ವಯಂಸೇವಕರು ಧನಧಾನ್ಯ ರೂಪದಲ್ಲಿ ಕ್ಷಾಮ ಪೀಡಿತರಿಗಾಗಿ ಸಹಾಯವನ್ನು ಸಂಗ್ರಹಿಸುತ್ತಿರುವರೆಂದೂ, ಈ ಕಾರ್ಯಕ್ಕಾಗಿ ಮಹಾಜನರು ಉದಾರವಾಗಿ ದಾನ ಮಾಡಬೇಕೆಂದೂ ಕರ್ನಾಟಕ ಪ್ರಾಂತ್ಯ ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕರಾದ ಶ್ರೀ ಯಾದವರಾವ್ ಜೋಷಿಯವರು ಮನವಿ ಮಾಡಿಕೊಂಡಿರುವರು

○ ಭಾರತದ ನಾನಾ ಅಭಿವೃದ್ಧಿ ಕಾರ್ಯಗಳಿಗಾಗಿ ಕಳೆದ ಸಾಲಿನಲ್ಲಿ ೩೧೬ ಕೋಟಿ ರೂ ಗಳನ್ನು ವೆಚ್ಚ ಮಾಡಲಾಯಿತೆಂದು ತಿಳಿದುಬಂದಿದೆ.

। ಜೈ ಹನುಮಾನ್ ।
ತಾ 29-9-52 ನೇ ಸೋಮವಾರ
ಶ್ರೀ ಮಹಾಪ್ರಾಣ ದೇವರ
ಜಂಬೂಸವಾರಿ ಮೆರವಣಿಗೆ
ನೋಡಲು ದೇವರಾಜ ಮಾರ್ಕೆಟ್ಟಿನ ಮೇಲೆ ಸ್ಥಳ ಏರ್ಪಡಿಸಲಾಗಿದೆ
ಮೆರವಣಿಗೆ ಹೋಗುವಾಗ
1 ಟಿಕೆಟ್ಟಿಗೆ 0 4 0
ಮೆರವಣಿಗೆ ಬರುವಾಗ 0-4 0
ಎಸ್ ಈಶ್ವರರಾವ್ ಕಂಟ್ರಾಕ್ಟರ್

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
24.9.52 ನೇ ಬುಧವಾರದಿಂದ ಅನೋಘ ಪ್ರಾರಂಭ
(ತೆಲುಗು)
★ **ಸ್ತ್ರೀ ಸಾಹಸಂ** ★
(ಕಲರ್ ಪ್ರಿಂಟ್)
ನಾತ್ರ ಅಂಜಲಿ, ನಾಗೇಶ್ವರರಾವ್ ಶ್ರೀಯುತ್ತ ರೇಲಂಗಿ, ಗಿರಿಜ, ಸಿ ಎಸ್ ಆರ್ ಶಿವರಾವ್ ಮುಂತಾದವರು

ದಸರಾ ಮಹೋತ್ಸವಕ್ಕಾಗಿ:- ಹೊಸ ಮಾದರಿಯ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ನಿ ಸೀರೆಗಳೂ, ದಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ
★ **M. V. ಭೋಜಯ್ಯ** ಇಂಡಿಯನ್ ಬ್ಯಾಂಕ್ ಎದುರು, ಮೈಸೂರು ಬಿ ಎ

ರಿಜಿಸ್ಟರ್ಡ್ ನಂ. ೨೪೨ ||ವಂದೇ ಮಾತರಂ|| ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೩೦-೯-೧೯೫೨ [ಸಂಚಿಕೆ ೪೮

ರೈಲ್ವೆಯವರ ಮುಷ್ಕರ ಹೂಡದೆಂದು ಮನವಿ

ವಿಮಾನ ದಾಳಿಯಿಂದ ಕೊರಿಯಾ ನಗರದ ನಾಶ

ಕಳೆದ ೧೯ ನೇ ತಾ|| ರಾತ್ರಿ ನಡೆದ ವಿಮಾನ ದಾಳಿಯಿಂದ ಉತ್ತರ ಕೊರಿಯದ ಪಿನಾಂಗ್ ನಗರವು ನಾಶಗೊಂಡಿರುವುದೆಂದು ವರದಿಯಾಗಿದೆ. ನೆನ್ನೆ ದಿನ ಅಮೆರಿಕದ ೧೩ ವಿಮಾನಗಳು ಉತ್ತರ ಕೊರಿಯದ ರಾಜಧಾನಿ ಪ್ಯಾಂಗ್‌ಯಾಂಗಿಗೆ ಪೂರ್ವದಲ್ಲಿ ಸರಬರಾಜು ಕೇಂದ್ರಗಳ ಮೇಲೆ ೧೦೦ ಟನ್ ಬಾಂಬುಗಳನ್ನು ಸುರಿಸಿ ಬಹಳ ನಷ್ಟವನ್ನುಂಟುಮಾಡಿದುವೆಂದೂ, ಈ ದಾಳಿಗೆ ಯಾವ ಪ್ರತಿಭಟನೆಯೂ ಬರಲಿಲ್ಲವೆಂದೂ ಹೇಳಲಾಗಿದೆ.

ದಕ್ಷಿಣ ಆಫ್ರಿಕಾ ಭಾರತೀಯರ ಸಮಸ್ಯೆಯಲ್ಲಿ ಟ್ರಿಗ್ವೆಲೀ ಪ್ರವೇಶ

ದಕ್ಷಿಣ ಆಫ್ರಿಕದಲ್ಲಿ ತಾ|| ಮಲಾನರ ವರ್ಣಭೇದ ನೀತಿಯನ್ನು ಕುರಿತು ಭಾರತವು ವಿಶ್ವಸಂಸ್ಥೆಗೆ ಬರೆದಿರುವ ಪತ್ರದ ಸಂಬಂಧವಾಗಿ ಸದರಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟ್ರಿಗ್ವೆಲೀಯವರು ಭಾರತ, ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾ ಸರ್ಕಾರಗಳಿಗೆ ಪತ್ರ ಬರೆದು ದಕ್ಷಿಣ ಆಫ್ರಿಕ ಸಮಸ್ಯೆಯ ಈಗಿನ ಸನ್ನಿವೇಶದ ಬಗ್ಗೆ ವಿವರಗಳನ್ನು ಕೇಳಿರುವರೆಂದು ವರದಿಯಾಗಿದೆ.

ತಂತಿ ಮತ್ತು ಟೆಲಿಫೋನ್ ವ್ಯವಸ್ಥೆ ಬಡಾವಣೆ

ದೇಶದಲ್ಲಿ ಎರಡು ಸಾವಿರ ಪ್ರಜಾಸಂಖ್ಯೆಯನ್ನು ಹೊಂದಿರುವ ಎಲ್ಲ ಹಳ್ಳಿಗಳಿಗೂ ಈಗ ಅಂಚೆ ಕಛೇರಿಯನ್ನು ತೆರೆಯಲಾಗಿದೆಯೆಂದೂ, ಐದು ಸಾವಿರ ಪ್ರಜಾಸಂಖ್ಯೆಯಿಂದ ಕೂಡಿದ ಪ್ರತಿ ಪ್ರಮುಖ ತಂತಿ ಕಛೇರಿಯನ್ನೂ ಮತ್ತು ೫೦ ಸಾವಿರಕ್ಕೆ ಮೇಲ್ಪಟ್ಟ ಜನಸಂಖ್ಯೆಯ ಎಲ್ಲ ಪಟ್ಟಣಗಳಿಗೂ ಸಾರ್ವಜನಿಕ ಟ್ರಂಕ್ ಟೆಲಿಫೋನ್ ವ್ಯವಸ್ಥೆಯನ್ನು ಏರ್ಪಡಿಸಲಾಗುವುದೆಂದೂ ಕೇಂದ್ರ ವಾರ್ತಾ ಸಚಿವ ಶ್ರೀ ಜಗಜೀವನರಾಂರವರು ತಿಳಿಸಿರುವರು.

ಬ್ರಿಟನ್ನಿನ ಅಣು ಶಸ್ತ್ರ ಪ್ರಯೋಗ

ಬ್ರಿಟನ್ನು ಹೊಸದಾಗಿ ತಯಾರಿಸಿರುವ ರಹಸ್ಯ ಅಣು ಶಸ್ತ್ರದ ಪರೀಕ್ಷಾರ್ಥ ಪ್ರಯೋಗವನ್ನು ಬರುವ ತಿಂಗಳ ಒಂದನೇ ತಾರೀಕು ಮಾಂಟಿಬೆಲ್ಲೋ ಐಲೆಂಡ್‌ನಲ್ಲಿ ನಡೆಸಲಾಗುವುದೆಂದು ತಿಳಿದು ಬಂದಿದೆ.

ಸುಪ್ರೀಂ ಕೋರ್ಟಿನಿಂದ ರಾಜು ಅಪೀಲು ಪರಿಶೀಲನೆ

ಪರಮಶಿವಯ್ಯನವರ ಆಸ್ತಿಯ ಎಕ್ಸಿಕ್ಯೂಟರ್ ಆಗಿದ್ದ ಶ್ರೀ ಎಲ್. ಎಸ್. ರಾಜುರವರು ಪ್ರೊಬೇಟ್ ವಿಷಯವಾಗಿ ಸುಳ್ಳು ಸಾಕ್ಷಿ ಹೇಳಿದರೆಂದು ಏಳು ವರ್ಷ ಕಠಿಣ ಶಿಕ್ಷೆಗೆ ಗುರಿಯಾದ ಸಂದರ್ಭದಲ್ಲಿ ಅವರು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿ, ಮೈಸೂರು ಹೈಕೋರ್ಟಿನವರು ತಮ್ಮ ರಿವಿಜನ್ ಅರ್ಜಿ ಬಗ್ಗೆ ಸರಿಯಾಗಿ ವಿಚಾರಣೆ ನಡೆಸದೆ ತಿರಸ್ಕರಿಸಿದರೆಂದು ಅಪೀಲು ಹೂಡಿದ ಸಂಬಂಧದಲ್ಲಿ ಸುಪ್ರೀಂ ಕೋರ್ಟಿನವರು ಅವರ ಅರ್ಜಿ ಪರಿಶೀಲನೆಗೆ ವಿಶೇಷ ಅನುಮತಿಯನ್ನಿತ್ತಿರುವರೆಂದು ವರದಿಯಾಗಿದೆ.

ಕಲ್ಕತ್ತಾದಲ್ಲಿ ೫೫ ಸಾವಿರ ರೂ. ಹಗಲು ದರೋಡೆ

ಕಲ್ಕತ್ತದಲ್ಲಿ ಒಂದು ಇಂಜಿನಿಯರಿಂಗ್ ಸಂಸ್ಥೆಯ ನೌಕರರಿಗೆ ಬಟವಾಡೆ ಮಾಡುವ ಸಲುವಾಗಿ ನೆನ್ನೆ ಮಧ್ಯಾಹ್ನ ಒಂದು ಮೋಟಾರಿನಲ್ಲಿ ಸಂಸ್ಥೆಯ ಕೆಲಸಗಾರರೊಡನೆ ಸಾಗಿಸಲಾಗುತ್ತಿದ್ದ ೫೫ ಸಾವಿರ ರೂ. ಅನ್ನು ನಾಲ್ಕು ಮಂದಿ ಶಸ್ತ್ರಸಜ್ಜಿತ ಯುವಕ ದರೋಡೆಕೋರರು ಅಪಹರಿಸಿಕೊಂಡು ಹೋದರೆಂದು ವರದಿಯಾಗಿದೆ. ಮೋಟಾರು ಗರಿಯಾಹಾಟ್ ಎಂಬಲ್ಲಿಗೆ ಬಂದಾಗ ದರೋಡೆಗಾರರು ಅದನ್ನು ತಡೆದು ನಿಲ್ಲಿಸಿ ಒಳಗಿದ್ದವರ ಮೇಲೆ ಗುಂಡು ಹಾರಿಸಿದರೆಂದೂ ಇದರ ಪರಿಣಾಮವಾಗಿ ಇಬ್ಬರು ಸತ್ತು ಇನ್ನಿಬ್ಬರು ಗಾಯಗೊಂಡರೆಂದೂ ಹೇಳಲಾಗಿದೆ. ಒಳಗಿದ್ದವರನ್ನು ದರೋಡೆಕೋರರು ಹೊರತಳ್ಳಿ ಎಳೆದುಹಾಕಿ ಮೋಟಾರು ಮತ್ತು ಹಣದ ಸಮೇತ ಪರಾರಿಯಾದರು. ಈ ಸಂಬಂಧವಾಗಿ ಇಬ್ಬರನ್ನು ಬಂಧಿಸಲಾಗಿದೆ.

ಗೋವಧೆ ನಿಷೇಧಕ್ಕಾಗಿ ಮುಸ್ಲಿಮನ ಉಪವಾಸ

ಉತ್ತರ ಪ್ರದೇಶದಲ್ಲಿ ಗೋವಧೆ ನಿಷೇಧ ಶಾಸನವನ್ನು ಪುನಃ ಜಾರಿಗೆ ತರುವುದು ಮತ್ತು ರಾಮನು ಹುಟ್ಟಿದ ಸ್ಥಳವನ್ನು ಹಿಂದುಗಳಿಗೆ ದೊರಕಿಸಿಕೊಡುವುದು—ಈ ಎರಡು ಉದ್ದೇಶಗಳ ಸಾಧನೆಗಾಗಿ ತೇಜ್ ಅಹಮದ್ ಅನ್ಸಾರಿ ಎಂಬುವರು ಕಳೆದ ೧೯ನೇ ತಾರೀಖಿನಿಂದ ಉಪವಾಸ ಮಾಡುತ್ತಿರುವರೆಂದು ವರದಿಯಾಗಿದೆ. ಉಪವಾಸ ನಿಲ್ಲಿಸಬೇಕೆಂದು ಅವರಿಗೆ ಆರ್. ಎಸ್. ಎಸ್. ಸಂಸ್ಥೆಯ ನಾಯಕರಾದ ಎಂ. ಎಸ್. ಗೋಳ್ವಾಲ್ಕರ್‌ರವರು ತಂತಿ ಕಳುಹಿಸಿರುತ್ತಾರೆ.

ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣಾ ವೇಳಾಪಟ್ಟಿ

ಬೆಂಗಳೂರು ೨೯

ಮುಂದೆ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಪ್ರತಿನಿಧಿಗಳ ಚುನಾವಣಾ ವೇಳಾಪಟ್ಟಿಯನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯವರು ಪ್ರಕಟಿಸಿರುತ್ತಾರೆ. ನವೆಂಬರ್ ೧ ನೇ ತಾ|| ನಾಮಪತ್ರ ಸ್ವೀಕಾರ, ೨ನೇ ತಾ|| ಪರಿಶೀಲನೆ, ೪ನೇ ತಾ|| ವಾಪಸು, ೧೭ನೇ ತಾ|| ಚುನಾವಣೆಯ ದಿನಗಳೆಂದು ಸೂಚಿಸಲಾಗಿದೆ. ಎಣಿಕೆ ೧೯ ನೇ ತಾ|| ನಡೆಯುವುದು. ಈ ಬಗ್ಗೆ ಪ್ರತಿನಿಧಿಗಳ ಸಂಖ್ಯೆಗಳನ್ನು ನಿರ್ಧರಿಸಲಾಗಿದೆ. ಬೆಂಗಳೂರು ನಗರ-೮, ಜಿಲ್ಲೆ ೧೩, ಕೋಲಾರ ಜಿಲ್ಲೆ ೧೧, ತುಮಕೂರು ಜಿಲ್ಲೆ ೧೩, ಚಿತ್ರದುರ್ಗ ಜಿಲ್ಲೆ ೯, ಚಿಕ್ಕಮಗಳೂರು ಜಿಲ್ಲೆ ೪, ಶಿವಮೊಗ್ಗ, ಹಾಸನ, ಮಂಡ್ಯ ಜಿಲ್ಲೆಗಳಿಗೆ ತಲಾ ೭, ಮೈಸೂರು ಜಿಲ್ಲೆ ೧೧ ಮತ್ತು ನಗರ ೨, ಒಟ್ಟು ೯೧ ಮಂದಿ ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿದೆ.

ಹೈದ್ರಾಬಾದ್ ಪೋಲೀಸ್ ಜಮೇದಾರರ ಬಂಧನ

ಡಕಾಯಿತಿ ಮತ್ತು ದರೋಡೆಗಳನ್ನು ಮಾಡುವ ಸಲುವಾಗಿ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನೂ ಸಂಗ್ರಹಿಸಲು ಪಿತೂರಿ ನಡೆಸುತ್ತಿದ್ದರೆಂಬ ಕಾರಣದ ಮೇಲೆ ಹೈದರಾಬಾದಿನ ರಿಸರ್ವ್ ಪೋಲೀಸ್ ಪಡೆಯ ಜಮೇದಾರ್ ಶಿವಲಾಲ್ ಸಿಂಗ್ ಎಂಬುವನನ್ನು ರಾಜಸ್ಥಾನದ ಪೋಲೀಸರು ಬಂಧಿಸಿರುವರೆಂದು ವರದಿಯಾಗಿದೆ.

ಮೈಸೂರು ದಸರಾ ವಸ್ತುಪ್ರದರ್ಶನ-೧೯೫೨

ಸೀಸನ್ ಟಿಕೆಟ್ ಪುಸ್ತಕಗಳ ಮಾರಾಟ

ಪ್ರಕಟಣೆ

20 ಟಿಕೆಟ್ಟುಗಳ ಪುಸ್ತಕ 1ಕ್ಕೆ ರೂ. 3 ರಂತೆ ಮಾರಲು ಏರ್ಪಡಿಸಲಾಗಿದೆ

ಮಹಾಜನರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕಾಗಿ ಪ್ರಾರ್ಥನೆ

ಪ್ರಧಾನ ಕಾರ್ಯದರ್ಶಿಗಳು.

ರೈಲ್ವೆ ನೌಕರರು ಮುಷ್ಕರ ಹೂಡಬಾರದೆಂದು ಸಲಹೆ

ಮೈಸೂರು ೨೯

ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗುರುಸ್ವಾಮಿಯವರು ನೆನ್ನೆ ಸಂಜೆ ಇಲ್ಲಿನ ರೈಲ್ವೆ ಇನ್‌ಸ್ಟಿಟ್ಯೂಟಿನ ಬಳಿ ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡುತ್ತಾ, ರೈಲ್ವೆ ನೌಕರರ ಸಂಬಳ ಮತ್ತು ಭತ್ಯವನ್ನು ನಿಷ್ಕರ್ಷಿಸುವ ಬಗ್ಗೆ ಸಂಬಳ ಸಮಿತಿಯು ಸರಕಾರಕ್ಕೆ ಮಾಡಿರುವ ಶಿಫಾರಸು ಇನ್ನೊಂದು ತಿಂಗಳೊಳಗೆ ಹೊರಬೀಳುವುದೆಂದೂ, ಈ ಬಗ್ಗೆ ಕಾರ್ಮಿಕರು ಕಳವಳಗೊಳ್ಳದೆ ಸಾವಧಾನದಿಂದಿರಬೇಕೆಂದೂ ಮುಷ್ಕರ ಹೂಡಬಾರದೆಂದೂ ಸೂಚಿಸಿದರು. ಮೊಳ್ಳಂಡ ಸಮಿತಿಯ ಶಿಫಾರಸಿನ ಪ್ರಕಾರ ಕಾರ್ಮಿಕರಿಗೆ ಹೆಚ್ಚು ಪ್ರಾವಿಡೆಂಟ್ ಫಂಡು ಮತ್ತು ವಿರಾಮ ದಿನಗಳು ದೊರೆಯಬಹುದೆಂದೂ, ಆದರೆ ಮನೆ ಬಾಡಿಗೆ ಭತ್ಯವು ನಿಲ್ಲಿಸಲ್ಪಡಬಹುದೆಂದೂ ಅವರು ಹೇಳಿದರು. ಸಂಬಳ ಸಮಿತಿಯ ಶಿಫಾರಸನ್ನು ಸರ್ಕಾರದವರು ಜಾರಿಗೆ ತರುವುದು ಸೂಕ್ತವಾಗಿರುವುದರಿಂದ ಕೆಲಸಗಾರರಿಗೂ ಮತ್ತು ಸಾರ್ವಜನಿಕರಿಗೂ ಹೆಚ್ಚು ಪ್ರಯೋಜನವುಂಟೆಂದೂ ಶ್ರೀ ಗುರುಸ್ವಾಮಿಯವರು ತಿಳಿಸಿ, ರೈಲ್ವೆ ಕಾರ್ಮಿಕರ ಬೇಡಿಕೆಗಳು ಕಾಲ್ಪನಿಕವಾದುವಲ್ಲವೆಂದು ಹೇಳಿದರು.

ಮೈಸೂರು ರೈಲ್ವೆಯನ್ನು ಇತರ ರೈಲ್ವೆಗಳೊಡನೆ ಐಕ್ಯಗೊಳಿಸಿರುವ ವಿಷಯವನ್ನು ಪ್ರಸ್ತಾಪಿಸಿ ಈ ವಿಲೀನೀಕರಣದಿಂದ ಸಂಸ್ಥಾನದ ರೈಲ್ವೆ ನೌಕರರ ಸ್ಥಿತಿಗತಿಗಳು ಭಾರತದ ಇತರ ಕಡೆಯ ನೌಕರರಿಗಿಂತ ಯಾವ ಭಾಗದಲ್ಲೂ ಕಡಿಮೆಯಾಗಿರಬಾರದೆಂದು ಹೇಳಿದರು. ಇತರ ಕಡೆಗಳಲ್ಲಿ ದಕ್ಷರೂ, ಚತುರರೂ ಆದ ನೌಕರರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಿರುವಾಗ ಮೈಸೂರಿನಲ್ಲಿ ಅಂತಹವರನ್ನು ಕೆಳದರ್ಜೆಗೆ ಇಳಿಸುತ್ತಿರುವುದರ ಮತ್ತು ರೈಲ್ವೆ ನೌಕರರ ವಿಮಾ ಕಂತಿನ ಹಣವನ್ನು ಅವರ ಸಂಬಳದಲ್ಲಿ ಹಿಡಿಯದಿರುವುದರ ಬಗ್ಗೆ ಶ್ರೀ ಗುರುಸ್ವಾಮಿಯವರು ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಮಾತುಕತೆಗಳಿಂದಲೇ ಕೈಗಾರಿಕಾ ವ್ಯಾಜ್ಯ ತೀರ್ಮಾನ

ಐ.ಎನ್.ಟಿ.ಯು.ಸಿ. ಅಧಿವೇಶನದಲ್ಲಿ ತೀರ್ಮಾನ

ಮೈಸೂರು ೨೯

ಅಖಿಲ ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ನಿನ ಮೈಸೂರು ಶಾಖೆಯ ಕೌನ್ಸಿಲ್ಲಿನ ಸಭೆಯು ಮೊನ್ನೆ ಇಲ್ಲಿ ಸೇರಿತ್ತು. ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್. ಕೇಶವಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಅಹಮದಾಬಾದಿನ ಬಟ್ಟೆ ಗಿರಣಿ ಮಾಲೀಕರ ಸಂಘ ಮತ್ತು ಗಿರಣಿ ಕಾರ್ಮಿಕರುಗಳಿಗೆ ಆಗಿರುವ ಒಪ್ಪಂದವನ್ನು ಸ್ವಾಗತಿಸಿ, ಕೈಗಾರಿಕಾ ವ್ಯಾಜ್ಯಗಳನ್ನು ಪರಸ್ಪರ ಮಾತುಕತೆಗಳಿಂದಲೇ ಬಗೆಹರಿಸುವುದು ಸೂಕ್ತವಾಗಿರುವುದೆಂದು ಸಭೆಯು ನಿರ್ಣಯಿಸಿತು. ಮಾಲೀಕರು ಕಾರ್ಮಿಕ ಶಾಸನಗಳನ್ನು ಉಲ್ಲಂಘಿಸುತ್ತಿರುವ ಬಗ್ಗೆ ಸರ್ಕಾರದವರು ಕ್ರಮ ಜರುಗಿಸಬೇಕೆಂದು ಕೋರಲಾಯಿತು. ಸಂಸ್ಥಾನದ ರೋಡ್ ಟ್ರಾನ್ಸ್‌ಪೋರ್ಟ್ ಕೆಲಸಗಾರರಿಗೆ ಆಗಬಹುದಾದ ತೊಂದರೆಗಳನ್ನು ಕುರಿತು ಸರಕಾರಕ್ಕೆ ತಿಳಿಸಲು ಎಂಟು ಜನರನ್ನೊಳಗೊಂಡ ನಿಯೋಗವನ್ನು ಕಳುಹಿಸಬೇಕೆಂದು ನಿರ್ಧಾರವಾಯಿತು.

ಪಾಕಿಸ್ತಾನದಲ್ಲಿ ಮಿಶ್ರ ಸರ್ಕಾರಕ್ಕಾಗಿ ಮುಷ್ತೀಕಿ ಒತ್ತಾಯ

ಪಾಕಿಸ್ತಾನದಲ್ಲಿ ಆಡಳಿತ ನಡೆಸುತ್ತಿರುವ ಮುಸ್ಲಿಂ ಲೀಗ್ ಸರ್ಕಾರವು ಇದುವರೆಗೆ ಯಾವ ಪ್ರಜಾಹಿತವನ್ನೂ ಸಾಧಿಸಿಲ್ಲವಾದ ಕಾರಣ ಅಲ್ಲಿ ಕೂಡಲೇ ಮಿಶ್ರ ಸರ್ಕಾರವು ಸ್ಥಾಪಿಸಲ್ಪಡಬೇಕೆಂದು ಅಲ್ಲಿನ ಇಸ್ಲಾಮಿ ಲೀಗಿನ ಸ್ಥಾಪಕ ಅಧ್ಯಕ್ಷರಾದ ಅಲ್ಲಾಮಾ ಮುಷ್ತೀಕಿಯವರು ತಿಳಿಸಿರುವರು

ಕೇಂದ್ರದ ಹಿರಿಯ ಶಾಸನ ಸಭೆಗೆ ಉಪಚುನಾವಣೆಯ ವೇಳಾ ಪಟ್ಟಿ

ಕೇಂದ್ರದ ಹಿರಿಯ ಸಭೆಯಾದ ಕೌನ್ಸಿಲ್ ಆಫ್ ಸ್ಟೇಟ್ಸಿಗೆ ಕಡೂರಿನ ಶ್ರೀ ತಿಮ್ಮಾಬೋಯಿಯವರು ರಾಜೀನಾಮೆ ಯಿತ್ತಿರುವುದರ ಪರಿಣಾಮವಾಗಿ, ಮೈಸೂರು ಶಾಸನ ಸಭಾ ಕ್ಷೇತ್ರದಿಂದ ಆ ಸಭೆಗೆ ಉಪ ಚುನಾವಣೆಯು ನಡೆಯಲು ಕೊಟ್ಟಿರುವ ವೇಳಾಪಟ್ಟಿಯು ಈ ರೀತಿ ಇದೆ:- ಇದೇ ೨೯ನೇ ತಾ॥ ಅರ್ಜಿ ಸಲ್ಲಿಸಲು ಕೊನೆಯ ದಿನ, ಅಕ್ಟೋಬರ್ ೧ ಪರಿಶೀಲನೆ, ೮ ವಾಪಸಿನ ದಿನ ೨೫ ಓಟಿಂಗ್

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ನಾಗಸ್ವರ ಎ. ವಿ. ನಾರಾಯಣಪ್ಪ ಮಧ್ಯಾಹ್ನ ೨ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ಸಂಜೆ ೫ ೨ ನಾಗಸ್ವರ, ಎ. ವಿ. ನಾರಾಯಣಪ್ಪ ೬-೧೦ ಬಾಲಜಗತ್, ಮಕ್ಕಳ ಕಾರ್ಯಕ್ರಮ ೭ ಹಿಂದಿ ಗೀತೆಗಳು, ಶ್ರೀರಾಮುಲುನಾಯ್ಡು ೭-೩೦ ಲಿಪಿ ಸುಸ್ಥಿರದ ಬಗ್ಗೆ ಚರ್ಚೆ ೮ ಎಲ್ ನರಸಿಂಹಾಚಾರ್ ವಿ ತ್ಯ. ... ಕುಪ್ಪಸ್ವಾಮಿ, ೮ ಸಂಗೀತ ೮ ... ೯. ೧೫ "ಸೆಕೆಂಡ್ ಹ್ಯಾಂಡ್ ವಾರ್" ಕಿರು ಗತೆ ೯-೪೦ ನಿಮ್ಮ ಮೆಚ್ಚಿನ ಗೀತೆಗಳು

ಸುಲಭವಾಗಿ ಸುಲಭ ಬೆಲೆ

ಮೈಸೂರು ಸಿಲ್ಕ್ ಪಿಲೇಚರ್ ಕಂಪನಿ

ಅಪ್ಪಟ ಸಿಲ್ಕ್ ಸೀರೆಗಳಿಗೆ

ವಿಚಾರಿಸಿ

ಕೆ. ಎಸ್. ಸತ್ಯನಾರಾಯಣರಾವ್,

ಜವಳಿ ವ್ಯಾಪಾರಿಗಳ,

೨೦೩, ಸಯ್ಯಾಜಿರಾವ್ ರಸ್ತೆ

(ಚಾಮುಂಡೇಶ್ವರಿ ಸಿನಿಮಾ ಕಟ್ಟಡ)

ಮೈಸೂರು

ಪೂನಾದ ಸಿವಿಲ್ ರಕ್ಷಣಾ ನೌಕರರ ಮುಷ್ಕರದ ಮುಕ್ತಾಯ

ಪೂನಾದಲ್ಲಿರುವ ೧೧ ಡಿಫೆನ್ಸ್ ಇಲಾಖಾ ಸಂಸ್ಥೆಗಳ ಸಿವಿಲ್ ನೌಕರರು ಕಳೆದ ೨೬ ದಿನಗಳಿಂದ ನಡೆಸುತ್ತಿದ್ದ ಮುಷ್ಕರವು ಇಂದು ಕೊನೆಗೊಳ್ಳುವುದೆಂದು ವರದಿಯಾಗಿದೆ. ಮುಷ್ಕರವನ್ನು ಮುಂದುವರಿಸುವುದರಿಂದ ಉಂಟಾಗಬಹುದಾದ ಕಷ್ಟ ಸ್ಥಿತಿಯನ್ನು ಮನಗಂಡು ಮುಷ್ಕರವನ್ನು ನಿಲ್ಲಿಸುವಂತೆ ೩೫ ಸಾವಿರ ಕೆಲಸಗಾರರಿಗೆ ಅವರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್ ಎಂ ಜೋಷಿಯವರು ತಿಳಿಸಿರುತ್ತಾರೆ

ಜಲಚರಪ್ರಾಣಿಗಳ ಸಂಗ್ರಹಾಲಯ

ಅಪೂರ್ವ ಮೀನುಗಳು ಮತ್ತು ಸಾಲಮಾಂಡರ್ ಎಂಬ ಜಪಾನಿನ ಜಲಚರ ಪ್ರಾಣಿಗಳನ್ನು ಇಡುವ ಸಲುವಾಗಿ ಪ್ರತ್ಯೇಕವಾದ ಸಂಗ್ರಹಾಲಯವೊಂದನ್ನು ರಾಜಧಾನಿಯ ಮೃಗಾಲಯದಲ್ಲಿ ಏರ್ಪಡಿಸಲಾಗುವುದೆಂದು ಗೊತ್ತಾಗಿದೆ ಜರ್ಮನಿ ಇಟಲಿ ಮುಂತಾದ ವಿದೇಶಗಳಿಂದ ಪ್ರಾಣಿಗಳನ್ನೂ ಪಕ್ಷಿಗಳನ್ನೂ ತರಿಸಿ, ಅವುಗಳ ಬದಲು ಇಲ್ಲಿನ ಕಾಡಾನೆ, ಕಾಡುಕೋಣ ಮತ್ತು ಹುಲಿಮರಿಗಳನ್ನು ಆ ದೇಶಗಳಿಗೆ ಕಳುಹಿಸುವ ಬಗ್ಗೆ ಸಂಬಂಧಪಟ್ಟವರು ಪತ್ರವ್ಯವಹಾರ ನಡೆಸುತ್ತಿರುವರೆಂದು ಹೇಳಲಾಗಿದೆ

'ದಿ ಜರ್ನಲಿಸ್ಟ್'

ವ ಹಾರ ಜಾ ಕಾಲೇಜಿನ ಪತ್ರಿಕೋದ್ಯಮದ ಸಂಘದವರು ಪ್ರಕಟಿಸಿರುವ ದಿ ಜರ್ನಲಿಸ್ಟ್ ಎಂಬ ಪತ್ರಿಕೆಯ ಮೊದಲನೇ ಸಂಚಿಕೆಯು ನಮ್ಮ ಕೈ ಸೇರಿದೆ ಇದರಲ್ಲಿ ಕಾಲೇಜಿನ ಕಾರ್ಯಕಲಾಪಗಳು, ಪುರಸಭೆಯ ಆಡಳಿತ, ಆಕಾಶವಾಣಿ, ಜಿಲ್ಲೆಯ ಆಹಾರ ಪರಿಸ್ಥಿತಿ ಮುಂತಾದ ವಿಷಯಗಳ ಮೇಲೆ ಉಪಯುಕ್ತವಾದ ಲೇಖನಗಳಿವೆ ಪತ್ರಿಕೋದ್ಯಮದ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಪ್ರಕಟವಾಗುತ್ತಿರುವ ಈ ಪತ್ರಿಕೆಯು ವಿದ್ಯಾರ್ಥಿಗಳಿಗೆ ಪೂರ್ಣ ಪರಿಶ್ರಮವನ್ನುಂಟುಮಾಡುವಂತಾಗಲೆಂದು ಹಾರೈಸುತ್ತೇವೆ

ಪತ್ರಿಕೆ ಹಂಚುವ ಕೆಲಸಕ್ಕೆ ಪದವೀಧರರ ಅರ್ಜಿ

ಪೂನಾದ ಪತ್ರಿಕೆಯೊಂದನ್ನು ಹಂಚುವ ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಿಸಿದ್ದ ಜಾಹಿರಾತನ್ನು ನೋಡಿ ಒಬ್ಬ ಡಬ್ಬಲ್ ಗ್ರಾಜುಯೇಟು ಮತ್ತು ಅನೇಕ ಅಂಡರ್ ಗ್ರಾಜುಯೇಟುಗಳು ಆ ಕೆಲಸಕ್ಕೆ ಅರ್ಜಿ ಸಲ್ಲಿಸಿರುವರೆಂದು ವರದಿಯಾಗಿದೆ

ಆಕಾಶವಾಣಿಯಲ್ಲಿ ಹಳ್ಳಿಯ ಹಾಡುಗಳು

ರಾಜಧಾನಿಯ ಆಲ್ ಇಂಡಿಯಾ ರೇಡಿಯೋ ನಿಲಯದವರು ನಾಳೆಯಿಂದ ಇದೇ ತಿಂಗಳು ೩೦ರ ವರೆಗೆ ಪ್ರತಿ ಸಂಜೆ ೬॥ಗೆ ಅರ್ಧಗಂಟೆಕಾಲ ಮೈಸೂರು, ಮಂಗಳೂರು ಮತ್ತು ಕೊಡಗು ಪ್ರದೇಶಗಳ ಹಳ್ಳಿಯವರ ಗೀತೆ ಮತ್ತು ನಾಟಕಗಳನ್ನು ಏರ್ಪಡಿಸಿರುತ್ತಾರೆ ಆಯಾ ಪ್ರದೇಶಗಳ ಜನರು ತಮ್ಮ ಸಾಂಪ್ರದಾಯಿಕವಾದ ಉಡುಪನ್ನು ಧರಿಸಿಬರುವರು ನಾಳೆ ದಿನದ ಕಾರ್ಯಕ್ರಮವನ್ನು ಸುಪ್ರಸಿದ್ಧ ನಾಟಕಕಾರರಾದ ಶ್ರೀ ಕೆ ಶಿವರಾಮ ಕಾರಂತರು ಆರಂಭಿಸುವರು ಕಂಸವಧ ಯಕ್ಷಗಾನ, ಜೋಗುಳ ಲಾವಣಿ, ರಾಗಿಬೀಸುವ ಪದ, ಬೈಲಾಟ, ಸೋಲಿಗರ ಪದ ಗಾಡಿ ಪದ, ಜೋಗಿ ಪದ, ಲಂಬಾಣಿ ನೃತ್ಯ ಮತ್ತು ಗೀತೆಗಳು ಇವೇ ಮುಂತಾದ ಕಾರ್ಯಕ್ರಮಗಳು ನಡೆಯುವುವು

ಮೈಸೂರು ದಸರಾ ವಸ್ತು ಪ್ರದರ್ಶನ-1952

ದಸರಾ ವಸ್ತು ಪ್ರದರ್ಶನದ ಪುಷ್ಪ ಶಾಖೆಯಲ್ಲಿ ಈ ಕೆಳಗೆ ಕಂಡ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ

I Competitions in Commercial Floral Art (For Men)

ಪುಷ್ಪ ಕಲೆ- To be held on 4 10-52

1 ಹಾರಗಳು (Garlands) 2 ಬೊಕ್ಕೆ ಮತ್ತು ತುರಾಯಿ (Bouquet & Turays) 3 ಮೇಜಿನ ಅಲಂಕಾರ (Table Decoration) 4 ಪುಷ್ಪ ಕರಂಡ ಅಲಂಕಾರ (Flower Vase Arrangement) 5 ಹೂವು ಕಟ್ಟುವ ಸ್ಪರ್ಧೆ

II Competitions in Floral Art (For Women Only) To be held on 5-10-52

1 ಮಕ್ಕಳಿಗೆ ಜಡೆ ಅಲಂಕಾರ (Hair Style for Children) 2 ತರಹ ಶೃಂಗಾರ 3 ಪೂಜಾ ಪುಷ್ಪ ಸಂಗ್ರಹ ಹೆಸರು ಸಮೇತ (Collection of Puja Flowers with names) 4 ಪುಷ್ಪ ಕರಂಡ ಅಲಂಕಾರ (Flower Vase Arrangement) 5 ಹೂವು ಕಟ್ಟುವ ಸ್ಪರ್ಧೆ

ಮೇಲ್ಕಂಡ ಸ್ಪರ್ಧೆಗಳಿಗೆ ಸೇರಲು ಇಚ್ಛೆ ಪಡುವ ಮಹಿಳೆಯರು ಮತ್ತು ಪುರುಷರು ತಮ್ಮ ಪೂರ್ಣ ವಿಳಾಸದೊಂದಿಗೆ ಈ ಕೆಳಗೆ ಕಂಡ ವಿಳಾಸಕ್ಕೆ ತಾ॥ 30-9-52ರ ಒಳಗಾಗಿ ತಲುಪುವಂತೆ ಅರ್ಜಿಗಳನ್ನು ಕಳುಹಿಸತಕ್ಕದ್ದು. ವಿಜಯಶಾಲಿಗಳಾದವರಿಗೆ ಸೂಕ್ತ ಬಹುಮಾನಗಳನ್ನು ಕೊಡಲಾಗುವುದು

ಪಿ. ಗೋಪಾಲಕೃಷ್ಣ ಶೆಟ್ಟಿ

ಜನರಲ್ ಸೆಕ್ರೆಟರಿ,

ದಸರಾ ವಸ್ತುಪ್ರದರ್ಶನ ಸಮಿತಿ

ಮೈಸೂರು

ನೇಪಾಳದ ಮೂಲಕ ಸುಭಾಷರ ಆಗಮನ!

ನೇತಾಜಿ ಸುಭಾಷ್ ಚಂದ್ರಬೋಸರು ಜೀವಂತರಾಗಿರುವರೆಂದೂ, ಅವರು ನೇಪಾಳದ ಮೂಲಕ ಭಾರತಕ್ಕೆ ಬರಲಿರುವರೆಂದೂ, ಕಮ್ಯೂನಿಸ್ಟರೊಡನೆ ಇರುವ ಅವರು ಶೀಘ್ರದಲ್ಲೇ ನೇಪಾಳದ ಕ್ರಾಂತಿಕಾರ ನಾಯಕ ಡಾ॥ ಕೆ ಐ ಸಿಂಗ್‌ರೊಡನೆ ಸ್ವದೇಶಕ್ಕೆ ಮರಳುವರೆಂದೂ, ಪಾಕಿಸ್ತಾನಕ್ಕೆ ಸಿಂಗಪುರದಿಂದ ಆಗಮಿಸಿರುವ ನೇತಾಜಿ ಬೋಸರ ಮಿತ್ರರೆಂದು ಹೇಳಲಾದ ಕರೀಂ ಗನಿಯವರು ತಿಳಿಸಿರುವರೆಂದು ವರದಿಯಾಗಿದೆ ನೇತಾಜಿಯವರ ಕಾರ್ಯ ಚಟುವಟಿಕೆಗಳ ಬಗ್ಗೆ ಅವರು ಕೆಲವು ಪುಸ್ತಕಗಳನ್ನು ಬರೆದಿರುವರೆಂದೂ ಹೇಳಲಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ
ನೆಲಗಡಲೆ	೭೦೦	೨೭
ಎಳ್ಳು	೫೯-೮-೦	೬೯-೦
ಹುಚ್ಚೆಳ್ಳು	೫೪ ೬ ೦	
ಹರಳು ಬೀಜ	೪೪ ೨ ೦	೪೮-೧೨-
ಹುರುಳಿ	೫೩ ೪ ೦	
ಹೆಸರು	೬೧ ೨ ೦	
ಹೊಂಗೇಬೀಜ	೨೩ ೪ ೦	
ಗುಮ್ಮ	೬೫ ೧೨ ೦	೭೮ ೦
ಅವರೆ	೬೯-೧೨-೦	
ಕಲಕಂದ	೬೧-೦-೦	
ಹುಣಿಸೆಕಾಯಿ ಮೂಟೆಗೆ	೧೭ ೧೨ ೦	೨೩ ೧೦
ಹುಣಿಸೇಹಣ್ಣು	೫ ೩ ೦	೫-೧೫-೦
ಸೀಗೇಕಾಯಿ	೪ ೭ ೦	
ಬೆಲ್ಲ	೪ ೮-೦	
ತೆಂಗಿನಕಾಯಿ ೧೦೦೦	೧೪೭ ೦ ೦	೨೦೪ ೦ ೦

॥ ಜೈ ಹನುಮಾನ್ ॥

ತಾ॥ 29-9-52 ನೇ ಸೋಮವಾರ

ಶ್ರೀ ಮ ಸ್ತ ಹಾ ರಾ ಜ ರ

ಜಂಬೂಸವಾರಿ ಮೆರವಣಿಗೆ

ನೋಡಲು ಪ್ರೇಕ್ಷಕರಿಗಾಗಿ ಮಾರ್ಕೆಟ್ಟಿನ ಮೇಲೆ ಸ್ಥಳ ಏರ್ಪಡಿಸಲಾಗಿದೆ

ಮೆರವಣಿಗೆ ಹೋಗುವಾಗ

1 ಟಿಕೆಟ್ಟಿಗೆ 0 1 0

ಮೆರವಣಿಗೆ ಬರುವಾಗ ,, 0 4 0

ಎಸ್ ಈಶ್ವರರಾವ್ ಕಂಟ್ರಾಕ್ಟರ

VISIT

CANARA JEWELLERS

IN DASARA EXHIBITION,

AT BLOCK 'D', STALL No. 22

For All Sovereign Gold Jewellery

In Excellent Mangalore Designs

Expert Workmanship

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

24-9-52 ನೇ ಬುಧವಾರದಿಂದ ಅನೋಘ ಪ್ರಾರಂಭ

(ತೆಲುಗು)

ಸ್ತ್ರೀ ಸಾಹಸಂ

(ಕಲರ್ ಪ್ರಿಂಟು)

ಪಾತ್ರ:- ಅಂಜಲಿ, ನಾಗೇಶ್ವರರಾವ್ ಸೂರ್ಯಪ್ರಭಾ ರೇಲಂಗಿ, ಗಿರಿಜ, ಸಿ ಎಸ್ ಆರ್, ಶಿವರಾವ್ ಮುಂತಾದವರು

SRI GAYATHRI TALKIES

Daily 3 Shows

From 24-9-52 For 3 Days

20th Century's

THE GIRL ON THE BRIDGE

With Hugo Hass, Beverly Michaels, Robert Dane

From 26-9-52 For 2 Days

R K O's

THE BLUE VEIL

With Jane Wyman Charles Laughton

Edited, Printed and Published by A. R Nagaraj at Sadhvi Press D Subbaiah Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧ } ಬುಧವಾರ ೨೪-೯-೧೯೫೨ [ಸಂಚಿಕೆ ೯೯

ಜಾರ್ಡ್ಡ್ ಮತ್ತು ಸಿರಿಯ ಮೇಲೆ ಇಸ್ರೇಲ್ ಯುದ್ಧ

೧೦೦೦ ರೂ. ಇನ್ಷೂರ್ ಹಣದ ಅಪಹಾರ

ಒಬ್ಬನ ದಸ್ತಗಿರಿ

ಮೈಸೂರು ೨೪

ರಾಜಧಾನಿಯ ಜನರಲ್ ಪೋಸ್ಟಾಫಿಸಿನಲ್ಲಿ ನೆನ್ನೆ ಸಬ್ಬ್ಯಾಕ್ಷ ಜ|| ಸೈಯದ್ ಅಬ್ದುಲ್ ಖಾದರ್ ಎಂಬುವರು ೧೦೦೦ ರೂ ಗಳನ್ನು ಇನ್ಷೂರ್ ಮಾಡುವ ಕವರಿಗೆ ಗೋಂದು ಮತ್ತು ಸ್ಟಾಂಪುಗಳನ್ನು ಹಚ್ಚುತ್ತಿರುವಾಗ, ಮೂರು ಜನರು ಸ್ಟಾಂಪುಗಳನ್ನು ಕೆಳಕ್ಕೆ ತಳ್ಳಿ, ಜ|| ಖಾದರವರಿಗೆ ಅವನ್ನು ತೋರಿಸಿದರೆಂದೂ, ಅವರು ಸ್ಟಾಂಪುಗಳನ್ನು ತೆಗೆದುಕೊಳ್ಳಲು ಬಗ್ಗಿದಾಗ ಕೌಂಟರಿನ ಹಲಗೆ ಮೇಲಿಟ್ಟಿದ್ದ ೧೦೦ ರೂ ಐದ ೧೦ ನೋಟುಗಳ ಇನ್ಷೂರ್ ಕವರನ್ನು ಅಪಹರಿಸಿ ಪರಾರಿಯಾದರೆಂದೂ ವರದಿಯಾಗಿದೆ ಈ ಸಂಬಂಧವಾಗಿ ಶಂಕರ್ ಎಂಬಾತನನ್ನು ಲಷ್ಕರ್ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ ಇತರರು ಪತ್ತೆಯಿರುವುದಿಲ್ಲ

ರಾಜಸಭೆಯಲ್ಲಿ ಸಂಸ್ಕೃತ ವಿದ್ವತ್ ಪಾರಿತೋಷಕ ಸಮಾರಂಭ

ರಾಜಧಾನಿಯ ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಶ್ರೀಮನ್ಮಹಾರಾಜರವರು ಈ ಸಂಜೆ ನಡೆಯುವ ರಾಜಸಭೆಯಲ್ಲಿ ಪಾರಿತೋಷಕ ಮತ್ತು ಪ್ರಶಸ್ತಿ ಪತ್ರಗಳನ್ನು ಕೊಡಲಿರುವರು ಪ್ರತಿ ವರ್ಷವೂ ಈ ಸಮಾರಂಭವು ನವರಾತ್ರಿ ಉತ್ಸವವು ಕಳೆದ ಮೇಲೆ ಅರಮನೆಯ ಕಲ್ಯಾಣಮಂಟಪದಲ್ಲಿ ನಡೆಯುತ್ತಿತ್ತು. ಈ ಬಾರಿ ಅದು ಮೊದಲಾಗಿ ರಾಜಸಭೆಯಲ್ಲಿ ನಡೆಯಲಿದೆ

ಕೃಷ್ಣರಾಜ ಒಡೆಯರವರ ಪ್ರತಿಮೆ

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರ್ ಚೌಕದಲ್ಲಿ ಕಟ್ಟಲಾಗುತ್ತಿರುವ ಮಂಟಪದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರವರ ಅಮೃತಶಿಲಾ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಬರುವ ತಿಂಗಳು ಮೊದಲನೆ ವಾರದಲ್ಲಿ ಮಾಜಿ ದಿವಾನರಾದ ಸರ್ ಎಂ ವಿಶ್ವೇಶ್ವರಯ್ಯನವರು ಅದರ ಅನಾವರಣ ಮಹೋತ್ಸವವನ್ನು ನೆರವೇರಿಸುವಂತೆ ಅವರನ್ನು ಕೇಳಿಕೊಳ್ಳಲಾಗಿದೆಯೆಂದು ಗೊತ್ತಾಗಿದೆ.

ಖಜಾನೆ ಕೆಲಸದ ಪರಿಶ್ರಮಕ್ಕಾಗಿ ರಿಜರ್ವ್ ಬ್ಯಾಂಕಿಗೆ ಅಧಿಕಾರಿಗಳು

ಸಂಸ್ಥಾನದ ಅಸಿಸ್ಟೆಂಟ್ ಕಮಿಷನರುಗಳಾದ ಶ್ರೀಗಳು ಜಿ ಎಚ್ ಆದಿನಾರಾಯಣ ವೆಂಕಟೇಶ್ ಮತ್ತು ಬಸವರಾಜ ಅರಸ್‌ರವರು ಖಜಾನೆ ವಿಷಯವಾಗಿ ಹೆಚ್ಚು ಪರಿಶ್ರಮ ಪಡೆಯಲು ಮದ್ರಾಸಿನಲ್ಲಿರುವ ರಿಸರ್ವ್ ಬ್ಯಾಂಕಿಗೆ ಕಳುಹಿಸಲ್ಪಡುವರೆಂದೂ, ಅವರು ೨೬ನೇ ತಾ|| ಮದರಾಸಿಗೆ ತೆರಳಲಿರುವರೆಂದೂ ಗೊತ್ತಾಗಿದೆ

ಆಹಾರ ಡೈರೆಕ್ಟರ್ ಆಗಿ

ವಿ ಮುನಿಯಪ್ಪನವರ ನೇಮಕ

ಹೆಚ್ಚುವರಿ ಪರಿಹಾರ ಕಮಿಷನರಾಗಿ ನೇಮಕವಾಗಿರುವ ಶ್ರೀ ಕೆ ಪಿ ರಾಮಯ್ಯನವರನ್ನು ಸಂಸ್ಥಾನದ ಆಹಾರ ಇಲಾಖಾ ಡೈರೆಕ್ಟರ್ ಆಗಿಯೂ ನೇಮಿಸಲಾಗಿದೆ

ಸರ್ಕಾರದವರಿಂದ ಬಸ್ಸು ಮಾರ್ಗಗಳ ವಶ

ಹೊಸ ನೀತಿ ಜಾರಿಗೆ ತರದಂತೆ ಖಾಸಗೀ ಮಾಲೀಕರುಗಳ ಮನವಿ

ಮೈಸೂರು ೨೪

ಮೈಸೂರು ಸರ್ಕಾರದವರು ೬ ರಸ್ತೆಗಳಲ್ಲಿ ತಮ್ಮದೇ ಆದ ಬಸ್ಸುಗಳನ್ನು ಓಡಿಸುವ ಮುನಾಪಲಿಯನ್ನು ಮಾಡಿಕೊಳ್ಳಲಿರುವ ಅಂಶವನ್ನು ಪರಿಶೀಲಿಸಲು ಖಾಸಗಿ ಬಸ್ಸು ಮಾಲೀಕರು ನೆನ್ನೆ ಮತ್ತು ಇಂದು ಇಲ್ಲಿ ಸಭೆ ನಡೆಸಿ, ಈ ವಿಷಯವನ್ನು ಆಮೂಲಾಗ್ರವಾಗಿ ಪರ್ಯಾಲೋಚಿಸಲು ಒಂದು ಸಲಹಾ ಸಮಿತಿಯನ್ನು ನೇಮಿಸಿ ಅದರಲ್ಲಿ ಬಸ್ಸು ಮಾಲೀಕರ ಸಂಘದವರಿಗೆ ಪ್ರಾತಿನಿಧ್ಯವಿತ್ತು ವಿಚಾರ ವಿನಿಮಯದಿಂದ ಒಂದು ವ್ಯಾಪಕ ಯೋಜನೆಯೊಂದನ್ನು ತಯಾರಿಸಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವನ್ನು ಅಂಗೀಕರಿಸಿರುತ್ತಾರೆ ಪ್ರಕೃತದಲ್ಲಿ ಆರ್ಥಿಕ ಮುಗ್ಗಟ್ಟು ಅಭಾವ ಪರಿಸ್ಥಿತಿಯಿರುವಾಗ ಸರ್ಕಾರದವರು ತಮ್ಮ ಹಣಕಾಸಿನ ಮುಗ್ಗಟ್ಟಿನ ನಿವಾರಣೆಗಾಗಿ, ನಷ್ಟವಿಲ್ಲದಿದ್ದರೂ ಲಾಭವನ್ನು ಕೊಡದಿರುವ ಈ ಹೊಸ ಉದ್ಯಮದಲ್ಲಿ ಕೈಹಾಕುವುದು ಸೂಕ್ತವಲ್ಲವೆಂದು ಸಂಘದವರು ಅಭಿಪ್ರಾಯಪಟ್ಟಿರುತ್ತಾರೆ ಈ ಅಶ್ನೆಯಿಂದ ತೊಂದರೆಗೆ ಒಳಗಾಗುವವರಿಗೆ ಸಾಕಷ್ಟು ಕಾಲಾವಕಾಶವೀಯದೆ ಬಸ್ಸು ಮಾಲೀಕರುಗಳನ್ನು ವಿಚಾರಿಸದೆ ತೀರ್ಮಾನಕ್ಕೆ ಬಂದಿರುವುದು ಮತ್ತು ಇವುಗಳಿಂದ ಆಗುವ ತೊಂದರೆಗಳನ್ನು ಗಮನಿಸದಿರುವುದು, ಪ್ರಯಾಣಿಕರಿಗೆ ಈ ಬದಲಾವಣೆಗಳಿಂದ ಆಗುವ ತೊಂದರೆಯನ್ನು ಲಕ್ಷಿಸದಿರುವುದು, ಮಾಲೀಕರುಗಳಿಗೆ ಹೊಸ ಮಾರ್ಗಗಳನ್ನು ಕೊಡುವ ಸಂದರ್ಭದಲ್ಲಿ ಉಂಟಾಗುವ ಅನಾನುಕೂಲ ಕಾಲಹರಣ, ನಷ್ಟ ಮುಂತಾದುವನ್ನು ಪರಿಶೀಲಿಸದಿರುವುದು, ಇವುಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಲಾಗಿದೆ

ರೈಲ್ವೆಯೊಡನೆ ಅಲ್ಲಲ್ಲಿ ಸ್ಪರ್ಧೆ ನಡೆಸಬೇಕಾಗುವುದರಿಂದ ಸರ್ಕಾರದವರಿಗೆ ಇದರಿಂದ ನಷ್ಟವೇ ಉಂಟಾಗುವುದೆಂದೂ, ಆದ್ದರಿಂದ ಈ ವಿಚಾರಗಳನ್ನು ಪರಿಶೀಲಿಸಲು ಸಲಹಾ ಸಮಿತಿಯೊಂದನ್ನು ನೇಮಿಸಬೇಕೆಂದೂ ಕೋರಲಾಗಿದೆ ಶಾಸನ ಸಭೆಯ ಮತ್ತು ಜನರ ಅಭಿಪ್ರಾಯವನ್ನು ಪಡೆದನಂತರ ಸರಕಾರದವರು ತಮ್ಮ ಯೋಜನೆಯನ್ನು ಜಾರಿಗೆ ತರಬೇಕೆಂದೂ, ಈ ಕೂಡಲೇ ಜಾರಿಗೆ ತರಕೂಡದೆಂದೂ ಪ್ರಾರ್ಥಿಸಲಾಗಿದೆ

ಸರ್ಕಾರದವರ ನೂತನ ಕ್ರಮದಿಂದ ೩೦೦ ಬಸ್ಸು ಸರ್ವಿಸ್ಸುಗಳಿಗೂ, ಸುಮಾರು ೩ ಸಾವಿರ ಜನ ನೌಕರರಿಗೂ ತೊಂದರೆಯಾಗುವುದೆಂದು ಹೇಳಲಾಗಿದೆ ಈ ಬಗ್ಗೆ ಬಸ್ಸು ಮಾಲೀಕರ ೧೨ ಜನ ಪ್ರತಿನಿಧಿಗಳು ನಾಳೆ ದಿನ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಲಿರುವರು

ರಾಯಲಸೀಮೆಗೆ ನೆಹರೂ ಭೇಟಿ

ಪ್ರಧಾನಿ ನೆಹರುರವರೂ ಬರುವ ತಿಂಗಳು ಮೊದಲನೇ ವಾರದಲ್ಲಿ ಮದ್ರಾಸಿಗೆ ಆಗಮಿಸಿ, ಒಂದು ವಾರಕಾಲ ಆ ಸಂಸ್ಥಾನದಲ್ಲಿ ಸಂಚರಿಸುವರೆಂದೂ, ರಾಯಲಸೀಮೆಗೂ ಅವರು ಭೇಟಿಯೀಯುವರೆಂದೂ ವರದಿಯಾಗಿದೆ

ಬೊಂಬಾಯಿಯಲ್ಲಿ ಕೃತಕ ಮಳೆ

ಅಭಾವ ಪ್ರದೇಶಗಳಲ್ಲಿ ಕೃತಕ ಮಳೆ ಕರೆಸಲು ಬೊಂಬಾಯಿ ಸರ್ಕಾರದವರು ತೀವ್ರ ಪ್ರಯತ್ನದಲ್ಲಿರುವರೆಂದು ವರದಿಯಾಗಿದೆ

ಸಹಗಮನ ತಪ್ಪಿಸುವಂತೆ ಮಹಿಳೆಯರ ಮನವಿ

ದೇಶದಲ್ಲಿ ಇತ್ತೀಚಿಗೆ ಸಹಗಮನಗಳು ಹೆಚ್ಚುತ್ತಿರುವುದೆಂದೂ ಅವನ್ನು ತಪ್ಪಿಸುವ ಶಾಸನವನ್ನು ಎಲ್ಲ ಸಂಸ್ಥಾನಗಳಲ್ಲೂ ಜಾರಿಗೆ ತರಬೇಕೆಂದೂ ಕೋರಿ ಭಾರತದ ಮಹಿಳಾ ಸಂಘದವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವರೆಂದು ತಿಳಿದುಬಂದಿದೆ

ಪರ್ಷಿಯಾ ಎಣ್ಣೆ ವ್ಯಾಜ್ಯದಲ್ಲಿ ಮಿರ್ಜಾರವರ ಸಂಧಾನ

ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೈಲರು ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿ ಕಳೆದ ಸೋಮವಾರ ಅಲ್ಲಿನ ಪ್ರಧಾನಿ ಮುಸದ್ದಿಕ್ ರವರನ್ನು ಕಂಡು ಎಣ್ಣೆ ವ್ಯಾಜ್ಯದ ವಿಷಯವಾಗಿ ಮಾತುಕತೆ ನಡೆಸಿದರೆಂದು ವರದಿಯಾಗಿದೆ ಅವರು ಈಗಾಗಲೇ ಅಲ್ಲಿರುವ ಅಮೆರಿಕದ ಮತ್ತು ಭಾರತದ ರಾಯಭಾರಿಗಳನ್ನು ಭೇಟಿ ಮಾಡಿರುವರು ಅವರು ಪುನಃ ಪರ್ಷಿಯದ ಪ್ರಧಾನಿ ಮತ್ತು ಉಪ ಪ್ರಧಾನಿಯವರನ್ನು ಭೇಟಿ ಮಾಡಲಿರುವರೆಂದು ಗೊತ್ತಾಗಿದೆ

೨೦೦ ಕೌಂಟಿನ ಖಾದಿ ನೂಲು

ಈ ಸಲದ ದಸರಾ ವಸ್ತುಪ್ರದರ್ಶನದ ಗೃಹ ಕೈಗಾರಿಕಾ ವಿಭಾಗದಲ್ಲಿ ದೇವಕೋಟೆಯ ಶ್ರೀ ಕೆ. ಪಿ ಶ್ರೀನಿವಾಸಯ್ಯಂಗಾರ್ ಎಂಬ ೭೫ ವರ್ಷದ ವಯೋವೃದ್ಧರು ಸಾಮಾನ್ಯವಾದ ರಾಟೆಯಲ್ಲಿ ೨೦೦ ಕೌಂಟಿನ ನೂಲನ್ನು ತೆಗೆಯುತ್ತಿರುವರು.

ಜಾರ್ಡಾನ್ ಮತ್ತು ಸಿರಿಯಾ ಮೇಲೆ ಇಸ್ರೇಲ್ ಯುದ್ಧವೇ

ಅರಬ್ ಲೀಗಿನ ಸದಸ್ಯ ರಾಷ್ಟ್ರಗಳಾದ ಜಾರ್ಡಾನ್ ಮತ್ತು ಸಿರಿಯಾಗಳ ಮೇಲೆ ಇಸ್ರೇಲ್ ದೇಶವು ಯುದ್ಧ ಹೂಡಲು ಸನ್ನಾಹ ಮಾಡಿಕೊಳ್ಳುತ್ತಿರುವುದೆಂದು ಕೈರೋವಿನ ಅಲ್ ಅಹ್ರಾಂ ಎಂಬ ಪತ್ರಿಕೆಯು ಆರೋಪಿಸಿರುತ್ತದೆ. ಈ ಬಗ್ಗೆ ಅರಬ್ ಲೀಗಿನ ರಾಜಕೀಯ ಸಮಿತಿಯು ಪರಿಸ್ಥಿತಿಯನ್ನು ಕುರಿತು ಚರ್ಚಿಸಿತೆಂದು ಆ ಪತ್ರಿಕೆಯು ವರದಿ ಮಾಡಿದೆ. ಇಸ್ರೇಲಿನೊಡನೆ ಅರಬ್ ರಾಷ್ಟ್ರಗಳು ಒಪ್ಪಂದಕ್ಕೆ ಬರಲು ಅದು ಹೂಡಿರುವ ತಂತ್ರವಿದೆಂದು ಭಾವಿಸಲಾಗಿದೆ

ಕೋರ್ಟಿನಲ್ಲಿ ಬೀಡಿ ಸೇದಿದುದಕ್ಕೆ ಸಜಾ

ಮದರಾಸಿನ ಜಾರ್ಜ್ ಟೌನಿನಲ್ಲಿರುವ ೮ನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊನ್ನೆ ವಿಚಾರಣೆ ನಡೆಯುತ್ತಿದ್ದ ವೇಳೆಯಲ್ಲಿ ಪೊನ್ನಯ್ಯ ಎಂಬ ಪ್ರೇಕ್ಷಕನು ಅಲ್ಲೇ ಬೀಡಿಯನ್ನು ಹತ್ತಿಸಿ ಸೇದಲು ಉಪಕ್ರಮಿಸಿದುದನ್ನು ನ್ಯಾಯಾಧೀಶರು ಕಂಡು ಕೋರ್ಟಿನ ಘನತೆ ಗೌರವಗಳನ್ನು ಅಲಕ್ಷಿಸಿ ಅವನು ಬೀಡಿ ಸೇದಿದುದಕ್ಕಾಗಿ ಒಂದು ತಿಂಗಳು ಕಠಿಣ ಸಜಾ ಶಿಕ್ಷೆ ವಿಧಿಸಿದರು

ಏಷ್ಯಾ ಸಮಾಜವಾದಿ ಸಮ್ಮೇಳನಕ್ಕೆ ಸಂಸ್ಥಾನದ ಪ್ರತಿನಿಧಿಗಳು

ರಂಗೂನಿನಲ್ಲಿ ಬರುವ ನವೆಂಬರಿನಲ್ಲಿ ಸೇರುವ ಏಷ್ಯಾ ಸಮಾಜವಾದಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀಗಳಾದ ಶಾಂತವೇರಿ ಗೋಪಾಲಗೌಡ, ಕೆ ಕಣ್ಣನ್, ಮೀರ್ ನೂರ್ ಹುಸೇನ್, ಬಿ ಶ್ರೀಕಂಠಪ್ಪ ಎ ಹೆಚ್ ಶಿವಾನಂದಸ್ವಾಮಿ, ಮತ್ತು ಎಸ್ ಗೋಪಾಲಗೌಡರವರನ್ನು ಮೈಸೂರು ಸಂಸ್ಥಾನದ ಸಮಾಜವಾದಿ ಪಕ್ಷವು ತನ್ನ ಪ್ರತಿನಿಧಿಗಳಾಗಿ ಕಳುಹಿಸಲಿದೆ.

ಶ್ರೀಕಂಠೇಶ್ವರ ಸ್ವಾಮಿಯವರಿಗೆ ಪ್ರಭುಗಳಿಂದ ಹಾರ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರಿಗೆ ಶ್ರೀಮನ್ಮಹಾರಾಜರು ೮ ಸಾವಿರ ರೂ ಬೆಲೆಯ ರತ್ನ ಖಚಿತವಾದ ಮತ್ತು ಗಂಡಭೇರುಂಡ ಪದಕವಿರುವ ಹಾರವನ್ನು ಕೊಟ್ಟಿರುತ್ತಾರೆ.

ಬಸ್ ಕೆಲಸಗಾರರಿಗೆ ಸಚಿವರ ಭರವಸೆ

ಮಿ ಎ ಟಿ ಯು.ಸಿ ಸಂಸ್ಥೆಯ ಮೈಸೂರು ಶಾಖೆಯ ಅಧ್ಯಕ್ಷರಾದ ಶ್ರೀ ಎನ್. ಕೇಶವಯ್ಯಂಗಾರ್ ಮತ್ತು ಇತರರು ನೆನ್ನೆ ಗೃಹ ಮಂತ್ರಿ ಶ್ರೀ ಹೆಚ್ ಸಿದ್ಧವೀರಪ್ಪನವರನ್ನು ಭೇಟಿ ಮಾಡಿ ಅಕ್ಟೋಬರಿನಿಂದ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳಲಿರುವ ಬಸ್ಸು ಮಾರ್ಗಗಳಲ್ಲಿ ಈಗ ಓಡುತ್ತಿರುವ ಖಾಸಗಿ ಬಸ್ಸುಗಳ ಕೆಲಸಗಾರರಿಗೆ ನಿರುದ್ಯೋಗವುಂಟಾಗದಂತಾಗಬೇಕೆಂದು ಪ್ರಾರ್ಥಿಸಿದರು ಸಚಿವರು ಉತ್ತರವಿತ್ತು ಹೊಸ ಲೈಸನ್ಸುಗಳನ್ನು ಕೊಡುವಾಗ ಮುನಾಪಲಿಯ ಬಸ್ಸು ಸರ್ವಿಸ್ಸಿನಿಂದ ನಿಂತುಹೋದ ಬಸ್ಸುಗಳ ಮಾಲೀಕರಿಗೆ ಪ್ರಧಮಾವಕಾಶ ಕೊಡುವುದಾಗಿ ಭರವಸೆಯಿತ್ತರು

ಡಕಾಯಿತರ ಸ್ಥಳಕ್ಕೆ ಬೆಂಕಿ ಇಟ್ಟ ಬಾಲಕಿಗೆ ಬಹುಮಾನ

ಡಕಾಯಿತರನ್ನೇ ನಿರ್ಮೂಲ ಮಾಡುವ ಕಾರ್ಯದಲ್ಲಿ ಸಹಾಯ ನೀಡಿದವರಿಗೆ ತಲಾ ೫೦೦ ರೂ ಗಳಂತೆ ಒಟ್ಟು ೮೦೦೦ ರೂ ಅನ್ನು ಮೊನ್ನೆ ಜೋಧಪುರದಲ್ಲಿ ರಾಜಾಸ್ಥಾನದ ಪೊಲೀಸು ಮುಖ್ಯಾಧಿಕಾರಿಯು ಹಂಚಿದರು ಡಕಾಯಿತರು ಅಡಗುತ್ತಿದ್ದ ಸ್ಥಳಕ್ಕೆ ಬೆಂಕಿ ಹಚ್ಚಿಸಿದ ಸ್ವರೂಪಾಬಾಯಿ ಎಂಬ ಹುಡುಗಿಗೂ ಬಹುಮಾನವು ದೊರೆತಿದೆ

ಭಾರತದಲ್ಲಿ ಟ್ರಾಕ್ಟರುಗಳ ತಯಾರಿಕೆ

ಭಾರತದಲ್ಲಿ ಟ್ರಾಕ್ಟರುಗಳನ್ನು ತಯಾರಿಸುವ ಬಗ್ಗೆ ಎಲ್ಲ ಸಿದ್ಧತೆಗಳನ್ನೂ ಮಾಡಲಾಗಿದೆಯೆಂದು ಬ್ರಿಟನ್ನಿನ ಕಾರ್ನೆಲ್ಸ್ ಆರ್ಥಿಕ ಸಮಿತಿಯು ಪ್ರಕಟಣೆಯೊಂದು ತಿಳಿಸಿದೆ.

ಭದ್ರಾವತಿಗೆ ಮಹಾರಾಜರ ಪ್ರಯಾಣ

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿ ಫರ್ನೇಸಿನ ಪ್ರಾರಂಭೋತ್ಸವವನ್ನು ನೆರವೇರಿಸಲು ಬರುವ ತಿಂಗಳು ಶ್ರೀಮನ್ಮಹಾರಾಜರು ಭದ್ರಾವತಿಗೆ ತೆರಳಲಿರುವರು

॥ ಜೈ ಹನುಮಾನ್ ॥

ತಾ. 29 9 52 ನೇ ಸೋಮವಾರ

ಶ್ರೀ ಮನ್ಮಹಾರಾಜರ

ಜಂಬೂಸವಾರಿ ಮೆರವಣಿಗೆ

ನೋಡಲು ದೇವರಾಜ ಮಾರ್ಕೆಟ್ಟಿನ ಮೇಲೆ ಸ್ಥಳ ನಿರ್ಮಿಸಲಾಗಿದೆ

ಮೆರವಣಿಗೆ ಹೋಗುವಾಗ 1 ಟಿಕೆಟ್ಟಿಗೆ 0 4 0

ಮೆರವಣಿಗೆ ಬರುವಾಗ ,, 0 1 0

ಎಸ್ ಈಶ್ವರಪ್ಪ ಕಂಟ್ರಾಕ್ಟರ್

ಜೀವಂತನಿಗೆ ಸತ್ತವನ ರಕ್ತನಾಳದ ಜೋಡಣೆ

ಜಪಾನಿನ ರಾಜಧಾನಿ ಟೋಕಿಯೋವಿನ ವೈದ್ಯರು ಸತ್ತವನೊಬ್ಬನ ಅಯೋರ್ಟಾ ಎಂಬ ಶುದ್ಧರಕ್ತನಾಳವನ್ನು ಮತ್ತೊಬ್ಬನಿಗೆ ಶಸ್ತ್ರಚಿಕಿತ್ಸೆ ಮೂಲಕ ಸೇರಿಸಿ, ಅವನ ಜೀವವನ್ನು ಉಳಿಸಿರುವರೆಂದು ವರದಿಯಾಗಿದೆ ವೈದ್ಯಕೀಯ ಚರಿತ್ರೆಯಲ್ಲೇ ಇದು ಪ್ರಥಮ ಪ್ರಸಂಗವಾಗಿದೆ ಸತ್ತವನ ನಾಳವನ್ನು ಒಂದು ವರ್ಷದ ಹಿಂದೆಯೇ ತೆಗೆದು ಆಲ್ಕೊಹಾಲ್ ದ್ರವದಲ್ಲಿಡಲಾಗಿತ್ತೆಂದೂ, ಮತ್ತೊಬ್ಬ ಮನುಷ್ಯನ ನಾಳದಲ್ಲಿ ವ್ರಣವುಂಟಾದುದರಿಂದ ಆತನ ಹೊಟ್ಟೆಭಾಗದಲ್ಲಿ ಶಸ್ತ್ರಚಿಕಿತ್ಸೆ ನಡೆಸಿ, ಅದನ್ನು ಅಲ್ಲಿಗೆ ಜೋಡಿಸಲಾಯಿತೆಂದೂ ಹೇಳಲಾಗಿದೆ

ಶ್ರೀ ರಾಮ ಸೇವಾ ಮಂಡಲಿ

ರಾಜಧಾನಿಯ ಒಂಟಿಕೊಪ್ಪಲಿನ ಗೋಕುಲಂ ಬಡಾವಣೆಯಲ್ಲಿರುವ ಶ್ರೀ ರಾಮ ಸೇವಾ ಮಂಡಳಿಯವರು ಕಳೆದ ಒಂದು ವಾರದಿಂದ ರಾಮ ಸಪ್ತಾಹ ಗುರು ಭಜನೆ ಮುಂತಾದುವುಗಳನ್ನು ನಡೆಸಿ, ಮೊನ್ನೆ ಶ್ರೀ ರಾಮ ಪಟ್ಟಾಭಿಷೇಕ ಮತ್ತು ಗುರು ಆರಾಧನೆಗಳನ್ನು ನಡೆಸಿದರು ಸಕಲ ಕೋಮಿನವರಿಗೂ ಸಮಾರಾಧನೆ ನಡೆಯಿತು

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳು

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

ಪತ್ತೆಯಿಲ್ಲದ ಡೆಟೆನ್ಯೂವಿನ ಹಾಜರಾತಿಗೆ ಕೋರ್ಟಿನಆಜ್ಞೆ

ಸ್ಥಾನಬದ್ಧತಾ ಶಾಸನದ ಪ್ರಕಾರ ಮದ್ರಾಸು ಅಥವಾ ಹೈದರಾಬಾದಿನಲ್ಲಿ ಬಂಧಿಸಲ್ಪಟ್ಟಿದ್ದ ಕಮ್ಯೂನಿಸ್ಟ್ ಡೆಟೆನ್ಯೂ ಟಿ ಜನಾರ್ಧನಾಚಾರಿ ಎಂಬುವರು ಈಗ ಎಲ್ಲಿರುವರೆಂಬ ಬಗ್ಗೆ ಅವರ ಸಹೋದರರೊಬ್ಬರು ಮೇಲ್ಕಂಡ ಸರ್ಕಾರಗಳವರನ್ನು ಕೇಳಲಾಗಿ ಅವರು ಸಮರ್ಪಕವಾದ ಉತ್ತರ ಕೊಡದ ಪ್ರಯುಕ್ತ ಜನಾರ್ಧನಾಚಾರಿಯವರ ಅಣ್ಣನವರು ಸುಪ್ರೀಂ ಕೋರ್ಟಿನಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ ತಮ್ಮ ಸಹೋದರರ ಯೋಗಕ್ಷೇಮ ತಿಳಿಯಲು ಅವರ ನೆರವನ್ನು ಕೋರಿದ್ದರು ಜನಾರ್ಧನಾಚಾರಿಯವರನ್ನು ಒಂದು ವಿಚಾರಣೆ ಸಂಬಂಧದಲ್ಲಿ ಮದರಾಸಿನಿಂದ ಹೈದರಾಬಾದಿಗೆ ಕಳಿಸಿದ್ದು ಅನಂತರ ವಾಪಸು ಕಳುಹಿಸಲಾಗಿತ್ತೆಂದು ಹೈದರಾಬಾದ್ ಪೊಲೀಸರು ಹೇಳಿರುವರೆಂದೂ, ಆದರೆ ಮದ್ರಾಸು ಸರ್ಕಾರದವರು ಇದಕ್ಕೆ ವ್ಯತಿರೇಕವಾದ ಹೇಳಿಕೆಯಿತ್ತು ಆತನನ್ನು ಹೈದರಾಬಾದಿಗೇ ಕಳುಹಿಸಲಾಯಿತೆಂದೂ ತಿಳಿಸಿರುವರು ಈ ಮಧ್ಯೆ ಆತನು ಮೃತಪಟ್ಟಿರಬಹುದೆಂದು

ಮನೆ ಬಿಕರಿಗಿದೆ

ಮೈಸೂರು ವಾಣೀವಿಲಾಸ ಮೊಹಲ್ಲಾ ಬ್ಲಾಕ್ IV ಎ ಗೋಕುಲದ ಬಳಿ ದೀಪ ನಲ್ಲಿ, ಕಾಂಪೌಂಡು ಮತ್ತು ವಿಶಾಲ ಗ್ಯಾರೇಜು ಸಹ ಉಳ್ಳ ಪ್ರತ್ಯೇಕ ತಾರಸೀ ಮನೆ ಇದೆ. ವಿವರಗಳಿಗೆ ಕೆಳಗೆ ಸಹಿ ಮಾಡಿದವರ ವಿಚಾರಿಸಿ.

ಜಿ ವಿ ವೆಂಕಟಾಚಾರ್,

22–9–52 | ಬ್ಲಾಕ್ IV ಎ

ಮೈಸೂರು | ವಿ ವಿ ಮೊಹಲ್ಲಾ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ 8 30 ಬಿ ಎಸ್ ಶ್ರೀನಿವಾಸಯ್ಯಂಗಾರ್ ಸಂಗೀತ ಮಧ್ಯಾಹ್ನ 1 40 ವೀಣೆ 3 ಮತ್ತು ಸಂಜೆ 6 30 ಎಂ ಕೆ ಕೃಷ್ಣ ಪಿಟೀಲು ಸಂಜೆ 7 40 ಬಿ ಎಸ್ ಶ್ರೀನಿವಾಸಯ್ಯಂಗಾರ್ ಸಂಗೀತ 8 10 ಕನ್ನಡ ಗೀತೆಗಳು 8 ರಸನಿಮಿಷ 8 45 ವ್ಯಾರಿ ಬೇಗಂ ತಂಡ 9 15 ಎಂ ಪಿ ನಾಗಮುತ್ತು ವಚನಗಾನ 9 40 ರತ್ನಮ್ಮ ಕೃಷ್ಣಮೂರ್ತಿ ಸಂಗೀತ 10 15 ಚಿತ್ರಸಂಗೀತ 10 40 ಪ್ರಶ್ನೆಗಳು

ಊಹಿಸಲಾಗಿದೆ ಸುಪ್ರೀಂ ಕೋರ್ಟಿನವರು ಈಗ ಉಭಯ ಸರ್ಕಾರಗಳವರಿಗೂ ಆಜ್ಞೆಯಿತ್ತು ೧೯೫೨ರಿಂದ ಪತ್ತೆಯಿಲ್ಲದಿರುವ ಜನಾರ್ಧನಾಚಾರಿಯನ್ನು ತಮ್ಮ ಕೋರ್ಟಿನಲ್ಲಿ ಹಾಜರು ಪಡಿಸಬೇಕೆಂದು ಸೂಚಿಸಿರುವರು

ಒಲಂಪಿಯಾ

25 9 52 ರಿಂದ ಜನಭರಿತ 2 ನೇ ವಾರ

ಪ್ರತಿ ದಿನ 3 ಆಟಗಳು

ನವೀನ ಕಥೆ ಸಂಗೀತ, ನೃತ್ಯಗಳು

ಸಿಂಲ ಗುಡ್ಡಗಳ ಮಂಜಿನಲ್ಲೇ

ಚಿತ್ರೀಕರಿಸಿರುವ ಪ್ರಕೃತಿ ಸೌಂದರ್ಯ

ಆಶ್ಚರ್ಯಕರ

★ ಪೂನಮ್ ★

ಭೂಮಿಕೆ — ಕಾಮಿನಿ ಕೌಶಲ್

ಅಶೋಕ್ ಕುಮಾರ್

ಸಂಗೀತ — ಶಂಕರ್ ಜೈಕಿಶನ್

ದಿಗ್ದರ್ಶಕ — ಎಂ ಸಾದಿಕ್

Edited, Printed and Published by A R Nagarajan at Sadhvi Press, D Subbiah Road, Mysore

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

24 9 52 ನೇ ಬುಧವಾರದಿಂದ ಅನೋಘ ಪ್ರಾರಂಭ

(ತೆಲುಗು)

* ಸ್ತ್ರೀ ಸಾಹಸಂ *

(ಕಲರ್ ಪ್ರಿಂಟು)

ಪಾತ್ರ ಅಂಜಲಿ, ನಾಗೇಶ್ವರ ರಾವ್ ಸೂರ್ಯಪ್ರಭಾ ರೇಲಂಗಿ, ಗಿರಿಜ, ಸಿ ಎಸ್ ಆರ್ ಶಿವರಾವ್ ಮುಂತಾದವರು

ಅನೋಘ ಪ್ರಾರಂಭ !

ನಾಟಕರತ್ನ ಜಿ ಹೆಚ್ ವೀರಣ್ಣನವರ

ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ) ಮೈಸೂರು

ಮೈಸೂರು ಶಿವರಾಂಪೇಟೆ ರತ್ನಾವಳಿ ಥಿಯೇಟರಿನಲ್ಲಿ

24 9–52ನೇ ಬುಧವಾರ ರಾತ್ರಿ 9 30ಕ್ಕೆ

ಮೈಸೂರು ಸಂಸ್ಥಾನದ ಸಚಿವ ಮಂತ್ರಿಗಳಾದ

ಶ್ರೀ ಕೆ ಹನುಮಂತಯ್ಯ ಬಿ ಎ, ಎಲ್ ಎಲ್ ಬಿ

ಇವರ ಘನವಾದ ಅಧ್ಯಕ್ಷತೆಯಲ್ಲಿ

* ಸಾಹುಕಾರ *

ಎಂಬ ಹೊಸ ನಾಟಕವನ್ನು ಅಭಿನಯಿಸುವರು

ಮಹಾಜನರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಪ್ರತಿ ದಿನ ರಾತ್ರಿ 10ಕ್ಕೆ ಇದೇ ನಾಟಕವನ್ನು ಅಭಿನಯಿಸಲು ಗುತ್ತ

ಕುಶಲರಾದ ಕೆಲಸಗಾರರಿಂದ ತಯಾರಿಸಲ್ಪಟ್ಟ

ಪ್ರಖ್ಯಾತ ಮಂಗಳೂರು ನಮೂನೆಯ

ಸಾವರಿನ್ ಗೋಲ್ಡ್ ನಗಗಳಿಗೆ

ಕೆನರಾ ಜ್ಯುಯಲರ್ಸ್

ದಸರಾ ವಸ್ತುಪ್ರದರ್ಶನದ ಡಿ ಬ್ಲಾಕಿನ

22 ನೇ ಸ್ಟಾಲಿಗೆ ಭೇಟಿ ಕೊಡಿರಿ

ಮಹಾತ್ಮರ ಉಪದೇಶ ! 92 ವರ್ಷದ ಚಿಕಿತ್ಸೆ !! ಖಾತರಿ ಗುಣ !

ಮೈಸೂರು ಅರಮನೆಯ ರಾಜ ವೈದ್ಯ ಅಂಟಕೆ ನರಸಿಂಹ ಪಂಡಿತರ ಮನೆತನದಲ್ಲಿ 92 ವರ್ಷದಿಂದ ಪ್ರಖ್ಯಾತವಾಗಿರುವ

ಎ ರಾಮಸ್ವಾಮಿ ಅಯ್ಯರ್

ರವರ

ಸಂತಾನ ಸಿಂಧೂರ

★ ಬಹಿಷ್ಠೆ ...

★ ...

★ ...

★ ಬಂಜೆತನವ ... ಕೊನೆಗಾಣಿಸಿ

ಸಂತಾನ ಕೊಡುತ್ತದೆ

ಕ್ರಯ 1 ಸೀಸೆ 5 ರೂ

ವಿವರಗಳಿಗೆ – ಎ ರಾಮಸ್ವಾಮಿ ಅಯ್ಯರ್ ಸನ್ಸ್,

628 ಸಂತಾನ ಸಿಂಧೂರ ಆಫೀಸ್ ನೂರಡಿ ರಸ್ತೆ

ದಕ್ಷಿಣ ಅಗ್ರಹಾರ, (ಕೃಷ್ಣಾ ರೈಸ್ ಮಿಲ್ ಪಕ್ಕ) ಮೈಸೂರು

ದಸರಾ ಮಹೋತ್ಸವಕ್ಕಾಗಿ:— ಹೊಸ ಮಾದರಿಯ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ನಿ ಸೀರೆಗಳೂ ಡಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ

★ M. V. ಭೋಜಯ್ಯ

ಇಂಡಿಯನ್ ಬ್ಯಾಂಕ್ ಎದುರು ...

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೫ ೯ ೧೯೫೦ [ಸಂಚಿಕೆ ೫೦

೧||| ಲಕ್ಷ ರೂ. ಅಫೀಮು ಮತ್ತು ಗಾಂಜಾ ಪತ್ತೆ

ಮದ್ರಾಸಿನ ವಿದ್ಯಾರ್ಥಿಗಳ ಮೈಸೂರು ಪ್ರವಾಸ

ಮೈಸೂರು ೨೪

ಮದ್ರಾಸಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಸುಮಾರು ೨೦೦ ವಿದ್ಯಾರ್ಥಿಗಳು ನಿನ್ನೆ ರಾಜಧಾನಿಗೆ ಭೇಟಿ ಇತ್ತು ಇಲ್ಲಿನ ರಾಮಕೃಷ್ಣಾಶ್ರಮದ ಶ್ರೀಮದ ಸ್ವಾಮಿ ಶಾಂಭವಾನಂದರವರ ಅತಿಥಿಗಳಾಗಿದ್ದರು. ಅವರು ನಿನ್ನೆ ಮೊನ್ನೆ ಸಂಜೆ ಇಲ್ಲಿನ ಆಶ್ರಮದ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಸ್ವಾಗತಿಸಿದರು. ಅವರನ್ನು ಸ್ವಾಮಿ ವಿಮಲಾನಂದಜಿ, ಸೋಮನಾಥಾನಂದಜಿ ಮತ್ತು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹೆಚ್ ಸಿ ದಾಸಪ್ಪನವರು ... ಮಾಡಿದರು.

... ಮಹಾರಾಜರು ವಿದ್ಯಾರ್ಥಿಗಳಿಗೆ ಶುಭ ಸಂದೇಶವನ್ನು ಕಳುಹಿಸಿ ಸ್ವಾಮಿ ವಿವೇಕಾನಂದರು ಮೈಸೂರಿಗೆ ಬಂದಾಗ ತಮ್ಮ ತಾತಂದಿರು ಅವರನ್ನು ಸ್ವಾಗತಿಸಿದುದನ್ನು ನೆನಪಿಗೆ ತಂದುಕೊಟ್ಟರು. ಸ್ವಾಮಿ ವಿವೇಕಾನಂದರು ಹೇಳಿದ ಮಾತುಗಳನ್ನು ವಿದ್ಯಾರ್ಥಿಗಳು ತಮ್ಮ ಆದರ್ಶವನ್ನಾಗಿಟ್ಟುಕೊಂಡು ರಾಮಕೃಷ್ಣ ಪರಮಹಂಸರ ಸಂದೇಶವನ್ನು ಪ್ರಚಾರ ಮಾಡಬೇಕೆಂದು ಸೂಚಿಸಿದ್ದರು.

ಮುಖ್ಯ ಮಂತ್ರಿಗಳಿಂದ ನಗರ ಪರಿಶೀಲನೆ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಪೌರಸಭಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿರಾವ್ ಮತ್ತು ಇತರ ಅಧಿಕಾರಿಗಳೊಡನೆ ನಗರದ ನಾನಾ ಭಾಗಗಳಲ್ಲಿ ನಿನ್ನೆ ಪರಿಶೀಲನೆ ನಡೆಸಿದರು. ಕರಣಿಕ ಕಂಪೌಂಡ್ ಆಸ್ಪತ್ರೆ, ... ಸಹಕಾರ ಸಂಘ ... ಕೇರಿ ಮತ್ತು ... ಸ್ಥಳಗಳಿಗೆ ಭೇಟಿಯಿತ್ತರು. ಮಂಡಿ ಮೊಹಲ್ಲಾ ಮತ್ತು ಅಶೋಕಾ ರಸ್ತೆಯ ಹಲವು ಭಾಗಗಳಲ್ಲಿ ಅವರು ಸಂಚರಿಸಿದರು.

ಫ್ಲಡ್ ಲೈಟ್ ಕ್ರೀಡೆ

ರಾಜಧಾನಿಯ ದಸರಾ ವಸ್ತುಪ್ರದರ್ಶನದಲ್ಲಿ ಫ್ಲಡ್ ಲೈಟ್ ಟೋರ್ನಮೆಂಟ್ ದಸರ ಕ್ರೀಡೆಗಳು ನಾಳೆ ಸಂಜೆಯಿಂದ ನಡೆಯುವುವು. ಮಹಿಳೆಯರ ಆಟಗಳನ್ನು ಬರುವ ತಿಂಗಳು ೪ ನೇ ತಾರೀಖಿನಂದು ನಡೆಸಲಾಗಿದೆ. ಕುಸ್ತಿ ಮತ್ತು ಶರೀರ ಸೌಂದರ್ಯದ ಸ್ಪರ್ಧೆಗಳನ್ನು ಬರುವ ತಿಂಗಳು ೬ ನೇ ತಾರೀಖು ಏರ್ಪಡಿಸಲಾಗಿದೆ. ಸ್ಪರ್ಧಿಸ ಬಯಸುವವರು ಇದೇ ೩೦ ನೇ ತಾರೀಖಿನೊಳಗೆ ಅರ್ಜಿ ಕಳುಹಿಸಬೇಕೆಂದು ಸೂಚಿಸಲಾಗಿದೆ.

ಪಬ್ಬಾವು ಜಿಂಕೆಯನ್ನು ನುಂಗಿತು

... ಲೇಖಿಪಾಣಿ ಅರಣ್ಯದ ... ಉದ್ದದ ಭಾರಿ ಹೆಬ್ಬಾವೊಂದು ಜಿಂಕೆಯನ್ನು ಜೀವಸಹಿತ ನುಂಗಿ ... ಮರಕ್ಕೆ ಸುತ್ತುಹಾಕಿಕೊಂಡು ... ವೂ ಹಾವನ್ನು ಜನರು ಕಡಿದು ... ಕೊಂದು ಪಕ್ಕದ ಊರಿಗೆ ... ನಕ್ಕಾಗಿ ತಂದಿದ್ದರೆಂದೂ ವರದಿಯಾಗಿದೆ.

ಬೊಂಬಾಯಿಯಲ್ಲಿ ರಾಜೂ ಅಪೀಲು ವಿಚಾರಣೆ

ಮೈಸೂರು ಶ್ರೇಷ್ಠನ್ಯಾಯಾಧೀಶರಾದ ಶ್ರೀ ಪಿ ಮೇದಪ್ಪನವರಿಗೆ ವಿಷಪ್ರಾಶನ ಮಾಡಿಸುವ ಪ್ರಯತ್ನದ ಸಂಬಂಧದಲ್ಲಿ ಶಿಕ್ಷೆಗೆ ಗುರಿಯಾಗಿರುವ ಶ್ರೀ ಎಲ್ ಎಸ್ ರಾಜುರವರು ಹೂಡಿರುವ ಅಪೀಲು ಬರುವ ತಿಂಗಳು ೬ ನೇ ತಾ|| ಬೊಂಬಾಯಿ ಹೈಕೋರ್ಟಿನಲ್ಲಿ ವಿಚಾರಣೆಗೆ ಬರುವುದು. ಈ ಸಂಬಂಧವಾಗಿ ಶ್ರೀ ರಾಜುರವರನ್ನು ಬೊಂಬಾಯಿಗೆ ಕಳುಹಿಸಲು ಏರ್ಪಾಡಾಗುತ್ತಿದೆಯೆಂದು ವರದಿಯಾಗಿದೆ.

ಅಣು ಬಾಂಬಿನ ರೀತಿಯಲ್ಲಿ ಜ್ವಾಲಾಮುಖಿ ಸಿಡಿತ

ಜಪಾನಿನ ರಾಜಧಾನಿಗೆ ೨೦೦ ಮೈಲಿ ದಕ್ಷಿಣದಲ್ಲಿ ಸಮುದ್ರದೊಳಗಿನ ಜ್ವಾಲಾಮುಖಿಯೊಂದು ಮೊನ್ನೆ ಸಿಡಿದಿದ್ದರಿಂದ ಅಣು ಬಾಂಬು ಸಿಡಿದಂತೆ ಕಟ್ಟವಂಗಿ ಭಾರಿ ಪ್ರಮಾಣದಲ್ಲಿ ಕರಗಿದ ಲೋಹ ಮತ್ತು ಹೊಗೆಯನ್ನು ಕಾರುತ್ತಿತ್ತೆಂದು ವರದಿಯಾಗಿದೆ. ಇದರಿಂದ ಕೆಲವು ದಿನಗಳ ಹಿಂದೆ ಉದ್ಭವವಾದ ದ್ವೀಪವೊಂದು ಮಾಯವಾಯಿತೆಂದೂ ಹೇಳಲಾಗಿದೆ.

ಸಂಸ್ಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಬಹುಮಾನ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಓದಿ ಉತ್ತೀರ್ಣರಾದ ೭೭ ಮಂದಿ ವಿದ್ಯಾರ್ಥಿಗಳಿಗೆ ಶ್ರೀಮನ್ಮಹಾರಾಜರು ನಿನ್ನೆ ರಾಜಸಭೆಯಲ್ಲಿ ಬಹುಮಾನವಾಗಿ ಹಣವನ್ನು ಕೊಟ್ಟರು. ಏಳು ಮಂದಿಗೆ ಶಾಲು ಜೋಡಿಗಳನ್ನು ಕೊಡಲಾಯಿತು. ವಿದ್ಯಾ ಇಲಾಖಾ ಡೈರೆಕ್ಟರ್ ಶ್ರೀ ಹೆಚ್ ಬಿ ಮಲ್ಲಾರಾಧ್ಯರು ಭಾಷಣ ಮಾಡಿ ಸಂಸ್ಕೃತಕ್ಕೆ ರಾಜಮನೆತನದವರು ಕೊಡುತ್ತಿರುವ ಪ್ರೋತ್ಸಾಹಕ್ಕಾಗಿ ಭಕ್ತಿಪೂರ್ವಕ ಕೃತಜ್ಞತೆಯನ್ನು ಸೂಚಿಸಿದರು.

ವಸ್ತುಪ್ರದರ್ಶನದಲ್ಲಿ ಟಿ. ಚೌಡಯ್ಯನವರ ಸಂಗೀತ

ದಸರಾ ವಸ್ತುಪ್ರದರ್ಶನದ ಜೀವನ ರಾಯನಕಟ್ಟೆಯ ವಿಭಾಗದಲ್ಲಿ ಈ ಸಂಜೆ ೬|| ಘಂಟೆಯಿಂದ ರಾತ್ರಿ ೮ರ ವರೆಗೆ ಸಂಗೀತ ರತ್ನ ಟಿ ಚೌಡಯ್ಯನವರ ಸಂಗೀತವು ಏರ್ಪಾಡಾಗಿದೆ.

೧||| ಲಕ್ಷ ರೂ. ಗಾಂಜಾ ಮತ್ತು ಅಫೀಮು ಪತ್ತೆ

ಬೆಂಗಳೂರು ೨೪

ಇಲ್ಲಿನ ಸಿವಿಲ್ ಪ್ರದೇಶದ ಎ ಎಸ್ ಪಿ ಯವರುಗಳಾದ ಶ್ರೀಗಳು ಎ ಜ ಕೆಲ್ಲಿ ಮತ್ತು ಹೆಚ್ ವರದರಾಜಯ್ಯಂಗಾರ್ಯರು ... ಮೊದಲಿ ರಸ್ತೆಯಲ್ಲಿ ಶ್ರೀ ದಾಸಪ್ಪನಾಯ್ಡು ಎಂಬುವರ ಮನೆಯನ್ನು ಶೋಧಿಸಿ ೬೦೦ ಸೇರು ಗಾಂಜಾ ಮತ್ತು ೧ ಸೇರ ಅಫೀಮನ್ನು ಪತ್ತೆಹಚ್ಚಿ ವಶಪಡಿಸಿಕೊಂಡಿರುತ್ತಾರೆ. ಅವಕ್ಕೆ ೧||| ಲಕ್ಷ ರೂ ಬೆಲೆಯಾಗುವುದೆಂದು ಹೇಳಲಾಗಿದೆ.

ಈಜಿಪ್ಟ್ ಸರ್ಕಾರಕ್ಕೆ ನಹಾಸ ಪಾಷಾರ ಸವಾಲ್

ಈಜಿಪ್ಟಿನ ... ಪಕ್ಷದ ನಾಯಕ ಮುಸ್ತಫಾ ನಹಾಸ್ ಪಾಷಾರವರು ... ಸರ್ಕಾರಕ್ಕೆ ಸವಾಲ್ ಹಾಕಿ ... ಕ್ಷೇತ್ರದಿಂದ ... ಮನ್ನು ... ಇವರು ಮತ್ತು ... ಇವರು ... ಎಂದು ... ಆ ಪಕ್ಷದ ಸ್ಥಾಪಕರ ... ಸರನ್ನು ... ಇಲ್ಲವೆಂದು ಗೊತ್ತಾಗಿದೆ.

ದರಿದ್ರನಾರಾಯಣ ಸೇವೆ

ನೂರಡಿ ರಸ್ತೆಯಲ್ಲಿರುವ ವರ್ತಕಪ್ರವರ್ತಕ ಹೊಂಬಾಳೆ ರಂಗಯ್ಯನವರ ಸಾರ್ವಜನಿಕ ಉಚಿತ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿ ಇದೇ ೩೦ ನೇ ತಾ|| ಮಧ್ಯಾಹ್ನ ೧೨|| ಗಂಟೆಗೆ ರಾಜಧಾನಿಯ ಗಣ್ಯ ವರ್ತಕರಾದ ಶ್ರೀ ಬಿ ಟಿ ಶಾಂತರಾಜಪ್ಪನವರ ಅಧ್ಯಕ್ಷತೆಯಲ್ಲಿ ದರಿದ್ರನಾರಾಯಣ ಸೇವೆಯು ನಡೆಯಲೇರ್ಪಾಡಾಗಿದೆ. ಈ ಸತ್ಕಾರ್ಯದಲ್ಲಿ ಧರ್ಮಪ್ರೇಮಿ ಎಲ್ಲರೂ ಸಹಾಯ ಮಾಡಬೇಕೆಂದು ಶ್ರೀ ಹೊಂಬಾಳೆ ರಂಗಯ್ಯನವರೂ, ಅವರ ಕುಟುಂಬ ಶ್ರೀಮತಿ ಪುಟ್ಟಮ್ಮನವರೂ ಪ್ರಾರ್ಥಿಸಿರುತ್ತಾರೆ.

ಮಹಾ ಮಂಗಳಾರತಿ

ಮಂಡಿ ಮೊಹಲ್ಲಾ ಬೇವಿನಕಾಳಮ್ಮನವರ ದೆ ವಸ್ಥಾನದಲ್ಲಿ ಈ ವರ್ಷವೂ ವಾಡಿಕೆಯಂತೆ ನಡೆಯುತ್ತಿರುವ ಉತ್ಸವದ ಅಂಗವಾಗಿ ನಾಳೆ ಸಂಜೆ ೭|| ಗಂಟೆಗೆ ಮಹಾ ಮಂಗಳಾರತಿಯನ್ನು ಏರ್ಪಡಿಸಲಾಗಿದೆ. ಭಕ್ತಾದಿಗಳು ಸಹಕರಿಸಬೇಕಾಗಿ ಕೋರಲಾಗಿದೆ.

ಮದ್ರಾಸ್ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಜಯ

ಮದ್ರಾಸಿನ ಪೌರಸಭೆ ೫೬ ಸ್ಥಾನಗಳಿಗೆ ನಡೆದ ಚುನಾವಣೆಗಳಲ್ಲಿ ೩೩ ಸ್ಥಾನಗಳನ್ನು ಕಾಂಗ್ರೆಸ್ ಉಮೇದುವಾರರು ಪಡೆದಿರುತ್ತಾರೆ. ಕಮ್ಯೂನಿಸ್ಟ್ ಮತ್ತು ಕೆ ಎಂ ಪಿ ಪಕ್ಷಗಳ ಜಂಟಿ ಸಂಗಡಿಗರ್ಗೂ ಸ್ವತಂತ್ರ ಸದಸ್ಯರೊಬ್ಬರಿಗೂ ಒಂದೊಂದು ಸ್ಥಾನವು ದೊರಕಿದೆ. ೨೫ ಮಂದಿ ಸ್ವತಂತ್ರರೂ, ಒಬ್ಬ ಜಂಟಿ ಸಂಗಡಿಗನೂ ಠೇವಣಿ ಹಣವನ್ನು ಕಳೆದುಕೊಂಡಿರುತ್ತಾರೆ.

ವಿದ್ಯಾರ್ಥಿ ಪರಿಷತ್ತಿನ ಪ್ರಾರಂಭೋತ್ಸವ

ಮೈಸೂರಿನ ಅ|| ಭಾ|| ವಿದ್ಯಾರ್ಥಿ ಪರಿಷತ್ತಿನ ಪ್ರಾರಂಭೋತ್ಸವವು ನಾಳೆ ಸಂಜೆ ೬ ಗಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧಿ ಸೇವಾ ಸಂಘದಲ್ಲಿ ಮಹಾರಾಜಾ ಕಾಲೇಜಿನ ಅ|| ಪ್ರೊ|| ಶ್ರೀ ಎಂ ಇ ಭರತರಾಜಸಿಂಗರಿಂದ ನೆರವೇರಿಸಲ್ಪಡುವುದು. ಪರಿಷತ್ತಿನ ಆಶ್ರಯದಲ್ಲಿ ನಡೆಯುತ್ತಿರುವ ಸಂಸ್ಕೃತ ತರಗತಿಯ ಆರಂಭೋತ್ಸವವನ್ನು ಅದೇ ಸಂದರ್ಭದಲ್ಲಿ ಮಹಾರಾಜಾ ಕಾಲೇಜಿನ ಶ್ರೀ ಹರಿಯಪ್ಪನವರು ನೆರವೇರಿಸುವರು.

ಗುಬ್ಬಿ ನಾಟಕ ಮಂಡಲಿ

ನಿನ್ನೆ ಸಂಜೆ ಗುಬ್ಬಿ ಕಂಪೆನಿಯ ಮಾಲೀಕರಾದ ಶ್ರೀ ಜಿ ಹೆಚ್ ವೀರಣ್ಣನವರು ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು ಸತ್ಕರಿಸಿ, ಇನ್ನು ಮುಂದೆ ತಮ್ಮ ಮಕ್ಕಳಾದ ಶ್ರೀ ಚೆನ್ನಬಸಪ್ಪನವರಿಗೆ ಸಂಸ್ಥೆಯ ಆಡಳಿತಾಧಿಕಾರವನ್ನು ವಹಿಸಿಕೊಟ್ಟಿರುವ ಅಂಶವನ್ನು ತಿಳಿಸಿ, ಪತ್ರಿಕೆಗಳೂ, ಮಹಾಜನರೂ ತಮ್ಮ ಉದ್ಯಮಕ್ಕೆ ಮುಂದೆಯೂ ಎಂದಿನಂತೆ ಪ್ರೋತ್ಸಾಹನೀಡಬೇಕೆಂದು ಕೋರಿದರು. ಶ್ರೀ ಎಂ ಸಿ ಮಹದೇವಸ್ವಾಮಿಯವರು ಪತ್ರಿಕಾ ಪ್ರತಿನಿಧಿಗಳಿಂದ ರಂಗಭೂಮಿಯ ಬೆಳವಣಿಗೆಗೆ ಆಗಬೇಕಾದ ಸಹಕಾರವನ್ನು ವಿವರಿಸಿದರು. ಪತ್ರಿಕರ್ತರಾಗಿ ಶ್ರೀ ಟಿಗರಂ ರಂಗಯ್ಯನವರು ಧನ್ಯವಾದವನ್ನು ಸಲ್ಲಿಸಿ, ನಾಟಕ ಕಲೆಯ ಉನ್ನತಿಗೆ ತಮ್ಮ ಸಹೋದ್ಯೋಗಿಗಳು ಸಂಪೂರ್ಣ ಬೆಂಬಲ ನೀಡುವರೆಂದು ಭರವಸೆ ಇತ್ತರು.

ಸಾಹುಕಾರ ನಾಟಕ

... ಕಂಪೆನಿಯವರು ನಿನ್ನೆ ರಾತ್ರಿ ಶಿವರಾಜಪೇಟೆ ... ಥಿಯೇಟರಿನಲ್ಲಿ "ಸಾಹುಕಾರ" ... ನಾಟಕದ ... ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ... ಪ್ರತಿಯೊಬ್ಬ ... ಶ್ರೀ ಎಂ ಸಿ ಮಹದೇವಸ್ವಾಮಿಯವರು ... ನಾಟಕ ಕಲೆಯ ಅಭಿವೃದ್ಧಿಗೆ ಸರ್ಕಾರದವರೂ, ಸಾರ್ವಜನಿಕರೂ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಕೋರಿದರು. ನಾಟಕಕ್ಕೆ ಮುಖ್ಯ ಮಂತ್ರಿಗಳಲ್ಲದೆ ಸಚಿವರುಗಳಾದ ಶ್ರೀಗಳು ಸಿದ್ದವೀರಪ್ಪ ಮತ್ತು ಟಿ ಚನ್ನಯ್ಯನವರೂ, ಶಾಸನ ಸಭಾಧ್ಯಕ್ಷ ಶ್ರೀ ಹೆಚ್ ಸಿದ್ದಯ್ಯನವರೂ, ಪೌರ ಸಭಾಧ್ಯಕ್ಷರೂ, ಶಾಸಕರೂ ಪತ್ರಿಕೋದ್ಯೋಗಿಗಳೂ ಮತ್ತು ಇನ್ನೂ ಅನೇಕ ಪ್ರಮುಖರೂ ಬಂದಿದ್ದರು.

ಅಧಿಕಾರಿ ಸಮಾರಂಭಗಳಲ್ಲಿ ಸ್ಥಾನಮಾನ

ಬೆಂಗಳೂರು ೨೪

ಸಂಸ್ಥಾನದ ಆಡಳಿತಕ್ಕೆ ಸಂಬಂಧಿಸಿದ ಸಮಾರಂಭಗಳಲ್ಲಿ ಸ್ಥಾನಮಾನಗಳನ್ನು ಗೊತ್ತುಪಡಿಸುವ ಬಗ್ಗೆ ಸರ್ಕಾರದ ಪ್ರಕಟಣೆಯೊಂದು ಹೊರಬಿದ್ದಿದೆ ಶ್ರೀಮನ್ ಮಹಾರಾಜರು, ಮುಖ್ಯ ಮಂತ್ರಿಯವರು, ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರು, ಕಿರಿಯ ಮತ್ತು ಹಿರಿಯ ಶಾಸನ ಸಭಾಧ್ಯಕ್ಷರು, ಸಚಿವರುಗಳು, ಹೈಕೋರ್ಟಿನ ನ್ಯಾಯಾಧೀಶರು, ಪಬ್ಲಿಕ್ ಸರ್ವಿಸ್ ಕಮಿಷನ್ ಅಧ್ಯಕ್ಷರು, ಹಿರಿಯ ಮತ್ತು ಕಿರಿಯ ಶಾಸನ ಸಭೆಗಳ ಉಪಾಧ್ಯಕ್ಷರುಗಳು, ಪಾರ್ಲಿಮೆಂಟ್ ಸದಸ್ಯರು, ಶಾಸನ ಸಭೆಗಳ ಸದಸ್ಯರು, ಬೆಂಗಳೂರು ಕಾರ್ಪೊರೇಷನ್ ಮೇಯರ್, ಮೈಸೂರು ನಗರದ ಪೌರಸಭಾಧ್ಯಕ್ಷರು, ಇಲಾಖಾ ಮುಖ್ಯಾಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು– ಈ ರೀತಿಯಾಗಿ ಒಂದನೇ ಪಟ್ಟಿಯನ್ನು ಮಾಡಲಾಗಿದೆ

ಎರಡನೆಯದರಲ್ಲಿ ನಿವೃತ್ತ ದಿವಾನರು ಮತ್ತು ಮಾಜಿ ಮುಖ್ಯ ಮಂತ್ರಿಗಳು, ಮಾಜಿ ಶ್ರೇಷ್ಠ ನ್ಯಾಯಾಧೀಶರು ಈ ರೀತಿ ಮೊದಲನೇ ಪಟ್ಟಿಯಂತೆ ನಿವೃತ್ತರಾದವರಿಗೆ ಸ್ಥಾನಗಳನ್ನು ಕಲ್ಪಿಸಲಾಗಿದೆ ೮೦೦ ರೂ ಮತ್ತು ಹೆಚ್ಚು ಸಂಬಳ ಬರುವ ಅಧಿಕಾರಿಗಳನ್ನು ಮೊದಲಿನ ಪಟ್ಟಿಯಲ್ಲಿ ಸೇರಿಸಲಾಗಿದೆ.

Edited, Printed and Published by A R Nagarajan at Sadhvi Press, D. Subbiah Road, Mysore

ಕಾಶ್ಮೀರ ಸಂಧಾನ ವಿಫಲವೆಂದು ಗ್ರಹಾಂ ವರದಿ

ಕಾಶ್ಮೀರ ಸಮಸ್ಯೆಯ ಬಗ್ಗೆ ವಿಶ್ವಸಂಸ್ಥೆಯ ಪ್ರತಿನಿಧಿ ಡಾ|| ಗ್ರಹಾಂರವರು ಭದ್ರತಾಸಮಿತಿಗೆ ವರದಿಯನ್ನೊಪ್ಪಿಸಿ, ಇತ್ತೀಚೆಗೆ ತಾವು ಭಾರತ ಮತ್ತು ಪಾಕಿಸ್ತಾನ ಪ್ರತಿನಿಧಿಗಳೊಡನೆ ನಡೆಸಿದ ಸಂಧಾನವು ವಿಫಲಗೊಂಡಿರುವುದಾಗಿ ತಿಳಿಸಿರುವರೆಂದೂ, ಆದರೆ ನಿರಾಶೆಯನ್ನು ವ್ಯಕ್ತಪಡಿಸಿಲ್ಲವೆಂದೂ ವರದಿಯಾಗಿದೆ.

ಗಂಡಭೇರುಂಡ ಧ್ವಜದ ಬಗ್ಗೆ ನೆಹರೂರವರಿಗೆ ತಂತಿ

ರಾಜಧಾನಿಯ ಜನಸಂಘದ ಸದಸ್ಯರಾದ ಶ್ರೀ ಎಂ ಎಸ್ ಚಂದ್ರಶೇಖರ ಜೋಯಿಸರು ಪ್ರಧಾನಿ ನೆಹರೂರವರಿಗೆ ತಂತಿಯೊಂದನ್ನು ಕಳುಹಿಸಿ, ಇದೇ ವಿಜಯದಶಮಿಯ ಒಳಗಾಗಿ ಗಂಡಭೇರುಂಡ ಧ್ವಜವನ್ನು ಹಾರಿಸುವಂತೆ ಆಜ್ಞೆಯಾಗಬೇಕೆಂದು ಪ್ರಾರ್ಥಿಸಿರುತ್ತಾರೆ ಧ್ವಜವನ್ನು ತೆಗೆಸಿದಂದಿನಿಂದ ದೇಶದಲ್ಲಿ ಕ್ಷಾಮವು ತಲೆದೋರಿ, ಮಳೆ ಬೆಳೆಗಳು ನಾಶವಾಗಿ ಹಸಿವಿನಿಂದ ಜನರ ಮರಣ ಮತ್ತು ಮಕ್ಕಳ ಮಾರಾಟಗಳು ಸಂಭವಿಸುತ್ತಿರುವುವೆಂದು ಅವರು ತರಿಕೆ ಮಾಡಿಕೊಂಡಿರುತ್ತಾರೆ

SREE GANESHA

TALKIES

From 26-9-52

Warner's

ON MOON LIGHT BAY

[Technicolor]

With - Doris Day & Gordon Macrae

ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ

ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಈ ರೀತಿ ತಿಳಿಸಿರುತ್ತಾರೆ —

ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಈ ವರ್ಷ ಮಳೆ ಅಭಾವವಾಗಿ, ಅನೇಕ ಗ್ರಾಮಸ್ಥರು ಕಷ್ಟಕ್ಕೆ ಈಡಾಗಿರುವರು ಕೆರೆಗಳಲ್ಲಿ ನೀರು ಬತ್ತಿಹೋಗಿದೆ ಭಾವಿ ತೆಗೆದರೂ ಸಾಕಾದಷ್ಟು ನೀರು ದೊರೆಯುತ್ತಿಲ್ಲ ಅದಕ್ಕೆ ತಗ್ಗುವಷ್ಟು ಹಣವನ್ನು ಸರ್ಕಾರದವರು ಮಂಜೂರು ಮಾಡಿರುವುದಿಲ್ಲ ಅದನ್ನು ಕೂಡಲೇ ಮಾಡಬೇಕಾಗಿದೆ

ರೈತರಿಗೂ, ಕೂಲಿಗಾರರಿಗೂ ತಿನ್ನಲು ಆಹಾರ ಧಾನ್ಯ ದೊರೆಯುತ್ತಿಲ್ಲ. ರಾಗಿಯು ಯಾರಲ್ಲಿಯೂ ಇರುವುದಿಲ್ಲ ಡಿಪೋಗಳಲ್ಲಿ ಅದನ್ನು ವಿಕರಿಗೆಕೊಟ್ಟಿಲ್ಲ ಅಲ್ಪ ಪ್ರಮಾಣದಲ್ಲಿ ಜೋಳವನ್ನು ಕೊಡಲಾಗುತ್ತಿದೆ ಇದಕ್ಕಾಗಿಯೇ ಒಂದು

ಒಲಂಪಿಯಾ

25-9-52 ರಿಂದ ಜಯಭೇರಿ 2 ನೇ ವಾರ

ಪ್ರತಿ ದಿನ 3 ಆಟಗಳು

ಪವಿತ್ರ ಕಥೆ, ಸಂಗೀತ, ನೃತ್ಯಗಳು

ಹಿಮಾಲಯ ಪರ್ವತಗಳ ಮಂಜಿನಲ್ಲೇ

ಚಿತ್ರೀಕರಿಸಿರುವ ಪ್ರಕೃತಿ ಸೌಂದರ್ಯಕ್ಕೆ ಆರ್ಟ್ ಕರವಸ

★ ಪ್ರಾಣಮ್ ★

ಭೂಮಿಕೆ ಕಾನನ ಕೌಶಲ್

ಅಶೋಕ್ ಕುಮಾರ್

ಸಂಗೀತ ದಾಮೋದರ್ ಜೈಕಿಶನ್

ದಿಗ್ದರ್ಶನ ಎಂ ಸಾದಿಕ್

ಬೆಳಗಿನ ಪ್ರದರ್ಶನ 29-9-52 ರಿಂದ

5 ದಿನಗಳು ಮಾತ್ರ

★ ಮಗ್ರೂರ್ ★

ಮೈಸೂರು ಪೇಟೆ ಧಾರಣೆ

	ಪಲ್ಲ ೧ಕ್ಕೆ ರೂ.ಇಂದ	ರೂ.ಗ
ನೆಲಗಡಲೆ	೩ ೮.೦	೧೯.೮.೧
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	
ಹೆಸರು	[illegible]	
ಹೊಂಗೇಬೀಜ	[illegible]	
ಉದ್ದು	[illegible]	[illegible]
ಅವರೆ	[illegible]	
ಹಲಸಂದೆ	[illegible]	[illegible]
ಮೆಣಸಿನಕಾಯಿ ಮಣ ೧ಕ್ಕೆ	[illegible]	[illegible]
ಹುಣಸೇಹಣ್ಣು	[illegible]	
ಒಣಗೇಕಾಯಿ	[illegible]	
ಬೆಲ್ಲ	[illegible]	
ತೆಂಗಿನಕಾಯಿ ೧೦೦೦	೧೭೦ ೦ ೦	೧೯೩ ೦ ೦

ಹೊತ್ತು ರೈತರು ಕಾಯಬೇಕಾಗುವುದು ಒಂದು ರೂ ಜೋಳ ಕೊಳ್ಳಲು ೧ದಿನದ ಕೂಲಿಯನ್ನು ಕಳೆದುಕೊಳ್ಳಬೇಕಾಗುತ್ತದೆ ಅಲ್ಲದೆ ಆ ಪ್ರಾಂತದ ಜನರಿಗೆ ಜೋಳ ತಿಂದು ಅಭ್ಯಾಸವಿರುವುದಿಲ್ಲ ಕೂಡಲೇ ಸರ್ಕಾರದವರು ರಾಗಿಯನ್ನು ಒದಗಿಸಬೇಕು

ಅನೇಕರಿಗೆ ಕೂಲಿಯೂ ದೊರೆಯುತ್ತಿಲ್ಲ. ಸರ್ಕಾರದವರು ಕೆರೆ ಕಾಮಗಾರಿಗಳನ್ನೂ, ನವಿಲೂರು, ಕೋಗಿಲವಿಂಡಿ ಪ್ರಾಜೆಕ್ಟುಗಳನ್ನೂ ಕೈಗೊಳ್ಳುವುದು ಆವಶ್ಯಕವಾಗಿದೆ.

|| ಜೈ ಹನುಮಾನ್ ||

ತಾ|| 29-9-52 ನೇ ಸೋಮವಾರ

ಶ್ರೀ ಮನ್ಮಹಾರಾಜರ

ಜಂಬೂಸವಾರಿ ಮೆರವಣಿಗೆ

ನೋಡಲು ದೇವರಾಜ ಮಾರ್ಕೆಟ್ಟಿನ ಮೇಲೆ ಸ್ಥಳ ಏರ್ಪಡಿಸಲಾಗಿದೆ.

ಮೆರವಣಿಗೆ ಹೋಗುವಾಗ 1 ಟಿಕೆಟ್ಟಿಗೆ 0-4-0

ಮೆರವಣಿಗೆ ಬರುವಾಗ ,, 0-4 0

ಎಸ್ ಈಶ್ವರರಾವ್, ಕಂಟ್ರಾಕ್ಟರ್

ಚಾಮುಂಡೇಶ್ವರೀ ಟಾಕೀಸ್

25-9-52 ರಿಂದ ಅಮೋಘ 2 ನೇ ವಾರ

ಜೀಲಾ ಪ್ರೊಡಕ್ಷನ್ಸ್ ರವರ ಸಂಗೀತಮಯ ತಮಿಳು ಚಿತ್ರ

★ ಪ್ರಿಯಸಖಿ ★

ಭೂಮಿಕೆಯಲ್ಲಿ - ಬಿ. ಎಸ್ ಸರೋಜ, ಕುಮಾರಿ, ರಾಮಸ್ವಾಮಿ, ನಂಬಿಯಾರ್ ಮುಂತಾದವರು.

VISIT

CANARA JEWELLERS

IN DASARA EXHIBITION,

AT BLOCK 'D', STALL No. 22

For All Sovereign Gold Jewellery

In Excellent Mangalore Designs

Expert Workmanship

ಬೆಲೆ ಬಾಳುವ ಆಭರಣಗಳ ಬಹಿರಂಗ ಹರಾಜು

ಕಲ್ಕತ್ತಾ ಹೈಕೋರ್ಟಿನ 1948 ನೇ ಇಸವಿ 3883 ನೇ ನಂಬರು ಮೊಕದ್ದಮೆಯ ಡಿಕ್ರಿಯಂತೆಯೂ, ಉಭಯ ಪಾರ್ಟಿಗಳ ಒಪ್ಪಂದದಂತೆಯೂ ಮತ್ತು ಕಲ್ಕತ್ತಾ ಅಫಿಷಿಯಲ್ ಅಸೈನಿಯವರ ಅಪ್ಪಣೆಯಂತೆಯೂ ಶ್ರೀ ಕೆ ಬಿ. ಸತ್ರಘ್ನರವರು 27-9-52 ನೇ ಶನಿವಾರ ಬೆಳಗ್ಗೆ ೧೦ ಘಂಟೆಗೆ ರಾಜಧಾನಿಯ ಗಾಂಧಿ ಚೌಕದಲ್ಲಿರುವ ಕೃಷ್ಣಾ ಥಿಯೇಟರ್ ಬಳಿ ಈ ಕೆಳಗೆ ಕಂಡ ಆಭರಣಗಳನ್ನು ಬಹಿರಂಗವಾಗಿ ಹರಾಜು ಮಾಡುವರು

ಆಭರಣಗಳು

ಬೆಲೆ ಬಾಳುವ ವಜ್ರ ಮುತ್ತು, ಪಚ್ಚೆಯಿಂದ ಕೂಡಿದ ಕೈಬಳೆಗಳು ಕಂಠಾಭರಣಗಳು ವಜ್ರದ ಬಳೆಗಳು, ಮೂಗುಬಟ್ಟುಗಳು, ಕಡಕುಗಳು ವಜ್ರ ಮತ್ತು ಪಚ್ಚೆಯಿಂದ ಕೂಡಿದ ಕಿವಿಯ ಆಭರಣದ ಪಟ್ಟಿಗಳು, ಉಂಗುರಗಳು, ನೈಜವಾದ ಮುತ್ತಿನ ಹಾರಗಳು, ದೊಡ್ಡವಜ್ರ ಮತ್ತು ಪಚ್ಚೆಯಿಂದ ಕೂಡಿದ ಪದಕ ಇತ್ಯಾದಿ

ಮಾಲುಗಳನ್ನು ನಾಳೆ ಮಧ್ಯಾಹ್ನ 2 ಗಂಟೆಯಿಂದ 6 ಗಂಟೆಯವರೆಗೆ

ಮೇಲ್ಕಂಡ ಸ್ಥಳದಲ್ಲಿ ಪರಿಶೀಲಿಸಬಹುದು

ಮಾಲಿನಪಟ್ಟಿ ಮತ್ತು ಇತರ ವಿಷಯಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು

ಸ್ತ್ರೀಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆ.

IF YOU LIKE PURE & BEST COFFEE, DON'T FORGET TO COME TO

SRI CHAMUNDESWARI BHAVAN

BOARDING, LODGING & RESTAURANT,

(Yelwal Road, Mysore)

DRINK — & — ENJOY

OUR PURE & HIGH FLAVOURED

PLANTATION 'A' COFFEE

Taste Our Sweets Prepared From Pure Ghee & Delicious & Wholesome Meals

PORTABLE REMINGTON TYPEWRITERS

AVAILABLE FROM READY STOCK AT

C. B. General Stores :: Yelwal Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೭-೯-೧೯೫೨ [ಸಂಚಿಕೆ ೫೨

ಬೊಂಬಾಯಿ ಜೈಲಿಗೆ ರಾಜೂರವರ ವರ್ಗಕ್ಕೆ ಆಜ್ಞೆ

ಬೊಂಬಾಯಿ ಜೈಲಿಗೆ ರಾಜೂರವರ ರವಾನೆಗೆ ಆಜ್ಞೆ

ಬೊಂಬಾಯಿ ಹೈಕೋರ್ಟಿನ ಮುಂದೆ ಜಾಮೀನು ಅರ್ಜಿ

ಮೈಸೂರು ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರಿಗೆ ನಿಷ್ಯಾಕರ ಪ್ರಯು... ಬಗ್ಗೆ ಕೊಡಲಾದ ಶಿಕ್ಷೆ ವಿರುದ್ಧದ ಅ... ವಿಚಾರಣೆಗಾಗಿ ಬೆಂಗಳೂರಿನ ಅ... ರಾದ ಶ್ರೀ ಎಲ್. ಎಸ್ ರಾಜೂರವರ... ಅವರನ್ನು ಶೀಘ್ರವಾಗಿ ಬೊಂಬಾಯಿಗೆ ...ಸಬೇಕೆಂದು ಬೊಂಬಾಯಿಯ ಹೈ...ಕೋರ್ಟಿನ ನ್ಯಾಯಾಧೀಶರುಗಳಾದ ಜ|| ...ಷ್ಣ ಮತ್ತು ಜ|| ವ್ಯಾಸ್‌ರವರು ಆ... ಮಾಡಿರುತ್ತಾರೆ. ರಾಜೂರವರ ಮಕ್ಕಳಾ... ಎಲ್. ಆರ್. ಜಯರಾಂರವರು ...ಬಾಯಿ ಹೈಕೋರ್ಟಿನ ಮುಂದೆ ಅ...ರ್ಜಿ ಸಲ್ಲಿಸಿ, ತಮ್ಮ ತಂದೆಯನ್ನು ಜಾಮೀ...ನ ಮೇಲೆ ಬಿಡುವಂತೆ ಕೋರಿರುತ್ತಾರೆ. ...ಪೀಲಿನ ಜೊತೆಗೆ ದಾಸಪ್ಪನಾಯ್ಡು ...ತ್ತು ಅಗ್ನಿಹೋತ್ರಿ ಇವರಿಬ್ಬರ ಅಪೀಲುಗಳು ...ರಣೆಯಾಗುವವೆಂದು ಹೇಳಲಾಗಿದೆ.

ಜಾಮೀನಿನ ಅರ್ಜಿಯಲ್ಲಿ, ಶ್ರೀ ಜಯ...ರವರು, ತಮ್ಮ ತಂದೆಗೆ ೬೦ ವರ್ಷ ವಯಸ್ಸಾಗಿದ್ದು, ಅನಾರೋಗ್ಯದಿಂದ ನಿ...ಶಕ್ತರಾಗಿರುವರೆಂದೂ, ಅವರಿಗೆ ರಕ್ತ...ಒತ್ತಡವಿರುವುದೆಂದೂ ತಿಳಿಸಿರುವುವ... ಅವರ ಅಪೀಲಿನ ವಿಚಾರಣೆ ಬಗ್ಗೆ ...ಲರಿಗೆ ಸೂಕ್ತ ತಿಳುವಳಿಕೆಯನ್ನು ...ಡಬೇಕಾಗಿರುವುದೆಂದೂ ಕಾರಣವ...ನ್ನು ಕೊಟ್ಟಿರುತ್ತಾರೆ. ಜಾಮೀನು ಅರ್ಜಿ...ಯನ್ನು ಬೊಂಬಾಯಿಯ ವಕೀಲರಾದ ...ಶ್ರೀ ಎ. ಸೋಲ್ವ್ಯಾಯವರು ವಿರೋ...ಧಿ... ಸುಪ್ರೀಂ ಕೋರ್ಟಿನವರು ಈ ...ವಿಚಾರಣೆಯ ವರ್ಗದ ...ಮಾಡಿದ ಆಜ್ಞೆಯ ನಂತರ ಇದೇ ...ವಿಲಾಗಿ ಈ ಜಾಮೀನು ಅರ್ಜಿಯು ...ವುದೆಂದೂ, ಇನ್ನೊಂದು ಮೊಕ...ದ್ದಮೆಯಲ್ಲಿ ರಾಜೂರವರು ಜೈಲಿನಲ್ಲಿರು...ವರೆಂದೂ ತಿಳಿಸಿದರು.

ಬೊಂಬಾಯಿಯ ಜೈಲಿನಲ್ಲಿ ರಾಜೂರವರನ್ನು ...ಅ ಜೈಲಿನ ವೈದ್ಯರು ಮತ್ತು ...ಸರ್ಜನ್ನರು ಅವರನ್ನು ಪರೀ...ಕ್ಷಿಸಿ ಜೈಲಿನಲ್ಲಿರುವುದರಿಂದ ಅವರ ...ಆರೋಗ್ಯಕ್ಕೆ ಕುಂದುಕವೇ ...ದನ್ನು ಕೋರ್ಟಿಗೆ ತಿಳಿಸಬೇಕೆಂ... ನ್ಯಾಯಾಧೀಶರುಗಳು ಸೂಚಿಸಿರು...ತ್ತಾರೆ.

...ವಾಸಿನಿಂದ ೨ ಲಕ್ಷ ಜನ ಮೈಸೂರು ಸಂಸ್ಥಾನಕ್ಕೆ

...ಂದೂರು, ಚಾಮರಾಜನಗರ, ...ಲಾದ ಪ್ರದೇಶಗಳಲ್ಲಿ ಆಹಾರದ ...ಸ್ಥಿತಿಯನ್ನು ಪರಿಶೀಲಿಸಲು ಪ್ರವಾ...ಸ ಗಿದ್ದ ರೆವಿನ್ಯೂ ಮಂತ್ರಿ ಶ್ರೀ ...ಮಂಜಪ್ಪನವರು ಯಳಂ...ದೂರಿನಲ್ಲಿ ಮಾತನಾಡುತ್ತಾ, ಸಂಸ್ಥಾನ...ದಲ್ಲಿರುವ ಪ್ರದೇಶಗಳಲ್ಲಿ ಅಭಾ...ವ ನಿವಾರಣೆಗಾಗಿ ಸರ್ಕಾರದವರು ೫೦ ...ಗಳನ್ನು ನೆಟ್ಟಿ ಮಾಡಿರುವರೆಂ...ದು ಮದ್ರಾಸಿನಿಂದ ಬಂದಿರುವ ೨ ಲಕ್ಷ ...ದಷ್ಟು ಜನರಿಗೆ ಆಹಾರವನ್ನು ಒ...ದಗಿಸುವ ಪ್ರಶ್ನೆಯು ಪರಿಹಾರದ ಕಾರ್ಯ...ವನ್ನು ಉಗ್ರಗೊಳಿಸಿರುವುದೆಂದೂ ತಿಳಿ...ಸುತ್ತ ಮದ್ರಾಸು ಪ್ರದೇಶಗಳಿಂದ ...ಮೈಸೂರು ಸಂಸ್ಥಾನಕ್ಕೆ ಜನರು ವಲಸೆ ...ತಡೆ ಹಾಕಬೇಕೆಂದು ಅಲ್ಲಿನ ...ಸರಕಾರಕ್ಕೆ ಪತ್ರ ಬರೆಯಲಾಗಿದೆಯೆಂ...ದವರು ಹೇಳಿರುವರು.

ಜಾಮೀನಿನ ಮೇಲೆ ವಿದ್ಯಾರ್ಥಿಗಳ ಬಿಡುಗಡೆ

ಮೈಸೂರು ೨೭

ಕ್ರಾಫರ್ಡ್ ಭವನದಲ್ಲಿ ವಿದ್ಯಾ ಸುಧಾರಣಾ ಸಮಿತಿಯ ಕೆಲಸ ಕಾರ್ಯದ ಆರಂಭೋತ್ಸವದ ಸಂಬಂಧವಾಗಿ ಗಲಭೆ ನಡೆಸಿದರೆಂದು ದಸ್ತಗಿರಿಯಾದ ೧೩ ಮಂದಿ ವಿದ್ಯಾರ್ಥಿಗಳು ನೆನ್ನೆ ಇಲ್ಲಿನ ಸಬ್ ಜೈಲಿನಿಂದ, ಒಬ್ಬೊಬ್ಬರು ಮಧ್ಯರಾತ್ರಿಯಲ್ಲಿ ೫೦೦ ರೂಗಳ ಸ್ವಂತ ಜಾಮೀನಿನ ಮೇಲೆ ಬಿಡುಗಡೆಯಾದರು. ನಗರದ ಎರಡನೇ ನ್ಯಾಯಾಧೀಶರ ಮುಂದೆ ಅವರುಗಳನ್ನು ಪೋಲೀಸು ಶಾಸನದ ೭ ಸೆಕ್ಷನ್ ಮತ್ತು ಆರ್ ನಿಬಂಧನೆಗಳ ಪ್ರಕಾರ ಸಾರ್ವಜನಿಕ ಸ್ಥಳದಲ್ಲಿ ಗಲಾಟೆ ಮಾಡಿದರೆಂದು ವಿಚಾರಣೆಗೆ ಗುರಿಪಡಿಸಲಾಗಿದೆ. ೧ನೇ ತಾ|| ಹಿಯರಿಂಗ್ ಇದೆ. ಅವರ ಪರ ಜ|| ವಿಠಾರ್ ನೂರ್ ಹುಸೇನ್‌ರವರು ವಕಾಲತ್ತು ವಹಿಸಿರುವರು. ಹನುಮಂತಯ್ಯನವರ ಗುಂಡಾಗಿರಿಗೆ ಧಿಕ್ಕಾರ, ಎ. ಜಿ. ರಾಮಚಂದ್ರರಾಯರ ದಬ್ಬಾಳಿಕೆಗೆ ಧಿಕ್ಕಾರ, ಕನ್ನಡ ಮಾತನಾಡಿ-ಎಂದು ಮುಂತಾಗಿ ಅವರುಗಳು ಕೂಗಿಕೊಂಡರೆಂದು ಆಪಾದಿಸಲಾಗಿದೆ.

ಹರಿಜನ ನಿವಾಸ ಸ್ಥಳಗಳಿಗೆ ಮಂತ್ರಿಗಳ ಭೇಟಿ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮತ್ತು ಆರೋಗ್ಯ ಸಚಿವ ಶ್ರೀ ಎಸ್ ಚನ್ನಯ್ಯನವರು ನಗರದ ಹರಿಜನರಿರುವ ಕ್ಷೇತ್ರಗಳಿಗೆ ನೆನ್ನೆ ಭೇಟಿಯಿತ್ತರು. ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎನ್. ರಾಚಯ್ಯನವರು ಅವರನ್ನು ಸ್ವಾಗತಿಸಿ, ಹರಿಜನರ ಕುಂದು ಕೊರತೆಗಳನ್ನೂ ನಿವೇದಿಸಿಕೊಂಡರು. ಅದಿಕರ್ನಾಟಕ ಪುರದ ಸ್ವಾಗತ ಸಮಿತಿಯ ಸದಸ್ಯರು ಮುಖ್ಯ ಮಂತ್ರಿಗಳಿಗೆ ಬಿನ್ನವತ್ತಳೆಯೊಂದನ್ನು ಸಮರ್ಪಿಸಿದರು.

ವ್ಯಾಪಾರಿ ಬೆಳೆಗೆ ತೆರಿಗೆ

ಹತ್ತಿ ಮತ್ತು ಸೆಣಬು ಇವುಗಳನ್ನು ಬಿಟ್ಟು ಉಳಿದ ನಗದು ಬೆಳೆಗಳ ಮೇಲೆ ತೆರಿಗೆಯನ್ನು ಹಾಕುವ ವಿಷಯವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ.

ಕ್ಷಾಮ ನಿಧಿಗೆ ಪೌರಸಭೆಯಿಂದ ೨ ಸಾವಿರ ರೂ.

ಮೈಸೂರು ೨೭

ಸಂಸ್ಥಾನದ ಅಭಾವ ಪರಿಹಾರ ನಿಧಿಗೆ ೨ ಸಾವಿರ ರೂ.ಗಳ ಸಹಾಯನೀಡಬೇಕೆಂದು ಮೊನ್ನೆ ನಡೆದ ಪೌರ ಸಭಾಧಿವೇಶನದಲ್ಲಿ ತೀರ್ಮಾನವಾಯಿತು. ದಸರಾ ಕಾಲದಲ್ಲಾದರೂ ಹೊಟೇಲುಗಳಲ್ಲಿ ಹಾಲಿನ ಪುಡಿಯನ್ನು ಉಪಯೋಗಿಸುವಂತೆ ಏರ್ಪಡಿಸಬೇಕಾದ ಅಗತ್ಯವಿರುವುದೆಂದು ಡಾ|| ಬಿ. ಜಿ. ದಾಸರು ಸೂಚಿಸಿದರು. ಕುದುರೆ ಜೂಜನ್ನು ನಿಲ್ಲಿಸಬೇಕೆಂಬ ಸಲಹೆ ಮಾಡಿದರು. ಅಧ್ಯಕ್ಷರು ಉತ್ತರವಿತ್ತು, ಹಾಲಿನ ಪುಡಿಯು ಸರಬರಾಜು ಸಾಕಾದಷ್ಟು ಇಲ್ಲದಿರುವುದೆಂದೂ, ಜೂಜು ಗದ್ದಿನ ಬಗ್ಗೆ ಹಿಂದೆಯೇ ಠರಾವೊಂದು ಬಂದು ಬಿದ್ದು ಹೋಯಿತೆಂದೂ ತಿಳಿಸಿದರು. ದಸರಾಕ್ಕಾಗಿ ಬರುವವರಿಗೆ ಪಡಿತರವನ್ನು ಒದಗಿಸುವಂತೆ ಸವರಿ ಸದಸ್ಯರು ಮಾಡಿದ ಸೂಚನೆ ಬಗ್ಗೆ ಅಧ್ಯಕ್ಷರು ಮಾತನಾಡಿ, ಅದಕ್ಕಾಗಿ ಠರಾವನ್ನು ಮಂಡಿಸಬಹುದೆಂದು ತಿಳಿಸಿದರು.

ಸ್ನಾನ ಮಾಡುವಾಗ ಆಭರಣಗಳ ಅಪಹಾರ

ದಸರಾ ಉತ್ಸವವನ್ನು ನೋಡುವ ಸಲುವಾಗಿ ರಾಜಧಾನಿಗೆ ಆಗಮಿಸಿರುವ ಮದ್ರಾಸಿನ ಶ್ರೀ ಕೆ. ಸುಬ್ರಹ್ಮಣ್ಯಶೆಟ್ಟಿ ಮತ್ತು ಅವರ ಕುಟುಂಬದವರು ನೆನ್ನೆ ಬೆಳಿಗ್ಗೆ ಸುಮಾರು ೯|| ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ಹೋಗಿ ಅಲ್ಲಿನ ದೇವೀಕೆರೆಯಲ್ಲಿ ಸ್ನಾನ ಮಾಡುತ್ತಿದ್ದಾಗ, ಅವರಿಗೆ ಸೇರಿದ್ದ ೫೩೩೦ ರೂ. ಬೆಲೆಯಾಗುವ ಚಿನ್ನದ ಗಡಿಯಾರ, ವಜ್ರದ ಓಲೆ, ಮೂಗಿನ ಆಭರಣ ಮುಂತಾದವನ್ನು ಯಾರೋ ಅಪಹರಿಸಿರುವರೆಂದು ವರದಿಯಾಗಿದೆ. ಸ್ನಾನ ಮಾಡುವ ಮುಂಚೆ ಆಭರಣಗಳನ್ನು ಒಂದು ಸಣ್ಣ ಲಂಗದಲ್ಲಿ ಕಟ್ಟಿ ಇಡಲಾಗಿತ್ತು. ಕೃಷ್ಣರಾಜಾ ಪೋಲೀಸರು ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಂಡು ತನಿಖೆ ನಡೆಸುತ್ತಿರುವರು.

ಸೂಚನೆ

ಆಯುಧ ಪೂಜೆ ಪ್ರಯುಕ್ತ, ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ನೌಕರಿಗಳಿಗೆ ಪದವಿಗಳ ಅಗತ್ಯವಿಲ್ಲವೆಂದು ನೆಹರೂ

ದೇಶದಲ್ಲಿ ವಿಶ್ವವಿದ್ಯಾಲಯದ ವಿದ್ಯಾಭ್ಯಾಸವು ಬಹಳ ಮಟ್ಟಿನ ಕೆಳದರ್ಜೆ ಇಳಿದುಹೋಗಿರುವುದೆಂದೂ, ಕೆಲವು ಕಾಲದ ಹಿಂದೆ ವಿಶ್ವವಿದ್ಯಾಲಯಗಳನ್ನೆ ಮುಚ್ಚಬೇಕೆಂದು ಕೇಂದ್ರ ವಿದ್ಯಾ ಮಂತ್ರಿಗಳಿಗೆ ತಾವು ಸಲಹೆ ಮಾಡಬೇಕೆಂದಿದ್ದುದಾಗಿಯೂ ಪ್ರಧಾನಿ ನೆಹರೂರವರು ಮೊನ್ನೆ ಹೈದರಾಬಾದಿನಲ್ಲಿ ಮಾತನಾಡುತ್ತಾ ತಿಳಿಸಿರುವರು. ವಿದ್ಯಾರ್ಥಿಗಳಿಗೆ ಈಗ ಕೊಡಲಾಗುತ್ತಿರುವ ಶಿಕ್ಷಣ ಕ್ರಮದಿಂದ ಪದವಿಗಳ ಬಗ್ಗೆ ಗೌರವವೇ ಇಲ್ಲವೆಂದು ಅವರು ಹೇಳಿರುವರು. ವ್ಯಾಯಾಮ ಶಿಕ್ಷಣದ ಪ್ರಾಮುಖ್ಯತೆಯನ್ನು ಅವರು ಒತ್ತಿ ಹೇಳಿ, ಒಂದು ವರ್ಷ ಕಾಲ ವ್ಯವಸಾಯ ಅಥವಾ ಕೈಗಾರಿಕೆಯಲ್ಲಿ ಕೆಲಸ ಮಾಡಿದ ಹೊರತು ಯಾರಿಗೂ ಪದವಿಗಳನ್ನು ಕೊಡಕೂಡದೆಂದು ತಾವು ಸೂಚಿಸಿರುವುದಾಗಿಯೂ ಅವರು ತಿಳಿಸಿರುವರು.

ಸರ್ಕಾರದ ಹಲವು ಹುದ್ದೆಗಳಿಗೆ ವಿಶ್ವವಿದ್ಯಾಲಯದ ಪದವಿಗಳಿರಬೇಕೆಂಬ ನಿಬಂಧನೆಯನ್ನು ತೆಗೆದುಹಾಕುವ ವಿಷಯವನ್ನು ತಾವು ಪರಿಶೀಲಿಸುತ್ತಿರುವುದಾಗಿ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

ಗಣಪತಿ ವಿಗ್ರಹದಂತಿರುವ ಶಿಶು

ಕೊರಟಗೆರೆ ನಿವಾಸಿ, ಬಳೆ ವ್ಯಾಪಾರಿ ಗೋಪಾಲಪ್ಪ ಎಂಬುವರ ಪತ್ನಿ ಗೌರಮ್ಮ ಎಂಬಾಕೆಯು ಕಳೆದ ೨೪ ನೇ ತಾ|| ರಾತ್ರಿ ಒಂದು ಗಂಡು ಶಿಶುವನ್ನು ಪ್ರಸವಿಸಿದರೆಂದೂ, ಮಗುವಿನ ತಲೆಯು ಗಣಪತಿಯ ತಲೆಯಂತೆ ಇದ್ದು, ಸೊಂಡಿಲು, ಅದರಡಿ ಬಾಯಿ, ಬಾಯಿಯಲ್ಲಿ ಕೋರೆ ಹಲ್ಲುಗಳು, ಆನೆಯ ಕಿವಿಯಂತೆ ಅಗಲವಾದ ಕಿವಿಗಳು ಇರುವುವೆಂದೂ ವರದಿಯಾಗಿದೆ. ಉಳಿದ ಅಂಗಾಂಗಗಳು ಮನುಷ್ಯನಿಗಿರುವಂತೆ ಇರುವುವೆಂದೂ, ಅನೇಕರು ಮಗುವನ್ನು ನೋಡಲು ಬರುತ್ತಿರುವರೆಂದೂ, ತಾಯಿ ಮಕ್ಕಳು ಆರೋಗ್ಯವಾಗಿರುವರೆಂದೂ ಹೇಳಲಾಗಿದೆ.

ಅ|| ಪ್ರೊ|| ಗಳ ಬಡ್ತಿ

ಈ ಕೆಳಗೆ ಕಂಡ ವಿಶ್ವವಿದ್ಯಾಲಯದ ಉಪಾಧ್ಯಾಯರುಗಳಿಗೆ ಅ|| ಪ್ರೊಫೆಸರರ ಬಡ್ತಿಯನ್ನು ಕೊಡಲಾಗಿದೆ:- ಮೈಸೂರು ಮಹಾರಾಜಾ ಕಾಲೇಜಿನ ಜ|| ಬಷೀರ್ ಹುಸೇನ್, ಶ್ರೀ ಕೆ. ಹೆಚ್ ಚೆಲುವರಾಜ್, ಕೆ ವಿ ರಾಘವಾಚಾರ್, ಶ್ರೀ ಕೆ. ಸುಬ್ಬರಾಮಪ್ಪ ಮತ್ತು ಮಹಾರಾಣಿ ಕಾಲೇಜಿನ ಶ್ರೀಮತಿ ಡಿ. ಚಂಪಾಬಾಯಿ. ಸೆಂಟ್ರಲ್ ಕಾಲೇಜಿನಲ್ಲಿರುವ ಶ್ರೀಮತಿ ಹೆಚ್. ರತ್ನಮ್ಮನವರಿಗೆ ಅ|| ಪ್ರೊ|| ಬಡ್ತಿ ಕೊಟ್ಟು, ಮಹಾರಾಣಿ ಕಾಲೇಜಿಗೆ ವರ್ಗಾಯಿಸಲಾಗಿದೆ.

ರೇಷ್ಮೆ ಕೈಗಾರಿಕಾ ಸಮ್ಮೇಳನ

ರೇಷ್ಮೆ ಕೈಗಾರಿಕೆಗೆ ಉತ್ತೇಜನವನ್ನು ಕೊಡುವ ಸಲುವಾಗಿ ಮೈಸೂರು ಸರ್ಕಾರದವರು ಬರುವ ತಿಂಗಳು ೧೫ನೇ ತಾ|| ಸಮ್ಮೇಳನವೊಂದನ್ನು ನಡೆಸಲಿರುವರೆಂದೂ, ಕೇಂದ್ರ ವಾಣಿಜ್ಯ ಮಂತ್ರಿ ಟಿ. ಟಿ. ಕೃಷ್ಣಮಾಚಾರ್‌ರವರು ಅದರಲ್ಲಿ ಭಾಗವಹಿಸುವರೆಂದೂ ಗೊತ್ತಾಗಿದೆ.

ಕಾರ್ಮಿಕರಿಗೆ ಈ ವರ್ಷ ೨೮॥ ಸಾವಿರ ನಿವಾಸಗಳು

ಕಾರ್ಮಿಕರುಗಳಿಗೆ ಈ ವರ್ಷದಲ್ಲಿ ೨೮,೫೦೦ ಮನೆಗಳನ್ನು ಕಟ್ಟಿಸಲು ಭಾರತ ಸರ್ಕಾರದವರು ೭ ಕೋಟಿ ೧೮ ಲಕ್ಷ ರೂ ಗಳನ್ನು ಮಂಜೂರು ಮಾಡಿರುತ್ತಾರೆ ಈ ಪೈಕಿ ೩.೩೪ಲಕ್ಷ ರೂ ಗಳನ್ನು ಸಹಾಯವಾಗಿಯೂ, ಉಳಿದುದನ್ನು ಸಾಲವಾಗಿಯೂ ಕೊಡಲಾಗುವುದು ಎರಡು ವಿಧವಾದ ನಿವಾಸಗಳನ್ನು ಕಟ್ಟಲಾಗುವುದು ತಿಂಗಳಿಗೆ ೧೦ ಮತ್ತು ೧೭॥ ರೂ ಬಾಡಿಗೆ ಗೊತ್ತುಪಡಿಸಲಾಗುವುದು

ರೇಷನಿಂಗ್ ಆಫೀಸರವರ ಕಛೇರಿ

ಮೈಸೂರು ನಗರ

ನೋಟಿಫಿಕೇಷನ್ ನಂ ಎ೧। ೮೨। ೫೨ ೫೩.

ತಾರೀಖು ೧೩ ೯-೫೨

ಮೆ ಮೊ

ಮೈಸೂರು ನಗರದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ದಸರಾ ರಜಾ ದಿನಗಳು ಮತ್ತು ಬೊಂಬೆ ಕಡೆಯ ವಿನದ ಪ್ರಯುಕ್ತ ಮೈಸೂರು ನಗರದಲ್ಲಿರುವ ಎಲ್ಲ ರೇಷನ್ ಡಿಪೋಗಳು ಮತ್ತು ಹೊಸಲ್ಯಾನಬ್ ಗೋದಾಮುಗಳು ಈ ಕೆಳಗೆ ನಮೂದಿಸಿರುವಂತೆ ಮುಚ್ಚಲ್ಪಡುತ್ತವೆ —

೨೯ ೯ ೫೨ ನೇ ಸೋಮವಾರ—ವಿಜಯದಶಮಿ ಪೂರ್ತಿ ದಿನ

೩೦-೯ ೫೨ ನೇ ಮಂಗಳವಾರ ಮೊದಲ ಕೆಲಸ ದಿನ—ಕಾರ್ಡುದಾರರಿಗೆ ಪೇಪರ್ ತೀರಿಸಿ, ಮುಚ್ಚಿದ ಡಿಪೋಗಳು ಮಾತ್ರ ಮಧ್ಯಾಹ್ನ ಮುಚ್ಚತಕ್ಕದ್ದು

(ಸಹಿ) ಹೆಚ್ ಜಿ ವಿಜಯರಾಘವರೆಡ್ಡಿ
ರೇಷನಿಂಗ್ ಆಫೀಸರ್

ಹೆಣ್ಣು ಮಗುವಿನ ಮಾರಾಟ

ಕೋಲಾರ ಜಿಲ್ಲೆಯ ಬಂಡಾಹಳ್ಳಿಯ ರಾಮಲಕ್ಷ್ಮಮ್ಮ ಎಂಬ ಹೆಂಗಸು ತನ್ನ ೩ ವರ್ಷದ ಹೆಣ್ಣು ಮಗುವನ್ನು ಬೈರಕ್ಕ ಎಂಬಾಕೆಗೆ ೨೦ ರೂ ಐನ ಒಂದು ಸೀರೆ ಮತ್ತು ಸ್ವಲ್ಪ ಧಾನ್ಯಗಳಿಗಾಗಿ ಮಾರಿದಳೆಂದು ವರದಿಯಾಗಿದೆ

ಕಾಂಗ್ರೆಸ್ ಸದಸ್ಯತನದ ಪುಸ್ತಕಗಳು

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಛೇರಿಯಿಂದ ಕಾಂಗ್ರೆಸ್ ಕೆಲಸಗಾರರು ತೆಗೆದುಕೊಂಡು ಹೋಗಿರುವ ಸದಸ್ಯತನದ ಪುಸ್ತಕಗಳನ್ನು ಹಣದ ಸಮೇತ ಕೂಡಲೇ ಸಮಿತಿಯ ಕಛೇರಿಗೆ ತಲುಪಿಸಬೇಕೆಂದು ಕಾರ್ಯದರ್ಶಿಯವರು ಕೋರಿರುತ್ತಾರೆ.

HOUSES FOR SALE

1 Door No. 1030 SITA ROAD
2 „ 3042 YADAVAGIRI
3 „ 858/1 LAKSHMIPURAM
4 „ 2948 SARASWATHIPURAM
5 „ 349 KALAMMA TEMPLE STREET

We have also other properties for sale and for mortgage

Enquire -

JAYA & CO,

House Estate, Loans Agents
Old Mysore Bank Building, Mysore Phone 520

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೦ ವಿಶ್ವಮಾಧುರ್ಯ ಮಧ್ಯಾಹ್ನ ೧ ೩೦ ಹಿಂದುಸ್ಥಾನಿ, ೨ ಕನ್ನಡ ಚಿತ್ರಗೀತೆಗಳು ಸಂಜೆ ೫ ೩೦ ಮಕ್ಕಳ ೭ ೩೦ ಶ್ರೀ ಶ್ರೀನಿವಾಸನ್ ಸಂಗೀತ ೬.೧೦ ಆರ್ಕೆಸ್ಟ್ರಾ, ೭ ಅನೂರ್ ರಾಮಕೃಷ್ಣರವರ ಸಂಗೀತ ೯.೧೫ ಅಶ್ವಮೇಧ, ೯ ೪೦ ಟಿ ನಾಗಮ್ಮ ಕನ್ನಡ ಗೀತೆಗಳು

೨೯ ನೇ ತಾ॥ ರಾತ್ರಿ ೯ ೧೦ ಗಂಟೆಗೆ ಜಂಬೂ ಸವಾರಿ ಬಗ್ಗೆ ಪ್ರಸಾರವನ್ನು ಏರ್ಪಡಿಸಲಾಗಿದೆ

ಹೊಸ ಕೋರ್ಟುಗಳ ಸ್ಥಾಪನೆ

ಹೊಳೆನರಸೀಪುರದಲ್ಲಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರ ಮತ್ತು ಸಕಲೇಶಪುರದಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟರ ಕೋರ್ಟುಗಳನ್ನು ಸರ್ಕಾರದವರು ಸ್ಥಾಪಿಸಿರುವರೆಂದು ವರದಿಯಾಗಿದೆ ಹಾಸನದಲ್ಲಿರುವ ಹೆಚ್ಚಿನ ಕೋರ್ಟುಗಳನ್ನು ತೆಗೆಯುವ ಸಂಭವವೂ ಇರುವುದೆಂದು ಹೇಳಲಾಗಿದೆ

ಕಳೆದುಹೋಗಿದೆ

ಟಿ. ಸುಬ್ರಹ್ಮಣ್ಯಯ್ಯ ಎಂಬುವರಿಗೆ ಇಂಟರ್ ಮೀಡಿಯೇಟ್ ಕಾಲೇಜಿನಿಂದಲೂ ಮತ್ತು ಮಹಾರಾಜಾ ಕಾಲೇಜು ಪ್ರಿನ್ಸಿಪಾಲರಿಂದಲೂ ಕೊಡಲ್ಪಟ್ಟ ಸರ್ಟಿಫಿಕೇಟುಗಳೂ, ಸುಧಾ ಎಂಬ ಕೈ ಬರಹದ ಪುಸ್ತಕವೂ ಮತ್ತು ಟೈಪು ಮಾಡಿದ ಕಾಗದಗಳೂ ಇದ್ದ ಒಂದು ರಟ್ಟಿನ ಫೈಲು ತಾ॥ ೨೫ ೯-೫೨ ನೇ ಮಧ್ಯಾಹ್ನ ೨ ಗಂಟೆಗೆ ನಂಜನಗೂಡಿನಿಂದ ಮೈಸೂರಿಗೆ ಹೊರಟ ರೈಲಿನಲ್ಲಿ ಕಳೆದುಹೋಗಿದೆ ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಕೆಳಗಿನ ವಿಳಾಸಕ್ಕೆ ತಲುಪಿಸಬೇಕೆಂದು ಕೋರುತ್ತೇನೆ

ಟಿ ಸುಬ್ರಹ್ಮಣ್ಯಯ್ಯ,
C/o ಸಾಧ್ವಿ, ಮೈಸೂರು

ಅನ್ನಾಭಾವದಿಂದ ಹೆಂಗಸಿನ ಮರಣ

ಜಗಳೂರು ತಾಲ್ಲೂಕಿನ ಸೋಮನಹಳ್ಳಿಯಲ್ಲಿ ಈಡಿಗರ ಗೌರಮ್ಮ ಎಂಬಾಕೆಯು ಕಳೆದ ೨ ನೇ ತಾ॥ ಆಹಾರವಿಲ್ಲದೆ ಮೃತಿಯನ್ನು ಹೊಂದಿರುವಳು ಸಂಸಾರವನ್ನು ಸಾಗಿಸಲಾರದೆ ಆಕೆಯ ಗಂಡನು ಎರಡು ತಿಂಗಳ ಹಿಂದೆ ಮನೆ ಬಿಟ್ಟು ಹೋದವನು ಇನ್ನೂ ಪತ್ತೆಯಿಲ್ಲವೆಂದು ಹೇಳಲಾಗಿದೆ ಈಗ ಮೂರು ಚಿಕ್ಕ ಮಕ್ಕಳು ಅಕೆಯ ಮನೆಯಲ್ಲಿವೆ

ಬೇಲೂರು ಮತ್ತು ಹಳೇಬೀಡುಗಳು ಕೇಂದ್ರದ ವಶಕ್ಕೆ

ಮೈಸೂರು ಸಂಸ್ಥಾನದ ಬೇಲೂರು, ಹಳೇಬೀಡು, ಶ್ರವಣ ಬೆಳಗೊಳ ಸೋಮನಾಥಪುರಗಳ ೧೬೮ ಐತಿಹಾಸಿಕ ಸ್ಮಾರಕ ಕಟ್ಟಡಗಳ ಆಡಳಿತವನ್ನು ಕೇಂದ್ರ ಸರ್ಕಾರದ ಪ್ರಾಚ್ಯ ಶೋಧನಾ ಇಲಾಖೆಯವರು ವಹಿಸಿಕೊಳ್ಳಲಿರುವರೆಂದೂ, ಇಂತಹ ೧೬೮ ಸ್ಮಾರಕಗಳನ್ನು ಇಲ್ಲಿನ ಸರ್ಕಾರದವರ ವ್ಯಾಪ್ತಿಗೆ ಬಿಡಲಾಗುವುದೆಂದೂ ವರದಿಯಾಗಿದೆ

॥ ಶ್ರೀ ಹನುಮಾನ್ ॥

ತಾ॥ 29 9 52 ನೇ ಸೋಮವಾರ

ಶ್ರೀ ಮನ್ಮಹಾರಾಜರ

ಜಂಬೂಸವಾರಿ ಮೆರವಣಿಗೆ

ನೋಡಲು ದೇವರಾಜ ಮಾರ್ಕೆಟ್ಟಿನ ಮೇಲೆ ಸ್ಥಳ ಏರ್ಪಡಿಸಲಾಗಿದೆ

ಮೆರವಣಿಗೆ ಹೋಗುವಾಗ 1 ಟಿಕೆಟ್ಟಿಗೆ 0 4 0

ಮೆರವಣಿಗೆ ಬರುವಾಗ „ 0 4 0

ಎಸ್ ಅಶ್ವತ್ಥರಾವ್, ಕಂಟ್ರಾಕ್ಟರ್

Edited, Printed and Published by A R Nagarajan at Sadhvi Press, D. Subbiah Road, Mysore

VISIT !

CANARA JEWELLERS

(G H School Road Mangalore)

IN DASARA EXHIBITION,

AT BLOCK 'D', STALL No-22

For All Sovereign Gold Jewellery

In Excellent Mangalore Designs

Expert Workmanship

ಮೈಸೂರು ಸಾಬೂನು

ಸಿಂಗಲ್ ಕೇಕುಗಳಲ್ಲೂ ಮಾರಾಟ ಮಾಡಲಾಗುತ್ತೆ.

★ ಅತ್ಯುತ್ತಮವಾದ ಒಗೆಯುವ ಸಾಬೂನು

★ ಪೂರ್ಣವಾಗಿ ಶುದ್ಧವಾಗಿದೆ, ಹಾನಿಕರ ರಸಾಯನಗಳಿಂದ ಕೂಡಿಲ್ಲ ಮತ್ತು ಮಿಶ್ರಿತವಲ್ಲದುದು

★ ಹೆಚ್ಚು ನೊರೆಯಿಲ್ಲದೆ ಬಟ್ಟೆಗಳು ಶುಭ್ರವಾಗುತ್ತವೆ

★ ಕಾಲದಲ್ಲಿ ಉಳಿತಾಯ, ಶ್ರಮ ಕಡಿಮೆ, ಬೆಲೆ ಸುಲಭ.

ಇಂದೇ ಒಂದು ಕೇಕನ್ನು ಕೊಂಡು ಪರೀಕ್ಷಿಸಿರಿ

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಮೈಸೂರು ದಸರಾ ವಸ್ತು ಪ್ರದರ್ಶನ-1952.

ಮನೋಹರವಾದ ನೃತ್ಯ ಪ್ರದರ್ಶನ

★ ★

ಮದರಾಸಿನ ಶ್ರೀಮತಿ

ವನಮಾಲ ಮತ್ತು ಪಾರ್ಟಿ

ಯವರಿಂದ ತಾ॥ 28-9-52 ನೇ ಭಾನುವಾರ ಸಾಯಂಕಾಲ 7 ರಿಂದ 8 ಘಂಟೆವರೆಗೆ ಜೀವನರಾಯರ ಕಟ್ಟಡದಲ್ಲಿರುವ ಥಿಯೇಟರಿನಲ್ಲಿ ಏರ್ಪಡಿಸಲಾಗಿದೆ

ರಿಜಿಸ್ಟರ್ಡ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೯-೯-೧೯೫೨ [ಸಂಚಿಕೆ ೫೩

ಅಭಾವ ಪ್ರದೇಶಗಳಿಗೆ ಸಹಾಯ

ಸಂಸ್ಥಾನದ ಪ್ರಮುಖರ ಸಭೆಯಲ್ಲಿ ಪರಿಶೀಲನೆ

ಮೈಸೂರು ೨೮

ಸಂಸ್ಥಾನದಲ್ಲಿ ಈಗ ಸಂಭವಿಸಿದ ವಿಷಮ ಪರಿಸ್ಥಿತಿಯನ್ನು ಕುರಿತು ಚರ್ಚಿಸುವ ಸಲುವಾಗಿ ನೆನ್ನೆ ದಿನ ಇಲ್ಲಿನ ಟೌನ್ ಹಾಲಿನಲ್ಲಿ ಗಣ್ಯ ಪುರಜನರ, ವಿಧಾನ ಸಭೆಗಳ ಸದಸ್ಯರ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮೇಳನ ಒಂದು ಜರುಗಿತು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅದರ ಅಧ್ಯಕ್ಷ ಪೀಠವನ್ನು ನೆರವೇರಿಸಿ ಕೆಳಗೆ ಕಂಡಂತೆ ಭಾಷಣ ಮಾಡಿದರು :—

ಈ ಸಲ ಮಳೆಯ ಅಭಾವದ ಪ್ರಯುಕ್ತ ಸಂಸ್ಥಾನದಲ್ಲಿ ಮೂರನೆಯ ಒಂದು ಭಾಗಕ್ಕಿಂತಲೂ ಹೆಚ್ಚು ಪ್ರದೇಶದಲ್ಲಿ ಕಷ್ಟ ಪರಿಸ್ಥಿತಿಯು ತಲೆದೋರಿದೆ ಸುಮಾರು ಮೂವತ್ತೈದು ಲಕ್ಷ ಜನರೂ ಅಸಂಖ್ಯಾತವಾದ ಜಾನುವಾರೂ ಅದರ ಪೀಡೆಗೆ ಗುರಿಯಾಗಿರುತ್ತವೆ. ನಮ್ಮ ದುರದೃಷ್ಟದಿಂದ ಕಳೆದ ಬಾರಿ ಕೆಲವು ಪ್ರದೇಶಗಳಲ್ಲಿ ಕಾಣಬರುತ್ತಿದ್ದ ಕಷ್ಟ ಪರಿಸ್ಥಿತಿ ಇನ್ನೂ ಅಧಿಕಗೊಂಡು ಉಳಿದ ಪ್ರದೇಶಗಳಿಗೂ ಹರಡಿದ್ದರಿಂದ ಈಗ ಸನ್ನಿವೇಶ ನಿಮಗೆಲ್ಲಾ ಗೊತ್ತಿರುವಂತೆ ಎಲ್ಲ ಬಂಭತ್ತು ಜಿಲ್ಲೆಗಳಿಗೂ ವ್ಯಾಪಿಸಿದೆ. ಹದಿನೈದು ತಾಲ್ಲೂಕುಗಳು ಪೂರ್ತಿ ಪೀಡಿತವಾಗಿದ್ದು ಮೂವತ್ತೈದು ಇತರ ತಾಲ್ಲೂಕುಗಳ ಒಳಗೊಂಡ ಸಲವತ್ತುಮೂರು ಹೋಬಳಿಗಳಲ್ಲಿ ಈ ದುಸ್ಥಿತಿ ಒದಗಿದ್ದು ಪರಿಹಾರ ಕಾರ್ಯವು ಅವಶ್ಯವಾಗಿದೆ. ಇದು ನಮ್ಮ ಸಂಸ್ಥಾನದಲ್ಲಿ ಇತ್ತೀಚೆಗೆ ಅನುಭವಿಸದೇ ಇದ್ದ ಅಸಾಧಾರಣ ಸ್ಥಿತಿ

ಈ ಸಂದರ್ಭದಲ್ಲಿ ಭಾರತದ ಪ್ರಧಾನ ಮಂತ್ರಿಯವರು ನಮ್ಮ ಸಂಸ್ಥಾನದ ಕಷ್ಟಕ್ಕೀಡಾಗಿರುವ ಪ್ರದೇಶಗಳಿಗೆ ಬರುವ ವಾರ ಭೇಟಿ ಕೊಡಲು ಒಪ್ಪಿರುವುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ

ಈ ದೃಷ್ಟಿಯಿಂದ ನಾನು ಕೇಂದ್ರ ಸರ್ಕಾರವನ್ನು ಕುರಿತು ಈ ಸಮಸ್ಯೆಯ ಬಗ್ಗೆ ಅವರ ಜವಾಬ್ದಾರಿಯ ಒಂದು ಅಂಶವೆಂದೇ ಭಾವಿಸಿ, ಸಾಕಷ್ಟು ಸಹಾಯವನ್ನು ನೀಡುವಂತೆ ಬೇಡಿಕೊಳ್ಳುತ್ತಿದ್ದೇನೆ. ಕೇಂದ್ರದಿಂದ ಹೆಚ್ಚಿನ ಸಹಾಯವು ದೊರೆಯದಿದ್ದರೆ ಸಂಸ್ಥಾನ ಸರಕಾರಕ್ಕೆ ಈ ಸ್ಥಿತಿಯನ್ನೆದುರಿಸುವುದು ನಿಜವಾಗಿಯೂ ಕಷ್ಟವಾಗುವುದು.

ಪರೆ ಭಾರತ ಸರಕಾರವು ಇದ ವರೆಗೆ ಈ ವಿಚಾರದಲ್ಲಿ ಯಾವ ಸಹಾಯವನ್ನೂ ನೀಡಿಲ್ಲ ಕಷ್ಟಪೀಡಿತ ಪ್ರದೇಶಗಳಿಗೆ ಸಹಾಯವನ್ನೊದಗಿಸುವ ಜವಾಬ್ದಾರಿಯು ಸಂಸ್ಥಾನ ಸರಕಾರದಷ್ಟೇ ಕೇಂದ್ರದ್ದೂ ಆಗಿದೆಯೆಂಬುದನ್ನು ಕೂಡ ಅವರು ಆಲೋಚಿಸುತ್ತಿಲ್ಲ ಸಹಾಯನೀಡುವ ಹೊಣೆ ಸ್ವಲ್ಪವೂ ಸಂಸ್ಥಾನ ಸರಕಾರಕ್ಕೆ ಮಾತ್ರ ಸೇರಿರುವುದಲ್ಲವೆಂಬುದು ಸ್ಪಷ್ಟ ವೇದ್ಯವಾಗಿದೆ ಭಾರತ ಸರಕಾರದವರು ತಮ್ಮ ನಿಯಮಗಳನ್ನೂ ಆದೇಶಗಳನ್ನೂ ಮುಂದಿಟ್ಟುಕೊಂಡು ಕಷ್ಟಪೀಡಿತ ಪ್ರದೇಶಗಳಲ್ಲಿ ಇರುವ ಪರಿಸ್ಥಿತಿಯನ್ನು ಕಡೆಗಣಿಸುವಂತಿಲ್ಲ ರಾಜ್ಯಾಂಗ ಶಾಸನದ ಪ್ರಕಾರ ಪ್ರಜೆಗಳೆಲ್ಲಾ ಭಾರತದ ಪ್ರಜೆಗಳೇ ಹೊರತು ಯಾವದೊಂದು ನಿರ್ದಿಷ್ಟ ಪ್ರಾಂತದ ಪ್ರಜೆಗಳಲ್ಲ ಈ ಭಾವನೆಯು ಕೇಂದ್ರದ ಅಧಿಕಾರ ಮಂತ್ರಿಗಳಿಗೆ ಸ್ಪಷ್ಟವಾಗಿ ಹಿಡಿಸದೇ ಇರುವುದು ನನಗೆ ಸ್ವಲ್ಪ ವ್ಯಥೆಯನ್ನುಂಟುಮಾಡಿದೆ ಕೇವಲ ಮಾನವೀಯತೆಯ ದೃಷ್ಟಿಯಿಂದ ಕೂಡ, ಜನಗಳು ಸಂಕಟಪಡುತ್ತಿರುವಾಗ ರಾಜ್ಯಾಂಗ ರಚನೆಯ ಗ್ರಂಥಸ್ಥ ನಿಯಮಗಳನ್ನೆಲ್ಲಾ ಒಟ್ಟಿಗೆ ತೊಡೆದುಹಾಕಬೇಕು ಮತ್ತು ಸಂಸ್ಥಾನದ ಸರಕಾರಗಳೂ ಕೇಂದ್ರ ಸರಕಾರವೂ ಒಟ್ಟಿಗೆ ಸೇರಿ ಪ್ರಯತ್ನಮಾಡಿ ಕಷ್ಟಪೀಡಿತರಾದ ಜನರಿಗೆ ಸಾಕಷ್ಟು ಸಹಾಯ ದೊರಕಿಸಬೇಕಾಗಿದೆ

ಕೆಳಗೆ ಕಂಡ ಆರು ನಿರ್ಣಯಗಳ ಮಂಜೂರಾದುವು:—

ಸಂಸ್ಥಾನದ ಸುಮಾರು ಮೂರನೇ ಒಂದರಷ್ಟು ಪ್ರದೇಶಗಳಲ್ಲಿ ಒದಗಿರುವ ಕ್ಷಾಮದಿಂದ ಸುಮಾರು ೩೦ ಲಕ್ಷ ಜನರು ಕಷ್ಟಕ್ಕೀಡಾಗಿರುವ ಪರಿಸ್ಥಿತಿಯನ್ನು ಈ ಸಭೆಯು ತೀವ್ರವಾಗಿ ಪರಿಗಣಿಸುತ್ತದೆ

ಸಂಸ್ಥಾನಕ್ಕೊದಗಿರುವ ಈ ಕಷ್ಟವನ್ನು ನಿವಾರಿಸುವ ಜವಾಬ್ದಾರಿಯು ಕೇಂದ್ರ ಸರ್ಕಾರಕ್ಕೂ ಸೇರಿರುವುದರಿಂದ ಅವರು ಕೂಡಲೇ ಧನ, ಧಾನ್ಯ ಮತ್ತು ಇತರ ಸಹಾಯವನ್ನು ಒದಗಿಸಬೇಕು

ಬರುವ ಎರಡನೇ ತಾರೀಖು ಮಹಾತ್ಮ ಗಾಂಧಿ ಜಯಂತಿ ಸಂದರ್ಭದಲ್ಲಿ ಕ್ಷಾಮ ನಿವಾರಣೆ ಬಗ್ಗೆ ಎಲ್ಲಾ ದೇವಾಲಯಗಳು, ಮಸೀದಿಗಳು ಮತ್ತು ಚರ್ಚುಗಳಲ್ಲೂ ವಿಶೇಷ ಪ್ರಾರ್ಥನೆ ನಡೆಸತಕ್ಕದ್ದು ಮತ್ತು ಆ ದಿನವನ್ನು ಕ್ಷಾಮಪರಿಹಾರ ನಿಧಿಯ ಸಂಗ್ರಹದ ದಿನವನ್ನಾಗಿ ಆಚರಿಸತಕ್ಕದ್ದು

ಸಂಸ್ಥಾನದ ಕಷ್ಟ ಪರಿಸ್ಥಿತಿಯನ್ನು ಪರಿಶೀಲಿಸಿ ಅದರ ನಿವಾರಣೆ ಬಗ್ಗೆ ಸಲಹೆ ನೀಡಲು ರೆವಿನ್ಯೂ ಸಚಿವರ ಅಧ್ಯಕ್ಷತೆಯಲ್ಲಿ ೩೦ ಜನರ ಸಮಿತಿಯೊಂದನ್ನು ರಚಿಸತಕ್ಕದ್ದು ಅಭಾವ ಪರಿಹಾರ ಕಮೀಷನರರು ಅದರ ಕಾರ್ಯದರ್ಶಿಯಾಗಿರತಕ್ಕದ್ದು

ಮುಖ್ಯ ಮಂತ್ರಿಗಳ ಕ್ಷಾಮ ಪರಿಹಾರ ನಿಧಿಗೆ, ಸಂಸ್ಥಾನದ ಜಾಯಿಂಟ್ ಸ್ಟಾಕ್ ಕಂಪೆನಿಗಳು, ಷೇರುದಾರರ ಪೂರ್ವಭಾವಿ ಅನುಮತಿ ಪಡೆಯದೆ ಧನ ಸಹಾಯ ಮಾಡಲು ಅನುಕೂಲಿಸುವಂತೆ ಕೇಂದ್ರ ಸರ್ಕಾರದವರು ವಿಶೇಷ ಕಾನೂನು ಮಾಡಬೇಕು ಮತ್ತು ಅಂತಹ ಸಹಾಯಕ್ಕೆ ವರಮಾನ ತೆರಿಗೆಯ ವಿನಾಯಿತಿ ಕೊಡಬೇಕು

ಸಂಸ್ಥಾನದಲ್ಲಿ ಕ್ಷಾಮವು ಮತ್ತೆ ತಲೆದೋರದಂತೆ ತಡೆಯಲು ಭದ್ರ, ತುಂಗ, ನುಗು ಈ ಅಣೆಕಟ್ಟುಗಳ ಯೋಜನೆಗಳನ್ನು ಕಾರ್ಯಗತ ಮಾಡುವ ಸಲುವಾಗಿ ಕೇಂದ್ರ ಸರ್ಕಾರದವರು ಧನಸಹಾಯ ಮಾಡಬೇಕು

ಸಂಸ್ಥಾನದಲ್ಲಿ ಜನೇತಾ|| ನೆಹರೂ ಪ್ರವಾಸ

ಬರುವ ಭಾನುವಾರ ನೆಹರೂರವರ ಆಗಮನ

ಮೈಸೂರು ೨೮

ಭಾರತ ಸರ್ಕಾರದ ಪ್ರಧಾನ ಮಂತ್ರಿ ಪಂ|| ನೆಹರೂರವರು ಬರುವ ತಿಂಗಳು ೫ ನೇ ತಾರೀಖು ಬೆಂಗಳೂರಿನಿಂದ ಸಂಸ್ಥಾನಕ್ಕೆ ಆಗಮಿಸಿ ಕ್ಷಾಮದಿಂದ ಕಷ್ಟಕ್ಕೀಡಾಗಿರುವ ಕೋಲಾರ, ತುಮಕೂರು, ಚಿಕ್ಕಮಗಳೂರು ಬಾಗೇಪಲ್ಲಿ ಮೊದಲಾದ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಪರಿಶೀಲನೆ ನಡೆಸಿ ಮಾರನೇ ದಿನ ವಾಪಸು ತೆರಳುವರು

ಸಾರ್ವಜನಿಕ ಸಭೆಯಲ್ಲಿ ನಿರ್ಣಯ

ಎಲ್ಲ ವರ್ಗಗಳಲ್ಲೂ ಕನ್ನಡವೇ ಶಿಕ್ಷಣ ಮಾಧ್ಯಮ

ಮೈಸೂರು ೨೮

ರಾಜಧಾನಿಯ ಕನ್ನಡ ಮಾಧ್ಯಮ ಸಮಿತಿಯ ಆಶ್ರಯದಲ್ಲಿ ನೆನ್ನೆ ಟೌನ್ ಹಾಲಿನಲ್ಲಿ "ವಿದ್ಯಾಭ್ಯಾಸದಲ್ಲಿ ಕನ್ನಡ-ಮಾಧ್ಯಮ" ಎಂಬ ವಿಷಯವಾಗಿ ಸಾರ್ವಜನಿಕ ವಿಚಾರಗೋಷ್ಠಿಯೊಂದು ಶ್ರೀ ಕೆ ಸಂಪದ್ಗಿರಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀಗಳಾದ ನಾಭದ್ರಯ್ಯ, ಕೆ ಪುಟ್ಟಸ್ವಾಮಿ, ಬಿ ಎಲ್ ಸುಬ್ಬಮ್ಮ, ಎಂ ಪಿ ಎಲ್ ಶಾಸ್ತ್ರಿ, ಎಚ್ ಎಸ್ ದೊರೆಸ್ವಾಮಿ, ರಾಮಸ್ವಾಮಿ ಮತ್ತು ಇತರರು ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಕುರಿತು ಭಾಷಣ ಮಾಡಿದರು. ಶಿಕ್ಷಣದ ಪದ್ಧತಿಯು ಎಲ್ಲ ಮಟ್ಟಗಳಲ್ಲೂ ಕನ್ನಡ ಮಾಧ್ಯಮವಾಗಿರಬೇಕು ಎಂಬ ನಿರ್ಣಯವು ಮಂಜೂರಾಯಿತು

ಒಂದು ವರ್ಷದ ಮಗುವಿನಿಂದ ಕುರಾನ್ ಪಠಣ

ಪೂರ್ವ ಪಾಕೀಸ್ತಾನದ ರಾಜಶಾಹಿ ಎಂಬಲ್ಲಿ ಒಬ್ಬ ವೈದ್ಯರ ಒಂದು ವರ್ಷದ ಮಗುವು ಕುರಾನನ್ನು ಸ್ಪಷ್ಟವಾಗಿ ಪಠಿಸುತ್ತಿರುವುದೆಂದೂ, ಈ ಸೋಜಿಗವನ್ನು ನೋಡಲು ಸಾವಿರಾರು ಜನರು ತಂಡೋಪತಂಡವಾಗಿ ಬರುತ್ತಿರುವರೆಂದೂ ವರದಿಯಾಗಿದೆ

ನೆಹರೂರವರ ಹಾರದ ಹರಾಜಿನಿಂದ ೩,೦೦೦ ರೂ.

ಹೈದರಾಬಾದಿನ ಬಿದರೆಯಲ್ಲಿ ಕಳೆದ ಶುಕ್ರವಾರ ಪಂಡಿತ ನೆಹರೂ ಮತ್ತು ಮೌಲಾನ ಆಜಾದರು ಭಾಷಣ ಮಾಡಿದಾಗ ಅವರಿಗೆ ಅರ್ಪಿಸಲಾದ ಎರಡು ಹೂವಿನ ಹಾರಗಳನ್ನು ಹರಾಜು ಹಾಕಲಾಗಿ ನೆಹರೂರವರ ಹಾರಕ್ಕೆ ೩,೧೦೦ ರೂ ಮತ್ತು ಆಜಾದರ ಹಾರಕ್ಕೆ ೧,೬೦೦ ರೂ ಗಳು ಬಂದುವೆಂದು ಗೊತ್ತಾಗಿದೆ ಪೋಲೀಸ್ ಕಾರ್ಯಾಚರಣೆಯ ನಂತರ ಬಿದರೆಯಲ್ಲಿ ನಡೆದ ಗೊಂದಲದಲ್ಲಿ ನೊಂದವರ ಪರಿಹಾರಾರ್ಥವಾಗಿ ಆ ಮೊಬಲಗನ್ನು ವಿನಿಯೋಗಿಸಲಾಗುವುದು

○ ಮೈಸೂರು ರೇಂಜ್ ಎಕ್ಸೈಜು ಇನ್‌ಸ್ಪೆಕ್ಟರ್ ಶ್ರೀ ಸಿ ಆರ್ ನಂಜುಂಡಮೂರ್ತಿಯವರು ನೆನ್ನೆ ರಾಜಧಾನಿಯ ಜಾಡಮಾಲಿಗಳ ಕಾಲೊನಿಯ ಚಿಕ್ಕರಾಮ ಎಂಬುವನ ಮನೆಯನ್ನು ಶೋಧಿಸಿ, ಅಕ್ರಮವಾಗಿ ಸೇಂದಿ ತಯಾರಿಸುತ್ತಿದ್ದ ಚಿಕ್ಕರಾಮ, ಕೂಂಡಮ್ಮ ಮತ್ತು ಚಿನ್ನಗಾಡು ಎಂಬುವರನ್ನು ಬಂಧಿಸಿ, ಭಟ್ಟಿ ಇಳಿಸುವ ಸಾಮಗ್ರಿಗಳು ಮತ್ತು ೩ ಸೇರು ಸೇಂದಿಯನ್ನು ವಶಪಡಿಸಿಕೊಂಡಿರುವರು

ಮೈಸೂರು ದಸರಾ ವಸ್ತುಪ್ರದರ್ಶನ

ಮಕ್ಕಳ ಪ್ರದರ್ಶನ-BABY SHOW

ಈ ವರ್ಷದ ವಸ್ತುಪ್ರದರ್ಶನದ ಅಂಗವಾಗಿ ತಾ|| 4-10-1952 ನೇ ಶನಿವಾರದ ದಿವಸ ಮಕ್ಕಳ ಪ್ರದರ್ಶನವನ್ನು ಜೀವನರಾಯನ ಕಟ್ಟೆಯಲ್ಲಿರುವ ರಂಗಮಂಟಪದಲ್ಲಿ ಮಧ್ಯಾಹ್ನ 2 ರಿಂದ 5-30 ಗಂಟೆಯವರೆಗೆ ನಡೆಸಲು ಏರ್ಪಡಿಸಲಾಗಿದೆ

18 ತಿಂಗಳೊಳಗಿರುವ ಮಕ್ಕಳು ಈ ಪ್ರದರ್ಶನದಲ್ಲಿ ಭಾಗವಹಿಸಬಹುದು ಭಾಗವಹಿಸುವ ಪ್ರತಿ ಮಗುವಿನೊಡನೆ ಬರುವ ತಾಯಿ ಅಥವಾ ಪೋಷಕರೊಬ್ಬರಿಗೆ ಮಾತ್ರ ಆ ದಿನ ಜೀವನರಾಯನ ಕಟ್ಟೆಗೆ ಪ್ರವೇಶ ಉಚಿತ

ಪ್ರದರ್ಶನ ಕಾಲದಲ್ಲಿ ವೈದ್ಯರು ಮಕ್ಕಳ ಕೂಲಂಕಷ ಆರೋಗ್ಯ ಇವುಗಳನ್ನು ಪರೀಕ್ಷಿಸಿ ಸೂಕ್ತವಾದ ಸಲಹೆಗಳನ್ನು ಕೊಡುತ್ತಾರೆ

ಜಯಶೀಲರಾದ ಮಕ್ಕಳಿಗೆ ವಸ್ತುಪ್ರದರ್ಶನ ಸಮಿತಿಯವರು ಬಹುಮಾನಗಳನ್ನು ಹಂಚುತ್ತಾರೆ

ಸಕಲರೂ ೧೮ ತಿಂಗಳೊಳಗಿನ ಮಕ್ಕಳನ್ನು ಪ್ರದರ್ಶನಕ್ಕೆ ಕರೆದುಕೊಂಡುಬಂದು ಮಕ್ಕಳ ಪ್ರದರ್ಶನದಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥಿಸಲಾಗಿದೆ

ಪಿ ಗೋಪಾಲಕೃಷ್ಣಶೆಟ್ಟಿ,
ವಿ ಎಸ್ ಕೃಷ್ಣ ಅಯ್ಯರ್,
ಪ್ರಧಾನ ಕಾರ್ಯದರ್ಶಿಗಳು

ಎಸ್ ವೇಣುಗಿರಿರಾವ್
ಎಂ ರಾಮಸ್ವಾಮಿ
ಗೌ|| ಕಾರ್ಯದರ್ಶಿಗಳು,
ಗುಣಾಬಿ ಸರ್ಭಿಣಿ ಮತ್ತು
ಶಿಶು ಸಂರಕ್ಷಣಾಲಯ
ಮೈಸೂರು.

ಸ್ಕೌಟ್ ಕೌನ್ಸಿಲ್ಲಿನ ವಾರ್ಷಿಕ ಸಭೆ

ಮೈಸೂರು ೨೭

ಸಂಸ್ಥಾನದ ಸ್ಕೌಟ್ ಕೌನ್ಸಿಲ್ಲಿನ ೩೪ ನೇ ವಾರ್ಷಿಕ ಸಭೆಯು ನೆನ್ನೆ ದಿನ ಮಹಾರಾಜಾ ಕಾಲೇಜಿನ ಯೂನಿಯನ್ ಸಂಭಾಗಣದಲ್ಲಿ ಜರುಗಿತು ವಿದ್ಯಾ ಸಚಿವ ಶ್ರೀ ಎ ಜಿ ರಾಮಚಂದ್ರ ರಾಯರು ಅಧ್ಯಕ್ಷತೆ ವಹಿಸಿದ್ದರು ಚೀಫ್ ಸ್ಕೌಟ್ ಕಮಿಷನರರಾದ ಶ್ರೀ ಪಿ ಶಿವಶಂಕರ್‌ರವರು ಸ್ವಾಗತ ಭಾಷಣ ಮಾಡಿದನಂತರ ಅಧ್ಯಕ್ಷರು ನೂತನಾಧಿಕಾರ ಶುಭ ಸನ್ನಿವೇಶದಲ್ಲಿ ಮೈಸೂರಿನ ಪ್ರಧಾನ ಸ್ಕೌಟರೂ ಮತ್ತು ಮೈಸೂರಿನ ಬಾಲಚಮೂ ದಳದ ಪ್ರಧಾನ ಪೋಷಕರೂ ಆದ ಶ್ರೀಮನ್ಮಹಾರಾಜರಿಗೆ ಶುಭಸಂದೇಶವನ್ನು ಸೂಚಿಸುವ ನಿರ್ಣಯವನ್ನು ಮಂಡಿಸಿದರು ಮೈಸೂರು ಬಾಲ ಚಮೂ ದಳವನ್ನು ಭಾರತದ ಸ್ಕೌಟ್ ಮತ್ತು ಗೈಡುಗಳೊಡನೆ ಐಕ್ಯಗೊಳಿಸಿರುವುದನ್ನು ಅನುಮೋದಿಸಿ ಬೆಂಗಳೂರಿನ ಶ್ರೀ ನಂಜುಂಡರಾಯರು ಒಂದು ನಿರ್ಣಯವನ್ನು ಮಂಡಿಸಿದರು ಅವೆರಡೂ ಮಂಜೂರಾದುವು

ತರುವಾಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಚ್ ಆರ್ ಅಬ್ದುಲ್ ಗಫಾರ್‌ರವರು ಸ್ಕೌಟ್ ಚಳುವಳಿಯ ಕಾರ್ಯಕಲಾಪಗಳ ಬಗ್ಗೆ ವಿವರವಾದ ವರದಿಯನ್ನು ಒಪ್ಪಿಸಿದರು ಅನಂತರ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು ಅವರು ತಮ್ಮ ಭಾಷಣದಲ್ಲಿ ಸ್ಕೌಟ್ ಚಳುವಳಿಯಿಂದ ಯುವಕರ ನಡೆನುಡಿಗಳು ಬಹು ಮಟ್ಟಿಗೆ ರೂಪುಗೊಂಡಿರುವುದಾಗಿಯೂ, ಇಂತಹ ಸಂಸ್ಥೆಗಳು ಹೆಚ್ಚಾಗಿ ಬೆಳೆದು ರಾಷ್ಟ್ರದ ಸರ್ವತೋಮುಖವಾದ ಪುನರ್ರಚನ ಕಾರ್ಯಕ್ಕೆ ನೆರವಾಗುವಂತಾಗಬೇಕೆಂದೂ ಹಾರೈಸಿದರು

ನಗರದ ಸ್ಕೌಟ್ ಕಮಿಷನರ್ ರಾವ್ ಬಹದ್ದೂರ್ ಎಂ ಶಿವಸ್ವಾಮಿಯವರು ವಂದನಾರ್ಪಣೆಯನ್ನು ಮಾಡಿದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕ್ಷಯ ರೋಗಿಗಳಿಗಾಗಿ ೧೫೦೦೦ ರೂ ಸಹಾಯ

ರಾಜಧಾನಿಯ ಶ್ರೀ ಕೃಷ್ಣಾಜಮ್ಮಣ್ಣಿ ಕ್ಷಯ ರೋಗ ಆಸ್ಪತ್ರೆಯ ಸಹಕಾರ ಸಂಘದಲ್ಲಿ ಕಳೆದ ಎರಡು ವರ್ಷಗಳಿಂದ ಒಂದ ಲಾಭ ಮತ್ತು ಇತರ ನಿಧಿಗಳಿಂದ ಒಟ್ಟು ೧೫ ಸಾವಿರ ರೂ ಗಳನ್ನು ಅಲ್ಲಿನ ರೋಗಿಗಳಿಗಾಗಿ ವಿನಿಯೋಗಿಸಲು ಸಂಘದವರು ನಿರ್ಧರಿಸಿರುತ್ತಾರೆ

ಬರ್ಮಾ ಸಂಸ್ಥಾನಗಳಲ್ಲಿ ಜರೂರು ಪರಿಸ್ಥಿತಿ

ಬರ್ಮದ ಷಾನ್ ಸಂಸ್ಥಾನಗಳಲ್ಲಿ ಕಮ್ಯೂನಿಸ್ಟರು ರೈತರನ್ನು ದಂಗೆಯೇಳುವಂತೆ ಪ್ರಚೋದಿಸುತ್ತಿರುವುದರಿಂದ ಅಲ್ಲಿ ಜರೂರು ಪರಿಸ್ಥಿತಿಯುಂಟಾಗಿರುವುದೆಂದು ಬರ್ಮ ಸರ್ಕಾರದವರು ಘೋಷಿಸಿರುತ್ತಾರೆ

ರೇಷನ್ ಕಛೇರಿಯ ವರ್ಗ

ರಾಜಧಾನಿಯ ವಾಣೀವಿಲಾಸ ರಸ್ತೆಯಲ್ಲಿ 'ಯದುಗಿರಿ' ಕಟ್ಟಡದಲ್ಲಿದ್ದ ನಗರದ ರೇಷನ್ ಆಫೀಸರರ ಕಛೇರಿ, ನಗರದ ಸೆಂಟ್ರಲ್ ಡಿಪೊ, ಎರಡನೇ ಸರ್ಕಲ್ಲಿನ ಅಸಿಸ್ಟೆಂಟ್ ರೇಷನಿಂಗ್ ಆಫೀಸರರ ಕಛೇರಿ, ಮೂರನೇ ಡಿವಿಜನ್ನಿನ ಆಹಾರದ ಇನ್ಸ್‌ಪೆಕ್ಟರರ ಕಛೇರಿಗಳನ್ನು ನಾಳಿದ್ದಿನಿಂದ, ಆರಾಂ ಕಛೇರಿಯಲ್ಲಿ ಡಿ ಎಸ್ ಪಿ ಯವರ ಕಛೇರಿಯಿದ್ದ ಸ್ಥಳಕ್ಕೆ ವರ್ಗಾಯಿಸಲಾಗುವುದು ಮಂಡಿ, ಲಷ್ಕರ್, ದೇವರಾಜಾ ಮತ್ತು ನಜರ್‌ಬಾದ್ ಮೊಹಲ್ಲಗಳ ಜನರ ಸಲುವಾಗಿ ಒಂದನೇ ಸರ್ಕಲ್ಲಿನ ಅಸಿಸ್ಟೆಂಟ್ ರೇಷನಿಂಗ್ ಆಫೀಸರ್ ಮತ್ತು ಒಂದನೇ ಮತ್ತು ಎರಡನೇ ಡಿವಿಜನ್ನುಗಳ ಆಹಾರ ಇನ್ಸ್‌ಪೆಕ್ಟರುಗಳ ಕಛೇರಿಗಳ ಗಾಂಧಿ ಚೌಕದಲ್ಲಿರುವ ರೇಷನಿಂಗ್ ಕಛೇರಿಗೆ ವರ್ಗಾಯಿಸಲ್ಪಡುವುವು

ಶ್ರೀ ಕೃಷ್ಣರಾಜೇಂದ್ರ ಗಿರಣಿ ಸಹಕಾರ ಸಂಘದ ಚುನಾವಣೆ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಕೋ-ಆಪರೇಟಿವ್ ಸೊಸೈಟಿಯ ೧೮ನೇ ವಾರ್ಷಿಕೋತ್ಸವವು ಕಳೆದ ೨೧ನೇ ತಾ|| ನಡೆದು ೧೯೫೨-೫೩ನೇ ಸಾಲಿಗೆ ಶ್ರೀ ಬಿ ಎಸ್. ವಿಶ್ವೇಶ್ವರಯ್ಯನವರು ಸಂಘದ ಅಧ್ಯಕ್ಷರಾಗಿಯೂ ಶ್ರೀ ಡಿ ಎಂ ಬೆಳ್ನಾರೆ ಎಂಬುವರ ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ವಿ ಶ್ರೀನಿವಾಸಯ್ಯ ಮತ್ತು ಶ್ರೀ ಕೆ ಮುದ್ದೇಗೌಡರವರು ಗೌರವ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು ಇತರ ಏಳು ಮಂದಿ ಸದಸ್ಯರನ್ನು ಚುನಾಯಿಸಲಾಯಿತು.

ಗಾಂಧಿ ಜಯಂತಿ ದಿನ ಸಾಮೂಹಿಕ ಯೋಜನೆ

ಗಾಂಧೀಜಿಯವರ ಜಯಂತಿಯ ದಿನ ದೇಶದಲ್ಲಿ ೫೫ ಸಾಮೂಹಿಕ ಯೋಜನೆಗಳನ್ನು ಜಾರಿಗೆ ಕೊಡಲಾಗುವುದು ಒಂದೊಂದು ಉದ್ಯಮಕ್ಕೆ ೩೦೦ ಹಳ್ಳಿಗಳನ್ನು ಸೇರಿಸಲಾಗಿದೆಯೆಂದೂ, ಅದರಿಂದ ೩ ವರ್ಷಗಳಲ್ಲಿ ೧|| ಲಕ್ಷ ಹಳ್ಳಿಗಳಿಗೆ ಉಪಯೋಗವಾಗುವುದೆಂದೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ಹಿಂದಿ ತರಗತಿಗಳು

ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದ ಆಶ್ರಯದಲ್ಲಿ ಹಿಂದಿ ತರಗತಿಗಳು ಇಂದಿನಿಂದ ಪ್ರಾರಂಭವಾಗುವುವು ಸೇರಲು ಬರುವ ತಿಂಗಳು ೫ನೇ ತಾ|| ಕೊನೆಯ ದಿನವಾಗಿದೆ

ವಿವಾಹ ಮಹೋತ್ಸವ

ರಾಜಧಾನಿಯ ಜಿ ಟಿ ಎ ಪ್ರೆಸ್ಸಿನ ಮಾಲೀಕರಾದ ಶ್ರೀ ಕೆ. ರಾಮನರಸಿಂಹಯ್ಯನವರು ತಮ್ಮ ಪುತ್ರ ಶ್ರೀ ಜಿ ಆರ್ ರಾಮಸ್ವಾಮಿಯವರಿಗೆ ತಿಪಟೂರಿನ ಶ್ರೀ ಕೃಷ್ಣಾ ಪ್ರೆಸ್ಸಿನ ಮಾಲೀಕರಾದ ಶ್ರೀ ನರಸಿಂಹ ಪುರಾಣಿಕರ ಪುತ್ರಿ ಸೌ|| ಸೀತಮ್ಮನನ್ನು ತಂದುಕೊಂಡು ನೆನ್ನೆ ತಿಪಟೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಮನೆ ಬಿಕರಿಗಿದೆ

ಮೈಸೂರು ವಾಣೀವಿಲಾಸ ಮೊಹಲ್ಲಾ ಬ್ಲಾಕ್ IV ಎ ಗೋಕುಲದ ಬಳಿ ದೀಪ, ನಲ್ಲಿ, ಕಾಂಪೌಂಡು ಮತ್ತು ನೆಲಬಾರು, ಗ್ಯಾರೇಜು ಸಹ ಉಳ್ಳ ಪೂರ್ತಿ ತಾರಸೀ ಮನೆ. ಹೆಚ್ಚು ವಿವರಗಳಿಗೆ ಕೆಳಗೆ ಕೊಟ್ಟಿರುವ ವಿಳಾಸದಲ್ಲಿ ವಿಚಾರಿಸಿ

ಜಿ ವಿ ದೇಶಿಕಾಚಾರ್,

22-9-52 ಮೈಸೂರು | ಬ್ಲಾಕ್ IV ಎ, ವಿ ವಿ ಮೊಹಲ್ಲಾ

ರೇಷನಿಂಗ್ ಆಫೀಸರವರ ಕಛೇರಿ

ಮೈಸೂರು ನಗರ

ನೋಟಿಫಿಕೇಷನ್ ನಂ [illegible]

ತಾರೀಖು [illegible]

ಮೆಮೊ

ಮೈಸೂರು ನಗರದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ದಸರಾ ರಜಾ ದಿನಗಳು, ಮತ್ತು ಮೊಹರಂ ಕತಲ್ ದಿನದ ಪ್ರಯುಕ್ತ ಮೈಸೂರು ನಗರದಲ್ಲಿರುವ ಎಲ್ಲ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಸಬ್ ಗೋಡೌನ್‌ಗಳು ಈ ಕೆಳಗೆ ನಮೂದಿಸಿದಂತೆ ಮುಚ್ಚಲ್ಪಡುತ್ತವೆ - ೨೯-೯-೫೨ ನೇ ಸೋಮವಾರ ವಿಜಯದಶಮಿ – ಪೂರ್ತಿ ರಜಾ

೩೦-೯-೫೨ ನೇ ಮಂಗಳವಾರ ಮೊಹರಂ ಕೊನೆಯ ದಿನ ಕಾರ್ಡುದಾರರಿಗೆ ಮೊದಲೇ ತಿಳಿಸಿ, ಮುಸ್ಲಿಂ ಡಿಪೋಗಳು ಮಾತ್ರ ಮುಚ್ಚತಕ್ಕದ್ದು

(ಸಹಿ) ಹೆಚ್ ಜಿ ವಿಜಯರಾಘವರೆಡ್ಡಿ,

ರೇಷನಿಂಗ್ ಆಫೀಸರ್

ಮಲ್ಲೇಶ್ವರಿ ಚಿತ್ರದ ಪ್ರದರ್ಶನ

ಮದರಾಸಿನ ವಾಹಿನಿ ಪ್ರೊಡಕ್ಷನ್ ಸಂಸ್ಥೆಯ ಡೈರೆಕ್ಟರರಾದ ಶ್ರೀ ಬಿ. ಎನ್ ರೆಡ್ಡಿಯವರು ತಯಾರಿಸಿರುವ ಮಲ್ಲೇಶ್ವರಿ ಎಂಬ ತೆಲುಗು ಚಿತ್ರದ ಪ್ರದರ್ಶನವನ್ನು ಕಳೆದ ಶುಕ್ರವಾರ ರಾಜಧಾನಿಯ ಶ್ರೀ ಗಾಯತ್ರೀ ಚಿತ್ರಮಂದಿರದಲ್ಲಿ ಏರ್ಪಡಿಸಿದ್ದರು ಸ್ಥಳೀಯ ಸಂಸ್ಥೆಗಳ ಸಚಿವರು, ಶಾಸನ ಸಭಾಧ್ಯಕ್ಷರು, ಹಲವು ಉನ್ನತಾಧಿಕಾರಿಗಳು ಮತ್ತು ಖಾಸಗೀ ಪ್ರಮುಖರು ಆಗಮಿಸಿದ್ದರು. ಶ್ರೀ ಎಚ್ ಜಿ ವಿಜಯರಾಘವ ರೆಡ್ಡಿಯವರು ಸ್ವಾಗತ ನೀಡಿದರು

ಬಡವರಿಗೆ ಧಾನ್ಯ ಸಹಾಯ

ಶ್ರೀರಂಗಪಟ್ಟಣದ ತಾಲ್ಲೂಕು ಬಾಬೂರಾಯನ ಕೊಪ್ಪಲು ಗ್ರಾಮದ ಕುಳವಾಡಿ ರಂಗ ಎಂಬುವರು, ಗ್ರಾಮದ ಬಡಜನರು ಪಕ್ಷ ನಡೆಸುವ ಸಲುವಾಗಿ ೩೩ ಪಲ್ಲ ಭತ್ತ ಮತ್ತು ರಾಗಿಯನ್ನು ಸಹಾಯವಾಗಿ ಕೊಟ್ಟಿದ್ದಾರೆಂದು ಗೊತ್ತಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವಿ. ವೆಂಕಟಸುಬ್ಬರಾವ್ ವೀಣೆ ಮಧ್ಯಾಹ್ನ ೧ ೩೦ ಕೊಳಲು ೧ ೪೫ ಟಿ. ಎಂ ರಾಜಗೋಪಾಲಶರ್ಮ ಕರ್ನಾಟಕ ಸಂಗೀತ ೨ ಹಿಂದೂಸ್ಥಾನಿ ಸಂಗೀತ ಸಂಜೆ ೫ ೩೦ ಎಚ್ ಎನ್ ಸ್ವರ್ಣಲತಾ ಸಂಗೀತ. ೬ ಜಾನಪದ ಗೀತೆಗಳ ಉತ್ಸವ ೭ "ಮಂಥರೆ" ಪ್ರಹಸನ. ೭.೩೦ ಹಿಂದೂಸ್ಥಾನಿ ಸಂಗೀತ ೭ ೪೫ ಮೊಹರಂ ದಿನಾಚರಣೆ, ಕನ್ನಡದಲ್ಲಿ ಭಾಷಣ ೮ ಸಂಗೀತ ೮ ೩೦ ಮೈಸೂರು ರೇಡಿಯೋ ವಾದ್ಯಗೋಷ್ಠಿಯೊಡನೆ ವೃಂದ ಸಂಗೀತ, ೯ ೧೫ ಎಂ ಎನ್ ಪಾರ್ಥಸಾರಥಿಯವರಿಂದ ಪ್ರೇಮಾವತಾರ ೯ ೪೦ ಗಾನಾಮೃತ

SRI GAYATHRI
TALKIES
On 30-9-52 " Daily 2 Shows
DESERT FOX
With James Mason, Cedric Hardwicke

SREE GANESHA
TALKIES
From 30 9-52
COVER GIRL
With Rita Hayworth & Gene Kelly

ಮನೆ ಬಿಕರಿಗಿದೆ

ಡಿ ಸುಬ್ಬಯ್ಯ ರಸ್ತೆಯ ಸಾಧ್ವಿ ಆಫೀಸ್ ಬಲ ಭಾಗದ ರಸ್ತೆಯಲ್ಲಿ 320 ನೇ ನಂಬರು ಮನೆ ಬಿಕರಿಗಿದೆ ದೀಪ, ನಲ್ಲಿ ಮುಂತಾದ ಸಕಲ ಸೌಕರ್ಯಗಳಿಂದ ಕೂಡಿದೆ. ಬೆಲೆ 9,000 ರೂ ವಿವರಗಳಿಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಅಂಬಿಕಾ ಸ್ಟೋರ್ಸಿನಲ್ಲಿ ವಿಚಾರಿಸಿ

Edited, Printed and Published by A R Nagarajan at Sadhvi Press, D. Subbiah Road, Mysore

ಮಹಾಶ್ಚರ್ಯ ಉಪದೇಶ ! ೧೨ ವರ್ಷದ ಚಾಲ್ತಿ !! ಖಾತರಿ ಗುಣ !
ಮೈಸೂರು ಅರಮನೆಯ ರಾಜ ವೈದ್ಯ ಉಂಬಳಿ ನರಸಿಂಹ ಪಂಡಿತರ ಮನೆತನದಲ್ಲಿ 92 ವರ್ಷದಿಂದ ಪ್ರಖ್ಯಾತವಾಗಿರುವ
ಎ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ
ಸಂತಾನ ಸಿಂಧೂರ
ಈ ಸಿಂಧೂರವು -
★ ಬಹಿಷ್ಠೆ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲ ಮಾಡುತ್ತದೆ
★ ಕ್ರಮತಪ್ಪಿ ಬಹಿಷ್ಠೆಯಾಗುವುದನ್ನು ಕ್ರಮಪಡಿಸುತ್ತದೆ
★ ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ.
★ ಬಂಜೆತನವನ್ನು ಕೊನೆಗಾಣಿಸಿ
ಸಂತಾನ ಕೊಡುತ್ತದೆ.
ಕ್ರಯ 1 ಸೆಟ್ 7 ರೂ ಹೊಸ ಕ್ಯಾಟಲಾಗು ಉಚಿತ
ವಿವರಗಳಿಗೆ - ಎ. ರಾಮಸ್ವಾಮಿ ಅಯ್ಯರ್ ಸನ್,
623, "ಸಂತಾನ ಸಿಂಧೂರ" ಆಫೀಸ್, ನಾರದಿ ರಸ್ತೆ
ದಕ್ಷಿಣ ಕ್ರಾಸ್, (ಕೃಷ್ಣಾ ರೈಸ್ ಮಿಲ್ ಪಕ್ಕ,) ಮೈಸೂರು

ದಸರಾ ಮಹೋತ್ಸವಕ್ಕಾಗಿ:- ಹೊಸ ಮಾದರಿಯ, ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ,
ಧರ್ಮಾವರಂ, ಬನಾರಸ್ ಸೀರೆಗಳೂ, ಡಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ
★ M. V. ಭೋಜಯ್ಯ
ಇಂಪೀರಿಯಲ್ ಬ್ಯಾಂಕ್ ಎದುರು, ಮೈಸೂರು

ಟೆಲಿಫೋನ್ ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೩೦-೯-೧೯೫೨ [ಸಂಚಿಕೆ ೫೪

ಜಿಲ್ಲಾಧಿಕಾರಿಗಳಿಗೆ ಕುದುರೆಯಿಂದ ಗಾಯ

ವೈಭವಯುತವಾದ ಜಂಬೂ ಸವಾರಿ ಉತ್ಸವ

ಮೈಸೂರು ೩೦

ನವರಾತ್ರಿ ಉತ್ಸವದ ಅಂಗವಾಗಿ ಕಳೆದ ಒಂಭತ್ತು ದಿನಗಳಿಂದಲೂ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ದರ್ಬಾರು ಯಶಸ್ವಿಯಾಗಿ ನಡೆದು, ನೆನ್ನೆ ಜಂಬೂ ಸವಾರಿ ಮೆರವಣಿಗೆಯು ಮೊದಲೇ ಗೊತ್ತಾಗಿದ್ದಂತೆ ಸಂಜೆ ೪ ಘಂಟೆಗೆ ಹೊರಟು ಸ್ಯಾಯಾಜಿ ಚೌಕ, ಎಲ್ಗಿನ್ ಫೌಂಟೆನ್, ಸಯ್ಯಾಜೀರಾವ್ ರಸ್ತೆ ಮಾರ್ಗವಾಗಿ ಬನ್ನಿಮಂಟಪವನ್ನು ಸುಮಾರು ಆರುಗಂಟೆ ವೇಳೆಗೆ ತಲಪಿತು.

ಮತ್ತೆ ರಾತ್ರಿ ೮ ೩೦ ಘಂಟೆಗೆ ಉತ್ಸವ ಅಲ್ಲಿಂದ ವಾಪಸು ಹೊರಟು, ಮೇಲ್ಕಂಡ ಮಾರ್ಗವಾಗಿ ರಾತ್ರಿ ೧೦-೩೦ ಘಂಟೆ ವೇಳೆಗೆ ಅರಮನೆಯನ್ನು ಸೇರಿತು ವಿಶೇಷವಾದ ಜನಸಂದಣಿಯು ರಸ್ತೆಯ ಉದ್ದಕ್ಕೂ ನಿಂತು ಪ್ರಭುಗಳ ಸಂದರ್ಶನ ಪಡೆಯಿತು.

ಮೆರವಣಿಗೆಯಲ್ಲಿ ಮಾಮೂಲಾಗಿ ಒಂಟೆ, ಆನೆ, ಕುದುರೆ, ಫಿರಂಗಿ ಗಾಡಿಗಳ್... ಎನ್ ಸಿ ಸಿ ಸ್ಕೌಟು ದಳಗಳೂ, ಭಾರತದ ಮಿಲಿಟರಿಗೆ ಸೇರಿದ ಮೈಸೂರು, ಹೈದರಾಬಾದು ಕಾಲ್ದಳಗಳೂ, ಅಶ್ವಾರೋಹಿದಳಗಳೂ ಇದ್ದುವು. ಭಾರತ ರಾಷ್ಟ್ರೀಯ ಸೇವಾದಳದವರೂ ಇದೇ ಮೊದಲನೇ ಬಾರಿ ಮೆರವಣಿಗೆಯಲ್ಲಿ ಇದ್ದರು ಅರಮನೆ ಬ್ಯಾಂಡಿನವರೂ, ಭಾರತದ ಮಿಲಿಟರಿ ಬ್ಯಾಂಡಿನವರೂ ಅರಮನೆಗೆ ಸೇರಿದ ನೌಕರರೂ, ನಗರದ ಪ್ರಮುಖ ಮಹನೀಯರೂ ಇದ್ದರು. ಶ್ರೀಮನ್ ಮಹಾರಾಜರಿಗೆ ರಸ್ತೆ ಪಕ್ಕಗಳಲ್ಲಿ ಎಲ್ಲೇ ಜನರು ಹೂಮಾಲೆಗಳನ್ನು ಅರ್ಪಿಸಿದರು.

ಬನ್ನಿಮಂಟಪದಲ್ಲಿ ಪ್ರಭುಗಳು ಶಮೀ ಪೂಜೆ ಮಾಡಿದನಂತರ ಸೈನಿಕರಿಂದ ಸಲ್ಯೂಟ್ ಸ್ವೀಕರಿಸಿದರು. ಟಾರ್ಚ್ ಲೈಟ್ ಪೆರೇಡೂ ನಡೆಯಿತು

ಶ್ರೀಮನ್ ಮಹಾರಾಜರ ಜಂಬೂಸವಾರಿಗಾಗಿ ವೀರಭದ್ರ ಎಂಬ ಹೊಸ ಅಂಬಾರಿ ಆನೆಯನ್ನು ಉಪಯೋಗಿಸಲಾಗಿತ್ತು.

ಮೆರವಣಿಗೆಯು ಹೊರಟಾಗ ಮತ್ತು ವಾಪಸು ಬನ್ನಿಮಂಟಪದಿಂದ ಬಂದಾಗ ... ಕುಶಾಲು ತೋಪುಗಳು ಹಾರಿಸಲ್ಪಟ್ಟುವು

ಲೇಕ್ ವ್ಯೂ' ಬದಲು 'ಜಲದರ್ಶಿನಿ'

ರಾಜಧಾನಿಯಲ್ಲಿ ಸಂಸ್ಥಾನದ ಮುಖ್ಯ ಮಂತ್ರಿಯವರು ಬಿಡಾರ ಮಾಡುವ "ಲೇಕ್ ವ್ಯೂ" ಭವನದ ಇಂಗ್ಲಿಷ್ ಹೆಸರನ್ನು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ದಿನ ಬದಲಾಯಿಸಿ "ಜಲ ದರ್ಶಿನೀ" ಎಂದು ಅದಕ್ಕೆ ನಾಮಕರಣ ಮಾಡಿರುವರು

ಅಶೋಕ ಚಕ್ರ ಸಂಘ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕೆ ಕಛೇರಿಯಲ್ಲಿ ನಾಳೆ ಸಂಜೆ ೬ ಗಂಟೆಗೆ ವಿಜ್ಞಾನದ ಜೀವನಕ್ಕೆ ಎಂಬ ವಿಷಯವಾಗಿ ಶ್ರೀ ಎ ವೆಂಕಟರಾಮರಿಂದ ಉಪನ್ಯಾಸವನ್ನು ಅಶೋಕ ಚಕ್ರ ಸಂಘದವರು ಏರ್ಪಡಿಸಿರುತ್ತಾರೆ ಸಕಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಕುದುರೆಯಿಂದ ಬಿದ್ದು ಜಿಲ್ಲಾಧಿಕಾರಿಗಳಿಗೆ ಗಾಯ

ಬನ್ನಿಮಂಟಪ ಸಮಾರಂಭದಲ್ಲಿ ಅಪಘಾತ

ಮೈಸೂರು ೩೦

ಶಮೀ ಪೂಜೆಗಾಗಿ ನೆನ್ನೆ ಶ್ರೀಮನ್ ಮಹಾರಾಜರು ಬನ್ನೀ ಮಂಟಪಕ್ಕೆ ಮೆರವಣಿಗೆಯಲ್ಲಿ ತೆರಳಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಜ॥ ಕೆ. ಮಹಮದ್ ಅಹಮದ್‌ರವರು ಕುದುರೆಯೊಂದರ ಮೇಲೆ ಕುಳಿತು ಮೆರವಣಿಗೆಯಲ್ಲಿ ಭಾಗವಹಿಸಿ, ಬನ್ನೀಮಂಟಪವನ್ನು ತಲಪಿ ವಾಪಸು ಬರುವಾಗ ಕುದುರೆಯು ಅನೆಗ ಬೆದರಿ ಇದ್ದಕ್ಕಿದ್ದಂತೆಯೇ ಹತೋಟಿ ತಪ್ಪಿ, ಜಿಲ್ಲಾಧಿಕಾರಿಗಳನ್ನು ಕೆಳಕ್ಕೆ ಕೆಡವಿ ತಾನೂ ಅವರ ಮೇಲೆ ಬಿದ್ದುದರಿಂದ ಅವರ ಮೂಗು, ಕಿವಿ ಮತ್ತು ತಲೆಗೆ ಪೆಟ್ಟುಬಿದ್ದಿತು ಕಿವಿ ಮತ್ತು ಮೂಗಿನಿಂದ ರಕ್ತವು ಸುರಿಯಿತು. ಅವರ ತೊಡೆಯ ಮೂಳೆ ಮುರಿದಿತು ಅವರನ್ನು ಕೂಡಲೆ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಯಿತು. ಈ ಬೆಳಗ್ಗೆ ಅವರನ್ನು ಎಕ್ಸ್‌ರೇ ಪರೀಕ್ಷೆಗೆ ಒಳಪಡಿಸಲಾಯಿತು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ, ಇತರ ಸಚಿವರುಗಳೂ, ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರೂ ಮತ್ತು ಇತರ ಅಧಿಕಾರಿಗಳೂ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹೆಚ್ ಸಿ ದಾಸಪ್ಪ, ಶ್ರೀ ಹೆಚ್. ಎಂ ಚನ್ನಬಸಪ್ಪ ಮುಂತಾದ ಸಾರ್ವಜನಿಕರೂ ಆಸ್ಪತ್ರೆಗೆ ತೆರಳಿ ಅವರ ದೇಹಸ್ಥಿತಿಯನ್ನು ವಿಚಾರಿಸಿದರು

ಅವರ ಸ್ಥಿತಿಯು ಉತ್ತಮಗೊಳ್ಳುತ್ತಿದೆಯೆಂದು ಹೇಳಲಾಗಿದೆ.

ಮದ್ರಾಸಿನ ಬಳಿ ಫೌಂಟೆನ್ ಪೆನ್ ಕಾರ್ಖಾನೆ

ತಿಂಗಳಿಗೆ ೫೦ ಸಾವಿರ ಫೌಂಟೆನ್ ಪೆನ್ನುಗಳು ಮತ್ತು ೩೦ ಸಾವಿರ ಡಜನ್ ತ್ರಿ ಓಸ್ಸೆಷ ದೌತಿಯ ಕಾಯಿಯನ್ನು ತಯಾರಿಸುವ ಕಾರ್ಖಾನೆಯೊಂದು ಮದರಾಸಿನ ಬಳಿ ಮೊನ್ನೆ ಅಲ್ಲಿನ ಹಣಕಾಸಿನ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂರವರಿಂದ ಆರಂಭಗೊಳಿಸಲ್ಪಟ್ಟಿತು ಬರುವ ವರ್ಷ ಜನವರಿಯಲ್ಲಿ ಪೆನ್ನುಗಳು ತಯಾರಿಸಲ್ಪಡುವುವೆಂದು ಹೇಳಲಾಗಿದೆ

ಕೆ. ಸಿ. ರೆಡ್ಡಿಯವರ ಅವಿರೋಧ ಆಯ್ಕೆ

ಬೆಂಗಳೂರು ೨೯

ಸಂಸ್ಥಾನದ ಶಾಸನ ಸಭೆಯಿಂದ ಭಾರತದ ಹಿರಿಯ ಶಾಸನ ಸಭೆಗೆ, ಶ್ರೀ ತಿಮ್ಮಾಬೋವಿಯವರ ಸ್ಥಾನಕ್ಕೆ ನಡೆಯಬೇಕಾಗಿದ್ದ ಉಪಚುನಾವಣೆಗೆ ಉಮೇದುವಾರಿಕೆ ಅರ್ಜಿಯನ್ನು ಸ್ವೀಕರಿಸಲು ನೆನ್ನೆ ಮಧ್ಯಾಹ್ನ ೩ ಘಂಟೆಯ ವರೆಗೆ ಅವಧಿಯಿತ್ತು. ಅದುವರೆಗೆ ಶ್ರೀ ಕೆ. ಸಿ. ರೆಡ್ಡಿಯವರೊಬ್ಬರದೇ ಅರ್ಜಿಯು ಬಂದಿದ್ದುದರಿಂದ ಅವರೇ ಅವಿರೋಧವಾಗಿ ಚುನಾಯಿತರಾಗಲಿರುವರೆಂದು ಹೇಳಲಾಗಿದೆ

ಇನ್‌ಷೂರ್ ಆದ ನೋಟುಗಳ ಕಳುವು

ಬೆಂಗಳೂರಿನ ಒಬ್ಬ ವರ್ತಕರು ಕಳೆದ ೨೫ ನೇ ತಾ॥ ಬೇರೆ ಊರಿನ ವರ್ತಕರೊಬ್ಬರಿಗೆ ಕಳುಹಿಸಿದ ಎರಡು ಸಾವಿರ ರೂ ನ ಇನ್‌ಷೂರ್ ಕವರು ವಿಳಾಸದಾರರಿಗೆ ತಲಪಿ ಅವರು ಅದನ್ನು ಒಡೆದು ನೋಡಿ ಒಳಗೆ ನೋಟಿನ ಬದಲು ಖಾಲಿ ಕಾಗದವಿದ್ದುದನ್ನು ಕಂಡು ಕೂಡಲೇ ಬೆಂಗಳೂರಿನ ಅಂಚೆ ಕಛೇರಿಗೆ ತಂತಿ ಮೂಲಕ ಸುದ್ದಿ ಕೊಡಲಾಗಿ, ಪೊಲೀಸರಿಗೆ ದೂರು ಕೊಟ್ಟಮೇಲೆ ಅವರು ಸಿಟಿ ಪೋಸ್ಟಾಫೀಸಿನ ರಿಸೀವಿಂಗ್ ಗುಮಾಸ್ತೆ ಪಿ ಎಸ್. ಕೋದಂಡ ರಾಮಯ್ಯ ಎಂಬುವರನ್ನು ಬಂಧಿಸಿ ತನಿಖೆ ನಡೆಸಿದರೆಂದೂ, ಅದರ ಪರಿಣಾಮವಾಗಿ ಬೆಂಗಳೂರಿನ ವರ್ತಕರು ಕಳುಹಿಸಿದ ೧೦೦ ರೂ ನ ಹಲವು ನೋಟುಗಳು ಅವರ ಬಳಿ ಸಿಕ್ಕಿದುವೆಂದೂ ಹೇಳಲಾಗಿದೆ ಅವರು ಕೊಂಡುಕೊಂಡಿದ್ದ ಒಂದು ರೇಡಿಯೋ ಮತ್ತು ಇತರ ಹಲವು ಸಾಮಾನುಗಳೂ ಪತ್ತೆಯಾಗಿರುವುವೆಂದು ತಿಳಿದುಬಂದಿದೆ.

ಮಲಗಿದ್ದವರ ಮೇಲೆ ಮೋಟಾರು ಹರಿಯಿತು

ರಾಜಧಾನಿಯ ಸಂಜಿವರಾಜ ಬಹದ್ದೂರ್ ಛತ್ರದ ಮೈದಾನದಲ್ಲಿ ಮರದ ಕೆಳಗಡೆ ನೆನ್ನೆ ನಿದ್ದೆ ಹೋಗುತ್ತಿದ್ದ ಮುನಿಸಂಜಪ್ಪ ಮತ್ತು ರಾಮಣ್ಣ ಎಂಬುವರಿಬ್ಬರ ಮೇಲೆ ಮೋಟಾರು ಕಾರೊಂದು ಹರಿದು ಅವರಿಬ್ಬರಿಗೂ ಗಾಯವಾಗಿ ಆಸ್ಪತ್ರೆಗೆ ಸಾಗಿಸಲಾಯಿತೆಂದು ವರದಿಯಾಗಿದೆ.

ತಮ್ಮ ಹೆಸರನ್ನಿಡಲು ನೆಹರೂರವರ ನಿರಾಕರಣೆ

ತುಂಗಭದ್ರ ಅಣೆಕಟ್ಟಿನ ಕೆಲಸವು ಮುಗಿದ ಮೇಲೆ ಅದಕ್ಕೆ "ಜವಹರ್ ಸಾಗರ" ಎಂದು ನಾಮಕರಣ ಮಾಡಬೇಕೆಂಬ ಒಗ್ಗೆ ಬಂದ ಒಂದು ಸಲಹೆಯನ್ನು ಪಂಡಿತ ನೆಹರೂರವರು ತಿರಸ್ಕರಿಸಿ, ಅದರಿಂದ ಇಲ್ಲದ ಒಂದು ಅಕ್ರಮ ಪದ್ಧತಿಯನ್ನು ಜಾರಿಗೆ ತಂದಂತಾಗುವುದೆಂದೂ, ಮನುಷ್ಯನು ಸತ್ತ ನಂತರವೇ ಅವನ ಸೇವೆ ಮತ್ತು ದಕ್ಷತೆಗಳ ಬಗ್ಗೆ ಅವನು ಗೌರವಿಸಲ್ಪಡುವುದು ಸಾಧುವೂ ಮತ್ತು ಉಚಿತವೂ ಆದುದೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ.

ಹೆಂಗಸನ್ನು ಕೊಂದು ೨೦ ಸಾವಿರ ರೂ. ಅಪಹಾರ

ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಕಳೆದ ೨೬ ನೇ ತಾ॥ ರಾತ್ರಿಯಲ್ಲಿ ದೊಂತಿ ವೆಂಕಟಪ್ಪಶೆಟ್ಟರ ಪತ್ನಿ ಶ್ರೀಮತಿ ರಾಮಲಕ್ಷ್ಮಮ್ಮನವರ ಮನೆಗೆ ಯಾರೋ ಹೆಂಚು ತೆಗೆದು ನುಗ್ಗಿ ಅವರ ಕತ್ತು ಮತ್ತು ಹೊಟ್ಟೆ ಮೇಲೆ ತೀವ್ರದ ಗಾಯಗಳನ್ನು ಮಾಡಿ, ಕಬ್ಬಿಣದ ಪೆಟ್ಟಿಗೆಯಲ್ಲಿದ್ದ ಸುಮಾರು ೨೦ ಸಾವಿರ ರೂ. ಬೆಲೆಯ ನಗದು ಮತ್ತು ಆಭರಣಗಳನ್ನು ಅಪಹರಿಸಿಕೊಂಡುಹೋಗಿರುವರೆಂದು, ವರದಿಯಾಗಿದೆ. ಪೊಲೀಸರು ಮನೆಯನ್ನು ಶೋಧಿಸಲಾಗಿ, ಮಲಗುವ ಕೋಣೆಯು ಪೂರ್ಣವಾಗಿ ರಕ್ತಮಯವಾಗಿತ್ತೆಂದೂ, ಅಲ್ಲಿ ಮನುಷ್ಯರ ರಕ್ತದ ಹೆಜ್ಜೆ ಗುರುತುಗಳಿದ್ದುವೆಂದೂ ವರದಿಯಾಗಿದೆ ಹತ್ತಿರದಲ್ಲಿ ಒಂದು ಕೊಡಲಿ ಮತ್ತು ಅರ್ಧ ತುಂಡಾದ ಚಾಕು ದೊರೆತುವೆಂದೂ ಹೇಳಲಾಗಿದೆ.

ಪೊಲೀಸರು ಕಬ್ಬಿಣದ ಪೆಟ್ಟಿಗೆಯನ್ನು ಶೋಧಿಸಿದಾಗ ೨೨ ಸಾವಿರ ರೂ. ಬೆಲೆಯ ಒಡವೆಗಳು ದೊರೆತುವೆಂದು ಹೇಳಲಾಗಿದೆ

ಎತ್ತಿನಿಂದ ತಿವಿಯಲ್ಪಟ್ಟು ಮರಣ

ರಾಜಧಾನಿಯ ಸಂತೇಪೇಟೆ ಬಸಪ್ಪನ ಮಯ್ಯ ಚೌಕದಲ್ಲಿ ನೆನ್ನೆ ಸಂಜೆ ಬೇನೇಗೌಡ ಎಂಬಾತನನ್ನು ಒಂದು ದನವು ತಿವಿದ ಪರಿಣಾಮವಾಗಿ ಅವನಿಗೆ ತೀವ್ರ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದು ಈ ಬೆಳಗ್ಗೆ ಮೃತಪಟ್ಟನು

ಸಚಿವರಲ್ಲಿ ನಾಚನಹಳ್ಳಿ ರೈತರ ನಿಯೋಗ

ಮೈಸೂರು ತಾಲ್ಲೂಕು ನಾಚನಹಳ್ಳಿಯ ಕಿಸಾನ್ ಪಂಚಾಯಿತಿಯವರು ನೆನ್ನೆ ಜ॥ ಎಸ್. ನೂರ್ ಹುಸೇನರವರ ನಾಯಕತ್ವದಲ್ಲಿ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ಅರಿಕೆ ಮಾಡಿಕೊಂಡರು. ಸಚಿವರು ಸಾವಧಾನವಾಗಿ ಕೇಳಿ ಸೂಕ್ತ ಉತ್ತರವಿತ್ತು, ಅಲ್ಲಿನ ಗೋಮಾಳವನ್ನು ಇನ್ನು ಕೆಲವು ದಿನಗಳಲ್ಲೇ ರೈತರಿಗೆ ವಾಪಸು ಕೊಡಿಸುವುದಾಗಿ ಭರವಸೆಯಿತ್ತರೆಂದು ಗೊತ್ತಾಗಿದೆ.

○ಲೋಹ ಕೊಳವೆಗಳಿಂದ ಕೂಡಿರುವ ಹೃದಯವುಳ್ಳ ಮಗುವಿಗೆ ಕಪಿಗಳ ಹೃದಯ ಮತ್ತು ಶ್ವಾಸಕೋಶಗಳನ್ನು ಜೋಡಿಸಿ ಸರಿಪಡಿಸಲು ಕೆಲವು ದಿನಗಳಲ್ಲಿ ಸಾಧ್ಯವಾಗಬಹುದೆಂದು ನ್ಯೂಯಾರ್ಕಿನ ವೈದ್ಯರೊಬ್ಬರು ತಿಳಿಸಿರುತ್ತಾರೆ.

ಕ್ರಾಫರ್ಡ್ ಭವನದ ಬಳಿ ವಿದ್ಯಾರ್ಥಿಗಳ ವರ್ತನೆ

ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿಯವರ ಖಂಡನೆ

ಕ್ರಾಫರ್ಡ್ ಭವನದ ಸಮಾರಂಭದ ಪ್ರಸಂಗದಲ್ಲಿ ವಿದ್ಯಾರ್ಥಿ ಪರಿಷತ್ತಿನ ಮೈಸೂರು ಕಾರ್ಯದರ್ಶಿಗಳಾದ ಶ್ರೀ ಎಸ್. ಹನುಮಂತರಾಯರು ಈ ರೀತಿ ಹೇಳಿಕೆಯನ್ನಿತ್ತಿದ್ದಾರೆ:-

ವಿದ್ಯಾಭ್ಯಾಸ ಸುಧಾರಣಾ ಮಹೋತ್ಸವದ ಸಂದರ್ಭದಲ್ಲಿ ನಡೆದ ಪ್ರಸಂಗವು ವಿದ್ಯಾಭ್ಯಾಸದಲ್ಲಿ ಆಸಕ್ತಿಯುಳ್ಳವರೆಲ್ಲರಿಗೂ, ವಿದ್ಯಾರ್ಥಿ ವೃಂದಕ್ಕೂ ಕುಂದು ಬೇಸರವನ್ನುಂಟುಮಾಡಿದೆ. ಈ ರೀತಿಯಾದ ಗಲಭೆಗೆ ಕಾರಣರಾದವರು ಯಾರೇ ಇರಲಿ, ಸಭಾ ಮರ್ಯಾದೆ ಮತ್ತು ಶಿಸ್ತಿಗೆ ಧಕ್ಕೆ ತಂದು ಗೊಂದಲವನ್ನೆಬ್ಬಿಸಿದ ಕೆಲವು ವಿದ್ಯಾರ್ಥಿ ಮಿತ್ರರನ್ನು ಖಂಡಿಸದೆ ವಿಧಿಯಿಲ್ಲ.

ಕನ್ನಡ ಮಾಧ್ಯಮವಾಗಬೇಕೆಂದು ಒತ್ತಾಯಪಡಿಸುವ ಕನ್ನಡ ಅಭಿಮಾನ ಪ್ರಶಂಸನೀಯವಾದರೂ ಅಭಿಪ್ರಾಯವನ್ನು ಸೂಚಿಸುವುದರಲ್ಲಿ ಒಂದು ಶಿಸ್ತಿನ ಅವಶ್ಯಕತೆ ಇದೆ.

ಸ್ವತಂತ್ರ ಭಾರತದಲ್ಲಿ ಶಾಂತಿಯುತವಾಗಿ ಪರಸ್ಪರ ಸಹಕಾರ ಮತ್ತು ಒಮ್ಮತದಿಂದ ನಮ್ಮ ನಾಡನ್ನು ಅತ್ಯಂತ ಸಾಮರ್ಥ್ಯಶಾಲಿ ಹಾಗೂ ವೈಭವಶಾಲಿಯನ್ನಾಗಿ ಮಾಡುವ ಜವಾಬ್ದಾರಿ ಎಲ್ಲರ ಮೇಲೂ ಇರುವಾಗ ಈ ರೀತಿಯಾದ ಆಂದೋಳನಾತ್ಮಕ ಪ್ರವೃತ್ತಿ ಎಲ್ಲೇ ಆಗಲಿ ದೇಶಘಾತುಕವಾದದ್ದು.

ರಾಜಕೀಯದಲ್ಲಿ ಏಕಾಏಕಿಯಾಗಿ ತಮ್ಮ ಪಕ್ಷದ ಸ್ವಾರ್ಥ ಪ್ರಚಾರಕ್ಕೆ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಉಪಯೋಗಿಸಿಕೊಂಡು ದಕ್ಷತೆ, ಶಿಸ್ತು ಸಕ್ರಮ ಇತ್ಯಾದಿಗಳಂಥ ಅವರಿಗೆ ವಿದ್ಯಾಭ್ಯಾಸದ ಮಾರ್ಗದಲ್ಲಿ ತೊಂದರೆ ಪಡಿಸುವ ರಾಜಕೀಯ ಮುಖಂಡರ ಮಾತಿಗೆ ವಿದ್ಯಾರ್ಥಿ ವೃಂದ ಮೋಸಹೋಗದಿರಲಿ.

ಈ ಮಹೋತ್ಸವದಲ್ಲಿ ವಿದ್ಯೆಗೆ ಅಧಿದೇವತೆಯಾದ ಶ್ರೀ ಸರಸ್ವತೀ ದೇವಿಯ ಚಿತ್ರಪಟವನ್ನಿಟ್ಟಿದ್ದರೂ ಅದಕ್ಕೆ ಒಂದು ಹೂವಿನ ಹಾರವನ್ನು ಕೂಡ ಹಾಕದೆ ಕಾರ್ಯಕ್ರಮ ಪ್ರಾರಂಭಿಸಿ ಮುಕ್ತಾಯ ಮಾಡಿದ ಅಪರಾಧ ಅಕ್ಷಮ್ಯವಾದದ್ದು ಮತ್ತು ಶೋಚನೀಯವಾದದ್ದು.

ಕೊನೆಯದಾಗಿ ಮಾನ್ಯ ಮಂತ್ರಿಗಳು ಶಾಂತವಾಗಿ ಸಮಾಧಾನದಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದು ವಿದ್ಯಾರ್ಥಿಗಳ ವ್ಯಥಾ ಕೋಪಕ್ಕೆ ಒಳಗಾಗದೆ ಇದ್ದಿದ್ದರೆ ಕಾರ್ಯಕ್ರಮವು ಇನ್ನೂ ಯಶಸ್ವಿಯಾಗಿ ನಡೆದು ಎಲ್ಲರ ಶ್ಲಾಘನೆಗೆ ಪಾತ್ರರಾಗುತ್ತಿದ್ದುದರಲ್ಲಿ ಸಂದೇಹವಿಲ್ಲ. ಅಂತೂ ವಿದ್ಯಾರ್ಥಿಗಳಾದ ನಾವು ಮುಂದಿನ ನಮ್ಮ ಭಾರತದ ಕಣ್ಮಣಿಗಳಾಗಿರುವಾಗ ನಮ್ಮಲ್ಲಿ ಹೆಚ್ಚಿನ ಶಿಸ್ತು, ಸಂಯಮ ಇದ್ದರೆ ವಿಶ್ವದಲ್ಲಿ ನಮ್ಮ ರಾಷ್ಟ್ರದ ಸ್ಥಾನ ಉನ್ನತವಾದೀತು.

SRI GAYATHRI

TALKIES

On 30-9-52 :: Daily 2 Shows

THE STORY OF ROMMEL

The Youngest German Field-Marshal in the WORLD WAR II

IN

DESERT FOX

With :- James Mason, Cedric Hardwicke

ರಾಜಪ್ರಮುಖರುಗಳು ಬಹು ಕಾಲ ಇರುವುದಿಲ್ಲ

ಭಾರತದ ಪ್ರಧಾನಿ ಪಂ|| ನೆಹರೂರವರು ಮೊನ್ನೆ ಹೈದರಾಬಾದಿನ ಪತ್ರಿಕಾ ಪ್ರತಿನಿಧಿಗನ್ನುದ್ದೇಶಿಸಿ ಭಾಷಣಮಾಡುತ್ತಾ ಭಾರತದಲ್ಲಿ ಕೇವಲ ಐದು ಅಥವಾ ಆರು ಮಂದಿ ರಾಜಪ್ರಮುಖರಿರುವರೆಂದೂ, ರಾಜಪ್ರಮುಖತ್ವವು ಬಹಳಕಾಲ ಇರದೆ ಬೇಗ ಅಳಿಯುವ ಸಂಭವವಿರುವುದೆಂದೂ ಹೇಳಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಎಸ್. ೬ ಬೇಲೂರಯ್ಯ ನಾಗಸ್ವರ. ಮಧ್ಯಾಹ್ನ ೧.೪೦ ಪಿಟೀಲು ೨ ವನಿತಾ ವಿಹಾರ, ಸ್ತ್ರೀಯರ ಕಾರ್ಯಕ್ರಮ. ಸಂಜೆ ೫.೪೦ ಎಸ್. ೬ ಬೇಲೂರಯ್ಯ ನಾಗಸ್ವರ ೬.೧೦ ಬಾಲ ಜಗತ್, ಮಕ್ಕಳ ಕಾರ್ಯಕ್ರಮ ೭ ಅಬ್ದುಲ್ ಗಫೂರ್ ಹಿಂದಿ ಗೀತೆ. ೭.೩೦ ಜನರಂಜನಿ ೭.೪೦ ಕನ್ನಡದಲ್ಲಿ ಭಾಷಣ ೮ ಬಿ ಎಸ್ ರಾಜಯ್ಯಂಗಾರ್ ಸಂಗೀತ ೯.೧೫ ಕನ್ನಡ ಗೀತೆಗಳು. ೯.೪೦ ನಿಮ್ಮ ಮೆಚ್ಚಿನ ಗೀತೆಗಳು

ಮನೆ ಬಿಕರಿಗಿದೆ

ಡಿ ಸುಬ್ಬಯ್ಯ ರಸ್ತೆಯ ಸಾಧ್ವಿ ಆಫೀಸ್ ಬಲ ಭಾಗದ ರಸ್ತೆಯಲ್ಲಿ 320 ನೇ ನಂಬರು ಮನೆ ಬಿಕರಿಗಿದೆ. ದೀಪ, ನಲ್ಲಿ ಮುಂತಾದ ಸಕಲ ಸೌಕರ್ಯಗಳಿಂದ ಕೂಡಿದೆ. ಬೆಲೆ 9,000 ರೂ ವಿವರಗಳಿಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಅಂಬಿಕಾ ಸ್ಟೋರ್ಸಿನಲ್ಲಿ ವಿಚಾರಿಸಿರಿ

ವಿದ್ಯಾರ್ಥಿಗಳಿಗೆ ರಚನಾತ್ಮಕ ಶಿಕ್ಷಣದ ಪಾಠ

ಪ್ರೌಢ ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ದೇಹಶ್ರಮದ ಘನತೆಯ ಭಾವನೆಯು ಬೆಳೆಯುವಂತೆ ಮಾಡಲು ರಚನಾತ್ಮಕ ಕೆಲಸದಲ್ಲಿ ಅವರು ತೊಡಗುವಂತೆ ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ಸಿದ್ಧಗೊಳಿಸುತ್ತಿರುವರೆಂದು ವರದಿಯಾಗಿದೆ. ವಿದ್ಯಾಭ್ಯಾಸದ ಅಂಗವಾಗಿ ಈ ದೇಹಶ್ರಮಪಡುವುದೂ ಅವಶ್ಯಕವೆಂಬುದನ್ನು ಸೂಚಿಸಲು ಸಂಸ್ಥಾನ ಸರ್ಕಾರಗಳೂ ತಕ್ಕ ಯೋಜನೆಗಳನ್ನು ತಯಾರಿಸುವಂತೆ ಸೂಚಿಸಲಾಗಿದೆ

ಉಪನಯನ

ಪ್ರಜಾಮಂಡಲಿಯ ಸಂಚಾಲಕರಾದ ಶ್ರೀ ವೆಂಕಟಸುಬ್ಬಯ್ಯಶರ್ಮರವರು ತಮ್ಮ ಕುಮಾರ ವಾಮನಮೂರ್ತಿಗೆ ಮೊನ್ನೆ ದಿನ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207. ಸಯ್ಯಾಜಿರಾವ್ ರೋಡ್,

ಮೈಸೂರು

ಪಿರಿಯಾಪಟ್ಟದ ತಾಲ್ಲೂಕಿನ ಕುಂದು ಕೊರತೆಗಳು

ಕಳೆದ ವಾರ ಶಿವಿನ್ನೂ ಮತ್ತು ಗೃಹ ಸಚಿವರು ಪಿರಿಯಾಪಟ್ಟಣಕ್ಕೆ ಭೇಟಿ ಇತ್ತಾಗ, ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಪಿ. ವೆಂಕಟಸುಬ್ಬಯ್ಯನವರು ಅವರಲ್ಲಿ ಈ ಕೆಳಗೆ ಕಂಡಂತೆ ಅರಿಕೆ ಮಾಡಿಕೊಂಡರು:—

ಪಿರಿಯಾಪಟ್ಟಣದ ತಾಲ್ಲೂಕು ಎಲ್ಲಾ ವಿಧದಲ್ಲಿಯೂ ಹಿಂದೆ ಉಳಿದಿದೆ. ರೈಲಿಲ್ಲ, ಶಾಲೆಯಿಲ್ಲ, ನೀರಾವರಿ ಸೌಕರ್ಯ ಕಮ್ಮಿ. ಅನೇಕ ಕೆರೆಗಳಲ್ಲಿ ಹೂಳು ತುಂಬಿಹೋಗಿದೆ. ಈ ವರ್ಷ ಎಲ್ಲ ಕೆರೆಗಳೂ ಬತ್ತಿಹೋಗಿವೆ. ಬುಲ್‌ಡೋಜರ್ ಮೂಲಕ ಹೂಳನ್ನು ತೆಗೆಸಿ ಕೆರೆಗಳ ಕೋಡಿಯನ್ನು ಅರ್ಧ ಅಡಿಯಷ್ಟು ಎತ್ತರಿಸಬೇಕು

ಪೂರ್ವದಂತೆ ರೈತರು ಕಡ್ಡಾಯವಾಗಿ ಮಟ್ಟಿ ಕಾಮಗಾರಿ ಮಾಡಿ ಪಾಠವಾರು ತೆಗೆದುಕೊಳ್ಳಲು ಏರ್ಪಡಿಸಬೇಕು. ಒಂದು ಕೆರೆಯಿಂದ ಇನ್ನೊಂದಕ್ಕೆ ಹೋಗುವ ಫೀಡರ್ ಕಾಲುವೆಗಳನ್ನು ದುರಸ್ತು ಮಾಡಿಸಬೇಕು. ನವಿಲೂರು ಮತ್ತು ಕೋಗಿಲವಾಡಿ ಯೋಜನೆಗಳನ್ನು ಕೂಡಲೇ ತೆಗೆದುಕೊಳ್ಳಬೇಕು. ೫೦,೦೦೦ ರೂ. ವಿಶೇಷ ಗ್ರ್ಯಾಂಟನ್ನು ಕೊಟ್ಟು ರೈತರಿಗೆ ಸಹಾಯ ಮಾಡಬೇಕು. ಸುಲಭ ದರದಲ್ಲಿ ಟ್ರಾಕ್ಟರುಗಳಿಂದ ಉಳುವ ಸೌಕರ್ಯವನ್ನು ಒದಗಿಸಬೇಕು. ಇಲ್ಲಿನ ರೈತರಿಗೆ ಜೋಳವನ್ನು ತಿನ್ನುವ ಅಭ್ಯಾಸವಿಲ್ಲದಿರುವುದರಿಂದ ವಾರಕ್ಕೆ ಒಂದು ರೂಪಾಯಿಗೆ ರಾಗಿಯಾದರೂ ಸಿಗುವಂತೆ ಮಾಡಬೇಕು

ಬಹಿರಂಗ ಸಭೆ

ರಾಜಧಾನಿಯ ಆರ್. ಎಸ್. ಎಸ್. ಸಂಸ್ಥೆಯು ಶ್ಯಾಮ ನಿವಾಸನಾ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ.

ಸುಸಮಯ : ಸುಲಭ ಬೆಲೆ

ಮೈಸೂರು ಸಿಲ್ಕ್ ಫಿಲೇಚರ್ ಕಂಪೆನಿ

ಅಪ್ಪಟ ಸಿಲ್ಕ್ ಸೀರೆಗಳಿಗೆ

ವಿಚಾರಿಸಿ

ಕೆ. ಎಸ್. ಸತ್ಯನಾರಾಯಣರಾವ್,

ಜವಳಿ ವ್ಯಾಪಾರಿಗಳು,

೨೦೪, ಸಯ್ಯಾಜಿರಾವ್ ರಸ್ತೆ,

(ಚಾಮುಂಡೇಶ್ವರಿ ಸಿನಿಮಾ ಕಟ್ಟಡ)

ಮೈಸೂರು

ಮೈಸೂರು ನಗರದ ಲೈಸೆನ್ಸಿಂಗ್ ಆಫೀಸರರ ಕಛೇರಿ

ಪ್ರಕಟಣೆ

2.10.1952 ನೇ ತಾರೀಕು ಗುರುವಾರ ಮಹಾತ್ಮಗಾಂಧಿಯವರ ಜಯಂತಿ ಪ್ರಯುಕ್ತ ಮೈಸೂರು ನಗರದ ಎಲ್ಲ ಲೈಸನ್ಸ್ ದಿಪೋಗಳೂ ಮತ್ತು ವೆಂಡರ್ಸ್ ಸ್ಟ್ ಗೋಡೌನುಗಳೂ ಮುಚ್ಚಲ್ಪಡುವುವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ರುಜು)ಹೆಚ್.ಜಿ ವಿಜಯರಾಘವರೆಡ್ಡಿ,

ಲೈಸನ್ಸಿಂಗ್ ಆಫೀಸರ್.

VISIT !

CANARA JEWELLERS

(G. H. School Road, Mangalore)

IN DASARA EXHIBITION,

AT BLOCK 'D', STALL No. 22

For All Sovereign Gold Jewellery

in Excellent Mangalore Designs

Expert Workmanship

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

1-10-52 ನೇ : ಬುಧವಾರದಿಂದ : ಅಮೋಘ ಪ್ರಾರಂಭ

★ ಸೌದಾಮಿನಿ ★

(ತಮಿಳು)

ಪಾತ್ರ:— ಎಂ ಕೆ ರಾಧಾ, ಕಣ್ಣಾಂಬ, ನಾಗೇಶ್ವರರಾವ್, ಟಿ. ಆರ್ ರಾಮಚಂದ್ರ ಮುಂತಾದವರು

ಮಹಾತ್ಮರ ಉಪದೇಶ ! 92 ವರ್ಷದ ಚಾರಿತ್ರೆ !! ಖಾತರಿ ಗುಣ !

ಮೈಸೂರು ಅರಮನೆಯ ರಾಜ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 92 ವರ್ಷದಿಂದ ಪ್ರಖ್ಯಾತವಾಗಿರುವ

ಎ. ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಈ ಸಿದ್ಧೌಷಧವು:—

★ ಬಹಿಷ್ಠ ಸಂಬಂಧದ ಹೊಟ್ಟೆ ನೋವನ್ನು ನಿರ್ಮೂಲ ಮಾಡುತ್ತದೆ.

★ ಕ್ರಮತಪ್ಪಿ ಬಹಿಷ್ಠೆಯಾಗುವುದನ್ನು ಕ್ರಮಪಡಿಸುತ್ತದೆ

★ ಗರ್ಭ ಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ.

★ ಬಂಜೆತನವನ್ನು ಕೊನೆಗಾಣಿಸಿ.

ಸಂತಾನ ಕೊಡುತ್ತದೆ.

ಕ್ರಯ 1 ಸೆಟ್ 5 ರೂ ಹೊಸ ಕ್ಯಾಟಲಾಗು ಉಚಿತ

ವಿವರಗಳಿಗೆ.- ಎ ರಾಮಸ್ವಾಮಿ ಅಯ್ಯರ್ ಸನ್,

628, "ಸಂತಾನ ಸಿಂಧೂರ" ಆಫೀಸ್, ನಾರಾಯಣ ಶಾಸ್ತ್ರಿ ರಸ್ತೆ

ದಕ್ಷಿಣ ಕ್ರಾಸ್, (ಕೃಷ್ಣಾ ರೈಸ್ ಮಿಲ್ ಹತ್ತಿರ,) ಮೈಸೂರು.

Edited, Printed and Published by A. R. Nagarajan at Sadhvi Press, D. Subbiah Road, Mysore

ಟೆಲಿಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧-೧೦-೧೯೫೨ [ಸಂಚಿಕೆ ೫೫

೮೦ ಕೋಟಿ ವೆಚ್ಚದಲ್ಲಿ ಕಬ್ಬಿಣದ ಕಾರ್ಖಾನೆ

...ಂಧಿಜಿಯವರ ಜಯಂತಿ

ಮೈಸೂರು ೧

ಮೈಸೂರು ನಗರ ಕಾಂಗ್ರೆಸ್ ಸಮಿ...ತಿ ಆಶ್ರಯದಲ್ಲಿ ನಾಳೆ ದಿನ ಮಹಾತ್ಮ ಗಾಂಧಿಯವರ ಜಯಂತಿ ಉತ್ಸವ ನಡೆಯುವುದು. ಬೆಳಿಗ್ಗೆ ೯ ಗಂಟೆಗೆ ...ಹಾಲ್ ಮೈದಾನದಲ್ಲಿ ಧ್ವಜ ವಂ... ನಂತರ ಪೌರಹಾಲಿನೊಳಗೆ ಪ್ರಾ...ನ ಮತ್ತು ನೂಲು ತೆಗೆಯುವುದು ...ನೆರವೇರುವುವು. ಸಂಜೆ ೬ ಗಂಟೆಗೆ ...ರ್ಥನಾ ಸಭೆಯು ಏರ್ಪಾಡಾಗಿದೆ ...ದನ್ನು ವಸ್ತು ಪ್ರದರ್ಶನ ಸಮಿತಿ ಆ...ವರಣದಲ್ಲಿ ನಾಳೆ ಗಾಂಧಿ ಜಯಂತಿ ಕಾ...ರ್ಯಕ್ರಮವು ಏರ್ಪಾಡಾಗಿದೆ. ಬೆಳಿಗ್ಗೆ ೮ ಗಂ...ಟೆಗೆ ಜೀವಣ್ಣಾರಾಯನ ಕಟ್ಟೆಯಲ್ಲಿ ಹಿರಿಯ ಶಾಸನಸಭಾ ಸದಸ್ಯರಾದ ಶ್ರೀ ಪಿ. ...ರಾಮಯ್ಯನವರಿಂದ ರಾಷ್ಟ್ರ ಧ್ವಜಾರೋಹಣ, ಸಂಜೆ ೫-೩೦ ರಿಂದ ೭|| ...ಗ ಜೀವಣ್ಣಾರಾಯನ ಕಟ್ಟೆಯ ರಂಗ...ಮಂಟಪದಲ್ಲಿ ಪ್ರಾರ್ಥನಾ ಸಭೆ ಇವು...ಗಳು ನಡೆಯುವುವು. ಸಂಜೆಯ ಕಾರ್ಯಕ್ರಮಕ್ಕೆ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂ...ರ್ತಿರಾಯರು ಅಧ್ಯಕ್ಷತೆ ವಹಿಸುವರು.

ಚೀಣದ ಜನತಾ ಪ್ರಭುತ್ವದ ವಾರ್ಷಿಕೋತ್ಸವ

ಮೈಸೂರಿನ ಭಾರತ-ಚೀಣಾ ಸ್ನೇಹ ...ಸಂಘದ ಆಶ್ರಯದಲ್ಲಿ ಈ ಸಂಜೆ ೬ಕ್ಕೆ ...ಟೌನ್‌ಹಾಲ್ ಮೈದಾನದಲ್ಲಿ ಚೀಣಾ ಜ...ನತಾ ಪ್ರಭುತ್ವದ ಮೂರನೇ ವಾರ್ಷಿ...ಕೋತ್ಸವ ದಿನಾಚರಣೆಯನ್ನು ನೆರವೇ...ರಿಸಲಾಗುವುದು. ಶ್ರೀ ತಗಡೂರು ರಾ...ಮಚಂದ್ರ ರಾಯರು ಅಧ್ಯಕ್ಷತೆ ವಹಿಸು...ವರು. ಜಂಬೂರು ಪತ್ರಿಕೆ ಸಂಪಾದಕ... ಡಾ|| ಅಹಮದ್ ಉಲ್ಲಾಖಾನ್ ಮು...ಮ್ತಾದ ಇತರರು ಭಾಷಣ ಮಾಡುವರು.

...ಮದ್ರಾಸಿಗೆ ಕನ್ನಂಬಾಡಿ ನೀರು

...ವ ಮದ್ರಾಸಿಗೆ ನೆಹರೂರವರ ಸೂಚನೆ...ಯಂತೆ ಸರ್ಕಾರ, ಮೈಸೂರು ಸರ್ಕಾರದವರು ...ಕೃಷ್ಣರಾಜ ಸಾಗರದಲ್ಲಿ ಶೇಖರಣೆಯಾ...ಗಿರುವ ನೀರನ್ನು ಮದ್ರಾಸು ಮೈಸೂರು ...ಒಪ್ಪಂದದಂತೆ ೧ ಸಾವಿರ ಕೋಟಿ ಘನ ...ಅಡಿಯಷ್ಟು ನೀರಿನ ಪೈಕಿ ಅರ್ಧ ಭಾಗ...ವನ್ನು ಒದಗಿಸಿ, ಇನ್ನೂ ಹೆಚ್ಚಾಗಿ ನೀ...ರನ್ನು ಬಿಡಲಿರುವರೆಂದೂ, ಈಗಾಗಲೇ ...ಜಲಾಶಯದಲ್ಲಿ ನೀರು ೮೪ ಅಡಿಗೆ ಇಳಿ...ದು ಹೋಗಿರುವುದರಿಂದ, ಇದೇ ರೀತಿ ...ಮುಂದುವರಿದರೆ ೮೦ ಸಾವಿರ ಎಕರೆ ಪ್ರ...ದೇಶದಲ್ಲಿರುವ ಕಬ್ಬು ಮತ್ತು ಭತ್ತದ ...ಬೆಳೆಯು ಪೂರ್ಣವಾಗಿ ಒಣಗುವ ಸಂಭ...ವವಿರುವುದೆಂದೂ ವರದಿಯಾಗಿದೆ.

...ಬಸ್ಸಿನವರಿಗೆ ೩ ತಿಂಗಳು ಕಾಲಾವಕಾಶ

...ಸಂಸ್ಥಾನದ ೮ರು ಮಾರ್ಗಗಳಲ್ಲಿ ಇಂ...ದಿನಿಂದ ಸರ್ಕಾರಿ ಬಸ್ಸುಗಳನ್ನೇ ಓಡಿಸು...ವ ಕಾರ್ಯಕ್ರಮವನ್ನು ಸರ್ಕಾರದವರು ೩ ...ತಿಂಗಳ ವರೆಗೆ ಮುಂದೆ ಹಾಕಿರುವರೆಂ...ದು ವರದಿಯಾಗಿದೆ. ಬಸ್ಸುಗಳ ಮಾಲೀ...ಕರ ಮನವಿಯಂತೆ ಅವರಿಗೆ ೩ ತಿಂಗಳ ...ಅವಧಿಯಿತ್ತು, ಅಷ್ಟರೊಳಗೆ ಅವರು ...ಬೇರೆ ಮಾರ್ಗಗಳಲ್ಲಿ ತಮ್ಮ ಸ್ವಂತ ಬ...ಸ್ಸುಗಳನ್ನು ಓಡಿಸಲು ಅರ್ಜಿ ಹಾಕಬ...ಹುದೆಂದು ಸರ್ಕಾರದವರು ಸೂಚನೆಯಿ...ತ್ತಿರುವರೆಂದು ಹೇಳಲಾಗಿದೆ. ಸದರಿ ...೮ ಮಾರ್ಗಗಳಲ್ಲಿ ಮಾಮೂಲಿನಂತೆ ...ಖಾಸಗಿ ಬಸ್ಸುಗಳು ಹೋಗುವುವು.

ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆ ವಾಪಸಾಗಲಿ

ರೇಷ್ಮೆ ಕಾರ್ಖಾನೆಯವರ ಸಂಘದ ಸಭೆಯಲ್ಲಿ ನಿರ್ಣಯ

ಮೈಸೂರು ೧

ನಗರದ ರೇಷ್ಮೆ ಕಾರ್ಖಾನೆಯವರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯೊಂದು ನೆನ್ನೆ ಟೌನ್‌ಹಾಲ್ ಮೈದಾನದಲ್ಲಿ ನಡೆಯಿತು. ಮೈಸೂರಿನ ಹಿರಿಯ ಶಾಸನಸಭೆಯ ಸಾಗರದ ಸದಸ್ಯರಾದ ಶ್ರೀ ಎಸ್. ಗೋಪಾಲಗೌಡರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಾ. ಸು. ಕೃಷ್ಣಮೂರ್ತಿ, ಎಂ. ಆರ್. ಸಿ. ಬಸಪ್ಪ, ಕೋದಂಡರಾಮಪಿಳ್ಳೆ, ಡಾ|| ಮೀರ್ ನೂರ್ ಹುಸೇನ್ ಮತ್ತು ಡಾ|| ಬಿ. ಜಿ. ದಾಸ್‌ರವರು ಮಾತನಾಡಿ ಸರ್ಕಾರದ ರೀತಿ ನೀತಿಗಳನ್ನು ಟೀಕಿಸಿದರು.

ಸಂಸ್ಥಾನದಲ್ಲಿ ಆಹಾರದ ಪಡಿತರವನ್ನು ತೆಗೆದಿರುವುದರಿಂದ ಜನರಿಗೆ ಡಿಪೋಗಳಲ್ಲಾಗಲಿ ಪೇಟೆಯಲ್ಲಾಗಲಿ ಒಳ್ಳೆಯ ಆಹಾರ ಧಾನ್ಯವು ದೊರೆಯದೆ ಡಿಪೋಗಳಲ್ಲಿ ಹುಳುಬಿದ್ದಿರುವ ಆಹಾರವು ದೊರೆಯುತ್ತಿರುವುದರಿಂದಲೂ, ಅದನ್ನು ತಪ್ಪಿಸಿ ಚೆನ್ನಾಗಿರುವ ಧಾನ್ಯವನ್ನು ಒದಗಿಸಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು. ಸಂಸ್ಥಾನದ ಕ್ಷಾಮಪೀಡಿತ ಪ್ರದೇಶಗಳಲ್ಲಿ ನೊಂದವರಿಗೆ ಧಾನ್ಯವನ್ನು ಅರ್ಧ ಬೆಲೆಯಲ್ಲಿ ಕೊಡುವಂತೆ ಸರ್ಕಾರವನ್ನು ಕೋರಲಾಯಿತು. ವಿವಿಧ ಕ್ಷೇತ್ರಗಳಲ್ಲಿ ದುಂದಾಟ ತೆರಿಗೆ ವಿಧಾಯಕವಾಗುವುದನ್ನು ತಪ್ಪಿಸಿ ಒಂದೇ ಕಡೆ ವಿಧಿಸುವಂತೆ ಸರ್ಕಾರ ಮಾಡಬೇಕೆಂದೂ, ಕ್ರಾಫರ್ಡ್ ಭವನದಲ್ಲಿ ಕಳೆದ ೨೬ ನೇ ತಾ|| ನಡೆದ ವಿದ್ಯಾ ಸುಧಾರಣಾ ಸಮಿತಿ ಸಮಾರಂಭದ ದಿನ ದಸ್ತಗಿರಿಯಾಗಿದ್ದ ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳಬೇಕೆಂದೂ, ಇತರ ಪ್ರಾಂತಗಳಂತೆ ಮೈಸೂರು ಸರ್ಕಾರದವರೂ ಸಹಾ ಕ್ಷಾಮ ಪರಿಹಾರಾರ್ಥವಾಗಿ ದೀರ್ಘಾವಧಿಯ ಸಾರ್ವಜನಿಕ ಸಾಲವನ್ನು ಎತ್ತಬೇಕೆಂದೂ ಕೋರುವ ನಿರ್ಣಯಗಳಾದುವು.

೧೬ ನೇ ತಾ|| ಕೃಷ್ಣರಾಜ ಒಡೆಯರ ಪ್ರತಿಮೆಯ ಅನಾವರಣ

ರಾಜಧಾನಿಯ ಬ್ಯಾಂಕ್ ಹೌಸ್ ಬಜಾರ್ ಬಳಿ ನಿರ್ಮಿಸಲ್ಪಟ್ಟಿರುವ ಮಂಟಪದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರತಿಮೆಯ ಅನಾವರಣ ಮಹೋತ್ಸವವನ್ನು ಮಾಜಿ ದಿವಾನರಾದ ಸರ್ ಎಂ. ವಿಶ್ವೇಶ್ವರಯ್ಯನವರು ೧೬ ನೇ ತಾ|| ಗುರುವಾರ ನೆರವೇರಿಸುವರು.

ಆಸ್ಪತ್ರೆಗೆ ಮಹಾರಾಜರ ಭೇಟಿ

ಜಿಲ್ಲಾಧಿಕಾರಿಗಳ ಸ್ಥಿತಿ ಉತ್ತಮ

ಮೈಸೂರು ೧

ಮೊನ್ನೆ ಜಂಬೂ ಸವಾರಿ ಮೆರವಣಿಗೆ ಸಂಬಂಧದಲ್ಲಿ ಗಾಯಗೊಂಡ ಜಿಲ್ಲಾಧಿಕಾರಿ, ಜ|| ಮಹಮದ್ ಅಹಮದ್‌ರವರು ಉತ್ತಮಗೊಳ್ಳುತ್ತಿರುವರು. ಅವರಿಗೆ ಯಾತನೆಯು ಕಾಣದಂತೆ ಇಂಜಕ್ಷನ್ ಕೊಡಲಾಗಿದೆ. ನೆನ್ನೆ ಸಂಜೆ ಶ್ರೀಮನ್ ಮಹಾರಾಜರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಭೇಟಿಯಿತ್ತಿದ್ದರು. ಶ್ರೀಮನ್ ಮಹಾರಾಜರೊಡನೆ ಜಿಲ್ಲಾಧಿಕಾರಿಗಳು ಸ್ವಲ್ಪ ಹೊತ್ತು ಮಾತನಾಡಿದರು. ನಂತರ ಪ್ರಭುಗಳು ಅವರ ಕುಟುಂಬದವರನ್ನು ಮಾತನಾಡಿಸಿ ಅವರಿಗೆ ಧೈರ್ಯ ಹೇಳಿದರಲ್ಲದೆ, ಜಿಲ್ಲಾಧಿಕಾರಿಗಳು ಶೀಘ್ರವಾಗಿ ಗುಣ ಹೊಂದುವ ಬಗ್ಗೆ ವೈದ್ಯರುಗಳು ಶ್ರದ್ಧೆವಹಿಸಬೇಕೆಂದು ಸೂಚಿಸಿದರು. ಆಸ್ಪತ್ರೆಯ ವೈದ್ಯರುಗಳಾದ ಡಾ|| ವಿ. ಆರ್. ನಾಯ್ಡು, ಆರ್. ಎಂ. ಓ. ರಾಜಣ್ಣ ಮತ್ತು ಶ್ರೀ ಆದಿಕೇಶವಲುರವರು ಚಿಕಿತ್ಸೆ ನಡೆಸುತ್ತಿರುವರು.

ಮಿಲ್ಲು ಸೀರೆಗಳಿಗೆ ಬಣ್ಣ ಹಾಕಲು ಪ್ರತಿಬಂಧಕ

ಕೈಮಗ್ಗದ ಕೈಗಾರಿಕೆಗೆ ರಕ್ಷಣೆ ಕಲ್ಪಿಸುವ ಸಲುವಾಗಿ ಕೇಂದ್ರ ಸರ್ಕಾರದವರು ಬರುವ ತಿಂಗಳು ೧ ನೇ ತಾರೀಖಿನಿಂದ ಗಿರಣಿಗಳಲ್ಲಿ ತಯಾರಾಗುವ ಸೀರೆಗಳಿಗೆ ಬಣ್ಣ ಹಾಕಬಾರದೆಂದು ಪ್ರತಿಬಂಧಿಸಲಿರುವರೆಂದೂ ಮತ್ತು ದೊಡ್ಡ ಪನ್ನದ ಮಗ್ಗಗಳಿರುವ ಗಿರಣಿಗಳಲ್ಲಿ ಶೇ|| ೮೦ ರಷ್ಟು ಮಗ್ಗಗಳನ್ನು ಪಂಚೆ ಮತ್ತು ಸೀರೆಗಳನ್ನೇ ತಯಾರಿಸಲು ಉಪಯೋಗಿಸಬೇಕೆಂದು ಮಾಡಿದ್ದ ಆಜ್ಞೆಯನ್ನು ವಾಪಸು ತೆಗೆದುಕೊಳ್ಳುವರೆಂದೂ ಹೇಳಲಾಗಿದೆ.

ರಾಜಧಾನಿಯಲ್ಲಿ ೮೫ ಸೆಂಟು ಮಳೆ

ರಾಜಧಾನಿಯಲ್ಲಿ ನೆನ್ನೆ ರಾತ್ರಿ ೮೫ ಸೆಂಟು ಮಳೆಯಾಗಿರುತ್ತದೆ.

○ ಕಳೆದ ೨೬ನೇ ತಾರೀಖು ಕ್ರಾಫರ್ಡ್ ಭವನದ ಬಳಿ ಬಂಧಿಸಲ್ಪಟ್ಟ ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಯ ವಿಚಾರಣೆಯನ್ನು ಇದೇ ೧೦ ನೇ ತಾರೀಕಿಗೆ ಮುಂದುವರಿಸಲಾಗಿದೆ.

೫೩ನೇ ಇಸವಿಯಲ್ಲಿ ಯಂತ್ರ ಸಾಮಗ್ರಿ ಕಾರ್ಖಾನೆ ಆರಂಭ

ಕೇಂದ್ರ ಮಂತ್ರಿ ಕೆ. ಸಿ. ರೆಡ್ಡಿಯವರ ಹೇಳಿಕೆ

ಸ್ವಂ. ಸು. ಫೋನ್] ಬೆಂಗಳೂರು ೧

ಇಲ್ಲಿ ಇಂದು ಆ|| ಭಾ|| ಯಂತ್ರ ಸಾಮಗ್ರಿಗಳ ತಯಾರಿಕಾಗಾರರ ಸಂಘದ ವಾರ್ಷಿಕೋತ್ಸವವನ್ನು ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಆರಂಭಗೊಳಿಸುತ್ತಾ, ಬರುವ ವರ್ಷ ಜಾಲಹಳ್ಳಿಯಲ್ಲಿ ಯಂತ್ರ ಸಾಮಗ್ರಿಗಳ ತಯಾರಿಕಾ ಕಾರ್ಖಾನೆಯು ಕೆಲಸವು ಉಪಕ್ರಮಿಸುವುದೆಂದು ತಿಳಿಸಿದರು. ಅವರಲ್ಲಿ ಬರುವ ವರ್ಷ ೩೩ ಜನ ವಿದೇಶೀಯ ಮುಖ್ಯ ಇಂಜನಿಯರುಗಳು, ೧೩೩ ಭಾರತೀಯ ಇಂಜನಿಯರುಗಳಿರುವರೆಂದೂ ಹೇಳಿದರು. ಕಾರ್ಖಾನೆಯು ಪೂರ್ತಿಯಾಗಿ ಕೆಲಸ ಮಾಡುವಾಗ ೭೧ ವಿದೇಶೀಯರೂ ೭೮೫ ಭಾರತೀಯ ಟೆಕ್ನಿಷಿಯನ್ನುಗಳೂ ಇರುವರೆಂದೂ ಅವರು ತಿಳಿಸಿದರು.

ವರ್ಷಕ್ಕೆ ೩೫೦ ಸಾವಿರ ಟನ್ ಕಚ್ಚಾ ಕಬ್ಬಿಣವನ್ನು ತಯಾರಿಸುವ ಕಬ್ಬಿಣದ ಕಾರ್ಖಾನೆಯೊಂದನ್ನು ಭಾರತ ಸರ್ಕಾರದವರು ೮೦ ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸುವ ವಿಷಯವನ್ನು ಯೋಚಿಸುತ್ತಿರುವರೆಂದೂ ಹೇಳಿದರು.

ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂಗ್ಲಿಷ್ ಮಾಧ್ಯಮಕ್ಕೆ ಸಲಹೆ

ಇಂಟರ್‌ಮೀಡಿಯಟ್ ತರಗತಿಗಳ ವರೆಗೆ ಶಿಕ್ಷಣವನ್ನು ಕನ್ನಡದಲ್ಲಿಯೇ ಕೊಡಬೇಕೆಂದೂ, ವಿಶ್ವವಿದ್ಯಾಲಯದ ಕಟ್ಟಡದಲ್ಲಿ ಇಂಗ್ಲೀಷು ಶಿಕ್ಷಣ ಮಾಧ್ಯಮವಾಗಬೇಕೆಂದೂ ಸಂಸ್ಥಾನದ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ಉಪಸಮಿತಿಯು ಸಲಹೆ ಮಾಡಿರುವುದೆಂದು ಗೊತ್ತಾಗಿದೆ. ಟೆಕ್ನಿಕಲ್ ಶಿಕ್ಷಣಕ್ಕಾಗಿ ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆ ಮತ್ತು ವ್ಯಾಪಾರಗಳ ಮೇಲೆ ತೆರಿಗೆಯನ್ನು ವಿಧಿಸುವಂತೆ ಇಲ್ಲಿಯೂ ಶಾಸನದ ಆಗತ್ಯದ ವಿಷಯವನ್ನು ವಿದ್ಯಾ ಸುಧಾರಣಾ ಸಮಿತಿಯವರು ಪರಿಶೀಲಿಸಬಹುದೆಂದು ಸದರಿ ಉಪಸಮಿತಿಯು ಅಭಿಪ್ರಾಯಪಟ್ಟಿರುವುದೆಂದು ವರದಿಯಾಗಿದೆ.

ಕೋಸಿ ನದಿ ಪ್ರವಾಹದಿಂದ ಭತ್ತದ ಪೈರಿನ ನಷ್ಟ

ಬಿಹಾರಿನ ಕೋಸಿ ಮತ್ತು ಕಮಲಾ ನದಿಗಳಲ್ಲಿ, ಮಳೆಯ ಪರಿಣಾಮವಾಗಿ ವಿಪರೀತ ಪ್ರವಾಹ ಬಂದು ಸುಮಾರು ಎಂಟು ನೂರು ಚದುರ ಮೈಲಿ ಪ್ರದೇಶದಲ್ಲಿದ್ದ ಭತ್ತದ ಪೈರು ನಾಶವಾಗಿರುವುದೆಂದೂ, ಅನೇಕ ಮನೆಗಳೂ ಮತ್ತು ಜಾನುವಾರುಗಳೂ ಕೊಚ್ಚಿಹೋದುವೆಂದೂ ವರದಿಯಾಗಿದೆ. ಸುಮಾರು ೬೦೦ ಗ್ರಾಮಗಳಲ್ಲಿ ಸೊಂಟದ ಮಟ್ಟಕ್ಕೆ ನೀರು ನಿಂತು, ಹತ್ತು ಲಕ್ಷ ಜನರು ನಿರಾಶ್ರಿತರಾಗಿರುವರೆಂದೂ, ಅನೇಕ ಕಡೆ ರೈಲು ಸಂಚಾರವನ್ನು ನಿಲ್ಲಿಸಲಾಗಿದೆಯೆಂದೂ ಹೇಳಲಾಗಿದೆ. ಕಷ್ಟಕ್ಕೀಡಾಗಿರುವವರ ಪರಿಹಾರ ಕಾರ್ಯವು ಭರದಿಂದ ಸಾಗುತ್ತಿದೆ.

ಸ್ತ್ರೀಸ್ಥಾನದಲ್ಲಿ ಪುರುಷನ ಸ್ಥಾನ

ಮದ್ರಾಸಿನ ಸ್ತ್ರೀ ಸದನದವರು ಸ್ತ್ರೀ ಸ್ವರ್ಗ ಎಂಬ ಹಾಸ್ಯಪೂರಿತ ನಾಟಕವೊಂದನ್ನು ಅಭಿನಯಿಸಿ, ಅದಕ್ಕೆ ಅಲ್ಲಿನ ಹಣಕಾಸಿನ ಮಂತ್ರಿಗಳನ್ನು ಬರಮಾಡಿಕೊಂಡಿದ್ದರು. ನಾಟಕವು ಸಮ್ಮೇಳನವೊಂದರ ರೂಪದಲ್ಲಿದ್ದು, ಗಂಡಸರ ಆಸ್ತಿಪಾಸ್ತಿಗಳೆಲ್ಲವನ್ನೂ ರದ್ದುಗೊಳಿಸಿ ಅವರನ್ನು ಪಂಚಾಯಿತಿಗೆ ಸೇರಿಸಬೇಕೆಂದು ಘೋಷಿಸಲಾಯಿತು. ವಿಧುರರ ವಿವಾಹವನ್ನು ನಿಷೇಧಿಸಬೇಕೆಂದೂ, ಪತಿತ ಪುರುಷರಿಗಾಗಿ ನಿರಾಶ್ರಿತ ಗೃಹಗಳನ್ನು ತೆರೆಯಬೇಕೆಂದೂ ಗೊತ್ತುಮಾಡಲಾಯಿತು. ಈ ಉದ್ದಿಶ್ಯಗಳ ಸಾಧನೆಗಾಗಿಯೂ ಸ್ತ್ರೀ ಸ್ಥಾನದ ಸ್ಥಾಪನೆಗಾಗಿಯೂ ಸತ್ಯಾಗ್ರಹವನ್ನು ನಡೆಸಬೇಕೆಂದ ನಿರ್ಣಯವನ್ನು ಮಾಡಲಾಯಿತು. ಸ್ತ್ರೀ ಸ್ಥಾನಕ್ಕೆ ವಿರೋಧಿಸುವ ಗಂಡಸರ ಕುಟುಂಬದವರು ಸತ್ಯಾಗ್ರಹಕ್ಕೆ ಸೇರಬೇಕೆಂದೂ ಗೊತ್ತುಪಡಿಸಲಾಯಿತು.

ಈ ನಾಟಕವನ್ನು ನೋಡಿದ ಮಂತ್ರಿಗಳ, ತಾವು ನೋಡಿದುದು ಕೇವಲ ಹಾಸ್ಯ ನಾಟಕವೇ ಹೊರತು ನಿಜವಲ್ಲವಾದ್ದರಿಂದ ಕೃತಕೃತ್ಯರಾದುದಾಗಿಯೂ ಸ್ತ್ರೀಯರೂ ಪುರುಷರೂ ಪರಸ್ಪರ ಸಹಕಾರದಿಂದಿದ್ದರೇ ಪ್ರಪಂಚದ ಅಭಿವೃದ್ಧಿಯಾಗುವುದೆಂದೂ ಹೇಳಿದರು.

ಅಖಿಲ ಮೈಸೂರು ವಾಲೀಬಾಲ್ ಟೋರ್ನಮೆಂಟ್

ನಂಜನಗೂಡಿನಲ್ಲಿ ಅಡ್ವೋಕೇಟ್ ಶ್ರೀ ಎಸ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕ್ರೀಡಾಭಿಮಾನಿಗಳ ಸಭೆ ಸೇರಿ ಬರುವ ೧೨ ರಿಂದ ಅ|| ಮೈ|| ವಾಲೀಬಾಲ್ ಟೂರ್ನಮೆಂಟ್ ನಡೆಸಬೇಕೆಂದು ತೀರ್ಮಾನಿಸಿದರು. ಸಾಹುಕಾರ್ ಶ್ರೀ ಪಿ ಮಹದೇವಯ್ಯನವರು ಬೆಳ್ಳಿಯ ಪಾರಿತೋಷಕಗಳನ್ನು ಕೊಡಲು ಒಪ್ಪಿದ್ದಾರೆ. ಕಾರ್ಯದರ್ಶಿಗಳಾಗಿ ಶ್ರೀ ಆರ್ ಕೃಷ್ಣಮೂರ್ತಿ ಮತ್ತು ಶ್ರೀ ಶಂಕರನಾರಾಯಣರವರು ಆರಿಸಲ್ಪಟ್ಟರುವರು. ಟೂರ್ನಮೆಂಟಿಗೆ ಎಂಟ್ರಿಯನ್ನು ಕಳುಹಿಸಲು ಬರುವ ೭ರಂದು ಕೊನೆಯ ದಿನವಾಗಿರುತ್ತೆ.

ಹಲವು ಹತ್ತಿ ಬಟ್ಟೆಗಳ ಮೇಲಿನ ಹತೋಟಿ ರದ್ದು

ಪಂಚೆ, ಸೀರೆ, ಮಲ್ಲು, ವಾಯಿಲ್, ಪಾಪ್ಲಿನ್, ಕ್ರೇಪ್, ಡ್ರಿಲ್ಲು ಮತ್ತು ಹಾಸಿಗೆ ಬಟ್ಟೆ ಈ ಹಲವು ಹತ್ತಿ ಬಟ್ಟೆಗಳ ಮೇಲಿನ ಹತೋಟಿಯನ್ನು ಭಾರತ ಸರ್ಕಾರದವರು ಇಂದಿನಿಂದ ರದ್ದು ಮಾಡಿರುವರು.

ವಸ್ತುಪ್ರದರ್ಶನಕಾರರ ಸಂಘದ ಕಾರ್ಯಕಾರಿ ಮಂಡಲಿ

ದಸರಾ ವಸ್ತು ಪ್ರದರ್ಶನಕಾರರ ಸಂಘದ ಸಾಮಾನ್ಯ ಸಭೆಯು ಕಳೆದ ೨೮ ನೇ ತಾ|| ಶ್ರೀ ಯು ಎಲ್ ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ನಾಟ್ಯ ಕಲಾವಿಶಾರದ ಎಂ ಪಿ ಮಹದೇವಸ್ವಾಮಿಯವರು ಅಧ್ಯಕ್ಷರಾಗಿಯೂ, ಸದ್ವೈದ್ಯ ಶಾಲೆಯ ಶ್ರೀ ಕೆ ಎಸ್ ಗುರುಮೂರ್ತಿಯವರು ಉಪಾಧ್ಯಕ್ಷರಾಗಿಯೂ, ರಾಮರ್ ಫ್ರೋಸೋ ಸ್ಟುಡಿಯೋವಿನ ಶ್ರೀ ಸಿ ಎ ರಾಮರ್‌ರವರು ಗೌರವ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಬಿ ಎಸ್ ರಂಗಪ್ಪ, ಎಸ್ ಗಂಡಪ್ಪ, ಎಂ ಗೌರೀಶಂಕರ್, ಎಸ್ ಆರ್ ಕೃಷ್ಣಮೂರ್ತಿ, ಎಸ್ ಸುಬ್ಬರಾವ್, ಯು ಎಲ್ ಚಂದ್ರರಾವ್, ಮದ್ರಾಸಿನ ಡಿಂಬಾಳ್ ಕಂಪೆನಿಯ ಮ್ಯಾನೇಜರ, ಮೈಸೂರ ಗ್ರಾಹಕರ ಸಹಕಾರ ಸಂಘದ [illegible] ಬೆಂಗಳೂರಿನ ಎಂ ಎಲ್ ಶ್ರೀನಿವಾಸ್, ಎಸ್ ಎನ್ ಚಂದ್ರಶೇಖರರಾವ್ ಮತ್ತು ಗುಂಜೂರು ವಿ ಸುಂದರವರ್ಮ ಇವರುಗಳು ಸದಸ್ಯರಾಗಿ ಚುನಾಯಿತರಾಗಿರುವರು.

ಬ್ಯಾಡ್ಮಿಂಟನ್ ಪಂದ್ಯ

ನೆನ್ನೆ ನಡೆದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಬಟ್ಟೆಗಳ [illegible] ಸಂಘದವರು ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಸ್ಪೋರ್ಟ್ಸ್ ಕ್ಲಬ್ಬಿನವರನ್ನು ೨೧–೩ ಮತ್ತು ೨೧–೬ ಪಾಯಿಂಟುಗಳಿಂದಲೂ ಮತ್ತು ಫುಟ್‌ಬಾಲ್ ಪಂದ್ಯದಲ್ಲಿ ೩–೧ ಗೋಲುಗಳಿಂದಲೂ ಸೋಲಿಸಿದರು.

ಭಾವಚಿತ್ರ ಅನಾವರಣ

ರಾಜಧಾನಿಯ ಕಂಚುಗಾರರ ಸಂಘದವರು ಬನುಮಯ್ಯನವರ ಪ್ರೌಢ ಶಾಲೆಯಲ್ಲಿ ನೆನ್ನೆ ಸಂಜೆ ಧರ್ಮಪರಾಯಣೆ ದೇವಿ ಸಾಕಮ್ಮ, ಶ್ರೀಗಳಾದ ಕೆ ನರಸಿಂಹಯ್ಯ ಮತ್ತು ಎಂ ಸಿ ನರಸಿಂಹಯ್ಯನವರುಗಳ ಭಾವಚಿತ್ರಗಳ ಅನಾವರಣೋತ್ಸವವನ್ನು ಏರ್ಪಡಿಸಿದ್ದರು. ಕೈಗಾರಿಕಾ ಮಂತ್ರಿಗಳಾದ ಶ್ರೀ ಟಿ ಸಿದ್ದಲಿಂಗಯ್ಯನವರು ಭಾವಚಿತ್ರಗಳ ಅನಾವರಣ ಮಾಡಿದರು. ದೇವತಾ ಪ್ರಾರ್ಥನೆ ಸ್ವಾಗತಗೀತೆಗಳಾದನಂತರ ವಿದುಷಿ ಚೊಕ್ಕಮ್ಮ ಮತ್ತು ಪಾರ್ಟಿಯವರಿಂದ ಸಂಗೀತ ನಡೆಯಿತು. ಶ್ರೀಮತಿ ದೇವಿ ಸಾಕಮ್ಮ, ಶ್ರೀಗಳಾದ ಕೆ ನರಸಿಂಹಯ್ಯ ಮತ್ತು ಎಂ ಸಿ ನರಸಿಂಹಯ್ಯನವರುಗಳಿಗೆ ಅಭಿನಂದನ ಪತ್ರಗಳನ್ನು ಒಪ್ಪಿಸಲಾಯಿತು. ಅವರುಗಳು ಸೂಕ್ತ ಉತ್ತರವಿತ್ತು, ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅಧ್ಯಕ್ಷರು ಭಾಷಣ ಮಾಡಿ, ಅವರುಗಳ ಸೇವೆಯನ್ನು ಪ್ರಶಂಸಿಸಿ, ಭಾವಚಿತ್ರಗಳನ್ನು ಅನಾವರಣ ಮಾಡಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭–೩೦ ಕೀರ್ತನೆ. ಮಧ್ಯಾಹ್ನ ೧–೪ [illegible] ಪಂಡಿತ್ ರವಿಶಂಕರ್ [illegible] (ರೆಕಾರ್ಡ್) ಸಂಜೆ ೫–೪೦ ಮತ್ತು ೬–೩೦ ಆರ್ ಚೊಕ್ಕಮ್ಮ ವೀಣೆ ಮತ್ತು ಸಂಗೀತ. ೬–೧೦ ಬಾಪು ಹಾಡೆ ಗಾಂಧೀಜಿಯವರ ಪ್ರಾರ್ಥನಾ ಕಾಲದ ಭಾಷಣ. ೭ ಮಹಿಳೆಗಾಗಿ [illegible] ಗೀತೆ ೭–೩೦ ಎಂ ಸಿ ಗಣಪತಿ ವಚನಗಾನ ೭–೪೦ ಶಾಂತಿರ ಪ ಬಾಪು ಕನ್ನಡದಲ್ಲಿ ಭಾಷಣ ೮ ದಾಸರ ಪದಗಳು [illegible] ೯ ಶ್ರೀಕಂಠ ದೇವರ ಸಂವಾದ [illegible] ಭಜನಾವಳಿ

SRI GAYATHRI
TALKIES
Daily 3 Shows
From 1 10 52 [illegible]
MARX BROTHERS
AT THE CIRCUS
— NEXT CHANGE
from 3 10 52
SAMSON &
DELILAH

ಕಾಶಿ ಬಳಿ ರೈಲು ಅಪಘಾತದಲ್ಲಿ ೩ ಮರಣ

ಅಲಹಾಬಾದಿಗೆ ಕಳೆದ ೨೮ ನೇ ತಾ|| ತೆರಳುತ್ತಿದ್ದ ಗೋರಖಪುರದ ಎಕ್ಸ್‌ಪ್ರೆಸ್ ರೈಲು ಕಾಶಿಗೆ ೬೦ ಮೈಲಿ ದೂರದಲ್ಲಿ ಒಂದು ಕಡೆ ಕಂಬಿತಪ್ಪಿದುದರ ಪರಿಣಾಮವಾಗಿ ೩ ಜನರು ಸತ್ತು, ೨೨ ಮಂದಿಗೆ ಗಾಯವಾಗಿರುತ್ತದೆ.

ಸಾಲಿಗ್ರಾಮದಲ್ಲಿ ಕ್ಷಾಮ ಪರಿಹಾರ ನಿಧಿಗೆ ಸಹಾಯ

ಕೃಷ್ಣರಾಜನಗರದ ತಾ|| ಸಾಲಿಗ್ರಾಮದಲ್ಲಿ ಕ್ಷಾಮ ಪರಿಹಾರ ನಿಧಿಗಾಗಿ ಈ ಕೆಳಗೆ ಕಂಡಂತೆ ಧನ ಸಹಾಯ ಆಗಿರುತ್ತದೆ — ಪೌರಸಭೆಯಿಂದ ೨೫ ರೂ, ಶ್ರೀಗಳಾದ ಎಸ್ ಡಿ ನಾಗೇಂದ್ರನ್, ಹೆಚ್ ಅನಂತರಾಜಯ್ಯ, ಎಚ್ ಹೆಚ್ ತಮ್ಮಯ್ಯ, ಎಸ್ ಎ ಸೀತಾರಾಮಯ್ಯ, ಎಸ್ ಬಿ ಅಪ್ಪಾಜಪ್ಪ, ಎಸ್ ಎ ಬ್ರಹ್ಮದೇವಯ್ಯ, ಎಸ್ ನರಸಿಂಹಮೂರ್ತಿ, ಹೆಚ್ ಪಿ ಆದಿರಾಜಯ್ಯ, ಮೂಡಲಗಿರಿಯ್ಯ, ಎಸ್ ಬಿ ಜವರೇಗೌಡ, ಎಸ್ ಡಿ ಗುಣಪಾಲಯ್ಯ ಇವರುಗಳಿಂದ ತಲಾ ರೂ ೫, ಶ|| ಅಪ್ಪಾಜಿಗೌಡ, ಎಸ್ ಹೆಚ್ ಆಂಜನೇಯ, ಎಸ್ ಬಿ ಪಾಯಣ್ಣ, ಮಂತ್ಯದ ನಾಗರಾಜಯ್ಯ ಇವರಿಂದ ತಲಾ ರೂ ೨½, ಎಸ್ ಎಲ್ ರಂಗಾಗೌಡ, ಹನುಮೇಗೌಡ, ಎಸ್ ಕೆ ಬೋರೇಗೌಡ, ಎಸ್ ಎ ಕೆಂಚಯ್ಯ, ಚೂಡೇಗೌಡ, ಎಸ್ ಎಲ್ ಮರೀಗೌಡ, ಎಸ್ ಎ ಧರಣಪ್ಪ ಇವರಿಂದ ತಲಾ ರೂ ೧೦, ಎಸ್ ಎ ತಿಮ್ಮೇಗೌಡ, ಶ್ರೀನಿವಾಸರಾವ್, ಬ್ರಹ್ಮಯ್ಯ ಇವರಿಂದ ತಲಾ ರೂ. ೫

ಮೈಸೂರು ನಗರದ ರೇಷನಿಂಗ್ ಅಫೀಸರರ ಕಛೇರಿ

ಪ್ರಕಟಣೆ

೨–೧೦–೧೯೫೨ ನೇ ತಾರೀಖು ಗುರುವಾರ ಮಹಾತ್ಮಗಾಂಧಿಯವರ ಜಯಂತಿ ಪ್ರಯುಕ್ತ ಮೈಸೂರು ನಗರದ ಎಲ್ಲ ರೇಷನ್ ಡಿಪೋಗಳೂ ಮತ್ತು ಮೊಹಲ್ಲಾ ಸಬ್ ಆಫೀಸುಗಳೂ ಮುಚ್ಚಲ್ಪಡುವುವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

(ರುಜು) ಟಿ ಜಿ ವಿಜಯರಾಘವರೆಡ್ಡಿ
ರೇಷನಿಂಗ್ ಆಫೀಸರ್

Edited Printed and Published by A R Nagaraja at Sadhvi Press D Subbaiah Road Mysore

ದಸರಾ ವಸ್ತು ಪ್ರದರ್ಶನ, ಮೈಸೂರು
ವಿಶೇಷ ಕಾರ್ಯಕ್ರಮ
2-10 52 ನೇ ಗುರುವಾರ, ಸಂಜೆ 6-30 ಕ್ಕೆ
ಜೀವನ್ನರಾಯನ ಕಟ್ಟೆ ರಂಗಮಂಟಪದಲ್ಲಿ
✱ ಅಮೋಘ ನೃತ್ಯಗಳು ✱
ಬೆಂಗಳೂರಿನ ಛಾಯಾ ಆಟ ಶ್ಯಿಸ
ಕುಮಾರಿ ಹೇಮಾ, ಯಮುನ ಮತ್ತು ಅಪಲ್ಲ
ಇವರುಗಳಿಂದ
ಪರವಾನಿ ಟಿಕೆಟ್ಟಿನೊಡನೆ ನೋಡಲು ತಪ್ಪಬೇಡಿ
ವಸ್ತುಪ್ರದರ್ಶನ ಸಮಿತಿ

ಪ್ರಭುದೇವಾ ಟಾಕೀಸ್
ಪ್ರತಿ ದಿನ ಮೂರು ಆಟಗಳು
1 10 52 ನೇ ಬುಧವಾರದಿಂದ ಅಮೋಘ ಪ್ರಾರಂಭ
★ ಸೌದಾಮಿನಿ ★
(ತಮಿಳು)
ಪಾತ್ರ — ಎಂ ಕೆ ರಾಧಾ, ಕಣ್ಣಾಂಬ, ನಾಗೇಶ್ವರರಾವ್, ಟಿ ಆರ್ ರಾಮಚಂದ್ರ ಮುಂತಾದವರು

ದಸರಾ ಮಹೋತ್ಸವಕ್ಕಾಗಿ:- ಹೊಸ ಮಾದರಿಯ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ನಿ ಸೀರೆಗಳೂ ದಿಂಡಿಗಲ್, ಬೊಂಬಾಯಿ ವಾಯಿಲ್ ಸೀರೆಗಳೂ ಬಂದಿವೆ ★ M. V. ಭೋಜಯ್ಯ ಇಂಡಿಯನ್ ಬ್ಯಾಂಕ್ ಎದುರು ಮೈಸೂರು ಶ್ರೀ ಬಿ ಪಿ

ಟೆಲಿಫೋನ್ ನಂ 292 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨-೧೦ ೧೯೫೦ [ಸಂಚಿಕೆ ೫೬

ದೇಶದ ಆದ್ಯಂತ ಇಂದು ಗಾಂಧಿ ಜಯಂತಿ

ಮಹಾತ್ಮ ಗಾಂಧಿಯವರು

ಗಾಂಧಿ ಜಯಂತಿ ಉತ್ಸವ

ಮೈಸೂರು ೨

ಮಹಾತ್ಮ ಗಾಂಧಿಯವರ ಜಯಂತ್ಯುತ್ಸವವನ್ನು ಈ ದಿನ ನಗರ ಕಾಂಗ್ರೆಸ್ ಸಮಿತಿಯವರು ಟೌನ್ ಹಾಲಿನಲ್ಲಿ ನೆರವೇರಿಸಿದರು. ಬೆಳಗ್ಗೆ ೯ ಗಂಟೆಗೆ ನಗರ ಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿ ರಾಯರು ಧ್ವಜಾರೋಹಣವನ್ನು ಮಾಡಿದರು. ನಂತರ ಟೌನ್ ಹಾಲಿನ ಒಳಗಡೆ ವೇದಿಕೆಯ ಮೇಲೆ ಮಹಾತ್ಮ ಗಾಂಧಿಯವರ ತೈಲ ಚಿತ್ರವನ್ನಿಟ್ಟು, ಸುಗಂಧ ಕುಸುಮಲತೆಗಳಿಂದ ಅಲಂಕರಿಸಿದ ಸ್ಥಳದಲ್ಲಿ ಆಶ್ರಮ ಭಜನಾವಳಿಯೂ, ಪ್ರಾರ್ಥನೆಯೂ ನಡೆದುವು. ಈ ದಿನ ಬೆಳಗ್ಗೆ ದಸರಾ ವಸ್ತು ಪ್ರದರ್ಶನದ ... ಜೀವಣ್ಣರಾಯರ ಕಟ್ಟೆ ವಿಭಾಗದಲ್ಲಿ ... ದೇ ಸಮಾರಂಭದ ಅಂಗವಾಗಿ ಹರಿಯ... ಸನ ಸಭಾ ಸದಸ್ಯರಾದ ಶ್ರೀ ಪಿ. ಸೀತಾರಾಮಯ್ಯನವರು ರಾಷ್ಟ್ರಧ್ವಜಾರೋಹಣ ಮಾಡಿ, ಮಹಾತ್ಮ ಗಾಂಧಿಯವರ ... ಗಳನ್ನು ಸಕಲರೂ ಅನುಸರಿಸಬೇಕೆಂದು ತಿಳಿಸಿದರು.

ಚಾಮುಂಡಿ ಬೆಟ್ಟದಲ್ಲಿ ರಥೋತ್ಸವ ... ಬೆಳಗ್ಗೆ ೭ ಗಂಟೆ ... ನಿಮಿಷಕ್ಕೆ ಚಾಮುಂಡಿ ಬೆಟ್ಟದಲ್ಲಿ ರಥೋತ್ಸವವು ನಡೆಯಿತು.

... ಮುಕ್ತ ಭಾರತ ಸಂಹಾರ್ದ ಚಿತ್ರಪಟಗಳ ಪ್ರದರ್ಶನ

ಒಡಾರ್ಟಸ್ ... ನಡೆಯುತ್ತಿರುವ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ... ಬೆಂಗಳೂರಿನ ಇಂಡಿಯಾ ... ಸ್ನೇಹ ಸಂಘದವರು ಈ ... ಸೌಹಾರ್ದವನ್ನು ಪ್ರತಿಬಿಂಬಿಸುವ ಚಿತ್ರಪಟಗಳನ್ನು ಪ್ರದರ್ಶಿಸಿರು... ಚೀಣದ ಪ್ರಾಚೀನ ಸಂಸ್ಕೃತಿ, ... ಚೀಣದಿಂದ ಬಂದಯ ಮೈಸೂರಿಗೆ ... ಪ್ರಯೋಗ ಇವುಗಳಿಗೆ ಸಂಬಂಧಪಟ್ಟ ಚಿತ್ರ ಪಟಗಳನ್ನು ಇಡಲಾಗಿದೆ. ಚೀಣಾ ಮಹಿಳೆಯರು ರೇಷ್ಮೆ ವಸ್ತ್ರದಲ್ಲಿ ಕಸೂತಿ ಕೆಲಸ ಮಾಡಿ ತಯಾರಿಸಿರುವ ಚಿತ್ರಪಟಗಳೂ ಆಕರ್ಷಕವಾಗಿವೆ.

ಆಹಾರವಿಲ್ಲದೆ ಹೆಂಗಸರು ಹೊಲಕ್ಕೆ ನುಗ್ಗಿದರು

... ಬಳಿ ಹಲವು ಹಳ್ಳಿಗಳಿಗೆ ... ಹರಿಜನರ ಗುಂಪೊಂದು ಆಹಾರಕ್ಕಾಗಿ ಅಲೆಯುತ್ತಾ, ಜಮೀನುದಾರರ ಹೊಲಗಳಿಗೆ ನುಗ್ಗಿ ಬೆಳೆದಿದ್ದ ಪೈರನ್ನು ಕಿತ್ತುಕೊಂಡುಹೋದರೆಂದು ವಿಚಾರ ಗುರಿಯಾಗಿರುವುದಾಗಿ ವರದಿಯಾಗಿದೆ. ಅವರ ಪೈಕಿ ೫೧ ಜನ ಸ್ತ್ರೀಯರು ... ೨೦ ಮಕ್ಕಳನ್ನು ಜಾಮೀನಿನ ಮೇಲೆ ಬಿಡಲಾಗಿದೆ. ಇತರರನ್ನು ಪೈಲಿಗೆ ... ಕಳುಹಲಾಗಿದೆ.

ದಕ್ಷಿಣ ಆಫ್ರಿಕ ಭಾರತೀಯರ ಸಮಸ್ಯೆಗಾಗಿ ಜಡ್ಜರ ನೇಮಕ

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಸಮಸ್ಯೆಯನ್ನು ಪರಿಹರಿಸುವ ಬಗ್ಗೆ ಒಬ್ಬ ... ಜಡ್ಜರನ್ನು ನೇಮಿಸಲು ಭಾರತ ... ಸ್ಥಾನಗಳು ಒಪ್ಪಿ, ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ... ಲೈರವರಿಗೆ ಕಾಗದ ಬರೆದಿರುವುದಾಗಿ ... ಆದರೆ ದಕ್ಷಿಣ ಆಫ್ರಿಕವು ಈ ... ಬಗ್ಗೆ ಯಾವ ಅಭಿಪ್ರಾಯವನ್ನೂ ತಿಳಿಸಿಲ್ಲವೆಂದೂ ವರದಿಯಾಗಿದೆ.

ಲಾರಿ ಚಕ್ರದೊಳಗೆ ಸಿಕ್ಕಿ ಬೆಕ್ಕಿನ ೫೫ ಮೈಲಿ ಪ್ರಯಾಣ

ಲಂಡನ್ನಿಗೆ ೫೫ ಮೈಲಿ ದೂರದ ಒಂದು ಊರಿನಿಂದ ಅಲ್ಲಿಗೆ ಬರುತ್ತಿದ್ದ ಲಾರಿಯೊಂದು ಮಧ್ಯೆ ಮಧ್ಯೆ ನಿಂತಾಗ ಒಂದು ಬೆಕ್ಕಿನ ಮರಿಯು ಕೂಗಿಕೊಳ್ಳುವ ಶಬ್ದ ಕೇಳಿ ಬರುತ್ತಿದ್ದುದನ್ನು ಕಂಡು ಡ್ರೈವರನು ಎಷ್ಟು ಶೋಧಿಸಿದರೂ ಸಂಗತಿಯು ಗೊತ್ತಾಗದೆ ಕಡೆಗೆ ಲಂಡನ್ನಿಗೆ ಒಂದು ಸೇರಿದನಂತರ ಲಾರಿಯ ಅಡಿಯಲ್ಲಿ ನೋಡಲಾಗಿ ಹಿಂಭಾಗದ ಎರಡು ಜಂಟಿ ಚಕ್ರಗಳ ಕಂಬಿಯ ಮೇಲೆ ೬ ತಿಂಗಳ ಬೆಕ್ಕಿನ ಮರಿಯೊಂದು ಸುರಕ್ಷಿತವಾಗಿ ಕುಳಿತಿದ್ದುದು ಕಾಣಬಂದಿತು. ಲಾರಿಯು ಓಡಿದಂತೆಲ್ಲಾ ಬೆಕ್ಕಿನ ಮರಿಯೂ ೫೫ ಮೈಲಿ ದೂರದ ವರೆಗೆ ಚಕ್ರದೊಡನೆ ಸಾವಿರಾರು ಬಾರಿ ಸುತ್ತಿದರೂ ಅದಕ್ಕೆ ಯಾವ ಅಪಾಯವೂ ಆಗದೆ ಅದು ಸುಖವಾಗಿ ಲಂಡನ್ ನಗರವನ್ನು ಮುಟ್ಟಿದ ಅಂಶವು ವ್ಯಕ್ತಪಟ್ಟಿತು.

ಮಲಯದಲ್ಲಿ ೪ ಲಕ್ಷ ರೂ. ವೆಚ್ಚದಿಂದ ಗಾಂಧಿ ಸ್ಮಾರಕ

ಮಹಾತ್ಮ ಗಾಂಧಿಯವರ ಸ್ಮಾರಕಾರ್ಥವಾಗಿ ಈ ದಿನ ಮಲಯಾದಲ್ಲಿ ೪ ಲಕ್ಷ ರೂ ವೆಚ್ಚದಿಂದ ಒಂದು ಶಾಲೆಯನ್ನು ಆರಂಭಿಸಲಾಗುವುದು. ಪೆರಾಕ್ ದ್ವೀಪದ ಸುಲ್ತಾನರು ಅದರ ಆರಂಭೋತ್ಸವವನ್ನು ನೆರವೇರಿಸುವರು. ಆಗ್ನೇಯ ಏಷ್ಯಾದಲ್ಲಿ ಇದೇ ಮೊಟ್ಟ ಮೊದಲನೆಯ ಗಾಂಧೀ ಸ್ಮಾರಕವೆಂದು ಹೇಳಲಾಗಿದೆ.

ವಸ್ತು ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ

ದಸರಾ ವಸ್ತು ಪ್ರದರ್ಶನದಲ್ಲಿ ಇದೇ ತಿಂಗಳು ೬ ನೇ ತಾ|| ಸಂಜೆ ಬಹುಮಾನ ವಿನಿಯೋಗ ಸಮಾರಂಭವನ್ನು ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ನೆರವೇರಿಸುವರು. ೬ ನೇ ತಾ|| ಪ್ರದರ್ಶನವುಂಟು. ಬೆಳಗ್ಗೆ ಎಲ್ಲರಿಗೂ, ಸಂಜೆ ಮಹಿಳೆಯರಿಗೆ ಮಾತ್ರವೂ ಪ್ರವೇಶಾವಕಾಶವಿರುವುದು.

ಮೈಸೂರಿಗೆ ಕೇಂದ್ರದಿಂದ ೫೦ ಲಕ್ಷ ರೂ. ಸಾಲ

ಬೆಂಗಳೂರು ೨

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ವ್ಯವಸಾಯಕ್ಕಾಗಿ ವಿದ್ಯುಚ್ಛಕ್ತಿಯನ್ನೊದಗಿಸಲು ಕೇಂದ್ರ ಸರ್ಕಾರದವರು ಮೈಸೂರಿಗೆ ೫೦ ಲಕ್ಷ ರೂ ಗಳನ್ನು ಸಾಲವಾಗಿ ಕೊಟ್ಟಿರುವರೆಂದು ವರದಿಯಾಗಿದೆ. ನದಿಗಳ ಅಂಚಿನಲ್ಲಿ ವಿದ್ಯುತ್ ಸಂಪುಗಳನ್ನು ಸ್ಥಾಪಿಸಿ, ಅವುಗಳ ಮೂಲಕ ನೀರನ್ನು ಬೇಸಾಯಕ್ಕೆ ಒದಗಿಸಿಕೊಳ್ಳುವ ಏರ್ಪಾಡಿಗಾಗಿ ಈ ಸಾಲವನ್ನು ಕೊಡಲಾಗಿದೆ.

ಬೊಂಬಾಯಿನ ಮೋಟಾರು ಲಾರಿಗಳ ಮುಷ್ಕರ

ಮೋಟಾರು ವಾಹನಗಳ ತೆರಿಗೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ನೆನ್ನೆ ಬೊಂಬಾಯಿಯಲ್ಲಿ ಮೋಟಾರು ವಾಹನಗಳ ಮುಷ್ಕರವು ಪ್ರಾರಂಭವಾಯಿತು. ಅನಿರ್ದಿಷ್ಟ ಕಾಲದವರೆಗೆ ಅದು ನಡೆಯುವುದೆಂದು ಹೇಳಲಾಗಿದೆ. ವಾಹನಗಳ ಮಾಲೀಕರ ವಿಷಯವಾಗಿ ಸಹಾನುಭೂತಿ ತೋರಿಸಲು ಅಲ್ಲಿನ ಅನೇಕ ಮಾರ್ಕೆಟ್ಟುಗಳು ಬಂದಾಗಿವೆ. ಬೊಂಬಾಯಿ ಸಂಸ್ಥಾನದ ಇತರ ಭಾಗಗಳಲ್ಲೂ ಹರತಾಳಗಳು ನಡೆಯುತ್ತಿರುವುದಾಗಿಯೂ ಹೆಚ್ಚಿಸಿರುವ ತೆರಿಗೆಯು ಕಡಿಮೆಯಾದ ಹೊರತು ಆ ಸಂಸ್ಥಾನದ ೧೫ ಸಾವಿರ ವಾಹನಗಳೂ ಕೆಲಸಕ್ಕೆ ಹಿಂತಿರುಗುವುದಿಲ್ಲವೆಂದೂ ಮೋಟಾರು ಸಂಚಾರದ ಆಪರೇಟರುಗಳ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಸೂಚನೆ

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವದ ಪ್ರಯುಕ್ತ ನಾಳೆ 'ಸಾಧ್ವಿ' ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ಭಾರತದ ಶಾಶ್ವತ ಧೊರೆ ಗಾಂಧಿಯೆಂದು ರಾಜಾಜಿ

ಮಹಾತ್ಮ ಗಾಂಧಿಯವರ ಜಯಂತಿ ಸಂಬಂಧವಾಗಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್, ಪ್ರಧಾನಿ ನೆಹರೂ, ಮದ್ರಾಸಿನ ಮುಖ್ಯಮಂತ್ರಿ ರಾಜಗೋಪಾಲಾಚಾರಿಯವರುಗಳು ಸಂದೇಶಗಳನ್ನಿತ್ತಿರುವರು. ಗಾಂಧಿಜಿಯವರು ಐಹಿಕ ಶರೀರವನ್ನು ಬಿಟ್ಟು ಕೇವಲ ೪ ವರ್ಷಗಳಾಗಿದ್ದರೂ, ಅದು ಯುಗಗಳೇ ಕಳೆದಂತಾಗಿದೆಯೆಂದೂ, ಜನರು ಅವರಿಗೆ ಪ್ರಿಯವಾದ ಖಾದಿ ಕೆಲಸವನ್ನು ಮರೆತಂತೆ ಕಾಣಬರುತ್ತಿರುವುದೆಂದೂ, ಗಾಂಧಿ ಜಯಂತಿ ದಿನವನ್ನು ಚರಖಾ ದಿನವೆಂದು ಆಚರಿಸಬೇಕೆಂದೂ ರಾಷ್ಟ್ರಾಧ್ಯಕ್ಷರು ತಿಳಿಸಿರುತ್ತಾರೆ. ಜನರು ಖಾದಿ ಧರಿಸಿ ಗಾಂಧಿಯವರಲ್ಲಿರುವ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಬೇಕೆಂದು ನೆಹರೂರವರು ತಿಳಿಸಿರುವರು. ಭಾರತದ ವಿಮಾನ ಸೈನಿಕರ ... ರಾಜಾಜಿಯವರಿತ್ತಿರುವ ಸಂದೇಶದಲ್ಲಿ ಒಕ್ಕೆಯ ನಡತೆಯೇ ಜನರ ಗುರಿಯಾಗಿರುವವರೆಗೆ ಮಹಾತ್ಮ ಗಾಂಧಿಯವರು ಭಾರತದ ಶಾಶ್ವತ ಧೊರೆಯಾಗಿರುವರೆಂದು ಹೇಳಿರುವರು. ಸಿಪಾಯಿಗೆ ದೇಶಾದ ಗುಣಗಳೆಲ್ಲವೂ ಅವರಲ್ಲಿತ್ತೆಂದೂ, ಅವರು ಖಾದಿ ನೋಡಿ ಸೈನಿಕರೆಂದೂ ರಾಜಾಜಿಯವರು ತಿಳಿಸಿರುವರು.

ಮಹಮದ್ ಅಹಮದ್‌ರವರ ದೇಹಸ್ಥಿತಿ

ಜಿಲ್ಲಾಧಿಕಾರಿಗಳಾದ ಜ|| ಕೆ ಮಹಮದ್ ಅಹಮದ್‌ರವರ ದೇಹಸ್ಥಿತಿಯು ಕ್ರಮವಾಗಿ ಉತ್ತಮಗೊಳ್ಳುತ್ತಿದೆ.

ಗಂಧದೆಣ್ಣೆ ಕಾರ್ಖಾನೆಯ ದಿನಾಚರಣೆ

ಮೈಸೂರು ೩

ಮೊನ್ನೆ ಬೆಳಿಗ್ಗೆ ಮೈಸೂರು ಸರ್ಕಾರದ ಗಂಧದೆಣ್ಣೆ ಕಾರ್ಖಾನೆಯ ದಿನಾಚರಣೆಯು ಕೈಗಾರಿಕಾ ಮಂತ್ರಿ ಶ್ರೀ ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ನ್ಯಾಯಾಂಗ ಮತ್ತು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಆರಂಭೋತ್ಸವವನ್ನು ನೆರವೇರಿಸಿದರು. ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಬಹುಮಾನಗಳನ್ನು ಹಂಚಿದರು.

ಲಕ್ಷ್ಮೀಪುರಂ ಶಿಶುವಿಹಾರದ ಮಕ್ಕಳಿಂದ ಪ್ರಾರ್ಥನೆಯಾದ ನಂತರ ಸಮಾರಂಭದ ಸಮಿತಿ ಅಧ್ಯಕ್ಷರಾದ ಶ್ರೀ ಬಿ. ಶ್ರೀಕಂಠಯ್ಯನವರಿಂದ ಸ್ವಾಗತ ಭಾಷಣವಾಯಿತು. ಆ॥ ವಿ॥ ಸಂ॥ ರಾ॥ ಟಿ. ಚೌಡಯ್ಯ ಮತ್ತು ಮಂಡಲಿಯವರಿಂದ ಸುಶ್ರಾವ್ಯವಾದ ಗಾಯನವು ನಡೆಯಿತು. ಶ್ರೀ ಜಿ. ಪುಟ್ಟಸ್ವಾಮಿಯವರು ವರದಿಯನ್ನೋದ್ದಿ, ಸಂಸ್ಥೆಯ ಪುರೋಭಿವೃದ್ಧಿಯನ್ನು ವಿವರಿಸಿದರು. ಕಾರ್ಖಾನೆಯಲ್ಲಿ ನಡೆಯುತ್ತಿರುವ ಅತ್ಯುತ್ತಮವಾದ ಕೆಲಸ ಕಾರ್ಯಗಳನ್ನು ಸಚಿವರುಗಳು ತಮ್ಮ ಭಾಷಣದಲ್ಲಿ ಪ್ರಶಂಸಿಸಿ, ಅದು ಇನ್ನೂ ಹೆಚ್ಚಿನ ಪ್ರಗತಿಯನ್ನು ಹೊಂದಲೆಂದು ಹಾರೈಸಿದರು.

ಕಾರ್ಯದರ್ಶಿಯವರಿಂದ ಶ್ರೀ ಎಸ್. ಎಸ್. ರಾಜಾರಾವ್‌ರವರಿಂದ ಧನ್ಯವಾದಗಳಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಈ ಸಮಾರಂಭಕ್ಕೆ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೂ ದಯಮಾಡಿಸಿದ್ದರು.

ಸಹಕಾರ ಶಿಕ್ಷಣ ತರಗತಿಗಳ ಉದ್ಘಾಟನೋತ್ಸವ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ನಡೆಯುವ ಸಹಕಾರ ಶಿಕ್ಷಣ ತರಗತಿಗಳ ಉದ್ಘಾಟನೋತ್ಸವವನ್ನು ಗೃಹಮಂತ್ರಿಗಳಾದ ಶ್ರೀ ಹೆಚ್. ಸಿ. ದಾಸಪ್ಪನವರು ಮೊನ್ನೆ ಸಹಕಾರ ಭವನದಲ್ಲಿ ನೆರವೇರಿಸಿದರು. ಮೈಸೂರು ಮತ್ತು ಕೊಡಗಿನ ರಿಜಿಸ್ಟ್ರಾರ್‌ರವರೂ ಇತರ ಗಣ್ಯರೂ ಹಾಜರಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಸ್ವಾಗತ ಭಾಷಣ ಮಾಡಿ ಜಿಲ್ಲಾ ಸಂಘವು ಮಾಡುತ್ತಿರುವ ವಿವಿಧ ಕಾರ್ಯಗಳನ್ನು ವಿವರಿಸಿದರು. ಮಾನ್ಯ ಮಂತ್ರಿಗಳು ಭಾಷಣ ಮಾಡುತ್ತಾ ಜಿಲ್ಲಾ ಪ್ರಚಾರ ಸಂಘದ ಕಾರ್ಯವನ್ನು ಪ್ರಶಂಸಿಸಿ, ಸಹಕಾರದಲ್ಲಿ ಪ್ರಚಾರ ಮತ್ತು ವಿದ್ಯಾಭ್ಯಾಸಕ್ಕಿರಬೇಕಾದ ಸ್ಥಾನವನ್ನು ಒತ್ತಿ ಹೇಳಿದರು. ಪ್ರಾಮಾಣಿಕತೆಯಿಂದ ಕೆಲಸ ಮಾಡುವುದು ಅತಿ ಮುಖ್ಯವೆಂದರು. ಸಹಕಾರದ ಏಳಿಗೆಗಾಗಿ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್, ಶ್ರೀ ಸಿ. ಗೋಪಾಲಕೃಷ್ಣಶೆಟ್ಟಿ ಮುಂತಾದವರು ಮಾಡುತ್ತಿರುವ ಕಾರ್ಯವನ್ನು ಪ್ರಶಂಸಿಸಿ, ಸಹಕಾರ ಶಿಕ್ಷಣ ತರಗತಿಯು ಯಶಸ್ವಿಯಾಗಿ ನಡೆಯಲೆಂದು ಹಾರೈಸಿದರು.

ಶ್ರೀ. ಸಿ. ಗೋಪಾಲಕೃಷ್ಣಶೆಟ್ಟಿರಿಂದ ವಂದನಾರ್ಪಣೆಯಾದ ಮೇಲೆ ಸಭೆ ಮುಕ್ತಾಯವಾಯಿತು.

ಮೈಸೂರಿಗೆ ರಷ್ಯದ ಆಹಾರ ಸಹಾಯ

ಭಾರತದಲ್ಲಿ ಕ್ಷಾಮದಿಂದ ನೊಂದವರ ಸಹಾಯಾರ್ಥವಾಗಿ ರಷ್ಯದಿಂದ ಕಳುಹಿಸಲಾಗಿರುವ ಆಹಾರದ ಪೈಕಿ ಮೈಸೂರು ಸಂಸ್ಥಾನಕ್ಕೆ ಎರಡು ಸಾವಿರ ಟನ್ ಗೋಧಿ, ಒಂದು ಸಾವಿರ ಟನ್ ಅಕ್ಕಿ, ಒಂದು ಲಕ್ಷ ಟಿನ್ನು ಹಾಲಿನ ಪುಡಿ ಮತ್ತು, ೧ ಲಕ್ಷ ೪೦ ಸಾವಿರ ರೂ ಚನ್ನು ಒದಗಿಸಲಾಗುವುದೆಂದು ತಿಳಿದುಬಂದಿದೆ.

ದರಿದ್ರನಾರಾಯಣನ ಸೇವೆ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ಶ್ರೀ ಹೊಂಬಾಳೆ ರಂಗಯ್ಯನವರ ಉಚಿತ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿ ಕಳೆದ ೨೮-೨೯ ನೇ ತಾ॥ಗಳಲ್ಲಿ ಸುಮಾರು ಸಾವಿರಾರು ಬಡ ಜನರಿಗೆ ಅನ್ನದಾನವನ್ನು ಏರ್ಪಡಿಸಲಾಗಿದ್ದಿತು. ಇದಕ್ಕೆ ಕಾರಣರಾದ ಶ್ರೀ ಹೊಂಬಾಳೆ ರಂಗಯ್ಯನವರು ಮತ್ತು ಅವರ ಕುಟುಂಬದವರು ಪ್ರಶಂಸನಾರ್ಹರು.

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು.

ಗಾಳಿಯಿಂದ ವಿದ್ಯುಚ್ಛಕ್ತಿ

ಡೆನ್ಮಾರ್ಕಿನ ಒಬ್ಬ ಇಂಜನಿಯರು ಗಾಳಿಯಿಂದ ವಿದ್ಯುಚ್ಛಕ್ತಿಯನ್ನು ತಯಾರಿಸಬಲ್ಲ ಯಂತ್ರವನ್ನು ಪೂರ್ಣಗೊಳಿಸಿರುತ್ತಾರೆ. ವಿದ್ಯುಚ್ಛಕ್ತಿ ತಯಾರಿಕೆಯಲ್ಲಿ ಹಿಂದುಳಿದಿರುವ ದೇಶಗಳಲ್ಲಿ ಅದನ್ನು ಉಪಯೋಗಿಸಬಹುದೆಂದು ಅಲ್ಲಿನ ಪತ್ರಿಕೆಯೊಂದು ಅಭಿಪ್ರಾಯ ಪಟ್ಟಿದೆ. ಈ ಯಂತ್ರವನ್ನು ತಯಾರಿಸುವ ಕಾರ್ಖಾನೆಯೊಂದರ ಸ್ಥಾಪನೆಗೆ ಏರ್ಪಾಡಾಗುತ್ತಿರುವುದಾಗಿಯೂ ಅದು ತಿಳಿಸಿರುತ್ತದೆ.

ಹರಿಕಥೆ

ಮೈಸೂರು ಆನೆ ಸಾರೋಟು ಬೀದಿ ಭಜನೆ ವೆಂಕಟಪ್ಪನವರ ರಾಮ ಮಂದಿರದಲ್ಲಿ ಪೂರ್ಣಿಮಾ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಹರಿಹರ ಕೀರ್ತನಕಾರ್ ಎಂ. ಸಿ. ಬಾಲಾಜಿ ಕೃಷ್ಣದಾಸರವರಿಂದ ನೃತ್ಯ ಪರೀಕ್ಷೆ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ.

GUIDE TO
ACCOUNTS HIGHER &
EDUCATION PROFICIENCY
EXAMINATIONS
Sri Ramachandra Book Depot
Devaraj Market, Mysore

Edited, Printed and Published by A. R. Nagarajan at Sadhvi Press, D. Subbiah Road Mysore.

ಪಥವೀಧರರಿಗೆ ಕಡ್ಡಾಯ ಸಮಾಜ ಸೇವಾ ಶಿಕ್ಷಣ

ಮೈಸೂರು ೩

ಸಂಸ್ಥಾನದ ವಿದ್ಯಾಭ್ಯಾಸದ ಸುಧಾರಣಾ ಸಮಿತಿಯು ಸ್ಟೀಯರಿಂಗ್ ಸಮಿತಿಯು, ವಿದ್ಯಾರ್ಥಿಗಳು ಡಿಗ್ರಿ ಪಡೆಯುವ ಮುನ್ನ ಸೇವಾ ದಳ, ಭಾರತ ಸ್ಕೌಟ್ಸ್ ಮತ್ತು ಗೈಡುಗಳು ಅಥವಾ ನ್ಯಾಷನಲ್ ಕೇಡೆಟ್‌ಕೋರ್ ಇವುಗಳಲ್ಲಿ ಕಡ್ಡಾಯವಾಗಿ ಸಮಾಜ ಸೇವಾ ಶಿಕ್ಷಣ ಪಡೆಯುವಂತೆ ವಿಧಾಯಕ ಮಾಡಬೇಕೆಂದು ಸಲಹೆ ಮಾಡಿರುವರೆಂದು ತಿಳಿದುಬಂದಿದೆ.

ಪ್ರಾಥಮಿಕ ಶಾಲಾ ವ್ಯಾಸಂಗವು ಆರು ವರ್ಷಗಳ ಅವಧಿಯಿಂದ ಕೂಡಿರಬೇಕೆಂದೂ, ಮೊದಲನೇ ತರಗತಿಗೆ ಸೇರಲು ಕನಿಷ್ಠವಾಗಿ ೬ ವರ್ಷವಾಗಿರಬೇಕೆಂದೂ ಸಮಿತಿಯು ಗೊತ್ತುಪಡಿಸಿದೆ. ಮಾಧ್ಯಮಿಕ ಶಾಲಾ ಪರೀಕ್ಷೆಯು ರದ್ದು, ಸೆಕೆಂಡರಿ ವಿದ್ಯಾಭ್ಯಾಸಕ್ಕೆ ೬ ವರ್ಷಗಳ ಅವಧಿ, (ಅದರಲ್ಲಿ ೪ ವರ್ಷ ಸೆಕೆಂಡರಿ ಮತ್ತು ೨ ವರ್ಷ ಇಂಟರ್) ೪ ವರ್ಷಗಳ ಸೆಕೆಂಡರಿ ಶಿಕ್ಷಣವಾದ ನಂತರ ಸ್ಕೂಲ್ ಫೈನಲ್ ಪರೀಕ್ಷೆ-ಇವುಗಳನ್ನು ಏರ್ಪಡಿಸಲು ಉಪಸಮಿತಿಯವರು ಶಿಫಾರಸು ಮಾಡಿರುವರೆಂದು ಹೇಳಲಾಗಿದೆ.

ಎಚ್. ಎಸ್. ಗುಬ್ಬಿಯವರಿಗೆ ಸತ್ಕಾರ

ಬೊಂಬಾಯಿಯಲ್ಲಿರುವ ಮೈಸೂರಿನವರಿಂದ ಶ್ರೀ ಎಚ್. ಎಸ್. ಗುಬ್ಬಿ ಮತ್ತು ಅವರ ಧರ್ಮಪತ್ನಿಯವರಿಗೆ ಇಂಪೀರಿಯಲ್ ಇಂಡಸ್ಟ್ರೀಸಿನ ಶ್ರೀ ಬಿ. ಎಸ್. ಸುಬ್ಬರಾಯರು ಸತ್ಕಾರ ಕೂಟವೊಂದನ್ನು ಮೊನ್ನೆ ಸಂಜೆ ಏರ್ಪಡಿಸಿದ್ದರು. ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣನ ರಾಜರಾಯರು ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಪೇಟೆ ಧಾರಣೆ

	ಪಲ್ಲ ಒಂದಕ್ಕೆ	ರೂ. ಇಂದ ರೂ.
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	
ಹೆಸರು	[illegible]	
ಹೊಂಗೆಬೀಜ	[illegible]	
ಉದ್ದು	[illegible]	
ಅವರೆ	[illegible]	
ಹಲಸಂದೆ	[illegible]	
ಮೆಣಸಿನಕಾಯಿ		
ಮೆಣಸಿನಕಾಯಿ ಮೊಣಕಟ್ಟೆ	[illegible]	[illegible]
ಹುಣಿಸೇಹಣ್ಣು	[illegible]	
ತೆಂಗಿನಕಾಯಿ	[illegible]	
ಬೆಲ್ಲ	[illegible]	[illegible]
ತೆಂಗಿನಕಾಯಿ ೧೦೦೦ಕ್ಕೆ	[illegible]	[illegible]

SRI GAYATHRI TALKIES, MYSORE



Please Note Change of Time
Matinee 3 p.m. 1st Show 6. 2nd Show 9-30

ಮಹಾತ್ಮರ ಉಪದೇಶ ! 92 ವರ್ಷದ ಖ್ಯಾತಿ !! ಭಾರತಕ್ಕೆ ಗುಣ !
ಮೈಸೂರು ಅರಮನೆಯ ರಾಜ ವೈದ್ಯ ಅಂಬಳೆ ಸಂಜೀವ ಪಂಡಿತರ
ಮನೆತನದಲ್ಲಿ 92 ವರ್ಷದಿಂದ ಪ್ರಖ್ಯಾತವಾಗಿರುವ
ಎ. ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ
ಸಂತಾನ ಸಿಂಧೂರ
ಈ ಸಿದ್ಧೌಷಧವು:—
★ ಬಸಿಕೆ ಸಂಬಂಧದ ಮುಟ್ಟಿನ ನೋವನ್ನು ನಿರ್ಮೂಲ ಮಾಡುತ್ತದೆ
★ ಕ್ರಮತಪ್ಪಿ ಬರುತ್ತಿರುವುದನ್ನು ಕ್ರಮಪಡಿಸುತ್ತದೆ.
★ ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ.
★ ಬಂಜೆತನವನ್ನು ಕೊನೆಗಾಣಿಸಿ
ಸಂತಾನ ಕೊಡುತ್ತದೆ.
ಕ್ರಯ 1 ಸೆಟ್ 5 ರೂ. ಹೊಸ ಕ್ಯಾಟಲಾಗು ಉಚಿತ
ವಿವರಗಳಿಗೆ – ಎ. ರಾಮಸ್ವಾಮಿ ಅಯ್ಯರ್ ಸನ್,
628, "ಸಂತಾನ ಸಿಂಧೂರ" ಆಫೀಸ್, ನೂರಡಿ ರಸ್ತೆ
ದಕ್ಷಿಣ ಕ್ರಾಸ್, (ಕೃಷ್ಣ ಫ್ಲೋರ್ ಮಿಲ್ ಪಕ್ಕ,) ಮೈಸೂರು.

ಬೇಕಾಗಿದ್ದಾರೆ
ಅಂಗಡಿ ಲೆಕ್ಕದಲ್ಲಿ ಪೂರ್ಣಾನುಭವವುಳ್ಳ ಒಬ್ಬರು ಗುಮಾಸ್ತರು ಬೇಕಾಗಿದ್ದಾರೆ. ಉಳಿದ ವಿಷಯಗಳಿಗೆ ಮೊಖ್ತಾ ಬಂದು ಕೇಳಿರಿ.
ಪಿ. ಎಚ್. ಸಂಗಪ್ಪ,
ಸಂತೆಪೇಟೆ, ಮೈಸೂರು

ಒಲಂಪಿಯಾ
2-10-52ರಿಂದ : ಅನಧಿಕೃತ ತಿಥಿಗಳ ಡೈ ನಾಕೆ, ಅಪ್ಸರವರ
ಪೂನಮ್
ಶಾಸ್ತ್ರೀ ಕಾಮಿನಿ ಕೌಶಲ್,
ಅಶೋಕ್ ಕುಮಾರ್
ಬೆಳಗಿನ ಪ್ರದರ್ಶನ : 2-10-52ರಿಂದ
4 ದಿನಗಳು ಮಾತ್ರ
ಮಧುಬಾಲಾ ಪಾತ್ರವಹಿಸಿರುವ
ದುಲಾರಿ

ಬಳಿಕೋಣ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೪-೧೦-೧೯೫೨ [ಸಂಚಿಕೆ ೫೭

ಅಮೆರಿಕ ರಾಯಭಾರಿ ವಾಪಸಿಗೆ ರಷ್ಯದ ಕರೆ

ವಿದ್ಯುಚ್ಛಕ್ತಿ ತಗುಲಿ ಪೋಲೀಸಿನವನ ಮರಣ

ಮೈಸೂರು ೩

ಮೈಸೂರು ತಾಲ್ಲೂಕು ಪೋಲೀಸು ಪಡೆಗೆ ಸೇರಿದ ನಜೀರ್ ಅಹಮದ್ ... ಪೋಲೀಸು ಕಾನ್ಸ್‌ಟೇಬಲ್ಲನು ಈ ... ಸುಮಾರು ೫|| ಘಂಟೆ ಸಮಯ ... ತಾಲ್ಲೂಕು ಕಛೇರಿ ಬಳಿ ಒಂದು ... ವಿದ್ಯುದ್ದೀಪದ ಕಂಭವನ್ನು ಮುಟ್ಟಿದಾ ... ಇದರಲ್ಲಿ ವಿದ್ಯುತ್ ಪ್ರವಾಹ ಹರಿ ... ತ್ತಿದ್ದು, ಆವನು ಕೂಡಲೇ ಮೃತಪ ... ನು ವಿದ್ಯುತ್ ಇಲಾಖೆಯವರು ಬಂ ... ದ ಇದನ್ನು ಸರಿಪಡಿಸಿದರು.

ಜಿಲ್ಲಾಧಿಕಾರಿಗಳ ಆರೋಗ್ಯ

ಜಿಲ್ಲಾಧಿಕಾರಿಗಳಾದ ಜ|| ಮಹಮ ... ಅಹಮದ್‌ರವರು ಉತ್ತಮಗೊಳ್ಳು ... ತ್ತಿರುವರು. ಆಸ್ಪತ್ರೆಯ ವೈದ್ಯರು ಇಂ ... ದು ಅವರ ಕಾಲಿಗೆ ಪ್ಲಾಸ್ಟರ್ ಹಾಕುವ ... ಮು ಗೊತ್ತಾಗಿದೆ ; ಅವರು ಇನ್ನೂ ... ದಿನಗಳವರೆಗೆ ಆಸ್ಪತ್ರೆಯಲ್ಲಿರಬೇ ... ಗುವುದೆಂದು ಹೇಳಲಾಗಿದೆ

ಬಂಡವಾಳಶಾಹಿ ರಾಜ್ಯಗಳಿಗೆ ಯುದ್ಧವೆಂದು ಸ್ಟಾಲಿನ್

ಬಂಡವಾಳಶಾಹಿಗೂ, ಇತರ ಪದ್ಧ ... ಗೂ ಇರುವ ಪೈಪೋಟಿಗಿಂತಲೂ ಒಂ ... ಬಂಡವಾಳಶಾಹಿ ರಾಜ್ಯಗಳಲ್ಲೇ ಹೆಚ್ಚು ... ಸ್ಪರ್ಧೆ ಇರುವುದರಿಂದ ಆ ರಾಷ್ಟ್ರಗಳಿಗೆ ... ಯುದ್ಧವು ಅನಿವಾರ್ಯವೆಂದು ರಷ್ಯದ ... ಪ್ರಧಾನಿ ಮಾರ್ಷಲ್ ಸ್ಟಾಲಿನ್ನರು ತಿಳಿ ... ಸ್ತ್ರರೆ ಈ ಸ್ಫೋಟ ಪರಿಣಾಮ ... ಅಮೆರಿಕದ ಹಿಡಿತದಿಂದ ಮೊದ ... ಬ್ರಿಟನ್ನೂ, ಅನಂತರ ಫ್ರಾನ್ಸೂ ತ ... ಕೊಂಡು ಬರಬೇಕಾಗುವುದೆಂದೂ ... ವರು ಅಭಿಪ್ರಾಯಪಟ್ಟಿರುವರು

ಆಹಾರಾಭಾವದಿಂದ ಕಳ್ಳತನ ಮತ್ತು ಲೂಟಿಗಳು

ಅನಂತಪುರದ ಜಿಲ್ಲೆಯ ಅನೇಕ ಕಡೆ ... ಆಹಾರದ ಅಭಾವದಿಂದ ಅನೇಕ ... ಪೃಷ್ಟ ಕಳ್ಳತನಗಳು ನಡೆಯುತ್ತಿ ... ವುದಾಗಿ ವರದಿಯಾಗಿದೆ. ಅಡಿಗೆಮಾ ... ಆಹಾರ, ಕುರಿ, ಕೋಳಿ, ಇವನ್ನು ... ವಿಯಬಾಗುತ್ತಿದೆ ಜವಾನುಗಳ ಬೆಳೆ ... ನ್ನು ಕತ್ತರಿಸಿಕೊಂಡು ಹೋಗಲಾ ... ತ್ತಿದೆ. ಗಾಡಿಗಳಲ್ಲಿ ಸಾಗಿಸುವ ಧಾನ್ಯ ... ಲೂಟಿ ಸಹ ನಡೆದ ವರದಿಗಳು ಬರು ... ತ್ತಿವೆ

ದಿವಾಕರರ ಸಂಬಳದಲ್ಲಿ ಖೋತಾ

... ರದ ಆರ್ಥಿಕ ದುಸ್ಥಿತಿಯ ಪರಿಣಾ ... ವಾಗಿ, ಬಿಹಾರಿನ ಗವರ್ನರರಾದ ಶ್ರೀ ಆರ್ ಆರ್ ದಿವಾಕರರು ತಮ್ಮ ಸಂಬ ... ಳದ ... ಶೇಕಡ ೧೫ರಷ್ಟನ್ನು ಅವರು ... ಹುದ್ದೆಗೆ ಸೇರಿದಾಗಿನಿಂದಲೂ, ಕಡಿಮೆ ... ಮಾಡಿಕೊಂಡಿರುವರೆಂದು ತಿಳಿದುಬಂ ... ದಿದೆ

ಬೊಂಬಾಯಿಗೆ ಎಲ್ ಎಸ್ ರಾಜುರವರ ರವಾನೆ

ಶ್ರೀ ಎಲ್ ಎಸ್. ರಾಜೂರವರನ್ನು ನೆನ್ನೆ ರಾತ್ರಿ ಬೊಂಬಾಯಿಗೆ ಪೋಲಿ ... ಸರು ಕರೆದೊಯ್ದರು ಬೊಂಬಾಯಿ ಹೈ ... ಕೋರ್ಟಿನಲ್ಲಿ ಅವರ ಅಪೀಲು ೬ ನೇ ... ವಿಚಾರಣೆಗೆ ಇದೆ

ಪ್ರಧಾನಿ ನೆಹರೂರೊಡನೆ ಕೆ. ಸಿ. ರೆಡ್ಡಿಯವರ ಪ್ರವಾಸ

ಸಂಸ್ಥಾನದ ದುರ್ಭಿಕ್ಷ ಪ್ರದೇಶಗಳಲ್ಲಿ ನಾಳೆಯಿಂದ ೨೪ ಗಂಟೆಗಳ ಕಾಲ ಪ್ರಧಾನಿ ನೆಹರೂರವರು ಪ್ರವಾಸ ಕೈಕೊಳ್ಳುವ ಸಮಯದಲ್ಲಿ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರೂ ತೆರಳಲಿರುವರೆಂದು ಹೇಳಲಾಗಿದೆ. ಅವರು ತಮ್ಮ ದೆಹಲಿ ಪ್ರಯಾಣವನ್ನು ಮುಂದಕ್ಕೆ ಹಾಕಿ ತಾವು ಬರುವವರೆಗೂ ಬೆಂಗಳೂರಿನಲ್ಲಿರುವಂತೆ ನೆಹರೂರವರು ಶ್ರೀ ರೆಡ್ಡಿಯವರಿಗೆ ಸೂಚಿಸಿರುವರೆಂದೂ ವರದಿಯಾಗಿದೆ.

ಸಮುದ್ರಕ್ಕೆ ಧುಮುಕಿ ನಾಲ್ವರ ಮರಣ

ಸಿಂಹಳಕ್ಕೆ ಅಕ್ರಮವಾಗಿ ವಲಸೆ ಹೋಗಲೆತ್ನಿಸಿದ ಹಲವರು ಒಂದು ದೋಣಿಯಲ್ಲಿ ಮನ್ನಾರ್ ಖಾರಿಯನ್ನು ದಾಟುತ್ತಿದ್ದಾಗ ಎದುರುಗಡೆ ಸಿಂಹಳದ ಪೋಲೀಸರ ಪಹರೆಯವರು ಬರಲಾಗಿ ದೋಣಿಯಲ್ಲಿದ್ದವರು ನೀರಿಗೆ ಧುಮುಕಿದರೆಂದು, ಆ ಪೈಕಿ ಈಜಿಕೊಂಡು ಬಂದ ೧೬ ಜನರನ್ನು ದಸ್ತಗಿರಿ ಮಾಡಲಾಯಿತೆಂದೂ; ೪ ಜನರು ನೀರಿನಲ್ಲಿ ಮುಳುಗಿ ಪ್ರಾಣ ಬಿಟ್ಟರೆಂದೂ ವರದಿಯಾಗಿದೆ

ಲಂಡನ್ನಿನಲ್ಲಿ ಮೈಸೂರಿನ ಹೊಸ ವ್ಯಾಪಾರಿ ಏಜೆಂಟರು

ಚಿತ್ರದುರ್ಗದ ಜಿಲ್ಲಾಧಿಕಾರಿಗಳಾಗಿರುವ ಶ್ರೀ ಕೆ. ಲಕ್ಷ್ಮೀ ನಾರಾಯಣ ಸ್ವಾಮಿಯವರನ್ನು ಲಂಡನ್ನಿನಲ್ಲಿ ಮೈಸೂರು ಸಂಸ್ಥಾನದ ವ್ಯಾಪಾರಿ ಪ್ರತಿನಿಧಿಯಾಗಿ ನೇಮಿಸಲು ಸರ್ಕಾರದವರು ನಿರ್ಧರಿಸಿರುವರೆಂದು ಗೊತ್ತಾಗಿದೆ. ಅವರ ಸ್ಥಾನಕ್ಕೆ ಶ್ರೀ ಟಿ. ವೆಂಕಟಶಿವರೆಡ್ಡಿಯವರನ್ನು ಕಳುಹಿಸಲಾಗುವುದೆಂದೂ ಹೇಳಲಾಗಿದೆ

ಎಂ. ಸಿ. ಮರಿಯಪ್ಪನವರ ನಿಧನ

ಮಾಜಿ ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಎಂ. ಸಿ ಮರಿಯಪ್ಪನವರು ಹೃದಯರೋಗದಿಂದ ಈ ದಿನ ಬೆಳಿಗ್ಗೆ ಶ್ರೀ ಕೃಷ್ಣ ರಾಜೇಂದ್ರ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೭೦ ವರ್ಷ ವಯಸ್ಸಾಗಿತ್ತು.

ಅಮೆರಿಕಾ ರಾಯಭಾರಿಯ ವಾಪಸಿಗೆ ರಷ್ಯದ ಒತ್ತಾಯ

ರಷ್ಯದಲ್ಲಿರುವ ಅಮೆರಿಕಾ ರಾಯಭಾರಿ ಜಾರ್ಜ್ ಕೆನ್ನಾನ್‌ರವರನ್ನು ವಾಪಸು ಕರೆಸಿಕೊಳ್ಳಬೇಕೆಂದು ರಷ್ಯಾ ಸರ್ಕಾರದವರು ಅಮೆರಿಕವನ್ನು ಒತ್ತಾಯಪಡಿಸಿರುವರೆಂದು ತಿಳಿದುಬಂದಿದೆ ರಷ್ಯಾವನ್ನು ನಿಂದಿಸುವ ಮತ್ತು ರಷ್ಯಕ್ಕೆ ವಿರೋಧವಾದ ಹೇಳಿಕೆಗಳನ್ನು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟರೆಂದು ಹೇಳಲಾಗಿದೆ

ಕಾಂಡ್ಲಾ-ಡೀಸಾ ರೈಲು ಮಾರ್ಗದ ಆರಂಭೋತ್ಸವ

ಕಚ್ ಖಾರಿಯ ಕಾಂಡ್ಲಾ ರೇವಿನಿಂದ ರಜಪುಟಾಣ, ಮಧ್ಯಭಾರತ ಮತ್ತು ದಕ್ಷಿಣ ಪಂಜಾಬುಗಳಿಗೆ ಪ್ರಯಾಣ ಸೌಕರ್ಯವನ್ನು ಏರ್ಪಡಿಸುವ ಕಾಂಡ್ಲಾ ಡೀಸಾ ರೈಲು ರಸ್ತೆಯನ್ನು ಮೊನ್ನೆ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಆರಂಭಗೊಳಿಸಿದರು. ೧೭೧ ಮೈಲಿ ಉದ್ದದ ರೈಲು ರಸ್ತೆಯಲ್ಲದೆ. ಇನ್ನೆರಡು ರಸ್ತೆಗಳನ್ನು ಆ ಪ್ರದೇಶದಲ್ಲಿ ನಿರ್ಮಿಸಲಾಗುವುದೆಂದೂ ಅವರು ತಿಳಿಸಿರುತ್ತಾರೆ ರೈಲು ಮಾರ್ಗವು ಗಾಂಧಿ ಧಾಮ್ ಎಂಬ ಸಿಂಧ್ ನಿರಾಶ್ರಿತರಿರುವ ಹೊಸ ನಗರದವರೆಗೆ ಇರುವುದು.

ಯುವಕನ ಸ್ಪರ್ಶದಿಂದ ವಿದ್ಯುದ್ದೀಪ !

ಇಂಗ್ಲೆಂಡಿನ ಕಾರ್ಡಿಫ್ ರೇವುನಗರದಲ್ಲಿರುವ ೨೦ ವರ್ಷದ ಯುವಕನೊಬ್ಬನ ಹಸ್ತಸ್ಪರ್ಶಮಾತ್ರದಿಂದಲೇ ವಿದ್ಯುದ್ದೀಪವು ಹತ್ತುವುದೆಂದು, ಈ ರೀತಿಯಾಗಿ ೧೫ ವಾಟ್ಸಿನ ದೀಪವನ್ನು ಯುವಕನು ಹತ್ತಿಸಿದಾಗ, ಆ ಬೆಳಕಿನಲ್ಲಿ ಪುಸ್ತಕವನ್ನು ಓದುತ್ತಿರುವಂತೆಯೇ ಅವನ ಚಿತ್ರವನ್ನು ತೆಗೆಯಲಾಯಿತೆಂದೂ ಹೇಳಲಾಗಿದೆ. ದೀಪ ಹತ್ತಿಸುವ ಮುಂಚೆ ಅವನು ತನ್ನ ಕೈಯನ್ನು ಉಜ್ಜಿದನು. ಆತನು ಸೈಕಲ್ ಸವಾರಿ ಮಾಡುವಾಗ ಯಾರನ್ನಾದರೂ ಮುಟ್ಟಿದರೆ ಅವರಿಗೆ ಷಾಕ್ ಹೊಡೆಯುವುದೆಂದೂ, ಆದ್ದರಿಂದ ಅವನು ಕೈಗೆ ರಬ್ಬರು ಚೀಲವನ್ನು ಹಾಕಿಕೊಂಡು ಸೈಕಲ್ ಸವಾರಿ ಮಾಡುವನೆಂದೂ ಹೇಳಲಾಗಿದೆ.

ಮೈಸೂರು ಸಂಸ್ಥಾನಕ್ಕೆ ಚೀಣಾ-ರಷ್ಯಾ ಆಹಾರ

ಬೆಂಗಳೂರು ೪

ಭಾರತಕ್ಕೆ ರಷ್ಯಾ ಮತ್ತು ಚೀಣಾ ರಾಷ್ಟ್ರಗಳು ದಾನವಾಗಿ ಕಳುಹಿಸಿರುವ ಆಹಾರದ ಆರನೇ ಒಂದು ಭಾಗವಾದ ೨೦೦೦ ಟನ್ ಗೋಧಿ, ೧೦೦೦ ಟನ್ ಅಕ್ಕಿ ಮತ್ತು ೧ ಲಕ್ಷ ಟನ್ ಹಾಲು ಇವು ಸಂಸ್ಥಾನಕ್ಕೆ ಬಂದಿರುತ್ತದೆ ನೆನ್ನೆ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಇಲ್ಲಿನ ರೆಡ್ ಕ್ರಾಸ್ ಸಂಸ್ಥೆಯವರು ಇವನ್ನು ಸ್ವೀಕರಿಸುವ ಸಮಾರಂಭವನ್ನು ಏರ್ಪಡಿಸಿದ್ದರು ರಷ್ಯಾ ಮತ್ತು ಚೀಣಾಗಳ ಪರವಾಗಿ ೫ ಜನರ ಮಂಡಲಿಯೊಂದು ಇದನ್ನು ಒಪ್ಪಿಸಿತು ಈ ಪೈಕಿ ೫೦೦ ಟನ್ ಗೋಧಿ, ೨೫೦ ಟನ್ ಅಕ್ಕಿ ಮತ್ತು ೨೫ ಸಾವಿರ ಟನ್ ಹಾಲು ಕೋಲಾರಕ್ಕೂ,೩೦೦ ಟನ್ ಗೋಧಿ, ೨೫೦ ಟನ್ ಅಕ್ಕಿ,೧೦ ಸಾವಿರ ಟನ್ ಹಾಲು ತುಮಕೂರಿಗೂ, ೫೦೦ ಟನ್ ಗೋಧಿ, ೧೫೦ ಟನ್ ಅಕ್ಕಿ ಮತ್ತು ೧೨ ಸಾವಿರ ಟನ್ ಹಾಲು ಚಿತ್ರದುರ್ಗಕ್ಕೂ ಕೊಟ್ಟು, ಉಳಿದುವನ್ನು ಶಿವಮೊಗ್ಗ, ಕಡೂರು, ಹಾಸನ ಮತ್ತು ಬೆಂಗಳೂರು ಜಿಲ್ಲೆಗಳಿಗೆ ಕಳುಹಿಸುವಂತೆ ಗೊತ್ತಾಗಿದೆ

ಭಾರತದ ೫೫ ಕಡೆ ಸಾಮೂಹಿಕ ಯೋಜನೆ ಆರಂಭ

ಗಾಂಧಿಜಿಯವರ ಜಯಂತಿ ದಿನೋತ್ಸವದ ಸಂಬಂಧವಾಗಿ ಮೊನ್ನೆ ಭಾರತದ ೫೫ ಕೇಂದ್ರ ಹಳ್ಳಿಗಳಲ್ಲಿ ಸಾಮೂಹಿಕ ಯೋಜನೆಗಳ ಪ್ರಾರಂಭೋತ್ಸವವು ನೆರವೇರಿತು ಪ್ರಧಾನಿ ನೆಹರೂರವರು, ಆಲಿಪುರದಲ್ಲಿ ಗುದ್ದಲಿ ತೆಗೆದುಕೊಂಡು ಮಣ್ಣನ್ನು ಅಗೆದರು ಅವರೊಡನೆ ಇದ್ದ ಇಂದಿರಾ ಗಾಂಧಿ ಮತ್ತು ಅಮೆರಿಕದ ರಾಯಭಾರಿ ಚೆಸ್ಟರ್ ಬೌಲ್ಸ್‌ರವರೂ ಹಾಗೆಯೇ ಮಣ್ಣನ್ನು ಅಗೆದರು ಹಳ್ಳಿಗಳನ್ನು ಅಭಿವೃದ್ಧಿಗೊಳಿಸುವ ಬೃಹತ್ ವಿಧಾಯಕವಾದ ಕಾರ್ಯಕ್ರಮವನ್ನು ಗೊತ್ತುಪಡಿಸಲಾಗಿದ್ದಿತು ಒಟ್ಟು ೨೩,೯೦೦ ಚದುರಮೈಲಿಯಲ್ಲಿ ೧೬೫೬೪ ಹಳ್ಳಿಗಳ ೧ ಕೋಟಿ ೫೩ ಲಕ್ಷ ಪ್ರಜೆಗಳ ಆರ್ಥಿಕಾಭಿವೃದ್ಧಿಗಾಗಿ ೩೪ ಕೋಟಿ ರೂಗಳ ಯೋಜನೆಯನ್ನು ಈಗ ಪ್ರಾರಂಭಿಸಲಾಗಿರುವುದು ಇದರ ಅಂಗವಾಗಿ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ನಗರದಲ್ಲೂ ೬೫ ಲಕ್ಷ ರೂ. ಯೋಜನೆಯನ್ನು ಮೈಸೂರು ವಿಧಾನ ಸಭೆಯ ಅಧ್ಯಕ್ಷರಾದ ಶ್ರೀ ಹೆಚ್. ಸಿದ್ದಯ್ಯನವರು ಮೊನ್ನೆ ಆರಂಭಗೊಳಿಸಿದರು ೩೦೦ ಹಳ್ಳಿಗಳ ಅಭಿವೃದ್ಧಿಗಾಗಿ ೩ ಕೇಂದ್ರವನ್ನು ಆರಿಸಲಾಗಿದೆ

ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದ ಆಶ್ರಯದಲ್ಲಿ, ಚಿಕ್ಕನ ಬಾಲಕರ ಮಾಧ್ಯಮಿಕ ಶಾಲೆಯ ಸಭಾಂಗಣದಲ್ಲಿ, ನಾಳೆ ಸಂಜೆ ೫-೩೦ ಘಂಟೆಗೆ, ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಸುಬ್ಬರಾಮಪ್ಪನವರು ರಂಗನಾಥ ರಾಮಾಯಣ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಬ್ರಿಟನ್ನಿನ ಪ್ರಥಮ ಅಣು ಬಾಂಬು ಪ್ರಯೋಗ

ಬ್ರಿಟನ್ನಿನಲ್ಲಿ ತಯಾರಿಸಲಾದ ಅಣು ಬಾಂಬಿನ ಪ್ರಪ್ರಥಮ ಆಸ್ಫೋಟನೆಯ ಪ್ರಯೋಗವು ನೆನ್ನೆ ಬೆಳಗ್ಗೆ ಆಸ್ಟ್ರೇಲಿಯಾ ತೀರದಲ್ಲಿರುವ ಮಾಂಟಬೆಲ್ಲೋ ದ್ವೀಪದಲ್ಲಿ ಯಶಸ್ವಿಯಾಗಿ ನಡೆಯಿತೆಂದು ವರದಿಯಾಗಿದೆ. ಇದಕ್ಕಾಗಿ ಕೃತಕವಾದ ನಿರ್ಜನ ನಗರವೊಂದನ್ನೇ ನಿರ್ಮಿಸಲಾಗಿದ್ದಿತು ಆಸ್ಫೋಟನೆಯಿಂದ ಉಂಟಾದ ಹೊಗೆಯು ನಾಲ್ಕು ನಿಮಿಷದೊಳಗೇ ಆಕಾಶದಲ್ಲಿ ೧೨ಸಾವಿರ ಅಡಿ ಎತ್ತರದಲ್ಲೂ ಮತ್ತು ಒಂದು ಮೈಲಿ ವಿಸ್ತಾರಕ್ಕೂ ಹರಡಿತ್ತೆಂದು ಹೇಳಲಾಗಿದ ಆಸ್ಫೋಟನೆಯ ಪ್ರಕಾಶವು ಮುಳುಗುವ ಸೂರ್ಯನ ಬೆಳಕಿನಂತಿತ್ತು, ಆಸ್ಫೋಟನೆಯ ಪರಿಣಾಮದ ಬಗ್ಗೆ ಬ್ರಿಟಿಷ್ ಅಣು ಸಂಶೋಧಕರು ೧೫ ದಿನಗಳ ಕಾಲ ಪರಿಶೀಲನೆ ನಡಸಿ ಅನಂತರ ತಮ್ಮ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಿರುವರೆಂದೂ ಹೇಳಲಾಗಿದೆ

ರುದ್ರಪಟ್ಟಣದ ಚೆನ್ನಬಸವಯ್ಯನವರಿಗೆ ಸನ್ಮಾನ

ಸಂಸ್ಥಾನದ ಹಿರಿಯ ಗಾಯಕರ ಸ್ಥಾನಕ್ಕೆ ನೇಮಿಸಲ್ಪಟ್ಟಿರುವ ಶ್ರೀ ರುದ್ರಪಟ್ಟಣ ಚೆನ್ನಬಸವಯ್ಯನವರನ್ನು ಗೌರವಿಸುವ ಸಲುವಾಗಿ ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದವರು ೩೦ ನೇ ತಾರೀಕು ಶ್ರೀ ಟಿ ಬಿ ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ಸಹಕಾರ ಭವನದಲ್ಲಿ ಒಂದು ಸಭೆಯನ್ನು [illegible] ನಯಾದನಂತರ [illegible] [illegible] ಭಾಷಣ ಮಾಡಿದರು [illegible] [illegible] ಸಂಗೀತದ [illegible] [illegible] [illegible] ಸನ್ಮಾನ [illegible] [illegible] ಪರ [illegible] ನಿರಪ್ಪ ಮತ್ತು ಆರ್ ಚಂದ್ರಶೇಖರಯ್ಯನವರು ಶ್ರೀ ರ [illegible] ಅಭಿನಂದಿಸಿದರು ಶ್ರೀ ಚನ್ನಬಸವಯ್ಯನವರ ಶಕ್ತಿ ಉತ್ತಮವಿದ್ದು, ಸಂಗೀತ [illegible] ಚಿತ್ರಕಲೆಗಳಲ್ಲಿ ಮೈಸೂರು ಸಹೋದರರು ಸೇವೆ ಸಲ್ಲಿಸುತ್ತಿರುವುದಲ್ಲದೆ ಉನ್ನತ ಮಟ್ಟದ ಸಂಸ್ಕೃತಿಯ ಪ್ರಚಾರಕರೂ ಆಗಿರ ಸರಿಂದ, ಅವರಿಗೂ ತಮಗೂ ೨೧ ವರ್ಷಗಳಿಂದ ಸೋದರಭಾವವು ಬೆಳೆದು ಬಂದಿರುವುದೆಂದೂ ತಿಳಿಸಿದರು ಸಚಿವ ಶ್ರೀ ಟಿ ಸಿದ್ಧಲಿಂಗಯ್ಯನವರು ಶ್ರೀ ರುದ್ರಪಟ್ಟಣ ಚನ್ನಬಸವಯ್ಯನವರು ಮೈಸೂರಿಗೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿದರು ತರುವಾಯ ಅಧ್ಯಕ್ಷ ಶ್ರೀ ಮಲ್ಲಾರಾಧ್ಯರು ಮಾತನಾಡಿ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರವು ನಾನಾ ಕ್ಷೇತ್ರಗಳಲ್ಲಿ ಸಲ್ಲಿಸುತ್ತಿರುವ ಸೇವೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು

ಸರಸ್ವತಿ ಪೂಜೆ

ಹೆಬ್ಬಳಗುಪ್ಪೆಯ ಹಳೇ ವಿದ್ಯಾರ್ಥಿಗಳ ಸಂಘದಲ್ಲಿ ಕಳೆದ ೨೭ನೇ ತಾರೀಖು ಸರಸ್ವತಿ ಪೂಜೆ ಮತ್ತು ಮಂಗಳಾರತಿಗಳು ಶ್ರೀ ಎಚ್ ಸಿ ಕೃಷ್ಣೇ ಅರಸಿನವರ ಅಧ್ಯಕ್ಷತೆಯಲ್ಲಿ ಜರುಗಿದುವು

ನೆಹರೂರವರಿಗೆ ಪುಣ್ಯ ಕ್ಷೇತ್ರಗಳಲ್ಲಿ ಭಕ್ತಿ ಗೌರವ

ಹೈದರಾಬಾದಿನಲ್ಲಿ ಪ್ರವಾಸ ಕೈಗೊಂಡಿದ್ದ ಪಂಡಿತ ನೆಹರೂರವರು ಕಾಳೀ ದೇವಾಲಯದಲ್ಲಿ ಪೂಜೆ ಸಲ್ಲಿಸಿದರೆಂದು ಬಂದ ಪತ್ರಿಕಾ ವರದಿಯನ್ನು ಕುರಿತು ನೆಹ್ರೂರವರು ಮಾತನಾಡಿ ತಾವು ಪೂಜೆಯನ್ನು ಮಾಡುವ ಮನೋಭಾವವನ್ನೇ ಹೊಂದಿರುವುದಿಲ್ಲವೆಂದೂ, ಪೂಜಾ ಕ್ಷೇತ್ರಗಳಿಗೆ ತಾವು ಸಂದರ್ಶನೆ ಕೊಡುವುದಕ್ಕೆ ಅವುಗಳ ಮೇಲೆ ತಮಗಿರುವ ಭಕ್ತಿಯೇ ಕಾರಣವೆಂದೂ ತಿಳಿಸಿರುತ್ತಾರೆ

ನವ ಚೀಣಾದ ಆರ್ಥಿಕ ಪ್ರಗತಿ

ನವಚೀಣಾದ ಆರ್ಥಿಕ ಪ್ರಗತಿಯನ್ನು ಕುರಿತು ಭಾರತದ ಅರ್ಥಶಾಸ್ತ್ರಜ್ಞರಾದ ವಿ ಕೆ ಆರ್ ವಿ ರಾವ್ ಮತ್ತು ಚಲನಚಿತ್ರ ಪತ್ರಿಕೋದ್ಯಮಿ ಕೆ ಎ ಅಬ್ಬಾಸ್‌ರವರ ಲೇಖನಗಳನ್ನೊಳಗೊಂಡಿರುವ ನವಚೀಣಾದ ಆರ್ಥಿಕ ಪ್ರಗತಿ ಎಂಬ ಪುಸ್ತಕವು ಮೈಸೂರಿನ ಇಂಡಿಯಾ ಚೀಣಾ ಸ್ನೇಹ ಸಂಘದವರಿಂದ ಪ್ರಕಟಿಸಲ್ಪಟ್ಟಿದೆ ಪುಸ್ತಕದ ಬೆಲೆ ೦-೪-೦ ಚೀಣಾ ದೇಶದ ಪ್ರಗತಿಯನ್ನು ಅರಿತು ನಮ್ಮ ದೇಶವೂ ಅದೇ ರೀತಿ ಮುಂದುವರಿಯಬೇಕೆಂದ ಬಯಸುವವರು ಅಗತ್ಯವಾಗಿ ಇದನ್ನು ಓದಬೇಕು

ಮದುವಣಗಿತ್ತಿ ಬಳಿ ಮದ್ಯ

ಮದರಾಸಿನಲ್ಲಿ ನಡೆದ ಒಂದು ಮದುವೆಯಲ್ಲಿ ಮದುವಣಗಿತ್ತಿಯ ಬಳಿ ೧೨ ಡ್ರಾಂಗಳ ಹೆಂಡವು ಇದ್ದುದು ಪತ್ತೆಯಾಗಿ ಪೋಲೀಸಿನವರು ಅಕೆಯ ಮೇಲೆ ಮೊಕದ್ದಮೆ ಹೂಡಲು ನ್ಯಾಯಾಧೀಶರು ಅವಳಿಗೆ ಒಂದು ತಿಂಗಳು ಕಠಿಣ ಸಜಾ ವಿಧಿಸಿದರು ವರನಿಗೂ ಮತ್ತು ಅವನ ಜೊತೆಯವರಿಗೂ ಸಹ ಇದೇ ಅಪರಾಧಕ್ಕಾಗಿ ತಲಾ ೨೫ ರೂ ಜುಲ್ಮಾನೆ ವಿಧಿಸಲಾಯಿತು

ಸಹಕಾರ ಶಿಕ್ಷಣ ತರಗತಿ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ನಡೆಯುವ ಸಹಕಾರ ಶಿಕ್ಷಣ ತರಗತಿಗಳು ಮೈಸೂರು ಸೂರಟ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಇದೇ ಮಾಹೆ 6 ನೇ ತಾರೀಖು ಸಾಯಂಕಾಲ 6 ಗಂಟೆಗೆ ಪ್ರಾರಂಭಿಸಲ್ಪಡುತ್ತವೆ ಸೇರಲು ಅರ್ಜಿ ಹಾಕಿಕೊಂಡಿರುವವರು ಸಕಾಲದಲ್ಲಿ ಹಾಜರಾಗಬೇಕಾಗಿ ತಿಳಿಸಲಾಗಿದೆ

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩೦ ಮಿಶ್ರ ವಾದ್ಯಮೇಳ [illegible] ಮಧ್ಯಾಹ್ನ ೧ ೪೦ ಜಲತರಂಗ್ [illegible] ಪುಟ್ಟರ ಗೀತೆಗಳು ಸಂಜೆ ೫.೪೦ [illegible] ೭ ೨೦ ಸಿ. ಕೆ [illegible], ಸಂಗೀತ [illegible] ಮತ್ತು ಆರ್ ಶ್ರೀನಿವಾಸ [illegible] ಸಂಗೀತ. ೭ ಉಸ್ತಾದ್ ಫೈಯ್ಯಾಜ್ [illegible] ದರ್ಗ ಸಂಗೀತ ೮.೪೦ ಅಕ್ಕನ [illegible] ಚಿತ್ರ ಸಂಗೀತ ೯ ೩೦ ದಾಶರಥಿ ದೀಕ್ಷಿತರವರಿಂದ ವಿರಚಿತವಾದ ಅಶ್ವಿನಿ [illegible]

ವ್ಯಂಗ್ಯ ಚಿತ್ರಗಳಿಗೆ ಬಹುಮಾನ ಕೊಡಬೇಕು

ಈ ಸಲದ ದಸರಾ ವಸ್ತು ಪ್ರದರ್ಶನದ ಚಿತ್ರಕಲಾ ವಿಭಾಗದಲ್ಲಿ ತೈಲ, ಜಲಸೀಸ ದಕಡ್ಡಿ ಚಿತ್ರಗಳು ಮತ್ತು ಫೋಟೋಗಳು ಸೇರಿದ ವಿಭಾಗಗಳಿಗೆ ಬಹುಮಾನಗಳನ್ನು ಕೊಟ್ಟಿರುವಂತೆ ವ್ಯಂಗ್ಯ ಚಿತ್ರ (ಕಾರ್ಟೂನು) ಗಳಿಗೂ ಕೊಡದೆ ಇರುವುದು ಮತ್ತು ನವೀನ ಕಾಲದಲ್ಲಿ ವ್ಯಂಗ ಚಿತ್ರಗಳೂ ಕಲೆಯ ಒಂದು ಭಾಗವಾಗಿರುವುದನ್ನು ಗಮನಕ್ಕೆ ತೆಗೆದುಕೊಳ್ಳದಿರುವುದು ವಿಷಾದಕರವೆಂದು ಚಿತ್ರಕಲಾ ಪ್ರೇಮಿಗಳು ಬರೆದಿಯವ ಪತ್ರದಲ್ಲಿ ತಿಳಿಸಿರುತ್ತಾರೆ

ಹಿಂದಿನ ಎರಡು ವರ್ಷಗಳಲ್ಲಿ ಬಹುಮಾನ ಕೊಟ್ಟಂತೆ ಈ ಸಾರಿಯೂ ವ್ಯಂಗ್ಯಚಿತ್ರಗಳಿಗೆ ಕೊಡಬೇಕೆಂದು ಸೂಚಿಸಿರುತ್ತಾರೆ

ಸ್ಪೆಷಲ್ ಎರಡು ನಾಟಕಗಳು

★

ಗುಬ್ಬಿ ಥಿಯೇಟ್ರಿಕಲ್

ಕಂಪೆನಿ

★

ಮೈಸೂರು ರತ್ನಾವಳಿ

ಥಿಯೇಟರಿನಲ್ಲಿ

ತಾ|| 6-10-52 ನೇ ಸೋಮವಾರ

ರಾತ್ರಿ 10 ಕ್ಕೆ

ಸದಾರಮೆ

ತಾ|| 7-10-52 ನೇ ಮಂಗಳವಾರ

ರಾತ್ರಿ 10ಕ್ಕೆ

ಗುಲೇಬಕಾವಲಿ

ನಾಟಕರತ್ನ

ಜಿ. ಹೆಚ್. ವೀರಣ್ಣ ಮತ್ತು

ಸಿನಿಮಾ ತಾರೆ ಬಿ. ಜಯಮ್ಮ

ಇವರ ಅಭಿನಯ

ಮನೆ ಬಾಡಿಗೆಗೆ ಬೇಕಾಗಿದೆ

ಮಹಾರಾಜಾ ಕಾಲೇಜಿಗೆ ಹತ್ತಿರದಲ್ಲಿ ನಲ್ಲಿ ದೀಪ ಫ್ಲಷ್ ಕಕ್ಕಸ್ಸು ಇರುವ, ಅನುಕೂಲವೂ ಅಂದವೂ ಆದ ಚಿಕ್ಕ ಮನೆ ಬಾಡಿಗೆಗೆ ಬೇಕಾಗಿದೆ ಮನೆಯು ಒಂದೇ ಒಕ್ಕಲಿರುವಂತಿರಬೇಕು ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ವ್ಯವಹಾರ ನಡೆಸುವುದು

ಸಿ. ವಿ. ರಾಮಯ್ಯ ಅಂಡ್ ಸನ್ಸ್,

ಬರ್ಮ್ಶೆಲ್ ಏಜೆಂಟ್ಸ್, ಚಾಮರಾಜನಗರ

Edited Printed and Published by A R Nagarajan at Sadhvi Press, D. Subbaiah Road, Mysore

ಧರ್ಮ ಪರಾಯಣೆ

ದಿ|| ಸಾಕಮ್ಮ

ನವರು

ಮೈಸೂರ ಅರಸರ [illegible] [illegible] ಶ್ರೀ [illegible] ಚಿಕ್ಕ [illegible] [illegible] ಧರ್ಮ [illegible] [illegible] [illegible] [illegible] ಪಟ್ಟ [illegible] ಅವರ [illegible] ಸನ್ಮಾನಿತರಾಗಿರುತ್ತಾರೆ

SREE - GANESHA TALKIES, MYSORE

From 4—10—52 Daily 3 Shows

GOLDEN HORDE OF CHENGIZ KHAN

(Technicolor)

A Universal International Picture

Featuring Ann Blyth and David Farrar

ಗೋಲ್ಡನ್ ಹೋರ್ಡ್ ಆಫ್ ಚೆಂಘೀಸ್ ಖಾನ್

ಚೆಂಗೀಸ್‌ಖಾನನು ಪ್ರಪಂಚವನ್ನೇ ಜಯಿಸಲು ಮಾಡಿದ ಘೋರ ಯುದ್ಧಗಳ ಚಲನ ಚಿತ್ರ!

ಇಷ್ಟೊಂದು ಬಾಣ ಮತ್ತು ಖಡ್ಗಗಳ ಪ್ರಯೋಗವನ್ನು ನೀವು ಹಿಂದೆಂದೂ ನೋಡಿರಲಿಲ್ಲ!!

ದಸರಾ ಮಹೋತ್ಸವಕ್ಕಾಗಿ:- ಹೊಸ ಮಾದರಿಯ ಮೈಸೂರು ಸಿಲ್ಕ್ ಕ್ರೇಪ್ ಸೀರೆಗಳೂ, ಧರ್ಮಾವರಂ, ಆರ್ಟ್ ಸೀರೆಗಳೂ, ಡಿಂಡಿಗಲ್, ಬೊಂಬಾಯಿ ಮಿಲ್ ಸೀರೆಗಳೂ ಬಂದಿವೆ

★ M. V. ಭೋಜಯ್ಯ

[illegible] ಎದುರು ಮೈಸೂರು ಶ್ರೀ [illegible]

ಪೋ. ಸಂ. 792 WEEKLY EDITION ಬಿಡಿಪ್ರತಿಗೆ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೫-೧೦-೧೯೫೨ [ಸಂಚಿಕೆ ೮

ಪರ್ಷಿಯಾಕ್ಕೆ ಬ್ರಿಟನ್ನಿನ – ಪರಿಹಾರ ಧನವಿಲ್ಲ –

ಓಡುತ್ತಿದ್ದ ರೈಲಿನಲ್ಲಿ ಕಳ್ಳತನ ಮಾಡಿ ಪರಾರಿ

ಮೈಸೂರು ೪

೩ ದಿನ ಬೆಳಿಗ್ಗೆ ಚಾಮರಾಜನಗರ ಕೋಟೆ ರೈಲು ಮೈಸೂರು ನಿಲ್ದಾಣದಿಂದ ಸ್ವಲ್ಪ ದೂರದಲ್ಲಿರುವ ಓವರ್ ಬ್ರಿಡ್ಜ್ (ಸೇತುವೆ) ಬಳಿ ಹೋಗುತ್ತಿದ್ದಾಗ ಗಾಡಿಯಲ್ಲಿದ್ದ ಒಬ್ಬಾತನು ಮತ್ತೊಬ್ಬ ಪ್ರಯಾಣಿಕರ ಕೈ ಚೀಲವನ್ನು ಅಪಹರಿಸಿ, ರೈಲು ಹೋಗುತ್ತಿದ್ದಂತೆಯೇ ಧುಮುಕಿ ಓಡಿಹೋದನೆಂದು ವರದಿಯಾಗಿದೆ ಸ್ವಲ್ಪ ಹೊತ್ತಿನ ಮೇಲೆ ಚೀಲ ಇಲ್ಲದಿರುವುದನ್ನು ಕಂಡು ಪ್ರಯಾಣಿಕರು ರೈಲಿನ ಸರಪಣಿಯನ್ನೆಳೆದು ನಿಲ್ಲಿಸಿ ಕಳ್ಳನನ್ನು ಅಟ್ಟಿಸಿಕೊಂಡು ಹೋದರೂ ಅವನು ಸಿಕ್ಕಲಿಲ್ಲವೆಂದು ಹೇಳಲಾಗಿದೆ

ಕಳ್ಳತನಕ್ಕಾಗಿ ದಸ್ತಗಿರಿ

ರಾಜಧಾನಿಯ ನಿರಂಜನ ರಾಜೆ ಅರಸನವರ ತೋಟದ ಬಳಿ ಒಂದು ಮನೆಬಾವಿಯ ಕಬ್ಬಿಣದ ರಾಟೆಯನ್ನು ಈ ಬೆಳಿಗ್ಗೆ ಕದ್ದುಕೊಂಡು ಹೋಗುತ್ತಿದ್ದ ಅಬ್ದುಲ್ ಸತ್ತಾರ್ ಎಂಬ ಆಸಾಮಿಯನ್ನು ಕೃಷ್ಣರಾಜೇಂದ್ರ ಪೋಲೀಸರು ಬಂಧಿಸಿರುತ್ತಾರೆ ಅವನಿಗೆ ಹಿಂದೆ ಕಳ್ಳತನಕ್ಕಾಗಿ ಶಿಕ್ಷೆಯಾಗಿತ್ತೆಂದು ಹೇಳಲಾಗಿದೆ

ಹಿಂದಿ ತರಗತಿಗಳು

ವಾಣಿವಿಲಾಸ ಮೊಹಲ್ಲಾ ನಿವಾಸಿಗಳಿಗಾಗಿ ರಾಜಧಾನಿಯ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಹಿಂದಿ ತರಗತಿಗಳು ಗೋಕುಲದ ಪಾರ್ಕಿನ ಬಳಿ ಇರುವ ...-ನೇ ನಂಬರು ಮನೆಯಲ್ಲಿ ಪ್ರತಿ ನಿತ್ಯವೂ ಸಂಜೆ ನಡೆಯುವುವು ಸಾರ್ವಜನಿಕರು ಕೂಡಲೇ ಈ ಅವಕಾಶವನ್ನು ಉಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ

ಗಾಂಧಿ ಜಯಂತಿ

ರಾಜಧಾನಿಯ ಒಂಟಿಕೊಪ್ಪಲಿನ ಗೋಕುಲ ಪಾರ್ಕ್ ಬಳಿಯಿರುವ ಹಿಂದಿ ಪ್ರಚಾರ ಸಭೆಯಲ್ಲಿ ಕಳೆದ ೨ನೇ ತಾ|| ಮಹಾತ್ಮಾ ಗಾಂಧೀಜಿಯವರ ಜಯಂತಿಯು ನಡೆಯಿತು ಶ್ರೀ ಎಚ್ ಅನಂತರಾಯರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿಗಳಾದ ಮಂಜುಳಾ, ಶಾಂತಾ, ಕೆ ಆರ್ ಸರೋಜಾ ಇವರಿಂದ ಗಾಂಧಿ ಗೀತೆಗಳು ಆದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಚನಾತ್ಮಕ ಕಾರ್ಯಗಳ ಪೈಕಿ ಒಂದಾದ ಹಿಂದಿಯ ಅಭ್ಯಾಸವನ್ನು ಎಲ್ಲರೂ ಮಾಡಬೇಕೆಂದು ತಿಳಿಸಿದರು ಶ್ರೀ ಡಿ ಸುಂದರ್‌ರವರಿಂದ ವಂದನಾರ್ಪಣೆಯಾದ ನಂತರ ಸಕ್ಕರೆ ವಿನಿಯೋಗವಾಯಿತು

ಈಜಿಪ್ಟಿನಲ್ಲಿ ಮಾದಕ ದ್ರವ್ಯ ವ್ಯಾಪಾರಿಗಳಿಗೆ ಗಲ್ಲು

ಈಜಿಪ್ಟಿನ ಜ|| ನಗೀಬರ ಸರ್ಕಾರದವರು ಸಾಮಾಜಿಕ ದುರ್ವ್ಯಸನಗಳನ್ನು ಹೋಗಲಾಡಿಸುವ ಉದ್ದೇಶದಿಂದ ಮಾದಕವಸ್ತುಗಳ ವ್ಯಾಪಾರಗಾರರಿಗೆ ಮರಣ ದಂಡನೆಯನ್ನೂ, ಕುಡಿಯುವವರಿಗೆ ೧೫ ವರ್ಷ ಸಜಾವನ್ನೂ ವಿಧಿಸುವ ಕಾರ್ಯಕ್ರಮವನ್ನು ಜಾರಿಗೆ ತಂದಿರುತ್ತಾರೆ ೨ ಕೋಟಿ ಪ್ರಜಾ ಸಂಖ್ಯೆಯಿರುವ ಆ ರಾಜ್ಯದಲ್ಲಿ ಈ ವಸ್ತುಗಳಿಗಾಗಿ ವರ್ಷಕ್ಕೆ ೧೫ ಕೋಟಿ ಪೌಂಡು ವೆಚ್ಚವಾಗುತ್ತಿದೆ

ಕೊಲೆ ಸಂಬಂಧವಾಗಿ ೧೧ ಜನರ ಮೇಲೆ ಆಪಾದನೆ

ಮೈಸೂರು ೫

ಕಳೆದ ತಿಂಗಳು ೧೪ ನೇ ತಾರೀಖು ರಾತ್ರಿ ಮೈಸೂರು ತಾಲ್ಲೂಕಿನ ದಾರಿಪುರ ಮತ್ತು ಗೋಪಾಲಪುರಗಳ ನಡುವೆ ಇಬ್ಬರನ್ನು ಕೊಲೆ ಮಾಡಿದರೆಂದು ಕೆಂಗೇಗೌಡ, ರಾಜೇಗೌಡ, ಕರಿ ಹನುಮೇಗೌಡ ಮತ್ತು ಇತರ ೮ ಜನರ ಮೇಲೆ ತಾಲ್ಲೂಕು ಪೋಲೀಸಿನವರು ನಗರದ ಎರಡನೇ ನ್ಯಾಯಾಧೀಶರ ಮುಂದೆ ನೆನ್ನೆ ಮೊಕದ್ದಮೆಯನ್ನು ಹೂಡಿದರು ಇದೇ ೧೧ ನೇ ತಾ|| ಗೆ ವಿಚಾರಣೆಯು ಇರುತ್ತದೆ ಆಪಾದಿತರ ಪೈಕಿ ೭ ಜನ ಗೋಪಾಲಪುರದವರೆಂದು ಹೇಳಲಾಗಿದೆ

ಬ್ರಿಟನ್ನಿನ ಅಣು ಬಾಂಬು ಜಲಜನಕ ಬಾಂಬೇ ?

ಆಸ್ಟ್ರೇಲಿಯದಲ್ಲಿ ಇತ್ತೀಚೆಗೆ ಆಸ್ಫೋಟನೆಯಾದ ಬ್ರಿಟನ್ನಿನ ಅಣು ಬಾಂಬು ಜಲಜನಕ ಬಾಂಬಾಗಿರಬಹುದೆಂದು ಆಸ್ಟ್ರೇಲಿಯದ ಪ್ರವೀಣರೊಬ್ಬರು ಸೂಚಿಸಿರುತ್ತಾರೆ ಬಾಂಬು ಎರಡುಬಾರಿ ಸಿಡಿದುದರಿಂದ ಈ ಊಹೆಗೆ ಕಾರಣವಾಗಿದೆ ಬಾಂಬು ಸಿಡಿದಾಗ ಭೂಮಿಯು ನಡುಗಿತೆಂದೂ, ಪ್ರಪಂಚದಲ್ಲಿ ಇದುವರೆಗೆ ಗೊತ್ತಾದ ಅಣು ಬಾಂಬುಗಳೆಲ್ಲಕ್ಕಿಂತಲೂ ಇದು ಹೆಚ್ಚು ವಿನಾಶಕಾರಿಯೆಂದೂ ಹೇಳಲಾಗಿದೆ

ಬೆಳದಿಂಗಳಲ್ಲಿ ದೀಪವಿಲ್ಲದ ಸೈಕಲ್ ಸವಾರಿ ತಪ್ಪಲ್ಲ

ಬೆಳದಿಂಗಳಿನಲ್ಲಿ ದೀಪವಿಲ್ಲದ ಸೈಕಲ್ಲನ್ನು ಸವಾರಿ ಮಾಡುವುದು ಅಪರಾಧವಲ್ಲವೆಂದು ಹೇಳಿ ರಾಜಕೋಟೆಯ ನ್ಯಾಯಾಧೀಶರೊಬ್ಬರು ಒಬ್ಬ ಸೈಕಲ್ ಸವಾರನನ್ನು ಖುಲಾಸೆ ಮಾಡಿರುತ್ತಾರೆ

ಸೈಕಲ್ಲು ಮತ್ತು ಬಲ್ಬುಗಳ ಹತೋಟಿ ವಜಾ

ಬೈಸಿಕಲ್ಲುಗಳು, ಸೈಕಲ್ ಭಾಗಗಳು ಸೈಕಲ್ ಟೈರು, ಟ್ಯೂಬುಗಳು ಮತ್ತು ವಿದ್ಯುಚ್ಛಕ್ತಿ ಬಲ್ಬುಗಳ ಮೇಲಿನ ಬೆಲೆ, ದಾಸ್ತಾನು ಪಟ್ಟಿಗಳ ವರದಿ, ಸಾಗಾಟ ಮುಂತಾದುವುಗಳ ಬಗ್ಗೆ ಎಲ್ಲ ಹತೋಟಿಗಳನ್ನೂ ಕೇಂದ್ರ ಸರ್ಕಾರದವರು ರದ್ದುಗೊಳಿಸಿರುತ್ತಾರೆ

ಫ್ರೆಂಚ್ ಭಾರತದಲ್ಲಿ ಪುಂಡರ ಅತ್ಯಾಚಾರ

ಫ್ರೆಂಚ್ ಭಾರತದ ಸ್ವಾಸ್ತ್ಯಗಳಲ್ಲಿ ಅಲ್ಲಿನ ಪೋಲೀಸರ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯದಿಂದ ಪುಂಡರು ರಾಷ್ಟ್ರೀಯವಾದಿಗಳ ಮೇಲೆ ದಾಂಧಲೆ ನಡೆಸುತ್ತಿರುವರೆಂದೂ ಅವರುಗಳು ಸುರಕ್ಷಿತವಾಗಿ ಇಲ್ಲಿರುವುದು ದುಸ್ತರವಾಗಿ, ಸಂಸಾರ ಸಮೇತ ಕಡಲೂರಿಗೆ ಓಡಿ ಬರುತ್ತಿರುವರೆಂದೂ ವರದಿಯಾಗಿದೆ ಈಗಾಗಲೇ ೫೦ ಸಂಸಾರದವರು ಈ ರೀತಿ ಬಂದಿರುವರು ಅಂತಹವರ ಮನೆಗಳು ಲೂಟಿಯಾಗಿರುವುದಲ್ಲದೆ, ಅವಕ್ಕೆ ಬೆಂಕಿಯನ್ನು ಹಾಕಲಾಗಿದೆಯೆಂದೂ, ಮಹಿಳೆಯರ ಮಾನಭಂಗ ಮತ್ತು ಅತ್ಯಾಚಾರಗಳು ನಡೆದಿರುವುದಾಗಿಯೂ ಗೊತ್ತಾಗಿದೆ ಭಾರತದೊಡನೆ ಆ ಪ್ರದೇಶವು ಒಂದುಗೂಡಬೇಕೆಂಬ ಚಳುವಳಿಯನ್ನು ತುಳಿಯುವುದೇ ಪುಂಡರ ಉದ್ದೇಶವಾಗಿದೆ ಇದೇ ಅಲ್ಲದೆ ಭಾರತೀಯ ಗ್ರಾಮಗಳ ಮೇಲೂ ಧಾಳಿ ನಡೆಸಲಾಗಿದೆಯೆಂದೂ ಹೇಳಲಾಗಿದೆ

ತುಟ್ಟಿಭತ್ಯದಲ್ಲಿ ಅರ್ಧದಷ್ಟು ಸಂಬಳದೊಡನೆ ಐಕ್ಯ

ಸರ್ಕಾರಿ ನೌಕರರ ತುಟ್ಟಿ ಭತ್ಯ ಮತ್ತು ಸಂಬಳಗಳನ್ನು ಐಕ್ಯಗೊಳಿಸುವ ಅಂಶವನ್ನು ಪರಿಶೀಲಿಸಿ ವರದಿಯನ್ನೊಪ್ಪಿಸುವ ಬಗ್ಗೆ ಮಾಜಿ ಕೇಂದ್ರ ಮಂತ್ರಿ ಎನ್ ವಿ ಗಾಡ್ಗಿಲ್ಲರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟಿದ್ದ ಸಮಿತಿಯು ಕೇಂದ್ರ ಸರಕಾರಕ್ಕೆ ತನ್ನ ಶಿಫಾರಸನ್ನು ಸಲ್ಲಿಸಿ ೫೫೦ ರೂ ಗಳಿಗೆ ಒಳಪಟ್ಟು ಸಂಬಳವಿರುವ ನೌಕರರ ತುಟ್ಟಿಭತ್ಯದ ಪೈಕಿ ಶೇ|| ೫೦ ರಷ್ಟನ್ನು, ಸಂಬಳದೊಡನೆ ಐಕ್ಯಗೊಳಿಸಬಹುದೆಂದು ಸೂಚಿಸಿರುವುದಾಗಿ ಗೊತ್ತಾಗಿದೆ

ಕೇಂದ್ರ ಸರ್ಕಾರದ ೧೫ ಲಕ್ಷಕ್ಕೂ ಮೇಲ್ಪಟ್ಟು ಸಂಖ್ಯೆಯ ನೌಕರರಿಗೆ ಇದರಿಂದ ಪ್ರಯೋಜನವಾಗುವುದೆಂದೂ ಇದರಿಂದ ಕೇಂದ್ರ ಸರ್ಕಾರದವರಿಗೆ ೭ ಕೋಟಿ ರೂ ವೆಚ್ಚವಾಗುವುದೆಂದೂ ಹೇಳಲಾಗಿದೆ ೫೫೦ ರೂ ಗಳಿಗೆ ಹೆಚ್ಚು ಸಂಬಳ ಪಡೆಯುವ ಸುಮಾರು ನಾಲ್ಕು ಸಾವಿರ ಮಂದಿ ನೌಕರರಿಗೆ ಈ ಸೌಲಭ್ಯವು ದೊರೆಯುವುದಿಲ್ಲ

ನುಗು ಜಲಾಶಯದಲ್ಲಿ ಖೈದಿಗಳಿಗೆ ಕೆಲಸ

ಸ್ವಂ ಸು] ಬೆಂಗಳೂರು ೫

ಖುಲಾಸೆ ಹೊಂದಿದ ಮೈಸೂರು ಸಂಸ್ಥಾನದ ಖೈದಿಗಳ ಸಹಕಾರ ಸಂಘದ ವಾರ್ಷಿಕ ಸಭೆಯು ನೆನ್ನೆ ನ್ಯಾಯಾಂಗ ಮತ್ತು ವಿದ್ಯಾ ಸಚಿವ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರುಗಿದಾಗ ಸಚಿವರು ಭಾಷಣ ಮಾಡುತ್ತಾ-ಉತ್ತಮ ನಡತೆಯಿಂದ ಕೂಡಿದ ೫೦ ಮಂದಿ ಖೈದಿಗಳನ್ನು ನುಗು ಜಲಾಶಯ ನಿರ್ಮಾಣದ ಕೆಲಸಕ್ಕೆ ತೆಗೆದುಕೊಂಡು, ಅವರು ಅಲ್ಲಿ ಸಂಸಾರ ಸಮೇತರಾಗಿ ನೆಲೆಸುವಂತೆ ವ್ಯವಸ್ಥೆ ಮಾಡುವ ಅಂಶವು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿರುವುದೆಂದು ತಿಳಿಸಿದರು

ಅಬೂ ಬೇಕರ್ ಕೋಲಾರದ ಜಿಲ್ಲಾಧಿಕಾರಿಗಳು

ಶ್ರೀ ಕೆ. ವಿ ರಾಮನಾಥಯ್ಯನವರ ಜಾಗದಲ್ಲಿ, ಕೋಲಾರದ ಜಿಲ್ಲಾಧಿಕಾರಿಗಳಾಗಿ ಬೆಂಗಳೂರಿನ ಕಾರ್ಪೊರೇಷನ್ನಿನ ಕಮಿಷನರರಾದ ಜ|| ಅಬೂ ಬೇಕರವರನ್ನು ನೇಮಿಸಲಾಗುವುದೆಂದು ತಿಳಿದುಬಂದಿದೆ ಸರ್ಕಾರದ ಅಕೌಂಟ್ಸ್ ಕಂಟ್ರೋಲರಾದ ಜ|| ಮಹಮದ್ ರಹಮತುಲ್ಲಾರವರನ್ನು ಕಾರ್ಪೊರೇಷನ್ನಿನ ಕಮಿಷನರಾಗಿ ಮೊಕರೂರು ಮಾಡಲಾಗುವುದೆಂದೂ ಹೇಳಲಾಗಿದೆ

ಟೆಲಿಫೋನ್ ಕಾರ್ಖಾನೆಗೆ ಜರ್ಮನಿಯ ಕಚ್ಚಾ ವಸ್ತುಗಳು

ಬೆಂಗಳೂರಿನಲ್ಲಿರುವ ಟೆಲಿಫೋನ್ ಕಾರ್ಖಾನೆಗೆ ಅವಶ್ಯಕವಾಗಿರುವ ಕಚ್ಚಾ ಪದಾರ್ಥಗಳನ್ನು ಒದಗಿಸಲು ಜರ್ಮನಿಯು ಮುಂದೆ ಬಂದಿರುವುದೆಂದೂ, ಈ ಸದವಕಾಶವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗುವುದೆಂದೂ ಇಲ್ಲಿನ ಟೆಲಿಫೋನ್ ಕಾರ್ಖಾನೆ ಆಡಳಿತ ಸಮಿತಿ ಅಧ್ಯಕ್ಷರಾದ ಶ್ರೀ ಎ ವಿ ಸ್ಟೈರವರು ತಿಳಿಸಿರುವರು

ಪರ್ಷಿಯಕ್ಕೆ ಪರಿಹಾರ ಕೊಡಲು ಬ್ರಿಟನ್ ನಿರಾಕರಣೆ

ಬ್ರಿಟನ್ನು ಈ ಕೂಡಲೆ ೮ ಕೋಟಿ ೦೦ ಲಕ್ಷ ಪೌಂಡುಗಳನ್ನು ಪರಿಹಾರವಾಗಿ ಕೊಡಬೇಕೆಂದು ಪರ್ಷಿಯವು ಮಾಡಿರುವ ಸೂಚನೆಯನ್ನು ಬ್ರಿಟನ್ನು ನಿರಾಕರಿಸಿ, ಪರ್ಷಿಯಾ ಪ್ರಧಾನಿ ಮುಸ್ಸಾದಿಕ್‌ರವರಿಗೆ ಪತ್ರ ಬರೆಯುವುದಾಗಿ ಗೊತ್ತಾಗಿದೆ ಆದರೂ ಈ ಬಗ್ಗೆ ಸಂಧಾನಕ್ಕೆ ಬ್ರಿಟನ್ನು ಸಿದ್ಧವಾಗಿರುವುದೆಂದು ಹೇಳಲಾಗಿದೆ

ಪರ್ಷಿಯದ ಹಿತ ರಕ್ಷಣೆಗೆ ಭಾರತದ ನೇಮಕ

ಪರ್ಷಿಯವು ಬ್ರಿಟನ್ನಿನೊಡನೆ ಸಂಬಂಧ ತ್ಯಾಗ ಮಾಡಲು ನಿರ್ಧರಿಸಿದಲ್ಲಿ ಆಗ್ಗೆ ಬ್ರಿಟನ್ನಿನಲ್ಲಿ ಇರಾನಿನ ಹಿತ ರಕ್ಷಣೆಯನ್ನು ನೋಡಿಕೊಳ್ಳಲು ಪರ್ಷಿಯದ ಪ್ರಧಾನಿ ಡಾ|| ಮುಸ್ಸಾದಿಕ್ಕರು ಭಾರತವನ್ನು ನೇಮಿಸಬಹುದೆಂದು ಟೆಹರಾನಿನ 'ಡಾನ್' ಎಂಬ ಪತ್ರಿಕೆಯು ತಿಳಿಸಿದೆ ಈ ಕೆಲಸಕ್ಕಾಗಿ ರಷ್ಯಾವನ್ನು ನೇಮಿಸುವಂತೆ ಪರ್ಷಿಯದ ಕಮ್ಯೂನಿಸ್ಟ್ ಪಕ್ಷದವರು ಒತ್ತಾಯಪಡಿಸಬಹುದೆಂದೂ ಹೇಳಲಾಗಿದೆ

ವಾರ ಭವಿಷ್ಯ

ತಾ|| ೫-೧೦-೫೨ ರಿಂದ ೧೧-೧೦-೫೨ ರ ವರೆಗೆ

ಮೇಷ — ಪ್ರಗತಿಯುತ ವಾರ. ಶ್ರದ್ಧಾಬಲದಿಂದ ಮಹತ್ಕಾರ್ಯ. ಆರೋಗ್ಯ ನೆಟ್ಟಗೆ. ಎದುರಾಳಿಗಳ ಸೋಲು ವಿದ್ವಾಂಸರ ಸಹವಾಸ. ಸುಖ ಪ್ರವಾಸ ಮತ್ತು ಇಷ್ಟಾರ್ಥ ಸಿದ್ಧಿ ತಾ|| ೯, ೧೦ ಮಹತ್ವದ ಪತ್ರಕ್ಕೆ ದಿನ, ಧನ ಲಾಭ

ವೃಷಭ — ಚಿತ್ತ ಸ್ವಾಸ್ಥ್ಯವಿಲ್ಲ. ಆರೋಗ್ಯ ನೆಟ್ಟಗಿರದು. ನೌಕರಿಯಲ್ಲಿ ವಿಷಾದ ಘಟನೆ ಅಪ್ರೇಷ್ಟರ ವೈಮನಸ್ಯ ಖರ್ಚು ಅಧಿಕ. ವ್ಯಾಪಾರಾದಿಗಳಲ್ಲಿ ತೊಂದರೆ. ಚತುಷ್ಪಾದಿಗಳಿಂದ ಹಾನಿ ಪ್ರವಾಸ ಬೇಡ. ತಾ|| ೫, ೬ ಅಪ್ರಿಯ ವಾರ್ತೆ, ಕಲಹ.

ಮಿಥುನ—ವಿಶ್ವಾಸಘಾತಕಿಗಳ ಭೇಟಿ. ಆರೋಗ್ಯ ನೆಟ್ಟಗಿರದು ಹಣ ಕಾಸಿನಸ್ಥಿತಿ ಅಸಮರ್ಪಕ ವ್ಯಾಪಾರಾದಿಗಳಲ್ಲಿ ಕ್ಲೇಶ. ನೌಕರಿಯಲ್ಲಿ ತೊಂದರೆ ಪಾಲುಗಾರರಿಂದ ಮೋಸ. ಪ್ರವಾಸದಲ್ಲಿ ಸಂಕಟ. ತಾ|| ೬, ೭, ೮ ಆಕಸ್ಮಿಕ ಖರ್ಚು, ಪತ್ನಿಗೆ ಕಾಹಿಲೆ

ಕರ್ಕ — ಅನೇಕ ಉತ್ತಮ ವಿಚಾರಗಳ ಯೋಜನೆ. ಆರೋಗ್ಯ ನೆಟ್ಟಗೆ ಕೌಟುಂಬಿಕ ಸ್ಥಿತಿ ನೆಟ್ಟಗೆ ಮಕ್ಕಳ ಮರಿಗಳ ಏಳಿಗೆ. ಕೋರ್ಟಿನಲ್ಲಿ ಅನುಕೂಲ ನೌಕರಿಯಲ್ಲಿ ಒಳ್ಳೇ ಕಡೆಗೆ ವರ್ಗ ಧನ ಲಾಭ ತಾ|| ೯, ೧೦ ಪರೋಪಕಾರ, ಅತಿಥಿ ಸತ್ಕಾರ.

ಸಿಂಹ — ಆರೋಗ್ಯ ನೆಟ್ಟಗೆ ಮಾನಸಿಕ ತೊಂದರೆಯಿಂದ ಮುಕ್ತಿ. ವ್ಯಾಪಾರಾದಿಗಳಲ್ಲಿ ಕ್ಲೇಶ ನಿವಾರಣೆ. ಹಣದ ತೊಂದರೆ ಪರಿಹಾರ ಪ್ರವಾಸ ಸುಖಪ್ರದ. ಪ್ರಿಯಜನ ಭೇಟಿ ತಾ|| ೯, ೧೦ ಅಪ್ತರ ಸಹಾಯ, ಶುಭ ವಾರ್ತೆ

ಕನ್ಯಾ — ಆರೋಗ್ಯ ನೆಟ್ಟಗಿರದು ವ್ಯಾಪಾರಾದಿಗಳಲ್ಲಿ ಘಾಸಿ ಪ್ರತಿಸ್ಪರ್ಧೆ ಕೋರ್ಟು ಹತ್ತುವ ಪ್ರಸಂಗ ಪ್ರವಾಸಕ್ಕೆ ಚೆನ್ನಾಗಿಲ್ಲ ಮನೆಯವರಿಗೆ ಅನಾರೋಗ್ಯ ತಾಯಿಗೆ ಅಪಘಾತ ಭಯ ತಾ|| ೫, ೬ ಚಿಂತಾವಾರ್ತೆ, ವಿಷ ಜಂತುಗಳಿಂದ ಭಯ

ತುಲಾ — ಆರೋಗ್ಯ ನೆಟ್ಟಗೆ ಮಹತ್ಕಾರ್ಯದಲ್ಲಿ ತೊಡಗುವಿರಿ ಪ್ರವಾಸ ಯೋಗ. ಹಣಕಾಸಿನ ಸ್ಥಿತಿ ಉತ್ತಮ ಆಕಸ್ಮಿಕ ಲಾಭ ತಾ|| ೯, ೧೦ ಆಪ್ತಜನರ ಭೇಟಿ, ಮಹತ್ವದ ಪತ್ರ

ವೃಶ್ಚಿಕ — ಅಪಯಶದಾಯಕ ವಾರವಲ್ಲ ವಿಶೇಷ ದುಡ್ಡಿನ ಖರ್ಚು. ಪ್ರವಾಸ ಯೋಗ ವ್ಯಾಪಾರಾದಿಗಳು ಉತ್ತಮ ತಾ|| ೯, ೧೦ ಬೆಲೆಯುಳ್ಳ ವಸ್ತುವಿನ ಅಪಹಾರ, ಗೊಂದಲ.

ಧನು — ಅಂಗೀಕೃತ ಕಾರ್ಯದಲ್ಲಿ ತೊಂದರೆ. ಆರೋಗ್ಯ ಚೆನ್ನಾಗಿರದು. ನೌಕರಿಯಲ್ಲಿ ಮಾನಹಾನಿ, ನಿದ್ರಾನಾಶ. ತಾ|| ೬, ೭, ೮ ಅನಾರೋಗ್ಯ, ಕಲಹ, ಅಪಘಾತ ಭಯ

ಮಕರ — ಅನಪೇಕ್ಷಣೀಯಸ್ಥಳಕ್ಕೆ ವರ್ಗ ಸಂಭವ. ವ್ಯಾಪಾರಾದಿಗಳಲ್ಲಿ ಅಂದಾಜು ತಪ್ಪುವುದು. ಆರ್ಥಿಕ ಹಾನಿ. ಆರೋಗ್ಯ ನೆಟ್ಟಗಿರದು. ತಾ|| ೯, ೧೦ ನಿಷ್ಕಾರಣ ಶತ್ರುತ್ವ, ಸಹಕಾರ ಕಾರ್ಯದಲ್ಲಿ ವ್ಯತ್ಯಯ.

ಕುಂಭ — ಯಶಸ್ವೀ ವಾರ ಆರೋಗ್ಯ ಸಮಾಧಾನಕರ ಉತ್ತಮ ಹಣಕಾಸಿನ ಸ್ಥಿತಿ. ಸ್ಪರ್ಧೆಗಳಲ್ಲಿ ಜಯ. ವ್ಯಾಪಾರಾದಿಗಳಲ್ಲಿ ಉತ್ಕೃಷ್ಟ ಪ್ರವಾಸ ಯೋಗ ತಾ|| ೭, ೮ ವಿಶೇಷ ಖರ್ಚು, ಮನರಂಜನೆ

ಮೀನ — ಉತ್ತಮ ಸಮಾಜ ಸೇವೆ ಆರೋಗ್ಯ ನೆಟ್ಟಗೆ ಸುಖ ಪ್ರವಾಸ ವ್ಯಾಪಾರಾದಿಗಳಲ್ಲಿ ಏಳಿಗೆ. ನೌಕರಿಯಲ್ಲಿ ಮೇಲಧಿಕಾರ ಪ್ರಾಪ್ತಿ. ತಾ|| ೯, ೧೦ ಖರ್ಚು, ಗೊಂದಲ

ತಾಲ್ಲೂಕು ಸಮ್ಮೇಳನಗಳನ್ನು ಪುನಃ ಜಾರಿಗೆ ತರಬೇಕು

ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಈ ರೀತಿ ಬರೆದಿರುತ್ತಾರೆ:-

ತಾಲ್ಲೂಕು ಮತ್ತು ಜಿಲ್ಲಾ ಸಮ್ಮೇಳನಗಳು ಸರ್ ಎಂ ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ನಡೆಯುತ್ತಾ ಬಂದುವು. ಇದರಿಂದ ಹಳ್ಳಿಗಾಡಿನ ಜನರ ತೊಂದರೆಗಳು ಸಭೆಯಲ್ಲಿ ಚರ್ಚೆಗೆ ಬಂದು ಸರ್ಕಾರಿ ಅಧಿಕಾರಿಗಳು ಸಾಧ್ಯವಾದ ಮಟ್ಟಿಗೂ ಪರಿಹಾರ ಕೊಡಲು ಅವಕಾಶವಾಗುತ್ತಿತ್ತು ಮತ್ತು ಶಾಸನ ಸಭೆಗೆ ತರತಕ್ಕದ್ದಲ್ಲದ ಅನೇಕ ಸ್ಥಳೀಯ ವಿಷಯಗಳು ಜಾಗ್ರತೆ ವ್ಯವಸ್ಥೆಯಾಗಲು ಅವಕಾಶವಾಗಿತ್ತು. ಪ್ರತಿನಿಧಿಗಳಾಗಿ ಬರತಕ್ಕವರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದರು

ಪ್ರಜಾ ಸರ್ಕಾರ ಬಂದ ಮೇಲೆ, ೧೯೫೦ರಲ್ಲಿ ಏರ್ಪಾಡಾಗಿದ್ದ ಸಮ್ಮೇಳನವನ್ನು ಸರ್ಕಾರದವರು ಏಕಾಏಕಿ ನಿಲ್ಲಿಸಿಬಿಟ್ಟರು ಇದು ಅನ್ಯಾಯವೆಂದು ಪ್ರತಿಭಟನೆ ಬಂದುದರ ಮೇಲೆ ಇವನ್ನು ನಡೆಸುವುದ ಅಗತ್ಯವೇ-ಎಂಬ ವಿಷಯದ ಪರಿಶೀಲನೆಗೆಂದು ಕಾಲ ಕಳೆದು ೧೯೫೧ನೇ ಇಸವಿ ಜನವರಿ ತಿಂಗಳಲ್ಲಿ ಹಿಂದಿನ ಮಂತ್ರಿಗಳು ಅದನ್ನು ನಡೆಸುವಂತೆ ಆಜ್ಞೆ ಮಾಡಿದರು.

ಈಗಿನ ಮಂತ್ರಿಗಳು ಪುನಃ ಇದನ್ನು ನಿಲ್ಲಿಸಿದ್ದಾರೆ ಇದು ಒಂದು ವಿಚಿತ್ರವಾಗಿದೆ ಯಾವ ಕಾರಣದಿಂದ ನಿಲ್ಲಿಸಿದರೆಂಬುದು ಹೊರಪಟ್ಟಿಲ್ಲ.

ಈ ಸಮ್ಮೇಳನಗಳನ್ನು ನಡೆಸುವುದಕ್ಕೆ ಯಾವ ವಿಧವಾದ ತೊಂದರೆಯೂ ಇರುವುದಿಲ್ಲ ಪ್ರತಿನಿಧಿಗಳಾಗಿ ಬರತಕ್ಕವರಿಗೆ ಭತ್ಯ ಸಹ ಕೊಡಬೇಕಾಗಿಲ್ಲ ಉಪಾಹಾರಕ್ಕಾಗಿ ಒಂದು ದಿನದ ಮಟ್ಟಿಗೆ ಅಲ್ಪಸ್ವಲ್ಪ ಖರ್ಚಾಗುತ್ತದೆ. ಇದೂ ಕೂಡ ಸಂಸ್ಥಾನವಿದ್ಯಂತ, ಹತ್ತು ಸಾವಿರ ರೂ ಗಳಿಗೆ ಮೀರುವುದಿಲ್ಲ ಶಾಸನ ಸಭೆಗಳನ್ನು ನಡೆಸಿ ಲಕ್ಷ ರೂಪಾಯಿ ಖರ್ಚು ಮಾಡುತ್ತಿರುವ ಮತ್ತು ಸದಸ್ಯರುಗಳ ಸಂಬಳಕ್ಕೆಂದು ಲಕ್ಷಾಂತರ ರೂಪಾಯಿ ಕೊಡುತ್ತಿರುವ ಪ್ರಜಾ ಸರಕಾರವು ಸರ್ ಎಂ ವಿಶ್ವೇಶ್ವರಯ್ಯನವರು ಏರ್ಪಡಿಸಿದ ಮತ್ತು ಪ್ರಯೋಜಕಾರದ ಈ ಸಮ್ಮೇಳನವನ್ನು ಈ ರೀತಿ ನಿಲ್ಲಿಸಿರುವುದು ಸರಿಯಲ್ಲ.

ಸರ್ಕಾರದವರು ಕೂಡಲೇ ಈ ಸಮ್ಮೇಳನವನ್ನು ನಡೆಸಲು ಏರ್ಪಾಡು ಮಾಡಿ, ಜನಗಳ ಮೆಚ್ಚುಗೆಯನ್ನು ಪಡೆಯುತ್ತಾರೆಂದು ನಂಬುತ್ತೇನೆ

ಶ್ರೀ ಕೆ. ನರಸಿಂಹಯ್ಯನವರು

ರಾಜಧಾನಿಯ ವರ್ತಕರಾಗಿದ್ದುಕೊಂಡು ಸರಳ ಜೀವಿಗಳಾಗಿರುತ್ತಾರೆ ಕುಂಚಿಟಿಗರ ಸಂಘಕ್ಕೆ ತಮ್ಮ ಜ್ಞಾತಿಗಳಾದ ದಿ|| ಟಿ ಕೆ ನರಸಿಂಹಯ್ಯನವರ ಹೆಸರಿನಲ್ಲಿ ಅವರ ಪತ್ನಿ ಧರ್ಮಪತ್ನಿಯಾದ ಅಲಮ್ಮನವರು ಮಾಡಿದ ೩ ಲಕ್ಷ ರೂ ಗಳ ಸ್ಥಿರ ಸ್ವತ್ತಿನ ದಾನಕ್ಕೆ ವಿಶಾಲ ನೆರವು ನೀಡಿರುವರು ಕುಂಚಿಟಿಗರ ಬಾಲಕರ ವಿದ್ಯಾಭಿವೃದ್ಧಿಗಾಗಿ ಶ್ರಮಿಸುತ್ತಿರುತ್ತಾರೆ

ಹಿಂದಿ ಶಿಕ್ಷಣ ತರಗತಿಗಳು

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀರಾಮ ಸಹಕಾರ ಸಂಘದಲ್ಲಿ ಎಂದಿನಂತೆ ಹಿಂದಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಎಚ್ ಎಸ್. ತರಗತಿಗಳು ನಡೆಯುತ್ತಿವೆ ಸೇರುವವರು ಕೂಡಲೆ ಬಂದು ಸೇರಬೇಕೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ರಾಜಕಮಲ್, ಮೈಸೂರು

3-10-52 ರಿಂದ 7 ನೇ ಕಡೇ ವಾರ

ಶ್ರೀನಿವಾಸ ಕಲ್ಯಾಣ

ಪಾತ್ರ ಅಭಿನಯಿಸಿರುವ ಕರ್ನಾಟಕ ಪ್ರತಿಭಾವೀರ, ಹರಿಣಿ, ಜಯಶ್ರೀ, ಎ. ಕೆ. ಶ್ರೀನಿವಾಸರಾವ್, ನಿಮಲಾನಂದದಾಸ್, ವೀರಭದ್ರಪ್ಪ ಕೊಟ್ಟೂರು ಬಸಪ್ಪ ಸುಬ್ಬರಾವ್, ಮಹಾಬಲರಾವ್.

Edited, Printed and Published by A. R. Nagarajan at Sadhvi Press, D. Subbiah Road, Mysore

ದಕ್ಷಿಣ ಆಫ್ರಿಕಕ್ಕೆ ಅರ್ಚಕರ ರವಾನೆ

ದಕ್ಷಿಣ ಆಫ್ರಿಕದಲ್ಲಿರುವ ಹಿಂದೂ ಜನರ ದೇವಾಲಯಗಳಲ್ಲಿ ಪೂಜಾದಿಗಳನ್ನು ನಡೆಸಲು ಅರ್ಚಕರ ಅವಶ್ಯಕತೆ ಇರುವುದೆಂದೂ, ಅದಕ್ಕಾಗಿ ಅವರನ್ನು ಭಾರತದಿಂದ ಅಲ್ಲಿಗೆ ಕಳುಹಿಸಲು ಏರ್ಪಾಡಾಗುತ್ತಿದೆಯೆಂದೂ ಗೊತ್ತಾಗಿದೆ. ಹಾಗೆಯೇ ತಮಿಳು ಉಪಾಧ್ಯಾಯರನ್ನು ಸಹ ಕಳುಹಿಸುವ ವ್ಯವಸ್ಥೆಯಾಗಿದೆ.

ಚಾಮುಂಡಿಪುರದಲ್ಲಿ ಕಳ್ಳತನಗಳು

ರಾಜಧಾನಿಯ ನಿರಂಜನರಾಜೇ ಅರಸಿನವರ ತೋಟದ ಬಳಿ ಇರುವ, ರೈಲ್ವೆ ಕಾರ್ಖಾನೆಯ ಗುಮಾಸ್ತ ಶ್ರೀ ತಿಪ್ಪಯ್ಯ ಎಂಬುವರ ಮನೆಗೆ ೨೮ನೇ ತಾ|| ಭಾನುವಾರ ರಾತ್ರಿ ೧೦-೧೨ ಗಂಟೆಯಲ್ಲಿ ಮನೆ ಹೆಂಚು ತೆಗೆದು, ೨ ಮೂಟೆ ಭತ್ತವನ್ನೂ, ಬೆಳ್ಳಿ ಸಾಮಾನುಗಳನ್ನೂ ಯಾವನೋ ತೆಗೆದು ಹಿತ್ತಲಿನ ಬಾವಿ ಕಟ್ಟೆಯ ಮೇಲೆ ಇಟ್ಟು ಹಿಂಭಾಗದ ಗಲ್ಲಿ ಮೂಲಕ ಒಂದು ಮೂಟೆ ಭತ್ತವನ್ನು ಸಾಗಿಸುತ್ತಿದ್ದನೆಂದೂ, ಮನೆಯವರು ಮದುವೆಗಾಗಿ ಹೋಗಿದ್ದು ಆ ವೇಳೆಗೆ ಸರಿಯಾಗಿ ಬಂದು ನೋಡಿ ಕೂಗಿಕೊಳ್ಳಲಾಗಿ, ಕಳ್ಳನು ಮೂಟೆಯನ್ನು ಎತ್ತಿಹಾಕಿ ಪರಾರಿಯಾದನೆಂದೂ ವರದಿಯಾಗಿದೆ. ಇದೇ ಅಲ್ಲದೆ ಚಾಮುಂಡಿಪುರದ ಹಲವು ಮನೆಗಳಲ್ಲಿ ಸಣ್ಣಪುಟ್ಟ ಕಳ್ಳತನಗಳು ನಡೆಯುತ್ತಿರುವುವೆಂದೂ, ಹಲವು ಮನೆಗಳ ಮೇಲೆ ರಾತ್ರಿ ಹೊತ್ತು ಕಲ್ಲು ಹೊಡೆಯುವುದು ಹೆಚ್ಚಾಗಿರುವುದೆಂದೂ ವರದಿಯಾಗಿದೆ. ಪೋಲೀಸರು ಸೂಕ್ತ ಎಚ್ಚರಿಕೆ ಕ್ರಮವನ್ನು ಕೈಗೊಳ್ಳುವಂತೆ ಪ್ರಾರ್ಥಿಸಲಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲಗಳಿಗೆ	ಮೂ ಇಂದ ರೂ.ಗೆ
ನೆಲಗಡಲೆ	೧೦೬.೦	೧೯.೧೪-೦
ಎಳ್ಳು	೬೭-೨ ೦	೭೩-೮-೦
ಹುಚ್ಚೆಳ್ಳು	೫೬-೦ ೦	
ಹರಳು ಬೀಜ	೪೨.೦ ೦	೪೪-೦-೦
ಹುರುಳಿ	೫೯ ೧೨ ೮	
ಹೆಸರು	೫೦ ೮-೦	
ಹೊಂಗೇಬೀಜ	೨೩ ೪ ೦	
ಉದ್ದು	೭೦-೨-೦	
ಅವರೆ	೭೯-೧೦-೦	
ಹಲಸಂದೆ	೬೪-೬ ೦	
ಮೆಣಸಿನಕಾಯಿ ಮಣಗಳಿಗೆ	೧೧-೮ ೦	೨೭ ೧೦ ೦
ಹುಣಸೇಹಣ್ಣು	೫-೦ ೮	
ಸೀಗೇಕಾಯಿ	೫ ೧-೦	
ಬೆಲ್ಲ	೩-೧೨-೦	೪ ೦ ೦
ತೆಂಗಿನಕಾಯಿ ೧೧೦೦	೧೯೬ ೦ ೦	೨೦೫-೦-೦

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರ್ಲು, ಉಬ್ಬಸ, ಪರಿಣಾಮಕಾರಿ ಮತ್ತು (TONSIL) ಗಲಾಯಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ. ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ. ಬೆಲೆ ರೂ. 2-8-0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ, ದಿವಾನರ ರಸ್ತೆ, ಮೈಸೂರು.

ಟೆಲಿಫೋನ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೬-೧೧-೧೯೫೩ [ಸಂಚಿಕೆ ೫೮

ಅಭಾವ ಪ್ರದೇಶಗಳಲ್ಲಿ ನೆಹರೂ ಪ್ರವಾಸ

ಹರಿಕಥೆ

ಮೈಸೂರು ೬

... ರಾತ್ರಿ ... ಗಂಟೆಗೆ "ಸಾಧ್ವಿ" ಪತ್ರಿ... ಕಾ ಕಛೇರಿಯ ಮೇಲೆ ಶ್ರೀ ... ರಂ ಶ್ರೀನಿವಾಸರಂಗಚಾರ್ಯ ... ಭಕ್ತ ಚಂದ್ರಹಾಸ " ಎಂಬ ಹ... ಷಯವನ್ನು ಕುರಿತು ಹರಿಕಥೆ ನಡೆಯುವುದು.

...ಕಥೆಯೂ ವಸ್ತು ಪ್ರದರ್ಶನ ಉಂಟು

... ವಸ್ತು ಪ್ರದರ್ಶನವನ್ನು ... ಇನ್ನೊಂದು ವಾರ ಮುಂದುವರಿಸಲಾಗಿದೆ. ... ಸ್ತ್ರೀ ಪುರುಷರೆಲ್ಲರಿಗೂ, ಎರಡು ... ಪ್ರವೇಶಾವಕಾಶವುಂಟು.

ಬೆಂಕಿ ಅನಾಹುತದಿಂದ ೧ ಕೋಟಿ ರೂ. ನಷ್ಟ

...ಕತ್ತಾ ನಗರದ ಪೋಲೀಸ್ ಕೇಂ... ದ್ರದ ಎದುರಿಗಿರುವ ನಾಲ್ಕು ಅಂತಸ್ತಿನ ... ಕಟ್ಟಡದಲ್ಲಿ ಮೊನ್ನೆ ರಾತ್ರಿ ಬೆಂ... ಕಿ ಅನಾಹುತ ಸಂಭವಿಸಿ ೧ ಕೋಟಿ ... ನಷ್ಟು ನಷ್ಟ ಸಂಭವಿಸಿರುವುದಾಗಿ ... ಯಾಗಿದೆ. ಬೆಂಕಿಯನ್ನಾರಿಸಲು ೬ ... ಯಂತ್ರಗಳು ನೆನ್ನೆ ಮ... ವರೆಗೆ ಕಾರ್ಯದಲ್ಲಿ ತೊಡಗಿ ತ... ಗೆ ಹತೋಟಿಗೆ ತಂದುವೆಂದೂ, ... ನ ವೇಳೆಗೆ ಬೆಂಕಿಯನ್ನು ಪೂರ್ಣ... ರಿಸಲು ಸಾಧ್ಯವಾಗಬಹುದೆಂ... ಳಲಾಗಿದೆ ಕಟ್ಟಡದಲ್ಲಿ ಬೆಲೆಬಾ... ಳುವ ಬಟ್ಟೆ, ಕಾರು ಡಬ್ಬಗಳು ... ಇತರ ಪದಾರ್ಥಗಳು ಸುಟ್ಟು ... ವೆಂದೂ ಹೇಳಲಾಗಿದೆ.

ಬರುವ ವಾರ ಕ್ಷಾಮ ನಿವಾರಣಾ ಯೋಜನೆ ಕ್ರಮದ ನಿಗದಿ

... ಸಂಸ್ಥಾನದ ಉತ್ಪನ್ನ ಶಾಖಾ ... ಶ್ರೀ ಕೆ ಸಿ. ರೆಡ್ಡಿಯವರು ಕಳೆದ ... ರದ ಚಿಕ್ಕಬಳ್ಳಾಪುರದ ಬಹಿರಂ... ಗ ಸಭೆಯೊಂದರಲ್ಲಿ ಭಾಷಣ ಮಾಡು... ಸಂಸ್ಥಾನದ ವ್ಯವಸಾಯ ಅಭಿವೃ... ದ್ಧಿ ಯೋಜನೆಯ ಕಾರ್ಯವನ್ನು ಜಾ... ರಿಗೊಳಿಸಲು ಕೇಂದ್ರ ಸರ್ಕಾರದವರು ... ಮಾಡಿರುವ ೫೦ ಲಕ್ಷ ರೂ ... ಈಗಾಗಲೇ ಸಂಸ್ಥಾನಕ್ಕೆ ಕೊಡ... ರೆಂದೂ, ಕೇಂದ್ರ ಸರ್ಕಾರದವ... ರು ಮುಂದಿನ ವಾರ ಕ್ಷಾಮ ನಿವಾರಣಾ ಯೋಜನೆಯ ಕ್ರಮಗಳನ್ನು ನಿಗದಿ ... ಪಡಿಸುವರೆಂದೂ ತಿಳಿಸಿದರು. ಈ ಯೋ... ಜನೆಯಿಂದ ಅನೇಕ ಮಂದಿ ನಿರುದ್ಯೋ... ಗಿಗಳಿಗೆ ಕೆಲಸವು ದೊರೆಯುವುದೆಂದು ... ಹೇಳಿದರು.

ಪತ್ನಿಯ ಸನ್ಯಾಸಿಯ ಹಿಂದೆ ಹಾಯ್ದ ಪ್ರಸಂಗ

... ಶುಕ್ರವಾರ ಸಿಂಹಳದ ಕಂಡಿ... ಯಲ್ಲಿ ನಡೆದ ಒಂದು ಧಾರ್ಮಿಕ ... ಸಭೆಯಲ್ಲಿ ಸ್ವಾಮಿ ಗೌರಿಬಾಲ ... ಪತ್ನಿಯ ಯೋಗಿಯು ಇತರ ... ಬೈರಾಗಿಗಳೊಡನೆ ಭಾ... ಷಣವನ್ನು ಯಶಸ್ವಿಯಾಗಿ ಹಾ... ದೂ, ಅದರಿಂದ ಅವನಿಗೆ ಮೈ... ಮರೆತನೆಂದೂ ಹೇಳಲಾಗಿದೆ. ಅತ... ನವರೆಗೆ ೬೦ ಕ್ಕೂ ಮೇಲ್ಪಟ್ಟು ... ಗಳನ್ನು ಹಾಯ್ದಿರುವನೆಂದೂ, ... ಬಿಕಯೇ ತನ್ನ ಯಶಸ್ಸಿಗೆ ಕಾ... ರಣವೆಂದು ಆತನು ತಿಳಿಸುವುದಾಗಿಯೂ ... ವರದಿಯಾಗಿದೆ

ಕಾಶ್ಮೀರದಮೇಲೆ ಧಾಳಿಯಾದರೆ ಪ್ರತಿಭಟನೆ ಸಿದ್ಧ

ಪಾಕಿಸ್ತಾನವಾಗಲಿ, ಪಾಕಿಸ್ತಾನದ ಮೂಲಕ ಗುಪ್ತಗಾಡಿನವರಾಗಲಿ ಕಾಶ್ಮೀರದ ಮೇಲೆ ಧಾಳಿ ನಡೆಸಿದರೆ ಭಾರತವು ಪ್ರತಿಭಟಿಸುವುದೆಂದು ಪ್ರಧಾನಿ ನೆಹರೂರವರು ತಿಳಿಸಿದ್ದಾರೆ. ಕಾಶ್ಮೀರದಿಂದ ಹೆಚ್ಚು ಸೈನ್ಯವನ್ನು ಭಾರತವು ವಾಪಸು ಕರೆಸಿಕೊಳ್ಳಲು ಸಾಧ್ಯವಿಲ್ಲವೆಂದೂ ಅವರು ಹೇಳುತ್ತಾರೆ. ಗೃಹಾಂಗದ ವರದಿಯು ಪರಿಸ್ಥಿತಿಯ ವಾಸ್ತವಾಂಶವನ್ನು ಹೊರಗೆಡಹಿರುವುದಾಗಿ ಅವರು ಅಭಿಪ್ರಾಯಪಟ್ಟಿರುವರು

ಇಬ್ಬರು ಮುಸ್ಲಿಮರು ಹಿಂದುಗಳಾದರು

ಮಂಗಳೂರಿನ ಮಹಮದ್ ಮತ್ತು ಶಿವಮೊಗ್ಗದ ಎಸ್ ರಹೀಂ ಎಂಬುವರಿಬ್ಬರು ಆರ್ಯ ಸಮಾಜದ ದೀಕ್ಷಾ ಹಿಂದೂ ಧರ್ಮವನ್ನವಲಂಬಿಸಿ ಕ್ರಮವಾಗಿ ಮಹಾಬಲ ಮತ್ತು ರಮಾನಂದ ಎಂದು ನಾಮಕರಣ ಮಾಡಲ್ಪಟ್ಟರೆಂದು ವರದಿಯಾಗಿದೆ.

೫॥ ವರ್ಷದಿಂದ ಜ್ಞಾನ ತಪ್ಪಿದ್ದವನ ಮರಣ

ಕಳೆದ ೫॥ ವರ್ಷಗಳಿಂದ ಪ್ರಜ್ಞೆ ತಪ್ಪಿ ಬಿದ್ದಿದ್ದ ಬಾಸ್ಟನ್ ನಗರದ ರಾಲ್ಫ್ ಆಲ್ಬರ್ಟ್ ಎಂಬ ೩೯ ವರ್ಷದ ಅಮೆರಿಕನ್ನನು ಮೊನ್ನೆ ಅಲ್ಲಿನ ಆಸ್ಪತ್ರೆಯೊಂದರಲ್ಲಿ ಮೃತಪಟ್ಟಿರುತ್ತಾನೆ. ೧೯೪೭ ರಲ್ಲಿ ಮೋಟಾರು ಅಪಘಾತಕ್ಕೆ ಇವನು ಸಿಕ್ಕಿದಂದಿನಿಂದಲೂ ಇವನಿಗೆ ಜ್ಞಾನವೇ ಬಂದಿರಲಿಲ್ಲ

ಸರಸವಾಣಿ ವಾದ್ಯ ಗೋಷ್ಠಿ

ಬೆಂಗಳೂರು. ಸರಸವಾಣಿ ವಾದ್ಯಗೋಷ್ಠಿಯವರಿಂದ ದಸರಾ ವಸ್ತು ಪ್ರದರ್ಶನಾಲಯದಲ್ಲಿ ಕಳೆದ ಶುಕ್ರವಾರ ಸಾಯಂಕಾಲ ೭ ರಿಂದ ೭-೪೫ರ ವರೆಗೆ ಅತ್ಯಮೋಘವಾದ ಸಂಗೀತವು ನಡೆಯಿತು ಅದೇ ದಿನ ರಾತ್ರಿ ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀಯಳಂದೂರು ಗೋಪಾಲ ಶಾಸ್ತ್ರಿಗಳವರ ಮನೆಯಲ್ಲೂ ಮೇಲ್ಕಂಡ ಪಾರ್ಟಿಯವರ ವಾದ್ಯ ಗೋಷ್ಠಿಯು ಆದ ನಂತರ ಗೋಷ್ಠಿಯವರು ರಾತ್ರಿ ಬೆಂಗಳೂರಿಗೆ ತೆರಳಿದರು.

ರಾಯಲಸೀಮೆ, ಮೈಸೂರುಗಳಿಗೆ ನೆಹರೂ ಭೇಟಿ

ರಾಯಲಸೀಮೆಯ ಕ್ಷಾಮ ಪರಿಸ್ಥಿತಿಯನ್ನು ಪರಿಶೀಲಿಸಲು ಅಲ್ಲಿನ ಪ್ರವಾಸವನ್ನು ಆರಂಭಿಸಿರುವ ಪ್ರಧಾನ ಪಂಡಿತ ನೆಹರೂರವರು ಧಾಡಪತ್ರಿ, ಧರ್ಮಾವರ ಮತ್ತು ಇತರ ಹಲವು ಗ್ರಾಮಗಳಲ್ಲಿ ಪ್ರವಾಸ ಮಾಡಿ ಹಿಂತಿರುಗಿ ನೆನ್ನೆ ಮಧ್ಯಾಹ್ನ ಜೆಮಗೊಂಡ... ವನ್ನು ತಲಪಿದರು ಆ ವೇಳೆಗೆ ಅಲ್ಲಿಗಾಗಲೆ ಆಗಮಿಸಿದ್ದ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆಹರೂರವರನ್ನು ಸಂದರ್ಶಿಸಿದರು. ಶ್ರೀ ಕೆ ಸಿ ರೆಡ್ಡಿಯವರೂ ಅಲ್ಲಿಗೆ ಆಗಮಿಸಿದ್ದರು

ಅನಂತರ ಎಲ್ಲರೂ ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಲೆ ಪ್ರವೇಶದ ಅಭಿಮುಖವಾಗಿ ಪ್ರಯಾಣ ಹೊರಟರು ಗಡಿಯಲ್ಲಿ ಮೈಸೂರು ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಚ್ ಸಿ. ದಾಸಪ್ಪ ಪ್ರಧಾನ ಕಾರ್ಯದರ್ಶಿ ಶ್ರೀ ವಿ ಕಾಪಜಿರಾವ್, ಪೋಲೀಸ್ ಐ. ಜಿ ತಿಮ್ಮರಾಜ ಅರಸ್ ಮುಂತಾದವರು ಪಂಡಿತ ನೆಹರೂರವರಿಗೆ ಸ್ವಾಗತವಿತ್ತರು. ಇವರು ತರುವಾಯ ಅವರು ಪಾವಗಡ, ಪರಶುರಾಮಪುರ, ಚಳ್ಳಕೆರೆಗಳಿಗೆ ಭೇಟಿಯಿತ್ತರು ಈಗ ತಾನೆ ಮಳೆ ಬಂದು ಮಾರ್ಗದಲ್ಲಿ ಹಲವಾರು ಕೆರೆಗಳಿಗೆ ನೀರು ಬಂದಿದ್ದರೂ, ಜಮೀನುಗಳಲ್ಲಿ ಫಸಲು ನಷ್ಟವಾಗಿದ್ದು ಕ್ಷಾಮ ಪರಿಸ್ಥಿತಿಯನ್ನು ಎದುರಿಸುತ್ತಿದ್ದುದನ್ನು ಪಂಡಿತ ನೆಹರೂರವರು ಕಂಡು ಜನರಿಗೆ ಸಮಾಧಾನ ಹೇಳಿದರು. ಪಾವಗಡ ಮತ್ತು ಚಳ್ಳಕೆರೆಗಳಲ್ಲಿ ಸಾರ್ವಜನಿಕರು ಇತ್ತ ಬಿನ್ನವತ್ತಳೆಗೆ ನೆಹರೂರವರು ಉತ್ತರವಿತ್ತು ಜನರು ಕಷ್ಟಕಾಲದಲ್ಲಿ ಸೌಹಾರ್ದದಿಂದ ಪರಸ್ಪರ ಸಹಾಯ ನೀಡಿ, ತಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಪಡಬೇಕೆಂದೂ, ಇದಕ್ಕಾಗಿ ಸರ್ಕಾರದವರಿಗೆ ಮನವಿ ಸಲ್ಲಿಸುವುದು ತಪ್ಪಬೇಕೆಂದೂ ಹೇಳಿ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳವರು ಸಾಧ್ಯವಾದ ಎಲ್ಲ ಸಹಾಯವನ್ನು ನೀಡುವುದಾಗಿಯೂ ಭರವಸೆಯಿತ್ತರು ಚಿತ್ರದುರ್ಗದಿಂದ ಬಳ್ಳಾರಿಗೂ ಮತ್ತು ಭದ್ರಾನದಿಯಿಂದ ಬಳ್ಳಾರಿ ಜಿಲ್ಲೆಯ ಕೊಟ್ಟೂರಿಗೂ ರೈಲ್ವೆ ಲೈನು ಹಾಕಬೇಕೆಂದು ಕೋರಿದ್ದುದನ್ನು ಸಾವಧಾನವಾಗಿ ಪರಿಶೀಲಿಸುವುದಾಗಿ ಪಂಡಿತ ನೆಹರೂರವರು ತಿಳಿಸಿದರು

ಇನ್ನೊಂದು ಗ್ರಾಮದಲ್ಲಿ ಬಿಸ್ಕತು ಮಕ್ಕಳ ಆಟದ ಸಾಮಾನುಗಳನ್ನು ಮಾರುತ್ತಿದ್ದಾಗ ನೆಹರೂರವರು ಎಲ್ಲವನ್ನೂ ತಾವು ಕೊಂಡುಕೊಂಡು ಸಣ್ಣ ಮಕ್ಕಳಿಗೆ ಹಂಚಿದರು, ಧಾಡಪತ್ರಿ ರೈಲ್ವೆ ನಿಲ್ದಾಣದ ಬಳಿ ಇಪ್ಪ ಒಂದು ಬಸ್ಸಿನ ಮೇಲೆ ನಿಂತು ಪಂಡಿತ ನೆಹರೂರವರು ಅಲ್ಲಿ ನೆರೆದಿದ್ದವರಿಗೆ ದರ್ಶನವಿತ್ತರು.

ನ್ಯಾಯಾಂಗ ಶಾಖೆ ನೌಕರರ ಸಂಬಳದ ಪುನರ್ವಿಮರ್ಶೆ

ಸ್ವಂ ಸು] ಬೆಂಗಳೂರು ೬

ಸಂಸ್ಥಾನದ ನ್ಯಾಯಾಂಗ ಇಲಾಖಾ ನೌಕರರ ಸಂಬಳವನ್ನು ಪುನರ್ವಿಮರ್ಶಿಸುವ ವಿಷಯವು ಸರ್ಕಾರದ ಕ್ಷಿಪ್ರ ಪರ್ಯಾಲೋಚನೆಯಲ್ಲಿ ರುವುದಾಗಿ ಗೊತ್ತಾಗಿದೆ ಅದರ ಪ್ರಕಾರ ಅಸಿಸ್ಟೆಂಟ್ ಕಮೀಷನರುಗಳ ಸಂಬಳದ ದರ್ಜೆಯು ೨೫೦-೨೫-೫೦೦ ರಿಂದ ೩೦೦-೨೫-೫೦೦, ಜಿಲ್ಲಾ ಮುನ್ಸಿಫರುಗಳ ಸಂಬಳವನ್ನೂ ೧೯೫೪ನೇ ಅಕ್ಟೋಬರ್ ೧ ರಿಂದ ಇದೇ ಮಟ್ಟದಲ್ಲಿ ನಿಗದಿ ಮಾಡಲಾಗಿದೆ. ಇದರಿಂದ ಅವರುಗಳು ಸಂತೋಷಪಟ್ಟು ವ್ಯತ್ಯಂತ ತಾರೀಖಿನಿಂದ ಇದುವರೆಗಿನ ಹೆಚ್ಚಿನ ಸಂಬಳದ ಭಾಗವನ್ನು ಮುಖ್ಯ ಮಂತ್ರಿಯವರ ಕ್ಷಾಮ ಪರಿಹಾರ ನಿಧಿಗೆ ಕೊಡಲು ತೀರ್ಮಾನಿಸಿರುವರೆಂದು ಹೇಳಲಾಗಿದೆ.

ಸಂಸ್ಥಾನದ ಸಬ್ ಜಡ್ಜಿಗಳ ಸಂಬಳವನ್ನು ೫೦೦-೫೦-೭೦೦ ರಿಂದ೫೦೦-೫೦-೭೦೦ ರಂತೆಯೂ ಮತ್ತು ಮೂರು ದರ್ಜೆಯ ಜಿಲ್ಲಾ ಜಡ್ಜಿಗೂ ೮೦೦, ೧೦೦೦, ೧,೨೦೦ ರಿಂದ ೧,೫೦೦ ಕ್ಕೂ ಹೆಚ್ಚಿಸುವುದಲ್ಲದೆ, ಹೈಕೋರ್ಟಿನ ಜಡ್ಜಿಗಳ ಸಂಬಳವನ್ನು ತಲಾ ೨೫೦೦ ರಂತೆಯೂ ಮತ್ತು ಪ್ರಧಾನ ನ್ಯಾಯಾಧೀಶರ ಸಂಬಳವನ್ನು ೩೦೦೦ ವೆಂದೂ ನಿಗದಿ ಮಾಡಲಾಗುವುದೆಂದು ಹೇಳಲಾಗಿದೆ

ಮದ್ರಾಸು ಎನ್. ಜಿ. ಓ. ಗಳ ಉಪವಾಸ ಸತ್ಯಾಗ್ರಹ

ಮದರಾಸಿನ ನಾನ್‌ಗೆಜೆಟೆಡ್ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಕೆ ಕರ್ಣ್ ಕುಟ್ಟಿ ಮೆನನ್‌ರವರು ನೆನ್ನೆ ವೆಲ್ಲೂರಿನ ಎನ್. ಜಿ. ಓ. ಗಳ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಸದರಿ ನೌಕರರ ಸಂಬಳ ಮತ್ತು ಭತ್ಯವನ್ನು ಉತ್ತಮಪಡಿಸುವ ಬಗ್ಗೆ ಅವರ ಸಂಘದವರು ಮಂಡಿಸಿದ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸಿಲ್ಲವೆಂದೂ, ಅವುಗಳ ಪೂರೈಕೆಗಾಗಿ ನಾನ್‌ಗೆಜೆಟೆಡ್ ನೌಕರರು ಸಧ್ಯದಲ್ಲೇ ಮದ್ರಾಸಿನ ಸರ್ಕಾರಿ ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ, ಸರ್ಕಾರಿ ನಿಯಮಗಳ ಉಲ್ಲಂಘನೆ ಮೊದಲಾದ ಕಾರ್ಯಕ್ರಮಗಳನ್ನು ಆರಂಭಿಸುವುದಾಗಿಯೂ ತಿಳಿಸಿದರು. ದೀಪಾವಳಿ ಮತ್ತು ಇತರ ವಿಶೇಷ ಸಂದರ್ಭಗಳ ವೆಚ್ಚಕ್ಕಾಗಿ ಮೂರು ತಿಂಗಳ ಸಂಬಳವನ್ನು ಬೋನಸ್ಸಿನ ರೂಪದಲ್ಲಿ ಕೊಡಬೇಕೆಂದು ಕೇಳಿರುವುದಾಗಿಯೂ, ಸಧ್ಯದಲ್ಲೇ ದೆಹಲಿಯಲ್ಲಿ ನಡೆಯುವ ಅರ್ಥಿಕ ಸಚಿವರ ಸಮ್ಮೇಳನಕ್ಕೆ ರಾಜಾಜಿಯವರು ತೆರಳಿ ಹಿಂದಿರುಗಿದ ನಂತರ ಸೂಕ್ತ ಪರಿಹಾರ ದೊರೆಯುವ್ವನೆಂದು ಕಾದು ಆಶಿಸಿರುವುದಾಗಿಯೂ ಹೇಳಿದರು.

ಕ್ರೇನ್ ಮೂಲಕ ಸರೋವರದಿಂದ ಆನೆಯ ಪಾರು

ಇಂಗ್ಲೆಂಡಿನ ಕ್ಯಾಂಟರ್‌ಬರಿ ನಗರದಲ್ಲಿ ಸರ್ಕಸ್ಸಿನ, ೮೦ ವರ್ಷದ ಹೆಣ್ಣಾನೆಯೊಂದು ವಿಹಾರಾರ್ಥವಾಗಿ ಸರೋವರದೊಳಗೆ ಹೋಗಿ ಅಪಾಯಕ್ಕೀಡಾಗುವುದನ್ನು ತಪ್ಪಿಸಲು ಸರ್ಕಸ್ಸಿನವರು ಕ್ರೇನ್ ಮೂಲಕ ಅದನ್ನು ಎತ್ತಿದರೆಂದೂ, ಅದಕ್ಕೆ ಹಲವಾರು ಇಂಜಕ್ಷನ್‌ಗಳನ್ನು ಕೊಟ್ಟು ಮಾದಕ ದ್ರವ್ಯವನ್ನು ಕುಡಿಸಲಾಯಿತೆಂದೂ, ಐದಾರು ದಿನಗಳ ನಂತರ ಅದು ಗುಣವಾಗಬಹುದೆಂದೂ ವರದಿಯಾಗಿದೆ.

ಹುಚ್ಚು ಹಿಡಿದ ಯುವಕನಿಂದ ನಾಲ್ವರ ಕೊಲೆ

ಉತ್ತರ ಅಸ್ಸಾಮಿನ ಶಿವಸಾಗರದ ಸಿನಿಮಾ ಮಂದಿರವೊಂದಕ್ಕೆ ಕಳೆದ ೨ನೇ ತಾ|| ರಾತ್ರಿ ಹೋಗಿ, ವಾಪಸು ಮನೆಗೆ ಬಸ್ಸಿನಲ್ಲಿ ಬರುತ್ತಿದ್ದಾಗ, ಯುವಕನೊಬ್ಬನಿಗೆ ಇದ್ದಕ್ಕಿದ್ದಂತೆಯೇ ಬುದ್ಧಿ ಕೆಟ್ಟು ಇಬ್ಬರು ಪೋಲೀಸರನ್ನು ತಿವಿದು ಕೊಂದನೆಂದೂ, ಮತ್ತೊಬ್ಬ ಪೋಲೀಸನನ್ನು ಗಾಯಗೊಳಿಸಿ ಅಲ್ಲಿನ ಸಬ್ ಡಿವಿಜನ್ ಅಧಿಕಾರಿಗಳ ಮನೆಗೆ ನುಗ್ಗಿದನೆಂದೂ, ಆವರು ಅವನಿಂದ ತಪ್ಪಿಸಿಕೊಂಡರೆಂದೂ, ನಂತರ ಅವನು ೧೨ ಅಡಿ ಎತ್ತರದ ತಂತಿ ಬೇಲಿಯನ್ನು ಹಾರಿ, ಸರ್ಕಾರಿ ಖಜಾನೆಗೆ ನುಗ್ಗುವ ಪ್ರಯತ್ನದಲ್ಲಿದ್ದಾಗ, ಪಹರೆಯ ಸಿಪಾಯಿಯು ಅವನ ಮೇಲೆ ಗುಂಡು ಹಾರಿಸಲಾಗಿ ಅದು ತಪ್ಪಿ, ಸಿಪಾಯಿಯನ್ನು ಆ ಯುವಕನು ಇರಿದ. ಕೊಂದನೆಂದೂ ಹೇಳಲಾಗಿದೆ ಮತ್ತೊಬ್ಬ ಪಹರೆಯವನು ಅವನನ್ನು ಗುಂಡು ಹೊಡೆದು ಸಾಯಿಸಿದನೆಂದು ವರದಿಯಾಗಿದೆ ಪೆಟ್ಟು ಬಿದ್ದ ಪೋಲೀಸನೂ ಆಸ್ಪತ್ರೆಯಲ್ಲಿ ಮಡಿದಿರುತ್ತಾನೆ

ಹಿಟ್ಲರನ ಸಮೀಪವರ್ತಿ ಅಧಿಕಾರಿ ರಷ್ಯದಲ್ಲಿ

ಹಿಟ್ಲರನಿಗಿಂತಲೂ ಹೆಚ್ಚಾಗಿ ಜನರು ಹೆದರುತ್ತಿದ್ದ ಮಾರ್ಟಿನ್ ಬೋರ‍್ಮನ್ ಎಂಬ ಹಿಟ್ಲರರ ಕಿರಿಯ ಅಧಿಕಾರಿಯು ಈಗ ರಷ್ಯದಲ್ಲಿ ಕಮ್ಯೂನಿಸ್ಟ್ ಗೂಢಚಾರರಿಗೆ, ಆ ವಿದ್ಯೆಯಲ್ಲಿ ಪಾಠ ಕಲಿಸುತ್ತಿರುವರೆಂದು ವರದಿಯಾಗಿದೆ

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಸೂಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ಸ್ಪೆಷಲ್ ಎರಡು ನಾಟಕಗಳು
★
ಗುಬ್ಬಿ ಥಿಯೇಟ್ರಿಕಲ್ ಕಂಪೆನಿ
★
ಮೈಸೂರು ರತ್ನಾವಳಿ ಥಿಯೇಟರಿನಲ್ಲಿ
ತಾ|| 6-10-52 ನೇ ಸೋಮವಾರ
ರಾತ್ರಿ 10 ಕ್ಕೆ
ಸದಾರಮೆ
ತಾ|| 7-10-52 ನೇ ಮಂಗಳವಾರ
ರಾತ್ರಿ 10ಕ್ಕೆ
ಗುಲೇಬಕಾವಲಿ
ನಾಟಕರತ್ನ
ಜಿ. ಹೆಚ್. ವೀರಣ್ಣ ಮತ್ತು
ಸಿನಿಮಾ ತಾರೆ ಬಿ. ಜಯಮ್ಮ
ಇವರ ಅಭಿನಯ

ವಸ್ತುಪ್ರದರ್ಶಕರ ಸಂಘ

ಮೈಸೂರು ೬

ಮೇಲ್ಕಂಡ ಸಂಘದ ಸಂತೋಷಕೂಟವು ನಿನ್ನೆ ದಿನ ನ್ಯಾಯಾಂಗ ಸಚಿವರಾದ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಸಂಘದ ಅಧ್ಯಕ್ಷರಾದ ಶ್ರೀ ಎಂ ಓ ಮಹಾದೇವಸ್ವಾಮಿಯವರು ವಸ್ತುಪ್ರದರ್ಶಕರುಗಳಿಗಿರುವ ಹಲವಾರು ಅನಾನುಕೂಲಗಳನ್ನು ವಿಶದೀಕರಿಸಿ ಅವುಗಳಿಗೆಲ್ಲಾ ತಕ್ಕ ಕಾರ್ಯಕ್ರಮ ಕೈಕೊಳ್ಳುವಂತೆ ಪ್ರಾರ್ಥಿಸಿದರು ಉಪಾಧ್ಯಕ್ಷರಾದ ಶ್ರೀ ಆ ವಿ ಗಣಪತಿ ಅಯ್ಯರ್ ರವರೂ ಅಧ್ಯಕ್ಷರಾದ ಮಾನ್ಯ ಮಂತ್ರಿಗಳೂ ಸೂಕ್ತ ಭಾಷಣಗಳನ್ನು ಕೊಟ್ಟರು ಉಭಯಕ್ಷರ ಸಹಕಾರದಿಂದ ಪ್ರದರ್ಶನವನ್ನು ಇನ್ನೂ ಹೆಚ್ಚಿನ ಸೊಬಗು ಮತ್ತು ಬೋಧಪ್ರದವಾಗಿ ಮಾಡಬಹುದೆಂದು ಅಭಿಪ್ರಾಯ ಪಟ್ಟರು ಅತಿಥಿಗಳಿಗೆಲ್ಲಾ ಉಪಾಹಾರವನ್ನೂ ನೀಡಲಾಗಿತ್ತು ಮಧುರ ಕಲಾ ಮಂದಿರದವರಿಂದ ವಾದ್ಯಗೋಷ್ಠಿಯು ಬಹಳ ಅಂದವಾಗಿದ್ದಿತು ಈ ಸಂದರ್ಭದಲ್ಲಿ ಸಂಘದ ಸ್ಥಾಪಕರಾದ ಶ್ರೀ ಬಿ ಎಸ್ ಸುಬ್ಬರಾಯರ ಮತ್ತು ಹಿಂದೆ ಅಧ್ಯಕ್ಷರಾಗಿದ್ದ ಶ್ರೀಯುತ ಎಲ್ ರಾಮಚಂದ್ರರಾಯರ ತೈಲಚಿತ್ರಗಳನ್ನು ಅನಾವರಣ ಮಾಡಲಾಯಿತು ಮೊದಲನೇ ಚಿತ್ರವನ್ನು ರಾಜ್ ಬ್ರದರ್ಸ್ ರವರು ಬಹುಮಾನವಾಗಿ ಕೊಟ್ಟಿದ್ದರು ರಾ|| ಸಾ|| ಎ ಸುಬ್ಬರಾಮಯ್ಯ ಅವರು ಶ್ರೀ|| ವಿ ಆರ್ ನಾಯ್ಡು ಮೊದಲಾದ ಅನೇಕ ಮಹನೀಯರಿಂದ ಶುಭ ಸಂದೇಶಗಳು ಬಂದಿದ್ದುವು ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಕೆಲವು ಮಾರ್ಗಗಳನ್ನಾಗಿ ಪ್ರದರ್ಶನಕಾರರನ್ನು ಅಭಿನಂದಿಸಿದರು ಕನ್ನಡಮಾಧ್ಯಮದ ಸಾಂಸ್ಕೃತಿಕ ಮುಖ್ಯಸ್ಥರ ಸಹಯೋಗದ ಮೇಲಿನ ಹೆಚ್ಚಿನ ಸಹಕಾರದ ವಿನಂತಿಯೊಂದಿಗೆ ಕಾರ್ಯಕ್ರಮ ಮುಗಿಯಿತು

ಇದರ ಪರಿಚಯವಿದೆಯೆ
ಮೈಸೂರು ಸಾಬೂನು
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ ಅಪಾಯಕರ ದ್ರವ್ಯಾಂಶಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು ಯಾವ ಕ್ರಮವಿಲ್ಲದೆಯೇ ಶೀಘ್ರವಾಗಿ ಕೊಳೆ ಯುತ್ತದೆ ಶ್ರಮ ಕಾಲ ಹಣ ಮಿಗಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ



ಒಂದು ಪೆಟ್ಟಿಗೆಯನ್ನು
ಬಳಸಿ ನೋಡಿ
ಎಲ್ಲ ಕಡೆಯೂ ಸಿಗುತ್ತದೆ
ಸರ್ಕಾರದ
ಸಾಬೂನು ಕಾರ್ಖಾನೆ
ಬೆಂಗಳೂರು

Edited Printed and Published by A R Nagreshan at Sadhvi Press, D Subbiah Road Mysore

೧೧೧ ವರ್ಷದ ವೃದ್ಧೆಯ ಮರಣ

ಅರಸೀಕೆರೆಯ ಅತ್ಯಂತ ವೃದ್ಧ ಮಹಿಳೆ, ಚೆನ್ನಮ್ಮ ಎಂಬಾಕೆಯು ಕಳೆದ ಗುರುವಾರ ತನ್ನ ೧೧೧ ನೇ ವಯಸ್ಸಿನಲ್ಲಿ ಮೃತಪಟ್ಟಳೆಂದು ವರದಿಯಾಗಿದೆ ಆಕೆಗೆ ೮ ಜನ ಪುತ್ರರೂ, ಇಬ್ಬರು ಪುತ್ರಿಯರೂ, ೩೭ ಮಂದಿ ಮೊಮ್ಮಕ್ಕಳೂ ಮತ್ತು ೭ ಮಂದಿ ಮರಿಮಕ್ಕಳೂ ಇರುವರೆಂದು ಹೇಳಲಾಗಿದೆ.

ದಸರಾ ವಸ್ತು ಪ್ರದರ್ಶನದ ಕೈಪಿಡಿಗಳು

ಈ ವರ್ಷದ ದಸರಾ ವಸ್ತು ಪ್ರದರ್ಶನದ ಕೈಪಿಡಿಯನ್ನು ಸರ್ಕಾರದ ಪ್ರಕಟಣಾಧಿಕಾರಿಗಳು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟಿಸಿರುತ್ತಾರೆ ಇಂಗ್ಲಿಷಿನ ಕೈಪಿಡಿಯಲ್ಲಿ ವಸ್ತುಪ್ರದರ್ಶನದ ಸಮಿತಿ ಸದಸ್ಯರು ಭಾರತದಲ್ಲಿರುವ ವಿದೇಶಿ ರಾಯಭಾರಿ ಕಚೇರಿಗಳು, ವಿದೇಶಗಳಲ್ಲಿರುವ ಭಾರತದ ರಾಯಭಾರಿಗಳು ಇವರ ಹೆಸರುಗಳನ್ನು ಕೊಡಲಾಗಿದೆ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾವ್, ಶ್ರೀ ಹೆಚ್ ಸಿದ್ದವೀರಪ್ಪ, ಮತ್ತು ಇತರ ಅಧಿಕಾರಿಗಳಾದ ಶ್ರೀಗಳು ಆ ವಿ ಗಣಪತಿ ಅಯ್ಯರ್, ಡಾ|| ಬಿ ಟಿ ನಾರಾಯಣನ್, ಜೆ ಬಿ ಮಲ್ಲಾರಾಧ್ಯ, ಶಿಪ್ಪೇ ರುದ್ರಯ್ಯ, ಮುಂತಾದವರಿಂದಲೂ, ಶ್ರೀಗಳಾದ ಪಿ ಕೋದಂಡರಾವ್ ಶ್ರೀನಿವಾಸ ಕೃಷ್ಣದರ್ಮ ಎಂ ಆರ ವ ಅಂಗಿನವರಿಂದಲೂ ವಿವಿಧ ಪ್ರಚಲಿತ ವಿಷಯಗಳನ್ನೊಳಗೊಂಡ ಲೇಖನಗಳಿವೆ ರಾಷ್ಟ್ರಾಧ್ಯಕ್ಷ ರಾಜೇಂದ್ರಬಾಬು ಪ್ರಧಾನಿ ನೆಹರೂ ಮೈಸೂರಿನ ಶ್ರೀ ರಾಜಪ್ರಮುಖರು, ಸಚಿವರುಗಳು ಮುಂತಾದವರ ಚಿತ್ರಗಳು ಕೊಡಲ್ಪಟ್ಟಿವೆ ಎಂ ಎನ್ ವಿ ಯವರ ಭಾವಚಿತ್ರವನ್ನೂ ಕೊಡಲಾಗಿದೆ.

ಕನ್ನಡದಲ್ಲಿ ಪ್ರಕಟವಾಗಿರುವ ಕೈಪಿಡಿಯಲ್ಲಿ ರಾಜಸಭೆ ಮತ್ತು ರಾಜಸಸ್ಥಾನ, ವಿದ್ಯಾಭ್ಯಾಸ, ಪಾನನಿರೋಧ, ಸರ್ಕಾರ ಮತ್ತು ಸಾಹಿತ್ಯಾಭಿವೃದ್ಧಿ, ವರ್ಧಾ ಶಿಕ್ಷಣ ಭಾರತ ಸೇವಾದಳ ಮುಂತಾದ ವಿಷಯಗಳ ಮೇಲೆ ಲೇಖನಗಳು ಬರೆಯಲ್ಪಟ್ಟಿವೆ

ವಸ್ತು ಪ್ರದರ್ಶನದಲ್ಲಿ ಬಹುಮಾನ ವಿನಿಯೋಗ

ನಿನ್ನೆ ಸಾಯಂಕಾಲ ಕೈಗಾರಿಕಾ ಮಂತ್ರಿಗಳಾದ ಶ್ರೀ ಟಿ ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಸಮಾರಂಭವು ನಡೆಯಿತು ದೇವತಾ ಪ್ರಾರ್ಥನೆಯಾದನಂತರ ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಶ್ರೀ ಎ. ಜಿ ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿ ವಸ್ತು ಪ್ರದರ್ಶನಾಲಯದ ಅಭಿವೃದ್ಧಿಗೆ ಅಗತ್ಯವಾದ ಕೆಲವು ಸಲಹೆಗಳನ್ನು ಅಧ್ಯಕ್ಷರ ಮುಂದಿಟ್ಟರು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೂ, ಪ್ರದರ್ಶಕರಿಗೂ ರಜತ ಪಾತ್ರೆಗಳನ್ನೂ, ಬಟ್ಟಲುಗಳನ್ನೂ ಮತ್ತು ಪದಕಗಳನ್ನೂ ಅಧ್ಯಕ್ಷರು ಹಂಚಿದರು ಅನಂತರ ಅಧ್ಯಕ್ಷರು ಭಾಷಣ ಮಾಡಿ ಸೂಕ್ತ ಭರವಸೆಗಳನ್ನಿತ್ತರು ನಂತರ ಸುಪ್ರಸಿದ್ಧ ಸಿನಿಮಾ ತಾರೆ ಶ್ರೀಮತಿ ಬಿ ಜಯಮ್ಮನವರಿಂದ ಸೊಗಸಾದ ಸಂಗೀತ ಕಛೇರಿ ನಡೆಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೩೦ ಎಲ್ ಶೇಷಗಿರಿರಾವ್, ವೀಣೆ ಮಧ್ಯಾಹ್ನ ೧ ೩೦ ಕೊಳಲು ೩ ಎಂ ಸಿ ನಾಗನುಮತ್ತು ಹಿಂದೂಸ್ಥಾನಿ ಸಂಗೀತ ಸಂಜೆ ೬ ೩೦ ಆರ್, ಪಾರ್ವತಿ, ಸಂಗೀತ ೭ ಎಂ ಟಿ ನಾಗರಮತ್ತು ಹಿಂದೂಸ್ಥಾನಿ ಸಂಗೀತ ೬ ೧೦ ಗಾನವಿಹಾರ. ೭ ೩೦ ಬಿ ಎಂ ಶ್ರೀ ಯವರ ಮೇಲೆ ಟಿ ಎಸ್ ಶ್ರೀಯವರ ಕನ್ನಡ ಭಾಷಣ ೮ ಎಲ್ ಶೇಷಗಿರಿ ರಾವ್, ವೀಣೆ ೮ ೩೦ ವೃಂದ ಸಂಗೀತ ೯ ೧೫ ಇಂಗ್ಲಿಷ್ ಭಾಷಣ ೯ ೪೦ ಗಾನಮಾಲಿಕ

ಎಂ ಸಿ ನರಸಿಂಹಯ್ಯನವರು

ಕಿರಿದಾಗಿ ದಿನದ ನ್ಯಾಯಾಂಗ ಳಾದ ದಿ|| ಚೆನ್ನಪ್ಪನವರ ಪುತ್ರರೂ ಕಾಂಗ್ರೆಸ್ಸಿಗರೂ ಮತ್ತು ವರ್ತಕರೂ ಆದ ಶ್ರೀ ನರಸಿಂಹಯ್ಯನವರು ಕುಂಚಿಟಿಗರ ಸಂಘ, ಶ್ರೀ ರಾಮ ಮಂದಿರ ಮತ್ತು ವಿದ್ಯಾರ್ಥಿ ನಿಲಯಗಳ ಸ್ಥಾಪನೆಗೂ, ಅಭಿವೃದ್ಧಿಗೂ ದುಡಿದಿರುತ್ತಾರೆ ಕಾಂಗ್ರೆಸ್ ಸದಸ್ಯರಾಗಿ ಮೈಸೂರು ಸತತ ೨ ದಿ ಘಂಟೆಗಳ ಕಾಲ ಹಿಂದಿ ತಪ್ಪ ಪ್ರಚಾರಕರೂ ಆಗಿರುತ್ತಾರೆ ನಗರದ ನೇಕಾರ ಕಾರ್ಡುದಾರರ ಸಂಘದಲ್ಲೂ ಸೇವೆ ಸಲ್ಲಿಸಿರುತ್ತಾರೆ

ನಾರಾಯಣ್ಣ ಕಲೆಕ್ಷನ್ ಡೈರಿ
ನಾರಾಯಣ ಶಾಸ್ತ್ರಿ ರೋಡು, ಮೈಸೂರು
ಅಪ್ಪಟ ಹಸುವಿನ ಹಾಲು ದೊರೆಯುತ್ತೆ
ಸಾರ್ವಜನಿಕರಿಗೋಸ್ಕರ ನೂರಾರು ರಸ್ತೆ ಅಂಚಿಗೆ ನ್ಯಾಯ್ಯ ಬಂಡಿಗಳ ಭದ್ರವಾದ ಹಿಂಭಾಗದಲ್ಲಿ ಹೊಸ ಸಿ ಟಿವಿ ತೆರೆಯಲಾಗಿದೆ
ದೊರೆಯುವ ಕಾಲ ಬೆಳಿಗ್ಗೆ 7 30, ಸಾಯಂಕಾಲ 4 30

ಟೆಲಿಫೋನ್ ನಂ ೭೯೨ ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೭-೧೦ ೧೯೫೩ [ಸಂಚಿಕೆ ೮೯

ಕೊಲೆ ಆಪಾದನೆಗಾಗಿ ಫರೂಕರ ವಿಚಾರಣೆ

೧೦೨ ತೊಲ ಗಾಂಜಾ ಪತ್ತೆ

ಮೈಸೂರು ೬

ಗೌರಿಬಿದನೂರು ತಾಲ್ಲೂಕು ಗೊಲ್ಲ...ಯ ನರಸಿಂಹಯ್ಯ ಉರುಫ್ ನರಸಯ್ಯ ಎಂಬುವನು ೧೦೨ ತೊಲ ಗಾಂ...ವನ್ನು ಅಕ್ರಮವಾಗಿ ರಾಜಧಾನಿಗೆ ...ದು ಮದ್ರಾಸಿನ ನಾರಾಯಣರಾವ್ ...ಬ ಸಣ್ಣ ಹೋಟೇಲಿನ ಮಾಲೀಕರ ಮೂಲಕ ಮಾರಾಟ ಮಾಡುತ್ತಿದ್ದುದ...ನ್ನು ನೆನ್ನೆ ಇಲ್ಲಿನ ಅಬ್ಕಾರಿ ಇನ್ಸ್ಪೆಕ್ಟ...ಕಂಡು ಹಿಡಿದು, ನೆನ್ನೆ ನಗರದ ೧...ನ್ಯಾಯಾಧೀಶರ ಮುಂದೆ ಅವರಿಬ್ಬರನ್ನು ಹಾಜರು ಮಾಡಲಾಗಿ, ನರಸಿಂಹಯ್ಯನಿಗೆ ೩೦೦ ರೂ ಮತ್ತು ನಾರಾಯಣರಾಯನಿಗೆ ೨೦೦ ರೂ ದಂಡ, ...ದರೆ ೧ ತಿಂಗಳ ಸಾದಾ ಸಜಾ ವಿಧಿಸಲಾಯಿತು

ಅಣುಬಾಂಬಿನ ಬಗ್ಗೆ ಸಿ. ವಿ. ರಾಮನ್‌ರವರ ವಿಷಾದ

...ಸ್ಟ್ರೇಲಿಯದ ಮಾಂಟೆ ಬೆಲ್ಲೋ ದ್ವೀಪದಲ್ಲಿ ಬ್ರಿಟಿಷರು ಸಿಡಿಸಿದ ಅಣುಬಾಂಬಿನ ಬಗ್ಗೆ ಅಭಿಪ್ರಾಯವೀಯುತ್ತಾ ...ತದ ಸುಪ್ರಸಿದ್ಧ ವಿಜ್ಞಾನಿ ಸಿ. ವಿ. ...ರವರು ಮಾನವ ಕೋಟಿಗೆ ಅ...ಎಂಬುಗಳಿಂದ ಪ್ರಯೋಜನವಿಲ್ಲ...ದು ಹೇಳಿರುತ್ತಾರೆ. ಬುದ್ಧ ಜೀವನ...ಎಂಬಿಕರಾದ ತಮಗೆ ಅಣುಬಾಂಬಿ...ಸಿಡಿತದಿಂದ ಸಂತೋಷವಾಗುವುದಿಲ್ಲ...ಮತವರು ತಿಳಿಸಿರುವರು ರಷ್ಯಾ...ತ್ತು ಅಮೆರಿಕಾಗಳಿಗಿಂತಲೂ, ಬ್ರಿ...ನ್ನು ಅಣುವಿನ ರಹಸ್ಯಗಳನ್ನು ಹೆ...ಗಿ ತಿಳಿದಿರಲು ಸಾಧ್ಯವೆಂದೂ ಅವ...ಅಭಿಪ್ರಾಯಪಟ್ಟಿರುತ್ತಾರೆ

'ಸತ್ಯಯುಗ ರಾಜ್ಯ'' ದ ಸ್ಥಾಪಕನ ದಸ್ತಗಿರಿ

ಸತ್ಯಯುಗದ ರಾಜ್ಯ ಸ್ಥಾಪನೆಯಲ್ಲಿ ತೊಡಗಿರುವುದಾಗಿ ಹೇಳುತ್ತಿದ್ದ ನಾಗಪುರದ ಮೋಟಾ ಭಗತ್ ಎಂಬುವನನ್ನು ...ಲೀಸರು ೨೦ ಸಾವಿರ ರೂ ಗಳ ...ಸದ ಸಂಬಂಧವಾಗಿ ಬಂಧಿಸಿ...ತ್ತಾರೆ ಅವನ ಬಳಿ ಶೋಧಿಸಲಾಗಿ ...ತ್ರಗಳು, ಧ್ವಜಗಳು, ಲಾಂ...ಗ ಳು ಮತ್ತು ಸತ್ಯಯುಗ ರಾಜ್ಯದ ಸ್ಥಾಪನೆಯಾಗಿರುವುದೆಂದು ತಿಳಿಸುವ ಪುಸ್ತಕ ...ಂದು ದೊರೆತುವು ಹೊಸ ರಾಜ್ಯದ ವ್ಯವಸ್ಥೆಗಾಗಿ ಅತನು ೨೫೦ ಜನ ನೌಕರರನ್ನು ನೇಮಿಸಿ, ತನ್ನದೇ ಆದ ಶಾ...ನುಗಳನ್ನು ರಚಿಸಿದ್ದನೆಂದು ಹೇಳಲಾಗಿದೆ ಅವನ ೪ ಜನ ಸಹೋದ್ಯೋಗಿಗಳನ್ನೂ ದಸ್ತಗಿರಿ ಮಾಡಲಾಗಿದೆ

ವಿಶ್ವಸಂಸ್ಥೆಯ ಸ್ವಯಂ ಸೇವಕ ಪಡೆಗೆ ಏರ್ಪಾಡು

...ಕ್ರಮಣಗಳನ್ನು ತಡೆಯುವ ಬಗ್ಗೆ ...ಸಂಸ್ಥೆಯು ಕ್ರಮಕೈಗೊಳ್ಳುವ ಸ...ಗಿ ೫೦ ಅಥವಾ ೬೦,೦೦೦ ಮಂದಿ ...ನ ಕೂಡಿದ ಒಂದು ವಿಶ್ವಸಂಸ್ಥೆಯ ...ಯಂಸೇವಕ ದಳವನ್ನು ರಚಿಸಲು ...ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ...ಲೈರವರು ಆಲೋಚಿಸಿರುವರೆಂದು ...ವಿಮಾಗಿವೆ ಈ ಅಂಶವು ಪರಿಶೀಲ...ವಾದುದೆಂದು. ವಿಶ್ವಸಂಸ್ಥೆಯ ಜ...ಅಸೆಂಬ್ಲಿಯು ಸಂಸ್ಥೆಯ ಸದ...ಸ್ಯಗಳಿಗೆ ಶಿಫಾರಸು ಮಾಡಿರುವು...ಎಂದು ಹೇಳಲಾಗಿದೆ

ಸಂಸ್ಥಾನದಲ್ಲಿ ನೆಹರೂರವರ ಪ್ರವಾಸ ಮುಕ್ತಾಯ

ಪ್ರಜಾವರ್ಗದವರಿಗೆ ಅವರ ಸಂದೇಶ

ಪ್ರಧಾನಿ ನೆಹರೂರವರು ಸಂಸ್ಥಾನದ ಅಭಾವ ಗ್ರಸ್ತವಾದ ತುಮಕೂರು ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರವಾಸ ಮುಗಿಸಿ ನೆನ್ನೆ ಪೆನುಗೊಂಡೆಗೆ ಹಿಂದಿರುಗಿದರು ಅವರು ಸಂಸ್ಥಾನದ ಪ್ರಜೆಗಳಿಗೆ ಸಂದೇಶವೊಂದನ್ನಿತ್ತು ಈಗ ಪ್ರಾರಂಭವಾಗಿರುವ ಮಳೆಯು ಇನ್ನೂ ಮುಂದುವರಿದು, ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ತಿಳಿಯಲು ತಮಗೆ ಸಂತೋಷವಾಗುವುದಾಗಿ ತಿಳಿಸಿರುತ್ತಾರೆ ಅಭಾವ ಪರಿಸ್ಥಿತಿ ಬಗ್ಗೆ ನಿಜಾಂಶವನ್ನು ತಿಳಿಯಲು ಬಂದಿದ್ದ ಅವರು, ಮೈಸೂರಿನ ಪರಿಸ್ಥಿತಿಗಿಂತಲೂ ಕಠಿಣವಾದ ಸನ್ನಿವೇಶವು ಭಾರತದ ಇತರ ಕಡೆಗಳಲ್ಲಿರುವುದಾಗಿ ಅಭಿಪ್ರಾಯಪಟ್ಟಿರುವರು ದೇಶದ ಇಂದಿನ ಸಾಧನ ಸಂಪತ್ತಿನ ದೃಷ್ಟಿಯಿಂದ ಹೆಚ್ಚು ಪರಿಹಾರ ನೀಡುವ ಬಗ್ಗೆ ತಾವು ದೆಹಲಿಗೆ ಹಿಂತಿರುಗಿದ ಮೇಲೆ ನಿರ್ಧರಿಸಬೇಕಾಗಿಯೆಂದು ಅವರು ಹೇಳಿರುವರು ಜನರಲ್ಲಿ ಕರ್ತವ್ಯ ಜಾಗ್ರತಿಯುಂಟಾಗಿ ಸ್ವಾವಲಂಬನೆಯ ಮನೋಭಾವವು ಬರಬೇಕೆಂದೂ, ಅದಕ್ಕನುಗುಣವಾದ ಸಂಪ್ರದಾಯವು ಜನರಲ್ಲಿ ಬರಲು ಭಾರತ ಸೇವಾ ಸಮಾಜವು ತೊಡಗಬೇಕೆಂದೂ ಅವರು ತಿಳಿಸಿರುವರು ಕಷ್ಟಕ್ಕೆ ಸಿಕ್ಕಿರುವ ನೆರೆಯವರಿಗೆ ಸಹಾಯ ಮಾಡುವುದು ಎಲ್ಲರ ಕರ್ತವ್ಯವೆಂದೂ, ಅಭಾವ ಪರಿಸ್ಥಿತಿಗಳು ಭಾರತಕ್ಕೆ ಹೊಸದಲ್ಲವೆಂದೂ ಮಳೆಯು ಇಲ್ಲದಿರುವುದೇ ಅಭಾವಕ್ಕೆ ಕಾರಣವಲ್ಲವೆಂದೂ, ಜನರಲ್ಲಿರುವ ಅನೇಕ ಅಭ್ಯಾಸಗಳೇ ಇದಕ್ಕೆ ಕಾರಣವೆಂದೂ ಅವರು ಸ್ಪಷ್ಟಪಡಿಸಿರುವರು

ಕಲ್ಕತ್ತಾದ ಸುತ್ತಮುತ್ತ ಏಳು ಬೆಂಕಿ ಅನಾಹುತಗಳು

ಕಲ್ಕತ್ತಾ ನಗರದ ಸುತ್ತಮುತ್ತ ನೆನ್ನೆ ಮತ್ತೆ ಏಳು ಕಡೆ ಬೆಂಕಿ ಅನಾಹುತಗಳು ಸಂಭವಿಸಿ, ಲಕ್ಷಾಂತರ ರೂಗಳಷ್ಟು ನಷ್ಟ ಸಂಭವಿಸಿರುವುದಾಗಿ ವರದಿಯಾಗಿದೆ

ವಾರ್ಧಾ ಸಾಯುಕತ್ವಕ್ಕೆ ನೆಹರೂರ ರಾಜೀನಾಮೆ

ಈಜಿಪ್ಟಿನ ವಾರ್ಧಾ ಪಕ್ಷದ ಮುಖಂಡತ್ವಕ್ಕೆ ನ ಹಾಸ್ ಪಾಶಾರವರು ರಾಜೀನಾಮೆ ಸಲ್ಲಿಸಿರುವರೆಂದು ಗೊತ್ತಾಗಿದೆ ಜ ನರೀಬ್‌ರವರ ಸೂಚನೆಯಂತೆ ಇಲ್ಲಿನ ರಾಜಕೀಯ ಪಕ್ಷಗಳ ಶುದ್ಧೀಕರಣಕ್ಕೆ ಸದರಿ ಪಕ್ಷವು ಮೊದಲು ಒಪ್ಪದೇ ಈಗ ಪುನಃ ದೇ ವಿಷಯವನ್ನು ಪರ್ಯಾಲೋಚಿಸಲು ಪಕ್ಷದ ಕಾರ್ಯಕಾರಿ ಮಂಡಲಿಯು ಸೇರಿದ್ದಾಗ ನಹಾಸ್ ರವರು ರಾಜೀನಾಮೆಕೊಡ ಪುವಾಗಿ ತಿಳಿಸಿ, ಅವರಿಂದ ವಾರ್ಧಾ ಪಕ್ಷವು ಉಳಿಯಲು ಸಾಧಕವಾಗಲೆಂದು ಹಾರೈಸಿರುತ್ತಾರೆ ಈ ಪಕ್ಷವು ಸಂಸ್ಥಾಪಕ ಜಗ್ಲೂಲ್ ಪಾಷಾರವರ ನಿಧನದ ದಿನದಿಂದಲೂ ನಹಾಸ್‌ರವರೇ ಸದರಿ ಪಕ್ಷದ ಅಧಿನಾಯಕರಾಗಿ ಬಹುಕಾಲ ಇದ್ದರು

೨|| ಕೋಟಿ ಡಾಲರು ವೆಚ್ಚದಲ್ಲಿ ಅಣು ಶಕ್ತಿ ಶಾಲೆ

ಐರೋಪ್ಯ ರಾಷ್ಟ್ರಗಳ ಅಣುಶಕ್ತಿ ಸಂಶೋಧನಾ ಸಲಹಾ ಸಮಿತಿಯ ಸಭೆಯು ಆಂಸ್ಟರ್‌ಡಾಮಿನಲ್ಲಿ ನೆನ್ನೆ ಸೇರಿ ೨|| ಕೋಟಿ ಡಾಲರ್ ವೆಚ್ಚದಲ್ಲಿ ಸಧ್ಯದಲ್ಲೇ ಸ್ವಿಟ್ಜರ್ಲೆಂಡಿನಲ್ಲಿ ಒಂದು ಅಣುಶಕ್ತಿ ಪ್ರಯೋಗ ಶಾಲೆಯನ್ನು ಸ್ಥಾಪಿಸಲು ನಿರ್ಧರಿಸಿತು ಅಲ್ಲಿ ನಡೆಸುವ ಎಲ್ಲ ಪ್ರಯೋಗಗಳ ಪರಿಣಾಮಗಳನ್ನೂ ಎಲ್ಲ ಸದಸ್ಯ ರಾಷ್ಟ್ರಗಳಿಗೂ ತಿಳಿಸಲಾಗುವುದೆಂದೂ, ಅಣು ಶಸ್ತ್ರಗಳ ಬಗ್ಗೆ ಪ್ರಯೋಗ ನಡೆಸುವುದಿಲ್ಲವೆಂದೂ ಹೇಳಲಾಗಿದೆ ಇನ್ನು ಐದು ವರ್ಷಗಳಲ್ಲಿ ಪ್ರಯೋಗ ಶಾಲೆಯು ನಿರ್ಮಾಣವಾಗುವುದೆಂದು ತಿಳಿಸಲಾಗಿದೆ

ಸ್ಮಶಾನದಲ್ಲಿ ಪ್ರಾಣ ಬಂದು ಪುನಃ ಮರಣ

ಮದ್ರಾಸು ಸಂಸ್ಥಾನದ ಏಟಿಯಾಪುರದ ಬಳಿ ಒಂದು ಹಳ್ಳಿಯಲ್ಲಿ ೫ವರ್ಷದ ಬಾಲಕಿಯೊಬ್ಬಳು ಸತ್ತಿರುವಳೆಂದು ಅವಳನ್ನು ಸ್ಮಶಾನಕ್ಕೆ ಕೊಂಡೊಯ್ಯಲಾಗಿ, ಅಲ್ಲಿ ಆಕೆಗೆ ಜೀವಬಂದು ನೀರನ್ನು ಕೇಳಿದಳೆಂದೂ, ಅದನ್ನು ಕುಡಿದ ನಂತರ ಅವಳನ್ನು ಮನೆಗೆ ಕರೆದುತಂದ ಎಂಟು ಗಂಟೆ ನಂತರ ಅವಳು ಮೃತಪಟ್ಟಳೆಂದೂ ವರದಿಯಾಗಿದೆ

ಕೊಲೆ ಆಪಾದನೆಗಾಗಿ ಫರೂಕರ ವಿಚಾರಣೆ

ಕಳೆದ ಮಾರ್ಚಿ ತಿಂಗಳಲ್ಲಿ ಈಜಿಪ್ಟಿನ ಉನ್ನತ ಮಿಲಿಟರಿ ಅಧಿಕಾರಿಯೊಬ್ಬರ ಮತ್ತು ಇನ್ನೊಬ್ಬ ವೈದ್ಯರ ಕೊಲೆ ಬಗ್ಗೆ ಅಲ್ಲಿನ ಮಾಜಿ ದೊರೆ ಫರೂಕರನ್ನು ಪರೋಕ್ಷದಲ್ಲಿ ಮಿಲಿಟರಿ ವಿಚಾರಣೆಗೆ ಗುರಿಪಡಿಸಲಾಗುವುದೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ ಫರೂಕರಲ್ಲದೆ ಇತರ ಹಲವರನ್ನು ಇದೇ ಕಾರಣಕ್ಕಾಗಿ ವಿಚಾರಣೆಗೆ ಒಳಪಡಿಸಲಾಗುವುದೆಂದೂ, ಲೆಫ್ಟಿನೆಂಟ್ ಅಬ್‌ಡೆಲ್ ಕಬೀರ್ ತಾಹಾ ಎಂಬ ಮಿಲಿಟರಿ ಅಧಿಕಾರಿಯು ಕೈರೋವಿನ ರಸ್ತೆಯಲ್ಲಿ ಹೋಗುತ್ತಿದ್ದಾಗ ಅವರ ಮೇಲೆ ಪಿಸ್ತೂಲುಗಳಿಂದ ಹೊಡೆದು ಗಾಯಗೊಳಿಸಲಾಯಿತೆಂದೂ, ಆಸ್ಪತ್ರೆಯಲ್ಲಿ ಅಧಿಕಾರಿಯು ಸಾಯುವ ಮುಂಚೆ "ನನ್ನನ್ನು ಫರೂಕರು ಕೊಲ್ಲುವುದರಲ್ಲಿ ನ್ಯಾಯವಿಲ್ಲ" ವೆಂದು ಹೇಳಿಕೆಯಿತ್ತು ಮಡಿದರೆಂದೂ ಹೇಳಲಾಗಿದೆ ಸದರಿ ಅಧಿಕಾರಿಯು ಫರೂಕರನ್ನು ಕೊಲ್ಲಬೇಕೆಂದಿದ್ದನೆಂದೂ, ಈ ವಿಷಯವು ಫರೂಕರಿಗೆ ಗೊತ್ತಾಗಿ ಅವನನ್ನು ಕೊಲ್ಲಲು ಆಜ್ಞೆ ಮಾಡಿದ್ದರೆಂದೂ ಹೇಳಲಾಗಿದೆ

ಸಹಗಮನ ಪ್ರಯತ್ನಕ್ಕೆ ಪೋಲೀಸರ ತಡೆ

ಜಯಪುರದ ಚನ್ನ ಗಿಲ್ಲಿ ಗಟ್ಟಿಗಳ ವ್ಯಾಪಾರಿಯೊಬ್ಬನು ಮೊನ್ನೆ ಗತಿಸಿದುದರಿಂದ ವಿರಹವನ್ನು ತಾಳಲಾರದೆ ಆತನ ಮಧ್ಯ ವಯಸ್ಸಿನ ಪತ್ನಿಯು ತಾನೂ ಗಂಡನೊಡನೆ ಚಿತೆಯೇರುವುದಾಗಿ ತಿಳಿಸಿದುದನ್ನು ಕೇಳಿ ಪೋಲೀಸರು ಆಕೆಯನ್ನು ಬಂಧಿಸಿ, ಸಹಗಮನದ ದೃಶ್ಯವನ್ನು ನೋಡಲು ಹೊರಟಿದ್ದ ಸಹಸ್ರಗಟ್ಟಲೆ ಜನರಿಗೆ ಅದು ನಡೆಯುವುದಿಲ್ಲವೆಂದು ಪ್ರಚಾರ ಮಾಡಿದರೆಂದು ವರದಿಯಾಗಿದೆ

ನೆಹರೂರವರಿಗೆ ಮೈಸೂರು ಸರ್ಕಾರದ ಮನವಿ

ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪದೇಪದೇ ಅಭಾವ ಪರಿಸ್ಥಿತಿಯನ್ನು ಕುರಿತು ಸಂಸ್ಥಾನದ ಅಭಾವ ಪರಿಹಾರ ಕಮೀಷನರಾದ ಶ್ರೀ ಕೆ ಪಿ ರಾಮನಾಥಯ್ಯನವರು ಪ್ರಧಾನಿ ನೆಹರೂರವರಿಗೆ ಬಾಗೆಪಲ್ಲಿಯಲ್ಲಿ ಮನವಿಯೊಂದನ್ನು ಸಲ್ಲಿಸಿ ಕಳೆದ ೩೫ ವರ್ಷಗಳಿಂದ ಆ ಪ್ರದೇಶಗಳಲ್ಲಿ ಆದ ಮಳೆಯ ಸರಾಸರಿಗಿಂತಲೂ ಈ ವರ್ಷ ೧೦ ಅಂಗುಲ ಕಡಿಮೆ ಬಿದ್ದಿರುವುದೆಂದು ತಿಳಿಸಿರುವರು ಅದರಿಂದ ನಿರುದ್ಯೋಗಿಗಳಾದ ೨ ಲಕ್ಷ ಮಂದಿಗೆ ೩ ತಿಂಗಳ ಕಾಲ ಕನಿಷ್ಟವಾಗಿ ಎಂಟಾಣೆಯಂತೆ ೧|| ಕೋಟಿ ರೂ ಕೂಲಿ ಒದಗಿಸಬೇಕಾಗುವುದೆಂದೂ, ಕೇಂದ್ರ ಸರಕಾರದವರು ಸಹಾಯ ನೀಡಬೇಕೆಂದೂ ಅವರು ಕೋರಿರುವರು

○ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಮೂರನೇ ಮಹಾ ಯುದ್ಧಕ್ಕೆ ಸಿದ್ಧತೆ ಮಾಡಿಕೊಂಡಿರುವುವೆಂದು ರಷ್ಯದ ಉಪಪ್ರಧಾನಿ ಮಾಲೆಂಟಾವ್‌ರವರು ಕಮ್ಯೂನಿಸ್ಟ್ ಕಾಂಗ್ರೆಸ್ ಅಧಿವೇಶನದಲ್ಲಿ ತಿಳಿಸಿರುತಾರೆ

ಕಾಂ|| ಕಾರ್ಯಕಾರಿ ಮಂಡಲಿಗೆ ಇನ್ನೂ ೮ ಜನ ಸದಸ್ಯರು

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ೨೧ ಸ್ಥಾನಗಳ ಪೈಕಿ ಖಾಲಿಯಿದ್ದ ನಾಲ್ಕು ಸ್ಥಾನಗಳಿಗೆ ಅಧ್ಯಕ್ಷ ಪಂಡಿತ ನೆಹರೂ ರವರು ಶ್ರೀಗಳಾದ ಲಾಲ್ ಬಹದ್ದೂರ್ ಶಾಸ್ತ್ರಿ, ರಫಿ ಅಹಮದ್ ಕಿದ್ವಾಯ್, ಎಸ್. ಎ. ಅಗರ್‌ವಾಲ್ ಮತ್ತು ಶ್ರೀಮತಿ ಪುಷ್ಪಬೆನ್ ಮೆಹತಾರವರನ್ನು ನೇಮಿಸಿರುವರೆಂದು ತಿಳಿದುಬಂದಿದೆ. ಶ್ರೀಗಳಾದ ಬಲವಂತರಾಯ್ ಮೆಹತಾ, ಯು. ಶ್ರೀನಿವಾಸಮಲ್ಯ ಮತ್ತು ಎಸ್ ಎ ಅಗರ್‌ವಾಲ್ ಈ ಮೂವರು ಕಾರ್ಯದರ್ಶಿಗಳಾಗಿರುವರು. ಕಾರ್ಯಕಾರಿ ಸಮಿತಿಯಲ್ಲಿ ಈಗ ಸಚಿವ ಮಂಡಲಿಯಿಂದ ಎಂಟು ಮಂದಿ ಸದಸ್ಯರಿರುವರು

ನೇಪಾಳ ಸರ್ಕಾರದ ವಿರುದ್ಧವಾಗಿ ಸತ್ಯಾಗ್ರಹ

ನೇಪಾಳದ ಮಾಜಿ ಕಾಂಗ್ರೆಸ್ ಸರ್ಕಾರವು ಅಲ್ಲಿ ಸಾಧಿಸಿದ್ದ ಅನೇಕ ಪ್ರಗತಿಪರ ಕಾರ್ಯಗಳನ್ನು ಈಗಿನ ಸಲಹೆಗಾರ ಸರ್ಕಾರವು ಅಳಿಸಿಬಿಡುತ್ತಿರುವುದೆಂದೂ, ಆದುದರಿಂದ ನೇಪಾಳದ ಕಾಂಗ್ರೆಸ್ಸು ಕ್ಷಿಪ್ರದಲ್ಲೇ, ಈಗಿನ ಸರ್ಕಾರದ ವಿರುದ್ಧವಾಗಿ ಸತ್ಯಾಗ್ರಹ ಹೂಡಬಹುದೆಂದೂ ಅಲ್ಲಿನ ಮಾಜಿ ಆಹಾರ ಸಚಿವ ಗಣೇಶಮಾನ್ ಸಿಂಗ್‌ರವರು ಕಾಶಿಯಲ್ಲಿ ತಿಳಿಸಿದರು.

ಗಾಂಧಿ ಜಯಂತಿ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ಶುಕ್ರವಾರ ಗಾಂಧೀಜಿಯವರ ೮೩ ನೆಯ ಜಯಂತಿಯನ್ನು ಶ್ರೀಮತಿ ರಂಗಮ್ಮನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಸಾಮೂಹಿಕ ಪ್ರಾರ್ಥನೆ ಮತ್ತು ಭಾರತ ವಾಚನ ಮೊದಲಾದ ಕಾರ್ಯಕ್ರಮಗಳಾದನಂತರ ಶ್ರೀ ಕೆ ಎಸ್. ನಾರಾಯಣಸ್ವಾಮಿಯವರಿಂದ ಗಾಂಧಿ ಸಾಹಿತ್ಯ ವಾಚನವು ನಡೆಯಿತು. ಅಧ್ಯಕ್ಷರು ಗಾಂಧೀಜಿಯವರ ಜೀವನದ ಧ್ಯೇಯ ಸಾಧನೆಗಳನ್ನು ವಿವರಿಸಿ ಮಹಿಳೆಯರೆಲ್ಲರೂ ಅವರ ಮಾರ್ಗದಲ್ಲಿ ಹೋಗಲು ಪ್ರಯತ್ನಿಸಬೇಕೆಂದು ಕೋರಿದರು.

ಕ್ಷಾಮ ನಿಧಿಗೆ ಸಹಾಯ

ರಾಜಧಾನಿಯ ಪೌರಸಭೆಯವರು ಶೇಖರಿಸುತ್ತಿರುವ ಸಂಸ್ಥಾನದ ಕ್ಷಾಮ ನಿವಾರಣಾ ನಿಧಿಗೆ ಕಳೆದ ತಿಂಗಳು ೧೦ ನೇ ತಾರೀಕಿನಿಂದ ೩೦ ನೇ ತಾರೀಕಿನವರೆಗೆ ಕೆಳಗೆ ಕಂಡಂತೆ ಧನ ಸಹಾಯವು ಒದಗಿರುತ್ತೆ:—ಶ್ರೀ ಸೈಯದ್ ಯೂಸುಫ್ ೫೦ ರೂ., ಬೋರಯ್ಯ ಬಸವಯ್ಯ ಮತ್ತು ಸಹೋದರರು ೨೦೧ ರೂ., ನಗರದ ಆರೋಗ್ಯಾಧಿಕಾರಿಗಳು ಶೇಖರಿಸಿರುವುದು ೨೧೩ ರೂ., ರೇಷನಿಂಗ್ ಆಫೀಸರರು ಶೇಖರಿಸಿರುವುದು ೩೧೦ ರೂ, ರಾಜಧಾನಿಯ ಪವರ್ ಮಗ್ಗಗಳ ಕಾರ್ಖಾನೆ ಕೆಲಸಗಾರರ ಸಂಘದ ಕಾರ್ಯದರ್ಶಿಗಳು ಕೂಡಿಸಿರುವುದು ೬೦೧ ರೂ., ಶ್ರೀ ಬಬು ಬೇಕರ್ ಹೊಟೇಲ್ ಮಾಲೀಕರು ೫೦ ರೂ. ಮತ್ತು ಗಾರ್ಡನ್ ಹೊಟೇಲಿನ ಮಾಲೀಕರಾದ ಶ್ರೀ ಕೆ. ಗುರುರಾಜಾಚಾರ್ಯರು ೫೦ ರೂ.

ಕ್ಷಾಮದಿಂದ ೨ ಕೋಟಿ ಜನರಿಗೆ ತೊಂದರೆ

ಮದ್ರಾಸ್, ಬೊಂಬಾಯಿ, ಮೈಸೂರು, ಅಜ್ಮೀರ್, ಉತ್ತರ ಪ್ರದೇಶದ ಪೂರ್ವ ಭಾಗ ಮತ್ತು ರಾಜಾಸ್ಥಾನಗಳಲ್ಲಿ ಒಟ್ಟು ೨ ಕೋಟಿಗಿಂತಲೂ ಹೆಚ್ಚಿನ ಜನರು ಕ್ಷಾಮ ಪೀಡಿತರಾಗಿರುವರೆಂದು ಅಂದಾಜಾಗಿದೆ. ಮೈಸೂರು ಸಂಸ್ಥಾನದಲ್ಲಿ ಪರಿಹಾರಕ್ಕಾಗಿ ಒದಗಿಸಿದ ೬೦ ಲಕ್ಷ ರೂ.ಗಳಲ್ಲಿ ೬ ಲಕ್ಷ ರೂ.ಗಳನ್ನು ಉಚಿತವಾಗಿ ಜನರಿಗೆ ಕೊಡಲಾಗಿದೆಯೆಂದೂ, ೧೩ ಲಕ್ಷ ಜನರಿಗಾಗಿ ೫೧೧ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲಾಗಿದೆಯೆಂದೂ ಹೇಳಲಾಗಿದೆ.

ನಗೀಬ್ ವಿರುದ್ಧ ಜಮೀನ್ದಾರನಿಗೆ ಜೀವಾವಧಿ ಶಿಕ್ಷೆ

ಈಜಿಪ್ಟಿನ ಭೂ ಸುಧಾರಣೆಯ ವಿರುದ್ಧವಾಗಿ ಇತ್ತೀಚೆಗೆ ಕ್ರಾಂತಿಯನ್ನೆಬ್ಬಿಸಿದ್ದ ಭಾರಿ ಜಮೀನ್ದಾರನೂ ಮತ್ತು ಪಾರ್ಲಿಮೆಂಟ್ ಸದಸ್ಯನೂ ಆಗಿದ್ದ ಅಡ್ಲಿ ಲಾಮಾಲುಂ ಎಂಬಾತನನ್ನು ವಿಚಾರಣೆಗೆ ಗುರಿಪಡಿಸಿ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ

ಆರೋಗ್ಯಾಧಿಕಾರಿಗಳಿಗೆ ಸತ್ಕಾರ

ರಾಜಧಾನಿಯ ಸಂತೇಪೇಟೆ ವರ್ತಕರಾದ ಶ್ರೀ ಡಿ ಪುಟ್ಟಯ್ಯನವರು ಹೊಸ ಸಂತೇಪೇಟೆಯಲ್ಲಿರುವ ತಮ್ಮ ಮನೆಯಲ್ಲಿ ಪೌರಸಭೆಯ ಆರೋಗ್ಯಾಧಿಕಾರಿಗಳಾದ ಶ್ರೀ ಎಸ್. ಶೇಷಗಿರಿರಾಯರನ್ನು ಬೀಳ್ಕೊಡುವ ಸಲುವಾಗಿ ನೆನ್ನೆ ರಾತ್ರಿ ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು. ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆ ವಹಿಸಿದ್ದರು. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣ, ಶ್ರೀ ಎಂ ಆರ್. ಸಿ ಬಸಪ್ಪ, ಬೆಂಗಳೂರಿನ ಶ್ರೀ ಡಿ. ವೆಂಕಟರಮಣಪ್ಪ ಮತ್ತು ಅಧ್ಯಕ್ಷರು ಭಾಷಣ ಮಾಡಿ ಆರೋಗ್ಯಾಧಿಕಾರಿಗಳ ಕರ್ತವ್ಯ ನಿಷ್ಠೆಯನ್ನು ಪ್ರಶಂಸಿಸಿದರು. ಶ್ರೀ ಶೇಷಗಿರಿರಾಯರು ಸೂಕ್ತ ಉತ್ತರವಿತ್ತು, ತಮ್ಮನ್ನು ಸತ್ಕರಿಸಿದುದಕ್ಕಾಗಿ ಶ್ರೀ ಡಿ. ಪುಟ್ಟಯ್ಯನವರಿಗೆ ಕೃತಜ್ಞತೆಯನ್ನು ಸೂಚಿಸಿದರು

ನಗರಕ್ಕೆ ಪಂ|| ಪ್ರೇಮನಾಥ ಡೋಗ್ರಾರವರ ಆಗಮನ

ಕಾಶ್ಮೀರ ಮತ್ತು ಜಮ್ಮು ಪ್ರಜಾಪರಿಷತ್ತಿನ ಅಧ್ಯಕ್ಷರಾದ ಪಂ|| ಪ್ರೇಮನಾಥ ಡೋಗ್ರಾರವರು ಇದೇ ೯ನೇ ತಾರೀಖು ಬೆಳಿಗ್ಗೆ ೭-೧೫ ಗಂಟೆಗೆ ಅರಸೀಕೆರೆ ಮಾರ್ಗವಾಗಿ ರಾಜಧಾನಿಗೆ ಆಗಮಿಸುವರು. ಅವರಿಗೆ ಸ್ವಾಗತ ನೀಡುವ ಸಲುವಾಗಿ ಡಾ|| ಬಿ. ಜಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಅತಿಥಿಗಳನ್ನು ಸ್ವಾಗತಿಸಲು ಸರ್ವರೂ ಮೇಲ್ಕಂಡ ದಿನ ರೈಲ್ವೆ ನಿಲ್ದಾಣಕ್ಕೆ ಬರಬೇಕೆಂದು ಸಮಿತಿಯವರು ಕೋರಿರುವರು ೯ ನೇ ತಾರೀಖು ಗುರುವಾರ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಶ್ರೀ ಡೋಗ್ರಾರವರ ಭಾಷಣವನ್ನು ಏರ್ಪಡಿಸಲಾಗಿದೆ.

ಗೋವಧೆ ನಿಷೇಧಕ್ಕೆ ಆರ್. ಎಸ್. ಎಸ್. ಚಳುವಳಿ

ಭಾರತದ ಆದ್ಯಂತ ಗೋಹತ್ಯೆಯನ್ನು ನಿಷೇಧಿಸುವ ಬಗ್ಗೆ ಆರ್. ಎಸ್. ಎಸ್. ಸಂಸ್ಥೆಯವರು ಇದೇ ೨೬ ನೇ ತಾರೀಕಿನಿಂದ ಪ್ರಚಂಡ ಚಳುವಳಿಯನ್ನು ಆರಂಭಿಸಲು ನಿರ್ಧರಿಸಿರುವರೆಂದು ವರದಿಯಾಗಿದೆ.

ಹರಿಜನನಿಗೆ ಕ್ಷೌರ ಮಾಡಲು ನಿರಾಕರಿಸಿದ್ದಕ್ಕೆ ದಂಡ

ಉತ್ತರ ಭಾರತದ ಎಡವಾ ಎಂಬ ಹಳ್ಳಿಯ ಕ್ಷೌರಿಕನೊಬ್ಬನು ಹರಿಜನನಿಗೆ ಕ್ಷೌರ ಮಾಡಲು ನಿರಾಕರಿಸಿದುದಕ್ಕಾಗಿ ೫೦ ರೂ ದಂಡ ವಿಧಿಸಲ್ಪಟ್ಟಿರುವನೆಂದು ತಿಳಿದುಬಂದಿದೆ

ಪರ್ಷಿಯದ ಷಹಾರೊಡನೆ ಸರ್ ಮಿರ್ಜಾರವರ ಭೇಟಿ

ಪರ್ಷಿಯಕ್ಕೆ ತೆರಳಿರುವ ಮೈಸೂರಿನ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲರು ಟೆಹರಾನಿನಲ್ಲಿ ಅಲ್ಲಿನ ಷಹಾರವರನ್ನು ಮೊನ್ನೆ ಭೇಟಿ ಮಾಡಿ ಸಂಭಾಷಣೆ ನಡೆಸಿದರೆಂದು ತಿಳಿದುಬಂದಿದೆ.

ಇಸ್ರೇಲ್ ಮಂತ್ರಿಯ ಕಛೇರಿ ಸಿಡಿತಕ್ಕೆ ಪ್ರಯತ್ನ

ಇಸ್ರೇಲಿನ ವಿದೇಶಾಂಗ ಮಂತ್ರಿ ಇಲಾಖಾ ಕಛೇರಿಯನ್ನು ಸಿಡಿಸುವ ಪ್ರಯತ್ನವನ್ನು ಮೊನ್ನೆ ನಡೆಸಿದ ಯುವಕನೊಬ್ಬನನ್ನು ದಸ್ತಗಿರಿ ಮಾಡಲಾಯಿತು. ಅವನ ಕೈಯ್ಯಲ್ಲಿದ್ದ ಬಾಂಬನ್ನು ಕಿತ್ತುಕೊಂಡು ಅದನ್ನು ಉಪಯೋಗವಿಲ್ಲದಂತೆ ಮಾಡಲಾಯಿತು. ಜರ್ಮನಿಯೊಡನೆ ಇಸ್ರೇಲ್ ರಾಜ್ಯವು ಮಾಡಿಕೊಂಡ ಯುದ್ಧ ಪರಿಹಾರ ಒಪ್ಪಂದವನ್ನು ಪ್ರತಿಭಟಿಸುವುದೇ ಆತನ ಉದ್ದಿಶ್ಯವಾಗಿತ್ತೆಂದು ಹೇಳಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಮತ್ತು ಸಂಜೆ ೫ ೪೦ ಡಿ. ಸಂಗೀತಪುಷ್ಪ, ಕ್ಲಾರಿಯೊನೆಟ್, ಪಿ. ವೆಂಕಟಸುಬ್ಬರಾವ್, ವೀಣೆ. ಮಧ್ಯಾಹ್ನ ೧.೪೦ ಸಿಟೀಲು. ೨ ವನಿತಾ ವಿಹಾರ, ಸ್ತ್ರೀಯರ ಕಾರ್ಯಕ್ರಮ. ಸಂಜೆ ೬ ಗೀತ ಮತ್ತು ಭಜನ್ (ರೆಕಾರ್ಡ್). ೬.೧೦ ಬಾಲ ಜಗತ್, ಮಕ್ಕಳ ಕಾರ್ಯಕ್ರಮ ೭ ವಾಣಿ ಸರ್ಕಾರ್, ಹಿಂದಿ ಗೀತೆಗಳು. ೭.೨೦ ಜನರಂಜನಿ. ೭ ೪೦ ದಿಲ್ರುಬಾ. ೮ ನೀಲಮ್ಮ ಕಡಾಂಬಿ, ವೀಣೆ ಮತ್ತು ಗಾಯನ. ಎಂ. ಎಸ್. ಸುಬ್ರಹ್ಮಣ್ಯಂ, ಪಿಟೀಲು ಮತ್ತು ವಿ. ವಿ. ರಂಗನಾಥ್, ಮೃದಂಗ. ೯.೧೫ ಡಿ. ಆರ್ ಬೇಂದ್ರೆ, ಕನ್ನಡ ಗೀತೆಗಳು (ರೆಕಾರ್ಡ್) ೯ ೪೦ ನಿಮ್ಮ ಮೆಚ್ಚಿನ ಗೀತೆಗಳು.

ಪೋಲೀಸನನ್ನು ವರಿಸಲು ರಾಜಕುವರಿಯ ಇಚ್ಛೆ

ಜಾರ್ಜ್ ಲೆಸ್ಲಿಗ್ರಾನ್ ಹ್ಯಾಂ ಎಂಬ ಲಂಡನ್ ಪೋಲೀಸಿನವನನ್ನು ವಿವಾಹವಾಗಲು ಅನುಮತಿಗಾಗಿ ಕೂಚ್‌ಬಿಹಾರ್ ರಾಜಪುತ್ರಿ ಸೊನಿಪಾ ದೀಪಾ ಮ..ಹರ್ ಎಂಬಾಕೆಯು ಅಲ್ಲಿನ ಒಂದು ಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾಳೆ. ಆಕೆಯ ತಂದೆ ಅರ್ಲ ಜೋಸೆಲ್ಯೆ ಮೂಂಡರ್ ಮತ್ತು ತಾಯಿ ರಾಜಕುಮಾರಿ ಮುಷೀದಾದೇವಿಯವರು ಈ ವಿವಾಹಕ್ಕೆ ಸಮ್ಮತಿಯನ್ನು ಕೊಟ್ಟಿಲ್ಲ. ತಂದೆ ತಾಯಿಗಳ ಪರವಾಗಿ ಒಬ್ಬ ವಕೀಲರು ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸಿ, ಅವರ ಮಗಳನ್ನು ಹೈಕೋರ್ಟಿನ ಪ್ರತಿನಿಧಿಗಳ ವಶಕ್ಕೆ ಒಳಪಡಿಸಬೇಕಾಗಿರುವುದರಿಂದ ಆಕೆಯ ವಿವಾಹದ ಅರ್ಜಿಯನ್ನು ತಾತ್ಕಾಲಿಕವಾಗಿ ತಳ್ಳಿಹಾಕಬೇಕೆಂದು ಸೂಚಿಸಿದರು. ನ್ಯಾಯಾಧೀಶರು ಕನ್ಯೆಯ ಅರ್ಜಿಯ ಪರಿಶೀಲನೆಯನ್ನು ಅನಿರ್ದಿಷ್ಟಕಾಲದವರೆಗೆ ಮುಂದಕ್ಕೆ ಹಾಕಿರುವರು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ.ಇಂದ	ರೂ.ಗೆ
ನೆಲಗಡಲೆ	೭-೮-೦	೨೧-೧೨-೬
ಎಳ್ಳು	೬೧-೧೨-೦	೬೨-೧೦-೧
ಹುಚ್ಚೆಳ್ಳು	೫೦-೦-೦	
ಹರಳು ಬೀಜ	೪೨-೦-೦	೪೪-೨-[illegible]
ಹುರುಳಿ	೬೦-೧೨-೮	
ಹೆಸರು	೫೦-೦-೦	
ಹೊಂಗೇಬೀಜ	೨೩-೪-೦	
ಉದ್ದು	೩೦-೨-೦	
ಅವರೆ	೭೯-೧೦-೨	
ಹಲಸಂದೆ	೬೪-೬-೦	
ಮೆಣಸಿನಕಾಯಿ		
ಮಣಕ್ಕೆ	೧೦-೧೪-೦	೨೧-೩-೦
ಹುಣಸೇಹಣ್ಣು	೪-೧-೦	೬-೮-೦
ಸೀಗೇಕಾಯಿ	೫-೧-೦	
ಬೆಲ್ಲ	೩-೮-೦	
ತೆಂಗಿನಕಾಯಿ ೧೧೦೦	೧೭೮.೦-೦	೨೩೩-೦-[illegible]

ಗ್ರಾಜುಯೇಟ್ಸ್ ಸಹಕಾರ ಸಂಘದ ವಾರ್ಷಿಕ ಸಭೆ

ರಾಜಧಾನಿಯ ಗ್ರಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿಯ ವಾರ್ಷಿಕ ಸಭೆಯು ನೆನ್ನೆ ಶ್ರೀ ಎಂ. ನಾರಾಯಣ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗಿ, ಕಳೆದ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸಿದ ನಂತರ ಹೊಸ ವರ್ಷದ ಆಡಳಿತ ವರ್ಗದ ಚುನಾವಣೆ ನಡೆದು ಶ್ರೀಗಳಾದ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ಯರು ಅಧ್ಯಕ್ಷರಾಗಿಯೂ, ಬಿ. ರಾಮಣ್ಣನವರು ಉಪಾಧ್ಯಕ್ಷರಾಗಿಯೂ, ಎಸ್ ಶ್ರೀರಂಗಾಚಾರ್ ಮತ್ತು ಭೀಮಸೇನರಾಯರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಮಾಯಣ್ಣ ಕಲೆಕ್ಷನ್ ಡೈರಿ
ನಾರಾಯಣ ಶಾಸ್ತ್ರಿ ರೋಡು, ಮೈಸೂರು.

ಅಪ್ಪಟ ಹಸುವಿನ ಹಾಲು ದೊರೆಯುತ್ತೆ

ಸಾರ್ವಜನಿಕರಿಗೋಸ್ಕರ ನೂರಡಿ ರಸ್ತೆ ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗದಲ್ಲಿ ಹೊಸ ಸ್ಟಾಲ್ ತೆರೆಯಲಾಗಿದೆ.

ದೊರೆಯುವ ಕಾಲ ಬೆಳಿಗ್ಗೆ 7 30, ಸಾಯಂಕಾಲ 4.30

Edited. Printed and Published by A. R. Nagarajan at Sadhvi Press, D. Subbiah Road Mysore

ಡಿ.ಪ್ರಾ. ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೮-೧೦-೧೯೫೩ [ಸಂಚಿಕೆ ೬೦

ಜಾಮೀನಿನ ಮೇಲೆ ರಾಜು ಬಿಡುಗಡೆಗೆ ಆಜ್ಞೆ

ಎಲ್. ಎಸ್. ರಾಜೂರವರನ್ನು ಜಾಮೀನಿನ ಮೇಲೆ ಬಿಡಲು ಆಜ್ಞೆ

ಬೊಂಬಾಯಿ ಹೈಕೋರ್ಟಿನ ತೀರ್ಪು

...ನ್ಯಾಯಾಧೀಶರಾದ ಶ್ರೀ ಪಿ. ...ನಪ್ಪನವರಿಗೆ ವಿಷ ಪ್ರಾಶನ ಮಾ...ಸುವ ಪ್ರಯತ್ನದ ಅಪಾದನೆ ಮೇಲ...ಯ ಅಪೀಲಿನಲ್ಲಿ ಶ್ರೀ ಎಲ್ ಎಸ್ ...ಜೂರವರನ್ನು ೫೦ ಸಾವಿರ ರೂ. ಗಳ ...ಂತ ಮುಚ್ಚಳಿಕೆ ಮತ್ತು ೨೫ ಸಾವಿ...ರೂಪಾಯಿನ ಇತರ ಎರಡು ಜಾಮೀ...ನಗಳ ಮೇಲೆ ಬಿಡುಗಡೆ ಮಾಡಬಹು...ದು ಬೊಂಬಾಯಿ ಹೈಕೋರ್ಟಿನವ...ರು ಆಜ್ಞೆ ಮಾಡಿರುತ್ತಾರೆ.

ಶ್ರೀ ರಾಜೂರವರು ಈಗ ಬೊಂಬಾ...ಯ ಆರ್ಥರ್ ರೋಡ್ ಜೈಲಿನಲ್ಲಿದ್ದಾ... ಜಾಮೀನಿನ ಮೇಲೆ ಬಿಡುಗಡೆಯಾ...ದ ನಂತರ ಅವರು ಹೈಕೋರ್ಟಿನ ಅನು...ಮತಿ ಇಲ್ಲದೆ, ತಮ್ಮ ಅಪೀಲು ವಿಚಾರ...ಣೆ ಮುಗಿಯುವ ವರೆಗೆ ಬೊಂಬಾ...ಯಿ ನಗರವನ್ನು ಬಿಟ್ಟು ಹೊರಗೆ ಹೋ...ಗ ಬಾರದೆಂದು ನ್ಯಾಯಾಧೀಶರುಗಳಾದ ...ಕೃಷ್ಣ ಮತ್ತು ವ್ಯಾಸ್‌ರವರುಗಳು ...ಮಾಡಿರುತ್ತಾರೆ.

ರಷ್ಯದ ಹೊಸ ಆಡಳಿತ ವರ್ಗದ ಆಯ್ಕೆ

ರಷ್ಯದ ಸೋವಿಯಟ್ ಕಮ್ಯೂನಿ...ಸ್ಟ್ ಪಾರ್ಟಿ ಕಾಂಗ್ರೆಸ್ಸಿನ ೧೯ನೇ ಅಧಿವೇ...ಶನವು ನೆನ್ನೆ ಸಮಾವೇಶಗೊಂಡು ೧೨... ...ನ ಕೂಡಿದ ಪ್ರೆಸಿಡಿಯಂ (ಆಡ...ಳಿತ ಮಂಡಳಿಯ ಚುನಾವಣೆ ನಡೆಸಿ... ...ನವರ ಮಂಡಲಿಯಲ್ಲಿ ಮಲಟೊ, ...ಕ್ರುಶ್ಚೌ ಮತ್ತು ಸ್ಟಾಲಿನ್‌ರವರ ಹೆಸ...ರುಗಳೂ ಸೇರಿವೆ.

ಪ್ರೇಮನಾಥ ಡೋಗ್ರಾರವರ ಭಾಷಣ

...ರಾಜಧಾನಿಯ ೩ ಸುಬ್ಬಯ್ಯ ರಸ್ತೆ...ಯಲ್ಲಿರುವ ಶ್ರೀರಾಮ ಸಹಾಯ ಸಂಘ...ದ ...ಲಯದಲ್ಲಿ ನಾಳೆಯ ದಿನ ಸಾಯಂ...ಕಾಲ ... ಘಂಟೆಗೆ ಕಾಶ್ಮೀರದ ಪಂಡಿತರ...ಪ್ರೇಮನಾಥ ಡೋಗ್ರಾರವರು ಭಾಷಣ ...ಮಾಡುವರು. ಸರ್ವರಿಗೂ ಸ್ವಾಗತವಿದೆ.

ಬಹುಮಾನ ವಿನಿಯೋಗ

...ದಸರಾ ವಸ್ತು ಪ್ರದರ್ಶನದ ಕಟ್ಟಡದ... ನೆನ್ನೆ ರಾತ್ರಿ ರಾಜ್ ಮತ್ತು ಬ್ರದ...ರ್ಸ್‌ರವರ ಮಾಲೀಕರಾದ ಶ್ರೀ ಎಸ್. ...ಗೋವಿಂದರಾಜ ಮುದಲಿಯಾರರು ...ನ್ನು ಕಂಪನಿಯಲ್ಲಿ ವಸ್ತು ಪ್ರದರ್ಶನದ ...ಲ್ಲಿ ಫೋಟೋ ತೆಗೆಸಿಕೊಂಡವರ ...ಗೆದ್ದವರಿಗೆ ಬಹುಮಾನ ವಿನಿಯೋ...ಗ ಸಮಾರಂಭವನ್ನು ಏರ್ಪಡಿಸಿದ್ದರು. ...ರ ಸಭಾಧ್ಯಕ್ಷರಾದ ಶ್ರೀ ಎ. ಕೃ...ಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿ...ದ್ದರು. ಶ್ರೀ ವೈ. ನರಸಿಂಹಲುರವರಿಂದ ...ಪ್ರಾರ್ಥನೆಯಾದನಂತರ ಓರಿಯಂಟಲ್ ...ಕಂಪೆನಿಯ ಶ್ರೀ ಬಿ. ಎಸ್ ಸುಬ್ಬರಾ...ಯರು ಸ್ವಾಗತ ಭಾಷಣ ಮಾಡಿದರು. ...ವಸ್ತು ಪ್ರದರ್ಶನ ಸಮಿತಿಯ ಪ್ರಧಾನ ...ಕಾರ್ಯದರ್ಶಿಯವರಾದ ಶ್ರೀ ವಿ ಎಸ್. ಕೃ...ಷ್ಣಯ್ಯಂಗಾರ್‌ರವರು ಭಾಷಣ ಮಾಡಿದರು. ...ನಂತರ ಬಹುಮಾನಗಳನ್ನು ಬಹುಮಾ...ನಿತರಿಗೆ ಹಂಚಲಾಯಿತು. ರಾಷ್ಟ್ರಗೀತೆ...ಯೊಡನೆ ಸಮಾರಂಭವು ಮುಕ್ತಾಯ...ವಾಯಿತು.

ರಾಜಪ್ರಮುಖರಿಗೆ ಸೇರಿದ ಆಸ್ತಿಗಳ ಮೇಲೆ ತೆರಿಗೆ

ಪೌರಸಭಾಧಿವೇಶನದಲ್ಲಿ ಪ್ರಶ್ನೋತ್ತರ

ಮೈಸೂರು ೮

ನಗರದ ಪೌರಸಭೆಯ ಮುಂದುವರಿದ ಅಧಿವೇಶನವು ನೆನ್ನೆ ನಡೆಯಿತು. ಮೈಸೂರಿನ ರಾಜಪ್ರಮುಖರಿಗೆ ಸೇರಿದ ಭವನಗಳ ಸಂಖ್ಯೆ ಮತ್ತು ಅವುಗಳಿಗೆ ಮೊಹತರ್ಫಾವನ್ನು ವಿಧಿಸಿರುವ ತಾರೀಖುಗಳ ಬಗ್ಗೆ ಶ್ರೀ ಕೆ. ಪುಟ್ಟಸ್ವಾಮಿಯವರು ಹಾಕಿದ ಪ್ರಶ್ನೆಗೆ ಅಧ್ಯಕ್ಷರು ಉತ್ತರವಿತ್ತು, ಪೌರಸಭೆಯವರಿಗೆ ತಿಳಿದಿರುವಂತೆ ೧೩ ಭವನಗಳು ಅರಮನೆಗೆ ಸೇರಿವೆಯೆಂದೂ ಹೇಳಿದರು. ಈ ಭವನಗಳಿಗಾಗಿ ಸ್ಯಾನಿಟರಿ ಸೆಸ್ಸನ್ನು ಕೊಡಲಾಗುತ್ತಿದೆಯೆಂದೂ, ೧೯೩೩ ನೇ ಶಾಸನದ ಪ್ರಕಾರ ಅರಮನೆಗೆ ಸೇರಿದ ಭವನಗಳಿಗೆ ಮೊಹತರ್ಫಾ ವಿಧಿಸುವ ಬಗ್ಗೆ ವಿನಾಯಿತಿಯು ಇರುವುದೆಂದೂ ಹೇಳಿದರು.

ಉಪ ಪ್ರಶ್ನೆಗಳಿಗೆ ಉತ್ತರವಾಗಿ ೧೯೫೦ ರಲ್ಲಿ ಮೈಸೂರು ಸರ್ಕಾರದವರು ಪೌರಸಭೆಗೆ ಪತ್ರ ಬರೆದು ಮೈಸೂರು ಮತ್ತು ಬೆಂಗಳೂರು ಅರಮನೆಗಳು ವಿನಹ ರಾಜಪ್ರಮುಖರಿಗೆ ಸೇರಿದ ಇತರ ಭವನಗಳಿಗೆ ತೆರಿಗೆ ವಿಧಿಸಬಹುದೆಂದು ಸೂಚಿಸಿದ್ದರೆಂದೂ, ಈ ಬಗ್ಗೆ ಪೌರಸಭೆಯವರು ಹುಜೂರು ಕಾರ್ಯದರ್ಶಿ ಮತ್ತು ದರ್ಬಾರು ಭಕ್ಷಿಯವರುಗಳಿಗೆ ಪತ್ರ ಬರೆದಿರುವುದಾಗಿಯೂ, ಅವರಿಂದ ಉತ್ತರವು ಬಂದಿಲ್ಲವೆಂದೂ ಅಧ್ಯಕ್ಷರು ಹೇಳಿದರು.

ಶ್ರೀ ಎ. ವೆಂಕಟೇಶಯ್ಯನವರು ಮಾತನಾಡಿ ರಾಜಪ್ರಮುಖರ ಆಸ್ತಿ ಮೇಲೆ ತೆರಿಗೆ ವಿಧಿಸುವ ಬಗ್ಗೆ ವಿನಾಯಿತಿಯು ಕೊಡಲ್ಪಟ್ಟಿರುವುದೆಂದೂ, ೧೯೩೩ ನೇ ಪೌರಸಭೆಯ ಶಾಸನದ ಪ್ರಕಾರ ತೆರಿಗೆ ವಿಧಿಸುವಂತಿಲ್ಲವೆಂದೂ ಆಕ್ಷೇಪಿಸಿದರು.

ಈ ಬಗ್ಗೆ ಸರ್ಕಾರದವರ ಸೂಕ್ತ ಸಲಹೆಯನ್ನು ಪಡೆಯುವಂತೆಯೂ, ತೆರಿಗೆ ವಿಧಿಸುವುದು ಈಗಿನ ಕಾನೂನಿನಂತೆ ಸಾಧ್ಯವೇ ಎಂಬುವನ್ನು ಪರಿಶೀಲಿಸಲು ಪೌರಸಭೆಯ ನ್ಯಾಯಾಂಗ ಸಮಿತಿಯ ಅಭಿಪ್ರಾಯವನ್ನು ಕೇಳಲೂ ಇತ್ಯರ್ಥವಾಯಿತು.

ಆರ್. ಜಿ., ಆರ್. ಸಿ., ಸ್ಟಾರ್ ಮುಂತಾದ ಕುಕ್ಕಿಂಗ್ ಮೀಡಿಯಂ ತುಪ್ಪಗಳನ್ನು ತಯಾರಿಸಲು ಪೌರಸಭೆಯ ರಹದಾರಿ ಪಡೆಯುವಂತೆ ಸೂಕ್ತವಾದ ಉಪ ನಿಬಂಧನೆಗಳಾಗಬೇಕೆಂದು ಶ್ರೀ ಚೌಡಯ್ಯನವರು ತಂದ ನಿರ್ಣಯವನ್ನು ನ್ಯಾಯಾಂಗ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಯಿತು.

ಸ್ವಾಮಿನಾಥನ್ ರವರು ಮೈಸೂರಿನ ಜಿಲ್ಲಾಧಿಕಾರಿ

ಬೆಂಗಳೂರು ೮

ಸರ್ಕಾರದ ವಿದ್ಯಾ ಕಾರ್ಯದರ್ಶಿಯವರಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರನ್ನು ಮೈಸೂರಿನ ಜಿಲ್ಲಾಧಿಕಾರಿಗಳಾಗಿ ನೇಮಿಸಲಾಗಿದೆ ಅವರ ಸ್ಥಾನಕ್ಕೆ ಮಾರಾಟ ತೆರಿಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಲ್. ಮುನಿಸ್ವಾಮಿಯವರನ್ನು ವರ್ಗಾಯಿಸಲಾಗಿದೆ. ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಹೆಚ್ ರಾಮುಲಾಜೀ ಅರಸರನ್ನು ಶ್ರೀ ಎಲ್. ಮುನಿಸ್ವಾಮಿಯವರ ಸ್ಥಾನದಲ್ಲಿ ಮಾರಾಟ ತೆರಿಗೆ ಅಧಿಕಾರಿಗಳಾಗಿ ಬೆಂಗಳೂರು ಡಿವಿಜನ್ನಿಗೆ ವರ್ಗಾಯಿಸಲಾಗಿದೆ.

ಹೆಂಜಾರಪ್ಪನವರು ಬೆಂಗಳೂರು ಕಾರ್ಪೊರೇಷನ್ ಕಮೀಷನರ್

ಬೆಂಗಳೂರಿನ ಪೌರಸಭಾ ಕಮೀಷನರರಾದ ಜ|| ಅಬೂಟೇಲರ್‌ರವರನ್ನು ಕೋಲಾರದ ಜಿಲ್ಲಾಧಿಕಾರಿಗಳಾಗಿಯೂ, ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಹೆಂಜಾರಪ್ಪನವರನ್ನು ಅಲ್ಲಿನ ಪೌರಸಭಾ ಕಮೀಷನರಾಗಿಯೂ ವರ್ಗಾಯಿಸಲಾಗಿದೆ.

ಪ್ರತಿಮೆ ಅನಾವರಣ ಮತ್ತು ವಿಶ್ವೇಶ್ವರಯ್ಯನವರಿಗೆ ಸನ್ಮಾನದ ಜಂಟಿ ಸಮಾರಂಭ

ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಪ್ರತಿಮೆಯ ಅನಾವರಣ ಮಹೋತ್ಸವ ಮತ್ತು ಅದನ್ನು ನೆರವೇರಿಸಲಿರುವ ಎಂ. ವಿಶ್ವೇಶ್ವರಯ್ಯನವರಿಗೆ ಮೈಸೂರು ಪೌರಸಭೆಯವರ ಸನ್ಮಾನ ಸಮಾರಂಭ ಇವೆರಡೂ ಏಕ ಕಾಲದಲ್ಲಿ ಇದೇ ೧೬ನೇ ತಾ|| ಬೆಳಿಗ್ಗೆ ೧೧ ಗಂಟೆಗೆ ಪ್ರತಿಮೆಯ ಚೌಕದ ಬಳಿ ನಡೆಯುವುವು.

ವಿದ್ಯಾರ್ಥಿಗಳ ಬಿಡುಗಡೆ ಬಗ್ಗೆ ಪ್ರವೇಶಿಸುವುದಿಲ್ಲ

ಮುಖ್ಯಮಂತ್ರಿ ಹನುಮಂತಯ್ಯನವರ ಹೇಳಿಕೆ

ಸ್ವಂ. ಸು. ಪ್ರೋ.] ಬೆಂಗಳೂರು ೮

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ಕುಮಾರ ಕೃಪಾದಲ್ಲಿ ಸೇರಿಸಿ, ಇತ್ತೀಚೆಗೆ ರಾಜಧಾನಿಯಲ್ಲಿ ನಡೆದ ರಾಜ ಸಭೆ ಮತ್ತು ಮೆರವಣಿಗೆ ಬಗ್ಗೆ ಹಲವು ಕಡೆ ಮಾಡಲಾದ ಟೀಕೆಗಳನ್ನು ಕುರಿತು ವಿಷಾದವನ್ನು ವ್ಯಕ್ತಪಡಿಸಿದರು. ಹಲವು ಹಿತಶತ್ರುಗಳು ಅಪಪ್ರಚಾರ ಮಾಡಿರುವುದಾಗಿಯೂ, ತಾವು ಅಂಬಾರಿಯ ಮೇಲೆ ಕೂಡಲು ಆಸೆಯನ್ನು ವ್ಯಕ್ತಪಡಿಸಿದೆನೆಂಬುದೂ, ಶ್ರೀಮನ್ಮಹಾರಾಜರೊಡನೆ ಜಗಳವಾಡಿದೆನೆಂಬುದೂ ಸುಳ್ಳೆಂದೂ, ತಮಗೆ ಅಂತಹ ಯಾವ ಆಸೆಯೂ ಇಲ್ಲವೆಂದೂ ತಿಳಿಸಿದರು. ಅವರು ಮುಂದುವರಿದು ಈ ರೀತಿ ಹೇಳಿದರು:—

ಕ್ರಾಫರ್ಡ್ ಭವನದಲ್ಲಿ ವಿದ್ಯಾರ್ಥಿಗಳು ಮಾಡಿದ ಗಲಾಟೆಯು ಒಂದು ರೀತಿಯ ದೈವಿಕ ಘಟನೆ. ವಿದ್ಯಾರ್ಥಿಗಳ ಶಿಸ್ತಿನ ಬಗ್ಗೆಯೂ ಸಮಿತಿಯು ತನ್ನ ಶಿಫಾರಸನ್ನು ಮಾಡಲು ಅದರಿಂದ ಸಹಾಯವಾಗುವುದು. ಕನ್ನಡದ ಬಗ್ಗೆ ನನಗೆ ಅಭಿಮಾನವಿದ್ದೇ ಇದೆ. ಅದರೆ ಇಂಗ್ಲಿಷನ್ನು ಮಾತ್ರ ನಾವು ಸದ್ಯಕ್ಕೆ ಬಿಡುವಂತಿಲ್ಲ.

ವಸ್ತಗಿರಿಯಾದ ವಿದ್ಯಾರ್ಥಿಗಳ ಬಿಡುಗಡೆ ವಿಷಯವು ಸಬ್ ಜುಡಿಸ್ ಆಗಿರುವುದರಿಂದ ಈ ಬಗ್ಗೆ ನಾನು ಈಗಲೇ ಏನನ್ನೂ ಹೇಳುವುದಿಲ್ಲ. ನೇರವಾಗಿ ಅವರುಗಳಿಂದ ಯಾವ ಅರಿಕೆಯೂ ಬಂದಿಲ್ಲ.

ಪ್ರಧಾನಿ ನೆಹರೂರವರಿಗೆ ಮೈಸೂರು ಸರ್ಕಾರದವರು ಅಭಾವ ಪರಿಹಾರದ ಬಗ್ಗೆ ೧೫೦ ಲಕ್ಷ ರೂ. ಗಳ ಬೇಡಿಕೆಯನ್ನು ಸಲ್ಲಿಸಿರುತ್ತಾರೆ. ಜನರಿಗೆ ಪರಿಹಾರವನ್ನು ಉಚಿತವಾಗಿ ಒದಗಿಸಲಾಗುವುದಿಲ್ಲ. ಭಿಕ್ಷುಕ ಮನೋಭಾವನೆ ಬೆಳೆಯಲು ಅವಕಾಶವಿರದಂತೆ ಕೆಲಸ ಕೊಟ್ಟು ಅವರಿಗೆ ಹಣ ಕೊಡಲಾಗುವುದು. ಸಂಸ್ಥಾನದಲ್ಲೆಲ್ಲಾ ಸಿಮೆಂಟ್ ಕಾಂಕ್ರೀಟ್ ರಸ್ತೆಗಳನ್ನೂ ಹಾಕುವುದು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಪರಿಹಾರದ ಬಗ್ಗೆ ಲಕ್ಯವಳ್ಳಿ ಯೋಜನೆಯನ್ನು ಕೇಂದ್ರದವರು ತಮ್ಮ ಪಂಚ ವಾರ್ಷಿಕ ಯೋಜನೆಗೆ ಸೇರಿಸುವಂತೆ ಕೇಂದ್ರಕ್ಕೆ ಒತ್ತಾಯ ಮಾಡಲಾಗಿದೆ. ಮಂಗಳೂರಿಗೆ ರೈಲು ರಸ್ತೆಯನ್ನು ಹಾಕಲು ಒತ್ತಾಯ ಪಡಿಸಲಾಗಿದೆ.

ವಿಶ್ವವಿದ್ಯಾಲಯದ ಉತ್ತರ ಪತ್ರಿಕೆಗಳ ಬಗ್ಗೆ ನಡೆದ ಘಟನೆಗಳ ವಿಚಾರಣೆ ನಡೆಸಲು ಸರ್ಕಾರದವರು ಹೈಕೋರ್ಟಿನ ನ್ಯಾಯಾಧೀಶರೊಬ್ಬರನ್ನು ನೇಮಿಸುವ ಅಭಿಪ್ರಾಯ ಹೊಂದಿರುವರು. ಹೊರಗಿನ ನ್ಯಾಯಾಧೀಶರು ಇದಕ್ಕಾಗಿ ಬರುವುದಿಲ್ಲ.

○ ಈಜಿಪ್ಟಿನ ಮಾಜಿ ದೊರೆ ಫರೂಕರಿಂದ ವಿಚ್ಛೇದನ ಹೊಂದಲು ಅವರ ಪತ್ನಿ ನರಿಮ್ಯಾನ್ ಸಾದಿಕ್‌ರವರು ಆಲೋಚಿಸುತ್ತಿರುವರೆಂದು ಕೈರೋ ವಿನ ಪತ್ರಿಕೆ ಅಲ್ ಅಹ್ರಾಂ ಎಂಬುದು ತಿಳಿಸಿದೆ.

ಬೊಂಬಾಯಿಯಲ್ಲಿ ಪುನಃ ಹರತಾಳ

ಬೊಂಬಾಯಿಯಲ್ಲಿ ಕೊನ್ನೆ ಮೂರನೇ ಬಾರಿ ಹರತಾಳವು ನಡೆಯಿತು ಸ್ಟಾಕ್ ಎಕ್ಸ್‌ಚೇಂಜ್ ಮತ್ತು ಚಿನ್ನ ಬೆಳ್ಳಿ ಗಟ್ಟಿಯ ವ್ಯಾಪಾರಗಳು ಬಿಟ್ಟು ಉಳಿದುವು ಬಂದಾಗಿದ್ದುವು ಲಾರಿಗಳ ಮುಷ್ಕರವು ನಡೆಯುತ್ತಲೇ ಇದೆ ಟ್ಯಾಕ್ಸಿಗಳೂ ಮುಷ್ಕರಕ್ಕೆ ಸೇರಿವೆ ಅಹಮದಾಬಾದಿನಲ್ಲೂ ಇದೇ ರೀತಿ ಮುಷ್ಕರಗಳು ನಡದವು ವೇವು ಪ್ರದೇಶದಲ್ಲಿ ಸಾಮಾನುಗಳು ಬಹಳವಾಗಿ ಬಿದ್ದು ಅವನ್ನು ಸಾಗಿಸುವುದೇ ಒಂದು ಸಮಸ್ಯೆಯಾಗಿದೆ

ಸ್ಥಳೀಯ ಸಂಸ್ಥೆಗಳಲ್ಲಿ ವಿದೇಶಗಳ ಚರ್ಚೆ ಕೂಡದು

ಸ್ಥಳೀಯ ಸಂಸ್ಥೆಗಳಲ್ಲಿ ಭಾರತ ಮತ್ತು ವಿದೇಶಗಳ ಆಡಳಿತ ಸಂಬಂಧದ ಬಗ್ಗೆ ಬರುವ ನಿರ್ಣಯಗಳಿಗೆ ಅವಕಾಶ ಕೊಡಕೂಡದೆಂದು ಮದ್ರಾಸು ಸರ್ಕಾರದವರು ಜಿಲ್ಲಾ ಬೋರ್ಡು ಮತ್ತು ಪೌರಸಭಾಧ್ಯಕ್ಷರುಗಳಿಗೆ ಸೂಚಿಸಿರುತ್ತಾರೆ

ಕರ್ಣಾಟಕ ಸಂಘ, ನಂಜನಗೂಡು

ಮೇಲ್ಕಂಡ ಸಂಘದ ಆಶ್ರಯದಲ್ಲಿ ಇದೇ ೧೦ನೇ ತಾ॥ ಶುಕ್ರವಾರ ಸಂಜೆ ೫ ಗಂಟೆಗೆ ಅಲ್ಲಿನ ಶ್ರೀ ಕನಕದಾಸ ವಿದ್ಯಾರ್ಥಿನಿಲಯದ ಆವರಣದಲ್ಲಿ ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳೂ ಮತ್ತು ಕವಿಗಳೂ ಪಟ್ಟಣ ಕನ್ನಡ ಪಿಲ್ಲೆಯ ಕುಮಟ ಕಾಲೇಜಿನ ಅಧ್ಯಾಪಕರುಗಳೂ ಆದ ಶ್ರೀ ಎಂ ಗೋಪಾಲಕೃಷ್ಣ ಅಡಿಗರವರು "ಹೊಸ ಕಾವ್ಯ" ಎಂಬ ವಿಷಯವಾಗಿಯೂ, ಶ್ರೀ ಬಿ ಹೆಚ್ ಶ್ರೀಧರರವರು ಕಾವ್ಯ ಮತ್ತು ರಸಿಕತೆ ಎಂಬ ವಿಷಯವಾಗಿಯೂ ಉಪನ್ಯಾಸ ಮಾಡುವರು

ಗಾಂಧಿ ಜಯಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ನೆನ್ನೆ ಬೆಳಗ್ಗೆ ನಗರದ ರೀಷನಿಂಗ್ ಅಧಿಕಾರಿಗಳಾದ ಶ್ರೀ ಹೆಚ್ ಜಿ ವಿಜಯರಾಘವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮಹಾತ್ಮಾ ಗಾಂಧಿಯವರ ಜಯಂತಿಯು ನೆರವೇರಿತು ಶ್ರೀ ಡಿ ಎಸ್. ಶಂಕರಪ್ಪನವರಿಂದ ಸ್ವಾಗತ ಭಾಷಣವಾದನಂತರ, ಮಹಾರಾಜಾ ಕಾಲೇಜಿನ ಶ್ರೀ ಎಲ್ ಶ್ರೀಕಂಠಯ್ಯನವರು ಭಾಷಣಮಾಡಿ ಗಾಂಧಿಜಿಯವರ ತತ್ವಗಳನ್ನು ವಿವರಿಸಿದರು ಶ್ರೀ ಬಿ ಆರ್ ರಾಮಯ್ಯನವರಿಂದ ವಂದನಾರ್ಪಣೆಯಾದನಂತರ ಸಭೆಯು ಮುಕ್ತಾಯವಾಯಿತು

ಲಾಯಿಡ್ಸ್ ಬ್ಯಾಂಕ್ ದರೋಡೆಕಾರರಿಗೆ ಶಿಕ್ಷೆ

ಭಾರತದಲ್ಲೇ ಅತ್ಯಂತ ಭಾರಿಯದೆಂದು ಹೇಳಲಾದ ಬೊಂಬಾಯಿಯ ಲಾಯಿಡ್ಸ್ ಬ್ಯಾಂಕಿನ ದರೋಡೆ ಮೊಕದ್ದಮೆಯಲ್ಲಿ ಆನೋಖಿ ಲಾಲ್ ಹರನಾರಾಯಣ್ ನಾನಕ್ ಚಂದ್, ರಾಮಕಿಶನ್ ಶರ್ಮರವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ ಈ ದರೋಡೆಗೆ ಮುಖ್ಯಸ್ಥನಾದ ಆನೋಖಿಲಾಲನು, ದೆಹಲಿಯ ಸುಪ್ರಸಿದ್ಧ ಜವಾನುದಾರ ಮತ್ತು ವ್ಯಾಪಾರಿಯೆಂದು ಹೇಳಲಾಗಿದೆ ಎರಡು ವರ್ಷಗಳ ಹಿಂದೆ ಅವರು ಮತ್ತು ಇನ್ನಿಬ್ಬರು ಲಾಯಿಡ್ಸ್ ಬ್ಯಾಂಕಿಗೆ ಸೇರಿದ ಟ್ರಕ್ಕೊಂದರ ಮೇಲೆ ಬಿದ್ದು, ಅದರಲ್ಲಿದ್ದ ೧೦ ಲಕ್ಷ ರೂ. ಗಳ ನೋಟುಗಳನ್ನು ಅಪಹರಿಸಿ, ಡ್ರೈವರನನ್ನು ಕೊಂದು ಇತರರನ್ನು ಗಾಯಗೊಳಿಸಿ ಪರಾರಿಯಾಗಿದರು ಪೋಲೀಸರು ಈ ಸಂಬಂಧವಾಗಿ ೭॥ ಲಕ್ಷ ರೂ ಗಳನ್ನು ಪತ್ತೆ ಹಚ್ಚಿರುವರು

ದರೋಡೆಗಾರನಿಂದ ಸ್ನೇಹಿತನ ಕೊಲೆ

ಪಪ್ಪುವಿನ ರಾಜಪಪ ಓತ ಒರಪನು ಬೀ ಕಳೆದ ನೇತ್ರ | ಒಬ್ಬ ಹಳ್ಳಿಯವನನ್ನು ಇಬ್ಬರು ಡಕಾಯಿತರು ಸಲಿಯುತ್ತಿಸಿ ಅಲ್ಲಿ ಹಳ್ಳಿಯವನು ಒಬ್ಬನನ್ನು ಹಿಡಿದುಕೊಂಡು ಡಸಾಗೂ ಮತ್ತೊಬನ ಗುಪ ಗಾರಿಸಲು ಇದು ಹಳ್ಳಿಯವನ ತೋಳಿಗೆ ತಗುಲಿ, ಮತ್ತೊಬ್ಬ ಡಕಾಯಿತನಿಗೆ ತಗಲಿದ್ದು ಅವನು ಕೂಡಲೇ ಮೃತಪಟ್ಟನೆಂದೂ ವರದಿಯಾಗಿದೆ

ದೆಹಲಿಗೆ ಮುಖ್ಯ ಮಂತ್ರಿಯವರ ಭೇಟಿ

ಸಂಸ್ಥಾನದಲ್ಲಿನ ಕ್ಷಾಮದ ಪರಿಹಾರದ ಬಗ್ಗೆ ಕೇಂದ್ರದ ಸಹಾಯ ಮತ್ತು ಮೈಸೂರಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಕುರಿತು ಚರ್ಚಿಸಲು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇದೇ ೧೧ನೇ ತಾ ದೆಹಲಿಗೆ ತೆರಳಿ ಅಲ್ಲಿ ೪ ದಿನಗಳವರೆಗೆ ಇರುವರು

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು.

ಕ್ಷಾಮ ನಿವಾರಣಾ ನಿಧಿ ಶೇಖರಣೆ

ನಂಜನಗೂಡ ೭

ಮುಖ್ಯ ಮಂತ್ರಿಗಳ ಕ್ಷಾಮ ಪರಿಹಾರ ನಿಧಿಗೆ ಧನ ಸಂಗ್ರಹಿಸಲು ನಂಜನಗೂಡಿನಲ್ಲಿ ಶ್ರೀ ಹೆಜ್ಜಿಗೆ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಕ್ಷಾಮ ಪರಿಹಾರ ಸಮಿತಿಯೊಂದನ್ನು ರಚಿಸಲಾಗಿದೆ ತಾಲ್ಲೂಕಿನ ಮಹಾಜನರು ಧನ, ಧಾನ್ಯ ಮತ್ತು ದನಗಳ ಮೇವಿನ ರೂಪದಲ್ಲಿ ಸಹಾಯ ನೀಡಿ ಪುಣ್ಯ ಭಾಗಿಗಳಾಗಬೇಕೆಂದು ಕೋರಲಾಗಿದೆ ಸಮಿತಿಯವರು ಕಳೆದ ೨ನೇ ತಾರೀಖು ಗಾಂಧಿ ಜಯಂತಿ ದಿನ ಮನೆಮನೆಗೂ ಹೋಗಿ ಸುಮಾರು ಒಂದು ಸಾವಿರ ರೂ ಗಳವರೆಗೆ ಸಂಗ್ರಹಿಸಿದರು ಕೆಳಗೆ ಕಂಡ ಮಹನೀಯರಿಂದ ಸಹಾಯವೊದಗಿದೆ –

ಪೌರಸಭೆ, ಶ್ರೀಗಳಾದ ಬಿ ವಿ ಪಂಡಿತರು ಮತ್ತು ಪಿ. ಮಹದೇವಯ್ಯನವರು ತಲಾ ೧೦೧ ರೂ, ಎಲ್ ನಂಜಪ್ಪನವರು ೭೫ ರೂ, ವೆಂಕಟಸುಬ್ಬರವರು ೫೧ ರೂ, ಮರಿಯಪ್ಪನವರು ೪೧ ರೂ ಎನ್ ನಾರಾಯಣರಾವ್ ಮತ್ತು ಯಜಮಾನ ಕಾಳೇಗೌಡರು ತಲಾ ೩೦ ರೂ ಎನ್ ಕೆ ಮರಿಕೆಂಪಯ್ಯ, ವಿಶ್ವೇಶ್ವರ ಗೌಡ ಹೆಜ್ಜಿಗೆ ಲಿಂಗಣ್ಣ ಎಂ ಎಲ್ ಲಿಂಗಪ್ಪ, ಎನ್ ರಾಜಯ್ಯ, ಆರ್ ಕಾಳೇಗೌಡ ... ಪಿಸಿಫೋಂಡ್ರೇಕ ಸಹ ... ರೂ ಮ್ಯಾದ ... ಡಾ॥ ಕೋಚರ್, ಜಿ ... ಜಂಪಪ್ಪ ಲಂಗೈವಿಶೆಟ್ಟಿ ಮಾಣಿಕ್ಯ ಶೆಟ್ಟಿ ಗೋವಿಂದ ರಾಜ ಅರ್ ... ವ್ ಎ ... ಕೃಷ್ಣ ರಹಮಾನ್ ಎಸ್ ಗೋವಿಂದ ಶೆಟ್ಟರ, ಮತ್ತು ... ಜಗೂಡ ಕೋ ಆಪರೇಟಿವ್ ಸೊಸೈಟಿ ತಲಾ ೧ ರೂ ಮತ್ತು ಟಿ ಎಸ್ ಕೃಷ್ಣ, ಕೃಷ್ಣನ ... ತಲಾ ... ಶ್ರೀ ರಾಮಸ್ವಾಮಿ ಪರೀಕ್ಷರು ಮುಖ್ಯ ಮಂತ್ರಿಗಳಿಗೆ ನೇರವಾಗಿ ೧೦೦ ರೂ ಗಳನ್ನು ಕಳುಹಿಸಿರುವರು

ಸುಂದರವಾದ ಸುಲಭ ಬೆಲೆ

ಮೈಸೂರು ಸಿಲ್ಕ್ ಫ್ಯಾಕ್ಟರಿ ಕಂಪೆನಿ

ಅಪ್ಪಟ ಸಿಲ್ಕ್ ಸೀರೆಗಳಿಗೆ

ವಿಚಾರಿಸಿ

ಕೆ ಎಸ್ ಸತ್ಯನಾರಾಯಣರಾವ್,

ಒಡವೆ ವ್ಯಾಪಾರಿಗಳು,

೧೧೩ ಸಯ್ಯಾಜಿರಾವ್ ರಸ್ತೆ

(ಚಾಮುಂಡೇಶ್ವರಿ ೨ನೇ ಬಿಲ್ಡಿಂಗ್ ಕಟ್ಟಡ)

ಮೈಸೂರು

ಉತ್ತರಾದಿಮಠಕ್ಕೆ ಆನೆಯ ಸಮರ್ಪಣೆ

ಶಿವಮೊಗ್ಗದ ಉತ್ತರಾದಿಮಠಕ್ಕೆ ... ರ್‍ಯಾರದವರು ಶ್ರೀದೇವಿ ಎಂಬ ... ವರ್ಷದ ಹೆಣ್ಣಾನೆಯೊಂದನ್ನು ಕಾಣಿಕೆಯಾಗಿ ಸಲ್ಲಿಸಿರುವರೆಂದು ವರದಿಯಾಗಿದೆ.

ಶಿವರಾಮ ಕಾರಂತರ ಉಪನ್ಯಾಸ

ರಾಜಧಾನಿಯ ಸಾರ್ವಜನಿಕ ವಿಚಾರ ಸಂಸ್ಥೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ, ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕೆ ಶಿವರಾಮ ಕಾರಂತರು, ಟೀಚರ್ಸ್ ಕಾಲೇಜಿನ ಸಭಾಂಗಣದಲ್ಲಿ ಪಾಶ್ಚಾತ್ಯ ಪ್ರವಾಸದ ಅನುಭವಗಳು ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಪ್ರೊ॥ ಎಲ್ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ದಿ ಎಸ್ ರಾಮಚಂದ್ರರಾವ್ ಸಂಗೀತ ಮಧ್ಯಾಹ್ನ ೧ ೩೦ ... ಕೆ ನಾಗರಾಜರಾವ್ ವೇಣುಗಾನ ಸಂಜೆ ೫ ೩೦ ಮತ್ತು ೭ ೩೦ ಕೃಷ್ಣಮೂರ್ತಿ ಸಂಗೀತ, ೬ ... ರಾಗಾಲಾಪನೆ ೭ ... ರವಿಶಂಕರ್ ... ಬಹದ್ದೂರ್ ... ಚರ್ಚ ... ಪ್ರಾಚೀನ ... ನಾಗರಾಜ ... ವೇಣುಗಾನ ... ಚಿತ್ರವಾಣಿ ... ಗಟೋಕ

ಮೈಸೂರು ಪೇಟೆ ಧಾರಣೆ

ಪಲ್ಲಂಗೆಕ್ಕೆ	ರೂ ಇಂದ	ರೂ
ನೆಲಗಡಲೆ	೧೦೦ ೦ ೦	೧೪ ೧ ...
ಎಳ್ಳು	೫೯ ೪ ೦	೬೯-೧೨ ...
ಹುಚ್ಚೆಳ್ಳು	೫೦-೦ ೦	
ಹರಳು ಬೀಜ	೪೨ ೮ ೦	೪೩-೬-...
ಹುರುಳಿ	೬೨ ೧೨ ೦	...
ಹೆಸರು	೫೦ ೦ ೦	
ಹೊಂಗೇಬೀಜ	೨೩ ೪ ೦	
ಉದ್ದು	೭೬-೮ ೦	
ಅವರೆ	೭೯ ೧೦ ೦	
ಹಲಸಂದೆ	೬೨-೧೨-೦	೬೩ ...
ಮೆಣಸಿನಕಾಯಿ		
ಮುಣಗೆಕ್ಕೆ	೧೪ ೦ ೦	...
ಹುಣಸೇಹಣ್ಣು	೫ ೧೩ ೦	...
ಸೀಗೇಕಾಯಿ	೪ ೧-೦	...
ಬೆಲ್ಲ	೩-೮-೦	
ತೆಂಗಿನಕಾಯಿ ೧೧೦೦	೧೫೦ ೦ ೦	೨೦೬ ೦ ...

ಒಲಂಪಿಯಾ

9 10–52ರಿಂದ ಅಮೋಘ 4ನೇ ವಾರ

ಫೂನಮ್

ಪಾತ್ರ ... ಕೌಶಲ್, ಅಶೋಕ್ ಕುಮಾರ್

ಬೆಳಗಿನ ಪ್ರದರ್ಶನ ೩ ದಿನ ... ನರ್ಗಿಸ್ ಪಾತ್ರವಹಿಸಿರುವ

ಅನೋಖಾ ಪ್ಯಾರ್

ಪ್ರಭುದೇವಾ ಟಾಕೀಸ್

ಪ್ರತಿ ದಿನ ಮೂರು ಆಟಗಳು

8.10 52 ನೇ ಬುಧವಾರದಿಂದ ಅಮೋಘ 2ನೇ ವಾರ

✻ **ಸೌದಾಮಿನಿ** ✻

17-10-52 ನೇ ಶುಕ್ರವಾರದಿಂದ

★ **ಏಳೆಯ್ ಉಳವನ್** ★

(ಬಡ ರೈತ) (ತಮಿಳು)

ಮಾಯಣ್ಣ ಕಲೆಕ್ಟಿವ್ ಡೈರಿ

ನಾರಾಯಣ ಶಾಸ್ತ್ರಿ ರೋಡು ಮೈಸೂರು

ಅಪ್ಪಟ ಹಸುವಿನ ಹಾಲು ದೊರೆಯುತ್ತೆ

ಸಾರ್ವಜನಿಕರಿಗೋಸ್ಕರ ನೂರಡಿ ರಸ್ತೆ ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗದಲ್ಲಿ ಹೊಸ ಸೆಂಟರ್ ತೆರೆಯಲಾಗಿದೆ

ದೊರೆಯುವ ಕಾಲ ಬೆಳಗ್ಗೆ 7 30, ಸಾಯಂಕಾಲ 4 30

Edited Printed and Published by A R Nagaraja at Sadhvi Press D Subbiah Road Mysore.

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೯-೧೦-೧೯೫೦ [ಸಂಚಿಕೆ ೬೧

ಲಂಡನ್ ನಿಲ್ದಾಣದಲ್ಲಿ ಭಾರಿ ರೈಲು ಅನಾಹುತ

ಲಂಡನ್ ಬಳಿ ರೈಲುಗಳ ಢಿಕ್ಕಿಯಿಂದ ೮೧ ಜನರ ಮರಣ

ಲಂಡನ್ನಿನ ಉಪನಗರವಾದ ಹ್ಯಾರೊ ... ರೈಲುಗಳಿಗೆ ನೆನ್ನೆ ಢಿಕ್ಕಿಯಾಗಿ ... ಮಂದಿ ಮಡಿದಿರುವರೆಂದೂ ನೂರಾರು ಜನರಿಗೆ ಗಾಯಗಳಾಗಿವೆಯೆಂದೂ ... ತಿಳಿದುಬಂದಿದೆ. ಹ್ಯಾರೋ ನಿಲ್ದಾಣದಲ್ಲಿ ... ಬಾಲಕರಿಂದ ತುಂಬಿದ ರೈಲೊಂದು ನಿಂತಿದ್ದಾಗ ಸ್ಕಾಟ್ಲೆಂಡಿನಿಂದ ಒಂದು ರಾತ್ರಿ ಎಕ್ಸ್‌ಪ್ರೆಸ್ ರೈಲು ಮೊದಲು ಬಂದು ಢಿಕ್ಕಿ ಹೊಡೆಯಿತೆಂದೂ, ಸ್ವಲ್ಪ ಹೊತ್ತಿನ ನಂತರ ಉತ್ತರ ದಿಕ್ಕಿನ ದಿನ ಅಭಿಮುಖವಾಗಿ ಹೋಗುತ್ತಿದ್ದ ಇನ್ನೊಂದು ಎಕ್ಸ್‌ಪ್ರೆಸ್ ರೈಲು ಅದೇ ಮಾರ್ಗವಾಗಿ ಬಂದು ಮೊದಲು ಢಿಕ್ಕಿಯಾಗಿದ್ದ ರೈಲಿಗೆ ಹೊಡೆದುದರ ಪರಿಣಾಮವಾಗಿ ಎರಡನೇ ಎಕ್ಸ್‌ಪ್ರೆಸ್ ರೈಲಿನ ಎರಡು ಇಂಜನ್ನುಗಳು ನುಚ್ಚು ನೂರಾಗಿ ನಿಲ್ದಾಣದಲ್ಲಿದ್ದ ಜನರ ಮೇಲೆಲ್ಲಾ ... ಬಿದ್ದುವೆಂದೂ ಹೇಳಲಾಗಿದೆ. ಗಾಡಿಗಳ ಚೂರುಚೂರಾದ ಭಾಗಗಳು ನಿಲ್ದಾಣದಲ್ಲಿ ಸುಮಾರು ೪೦ ಅಡಿಗಳಷ್ಟು ಎತ್ತರ ರಾಶಿಯಾಗಿ ಬಿದ್ದಿದ್ದುವೆಂದೂ, ಮೂರು ನಾಲ್ಕು ಗಾಡಿಗಳು, ಚಾವಣಿ ಮುರಿದು, ಒಂದರಮೇಲೊಂದು ನಿಂತುವೆಂದೂ ವರದಿಯಾಗಿದೆ.

... ಸನ್ನಿವೇಶವು ಒಂದು ರಣರಂಗದಂತೆ ಕಾಣಬರುತ್ತಿತ್ತು. ಪುಡಿಪುಡಿಯಾದ ಗಾಡಿಗಳ ಚೂರುಗಳ ರಾಶಿಯ ... ಆಗಿ ರೋದನ ಮಾಡುತ್ತಿದ್ದವರನ್ನು ರಕ್ಷಿಸಲು ಅನೇಕರು ಮಾಡಿದ ಪ್ರಯತ್ನಗಳು ಪೂರ್ಣ ಫಲಕಾರಿಯಾಗಲಿಲ್ಲ. ... ಸಮೀಪದಲ್ಲಿದ್ದ ಆಸ್ಪತ್ರೆಗಳಿಗೆ ಗಾಯಗೊಂಡವರನ್ನು ಕಾರುಗಳಲ್ಲಿಯೂ, ... ಗಳಲ್ಲಿಯೂ ಎಡೆಬಿಡದೆ ಸಾಗಿಸಲಾಯಿತು. ವೈದ್ಯರು ಚೂರುಗಳ ಸಂದಿನಲ್ಲಿ ನುಸುಳಿಕೊಂಡು ಹೋಗಿ ಇನ್ನೂ ಜೀವದಿಂದಿದ್ದವರಿಗೆ ಇಂಜಕ್ಷನ್ ಮುಂತಾದ ಚಿಕಿತ್ಸೆಗಳನ್ನು ಮಾಡಿದರು. ಮುರಿದು ಬಿದ್ದ ಗಾಡಿಗಳ ಕಿಟಕಿಗಳ ಮೂಲಕ ರಕ್ತ ... ಮಡುವಿನಿಂದ ಹಲವಾರು ಜನರು ಹೊರಗೆ ಬಂದರು. ನಿಲ್ದಾಣದ ನೂರಾರು ಗಜ ಪ್ರದೇಶದಲ್ಲಿ ಬಟ್ಟೆಬರೆ ಮತ್ತು ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ ಹರಡಿದ್ದುವು.

ಹೊಸ ರಾಜ್ಯಾಂಗಕ್ಕೆ ಸುಡಾನ್ ಜನರ ಬಹಿಷ್ಕಾರ

ಬರುವ ತಿಂಗಳು ೮ನೇ ತಾ|| ದಿಂದ ... ಗೆ ಬರಲಿರುವ ಹೊಸ ರಾಜ್ಯಾಂಗವನ್ನು ಸುಡಾನಿನ ಬಹು ಸಂಖ್ಯೆಯ ಜನರು ಬಹಿಷ್ಕರಿಸಿ, ಬ್ರಿಟಿಷರಿಂದ ಸೂಚಿತವಾಗಿರುವ ಈ ಸುಧಾರಣೆಯ ವಿರುದ್ಧವಾಗಿ ಅಹಿಂಸಾಯುತ ಹೋರಾಟವನ್ನು ನಡೆಸಲಿರುವರೆಂದು ಅಲ್ಲಿನ ಅಷಿಕ್ಕ ಪಕ್ಷದ ಕಾರ್ಯದರ್ಶಿ, ಕಿದರ್ ಒಮ್ಮಾ ... ಮತ್ತು ಸುಡಾನ್ ಕಾಂಗ್ರೆಸ್ಸಿನ ಸದಸ್ಯ ... ಹಮಾದ್ ಅವಾನ್‌ರವರು ತಿಳಿಸಿದ್ದಾರೆ. ಆ ದೇಶದ ಉಮ್ಮಾ ಪಕ್ಷವನ್ನು ಬಿಟ್ಟರೆ ಉಳಿದ ಎಲ್ಲ ಪಕ್ಷಗಳು ರಾಜ್ಯಾಂಗವನ್ನು ಬಹಿಷ್ಕರಿಸುವುವೆಂದೂ, ಬ್ರಿಟಿಷರ ಆಡಳಿತದಿಂದ ಬಿಡುಗಡೆಹೊಂದಿದ ಮೇಲೆ ಸುಡಾನು ಈಜಿಪ್ಟಿನೊಡನೆ ಐಕ್ಯ ಹೊಂದುವುದೆಂದೂ ಅವರು ಹೇಳಿರುವರು.

ಪಾಕಿಸ್ತಾನದಮೇಲೆ ಯುದ್ಧ ಹೂಡುವುದು ಅನಿವಾರ್ಯ

ಪತ್ರಿಕಾಗೋಷ್ಠಿಯಲ್ಲಿ ಪ್ರೇಮನಾಥ ಡೋಗ್ರಾರವರ ಹೇಳಿಕೆ

ಮೈಸೂರು ೯

ಕಾಶ್ಮೀರ ಮತ್ತು ಜಮ್ಮು ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಪಂಡಿತ ಪ್ರೇಮನಾಥ ಡೋಗ್ರಾರವರು ಪತ್ರಿಕಾ ಪ್ರತಿನಿಧಿಗಳನ್ನು ಕುರಿತು ಮಾತನಾಡುತ್ತಾ, ಜಮ್ಮು ಮತ್ತು ಕಾಶ್ಮೀರ ಸಂಸ್ಥಾನವು ಭಾರತದೊಡನೆ ಸಂಪೂರ್ಣವಾಗಿ ವಿಲೀನವಾಗುವುದೇ ತಮ್ಮ ಸಂಸ್ಥೆಯ ಗುರಿಯೆಂದು ಹೇಳಿದರು. ಈ ಕಾರ್ಯವನ್ನು ಸಾಧಿಸಲು ಇಂದಿನ ಪರಿಸ್ಥಿತಿಯಲ್ಲಿ ಯುದ್ಧವೊಂದೇ ಮಾರ್ಗವೆಂಬುದಾಗಿ ಅಭಿಪ್ರಾಯಪಟ್ಟರು. ಆದರೆ ಇದಕ್ಕಾಗಿ ಯಾವ ಸಿದ್ಧತೆಗಳೂ ಇನ್ನೂ ಆಗಿಲ್ಲವೆಂದು ಹೇಳಿದರು. ಈ ಧ್ಯೇಯಕ್ಕೆ ಎಲ್ಲರ ಸಹಾನುಭೂತಿಯನ್ನೂ ಪಡೆಯುವುದಕ್ಕಾಗಿ ಭಾರತದಲ್ಲೆಲ್ಲಾ ತಾವು ಪ್ರವಾಸ ಮಾಡುತ್ತಿರುವುದಾಗಿ ಅವರು ತಿಳಿಸಿದರು. ಷೇಕ್ ಅಬ್ದುಲ್ಲಾರವರ ನೇತೃತ್ವದಲ್ಲಿ ಈಗ ಮಾಡಲಾಗಿರುವ ರಾಜ್ಯಾಂಗವು ಭಾರತದೊಡನೆ ಕಾಶ್ಮೀರದ ಸಂಪೂರ್ಣ ಐಕ್ಯಕ್ಕೆ ಅವಕಾಶ ಕಲ್ಪಿಸಿಲ್ಲವೆಂದು ಅವರು ಹೇಳಿ, ಇಂದಿನ ಪರಿಸ್ಥಿತಿಯಲ್ಲಿ ಯುವರಾಜ ಕರಣಸಿಂಗರು ಕಾಶ್ಮೀರದ ಅಧಿಪತಿಯಾಗುವುದು ಉಚಿತವಲ್ಲವೆಂದು ಸೂಚಿಸಿದರು.

ಪೌರಸಭಾಧ್ಯಕ್ಷರಿಗೆ ಪ್ರಭುಗಳ ಭೇಟಿ

ಮೈಸೂರಿನ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರಿಗೆ ಶ್ರೀಮನ್ಮಹಾರಾಜರು ಈ ಬೆಳಿಗ್ಗೆ ಭೇಟಿ ದಯಪಾಲಿಸಿದರು.

ಕಾವೇರಿ ನೀರಿನ ಬಗ್ಗೆ ಹೊಸ ಒಡಂಬಡಿಕೆ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಪತ್ರಿಕಾಗೋಷ್ಠಿಯಲ್ಲಿ ಕಾವೇರಿ ನೀರಿನ ಹಂಚಿಕೆ ವಿಷಯವಾಗಿ ಮೈಸೂರು ಮತ್ತು ಮದ್ರಾಸು ಸರಕಾರಗಳಿಗೆ ಯಾವ ವಿವಾದವೂ ಇಲ್ಲವೆಂದೂ, ಇಬ್ಬರಿಗೂ ಈ ಬಗ್ಗೆ ಹೊಸ ಒಡಂಬಡಿಕೆಯಾಗಿರುವುದೆಂದೂ ಹೇಳಿದರು.

ತೃತೀಯ ಯುದ್ಧ ತಪ್ಪಿಸಲು ವಿಶ್ವಸಂಸ್ಥೆಗೆ ಶಕ್ತಿ ಇಲ್ಲವೇ ?

ಪ್ರಪಂಚದ ತೃತೀಯ ಯುದ್ಧವನ್ನು ತಪ್ಪಿಸಲು ವಿಶ್ವಸಂಸ್ಥೆಗೆ ಸಾಧ್ಯವಾಗುವುದೆಂದು ಖಚಿತವಾಗಿ ಯಾರೂ ಹೇಳಲು ಆಗುವುದಿಲ್ಲವೆಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾದ ಟ್ರಿಗ್ವೆ ಲೀ ರವರು ತಿಳಿಸಿರುತ್ತಾರೆ. ಪಶ್ಚಿಮ ರಾಷ್ಟ್ರಗಳು ಮತ್ತು ರಷ್ಯಾಗಳಿಗೆ ಇರುವ ಹೋರಾಟಗಳು ಎಳ್ಳಷ್ಟೂ ಕಡಿಮೆ ಯಾಗದೆ ಇವೆಯೆಂದು ಅವರು ಅಭಿಪ್ರಾಯಪಟ್ಟಿರುವರು.

ಬರ್ಮಾದಲ್ಲಿ ಕರೆನ್ನರೊಡನೆ ಶಾಂತಿ ಸಂಧಾನ

ಬರ್ಮಾ ಸರ್ಕಾರದವರು ಕರೆನ್ ರಾಜ್ಯಸ್ಥಾಪನೆಗಾಗಿ ಹೋರಾಡುತ್ತಿರುವ ಆ ಜೇಶದ ಪ್ರತಿನಿಧಿಗಳೊಡನೆ ಸಂಧಾನ ನಡೆಸುತ್ತಿರುವರು. ಬರ್ಮಾ ಸರ್ಕಾರಕ್ಕೂ, ಕರೆನ್ನರಿಗೂ ೩|| ವರ್ಷಗಳಿಂದ ನಡೆಯುತ್ತಿದ್ದ ಯುದ್ಧವು ಇದರಿಂದ ಸಮಾಪ್ತವಾಗುವುದೆಂದು ಹೇಳಲಾಗಿದೆ. ಆದರೆ ಸರ್ಕಾರದವರು ಕಮ್ಯೂನಿಸ್ಟ್ ದಂಗೆಕೋರರ ಮೇಲೆ ಈ ತಿಂಗಳು ಧಾಳಿ ನಡೆಸಲಿರುವರೆಂದು ಹೇಳಲಾಗಿದೆ.

ಷರತ್ತಿಲ್ಲದೆ ಶಸ್ತ್ರಾಸ್ತ್ರ ಒಪ್ಪಿಸಲು ಕಮ್ಯೂನಿಸ್ಟರ ಒಪ್ಪಿಗೆ

ಯಾವ ವಿಧವಾದ ಷರತ್ತೂ ಇಲ್ಲದೆ ಶಸ್ತ್ರಾಸ್ತ್ರಗಳನ್ನೆಲ್ಲಾ ಒಪ್ಪಿಸಲು ಹೈದರಾಬಾದಿನ ಕಮ್ಯೂನಿಸ್ಟರು ಒಪ್ಪಿರುವುದಾಗಿ ಅಲ್ಲಿನ ಮುಖ್ಯಮಂತ್ರಿ ರಾಮಕೃಷ್ಣರಾಯರು ತಿಳಿಸಿರುವರು. ಆದರೆ ಶಸ್ತ್ರಾಸ್ತ್ರಗಳ ಸಂಖ್ಯೆ ಬಗ್ಗೆ ಭಿನ್ನಾಭಿಪ್ರಾಯವಿರುವುದೆಂದೂ, ಕಮ್ಯೂನಿಸ್ಟರು ಒಪ್ಪಿಸಬೇಕೆಂದಿರುವುದಕ್ಕಿಂತಲೂ ಹೆಚ್ಚಾಗಿ ಅಸ್ತ್ರಗಳು ಅವರಲ್ಲಿರುವುವೆಂದು ಸರ್ಕಾರಕ್ಕೆ ತಿಳಿದುಬಂದಿರುವುದಾಗಿಯೂ ತಿಳಿಯಪಡಿಸಲಾಗಿದೆ.

ಅಖಿಲ ಭಾರತ ಮಹಿಳಾ ಸಮ್ಮೇಳನದ ರಜತೋತ್ಸವ

ಅಖಿಲ ಭಾರತ ಮಹಿಳಾ ಸಮ್ಮೇಳನದ ರಜತ ಮಹೋತ್ಸವವು ಇದೇ ೧೧ನೇ ತಾ|| ಬೆಂಗಳೂರಿನಲ್ಲಿ ನಡೆಯುವುದು. ಮೈಸೂರಿನ ಶ್ರೀಮನ್ಮಹಾರಾಣಿಯವರು ಅಧ್ಯಕ್ಷತೆ ವಹಿಸುವರು.

ಜೈಲಿನಲ್ಲಿರುವುದರಿಂದ ರಾಜೂರ ಆರೋಗ್ಯಕ್ಕೆ ಧಕ್ಕೆ

ಬೊಂಬಾಯಿ ವೈದ್ಯರುಗಳ ಅಭಿಪ್ರಾಯ

ಬೊಂಬಾಯಿ ಹೈಕೋರ್ಟಿನ ಸೂಚನೆ ಪ್ರಕಾರ ಅಲ್ಲಿನ ಪೋಲೀಸು ಸರ್ಜನ್ ಮತ್ತು ಜೈಲಿನ ವೈದ್ಯರು ಶ್ರೀ ಎಲ್. ಎಸ್. ರಾಜುರವರನ್ನು ಪರೀಕ್ಷಿಸಿ, ಕಳಿಸಿದ ಛಾಪುವಾದ ಹೈಕೋರ್ಟಿಗೆ ಒಪ್ಪಿಸಿದ ವರದಿಯಲ್ಲಿ ರಾಜುರವರ ದೇಹಸ್ಥಿತಿಯು ಸಮಾಧಾನಕರವಾಗಿರುವುದಿಲ್ಲವೆಂದೂ, ಅವರು ಜೈಲಿನಲ್ಲಿಯೇ ಇದ್ದರೆ ಅವರ ಆರೋಗ್ಯಕ್ಕೆ ಕುಂದಕವೆಂದೂ, ಅವರನ್ನು ಆಸ್ಪತ್ರೆಯಲ್ಲಿಡಬೇಕೆಂದೂ ತಿಳಿಯಪಡಿಸಿರುತ್ತಾರೆ. ಅಲ್ಲಿನ ಹೈಕೋರ್ಟಿನಲ್ಲಿ ಬೆಂಗಳೂರಿನ ಸಬ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿಯವರು ಪ್ರಮಾಣ ಪತ್ರವೊಂದನ್ನು ಹಾಜರು ಮಾಡಿ, ರಾಜುರವರನ್ನು ಜಾಮೀನು ಮೇಲೆ ಬಿಡಲಾಗದೆಂದು ಕೋರಿದರು.

ರಾಜುರವರ ಪರ ಕಾರ್ನ್ಲಿ ಖಾಂಡೇಲ್‌ವಾಲರು ವಾದಿಸಿ ಜಾಮೀನು ಮೇಲೆ ಬಿಡುವುದು ಸೂಕ್ತವೆಂಬುದು ವೈದ್ಯರ ಹೇಳಿಕೆಯಿಂದ ಸಮರ್ಥನೆಯಾಗುವುದೆಂದು ತಿಳಿಸಿ, ಆಸ್ಪತ್ರೆಯಲ್ಲಿ ರಾಜುರವರನ್ನು ಇಡುವುದರಿಂದ ಅವರಿಗೆ ಕಷ್ಟನಷ್ಟ ತಗಲುವುದೆಂದು ಸೂಚಿಸಿದರು.

ಮೈಸೂರು ಸರ್ಕಾರದ ಪರವಾಗಿ ಶ್ರೀ ಎ. ಸೋಮನ್ನಿಯವರು ವಾದ ಮಾಡಿ, ರಾಜುರವರನ್ನು ಆಸ್ಪತ್ರೆಯಲ್ಲಿಡಬೇಕೆಂದೂ ಜಾಮೀನು ಮೇಲೆ ಅವರನ್ನು ಬಿಡುವುದಾದರೆ ೧ ಲಕ್ಷ ರೂ. ಮುಚ್ಚಳಿಕೆಯನ್ನು ಅವರಿಂದ ತೆಗೆದುಕೊಳ್ಳಬೇಕೆಂದೂ ಕೋರಿದರು.

ಪಂಜಾಬಿಗೆ ಗೌರ್ನರ್ ಆಗಿ ಕಟ್ಜುರವರ ನೇಮಕ ?

ಕೇಂದ್ರ ಸರ್ಕಾರದ ಗೃಹ ಮಂತ್ರಿ ಕೈಲಾಸನಾಥ ಕಟ್ಜುರವರನ್ನು, ಬರುವ ತಿಂಗಳು ನಿವೃತ್ತರಾಗಲಿರುವ ಪೂರ್ವ ಪಂಜಾಬಿನ ಗೌರ್ನರ್ ಚಂದೂಲಾಲ್ ತ್ರಿವೇದಿಯವರ ಸ್ಥಾನದಲ್ಲಿ ನೇಮಿಸಲಾಗುವುದೆಂದು ವರದಿಯಾಗಿದೆ. ಪಂಜಾಬು ಪ್ರಾಂತವು ಆಯಕಟ್ಟು ಪ್ರದೇಶದಲ್ಲಿರುವುದರಿಂದ ಅಲ್ಲಿಗೆ ದಕ್ಷರಾದ ಗೌರ್ನರ್ ಇರಬೇಕಾಗಿದೆಯೆಂದು ಹೇಳಲಾಗಿದೆ. ಕಟ್ಜುರವರಲ್ಲದೆ ಕೇಂದ್ರ ರಕ್ಷಣಾ ಮಂತ್ರಿ ಎನ್. ಜಿ. ಅಯ್ಯಂಗಾರ್ ಮತ್ತು ಮಾಜಿ ಮಂತ್ರಿ ಹರೇಕೃಷ್ಣ ಮೆಹತಾಬ್‌ರವರ ಹೆಸರುಗಳನ್ನೂ ಈ ಸಂಬಂಧವಾಗಿ ಸೂಚಿಸಲಾಗುತ್ತಿದೆ.

ಹರಿಜನರಿಗೆ ಕ್ಷೌರ ಮಾಡದಿದ್ದುದಕ್ಕೆ ದಸ್ತಗಿರಿ

ಭೂಪಾಲಿನ ಬಳಿ ಒಂದು ಹಳ್ಳಿಯ ನಾಪಿತರು ಹರಿಜನರಿಗೆ ಕ್ಷೌರಮಾಡಲು ನಿರಾಕರಿಸಿದುದನ್ನು ಪ್ರತಿಭಟಿಸಲು ಹರಿಜನನೊಬ್ಬನು ಕಳೆದ ಐದು ದಿನಗಳಿಂದಲೂ ಉಪವಾಸ ಸತ್ಯಾಗ್ರಹವನ್ನು ಹೂಡಿರುವನೆಂದೂ, ಈ ಸಂಬಂಧವಾಗಿ ಆರು ಮಂದಿ ನಾಪಿತರನ್ನು ಬಂಧಿಸಿ ಜಾಮೀನಿನ ಮೇಲೆ ಖುಲಾಸೆ ಮಾಡಲಾಗಿದೆಯೆಂದೂ ವರದಿಯಾಗಿದೆ. ಹರಿಜನರಿಗೆ ಕ್ಷೌರ ಮಾಡಬೇಕೆಂದು ನಿರ್ಬಂಧಿಸಿದರೆ ತಾವು ಆ ವೃತ್ತಿಯನ್ನೇ ಬಿಟ್ಟುಬಿಡುವುದಾಗಿ ನಾಪಿತರು ಹೇಳುತ್ತಿರುವರು.

ನೆಹರೂರವರಿಂದ ದ॥ ಭಾ॥ ಸೇವಕ ಸಮಾಜದ ಆರಂಭ

ನಾಳೆ ಬೆಳಗ್ಗೆ ಮದರಾಸಿನಲ್ಲಿ ಪ್ರಧಾನಿ ನೆಹರೂರವರು ತಮಿಳು ನಾಡು, ಆಂಧ್ರ, ಮೈಸೂರು ಮತ್ತು ಕೊಡಗುಗಳ ಭಾರತ ಸೇವಕ ಸಮಾಜದ ಶಾಖೆಗಳನ್ನು ಆರಂಭಗೊಳಿಸುವರು ಮೈಸೂರು ಸಂಸ್ಥಾನದ ಪರವಾಗಿ ಶ್ರೀಗಳಾದ ಟಿ ಸುಬ್ರಹ್ಮಣ್ಯ, ಎಲ್ ಎಸ್ ವೆಂಕಾಜಿರಾವ್, ಎ ಸ್ ವಾಸುದೇವರಾವ್, ರುಮಾಲೆ ಚನ್ನಬಸವಯ್ಯ, ಎಂ ಹುಚ್ಚೇಗೌಡ, ಕೆ ಪಟ್ಟಾಭಿರಾಮಯ್ಯ, ಜ॥ ಮಹಮದ್ ಇಮಾಂ ಮತ್ತು ಶ್ರೀಮತಿಗಳಾದ ಯಶೋಧರಾ ದಾಸಪ್ಪ, ಮತ್ತು ಬಳ್ಳಾರಿ ಸಿದ್ದಮ್ಮ ಇವರುಗಳು ಸಮಾರಂಭದಲ್ಲಿ ಭಾಗವಹಿಸುವರು

ಬ್ರಹ್ಮಪುತ್ರ ಪ್ರದೇಶದಲ್ಲಿ ನೆಹರೂ ವಿಮಾನ ಯಾನ

ಅಸ್ಸಾಮಿನಲ್ಲಿ ಪ್ರವಾಸ ಕೈಗೊಳ್ಳಲಿರುವ ಪ್ರಧಾನಿ ನೆಹರೂರವರು ಬ್ರಹ್ಮಪುತ್ರಾ ನದಿಯ ಇಕ್ಕಟ್ಟಿನ ಪ್ರದೇಶಗಳಲ್ಲಿ ಬೆಟ್ಟದ ಶ್ರೇಣಿಗಳ ನಡುವೆ ವಿಮಾನದಲ್ಲಿ ಯಾನ ಮಾಡುವರೆಂದು ಹೇಳಲಾಗಿದೆ

ಚೀಣಾ ಮೇಲೆ ದಿಗ್ಬಂಧನ ತೆಗೆಯಲು ಒತ್ತಾಯ

ವಿಶ್ವಸಂಸ್ಥೆಯು ಕಮ್ಯೂನಿಸ್ಟ್ ಚೀಣದ ಮೇಲೆ ಹಾಕಿರುವ ಆರ್ಥಿಕ ದಿಗ್ಬಂಧನವನ್ನು ತೆಗೆಯುವಂತೆ ಪೀಕಿಂಗಿನಲ್ಲಿ ನಡೆದ ಏಷ್ಯಾ ಮತ್ತು ಶಾಂತಿ ಸಾಗರ ಪ್ರದೇಶಗಳ ಸಮ್ಮೇಳನವು ಒತ್ತಾಯಪಡಿಸಿರುತ್ತದೆ

ದಕ್ಷಿಣದಲ್ಲಿ ಕ್ಷಾಮ ತಪ್ಪಿಸಲು ಖಾಯಂ ವ್ಯವಸ್ಥೆ

ದಕ್ಷಿಣ ಭಾರತದಲ್ಲಿ ಮಳೆಯಾಗದ ಪ್ರದೇಶದ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಣೆ ಮಾಡುವ ಬಗ್ಗೆ ಸೂಕ್ತ ವರದಿಯನ್ನೊಪ್ಪಿಸುವಂತೆ ಭಾರತ ಸರ್ಕಾರದವರು ಒಂದು ಪ್ರವೀಣರ ಸಮಿತಿಯನ್ನು ನೇಮಿಸಲಿರುವರೆಂದೂ, ಅದರಲ್ಲಿ ಯೋಜನಾ ಸಮಿತಿಯ ಸದಸ್ಯರೊಬ್ಬರು ಇರುವರೆಂದೂ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುತ್ತಾರೆ

ರಂಗನಾಥ ರಾಮಾಯಣದ ಬಗ್ಗೆ ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದ ಆಶ್ರಯದಲ್ಲಿ ಏರ್ಪಡಿಸಲಾಗಿರುವ ರಾಮಾಯಣದ ಉಪನ್ಯಾಸ ಮಾಲೆಯ ಅಂಗವಾಗಿ ಆಂಧ್ರದಲ್ಲಿ ಜನಪ್ರಿಯವಾಗಿರುವ ರಂಗನಾಥ ರಾಮಾಯಣದ ವಿಷಯದ ಮೇಲೆ ಮಹಾರಾಜಾ ಕಾಲೇಜಿನ ತೆಲುಗು ಅ॥ ಪ್ರೊ ಶ್ರೀ ಕೆ ಸುಬ್ಬರಾಮಪ್ಪನವರು ಮೊನ್ನೆ ಕನ್ನಡದಲ್ಲಿ ಉಪನ್ಯಾಸ ಮಾಡಿ, ೧೩ ನೇ ಶತಮಾನದಲ್ಲಿ ಆಂಧ್ರ ದೇಶದಲ್ಲಿ ವೈದಿಕ ಮತವನ್ನು ಪ್ರಚಾರ ಮಾಡುವುದಕ್ಕಾಗಿಯೂ, ಭಾರತೀಯ ಸಂಸ್ಕೃತಿಯನ್ನು ಕಲಿಸಲು ರಂಗನಾಥನೆಂಬ ಕವಿಯು ವಾಲ್ಮೀಕಿ ರಾಮಾಯಣವನ್ನು ದ್ವಿಪದಿ ಕಾವ್ಯವಾಗಿ ಅನುವಾದಿಸಿದರೆಂದು ತಿಳಿಸಿದರು ಸಂಘದ ಕಾರ್ಯದರ್ಶಿ ಶ್ರೀ ಎನ್ ತ್ರಿಶಂಕರಯ್ಯನವರು ವಂದನಾರ್ಪಣೆ ಮಾಡಿದರು

ಚಿತ್ರಗಳ ಮೂಲಕ ವಿಶ್ವ ಸಂಸ್ಥೆಯವರಿಂದ ಶಿಕ್ಷಣ

ಬರುವ ತಿಂಗಳು ಆದಿ ಭಾಗದಲ್ಲಿ ಕೆನಡಾ ಫಿಲಂ ಸಮಿತಿಯ ನಾರ್ಮನ್ ಮಕ್‌ಲಾರೇರವರ ನೇತೃತ್ವದಲ್ಲಿ ವಿಶ್ವ ಸಂಸ್ಥೆಯ ವಿದ್ಯಾಭ್ಯಾಸ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಘದ ೩ ಜನ ಸದಸ್ಯರು ಭಾರತಕ್ಕೆ ಆಗಮಿಸಿ ಚಲನಚಿತ್ರಗಳ ಮೂಲಕ ಅನಕ್ಷರಸ್ಥರಿಗೆ ವಿದ್ಯಾಭ್ಯಾಸ ಮಾಡಿಸುವ ವಿಧಾನವನ್ನು ತೋರಿಸಿಕೊಡಲಿರುವರು ಅವರು ಮೊದಲು ಆರು ತಿಂಗಳು ದೆಹಲಿಯಲ್ಲಿದ್ದು, ನಂತರ ಮೈಸೂರಿನಲ್ಲಿ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯವರ ಆಶ್ರಯದಲ್ಲಿ ಶಿಕ್ಷಣ ಕೇಂದ್ರವನ್ನು ನಡೆಸುವರು ಶಿಕ್ಷಣ ಪಡೆಯಲು ತಕ್ಕ ಜನರನ್ನು ಭಾರತದ ನಾನಾ ಕಡೆಗಳಿಂದ ಮೈಸೂರಿಗೆ ಕಳುಹಿಸಲಾಗುವುದು ಕಲಾವಿದರು, ಫೋಟೊಗ್ರಾಫರುಗಳು, ಸಿನಿಮಾ ಕ್ಯಾಮರಾ ಮನ್‌ಗಳ ಸಹಕಾರವು ಈ ರೀತಿಯ ವಿದ್ಯಾಭ್ಯಾಸಕ್ಕೆ ಅವಶ್ಯಕವಾಗಿದೆ ಅಂತಹವರನ್ನು ಕಳುಹಿಸುವಂತೆ ನಾನಾ ಸಂಸ್ಥಾನಗಳ ಸರ್ಕಾರಗಳಿಗೆ ಕೇಂದ್ರ ಸರ್ಕಾರದವರು ಸೂಚಿಸಿರುವರು

ವಿಶ್ವಸಂಸ್ಥೆ ಪಡೆಗಳ ಮೇಲೆ ಕಮ್ಯೂನಿಸ್ಟರ ಭಾರಿ ಧಾಳಿ

ಕೊರಿಯಾದಲ್ಲಿ ವಿಶ್ವಸಂಸ್ಥೆ ಪಡೆಗಳ ಮೇಲೆ ಕಮ್ಯೂನಿಸ್ಟ್ ಚೀಣರು ಈ ವರ್ಷದಲ್ಲೇ ಅತ್ಯಂತ ಭಾರಿಯಾದ ಧಾಳಿಯನ್ನಿತ್ತು, ಈಗಾಗಲೇ ೭ ಸ್ಥಳಗಳನ್ನು ಆಕ್ರಮಿಸಿಕೊಂಡಿರುತ್ತಾರೆಂದು ವರದಿಯಾಗಿದೆ ವಿಶ್ವಸಂಸ್ಥೆ ಪಡೆಗಳ ಧಾಳಿಕಾರರನ್ನು ಎದುರಿಸಿ ತಡೆದಿರುತ್ತಾರೆ ೧೫ ಸಾವಿರ ಮಂದಿ ಚೀಣರು ಇದರಲ್ಲಿ ಭಾಗಿಗಳಾಗಿರುವರೆಂದು ಹೇಳಲಾಗಿದೆ

ಉತ್ತರ ಭಾರತದಲ್ಲಿ ಮೈಸೂರು ವಿದ್ಯಾರ್ಥಿಗಳ ಪ್ರವಾಸ

ವಿದ್ಯಾ ಪ್ರವಾಸವನ್ನು ಕೈಗೊಂಡಿರುವ ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಶಾಲೆಯ ಐವತ್ತೈರು ತರಗತಿಯ ವಿದ್ಯಾರ್ಥಿಗಳ ಗೌರವಾರ್ಥವಾಗಿ ಬೊಂಬಾಯಿಯಲ್ಲಿ ಕಲ್ಲಿನ ಇಂಡಿಯಾ ಪ್ರೆಸ್ ಸರ್ವಿಸ್ಸಿನ ಸಂಪಾದಕರಾದ ಶ್ರೀ ಎ ಸುಬ್ಬರಾಯರು ಕಳೆದ ೩ ನೇ ತಾ॥ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಮೈಸೂರಿನವರನೇಕರು ಬಂದಿದ್ದರು ಟೆಕ್ನಿಕಲ್ ಶಿಕ್ಷಣಕ್ಕಾಗಿ ನ್ಯಾಷನಲ್ ಇನ್ಸ್ಟಿಟ್ಯೂಟಿನ ಸ್ಥಾಪಕರ ನಿಸ್ವಾರ್ಥ ಸೇವೆಯನ್ನು ಶ್ರೀ ಸುಬ್ಬರಾಯರು ಪ್ರಶಂಸಿಸಿ ಇಲ್ಲಿನ ವಿದ್ಯಾರ್ಥಿಗಳಿಗೆ ಯಶಸ್ಸನ್ನು ಕೋರಿದರು ವಿದ್ಯಾರ್ಥಿಗಳು ಅದೇ ದಿನ ಉತ್ತರ ಭಾರತ ಪ್ರವಾಸಕ್ಕಾಗಿ ತೆರಳಿದರು ದೆಹಲಿಯಲ್ಲಿ ಅವರು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ, ತಮ್ಮ ಗೌರವವನ್ನು ಅವರಿಗೆ ವ್ಯಕ್ತಪಡಿಸುವರು ಅಲ್ಲದೆ ರಾಜಘಾಟಿನಲ್ಲಿ ಮಹಾತ್ಮಾ ಗಾಂಧಿಯವರ ಸಮಾಧಿಯನ್ನು ಸಂದರ್ಶಿಸುವರು ೩೫ ಜನರಿರುವ ಈ ವಿದ್ಯಾರ್ಥಿಗಳ ತಂಡಕ್ಕೆ ಪ್ರೊ॥ ವೆಂಕಟೇಶಾಚಾರ್ಯರು ನಾಯಕರಾಗಿರುವರು

ಭಿಕ್ಷೆ ಬೇಡುವುದಕ್ಕೆ ನೆಹರೂರವರ ಖಂಡನೆ

ಅಭಾವ ಪ್ರದೇಶಗಳಿಗೆ ಪರಿಹಾರ ನೀಡುವ ಸಲುವಾಗಿ ಅಲ್ಲಿಗೆ ಕ್ಷಾಮದ ಶಾಸನವನ್ನು ಅನ್ವಯಿಸುವುದನ್ನು ತಾವು ಅನುಮೋದಿಸುವುದಿಲ್ಲವಾಗಿಯೂ ಈ ಶಾಸನದ ತತ್ವದ ಪ್ರಕಾರ ಬಡವರಿಗೂ ಮತ್ತು ಭಿಕ್ಷುಕರಿಗೂ ಉಪಾದಾನವೀಯಬೇಕಾಗುವುದೆಂದೂ, ಸ್ವತಂತ್ರ ಭಾರತದಲ್ಲಿ ಪ್ರಜೆಗಳು ಎಷ್ಟೇ ಬಡವರಾಗಿದ್ದರೂ ಈ ರೀತಿ ಬೇಡುವುದು ಜನರ ಘನತೆಗೆ ಸಲ್ಲದ ವಿಷಯವೆಂದೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ಕ್ಷಾಮದ ಶಾಸನವನ್ನು ರಾಯಲಸೀಮೆಗೆ ಅನ್ವಯಿಸಬೇಕೆಂದು ಕೋರಿದಾಗ ಮೇಲ್ಕಂಡಂತೆ ಅವರು ಉತ್ತರವಿತ್ತಿರುತ್ತಾರೆ

ಸಂಸ್ಥಾನಕ್ಕೆ ಹೈದರಾಬಾದಿನ ಬಿತ್ತನೆ ಜೋಳ

ಮೈಸೂರು ಸಂಸ್ಥಾನಕ್ಕೆ ೭೦೦೦ ಪಲ್ಲಾ ಬಿತ್ತನೆ ಜೋಳವನ್ನು ಹೈದರಾಬಾದು ಸರ್ಕಾರದವರು ಒದಗಿಸಿರುವರು

ಕೃತಕ ಅಕ್ಕಿ ಆಹಾರದ ಸೇವನೆ

ಕೇಂದ್ರ ಸಂಶೋಧನಾ ಇಲಾಖೆಯ ಉಪಸಚಿವರಾದ ಕೇಶವದೇವ ಮಾಳವೀಯರು ಮೈಸೂರಿಗೆ ಬಂದು ಇಲ್ಲಿನ ಆಹಾರ ಸಂಶೋಧನಾಲಯದವರು ಒದಗಿಸಿದ ಕೃತಕ ಅಕ್ಕಿ ಮತ್ತು ಮೊಸರನ್ನು ತೆಗೆದುಕೊಂಡು ದೆಹಲಿಗೆ ಹೋಗಿ ಅಲ್ಲಿ ತಮ್ಮ ಮಿತ್ರರಿಗೆ ಅದನ್ನು ತಿನ್ನಲು ಕೊಟ್ಟರೆಂದೂ, ಅದರ ರುಚಿ ಬಗ್ಗೆ ಅವರುಗಳು ಒಪ್ಪಿಗೆಯನ್ನು ವ್ಯಕ್ತಪಡಿಸಿದರೆಂದೂ ಪತ್ರಿಕೆಯಾಗಿದೆ ಕೇಂದ್ರ ಸರ್ಕಾರದವರು ಮರಗೆಣಸಿನ ಅಕ್ಕಿ ಮತ್ತು ಕಡಲೆಯ ಕಾಳನ್ನು ಭಾರಿ ಪ್ರಮಾಣದಲ್ಲಿ ಉತ್ಪನ್ನ ಮಾಡಲು ಏಳೆಂಟು ತಿಂಗಳಲ್ಲಿ ವ್ಯವಸ್ಥೆ ಮಾಡಲಿರುವರೆಂದು ಹೇಳಲಾಗಿದೆ

ಕಾಗದದ ಕಾರ್ಖಾನೆ ಕಾರ್ಮಿಕರ ಸಂಘ

ನಂಜನಗೂಡು ಬಳಿಇರುವ ಕಾವೇರಿ ಕಣಿವೆ ಕಾಗದದ ಕಾರ್ಖಾನೆಯ ಕೆಲಸಗಾರರ ಸಭೆಯು ಮೊನ್ನೆ ನಡೆದು ಕಾರ್ಮಿಕರುಗಳ ಸಂಘವೊಂದನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು ಸಂಘದ ಕಾರ್ಯಸಮಿತಿಗೆ ತಾತ್ಕಾಲಿಕವಾಗಿ ಮೈಸೂರಿನ ಶ್ರೀ ಎ ರಾಮಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಕೆ ಎಸ್ ರಾಜಾರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಟಿ ಎಸ್ ಸುಬ್ಬಣ್ಣನವರು ಕಾರ್ಯದರ್ಶಿ, ಶ್ರೀ ಡಿ ಆರ್ ಕೃಷ್ಣಪ್ಪ ಮತ್ತು ಶ್ರೀ ಪೆರುಮಾಳ್ ಪಿಳ್ಳೆಯವರು ಉಪಕಾರ್ಯದರ್ಶಿ ಮತ್ತು ಖಜಾಂಚಿಗಳಾಗಿಯೂ ಆರಿಸಲ್ಪಟ್ಟರು

ಪ್ರಭಾ ★ ಜಯಪ್ರದ ೩ನೇ ವಾರ 10-10-52 ರಿಂದ ದಿನವೂ 3 ಆಟಗಳು

ಪ್ರತಿಯೊಬ್ಬ ಹೆಂಗಸೂ ತಪ್ಪದೇ ನೋಡಬೇಕಾದ ಅತ್ಯುತ್ತಮ ಸಾಂಸಾರಿಕ ತೆಲುಗು ಚಿತ್ರ

★ ಸಂಕ್ರಾಂತಿ ★

ಬೆಳಗಿನ ಪ್ರದರ್ಶನ 10-10-52 ರಿಂದ ೬ ದಿನಗಳು ಮಾತ್ರ

"ಲಾರೆಲ್ ಹಾರ್ಡಿ" ಖ್ಯಾತಿ ವಿನೋದ ನಟಿಸಿರುವ

ಸ ಕ್ - ಫಿ - ಲ ದ್ದಿ

೭೨ ದಿನಗಳ ಉಪವಾಸ

- ಇಂಗ್ಲೆಂಡಿನ ಬ್ರೈಟನ್ ನಗರದಲ್ಲಿ ಜಾರ್ಜ್ ಫೇಷರ್ ಎಂಬ ಒಬ್ಬ ಯುಕ್ತಿಣಿಗಾರನು ೭೨ ದಿನ ೩ ಗಂಟೆ, ೪ ನಿಮಿಷಗಳ ಕಾಲ ಉಪವಾಸ ಮಾಡಿ ಪ್ರಪಂಚದ ರಿಕಾರ್ಡು ಸ್ಥಾಪಿಸಿರುವುದಾಗಿ ಹೇಳಿರುವನು ಇಟಲಿಯ ಪಾಲೆರ್ಮೋವಿನಲ್ಲಿ ಫಕೀರನೊಬ್ಬನು ಇವನಿಗಿಂತಲೂ ಒಂದು ನಿಮಿಷ ಕಡಿಮೆ ಉಪವಾಸ ಮಾಡಿದ್ದನು

ಪಾದುಕಾಪಹರಣ

ಬೆಂಗಳೂರಿನ ಸತ್ಯ ಶೋಧನ ಪುಸ್ತಕ ಭಂಡಾರದವರು ಪ್ರಕಟಿಸಿರುವ ಪಾದುಕಾಪಹರಣ ಎಂಬ ಕನ್ನಡ ಗ್ರಂಥದ ಪ್ರತಿಯೊಂದು ನಮ್ಮ ಕೈಸೇರಿದೆ. ಶ್ರೀ ನಾರಾಯಣರವರು ಅದನ್ನು ರಚಿಸಿರುವರು ರಾಮಾಯಣದಲ್ಲಿ ಅಜ್ಞಾತವಮ್ಯಂದಿರು, ಗೀತೆಯ ಮಹಾ ಗುಟ್ಟು ಶಂಕರ ಸನ್ಯಾಸ ಮುಂತಾದ ವಿಷಯಗಳ ಬಗ್ಗೆ ಲೇಖನಗಳು, ಹಲವು ಪದ್ಯ ಮಾಲಿಕೆಗಳು ಅದರಲ್ಲಿವೆ ಗ್ರಂಥವನ್ನು ಬೆಂಗಳೂರು ಶ್ರೀ ರಾಮಕೃಷ್ಣಾಶ್ರಮದಲ್ಲಿ ಸೇವೆ ಮಾಡಿದ ಶ್ರೀ ತ್ಯಾಗೀಶಾನಂದಜಿಯವರಿಗೆ ಅರ್ಪಿಸಲಾಗಿದೆ ಬೆಲೆ ೧-೦-೦

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಬಿ ವರದರಾಜ ಅಯ್ಯಂಗಾರ್ ಸಂಗೀತ ಮಧ್ಯಾಹ್ನ ೧ ೪೦ ದಿಲ್ರುಬಾ ೨ ತಿಮ್ಮ ಮೆಚ್ಚಿನ ಕಲಾವಿದರು ಸಂಜೆ ೫ ೦ ಮತ್ತು ೭ ೩೦ ಅರ್ ಸುಶೀಲ, ಸಂಗೀತ ೭ ಶಿವಪ್ರಸಾದ್, ರಾಮಾಯಣ ಪಾಚನ ೮ ಗೀತಾಮಾಲಾ ೯ ೧೫ ಹೇಮಂತ ಕುಮಾರ್, ರಿಕಾರ್ಡು ಸಂಗೀತ ೯ ೧೫ ಸ್ಮಶಾನ ಕುರುಕ್ಷೇತ್ರ-ಕೆ ಪಿ ಪುಟ್ಟಪ್ಪನವರ ಕಥೆ

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ ರೂ ಇಂದ ರೂ.ಗೆ

ನೆಲಗಡಲೆ	೬ ೮ ೦	೧೫ ೮ ೦
ಎಳ್ಳು	೬೦ ೮.೦	೬೦-೦-೦
ಹುಚ್ಚೆಳ್ಳು	೫೦ ೦ ೦	
ಹರಳು ಬೀಜ	೪೨ ೦ ೦	೪೨-೧೦-೦
ಹುರುಳಿ	೬೦ ೧೦ ೬	೬೧-೩ ೦
ಹೆಸರು	೫೦-೦-೦	
ಹೊಂಗೇಬೀಜ	೨೬ ೪ ೦	
ಗುದ್ದು	೬೬-೮ ೬	
ಅವರೆ	೭೯ ೧೦-೦	
ಹಲಸಂದೆ	೬೧-೮-೦	
ಮೆಣಸಿನಕಾಯಿ		
ಮಣ ೧ಕ್ಕೆ	೮ ೦ ೦	೨೦.೮ ೦
ಮೆಣಸೇಹಣ್ಣು	೫ ೯ ೦	
ಸೀಗೇಕಾಯಿ	೪-೧೧-೦	೫ ೦ ೦
ಬೆಲ್ಲ	೩-೮-೦	

ತೆಂಗಿನಕಾಯಿ ೧೧೦೦ ೧೧೬ ೦-೦ ೨೭೩-೦ ೦

ಒ ಲಂ ಪಿ ಯಾ

9 10-52 ರಿಂದ ಅಮೋಘ 4 ನೇ ವಾರ

ಕೆ. ಆಸ್ಪರವರ

ಪೂನಮ್

ಪಾತ್ರ ಕಾಮಿನಿ ಕೌಶಲ್, ಅಶೋಕ್ ಕುಮಾರ್

ಬೆಳಗಿನ ಪ್ರದರ್ಶನ ೩ ದಿನಗಳು ಮಾತ್ರ

ನರ್ಗಿಸ್ ಪಾತ್ರವಹಿಸಿರುವ

ಅನೋಖಾ ಪ್ಯಾರ್

Edited. Printed and Published by A R. Nagarajan at Sadhvi Press, D Subbiah Road. Mysore.

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೦-೧೦-೧೯೫೨ [ಸಂಚಿಕೆ ೬೩

ಫ್ರೆಂಚ್-ಭಾರತ ಐಕ್ಯಕ್ಕೆ ಜನಾಭಿಪ್ರಾಯವಿಲ್ಲ

೨ ಕೋಟಿ ಪೌಂಡಿಗಾಗಿ ಬ್ರಿಟನ್ನಿಗೆ ಇರಾನ್ ಒತ್ತಾಯ

ಪರ್ಷಿಯದ ಪ್ರಧಾನಿ ಡಾ|| ಮುಸ್ಸಾದೀಕರವರು ಬ್ರಿಟನ್ನಿಗೆ ಪತ್ರ ಬರೆದ, ತಮ್ಮ ಸರ್ಕಾರಕ್ಕೆ ಇಂಗ್ಲೆಂಡು ೨ ಕೋಟಿ ಪೌಂಡು ಹಣವನ್ನು ಒಂದೇ ಮೊತ್ತದಲ್ಲಿ ಕೊಡಬೇಕೆಂದು ತಿಳಿಸಿ, ಪರ್ಷಿಯಾ ಎಣ್ಣೆ ವ್ಯಾಜ್ಯದ ಬಗ್ಗೆ ಒಡಂಬಡಿಕೆಗೆ ಬಾರದೊಳಗೆ ಆಂಗ್ಲೋ ಇರಾನಿಯನ್ ಕಂಪೆನಿಯ ಮಂಡಲವು ಸಂಧಾನಕ್ಕೆ ಬರಬೇಕೆಂದು ಸೂಚಿಸಿರುವರು. ಪರ್ಷಿಯವು ಈ ಹಿಂದೆಯೇ ಕೇಳಿದ ಒಟ್ಟು ೫ ಕೋಟಿ ಪೌಂಡು ಹಣದ ಪೈಕಿ ಉಳಿದುದನ್ನು ಸಂಧಾನ ಮುಗಿದನಂತರ ಕೊಡಬೇಕೆಂದು ಅವರು ತಿಳಿಸಿರುವರು

ರಾಷ್ಟ್ರಾಧ್ಯಕ್ಷರಿಂದ ಭೂದಾನ

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ತಮಗೆ ಸೇರಿದ ಭೂಮಿಯನ್ನು ಒಪ್ಪಿಸಿರುತ್ತಾರೆ ವಿನೋಬಾರವರು ಈ ಬಗ್ಗೆ ಅಭಿಪ್ರಾಯವಿತ್ತು ಇದು ದಾನವಲ್ಲವೆಂದೂ, ಅಧ್ಯಕ್ಷರ ಆಶೀರ್ವಾದವೆಂದೂ ಹೇಳಿರುವರು

ಸಂಧಾನದ ಮೂಲಕ ಕೈಗಾರಿಕಾ ವಿವಾದಗಳ ಪರಿಹಾರ

ಭಾರತದಲ್ಲಿ ಕೈಗಾರಿಕಾ ವಿವಾದಗಳನ್ನು ಪರಿಹಾರ ಮಾಡಲು ಕೇಂದ್ರ ಕಾರ್ಮಿಕ ಮಂತ್ರಿ ವಿ ವಿ ಗಿರಿಯವರು ಹೊಸ ಸೂತ್ರವೊಂದನ್ನು ಸೂಚಿಸಿರುತ್ತಾರೆ. ಅತ್ಯವಶ್ಯಕವಾದ ಕೈಗಾರಿಕೆಗಳಲ್ಲಿ ವಿವಾದವುಂಟಾದರೆ ಆಗ ಪಂಚಾಯತಿಯು ನಡೆಯಬೇಕೆಂದೂ, ಉಳಿದ ಎಲ್ಲಾ ಕಾರ್ಖಾನೆಗಳಲ್ಲೂ ವ್ಯಾಜ್ಯಗಳು ಸಂಧಾನದ ಮೂಲಕ ಇತ್ಯರ್ಥವಾಗಬೇಕೆಂದೂ ಅವರು ಅಭಿಪ್ರಾಯಪಟ್ಟಿರುವರು.

ನೆಹರೂರವರಿಗೆ ಹಾರಗಳು ಬೇಡ; ಹೂ ಮಾತ್ರ ಸಾಕು

ತಮಗೆ ಒಪ್ಪಿಸುವ ಹೂ ಮಾಲೆಗಳೇ ಒಂದು ಸಮಸ್ಯೆಯಾಗಿರುವುದೆಂದೂ, ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಕಾರ್ಯಕರ್ತರು ಅವುಗಳ ಉಪಯೋಗದ ಬಗ್ಗೆ ಸಲಹೆಗಳನ್ನು ನೀಡಬೇಕೆಂದು ಪ್ರಧಾನಿ ನೆಹರೂರವರು ಹೇಳಿರುವರು ಪ್ರಾಂತದಲ್ಲಿ ಅನೂಚಾನವಾಗಿ ಬಂದಿರುವ ಹಾರ ಹಾಕುವ ಪದ್ಧತಿಯನ್ನು ಇತರೆಡೆಗಳಲ್ಲೂ ಅನುಕರಣೆ ಮಾಡುತ್ತಿರುವರೆಂದೂ, ಒಂದು ಹಾರವನ್ನು ಮಾತ್ರ ಹಾಕುವುದು ಸಾಕೆಂದೂ ಹೆಚ್ಚು ಹಾರಗಳನ್ನು ಹಾಕುವುದರ ಬದಲು ಬಿಡಿ ಹೂಗಳನ್ನು ನೀಡಬಹುದೆಂದೂ ಅವರು ತಿಳಿಸಿರುವರು

ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಗೆ ಪೌರಸಭೆಯ ಸನ್ಮಾನ

ಮೈಸೂರು ನಗರದ ಪೌರ ಸಭೆಗೆ ವಿಶೇಷ ರೀತಿಯಲ್ಲಿ ಸಹಾಯ ಮಾಡಿರುವ ಶ್ರೀ ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಗೆ ೧೦೦೦ ರೂಪಾಯಿ ಗಳನ್ನು ಗೌರವ ಸೂಚನೆ ಸಂಕೇತವಾಗಿ ಗ್ರಾಂಟ್ ನೀಡಲು ಪೌರಸಭೆಯವರು ನಿರ್ಧರಿಸಿರುವರು

ಆಲಿ ಖಾನರೊಡನೆ ರೀಟಾ ಹೇವರ್ತಳ ವಿಚ್ಛೇದನ

ಆಗಾಖಾನರ ಮಗ ಅಲಿಖಾನರಿಂದ ವಿಚ್ಛೇದನಹೊಂದಲು ಅಮೆರಿಕದ ಚಲನ ಚಿತ್ರ ನಟಿ ರೀಟಾ ಹೇವರ್ತಳು ನಿರ್ಧರಿಸಿರುತ್ತಾಳೆ ಅಲಿಖಾನರು ಒಳ್ಳೆಯವರಾದರೂ ಅವರು ಸಾಂಸಾರಿಕ ಜೀವನದ ಜವಾಬ್ದಾರಿಯನ್ನೇ ಅರಿಯರೆಂದೂ, ಸದಾ ಜೂಜು, ಕುದುರೆ ಪಂದ್ಯಗಳಲ್ಲಿ ಭಾಗವಹಿಸಿ ಕಾಲ ಕಳೆಯುವರೆಂದೂ, ಆದ್ದರಿಂದ ಅವರೊಡನೆ ಸಂಸಾರ ಮಾಡುವುದು ಅಸಾಧ್ಯವೆಂದೂ ರೀಟಾರವರು ತಿಳಿಸಿರುತ್ತಾರೆ

ದೆಹಲಿಯ ಹೈದರಾಬಾದು ಅರಮನೆಯ ಮಾರಾಟ

ದೆಹಲಿಯಲ್ಲಿರುವ ಹೈದರಾಬಾದು ಅರಮನೆಯನ್ನು ಹೈದರಾಬಾದು ಸರ್ಕಾರದವರು ಮಾರಾಟ ಮಾಡುವುದಾಗಿ ತಿಳಿಸಿರುವರು ಅದಕ್ಕೆ ಈಗ ೫೦ ಲಕ್ಷ ರೂ ಬೆಲೆಯಾಗುವುದೆಂದೂ, ಅದರ ಉಸ್ತುವಾರಿ ಮತ್ತು ಇತರ ಕೆಲಸಕಾರ್ಯಗಳಿಗಾಗಿಯೇ ವರ್ಷಕ್ಕೆ ೧ ಲಕ್ಷ ೩೦ ಸಾವಿರ ರೂ ಗಳು ಬೇಕಾಗುವುದೆಂದೂ ಹೇಳಲಾಗಿದೆ ೩೬ ಲಕ್ಷಕ್ಕೆ ಅದನ್ನು ತಾವೇ ಕೊಂಡುಕೊಳ್ಳುವುದಾಗಿ ನಿಜಾಮರು ತಿಳಿಸಿರುತ್ತಾರೆ. ಕೊಂಡುಕೊಳ್ಳಲು ಇನ್ನಾರೂ ಮುಂದೆ ಬಂದಿರುವುದಿಲ್ಲ

ಶಾಸನ ಸಭೆಗಳ ಅಧಿವೇಶನ

ಸಂಸ್ಥಾನದ ಕಿರಿಯ ಮತ್ತು ಹಿರಿಯ ಶಾಸನ ಸಭೆಗಳ ಅಧಿವೇಶನಗಳು ಈ ತಿಂಗಳು ೨೦ ನೇ ತಾ|| ಆರಂಭವಾಗಿ ೬ ದಿನಗಳವರೆಗೆ ನಡೆಯುವುವು ಕಿರಿಯ ಶಾಸನ ಸಭೆಗೆ ೫೦೦ ಪ್ರಶ್ನೆಗಳೂ, ೪೦ ನಿರ್ಣಯಗಳೂ ಕಳುಹಿಸಲ್ಪಟ್ಟಿವೆ. ಹಿರಿಯ ಸಭೆಗೆ ೫೫ ಪ್ರಶ್ನೆ ಮತ್ತು ೨೦ ನಿರ್ಣಯಗಳು ಬಂದಿವೆ. ಲೇವಿ ಪದ್ಧತಿ ಬಗ್ಗೆ ಚರ್ಚೆಗಾಗಿ ಒಂದು ದಿನವನ್ನು ಗೊತ್ತು ಮಾಡಲಾಗಿದೆ

ಶಾಸ್ತ್ರಿಯವರ ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದ ಆಶ್ರಯದಲ್ಲಿ ಅಲ್ಲಿನ ಬಾಲಿಕಾ ಮಾಧ್ಯಮಿಕ ಶಾಲೆಯಲ್ಲಿ ನಾಳೆ ಸಂಜೆ ೫|| ಗಂಟೆಗೆ ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರು ವಾಲ್ಮೀಕಿರಾಮಾಯಣ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಭಾರತದಲ್ಲಿ ಕಾಶ್ಮೀರದ ಪೂರ್ಣ ಐಕ್ಯ

ಪ್ರೇಮನಾಥ ಡೋಗ್ರಾರವರ ಭಾಷಣ

ಮೈಸೂರು ೧೦

ಜಮ್ಮು ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಪ್ರೇಮನಾಥ ಡೋಗ್ರಾರವರು ನೆನ್ನೆ ಟೌನ್‌ಹಾಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಕಾಶ್ಮೀರವು ಭಾರತದಲ್ಲಿ ಪೂರ್ಣವಾಗಿ ಐಕ್ಯವಾಗುವ ಸಲುವಾಗಿಯೇ ತಾವು ಮತ್ತು ತಮ್ಮ ಸಂಸ್ಥೆಯವರು ಚಳುವಳಿ ನಡೆಸುತ್ತಿರುವುದಾಗಿ ತಿಳಿಸಿದರು ಪೌರ ಸಭಾಸದಸ್ಯರಾದ ಡಾ|| ಬಿ ಜಿ ದಾಸರವರು ಅಧ್ಯಕ್ಷತೆ ವಹಿಸಿದ್ದರು

ರಾಷ್ಟ್ರಗೀತೆಯಾದನಂತರ ಶ್ರೀ ಎಂ. ಎನ್ ತಿಮ್ಮಯ್ಯನವರು ಸ್ವಾಗತ ಭಾಷಣ ಮಾಡಿದರು ಶ್ರೀ ಪ್ರೇಮನಾಥ ಡೋಗ್ರಾರವರ ಕಾರ್ಯದರ್ಶಿ ಶ್ರೀ ದುರ್ಗಾದಾಸ್‌ರವರು ಮಾತನಾಡಿ, ಕಾಶ್ಮೀರವು ಭಾರತದ ಒಂದು ಭಾಗವೆಂದೂ, ಅವೆರಡೂ ಪೂರ್ಣವಾಗಿ ಐಕ್ಯಗೊಳ್ಳುವುದಕ್ಕೆ ಸರ್ವ ತ್ಯಾಗಕ್ಕಾದರೂ ಕಾಶ್ಮೀರದ ಜನರು ಸಿದ್ಧವಾಗಿರುವರೆಂದೂ ಹೇಳಿದರು

ಶ್ರೀ ಪ್ರೇಮನಾಥ ಡೋಗ್ರಾರವರು ನಂತರ ಮಾತನಾಡಿ ಕಾಶ್ಮೀರದ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾರವರು ಕಾಶ್ಮೀರ ಮತ್ತು ಜಮ್ಮುಗಳು ಭಾರತದಲ್ಲಿ ಪೂರ್ಣವಾಗಿ ಐಕ್ಯಗೊಳ್ಳಲು ಇಚ್ಛಿಸದೆ, ಆ ಸಂಸ್ಥಾನವನ್ನು ಪ್ರತ್ಯೇಕ ರಿಪಬ್ಲಿಕ್ ಆಗಿ ಮಾಡುವ ಉದ್ದಿಶ್ಯದಿಂದ ಕೂಡಿರುವರೆಂದು ಹೇಳಿದರು

ಕಾಶ್ಮೀರದ ರಾಜ್ಯಾಂಗ ಸಭೆಯನ್ನು ವಿಸರ್ಜಿಸುವಾಗ, ಭಾರತದೊಡನೆ ಕಾಶ್ಮೀರವು ಪೂರ್ಣವಾಗಿ ಐಕ್ಯವಾಗಬೇಕೆಂಬ ಉದ್ದೇಶ್ಯದಿಂದ ಅದನ್ನು ತಡೆಯುವುದಾಗಿ ತಿಳಿಸಿದ್ದ ಷೇಕ್ ಅಬ್ದುಲ್ಲಾರವರು ಮಾತಿಗೆ ತಪ್ಪಿರುವರೆಂದೂ ಅಭಿಪ್ರಾಯಪಟ್ಟು, ಷೇಕ್ ಅಬ್ದುಲ್ಲಾರವರಿಗೆ ಜನತೆಯ ಬೆಂಬಲವಿಲ್ಲವೆಂದು ತಿಳಿಸಿದರು ಕಾಶ್ಮೀರವು ಭಾರತದಲ್ಲಿ ಪೂರ್ಣವಾಗಿ ಐಕ್ಯವಾಗಲು ಸಕಲರೂ ಸಹಾಯ ನೀಡಬೇಕೆಂದು ಶ್ರೀ ಡೋಗ್ರಾರವರು ಕೋರಿದರು

ನೆಹರೂರವರಿಂದ ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಪುಂಡುತನದ ಬಗ್ಗೆ ಖಂಡನೆ

ಪ್ರಧಾನಿ ನೆಹರೂರವರು ಮದ್ರಾಸಿನಲ್ಲಿ ನೆನ್ನೆ ಭಾಷಣ ಮಾಡಿ, ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಜನಾಭಿಪ್ರಾಯ ಕೇಳುವ ಪ್ರಶ್ನೆಯನ್ನು ಕುರಿತು ಭಾರತ ಸರ್ಕಾರದವರು ಯಾರೊಡನೆಯೂ ಚರ್ಚಿಸುವುದಿಲ್ಲವೆಂದು ಘೋಷಿಸಿದರು ಭಾರತದೊಳಗೆ ಐಕ್ಯವಾಗಬೇಕೆಂದು ಯಾರಾದರೂ ಪುದುಚೇರಿಯಲ್ಲಿ ಮಾತನಾಡಿದರೆ ಅಲ್ಲಿನ ಪುಂಡರು ಅವರ ತಲೆಯನ್ನು ಒಡೆಯುತ್ತಿರುವುದೇ ಇದಕ್ಕೆ ಕಾರಣವೆಂದೂ ಅವರು ಹೇಳಿದರು

ಲಂಡನ್ ರೈಲು ಅನಾಹುತದಲ್ಲಿ ಇನ್ನೂ ೪ ಮರಣ

ಲಂಡನ್ನಿನಲ್ಲಿ ಮೊನ್ನೆ ಆದ ಮೂರು ರೈಲುಗಳ ಢಿಕ್ಕಿಯ ಪರಿಣಾಮವಾಗಿ ಮರಣಗಳ ಸಂಖ್ಯೆಯು ೮೫ಕ್ಕೆ ಹೆಚ್ಚಿದೆ ೧೫೦ ಕ್ಕಿಂತಲೂ ಹೆಚ್ಚು ಮಂದಿ ಗಾಯಗೊಂಡಿರುವರು ಅನೇಕ ಸ್ತ್ರೀಯರು ಗೋಳಾಡುತ್ತ ತಮ್ಮ ಗಂಡಂದಿರ ಶರೀರಗಳ ಶೋಧನೆಯಲ್ಲಿ ತೊಡಗಿರುತ್ತಾರೆ. ೬೬ ಮೃತ ದೇಹಗಳು ದೊರಕಿವೆ

ಬ್ರಿಟಿಷ್ ರಾಣಿ ಮೆರವಣಿಗೆ ನೋಡಲು ೩೫೦ ರೂ.ಗಳು

ಬ್ರಿಟನ್ನಿನ ಎರಡನೇ ಎಲಿಜಬೆತ್ ರಾಣಿಯವರ ಕಿರೀಟ ಧಾರಣೆಯ ಮೆರವಣಿಗೆಯನ್ನು ಅದು ಬರುವ ರಸ್ತೆಗಳ ಪಕ್ಕದ ಭವನಗಳಮೇಲೆ ನಿಂತು ನೋಡಬಯಸುವವರು ೩೫೦ ರಿಂದ ೬೫೦ ರೂ.ಗಳ ವರೆಗೆ ಶುಲ್ಕವನ್ನು ಕೊಡಬೇಕಾಗಿದೆ ಜಾಗಗಳನ್ನು ಮೀಸಲು ಮಾಡುವುದಕ್ಕಾಗಿಯೇ ಇರುವ ಹಲವಾರು ಸಂಸ್ಥೆಗಳ ಪೈಕಿ ಒಂದಕ್ಕೆ ೪೦ ಸಾವಿರ ಅರ್ಜಿಗಳು ಬಂದಿವೆ

ಎಸ್. ಸಿ. ಮಲ್ಲಯ್ಯನವರ ನಿಧನ

ಮಂಡ್ಯದ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ, ಹಿಂದಿನ ಪ್ರಜಾಪ್ರತಿನಿಧಿ ಸಭಾ ಸದಸ್ಯರೂ ಆದ ಶ್ರೀ ಎಸ್ ಸಿ. ಮಲ್ಲಯ್ಯನವರು ಮೊನ್ನೆ ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ ಮರಣ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು ಮದ್ದೂರು ಬಳಿ ಸೋಮನಹಳ್ಳಿಯ ನಿವಾಸಿಗಳು ಸಾರ್ವಜನಿಕ ಜೀವನದಲ್ಲಿಯೂ, ರಾಜಕೀಯ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿದ್ದರು ಅವರಿಗೆ ೫೦ ವರ್ಷ ವಯಸ್ಸಾಗಿತ್ತು

ಬೆಂಕಿ ಅನಾಹುತ

ಡಿ ಸುಬ್ಬಯ್ಯ ರಸ್ತೆ ಪ್ರಾಂತ್ಯದಲ್ಲಿ ಶ್ರೀ ಎಂ. ಸುಬ್ಬಯ್ಯನವರ ನಂಬರು ಮನೆಯ ಕೊಟ್ಟಿಗೆಗೆ ಈ ದಿನ ಆಕಸ್ಮಾತ್ ಬೆಂಕಿ ತಗುಲಿ ಹುಲ್ಲು ಮತ್ತು ಇತರ ಸಾಮಾನುಗಳು ಬೆಂದುಹೋದವು ಸುಟ್ಟು ನಾಶವಾಗಿದೆ ನೆರೆಹೊರೆಯವರು ಕೂಡಲೇ ಬಂದು ಬೆಂಕಿಯನ್ನು ಆರಿಸಿ, ಪಕ್ಕದ ಮನೆಗಳಿಗೆ ಅದು ಹರಡದಂತೆ ಸಹಾಯ ಮಾಡಿದರು.

ಭಾರತದ ಭವಿಷ್ಯವು ವಿದ್ಯಾರ್ಥಿಗಳ ಮೇಲಿದೆ

ಭಾರತದ ಭವಿಷ್ಯವು ವಿದ್ಯಾರ್ಥಿಗಳನ್ನು ಅವಲಂಬಿಸಿರುವುದೆಂದೂ, ಅವರು ಸುಖ ಜೀವನವನ್ನು ಮರೆತು, ಸಾಹಸಿಗರಂತೆ ಕಷ್ಟವನ್ನು ಅಪ್ಪಿಕೊಂಡು, ಸನ್ಯಾಸನವನ್ನು ತ್ಯಜಿಸಿ ದೇಶದ ಭವಿಷ್ಯವನ್ನು ಕಾಪಾಡಬೇಕೆಂದೂ ಪ್ರಧಾನಿ ನೆಹರೂರವರು ಮೊನ್ನೆ ಮದ್ರಾಸಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದರು ಭಾರತದ ಜನರಲ್ಲಿ ಉನ್ನತ ಮತ್ತು ಉದಾತ್ತವಾದ ಗುಣಗಳಿರಬೇಕೆಂದೂ, ಒಂದು ರಾಷ್ಟ್ರದ ಬೆಳವಣಿಗೆಯಾಗಬೇಕಾದರೆ ಜನರಲ್ಲಿ ಸುಗುಣ ಸಂಪನ್ನತೆಯು ಅವಶ್ಯಕವೆಂದೂ ಅವರು ಹೇಳಿದರು

ಚಿಕಿತ್ಸೆ ನಂತರ ಹೊಟ್ಟೆಯೊಳಗೆ ಶಸ್ತ್ರ ಬಿಟ್ಟ ಅಪರಾಧ

ನ್ಯೂಜಿಲೆಂಡಿನ ವೈದ್ಯರೊಬ್ಬರು ೧೯೪೭ರಲ್ಲಿ ಒಬ್ಬ ರೋಗಿಗೆ ಶಸ್ತ್ರ ಚಿಕಿತ್ಸೆ ನಡೆಸಿ ಇಕ್ಕಳದ ಮಾದರಿಯ ಸಣ್ಣ ಉಪಕರಣವನ್ನು ಹೊಟ್ಟೆಯಲ್ಲಿ ಬಿಟ್ಟಿದನ್ನು ನಾಲ್ಕು ವರ್ಷಗಳನಂತರ ಬೇರೊಬ್ಬ ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಿ, ಕಂಡುಹಿಡಿದರೆಂದೂ ಈ ಬಗ್ಗೆ ಮೊನ್ನೆ ನ್ಯಾಯಾಧೀಶರು ಮೊದಲು ಚಿಕಿತ್ಸೆ ನಡೆಸಿದ ವೈದ್ಯರಿಗೆ ೬೦೦ ಪೌಂಡುಗಳ ದಂಡವನ್ನು ವಿಧಿಸಿದರೆಂದೂ ಹೇಳಲಾಗಿದೆ

೨॥ ಲಕ್ಷ ತೆಂಗಿನಕಾಯಿಗಳು ಸಮುದ್ರದ ಪಾಲು

ತಲಚೇರಿಯಲ್ಲಿ ಶೀತ ಮಾರುತವು ಸಂಭವಿಸಿ ತೀರದಲ್ಲಿದ್ದ ೩ ಭಾರಿ ದೋಣಿಗಳು ಲಂಗರು ಕಡಿದು ಪುಡಿಪುಡಿಯಾದ ಪರಿಣಾಮವಾಗಿ ಅವುಗಳಲ್ಲಿದ್ದ ಸುಮಾರು ೨॥ ಲಕ್ಷ ತೆಂಗಿನಕಾಯಿಗಳು ಸಮುದ್ರದ ಪಾಲಾಗಿವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಚಿತ್ರ ಜಗತ್ ಮಧ್ಯಾಹ್ನ ೧-೦ ಗಿಟಾರ್ ೨ ಬಾಲ ಜಗತ್ ಸಂಜೆ ೫-೪೦ ಮತ್ತು ೭ ರಾಜ್ ತಾರಾನಾಥ್, ಹಿಂದೂಸ್ತಾನಿ ಸಂಗೀತ ೬-೧೦ ನಾದ ಶ್ರೀ ೭-೩೦ ವನಿತಾ ವಿಹಾರ ೮ ಎಂ ಎಸ್ ಮೂರ್ತಿ ಕೌಸಲ್ಯಾ ಪರಿಣಯ ಕಥಾ ಕಾಲಕ್ಷೇಪ ೯-೧೫ ಕಬಲ ೧೦ ವರನ ೯ ೩೦ ಗಾನ ವಾರಿಧಿ

ನ್ಯಾಯಾಸ್ಥಾನದಲ್ಲಿ ಮಗುವಿನ ಶವದ ಪ್ರದರ್ಶನ

ಒಂದು ಅಪಾದನೆಗಾಗಿ ವಿಚಾರಣೆಗೆ ಗುರಿಯಾಗಿದ್ದ ಕಲ್ಕತ್ತದ ಅಗುಸ್ ಗಂಗೂಲಿ ಎಂಬಾತನು ಮಂಗಳವಾರ ತನ್ನ ಐದು ತಿಂಗಳ ಹೆಣ್ಣು ಮಗುವು ಸತ್ತುದರಿಂದ ಶೋಕಗ್ರಸ್ತನಾಗಿ, ಅದೇ ದಿನ ಕೋರ್ಟಿನಲ್ಲಿ ನಡೆಯಲಿದ್ದ ವಿಚಾರಣೆಯಲ್ಲಿ ಹಾಜರಾಗದಿರಲು ಅನುಮತಿ ಕೇಳಿದ್ದನೆಂದೂ, ರುಜುವಾತಿಗಾಗಿ ಅವನು ಸತ್ತ ಮಗುವನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಕೋರ್ಟಿನಲ್ಲಿ ಹಾಜರುಪಡಿಸಿದನೆಂದೂ ವರದಿಯಾಗಿದೆ ನ್ಯಾಯಾಧೀಶರು ಅವನನ್ನು ಹೊರಕ್ಕೆ ಕಳುಹಿಸಿ, ಅವನ ಗೈರುಹಾಜರಿಯಲ್ಲಿ ಮೊಕದ್ದಮೆಯು ಮುಂದುವರಿಯಬಹುದೆಂದು ಆಜ್ಞೆ ಮಾಡಿದರು

ಕಚ್ಚಾ ಫಿಲಂ ತಯಾರಿಕೆ

ಸಂಸ್ಥಾನದಲ್ಲಿ ಕಚ್ಚಾ ಫಿಲಂ ತಯಾರಿಸುವ ಬಗ್ಗೆ ಮೈಸೂರು ಸರ್ಕಾರದವರು ಕ್ರಮ ಕೈಗೊಂಡಿರುವರೆಂದೂ, ಇದಕ್ಕಾಗಿ ೨ ಕೋಟಿ ರೂ ಗಳನ್ನು ಕೇಂದ್ರ ಮತ್ತು ಮೈಸೂರು ಸರ್ಕಾರಗಳು ಸಮನಾಗಿ ಒದಗಿಸುವರೆಂದೂ ಕೈಗಾರಿಕೆಯು ಸ್ಥಾಪನೆಗಾಗಿ ಎರಡು ವಿದೇಶಿ ಕಂಪೆನಿಗಳ ಮಂದೆ ಬಂದಿವೆಯೆಂದೂ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿದರು

ಪೌರಸಭೆಗಳ ತುರ್ತು ಕೆಲಸಕ್ಕಾಗಿ ಒಟ್ಟು ೫। ಕೋಟಿ ರೂ. ಬೇಕು

ಸಂಸ್ಥಾನದ ಒಟ್ಟು ೧೧೦ ಪೌರಸಭೆಗಳಲ್ಲಿ ತುರ್ತು ಕೆಲಸಗಳನ್ನು ಕೈಗೊಳ್ಳುವುದಕ್ಕೆ ಒಟ್ಟು ೫। ಕೋಟಿ ರೂ ಗಳು ಬೇಕಾಗುವುವೆಂದೂ, ಈ ವಿಷಯದ ಬಗ್ಗೆ ಶಾಸನ ಸಭೆಯು ಅಭಿಪ್ರಾಯವನ್ನು ಪಡೆಯಲಾಗುವುದೆಂದೂ, ಈ ಕಾರ್ಯಗಳಿಗಾಗಿ ಸರ್ಕಾರವೇ ಸಾಲವೆತ್ತಿ ಸಹಾಯ ಮಾಡುವ ಒಂದೇ ಮಾರ್ಗವಿರವುದಾಗಿ ತಮ್ಮ ಅಭಿಪ್ರಾಯವೆಂದೂ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ ನೀರಿನ ವ್ಯವಸ್ಥೆಗಾಗಿ ೨ ಕೋಟಿ ೬೫ ಲಕ್ಷ ರೂ ಚರಂಡಿಗಳಿಗಾಗಿ ೨ ಕೋಟಿ ೧೦ ಲಕ್ಷ ರೂ , ಮತ್ತು ಇತರ ಕೆಲಸಗಳಿಗಾಗಿ ೫೭ ಲಕ್ಷ ರೂ ಬೇಕಾಗುವುದೆಂದು ಅವರು ತಿಳಿಯಪಡಿಸಿದರು

ಭತ್ತಕ್ಕೆ ಘೋರವಾದ ಹುಳುವಿನ ವ್ಯಾಧಿ

ಮಧ್ಯ ಪ್ರದೇಶದ ಭತ್ತ ಬೆಳೆಯುವ ಐದು ಜಿಲ್ಲೆಗಳಲ್ಲಿ ಎಂದೂ ಕಂಡರಿಯದಂತಹ ಹುಳುವಿನ ವ್ಯಾಧಿ ಹರಡಿದೆಯೆಂದು ವರದಿಯಾಗಿದೆ. ವಿಂಧ್ಯ ಮತ್ತು ಉತ್ತರ ಪ್ರದೇಶಗಳಲ್ಲೂ ಇದೇ ರೋಗವುಂಟಾಗಿ "ಗುಂಧಿ" ಎಂಬ ಒಂದು ವಿಧದ ಕೀಟವು ತೆನೆ ಕಟ್ಟುವಾಗಲೇ ಅದರ ರಸವನ್ನು ಹೀರಿ,ಅದರಿಂದ ಅಕ್ಕಿಯ ಕಾಳು ಆಗದಂತೆ ಮಾಡುತ್ತಿರುವುದೆಂದೂ, ಇದರಿಂದ ಫಸಲಿಗೆ ವಿಶೇಷ ನಷ್ಟವಾಗಿರುವುದೆಂದೂ ಹೇಳಲಾಗಿದೆ

ಕ್ಷಾಮ ನಿವಾರಣಾ ನಿಧಿಗೆ ಶೇಖರಣೆ

ನಂಜನಗೂಡು ೮

ಈ ತಾಲ್ಲೂಕಿನ ಕ್ಷಾಮ ಪರಿಹಾರ ಸಮಿತಿ ಅಧ್ಯಕ್ಷರಾದ ಶ್ರೀ ಹೆಜ್ಜಿಗೆ ಶಿವಣ್ಣ ಮತ್ತು ತಾಲ್ಲೂಕಿನ ಅಮಲ್ದಾರರು ಕಳೆದ ೬ ನೇ ತಾ॥ ಚಿನ್ನದಗುಡಿ ಹುಂಡಿ, ಬದನವಾಳು,ದೊಡ್ಡಕೌಲಂದೆ, ಚುಂಚನಹಳ್ಳಿ ಮುಂತಾದ ಹಳ್ಳಿಗಳಿಗೆ ಭೇಟಿಯಿತ್ತು ಕ್ಷಾಮ ಪರಿಹಾರ ನಿಧಿಗೆ ಹಣ ವನ್ನು ಶೇಖರಿಸಿದರು ಒಟ್ಟು ೪೦೦ ರೂ ಗಳು ಬಂದಿವೆ ಸುತ್ತೂರು ಮಠಾಧಿಪತಿಗಳು ೧೦೧ ರೂ ಗಳನ್ನು ಕೊಟ್ಟಿರುವರು

ಎಲ್ಲಾ ಬಗೆಯ

ಎಲೋಪತಿಕ್ ಔಷಧಿಗಳು

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

೨೦/ ಸಯ್ಯಾಜಿರಾವ್ ರೋಡ್

ಮೈಸೂರು.

ಮುರುಗನ್ ಅಂಡ್ ಕಂಪನಿ

ಮೈಸೂರು

ದಸರಾ ವಸ್ತುಪ್ರದರ್ಶನದ ಕೊನೆಯ ದಿನ ಮೈಸೂರು ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾವ್ ಮತ್ತು ಶ್ರೀಮಾನ್ ಕಾರ್ಯದರ್ಶಿ ಶ್ರೀ ವಿ ಎಸ್ ಕೃಷ್ಣ ಅಯ್ಯರ್ ಅವರ ಸಮ್ಮುಖದಲ್ಲಿ "ಲಕ್ಕಿ ಡಿಪ್ ಕೆ ಯ ಲಾಗಿ, ಕೆಳಗೆ ಕಂಡ ನಂಬರಿನ ಚಿತ್ರಗಳಿಗೆ ಬಹುಮಾನಗಳು ದೊರೆತಿವೆ ವ ಸ್ಟುಡಿಯೋವಿಗೆ ಬಂದು ಬಹುಮಾನ ಪಡೆಯಬಹುದು

1 ನಂಬರು 611 ಶ್ರೀ ಜನಾರ್ಧನ್

, 137 ,, ಶಿಕಾಚಾರ್

115 ಮುನಿಯಪ್ಪ

4 ೨೬೨ , ಮ್ಯಾನೆಜರ್, ಇಂಡಿಯನ್ ಬ್ಯಾಂಕ್.

೬೭/ ಶ್ರೀ ಎಂ ಎ ಸುಬ್ಬರಾಯ

6 (ಸ್ಪೆಷಲ್) ೨೫೮ ಕೆ ವಿ ಕೇಶವಮೂರ್ತಿ ಶೆಟ್ಟಿ

Edited, Printed and Published by A R Nagarajan at Sadhvi Press, D Subbiah Road, Mysore

ಕಾಫಿ ಬೆಲೆಯಲ್ಲಿ ಇಳಿತಾಯ

ಕೊಯಮತ್ತೂರಿನಲ್ಲಿ ಕಾಫಿಯ ಬೆಲೆಯು ಪೌಂಡಿಗೆ ೩ ಆಣೆಯಷ್ಟು ಇಳಿದಿದೆ ಕಾಫಿ ಫಸಲು ಬರುವ ವರ್ಷ ಹೇರಳವಾಗುವುದರಿಂದ ಬೆಲೆಯು ವಿಪರೀತವಾಗಿ ಇಳಿದುಹೋಗುವುದೆಂದೂ ನಂಬಲಾಗಿದೆ

ಶಿವ್ರೂ ಅಥವಾ ಒಡನಾಡಿಯ ಒಲವು

ಪಾದುಕಾಪಹರಣ, ಪಾದುಕಾ ಪ್ರಭಾವ ಇವೇ ಮುಂತಾದ ಕಥೆಗಳನ್ನು ರಚಿಸಿರುವ ಶ್ರೀ ನಾರಾಯಣರವರ ಶಿವ್ರೂ ಅಥವಾ ಒಡನಾಡಿಯ ಒಲವು ಎಂಬ ಕಥಾ ಪುಸ್ತಕವು ನಮ್ಮ ಹಸ್ತಗತವಾಗಿದೆ ಮೈಸೂರಿನ ಉಷಾ ಪುಸ್ತಕ ಭಂಡಾರದಲ್ಲಿ ಪ್ರತಿಗಳು ದೊರೆಯುತ್ತವೆ ಸಾಮಾಜಿಕ ವಿಷಯಗಳನ್ನು ಕಥೆಗಳ ರೂಪದಲ್ಲಿ ಕೊಡಲಾಗಿದೆ ಅದರ ಬೆಲೆ ರೂ ೧-೪-೦ ಸರ್ವರೂ ಓದಲು ಅರ್ಹವಾಗಿದೆ

VASANTHA COACHING CLASSES

For L S and S S L C from 1st Nov 52 Expert tuition Moderate Fees

Contact —

N. K Anantha Raman, B sc

1199 Kantharaj Road

K M Puram, Mysore

ನೋಟೀಸ್

ಮೈಸೂರು ನಗರದ ಗಾಂಧಿ ಸ್ಕ್ವೇರ್‌ನಲ್ಲಿ ಜವಳಿ ಅಂಗಡಿ ಇಟ್ಟಿದ್ದ ಮಾಡರನ್ ಸಾರ್ವೀಸ್ ಸ್ಟೋರಿನ ಮಾಲೀಕರಾದ ಜನಾಬ್ ಡಿ ಯಂ ಅಲ್ಲಿಸಾಹೇಬರು ವ್ಯವಹಾರದಲ್ಲಿ ಮುಗ್ಗರಿಸಿ, ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಗೆ ಈಡಾಗಿ, ಅನೇಕರಿಗೆ ಸಾಲಗಾರರಾಗಿರುತ್ತಾರೆ ತಾ॥ ೧೪ ೯-೫೨ ರಲ್ಲಿ ಸದರಿ ಅಲ್ಲಿ ಸಾಹೇಬರಿಗೂ, ಮತ್ತು ಅನೇಕ ದೇಣೆದಾರರಿಗೂ ಆದ ಕರಾರು ಪ್ರಕಾರ, ಐದು ಜನ ಪಂಚಾಯಿತರನ್ನು ಚುನಾಯಿಸಿ, ಅವರು ಅಂಗಡಿಯನ್ನು ಮಾಲ್ ಸಮೇತ ವಹಿಸಿಕೊಂಡು, ಮಾರಾಟದಿಂದ ಬಂದ ಮೊಬಲಗನ್ನು ಎಲ್ಲ ದೇಣೆದಾರರಿಗೂ ದಾವಾಮಾಫಿಕ ಪ್ರಕಾರ ಹಂಚಿಕೆ ಮಾಡಬೇಕೆಂದೂ ತೀರ್ಮಾನಿಸಲಾಯಿತು ಆದರಂತೆ ಪಂಚಾಯಿತದಾರರ ಅಂಗಡಿಯನ್ನು ಬನಾರಸ್ ಸಿಟಿ ವ ವನಪುರ ರೋಡು ಜನಾಬ್ ಯಂ ಅಬ್ದುಲ್ ಸತ್ತಾರ್ ಸಾಹೇಬರಿಗೆ ಹಾಲಿ ವ ೨೦ (ರೂ೧೧೯೦೦೧) ಐದಿನ ಒ ೧ ವನ ಒಂದು ರೂಪಾಯಿಗಳಿಗೆ ವಿಕ್ರಯಿಸಿದ್ದಾರೆ

ಆದ ಕಾರಣ ಸದರಿ ಜನಾಬ್ ಡಿ ಯಂ ಅಲ್ಲಿಸಾಹೇಬರಿಂದ ಬರಬೇಕಾಗಿರುವ ಬಾಕಿ ಮೊಬಲಗು ಇದ್ದಲ್ಲಿ ದೇಣೆದಾರರು, ಈ ಲಾನಾಯಿತು ಎಂಟು ದಿನಗಳೊಳಗೆ ಲಿಖಿತ ಮೂಲಕ ಈ ಕೆಳಗೆ ಕಂಡ ವಿಳಾಸಕ್ಕೆ ತಿಳಿಯಪಡಿಸಬೇಕಾಗಿ ಕೋರಿದೆ

ಇ. ಪಿ. ನಂಜಪ್ಪ,

ಪಂಚಾಯಿತರ ಪರವಾಗಿ

ಅಶೋಕಾ ರೋಡು ಮೈಸೂರು

ತಾ॥ 10 10 1952

SRI GAYATHRI TALKIES, MYSORE

TO-MORROW LAST DAY

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೧-೧೦-೧೯೫೨ [ಸಂಚಿಕೆ ೬೩

ಅಮೆರಿಕಾ ಅಧ್ಯಕ್ಷ ಟ್ರೂಮನ್ ಮೇಲೆ ದಾವೆ

ಅಭಾವ ಪರಿಹಾರಕ್ಕಾಗಿ ೫೦ ಸಾವಿರ ರೂ. ಕಾಂಗಾರಿ

ಜಿಲ್ಲಾ ಬೋರ್ಡಿನ ನಿರ್ಣಯ

ಮೈಸೂರು ೧೧

ಮೈಸೂರು ಜಿಲ್ಲಾ ಬೋರ್ಡಿನ ಈ ವರ್ಷದ ಆಯವ್ಯಯ ಪಟ್ಟಿಯು ನಿನ್ನೆ ನಡೆದ ಬೋರ್ಡಿನ ಸಭೆಯಲ್ಲಿ ಪರಿಶೀಲಿಸಲ್ಪಟ್ಟು ಅಂಗೀಕೃತವಾಯಿತು ಅಧ್ಯಕ್ಷರಾದ ಶ್ರೀ ಹೆಚ್ ಎಂ. ಚನ್ನಬಸಪ್ಪನವರು ಅಗ್ರಾಸನ ವಹಿಸಿದ್ದರು

ಬೋರ್ಡಿನವರು ತಯಾರಿಸಿದ್ದ ಪಟ್ಟಿಯಲ್ಲಿ ಹಲವು ಮಾರ್ಪಾಡುಗಳಾಗಬೇಕೆಂದು ಸೂಚಿಸಿ ಸರ್ಕಾರದವರಿಂದ ಬಂದ ಪತ್ರವನ್ನು ಸಭೆಯ ಗಮನಕ್ಕೆ ತರಲಾಯಿತು ಈ ಬಗ್ಗೆ ಜಿಲ್ಲಾ ಬೋರ್ಡಿನ ಹಕ್ಕನ್ನು ಸರ್ಕಾರದವರು ಕಾಯಿಸುವುದು ಸರಿಯಲ್ಲವೆಂದು ಕೆಲವು ಸದಸ್ಯರು ಅಭಿಪ್ರಾಯಪಟ್ಟು ಜಿಲ್ಲಾ ಬೋರ್ಡು ಆಯವ್ಯಯ ಸರ್ಕಾರದವರ ಪೂರ್ವಭಾವಿ ಅನುಮತಿಗೆ ಬೇಕಾಗಿರುವುದೆಂದು ಕಾನೂನಿನಲ್ಲಿದ್ದರೂ, ಸರ್ಕಾರದವರು ಸಲಹೆಗಳ ಮಾತ್ರ ಕೊಟ್ಟಿರುವರೆಂದು ಮ ಸದಸ್ಯರು ಉತ್ತರವಿತ್ತರು

ಅಧ್ಯಕ್ಷರು ಮಾತನಾಡಿ, ಸರ್ಕಾರದಿಂದ ಬೋರ್ಡಿಗೆ ೫,೮೩,೫೪೪ ರೂ ಗಳು ... ಕೆಲಸಕಾರ್ಯಗಳಗಾಗಿ ಬರಬೇಕಾಗಿರುವುದೆಂದೂ, ಅದನ್ನು ಕೊಡದಿರುವುದು ಬೋರ್ಡಿನ ಕೆಲಸಕ್ಕೆ ಅಡಚಣೆಯಾಗುವುದೆಂದೂ ಹೇಳಿದರು ಖಜಾನೆಯ ಬೋರ್ಡಿನವರು ೧ ಲಕ್ಷ ... ಓವರ್ ಡ್ರಾಫ್ಟ್ ಹಣ ಪಡೆಯಲು ಸರ್ಕಾರದವರು ಸಮ್ಮತಿಸಲಿಲ್ಲವೆಂದು, ಜಿಲ್ಲಾ ಬೋರ್ಡಿನವರು ಸಾಲ ... ವಾಗಿ ತಿಳಿಸಿದರೆ, ಅದಕ್ಕೆ ಸರ್ಕಾರದಿಂದ ಉತ್ತರವೇ ಬಂದಿರುವುದಿಲ್ಲವೆಂದೂ ಹೇಳಿದರು

ಜಿಲ್ಲೆಯ ನಾನಾ ಭಾಗಗಳಲ್ಲಿ ಅಭಾವ ಪರಿಸ್ಥಿತಿಯುಂಟಾಗಿರುವುದೆಂದು ಹಲವು ಸದಸ್ಯರು ಸಭೆಯ ಗಮನಕ್ಕೆ ತಂದರು ಅಭಾವ ಪ್ರದೇಶಗಳಲ್ಲಿ ಕಾಂಗಾರಿ ಕೆಲಸಗಳಿಗಾಗಿ ೫೦ ಸಾವಿರ ರೂ ಗಳನ್ನು ... ಮಂಜೂರು ಮಾಡಿತು

... ಮರಾಜನಗರದ ಪುರಸಭಾ ಪ್ರೌಢಶಾಲೆಯ ಕಟ್ಟಡದ ಬಡಾವಣೆಯ ... ಕ್ಕಾಗಿ ಮಂಜೂರಾಗಿರುವ ೩೦ ... ರೂ ಪೈಕಿ, ೧೮ ಸಾವಿರ ರೂ ... ವರ್ಷದಲ್ಲಿ ಕೆಲಸವನ್ನು ಪ್ರಾರಂಭಿಸಬೇಕೆಂದು ತೀರ್ಮಾನವಾಯಿತು

... ಲಿಂಗನ ಪಂಚಲಿಂಗ ದರ್ಶನದ ... ಸಮಯದಲ್ಲಿ ನೀರು ಸರಬರಾಜು ಮತ್ತು ನಿರ್ಮಲೀಕರಣದ ವ್ಯವಸ್ಥೆ ... ಸಾವಿರ ರೂ , ಬನ್ನೂರು ಬಳಿ ಕಾವೇರಿ ನದಿಗೆ ಸೇತುವೆ ಕಟ್ಟಲು ... ಆಗಿರುವ ೬,೬೬ ಸಾವಿರ ಮತ್ತು ... ರೂ. ಗಳ ಎರಡು ಅಂದಾಜುಗಳ ಪೈಕಿ ಮಂಜೂರಾಗುವ ... ನಾಲ್ಕನೇ ಒಂದು ಭಾಗವ ಮಂಜೂರು ಮಾಡಬಹುದೆಂದು ... ರವಾಯಿತು

... ವಸೂಲಿ ಬಗ್ಗೆ ಲೆವಿ ಪದ್ಧತಿಯಿಂದ ರೈತರಿಗೆ ತೊಂದರೆಯಾಗುವುದರಿಂದ ಈಗ ಇರುವ ವಸೂಲಿ ಪದ್ಧತಿ ... ಮುಂದುವರಿಯಬೇಕೆಂದೂ ಸದ...

ಧಾನ್ಯವನ್ನು ಅಧಿಕ ಬೆಲೆಗೆ ಮಾರಿದರೆ ಛಡಿ ಶಿಕ್ಷೆ

ಈಜಿಪ್ಟಿನಲ್ಲಿ ಆಹಾರ ಧಾನ್ಯವನ್ನು ನಿಗದಿಯಾಗಿರುವುದಕ್ಕಿಂತ ಹೆಚ್ಚು ಬೆಲೆಗೆ ಮಾರುವವರನ್ನು ವಿ.ಲಿಟರಿ ವಿಚಾರಣೆಗೆ ಗುರಿಪಡಿಸಿ, ಸಾಮಾನ್ಯ ತಪ್ಪಿತಸ್ಥರನ್ನು ಬಹಿರಂಗ ಬೆತ್ತದ ಏಟಿನ ಶಿಕ್ಷೆಗೂ ಮತ್ತು ಭಾರಿಯಾದ ತಪ್ಪು ಮಾಡಿದವರನ್ನು ದೊಣ್ಣೆಗಳ ಏಟಿನ ಶಿಕ್ಷೆಗೂ ಗುರಿಪಡಿಸಲಾಗುವುದೆಂದು ವರದಿಯಾಗಿದೆ

ಪೋಸ್ಟಾಫೀಸಿನಲ್ಲೇ ಭಾರಿ ಚೀಲಗಳ ಕಳವು

ಬೆಂಗಳೂರಿನ ಅವೆನ್ಯೂ ರಸ್ತೆಯ ಪೋಸ್ಟಾಫೀಸಿನ ಆವರಣದೊಳಕ್ಕೆ ಕಳೆದ ಬುಧವಾರ ಜಾಲಾರಪೇಟೆಯ ನಾಗಪ್ಪ ಮುದಲಿಯಾರ್ ಎಂಬಾತನು ನುಗ್ಗಿ ೫,೩೦೦ ರೂ ಬೆಲೆಯ ಪಾರ್ಸಲುಗಳಿದ್ದ, ಮೊಹರಾದ ಒಂದು ಚೀಲವನ್ನೂ ಮತ್ತು ಹಲವು ರಿಜಿಸ್ಟರು ಪಾರ್ಸಲುಗಳನ್ನೂ ಅಪಹರಿಸಿಕೊಂಡು ಹೋಗುತ್ತಿದ್ದ ಸಮಯದಲ್ಲಿ ಹಿಡಿಯಲ್ಪಟ್ಟನೆಂದೂ, ಪೋಲೀಸರು ಅವನನ್ನು ಬಂಧಿಸಿ ತನಿಖೆ ಕ್ರಮ ನಡೆಸುತ್ತಿರುವರೆಂದೂ ವರದಿಯಾಗಿದೆ

ಗಮಕ ಗೋಷ್ಠಿ

ರಾಜಧಾನಿಯ ಗಮಕ ಕಲಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪-೩೦ಕ್ಕೆ ನಾರಾಯಣಶಾಸ್ತ್ರಿ ಬೀದಿಯಲ್ಲಿರುವ ಆಯುರ್ವೇದ ವಿದ್ವಾನ್ ಶ್ರೀ ಕೆ ಸಿ. ಪುರಾಣೀಕರ ಮನೆಯಲ್ಲಿ ಗಮಕ ಗೋಷ್ಠಿಯನ್ನು ಏರ್ಪಡಿಸಲಾಗಿದೆ ಗಮಕಿಗಳೂ, ಹಾಗೂ ಕಲಾಭಿಮಾನಿಗಳೂ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ

...ಸ್ಯರು ಅಭಿಪ್ರಾಯಪಟ್ಟರು

ಆಹಾರದ ಸಂಬಂಧವಾಗಿ ವಿಶೇಷ ಪರಿಸ್ಥಿತಿಯು ಇರುವುದರಿಂದ ಸರ್ಕಾರದವರು ಬಹಿರಂಗವಾಗಿ ಧಾನ್ಯವನ್ನು ಕೊಳ್ಳಬೇಕೆಂದೂ, ೨೦ ಮಂದಿಗಿಂತ ಹೆಚ್ಚು ಜನಗಳಿರುವ ಕಾರ್ಖಾನೆಗಳಲ್ಲಿ ಕಾರ್ಮಿಕರಿಗಾಗಿ ಮಾಲೀಕರು ೧ ವರ್ಷದ ಆಹಾರವನ್ನು ಕೊಂಡು ಹಂಚುವಂತೆ ಏರ್ಪಡಿಸಬೇಕೆಂದೂ ಸರಕಾರಕ್ಕೆ ಸಲಹೆಗಳನ್ನು ಮಾಡಲಾಯಿತು

ನಕ್ಷೆ ಕೆಲಸಗಾರರಿಗೆ ಬಡ್ತಿ

ಮೈಸೂರು ೧೧

ರಾಜಧಾನಿಯ ಜ್ಯೂಯೆಲ್ ಫ್ಯಾಕ್ಟರಿಯ ಕೆಲಸಗಾರರಿಗೆ ಅವರವರ ಸರ್ವಿಸ್ಸಿನ ಆಧಾರದ ಪ್ರಕಾರ ಬಡ್ತಿ ಕೊಡಬೇಕಾಗಿರುವುದೆಂದು ಗೊತ್ತಾಗಿದೆ ನಕ್ಷೆ ಕೆಲಸಗಾರರು ಕಳೆದ ನವರಾತ್ರಿ ಹಬ್ಬದ ಮೊದಲನೇ ದಿನ ಪುರಸ್ಕಾರ ನಡೆಯುವುದಾಗಿ ಮೊದಲು ತಿಳಿಸಿ, ಅದು ಮುಂದು ವರಿಸಲ್ಪಟ್ಟಿದ್ದಿತು

ನೇಣು ಹಾಕಿಕೊಂಡು ಮರಣ

ರಾಜಧಾನಿಯ ಹಳೇಅಗ್ರಹಾರದ ಬಳಿ ಪ್ರಭುದೇವಾ ಟಾಕೀಸ್ ಹತ್ತಿರವಿರುವ ಒಂದು ಮನೆಯಲ್ಲಿ ರಾಜಮಣಿ ಎಂಬ ೧೯ ವರ್ಷದ ಯುವತಿಯೊಬ್ಬಳು ಹೊಟ್ಟೆ ನೋವಿನ ಬಾಧೆಯನ್ನು ತಾಳಲಾರದೆ ನೆನ್ನೆ ಮಧ್ಯಾಹ್ನ ನೇಣು ಹಾಕಿಕೊಂಡು ಮೃತಪಟ್ಟಳು

ಗೋಪಾಲಕೃಷ್ಣ ಶೆಟ್ಟರಿಗೆ ಸತ್ಕಾರ

ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾಗಿರುವ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಗೌರವಾರ್ಥವಾಗಿ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿಯವರು ನಿನ್ನೆ ಕಾವೇರಿಪಟ್ಟಣಂ ಸುಬ್ಬರಾಯ ಶೆಟ್ಟರ ಛತ್ರದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಸೊಸೈಟಿಯ ಅಸಿಸ್ಟೆಂಟ್ ಸೆಕ್ರೆಟರಿಯವರಾದ ಶ್ರೀ ಎಃ ರಾಮಸ್ವಾಮಿಯವರು ಬಿನ್ನವತ್ತಳೆಯನ್ನು ಓದಿ ಶ್ರೀ ಶೆಟ್ಟರಿಗೆ ಒಪ್ಪಿಸಿದರು. ಸತ್ಕಾರಕ್ಕಾಗಿ ಶ್ರೀ ಶೆಟ್ಟರು ಧನ್ಯವಾದವನ್ನರ್ಪಿಸಿ, ಸೊಸೈಟಿಯ ಏಳಿಗೆಗೆ ಸೂಕ್ತ ಹಿತವಚನಗಳನ್ನಿತ್ತರು

ಜನವರಿ ೧೪ ರಿಂದ ಕಾಂಗ್ರೆಸ್ ಮಹಾಧಿವೇಶನ

ಹೈದರಾಬಾದು ಸಂಸ್ಥಾನದ ಗೋಲ್ಕೊಂಡ ನಗರದಲ್ಲಿ ಬರುವ ಜನವರಿ ೧೬ನೇ ತಾ|| ೫೮ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಪ್ರಾರಂಭವಾಗಿ ೧೯ರ ವರೆಗೂ ನಡೆಯುವುದು ೧೪, ೧೫ ಮತ್ತು ೧೬ನೇ ತಾ|| ಕಾರ್ಯಕಾರಿ ಮಂಡಲಿ, ೧೫ ಮತ್ತು ೧೬ ವಿಷಯ ನಿಯಾಮಕ ಸಮಿತಿ ಸಭೆಗಳೂ, ೧೭ ಮತ್ತು ೧೮ ಬಹಿರಂಗ ಅಧಿವೇಶನವೂ ನಡೆಯುವುವು ಮಾರನೇ ದಿನ ಕಾರ್ಯಕಾರಿ ಮಂಡಲಿಯು ಪುನಃ ಸೇರಿದ ನಂತರ ಕೊನೆಗೊಳ್ಳುವುದು

ಶಾಸನ ಸಭೆಗಳ ಅಧಿವೇಶನಗಳ ಕಾರ್ಯಕ್ರಮ

ಸ್ವಂ ವ ಪೋರ್ಟ್] ಬೆಂಗಳೂರು ೧೧

ಈ ತಿಂಗಳು ೨೦ನೇ ತಾ|| ನಿಂದ ೫ ದಿನಗಳವರೆಗೆ ಸಂಸ್ಥಾನದ ಹಿರಿಯ ಮತ್ತು ಕಿರಿಯ ಶಾಸನ ಸಭೆಗಳು ಸಮಾವೇಶಗೊಳ್ಳುವುವು ಮಧ್ಯಾಹ್ನ ೧೨ ಗಂಟೆಗೆ ಕಿರಿಯ ಸಭೆಯೂ, ೧ಕ್ಕೆ ಹಿರಿಯ ಸಭೆಯೂ ಸೇರುವುವು

ಕಿರಿಯ ಸಭೆಯ ಕಾರ್ಯಕ್ರಮ ಈ ರೀತಿ ಇದೆ-೨೦ನೇ ತಾ|| ಸಭಾ ನಡವಳಿಕೆಯ ವಿಶೇಷ ನಿಬಂಧನೆಗಳು ಮತ್ತು ಮಸೂದೆಗಳು ೨೧ ಬೇಡಿಕೆಗಳ ಬಗ್ಗೆ ಓಟಿಂಗ್ ೨೨ನೇ ತಾ|| ಆಹಾರ ಧಾನ್ಯದ ಲೆವಿ ಪದ್ಧತಿ ಬಗ್ಗೆ ಚರ್ಚೆ, ೨೩ ಮಸೂದೆಗಳು, ೨೪ ಖಾಸಗಿ ಕಾರ್ಯಕ್ರಮ, ೨೫ ಖಾಸಗಿ ಮಸೂದೆಗಳು

ಹಿರಿಯ ಸಭೆಯ ಕಾರ್ಯಕ್ರಮ ಹೀಗಿದೆ- ೨೦ ಬೇಡಿಕೆಗಳು, ೨೧ ಖಾಸಗಿ ಮಸೂದೆ, ೨೨ ಆಹಾರದ ಲೆವಿ ಬಗ್ಗೆ ಚರ್ಚೆ, ೨೩, ೨೪, ಮತ್ತು ೨೫ ಸರ್ಕಾರಿ ಮಸೂದೆಗಳು. ಚರ್ಚೆಗೆ ಬರುವ ಮಸೂದೆಗಳಲ್ಲಿ ಅಧಿಕಾರ ಭಾಷೆ ಮತ್ತು ಸಿನಿಮಾ ಮಂದಿರಗಳಿಗೆ ಸಂಬಂಧಪಟ್ಟವೂ ಇವೆ

○ ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳಾದ ಶ್ರೀ ಹೆಚ್ ಜಿ ವಿಜಯರಾಘವಶೆಟ್ಟಿಯವರನ್ನು ಕೈಗಾರಿಕೆ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ನೇಮಿಸಲಾಗಿದೆ

○ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ತೆರಳಿದರು. ೧೭ನೇ ತಾ|| ವಾಪಸು ಬರುವರು

ಗ್ರೀಸಿನ ಸರ್ಕಾರದ ರಾಜೀನಾಮೆ

ಗ್ರೀಸಿನ ಜ|| ನಿಕೊಲಾಸ್ ಪ್ಲಾಸ್ಟಿರಾಸ್‌ರವರ ಮುಖಂಡತ್ವದಲ್ಲಿ ಸ್ಥಾಪನೆಯಾಗಿರುವ ಸಮ್ಮಿಶ್ರ ಸರ್ಕಾರವು ರಾಜೀನಾಮೆಯನ್ನು ಸಲ್ಲಿಸಿರುತ್ತದೆ ಈಗಿನ ಪಾರ್ಲಿಮೆಂಟನ್ನು ವಿಸರ್ಜಿಸಿ ಹೊಸ ಚುನಾವಣೆಯು ನಡೆಯ ಬೇಕೆಂದು ಅಲ್ಲಿನ ದೊರೆಯು ಆಜ್ಞೆಮಾಡಿರುತ್ತಾರೆ

ಕೊರಿಯಾ ಯುದ್ಧದಲ್ಲಿ ಅಮೆರಿಕಾ ಪ್ರವೇಶದ ಬಗ್ಗೆ ಟ್ರೂಮನ್ನರ ಮೇಲೆ ದಾವಾ

ಅಮೆರಿಕದ ಕಾಂಗ್ರೆಸ್ಸಿನ ಉಭಯ ಸಭೆಗಳ ಅನುಮತಿ ಪಡೆಯದೆ, ಕೊರಿಯಾ ಯುದ್ಧದಲ್ಲಿ ಅಮೆರಿಕವು ಪ್ರವೇಶಿಸುವಂತೆ ಆಜ್ಞೆ ಮಾಡಿದರೆಂದು ಅಲ್ಲಿನ ಫೆಡರಲ್ ಕೋರ್ಟಿನಲ್ಲಿ ಒಬ್ಬ ವಕೀಲರು ಅಧ್ಯಕ್ಷ ಟ್ರೂಮನ್ನರ ಮೇಲೆ ದಾವೆಯನ್ನು ಹೂಡಿರುವರು ಈ ಬಗ್ಗೆ ಅಧ್ಯಕ್ಷರಿಗೆ ನ್ಯಾಯಾಸ್ಥಾನದ ಸಮನ್ಸ್ ಬಂದಿರುತ್ತದೆ

ಲಲಿತಾದ್ರಿಪುರದಲ್ಲಿ ಇಬ್ಬರ ಕೊಲೆ

ಮೈಸೂರು ತಾಲ್ಲೂಕು ಲಲಿತಾದ್ರಿಪುರದಲ್ಲಿ ಈ ಬೆಳಗ್ಗೆ ಕಂಟ್ರಾಕ್ಟರ್ ಯಲ್ಲಯ್ಯ ಮತ್ತು ಅವನ ಮಗನನ್ನು ಕೊಲೆ ಮಾಡಲಾಗಿದೆಯೆಂದು ವರದಿಯಾಗಿದೆ ಯಲ್ಲಯ್ಯನು ಸ್ಥಳದಲ್ಲೂ, ಅವನ ಮಗನು ಆಸ್ಪತ್ರೆಯಲ್ಲೂ ಮೃತಿಪಟ್ಟರು.

ಸ್ವಯಂಸೇವಕರನ್ನು ಹೊಡೆದ ಪೌರ ಸಭಾಧ್ಯಕ್ಷರ ದಸ್ತಗಿರಿ

ವಿರೂಧುನಗರದ ಕಾಂಗ್ರೆಸ್ ಕಛೇರಿಯೊಂದಕ್ಕೆ ನುಗ್ಗಿ ಅಲ್ಲಿ ಮಲಗಿದ್ದ ಸ್ವಯಂ ಸೇವಕರುಗಳ ಮೇಲೆ ಕೈಮಾಡಿದರೆಂದು ಅಲ್ಲಿನ ಪೌರಸಭಾಧ್ಯಕ್ಷರಾದ ಎಂ. ಎಸ್ ಪೆರಿಯಸ್ವಾಮಿ ನಾಡರವರು ದಸ್ತಗಿರಿಯಾಗಿ, ಈಗ ಜಾಮೀನಿನ ಮೇಲೆ ಅವರನ್ನು ಬಿಡಲಾಗಿದೆ

ಪೆಪ್ಸುವಿನಲ್ಲಿ ಅಧ್ಯಕ್ಷರ ಆಡಳಿತೆ

ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳ ಒಕ್ಕೂಟದಲ್ಲಿ ಇನ್ನು ಕೆಲವು ವಾರಗಳಲ್ಲೇ ರಾಷ್ಟ್ರಾಧ್ಯಕ್ಷರ ಆಡಳಿತವು ಬರುವುದೆಂದು ವರದಿಯಾಗಿದೆ ಆ ಸಂಸ್ಥಾನದಲ್ಲಿರುವ ಮಂತ್ರಿಮಂಡಲವು ಬೀಳಲಿರುವುದೆಂದೂ, ಅವರಲ್ಲಿದ್ದ ಐದು ಜನರು ವಿರೋಧಿ ಪಂಗಡವಾದ ಕಾಂಗ್ರೆಸ್ಸಿನೊಡನೆ ಸೇರುವರೆಂದೂ ಹೇಳಲಾಗಿದೆ

ಕಟ್ಟೆಮಳಲವಾಡಿ ರೈತರ ಸಮ್ಮೇಳನ

ಹೊಡಕೆಕಟ್ಟೆ ಕಾವಲು ಜಮೀನಿನ ವಿನಿಯೋಗದ ವಿಷಯವಾಗಿ ವಿಮರ್ಶ ನಡಸಿ ಸರ್ಕಾರಕ್ಕೆ ಸೂಕ್ತ ಅರಿಕೆಗಳನ್ನು ಕಳುಹಿಸಲು ನಾಳೆ ಬೆಳಗ್ಗೆ ೧೧ ಗಂಟೆಗೆ ಕಟ್ಟೆಮಳಲವಾಡಿಯಲ್ಲಿರುವ ೦ಣ ಕಟ್ಟೆ ತೋಪಿನಲ್ಲಿ ರೈತರ ಸಮ್ಮೇಳನವನ್ನು ಏರ್ಪಡಿಸಲಾಗಿದೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಎಚ್ ಎಂ ಚನ್ನಬಸಪ್ಪನವರು ಭಾಗವಹಿಸುವರು

ಗಾಂಧಿ ಜಯಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಮಹಾತ್ಮಾ ಗಾಂಧಿಯವರ ಜಯಂತ್ಯುತ್ಸವವು ಪೊನ್ನೆ ಜ|| ದಾವುದ್ ಷರೀಫರ ಅಧ್ಯಕ್ಷತೆಯಲ್ಲಿ ನಡೆಯಿತು ವಿದ್ಯಾರ್ಥಿ ಶ್ರೀ ಬಿ ಆರ್ ರಾಮಯ್ಯನವರಿಂದ ಸ್ವಾಗತವಾದ ನಂತರ ಮಹಾರಾಜಾ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ನಾಗಪ್ಪನವರು ಗಾಂಧಿಜಯಂತಿ ತತ್ವ ನಿಷ್ಠೆ ಮತ್ತು ಅವರ ನಡೆನುಡಿಗಳ ಬಗ್ಗೆ ಭಾಷಣ ಮಾಡಿದರು ಶ್ರೀಗಳಾದ ಕೆ ಎಸ್ ಜೋರ್ಡೆಗೌಡ ಕೆ ಷೇಕ್ ಕೊಟ್ರಪ್ಪ ಮತ್ತು ಟಿ ಎಸ್ ಸುಬ್ಬಣ್ಣನವರುಗಳ ಭಾಷಣಗಳೂ ಆದುವು ಶ್ರೀ ನಂಜುಂಡರಾಯರಿಂದ ವಂದನಾರ್ಪಣೆಯಾದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು

ಪದೇಪದೇ ಔಷಧಿ ಸೇವಿಸದಂತೆ ನೆಹರೂ ಸೂಚನೆ

ಜನರು ಪದೇಪದೇ ಔಷಧವನ್ನು ಸೇವಿಸಬಾರದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ. ಈ ಬಗ್ಗೆ ತಮ್ಮ ಅನುಭವವನ್ನು ಅವರು ತಿಳಿಸಿ, ಕಳೆದ ಪಾರ್ಲಿಮೆಂಟಿನ ಅಧಿವೇಶನದ ಸಮಯದಲ್ಲಿ ತಾವು ಜಾರಿಬಿದ್ದು ಕಾಲು ನೋವಾದಾಗ ೧೦ ಜನ ವೈದ್ಯರು ತಮ್ಮನ್ನು ಸುತ್ತುವರಿದು, ಅನೇಕ ಔಷಧಗಳು ಮತ್ತು ಸಿರಿಂಜಗಳನ್ನು ತಂದು ಗಾಬರಿಗೊಳಿಸಿದರೆಂದೂ, ಧನುರ್ವಾಯುವಿನ ವಿರುದ್ಧವಾದ ಇಂಜಕ್ಷನ್ ತೆಗೆದುಕೊಳ್ಳುವಂತೆ ಒತ್ತಾಯಪಡಿಸಿದರೆಂದೂ, ತಾವು ಜೀವಮಾನದಲ್ಲೆಲ್ಲಾ ಇಂಜಕ್ಷನ್ ತೆಗೆದುಕೊಂಡಿರಲಿಲ್ಲವೆಂದೂ ಹೇಳಿದರು ಇಂಜಕ್ಷನ್ನಿನಿಂದ ತಮ್ಮ ಶರೀರವು ಹಲವು ದಿನಗಳ ವರೆಗೆ ಭಾರಿ ಬಲೂನಿನಂತೆ ಊದಿಕೊಂಡಿತ್ತೆಂದೂ ಅವರು ತಿಳಿಸಿದರು

ಅನಾಥ ಕನ್ಯೆಯರ ವಿವಾಹಕ್ಕಾಗಿ ಸಮಿತಿ

ಹೈದರಾಬಾದಿನಲ್ಲಿ ಅನಾಥ ಕನ್ಯೆಯರ ವಿವಾಹವನ್ನು ನೆರವೇರಿಸುವ ಮತ್ತು ಇತರ ಸಮಾಜಸೇವಾ ಕಾರ್ಯಗಳನ್ನು ನಡೆಸುವ ಸಲುವಾಗಿ ಸರೋಜಿನಿ ನಾಯಿಡುರವರ ಅಧ್ಯಕ್ಷತೆಯಲ್ಲಿ ೧೫ ಮಂದಿ ಸದಸ್ಯರಿಂದ ಕೂಡಿದ ಒಂದು ಉಪ ಸಮಿತಿಯನ್ನು ರಚಿಸಲಾಗಿದೆ

ಮಹದೇಶ್ವರ ಬೆಟ್ಟದ ಜಾತ್ರೆಗೆ ಹೋಗುವವರಿಗೆ ಇನಾಕ್ಯುಲೇಷನ್

ಕೊಳ್ಳೇಗಾಲದ ತಾಲ್ಲೂಕು ಮಹದೇಶ್ವರ ಬೆಟ್ಟದ ಜಾತ್ರೆಯು ಇದೇ ೨೦ನೇ ತಾ|| ನಿಂದ ಪ್ರಾರಂಭವಾಗುವುದು ಆ ಪ್ರದೇಶದಲ್ಲಿ ವಾಂತಿಭೇದಿ ರೋಗವು ಹರಡಬಹುದಾದ ಪ್ರಮೇಯವಿರುವುದು ಅಲ್ಲಿಗೆ ಮೈಸೂರಿನಿಂದ ಹೋಗಲಿಚ್ಛಿಸುವವರೆಲ್ಲರೂ ಕಾಲರಾ ಇನಾಕ್ಯುಲೇಷನ್ ಮಾಡಿಸಿಕೊಳ್ಳಬೇಕು ತಾವು ಹೊರಡುವುದಕ್ಕೆ ಮುಂಚಿತವಾಗಿ ಇನಾಕ್ಯುಲೇಷನ್ ಮಾಡಿಸಿಕೊಂಡ ಬಗ್ಗೆ ಜನರು ಸರ್ಟಿಫಿಕೇಟುಗಳನ್ನು ಪಡೆದಿರಬೇಕು ಮೈಸೂರು ಜಿಲ್ಲೆಯ ಸಂತೆಮರಹಳ್ಳಿ, ಮುಡುಕತೊರೆ ಮೂಗೂರು, ಅಗರ-ಮಾಂಬಳ್ಳಿ ಗಡಿ ಗೇಟ್, ಟಿ ನರಸೀಪುರ, ಯಳಂದೂರು, ಸತ್ಯಾಗಾಲ ಈ ಸ್ಥಳಗಳಲ್ಲಿ ಉಚಿತವಾಗಿ ಇನಾಕ್ಯುಲೇಷನ್ ಮಾಡುವ ವ್ಯವಸ್ಥೆಯಾಗಿರುವುದು-ಎಂಬುದಾಗಿ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ

ನೆಹರೂರವರಿಂದ ಕುರುಡ ಹುಡುಗನ ಆಲಿಂಗನ

ಮದರಾಸಿನ ಸಮಾಜ ಸೇವಾ ಸಂಘದವರು ಏರ್ಪಡಿಸಿದ್ದ ಪ್ರದರ್ಶನವನ್ನು ಪ್ರಧಾನಿ ನೆಹರೂರವರು ನೋಡುತ್ತಾ ಹೋಗುತ್ತಿದ್ದಾಗ ಒಬ್ಬ ಕುರುಡ ಬಾಲಕನು ಹಿಂದುಗಡೆಯಿಂದ ಪಂಡಿತಜಿ ಎಂದು ಕೂಗಲು, ಅವರು ಹಿಂತಿರುಗಿ ಅವನನ್ನು ಏನೆಂದು ಪ್ರಶ್ನಿಸಲು ಬಾಲಕನು ಅವರು ಅಲ್ಲಿಗೆ ಬಂದುದಕ್ಕಾಗಿ ತನಗೆ ಆದ ಸಂತೋಷವನ್ನು ತಿಳಿಸಲಾಗಿ ನೆಹರೂರವರು ಅವನ ಮಾತಿಗೆ ಏನನ್ನೂ ಹೇಳಲಾರದೆ ಕ್ಷಣಕಾಲ ಮೂಕರಂತೆ ನಿಂತು, ನಂತರ ಅವನನ್ನು ಅಪ್ಪಿಕೊಂಡರೆಂದು ವರದಿಯಾಗಿದೆ

ಹರಿಶ್ಚಂದ್ರ ನಾಟಕ

ಮಂಡಿ ಮೊಹಲ್ಲಾ ಬೆಂಕಿ ನವಾಬರ ಬೀದಿಯಲ್ಲಿರುವ ಕೋಣನ ಕೊಟ್ಟಿಗೆಯಲ್ಲಿ ಈ ರಾತ್ರಿ ೧೦|| ಘಂಟೆಗೆ ಕುಂಬಾರಗೇರಿಯವರು ಹರಿಶ್ಚಂದ್ರ ಎಂಬ ನಾಟಕವನ್ನು ಅಭಿನಯಿಸುವರು

ಕ್ಷಾಮ ಪರಿಹಾರ ನಿಧಿಗೆ ಸಹಾಯ

ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೋ-ಆಪರೇಟಿವ್ ಸೊಸೈಟಿಯವರು ಮುಖ್ಯಮಂತ್ರಿಗಳ ಕ್ಷಾಮ ಪರಿಹಾರ ನಿಧಿಗೆ ೧೦೦ ರೂ ಗಳನ್ನು ಸಹಾಯವಾಗಿ ಕೊಟ್ಟಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಮಾದ [illegible]
[illegible]
[illegible] ಸಂಗೀತ
[illegible] ಚಿತ್ರ ಸಂಗೀತ
[illegible] ಕನ್ನಡ ಭಾಷಣ

SRI GAYATHRI

TALKIES

Daily 2 Shows

From 12 10 52 For 2 Days

20th Century's

ROSE OF CIMARRON

(In Natural Color)

VASANTHA COACHING CLASSES

For L S and S S L C from 1st Nov 52 Expert tuition Moderate Fees

Contact

N. K Anantha Raman, B Sc

1199 Kanthiraja Road,

K M Puram, Mysore

ಬೇಕಾಗಿದೆ

ಸರಸ್ವತಿಪುರಂ ಮತ್ತು ಚಾಮರಾಜಪುರಂಗಳಲ್ಲಿ ನಮ್ಮ ಪತ್ರಿಕೆ ಹಂಚಲು ಒಬ್ಬ ಹುಡುಗ ಬೇಕಾಗಿದೆ

ನ್ಯೂಸ್ ಪೇಪರ್ ಹೌಸ್,

ಸಾಧ್ವಿ ಏಜೆಂಟರು, ಮೈಸೂರು.

Edited, Printed and Published by A. R Nagarajan at Sadhvi Press, D Subbaiah Road, Mysore

ಬರುವ ವರ್ಷ ಚರ್ಚಿಲ್ಲರ ರಾಜೀನಾಮೆಯೇ ?

ಬ್ರಿಟನ್ನಿನ ಪ್ರಧಾನಿ ಚರ್ಚಿಲ್ಲರು ಬರುವ ವರ್ಷ ಅಧಿಕಾರ ತ್ಯಾಗ ಮಾಡುವರೆಂದು ಬರ್ಮದ ಜ್ಯೋತಿಷ್ಯರೊಬ್ಬರು ಭವಿಷ್ಯ ನುಡಿದಿರುವರು

೯ ಗಂಟೆಗಳಲ್ಲಿ ೨೧ ಮೊಟ್ಟೆ ಇಟ್ಟ ಕೋಳಿ

ಇಂಗ್ಲೆಂಡಿನ ಹಳ್ಳಿಯೊಂದರ ಒಂದು ಕೋಳಿಯು ೯ ಗಂಟೆಗಳ ಅವಧಿಯಲ್ಲಿ ೨೧ ಮೊಟ್ಟೆಗಳನ್ನು ಇಟ್ಟು ರಿಕಾರ್ಡ್ ಸ್ಥಾಪಿಸಿರುವುದೆಂದು ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

	ಪಲ್ಲ ಒಂದಕ್ಕೆ ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	
ಹೊಂಗೆ ಬೀಜ	[illegible]	
ಉದ್ದು	[illegible]	
ಅವರೆ	[illegible]	
ಹಲಸಂದೆ	[illegible]	
ಮೆಣಸಿನಕಾಯಿ		
ಸಣ್ಣಕ್ಕಿ	[illegible]	[illegible]
ಮೆಣಸೇ ಹಣ್ಣು	[illegible]	
ಸೀಗೇಕಾಯಿ	[illegible]	
ಬೆಲ್ಲ	[illegible]	
ತೆಂಗಿನಕಾಯಿ ೧೦೦೦	[illegible]	[illegible]

ನಿಧನ

ಮಂಡಿ ಮೊಹಲ್ಲೆಯ ಪ್ರಮುಖ ವರ್ತಕರೂ ಕಾಂಗ್ರೆಸ್ ಭಕ್ತರೂ ಆದ ಶ್ರೀ ಎಸ್ ಗುರುಸಿದ್ದಪ್ಪನವರು ಕಳೆದ ಬುಧವಾರ ಸಂಜೆ ಹೃದಯ ಸ್ತಂಭನದಿಂದ ನಿಧನರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ

ನಗರಾಭಿವೃದ್ಧಿ ಸಮಿತಿ,

ಮೈಸೂರು.

ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.-

ಮೈಸೂರು ಸಿಟಿ ನರಸಿಂಹರಾಜ ಮೊಹಲ್ಲಾ ಸಂಟ್ ಫಿಲೋಮಿನಾ ಹೈಸ್ಕೂಲಿಗೆ ಉತ್ತರ ದಿಕ್ಕಿನಲ್ಲಿ ಹೊಸದಾಗಿ ಕಟ್ಟಿರುವ ಎರಡು ಸಿಮೆಂಟ್ ಬ್ರಿಕ್ಸ್ನಾದರಿ ಮನೆಗಳ ವಿಲೆ ಬಗ್ಗೆ ಆಫೀಸಿನಲ್ಲಿ ದೊರೆಯುವ ನಿಧಾಯಕವಾದ ನಮೂನೆಯಲ್ಲಿ ತಾರೀಖು 24-10-52 ನೇ ಶುಕ್ರವಾರ ಮಧ್ಯಾಹ್ನ 3 ಘಂಟೆ ವರೆವಿಗೆ ಒಂದು ನೂರು ರೂಪಾಯಿ ರೇವಣಿ ಸಮೇತ ಅರ್ಜಿ ಸ್ವೀಕರಿಸಲಾಗುತ್ತದೆ. ಪ್ರತಿ ಮನೆಯ ಬೆಲೆ 3500 ರೂಪಾಯಿಗಳು. ಮನೆ ಮಂಜೂರಾದ 15 ದಿನಗಳಲ್ಲಿ ಪೂರ್ತಾ ಬೆಲೆ ಪಾವತಿ ಮಾಡಿ ಮನೆ ಸ್ವಾಧೀನ ಪಡೆಯಬಹುದು ಹೆಚ್ಚಿನ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

(ರುಜು) ಎಸ್. ಲಿಂಗಣ್ಣ,

ಅಧ್ಯಕ್ಷರು

ಅಬೇದ್ ರವರ ಅಮೋಘ ಹರಾಜು ಮಾರಾಟ

ನಾಳೆ 12-10-52 ಭಾನುವಾರ ಬೆಳಿಗ್ಗೆ 10-30 ಕ್ಕೆ ಸರಿಯಾಗಿ

ಈ ದಿನ ಸಂಜೆ 6 ಘಂಟೆ ವರಗೆ ಸಾಮಾನುಗಳನ್ನು ಪರೀಕ್ಷಿಸಬಹುದು

ಸುಣ್ಣಕ್ಕೆ ಸ್ಪ್ರಿಂಗ್ ಸೋಫಾ ಸೂಟುಗಳು, ಅಲ್ಮೈರಾಗಳು ಮೇಜುಗಳು ಕುರ್ಚಿಗಳು, ಡ್ರೆಸ್ಸಿಂಗ್ ಸ್ಟ್ಯಾಂಡ್ಗಳು, ಡ್ರಾಯರುಗಳ ಬೀರು, ಪೆರಾಂಬುಲೇಟರುಗಳು, ಎಲೆಕ್ಟ್ರಿಕ್ ಸ್ಟವ್ ಮತ್ತು ಸ್ಟಿಂಗುಗಳು, ಸಿಂಗಲ್ ಮತ್ತು ಡಬ್ಬಲ್ ಮಂಚಗಳು, ಕಿಟಕಿಗಳು ಬಾಗಿಲುಗಳು ಮತ್ತು ಚೌಕಟ್ಟುಗಳು, ನಾಮೂರು 6 ಜನಿಸ್ಸಿ ಭತ್ತ ಅಥವಾ ಅಕ್ಕಿಯನ್ನು ಇಡಬಹುದಾದ ದೊಡ್ಡ ಪೀಪಾಯಿಗಳು ಕೈಗಡಿಯಾರಗಳು, ಪಿಂಗಾಣಿ ಸಾಮಾನುಗಳು ಹೂದಾನಿಗಳು ಮತ್ತು ಹಲವಾರು ಉಪಯುಕ್ತ ಸಾಮಾನುಗಳನ್ನೊಳಗೊಂಡ ಫರ್ನಿಚರುಗಳು ಮತ್ತು ಗೃಹೋಪಯುಕ್ತ ಸಾಮಾನುಗಳು

ನೀವು ಎಂದಿಗೂ ಮರೆಯಲಾಗದ ಒಂದು ವ್ಯಾಪಾರ !

ಫೋನ್ ನಂ 792 WEEKLY EDITION ಬಿಡಿಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೨-೧೦-೧೯೫೨ [ಸಂಚಿಕೆ ೯

ಫ್ರೆಂಚ್-ಭಾರತ ಐಕ್ಯತೆ ಪ್ರದರ್ಶಕರಿಗೆ ಗುಂಡೇಟು

...ದ್ದರ್ ಪರಸ್ಪರ ಸಹಾಯ ...ಪುದ ಅಧಿಕಾರ ವರ್ಗ

ಮೈಸೂರು ೧೧

...ಸೂರು ಖದ್ದರ್ ಪರಸ್ಪರ ಸಹಾ... ಸಂಘದ ವಾರ್ಷಿಕ ಸಭೆಯು ಈ... ಬಳಗ್ಗೆ ಶ್ರೀ ಎಂ. ಲಕ್ಷ್ಮೀನಾರಾ... ನಾಯರ ಅಧ್ಯಕ್ಷತೆಯಲ್ಲಿ ನಡೆಯು... ಪ್ರಸಕ್ತ ಸಾಲಿಗೆ ಶ್ರೀ ಎಸ್. ಶ್ರೀ... ಚಾರ್ಯರು ಅಧ್ಯಕ್ಷರಾಗಿಯೂ ಶ್ರೀ... ಎಸ್ ಶಾಸ್ತ್ರಿಯವರು ಉಪಾಧ್ಯ... ಗಿಯೂ ಶ್ರೀ ಆರ್ ಶ್ರೀನಿವಾಸಾ... ರ್ಯರು ಗೌರವ ಕಾರ್ಯದರ್ಶಿಯಾಗಿ ... ಅವಿರೋಧವಾಗಿ ಚುನಾಯಿತರಾ...ರು.

...ರ್ವಕರ್ತಬಗಳ ಸ್ಥಾನಕ್ಕೆ ಅಪೇಕ್ಷಿಸಿ ...ಕೆ ಸಲ್ಲಿಸಿದ್ದ ೧೫ ಜನರ ಪೈಕಿ ಶ್ರೀ ... ಸಿ ಆರ್. ಗೋಪಾಲಶೆಟ್ಟರು, ... ದೊರೆಸ್ವಾಮಯ್ಯಂಗಾರ್ಯರು ... ಪಿ. ವಿ ಪದ್ಮನಾಭರಾಯರು ... ಪಡೆದುದರಿಂದ ಶ್ರೀಗಳಾದ ... ಕೆ ಕುಮಾರಸ್ವಾಮಿ, ಎಂ.ಎಸ್ ... ಮೂರ್ತಿ, ಹೆಚ್ ಎಸ್ ಕೃಷ್ಣ... ಅಯ್ಯಂಗಾರ್, ಕೆ ಎಸ್ ನಾ... ಣಸ್ವಾಮಿ, ಬಿ ಪದ್ಮನಾಭಾಚಾ... ಎಂ ಮಹದೇವಯ್ಯ, ಎಸ್ ವಿನಾ... ...ರಾವ್, ಹೆಚ್ ಎಸ್ ರಾಮಶಾ... ಸಚ್ಚಿದಾನಂದಂ, ಬಿ. ಎಸ್ ...ರಾವ್ ಮತ್ತು ಶ ಸೂರ್ಯನಾರಾ... ರವರು ಚುನಾಯಿತರಾದರು ... ಕ ವರ್ಷಗಳಿಂದಲೂ ಸಂಸ್ಥೆಗೆ ಜ... ...ಗ ಸೇವೆ ಸಲ್ಲಿಸಿರುವ ಶ್ರೀ ಎಂ ... ನಾರಾಯಣರಾಯರಿಗೆ ವಂದನೆಗ... ...ಸಲಾಯಿತು ಕೆ ಜಿ. ಮತ್ತು ...ರವರ ಶ್ರಮವನ್ನಾಗಿ ಸಂತಾಪ ... ಸಲಾಯಿತು

ಗುಂಡಿನಿಂದ ಇಬ್ಬರು ...ವ್ಯಾಗನ್ ಕಳ್ಳರ ಮರಣ

...ತ್ತಾ ಬಳಿ ಕಿತಿಪಾರ ನಿಲ್ದಾಣ... ...ಲ್ವೆ ವ್ಯಾಗನ್ನುಗಳಿಂದ ಪದಾರ್ಥ... ...ಕದಿಯುತ್ತಿದ್ದವರ ಮೇಲೆ ಸೊ... ಪೊಲೀಸರು ಗುಂಡು ಹಾರಿಸಲಾಗಿ, ... ಮಡಿದರೆಂದು ವರದಿಯಾಗಿದೆ. ... ಕಂಭದ ಬಳಿ ಗೂಡ್ಸ್ ರೈಲು ... ಗ, ೪೦ ಜನರು ಆಯುಧ ಮತ್ತು ... ಣಗಳನ್ನು ಹಿಡಿದು ವ್ಯಾಗ... ವನ್ನು ಒಡೆಯಲು ಪ್ರಯತ್ನಿಸಿದ... ರೈಲ್ವೆ ರಕ್ಷಣಾ ಪೊಲೀಸರು ... ಹಾರಿಸಿದರೆಂದೂ ಹೇಳಲಾ... ...ದೆ

ಭಾರತ ಪಾಕಿಸ್ತಾನಗಳು ...ದರ್ಶವಾಗಲೆಂದು ಗ್ರಹಾಂ

...ಶ್ಮೀರದ ಸಮಸ್ಯೆಯನ್ನು ಶಾಂತಿ... ...ವಾಗಿ ಬಗೆಹರಿಸಿ ಭಾರತ ಮತ್ತು ... ...ನಗಳು ಜಗತ್ತಿನ ಉಳಿದ ಎ... ...ಷ್ಟ್ರಗಳಿಗೂ ಆದರ್ಶವಾಗಬೇಕೆಂ... ...ಸಂಸ್ಥೆಯ ಪ್ರತಿನಿಧಿ ಫ್ರಾಂಕ್ ...ಹಾಂ ರವರು ಭದ್ರತಾ ಸಮಿತಿಗೆ ಮ... ...ವರದಿಯಲ್ಲಿ ತಿಳಿಸಿ, ಕಾಶ್ಮೀರದಲ್ಲಿ ... ಮತಗಣನೆ ತೆಗೆದು ಕೊಳ್ಳುವ ... ...ಲ್ಲಿ ನಿಶ್ಶಸ್ತ್ರೀಕರಣ ಮಾಡು... ...ಎರಡು ರಾಷ್ಟ್ರಗಳ ಒಪ್ಪಂದ ...ಲು ತಾವು ನಡೆಸಿದ ಪ್ರಯತ್ನಗ... ಫಲಿಸಿಲ್ಲವೆಂದು ಹೇಳುತ್ತಾರೆ

ಬೊಂಬಾಯಿ ಲಾರಿ ಮುಷ್ಕರದ ಮುಕ್ತಾಯ

ಬೊಂಬಾಯಿ ಲಾರಿಗಳ ಮುಷ್ಕರವು ಹನ್ನೊಂದು ದಿನಗಳ ವರೆಗೆ ನಡೆದು ನೆನ್ನೆ ಮುಕ್ತಾಯವಾಯಿತು ಅಲ್ಲಿನ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ಕೆ ಪಾಟೀಲರ ಭರವಸೆಯ ಮೇಗೆ ಅದು ನಿಂತಿರುವುದಾಗಿ ಆಪರೇಟರುಗಳ ಸಂಘದ ಅಧ್ಯಕ್ಷರು ತಿಳಿಸಿರುತ್ತಾರೆ. ಅವರೆ ಅವರ ಪೈಕಿ ಬೇರೊಂದು ಸಂಗಡದವರು ತೆರಿಗೆಯ ಬಗ್ಗೆ ಪರಿಹಾರವನ್ನು ಕೊಡುವ ಭರವಸೆ ದೊರೆಯುವವರೆಗೂ ಮುಷ್ಕರವು ಮುಂದುವರಿಯುವುದೆಂದು ಹೇಳುತ್ತಾರೆ. ತೆರಿಗೆ ಪರಿಹಾರದ ಬಗ್ಗೆ ಸರ್ಕಾರದವರಿಂದ ಸಾಧ್ಯವಾದ ವಿನಾಯಿತಿಯನ್ನೊದಗಿಸಲು ಪಾಟೀಲರು ಭರವಸೆಯಿತ್ತಿರುವರೆಂದು ಹೇಳಲಾಗಿದೆ

ನ್ಯೂಜಿಲೆಂಡಿಗೆ ಮೈಸೂರಿನ ಆನೆ

ನ್ಯೂಜಿಲೆಂಡಿನ ಮಕ್ಕಳುಗಳ ಸಂತೋಷಾರ್ಥವಾಗಿ ಮೈಸೂರು ಸರ್ಕಾರದವರು ಒಂದು ಆನೆ ಮರಿಯನ್ನು ಕಳುಹಿಸಲಿರುವರು ಅಖಿಲ ಭಾರತ ಮಹಿಳಾ ಸಮ್ಮೇಳನದ ಉಪಾಧ್ಯಕ್ಷಿಣಿ ಶ್ರೀಮತಿ ರಕ್ಷಾಸರಸ್ವತಿರವರು ಆ ದೇಶದಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ಅಲ್ಲಿನ ಮಕ್ಕಳಿಗಾಗಿ ಒಂದು ಆನೆ ಮರಿಯನ್ನು ಕಳುಹಿಸುವಂತೆ ಕೋರಲಾಗಿತ್ತು. ಆನೆ ಮರಿಯನ್ನು ಶ್ರೀಮನ್ ಮಹಾರಾಣಿಯವರು ಒಪ್ಪಿಸುವರು

ಹರಿಜನರೆಲ್ಲರೂ ಬೌದ್ಧರಾಗಲು ಸಲಹೆ

ಭಾರತದ ಹರಿಜನರೆಲ್ಲರೂ ಬೌದ್ಧರಾಗಿ ಪರಿವರ್ತಿತರಾಗುವುದರಿಂದಲೇ ಅವರ ಮೋಕ್ಷವೆಂದು ಅಖಿಲ ಭಾರತ ಸಿನ್ನು ವರ್ಗದ ಫೆಡರೇಷನ್ನಿನ ಕಾರ್ಯದರ್ಶಿ ಪಿ ಎನ್ ರಾಜಭೋಜ್‌ರವರು ತಿಳಿಸಿರುತ್ತಾರೆ. ಇತರ ಮತಗಳಿಗಿಂತಲೂ ಬೌದ್ಧ ಮತಕ್ಕೆ ಸೇರುವುದು ಉತ್ತಮವೆಂದು ಅವರು ಅಭಿಪ್ರಾಯಪಟ್ಟಿರುವರು ಬೌದ್ಧ ಮತವು ಭಾರತದಲ್ಲೇ ಅವತರಿಸಿದುದರಿಂದ ಅವರು ಹಾಗೆ ತಿಳಿಸಿರುತ್ತಾರೆ.

ನೆಹರೂ ಘೋಷಣೆ ಬಗ್ಗೆ ಫ್ರಾನ್ಸಿಗೆ ಅಸಮಾಧಾನ

ಭಾರತದಲ್ಲಿರುವ ವಸಾಹತುಗಳನ್ನು ತ್ಯಜಿಸಿ ಹೋಗಬೇಕೆಂದು ಫ್ರಾನ್ಸಿಗೆ ಪ್ರಧಾನಿ ನೆಹರೂರವರು ಮಾಡಿದ ಸೂಚನೆಯು ಅಲ್ಲಿನವರನ್ನು ಕೆರಳಿಸಿದೆಯೆಂದು ಹೇಳಲಾಗಿದೆ ಸದರಿ ಸ್ವಾಸ್ತ್ಯಗಳು ಭಾರತದಲ್ಲಿ ಐಕ್ಯವಾಗುವ ಅಥವಾ ಬಿಡುವ ಬಗ್ಗೆ ಅಲ್ಲಿನ ಜನಾಭಿಪ್ರಾಯ ಪಡೆಯುವುದೇ ಯುಕ್ತ ಮಾರ್ಗವೆಂದು ಫ್ರೆಂಚರು ಭಾವಿಸಿರುತ್ತಾರೆ ಪುದುಚೇರಿಯಲ್ಲಿ ರಾಷ್ಟ್ರೀಯರ ವಿರುದ್ಧವಾಗಿ ನಡೆಯುತ್ತಿರುವ ಪುಂಡತನವನ್ನು ನೆಹರೂರವರು ಖಂಡಿಸಿ, ಆ ಪ್ರದೇಶವನ್ನು ಭಾರತಕ್ಕೆ ಒಪ್ಪಿಸಿ, ಫ್ರಾನ್ಸು ತ್ಯಜಿಸಬೇಕೆಂದು ತಿಳಿಸಿದ್ದರು.

ಟೆಲಿಫೋನ್ ಉಪಯೋಗದಲ್ಲೂ ವರ್ಣಭೇದ

ದಕ್ಷಿಣ ಆಫ್ರಿಕದ ಪ್ರಮುಖ ನಗರಗಳ ರಸ್ತೆಗಳಲ್ಲಿ ಕರಿಯ ಮತ್ತು ಬಿಳಿಯ ವರ್ಣಗಳ ಜನಾಂಗಗಳವರಿಗೆ ಪ್ರತ್ಯೇಕವಾದ ಟೆಲಿಫೋನ್ ಬೂತುಗಳನ್ನು ಸ್ಥಾಪಿಸಲಾಗುವುದೆಂದೂ, ಒಂದು ವರ್ಗದವರ ಬೂತಿನಲ್ಲಿ ಮತ್ತೊಂದರ ಜನರು ಟೆಲಿಫೋನನ್ನು ಉಪಯೋಗಿಸುವುದು ಅಪರಾಧವಾಗುವುದೆಂದು ಶಾಸನ ಮಾಡಲಾಗುವುದೆಂದೂ 'ಅಲ್ಲಿನ ಅಂಚೆ ಮತ್ತು ತಂತಿ ಇಲಾಖಾ ಸಚಿವರು ತಿಳಿಸಿರುವರು.

ಬ್ಲಿಟ್ಸ್ ಪತ್ರಿಕಾ ಕಛೇರಿಯ ಶೋಧನೆ

ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಚೆಸ್ಟರ್ ಬೌಲ್ಸ್‌ರವರು ಬೊಂಬಾಯಿನ ಬ್ಲಿಟ್ಸ್ ಎಂಬ ಇಂಗ್ಲಿಷ್ ವಾರಪತ್ರಿಕೆಗೆ ಬರೆದರೆಂದು ಹೇಳಿ, ಅಲ್ಲಿನ ಮತ್ತೊಂದು ಪತ್ರಿಕೆ ಕರೆಂಟ್ ಎಂಬುದು ಪ್ರಕಟಿಸಿರುವ "ಪತ್ರ" ವು ನಿಜವಲ್ಲವೆಂದೂ, ಫೋರ್ಜರಿಯೆಂದೂ ರಾಯಭಾರಿಗಳು ಭಾರತ ಸರ್ಕಾರಕ್ಕೆ ತಿಳಿಸಿದ ಸಂಬಂಧವಾಗಿ ಬೊಂಬಾಯಿಯ ಸಿ ಐ ಡಿ ಯವರು ಬ್ಲಿಟ್ಸ್ ಪತ್ರಿಕಾ ಕಛೇರಿಯನ್ನೂ ಸಂಪಾದಕ ಕರಂಜಿಯಾರವರ ಮನೆಯನ್ನೂ ಶೋಧಿಸಿ ಟೈಪ್‌ರೈಟರುಗಳನ್ನು ತೆಗೆದುಕೊಂಡು ಹೋಗಿರುವರೆಂದು ವರದಿಯಾಗಿದೆ.

ಫ್ರೆಂಚ್-ಭಾರತದ ಐಕ್ಯತೆ ಪ್ರದರ್ಶಕರ ಮೇಲೆ ಗುಂಡು

ಫ್ರೆಂಚ್ ಸ್ವಾಸ್ತ್ಯಗಳು ಭಾರತದಲ್ಲಿ ಐಕ್ಯವಾಗಬೇಕೆಂದು ಪ್ರಚಾರ ಮಾಡುವ ಸಲುವಾಗಿ ಮುಲ್ಲೆಪೇಟೆಯ ಎಂಬ ಫ್ರೆಂಚ್ ಭಾರತದ ಊರಿಗೆ ಮೊನ್ನೆ ಮೆರವಣಿಗೆ ಹೋದವರ ಮೇಲೆ ಅಲ್ಲಿನ ಪೊಲೀಸು ಸಬ್ ಇನ್ಸ್‌ಪೆಕ್ಟರು ಮತ್ತು ಇತರ ಪುಂಡರು ಎರಡು ರೌಂಡು ಗುಂಡು ಹಾರಿಸಿದರೆಂದೂ, ಅವು ನೆಲಕ್ಕೆ ತಗುಲಿದುವೆಂದೂ ವರದಿಯಾಗಿದೆ ಪ್ರದರ್ಶಕರು ವಾಪಸು ಭಾರತದ ಎಲ್ಲೆಯೊಳಗೆ ಬಂದರೆಂದೂ, ಎರಡು ಕಡೆಗಳವರೂ ಕಲ್ಲೆಸೆದು ಬದ್ದು ಅನೇಕರಿಗೆ ಗಾಯಗಳಾಗಿವೆಯೆಂದೂ ಹೇಳಲಾಗಿದೆ ಫ್ರೆಂಚ್ ಭಾರತದ ಪೊಲೀಸರು ಐಕ್ಯತಾವಾದಿಗಳನ್ನು ಹಿಡಿದು ತರಬೇಕೆಂದು ಪುಂಡರನ್ನು ಪ್ರೇರಿಸಿ ಅವರಿಗೆ ದುಡ್ಡು ಕೊಡುತ್ತಿರುವರೆಂದೂ ತಿಳಿದು ಬಂದಿದೆ

ಸರ್ಕಾರಿ ವೈದ್ಯರಿಂದ ಖಾಸಗಿ ಚಿಕಿತ್ಸೆಗೆ ನಿಷೇಧ

ಸರ್ಕಾರಿ ಕೆಲಸದಲ್ಲಿರುವ ವೈದ್ಯರು ಖಾಸಗಿಯಾಗಿ ವೈದ್ಯ ವೃತ್ತಿ ನಡೆಸುವುದರಿಂದ ಆಸ್ಪತ್ರೆಗಳಲ್ಲಿನ ಕೆಲಸವು ದಕ್ಷತೆಯಿಂದ ನಡೆಯಲಾರದೆಂದೂ, ಆದುದರಿಂದ ಇನ್ನು ಮುಂದೆ ಅಂತಹವರು ಖಾಸಗಿ ವ್ಯವಹಾರ ನಡೆಸದಂತೆ ನಿಷೇಧಿಸಲಾಗುವುದೆಂದೂ ಕೇಂದ್ರ ಸರ್ಕಾರದ ಆರೋಗ್ಯ ಸಚಿವ ರಾಜಕುಮಾರಿ ಅಮೃತ ಕೌರ್‌ರವರು ತಿಳಿಸಿರುವರು ವೈದ್ಯರ ಸಂಬಳವನ್ನು ಹೆಚ್ಚಿಸುವಂತೆ ತಾವು ಸರ್ಕಾರಕ್ಕೆ ಸಲಹೆ ಮಾಡಿರುವುದಾಗಿಯೂ ಅವರು ಹೇಳಿರುವರು

ಕಾಶ್ಮೀರದ ಬಗ್ಗೆ ಗ್ರಹಾಂ ರವರ ಪುನಸ್ಸಂಧಾನ

ಕಾಶ್ಮೀರದ ಬಗ್ಗೆ ತಮ್ಮ ವರದಿಯನ್ನು ಭದ್ರತಾ ಸಮಿತಿಗೆ ಒಪ್ಪಿಸಿದ ಫ್ರಾಂಕ್‌ಗ್ರಹಾಂರವರು ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇರುವ ಭಿನ್ನಾಭಿಪ್ರಾಯವು ಅಲ್ಪವಾದುದರಿಂದ ವಿಕ್ಕಟ್ಟನ್ನು ಬಗೆಹರಿಸಲು ತಮಗೆ ಮತ್ತೊಂದು ಅವಕಾಶವೀಯಬೇಕೆಂದು ಸೂಚಿಸಿರುವರೆಂದು ಹೇಳಲಾಗಿದೆ

ಉಡುಪಿಯ ಭಂಡಾರಕೇರಿ ಸ್ವಾಮಿಗಳವರ ಉಪನ್ಯಾಸ

ಮೈಸೂರು ೧೦

ಉಡುಪಿಯ ಭಂಡಾರಕೇರಿ ಮಠದ ಗುರುಗಳಾದ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಶ್ರೀ ಗೋಪಾಲಾಚಾರ್ಯರ ಗೋವಿಂದ ಛತ್ರಾಲಯದಲ್ಲಿ ಈ ಸಂಜೆ ೬-೩೦ಕ್ಕೆ ಗೀತಾ ಧರ್ಮ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಸರ್ವರಿಗೂ ಸ್ವಾಗತವುಂಟು

○ ಭಾರತ ಮತ್ತು ಪಾಕೀಸ್ತಾನಗಳ ನಡುವೆ ಜನರ ಓಡಾಟದ ಬಗ್ಗೆ ಏರ್ಪಡಿಸಲಾದ ರಹದಾರಿ ವ್ಯವಸ್ಥೆಯು ಜಾರಿಗೆ ಬರಲು ಇನ್ನೂ ಒಂದು ತಿಂಗಳ ಅವಧಿ ಬೇಕೆಂದು ಪಾಕೀಸ್ತಾನ ಸರ್ಕಾರದವರು ಭಾರತವನ್ನು ಕೋರಿರುವರೆಂದು ವರದಿಯಾಗಿದೆ

ವಾರ ಭವಿಷ್ಯ

ತಾ|| ೧೩-೧೦ ೫೨ ರಿಂದ ೧೯ ೧೦-೫೨ ರವರೆಗೆ

ಮೇಷ.– ಆರೋಗ್ಯ ಉತ್ತಮ. ಕೈಗೊಂಡ ಕಾರ್ಯಗಳಲ್ಲಿ ಜಯ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ವ್ಯವಹಾರಗಳಲ್ಲಿ ಯಶಸ್ಸು ತಾ|| ೧೨, ೧೩ ಗಡಿಬಿಡಿ, ಖರ್ಚು

ವೃಷಭ – ಆರೋಗ್ಯ ಚೆನ್ನಾಗಿರುವುದಿಲ್ಲ ಅಪಘಾತ ಭಯ. ಪ್ರವಾಸ ಬೇಡಿ ಅಧಿಕ ಖರ್ಚು. ವ್ಯವಹಾರದಲ್ಲಿ ಅಭಿವೃದ್ಧಿ ತಾ|| ೧೪, ೧೫ ಕಳುವಾಗುವ ಸಂಭವ, ಚಿಂತೆ

ಮಿಥುನ – ಆರೋಗ್ಯ ಉತ್ತಮ ಕುಟುಂಬದಲ್ಲಿ ಕಲಹ ವ್ಯವಹಾರಗಳಲ್ಲಿ ಮೋಸ ಸಂಭವ ಆರ್ಥಿಕ ಮುಗ್ಗಟ್ಟು ಹೆಚ್ಚುವುದು ತಾ|| ೧೪, ೧೫ ಪ್ರವಾಸ ಸಂಭವ, ಮಿತ್ರರ ಸಹಾಯ

ಕರ್ಕ – ಆರೋಗ್ಯ ಉತ್ತಮವಾಗಿರುವುದು ಎಮಂಡಳಿಗಳ ಸೋಲು ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಆರ್ಥಿಕ ಸ್ಥಿತಿ ಉತ್ತಮ. ತಾ|| ೧೪, ೧೫ ಚೋಕ್ಕ ಭೋಜನ.

ಸಿಂಹ – ಶರೀರ ಪ್ರಕೃತಿ ಚೆನ್ನಾಗಿರುವುದು ಅಧಿಕ ಖರ್ಚು ವಿಷಾದಕರ ಘಟನೆಗಳು ಜರುಗುವುವು ತಾ|| ೧೧, ೧೨ ಅತಿಥಿಗಳ ಆಗಮನ, ಖರ್ಚು

ಕನ್ಯಾ ಆರೋಗ್ಯ ಚೆನ್ನಾಗಿರದು ವೃಥಾ ಕಲಹ ಸಂಭವ ವ್ಯವಹಾರಗಳಲ್ಲಿ ತೊಂದರೆ ತಾ|| ೧೪, ೧೫ ಕೆಟ್ಟ ಸುದ್ದಿ, ಅಗ್ನಿ ಭಯ

ತುಲ ಆರೋಗ್ಯ ಚೆನ್ನಾಗಿರುವುದಿಲ್ಲ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು ತಾ|| ೧೪, ೧೫, ಮಿತ್ರರ ಉತ್ತೇಜನ

ವೃಶ್ಚಿಕ – ಆರೋಗ್ಯ ಉತ್ತಮ ವಿಚಿತ್ರ ಘಟನೆಗಳು ಜರುಗುವುವು ಧಾರ್ಮಿಕ ಕಾರ್ಯಗಳು ನಡೆಯುವುವು ತಾ|| ೧೨, ೧೩, ಪ್ರವಾಸ, ಸುವಾರ್ತೆ

ಧನು.– ಶರೀರ ಪ್ರಕೃತಿ ಸಮರ್ಪಕವಿಲ್ಲ ಕೈಗೊಂಡ ಕಾರ್ಯಗಳಿಗೆ ಅಭಿವೃದ್ಧಿ ನೌಕರಿಯಲ್ಲಿ ಜವಾಬ್ದಾರಿ ಹೆಚ್ಚು ವ್ಯವಹಾರಗಳಲ್ಲಿ ತೊಂದರೆ ತಾ|| ೧೨ ೧೩. ಅಪಘಾತ ಭಯ, ಚಿಂತೆ

ಮಕರ – ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಮುಗ್ಗಟ್ಟು ಹೆಚ್ಚುವುದು ವ್ಯಾಪಾರಾದಿಗಳ ತೊಂದರೆ ಪ್ರವಾಸದಲ್ಲಿ ಅಭಿವೃದ್ಧಿ. ತಾ|| ೧೪, ೧೫ ಕಾಲಹರಣ, ಅವಮಾನ

ಕುಂಭ:– ಆರೋಗ್ಯ ಉತ್ತಮ ಕೈಗೊಂಡ ಕಾರ್ಯದಲ್ಲಿ ಜಯ ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು ಆಪ್ತರ ಸಹವಾಸ ತಾ|| ೧೭, ೧೮ ಸುವಾರ್ತೆ, ಚೊಕ್ಕ ಭೋಜನ

ಮೀನ.– ಆರೋಗ್ಯ ಚೆನ್ನಾಗಿರುವುದು ಸಜ್ಜನರ ಸಹವಾಸ. ವ್ಯವಹಾರಗಳಲ್ಲಿ ಜಯ ಆರ್ಥಿಕ ಸ್ಥಿತಿ ಉತ್ತಮ ಪ್ರವಾಸ ಸುಖಕರವಾಗಿರುವುದು. ತಾ|| ೧೧, ೧೨, ೧೩ ಧನಾಗಮನ

Edited, Printed and Published by A R Nagarajan at Sadhvi Press, D Subbiah Road, Mysore.

ಕಾಂಗ್ರೆಸ್ಸಿನ ಕಾರ್ಯಕರ್ತರೆಂದರೆ ಯಾರು ?

ಕಾಂಗ್ರೆಸ್ಸಿನ ಕಾರ್ಯಕರ್ತರು ಯಾರು, ಯಾರಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದುವರೆಗೂ ತಮಗೆ ಸಾಧ್ಯವಾಗಿರುವುದಿಲ್ಲವೆಂದು ನೆಹರೂರವರು ಹೇಳಿರುತ್ತಾರೆ. ಕಾಂಗ್ರೆಸ್ ಕೆಲಸಗಾರರ ಸಭೆಗಳೆಂದು ಕರೆಯಲ್ಪಡುವ ಸ್ಥಳಗಳಿಗೆ ಸಾವಿರಾರು ಜನರು ಬರುತ್ತಿರುವುದಾದರೂ, ಕೆಲಸವು ಮಾತ್ರ ಅಷ್ಟಾಗಿ ನಡೆದಿರುವುದಿಲ್ಲವೆಂದು ಅವರು ತಿಳಿಸಿರುವರು

ಫ್ರೆಂಚ್ ಸರಕಾರಕ್ಕೆ ನೇರವಾಗಿ ಭಾರತದ ಪ್ರತಿಭಟನೆ

ಭಾರತದಲ್ಲಿರುವ ಫ್ರೆಂಚರ ವಸಾಹತುಗಳಲ್ಲಿ ರಾಷ್ಟ್ರೀಯ ವಾದಿಗಳ ಮೇಲೆ ಹಿಂಸಾಕೃತ್ಯಗಳು ಯಥೇಚ್ಛವಾಗಿ ನಡೆಯುತ್ತಿರುವುದರ ಬಗ್ಗೆ ಭಾರತ ಸರ್ಕಾರದವರು ಫ್ರೆಂಚ್ ಸರಕಾರಕ್ಕೆ ನೇರವಾಗಿ ಪ್ರತಿಭಟನಾ ಪತ್ರವನ್ನು ಕಳುಹಿಸಿರುತ್ತಾರೆ. ಸಾಮಾನ್ಯವಾಗಿ ಭಾರತ ಸರ್ಕಾರದವರು ಈ ವಿಷಯಗಳ ಬಗ್ಗೆ ಪುದುಚೇರಿಯಲ್ಲಿರುವ ಭಾರತದ ಉಪರಾಯಭಾರಿಯ ಮೂಲಕ ಅದನ್ನು ಕಳುಹಿಸುತ್ತಿದ್ದರೆಂದು ಹೇಳಲಾಗಿದೆ

ಕ್ವಿಲಾನ್-ಎರ್ನಾಕುಲಂ ರೈಲಿಗೆ ೧ ಕೋಟಿ ರೂ.

ಕ್ವಿಲಾನ್‌ನಿಂದ ಎರ್ನಾಕುಲಂವರೆಗೆ ರೈಲು ಸಂಪರ್ಕವನ್ನು ಏರ್ಪಡಿಸಲು ಕೇಂದ್ರ ಸರ್ಕಾರದವರು ೧ ಕೋಟಿ ರೂ ಗಳನ್ನು ಮಂಜೂರು ಮಾಡಿರುತ್ತಾರೆ ಬರುವ ತಿಂಗಳು ೩ನೇ ವಾರದಲ್ಲಿ ಕೆಲಸವು ಆರಂಭವಾಗುವುದೆಂದು ಗೊತ್ತಾಗಿದೆ

ಕಾಶ್ಮೀರದ ಬಗ್ಗೆ ಶಾಂತ ನಡವಳಿಕೆಗಾಗಿ ಪ್ರತಿಜ್ಞೆ

ಪೀಕಿಂಗಿನಲ್ಲಿ ನಡೆದ ಅಖಿಲ ಏಷ್ಯಾ ಶಾಂತಿ ಸಮ್ಮೇಳನಕ್ಕೆ ತೆರಳಿದ್ದ ಭಾರತ ಮತ್ತು ಪಾಕಿಸ್ತಾನದ ಪ್ರತಿನಿಧಿಗಳು ಕಾಶ್ಮೀರದ ಸಮಸ್ಯೆಯ ಪರಿಹಾರದ ಬಗ್ಗೆ ನ್ಯಾಯ ಮತ್ತು ಶಾಂತಿಯುತವಾದ ನಡವಳಿಕೆಯನ್ನೇ ನಡಸುವುದಾಗಿ ಪ್ರತಿಜ್ಞೆ ಮಾಡಿರುವರೆಂದ ಹೊಸ ಚೀಣಾ ವಾರ್ತಾ ಸಂಸ್ಥೆಯು ತಿಳಿಸಿರುತ್ತದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಬಿ ವಿ ಪಡಗೋರ್ ರ ಕರ್ನಾಟಕ ಸಂಗೀತ. ಮಧ್ಯಾಹ್ನ ೧ ೪೦ ನಾಗಸ್ವರ. ೩ ಚಿತ್ರ ಸಂಗೀತ ೩ ೧೫ ಆಕೆ ಸ್ಕೂ ಸಂಜೆ ೫ ೩೦ ಮತ್ತು ೮ ವಿ ರಾಮಯ್ಯ ಪಿಟೀಲು ೬ ೧೦ ಗಾನ ವಿಹಾರ ೭ ಟಿ ವಿ ರಾಜಗೋಪಾಲರ ಕರ್ನಾಟಕ ಸಂಗೀತ ೭ ೩೦ ಸಂಜೆ ಮಂಗೇಶರಾಯರ ಕುರಿತು ಭಾಷಣ ೮ ೩೦ ಮತ್ತು ೯ ೩೦ ಜಯ ಮತ್ತು ಭಾಗ್ಯ ಸಂಗೀತ ೯ ೧೫ ಮೈಸೂರ ತೋಟಗಳು– ಇಂಗ್ಲಿಷ್ ಭಾಷಣ

ರಾಜಕಮಲ್, ಮೈಸೂರು

10 10-52 ರಿಂದ 8 ನೇ ಕಡೇ ವಾರ

ಶ್ರೀನಿವಾಸ ಕಲ್ಯಾಣ

ಪಾತ್ರ ಅನಿವಾರ್ಬಾಯಿ ಕರ್ನಾಟಕ

ಪ್ರತಿಮಾದೇವಿ, ಹರಿಣಿ, ಜಯಶ್ರೀ,

ಎ ವಿ ಶ್ರೀನಿವಾಸರಾವ್, ವಿಮಲಾನಂದ

ದಾಸ್, ವೀರಭದ್ರಪ್ಪ ಕೊಟ್ಟೂರು ಬಸಪ್ಪ,

ಮರಿರಾವ್, ಮಹಾಬಲರಾವ್

ರಾಜಾಸ್ತಾನದ ಮಂತ್ರಿ ಮಂಡಲದಲ್ಲಿ ಅವಿಶ್ವಾಸ

ರಾಜಾಸ್ತಾನದ ಮುಖ್ಯ ಮಂತ್ರಿ ತಿಕ್ಕಾರಾಂ ಪಲಿವಾಲರ ಮಂತ್ರಿಮಂಡಲದಲ್ಲಿ ಅವಿಶ್ವಾಸವನ್ನು ಸೂಚಿಸಲು ಅಲ್ಲಿನ ಶಾಸನ ಸಭೆಯ ವಿರೋಧ ಪಕ್ಷದ ಉಪನಾಯಕರಾದ ಇಂದ್ರನಾಥ್ ಮೋದಿಯವರು ತಂದ ನಿರ್ಣಯಕ್ಕೆ ಸಭಾಧ್ಯಕ್ಷರು ಅನುಮತಿಯಿತ್ತಿರುತ್ತಾರೆ

ಅದಕ್ಕೆ ಮುಂಚಿತವಾಗಿ ಮುಖ್ಯಮಂತ್ರಿ ಪಲಿವಾಲ್‌ರವರೂ ಕಾಂಗ್ರೆಸ್ ಪಕ್ಷದ ಹೊಸ ನಾಯಕ ಜೈನಾರಾಯಣ್ ವ್ಯಾಸ್‌ರವರೂ, ಮಂತ್ರಿಮಂಡಲವು ಈಗಾಗಲೇ ರಾಜೀನಾಮೆಯನ್ನು ಸಲ್ಲಿಸಿರುವುದಾಗಿಯೂ, ಅವಿಶ್ವಾಸ ನಿರ್ಣಯದ ಅವಶ್ಯಕತೆಯೇ ಇರುವುದಿಲ್ಲವೆಂದೂ ತಿಳಿಸಿದುವರು ಕಾಂಗ್ರೆಸ್ ಪಕ್ಷದಲ ಮಂದಿ ಸದಸ್ಯರು ಬೇರೆಯಾಗಿ ಹೊಸ ಪ್ರಜಾ ಪಕ್ಷವನ್ನು ರಚಿಸಿಕೊಂಡಿರುತ್ತಾರೆ

ತಿರುಕನ ಬಳಿ ೧೪ ಲಕ್ಷ ರೂ. ಗಳು !

ಸಿಸಿಲಿಯ ಬುದ್ಧಿ ಭ್ರಮಣೆ ಹಿಡಿದಿದ್ದ ಆಭರಣಗಳ ವ್ಯಾಪಾರಿಯೊಬ್ಬನು ತಿರುಕನಂತೆ ಆ ಊರಿನ ಬೀದಿಗಳಲ್ಲಿ ಅಲೆಯುತ್ತಿದ್ದು ಅವನನ್ನು ಪೊಲೀಸರು ಆಸ್ಪತ್ರೆಗೆ ಸೇರಿಸಿದಾಗ ಅಲ್ಲಿ ಮೃತಿಹೊಂದಿದನೆಂದೂ, ಆತನ ಬಳಿ ೩ ಲಕ್ಷ ರೂ ಬೆಲೆ ಬಾಳುವ ರತ್ನಗಳೂ, ಬ್ಯಾಂಕುಗಳ [illegible] ಲಕ್ಷ ರೂ ಗಳ ಬಾಂಡುಗಳೂ, [illegible] ಟ್ಟವೆಂದೂ ಹೇಳಲಾಗಿದೆ

ಮೋಟಾರು ಅಪಘಾತದಲ್ಲಿ ಲಾರ್ಡ್ ಇರ್ವಿನ್ನರಿಗೆ ಗಾಯ

ಭಾರತದ ಮಾಜಿ ವೈಸರಾಯರಾದ ಲಾರ್ಡ್ ಇರ್ವಿನ್ (ಇಂಗ್ಲೆಂಡಿನ ಮಾಜಿ [illegible] ಕಾರ್ಯದರ್ಶಿ ಲಾರ್ಡ್ [illegible] ಲಿಫಾಕ್ಸ್)ರವರು ಕಳೆದ ಗುರುವಾರ [illegible] ರ್ಕ್‌ಷೈರಿನಲ್ಲಿ ತಮ್ಮ ಮೋಟಾರಿನಲ್ಲಿ ಕುಳಿತು ಹೋಗುತ್ತಿದ್ದಾಗ ಅದು ಇನ್ನೊಂದು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಗಾಯಗೊಂಡರೆಂದು ವರದಿಯಾಗಿದೆ

ಶಿಕ್ಷಣವು ಸರ್ಕಾರಿ ನೌಕರಿಗಾಗಲ್ಲವೆಂದು ನೆಹರೂ ಹೇಳಿಕೆ

ಟೆಕ್ನಿಕಲ್ ಶಾಲೆಗಳಲ್ಲಿ ದೊರೆಯುವ ಶಿಕ್ಷಣವು ಸರ್ಕಾರಿ ನೌಕರಿಯನ್ನು ಒದಗಿಸುವ ಭರವಸೆಯಲ್ಲವೆಂದು ಪ್ರಧಾನಿ ನೆಹರೂರವರು ಅಭಿಪ್ರಾಯಪಟ್ಟು, ನೌಕರಿಯು ಮುಖ್ಯವಾದ ವಿಷಯವಲ್ಲವೆಂದೂ, ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಲು ಶಿಕ್ಷಣವು ಮಾರ್ಗ ತೋರುವುದೆಂದೂ ಹೇಳಿರುತ್ತಾರೆ.

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ಪೂರ್ವ ಬಂಗಾಳದಿಂದ ಅನೇಕ ಹಿಂದುಗಳನಿರ್ಗಮನ

ಪೂರ್ವ ಬಂಗಾಳದ ಮುಸಲ್ಮಾನೇತರರು ಭಾರತಕ್ಕೆ ವಲಸೆ ಬರುವ ಸಂಖ್ಯೆಯು ಕಳೆದ ೧ನೇ ತಾ|| ನಿಂದ ವಿಪರೀತವಾಗಿರುವುದರಿಂದೂ, ಈ ಬಗ್ಗೆ ಭಾರತ ಸರ್ಕಾರದವರು ಆತಂಕಪಡುತ್ತಿರುವರೆಂದೂ ವರದಿಯಾಗಿದೆ ಈ ತಿಂಗಳು ೧೫ನೇ ತಾ|| ನಿಂದ ಪಾಕಿಸ್ತಾನ ಮತ್ತು ಭಾರತಗಳ ನಡುವೆ ಸಂಚಾರಕ್ಕಾಗಿ ರಹದಾರಿ ಪದ್ಧತಿಯು ಜಾರಿಗೆ ಬರಬೇಕಾಗಿದ್ದು, ಪಾಕಿಸ್ತಾನದ ಪ್ರಧಾನಿಯವರು ಆ ಪದ್ಧತಿಯನ್ನು ಈಗಲೇ ಜಾರಿಗೆ ತರುವುದಿಲ್ಲವೆಂದು ತಿಳಿಸಿರುವುದರಿಂದಲೂ ಇನ್ನು ಮುಂದೆ ಭಾರತಕ್ಕೆ ಹಿಂದುಗಳು ವಾಪಸು ಹೋಗಲು ಸಾಧ್ಯವೇ ಇಲ್ಲವೆಂದು ಅಲ್ಲಿನ ಮುಸಲ್ಮಾನರು ಹೆದರಿಸುತ್ತಿರುವುದರಿಂದಲೂ ಹಿಂದುಗಳು ಯಥೇಚ್ಛವಾಗಿ ಭಾರತಕ್ಕೆ ಬರುತ್ತಿರುವರೆಂದು ಹೇಳಲಾಗಿದೆ ಈಗಾಗಲೇ ಅಲ್ಪಸಂಖ್ಯಾತರ ಮೇಲೆ ಅನೇಕ ಅತ್ಯಾಚಾರಗಳೂ, ಡಕಾಯಿತಿಗಳೂ, ಸ್ತ್ರೀಯರ ಮಾನಾಪಹರಣವೂ ಒತ್ತಾಯವಾಗಿ ಮತಾಂತರವೂ ನಡೆಯುತ್ತಿವೆಯೆಂದು ತಿಳಿದುಬಂದಿದೆ

ಬಿ. ಸಂಸ್ಥಾನಗಳಲ್ಲಿ ಸಲಹಗಾರರ ನೇಮಕ ರದ್ದು ?

ಬಿ ಸಂಸ್ಥಾನಗಳಲ್ಲಿ ಸಲಹಗಾರರ ಮತ್ತು ಪ್ರಾದೇಶಿಕ ಕಮಿಷನರುಗಳ ಕಛೇರಿಗಳನ್ನು ಮುಚ್ಚಲು ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ. ಈ ಸಂಬಂಧವಾಗಿ ಸೂಚನೆಯೊಂದು ಬಂದಿರುತ್ತದೆ

ಕನ್ನಡ ನಾಡ ಹಬ್ಬ

ನಂಜನಗೂಡಿನ ಕರ್ನಾಟಕ ಸಂಘದವರು ಇದೇ ೧೭, ೧೮ ಮತ್ತು ೧೯ನೇ ತಾ|| ಗಳಲ್ಲಿ ಕನ್ನಡ ನಾಡಹಬ್ಬವನ್ನು ನಡೆಸಲಿರುವರು ಉಪನ್ಯಾಸ, ವಾಚನ, ಸಂಗೀತ, ನಾಟಕ ಮುಂತಾದ ಕಾರ್ಯಕ್ರಮಗಳು ಏರ್ಪಾಡಾಗಿವೆ ಅದರ ಅಂಗವಾಗಿ ಕಾವ್ಯವಾಚನ ಕಂಠಪಾಠ, ಚರ್ಚೆ, ಸಂಗೀತ ವಿವಿಧ ವೇಷ, ಹೊಳಪು, ರಂಗವಲ್ಲಿ ಹಸೆ ಮುಂತಾದ ಸ್ಪರ್ಧೆಗಳು ನಡೆಯುವುವು ಅಖಿಲ ಕರ್ನಾಟಕ ವೃತ್ತಪತ್ರಿಕೆಗಳು, ಗದ್ಯ ಸಾಹಿತ್ಯ, ವಯಸ್ಕರ ಸಾಹಿತ್ಯ ಪ್ರದರ್ಶನಗಳೂ ಅಪೂರ್ವ ವಸ್ತುಗಳ ಸಂಗ್ರಹಣೆಗಳೂ, ಮೈಸೂರು ವನಿತಾ ಸದನದವರಿಂದ ಕಸೂತಿ ಕೆಲಸ ಇವುಗಳ ಪ್ರದರ್ಶನಗಳೂ ನಡೆಯುವುವು

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಗೂರ್ಲು, ಉಬ್ಬಸ, ಪರಿಣಾಮಶೂಲೆ ಮತ್ತು (TONSIL) ಗಲಾಯಕಕ್ಕೆ ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಸರ್ಟಿಫಿಕೇಟು ಮತ್ತು ಬಂಗಾರದ ಮೆಡಲುಗಳನ್ನು ಕೊಟ್ಟಿರುತ್ತಾರೆ ಬೆಲೆ ರೂ 2 8 0

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ,

ದಿವಾನರ ರಸ್ತೆ, ಮೈಸೂರು

[illegible] || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೫-೧೦-೧೯೫೧ [ಸಂಚಿಕೆ ೬೩

ಅರಮನೆ ಕಛೇರಿಯಲ್ಲಿ ೩,೪೦೦ ರೂ. ಕಳುವು

ಉಡುಪಿ ಭಂಡಾರಕೇರಿ ಸ್ವಾಮಿಗಳ ಭಾಷಣ

ಮೈಸೂರು ೧೩

ಉಡುಪಿಯ ಭಂಡಾರ ಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀ ಪಾದಂಗಳವರು ಈ ರಾತ್ರಿ ೭|| ಘಂಟೆಗೆ ದಿವಾನರ ರಸ್ತೆಯ ಗೋವಿಂದ ಭಕ್ತಾಲಯದಲ್ಲಿ "ಗೀತಾ ಧರ್ಮ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವುಂಟು.

ಮೈದುನನು ಅತ್ತಿಗೆ ಕಾಲು ತುಂಡರಿಸಿದ ಪ್ರಸಂಗ

ನಂಜನಗೂಡಿನ ಬಳಿ ಪದಿನಾಲು ಗ್ರಾಮದ ಹತ್ತಿರವಿರುವ ಮೋಳೆ ಎಂಬ ಹಳ್ಳಿಯಲ್ಲಿ ಮಾದಶೆಟ್ಟಿ ಎಂಬುವನು ತನ್ನ ಅತ್ತಿಗೆ ಚನ್ನಮ್ಮ ಎಂಬಾಕೆಯ ಒಂದು ಕಾಲನ್ನು ಕಡಿದು ತುಂಡುತುಂಡು ಮಾಡಿ, ಇನ್ನೊಂದು ಕಾಲನ್ನು ಸ್ವಲ್ಪ ಕತ್ತರಿಸಿದ ಪ್ರಸಂಗವು ವರದಿಯಾಗಿದೆ. ನಂಜನಗೂಡಿನ ಪೋಲೀಸರು ಗ್ರಾಮಕ್ಕೆ ಹೋಗಿ ಮಾದಶೆಟ್ಟಿಯನ್ನು ಬಂಧಿಸಿ, ಚನ್ನಮ್ಮನನ್ನು ಆಸ್ಪತ್ರೆಗೆ ಸೇರಿಸಿ ಹಿಂದಿನ ತನಿಖೆ ನಡೆಸುತ್ತಿರುವರೆಂದು ತಿಳಿಯಲಾಗಿದೆ.

ಕೊರಿಯಾ ಯುದ್ಧ ಮುಕ್ತಾಯಕ್ಕೆ ಅಮೆರಿಕದ ಹೊಸ ನಿರ್ಣಯ

ನಾಳೆ ದಿನ ಸಮಾವೇಶಗೊಳ್ಳಲಿರುವ ರಾಷ್ಟ್ರ ಸಂಸ್ಥೆಯ ಜನರಲ್ ಅಸೆಂಬ್ಲಿಯ ಮುಂದೆ ಕೊರಿಯಾ ಯುದ್ಧವನ್ನು ಇನ್ನು ೩೦ ದಿನಗಳಲ್ಲಿ ಪರಿಸಮಾಪ್ತಿಗೊಳಿಸುವ ಬಗ್ಗೆ ಒಂದು ನಿರ್ಣಯವನ್ನು ಅಮೆರಿಕವು ಮಂಡಿಸಲಿರುವುದೆಂದೂ ಭಾರತ ಮೊದಲಾದ ತಟಸ್ಥ ರಾಷ್ಟ್ರಗಳ ಬೆಂಬಲ ಪಡೆಯುವುದೇ ಇದರ ಗುರಿಯೆಂದೂ ಹೇಳಲಾಗಿದೆ. ಈ ನಿರ್ದಿಷ್ಟ ಕಾಲಾವಧಿಯಲ್ಲಿ ಮತ್ತೊಂದು ನಿರ್ಣಯವನ್ನು ತಂದು ಅಮೆರಿಕವು ಚೀಣದ ಮೇಲೆ ಪೂರ್ಣವಾದ ನೌಕಾ ದಿಗ್ಬಂಧನವನ್ನು ವಿಧಿಸಿ ಅಲ್ಲಿನ ಆಮದು ರಫ್ತು ವ್ಯಾಪಾರವನ್ನೂ ತಡೆಗಟ್ಟಬೇಕೆಂದು ಸೂಚಿಸುವುದಾಗಿಯೂ ಹೇಳಲಾಗಿದೆ. ಚೀಣದ ಮೇಲೆ ಆರ್ಥಿಕ ನಿರ್ಬಂಧವನ್ನೂ ವಿಧಿಸುವ ಬಗ್ಗೆ ಈ ಹಿಂದೆಯೇ ಅಮೆರಿಕವು ತಂದಿದ್ದ ನಿರ್ಣಯವನ್ನು ಬ್ರಿಟನ್ನು ವಿರೋಧಿಸಿದುದರಿಂದ ಅಮೆರಿಕವು ಆ ಪ್ರಯತ್ನವನ್ನು ಕೈಬಿಟ್ಟಿತೆಂದೂ ವರದಿಯಾಗಿದೆ.

ಈಜಿಪ್ಟಿನಲ್ಲಿ ಸಂತಾನ ನಿರೋಧ

ಈಜಿಪ್ಟಿನಲ್ಲಿ ದಿನೇದಿನೇ ಹೆಚ್ಚುತ್ತಿರುವ ಜನಸಂಖ್ಯೆಯ ಪರಿಣಾಮವಾಗಿ ಆ ದೇಶದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಧಕ್ಕೆ ತಗಲಿರುವುದೆಂದೂ, ಸಂತಾನ ನಿವಾರಿಸುವುದು ಅಲ್ಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಎಲ್ಲ ಕ್ಷೇತ್ರಗಳವರಿಗೂ ಭಾರಿ ಆವಶ್ಯಕವಾಗಿರುವುದೆಂದೂ ವರದಿಯಾಗಿದೆ. ಸಂತಾನ ನಿರೋಧವು ಕುರಾನಿನಲ್ಲಿ ಒಪ್ಪಲ್ಪಟ್ಟಿರುವುದಾದರೂ, ಪತ್ನಿಯ ಸಮ್ಮತಿಪಟ್ಟಲ್ಲಿ ಕುರಾನು ಅದಕ್ಕೆ ಅಡ್ಡಿ ಬರುವುದಿಲ್ಲವೆಂದೂ ತಿಳಿಯಪಡಿಸಲಾಗಿದೆ.

ಸುಗ್ಗಿಯ ಆಜ್ಞೆಯ ಬದಲಾವಣೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಸೂಚನೆ

ಸ್ವಂ ಸು ಫೋ] ಬೆಂಗಳೂರು ೧೩

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯು ನೆನ್ನೆ ನಡೆದು ಈಗ ಜಾರಿಯಲ್ಲಿರುವ ಧಾನ್ಯ ಲೇವಿ ವಸೂಲಿ ಪದ್ಧತಿಯಲ್ಲಿ ಹಲವು ಮಾರ್ಪಾಡುಗಳನ್ನು ಮಾಡಿ ಈ ಪದ್ಧತಿಯನ್ನೇ ಮುಂದುವರಿಸಬೇಕೆಂದು ಅಭಿಪ್ರಾಯಪಟ್ಟಿತೆಂದು ತಿಳಿದು ಬಂದಿದೆ.

ಮಂತ್ರಿಮಂಡಲದವರು ಮುಖ್ಯ ಆಡಳಿತ ವಿಚಾರಗಳಲ್ಲಿ ಕಾಂಗ್ರೆಸ್ ಕಾರ್ಯಕಾರೀ ಮಂಡಲಿಯ ಸಲಹೆಯನ್ನು ಪಡೆಯುವ ಸತ್ಸಂಪ್ರದಾಯವನ್ನು ಮುಂದುವರಿಸುವುದು ಒಳ್ಳೆಯದೆಂದು ಸೂಚಿಸಿ ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರಿಗೆ ಪತ್ರ ಬರೆಯಲಾಗಿದೆಯೆಂದೂ ಸಹ ತಿಳಿದುಬಂದಿದೆ.

ಕ್ಷಾಮ ಪರಿಹಾರ ನಿಧಿ ಸಂಗ್ರಹಣೆಗೆ ಸಹಾಯ ಮಾಡಲು ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ.

ಚುನಾವಣಾಧಿಕಾರಿಗಳು

ಹೈದರಾಬಾದಿನಲ್ಲಿ ನಡೆಯುವ ಕಾಂಗ್ರೆಸ್ ಮಹಾಧಿವೇಶನಕ್ಕೆ ಪ್ರತಿನಿಧಿಗಳನ್ನು ಆರಿಸಲು ಈ ಕೆಳಗೆ ಕಂಡವರು ಚುನಾವಣಾಧಿಕಾರಿಗಳಾಗಿ ನೇಮಿಸಲ್ಪಟ್ಟಿರುವರು —

ಶ್ರೀಗಳು, ಬೆಂಗಳೂರು ನಗರ-ಜಿ ಆರ್ ಸ್ವಾಮಿ, ಜಿಲ್ಲೆ-ಜಿ ವಿ ಚಲ್ಲಂ, ಮೈಸೂರು ನಗರ-ಡಾ|| ಸಿ ಬಂದೀಗೌಡ, ಜಿಲ್ಲೆ ಅಗರಂ ರಂಗಯ್ಯ, ಕೋಲಾರ ವಿ ಎಸ್. ಕೃಷ್ಣಯ್ಯಂಗ್, ತುಮಕೂರು-ಎ೯ ನೀಲಕಂಠರಾವ್, ಹಾಸನ-ಎಚ್ ಎಸ್ ದೊರೆಸ್ವಾಮಿ, ಚಿಕ್ಕಮಗಳೂರು-ಎಚ್ ಆರ್ ವೆಂಕಟರಾಮಯ್ಯರ್, ಶಿವಮೊಗ್ಗ-ಕೆ ಶಂಕರಪ್ಪ, ಚಿತ್ರದುರ್ಗ-ಕೆ. ಆರ್ ಶ್ರೀಧರ್

○ ಏಳು ವರ್ಷದ ಒಬ್ಬ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದುದಕ್ಕಾಗಿ ರಾಬರ್ಟ್‌ಸನ್‌ಪೇಟೆಯ ಚಲುವರಾಜು ಎಂಬ ೧೫ ವರ್ಷದ ಹುಡುಗನಿಗೆ ಒಂದು ತಿಂಗಳು ಕಠಿಣ ಸಜಾ ಶಿಕ್ಷೆಯನ್ನು ವಿಧಿಸಲಾಗಿದೆ

ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಹೊಸ ನಿರ್ಧಾರ

ಪಾಕೀಸ್ತಾನದ ಪ್ರಧಾನಿ ಖ್ವಾಜಾ ನಾಜಿಮುದ್ದೀನರು ಢಕ್ಕಾದಲ್ಲಿ ಸಮಾವೇಶಗೊಂಡಿದ್ದ ಮುಸ್ಲಿಂ ಲೀಗ್ ಕೌನ್ಸಿಲ್ ಸಭೆಯಲ್ಲಿ ನೆನ್ನೆ ಮಾತನಾಡುತ್ತಾ, ಕಾಶ್ಮೀರದ ಸಮಸ್ಯೆಯು ನ್ಯಾಯವಾಗಿಯೂ ಮತ್ತು ಶಾಂತಿಯುತವಾಗಿಯೂ, ವಿಶ್ವಸಂಸ್ಥೆಯ ಮಧ್ಯಸ್ತಿಕೆಯಿಂದ ಬಗೆಹರಿಯಲೆಂದು ನಾವು ಎದುರು ನೋಡುತ್ತಿದ್ದೇವೆ. ಈ ಪ್ರಯತ್ನವು ವಿಫಲವಾದಲ್ಲಿ ಕಾಶ್ಮೀರದ ಜನತೆಯ ಹಿತರಕ್ಷಣೆಗಾಗಿ ಬೇರೆ ನಿರ್ಧಾರವನ್ನು ಕೈಗೊಳ್ಳಲಾಗುವುದೆಂದೂ, ಅದರ ಪರಿಣಾಮವು ಏನಾದರೂ ಚಿಂತಿಸುವಂತಿಲ್ಲವೆಂದೂ ತಿಳಿಸಿದರು.

ಈಜಿಪ್ಟಿನಲ್ಲಿ ಅಕ್ರಮ ಧಾನ್ಯ ದಾಸ್ತಾನಿಗಾಗಿ ಶಿಕ್ಷೆ

ಈಜಿಪ್ಟಿನಲ್ಲಿ ಅಕ್ರಮವಾಗಿ ಆಹಾರ ಧಾನ್ಯವನ್ನು ಸಂಗ್ರಹಿಸಿ ಹೆಚ್ಚು ಬೆಲೆಗೆ ಮಾರಿದರೆಂಬ ಆಪಾದನೆ ಮೇಲೆ ೧೪೧ ಜನರನ್ನು ಮಿಲಿಟರಿ ವಿಚಾರಣೆಗೆ ಗುರಿಪಡಿಸಿ ಹಲವರಿಗೆ ಸಜಾ ಮತ್ತು ಜುಲ್ಮಾನೆಗಳನ್ನು ವಿಧಿಸಲಾಯಿತು. ಅವರಲ್ಲಿದ್ದ ಅಧಿಕ ಧಾನ್ಯದ ದಾಸ್ತಾನನ್ನು ಪೋಲೀಸ್ ಮತ್ತು ಮಿಲಿಟರಿಯವರು ವಶಪಡಿಸಿಕೊಂಡು ಮಾರ್ಕೆಟ್ಟುಗಳಿಗೆ ಕಳುಹಿಸಿದರು.

ಜೆಕೊಸ್ಲೊವೇಕಿಯಾ ಸೈನ್ಯಾಧಿಕಾರಿಗಳ ದಸ್ತಗಿರಿ

ಜೆಕೊಸ್ಲೊವೇಕಿಯಾ ಸರ್ಕಾರದ ವಿರುದ್ಧವಾಗಿ ಪಿತೂರಿ ನಡೆಸಿದ ಆಪಾದನೆ ಮೇಲೆ ಅಲ್ಲಿನ ಬಹು ಮಂದಿ ಉನ್ನತ ಮತ್ತು ಕೆಳ ದರ್ಜೆಯ ಸೈನ್ಯಾಧಿಕಾರಿಗಳನ್ನು ಸಾಮೂಹಿಕವಾಗಿ ಬಂಧಿಸಲಾಗಿದೆಯೆಂದು ವರದಿಯಾಗಿದೆ.

ಆರ್ಥಿಕಾಭಿವೃದ್ಧಿ ಸಲಹೆಗಳ ಪರಿಶೀಲನೆಗೆ ಸಮಿತಿ

ಕೇಂದ್ರ ಸರ್ಕಾರದ ವ್ಯಾಪಾರ ಸಮಿತಿಯು ಭಾರತದ ಆರ್ಥಿಕ ಅಭಿವೃದ್ಧಿಗಳ ದೃಷ್ಟಿಯಿಂದ ಮಾಡಿರುವ ಹಲವು ಶಿಫಾರಸುಗಳನ್ನು ಪರಿಶೀಲಿಸುವ ಸಲುವಾಗಿ ಪಾರ್ಲಿಮೆಂಟಿನ ಮೈಸೂರು ಸದಸ್ಯರಾಗಿರುವ ಶ್ರೀ ಎಸ್ ವಿ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಅರಮನೆ ಕಛೇರಿಯಲ್ಲಿ ಹಗಲು ದರೋಡೆ

ಹಣ ಕಟ್ಟಲು ಬಂದಿದ್ದವರಿಂದ ೩,೪೦೦ ರೂ. ಅಪಹಾರ

ಮೈಸೂರು ೧೩

ಕೃಷ್ಣರಾಜಸಾಗರದ ಸೊಸೈಟಿಯಿಂದ ಜಿಲ್ಲಾ ಖಜಾನೆಗೆ ಆಹಾರ ಧಾನ್ಯ ಬಾಕಿ ಕಟ್ಟಲು ತಂದಿದ್ದ ೩,೪೦೦ ರೂಪಾಯನ್ನು ಈ ದಿನ ಮಧ್ಯಾಹ್ನ ಅರಮನೆ ಕಛೇರಿಯಲ್ಲಿ ಸೊಸೈಟಿಯ ಗುಮಾಸ್ತರಾದ ಶ್ರೀ ರಘುನಾಥ ಅಯ್ಯಂಗಾರ್ಯರಿಂದ ಯಾವನೋ ಒಬ್ಬನು ದರೋಡೆ ಮಾಡಿ ಪರಾರಿಯಾದ ಪ್ರಸಂಗವು ವರದಿಯಾಗಿದೆ. ಅವರು ಆಹಾರದ ಅಧಿಕಾರಿಗಳನ್ನು ನೋಡಲು ಹೋಗುತ್ತಿದ್ದಾಗ ಆಗಂತುಕನು ಹಿಂದುಗಡೆಯಿಂದ ಬಂದು ಅವರ ಅಂಗಿಗೆ ಅಮೇಧ್ಯವು ಬಳಿದಿದೆಯೆಂದೂ, ಅದನ್ನು ನೋಡುವಂತೆಯೂ ಹೇಳಿ, ಅವರು ಕೋಟನ್ನು ಬಿಚ್ಚಿ ನೋಡುತ್ತಿದ್ದಾಗ ಅವರ ಬಳಿಯಿದ್ದ ಹಣದ ಗಂಟನ್ನು ಕಸಿದುಕೊಂಡು ಪರಾರಿಯಾಗಿರುವನೆಂದು ಹೇಳಲಾಗಿದೆ. ರಾಜಧಾನಿಯ ಅರಮನೆ ಕಛೇರಿಯಲ್ಲಿಯೇ ನಡೆದಿರುವ ಈ ಹಗಲು ದರೋಡೆ ಪ್ರಸಂಗವು ವಿಶೇಷ ಕೋಲಾಹಲವನ್ನುಂಟು ಮಾಡಿರುತ್ತದೆ.

ಸರ್ಕಾರಿ ನೌಕರರ ವಿರಾಮ ವೇತನದ ಪುನರ್ವ್ಯವಸ್ಥೆ

ಕಳೆದ ಆಗಸ್ಟಿನಿಂದೀಚೆಗೆ ಕೆಲಸದಿಂದ ನಿವೃತ್ತರಾಗಿರುವ ಸಂಸ್ಥಾನ ಸರಕಾರದ ನೌಕರರಿಗೆ ಇನ್ನು ಮುಂದೆ ಅವರ ನಿವೃತ್ತಿ ಕಾಲದಲ್ಲಿ ಒಂದು ವರ್ಷದ ಸಂಬಳವನ್ನೂ ಮತ್ತು ಪ್ರತಿ ತಿಂಗಳೂ ಸಂಬಳದ ಅರ್ಧದಷ್ಟು ವಿರಾಮವೇತನಕ್ಕೆ ಬದಲು ೮ ನೇ ೩ ಭಾಗವನ್ನೂ ವೇತನವಾಗಿ ಕೊಡಲಾಗುವುದೆಂದು ತಿಳಿದು ಬಂದಿದೆ.

ಕಟ್ಟಿಮಳಲವಾಡಿ ವೆಂಕಟರಾಮಾವಧಾನಿಗಳವರಿಗೆ ಸನ್ಮಾನ

ಕೆಲವು ದಿವಸಗಳ ಹಿಂದೆ ಚಿತ್ರದುರ್ಗದಲ್ಲಿ ಪರ್ಜನ್ಯ ಜಪ ನಡೆಸಲು ಅಲ್ಲಿಗೆ ತೆರಳಿದ್ದ ರಾಜಧಾನಿಯ ಬ್ರ|| ಶ್ರೀ|| ಕಟ್ಟಿಮಳಲವಾಡಿ ವೆಂಕಟರಾಮಾವಧಾನಿಗಳವರಿಗೆ ಕೂಡ್ಲಿಯ ಶ್ರೀ ಶೃಂಗೇರಿ ಮಠಾಧೀಶರು ವೇದಭಾಸ್ಕರ ಎಂಬ ಬಿರುದನ್ನೂ ಮತ್ತು ಸುವರ್ಣದ ಕಡ್ಡವನ್ನೂ ದಯಪಾಲಿಸಿ ಸನ್ಮಾನಿಸಿರುವರು. ಪರ್ಜನ್ಯ ಜಪವು ಆರಂಭವಾದ ೪-೫ ದಿವಸಗಳಲ್ಲೇ ಒಳ್ಳೆಯ ಮಳೆಯು ಬಂದಿತೆಂದು ಹೇಳಲಾಗಿದೆ.

ಮಹಿಳೆಯು ಗಂಡಸಾಗಿ ಸೇವಕಿಯನ್ನು ವರಿಸಿದಳು

ಇಂಗ್ಲೆಂಡಿನ ಎಬರ್ಡೀನ್‌ಷೈರಿಗೆ ಸೇರಿದ ಆಲ್‌ಫರ್ಡ್ ಎಂಬಲ್ಲಿನ ಎಲಿಜಬೆತ್ ಎಂಬ ಮಹಿಳಾ ವೈದ್ಯಳು ಇತ್ತೀಚೆಗೆ ಗಂಡಸಾಗಿ ಪರಿವರ್ತಿತಳಾಗಿ ಕಳೆದ ಶುಕ್ರವಾರ ತನ್ನ ಮನೆಯ ಸೇವಕಿಯಾದ ಮಿಸ್ ಇಸೋಬೆಲ್ ಮಿಚೆಲ್ ಎಂಬುವಳನ್ನು ರಹಸ್ಯವಾಗಿ ವಿವಾಹವಾದಳೆಂದೂ, ಗಂಡಸಾದ ನಂತರ ಆಕೆಯು ತನ್ನ ಹೆಸರನ್ನು ಇವಾರ್ ಎಂದು ಬದಲಾಯಿಸಿದಳೆಂದೂ ಹೇಳಲಾಗಿದೆ

ಮಹಿಳಾ ಸಮ್ಮೇಳನದ ರಜತೋತ್ಸವ

ಶ್ರೀಮತಿ ಮಹಾರಾಣಿಯವರ ಭಾಷಣ

ಬೆಂಗಳೂರು ೧೨

ಅಖಿಲ ಭಾರತ ಮಹಿಳಾ ಸಮ್ಮೇಳನದ ಮೈಸೂರು ಸಂಸ್ಥಾನದ ಶಾಖೆಯ ರಜತೋತ್ಸವದ ಅಧ್ಯಕ್ಷತೆಯನ್ನು ಇಲ್ಲಿ ನೆನ್ನೆ ಶ್ರೀಮತಿ ಮಹಾರಾಣಿಯವರು ವಹಿಸಿ, ಭಾಷಣ ಮಾಡುತ್ತಾ ಇಂದಿನ ಅತ್ಯಂತ ಪ್ರಾಮುಖ್ಯವಾದ ವಿಷಯವಾದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜನರಿಗೆ ಆಹಾರ ಬಟ್ಟೆ ಮುಂತಾದುವನ್ನು ಒದಗಿಸುವುದರ ಕಡೆಗೆ ಎಲ್ಲರೂ ಗಮನವೀಯಬೇಕೆಂದು ಸೂಚಿಸಿದರು

ಶ್ರೀಮತಿ ಮಹಾರಾಣಿಯವರು ಸತೀ ಮಿರ್ಜಾ ಇಸ್ಮೇಲ್, ಶ್ರೀಮತಿ ರುಕ್ಮಿಣಿಯಮ್ಮ, ಕಮಲಮ್ಮ ದಾಸಪ್ಪ, ಡಾ|| ಆಲ್ಬುಕರ್ಕ್ ಮುಂತಾದವರ ಸೇವೆಯನ್ನು ಪ್ರಶಂಸಿಸಿದರು ಭಾರತದ ರಾಜ್ಯಾಂಗದಂತೆ ದೊರೆತಿರುವ ಸಮಾನತೆಯನ್ನು ಪ್ರಸ್ತಾಪಿಸಿ ಮಹಿಳೆಯರಿಗೆ ಹಿಂದಿನಕಾಲದ ವೈಭವ ಪೂರ್ಣ ಭವಿಷ್ಯವು ಈಗ ಪುನಃ ದೊರೆತಿರುವುದೆಂದೂ, ಅವರು ಪುರುಷರೊಡನೆ ಸಮಾನರಾಗಿರುವರೆಂದೂ ಹೇಳಿರುವರು ಮಹಿಳೆಯರಿಗೆ ಮತದಾನದ ಹಕ್ಕು ದೊರೆತಿರುವುದಾದರೂ, ಅದರ ಉಪಯೋಗವನ್ನು ಅರ್ಥ ಮಾಡಿಕೊಳ್ಳದಿದ್ದರೆ ಆ ಹಕ್ಕಿನಿಂದ ಪ್ರಯೋಜನವೇನೂ ಇರುವುದಿಲ್ಲವೆಂದೂ, ದೇಶವು ನಿಜವಾಗಿಯೂ ಪ್ರಜಾಪ್ರಭುತ್ವಾತ್ಮಕ ರಾಷ್ಟ್ರವಾಗಬೇಕಾದರೆ ಮಹಿಳೆಯರು ಅಜ್ಞಾನಿಗಳಾಗಿರಲು ಸಾಧ್ಯವಿಲ್ಲವೆಂದೂ ಅವರು ಹೇಳಿದರು

ಶಿಶುರಕ್ಷಣೆ, ಕಡ್ಡಾಯ ಶಿಕ್ಷಣ, ಹೆಂಗಸರಿಗೆ ಸೌಕರ್ಯ ಮುಂತಾದುವನ್ನು ಕಾರ್ಯಗತ ಮಾಡಲು ಸರ್ಕಾರದವರೇ ಮುಂದೆ ಬಂದಿರುವುದರಿಂದ ಮಹಿಳೆಯರಿಗೆ ಕೆಲಸವೇನೂ ಇಲ್ಲವೆಂದು ಭಾವಿಸಕೂಡದೆಂದೂ ಅವರುಗಳು ಆ ವಿಷಯಗಳಲ್ಲಿ ಆಸಕ್ತಿ ವಹಿಸಬೇಕೆಂದೂ ಕೋರಿದರು

ಶ್ರೀಮತಿ ಕಮಲಮ್ಮ ದಾಸಪ್ಪನವರು ಸ್ವಾಗತ ಭಾಷಣ ಮಾಡಿದರು

ಉಯ್ಯಾಲೆ ಹಗ್ಗ ಕತ್ತಿಗೆ ಬೀರಿ ಬಾಲಕನ ಮರಣ

ಉತ್ತರ ಮಲಬಾರಿನ ನಾದಪುರಂ ಎಂಬ ಹಳ್ಳಿಯಲ್ಲಿ ೧೦ ವರ್ಷದ ಹುಡುಗನೊಬ್ಬನು ಒಂದು ಹಗ್ಗವನ್ನು ಮರದ ಕೊಂಬೆಗೆ ಕಟ್ಟಿ ಉಯ್ಯಾಲೆಯಾಡುತ್ತಿದ್ದಾಗ ಹಗ್ಗವು ಹುಡುಗನ ಕುತ್ತಿಗೆಗೆ ಬಿಗಿದುಕೊಂಡು ಅವನು ಮೃತಪಟ್ಟನೆಂದು ವರದಿಯಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ಲಘುಸಂಗೀತ ಕೆ ಜ ಆನಂದ ಪುಟ್ಟಪ್ಪ ತ ಪಟೇಲ್, ಎಂ ಉಲ್ಲಾಳ್ ಸಂಜೆ ೬ ಸಂಗೀತ, ಎಂ ಎ ವೆಂಕಟಾಚಾರ್ ಮತ್ತು ೬ ೩ ಪಟೇಲ ಎಂ ಎ ಉಲ್ಲಾಳ್ ೬ ೩೦ ದೇವರ ನಾಮ, ಎಸ್ ರಾಮಚಂದ್ರರಾವ್ ೮ ವೀಣಾವಾದನ, ಕೆ ಜ ಆನಂದ ೮ ೩೦ ಸಂಗೀತ ೮ ನಾಗನ್ನ ೯ ೩೦ ಗಾನಾಮೃತ, ರಿಕಾರ್ಡು ಕಾರ್ಯಕ್ರಮ

ನೆಹರೂರವರ ಜೀವನದ ಹಿರಿಯ ಆಶೆ !

ನೆಹರೂರವರು ಮದ್ರಾಸಿನಲ್ಲಿ ಮಾತನಾಡುತ್ತಾ, ತಮ್ಮ ಜೀವಮಾನವನ್ನೆಲ್ಲಾ ಹೊಸ ಭಾರತದ ನಿರ್ಮಾಣಕ್ಕಾಗಿಯೇ ಉಪಯೋಗಿಸಬೇಕೆಂಬುದು ತಮಗಿರುವ ಒಂದೇ ಒಂದು ಹಿರಿಯ ಆಸೆಯೆಂದು ತಿಳಿಸಿರುತ್ತಾರೆ ತಾವು ಗತಿಸಿದ ನಂತರ ತಮ್ಮ ಕೀರ್ತಿಯು ಯಾವ ರೀತಿ ಹರಡುವುದೆಂಬುದಕ್ಕೆ ತಾವು ಲಕ್ಷ್ಯ ಕೊಡುವುದಿಲ್ಲವೆಂದೂ ಭಾರತ ಮತ್ತು ಅದರ ಪ್ರಜೆಗಳನ್ನು ಕಾಯಾ, ವಾಚಾ, ಮನಸಾ ಪ್ರೀತಿಸಿದುದಕ್ಕಾಗಿ ಪ್ರಜೆಗಳು ತಮ್ಮ ಮೇಲೆ ಅಮಿತ ಪ್ರೇಮವಿಟ್ಟಿದ್ದರಿಂದು ಜನರು ತಿಳಿಕೊಂಡರೆ ತಮಗೆ ಅಷ್ಟೇ ಸಾಕೆಂದೂ ಅವರು ಹೇಳಿರುವರು

ಹಾರುತ್ತಿದ್ದ ವಿಮಾನದಲ್ಲೇ ನಾಮಕರಣ ಮಹೋತ್ಸವ

ರೋಮ್ ನಗರದ ಅಲ್ಲಾಂ ಜಿಲೊ ಆಸ್ಟೋನ್ ಎಂಬ ವಿಮಾನ ಚಾಲಕನು ೯೦೦೦ ಅಡಿ ಎತ್ತರದಲ್ಲಿ ಹಾರುತ್ತಿದ್ದ ವಿಮಾನದಲ್ಲೇ ತನ್ನ ಮಗುವಿನ ನಾಮಕರಣ ಮಹೋತ್ಸವವನ್ನು ನಡೆಸಿದನೆಂದು ವರದಿಯಾಗಿದೆ ಒಂದೇ ಬಾರಿ ಹಾರುತ್ತಿದ್ದ ಇನ್ನೊಂದು ವಿಮಾನದಲ್ಲಿ ಮಗುವಿನ ತಾಯಿಯು ಇದ್ದಳು ನಾಮಕರಣ ನಡೆದ ಪ್ರತಿಯೊಂದನ್ನೂ ವೈಮಾನಿಕನೆಂದು ಹೇಳಲಾಗಿದೆ

ರೈಲು ದುರಂತದಲ್ಲಿ ಮಡಿದವರ ಸಂಖ್ಯೆ ೧೧೦

ಲಂಡನ್ನಿನ ಬಳಿ ಹ್ಯಾರೋ ರೈಲ್ವೆ ನಿಲ್ದಾಣದಲ್ಲಿ ಕೆಲವು ದಿನಗಳ ಕೆಳಗೆ ನಡೆದ ರೈಲು ಅನಾಹುತದಲ್ಲಿ ಮಡಿದವರ ಸಂಖ್ಯೆ ೧೧೦ ಕ್ಕೆ ಏರಿರುವುದಾಗಿ ತಿಳಿದು ಬಂದಿದೆ

ಅಭಾವ ಪರಿಹಾರ ಸಮಿತಿಗೆ ಖಾಸಗೀ ಸದಸ್ಯರು

ಸಂಸ್ಥಾನದ ಅಭಾವ ಪರಿಹಾರ ಸಮಿತಿಗೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಸಿ ದಾಸಪ್ಪ, ಜ|| ಮಹಮದ್ ಇಮಾಂ, ಶ್ರೀ ಗ ಲಾ ದ ವ ಗುಲ್ಬಾ ಗೋವಿಂದರೆಡ್ಡಿ ಎಸ್ ಚನ್ನಯ್ಯ, ಬಿ ವಿ ಲಂಕಪ್ಪ, ಜಯಂತಿಲಾಲ್ ಠಾಕೂರ್, ವೈ ಧರ್ಮಪ್ಪ ಕೆ ವೆಂಕಟಸ್ವಾಮಿ, ಎಂ ಎಸ್ ದೇವೇಗೌಡ, ಜ|| ಮಹಮದ್ ಷರೀಫ್, ಮತ್ತು ಶ್ರೀಮತಿ ಲಕ್ಷ್ಮೀ ಕೃಷ್ಣಪ್ಪನವರನ್ನು ಖಾಸಗಿ ಸದಸ್ಯರಾಗಿ ತೆಗೆದುಕೊಳ್ಳಲಾಗಿದೆ

ಗಮಕ ತರಗತಿಗಳು

ರಾಜಧಾನಿಯ ನೇವರಾಜ ಮೊಹಲ್ಲಾದಲ್ಲಿರುವ ಮಂಗಳಾ ಸದನದಲ್ಲಿ ಗಮಕ ತರಗತಿಗಳನ್ನು ಇದೇ ಮಾಹೆ ೧೫ ರಿಂದ ಗಮಕಿ ಕೃಷ್ಣಗಿರಿ ಕೃಷ್ಣರಾಯರು ನಡೆಸುತ್ತಾರೆ. ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಡೆಯುವ ಗಮಕ ಪರೀಕ್ಷೆಗಳಿಗೆ ವಿದ್ಯಾರ್ಥಿನಿಯರನ್ನು ತಯಾರು ಮಾಡಲಾಗುತ್ತದೆ ತರಗತಿಗಳಿಗೆ ಸೇರಬಯಸುವ ಮಹಿಳೆಯರು ಸದನದ ಕಾರ್ಯದರ್ಶಿಗಳಲ್ಲಿ ಹೆಚ್ಚಿನ ವಿಷಯಗಳನ್ನು ತಿಳಿಯಬಹುದು.

ಮನುಷ್ಯನ ಹೃದಯಕ್ಕೆ ಪ್ಲಾಸ್ಟಿಕ್ ವಾಲ್ವ್

ಅಮೆರಿಕದ ಜಾರ್ಜ್‌ಟೌನ್ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ಒಬ್ಬ ರೋಗಿಯ ಹೃದಯದ ಹೃತ್ಕರಣ ಮತ್ತು ಹೃತ್ಕುಕ್ಷಿಗಳ ನಡುವೆ ಪ್ಲಾಸ್ಟಿಕ್ಕಿನಿಂದ ತಯಾರಿಸಿದ ವಾಲ್ವ್ ಒಂದನ್ನು ಜೋಡಿಸಿರುತ್ತಾರೆ ಅದು ಯಶಸ್ವಿಯಾಗಿ ಕೆಲಸ ಮಾಡುತ್ತಿರುವುದೆಂದು ಹೇಳಲಾಗಿದೆ ಹೃತ್ಕುಕ್ಷಿಯಿಂದ ಹೃತ್ಕರಣಕ್ಕೆ ರಕ್ತವು ಹಿಂತಿರುಗುವುದರಿಂದ ಹೃದಯ ಸ್ತಂಭನವಾಗುವುದನ್ನು ತಪ್ಪಿಸಲು ಈ ಹೊಸ ವಿಧಾನವನ್ನು ವೈದ್ಯರು ಕಂಡು ಹಿಡಿದಿರುವರು

ಟೆಲಿಫೋನ್ ಮೂಲಕ ವಿವಾಹ

ಪಶ್ಚಿಮ ಜರ್ಮನಿಯ ಮ್ಯೂನಿಚ್ ನಗರದಲ್ಲಿರುವ ಮೇರಿಯಾ ಷಿಲ್ಲರ್ ಎಂಬಾಕೆಯು ಸ್ವಸ್ಥಾನದಲ್ಲಿದ್ದುಕೊಂಡು ಅಮೆರಿಕದ ಟೆಕ್ಸಾಸಿನಲ್ಲಿರುವ ಜಾರ್ಜ್ ಪಿ ಡೇ ಎಂಬುವನನ್ನು ಟೆಲಿಫೋನ್ ಮೂಲಕ ವಿವಾಹ ಮಾಡಿಕೊಂಡಳೆಂದೂ, ಈ ಸಮಾರಂಭವು ಆರು ನಿಮಿಷದ ಸಂಭಾಷಣೆ ಮತ್ತು ೧೨ ಸೆಕೆಂಡು ವೆಚ್ಚದಲ್ಲಿ ಜರಗಿತೆಂದೂ ಹೇಳಲಾಗಿದೆ ಟೆಕ್ಸಾಸಿನಲ್ಲಿ ವರನ ಕಡೆಯವರೊಬ್ಬರು, ಮ್ಯೂನಿಚ್ಚಿನಲ್ಲಿ ವಧುವಿನ ಕಡೆಯ ೧೨ ಜನರೂ ವಿವಾಹವನ್ನು ವೀಕ್ಷಿಸಿದರೆಂದು ವರದಿಯಾಗಿದೆ

ಹಿಂದಿ ತರಗತಿಗಳು

ರಾಷ್ಟ್ರಭಾಷಾ ಪ್ರಚಾರ ಸಮಿತಿಯ ಶ್ರಾವಣ ಶಾಸ್ತ್ರಿ ರಸ್ತೆಯಲ್ಲಿರುವ ಸಾಹಿತ್ಯ ಶಿಕ್ಷಣ ಮಂದಿರವು ಹಿಂದಿ ತರಗತಿಗಳನ್ನು ಇದೇ ಮಾಹೆ ೧೫ ನೇ ತಾ|| ನಿಂದ ಪ್ರಾರಂಭಿಸುತ್ತದೆ ಪ್ರಥಮ, ಮಧ್ಯಮ, ರಾಷ್ಟ್ರಭಾಷಾ ಮತ್ತು ಹಿಂದಿಯನ್ನು ಐಚ್ಛಿಕವಾಗಿಯೂ ತೆಗೆದುಕೊಂಡಿರುವ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ನುರಿತ ಶಿಕ್ಷಕರಿಂದ ಶಿಕ್ಷಣ ಕೊಡಿಸಲಾಗುವುದು ತರಗತಿಗೆ ಸೇರಲಿಚ್ಛಿಸುವವರು ಇದೇ ೧೫ ರ ಒಳಗೆ ಬಂದು ಸೇರಬಹುದು ಹೆಚ್ಚು ವಿವರಗಳನ್ನು ಮಂದಿರದಲ್ಲಿ ಸಂಜೆ ೫ ರಿಂದ ೭|| ಯೊಳಗೆ ತಿಳಿಯಬಹುದು

ಪಬ್ಲಿಕ್ ಲೈಬ್ರರಿಯಲ್ಲಿ ಅಮೆರಿಕದ ಪುಸ್ತಕ ಪ್ರದರ್ಶನ

ಮದರಾಸಿನಲ್ಲಿರುವ ಅಮೆರಿಕನ್ ಕಾನ್ಸುಲೇಟ್ ಜನರಲ್ಲರ, ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಷನ್ ಲೈಬ್ರರಿಯ ಡಾ|| ಹರ್ಸೆಲ್‌ರವರು ಕೆಲವು ದಿನಗಳ ಕೆಳಗೆ ರಾಜಧಾನಿಯ ಪಬ್ಲಿಕ್ ಲೈಬ್ರರಿಗೆ ಭೇಟಿಯಿತ್ತು ಅಲ್ಲಿನ ಕಾರ್ಯಕಲಾಪಗಳನ್ನು ನೋಡಿ ಬಹಳವಾಗಿ ಪ್ರಶಂಸಿಸಿರುವರು ಮೇಲ್ಕಂಡ ಸಂಸ್ಥೆಯ ಆಶ್ರಯದಲ್ಲಿ ಬೆಂಗಳೂರಿನಲ್ಲಿ ತೆರೆದಿರುವ ವಾಚನಾಲಯದವರು, ಇತ್ತೀಚಿನ ಅಮೆರಿಕದ ಪ್ರಕಟಣೆಗಳಾದ ೩೦೦ ಅಮೂಲ್ಯ ಪುಸ್ತಕಗಳನ್ನು ಮೈಸೂರು ಪಬ್ಲಿಕ್ ಲೈಬ್ರರಿಯಲ್ಲಿ ಇದೇ ೨೦ ನೇ ತಾರೀಖಿನಿಂದ ೮-೧೦ ದಿನಗಳ ಕಾಲ ಪ್ರದರ್ಶಿಸಲು ವ್ಯವಸ್ಥೆ ಮಾಡಲಾಗಿದೆ

ಇನ್ನು ೨೫ ವರ್ಷಗಳಲ್ಲೇ ಚಂದ್ರಗ್ರಹಕ್ಕೆ ಪ್ರಯಾಣ

ಇನ್ನು ೨೫ ವರ್ಷಗಳೊಳಗೆ ಮಾನವನು ರಾಕೆಟ್ ಮೂಲಕ ಚಂದ್ರಲೋಕಕ್ಕೆ ಪ್ರಯಾಣ ಬೆಳಸಲು ಅನುಕೂಲವಾಗುವುದೆಂದು ವಿಶ್ವದ ರಾಕೆಟ್ ನಿಪುಣರಾದ ಡಾ|| ವೆರ್ನರ್ ವಾನ್ ಬ್ರಾನ್‌ರವರು ತಿಳಿಸಿರುವರು ಈ ಬಗ್ಗೆ ಅವರು ವಿವರಣೆಯನ್ನಿತ್ತು ಭೂಮಿಯ ಮೇಲೆ ೭೫ ಮೈಲಿ ಎತ್ತರದಲ್ಲಿ ರಾಕೆಟ್ ಹಾರಿಸುವ ನಿಲ್ದಾಣವೊಂದನ್ನು ನಿರ್ಮಿಸಲಾಗುವುದೆಂದೂ, ೨,೩೯,೦೦೦ ಮೈಲಿಯ ಪ್ರವಾಸಕ್ಕೆ ಬೇಕಾಗುವಷ್ಟು ಪೆಟ್ರೋಲನ್ನು ಮೂರು ರಾಕೆಟ್ಟುಗಳಲ್ಲಿ ತುಂಬಿ, ೫೦ ಮಂದಿ ವಿಜ್ಞಾನಿಗಳೂ ಮತ್ತು ಯಂತ್ರ ನಿಪುಣರೂ, ಅವುಗಳಲ್ಲಿ ಕುಳಿತು ಚಂದ್ರಲೋಕಕ್ಕೆ ಹೋಗಿ, ಆರು ವಾರಗಳ ಕಾಲ ಅಲ್ಲಿದ್ದು ತರುವಾಯ ಒಂದು ರಾಕೆಟ್ಟನ್ನು ಅಲ್ಲೇ ಬಿಟ್ಟು, ಉಳಿದೆರಡನ್ನು ವಾಪಸು ಭೂಮಿಗೆ ತೆಗೆದುಕೊಂಡು ಬರಲಾಗುವುದೆಂದೂ ಅವರು ತಿಳಿಸಿರುವರು

೧೬,೦೦೦ ರೈಲ್ವೆ ನೌಕರರಿಂದ ಸಂಬಳದ ನಿರಾಕರಣೆ

ಖರಗ್‌ಪುರದಲ್ಲಿರುವ ಈಸ್ಟರ್ನ್ ರೈಲ್ವೆ ವರ್ಕ್ ಷಾಪಿನ ಹಲವು ನೌಕರರಿಗೆ ಕಳೆದ ತಿಂಗಳು ಪೂಜಾ ಸಮಾರಂಭದಲ್ಲಿ ತಲಾ ೩೦ ಮತ್ತು ೫೦ ರೂ ನಂತೆ ಅಡ್ವಾನ್ಸನ್ನು ಕೊಡಲಾಗಿದ್ದುದನ್ನು, ಕಳೆದ ಶುಕ್ರವಾರ ಸಂಬಳ ಕೊಡುವಾಗ, ಒಂದೇ ಮೊತ್ತದಲ್ಲಿ ಹಿಡಿಯಲಾಗಿ ಸುಮಾರು ೧೬ ಸಾವಿರ ನೌಕರರು ಅದನ್ನು ಪ್ರತಿಭಟಿಸಿ ಸಂಬಳ ತೆಗೆದುಕೊಳ್ಳಲು ನಿರಾಕರಿಸಿದರೆಂದು ವರದಿಯಾಗಿದೆ ಅಡ್ವಾನ್ಸನ್ನು ಹಲವು ಕಂತುಗಳಲ್ಲಿ ಹಿಡಿಯಬೇಕೆಂದು ಅವರು ಬೇಡಿಕೆ ಸಲ್ಲಿಸಿದ್ದರು

ಓಡುತ್ತಿದ್ದ ರೈಲಿನಲ್ಲಿ ಇಬ್ಬರ ಕೊಲೆ

ಆಗ್ರಾದ ಬಳಿ ಸೋಮ್ನಾ ಮತ್ತು ಖುರ್ಜ ನಿಲ್ದಾಣಗಳ ನಡುವೆ ಕಳೆದವಾರ ಓಡುತ್ತಿದ್ದ ರೈಲಿನಲ್ಲಿ ಸಶಸ್ತ್ರ ಧಾಳಿಯತವಿಬ್ಬರು ಇಬ್ಬರು ಪ್ರಯಾಣಿಕರನ್ನು ಗುಂಡಿನಿಂದ ಕೊಂದು ಅವರ ಶರೀರಗಳನ್ನು ಹೊರಕ್ಕೆ ಎಸೆದರೆಂದು ವರದಿಯಾಗಿದೆ. ಧಾಳಿಯಿಕರನ್ನು ದಸ್ತಗಿರಿ ಮಾಡಲಾಗಿದೆ

SRI GAYATHRI
TALKIES
Daily 2 Shows
From 14-10-52 For 2 days
20th Century s
NEPTUNES DAUGHTER
With Esther Williams
& Red Skelton
— NEXT CHANGE —
ALL ABOUT EVE

Edited, Printed and Published by A R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೪ ೧೦-೧೯೫೩ [ಸಂಚಿಕೆ ೭೪

ಮೈಸೂರು ಜಿಲ್ಲಾ ಬಸ್ಸು ಕಾರ್ಮಿಕರ ಮುಷ್ಕರವೇ ?

ಶ್ರೀ ಶೃಂಗೇರಿ ಜಗದ್ಗುರು
ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಂಗಳವರು

ಈ ದಿನ ಶ್ರೀ ಸ್ವಾಮಿಗಳವರ ೭೧ ನೇ ಜಯಂತಿ
ವ ಹೋತ್ಸವವು ಆಚರಿಸಲ್ಪಡುವುದು

ಅಖಿಲ ಭಾರತ ಮಾಧ್ವ ತತ್ವ ಶಾಸ್ತ್ರ ಸಮ್ಮೇಳನ

ನವೆಂಬರ್ ೧೬ ರಂದು

ಶ್ರೀ ಮಹಾರಾಜರಿಂದ ಆರಂಭ

ಸು] ಉಡುಪಿ ೧೧

ಅಖಿಲ ಭಾರತ ಮಾಧ್ವ ತತ್ವ ಶಾಸ್ತ್ರ ಸಮ್ಮೇಳನವು ಬರುವ ತಿಂಗಳು ೧೬ ನೇ ತಾ|| ಇಲ್ಲಿ ನಾಲ್ಕು ದಿನಗಳ ವರೆಗೆ ನಡೆಯುವುದು. ಮೈಸೂರಿನ ರಾಜಪ್ರಮುಖರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಲು ಒಪ್ಪಿರುತ್ತಾರೆ ... ನವೆಂಬರ್ ೧೫ ನೇ ತಾ|| ಮೈಸೂರಿನಿಂದ ಹೊರಟು ಅದೇ ದಿನ ಮಧ್ಯಾಹ್ನ ಮಂಗಳೂರನ್ನು ತಲುಪಿ ಮಾರನೇ ಬೆಳಿಗ್ಗೆ ೧೦ ಗಂಟೆಗೆ ಇಲ್ಲಿಗೆ ಬರುವರು.

ಸಮ್ಮೇಳನದ ಅಧ್ಯಕ್ಷತೆಯನ್ನು ಬೆಂಗಳೂರಿನ ಪ್ರೊ|| ಬಿ ವೆಂಕಟೇಶಾಚಾರ್ಯರ ವಹಿಸುವಂತೆ ಅವರನ್ನು ಪ್ರಾರ್ಥಿಸಲಾಗಿದೆ.

ಮಂಗಳೂರಿನಲ್ಲಿರುವಾಗ ಶ್ರೀ ಮಹಾರಾಜರಿಗೆ ಅಲ್ಲಿನ ಪೌರಸಭೆಯವರು ಬಿನ್ನವತ್ತಳೆಯನ್ನು ಅರ್ಪಿಸುವರು.

ಕ್ಷಾಮನಿಧಿಗೆ ಶೃಂಗೇರಿ ಜಗದ್ಗುರುಗಳಿಂದ ೧,೦೦೦ ರೂ

... ಸಿವ ... ಮುಖ್ಯಮಂತ್ರಿಯವರ ಪರಿಹಾರ ... ಶೃಂಗೇರಿ ಮಠದ ಜಗದ್ಗುರುಗಳು ಸಾವಿರ ರೂ ... ಕಳುಹಿಸಿಕೊಟ್ಟಿರುವರು.

ಮಂತ್ರಿಗಳ ಆಸ್ತಿ ತನಿಖೆ ಬಗ್ಗೆ ಸದಸ್ಯರಿಗೆ ಮನವಿ

... ಪಾರ್ಲಿಮೆಂಟಿನ ... ಯ ... ಸಭೆಗೆ ... ಮಂತ್ರಿಗಳ ಮತ್ತು ... ಹಾಗಿನ ಮತ್ತು ಹಿಂದಿನ ... ಅವರ ಪತ್ನಿ ಪುತ್ರರುಗಳ ಚರಸ್ಥಿರಾಸ್ತಿ, ಅವರು ಬ್ಯಾಂಕು ಮತ್ತು ವಿದೇಶಗಳಲ್ಲಿ ಇಟ್ಟಿರುವ ಠೇವಣಿಗಳು ಇವುಗಳ ಬಗ್ಗೆ ವಿವರಗಳನ್ನು ಶೇಖರಿಸಬೇಕೆಂದು ಪ್ರಧಾನಿಯವರನ್ನು ಕೋರಿರುವರೆ ... ಅಂಡರ್ ಸೆಕ್ರೆಟರಿಯವರಿಗಿಂತ ... ದರ್ಜೆ ಅಧಿಕಾರಿಗಳ ಮತ್ತು ಅವರ ಕುಟುಂಬದವರ ಆಸ್ತಿ ಪಟ್ಟಿಯನ್ನು ... ಬೇಕೆಂದೂ ಅವರು ಸೂಚಿಸಿರುವರು ... ಸ್ವಾತಂತ್ರ್ಯ ಬಂದ ನಂತರ ... ರುವುದಕ್ಕೂ ಮುಂಚಿನ ಅವರುಗಳ ... ವಿವರಗಳನ್ನೂ ಕೇಳಲಾಗಿದೆ.

ಫ ಪಾರಶೇಕರ ಸ್ವಾಮಿಗಳವರ ಉಪನ್ಯಾಸ

ಉಡುಪಿಯ ಶ್ರೀ ಭಂಡಾರಕೇರಿ ಮಠದವರು ನಾಳೆ ಸಂಜೆ ೫|| ಘಂಟೆಗೆ ... ಸಮೀಪ ಇರುವ ಶ್ರೀ ... ಇಂದ್ರ ಸ್ವಾಮಿಗಳವರ ಮಠದ ... ಸಂಘಟನೆ ಮತ್ತು ವರ್ಣಾಶ್ರಮ ಧರ್ಮ ಎಂಬ ವಿಷಯವಾಗಿ ಉಪನ್ಯಾಸ ಮಾಡಲಿರುವರು.

ಗೋಲಿ ಆಡುತ್ತಿದ್ದವರಿಗೆ ದಂಡ

... ರಾಜಧಾನಿಯ ಬೆಳ್ಳಿಕಟ್ಟೆಗೆ ಸಮೀಪ ... ನೆನ್ನೆ ಗೋಲಿ ಜೂಜು ಆಡು ... ಲ ಜನರನ್ನು ಹಿಡಿದು ಅವರ ... ಮೊಕದ್ದಮೆ ಹೂಡಲಾಗಿ ಅವರು ... ಲಾ ೧೦ ರೂ ದಂಡ ವಿಧಿಸಲಾಗಿದೆ.

೬ ತಿಂಗಳಿಂದ ಉಪವಾಸವಿದ್ದರೂ, ಸ್ವಲ್ಪವೂ ಕುಗ್ಗಿಲ್ಲ

ಮಡಕೇರಿಯ ಬಳಿ ... ರಿಕೊಪ್ಪದ ಒಂದು ಕಾಫಿ ತೋಟದಲ್ಲಿ ಗುಮಾಸ್ತರಾಗಿರುವ ಶ್ರೀ ಅಯ್ಯಣ್ಣ ಎಂಬುವರ, ೧೫ ವರ್ಷದ ಮಗಳು ಧನಲಕ್ಷ್ಮಿ ಎಂಬಾಕೆಯು ಈಗ್ಗೆ ಆರು ತಿಂಗಳಿಂದಲೂ ಅನ್ನ ನೀರನ್ನಾಗಲೀ, ಇತರ ಯಾವ ಆಹಾರವನ್ನಾಗಲೀ ಸೇವಿಸದೆ ಕೇವಲ ನಿರಾಹಾರಿಯಾಗಿರುವಳೆಂದೂ ಆದರೂ ಆಕೆಯ ದೇಹಸ್ಥಿತಿಯು ಕೆಡದೆ, ತೋಟದಲ್ಲಿ ... ಹೊಂದು ಹೆಚ್ಚಿರುವಳೆಂದೂ ಆಕೆಯು ಭತ್ತ ಕುಟ್ಟುವುದು, ನೀರು ಸೇದುವುದು ಅಡಿಗೆ ಮಾಡುವುದೇ ಮೊದಲಾದ ಕೆಲಸಗಳನ್ನು ಮಾಡಿಕೊಂಡು ದೃಢಕಾಯಳಾಗಿರುವಳೆಂದೂ ಹೇಳಲಾಗಿದೆ.

ಕಳೆದ ಎರಡು ಮೂರು ವರ್ಷಗಳಿಂದಲೂ ಆಕೆಗೆ ಆಹಾರದ ವಿಷಯದಲ್ಲಿ ಬೇಸರಿಕೆ ಹುಟ್ಟಿತ್ತೆಂದೂ ವರದಿಯಾಗಿದೆ. ಮೈಸೂರಿಗೆ ಆಕೆಯನ್ನು ಕರತಂದು ಪರೀಕ್ಷಿಸಿದರೂ ಏನೂ ಗೊತ್ತಾಗಿಲ್ಲವೆಂದೂ ಹೇಳಲಾಗಿದೆ.

○ ಕನ್ನಂಬಾಡಿ ಕಟ್ಟೆಯಲ್ಲಿ ಈ ಮಧ್ಯಾಹ್ನ ೧೧೧ ಅಡಿ ನೀರಿತ್ತು.

ಪಾಕಿಸ್ತಾನದ ಕೋರಿಕೆಗೆ ಭಾರತದ ತಿರಸ್ಕಾರ

ಭಾರತ ಮತ್ತು ಪಾಕಿಸ್ತಾನಗಳಲ್ಲಿನ ಜನರು ಪರಸ್ಪರ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ಬರಲು ಪಾಸ್‌ಪೋರ್ಟ್ ಪದ್ಧತಿಯನ್ನು ಜಾರಿಗೆ ತರುವುದನ್ನು ಒಂದು ತಿಂಗಳ ಕಾಲ ಮುಂದುವರಿಸಬೇಕೆಂದು ಪಾಕಿಸ್ತಾನದವರು ಮಾಡಿದ ಕೋರಿಕೆಯನ್ನು ಭಾರತ ಸರ್ಕಾರದವರು ತಿರಸ್ಕರಿಸಿರುತ್ತಾರೆ. ಆ ಪದ್ಧತಿಯನ್ನು ಇಂದು ಮಧ್ಯರಾತ್ರಿಯಿಂದಲೇ ಜಾರಿಗೆ ತರಲು ವ್ಯವಸ್ಥೆ ಮಾಡಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿರುವ ಅಧಿಕಾರಿಗಳಿಗೂ ಮತ್ತು ಪೂರ್ವ ಬಂಗಾಳದಲ್ಲಿರುವ ಭಾರತ ರಾಯಭಾರ ಕಛೇರಿಯವರಿಗೂ ರಹದಾರಿ ಕೊಡುವ ಬಗ್ಗೆ ಅವರು ಸೂಚನೆಯನ್ನಿತ್ತಿರುವರೆಂದು ಗೊತ್ತಾಗಿದೆ. ಈ ಬಗ್ಗೆ ಪಾಕಿಸ್ತಾನದ ಪ್ರಧಾನಿ ನಾಜಿಮುದ್ದೀನರು ನೆಹರೂರವರಿಗೆ ತಂತಿ ಕಳುಹಿಸಿ, ಪಾಕಿಸ್ತಾನದ ಕೋರಿಕೆಯನ್ನು ನಡೆಸದಿರಲು ಭಾರತ ಸರ್ಕಾರದವರು ಕಾರಣವೇನೆಂಬುದನ್ನು ಕೋರಿಯುತ್ತಾರೆ.

ಜಿಲ್ಲಾ ಮೋಟಾರು ಕೆಲಸಗಾರರ ಮುಷ್ಕರ

ಮೈಸೂರು ೧೪

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ನೆನ್ನೆ ಸಂಜೆ ಸಂಘದ ಉಪಾಧ್ಯಕ್ಷರಾದ ಶ್ರೀ ... ರವರ ಅಧ್ಯಕ್ಷತೆಯಲ್ಲಿ ನಡೆದು, ಕೈಗಾರಿಕಾ ನ್ಯಾಯಾಲಯದವರು ಕೊಟ್ಟ ತೀರ್ಪು ಗೆಜೆಟ್ಟಿನಲ್ಲಿ ಪ್ರಕಟವಾದ ಒಂದು ತಿಂಗಳೊಳಗೆ ಅದರ ಅಂಶಗಳನ್ನು ಜಾರಿಗೆ ತರಬೇಕೆಂದು ಕಾನೂನು ಇದ್ದರೂ ಸಹ, ಬಸ್ಸು ಮಾಲೀಕರು ಹಾಗೆ ಮಾಡದೆ ಇರುವುದನ್ನು ಕಂಡು ಸಭೆಯು ತನ್ನ ವಿಷಾದವನ್ನು ಸೂಚಿಸಿ, ನೆನ್ನೆಯಿಂದ ಒಂದು ವಾರದೊಳಗೆ ಸದರಿ ತೀರ್ಪಿನ ಅಂಶಗಳನ್ನು ಜಾರಿಗೆ ತರದಿದ್ದರೆ ಸಂಘವು ಕಾನೂನು ಬದ್ಧ ಕ್ರಮವನ್ನು ತೆಗೆದುಕೊಂಡು ಪುನಃ ಮುಷ್ಕರ ಹೂಡಬೇಕೆಂದು ತೀರ್ಮಾನವಾಯಿತು.

ಈ ವರ್ಷದಲ್ಲಿ ನಡೆಯುವ ಸಂಘದ ವಾರ್ಷಿಕೋತ್ಸವಕ್ಕೆ ಭಾರತದ ಪ್ರಧಾನಿ ನೆಹರೂರವರನ್ನು ಆಹ್ವಾನಿಸಬೇಕೆಂದು ನಿಶ್ಚಯ ಮಾಡಲಾಯಿತು.

ಸಿ ಪಿ ಸಿ ಬಸ್ಸಿನ ಡ್ರೈವರ್ ಶ್ರೀ ... ಲಕ್ಷ್ಮೀಧರನ್ನು ನೆನ್ನೆ ಮಾಚನಹಳ್ಳಿ ಜನರು ಹೊಡೆದು ಗಾಯಗೊಳಿಸಿದ ... ರವನ್ನು ಖಂಡಿಸಿ, ಈ ಬಗ್ಗೆ ಅಧಿಕಾರಿಗಳು ತಪ್ಪಿತಸ್ಥರ ಮೇಲೆ ... ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೋರಲಾಯಿತು.

ದೂರ ಫರೂಕರ ಮೇಲೆ ಎಕ್ಸ್‌ಟ್ರಾಡಿಷನ್ ವಾರಂಟ್

ಈಜಿಪ್ಟಿನ ಮಾಜಿ ದೊರೆ ಫರೂಕರು ... ಎಂಬ ಅಧಿಕಾರಿಯ ಕೊಲೆಗೆ ಕಾರಣರಾಗಿರುವರೆಂದು ಫರೂಕರ ಸೇವಕ ಮಹಮದ್ ಅಸ್ಸಾನ್ ಎಂಬಾತನು ಒಪ್ಪಿಕೊಂಡಿರುವುದರಿಂದ ಈಜಿಪ್ಟ್ ಸರ್ಕಾರವು ಫರೂಕರ ಮೇಲೆ ಎಕ್ಸ್‌ಟ್ರಾಡಿಷನ್ ವಾರಂಟನ್ನು ಜಾರಿ ಮಾಡುವಂತೆ ಇಟಲಿ ಸರ್ಕಾರವನ್ನು ಕೇಳಬಹುದೆಂದು ಕೈರೋವಿನ "ಅಲ್ ಅಕ್ಬಾರ್" ಎಂಬ ಪತ್ರಿಕೆ ವರದಿ ಮಾಡಿದೆ. ಇಟಲಿ ಸರ್ಕಾರವು ಫರೂಕರನ್ನು ರಾಜಕೀಯ ನಿರಾಶ್ರಿತರೆಂದು ಪರಿಗಣಿಸಿ ಎಕ್ಸ್‌ಟ್ರಾಡಿಷನ್ ವಾರಂಟನ್ನು ಕೊಡಲಾರದೆಂದು ನಂಬಲರ್ಹವಾದ ವೃತ್ತಗಳಲ್ಲಿ ಹೇಳಲಾಗುತ್ತಿದೆ.

ಫರೂಕರು ಇನ್ನೂ ಅನೇಕ ಕೊಲೆಗಳು ಮತ್ತು ದುಷ್ಕೃತ್ಯಗಳ ಆಪಾದನೆಗೆ ಗುರಿಯಾಗಿರುವರೆಂದು ವರದಿಯಾಗಿರುತ್ತದೆ. ಜನರಲ್ ನಗೀಬರನ್ನು ಮುಟ್ಟ ಹಾಕುವ ಸಲುವಾಗಿ ಫರೂಕರು ಬ್ರಿಟಿಷ್ ಸೈನ್ಯದ ಸಹಾಯವನ್ನು ಕೋರಿ ರಾಜದ್ರೋಹ ಮಾಡಿರುವರೆಂದು ಆಪಾದಿಸಿ ಅವರನ್ನು ಮಿಲಿಟರಿ ಕೋರ್ಟಿನ ಮುಂದೆ ವಿಚಾರಣೆಗೆ ಗುರಿಪಡಿಸಲು ಈಜಿಪ್ಟ್ ಸರ್ಕಾರವು ನಿರ್ಧರಿಸಿದೆ.

ಲಲಿತಾದ್ರಿಪುರದ ಕೊಲೆ ಸಂಬಂಧವಾಗಿ ೧೩ ದಸ್ತಗಿರಿ

ಲಲಿತಾದ್ರಿಪುರದ ಬಳಿ ಜಮೀನು ವ್ಯಾಜ್ಯದ ಬಗ್ಗೆ ಕಳೆದ ಶನಿವಾರ ನಡೆದ ಎರಡು ಕೊಲೆಗಳ ಸಂಬಂಧವಾಗಿ ೧೩ ಜನರ ದಸ್ತಗಿರಿಯಾಗಿದೆ.

ಸಚಿವರೂ ಬೀದಿ ಗುಡಿಸಿದರು

ಹೈದರಾಬಾದಿನ ಸಮಾಜ ಸೇವಾ ಖಾತೆಯ ಸಚಿವರಾದ ಶ್ರೀ ಶಂಕರರಾವ್‌ರವರು ಕಾಂಗ್ರೆಸ್ ಕಾರ್ಯಕರ್ತರುಗಳೊಡನೆ ಗಾಂಧಿ ಜಯಂತಿಯ ದಿನ ಅಕ್ಕಲಕೂರು ಎಂಬ ಪಟ್ಟಣದ ಬೀದಿಗಳನ್ನು ಗುಡಿಸಿದರೆಂದೂ, ಅಲ್ಲಿನ ಹರಿಜನ ಕೇರಿಗೆ ಭೇಟಿ ಇತ್ತು ಪ್ರತಿಯೊಂದು ಹರಿಜನ ಸಂಸಾರಕ್ಕೂ ಒಂದೊಂದು ಗಾಂಧಿಜಿಯವರ ಭಾವಚಿತ್ರವನ್ನು ಕೊಟ್ಟರೆಂದೂ ವರದಿಯಾಗಿದೆ

ರೆಡ್ ಕ್ರಾಸ್ ವಾರದ ಆರಂಭೋತ್ಸವ

ರಾಜಧಾನಿಯ ಹಾರ್ಡ್ವಿಕ್ ಹೈಸ್ಕೂಲ್ ಮತ್ತು ಮಿಡ್ಲ್ ಸ್ಕೂಲಿನ ಸ್ಕೌಟುಗಳೂ ಮತ್ತು ವಿದ್ಯಾರ್ಥಿಗಳೂ ಮೈಸೂರು ತಾಲೂಕಿಗೆ ಮೈಲಿಯಲ್ಲಿರುವ ಲಿಂಗಾಂಬುಧಿಪಾಳ್ಯ ಎಂಬಲ್ಲಿ ಕಳೆದ ಶನಿವಾರ 11ನೇ ತಿಂಗಳುಗಳ ಸಮಾಜಸೇವಾ ಕಾರ್ಯಕ್ರಮವನ್ನು ಆರಂಭಿಸಿ ಗ್ರಾಮದ ರಸ್ತೆಗಳು ಮತ್ತು ಬಚ್ಚಲು ಮುಂತಾದುವುಗಳನ್ನು ಸ್ವಚ್ಛ ಮಾಡಿಸಿದರು ಸ್ಕೌಟ್ ಮಾಸ್ಟರ್ ಶ್ರೀ ಜೆ ಪಿ ಕೃಷ್ಣಸ್ವಾಮಿಯವರು ಧ್ವಜಾರೋಹಣ ಮಾಡಿ ಧ್ವಜ ವ ತ್ತು ರಾಷ್ಟ್ರಗೀತೆಗಳ ಮಹತ್ವವನ್ನು [illegible] ಭಾಷಣ ಮಾಡಿದರು [illegible] ಪ್ರಾಥಮಿಕ ಶಾಲೆಯೊಂದನ್ನು ಆಸೆಸ್ಟ್ ಚೆನ್ನಪ್ಪನವರ [illegible] ಅದನ್ನು ಮೂರು ತಿಂಗಳ [illegible] ವಿದ್ಯಾರ್ಥಿಗಳ [illegible]

ಜೀವನ ಪರಿಚಯ ಮತ್ತು ಧ್ಯೇಯಗಳ ಭಾಷಣ ಸ್ಪರ್ಧೆ

ರಾಜಧಾನಿಯ ಎವಿ [illegible] ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಮೊನ್ನೆ ಜೀವನಪರಿಚಯ ಹಾಗೂ ಧ್ಯೇಯಗಳ ಭಾಷಣ ಸ್ಪರ್ಧೆ ನಡೆಯಿತು. ಪ್ರಥಮ ದರ್ಜೆ ಕಾಲೇಜಿನ ಅಧ್ಯಾಪಕರಾದ ಶ್ರೀ ಕೆ ಕೃಷ್ಣಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು [illegible] ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು ಶ್ರೀಗಳಾದ ಕೆ ಎಸ್ ಕೃಷ್ಣಮೂರ್ತಿ, ಬಲರಾಮ್ ಮತ್ತು ಹೆಚ್ ಸದಾಶಿವಯ್ಯನವರಿಗೆ ಕ್ರಮವಾಗಿ ಪ್ರಥಮ ದ್ವಿತೀಯ ಮತ್ತು ತೃತೀಯ ಬಹುಮಾನಗಳು ದೊರೆತವು

ಮಹದೇಶ್ವರ ಸ್ವಾಮಿ ರಥೋತ್ಸವ

ಟಿ ನರಸೀಪುರ ತಾಲ್ಲೂಕು ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮಕ್ಕೆ ಸೇರಿದ ಅರವಟ್ಟಿಗೆ ಕೊಪ್ಪಲಿನ ಶ್ರೀ ಮಹದೇಶ್ವರ ಸ್ವಾಮಿಯ ಕಾರ್ತೀಕ ಮಾಸದ ಜಾತ್ರೆಯು ಎಂದಿನಂತೆ ಇದೇ [illegible] ನೇ ತಾರೀಖಿನಿಂದ [illegible] ವರೆಗೆ ನಡೆಯುವುದು

ಸುಸಮಯ ಸುಲಭ ಬೆಲೆ

ಮೈಸೂರು [illegible] ಕಂಪನಿ

ಅಪ್ಪಟ ಸಿಲ್ಕ್ ಸೀರೆಗಳಿಗೆ

[illegible]

ಕೆ ಎಸ್ ಸತ್ಯನಾರಾಯಣದಾಸ್,

ಜವಳಿ ವ್ಯಾಪಾರಿಗಳು,

[illegible]

([illegible])

ಮೈಸೂರು

ಆಂಧ್ರ ಪ್ರಾಂತ ಸ್ಥಾಪನೆಗೆ ಸೀತಾರಾಮರ ಹೊಸ ಸಲಹೆ

ಆಂಧ್ರ ಪ್ರಾಂತದ ಸ್ಥಾಪನೆಯನ್ನು ಮಾಡಿ, ಆ ಸಂಸ್ಥಾನದ ಪ್ರಥಮ ಮಂತ್ರಿಮಂಡಲವನ್ನು ನಡೆಸುವಂತೆ ಕೇಂದ್ರ ಸರ್ಕಾರದವರು ತಮಗಿಚ್ಛೆಬಂದವರನ್ನು ಮುಖ್ಯ ಮಂತ್ರಿಯಾಗಿ ನೇಮಿಸಬಹುದೆಂದೂ, ಆ ಹೊಸ ಸರ್ಕಾರವು ಒಂದು ವರ್ಷ ಕಾಲ ನಡೆಯಲೆಂದೂ ಸ್ವಾಮಿ ಸೀತಾರಾಮರವರು ಸಲಹೆಯೊಂದನ್ನು ಮಾಡಿರುತ್ತಾರೆ ಕಮ್ಯೂನಿಸ್ಟರು ಆಂಧ್ರ ಪ್ರಾಂತವಾದ ನಂತರ ಚುನಾವಣಾ ಸಭೆಗಳಿಗೆ ಬಹುಸಂಖ್ಯಾತರಾಗಿ ಬರುವರೆಂದು ಸರ್ಕಾರದವರು ಭಾವಿಸಿದ್ದರೆ ಮೇಲ್ಕಂಡ ಮಾರ್ಗವು ಸೂಕ್ತವಾದದೆಂದು ಅವರು ಅಭಿಪ್ರಾಯಪಟ್ಟಿರುವರು

ಭಾರತೀ ಸ್ತ್ರೀ ಸಮಾಜ

ವಾಣೀವಿಲಾಸ ಮೊಹಲ್ಲಾ ಭಾರತೀ ಸ್ತ್ರೀ ಸಮಾಜದಲ್ಲಿ ಮಹಿಳೆಯರಿಗಾಗಿ ಪ್ರಥಮ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಹಿಂದೀ ತರಗತಿಗಳೂ ಹೊಲಿಗೆ ಮತ್ತು ಕಸೂತಿ ತರಗತಿಗಳ [illegible] ಭವಾಗಿವೆ [illegible] ತರಗತಿಗಳನ್ನು [illegible]

ಧನ್ವಂತರಿ ಜಯಂತಿ

[illegible] ಕೃಷ್ಣರಾಜ [illegible] ವೈದ್ಯ [illegible] ಶ್ರೀಮತಿ [illegible] ಧನ್ವಂತರಿ ಜಯಂತಿ [illegible] ಆಯುರ್ವೇದ [illegible] ಪ್ರಾಧ್ಯಾಪಕರಾದ ಡಾಕ್ಟರ್ [illegible] ದೇವೇಂದ್ರಪ್ಪನವರ ಗಾಯನವೂ ಏರ್ಪಾಡಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible] ಸಂಗೀತ [illegible] ಪಲ್ಲವಿ [illegible] ಹಿಂದೀ ಗೀತೆಗಳು [illegible] ಎಸ್ ಸುಬ್ರಹ್ಮಣ್ಯಂ [illegible] ಕೃಷ್ಣಮೂರ್ತಿ, ಎಸ್ ವೆಂಕಟರಮಣಯ್ಯ [illegible] ಮುಚ್ಚಿನ ಗೀತೆಗಳು

ನಾಟಕರತ್ನ ಜಿ ಹೆಚ್ ವೀರಣ್ಣನವ

ಗುಬ್ಬಿ ಕಂಪೆನಿ

ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ

15 10-52 ರಿಂದ ಪ್ರತಿ ದಿನ

ಸಂಜೆ 6—30ಕ್ಕೆ

ಪ್ರತಿ ಶನಿವಾರ, ಬುಧವಾರ ರಾತ್ರಿ 10ಕ್ಕೆ

ಸಾಹುಕಾರ

ಎಂಬ ನಾಟಕವನ್ನು ಅಭಿನಯಿಸುವರು

೧೩೦ನೇ ವಯಸ್ಸಿನಲ್ಲಿ ಹಲ್ಲುಗಳ ಮೊಳಕೆ

ಪಾಕಿಸ್ತಾನದ ಲಾಹೋರಿನಲ್ಲಿ ೧೩೦ ವರ್ಷ ವಯಸ್ಸಿನ ಆಯೇಷಾ ಎಂಬ ವೃದ್ಧಳು ಇತ್ತೀಚೆಗೆ ಮೃತಪಟ್ಟಳೆಂದೂ ಸಾಯುವ ವೇಳೆಯಲ್ಲಿ ಆಕೆಗೆ ಹೊಸ ಹಲ್ಲುಗಳು ಮೊಳೆಯಲು ಆರಂಭಿಸಿದ್ದುವೆಂದೂ ಹೇಳಲಾಗಿದೆ ಸಾಯುವವರೆಗೆ ಅವಳ ಕಣ್ಣಿನ ದೃಷ್ಟಿಯು ಚೆನ್ನಾಗಿತ್ತೆಂದ ವರದಿಯಾಗಿದೆ

ಅಭಿನಂದನಾ ಸಭೆ

ರಾಜಧಾನಿಯ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿ ದೇವಾಲಯದಲ್ಲಿ ಮೊನ್ನೆ ನವಮಿ ಪ್ರಯುಕ್ತ ವಿಶೇಷ ಪೂಜಾದಿಗಳೂ, ನಗರದ ಆರೋಗ್ಯಾಧಿಕಾರಿಗಳಾದ ಶ್ರೀ ಎಸ್ ಶೇಷಗಿರಿರಾವ್ ಜಿಲ್ಲಾ [illegible] ಅಧಿಕಾರಿಗಳಾದ ಶ್ರೀ ಎ ಭೈರಪ್ಪ ಮತ್ತು ನಗರದ ಟೌನಪ್ಲಾನಿಂಗ್ ಅಧಿಕಾರಿಗಳಾದ ಶ್ರೀ ಹೆಚ್ ಜಿ ವಿಜಯರಾಘವರೆಡ್ಡಿ ಇವರುಗಳನ್ನು ಅಭಿನಂದಿಸುವ ಸಲುವಾಗಿ ಸಭೆಯೂ ನಡೆದುವು ಶ್ರೀಮತಿ [illegible] ಶ್ರೀ [illegible] ಸಂಗೀತ ಕಛೇರಿಯು ನಡೆದ ನಂತರ [illegible] ಶ್ರೀ [illegible] ಲಿಂಗಣ್ಣ [illegible] ಉತ್ತರವಿತ್ತು ಕೃತಜ್ಞತೆಯನ್ನು ಸೂಚಿಸಿದ ನಂತರ ಸಮಾರಂಭವು ಮುಕ್ತಾಯವಾಯಿತು

ಎಲ್ಲಾ ಬಗೆಯ

ಅಲೋಪಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

ನೀರಿನ ಮೇಲೆ ಇಳಿಯಬಲ್ಲ ವಿಮಾನ

ನೀರಿನ ಮೇಲಾಗಲೀ, ಮಂಜಿನ ಮೇಲಾಗಲೀ ಅಥವಾ ನೆಲದ ಮೇಲಾಗಲೀ ಇಳಿಯಬಲ್ಲ ವಿಮಾನವೊಂದನ್ನು ಸಾವೇಯ ಆಸ್ಲೋ ನಗರದಲ್ಲಿ ತಯಾರಿಸಲಾಗಿದೆಯೆಂದೂ, ಅದು [illegible] ಜನರು ಅಥವಾ ಅವರ ತೂಕದಷ್ಟು ಹೊರೆಯನ್ನು ಹೊತ್ತು ಗಂಟೆಗೆ [illegible] ಮೈಲಿ ವೇಗದಲ್ಲಿ ಸಂಚರಿಸಬಲ್ಲದೆಂದೂ ಹೇಳಲಾಗಿದೆ

ರೈಲು ಮಾರ್ಗದಲ್ಲಿ ಡೀಸೆಲ್ ಕಾರು ಪ್ರಯಾಣದ ವ್ಯವಸ್ಥೆ

ತಿರುನಲ್ವೇಲಿ ಜಿಲ್ಲೆಯ ರೈಲ್ವೆ ರಸ್ತೆಗಳಲ್ಲಿ ಡೀಸೆಲ್ ಎಣ್ಣೆಯಿಂದ ನಡೆಯುವ ಕಾರುಗಳ ಸಂಚಾರದ ವ್ಯವಸ್ಥೆಯನ್ನು ಏರ್ಪಡಿಸಲು ದಕ್ಷಿಣ ರೈಲ್ವೆಯವರು ಆಲೋಚಿಸುತ್ತಿರುವರೆಂದು ಹೇಳಲಾಗಿದೆ ಆ ಕಾರುಗಳಲ್ಲಿ ೧೫೦ ಮಂದಿ ಪ್ರಯಾಣಿಕರು ಕುಳಿತುಕೊಳ್ಳಬಹುದೆಂದು ತಿಳಿಸಲಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲಗಳ್ಳೆ ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	
ಹೊಂಗೆಬೀಜ	[illegible]	
ಉದ್ದು	[illegible]	
ಅವರೆ	[illegible]	
[illegible]	[illegible]	[illegible]
[illegible]	[illegible]	[illegible]
[illegible]	[illegible]	
[illegible]	[illegible]	
ಬೆಲ್ಲ	[illegible]	

[illegible]

WANTED

One C B 7 or C B G Graduate on Rs 60 plus 20 D A Apply immediately to –

THE SECRETARY,
Municipal High School
Managing Committee,
GUNDLUPET

Edited, Printed and Published by A R Nagaraj at Sadhvi Press, D Subbaiah Road Mysore

ಒಲಿಂಪಿಯಾ

ಅಮೋಘ ಪ್ರಾರಂಭ 16 10 52 ರಿಂದ

ದಿನವೂ ಮೂರು ಪ್ರದರ್ಶನಗಳು

ದೀಪಾವಳಿ ಹಬ್ಬದ ವಿಶೇಷ ಆಕರ್ಷಣೆ

[illegible]

[illegible]

[illegible]

✱ ಅಂಜಾಮ್ ✱

[illegible]

ಬೆಳಗಿನ ಪ್ರದರ್ಶನ 16.10.52 ರಿಂದ 4 ದಿನಗಳು ಮಾತ್ರ

ನೂತನ ಚಿತ್ರವಹಿಸಿರುವ — ನಗೀನ —

[illegible] || ವಂದೇ ಮಾತರಂ || ಇಂದಿನ ಪತ್ರಿಕೆ 3 ಆಣೆ

ಸಾಧ್ವಿ

ಸಂಪುಟ ೧೧] ಬುಧವಾರ ೧೫-೧೦-೧೯೫೩ [ಸಂಚಿಕೆ ೬೫

ಭಾರತಕ್ಕೆ ದಕ್ಷಿಣ ಆಫ್ರಿಕಾ ಪ್ರಧಾನಿಯ ಬೆದರಿಕೆ

[illegible] ಪಂಚಾಯತ್ತಿ ಅಧ್ಯಕ್ಷರ ಬಂಧನ

ಮೈಸೂರು ೧೫

[illegible] ರಾಜಾದ್ರಿಪುರ ಮತ್ತು ಉತ್ತನಹಳ್ಳಿ [illegible] ವಿಮಾನೊಂದರ ವ್ಯವಸಾಯದ [illegible] ಕೊಲೆಗಳ ಸಂಬಂಧ [illegible] ತಾಲ್ಲೂಕು ಪೊಲೀಸಿನವರು [illegible] ಪಂಚಾಯತಿ ಅಧ್ಯಕ್ಷ ಮಾದಯ್ಯ [illegible] ಕಾರ್ಯದರ್ಶಿ ಪುಟ್ಟಮಾದಯ್ಯ ಎಂಬುವರನ್ನೂ ಇನ್ನೂ ೧೧ ಜನರನ್ನೂ ದಸ್ತಗಿರಿ ಮಾಡಿರುತ್ತಾರೆ ಲಿಂಗಯ್ಯ ಎಂಬುವ ತಪ್ಪಿಸಿಕೊಂಡಿರುವನೆಂದು ಹೇಳಿದೆ

[illegible] ವಿಶ್ವೇಶ್ವರಯ್ಯನವರ ಆಗಮನ

[illegible] ದಿವಾನರಾದ ಶ್ರೀ ಎಂ. ವಿಶ್ವೇಶ್ವರಯ್ಯನವರು ಈ ದಿನ ೧೧ ಗಂಟೆಗೆ [illegible] ಗಳೂರಿನಿಂದ ಇಲ್ಲಿಗೆ ಕೈಗಾರಿಕಾ [illegible] ಸಿದ್ದಲಿಂಗಯ್ಯನವರೊಡನೆ ಆಗಮಿಸಿದರು [illegible] ಅವರು ಸರ್ಕಾರಿ ಅತಿಥಿ [illegible] ಯವರು ಅವರನ್ನು ಸ್ವಾಗತಿಸಿದರು [illegible] ಶ್ರೀ ಎ. ಕೃಷ್ಣಮೂರ್ತಿರಾವ್ [illegible] ಅಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ [illegible] ಲಿಂಗಣ್ಣ, ಚೀಫ್ ಇಂಜನಿಯರ್ [illegible] ಬಿ. ಎಸ್. ವೆಂಕಣ್ಣ ಮುಂತಾದವರು [illegible] ಬಂದಿಳಿಸಿದರು ಅವರು ಈ ಸಂಜೆ [illegible] ಕೃಷ್ಣರಾಜಸಾಗರಕ್ಕೆ ಭೇಟಿ ಕೊಡು[illegible]

[illegible] ನಿಧಿ ಸಂಗ್ರಹ

[illegible] ವರ್ಷದಂತೆ ಈ ಸಾರಿಯೂ ದೀ[illegible] ಹಬ್ಬ ಸಮಯದಲ್ಲಿ ರಾಜಧಾನಿ [illegible] ಟಕೂಪ್ಪಲಿನಲ್ಲಿರುವ ಮಹಾಜ[illegible] ಪಾಠಶಾಲೆಯ ವಿದ್ಯಾರ್ಥಿಗಳೂ [illegible] ಉಪಾಧ್ಯಾಯರೂ ಇದೇ ೧೬. ನೇ [illegible] ರಿಂದ ಮೂರು ದಿನಗಳು ನಿಧಿ [illegible] ಎತ್ತುವರೆಂದೂ, ಮಹಾಜನ [illegible] ಉದಾರವಾಗಿ ಸಹಾಯ ನೀಡಬೇಕೆಂ [illegible] ಶಾಲಾ ಅಧ್ಯಕ್ಷ ಶ್ರೀ ಅಂಬಳೆ ಸುಬ್ರ[illegible] ಅಯ್ಯರ್‌ರವರು ಕೋರಿರುವರು

ಮೈಸೂರಿಗೆ ಆನಂದ ನಂಬಿಯಾರ್

[illegible] ರತದ ಪಾರ್ಲಿಮೆಂಟಿನ ಸದಸ್ಯ [illegible] ರೈಲ್ವೆ ಕಾರ್ಮಿಕ ಸಂಘದ [illegible] ಗಳೂ ಆದ ಶ್ರೀ ಆನಂದ ನಂಬಿಯಾರ್‌ರವರು ಇದೇ ೧೭. ಮತ್ತು [illegible] ತಾರೀಖುಗಳಲ್ಲಿ ಮೈಸೂರು [illegible] ಬೆಂಗಳೂರಿಗೆ ಭೇಟಿ ಕೊಡಲಿರು[illegible] ಗೊತ್ತಾಗಿದೆ

ಭಾರತಕ್ಕೆ ಪುನಃ ೫೦ ಸಾವಿರ ಟನ್ ಚೀಣಾ ಅಕ್ಕಿ

[illegible] ಐವತ್ತು ಸಾವಿರ ಟನ್ ಅಕ್ಕಿ [illegible] ಭಾರತಕ್ಕೆ ಮಾರಲು ಚೀಣಾವು [illegible] ದರೊಡನೆ ವ್ಯಾಪಾರ ಒಪ್ಪಂದವ [illegible] ಮಾಡಿಕೊಂಡಿರುತ್ತದೆ ಈ ರೀತಿ [illegible] ಚೀಣಾವು ಭಾರತಕ್ಕೆ ಒದಗಿ[illegible] ವುದು ಇದು ಐದನೇ ಬಾರಿ

ನರಭಕ್ಷಕರು ರೋಮಿನಲ್ಲಿ ನೆಲೆಸುವರು

[illegible] ಲಿಯ ಸಂಪ್ರದಾಯ [illegible] ಈಗ ತಂಗಿ[illegible] ಆಫ್ರಿಕಾದ [illegible] ನರಭಕ್ಷಕರು [illegible] ರೋಮ್ ನಗರದ [illegible] ಭವನದಲ್ಲಿ ನೆಲೆಯೂರಿ[illegible] ವರದಿಯಾಗಿದೆ

ಹನುಮಂತರೆಡ್ಡಿಯವರು ಸೆಷನ್ಸ್ ವಿಚಾರಣೆಗೆ

ಬೆಂಗಳೂರು ೧೫

ಶ್ರೀ ಹೆಚ್. ಸಿ. ದಾಸಪ್ಪನವರ ನಿವಾಸಕ್ಕೆ ಅಕ್ರಮ ಪ್ರವೇಶ ಮಾಡಿ, ಅವರ ಕೊಲೆ ಪ್ರಯತ್ನ ನಡೆಸಿದರೆಂದು ಇಲ್ಲಿನ ನಗರದ ನ್ಯಾಯಾಧೀಶರಾದ ಶ್ರೀ ಡಿ. ಚನ್ನಬಸಪ್ಪಯ್ಯನವರು ಶ್ರೀ ಹನುಮಂತರೆಡ್ಡಿಯವರ ಮೇಲೆ ಆಪಾದನೆ ಹೊರಿಸಿ ಅವರನ್ನು ಸೆಷನ್ಸ್ ವಿಚಾರಣೆಗೆ ಒಪ್ಪಿಸಿರುವರು

ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರು ಆಪಾದಿತರನ್ನು ೨೦ ಸಾವಿರ ರೂ ಗಳ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊಬಲಗಿನ ೨ ಜಾಮೀನುಗಳ ಮೇಲೆ ಬಿಡುವಂತೆ ಆಜ್ಞೆ ಮಾಡಿದ್ದಾಗಿ, ನೆನ್ನೆ ಆಪಾದಿತರು ಅದರಂತೆ ಜಾಮೀನು ಸಲ್ಲಿಸಿ ಬಿಡುಗಡೆ ಹೊಂದಿದರು

ಬಂಗಾರುಪೇಟೆ ತಾಲ್ಲೂಕಿನಿಂದ ಶಾಸನಸಭೆಗೆ ಉಪಚುನಾವಣೆ

ಕೇಂದ್ರ ರಾಜ್ಯಮಂಡಲ ಸಭೆಗೆ ಆರಿಸಲ್ಪಟ್ಟಿರುವ ಶ್ರೀ ಕೆ. ಸಿ. ರೆಡ್ಡಿಯವರು ಸಂಸ್ಥಾನದ ಶಾಸನಸಭೆಗೆ ರಾಜೀನಾಮೆಯನ್ನು ಕೊಡಲಿರುವುದರಿಂದ ಖಾಲಿ ಬೀಳುವ ಬಂಗಾರುಪೇಟೆ ತಾಲ್ಲೂಕು ಪ್ರತಿನಿಧಿ ಸ್ಥಾನಕ್ಕೆ ನಡೆಯಬೇಕಾಗುವ ಉಪಚುನಾವಣೆಗೆ ಒಬ್ಬ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸಲು ಸಂಸ್ಥಾನದ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನಿರ್ಧರಿಸಿರುತ್ತದೆ

ಸಂಸ್ಥಾನದ ಭೂದಾನ ಯಜ್ಞ ಸಮಿತಿ ಸದಸ್ಯರು

ಮೈಸೂರು ಸಂಸ್ಥಾನದ ಭೂದಾನ ಯಜ್ಞ ಸಮಿತಿ ಸದಸ್ಯರಾಗಿ ಶ್ರೀಮತಿ ಗಳಾದ ಯಶೋಧರಾ ದಾಸಪ್ಪ, ಶರಸ್ವತಿ ನಟರಾಜ್, ಶ್ರೀಗಳಾದ ಹೆಚ್. ಸಿ. ದಾಸಪ್ಪ, ಎಸ್. ವಾಸುದೇವರಾವ್ ಸಿದ್ದನಹಳ್ಳಿ, ಕೃಷ್ಣಶರ್ಮ, ಎಲ್. ಎಸ್. ವೆಂಕಾಜಿರಾವ್, ಬಿ. ಎಸ್. ನಾರಾಯಣರಾವ್ ರಾಜಾರಾಮಯ್ಯಂಗಾರ್, ವೆಂಕಟರಾಮಯ್ಯ, ನಿಟ್ಟೂರು ಶ್ರೀನಿವಾಸರಾವ್ ಕೆ. ಶ್ರೀನಿವಾಸರಾವ್ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರನ್ನು ಭಾರತದ ಸರ್ವಸೇವಾ ಸಂಘದವರು ನೇಮಿಸಿರುತ್ತಾರೆ

ಈಜಿಪ್ಟಿಗೆ ಒಬ್ಬರೇ ರೀಜೆಂಟರು

ಈಜಿಪ್ಟಿನ ರಾಜ್ಯಾಡಳಿತ ನಡೆಸುತ್ತಿರುವ ರಾಜಪ್ರತಿನಿಧಿ ಮಂಡಲದ ಸದಸ್ಯರೊಬ್ಬರಾದ ಕರ್ನಲ್ ರಷಾದ್ ಮೆಹನ್ನಾರವರು ರಾಜಕೀಯದಲ್ಲಿ ಭಾಗವಹಿಸಿ, ಪ್ರಭಾವ ಬೀರುತ್ತಿದುದರಿಂದ ಅವರನ್ನು ಜನರಲ್ ನಗೀಬ್‌ರವರ ಸರ್ಕಾರವು ಪದಚ್ಯುತಿಗೊಳಿಸಿರುವುದಲ್ಲದೆ ಇದುವರೆಗೆ ಆಡಳಿತ ನಡೆಸುತ್ತಿದ್ದ ಮೂರು ಜನ ರೀಜೆಂಟರ ಸಮಿತಿಯನ್ನು ರದ್ದು ಮಾಡಿ ರಾಜವಂಶಿಕನಕ್ಕೆ ಸೇರಿದ ಅಬ್ದುಲ್ ಮನ್ಸೂರ್ ರವರೊಬ್ಬರನ್ನೇ ರೀಜೆಂಟರನ್ನಾಗಿ ನೇಮಿಸಿರುತ್ತದೆ

ಇರಾನ್ ಸರ್ಕಾರವನ್ನು ಉರುಳಿಸಲು ಪಿತೂರಿ

ಪರ್ಷಿಯದ ರಾಜಧಾನಿ ಟೆಹರಾನಿನಲ್ಲಿರುವ ಒಂದು ವಿದೇಶಿ ರಾಯಭಾರಿ ಕಛೇರಿಯ ಸಹಾಯದಿಂದ, ಪರ್ಷಿಯಾ ಸರ್ಕಾರವನ್ನು ಉರುಳಿಸುವ ಪಿತೂರಿಯೊಂದು ನಡೆದಿತ್ತೆಂದೂ, ಈ ಸಂಬಂಧವಾಗಿ ಒಬ್ಬ ಸೈನ್ಯಾಧಿಕಾರಿಯನ್ನು ದಸ್ತಗಿರಿ ಮಾಡಲಾಗಿದೆಯೆಂದೂ ವರದಿಯಾಗಿದೆ ಇಬ್ಬರು ಪರ್ಷಿಯಾ ಸೈನ್ಯಾಧಿಕಾರಿಗಳು ಮತ್ತು ಅಲ್ಲಿನ ಹಲವು ಶಾಸನ ಸಭಾ ಸದಸ್ಯರು ಈ ಪಿತೂರಿಯಲ್ಲಿ ಸೇರಿದ್ದರೆಂದು ಹೇಳಲಾಗಿದೆ

ಬಿಳಿಗಿರಿರಂಗನ ಬೆಟ್ಟದ ದೇವಸ್ಥಾನದ ಕಳಶದ ಜೀರ್ಣೋದ್ಧಾರ

ಶ್ರೀ ಬಿಳಿಗಿರಿ ರಂಗಸ್ವಾಮಿಯವರ ಬೆಟ್ಟದಲ್ಲಿ ಶ್ರೀ ರಂಗನಾಯಕಿ ಅಮ್ಮನವರ ದೇವಸ್ಥಾನದ ಕಳಶದ ಜೀರ್ಣೋದ್ಧಾರ ಸಮಾರಂಭವನ್ನು ಇದೇ ೨೦ನೇ ತಾರೀಖು ಸೋಮವಾರ ಬೆಳಿಗ್ಗೆ ೯-೧೫ ಘಂಟೆಯಿಂದ ೧೦ ಘಂಟೆಯೊಳಗೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ ನೆರವೇರಿಸಲಾಗುವುದು ಕಳಸಕ್ಕೆ ಚಿನ್ನದ ಮುಲಾಮು ಹಾಕಿಸುವ ಏರ್ಪಾಡು ಆಗುತ್ತಿದೆ

○ ಪಶ್ಚಿಮ ಪಂಜಾಬಿನ ಸಿಯಾಲ್‌ಕೋಟೆಯಲ್ಲಿ ಪಾಕಿಸ್ತಾನದ ಸೈನಿಕರು ನೆನ್ನೆ ಕವಾಯತು ನಡೆಯುತ್ತಿದ್ದಾಗ, ಬಾಂಬೊಂದು ಸಿಡಿದು ೭ ಮಂದಿ ಸತ್ತು, ೩೦ ಜನರು ಗಾಯಗೊಂಡಿರುವರೆಂದು ವರದಿಯಾಗಿದೆ

ಕುದುರೆ ಜೂಜಿನ ಸ್ಥಳಕ್ಕೆ ೩,೦೦೦ ರೂ. ಶುಲ್ಕ

ಬೆಂಗಳೂರು

ಕುದುರೆ ಜೂಜು ಸ್ಥಳಗಳ ರಕ್ಷಣೆ ಶಾಸನದ ಪ್ರಕಾರ ಜೂಜಿನ ಸ್ಥಳಗಳಿಗೆ ಸಾಲಿಯಾನಾ ೩ ಸಾವಿರ ರೂ ಶುಲ್ಕವನ್ನು ಕೊಡಬೇಕೆಂದು ಆಜ್ಞೆ. ಇದಲ್ಲದೆ ಗೊತ್ತಾದ ಅವಧಿಯೊಳಗೆ ೩೦೦೦ ರೂ ಕೊಟ್ಟು ಪುನಃ ಮಾರನೆ ವರ್ಷದ ಪರವಾನಗಿ ಪಡೆಯಬೇಕೆಂದು, ತಪ್ಪಿದರೆ ಅಪರಾಧಕ್ಕಾಗಿ ೬೦೦೦ ರೂ ಕೊಡಬೇಕಾಗುವುದೆಂದೂ ತಿಳಿಸಲಾಗಿದೆ

ಭಾರತಕ್ಕೆ ಮಲಾನರ ಬೆದರಿಕೆ

ದಕ್ಷಿಣ ಆಫ್ರಿಕದ ಪ್ರಧಾನಿ ಡಾಕ್ಟರ್ ಡೇನಿಯಲ್ ಮಲಾನರು ಹೇಳಿಕೆಯೊಂದನ್ನಿತ್ತು ಶಾಂತಿ ಸ್ಥಾಪನೆಗೆ ಭಾರತ ಪ್ರಾಮಾಣಿಕವಾಗಿಯೂ ಇಚ್ಛೆ ಪಡುದಾದರೆ ಬೇರೆ ರಾಷ್ಟ್ರದ ಒಳನಾಡಿನ ಮಧ್ಯೆಗಳಲ್ಲಿ ಅದು ಪ್ರವೇಶಿಸಕೂಡದೆಂದು ಎಚ್ಚರಿಸಿರುತ್ತಾರೆ. ಒಂದು ದೇಶದಲ್ಲಿರುವ ಪ್ರಜೆಗಳ ಒಂದು ಗುಂಪಿನ ಪರವಾಗಿ ಪದೇಪದೇ ಪ್ರವೇಶಿಸುವುದರಿಂದ ಯಾವ ಪ್ರಯೋಜನವೂ ಆಗದೆ ಪರಿಸ್ಥಿತಿಯು ಬಿಗಡಾಯಿಸುವುದೆಂದೂ ಅವರು ಹೇಳಿರುವರು

ಗೂಡ್ಸ್ ಗಾಡಿಗೆ ಮೇಲ್ ರೈಲು ಢಿಕ್ಕಿಯಿಂದ ೭ ಮರಣ

ಕರಾಚಿ ಮತ್ತು ಕ್ವೆಟ್ಟಾಗಳ ನಡುವೆ ರೈಲು ರಸ್ತೆಯಲ್ಲಿ ನೆನ್ನೆ ರಾತ್ರಿ ಮೇಲ್ ರೈಲು ಜಾಕಾಬಾಬಾದ್ ಬಳಿ ಒಂದು ಗೂಡ್ಸ್ ರೈಲಿಗೆ ಢಿಕ್ಕಿ ಹೊಡೆದುದರ ಪರಿಣಾಮವಾಗಿ ೭ ಜನರು ಮಡಿದು, ೧೮ ಮಂದಿಗೆ ಗಾಯವಾಗಿರುತ್ತದೆ ಢಿಕ್ಕಿಗೆ ಮುಂಚೆ ಮೇಲ್ ಗಾಡಿ ಡ್ರೈವರನು ಹೊರಕ್ಕೆ ಹಾರಿ ಅಪಾಯದಿಂದ ಪಾರಾದನು ಡ್ರೈವರ್‌ನನ್ನು ಗೆ ಪಟ್ಟಬದ್ಧಿದೆ

ಭಾರತ-ಪಾಕಿಸ್ತಾನಗಳ ಮಧ್ಯೆ ರಹದಾರಿ ಏರ್ಪಾಟು

ನೆನ್ನೆ ಮಧ್ಯರಾತ್ರಿಯಿಂದ ಭಾರತ ಸರ್ಕಾರದವರು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಜನ ಸಂಚಾರದ ರಹದಾರಿ ಏರ್ಪಾಟನ್ನು ಜಾರಿಗೆ ತಂದಿರುತ್ತಾರೆ ಪಾಕಿಸ್ತಾನ ಸರ್ಕಾರದವರು ಈ ವರಂತೆಯೇ ನಿರ್ಧರಿಸಿ ಈ ಪದ್ಧತಿಯನ್ನು ಇದೇ ತಿಂಗಳು ೧೭ ರಿಂದ ಜಾರಿಗೆ ಕೊಡುವ ವ್ಯವಸ್ಥೆ ಮಾಡಿರುತ್ತಾರೆ ಒಂದು ದೇಶದಿಂದ ಇನ್ನೊಂದಕ್ಕೆ ವಲಸೆ ಬರುವವರು ಮಾತ್ರ ರಹದಾರಿ ಚೀಟಿಯನ್ನು ಹೊಂದಬೇಕಾಗಿಲ್ಲವೆಂದು ಎರಡು ರಾಷ್ಟ್ರಗಳಿಗೂ ಒಡಂಬಡಿಕೆಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎಸ್ ಸಂಬಂಧ ಮೊದಲ, ಸಂಗೀತ ಮುಕ್ತಾಪ್ಪ ೯-೪೦ ವೀಣೆ ರಂಗಪ್ಪ ವೇಣುಗಾನ ಸಂಜೆ ೫-೪೦ ಎಂ [illegible] ವರದಾಸ್ವಾಮಿ [illegible] ೬-೧೦ ಕನ್ನಡ ಗೀತೆಗಳು ೭ ರ ೫ [illegible] ೭-೩೦ ಎಸ್ ಸಂಬಂಧ ಮೊದಲ, ಸಂಗೀತ [illegible] ಭಾರತ ವಾಣಿ [illegible] ರಂಗಪ್ಪ ವೀಣಾ ಗಾನ [illegible] ೯-೪೦ ವಿದ್ಯಾರ್ಥಿ ಮಂಡಳಿ-ವಿದ್ಯಾರ್ಥಿಗಳ ಕಾರ್ಯಕ್ರಮ

○ ರಾಜಧಾನಿಯ ಕುಕ್ಕರಹಳ್ಳಿ ಕೆರೆಯಲ್ಲಿ ನೆನ್ನೆ ಒಬ್ಬ ಗಂಡಸಿನ ಶವವು ತೇಲುತ್ತಿದ್ದುದು ಪತ್ತೆಯಾಗಿದೆ

ನೆಹರೂರವರಿಂದ ರೋಗ ನಿವಾರಣೆ ಬಗ್ಗೆ ಎಚ್ಚರಿಕೆ

ಆಯುರ್ವೇದ ವಿದ್ವಾನ್ ಡಾ|| ಎಸ್ ಎಸ್ ಸುಬ್ರಹ್ಮಣ್ಯ ಶಾಸ್ತ್ರಿಗಳು ಈ ರೀತಿ ಬರೆದಿರುತ್ತಾರೆ —

ಹಾರಿ ಬಿಸ್ಕ ಪ್ರಧಾನಿ ನೆಹರೂರವರಿಗೆ ೧೦ ಜನ ಡಾಕ್ಟರುಗಳು ಸುತ್ತುವರಿದು ಅನೇಕ ಔಷಧಿಗಳು ಇಂಜಕ್ಷನುಗಳನ್ನೂ ತಂದು ಗಾಬರಿಗೊಳಿಸಿದರಂತೆ ಅವರು ಪ್ರತಿಭಟಿಸಿದರೂ ಬಿಡದೆ ಧನುರ್ವಾಯು ಬರದಂತೆ ತಡೆಯುವ ಇಂಜಕ್ಷನ್ನನ್ನು ಚುಚ್ಚಿಯೇ ಬಿಟ್ಟರಂತೆ ಅದರ ಪರಿಣಾಮವಾಗಿ ಅವರ ಶರೀರವೆಲ್ಲಾ ಹಲವು ದಿನಗಳ ವರೆವಿಗೆ ಭಾರಿ ಬೆಲೂನಿನಂತೆ ಊದಿಕೊಂಡಿತಂತೆ ಇದನ್ನು ಅನುಭವಿಸಿದ ಪ್ರಧಾನಿಯವರು "ಜನರು ಪದೇ ಪದೇ ಔಷಧಿ ಸೇವಿಸಬಾರದೆಂದು" ಸಕಾಲದಲ್ಲಿ ಎಚ್ಚರಿಸಿದ್ದಾರೆ

ಇದನ್ನು ತಿಳಿದಾದರೂ ಭಾರತೀಯರೆಲ್ಲಾ ಜಾಗ್ರತಿಗೊಂಡು ಇಂತಹ ಪ್ರಯೋಗಗಳನ್ನು ತೀವ್ರವಾಗಿ ಪ್ರತಿಭಟಿಸಬೇಕು ಪ್ರಧಾನಿಯವರೂ ಒಂದು ವಿಷಯವನ್ನು ಕೂಡಲೇ ಗಮನಿಸಬೇಕು ಪ್ರಧಾನಿಯವರ ಪ್ರತಿಭಟನೆಯನ್ನೇ ನಿರ್ಲಕ್ಷಿಸುವಾಗ ಜನಸಾಮಾನ್ಯರ ಪ್ರತಿಭಟನೆ ಪರಿಣಾಮ ಕಾರಿಯಾಗುತ್ತದೆಯೇ? ಎಂದು ಅವರು ಆಲೋಚಿಸಿ ನೋಡಬೇಕು ಏಕೆಂದರೆ ಒಂದು ಇಂಜಕ್ಷನ್ ತನ್ನ ಜೀವಮಾನದಲ್ಲಿ ಒಂದಾವರ್ತಿ ಹೊಂದಿ ಕಷ್ಟ ಅನುಭವಿಸಿರುವಾಗ ಪ್ರತಿ ವರ್ಷ ಸಿಡುಬು, ಕಾಲರಾ, ಪ್ಲೇಗ್ ಡಿಫ್ತೀರಿಯಾ ಟೈಫಾಯಿಡ್ ನ್ಯುಮೋನಿಯಾ ಧನುರ್ವಾಯು ಇವಕ್ಕೆಲ್ಲಾ ಬಿಸಿಜಿ ಘೋರ ವಿಷಗಳ ಬಿ ಸಿ ಜಿ ಇತ್ಯಾದಿ ಅನೇಕ ವಿಷಗಳನ್ನು ಹುಟ್ಟಿದ ಮಗುವಿನಿಂದ ಹಿಡಿದು ವೃದ್ಧರ ವರೆವಿಗೂ ಬಲಾತ್ಕಾರದಿಂದ ಚುಚ್ಚುತ್ತಾ ದೇಹಕ್ಕೆ ಎಷ್ಟು ಬಾಧೆ ಉಂಟು ಮಾಡುತ್ತಿದ್ದಾರೆಂಬುದನ್ನು ದಯಮಾಡಿ ಗಮನಿಸಬೇಕು

ಮೊದಲ್ಲ ಕಂದಗಳ ಕೋಮಲ ದೇಹಕ್ಕೆ ಇಷ್ಟೊಂದು 'Shock' ಉಂಟುಮಾಡುವುದರ ಪರಿಣಾಮವೇನೆಂಬ ದರ ಅರಿವೇ ಇಲ್ಲದೆ ಆರೋಗ್ಯ ದಾನ ಮಾಡ ತ್ತೇವೆಂದು ಆರೋಗ್ಯಾಧಿಕಾರಿಗಳು ತಾಯಿತಂದೆಗಳನ್ನು ಬೆದರಿಸಿ ಔಷಧಿ ಪ್ರಯೋಗಿಸುತ್ತಿದ್ದಾರೆ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಬೆದರಿಸಿ, ಪ್ರತಿ ವರ್ಷ ಆರೋಗ್ಯವಾಗಿರುವ ದೇಹಗಳ ಮೇಲೆ ಸಂಸಜ್ಜಿತ ಧಾಳಿಯನ್ನೇ ಮಾಡುತ್ತಿದ್ದಾರೆ

ಇತ್ತೀಚೆಗಳಲ್ಲಿ ಬಿ ಸಿ ಜಿ ವ್ಯಾಕ್ಸೀನ್ ವಿಚಾರದಲ್ಲಿ, ಅದರಿಂದಾದ ದುಷ್ಪರಿಣಾಮಗಳನ್ನು ವಿಮರ್ಶಿಸಿ ಭಾರತಾದ್ಯಂತ ಪ್ರತಿಭಟನಾ ಸಭೆಗಳು ನಡೆದೂ, ನೊಂದ ಜನರು ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಮಾಡಿದ್ದರೂ ಕೂಡ ಅದೇ ಸ್ವಾತಂತ್ರ್ಯ ಸಮಾರಂಭದ ದಿವಸ ದೇಶಾದ್ಯಂತ ಏಕ ಕಾಲದಲ್ಲಿ "ಬಿ ಸಿ ಜಿ ಇಂದ ಅನರ್ಥವಾದುವಕ್ಕೆ ಯಾವ ದಾಖಲೆಯೂ ಇಲ್ಲ, ಇಂಥ ಅಮ್ಮ ತಪ್ಪು ಕ್ಷಯ ನಿವಾರಣೆಗೆ ಬೇರೆ ಇಲ್ಲವೇ ಇಲ್ಲ ಜನಗಳೆಲ್ಲಾ ಆಸಕಟ್ಟು ಇದನ್ನು ಹೊಂದುತ್ತಿದ್ದಾರೆ" ಎಂಬ ಬಹು ಸುಳ್ಳು ಪ್ರಕಟನೆಯು ಹೊರಬಿದ್ದಿರುವುದು ಸರ್ವೇದಾಶ್ಚರ್ಯವನ್ನು ಉಂಟುಮಾಡುತ್ತದೆ

ಪರಿಸ್ಥಿತಿ ಹೀಗಿರುವಾಗ ಪ್ರಧಾನಿಯವರ ಹೇಳಿಕೆಯು ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ ಭಾರತೀಯರನ್ನು

ಸರ್ ಮೊರಿಸ್ ಗ್ವಯರ್‌ರವರ ನಿಧನ

ಭಾರತದ ಫೆಡರಲ್ ಕೋರ್ಟಿನ ಪ್ರಥಮ ನ್ಯಾಯಾಧೀಶರಾಗಿದ್ದ ಸರ್ ಮಾರಿಸ್ ಗ್ವಯರ್‌ರವರು ಮೊನ್ನೆ ಇಂಗ್ಲೆಂಡಿನ ಸಸ್ಸೆಕ್ಸಿನಲ್ಲಿ ನಿಧನರಾದರೆಂದು ತಿಳಿದುಬಂದಿದೆ

ಇಂಥಾ ಘೋರ ವಿಪತ್ತಿನಿಂದ ರಕ್ಷಿಸಬೇಕಾದ್ದು ಅಗತ್ಯವಿದೆ ಅಂಥಾ ಅಧಿಕಾರವನ್ನು ಹೊಂದಿರುವ ಪ್ರಧಾನರು ಕೂಡಲೇ ಈ ಕ್ರಮಗಳನ್ನು ನಿಲ್ಲಿಸುವಂತೆ ಆಜ್ಞೆ ಮಾಡಿ, ಪ್ರಜಾ ಕೋಟಿಗೆ ನೆಮ್ಮದಿಯನ್ನೂ, ಕೋಟ್ಯಾಂತರ ರೂಪಾಯಿಗಳು ದಂಡು ವೆಚ್ಚವಾಗುತ್ತಿರುವುದನ್ನೂ ತಪ್ಪಿಸಿ ಚಿರ ಕೀರ್ತಿಗೆ ಪಾತ್ರರಾಗಬೇಕೆಂದೂ ಪ್ರಾರ್ಥಿಸುತ್ತೇನೆ ಅಲ್ಲದೆ ಇಂಗ್ಲೆಂಡ್ ಮಾತೃ ಸ್ಥಾನವಾದ ಪಾಶ್ಚಾತ್ಯ ದೇಶಗಳಲ್ಲಿ ಕೂಡಾ ಇಂಥಾ ಬಲಾತ್ಕಾರದಿಂದ ಪ ರೋಗ ಪ್ರತಿಬಂಧಕ ಕ್ರಮ ಕೂಡದೆಂದೇ ಶಾಸನ ಮಾಡಿ ಜಾರಿಯಲ್ಲಿರುವ ಕಡೆ ಏಟ್ಟಿಗಾ ಗಿರುವಂತೆ ಮಾಡಿದ್ದಾರೆಂಬುದನ್ನು ಅವರ ಗಮನಕ್ಕೆ ತರಲಿಚ್ಛಿಸುತ್ತೇನೆ

ಸಂಸ್ಥಾನದಲ್ಲಿ ೬೦ ಸಾವಿರ ಜನ ಕಾಂಗ್ರೆಸ್ ಸದಸ್ಯರು

ಸಂಸ್ಥಾನದಲ್ಲಿ ಈ ವರ್ಷ ೫೯,೩೩೬ ಮಂದಿ ಪ್ರಾಥಮಿಕ ಕಾಂಗ್ರೆಸ್ ಸದಸ್ಯರಾಗಿರುವರೆಂದು ತಿಳಿದುಬಂದಿದೆ

ಇದರ ಪರಿಚಯವಿದೆಯೇ

ಮೈ ಸೂ ರು ಸಾ ಬೂ ನು

ಸಂಪೂರ್ಣವಾಗಿ ಶುದ್ಧವಾದ ಯಾವ ಬೆರಕೆಯೂ ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ ಶ್ರಮ, ಕಾಲ ಹಣ ಉಳಿಸುತ್ತದಲ್ಲದೆ ಸಂಪೂರ್ಣ ತೃಪ್ತಿಯನ್ನು ಕೊಡುತ್ತದೆ

ಒಂದ ಪಟ್ಟಿಗೆಯನ್ನು ಬಳಸಿ ನೋಡಿ
ಎಲ್ಲ ಕಡೆಯೂ ಸಿಗುತ್ತದೆ

ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು

Edited Printed and Published by A R Nagarajan at Sadhvi Press, D Subbaiah Road Mysore

ದೀಪಾವಳಿ ಹಬ್ಬದ

ಉಡುಗೊರೆಗಾಗಿ

ನೆ ಸ್ಟ ೦ ಡ್

ಗಡಿಯಾರಗಳನ್ನೇ ಕೊಡಿರಿ

ಸ್ಟಾಕಿಸ್ಟರು

ಕೆ. ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್,

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅರಸು ರಸ್ತೆ ಮೈಸೂರು

ನಾಟಕರತ್ನ ಜಿ ಹೆಚ್ ವೀರಣ್ಣನವರ

ಗುಬ್ಬಿ ಕಂಪೆನಿ

ಮೈಸೂರು ಶಿವರಾಂಪೇಟೆ

ರತ್ನಾವಳಿ ಥಿಯೇಟರಿನಲ್ಲಿ

15 10-52 ರಿಂದ ಪ್ರತಿ ದಿನ ಸಂಜೆ 6 3 ಕ್ಕೆ

ಪ್ರತಿ ದಿನ ರಾತ್ರಿ 10ಕ್ಕೆ

ಸಾಹುಕಾರ

ಎಂ ವಿ ಟಿ ರವರನ್ನು ಅಭಿನಯಿಸುವರು

SRI GAYATHRI
TALKIES
Daily 2 Shows
On 16 10-52 One day only
ALL ABOUT EVE
From 17-10 52
VIVA ZAPATA

CHAMUNDESWARI TALKIES
From 6 10 52 Daily 3 Shows
GRAND DOUBLE ATTRACTION

THE BIG CAGE
(THE GREATEST CIRCUS SHOW)
ದಿ ಬಿಗ್ ಕೇಜ್
(ಅಪೂರ್ವವಾದ ಸರ್ಕಸ್ಸಿನ ದೃಶ್ಯಗಳು)
&
CHUMPS AT OXFORD
With Laurel & Hardy

ಒಲಿಂಪಿಯಾ ಅಮೋಘ ಪ್ರಾರಂಭ 16—10 52 ರಿಂದ

ದಿನವೂ ಮೂರು ಪ್ರದರ್ಶನಗಳು

ದೀಪಾವಳಿ ಹಬ್ಬದ ವಿಶೇಷ ಆಕರ್ಷಣೆ

ಸಂಸಾರಿಕ ಸಮಸ್ಯೆಗಳಿಗೆ ಸಿದ್ಧಾಂತವನ್ನ ಕೊಟ್ಟ ಲೇಡಿ ಡಾಕ್ಟರ್ ಪಾತ್ರದಲ್ಲಿ ವೈಜಯಂತಿಮಾಲಾ ಮತ್ತು ಪ್ರೇಮನಾಥ ಮುಖ್ಯ ಪಾತ್ರವಹಿಸಿರುವ ಗರ್ ಕೃಷ್ಣ ಪಿಕ್ಚರ್ಸ್‌ರವರ ಹಿಂದಿ ಚಿತ್ರ

*** ಆ ೯ ಜಾ ಮ್ ***

ಸಹಾಯಕ ವರ್ಗ — ಕುಲದೀಪ್ ಕೌರ್ ಮತ್ತು ಯಾಕೂಬ್

ಬೆಳಗಿನ ಪ್ರದರ್ಶನ 16-10-52 ರಿಂದ 4 ದಿನಗಳು ಮಾತ್ರ

ನೂತನ್ ಪಾತ್ರವಹಿಸಿರುವ — ನಗೀನ —

ದೀ ಪಾ ವ ಳಿ ಸ್ಪೆ ಷ ಲ್ ಪ್ರೋ ಗ್ರಾಂ !

ಪ್ರ ಭು ದೇ ವಾ ಟಾ ಕೀ ಸ್, ಮೈ ಸೂ ರು

17—10—52ನೇ :: ಶುಕ್ರವಾರದ ಆರಂಭವಾಗುತ್ತಿ :: ದಿನವಹಿ ಮೂರು ಆಟಗಳು

ರಾಜರಾಜೇಶ್ವರಿ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಪ ಳೆ ಯ್ ಉ ಳ ವ ನ್ ★

(ಬ ಡ ರೈ ತ) .... (ಜೆಮಿನಿ ರಿಲೀಸ್)

ಪಾತ್ರ — ಅಂಜಲಿ ದೇವಿ ಕನ್ನಾಂಬ ಶ್ರೀರಾಮಮೂರ್ತಿ ಲಿಂಗಮೂರ್ತಿ ಮುಂತಾದವರು

ಸಂಪುಟ ೧೧ ನಂ ೧೯೨ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೬. ೧೦ ೧೯೫೫ [ಸಂಚಿಕೆ ೬೩

ನಾಲ್ವಡಿ ಕೃಷ್ಣರಾಜರ ಪ್ರತಿಮೆಯ ಅನಾವರಣ

... ಸಂತತಿಯಲ್ಲಿ ನಾಲ್ವಡಿ ಕೃಷ್ಣರು ಶ್ರೇಷ್ಠರು

ಪ್ರತಿಮೆ ಅನಾವರಣೋತ್ಸವದಲ್ಲಿ ವಿಶ್ವೇಶ್ವರಯ್ಯನವರ ಭಾಷಣ

ಮೈಸೂರು ೧೬

... ವ ಹಾಃ ಸ್ವಾಮಿ ಉದ್ಯಾನವನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅಮೃತ ಶಿಲಾ ಪ್ರತಿಮೆಯನ್ನು ... ವಿನ ಸಂಜೆ ಮಾಜಿ ದಿವಾನರಾದ ... ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ... ನಾವರಣ ಮಾಡಿದರು ಶ್ರೀ ವಿಶ್ವೇಶ್ವರಯ್ಯನವರು ರೆಸಿಡೆನ್ಸಿ ... ದ ಕ್ಕೆ ಆಗಮಿಸಿದಾಗ ಸಚಿವ ಶ್ರೀ ಟಿ ... ಎ ಎ ಮತ್ತು ಚೀಫ್ ಇಂಜನಿ ... ರ ಶ್ರೀ ಡಿ ಎಸ್ ವೆಂಕಣ್ಣನವ ... ತನ ಆಗಮಿಸಿದರು ಶ್ರೀ ... ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣ ... ಪೌರಸಭಾ ಸದಸ್ಯರು ... ಜಿಲ್ಲಾಧಿಕಾರಿ ಶ್ರೀ ... ಸ್ವಾಗತಿಸಿದರು ... ಶ್ರೀ ಕೃಷ್ಣ ... ಪ್ರಾರ್ಥನೆಯಾದ ನಂತರ ... ರಾಜಮ್ಮ ... ಗೀತೆಯನ್ನು ... ದರು

... ರನ್ನಾವ ... ಸಂಗಪ್ಪ, ... ಮಾಜಿ ದಿವಾನ್ ... ಸಂದೇಶಗಳು ...

... ನಂತರ ... ಶ್ರೀ ... ಬೆಳ್ಳಿ ... ರಜತಕರಂಡದಲ್ಲಿ ಶ್ರೀ ... ರಯ್ಯನವರಿಗೆ ಒಪ್ಪಿಸಿದರು ... ಇನ್ನೂ ಅನೇಕ ವ ... ಅವರ ಶತಮಾನೋತ್ಸವ ... ಭಾಗ್ಯವು ದೊರಯು ... ಗಲೆಂದು ಬಿನ್ನವತ್ತಳೆಯಲ್ಲಿ ... ಗಿತ್ತು

ಸಂಸ್ಥಾನದ ಚೀಫ್ ಇಂಜನಿಯರ್ ... ಎಸ್ ವೆಂಕಣ್ಣನವರು ವರದಿ ... ಒಪ್ಪಿಸಿ ... ಲಕ್ಷ ರೂ ಗ ... ದಲ್ಲಿ ಪ್ರತಿಮೆ, ಮಂಟಪ ಇವೆ ... ತಯಾರಿಸಲಾಗಿವೆಯೆಂದು ತಿಳಿ ... ಸಿದ

ವಿಶ್ವೇಶ್ವರಯ್ಯನವರ ಭಾಷಣ

ವಿಶ್ವೇಶ್ವರಯ್ಯನವರು ಶ್ರೀ ಕೃಷ್ಣ ... ಒಡೆಯರವರ ... ಮೈಸೂರು ಸಂಸ್ಥಾನದ ಸರ್ವ ... ಪ್ರಗತಿಯನ್ನು ಕುರಿತು ... ದೀರ್ಘ ಭಾಷಣ ಮಾಡಿ ... ತಿಳಿಸಿದರು

... ಪ್ರಸಂಗದಲ್ಲಿ ವಿದ್ಯ ... ಆರಂಭಿಸಲಾಯಿತು ನಾನು ... ದ ಸೇವೆಗೆ ಬಂದ ... ಮತ್ತು ಯೋಜನೆಗಳನ್ನು ... ಅನೇಕ ಅಭಿವೃದ್ಧಿ ಕೆಲಸಗ ... ಮಾಡೆನು

... ರ ವರ್ಷದ ... ಸಂಸ್ಥಾನದ ಪ್ರಜಾಸಂಖ್ಯೆ ... ಲಕ್ಷಕ್ಕೆ ... ಸಂಖ್ಯೆಯು ... ಅದಾಯ ... ರೂ ... ಲಕ್ಷಕ್ಕೆ ... ವೈಯು ... ಕೋಟಿ ... ವರ್ಷದಲ್ಲಿ ... ಲಕ್ಷ ಎಕರೆಗೆ ನೀರು ... ಆಗಿನ ಕಾಲಕ್ಕೆ ಭಾರತದಲ್ಲೆಲ್ಲಾ

ಶ್ರೀ ಎಂ ವಿಶ್ವೇಶ್ವರಯ್ಯನವರು

... ದೊಡ್ಡದಾದ ಕೃಷ್ಣರಾಜ ಸಾಗರ ... ಕಟ್ಟೆಯು ನಿರ್ಮಾಣವಾಯಿತು ... ಶಕ್ತಿ ... ಕಾರ್ಖಾನೆ ... ವಲ್ಲಿ ಆದುದು ಮೈಸೂರು ವಿಶ್ವವಿದ್ಯಾನಿಲಯ ... ಕಾಲದಲ್ಲಿ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ಅಧಿಕಾರವನ್ನು ಹೆಚ್ಚಿಸಿ ಪ್ರಜಾಸತ್ತಾತ್ಮಕ ... ಪ್ರೋತ್ಸಾಹಿಸಲಾಯಿತು

ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯ ... ರು ... ಗಿದ್ದರು ಆವರ ... ವ ತೀಯ ಮತ್ತು ... ದೇಶಗಳಿಂದ ದೂರವಾಗಿದ್ದರು

ಅವರ ಗುಣಾಢ್ಯತೆಯಿಂದ ಮೈಸೂರು ದೇಶ ಹೆಚ್ಚು ಪ್ರಾಶಸ್ತ್ಯಕ್ಕೆ ಬಂದಿತ್ತು ... ಪುರಾತನವಾದ ... ವಂಶಕ್ಕೆ ... ಒಡೆಯರ ಮನೆತನದ ಸಂತತಿಯಲ್ಲಿ ಶ್ರೇಷ್ಠರಾಗಿದ್ದರು

ಅವರ ... ನಾವು ... ದ ... ಕೆಲವು ದಿನಗಳ ಹಿಂದೆ ದಕ್ಷಿಣ ಭಾರತದ ... ಮಾಡಿ ... ಜನರ ... ಅವರ ... ಹೋಲುತ್ತಿತ್ತೆಂದು ಅವರು ತಿಳಿಸಿದರು

ಪ್ರಗತಿಪರವಾದ ಆಧುನಿಕ ಮೈಸೂರು ಸಂಸ್ಥಾನದ ನಿರ್ಮಾಣಕಕ್ಕ ಮತ್ತು ಬಹು ... ಸರ್ವತೋಮುಖ ಅಭಿವೃದ್ಧಿಗೂ ... ಶಾಂತಿ ಶ್ರೇಷ್ಠವಾದ ರೀತಿಯಲ್ಲಿ ... ಪ್ರತಿಮೆಯು ... ಈ ಪ್ರತಿಮೆಯು ... ಜನಾಂಗಕ್ಕೆ ... ವಾಗಿ ನಿಲ್ಲುತ್ತದೆ

ರೇಡಿಯೊ, ಸೈಕಲ್ಲುಗಳ ಆಮದಿಗೆ ನಿಷೇಧ

ವಿದೇಶಗಳಿಂದ ಭಾರತಕ್ಕೆ ಹಲವು ಆಹಾರ ಸಾಮಗ್ರಿಗಳು, ಯಂತ್ರೋಪಕರಣಗಳು ಮೊದಲಾದ ... ಪದಾರ್ಥಗಳ ಆಮದನ್ನು ... ಜುಲೈ ... ತಿಂಗಳ ಕಾಲ ನಿಷೇಧಿಸಿ ... ಹೊರಡಿಸಿದವರು ... ರೇಡಿಯೋ ಸೆಟ್ಟು, ಸೈಕಲ್ಲು ಮತ್ತು ... ಬ್ಲೇಡುಗಳು ಮತ್ತು ಇತರ ... ಹಲವು ಪದಾರ್ಥಗಳ ... ಮಟ್ಟಿಗೆ ತಗ್ಗಿಸಲಾಗುವುದು

ಹೆತ್ತ ಕೂಡಲೇ ಶಿಶುವನ್ನು ಬೀದಿಯಲ್ಲಿಟ್ಟ ಪ್ರಸಂಗ

ಮೊನ್ನೆ ... ಜನಗೂಡಿನಲ್ಲಿ ದೇವಸ್ಥಾನದ ಹಿಂಭಾಗದಲ್ಲಿರುವ ಛತ್ರದ ಬಾಗಿಲಲ್ಲಿ ಆಗತಾನೆ ಹುಟ್ಟಿದ ಮಗುವನ್ನು ಯಾರೋ ಒಂದು ಮೊರದಲ್ಲಿಟ್ಟಿದ್ದುದು ಪತ್ತೆಯಾಗಿ ಅದನ್ನು ಅಲ್ಲಿನ ಆಸ್ಪತ್ರೆಗೆ ಒಪ್ಪಿಸಲಾಯಿತೆಂದು ತಿಳಿದು ಬಂದಿದೆ

ಸರ್ಕಾರಿ ನೌಕರರಿಗೆ ಕಡ್ಡಾಯದ ಖಾದಿ ಉಡುಪು

೨೦೦ ರೂ ಅದಕ್ಕೆ ಮತ್ತು ಕಡಿಮೆಯಾಗಿ ಸಂಬಳ ಬರುವ ಸರ್ಕಾರಿ ನೌಕರರು ಕೆಲಸದ ಕಾಲದಲ್ಲಿ ಕಡ್ಡಾಯವಾಗಿ ಖಾದಿಯನ್ನು ಧರಿಸಬೇಕೆಂದು ಉತ್ತರ ಪ್ರದೇಶ ಸರ್ಕಾರದವರ ಆಜ್ಞೆ ... ಆಲೋಚನೆಯಲ್ಲಿರುವರೆಂದು ವರದಿಯಾಗಿದೆ ಖಾದಿ ಬಟ್ಟೆಯ ಮಾರಾಟವು ಕಡಿಮೆಯಾಗಿರುವುದರಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ

ಲೆಸ್ಟರ್ ಪಿಯರ್ಸನ್ನರು ವಿಶ್ವಸಂಸ್ಥೆ ಅಧ್ಯಕ್ಷರು

ಮೊನ್ನೆ ನಡೆದ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಅಧ್ಯಕ್ಷರ ಚುನಾವಣೆಯು ನಡೆದು ಕೆನಡದ ವಿದೇಶಾಂಗ ಮಂತ್ರಿ ಲೆಸ್ಟರ್ ಪಿಯರ್ಸನ್ನರು ... ಓಟುಗಳನ್ನು ಪಡೆದು ಆರಿಸಲ್ಪಟ್ಟರು ಈ ಚುನಾವಣೆಯಲ್ಲಿ ಶ್ರೀಮತಿ ವಿಜಯಲಕ್ಷ್ಮಿಯವರಿಗೆ ಕೇವಲ ನಾಲ್ಕು ಓಟುಗಳು ಬಂದುವು

ಕಾಂಗ್ರೆಸ್ಸನ್ನು ಉರುಳಿಸಲು ವಿದ್ಯಾರ್ಥಿಗಳ ನಿರ್ಧಾರ

ತಿರುವನಂತಪುರದ ವಿಶ್ವವಿದ್ಯಾಲಯ ... ರಾಜ್ಯಶಾಸ್ತ್ರ ಪತ್ರ ... ಶಾಸ್ತ್ರ ವಿದ್ಯಾರ್ಥಿ ಸಂಘಗಳ ಸಭೆಯು ನಡೆದು ... ಕಳೆದ ... ವರ್ಷಗಳ ಕಾಂಗ್ರೆಸ್ ಆಡಳಿತವು ಪೂರ್ಣವಾಗಿ ವಿಫಲವಾಗಿರುವುದೆಂದು ನಿರ್ಣಯ ಮಾಡಿ ... ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸಿ ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನಿಸಬೇಕೆಂದೂ ನಿರ್ಧರಿಸಲಾಯಿತು

ಹಸಿವನ್ನು ತಡೆಯಲಾರದ ವಿದ್ಯಾರ್ಥಿಯಿಂದ ಕಳುವು

ಕಳೆದ ... ನೇ ತಾರೀಕು ದಕ್ಷಿಣ ಕಲ್ಕತ್ತದ ಒಬ್ಬ ವಿದ್ಯಾರ್ಥಿಯು ಅಲ್ಲಿನ ವೈದ್ಯರೊಬ್ಬರ ಮನೆಗೆ ನುಗ್ಗಿ ಕಳುವು ಮಾಡುವ ಪ್ರಯತ್ನದಲ್ಲಿದ್ದಾಗ ಪೋಲೀಸರಿಂದ ಬಂಧಿಸಲ್ಪಟ್ಟು ಅಲಿಪುರದ ಪೋಲೀಸ್ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ಗುರಿಯಾಗಿ ಅವನು ತನ್ನ ತಪ್ಪನ್ನು ಒಪ್ಪಿಕೊಂಡು, ಹಸಿವಿನ ಬಾಧೆಯನ್ನು ತಡೆಯಲಾರದೆ ತಾನು ಆ ಕೃತ್ಯ ಮಾಡಿದುದಾಗಿ ತಿಳಿಸಲು, ನ್ಯಾಯಾಧೀಶರು ಬುದ್ಧಿವಾದ ಹೇಳಿ ಅವನನ್ನು ಖುಲಾಸ ಮಾಡಿದರೆಂದು ವರದಿಯಾಗಿದೆ

ಕುದುರೆ ಜೂಜನ್ನು ನಿಷೇಧಿಸಲು ಪುರಸಭೆಯ ಮನವಿ

ಸಿಂಹಳದಲ್ಲಿ ಕುದುರೆ ಪಂದ್ಯ ಮತ್ತು ಪಣಕಟ್ಟಿ ಆಡುವ ಇತರ ಜೂಜುಗಳನ್ನು ರದ್ದು ಮಾಡಬೇಕೆಂದು ಅಲ್ಲಿನ ಸರ್ಕಾರವನ್ನು ಕೋರಲು ಕೊಲಂಬೋ ಪೌರಸಭೆಯು ನಿರ್ಧರಿಸಿದೆ ಪತ್ರಿಕೆಗಳಲ್ಲಿ ಸ್ಥಳೀಯ ಮತ್ತು ಹೊರಗಿನ ಜೂಜಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಕಟಿಸದಂತೆ ನಿಷೇಧಿಸಬೇಕೆಂದೂ, ಮತ್ತು ಈಗ ಅಲ್ಲಿ ಕುದುರೆ ಜೂಜು ನಡೆಯುವ ಸ್ಥಳವನ್ನು ಮಧ್ಯಮ ಮತ್ತು ಕಾರ್ಮಿಕರ ವರ್ಗಗಳ ಜನರಿಗೆ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಪೌರಸಭೆಗೆ ಕೊಡಬೇಕೆಂದೂ ಅಪೇಕ್ಷಿಸಲ್ಪಟ್ಟಿರುವುದಾಗಿಯೂ ಗೊತ್ತಾಗಿದೆ

ಪೌರಸಭಾ ಇಂಜನಿಯರರ ವರ್ಗ

ರಾಜಧಾನಿಯ ಪೌರಸಭಾ ಇಂಜನಿಯರರಾದ ಶ್ರೀ ವಿ. ಕೆ ಮುಕುಂದರಾವರನ್ನು ಬೆಂಗಳೂರು ಕಾರ್ಪೊರೇಷನ್ನಿಗೂ, ಅಲ್ಲಿನ ಶ್ರೀ ಕೆ ಎಸ್ ರಾಮಣ್ಣನವರನ್ನು ಮೈಸೂರು ಪೌರಸಭಾ ಇಂಜನಿಯರರನ್ನಾಗಿಯೂ ವರ್ಗಾಯಿಸಲಾಗಿದೆ

ಅಮಲ್ದಾರರಾಗಿ ಬಡ್ತಿ

ಮೈಸೂರಿನ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಕಛೇರಿಯ ಹೆಡ್ ಗುಮಾಸ್ತರಾದ ಶ್ರೀ ಟಿ ಎಸ್ ಪದ್ಮನಾಭಯ್ಯ ಮತ್ತು ಇತರ ಆರುಮಂದಿಗೆ ಅಮಲ್ದಾರ್ ಹುದ್ದೆಗೆ ಬಡ್ತಿ ಕೊಡಲಾಗಿದೆ

ಉತ್ತರ ಭಾರತದ ಛಪ್ರಾ ಎಂಬ ಹಳ್ಳಿಯ ಎಮ್ಮೆಯೊಂದು ಕೆಲವು ದಿನಗಳ ಕೆಳಗೆ ಒಂದು ದೊಡ್ಡ ಕಪ್ಪೆಯನ್ನು ಈದಿತೆಂದೂ, ಕಪ್ಪೆಯು ಎರಡು ದಿನಗಳಲ್ಲಿ ಮೃತಪಟ್ಟಿತೆಂದೂ ವರದಿಯಾಗಿದೆ ಹಳ್ಳಿಯ ಸುತ್ತಮುತ್ತ ಪ್ರದೇಶದ ಸಾವಿರಾರು ಜನರು ಈ ಆಶ್ಚರ್ಯ ಪ್ರಸಂಗವನ್ನು ನೋಡಿದರೆಂದು ಹೇಳಲಾಗಿದೆ

ರಾಜೂರನ್ನು ಬೆಂಗಳೂರಿಗೆ ಕರೆಸುವ ಪ್ರಶ್ನೆ

ಅರ್ಜಿ ಪರಿಶೀಲನೆ ಮುಂದೆ ಹಾಕಲು ಬೊಂಬಾಯಿ ಹೈಕೋರ್ಟಿನ ಆಜ್ಞೆ

ಬೆಂಗಳೂರು ಸಿವಿಲ್ ಪ್ರದೇಶದ ೧ನೇ ನ್ಯಾಯಾಧೀಶರ ಸಮ್ಮುಖದಲ್ಲಿ ಹಣದ ದುರುಪಯೋಗದ ಸಂಬಂಧ ಶ್ರೀ ಎಲ್ ಎಸ್ ರಾಜೂರವರ ಮೇಲೆ ಹೂಡಿರುವ ಮೊಕದ್ದಮೆಯು ರಿಮ್ಯಾಂಡ್ ಅರ್ಜಿ ಪರಿಶೀಲನೆಯಾಗಬೇಕಾಗಿದ್ದು ಈ ಸಂಬಂಧವಾಗಿ ಬೆಂಗಳೂರು ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರ ಬೊಂಬಾಯಿ ಜೈಲಿನ ಅಧಿಕಾರಿಗಳಿಗೆ ತಂತಿ ಕಳುಹಿಸಿ ಸದರಿ ವಿಚಾರಣೆ ಕಾಲದಲ್ಲಿ ಶ್ರೀ ರಾಜೂರವರನ್ನು ಕೋರ್ಟಿನ ಮುಂದೆ ಹಾಜರುಪಡಿಸಬೇಕಾಗಿರುವುದೆಂದು ಸೂಚಿಸಿರುವುದನ್ನು ಅಲ್ಲಿನ ಜೈಲು ಅಧಿಕಾರಿಗಳು ಹೈಕೋರ್ಟಿಗೆ ವರದಿ ಮಾಡಲಾಗಿ ನ್ಯಾಯಾಧಿಕಾರಿಗಳು ಬೆಂಗಳೂರು ಮೊಕದ್ದಮೆಯನ್ನು ಬರುವ ತಿಂಗಳು ೩ನೇ ತಾರೀಖಿನವರೆಗೆ ಮುಂದುವರಿಸಬೇಕೆಂದೂ ಶ್ರೀ ರಾಜೂರವರನ್ನು ಸಧ್ಯದ ಕಳುಹಿಸಬೇಕಾಗಿಲ್ಲವೆಂದೂ ಆಜ್ಞೆ ಮಾಡಿದರು.

ಬಹಳ ವಿಚಿತ್ರ [illegible] ರಾಜೂರವರನ್ನು ಬೊಂಬಾಯಿಗೆ ಕರೆತರಲಾಗಿದೆಯೆಂದೂ [illegible] ಗಡಯಾಚನಂತರ [illegible] ವರು ಬೊಂಬಾಯಿ [illegible]

೭ ಸಾವಿರ ಅಡಿ ಎತ್ತರದಲ್ಲಿ ಬತ್ತದ ಬೆಳೆ!

ಕಾಶ್ಮೀರದ ಪಹಲ್ಗಾಂ ಎಂಬಲ್ಲಿ ಸಮುದ್ರಮಟ್ಟಕ್ಕೆ ೭೦೦೦ ಅಡಿ ಎತ್ತರದ ಭೂಮಿಯಲ್ಲಿ ಇದೇ ಮೊದಲಬಾರಿ ಕಾಶ್ಮೀರ ಬತ್ತವನ್ನು ಬೆಳೆದ ಮಹಮದ್ [illegible] ಎಂಬ ರೈತನೊಬ್ಬನಿಗೆ ವ್ಯವಸಾಯ ಪ್ರದರ್ಶನದಲ್ಲಿ ಬೆಳ್ಳಿ ಪದಕವನ್ನು ಕೊಡಲಾಗಿದೆ.

ನಂಜನಗೂಡು ಕರ್ನಾಟಕ ಸಂಘಕ್ಕೆ ಕಾಣಿಕೆ

ಬೆಂಗಳೂರಿನ ಟಿ ಆರ್ ವಿ ಮಿಲ್ಸಿನ ಏಜೆಂಟರಾದ ಶ್ರೀ ಟಿ ಎ ಕೃಷ್ಣಪ್ಪನವರ ಕುಮಾರಿ ಸೌ॥ ರಾಘವಮ್ಮ ಮತ್ತು ಬೆಂಗಳೂರು ವಾಣಿವಿಲಾಸದಲ್ಲಿರುವ ಕಂಟ್ರಾಕ್ಟರ್ ಶ್ರೀ ಜಿ ರಾಜರತ್ನಯ್ಯರ ಮಗ ಶ್ರೀ ಜಿ ಗೋಪಾಲಸ್ವಾಮಿಯವರ ವಿವಾಹವು ನಂಜನಗೂಡಿನಲ್ಲಿ ನಡೆದ ಸಂಬಂಧವಾಗಿ ಅಲ್ಲಿನ ಕರ್ನಾಟಕ ಸಂಘಕ್ಕೆ ೫ ರೂ ಕಾಣಿಕೆಯನ್ನು ಕಳುಹಲಾಗಿದೆ.

ಯನ್ನು ಬಿಟ್ಟು ಹೋಗುವಂತಿಲ್ಲವೆಂದೂ [illegible] ದ ವಿಷಯ [illegible] ರಣೆ ನಡೆ [illegible] ತಾ ವರೆಗೂ ಬೆಂಗ [illegible] ರಲು ನಿಷೇಧ [illegible] ಯ ಪರಿಶೀಲನೆ [illegible] ಹಾಕ [illegible]

ಕಥಾಲೋಕ

ರಾಜಧಾನಿಯ ಶ್ರೀ ಕೆ ವಿ ಅನಂತರಾಮಯ್ಯನವರ ಸಂಪಾದಕತ್ವದಲ್ಲಿ ಶ್ರೀ [illegible] ಮತ್ತು ಕಂಪೆನಿಯವರು ಪ್ರಕಟಿಸುತ್ತಿರುವ ಕಥಾಲೋಕ ಮಾಸಪತ್ರಿಕೆಯ ಅಕ್ಟೋಬರ್ ಸಂಚಿಕೆಯು ನಮ್ಮ ಕೈಸೇರಿದೆ. ತರುಣ ಲೇಖಕರ ಕಥೆಗಳನ್ನೊಳಗೊಂಡು ಅಂದವಾಗಿ ಅಚ್ಚಾಗಿರುವ ಈ ಪತ್ರಿಕೆ ಆಕರ್ಷಣೀಯವಾಗಿದೆ. ಇದರ ಬೆಲೆ ೦ ೩ ೦

ಅಭಾವ ಪರಿಹಾರ ನಿಧಿಗೆ ಕೃಷ್ಣರಾಜನಗರದ ನಿವಾಸಿಗಳ ಸಹಾಯ

ಅಭಾವ ಪ್ರದೇಶಗಳಲ್ಲಿ ಪರಿಹಾರ ಕ್ರಮ ಕೈಗೊಳ್ಳಲು ಸ್ಥಾಪಿಸಲ್ಪಟ್ಟಿರುವ ಮುಖ್ಯಮಂತ್ರಿಗಳ ನಿಧಿಗೆ ಕೃಷ್ಣರಾಜನಗರದ ತಾಲ್ಲೂಕಿನ ಅವಲ್ದಾರರಾದ ಶ್ರೀ ಕೆ ಎಂ ಸೋಮಶೇಖರ್‌ರವರು ನಗರದ ಹಲವು ಮುಖಂಡರೊಡನೆ ಮನೆ ಮನೆಗೂ ತೆರಳಿ ಹಣವನ್ನು ಸಂಗ್ರಹಿಸಿರ ತ್ತಾರೆ. ಶ್ರೀ ಬೆಳ್ಳಾಳೆ ಚನ್ನಪ್ಪನವರು ೧೧೦೧ ರೂ ಶ್ರೀಗಳಾದ ಬಿ ಸಿದ್ದಲಿಂಗಶೆಟ್ಟರು [illegible] ಚಿಕ್ಕಬಸಪ್ಪನವರು [illegible] ನಂಜುಂಡಪ್ಪನವರು [illegible] ಅವರು [illegible] ಮತ್ತು [illegible] ಇತರರೂ ಧನ ಸಹಾಯ ಮಾಡಿರುವರು

ಆನೆ ಸೊಂಡಲಿನ ಹಂದಿಮರಿ

ಮಧ್ಯಪ್ರದೇಶ ಪ್ರಾಂತದ ಪೂಲ್ಪಾರಿ ಎಂಬ ಹಳ್ಳಿಯಲ್ಲಿ ಸಾಕಿಕೊಂಡಿದ್ದ ಹೆಣ್ಣು ಹಂದಿಯೊಂದು ಈದ ಮರಿಗೆ ಆನೆಗಿರುವಂತೆ ಸೊಂಡಿಲು ಇತ್ತೆಂದೂ ಕೆಲವು ನಿಮಿಷಗಳ ನಂತರ ಅದು ಮೃತಪಟ್ಟಿತೆಂದೂ ಹೇಳಲಾಗಿದೆ.

ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಷಣ್ಮುಗಂ ಚೆಟ್ಟಿಯರ ಷಷ್ಠ್ಯಬ್ದ ಪೂರ್ತಿ ಶಾಂತಿ

ಕೇಂದ್ರ ಸರ್ಕಾರದ ಮಾಜಿ ಅರ್ಥ ಸಚಿವರಾದ ಡಾ॥ ಆರ್ ಕೆ ಷಣ್ಮುಗಂ ಚೆಟ್ಟಿಯರ ಷಷ್ಠ್ಯಬ್ದ ಪೂರ್ತಿ ಶಾಂತಿಯು ನಾಳಿದ್ದು ಕೊಯಮತ್ತೂರಿನಲ್ಲಿ ಮೈಸೂರಿನ ಮಾಜಿ ದಿವಾನರಾದ ಶ್ರೀ ಎಂ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗುವುದೆಂದು ತಿಳಿದು ಬಂದಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕ್ಕೆ [illegible] ಮಧ್ಯಾಹ್ನ ೧ ೪೦ ದೀಪಾವಳಿ [illegible] ನಮ್ಮ ಮೆಚ್ಚಿನ ಕಲಾವಿದರು ಸಂಜೆ ೫ ೩೦ ಮತ್ತು ೭ ೩೦ ಹೆಚ್ ಟಿ ರಾಮಸ್ವಾಮಿ ಸಂಗೀತ ೬ ೦೦ [illegible] ಹಿಂದಿ [illegible] ದೀಪಾವಳಿ ಹಿಂದಿ ಗೀತೆಗಳು [illegible] ಮಂಡಲ ದೀಪಾವಳಿ ಕನ್ನಡದಲ್ಲಿ [illegible] ಕಾರ್ಯಕ್ರಮ

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ
ಮೈಸೂರು

Edited Printed and Published by A R Nagarajan at Sadhvi Press, D Subbaiah Road, Mysore

ದೀಪಾವಳಿ ಹಬ್ಬದ
ಉಡುಗೊರೆ
ವಸ್ತ್ರಂ ಡಾ
[illegible]
ಕೆ ಎಸ್ ಲಕ್ಷ್ಮಣ ಅಯ್ಯರ್
ಅಂಡ್ ಸನ್ಸ್,
[illegible] ಮತ್ತು [illegible]
[illegible]
[illegible] ಮೈಸೂರು

ರಾಜಕಮಲ್, ಮೈಸೂರು
ದೀಪಾವಳಿ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ!
17 10-52ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು
★ ಮರುದಲು ಪೆಳ್ಳಿ ★
(ತೆಲುಗು)
ಭೂಮಿಕೆ [illegible]

ಒಲಂಪಿಯಾ ಅಮೋಘ ಪ್ರಾರಂಭ 16 10—52 ರಿಂದ
ದಿನವೂ ಮೂರು ಪ್ರದರ್ಶನಗಳು
ದೀಪಾವಳಿ ಹಬ್ಬದ ವಿಶೇಷ ಆಕರ್ಷಣೆ
[illegible]
[illegible]
[illegible] ಹಿಂದಿ ಚಿತ್ರ
ಅಂದಾಜ್
[illegible] ಕುಲದೀಪ ಕೌರ್ ಮತ್ತು [illegible]
ಬೆಳಗಿನ ಪ್ರದರ್ಶನ 16 10 [illegible] ರಿಂದ [illegible]
[illegible] — ನಗೀನ —

ಮೋತಿಲಾಲ್ ಟಾಕೀಸ್
[illegible] ಮೈಸೂರು
17-10-52 ರಿಂದ ಪ್ರತಿದಿನ 3 ಆಟಗಳು
ದೀಪಾವಳಿ ಹಬ್ಬದ ಪ್ರಯುಕ್ತ [illegible] ಪ್ರಾರಂಭ
[illegible] ಹಿಂದಿ ಚಿತ್ರ ★ ಸಾಗರ್ ★
ಪಾತ್ರ [illegible]
ಬೆಳಗಿನ ಪ್ರದರ್ಶನ [illegible]
ಕ್ಯಾಪ್ಟನ್ ಅಮೆರಿಕ — ([illegible])
ಈ ಚಿತ್ರದಲ್ಲಿ [illegible]
[illegible]

ದೀಪಾವಳಿ ಸ್ಪೆಷಲ್ ಪ್ರೋಗ್ರಾಂ!
ಪ್ರಭುದೇವಾ ಟಾಕೀಸ್, ಮೈಸೂರು
17—10—52ನೇ ಶುಕ್ರವಾರದ ಲಾಗಾಯ್ತು .. ದಿನವಹಿ ಮೂರು ಆಟಗಳು
ರಾಜರಾಜೇಶ್ವರಿ ಪಿಕ್ಚರ್ಸ್‌ರವರ ತಮಿಳು ಚಿತ್ರ
★ ಏಳೆಯ್ ಉಳವನ್ ★
(ಬಡ ರೈತ) .. (ಜೆಮಿನಿ ರಿಲೀಸ್)
ಪಾತ್ರ ಅಂಜಲಿ ದೇವಿ ಕನ್ನಾಂಬ ಶ್ರೀರಾಮಮೂರ್ತಿ ಲಿಂಗಮೂರ್ತಿ ಮುಂತಾದವರು

ಟೆಲಿಫೋನ್ ... ವಾರ್ಷಿಕ ... | ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೭ ೧೧ ೧೯೫೦ [ಸಂಚಿಕೆ ೬೬

ಕಷ್ಟಪಟ್ಟು ಸತತವಾಗಿ ದುಡಿಯಿರಿ

ಪ್ರಜಾವರ್ಗದವರಿಗೆ ವಿಶ್ವೇಶ್ವರಯ್ಯನವರ ಹಿತೋಕ್ತಿ

ಮೈಸೂರು ೧೭

ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರ ಅಮೃತ ಶಿಲಾ ಪ್ರತಿಮೆಯ ಅನಾವರಣೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಶ್ರೀ ಎಂ ವಿಶ್ವೇಶ್ವರಯ್ಯನವರು ತಮಗೆ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವಾಗಿ ಪೌರಸಭೆಯವರ ನಗರದಲ್ಲಿರುವ ಜನರ ಆರ್ಥಿಕ ಸರ್ವೆಯೊಂದನ್ನು ಕೈಗೊಳ್ಳಬೇಕೆಂದ ಸೂಚಿಸಿದರು. ಅವರು ಕನ್ನಡದಲ್ಲಿ ಭಾಷಣ ಮಾಡಿದರು.

ಸರ್ವೆಯನ್ನು ಮಾಡುವುದು ಕಷ್ಟವಾದ ಕೆಲಸವೆಂದೂ, ಪ್ರಜೆಗಳ ನಿಜಸ್ಥಿತಿಯು ಅದರಿಂದ ತಿಳಿಯುವುದಲ್ಲದೆ ಇತರ ದೇಶಗಳಂತೆ ಇಲ್ಲೂ ಸಹ ಜನಗಳು ಪ್ರವರ್ಧನೆ ಸಾಧಿಸುವ ಪ್ರಗತಿಯ ... ... ಪ್ರಬುದ್ಧವಾಗಿ ... ಭಾರತದ ... ಅಮೆರಿಕ ... ... ಜನರು ವಾರಕ್ಕೆ ... ... ಕಾಲವನ್ನು ಕುಸಿದು ಒಂದವರಿನ್ನು ... ಅವಮಾನವೆಂದು ಜನರ ತಿಳಿಯುತ್ತಿದ್ದರು ಬದಲಿ ಈಗ ... ... ಆಹಾರದ ಅಭಾವವು ... ಇದಕ್ಕೆ ನಾನಾ ಕಾರಣ ... ಜನ ಸಂಖ್ಯೆಯು ಹೆಚ್ಚಿ ... ಆಹಾರದ ... ... ಬೆಳೆಯುತ್ತಿಲ್ಲ ಜನರ ಇನ್ನೂ ಹೆಚ್ಚು ... ... ಹೊಸ ಹೊಸ ... ಜನರನ್ನು ಉದ್ಯೋಗಗಳನ್ನು ... ... ಜನರೂ ಸಹ ಮುಕ್ತಿ ... ... ವ್ಯವಸಾಯ ಕೈಗಾರಿಕೆ ... ... ಈ ಎರಡು ವಿಧದ ಸಾಮಾಜಿಕ ಕೆಲಸಗಳ ಹಂಚಿಕೆಯಾಗಬೇಕು

ಮನೆಗಳಲ್ಲಿ ಒಂದೊಂದು ಸಂಸಾರದವರು ... ... ಯೋಜನೆಯೆಂಬ ಕಾರ್ಯಕ್ರಮವನ್ನು ಹಾಕಿಕೊಟ್ಟಿರುತ್ತಾರೆ ಇದನ್ನು ಅನುಸರಿಸಬೇಕಾದುದು ... ... ಮುಂದೆ ಬರಬಹುದಾದ ಕಷ್ಟವನ್ನು ... ... ಇನ್ನಷ್ಟು ಹೆಚ್ಚಬೇಕು ವಿದ್ಯೆಯ ... ಪ್ರಗತಿ ಪ್ರತಿಬಂಧಕವಾಗುವುದಿಲ್ಲ ... ಪ್ರಮಾಣದ ವಿದ್ಯಾಭ್ಯಾಸವನ್ನು ... ಎಲ್ಲವರು ಕೈಗೊಳ್ಳಬೇಕು

ಚೀಣಾ ದ್ವೀಪದ ಮೇಲೆ – ರಾಷ್ಟ್ರೀಯರ ಧಾಳಿ –



ನಿನ್ನೆ ಶ್ರೀ ... ... ಶ್ರೀ ... ... ಸಚಿವ ಶ್ರೀ ಟಿ ... ... ಶ್ರೀ ... ... ವೆಂಕಣ್ಣ ... ...

ಸಾಯುವಣ್ಣಗಳು ... ... ಮೈಸೂರು ... ... ತಯಾರಿಸಲ್ಪಟ್ಟಿವೆ

ನಾಲ್ವಡಿ ಕೃಷ್ಣರು ರಾಜ ಋಷಿಗಳು

ಡಾ॥ ಪಟ್ಟಾಭಿಯವರ ಪ್ರಶಂಸೆ

ಮೈಸೂರು ೧೭

ಶ್ರೀಮನ್ನಾಲ್ವಡಿ ಕೃಷ್ಣ ... ಒಡೆಯರ ಪ್ರತಿಮೆಯ ಅನಾವರಣ ಉತ್ಸವದ ಸಂದರ್ಭದಲ್ಲಿ ಮುಖ್ಯಪ್ರವೇಶದ ಗೌರವ ... ಡಾ॥ ಪಟ್ಟಾಭಿ ಸೀತಾ ... ... ಕಳುಹಿಸಿರುವ ಸಂದೇಶದ ... ... ಪೌರಸಭೆಗೆ ಕಳುಹಿಸಿತು ಒದಗಿ ... ... ತಿಳಿಸಿರುತ್ತಾರೆ

... ... ಆಳ್ವಿಕೆಯ ... ... ಅವರ ... ... ಬಗ್ಗೆ ... ... ಗೌರವ ... ... ರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರವರ ಪ್ರತಿಮೆಯನ್ನು ... ... ಅನಾವರಣ ಮಾಡುವ ಸಮಯದಲ್ಲಿ ... ...

... ರಾಜರು ... ... ಋಷಿಗಳಲ್ಲಿ ರಾಜ ... ... ಅನಾವರಣ ಮಾಡಲು ... ... ಸರ್ ಎಂ ... ...

ಕೇಂದ್ರ ಸರ್ಕಾರದ ಉತ್ಸವ ಮಂತ್ರಿ ಶ್ರೀ ಕೆ ಸಿ ರೆಡ್ಡಿ ಯವರು ನಿನ್ನೆ ಈ ರೀತಿ ಸಂದೇಶವನ್ನು ಕಳುಹಿಸಿದ್ದಾರೆ —

"... ... ಮೈಸೂರಿನ ಮಹಾರಾಜರ ... ... ದಿನ ನನು ... ಅನಾವರಣ ಮಾಡುವ ... ... ಯಶಸ್ವಿಯಾಗಲೆಂದು ಹಾರೈಸುತ್ತೇನೆ"

ಬಹಿರಂಗ ಸಭೆ

ಈ ದಿನ ಸಂಜೆ ... ಗಂಟೆಗೆ ... ... ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ... ... ನಂಬಿಯಾರ್‌ರವರು ... ... ಬಹಿರಂಗ ಸಭೆಯಲ್ಲಿ ಭಾಷಣ ಮಾಡಲಿದ್ದಾರೆ

೯೦೦೦ ರೂ ಗಳ ೧೧ ಥಾಂಗಿ ಕವರುಗಳು ಪತ್ತೆಯಿಲ್ಲ

ಬೆಂಗಳೂರು ೧೭

ಇಲ್ಲಿನ ... ... ಕಛೇರಿಯಲ್ಲಿ ನೆನ್ನೆ ೯೦೦೦ ರೂ ಗಳ ಮೊತ್ತದ ೧೧ ಇನ್ಷೂರ್ ಕವರುಗಳು ನೆನ್ನೆ ಪತ್ತೆಯಿಲ್ಲವಾಗಿವೆಯೆಂದು ಹೇಳಲಾಗಿದೆ

ಜೇರಿಗೆ ಸಣ್ಣ ಅಕ್ಕಿ ಬೆಲೆ ಹೆಚ್ಚಿಸು

ಜೀರಿಗೆ ಸಣ್ಣ ಅಕ್ಕಿಯ ಬೆಲೆಯನ್ನು ೧ ರೂ ಗೆ ಒಂದು ಸೇರಿನಂತೆಯೂ, ... ಗೋಧಿಯನ್ನು ... ... ಸೇರಿನಂತೆಯೂ ಮಾರುವಂತೆ ವಿಧಾಯಕ ಮಾಡಲಾಗಿದೆ

ಸಂಸ್ಥಾನದ ಹೊಸ ಚೀಫ್ ಇಂಜನಿಯರ್

ಸಂಸ್ಥಾನದ ಚೀಫ್ ಇಂಜನಿಯರ್ ಆದ ಶ್ರೀ ಬಿ ಎನ್ ವೆಂಕಣ್ಣನವರ ಇದೇ ತಿಂಗಳು ೨೫ ರಿಂದ ನಿವೃತ್ತರಾಗಲಿರುವರೆಂದು ತಿಳಿದುಬಂದಿದೆ ಅವರ ಸ್ಥಾನದಲ್ಲಿ ... ರಾಮಯ್ಯ ... ... ಶ್ರೀ ... ... ಗೊತ್ತಾಗಿದೆ ... ... ಡೆಪ್ಯುಟಿ ಚೀಫ್ ಇಂಜನಿಯರ್ ಇದ್ದವರು

ಚೀಣಾ ದ್ವೀಪದ ಮೇಲೆ ಧಾಳಿಯಿಂದ ೨ ಸಾವಿರ ಮರಣ

... ... ರಾಷ್ಟ್ರೀಯ ... ... ಚೀಣಕ್ಕೆ ಸೇರಿದ ದ್ವೀಪವೊಂದರ ಮೇಲೆ ನಡೆಸಿದ ಧಾಳಿಯಲ್ಲಿ ೨ ಸಾವಿರ ಕಮ್ಯೂನಿಸ್ಟರು ಮರಣ ಹೊಂದಿದರೆಂದು ಹೇಳಲಾಗಿದೆ

ಇಬ್ಬರು ಸಂಪಾದಕರ ಬಂಧನ ಮತ್ತು ಜಾಮೀನು

ಮುಂಬಯಿಯ ... ... ಸಂಪಾದಕರಿಗೆ ... ... ಪತ್ರಿಕೆಯ ಸಂಪಾದಕ ... ... ಜಾಮೀನು ಮೇಲೆ ಬಿಡಲಾಗಿದೆ

ಬ್ರಿಟನ್ನಿನೊಡನೆ ಪರ್ಷಿಯದ ರಾಜತಂತ್ರ ಸಂಬಂಧ ತ್ಯಾಗ

ಬ್ರಿಟನ್ನಿನೊಡನೆ ಎಲ್ಲ ವಿಧದ ರಾಜತಾಂತ್ರಿಕ ಸಂಬಂಧವನ್ನು ತ್ಯಜಿಸಲು ಸರ್ಕಾರವು ನಿರ್ಧರಿಸಿರುತ್ತದೆ ಎಣ್ಣೆ ಎ... ವಿವಾದದ ಬಗ್ಗೆ ಇರಾನು ಸೂಚಿಸಿದ ಸಲಹೆಗಳನ್ನು ಬ್ರಿಟನ್ನು ತಿರಸ್ಕರಿಸಿರುವುದೇ ಇದಕ್ಕೆ ಕಾರಣ

ಹೊಸ ಕನ್ನಡ ಅ॥ ಪ್ರೊಫೆಸರ್

ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಲ್ಪಟ್ಟಿರುವ ಶ್ರೀ ಟಿ ಎನ್ ಶ್ರೀಕಂಠಯ್ಯನವರ ಸ್ಥಾನದಲ್ಲಿ ಶ್ರೀ ಕೆ ವೆಂಕಟರಾಮಯ್ಯನವರನ್ನು ತಾತ್ಕಾಲಿಕ ಕನ್ನಡ ಪ್ರೊಫೆಸರಾಗಿ ನೇಮಿಸಲಾಗಿದೆ

ಇಲ್ಲಿನ ಮಹಾರಾಣಿ ಹೈಸ್ಕೂಲಿನ ಸಹಾಯ ಉಪಾಧ್ಯಾಯಿನಿ ಶ್ರೀಮತಿ ಪಿ ಎಲ್ ರಂಗಮ್ಮನವರನ್ನು ತುಮಕೂರು ಎಂಪ್ರೆಸ್ ಬಾಲಕಿಯರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ನೇಮಿಸಲಾಗಿದೆ

ರಷ್ಯಕ್ಕೆ ಇತರ ದೇಶಗಳ ಜನರ ಬೆಂಬಲ ಅವಶ್ಯಕ

ಮಾಸ್ಕೋವಿನಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಣ ಮಾಡುತ್ತಾ ಮಾರ್ಷಲ್ ಸ್ಟಾಲಿನ್ನರು ರಷ್ಯಕ್ಕೆ ಹೊರಗಿನ ಜನರ ಬೆಂಬಲವು ಅಗತ್ಯವೆಂದು ತಿಳಿಸಿರುತ್ತಾರೆ. ವಿದೇಶಗಳಲ್ಲಿರುವ ಕಮ್ಯೂನಿಸ್ಟ್ ಪಕ್ಷಗಳು ಹೂಡಿರುವ ಶಾಂತಿ ಮತ್ತು ವಿಮೋಚನಾ ಚಳುವಳಿಗೆ ರಷ್ಯದ ಕಮ್ಯೂನಿಸ್ಟ್ ಪಕ್ಷವು ಬೆಂಬಲ ನೀಡುವುದಾಗಿಯೂ ಅವರು ಬಂಡವಾಳಶಾಹಿ ರಾಷ್ಟ್ರಗಳು - ಮಧ್ಯಮ ವರ್ಗದ ಜನತೆ ಅಲ್ಪಿಕೆಯು ಮಿತವಾದದ ಶತ್ರುವೆಂದು ಅವರು ಹೇಳಿ, ಮಧ್ಯಮ ವರ್ಗದ ಜನರ ದಬ್ಬಾಳಿಕೆಯಿಂದ ತಪ್ಪಿರುವ ಪಕ್ಷಗಳ ಕಡೆ ಗಮನವೀಯಬೇಕೆಂದು ತಿಳಿಸಿರುವರು.

ಸಂಗೀತ ಸ್ಪರ್ಧೆ

ನಂಜನಗೂಡು ಕರ್ನಾಟಕ ಸಂಘದ ಆಶ್ರಯದಲ್ಲಿ ಮೊಸ್ಸಿನವರು ಏರ್ಪಡಿಸಿದ್ದ ಸಂಗೀತ ಸ್ಪರ್ಧೆಯನ್ನು ನಾಳೆ ಬೆಳಿಗ್ಗೆ ೮ ಗಂಟೆಗೆ ನಡೆಸಲಾಗುತ್ತದೆ.

ತಪ್ಪದೇ ಬನ್ನಿರಿ! :: ಬನ್ನಿರಿ!

ಅಬೀದ್‌ರವರ ಹರಾಜು ಮಾರಾಟ

19ನೇ ತಾ|| ಭಾನುವಾರ ಬೆಳಿಗ್ಗೆ 10 ಗಂಟೆಗೆ

ಷೋರೂಂ ಬಳಿ

ಬೀಟಿ ಮತ್ತು ತೇಗದ ಒಂಟಿ ಮತ್ತು ಜೋಡಿ ಮಂಚಗಳು, ಬೀಟಿ ಮರದ ಸೋಫಾ ಸೂಟುಗಳು, ಬೀಟಿ ಮರದ ಡೈನಿಂಗ್ ಟೇಬಲ್ಲುಗಳು, ... ಬರೆಯುವ ಮೇಜುಗಳು, ಕೈ ಇರುವ ಮತ್ತು ಇಲ್ಲದ ಕುರ್ಚಿಗಳು, ... ಬೆಂಚುಗಳು, ಕದಗಳು ಮತ್ತು ಕಿಟಕಿ ಚೌಕಟ್ಟುಗಳು, ... ಪೆರಾಂಬುಲೇಟರುಗಳು, ಹೆಚ್. ಎಂ. ವಿ. ಗ್ರಾಮಾಫೋನ್ ... ಟೈಪ್‌ರೈಟರುಗಳು, ರೇಡಿಯೋ ... ಬಟ್ಟೆಗಳು ... ಫ್ಯಾನ್ಸಿ ಮೇಜು ದೀಪಗಳು, ... ಗೃಹೋಪಯುಕ್ತ ಸಾಮಾನುಗಳು ಮತ್ತು ಅನೇಕ ಇತರ ಪದಾರ್ಥಗಳು.

18 ನೇ ಶನಿವಾರ ಮಧ್ಯಾಹ್ನ 3 ರಿಂದ 7 ರ ವರೆಗೆ ಪದಾರ್ಥಗಳನ್ನು ನೋಡಬಹುದು. ನಗದು ವ್ಯಾಪಾರ.

ಮೋತಿಲಾಲ್ ಟಾಕೀಸ್

ಮಂಡಿ ಮೊಹಲ್ಲಾ ಮೈಸೂರು

17-10-52 ರಿಂದ :: ಪ್ರತಿದಿನ 3 ಆಟಗಳು

ದೀಪಾವಳಿ ಹಬ್ಬದ ಪ್ರಯುಕ್ತ ಅಶೋಕ ಚಿತ್ರರಂಗ

ಟಿ.ಜೆ. ಫಿಲಂಸ್‌ರವರ ಹಿಂದಿ ಚಿತ್ರ ★ **ಸಾಗರ್** ★

ಪಾತ್ರ:— ನರ್ಗೀಸ್, ಭರತ್ ಭೂಷಣ್, ...

ಬೆಳಗಿನ ಪ್ರದರ್ಶನ : 16-10-52 ರಿಂದ ...

ಕ್ಯಾಪ್ಟನ್ ಅಮೆರಿಕ — (ಇಂಗ್ಲೀಷ್ ಸೀರಿಯಲ್)

ಈ ಚಿತ್ರದಲ್ಲಿ ... ದೃಶ್ಯಗಳು ... ಪರದೆಯ ಮೇಲೆ ...

ಪ್ರಭುದೇವಾ ಟಾಕೀಸ್

(ದಿನವಹಿ 3 ಆಟಗಳು)

17-10-52 ನೇ :: ಶುಕ್ರವಾರದಿಂದ

(ಬಡ ರೈತ)

ಪಾತ್ರ ... ರಂಜನ್ ... , ... , ...

ನಾಲ್ಕುವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ.

SRI GAYATHRI

From 17-10-52 Daily 2 Shows

20th Century's

VIVA ZAPATA

Starring: Marlon Brando and Jean Peters.

Morning Shows on 18th and 19th at 10-30 A. M

M. G. M's

Madame Bovary

ದೀಪಾವಳಿ ಹಬ್ಬದ

ಉಡುಗೊರೆಗಾಗಿ

ವೆಸ್ಟೆಂಡ್

ಗಡಿಯಾರಗಳನ್ನೇ ಕೊಡಿರಿ

ಸ್ವಾಧಿಕಾರಿಗಳು:—

ಕೆ. ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕಾ ರಸ್ತೆ :: ಮೈಸೂರು.

ಈ ವರ್ಷದ ಅತಿ ದೊಡ್ಡ ಹಬ್ಬ! :: ವರ್ಷದ ಮಹೋನ್ನತ ಚಿತ್ರ!!

ಈ ಚಿತ್ರದಲ್ಲಿ ಸಂಭವಿಸುವ ಒಂದಲ್ಲ ಒಂದು ಘಟನೆಯು ನಿಮ್ಮ ಮನೆಯಲ್ಲಿ ನಡೆದಿರುತ್ತಲ್ಲದೆ ನೀವೂ ಭಾಗಿಗಳಾಗಿರುವಿರಿ!

ಅಂತಹ ನೈಜ ಜೀವನವನ್ನು ಚಿತ್ರಿಸಿ ನಿಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡಿರುವ ಚಿತ್ರವು ಜನರ ಮನವನ್ನು ಸೆಳೆದು ಎಲ್ಲರ ಹೊಗಳಿಕೆಗೂ ಪಾತ್ರವಾಗಿರುವುದರಲ್ಲಿ ವಿಶೇಷತೆಯು!! ಇದೇ!!!

ಅಸ್ಸೋಸಿಯೇಟೆಡ್‌ರವರ ತೆಲುಗು ಚಿತ್ರ

★ ಸಂಕ್ರಾಂತಿ ★

ತಾರಾಗಣ:— ಶಾಂತಕುಮಾರಿ, ಸಾವಿತ್ರಿ, ಸದಾಶಿವರಾವ್, ಶಿವರಾವ್ ಡೈರೆಕ್ಟರ್ - ಸಿ. ಪುಲ್ಲಯ್ಯ

17—10—52 ರಿಂದ :: ಅಮೋಘ 4ನೇ ವಾರ

ಬೆಂಗಳೂರು - ಶಾರದ - ಸೆಂಟ್ರಲ್ - ರೂಪಮಹಲ್

ಮೈಸೂರು - ಪ್ರಭಾ ಚಿತ್ರ ಮಂದಿರಗಳಲ್ಲಿ ಪ್ರತಿ ದಿನ ಮೂರು ಆಟಗಳು

ಇಂದಿನಿಂದ — ಅಶೋಕ - ದಾವಣಗೆರೆ

CHAMRIA TALKIE DISTRIBUTORS RELEASE

Edited, Printed and Published by A. R. Nagarajan at Sadhvi Press, D. Subbiah Road, Mysore.

ಟೆಲಿಫೋನ್ ನಂ ೨೨೬ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೮-೧೦-೧೯೫೨ [ಸಂಚಿಕೆ ೬೮

ಅಭಾವ ಸ್ಥಿತಿ ವೀಕ್ಷಣೆಗೆ ಕೇಂದ್ರದ ಕ್ಷಿ ಜನರ ಸಮಿತಿ

ಆಹಾರ ಪರಿಹಾರಕ್ಕೆ ಸರ್ವ ಪಕ್ಷ ಸಮ್ಮೇಳನಕ್ಕಾಗಿ ಸಲಹೆ

ನೆಹರೂರವರಿಗೆ ಅನಂದನ್ ನಂಬಿಯಾರ್‌ರವರ ಪತ್ರ

ಮೈಸೂರು ೧೮

ಪಾರ್ಲಿಮೆಂಟಿನ ಸದಸ್ಯರೂ, ಕಮ್ಯೂನಿಸ್ಟ್ ನಾಯಕರೂ ಆದ ಶ್ರೀ ಕೆ. ಅನಂದನ್ ನಂಬಿಯಾರ್‌ರವರು ನೆನ್ನೆ ಇಲ್ಲಿಗೆ ಆಗಮಿಸಿ, ಮಧ್ಯಾಹ್ನ ಪೌರಸಭಾ ಕೆಲಸಗಾರರ ಸಂಘದ ಆರಂಭೋತ್ಸವವನ್ನು ನೆರವೇರಿಸಿದರು.

ಆನಂತರ ಅವರು ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ, ದಕ್ಷಿಣ ಭಾರತದಲ್ಲಿ ಆಹಾರ ಸಮಸ್ಯೆಯು ದಿನೇ ದಿನೇ ಉಲ್ಬಣವಾಗುತ್ತಿದೆಯೆಂದೂ ಇದಕ್ಕೆ ಸರಿಯಾದ ಪರಿಹಾರ ದೊರಕಿಸಲು ಸರ್ವ ಪಕ್ಷಗಳ ಸಮ್ಮೇಳನವೊಂದನ್ನು ನಡೆಸುವುದು ಅಗತ್ಯವೆಂದು ತಾವು ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುವುದಾಗಿಯೂ, ಪಾರ್ಲಿಮೆಂಟ್ ಅಧಿವೇಶನಕ್ಕಾಗಿ ದೆಹಲಿಗೆ ಬಂದಾಗ್ಗೆ ಈ ವಿಚಾರವನ್ನು ಚರ್ಚಿಸಬಹುದೆಂದು ನೆಹರೂರವರು ತಮಗೆ ತಿಳಿಸಿರುವುದಾಗಿಯೂ ಹೇಳಿದರು.

ರೈಲ್ವೆಗಳ ಪುನರ್ವಿಂಗಡಣೆಯಿಂದ ಕಾರ್ಮಿಕರಿಗೆ ತೊಂದರೆಗಳು ಸಂಭವಿಸಿವೆ; ದಕ್ಷಿಣ ರೈಲ್ವೆಯು ಸುಮಾರು ೭,೦೦೦ ಮೈಲಿಗಳ ವಿಸ್ತಾರವನ್ನೊಳಗೊಂಡು ವಿವಿಧ ಭಾಷೆಗಳನ್ನಾಡುವ ೧ ಲಕ್ಷ ೩೦ ಸಾವಿರ ಕಾರ್ಮಿಕರನ್ನು ಹೊಂದಿದೆಯೆಂದೂ, ಆದ್ದರಿಂದ ವರ್ಗ, ಬಡ್ತಿ, ವೇತನ ಮುಂತಾದ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅವರುಗಳು ಸಂಘಟಿತರಾಗುವುದಕ್ಕೆ ತೊಂದರೆಯಾಗಿದೆಯೆಂದೂ ತಿಳಿಸಿದರು.

ಶ್ರೀ ನಂಬಿಯಾರ್‌ರವರು ಸಂಜೆ ಮಹಾರಾಜಾ ಕಾಲೇಜು ವಿದ್ಯಾರ್ಥಿಗಳ ಸಭೆಯಲ್ಲಿ ತಮ್ಮ ಚೀಣಾ ಪ್ರವಾಸದ ಅನುಭವಗಳನ್ನು ವಿವರಿಸಿದರು. ನಂತರ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ರೈಲ್ವೆಗಳಿಂದ ಕೇಂದ್ರ ಸರ್ಕಾರಕ್ಕೆ ಖರ್ಚುಗಳೆಲ್ಲಾ ಕಳೆದ ಮೇಲೂ ವರ್ಷಕ್ಕೆ ೩೦ ಕೋಟಿ ರೂ. ಉಳಿತಾಯವಾಗುತ್ತಿದೆಯೆಂದೂ, ಟಿಕೆಟ್ ಮತ್ತು ಗೂಡ್ಸ್ ದರಗಳನ್ನು ಹೆಚ್ಚಿಸಿರುವುದರಿಂದ ಹೆಚ್ಚು ಲಾಭ ಬರುತ್ತಿದೆಯೆಂದೂ, ಈ ಲಾಭದಲ್ಲಿ ರೈಲ್ವೆ ಕಾರ್ಮಿಕರಿಗಾಗಲೀ ಸಾಮಾನ್ಯ ಜನರಿಗಾಗಲೀ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುತ್ತಿಲ್ಲವೆಂದೂ ಅವರು ತಿಳಿಸಿದರು.

ಆರ್. ಎಸ್. ಎಸ್. ನವರಿಂದ ಅಭಾವ ಪರಿಹಾರ ನಿಧಿ ಶೇಖರಣೆ

ರಾಜಧಾನಿಯ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಕಳೆದ ತಿಂಗಳು ೨೮ರಿಂದ ಈ ತಿಂಗಳು ೫ರ ವರೆಗೂ ನಗರದಲ್ಲಿ ಮನೆ ಮನೆಗೂ ಹೋಗಿ, ಅಭಾವ ಪ್ರದೇಶದಲ್ಲಿ ಪೀಡಿತರಾಗಿರುವ ಜನರ ಸಹಾಯಕ್ಕಾಗಿ ಧನ ಧಾನ್ಯವನ್ನು ಸಂಗ್ರಹಿಸಿರುತ್ತಾರೆ. ೩|| ಪಲ್ಲಾ ಅಕ್ಕಿ, ೧ ಪಲ್ಲದಷ್ಟು ಇತರ ಧಾನ್ಯ ಮತ್ತು ... ರೂ ಗಳು ವಸೂಲಾಗಿದೆ. ಸಂಘದ ಎಲ್ಲ ಸ್ವಯಂಸೇವಕರೂ ಕಳೆದ ೧೧

ಬ್ಯಾಂಕಿನಲ್ಲಿ ೩|| ಸಾವಿರ ರೂ. ಇಟ್ಟ ಭಿಕ್ಷುಕಿ

ದೆಹಲಿಯ ಪೋಲೀಸರು ಬಂಧಿಸಿರುವ ೫ ಸಾವಿರ ೧೫೦ ಮಂದಿ ಭಿಕ್ಷುಕರ ಪೈಕಿ ೬೦ ವರ್ಷದ ಮುದುಕಿಯೊಬ್ಬಳು ಇರುತ್ತಾಳೆ. ಆವಳು ಬ್ಯಾಂಕಿನಲ್ಲಿ ೩|| ಸಾವಿರ ರೂ. ಗಳನ್ನು ಇಟ್ಟಿರುವಳೆಂದು ವರದಿಯಾಗಿದೆ. ಆವಳು ಒಬ್ಬ ಗೆಜೆಟೆಡ್ ಅಧಿಕಾರಿಯ ತಾಯಿಯೆಂದೂ ಆಕೆಯ ಮಕ್ಕಳೂ, ಮೊಮ್ಮಕ್ಕಳೂ ಉತ್ತಮ ಸ್ಥಿತಿಯಲ್ಲಿರುವರೆಂದೂ ಹೇಳಲಾಗಿದೆ. ನ್ಯಾಯಾಧೀಶರು ಆಕೆಗೆ ವಿಧಿಸಿದ ಐವತ್ತು ರೂ. ದಂಡವನ್ನು ಆಕೆಯ ಪರಿಚಿತನೊಬ್ಬನು ಕೊಟ್ಟನೆಂದೂ ಈಗಾಗಲೇ ಆಕೆಯನ್ನು ಮೂರು ಬಾರಿ ಬಂಧಿಸಲಾಗಿತ್ತೆಂದೂ ಹೇಳಲಾಗಿದೆ.

ವಿದ್ಯಾ ಗಣಪತಿಯ ೬೧ ನೇ ಪ್ರತಿಷ್ಠಾ ಸ್ಮಾರಕೋತ್ಸವ

ರಾಜಧಾನಿಯ ಶ್ರೀಮನ್ ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿದ್ಯಾಗಣಪತಿಸ್ವಾಮಿಯ ವರ ೬೧ ನೇ ಪ್ರತಿಷ್ಠಾ ಸ್ಮಾರಕೋತ್ಸವವು ಇದೇ ೨೧ ನೇ ತಾ|| ಸಂಜೆ ೫ ಗಂಟೆಗೆ ಪಾಠಶಾಲೆಯಲ್ಲಿ ನಡೆಯುವುದು. ಅದರ ಅಂಗವಾಗಿ ನಾಳೆ ಸಂಜೆ ೫ ಗಂಟೆಗೆ ಹರಿಕಥೆ, ನಾಳಿದ್ದು ಸಂಜೆ ೪|| ಗಂಟೆಗೆ ೮|| ಮ|| ವಿದ್ವಾನ್ ಎಂ. ಎಸ್. ವೆಂಕಟೇಶಶಾಸ್ತ್ರಿಗಳವರಿಂದ ಉಪನ್ಯಾಸ, ೨೧ ನೇ ತಾ|| ಸಂಜೆ ೫ ಗಂಟೆಗೆ ಸಂಗೀತ ಇವು ಏರ್ಪಾಡಾಗಿವೆ.

ದೀಪಾವಳಿ ಶುಭಾಶಯಗಳು

ದೀಪಾವಳಿ ಹಬ್ಬದಲ್ಲಿ ನಮ್ಮ ಪತ್ರಿಕೆಯ ಚಂದಾದಾರರು, ಜಾಹಿರಾತುದಾರರು, ಹಿತೈಷಿಗಳು ಮತ್ತು ಎಲ್ಲ ಸಾರ್ವಜನಿಕರಿಗೂ ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನು ಬಯಸುತ್ತೇವೆ.

— ಸಂಪಾದಕ

ನೇ ತಾ|| ನಿರಶನ ವ್ರತನನ್ನಾಚರಿಸಿ ಅಕ್ಕಿ ಮತ್ತು ಹಣವನ್ನು ನಿಧಿಗೆ ಕೊಟ್ಟಿರುವರು. ತುಮಕೂರಿನಲ್ಲಿರುವ ಆರ್. ಎಸ್. ಎಸ್. ಸಂಸ್ಥೆ ಅಧ್ಯಕ್ಷರಾದ ಡಾ|| ಸಿ. ಎಚ್. ಸ್ವಾಮಿಯವರಿಗೆ ಸಂಗ್ರಹಿಸಿದ ವಸ್ತು ಮತ್ತು ಹಣವನ್ನು ಕಳುಹಲಾಗುತ್ತಿದೆ. ಧನ ಧಾನ್ಯ ಸಹಾಯ ಮಾಡಿದವರಿಗೆ ಸಂಸ್ಥೆಯವರು ಕೃತಜ್ಞತೆಯನ್ನು ಸೂಚಿಸಿರುತ್ತಾರೆ.

ಕಾಂಗ್ರೆಸ್ ಸಂಸ್ಥೆ ಮತ್ತು ಸರ್ಕಾರಕ್ಕೆ ಭಿನ್ನಾಭಿಪ್ರಾಯ

(ಸ್ವಂ ಸು ಫೋ) ಬೆಂಗಳೂರು ೧೮

ಪ್ರದೇಶದ ಕಾಂಗ್ರೆಸ್ಸಿನೊಡನೆ ಸಮಾಲೋಚನೆ ನಡೆಸಿ ಮುಖ್ಯವಾದ ಆಡಳಿತ ನೀತಿಯನ್ನು ಮಂತ್ರಿಮಂಡಲವು ಹಾಕಿಕೊಳ್ಳಬೇಕೆಂಬುದಾಗಿ ಪ್ರದೇಶ ಸಮಿತಿ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರು ಇತ್ತೀಚಿನ ಹೇಳಿಕೆಯನ್ನು ಕುರಿತು—ಈ ವಿಷಯವು ಎ. ಐ. ಸಿ. ಸಿ. ಮತ್ತು ಕಾರ್ಯಕಾರಿ ಸಮಿತಿಗಳ ಮುಂದೆ ಇದೆಯೆಂದೂ, ಈಗ ಬೆಂಗಳೂರಿಗೂ ಇರುವ ಚಾಂಪ್ಯದ ಬಗ್ಗೆ ನೆಹರೂರವರು ಪತ್ರಗಳನ್ನು ಬರೆದಿರುವರೆಂದೂ, ಶ್ರೀ ದಾಸಪ್ಪನವರೊಡನೆ ಒಳ ಸಮಸ್ಯೆ ಬಗ್ಗೆ ಬಹಿರಂಗ ವಾದಕ್ಕಾಗಿ ತಾವು ಇಳಿಯುವುದಿಲ್ಲವೆಂದೂ, ಅವಶ್ಯವೊದಗಿದರೆ ಪ್ರಾಂತ ಸಮಿತಿಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವುದಾಗಿಯೂ ಶ್ರೀ ಹನುಮಂತಯ್ಯನವರು ಹೇಳಿದರು.

ಸಂಸ್ಥಾನದ ಸಿವಿಲ್ ಕೋರ್ಟುಗಳಲ್ಲಿ ಮಂತ್ರಿಗಳು ಖುದ್ದು ಹಾಜರಾಗಬೇಕಾಗಿಲ್ಲವೆಂದು ರಾಜಪ್ರಮುಖರು ಆಜ್ಞೆ ಮಾಡಿರುತ್ತಾರೆ.

ಸೂಚನೆ

ದೀಪಾವಳಿ ಹಬ್ಬದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಕೊರಿಯದಲ್ಲಿ ಅಣು ಬಾಂಬು ಪ್ರಯೋಗವೇ?

ಕೊರಿಯದಲ್ಲಿ ಹಲವು ಯುದ್ಧದ ಪ್ರದೇಶಗಳ ಮೇಲೆ ಅಣು ಬಾಂಬು ಪ್ರಯೋಗಿಸಲು ಸೈನ್ಯಾಧಿಕಾರಿಗಳು ಶಿಫಾರಸು ಮಾಡಿರುವರೆಂದು ಅಮೇರಿಕದ ರಕ್ಷಣಾಧಿಕಾರಿಯು ತಿಳಿಸಿರುತ್ತಾರೆ.

ಆರಂಭೋತ್ಸವ

ರಾಜಧಾನಿಯ ಇಟ್ಟಿಗೆಗೂಡು ಯುವಕರ ಸಂಘದ ಆರಂಭೋತ್ಸವವು ನಾಳೆ ಸಂಜೆ ೫|| ಗಂಟೆಗೆ ಸಂಘದ ಕಛೇರಿಯಲ್ಲಿ ನಡೆಯುವುದು. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರು ಅಧ್ಯಕ್ಷತೆ ವಹಿಸುವರು. ಮಹಾರಾಜಾ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ಎಚ್. ನಾಗಪ್ಪನವರು ಭಾಷಣ ಮಾಡುವರು.

ಅಭಾವ ಸ್ಥಿತಿ ಪರಿಶೀಲನೆಗೆ ಕೇಂದ್ರದಿಂದ ೩ ಸದಸ್ಯರು

(ಸ್ವಂ ಸು ಫೋ) ಬೆಂಗಳೂರು ೧೮

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ, ಸಂಸ್ಥಾನದ ಅಭಾವ ಪರಿಹಾರದ ಬಗ್ಗೆ ಕೇಂದ್ರದ ಸಹಾಯಕ್ಕಾಗಿ ತಾವು ಒತ್ತಾಯಪಡಿಸಿದುದಾಗಿಯೂ, ಪ್ರಧಾನಿ ನೆಹರೂರವರು ೩ ಜನರ ಸಮಿತಿಯೊಂದನ್ನು ಇಲ್ಲಿಗೆ ಕಳುಹಿಸಲು ಒಪ್ಪಿರುವರೆಂದೂ ತಿಳಿಸಿದರು.

ಮದ್ರಾಸು-ಬೆಂಗಳೂರು ಮೂಲಕ ಮಂಗಳೂರಿಗೆ ರೈಲು

ಮದ್ರಾಸಿನಿಂದ ಬೆಂಗಳೂರಿಗೆ ಇರುವ ಬ್ರಾಡ್‌ಗೇಜು ರೈಲನ್ನು ಮಂಗಳೂರು ವರಿಗೂ ಹಾಕಬೇಕೆಂದು ತಾವು ರೈಲ್ವೆ ಮಂತ್ರಿಗಳನ್ನು ಒತ್ತಾಯ ಮಾಡಿದುದಾಗಿಯೂ, ಈ ಅಂಶದ ಪ್ರಾಮುಖ್ಯತೆ ಮತ್ತು ಅವಶ್ಯಕತೆಯನ್ನು ಸಚಿವ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಶಂಸಿರುವುದಾಗಿಯೂ ಅವರು ಹೇಳಿದರು.

ಜಕಾರ್ತದಲ್ಲಿ ಜನರ ಭಾರಿ ಪ್ರದರ್ಶನ

ಇಂಡೋನೇಷ್ಯಾ ಪಾರ್ಲಿಮೆಂಟಿನ ವಿಸರ್ಜನೆಯಾಗಬೇಕೆಂದು ಸೂಚಿಸುವ ಭಿತ್ತಿಪತ್ರಗಳನ್ನು ಹಿಡಿದು, ಅಲ್ಲಿನ ರಾಜಧಾನಿ ಜಕಾರ್ತಾದಲ್ಲಿ ಸಹಸ್ರಗಟ್ಟಲೆ ಜನರು ನಿನ್ನೆ ನಡೆಸಿದ ಪ್ರದರ್ಶನದ ಸಂಬಂಧವಾಗಿ ಸರ್ಕಾರದವರು ಸೈನ್ಯ ಮತ್ತು ಟ್ಯಾಂಕುಗಳನ್ನು ರಕ್ಷಣೆಗಾಗಿ ಕರೆಸಿದ್ದರೆಂದೂ, ಪ್ರದರ್ಶನಕಾರರು ಅಲ್ಲಿನ ರಷ್ಯಾ ರಾಯಭಾರ ಕಛೇರಿಯಲ್ಲಿದ್ದ ಹತ್ತಿರ ಬಾವುಟವನ್ನು ಹರಿದುಹಾಕಿದರೆಂದೂ ವರದಿಯಾಗಿದೆ. ಪಾರ್ಲಿಮೆಂಟ್ ಭವನದಲ್ಲಿ ಕು ಚ್ ಗ ಬೆಂಬ ಮುಂತಾದುವನ್ನು ಮುರಿದು ಅವರು ಅಧ್ಯಕ್ಷರ ಭವನಕ್ಕೆ ತೆರಳಿದಾಗ, ಅಲ್ಲಿ ಅಧ್ಯಕ್ಷರು ಭಾಷಣ ಮಾಡಿದನಂತರ ಶಾಂತರಾದರೆಂದು ಹೇಳಲಾಗಿದೆ. ರಾತ್ರಿ ೮ರಿಂದ ಬೆಳಿಗ್ಗೆ ೬ರವರೆಗೆ ಕರ್ಫ್ಯೂ ವಿಧಿಸಲಾಗಿದೆ. ಸಭೆಗಳನ್ನು ಪ್ರತಿಬಂಧಿಸಲಾಗಿದೆ. ದೇಶದ ರಕ್ಷಣಾ ವಿಷಯದ ಬಗ್ಗೆ ತನಿಖೆಗಾಗಿ ಪಾರ್ಲಿಮೆಂಟು ಒಂದು ಸಮಿತಿಯನ್ನು ರಚಿಸಬೇಕೆಂದು ಸಭೆಯಲ್ಲಿ ನಿರ್ಣಯವಾದ ಪರಿಣಾಮವಾಗಿಯೇ ಈ ಪ್ರದರ್ಶನ ನಡೆಯಿತೆಂದು ಹೇಳಲಾಗಿದೆ. ನಿರ್ಣಯದಲ್ಲಿ ಆಡಳಿತವಾಗಿರುವ ವಿಷಯವನ್ನು ಒಪ್ಪದೆ, ರಕ್ಷಣಾ ಮಂತ್ರಿಗಳು ರಾಜೀನಾಮೆ ಕೊಡಬಹುದೆಂದೂ ಹೇಳಲಾಗಿದೆ.

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಈ ಸಂಜೆ ೭ ಘಂಟೆಗೆ ಶ್ರೀ ಪಿ. ರಾಮಸ್ವಾಮಿ ನಾಯ್ಡು ರವರಿಂದ ದಾನ ಶೂರ ಕರ್ಣ ಎಂಬ ಹರಿಕಥೆಯೂ, ಅನ್ನಸಂತರ್ಪಣೆ ಶ್ರೀ ಕೃಷ್ಣಸ್ವಾಮಿ ಅಲಂಕಾರವೂ ಏರ್ಪಾಡಾಗಿದೆ.

ಸಾರ್ವಜನಿಕ ವಿಚಾರ ಗೋಷ್ಠಿ

ರಾಜಧಾನಿಯ ಸಾರ್ವಜನಿಕ ವಿಚಾರ ಸಂಸ್ಥೆ ಮತ್ತು ಇಂಡಿಯಾ-ಚೀಣಾ ಸ್ನೇಹ ಸಂಘಗಳ ಸಂಯುಕ್ತ ಆಶ್ರಯದಲ್ಲಿ ನಾಳೆ ಸಂಜೆ ೫ ೪೦ ಕ್ಕೆ ಸಾರ್ವಜನಿಕ ವಿಚಾರ ಗೋಷ್ಠಿಯು ಜಗನ್ಮೋಹನ ಬಂಗಲೆ ಬಳಿ ಇರುವ ಪೂರ್ಣಿಮಾ ಹಾಲೆಯಲ್ಲಿ ಏರ್ಪಾಡಾಗಿದೆ. ಶ್ರೀ ಎಂ. ಯಾಮುನಾಚಾರ್ಯರು ಚೀಣಾದ ತತ್ವ ಜ್ಞಾನದ ವಿಚಾರವಾಗಿಯೂ, ಶ್ರೀ ಎ. ಪಿ. ಶ್ರೀನಿವಾಸಮೂರ್ತಿಯವರು ಚೀಣಾದ ಆರ್ಥಿಕ ವ್ಯವಸ್ಥೆಯ ಬಗ್ಗೆಯೂ, ಶ್ರೀ ಬಿ. ಕೆಂಚೇಗೌಡರು ಚೀಣಾ ಮತ್ತು ವಿಶ್ವಸಂಸ್ಥೆ ಎಂಬ ವಿಷಯವಾಗಿಯೂ ಭಾಷಣ ಮಾಡುವರು. ಶ್ರೀ ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು.

ಬ್ಯಾಂಕುಗಳ ಡಿಪಾಜಿಟ್ ಹಣ ಅಭಾವ ಪರಿಹಾರಕ್ಕೆ

ಬೆಂಗಳೂರು ೧೭

ಶಾಸನ ಸಭೆಯ ಅಧಿವೇಶನದಲ್ಲಿ ಚರ್ಚಿಸುವ ಸಲುವಾಗಿ ಕಳುಹಿಸಲಾಗಿರುವ ಖಾಸಗಿ ನಿರ್ಣಯಗಳ ಪೈಕಿ ಹುಣಸೂರಿನ ಶ್ರೀ ಡಿ ದೇವರಾಜ ಅರಸರು ಕೊಟ್ಟಿರುವ ನಿರ್ಣಯದ ಪ್ರಕಾರ, ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ, ಬ್ಯಾಂಕ್‌ಗಳಲ್ಲಿ ಜನರು ಇಟ್ಟಿರುವ ಡಿಪಾಜಿಟ್ಟು ಹಣವನ್ನು ತೆಗೆದುಕೊಂಡು ಉಪಯೋಗಿಸಿ, ಆ ರೀತಿ ತೆಗೆದುಕೊಂಡ ಹಣವನ್ನು ೧೧ ವರ್ಷದ ಅವಧಿಯಲ್ಲಿ ತೀರಿಸುವ ಸಾಲವನ್ನಾಗಿ ಪರಿಗಣಿಸಬೇಕೆಂದ ಸೂಚಿಸಲಾಗಿದೆ. ಜಾರಿಯಲ್ಲಿರುವ ಪಾನ ನಿರೋಧ ಕ್ರಮವನ್ನು ರದ್ದುಗೊಳಿಸಿ, ಅಬ್ಕಾರಿ ವರಮಾನದ ಹಣವನ್ನು ಸರ್ಕಾರದವರು ಪರಿಹಾರ ಕಾರ್ಯಕ್ಕಾಗಿ ಉಪಯೋಗಿಸಬೇಕೆಂದು ಜೆ ಇಮಾಂರವರು ಒಂದು ನಿರ್ಣಯದಲ್ಲಿ ಸೂಚಿಸಿರುತ್ತಾರೆ. ಅಭಾವವಿರುವ ಕಡೆ ಕ್ಷಾಮ ಪ್ರದೇಶವೆಂದು ಸಾರಬೇಕೆಂದು ಶ್ರೀ ಎ ಭೀಮಪ್ಪನಾಯಕರೂ, ಇನಾಂ, ಜೋಡಿ ಮುಂತಾದ ಪಾಳೆಯಗಾರತನದ ಜಮೀನುದಾರಿ ಪದ್ಧತಿಯನ್ನು ಪರಿಹಾರವಿಲ್ಲದೆ ರದ್ದುಪಡಿಸಬೇಕೆಂದು ಶ್ರೀ ಬಿ ಪಿ ನಂಜುಂಡ ರೆಡ್ಡಿಯವರೂ ನಿರ್ಣಯಗಳನ್ನು ಕಳುಹಿಸಿರುತ್ತಾರೆ.

ಬೆಂಚು ಕೋರ್ಟುಗಳ ರದ್ದು

ಸಂಸ್ಥಾನದಲ್ಲಿರುವ ನಾನಾ ಬೆಂಚ್ ಕೋರ್ಟುಗಳನ್ನು ಈ ತಿಂಗಳ ಅರಿಯುಂದ ಸರ್ಕಾರದವರು ರದ್ದುಪಡಿಸುತ್ತಾರೆ. ಬೆಂಗಳೂರಿನಲ್ಲಿರುವ ಸವರಿ ಕೋರ್ಟು ಬರುವ ೧ನೇ ತಾ|| ನಿಂದ ಮುಚ್ಚಲ್ಪಡುವುದು.

ಮೈಸೂರು ಪ್ರದೇಶ ಕಾಂಗ್ರೆಸ್ ಚುನಾವಣಾ ಕಮಿಷನರ್

ಮೈಸೂರು ಸಂಸ್ಥಾನದ ಪ್ರದೇಶ ಕಾಂಗ್ರೆಸ್ಸಿನ ಚುನಾವಣಾಧಿಕಾರಿಯಾಗಿ ಶ್ರೀ ಕೆ ಆರ್ ಮಾಧವರಾಯರನ್ನು ನೇಮಿಸಲಾಗಿದೆ.

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್, ಮೈಸೂರು

ಮೈಸೂರಿನಲ್ಲಿ ವನ ಮೃಗ ರಕ್ಷಣಾ ಸಮಿತಿ ಸಭೆ

ಅಖಿಲಭಾರತ ವನಮೃಗ ರಕ್ಷಣಾ ಸಮಿತಿಯ ಪ್ರಥಮ ಅಧಿವೇಶನವು ಬರುವ ತಿಂಗಳು ಆಖೈರಿನಲ್ಲಿ ಮೈಸೂರಿನಲ್ಲಿ ಸೇರಲಿರುವುದು. ಮೈಸೂರಿನ ರಾಜಪ್ರಮುಖರು ಅದರ ಆರಂಭೋತ್ಸವವನ್ನು ನೆರವೇರಿಸುವರು. ಕಾಡು ಮೃಗಗಳ ರಕ್ಷಣೆ, ಅವುಗಳ ಅಮದು ಮತ್ತು ರಫ್ತು, ಬೇಟೆ ಮುಂತಾದ ವಿಷಯಗಳು ಪರಿಶೀಲನೆಗೆ ಬರುತ್ತವೆ.

ಅಮೆರಿಕಕ್ಕೆ ಭಾರತದಿಂದ ೪ ಕೋಟಿ ಚೀಲ ಮರಳು

ಭಾರತದಿಂದ ಮರಳು ತುಂಬಿದ ೪ ಕೋಟಿ ಚೀಲಗಳನ್ನು ಅಮೆರಿಕವು ಕೊಳ್ಳಲಿರುವುದಾಗಿ ವರದಿಯಾಗಿದೆ.

○ ಮದ್ರಾಸು ವಿಶ್ವವಿದ್ಯಾಲಯದ ನಿವೃತ್ತ ಇತಿಹಾಸ ಪ್ರೊಫೆಸರರಾದ ಶ್ರೀ ಕೆ ಎ ನೀಲಕಂಠ ಶಾಸ್ತ್ರಿಯವರನ್ನು ಮೈಸೂರು ವಿಶ್ವವಿದ್ಯಾಲಯದ ಇಂಡಾಲಜಿ ಪ್ರೊಫೆಸರರಾಗಿ ೨ ವರ್ಷಗಳ ಕಾಲ ನೇಮಿಸಲಾಗಿದೆ.

ವಿಶ್ವೇಶ್ವರಯ್ಯನವರಿಗೆ ಪೌರಸಭೆಯವರ ಸತ್ಕಾರ

ಡಾ|| ಎಂ ವಿಶ್ವೇಶ್ವರಯ್ಯನವರ ಗೌರವಾರ್ಥವಾಗಿ ಮೊನ್ನೆ ಸಂಜೆ ಮೈಸೂರು ಪೌರಸಭೆಯವರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ನಗರವನ್ನು ಅಭಿವೃದ್ಧಿಪಡಿಸುವುದರಲ್ಲಿ ಆಸಕ್ತರಾಗಿರುವುದಕ್ಕಾಗಿ ಶ್ರೀ ವಿಶ್ವೇಶ್ವರಯ್ಯನವರು ಪೌರಸಭಾಧ್ಯಕ್ಷರನ್ನೂ ಮತ್ತು ಸಭೆಯವರನ್ನೂ ಪ್ರಶಂಸಿಸಿದರು.

ಸೂಯೆಜ್ ಕಂಪೆನಿ ಆಡಳಿತ ವಹಿಸಲು ಈಜಿಪ್ಟ್ ಸಿದ್ಧತೆ

೧೯೬೮ಕ್ಕೆ ಮುಗಿಯುವ ೯೯ ವರ್ಷದ ರಿಯಾಯಿತಿಯ ಅವಧಿಯು ತೀರಿದ ನಂತರ ಸೂಯೆಜ ಕಾಲುವೆ ಕಂಪೆನಿಯ ಆಡಳಿತವನ್ನು ವಹಿಸಿಕೊಳ್ಳಲು ಈಗಿನಿಂದಲೇ ಪೂರ್ವಭಾವಿಯಾಗಿ ಸಿದ್ಧತೆಗಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆದಿರುವುದಾಗಿ ಗೊತ್ತಾಗಿದೆ.

ದೀಪಾವಳಿ ಹಬ್ಬದ

ಉಡುಗೊರೆಗಾಗಿ

ವೆಸ್ಟೆಂಡ್

ಗಡಿಯಾರಗಳನ್ನೇ ಕೊಡಿರಿ

ಸ್ಟಾಕಿಸ್ಟರು —

ಕೆ. ಎಸ್ ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್,

ಗಡಿಯಾರ ವ ತ್ಪ್ರ ಕನ್ನಡಕಗಳ ವ್ಯಾಪಾರಿಗಳು

ಅಶೋಕಾ ರಸ್ತೆ ಮೈಸೂರು

ಟ್ಯಾಕ್ಸಿಯಲ್ಲೇ ೨೦೦೦ ರೂ. ಕಳುಗಳ್ಳತನ

ಎಂ ಡಿ ಕಾರ್ಪೊರೇಷನ್ನಿನ ಬೆಂಗಳೂರು ಶಾಖೆಯ ಶ್ರೀ ವೆಂಕಟರಾವ್ ಎಂಬವರು ಬುಧವಾರ ಟ್ಯಾಕ್ಸಿಯೊಂದರಲ್ಲಿ ಕುಂದ್ಯದಲ್ಲಿ ಹೋಗುತ್ತಿದ್ದಾಗ ಅದರಲ್ಲಿದ್ದ ಷೇಕ್ ಅಹಮದ್, ವಿ ಕಾಶೀನಾಥ್, ಸಿ ಗುರಪ್ಪ ಮತ್ತು ಎಂ ಜಹೀರ ದ್ದೀನರವರು ಸುಮಾರು ೨೦೦೦ ರೂಗಳನ್ನು ಶ್ರೀ ವೆಂಕಟರಾಯರ ಜೇಬಿನಿಂದ ಅಪಹರಿಸಿದರೆಂದೂ ಆ ನಾಲ್ಕು ಜನರನ್ನು ದಸ್ತಗಿರಿ ಮಾಡಿ ಟ್ಯಾಕ್ಸಿಯನ್ನು ಪೊಲೀಸರು ವಶಪಡಿಸಿಕೊಂಡಿರುವರೆಂದೂ ವರದಿಯಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೨೦ ಮಿಶ್ರ ಮಾಧುರ್ಯ ಮಧ್ಯಾಹ್ನ ೧೨ ಜಲತರಂಗ್ ೨ ನಿಮ್ಮ ಮೆಚ್ಚಿನ ಗೀತೆಗಳು ಸಂಜೆ ೫ ೩೦ ಮಕ್ಕಳು ೬ ೨೦ ಕೆ ವಿ ಸಂಪತ್ ಸಂಗೀತ ೬ ೧೦ ಮತ್ತು ಆ ಎಂ ಎಸ್ ಶಿಲ್ಪಪುಳ್ಳಿ ಅಯ್ಯಂಗಾರ್, ಸಂಗೀತ ೮ ೦ ಆರ್ಕೆಸ್ಟ್ರಾ ೯ ೧೫ ಚಿತ್ರ ಸಂಗೀತ ೯ ೩೦ ಸಭಾಕಂಪನಿ ಸಿ ರಾಜರತ್ನಂ ರವರಿಂದ ಕನ್ನಡದಲ್ಲಿ ಮಾತು ೯ ೪೫ ರಾಷ್ಟ್ರೀಯ ಕಾರ್ಯಕ್ರಮ

೨೦ ೧೦ ೫೨

ಬೆಳಿಗ್ಗೆ ೭ ೩೦ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ರಿಕಾರ್ಡು ಸಂಗೀತ ಮಧ್ಯಾಹ್ನ ೧ ೩೦ ನಾಗಸ್ವರ ೨ ಚಿತ್ರ ಸಂಗೀತ ಸಂಜೆ ೫ ೩೦ ಮತ್ತು ಆ ಎ ಎಸ್ ಶಿವರುದ್ರಪ್ಪ ಪಿಟೀಲು ೬ ೧೫ ಗಾನವಿಹಾರ ೭ ಜಿ ಎನ್ ಬಾಲಸುಬ್ರಹ್ಮಣ್ಯಂ, ರಿಕಾರ್ಡು ಸಂಗೀತ ೭ ೩೦ ಗೀತಾಂಜಲಿ ೭ ೪೦ ವಿಶ್ವ ವಾರ್ತೆ ಪಿವ ಕೆ ೮ ೪೦ ಮತ್ತು ೯ ೩೦ ೧೦ ಟಿ ಚೌಡಯ್ಯ ಸಂಗೀತ ೯ ೧೦ ಡಾ|| ರಾಜ್ಯಂಗಳವರಿಂದ ಇಂಗ್ಲಿಷ್ ಭಾಷಣ

TYPICAL PROBLEMS

IN

INTERMEDIATE ANALYTICAL GEOMETRY

(With Full Solutions)

BY

V. K. DORASWAMY M Sc.,

Price : 0-8-0

Edited, Printed and Published by A R Nagarajan at Sadhvi Press, D Subbiah Road, Mysore

ವೇದವನ್ನು ಉಚ್ಚರಿಸುವ ಮೈಸೂರಿನ ಮಗು

ತೀರ್ಥಯಾತ್ರೆಗಾಗಿ ಉತ್ತರ ಭಾರತದ ಪ್ರವಾಸ ಮಾಡುತ್ತಿರುವ ಮೈಸೂರಿನ ಒಂದು ಸಂಸಾರಕ್ಕೆ ಸೇರಿದ ... ವರ್ಷದ ಬಾಲಕನು ವೇದ, ಉಪನಿಷತ್ತು, ಬ್ರಹ್ಮ ಸೂತ್ರ ಮುಂತಾದ ಪವಿತ್ರ ಗ್ರಂಥಗಳ ಶ್ಲೋಕಗಳನ್ನು ಲೀಲಾಜಾಲವಾಗಿ ಹೇಳುತ್ತಿರುವನೆಂದು ಗೊತ್ತಾಗಿದೆ. ಹುಡುಗನ ಅಪೂರ್ವ ಪಾಂಡಿತ್ಯವನ್ನು ನೋಡಿ ಕಾಶಿಯ ವಿದ್ವಾಂಸರು ಆಶ್ಚರ್ಯಗೊಂಡಿರುವರು. ಇದು ಪೂರ್ವಜನ್ಮಾಂತರದ ಪುಣ್ಯ ವಿಶೇಷವೆಂದು ಅವರು ಭಾವಿಸಿರುವರು. ಹುಡುಗನು ಹಾಲನ್ನು ಮಾತ್ರ ಸೇವಿಸುತ್ತಾನೆ. ಮತ್ತು ದಿನಕ್ಕೆ ನಾಲ್ಕು ಗಂಟೆಗಳ ಕಾಲ ನಿದ್ರಿಸುತ್ತಾನೆಂದು ಹೇಳಲಾಗಿದೆ.

ಭಾರತ ನಾಟ್ಯ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯು ಶಿವರಾಂಪೇಟೆ ಕೇಂದ್ರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶ್ರೀಮತಿ ಇಂದಿರಾಬಾಯಿಯವರಿಂದ ಭಾರತ ನಾಟ್ಯವು ನಡೆಯುವುದು. ಶ್ರೀ ಕೃಷ್ಣಪ್ರಸಾದ ಯಕ್ಷಗಾನ ಮಂಡಲಿಯವರಿಂದ ಪಂಚವಟಿ ಎಂಬ ಯಕ್ಷಗಾನ ಕಥೆ ಉಂಟು.

ಸಹಕಾರಿ ಗಂಧದೆಣ್ಣೆ ಕಾರ್ಖಾನೆ

ಮೈಸೂರು

ಪ್ರಕಟಣೆ

ಮೇಲ್ಕಂಡ ಕಾರ್ಖಾನೆಯ ಕಾರ್ಮಿಕ ವಸತಿ ಗೃಹಗಳನ್ನು ಉತ್ತಮಪಡಿಸುವ ... ತ್ತು ರಿಪೇರಿ ಮಾಡುವ ಬಗ್ಗೆ ಮೊಹರು ಟೆಂಡರುಗಳನ್ನು 1952ನೇ ಅಕ್ಟೋಬರ್ 31 ನೇ ತಾರೀಖು ಮಧ್ಯಾಹ್ನ ೩ ಗಂಟೆವರೆಗೆ ಕೆಳಗೆ ರುಜು ಮಾಡಿರುವವರ ಕಛೇರಿಯಲ್ಲಿ ಸ್ವೀಕರಿಸಲಾಗುವುದೆಂದು ಮಾಹಿತಿ ... ಟೆಂಡರಿನೊಡನೆ 180 ರೂ ... ಠೇವಣಿಯನ್ನು ಕಳುಹಿಸಬೇಕು ... ಇಲ್ಲದೆ ಬರುವ ಟೆಂಡರುಗಳನ್ನು ಪರಿಶೀಲಿಸಲಾಗುವುದಿಲ್ಲ. ಇತರ ವಿವರಗಳನ್ನು ಕೆಳಗೆ ರುಜು ಮಾಡಿರುವವರ ಕಛೇರಿಯಲ್ಲಿ ಕೆಲಸದ ದಿನ ಮತ್ತು ವೇಳೆಯಲ್ಲಿ ಪಡೆಯಬಹುದು.

ಜಿ. ತಿಪ್ಪೇಸ್ವಾಮಿ,

ಜನರಲ್ ಮ್ಯಾನೇಜರ್

ಸಹಕಾರಿ ಗಂಧದೆಣ್ಣೆ ಕಾರ್ಖಾನೆ

ಮೈಸೂರು

REMEMBER !

ABIDS AUCTION TO MORROW

AT 10 A M AT SHOW ROOMS

INSPECT the Articles TO DAY Between 3 & 7 P M

ಮೋತಿಲಾಲ್ ಟಾಕೀಸ್

ಮಂಡಿ ಮೊಹಲ್ಲಾ, ಮೈಸೂರು

17-10-52 ರಿಂದ : ಪ್ರತಿದಿನ 3 ಆಟಗಳು

ದೀಪಾವಳಿ ಹಬ್ಬದ ಪ್ರಯುಕ್ತ ಅಪೂರ್ವ ಪ್ರಾರಂಭ

ಪಿ ಜೆ ಫಿಲಂಸ್‌ರವರ ಹಿಂದಿ ಚಿತ್ರ ★ **ಸಾಗರ್** ★

ಪಾತ್ರ — ನರ್ಗಿಸ್, ಭರತ ಭೂಷಣ್ ಪ್ರೇಂನಾಥ್, ಕೆ ಎನ್ ಸಿಂಗ್ ಜೇವಿಡ್

ಬೆಳಗಿನ ಪ್ರದರ್ಶನ 16-10-52 ರಿಂದ 4 ದಿನಗಳು ಮಾತ್ರ

ಕ್ಯಾಪ್ಟನ್ ಅಮೆರಿಕ — (ರಿಪಬ್ಲಿಕ್ ಸೀರಿಯಲ್)

ಈ ಚಿತ್ರದಲ್ಲಿ ಕಾಣುವ ಹೊರಗಿನ ದೃಶ್ಯಗಳು ಹಾಲಿವುಡ್ ನಗರದಿಂದ ಕೊಲರೆಡೋ ನದಿವರೆಗೂ ಚಿತ್ರಿಸಲ್ಪಟ್ಟಿವೆ. ಇದೇ ಮೊದಲನೇ ಚಾರಿ

ಪ್ರಭುದೇವಾ ಟಾಕೀಸ್

(ಏರ್ ಕಂಡಿಷನ್ ...)

17-10-52 ನೇ : : ಶುಕ್ರವಾರದಿಂದ

ರಾಜರಾಜೇಶ್ವರಿ ಪಿಕ್ಚರ್ಸ್‌ರವರ ತಮಿಳು ಚಿತ್ರ

ಏಳೆಯ್ಯಾ ಉಳವನ್

(ಬಡ ರೈತ)

ಪಾತ್ರ — ಅಂಜಲಿದೇವಿ, ಕಣ್ಣಾಂಬ ಶ್ರೀರಾಮಮೂರ್ತಿ, ಲಿಂಗಮೂರ್ತಿ

ನಾಲ್ಕುವಾರ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನೂ ವಜಾ ಮಾಡಿರುತ್ತೆ

ಭಾರತದ ಆದ್ಯಂತ ಧಾನ್ಯದ ಹತೋಟಿ ರದ್ದು

ದೇಶದಲ್ಲಿ ಕ್ರಮಕ್ರಮವಾಗಿ ಆಹಾರದ ಹತೋಟಿಯನ್ನು ರದ್ದುಗೊಳಿಸಬೇಕೆಂಬ ಭಾರತದ ನೀತಿಗೆ ಅನುಸಾರವಾಗಿ ... ರುವ ವರ್ಷದಿಂದ ಸಮಗ್ರ ಭಾರತ ... ಧಾನ್ಯದ ಹತೋಟಿಯನ್ನು ಪೂರ್ಣವಾಗಿ ರದ್ದುಗೊಳಿಸುವ ಬಗ್ಗೆ ಕೇಂದ್ರ ಸರಕಾರದವರು ಪರ್ಯಾಲೋಚಿಸುತ್ತಿರುವ ... ವ ದೇಶಲಾಗಿದೆ. ಮದ್ರಾಸು ... ಇತರ ಪ್ರದೇಶಗಳಲ್ಲಿ ಧಾನ್ಯದ ... ಟಿಯನ್ನು ರದ್ದು ಮಾಡಿದ್ದರೂ ... ಅವಕಾಶವಿಲ್ಲದಿರು ... ದಲೂ, ಕೆಲವು ವರ್ಷಗಳಿಂದ ... ಶಾಲಿಯಾನಾ ಆಫೀಸಿನಲ್ಲಿ ... ಟನ್ನಿಗೂ ಮೇಲ್ಪಟ್ಟು ಧಾನ್ಯ ... ತಾಯವಾಗುತ್ತಿರುವುದರಿಂದಲೂ ... ಸಾರಿ ಒಳ್ಳೆಯ ಬೆಳೆ ಬರು ... ನಿರೀಕ್ಷೆ ಇರುವುದರಿಂದಲೂ ಮೇ ... ದ ಮೇರೆ ಆಲೋಚಿಸಿ, ಕಲ್ಕತ್ತಾ, ... ಬಾಯಿ ಮತ್ತು ದೆಹಲಿ ನಗರಗಳ ... ದು ಉಳಿದ ಎಲ್ಲ ಕಡೆಗಳಲ್ಲೂ ... ದ ಹತೋಟಿಯನ್ನು ಪೂರ್ಣವಾ ... ಮಾಡುವ ಸಂಭವವಿರುವುದೆಂ ... ವರದಿಯಾಗಿದೆ

... ಕ ಕೊಡದಿದ್ದುದಕ್ಕೆ ...॥ ಲಕ್ಷ ರೂ. ದಂಡ

... ಬಾಯಿಯ ಪಾರ್ಕ್, ಡೇವಿಸ್ ... ಯವರು ... ಲಕ್ಷ ರೂಗಳಷ್ಟು ... ಮ್ಯುಸಿಟ್ಯ ಔಷಧವನ್ನು ತರಿಸಿ, ... ಸುಂಕ ಕೊಡುವುದನ್ನು ತಪ್ಪಿಸಿ ... ಕಡಿಮೆ ಬೆಲೆಯನ್ನು ಹೇಳ ... ಕ್ಕಾಗಿ ... ಕಂಪೆನಿಯವರಿಗೆ ... ವೈರ್ಲೆಸ್ ಸಾಮಾನುಗಳನ್ನು ತ ... ಬಗ್ಗೆ ಮಾರ್ಕ್ಯಾನಿ ಅಂತರರಾ ... ವೈರ್ಲೆಸ್ ಕಮ್ಯುನಿಕೇಷನ್ಸ್ ... ಯವರಿಗೆ ಕೊಡಲಾಗಿದ್ದ ಸುಂಕ ... ವಿನಾಯಿತಿಯನ್ನು ದುರುಪಯೋಗ ... ಪಡಿಸಿಕೊಂಡಿದ್ದುದಕ್ಕಾಗಿ ... ಕಂಪೆನಿ ... ಲಕ್ಷ ರೂ. ದಂಡ ವಿಧಿಸ ... ಲಾಗಿ ...

... ಪಾಕಿಸ್ತಾನದ ...,೦೦೦ ನಿರಾಶ್ರಿತರು

... ಸಿ ನೆಹರೂರವರು ಪಶ್ಚಿಮ ... ನ ಪ್ರವಾಸ ಕೈಗೊಂಡು, ಪೂ ... ದಿಂದ ಭಾರತಕ್ಕೆ ವಲಸೆ ... ತ್ತಿರುವ ನಿರಾಶ್ರಿತರ ಸಮಸ್ಯೆ ... ಪರಿಶೀಲನೆ ನಡೆಸುತ್ತಿರುವರು ... ಲ್ಲಿ ... ದಲ್ಲಿ ಅವರಿಗೆ ಸಲ್ಲಿಸಲಾದ ... ಯೊಂದಕ್ಕೆ ಉತ್ತರವಿತ್ತು ಅಲ್ಲಿಗೆ ... ನಿರಾಶ್ರಿತರ ಪೈಕಿ ಹಲವರನ್ನು ... ಇತರ ಪ್ರದೇಶಗಳಿಗೂ ಕಳು ... ವುದೆಂದೂ ಮತ್ತು ... ನಿರಾಶ್ರಿತರನ್ನು ಅಂಡಮಾ ... ಕ್ಕೆ ಕಳುಹಿಸಿ ಅಲ್ಲಿ ಅವರಿಗೆ ... ಸೌಲಭ್ಯಗಳನ್ನು ಕಲ್ಪಿಸ ... ವುದೆಂದೂ ತಿಳಿಸಿದರು

ನೇಪಾಳದ ರಾಜಕುಮಾರರ ಬಂಧನ

... ರಾಜರಾದ ತ್ರಿಭುವನರ ... ರ ... ಸುವ ಬಗ್ಗೆ ಜಲ್ಲಿನ ರಾಜ ... ಮಹೇಂದ್ರವೀರ ವಿಕ್ರಮ ಷ ... ಒಳಸಂಚು ನಡೆಸಿದರೆಂಬ

ಒಂದು ಸುದ್ದಿಯು ವರದಿ. ಈ ತಿಂಗಳ ಅದಿಯಲ್ಲಿ ಅವರ ಐದು ಮಂದಿ ಸಹವರ್ತಿಗಳ ತನಿಖೆ ನಡೆಸಿದ ಪರಿಣಾಮ ... , ಕಳೆದ ಐದು ದಿನಗಳಿಂದ ರಾಜ ... ಅಲ್ಲಿನ ಅರಮನೆಯಲ್ಲೇ ಬಂಧನದಲ್ಲಿಡಲಾಗಿದೆಯೆಂದೂ ಅವರ ... ಶೋಧಿಸಿದಾಗ ಒಂದು ಹೊಸ ಸ್ಟ ... ನ್ನು ಮತ್ತು ಬ್ರೆ ... ಗನ್ನುಗಳು ದೊರೆತುವೆಂದೂ ಪ್ಯಾರಿಸ್ಸಿನಿಂದ ಬಂದ ವರದಿಯೊಂದು ತಿಳಿಸುತ್ತದೆ

ಟೆಲಿಫೋನ್ ನಂ 794 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೩೦-೧೦-೧೯೫೦ [ಸಂಚಿಕೆ ೬೯

ಭಾರತದ ಆದ್ಯಂತ ಧಾನ್ಯ ಹತೋಟಿ ರದ್ದು?

ಮೌರ್ಯರ ಕಾಲದಲ್ಲಿ ಮಾರಾಟ ತೆರಿಗೆ ಇದ್ದಿತೆ?

ಉತ್ತರ ಪ್ರದೇಶದ ಶಾಸನ ಸಭೆಯು ಸಮಾವೇಶಗೊಂಡಿದ್ದಾಗ ಅಲ್ಲಿನ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ ಹರಿಪೂರ್ಣಾನಂದವರ್ಮ ಎಂಬುವರು ಮಾರಾಟ ತೆರಿಗೆಯ ಚರ್ಚೆ ಸಂಬಂಧದಲ್ಲಿ ಮಾತನಾಡುತ್ತಾ ೨೫೦೦ ವರ್ಷಕ್ಕೆ ಹಿಂದ ಭಾರತದಲ್ಲಿ ಮೌರ್ಯರ ಆಳ್ವಿಕೆಯಲ್ಲಿ ಮಾರಾಟ ತೆರಿಗೆಯು ಜಾರಿಯಲ್ಲಿತ್ತೆಂದೂ, ಮಾರಾಟ ತೆರಿಗೆಯು ಕೌಟಿಲ್ಯರ ಅರ್ಥ ಶಾಸ್ತ್ರದಲ್ಲೂ ಸೂಚಿತವಾಗಿರುವುದೆಂದೂ ಹೇಳಿದರು. ಆದೇ ಕಾಲದಲ್ಲಿ ಗ್ರೀಸಿನಲ್ಲೂ ಮಾರಾಟ ತೆರಿಗೆಯು ಜಾರಿಯಲ್ಲಿತ್ತೆಂದೂ ಆಗ ಅಲ್ಲಿನ ಖ್ಯಾತ ತತ್ವ ಜ್ಞಾನಿಯಾದ ಅರಿಸ್ಟಾಟಲ್ ... ಯವರು ಅದನ್ನು ವಿರೋಧಿಸಿದರೆಂದೂ ಶ್ರೀ ವರ್ಮರವರು ತಿಳಿಸಿದರು

ಷಣ್ಮುಗಂ ಶೆಟ್ಟಿರ ಷಷ್ಟಿ ಪೂರ್ತಿ ಶಾಂತಿ

ಭಾರತದ ಮಾಜಿ ಅರ್ಥ ಸಚಿವ ಶ್ರೀ ಆರ್. ಕೆ. ಷಣ್ಮುಗಂಶೆಟ್ಟಿರ ಷಷ್ಟ್ಯಬ್ಧಿ ಪೂರ್ತಿ ಶಾಂತಿಯು ಮೊನ್ನೆ ದಿನ ಕೊಯಮತ್ತೂರಿನಲ್ಲಿ ಜರಗಿತು. ಅದರ ಅಂಗವಾಗಿ ಅಂದು ಸಂಜೆ ಅಲ್ಲಿನ ಹಲವು ವಾಣಿಜ್ಯ ಸಂಸ್ಥೆಗಳ ಆಶ್ರಯದಲ್ಲಿ ಮೈಸೂರಿನ ಮಾಜಿ ದಿವಾನರಾದ ಶ್ರೀ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ನಡೆದು ಶ್ರೀ ಶೆಟ್ಟಿಗೆ ಮಾನಪತ್ರಗಳನ್ನು ಅರ್ಪಿಸಲಾಯಿತು. ಕೊಯಮತ್ತೂರಿನ ಜರು ವಾಣಿಜ್ಯ ಸಂಸ್ಥೆಗಳವರು ಶ್ರೀ ವಿಶ್ವೇಶ್ವರಯ್ಯನವರಿಗೂ ಮಾನಪತ್ರವನ್ನು ಅರ್ಪಿಸಿ ಗೌರವಿಸಿದರು

ಮದ್ದು ಅರೆಯುತ್ತಿದ್ದಾಗ ಇಬ್ಬರ ಮರಣ

ಮೈಸೂರು ೨೦

ರಾಜಧಾನಿಯ ಅಶೋಕಾ ರಸ್ತೆಯ ೧೭ ನೇ ಕ್ರಾಸಿನ ಒಂದು ಮನೆಯಲ್ಲಿ ಮೊನ್ನೆ ದಿನ ಅಬ್ದುಲ್ ಅಜೀಜ್ ಎಂಬಾತನು ಮದ್ದನ್ನು ಅರೆಯುತ್ತಿದ್ದನೆಂದೂ, ಅಗ್ಗೆ ಅವಿಯರ್ ಪಾಷಾ ಮತ್ತು ಇನಾಯತ್‌ಉಲ್ಲಾ ಎಂಬಿಬ್ಬರು ಅಲ್ಲಿಗೆ ಬಂದರೆಂದೂ ಆ ಸಮಯದಲ್ಲಿ ಮದ್ದಿನ ಆಸ್ಫೋಟನೆಯಾಗಿ ಅಬ್ದುಲ್ ಅಜೀಜ್ ಮತ್ತು ಅವಿಯರ್ ಪಾಷಾ ಎಂಬುವರು ಸ್ಥಳದಲ್ಲೇ ಮೃತಪಟ್ಟರೆಂದೂ ತಿಳಿದು ಬಂದಿದೆ. ಇನಾಯತ್ ಉಲ್ಲಾ ಎಂಬಾತನಿಗೆ ತೀವ್ರ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟು ನೆನ್ನೆ ಅವನೂ ಅಲ್ಲಿ ಸತ್ತಿದನೆಂದೂ ಗೊತ್ತಾಗಿದೆ

ನೇಣು ಹಾಕಿಕೊಂಡು ಮರಣ

ನರಸಿಂಹರಾಜ ಮೊಹಲ್ಲದ ಜಾನಕಿಬಾಯಿ ಎಂಬುವರು ಹೊಟ್ಟೆ ನೋವಿನಿಂದ ಬಹಳ ದಿನದಿಂದಲೂ ನರಳುತ್ತಿದ್ದು ಮೊನ್ನೆ ಅದರ ಬಾಧೆಯನ್ನು ಸಹಿಸದೆ ನೇಣು ಹಾಕಿಕೊಂಡು ಮೃತಪಟ್ಟರೆಂದು ಗೊತ್ತಾಗಿದೆ. ಅಮಾವಾಸ್ಯೆ ವೇಳೆಗೆ ಅವರಿಗೆ ಅದರ ಬಾಧೆಯು ಹೆಚ್ಚುತ್ತಿತ್ತೆಂದು ಹೇಳಲಾಗಿದೆ

ಎ. ಐ. ಸಿ. ಸಿ.ಗೆ ಪ್ರತಿನಿಧಿಗಳ ಚುನಾವಣಾ ವೇಳಾಪಟ್ಟಿ

ಬೆಂಗಳೂರು ೩೦

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಸಂಸ್ಥಾನದಿಂದ ಪ್ರತಿನಿಧಿಗಳ ಚುನಾವಣೆ ಬಗ್ಗೆ ಪುನರ್ನಿರ್ಮಿತ ವೇಳಾಪಟ್ಟಿಯು ಈ ರೀತಿ ಇದೆ - ಮತದಾರರ ಪಟ್ಟಿ ... ಯ ಪ್ರಕಟನೆ ೩ ... ನಾಮ ಪತ್ರಗಳನ್ನು ಸ್ವೀಕರಿಸುವುದು ನವಂಬರ್ ೧ ಮತ್ತು ೨ ನೇ ತಾರೀಕು ಬೆಳಗ್ಗೆ ೧೧ ರಿಂದ ಸಂಜೆ ೪ ಘಂಟೆವರೆಗೆ. ಅವುಗಳ ಪ್ರಕಟನೆ ೧ ಮತ್ತು ೨ ನೇ ತಾರೀಕು ಸಂಜೆ ... ಘಂಟೆಯೊಳಗೆ. ನಾಮಪತ್ರಗಳ ಪರಿಶೀಲನೆ ೩ ನೇ ತಾರೀಕು ಬೆಳಗ್ಗೆ ೧೧ ರಿಂದ. ಕ್ರಮವಾದ ನಾಮ ಪತ್ರಗಳ ಪ್ರಕಟನೆ ೩ ನೇ ತಾರೀಕು ಸಂಜೆಯೊಳಗೆ, ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ೬ ನೇ ತಾರೀಕು ಸಂಜೆ ೫ ಘಂಟೆವರೆಗೆ. ಅವಧಿ ಚುನಾವಣೆ ೧೭ ನೇ ತಾರೀಕು ಬೆಳಗ್ಗೆ ... ರಿಂದ ಸಂಜೆ ೫ ರವರೆಗೆ. ಓಟುಗಳ ಎಣಿಕೆ ೧೮ ನೇ ತಾರೀಕು. ಚುನಾಯಿತರ ಪಟ್ಟಿಯನ್ನು ಜಿಲ್ಲೆ ಮತ್ತು ಪ್ರಾಂತ್ಯ ಕಾಂಗ್ರೆಸ್ ಸಮಿತಿಗಳಿಗೆ ಕಳುಹಿಸಲು ಕಡೇ ದಿನ ೨೦ ನೇ ತಾರೀಕು

ಶಾಸನ ಸಭೆಗಳ ಅಧಿವೇಶನ

ರಾಜಸಭೆಯ ಬಗ್ಗೆ ಪ್ರಶ್ನೋತ್ತರ

ಸ್ವಂ ಸು ಫೋನ್] ಬೆಂಗಳೂರು ೩೦

ಈ ದಿನ ೧೨ ಘಂಟೆಗೆ ಕಿರಿಯ ಶಾಸನ ಸಭೆಯೂ, ೧ ಘಂಟೆಗೆ ಹಿರಿಯ ಶಾಸನ ಸಭೆಯೂ ಆರಂಭವಾದುವು. ಶ್ರೀಗಳಾದ ಎಚ್. ಸಿದ್ದಯ್ಯ ಮತ್ತು ಕೆ. ಟಿ. ಭಾಷ್ಯಂರವರು ಅವುಗಳ ಅಧ್ಯಕ್ಷತೆ ವಹಿಸಿದ್ದರು. ಶ್ರೀ ದೇವರಕೊಂಡಪ್ಪನವರ ನಿಧನದ ಬಗ್ಗೆ ಹಿರಿಯ ಶಾಸನ ಸಭೆಯಲ್ಲಿಯೂ, ಶ್ರೀ ಎಸ್. ಸಿ. ಮಲ್ಲಯ್ಯನವರ ನಿಧನದ ಬಗ್ಗೆ ಕಿರಿಯ ಶಾಸನ ಸಭೆಯಲ್ಲಿಯೂ ಸಂತಾಪಸೂಚಕ ನಿರ್ಣಯಗಳು ಅಂಗೀಕರಿಸಲ್ಪಟ್ಟುವು

೧೯೪೧ ನೇ ಇಸವಿಯ ಅನಂತರದವರೆಗೆ ಸರ್ಕಾರದವರು ಮಾಡಿರುವ ಆಜ್ಞೆಗಳು, ಅವುಗಳ ಬದಲಾವಣೆ ಅಥವಾ ಅವುಗಳ ರದ್ದಿನ ಬಗ್ಗೆ ವಿವರಗಳನ್ನು ಕೇಳಿ ಶ್ರೀ ಕೆ. ಪುಟ್ಟಸ್ವಾಮಿಯವರು ಕಿರಿಯ ಶಾಸನ ಸಭೆಯಲ್ಲಿ ಹಾಕಿದ ಪ್ರಶ್ನೆಗೆ ಶ್ರೀ ಹನುಮಂತಯ್ಯನವರು ಉತ್ತರವಿತ್ತು- ಇದು ಒಂದು ದೊಡ್ಡ ಪಟ್ಟಿಯಾಗುವುದೆಂದೂ, ಅದನ್ನು ಸಂಗ್ರಹಿಸಲು ಹೆಚ್ಚು ಕಾಲ ಬೇಕೆಂದೂ, ಉತ್ತರೋತ್ತರ ಈ ವಿಷಯಗಳನ್ನು ಒದಗಿಸಲಾಗುವುದೆಂದೂ ತಿಳಿಸಿದರು

ನವರಾತ್ರಿ ದರ್ಬಾರನ್ನು ರಾಜ ಸಭೆಯಾಗಿ ಪರಿವರ್ತಿಸಿದುದರ ಬಗ್ಗೆ ಶ್ರೀ ಆರ್. ಪಿ. ರೇವಣ್ಣನವರು ಪ್ರಶ್ನೆಗಳನ್ನು ಹಾಕಿದರು. ಮುಖ್ಯ ಮಂತ್ರಿ ಹನುಮಂತಯ್ಯನವರು ಉತ್ತರವಿತ್ತು, ಈ ಬದಲಾವಣೆಯು ಕಾಲೋಚಿತವಾಗಿರುತ್ತದೆಯೆಂದು ತಿಳಿಸಿದರು. ಇದರ ಪರಿಣಾಮವು ಸಹ ಉತ್ತಮವಾಗಿರುವುದೆಂದು ಹೇಳಿದರು. ಈ ವಿಚಾರವು ಆಡಳಿತದ ಒಂದು ಸಣ್ಣ ಅಂಶವಾಗಿರುವುದರಿಂದ ಶಾಸನ ಸಭೆಯ ಅಭಿಪ್ರಾಯವನ್ನು ಕೇಳಲಿಲ್ಲವೆಂದೂ ಸಹ ಅವರು ಸೂಚಿಸಿದರು

ಈ ಬದಲಾವಣೆಯನ್ನು ಮಾಡುವುದರಲ್ಲಿ ರಾಜಕೀಯ ಉದ್ದೇಶವೇನೂ ಇಲ್ಲವೆಂದು ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳವರ ಉಪ ಪ್ರಶ್ನೆಗೆ ಉತ್ತರವಾಗಿ ಅವರು ತಿಳಿಸಿದರು

ರಾಜ ಸಭೆಯ ಖರ್ಚು ವೆಚ್ಚಗಳನ್ನು ಸರ್ಕಾರವು ವಹಿಸುತ್ತಿದೆ. ಅರಮನೆಯವರೇ ವಹಿಸುತ್ತಿದ್ದರೆ ಆಗ ಪರಿಸ್ಥಿತಿಯು ಬೇರೆಯಾಗುತ್ತಿತ್ತೆಂದು ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ಉಪ ಪ್ರಶ್ನೆಗೆ ಉತ್ತರವಾಗಿ ಅವರು ಹೇಳಿದರು

ಬ್ಲೇಡುಗಳ ಬೆಲೆ ಹೆಚ್ಚಿತು

ಭಾರತ ಸರ್ಕಾರದವರು ಇದೇ ಜುಲೈನಿಂದ ಡಿಸೆಂಬರ್ ವರೆಗಿನ ಆಮದು ನೀತಿಯನ್ನು ವಿವರಿಸಿದ ಪರಿಣಾಮವಾಗಿ ಮದ್ರಾಸಿನಲ್ಲಿ ಬ್ಲೇಡ್‌ಗಳ ಬೆಲೆಯು ಹೆಚ್ಚಿದೆ. ಹತ್ತು ಬ್ಲೇಡುಗಳ ಪ್ಯಾಕೆಟ್ಟಿಗೆ ೧೨ ಆಣೆಯಿಂದ ೧ ರೂಪಾಯಿ ಆಗಿದೆ. ಹಲವು ಅಂಗಡಿಗಳಲ್ಲಿ ಮಾಲು ದೊರೆಯುತ್ತಿಲ್ಲವೆಂದು ಹೇಳಲಾಗಿದೆ

○ ಅಮೆರಿಕದ ರಾಜಧಾನಿ ವಾಷಿಂಗ್ಟನ್ನಿನ ಇವಾ ಗ್ರೀಷರ್ ಎಂಬಾಕೆಯು ೫ ನೇ ಸಾರಿ ಅವಳಿ ಮಕ್ಕಳನ್ನು ಹಡೆದಿರುತ್ತಾಳೆ. ಆಕೆಯು ಒಂದು ಸಲ ಒಟ್ಟಿಗೆ ಮೂರು ಮಕ್ಕಳನ್ನು ಹಡೆದಿದ್ದಳು. ಈಗ ಆಕೆಗೆ ೨೦ ಮಕ್ಕಳಿವೆ.

ಅಸ್ಸಾಂ ನ್ಯಾಯಾಧೀಶರಿಂದ ಲಂಡನ್ ನ್ಯಾಯಾಧೀಶರಿಗೆ ಆಜ್ಞೆ !

ಲಂಡನ್ನಿನಲ್ಲಿರುವ ಡಿ ಎ ಪ್ ಎಂ ಟ ಮಾಜಿ ಅಧಿಕಾರಿಯನ್ನು ವಿಚಾರಣೆಗಾಗಿ ತಮ್ಮ ಮುಂದೆ ಹಾಜರಾಗುವಂತೆ ಏರ್ಪಡಿಸಬೇಕೆಂದು ಅಸ್ಸಾಮಿನ ನ್ಯಾಯಾಧೀಶರೊಬ್ಬರು ಲಂಡನ್ನಿನ ಒಬ್ಬ ನ್ಯಾಯಾಧೀಶರಿಗೆ ಇತ್ತ ಸೂಚನೆ ಬಗ್ಗೆ ಸದರಿ ಅಧಿಕಾರಿಯು ಅಲ್ಲಿನ ಶ್ರೀ [illegible] ನ್ಯಾಯಾಧೀಶರ ಮುಂದೆ ಅರ್ಜಿ ಸಲ್ಲಿಸಲಾಗಿ, ಅವರು ಅಧಿಕಾರಿಯನ್ನು ಖುಲಾಸೆ ಮಾಡಿ, ಅಸ್ಸಾಂ ನ್ಯಾಯಾಧೀಶರು ಲಂಡನ್ನಿನ ಅಧಿಕಾರಿಗೆ ಸೂಚನೆ ಕೊಡುವ ಪತ್ರವನ್ನು "ಅಪಮಾನಕರವಾದ" ಕೇಳಿಕೆಯೆಂದು ಟೀಕಿಸಿ ಅವರಿಗೆ ಏನು ಅಧಿಕಾರವಿದೆಯೆಂದು ಪ್ರಶ್ನಿಸಿರುತ್ತಾರೆ ತಮ್ಮ ಕೋರ್ಟಿನಲ್ಲಿ ಆದ ಖರ್ಚನ್ನು ಭಾರತದ ಹೈಕಮೀಷನರು ಕೊಡುವಂತೆ ಆಜ್ಞೆ ಮಾಡಿರುತ್ತಾರೆ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರಕ್ಕೆ ಬಹುಮಾನಗಳು

ಈ ವರ್ಷದ ದಸರಾ ವಸ್ತು ಪ್ರದರ್ಶನದಲ್ಲಿ ನಡೆದ ಸಂಗೀತ ಸ್ಪರ್ಧೆಗಳಲ್ಲಿ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರಕ್ಕೆ [illegible] ಬಹುಮಾನಗಳ ಪೈಕಿ, ಸೀನಿಯರ್, ಜೂನಿಯರ್, ಹಾಡುಗಾರಿಕೆ ಮತ್ತು ವೀಣೆಗಳಲ್ಲಿ [illegible] ಬಹುಮಾನಗಳು ಬಂದಿರುತ್ತವೆ ಬಹುಮಾನಿತರು [illegible] ಗಳಾದ ಎ ಶಾಂತ, ಎಸ್ ಜಿ ಭಾರತಮಾತೆ, ಎಸ್ ಕೆ ನಾಗರತ್ನ ಮತ್ತು ಸರಸ್ವತಿ ಭಾರತಿ ಈಚೆಗೆ [illegible] ನಗೂಡಿನಲ್ಲಿ ಕರ್ನಾಟಕ ಸಂಘದ [illegible] ಯದಲ್ಲಿ ನಡೆದ ಸಂಗೀತ ಸ್ಪರ್ಧೆಗಳಲ್ಲಿಯೂ ಸಹಾ ಈ ಮಂದಿರಕ್ಕೆ ಸೀನಿಯರ್ ಮತ್ತು ಜೂನಿಯರ್ ವೀಣೆ ಮತ್ತು ಹಾಡುಗಾರಿಕೆಗಳಲ್ಲಿ ಒಟ್ಟು [illegible] ಬಹುಮಾನಗಳ ಪೈಕಿ [illegible] ಬಹುಮಾನಗಳು ಬಂದಿವೆ ಬಹುಮಾನಿತರು [illegible] ಎಸ್. ಜಿ ಭಾರತಮಾತೆ, ಎ ಶಾಂತ [illegible] ಜಿ ವಿಜಯಲಕ್ಷ್ಮಿ, ಸಿ ಎನ್ ರಮಾ

[illegible] ಎಸ್. ಎಲ್. ಸಿ. ಮತ್ತು [illegible] ಎಲ್ ಎಸ್. ಶಿಕ್ಷಣ ತರಗತಿಗಳು

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಭಾ ಆಶ್ರಯದಲ್ಲಿ ಎಸ್ ಎಸ್ ಎಲ್ ಸಿ. [illegible] ಕ್ಷಣ ತರಗತಿಗಳನ್ನು ನವೆಂಬರ್ ೧ನೇ ತಾರೀಖಿನಿಂದ ಪ್ರಾರಂಭಿಸಲಾಗುತ್ತದೆ ಮತ್ತು ಎಲ್. ಎಸ್, ಹಿಂದಿ ತರಗತಿಗಳು ನಡೆಯುತ್ತಿವೆ ಸೇರಲಿಚ್ಛಿಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಂಘಕ್ಕೆ ಬಂದು ವಿವರಗಳನ್ನು ತಿಳಿಯಬಹುದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಅಸ್ಸಾಮಿನಲ್ಲಿ ಪ್ರವಾಹದಿಂದ ೩೦೦೦೦ ಜನರಿಗೆ ಕಷ್ಟ

ಅಸ್ಸಾಮಿನಲ್ಲಿ ೪ ಭಾರಿ ನದಿಗಳೂ ಅವುಗಳ ಉಪನದಿಗಳೂ ಉಕ್ಕಿ ಹರಿಯುತ್ತಿರುವುದರಿಂದ ಅಲ್ಲಿನ ೩೦ ಸಾವಿರ ಜನರು ನಿರಾಶ್ರಿತರಾಗಿರುವರೆಂದೂ, ೮೦ ಸಾವಿರ ಎಕರೆ ಪ್ರದೇಶದಲ್ಲಿ ಭತ್ತದ ಬೆಳೆಯು ನಾಶವಾಗಿರುವುದೆಂದೂ ಹೇಳಲಾಗಿದೆ

ಶಿವರಾತ್ರೀಶ್ವರ ಆಶ್ರಮ

ರಾಜಧಾನಿಯ ಶ್ರೀ ಶಿವರಾತ್ರೀಶ್ವರ ಆಶ್ರಮದ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಮಂಡಲಿಯ ಪ್ರಸಕ್ತ ಸಾಲಿನ ಚುನಾವಣೆಯು ನಡೆದು ಶ್ರೀ ಟಿ ವಿ ಚಂದ್ರಮೌಳಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಡಿ ಎಂ ಗುರುಸಿದ್ದಯ್ಯ ಮತ್ತು ಕೆ ಅಂಜನಪ್ಪನವರುಗಳು ಕಾರ್ಯದರ್ಶಿ ಮತ್ತು ಉಪ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು

ಸತ್ಕಾರ ಕೂಟ

ಡಾ॥ ವಿ ಆರ್ ನಾಯ್ಡುರವರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ವೈದ್ಯಾಧಿಕಾರಿಗಳಾಗಿ ನೇಮಿತರಾದ ಬಗ್ಗೆ ಅವರನ್ನು ಅಭಿನಂದಿಸಲು ರಾಜಧಾನಿ ಬಲಿಜಾ ಸಂಘದವರು ಶ್ರೀರಂಗಪಟ್ಟಣದಲ್ಲಿ, ಮಹಾರಾಜಾ ಕಾಲೇಜ [illegible] ಪಕರಾದ ಶ್ರೀ ಸಿ ಡಿ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಶ್ರೀ ಜನಾರ್ಧನ ನಾಯ್ಡುರವರ ಅತಿಥಿಗಳನ್ನು ಪ್ರಶಂಸಿಸಿ ಭಾಷಣ ಮಾಡಿದರು ಶ್ರೀ ಸಿ ಕೆ [illegible] ಸಾರಥಿಯವರು ಪ್ರಶಂಸಾ ಪದ್ಯವನ್ನು ಓದಿದರು ವೇದ ನಾರ್ಥನೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ವೀಣಾವಾದನ ವಿ ವೆಂಕಟಸುಬ್ಬರಾವ್ ಮಧ್ಯಾಹ್ನ ೧-೩೦ ವೇಣುಗಾನ ೧-೫ ಅಹಮದ್ ಜಾನ್ ತಿರಕ್ವಾ ತಬಲ [illegible] ಮತ್ತು ಸಂಜೆ ೭ ಮತ್ತು [illegible] ಸಿತಾರ್, ಜಿ ಎಸ್ ರತ್ನಾಕರಭಟ್ [illegible] ೩೦ ಹಾಡುಗಾರಿಕೆ ಟಿ ಎಸ್ ಕಲ್ಲಪ್ಪ [illegible] ವಿ ರಂಗನಾಥ, ತನಿ ಮೃದಂಗ [illegible] ಕನ್ನಡದಲ್ಲಿ ಭಾಷಣ [illegible] ವೀಣೆ, ವಿ ವೆಂಕಟಸುಬ್ಬರಾವ್ [illegible] ವೃಂದ ಸಂಗೀತ, ರೇಡಿಯೋ ವಾದ್ಯಗೋಷ್ಠಿ ಮತ್ತು ಎಸ್ ರಾಮಚಂದ್ರರಾವ್ [illegible] ಇಂಗ್ಲೀಷಿನಲ್ಲಿ ಭಾಷಣ [illegible] ಗಾನನೃತ್ಯ

ಖೈದಿಗಳ ಪತ್ರಿಕೆ

ಹೈದರಾಬಾದು ಸೆಂಟ್ರಲ್ ಜೈಲಿನಲ್ಲಿರುವ ವಿದ್ಯಾವಂತ ಖೈದಿಗಳು "ದೀಪ[illegible]" ಎಂಬ ಹೆಸರಿನಕೈ ಬರಹದ ಪತ್ರಿಕೆಯೊಂದನ್ನು ಹೊರಡಿಸುತ್ತಾರೆ ಅದರಲ್ಲಿ ಸಾಹಿತ್ಯ ಮತ್ತು ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದ ಲೇಖನಗಳಿವೆ

ದೀಪಾವಳಿ ಶುಭಾಶಯಗಳು

ಬೊಂಬಾಯಿಯ ಮಾತುಂಗಾದಲ್ಲಿರುವ ಮೈಸೂರು ಕನ್ಸರ್ನ್ಸ್, ಮೈಸೂರು ಟೈಲರ್ಸ್, ಮೈಸೂರು ಪ್ರಿಂಟಿಂಗ್ ಪ್ರೆಸ್, ಮೈಸೂರು ಬೋರ್ಡಿಂಗ್ ಹೌಸ್ ಈ ಸಂಸ್ಥೆಗಳ ಮಾಲೀಕರಾದ ಶ್ರೀ ಜಿ ವಿ ಈಶ್ವರ್ ಸಹೋದರರು ನಮಗೆ ಕಳುಹಿಸಿರುವ ದೀಪಾವಳಿ ಶುಭಾಶಯವನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ರಾಜಧಾನಿಯ ಒಲಂಪಿಯಾ ಟಾಕೀಸಿನವರು, ದೇವರಾಜಾ ಮಾರ್ಕೆಟ್ಟಿನಲ್ಲಿರುವ ಸೌಭಾಗ್ಯ ಸ್ಟೋರ್ಸಿನವರು ಮತ್ತು ಶ್ರೀ ಪುರಂಧರ ತ್ಯಾಗರಾಜ ಸಂಗೀತ ಪಾಠಶಾಲೆಯವರು ಕಳುಹಿಸಿರುವ ದೀಪಾವಳಿ ಶುಭಾಶಯಗಳಿಗಾಗಿ ಅವರೆಲ್ಲರಿಗೂ ನಮ್ಮ ಕೃತಜ್ಞತೆಯನ್ನು ಸೂಚಿಸುತ್ತೇವೆ

ಬೊಂಬಾಯಿ ಇಂದ್ರ ಭವನ

ರಾಜಧಾನಿಯ ಧನ್ವಂತರಿ ರಸ್ತೆಯಲ್ಲಿರುವ ಬೊಂಬಾಯಿ ಇಂದ್ರ ಭವನದವರು ದೀಪಾವಳಿ ಶುಭಾಶಯದೊಡನೆ ನಮಗೆ ಕಳುಹಿಸಿರುವ ಸಿಹಿ ತಿಂಡಿಗಳನ್ನು ವಂದನಾಪೂರ್ವಕವಾಗಿ ಸ್ವೀಕರಿಸಿರುತ್ತೇವೆ

ಧನಲಕ್ಷ್ಮೀ ಪೂಜೆ

[illegible] ದೇವರಾಜಾ ಮಾರ್ಕೆಟ್ಟಿನಲ್ಲಿರುವ ಶ್ರೀ ಮಹಾಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸಿನವರೂ ಮತ್ತು ಅಶೋಕಾ ರಸ್ತೆಯಲ್ಲಿರುವ ಬ್ಯಾಂಕರ್ ಶ್ರೀ [illegible] ನವರು [illegible] ದಿನ ಶ್ರೀ ಧನಲಕ್ಷ್ಮೀ ಪೂಜೆಯನ್ನು [illegible] ಆಹ್ವಾನ ಪತ್ರಿಕೆಯನ್ನು [illegible] ಕಳುಹಿಸಿದ್ದು

ಭಂಡಾರಕೇರಿ ಮಠಾಧೀಶರ ಕಾರ್ಯಕ್ರಮ

ಉಡುಪಿಯ ಶ್ರೀ ಭಂಡಾರಕೇರಿ ಮಠದ ಸ್ವಾಮಿಗಳವರು ರಾಜಧಾನಿಯಲ್ಲಿ ಮಧ್ವ ತತ್ವ ಜ್ಞಾನ ಸಮ್ಮೇಳನ ಪ್ರಚಾರವನ್ನೂ, ಪಠಣ [illegible], ವಿಷ್ಣು ಭಕ್ತಿ [illegible] ವಿಷಯಗಳ ಉಪನ್ಯಾಸವನ್ನೂ ಪ್ರತಿ ದಿನ ಸಂಜೆ [illegible] ರಿಂದ ೭ ಘಂಟೆ ವರೆಗೆ [illegible] ಕೇರಿ ಬಳಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಸುತ್ತಲಿರುವರು ಶ್ರೀಗಳವರನ್ನು ಪ್ರತಿ ದಿನ ಬೆಳಿಗ್ಗೆ [illegible] ರಿಂದ ೧೦-೩೦ ಘಂಟೆ ಮತ್ತು ಮಧ್ಯಾಹ್ನ [illegible] ರಿಂದ [illegible] ವರೆಗೆ [illegible] ರುವ ಗೋಪಿನಾಥ [illegible] ದರ್ಶನ ಮಾಡಲು ಅವಕಾಶ ಕಲ್ಪಿಸಲಾಗಿದೆ ಇದೇ [illegible] ಶ್ರೀ ಸ್ವಾಮಿಗಳವರು ಬೆಂಗಳೂರಿಗೆ ಪ್ರಯಾಣ ಬೆಳೆಸುವರು

ಕಾಂಗ್ರೆಸ್ ಸಮಿತಿಗಳಿಂದ ಖಾದಿ ಹುಂಡಿಗಳ ಮಾರಾಟ

[illegible] ಟವಾಗದೆ ಉಳಿದಿರುವ [illegible] ಲಕ್ಷ ರೂ ಬೆಲೆಯ ಖಾದಿ ಬಟ್ಟೆ [illegible] ಲಕ್ಷ ರೂ ನಷ್ಟ ಕೈನೂಲು [illegible] ಬಗ್ಗೆ ದೇಶದಲ್ಲಿರುವ ಕಾಂಗ್ರೆಸ್ ಸಮಿತಿಗಳು ಖಾದಿ ಬಟ್ಟೆಯ ಹುಂಡಿಗಳನ್ನು ಮಾರುವ ಏರ್ಪಾಟು ಮಾಡುವ ಬಗ್ಗೆ ಆಯಾ ಪ್ರದೇಶಗಳಲ್ಲಿರುವ ಖಾದಿ ಭಂಡಾರದವರಿಗೆ ನೆರವಾಗಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರು ಸೂಚನೆಯೊಂದನ್ನು ಹೊರಡಿಸಿರುತ್ತಾರೆ

ಅಂಬೇಡ್ಕರ್, ಅಶೋಕ ಮೆಹತಾ ಅರ್ಜಿ ವಜಾ

ಪಾರ್ಲಿಮೆಂಟಿನ ಕೆಳಸಭೆಗೆ ಬೊಂಬಾಯಿ ನಗರದ [illegible] ಕ್ಷೇತ್ರಗಳಿಂದ ನಡೆದ ಚುನಾವಣೆಯಲ್ಲಿ ಅಕ್ರಮ ನಡೆದಿತ್ತೆಂದು [illegible] ಚುನಾವಣೆಯನ್ನು ರದ್ದುಗೊಳಿಸಬೇಕೆಂದು ಡಾ॥ ಅಂಬೇಡ್ಕರ್ ಮತ್ತು ಅಶೋಕ ಮೆಹತಾರವರು ಹೂಡಿದ್ದ ಮೊಕದ್ದಮೆಗಳನ್ನು ಚುನಾವಣಾ ನ್ಯಾಯ ಮಂಡಲಿಯವರು ತಿರಸ್ಕರಿಸಿರುತ್ತಾರೆ

ವ್ಯವಸಾಯ ತೋಟಗಾರ ಸಂಘ

ಮೈಸೂರು ಜಿಲ್ಲಾ ವ್ಯವಸಾಯ [illegible] ಗಾರರ ಸಂಘದ [illegible] ಸಾಲಿನ ಕಾರ್ಯನಿರ್ವಾಹಕ ಮಂಡಲಿಗೆ ಶ್ರೀ [illegible] ನವರು ಅಧ್ಯಕ್ಷರಾಗಿಯೂ, ಶ್ರೀ ಎಚ್ ಕೆ ಕುಮಾರಸ್ವಾಮಿಯವರು [illegible] ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. [illegible] ಕೇಂದ್ರ ಸಮಿತಿಗೆ [illegible] ಶ್ರೀ [illegible] ರಾಮಸ್ವಾಮಿಯವರೂ, ಶ್ರೀ [illegible] ಆರಿಸಲ್ಪಟ್ಟರು ಇದೇ [illegible] ತಾ॥ ಮಂಗಳವಾರ [illegible] ಘಂಟೆಗೆ ಜಿಲ್ಲಾ [illegible] ಸಭೆ [illegible] ನಡೆಯುವುದು.

ಮನರಂಜನೆ ತೆರಿಗೆ ವಸೂಲಿ ಬಗ್ಗೆ ಹೊಸ ಕ್ರಮ

ಸಂಸ್ಥಾನದ ವಿವಿಧ ಊರುಗಳಲ್ಲಿ ಮನರಂಜನೆ ತೆರಿಗೆ [illegible] ವಸೂಲಿ ಮಾಡುವ ಬಗ್ಗೆ [illegible] ಸಂಸ್ಥೆಗಳ [illegible] ಮಾಡುವ ಸೂಚನೆಯನ್ನು [illegible] ವರು

ದೀಪಾವಳಿಯಂದು !

[illegible] ಬೆಳಕು ಕಾಣದೆ [illegible] ನಮ್ಮ [illegible] ಬೆಳಕು ಕಂಡು [illegible] ಸುಖ ಸಂತೋಷಗಳು ನಮ್ಮಗಳ ಮನೆಯಲ್ಲಿ [illegible] ಕನ್ನಡ ನಾಡು [illegible] ದಲ್ಲಿ [illegible] ರು ಚಿರಸ್ಮರಣೀಯರಾಗಿ ಉಳಿಯಲು, ಪರಮಾತ್ಮನು ಸರ್ವರಿಗೂ ಶಕ್ತಿ ನೀಡಲಿ

ಎಂ. ಎಸ್. ಪುಟ್ಟಲಿಂಗು,

ಮಾಲೀಕರು, ಎಂಪೈರ್ ಮೋಟಾರ್ ಸರ್ವಿಸ್, ಮೈಸೂರು

ಎಲ್ಲಾ ಬಗೆಯ

ಅಲೋಪಥಿಕ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

TYPICAL PROBLEMS

I[illegible]

INTERMEDIATE ANALYTICAL GEOMETRY

(With Full Solutions)

BY

V K DORASWAMY M Sc,

Price 0 8 0

Edited Printed and Published by A R Nagaraj[illegible] at Sadhvi Press, D Subbiah Road, Mysore

ರಿಜಿಸ್ಟರ್ಡ್ ನಂ. 792 || ವಂದೇ ಮಾತರಂ || ಬೆಲೆ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೧-೧೦-೧೯೫೨ [ಸಂಚಿಕೆ ೭೦

ದಕ್ಷಿಣ ಆಫ್ರಿಕದಲ್ಲಿ ಗಲಭೆ ಮತ್ತು ಗುಂಡು

ಮರದ ದಿಮ್ಮಿಗಳ ಅಪಹಾರದ ಬಗ್ಗೆ ಮೊಕದ್ದಮೆ

ಮೈಸೂರು ೨೧

ಪಿರಿಯಾಪಟ್ಟಣ ತಾಲ್ಲೂಕಿನ ಕಾಡು ಗಳಿಂದ ಭಾರಿ ಮರದ ದಿಮ್ಮಿಗಳನ್ನು ಕಳ್ಳತನದಲ್ಲಿ ಸಾಗಿಸಿದ ಅಪಾದನೆ ಮೇಲೆ ಹುಣಸೂರಿನ ಸಬ್‌ಡಿವಿಷನಲ್ ಮ್ಯಾಜಿಸ್ಟ್ರೇಟರ ನ್ಯಾಯಾಲಯದಲ್ಲಿ ಏಳು ಜನರ ಮೇಲೆ ಪೋಲೀಸರು ಮೊಕದ್ದಮೆಯನ್ನು ಹೂಡಿರುತ್ತಾರೆ. ಆ ಪೈಕಿ ಪಿರಿಯಾಪಟ್ಟಣ ತಾಲ್ಲೂಕಿನಿಂದ ಆರಿಸಿ ಬಂದಿರುವ ಶಾಸನ ಸಭಾ ಸದಸ್ಯ ಶ್ರೀ ಎಸ್. ಎಂ. ಮರಿಯಪ್ಪನವರು ಒಬ್ಬರು. ಇವರಲ್ಲದೆ ಶ್ರೀ ಬಿ. ಬೋರೇಗೌಡ, ರಿಂಟು ಮತ್ತೊಬ್ಬ ಖಾಸಗಿಯವರು, ರೆವಿನ್ಯೂ ಇನ್ಸ್‌ಪೆಕ್ಟರುಗಳಾದ ಶ್ರೀಗಳು ಎಂ. ಕೆ. ಬಾಲಕೃಷ್ಣಾಚಾರ್ ಮತ್ತು ಎಸ್. ವೀರಯ್ಯ, ಫಾರೆಸ್ಟರ್ ಶ್ರೀ ಟಿ. ಪಿ. ಗೌಡ್, ಶ್ಯಾನುಭೋಗರುಗಳಾದ ಶ್ರೀ ಪುಟ್ಟರಾಮಯ್ಯ ಮತ್ತು ಕೆ. ನಾಗಪ್ಪ ಇತರರ ಮೇಲೂ ಐ. ಪಿ. ಸಿ. ೩೭೯, ೧೧೪, ೪೨೦, ೪೬೭, ೪೬೮, ೪೭೧ ಮತ್ತು ೧೧೯ನೇ ನಿಬಂಧನೆಗಳ ಪ್ರಕಾರ ಅಪಾದನೆ ಮಾಡಲಾಗಿದೆ.

ಬಸ್ಸು ಕೆಲಸಗಾರರ ಮುಷ್ಕರವಿಲ್ಲ

ಮೈಸೂರು ಜಿಲ್ಲಾ ಬಸ್ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ನೆನ್ನೆ ನಡೆದು, ಬಸ್ಸು ಮಾಲೀಕರುಗಳಿಗೆ ಕೈಗಾರಿಕಾ ನ್ಯಾಯಾಲಯದವರು ಇತ್ತ ತೀರ್ಮಾನ ಅಂಶವನ್ನು ಜಾರಿಗೆ ತರಬೇಕೆಂದು ಒಂದು ವಾರದ ಅವಧಿ ಇತ್ತು ಕೊಟ್ಟಿರುವ ಸೂಚನೆಯನ್ನು ಪರಿಶೀಲಿಸಿತು. ಕೆಲಸಗಾರರ ಮುಷ್ಕರವನ್ನು ನಿಲ್ಲಿಸುವಂತೆ ತೀರ್ಮಾನವಾಯಿತು.

ದಕ್ಷಿಣ ಆಫ್ರಿಕದಲ್ಲಿ ಗಲಭೆ ಮತ್ತು ಪೋಲೀಸರ ಗುಂಡು

ದಕ್ಷಿಣ ಆಫ್ರಿಕದ ನ್ಯೂ ಬ್ರೈಟನ್ ಎಂಬಲ್ಲಿ ಕಳೆದ ಶನಿವಾರ ಪೋಲೀಸರು ಇಬ್ಬರು ಆಫ್ರಿಕನ್ನರನ್ನು ಕಳುವಿನ ಅಪಾದನೆಗಾಗಿ ಬಂಧಿಸಲು, ಇತರ ಆಫ್ರಿಕನ್ನರು ಗುಂಪುಗೂಡಿ ಗಲಭೆಯೆಬ್ಬಿಸಿ ಬಂಧಿತರನ್ನು ಬಿಡಿಸಲು ಪ್ರಯತ್ನಿಸಿದರೆಂದೂ, ಸಾವಿರಾರು ಮಂದಿ ಆಫ್ರಿಕನ್ನರು ಅಂಗಡಿಗಳು, ಒಂದು ಮೋಟಾರು ಕಾರು, ಒಂದು ಅಂಚೆ ಕಛೇರಿ ಮತ್ತು ಅತ್ಯಾಧುನಿಕ ಸಿನಿಮಾ ಮಂದಿರಕ್ಕೆ ಬೆಂಕಿ ಹಚ್ಚಿ ಸುಟ್ಟರೆಂದೂ ವರದಿಯಾಗಿದೆ.

ಇದರ ಪರಿಣಾಮವಾಗಿ ಪೋಲೀಸರು ಗುಂಡು ಹಾರಿಸಲು ಮೂವರು ಬಿಳಿಯರೂ ಮತ್ತು ಎಂಟು ಮಂದಿ ಆಫ್ರಿಕನ್ನರೂ ಮಡಿದರೆಂದು ವರದಿಯಾಗಿದೆ.

ಗಂಟೆ ಕಾಲ ಗುಂಪಿನವರು ಸರ್ಕಾರಿ ಕಟ್ಟಡಗಳು ಮತ್ತು ರೈಲ್ವೆ ನಿಲ್ದಾಣದ ಮೇಲೆ ಕಲ್ಲನ್ನು ಎಸೆದು ಗಲಭೆ ನಡೆಸಲು ಹೆಚ್ಚಿನ ಪೋಲೀಸರು ಬಂದು ಗುಂಡು ಹಾರಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಗಲಭೆಯಲ್ಲಿ ೨೭ ಜನರು ಗಾಯಗೊಂಡರು. ಗುಂಪಿನವರು ಒಂದು ಚಿತ್ರಮಂದಿರದಲ್ಲಿ ವ್ಯವಸ್ಥಾಪಕ ರನ್ನು ಹಾಗೂ ಇತರರನ್ನು ಕೊಲೆ ಮಾಡಿದರೆಂದು ತಿಳಿದ ಬಂದಿದೆ. ನೆಟಾಲಿನ ಬಳಿ ಮೊನ್ನೆ ದಿನ ರಾತ್ರಿ ಒಂದು ರೈಲನ್ನು ತಂಟೆ ತಪ್ಪಿಸಲಾಗಿ ಅದರಿಂದ ೨೧ ಮಂದಿ ಆಫ್ರಿಕನ್ನರು ಮಡಿದರೆಂದೂ ಹೇಳಲಾಗಿದೆ.

ಜನವರಿಯಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆ

ಶಾಸನ ಸಭೆಯಲ್ಲಿ ಮಂತ್ರಿಗಳ ಹೇಳಿಕೆ

ಬೆಂಗಳೂರು ೨೧

ಕಿರಿಯ ಶಾಸನ ಸಭೆಯಲ್ಲಿ ನೆನ್ನೆ ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಬರುವ ಜನವರಿಯಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆಯನ್ನು ನಡೆಸಲಾಗುವುದೆಂದೂ, ಈಗಾಗಲೇ ಈ ಬಗ್ಗೆ ಕ್ರಮಗಳನ್ನು ಜರುಗಿಸಲಾಗಿದೆಯೆಂದೂ ತಿಳಿಸಿದರು. ಈಗಿನ ಬೋರ್ಡುಗಳಿಗೆ ಹೆಚ್ಚಿನ ಜೀವದಾನ ಮಾಡುವುದಿಲ್ಲವೆಂದೂ ಅವರು ತಿಳಿಸಿದರು.

ಹಿರಿಯ ಶಾಸನ ಸಭೆಯಲ್ಲಿ ನೆನ್ನೆ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ, ಬಸ್ಸುಗಳ ರಾಷ್ಟ್ರೀಕರಣದಿಂದ ನಿರುದ್ಯೋಗ ಸಮಸ್ಯೆಯುಂಟಾಗುವುದಿಲ್ಲವೆಂದೂ, ೧೨ ಮಾರ್ಗಗಳನ್ನು ಸರ್ಕಾರದವರು ವಹಿಸಿಕೊಳ್ಳಲಿರುವುದರಿಂದ ನಿರುದ್ಯೋಗಿಗಳಾಗುವ ೩೫೦ ಮಂದಿ ಕೆಲಸಗಾರರನ್ನು ಸರ್ಕಾರದವರೇ ನೇಮಿಸಿಕೊಳ್ಳುವ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದೂ ತಿಳಿಸಿದರು.

ಬೆಂಗಳೂರಿನ ಬಿ. ಟಿ. ಸಿ. ಕಂಪೆನಿಯ ವ್ಯವಸ್ಥೆಯನ್ನು ಸಧ್ಯದಲ್ಲೇ ಸರ್ಕಾರಕ್ಕೆ ವಹಿಸಿಕೊಳ್ಳುವ ಆಲೋಚನೆಯು ಇಲ್ಲವೆಂದೂ ಅವರು ಹೇಳಿದರು.

ಸರ್ಕಾರಿ ನೌಕರರ ತುಟ್ಟಿಭತ್ಯವನ್ನು ಸಂಬಳದ ಜೊತೆಗೆ ಸೇರಿಸುವ ವಿಷಯವು ಪರಿಶೀಲನೆಯಲ್ಲಿರುವುದಾಗಿ ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಶ್ರೀ ಆರ್. ಪಿ. ಶೀನಪ್ಪನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಜೂಜಿನ ಪತ್ತೆ

ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆ ರಸ್ತೆಯಲ್ಲಿ ಶಿವಯ್ಯ ಎಂಬುವರ ಮನೆಯಲ್ಲಿ ನೆನ್ನೆ ಎಂ. ಪಿ. ಗೋಪಾಲ ಮತ್ತು ಇತರ ಎಂಟು ಮಂದಿ ಜೂಜಾಡುತ್ತಿದ್ದವರನ್ನು ಬಸ್ತಿರಿನ ಸಬ್ ಇನ್‌ಸ್ಪೆಕ್ಟರ್ ಶ್ರೀ ಕೃಷ್ಣಾ ಶೆಟ್ಟಿಯವರು ಪತ್ತೆ ಹಚ್ಚಿ, ರೂ ೭೯೧-೨-೦ ಅನ್ನು ವಶಪಡಿಸಿಕೊಂಡು ಅವರ ಮೇಲೆ ಮೊಕದ್ದಮೆ ಹೂಡಿರುವರು.

ರಾಜಸಭೆಯಲ್ಲಿ ಆಸನಗಳ ಕಾರತಮ್ಯ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು. ಪ್ರೆ] ಬೆಂಗಳೂರು ೨೧

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಶ್ರೀ ಅನಂತರವರ ಪ್ರಶ್ನೆಗೆ ಉತ್ತರವಿತ್ತು, ಗೃಹ ಮಂತ್ರಿ ಸಿದ್ದವೀರಪ್ಪನವರು ದಸರಾದಲ್ಲಿ ನಡೆದ ರಾಜಸಭೆಯ ವಿಚಾರದಲ್ಲಿಗೂ ಸರ್ಕಾರ ಅಥವಾ ಮುಖ್ಯಮಂತ್ರಿಗಳಿಗೂ ಯಾವ ಸಂಬಂಧವೂ ಇರಲಿಲ್ಲವೆಂದೂ, ಅಲ್ಲಿನ ಏರ್ಪಾಡುಗಳನ್ನು ಅರಮನೆ ಅಧಿಕಾರಿಗಳೇ ಮಾಡಿದ್ದರೆಂದೂ, ಮಂತ್ರಿಗಳಿಗೆ ಮತ್ತು ಇತರ ಖಾಸಗಿಯವರಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಿ ಬೇಧಮಾಡಿದರೆಂದು ಹೇಳುವುದು ಸರಿಯಲ್ಲವೆಂದೂ ತಿಳಿಸಿದರು. ಈ ಹೊಸ ವಿಚಾರದ ರಾಜ್ಯಾಂಗದ ಸ್ಫೂರ್ತಿಗೆ ಸರಿಹೊಂದುವುದೆಂದು ಭಾವಿಸಿ ಹೊಸ ವ್ಯವಸ್ಥೆ ಮಾಡಲಾಯಿತೆಂದು ಅವರು ತಿಳಿಸಿದರು.

೫ ವರ್ಷಗಳಿಗೊಮ್ಮೆ ಉಪಾಧ್ಯಾಯರುಗಳ ವರ್ಗ

ಹಿರಿಯ ಶಾಸನ ಸಭೆಯಲ್ಲಿ ಈ ದಿನ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಉಪಾಧ್ಯಾಯರುಗಳು ೫ ವರ್ಷಗಳಿಗಿಂತಲೂ ಹೆಚ್ಚಾಗಿ ಒಂದು ಊರಿನಲ್ಲಿ ಇರದಂತೆ ಅವರನ್ನು ವರ್ಗ ಮಾಡಬೇಕೆಂದು ಸರ್ಕಾರದವರು ವಿದ್ಯಾ ಇಲಾಖಾಧಿಕಾರಿಗಳಿಗೆ ಸೂಚನೆಯೊಂದನ್ನು ಕಳುಹಿಸಿರುವರೆಂದು ತಿಳಿಸಿದರು.

ಕೆನ್ಯಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆ

ಆಫ್ರಿಕದ ಕೆನ್ಯಾ ರಾಜ್ಯದಲ್ಲೆಲ್ಲಾ ತುರ್ತು ಪರಿಸ್ಥಿತಿಯೊದಗಿರುವುದೆಂದು ಅಲ್ಲಿನ ಗೌವರ್ನರ್ ಎವಲಿನ್ ಬೇರಿಂಗ್‌ರವರು ನೆನ್ನೆ ರಾತ್ರಿ ಘೋಷಣೆಯೊಂದನ್ನು ಹೊರಡಿಸಿದರು. ಅಲ್ಲಿನ ರಾಜಧಾನಿ ನೈರೋಬಿ ನಗರಕ್ಕೆ ಮತ್ತು ಸೂಯೆಜದಿಂದ ಒಂದು ಬ್ರಿಟಿಷ್ ಸೈನ್ಯವನ್ನು ವಿಮಾನದಲ್ಲಿ ಕಳುಹಿಸಲಾಗಿದೆ. ಇನ್ನಿತರ ದಳಗಳನ್ನು ಬ್ರಿಟನ್ನಿನಿಂದ ರವಾನಿಸಲು ವ್ಯವಸ್ಥೆಯಾಗಿದೆ. ಯುದ್ಧದ ಹಡಗೊಂದು ಆ ತೀರಕ್ಕೆ ಧಾವಿಸುತ್ತಿದೆ. ಅಲ್ಲಿ ಶಿಸ್ತು ಪರಿಪಾಲನೆ ಮಾಡುವ ಉದ್ದೇಶದಿಂದಲೂ, ಅಲ್ಲಿನ ಮವೂಮವೂ ಎಂಬ ಗುಪ್ತ ಗಾಮಿ ಜನರ ಚಟುವಟಿಕೆಯನ್ನು ತಡೆಯಲು ಮೇಲ್ಕಂಡ ವ್ಯವಸ್ಥೆಯಾಗಿದೆ. ಪ್ರಾಂತ್ಯಗಳನ್ನು ಹಿಡಿಯುವ ಚಳುವಳಿಯಲ್ಲಿ ಸೈನಿಕರು ತೊಡಗಿರುವರು. ಪ್ರಾಂತ್ಯಾಧಿಕಾರಿಗಳು ಬಂದು ಪೋಲೀಸರ ಕೆಲ್ಲನ್ನು ಸುಟ್ಟುಹಾಕಿರುತ್ತಾರೆ.

ಆಹಾರದ ವಸೂಲಿ ಬಗ್ಗೆ ಚರ್ಚೆ ಆರಂಭ

ಶಾಸನ ಸಭೆಯಲ್ಲಿ ಮಂತ್ರಿಗಳ ಹೇಳಿಕೆ

ಸ್ವಂ. ಸು. ಪ್ರೆ] ಬೆಂಗಳೂರು ೨೧

ಕಿರಿಯ ಶಾಸನ ಸಭೆಯಲ್ಲಿ ಈ ದಿನ ಆಹಾರ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಆಹಾರ ಧಾನ್ಯದ ವಸೂಲಿ ಬಗ್ಗೆ ಸಭೆಯವರ ಅಭಿಪ್ರಾಯವನ್ನು ಕೇಳಿ, ಒಂದು ಹೇಳಿಕೆಯನ್ನಿತ್ತರು. ನೆನ್ನೆಯವರೆಗೆ ಸರ್ಕಾರದ ಬಳಿ ೪,೯೭,೨೦೮ ಪಲ್ಲ ಭತ್ತ, ೭೭,೭೨೦ ಪಲ್ಲ ಅಕ್ಕಿ ೧,೧೧,೦೯೨ ಪಲ್ಲ ರಾಗಿ ೪೭,೫೫೫ ಪಲ್ಲ ಜೋಳ, ೫೭,೦೧೨ ಪಲ್ಲ ಗೋಧಿ ಈ ರೀತಿ ಧಾನ್ಯವಿರುವುದೆಂದು ಅವರು ಅಂಕಿ ಅಂಶಗಳನ್ನು ಕೊಟ್ಟರು.

ಆಹಾರದ ಹತೋಟಿಯನ್ನು ಪೂರ್ಣವಾಗಿ ತೆಗೆಯುವುದೇ ಸರ್ಕಾರದ ಅಂತಿಮ ಗುರಿಯೆಂದೂ, ಅದರಿಂದ ಏನು ಸುಖವಾಗುವುದಿಲ್ಲವೆಂದೂ ಅವರು ತಿಳಿಸಿದರು.

ಚರ್ಚೆಯು ಆರಂಭವಾಗಿ, ಲೆವಿ ಪದ್ಧತಿಯು ಬೇಕಾಗಿಲ್ಲವೆಂದು ಶ್ರೀ ಹೆಚ್. ಕೆ. ವೀರಣ್ಣಗೌಡರೂ, ಸಧ್ಯಕ್ಕೆ ಸರ್ಕಾರದ ಲೆವಿ ಪದ್ಧತಿ ಯೋಜನೆಯು ಅನಾವಶ್ಯಕವೆಂದು ಶ್ರೀ ಮರಿಯಪ್ಪನವರೂ ಅಭಿಪ್ರಾಯಪಟ್ಟರು.

ಧಾನ್ಯದ ವಸೂಲಿ ಬಗ್ಗೆ ಲೆವಿ ಪದ್ಧತಿ ಪರಿಶೀಲನೆ

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಡೆದು ಧಾನ್ಯದ ವಸೂಲಿ ಬಗ್ಗೆ ಲೆವಿ ಪದ್ಧತಿಯನ್ನು ತರಬೇಕೆಂದು ಸರ್ಕಾರದವರು ಮಾಡಿದ ಸಲಹೆ ಮೇಲೆ ಪಕ್ಷದ ಉಪ ಸಮಿತಿಯೊಂದು ತಯಾರಿಸಿದ ವರದಿಯನ್ನು ಪರಿಶೀಲಿಸಿತೆಂದು ಹೇಳಲಾಗಿದೆ. ವರ್ಷಕ್ಕೆ ತನ್ನಿಂದ ಬೆಳೆಯುವ ಭತ್ತಕ್ಕೆ ಪಲ್ಲ ಒಂದಕ್ಕೆ ೨೫ ರೂ ಸಂಕೆಯೂ, ಜೋಳ ಮತ್ತು ರಾಗಿಗೂ ಅದೇ ಧಾರಣೆಯನ್ನು ಕೊಡಬೇಕೆಂದೂ ಸಮಿತಿಯು ಶಿಫಾರಸು ಮಾಡಿರುತ್ತದೆಂದು ಗೊತ್ತಾಗಿದೆ.

ಕೋರ್ಟಿನ ಮುಂದೆ ವಿದ್ಯಾರ್ಥಿಗಳ ಪ್ರದರ್ಶನ

ಇತ್ತೀಚೆಗೆ ನಡೆದ ಪ್ರಕರಣದ ಸಂಬಂಧವಾಗಿ ದಸ್ತಗಿರಿಯಾಗಿರುವ ವಿದ್ಯಾರ್ಥಿಗಳ ವಿಚಾರಣೆಯು ನೆನ್ನೆ ಸ್ಥಳದ ನ್ಯಾಯಾಧೀಶರ ಕೋರ್ಟಿನಲ್ಲಿ ಆರಂಭವಾಯಿತು. ಪೋಲೀಸು ಇನ್ಸ್‌ಪೆಕ್ಟರ್ ಶ್ರೀ ಅಂತಿಯಪ್ಪನವರ ಸಾಕ್ಷ್ಯವು ನಡೆಯಿತು. ವಿದ್ಯಾರ್ಥಿಗಳ ತಂಡವೊಂದು ಕೋರ್ಟಿನ ಮುಂದೆ ಪ್ರದರ್ಶನ ನಡೆಸಿ, ಅಪಾದಿತರನ್ನು ಬಿಡುಗಡೆ ಮಾಡಬೇಕೆಂದು ಕೋರಿತು. ಅದಕ್ಕೆ ಮುಂಚಿತವಾಗಿ ಮಹಾರಾಜಾ ಕಾಲೇಜು ಬಳಿ ವಿದ್ಯಾರ್ಥಿಗಳ ಬಹಿರಂಗ ಸಭೆಯು ನಡೆದು, ಸರ್ಕಾರದ ವರ್ತನೆಯನ್ನು ಖಂಡಿಸುವ ನಿರ್ಣಯವನ್ನು ಮಾಡಲಾಯಿತು. ಮೊಕದ್ದಮೆ ನಾಳಿದ್ದಿಗೆ ಮುಂದುವರಿಕೆ.

ಚಾಮುಂಡೇಶ್ವರಿ ಭವನ

ರಾಜಧಾನಿಯ ಚಾಮುಂಡೇಶ್ವರಿ ಭವನದವರು ನಮಗೆ ಕಳುಹಿಸಿರುವ ದೀಪಾವಳಿ ಶುಭಾಶಯಗಳು ಮತ್ತು ಸಿಹಿ ತಿಂಡಿಗಳನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ.

ಮೈಸೂರಿಗೆ ವಿನೋಬಾ ಭಾವೆಯವರ ಸಂದೇಶ

ಭೂದಾನ ಯಜ್ಞವನ್ನು ಕೈಗೊಳ್ಳಲು ಮನವಿ

ಮೈಸೂರು ೨೧

ಬಿಹಾರಿನಲ್ಲಿ ಸಂಚರಿಸಿ, ಭೂದಾನ ಚಳುವಳಿಯನ್ನು ನಡೆಸುತ್ತಿರುವ ಆಚಾರ್ಯ ವಿನೋಬಾ ಭಾವೆಯವರು ಮೈಸೂರಿನ ಭೂದಾನ ಯಜ್ಞ ಸೇವಕರಾದ ಶ್ರೀ ಟಿ ಎಸ್. ಅನಂತ ರಂಗಾಚಾರ್ ರವರ ಮೂಲಕ ಸಂಸ್ಥಾನದ ಪ್ರಜಾವರ್ಗಕ್ಕೆ ಸಂದೇಶವೊಂದನ್ನು ಕಳುಹಿಸಿ ಈ ರೀತಿ ತಿಳಿಸಿರುತ್ತಾರೆ —

ಮೈಸೂರಿನಲ್ಲಿ ಭೂದಾನ ಯಾತ್ರೆಗಾಗಿ ಸಂದೇಶ ಕೇಳಿದ್ದೀರಿ ಈ ಯಜ್ಞ ಕಾರ್ಯ ಪೂರ್ಣವಾಗುವ ವರೆಗೆ ನಾವು ವಿಶ್ರಾಂತಿ ಪಡೆಯಬಾರದು- ಇದೇ ನನ್ನ ಸಂದೇಶ ಹಿರಣ್ಯ ಗರ್ಭ ದೇಶವಾದ ಮೈಸೂರಿನಲ್ಲಿ ಭೂದಾನ ಯಜ್ಞದ ಅವಶ್ಯಕತೆಯಿದೆ ಅಲ್ಲಿಯ ಉದಾರ ಜನತೆಯಿಂದ ಇದಕ್ಕೆ ಪೂರ್ಣ ಸಹಕಾರ ಸಿಗುತ್ತದೆ ನನಗೆ ಇದರಲ್ಲಿ ಯಾವ ಸಂದೇಹವೂ ಇಲ್ಲ ಎಲ್ಲರೂ ತಮ್ಮ ಶಕ್ತಿ, ಧ್ಯಾನ ಮತ್ತು ಸಮಯದ ಮುಖ್ಯ ಭಾಗವನ್ನು ಈ ಭೂದಾನ ಯಜ್ಞ ಕಾರ್ಯದಲ್ಲೇ ವಿನಿಯೋಗಿಸಲಿ ಈ ಕಾರ್ಯ ಎಲ್ಲರಿಗೂ ಲಾಭದಾಯಕವಾದದ್ದು ಕ್ರಾಂತಿಕಾರಕವಾದದ್ದು ಇದು ಭೂಮಿಯ ಬೇಡಿಕೆ. ಅಹಿಂಸೆಯ ಶಕ್ತಿ ಇದರಿಂದ ಪ್ರಕಟವಾಗುತ್ತದೆ ಯಾರು ಈ ಕೆಲಸದಲ್ಲಿ ಈಗ ಪೂರ್ಣ ಸಹಯೋಗ ಕೊಡುವುದಿಲ್ಲವೋ ಅವರು ತಮ್ಮ ಕರ್ತವ್ಯವನ್ನು ಕಳೆದುಕೊಳ್ಳುತ್ತಾರೆಂದೂ, ಆ ಮೇಲೆ ಇದಕ್ಕಾಗಿ ಅವರು ಪಶ್ಚಾತ್ತಾಪ ಪಡಬೇಕಾದೀತೆಂದೂ ನನ್ನ ನಿಶ್ಚಿಯ ಪೂರ್ಣವಾದ ನಂಬಿಕೆ

ಇಲ್ಲಿಯ (ಬಿಹಾರ) ವೃತ್ತಾಂತ ನಿಮಗೆ ತಿಳಿಯುತ್ತಿರುತ್ತದೆ ಇದರಿಂದ ಸ್ಫೂರ್ತಿ ಪಡೆದು ನೀವೆಲ್ಲರೂ ಈ ಕೆಲಸದಲ್ಲಿ ಗುಂಪುಗುಂಪಾಗಿ ಸೇರಿರಿ. ಜಯಶ್ರೀ ನಿಮಗೆ ಪ್ರಸನ್ನಳಾಗುವಳು

ಯಾರ ಹೃದಯವನ್ನೂ ದುಃಖಿಯನ್ನಾಗಿ ಮಾಡಬಾರದು ಎಲ್ಲರಿಗೂ ಗೌರವ ಕೊಡಬೇಕು, ಎಲ್ಲರ ಗೌರವವನ್ನೂ ವರ್ಧಿಸಬೇಕು, ಎಲ್ಲರನ್ನೂ ನಾರಾಯಣ ಸ್ವರೂಪವೆಂದು ನೋಡಬೇಕು ಇಷ್ಟನ್ನು ನೆನಪಿನಲ್ಲಿಡಿರಿ ವಿನೋಬಾನ ಶುಭೇಚ್ಛೆ

ಹಿಂದಿ ಮತ್ತು ಮರಾಠಿ ಸರ್ಕಾರಿ ಭಾಷೆಗಳು

ಮಧ್ಯಪ್ರದೇಶದಲ್ಲಿ ಬರುವ ವರ್ಷ ಆಗಸ್ಟ್ ೧೫ ರಿಂದ ಹಿಂದಿ ಮತ್ತು ಮರಾಠಿಗಳನ್ನು ಇಂಗ್ಲಿಷಿನ ಸ್ಥಾನದಲ್ಲಿ ಸರ್ಕಾರಿ ಭಾಷೆಯಾಗಿ ಮಾಡಲಾಗುವುದೆಂದು ಅಲ್ಲಿನ ಮುಖ್ಯ ಮಂತ್ರಿ ರ ವಿ ಶಂಕರ ಶುಕ್ಲರವರು ತಿಳಿಸಿರುವರು

ವಿಷ ಸೇವಿಸಿ ಅಣು ವಿಜ್ಞಾನಿಯ ಆತ್ಮಹತ್ಯೆ

ಸುಪ್ರಸಿದ್ಧ ಅಣು ವಿಜ್ಞಾನಿಯಾದ ಡಾ|| ಲೋಸ್ ಎಂಬುವರು ಮೊನ್ನೆ ವಿಷ ಪಾನ ಮಾಡಿ ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ

ಲಂಚ ನಿರೋಧ ಮತ್ತು ದಕ್ಷತೆ ತನಿಖೆ

ಬೆಂಗಳೂರು ೨೧

ಲಂಚ ನಿರೋಧ ಮತ್ತು ದಕ್ಷತೆ ತನಿಖೆಯ ಇಲಾಖೆಯವರು ಕಳೆದ ಆಗಸ್ಟ್ ತಿಂಗಳಲ್ಲಿ ನಡೆಸಿದ ಕಾರ್ಯಚಟುವಟಿಕೆಗಳ ಪರಿಣಾಮವಾಗಿ, ೯ ವಿದ್ಯಮಾನಗಳಲ್ಲಿ ರುಜುವಾತು ದೊರಕಿತು ಒಬ್ಬ ಸರ್ಕಾರಿ ನೌಕರನನ್ನು ವಜಾ ಮಾಡಲಾಯಿತೆಂದೂ, ಇತರ ನಾಲ್ವರನ್ನು ಕೆಲಸದಿಂದ ನಿವೃತ್ತಿ ಮಾಡಲಾಯಿತೆಂದೂ, ಇಬ್ಬರ ಸಂಬಳವನ್ನು ಕಡಿಮೆಮಾಡಿ, ಇತರ ಇಬ್ಬರ ಬಡ್ತಿಯನ್ನು ೨ ವರ್ಷ ಕಾಲ ನಿಲ್ಲಿಸಿ, ಆ ಪೈಕಿ ಒಬ್ಬನಿಗೆ ದಂಡ ವಿಧಿಸಲಾಯಿತೆಂದೂ ತಿಳಿಸಲಾಗಿದೆ

ಒಬ್ಬ ರೇಷ್ಮೆ ಅಸಿಸ್ಟೆಂಟ್ ಡೈರೆಕ್ಟರ್ ರವರಿಂದ ರೂ.೨೬೨ ೨ ೬ ಪೈ, ರೇಷ್ಮೆ ಆಪರೇಟಿವ್ ಒಬ್ಬನಿಂದ ರೂ ೧೫೩ ೯ ೩ ಪೈ, ಅಕೌಂಟೆಂಟ್‌ನಿಂದ ರೂ ೧೧೮ ೯ ೩ ಪೈ ಮತ್ತು ಡಿಪೊ ವ್ಯವಸ್ಥಾಪಕರಿಂದ ೨೨೫ ರೂ ಗಳನ್ನು ವಸೂಲು ಮಾಡಲಾಯಿತು

ಒಬ್ಬ ಟ್ರಾಕ್ಟರ್ ಇಂಜನಿಯರ್, ವ್ಯವಸಾಯ ಇಲಾಖೆಯ ಒಬ್ಬ ಫೋರ್ಮನ್, ಒಬ್ಬ ಅಮಲ್ದಾರ್ ಇಬ್ಬರು ರೆವಿನ್ಯೂ ಇನ್ಸ್‌ಪೆಕ್ಟರ್, ಒಬ್ಬ ವಿದ್ಯುಚ್ಛಕ್ತಿ ಆಪರೇಟರ್ ಇಬ್ಬರು ಪೋಲೀಸು ದಫೇದಾರರು ಒಬ್ಬ ಕಾನ್ಸ್ಟೇಬಲ್ ಮತ್ತು ಒಬ್ಬ ಪಟೇಲರ ಮೇಲೆ ಆಪಾದನೆ ಹೊರಿಸಲಾಗಿದೆ

ಹೂವು, ವೀಳೆಯದೆಲೆಗಳ ಮಾರಾಟ ತೆರಿಗೆ ನಿಗದಿ

ಸಂಸ್ಥಾನದಲ್ಲಿ ಹೂವು, ವಿಳೆಯದೆಲೆ ಹಾಲು, ಬ್ರೆಡ್ಡು, ಹಣ್ಣು, ತರಕಾರಿ, ಮಾಂಸ ಮತ್ತು ಮೊಟ್ಟೆಗಳ ಮೇಲಿನ ಮಾರಾಟ ತೆರಿಗೆಯನ್ನು ಕೆಳಗೆ ಕಂಡಂತೆ ನಿಗದಿ ಮಾಡಲಾಗಿದೆ —

ವರ್ಷದಲ್ಲಿ ಒಟ್ಟು ವ್ಯಾಪಾರವು ೧೦ ಸಾವಿರ ರೂ ಗೆ ಕಡಿಮೆಯಿಲ್ಲದೆ ೨೦ ಸಾವಿರಕ್ಕೆ ಮೀರದಂತಿದ್ದರೆ ರೂ ೯೬. ೨೦ ಸಾವಿರಕ್ಕೆ ಮೇಲ್ಪಟ್ಟು ೪೦ ಸಾವಿರದೊಳಗೆ ಇದ್ದಲ್ಲಿ ೧೯೨ ರೂ , ೪೦ ಸಾವಿರಕ್ಕೆ ಮೀರಿದಲ್ಲಿ ರೂ ೧೯೩ ಕಾಸು ಟನ್ನುಗಳಲ್ಲಿಟ್ಟಿರುವ ಅಥವಾ ಒಣಗಿಸಲ್ಪಟ್ಟ ಮಾಂಸ, ಹಣ್ಣು, ತರಕಾರಿ, ಹೂವು, ಹಾಲು, ಆಲೂಗೆಡ್ಡೆ, ಈರುಳ್ಳಿ ಮತ್ತು ತೆಂಗಿನಕಾಯಿಗಳಿಗೆ ಇದು ಅನ್ವಯಿಸುವುದಿಲ್ಲ

ಕಲ್ಕತ್ತಾದಲ್ಲಿ ಟ್ಯೂಬ್ ರೈಲು ವ್ಯವಸ್ಥೆ

ಕಲ್ಕತ್ತಾ ನಗರದ ರಸ್ತೆಗಳ ಒಳಭಾಗದಲ್ಲಿ ರೈಲು ಸಂಚಾರದ ವ್ಯವಸ್ಥೆಯನ್ನು ಏರ್ಪಡಿಸುವ ಬಗ್ಗೆ ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ|| ಬಿ ಸಿ ರಾಯ್‌ರವರು ಯೂರೋಪ್ ಮತ್ತು ಅಮೇರಿಕಗಳ ನಿಪುಣರ ಕೂಡ ಮಾತುಕತೆ ನಡೆಸಿರುವರೆಂದೂ, ಬರುವ ಡಿಸೆಂಬರ್ ತಿಂಗಳಲ್ಲಿ ಅಮೇರಿಕದ ಪ್ರವೀಣರೊಬ್ಬರು ಕಲ್ಕತ್ತೆಗೆ ಆಗಮಿಸಿ ಇದರ ಸಾಧ್ಯಾಸಾಧ್ಯತೆಯ ಬಗ್ಗೆ ಪರಿಶೀಲನೆ ನಡೆಸುವರೆಂದೂ ಹೇಳಲಾಗಿದೆ ಜರ್ಮನಿಯ ನಿಪುಣರೊಬ್ಬರು ಬಂದು ಒಳಚರಂಡಿ ವ್ಯವಸ್ಥೆಯ ಬಗ್ಗೆ ಪರಿಶೀಲನೆ ನಡೆಸಿ ತಕ್ಕ ಸಲಹೆ ನೀಡುವರೆಂದೂ ತಿಳಿದುಬಂದಿದೆ

ವಿಶ್ವ ಶಾಂತಿಗೆ ರಷ್ಯದ ೭ ಅಂಶಗಳ ಯೋಜನೆ

ವಿಶ್ವ ಶಾಂತಿ ಸ್ಥಾಪನೆಗಾಗಿ ೭ ಅಂಶಗಳ ಯೋಜನೆಯೊಂದನ್ನು ವಿಶ್ವಸಂಸ್ಥೆಯಲ್ಲಿ ರಷ್ಯದ ಪ್ರತಿನಿಧಿಯು ಮಂಡಿಸಿರುವರು ಕೊರಿಯದ ಯುದ್ಧ ಖೈದಿಗಳನ್ನೆಲ್ಲಾ ವಾಪಸು ಮಾಡುವುದು, ಕೊರಿಯದಿಂದ ಎಲ್ಲಾ ವಿದೇಶೀ ಸೈನ್ಯಗಳನ್ನೂ ವಾಪಸು ಕರೆಸಿಕೊಳ್ಳುವುದು, ಯುದ್ಧದಲ್ಲಿ ಭಾಗವಹಿಸುತ್ತಿರುವ ಮತ್ತು ಇತರ ದೇಶಗಳ ಪ್ರತಿನಿಧಿಗಳ ಸಮಿತಿಯ ಮೇಲ್ವಿಚಾರಣೆಯಲ್ಲಿ ಕೊರಿಯದ ಐಕ್ಯತೆ, ಮಹಾರಾಷ್ಟ್ರಗಳು ಶಸ್ತ್ರಾಸ್ತ್ರಗಳನ್ನು ಮೂರನೇ ಒಂದು ಭಾಗದಷ್ಟು ಕಡಿಮೆ ಮಾಡುವುದು, ಆಟಾಮಿಕ್ ಅಸ್ತ್ರಗಳನ್ನು ಬಹಿಷ್ಕರಿಸುವುದು, ಕ್ರಿಮಿ ಯುದ್ಧವನ್ನು ನಿಷೇಧಿಸುವ ಜಿನೀವಾ ಒಪ್ಪಂದವನ್ನು ಎಲ್ಲ ರಾಷ್ಟ್ರಗಳೂ ಪಾಲಿಸುವುದು ಮತ್ತು ಪಂಚ ಮಹಾರಾಷ್ಟ್ರಗಳು ಒಂದು ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುವುದು-ಇವು ಆ ಯೋಜನೆಯಲ್ಲಿ ಅಡಕವಾಗಿರುವ ೭ ಅಂಶಗಳು

ಸುತ್ತೂರು ವಿದ್ಯಾರ್ಥಿ ಸಂಘ

ನಂಜನಗೂಡು ತಾಲ್ಲೂಕು ಸುತ್ತೂರು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳ ಸಭೆಯು ಶ್ರೀ ಮಲ್ಲಿಕಾರ್ಜುನ ದೇವರ ಅಧ್ಯಕ್ಷತೆಯಲ್ಲಿ ನಡೆದು ವಿದ್ಯಾರ್ಥಿ ಸಂಘವನ್ನು ಸ್ಥಾಪಿಸುವಂತೆ ತೀರ್ಮಾನಿಸಿ ಶ್ರೀ ಎಂ ಎಸ್ ಪ್ರಭುಸ್ವಾಮಿಯವರನ್ನ ಅಧ್ಯಕ್ಷರಾಗಿಯೂ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸುಬ್ಬರಾಯರು ಮತ್ತು ಶ್ರೀ ಬಿ ಸ್ವಾಮಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು

ಸಹಾಯಾರ್ಥ ಚಿತ್ರ ಪ್ರದರ್ಶನ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸಹಾಯಾರ್ಥವಾಗಿ, ಇದೇ ತಿಂಗಳು ೨೬ ನೇ ತಾ|| ಭಾನುವಾರ ಬೆಳಿಗ್ಗೆ ೯|| ಗಂಟೆಗೆ ಪ್ರಭಾ ಚಿತ್ರ ಮಂದಿರದಲ್ಲಿ ಪತಂಗ ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು ಮಹಾ ಜನರು ಪ್ರದರ್ಶನವನ್ನು ನೋಡಿ, ನಿಲಯದ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದು ಕೋರಲಾಗಿದೆ

ಕೂಲಿಕಾರ ಚಿತ್ರದ ತಯಾರಿಕೆ ಆರಂಭ

ಮೈಸೂರಿನ ಫೋಟೋಗ್ರಾಫರುಗಳಾದ ರಾಜ್ ಮತ್ತು ಸಹೋದರರು ವೈಸ್‌ರಾಯ್ ರಸ್ತೆಯಲ್ಲಿರುವ ತಮ್ಮ ಕಾರ್ಯಾಲಯದಲ್ಲಿ ತಯಾರಿಸಲಾಗುವ ಕೂಲಿಕಾರ ಎಂಬ ಚಲನ ಚಿತ್ರದ ಅಂಗವಾಗಿ ಮೊನ್ನೆ ರಾತ್ರಿ ಲಕ್ಷ್ಮಿ ಪೂಜೆಯನ್ನು ನೆರವೇರಿಸಿದರು ಹಂಗಾಮಿ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಡಿ ಶಿವನಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು ಓರಿಯಂಟಲ್ ಇಂಡಸ್ಟ್ರೀಸಿನ ಶ್ರೀ ಬಿ ಎಸ್ ಸುಬ್ಬರಾಯರು ಮಾಲೀಕರ ಪರವಾಗಿ ಸ್ವಾಗತ ಭಾಷಣ ಮಾಡಿದ ನಂತರ ಅಧ್ಯಕ್ಷರು ಮಾತನಾಡಿ ಶ್ರೀ ರಾಜ್ ರವರ ನೂತನ ಉದ್ಯಮಕ್ಕೆ ಯಶಸ್ಸನ್ನು ಕೋರಿದರು ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಗೋವಧಾ ನಿರೋಧ ಚಳುವಳಿ

ರಾಜಧಾನಿಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಾಖೆಯವರು ಕಳೆದ ಭಾನುವಾರ ಮಹಾರಾಜಾ ಕಾಲೇಜು ಮುಂಭಾಗದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಸಂಸ್ಥಾನದ ಶಾಖೆಯ ಮುಖ್ಯ ಪ್ರಚಾರಕರಾದ ಶ್ರೀ ಸೂರ್ಯನಾರಾಯಣರಾಯರು ಭಾಷಣ ಮಾಡಿ, ಇದೇ ತಿಂಗಳು ೨೬ ರಿಂದ ಭಾರತದ ಅದ್ಯಂತವೂ ಒಂದು ತಿಂಗಳ ಕಾಲ ನಡೆಯಲಿರುವ ಗೋಹತ್ಯಾ ನಿರೋಧ ಚಳುವಳಿಯಲ್ಲಿ ಪ್ರತಿಯೊಬ್ಬ ಸ್ವಯಂ ಸೇವಕನೂ ಭಾಗವಹಿಸಬೇಕೆಂದು ಸೂಚಿಸಿ, ಈ ಕಾರ್ಯಕ್ಕೆ ಎಲ್ಲ ಪ್ರಜೆಗಳ ಹಸ್ತಾಕ್ಷರವನ್ನು ಪಡೆದು, ಆ ಮೂಲಕ ಭಾರತ ಸರ್ಕಾರವನ್ನು ಗೋವಧಾ ನಿಷೇಧಕ್ಕಾಗಿ ಒತ್ತಾಯ ಪಡಿಸಬೇಕೆಂದು ತಿಳಿಸಿದರು. ಸೂರ್ಯ ನಮಸ್ಕಾರ, ಯೋಗ, ವ್ಯಾಯಾಮ ಮುಂತಾದ ಪ್ರದರ್ಶನಗಳೂ, ಪ್ರಾರ್ಥನೆಯೂ ನಡೆದುವು ೫೦೦ ಮಂದಿ ಸ್ವಯಂ ಸೇವಕರು ಭಾಗ ವಹಿಸಿದ್ದರು

ಶ್ರೀಮದ್ಭಗವದ್ಗೀತಾ ಪ್ರವಚನ

ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲಾ ಆವರಣದಲ್ಲಿರುವ ಶ್ರೀ ಸದ್ಗುರು ಸೇವಾ ಮಂಡಲದ ಆಶ್ರಯದಲ್ಲಿ ಮಾಮೂಲಿನಂತೆ ಈ ಸಾರಿಯೂ ಶ್ರೀ ಮಹಾ ಭಾರತ ಶ್ರವಣವು ಇದೇ ೨೪ ನೇ ತಾರೀಖಿನಿಂದ ಪ್ರತಿದಿನ ಸಂಜೆ ೭ ೩೦ ಘಂಟೆಗೆ ಶ್ರೀ ಪಾಠಕರ್ ಚಂದ್ರಶೇಖರ ಭಟ್ಟರಿಂದ ನಡೆಯುವುದು ಈ ಸಾರಿ ಭೀಷ್ಮ ಪರ್ವದಲ್ಲಿ ಬರುವ ಶ್ರೀಮದ್ಭಗವದ್ಗೀತಾ ಪ್ರಕರಣದ ಪ್ರವಚನವನ್ನು ಏರ್ಪಡಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೨೦ ದ್ಯಾಂಡ್, ಹಿಲ್ ರಾಮಯ್ಯ ಮತ್ತು ಪಾರ್ಟಿ ಮಧ್ಯಾಹ್ನ ೨ ಬಾಲ ವಿಹಾರ, ಮಹಿಳೆಯರ ಕಾರ್ಯಕ್ರಮ ಸಂಜೆ ೬ ೪೦ ಬ್ಯಾಂಡ್, ಹಿಲ್ ರಾಮಯ್ಯ ಮತ್ತು ಪಾರ್ಟಿ ೬ ೧೦ ಯಾಂಜಗಸ್ ಮೃತ ಕಾರ್ಯಕ್ರಮ ೭ ಹಿಂದಿ ಗೀತೆಗಳು ಕೀರ್ತನ ಉಪಕಾರ ೮ ೩೦ ಗೀತೆ, ಟಿ ಆರ್ ಶ್ರೀನಿವಾಸನ್ ೯ ೧೫ ತೀ ಸಂ ಶ್ರೀಕಂಠಯ್ಯನವರಿಂದ ಸ್ವಂತ ಕವನಗಳ ವಾಚನ, ೯ ೪೦ ತಮ್ಮ ಮಕ್ಕಳ ಗೀತೆಗಳು

ಮೈಸೂರು ಪೇಟೆ ಧಾರಣೆ

	ಪಲ್ಲ ೧ಕ್ಕೆ	ರೂ ಇಂದ ರೂ
ನೆಲಗಡಲೆ	೧೬ ೦ ೦	೨೦-೩-೧
ಎಳ್ಳು	೩೩-೪೨ ೦	೩೯-೬-[illegible]
ಹುಚ್ಚೆಳ್ಳು	೫೫-೦ ೦	
ಹರಳು ಬೀಜ	೪೨ ೦-೦	
ಹುರುಳಿ	೫೭ ೦ ೮	೫೪ ೦[illegible]
ಹೆಸರು	೫೦ ೦ ೦	
ಕೊಂಗೇಬೀಜ	೨೩ ೪ ೦	
ಉದ್ದು	೩೧ ೦ ೦	
ಅವರೆ	೭೯ ೧೦ ೦	
ಹುಳಸಂದೆ	೫೩ ೦-೦	೫೯ ೧೪[illegible]
ಮೆಣಸಿನಕಾಯಿ		
ಮಣ ೧ಕ್ಕೆ	೮ ೧೩ ೦	೧೮ ೧೦[illegible]
ಹುಣಸೇಹಣ್ಣು	೫ ೧೨ ೦	
ಸೀಗೇಕಾಯಿ	೪ ೦-೦	
ಬೆಲ್ಲ	೨-೪-೦	
ತೆಂಗಿನಕಾಯಿ ೧೦೦೦	೧೩೩ ೦ ೦	೨೨೯ ೦[illegible]

Edited, Printed and Published by A R Nagarajan at Sadhvi Press, D Subbiah Road, My.

ಓಲಲ್ಲೋ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೨ ೧೦-೧೯೫೨ [ಸಂಚಿಕೆ ೭೧

ವಿಶ್ವವಿದ್ಯಾಲಯದ ತನಿಖೆಗೆ ಬಾಲಕೃಷ್ಣಯ್ಯ

ಪರಿಸ್ಥಿತಿ ಸುಧಾರಿಸುವವರೆಗೆ ಪೂರ್ಣ ಹತೋಟಿ ರದ್ದಿಲ್ಲ

ಶಾಸನಸಭೆಯಲ್ಲಿ ಆಹಾರ ಮಂತ್ರಿಗಳ ವಿವರಣೆ

ಬೆಂಗಳೂರು ೨೨

...ಮ ಶಾಸನ ಸಭೆಯಲ್ಲಿ ನಿನ್ನೆ ಆಹಾರ ...ತ್ರಿ ಶ್ರೀ ಎಸ್ ಸಿದ್ದವೀರಪ್ಪನವರ ...ಕೆಯನ್ನಿತ್ತು, ಪಟ್ಟಣಗಳಲ್ಲಿ ಮೂರು ನಗ... ...ರ ಸನಿವಾಸ ಸಿತರವು ಜಾರಿಯ... ...ದಲ್ಲಿ ಪರಿಸ್ಥಿತಿ ಸುಧಾರಿಸುವವ... ...ರವು ಆ ನಗರಗಳಲ್ಲಿ ಪಡಿತರವ... ...ತ್ರದೆಂಬ ಧಾನ್ಯ ಸಂಗ್ರ... ...ಸವೂ ಅಗತ್ಯವೆಂದು ತಿಳಿಸಿದರು ...ಗಾಣಿಕೆ ನಿಯಮವನ್ನು ಸಡಿಲಿ... ...ರ ಉಂಟಾದ ಪರಿಸ್ಥಿತಿಯು ಸರ... ...ಪರಿಶೀಲನೆಯಲ್ಲಿರುವುದಾಗಿ ಅವರು ...ರು

...ಯಸ್ಸಿನ ಬಗ್ಗೆ ತಪ್ಪು ಹೇಳಿಕೆ ...೩೦ ಅಧಿಕಾರಿಗಳ ನಿವೃತ್ತಿ

...ಹುಟ್ಟಿದ ದಿನವನ್ನು ತಿಳಿಸು... ...ಲ್ಲ ಅಧಿಕಾರಿಗಳಿಗೂ ಸೂಚನೆ... ...ಮ ಕೊಡಲ್ಪಟ್ಟಿತ್ತೆಂದೂ, ನೌಕರಿ... ...ವ ಮುಂಚೆ ಅವರು ಕೊಟ್ಟ... ...ಗೂ ಅನಂತರ ಕೊಟ್ಟ ತಾ|| ...ವಿದ್ಯಮಾನಗಳಲ್ಲಿ ವ್ಯತ್ಯಾಸವಿ... ...ಕ್ಕೆ ೩೦ ಅಧಿಕಾರಿಗಳನ್ನು ...ಳಿಸಲಾಗಿದೆಯೆಂದೂ, ಕ್ರೋ... ...ಅಧಾರದ ಮೇಲೆ ಈ ನಿ... ...ಗಲಿಲ್ಲವೆಂದೂ ರೆವಿನ್ಯೂ ...ಶ್ರೀ ಕಡಿದಾಳ್ ಮಂಜಪ್ಪನವ... ರಾಜಶೇಖರ ಮೂರ್ತಿಯವರ ...ಉತ್ತರವಾಗಿ ತಿಳಿಸಿರುತ್ತಾರೆ

...ಪ್ಪಗಳಲ್ಲ ಉತ್ತೀರ್ಣರಾಗದ ನೌಕರರ ವಜಾ

...ರು ಸರ್ಕಾರದವರು ...ಪಾಧಿ... ಸೂಚನೆಯೊಂದನ್ನು ಕಳುಹಿಸಿ... ...ವಯಸ್ಸಿಗಿಂತ ಕಡಿಮೆಯಿರುವ... ...ಮೂರು ವರ್ಷಗಳ ಅವಧಿಯಲ್ಲಿ ಪರೀಕ್ಷೆಗಳನ್ನು ಮಾಡದಿದ್ದರೆ ಆ... ನಿವೃತ್ತಿ ಮಾಡುವಂತೆ ಸೂಚಿಸಿರು... ...ಶೇಷ ಸಂದರ್ಭಗಳಲ್ಲಿ ಇನ್ನು ಎ... ...ಕಾಲಾವಕಾಶ ಕೊಡಬಹುದೆಂ... ...ತಿಳಿಸಲಾಗಿದೆ ...ಂದವರ ವಯ... ...ಗಿರುವವರಿಗೆ ಸಂದರ್ಭಾನುಸಾರ ವಿ... ...ಡ ಬಹುದೆಂದೂ ೧೯೫೦ನೇ... ...ಕ್ಕೆ ಳಗ ವರ್ಷ ವಯಸ್ಸಾಗಿರುವ... ...ವಿನಾಯಿತಿ ಕೊಡಬಹುದೆಂದೂ ...ಗಿದೆ

...ರಾಸ್ಥಾನ ಸರ್ಕಾರದಲ್ಲಿ ಅ... ...ಸ ನಿರ್ಣಯದ ಸೋಲು

...ಸ್ಥಾನದ ಕಾಂಗ್ರೆಸ್ ಮಂತ್ರಿ... ...ದಲ್ಲಿ ಅವಿಶ್ವಾಸವನ್ನು ವ್ಯಕ್ತ... ವಿರೋಧ ಪಕ್ಷದವರು ಸೂಚಿಸಿದ್ದ... ...ವು ಬಹುಮತದಿಂದ ತಿರಸ್ಕರಿ... ...ಮ ಓಟು ತೆಗೆದುಕೊಳ್ಳುವಾಗ... ...ಗುಂಪಿನವರ ಸ್ಥಳ ಐದು ಜನ... ...ತ್ರ ಸಭೆಯಲ್ಲಿದ್ದರು ಉಳಿದ ೬೭... ...ಂಯ ಏಕ್ಕ ಪಕ್ಷದ ... ...ರು ...ಕೊಟ್ಟ ರೂಲಿಂಗನ್ನು ಪ್ರತಿ... ...ತ್ಯಾಗ ಮಾಡಿದರು ಚರ್ಚೆ... ...ವಿರೋಧ ಪಂಗಡದವರಿಂದ ...ಪಗಳ ಸುರಿಮಳೆಯೇ ಆ... ಮತ್ತೊಂದು ಕ್ರಿಯಾಲೋಪವ... ...ಗ ಜವಕ್ಕೆ ಅಧ್ಯಕ್ಷರು ಅವಕಾಶ... ...ಲ್ಲವಾಗಿ, ವಿರೋಧ ಪಂಗಡ... ...ವರು ಸಭಾತ್ಯಾಗ ಮಾಡಿದರು.

ದೆಹಲಿಗೆ ಶ್ರೀಮನ್ಮ ಮಹಾರಾಜರು

ಮೈಸೂರು ೨೨

...ರ್ಮನ ಮಹಾರಾಜರು ನಾಳೆ ದಿನ ದೆಹಲಿಗೆ ಪ್ರಯಾಣ ಮಾಡುವರು ...ನೇ ತಾ|| ಅವರು ಹಿಂದಿರುಗುವರು ...ವರ ಭೇಟಿಯು ಖಾಸಗಿಯದೆಂದು ಹೇಳಲಾಗಿದೆ

ಪ್ರಭುಗಳೊಡನೆ ಮುನ್ಷಿಲಾಲ್ ಮತ್ತು ರಾಮಯ್ಯರ್ರವರ ಭೇಟಿ

ರಾಜಧಾನಿಯ ಚಾಮರಾಜೇಶ್ವರೀ ಭವನದ ಮಾಲೀಕರುಗಳಾದ ಶ್ರೀಗಳು ಮನ್ಷಿಲಾಲ್ ಮತ್ತು ರಾಮಯ್ಯರ್‌ರವರು ಈ ದಿನ ಬೆಳಗ್ಗೆ ಅರಮನೆಯಲ್ಲಿ ಶ್ರೀಮನ್ಮಹಾರಾಜರವರನ್ನು ಭೇಟಿ ಮಾಡಿ ದೀಪಾವಳಿ ಶುಭಾಶಯದೊಡನೆ ಪುಷ್ಪಹಾರ ಮತ್ತು ಸಿಹಿ ತಿಂಡಿಗಳನ್ನು ಅರ್ಪಿಸಿದರು ಪ್ರಭುಗಳು ಅವನ್ನು ಸಂತೋಷದಿಂದ ಸ್ವೀಕರಿಸಿ ಶ್ರೀಯುತರಿಗೆ ಯಶಸ್ಸನ್ನು ಕೋರಿದರು

ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆ

ರಾಜಧಾನಿಯ ಬಿಡಾರಂ ಕೃಷ್ಣಪ್ಪನವರ ಶ್ರೀ ರಾಮ ಮಂದಿರದಲ್ಲಿರುವ ಶ್ರೀ ಅಯ್ಯನಾರ್ ಸಂಗೀತ ಕಲಾಶಾಲೆಯವರು ನಾಳೆ ಸಂಜೆ ೬|| ಗಂಟೆಗೆ ಶ್ರೀ ಮುತ್ತುಸ್ವಾಮಿ ದೀಕ್ಷಿತರ ದಿನಾಚರಣೆಯನ್ನು ನೆರವೇರಿಸುವರು ಸಂ| ರಾ|| ವಿ|| ಕೆ ವಾಸುದೇವಾಚಾರ್ಯರು ಅಧ್ಯಕ್ಷತೆ ವಹಿಸುವರು ವಿದ್ವಾಂಸರುಗಳಾದ ಆರ್ ಎನ್ ದೊರೆಸ್ವಾಮಿಯವರ ವೀಣೆ ಚಿಟ್ಟಿ ಕೃಷ್ಣಯ್ಯಂಗಾರ್ ಮತ್ತು ಬಿ ಕೆ ಪದ್ಮನಾಭರಾಯರ ಸಂಗೀತವು ವಿ|| ಗೋಪಾಲರಾಯರ ಪಿಟೀಲು ಮತ್ತು ಮೃದಂಗಗಳೊಡನೆ ಜರುಗುವುವು

ಅಮೃತ್ ಕೌರರ ರೇಡಿಯೊ ಭಾಷಣ

ಕೇಂದ್ರ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರ್‌ರವರ ಸಂದೇಶ ಭಾಷಣವನ್ನು ಈ ರಾತ್ರಿ ೮ ೩೦ ಗಂಟೆಗೆ ಇಲ್ಲಿನ ಆಲ್ ಇಂಡಿಯಾ ರೇಡಿಯೋ ನಿಲಯದಿಂದ ಪ್ರಸಾರ ಮಾಡಲಾಗುವುದು

ಚಾಮರಾಜನಗರದ ಅಮಲ್ದಾರರು

ಅಮಲ್ದಾರರಾಗಿ ಬಡ್ತಿ ಹೊಂದಿರುವ ಶ್ರೀ ಕೆ ಎಚ್ ಖಂಡೇರಾಯರನ್ನು ಚಾಮರಾಜನಗರದ ಅಮಲ್ದಾರರನ್ನಾಗಿ ನೇಮಿಸಲಾಗಿದೆ

ವಿಶ್ವವಿದ್ಯಾಲಯದ ತನಿಖೆಗೆ ಬಾಲಕೃಷ್ಣಯ್ಯನವರು

ಬೆಂಗಳೂರು ೨೨

ಮೈಸೂರು ವಿಶ್ವವಿದ್ಯಾಲಯದ ...ಡಳಿತದ ಸಂಬಂಧವಾಗಿ ತನಿಖೆ ನಡೆಸಲು ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಎನ್ ಬಾಲಕೃಷ್ಣಯ್ಯನವರು ಹೋಗಬಹುದೆಂದು ...ಧ್ಯಕ್ಷರು ಅವರಿಗೆ ಅನುಮತಿಯಿತ್ತಿರುವರೆಂದು ವರದಿಯಾಗಿದೆ ಇಂಜನಿಯರಿಂಗ್ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಪುನಃ ಪರಿಶೀಲನೆ ಮಾಡಲು ಆಜ್ಞೆ ಮಾಡಿದ ಸಂಬಂಧದಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳ ಮೇಲೆ ಮಾಡಲಾದ ...ಪಾದನೆಗಳ ಪರಿಣಾಮವಾಗಿಯೇ ಈ ತನಿಖೆಯು ನಡೆಯಲಿದೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ಅಲ್ಲಿನ ಅಧಿಕಾರಿಗಳು ಸ್ವಾತಂತ್ರ್ಯವನ್ನು ಬಯಸಿದರೂ ಸಾರ್ವಜನಿಕ ಹಣದಿಂದ ವಿಶ್ವವಿದ್ಯಾಲಯಕ್ಕೆ ಸರ್ಕಾರದವರು ಹಣ ಒದಗಿಸುವವರಾಗಿರುವುದರಿಂದ ಅದಕ್ಕೆ ತಾವು ಜವಾಬುದಾರರಾಗಿರುವುದಾಗಿಯೂ ಆದ್ದರಿಂದ ಈ ವಿದ್ಯಮಾನವನ್ನು ನಿಷ್ಪಕ್ಷಪಾತ ರೀತಿಯಾಗಿ ಕಂಡು ತನಿಖೆ ನಡೆಸಲು ಅವರು ನಿರ್ಧರಿಸಿರುವರೆಂದೂ ಹೇಳಲಾಗಿದೆ

ಬೊಂಬಾಯಿಯಲ್ಲಿ ಧಾನ್ಯದ ಹತೋಟಿ ರದ್ದಿಗೆ ಷರತ್ತು

ಬೊಂಬಾಯಿ ಪ್ರಾಂತ್ಯದಲ್ಲಿ ಬೆಳೆಯು ಉತ್ತಮವಾಗಿರುವುದರಿಂದ ಅಲ್ಲಿನ ಸರಕಾರದವರು ಪ್ರಾಂತ್ಯದ ಆದ್ಯಂತ ಧಾನ್ಯದ ಹತೋಟಿಯನ್ನು ರದ್ದು ಮಾಡಲು ಸಿದ್ಧವಾಗಿರುವುದಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸಿ ಈ ಬಗ್ಗೆ ಎರಡು ಷರತ್ತುಗಳನ್ನು ಹಾಕಿ, ಕೇಂದ್ರದವರು ತಮಗೆ ಸಾಲಿಯಾನಾ ೧೫ ಲಕ್ಷ ಟನ್ನು ಧಾನ್ಯವನ್ನು ಒದಗಿಸುವ ಭರವಸೆ ಕೊಡಬೇಕೆಂದೂ ಮತ್ತು ಪ್ರಾಂತ್ಯದ ಪ್ರಮುಖ ಕೈಗಾರಿಕಾ ನಗರಗಳಾದ ಬೊಂಬಾಯಿ, ಅಹಮದಾಬಾದ್, ಷೋಲಾಪುರ, ಮತ್ತು ಪೂನಾಗಳಲ್ಲಿ ಪಡಿತರ ಪದ್ಧತಿಯನ್ನು ಮುಂದುವರಿಸಲು ಅವಕಾಶ ಕೊಡಬೇಕೆಂದೂ ಕೇಳಿರುವರೆಂದು ತಿಳಿದುಬಂದಿದೆ ಎರಡನೆಯ ಷರತ್ತಿಗೆ ಕೇಂದ್ರದವರು ಒಪ್ಪಿರುವರಾದರೂ ಮೊದಲನೆಯದರ ಬಗ್ಗೆ ನಿರ್ದಿಷ್ಟವಾದ ಯಾವ ಭರವಸೆಯನ್ನೂ ಕೊಡಲು ಅವರು ಸಿದ್ಧರಿಲ್ಲವೆಂದೂ ಹೇಳಲಾಗಿದೆ ಧಾನ್ಯದ ಹತೋಟಿ ರದ್ದಾದಲ್ಲಿ, ಧಾನ್ಯ ಸಂಗ್ರಹಣೆ ಕಾರ್ಯವನ್ನು ಪೂರ್ಣವಾಗಿ ನಿಲ್ಲಿಸಲಾಗುವುದೆಂದೂ ತಿಳಿದುಬಂದಿದೆ

ರಾಜಸಭೆಯ ನಡವಳಿಕೆ ಬಗ್ಗೆ ಪ್ರಶ್ನಾವಲಿ

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಉತ್ತರ

ಸ್ವಂ ಖು ವರ್ತ] ಬೆಂಗಳೂರು ೨೨

ಇತ್ತೀಚೆಗೆ ನಡೆದ ರಾಜಸಭೆಯ ಸಂಬಂಧವಾಗಿ ಈ ದಿನವೂ ಕಿರಿಯ ಶಾಸನ ಸಭೆಯಲ್ಲಿ ಪ್ರಶ್ನೆಗಳನೇಕವು ಹಾಕಲ್ಪಟ್ಟವು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು, ರಾಜಸಭೆಗೆ ಬಂದ ಆಹ್ವಾನಿತರು ಪ್ರಯಾಣ ಅಥವಾ ದಿನ ಭತ್ಯವನ್ನು ತೆಗೆದುಕೊಳ್ಳಲು ಅರ್ಹರಾಗಿಲ್ಲವೆಂದು ತಿಳಿಸಿದರು ಹಿಂದೆ ಅನೇಕರಿಗೆ ಭತ್ಯಗಳನ್ನು ಕೊಡಲಾಗುತ್ತಿತ್ತೆಂದೂ ಎಲ್ಲರಿಗೂ ಅವು ದೊರೆಯುತ್ತಿರಲಿಲ್ಲವೆಂದೂ ಅವರು ಹೇಳಿ, ಉದ್ದಿಶ್ಯಪೂರ್ವಕವಾಗಿಯೇ ಸರ್ಕಾರದವರು ಭತ್ಯವನ್ನು ಕೊಟ್ಟಿರುವುದಿಲ್ಲವೆಂದು ಹೇಳಿದರು

ಮಂತ್ರಿಗಳು ಈ ಸಂಬಂಧವಾಗಿ ಭತ್ಯವನ್ನು ಪಡೆಯಲಿಲ್ಲವೇ ಎಂದು ಜ|| ಇಮಾಂರವರು ಕೇಳಲು, ಮಂತ್ರಿಗಳು ಅಲ್ಲಿ ೧೦ ದಿನಗಳ ವರೆಗೆ ಇನ್ನೂ ಅನೇಕ ಕೆಲಸದಲ್ಲಿ ತೊಡಗಿದ್ದರೆಂದು ಹೇಳಿ “ಹಿಂದೆ ನೀವು (ಜ|| ಇಮಾಂ) ಮಂತ್ರಿಗಳಾಗಿದ್ದಾಗ ಏನು ಸಾಧಿಸಿದಿರೋ ಅದರಂತೆ ನಾವೂ ಮಾಡಿರುತ್ತೇವೆ” ಎಂದು ನುಡಿದರು

ಪ್ರಯಾಣ ಭತ್ಯ ಕೊಡದ ಬಗ್ಗೆಯಾಗಲಿ, ರಾಜಸಭೆಗೆ ಮುಖ್ಯ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯವರು ಹೊರಡಿಸಿದ ಪ್ರಕಟಣೆಯಿಂದಲಾಗಲಿ ಆಹ್ವಾನಿತರಿಗೆ ಅಪಮಾನವಾಗಿರುವುದಿಲ್ಲವೆಂದೂ, ದಬಾರು ಅಥವಾ ರಾಜಸಭೆ ಬಗ್ಗೆ ಹುಟ್ಟಿದ ಅನುಮಾನ ಪರಿಚ್ಛೇದಕ್ಕಾಗಿಯೇ ಶ್ರೇಷ್ಠ ಕಾರ್ಯದರ್ಶಿಯವರು ಪ್ರಕಟಣೆ ಹೊರಡಿಸಿದರೆಂದೂ ತಿಳಿಸಿದರು

ಇಬ್ಬರ ತಲೆ ಕಡಿದ ಪ್ರಸಂಗ

ತಿರುನಲ್ವೇಲಿಗೆ ಸ್ವಲ್ಪ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ಕಳೆದ ಶನಿವಾರ ಒಂದು ಮನೆಯಲ್ಲಿ ಅಡಗಿಕೊಂಡಿದ್ದ ಕೊಂಬಯ್ಯ ದೇವರ್ ಮತ್ತು ಮಾದಾಸ್ವಾಮಿ ದೇವರ್ ಎಂಬುವರನ್ನು ಅವರ ಶತ್ರುಗಳು ಮೂದಲಿಸಿ ಗಂಡಸುತನವಿದ್ದರೆ ಹೊರಕ್ಕೆ ಬರಬೇಕೆಂದು ತಿಳಿಸಲಾಗಿ ಅವರುಗಳು ಆಚೆಗೆ ಬಂದಾಗ ಅವರುಗಳ ತಲೆ ಕಡಿದಿರುವರೆಂದು ಹೇಳಲಾಗಿದೆ

ಕೈರೋವಿನಲ್ಲಿ ಸೈನ್ಯಗಳ ಎಚ್ಚರಿಕೆ ಕ್ರಮ

ಈಜಿಪ್ಟಿನ ರಾಜಧಾನಿ ಕೈರೋವಿನಲ್ಲಿರುವ ಬ್ರಿಟಿಷ್ ಮತ್ತು ಅಮೆರಿಕಾ ರಾಯಭಾರಿಗಳ ಕಛೇರಿಗಳನ್ನು ಕಾವಲು ಕಾಯಲು ಈಜಿಪ್ಟಿನ ಶಸ್ತ್ರಸಜ್ಜಿತ ಪಡೆಗಳಿಗೆ ಆಜ್ಞೆಯಾಗಿದೆ ಸೂಯೆಜ್ ಕಾಲುವೆಯಲ್ಲಿರುವ ಬ್ರಿಟಿಷ್ ಸೈನ್ಯಗಳಲ್ಲಿ ದಂಗೆಯುಂಟಾಗಿರುವುದೆಂಬ ಸುದ್ದಿಯನ್ನು ಬ್ರಿಟಿಷ್ ಅಧಿಕಾರಿಗಳು ನಿರಾಕರಿಸಿರುತ್ತಾರೆ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

SRI GAYATRI

TALKIES

Daily 2 Shows

TO DAY & TO-MORROW

20th Century Fox's

PHONE CALL FROM A STRANGER

[illegible]

ಜಿಲ್ಲಾ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣಾ ವೇಳಾ ಪಟ್ಟಿ

ಮೈಸೂರು ೨೩

ಮೈಸೂರು ಜಿಲ್ಲಾ ಚುನಾವಣಾಧಿಕಾರಿಗಳಾದ ಶ್ರೀ ಅಗರಂ ರಂಗಯ್ಯನವರು ಈ ರೀತಿ ತಿಳಿಯಪಡಿಸಿರುತ್ತಾರೆ

ನವೆಂಬರ್ ೧೭ನೇ ತಾರೀಖು ತಲಕಾಡಿನಲ್ಲಿ ನಡೆಯುವ ಪಂಚಲಿಂಗ ದರ್ಶನ ಮಹೋತ್ಸವಕ್ಕೆ ಹೋಗುವವರ ಸೌಕರ್ಯಾರ್ಥವಾಗಿ ಮೈಸೂರು ಜಿಲ್ಲಾ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯ ತಾರೀಖನ್ನು ಇದೇ ನವೆಂಬರ್ ೧೭ ರಿಂದ ೧೫ನೇ ತಾರೀಖಿಗೆ ಬದಲಾಯಿಸಿರುತ್ತದೆ ಉಳಿದ ಕಾರ್ಯಕ್ರಮಗಳಲ್ಲಿ ಬದಲಾವಣೆಯಿರುವುದಿಲ್ಲ

ಪುನರ್ನಿರ್ಮಿತ ಚುನಾವಣಾ ವೇಳಾ ಪಟ್ಟಿಯು ಈ ರೀತಿ ಇರುತ್ತದೆ –

ಮತದಾರರ ಅಂತಿಮ ಪಟ್ಟಿ ಪ್ರಕಟಣೆ ೨೭-೧೦ ೫೨, ನಾಮಪತ್ರಗಳನ್ನು ಸ್ವೀಕರಿಸುವುದು ನವೆಂಬರ್ ೧ ಮತ್ತು ೨ನೇ ತಾರೀಖು ಬೆಳಿಗ್ಗೆ ೧೦ ರಿಂದ ಮಧ್ಯಾಹ್ನ ೪ರ ವರೆಗೆ ಉಮೇದುವಾರರುಗಳ ಪಟ್ಟಿ ಪ್ರಕಟಣೆ ನವೆಂಬರ್ ೧ ಮತ್ತು ೨ನೇ ತಾರೀಖು ಸಂಜೆ ೭ ಘಂಟೆ, ಉಮೇದುವಾರಿಕೆ ಪತ್ರಗಳ ಪರಿಶೀಲನೆ ೩-೧೧ ೫೨ ಬೆಳಿಗ್ಗೆ ೧೦ ರಿಂದ, ಕ್ರಮಬದ್ಧವಾದ ಉಮೇದುವಾರರ ಪಟ್ಟಿಯ ಪ್ರಕಟಣೆ ೫-೧೧ ೫೨ ಸಂಜೆ ೫ ಘಂಟೆ, ಉಮೇದುವಾರಿಕೆ ವಾಪಸು ಪಡೆಯಲು ೬-೧೧ ೫೨ ಸಂಜೆ ೫ ಘಂಟೆ ಚುನಾವಣೆ ೧೫-೧೧ ೫೨ರ ಬೆಳಿಗ್ಗೆ ೯ ರಿಂದ ಸಂಜೆ ೫ರ ವರೆಗೆ, ಮತಗಳ ಎಣಿಕೆ ೧೯-೧೧ ೫೨ ಜಿಲ್ಲಾ ಮತ್ತು ಪ್ರಾಂತ್ಯ ಸಮಿತಿಗಳಿಗೆ ಚುನಾಯಿತ ಪ್ರತಿನಿಧಿಗಳ ಪಟ್ಟಿಯನ್ನು ಕಳುಹಿಸುವುದು ೨೧-೧೧ ೫೨

ಭಾರತಕ್ಕೆ ನೇತಾಜಿ ಬೋಸರು

ನೇತಾಜಿ ಸುಭಾಷ್ ಬೋಸರು ಜೀವಂತರಾಗಿದ್ದು, ಚೀನಾ ಅಥವಾ ರಷ್ಯದಲ್ಲಿರಬೇಕೆಂದೂ, ತಮ್ಮ ಪಕ್ಷವು ಆಗಾಗ ಅವರೊಡನೆ ಸಂಪರ್ಕ ಹೊಂದುತ್ತಿರುವುದೆಂದೂ, ಅವರು ಶೀಘ್ರವಲ್ಲೇ ಭಾರತಕ್ಕೆ ಬರುವರೆಂದೂ ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಉಪಾಧ್ಯಕ್ಷರಾದ ಶೀಲಭದ್ರಯಾಜಿಯವರು ತಿಳಿಸಿರುವರು ಕಳೆದ ಜುಲೈನಲ್ಲಿ ತಮ್ಮ ಪಕ್ಷದ ಸದಸ್ಯರೊಬ್ಬರು ನೇತಾಜಿಯವರನ್ನು ಸಂದರ್ಶಿಸಿದ್ದುದಾಗಿ ಇವರು ಹೇಳಿರುತ್ತಾರೆ

ಕೃಷ್ಣರಾಜಮೊಹಲ್ಲಾ ವಿಜಿಲೆನ್ಸ್ ಸಮಿತಿ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾಕ್ಕೆ ಸೇರಿದ ಸೂರಡಿ ತ್ಯಾಗರಾಜ ವಾಣಿವಿಲಾಸ ಮತ್ತು ನಾರಾಯಣ ಶಾಸ್ತ್ರಿ ರಸ್ತೆಗಳ ಮಧ್ಯೆ ಇರುವ ಪ್ರದೇಶದಲ್ಲಿ ಪ್ರತಿ ನಿತ್ಯವೂ ರಾತ್ರಿ ೧೧ ಗಂಟೆಯಿಂದ ಬೆಳಗಿನ ಝಾವ ೪ ಗಂಟೆ ವರೆಗೆ ಖಾಸಗಿ ಜನರು ಗಸ್ತು ತಿರುಗುವ ಬಗ್ಗೆ ಸೂಕ್ತ ಏರ್ಪಾಡು ಮಾಡಲು ವಿಜಿಲೆನ್ಸ್ ಸಮಿತಿಯೊಂದನ್ನು ರಚಿಸಲಾಗಿದೆ ಶ್ರೀ ಪಿ ಕೆ ಕುಮಾರಸ್ವಾಮಿಯವರ ಅದರ ಅಧ್ಯಕ್ಷರಾಗಿಯೂ, ಶ್ರೀ ಕೆ ಜಿ ಸ್ವಾಮಿಯವರು ಉಪಾಧ್ಯಕ್ಷರಾಗಿಯೂ ಶ್ರೀಗಳು ವಿ ವೆಂಕಟಾಚಾರ್ ಮತ್ತು ಎಸ್ ಕೃಷ್ಣಾರ್ಯರವರ ಕಾರ್ಯದರ್ಶಿಗಳಾಗಿಯೂ, ಶ್ರೀ ನಂಜುಂಡಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟಿರುವರು ಕೃಷ್ಣರಾಜ ಮೊಹಲ್ಲಾ ಠಾಣೆಯ ಪೊಲೀಸು ಸಬ್ ಇನ್ಸ್‌ಪೆಕ್ಟರು ಸಮಿತಿಯವರೊಡನೆ ಸಹಕರಿಸುವುದಾಗಿ ಭರವಸೆಯಿತ್ತಿರುವರು

ವಸ್ತ್ರವನ್ನು ಸುಗಂಧಮಯ ಮಾಡುವ ಇಸ್ತ್ರಿ ಸಾಧನ

ಒಗೆದ ಬಟ್ಟೆಗಳನ್ನು ಮಡಿಸಿ, ಇಸ್ತ್ರಿ ಮಾಡುವಾಗ, ವಸ್ತ್ರಗಳನ್ನು ಸುಗಂಧಮಯವಾಗಿ ಮಾಡುವ ಏರ್ಪಾಡನ್ನು ಅಮೆರಿಕಾ ಕಂಪನಿಯೊಂದು ಕಂಡುಹಿಡಿಯುತ್ತಿರುವುದೆಂದು ಹೇಳಲಾಗಿದೆ

ಗೃಹ ಕೈಗಾರಿಕೆ ಸಮಿತಿಯ ಪುನರ್ರಚನೆ

ಗೃಹ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಎರಡು ವರ್ಷದ ಅವಧಿಯುಳ್ಳ ಸಲಹಾ ಸಮಿತಿಯನ್ನು ಸರ್ಕಾರದವರು ರಚಿಸಿರುತ್ತಾರೆ ಅದರಲ್ಲಿ ಕೈಗಾರಿಕಾ ಮಂತ್ರಿಗಳು ಅಧ್ಯಕ್ಷರು, ವಾಣಿಜ್ಯ ಮತ್ತು ಕೈಗಾರಿಕೆ ಡೈರೆಕ್ಟರು ಉಪಾಧ್ಯಕ್ಷರಾಗಿರುವರು ಶ್ರೀಮತಿ ಪಾರ್ವತಮ್ಮ ಹುಚ್ಚೇಗೌಡ, ಬೆಂಗಳೂರಿನ ಶ್ರೀ ಟಿ ರಾಮಸ್ವಾಮಿ, ತುಮಕೂರಿನ ಶ್ರೀ ಆರ್ ಎಸ್ ಆರಾಧ್ಯ, ಮೈಸೂರು ಸ್ಟೇಟ್ಸ್ ಇಂಜನಿಯರಿಂಗ್ ಕಂಪೆನಿಯ ಶ್ರೀ ಎಸ್ ರಾಮರಾವ್‌ರವರುಗಳು ಖಾಸಗೀ ಸದಸ್ಯರಾಗಿರುವರು

ಹೆಚ್ಚು ಧಾನ್ಯ ಬೆಳೆದವರಿಗೆ ಅನ್ನದಾತರೆಂಬ ಬಿರುದು

ಹೆಚ್ಚು ಧಾನ್ಯವನ್ನು ಬೆಳೆದು ಸರ್ಕಾರಕ್ಕೆ ಒಪ್ಪಿಸುವವರನ್ನು ಅನ್ನದಾತರೆಂದು ಕರೆಯಬೇಕೆಂದು ಸಂಸ್ಥಾನದ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಉಪಸಮಿತಿಯೊಂದು ಶಿಫಾರಸು ಮಾಡಿರುತ್ತದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೨೦ ವಿ ವೆಂಕಟಸುಬ್ರಮಣ್ಯರ ವೀಣೆ ಮಧ್ಯಾಹ್ನ ೧ ೩೦ ದಿಲ್ರುಬಾ ೨ [illegible] ಕಲಾವಿದರ ಸಂಜೆ ೫ ೩೦ [illegible] ೭ ೨೦ [illegible] ಸಂಗೀತ ೭ ೦೧ ಗಾನವಿಹಾರ ೭ [illegible] ಆರ್ ಶೀಲಾವತಿ ಹಿಂದಿಗೀತೆಗಳು ೮ ಗೀತೆಗಳು [illegible] ೯ ೦೫ ಗಜಾನನ ಕರ್ನಾಡ್ [illegible] ಪಿಟೀಲು ೯.೩೦ ಕನ್ನಡದಲ್ಲಿ [illegible] "ಗೃಹಪ್ರವೇಶ" ನಾಟಕ

ಒಲಂಪಿಯಾ ಟಾಕೀಸ್

23 10 52 ರಿಂದ ಜನಭರಿತ 2 ನೇ ವಾರ

ಸೆಂಟ್ರಲ್ ಪಿಕ್ಚರ್ಸ್‌ರವರ

ಅಂಜಾಮ್

ಪಾತ್ರ – ವೈಜಯಂತಿಮಾಲಾ ಪ್ರೇಮನಾಥ್ ಮತ್ತು ಯಾಕೂಬ್

— ಬೆಳಗಿನ ಪ್ರದರ್ಶನ —

ನರ್ಗಿಸ್ ಪಾತ್ರವಹಿಸಿರುವ

ಲಾಹೋರ್

Edited, Printed and Published by A R Nagarajan at Sadhvi Press, D Subbiah Road, Mysore

ಪಾನನಿರೋಧ ರದ್ದು ಮಾಡಿ, ಲಾಟರಿಗಳನ್ನು ತೆರೆಯಿರಿ

ಭಾರತ ಸರ್ಕಾರದ ಪಂಚ ವಾರ್ಷಿಕ ಯೋಜನೆಗೆ ಹಣವೊದಗಿಸಲು, ಸರ್ಕಾರದವರು ಪಾನ ನಿರೋಧವನ್ನು ರದ್ದುಗೊಳಿಸಿ, ಲಾಟರಿಗಳನ್ನು ಎತ್ತಬೇಕೆಂದು ಪಾರ್ಲಿಮೆಂಟಿನ ಹಲವು ಸದಸ್ಯರು ಸೂಚಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ.ಇಂದ	ರೂ.ಗೆ
ನೆಲಗಡಲೆ	೧೦ ೨ ೦	೨೦-೧೦-೦
ಎಳ್ಳು	೪೯ ೧೨ ೦	೬೩-೦-೦
ಹುಚ್ಚೆಳ್ಳು	೫೫-೦-೦	
ಹರಳು ಬೀಜ	೪೩-೧೨-೦	೪೪ ೦ ೦
ಹುರುಳಿ	೫೬ ೧೨ ೮	
ಹೆಸರು	೫೮ ೦-೦	
ಹೊಂಗೆಬೀಜ	೨೩ ೪ ೦	
ಉದ್ದು	೬೧ ೦ ೦	
ಅವರೆ	೬೯ ೧೦-೦	
ಹಲಸಂದೆ	೫೩-೦-೦	
ಮೆಣಸಿನಕಾಯಿ ದಪ್ಪ ಗಿಡ್ಡ	೯ ೨ ೦	೧೨ ೮ ೦
ಹುಣಸೇಹಣ್ಣು	೫ ೭ ೦	
ಸೀಗೇಕಾಯಿ	೪-೦-೦	
ಬೆಲ್ಲ	೩-೪-೦	೩ ೮ ೦
ತೆಂಗಿನಕಾಯಿ ೧೧೦೦	೨೧೮-೦ ೦	

ಚಾಮುಂಡೇಶ್ವರಿ ಟಾಕೀಸ್

21-10-52 ರಿಂದ ಅಪೇಕ್ಷಿತ ಪ್ರಾರಂಭ

ಸರೋಜಿನಿ ನಾಯ್ಡು ಪಂಡಿತ ನೆಹರೂ ಮೊದಲಾದ ರಾಷ್ಟ್ರ ನಾಯಕರಿಂದ ಶ್ಲಾಘಿಸಲ್ಪಟ್ಟಿರುವ ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ

* ಮೀರಾ *

ಪಾತ್ರ ಎಂ ಎಸ್ ಸುಬ್ಬುಲಕ್ಷ್ಮಿ, ನಾಗಯ್ಯ

In The Court of The District Judge, MYSORE

O S No 31 of 1949-50
Ex. No 405 of 1951 1952

Plaintiff:– Sri M. Krishnaji Rao
Vs
Defendants :- Sri S. R. Ramiah & Others

In pursuance of the order of the Court in this case the property known as Navajyothi Studios in Saraswathipuram, Mysore will be sold near the court at 11 A M on 4-11-1952

M. Lakshminarayana Rao,
Advocate

ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂ ಸೆಕ್ರೆಟರಿಯವರ ಕಛೇರಿ ಮೈಸೂರು

ಸಂಕ್ಷಿಪ್ತ ಪ್ರಕಟಣೆ

೧೯೫೩ ನೇ ಜನವರಿ ೧ನೇ ತಾರೀಖಿನಿಂದ ೧೯೫೩ ನೇ ಡಿಸೆಂಬರ್ ೩೧ ನೇ ತಾರೀಖಿನ ವರೆವಿಗೆ (ಎರಡು ದಿನಗಳೂ ಸೇರಿ) ಮೈಸೂರಿನಲ್ಲಿರುವ ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಕ್ಷಯರೋಗ ಆಸ್ಪತ್ರೆಯ ಉಪಯೋಗಕ್ಕೆ ಬೇಕಾಗುವ ಕೆಳಕಂಡ ಪದಾರ್ಥಗಳನ್ನು ಸರಬರಾಜು ಮಾಡಲು ಫೂಲ್ಸ್‌ಕ್ಯಾಪ್ ಸೈಜು ಅರ್ಧ ಹಾಳೆಯಲ್ಲಿ ನಾಲ್ಕು ಪ್ರತಿಗಳಲ್ಲಿ ಸೀಲಾದ ಟೆಂಡರುಗಳು ಕೆಳಗೆ ರುಜು ಮಾಡಿರುವವರಿಂದ ಮೈಸೂರಿನಲ್ಲಿ ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಸ್ಯಾನಿಟೋರಿಯಂನಲ್ಲಿರುವ ಅವರ ಕಛೇರಿಯಲ್ಲಿ ೧೯೫೨ನೇ ನವೆಂಬರ್ ೨೯ ನೇ ತಾರೀಖು ಶನಿವಾರ ಕೆಳಗೆ ತಿಳಿಸಿರುವ ಕಾಲಗಳಲ್ಲಿ ತೆಗೆದುಕೊಳ್ಳಲಾಗುವುದು

೧	ಬ್ರೆಡ್ ವೈಟ್ ಅಥವಾ ಬ್ರೌನ್ ಮೊದಲನೆ ರಕಂ	ಬೆಳಿಗ್ಗೆ ೯.೩೦
೨	ಆಹಾರ ಮತ್ತು ಆಸ್ಪತ್ರೆ ಅವಶ್ಯಕತೆಗಳು	" ೧೦ ೩೦
೩	ಶುದ್ಧವಾದ ಹಸುವಿನ ಹಾಲು	" ೧೧ ೩೦
೪	ಹಾಸಿಗೆ, ಹೊದಿಕೆಗಳು, ಸಮವಸ್ತ್ರ ಯೂನಿಫಾರಂ (೧೯೫೩-೫೪)	" ೧೨ ೩೦

ಆಯಾ ಟೆಂಡರಿನ ಒಟ್ಟು ಮೊತ್ತದ ಶೇಕಡ ೫ಕ್ಕೆ ಕಡಿಮೆ ಇಲ್ಲದೆ ಠೇವಣಿ ಹಣವನ್ನು ಟ್ರೆಜರಿಯಲ್ಲಿ ಜಮಾ ಮಾಡಿ ಆ ಬಗ್ಗೆ ಪಡೆದ ರಸೀತಿಯಿಲ್ಲದೆ ಬರುವ ಟೆಂಡರುಗಳನ್ನು ಸ್ವೀಕರಿಸುವುದಿಲ್ಲ ಟೆಂಡರಿಗಾಗಿ ಠೇವಣಿ ಮಾಡುವ ಮೊಬಲಗು [illegible] ಪತ್ರದಲ್ಲಿರಬೇಕು ಟೆಂಡರ ದಾರರು ತಮ್ಮ ಟೆಂಡರುಗಳ ಜೊತೆಯಲ್ಲಿ ಟೆಂಡರು ಮೊಬಲಗಿನ ಶೇಕಡ ೨೫ ರಷ್ಟಕ್ಕೆ ಟೆಂಡರು ಕೊಡುವ ತಾರೀಖಿಗೆ ೬ ತಿಂಗಳಿಗಿಂತ ಮುಂಚಿತವಾಗಿಲ್ಲದೆ ರೆವಿನ್ಯೂ ಅಧಿಕಾರಿಗಳಿಂದ ಪಡೆದ ಸಾಲ್ವೆನ್ಸಿ ಸರ್ಟಿಫಿಕೇಟುಗಳು ಮತ್ತು ಸರ್ಕಾರಿ ಕಂಟ್ರಾಕ್ಟರುಗಳಾಗಿ ಸ್ಟೋರ್ಸ್ ಪರ್ಚೇಸ್ ಕಮಿಟಿಯವರ ಪಟ್ಟಿಯಲ್ಲಿರುವ ಬಗ್ಗೆ ಅವರಿಂದ ಪಡೆದ ಇತ್ತೀಚಿನ ಸರ್ಟಿಫಿಕೇಟ್ ಮತ್ತು ವರಮಾನ ತೆರಿಗೆ ಅಧಿಕಾರಿಗಳಿಂದ ಪಡೆದ ಇನ್‌ಕಂಟ್ಯಾಕ್ಸ್ ಕ್ಲಿಯರೆನ್ಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಇವುಗಳನ್ನು ಲಗತ್ತಿಸಿರಬೇಕು

ವಿವರವಾದ ಟೆಂಡರು ಪ್ರಕಟಣೆಯ ಪ್ರತಿಗಳನ್ನು ಸಾಕಷ್ಟು ಪೋಸ್ಟ್ ಸ್ಟಾಂಪು ಸಹಿತ ಬರೆದುಕೊಂಡು ಅಥವಾ ಸ್ವಂತವಾಗಿ ಬಂದು ಕೆಳಗೆ ರುಜು ಮಾಡಿರುವವರ ಕಛೇರಿಯಲ್ಲಿ ಪಡೆಯಬಹುದು

ಎಂ ಕೃಷ್ಣಮೂರ್ತಿ,
ಸೆಕ್ರೆಟರಿ

ಪ್ರಭುದೇವಾ ಟಾಕೀಸ್

(ದಿನವಹಿ 3 ಆಟಗಳು)

24-10-52 ರಿಂದ :: ಅಪೇಕ್ಷಿತ 2 ನೇ ವಾರ

★ ಬಡ ರೈತ ★

(ತಮಿಳು)

(ಏಳೈಯ್ ಉಳವನ್)

ಪಾತ್ರ — ಅಂಜಲಿದೇವಿ, ಕನ್ನಾಂಬ, ಅ.ನಾಗೇಶ್ವರರಾವ್ [illegible]

[illegible]

ರಿಜಿಸ್ಟರ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೪-೧೧-೧೯೫೩ [ಸಂಚಿಕೆ ೭೩

ಅಧಿಕ ಧಾನ್ಯ ಪಡೆದಿರುವವರಿಂದಲೇ ವಸೂಲಿ

ಈಗಿರುವ ತೆರಿಗೆಗಳ ಮೇಲೆಲ್ಲಾ ಸರ್ ಛಾರ್ಜು ?

ಕೇಂದ್ರ ಆಯೋಜನಾ ಮಂಡಲಿಯ [illegible] ಸಮಿತಿಯು ಸಭೆಯು ಈಗ ವಿಧಿಸಲಾಗಿರುವ ಎಲ್ಲ ತೆರಿಗೆಗಳ ಮೇಲೆ ಸರ್ ಛಾರ್ಜು ತೆರಿಗೆಯನ್ನು ವಿಧಿಸಬೇಕೆಂದ ಸಲಹೆ ಮಾಡಿರುವುದಾಗಿ ಗೊತ್ತಾಗಿದೆ

ಇರಾಣ್-ಬ್ರಿಟನ್ ಸಂಬಂಧ ತ್ಯಾಗ

ನಿನ್ನೆ ದಿನ ಪರ್ಷಿಯವು ಬ್ರಿಟನ್ನಿನೊಡನೆ ರಾಜತಾಂತ್ರಿಕ ಸಂಬಂಧವನ್ನು ಧಿಕ್ಕಾರಯುತವಾಗಿ ಕಡಿದುಹಾಕಿ ಲಂಡನ್ನಿನಲ್ಲಿರುವ ಇರಾಣ್ ರಾಯಭಾರಿಯು ವಾಪಸು ಬರಲು ಸೂಚಿಸಲ್ಪಟ್ಟಿರುವರು ಟೆಹರಾನಿನಲ್ಲಿರುವ ಬ್ರಿಟಿಷ್ ರಾಯಭಾರಿಯು ಜಾಗ್ರತೆಯಾಗಿಯೇ [illegible] ಮುಚ್ಚಲು ಸಿದ್ಧವಾಗಿರುವರು

ನಾಲ್ಕು ಭಾಷೆ ಬಲ್ಲ ೩ ವರ್ಷದ ಬಾಲಕ

ಗ್ರೀಕ್, ಸಂಸ್ಕೃತ, ಮರಾಠಿ ಮತ್ತು [illegible] ಇಂದಿ ಭಾಷೆಗಳನ್ನು ಅರ್ಥ ಮಾಡಿಕೊಂಡು ಮಾತನಾಡಬಲ್ಲ ೩ ವರ್ಷದ [illegible] ಷ ಓಕ್ ಎಂಬ ಬಾಲಕನಿಗೆ [illegible] ರಾಷ್ಟ್ರಾಧ್ಯಕ್ಷರು ಭೇಟಿ ದಯಪಾಲಿಸಿದರು ಬಂದೂಕ ಕೊಟ್ಟರೆ ಏನು ಮಾಡುವೆಯೆಂದು ರಾಷ್ಟ್ರಾಧ್ಯಕ್ಷರು ಅವನನ್ನು ಕೇಳಲಾಗಿ, ಸಿಂಹವನ್ನು ಹೊಡೆಯುವದಾಗಿ ಉತ್ತರವಿತ್ತನು

[illegible] ಮೊಹಲ್ಲಾ ಕಾಂಗ್ರೆಸ್ ಸಮಿತಿ

[illegible] ಮೊಹಲ್ಲೆಯ ಒಂದು, ಎರಡು ಮತ್ತು [illegible]ನೇ ಪ್ರಾಥಮಿಕ ಕಾಂಗ್ರೆಸ್ ಸಮಿತಿಗಳ ಮತ್ತು ಆಯಾ ಕ್ಷೇತ್ರಗಳ ಪ್ರಾಥಮಿಕ ಕಾಂಗ್ರೆಸ್ ಸದಸ್ಯರ ಅಂತಿಮ ಪಟ್ಟಿಯನ್ನೂ, ಸಕ್ರಿಯಾ ಸದಸ್ಯರ [illegible] ಪಟ್ಟಿಯನ್ನೂ , ಮೊಹಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಪ್ರಕಟಿಸಲಾಗಿದೆ

ಪ್ರಜಾ ಸೋಷಲಿಸ್ಟರ ಸಭೆ

[illegible]ದ ಪ್ರಜಾ ಸೋಷಲಿಸ್ಟ್ ಪಕ್ಷದ [illegible] ನಾಳೆ ಸಂಜೆ ೮|| ಗಂಟೆಗೆ [illegible] ಪೇಟೆಯಲ್ಲಿರುವ ಈವನಿಂಗ್ [illegible]ನ ಮಹಡಿ ಮೇಲೆ ಸೇರುವುದು [illegible]ಮೆಂಟಿನ ಸದಸ್ಯರಾಗಿರುವ ಶ್ರೀ [illegible] ಎಸ್ ಗುರುಪಾದಸ್ವಾಮಿಯವರು [illegible]ದರಲ್ಲಿ ಭಾಗವಹಿಸುವರು ಸದಸ್ಯರೆಲ್ಲ ದಯಮಾಡಿಸಬೇಕೆಂದು ಕೋರಲಾಗಿದೆ

೨೩ ಜನ ಭಿಕ್ಷುಕರ ಬಂಧನ

ರಾಜಧಾನಿಯಲ್ಲಿ ನಿನ್ನೆ ೨೩ ಜನ ಭಿಕ್ಷುಕರನ್ನು ದಸ್ತಗಿರಿ ಮಾಡಲಾಯಿತು

ಸೀಮೆಯೆಣ್ಣೆ ಕಾಳಸಂತೆಗಾಗಿ ಶಿಕ್ಷೆ

ಕಂಟ್ರೋಲ್ ಬೆಲೆಗಿಂತ ಹೆಚ್ಚಾಗಿ ಸೀಮೆಯೆಣ್ಣೆಯನ್ನು ಮಾರಿದರೆಂಬ ಆಪಾದನೆ [illegible] ಮೊದಲು ಶಿಕ್ಷೆಗೆಗುರಿಯಾಗಿ, [illegible] ಜಾಮೀನಿನಲ್ಲಿ ಖುಲಾಸೆಯಾಗಿದ್ದ [illegible]ರಿನ ವರ್ತಕರಾದ ಶ್ರೀ ಸಂಜೀವಯ್ಯನವರಿಗೆ ಹೈಕೋರ್ಟಿನವರು [illegible] ತಿಂಗಳು ಕಠಿಣ ಸಜಾ [illegible] ೦೦೦ ರೂ ದಂಡವನ್ನು ವಿಧಿಸಿ [illegible] ಸರ್ಕಾರದವರು ಹೈಕೋರ್ಟಿಗೆ ಅಪೀಲು ಹೋಗಿದ್ದರು

ಅಣುಬಾಂಬಿನಿಂದ ಹಡಗು ಆವಿಯಾಯಿತು

ಆಸ್ಟ್ರೇಲಿಯದ ಬಳಿ ಮಾಂಟೆಬೆಲ್ಲೋ ಎಂಬಲ್ಲಿ ಮೂರು ವಾರಗಳ ಹಿಂದೆ ಆಸ್ಫೋಟಿಸಲಾದ ಬ್ರಿಟನ್ನಿನ ಅಣು ಬಾಂಬಿನ ಪ್ರಭಾವದ ಬಗ್ಗೆ ಪ್ರಧಾನಿ ಚರ್ಚಿಲ್ಲರು ಅಲ್ಲಿನ ಕಾಮನ್ಸ್ ಸಭೆಯಲ್ಲಿ ವಿವರಣೆಯಿತ್ತು, ಬಾಂಬನ್ನು ಸಮುದ್ರಕ್ಕೆ ಒಯ್ಯುತ್ತಿದ್ದ ೧೪೫೦ ಟನ್ನು ತೂಕದ ಒಂದು ಯುದ್ಧ ನೌಕೆಯು ಪೂರ್ಣವಾಗಿ ಗಿಂದು ಆವಿಯ ರೂಪವಾಗಿ ಹೋಯಿತೆಂದೂ, ಕೆಂಡದಂತೆ ಕೆಂಪಗೆ ಕಾದಿದ್ದ ಅದರ ಹಲವು ಭಾಗಗಳು ಮಾಂಟೆಬೆಲ್ಲೋ ದ್ವೀಪದ ತೀರ ಪ್ರದೇಶಕ್ಕೆ ಹಾರಿ, ಅಲ್ಲಿದ್ದ ಒಣಗಿದ ಪೈರುಗಳನ್ನು ಸುಟ್ಟುಹಾಕಿತೆಂದೂ ತಿಳಿಸಿರುವರು ಸಮುದ್ರದಲ್ಲಿ ಭಾರಿ ಪ್ರಮಾಣದ ಅಲೆಗಳು ಉಂಟಾಗಿ, ಸಾವಿರಾರು ಟನ್ನುಗಳಷ್ಟು ನೀರು, ಮರಳು ಮತ್ತು ಕಲ್ಲು ಬಂಡೆಗಳನ್ನು ಆಕಾಶದಲ್ಲಿ ಸಾವಿರ ಅಡಿ ಎತ್ತರಕ್ಕೆ ಹಾರಿಸಿತೆಂದೂ ಅವರು ಹೇಳಿದರು

ಕ್ರಕಟೋವಾ ಅಗ್ನಿಪರ್ವತದಿಂದ ಶಿಲಾ ಪ್ರವಾಹ

ಜಾವಾ ಮತ್ತು ಸುಮಾತ್ರಾ ದ್ವೀಪಗಳ ನಡುವೆ ಇರುವ ಕ್ರಕಟೋವಾ ಅಗ್ನಿ ಪರ್ವತವು ಮೊನ್ನೆ ರಾತ್ರಿಯಿಂದ ಶಿಲಾ ಪ್ರವಾಹವನ್ನು ಕಾರಲು ಆರಂಭಿಸಿರುವುದೆಂದೂ, ಇದರಿಂದ ಸುತ್ತ ಮುತ್ತಲ ಜನರು ಬೇರೆ ಸ್ಥಳಗಳಿಗೆ ಹೋಗಬೇಕಾದ ಸನ್ನಿವೇಶವೊದಗಿರುವುದೆಂದೂ ಹೇಳಲಾಗಿದೆ

ತರಳಬಾಳು ಮಠಕ್ಕೆ ಆನೆ ಕಾಣಿಕೆ

ಶ್ರೀ ಮನ್ಮಹಾರಾಜರು ತರಳಬಾಳು ಮಠಕ್ಕೆ ಹೆಣ್ಣಾನೆ ಮತ್ತು ಮೇನಾಗಳನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ ಆನೆಗೆ ಅಕ್ಕಮಹಾದೇವಿಯೆಂದು ಹೆಸರಿಡಲಾಗಿದೆ

ಶಾಸನ ಸಭಾ ಸದಸ್ಯರನ್ನು ಕುರಿತು ವಿಶ್ವೇಶ್ವರಯ್ಯನವರ ಭಾಷಣ

ಮಾಜಿ ದಿವಾನರಾದ ಡಾ|| ಎಂ ವಿಶ್ವೇಶ್ವರಯ್ಯನವರು ನಾಳೆ ಸಂಜೆ ೪ ಗಂಟೆಗೆ ಬೆಂಗಳೂರಿನ ರೆಸಿಡೆನ್ಸಿ ಭವನದಲ್ಲಿ ಎರಡು ಶಾಸನ ಸಭೆಗಳ ಸದಸ್ಯರುಗಳನ್ನು ಉದ್ದೇಶಿಸಿ ಭಾಷಣ ಮಾಡಲಿರುವರು

ಹೆಚ್ಚು ಧಾನ್ಯ ಹೊಂದಿರುವವರಿಂದ ಧಾನ್ಯದ ವಸೂಲಿ

ಶಾಸನ ಸಭೆಯಲ್ಲಿ ನಿರ್ಣಯ

ಸ್ವಂ ಸ್ವ] ಬೆಂಗಳೂರು ೨೬

ಕಿರಿಯ ಶಾಸನ ಸಭೆಯಲ್ಲಿ ನಿನ್ನೆ ನಡೆದ ಆಹಾರ ಸಂಬಂಧವಾದ ಚರ್ಚೆಗೆ ಉತ್ತರ ಕೊಡುತ್ತಾ ಗೃಹ ಸಚಿವ ಶ್ರೀ ಎಚ್ ಸಿದ್ದವೀರಪ್ಪನವರು, ಪಡಿತರವನ್ನು ಮುಂದುವರಿಸಲು ತಮಗೆ ಮನಸ್ಸಿಲ್ಲವೆಂದೂ, ಧಾನ್ಯ ಸಂಗ್ರಹಣೆ ಮಾಡಿ ಫೇರ್ ಪ್ರೈಸ್ ಅಂಗಡಿಗಳನ್ನು ತೆರೆಯಲಾಗುವುದೆಂದೂ ಹೇಳಿದರು ಹೊಸ ವರ್ಷದಲ್ಲಿ ಆಹಾರ ಪರಿಸ್ಥಿತಿಯು ಕಷ್ಟಕರವಾಗುವುದೆಂಬುದು ತಿಳಿದ ವಿಷಯವಾಗಿದೆಯೆಂದೂ, ಆದಕ್ಕೆ ಜನರ ಸಹಕಾರವು ಅವಶ್ಯಕವಾಗಿಬೇಕೆಂದೂ ಬೊಂಬಾಯಿಯಲ್ಲಿ ನಡೆಯಲಿರುವ ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಶೀಘ್ರ ಸರ್ಕಾರದ ಅಭಿಪ್ರಾಯವನ್ನು ತಿಳಿಸಲಾಗುವುದೆಂದೂ ಶಾಸನ ಸಭೆಯ ಅಭಿಪ್ರಾಯವನ್ನು ಗಮನಿಸಿ ಸರ್ಕಾರದವರು ತಮ್ಮ ಕಾರ್ಯನೀತಿಯನ್ನು ರೂಪಿಸುವುದಾಗಿಯೂ ಅವರು ಹೇಳಿದರು

ಚರ್ಚೆ ಸಮಯದಲ್ಲಿ ಪಡಿತರವು ಪೂರ್ಣವಾಗಿ ಹೋಗಬೇಕೆಂದು ಶ್ರೀ ಎಂ ಮಾದಯ್ಯನವರು ತಿದ್ದುಪಡಿ ತಂದಿದ್ದರು

ಟಿ ನರಸೀಪುರದ ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಪಡಿತರ ಪೂರ್ಣವಾಗಿ ಹೋಗಬೇಕೆಂದೂ ಬೆಲೆಯನ್ನು ಪಡಿತರದಲ್ಲಿದ್ದಂತೆ ಸರ್ಕಾರದವರು ಧಾನ್ಯದ ವಾಸ್ತಾನನ್ನು ಮಾಡಬೇಕೆಂದೂ ಸೂಚಿಸಿದರು

ಪಡಿತರವು ಇರಬೇಕಾದ ಅವಶ್ಯಕವೆಂದು ಸಾಗರದ ಶ್ರೀ ಗೋಪಾಲಗೌಡರು ತಿಳಿಸಿದರು

ಮೈಸೂರು ನಗರದಲ್ಲಿ ತೆಗೆದಂತೆ ಇತರ ನಗರಗಳಲ್ಲೂ ಪಡಿತರವನ್ನು ತೆಗೆಯುವಂತೆ ಶ್ರೀ ಕೆ ಪಟ್ಟಾಭಿರಾಮರವರು ಒತ್ತಾಯ ಮಾಡಿದರು

ಶ್ರೀ ಬಿ ಮಾಧವಾಚಾರ್ಯರು ಒಂದು ಸಲಹೆಯನ್ನಿತ್ತು, ಹೆಚ್ಚು ಬೆಳೆ ತೆಗೆಯಲು ಉತ್ಪಾದಕನ ಸೌಲಭ್ಯಗಳನ್ನು ಕಲ್ಪಿಸಬೇಕೆಂದೂ ಮತ್ತು ಸಾಧ್ಯವಾದ ಕಡೆಗಳಲ್ಲೆಲ್ಲಾ ಕಾರು ಫಸಲನ್ನು ಕಡ್ಡಾಯವಾಗಿ ಬೆಳೆಯುವಂತೆ ಶಾಸನ ಮಾಡಬೇಕೆಂದೂ ತಿಳಿಸಿದರು

ಮೊನ್ನೆ ದಿನ ಶಾಸನ ಸಭೆಯಲ್ಲಿ ಆರಂಭವಾದ ಆಹಾರದ ಚರ್ಚೆಯು ನಿನ್ನೆ ಮುಕ್ತಾಯವಾಯಿತು ಧಾನ್ಯ ಸಂಗ್ರಹಣೆ ಬಗ್ಗೆ ಹೆಚ್ಚುವರಿ ಧಾನ್ಯ ಹೊಂದಿರುವವರಿಂದ ಅದನ್ನು ವಸೂಲು ಮಾಡಬೇಕೆಂದೂ ಆಹಾರದ ಪಡಿತರವನ್ನು ಪೂರ್ಣವಾಗಿ ರದ್ದುಪಡಿಸುವುದೇ ಅಂತಿಮ ಗುರಿಯಾಗಿರಬೇಕೆಂದೂ ನಿರ್ಣಯ ಮಾಡಲ್ಪಟ್ಟಿತು

ಚಿನ್ನದ ಗಣಿಯೊಡನೆ ಸರ್ಕಾರದ ಒಪ್ಪಂದ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು ವರ್ತ] ಬೆಂಗಳೂರು ೨೬

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಕೋಲಾರದ ಚಿನ್ನದ ಗಣಿ ಕಂಪೆನಿಗೂ ಸರ್ಕಾರಕ್ಕೂ ಆಗಿರುವ ಒಪ್ಪಂದವು ಸರಿಯಾಗಿ ಜಾರಿಗೆ ಬರುತ್ತಿರುವುದೇ ಎಂದು ಶ್ರೀ ಕೆ ಎಸ್ ವಾಸನರವರು ಪ್ರಶ್ನೆ ಮಾಡಲಾಗಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಉತ್ತರವಿತ್ತು ಹೌದು ಎಂದು ಹೇಳಿದರು

ಗಣಿಗಳಲ್ಲಿ ಪಕ್ಷಭೇದ ನೀತಿಗೆ ಅವಕಾಶವಿಲ್ಲವೆಂದೂ, ಆದು ಕಂಡುಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದೂ ಅವರು ತಿಳಿಸಿದರು ಶ್ರೀ ವೆಂಕಟಪ್ಪ ಎಂಬ ಇಂಜನಿಯರೊಬ್ಬರನ್ನು ತೆಗೆದು ಅವರ ಸ್ಥಾನದಲ್ಲಿ ಐರೋಪ್ಯರೊಬ್ಬರನ್ನು ನೇಮಿಸುವ ವಿಷಯವೇ ತಮಗೆ ತಿಳಿಯದೆಂದು ಮುಖ್ಯ ಮಂತ್ರಿಗಳು ಹೇಳಿದರು

ಶ್ರೀ ಜೆ ಎಂ. ಇಮಾಂ ಮತ್ತು ಶ್ರೀ ಎಸ್ ಶ್ರೀನಿವಾಸಯ್ಯಂಗಾರ್ಯರು ಹಕ್ಕು ಬಾಧ್ಯತಾ ಸೂಚನೆಯೊಂದನ್ನು ಕಳುಹಿಸಿ, ಸದಸ್ಯರು ಕೇಳುವ ವಿಷಯಗಳನ್ನು ಸರ್ಕಾರದವರು ಒದಗಿಸದಿದ್ದರೆ ಸದಸ್ಯರ ಹಕ್ಕಿಗೆ ಲೋಪಬರುವುದೆಂದು ಸೂಚಿಸಿದ್ದರು

ಅಧ್ಯಕ್ಷರು ಈ ಬಗ್ಗೆ ಮಾತಾಡಿ, ತಮ್ಮನ್ನು ಒದಗಿಸಲೇಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸಲು ಸಾಧ್ಯವಿಲ್ಲವೆಂದು ಹೇಳಿದರು

ಉರಿಗಾಂ ಚಿನ್ನದ ಗಣಿಯನ್ನು ಮುಚ್ಚಲಾಗುವುದೆಂದು ಪ್ರಶ್ನೆ ಮಾಡಲಾಗಿ, ತಿಳಿಯದೆಂದು ಉತ್ತರ ಬಂದಿತು ಅದನ್ನು ಒಂದು ವೇಳೆ ಮುಚ್ಚಿ ಕಾರ್ಮಿಕರಿಗೆ ತೊಂದರೆ ಬರುವ ಪಕ್ಷಕ್ಕೆ ಸೂಕ್ತಕಾಲದಲ್ಲಿ ನಿವಾರಿಸಲು ವ್ಯವಸ್ಥೆ ಮಾಡಲಾಗುವುದೆಂದು ಭರವಸೆಯೀಯಲಾಯಿತು

ಸರ್ಕಾರದ ಮರಾಮತ್ತು ಇಲಾಖಾ ಕಾರ್ಯದರ್ಶಿಯವರಾದ ಶ್ರೀ ಕೆ ಎಸ್ ಗಂಗಾಧರರವರನ್ನು ಸರ್ಕಾರದ ಶ್ರೇಷ್ಠ ಇಂಜನಿಯರ್‌ರಾಗಿ ನೇಮಿಸಲಾಗಿದೆ

ಬಿರುಗಾಳಿಯಿಂದ ೪೬ ಜನರ ಮರಣ

ಫಿಲಿಪೈನ್ ದ್ವೀಪಗಳಮೇಲೆ ಕಳೆದ ಮಂಗಳವಾರದಿಂದ ಗಂಟೆಗೆ [illegible] ಮೈಲಿ ವೇಗದಲ್ಲಿ ಎಡೆಬಿಡದೆ ಮೂರು ದಿನಗಳ ಕಾಲ ಬೀಸಿದ ಬಿರುಗಾಳಿಯ ಪರಿಣಾಮವಾಗಿ ೪೬ ಜನರು ಮಡಿದರು, ನೂರಾರು ಮನೆಗಳು ನೆಲಸಮವಾದುವೆಂದು ವರದಿಯಾಗಿದೆ ಲೆಗಾಸ್ಪಿ ಎಂಬ ಒಂದು ಊರಿನಲ್ಲಿ ಶೇಕಡ ೯೦ ರಷ್ಟು ಮನೆಗಳು ನಾಶವಾದುವೆಂದು ತಿಳಿದು ಬಂದಿದೆ

೬ ಲಕ್ಷ ರೂ.ಬದಲು ಭಾಂಗಿ ಲಕೋಟೆಯಲ್ಲಿ ಕಲ್ಲುಗಳು

ಬೊಂಬಾಯಿನ ನ್ಯಾಷನಲ್ ಬ್ಯಾಂಕಿಗೆ ಅರೇಬಿಯಾ ದೇಶದ ಜೆಡ್ಡಾದಿಂದ ನಿನ್ನೆ ಬಂದ ೬ ಲಕ್ಷ ರೂ. ಗಳ ಭಾಂಗಿ ಲಕೋಟೆಯೊಂದನ್ನು ತೆಗೆದು ನೋಡಲಾಗಿ, ಅದರಲ್ಲಿ ಹಣಕ್ಕೆ ಬದಲು ಕಲ್ಲುಗಳು, ವರ್ತಮಾನ ಪತ್ರಿಕೆಗಳು ಇದ್ದುದು ಪತ್ತೆಯಾಗಿದೆ ಜೆಡ್ಡಾದಿಂದ ಭಾಂಗಿಯು ಹೊರಡುವ ಮುನ್ನ ಮೋಸ ನಡೆದಿರಬೇಕೆಂದು ಹೇಳಲಾಗಿದೆ ಭಾಂಗಿಯ ತೂಕವು ಮೊದಲು ಎಷ್ಟಿತ್ತೋ ಅನಂತರವೂ ಅಷ್ಟೇ ಇದ್ದಿತು

ಮಿತ ಸಂತಾನಕ್ಕಾಗಿ ಎಲ್ಲಾ ಆಸ್ಪತ್ರೆಗಳಲ್ಲೂ ಏರ್ಪಾಡು

ಹಿರಿಯ ಶಾಸನಸಭೆಯಲ್ಲಿ ಸ್ವಾರಸ್ಯವಾದ ಚರ್ಚೆ

ಬೆಂಗಳೂರು ೨೩

ಹಿರಿಯ ಶಾಸನ ಸಭೆಯಲ್ಲಿ ಮೊನ್ನೆ ಶ್ರೀ ಡಿ ವೆಂಕಟರಾಮಯ್ಯನವರು ಶಾಸಕ ನಿರ್ಣಯವೊಂದನ್ನು ತಂದು ಸಂಸ್ಥಾನದ ಎಲ್ಲ ಆಸ್ಪತ್ರೆಗಳಲ್ಲೂ ಮಿತ ಸಂತಾನವನ್ನು ಜಾರಿಗೆ ತರಲು ಕ್ಲಿನಿಕ್‌ಗಳನ್ನು ಏರ್ಪಡಿಸಬೇಕೆಂದು ಕೋರಿದರು ನಿರ್ಣಯದ ಅಂಶಗಳ ಬಗ್ಗೆ ಸಚಿವ ಶ್ರೀ ಟಿ ಸಿದ್ಧಲಿಂಗಯ್ಯನವರು ಸಹಾನುಭೂತಿ ವ್ಯಕ್ತಪಡಿಸಲಾಗಿ, ಅದನ್ನು ವಾಪಸು ತೆಗೆದುಕೊಳ್ಳಲಾಯಿತು

ಹೆಚ್ಚುತ್ತಿರುವ ಜನಸಂಖ್ಯೆಯನ್ನು ಶಾಸ್ತ್ರೀಯವಾಗಿ ತಡೆಗಟ್ಟಬೇಕೆಂದು ಡಾ|| ವಿಶ್ವೇಶ್ವರಯ್ಯನವರು ತಿಳಿಸಿರುವರೆಂದೂ ಸೂಚಕರು ತಿಳಿಸಿದರು

ಶ್ರೀ ಎಂ ಪಿ ಯಲ್ ಶಾಸ್ತ್ರಿಗಳು ಮಾತನಾಡಿ, ಮಿತ ಸಂತಾನ ಪದ್ಧತಿಯು ದೇಶದ ಸಂಸ್ಕೃತಿಗೆ ವಿರೋಧವಾದುದೆಂದೂ, ದೇಶದಲ್ಲಿ ಜನಬಾಹುಳ್ಯವೇ ಒಂದು ಹೆಮ್ಮೆಯ ವಿಷಯವೆಂದೂ, ಅದನ್ನು ಕಂಡು ವಿದೇಶೀಯರು ಅಂಜಬಹುದೆಂದೂ ತಿಳಿಸಿದರು

೧೮ ಮಕ್ಕಳ ತಂದೆಯಾದ ತಮಗೆ ಅವರನ್ನು ಸಾಕುವುದು ಭಾರವಾಗಿಲ್ಲವೆಂದು ಶ್ರೀ ಭೀಮಯ್ಯನವರು ಹೇಳಿದರು

ಕೃತಕ ವಿಧಾನಗಳಿಂದ ಮಿತ ಸಂತಾನ ಮಾಡುವುದು ಕಾಮುಕ ಜೀವನಕ್ಕೆ ಉತ್ತೇಜನವೀಯುವಂತಾಗುವುದಿಲ್ಲವೆಂದು ಶ್ರೀ ಆರ್ ಪಿ ರೇವಣ್ಣನವರು ತಿಳಿಸಿದರು

ಮಕ್ಕಳಾಗುವುದು, ಬಿಡುವುದು ದೈವೇಚ್ಛೆ, ಹಲವಾರು ಲಗ್ನಗಳನ್ನು ಮಾಡಿಕೊಂಡವರಿಗೂ ಅವು ಹುಟ್ಟಿರುವುದಿಲ್ಲ. ಬಡವನಾದರೂ ದುಡಿದು ಮನೆಗೆ ಬಂದಾಗ ಮಕ್ಕಳ ಆದರವನ್ನು ನೋಡಿದರೆ ಅವನ ಕಷ್ಟವೆಲ್ಲವೂ ಪರಿಹಾರವಾಗುವುದು–ಎಂದು ಶ್ರೀ ಗುಬ್ಬಿ ವೀರಣ್ಣನವರು ಹೇಳಿದರು

ಸೃಷ್ಟಿ, ಸ್ಥಿತಿ, ಲಯಗಳಿಗೆ ತ್ರಿಮೂರ್ತಿಗಳು ಕಾರಣ ಮನುಷ್ಯರೇ ಸೃಷ್ಟಿಕರ್ತರೆಂದು ಭಾವಿಸುವುದು ಮೂರ್ಖತನ ಮತ್ತು ಅಹಂಕಾರದ ಮಾತು ಆರ್ಥಿಕ ಸಮಸ್ಯೆಗಾಗಿ ಮಕ್ಕಳು ಬೇಡವೆಂದರೆ, ಯುದ್ಧವೊದಗಿದರೆ ಜನರನ್ನೆಲ್ಲಿ ಒದಗಿಸುವಿರಿ–ಎಂದು ಶ್ರೀ ಬಿ. ಟಿ ರಾಮಯ್ಯನವರು ಪ್ರಶ್ನೆ ಮಾಡಿ, ಮಿತ

ಒಲಂಪಿಯಾ ಟಾಕೀಸ್

23 10 52 ರಿಂದ ಜಯಪ್ರದ 2 ನೇ ವಾರ

ಸರ್ಕೈಸ್ ಪಿಕ್ಚರ್ಸ್‌ರವರ

ಅರ್‌ ಜಾ ಮ್

ಪಾತ್ರ –ವೈಜಯಂತಿಮಾಲಾ, ಪ್ರೇಂನಾಥ್ ಮತ್ತು ಯಾಕೂಬ್

— ಬೆಳಗಿನ ಪ್ರದರ್ಶನ —

ನರ್ಗಿಸ್ ಪಾತ್ರವಹಿಸಿರುವ

ಲಾ ಹೋ ೯ ರ್

ಗುಡ್ಡಗಾಡಿನವರ ಮಧ್ಯೆ ನೆಹರೂರವರ ನೃತ್ಯ !

ಅಸ್ಸಾಮಿನ ಗುಡ್ಡಗಾಡಿನ ಪ್ರದೇಶದಲ್ಲಿ ಸಂಚರಿಸುತ್ತಿರುವ ಪ್ರಧಾನಿ ನೆಹರೂರವರು ಮೊನ್ನೆ ಒಂದು ಕಡೆ ಗುಡ್ಡಗಾಡಿನವರೊಡನೆಯೇ ಅಲ್ಲಿನವರ "ಬೊ ಬೊ" ನೃತ್ಯವನ್ನು ಮಾಡಲು ಪ್ರಯತ್ನಿಸಿದರೆಂದು ವರದಿಯಾಗಿದೆ ನೆಹರೂರವರನ್ನು ಗೌರವಿಸಲು ಗುಡ್ಡಗಾಡಿನವರು ತಮ್ಮ ಭಾಷೆಯಲ್ಲಿಯೇ ಒಂದು ಕವನವನ್ನು ರಚಿಸಿ ಹಾಡಿದರು

ವಿವಾಹ ಮಹೋತ್ಸವ

ಆಗರದ ಶ್ಯಾನುಭೋಗರಾದ ಶ್ರೀ ಎ ಆರ್. ನಾರಾಯಣರಾಯರ ಸಹೋದರರಾದ ಶ್ರೀ ಕೃಷ್ಣಮೂರ್ತಿಯವರಿಗೆ ಚಾಮರಾಜನಗರದ ಶ್ರೀ ಕೆ. ಜಿ. ಗುಂಡಪ್ಪನವರ ಪುತ್ರಿ ಸೌ|| ಸಂಗಳಾಂಬನನ್ನು ಕೊಟ್ಟು ನೆನ್ನೆ ಚಾಮರಾಜನಗರದಲ್ಲಿ ವಿವಾಹವು ನೆರವೇರಿತು.

ಶಾಸನ ಸಭೆಗಳ ಹೊಸ ಅಧಿವೇಶನ

ಸಂಸ್ಥಾನದ ಉಭಯ ಶಾಸನ ಸಭೆಗಳ ಅಧಿವೇಶನವು ಬರುವ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ನಡೆಯುವುದೆಂದು ನ್ಯಾಯಾಂಗ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ತಿಳಿಸಿರುತ್ತಾರೆ

ಸಂತಾನವು ಧರ್ಮಕ್ಕೆ ವಿರುದ್ಧವಾದುದು, ಎಂದು ಹೇಳಿದರು

ಸಂತಾನವನ್ನು ತಡೆಗಟ್ಟುವುದು ದೇಹ ಮತ್ತು ಮನಸ್ಸಿನ ಮೇಲೆ ಕೆಟ್ಟ ಪರಿಣಾಮವುಂಟುಮಾಡುವುದೆಂದು ಶ್ರೀಮತಿ ಎಂ.ಬಿ. ಲಕ್ಷ್ಮಮ್ಮನವರು ತಿಳಿಸಿದರು ಅಪೇಕ್ಷಪಡುವವರಿಗಾಗಿ ಕ್ಲಿನಿಕ್‌ಗಳು ಇರಲಿ – ಎಂದು ಅವರು ಅಭಿಪ್ರಾಯಪಟ್ಟರು

ನಿರ್ಣಯದ ಅಂಶದ ಬಗ್ಗೆ ಸಹಾನುಭೂತಿಯಿದ್ದರೂ, ಒತ್ತಾಯ ಪೂರ್ವಕವಾಗಿ ತರುವ ಉದ್ದೇಶವಿಲ್ಲವೆಂದೂ, ಬೇಕಾದವರು ಅದರ ಉಪಯೋಗ ಹೊಂದಬಹುದೆಂದೂ ಸಚಿವರು ಹೇಳಿದರು

ಆ ರೋ ಗ್ಯ ಕ್ಕೂ ಮ ತ್ತು ಶ ಕ್ತಿ ಗೂ

ಯಾವಾಗಲೂ

ಶ್ರೇಷ್ಠವಾದ ಬೆಣ್ಣೆ & ತುಪ್ಪವನ್ನು

ಉಪಯೋಗಿಸಿ

ಬೆಣ್ಣೆ ವೀಸೆ 1ಕ್ಕೆ 5–0–0

ದಯವಿಟ್ಟು ಭೇಟಿ ಕೊಡಿ

ಎಂ.ಎಸ್.ನಾಗಣ್ಣ & ಸನ್ಸ್

100 ಅಡಿ ರಸ್ತೆ, ಮೈಸೂರು

ಆಫ್ರಿಕಾ ಭಾರತೀಯರ ಸಹಾಯಕ್ಕಾಗಿ ಮನವಿ

ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರು ಸತ್ಯಾಗ್ರಹಕ್ಕೆ ಇಳಿದಿರುವುದರಿಂದ ಅವರುಗಳ ತ್ರಸ್ತ ಸಂಸಾರದವರಿಗೆ ಸಹಾಯ ನೀಡಲು ಪ್ರಾರ್ಥನೆಯೊಂದನ್ನು ಭಾರತದ ೩೭ ಮಂದಿ ರಾಷ್ಟ್ರೀಯ ಮುಖಂಡರು, ಪ್ರಮುಖ ಕೈಗಾರಿಕೆಯವರು, ವ್ಯಾಪಾರಿಗಳು ಮತ್ತು ಎಲ್ಲ ಕೋಮುಗಳ ಮುಖಂಡರೂ ಹೊರಡಿಸಿರುತ್ತಾರೆ.

ನಗರದ ರೇಷನಿಂಗ್ ಅಧಿಕಾರಿಗಳ ಹುದ್ದೆ ರದ್ದು

ರಾಜಧಾನಿಯಲ್ಲಿ ಪಡಿತರದ ರದ್ದಿನ ಅಂಗವಾಗಿ ಇಲ್ಲಿನ ಮುಖ್ಯ ರೇಷನಿಂಗ್ ಮತ್ತು ರೇಷನಿಂಗ್ ಅಧಿಕಾರಿಗಳ ಹುದ್ದೆಗಳನ್ನು ರದ್ದು ಮಾಡಲಾಗಿದೆ ಅವರುಗಳ ಕೆಲಸವನ್ನು ಜಿಲ್ಲಾಧಿಕಾರಿಗಳ ಆಹಾರದ ಅಸಿಸ್ಟೆಂಟರಿಗೆ ವಹಿಸಲಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭.೩೦ ಚಿತ್ರ ಜಗತ್ ಮಧ್ಯಾಹ್ನ ೧ ೪೦ ಗಿಟಾರ್ ೨ ಬಾಲಜಗತ್, ಸಂಜೆ ೫ ೪೦ ಮತ್ತು ೭ ಪಿ ವೆಂಕಟರಾಮಯ್ಯ, ಪಿಟೀಲು ೬.೧೦ ನಾದಶ್ರೀ. ೭ ೩೦ ಪರಿಹಾರ ೮ ಧ್ರುವ ಚರಿತ್ರೆ ಕಥೆ. ಎಸ್ ಕೃಷ್ಣಯ್ಯಂಗಾರ್ ೯ ೧೫ ತಬಲ ೯ ೪೦ ಗಾನವಾರಿಧಿ ೯ ೪೫ ಆರ್ಕೆಸ್ಟ್ರಾ

ರಾತ್ರಿ ೮ ೩೦ ಗಂಟೆಗೆ ಕೇಂದ್ರ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರ ದೆಹಲಿ ಭಾಷಣದ ಪುನಃಪ್ರಸಾರ

ಸಕಾಲದ ಸುಲಭ ಬೆಲೆ

ಮೈಸೂರು, ಸಿಲ್ಕ್ ಫಿಲೇಚರ್ ಕಂಪನಿ

ಅಪ್ಪಟ ಸಿಲ್ಕ್ ಸೀರೆಗಳಿಗೆ

ವಿ ಚಾ ರಿ ಸಿ

ಕೆ. ಎಸ್. ಸತ್ಯನಾರಾಯಣರಾವ್,

ಜವಳಿ ವ್ಯಾಪಾರಿಗಳು,

೨೦೩, ಸಯ್ಯಾಜಿರಾವ್ ರಸ್ತೆ

(ಶ್ರೀ ಚಾಮುಂಡೇಶ್ವರಿ ಸಿನಿಮಾ ಕಟ್ಟಡ)

ಮೈಸೂರು

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

Edited, Printed and Published by A R Nagarajan at Sadhvi Press, D Subbaiah Road, Mysore

ಸಿನಿಮಾಗಳಿಂದ ಪ್ರಗತಿ ಸಾಧನೆಯಿಲ್ಲವೆಂದು ನೆಹ್ರೂ

ದೇಶಾಭ್ಯುದಯದ ಸಾಧನೆಗಾಗಿ ಸಿನಿಮಾ ಕೈಗಾರಿಕೆಗೆ ಹೆಚ್ಚು ಉತ್ತೇಜನ ಕೊಡಬೇಕೆಂದು ಕೋರುವವರ ಅಭಿಪ್ರಾಯವನ್ನು ತಾವು ಅನುಮೋದಿಸುವುದಿಲ್ಲವೆಂದೂ, ವಾಸ್ತವವಾಗಿ ಜನರಿಗೆ ಬೇಕಾಗುವ ಪದಾರ್ಥಗಳನ್ನು ತಯಾರಿಸುವ ಮತ್ತು ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬಲ್ಲ ಕೈಗಾರಿಕೆಗಳು ಪ್ರಗತಿ ಹೊಂದಬೇಕೆಂದು ತಾವು ಬಯಸುವುದಾಗಿಯೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

	ಪಲ್ಲ ೧ಕ್ಕೆ	ರೂ ಇಂದ ರೂ
ನೆಲಗಡಲೆ	೮ ೦-೦	೨೧–೭–[illegible]
ಎಳ್ಳು	೬೫ ೦ ೦	೭೦ [illegible]
ಹುಚ್ಚೆಳ್ಳು	೫೫-೦-೦	
ಹರಳು ಬೀಜ	೪೫–೦–೦	೪೩ ೦
ಹುರುಳಿ	೫೭-೮ ೦	
ಹೆಸರು	೫೦ ೦-೦	
ಹೊಂಗೇಬೀಜ	೨೩ ೪-೦	
ಉದ್ದು	೬೧ ೦ ೦	
ಅವರೆ	೭೯-೧೦-೦	
ಹಲಸಂದೆ	೫೩ ೦ ೦	
ಮೆಣಸಿನಕಾಯಿ		
ಮುಣ್ಣ ೧ಕ್ಕೆ	೧೨ ೦ ೦	೩೮ [illegible]
ರ ಣಸೇಪಣ್ಣು	೫ ೨ ೦	
ಸೀಗೇಕಾಯಿ	೪ ೦-೦	
ಬೆಲ್ಲ	೩-೪-೦	೩ ೮
ತೆಂಗಿನಕಾಯಿ ೧೧೦೦	೧೬೭ ೦ ೦	೨೦೪ [illegible]

ಚಾಮುಂಡೇಶ್ವರಿ ಟಾಕೀಸ್ ನ

24–10–52 ರಿಂದ ಅಮೋಘ ಪ್ರಾರಂಭ

ಸರೋಜಿನಿ ನಾಯ್ಡು, ಪಂಡಿತ ನೆಹರೂ ಮುಂತಾದ ರಾಷ್ಟ್ರ ನಾಯಕರಿಂದ ಶ್ಲಾಘಿಸಲ್ಪಟ್ಟಿರುವ ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ

* ಮೀ ರಾ *

ಪಾತ್ರ: ಎಂ.ಎಸ್ ಸುಬ್ಬಲಕ್ಷ್ಮಿ, ನಾಗಯ್ಯ

ಇದರ ಪರಿಚಯವಿದೆಯೇ .

ಮೈ ಸೂ ರು ಸಾ ಬೂ ನು

ಸಂಪೂರ್ಣವಾಗಿ ಶುದ್ಧವಾದ, ಯಾವ ಚರಬಿಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಬಗೆಯುವ ಸಾಬೂನು ಯಾವ ಕ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತವೆ. ಕ್ರಮ, ಕಾಲ, ಹಣ ವಿನಿಯೋಗಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತವೆ.



ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ

ಎಲ್ಲ ಕಡೆಯೂ ಸಿಗುತ್ತದೆ

ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು

ಅಮೋಘ ಪ್ರಾರಂಭ :: 24-10-52 ರಿಂದ

ಮೈಸೂರು ಪ್ರ ಭಾ ಚಿತ್ರ ಮಂದಿರದಲ್ಲಿ

ಪ್ರತಿ ದಿನ 3 ಆಟಗಳು

ರಾಜ್‌ಕಪೂರ್ ಮತ್ತು ನಿಮ್ಮಿ ಅಭಿನಯಿಸಿರುವ

★ ಬಾ ವ ರಾ ★

ಸಹಾಯಕ ಪಾತ್ರ – ಕೆ ಎನ್ ಸಿಂಗ್, ಲಲಿತ ಪವಾರ್, ಹೀರಾಲಾಲ್, ಸುಂದರ್

PARAMOUNT PICTURES RELEASE

ಟೆಲಿಫೋನ್ ನಂ 792 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೫ ೧೦-೧೯೫೩ [ಸಂಚಿಕೆ ೭೪

ಕೇರಳ ಸರ್ಕಾರದಲ್ಲಿ – ಅವಿಶ್ವಾಸ ಸೂಚನೆ –

ಪ್ರಜಾಸರ್ಕಾರದ ಮಂತ್ರಿಗಳ ವೆಚ್ಚ ೯ ಲಕ್ಷ ರೂ.

ಶಾಸನ ಸಭೆಯಲ್ಲಿ ವಿವರಣೆ

ಬೆಂಗಳೂರು ೨೫

... ನಾಬ್ದಾರಿ ಸರ್ಕಾರವು ಸ್ಥಾಪನೆ ... ದಾಗಿನಿಂದ ಇದುವರೆಗೆ ಪ್ರಜಾ ... ಮಂತ್ರಿಗಳ ಸಂಬಳ, ವಸತಿ ಸೌಕರ್ಯ, ... ಕಾರುಗಳ ವೆಚ್ಚ, ಮುಂತಾದು ... ಸುಮಾರು ೯ ಲಕ್ಷ ರೂ. ವೆಚ್ಚ ... ವುದೆಂಬ ವಿಷಯವು ಮುಖ್ಯ ... ಶ್ರೀ ಹನುಮಂತಯ್ಯನವರು ... ಶಾಸನ ಸಭೆಯಲ್ಲಿ ಒದಗಿಸಿದ ... ಅಂಶಗಳಿಂದ ವ್ಯಕ್ತಪಟ್ಟಿದೆ ... ಮಂತ್ರಿಗಳ ಕಾರುಗಳಿಗಾಗಿ ಒಟ್ಟು ... ರೂ ಖರ್ಚಾಗಿ ... ಮೊದಲು ಕೊಂಡ ೯ ಕಾರುಗಳಿಗೆ ... ರೂ. ನೂತನ ಮಂತ್ರಿಗಳು ... ನಂತರ ಕೊಂಡ ೭ ಕಾರುಗಳಿಗೆ ... ರೂ ವೆಚ್ಚವಾಗಿದೆ ೫೩ ... ಕೊಂಡ ... ಕಾರಿಗೆ ೨೦ ೪೦೦ ರೂ ... ೭ ಕಾರುಗಳಲ್ಲಿ ಇನ್ನು ಮೂ ... ಉಪಯೋಗಿಸಲಾಗುತ್ತಿದೆ ಅತಿ ... ರಿಗಾಗಿ ಒದಗಿಸಿದ ಒಂದು ಕಾರು ... ಅಕಸ್ಮೀಕವಾಗಿ ನಾಶವಾಗಿದೆ ಅತಿ ... ಹೆಸರನ್ನು ತಿಳಿಸಲಾಗಲಿಲ್ಲ ಆ ... ವಿಷಯವೂ ಆಗಿಲ್ಲ. ಹಳೆಯ ... ಗಳನ್ನು ಕೊಂಡ ಬೆಲೆಗೆ ಮಾರ ... ದೆ

ಮಹಾರಾಜಾ ಕಾಲೇಜಿನ ಉರ್ದು ಪ್ರೊಫೆಸರ್‌ಗಿರಿ ಬಗ್ಗೆ ಪ್ರಶ್ನೆ

ಮೈಸೂರು ಮಹಾರಾಜಾ ಕಾಲೇಜಿ ... ಉರ್ದು ಪ್ರೊಫೆಸರ್‌ಗಿರಿಯನ್ನು ... ಲ್ಲಿ ಮಂಜೂರ್ಮಾಡಲಾಗಿತ್ತೆಂ ... ದಕ್ಕೆ ಶ್ರೀ ಅಬ್ದುಲ್ ಖಾದರ್ ... ಯವರನ್ನು ನೇಮಿಸಿತ್ತೆಂದೂ, ... ಲ್ಲಿ ಅವರು ಬಿಟ್ಟುಹೋದ ಸ ... ಶ್ರೀ ಮಿಹರ್ ಅಲಿ ಖಾನರಿಗೆ ... ಕೊಡಲಾಯಿತೆಂದೂ, ವಿದ್ಯಾ ... ಶ್ರೀ ಎ ಜಿ ರಾಮಚಂದ್ರರಾ ... ಹಿರಿಯ ಶಾಸನ ಸಭೆಯಲ್ಲಿ ಕಿಳ ... ಪ್ರಶ್ನೆಗೆ ಉಪ ಪ್ರಶ್ನೆಗಳಿಗೆ ಉತ್ತರ ... ಸರ್ಕಾರಿಯವರು ರಜಾಕ್ಕೆ ಅ ... ಸಹಾ ಕೊಡದೆ ಪೋಲೀಸು ಕಾರ್ಯಾ ... ನಡೆಯುವುದಕ್ಕಿಂತ ಮುಂಚೆ ... ಬಾರದಿಗೆ ಓಡಿಹೋದರೆಂಬುದಾಗ ... ಅವರು ವಾಪಸು ಬಂದುದಾಗಲೀ ... ಅವರು ಎಲ್ಲಿರುವರೆಂಬುದಾಗಲಿ ಸ ... ತಿಳಿಯದೆಂದೂ ಹೇಳಿರುವರು ... ಎಕ್ಸಿಕ್ಯೂಟಿವ್ ಇಂಜನಿಯರ್ ಶ್ರೀ ... ಸ್ವಾಮಿ ಅಯ್ಯಂಗಾರ್ರವರನ್ನು ಸೂ ... ಟೆಂಡಿಂಗ್ ಇಂಜನಿಯರ್ ಆಗಿ ... ಸರ್ಕಾರದ ಮರಾಮತ್ತು ಇಲಾ ... ಪ್ರಧಾನ ಕಾರ್ಯದರ್ಶಿಯಾಗಿಯೂ ನೇಮಕರೂ ... ಮಾಡಲಾಗಿದೆ.

ಮದ್ರಾಸು ಪೋಲೀಸರಿಂದ ಗಡಿ ಧಾಳಿಯೆಂದು ಅರ್ಜಿ

... ಬಾಗಲು ತಾಲ್ಲೂಕಿನ ಚಿಪ್ಪೇ ... ಹಳ್ಳಿಯ ಜನರು ಕೋಲಾರದ ... ಕಾರಿಗಳಿಗೆ ಅರ್ಜಿಯೊಂದನ್ನು ... ಮೈಸೂರಿನ ಗಡಿ ಹಳ್ಳಿಗಳಮೇ ... ಮದ್ರಾಸು ಸಂಸ್ಥಾನದ ಶಸ್ತ್ರ ಸಜ್ಜ ... ಪೋಲೀಸರು ಧಾಳಿ ನಡೆಸಿರುವರೆಂದು ... ತಿಳಿಸಿದ್ದಾರೆ ತನಿಖೆಗಾಗಿ ಅರ್ಜಿಯ ... ಪೋಲೀಸು ಇಲಾಖೆಗೆ ಕಳುಹಿಸಲಾ

ಕೋಲಾರದ ಹಳ್ಳಿ ಮೇಲೆ ಮದ್ರಾಸು ಪೋಲೀಸರ ಧಾಳಿ

ಹಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರ ಉತ್ತರ

ಸ್ವಂ ಸು ಫೋ] ಬೆಂಗಳೂರು ೨೫

ಹಿರಿಯ ಶಾಸನ ಸಭೆಯಲ್ಲಿ ಈ ದಿನ ಶ್ರೀ ಎಂ ಸಿ ಎಲ್ ಶಾಸ್ತ್ರಿಯವರು ಅವಸರದ ನಿರ್ಣಯವೊಂದನ್ನು ತಂದು ಇತ್ತೀಚೆಗೆ ಕೋಲಾರದ ಗಡಿ ಹಳ್ಳಿಯ ಮೇಲೆ ಮದ್ರಾಸು ಪೋಲೀಸರು ಧಾಳಿ ನಡೆಸಿ ಆಹಾರ ಧಾನ್ಯಗಳನ್ನು ಸಾಗಿಸಿದರೆಂಬ ಅಂಶವನ್ನು ಪ್ರಸ್ತಾಪಿಸಿದರು

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ ಈಗಾಗಲೇ ಸರ್ಕಾರಕ್ಕೆ ವರದಿಗಳು ಬಂದಿರುವುದಾಗಿಯೂ ಮದ್ರಾಸು ಸರ್ಕಾರದೊಡನೆ ತಮ್ಮ ಸರ್ಕಾರದವರು ವ್ಯವಹರಿಸುತ್ತಿರುವುದಾಗಿಯೂ ಹೇಳಿದರು.

ಕಿರಿಯ ಮತ್ತು ಹಿರಿಯ ಶಾಸನ ಸಭೆಗಳ ಅಧಿವೇಶನವು ಈ ದಿನ ಮುಕ್ತಾಯವಾಯಿತು

ಹಿಂದಿನ ಸರ್ಕಾರದ ಆಜ್ಞೆಗಳೆಲ್ಲಾ ಜಾರಿಗೆ

ಹಿಂದಿನ ಸರ್ಕಾರದವರು ಮಾಡಿದ ಯಾವ ಆಜ್ಞೆಯನ್ನೂ ಜಾರಿಗೆ ತರದೆ ತಡೆದಿಟ್ಟಿಲ್ಲವೆಂದೂ, ಒಂಬತ್ತು ಆಜ್ಞೆಗಳನ್ನು ಮಾತ್ರ ಬದಲಾವಣೆ ಮಾಡಲಾಯಿತೆಂದೂ, ತಡವಾಗಿ ಬಡ್ತಿ ಕೊಟ್ಟ ೭ ಆಜ್ಞೆಗಳನ್ನು ವಾಪಸು ತೆಗೆದುಕೊಳ್ಳಲಾಯಿತೆಂದೂ ಮುಖ್ಯ ಮಂತ್ರಿಯವರು ಮೈಸೂರಿನ ಶ್ರೀ ಕೆ ಪುಟ್ಟಸ್ವಾಮಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು ಶ್ರೀ ರಾಮರಾಜು ಎಂಬುವರಿಗೆ ವಿರಾಮ ವೇತನ ಕೊಟ್ಟುದು, ಹಾಸನದ ಅಬ್ಕಾರಿ ಕಂಟ್ರಾಕ್ಟರ್ ಶ್ರೀ ರಂಗಪ್ಪನವರಿಗೆ ವಿದೇಶೀ ಮದ್ಯಗಳ ರಹದಾರಿ ಕೊಟ್ಟುದು, ಶ್ರೀ ಬಿ ಎಸ್ ಪುಟ್ಟಸ್ವಾಮಿಯವರಿಗೆ ಸಂಬಂಧಿಸಿದ ಆರ್ಬಿಟ್ರೇಶನ್ ಪ್ರೋಸೀಡಿಂಗ್ಸ್ ಈ ವಿಷಯಗಳಲ್ಲಿ ಮೇಲ್ಕಂಡ ಕ್ರಮ ಕೈಗೊಳ್ಳಲಾಯಿತು. ಎಂದು ಶ್ರೀ ಹನುಮಂತಯ್ಯನವರು ವಿವರಣೆಯಿತ್ತರು

ಮೆಕ್ಸಿಕೋವಿನಲ್ಲಿ ಸಿತೂರಿ ?

ಮೆಕ್ಸಿಕೋ ಸರ್ಕಾರದ ವಿರುದ್ಧ ದಂಗೆ ಏಳಲು ಪಿತೂರಿ ನಡೆಸಿದರೆಂದು ೧೬ ಜನ ಸೈನ್ಯಾಧಿಕಾರಿಗಳೂ, ನಾಲ್ವರೂ ಖಾಸಗಿಯವರೂ ವಶ್ಯಗಿರಿ ಮಾಡಲ್ಪಟ್ಟಿದ್ದಾರೆ

ಮಹಾರಾಜರಿಗೆ ಸೇರಿದ ಜಮೀನುಗಳ ಮೇಲೆ ತೆರಿಗೆ

೧೯೫೧ನೇ ಫೆಬ್ರವರಿಯಿಂದ ವಸೂಲಾತಿ ಕ್ರಮ

ಸ್ವಂ ಸು. ಫೋ] ಬೆಂಗಳೂರು ೨೫

ಈ ದಿನ ಕಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಶ್ರೀಮನ್ಮಹಾರಾಜರವರಿಗೆ ಸೇರಿರುವ ೩೫,೬೨೨ ಎಕರೆ ತರಿ, ೧೩,೨೧೯ ಎಕರೆ ಖುಷ್ಕಿ, ೮೦೩ ಎಕರೆ ಬಾಗಾಯಿತು ಜಮೀನುಗಳಿಗೆ ೧೯೫೧ನೇ ಫೆಬ್ರವರಿಯಿಂದ ತೆರಿಗೆ ವಿಧಿಸಲಾಗುವುದೆಂದೂ, ಎಷ್ಟು ತೆರಿಗೆಯನ್ನು ವಿಧಿಸಬೇಕೆಂಬ ಬಗ್ಗೆ ಲೆಕ್ಕ ಹಾಕಲಾಗುತ್ತಿರುವುದೆಂದೂ ತಿಳಿಸಿದರು

ಶ್ರೀ ಕೆ ಪುಟ್ಟಸ್ವಾಮಿಯವರ ಉಪ ಪ್ರಶ್ನೆಗೆ ಉತ್ತರವೀಯುತ್ತಾ, ಈಗಾಗಲೇ ರೆವಿನ್ಯೂ ಕಮೀಷನರರು ವಸೂಲಾತಿ ಬಗ್ಗೆ ಆಜ್ಞೆ ಹೊರಡಿಸಿರುವರೆಂದೂ ಹಿಂದೆ ವಸೂಲಾಗಬೇಕಾದ ಹಣಕ್ಕೆ ತಾವು ಜವಾಬ್ದಾರರಲ್ಲವೆಂದೂ ಮುಖ್ಯ ಮಂತ್ರಿಗಳು ಹೇಳಿದರು

ಶ್ರೀ ಕೆ ಪುಟ್ಟಸ್ವಾಮಿಯವರ ಮತ್ತೊಂದು ಪ್ರಶ್ನೆಗೆ ಆಹಾರ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ಉತ್ತರಿಸುತ್ತ, ರಹದಾರಿಯಿಲ್ಲದೆ ಸಂಸ್ಥಾನದಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಿದ ಧಾನ್ಯದ ಪಟ್ಟಿಯನ್ನು ಕೊಡುವ ಬಗ್ಗೆ ವಿವರವನ್ನು ಶೇಖರಿಸಲು ಆಗುವ ಶ್ರಮಕ್ಕೆ ತಕ್ಕ ಪ್ರತಿಫಲವು ಸಿಗುವುದಿಲ್ಲವೆಂದರು ಆದರೆ ಈ ಬಗ್ಗೆ ವಿವರಗಳನ್ನು ಶೇಖರಿಸಲಾಗುತ್ತಿದೆಯೆಂದೂ ಹೇಳಿದರು

ಶ್ರೀ ಎ. ಭೀಮಪ್ಪ ನಾಯಕರು ಕ್ರಿಯಾಲೋಪವನ್ನೆತ್ತಿ ಸರ್ಕಾರದವರು ತನಗೆ ಆಗುವ ಪ್ರಮಾದ ನಿವಾರಿಸಲು ಉತ್ತರವನ್ನು ನಿರಾಕರಿಸುವುದು ಸರಿಯಲ್ಲವೆಂದರು

ಮುಖ್ಯ ಮಂತ್ರಿಗಳು ಮಧ್ಯೆ ಪ್ರವೇಶಿಸಿ, ಶಾಸನ ಸಭೆಯಲ್ಲಿ ಹಿಂದೆ ಕೊಡಲಾಗಿರುವ ರೂಲಿಂಗುಗಳನ್ನು ಅನುಸರಿಸಿಯೇ ಉತ್ತರವೀಯಲಾಗುತ್ತಿರುವುದೆಂದು ಹೇಳಿದರು

ಸಭಾಧ್ಯಕ್ಷರು ಕ್ರಿಯಾಲೋಪ ಸೂಚನೆಯನ್ನು ತಳ್ಳಿಹಾಕಿದರು

ಶ್ರೀ ಎ ಎಂ ಇಮಾಂರವರು ಎಷ್ಟು ಒಟ್ಟು ಮಂತ್ರಿಗಳು ಉತ್ತರವೀಯುವಾಗ ಮತ್ತೊಬ್ಬರು ಅದಕ್ಕೆ ಉತ್ತರ ಕೊಡಲು

ಮಹಾರಾಜಾ ಕಾಲೇಜಿಗೆ ಪ್ರಭುಗಳಿಂದ ೫೦,೦೦೦ರೂ.

ಮೈಸೂರು ೨೫

ಇತ್ತೀಚೆಗೆ ನಡೆದ ಮಹಾರಾಜಾ ಕಾಲೇಜಿನ ರಜತಮಹೋತ್ಸವದ ನೆನಪಿಗಾಗಿ ಒಂದು ಸಭಾಂಗಣವನ್ನು ನಿರ್ಮಿಸಲು ಶ್ರೀಮನ್ಮಹಾರಾಜರು ೫೦ ಸಾವಿರ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ ವಿಶ್ವವಿದ್ಯಾಲಯದಲ್ಲಿ ಇಂಡಾಲಜಿ ಇಲಾಖೆಯನ್ನು ತೆಗೆಯಲು ಪ್ರಭುಗಳು ಮಾಹೆಯಾನ ೧೦೦೦ ರೂ ಗಳನ್ನು ಕೊಡುವರು

ತಿರುವಾಂಕೂರು-ಕೊಚ್ಚಿ ಸರ್ಕಾರದಲ್ಲಿ ಅವಿಶ್ವಾಸ

ತಿರುವಾಂಕೂರು ಕೊಚ್ಚಿ ಮಂತ್ರಿಮಂಡಲದಲ್ಲಿ ಅಲ್ಲಿನ ಶಾಸನ ಸಭೆಯ ಕಮ್ಯೂನಿಸ್ಟ್ ಪಕ್ಷವು ಅವಿಶ್ವಾಸ ಸೂಚಿಸಿ ನಿರ್ಣಯವನ್ನು ಕಳುಹಿಸಿರುವುದೆಂದು ವರದಿಯಾಗಿದೆ ಆದರೆ ಮಂತ್ರಿಮಂಡಲವು ಉರುಳುವುದಿಲ್ಲವೆಂದು ಕಾಂಗ್ರೆಸ್ ಪಕ್ಷದವರು ಧೈರ್ಯದಿಂದಿರುವರು

ನೆಹರೂರವರಿಗೆ ಕಾಡೆಮ್ಮೆ ಬಹುಮಾನ

ಅಸ್ಸಾಮಿನ ಗುಡ್ಡಗಾಡಿನವರು ನೆಹರೂರವರಿಗೆ ಎರಡು ಕಾಡೆಮ್ಮೆಗಳನ್ನು ಬಹುಮಾನ ಕೊಟ್ಟಿರುತ್ತಾರೆ ನೆಹರೂರವರು ಅವರುಗಳಿಗೆ ಒಕ್ಕ ... ಸಾಬೂನು ಮತ್ತು ಬಟ್ಟೆಗಳನ್ನು ಬದಲಿ ಕೊಟ್ಟರು

ಕೊರಿಯಾ ಶಾಂತಿಗಾಗಿ ಭಾರತದ ಮಧ್ಯಸ್ತಿಕೆ

ಕೊರಿಯಾದಲ್ಲಿ ಶಾಂತಿಯುಂಟಾಗುವಂತೆ ಭಾರತವು ಮಧ್ಯಸ್ತಿಕೆ ವಹಿಸಬೇಕೆಂದು ಬ್ರಿಟನ್ ಮತ್ತು ಅಮೆರಿಕಗಳು ಪ್ರಾರ್ಥಿಸಿರುವುದಾಗಿಯೂ, ಪೀಕಿಂಗಿನಲ್ಲಿರುವ ಭಾರತದ ರಾಯಭಾರಿ ಎನ್ ರಾಘವನ್‌ರವರು ಈ ಸಂಧಾನದಲ್ಲಿ ಪಾತ್ರವಹಿಸುವರೆಂದೂ ವರದಿಯಾಗಿದೆ ಕೊರಿಯಾ ಸಂಬಂಧದ ಚರ್ಚೆಯಲ್ಲಿ ದಕ್ಷಿಣದವರೂ ಭಾಗವಹಿಸಲು ಅವಕಾಶವನ್ನು ವಿಶ್ವಸಂಸ್ಥೆಯು ಕೊಟ್ಟು, ಉತ್ತರದವರಿಗೆ ಕೊಡಲು ನಿರಾಕರಿಸಿದೆ

ಬರುವುದು ನ್ಯಾಯವೇ ಎಂದು ಪ್ರಶ್ನಿಸಲಾಗಿ ಮುಖ್ಯ ಮಂತ್ರಿಗಳು ಮಂತ್ರಿಗಳು ಜವಾಬ್ದಾರಿಯಿಂದ ಕೇಳ ಮಾಡಬೇಕಾಗಿರುವುದರಿಂದ ಅದು ಸಾಧ್ಯವೆಂದು ಹೇಳಿದರು ಮುಕ್ತ ಅದಕ್ಕೆ ರೂಲಿಂಗ್ ಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟರು

ಶ್ರೀ ಕೆ ಪುಟ್ಟಸ್ವಾಮಿಯವರು ಮಾತನಾಡಿ, ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಲು ಸರ್ಕಾರದವರು ಈ ರೀತಿ ವರ್ತಿಸುತ್ತಿರುವರೆಂದು ಹೇಳಿದಾಗ, ಮುಖ್ಯಮಂತ್ರಿಯವರು ಬೇಕಾದರೆ ಉತ್ತರವನ್ನು ಕೊಡಿಸಲು ಸಿದ್ಧನಿರುವುದಾಗಿಯೂ, ಮಂತ್ರಿಮಂಡಲವು ಒಂದಾಗಿ ಜವಾಬ್ದಾರಿಯುಳ್ಳದ್ದೆಂದೂ ಹೇಳಿದರು.

ಡಾ|| ಎಂ. ವಿಶ್ವೇಶ್ವರಯ್ಯನವರು ಶಾಸನ ಸಭಾ ಸದಸ್ಯರುಗಳನ್ನುದ್ದೇಶಿಸಿ ಮಾತನಾಡುವರೆಂದು ಸಭಾ ಕಾರ್ಯದರ್ಶಿಯವರು ಸೂಚನಾ ಪತ್ರವನ್ನು ಹೊರಡಿಸಿರುವುದಕ್ಕೆ ಆಕ್ಷೇಪಿಸಿ, ಸಭೆಗಳಿಗೆ ಸೂಚನೆ ಕೊಡಲು ಶ್ರೀಮನ್ಮಹಾರಾಜರೊಬ್ಬರಿಗೇ ಅಧಿಕಾರವಿದೆಯೆಂದು ಶ್ರೀ ಹೆಚ್ ಕೆ ವೀರಣ್ಣಗೌಡರು ಹೇಳಿದರು

ಜ॥ ಕಾರಿಯಪ್ಪ ಪಂಜಾಬ್ ಗೌರ್ನರ್

ಜನವರಿ ತಿಂಗಳಲ್ಲಿ ನಿವೃತ್ತರಾಗಲಿರುವ ಭಾರತದ ಶ್ರೇಷ್ಠ ಸೇನಾನಿ ಕಾರಿಯಪ್ಪನವರನ್ನು ಪೂರ್ವ ಪಂಜಾಬಿನ ಗೌರ್ನರ್ ಆಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಎದೆ ಬಳಿ ಅಂಟಿಕೊಂಡ ಜಂಟಿ ಹೆಣ್ಣು ಮಕ್ಕಳು

ಫಿಲಿಪ್ಪೈನ್ ದ್ವೀಪದ ಒಂದು ಊರಿನಲ್ಲಿ ೧೬ ವರ್ಷದ ಹೆಂಗಸೊಬ್ಬಳಿಗೆ,ಎದೆಯಿಂದ ಹೊಟ್ಟೆಯ ವರೆಗೆ ಅಂಟಿಕೊಂಡಿರುವ ಅವಳಿ ಹೆಣ್ಣು ಮಕ್ಕಳು ಹುಟ್ಟಿರುವುವೆಂದು ಹೇಳಲಾಗಿದೆ ಅವೆರಡಕ್ಕೂ ಒಂದೇ ಒಂದು ಹೊಕ್ಕಳು ಇರುತ್ತದೆ

ಕ್ಷಾಮ ನಿವಾರಣಾ ನಿಧಿಗೆ ೨ ಲಕ್ಷ ರೂ

ಕೋಲಾರದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಅಲ್ಲಿನ ಜಿಲ್ಲಾ ಬೋರ್ಡಿನ ನಿಧಿಯಿಂದ ೨ ಲಕ್ಷ ರೂಗಳನ್ನು ಮಂಜೂರು ಮಾಡಲಾಗಿದೆ

ಸಾರ್ವಜನಿಕ ವಿಚಾರ ಗೋಷ್ಠಿ

ರಾಜಧಾನಿಯ ಇಂಡಿಯಾ-ಚೀನಾ ಸ್ನೇಹ ಸಂಘ ಮತ್ತು ಸಾರ್ವಜನಿಕ ವಿಚಾರ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಕ್ಕೆ ಸಾರ್ವಜನಿಕ ವಿಚಾರ ಗೋಷ್ಠಿಗಳು ಜಗನ್ಮೋಹನ ಬಂಗ್ಲೆ ಬಳಿ ಇರುವ ವಾಡರಿ ಶಾಲೆಯಲ್ಲಿ ಏರ್ಪಾಡಾಗಿವೆ ಮಹಾರಾಜ ಕಾಲೇಜಿನ ಪ್ರೊ॥ ಎ ಪಿ ಶ್ರೀನಿವಾಸಮೂರ್ತಿಯವರ 'ಚೀನದ ... ರ್ಥಿಕ ವ್ಯವಸ್ಥೆ ಎಂಬ ವಿಷಯವಾಗಿಯೂ, ಪ್ರೊ॥ ಎಲ್ ಶ್ರೀಕಂಠಯ್ಯನವರು ಚೀಣಾದ ರಾಜಕೀಯ ವ್ಯವಸ್ಥೆಯ ಬಗ್ಗೆಯೂ ಶ್ರೀ ಜಿ ಹೆಚ್ ರಾಮರಾಯರು ಚೀಣಾ ಮತ್ತು ಕೊರಿಯಾ ಎಂಬ ವಿಚಾರವಾಗಿಯೂ ಭಾಷಣ ಮಾಡಲಿದ್ದಾರೆ ಶ್ರೀ ತಗಡೂರು ರಾಮಚಂದ್ರ ರಾಯರು ಅಧ್ಯಕ್ಷತೆ ವಹಿಸುವರು

ಭಾರತದ ಪೊಲೀಸ್ ಸರ್ವಿಸ್ಸಿಗೆ ಇಬ್ಬರು ಮೈಸೂರಿನವರು

ಶ್ರೀ ಎಸ್ ಸಿ ಮಲ್ಲಪ್ಪ ಮತ್ತು ಶ್ರೀ ಆರ್ ಡಿ ಅಂದಾರ್‌ಕರರವರನ್ನು ಭಾರತದ ಪೊಲೀಸ್ ಸರ್ವಿಸ್ಸಿಗೆ ಪ್ರೊಬೇಷನ್ ಮೇಲೆ ತೆಗೆದುಕೊಳ್ಳಲಾಗಿದೆ

ಸಹಕಾರ ಸಂಘಗಳ ರಿಜಿಸ್ಟ್ರಾರ್

ನಿವೃತ್ತಿ ಎಗದ ಅಧಿಕಾರಿಗಳಾಗಿರುವ ಶ್ರೀ ಬಿ ರಾಚಪ್ಪನವರನ್ನು ಸಹಕಾರ ಸಂಘಗಳ ರಿಜಿಸ್ಟ್ರಾರ್, ಶ್ರೀ ಕೆ ಆರ್ ಮರುದೇವೇಗೌಡರನ್ನು ಜಂಟಿ ರಿಜಿಸ್ಟ್ರಾರ್ ಆಗಿ ನೇಮಿಸಲಾಗಿದೆ

ನಿಜಾಮರ ಮಗ ಮತ್ತು ಸೊಸೆಯ ವಿಚ್ಛೇದನ

ನಿಜಾಮರ ದ್ವಿತೀಯ ಪುತ್ರರಾದ ಮುಜಾಮ್ ಝಾ ಬಹದ್ದೂರ್‌ರವರು ತಮ್ಮ ಪತ್ನಿ ರಾಜಕುಮಾರಿ ನಿಲೋಫರ್‌ರವರೊಡನೆ ವಿಚ್ಛೇದನ ಮಾಡಿಕೊಂಡಿರುತ್ತಾರೆ ಆಕೆಯು ತುರ್ಕಿಯ ಮಾಜಿ ಖಲೀಫರ ಸಂಬಂಧಿಕರು ದಂಪತಿಗಳಿಗೆ ೧೯ ವರ್ಷಗಳಿಂದ ಭಿನ್ನಾಭಿಪ್ರಾಯವು ಹುಟ್ಟಿ ಆಗಿನಿಂದಲೂ ಆಕೆಯು ಯೂರೋಪಿನಲ್ಲಿಯೇ ಇರುವರು ಮುಜಾಮ್‌ರವರು ಬೊಂಬಾಯಿ ನಗರದಲ್ಲಿ ವಾಸಿಸುತ್ತಿರುವರು ಅವರಿಗೆ ಮಕ್ಕಳಾಗಿಲ್ಲ

ಯಜಮಾನನನ್ನು ಚಿರತೆಯಿಂದ ರಕ್ಷಿಸಿದ ನಾಯಿ

ಕಡಪಾ ಬಳಿ ಒಂದು ಹಳ್ಳಿಯಲ್ಲಿ ಬುಧವಾರ ಒಬ್ಬ ರೈತನು ತನ್ನ ಹೊಲದಲ್ಲಿ ಹೋಗುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಒಂದು ಚಿರತೆಯು ಅವನ ಮೇಲೆ ಹಾರಿತೆಂದೂ, ಅದನ್ನು ನೋಡಿದ ಅವನ ನಾಯಿಯು ಕೂಡಲೇ ಚಿರತೆಯ ಮೇಲೆ ಬಿದ್ದು ಅದನ್ನು ದರದರನೆ ಸ್ವಲ್ಪ ದೂರದ ವರೆಗೆ ಕಚ್ಚಿ ಎಳೆದುಕೊಂಡು ಹೋಯಿತೆಂದೂ ... ಯಜಮಾನನು ನಂತರ ಬರ್ಜಿ... ಚಿರತೆಯನ್ನು ಇರಿದು ಕೊಂದನಂದು ವರದಿಯಾಗಿದೆ

ಸಂಸ್ಥಾನದ ಸ್ಥಾನಬದ್ಧತೆ ಸಲಹಾ ಸಮಿತಿ ಅಧ್ಯಕ್ಷರು

ಸಂಸ್ಥಾನದ ನಿವೃತ್ತ ಹೈಕೋರ್ಟ ನ್ಯಾಯಾಧೀಶರಾದ ಶ್ರೀ ಎ ಆರ್ ನಾಗೇಶ್ವರ ಅಯ್ಯರ್‌ರವರನ್ನು ಸ್ಥಾನಬದ್ಧತೆಯ ಸಲಹಾ ಸಮಿತಿಯ ಅಧ್ಯಕ್ಷರಾಗಿ ಸರ್ಕಾರದವರು ನೇಮಿಸಿರುವರು

ಗೋವಧಾ ನಿರೋಧ ಚಳುವಳಿಯ ಆರಂಭೋತ್ಸವ

ರಾಜಧಾನಿಯ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ನಾಳೆ ಸ... ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಗೋವಧಾ ನಿರೋಧ ಚಳುವಳಿಯ ಆರಂಭೋತ್ಸವವನ್ನು ನೆರವೇರಿಸುತ್ತಾರೆ ನಾಳೆ ಬೆಳಿಗ್ಗೆ ಸೈಕಲ್ ಮೆರವಣಿಗೆಯೂ ನಡೆಯುವುದು

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಿಶ್ರ ವಾದ್ಯಗೋಷ್ಠಿ ... ೯ ೪೦ ಜಲತರಂಗ ೨ ನಿತ್ಯ ... ನ ಗೀತೆಗಳು ಸಂಜೆ ೫ ೪೦ ಮತ್ತು ೭ ೦೦ ಎಂ ಎಲ್ ಕಾಂತಿಮತಿ ಸಂಗೀತ ೭ ೦೦ ಮತ್ತು ... ಎಸ್ ಸುಬ್ಬಲಕ್ಷ್ಮಿಯ್ಯ ಸಂಗೀತ ೮ ೩೦ ಆರ್ಕೆಸ್ಟ್ರಾ ೯ ... ಚಿತ್ರ ಸಂಗೀತ ೯ ೪೦ ಕನ್ನಡದ ನಾಟಕ ೧೦ ... ದೆಹಲಿ ... ಪ್ರಸಾರ

ಪೂರ್ವರಾಷ್ಟ್ರಗಳ ಆಹಾರ ಅಧಿಕಾರಿಗಳ ಸಮ್ಮೇಳನ

ಬರುವ ವರ್ಷದ ಜುಲೈ ತಿಂಗಳಲ್ಲಿ ದೂರ ಪ್ರಾಚ್ಯ ರಾಷ್ಟ್ರಗಳ ಆಹಾರ ಇಲಾಖಾ ಅಧಿಕಾರಿಗಳ ಸಮ್ಮೇಳನವೊಂದು ಭಾರತದಲ್ಲಿ ನಡೆಯಲಿದೆಯೆಂದೂ, ವಿವಿಧ ರಾಷ್ಟ್ರಗಳ ಆಹಾರ ಮತ್ತು ವ್ಯವಸಾಯ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಚರ್ಚಿಸುವುದೆಂದು ತಿಳಿದುಬಂದಿದೆ

ಹೈದರಾಬಾದು ಹಳ್ಳಿಯಲ್ಲಿ ವಿಚಿತ್ರ ದೃಶ್ಯ

ಹೈದರಾಬಾದಿನ ವಾರಂಗಲ್ ಬಳಿ ನೇಲಕ... ಎಂಬ ಹಳ್ಳಿಯಲ್ಲಿ ಮೊನ್ನೆ ಪ್ರಬಲವಾದ ಶಬ್ದವಾದುದನ್ನು ಕೇಳಿ ಕುತೂಹಲದಿಂದ ಜನರು ಹೊರಕ್ಕೆ ಬರಲಾಗಿ,ಭಯಾನಕವಾದ ಮುಸುಕಿನ ಮುದ್ದೆಯೊಂದು ಹಳ್ಳಿ ಕಡೆ ಬರುತ್ತಾ ದಾರಿಯಲ್ಲಿ ಎರಡು ಮರಗಳನ್ನು ಉರುಳಿಸಿತೆಂದೂ, ಅನಂತರ ಅದು ಊರಿನ ಕೆರೆಗೆ ಹೋಗಿ ಎರಡು ಬಾರಿ ಮುಳುಗಿ ಎದ್ದಿತೆಂದೂ, ಮೂರನೇ ಬಾರಿಗೆ ಅದೃಶ್ಯವಾಯಿತೆಂದೂ ಹೇಳಲಾಗಿದೆ ... ನೀರಿನಿಂದ ... ನೋಡುತ್ತಾ ... ಪ್ರಬಲ ... ತೆಂದು ಹೇಳಲಾಗಿದೆ ಇದು ಅದೃಶ್ಯವಾದ ಮೇಲೆ ... ಕಾಮನಬಿಲ್ಲು ಗೋಚರಿಸಿತು ಇದು ನೋಡಲು ... ವಿಚಿತ್ರ ... ಹಳ್ಳಿಗರಿ... ಹೇಳಿರುವರೆಂದು ... ಹೇಳಲಾಗಿದೆ

ವಿವಾಹ ಮಹೋತ್ಸವ

ರಾಜಧಾನಿಯ ಶ್ರೀ ಎಸ್ ಆರ್ ರಂಗರಾಯರು ತಮ್ಮ ಪುತ್ರ ಶ್ರೀ ಶ್ರೀನಿವಾಸಮೂರ್ತಿಗೆ ನರಸೀಪುರದ ಪೋಸ್ಟ್ ಮಾಸ್ಟರ್ ಶ್ರೀ ಸುಬ್ಬರಾಯರ ಪುತ್ರಿ ಸೌ॥ ಲೀಲಾವತಿಯನ್ನು ತಂದುಕೊಂಡು ನೆನ್ನೆ ವಿವಾಹವನ್ನು ನೆರವೇರಿಸಿದರು

ಹೆಬ್ಬಳಗುಪ್ಪೆ ಮಿತ್ರಮಂಡಲಿ

ಹೆಗ್ಗಡದೇವನಕೋಟೆ ತಾಲ್ಲೂಕು ಹೆಬ್ಬಳಗುಪ್ಪ ಗ್ರಾಮದ ಮಿತ್ರಮಂಡಲಿಯ ಆರಂಭೋತ್ಸವವು ಕಳೆದ ಭಾನುವಾರ ನಡೆಯಿತು ಶ್ರೀ ಹೆಚ್ ಎಸ್ ಸುಬ್ರಹ್ಮಣ್ಯರಾಜೇ ಅರಸಿನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಹೆಚ್ ವಿ ಶ್ರೀನಿವಾಸ ಮೂರ್ತಿರವರ ಭಾಷಣವೂ ಶ್ರೀಗಳಾದ ಚಿನ್ನಾಚಾರ್ ತಬಲದ ಚಿನ್ನಾಚಾರ್ ಮತ್ತು ನಾಗಣ್ಣನವರುಗಳಿಂದ ಸಂಗೀತವೂ ನಡೆಯಿತು

SRI GAYATHRI TALKIES

Daily 2 Shows

From 26-10-52 For 2 Days

Warner's

STAR LIFT

Featuring Virginia Mayo and Ruth Roman

— NEXT CHANGE —

TO-MORROW IS ANOTHER DAY

ಡಿವೆಲರಾ ದಸ್ತಗಿರಿಗೆ ೩೩ ವರ್ಷಗಳ ಹಿಂದಿನ ವಾರೆಂಟ್ !

ಹಾಲೆಂಡಿನ ಯೂಟ್ರೆಕ್ಟಿನ ಆಸ್ಪತ್ರೆಗೆ ಕಣ್ಣು ವ್ಯಾಧಿ ಚಿಕಿತ್ಸೆಗಾಗಿ ಬಂದಿರುವ ಐರ್ಲೆಂಡಿನ ಪ್ರಧಾನಿ ಈಮನ್ ಡಿವೇಲರಾರವರ ದಸ್ತಗಿರಿಗೆ ೩೩ ವರ್ಷದ ಹಿಂದೆ ಹೊರಡಿಸಿದ ವಾರಂಟೊಂದನ್ನು ಹಾಲೆಂಡಿನ ಪೊಲೀಸು ಅಧಿಕಾರಿಯು ತೋರಿಸಲಾಗಿ ಅವರು ನಕ್ಕುಬಿಟ್ಟರೆಂದು ಹೇಳಲಾಗಿದೆ ೧೯೧೯ರಲ್ಲಿ ಬ್ರಿಟಿಷ್ ಜೈಲೊಂದರಿಂದ ಅವರು ತಪ್ಪಿಸಿಕೊಂಡದ್ದಾಗ, ಬ್ರಿ॥ ಸರ್ಕಾರದವರು ಎಲ್ಲ ಯೂರೋಪ್ಯ ರಾಷ್ಟ್ರಗಳಿಗೂ ಪತ್ರ ಬರೆದು ಅವರನ್ನು ದಸ್ತಗಿರಿ ಮಾಡಬೇಕೆಂದು ಸೂಚಿಸಲಾಗಿ, ಅಂದು ಸಿದ್ಧವಾದ ವಾರೆಂಟು ಇನ್ನೂ ವಿಲೇ ಆಗದೆ ನಿಂತಿತ್ತೆಂದು ಹೇಳಲಾಗಿದೆ

ಸ್ಟ್ರೆಪ್ಟೊಮೈಸಿನ್ ಶೋಧಕರಿಗೆ ನೊಬೆಲ್ ಬಹುಮಾನ

ಕ್ಷಯರೋಗವನ್ನು ತಡೆಯಬಲ್ಲ ಸ್ಟ್ರೆಪ್ಟೊಮೈಸಿನ್ ಔಷಧವನ್ನು ಕಂಡುಹಿಡಿದ ಅಮೆರಿಕದ ಸೆಲ್ಮನ್ ವಾಕ್ಸ್‌ಮನ್ನರಿಗೆ ನೊಬೆಲ್ ಪಾರಿತೋಷಕವು ದೊರೆತಿದೆ

ಕೋಲಾರದಲ್ಲಿ ೧೩೦ ಜನರ ಮರಣ

ಕೋಲಾರದ ಅಭಾವ ಪರಿಹಾರ ಸಮಿತಿಯೊಂದರಲ್ಲಿ ಭಾಷಣ ಮಾಡುತ್ತಾ ಶ್ರೀ ಹೆಚ್ ಸಿ ದಾಸಪ್ಪನವರು ಹಲವು ತಿಂಗಳಲ್ಲಿ ಕಾದಾಟ ಮತ್ತು ಬೇರೆ ಗಳನ್ನು ತಿಂದ ೧೩೦ ಮಂದಿ ಮಡಿದಿರುವರೆಂದು ತಿಳಿಸಿರುತ್ತಾರೆ

ನಗರದಲ್ಲಿ ೧ ೧೨ ಅಂಗುಲ ಮಳೆ

ರಾಜಧಾನಿಯಲ್ಲಿ ನೆನ್ನೆ ೧ ೧೨ ಅಂಗುಲದಷ್ಟು ಮಳೆಯಾಯಿತು

On SUNDAY The 26th October

Public Lecture on

UNIVERSAL BROTHERHOOD

Followed by Questions and Answers

(All Cordially Invited)

At 5 30 P M

THEOSOPHY STUDY GROUP

Yadavagiri Road

Near All India Radio-Akashvani

ಆರೋಗ್ಯಕ್ಕೂ ಮತ್ತು ಶಕ್ತಿಗೂ

ಯಾವಾಗಲೂ

ಶ್ರೇಷ್ಠವಾದ ಬೆಣ್ಣೆ ... ತುಪ್ಪವನ್ನು ಉಪಯೋಗಿಸಿ

ಬೆಣ್ಣೆ ಸೇರಿಗೆ 1ಕ್ಕೆ 5-0-0

ದಯವಿಟ್ಟು ಭೇಟಿ ಕೊಡಿ

ಎಂ. ಎಸ್. ನಾಗಣ್ಣ & ಸನ್ಸ್

100 ಅಡಿ ರಸ್ತೆ ಮೈಸೂರು

ಅಪೋಜಿ ಪ್ರಾರಂಭ :: 24-10-52 ರಿಂದ

ಮೈಸೂರು ಪ್ರಭಾ ಚಿತ್ರ ಮಂದಿರದಲ್ಲಿ

ಪ್ರತಿ ದಿನ 3 ಆಟಗಳು

ರಾಜ್‌ಕಪೂರ್ ಮತ್ತು ನಿಮ್ಮಿ ಅಭಿನಯಿಸಿರುವ

★ ಬಾವರಾ ★

ಸಂಗೀತ ... — ... ಲಲಿತ ... ಸುಂದರ

PARAMOUNT PICTURES RELEASE

Edited Printed and Published by V. K. Nagaraj at Sadhvi Press D Subbiah Road Mysore

WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೬೭] ಭಾನುವಾರ ೨೬-೧೦-೧೯೫೨ [ಸಂಚಿಕೆ ೧೦

ನವೆಂಬರಿಂದ ಕ್ರಮೇಣ ಧಾನ್ಯ ಹತೋಟಿ ರದ್ದು

... ಪರಿಹಾರ ಕಾರ್ಯ

ಶಾಸನ ಸಭೆಯಲ್ಲಿ ಮಂತ್ರಿಗಳ ವಿವರಣೆ

ಬೆಂಗಳೂರು ೨೬

...ರಿಯ ಶಾಸನ ಸಭೆಯಲ್ಲಿ ನೆನ್ನೆ ...ಲ್ಕು ಖಾಸಗೀ ನಿರ್ಣಯಗಳನ್ನು ...ಂಡಿಸಿ ಎಲ್ಲವನ್ನು ವಾಪಸು ಪಡೆ... ...ಯತು ಅಭಾವ ಪ್ರದೇಶಗಳು ಕ್ಷಾಮ ...ಪೀಡಿತವಾದುವೆಂದು ಘೋಷಿಸ ...ಂದು ಶ್ರೀ ಎ ಭೀಮಪ್ಪನಾಯಕ ...ಂಡಿಸಿದ ನಿರ್ಣಯಕ್ಕೆ ಉತ್ತರವಿ...ರೆವಿನ್ಯೂ ಮಂತ್ರಿ, ಶ್ರೀ ಕಡಿದಾಳ್ ...ಜಪ್ಪನವರು ಕ್ಷಾಮ ನಿವಾರಣಾ ...ನಲ್ಲಿ ನಮೂದಿಸಿರ ವುದಕ್ಕಿಂತ ...ನ ಪರಿಹಾರ ಕಾರ್ಯಗಳನ್ನು ಸರ್ಕಾರ ...ಮ ಕೈಗೊಂಡಿರುವುದಾಗಿಯೂ, ... ಪೀಡಿತ ಪ್ರದೇಶವೆಂದು ಕರೆ... ...ವು ಅನವಶ್ಯಕವೆಂದೂ ತಿಳಿಸಿ, ...ಗ ಕೇಂದ್ರ ಪರಿಹಾರ ಸಮಿತಿಯ ...ಒದಗಿಸಿದ ಸಹಾಯದ ಬಗ್ಗೆ ವಿವ... ...ತ್ತರು ಕೋಲಾರ, ತುಮಕೂ... ಚಿತ್ರದುರ್ಗ ಜಿಲ್ಲೆಗಳಿಗೆ ತಲಾ ... ೨೦೦ ರೂ, ಶಿವಮೊಗ್ಗೆಗೆ ...೦೦ ರೂ ಹಾಸನ, ಮಂಡ್ಯ, ...ಚಿಕ್ಕಮಗಳೂರು ಜಿಲ್ಲೆಗಳಿಗೆ ತ... ಸಾವಿರ, ಮೈಸೂರಿಗೆ ೭೦ ಸಾ... ... ಬೆಂಗಳೂರಿಗೆ ೨೦ ಸಾವಿರ ...ಂಜೂರು ಮಾಡಲಾಯಿತೆಂದು ... ಹೇಳಿದರು

...ಶ್ವೇಶ್ವರಯ್ಯನವರ ಅಭಿಲಾಷೆ

...ಕಗಳಲ್ಲಿ ತಯಾರಾಗುವ ಪದಾ... ...ಪ್ಟೆ ಉತ್ತಮವಾದ ಯಾವುದಾ... ...ನವು ತಮ್ಮ ಜೀವಮಾನದೊ... ...ಮೈಸೂರಿನಲ್ಲಿ ತಯಾರಾಗಬೇಕೆಂ... ... ತಮ್ಮ ಅಭಿಲಾಷೆಯೆಂದು ಡಾ|| ...ವಿಶ್ವೇಶ್ವರಯ್ಯನವರ ನೆನ್ನೆ ಶಾಸ... ...ಸದಸ್ಯರುಗಳನ್ನು ಕುರಿತು ಭಾ...ಣ ಮಾಡುವಾಗ ಹೇಳಿದರು

ಹುಡತಿಯನ್ನು ಕೈ ಕತ್ತರಿಸಿದ ಪ್ರಸಂಗ

...ಪುರದಲ್ಲಿ ಗೋವಿಂದರಾಜ್ ... ವನು ತನ್ನ ೨೫ ವರ್ಷದ ಹೆಂಡ...ಲಾ ಎಂಬಾಕೆಯನ್ನು ಕಳೆದ ... ತಾ|| ದೂರಕ್ಕೆ ಕರೆದುಕೊಂ... ...ಡ ಹೋಗಿ ಚಾಕುವಿನಿಂದ ಆಕೆಯ ...ನ್ನು ಕತ್ತರಿಸಿ ಓಡಿಹೋದನೆಂ... ...ಕಯನ್ನು ಆಲ್ಲಿನ ಆಸ್ಪತ್ರೆಗೆ ಸೇ...ಸ ಗಿರುವುದಾಗಿ ಗೊತ್ತಾಗಿದೆ

...ಸ್ವಾಮಿ ದೀಕ್ಷಿತರ ಆರಾಧನೆ

...ಜಧಾನಿಯ ಬಿಡಾರಂ ಕೃಷ್ಣಪ್ಪ ... ಪ್ರಸನ್ನ ರಾಮಮಂದಿರದಲ್ಲಿ ಆಳೆ... ...ಕಾರ ಮುತ್ತುಸ್ವಾಮಿ ದೀಕ್ಷಿತ ...ಧನೆಯನ್ನು ಅಯ್ಯನಾರ್ ಕ... ...ವರು ನೆರವೇರಿಸಿದರು ... ವಿ|| ಕೆ ವಾಸುದೇವಾಚಾರ್ಯ... ...ರ ಜೀವನ ಪರಿಚಯವನ್ನು ...ಟ್ಟು ಅವರಿಂದ ರಚಿತವಾದ ...ನ್ನು ವಿವರಿಸಿದರು ಶ್ರೀ||ಆರ್ ...ವೆಂಕಟಸ್ವಾಮಿಯವರ ವೀಣಾವಾ... ... ಶ್ರೀ|| ಚಿಟ್ಟಿ ಕೃಷ್ಣಯ್ಯಂಗಾ... ...ತ್ತು ಬಿ ಕೆ ಪದ್ಮನಾಭರಾಯ ... ತಪ್ಪೂ, ಶ್ರೀ|| ಟಿ ಎಸ್ ತಾತಾ... ...ಪಿಟೀಲು ಮತ್ತು ಕೆ ಎಸ್ ...ಪ ಆರಾಯರ ಮೃದಂಗದೊಡನೆ ...ದವು

ಆಹಾರದ ಹತೋಟಿ ಪೂರ್ಣವಾಗಿ ತಪ್ಪಬೇಕು

ರೇಷನ್ ಕಾರ್ಡುದಾರರ ಸಂಘದವರ ನಿರ್ಣಯ

ಮೈಸೂರು ೨೬

ನಗರದ ರೇಷನ್ ಕಾರ್ಡುದಾರರ ಸಂಘದ ಆಶ್ರಯದಲ್ಲಿ ನೆನ್ನೆ ಬಹಿರಂಗ ಸಭೆಯೊಂದು ಟೌನ್‌ಹಾಲ್ ಮೈದಾನದಲ್ಲಿ ನಡೆಯಿತು ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಂ ಎಸ್ ಗುರುಪಾದ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

ಡಾ|| ಬಿ ಜಿ ಪಾರ್ಥರವರು ಭಾಷಣ ಮಾಡಿ, ಭತ್ತ, ರಾಗಿ, ಜೋಳ ಮುಂತಾದುವುಗಳ ಕೊಳ್ಳುವ ಬೆಲೆಯನ್ನು ಹೆಚ್ಚಿಸಬೇಕೆಂದು ರಾಜ್ಯಸಭಾ ಸದಸ್ಯರು ಕೇಳಿರುವುದನ್ನು ಟೀಕಿಸಿ ಸರ್ಕಾರದವರು ಬೆಲೆಗಳನ್ನು ಹೆಚ್ಚಿಸಕೂಡದೆಂದು ತಿಳಿಸಿದರು ಶಾಸನಸಭೆಯಲ್ಲಿರುವವರು ಜಮೀನುದಾರರು ಮತ್ತು ಅವರುಗಳ ಪ್ರತಿನಿಧಿಗಳಾಗಿರುವುದರಿಂದ ಅವರಿಗೆ ಬಡವರ ಕಡೆ ಗಮನವಿರುವುದಿಲ್ಲವೆಂದು ಹೇಳಿದರು

ಶ್ರೀ ಕೋದಂಡರಾಮ ಪಿಳ್ಳೆಯವರು ಮಾತನಾಡಿ, ಆಹಾರದ ಪೂರ್ಣ ಹತೋಟಿಯು ಹೋಗಿ, ಬೆಳೆಯುವ ರೈತ, ವರ್ತಕ ಮತ್ತು ಕೊಳ್ಳುವವರಿಗೇ ವ್ಯಾಪಾರವನ್ನು ಬಿಡಬೇಕೆಂದೂ, ಇಲಾಖೆಯವರ ಕಿರುಕುಳಗಳು ತಪ್ಪಬೇಕೆಂದೂ ತಿಳಿಸಿ, ಶಾಸನಸಭೆಗಳಿಗೆ ಇನ್ನು ಮುಂದಾದರೂ ಸದಸ್ಯರನ್ನು ಚುನಾಯಿಸುವಾಗ ಉಮೇದುವಾರರುಗಳಿಂದ ಜನರ ಹಿತಸಾಧನೆ ಬಗ್ಗೆ ಪ್ರತಿಜ್ಞೆ ತೆಗೆದುಕೊಳ್ಳಬೇಕೆಂದು ಹೇಳಿದರು

ಅಧ್ಯಕ್ಷರು ಭಾಷಣ ಮಾಡಿ, ಭಾರತದಲ್ಲಿ ಶೇ|| ಪತ್ತರಷ್ಟು ಆಹಾರ ಕೊರತೆಯನ್ನು ಎನ್ನು ತುಂಬದಿಸದಿರಲು ಸರ್ಕಾರದವರು ಅಸಮರ್ಥರಾಗಿರುವರೆಂದೂ ಅಧಿಕ ಆಹಾರ ಬೆಳೆಯನ್ನು ತೆಗೆಯಲು ೧೫ ಕೋಟಿ ರೂ ಗಳನ್ನು ವ್ಯಯಮಾಡಿ ಶೇ ೧ ರಷ್ಟು ಬೆಳೆಯನ್ನು ಮಾತ್ರ ಹೆಚ್ಚಾಗಿ ತೆಗೆಯಲಾಗಿದೆಯೆಂದೂ ಹೇಳಿದರು

ಆಹಾರದ ಮೇಲಿನ ಹತೋಟಿಯನ್ನು ಪೂರ್ಣವಾಗಿ ತೆಗೆಯಬೇಕೆಂದು ನಿರ್ಣಯ ಮಾಡಲಾಯಿತು

ಜನತಾ ಶಿಕ್ಷಣದ ಬಗ್ಗೆ ಭಾಷಣ

ನಗರದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಕ್ಯಾತಮ್ಮನಹಳ್ಳಿಯಲ್ಲಿ ಜನತಾ ಶಿಕ್ಷಣದ ಅಂಗವಾಗಿ ಗ್ರಾಮ ಕಲೆಗಳ ವಿಷಯದ ಬಗ್ಗೆ ಮೈಸೂರು ಪ್ರಾಂತ್ಯದ ಪ್ರಾಂತ್ಯಾಧಿಕಾರಿಗಳಾದ ಶ್ರೀ|| ಬಿ ಎ. ಸತ್ಯನಾರಾಯಣರವರು ನಾಳೆ ಸಾಯಂಕಾಲ ೭ ಘಂಟೆಗೆ ಭಾಷಣ ಮಾಡುತ್ತಾರೆ.

ನವೆಂಬರಿನಿಂದ ಕ್ರಮವಾಗಿ ಆಹಾರದ ಹತೋಟಿ ರದ್ದು

ನವೆಂಬರ್ ೧ನೇ ತಾ|| ನಿಂದ ಪ್ರಾಂತಗಳ ಆಹಾರದ ವಲಯ ಗಳನ್ನೂ, ಅಕ್ಕಿ ಮತ್ತು ಗೋಧಿ ಇವುಗಳನ್ನು ಬಿಟ್ಟು ಮಿಕ್ಕ ಆಹಾರ ಧಾನ್ಯಗಳ ಸಾಗಾಣಿಕೆಯ ಮೇಲಿನ ಹತೋಟಿಯನ್ನು ರದ್ದುಪಡಿಸಲಾಗುವುದೆಂದು ಕೇಂದ್ರ ಆಹಾರ ಮಂತ್ರಿ ಕಿದ್ವಾಯರು ತಿಳಿಸಿರುತ್ತಾರೆ ಗೋಧಿಯ ಸಾಗಾಣಿಕೆ ಹತೋಟಿಯನ್ನು ಇದೇ ರೀತಿ ಬರುವ ಮಾರ್ಚಿಯಲ್ಲಿ ತೆಗೆಯುವ ಆಲೋಚನೆಯಿರುವುದೆಂದೂ ಅವರ ಹೇಳಿರುವರು ಮಾರ್ಚಿ ಹೊತ್ತಿಗೆ ಗೋಧಿಯನ್ನು ಕಂಟ್ರೋಲ್ ಬೆಲೆಗಿಂತಲೂ ಕಡಿಮೆಯಾಗಿ ಮಾರಲಾಗುವುದೆಂದು ಅವರು ತಿಳಿಸಿರುವರು ಅಕ್ಕಿಯ ಮೇಲಿನ ಹತೋಟಿಯ ಮುಂದುವರಿಯುವುದೆಂದು ಅವರು ಸ್ಪಷ್ಟಪಡಿಸಿರುವರು.

ನಗರದ ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯರ ಪಟ್ಟಿ

ಮೈಸೂರು ನಗರದಲ್ಲಿ ಕಾಂಗ್ರೆಸ್ಸಿನ ಸದಸ್ಯರಾಗಿರುವವರ ಪಟ್ಟಿಯನ್ನು ನಗರ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ಈ ದಿನ ಪ್ರಕಟಿಸಲಾಗಿದೆಯೆಂದೂ, ಯಾವ ಕಾಂಗ್ರೆಸ್ಸಿನವರಾದರೂ ಅದನ್ನು ಪರಿಶೀಲಿಸಬಹುದೆಂದೂ ಕಾರ್ಯದರ್ಶಿಯವರಾದ ಶ್ರೀ ಕೆ ಎಸ್ ಸೂರ್ಯನಾರಾಯಣ ರಾಯರು ತಿಳಿಸಿರುತ್ತಾರೆ ಕಾಂಗ್ರೆಸ್ ಅಧಿವೇಶನಕ್ಕೆ ನಗರದಿಂದ ಹೋಗುವ ಇಬ್ಬರು ಪ್ರತಿನಿಧಿಗಳ ಚುನಾವಣೆ ಸಂಬಂಧವಾಗಿ ಮಂಡಿ, ಲಷ್ಕರ್ ಮತ್ತು ನಜರ್‌ಬಾದ್ ಮೊಹಲ್ಲೆಗಳಿರುವ ೧ನೇ ವಾರ್ಡಿಗೆ ನವೆಂಬರ್ ೭ ನೇ ತಾರೀಖು ಮತ್ತು ದೇವರಾಜ, ಚಾಮರಾಜ, ಕೃಷ್ಣರಾಜ ಮತ್ತು ಕಿಲ್ಲೆ ಮೊಹಲ್ಲಾಗಳ ೨ನೇ ವಾರ್ಡಿಗೆ ೨ ನೇ ತಾರೀಖು ನಾಮಪತ್ರಗಳ ಸ್ವೀಕಾರಕ್ಕೆ ದಿನಗಳೆಂದು ಗೊತ್ತುಪಡಿಸಿರುವುದಾಗಿಯೂ ಕಾರ್ಯದರ್ಶಿಯವರು ತಿಳಿಸಿರುವರು.

○ ಕೊರಿಯದ ಯುದ್ಧದಲ್ಲಿ ಇದುವರೆಗೆ ವಿಶ್ವಸಂಸ್ಥೆಯ ಕಡೆ ೬,೭೦,೦೦೦ ಸೈನಿಕರು ಮಡಿದಿರುವರೆಂದೂ,೬೩೦ ವಿಮಾನಗಳು ನಷ್ಟವಾಗಿರುವುವೆಂದೂ, ಚೀನಾ ಕಮ್ಯೂನಿಸ್ಟರು ತಿಳಿಸಿರುತ್ತಾರೆ

ಸಂಸ್ಥಾನಕ್ಕೆಲ್ಲಾ ಗ್ರಾಮ ಕೈಗಾರಿಕಾ ಯೋಜನೆ

ಶಾಸನ ಸಭಾ ಸದಸ್ಯರಿಗೆ ವಿಶ್ವೇಶ್ವರಯ್ಯನವರ ಹಿತನುಡಿ

ಬೆಂಗಳೂರು ೨೬

ಎರಡು ಶಾಸನಸಭೆಗಳ ಸದಸ್ಯರನ್ನುದ್ದೇಶಿಸಿ, ಮಾಜಿ ದಿವಾನರಾದ ಡಾ|| ಎಂ ವಿಶ್ವೇಶ್ವರಯ್ಯನವರು ನೆನ್ನೆ ಭಾಷಣ ಮಾಡಿ, ಗ್ರಾಮಾಂತರ ಕೈಗಾರಿಕಾ ಯೋಜನೆಯನ್ನು ಇಂದಲ್ಲ, ನಾಳೆಯಾದರೂ ಸಂಸ್ಥಾನಕ್ಕೆಲ್ಲಾ ಅನ್ವಯಿಸಬೇಕಾಗುವುದೆಂದು ತಿಳಿಸಿದರು. ಹಾಗೆ ಮಾಡಿದರೆ, ಸರ್ಕಾರದವರು ವೆಚ್ಚ ಮಾಡುವ ೨೦ ಲಕ್ಷ ರೂ ಗಳಿಂದ ೨೫ ಕೋಟಿ ರೂ ಗಳಷ್ಟು ಉತ್ಪತ್ತಿಯಾಗುವುದೆಂದು ಅವರು ಹೇಳಿ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸರ್ಕಾರದವರು ವೆಚ್ಚಮಾಡಿರುವ ೬! ಲಕ್ಷ ರೂ ಗಳಿಂದ ೭೫ ಲಕ್ಷ ರೂ ಉತ್ಪತ್ತಿಯಾಗಿರುವುದೆಂದು ತಿಳಿಸಿದರು,

ಈ ಯೋಜನೆಯನ್ನು ಜನರು ಮನಸ್ಸಿಗೆ ಸ್ವಲ್ಪ ಸ್ವಲ್ಪವಾಗಿ ಹತ್ತಿಸಿಕೊಳ್ಳುತ್ತಿರುವರೆಂದು ಹೇಳಿದರು ಜನರಲ್ಲಿ ಕರ್ತವ್ಯ ದೃಷ್ಟಿಯೂ, ಸಹಕಾರ ಪ್ರಯತ್ನದ ಅಭಿಲಾಷೆಯೂ ಬೆಳೆಯಬೇಕೆಂದು ಅವರು ಸೂಚಿಸಿದರು

ದೇಶದ ರಕ್ಷಣೆ ವಿಷಯವನ್ನು ಕುರಿತು ಮಾತನಾಡಿ ಶಾಂತಿ ಮತ್ತು ಅಹಿಂಸೆಗಳನ್ನು ಸದಾ ಪ್ರಚಾರ ಮಾಡುವುದು ಕ್ಷೇಮಕರವಲ್ಲವೆಂದೂ, ಏಟಿಗೆ ಏಟನ್ನು ಕೊಡಬಲ್ಲೆವೆಂಬ ನಿದರ್ಶನವನ್ನು ತೋರಿಸಬೇಕೆಂದೂ ತಿಳಿಸಿದರು

ಬಿರುಗಾಳಿಯಿಂದ ೫೩೪ ಮರಣ

ಫಿಲಿಪೈನಿನ ದಕ್ಷಿಣ ಲುಜಾನ್ ದ್ವೀಪದಲ್ಲಿ ೨೨ ನೇ ತಾರೀಖು ಬೀಸಿದ ಬಿರುಗಾಳಿಯ ಪರಿಣಾಮವಾಗಿ ೫೩೪ ಜನರು ಮಡಿದಿರುವರೆಂದೂ ೭೫೪ ಮಂದಿ ಪತ್ತೆಯಿಲ್ಲವೆಂದೂ, ೩೦ ಕೋಟಿ ರೂ ಬಾಳುವಷ್ಟನ್ನು ನಷ್ಟವಾಗಿರುವುದೆಂದೂ ಹೇಳಲಾಗಿದೆ

ಭೂಗೋಳ ಶಾಸ್ತ್ರದಲ್ಲಿ ಆನರ್ಸ್ ತರಗತಿ ತೆರೆಯಬೇಕು

ರಾಜಧಾನಿಯ ಕಾಲೇಜಿನಲ್ಲಿ ಭೂಗೋಳ ಶಾಸ್ತ್ರದ ಆನರ್ಸ್ ತರಗತಿಯನ್ನು ಏರ್ಪಡಿಸದಿರುವುದು ಒಂದು ದೊಡ್ಡ ಕೊರತೆಯಾಗಿದೆ ಭೂಗೋಳ ಶಾಸ್ತ್ರವನ್ನು ಓದಲು ೧೫೦ ಮಂದಿ ವಿದ್ಯಾರ್ಥಿಗಳು ಸಿದ್ಧರಾಗಿದ್ದರು ಈ ಪೈಕಿ ೪೦ ಮಂದಿಗೆ ಅವಕಾಶವಿತ್ತು, ಮಿಕ್ಕವರಿಗೆ ಒದಗಿಸಿಲ್ಲ ಈ ವಿಷಯವನ್ನು ಪ್ರಥಮ ವರ್ಷ ಕಾಲೇಜಿನಲ್ಲ ವ್ಯಾಸಂಗ ಮಾಡಿ ಉತ್ತೀರ್ಣರಾದವರು ಮುಂದೆ ಆನರ್ಸ್ ತರಗತಿಗೆ ಸೇರಬೇಕಾದರೆ ಆಂಧ್ರಕ್ಕಾಗಲೀ, ಅಲಿಘಡಕ್ಕಾಗಲೀ ಹೋಗಬೇಕಾಗುವುದು ಬಡ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುವುದು ಪ್ರಾಮುಖ್ಯತೆ ಇಲ್ಲದ ತರಗತಿಗಳನ್ನು ತೆರೆದು, ಮುಖ್ಯವಾದ ಈ ತರಗತಿಯನ್ನು ಏರ್ಪಡಿಸದಿರುವುದು ಸರಿಯಲ್ಲ ಮುಂದಿನ ವರ್ಷದಿಂದಲಾದರೂ ಈ ತರಗತಿಯನ್ನು ತೆರೆಯಬೇಕಾದುದು ಅಗತ್ಯ ಎಂದು ಹಲವು ವಿದ್ಯಾರ್ಥಿಗಳು ತಿಳಿಸಿರುತ್ತಾರೆ

ವಾರ ಭವಿಷ್ಯ

೨೬-೧೦ ೫೨ ರಿಂದ ೨-೧೧ ೫೨ರ ವರೆಗೆ

ಮೇಷ— ಆರೋಗ್ಯ ನೆಟ್ಟಗೆ ನಿಶ್ಚಲವನಸ್ಸು ಪರೀಕ್ಷೆಯಲ್ಲಿ ಯಶ ಕೋರ್ಟಿನಲ್ಲಿ ಜಯ ತಾ|| ೩೦,೩೧ ಪರೋಪಕಾರ, ಅತಿಥಿ ಸತ್ಕಾರ.

ವೃಷಭ— ತೊಂದರೆ ಸಹಿಸಬೇಕಾಗಿದೆ ಆರೋಗ್ಯ ನೆಟ್ಟಗಿರದು ಉತ್ಸಾಹಕ್ಕೆ ಧಕ್ಕೆ ನೌಕರಿಯಲ್ಲಿ ಅಪಮಾನ ವಿಶ್ವಾಸಘಾತ ಪ್ರವಾಸ ಬೇಡ ತಾ|| ೨೬, ೨೯ ಆರ್ಥಿಕ ಚಿಂತಾನಾಶ ಉತ್ತಮ

ಮಿಥುನ— ಮಾನಸಿಕ ತೊಂದರೆ ಹೆಚ್ಚು ಆರೋಗ್ಯ ನೆಟ್ಟಗೆ ಮಕ್ಕಳ ಆರೋಗ್ಯಕ್ಕೆ ಕ್ಲೇಶ ಕುಟುಂಬದಲ್ಲಿ ಬೇಸರ ನಿಮ್ಮ ಬಗ್ಗೆ ತಪ್ಪು ತಿಳುವಳಿಕೆ ಉದ್ಯೋಗ ವ್ಯಾಪಾರ ಸ್ಥಿತಿ ಚಮತ್ಕಾರಿಕ ಅಪ್ತರಿಂದ ಅಪಮಾನ ತಾ|| ೨೬,೨೭ ಖರ್ಚು, ಅಪಘಾತ

ಕರ್ಕ — ಯೋಜನೆಗಳ ಸಾಫಲ್ಯದ ಸೂಚನೆ ಬಂಧುಗಳಿಂದ ಸಹಾಯ ಆರೋಗ್ಯ ನೆಟ್ಟಗೆ ಧರ್ಮ ಕಾರ್ಯ ಸುಖ ಪ್ರವಾಸ ನೌಕರಿಯಲ್ಲಿ ಉನ್ನತಿ ರಾಜಕೀಯದಲ್ಲಿ ದಕ್ಷತೆ ತಾ|| ೨೮, ೨೯ ಗೊಂದಲ, ಅತಿಥಿಗಳ ಹಾವಳಿ

ಸಿಂಹ — ಮನಸ್ಸು ಸ್ಥಿಮಿತವಿಲ್ಲ ವ್ಯರ್ಥ ಕಾಲಹರಣ ನೌಕರಿಯಲ್ಲಿ ಅಪ್ರಿಯ ಕೆಲಸ ವ್ಯಾಪಾರಾದಿಗಳಲ್ಲಿ ಅಪಮಾನವಿಲ್ಲ ಉತ್ಸಾಹವಿಲ್ಲ ತಾ|| ೩೦ ೩೧ ಧನ ಲಾಭದಲ್ಲಿ ತೊಂದರೆ, ಸಂತತಿಗೆ ಕ್ಲೇಶ

ಕನ್ಯಾ — ದೇವರ ಕೃಪೆ ಬೇಕು ಪ್ರಯತ್ನಕ್ಕೆ ಫಲ ಸಿಕ್ಕದು ಅಪೇಕ್ಷಾಭಂಗ ಆರೋಗ್ಯ ನೆಟ್ಟಗಿರದು ವಾಹನ ಭಯ ವ್ಯಾಪಾರಾದಿಗಳಲ್ಲಿ ವಿರುದ್ಧ ಘಟನೆ ತಾ|| ೨೭, ೨೮, ೨೯ ಪ್ರಿಯಜನ ವಿಯೋಗ, ಹಾನಿ.

ತುಲಾ — ಹೊಸ ಕಲ್ಪನೆ ಆರೋಗ್ಯ ಉತ್ತಮ ಸರ್ಕಾರಿ ಕಾರ್ಯದಲ್ಲಿ ಜಯ ವ್ಯಾಪಾರಾದಿಗಳಲ್ಲಿ ಅನುಕೂಲ ಘಟನೆ ಧರ್ಮ ಕಾರ್ಯ ತಾ|| ೨೬, ೩೦ ಖರ್ಚು, ಪರೋಪಕಾರ

ವೃಶ್ಚಿಕ — ಅಶುಭ ವಾರವಲ್ಲ ಹಣಕಾಸಿನ ಖರ್ಚು ಹೆಚ್ಚುವುದು ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಹಾನಿಯಿಲ್ಲ ತಾ|| ೨೬, ೩೦ ಪ್ರಿಯ ಜನರ ಸಹವಾಸ ಸುಖ ಭೋಜನ

ಧನು — ಉತ್ತಮ ವಾರ ಆರೋಗ್ಯ ಮಾತ್ರ ನೆಟ್ಟಗಿರದ . ಚಿಂತೆ ಸಹಕಾರ ಸಿಗದು ವಿಶ್ವಾಸಘಾತ ಮೇಲಿನವರಿಂದ ಅಸಭ್ಯ ವರ್ತನೆ ತಾ|| ೩೦, ೩೧ ಕಲಹ ಅಪಘಾತ ಭಯ

ಮಕರ — ತೊಂದರೆಗೆ ಹೆದರದಿರಿ ಆರೋಗ್ಯ ನೆಟ್ಟಗಿರದು ಪ್ರವಾಸಕ್ಕೆ ಚೆನ್ನಾಗಿಲ್ಲ ವ್ಯಾಪಾರಾದಿಗಳ ಸ್ಥಿತಿ ಕೆಡುವುದು ಯಾವಾಗಲೂ ಚಿಂತೆ ತಾ|| ೨೮ ೨೯ ಚಿಂತೆ ನಿವಾರಣೆ ಶಾಂತಿ.

ಕುಂಭ — ಉತ್ತಮ ವಾರ ಆರೋಗ್ಯ ನೆಟ್ಟಗೆ ಶಿಸ್ತಿನ ಸಹವಾಸ ಹಣಕಾಸಿನ ಸ್ಥಿತಿ ತೃಪ್ತಿಕರ ವ್ಯಾಪಾರಾದಿಗಳಲ್ಲಿ ಸಹಕಾರ ಸುಖ ಪ್ರವಾಸ ತಾ|| ೩೦, ೩೧ ಶುಭ ಕಾರ್ಯ, ಅಲ್ಪ ಪ್ರವಾಸ

ಮೀನ — ಆರೋಗ್ಯ ನೆಟ್ಟಗೆ ಉತ್ತಮ ಹಣ ಕಾಸಿನ ಸ್ಥಿತಿ ಹಳೇ ಬಾಕಿ ವಸೂಲಿ ವ್ಯಾಪಾರಾದಿಗಳಲ್ಲಿ ಲಾಭ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸುಖಮಯ ತಾ|| ೨೮, ೨೯ ಪರೋಪಕಾರ, ಅತಿಥಿಗಳಿಗಾಗಿ ಖರ್ಚು

ಕಾವೇರಿ ನೀರಿನ ಹಂಚಿಕೆ ಬಗ್ಗೆ ಹೊಸ ಒಪ್ಪಂದ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಬೆಂಗಳೂರು ೨೬

ಕಾವೇರಿ ನೀರಿನ ಹಂಚಿಕೆ ಬಗ್ಗೆ ಈಗಿರುವ ಒಪ್ಪಂದವನ್ನು ಬದಲಾಯಿಸಿ ಬೇರೆಯದನ್ನು ಮದರಾಸು ಸರ್ಕಾರದವರೊಡನೆ ಮಾಡಿಕೊಳ್ಳುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಶಾಸನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರರೂಪವಾಗಿ ತಿಳಿಸಿದರು

ಮೈಸೂರಿನಲ್ಲಿರುವ ರೇಡಿಯೋ ಭಾರತ ಸರ್ಕಾರಕ್ಕೆ ಸೇರಿದ ನಂತರ ಇಬ್ಬರು ಗೆಜೆಟೆಡ್ ೨೬ ನಾನ್‌ಗೆಜೆಟೆಡ್, ೩೮ ಮಂದಿ ಕಾಂಟ್ರಾಕ್ಟ್ ಸಿಬ್ಬಂದಿಯವರು, ೨೬ ಮಂದಿ ಆಳುಗಳು ಭಾರತ ಸರ್ಕಾರಕ್ಕೆ ಸೇರಿದವರಾದರೆಂದೂ ೫ ಜನರನ್ನು ಕೆಲಸದಿಂದ ತೆಗೆಯಲಾಯಿತೆಂದೂ ಕೈಗಾರಿಕಾ ಮಂತ್ರಿ ಶ್ರೀ|| ಟಿ ಸಿದ್ದಲಿಂಗಯ್ಯನವರು ಶ್ರೀ ಎಸ್ ಗೋಪಾಲಗೌಡರ ಪ್ರಶ್ನೆಗೆ ಉತ್ತರವಾಗಿ ಹೇಳಿದರು ಮೈಸೂರಿನ ಪತ್ರಿಕೋದ್ಯೋಗಿಗಳಿಗೆ ಈಗ ರೇಡಿಯೋ ನಿಲಯದಲ್ಲಿ ಸಾಕಷ್ಟು ಅವಕಾಶವು ಸಿಗುತ್ತಿಲ್ಲವೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಲಾಗಿ ಅದು ಮೈಸೂರು ಸರ್ಕಾರಕ್ಕೆ ಸಂಬಂಧಿಸಿದ ವಿಷಯವಲ್ಲವೆಂದೂ, ರೇಡಿಯೋ ನಿಲಯದಲ್ಲಿ ಇನ್ನೇ ಸಂಸ್ಥೆಯ ಮೈಸೂರಿನ ಪರಿಷತ್ತಿನ ಬಗ್ಗೆ ಒಪ್ಪಂದವೇನೂ ಆಗಿಲ್ಲವೆಂದೂ ಅವರು ತಿಳಿಸಿದರು

ಟಿ ನರಸೀಪುರದ ವಿನಿವೋಗ್ಗೆ ಶ ಸರಕಾರ ಸಂಘದಲ್ಲಿ ... ದಲ್ಲಿ ಲೆಕ್ಕಗಳ ಬಗ್ಗೆ ಹಲವು ದೋಷದೋಷಗಳಿರುವುದಾಗಿ ಸರ್ಕಾರಕ್ಕೆ ತಿಳಿದುಬಂದಿರುವುದೆಂದೂ ಇಲಾಖೆಯವರ ಆಡಿಟರ್‌ರವರ ಪರಿಶೀಲನೆ ಬಗ್ಗೆ ತನಿಖೆ ನಡಸುವರೆಂದೂ, ಅದ್ದರಿಂದ ಆಡಳಿತ ನಿರೋಧ ಸಮಿತಿಗೆ ಅದನ್ನು ಒಪ್ಪಿಸಬೇಕಾದ ಪ್ರಮೇಯವಿಲ್ಲವೆಂದೂ ಮಂತ್ರಿ ಹೆಚ್ ಸಿದ್ದವೀರಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ಜಪಾನಿಗೆ ಪುನಃ ಯೋಷಿಡಾ ಪ್ರಧಾನಿ

ಜಪಾನಿನ ಉದಾರವಾದಿ ಪಕ್ಷದ ನಾಯಕರಾದ ಯೋಷಿಡಾರವರೇ ನಾಲ್ಕನೆಯ ಬಾರಿಗೆ ಅಲ್ಲಿನ ಪ್ರಧಾನಿಗಳಾಗಿ ಚುನಾಯಿತರಾಗಿರುತ್ತಾರೆ

ಗಂಡ ಹೆಂಡಿರ ಜಗಳದಲ್ಲಿ ಮಗುವಿಗೆ ಪೀಕಲಾಟ

ಬ್ರಿಟನ್ನಿನೊಡನೆ ಇರಾನಿನ ಸಂಬಂಧ ತ್ಯಾಗದ ಪರಿಣಾಮವಾಗಿ ಒಬ್ಬ ಪರ್ಷಿಯನ್ನನಿಗೂ ಅವನ ಬ್ರಿಟಿಷ್ ಪತ್ನಿಗೂ ಜನಿಸಿದ ೮ ತಿಂಗಳ ಗಂಡುಮಗುವಿನ ಬಗ್ಗೆ ನ್ಯಾಯಾಲಯದಲ್ಲಿ ಜಿಜ್ಞಾಸೆಯುಂಟಾಗಿರುತ್ತದೆ ಹೆಂಗಸು ತನ್ನ ಗಂಡನೊಡನೆ ಪರ್ಷಿಯಕ್ಕೆ ಹಿಂದಿರುಗಲು ನಿರಾಕರಿಸಿ ಮಗುವನ್ನು ತನ್ನ ವಶಕ್ಕೆ ಕೊಡತಕ್ಕದ್ದೆಂದು ತಿಳಿಸಿರುತ್ತಾಳೆ ಮಗುವು ಈಗಾಗಲೇ ಇರಾನಿಗೆ ತೆರಳಿರುವುದೆಂದು ಗಂಡನು ಕೋರ್ಟಿನಲ್ಲಿ ಹೇಳಿರುತ್ತಾನೆ ಲಂಡನ್ ನ್ಯಾಯಾಧೀಶರು ತೀರ್ಪಿತ್ತು, ಮಗುವನ್ನು ತಾಯಿ ವಶಕ್ಕೆ ಬಿಡುವುದಲ್ಲದೆ ಅದರ ಕ್ಷೇಮಚಿಂತನೆಗಾಗಿ ವಾರಕ್ಕೆ ೩೦ ಷಿಲಿಂಗ್ ಹಣ ಕೊಡುವಂತೆ ಗಂಡನಿಗೆ ಸೂಚಿಸಿರುತ್ತಾರೆ

ಅಪೊಲೋ ಜಿಮ್ನೇಷಿಯಂ

ರಾಜಧಾನಿಯ ಅಪೊಲೊ ಜಿಮ್ನೇಷಿಯಂನ ಡೈರೆಕ್ಟರ್ ಶ್ರೀ|| ವೈ ವಿ ಎನ್ ಅಯ್ಯನವರು ಚಾಮುಂಡಿಪುರಂ ನಿರಂಜನರಾಜ ಅರಸ್ ಗಾರ್ಡನ್ನಿನ ಹೊಸ ಕಟ್ಟಡದಲ್ಲಿ ತಮ್ಮ ಶಾಲೆಯ ಆರಂಭೋತ್ಸವವನ್ನು ಕಳೆದ ಗುರುವಾರ ನೆರವೇರಿಸಿದರು ಈ ಸಂಬಂಧದಲ್ಲಿ ಅವರು ಇಷ್ಟಮಿತ್ರರನ್ನು ಉಪಚರಿಸಿ ಸತ್ಕರಿಸಿದರು

ಭಾರತ ನಾಚನ ಮಾಸ್ತ

ಪಂಡರಿ ಭಜನೆ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ನಾಲ್ಕನೇ ವಾರ್ಷಿಕ ... ನರಸಿಂಹರಾಜ ಮೊಹಲ್ಲೆಯ ಪ್ರಸನ್ನ ಗಣಪತಿ ದೇವಾಲಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಕಾರ್ತೀಕ ಸೋಮವಾರದ ಪ್ರಯುಕ್ತ ಶ್ರೀಮತಿ ಎಂ ಆ ದಿರಾಬಾಯಿಯವರ ಭಾರತ ವಾಚನವೂ, ಭಾವಸಾರ ಕ್ಷತ್ರಿಯ ಭಜನೆ ಮಂಡಲಿಯವರ ಪಂಡರಿ ಭಜನೆಯೂ ನಡೆಯುವುವು

ಭಾರತದ ಅತ್ಯಂತ ಭಾರಿ ಮನುಷ್ಯನ ಮರಣ

ಭಾರತದ ಅತ್ಯಂತ ಸ್ಥೂಲ ಕಾಯವುಳ್ಳ ನಾಥೂಲಾಲ್ ಭಾರ್ಗವ ಎಂಬುವನು ನೊನ್ನೆ ಇಂದೂರು ಬಳಿ ಗೊಸಾ ಎಂಬ ಹಳ್ಳಿಯಲ್ಲಿ ಹಠಾತ್ತನೆ ಮರಣ ಹೊಂದಿರುವನೆಂದು ವರದಿಯಾಗಿದೆ ಅವನು ೨೪೫ ಪೌಂಡು ತೂಕವಿದ್ದನೆಂದು ಹೇಳಲಾಗಿದೆ

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭ ೩೦ ಅನಂತಲಕ್ಷ್ಮಿ ಪಟಗೇರ್ ಮತ್ತು ಎಂ ಎಲ್ ವಸಂತ ಕುಮಾರಿ, ಕರ್ನಾಟಕ ಸಂಗೀತ ಮಧ್ಯಾಹ್ನ ೨ ೩ ... ಸಂಗೀತ ಸಂಜೆ ೫ ೩೦ ಮತ್ತು ೬ ಸಂಗೀತ, ಟಿ ರುಕ್ಮಿಣಿ ೭ ... ರ ಶಾಸ್ತ್ರಿ ವೀಣೆ (ಕರ್ನಾಟಕ) ೮ ೩೦ ಮತ್ತು ೯ ೩೦ ಸಂಗೀತ, ಎನ್ ಕೆ ದೊರೆಸ್ವಾಮಿ

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೬೦ ೦	೬-೮ ೦
ಎಳ್ಳು	೬೫ ೦ ೦	೭೧-೯೪ ೦
ಹುಚ್ಚೆಳ್ಳು	೫೫ ೦ ೦	
ಹರಳು ಬೀಜ	೪೬-೧೦-೮	೪೭ ೦ ೦
ಹುರುಳಿ	೬೦ ೦ ೦	
ಜೋಳ	೫೦ ೦ ೦	
ಹೊಂಗೇಬೀಜ	೨೩ ೪ ೦	
ಉದ್ದು	೬೧ ೦ ೦	
ಅವರೆ	೨೯ ೧೦ ೦	
ಹಲಸಂದೆ	೫೩ ೦-೦	
ಮೆಣಸಿನಕಾಯಿ		
ಮಣ ೧ಕ್ಕೆ	೬ ೧೩ ೦	೧೬ ೦ ೦
ಹುಣಸೇಹಣ್ಣು	೬ ೪ ೦	೬ ೮
ಶೀಗೇಕಾಯಿ	೪ ೦ ೦	
ಬೆಲ್ಲ	೩-೮-೦	
ತೆಂಗಿನಕಾಯಿ ೧೧೦೦ ೧೯೦	೦ ೦	೨೩೦ ೦ ೦

Edited, Printed and Published by A R Nagarajan at Sadhvi Press, D Subbiah Road Mysore

ರಾಜಕಮಲ್, ಮೈಸೂರು
ತಾ|| ೨೬ 10 52 ರಿಂದ 2 ನೇವಾರ
ಮರದಲು ಪೆಳ್ಳಿ

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು

ಮೊಸರು ಇಲ್ಲದ ಊಟ, ಕೆಸರು ಇಲ್ಲದ ಗದ್ದೆ ಬಸುರಾಗದವಳ
ಬಾಳುವೆಯು ಬೇಸಿಗೆಯ ಬಿಸಿಲು ಕಾದಂತೆ ಸರ್ವಜ್ಞ ||
ನೂರಾರು ವರ್ಷಗಳ ಹಿಂದೆ ಸರ್ವಜ್ಞನು ಈ ರೀತಿ ಬರೆಯಲು ಕಾರಣ?
ಶೋಭನ (NUPTIALS) ವಾಗಿ ಎಷ್ಟೇ ವರ್ಷಗಳಾದಾಗ್ಯೂ ಬಹಿಷ್ಠೆ
ಸಂಬಂಧದ ಹೊಟ್ಟೆನೋವು ಸಂಪೂರ್ಣವಾಗಿ ಗುಣವಾಗುವ
ತನಕ ಖಂಡಿತ ಸಂತಾನವಾಗುವುದಿಲ್ಲವೆಂಬುದು ನೆನಪಿರಲಿ!
ಈ ಹೊಟ್ಟೆನೋವು ಇತ್ಯಾದಿಗಳು ಕೂಡಲೇ ಗುಣವಾಗಿ ಜಾಗ್ರತೆ ಸಂತಾನ
ಫಲ ಬೇಕೋ? ಹಾಗಾದರೆ ಮೈಸೂರು ಅರಮನೆಯ ರಾಜವೈದ್ಯರಾಗಿದ್ದ
ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 94 ವರ್ಷಗಳಿಂದ
ಪ್ರಖ್ಯಾತವಾಗಿ ಅನೇಕ ಡಾಕ್ಟರು ಮತ್ತು ಹೆಸರಾಂತ
ಸಾರ್ವಜನಿಕರ ಶಿಫಾರಸು ಮತ್ತು ಮೆಚ್ಚಿಗೆಯನ್ನು ಪಡೆದಿರುವ
ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ಸುಪ್ರಸಿದ್ಧ
ಸಂತಾನ ಸಿಂಧೂರ
ಸಿದ್ಧೌಷಧವನ್ನು ಸತಿಪತಿಯರಿಬ್ಬರೂ ಮಧುವಿನ ಮಿಲಾಸದೊಡನೆ
1 ಸೆಟ್ ಸೇವಿಸಿ ಫಲ ತಪ್ಪದೇ ಗೊತ್ತಾಗುತ್ತೆ ಈ ಮಹೌಷಧವು
★ ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ
★ ಅಕ್ರಮ ಸೂತಕ ಕ್ರಮತಪ್ಪಿ ಬಹಿಷ್ಠೆಯಾಗುವುದನ್ನು ಕ್ರಮಪಡಿಸಿ
★ ಗರ್ಭಪತನ ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸಿ
★ ಬಂಜೆತನವನ್ನು ಕೊನೆಗಾಣಿಸಿ ಸಂತಾನವನ್ನು ಕೊಡುತ್ತದೆ
ಕ್ರಯ 1 ಸೆಟ್ 5 ರೂ ಟಪಾಲು ಖರ್ಚು ರೂ 1 ವಿ ಪಿ ಎಲ್ಲ
ಕ್ಕೂ ಬೇಕಾಗುವ ಉಚಿತ ಪತ್ರ ವ್ಯವಹಾರ ಗುಪ್ತ
ವಿಳಾಸ — ಎ. ರಾಮಸ್ವಾಮಿ ಅಯ್ಯಂಗಾರ್ ಸನ್
628 ಸಂತಾನ ಸಿಂಧೂರ ಆಫೀಸ್ ಚಾಮರಾಜ ರೋಡ್ ದಕ್ಷಿಣ ಕ್ರಾಸ್,
ಕೃಷ್ಣಾ ರೈಸ್ ಮಿಲ್ ಹತ್ತಿರ, ಮೈಸೂರು

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೬-೧೦-೧೯೫೨ [ಸಂಚಿಕೆ ೬೫

ಸರ್ ಸಿ.ಪಿ. ನೇತೃತ್ವದಲ್ಲಿ ದ|| ಆಫ್ರಿಕಕ್ಕೆ ನಿಯೋಗ

ಗೋವಧೆ ನಿರೋಧ ಚಳುವಳಿ

ಮೈಸೂರು ೨೬

...ೂರಿನ ರಾಷ್ಟ್ರೀಯ ಸ್ವಯಂ ...ಸಂಘದ ಆಶ್ರಯದಲ್ಲಿ ನೆನ್ನೆ ...ಷ್ಟಮಿ ಸಮಾರಂಭದ ಅಂಗವಾ ...ಧಾನಿಯ ಪುರಭವನದ ಆವರ ...ಗೋವಧ ನಿರೋಧ ಚಳುವಳ ...ದ್ಘಾಟನೋತ್ಸವವು ಜರುಗಿತು ...ಾ ಸದಸ್ಯರಾದ ಡಾ|| ಬಿ ಜಿ ...ರವರು ಅಧ್ಯಕ್ಷತೆ ವಹಿಸಿದ್ದರು ...ನದ ಗೋವಧೆ ನಿರೋಧ ಪ್ರ ...ಾದ ಶ್ರೀ ಸೂರ್ಯನಾರಾಯ ...ರು ಭಾಷಣ ಮಾಡಿ ಭಾರತದ ...ವನ್ನು ಪರಮ ಪವಿತ್ರವಾದ ವ ...ಮ ಪರಿಗಣಿಸುತ್ತಿರುವಾ ...ಣದ ಸಂಪಾದನೆಯ ಆಸೆಯಿಂದ ...ಗ್ಯಾಗಿ, ದನ ಕರುಗಳನ್ನು ಕೊ ...ಪ್ರಕರಣಗಳು ಸಾಗುತ್ತಿವೆ, ಅಲ್ಲ ...ವು ಸಂಸ್ಥಾನ ಸರ್ಕಾರಗಳು ಮು ...ಳನ್ನು ಕೊಲ್ಲಬಹುದೆಂದೂ ...ಮಾಡಿರುತ್ತವೆ ಇದು ರಾಜ್ಯಾಂ ...ರೋಧವಾಗುವುದು—ಎಂದು ತಿಳಿ ...ಂತಹ ಮುದಿ ಪಶುಗಳನ್ನು ...ಗಲವ ವೆಚ್ಚಕ್ಕಿಂತಲೂ ಹ ...ೊಬ್ಬರದಿಂದ ಹೆಚ್ಚು ವರಮಾನ ...ವುದರಿಂದ ಅವನ್ನು ರಕ್ಷಿಸುವು ...ತ್ಯವೆಂದು ತಿಳಿಸಿ, ಇತರ ಧರ್ಮೀ ...ಮನ ನೋಯಿಸಬಾರದೆಂಬ ಭಾ ...ವ ಗೋವಧೆಯನ್ನು ಅನು ...ಸುವವರೂ ಇರುವರೆಂದೂ, ನ ...ವನ್ನು ತ್ಯಜಿಸಿ ಇತರರ ಕೃ ...ಇಂತಹ ನೀಚ ಕೃತ್ಯಕ್ಕೆ ಒಪ್ಪ ...ದೂ ಶ್ರೀ ಸೂರ್ಯನಾರಾಯ ...ರು ತಿಳಿಸಿ ಗೋವಧೆ ನಿರೋಧ ...ಲಿಗ ಸರ್ವರ ಬೆಂಬಲವನ್ನೂ ...ದರು

ಭಾರತದಲ್ಲಿ ಗೋವಧೆಯು ...ರೋಧಿಸಬೇಕೆಂಬ ನಿರ್ಣಯವ ...ಾನುಮತದಿಂದ ಮಾಡಿ ರಾ ...ರು, ಪಂಡಿತ ನೆಹರೂ,ಮೈಸೂ ...ಮಹಾರಾಜರು ಮತ್ತು ಮು ...ಂತ್ರಿ ಹನುಮಂತಯ್ಯನವರಿಗೆ ...ಲಾಗಿದೆ

...ರ್ವಜನಿಕ ವಿದ್ಯಾರ್ಥಿ ನಿಲಯದ ...ವರ ಕೃತಜ್ಞತೆ

...ಧಾನಿಯ ಸಾರ್ವಜನಿಕ ವಿದ್ಯಾ ...ಲಯದ ಸಹಾಯಾರ್ಥವಾಗಿ ಪ್ರ ...ಚಿತ್ರಮಂದಿರದವರು ನೆನ್ನೆ ಬೆಳಿಗ್ಗೆ ...ಎಂಬ ಚಿತ್ರವನ್ನು ಪ್ರದರ್ಶಿಸಿ ...ಪ್ರವೃತ್ತಿಯನ್ನು ಉದಾರವಾಗಿ ...ಒಗ್ಯ ನಿಲಯದ ವಾರ್ಡನರವರು ...ದವರನ್ನೂ ಮತ್ತು ಪ್ರೇಕ್ಷಕರ ...ಭಿನಂದಿಸಿ ಪತ್ರ ಬರೆದಿರುವರು

...ವಧಿಗೆ ಮೊದಲೆ ೫,೦೦೦ ...ಖೈದಿಗಳ ಖುಲಾಸೆ

...ಪ್ರಾಂತದ ವಿವಿಧ ಜೈ ...ಕ್ಷಾ ಪಡೆದಿರುವ ಖೈದಿಗಳು ...ಸ್ಥಳಾಭಾವದ ದೆಸೆಯಿಂದ ...ಸಾವಿರ ಮಂದಿಯನ್ನು ಅವ ...ಅವಧಿಯು ಮುಗಿಯುವುದ ...ಮುಂಚಿತವಾಗಿ ಖುಲಾಸೆ ಮಾಡ ...ಪ್ರಾಂತ ಸರ್ಕಾರದವರು ನಿರ್ಧರಿಸಿ ...ವೆಂದೂ ಗೊತ್ತಾಗಿದೆ

ಸರ್ ಸಿ.ಪಿ. ನೇತೃತ್ವದಲ್ಲಿ ದಕ್ಷಿಣ ಆಫ್ರಿಕಕ್ಕೆ ನಿಯೋಗ

ತಿರುವಾಂಕೂರಿನ ಮಾಜಿ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ದಕ್ಷಿಣ ಆಫ್ರಿಕದ ವರ್ಣಭೇದ ಶಾಸನದ ಪರಿಣಾಮವಾಗಿ ಉಂಟಾಗಿರುವ ಅಲ್ಲಿನ ಭಾರತೀಯರ ಪರಿಸ್ಥಿತಿ ಬಗ್ಗೆ ಪರಿಶೀಲನ ನಡೆಸಲು ಪ್ರಮುಖ ಭಾರತೀಯರಿಂದ ಕೂಡಿದ ಒಂದು ನಿಯೋಗವನ್ನು ಕರೆದುಕೊಂಡು ಹೋಗಲಿರುವರೆಂದು ತಿಳಿದುಬಂದಿದೆ

೯ ಮಂದಿ ಸಿರಿಯನ್ನರಿಗೆ ಘಾಸಿ ಶಿಕ್ಷೆ

ಇಸ್ರೇಲ್ ಸರ್ಕಾರದ ವಿರುದ್ಧವಾಗಿ ಪಿತೂರಿ ನಡೆಸಿದರೆಂಬ ಆಪಾದನೆ ಮೇಲೆ ೯ ಮಂದಿ ಸಿರಿಯನ್ನರನ್ನು ಮಿಲಿಟರಿ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಿ ಘಾಸಿ ಶಿಕ್ಷೆ ವಿಧಿಸಲಾಯಿತೆಂದು ತಿಳಿದುಬಂದಿದೆ

ಮಿಲ್ಲು ಬಟ್ಟೆ ಮೇಲೆ ಗಜಕ್ಕೆ ೩ ಕಾಸು ಸೆಸ್ಸು

ಭಾರತದಲ್ಲಿ ಕೈಮಗ್ಗದ ಕೈಗಾರಿಕೆಯ ರಕ್ಷಣಾ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಗಿರಣಿಗಳಲ್ಲಿ ತಯಾರಾದ ಬಟ್ಟೆಗಳ ಮೇಲೆ ಗಜ ಒಂದಕ್ಕೆ ೩ ಕಾಸು ತೆರಿಗೆ ವಿಧಿಸಲು ನಿರ್ಧರಿಸಿರುವರೆಂದು ಗೊತ್ತಾಗಿದೆ ಮತ್ತು ಕೇಂದ್ರ ಸರ್ಕಾರದ ಟೆಕ್ಸ್‌ಟೈಲ್ ಕಮಿಷನರರ ಅಧ್ಯಕ್ಷತೆಯಲ್ಲಿ ೧೬ ಮಂದಿ ಸದಸ್ಯರ ಒಂದು ಕೈಮಗ್ಗದ ಕೈಗಾರಿಕಾಭಿವೃದ್ಧಿ ಸಲಹಾ ಸಮಿತಿಯನ್ನು ರಚಿಸಲಾಗಿದೆ

ಜಿಲ್ಲಾ ಕಾಂಗ್ರೆಸ್ ಸದಸ್ಯರ ಪಟ್ಟಿ

ಮೈಸೂರು ಜಿಲ್ಲೆಯ ಕಾಂಗ್ರೆಸ್ ಸದಸ್ಯರುಗಳ ಪಟ್ಟಿಯನ್ನು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಪ್ರಕಟಿಸಲಾಗಿದೆಯೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ವಿಶ್ವವಿದ್ಯಾಲಯದ ಘಟಿಕೋತ್ಸವದ ಭಾಷಣ

ಬರುವ ತಿಂಗಳು ನಡೆಯಲಿರುವ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದ ಸಮಾರಂಭದಲ್ಲಿ ಸಿಂಹಳದ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಸರ್ ಐವಾರ್ ಜನ್ನಿಂಗ್ಸ್‌ರವರು ಪದವೀಧರರನ್ನುದ್ದೇಶಿಸಿ ಭಾಷಣ ಮಾಡುವರು

ಫ್ರೆಂಚ್ ಭಾರತದಲ್ಲಿ ೩೫೦ ಗೂಂಡಾ ಕೃತ್ಯಗಳು

ಭಾರತದ ಪ್ರಧಾನಿ ಪಂಡಿತ ನೆಹರೂರವರು ಫ್ರೆಂಚ್ ಭಾರತದಲ್ಲಿ ನಡೆಯುತ್ತಿರುವ ಗೂಂಡಾ ವರ್ತನೆಯನ್ನು ಪ್ರಸ್ತಾಪಿಸಿ,ಕೆಲವು ದಿನಗಳ ಕೆಳಗೆ ಮದರಾಸಿನಲ್ಲಿ ಮಾಡಿದ ಭಾಷಣವನ್ನು ಕುರಿತು ಫ್ರಾನ್ಸಿನ ವಿದೇಶಾಂಗ ಸಚಿವರು ಭಾರತಕ್ಕೆ ಪತ್ರ ಬರೆದು ಫ್ರೆಂಚ್ ಭಾರತದಲ್ಲಿ ಅಂತಹ ಘಟನೆಗಳೇನೂ ಸಂಭವಿಸಿಲ್ಲವೆಂದೂ ಆ ಬಗ್ಗೆ ಪಂಡಿತ ನೆಹರೂರವರಿಗೆ ಬಂದಿರುವ ವರದಿಗಳೆಲ್ಲಾ ಸುಳ್ಳೆಂದೂ ತಿಳಿಸಿರುವರು ಭಾರತ ಸರಕಾರದ ವಿದೇಶಾಂಗ ಶಾಖೆಯವರು ಇದಕ್ಕೆ ಉತ್ತರವಿತ್ತು ಭಾರತದ ಫ್ರೆಂಚ್ ಸ್ವಾಸ್ತ್ಯಗಳಲ್ಲಿ ೩೫೦ ಪ್ರಮುಖ ಕ್ರೂರ ಗೂಂಡಾ ವರ್ತನೆಗಳು ನಡೆದಿರುವುವೆಂದೂ, ಇತರೆ ಚಿಲ್ಲರೆ ಘಟನೆಗಳು ಲೆಕ್ಕವಿಲ್ಲದಷ್ಟು ಸಂಭವಿಸಿರುವುವೆಂದೂ ತಿಳಿಸಿರುವರು ಅನೇಕ ಸಂದರ್ಭಗಳಲ್ಲಿ ಪೋಲೀಸರೇ ಇಂತಹ ಕೃತ್ಯಗಳಲ್ಲಿ ಭಾಗವಹಿಸಿರುವ ಪ್ರಸಂಗಗಳಿರುವುದರಿಂದ ಆ ಬಗ್ಗೆ ದೂರು ಕೊಟ್ಟ ಜನರು ಪೋಲೀಸರ ಆಗ್ರಹಕ್ಕೆ ಪಾತ್ರರಾಗಬೇಕಾದ ಪ್ರಸಂಗವುಂಟಾಗಿರುವುದೆಂದೂ ಆ ಪತ್ರದಲ್ಲಿ ನಮೂದಿಸಲಾಗಿದೆ

ಉಡುಪಿಯ ಮಾಧ್ವ ಸಮ್ಮೇಳನ ಮುಂದಕ್ಕೆ

ಬರುವ ತಿಂಗಳು ೧೬ ನೇ ತಾರೀಖು ಮೈಸೂರಿನ ಶ್ರೀಮನ್ಮಹಾರಾಜರಿಂದ ಆರಂಭಿಸಲ್ಪಡಬೇಕಾಗಿದ್ದ ಮಾಧ್ವ ತತ್ವಜ್ಞಾನ ಸಮ್ಮೇಳನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹಾಕಲಾಗಿದೆ

ಬರ್ಮಾ ನರೇಂದ್ರರಿಂದ ಅಧಿಕಾರ ವರ್ಗಾವಣೆ

ಬರ್ಮಾದ ಷಾನ್ ಮೊದಲಾದ ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಜಾರಿಗೆ ತರುವ ಉದ್ದೇಶದಿಂದ ಅಲ್ಲಿನ ನರೇಂದ್ರರು ಆಡಳಿತಾಧಿಕಾರವನ್ನು ಪ್ರಜೆಗಳಿಗೇ ಬಿಟ್ಟುಕೊಡಲು ನಿರ್ಧರಿಸಿರುವರೆಂದು ತಿಳಿದುಬಂದಿದೆ ಬರ್ಮಾ ರಿಪಬ್ಲಿಕ್ಕಿನ ರಾಜ್ಯಾಂಗದ ಪ್ರಕಾರ ಶಾಸನಾಂಗದ ಅಧಿಕಾರವನ್ನು ಅವರು ಉಳಿಸಿಕೊಳ್ಳುವರೆಂದೂ ಹೇಳಲಾಗಿದೆ

ಪೌರ ಸಭಾಧಿವೇಶನದಲ್ಲಿ ರಿವಾಲ್ವರಿನ ಪ್ರಯೋಗ

ಬ್ರೆಜಿಲ್ಲಿನ ರಾಜಧಾನಿ ರಯೋಡಿ ಜನೀರೋವಿನಲ್ಲಿ ಮಾರಾಟ ತೆರಿಗೆಯನ್ನು ಶೇಕಡ ಎರಡರಿಂದ ಐದಕ್ಕೆ ಹೆಚ್ಚಿಸಬೇಕೆಂಬ ಬಗ್ಗೆ ಬಂದ ಮಸೂದೆಯನ್ನು ಅಲ್ಲಿನ ಪೌರ ಸಭೆಯಲ್ಲಿ ಚರ್ಚಿಸುತ್ತಿದ್ದಾಗ ಕಳೆದ ಬುಧವಾರ ಒಂದು ಪಕ್ಷದ ಸದಸ್ಯರೊಬ್ಬರು ಉದ್ರೇಕಗೊಂಡು ವಿರೋಧ ಪಕ್ಷದ ಸದಸ್ಯರ ಕಡೆ ರಿವಾಲ್ವರಿನಿಂದ ಹೊಡೆದರೆಂದೂ ಆದರೆ ಅದರಿಂದ ಯಾವ ಅಪಘಾತವೂ ಸಂಭವಿಸಲಿಲ್ಲವೆಂದೂ, ತರುವಾಯ ರಿವಾಲ್ವರನ್ನು ಅವರಿಂದ ಕಿತ್ತುಕೊಳ್ಳಲಾಗಿ ಅವರು ತಮ್ಮಲ್ಲಿದ್ದ ಚಾಕುವನ್ನು ಹೊರಗೆ ತೆಗೆದಾಗ ಪೌರಸಭೆಯ ಆಳುಗಳು ಕಿತ್ತುಕೊಳ್ಳಲು ಅವರು ಸಭಾ ಭವನದಲ್ಲಿದ್ದ ಮೈಕ್ರೊಫೋನನ್ನು ಎತ್ತಿ ಪ್ರತಿ ಪಕ್ಷದವರ ಕಡೆ ಎಸದರೆಂದೂ,ಅದರ ಪರಿಣಾಮವಾಗಿ ಆತನ ತಲೆಯಲ್ಲಿ ಗಾಯವಾಯಿತೆಂದೂ ವರದಿಯಾಗಿದೆ ಕಡೆಗೆ ಆತನು ಸಭೆಯಿಂದ ಹೊರಕ್ಕೆ ಹೋದನೆಂದೂ, ಮಸೂದೆಯು ಸಭೆಯಲ್ಲಿ ಮಂಜೂರಾಯಿತೆಂದೂ ತಿಳಿದುಬಂದಿದೆ

ಕಳ್ಳನು ಭಾವಿಗೆ ಬಿದ್ದು ಮೃತಪಟ್ಟ ಪ್ರಸಂಗ

ಬೆಂಗಳೂರ ದಂಡಿನ ಕೃಷ್ಣ ಎಂಬ ಒಕ್ಕಲಿಗ ಯುವಕನು ತಾನು ವಿದ್ಯುಚ್ಛಕ್ತಿ ಇಲಾಖೆಯ ನೌಕರನೆಂದು ಹೇಳಿಕೊಂಡು ಮೀಟರ್‌ಗಳನ್ನು ನೋಡುವ ನೆಪದಲ್ಲಿ ಮನೆಮನೆಗೂ ನುಗ್ಗಿ ಕಳುವು ಮಾಡುತ್ತಿದ್ದನೆಂಬ ಅಪಾದನೆ ಮೇಲೆ ಪೋಲೀಸರು ಅವನನ್ನು ಬಂಧಿಸಿ ಠಾಣೆಗೆ ಕರೆದೊಯ್ಯುತ್ತಿದ್ದಾಗ ಕುಮಾರಾ ಪಾರ್ಕ್ ಬಡಾವಣೆಯಲ್ಲಿ ಅವನು ಪೋಲೀಸರ ಕಣ್ಣು ಮರೆಸಿ, ಒಂದು ಮನೆಯ ಕಾಂಪೌಂಡಿನಲ್ಲಿದ್ದ ಭಾವಿಯಲ್ಲಿ ಬಿದ್ದು ಪ್ರಾಣ ಬಿಟ್ಟನೆಂದು ವರದಿಯಾಗಿದೆ

ಚನ್ನಪಟ್ಟಣದ ಗ್ರಾಮದಲ್ಲಿ ಕೊಲೆ

ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆ ಎಂಬ ಗ್ರಾಮದಲ್ಲಿ ಕಳೆದ ೨೨ ನೇ ತಾರೀಖು ರಾತ್ರಿ ಕರಿಯ ಉರುಫ್ ಅಂಕ ಎಂಬುವನನ್ನು ಯಾರೋ ಶಸ್ತ್ರ ಪ್ರಹರಿಸಿ ಕೊಲೆ ಮಾಡಿದ್ದರೆಂದೂ, ಶವದ ಮೈ ಮೇಲೆಲ್ಲಾ ಬಹಳ ಗಾಯಗಳಾಗಿದ್ದುವೆಂದೂ ಹೇಳಲಾಗಿದೆ.

ಪರ್ಷಿಯಾದ ಷಹಾರವರ ಕಡೆ ಕಲ್ಲಿನ ಹೊಡೆತ

ಪರ್ಷಿಯದ ಷಹಾರವರ ವರ್ಧಂತಿ ಸಂದರ್ಭದಲ್ಲಿ ಟೆಹರಾನಿನಲ್ಲಿ ನೆನ್ನೆ ಏರ್ಪಡಿಸಿದ್ದ ಪಂದ್ಯಗಳನ್ನು ವೀಕ್ಷಿಸಲು ಷಹಾರವರು ಬಂದಿದ್ದಾಗ ಅಲ್ಲಿನ ಟೂಡೇ ಪಕ್ಷದ ಬೆಂಬಲಿಗರು ಅವರ ಮೇಲೆ ಕಲ್ಲನ್ನೆಸೆದು ಅವರ ವಿರುದ್ಧವಾಗಿ ಘೋಷಣೆ ಮಾಡಿದರೆಂದೂ, ಪೋಲೀಸರು ಆ ಸಂಬಂಧವಾಗಿ ನೂರು ಮಂದಿಯನ್ನು ಬಂಧಿಸಿರುವರೆಂದೂ ಗೊತ್ತಾಗಿದೆ

○ರಫಿ ಅಹಮದ್ ಕಿದ್ವಾಯಿಯವರು ಇದುವರೆಗೆ ಚರ್ಚಿಸಿದ ಎಲ್ಲ ಸಂಸ್ಥಾನಗಳ ಸಚಿವರುಗಳೂ ಧಾನ್ಯದ ಕಂಟ್ರೋಲು ತೆಗೆಯಬೇಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುವರೆಂದು ಗೊತ್ತಾಗಿದೆ.

ಕೊರಿಯಾ ಯುದ್ಧಕ್ಕೆ ರಷ್ಯ ಕಾರಣವೆಂದು ಎಚೆರ್ಸ

ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಮೊನ್ನೆ ಭಾಷಣ ಮಾಡುತ್ತಾ, ಅಮೆರಿಕದ ವಿದೇಶಾಂಗ ಮಂತ್ರಿ ಎಚೆರ್ಸರು ಕೊರಿಯಾ ಯುದ್ಧಕ್ಕೆ ರಷ್ಯವೇ ಕಾರಣವೆಂದು ಆಪಾದಿಸಿರುತ್ತಾರೆ. ಎರಡನೇ ಮಹಾ ಯುದ್ಧವು ಮುಗಿಯುವುದಕ್ಕೆ ೩ ತಿಂಗಳು ಮುಂಚೆ ರಷ್ಯವು ಉತ್ತರ ಕೊರಿಯನ್ನರಿಂದ ಕೂಡಿದ ಭಾರಿ ಸೈನ್ಯವನ್ನು ಕಟ್ಟಲು ಆರಂಭಿಸಿ ಅದಕ್ಕೆ ಬೇಕಾದಷ್ಟು ಯುದ್ಧ ಸಾಮಗ್ರಿಗಳನ್ನು ಒದಗಿಸಿತ್ತೆಂದೂ ಅವರು ಹೇಳಿರುವರು

ಸತ್ತವನು ಬದುಕಿದ ಪ್ರಸಂಗ

ಉತ್ತರ ಪ್ರದೇಶದ ಸಹರಾನ್ಪುರದ ಒಬ್ಬ ವ್ಯಾಪಾರಿಯು ಸತ್ತ ಮೇಲೆ, ಅವನ ಸಂಬಂಧಿಕರು ಶವವನ್ನು ಸ್ಮಶಾನಕ್ಕೆ ಒಯ್ಯಲು ವ್ಯವಸ್ಥೆ ಮಾಡುತ್ತಿದ್ದಾಗ, ಮೃತನು ಮೆಲ್ಲಗೆ ಹಾಸಿಗೆಯ ಮೇಲಿಂದ ಎದ್ದು, ಸುತ್ತಲೂ ಇದ್ದ ಜನರ ಗುಂಪನ್ನು ಕಂಡು ಅವರು ಸೇರಿರುವುದೇಕೆಂದು ಪ್ರಶ್ನಿಸಲಾಗಿ ಅವರೆಲ್ಲರಿಗೂ ಆಶ್ಚರ್ಯವಾಯಿತೆಂದು ವರದಿಯಾಗಿದೆ

ಚಾಕು ಇರಿತದಿಂದ ಗಾಯ

ರಾಜಧಾನಿಯ ಮಂಡಿ ಮೊಹಲ್ಲೆಯ ನಿವಾಸಿ ಮುನಿಸ್ವಾಮಿ ಎಂಬುವನಿಗೆ ಚಾಕು ಇರಿತದ ಗಾಯವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವನೆಂದು ವರದಿಯಾಗಿದೆ. ಮನೆಯನ್ನು ಬಾಡಿಗೆಗೆ ಕೊಡಿಸುವುದಾಗಿ ಅವನು ಸಬ್ಬ ಎಂಬುವನಿಂದ ೧೫ ರೂ ಗಳನ್ನು ಪಡೆದು, ಮನೆಯನ್ನೂ ಕೊಡಿಸದೆ, ದುಡ್ಡನ್ನೂ ವಾಪಸು ಕೊಡದಿದ್ದ ಸಂದರ್ಭದಲ್ಲಿ ಇಬ್ಬರಿಗೂ ಮಾತು ಬೆಳೆದು ಪರಿಣಾಮ ವಿರಸಗೊಂಡಿತೆಂದು ಹೇಳಲಾಗಿದೆ

ಪಬ್ಲಿಕ್ ಲೈಬ್ರರಿ ಅಧಿಕಾರ ವರ್ಗ

ರಾಜಧಾನಿಯ ಪಬ್ಲಿಕ್ ಲೈಬ್ರರಿ ಕಾರ್ಯಕಾರಿ ಸಮಿತಿಗೆ ಚುನಾವಣೆಯು ನೆನ್ನೆ ನಡೆದು ಪ್ರಸಕ್ತ ಸಾಲಿಗೆ ಶ್ರೀಗಳಾದ ಎಸ್ ಚಾಮಣ್ಣ, ಎಸ್ ರಾಮಸ್ವಾಮಿ, ಡಿ ವಿ ನರಸಿಂಹರಾವ್ ಡಾ|| ಆದಿ ಕೇಶವಲು, ಎಸ್ ನರಸಿಂಹಮೂರ್ತಿ, ಅಯ್ಯಣ್ಣ, ಎಂ ಗಂಗಾಧರಮೂರ್ತಿ, ಎನ್. ತಮ್ಮಯ್ಯ, ವಿ ಪ್ರಫುಲ್ಲ ಚಂದ್ರ ಮತ್ತು ಶ್ರೀಮತಿ ಸಿ. ಆರ್. ಶೇಷುರವರು ಚುನಾಯಿತರಾಗಿರುವರು

ಹಾಸ್ಟೆಲ್ ಸ್ಪೋರ್ಟ್ಸ್ ಕ್ಲಬ್

ಇಟ್ಟಿಗೆಗೂಡಿನಲ್ಲಿ ಮೇಲ್ಕಂಡ ಕ್ಲಬ್ಬಿನ ಆರಂಭೋತ್ಸವವು ಕಳೆದ ಶುಕ್ರವಾರ ಕಾಲೇಜು ಅಧ್ಯಾಪಕರಾದ ಶ್ರೀ ಎಸ್ ದೇವೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಸಕ್ತ ಸಾಲಿಗೆ ಶ್ರೀ ಎಸ್ ನಾರಾಯಣ್ ಅಧ್ಯಕ್ಷರಾಗಿಯೂ, ಶ್ರೀ ದೇವೇಗೌಡರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಎಸ್. ಸಿದ್ದಪ್ಪ ಮತ್ತು ಎಸ್ ಜನಂಪ್ಪನವರು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀಗಳಾದ ಟಿ. ಎ. ನಟರಾಜ ಮತ್ತು ಕೆ ವಿ. ರಾಧಾಕೃಷ್ಣರವರು ಕ್ಯಾಪ್ಟನ್‌ಗಳಾಗಿಯೂ ಚುನಾಯಿತರಾಗಿರುವರು.

ಪಂಜಾಬು ಗಡಿ ಬಳಿ ಬಂದೂಕದ ಕಾಳಗ

ಪೂರ್ವ ಮತ್ತು ಪಶ್ಚಿಮ ಪಂಜಾಬುಗಳ ಒಂದು ಗಡಿ ಪ್ರದೇಶದಲ್ಲಿ ಕಳೆದ ೨೩ ನೇ ತಾ|| ಭಾರತೀಯ ಮತ್ತು ಪಾಕಿಸ್ತಾನ ಪೋಲೀಸರುಗಳಿಗೆ ೪ ಗಂಟೆಗಳ ಕಾಲ ಗುಂಡಿನ ಕಾಳಗವು ನಡೆಯಿತೆಂದು ಹೇಳಲಾಗಿದೆ. ಭಾರದ ಕಡೆ ಸಾವು ನೋವುಗಳೇನೂ ವರದಿಯಾಗಿಲ್ಲ. ಪಾಕಿಸ್ತಾನದ ಹಲವು ಪೋಲೀಸರಿಗೆ ಗಾಯಗಳಾಗಿವೆ. ಒಂದು ಹಳ್ಳಿಯಲ್ಲಿ ಚರಂಡಿ ವ್ಯವಸ್ಥೆ ಬಗ್ಗೆ ಸರ್ವೆಯನ್ನು ಭಾರತದ ಅಧಿಕಾರಿಗಳು ಮಾಡುತ್ತಿದ್ದಾಗ ಪಾಕಿಸ್ತಾನ ಪೋಲೀಸರು ಅಡ್ಡಿಪಡಿಸಿ, ಅದರಿಂದ ಪಾಕಿಸ್ತಾನದೊಳಕ್ಕೆ ನೀರು ಹರಿದು ಬರುವುದೆಂದು ಆಕ್ಷೇಪಿಸಿದರೆಂದೂ, ಆ ಹಳ್ಳಿಯು ಭಾರತದೊಳಗೆ ಇರುವುದರಿಂದ ಪಾಕಿಸ್ತಾನದವರಿಗೆ ಅಡ್ಡಿಪಡಿಸಲು ಯಾವ ಹಕ್ಕೂ ಇರುವುದಿಲ್ಲವೆಂದು ಭಾರತೀಯರು ಹೇಳಿದರೆಂದೂ, ಇದರ ಮೇಲೆ ಪಾಕ್ ಪೋಲೀಸರು ಗುಂಡು ಹಾರಿಸಿದರೆಂದೂ ಹೇಳಲಾಗಿದೆ.

ಲಲಿತ ಕಲೆಗೆ ಹೆಚ್ಚು ಪ್ರೋತ್ಸಾಹ ಬೇಕು

ಬೆಂಗಳೂರಿನ ಲಲಿತ ಕಲಾ ಸಂಘದ ಅಧ್ಯಕ್ಷರಾದ ಶ್ರೀ ಎನ್ ಜಿ ಪಾವಂಜೆಯವರು ಪತ್ರವೊಂದನ್ನು ಬರೆದು, ಲಲಿತ ಕಲೆಗಳಿಗೆ ಸಂಸ್ಥಾನದಲ್ಲಿ ಉತ್ತೇಜನ ದೊರೆಯುತ್ತಿಲ್ಲವೆಂದೂ, ಇದರಿಂದ ಅನೇಕ ಕಲಾವಿದರು ಸಂಸ್ಥಾನವನ್ನು ಬಿಟ್ಟು ಹೊರಗೆ ಹೋಗಿರುವರೆಂದೂ ತಿಳಿಸಿರುತ್ತಾರೆ. ವಿದ್ಯಾಭ್ಯಾಸ ಕ್ರಮದಲ್ಲಿ ಈ ಕಲೆಗೆ ಕೊಡಬೇಕಾದ ಸ್ಥಾನ ಮತ್ತು ಅದರ ಅಭಿವೃದ್ಧಿಗೆ ಮಾಡಬೇಕಾದ ಏರ್ಪಾಡುಗಳ ಬಗ್ಗೆ ವಿದ್ಯಾ ಸಲಹಾ ಸಮಿತಿಗೆ ಮನವಿಯೊಂದನ್ನು ಕಳುಹಿಸಲಾಗುವುದೆಂದು ಅವರು ಸೂಚಿಸಿರುತ್ತಾರೆ

ಪೌರಸಭಾ ಚುನಾವಣೆ ಕೂಡಲೇ ನಡೆಯಬೇಕು

ರಾಜಧಾನಿಯ ಪೌರಸಭೆಯ ಅವಧಿಯು ಮುಗಿಯುತ್ತ ಬಂದಿರುವುದರಿಂದಲೂ, ಹೊಸ ಸಭೆಗೆ ಇದೇ ನವೆಂಬರ್ ಅಥವಾ ಡಿಸೆಂಬರ್ ತಿಂಗಳು ಚುನಾವಣೆ ನಡೆಯಬೇಕಾಗಿರುವುದೆಂದೂ ನಗರದಲ್ಲಿ ಹೊಸದಾಗಿ ವಾರ್ಡುಗಳನ್ನು ಏರ್ಪಡಿಸಬೇಕೆಂಬ ನೆಪದಿಂದ ಚುನಾವಣೆಯನ್ನು ಮುಂದಕ್ಕೆ ತಳ್ಳದೆ ನಿಯಮಿತ ಕಾಲದಲ್ಲಿಯೇ ಅದನ್ನು ನಡೆಸಬೇಕೆಂದೂ ಶ್ರೀ|| ಎಂ. ಎಸ್ ಪುಟ್ಟಲಿಂಗುರವರು ಕೋರಿರುತ್ತಾರೆ

ಆರೋಗ್ಯಕ್ಕೂ ಮತ್ತು ಶಕ್ತಿಗೂ

ಯಾವಾಗಲೂ

ಶ್ರೇಷ್ಠವಾದ ಬೆಣ್ಣೆ & ತುಪ್ಪವನ್ನು

ಉಪಯೋಗಿಸಿ

ಬೆಣ್ಣೆ ವೀಸೆ 1ಕ್ಕೆ 5-0-0

ದಯವಿಟ್ಟು ಭೇಟಿ ಕೊಡಿ

ಎಂ. ಎಸ್. ನಾಗಣ್ಣ & ಸನ್ಸ್

100 ಅಶೋಕ ರಸ್ತೆ . ಮೈಸೂರು

ರೆಗ್ಯುಲೇಟೆಡ್ ಮಾರ್ಕೆಟ್ ನಲ್ಲಿ ಅಕ್ರಮ ನಡವಳಿಕೆ

ರೈತರು ಬೆಳೆದ ಪದಾರ್ಥಗಳಿಗೆ ಯಾವ ಅನ್ಯಾಯವೂ, ಮೋಸವೂ ಇಲ್ಲದೆ ಸರಿಯಾದ ಬೆಲೆ ಸಿಗಬೇಕೆಂಬ ಸದುದ್ದೇಶದಿಂದ ಸರ್ಕಾರದವರು "ರೆಗ್ಯುಲೇಟೆಡ್ ಮಾರ್ಕೆಟ್" ಪದ್ಧತಿಯನ್ನು ಜಾರಿಗೆ ತಂದರು. ಇದು ಪ್ರಾರಂಭವಾದಾಗಿನಿಂದ ಸಮರ್ಪಕವಾಗಿ ನಡೆದುಬಂದಿದೆ. ಇತ್ತೀಚೆಗೆ ಆ ಉದ್ದೇಶಕ್ಕೆ ಭಂಗ ತರತಕ್ಕ ಪರಿಸ್ಥಿತಿಯುಂಟಾಗಿದೆ

ಪ್ರತಿಯೊಬ್ಬ ರೈತರಿಗೂ ಒಬ್ಬೊಬ್ಬ ದಳ್ಳಾಳಿ ಇರುತ್ತಾನೆ. ಸಾಧಾರಣವಾಗಿ ದಳ್ಳಾಳಿಗಳೂ, ವ್ಯಾಪಾರಿಗಳೂ ಪರಸ್ಪರ ಸಹಕರಿಸಿಕೊಂಡು ಸರಕನ್ನು ತಂದ ರೈತನಿಗೆ ಯಾವ ತೊಂದರೆಯೂ ಇಲ್ಲದಂತೆ ವ್ಯಾಪಾರವು ಸುಗಮವಾಗಿ ನಡೆಯುತ್ತಿತ್ತು. ಹರಾಜು ಆದ ಬಳಿಕ, ಹಣವನ್ನು ಪಾವತಿ ಮಾಡಿಯೇ ಪದಾರ್ಥಗಳನ್ನು ಮಾರ್ಕೆಟ್ಟಿನಿಂದ ಸಾಗಿಸಬೇಕೆಂಬ ನಿಯಮವಿದೆ. ಈಚೆಗೆ ವ್ಯಾಪಾರಸ್ಥರು ದಳ್ಳಾಳಿಗೆ ಹಣವನ್ನು ಪಾವತಿ ಮಾಡದೆ ದಿನಗಳನ್ನು ತಳ್ಳುತಕ್ಕ ಪದ್ಧತಿಯು ಪ್ರಾರಂಭವಾಗಿದೆ. ಹಣವನ್ನು ಕೊಡುವಾಗ ಅದರಲ್ಲಿ ಕ್ಯಾಷ್ ಡಿಸ್ಕೌಂಟು ಎಂದು ಒಂದು ರೂಪಾಯಿಗೆ ಒಂದು ಕಾಸಿನಂತೆ ಕಳೆದು ಕೊಡುತ್ತಾರೆ. ಡಿಸ್ಕೌಂಟು ಕೊಟ್ಟರೂ ಹಣವನ್ನು ಕೊಡಲು ವಾರಗಟ್ಟಲೆ ಸತಾಯಿಸುತ್ತಾರೆ. ತಾನು ಕಷ್ಟಪಟ್ಟು ಬೆಳೆಸಿದ ಪದಾರ್ಥಗಳ ಹಣವು ಕೈಗೆ ಸಿಗದೇ ಇದ್ದರೆ ರೈತನು ಮುಂದೆ ಸರಾಗವಾಗಿ ಸರಕನ್ನು ಮಾರಾಟಕ್ಕೆ ತರಲು ಹಿಂತೆಗೆಯಬಹುದು. ಸರಕು ಕಮ್ಮಿಯಾದ ಕೂಡಲೇ ಪದಾರ್ಥಗಳ ಅಭಾವವೆಂಬ ಕೂಗು ಹುಟ್ಟಿ ಜನಗಳ ಸುಲಿಗೆಯಾಗುತ್ತದೆ. ಹೀಗೆ ಒಂದರ ಮೇಲೆ ಒಂದರಂತೆ ತೊಂದರೆಯಾಗಿ "ರೆಗ್ಯುಲೇಟೆಡ್" ಮಾರ್ಕೆಟ್ಟಿನ ಉದ್ದೇಶವೇ ಕೆಟ್ಟು ಹೋಗುತ್ತದೆ. ಇಂಥ ಕೆಟ್ಟ ಆಲೋಚನೆಗೆ ವ್ಯಾಪಾರಸ್ಥರೇ ಕಾರಣ. ಮಾರ್ಕೆಟ್ಟು ಕಮಿಟಿ ಸದಸ್ಯರ ಪಾತ್ರವೂ ವಿಷಾದಕರ

ಇತಿ ಕಮ್ಮಿ ಪ್ರಮಾಣದ ಪ್ರತಿಫಲವನ್ನು ತೆಗೆದುಕೊಳ್ಳುತ್ತಿರುವ ದಳ್ಳಾಳಿಗಳು ರೂಪಾಯಿಗೆ ಒಂದು ಕಾಸಿನಂತೆ ಡಿಸ್ಕೌಂಟನ್ನು ಕೈಯಿಂದ ಹಾಕಲಾರರು. ಆ ನಷ್ಟವನ್ನು ಅನ್ಯತಸ್ಥನಲ್ಲದ ರೈತನ ತಲೆಗೆ ಕಟ್ಟಲಾಗುವುದು

ಪದಾರ್ಥಗಳು ಬಜಾರಿನಲ್ಲಿ ಚಲಾವಣೆ ಇದ್ದು ಎಲ್ಲರಿಗೂ ಸುಲಭವಾಗಿ ಸಿಗುವಂತಾಗಬೇಕೆಂಬುದು ಸರ್ಕಾರದ ಉದ್ದೇಶ. ಅದಕ್ಕಾಗಿ ಪದಾರ್ಥಗಳ ಮೇಲೆ ಬ್ಯಾಂಕುಗಳು ಸಾಲ ಕೊಡಕೂಡದೆಂದು ನಿಯಮವನ್ನು ಮಾಡಿದೆ. ಕೈಯಲ್ಲಿ ಹಣವಿಲ್ಲದೇ ಇರುವವರು ಹರಾಜಿನಲ್ಲಿ ಪದಾರ್ಥಗಳನ್ನು ಕೊಂಡು ಕೊಂಡು ಹಣ ಕೊಡದೇ ಬಾಕಿ ಇಡುವುದು

ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ಡೈರೆಕ್ಟರ್‌ಗಳ ಚುನಾವಣೆ.

ನನಗೆ ಈ ಚುನಾವಣೆಯಲ್ಲಿ ಜಯಶೀಲನಾಗಲು ಪ್ರೋತ್ಸಾಹಿಸಿದ ಮಾನ್ಯ ಮೆಂಬರುಗಳೆಲ್ಲರಿಗೂ, ಮತ್ತು ನನ್ನ ಸಹಕಾರಿಗಳಿಗೂ, ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ

(ರಾಜು) ಕೆ. ಸೀತಾರಾಮರ್,

ನಂ. 44

ಸಯ್ಯಾಜಿರಾವ್ ರೋಡು (ಗಣಪತಿ ಮನೆ ಪಕ್ಕ) ಬಸ್ ಟರ್ಮಿನಸ್ ಮತ್ತು ಮಿಷನ್ ಆಸ್ಪತ್ರೆ ರೋಡುಗಳ ಜಂಕ್ಷನ್‌ನಲ್ಲಿ ಹೊಸದಾಗಿ ಕಟ್ಟಿರುವ ಮಹಡಿ ಮತ್ತು ಅಂಗಡಿ ರೂಮುಗಳು ಬಾಡಿಗೆಗೆ ಕೊಡಲ್ಪಡುತ್ತವೆ

ನಿರಾಶ್ರಿತರ ರವಾನೆ ರೈಲಿಗೆ ತಡೆ

ಪೂರ್ವ ಬಂಗಾಳದಿಂದ ಇತ್ತೀಚೆಗೆ ವಲಸೆ ಬಂದವರ ಪೈಕಿ ೧೫೦೦ ಜನರನ್ನು ಹೊತ್ತು ಒರಿಸ್ಸಾ ಪ್ರಾಂತಕ್ಕೆ ಹೊರಟಿದ್ದ ವಿಶೇಷ ರೈಲನ್ನು ಕಲ್ಕತ್ತಾ ಬಳಿ ಡಂಡಂ ನಿಲ್ದಾಣದಲ್ಲಿ ಪ್ರದರ್ಶನಕಾರರು ತಡೆದರೆಂದೂ, ಅವರ ಒತ್ತಾಯದಂತೆ ಅನೇಕ ನಿರಾಶ್ರಿತರು ಅಲ್ಲೇ ಇಳಿದು, ಒರಿಸ್ಸಾಕ್ಕೆ ಹೋಗಲು ನಿರಾಕರಿಸಿದರೆಂದೂ ಹೇಳಲಾಗಿದೆ. ಮೊದಲು ಆ ಪ್ರಾಂತಕ್ಕೆ ಹೋಗಲು ಒಪ್ಪಿದ್ದುದರಿಂದ ಅವರ ರವಾನೆಗೆ ಬಂಗಾಳಾ ಸರ್ಕಾರದವರು ಏರ್ಪಡಿಸಿದ್ದರು. ನಿರಾಶ್ರಿತರ ಮಕ್ಕಳಿಗಾಗಿ ಹಾಲನ್ನು ಕೊಳ್ಳುವುದಕ್ಕೆ ಡಂಡಂ ನಿಲ್ದಾಣದಲ್ಲಿ ರೈಲನ್ನು ನಿಲ್ಲಿಸಲಾಗಿತ್ತು. ಆಗ ಪ್ರದರ್ಶನಕಾರರು ರೈಲು ಮುಂದೆ ಹೋಗಲು ಅಡ್ಡಿಪಡಿಸಿದರು

ಕ್ರಿಕೆಟ್ ಪಂದ್ಯ

ರಾಜಧಾನಿಯ ಸೊನಾರ್ ಬೀದಿಯಲ್ಲಿರುವ ಜೈಹಿಂದ್ ಕ್ರಿಕೆಟ್ ಕ್ಲಬ್ಬಿಗೂ ಮತ್ತು ಸರಸ್ವತಿಪುರದ ಪ್ರಭಾತ್ ಕ್ಲಬ್ಬಿಗೂ ನೆನ್ನೆ ಕ್ರಿಕೆಟ್ ಪಂದ್ಯವು ನಡೆದು ಜೈಹಿಂದ್ ಕ್ಲಬ್ಬಿನವರು ಒಂದು ಇನ್ನಿಂಗು ಮತ್ತು ೪೫ ರನ್ನುಗಳಿಂದ ಜಯಗಳಿಸಿದರು.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಟಿ. ಎಸ್. ಸಾವಿತ್ರಿ ಸಂಗೀತ. ಸುಪ್ರಭಾತ ೧-೩೦ ಕೊಳಲು. ೨. ಎಂ ಪಿ ರಾಮಯ್ಯ ಪಿಟೀಲು ಸಂಜೆ ೫-೩೦ ಮತ್ತು ಆ ವೆಂಕಟಸುಬ್ಬರಾವ್ ವೀಣೆ, ವಿ ನಾರಾಯಣಯ್ಯರ್ ವೀಣೆ, ಎಂ ವಿ ವರಹಾಸ್ವಾಮಿ ಗಿಟಾರ್. ೭ ಎಂ ಪಿ ರಾಮಯ್ಯ ಪಿಟೀಲು (ಹಿಂದೂಸ್ತಾನಿ). ೭-೩೦ ಕನ್ನಡದಲ್ಲಿ ಮಾತು. ೮-೩೦ ವೃಂದ ಸಂಗೀತ. ೯-೧೫ ಎಂ ಅನಂತಸ್ವಾಮಿರಾವ್ ಇಂಗ್ಲಿಷ್ ಭಾಷಣ. ೯-೪೦ ಎಸ್ ಕೆ ದೊರೆಸ್ವಾಮಿ ಸಂಗೀತ.

ತಪ್ಪಲ್ಲವೇ? ಕಡಲೆಕಾಯಿ ವ್ಯಾಪಾರದಲ್ಲಂತೂ ಈ ಕೆಟ್ಟ ವರ್ತನೆಯು ವಿಪರೀತ ಬೆಳೆದಿದೆ. ವ್ಯಾಪಾರಸ್ಥರೊಡನೆ ದಳ್ಳಾಳಿಗಳೂ ಸೇರಿ ರೈತರಿಗೆ ಅನ್ಯಾಯ ಮಾಡುತ್ತಿರುವುದನ್ನು ಕೂಡಲೇ ತಪ್ಪಿಸಬೇಕು

ದಳ್ಳಾಳಿಗಳು ಪ್ರತಿ ನಿತ್ಯವೂ ಮಾರ್ಕೆಟಿಂಗ್ ಆಫೀಸರರಿಗೆ ತಮ್ಮ ಲೆಕ್ಕವನ್ನು ತೋರಿಸಬೇಕೆಂಬ ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಅಧಿಕಾರಿಗಳು ಯಾರಿಗೂ ಯಾವ ರಿಯಾಯಿತಿಯನ್ನೂ ತೋರಿಸದೇ ನ್ಯಾಯವನ್ನು ರಕ್ಷಿಸುತ್ತಾರೆ. ಅಗತ್ಯ ಎಂದು ರಾಜಧಾನಿಯ ರೈತರ ಹಿತೈಷಿಯೊಬ್ಬರು ತಿಳಿಸಿರುತ್ತಾರೆ

SRI GAYATHRI

Daily 2 Shows

From 27-10-52 For 2 Days

Warner Brother's

TO-MORROW IS ANOTHER DAY

Starring Ruth Roman and Steve Cochran

:- NEXT CHANGE :—

Warner Brother's

CLOSE TO MY HEART

Edited, Printed and Published by A R Nagaraja at Sadhvi Press, D Subbiah Road, Mysore.

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೮-೧೦-೧೯೫೨ [ಸಂಚಿಕೆ ೭೬

ಪಾಕಿಸ್ತಾನದಲ್ಲಿ ಕಾಶ್ಮೀರ ಮುಸಲ್ಮಾನರ ದಸ್ತಗಿರಿ

ಬ್ರಿಟನ್ನಿನಿಂದ ಭಾರತಕ್ಕೆ ೩ ಯುದ್ಧ ನೌಕೆಗಳ ಸಾಲ

ಬ್ರಿಟನ್ನಿನಿಂದ ಭಾರತವು ಮೂರು ೦.ನ ನೌಕೆಗಳನ್ನು ಮೂರು ವರ್ಷದ ... ಯುದೆ ಮೇಲೆ ಸಾಲವಾಗಿ ಪಡೆಯು ವುದೆಂದು ಹೇಳಲಾಗಿದೆ. ಅಗತ್ಯಬಿದ್ದರೆ ... ಅವಧಿಯನ್ನು ಹೆಚ್ಚಿಸಲಾಗುವುದೆಂ ... ಆದರೆ ತುರ್ತು ಪರಿಸ್ಥಿತಿಯೊದಗಿ ... ಬ್ರಿಟನ್ನು ಯಾವ ಘಳಿಗೆಯಲ್ಲಾ ... ಅವನ್ನು ಹಿಂದಕ್ಕೆ ಪಡೆಯಬಹುದೆಂದೂ ಒಪ್ಪಂದವಾಗಿದೆ.

ನಾಲ್ಕು ಹುಲಿಗಳ ಶಿಕಾರಿ

... ಸನಕ್ಕೆ ... ಮೈಲಿ ದೂರವಿರುವ ... ಗಡ್ಡದ ಹತ್ತಿರವಿರುವ ಆಡಗೂರು ... ಕಾಫಿ ಪ್ಲಾಂಟರ್ ಶ್ರೀ ... ಟ್ಲಿಸ್ ರವರು ೪ ಹುಲಿಗಳನ್ನು ಶಿಕಾರಿ ಮಾಡಿ ... ತ್ತರೆ. ಈ ಪೈಕಿ ಒಂದು ದೊಡ್ಡದು ... ತ್ತು ಇನ್ನೊಂದು ನಾಲ್ಕು ಮರಿಗಳ ... ಹಾಕಿದ ಹೆಣ್ಣು ಹುಲಿ. ಹೆಣ್ಣು ಹು ಲಿ ... ಶಿಕಾರಿಯ ಮೇಲೆ ಬಿದ್ದಾಗ, ... ತಪ್ಪಿಸಿಕೊಂಡು ಅದನ್ನು ಹೊಡೆ ... ತರೆ. ಆದರೆ ನಾಲ್ಕು ಮರಿಗಳನ್ನು ... ಸ್ಸು ತೆಗೆದುಕೊಂಡಿರುವರು. ಹುಲಿ ... ನಾಲ್ಕು ಮರಿಗಳನ್ನು ಹಾಕಿರುವು ... ಆಶ್ಚರ್ಯದ ಸಂಗತಿಯೆಂದು ಹೇ ... ಗಿದೆ.

... ಂಗರಾಮಯ್ಯನವರಿಗೆ ಚುನಾವಣಾ ಅನರ್ಹತೆ

... ರತದ ಚುನಾವಣಾ ಕಮಿಷನ್ನು ... ಶ್ರೀಗಳಾದ ಮೈಸೂರಿನ ಎಸ್ ... ರಾಮಯ್ಯ, ಬೆಂಗಳೂರಿನ ಎಂ ಕೃ ... ವಿ ಸಿಳ್ಳೆ, ಬಿ ಎಚ್ ಸಂಜೀವ ... ಟಿ ವೆಂಕಟರಾವ್ ಮತ್ತು ಯು ... ರಾಮಾ ಚಾರ್ಯರನ್ನು ಚುನಾವಣೆ ... ಸ್ಪರ್ಧಿಸಲು ಅನರ್ಹರೆಂದು ಸೂಚಿಸಿ ... ರೆ. ಮೈಸೂರು ತಾಲ್ಲೂಕಿನ ಶ್ರೀ ... ಹೊನ್ನಪ್ಪ, ಮದ್ದೂರು ತಾಲ್ಲೂ ... ಸೋಮನಹಳ್ಳಿಯ ಶ್ರೀ ಎಸ್ ... ಯ್ಯ (ಇತ್ತೀಚೆಗೆ ಮೃತಪಟ್ಟಿರುವ ... ನವರುಗಳ ಅನರ್ಹತೆಯನ್ನು ... ಪಡಿಸಲಾಗಿದೆ.

ಅಭಾವ ಪರಿಹಾರ ನಿಧಿಗೆ ಶೇಖರಣೆ

ರಾಜಧಾನಿಯ ಪೌರಸಭೆಯ ಸದ ... ನ ಶ್ರೀ ಹೆಚ್ ಎ. ಮುದ್ದಯ್ಯ ... ೭೩ ರೂ, ಶ್ರೀ ಜಿ ಅಹಮದ್ ... ರವರು ೩೫ ರೂ ಮತ್ತು ಶ್ರೀ ವೆಂ ಕಟರಮಣಯ್ಯನವರು ೭೮ ರೂ ಗಳ ... ಅಭಾವ ಪರಿಹಾರ ನಿಧಿಗಾಗಿ ವ ... ಮಾಡಿ, ಪೌರಸಭಾ ಕಮಿಷ ... ವರಿಗೆ ಕಳುಹಿಸಿರುತ್ತಾರೆ.

ಕ್ಷಾಮ ನಿವಾರಣಾ ನಿಧಿಗೆ ಪರಕಾಲ ಸ್ವಾಮಿಗಳವರ ಸಹಾಯ

... ಜಧಾನಿಯ ಪರಕಾಲ ಮಠದ ... ಸ್ವಾಮಿಗಳವರು ಸಂಸ್ಥಾನದ ಮು ... ಮಂತ್ರಿಗಳ ಕ್ಷಾಮ ನಿವಾರಣಾ ನಿ ... ,೦೦೦ ರೂ ಗಳನ್ನು ಉದಾರ ... ವಾಗಿ ನೀಡಿರುವರು.

ಭಾರತ ವಾಚನ

... ಜಧಾನಿಯ ಶ್ರೀಮನ್ಮಹಾರಾಜರ ... ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ... ಸಂಜೆ ೫ ಗಂಟೆಗೆ ಶ್ರೀ ಸುಬ್ಬಯ್ಯ ... ಮತ್ತು ಶ್ರೀ ಕೆ ವೆಂಕಟಸು ... ಯ್ಯ ಇವರುಗಳಿಂದ ಭಾರತ ವಾಚನ ವನ್ನು ಶಾಲೆಯ ವಿದ್ಯಾರ್ಥಿ ಸಂಘದವ ... ಏರ್ಪಡಿಸಿರುತ್ತಾರೆ.

ಬೊಂಬಾಯಿಯಲ್ಲಿ ಬ್ರಹ್ಮ ಪಾರಾಯಣ ಯಜ್ಞ

ಬೊಂಬಾಯಿಯಲ್ಲಿ ನೆನ್ನೆ ಬ್ರಹ್ಮ ಪಾರಾಯಣ ಯಜ್ಞವು ಪ್ರಾರಂಭವಾಯಿತು. ಅದಕ್ಕಾಗಿ ದೇಶದ ನಾನಾ ಕಡೆಗಳಿಂದ ೧,೫೦೦ ಮಂದಿ ವಿದ್ವಾಂಸರೂ, ಶ್ರೋತ್ರೀಯರೂ ಬಂದಿರುವರು. ಒಂದೊಂದು ವೇದಕ್ಕೂ ಒಂದೊಂದು ಯಜ್ಞಕುಂಡವನ್ನೇರ್ಪಡಿಸಲಾಗಿದೆ. ವೇದಾಧ್ಯಯನ ಸಂಪನ್ನರಾದವರಿಗೆ ಉತ್ತೇಜನವೀಯಲು ಈ ಯಾಗವನ್ನು ಏರ್ಪಡಿಸಲಾಗಿದೆ. ಇದು ಒಂದು ವಾರ ಕಾಲ ನಡೆಯುವುದು.

ಮಡಕೇರಿಗೆ ಡಾ|| ಮೋದಿಯವರ ಪ್ರಯಾಣ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ ಸಿ ಮೋದಿಯವರು ನೆನ್ನೆ ಕೊಡಗಿನ ಮುಖ್ಯ ಪಟ್ಟಣವಾದ ಮಡಕೇರಿಗೆ ಪ್ರಯಾಣ ಮಾಡಿದರು. ಬರುವ ೧ ನೇ ತಾ|| ನಿಂದ ಅವರು ಅಲ್ಲಿ ಉಚಿತವಾಗಿ ಕಣ್ಣಿನ ಚಿಕಿತ್ಸೆಯನ್ನು ಆರಂಭಿಸುವರು.

ಕೆ. ನಂಜಪ್ಪನವರಿಗೆ ಕೊಟ್ಟಿರುವ ಜಮೀನಿನ ತನಿಖೆ ಸಮಿತಿ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ತಮ್ಮಂದಿರಾದ ಶ್ರೀ ಕೆ ನಂಜಪ್ಪನವರಿಗೆ ರಾಮನಗರದ ತಾಲ್ಲೂಕಿನಲ್ಲಿ ಸರ್ಕಾರದವರು ಕೊಟ್ಟಿರುವ ೫೦ ಎಕರೆ ಜಮೀನಿನ ಸಂಬಂಧವಾಗಿ ಉಂಟಾದ ವ್ಯಾಜ್ಯದಿಂದ ಹಲವು ಜನರನ್ನು ದಸ್ತಗಿರಿ ಮಾಡಿ, ಅವರ ಮೇಲೆ ಮೊಕದ್ದಮೆ ನಡೆಸುತ್ತಿರುವ ವಿಷಯವು ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಪರಿಶೀಲಿಸಲ್ಪಟ್ಟು, ಈ ವಿಚಾರವನ್ನು ಅನುಕೂಲಾಗ್ರವಾಗಿ ವಿಮರ್ಶಿಸಿ, ತೀರ್ಮಾನಕ್ಕೆ ಬರಲು ಶ್ರೀಗಳಾದ ವಿ ವೆಂಕಟಪ್ಪ, ಹೆಚ್. ಕೆ. ವೀರಣ್ಣಗೌಡ ಮತ್ತು ಎಸ್. ಕರಿಯಪ್ಪನವರಿಂದ ಕೂಡಿದ ಸಮಿತಿಯೊಂದನ್ನು ರಚಿಸಲಾಗಿರುವುದೆಂದು ತಿಳಿದುಬಂದಿದೆ.

○ ಯುಗೊಸ್ಲೇವಿಯದ ಗಡಿಗೆ ಹತ್ತು ಮೈಲಿಯೊಳಗಿರುವ ಒಂದು ಲಿಟಿರು ಕಟ್ಟಡಗಳ ಮೇಲೆ ನೆನ್ನೆ ಬಲ್ಗೇರಿಯಾ ಗಡಿ ಸೈನಿಕರು ಗುಂಡು ಹಾರಿಸಿದರೆಂದು ಬೆಲ್‌ಗ್ರೇಡ್ ರೇಡಿಯೋವು ತಿಳಿಸಿರುತ್ತದೆ.

ಸಧ್ಯದಲ್ಲೇ ಅಕ್ಕಿ ಮತ್ತು ಗೋಧಿ ಹತೋಟಿ ರದ್ದು

ಕೇಂದ್ರ ಆಹಾರ ಸಚಿವರ ವಿವರಣೆ

ಭಾರತದ ಆದ್ಯಂತ ಧಾನ್ಯದ ಹತೋಟಿಯನ್ನು ರದ್ದು ಮಾಡುವ ಬಗ್ಗೆ ಕೇಂದ್ರ ಸರ್ಕಾರದ ಆಹಾರ ಸಚಿವ ರಫಿ ಅಹಮದ್ ಕಿದ್ವಾಯಿಯವರು ಸಂಸ್ಥಾನಗಳ ಆಹಾರ ಸಚಿವರೊಡನೆ ಬೊಂಬಾಯಿಯಲ್ಲಿ ನಡೆಯುತ್ತಿದ್ದ ಮಾತುಕತೆಗಳು ನೆನ್ನೆ ಮುಕ್ತಾಯಗೊಂಡುವು. ಮೈಸೂರಿನ ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ಹಿಂದಿರುಗುವಾಗ ಕಿದ್ವಾಯಿಯವರೊಡನೆ ಮಾತುಕತೆ ನಡೆಸಿ ಕೇಂದ್ರದ ಹತೋಟಿ ರದ್ದಿನ ನೀತಿಗೆ ಪೂರ್ಣ ಬೆಂಬಲವಿತ್ತರೆಂದು ಗೊತ್ತಾಗಿದೆ. ಶ್ರೀ ಕಿದ್ವಾಯಿಯವರು ಈ ಮಾತುಗಳ ಬಗ್ಗೆ ನೆನ್ನೆ ರಾತ್ರಿ ವಿವರಣೆಯಿತ್ತು ಈ ರೀತಿ ತಿಳಿಸಿರುವರು:-

ಭಾರತದ ಎಲ್ಲ ಸಂಸ್ಥಾನಗಳವರೂ ಆಹಾರ ಹತೋಟಿ ರದ್ದಿಗೆ ಯಾವ ಷರತ್ತನ್ನೂ ಹಾಕದೆ ಒಪ್ಪಿರುವರು. ಈಗ ನಮ್ಮಲ್ಲಿರುವ ಧಾನ್ಯವನ್ನೇ ನಾವು ಪೂರ್ಣವಾಗಿ ಬಳಸುತ್ತಿಲ್ಲ. ಹೊರಗಿನಿಂದ ಇಲ್ಲಿಗೆ ಇನ್ನೂ ಧಾನ್ಯವು ಬರುತ್ತಲಿದೆ. ಮುಸುಕಿನ ಜೋಳ ಮತ್ತು ಜೋಳದ ಹತೋಟಿಯನ್ನು ರದ್ದುಪಡಿಸಿದ ಒಡನೆಯೇ ಅಕ್ಕಿ, ಗೋಧಿ ಮತ್ತು ಇತರ ಎಲ್ಲ ಧಾನ್ಯಗಳ ಮೇಲಿನ ಹತೋಟಿಯನ್ನೂ ತೆಗೆಯಲು ನಾವು ಆಲೋಚಿಸಿರುತ್ತೇವೆ. ಧಾನ್ಯಕ್ಕೆ ಕೊರತೆಯಿರುವ ಪ್ರದೇಶವಾದ ಮದರಾಸಿನಲ್ಲೇ ಹತೋಟಿಯನ್ನು ರದ್ದುಮಾಡಿರುವುದು ಯಶಸ್ವಿಯಾಗಿರುವುದರಿಂದ ಇತರ ಕಡೆಗಳಲ್ಲೂ ಹಾಗೆ ಮಾಡಲು ಯಾವ ಆತಂಕವೂ ಬರಲಾರದು.

ಆಹಾರ ಹತೋಟಿ ರದ್ದಿನಿಂದ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗುವುದು. ನಮ್ಮಲ್ಲಿ ಆಹಾರದ ಬೆಳೆಯು ಹೆಚ್ಚುತ್ತಿರುವುದಲ್ಲದೆ, ಉತ್ಪತ್ತಿಯು ಇನ್ನೂ ಹೆಚ್ಚುತ್ತಲೇ ಹೋಗುವುದು. ೧೯೫೩ ರಲ್ಲಿ ಹೊರಗಿನ ಆಮದೂ ಸೇರಿ, ನಾವು ಉಪಯೋಗಿಸುವುದಕ್ಕಿಂತ ಅಧಿಕ ಧಾನ್ಯವು ನಮ್ಮಲ್ಲಿ ಉಳಿಯುವುದು. ಈ ವರ್ಷದಲ್ಲಿ ೩೦ ಲಕ್ಷ ಟನ್ ಧಾನ್ಯ ಸಿಕ್ಕು, ಮುಂದಿನ ವರ್ಷ ೨೫ ಲಕ್ಷ ಟನ್ ತರಿಸುವ ಯೋಚನೆ ಇದೆ. ಮುಂದೆ ಧಾನ್ಯದ ಆಮದು ನಿಲ್ಲುವ ಸಂಭವವೂ ಇದೆ.

ಮುಂದೆ ಹಲವು ನೀರಾವರಿ ಮತ್ತು ಅಣೆಕಟ್ಟುಗಳ ಯೋಜನೆಗಳ ಪ್ರಾರ್ಕಿಕೆಯಾಗಲಿರುವುದರಿಂದ ಮಳೆಯಿಲ್ಲದೆ ಬೆಳೆ ನಷ್ಟವಾಗಿರುವುದೆಂಬ ಭೀತಿಯು ತಪ್ಪಿ ಧಾನ್ಯದ ಉತ್ಪನ್ನವು ಉತ್ತಮಗೊಳ್ಳುವುದು.

ಬೊಂಬಾಯಿನ ವರ್ತಕರೊಡನೆ ಕಿದ್ವಾಯಿಯವರು ಮಾತುಕತೆ ನಡೆಸಿ ವಿದೇಶಗಳಿಂದ ಅಧಿಕ ಉತ್ತಮವಾದ ಧಾನ್ಯವನ್ನು ಆಮದು ಮಾಡುವ ಅಂಶವನ್ನು ಕುರಿತು ಪರಿಶೀಲಿಸಿದರೆಂದು ತಿಳಿದುಬಂದಿದೆ.

ಪಾಕಿಸ್ತಾನದಲ್ಲಿ ಕಾಶ್ಮೀರಿ ಮುಸಲ್ಮಾನರ ಬಂಧನ

ಕಾಶ್ಮೀರಿಗಳ ಬಗ್ಗೆ ಪಾಕಿಸ್ತಾನವು ತೋರುತ್ತಿರುವ ವರ್ತನೆ ವಿರುದ್ಧವಾಗಿ ಪಶ್ಚಿಮ ಪಂಜಾಬಿನಲ್ಲಿ ಚಳುವಳಿ ನಡೆಸುತ್ತಿರುವ ಅನೇಕ ಕಾಶ್ಮೀರೀ ಮುಸಲ್ಮಾನರನ್ನು ಬಂಧಿಸಲಾಗಿರುವುದೆಂದು ವರದಿಯಾಗಿದೆ. ಸಿಯಾಲ್ಕೋಟೆಯಲ್ಲಿರುವ ಕಾಶ್ಮೀರಿಗಳು ತಮ್ಮ ಸ್ಥಿತಿಗತಿಗಳು ಕೆಟ್ಟಿರುವುದೆಂದು ಭಾವಿಸಿ, ವಾಪಸು ಕಾಶ್ಮೀರಕ್ಕೆ ತೆರಳಲು ಅವಕಾಶ ಬೇಕೆಂದು ಚಳುವಳಿ ಹೂಡಿರುತ್ತಾರೆ. ಪಾಕಿಸ್ತಾನ ಸರ್ಕಾರದ ನೀತಿಯನ್ನು ಖಂಡಿಸಲು ಸಿಯಾಲ್ಕೋಟೆಯಲ್ಲಿ ಸೇರಿದ್ದವರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದರೆಂದೂ ಹೇಳಲಾಗಿದೆ.

ಮಾರ್ಚಿ ೧ಕ್ಕೆ ೧ನೇ ತರಗತಿ ರೈಲು ಪ್ರಯಾಣ ರದ್ದು

ಬರುವ ಮಾರ್ಚಿ ೧ನೇ ತಾ|| ಹೊತ್ತಿಗೆ ಭಾರತಾದ್ಯಂತ ೧ನೇ ತರಗತಿ ರೈಲು ಪ್ರಯಾಣವು ಪೂರ್ಣವಾಗಿ ರದ್ದಾಗಲಿರುವುದೆಂದು ರೈಲ್ವೆ ಉಪ ಮಂತ್ರಿ ಅಲಗೇಶನವರು ತಿಳಿಸಿರುತ್ತಾರೆ. ಸಾಧ್ಯವಾದ ಕಡೆಗಳಲ್ಲಿ ಆಗಿನಿಂದ ಹವಾ ಗುಣಕ್ಕೆ ತಕ್ಕ ವ್ಯವಸ್ಥೆಗಳನ್ನೊಳಗೊಂಡ (ಏರ್ ಕಂಡಿಷನ್ಡ್) ಗಾಡಿಗಳನ್ನು ಓಡಿಸಲಾಗುವುದೆಂದು ಅವರು ಸೂಚಿಸಿರುವರು.

ಗೋಮಟೇಶ್ವರಸ್ವಾಮಿ ಮಸ್ತಕಾಭಿಷೇಕ

ಬರುವ ವರ್ಷ ಫೆಬ್ರವರಿಯಲ್ಲಿ ಶ್ರವಣಬೆಳಗೊಳದಲ್ಲಿ ನಡೆಯಬೇಕಾದ ಗೋಮಟೇಶ್ವರನ ಮಹಾ ಮಸ್ತಕಾಭಿಷೇಕವು ಮಾರ್ಚಿ ತಿಂಗಳು ೫ ನೇ ತಾ|| ಗೆ ಮುಂದುವರಿದಿದೆ.

ಬೆಟ್ಟದಪುರದ ಬಳಿ ದರೋಡೆ

ಪಿರಿಯಾಪಟ್ಟಣದ ತಾಲ್ಲೂಕು ಬೆಟ್ಟದಪುರದ ಹೋಬಳಿಯಲ್ಲಿ ಹುಣಸೇಮರಗಳ ಹರಾಜಿಗಾಗಿ ಪಿರಿಯಾಪಟ್ಟಣದಿಂದ ಹೋಗುತ್ತಿದ್ದ ಶ್ರೀ ಮಾರ್ ಆಜ್ ಅಲಿಯವರನ್ನು ತೊರ್ಲಗಳ್ ಎಂಬಲ್ಲಿ ೪ ಜನ ದರೋಡೆಕಾರರು ತಡೆದು ಚಾಕುಗಳನ್ನು ತೋರಿಸಿ, ಅವರಲ್ಲಿದ್ದ ಆಭರಣಗಳನ್ನು ಅಪಹರಿಸಿರುವರೆಂದು ಗೊತ್ತಾಗಿದೆ.

ಆನೆ ಮರಿ ಮತ್ತು ಹೆಬ್ಬಾವಿನ ಕಾಳಗ

ಅಸ್ಸಾಮಿನ ಅರಣ್ಯ ಪ್ರದೇಶವೊಂದರಲ್ಲಿ ಒಂದು ಕಾಡಾನೆ ಮರಿಗೂ ಮತ್ತೊಂದು ಹೆಬ್ಬಾವಿಗೂ ಕಾಳಗವು ನಡೆದು, ಹೆಬ್ಬಾವು ಆನೆಯ ಹಿಂದಿನ ಕಾಲೊಂದನ್ನು ನುಂಗಿ, ಭಾರಿ ಮರವೊಂದಕ್ಕೆ ಸುತ್ತಿಕೊಂಡಿತ್ತೆಂದೂ, ಇದನ್ನು ನೋಡಿದ ಹತ್ತಿರದ ಹಳ್ಳಿಯವರು ಹಾವನ್ನು ಹೊಡೆದು ಕೊಂದು, ಆನೆಯನ್ನು ಬಿಡಿಸಿದರೆಂದೂ ವರದಿಯಾಗಿದೆ.

○ ಪಾಕಿಸ್ತಾನದ ಹತೋಟಿಯಲ್ಲಿರುವ ಆಜಾದ್ ಕಾಶ್ಮೀರದ ಪ್ರದೇಶದಲ್ಲಿ ಇನ್ನು ಒಂದು ತಿಂಗಳೊಳಗೆ ಜಹಗೀರಿಗಳನ್ನು ರದ್ದು ಮಾಡಿ ಭೂ ಸ್ವಾಮ್ಯವನ್ನು ಕಾರ್ಯನಿರತ ಬೇಸಾಯಗಾರರಿಗೆ ವಹಿಸಲಾಗುವುದೆಂದು ವರದಿಯಾಗಿದೆ.

ಮಹಿಳಾ ಅಭಿವೃದ್ಧಿಗಾಗಿ ರಾಜೇಂದ್ರಪ್ರಸಾದರ ನಿಧಿ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್‌ರವರು ತಾವು ಬರೆದಿರುವ ಪುಸ್ತಕಗಳ ಮಾರಾಟದಿಂದ ಬಂದಿರುವ ಹಣದಿಂದ ನಿಧಿಯೊಂದನ್ನು ಸ್ಥಾಪಿಸಿರುತ್ತಾರೆ. ೩ ಲಕ್ಷ ರೂ. ಬಂಡವಾಳದಿಂದ ಆರಂಭವಾಗಿರುವ ಈ ನಿಧಿಯು ಭಾರತದ ಮಹಿಳೆಯರ ಪುರೋಭಿವೃದ್ಧಿಯೇ ಮುಂತಾದ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಾಗಿರುವುದು. ಈ ನಿಧಿಗೆಲ್ಲ ಜನ ಧರ್ಮದರ್ಶಿಗಳನ್ನು ಅವರು ನೇಮಿಸಿರುತ್ತಾರೆ.

ಭದ್ರತಾ ಸಮಿತಿಯ ಹೊಸ ಸದಸ್ಯ ರಾಷ್ಟ್ರಗಳು

ಕೊಲಂಬಿಯಾ, ಲೆಬನಾನ್ ಮತ್ತು ಡೆನ್ಮಾರ್ಕ್ ಈ ಮೂರು ರಾಜ್ಯಗಳು ರಾಷ್ಟ್ರ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಸದಸ್ಯರಾಗಿ ೨ ವರ್ಷ ಕಾಲ ಆರಿಸಲ್ಪಟ್ಟಿರುವುವು.

ಪೌರಸಭೆ ಚುನಾವಣೆ ಬಗ್ಗೆ ಸಭೆ

ಮೊನ್ನೆ ದಿನ ಸಂಜೆ ಮೈಸೂರು ಸಂತೇಪೇಟೆಯಲ್ಲಿರುವ ಶ್ರೀ ಎ. ವೆಂಕಟೇಶಯ್ಯನವರ ಆಫೀಸಿನಲ್ಲಿ ಸಭೆಯೊಂದು ಸೇರಿ ಮುಂಬರುವ ಪೌರಸಭೆ ಚುನಾವಣೆ ಬಗ್ಗೆ ಅನುಸರಿಸಬೇಕಾದ ನೀತಿ ನಿಯಮಗಳ ಬಗ್ಗೆ ಚರ್ಚೆ ನಡೆಸಿತು. ಪ್ರಜಾ ಸಂಘ ಎಂಬ ಹೆಸರಿನಲ್ಲೇ ಕಾರ್ಯ [illegible] ಮುಂದುವರಿಯಬೇಕೆಂದೂ, ಅದರ ಸರಿಯಾದ [illegible] ಯು ಕಳಿಸದ [illegible] ಇರುವುದೆಂದೂ [illegible] ಸದಸ್ಯರುಗಳನ್ನೂ [illegible] ಸಂಘದ [illegible] ಕೆಲಸ ಮಾಡಲು [illegible] ಜನ [illegible] ಉಮೇದುವಾರರನ್ನು ನಿಲ್ಲಿಸಲು ಏರ್ಪಾಡು ಮಾಡಬೇಕೆಂದೂ ತೀರ್ಮಾನಿಸಲಾಯಿತು.

ಮುಸ್ಲಿಂ ಅನಾಥಾಲಯಕ್ಕೆ ಕಟ್ಟಡದ ದಾನ

ರಾಜಧಾನಿಯ ಕಬ್ಬಿಣದ ವ್ಯಾಪಾರಿ [illegible] ಹಾಜಿ ಹಕೀಂ ಮಹಮದ್ [illegible]ರವರು ಇಲವಾಲ ರಸ್ತೆಯಲ್ಲಿರುವ [illegible] ಎಂಬ ೭೫ ಸಾವಿರ ರೂ. ಬೆಲೆ ಬಾಳುವ ತಮ್ಮ ಭವನವನ್ನು ಮುಸ್ಲಿಂ ಬಾಲಕ ಮತ್ತು ಬಾಲಕಿಯರ ಅನಾಥಾಲಯಕ್ಕೆ ಉದಾರವಾಗಿ ದಾನ ಮಾಡಿರುತ್ತಾರೆ.

ಜೂನಿಯರ್ ರೆಡ್ ಕ್ರಾಸ್ ಸಂಘ

ರಾಜಧಾನಿಯ ಹಾರ್ಡ್ವಿಕ್ ಹೈಸ್ಕೂಲಿನ ರೆಡ್ ಕ್ರಾಸ್ [illegible]ದವರು ಶಾಲೆಯ ಆವರಣದಲ್ಲಿ ಕಳೆದ ವಾರ ಒಂದು ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀ [illegible] ಅಯ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು. ರೆಡ್‌ಕ್ರಾಸ್ ಸಂಘದ ಧ್ಯೇಯಗಳನ್ನೂ [illegible] ಅಧಿಕಾರಿಗಳು ಕಳುಹಿಸಿದ್ದ ಸಂದೇಶವನ್ನು ವಿವರಿಸಲಾಯಿತು. [illegible] ರೆಡ್‌ಕ್ರಾಸ್ ಬ್ಯಾಡ್ಜುಗಳನ್ನು ಮಾರಲಾಯಿತು. ಹಳ್ಳಿಯ ಮಕ್ಕಳಿಗೆ ಬಟ್ಟೆಯನ್ನು ಹಂಚುವ ಬಗ್ಗೆ ಕೊಡಬೇಕೆಂದು ವಸ್ತುಗಳನ್ನು ಸ್ವೀಕರಿಸಲಾಯಿತು. ರಾಷ್ಟ್ರಗೀತೆಯ ನಂತರ ಸಮಾರಂಭವು ಮುಕ್ತಾಯವಾಯಿತು.

ಹೈದರಾಬಾದಿನಲ್ಲಿ ಕಡ್ಡಾಯ ಸಂಸ್ಕೃತ ಶಿಕ್ಷಣ

ಸಂಸ್ಕೃತವನ್ನು ಬಿಟ್ಟು ಭಾರತದ ಯಾವ ಭಾಷೆಯೂ ಬದುಕಲಾರದೆಂದು ಹೈದರಾಬಾದಿನ ವಿದ್ಯಾ ಸಚಿವ ಶ್ರೀ ಫೂಲ್‌ಚಂದ್ ಗಾಂಧಿಯವರು ತಿಳಿಸಿ [illegible] ಸಂಸ್ಥಾನದಲ್ಲಿ ಕಡ್ಡಾಯ ಸಂಸ್ಕೃತ ಶಿಕ್ಷಣವನ್ನು ಜಾರಿಗೆ ತರಲಾಗುವುದೆಂದು ಹೇಳಿರುವರು.

ದ್ರಾವಿಡ ಬ್ರಾಹ್ಮಣರ ವಾರ್ಷಿಕ ಸಭೆ

ಮೈಸೂರು ಮತ್ತು ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಸಂಘದ ವಾರ್ಷಿಕ ಮಹಾ ಸಭೆಯು ರಾಜಧಾನಿಯ ದಾಸಪ್ರಕಾಶ ಭವನದಲ್ಲಿ ತಾ|| ೧೧ [illegible] ರಂದು ಸಂಜೆ ೭ ಘಂಟೆಗೆ ಜರುಗುವುದು. ಸಂಘದ ಸದಸ್ಯರೆಲ್ಲರೂ ಸಭೆಗೆ ಬರಬೇಕೆಂದು ಕಾರ್ಯದರ್ಶಿಯವರು ಕೋರಿರುತ್ತಾರೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

[illegible]

ಎಲ್ಲಾ ಬಗೆಯ
ಆಯೋಪತಿಕ ಔಷಧಿಗಳು
[illegible] ಯವಾಗ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ ಅಂಡ್ ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು

ಕೃತ್ರಿಮ ಚಕ್ರಬಂಧ ಸ್ಪರ್ಧೆಗಳ ತಡೆ

ದಿಂಡಿಗಲ್ಲು ಮತ್ತು ಮಧುರೆಗಳಲ್ಲಿ ನಡೆಯುತ್ತಿರುವ ಹಲವು ಕೃತ್ರಿಮ ಚಕ್ರಬಂಧ ಸ್ಪರ್ಧೆಗಳನ್ನು ನಡೆಸುವವರ ಮೇಲೆ ಮೊಕದ್ದಮೆ ಹೂಡಿರುವುದಾಗಿಯೂ ಅವುಗಳಿಗೆ ಕಳುಹಿಸುವ ಮನಿಯಾರ್ಡರುಗಳನ್ನೂ ಜಪ್ತಿ ಮಾಡಲು ತಡೆಯಲಾಗಿರುವುದೆಂದೂ ಮದರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ತಿಳಿಸಿರುವರು.

ವಿವಾಹ ಮಹೋತ್ಸವ

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಉಪಾಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ತಮ್ಮ ಪುತ್ರ ಶ್ರೀಯುತ [illegible] ರವರಿಗೆ ಮದನಪಲ್ಲಿ [illegible] ಸುಬ್ಬರಾಜ [illegible] ರವರ ಪುತ್ರಿ ಸೌ|| ಶ್ರೀಮತಿ ದೇವಿಯವರನ್ನು ಕೊಟ್ಟು ನೆನ್ನೆ ಮದುವೆಯನ್ನು ನೆರವೇರಿಸ [illegible]

[illegible]

ಟೈರ್ [illegible] ಟ್ಯೂಬ್
ಸ [illegible] ಪಡೆಗಳು
[illegible]
[illegible] ಸ್ಪೇರ್ ಪಾರ್ಟ್ ಸ್ಟೋರ್
[illegible] ಮೈಸೂರು

ಪೆಪ್ಸು ರಾಜಪ್ರಮುಖರ [illegible] ಕಳಗಿಳಿಸಲು ಒತ್ತಾಯ

[illegible] ಪೂರ್ವ [illegible] ಸಂಸ್ಥಾನಗಳ [illegible] ಪ್ರಜಾ [illegible] ಸಭೆಯು [illegible] ರಾಜಪ್ರಮುಖರು ಸಂಸ್ಥಾನದ [illegible] ಮತ್ತು ಕೋಮುವಾರು ಪಂಗಡಗಳ [illegible] ಕೈಗೊಂಡು ಸಂಸ್ಥಾನದ ರಾಜ್ಯ ಪರಿಸ್ಥಿತಿಯನ್ನು ಬಹಳ ಕೆಡಿಸಿರುವರೆಂದೂ, [illegible] ಕೇಂದ್ರ ಸರ್ಕಾರದವರು [illegible] ಬೇಕೆಂದೂ ಕೋರುವ ನಿರ್ಣಯ [illegible] ಗೀಕರಿಸಿತು.

ಅಕ್ಕಿ ಕಾಳಿನ ಮೇಲೆ ಪ[illegible]

ಲಂಡನ್ನಿನ ಬಿ. ಬಿ. ಸಿ. ರೇಡಿಯೋ ಕೇಂದ್ರಕ್ಕೆ ಜಪಾನಿನವರೊಬ್ಬರು [illegible] ಯ ಕಾಳಿನ ಮೇಲೆ ಪತ್ರ ಬರೆದು [illegible] ರ ದಿನಚರಿ ಪ್ರಸಾರ ಕಾರ್ಯಕ್ರಮ [illegible] ಗೆ ವಂದನೆಗಳನ್ನರ್ಪಿಸಿರುತ್ತಾರೆ. [illegible] ಬಿ. ಸಿ.ಗೆ ಬಂದಿರುವ ಪತ್ರಗಳಲ್ಲಿ [illegible] ಅತಿ ಚಿಕ್ಕದೆಂದು ಗೊತ್ತಾಗಿದೆ.

ಮನೆ ಕಂದಾಯ ಹೆಚ್ಚಿಸಿರು[illegible] ಬಗ್ಗೆ ಅಪೀಲು ವ್ಯವಸ್ಥೆ

[illegible] ರಾಜಧಾನಿಯ ಪೌರಸಭೆಯು [illegible] ಕಂದಾಯದ ಪುನರ್ [illegible] ನಡೆಸಿದ ಸಂದರ್ಭದಲ್ಲಿ [illegible] ನಡೆಸಿದ [illegible] ಬಾಡಿಗೆ [illegible] ದೆಯೂ ಇರುವ ಹಲವು ವಾಸದ [illegible] ಗಳ ಮೇಲೆ ಎರಡು ವರ್ಷದ [illegible] ದೊರೆ [illegible] ದುಬಾರಿ ಕಂದಾಯ [illegible] ವಿಧಿಸಿರುವುದೂ ಮತ್ತು ಇತರ [illegible] ಕಂದಾಯಗಳನ್ನು ಹೆಚ್ಚಿಸಿ [illegible] ತಕ್ಕವು ಮತ್ತು ಅನ್ಯಾಯ [illegible] ದೆಂದು ತಿಳಿಸಿ, ಈ ಬಗ್ಗೆ [illegible] ಹೂಡಲು ಇಚ್ಛಿಸಿರುವವರು [illegible] ಕ್ಕ [illegible] ಪಡೆಯುವವರ [illegible] ನವರ ಪ್ರಾಥಮಿಕ ಶಾಲಾ [illegible] ನಂಬರು ಕೊರೆಯಲ್ಲಿ [illegible] ದಿನ ಸಂಜೆ [illegible] ಗಂಟೆ [illegible] ಯ ಇಚ್ಛೆಗನುಸಾರ [illegible] ನ್ನು ಹಿಡಿದು ಮುಂದಿನ ಕ್ರಮ [illegible] ಹೂಡಬೇಕೆಂದು ಶ್ರೀ ಎಂ. ಸಿ. [illegible] ಯ್ಯನವರು ಕೋರಿರುತ್ತಾರೆ.

ಮೈಸೂರು ಪೇಟೆ ಧಾರ[illegible]

ಪಲ್ಲಕ್ಕೆ	ರೂ. ಇಂದ [illegible]
ಕಡಲೆಕಾಳೆ	[illegible]
ಎಳ್ಳು	೭೦೦ [illegible]
ಹುಚ್ಚೆಳ್ಳು	[illegible]
ಹರಳು ಬೀಜ	[illegible]
ಹುರುಳಿ	[illegible]
ಹೆಸರು	[illegible]
ಹೊಂಗೆಬೀಜ	[illegible]
ಹುಣ್ಸೆ	[illegible]
ತೊಗರಿ	[illegible]
ಹಲಸಂದೆ	[illegible]
ತೆಂಗಿನ ಕಾಯಿ	
ಮಣಕಟ್ಟೆ	೬೦೦
ಸಣ್ಣಕಾಯಿ	[illegible]
ಸಿಪ್ಪೆಕಾಯಿ	[illegible]
ಬೆಲ್ಲ	[illegible]
ತೆಂಗಿನಕಾಯಿ ೧೧೦೦ಗಳಿಗೆ	[illegible]

Edited, Printed and Pu[blished] by A. R. Nagaraj at Sadhvi Press, D[illegible] [illegible] Road Mysore

ಮೂವರು ಇಲ್ಲದ [illegible] ಬಸುರಾಗದವರು
ಬಾಳುವೆಯು [illegible]
[illegible] ವರ್ಷಗಳ ಹಿಂದೆ ಸರ್ವ [illegible]
[illegible] ಗಳ [illegible] ಬಹಿಷ್ಟೆ
ಸಂಬಂಧವ ಹೊಟ್ಟೆನೋವು ಸಂಪೂರ್ಣವಾಗಿ ಗುಣವಾಗುವ
ತನಕ ಖಂಡಿತ ಸಂತಾನವಾಗುವುದಿಲ್ಲವೆಂಬ [illegible]
ಈ ಹೊಟ್ಟೆನೋವು [illegible] ಸಂಪೂರ್ಣವಾಗಿ [illegible]
ಸಲ ಬೇಕೋ? [illegible]
ಅಂಬಳೆ [illegible]
[illegible]
[illegible]
ಅಂಬಳೆ ರಾಮ ಸ್ವಾಮಿ ಅಯ್ಯಂಗಾರರ ಸುಪ್ರಸಿದ್ಧ
ಸಂತಾನ ಸಿಂಧೂರ
[illegible]
1 ಸೀಸೆ [illegible]
★ ಬಹಿಷ್ಟೆ [illegible] ಹೊಟ್ಟೆನೋವನ್ನು [illegible]
★ ಅಕ್ರಮ [illegible] ಬಹಿಷ್ಟೆಯಾಗುವುದನ್ನು ಕ್ರಮ [illegible]
★ ಗರ್ಭ [illegible] ಗರ್ಭ [illegible] ಇತ್ಯಾದಿಗಳನ್ನು ನಿವಾರಿಸಿ
★ ಬಂಜೆತನವನ್ನು ಕಳೆದು [illegible] ಕೊಡುತ್ತದೆ
ಕ್ರಯ 1 ಸೀಸೆ [illegible] ರೂ [illegible]
[illegible] ಪತ್ರ [illegible]
ವಿಳಾಸ - ಎ. ರಾಮಸ್ವಾಮಿ ಅಯ್ಯಂಗಾರ್ [illegible]
675 ಸಂತಾನ ಸಿಂಧೂರ ಆಫೀಸ್ [illegible] ರೋಡ್ [illegible]
[illegible] ಮೈಸೂರು

ಟೆಲಿಫೋನ್ ನಂ 798 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೯-೧೦-೧೯೪೭ [ಸಂಚಿಕೆ ೭೪

ಧಾನ್ಯದ ಆಮದಿಗಾಗಿ ವರ್ತಕರಿಗೆ ಅನುಮತಿ

ನಗರದ ಮೇಲೆ ೭ ಹಾರುವ ತಟ್ಟೆಗಳು !

ಮೈಸೂರು ೨೮

ಆ ದಿನ ಬೆಳಗ್ಗೆ ೫ ೪೦ ಗಂಟೆ ಸಮಯದಲ್ಲಿ ೭ ಹಾರುವ ತಟ್ಟೆಗಳು ವಿದ್ಯುಚ್ಛಕ್ತಿಯ ವೇಗದಲ್ಲಿ ಪಶ್ಚಿಮದಿಂದ ಪೂರ್ವದ ಕಡೆ ಹೋದುವೆಂದು ಮಹಾರಾಜಾ ಕಾಲೇಜಿನ ಸೀನಿಯರ್ ಬಿ ಎ ತರಗತಿ ವಿದ್ಯಾರ್ಥಿ, ಶ್ರೀ ಹಿ.ಎಲ್ ಮಹದೇವಯ್ಯನವರು ತಿಳಿಸಿರುತ್ತಾರೆ ಮುಂಜಾನೆ ಆಕಾಶವನ್ನು ನಿಶ್ಚಯವಾಗಿ ನೋಡುವ ಅಭ್ಯಾಸವು ತಮಗಿರುವುದೆಂದೂ, ಆ ದಿನವೂ ಅದೇ ರೀತಿ ನೋಡುತ್ತಿದ್ದಾಗ, ನಕ್ಷತ್ರಗಳಂತೆ ಮಿನುಗುವ ೭ ಜ್ಯೋತಿಗಳು ಕಾಣಿಸಿಕೊಂಡುವೆಂದೂ, ಅರ್ಧ ನಿಮಿಷದಲ್ಲಿ ಅವು ತಾವು ನಿಂತ ಸ್ಥಳದಲ್ಲಿ ನೇರವಾಗಿ ಬಹು ಎತ್ತರದಲ್ಲಿ ಹಾರಿ ಹೋದುವೆಂದೂ ಅವರು ಹೇಳಿರುತ್ತಾರೆ ಅವು ಕೆಂಪಗಿದ್ದು ಅವು ಗುಂಡಾಗಿಯೂ, ಓಟದಲ್ಲಿ ವೃತ್ತಾಕಾರವಾಗಿಯೂ ಇದ್ದುವೆಂದೂ ಅವರು ತಿಳಿಸಿರುವರು.

ಕಾಂಗ್ರೆಸ್ ಅಧಿವೇಶನಕ್ಕೆ ನಗರ ಪ್ರತಿನಿಧಿಗಳ ಚುನಾವಣೆ

ಕಾಂಗ್ರೆಸ್ ಅಧಿವೇಶನದ ನಗರ ಪ್ರತಿನಿಧಿಗಳ ಚುನಾವಣೆಯು ನಗರ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದೂ ನಾಮನಿರ್ದೇಶನ ಅರ್ಜಿ ನವೆಂಬರ್ ೧ನೇ ತಾರೀಖು ನಗರ ಕಾಂಗ್ರೆಸ್ ಕಛೇರಿಯಲ್ಲಿ ದೊರೆಯುವುವೆಂದೂ,ಅರ್ಜಿ ಸ್ವೀಕರಿಸಲು ನವೆಂಬರ್ ೧ ಮತ್ತು ೩ ನೇ ತಾರೀಖು ಕಡೆಯ ದಿನಗಳೆಂದೂ ನಗರ ಕಾಂಗ್ರೆಸ್ ಚುನಾವಣಾಧಿಕಾರಿಗಳಾದ ಡಾ|| ... ಗೌಡರು ತಿಳಿಸಿರುತ್ತಾರೆ

ಬೊಂಬಾಯಿಯಲ್ಲಿ ೩ ದಿನಗಳ ಹರತಾಳ

ಮರಾಠಿ ಕಾರ್ಮಿಕರ ಪ್ರತಿಭಟನೆ ... ಬೊಂಬಾಯಿಯ ಮರಾಠಿ ಸಂಘದ ಕಾರ್ಯನಿರ್ವಾಹಕ ಮಂಡಲದವರು ಸಂಸ್ಥಾನಿಕ ... ನವೆಂಬರ್ ೧, ೨ ಮತ್ತು ೩ರಂದು ಹರತಾಳವನ್ನು ನಡೆಸಬೇಕೆಂದು ನಿರ್ಧರಿಸಿರುತ್ತಾರೆ

ಕಲ್ಕತ್ತಾ ಬಳಿ ಬಸ್ಸಿನ ಅಪಘಾತದಿಂದ ೭ ಜನ ಮರಣ

ಕಲ್ಕತ್ತಾ-ಬರಕ್‌ಪುರದ ರಸ್ತೆಯಲ್ಲಿ ಕಲ್ಕತ್ತೆಯ ನಗರದಿಂದ ನಾಲ್ಕು ಮೈಲಿಯಲ್ಲಿ ಮಧ್ಯಾಹ್ನ ಎದುರುಬದುರಾಗಿ ಬರುತ್ತಿದ್ದ ಪ್ರಯಾಣಿಕರ ಬಸ್ಸಿಗೆ ಡಿಕ್ಕಿ ಹೊಡೆದು ... ಜನರು ಮೃತಪಟ್ಟರೆಂದೂ ... ಜನರಿಗೆ ತೀವ್ರ ಗಾಯವಾಯಿತೆಂದೂ ವರದಿಯಾಗಿದೆ ... ಗಾಯಗೊಂಡವರನ್ನು ಕಲ್ಕತ್ತಾ ಆಸ್ಪತ್ರೆಗೆ ಸಾಗಿಸಲಾಗಿದೆ

ಸಿಡಿಮದ್ದಿನ ದಾಸ್ತಾನಿಗೆ ಬೆಂಕಿಬಿದ್ದು ಇಬ್ಬರ ಮರಣ

ಸೂರತ್ತಿನಲ್ಲಿ ಸಿಡಿಮದ್ದುಗಳನ್ನು ಶೇಖರಿಸಲಾಗಿದ್ದ ಒಂದು ಗೋದಾಮಿಗೆ ನಿನ್ನೆ ಬೆಳಗ್ಗೆ ಬೆಂಕಿ ಬಿದ್ದು ಸುಮಾರು ... ಸಿಡಿಮದ್ದುಗಳು ಸಿಡಿದುವೆಂದೂ ಇದರ ಪರಿಣಾಮವಾಗಿ ಇಬ್ಬರು ಮಕ್ಕಳು ಸುಟ್ಟು ಮೃತಪಟ್ಟರೆಂದೂ ಇನ್ನಿಬ್ಬರಿಗೆ ಗಾಯವಾಯಿತೆಂದೂ ವರದಿಯಾಗಿದೆ ಅಗ್ನಿ ಶಾಮಕ ಯಂತ್ರಗಳು ಬೆಂಕಿಯನ್ನು ಆರಿಸಿದುವು

ಸೀಮೆಯೆಣ್ಣೆ ವರ್ತಕರಿಗೆ ಜಾಮೀನು

ಸುಪ್ರೀಂ ಕೋರ್ಟಿನ ಆಜ್ಞೆ

ಬೆಂಗಳೂರು ೨೮

ಕಾಳಸಂತೆಯಲ್ಲಿ ಸೀಮೆಯೆಣ್ಣೆಯನ್ನು ಮಾರಿದರೆಂದು ಹೈಕೋರ್ಟಿನವರಿಂದ ೬ ತಿಂಗಳು ಸಜಾ ಮತ್ತು ೧೦೦೦ ರೂ ದಂಡದ ಶಿಕ್ಷೆಗೆ ಗುರಿಯಾಗಿರುವ ಶ್ರೀ ಎ ಸಂಪಂಗಿರಾಮಯ್ಯನವರು ೩೦ ಸಾವಿರ ರೂ ಗಳ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊಬಲಗಿನ ೨ ಜಾಮೀನುಗಳ ಮೇಲೆ ಒಂದು ತಿಂಗಳು ಕಾಲ ಬಿಡುಗಡೆಯಾಗಬಹುದೆಂದು ಸುಪ್ರೀಂ ಕೋರ್ಟಿನವರು ಆಜ್ಞೆ ಮಾಡಿರುತ್ತಾರೆ ಇಲ್ಲಿನ ನಗರ ನ್ಯಾಯಾಧೀಶರು ಈ ಸಂಬಂಧವಾಗಿ ಪೊಲೀಸು ಇನ್ಸ್‌ಪೆಕ್ಟರರಿಗೆ ಸೂಚನೆ ಕೊಟ್ಟು ಸದರಿ ವರ್ತಕರ ಮೇಲಿರುವ ವಾರಂಟನ್ನು ಜಾರಿಗೆ ತರಕೂಡದೆಂದು ತಿಳಿಸಿರುತ್ತಾರೆ

ಬೆಂಗಳೂರಿಗೆ ರಾಜೇಂದ್ರ ಸಿಂಹಜಿ

ಭಾರತದ ಶ್ರೇಷ್ಠ ಸೇನಾನಿಯಾಗಲಿರುವ ಲೆ|| ಜನರಲ್ ಮಹಾರಾಜಾ ರಾಜೇಂದ್ರ ಸಿಂಹಜಿಯವರು ಬರುವ ೩ನೇ ತಾರೀಖು ಬೆಂಗಳೂರಿಗೆ ಆಗಮಿಸುವರು ಅಲ್ಲಿಂದ ಅವರು ಮೈಸೂರಿಗೆ ಪ್ರಯಾಣ ಬೆಳೆಸುವರು ಅವರು ಪುನಃ ೫ ನೇ ತಾರೀಖು ವಾಪಸು ಬೆಂಗಳೂರಿಗೆ ಆಗಮಿಸುವರು ೭ ನೇ ತಾರೀಖು ಸಿವಿಲ್ ಪ್ರದೇಶದಲ್ಲಿ ನಿರ್ಮಿಸಲಾಗುವ ರಾಜೇಂದ್ರ ಸಿಂಹಜಿ ಸ್ಟೇಡಿಯಂನ ಶಂಕುಸ್ಥಾಪನೆಯನ್ನು ನೆರವೇರಿಸುವರು ೮ ನೇ ತಾ|| ಪೂನಾ ನಗರಕ್ಕೆ ತೆರಳುವರು

ಧಾನ್ಯ ಸಾಗಾಣಿಕೆ ಬಗ್ಗೆ ಜೋನು ವ್ಯವಸ್ಥೆ ಇಲ್ಲ

ಮದರಾಸಿನ ಆಹಾರ ಸಚಿವ ಶ್ರೀ ಕೆ ಸುಬ್ರಹ್ಮಣ್ಯಂರವರು ಬೊಂಬಾಯಿಯಿಂದ ಸೌತ್ ಮದರಾಸಿಗೆ ಹಿಂದಿರುಗಿ ಪತ್ರಿಕಾ ಪ್ರತಿನಿಧಿಗಳಿಗೆ ವಿವರಣೆಯಿತ್ತು, ಮದರಾಸಿಗೆ ಬೇಕಾಗುವಷ್ಟು ಧಾನ್ಯವನ್ನು ಸರಬರಾಜು ಮಾಡಲು ಕೇಂದ್ರ ಸರ್ಕಾರದವರು ಭರವಸೆ ನೀಡಿರುವರೆಂದೂ ಧಾನ್ಯ ಸಾಗಾಣಿಕೆ ಬಗ್ಗೆ ಜೋನುಗಳನ್ನು ನಿರ್ಮಿಸುವ ವಿಷಯಕ್ಕೆ ಹಲವು ಸಂಸ್ಥಾನಗಳು ಪ್ರತಿಭಟನೆ ಸೂಚಿಸುವುದರಿಂದ ಜೋನುಗಳನ್ನು ನಿರ್ಮಿಸುವ ಸಂಭವವಿಲ್ಲವೆಂದೂ ತಿಳಿಸಿದರು.

ಆಹಾರ ಧಾನ್ಯ ತರಿಸಲು ವ್ಯಾಪಾರಿಗಳಿಗೆ ಅವಕಾಶ

ಆಹಾರ ಧಾನ್ಯದ ಹತೋಟಿಯನ್ನು ತಪ್ಪಿಸುವ ಬಗ್ಗೆ ಕೇಂದ್ರ ಸರಕಾರದವರು ತಮ್ಮ ನೀತಿಯನ್ನು ಘೋಷಿಸಿದ ನಂತರ ಹೊರ ದೇಶಗಳಿಂದ ಖಾಸಗಿ ವರ್ತಕರು ಧಾನ್ಯವನ್ನು ಆಮದು ಮಾಡಲು ಅವಕಾಶವನ್ನು ಕೊಡಲಾಗುವುದೆಂದು ತಿಳಿದುಬಂದಿದೆ

ಜಾಮೀನಿನ ಮೇಲೆ ರಾಜೂರವರ ಬಿಡುಗಡೆ

ಮೈಸೂರಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರಿಗೆ ಲಂಚ ನೀಡಲು ಪ್ರಯತ್ನಿಸಿದ ಪ್ರಯತ್ನಕ್ಕಾಗಿ ಶಿಕ್ಷೆಗೆ ಗುರಿಯಾಗಿರುವ ಶ್ರೀ ಎಲ್ ಎಸ್ ರಾಜು ರವರು ಬೊಂಬಾಯಿ ಹೈಕೋರ್ಟಿನಲ್ಲಿ ನಿನ್ನೆ ೫೦ ಸಾವಿರ ರೂ ಗಳ ಸ್ವಂತ ಮುಚ್ಚಳಿಕೆ ಮತ್ತು ತಲಾ ೨೫ ಸಾವಿರ ರೂಗಳ ಎರಡು ಜಾಮೀನುಗಳನ್ನು ಕೊಟ್ಟು ಬಿಡುಗಡೆಯಾದರೆಂದು ತಿಳಿದುಬಂದಿದೆ ಅವರ ಅಪೀಲು ವಿಚಾರಣೆಯು ಬರುವ ತಿಂಗಳು ೩ ನೇ ತಾರೀಖು ಬೊಂಬಾಯಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಎಂ ಸಿ ಚಾಗ್ಲಾ ಮತ್ತು ನ್ಯಾಯಮೂರ್ತಿ ಶ್ರೀ ದೀಕ್ಷಿತ್‌ರವರ ಸಮ್ಮುಖದಲ್ಲಿ ಆರಂಭವಾಗಲಿದೆ

ಶವ ಎತ್ತಲು ೪೫ ಜನರ ಸಹಾಯ

ಇಂದೋರು ಬಳಿ ಗುಣ ಎಂಬ ಹಳ್ಳಿಯಲ್ಲಿ ಭಾರತದ ಅತ್ಯಂತ ಸ್ಥೂಲಕಾಯರಾದ ವಕೀಲ, ಸಾಧೂಲಾಲ್ ಭಾರ್ಗವರವರು ಕೆಲವು ದಿನಗಳ ಹಿಂದೆ ಮಡಿದರು ಅವರ ಶವವನ್ನೆತ್ತಲು ೪೫ ಜನರು ಸಹಾಯಕ್ಕೆ ಬರಬೇಕಾಯಿತೆಂದೂ, ಲಾರಿಯಲ್ಲಿಟ್ಟು ಅದನ್ನು ಸ್ಮಶಾನಕ್ಕೆ ಸಾಗಿಸಲಾಯಿತೆಂದೂ ಹೇಳಲಾಗಿದೆ ಅವರು ೫೦೦ ಪೌಂಡು ತೂಕವಿದ್ದರೆಂದು ತಿಳಿದುಬಂದಿದೆ

○ ಆಕ್ಷೇಪಣೆಯಾಗಿರುವುದೆ ಟ ಕಾರಣಕ್ಕಾಗಿ ಕಲ್ಕತ್ತೆಯ ೧ ಸಾವಿರ ಮಿಠಾಯಿ ಅಂಗಡಿ,ಉಪಾಹಾರ ಗೃಹ ಮತ್ತು ಹೋಟೇಲುಗಳಿಗೆ ರಹದಾರಿಯನ್ನು ಕೊಡಲು ಅಲ್ಲಿನ ಪೌರಸಭೆಯವರು ನಿರಾಕರಿಸಿರುತ್ತಾರೆ ಅಲ್ಲಿ ಈಗೆ ಒಟ್ಟು ೧೧ ಸಾವಿರ ಹೊಟೇಲುಗಳಿವೆ

ಲಂಚ ಪಡೆದುದಕ್ಕಾಗಿ ಸಚಿವರ ಅಸಿಸ್ಟೆಂಟರ ದಸ್ತಗಿರಿ

ಬೊಂಬಾಯಿಯ 7 ಏಲ್ ಸರಬರಾಜು ಶಾಖಾ ಉಪ ಮಂತ್ರಿಗಳ ಪರ್ಸನಲ್ ಅಸಿಸ್ಟೆಂಟರಾದ ಕೇಲ್ಕರ್ ಎಂಬುವರು ಒಬ್ಬ ಕಕ್ಷಿಯಿಂದ ಲು ವ್ಯಾಪಾರಿಯಿಂದ ೩೦೦ ರೂ ಲಂಚ ಪಡೆದರೆಂದು ಅವರನ್ನು ದಸ್ತಗಿರಿ ಮಾಡಲಾಗಿದೆ ವ್ಯಾಪಾರಿಯು ರಹದಾರಿಯನ್ನು ರದ್ದು ಗೊಳಿಸಲಾಗುವುದೆಂದು ಕೇಲ್ಕರ್‌ರವರು ಬೆದರಿಸಿ, ಲಂಚವನ್ನು ಕೇಳಿದರೆಂದೂ, ಲಂಚ ನಿರೋಧಾಧಿಕಾರಿಗಳಿಂದ ಗುರುತು ಮಾಡಲ್ಪಟ್ಟ ನೋಟುಗಳನ್ನು ಅಧಿಕಾರಿಯು ಸ್ವೀಕರಿಸಿದ್ದುದನ್ನು ಪತ್ತೆ ಹಚ್ಚಲಾಯಿತೆಂದೂ ಗೊತ್ತಾಗಿದೆ.

ಮಾಕಳಿದುರ್ಗದ ಬಳಿ ಪುನಃ ಗೂಡ್ಸ್‌ಗಾಡಿ ಕಂಬಿ ತಪ್ಪಿತು

ಬೆಂಗಳೂರು-ಗುಂತಕಲ್ ರೈಲು ರಸ್ತೆಯಲ್ಲಿರುವ ಮಾಕಳಿದುರ್ಗದ ನಿಲ್ದಾಣದ ಬಳಿ ಕಳೆದ ೨೫ನೇ ತಾ|| ಗೂಡ್ಸ್ ಗಾಡಿಯೊಂದು ಕಂಬಿ ತಪ್ಪಿದ ಸ್ಥಳದಲ್ಲೇ ಪುನಃ ನಿನ್ನೆ ಮತ್ತೊಂದು ಗಾಡಿಯು ಕಂಬಿತಪ್ಪಿರುವುದೆಂದು ವರದಿಯಾಗಿದೆ

ಹಂಪೆಯಲ್ಲಿ ಪ್ರದರ್ಶನಾಲಯ

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪೆಯಲ್ಲಿ ರಾಯಲಸೀಮೆಯ ಪುರಾತನ ಕೇಂದ್ರ ಶಿಲ್ಪ ಮತ್ತು ಪ್ರದರ್ಶನಾಲಯವನ್ನು ಸ್ಥಾಪಿಸಲು ಭಾರತಸರ್ಕಾರದವರು ಪರ್ಯಾಲೋಚಿಸುತ್ತಿರುವರು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬೂದು ಬಣ್ಣದ ಕಡಪಾ ಸುಣ್ಣದ ಕಲ್ಲಿನ ಮೇಲೆ ಅತಿ ಚಮತ್ಕಾರವಾಗಿ ಕೆತ್ತಿರುವ ೩ ವಸ್ತುಗಳು ಈಗ ದೊರೆತಿವೆ ಇವುಗಳನ್ನು ಅಲ್ಲಿ ಇಡಲಾಗುವುದು

ಗಿರಣಿ ಕಾರ್ಮಿಕರ ಮೇಲೆ ಲಾಠಿ ಪ್ರಯೋಗ

ಅಹಮದಾಬಾದಿನ ಹತ್ತಿ ಗಿರಣಿಯೊಂದರ ೫೦೦ ಮಂದಿ ಕಾರ್ಮಿಕರು ನಿನ್ನೆ ಗಿರಣಿಯ ವ್ಯವಸ್ಥಾಪಕರನ್ನು ಸುತ್ತುವರಿದಾಗ ಅವರ ಸಹಾಯಕಾಗಿ ಬಂದ ಪೋಲೀಸರ ಮೇಲೆ ಕಾರ್ಮಿಕರು ಕಲ್ಲುಗಳನ್ನು ಬೀರಿದ ಪರಿಣಾಮವಾಗಿ ೩೦ ಜನರಿಗೆ ಗಾಯಗಳಾದುವೆಂದೂ, ಪೋಲೀಸರು ಲಾಠಿ ಪ್ರಹಾರ ಮಾಡಿ ಅವರನ್ನು ಚದುರಿಸಿದರೆಂದೂ ಹೇಳಲಾಗಿದೆ ೩೭ ಜನರ ದಸ್ತಗಿರಿಯಾಗಿದೆ

ಹೂವು ಕದ್ದಿದ್ದಕ್ಕೆ ಶಿಕ್ಷೆ

ರಾಜಧಾನಿಯ ಸರ್ಕಾರಿ ಉದ್ಯಾನವನಗಳಲ್ಲಿ ಕಳೆದ ೧೯ನೇ ತಾರೀಖು ಹೂವನ್ನು ಕದ್ದು ಕೊಯ್ಯುತ್ತಿದ್ದ ಮಂಚಿ ಎಂಬುವನ ಮೇಲೆ ಒಂದನೇ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು ಕಳೆದ ಗುರುವಾರ ಆತನಿಗೆ ಒಂದು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು

○ ಆಂಧ್ರ ಸ್ವಾತಂತ್ರ್ಯ ಸ್ಥಾಪನಾ ಚಳುವಳಿಯ ಮುಖಂಡರಾದ ಸ್ವಾಮಿ ಸೀತಾರಾಂರವರು ಬರುವ ತಿಂಗಳು ೧೫ನೇ ತಾರೀಕಿನೊಳಗೆ ದೆಹಲಿಗೆ ತೆರಳಿ,ತಮ್ಮ ಧ್ಯೇಯಸಾಧನೆಗಾಗಿ ಅಲ್ಲಿನ ರಾಜಧಾನಿಯಲ್ಲಿ ಆಮರಣಾಂತ ಉಪವಾಸವನ್ನು ಆರಂಭಿಸುವರೆಂದು ತಿಳಿದುಬಂದಿದೆ.

ಲಂಚ ಖುಷುವತ್ತು ಗಳಿಗಾಗಿ ಶಿಕ್ಷೆ

ಬೆಂಗಳೂರು ೨೯

ಕಳೆದ ಜೂ॥ ತಿಂಗಳಿಗೆ ಮುಗಿದ ೩ ತಿಂಗಳ ಅವದಿಯಲ್ಲಿ ಲಂಚ ನಿರೋಧ ಇಲಾಖೆಯುವರು ಈ ಕೆಳಗೆ ಕಂಡವರ ಮೇಲೆ ಕ್ರಮ ಕೈಗೊಂಡಿರುತ್ತಾರೆ—

ಟ್ರೆಜರಿ ಅಸಿಸ್ಟೆಂಟರಾದ ಶ್ರೀ ಸೈಯ್ಯದ್ ಅಹಮದ್ ಅಲಿಖಾನರು ಜವಾನರುಗಳನ್ನು ಸ್ವಂತ ಕೆಲಸಕ್ಕೆ ನೇಮಿಸಿದುದಕ್ಕಾಗಿ ೩೦೧ ರೂ ಕೊಡಬೇಕು

ಸಾರ್ವಜನಿಕರಿಂದ ಲಂಚ ಪಡೆದರೆಂದು ಸಬ್ ರಿಜಿಸ್ಟ್ರಾರ್ ಶ್ರೀ ವೈ ಮಲ್ಲಪ್ಪನವರ ನಿವೃತ್ತಿ

ಹೆಚ್ಚು ಆಹಾರ ಬೆಳೆ ಯೋಜನೆ ಸಂಬಂಧವಾಗಿ ಸರ್ಕಾರಕ್ಕೂ, ರೈತರಿಗೂ ವಂಚನೆ ಮಾಡಿದುದಲ್ಲದೆ, ಕೈಕೆಳಗಿನವರಿಂದ ಫೋರ್ಜರಿಗೆ ಸಹಾಯ ಮಾಡಿದ ವ್ಯವಸಾಯ ಇನ್ಸ್‌ಪೆಕ್ಟರ್ ಶ್ರೀ ಅಬ್ದುಲ್ ರಹಮಾನರಿಂದ ೬೪೯ ಮಣ ೧೪ ಪೌಂಡು ಗೊಬ್ಬರದ ವಸೂಲಿ ಅವರೊಡನೆ ಪರೀಕ್ಷಾದ ಮಾರಾಟಗಾರ ಶ್ರೀ ಚಿಕ್ಕ ತಿಮ್ಮಯ್ಯನವರ ನಿವೃತ್ತಿ

ಕಾಡುಗಳ ಸಂಪತ್ತಿನ ದುರುಪಯೋಗಕ್ಕಾಗಿ ರೇಂಜ್ ಫಾರೆಸ್ಟ್ ಆಫೀಸರ್ ಶ್ರೀ ಟಿ ಶ್ರೀಕಂಠಯ್ಯನವರಿಗೆ ಬಲಾತ್ಕಾರ ನಿವೃತ್ತಿ ಪೂರ್ವ ರಜಾ

ಆರೋಗ್ಯ ಏಜೆಂಟರಕ್ಕೆ ನೇಮಿಸಲ್ಪಟ್ಟಿದ್ದ ಡಾ॥ ಎಸ್ ವಿ ಸುಬ್ಬರಾಯರಿಂದ ದುರುಪಯೋಗ ಪಡಿಸಿಕೊಳ್ಳಲಾಗಿದ್ದ ೫೫೦ ಸಲ್ಫಾನಿಮೈಡ್ ಮಾತ್ರೆಗಳ ಬೆಲೆಯ ವಸೂಲಿ

ಬಸ್ಸು ಪರ್ಮಿಟ್ಟುಗಳ ಸಸ್ಪೆಂಡ್

೫೦೧೩, ಎಸ್, ೧೬೭ ಎಸ್, ೭೨ ಎಸ್ ನಂಬರು ಇರುವ ಮೂರು ಬಸ್ಸುಗಳಲ್ಲಿ ಹೆಚ್ಚು ಜನರನ್ನು ಕೊಂಡಿಯ್ಯುದಕ್ಕಾಗಿ ೧೫ ದಿನಗಳ ಕಾಲ ಅವುಗಳ ಪರ್ಮಿಟ್ಟನ್ನು ರದ್ದುಪಡಿಸಲಾಗಿದ್ದೆಂದೂ, ಬಸ್ಸುಗಳ ಕಂಡಕ್ಟರುಗಳ ರಹದಾರಿಯನ್ನು ೩ ತಿಂಗಳ ಕಾಲ ನಿಲ್ಲಿಸಲಾಗಿತ್ತೆಂದೂ ಲಂಚ ನಿರೋಧ ಇಲಾಖೆಯವರು ತಿಳಿಸಿರುತ್ತಾರೆ ೧೧ ಬಸ್ಸುಗಳವರ ಮೇಲೆ ಇದೇ ಕಾರಣಗಳಿಗಾಗಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಸೂಚಿಸಲಾಗಿದೆ

ಮೋಟಾರು ವಾಹನಗಳ ರಿಜಿಸ್ಟ್ರೇಷನ್

ಬೆಂಗಳೂರಿನಲ್ಲಿ ವಾಸವಿಲ್ಲದ ಮೋಟಾರು ವಾಹನಗಳ ಮಾಲೀಕರುಗಳಿಗೆ ರಿಜಿಸ್ಟ್ರೇಷನ್ ಸರ್ಟಿಫಿಕೇಟುಗಳನ್ನು ಅಂಚೆ ಮೂಲಕ ವಾಪಸು ಕಳುಹಿಸಲಾಗುವುದೆಂದೂ, ಬೆಂಗಳೂರಿನಲ್ಲಿರುವವರು ಅವುಗಳನ್ನು ಪಡೆಯಲು ತಮ್ಮ ಸ್ವಂತ ಏರ್ಪಾಡು ಮಾಡಿಕೊಳ್ಳಬೇಕೆಂದೂ ಸೂಚಿಸಿ, ಸರ್ಕಾರದ ಪತ್ರಿಕಾ ಪ್ರಕಟಣೆಯೊಂದು ತಿಳಿಸಿರುತ್ತದೆ

ರಸ್ತೆಗಳಲ್ಲಿ ಉಗುಳುವುದರ ನಿಷೇಧಕ್ಕಾಗಿ ಶಾಸನ

ಪೂರ್ವ ಪಂಜಾಬಿನ ಹಲವು ನಗರಗಳ ರಸ್ತೆಗಳಲ್ಲಿ ಉಗುಳುವುದನ್ನು ನಿಷೇಧಿಸುವ ಶಾಸನವನ್ನು ಮಾಡುವ ಉದ್ದೇಶದಿಂದ ಮಸೂದೆಯೊಂದನ್ನು ಶಾಸನ ಸಭೆಯಲ್ಲಿ ಅಂಗೀಕರಿಸಲಾಗಿದೆ ಗೊತ್ತಾದ ಕಡೆಗಳಲ್ಲಿ ಹೊರತು ಮಿಕ್ಕ ಕಡೆ ಉಗುಳಿದರೆ ಇಪ್ಪತ್ತೈದು ರೂ ದಂಡವನ್ನು ವಿಧಿಸಲಾಗುವುದು

ಒರಿಸ್ಸಾ ಶಾಸನ ಸಭೆಯಲ್ಲಿ ಗೊಂದಲ

ಒರಿಸ್ಸಾ ಶಾಸನ ಸಭೆಯಲ್ಲಿ ಸಭಾಧ್ಯಕ್ಷರಿಗೂ ವಿರೋಧ ಪಕ್ಷದ ಸದಸ್ಯರಿಗೂ ಮಾತುಬೆಳೆದು, ಹಲವು ಸದಸ್ಯರು ಮೇಜುಗಳ ಮೇಲೆ ಪೇಪರ್‌ವೈಟುಗಳಿಂದ ಹೊಡೆದು ಗೊಂದಲವನ್ನೆಬ್ಬಿಸಿದರೆಂದು ವರದಿಯಾಗಿದೆ ಉಪಾಹಾರದ ಸಮಯದ ವರೆಗೂ ಗಲಾಟೆಗಳು ನಡೆಯುತ್ತಲೇ ಇದ್ದುವು ಹಿಂದಿನ ದಿನ ಸಭಾಧ್ಯಕ್ಷರು ರೂಲಿಂಗ್ ಒಂದನ್ನು ಕೊಟ್ಟ ಸಂಬಂಧವಾಗಿ ಜನಸಂಘದ ಪ್ರತಿನಿಧಿ ಪಂಡಿತ ನೀಲಕಂಠದಾಸರವರು ವೈಯ್ಯಕ್ತಿಕ ವಿವರಣೆ ಕೊಡಲು ಹೋದಾಗ ಅಧ್ಯಕ್ಷರು ಅದಕ್ಕೆ ಅವಕಾಶವೀಯದಿದ್ದುದೇ ಗಲಭೆಗೆ ಕಾರಣವಾಯಿತು

ಕಂಪೆನಿಗಳ ರಿಜಿಸ್ಟ್ರಾರರು ಕೇಂದ್ರ ಆಡಳಿತಕ್ಕೆ

ವಿವಿಧ ಪ್ರಾಂತ್ಯಗಳ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರುಗಳನ್ನು ಕೇಂದ್ರದ ಆಡಳಿತಾಧಿಕಾರಕ್ಕೆ ಒಳಪಡಿಸಿಕೊಳ್ಳುವುದಾಗಿ ಕೇಂದ್ರ ಸರ್ಕಾರದವರು ಸಂಸ್ಥಾನ ಸರ್ಕಾರಗಳಿಗೆ ಸೂಚನೆಯಿತ್ತಿರುವರೆಂದು ಗೊತ್ತಾಗಿದೆ ಕಂಪೆನಿ ಲಾಗಳ ಸಮಿತಿಯ ಶಿಫಾರಸಿನ ಮೇರೆಗೆ ಈ ಕಾರ್ಯಕ್ರಮ ಕೈಗೊಳ್ಳಲಾಗುವುದಾಗಿ ತಿಳಿದು ಬಂದಿದೆ

ಭಾರತ ಸೇವಾದಳದ ಜಿಲ್ಲಾ ಕಾರ್ಯಕರ್ತರ ಸಭೆ

ಭಾರತ ಸೇವಾದಳದ ಬೆಳವಣಿಗೆಗೆ ಅವಶ್ಯಕವಾದ ಕಾರ್ಯಕ್ರಮವನ್ನು ಹಾಕಲು ಪ್ರತಿ ಜಿಲ್ಲೆಯಲ್ಲೂ ಕಾರ್ಯಕರ್ತರ ಸಭೆಗಳು ನಡೆಯುವುವು ಸಭೆಗಳಲ್ಲಿ ಸೇವಾ ದಳದ ದಳಪತಿಗಳೂ, ಹಲವು ಅಧಿಕಾರಿಗಳೂ, ಜಿಲ್ಲೆಯ ದಳಗಳ ಶಾಖಾ ನಾಯಕರಿಗೂ, ತಾಲ್ಲೂಕು ಕಾರ್ಯದರ್ಶಿಗಳಿಗೂ ಸೂಕ್ತ ತಿಳುವಳಿಕೆಗಳನ್ನು ಕೊಡಲಾಗುವುದು ಮೈಸೂರು ಜಿಲ್ಲೆ, ನಗರ ಮತ್ತು ಮಂಡ್ಯ ಜಿಲ್ಲೆಗಳ ಸಭೆಯು ಒಂದರ ೧೫–೧೧ ನೇ ತಾ॥ ರಾಜಧಾನಿಯ ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಟ್ಟಡದಲ್ಲಿ ಜರುಗುವುದು

ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವವು ೧–೧೧–೫೨ ನೇ ತಾ॥ ಶನಿವಾರ ಸಂಜೆ ೫॥ ಘಂಟೆಗೆ ಪುಣ್ಯಮೆ ಪ್ರಯುಕ್ತ ನಡೆಯುವುದು. ಅದೇ ಸಂಜೆ ೭॥ ಗಂಟೆಯಿಂದ ರಾತ್ರಿ ೯ ಗಂಟೆವರೆಗೆ ಊರಿನ ಬೀದಿಗಳಲ್ಲೂ ಶ್ರೀಯವರ ಉತ್ಸವವು ಸಕಲ ರಾಜ ಮರ್ಯಾದೆಗಳೊಡನೆ ಜರುಗುವುದು

ಕೋಚಿಂಗ್ ತರಗತಿಗಳು

ರಾಜಧಾನಿಯ ವಿದ್ಯಾ ವರ್ಧಕ ಹೈಸ್ಕೂಲಿನಲ್ಲಿ ಬರುವ ೩ ನೇ ತಾ॥ ನಿಂದ ಪ್ರತಿನಿತ್ಯವೂ ಸಂಜೆ ೬॥ ಗಂಟೆಯಿಂದ ರಾತ್ರಿ ೮॥ ವರೆಗೆ ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗಾಗಿ ಕೋಚಿಂಗ್ ತರಗತಿಗಳನ್ನು ನಡೆಸಲಾಗುತ್ತದೆ ಸೇರಲು ಇಷ್ಟಪಡುವವರು ಶಾಲೆಯ ಮುಖ್ಯೋಪಾಧ್ಯಾಯರಿಂದ ಹೆಚ್ಚಿನ ವಿವರಗಳನ್ನು ತಿಳಿಯಬಹುದು

ಗಂಡನ ಮೇಲಿನ ಮೊಕದ್ದಮೆಯಲ್ಲಿ ಹೆಂಡತಿ ಸಾಕ್ಷಿ

ಮದ್ರಾಸಿನ ಅಲೆಕ್ಸಾಂಡರ್ ಎಂಬ ವರ್ತಕರೊಬ್ಬರ ಕೊಲೆ ಸಂಬಂಧವಾಗಿ ಅಲ್ಲಿನ ಒಂದು ಪತ್ರಿಕೆಯ ಸಂಪಾದಕ ಪಿ ಪಿ ಮೆನನ್ನರ ಮೇಲೆ ಪೋಲೀಸರು ಮೊಕದ್ದಮೆಯಲ್ಲಿ ಅಪಾದಿತರ ಪತ್ನಿ ದೇವಕಿ ಎಂಬಾಕೆಯು ತಪ್ಪೊಪ್ಪಿಗೆಯನ್ನು ಮಾಡಿಕೊಂಡಿರುವಳೆಂದೂ, ಆಕೆಗೆ ನ್ಯಾಯಾಧೀಶರು ಕ್ಷಮೆ ತೋರಿ, ಈಗ ಆಕೆಯನ್ನು ಪ್ರಾಸಿಕ್ಯೂಷನ್ ಪರ ಸಾಕ್ಷಿಯಾಗಿ ತೆಗೆದುಕೊಳ್ಳಲಾಗಿದೆಯೆಂದೂ ವರದಿಯಾಗಿದೆ

ರೇಖಾಗಣಿತದ ಮಾದರಿ ಟಿಕ್ಕೆಗಳು

ರಾಜಧಾನಿಯ ಶಾರದಾವಿಲಾಸ ಕಾಲೇಜಿನ ಗಣಿತ ಶಾಸ್ತ್ರದ ಅಧ್ಯಾಪಕರಾದ ಶ್ರೀ ವಿ ಕೆ ದೊರೆಸ್ವಾಮಿಯವರು ಪ್ರಕಟಿಸಿರುವ ಇಂಟರ್‌ಮೀಡಿಯೆಟ್ ತರಗತಿಯ ಟಿಪಿಕಲ್ ಪ್ರಾಬ್ಲೆಮ್ಸ್ ಇನ್ ಜನರಲ್ ಜಾಮಿಟ್ರಿ ಎಂಬ ಚಿಕ್ಕ ಇಂಗ್ಲಿಷ್ ಗ್ರಂಥವು ನಮ್ಮ ಕೈ ಸೇರಿದೆ ಭಾರತದ ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಕೊಡಲ್ಪಟ್ಟ ೭೦ ಇಂಟರ್ ಪ್ರಶ್ನೆಗಳಿಗೆ ಇದರಲ್ಲಿ ವಿಸ್ತೃತವಾದ ಉತ್ತರಗಳನ್ನು ಕೊಡಲಾಗಿದೆ ಇಂಟರ್ ವಿದ್ಯಾರ್ಥಿಗಳಿಗೆ ಇದರಿಂದ ಉಪಯೋಗವಾಗುವುದರಲ್ಲಿ ಸಂದೇಹವಿಲ್ಲ ಬೆಲೆ ೦–೮–೦

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ	ರೂ. ಇಂದ ರೂ ಗೆ
ನೆಲಗಡಲೆ	೧೧–೦–೦	೨–೮–೦
ಎಳ್ಳು	೬೬ ೦ ೦	೬೨ ೮–೦
ಹುಚ್ಚೆಳ್ಳು	೩೪–೦–೦	
ಹರಳು ಬೀಜ	೪೬–೩–೦	೫೩ ೧೦ ೦
ಹುರುಳಿ	೨೬ ೧೨ ೦	೩೪ ೦ ೦
ಹೆಸರು	೫೫–೧೪–೦	೬೦.೦.೦
ಹೊಂಗೆಬೀಜ	೨೩ ೪ ೦	
ಉದ್ದು	೩೭ ೬ ೦	
ಅವರೆ	೭೯–೦೦–೦	
ಹಲಸಂದೆ	೫೭–೮–೦	೩೪ ೦ ೦
ಮೆಣಸಿನಕಾಯಿ		
ಮಣಗಕ್ಕೆ	೬–೧೨ ೦	
ಹುಣಸೆಹಣ್ಣು	೪ ೯ ೦	೬ ೯ ೦
ಸೀಗೇಕಾಯಿ	೫–೦–೦	೫ ೪–೦
ಬೆಲ್ಲ	೩–೪–೦	
ತೆಂಗಿನಕಾಯಿ ೧೦೦೦ ೧೨೩ ೦.೦ ೨೩೬ ೦.೦		

SRI GAYATHRI

TALKIES

Daily 2 Shows

From 29-10-52 · For 3 Days

CLOSE TO MY HEART

With — Ray Milland and Gene Tierney

— MORNING SHOWS —

On 1st and 2nd Nov 52

BIRD OF PARADISE

(Technicolor)

ಸೇವಕ ದಿನ ಪತ್ರಿಕೆ

ರಾಜಧಾನಿಯ ಸೇವಕ ದಿನ ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಅನಂತ ಸುಬ್ಬರಾಯರು ಇದೇ ನವೆಂಬರ್ ೧ ನೇ ತಾರೀಖಿನಿಂದ ತಮ್ಮ ಪತ್ರಿಕೆಗೆ ಪಿ ಟಿ ಐ ಮತ್ತು ರಾಯಿಟರ್ ತಂತಿ ಸುದ್ದಿಗಳನ್ನು ತರಿಸಿ, ಪ್ರಕಟಿಸುವುದಾಗಿ ತಿಳಿಸಿರುತ್ತಾರೆ. ರಾಜಧಾನಿಯ ಪತ್ರಿಕೋದ್ಯಮದಲ್ಲಿ ಮುಂದೆ ಹೆಜ್ಜೆ ಇಡಲಿರುವ ಶ್ರೀಯುತರಿಗೆ ಸಕಲರ ಸಹಾನುಭೂತಿಯೂ ಇರುವುದು. ಪತ್ರಿಕೆಯನ್ನು ಬೆಳಗ್ಗೆ ಮತ್ತು ಸಂಜೆ ಎರಡು ಹೊತ್ತು ಪ್ರಕಟಿಸಲಾಗುವುದು ಪ್ರತಿ ಒಂದಕ್ಕೆ ೦–೦–೬ ಪೈ.

ಬೃಂದಾವನೋತ್ಸವ

ರಾಜಧಾನಿಯ ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ದೇವಾಲಯದಲ್ಲಿ ನಾಳೆ ಸಂಜೆ ೮ ಗಂಟೆಗೆ ಉತ್ಥಾನ ದ್ವಾದಶಿ ಪ್ರಯುಕ್ತ ಬೃಂದಾವನೋತ್ಸವವು ನಡೆಯುವುದು. ಸಕಲರಿಗೂ ಆಹ್ವಾನವಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಜಿ. ಎಲ್. ನಳೀನ ರಾವ್ ಸಂಗೀತ, ಮಧ್ಯಾಹ್ನ ೩ ಎಂ. ವಿ ಸೂರ್ಯನಾರಾಯಣ, ಕೊಳಲು. ಸಂಜೆ ೫ ೪೦ ವಿ. ಮುನಿರಾಮಯ್ಯ, ಸಂಗೀತ. ೬ ೧೦ ಕನ್ನಡ ಗೀತೆಗಳು ೭ ರಸ ಜಿನಸು ೭ ೦೦ ಗದೇವ ಶಾಸ್ತ್ರಿ, ಸಂಗೀತ ೮ ಪಾರ್ವತಿ ಕಲ್ಲ ಮುರುಸಿಸಿ ೮ ೧೫ ಲಲಿತಮ್ಮ, ವೀಣಾ ವಾದನ. ೮ ೪೦ ಎಂ ವಿ ಸೂರ್ಯನಾರಾಯಣ, ಕೊಳಲು ೯ ೧೫ ಚಿತ್ರಕಾವ್ಯ ೯.೪೦ ವಿ. ಟಿ. ನರಸಿಂಹಾಚಾರ್, ಕೆ ಸಿ ನರಸಿಂಹಸ್ವಾಮಿ ಮತ್ತು ವಿ ಸೀತಾರಾಮಯ್ಯನವರುಗಳಿಂದ ರಚಿತವಾದ ಕಾವ್ಯ ೧೦ ಎಂ ವಿ ನರಸಿಂಹಾಚಾರ್ ಬಿ ಆರ್. ಶ್ರೀನಿವಾಸನ್, ಆರ್. ಪದ್ಮ, ಪಿ. ವಿ.ವರಾಹಸ್ವಾಮಿ, ವಿ.ವೆಂಕಟಸುಬ್ಬರಾವ್ ಮತ್ತು ಎಂ. ಎಸ್. ಚಂದ್ರಶೇಖರಯ್ಯ

WANTED

Part-time or full-time service of an accountant. Only experienced people need approach for particulars, The Managing Director, The N K C A Pharmacy, 927 Lakshmipuram, Mysore, within the 1st week of Nov 1952

Edited, Printed and Published by A. R. Nagaraja at Sadhvi Press, D Subbiah Road, Mysore

ಒಲಿಂಪಿಯಾ

ಆರೋಹಿ ಪ್ರಾರಂಭ 30-10-52 ರಿಂದ

ಪ್ರತಿ ದಿನ ಮೂರು ಆಟಗಳು

ನ್ಯೂ ಥಿಯೇಟರ್ಸ್ ರವರ ಪ್ರಖ್ಯಾತನಟ ಮುನಿಸ್ವಾಮಿ ಮತ್ತು ಪ್ರೇಂ ಅದೀಬ್ ಕಾತ್ರನಯಿಸಿರುವ ಅತ್ಯುತ್ತಮ ಪೌರಾಣಿಕ ಹಿಂದಿ ಚಿತ್ರ

★ ರಾಜಾ ಹರಿಶ್ಚಂದ್ರ ★

ಸಹಾಯಕ ನಟಿವರ್ಗ-ಲಲಿತಾ ಪವಾರ್ ಬಿಬಿನ್ ಗುಪ್ತ ಮತ್ತು ಹಾಸ್ಯ ನಟ ಗೋಪ್

ಬೆಳಗಿನ ಪ್ರದರ್ಶನ – ಚಂದ್ರಮೋಹನ್ ಪಾತ್ರವಹಿಸಿರುವ ಡೋಂ ಕಿ

ಟೆಲಿಫೋನ್ ನಂ. 178 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೩೦-೧೦ ೧೯೫೨ [ಸಂಚಿಕೆ ೭೮

ಕೆಂಪು ಮತ್ತು ರಾಷ್ಟ್ರೀಯ ಚೀಣಾರ ನೌಕೆಗಳ ಕದನ

ಪಂಚಲಿಂಗ ದರ್ಶನದ ಯಾತ್ರಿಕರಿಗೆ ೨ ಆಣೆ ತೆರಿಗೆ

ಮೈಸೂರು ೩೦

ತಲಕಾಡಿನಲ್ಲಿ ಬರುವ ತಿಂಗಳು ೧೭ನೇ ತಾ॥ ನಡೆಯುವ ಪಂಚಲಿಂಗ ದರ್ಶನದ ಸಂಬಂಧವಾಗಿ ಯಾತ್ರಿಕರ ಅನುಕೂಲದ ಬಗ್ಗೆ ಆಗುತ್ತಿರುವ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಪರಿಶೀಲಿಸಿಕೊಂಡು ಬಂದಿರುವರು. ಯಾತ್ರೆಗೆ ೩ ಲಕ್ಷ ಜನರು ಬರುವ ನಿರೀಕ್ಷೆಯಿದೆ. ಕ್ಷೇತ್ರವನ್ನು ಆರೋಗ್ಯಕರವಾಗಿಟ್ಟು, ಉತ್ತಮ ನೀರಿನ ವ್ಯವಸ್ಥೆ ಮಾಡುವುದು, ಹಂಗಾಮಿ ವೈದ್ಯಶಾಲೆಯೊಂದನ್ನು ತೆರೆಯಲಾಗುವುದು. ಯಾತ್ರಾರ್ಥಿಗಳು ಎರಡು ಆಣೆಯ ಸುಂಕ ಕೊಡಬೇಕಾಗುವುದು. ಶ್ರೀಮನ್ ಮಹಾರಾಜರವರು ಈ ಯಾತ್ರೆಗೆ ಹೋಗುವರೆಂದು ಹೇಳಲಾಗಿದೆ.

ಮುದ್ರಣಾಲಯದ ಮುಂದೆ ಸತ್ಯಾಗ್ರಹವೇ?

ಮೈಸೂರು ಜಿಲ್ಲಾ ಮುದ್ರಣಾಲಯದ ಕೆಲಸಗಾರರ ಸಭೆಯು ಕಳೆದ ೨೭ನೇ ತಾರೀಖು ಸೇರಿ ರಾಜಧಾನಿಯ ಪ್ರಿನ್ಸಿಪಾಲ್ ಎಲೆಕ್ಟ್ರಿಕ್ ಪ್ರೆಸ್ಸಿನ ಕೆಲಸಕ್ಕಿದ್ದ ಶ್ರೀ ಮಹಾಲಿಂಗಪ್ಪ ಎಂಬುವರನ್ನು ತೆಗೆದುಹಾಕಿರುವುದನ್ನು ಖಂಡಿಸಿ, ಅವರನ್ನು ಕೂಡಲೇ ಕೆಲಸದ ಮೇಲೆ ತೆಗೆದುಕೊಳ್ಳುವಂತೆ ಒತ್ತಾಯ ಮಾಡಲಾಯಿತು. ೯ ದಿನಗಳೊಳಗಾಗಿ ಹಾಗೆ ಮಾಡದಿದ್ದರೆ ಮುದ್ರಣಾಲಯದ ಮುಂದೆ ಸತ್ಯಾಗ್ರಹವನ್ನು ಹೂಡಬೇಕೆಂದೂ ನಿರ್ಣಯ ಮಾಡಲಾಯಿತು.

ಹರಿಕಥೆ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ಶಿವರಾಂಪೇಟೆಯ ೩ನೇ ಶಾಖೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀಮತಿ ಶಾರದಮ್ಮನವರಿಂದ ಸತಿ ಅನುಸೂಯ ಎಂಬ ಹರಿಕಥೆಯು ನಡೆಯುವುದು. ನರಸಿಂಹರಾಜ ಮೊಹಲ್ಲಾದಲ್ಲಿರುವ ಶ್ರೀ ಪ್ರಸನ್ನ ಗಣಪತಿ ದೇವಾಲಯದಲ್ಲಿರುವ ೪ನೇ ಶಾಖೆಯಲ್ಲಿ ಬರುವ ತಿಂಗಳು ೩ನೇ ತಾ॥ ಸಂಜೆ ೬ ಗಂಟೆಗೆ ಶ್ರೀಮತಿ ಎಂ. ಎಸ್. ಶಂಕರಮ್ಮ ಮತ್ತು ಎಂ. ಎಸ್. ಲೀಲಾವತಿಯವರ ವೀಣೆ ಮತ್ತು ಸಂಗೀತವು ನಡೆಯುವುದು.

ವೆಂಕಟಸುಬ್ರಹ್ಮಣ್ಯ ಶಾಸ್ತ್ರಿಗಳವರ ನಿಧನ

ರಾಜಧಾನಿಯ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದ ಶ್ರೀ ವೆಂಕಟಸುಬ್ರಹ್ಮಣ್ಯ ಶಾಸ್ತ್ರಿಗಳವರು ನೆನ್ನೆ ದಿನ ಹೃದಯ ರೋಗದಿಂದ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಸುಮಾರು ೬೫ ವರ್ಷ ವಯಸ್ಸಾಗಿದ್ದಿತು.

ಒಂದು ವರ್ಷದಲ್ಲೇ ಕರ್ನಾಟಕ ಪ್ರಾಂತ

ಇನ್ನು ಒಂದು ಅಥವಾ ಎರಡು ವರ್ಷಗಳೊಳಗೆ ಕರ್ನಾಟಕ ಪ್ರಾಂತವಾಗಲಿರುವುದೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿರುತ್ತಾರೆ.

ಚರ್ಚಿಲರಲ್ಲಿ ಅವಿಶ್ವಾಸ ಸೂಚಕ ಪತ್ರ

ಬ್ರಿಟನ್ನಿನ ರಾಣಿ ಎಲಿಜಬೆತ್ತರ ಪಟ್ಟಾಭಿಷೇಕೋತ್ಸವ ಸಮಾರಂಭದ ಟೆಲಿವಿಷನ್ ಪ್ರದರ್ಶನದ ವ್ಯವಸ್ಥೆಯ ನಿಷೇಧದ ಬಗ್ಗೆ ಚರ್ಚಿಲರಿಗೆ ಮಂತ್ರಿಮಂಡಲದವರು ನೀಡಿದ ಸಲಹೆಯನ್ನು ಬಹಿರಂಗ ಪಡಿಸಲು ಅವರು ನಿರಾಕರಿಸಿದುದರಿಂದ ಪಾರ್ಲಿಮೆಂಟಿನ ಲೇಬರ್ ಪಕ್ಷದ ೭೯ ಮಂದಿ ಸದಸ್ಯರು ಚರ್ಚಿಲರಲ್ಲಿ ವೈಯಕ್ತಿಕ ಅವಿಶ್ವಾಸ ನಿರ್ಣಯದ ಸೂಚನಾ ಪತ್ರವನ್ನು ಒರೆದಿರುವರೆಂದು ಗೊತ್ತಾಗಿದೆ.

ಬ್ರಿಟನ್ನಿಗೆ ಚೀಣಾ ಪ್ರತಿಭಟನೆ

ಹಾಂಕಾಂಗಿನ ವಿಮಾನ ನಿಲ್ದಾಣದಲ್ಲಿ ಚೀಣೆಯರು ಇಟ್ಟುಕೊಂಡಿರುವ ೭೧ ವಿಮಾನಗಳನ್ನು ಬ್ರಿಟನ್ನು ತನಗೆ ಒಪ್ಪಿಸಬೇಕೆಂದು ಕಮ್ಯೂನಿಸ್ಟ್ ಚೀಣಾವು ತಿಳಿಸಿ ಅವನ್ನು ಇನ್ನೂ ಕೊಡದಿರುವ ಬಗ್ಗೆ ಬ್ರಿಟನ್ನಿಗೆ ಪ್ರತಿಭಟನೆಯನ್ನು ಸೂಚಿಸಿರುತ್ತದೆ.

ಅನಾಥರಿಗೆ ಉಚಿತ ಪಡಿತರ ಹಂಚಿಕೆ

ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕೋಲಾರ ಜಿಲ್ಲೆಯಲ್ಲಿ ೩ ದಿನಗಳ ಕಾಲ ಪ್ರವಾಸ ಮಾಡಿ ಅಲ್ಲಿ ಅಭಾವ ಪೀಡಿತರ ಕುಂದುಕೊರತೆಗಳನ್ನು ವಿಚಾರಿಸಿ ನಿವಾರಣೆ ಬಗ್ಗೆ ಸೂಕ್ತ ಭರವಸೆ ನೀಡಿದರು. ಬಾರಕೂರು ಎಂಬ ಗ್ರಾಮಕ್ಕೆ ಭೇಟಿಯಿತ್ತಾಗ ಅವರು ಅಲ್ಲಿ ಪರಿಹಾರ ಕಾರ್ಯಕ್ಕಾಗಿ ಹತ್ತು ಸಾವಿರ ರೂ ಅನ್ನು ಮಂಜೂರು ಮಾಡಿ, ಅನಾಥರಿಗೆ ಉಚಿತ ಪಡಿತರ ಹಂಚುವಂತೆ ಆಜ್ಞೆ ಮಾಡಿದರೆಂದು ಹೇಳಲಾಗಿದೆ.

ರೈಲಿನಲ್ಲಿ ಫಲಾಹಾರದ ಗಾಡಿ ರದ್ದು

ಮೂರನೇ ತರಗತಿ ರೈಲು ಪ್ರಯಾಣಿಕರಿಗೆ ಹೆಚ್ಚಿಗೆ ಸ್ಥಳದ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶ್ಯದಿಂದ ಕೇಂದ್ರ ರೈಲ್ವೆ ಇಲಾಖೆಯವರು ಪ್ರಮುಖ ರೈಲು ಮಾರ್ಗಗಳಲ್ಲಿ ಫಲಾಹಾರ ಗಾಡಿಗಳನ್ನು ರದ್ದು ಮಾಡಲು ಆಲೋಚಿಸಿರುವರೆಂದು ಗೊತ್ತಾಗಿದೆ.

ರಾಣಿ ಎಲಿಜಬೆತ್ತರೊಡನೆ ರಾಧಾಕೃಷ್ಣನ್ ಭೇಟಿ

ಭಾರತದ ಉಪಾಧ್ಯಕ್ಷ ಡಾ॥ ಎಸ್. ರಾಧಾಕೃಷ್ಣನ್‌ರವರು ನೆನ್ನೆ ಲಂಡನ್ನಿನ ಬಕಿಂಗ್‌ಹ್ಯಾಂ ಅರಮನೆಯಲ್ಲಿ ಬ್ರಿಟನ್ನಿನ ನೂತನ ರಾಣಿ ಎಲಿಜಬೆತ್‌ರವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಟಿ. ಎಸ್. ಎಸ್. ರಾಜನ್‌ರವರ ಸ್ಥಿತಿ ಚಿಂತಾಜನಕ

ಮದ್ರಾಸಿನ ಮಾಜಿ ಆಹಾರದ ಮಂತ್ರಿ ಡಾಕ್ಟರ್ ಟಿ. ಎಸ್. ಎಸ್. ರಾಜನ್‌ರವರು ಮೂತ್ರಕೋಶದ ರೋಗ ಪೀಡಿತರಾಗಿ ನೆನ್ನೆ ತಮ್ಮ ಸ್ವಂತ ಹಳ್ಳಿಯಿಂದ ತಿರುಚನಾಪಳ್ಳಿ ಆಸ್ಪತ್ರೆಗೆ ಪ್ರಜ್ಞಾವಿಹೀನ ಸ್ಥಿತಿಯಲ್ಲಿ ಕರೆತರಲ್ಪಟ್ಟಿರುತ್ತಾರೆ.

ಬೊಂಬಾಯಿಯಲ್ಲಿ ಒಂದು ದಿನದ ಮೋಟಾರು ಮುಷ್ಕರ

ಬೊಂಬಾಯಿಯಲ್ಲಿ ಹೊಸ ತೆರಿಗೆ ವಿರೋಧ ಸಮಿತಿಯವರ ಮುಷ್ಕರಕ್ಕೆ ಬೆಂಬಲ ನೀಡುವ ಸಲುವಾಗಿ ಬೊಂಬಾಯಿ ಪ್ರಾಂತ್ಯದ ಆದ್ಯಂತ ಮೋಟಾರು ಕೆಲಸಗಾರರು ಬರುವ ಸೋಮವಾರ ಒಂದು ದಿನದ ಮುಷ್ಕರ ಹೂಡಲು ನಿರ್ಧರಿಸಿರುವರು.

ಕ್ರಿಕೆಟ್ ಆಟದ ಕಾಲದಲ್ಲಿ ಖರೆಯವರ ಪಿಕೆಟಿಂಗ್

ಪಾಕಿಸ್ತಾನ ಸರ್ಕಾರದವರು ಹಿಂದುಗಳನ್ನು ಹೊರಕ್ಕೆ ದೂಡುತ್ತಿರುವಾಗ ಭಾರತದವರು ಪಾಕಿಸ್ತಾನದ ಆಟಗಾರರೊಡನೆ ಕ್ರಿಕೆಟ್ ಪಂದ್ಯವನ್ನು ಆಡಲು ಕರೆಯುವುದು ತಪ್ಪೆಂದು ಹಿಂದೂ ಮಹಾ ಸಭೆಯ ನಾಯಕರಾದ ಡಾ॥ ಎನ್. ಬಿ. ಖರೆಯವರು ತಿಳಿಸಿ, ನಾಗಪುರದಲ್ಲಿ ಪಾಕಿಸ್ತಾನದ ಟೀಮಿನವರು ಸ್ಥಳೀಯರೊಡನೆ ಆಡುವಾಗ ತಾವು ಪಿಕೆಟಿಂಗ್ ಮಾಡುವುದಾಗಿ ಹೇಳಿರುವರು.

ರೈತರಿಗೆ ಫರೂಕರ ಜಮೀನುಗಳ ಹಂಚಿಕೆ

ಈಜಿಪ್ಟಿನ ಮಾಜಿ ದೊರೆ ಫರೂಕರ ಜಮೀನುಗಳನ್ನು ಅಲ್ಲಿನ ರೈತರುಗಳಿಗೆ ಹಂಚಲಾಗಿದೆ.

ಕೆಂಪು ಚೀಣಾ ಮತ್ತು ರಾಷ್ಟ್ರೀಯರ ನೌಕೆಗಳ ಕದನ

ಹಾಂಕಾಂಗಿಗೆ ಸ್ವಲ್ಪ ದೂರದಲ್ಲಿರುವ ಲಿಂಗ್ ಟಿಂಗ್ ದ್ವೀಪದ ಹತ್ತಿರ ಕೆಂಪು ಚೀಣದ ಗನ್ ಬೋಟುಗಳಿಗೂ ರಾಷ್ಟ್ರೀಯರ ನೌಕೆಗಳಿಗೂ ನೆನ್ನೆ ೧೪ ಗಂಟೆಗಳ ಕಾಲ ಭಿರಂಗಿ ಕದನವು ನಡೆಯಿತೆಂದು ವರದಿಯಾಗಿದೆ.

ಗುಂಡಿನಿಂದ ಆರ್ಯಸಮಾಜದ ಮುಖಂಡನ ಕೊಲೆ

ಹೈದರಾಬಾದಿನ ಔರಂಗಾಬಾದ್ ನಗರದಲ್ಲಿ ಕಳೆದ ಸೋಮವಾರ ತಪ್ಪಿ ರಾಮುಲು ಎಂಬ ಆರ್ಯಸಮಾಜದ ಮುಖಂಡನೊಬ್ಬನು ಹೋಟೆಲೊಂದರಲ್ಲಿ ಚಹಾ ಸೇವಿಸುತ್ತಿದ್ದಾಗ ಬದ್ರಿಸಿಂಗ್ ಎಂಬ ಒಬ್ಬ ಯುವಕ ಪೋಲೀಸನು ಗುಂಡು ಹಾರಿಸಿ ಕೊಂದನೆಂದೂ, ಅನಂತರ ಆತನು ಪೋಲೀಸು ಠಾಣೆಗೆ ಹೋಗಲು ಅಲ್ಲಿ ಜನರು ಅವನನ್ನು ಮುತ್ತಿ, ದೊಣ್ಣೆ ಮತ್ತು ದೊಣ್ಣೆಗಳಿಂದ ಹೊಡೆದು ಕೊಂದರೆಂದೂ ವರದಿಯಾಗಿದೆ. ಈ ಗೊಂದಲದಲ್ಲಿ ಮತ್ತೊಬ್ಬ ಪೋಲೀಸನಿಗೆ ಪೆಟ್ಟು ಬಿದ್ದಿದೆ. ಅಲ್ಲಿನ ಧರ್ಮಶಾಲೆಗೆ ಇತ್ತೀಚೆಗೆ ಬಂದ ಒಬ್ಬ ಯುವತಿಯ ಬಗ್ಗೆ ಅವಲ್ಲಿಂದ ಈ ವ್ಯಾಜ್ಯವಾಗಿತ್ತೆಂದು ಹೇಳಲಾಗಿದೆ.

ಹೆಂಗಸಿನ ತುಟಿ ಕತ್ತರಿಸಿದ ಪ್ರಸಂಗ

ಉಡುಮಲಪೇಟೆಯ ಬಳಿ ಮಡತುಕೊಳದ್ ಎಂಬ ಹಳ್ಳಿಯ ನಿವಾಸಿ ದೂಡವಾಣಿ ಅಮ್ಮಾಳ್ ಎಂಬಾಕೆಯು ನೀರನ್ನು ತರಲು ಬಾವಿಗೆ ಹೋದಾಗ ಆಕೆಯನ್ನು ಹೊಡೆದು ಗಾಯಗೊಳಿಸಿ ಕೆಳ ತುಟಿಯನ್ನು ಕತ್ತರಿಸಲಾಗಿದೆಯೆಂದೂ, ಈ ಸಂಬಂಧವಾಗಿ ಇಬ್ಬರು ಸ್ತ್ರೀಯರನ್ನು ವಶ್ಯಗಿರಿ ಮಾಡಲಾಗಿದೆಯೆಂದೂ ಹೇಳಲಾಗಿದೆ. ಪೋಲೀಸರು ಮೂರು ಜನ ಗಂಡಸರನ್ನು ಹುಡುಕುವ ಪ್ರಯತ್ನದಲ್ಲಿರುವರು.

ಕೋಜೆ ದ್ವೀಪದಲ್ಲಿ ಮತ್ತೆ ದಂಗೆ

ಕೊರಿಯಾ ಯುದ್ಧದಲ್ಲಿ ಸೆರೆ ಸಿಕ್ಕಿರುವ ಕಮ್ಯೂನಿಸ್ಟ್ ಖೈದಿಗಳನ್ನು ಇಟ್ಟಿರುವ ಕೋಜೆ ದ್ವೀಪದ ಶಿಬಿರದಲ್ಲಿ ಪುನಃ ದಂಗೆಯಾಗಿ, ಅದನ್ನು ಅಡಗಿಸಲು ಅಮೆರಿಕಾ ಸೈನ್ಯಗಳು ಪ್ರವೇಶಿಸಿದುವೆಂದೂ, ಪರಿಣಾಮವಾಗಿ ೭೫ ಜನ ಖೈದಿಗಳಿಗೆ ಗಾಯವಾಗಿ ಅ ಪೈಕಿ ಒಬ್ಬನು ಮಡಿದಿರುವನೆಂದೂ ವರದಿಯಾಗಿದೆ.

ಹುಲಿ ತಾಯಿಯನ್ನು ಕೊಂದು ಮಗುವನ್ನು ಬಿಟ್ಟಿತು

ಒರಿಸ್ಸಾ ಪ್ರಾಂತ್ಯದ ಸುಂಥಗುರಾ ಎಂಬ ಗ್ರಾಮದ ಆದಿವಾಸಿ ಮಹಿಳೆಯೊಬ್ಬಳು ತನ್ನ ಮಗುವಿನೊಡನೆ ಬಯಲಿನಲ್ಲಿ ದನ ಕಾಯುತ್ತಿದ್ದಾಗ ಒಂದು ಹುಲಿಯು ಆಕೆಯನ್ನು ಕಾಡಿಗೆ ಎಳೆದುಕೊಂಡು ಹೋಗಿ ತಿಂದುಹಾಕಿ, ಬಿದ್ದುಬಿಟ್ಟ ಅವಶೇಷದಲ್ಲಿ ಆಕೆಯ ಕೈಕಾಲುಗಳು ದೊರೆತುವೆಂದು ಹೇಳಲಾಗಿದೆ. ಅವರ ಮಗುವು ಸುರಕ್ಷಿತವಾಗಿದ್ದಿತು.

ಮಲ್ಲಿಕಾರ್ಜುನಯ್ಯನವರ ನಿಧನ

ಮೈಸೂರು ಸಬ್ ಜೈಲಿನ ನಿವೃತ್ತ ಸೂಪರಿಂಟೆಂಡೆಂಟರಾದ ಶ್ರೀ ಮಲ್ಲಿಕಾರ್ಜುನಯ್ಯನವರು ನೆನ್ನೆ ಮೃತಿಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ತನಗೆ ಉಡುಗೊರೆ ಬೇಡವೆಂದು ನೆಹರು ಮನವಿ

ಪ್ರಧಾನಿ ನೆಹರೂರವರು ಕೊಟ್ಟಿರುವ ಸಂದೇಶವೊಂದರಲ್ಲಿ ತಮ್ಮ ಹುಟ್ಟಿದ ಹಬ್ಬದ ದಿನ ಯಾರೂ ಯಾವ ವಿಧವಾದ ಬಹುಮಾನಗಳನ್ನೂ ಕಳುಹಿಸಕೂಡದೆಂದು ವಿನಂತಿ ಮಾಡಿಕೊಂಡಿರುವರು ಜನರು ತಮ್ಮಲ್ಲಿಟ್ಟಿರುವ ಪ್ರೀತಿಗಾಗಿ ತಾವು ಋಣಿಯಾಗಿರುವುದಾದರೂ, ಬಹುಮಾನಗಳು ತಮ್ಮನ್ನು ದಾಕ್ಷಿಣ್ಯಕ್ಕೆ ಗುರಿಪಡಿಸುವುದಾಗಿಯೂ, ಹಾಗೆ ಅವುಗಳನ್ನು ಕಳುಹಿಸುವವರು ಯಾವುದಾದರೂ ಮಕ್ಕಳ ನಿಧಿಗಾಗಲಿ, ಕೂಟಕ್ಕಾಗಲಿ ಕೊಡಬಹುದೆಂದೂ ಸೂಚಿಸಿರುತ್ತಾರೆ ಅವರ ವರ್ಧಂತಿಯು ನವೆಂಬರ್ ೧೪ನೇ ತಾ|| ನಡೆಯುವುದು

ಪತ್ರದ ತೂಕವೇ ೮೦ ತೊಲ

ಜರ್ಮನಿಯಲ್ಲಿರುವ ಅಮೆರಿಕ ಸೈನಿಕರ ಪೈಕಿ ಒಬ್ಬರಿಗೆ ೮೦ ತೊಲ ತೂಕವಿರುವ ಒಂದು ಪತ್ರವು ಬಂದಿರುತ್ತದೆ ಅದು ೧೧೧೦ ಅಡಿ ಉದ್ದವಿದೆ ಪತ್ರದಲ್ಲಿ ಅವನ ತಾಯಿ, ಸ್ನೇಹಿತರು, ನೆರೆಹೊರೆಯವರು ಎಲ್ಲರೂ ತನಗೆ ತೋರಿದ ವಿಷಯಗಳನ್ನು ಬರೆದು ಕಳುಹಿಸಿರುತ್ತಾರೆ

ಹಿಂದಿ ಪ್ರಚಾರ ಸಭೆಯ ನೂತನ ಅಧಿಕಾರ ವರ್ಗ

ರಾಜಧಾನಿಯ ಹಿಂದಿ ಪ್ರಚಾರ ಸಭೆಯ ವಾರ್ಷಿಕ ಅಧಿವೇಶನವು ಕಳೆದ ೨೬ನೇ ತಾ|| ನಡೆದು ಪ್ರಕೃತ್ತಕಾಲಿಗೆ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಕೆ ವಿ ಶ್ರೀನಿವಾಸಮೂರ್ತಿ ಮತ್ತು ಸಿ. ಗೋಪಾಲಕೃಷ್ಣ ಶೆಟ್ಟರು ಉಪಾಧ್ಯಕ್ಷರುಗಳಾಗಿಯೂ, ಶ್ರೀ ಕೆ ಆರ್. ೧೨ಯರು ಖಜಾಂಚಿಯಾಗಿಯೂ ಮತ್ತು ಶ್ರೀ ಎಸ್ ಶ್ರೀರಂಗಾಚಾರ್ಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು ಶ್ರೀಮತಿ ಪುಟ್ಟತಾಯಮ್ಮ, ಶ್ರೀಗಳಾದ ಎ. ನಾಗಪ್ಪ, ಜಿ ಸಚ್ಚಿದಾನಂದ, ಕೆ ವಿ. ಶ್ರೀನಿವಾಸಮೂರ್ತಿ, ಎಂ ಕೆ ರಾಜಗೋಪಾಲ್, ಆರ್ ತಾತಾಚಾರ್, ಜಿ ಶ್ರೀನಿವಾಸಯ್ಯಂಗಾರ್ ಮತ್ತು ಎಂ ದೇವೇಗೌಡ ಇವರುಗಳು ಸಮಿತಿ ಸದಸ್ಯರಾಗಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಎ ಪಿ ನಾರಣಪ್ಪ ಮಂಜು ವೀಣೆ ಮಧ್ಯಾಹ್ನ ೧೨೦ ದಿಲ್ರುಬಾ ೭ ನಿಮ್ಮ ಮೆಚ್ಚಿನ ಕಲಾವಿದರು ಸಂಜೆ ೬ ೩೦ ಮಕ್ಕಳಿಗೆ ೭ ೩೦ ಆರ್ ರತ್ನ ಸಂಗೀತ ೬ ೧೦ ಗ ನಿವಹಾರ ೮ ಗೀತಮಾಲ ೯ ೧೫ ಎಂ ಎಸ್ ಸುಬ್ಬುಲಕ್ಷ್ಮಿ ರಿಕಾರ್ಡ್ ಸಂಗೀತ ೯ ೩೦ ನಳಿಸವು ಯಂತಿ ನಾಟಕ

ದೊಡ್ಡವರಿಗೆ ಮಾತ್ರ-ಎಂಬ ಚಲನಚಿತ್ರಗಳ ಭೇದ ರದ್ದು

ಹಲವು ಚಲನ ಚಿತ್ರ ನಿರ್ಮಾಪಕರ ವಯಸ್ಕರಿಗೆ ಮಾತ್ರ ಎಂಬ ವರ್ಗದ ಚಿತ್ರಗಳನ್ನು ತಯಾರಿಸುವುದನ್ನು ಕೇಂದ್ರ ಫಿಲಂ ಸೆನ್ಸಾರ್ ಬೋರ್ಡಿನ ಅಧ್ಯಕ್ಷರಾದ ಸಿ ಎಂ ಅಗರ್ ವಾಲರವರು ಟೀಕಿಸಿ, ಇದರಿಂದ ಇನ್ನೂ ಚಿಕ್ಕವರೇ ಹೆಚ್ಚಾಗಿ ಸಿನಿಮಾಗಳನ್ನು ನೋಡಲು ಬರುವಂತಾಗಿದೆಯೆಂದು ಹೇಳಿರುವರು ಅಂತಹ ವರ್ಗ ಭೇದವನ್ನು ರದ್ದುಪಡಿಸಲು ತಮ್ಮ ಬೋರ್ಡಿನವರು ತೀರ್ಮಾನಿಸು ಮಾಡಿರುವುದಾಗಿಯೂ ಅವರು ತಿಳಿಸಿರುವರು ಹಿಂದಿ ಚಿತ್ರಗಳಲ್ಲಿ ಲೈಂಗಿಕ ಆಕರ್ಷಣೆಯು ವಿಪರೀತವಾಗಿ ಹೆಚ್ಚಿರುವುದೆಂದೂ, ಇದಕ್ಕೆ ಹಣಗಳಿಸಬೇಕೆಂಬ ಆಸೆಯೇ ಕಾರಣವೆಂದೂ ಅವರು ಹೇಳುತ್ತಾರೆ

"ಸಿಡಿಲು" ವಾರ ಪತ್ರಿಕೆ

ರಾಜಧಾನಿಯ ಪ್ರಜಾ ಸೋಷಿಯಲಿಸ್ಟ್ ಮುಖಂಡರಾದ ಶ್ರೀ ವೇದಾಂತ ಹೆಮ್ಮಿಗೆಯವರು ಸಿಡಿಲು ಎಂಬ ವಾರ ಪತ್ರಿಕೆಯು [illegible] ಕಲಾ [illegible] ಪ್ರಕಾಶಿಸು [illegible] ಪ್ರಕಟಿಸು [illegible] ನಷ್ಟ ಜಿಲ್ಲಾಧಿಕಾರಿಗಳ [illegible] ಡಿಕ್ಲರೇಷನ್ ನೀಡಿದ್ದಾರೆ

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳು

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು

ಬೇಕಾಗಿದ್ದಾರೆ

ಮೈಸೂರು ತಾಲ್ಲೂಕು ಸಮಗ್ರ ಗ್ರಾಮ ಸೇವಾ ಸಹಕಾರ ಸಂಘಕ್ಕೆ ಓರ್ವ ಗುಮಾಸ್ತರು ಬೇಕಾಗಿದ್ದಾರೆ ಎಸ್ ಎಸ್ ಎಲ್. ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವವರಿಗೆ ಪ್ರಾಶಸ್ತ್ಯ ಕೊಡಲಾಗುವುದು ೫-೧೧-೫೨ರ ಒಳಗಾಗಿ ಈ ಕೆಳಗೆ ಕಂಡ ವಿಳಾಸಕ್ಕೆ ಅರ್ಜಿಗಳನ್ನು ಸಲ್ಲಿಸಬಹುದು

ಆರ್. ರಾಮಕೃಷ್ಣಯ್ಯಂಗಾರ್,
ಸೆಕ್ರೆಟರಿ,
ಮೈಸೂರು ತಾಲ್ಲೂಕು ಸಮಗ್ರ ಗ್ರಾಮ ಸೇವಾ ಸಹಕಾರ ಸಂಘ ಲಿಮಿಟೆಡ್
ನಾರಾಯಣ ರಸ್ತೆ ಮೈಸೂರು

ಅತ್ಯಂತ ಭಾರಿ ಮೀಸೆಯುಳ್ಳ ಮನುಷ್ಯ

ಪ್ರೀತಂ ಸಿಂಗ್ ಎಂಬ ಭಾರತ ಸರ್ಕಾರದ ಜವಾನನೊಬ್ಬನಿಗೆ ಜಗತ್ತಿನಲ್ಲಿಯೇ ಯೇ ಅತ್ಯಂತ ಉದ್ದವಾದ ಮೀಸೆಯಿರುವುದೆಂದು ವರದಿಯಾಗಿದೆ ಅವನು ಅದನ್ನು ಚೆನ್ನಾಗಿ ತಿರುವಿ, ರೇಡಿಯೋವಿನ ಏರಿಯಲ್‌ನಂತೆ ಕಾಣುವ ಹಾಗೆ ಮಾಡಿರುವನೆಂದು ಹೇಳಲಾಗಿದೆ ಅದು ೨ ಗಜಗಳಷ್ಟು ಉದ್ದವಿದೆ ಹತ್ತು ವರ್ಷಗಳ ಕೆಳಗೆ ಇವನ ಮಗನೊಬ್ಬನು ಮೀಸೆಯ ಎರಡು ಕಡೆಗಳಲ್ಲೂ ೬ ಅಂಗುಲದಷ್ಟು ಕೂದಲನ್ನು ಕತ್ತರಿಸಿ ಹಾಕಿದನೆಂದು ಹೇಳಲಾಗಿದೆ

ಬ್ಯಾಡ್ಮಿಂಟನ್ ಟೆನ್ನಿಸ್ ಫೈನಲ್ ಪಂದ್ಯ

ರಾಜಧಾನಿಯ ಕೃಷ್ಣಮೂರ್ತಿಪುರದ ಬ್ಯಾಡ್ಮಿಂಟನ್ ಟೆನ್ನಿಸ್ ಕ್ಲಬ್ಬಿನವರು ಏರ್ಪಡಿಸಿದ್ದ ಪಂದ್ಯಗಳ ಫಲಿತಾಂಶ ಈ ರೀತಿ ಇದೆ — ಸಿಂಗಲ್ಸ್‌ನಲ್ಲಿ: ಕೆ ಎನ್ ಶಂಕರ್‌ರವರು ಜಿ ಕೆ ಮಾಧವರಾವ್‌ರವರನ್ನು ೬-೪, ೪-೬, ೭-೧, ೪-೬, ೬-೩ಗಳಿಂದ ಡಬಲ್ಸ್‌ನಲ್ಲಿ ಎ ಆರ್ ಸೀತಾರಾಂ ಮತ್ತು ಬಿ ಎಚ್ ಶಂಕರ್‌ರವರು ಕೆ. ಎನ್ ಶಂಕರ್ ಮತ್ತು ಕೆ ಎಸ್ ಸೀತಾರಾಮಸುಂದರ್‌ರವರನ್ನು ೪-೬, —, ೬-೧, ೬-೦ಗಳಿಂದ ಸೋಲಿಸಿ ಪಾರಿತೋಷಕಗಳನ್ನು ಪಡೆದಿರುತ್ತಾರೆ

ಮೈಸೂರು ಪೇಟೆ ಧಾರಣೆ

	ಪಲ್ಲಕ್ಕೆ ರೂ ಇಂದ	ರೂ ಗೆ
ಕಡಲೆಕಾಯಿ	೧೨ ೦	೨೦ ೬-೦
ಎಳ್ಳು	೬೯ ೮ ೦	೬೧ ೧೨ ೦
ಹತ್ತಿ	೧೪ ೦ ೦	
ರಾಗಿ [illegible]	೪೩ ೮ ೦	೪೭ ೦ ೦
[illegible]	೫೬ ೬ ೦	೫೯ ೮ ೦
ಕಡಲೆ	೫೫ ೧೪ ೦	೬೦ ೦ ೦
[illegible]	೨೩ ೪ ೦	
[illegible]	೬೧ ೪ ೦	
ಅವರೆ	೭೯ ೧೨-೦	
ಹುರುಳಿ	೫೪ ೮ ೦	೬೦ ೦ ೦
ಮೆಣಸಿನಕಾಯಿ		
ಮಣಗಳಿಗೆ	೫ ೧೦ ೦	೧೬-೦ ೦
ಮೆಣಸಿನಪುಡಿ	೫ ೧ ೦	೬ ೧೦ ೦
ಹೊಗೆಸೊಪ್ಪು	೫-೬-೦	
ಬೆಲ್ಲ	೩-೨ ೦	೩ ೦ ೮
ತೆಂಗಿನಕಾಯಿ	೧೨೦೦ ೧೧೧ ೦ ೦	೨೪೦ ೦ ೦

ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳ ಸ್ಥಾನಮಾನ

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಎಚ್ ವಿ ವೀರಭದ್ರಪ್ಪನವರು ಪತ್ರವೊಂದನ್ನು ಬರೆದು [illegible]ರಿಂದಲೂ ಇರುವ ಅನೇಕ ಗ್ರಾಮ ಪಂಚಾಯಿತಿಗಳು ತಮ್ಮ ಕೆಲಸ ಕಾರ್ಯಗಳನ್ನು ತೃಪ್ತಿಕರವಾಗಿ ನಡೆಸಲು ಸಾಧ್ಯವಿಲ್ಲದೆ ಇರುವಾಗ ಹೊಸ ಶಾಸನದ ಪ್ರಕಾರ ಪಂಚಾಯಿತಿಗಳಿಗೆ ಇನ್ನೂ ಹೆಚ್ಚಿನ ಗ್ರಾಮಗಳನ್ನು ಸೇರಿಸಿದರೆ ಸರ್ಕಾರದ ಸಹಾಯವಿಲ್ಲದೆ ಅವುಗಳನ್ನು ಸುಧಾರಿಸಲು ಸಾಧ್ಯವಾಗದೆ ಹೋಗಬಹುದೆಂದು ತಿಳಿಸಿರುತ್ತಾರೆ ಹೊಸ ಶಾಸನದ ನಿಬಂಧನೆಗಳನ್ನು ಪ್ರತಿ ಗ್ರಾಮ ಪಂಚಾಯಿತಿಯವರೂ ಪೂರ್ಣವಾಗಿ ತಿಳಿದುಕೊಳ್ಳುವಂತೆ ಕನ್ನಡ ಭಾಷಾಂತರವನ್ನು ಸರ್ಕಾರದವರು ಮಾಡಬೇಕೆಂದು ಕೋರಿರುತ್ತಾರೆ ಜಿಲ್ಲಾ ಬೋರ್ಡ್ ಮತ್ತು ಪೌರ ಸಭಾಧ್ಯಕ್ಷರುಗಳಿಗೆ ಇರುವ ಸ್ಥಾನಮಾನವು ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳಿಗೆ ದೊರೆಯುತ್ತಿಲ್ಲವೆಂದೂ, ಇನ್ನು ಮುಂದಾದರೂ ಅದು ಲಭಿಸುವಂತಾಗಬೇಕೆಂದೂ ಅವರು ಮನವಿ ಮಾಡಿಕೊಂಡಿರುವರು

ಸಾರ್ವಜನಿಕ ವಿದ್ಯಾರ್ಥಿ ನಿಲಯದ ರಸ್ತೆ

ರಾಜಧಾನಿಯ ಚಾಮುಂಡಿಪುರದ ಬಡಾವಣೆಯಲ್ಲಿ ೧ ಲಕ್ಷ ರೂ. ವೆಚ್ಚದಲ್ಲಿ ದಾನಿಗಳಿಂದ ಕಟ್ಟಲ್ಪಡುತ್ತಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಮುಂದೆ, ರೇಷ್ಮೆ ಕಾರ್ಖಾನೆಯಿಂದ ಚಾಮುಂಡಿ ಬಡಾವಣೆ ವರೆಗೆ ಇರುವ ರಸ್ತೆಗೆ ಸಾರ್ವಜನಿಕ ವಿದ್ಯಾರ್ಥಿನಿಲಯದ ರಸ್ತೆ, ಎಂದು ಪೌರಸಭೆಯವರು ನಾಮಕರಣ ಮಾಡಿರುತ್ತಾರೆ ನಿಲಯದ ವ್ಯವಸ್ಥಾಪಕರಾದ ಶ್ರೀ ಟಿ ಎಸ್ ಸುಬ್ಬಣ್ಣನವರು ಇದಕ್ಕಾಗಿ ಪೌರಸಭಾಧ್ಯಕ್ಷರಿಗೆ ಕೃತಜ್ಞತೆಯನ್ನು ಸೂಚಿಸಿರುತ್ತಾರೆ

ಚಾಮುಂಡೇಶ್ವರಿ ಟಾಕೀಸ್

31-10-52 ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಆಟಗಳು

ನ್ಯಾಷನಲ್ ಪಿಕ್ಚರ್ಸ್‌ರವರ ನೂತನ ತಮಿಳು ಚಿತ್ರ

★ ಪರಾಶಕ್ತಿ ★

ಪಾತ್ರವರ್ಗ ಜೂನಿಯರ್ ಶ್ರೀರಂಜನಿ, ಸಹಸ್ರನಾಮಂ, ಗಣೇಶ್ ಪಂಡರಿಬಾಯಿ ಮುಂತಾದವರು

[ಸ್ಟುಡಿಯೋ. ಎ ವಿ ಎಂ

ಪ್ರಭುದೇವಾ ಟಾಕೀಸ್

(ದಿನಕ್ಕೆ 3 ಆಟಗಳು)

31-10-52 ರಿಂದ :: ಅಮೋಘ 3 ನೇ ವಾರ

★ ಬಡ ರೈತ ★

(ತಮಿಳು)

(ಏಳೆಯಿನ್ ಉಳವನ್)

ಪಾತ್ರ - ಅಂಜಲಿದೇವಿ, ಕನ್ನಾಂಬ ಶ್ರೀರಾಮಮೂರ್ತಿ, ರಂಗನಾಥ್

ಒಲಿಂಪಿಯಾ

ಅಮೋಘ ಪ್ರಾರಂಭ 30-10 52 ರಿಂದ

ಪ್ರತಿ ದಿನ ಮೂರು ಆಟಗಳು

ನ್ಯೂ ಥಿಯೇಟರ್ಸ್‌ರವರ ಪ್ರಖ್ಯಾತನಟ [illegible] ಮತ್ತು [illegible] ಅಭಿನಯಿಸಿರುವ ಅತ್ಯುತ್ತಮ ಪೌರಾಣಿಕ ಹಿಂದಿ ಚಿತ್ರ

★ ರಾಜಾ ಹರಿಶ್ಚಂದ್ರ ★

ಸಹಾಯಕ ನಟವರ್ಗ-ಲಲಿತಾ ಪವಾರ್ ಬಿಪಿನ್ ಗುಪ್ತ ಮತ್ತು ಇತರ ನಟನಟಿಯರು

ಬೆಳಗಿನ ಪ್ರದರ್ಶನ – ಚಂದ್ರಮೋಹನ್ ಪಾತ್ರವಹಿಸಿರುವ ರೋಟಿ

Edited, Printed and Published by A R Nagaraj at Sadhvi Press, D Subbiah Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೩೧-೧೦-೧೯೫೨ [ಸಂಚಿಕೆ ೭೯

ತಿರುವಾಂಕೂರು ಸರ್ಕಾರದಲ್ಲಿ ವಿಶ್ವಾಸ

೭ ವರ್ಷಗಳ ಹಿಂದಿನ ಕೊಲೆ ಸಂಬಂಧದಲ್ಲಿ ದಸ್ತಗಿರಿ

ಮೈಸೂರು ೩೦

[illegible] ಜನಗೂಡು ತಾಲ್ಲೂಕು [illegible] ೭ಯಲ್ಲಿ ೧೯೪೫ ನೇ ಇಸವಿಯ [illegible]ಂಡರಿಯನ್ನು ಕೊಲೆ ಮಾಡಿ ಪ[illegible] ಯಾಗಿದ್ದು ತಲೆ ಮರೆಸಿಕೊಂಡಿದ್ದ [illegible] ಪುಟ್ಟ ಎಂಬುವನನ್ನು ಮಲ್ಲಳ್ಳಿ [illegible] ಹೋಬಳಿ ದಫೇದಾರ್ ಶ್ರೀ ಕೆ ಮಾದಪ್ಪನವರು ಸಿಬ್ಬಂದಿಯೊಡನೆ ಕಳೆದ ೨೬ ನೇ ತಾರೀಖು ದಸ್ತಗಿರಿ ಮಾಡಿ [illegible] ಮುಂದಿನ ಕ್ರಮಗಳನ್ನು ಜ[illegible] ಸಲಾಗುತ್ತಿದೆ

ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆ

[illegible] ಸೂರು ಜಿಲ್ಲಾ ಸಹಕಾರ ಪ್ರಚಾ[illegible] ಪದವರು ನಾಳೆ ಸಂಜೆ ೬ ಗಂಟೆಗೆ [illegible] ಲಕ್ಷ್ಮಿಯಲ್ಲಿರುವ ಸಹಕಾರ ಭವ[illegible] ಅಂತರ ರಾಷ್ಟ್ರೀಯ ಸಹಕಾರ ದಿ[illegible] ಚರಣೆಯನ್ನು ನೆರವೇರಿಸುವರು [illegible] ನ್ಯಾಯಾಧೀಶರಾದ ಶ್ರೀ ಕೆ [illegible] ತಿಮ್ಮರಾಯ ಶೆಟ್ಟಿಯವರು ಅ[illegible] ನವನ್ನು ವಹಿಸುವರು. ಡಾ॥ ಎಂ. [illegible] ಕೃಷ್ಣರಾವ್, ಶ್ರೀ ಎಂ ಎ ಡೊರೆ[illegible] ಅಯ್ಯಂಗಾರ್ ಮತ್ತು ಶ್ರೀ [illegible] ದೇವ ಸ್ವಾಮಿಯವರು ಭಾಷಣ ಮಾಡುವರು

ವೆಂಕಣ್ಣಯ್ಯ ಮತ್ತು ಕಕ್ಕಿಲಾಯ ರವರ ಭಾಷಣ

ಸ್ಥಾನಿಯ ಕಮ್ಯೂನಿಸ್ಟ್ ಪಕ್ಷ[illegible] ದಲ್ಲಿ ನಾಳೆ ಸಂಜೆ ೬॥ ಗಂಟೆ [illegible] ಹಾಲ್ ಮೈದಾನದಲ್ಲಿ ಒಹಿರಂ[illegible] ಸಭೆಯೊಂದು ಏರ್ಪಾಡಾಗಿದೆ ಕ[illegible] ನಿಸ್ಟ್ ಮುಖಂಡರಾದ ಕೊಡಗಿನ [illegible] ವೆಂಕಣ್ಣಯ್ಯ ಮತ್ತು ಮಂಗಳೂರಿ[illegible] ಕಕ್ಕಿಲಾಯರವರು ಇಂದಿನ ರಾ[illegible] ಪರಿಸ್ಥಿತಿ ಮತ್ತು ಕಮ್ಯೂನಿ[illegible] ಪಕ್ಷದ ರೀತಿ ನೀತಿ ಇವುಗಳ ವಿಷ[illegible] ಗಿ ಭಾಷಣ ಮಾಡುವರು.

ಕೊರಿಯಾ ಶಾಂತಿಗಾಗಿ ರಷ್ಯದ ಹೊಸ ಸಲಹೆ

[illegible] ಸಂಸ್ಥೆಯ ರಾಜಕೀಯ ಸಮಿತಿ [illegible] ಸಭೆಯು ಮೊನ್ನೆ ಸೇರಿದ್ದಾಗ ರಷ್ಯ[illegible] ದ ಪ್ರತಿನಿಧಿ ವಿಷಿನ್ಸ್ಕಿಯವರು ಮಾತ[illegible] ಕೊರಿಯದಲ್ಲಿ ಶಾಂತಿ ಸ್ಥಾ[illegible] ಬಗ್ಗೆ ಒಂದು ವಿಶೇಷ ಸಮಿತಿಯು [illegible] ಸುವಂತೆ ಸಲಹೆ ಮಾಡಿದರು [illegible] ಕೊರಿಯಾ ಯುದ್ಧಕ್ಕೆ ಸಂಬಂ[illegible] ಎಲ್ಲಾ ರಾಷ್ಟ್ರಗಳ ಪ್ರತಿನಿಧಿಗಳು [illegible] ರಬೇಕೆಂದೂ, ಉತ್ತರ ಮತ್ತು ದಕ್ಷಿ[illegible] ಭಾಗಗಳನ್ನು ಅಲ್ಲಿನ ಜನರೇ [illegible] ಗೂಡಿಸಲು ಅನುಕೂಲವಾಗು[illegible] ರೀತಿಯಲ್ಲಿ ಸಮಿತಿಯು ಶಾಂತಿ [illegible] ಕಾರ್ಯವನ್ನು ಕೂಡಲೇ ಆ[illegible] ಬೇಕೆಂದೂ ಅವರ ತಿಳಿಸಿದರು

ಬರ್ಮಾದಿಂದ ಭಾರತಕ್ಕೆ ೫೦ ಸಾವಿರ ಟನ್ ಅಕ್ಕಿ

ಬರ್ಮಾ ಸರ್ಕಾರದವರು ಈಗಾಗಲೇ [illegible] ಸಾವಿರ ಟನ್ ಅಕ್ಕಿಯನ್ನು [illegible] ದೇಶಗಳಿಗೆ ಮಾರಿರುವರು ಅ[illegible] ಭಾರತ ಸರ್ಕಾರದವರು ೫೦,೦೦೦ [illegible] ಅಷ್ಟು ಧಾನ್ಯವನ್ನು ಕೊಂಡಿರುವ [illegible] ವರ್ತಕರುಗಳಿಗೆ ೮೦ ಸಾವಿ[illegible] ಧಾನ್ಯ ಮಾರಲು ಬರ್ಮಾ ಸ[illegible]

ಖುಷ್ಕಿ ಧಾನ್ಯಗಳ ಹತೋಟಿ ರದ್ದು ಮಾಡಲು ಒತ್ತಾಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ

ಬೆಂಗಳೂರು ೩೦

ಖುಷ್ಕಿ ಧಾನ್ಯಗಳ ಮೇಲಿನ ಹತೋಟಿಯನ್ನು ತೆಗೆದು ಅಕ್ಕಿಯ ಹತೋಟಿಯನ್ನು ಉಳಿಸಿಕೊಳ್ಳಬಹುದೆಂದು ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ

ಕೆ ಜಿ ಎಫ್ ಬೆಂಗಳೂರು ಮತ್ತು ದಾವಣಗೆರೆಗಳಲ್ಲಿ ಪಡಿತರ ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗ[illegible] ಬೇಕೆಂದೂ, ಅವಶ್ಯಕತೆ ಕಂಡ ಸ್ಥಳಗಳಲ್ಲೆಲ್ಲಾ ಫೇರ್ ಪ್ರೈಸ್ ಡಿಪೋಗಳನ್ನು ಸ್ಥಾಪಿಸಬೇಕೆಂದು ನಿರ್ಣಯ ಮಾಡಲಾಗಿದೆ

ಭತ್ತವನ್ನು ಹಚ್ಚುವರಿ ಬೆಳೆಯುವವರಿಂದ ಶೇ॥ ೭೫ ಅಥವಾ ೮೦ ರಷ್ಟು ವಸೂಲು ಮಾಡಬೇಕೆಂದೂ ಅದರ ಬೆಲೆಯನ್ನು ಸಲ್ಲಾಕ್ಕೆ ಹೆಚ್ಚಿಗೆ ಯಾವ [illegible] ಕೊಡದೆಂದೂ ವಸೂಲಿ ಮುಂತಾದ ಕ್ರಮಗಳ ಬಗ್ಗೆ ತಗುಲುವ ವೆಚ್ಚವನ್ನು ಚಿಲ್ಲರೆ ಏಕರಿಯಿಂದ ಪಡೆಯಬೇಕೆಂದೂ ಅಭಿಪ್ರಾಯಪಡಲಾಗಿದೆ

ಹೈಟಿ ದ್ವೀಪದಲ್ಲಿ ಭೂಕಂಪದ ಪರಂಪರೆ

ಪೆಸಿಫಿಕ್ ಸಾಗರದಲ್ಲಿರುವ ಹೈಟಿ ದ್ವೀಪದಲ್ಲಿ ಕಳೆದ ನಾಲ್ಕು ದಿನಗಳಿಂದಲೂ ಒಂದಾಗುತ್ತಲೊಂದು ಭೂಕಂಪವಾಗುತ್ತಲೇ ಇರುವುದೆಂದೂ, ಇದುವರೆಗೆ ೬ ಮಂದಿ ಸತ್ತು, ೫೦ ಮಂದಿಗೆ ಗಾಯಗಳಾಗಿರುವುವೆಂದೂ, ಸಾವಿರ ಮಂದಿಗೆ ನೆಲೆಯಿಲ್ಲದೆ, ೫೦ ಸಹಸ್ರ ರೂಗಳಷ್ಟು ನಷ್ಟವಾಗಿರುವುದೆಂದೂ ಹೇಳಲಾಗಿದೆ

೬೦ ಮಂದಿ ಕಾಂಗ್ರೆಸ್ಸಿನವರ ಮೇಲೆ ಶಿಸ್ತಿನ ಕ್ರಮ

ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ವಿರೋಧವಾಗಿ ನಡೆದುಕೊಂಡರೆಂದು ೧೭೦ ಜನರ ಮೇಲೆ ಬಂದಿದ್ದ ದೂರುಗಳನ್ನು ಪರಿಶೀಲಿಸಿ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೬೦ ಜನರ ಮೇಲೆ ಕ್ರಮ ಜರುಗಿಸುವಂತೆ ಶಿಫಾರಸು ಮಾಡಿರುವುದೆಂದು ಗೊತ್ತಾಗಿದೆ ಸಂಬಂಧಪಟ್ಟವರು ಕ್ಷಮಾಪಣೆ ಕೇಳದಿದ್ದರೆ ಅಂಥವರನ್ನು ೩ ವರ್ಷಗಳ ಕಾಲ ಅವರನ್ನು ಸದಸ್ಯತನದಿಂದ ತೆಗೆಯಲಾ[illegible]

ಪೌರಸಭಾ ಚುನಾವಣೆ ವಿಷಯವಾಗಿ ಚರ್ಚೆ

ಸದಸ್ಯರೊಬ್ಬರ ಸಭಾತ್ಯಾಗ

ಮೈಸೂರು ೩೦

ನಗರದ ಪೌರ ಸಭೆಯ ಮಾಸಿಕ ಅಧಿವೇಶನವು ನೆನ್ನೆ ಶ್ರೀ ಎ ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಡಾ॥ ಬಿ ಜಿ ದಾಸ[illegible] ವರು ಅಧ್ಯಕ್ಷರನ್ನು ಕುರಿತು ತಾವು ಕಳುಹಿಸಿದ್ದ ಒಂದು ನಿರ್ಣಯವನ್ನು ಸಭಾ ಕಾರ್ಯಕ್ರಮದಲ್ಲಿ ಸೇರಿಸದೆ ತಿರಸ್ಕರಿಸಿದ ಬಗ್ಗೆ ಪ್ರಶ್ನೆ ಮಾಡಿದರು ಈ ವಿಷಯದಲ್ಲಿ ಕಾನೂನು ಪ್ರಕಾರ ನಡೆದಿರುವುದಾಗಿ ಅಧ್ಯಕ್ಷರು ಉತ್ತರವಿತ್ತರು ಡಾ॥ ಬಿ ಜಿ ದಾಸರು ಪ್ರತಿಭಟನೆಯನ್ನು ಸೂಚಿಸಲು ಹೊರಕ್ಕೆ ಹೋಗುವುದಾಗಿ ತಿಳಿಸಿ ಸಭಾತ್ಯಾಗ ಮಾಡಿ ೨೫ ನಿಮಿಷಗಳ ನಂತರ ಸಭೆಗೆ ಬಂದರು

ಮಾರ್ಚಿ ತಿಂಗಳ ವರೆಗೆ ಪೌರ ಸಭೆಗೆ ಚುನಾವಣೆ ಕೊಡಲಾಗಿದೆಯೆಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದೆಂದೂ, ಪೌರಸಭಾಧಿಕಾರಿಗೇ ಈ ಸಂಬಂಧವಾಗಿ ಸರ್ಕಾರಕ್ಕೆ ಪತ್ರ ಬರೆದಿರುವರೆಂದು ಭಾವಿಸಲು ಅವಕಾಶವಾಗಿದೆಯೆಂದೂ ಶ್ರೀ ಎ ವೆಂಕಟೇಶಯ್ಯನವರು ತಿಳಿಸಿದರು

ಅಧ್ಯಕ್ಷರು ಮಾತನಾಡಿ ಸ್ಥಳೀಯ ಸಂಸ್ಥೆ ಸಚಿವರು ತಮ್ಮನ್ನೂ ಉಪಾಧ್ಯಕ್ಷರನ್ನೂ, ಕಮಿಷನರರನ್ನೂ ಕರೆಸಿ ಕಳೆದ [illegible] ಮಾತನಾಡಿದಾಗ ಅವರ ನಮಗೆ ಚುನಾವಣೆಗಳನ್ನು ಜಾಗಲೇ ನಡೆಸಲು ಇರುವ ಅನಿವಾರ್ಯಗಳನ್ನು ತರಲಾಯಿತೆಂದು ಹೇಳಿದರು ಈ ಕಾರಣದಿಂದ ಚುನಾವಣೆಯು ಮಾರ್ಚಿ ತಿಂಗಳ ವರೆಗೆ ಮುಂದುವರೆಯಬೇಕಾಗುವುದೆಂದೂ, ಈ ಬಗ್ಗೆ ಸರ್ಕಾರದ ಆಜ್ಞೆಯನ್ನು ತಾವು ನಿರೀಕ್ಷಿಸುತ್ತಿರುವುದಾಗಿಯೂ ತಿಳಿಸಿದರು

ಕಾನ್ಸ್ಟೇಬಲ್ ಗಳಾಗಲು ನಿರುದ್ಯೋಗಿಗಳ ನಿರಾಕರಣೆ

ಸೌರಾಷ್ಟ್ರದಲ್ಲಿ ೪೫೦ ಪೋಲೀಸ್ ಕಾನ್ಸ್ಟೇಬಲ್ಲುಗಳ ಹುದ್ದೆಗಳು ಖಾಲಿ ಬಿದ್ದಿರುವುವೆಂದೂ, ಅಲ್ಲಿನ ಉದ್ಯೋಗ ವಿನಿಮಯ ಸಂಸ್ಥೆಯಲ್ಲಿ ಹೆಸರನ್ನು ರಿಜಿಸ್ಟರು ಮಾಡಿಕೊಂಡಿರುವವರಿಗೆ ಆ ಕೆಲಸಗಳಿಗೆ ಹೋಗುವಂತೆ ಸೂಚಿಸಲಾಗಿ, ಅವರುಗಳು ನಿರಾಕರಿಸಿದರೆಂದೂ ಗೊತ್ತಾಗಿದೆ ಈ ಕಾರಣದಿಂದ ಅಲ್ಲಿನ ಪೋಲೀಸ್ ಕಾನ್ಸ್ಟೇಬಲ್ಲುಗಳ ಹುದ್ದೆಗೆ ನೇಮಕವು ಒಂದು ಸಮಸ್ಯೆಯಾಗಿ [illegible]

ತಿರುವಾಂಕೂರು ಸರ್ಕಾರದ ಮೇಲೆ ಅವಿಶ್ವಾಸಕ್ಕೆ ಸೋಲು

ತಿರುವಾಂಕೂರು ಕೊಚ್ಚಿ ಕಾಂಗ್ರೆಸ್ ಮಂತ್ರಿ ಮಂಡಲದ ಮೇಲೆ [illegible] ತಲ್ಲಿನ ಸಂಯುಕ್ತ ಪಕ್ಷದವರು ತಂದಿದ್ದ ಅವಿಶ್ವಾಸ ನಿರ್ಣಯವು ೪೬-೬೧ ಓಟುಗಳಿಂದ ಬಿದ್ದು ಹೋಯಿತು ನಿರ್ಣಯದ ಪರವಾಗಿ ಸಂಯುಕ್ತ ವಾಮ ಪಕ್ಷದ ೨೧ ಮಂದಿ, ಪ್ರಜಾಸೋಷಿಯಲಿಸ್ಟ್ ಪಕ್ಷದ ೧೦ ಮಂದಿ ಮತ್ತು ೫ ಮಂದಿ ಸ್ವತಂತ್ರ ಸದಸ್ಯರು ಓಟು ಕೊಟ್ಟರು. ವಿರುದ್ಧವಾಗಿ ೪೬ ಮಂದಿ ಕಾಂಗ್ರೆಸ್ಸಿನವರೂ ಎಂಟು ಮಂದಿ ತಮಿಳು [illegible] ಕಾಂಗ್ರೆಸ್ಸಿನವರೂ ಮತ್ತು ೭ ಜನ ಸ್ವತಂತ್ರರೂ ಮತವಿತ್ತರು ಮಂತ್ರಿಮಂಡಲವು ಪ್ರಜಾವರ್ಗದವರಿಗೆ ಉದ್ಯೋಗ, ಮತ್ತು ಆಹಾರ ಒದಗಿಸದೆ, ಸಭಾ, ಭಾಷಣ ಮುಂತಾದ ಸ್ವಾತಂತ್ರ್ಯಗಳಿಗೆ ವಿರೋಧವಾಗಿ ನಡೆದು, ಕೂಲಿಕಾರರ ಚಳುವಳಿಯು ಸ್ವತಂತ್ರವಾಗಿ ನಡೆಯದಂತೆ ಮಾಡಿರುವುದಾಗಿಯೂ ಜಮೀನುದಾರರ ಪಾಳೆಯಗಾರಿಕೆಯಿಂದ ರೈತರನ್ನು ತಪ್ಪಿಸಿಲ್ಲವೆಂದೂ, ಲಂಚ ಕೊಡುವಿಕೆಯ [illegible] ಗುರಿಯಾಗಿರುವುದಲ್ಲದೆ, ಐಕ್ಯ ಕೇರಳ ಮತ್ತು ಐಕ್ಯ ತಮಿಳು ನಾಡು [illegible] ದ್ರೋಹ ಮಾಡಿರುವುದೆಂದೂ ಅವಿಶ್ವಾಸ ನಿರ್ಣಯಕ್ಕೆ ಕಾರಣಗಳನ್ನು ಕೊಡಲಾಗಿದ್ದಿತು

ಬೊಂಬಾಯಿ ಮುಖ್ಯ ಮಂತ್ರಿಗಳ ಪ್ರತಿಮೆ ದಹನ

ಬೊಂಬಾಯಿ ನಗರದ ಮಧ್ಯದಲ್ಲಿರುವ ದೊಂಗ್ರಿ ಎಂಬಲ್ಲಿ ನೆನ್ನೆ ಸಂಜೆ ಕಮ್ಯೂನಿಸ್ಟರ ಪ್ರಭಾವಕ್ಕೆ ಒಳಗಾಗಿರುವ ಬಾಡಿಗೆದಾರರ ಸಂಘದ ಹಲವರು ಅಲ್ಲಿನ ಮುಖ್ಯ ಮಂತ್ರಿ ಮೊರಾರ್ಜಿ ದೇಸಾಯರ, ಆರು ಅಡಿ ಎತ್ತರದ ಒಂದು ಪ್ರತಿಮೆಯನ್ನು ಮೆರವಣಿಗೆಯಲ್ಲಿ ಕೊಂಡೊಯ್ದು ಸುಟ್ಟರೆಂದೂ ಈ ಸಂಬಂಧವಾಗಿ ೫ ಮಂದಿಯನ್ನು ದಸ್ತಗಿರಿ ಮಾಡಲಾಗಿದೆಯೆಂದೂ ತಿಳಿದುಬಂದಿದೆ ಪ್ರತಿಮೆಯನ್ನು ಚೌಪಾತಿ ತೀರದಲ್ಲಿ ಸುಡುವ ಸಲುವಾಗಿ ಮೆರವಣಿಗೆ ಕೊಂಡೊಯ್ದಾಗ, ಪೋಲೀಸರು ಮಾರ್ಗ ಮಧ್ಯದ ಸ್ಥಳದಲ್ಲಿ ತಡೆಯಲು ಪ್ರವರ್ತಕರು ಅಲ್ಲೇ ಅದನ್ನು ಸುಟ್ಟರೆಂದು ಹೇಳಲಾಗಿದೆ

ನಾಗರೀ ಲಿಪಿಗಾಗಿ ನೆಹರೂ ಒತ್ತಾಯ

ದೇಶದ ಪ್ರಾದೇಶಿಕ ಭಾಷೆಗಳನ್ನು ನಾಗರಿ ಲಿಪಿಯಲ್ಲಿ ಬರೆಯುವುದು ಸೂಕ್ತವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ ದೇಶದಲ್ಲಿ ಜನರು ಎರಡು ಭಾಷೆಗಳನ್ನಾದರೂ ಕಲಿಯಬೇಕಾದ ಪರಿಸ್ಥಿತಿಯೊದಗಿರುವುದೆಂದೂ, ದೇವನಾಗರಿ ಲಿಪಿಯನ್ನು ಉಪಯೋಗಿಸಿದರೆ ಎರಡು ಅಥವಾ ಮೂರು ಪ್ರಾದೇಶಿಕ ಭಾಷೆಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದೆಂದೂ ಅವ[illegible]

ಸುಡಾನ್ ಮುಖಂಡರೊಡನೆ ನಗೀಬರ ಒಪ್ಪಂದ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬ್ ಮತ್ತು ಮಾಜಿ ಪ್ರಧಾನಿ ಅಲಿ ಮಹರ್ ಪಾಷಾರವರು ಈಜಿಪ್ಟಿನ ಪರವಾಗಿ ಸುಡಾನಿನ ಉಮ್ಮಾ ಪಕ್ಷದ ಮುಖಂಡರಾದ ಅಬ್ದುಲ್ ಮಹದಿಯವರೊಡನೆ ಮಾಡಿಕೊಂಡಿರುವ ಒಪ್ಪಂದಕ್ಕೆ ರುಜು ಹಾಕಿರುತ್ತಾರೆ ಈಜಿಪ್ಟಿನೊಡನೆ ಐಕ್ಯವಾಗಬೇಕೆಂದು ಬಯಸುವ ಸುಡಾನಿನ ಎಲ್ಲ ಪಕ್ಷಗಳೂ ಈ ಒಪ್ಪಂದದ ತತ್ವವನ್ನು ಅನುಮೋದಿಸಿರುವುದರಿಂದ ಅವುಗಳ ರುಜುವಿನ ಅವಶ್ಯಕತೆಯಿರುವುದಿಲ್ಲವೆಂದು ಜ॥ ನಗೀಬ್‌ರವರು ತಿಳಿಸಿರುತ್ತಾರೆ ಒಪ್ಪಂದದ ನಿಬಂಧನೆಗಳ ಪ್ರಕಾರ ಸುಡಾನಿಗೆ ಸ್ವಯಂ ನಿರ್ಣಯಾಧಿಕಾರವನ್ನೀಯಲಾಗುವುದು ಆ ಮೂಲಕ ಆಂತರಿಕ ಸ್ವರಾಜ್ಯವನ್ನು ಸುಡಾನು ಹೊಂದಬಹುದಾಗಿದೆ ಈಜಿಪ್ಟ್ ಅಥವಾ ಬ್ರಿಟನ್ನಿನೊಡನೆ ಸೇರಲು ಸುಡಾನು ತೀರ್ಮಾನಿಸಲು ಅವಕಾಶವನ್ನು ಕಲ್ಪಿಸಲಾಗಿದೆ

ರಸ್ತೆಯ ಪಕ್ಕದಲ್ಲಿ ಮಲಗಿದ್ದವನ ಮೇಲೆ ಲಾರಿ ಹರಿಯಿತು

ರಾಜಧಾನಿಯಿಂದ ಬೆಂಗಳೂರಿಗೆ ಮೊನ್ನೆ ಸಂಜೆ ಹೊರಟಿದ್ದ ಲಾರಿಯೊಂದು ಸಿದ್ದಲಿಂಗಪುರದ ಬಳಿ ರಸ್ತೆ ಪಕ್ಕದಲ್ಲಿ ಮಲಗಿದ್ದವನ ಮೇಲೆ ಹರಿದುದರಿಂದ ತಲೆ ವರೆಗೂ ನಜ್ಜುಗುಜ್ಜಾಗಿ ಅವನು ಸ್ಥಳದಲ್ಲಿಯೇ ಸತ್ತಿರುವನೆಂದು ವರದಿಯಾಗಿದೆ

ಟೈರ್ ಮತ್ತು ಟ್ಯೂಬ್ ಸೋಲ್ ಚಪ್ಪಲಿಗಳು

ಹೊಸ ರೀತಿಯ ನಮೂನೆಯಲ್ಲಿ ಮಾಡಿಸಿಕೊಡಲಾಗುವುದು

ಹನ್ಸ್ ಫುಟ್ ವೇರ್,

ದೇವರಾಜ ಮಾರ್ಕೆಟ್, ಮೈಸೂರು

ರಾಷ್ಟ್ರಪತಿ ಭವನದಲ್ಲಿ ಸ್ವದೇಶೀ ವಸ್ತ್ರಗಳು

ದೆಹಲಿಯಲ್ಲಿರುವ ರಾಷ್ಟ್ರಪತಿ ಭವನದಲ್ಲಿ ವಿದೇಶಿ ವಸ್ತ್ರಗಳ ಅಲಂಕಾರವನ್ನೆಲ್ಲಾ ತೆಗೆದು ಖಾದಿ ಬಟ್ಟೆಯನ್ನು ಉಪಯೋಗಿಸಲಾಗಿದೆ ಗೃಹ ಕೈಗಾರಿಕೆಗಳ ವಸ್ತ್ರಗಳನ್ನು ಅಲಂಕಾರಕ್ಕಾಗಿ ಉಪಯೋಗಿಸಲಾಗುತ್ತಿದೆ

ಜಾತ್ರೆಗೆ ಹೋಗಲು ಖೈದಿಗಳಿಗೆ ಅವಕಾಶ

ಏಷ್ಯಾದಲ್ಲೇ ಅತ್ಯಂತ ಭಾರಿಯಾದ ಸೋನ್‌ಪುರ ಜಾತ್ರೆಗೆ ಹೋಗಲು ೧೧ ಮಂದಿ ಯೋಗ್ಯರಾದ ಖೈದಿಗಳಿಗೆ ಬಿಹಾರ್ ಸರ್ಕಾರದವರು ಅವಕಾಶವಿತ್ತಿರವರು

ಪ್ರಹಸನ ನಾಟಕ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಆಶ್ರಯದಲ್ಲಿ ಏರ್ಪಾಡಾಗಿರುವ ನಾಟಕ ಮತ್ತು ಸಾಹಿತ್ಯ ಶಾಲೆಯ ವ್ಯವಸ್ಥಾಪಕರು ನಾಳೆ ಸಂಜೆ ೬॥ ಗಂಟೆಗೆ ಕೃಷ್ಣಮೂರ್ತಿಪುರದ ತಮ್ಮ ಶಾಲೆಯಲ್ಲಿ ಕೈಲಾಸಂರವರ ಅವರ "ಪೋಲಿಕಿಟ್ಟಿ" ಎಂಬ ಪ್ರಹಸನ ನಾಟಕದ ಅಭಿನಯವನ್ನು ಏರ್ಪಡಿಸಿರುತ್ತಾರೆ

ತಲಕಾಡು ಮಹಾತ್ಮೆ

ಮತ್ತು

ಪಂಚಲಿಂಗ ದರ್ಶನ ಯಾತ್ರೆ

ಲೇಖಕರು —

ಟಿ ಆರ್ ಸೀತಾರಾಮ ಶಾಸ್ತ್ರಿ

ಬೆಲೆ ೦ ೬-೦

ಪಂಚಲಿಂಗ ದರ್ಶನ ಕಾಲದಲ್ಲಿ ಪ್ರತಿಗಳು ದೊರೆಯುವ ಸ್ಥಳ —

ಟಿ ಆರ್ ಸೀತಾರಾಮ ಶಾಸ್ತ್ರಿ, ತಲಕಾಡು ಟಿ ನರಸೀಪುರ ತಾ ಮತ್ತು ಸಾಧ್ವಿ ಆಫೀಸ್ ಮೈಸೂರು

ಚಾಮುಂಡೇಶ್ವರಿ ಟಾಕೀಸ್

31-10 52 ರಿಂದ ಅಮೋಘ ಪ್ರಾರಂಭ ಪ್ರತಿದಿನ 3 ಆಟಗಳು

ನ್ಯಾಷನಲ್ ಪಿಕ್ಚರ್ಸ್‌ರವರ ನೂತನ ತಮಿಳು ಚಿತ್ರ

★ ಪರಾಶಕ್ತಿ ★

ಶಿವಾಜಿ ಗಣೇಶನ್ ಜನಿಯರ್ ಶ್ರೀ ರಂಜನಿ ಸಹಸ್ರನಾಮಂ
ಗಣೇಶ್ ಪಂಡರಿಬಾಯಿ ಮುಂತಾದವರು

[ಸ್ಟುಡಿಯೋ ಎ ವಿ ಎಂ

ABIDS AUCTION SALE

On Sunday 2nd NOV at SHOW ROOMS At 10 A M

Furniture and Household Effects including R W 1/2 Hanging Half Shelf Almirah, R W & T W Single & Double Cots, Arm & Armless Chairs, Spring Cushioned Sofa suite, Commode Stands, H M V Double Spring GRAMOPHONE, REMINGTON TYPEWRITERS, Water Pump Oil paintings, PERAMBULATORS, Snake Skins, Hand Gloves, Frame Stands, Pillow Cases, and many other fancy and useful articles

INSPECTION ON SATURDAY 1st NOV Between 3 to 6 P. M

ಪ್ರೀತಂ ಸಿಂಗ್ ಎಂಬುವನು ಪ್ರಪಂಚದಲ್ಲೆಲ್ಲಾ ಭಾರಿ ಮೀಸೆಯುಳ್ಳವನೆಂದು ನೆನ್ನೆ ವರದಿಯಾಗಿತ್ತಷ್ಟೆ ಮೇಲ್ಕಂಡ ಚಿತ್ರದಲ್ಲಿರುವ ಪಾಕಿಸ್ತಾನ್ಯ ಮನುಷ್ಯನ ಮೀಸೆಯು ಸಹಾ ಇವನಿಗಿಂತ ಮುಂಚಿತವಾಗಿಯೇ ವಿಶ್ವ ವಿಖ್ಯಾತಿಯನ್ನು ಪಡೆದಿದ್ದಿತು

ಪೆಸಿಫಿಕ್ ದ್ವೀಪದಲ್ಲಿ ಜಲಜನಕ ಬಾಂಬಿನ ಆಸ್ಫೋಟನೆ

ಜಲಜನಕ ಬಾಂಬಿನ ತಯಾರಿಕೆಯಲ್ಲಿ ಅಮೆರಿಕ ಮತ್ತು ರಷ್ಯಾಗಳಿಗೆ ಸ್ಪರ್ಧೆ ನಡೆಯುತ್ತಲೇ ಇರುವುದೆಂದೂ, ಅಮೆರಿಕವು ಈಗಾಗಲೇ ಒಂದನ್ನು ತಯಾರಿಸಿರುವುದೆಂದೂ, ಅದರ ಆಸ್ಫೋಟನಾ ಪ್ರಯೋಗವು ಸಧ್ಯದಲ್ಲೇ ಪೆಸಿಫಿಕ್ಕಿನ ಏನ್‌ವಿಟಾಕ್ ದ್ವೀಪದಲ್ಲಿ ನಡೆಯಲಿದೆಯೆಂದೂ ಹೇಳಲಾಗಿದೆ

ಸಿಟಿ ಬಸ್ಸು ಸಂಚಾರ ಸರಿಯಾಗಿಲ್ಲ

ಚಾಮುಂಡಿಪುರದ ಬಸ್ಸು ಸ್ಟಾಂಡಿನಲ್ಲಿ ನೆನ್ನೆ ಬೆಳಿಗ್ಗೆ ೧೦-೪೫ ಗಂಟೆ ಹೊತ್ತಿಗೆ ಬರುವ ಬಸ್ಸಿಗಾಗಿ ೧೧-೩೦ ಗಂಟೆ ವರೆಗೂ ಜನರು ಕಾಯಬೇಕಾಯಿತೆಂದೂ, ಆದರೂ ಯಾವ ಬಸ್ಸೂ ಬರಲಿಲ್ಲವೆಂದೂ ಇದರಿಂದ ಮಾರ್ಕೆಟ್ಟು, ಆಸ್ಪತ್ರೆ ಮುಂತಾದುವುಗಳಿಗೆ ಹೋಗಬೇಕೆಂದಿದ್ದ ಅನೇಕರಿಗೆ ತೊಂದರೆಯಾಯಿತೆಂದೂ ಬಸ್ಸು ಪ್ರಯಾಣಿಕರೊಬ್ಬರು ತಿಳಿಸಿರುತ್ತಾರೆ ಜನಗಳ ಹಿತದೃಷ್ಟಿಯಿಂದ ಅಧಿಕಾರಿಗಳು ಇಂತಹ ಅವ್ಯವಸ್ಥೆಯನ್ನು ತಪ್ಪಿಸಬೇಕೆಂದೂ ಅವರು ಸೂಚಿಸಿರುತ್ತಾರೆ

ನಾಲ್ಕು ಹೃದಯಗಳ ಕೋಳಿ

ಲಂಡನ್ನಿನಲ್ಲಿ ಒಬ್ಬ ಪಶು ವೈದ್ಯರು ಮಾಂಸಕ್ಕಾಗಿ ಕೋಳಿಯೊಂದನ್ನು ಕೊಯ್ದಾಗ ಒಳಗಡೆ ನಾಲ್ಕು ಹೃದಯಗಳಿದ್ದುದು ಪತ್ತೆಯಾಯಿತೆಂದು ಹೇಳಲಾಗಿದೆ ಪ್ರತಿಯೊಂದು ಹೃದಯವೂ ಒಳ್ಳೆಯ ಸ್ಥಿತಿಯಲ್ಲೇ ಇದ್ದು, ಒಂದರಿಂದ ಒಂದರ ಮೂಲಕ ರಕ್ತವು ಹರಿಯುತ್ತಿದ್ದಿತೆಂದು ಹೇಳಲಾಗಿದೆ ನೋಡಲು ಕೋಳಿಯು ಇತರ ಕೋಳಿಗಳಂತೆಯೇ ಇದ್ದಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಚಿತ್ರ ಸಂಗೀತ ಮಧ್ಯಾಹ್ನ ೧ ೩೦ ಗಿಟಾರ್ ೨ ಬಾಲಜಗತ್ ಮಕ್ಕಳ ಕಾರ್ಯಕ್ರಮ ಸಂಜೆ ೫ ೩೦ ವಿ ಶಾಸ್ತ್ರಿ ಅರ್ ಸಿದ್ಧಲಿಂಗಸ್ವಾಮಿ, ಕೊಳಲು ೬ ೧೫ ವಾರ್ತೆ ೬ ೩೦ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರ ಕಾರ್ಯಕ್ರಮ ೮ ಎಸ್ ಟಿ ಸಿದ್ದಲಿಂಗಶಾಸ್ತ್ರಿ, ದಕ್ಷಯಜ್ಞ- ಕಥಾ ಕಾಲಕ್ಷೇಪ ೯ ೩೦ ಗಾನವಾರಿಧಿ ೯ ೪೫ ಅರ್ಕೆಸ್ಟ್ರಾ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೨ ೪ ೦	೧೯ ೮-೦
ಎಳ್ಳು	೭೪ ೦ ೦	೭೭ ೪ ೦
ಹುಚ್ಚೆಳ್ಳು	೫೫ ೧೪ ೦	
ಹರಳು ಬೀಜ	೪೫-೨ ೦	೪೬ ೦
ಹುರುಳಿ	೩೯ ೧೪ ೮	
ಹೆಸರು	೫೫ ೧೪ ೦	೬೦ ೦ ೦
ಹೊಂಗೇಬೀಜ	೨೩ ೪ ೦	
ಉದ್ದು	೬೧ ೪ ೮	
ಅವರೆ	೭೯ ೧೦ ೦	
ಹುಣಸೆ	೫೮-೮ ೦	೭೮ ೦
ಮೆಣಸಿನಕಾಯಿ		
ಮಾಮೂಲಿ	೫ ೨ ೮	೧೬ ೫ ೦
ಹುಣಸೇಹಣ್ಣು	೪ ೧೨ ೨	
ತೆಂಗಿನಕಾಯಿ	೫ ೨-೨	
ಬೆಲ್ಲ	೩-೪-೨	೩-೦ ೨
ಕೊಬ್ಬರಿ	೧೦೦ ೧೪ ೦	೧೦೦ ೦

SRI GAYATHRI

TALKIES

Daily 2 Shows

From 31-10-52 For 2 Days

20th Century's

DEAD LINE U. S. A.

With Humphry Bogart

Every Citizen must see this Drama

On Sunday 2nd, only

20th Century's

Most Powerful Picture

IN OLD CHICAGO

With —Tyrone Power

MORNING SHOWS

On 1st and 2nd

20th Century's Technicolor Picture

BIRD OF PARADISE

SRI GANESHA

TALKIES

GALA RELEASE

On 1-11-52

Universal's Masterpiece

THE PRINCE WAS A THIEF

(In Technicolor)

With Pieper Laurie & Tony Curtins

Edited, Printed and Published by A R Nagaraj an at Sadhvi Press, D Subbiah Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೧-೧೧-೧೯೫೦ [ಸಂಚಿಕೆ ೪೦

ಖರೆಯುವರ ಬಂಧನ ಮತ್ತು ಬಿಡುಗಡೆ

ಚಿಟ್ ಫಂಡಿನ ಬಗ್ಗೆ ಮೋಸ ಕ್ಕಾಗಿ ಸಜಾ ಮತ್ತು ದಂಡ

ಮೈಸೂರು ೧

ರಾಜಧಾನಿಯ ಮಂಡಿ ಮೊಹಲ್ಲಾ ...ರ್ ರಸ್ತೆಯಲ್ಲಿರುವ ಕಾಳಮ್ಮ ಮ... ...ತಿಮ್ಮಯ್ಯ ಎಂಬುವರುಗಳು ಚಿಟ್ ಫಂಡನ್ನು ನಡೆಸಿ, ಸಿದ್ದಾ... ...ದ ಹಲವರಿಗೆ ಮೋಸಮಾಡಿದರೆಂದು ೧... ನಗರ ನ್ಯಾಯಾಧೀಶರ ಮುಂದೆ ವಿ... ...ರಣೆಗೆ ಗುರಿಯಾಗಿ, ತಪ್ಪಿತಸ್ಥರೆಂದು ...ವಾಗಿ ಬಂದುದರಿಂದ ೧ ವಾರ ... ಸಜಾ ಮತ್ತು ತಲಾ ೫೦೦ ರೂ ...ನೆ ವಿಧಿಸಲ್ಪಟ್ಟಿರುವರು ಆಪಾ... ಸುಮಾರು ೩೦ ಸಾವಿರ ರೂ... ...ಗಳಷ್ಟು ಮೋಸ ಮಾಡಿರುತ್ತಾರೆಂದು ತಿ... ...ದಿದೆ

...ಯಜ್ಞ ಮತ್ತು ಉಪನ್ಯಾಸ

ರಾಜಧಾನಿಯ ಆರ್ಯ ಸಮಾಜದ ...ಯದಲ್ಲಿ ಪ್ರತಿ ಭಾನುವಾರ ಬೆಳಗ್ಗೆ ... ಗಂಟೆಗೆ ದೇವಯಜ್ಞವೂ, ಭಜನೆ ... ನಡೆಯುವುವು ಕಾಶ್ಮೀರದಿಂದ ...ದಿರುವ ಶ್ರೀ ಜಗದೀಶಚಂದ್ರ ಆನಂ... ...ದರವರು ಕರ್ಮಯೋಗದ ವಿಷಯವಾ... ...ಗಿ ಪನ್ಯಾಸ ಮಾಡುವರು

ಪ್ರಭುಗಳ ಆಗಮನ

...ಕಲಿಗೆ ತೆರಳಿದ್ದ ಶ್ರೀಮನ್ಮಹಾರಾ... ... ನಿನ್ನೆ ಬೆಳಿಗ್ಗೆ ರಾಜಧಾನಿಗೆ ...ಹಿಂತಿರುಗಿದರು

ಸಂತತಿಯೊಡನೆ ವ್ಯಾಜ್ಯವಾಡಿ ...ತ್ಮಹತ್ಯೆ ... ಸೇವನೆ

...ಂಡಿ ಮೊಹಲ್ಲಾ ನಿವಾಸಿ ಆ|| ಅ... ...ರಜಾಕ್ ಎಂಬುವನು ನೆನ್ನೆ ...ಸತಿಯೊಡನೆ ವ್ಯಾಜ್ಯವಾಡಿ, ಮೈಲ ...ತುತ್ತವನ್ನು ಸೇವಿಸಿದನೆಂದೂ ಕೃಷ್ಣರಾ... ...ಜ ಪ್ರ ಆಸ್ಪತ್ರೆಗೆ ಅವನನ್ನು ಸೇರಿಸಿ ... ಚಿಕಿತ್ಸೆಯಾದನಂತರ ವಾಪಸು ...ಕಳುಹಿಸಲಾಯಿತೆಂದೂ ವರದಿಯಾಗಿ... ...ದ ...ತ್ರೆಯೊಡನೆ ವಾಪಸು ಸೊಸೆಯು ... ಪಡದೆ ಬೇರೆ ಮನೆಗೆ ಹೋಗಲು ...ತಾಯ ಪಡಿಸಿದ ಸಂಬಂಧವಾಗಿ ದಂ... ...ಗೆ ವ್ಯಾಜ್ಯವಾಗಿತ್ತು ಅವನ ... ಪೋಲೀಸರು ಆತ್ಮಹತ್ಯೆ ಪ್ರಯ... ...ತ್ನಕ್ಕಾಗಿ ಮೊಕದ್ದಮೆ ಹೂಡಲಿರುವರು

ಮಹಾಜನ ಪ್ರೌಢಶಾಲೆಗೆ ಸಹಾಯಕ್ಕಾಗಿ ಪ್ರಾರ್ಥನೆ

...ಧಾನಿಯ ವಾಣಿವಿಲಾಸ ಮೊ... ...ಹಲ್ಲಾದಲ್ಲಿರುವ ಮಹಾಜನ ಪ್ರೌಢಶಾ... ...ಸಮಿತಿಯ ಕಾರ್ಯದರ್ಶಿ ಶ್ರೀ ಎಸ್ ... ...ರಾವ್ ರಾಯರು ನೆನ್ನೆ ನಗರದ ಪತ್ರಿ... ...ದ್ಯಮಿಗಳಿಗಾಗಿ ಸತ್ಕಾರ ಸಮಾರಂ... ...ವನ್ನು ಏರ್ಪಡಿಸಿದ್ದರು ಶಾಲೆಯ ...ವನ್ನು ಮುಂದೆ ಬಟ್ಟೆ ಯೋಲಿಯುವ ... ಮಾರಿಗೆಲಸ ಮುಂತಾದ ಔದ್ಯೋ... ...ಶಿಕ್ಷಣವನ್ನು ಕೊಡಲು ಏರ್ಪಡಿಸ... ...ಉದ್ದೇಶವಿದೆ ಎಂದು ಅವರು ತಿಳಿಸಿದರು ...ಶಾಲೆಯ ಕಟ್ಟಡದ ಕೆಲಸವೂ ಅ... ...ರ್ಧವಷ್ಟು ಮಾತ್ರ ಆಗಿರುವುದೆಂದೂ, ಅ... ...ದಕ್ಕಾಗಿ ಮಹಾಜನರ ಉದಾರ ಸಹಾ... ...ಯ ಬೇಕೆಂದೂ ಕೋರಿ ಈ ಬಗ್ಗೆ ಶ್ರೀ ... ...ಸ್ಟ್ರೀ ಮದರಾಸಿನ ಶ್ರೀಮತಿ ಎಂ ... ಸುಬ್ಬುಲಕ್ಷ್ಮಿಯವರ ಸಂಗೀತವ ... ...ಏರ್ಪಡಿಸಲಾಗುವುದೆಂದು ತಿಳಿಸಿದ ... ಚಾಮರಾಜಪೇಟೆ ಶ್ರೀ ಎಂ ವಿ ...ಪ್ರಯರು ಬಾಣ ಪ್ರಯೋಗದ ...ಪ್ರದರ್ಶನವನ್ನು ನಡೆಸಿದರು

ಹರಿಕಥೆ

ಮೈಸೂರು ೧

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಕಛೇರಿಯಲ್ಲಿ ಈ ರಾತ್ರಿ ೭ ಘಂಟೆಗೆ ಪೂರ್ಣಿಮಾ ಪ್ರಯುಕ್ತ ಇಂದ್ರಕೀಲ ಎಂಬ ಹರಿಕಥೆಯು ವೇ|| ಬ್ರ|| ಶ್ರೀ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ ನಡೆಯುವುದು ಸರ್ವರಿಗೂ ಸ್ವಾಗತವುಂಟು

ಟೆನ್ನಿಸ್ ಚಾಂಪಿಯನ್‌ಷಿಪ್ ಪಂದ್ಯ

ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ಈ ವರ್ಷದ ಬಹಿರಂಗ ಟೆನ್ನಿಸ್ ಚಾಂಪಿಯನ್‌ಷಿಪ್ ಪಂದ್ಯಗಳನ್ನು ಇದೇ ತಿಂಗಳು ೧೦ನೇ ತಾ|| ನಿಂದ ೨೦ರ ವರೆಗೆ ನಡೆಸಲಾಗುವುದು ಗಂಡಸರ ಸಿಂಗಲ್ಸ್ ಡಬ್ಬಲ್ಸ್ ಸ್ತ್ರೀಯರ ಸಿಂಗಲ್ಸ್ ಡಬ್ಬಲ್ಸ್ ಮತ್ತು ಮಿಕ್ಸೆಡ್ ಡಬ್ಬಲ್ಸ್ ಪಂದ್ಯಗಳು ಏರ್ಪಾಡಾಗುವುವು

ಏಕ ಕಾಲದಲ್ಲಿ ನಾಲ್ಕು ಕರುಗಳ ಜನನ

ನಾಗಪಟ್ಟಣ ತಾಲ್ಲೂಕಿನ ಮಾಣಲೂರು ಗ್ರಾಮದಲ್ಲಿ ಒಂದು ಹಸುವು ಏಕ ಕಾಲದಲ್ಲಿ ೪ ಕರುಗಳನ್ನು ಹಾಕಿತೆಂದೂ ಕರುಗಳ ಪೈಕಿ ಎರಡು ಮೃತಪಟ್ಟು, ಉಳಿದುವು ಬದುಕಿರುವುವೆಂದೂ ವರದಿಯಾಗಿದೆ

ನೆಹರೂರವರಿಗೆ ಗೌರವ ಪ್ರಶಸ್ತಿ

ಮಧ್ಯ ಪ್ರದೇಶದ ಸೌಗಾರ್ ವಿಶ್ವವಿದ್ಯಾಲಯದವರು ನೆನ್ನೆ ಭಾರತದ ಪ್ರಧಾನಿ ಪಂಡಿತ ನೆಹರೂರವರಿಗೆ ಡಾಕ್ಟರ್ ಆಫ್ ಲೆಟರ್ಸ್ ಎಂಬ ಗೌರವ ಪ್ರಶಸ್ತಿಯನ್ನು ಕೊಟ್ಟರು

ಹಿಂದೂ ಮಹಾಸಭಾಧ್ಯಕ್ಷರ ದಸ್ತಗಿರಿ ಮತ್ತು ಬಿಡುಗಡೆ

ನಾಗಪುರದಲ್ಲಿ ನೆನ್ನೆ ಅಲ್ಲಿನ ಕ್ರಿಕೆಟ್ ಪಂದ್ಯ ಸಂಘದವರು ಪಾಕಿಸ್ತಾನದಿಂದ ಬಂದಿರುವ ಟೀಮಿನೊಡನೆ ಪಂದ್ಯವಾಡುವ ಸ್ಥಳದಲ್ಲಿ ಪಿಕೆಟಿಂಗ್ ನಡೆಸುವುದಾಗಿ ತಿಳಿಸಿದ್ದ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಡಾ|| ಎಲ್ ಬಿ ಖರೆಯವರನ್ನು ಪ್ರಜಾಸಬದ್ಧತಾ ಶಾಸನದ ಪ್ರಕಾರ ದಸ್ತಗಿರಿ ಮಾಡಿ, ೧೩ ಗಂಟೆಗಳ ನಂತರ ಬಿಡುಗಡೆ ಮಾಡಲಾಯಿತು

ಭತ್ತದ ಕೊಳ್ಳುವ ಬೆಲೆ ಹೆಚ್ಚುವುದು

ಬೆಂಗಳೂರು ೧

ಸಣ್ಣ ಭತ್ತವನ್ನು ಪಲ್ಲಾ ೧ಕ್ಕೆ ೨೫ ರೂ ನಂತೆಯೂ, ಮಧ್ಯಮ ವರ್ಗದ ಭತ್ತವನ್ನು ಪಲ್ಲಾಕ್ಕೆ ೨೩ ರೂ ನಂತೆಯೂ ಕೊಳ್ಳಲು ಸರ್ಕಾರದವರು ಗೊತ್ತುಪಡಿಸುವರೆಂದು ತಿಳಿದುಬಂದಿದೆ ಬತ್ತವೊಂದನ್ನು ಬಿಟ್ಟು ಮಿಕ್ಕೆಲ್ಲಾ ಮುಖ್ಯ ಧಾನ್ಯಗಳ ವಸೂಲಿ ಕ್ರಮವನ್ನು ಸರ್ಕಾರದವರು ರದ್ದು ಮಾಡಲಿರುವರು ಭತ್ತದ ವಸೂಲಿ ಬಗ್ಗೆ ಹೊಸ ದರವನ್ನು ಜಾರಿಗೆ ತರಲು ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳಲಾಗುವುದೆಂದು ಹೇಳಲಾಗಿದೆ ಕೊಳ್ಳುವ ಬೆಲೆಯು ಹೆಚ್ಚಿದರೂ ಮಾರಾಟದ ಬೆಲೆಯನ್ನು ಮಾತ್ರ ಬದಲಾಯಿಸುವ ಉದ್ದೇಶವು ಸರ್ಕಾರಕ್ಕಿಲ್ಲವೆಂದೂ ವರದಿಯಾಗಿದೆ

ದಿಮ್ಮಿ ಕಳ್ಳ ಸಾಗಾಣಿಕೆ ಮೊಕದ್ದಮೆ.

ಸಿರಿಯಾ ಪಟ್ಟಣದ ಕಾಡುಗಳಲ್ಲಿ ದಿಮ್ಮಿಗಳ ಕಳ್ಳ ಸಾಗಾಣಿಕೆ ಸಂಬಂಧದಲ್ಲಿ ಹುಣಸೂರು ಮುನ್ಸೀಫ್ ಮಾಜಿಸ್ಟ್ರೇಟ್ ಕೋರ್ಟಿನಲ್ಲಿ ಹೂಡಲಾಗಿರುವ ಮೊಕದ್ದಮೆಯು ಇದೇ ತಿಂಗಳು ೧೩ ನೇ ತಾ|| ಗೆ ಮುಂದಕ್ಕೆ ಹಾಕಲ್ಪಟ್ಟಿದೆ ೬ಟ್ಟು ಅಪಾದಿತರು ಹಾಜರಿಲ್ಲದಿದ್ದುದೇ ಇದಕ್ಕೆ ಕಾರಣ ಮೊಕದ್ದಮೆಯನ್ನು ಮೈಸೂರು ನಗರದ ನ್ಯಾಯಾಲಯವೊಂದಕ್ಕೆ ವರ್ಗಾಯಿಸುವಂತೆ ನೆನ್ನೆ ಜಿಲ್ಲಾ ಮ್ಯಾಜಿಸ್ಟ್ರೇಟರ ಸಮ್ಮುಖದಲ್ಲಿ ಅರ್ಜಿಯೊಂದನ್ನು ಪ್ರಾಸಿಕ್ಯೂಷನ್ ಪರವಾಗಿ ಸಲ್ಲಿಸಲಾಯಿತು ೩ ವಾರಗಳಿಗೊಮ್ಮೆ ಹುಣಸೂರಿನಲ್ಲಿ ಮ್ಯಾಜಿಸ್ಟ್ರೇಟರ ಕೋರ್ಟು ನಡೆಯುವುದೆಂದೂ ಈ ಮೊಕದ್ದಮೆಯ ವಿಚಾರಣೆಗೆ ಪೂರ್ಣ ಕಾಲದ ನ್ಯಾಯಾಧಿಪರ ಅವಶ್ಯಕತೆ ಇರುವುದೆಂದೂ ಅರ್ಜಿಯಲ್ಲಿ ತಿಳಿಸಲಾಗಿದೆ ೧೦ ನೇ ತಾ|| ಅರ್ಜಿಯ ಪರಿಶೀಲನೆಯು ನಡೆಯುವುದು

ಇಂಗ್ಲೆಂಡಿಗೆ ಆಹಾರದ ಸಂಶೋಧನಾಧಿಕಾರಿಗಳು

ಕೃತಕ ಅಕ್ಕಿಯನ್ನು ತಯಾರಿಸುವ ಸಲುವಾಗಿ ಯಂತ್ರವನ್ನು ತರಲು ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದ ಅಧಿಕಾರಿಗಳಾದ ಡಾ|| ವಿ

ಸರ್ಕಾರ ಮತ್ತು ಕಾಂಗ್ರೆಸ್ಸಿನ ಬಾಂಧವ್ಯ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ದಾಸಪ್ಪನವರ ಹೇಳಿಕೆ

ಸ್ವಂ ಸು.ಪೋ] ಬೆಂಗಳೂರು ೧

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್ ಸಿ ದಾಸಪ್ಪನವರು ಈ ದಿನ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಪ್ರತಿಯೊಂದು ಮುಖ್ಯ ನೀತಿಯ ವಿಷಯದಲ್ಲೂ ಕಾಂಗ್ರೆಸ್ಸಿನೊಡನೆ ಸರ್ಕಾರದವರು ಸಮಾಲೋಚಿಸಬೇಕೆಂದು ಸೂಚಿಸಿದರು

ಸ್ಥಳೀಯ ಶಾಸನ ಸಭೆಗೆ ಬಂಗಾರಪೇಟೆ ತಾಲ್ಲೂಕಿನಿಂದ ಕಾಂಗ್ರೆಸ್ಸಿನವರೊಬ್ಬರನ್ನು ಉಪ ಚುನಾವಣೆಯಲ್ಲಿ ಉಮೇದುವಾರರಾಗಿ ನಿಲ್ಲಿಸುವ ಬಗ್ಗೆ ಅಲ್ಲಿನ ಕಾರ್ಯಕರ್ತರ ಅಭಿಪ್ರಾಯವನ್ನು ತಿಳಿದುಕೊಳ್ಳಲಾಗುವುದೆಂದು ಅವರು ಹೇಳಿದರು

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಭಿಪ್ರಾಯವನ್ನು ಪಡೆದ ನಂತರ ಹಲವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಅವರು ಸೂಚಿಸಿದರು

ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು

ಇಲ್ಲಿನ ನಗರಾಭಿವೃದ್ಧಿ ಸಮಿತಿಗೆ ಪೌರಸಭಾ ಇಂಜನಿಯರರಾದ ಶ್ರೀ ಆರ್ ಮಾಧವರಾವರವರನ್ನು ಅಧ್ಯಕ್ಷರಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಪಾಕಿಸ್ತಾನದೊಡನೆ ಯುದ್ಧ ಹೈದರಾಬಾದು ಕಾರ್ಯಾಚರಣೆ ಶೈಯಂತಲ್ಲ

ಪಾಕಿಸ್ತಾನದಲ್ಲಿರುವ ಹಿಂದೂ ಅಲ್ಪಸಂಖ್ಯಾತರ ಬಗ್ಗೆ ಅಲ್ಲಿನ ಸರ್ಕಾರದವರ ವರ್ತನೆಗಾಗಿ ಭಾರತವು ಯುದ್ಧ ಮಾಡಬೇಕೆಂಬ ಸಲಹೆಯನ್ನು ಪ್ರಧಾನಿ ನೆಹರೂರವರು ಅಲ್ಲಗಳೆದು ಅದು ಬರಿಯ ಮಕ್ಕಳಾಟಿಕೆ ಮತ್ತು ಬೇಜವಾಬ್ದಾರಿಯುತ ಮಾತೆಂದೂ, ಹೈದರಾಬಾದು ಪೋಲೀಸು ಕಾರ್ಯಾಚರಣೆಯಂತೆ ಆ ಯುದ್ಧವು ಪರಿಣಮಿಸದೆ, ಬಹು ದೀರ್ಘವಾಗಿ ನಡೆಯುವುದೆಂದೂ, ತೀವ್ರ ಸಂಹಾರಕ ಯುದ್ಧದಿಂದ ಯಾರಿಗೂ ಶ್ರೇಯದಾಗುವುದಿಲ್ಲವೆಂದು ಅವರು ಸೂಚಿಸಿರುವರು

ತುಟಿಗೆಂಪನ್ನು ಸ್ತ್ರೀಯರು ಬಿಡಬೇಕೆಂದು ಮನವಿ

ತುಟಿಗೆಂಪು, ಹಲ್ಲುಜ್ಜುವ ಬ್ರಷ್ಷು ಮತ್ತು ಪೌಡರ್ ಇವುಗಳಿಂದ ಉಪಯೋಗನಿಲ್ಲದಿದ್ದರೂ ಸಹ, ಅವನ್ನು ಈ ದೇಶದಲ್ಲೇ ತಯಾರಿಸುವವರೆಗೆ ಸ್ತ್ರೀಯರು ಬಳಸಬಾರದೆಂದು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರ ರಾಯರು ಬೆಂಗಳೂರು ಮಹಾರಾಣಿಯವರ ಮಹಿಳಾ ಕಾಲೇಜಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ಸುಬ್ರಹ್ಮಣ್ಯಂ ರವರನ್ನು ಕೇಂದ್ರ ಸರ್ಕಾರದವರು ಇಂಗ್ಲೆಂಡಿಗೆ ಕಳುಹಿಸಲಿರುವರೆಂದು ಗೊತ್ತಾಗಿದೆ

ಮನೆಗಂದಾಯದ ಪುನರ್ವಿಮರ್ಶೆ

ಪೌರಸಭೆಯಲ್ಲಿ ಚರ್ಚೆ

ಮೈಸೂರು ೧

ಮೊನ್ನೆ ನಗರದ ಪೌರಸಭೆಯು ಸೇರಿದ್ದಾಗ ಶ್ರೀಗಳಾದ ಚೌಡಯ್ಯ, ಜಿ. ರಂಗಸ್ವಾಮಯ್ಯ ಟಿ. ವಿ. ಕೃಷ್ಣಸ್ವಾಮಿ ಎ. ವೆಂಕಟೇಶಯ್ಯ ಮುಂತಾದವರು ಮಾತನಾಡಿ ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಮನೆಗಂದಾಯದ ಪುನರ್ವಿಮರ್ಶೆಯಾಗುವಾಗ, ಮನೆಗಳ ಅಭಿವೃದ್ಧಿಯಾಗಲೀ ದಿಡಲೀ ಹೆಚ್ಚಿಸುವುದೇ ಪದ್ಧತಿ ಇರುವ ಬಗ್ಗೆ ಟೀಕಿಸಿದರು

ಮನೆಗಂದಾಯದ ವಿಮರ್ಶೆ ಬಗ್ಗೆ ಪೂರ್ವಭಾವಿಯಾಗಿ ಕೆಲಸ ನಡೆಯುತ್ತಿರುವಾಗ, ಅದರಲ್ಲಿ ಸಭೆಯು ಪ್ರವೇಶ ಮಾಡಲು ಈಗ ಸಾಧ್ಯವಿಲ್ಲವೆಂದೂ, ಯಾವ ತೆರಿಗೆದಾರರ ಮೇಲಾದರೂ ಹೆಚ್ಚು ತೆರಿಗೆ ಹಾಕಿದ ವಿಷಯದಲ್ಲಿ ಪೌರಸಭೆಗೆ ಅಪೀಲು ಮಾಡಿದರೆ ಆಗ ಸಭೆಯು ಪರಿಶೀಲಿಸಬಹುದೆಂದೂ ಅಧ್ಯಕ್ಷರು ಉತ್ತರವಿತ್ತರು

ವಸ್ತುಗಳ ಮೇಲೆ ಸುಂಕ ವಸೂಲು ಮಾಡುವಾಗ ಜನರನ್ನು ಅಧಿಕಾರಿಗಳು ದಿನವೆಲ್ಲಾ ನಿಲ್ಲಿಸುತ್ತಿರುವರೆಂದು ಇಂ ವಿ. ಶಾರ್ ನೂರ್ ಹುಸೇನ್ ರವರು ತಿಳಿಸಿದರು

ಸುಂಕದ ವಸೂಲಿ ಬಗ್ಗೆ ಜನರಿಗೆ ತೊಂದರೆಗಳು ಕಡಿಮೆಯಾಗುವಂತೆ ಮಾಡಲು ನಿಬಂಧನೆಗಳನ್ನು ಸೂಕ್ತ ರೀತಿ ಬದಲಾವಣೆ ಮಾಡಬೇಕಾಗಿರುವುದೆಂದು ಅಭಿಪ್ರಾಯ ಪಡಲಾಯಿತು

ಸಭೆಯು ೫ನೇ ತಾ।।ಗೆ ಮುಂದುವರಿಯಿತು

ಎಸ್ ಎಸ್ ಎಲ್ ಸಿ. ಶಿಕ್ಷಣ ತರಗತಿಗಳು

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ಎಸ್ ಎಸ್ ಎಲ್ ಸಿ ಶಿಕ್ಷಣ ತರಗತಿಗಳು ಇಂದಿನಿಂದ ಆರಂಭವಾಗಿವೆ ಈ ಸದವಕಾಶವನ್ನು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಯೋಗಿಸಿಕೊಳ್ಳಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಇಂಜನಿಯರಿಂಗ್ ಶಾಲೆಗೆ ಹಾಸ್ಟೆಲ್ ವಿದ್ಯಾರ್ಥಿ ವೇತನ

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಶಾಲೆಯ ಮೂವರು ವಿದ್ಯಾರ್ಥಿಗಳಿಗೆಂದು ಬೊಂಬಾಯಿಯ ದೊರಾಬ್ಜಿ ಟಾಟಾ ಟ್ರಸ್ಟಿನವರು ಮಾಹೆಯಾನ್ಹಾ ೪೦ ರೂ ಗಳ ೩ ವಿದ್ಯಾರ್ಥಿ ವೇತನಗಳನ್ನು ಕೊಟ್ಟಿರುತ್ತಾರೆ ಅವುಗಳನ್ನು ನಾಲ್ಕನೇ ತರಗತಿಯ ಶ್ರೀ ಎಸ್ ಎ ವೆಂಕಟರಾವ್, ೩ನೇ ತರಗತಿಯ ಶ್ರೀ ಎ ಆರ್ ಗುಂಡಪ್ಪ ಮತ್ತು ೨ನೇ ತರಗತಿಯ ಶ್ರೀ ಎಂ ಪಿ. ಸಂಪತ್ಕುಮಾರ್ ಎಂಬ ವಿದ್ಯಾರ್ಥಿಗಳಿಗೆ ಕೊಡಲಾಗಿದೆ

ನಂಜನಗೂಡು ಬ್ಯಾಡ್ಮಿಂಟನ್ ಕ್ಲಬ್

ನಂಜನಗೂಡಿನ ಗೀತಾ ಬ್ಯಾಡ್ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ಸಂಸ್ಥಾನದ ಜೂನಿಯರ್ ಬ್ಯಾಡ್ಮಿಂಟನ್ ಪಂದ್ಯವನ್ನು ನಡೆಸಲಾಗುವುದು ಭಾಗವಹಿಸಲಿಚ್ಛಿಸುವವರು ನವೆಂಬರ್ ೧೧ನೇ ತಾರೀಖಿನೊಳಗೆ ಪ್ರವೇಶ ಧನದೊಡನೆ ಅರ್ಜಿ ಕಳಿಸಬೇಕು ಶ್ರೀ ಎನ್ ಡಿ ಮೂರ್ತಿ, ನಟರಾಜ ಇಂಜನಿಯರಿಂಗ್ ವರ್ಕ್ಸ್, ನಂಜನಗೂಡು- ಈ ವಿಳಾಸಕ್ಕೆ ಬರೆದು ಹೆಚ್ಚಿನ ವಿವರಗಳನ್ನು ತಿಳಿಯಬಹುದು.

ಕಡೂರು-ಮಂಗಳೂರು ರೈಲ್ವೆ ಸ್ಥಾಪನೆಗೆ ಸತ್ಯಾಗ್ರಹ

ಇತ್ತೀಚೆಗೆ ದಿಹಲಿಯಲ್ಲಿ ಕೇಂದ್ರದ ರೈಲ್ವೆ ಸಚಿವರೊಡನೆ ಮಾತುಕತೆ ನಡೆಸಿದ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಕಡೂರು ಚಿಕ್ಕಮಗಳೂರು- ಮಂಗಳೂರು ರೈಲ್ವೆ ಸ್ಥಾಪನೆ ಬಗ್ಗೆ ಯಾವ ಪ್ರಸ್ತಾಪವನ್ನೂ ಮಾಡದಿದ್ದ ಅಂಶವನ್ನು ಚಿಕ್ಕಮಗಳೂರು ಪೌರಸಭೆಯ ಅಧಿವೇಶನದಲ್ಲಿ ಹಲವು ಸದಸ್ಯರು ಸೂಚಿಸಿ ಅದಕ್ಕಾಗಿ ಸತ್ಯಾಗ್ರಹ ಹೂಡಬೇಕೆಂದು ಸಲಹೆ ಮಾಡಿದರೆಂದೂ, ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಕ್ರಮಬದ್ಧವಾದ ಮಾರ್ಗವನ್ನು ಅನುಸರಿಸಿ ಸಾವಧಾನದಿಂದ ಮುಂದುವರಿಯಬೇಕೆಂದು ಸಲಹೆ ಮಾಡಿದರೆಂದೂ ಗೊತ್ತಾಗಿದೆ

ಅತಿಕ್ರಮ ಪ್ರವೇಶಕ್ಕಾಗಿ ಪೋಲೀಸಿನವನು ಸೆಷನ್ ವಿಚಾರಣೆಗೆ

ಕಳೆದ ಮೇ ೧೪ನೇ ತಾ।। ರಾತ್ರಿ ಗಂಗಳೂರು ಚಾಮರಾಜಪೇಟೆಯ ನಿವಾಸಿಗಳಾದ ಅಬ್ರಹಾಂ ಮತ್ತು ಅವರ ಪತ್ನಿ ಶ್ರೀಮತಿ ಮೇರಿಯಮ್ಮನವರ ಮನೆಗೆ ಅತಿಕ್ರಮ ಪ್ರವೇಶ ಮಾಡಿದನೆಂದು ಪೋಲೀಸು ಕಾನ್ಸ್ಟೇಬಲ್ ವೀರಣ್ಣ ಎಂಬುವನನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದೆ

ಮೈಸೂರು ರೈಲ್ವೆ ನೌಕರರ ಕುಂದುಕೊರತೆ ಬಗ್ಗೆ ತನಿಖೆಗೆ ಮನವಿ

ಮೈಸೂರು ಸಂಸ್ಥಾನದ ರೈಲ್ವೆ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಬಿ ಎಸ್ ಶ್ರೀಕಂಠಯ್ಯನವರು ಅಖಿಲ ಭಾರತ ರೈಲ್ವೆ ನೌಕರರ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಭಾಗವಹಿಸಲು ನೆನ್ನೆ ಪೂನಾಕ್ಕೆ ತೆರಳಿದರು ಅವರು ಸಂಸ್ಥಾನದ ಮಾಜಿ ರೈಲ್ವೆ ನೌಕರರ ಕುಂದು ಕೊರತೆಗಳ ಬಗ್ಗೆ ತನಿಖೆಗಾಗಿ ಒಂದು ವಿಚಾರಣಾ ಸಮಿತಿಯನ್ನ ರೈಲ್ವೆ ಇಲಾಖೆಯವರು ನೇಮಿಸುವಂತೆ ಮನವಿಯೊಂದನ್ನು ಸಮಿತಿಗೆ ಒಪ್ಪಿಸಲಿರುವರು

೪ ತಾಲ್ಲೂಕುಗಳಲ್ಲಿ 'ಸುಳ್ಳು' ಕಾಂಗ್ರೆಸ್ ಸದಸ್ಯರು

ಚಿತ್ರದುರ್ಗ, ದಾವಣಗೆರೆ, ಹೊಳಲ್ಕೆರೆ ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಸದಸ್ಯರಾಗಿರುವರೆಂದು ಹೇಳಲಾಗಿರುವವರ ಪಟ್ಟಿಯು ಸರಿಯಾಗಿಲ್ಲವೆಂಬ ವಿಷಯವು ತಿಳಿದು, ಆ ತಾಲ್ಲೂಕುಗಳಿಂದ ಪ್ರತಿನಿಧಿಗಳ ಚುನಾವಣೆಯನ್ನು ಮುಂದೆ ಹಾಕಲಾಗಿದೆ ಡಿಸೆಂಬರ್ ೩ರ ಹೊತ್ತಿಗೆ ಹೊಸ ಚುನಾವಣೆಗಳು ನಡೆಯುವುವು

ವಿವಾಹ ಮಹೋತ್ಸವ

ಬೆಳಕವಾಡಿಯ ಪೌರಸಭಾಧ್ಯಕ್ಷರಾದ ಶ್ರೀ ಬಿ ಎಸ್ ವೆಂಕಟಾಚಲಯ್ಯನವರು ತಮ್ಮ ಪುತ್ರಿ ಸೌ।। ವೆಂಕಟಲಕ್ಷ್ಮಮ್ಮನನ್ನು ಕೊಳ್ಳೇಗಾಲದ ತಾಲ್ಲೂಕು ಗೊಬ್ಬಳಿಪುರದ ಕರ್ಣಂ ಶ್ರೀ ಜಿ ಎಸ್ ನಾರಣಯ್ಯನವರ ಮಕ್ಕಳು ಶ್ರೀ ಜಿ ಎಸ್ ಸುಬ್ರಹ್ಮಣ್ಯಂ ರವರಿಗೆ ಕೊಟ್ಟು ಮೊನ್ನೆ ಬೆಳಕವಾಡಿಯಲ್ಲಿ ವಿವಾಹವನ್ನು ನೆರವೇರಿಸಿದರು

ಫ್ರಾನ್ಸಿನ ಮೇಲೆ ಹಾರುವ ತಟ್ಟೆಗಳು

ದಕ್ಷಿಣ ಫ್ರಾನ್ಸಿನ ಒಂದು ಹಳ್ಳಿಯ ಮೇಲೆ ಕಳೆದ ಮಂಗಳವಾರ ೧೪ ಹಾರುವ ತಟ್ಟೆಗಳು ಹಾರುಹೋದುವೆಂದೂ, ಅವುಗಳ ಮಧ್ಯೆ ಸಿಗಾರ್ ಆಕಾರದ ಹೋಲುವ ವಸ್ತುವೊಂದು ಇದ್ದುದನ್ನು ಅನೇಕರು ನೋಡಿದರೆಂದೂ ವರದಿಯಾಗಿದೆ.

ಮೋಟಾರು ಓಡಾಟಕ್ಕೆ ನಿರ್ಬಂಧ ಬೇಕು

ರಾಜಧಾನಿಯ ನಾರಾಯಣ ಶಾಸ್ತ್ರಿ ಮತ್ತು ಚಾಮುಂಡೇಶ್ವರಿ ರಸ್ತೆಗಳಲ್ಲಿ ಮೋಟಾರು ಮತ್ತು ಲಾರಿಗಳ ಓಡಾಟವು ವಿಪರೀತವಾಗಿರುವುದಲ್ಲದೆ, ಅವುಗಳು ಅತಿ ವೇಗವಾಗಿ ಹೋಗುತ್ತಿರುವುವೆಂದೂ, ಅದೇ ಬೀದಿಯಲ್ಲಿ ಹಲವು ಬಾಲಕ ಬಾಲಕಿಯರ ಶಾಲೆಗಳಿದ್ದು, ಮಕ್ಕಳಿಗೆ ತೊಂದರೆಗಳಾಗುವುದನ್ನು ತಪ್ಪಿಸಲು ಸೂಕ್ತ ವ್ಯವಸ್ಥೆಯಾಗಬೇಕೆಂದೂ ಮಾಜಿ ಪೌರ ಸಭಾ ಸದಸ್ಯರಾದ ಶ್ರೀ ಜನಾರ್ಧನನಾಯ್ಡು ರವರು ಈ ಎರಡು ರಸ್ತೆಗಳು ಕೂಡುವ ಸ್ಥಳಗಳಲ್ಲಿ ಅಲ್ಲಲ್ಲೇ ಟ್ರಾಫಿಕ್ ಐಲೆಂಡುಗಳನ್ನೂ ಏರ್ಪಡಿಸಬೇಕೆಂದೂ ಅವರು ಕೋರಿರುತ್ತಾರೆ

ಗಮಕ ಗೋಷ್ಠಿ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀಮತಿ ಚಂದ್ರಮ್ಮ ರವರ ೧೪೨೨ನೇ ನಂಬರ್ ಮನೆಯಲ್ಲಿ ನಾಳೆ ಸಂಜೆ ೫।। ಗಂಟೆಗೆ ಗಮಕ ಗೋಷ್ಠಿಯೊಂದನ್ನು ನಗರದ ಗಮಕ ಕಲಾ ಸಂಘದವರು ಏರ್ಪಡಿಸಿರುತ್ತಾರೆ ಎಲ್ಲ ಗಮಕಿಗಳೂ, ಕಲಾಭಿಮಾನಿಗಳೂ ದಯಮಾಡಿಸಬೇಕೆಂದು ಕಾರ್ಯದರ್ಶಿಯವರು ಪ್ರಾರ್ಥಿಸಿರುತ್ತಾರೆ ಶ್ರೀಮತಿ ಸತ್ಯವತಿಯವರ ಭಾರತ ವಾಚನವು ಇದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಿಶ್ರ ವಾದ್ಯವೃಂದ ಮಧ್ಯಾಹ್ನ ೧.೪೦ ಜಲತರಂಗ್ ೩ ಹಿಂದಿ ಚಿತ್ರಗೀತೆಗಳು ಸಂಜೆ ೫ ೪೦ ಮತ್ತು ೭ ೩೦ ಎಸ್ ರಾಮಚಂದ್ರರಾವ್ ಸಂಗೀತ ೬ ೧೦ ವಿ ಎಸ್ ರಾವ್ ಗಾಯನ ೭ ಮತ್ತು ೮ ಎಸ್ ಎ ಸುಂದರಂ ವೀಣೆ ಸಂಗೀತ ೮ ೩೦ ಅರ್ಕೆಸ್ಟ್ರಾ ೯ ೪೦ ತಿರುಪತಿ ಅಮರೇಶ್ವರ ಕನ್ನಡದಲ್ಲಿ ಭಾಷಣ

ಎಲ್ಲಾ ಬಗೆಯ ಅಲೋಪೆತಿಕ್ ಔಷಧಿಗಳೂ ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

407 ಧನ್ವಂತರಿ ರೋಡ್,

ಮೈಸೂರು.

ಹಾಲಿನವರ ಸೋದಿನ ರೀತಿ!

ಕಲ್ಕತ್ತಾ ನಗರದಲ್ಲಿ ರಹದಾರಿಯಿಲ್ಲದ ಕೊಟ್ಟಿಗೆಗಳ ಮೇಲೆ ಪೋಲೀಸರು ಮತ್ತು ಪೌರಸಭೆಯವರು ತೆಗೆದುಕೊಂಡ ಕ್ರಮಕ್ಕೆ ಪ್ರತೀಕಾರವಾಗಿ, ಅಲ್ಲಿ ಹಾಲು ಮಾರುವವರು ಒಟ್ಟಾಗಿ ಸೇರಿ ನಗರದ ಪೋಲೀಸು ಮುಖ್ಯಾಧಿಕಾರಿಗಳ ಮನೆಗೆ ಯಾರೂ ಹಾಲನ್ನು ಒದಗಿಸದಂತೆ ಬಹಿಷ್ಕಾರ ಹಾಕಿರುವರೆಂದು ವರದಿಯಾಗಿದೆ.

ವಿಜಯರಾಘವ ರೆಡ್ಡಿಯವರಿಗೆ ಸತ್ಕಾರ

ರಾಜಧಾನಿಯ ರೇಸ್ ಕುದುರೆ ವ್ಯಾಪಾರಿಗಳ ಸಂಘದವರು ನೆನ್ನೆ ರಾಯಲ್ ಮೈಸೂರು ರೇಸಿಂಗ್ ಅಧಿಕಾರಿಗಳಾದ ಶ್ರೀ ಹೆಚ್. ಜಿ. ವಿಜಯರಾಘವ ರೆಡ್ಡಿಯವರ ಗೌರವಾರ್ಥವಾಗಿ ಭೋಜನ ಕೂಟವೊಂದನ್ನು ಏರ್ಪಡಿಸಿದ್ದರು ಪ್ರಾರ್ಥನೆಯ ನಂತರ ಸಂಘದ ಅಧ್ಯಕ್ಷರಾದ ಶ್ರೀ ಕೆ ಎಸ್ ಸುಂದರರಾಜಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿದರು. ಮುಖ್ಯ ಅತಿಥಿಗಳು ಉತ್ತರವಿತ್ತನಂತರ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರು ಭಾಷಣ ಮಾಡಿ ಶ್ರೀ ರೆಡ್ಡಿಯವರ ಸೇವೆಯನ್ನು ಪ್ರಶಂಸಿಸಿದರು ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆ ಪೈ	ರೂ ಆ ಪೈ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹುಚ್ಚೆಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	
ಹೆಸರು	[illegible]	[illegible]
ಹೊಂಗೆಬೀಜ	[illegible]	
ಉದ್ದು	[illegible]	
ಅವರೆ	[illegible]	
ಹಲಸಂದೆ	[illegible]	
ಮೆಣಸಿನಕಾಯಿ ಮಣಕ್ಕೆ	[illegible]	[illegible]
ಹುಣಸೇಹಣ್ಣು	[illegible]	
ತೆಂಗಿನಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ ೧೦೦೦ಕ್ಕೆ	[illegible]	

SRI GAYATHRI TALKIES

On 2.11.52 For A Day Only

20th Century's Most Powerful Picture

IN OLD CHICAGO

With Tyrone Power

— MORNING SHOWS —

On 1st and 2nd

20th Century's Technicolor Picture

BIRD OF PARADISE

ನೆನಪಿನಲ್ಲಿಡಿರಿ ! :: ಅಬೀದ್‌ಗನವರಲ್ಲಿ

ನಾಳೆ ಹರಾಜು

ಹೋಲ್‌ರೂಂ ಬಳಿ : ಬೆಳಿಗ್ಗೆ 10 ಗಂಟೆಗೆ

Edited, Printed and Published by A R Nagarajan

ಫೋ. ನಂ. 794 WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೧೭] ಭಾನುವಾರ ೨-೧೧ ೧೯೫೨ [ಸಂಚಿಕೆ ೧೧

ಭಾರತದ ಹಳ್ಳಿ ಮೇಲೆ ಪಾಕಿಸ್ತಾನಿಗಳ ಗುಂಡು

ಪ್ರಪಂಚದ ಶಾಂತಿಗೆ ಸಹಕಾರವೇ ಸಿದ್ಧಾಂತ

ಸಹಕಾರ ದಿನಾಚರಣೆಯಲ್ಲಿ ತಿಮ್ಮರಾಯಶೆಟ್ಟರ ಭಾಷಣ

ಮೈಸೂರು ೧

ರಾಜಧಾನಿಯ ಸಹಕಾರ ಭವನದಲ್ಲಿ ನೆನ್ನೆ ಸಂಜೆ ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ನೆರವೇರಿಸಲಾಯಿತು. ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ. ಆರ್. ತಿಮ್ಮರಾಯ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಸಹಕಾರ ಪ್ರಚಾರ ಸಂಘದ ಅಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಸ್ವಾಗತ ಭಾಷಣ ಮಾಡಿ, ಸಹಕಾರ ಪ್ರಮಾಣ ವಚನವನ್ನು ಸ್ವೀಕರಿಸುವುದರ ಉದ್ದೇಶವನ್ನು ವಿವರಿಸಿದರು. ಡಾ|| ಎಂ. ವಿ. ಕೃಷ್ಣರಾವ್, ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್, ಶ್ರೀ ಎಂ. ರಾಮಸ್ವಾಮಿ ಯವರುಗಳು ಮಾತನಾಡಿ, ಆ ದಿನದ ಮಹತ್ವವನ್ನು ವಿವರಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ದ್ವೇಷ, ಅಸೂಯೆಗಳಿಂದ ಕೂಡಿರುವ ಇಂದಿನ ಪ್ರಪಂಚಕ್ಕೆ ಶಾಂತಿಯು ದೊರಕಬೇಕಾದರೆ ಸಹಕಾರ ತತ್ವವೇ ಸಿದ್ಧಾಂತವೆಂದೂ ಅದರ ಬೆಳವಣಿಗೆಗೆ ಮನುಷ್ಯನ ಜೀವನಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಬೇಕೆಂದೂ ಹೇಳಿದರು.

ಕಾರ್ಯದರ್ಶಿ ಶ್ರೀ ಪಿ. ಗೋಪಾಲಕೃಷ್ಣಪ್ಪನವರಿಂದ ವಂದನಾರ್ಪಣೆಯಾದ ನಂತರ ಸಭೆಯು ಮುಕ್ತಾಯವಾಯಿತು.

ಟ್ರಾಫಿಕ್ ಕಾನೂನು ಪ್ರಕಾರ ಶಿಕ್ಷೆ

ಟ್ರಾಫಿಕ್ ಕಾನೂನನ್ನು ಉಲ್ಲಂಘಿಸಿದರೆಂದು ಅಂಕನಾಥೇಶ್ವರ ಮೋಟಾರು ಸರ್ವಿಸ್ಸಿನ ಡ್ರೈವರ್ ಮಲ್ಲಿಕಾರ್ಜುನ, ಅರಸೀಕೆರೆ ಯೂನಿಯರ್ ಸರ್ವಿಸ್ಸಿನ ಡ್ರೈವರ್ ರಾಮಸ್ವಾಮಿ ಮತ್ತು ಅದೇ ಸರ್ವಿಸಿನ ಮತ್ತೊಂದು ಬಸ್ಸಿನ ಡ್ರೈವರ್ ಲಾಲ್ ಸಿಂಗ್ ಇವರ ಮೇಲೆ ಎ ಡಿವಿಜನ್ ಟ್ರಾಫಿಕ್ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ೧ ನೇ ನ್ಯಾಯಾಧೀಶರು ಅವರುಗಳಿಗೆ ತಲಾ ೫೦ ರೂ. ದಂಡ ವಿಧಿಸಿರುತ್ತಾರೆ. ಖಾಸಗಿ ಕಾರೊಂದರ ಡ್ರೈವರ್ ನಾರಾಯಣಸ್ವಾಮಿಗೆ ೧೦ ರೂ. ಜುಲ್ಮಾನೆಯಾಗಿದೆ.

ಭಾರತದ ಗಡಿ ಹಳ್ಳಿ ಮೇಲೆ ಪಾಕಿಸ್ತಾನ್ ಪೋಲೀಸರ ಧಾಳಿ

ಪಾಕಿಸ್ತಾನದ ಪೋಲೀಸರು ನೆನ್ನೆ ಮಧ್ಯರಾತ್ರಿ ಸಮಯದಲ್ಲಿ ಶಸ್ತ್ರಾಸ್ತ್ರ, ಬಂದೂಕ, ಮಾರ್ಟರ ಗಳು ಮತ್ತು ಹ್ಯಾಂಡ್ ಗ್ರೆನೇಡುಗಳಿಂದ, ಭಾರತ ಮತ್ತು ಪಾಕಿಸ್ತಾನಗಳ ಗಡಿ ಬಳಿ ಇರುವ ಭಾರತದ ಡೊಂಕಿ ಎಂಬ ಹಳ್ಳಿಯ ಮೇಲೆ ಯಾವ ಕಾರಣವೂ ಇಲ್ಲದೆ ಬಲು ಜೋರಾಗಿ ಗುಂಡು ಹಾರಿಸಿದರೆಂದೂ, ಭಾರತೀಯ ಪೋಲೀಸರು ಕೂಡಲೇ ಪ್ರತಿಯಾಗಿ ಗುಂಡು ಹಾರಿಸಿದರೆಂದೂ ವರದಿಯಾಗಿದೆ. ಆ ಹಳ್ಳಿಗೆ ಇನ್ನೂ ಹೆಚ್ಚಿನ ಭಾರತೀಯ ಪೋಲೀಸರನ್ನು ರವಾನಿಸಲಾಗಿದೆ. ಯಾವ ಸಾವು ನೋವುಗಳೂ ಆಗಿಲ್ಲ. ಕಳೆದ ೨೩ ನೇ ತಾ|| ಇದೇ ಹಳ್ಳಿಯ ಮೇಲೆ ಪಾಕಿಸ್ತಾನದವರು ಗುಂಡು ಹಾರಿಸಿದ್ದರು.

ವಾಯುವ್ಯ ಗಡಿನಾಡಿನಲ್ಲಿ ರಜಾಕಾರರ ಪಡೆ

ಪಾಕಿಸ್ತಾನದ ವಾಯುವ್ಯ ಗಡಿನಾಡು ಪ್ರದೇಶದ ಮುಖ್ಯ ಮಂತ್ರಿ ಅಬ್ದುಲ್ ಕ್ವಯೂಂ ಖಾನರವರು ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಆ ಪ್ರಾಂತ್ಯದಲ್ಲಿ ಶಾಂತಿ ರಕ್ಷಣೆ ಕಾರ್ಯ ಚಳುವಳಿಯ ವ್ಯವಸ್ಥೆಯನ್ನು ಏರ್ಪಡಿಸಿ, ರಜಾಕಾರರ ಪಡೆಯನ್ನು ರಚಿಸಲಾಗುವುದೆಂದೂ ಅವರಿಗೆ ಶಿಕ್ಷಣ ಕೊಟ್ಟು, ಜರೂರು ಪರಿಸ್ಥಿತಿಯಲ್ಲಿ ಪೋಲೀಸರ ಕೆಲಸಕ್ಕೆ ಅವರನ್ನು ನೇಮಿಸಲಾಗುವುದೆಂದೂ, ಶಿಕ್ಷಣದ ಕಾಲದಲ್ಲಿ ಅವರಿಗೆ ವೇತನ ಕೊಡಲಾಗುವುದೆಂದೂ ತಿಳಿಸಿದರು.

ಹಡಗು ಮುಳುಗಿ ೬೦ ಜನರ ಮರಣ

ರಂಗೂನಿನ ತೀರದಲ್ಲಿ ಕಳೆದ ವಾರ ಬೀಸಿದ ಬಿರುಗಾಳಿಯ ಪರಿಣಾಮವಾಗಿ ನಗರಕ್ಕೆ ೫೦ ಮೈಲಿ ದೂರದಲ್ಲಿ ಸಂಚರಿಸುತ್ತಿದ್ದ ೨ ಹಡಗುಗಳು ತಲೆ ಕೆಳಗಾಗಿ ೬೦ ಜನರು ನೀರಿನಲ್ಲಿ ಮುಳುಗಿ ಸತ್ತರೆಂದು ವರದಿಯಾಗಿದೆ.

ಸಮಾಜ ಶಿಕ್ಷಣ ದಿನಾಚರಣೆ

ರಾಜಧಾನಿಯ ಜಲಪುರಿಯಲ್ಲಿ ನೆನ್ನೆ ಸಮಾಜ ಶಿಕ್ಷಣ ದಿನಾಚರಣೆಯು ಮಹಾರಾಜಾ ಕಾಲೇಜಿನ ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ರಾಜೇಶ್ವರಯ್ಯನವರು ಮತ್ತು ಟಿ. ಟಿ. ಶ್ರೀನಿವಾಸ್‌ರವರು ಭಾಷಣ ಮಾಡಿದರು. ಕುವೆಂಪುರವರ ಜಲಗಾರ ಎಂಬ ನಾಟಕವನ್ನು ಅಭಿನಯಿಸಲಾಯಿತು. ವಯಸ್ಕರ ಶಿಕ್ಷಣ ಸಮಿತಿಯವರು ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಿದರು.

ಜಿಲ್ಲಾ ಬೋರ್ಡುಗಳಿಗೆ ಪುನಃ ಜೀವದಾನವೇ ?

ಸಂಸ್ಥಾನದ ಜಿಲ್ಲಾ ಬೋರ್ಡುಗಳ ಅವಧಿಯನ್ನು ಇನ್ನೂ ಹಲವು ತಿಂಗಳುಗಳ ಕಾಲ ಹೆಚ್ಚಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ. ಬರುವ ವರ್ಷ ಜೂನ್ ತಿಂಗಳಿನಲ್ಲಿ ಮಾತ್ರ ಬೋರ್ಡುಗಳ ಪುನರ್ರಚನೆಯು ಸಾಧ್ಯವೆಂದು ಸರ್ಕಾರದವರ ಅಭಿಪ್ರಾಯವಾಗಿರುವುದೆಂದೂ ಹೇಳಲಾಗಿದೆ.

ಬೊಂಬಾಯಲ್ಲಿ ೩ ದಿನಗಳ ಹರತಾಳದ ಆರಂಭ

ಮಹಾರಾಷ್ಟ್ರ ಸರಕಾರ ಹೊಸದಾಗಿ ಜಾರಿಗೆ ತಂದಿರುವ ಶಾಸನಕ್ಕೆ ಪ್ರತಿಭಟನೆ ಸೂಚಿಸಲು ನೆನ್ನೆ ಬೊಂಬಾಯಿಯ ಹತ್ತಿ, ಚಿನ್ನ ಬೆಳ್ಳಿ, ಗಟ್ಟಿ, ಹತ್ತಿಯ ಬೀಜ, ಮೆಣಸು, ಸ್ಟಾಕ್, ನೂಲು, ಸಕ್ಕರೆ ಮುಂತಾದ ಎಲ್ಲಾ ಮುಖ್ಯ ಮಾರ್ಕೆಟ್ಟುಗಳು ಬಂದಾಗಿದ್ದುವು. ಅಲ್ಲಿನ ಪ್ರಮುಖವಾದ ಮುಲ್ಜಿ ಜೇಥಾ ಮತ್ತು ಮಂಗಳದಾಸ್ ಮಾರ್ಕೆಟ್ಟುಗಳಲ್ಲಿ ಜನರ ಸುಳಿವೇ ಇರಲಿಲ್ಲ. ಪದಾರ್ಥ ಅಂಗಡಿ, ಹೋಟೇಲುಗಳು, ಔಷಧಿ ಅಂಗಡಿಗಳೂ ಸಹ ಮುಚ್ಚಲ್ಪಟ್ಟಿದುವು. ಈ ಹರತಾಳವು ನಡೆಯುವುದು ಇದು ಐದನೆಯ ಬಾರಿ. ಇನ್ನೂ ೨ ದಿನಗಳವರೆಗೆ ಅದು ಮುಂದುವರಿಯುವುದೆಂದು ತಿಳಿಸಲಾಗಿದೆ.

ಮದ್ರಾಸು ಪೌರ ಸಭಾಧ್ಯಕ್ಷತೆಗೆ ಉಮೇದುವಾರರು

ಮದರಾಸು ಪೌರಸಭೆಯ ಕಾಂಗ್ರೆಸ್ ಸದಸ್ಯರ ಸಭೆಯು ಅಲ್ಲಿನ ಮೇಯರ್ ಶ್ರೀ ಪಿ. ಗತ್ತಸ್ವಾಮಿರವರ ಅಧ್ಯಕ್ಷತೆಯಲ್ಲಿ ನೆನ್ನೆ ನಡೆದು ಇದೇ ೬ ನೇ ತಾರೀಕು ನಡೆಯಲಿರುವ ಕಾರ್ಪೋರೇಷನ್ ಮೇಯರರ ಚುನಾವಣೆಗೆ ಉಮೇದುವಾರರನ್ನು ಆರಿಸುವ ಬಗ್ಗೆ ಚರ್ಚೆ ನಡೆಸಿತು. ೪೯ ಸದಸ್ಯರ ಪೈಕಿ ೪೮ ಜನರು ಸಭೆಗೆ ಆಗಮಿಸಿದರೆಂದೂ, ಉಮೇದುವಾರರ ಆಯ್ಕೆ ಬಗ್ಗೆ ಭಿನ್ನಾಭಿಪ್ರಾಯ ಎಂದು ಇಬ್ಬರ ಹೆಸರುಗಳು ಸೂಚಿಸಲ್ಪಟ್ಟುದರಿಂದ ಯಾವ ತೀರ್ಮಾನಕ್ಕೂ ಬರದೇ ಇದೇ ನಾಲ್ಕನೇ ತಾ|| ಅಧ್ಯಕ್ಷರು ನಿರ್ಧಾರಕ್ಕೆ ಬಂದು ಉಮೇದುವಾರರ ಹೆಸರನ್ನು ಸೂಚಿಸಲಾಗುವುದೆಂದೂ ಅಧ್ಯಕ್ಷರು ನುಡಿದರು. ಶ್ರೀ ಟಿ. ಚೆಂಗಲ್ವರಾಯನ್‌ರವರನ್ನು ಪೌರಸಭೆಯ ಕಾಂಗ್ರೆಸ್ ಪರವಾಗಿ ಮೇಯರರ ಚುನಾವಣೆಗೆ ಉಮೇದುವಾರರನ್ನಾಗಿ ಆರಿಸಲಾಗಿದೆ.

ಇಂಗ್ಲಿಷ್ ಬದಲು ಹಿಂದಿ

ಉತ್ತರ ಪ್ರದೇಶ ಪ್ರಾಂತ್ಯದಲ್ಲಿ ನೆನ್ನೆಯಿಂದ ಇಂಗ್ಲಿಷ್ ಭಾಷೆಯ ಬದಲು ಹಿಂದಿಯನ್ನು ಜಾರಿಗೆ ತರಲಾಗಿದೆ.

ಅಭಾವ ಪ್ರದೇಶದಲ್ಲಿ ರಾಮಮೂರ್ತಿಯವರ ಪ್ರವಾಸ

ಬೆಂಗಳೂರು ೨೨

ಮೈಸೂರು ಸಂಸ್ಥಾನದ ಅಭಾವ ಪೀಡಿತ ಪ್ರದೇಶಗಳಲ್ಲಿ ಶ್ರೀ ಎಸ್. ವಿ. ರಾಮಮೂರ್ತಿಯವರು ಭಾರತ ಸರ್ಕಾರದ ಐದು ಜನ ಅಧಿಕಾರಿಗಳೊಡನೆ ಪ್ರವಾಸ ಮಾಡುವರು. ಕೇಂದ್ರದವರು ಇಲ್ಲಿನ ಅಭಾವ ಪ್ರದೇಶಗಳಿಗೆ ಯಾವ ರೀತಿ ಸಹಾಯವೊದಗಿಸಬೇಕೆಂಬುವನ್ನು ಕಂಡುಹಿಡಿಯಲು ಅವರು ಈ ಪ್ರವಾಸ ಕೈಗೊಳ್ಳುವರು.

ಕದ್ದ ಮಾಲನ್ನು ಮಾರಲು ಸಹಾಯಕ್ಕಾಗಿ ಪೋಲೀಸಿನವರ ಬಂಧನ

ಮಡಿಕೇರಿಯಲ್ಲಿ ಕಳುವು ಮಾಡಿದ ಚಿನ್ನದ ಸರವೊಂದನ್ನು ಇಲ್ಲಿ ಮಾರಲು ಬಂದಿದ್ದ ಗೋಪಾಲ ಎಂಬುವನಿಗೆ ಕಲಾಸಿಪಾಳ್ಯ ಪೋಲೀಸ್ ಸ್ಟೇಷನ್ನಿನ ಮುನಿಯಪ್ಪ ಮತ್ತು ಇನ್ನಿಬ್ಬರು ಕಾನ್‌ಸ್ಟೇಬಲ್ಲುಗಳು ಅದನ್ನು ಮಾರುವುದರಲ್ಲಿ ಸಹಾಯ ಮಾಡಿದುದಕ್ಕಾಗಿ ಆ ಮೂವರನ್ನು ಮತ್ತು ಗೋಪಾಲನನ್ನೂ ಕಲಾಸಿಪಾಳ್ಯ ಕ್ರೈಂ ಬ್ರಾಂಚ್ ಪೋಲೀಸರು ಬಂಧಿಸಿದ್ದಾರೆ.

ಸೋವಿಯೆಟ್ ಜರ್ಮನಿ ಗಣಿಯಲ್ಲಿ ಸಿಡಿತ

ಪೂರ್ವ ಜರ್ಮನಿಯ ಸ್ಯಾಕ್ಸೊನಿ ಪ್ರಾಂತದಲ್ಲಿರುವ ಅಣುಶಕ್ತಿಯುತ್ಪನ್ನಕ್ಕೆ ಸಾಧಕವಾದ ಯುರೇನಿಯಂ ಗಣಿಯಲ್ಲಿ ಮೊನ್ನೆ ಸಿಡಿತವುಂಟಾಗಿ ಒಬ್ಬ ರಷ್ಯಾ ಅಧಿಕಾರಿ ಸತ್ತು ಮತ್ತು ಇತರ ೭ ಜನರು ಗಾಯಗೊಂಡಿರುತ್ತಾರೆ. ಈ ಗಣಿಯು ರಷ್ಯದವರ ಅಧೀನದಲ್ಲಿದೆ.

ಬ್ರಿಟಿಷ್ ರಾಜರ ಮತ್ತು ಶ್ರೀಮಂತರ ಚಿತ್ರಗಳ ರವಾನೆ

ದೆಹಲಿಯ ರಾಷ್ಟ್ರಪತಿ ಭವನ, ಪಾರ್ಲಿಮೆಂಟ್, ಗವರ್ನರುಗಳ ಭವನ ಮತ್ತು ಇನ್ನೂ ಅನೇಕ ಸರ್ಕಾರಿ ಕಟ್ಟಡಗಳಲ್ಲಿರುವ ಬ್ರಿಟಿಷ್ ದೊರೆಗಳು ಮತ್ತು ವೈಸರಾಯರುಗಳ ಚಿತ್ರಗಳನ್ನು ತೆಗೆದಿಡಲು ಈಗ ಪ್ರತ್ಯೇಕವಾದ ಸ್ಥಳವೊಂದನ್ನು ಹುಡುಕಲಾಗುತ್ತಿದೆಯೆಂದು ವರದಿಯಾಗಿದೆ. ರಾಷ್ಟ್ರಪತಿ ಭವನದಲ್ಲಿ ವೈಸರಾಯರ ೪೯ ಚಿತ್ರಗಳೂ, ಬ್ರಿಟಿಷ್ ದೊರೆಗಳ ೩ ಚಿತ್ರಗಳೂ ಇವೆ. ಪಾರ್ಲಿಮೆಂಟಿನಲ್ಲಿ ಇಬ್ಬರು ದೊರೆಗಳ ಮತ್ತು ೫ ವೈಸರಾಯರುಗಳ ಚಿತ್ರಗಳಿವೆ. ರಾಜಭವನಗಳಲ್ಲಿ ನೂರಾರು ಇಂತಹ ಚಿತ್ರಗಳಿವೆ. ಈ ಚಿತ್ರಗಳನ್ನು ಬರೆದವರಿಗೆ ಬಹಳ ದುಡ್ಡನ್ನು ಕೊಡಲಾಗಿತ್ತು.

ಇಬ್ಬರಿಗೆ ಚೂರಿ ಇರಿತ

ಮಂಡಿ ಮೊಹಲ್ಲಾ ಆದಿಕರ್ನಾಟಕರ ಕೇರಿಯಲ್ಲಿ ನೆನ್ನೆ ಹೊಡೆದಾಟವಾಗಿ ಪೋಲೀಸ್ ಕಾನ್‌ಸ್ಟೇಬಲ್ ಜವರಯ್ಯ ಮತ್ತು ರಾಚಯ್ಯ ಎಂಬಿಬ್ಬರು ಚೂರಿಯಿಂದ ಇರಿಯಲ್ಪಟ್ಟರು. ಈ ಸಂಬಂಧವಾಗಿ ಯಜಮಾನ್ ರಂಗಯ್ಯ ಮತ್ತು ಇನ್ನಿಬ್ಬರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡಲಾಗಿದೆ.

ವಾರ ಭವಿಷ್ಯ

ತಾ|| ೨-೧೧-೫೨ರಿಂದ ೯-೧೧-೫೨ರ ವರೆಗೆ

ಮೇಷ — ಮಹತ್ವದ ಕಾರ್ಯ ನಿಷ್ಪಾಂತರ ಸಹವಾಸ ನೌಕರಿಯಲ್ಲಿ ಮೇಲಧಿಕಾರಿಗ ವ್ಯಾಪಾರಾದಿಗಳಲ್ಲಿ ಧನ ಪ್ರಾಪ್ತಿ ಕುಟುಂಬ ಜೀವನದಲ್ಲಿ ಶಾಂತಿ ತಾ|| ೫, ೬ ಪ್ರವಾಸ, ಮಹತ್ವದ ಪತ್ರ

ವೃಷಭ — ಕಷ್ಟದ ಬಹ್ಮೆಗಳು ಮನೋಧೈರ್ಯವುಂಟು ಆರೋಗ್ಯ ನೆಟ್ಟಗಿರದು. ಹಣಕಾಸಿನ ಸ್ಥಿತಿಯೂ ಅದೇ ರೀತಿ ವ್ಯಾಪಾರಾದಿಗಳಲ್ಲಿ ವಂಚನಾ ಪ್ರಯತ್ನ ನೌಕರಿಯಲ್ಲಿ ಕ್ಲೇಶ ಪ್ರವಾಸ ಬೇಡವಾಗಿಲ್ಲ ತಾ|| ೩, ೩ ಅಪಘಾತ, ಕಲಹ

ಮಿಥುನ — ಹೆಚ್ಚಿನ ಜವಾಬ್ದಾರಿ ಆರೋಗ್ಯ ತೃಪ್ತಿಕರ ಪ್ರತಿಕೂಲ ಯೋಗ. ಪತ್ನಿಗೆ ಅನಾರೋಗ್ಯ ಮಾನಹಾನಿ ವ್ಯಾಪಾರಾದಿಗಳಲ್ಲಿ ವಿಶ್ವಾಸಘಾತ ತಾ|| ೩, ೪ ತಪ್ಪು ತಿಳಿವಳಿಕೆ, ಭಯ

ಕರ್ಕ — ಉತ್ತಮ ವಾರ ಕೈಗೊಂಡ ಕಾರ್ಯದಲ್ಲಿ ಯಶಸ್ಸು ಅಲ್ಪ ಪ್ರವಾಸ ವ್ಯಾಪಾರಾದಿಗಳಲ್ಲಿ ಲಾಭ ನೌಕರಿಯಲ್ಲಿ ತೃಪ್ತಿ ತಾ|| ೫, ೬ ಪರೋಪಕಾರ ಶ್ರಮ

ಸಿಂಹ — ಹಣದ ಅಡಚಣೆ ಕಡಿಮೆ ಆರೋಗ್ಯದಲ್ಲಿ ಸುಧಾರಣೆ ಉತ್ತಮ ವಾರ ಸಿಮ್ಮ ಪತ್ನಿ ಆರೋಗ್ಯ ನೆಟ್ಟಗೆ ಮೇಲಧಿಕಾರ ಪ್ರಾಪ್ತಿ ವ್ಯಾಪಾರಾದಿಗಳಲ್ಲಿ ಸುಧಾರಣೆ ತಾ|| ೫, ೬ ಶುಭ ವಾರ್ತೆ, ಲಾಭ

ಕನ್ಯಾ — ಜವಾಬ್ದಾರಿ ಕಡಿಮೆ ಆರೋಗ್ಯ ನೆಟ್ಟಗಿರುವುದು ಪ್ರವಾಸ ಉತ್ತಮವಲ್ಲ ತಾ|| ೩, ೪ ಕೆಟ್ಟ ವಾರ್ತೆ, ಸಹಾಯ

ತುಲಾ — ಆರೋಗ್ಯ ನೆಟ್ಟಗೆ ಎದುರಾಳಿಗಳ ಸೋಲು ಹಣಕಾಸಿನ ದೃಷ್ಟಿಯಿಂದ ಲಾಭ ವ್ಯಾಪಾರಾದಿಗಳಲ್ಲಿ ಜಯ ಮೇಲಧಿಕಾರಿಗಳ ಮನ್ನಣೆ ಸುಖ ಪ್ರವಾಸ ತಾ|| ೫, ೬ ತೀರ್ಥಕ್ಷೇತ್ರಗಳ ಸಂದರ್ಶನ ಮಹಿಳೆಯರಿಂದ ಲಾಭ

ವೃಶ್ಚಿಕ — ಹಣದ ಮುಗ್ಗಟ್ಟು ನಿವಾರಣೆ ಮಾನಭಂಗ ಮಾಡಲೆತ್ನಿಸುವವರು ಗೆಳೆತನಕ್ಕಾಗಿ ಬರುವರು ವ್ಯಾಪಾರಾದಿಗಳಲ್ಲಿ ಸನ್ನಿವೇಶ ಪರಿಹಾರ ತಾ|| ೫, ೬ ಖರ್ಚು, ಪರೋಪಕಾರ

ಧನು — ಕಳೆದ ವಾರಕ್ಕಿಂತ ಉತ್ತಮವಿಲ್ಲ ಹಣದ ಅಡಚಣೆ ಕುಟುಂಬದಲ್ಲಿ ಕಲಹ ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಕ್ಲೇಶ ತಾ|| ೩, ೪ ಪತ್ನಿಗೆ ಅಗ್ನಿ ಭಯ, ಜಗಳ

ಮಕರ — ಕ್ಲೇಶಕರ ಪ್ರವಾಸ ವ್ಯಾಪಾರಾದಿಗಳಲ್ಲಿ ಪರಿಸ್ಥಿತಿ ಸರಿಯಿಲ್ಲ ನೌಕರಿಯಲ್ಲಿ ಮನಸ್ತಾಪ ಆರೋಗ್ಯವೂ ನೆಟ್ಟಗಿರದು ಗೆಳೆಯ ವಸ್ತುವಿನ ಅಪಹಾರ ತಾ|| ೫, ೬ ಸಟ್ಟಾ, ಲಾಟರಿಗಳಲ್ಲಿ ಹಾನಿ

ಕುಂಭ — ಆರೋಗ್ಯ ನೆಟ್ಟಗೆ ಆಕಸ್ಮಿಕ ಹಣದ ಲಾಭ ಪ್ರವಾಸ ಬಹಳ ಒಳ್ಳೆಯದು ತಾ|| ೫, ೬ ಧಾರ್ಮಿಕ ಕಾರ್ಯ, ಮಿತ್ರರ ಭೇಟಿ

ಮೀನ — ಮಾನ ಸನ್ಮಾನ. ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಲಾಭ ನೌಕರಿಯಲ್ಲಿ ಅಧಿಕಾರ ಪ್ರಾಪ್ತಿ ತಾ|| ೩, ೪ ಪ್ರವಾಸ, ಯಶ

ಕಾಶ್ಮೀರದ ಬಗ್ಗೆ ವಿಶ್ವ ಸಂಸ್ಥೆಯ ನೇರವಾದ ಪ್ರವೇಶ

ಪಾಕಿಸ್ತಾನದ ಕೋರಿಕೆ ಮೇಲೆ ಶೀಘ್ರದಲ್ಲೇ ಭದ್ರತಾ ಸಮಿತಿ ಸಭೆಯು ಸೇರುವುದೆಂದೂ, ಆಗ ಅಮೇರಿಕಾ ಮತ್ತು ಬ್ರಿಟನ್ನುಗಳು ಜಂಟಿಯಾಗಿ ನಿರ್ಣಯವೊಂದನ್ನು ಮಂಡಿಸಿ, ಕಾಶ್ಮೀರದಲ್ಲಿ ಜನಮತಗಣನೆಗೆ ಪೂರ್ವ ಭಾವಿಯಾಗಿ, ಆ ಸಂಸ್ಥಾನವನ್ನು ನಿಶ್ಶಸ್ತ್ರೀಕರಣ ಮಾಡುವ ಬಗ್ಗೆ ವಿಶ್ವ ಸಂಸ್ಥೆಯೇ ನೇರವಾದ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಲಿರುವುವೆಂದೂ ಹೇಳಲಾಗಿದೆ

ಆಯುರ್ವೇದ ಕಾಲೇಜಿನ ಪರೀಕ್ಷಾ ಫಲಿತಾಂಶ

ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸಪ್ಲಿಮೆಂಟರಿ ಪರೀಕ್ಷೆಯ ಫಲಿತಾಂಶಗಳು ಹೀಗಿವೆ -

ಆಯುರ್ವೇದ ವಿಭಾಗ.—

೧ ನೇ ವರ್ಷ ದ್ವಿತೀಯ ಶ್ರೇಣಿ ೧, ೩, ೪, ೬ ೭, ೯, ೧೨ ೧೩, ೧೪, ೧೫, ೧೬ ೧೭ ೧೮, ೨೦, ೨೧, ೨ ೨೩ ೨೪ ಮತ್ತು ೨೫.

೨ ನೇ ವರ್ಷ ದ್ವಿತೀಯ ಶ್ರೇಣಿ. ೨೬ ೨೭, ೨೯ ೩೧, ೩೨ ೩೩ ೩೪

೩ ನೇ ವರ್ಷ, ದ್ವಿತೀಯ ಶ್ರೇಣಿ ೩೫

೪ ನೇ ವರ್ಷ ದ್ವಿತೀಯ ಶ್ರೇಣಿ ೩೬ ೩ ೩೦ ೪೦ (ಎ) ಫಲಿತಾಂಶ ಇನ್ನೂ ಪ್ರಕಟವಿಲ್ಲ

ಯುನಾನಿ ವಿಭಾಗ.—

೧ ನೇ ವರ್ಷ ದ್ವಿತೀಯ ಶ್ರೇಣಿ. ೪೯

೨ ನೇ ವರ್ಷ ದ್ವಿತೀಯ ಶ್ರೇಣಿ ೪೩

೩ ನೇ ವರ್ಷ ೪೪ ನೇ ನಂಬರಿನ ಫಲಿತಾಂಶ ಪ್ರಕಟವಿಲ್ಲ

ಕಲ್ಲಿದ್ದಲಿನಿಂದ ಪೆಟ್ರೋಲು

ಅಸ್ಸಾಂ ಕಲ್ಲಿದ್ದಲಿನಿಂದ ಪೆಟ್ರೋಲ್ ಎಣ್ಣೆ ತೆಗೆಯುವುದನ್ನು ಭಾರತದ ರಾಷ್ಟ್ರೀಯ ಸಂಶೋಧನಾ ಸಮಿತಿಯೊಂದು ಕಂಡುಹಿಡಿದಿರುವುದಾಗಿ ಗೊತ್ತಾಗಿದೆ ಕಲ್ಲಿದ್ದಲನ್ನು ನೀರಾಗಿ ಪರಿವರ್ತಿಸುವ ಮೂಲಕ ನೋಲ್ಯಂಡ ಫಲಿತಾಂಶ ಉಂಟಾಗುವುದೆಂದೂ, ಈಗ ತೆಗೆಯಲಾಗುತ್ತಿರುವ ಎಣ್ಣೆಯು ಟೀ ಮುಂತಾದ ಲೋಹಗಳನ್ನು ತುಕ್ಕು ಹಿಡಿಸುವುದರಿಂದ ಅಸ್ಸಾಮಿನ ಕಲ್ಲಿದ್ದಲನ್ನು ಬಿಟ್ಟು ಬೇರೆ ಕಲ್ಲಿದ್ದಲಿನಲ್ಲಿ ಪ್ರಯೋಗ ನಡೆಸಲಾಗುವುದೆಂದೂ ಹೇಳಲಾಗಿದೆ

ಗೋವಧಾ ನಿರೋಧ ಚಳುವಳಿಯಲ್ಲಿ ಗೋವಿಗೆ ಸಂಬಂಧವಿಲ್ಲ

ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಹೂಡಿರುವ ಗೋವಧಾ ನಿರೋಧ ಚಳುವಳಿಯು ರಾಜಕೀಯ ಉದ್ದೇಶದಿಂದ ಕೂಡಿರುವುದೆಂದೂ, ಈ ಚಳುವಳಿಗೂ ಗೋವಿಗೂ ಯಾವ ಸಂಬಂಧವೂ ಇರುವುದಿಲ್ಲವೆಂದೂ ಪ್ರಧಾನಿ ನೆಹರೂರವರು ಹೇಳುತ್ತಾರೆ. ಗೋವಧಾ ನಿರೋಧದ ಬಗ್ಗೆ ತಮ್ಮ ಪೂರ್ಣ ಒಪ್ಪಿಗೆ ಇರುವುದೆಂದೂ ಈ ವಿಷಯವನ್ನು ಪ್ರಾಂತೀಯ ಸರ್ಕಾರಗಳಿಗೆ ಬಿಡುವುದು ಅಗತ್ಯವೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ

FRESH ADMISSIONS

FOR

SHORTHAND & TYPEWRITING

Only, Leading to

November 1953 Examinations

Are now being received

At The

CHAMPION METROPOLITAN COLLEGE OF COMMERCE,

Competitors Home

100 Feet Road, Mysore

Sd/- M. S PUTTANNA,

Vice Principal

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ೩೦ ಮಧುರ ಮಂಗಳ ಅಧ್ಯಾತ್ಮ ಕರ್ನಾಟಕ ಸಂಗೀತ ಮಧ್ಯಾಹ್ನ ೧ ಗಂಟೆಗೆ ೨ ಚಿತ್ರ ಸಂಗೀತ. ಸಂಜೆ ... ಮತ್ತು ಆರ್. ರಾಮ ಅಯ್ಯರ್ ... ೬.೧೦ ಗಾನ ವಿಹಾರ. ೭ ... ಕೊಳಲು ವಾದನ, ೭.೩೦ ... ೭.೪೦ ವಿಶ್ವವಾಣಿ ... ಮತ್ತು ೯ ೩೦ ಟಿ ನಾಗಯ್ಯ ಸಂಗೀತ ೯.೧೫ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮ ಇಂಗ್ಲಿಷ್ ಭಾಷಣ.

ಮೈಸೂರು ಪೇಟೆ ಧಾರಣೆ

	ಪಲ್ಲ ಗಳ್ಳೆ	ರೂ. ಇಂದ ರೂ
ನೆಲಗಡಲೆ	೧೦ ೩.೦	೩೦-೦
ಎಳ್ಳು	೩೦.೧೪.೦	೩೪
ಹರಳು ಬೀಜ	೩೮-೧೪-೦	೪೦
ಹುರುಳಿ	೩೦.೪.೦	
ಹೆಸರು	೬೦ ೧೧-೦	೬೦
ಉದ್ದು	೬೧ ೪ ೮	
ಕಡಲೆಬೇಳೆ	೩೭-೧೦-೦	
ಮೆಣಸಿನಕಾಯಿ		
ಮಣ ಗಳ್ಳೆ	೩ ೪ ೦	೧೫
ಹುಣಿಸೇಹಣ್ಣು	೬ ೧.೦	
ಬೆಲ್ಲ	೩-೮-೦	
ತೆಂಗಿನಕಾಯಿ ೧೦೦೦	೧೪೦.೦.೦	

ರಾಜಕಮಲ್ ಮೈಸೂರು

31-11 52ರಿಂದ ಅಮೋಘ ಪ್ರದರ್ಶನ

ಪ್ರತಿ ದಿನ ಮೂರು ಆಟಗಳು

ಮಲತಾಯಿ

(ತಮಿಳು)

ಪಾತ್ರ:— ರುಕ್ಮಿಣಿ ದೇವಿ, ಎಸ್. ಜಯಮಣಿ

ಮೊಸರು ಇಲ್ಲದ ಊಟ, ಕೆಸರು ಇಲ್ಲದ ಗದ್ದೆ, **ಬಸುರಾಗದವಳ ಬಾಳುವೆಯು ಬೇಸಿಗೆಯ ಬಿಸಿಲು ಕಾವಂತೆ ಸರ್ವಜ್ಞ ||**

ನೂರಾರು ವರ್ಷಗಳ ಹಿಂದೆ ಸರ್ವಜ್ಞನು ಈ ರೀತಿ ಬರೆಯಲು ಕಾರಣ?

ಶೋಭನ (NUPTIALS) ವಾಗಿ **ಎಷ್ಟೋ ವರ್ಷಗಳಾದಾಗ್ಯೂ ಬಹಿಷ್ಠೆ ಸಂಬಂಧದ ಹೊಟ್ಟೆನೋವು ಸಂಪೂರ್ಣವಾಗಿ ಗುಣವಾಗುವ ತನಕ ಖಂಡಿತ ಸಂತಾನವಾಗುವುದಿಲ್ಲವೆಂಬುದು ನೆನಪಿರಲಿ!**

ಈ ಹೊಟ್ಟೆನೋವು ಇತ್ಯಾದಿಗಳು ಕೂಡಲೇ ಗುಣವಾಗಿ, ಶಾಶ್ವತ ಸಂತಾನ ಫಲ ಬೇಕೋ? ಹಾಗಾದರೆ, ಮೈಸೂರು ಅರಮನೆಯ ರಾಜ ವೈದ್ಯರಾಗಿದ್ದ ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 94 ವರ್ಷಗಳಿಂದ ಪ್ರಖ್ಯಾತವಾಗಿ ಅನೇಕ ಡಾಕ್ಟರು ಮತ್ತು ಹೆಸರಾಂತ ಸಾರ್ವಜನಿಕರ ಶಿಫಾರಸು ಮತ್ತು ಮೆಚ್ಚುಗೆಯನ್ನು ಪಡೆದಿರುವ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಸಿದ್ಧೌಷಧವನ್ನು ಸೇವಿಸಿರಿ ... ಮದನ ವಿಲಾಸದೊಡನೆ

1 ಸೆಟ್ ಸೇವಿಸಿ ಫಲ ತಪ್ಪದೆ ಗೊತ್ತಾಗುತ್ತೆ. ಈ ಮಹೌಷಧವು

★ ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ.

★ ಅಕ್ರಮ ಸೂತಕ ಕ್ರಮವನ್ನು ಬಹಿಷ್ಠೆಯಾಗುವುದನ್ನು ಕ್ರಮಪಡಿಸಿ

★ ಗರ್ಭ ಪತನ ಗರ್ಭಸ್ರಾವ ಇತ್ಯಾದಿಗಳನ್ನು ತಡೆಗಟ್ಟಿ

★ ಬಾಲಾರಿಷ್ಟಗಳನ್ನು ಹೋಗಲಾಡಿಸಿ ಸಂತಾನವನ್ನು ಕೊಡುತ್ತದೆ

ಕ್ರಯ | ಸೆಟ್ 5 ರೂ ಅಂಚೆ ಖರ್ಚು ರೂ 1 ವಿ ಪಿ ಇಲ್ಲ

ಕ್ಯಾಟಲಾಗು ಉಚಿತ ಪತ್ರ ವ್ಯವಹಾರ ಗುಪ್ತ

ವಿಳಾಸ — ಎ. ರಾಮಸ್ವಾಮಿ ಅಯ್ಯರ್ ಸನ್,

628 ಸಂತಾನ ಸಿಂಧೂರ ಆಫೀಸ್, ಚಾಮುಂಡಿ ರೋಡ್, ದಕ್ಷಿಣ ಕ್ರಾಸ್, ಕೃಷ್ಣ ವಿಲಾಸ್ ಸಮೀಪ, ಮೈಸೂರು

Edited, Printed and Published by A R Nagaraj at Sadhvi Press, D Subbiah Road, Mysore

ಗಮನಿಸಿ ! ದಯಮಾಡಿಸಿ ! ಆನಂದಿಸಿ !

ರುಚಿರುಚಿಯಾದ ಫಲಾಹಾರ ಮಂದಿರವೆಂದರೆ ? ಎಚ್ ಜಿ ಪ್ರಸಾದ್‌ರವರ

(ನ್ಯೂ ಮ್ಯಾನೇಜ್‌ಮೆಂಟ್)

★ ವಿಶ್ರಾಂತಿ ಭವನ್ ★

(ಬಡಾವಣೆ ಆಫೀಸ್)

ಶಿವರಾಂಪೇಟೆ ಬಜಾರ್ (ಮಹಲು) ಇಲಾಖೆಯ ರಸ್ತೆ, ಮೈಸೂರು

ಮಹಾಶಯರೇ ತಮ್ಮ ಮಿತ್ರರೊಡನೆ ಈ ದಿನವೇ ಭೇಟಿ ಕೊಡಿ ಅಲ್ಲಿಯ ಕಾಫಿ ತಿಂಡಿಯನ್ನು ಫಲಹಾರ ಮಾಡಿ ಪರೀಕ್ಷಿಸಿರಿ ಬೆಲೆಯಲ್ಲಿ ಕಡಿಮೆಯಿದ್ದು ಗುಣದಲ್ಲಿ ತೃಪ್ತಿಪಟ್ಟು ತಮ್ಮ ಮಿತ್ರರೊಡನೆ ಮತ್ತೊಂದು ಸಲ ಭೇಟಿ ಕೊಡಿ ಈಗ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಸರ್ವರೂ ಈ ಹೋಟೇಲಿಗೆ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ರಜಾ ದಿನ – ಗುರುವಾರ ಸ್ಪೆಷಲ್ ತಿಂಡಿ ಬೆಲೆ ಒಡೆ 0 1 0, ಸಂಜೆಯ ದೋಸೆ 0-3 0. ಸ್ಪೆಷಲ್ ಕಾಫಿ ಬೆ 0-1-6

ರಿಜಿಸ್ಟರ್ಡ್ ನಂ 792 [ರಂಪ್ಯ ಮಾತರಂ] ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೭-೧೧-೧೯೫೬ [ಸಂಚಿಕೆ ೫೦

ದಕ್ಷಿಣ ಆಫ್ರಿಕಾ-ಭಾರತ – ಗಳ ನೇರ ಸಂಧಾನ –

ಅಖಿಲ ಭಾರತ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ

ಹಲವು ತಾಲ್ಲೂಕುಗಳಿಂದ ಅವಿರೋಧ ಆಯ್ಕೆ

ಮೈಸೂರು ೩.

ಮೈಸೂರು ಜಿಲ್ಲೆಯಿಂದ ಕಾಂಗ್ರೆಸ್ ಮಹಾಧಿವೇಶನಕ್ಕೆ ನಡೆಯಲಿರುವ ಚುನಾವಣೆಗಳಿಗೆ ನಾಮಪತ್ರಗಳನ್ನು ಸಲ್ಲಿಸಲು ನಿಶ್ಚಯೀ ಕಡೆಯ ದಿನವಾಗಿತ್ತು. ಟಿ. ನರಸೀಪುರದಿಂದ ಶ್ರೀ ಹೆಚ್. ಎಂ. ಚನ್ನಬಸಪ್ಪನವರೂ, ಚಾಮರಾಜನಗರದಿಂದ ಶ್ರೀ ಟಿ. ಮಹಾದೇವಯ್ಯನವರೂ, ಕನಕಪುರ ಕ್ಷೇತ್ರದಿಂದ ಶ್ರೀ ಬಿ. ಎಂ. ಸಿದ್ದಯ್ಯನವರೂ ಹೆಗ್ಗಡದೇವನಕೋಟೆಯಿಂದ ಶ್ರೀ ಹೆಚ್. ಕೆ. ತಿಮ್ಮಪ್ಪನವರೂ ಹುಣಸೂರಿನಿಂದ ಶ್ರೀ ಎಂ. ಎ. ಶ್ರೀನಿವಾಸಯ್ಯಂಗಾರ್ಯರೂ ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಇತರ ತಾಲ್ಲೂಕುಗಳಲ್ಲಿ ಸ್ಪರ್ಧೆ ನಡೆದಿದೆ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಡಿ. ಸಿ. ಪಾಪಣ್ಣನವರು ಮೈಸೂರು ಜಿಲ್ಲಾ ಗುಂಡ್ಲುಪೇಟೆ ತಾಲ್ಲೂಕುಗಳಿಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಿರುವರು. ಚುನಾವಣೆಗಳು ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಇದೇ ೧೫ ನೇ ತಾರೀಖು ನಡೆಯುವುವು.

ಬೃಂದಾವನೋತ್ಸವ

ಬೆಂಗಳೂರಿನ ಪಾಂಚಜನ್ಯ ಬಿರುದಾಂಕಿತ ಭಾರತೀ ಶ್ರೀ ಸಮಾಜದಲ್ಲಿ ಕಳೆದ ಗುರುವಾರ ಬೃಂದಾವನೋತ್ಸವವು ನಡೆಯಿತು. ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು "ಸತಿ ಬೃಂದೆಯ ಅಮರ ಪಾತಿವ್ರತ್ಯ" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು. ದೀಪೋತ್ಸವ ನಡೆದು ಮಕ್ಕಳಿಗೆ ಪಟಾಕಿಗಳನ್ನು ಹಂಚಲಾಯಿತು.

ಟೆನ್ನಿಸ್ ಚಾಂಪಿಯನ್‌ಷಿಪ್ ಸ್ಪರ್ಧೆಗಳು

ಬೆಂಗಳೂರು ಪಾರಿಟನ್ ಕ್ಲಬ್ಬಿನ ಆಶ್ರಯದಲ್ಲಿ ಈ ತಿಂಗಳು ೧೦ ನೇ ತಾರೀಖಿನಿಂದ ೨೨ ನೇ ತಾರೀಖಿನ ವರೆಗೆ ನಡೆಯುವ ಟೆನ್ನಿಸ್ ಚಾಂಪಿಯನ್‌ಷಿಪ್ ಪಂದ್ಯಗಳಿಗೆ ಪ್ರವೇಶ ಪತ್ರಗಳನ್ನು ಇದೇ ತಿಂಗಳು ೮ ನೇ ತಾರೀಖು ಸಂಜೆ ೬ ಘಂಟೆಯ ವರೆಗೆ ಸ್ವೀಕರಿಸಲಾಗುವುದೆಂದು ತಿಳಿಯಪಡಿಸಲಾಗಿದೆ.

ದೆಹಲಿಗೆ ಕಾರ್ಮಿಕ ಪ್ರತಿನಿಧಿಗಳ ಪ್ರಯಾಣ

ಅಖಿಲ ಭಾರತ ರೈಲ್ವೆ ನೌಕರರ ಸಂಘದವರು ತಮ್ಮ ಕುಂದುಕೊರತೆಗಳನ್ನು ಭಾರತ ಸರ್ಕಾರದ ರೈಲ್ವೆ ಮಂತ್ರಿಗಳಿಗೆ ಪ್ರತಿನಿಧಿಗಳ ಮೂಲಕ ತಿಳಿಸಿ ಅವರುಗಳ ಅಭಿಪ್ರಾಯಗಳನ್ನು ಕೇಳಲಿರುವರಲ್ಲದೆ ಮೈಸೂರು ಪ್ರಾಂತದ ಪ್ರತಿನಿಧಿಯಾಗಿರುವ ಶ್ರೀ ಮರಿಸ್ವಾಮಿಯವರು ಸಭೆಯಲ್ಲಿ ಭಾಗವಹಿಸಲು ನೆನ್ನೆ ದೆಹಲಿಗೆ ಪ್ರಯಾಣ ಮಾಡಿದರು.

ಉತ್ತರ ಪ್ರದೇಶದ ಸರ್ಕಾರೀ ಭಾಷೆ ಹಿಂದಿ

ಉತ್ತರ ಪ್ರದೇಶದಲ್ಲಿ ನೆನ್ನೆಯಿಂದ ಎಲ್ಲ ಸರ್ಕಾರೀ ವ್ಯವಹಾರಗಳನ್ನೂ ಇಂಗ್ಲೀಷಿಗೆ ಬದಲು ಹಿಂದೀ ಭಾಷೆಯಲ್ಲಿ ನಡೆಸುವ ವ್ಯವಸ್ಥೆ ಜಾರಿಗೆ ಬಂದಿದೆ.

ತಮಿಳು ನಾಡು ಪಿ. ಎಂ. ಪಿ. ಪಕ್ಷದ ವಿರೋಧ ವರ್ತನೆ

ಅಖಿಲ ಭಾರತ ಪ್ರಜಾ ಸೋಷಲಿಸ್ಟ್ ಪಕ್ಷವಾಗಿ ಕೆ ಎಂ ಪಿ ಮತ್ತು ಸಮಾಜವಾದಿ ಪಕ್ಷಗಳು ಐಕ್ಯವಾಗಿರುವುದನ್ನು ಮದರಾಸಿನ ತಮಿಳುನಾಡು ಕೆ ಎಂ ಪಿ ಪಕ್ಷವು ವಿರೋಧಿಸಿ, ಇನ್ನು ಮುಂದೆ ತಮ್ಮ ಪಕ್ಷದ ಸದಸ್ಯರು ಶಾಸನ ಸಭೆಯಲ್ಲಿ ಸಂಯುಕ್ತ ಪಕ್ಷದವರೊಡನೆ ಕೂಡಬೇಕೆಂದೂ, ಪ್ರಜಾ ಸೋಷಲಿಸ್ಟ್ ಪಕ್ಷದ ಕಾರ್ಯಕ್ರಮಗಳೊಡನೆ ಸಹಕರಿಸಬಾರದೆಂದೂ ತೀರ್ಮಾನಿಸಿರುತ್ತದೆ.

ಅಪರಿಚಿತನ ಕೂಡೆ ಮಾತನಾಡಿದ ಪತ್ನಿಗೆ ಇರಿತ

ಕರಾಚಿಯ ಮುರದ್ ಮೊಗಲ್ ಎಂಬ ಮುಸ್ಲಿಂ ತರುಣನು ತನ್ನ ಪತ್ನಿ ರಬಿಯಾ ಎಂಬಾಕೆಯು ಅಪರಿಚಿತ ಪುರುಷನೊಡನೆ ಮಾತನಾಡುತ್ತಿದ್ದಳೆಂಬ ಕಾರಣಕ್ಕಾಗಿ ಅವಳನ್ನು ಕುತ್ತಿಗೆ ಮತ್ತು ಹೊಟ್ಟೆ ಮೇಲೆ ಇರಿದು ಸಾಯಿಸಿದನೆಂದು ವರದಿಯಾಗಿದೆ.

ಆಸ್ಪತ್ರೆ ಕಟ್ಟಡಕ್ಕೆ ಬೆಂಕಿ ಬಿದ್ದು ೧೮ ಜನರ ಮರಣ

ಉತ್ತರ ಅಮೆರಿಕದ ಮಿಸ್ಸೌರಿ ಎಂಬಲ್ಲಿ ಮೂರು ಅಂತಸ್ತಿನ ಆಸ್ಪತ್ರೆ ಕಟ್ಟಡವೊಂದರ ಕೆಳ ಅಂತಸ್ತಿನಲ್ಲಿ ಮೊನ್ನೆ ಬೆಂಕಿಯುಂಟಾಗಿ ಅದು ಉಳಿದ ಎರಡು ಅಂತಸ್ತುಗಳಿಗೂ ಹರಡಿದ ಪರಿಣಾಮವಾಗಿ ೧೮ ಮಂದಿ ವ್ಯಕ್ತಿಗಳು, ೩೭ ಜನರಿಗೆ ತೀವ್ರ ಗಾಯಗಳಾದುವೆಂದು ತಿಳಿದುಬಂದಿದೆ.

ಮೈಸೂರಿನಲ್ಲಿ ಅಖಿಲ ಭಾರತ ರೈಲ್ವೆ ಸಮ್ಮೇಳನ

ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಪೂನಾದಲ್ಲಿ ಸಮಾವೇಶಗೊಂಡು ರೈಲ್ವೆಗಳ ಪುನರ್ವಿಂಗಡಣೆಯಿಂದುಂಟಾದ ಪರಿಸ್ಥಿತಿಯನ್ನು ಪರಿಶೀಲಿಸಿತು. ಬರುವ ಜನವರಿ ೨೧ ನೇ ತಾರೀಖಿನಿಂದ ೨೪ ರ ವರೆಗೆ ಮೈಸೂರಿನಲ್ಲಿ ಅಖಿಲ ಭಾರತ ರೈಲ್ವೆ ಕೆಲಸಗಾರರ ಮಹಾ ಸಮ್ಮೇಳನವನ್ನು ನಡೆಸುವಂತೆ ತೀರ್ಮಾನಿಸಲಾಯಿತು. ಶ್ರೀ ಜಯಪ್ರಕಾಶ್ ನಾರಾಯಣರು ಸಭಾಧ್ಯಕ್ಷತೆ ವಹಿಸಿದ್ದರು.

ಭಾರತದೊಡನೆ ದಕ್ಷಿಣ ಆಫ್ರಿಕದ ನೇರ ಸಂಧಾನ

ವಿಶ್ವಸಂಸ್ಥೆಯ ಟ್ರಸ್ಟಿಷಿಪ್ ಸಮಿತಿಯಲ್ಲಿ ಮೊನ್ನೆ ದಿನ ದಕ್ಷಿಣ ಆಫ್ರಿಕದ ವರ್ಣಭೇದ ಶಾಸನದ ಚರ್ಚೆಯು ಆರಂಭವಾದಾಗ ದಕ್ಷಿಣ ಆಫ್ರಿಕದ ಪ್ರತಿನಿಧಿಯು ಅದರಲ್ಲಿ ಭಾಗವಹಿಸಲೂ ಮತ್ತು ಓಟು ಕೊಡಲೂ ನಿರಾಕರಿಸಿದರೆಂದು ಗೊತ್ತಾಗಿದೆ. ಮೇಲ್ಕಂಡ ಸಮಸ್ಯೆಯನ್ನು ಕುರಿತು ಭಾರತ ಪಾಕಿಸ್ತಾನಗಳೊಡನೆ ನೇರವಾಗಿ ಸಂಧಾನ ನಡೆಸಲು ದಕ್ಷಿಣ ಆಫ್ರಿಕವು ಸಿದ್ಧವಾಗಿರುವುದೆಂದೂ ಹೇಳಲಾಗಿದೆ.

ಪತ್ರವಳ ಶೀರ್ಷಕ ಪಡೆದ ಮಗನಿಗೆ ಸಜಾ

ಲಂಡನ್ನಿನ ವಿಲಿಯಂ ಹೆನ್ರಿ ಸ್ಮಿತ್ ಎಂಬುವನು ಒಂದು ವರ್ಷದ ಹಿಂದೆ ತನ್ನ ತನ್ನ ೮೭ ವರ್ಷದ ತಾಯಿಯ ವೃದ್ಧಾಪ್ಯದ ಪೆನ್ಷನ್ನನ್ನು ಮೋಸ ಮಾಡಿ ಪಡೆದುದಕ್ಕಾಗಿ ೯ ತಿಂಗಳು ಸಜಾ ಶಿಕ್ಷೆಗೆ ಗುರಿಯಾಗಿರುವನೆಂದು ವರದಿಯಾಗಿದೆ. ತಾಯಿಯ ಶವವನ್ನು ಅವನು ತನ್ನ ಮನೆಯ ಅಡಿಗೆ ಮನೆಯಲ್ಲಿ ಒಂದು ಕುರ್ಚಿಯ ಮೇಲೆ ಇಟ್ಟಿದ್ದನೆಂದೂ, ಅಕ್ಕಪಕ್ಕದ ಮನೆಗಳವರು ಅದನ್ನು ನೋಡಲು ಬಂದಾಗ ತನ್ನ ತಾಯಿಯು ಅಸ್ವಸ್ಥಳಾಗಿರುವಳೆಂದೂ, ಬೇರೆಯವರಿಗೆ ಸಂಧಿಸಲಾರಳೆಂದೂ ತಿಳಿಸುತ್ತಿದ್ದನೆಂದೂ, ಕಡೆಗೆ ಶವವು ನಾರುವುದಕ್ಕೆ ಆರಂಭವಾದಾಗ, ವೈದ್ಯರು ಪರೀಕ್ಷಿಸಿ ಆಕೆಯು ಒಂದು ವರ್ಷದ ಹಿಂದೆಯೇ ಸತ್ತಿರಬೇಕೆಂದು ತಿಳಿಸಿದರೆಂದೂ ಗೊತ್ತಾಗಿದೆ.

ಕೊರಿಯಾ ಬಗ್ಗೆ ಏಷ್ಯಾ ಅರಬ್ ರಾಷ್ಟ್ರಗಳ ಚರ್ಚೆ

ಏಷ್ಯಾ ಅರಬ್ ರಾಷ್ಟ್ರಗಳು ಆ ದಿನ ಸಭೆ ಸೇರಿ ಕೊರಿಯಾ ಸಮಸ್ಯೆಯ ಇತ್ಯರ್ಥದ ಬಗ್ಗೆ ಚರ್ಚೆ ನಡೆಸುವುವು. ಈ ಸಂಗಡಕ್ಕೆ ಈ ತಿಂಗಳಿಗೆ ಅಧ್ಯಕ್ಷ ರಾಷ್ಟ್ರವಾದ ಭಾರತವು ೧೧ ಸದಸ್ಯ ರಾಷ್ಟ್ರಗಳ ಮತ್ತು ರಕ್ಷಣಾ ನಿರ್ಣಯಗಳಿಗೆ ಹೊಂದುವಂಥ ನಿರ್ಣಯದ ಕರಡನ್ನು ತಯಾರಿಸಿ ಸಂಗಡದ ಪರಿಶೀಲನೆಗೆ ಒಪ್ಪಿಸಬೇಕೆಂದು ಕೋರಲ್ಪಟ್ಟಿದೆ.

ದಕ್ಷಿಣ ಆಫ್ರಿಕದಲ್ಲಿ ಘರ್ಷಣೆ ತಡೆಯಲು ಉಗ್ರ ಕ್ರಮ

ದಕ್ಷಿಣ ಆಫ್ರಿಕದಲ್ಲಿ ಐರೋಪ್ಯರಿಗೂ ಮತ್ತು ಇತರ ವರ್ಣದವರಿಗೂ ಸಂಭವಿಸಬಹುದಾದ ಘರ್ಷಣೆಗಳನ್ನು ನಿವಾರಿಸುವ ಸಲುವಾಗಿ ಉಗ್ರ ಕ್ರಮವನ್ನು ಕೈಗೊಳ್ಳಲು ತಕ್ಕ ಶಾಸನವನ್ನು ಬರುವ ಜನವರಿ ತಿಂಗಳಲ್ಲಿ ಸೇರುವ ಪಾರ್ಲಿಮೆಂಟ್ ಸಭೆಯಲ್ಲಿ ತರಲಾಗುವುದೆಂದೂ, ಗಲಭೆಯನ್ನು ತಡೆಯಲು, ಅಗತ್ಯ ಬಿದ್ದಾಗ ಹೊಡೆಯುವುದಕ್ಕೂ ಮತ್ತು ಗುಂಡು ಹಾರಿಸುವುದಕ್ಕೂ ಪೋಲೀಸರಿಗೆ ಅಧಿಕಾರ ಕೊಡಲಾಗುವುದೆಂದೂ ಅಲ್ಲಿನ ನ್ಯಾಯಾಂಗ ಮಂತ್ರಿ ಸ್ವಾರ್ಟ್‌ರವರು ತಿಳಿಸಿರುವರು.

ಎ. ಐ. ಆರ್. ನೊಡನೆ ಚಿತ್ರ ತಯಾರಕರ ಒಪ್ಪಂದ ರದ್ದು

ಅಖಿಲ ಭಾರತ ಚಲನಚಿತ್ರ ತಯಾರಕರ ಸಂಘದ ಸಭೆಯು ಮೊನ್ನೆ ಬೊಂಬಾಯಿಯಲ್ಲಿ ಸೇರಿ, ಭಾರತ ಸರ್ಕಾರದವರು ಚಿತ್ರ ಸಂಗೀತವನ್ನು ರೇಡಿಯೋ ಕೇಂದ್ರಗಳಲ್ಲಿ ಪ್ರಸಾರ ಮಾಡದಂತೆ ನಿರ್ಧರಿಸಿರುವ ಅಂಶವನ್ನು ಪರಿಶೀಲಿಸಿ ಇನ್ನು ಮುಂದೆ ಸಂಘದ ಸದಸ್ಯರ ಚಿತ್ರ ಸಂಗೀತದ ರೆಕಾರ್ಡುಗಳನ್ನು ಹಾಕುವ ಬಗ್ಗೆ ಸಂಸ್ಥೆಗೂ ಸರ್ಕಾರಕ್ಕೂ ಆಗಿದ್ದ ಒಪ್ಪಂದವನ್ನು ಕೊನೆಗಾಣಿಸಬೇಕೆಂದು ನಿರ್ಧರಿಸಿತು. ಭಾರತದ ಚಿತ್ರಗಳನ್ನು ಪಾಕೀಸ್ತಾನಕ್ಕೆ ತರಿಸದಂತೆ ನಿಷೇಧಿಸಿರುವುದರಿಂದ ಅಲ್ಲಿನ ಚಿತ್ರವನ್ನು ಇಲ್ಲೂ ಕೂಡಲೇ ಪ್ರತಿಬಂಧಿಸಬೇಕೆಂದು ಸರಕಾರವನ್ನು ಒತ್ತಾಯ ಮಾಡಲಾಯಿತು. ಬೊಂಬಾಯಿಯಲ್ಲಿ ವಿಧಿಸಲಾಗಿರುವ ವಿವಿಧ ಥಿಯೇಟರ್ ಮನೋರಂಜನ ತೆರಿಗೆಯನ್ನು ಪ್ರತಿಭಟಿಸುವ ನಿರ್ಣಯವೂ ಮಂಜೂರಾಯಿತು.

ಸತ್ತ ಯಜಮಾನನಿಗಾಗಿ ಬೆಕ್ಕಿನ ವ್ಯಸನ

ತನ್ನ ಯಜಮಾನನು ಸತ್ತುದನ್ನು ಕಂಡು ಒಂದು ಬೆಕ್ಕು ಅಂದಿನಿಂದಲೂ ಆಹಾರದ ಸೇವನೆಯನ್ನು ಬಿಟ್ಟು ವ್ಯಥೆ ಪಡುತ್ತಿರುವುದಾಗಿ ರಾಜಪುರದ ಸುದ್ದಿಯೊಂದು ತಿಳಿಸುತ್ತದೆ.

ಕಾಡುಗೋಲು- ಕೊಡಲಿಯಿಂದ ೮ ಜನರ ಕೊಲೆ

ಭಾರತದ ಪೋರ್ಚುಗೀಸ್ ಸ್ವಾಸ್ಥ್ಯದಲ್ಲಿರುವ ಸಿಲ್ವಾಸ್ಸಾ ಎಂಬಲ್ಲಿ ಕಳೆದ ಗುರುವಾರ ಎರಡು ಪಂಗಡಗಳವರಿಗೆ ಜಗಳ ಸಂಭವಿಸಿ ಒಂದು ಪಕ್ಷಕ್ಕೆ ಸೇರಿದ ಎಂಟು ಜನರು ಕಾಡುಗೋಲು ಮತ್ತು ಕೊಡಲಿಗಳಿಂದ ಕೊಲ್ಲಲ್ಪಟ್ಟರೆಂದೂ, ಇತರ ಮೂವರು ತೀವ್ರ ಗಾಯಗೊಂಡರೆಂದೂ ಗೊತ್ತಾಗಿದೆ.

ನಂಜನಗೂಡು

ಶ್ರೀಕಂಠಶಾಸ್ತ್ರಿಗಳಿಗೆ ಸನ್ಮಾನ

ಪ್ರಖ್ಯಾತ ವಿದ್ವಾಂಸ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳನ್ನು ಸನ್ಮಾನಿಸಲು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ಇದೇ ೯ ನೇ ತಾರೀಖು ಸನ್ಮಾನ ಸಭೆಯೊಂದನ್ನು ಏರ್ಪಡಿಸಿರುತ್ತಾರೆಂದು ತಿಳಿದುಬಂದಿದೆ.

ಪರಿಹಾರ ನಿಧಿಗೆ ಬಟ್ಟೆ ವರ್ತಕರ ಸಹಾಯ

ಮೈಸೂರು ೩

ರಾಜಧಾನಿಯ ಬಟ್ಟೆ ವರ್ತಕರು ಮುಖ್ಯ ಮಂತ್ರಿಯವರ ಅಭಾವ ಪರಿಹಾರ ನಿಧಿಗೆ ಈ ರೀತಿ ಸಹಾಯ ಮಾಡಿರುತ್ತಾರೆ —

ಶ್ರೀಗಳಾದ ಜವಾರ್ ಚಂದ್ ರೂಪಾಜಿ ಮತ್ತು ಕಂಪೆನಿ ೩೦೧, ಮತ್ತು ಷಾ ರಿಕಾಬ್ ಚಂದ್ ಮಿಠ್ಠಾಲಾಲ್ ಮತ್ತು ಕಂಪೆನಿ ಮಾಣಿಕ್ ಚಂದ್ ಪುಖ್‌ರಾಜ್ ಮತ್ತು ಕಂಪೆನಿ ೩೦೧ ರೂ, ಇ ಪಿ ನಂಜಪ್ಪ, ಅಬ್ದುಲ್ ಕರೀಂ ಅಬೂಬೇಕರ್ ಸೇಟ್ ಕಂಪೆನಿ ತಲಾ ೨೦೧ ರೂ, ಯು ಎಲ್ ರಾಮಚಂದ್ರರಾವ್, ಷಾ ಚೋಗಾಲಾಲ್ ಭೇರ್ ಚಂದ್ ಕಂಪೆನಿ, ಷಾ ಶೇಷಮಲ್ ಗೇನಾಜಿ ಕಂಪೆನಿ, ರಾಮಕೃಷ್ಣ ರಾವ್ ಕೆ ಎ ಅಂಜನಪ್ಪ ಮತ್ತು ವಿ ಆರ್ ಎ ಬಾಲಕೃಷ್ಣ ಮುದಲಿಯಾರ್ ತಲಾ ೧೫೧ ರೂ, ಕೆ ಎಸ್ ಸತ್ಯನಾರಾಯಣರಾವ್ ೧೨೦ ರೂ, ಷಾ ತೇಗರಾಜ್ ಹಿರಾಚಂದ್ ಕಂಪೆನಿ ಕೆ ಜೆ ರಂಗಸ್ವಾಮಿ ಕಂಪೆನಿ ಗುಲಾಬ್ ಚಂದ್ ನೇಮಿಚಂದ್ ಕಂಪೆನಿ, ಹಾಜಿ ಗುಲಾಂ ಹುಸೇನ್ ಖಾನ್ ಮತ್ತು ಸನ್ಸ್, ಹಾಜಿ ಗುಲಾಂ ಅಹಮದ್ ಖಾನ್ ಮತ್ತು ಸನ್ ಎಸ್ ಆರ್ ಎಲ್ ತಲ್ಲಂ ಕಂಪೆನಿ, ಯು ಎಲ್ ವಿಶ್ವನಾಥರಾವ್ ತಲಾ ೧೦೧ ರೂ, ನಿಾತ್ರಿಮಲ್ ಗೇವರ್‌ಚಂದ್ ಕಂ, ಎಂ ಕೆ ಮಾಧವರಾವ್ ಪವಾರ್ ತಲಾ ೭೫ ರೂ, ಕೆ ಎಸ್ ಸೂರ್ಯನಾರಾಯಣ ರಾವ್ ೫೦ ರೂ ಷಾ ಸ ಮರ್ಥ್ಮಲ್ ಸವಾಜಿ ಕಂಪನಿ ಷಾ ಮಗೇಮಲ್ ಹಸ್ತಿಮಲ್ ಕಂಪೆನಿ, ಮುಲ್ತಾನ್ ಮಲ್ ಸಾಥ್‌ಮಲ್ ಕಂಪೆನಿ, ಬಿ ಒಬ್ದುಲ ಕರೀಂ ಮಹಮದ್ ಸೇಟ, ವರ್ಧಿಚಂದ್ ಹಸ್ತಿಮಲ್ ಕಂಪೆನಿ ಕೇಸ್‌ರಾಜ್ ಸಜ್ಜನ್‌ರಾಜ್ ಕಂಪೆನಿ, ಶೇಷ್‌ಮಲ್ ಭೂತ್ಮಲ್ ಕಂಪೆನಿ, ಹೇಮರಾಜ್ ಕಪೂರ್‌ಚಂದ್ ಕಂಪೆನಿ ಓ ಎಸ್ ವೆಂಕಟರಮಣಶೆಟ್ಟಿ ಮತ್ತು ಸನ್ಸ್, ಕುಕ್ರಿ ಎಂಪೋರಿಯಂ ತಲಾ ೫೧ ರೂ, ವಾಸುದೇವ ಏಕೆ, ರತನಚಂದ್ ಚಂದನಮಲ್ ಕಂಪೆನಿ ತಲಾ ೪೧ ರೂ, ಬಾಬೂಲಾಲ್ ಜವರ್‌ಲಾಲ್ ಕಂಪೆನಿ, ಭೀಮರಾವ್ ಭೆಜಾಜಿ ಕಂಪೆನಿ, ಸಮರಥ್‌ಮಲ್ ಸಾಹೂಲಾಲ್ ಕಂಪೆನಿ ಭೊರ್ಮಲ್ ದೀಪಚಂದ್ ಕಂ, ಮಿಸ್ರಿಮಲ್ ಶೇಮಲ್‌ಮಲ್ ಕಂ ಬಾಬೂಲಾಲ್ ಉಮೇದ್‌ಮಲ್ ಕಂ, ಎಂ ಬಿ ಸ್ವಾಮಿ ತಲಾ ೨೫ ರೂ

ಸಮಾಜ ಸೇವಾ ದಿನಾಚರಣೆ

ರಾಜಧಾನಿಯ ಮಹಾರಾಜಾ ಹೈಸ್ಕೂಲಿನಲ್ಲಿ ಸಮಾಜ ಸೇವಾ ದಿನಾಚರಣೆಯನ್ನು ಮೊನ್ನೆ ನೆರವೇರಿಸಲಾಯಿತು ಶಾಲಾ ಮುಖ್ಯೋಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು ಉಪಾಧ್ಯಾಯರುಗಳು ಭಾಷಣ ಮಾಡಿ ಸಮಾಜ ಸೇವೆಯ ಮಹತ್ವವನ್ನು ತಿಳಿಸಿದರು ಸಮಾಜಕ್ಕೆ ಸೇವೆ ಸಲ್ಲಿಸಲು ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಿದರು

ನವ ಚೀಣಾದ ಆರ್ಥಿಕ ಪ್ರಗತಿ

ತಾಯಿನಾಡು ಟೀಕೆಗೆ ನನ್ನ ಸಮಾಧಾನ

ತಾಯಿನಾಡು ೨೫ ೧೦ ೫೨ರ ಶನಿವಾರದ ಪತ್ರಿಕೆಯು ಪ್ರಕಟಣ ಪ್ರಪಂಚದಲ್ಲಿ ' ನವ ಚೀಣಾದ ಆರ್ಥಿಕ ಪ್ರಗತಿ ' ಎಂಬ ಶಿರೋನಾಮೆಯಲ್ಲಿ ಸದರಿ ಪುಸ್ತಕದ ವ್ಯಂಗ್ಯ ಚಿತ್ರ ಮತ್ತು ನನ್ನ ಮುನ್ನುಡಿಯ ಮೇಲಿನ ಟೀಕೆಗಳಿಗೆ ಸಮಾಧಾನವಿತ್ತಿದ್ದೇನೆ ಸದರಿ ಪತ್ರಿಕೆಯಲ್ಲಿ ನನ್ನ ಟೀಕೆಯು ಪ್ರಕಟವಾಗಲಿಲ್ಲ ದಯವಿಟ್ಟು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ

ಚೀಣಾ ರಾಷ್ಟ್ರವು ಸ್ವಾವಲಂಬನ, ಸ್ವಪರಿಪೂರ್ಣವಾಗಿ ' ಕೊಡುಗೈ ಚೀಣಾ ರಾಷ್ಟ್ರವೇ ಆಗಿದೆ ಪೂರ್ವ ದಿಕ್ಕಿನ ನವೋದಯವು ಅನನ್ಯಾನಕ್ಕೆ ತರ ತಕ್ಕಂಥಾದ್ದೆಂಬುದು ನಿರ್ವಿವಾದವಾದುದೂ ಮತ್ತು ವಿಷಯಕ್ಕೆ ಅವಶ್ಯಕವಾದುದೂ ಆಗಿದ

ಚೀಣಾ ರಾಷ್ಟ್ರವು ಸ್ವತಂತ್ರವಾದ ಕೂಡಲೇ ಜನ ನಾಯಕರ ಹಸ್ತಗತವಾಯಿತು ಆ ನಾಯಕರುಗಳ ಮುಖಂಡರಾದ ಚಾಂಗ್ ಕೈಷೇಕ್‌ರವರು ಸುಲಿಗೆಕೋರರಾದ ಪರ ರಾಷ್ಟ್ರದ ಸಹಕಾರವನ್ನು ಪಡೆದು ಪರ ರಾಷ್ಟ್ರದ ಸುಲಿಗೆ ಗೆ ಬೆಂಬಲ ಕೊಡುವ ದೇಶೀಯ ಶ್ರೀಮಂತರ ಜಮೀನ್ದಾರರ ಪಕ್ಷಕ್ಕೆ ಪೂರ್ಣ ಬೆಂಬಲ ನೀಡುವ ಶಾಸನಗಳನ್ನು ರಚಿಸಿದರು ಇಂದ ಶೋಷಣೆಯ ಶಾಸನಗಳ ಆಡಳಿತದಿಂದ ನಲವತ್ತು ಶತಮಾನಗಳ ಗುಲಾಮಗಿರಿಯಿಂದ ಬೆಂದು ಬೆಂಡಾಗಿದ್ದ ಚೀಣಾ ರಾಷ್ಟ್ರವು ಬಡತನವು ಮತ್ತು ಅಭಾವದ ಪರಮಾವಧಿಯನ್ನು ಮುಟ್ಟಿತು ಇದನ್ನು ಸಹಿಸಲಾರದ ಪ್ರಜಾವರ್ಗವು ಮೋತ್ಸೆ ಟುಂಗ್‌ರವರ ನಾಯಕತ್ವವನ್ನು ಅಂಗೀಕಾರ ಮಾಡಿತು ಮೋತ್ಸೆ ಟುಂಗರು ಸುಲಿಗೆಕೋರರಾದ ಪರ ರಾಷ್ಟ್ರದ ಸಂಪರ್ಕವನ್ನು ತೊಡೆದುಹಾಕಿದರು ಅವರ ಆಸ್ತಿ ಪಾಸ್ತಿಗಳನ್ನೂ ಬಂಡವಾಳವನ್ನೂ ರಾಷ್ಟ್ರೀಕರಣ ಮಾಡಿ ರಾಷ್ಟ್ರಾಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಿದರು ಅನಾವಶ್ಯಕವಾದ ಪದಾರ್ಥಗಳು ಚೀಣಾ ರಾಷ್ಟ್ರದೊಳಗೆ ಪ್ರವೇಶಿಸದಂತೆಯೂ, ಕಚ್ಚಾ ಮಾಲುಗಳನ್ನು ಪರ ರಾಷ್ಟ್ರಗಳಿಗೆ ಕಳುಹಿಸದಂತೆಯೂ ತಡೆಗಟ್ಟಿದರು

ಚೀಣಾ ರಾಷ್ಟ್ರದ ಪೂರ್ಣ ಜವಾಬ್ದಾರಿಯನ್ನು ಧೈರ್ಯದಿಂದ ವಹಿಸಿಕೊಂಡು ಕಟ್ಟುನಿಟ್ಟಾದ ವ್ಯವಸ್ಥೆಯನ್ನು ಮಾಡಿದರು ಚೀಣಾ ರಾಷ್ಟ್ರದ ವ್ಯವಸಾಯದ ಭೂಮಿ ಎಲ್ಲವನ್ನೂ ೩೦ ಕೋಟಿ ಜನರಿಗೆ ಹಂಚಿ ಅವರಿಗೆ ಉದ್ಯೋಗವನ್ನೂ ಕಲ್ಪಿಸಿ, ರಾಷ್ಟ್ರಕ್ಕೆ ಆಹಾರವನ್ನೂ, ಕಚ್ಚಾ ಮಾಲುಗಳನ್ನೂ ಒದಗಿಸುವ ಜವಾಬ್ದಾರಿಯನ್ನು ಅವರಿಗೆ ಹೊರಿಸಿದರು ರಾಷ್ಟ್ರೀಯ ಬಂಡವಾಳಗಾರರಿಗೆ ಪೂರ್ಣ ಬೆಂಬಲ ಕೊಟ್ಟು, ಅವಶ್ಯಕವಾದ ಸಕಲ ಪದಾರ್ಥಗಳನ್ನೂ ನಿರ್ಮಾಣ ಮಾಡಲು ಗೊತ್ತುಮಾಡಿದರು ಕಾರ್ಮಿಕರುಗಳಿಗೆ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ರಾಷ್ಟ್ರೀಯ ಬಂಡವಾಳಗಾರರ ಸಮಭಾಗೀದಾರರಾಗಿ ದುಡಿಯಲು ವ್ಯವಸ್ಥೆ ಮಾಡಿ ಅವರಲ್ಲಿ ಪರಸ್ಪರ ಮೈತ್ರೀಭಾವನೆಯನ್ನು ಬೆಳಸಿ ಉತ್ಪತ್ತಿಯನ್ನು ಹೆಚ್ಚಿಸಿದರು ಶ್ರೀಮಂತರುಗಳೂ, ವರ್ತಕರುಗಳೂ ಇಷ್ಟೇ ಲಾಭ ಪಡೆಯಲು ತಕ್ಕದ್ದೆಂಗು ವಿಧಿಸಿ ಬ್ಲಾಕ್ ಮಾರ್ಕೆಟ್ಟನ್ನು ಸಂಪೂರ್ಣವಾಗಿ ಮಟ್ಟಹಾಕಿ, ರಾಷ್ಟ್ರದ ಪ್ರಜೆಗಳಿಂದ ಸುಲಿಗೆ ಮಾಡುವುದನ್ನು ತಪ್ಪಿಸಿದರು ಈ ಕಾರ್ಯಕ್ರಮಗಳಿಂದ ಚೀಣಾ ರಾಷ್ಟ್ರವು ಜಗತ್ತಿಗೇ ಆದರ್ಶವಾಗಿದೆ, ಕರ್ಮಯೋಗಿಗಳ ರಾಷ್ಟ್ರವಾಗಿದೆ ಇದನ್ನು ಮುಕ್ತಕಂಠದಿಂದ ಹೊಗಳುವುದು ಮಾತ್ರ ಅಲ್ಲ ಕಡೆ ನಮ್ಮ ಸಂಪೂರ್ಣ ಗಮನವನ್ನು ಕೊಡುವುದು ನಮ್ಮ ಪವಿತ್ರ ಕರ್ತವ್ಯವೆಂದು ನಾನು ಘಂಟಾಘೋಷವಾಗಿ ಸಾರಿ ಹೇಳುತ್ತೇನೆ ಯಾವುದೇ ಪರರಾಷ್ಟ್ರದ ಅವಲಂಬನೆಯೂ ಯೋಗ್ಯವಲ್ಲವೆಂ ಎದನ್ನು ಅಂಗೀಕರಿಸುತ್ತೇನೆ ಇದನ್ನು ಸ್ಪಷ್ಟೀಕರಿಸುವುದೇ ಕೊಡುಗೈ ಚೀಣಾ ಎಂಬ ವ್ಯಂಗ್ಯ ಚಿತ್ರದ ಸಂಪೂರ್ಣ ಅರ್ಥವಾಗಿದೆ ಅಮೇರಿಕದಿಂದ ಬೇಡುವುದೂ ಬೇಡ ಚೀಣಾದಿಂದ ಬೇಡುವುದೂ ಬೇಡ, ನಮ್ಮ ಕಾಲಮೇಲೆ ನಾವು ನಿಲ್ಲುವ ವ್ಯವಸ್ಥೆಯೇ ಪೂರ್ವ ದಿಕ್ಕಿನ ನವೋದಯವೆಂಬುದನ್ನು ನಾನು ಮನಗಂಡಿದ್ದೇನೆ ಮಹಾತ್ಮಾಗಾಂಧಿಯವರ ಸ್ವಾವಲಂಬನ, ಸ್ವಪರಿಪೂರ್ಣತೆಯ, ಅರ್ಥಾತ್ ರಾಮರಾಜ್ಯವೇ ಮೋತ್ಸೇಟುಂಗ್ ರವರು ಜಾರಿಗೆ ತಂದಿರುವ ಸ್ವಾವಲಂಬನ ಸ್ವಪರಿಪೂರ್ಣತೆಯ ರಾಮ ರಾಜ್ಯವಾಗಿದೆ ಪರದೇಶೀಯರೇ ಆಗಲೀ, ಸ್ವದೇಶೀಯರೇ ಆಗಲೀ ಚೀಣಾ ರಾಷ್ಟ್ರದಲ್ಲಿ ಸುಲಿಗೆ ಮಾಡಲು ಸಾಧ್ಯವಿಲ್ಲ ಇಂತಹ ಧರ್ಮರಾಜ್ಯವನ್ನು ಹೊಗಳಲೇಬೇಕು, ಅನುಕರಿಸಲೇಬೇಕು ದೇಶೀಯರ ಗುಲಾಮಗಿರಿಯೂ ಬೇಡ ಪರದೇಶೀಯರ ಗುಲಾಮಗಿರಿಯೂ ಬೇಡ ಇದೇ ಚೀಣಾ ರಾಷ್ಟ್ರದ ನಿರ್ಮಾಣದ ಆದರ್ಶವಾಗಿದೆ. ಈ ಆದರ್ಶವು ವಿಷಯಕ್ಕೆ ಅವಶ್ಯಕವಾಗಿದೆ

ತಗಡೂರು ರಾಮಚಂದ್ರರಾವ್,
ಅಧ್ಯಕ್ಷ
ಇಂಡಿಯಾ ಚೀಣಾ ಸ್ನೇಹ ಸಂಘ ಮೈಸೂರು

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
407 ಸಯ್ಯಾಜಿರಾವ್ ರೋಡ್,
ಮೈಸೂರು

ಸಾಬೂನು ಕಾರ್ಖಾನೆ ಕೆಲಸಗಾರರ ಸಂಘ

ನಗರದ ಸಾಬೂನು ಕಾರ್ಖಾನೆ ಕೆಲಸಗಾರರ ಸಂಘವು ಕಾನೂನು ಪ್ರಕಾರ ರಿಜಿಸ್ಟರ್ ಆಗಿದೆ ಕೆಲಸಗಾರರೆಲ್ಲರೂ ಸದಸ್ಯರಾಗಬೇಕೆಂದೂ, ಸಂಘದ ಕಛೇರಿಯನ್ನು ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ಸಂಘದ ಕಟ್ಟಡದಲ್ಲಿ ತೆರೆಯಲಾಗಿದೆಯೆಂದೂ ತಿಳಿಸಲಾಗಿದೆ

ಭಿಕ್ಷುಕನ ಮೇಲೆ ದರೋಡೆ ಮಾಡಿದ್ದಕ್ಕೆ ೨॥ ವರ್ಷ ಶಿಕ್ಷೆ

ಕಿವುಡ ಮತ್ತು ಮೂಕನಾದ ಒಬ್ಬ ವೃದ್ಧ ಭಿಕ್ಷುಕನಿಗೆ ದತ್ತೂರಿ ವಿಷವನ್ನು ಕೊಟ್ಟು ಅವನ ಹಣವು ಆಭರಣಗಳನ್ನು ಅಪಹರಿಸಿದುದಕ್ಕಾಗಿ ದೇಹಲಿಯ ಚಿರಂಜಿ ಲಾಲ್ ಎಂಬ ಯುವಕನಿಗೆ ೨॥ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೨೦ ಶ್ರೀ ನಾಗಲಕ್ಷ್ಮಿ ಸಂಗೀತ ಮಧ್ಯಾಹ್ನ ೧ ೪೦ ಕೊಳಲು ೨ ಎಂ ಎಸ್ ರಾಮಚಂದ್ರರಾವ್, ಹಿಂದೂಸ್ಥಾನಿ ಸಂಗೀತ ಸಂಜೆ ೫ ೪೦ ಮುತ್ತು ಶಿವ ನಾರಣ ಅಯ್ಯರ್ ವೀಣೆ ೬ ೧೦ ಗಾನವಿಹಾರ, ೭ ಎಂ ಎಸ್ ರಾಮಚಂದ್ರರಾವ್, ಹಿಂದುಸ್ಥಾನಿ ಸಂಗೀತ ೭ ೪೦ ಗೋಮಟೇಶ್ವರ ವಿಗ್ರಹ-ಶಿಲ್ಪದಲ್ಲಿ ಭಾಷಣ ೮ ೪೦ ವೃಂದ ಸಂಗೀತ ೯ ೧೫ ಇಂಗ್ಲಿಷ್ ಭಾಷಣ ೯ ೩೦ ಗಾನಮಾಧುರ್ಯ

ತಲಕಾಡು ಮಹಾತ್ಮೆ
ಮತ್ತು
ಪಂಚಲಿಂಗ ದರ್ಶನ ಯಾತ್ರೆ
— ಲೇಖಕರು —
ಟಿ ಆರ್. ಸೀತಾರಾಮ ಶಾಸ್ತ್ರಿ
ಬೆಲೆ ೦ ೬-೦
ಯಾತ್ರಿಕರಿಗೆ ಉಪಯುಕ್ತವಾದ ಕೈಪಿಡಿ ಕೊಡಲಾಗುತ್ತದೆ
ಪ್ರತಿಗಳು ದೊರೆಯುವ ಸ್ಥಳ —
ಟಿ ಆರ್ ಸೀತಾರಾಮ ಶಾಸ್ತ್ರಿ,
ತಲಕಾಡು ಟಿ ನರಸೀಪುರ ತಾ
ಮತ್ತು ಸಾಧ್ವಿ ಆಫೀಸ್, ಮೈಸೂರು

ಇದರ ಪರಿಚಯವಿದೆಯೋ
ಮೈಸೂರು
ಸಾಬೂನು
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮ ಬಗೆಯ ಸಾಬೂನು ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ ಶ್ರಮ, ಕಾಲ, ಹಣ ಉಳಿಸುತ್ತದಲ್ಲದೆ ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ

ಒಂದು ಪಟ್ಟಿಗೆಯನ್ನು
ಬಳಸಿ ನೋಡಿ
ಎಲ್ಲ ಕಡೆಯೂ ಸಿಗುತ್ತದೆ
ಸರ್ಕಾರದ
ಸಾಬೂನು ಕಾರ್ಖಾನೆ,
ಬೆಂಗಳೂರು

Edited, Printed and Published by A R Nagarajan at Sadhvi Press, D Subbaiah Road, Mysore.

ಟೆಲಿಫೋನ್ ನಂ 792 ॥ವಂದೇ ಮಾತರಂ॥ ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೪ ೧೧-೧೯೫೦ [ಸಂಚಿಕೆ ೮೩

ಭಾರತಕ್ಕೆ ಅಮೆರಿಕದ ೧೮ ಕೋಟಿ ರೂ. ನೆರವು

ವಿಷಪ್ರಾಶನ ಪ್ರಕರಣವು ಮೋದಪ್ಪನವರ ಕಲ್ಪನೆ

ರಾಜು ಪರ ವಕೀಲರಾದ ಎಸ್ ಪಿ ಸಿಣ್ಣರವರ ವಾದ

ಮೈಸೂರಿನ ಶ್ರೀಕೃಷ್ಣ ನ್ಯಾಯಾಧೀಶ ಶ್ರೀ ಮೋದಪ್ಪನವರಿಗೆ ವಿಷ ಪ್ರಾಶನ ಪ್ರಯತ್ನದ ಸಂಬಂಧವಾಗಿ ಶಿಕ್ಷೆಗೆ ಗುರಿಯಾಗಿರುವ ಬೆಂಗಳೂರಿನ ಶ್ರೀ ಎಲ್ ಎಸ್ ರಾಜು ರವರು ಹೂಡಿರುವ ಅಪೀಲಿನ ಬಗ್ಗೆ ನೆನ್ನೆ ದಿ. [illegible] ಶ್ರೀಕೃಷ್ಣ ನ್ಯಾಯಾಧೀಶರು ಮತ್ತು ಜಸ್ಟಿಸ್ ದೀಕ್ಷಿತ್‌ರವರ ಮುಂದೆ ವಿಚಾರಣೆ ಆರಂಭವಾಯಿತು. ಕೋರ್ಟಿನಲ್ಲಿ ಶ್ರೀ ರಾಜುರವರೂ, ಶಾಸಪ್ಪನಾಯ್ಡು ಮತ್ತು ಆಕ್ಸೆಸ್‌ರವರುಗಳೂ ಇದ್ದರು.

ರಾಜುರವರ ಪರ ಎಸ್ ಪಿ ಸಿಣ್ಣರವರು ಶ್ರೀ ಎನ್ ಆರ್ ರಾಘವಾಚಾರಿ ಮತ್ತು ಎನ್ ಸಿ ಎನ್ ಆಚಾರ್ಯರ ಸಮೇತ ವಕಾಲತು ವಹಿಸಿರುತ್ತಾರೆ. ರಾಜಪ್ಪನಾಯ್ಡು ಮತ್ತು ಆಗ್ನೆಸ್ ಪರ ಮಿರ್ಜಾ [illegible] ಮತ್ತು ಮುಂತಾಗಿಯುವರು ವಾದ ಮಾಡುವರು.

ಅಪೀಲುದಾರರು ತಮ್ಮ ಅರ್ಜಿಯಲ್ಲಿ, ಸೆಷನ್ ಕೋರ್ಟಿನವರು ಪ್ರಾಸಿಕ್ಯೂಷನ್ ಪರ ಸಾಕ್ಷ್ಯಗಳನ್ನು ಸ್ವತಂತ್ರವಾಗಿ ವಿಮರ್ಶಿಸದೆ ರಿಪೋರ್ಟ್ ಸಾಕ್ಷ್ಯಕ್ಕೆ ಜಾಟಿ [illegible] ಪ್ರಾಸಿಕ್ಯೂಷನ್ನಿನ ಕತೆಯನ್ನು ಒಪ್ಪಿದರೆಂದೂ ಅಪೀಲುದಾರರು ಅಕ್ರಮ ಕೂಟಕ್ಕೆ ಸೇರಿದ್ದರೆಂಬ ಆಪಾದನೆಯುಂ [illegible]

ವರನ್ನು ದೋಷಮುಕ್ತರನ್ನಾಗಿ ಮಾ [illegible] ಆಪಾದನೆಯ ಜೊತೆಗೆ [illegible] ನಿಬಂಧನೆಯನ್ನು ಸೇರಿಸಿ ಶಿಕ್ಷೆ [illegible] ಸರಿಯಲ್ಲವೆಂದೂ ತಿಳಿಸಿದರು.

ಅಗ್ನೆಸ್ಸಳನ್ನು ಕೊಲೆ ಪ್ರಯತ್ನಕ್ಕಾಗಿ [illegible] ರಾಜು ಮತ್ತು ದಾಸಪ್ಪನಾಯ್ಡುರವರಿಗೆ [illegible] ನಿಬಂಧನೆಯು [illegible] ಕೊಟ್ಟಿರುವುದು ಸರಿಯಲ್ಲವೆಂ [illegible] ತಿಳಿಯಪಡಿಸಲಾಗಿದೆ

ಪ್ರಾಸಿಕ್ಯೂಷನ್ನಿನ ಲೋಪದೋಷಗಳ [illegible] ಗಿ ಕಂಡುದು ತಪ್ಪು ಮತ್ತು [illegible] ಸಾಕ್ಷ್ಯಗಳಿಂದ ಸಾಧಿಸಲಾರದ ಅಂಶ [illegible] ಕೆಳ ಕೋರ್ಟು ತನ್ನ ಟೀಕೆಗಳಿಂದ [illegible] ಹೊರಟಿದ್ದು ನ್ಯಾಯವಲ್ಲ [illegible] ತಪ್ಪೊಪ್ಪಿಗೆ ಹೇಳಿಕೆಗೆ ಸಮರ್ಥನೆ [illegible] ದೊರೆಯದಿರುವಾಗ ಅದನ್ನು ಒಪ್ಪಿದ್ದು ಸರಿಯಲ್ಲ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಶ್ರೀ ಎಸ್ ಪಿ ಸಿಣ್ಣರವರು ವಾದವನ್ನು [illegible] ಶ್ರೀ [illegible], ಶ್ರೀ ಮೋದಪ್ಪನವರಿಗೂ ಉಂಟಾದ ವೈಮನಸ್ಯದ ಹಿನ್ನೆಲೆಯನ್ನು ಕೆಳಗಿನ ಕೋರ್ಟು ಗಣನೆಗೆ [illegible] ದಿಲ್ಲವೆಂದು ಹೇಳಿದರು. [illegible] ಎಲ್, ಗೋಪಾಲರಾವ್ [illegible] ಪರಮಶಿವಯ್ಯರ್ ನಿಲ್ ಮೊ [illegible] ವಕೀಲರು ಪ್ರಸ್ತಾಪಿಸಿ, [illegible] ರವರ ಮೇಲೆ ಮೋದಪ್ಪನವರಿಗೆ [illegible] ತೆಂದೂ, ತಮಗೂ ಮೋದಪ್ಪನವರ [illegible] ಬಡತಿಗಾಗಿ ರಾಜುರವರು ಕಳೆದ [illegible] ರಲ್ಲಿ ಅನಂತಶಯನಂ [illegible] ಅವರನ್ನು ಕಾಣಲು ದೆಹಲಿಗೆ [illegible] ಯನಂತರವರು [illegible] ಮೈಸೂರಿಗೆ ಬಂದಿದ್ದಾಗ ಮೋದಪ್ಪನ [illegible] ರಾಜುರವರು ಪ್ರಯತ್ನಿಸಿದ [illegible] ಹೇಳುವುದು ಸುಳ್ಳೆಂದೂ ವಕೀಲ [illegible] ಯಪಟ್ಟರು.

[illegible] ರಾಜುರವರು ನಡೆಸಿದ [illegible] ರಾಜಕೀಯ ಚಳುವಳಿಗೆ ಸಂಬಂ [illegible] ದೂ ಕೋರ್ಟಿನ ಮುಂದಿರುವ [illegible] ಸಂಬಂಧವಿಲ್ಲವೆಂದೂ ಶ್ರೀಕೃಷ್ಣ [illegible] ರವರು ಹೇಳಿದರು.

ಸಿಣ್ಣರವರು, ನಾರಾಯಣ ಪ್ರಸಾದರ [illegible] ವನ್ನು ವಿವರಿಸಿ, ರಾಜುರವರ ವಿ [illegible] ಪ್ರಸಾದರು ಹೆಚ್ಚಿನ ಆಸಕ್ತಿ [illegible] ತೋರಿಸ ತ್ತಿದ್ದರೆಂಬುದೂ, ಆ [illegible] ದಲ್ಲಿ ತಪ್ಪುಗಳಿವೆಯೆಂಬು

ಋಷ್ಯ ಧಾನ್ಯಗಳ ಹತೋಟಿ ರದ್ದು

ಬೆಂಗಳೂರು ೩

ಸಂಸ್ಥಾನದಲ್ಲಿ ಋಷ್ಯ ಧಾನ್ಯಗಳೆಲ್ಲದರ ಹತೋಟಿಯನ್ನೂ ರದ್ದು ಮಾಡಲು ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ. ಕೇಂದ್ರದವರ ಒಪ್ಪಿಗೆಯ ನಂತರ ಈ ನಿರ್ಧಾರವನ್ನು ಜಾರಿಗೆ ತರಲಾಗುವುದೆಂದು ಹೇಳಲಾಗಿದೆ. ಬೆಂಗಳೂರ, ದಾವಣಗೆರೆ ಮತ್ತು ಚಿಕ್ಕದಗಣಿಗಳಲ್ಲಿ ಪಡಿತರವನ್ನು ಮುಂದುವರಿಸಲು ಕೇಂದ್ರದವರು ತಕ್ಕಷ್ಟು ಧಾನ್ಯ ಒದಗಿಸ ನಂತೆ ಯೂ ಕೋರಲಾಗಿದೆ.

ಶಾಸನ ಸಭೆಯಲ್ಲಿ ಆದ ನಿರ್ಣಯದಂತೆ ಹೆಚ್ಚುವರಿ ಬೆಳೆವವರಿಂದ ಧಾನ್ಯವನ್ನು ವಸೂಲಿ ಮಾಡಲೂ ಸಹ ಸರ್ಕಾರದವರು ನಿರ್ಧರಿಸಿರ ವರೆಂದು ಹೇಳಲಾಗಿದೆ.

ಹೆಂಡತಿ ಕೊಲೆ ಪ್ರಯತ್ನಕ್ಕಾಗಿ ೫ ವರ್ಷ ಸಜಾ

ಬೆಂಗಳೂರಿನ ಸಶಸ್ತ್ರ ರಿಸರ್ವ್ ಪೋಲೀಸು ದಳದ ಕಾನ್ಸ್ಟೇಬಲ್ ರಾಮು ಎಂಬುವನು ಕಳೆದ ಜೂಲೈ ೧ನೇ ತಾ॥ ತನ್ನ ಪತ್ನಿಯನ್ನು ಇರಿದು ಕೊಲೆ ಮಾಡಲು ಪ್ರಯತ್ನಿಸಿದುದಕ್ಕಾಗಿ ಅವನಿಗೆ ಸಿವಿಲ್ ಪ್ರದೇಶದ ಸೆಷನ್ ನ್ಯಾಯಾಧೀಶರು ೫ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ವೂ ಕಾಣಬಂದಿರುವುದಾಗಿ ಹೇಳಿದರು. ಅಗ್ನೆಸ್ಸಳ ದಸ್ತಗಿರಿಗೆ ವಿಧಾನಪಾಡುದು ಮತ್ತು ಆಕೆಯನ್ನು ಮೋದಪ್ಪನವರು ಠಾಣೆಗೆ ಪುನಃ ತೆಗೆದುಕೊಂಡುದರ ಕಡೆಗೆ ವಕೀಲರು ಕೋರ್ಟಿನ ಗಮನವನ್ನು ಸೆಳೆದು, ಪ್ರಾಸಿಕ್ಯೂಷನ್ನಿನ ಕತೆಯನ್ನು ಶ್ರೀ ಮೋದಪ್ಪನವರೇ ನಿಜವಾಗಿ ಕಾಣುವಂತೆ ಕಟ್ಟಿರ ವುದಾಗಿಯೂ ಅವರು ಸೂಚಿಸಿದರು. ತಿರುಮಲ ವೀರಸ್ವಾಮಿ ಶಾಸ್ತ್ರಿ [illegible] ನಾರಾಯಣ ಪ್ರಸಾದರದಿರಬೇಕೆಂದೂ ಅವರು ಹೇಳಿದರು.

ಅಪರಾಧವೆಸಗಿದರೆಂಬ ವಿಷಯವನ್ನು ವಿಮರ್ಶೆ ಮಾಡುತ್ತಾ ವಕೀಲರು ರಾಜುರವರ [illegible] ತನ್ನು ವಿವರಿಸಿದರು.

ಅಂತಹವರೇ ಕೃತ್ಯವೆಸಗಿದ್ದರೆ ಅದು ಬಲು ತೀವ್ರವಾದುದು ಎಂದು ನ್ಯಾಯಾಧೀಶರು ಹೇಳಿದರು.

ಮದ್ರಾಸು ಶಾಸನ ಸಭೆಯಲ್ಲಿ ತೆಲುಗಿನಲ್ಲಿ ಪ್ರಶ್ನೆ

ಮದ್ರಾಸು ಶಾಸನ ಸಭೆಯಲ್ಲಿ ನೆನ್ನೆ ಕಮ್ಯೂನಿಸ್ಟ್ ಸದಸ್ಯರು ತೆಲುಗು ಭಾಷೆಯಲ್ಲಿ ಪ್ರಶ್ನೆ ಮಾಡಿದರು. ಮಂತ್ರಿಗಳು ನೋಟೀಸು ಬೇಕೆಂದು ಕೇಳಿದರು. ತಮಿಳು ಸದಸ್ಯರೊಬ್ಬರು ಮಾತನಾಡಿ, ಇದ ವರೆಗೆ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದವರು ತೆಲುಗು ಭಾಷೆಯನ್ನು ಬಳಸುತ್ತಿರುವುದರಿಂದ ಸಭಾ ಕಾರ್ಯಕಲಾಪಗಳೇ ಅರ್ಥವಾಗುತ್ತಿಲ್ಲವೆಂದು ಆಕ್ಷೇಪಿಸಿದರು. ಮುಖ್ಯ ಮಂತ್ರಿ ರಾಜಾಜಿಯವರು ಮಾತನಾಡಿ, ವಿಷಯ ಸಂಗ್ರಹಣೆಗಾಗಿ ಪ್ರಶ್ನೆ ಮಾಡುವುದು ಉಚಿತವೆಂದೂ, ಆದರೆ ಬೇರೊಂದು ಉದ್ದಿಶ್ಯ ದಸಾಧನೆಗಾಗಿ ತೆಲುಗಿನಲ್ಲಿ ಪ್ರಶ್ನೆ ಕೇಳುತ್ತಿರುವುದು ಕುತಂತ್ರವೆಂದೂ, ಆದಕಾಗಿಯೇ ಸರ್ಕಾರದವರು ಪ್ರತಿ ಪ್ರಶ್ನೆಗೂ ನೋಟೀಸನ್ನು ಕೇಳುತ್ತಿರುವುದು ಸರಿಯೆಂದೂ ತಿಳಿಸಿದರು. ಇಂಗ್ಲೀಷಿನಲ್ಲೇ ಸದಾ ಮಾತನಾಡುತ್ತಿದ್ದವರು ಏಕಾಏಕಿ ತೆಲುಗು ಭಾಷೆಯನ್ನು ಬಳಸುವುದನ್ನು ತಂತ್ರವೆಂದು ಕರೆಯುವುದು ಸರಿಯೆಂದು ರಾಜಾಜಿಯವರು ಅಭಿಪ್ರಾಯ ಪಟ್ಟರು.

ಕಾಂಗ್ರೆಸ್ ಅಧಿವೇಶನಕ್ಕೆ ನಗರ ಪ್ರತಿನಿಧಿಗಳ ಉಮೇದುವಾರಿಕೆ

ಕಾಂಗ್ರೆಸ್ ಅಧಿವೇಶನಕ್ಕೆ ನಗರದಿಂದ ಇರುವ ಎರಡು ಸ್ಥಾನಗಳಿಗೆ ನೆನ್ನೆ ಒಟ್ಟು ೭ ಉಮೇದುವಾರಿಕೆ ಅರ್ಜಿಗಳು ಬಂದಿವೆ. ಮಂಡಿ ಲಷ್ಕರ್ ಮತ್ತು ಫಕೀರ್‌ಬಾದ್ ಮೊಹಲ್ಲೆಯ ೧ನೇ ಕ್ಷೇತ್ರದಲ್ಲಿ ಶ್ರೀಗಳಾದ ಎಸ್ ಚನ್ನಯ್ಯ, ವೈ ೧ ವೆಂಕಟಪ್ಪ ಮತ್ತು ಎಂ ತಂಕರಯ್ಯನವರು ಸ್ಪರ್ಧಿಸಿರುತ್ತಾರೆ. ಉಳಿದ ಮೊಹಲ್ಲಾಗಳಿರುವ ಎರಡನೇ ಕ್ಷೇತ್ರದಲ್ಲಿ ಶ್ರೀಗಳಾದ ಕೆ ಎಸ್ ಸೂರ್ಯನಾರಾಯಣರಾವ್, ಎನ್ ಗೋಪಾಲರಾವ್, ಎಸ್ ಎಸ್ ಶಾಸ್ತ್ರಿ ಮತ್ತು ಸಿ ಜೆ ದೇವನಾಥ್‌ರವರು ಸ್ಪರ್ಧಿಸಿರುವರು.

○ಸಿಂಹಳದಲ್ಲಿರುವ ಭಾರತೀಯರ ಸಮಸ್ಯೆ ಪರಿಹಾರವಾಗಲು ಸಹಾಯಕವಾಗುವ ಸೂಚನೆಗಳು ಕಂಡುಬರುತ್ತಿರುವುದಾಗಿ ಪ್ರಧಾನಿ ನೆಹರೂರವರು ಹೇಳಿರುತ್ತಾರೆ.

ಭಾರತಕ್ಕೆ ಅಮೆರಿಕದ ೧೮ ಕೋಟಿ ರೂ. ಸಹಾಯ

ಭಾರತದ ಆರ್ಥಿಕಾಭಿವೃದ್ಧಿಗಾಗಿ ಬರುವ ವರ್ಷ ಜೂನ್ ಒಂದಕ್ಕೆ ಅಂತ್ಯವಾಗುವ ಕಾಲಿನಲ್ಲಿ ಅಮೆರಿಕದವರು ತೆಗೆದಿಟ್ಟಿರುವ ೨೨ ಕೋಟಿ ರೂ ಗಳ ಸಹಾಯ ದ್ರವ್ಯದ ಪೈಕಿ ೧೮ ೩ ಕೋಟಿ ರೂ ಗಳನ್ನು ಈಗಲೇ ಒದಗಿಸುವ ಬಗ್ಗೆ ಭಾರತ ಮತ್ತು ಅಮೆರಿಕಗಳಿಗೆ ಒಪ್ಪಂದವಾಗಿರುತ್ತದೆ. ಉಳಿದ ಹಣವನ್ನು ಹಲವು ವಿಶೇಷ ನಿರ್ದಿಷ್ಟ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲಾಗುವುದೆಂದು ಗೊತ್ತಾಗಿದೆ.

ಆಫ್ರಿಕಾ ಕಾಂಗ್ರೆಸ್ಸಿನವರ ಅಸಹ್ಯೋಲಂಘನಾ ಮುಷ್ಕರ

ಆಫ್ರಿಕದ ಜನರ ಬಹಿರಂಗ ಸಭೆಗಳನ್ನು ನಿಷೇಧಿಸುವ ಯೋಜನೆಯನ್ನು ಪೋರ್ಟ್ ಎಲಿಜಬೆತ್ ಪೌರಸಭೆಯು ಬಿಟ್ಟುಬಿಡದಿದ್ದರೆ, ಆಫ್ರಿಕಾ ಕಾಂಗ್ರೆಸ್ಸಿನವರು ಉಪವಾಸ ಮತ್ತು ಪ್ರಾರ್ಥನೆಗಳನ್ನು ನಡೆಸಿ, ಸಾರ್ವತ್ರಿಕ ಮುಷ್ಕರವನ್ನು ಹೂಡಿ ಆಜ್ಞೆಗಳನ್ನು ಉಲ್ಲಂಘಿಸುವರೆಂದು ವರದಿಯಾಗಿದೆ.

ಗೋಮಟೇಶ್ವರನ ಪ್ರತಿಮೆಯಲ್ಲಿ ಬಿರುಕು

ಶ್ರವಣಬೆಳಗೊಳದಲ್ಲಿರುವ ಶ್ರೀ ಗೋಮಟೇಶ್ವರ ಸ್ವಾಮಿ ಪ್ರತಿಮೆಯ ಮುಖ ಮತ್ತು ಬೆನ್ನಿನಲ್ಲಿ ಬಿರುಕು ಬಿಟ್ಟ [illegible] ಈ ಬಗ್ಗೆ ಪ್ರಾಚೀನ ವಸ್ತು ಸಂಶೋಧನಾ ಇಲಾಖೆಯವರು ಶೋಧನಾ ಕ್ರಮದಲ್ಲಿ ತೊಡಗಿರುವುದರಿಂದ ಮಹಾ ಮಸ್ತಕಾಭಿಷೇಕವನ್ನು ಫೆಬ್ರವರಿ ೧ ರಿಂದ ಮಾರ್ಚಿ ೫ ಕ್ಕೆ ಮುಂದೂಡಲಾಗಿದೆಯೆಂದು ತಿಳಿಸಲಾಗಿದೆ. ಈ ಉತ್ಸವಕ್ಕಾಗಿ ಭಾರತದ ನಾನಾ ಕಡೆಗಳಿಂದ ೩ ಲಕ್ಷ ಜನರು ಸೇರುವರೆಂದು ನಿರೀಕ್ಷಿಸಲಾಗಿದೆ.

ಸುಮೇರು ಪರ್ವತದ ಪತ್ತೆ

ಹಿಂದುಗಳ ಪುರಾಣೇತಿಹಾಸಗಳಲ್ಲಿ ಉಕ್ತವಾಗಿರುವ ಸುಮೇರು ಅಥವಾ ಬಂಗಾರದ ಶಿಖರ ಎಂಬ ಹಿಮಾಲಯದ ಪರ್ವತವೊಂದನ್ನು ನಿವೃತ್ತ ಸೈನ್ಯಾಧಿಕಾರಿ ಕ್ಯಾಪ್ಟನ್ ಉಮಾಕಾಂತ್ ಶುಕ್ಲರವರು ಕಂಡುಹಿಡಿದಿರುವರೆಂದು ವರದಿಯಾಗಿದೆ. ೧೯೪೭ ರಲ್ಲಿ ಕೆಲಸದಿಂದ ವಿರಾಮಹೊಂದಿದ ಮೇಲೆ ಅವರು ಪುರಾಣಗಳಲ್ಲಿ ಕಾಣಬಂದಿರುವ ಶಿಖರಗಳನ್ನು ಹುಡುಕುವ ಪ್ರಯತ್ನದಲ್ಲಿ ತೊಡಗಿರುವರು.

ನೌಕರನನ್ನು ಹೊಡೆದುದಕ್ಕೆ ೪ ಆಣೆ ದಂಡ

ರಾಜಧಾನಿಯ ಹಳೇಅಗ್ರಹಾರದಲ್ಲಿರುವ ಶ್ರೀ ಬಸವರಾಜಪ್ಪ ಎಂಬುವರು ತಮ್ಮ ಅಂಗಡಿಯ ನೌಕರನ ಮೇಲೆ ಕೈ ಮಾಡಿದರೆಂದು ನಗರದ ೩ನೇ ನ್ಯಾಯಾಧೀಶರು ನವರಿಯವರಿಗೆ ೪ ಆಣೆ ದಂಡವನ್ನು ವಿಧಿಸಿರುತ್ತಾರೆ.

○ಇಟಲಿಯ ವಿರೋನಾ ನಗರದಲ್ಲಿ ನೆನ್ನೆ ಬಸ್ಸು, ಲಾರಿ, ಮೋಟಾರು ಬೈಸಿಕಲ್ ಮೋಟಾರು, ಸೈಕಲ್ ಮತ್ತು ಗಾಡಿ, ಇಷ್ಟು ವಾಹನಗಳೂ ಏಕಕಾಲದಲ್ಲಿ ಢಿಕ್ಕಿಯಾದ ಪರಿಣಾಮವಾಗಿ ೯ ಜನರಿಗೆ ಗಾಯವಾಗಿರುತ್ತದೆ.

ಬೊಂಬಾಯಿ ಹರತಾಳದಲ್ಲಿ ಸಣ್ಣ ಅಂಗಡಿಗಳು ಸೇರಿಲ್ಲ

ವಿವಿಧ ಕಡೆ ಮಾರಾಟ ತೆರಿಗೆಯನ್ನು ವಿಧಿಸಿರುವ ಬಗ್ಗೆ ಪ್ರತಿಭಟನೆಗಾಗಿ ಬೊಂಬಾಯಿಯಲ್ಲಿ ಹೂಡಲಾಗಿರುವ ೩ ದಿನಗಳ ಹರತಾಳದಲ್ಲಿ ಅನೇಕ ಚಿಲ್ಲರೆ ಅಂಗಡಿಗಳು ಭಾಗವಹಿಸಿರಲಿಲ್ಲವೆಂದು ಹೇಳಲಾಗಿದೆ ಆದರೆ ಆ ನಗರದಲ್ಲಿರುವ ೬೦೦೦ ಮತ್ತು ಸಂಸ್ಥಾನಾದ್ಯಂತ ೧೪ ಸಾವಿರ ಅಂಗಡಿಗಳೂ ನೆನ್ನೆ ಒಂದು ದಿನದ ಸಹಾನುಭೂತಿ ಮುಷ್ಕರವನ್ನು ನಡೆಸಿದುದಾಗಿಯೂ ತಿಳಿದುಬಂದಿದೆ

ಮೈಸೂರು ಮಕ್ಕಳ ಕೂಟ

ಮೈಸೂರು ಪ್ರಾಂತದಲ್ಲಿ ಪ್ರವಾಸ ಕೈಗೊಂಡಿದ್ದ ಬೊಂಬಾಯಿನ ಘಾಟಕೋಪರ್ ಬಾಲ್ಕಂಜಿ ಬಾರಿಯ ೧೫೦ ಮಕ್ಕಳನ್ನು ಸತ್ಕರಿಸುವುದಕ್ಕಾಗಿ ಮಕ್ಕಳ ಕೂಟದವರು ಸಮಾರಂಭವೊಂದನ್ನು ಕಳೆದ ಗುರುವಾರ ಡಾ|| ಎಂ ವಿ ಗೋಪಾಲಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಶ್ರೀಮತಿ ಲೀಲಾವತಿ ಅಂಚನಪ್ಪ ಮತ್ತು ಚಿ|| ಪಾಪು ಇವರುಗಳಿಂದ ಸ್ವಾಗತ ಭಾಷಣಗಳಿಂದನಂತರ ಶಿಶುವಿಹಾರದ ಮತ್ತು ಬೊಂಬಾಯಿನ ಮಕ್ಕಳಿಂದ ನೃತ್ಯ, ಅಂಗ ಸಾಧನೆ ಕೋಲಾಟ, ವಿವಿಧ ವೇಷ ಸ್ಪರ್ಧೆ ಮುಂತಾದುವು ಪ್ರದರ್ಶಿಸಲ್ಪಟ್ಟುವು ಅಧ್ಯಕ್ಷರ ಭಾಷಣ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಜಿಲ್ಲಾ ಮೋಟಾರು ಕೆಲಸಗಾರರ ಸಂಘ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯ ನಿರ್ವಾಹಕ ಸಮಿತಿಯ ಸಭೆಯು ಕಳೆದ ಶುಕ್ರವಾರ ಸೇರಿ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು – ಪಂಚಾಯ್ತಿ ಕೋರ್ಟ್ ತೀರ್ಮಾನಿಸಿರುವ ಅವಾರ್ಡನ್ನು ಅನೇಕ ಮಾಲೀಕರು ಜಾರಿಗೆ ಕೊಡದೇ ಇರುವ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ಅದನ್ನು ಕೂಡಲೇ ಜಾರಿಗೆ ತರುವಂತೆ ಮಾಲೀಕರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದೂ, ಮಾಲೀಕರು ನಿಷ್ಕಾರಣವಾಗಿ ವಜಾ ಮಾಡಿರುವ ಕೆಲಸಗಾರರ ಕೇಸುಗಳನ್ನು ಕೈಗಾರಿಕಾ ನ್ಯಾಯಾಲಯಕ್ಕೆ ಹಾಕುವಂತೆಯೂ ಸರ್ಕಾರದವರನ್ನು ಪ್ರಾರ್ಥಿಸಲಾಯಿತು ಕೆಲಸಗಾರರಿಗೆ ಇಟ್ಟಿಗೆ ಗೂಡಿನಲ್ಲಿ ಕಡಿಮೆ ದರದಲ್ಲಿ ಸೈಟುಗಳನ್ನು ಕೊಡಿಸಬೇಕೆಂದು ಟ್ರಸ್ಟ್ ಬೋರ್ಡಿನವರನ್ನು ಪ್ರಾರ್ಥಿಸಲು ತೀರ್ಮಾನಿಸಲಾಯಿತು

ಚಂದ್ರ ಸುಂದ್ರು

ರಾಜಧಾನಿಯ ಶ್ರೀ ಬಿ ಆರ್ ಶಂಕರ್ ರವರಿಂದ ರಚಿಸಲ್ಪಟ್ಟು, ಮಿಣಾಮಿ ಪ್ರಕಟಣೆಯವರಿಂದ ಪ್ರಕಟಿಸಲ್ಪಟ್ಟಿರುವ ಚಂದ್ರ ಸುಂದ್ರು ಎಂಬ ಪುಟ್ಟ ಪುಸ್ತಕವು ನಮ್ಮ ಕೈ ಸೇರಿದೆ ಚಿಕ್ಕದಾಗಿಯೂ, ಸುಂದರವಾಗಿಯೂ ಇರುವ ಈ ಕಥೆಯು ಮಕ್ಕಳಿಗೆ ಬೋಧಪ್ರದವಾಗಿದೆ ಇದರ ಬೆಲೆ ೦ ೪ ೦

ತ್ರಿವಳಿ ಮಕ್ಕಳಿಗೆ ಬರ್ಮಾ ಸರ್ಕಾರದ ನೆರವು

ತ್ರಿವಳಿಯಾಗಲೀ, ೪ ಅಥವಾ ಹೆಚ್ಚಿನ ಮಕ್ಕಳನ್ನಾಗಲಿ ಹಡೆದ ತಾಯಿತಂದೆಗಳು ಅವುಗಳ ಪೋಷಣೆಗೆ ತೊಂದರೆ ಪಡದಂತೆ ನೋಡಿಕೊಳ್ಳಲು ಬರ್ಮಾ ಸರ್ಕಾರದವರು ೧ ವರ್ಷ ಕಾಲ ಸೂಕ್ತ ನೆರವು ನೀಡುವರು ಪ್ರತಿ ಮಗುವಿಗೂ ತಿಂಗಳಿಗೆ ೧೫ ರೂ ನಂತೆ ಕೊಡಲಾಗುವುದು ಆ ಮೇಲೆ ಒಂದು ಸರ್ತಿ ಅದರ ಭತ್ಯವನ್ನು ಮಾತ್ರ ನಿಲ್ಲಿಸಲಾಗುವುದು

ಶ್ರೀಕಂಠೇಶ್ವರ ಫುಟ್ ಬಾಲ್ ಪಂದ್ಯ

ನಂಜನಗೂಡಿನಲ್ಲಿ ಈ ವರ್ಷದ ಶ್ರೀ ಶ್ರೀಕಂಠೇಶ್ವರ ಫುಟ್ ಬಾಲ್ ಪಂದ್ಯವು ಇದೇ ೧೫ ನೇ ತಾರೀಖಿನಿಂದ ನಡೆಯಲೇರ್ಪಾಡಾಗಿದೆ ಪೌರಸಭಾಧ್ಯಕ್ಷರಾದ ಶ್ರೀ ಎ. ಕೆ ಮರಿಕೆಂಪಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ ೧೨ ನೇ ತಾ|| ನೊಳಗೆ ಪ್ರವೇಶ ಪತ್ರ ಕಳುಹಿಸಬಹುದು ಎಲ್ಲ ಪತ್ರ ವ್ಯವಹಾರಗಳನ್ನೂ ಶ್ರೀ ಡಿ ನಂಜಪ್ಪ ಕಾರ್ಯದರ್ಶಿ, ಎಸ್ ಎಸ್ ಫುಟ್ ಬಾಲ್ ಟೂರ್ನಮೆಂಟ್, ನಂಜನಗೂಡು ಈ ವಿಳಾಸದೊಡನೆ ನಡೆಸಬೇಕೆಂದು ಸೂಚಿಸಲಾಗಿದೆ

ನಾನ್ ಮೆಡಲಿಸ್ಟ್ ಟೇಬಲ್ ಟೆನ್ನಿಸ್ ಪಂದ್ಯಗಳು

ನಾನ್ ಮೆಡಲಿಸ್ಟ್ ಪಂದ್ಯಗಳು ರಾಜಧಾನಿಯ ಡಿ. ಬನುಮಯ್ಯ ಹೈಸ್ಕೂಲಿನಲ್ಲಿ ಇದೇ ೭ ರಿಂದ ೯ ನೇ ತಾರೀಖಿನವರೆಗೆ ನಡೆಯುವುವು ಪ್ರವೇಶ ಧನ ಸಿಂಗಲ್ಸ್ ರೂ ೧ ೮-೦ ಡಬ್ಬಲ್ಸ್ ರೂ ೨-೮-೦ ಪ್ರವೇಶ ಪತ್ರಗಳನ್ನು ಕಳುಹಿಸಲು ಕಡೇ ದಿನ ೬ ನೇ ತಾರೀಖು ಸಂಜೆ ೬ ಘಂಟೆ ರಾಮವಿಲಾಸ ಅಗ್ರಹಾರದಲ್ಲಿರುವ 'ರಾಘವ ಸದನದಲ್ಲಿ" ಪ್ರವೇಶ ಪತ್ರಗಳನ್ನು ಸ್ವೀಕರಿಸಲಾಗುವುದು

ಶ್ರೀ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಸೊಸೈಟಿ ಅಧಿಕಾರ ವರ್ಗ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಕೋ ಆಪರೇಟಿವ್ ಸೊಸೈಟಿಯ ಅಧಿಕಾರ ವರ್ಗಕ್ಕೆ ಪ್ರಸಕ್ತ ಸಾಲಿಗೆ ಶ್ರೀ ಎಂ ರಾಜಶೇಖರ ಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಎಂ. ಎ. ರಾಮಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ಎಂ ಆರ್ ವಿ ಶಾಸ್ತ್ರಿ ಮತ್ತು ಎಂ ವಿ ವೆಂಕಟರಾಜುರವರು ಗೌರವ ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಬಿ ಪದ್ಮರಾಜಯ್ಯನವರು ನ್ಯಾಯ ಸಲಹೆಗಾರರಾಗಿಯೂ ಚುನಾಯಿತರಾಗಿದ್ದಾರೆ

ಪ್ರಭಾ ಅಮೋಘ ಪ್ರಾರಂಭ 7 11-52 ರಿಂದ
ದಿನವಹಿ 3 ಪ್ರದರ್ಶನಗಳು
ಸೀತಾರ್ಸ್ ಆರ್ಟ್ ಪ್ರೊಡಕ್ಷನ್ಸ್ ರವರ
ಅದ್ಭುತ ತೆಲುಗು ಚಿತ್ರ
★ ಪಲ್ಲೆಟೂರು ★
(ಹಳ್ಳಿ)
ಪಾತ್ರ – ಎನ್ ಟಿ ರಾಮರಾವ್,
(ಪಾತಾಳಭೈರವಿ ಪ್ರಖ್ಯಾತಿ)
ಸಾವಿತ್ರಿ, ರಂಗರಾವ್,

ತಲಕಾಡು ಮಹಾತ್ಮೆ ಮತ್ತು ಪಂಚಲಿಂಗ ದರ್ಶನ ಯಾತ್ರೆ

ಇದೇ ತಿಂಗಳು ೧೭ನೇ ತಾ|| ತಲಕಾಡಿನಲ್ಲಿ ನಡೆಯುವ ಪಂಚಲಿಂಗ ದರ್ಶನದ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಮೇಲ್ಕಂಡ ಶಿರೋನಾಮೆಯುಳ್ಳ ಪುಸ್ತಕವನ್ನು ಶ್ರೀ ತಲಕಾಡು ಟಿ ಆರ್ ಸೀತಾರಾಮಶಾಸ್ತ್ರಿಗಳು ಪ್ರಕಟಿಸಿರುತ್ತಾರೆ ಗಜಾರಣ್ಯ ಕ್ಷೇತ್ರ, ವೈದ್ಯನಾಥೇಶ್ವರ ಮತ್ತು ತಲಕಾಡು ಎಂಬ ಹೆಸರುಗಳು ಬರಲು ಕಾರಣ, ಕ್ಷೇತ್ರ ಪ್ರಾಶಸ್ತ್ಯ ಪಂಚ ಲಿಂಗಗಳ ಮಹಿಮೆ, ದರ್ಶನದ ಅರ್ಥ, ಯಾತ್ರಾ ಕ್ರಮ, ಯಾತ್ರಾ ಫಲ ಮುಂತಾದುವನ್ನು ಪುಸ್ತಕದಲ್ಲಿ ವಿವರವಾಗಿ ವರ್ಣಿಸಲಾಗಿದೆ ಹಲವು ಚಿತ್ರಗಳನ್ನೂ ಕೊಡಲಾಗಿದೆ ಯಾತ್ರೆ ಮಾಡುವವರಿಗೂ, ತಲಕಾಡಿನ ವಿಷಯವನ್ನು ತಿಳಿಯಬಯಸುವವರಿಗೂ ಪುಸ್ತಕವು ವಿಶೇಷ ಸಹಕಾರಿಯಾಗಿರುತ್ತದೆ ಇದರ ಬೆಲೆ ೦ ೬-೦ ಪುಸ್ತಕಗಳು ಗ್ರಂಥಕರ್ತರ ಬಳಿ ಮತ್ತು ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ದೊರೆಯುವುವು

ಅರಮನೆಗೆ ಬಾಲ್ಕಂಜಿ ಬಾರಿ ಮಕ್ಕಳ ಭೇಟಿ

ಬೊಂಬಾಯಿಯ ಘಾಟ್ಕೋಪರಿನ ಬಾಲ್ಕಂಜಿ ಬಾರಿ(ಮಕ್ಕಳ ಕೂಟ) ಯ ೧೫೦ ಮಂದಿ ಬಾಲಕ ಬಾಲಕಿಯರು ನಗರಕ್ಕೆ ಬಂದು ನೆನ್ನೆ ಅರಮನೆಯನ್ನು ನೋಡಿದರು ಶ್ರೀ ಮಹಾರಾಜರು ಮಕ್ಕಳನ್ನು ಬರಮಾಡಿಕೊಂಡು ತಮ್ಮ [illegible] ವರೊಡನೆ [illegible] ಎಲ್ಲರಿಗೂ ಸಿಹಿ ತಿಂಡಿಗಳನ್ನು ಹಂಚಿಸಿದರಲ್ಲದೆ, ಅವರುಗಳ ಫೋಟೋ ತೆಗೆಸಿ ಬೀಳ್ಕೊಟ್ಟರು ಸದರಿ ಮಕ್ಕಳ ಕೂಟದವರು ದಕ್ಷಿಣ ಭಾರತದಲ್ಲೆಲ್ಲಾ ಪ್ರವಾಸ ಮಾಡುವರು

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೯ ೦ ೦	೩೩-೦-೦
ಎಳ್ಳು	೬೭ ೮ ೦	೬೯-೦-೦
ಹರಳು ಬೀಜ	೪೭ ೮-೦	೪೧ ೦ ೦
ಹುರುಳಿ	೬೦ ೪ ೦	
ಹೆಸರು	೫೪ ೨-೦	೬೦ ೦ ೦
ಉದ್ದು	೬೧ ೪ ೦	
ಹಲಸಂದೆ	೫೫-೮-೦	೬೯-೪-೦
ಹುಚ್ಚೆಳ್ಳು	೫೫ ೧೪ ೦	
ಅವರೆ	೨೯ ೧೦ ೦	
ಮೆಣಸಿನಕಾಯಿ ಮೂಟೆ ೧ಕ್ಕೆ	೬ ೧೨ ೦	೧೫ ೧೪ ೦
ಹುಣಸೇಹಣ್ಣು	೬ ೧ ೦	
ಬೆಲ್ಲ	೩-೮-೦	
ಸೀಗೇಕಾಯಿ	೪-೧೫-೦	
ಹೊಂಗೆಬೀಜ	೨೬ ೪ ೦	
ತೆಂಗಿನಕಾಯಿ ೧೦೦೦	೧೪೬ ೦ ೦	೨೦೬ ೦ ೦

ADMISSIONS RECEIVED
Coaching Classes For The
S.S L.C. Examination of March 53
Under the able guidance of
Sri B SUBBANNACHAR B.Sc., B.T.
(Author of ಅಂಕಗಣಿತ Etc)
— Private Tuitions Arranged —
Separate Classes For Ladies
— FOR PARTICULARS
CITY TUTORIAL COLLEGE,
V. V Market, Mysore

ರಷ್ಯದ ವಿದೇಶಾಂಗ ನೀ[…] ಯಿಂದ ಜಗತ್ತಿನಲ್ಲಿ ತಿಕ್ಕಾ[…]

ರಷ್ಯದವರ ಶೋಷಣೆ ನೀತಿಯಿ[…] ಜಗತ್ತಿನಲ್ಲಿ ತಿಕ್ಕಾಟವಾಗುತ್ತಿರುವುದೆಂದೂ, ಅದಕ್ಕೆ ಪರಿಹಾರವೇ ಕಾಣಬ[…]ತ್ತಿಲ್ಲವೆಂದೂ ಯುಗೋಸ್ಲೇವಿಯದ ಪ್ರಧಾನಿ ಮಾರ್ಷಲ್ ಟಿಟೋರವರು ಅಲ್ಲಿ[…] ಕಮ್ಯೂನಿಸ್ಟ್ ಪಕ್ಷದ ಅಧಿವೇಶನದ[…] ಮಾತನಾಡುತ್ತಾ ತಿಳಿಸಿರುತ್ತಾರೆ ರಷ್ಯದ ವಿದೇಶಾಂಗ ನೀತಿಯನ್ನು ಅವರು ಖಂಡಿಸಿ, ಈಗ ಯುದ್ಧವಾಗುವ ಭಯವು ಇಲ್ಲದಿದ್ದರೂ ಸಹ ಅಂತರಂಗವಾ[…] ಅದು ಕುದಿಯುತ್ತಿರುವುದೆಂದೂ ಅವರು ಹೇಳುವರು ಬಂಡವಾಳ ಷಾಹಿ ರಾಷ್ಟ್ರಗಳೂ, ಸಮಾಜವಾದಿ ರಾಷ್ಟ್ರವಾ[…] ಯುಗೋಸ್ಲಾವಿಯವೂ ಒಂದರ ಪಕ್ಕದಲ್ಲೊಂದು ಬಾಳುತ್ತಿರುವುವೆಂದೂ ಅವರು ಹೇಳುವರು

ಮಾತೆತ್ತಿದರೆ ಸತ್ಯಾಗ್ರಹ ಉಚಿತವಲ್ಲ

ಇತ್ತೀಚೆಗೆ ಮಾತೆತ್ತಿದರೆ ಸತ್ಯಾಗ್ರ[…]ದ ಕೂಗು ಕೇಳಿ ಬರುತ್ತಿದೆ ಕಾರ್ಮಿ[…]ರು ತಮ್ಮ ಕುಂದು ಕೊರತೆಗಳನ್ನು [...] ಪರಿಹರಿಸಿಕೊಳ್ಳಲು ಕಾನೂನು ಸೌಲಭ್ಯ[…]ಳಿರುವಾಗ ಅವನ್ನು ಬಿಟ್ಟು ಅನುಚಿ[…] ಮಾರ್ಗಗಳನ್ನು ಹಿಡಿಯುವುದು ಸರಿ[…]ವಲ್ಲ ಸತ್ಯಾಗ್ರಹವೆಂಬುದು ಪವಿತ್ರವಾದ ಅಸ್ತ್ರ ಎಲ್ಲ ಪ್ರಸಂಗಗಳಲ್ಲೂ ಅದನ್ನು ಪ್ರಯೋಗಿಸಿ, ಗೊತ್ತು ಪಡಿಸಿಕೆಯನ್ನು ಹಾಕಿದರೆ ಅನೇಕ ಅನ್ಯಾಯಗಳಿಗೆ ಕಾರಣವಾಗುವುದು ಅಂತಹ ಅನುಚಿತ ಕ್ರಮಗಳನ್ನು ಬಿಟ್ಟು ಶಾಸನ ಬದ್ಧವಾದ ನ್ಯಾಯ ಮಾರ್ಗಗಳನ್ನು ಹಿಡಿಯಬೇಕಾದುದು ಧರ್ಮ—ಎಂದು ಸಾರ್ವ[…]ನಿಕರೊಬ್ಬರು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೩೦ ಗಂಟೆಗೆ ಎ ವಿ [...] ರಾಮಶಾಸ್ತ್ರಿ ಸುಪ್ರಭಾತ ೧ ೪೦ ವಿವಿಧ [...] ವೇಣುಗೋಪಾಲ್, ರಿಕಾರ್ಡ್ [...] ದ ಮಹಿಳೆಯರ ಕಾರ್ಯಕ್ರಮ [...] ೫ ೪೦ ಗಂಟೆಗೆ, ಎ ವಿ ನಾರಾಯಣ[...] ೬ ೧೦ ಬಾಲಜಗತ್, ಮಕ್ಕಳ ಕಾರ್ಯಕ್ರಮ ೬ ೩೦ ಹಿಂದಿ ಗೀತೆಗಳು, [illegible] ಅಮೃತ[...] ವ ಸಂಗೀತ, [illegible] ೯ ೧೫ ಕನ್ನಡ ಗೀತೆಗಳು [illegible] ೯ ೪೦ [illegible] ಗೀತೆಗಳು

○ ರಾಜಧಾನಿಯ ಮಹಾರಾಣಿ ಪ್ರೌ[…]ಶಾಲೆಯ ಅಧ್ಯಾಪಕಿ ಶ್ರೀಮತಿ ಸಿ [...] ರತ್ನಯವರನ್ನು ಹಾಸನದ ವಿದ್ಯಾರ್ಥಿನಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿ ವರ್ಗಾಯಿಸಲಾ[…]

Wanted Travelling
Salesmen on Salary [...]
Commission for
VASU OODABATHI[...]
Factory at —
1135 Narayana Sastry Ro[ad]
Sivarampet MYSORE

Edited, Printed and Pu[b]lished by A R Nagaraj at Sadhvi Press, D Sub[ba]iah Road, Mysore.

ಟೆಲಿಫೋನ್ ನಂ. 798 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೫-೧೧-೧೯೫೨ [ಸಂಚಿಕೆ ೮೩

ಐಸೆನ್‌ಹೋವರರಿಗೇ ಅಮೆರಿಕದ ಅಧ್ಯಕ್ಷಪಟ್ಟ

ರಾಜು ಅಪೀಲಿನಲ್ಲಿ ಮುಂದುವರಿದ ವಾದ

ಮುಖ್ಯೋಪಾಧ್ಯಾಯರ ಕ್ವಾಲಿಫಿಕೇಷನ್ ವಿಷಯ ಬಗ್ಗೆ ವಿಮರ್ಶೆ

[illegible] ಹೈಕೋರ್ಟಿನಲ್ಲಿ ನೆನ್ನೆ [illegible] ವಿಷಯದ ಬಗ್ಗೆ ಮುಂದುವರಿದ ವಾದ [illegible] ಶ್ರೀ ರಾಜುರವರ [illegible] ವಕೀಲರು, ಶ್ರೀ ಸಿಣ್ಣಾರವರು [illegible] ಡೆಪ್ಯೂಟಿ ಪೋಲೀಸ್ ಸೂಪರಿಂಟೆಂ[illegible] ತನಿಖೆ ಬಗ್ಗೆ ನಡೆಸಿದ ಕ್ರಮವನ್ನು [illegible] ಮೊದಲು ಪತ್ರಗಳನ್ನು ಗುರು[illegible] ತೆಗೆದುಕೊಂಡು, ನಂತರ ವಿವರಗಳನ್ನು [illegible] ಇದು ನ್ಯಾಯ [illegible] ನ್ಯಾಯಸೂತ್ರಗಳಿಗೆ ವಿರುದ್ಧವೆಂದೂ [illegible] ಈ ಬಗ್ಗೆ ಕೆಳಗಿನ ಕೋರ್ಟಿನ [illegible] ಅಧಿಕಾರಿಯನ್ನು ಪ್ರಶ್ನಿಸಲಾ[illegible] ವಕೀಲರು ಕ್ರೀಸ್ತ ನ್ಯಾಯ [illegible] ತಿಳಿಸಿದರು.

ಈ ಬಗ್ಗೆ ಚರ್ಚೆ ನಡೆದು ತನಿಖೆ ವಿವರ [illegible] ಬರೆದುಕೊಳ್ಳುವ ಸಂಬಂಧವಾಗಿ [illegible] ನ್ಯಾಯವೇನೂ ಇಲ್ಲವೆಂದು ಆಧಾ[illegible] ಪಡಲಾಯಿತು. ಆವರೆ ಸಾಕ್ಷಿಗಳ [illegible] ಕೇಸು ಡೈರಿಯಲ್ಲಿ ಎರಡು [illegible] ಕೆಂದು [illegible] ತಿಳಿಸಿದರು [illegible] ಹೇಳಿಕೆಗಳನ್ನು ಬಿಡಿಯ [illegible] ಬರೆದುಕೊಳ್ಳುವ ಪದ್ಧತಿ ಇದು [illegible] ಅವರು ಹೇಳಿದರು.

[illegible] ರು ಸರ್ಕಾರದ ವಕೀಲರಾದ [illegible] ಮುನಿರು ಸಾಕ್ಷಿ [illegible] ವಕೀಲರ [illegible] ಕೇಸು ಪುಸ್ತಕದಲ್ಲಿ ತೆಗೆದುಕೊ[illegible] ಅವುಗಳಿಗೆ ಆಸ್ಪದ [illegible] ಆದರೆಯೆಂದೂ ತಿಳಿಸಿದರು. ಕೇಸು [illegible] ತನಿಖೆ ಬಗ್ಗೆ ನಡೆದಿರುವ ಕ್ರಮ [illegible] ಪ್ರಧಾನ ನ್ಯಾಯಾಧೀಶರು [illegible] ಹೇಳಿಕೆಗಳನ್ನು ನೋಟು ಪುಸ್ತಕ [illegible] ಅದರಿಂದ ಆಪಾದಿತರಿಗೆ ಯಾ[illegible] ತೊಂದರೆಯೂ ಬಂದಿಲ್ಲವೆಂದು ಪ್ರಶ್ನಿ[illegible] ಈ ಬಗ್ಗೆ [illegible] ಪ್ರಶ್ನೆ [illegible] ಸಿಣ್ಣಾರವರು ತಿಳಿಸಿದರು.

[illegible] ವನ್ನು ಮುಂದುವರಿಸಿ ಹಾಜರಿದ್ದ [illegible] ಕಟ್ಟೆಕೊಂಡಿದ್ದ ಪದಾರ್ಥದ [illegible] ಪರೀಕ್ಷೆಯ ಬಗ್ಗೆ ಡಿ ಎಸ್ ಪಿ [illegible] ರವರ ಸಾಕ್ಷ್ಯವನ್ನು ಅವರು ವಿವ[illegible] ಪದಾರ್ಥವು ಪಾಪದರವೆಂದೂ [illegible] ಪಾಷಾಣ) ಅಥವಾ ಬೇರೆ ಅದರಲ್ಲಿ [illegible] ಪರೀಕ್ಷೆಯಲ್ಲಿ ವ್ಯಕ್ತವಾಗಿರು[illegible] ಹೇಳಿದರು. ಅದು ಮುಖ್ಯೋಪಾ[illegible] ಆಗಿರಲಿಲ್ಲ. ಆ ಮೇಲೆ ಪರೀ[illegible] ಕಳುಹಿಸಲ್ಪಟ್ಟ ಶೀಸೆಯಲ್ಲಿದ್ದ [illegible] ಕ್ವಾಲಿಫಿಕೇಷನ್ ಆಗಿತ್ತು [illegible] ತಿಳಿಸಿದರು.

[illegible] ಕ್ವಾಲಿಫಿಕೇಷನೊಡನೆ ಬೆರೆತು [illegible] ಮಾತ್ರ ಉಳಿಯುವಂತಹ [illegible] ಸಂಬಂಧದ ವಸ್ತುಗಳು ಇದ್ದಲ್ಲಿ [illegible] ಪಾಪದರವಿದ್ದ [illegible] ಕಾರಣ [illegible] ಅದರಲ್ಲಿ ಮುಖ್ಯೋಪಾ[illegible] ವಿಷವನ್ನು ಹಾಕಲಾಯಿತೆಂದು [illegible] ಸಾಧ್ಯವಿಲ್ಲವೆಂದು ಅವರು [illegible] ಸಿದ್ದರು.

[illegible] ತಪ್ಪುಪ್ಪಿಗೆ ಹೇಳಿಕೆ ಕಡೆಗೆ [illegible] ರವರು ನಕಲಿಯ [illegible] ಮುದ್ದಣವನ್ನು [illegible] ಈ ಬಗ್ಗೆ ಮುಂದೆ ತಿಳಿಸುವುದಾಗಿ [illegible] ರವಿತ್ತರು.

ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು

[illegible] ಗಳೂರು ಟ್ರಸ್ಟ್ ಬೋರ್ಡಿನ [illegible] ರಾಗಿ ಅಲ್ಲಿನ ಕಾರ್ಪೋರೇಷನ್ನಿನ [illegible] ಸೀನಿಯರ್ ಶ್ರೀ ಆರ್ ಮಾಧವರ[illegible] ನ್ನು ನೇಮಿಸಲಾಗಿದೆ.

ರೈಲ್ವೆ ನೌಕರರ ವೇತನದ ಮೊಕದ್ದಮೆ ?

ಬಂಧವಾಗಿದ್ದ ಟಿಗಳ ಕ್ರಿಯಾವಿಕ್ಕೆ [illegible] ರವ [illegible] ಈಗಿನ ಸರ್ಕಾರವು [illegible] ರವರ ಒತ್ತಾಯಿಗಿ ದ ಡಿ [illegible] ಯನ್ನು ಯಾರೂ ನಂಬ [illegible] ಬೇಡಿ ಎಂದು ಅಖಿಲ ಭಾರತ ರೈಲ್ವೆ ನೌ[illegible] ಕರರ ಸಂಘದ ಕಾರ್ಯದರ್ಶಿ ಎಸ್ ಗು[illegible] ರುಸ್ವಾಮಿಯವರು ತಿಳಿಸಿ, ಸರ್ಕಾರಿ ನೌಕರರು, ರವರಲ್ಲೂ ರೈಲ್ವೆ ನೌಕರರು ಗಳ ಸಂಬಳವನ್ನು ಏರಿಸುವ [illegible] ಚನೆಗಳು [illegible] ಗಿ ಹೇಳಿರುವರು.

ಅಂಗಡಿ ಕಾನೂನು ಉಲ್ಲಂಘನೆಗಾಗಿ ಶಿಕ್ಷೆ

ಸಂಸ್ಥಾನದಲ್ಲಿ ಜಾರಿಯಲ್ಲಿರುವ ಅಂ[illegible] ಗಡಿ ಕಾನೂನ ಉಲ್ಲಂಘನೆಗಾಗಿ ಕೆಳಗೆ ಕಂಡ ಅಂಜಿಯ ಹೋಟೇಲು ಮತ್ತು ಅಂಗಡಿ ಮಾಲೀಕರುಗಳಿಗೆ ಈರೀತಿ ದಂಡವನ್ನು ವಿಧಿಸಲಾಗಿದೆ —ಹಾಜಿ ಅಬೂಬಾಕರ್ ಮಾಲಿಕರು ಮತ್ತು ಕುಂಜಿ ಅಹಮದ್ ಮ್ಯಾನೇಜರ್ ದ ಬಾರ್ ಹೋಟೇಲು ಮತ್ತು ಮದೀನ ಹೋಟೇಲು ಇವರಿಗೆ ತಲಾ ೮ ರೂ., ಗಜರ್‌ಬಾದಿನ ಗೋಪಾಲ್ ಭವನದ ಶ್ರೀ ಕೆ ಕೃಷ್ಣಪ್ಪ ೭ ರೂ., ದೇವರಾಜಾ ಮಾರ್ಕೆಟ್ಟಿನ ಅಬ್ದುಲ್ ಕರೀಂ ಸಾಹೇಬರು, ಮ್ಯಾನೇಜರ್, ಗಾಯಿತ್ರಿ ಸ್ಟೋರ್ಸ್ ರವರುಗಳಿಗೆ ತಲಾ ೫ ರೂ., ಇರ್ವಿನ್ ರಸ್ತೆಯ ಜಯಲಕ್ಷ್ಮಿ ಟೀ ಷಾಪಿನ ಶ್ರೀ ಬಸವಯ್ಯನವರಿಗೆ ೫ ರೂ., ಗಾಂಧಿ ಚೌಕದಲ್ಲಿರುವ ಎಸ್ ಆರ್. ಆರ್ ಮಾಡರ್ನ ಹಿಂದೂ ಹೋಟೇಲಿನ ಶ್ರೀ ಚೆನ್ನೇಗೌಡರು ಮತ್ತು ಕಾಳಮ್ಮನ ಗುಡಿ ಬೀದಿಯಲ್ಲಿರುವ ನ್ಯೂ ಪದ್ಮಾಲಯ ಹೋಟೇಲಿನ ಶ್ರೀ ವಾಸುದೇವರಾಯರಿಗೆ ತಲಾ ೩ ರೂ.

ದೆಹಲಿ ಸಿ ಐ ಡಿ ಅಧಿಕಾರಿ ಸಂಸ್ಥಾನಕ್ಕೆ

ದೆಹಲಿಯ ವಿಶೇಷ ಪೋಲೀಸು ಸಿಬ್ಬಂದಿಗೆ ಸೇರಿದ ಶ್ರೀ ಎ ಎಂ ಚಾಟರ್ಜಿಯವರನ್ನು ಸಂಸ್ಥಾನದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಲಾಗಿದೆ. ಪೋಲೀಸು ಇನ್ಸ್‌ಪೆಕ್ಟರ್ ಶ್ರೀ ಕೆ ಎಚ್ ನರಸಿಂಹಮೂರ್ತಿಯವರನ್ನು ಎ. ಎಸ್ ಪಿ ಯಾಗಿ ನೇಮಕ ಮಾಡಲಾಗಿದೆ.

ಅಮೆರಿಕದ ಅಧ್ಯಕ್ಷರು

ಜನರಲ್ ಐಸೆನ್ ಹೋವರ್

ಬಸ್ಸು ಸೇತುವೆಯಿಂದ ಬಿದ್ದು ೫ ಜನರ ಮರಣ

ತುಮಕೂರು ಜಿಲ್ಲೆಯ ಎತ್ತಿನಹೊಳೆಯಿಂದ ಹೊರಟು ಬೆಂಗಳೂರಿಗೆ ಬರುತ್ತಿದ್ದ ಶ್ರೀದಲಿಂಗೇಶ್ವರ ಸರ್ವಿಸ್ಸಿನ ಬಸ್ಸೊಂದು ನೆನ್ನೆ ಮಾಗಡಿ ಹತ್ತಿರ ಬಂದು ಒಣ್ಣ ಹಳ್ಳದ ಬಳಿ ಸೇತುವೆಯಿಂದ ಕೆಳಕ್ಕೆ ಮಗುಚಿಕೊಂಡ ಪರಿಣಾಮವಾಗಿ ಡ್ರೈವರನೂ ಸೇರಿ ಐದು ಮಂದಿ ಮಡಿದು ೩೩ ಜನರಿಗೆ ಗಾಯವಾಗಿದೆ. ಗಾಯವಾದವರಲ್ಲಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ಸೇತುವೆಯ ಪಕ್ಕದ ಗೋಡೆ ಮತ್ತು ಕಲ್ಲನ್ನು ಮುರಿದು ಮುಂದೆ ಬಂದು ಅದು ಮಗುಚಿಕೊಂಡಿತೆಂದು ಹೇಳಲಾಗಿದೆ. ಹಳ್ಳದಲ್ಲಿ ಸ್ವಲ್ಪ ನೀರೂ ಮತ್ತು ಮರಳೂ ಇದ್ದುದರಿಂದ ಇನ್ನೂ ಹೆಚ್ಚು ಅಪಾಯವಾಗಲಿಲ್ಲ.

ರಹದಾರಿ ಇಲ್ಲದೆ ಬಸ್ಸು ಓಡಿಸಿದುದಕ್ಕೆ ದಂಡ

ಚಾಮರಾಜನಗರದ ಸಿ ಎಸ್ ಆರ್ ಮೋಟಾರು ಸರ್ವಿಸ್ಸಿನ ಬಸ್ಸನ್ನ ರಹದಾರಿಯಿಲ್ಲದೆ ಅದರ ಡ್ರೈವರ್ ಸಿದ್ದಯ್ಯ ಎಂಬುವನು ಓಡಿಸಿದುದಕ್ಕಾಗಿ ಅವನಿಗೆ ೧೫ ರೂ ಗಳ ಜುಲ್ಮಾನೆ ತಪ್ಪಿದರೆ ೨ ದಿನಗಳ ಸಾದ ಸಜವನ್ನು ನೆನ್ನೆ ವಿಧಿಸಲಾಯಿತು.

ಅಮೆರಿಕಾ ಅಧ್ಯಕ್ಷರಾಗಿ ಐಸೆನ್‌ಹೋವರ್

ಅಮೆರಿಕದ ಅಧ್ಯಕ್ಷತೆಗೆ ನೆನ್ನೆ ಚುನಾವಣೆಯು ನಡೆಯಿತು. ರಿಪಬ್ಲಿಕ್ಕಿನ ಪಕ್ಷದ ಉಮೇದವಾರರಾದ ಜನರಲ್ ಐಸೆನ್‌ಹೋವರರಿಗೂ, ಡಿಮೊಕ್ರಾಟ್ ಪಕ್ಷದ ಸ್ಪರ್ಧಿ ಆಡ್ಲೈ ಸ್ಟೀವನ್ಸನ್ನರಿಗೂ, ತೀವ್ರ ಸ್ಪರ್ಧೆಯು ನಡೆದ ನಂತರ, ಐಸೆನ್‌ಹೋವರರೇ ಬಹುಮತ ಗಳಿಸಿ ಜಯಶಾಲಿಗಳಾಗುವರೆಂದು ತಿಳಿದುಬಂದಿದೆ.

ಪೋಲೀಸರ ಗುಂಡಿನಿಂದ ೩ ಆಫ್ರಿಕನ್ನರ ಕೊಲೆ

ದಕ್ಷಿಣ ಆಫ್ರಿಕದ ಜೊಹಾನ್ಸ್‌ಬರ್ಗ್‌ನಲ್ಲಿರುವ ಆಫ್ರಿಕನ್ನರ ಒಂದು ಹೊಟೇಲಿನಲ್ಲಿ ನೆನ್ನೆ ರಾತ್ರಿ ಪೋಲೀಸರು ಗುಂಡುಹಾರಿಸಿದ ಪರಿಣಾಮವಾಗಿ ೩ ಜನ ಆಫ್ರಿಕನ್ನರು ಮಡಿದರೆಂದು ವರದಿಯಾಗಿದೆ. ತಮ್ಮ ಮೇಲೆ ಕಲ್ಲುಗಳನ್ನು ಜನರು ಎಸೆದರೆಂದು ಪೋಲೀಸರು ಹೇಳಿದ್ದಾರೆ.

ಮದ್ರಾಸಿನ ಹೊಸ ಮೇಯರ್

ಮದ್ರಾಸಿನ ಮೇಯರಾಗಿ ಅಲ್ಲಿನ ಪೌರಸಭೆ ಕಾಂಗ್ರೆಸ್ ಉಮೇದುವಾರರಾದ ಟಿ ಚೆಂಗಲ್ವರಾಯರವರು ಆರಿಸಲ್ಪಟ್ಟಿರುತ್ತಾರೆ. ಮತ್ತೊಬ್ಬ ಕಾಂಗ್ರೆಸ್ ಸ್ಪರ್ಧಿ ಸರಸ್ವತಿ ಪಾಂಡುರಂಗಂ ಎಂಬಾಕೆಯು ಉಪಮೇಯರಾಗಿ ಚುನಾಯಿತರಾಗಿರುವರು.

ಜಪಾನ್ ದ್ವೀಪದ ಮೇಲೆ ರಷ್ಯಾ ವಿಮಾನ ?

ಜಪಾನಿನ ಉತ್ತರ ಭಾಗದ ದ್ವೀಪವಾದ ಹೊಕೈಡೋವಿನ ಮೇಲೆ ನೆನ್ನೆ ರಾತ್ರಿ ರಷ್ಯಕ್ಕೆ ಸೇರಿದುದೆಂದು ಹೇಳಲಾದ ವಿಮಾನವೊಂದು ಹಾರಿ ಬಂದಿತೆಂದೂ, ಅದನ್ನು ಎರಡು ಜೆಟ್ ವಿಮಾನಗಳು ಅಟ್ಟಿಸಿಕೊಂಡು ಹೋದುವೆಂದೂ ಹೇಳಲಾಗಿದೆ. ಗುಂಡು ಹಾರಿಸಿದ ಶಬ್ದವೂ ಕೇಳಿಬಂತೆಂದು ವರದಿಯಾಗಿದೆ.

ಫ್ರೆಂಚ್ ಭಾರತದಲ್ಲಿ ಜನಮತಗಣನೆಗೆ ಒತ್ತಾಯ

ಫ್ರಾನ್ಸಿನ ಪ್ರತಿನಿಧಿಯು ವಿಶ್ವಸಂಸ್ಥೆಯ ಧರ್ಮದರ್ಶಿಗಳ ಸಮಿತಿಯಲ್ಲಿ ಮಾತನಾಡುತ್ತಾ, ಭಾರತದಲ್ಲಿರುವ ಫ್ರೆಂಚ್ ಪ್ರದೇಶಗಳಲ್ಲಿ ಜನಮತ ಗಣನೆಯನ್ನು ತೆಗೆದುಕೊಂಡ ನಂತರವೇ ಅವುಗಳ ಭವಿಷ್ಯವನ್ನು ನಿರ್ಧರಿಸಬೇಕಾಗಿದೆಯೆಂದು ತಿಳಿಸಿರುವರು. ೩ ಶತಮಾನಗಳಿಂದ ಫ್ರೆಂಚ್ ಪ್ರಜೆಗಳಾಗಿದ್ದವರನ್ನು ಅವರ ಅಭಿಮತವಿಲ್ಲದೆ ಮತ್ತೊಬ್ಬರಿಗೆ ಒಪ್ಪಿಸುವುದಕ್ಕೆ ಫ್ರಾನ್ಸಿಗೆ ನೈತಿಕವಾದ ಹಕ್ಕು ಇರುವುದಿಲ್ಲವೆಂದೂ ಅವರು ಹೇಳಿರುವರು.

ಸಂಸ್ಥಾನಕ್ಕೆ ಬೊಂಬಾಯಿ ಸಚಿವರು

ಬೊಂಬಾಯಿಯ ಸ್ಥಳೀಯ ಸಂಸ್ಥೆ ಸಚಿವರಾದ ಎಂ ಪಿ ಪಾಟೀಲರು ನಾಳೆಯಿಂದ ೧೩ನೇ ತಾ|| ವರೆಗೆ ಮೈಸೂರು ಸಂಸ್ಥಾನದ ಜಿಲ್ಲಾ ನಾಡುಗಳಲ್ಲಿ ಪ್ರವಾಸ ಮಾಡಿ, ಡಾ|| ವಿಶ್ವೇಶ್ವರಯ್ಯನವರ ಗ್ರಾಮ ಕೈಗಾರಿಕಾ ಯೋಜನೆಯ ಕ್ರಮವನ್ನು ಪರಿಶೀಲಿಸುವರು.

ಸುಪ್ರೀಂ ಕೋರ್ಟಿನಲ್ಲಿ ಖಾಸಿಂ ರಜ್ವಿ ಅಪೀಲು

ಠಕಾಯಿತಿ ಮೊಕದ್ದಮೆಯಲ್ಲಿ ೭ ವರ್ಷ ಶಿಕ್ಷೆಗೆ ಗುರಿಯಾಗಿರುವ ಹೈದರಾಬಾದಿನ ಖಾಸಿಂ ರಜ್ವಿಯು ಭಾರತದ ಸುಪ್ರೀಂ ಕೋರ್ಟಿನಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ ರಾಜ್ಯಾಂಗದ ವಿಧಿಯ ಪ್ರಕಾರ, ತನಗೆ ಶಿಕ್ಷೆ ವಿಧಿಸಲು ಅವಕಾಶವೇ ಇಲ್ಲವೆಂದು ತಿಳಿಸಿರುತ್ತಾನೆ ತನಗೆ ಶಿಕ್ಷೆ ವಿಧಿಸಿರುವುದು ಭಾರತದ ಪ್ರಜೆಯ ಮೂಲಭೂತ ಹಕ್ಕುಗಳ ನಿಯಮಕ್ಕೆ ವಿರೋಧವಾಗಿರುವುದೆಂದು ಅವನು ಸೂಚಿಸಿರುತ್ತಾನೆ ಈ ಶಿಕ್ಷೆಯ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಅಪೀಲೊಂದೂ ದಾಖಲಾಗಿದೆ

ತೀರ್ಥ ಸ್ನಾನ ಮುಂದಕ್ಕೆ ಹೋಯಿತು

ಶ್ರೀರಂಗಪಟ್ಟಣದ ಗಂಗಾಧರೇಶ್ವರ ಸ್ವಾಮಿಯ ತೀರ್ಥಸ್ನಾನ ಮಹೋತ್ಸವವು ಪ್ರತಿವರ್ಷವೂ ತುಲಾ ಮಾಸದ ಪೂರ್ಣಿಮೆ ದಿನ ನಡೆಯುವ ವಾಡಿಕೆ ಅದಕ್ಕಾಗಿ ಹೊರಗಿನಿಂದ ಸಹಸ್ರಾರು ಜನರು ಮಾಮೂಲಿನಂತೆ ಈ ಸಾರಿಯೂ ಬಂದಿದ್ದು ಸ್ನಾನದ ವಿಷಾ ಡಿಲ್ಲದೆ ಜನೇಕರು ನಿರಾಶರಾದರು ದೇವಸ್ಥಾನದ ಪಾರುಪತ್ಯೇಗಾರರಿಗೆ ಹುಷಾರಿಲ್ಲದಿದ್ದುದೇ ಇದಕ್ಕೆ ಕಾರಣವಂತೆ ಪಂಚಮಿ ದಿನ, ಅದನ್ನು ಇಟ್ಟುಕೊಂಡಿರುವುದಾಗಿ ಗೊತ್ತಾಗಿದೆಯೆಂದೂ ಸಂಬಂಧಪಟ್ಟ ಅಧಿಕಾರಿಗಳು—ಈ ಬಗ್ಗೆ ವಿಚಾರಣೆ ನಡೆಸಬೇಕೆಂದೂ ವಾಚಕರೊಬ್ಬರು ಬರೆದಿರುತ್ತಾರೆ

ಟೈರ್ ಮತ್ತು ಟ್ಯಾಂಕ್ ಸೋಲ್ ಚಪ್ಪಲಿಗಳು

ನಿಮಗೆ ಬೇಕಾದ ನಮೂನೆಯಲ್ಲಿ ಮಾಡಿಕೊಡುತ್ತೇವೆ

ಹಪ್ಸ್ ಫುಟ್ ವೇರ್,

ವಾಣೀವಿಲಾಸ ಮಾರ್ಕೆಟ್, ಮೈಸೂರು

ಬಿಳಿಗಿರಿ ರಂಗಸ್ವಾಮಿ ಬೆಟ್ಟದಲ್ಲಿ ಕಲಶ ಸ್ಥಾಪನೆ

ಕಳೆದ ತಿಂಗಳು ೨೦ ನೇ ತಾ॥ ಬಿಳಿಗಿರಿ ರಂಗಸ್ವಾಮಿಯವರ ದೇವಸ್ಥಾನದ ಅಮ್ಮನವರ ಗುಡಿಯ ಕಲಶ ಸ್ಥಾಪನಾ ಮಹೋತ್ಸವವು ವೈಭವದಿಂದ ನೆರವೇರಿತು ಇದಕ್ಕೆ ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳೂ, ಯಳಂದೂರು ತಾಲ್ಲೂಕು ಅಮಲ್ದಾರರೂ, ಜಹಗೀರುದಾರರ ಕಡೆಯ ಶ್ರೀ ಸಿ ಆರ್ ವೆಂಕಟರಾಮಯ್ಯ ಮತ್ತು ಇತರ ಅನೇಕ ಖಾಸಗಿ ಮಹನೀಯರುಗಳೂ ಬಂದಿದ್ದರು

ಇಲ್ಲಿ ಆಸ್ಪತ್ರೆಯು ಕಟ್ಟಡವಿದ್ದೂ ವೈದ್ಯ ಸಹಾಯವಿಲ್ಲದೆ ತುಂಬಾ ತೊಂದರೆಯಾಗಿದ್ದ

ಕಾಡಿನಲ್ಲಿ ಹುಲಿಯು ಸೇರಿಕೊಂಡು ಜನ ಮತ್ತು ಜಾನುವಾರುಗಳಿಗೆ ತೊಂದರೆಯಾಗಿದೆ ಸೋಲಿಗರ ಪೋಡೊಂದಕ್ಕೆ ಹುಲಿಯು ನುಗ್ಗಿ ಒಬ್ಬ ಹೆಂಗಸನ್ನು ಕೊಂದು ಹಾಕಿರುತ್ತದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಸ್ ಬಿ ಕೇಶವಮೂರ್ತಿ ಸಂಗೀತ ಮಧ್ಯಾಹ್ನ ೧-೩೦ ವೀಣೆ ಎ ವಿ ವೆಂಕಟಾಚಾರ್, ವೇಣು ಗಾನ ಸಂಜೆ ೫-೪೫ ಮತ್ತು ೭-೦೦ ಎಸ್ ಆರ್ ಪ ... ಸಂಗೀತ ೭-೧೦ ಕನ್ನಡ ... ೭ ರಿಸ ನವಿಸ ಅಖಿಲ ಭಾರತ ವಾಚನ ೮-೩೦ ವಿ ವೆಂಕಟಾಚಾರ್ ವೀಣಾ ಗಾನ ೯-೧೫ ಚಿತ್ರಗೀತೆ ೯-೩೦ ... [illegible]

ಸಿಟಿ ಟ್ಯುಟೋರಿಯಲ್ ಕಾಲೇಜು

ವಾಣಿವಿಲಾಸ ಮಾರ್ಕೆಟ್, ಮೈಸೂರು

ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗಾಗಿ ಸಾಯಂಕಾಲದ ತರಗತಿಗಳು ಪ್ರಾರಂಭವಾಗಿವೆ ವಿವರಗಳಿಗೆ ವಿಚಾರಿಸಿ

Edited, Printed and Published by A R Nagarajan at Sadhvi Press, D Subbiah Road, Mysore

ಅರಬ್ ರಾಷ್ಟ್ರಗಳ ಐಕ್ಯತೆಗೆ ನಗೀಬರ ಪ್ರಯತ್ನ

ಎಲ್ಲ ಅರಬ್ ರಾಜ್ಯಗಳನ್ನು ಒಂದುಗೂಡಿಸಿ ಫೆಡರೇಷನ್ನು ಸ್ಥಾಪಿಸಲು ಈಜಿಪ್ಟಿನ ನಗೀಬರು ಆಲೋಚಿಸಿರುವರೆಂದು ವರದಿಯಾಗಿದೆ ಅರಬ್ ದೇಶಗಳ ವಿದೇಶಾಂಗ ನೀತಿಯನ್ನು ಬಲಗೊಳಿಸಲು ಆ ರಾಜ್ಯಗಳ ಒಂದು ಶ್ರೇಷ್ಠ ಮಂತ್ರಾಲೋಚನಾ ಮಂಡಲವನ್ನು ನಿರ್ಮಿಸುವ ಆಲೋಚನೆಯು ಅವರಿಗೆ ಇರುವುದಾಗಿ ಹೇಳಲಾಗಿದೆ

ಇಂಜನಿಯರಿಂಗ್ ಕಾಲೇಜಿಗೆ ಸೇರಲು ಅವಕಾಶ

ದಾವಣಗೆರೆಯ ಬಿ ಡಿ ಟಿ ಇಂಜನಿಯರಿಂಗ್ ಕಾಲೇಜಿನವರು ಏರ್ಪಡಿಸಿರುವ ನವೆಂಬರ್-ಸೆಪ್ಟೆಂಬರ್ ಕೋರ್ಸ್ ಸಪ್ಲಿಮೆಂಟರಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಆದರೆ ಇಲ್ಲಿಯವರೆಗೂ ಇಂಟರ್ ಪರೀಕ್ಷಾ ಫಲಿತಾಂಶವು ಹೊರಬೀಳದೆ ಮೇಲಿನ ಕಾಲೇಜಿನಲ್ಲಿ ಎಡ್ಮಿಷನ್ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳಿಗೆ ಆತಂಕವುಂಟಾಗಿರುತ್ತದೆ ಅರ್ಜಿಯನ್ನು ಇದೇ ತಿಂಗಳು ೧೧ ನೇ ತಾ॥ ನೊಳಗೆ ರವಾನಿಸಬೇಕಾಗಿದೆ ಫಲಿತಾಂಶವು ಈ ಕೂಡಲೇ ಹೊರಬೀಳದಿದ್ದರೂ ಸಹ ಕಡು ಕಾಲೇಜಿನ ತಪಶೀಲು ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಪಡೆದು, ಕಾಲೇಜಿನ ಉಪಾಧ್ಯಾಯರಿಂದ ದೃಢ ಮಾಡಿಸಿ, ನಂಬರುಗಳ ಪತ್ರಗಳನ್ನು ಒದಗಿಸಿಕೊಳ್ಳುವುದೇ ಮಂತಾದ ಕೆಲ ಕಾರಣವರಿಂದ ಅರ್ಜಿ ಸಲ್ಲಿಸುವ ೧೦ ದಿನ ಅವಧಿಯು ಬೇಕಾಗುವುದು ಅವಕಾಶದ, ವಿಶ್ವವಿದ್ಯಾನಿಲಯದವರು ಫಲಿತಾಂಶವು ಹೊರಬಿದ್ದ ನಂತರ ೧೦ ದಿನಗಳ ವರೆಗಾದರೂ ಅರ್ಜಿ ಸಲ್ಲಿಸುವ ಅವಧಿಯನ್ನು ಹೆಚ್ಚಿಸಬೇಕೆಂದು ವಿದ್ಯಾರ್ಥಿಗಳ ಹಿತೈಷಿಗಳು ಕೋರಿರುವರು

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್, ಮೈಸೂರು

ತೆರಿಗೆ ಕಟ್ಟದೆ ಕಾರು ನಡೆಸಿದವನಿಗೆ ೪೦ ರೂ ಜುಲ್ಮಾನೆ

ರಾಜಧಾನಿಯ ಬಟ್ಟೆ ವರ್ತಕರಾದ ಶ್ರೀ ಬಿ ಎಲ್. ರಾಮಸ್ವಾಮಿ ಶೆಟ್ಟರವರ ಮೋಟಾರಿಗೆ ತೆರಿಗೆ ಕಟ್ಟದಿದ್ದರೂ ಸಹ ಅದನ್ನು ಓಡಿಸಿದ ಡ್ರೈವರ್ ಸೈಯದ್ ಗಫಾರ್ ಎಂಬುವನ ಮೇಲೆ ಟ್ರಾಫಿಕ್ ಪೋಲೀಸರು ಮೊಕದ್ದಮೆ ಹೂಡಲಾಗಿ ಮೊನ್ನೆ ನಗರದ ನ್ಯಾಯಾಧೀಶರು ಅಪಾದಿತನಿಗೆ ೪೦ ರೂ ಜುಲ್ಮಾನೆಯನ್ನು ವಿಧಿಸಿ, ೬೨ ರೂ ತೆರಿಗೆಯನ್ನು ವಸೂಲು ಮಾಡುವಂತೆ ಆಜ್ಞೆ ಮಾಡಿರುತ್ತಾರೆ ದಂಡ ಕೊಡಲು ತಪ್ಪಿದರೆ ೨೦ ದಿನಗಳ ಸಾದಾ ಸಜವನ್ನು ಅನುಭವಿಸಬೇಕಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೮೦ ೦	೩೭-೪-೦
ಎಳ್ಳು	೩೩ ೮ ೦	೭೩-೧೨-೦
ಹರಳು ಬೀಜ	೩೯-೦-೦	೪೨ ೪ ೦
ಹುರುಳಿ	೫೩ ೦ ೦	೫೮ ೧೨ ೦
ಹೆಸರು	೫೫ ೨ ೦	೫೬ ೬ ೦
ಉದ್ದು	೫೮ ೪ ೦	
ಹಲಸಂದೆ	೬೮-೧೦-೦	
ಹುಚ್ಚೆಳ್ಳು	೫೫ ೧೪-೦	
ಅವರೆ	೭೯ ೧೦-೦	
ತೆಂಗಿನಕಾಯಿ		
ಮಂಡಿಗೆ	೭ ೧೪ ೦	೧೭ ೩ ೦
ಹುಣಸೇಹಣ್ಣು	೬ ೧೦ ೦	
ಬೆಲ್ಲ	೪-೪ ೦	
ಸೀಗೇಕಾಯಿ	೫-೧-೦	
ಹೊಂಗೇಬೀಜ	೨೩ ೪ ೦	
ತೆಂಗಿನಕಾಯಿ ೧೦೦೦ ಕ್ಕೆ	೯೦ ೦	೨೧೨ ೦ ೦

SRI GAYATHRI

TALKIES

Daily 2 Shows

From 5-11-52 For 2 Days

20th Century's

RED SKIES OF MONTANA

(In Technicolor)

Starring - Richard Widmark and Constance Smith

FROM 7-11-52

M G M Brings You the Lusty Saga Of

'SCARAMOUCHE

A Devil with the Ladies

A Demon with the Sword

Resplendent in Color by Technicolor

Featuring Stewart Granger and Eleanor Parker

॥ ಶ್ರೀ ॥

ಮಹಾಜನ ಹೈಸ್ಕೂಲಿನ ನಿಧಿಗಾಗಿ

ತಾ॥ 16-11-52 ನೇ ಭಾನುವಾರ ಸಾಯಂಕಾಲ 4 ಘಂಟೆಗೆ

— ಕ್ರಾಫರ್ಡ್ ಹಾಲಿನಲ್ಲಿ —

ಘನವಾದ ಸಂಗೀತ ಕಛೇರಿ

ಕೋಕಿಲಗಾನ, ಇಸೈವಾಣಿ

ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿಯವರ

ಹಾಡುಗಾರಿಕೆ

ಶ್ರೀ ಆರ್ ಕೆ. ವೆಂಕಟರಾಮಾಶಾಸ್ತ್ರಿಗಳ ಪಿಟೀಲು

ಶ್ರೀ ಟಿ ಕೆ. ಮೂರ್ತಿಯವರ ಮೃದಂಗ

ಶ್ರೀ ಆಲಂಗುಡಿ ರಾಮಚಂದ್ರರವರ ಘಟಂ

ಮೈಸೂರು ಸರ್ಕಾರದ ಪಬ್ಲಿಕ್ ಮಂತ್ರಿಗಳಾದ

ಶ್ರೀ ಕಡಿದಾಳ್ ಮಂಜಪ್ಪ, ಬಿ ಎ, ಬಿ. ಎಲ್ , ರವರು

ಅಧ್ಯಕ್ಷತೆಯನ್ನು ವಹಿಸುವರು

ವಿದ್ಯಾ ಮಂತ್ರಿಗಳಾದ

ಶ್ರೀ ಎ ಜಿ. ರಾಮಚಂದ್ರರಾವ್, ಬಿ ಎ , ಬಿ ಎಲ್ , ರವರು

ಶಾಲಾನಿಧಿ ಸಂಗ್ರಹ ಕಾರ್ಯದ ಪ್ರಾರಂಭೋತ್ಸವವನ್ನು ನಡೆಸುವರು

ವಿದ್ಯಾಪ್ರೇಮಿಗಳೂ, ಕಲಾಭಿಮಾನಿಗಳೂ, ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಟಿಕೇಟು ದರ — ರೂ 25, 10 5 ಮತ್ತು 3

ಎಸ್ ರಾಮರಾವ್,

ಗೌರವ ಕಾರ್ಯದರ್ಶಿ, ಮಹಾಜನ ಹೈಸ್ಕೂಲ್

ADMISSIONS RECEIVED

Coaching for MARCH 53

B.A & B Sc (Eng & P C M)

INTER (Eng P.C M C B Z)

Private Tuitions Arranged

CITY TUTORIAL COLLEGE,

V V Market, Mysore

ಒಲಂಪಿಯಾ ✱ ಅಮೋಘ ಪ್ರಾರಂಭ 6-11-52 ರಿಂದ

ಪ್ರತಿ ದಿನ ಮೂರು ಆಟಗಳು

ವೇಶ್ಯೆಯಾಗಿ ಜಾರಿ ಬೀಳಿದ ರಾಷ್ಟ್ರಭಕ್ತೆಯ ಜೀವನವನ್ನು ನಿರೂಪಿಸುವ ಕಿಶೋರ್ ಶರ್ಮರವರ ಉತ್ತಮ ಹಿಂದಿ ಚಿತ್ರ

★ ಮೋತಿಯಾ ★

ಪಾತ್ರ-ಭಾರತ್ಯ ಪ್ರೇಮ ಶಾಲ್, ಜೀವನ ಮತ್ತು ಕಮಲೇಶ ಕುಮಾರಿ

೧೬ ನೇ ಶತಮಾನದ ಭಾರತದ ಚರಿತ್ರೆಯ ಕೆಲವು ಅಂಶಗಳನ್ನು ಸೂಚಿಸುವ ಉತ್ತಮ ಚಿತ್ರ

ಬರಲಿರುವ ಪ್ರದರ್ಶನ — ಫಿಲಿಮಿಸ್ತಾನದವರ ಸಿ ಐ ಡಿ ಫೋರ್

ರಿಜಿಸ್ಟರ್ಡ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೬-೧೧-೧೯೫೨ [ಸಂಚಿಕೆ ೮೪

ಸಧ್ಯದಲ್ಲೇ ಕೊರಿಯಕ್ಕೆ – ಐಸೆನ್‌ಹೋವರರು –

ಒಳಚರಂಡಿ ನೀರಿನಿಂದ ಗೊಬ್ಬರದ ತಯಾರಿಕೆ

ಪೌರಸಭೆಗೆ ಕೇಂದ್ರ ಸರ್ಕಾರದಿಂದ ಸಾಲ

ಮೈಸೂರು ೬

ಮೈಸೂರು ಒಳ ಚರಂಡಿ ನೀರು ವ್ಯರ್ಥವಾಗದಂತೆ ವ್ಯವಸಾಯ ಕಾರ್ಯಗಳಿಗೆ ಮತ್ತು ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುವ ಸಲುವಾಗಿ ಅದನ್ನು ಉಪಯೋಗಿಸಲು ಒಂದು ಯೋಜನೆಯನ್ನು ಭಾರತ ಸರ್ಕಾರದ ಆಹಾರ ಖಾತೆಯ ಕಾಂಪೋಸ್ಟ್ ಮತ್ತು ಸೂಯಿಜ್ ಅಭಿವೃದ್ಧಿ ಅಧಿಕಾರಿಗಳಾದ ಡಾ|| ತಲಾತಿಯವರು ರಾಜಧಾನಿಯ ಪೌರಸಭೆಗೆ ಕಳೆದ ವರ್ಷ ಕೊಟ್ಟಿದ್ದರು. ಒಳ ಚರಂಡಿ ನೀರನ್ನು ಶೇಖರಿಸಿ ವ್ಯವಸಾಯಕ್ಕೆ ಉಪಯೋಗಿಸುವುದೇ ಈ ಯೋಜನೆಯ ಉದ್ದೇಶ. ಇದಕ್ಕಾಗಿ ೫೦ ಸಾವಿರ ರೂಗಳನ್ನು ಕೇಂದ್ರ ಸರ್ಕಾರವೇ ಸಾಲವಾಗಿ ಕೊಡುವುದೆಂದು ತಿಳಿದುಬಂದಿದೆ.

ಇದರಿಂದ ಪೌರಸಭೆಗೆ ವರ್ಷಂ ಪ್ರತಿ ೨೦ ಸಾವಿರ ರೂ ಲಾಭ ಬರುವುದೆಂದೂ ಹೇಳಲಾಗಿದೆ.

ಡಾ|| ತಲಾತಿಯವರು ನೆನ್ನೆ ಪೌರಸಭಾ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ಭಾರತದಲ್ಲಿ ಒಳ ಚರಂಡಿ ವ್ಯವಸ್ಥೆಯುಳ್ಳ ಒಟ್ಟು ೫೦೦ ನಗರಗಳಲ್ಲಿ ಒಳಚರಂಡಿ ನೀರನ್ನು ಸರಿಯಾಗಿ ಉಪಯೋಗಿಸಿದರೆ ಸುಮಾರು ೧ ಲಕ್ಷ ಟನ್ ಬೆಳೆ ತೆಗೆಯಬಹುದೆಂದೂ, ಈಗಿನಂತಹ ಆಹಾರ ಅಭಾವದ ಕಾಲದಲ್ಲಿ ಇದರಿಂದ ಬಹಳ ಉಪಯೋಗವುಂಟೆಂದೂ ತಿಳಿಸಿದರು.

ಅನಂತರ ಸಭೆಯು ಆ ಯೋಜನೆಯನ್ನು ಅಂಗೀಕರಿಸಿ ನಿರ್ಣಯವನ್ನು ಮಾಡಿತು.

ಕೃಷ್ಣರಾಜ ನಗರದಿಂದ ಅವಿರೋಧ ಆಯ್ಕೆ

ಅಖಿಲ ಭಾರತ ಕಾಂಗ್ರೆಸ್ ಪ್ರತಿನಿಧಿ ಚುನಾವಣೆಗೆ ಕೃಷ್ಣರಾಜ ನಗರದಿಂದ ಸ್ಪರ್ಧಿಸುವವರಾಗಿದ್ದ ಶ್ರೀ ಹೆಚ್. ಜಿ. ಶ್ರೀಕಂಠಶೆಟ್ಟರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುವುದರಿಂದ ಶ್ರೀ ಎಂ. ಎಲ್. ನಂಜರಾಜೇಅರಸಿನವರು ಅವಿರೋಧವಾಗಿ ಚುನಾಯಿತರಾಗಿರುವರೆಂದು ಗೊತ್ತಾಗಿದೆ.

ಬಹುಮಾನ ವಿತರಣೆ ಸಮಾರಂಭ

ರಾಜಧಾನಿಯ ದಿವಾಕರ ಅಗ್ರಹಾರ ವಿಭಾಗದ ಮಹಿಳಾ ಸಭೆಯ ಆಶ್ರಯದಲ್ಲಿ ದಸರಾ ಉತ್ಸವದ ಅಂಗವಾಗಿ ನಡೆಯುತ್ತಿದ್ದ ಗಮಕ ತರಗತಿಗಳ ಮುಕ್ತಾಯ ಸಮಾರಂಭವೂ, ಬಹುಮಾನ ವಿತರಣೆಯೂ ನಾಳೆ ಸಂಜೆ ೫|| ಗಂಟೆಗೆ ನಡೆಯುವುದು. ಮಹಾರಾಜ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಸ್. ಅನಂತ ರಂಗಾಚಾರ್‌ರವರು ಅಧ್ಯಕ್ಷತೆ ವಹಿಸುವರು.

ಕಾರಿನ ಓವರ್ ಲೋಡಿಗಾಗಿ ದಂಡ

ಓವರ್ ಲೋಡು ಮಾಡಿದುದಕ್ಕಾಗಿ ಎಂ. ವೈ. ೫೦೮೯ ಎಕ್ಸ್‌ಪ್ರೆಸ್ ಕಾರಿನ ಮಾಲೀಕ ಬೋಮರಾಜ್ ಎಂಬುವರಿಗೆ ನೆನ್ನೆ ನಗರದ ೧ ನೇ ನ್ಯಾಯಾಧೀಶರು ೧೦ ರೂ ದಂಡವನ್ನು ವಿಧಿಸಿರುತ್ತಾರೆ.

ಅಮೆರಿಕದ ಇಂದಿನ ಅಧ್ಯಕ್ಷ, ಟ್ರೂಮನ್

ಇವರು ಜನವರಿ ೨೦ ನೇ ತಾ|| ಅಧಿಕಾರವನ್ನು ಐಸೆನ್‌ಹೋವರರಿಗೆ ವಹಿಸಿಕೊಡುವರು

ಐಸೆನ್‌ಹೋವರರಿಗೆ ಪ್ರತಿಸ್ಪರ್ಧಿಯ ಶುಭಾಶಯ

ಅಮೆರಿಕದ ಅಧ್ಯಕ್ಷರಾಗಿ ಜನರಲ್ ಐಸೆನ್‌ಹೋವರರು ಬಹುಮತ ಗಳಿಸಿ ಆರಿಸಲ್ಪಟ್ಟಿರುವರು. ೧೯೩೨ ರಿಂದ ಡೆಮೊಕ್ರಾಟ್ ಪಕ್ಷದವರು ಇದುವರೆಗೆ ಅಲ್ಲಿನ ರಾಜ್ಯ ಸೂತ್ರಗಳನ್ನು ವಹಿಸಿದ್ದು, ಈಗ ಅದು ರಿಪಬ್ಲಿಕನ್ ಪಕ್ಷದ ಕೈ ಸೇರುವುದು. ಜ|| ಐಸೆನ್‌ಹೋವರರು ಜನವರಿ ೨೦ ನೇ ತಾ|| ಅಧಿಕಾರವನ್ನು ಸ್ವೀಕರಿಸುವರು.

ಅವರು ಜಯಶಾಲಿಗಳಾಗಿರುವರೆಂದು ಪ್ರತಿ ಸ್ಪರ್ಧಿಯಾದ ಇಲ್ಲಿನಾಯ್ ಸಂಸ್ಥಾನದ ಗೌರ್ನರ್ ಸ್ಟೀವನ್‌ಸನ್ನರು ಒಪ್ಪಿಕೊಂಡು ಅವರಿಗೆ ತಮ್ಮ ಶುಭಾಶಯಗಳನ್ನು ಕಳುಹಿಸಿರುವರು. ತಾವು ಇಷ್ಟಪಟ್ಟವರನ್ನು ಜನರು ಆರಿಸಿಕೊಂಡಿರುವರೆಂದೂ, ಜನರ ಈ ಅಭಿಪ್ರಾಯಕ್ಕೆ ತಾವು ತಲೆಬಾಗುವುದಾಗಿಯೂ ಪ್ರತಿಸ್ಪರ್ಧಿಯು ನುಡಿದಿರುವರು. ಆ ದೇಶದ ಮುಂದಿರುವ ಭಾರಿ ಸಮಸ್ಯೆಗಳನ್ನು ಬಗೆಹರಿಸಲು ಹೊಸ ಅಧ್ಯಕ್ಷರಿಗೆ ಸಕಲರೂ ಬೆಂಬಲವೀಯಬೇಕೆಂದು ಪ್ರಾರ್ಥಿಸಿರುವರು.

ಕೊರಿಯಕ್ಕೆ ಐಸೆನ್‌ಹೋವರ್

ಕೊರಿಯದಲ್ಲಿ ಯುದ್ಧವನ್ನು ಆದಷ್ಟು ಜಾಗ್ರತೆ ಮುಕ್ತಾಯಗೊಳಿಸಲು ಜ|| ಐಸೆನ್‌ಹೋವರರು ಸಂಕಲ್ಪಿಸಿರುತ್ತಾರೆ. ಸಂಧಾನದ ಮೂಲಕವಾಗಲಿ, ಅಥವಾ ಪೂರ್ಣ ಬಲಪ್ರಯೋಗದಿಂದಲಾಗಲೀ ತಮ್ಮ ಉದ್ದೇಶವನ್ನು ಸಾಧಿಸಲು ಅವರು ಪ್ರಯತ್ನಿಸುವರೆಂದು ಹೇಳಲಾಗಿದೆ. ಅವರು ಶೀಘ್ರದಲ್ಲೇ ಕೊರಿಯಕ್ಕೆ ತೆರಳುವರೆಂದೂ ಇದಕ್ಕಾಗಿ ಮಿಲಿಟರಿ ವಿಮಾನವೊಂದನ್ನು ತಮಗೆ ಕೊಡಬೇಕೆಂದು ಅವರು ಅಮೆರಿಕದ ರಕ್ಷಣಾ ಕಾರ್ಯದರ್ಶಿಯವರನ್ನು ಕೋರಲಿರುವರೆಂದೂ ಹೇಳಲಾಗಿದೆ. ಅಧ್ಯಕ್ಷರ ವಿಮಾನದಲ್ಲಿ ಅವರು ಹೋಗಲು ನಿರಾಕರಿಸಿರುವರು.

ಸೈಬೀರಿಯದಲ್ಲಿ ಭೂಕಂಪ

ಸೈಬೀರಿಯದ ಪರ್ಯಾಯ ದ್ವೀಪವಾದ ಕಾಮಚಾಟ್ಕದಲ್ಲಿ ನೆನ್ನೆ ಭೂಕಂಪವು ಸಂಭವಿಸಿದುದರ ಪರಿಣಾಮವಾಗಿ ಫೆಸಿಫಿಕ್ ಸಾಗರದಲ್ಲಿ ಭಾರಿ ಅಲೆಗಳು ಎದ್ದು ಜಪಾನ್ ತೀರಕ್ಕೆ ಬಡಿದುವೆಂದು ವರದಿಯಾಗಿದೆ.

ನೆಹರೂರವರು ಪುನಃ ಕಾಂಗ್ರೆಸ್ ಅಧ್ಯಕ್ಷರಾಗುವುದಿಲ್ಲ

ಪ್ರಧಾನಿ ನೆಹರೂರವರು ಮತ್ತೊಮ್ಮೆ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಲು ಸಮ್ಮತಿಸಿರುವುದಿಲ್ಲವೆಂದೂ, ಆ ಸ್ಥಾನಕ್ಕೆ ಮೌಲಾನಾ ಆಜಾದ್ ಅಥವಾ ಹರೇಕೃಷ್ಣ ಮೆಹತಾಬರನ್ನು ಚುನಾಯಿಸಲಾಗುವುದೆಂದೂ ತಿಳಿದುಬಂದಿದೆ.

ಮಾರುತಿ ಮೋಟಾರು ಡ್ರೈವರ್ ನ ಅಪಾಯ

ರಾಜಧಾನಿಯ ಮಾರುತಿ ಮೋಟಾರು ಸರ್ವಿಸ್ಸಿನಲ್ಲಿ ಡ್ರೈವರ್ ಆಗಿದ್ದ ಗಿಯಾಸ್ ಸಾಹೇಬರನ್ನು ಪೋಲೀಸರು ಪೌಳಿಯಿಂದ ತೆಗೆದಿರುವುದನ್ನು ಹೈಕೋರ್ಟಿನವರು ಎತ್ತಿ ಹಿಡಿದು, ಜಿಲ್ಲಾ ಮ್ಯಾಜಿಸ್ಟ್ರೇಟರು ಸದರಿಯವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಂತೆ ಪೋಲೀಸರಿಗೆ ಮಾಡಿದ ಆಜ್ಞೆಯನ್ನು ರದ್ದುಗೊಳಿಸಿರುತ್ತಾರೆ. ಸದರಿ ಡ್ರೈವರರು ಹೊಸದರ ಬದಲು ಹಳೇ ಬ್ಯಾಟರಿಯನ್ನು ಲಾರಿಗೆ ಜೋಡಿಸಿದುದಕ್ಕಾಗಿಯೂ, ಕೆಲಸಕ್ಕೆ ಸರಿಯಾಗಿ ಬರದೆ ಇದ್ದುದಕ್ಕಾಗಿಯೂ ಅವರನ್ನು ವಜಾ ಮಾಡಲಾಗಿತ್ತು.

ದೆಹಲಿಗೆ ಮುಖ್ಯ ಮಂತ್ರಿಗಳ ಪ್ರಯಾಣ

ಸ್ವಂ. ಮು ವರದಿಗಾರರಿಂದ] ಬೆಂಗಳೂರು ೬

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು, ಅರ್ಥ ಕಾರ್ಯದರ್ಶಿ ಶ್ರೀ ಎ. ವಿ. ಆರ್. ರಾವ್ ಮತ್ತು ಕೈಗಾರಿಕಾ ಡೈರೆಕ್ಟರ್, ಶ್ರೀ ಆ. ವಿ. ಗಣಪತಿ ಅಯ್ಯರ್‌ರವರೊಡನೆ ದೆಹಲಿಗೆ ಈ ದಿನ ವಿಮಾನದಲ್ಲಿ ಪ್ರಯಾಣ ಬೆಳೆಸಿದರು. ಅವರು ಅಲ್ಲಿಂದ ಅಲಹಾಬಾದು ಮತ್ತು ಕಾಶಿಗಳಿಗೆ ಹೋಗಿ ೧೬ ನೇ ತಾ|| ವಾಪಸು ಬರುವರು.

ರಾಜೇಂದ್ರ ಸಿಂಹಜಿಯವರಿಗೆ ಮೈಸೂರಿನ ಗೌರವ

ಭಾರತದ ಶ್ರೇಷ್ಠ ಸೇನಾನಿಯಾಗಿರುವ ಜ|| ರಾಜೇಂದ್ರ ಸಿಂಹಜಿಯವರ ಸಮ್ಮುಖದಲ್ಲಿ ಈ ದಿನ ೩ ಸಾವಿರ ಜಂಗೀ ಪಡೆ ಕವಾಯತು ನಡೆಯಿತು. ಬ್ರಿಗೇಡಿಯರ್ ಥಿಮ್ಮಯ್ಯರವರು ಅದರ ಮುಖಂಡತ್ವವನ್ನು ವಹಿಸಿದ್ದರು. ರಾಜೇಂದ್ರ ಸಿಂಹಜಿಯವರು ಗೌರವವನ್ನು ಸ್ವೀಕರಿಸಿದರು.

○ ಬೊಂಬಾಯಿ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಈ ಬೆಳಿಗ್ಗೆ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು.

ಪೌರಸಭಾ ನಿರ್ಣಯವನ್ನು ರದ್ದು ಮಾಡಿಸಲು ಸದಸ್ಯರ ದಾವಾ

ಬೆಂಗಳೂರಿನ ಪ್ರಥಮ ಸಬ್ ಜಡ್ಜ್ ಕೋರ್ಟಿನಲ್ಲಿ ಅಲ್ಲಿನ ಪೌರಸಭಾ ಸದಸ್ಯರಾದ ಶ್ರೀ ಕೆ. ಎಂ. ನಾಗಣ್ಣ ಮತ್ತು ಡಾ|| ಕೆ. ಆರ್. ಶ್ರೀಕಂಠೇಶ್ವರ್‌ರವರು ದಾವೆಯನ್ನು ಹೂಡಿ, ಹಾಲಿ ಪೌರಸಭಾ ಸದಸ್ಯರಾಗಿರುವ ಶ್ರೀ ವಿ. ಆರ್. ನಾಯ್ಡುರವರ ತಂದೆ ಶ್ರೀ ಆರ್. ವೀರಾಸ್ವಾಮಿಯವರಿಗೆ ಮಲ್ಲೇಶ್ವರ ಮತ್ತು ಶೇಷಾದ್ರಿಪುರ ಬಡಾವಣೆಗಳ ಮಧ್ಯೆ ೫೦ ಅಡಿ ಉದ್ದ ೬೦ ಅಡಿ ಅಗಲದ ನಿವೇಶನವೊಂದನ್ನು ಖುಷ್ ಖರೀದಿಗೆ ಪೌರಸಭೆಯು ಕೊಡಲು ಮಾಡಿರುವ ನಿರ್ಣಯವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ. ಪೌರಸಭಾ ಶಾಸನದ ಪ್ರಕಾರ ತಮಗೆ ನೇರವಾಗಿ ಸಂಬಂಧಪಟ್ಟ ಯಾವುದೇ ಪೌರಸಭೆಯ ವ್ಯವಹಾರದಲ್ಲೂ, ಯಾವ ಸದಸ್ಯನೂ ಭಾಗವಹಿಸಕೂಡದೆಂದು ನಿಯಮವಿದ್ದರೂ ಸದರಿ ಸದಸ್ಯರಾದ ಶ್ರೀ ವಿ. ಆರ್. ನಾಯ್ಡುರವರು ನಿವೇಶನವನ್ನು ಕೊಡಲು ತಮ್ಮ ಮತವನ್ನು ಚಲಾಯಿಸಿರುವರೆಂದು ಅರ್ಜಿದಾರರು ತಿಳಿಸಿರುತ್ತಾರೆ.

ಕಾಶ್ಮೀರದ ಅಧಿಪತಿಯ ಚುನಾವಣೆ ೧೪ ನೇ ತಾ||

ಕಾಶ್ಮೀರದ ರಾಜ್ಯಾಂಗ ಸಭೆಯು ಇದೇ ತಿಂಗಳು ೧೪ ನೇ ತಾ|| ಆ ಸಂಸ್ಥಾನದ ಅಧಿಪತಿಯನ್ನು ಚುನಾಯಿಸಲಿದೆ. ಈಗಿನ ರೀಜೆಂಟರಾದ ಯುವರಾಜ ಕರಣಸಿಂಗ್‌ರವರೇ ಆರಿಸಲ್ಪಡುವರೆಂದು ಹೇಳಲಾಗಿದೆ.

ಅಮೆರಿಕದ ಉಪಾಧ್ಯಕ್ಷರು

ಅಮೆರಿಕದ ಉಪಾಧ್ಯಕ್ಷತೆಗೆ ರಿಪಬ್ಲಿಕನ್ ಪಕ್ಷದ ರಿಚರ್ಡ್ ನಿಕ್ಸನ್ನರು ಆರಿಸಲ್ಪಟ್ಟಿರುವರು. ಅವರಿಗೆ ೩೯ ವರ್ಷ ವಯಸ್ಸು.

ಪಂಚಲಿಂಗ ದರ್ಶನಕ್ಕೆ ಮಹಾರಾಜರ ಭೇಟಿ

ಅಧಿಕಾರಿಗಳಿಗೆ ಕೆಲವು ಸಲಹೆಗಳು

ಹದಿನಾಲ್ಕು ವರ್ಷಗಳ ನಂತರ ಇದೇ ತಿಂಗಳು ೧೭ನೇ ತಾ|| ತಲಕಾಡಿನಲ್ಲಿ ಪಂಚಲಿಂಗ ದರ್ಶನವೆಂಬ ಅಪೂರ್ವವಾದ ಯಾತ್ರೆ ನಡೆಯಲಿದೆಯಷ್ಟೆ. ಪವಿತ್ರವಾದ ಮತ್ತು ಅಪೂರ್ವವಾದ ಈ ಸಮಯದಲ್ಲಿ ಅಲ್ಲಿಗೆ ಲಕ್ಷಾಂತರ ಜನ ಭಕ್ತರು ದೇವರ ದರ್ಶನಕ್ಕಾಗಿ ಬರಲಿರುವರು. ನಮ್ಮ ಶ್ರೀಮನ್ ಮಹಾರಾಜರವರೂ, ಅಲ್ಲಿಗೆ ದಯಮಾಡಿಸುವರೆಂಬ ವಾರ್ತೆಯು ಅತ್ಯಂತ ಸಂತೋಷಪ್ರದವಾದುದೇ ಸರಿ. ಪ್ರಭುಗಳು ತಮ್ಮ ದೈವಭಕ್ತಿ, ಧರ್ಮ ಶ್ರದ್ಧೆ ಮತ್ತು ಸದಾಚಾರ ಪ್ರವರ್ತನೆಗಳಲ್ಲಿ ಪ್ರಜಾ ವರ್ಗದವರಿಗೆ ಆದರ್ಶಪ್ರಾಯರಾಗಿ ನಡೆದುಕೊಳ್ಳುವುದು ಸಹಜವಾಗಿಯೇ ಇದೆ. ಅವರ ಆಗಮನದಿಂದ ಈ ಜಾತ್ರೆಗಾಗಿ ನಡೆಯುವ ಏರ್ಪಾಡುಗಳು ಹೆಚ್ಚು ಸುವ್ಯವಸ್ಥಿತವಾಗಿಯೂ, ಪರಿಷ್ಕಾರವಾಗಿಯೂ ಸಾಗಲೆಂದು ಭಕ್ತಾದಿಗಳೆಲ್ಲರೂ ಹಾರೈಸುವರು

ಮುಖ್ಯವಾಗಿ ಆ ದಿನ ಆ ಪುಣ್ಯ ಕ್ಷೇತ್ರಕ್ಕೆ ಹೋಗುವವರೆಲ್ಲರೂ ನಿರಾತಂಕವಾಗಿ ಭಗವಂತನ ದರ್ಶನವನ್ನು ಮಾಡಬೇಕೆಂಬ ಆಕಾಂಕ್ಷೆಯಿಂದ ಕೂಡಿರುತ್ತಾರೆ. ಬೇರೆ ಎಲ್ಲದಕ್ಕಿಂತಲೂ ಈ ವಿಷಯಕ್ಕೆ ಸಂಬಂಧಪಟ್ಟ ಪ್ರವರ್ತಕರೂ, ಅಧಿಕಾರಿ ವರ್ಗದವರೂ ವಿಶೇಷ ಗಮನ ಕೊಡುವುದು ಅಗತ್ಯ. ಲಕ್ಷಾಂತರ ಜನರು ಸೇರಿ ಒಂದೇ ಕಾಲದಲ್ಲಿ ದೇವರ ದರ್ಶನವನ್ನು ಮಾಡಲು ಹಾತೊರೆಯುವಾಗ, ಬಹಳ ನೂಕುನುಗ್ಗಲಿಗೆ ಅವಕಾಶವಿರುತ್ತದೆ. ಈ ವಿಚಾರದಲ್ಲಿ ಹಿಂದೆ ಯಾವಾಗಲೂ ಸರಿಯಾದ ವ್ಯವಸ್ಥೆ ಮಾಡಿರುವುದಿಲ್ಲ. ದಕ್ಷಿಣ ದೇಶದ ಇತರ ಅನೇಕ ಪುಣ್ಯ ಸ್ಥಳಗಳಲ್ಲಿ ಜಾತ್ರೆಗಳು ನಡೆಯುವಾಗ ಅಲ್ಲಿಗೆ ಬರಲಿರುವ ಇನ್ನೂ ಹೆಚ್ಚಿನ ಜನ ಸಂದಣಿಯನ್ನು ಒಂದು ವ್ಯವಸ್ಥಿತವಾದ ಪದ್ಧತಿ ಕ್ರಮದಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಸಾಲುಸಾಲಿಗೆ (ಕ್ಯೂ ಪದ್ಧತಿ ಪ್ರಕಾರ) ಬಿಟ್ಟು ಯಾರಿಗೂ ತೊಂದರೆಯಾಗದಂತೆಯೂ ಎಲ್ಲರಿಗೂ ದರ್ಶನವಾಗುವಂತೆಯೂ ಏರ್ಪಡಿಸಲಾಗುತ್ತದೆ. ಈ ಏರ್ಪಾಡನ್ನು ಇಲ್ಲಿಯೂ ಜಾರಿಗೆ ತರುವುದು ಅಗತ್ಯ.

ಮುಖ್ಯವಾಗಿ ಶ್ರೀಮನ್ಮಹಾರಾಜರೂ, ರಾಜ ಪರಿವಾರದವರೂ ದೇವರ ದರ್ಶನಕ್ಕೆ ಬಂದಾಗ ಅಧಿಕಾರಿ ವರ್ಗದವರು ಇಲ್ಲದ ಬಿಡ ಬರಗಳನ್ನೂ ಅನ್ಯ ಆತಂಕಗಳನ್ನೂ ಹಾಕದಂತೆ ನೋಡಿಕೊಳ್ಳುವುದು ಅತ್ಯವಶ್ಯಕ. ಪ್ರಭುಗಳೂ, ಅವರ ಕುಟುಂಬದವರೂ ಭಗವಂತನ ದರ್ಶನಕ್ಕೆ ಬಂದು ಸೇವೆ ಮಾಡುವುದರಲ್ಲಿ ಪ್ರಜೆಗಳೆಲ್ಲರೂ ಅತ್ಯಂತ ಸಂತೋಷ ಪಡುವುದಲ್ಲದೆ, ಅವರುಗಳು ಬಂದ ಕಾಲಕ್ಕೆ ಎಲ್ಲರೂ ಸಂಪೂರ್ಣವಾಗಿ ಸಹಕರಿಸುವುದರಲ್ಲಿ ಸಂದೇಹವಿಲ್ಲ. ಆದರೆ ಈ ಕಾರಣದಿಂದ-ಭಕ್ತಾದಿಗಳನ್ನು ಗಂಟೆಗಟ್ಟಲೆ ಕಾಯಿಸಿ ಅವರ ಸೇವೆಗೆ ಆತಂಕ ಮಾಡಿ ಅಧಿಕಾರಿ ವರ್ಗದವರು ಮಹಾಜನರಿಗೆ ಅತ್ಯಂತ ಅಸಮಾಧಾನವನ್ನೂ ಅನಾನುಕೂಲವನ್ನೂ ಉಂಟುಮಾಡುವ ನಿದರ್ಶನಗಳು ಹೇರಳವಾಗಿವೆ

ಕಳೆದ ಪಂಚಲಿಂಗ ದರ್ಶನಕ್ಕೆ ದಿವಂಗತರಾದ ಮಹಾರಾಜರು ಬರುವರೆಂಬ ನಿರೀಕ್ಷಣೆ ಇದ್ದು ಅವರು ಬಾರದೆ ಕಡೆಗೆ ಆಗ ರಾಜಕುಮಾರರಾಗಿದ್ದ ಇಂದಿನ ಮಹಾರಾಜರು ದಯಮಾಡಿಸಿದ್ದರು. ಆ ಸಮಯದಲ್ಲಿ ಮೇಲೆ ಕಂಡಂತೆ ಭಕ್ತಾದಿಗಳು ಅನವಶ್ಯಕವಾಗಿ ಬಹಳ ಕಾಲ ಕಾದು ತೊಂದರೆ ಪಡಬೇಕಾಯಿತು. ಇದರ ಮೇಲೆ ವಿಶೇಷವಾದ ಟೀಕೆಗಳೂ ಬಂದವು. ಯಾತ್ರೆಗೆ ಬಂದಿರುವ ಭಕ್ತರಿಗೆ ಈ ರೀತಿ ಅನಾನುಕೂಲ ಉಂಟುಮಾಡಿ ಅವರ ಅಸಮಾಧಾನಕ್ಕೆ ಪಾತ್ರರಾಗುವುದು ಯಾರಿಗೂ ಸರಿಯಲ್ಲ

ಇದುವರೆಗೆ ಎಂದೂ ಇಲ್ಲದ ಎರಡಣೆ ಯಾತ್ರಿಕರ ತೆರಿಗೆಯನ್ನು ಬೇರೆ ಪ್ರಚಾರಿ ಹಾಕಲಾಗಿರುವುದು ಇದೊಂದು ತಲೆಗಂದಾಯದಂತೆ ಕಂಡುಬರುವುದಲ್ಲದೆ ಅಲ್ಲಿಗೆ ಬರುವ ಜನರು ಇದಕ್ಕಾಗಿ ದೊರೆಯುವ ವಿಶೇಷ ಪ್ರತಿಫಲವೇನೆಂಬುವನ್ನು ಕುತೂಹಲದಿಂದ ನಿರೀಕ್ಷಿಸುತ್ತಾರೆ

ಶ್ರೀಮನ್ಮಹಾರಾಜರವರೇ ಸ್ವತಃ ಈ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು, ಅಧಿಕಾರಿಗಳಿಗೆ ತಕ್ಕ ಸಲಹೆಗಳನ್ನಿತ್ತು ಪ್ರಜೆಗಳಿಗೆ ಯಾವ ತೊಂದರೆಯೂ ಆಗದೆ ಸಮಸ್ತ ಸೌಲಭ್ಯಗಳೂ ದೊರೆಯುವಂತೆ ಮಾಡಿ, ಈ ಪುಣ್ಯ ಕ್ಷೇತ್ರದಲ್ಲಿ ಇಂತಹ ಪವಿತ್ರ ಸಮಯದಲ್ಲಿ ಭಕ್ತಕೋಟಿಯೊಡನೆ ತಾವೂ ಬೆರೆತು ತಮ್ಮ ಪ್ರಜಾವಾತ್ಸಲ್ಯದ ಆದರ್ಶವನ್ನು ಬೆಳಗಲೆಂದು ಹಾರೈಸೋಣ

—ಯಾತ್ರಿಕ

Edited, Printed and Published by A R Nagarajan at Sadhvi Press, D Subbiah Road, Mysore

ಐಸೆನ್ ಹೋವರರ ಮೇಲೆ ಗಡಿಯಾರ ಬಿದ್ದು ಪೆಟ್ಟು

ಈಗ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿರುವ ಐಸೆನ್ ಹೋವರರ ತಲೆ ಮೇಲೆ ಗಡಿಯಾರವೊಂದು ಬಿದ್ದು ಅವರಿಗೆ ಸ್ವಲ್ಪ ಗಾಯವಾಗಿದೆ. ಅವರ ಫೋಟೋ ತೆಗೆದುಕೊಳ್ಳುವ ಸಮಯದಲ್ಲಿ ಈ ಘಟನೆಯು ಸಂಭವಿಸಿತೆಂದು ಹೇಳಲಾಗಿದೆ

ಚಾಮುಂಡೇಶ್ವರಿ ಟಾಕೀಸ್

7-11-52ರಿಂದ ಅಮೋಘ 2 ನೇ ವಾರ

ಪರಾಶಕ್ತಿ

(ತಮಿಳು)

ಜೂನಿಯರ್ ಶ್ರೀರಂಜನಿ ಗಣೇಶ್, ಪಂಢರಿಬಾಯಿ ಮುಂತಾದವರು

SRI GAYATHRI TALKIES

Daily 2 Shows FROM 7-11-52

The Company that made Quo Vadis Brings to the World another Spectacular & Romantic Triumph

MGM Presents Rafael Sabatini's

'SCARAMOUCHE'

Colour by Technicolor

Stewart Granger and Eleanor Parker

Special Matinee On FRIDAY

Complimentaries and Press Passes suspended for this Picture

Morning Shows on 8th & 9th

20th Century's

THREE CAME HOME

ತಲಕಾಡು ಮಹಾತ್ಮೆ

ಮತ್ತು

ಪಂಚಲಿಂಗ ದರ್ಶನ ಯಾತ್ರೆ

— ಲೇಖಕರು —

ಬಿ. ಆರ್. ಸೀತಾರಾಮ ಶಾಸ್ತ್ರಿ

ಬೆಲೆ 0-೬-0

ಮಾರಾಟಗಾರರಿಗೆ ಉತ್ತಮ ಕಮಿಷನ್ ಕೊಡಲಾಗುತ್ತೆ

ಪ್ರತಿಗಳು ದೊರೆಯುವ ಸ್ಥಳ —

ಬಿ. ಆರ್. ಸೀತಾರಾಮ ಶಾಸ್ತ್ರಿ, ತಲಕಾಡು ಟಿ. ನರಸೀಪುರ ತಾ|| ಮತ್ತು ಸಾಧ್ವಿ ಆಫೀಸ್, ಮೈಸೂರು

ಅಣುಬಾಂಬು ವಿಮಾನಗಳಿಗೆ ೪೮೦೦ ಕೋಟಿ ರೂ

ಅಣು ಬಾಂಬನ್ನು ಹಾಕುವ ವಿಮಾನಗಳಿಗಾಗಿ ಅಮೆರಿಕವು ಒಟ್ಟು ೪೮೦೦ ಕೋಟಿ ರೂ ಗಳನ್ನು ವೆಚ್ಚಮಾಡಲಿರುವುದೆಂದೂ, ಒಂದೇ ಒಂದು ವಿಧವಾದ ಅಸ್ತ್ರಕ್ಕಾಗಿ ಒಂದು ದೇಶವು ಇಷ್ಟು ಅಗಾಧವಾಗಿ ವೆಚ್ಚಮಾಡುವುದು ಇದೇ ಮೊದಲೆಂದೂ ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎ. ವಿ. [illegible] ಮುಖವೀಣೆ ಮಧ್ಯಾಹ್ನ ೧-೧೫ [illegible] ೨ ನಿಮ್ಮ ಮೆಚ್ಚಿನ ಕಲಾವಿದರು, ಸಂಜೆ [illegible] ಮತ್ತು ೬-೩೦ ರೆಕಾರ್ಡು ಕೃಷ್ಣಮೂರ್ತಿ ಸಂಗೀತ ೬-೧೫ ಗಾನವಿಹಾರ ಗೀತ ನೂಲು, ೯-೧೫ ಜನಪದ ಗೀತೆಗಳು ೯-೩೦ ಸೌಭಾಗ್ಯ ನಕ್ಷತ್ರ-ಕನ್ನಡದಲ್ಲಿ ನಾಟಕ

ನ್ಯೂ ಕೃಷ್ಣ ಪ್ರಕಾಶ್ ಮಾಲೀಕತ್ವ

ಮೈಸೂರು ಸಿಟಿ ರಣಜಿತ್ ಟಾಕೀಸ್ ಎದುರು ನ್ಯೂ ಕೃಷ್ಣ ಪ್ರಕಾಶ್ ಹೊಟೇಲ್ ಅದರ ಫರ್ನಿಚರ್, ಪಾತ್ರೆ ಸಾಮಾನುಗಳ ವಸ್ತು ಲೈಸೆನ್ಸ್ ಸಹಾ ನನ್ನದಾಗಿರುತ್ತೆ. ನನ್ನ ದೇಹಸ್ಥಿತಿ ಸರಿಯಿಲ್ಲದಿದ್ದುದರಿಂದ ಹೊಟೇಲ್ ಮ್ಯಾನೇಜ್‌ಮೆಂಟನ್ನು ಮ|| ರಾ|| ವೆಂಕಟರಮಣಾಚಾರಯರು ಉರುಫ್ ಬಾಬಾಚಾರ್ಯರು ಮತ್ತು ಲಕ್ಷ್ಮೀನಾರಾಯಣಾಚಾರ್ಯರು ಉರುಫ್ ಎಚ್ಚಪ್ಪರಾಯರು ಇವರುಗಳಿಗೆ ವಹಿಸಿಕೊಟ್ಟಿದ್ದೆ. ಇವರುಗಳಿಂದ ೩೪೫೦ ರೂ ಗಳ ನವೆಂಬರ್ ೮ ನೇ ತಾರೀಖು ವರೆಗೆ ಅಸಲು ಮತ್ತು ಬಡ್ಡಿ ಸಹಾ ಬರಬೇಕಾಗಿರುತ್ತೆ. ಇವರುಗಳನ್ನು ರೂಪಾಯಿ ಕೇಳಿದ್ದಲ್ಲಿ ಬನಾವಟ್ಟು ಚಿತಾವಣೆಗಳನ್ನೆಲ್ಲಾ ಮಾಡಿಕೊಂಡು ಮೇಲ್ಕಂಡ ಅಣ್ಣ ತಮ್ಮಂದಿರು ಮತ್ತು ಇವರುಗಳ ಸ್ನೇಹಿತರು ಸಹಾ ಉಡಾಫೆ ಮಾಡುತ್ತಾ ಇರುತ್ತಾರೆ. ಈ ರೂಪಾಯಿಗಳು ಪರಮಾತ್ಮ ಸಾಕ್ಷಿಯಾಗಿ ಸತ್ಯವಾಗಿ ಇರುವುದರಿಂದ ಈ ರೂಪಾಯಿ ವಸೂಲಿ ಆಗೋವರೆಗೂ ಅಥವಾ ಇಲ್ಲವಾಗಿ ಹೋಟೇಲ್ ಬಿಟ್ಟು ಕೊಡುವ ವರೆಗೆ ನನ್ನ ಮಕ್ಕಳು ಆದಿಯಾಗಿ ನಾನು ಹೋಟೇಲ್ ಮುಂದೆ ಸತ್ಯಾಗ್ರಹ ಮಾಡಬೇಕೆಂದು ನಿಶ್ಚಯಿಸಿರುತ್ತೇನೆ. ಮಹನೀಯರು ಮತ್ತು ನನ್ನ ಬಂಧು ಬಾಂಧವರು ನೆರವೇರಿಸಿ ಕೊಡಬೇಕಾಗಿ ಪ್ರಾರ್ಥನೆ

ಯು. ಲಕ್ಷ್ಮೀನಾರಾಯಣಾಚಾರ್
ಜಲತರಂಗ್ ವಿದ್ವಾನ್,
ಹಳೇ ಸಂತೇಪೇಟೆ ಮೈಸೂರು

ಒಲಂಪಿಯಾ ✻ ಅಮೋಘ ಪ್ರಾರಂಭ 6-11-52 ರಿಂದ

ಪ್ರತಿ ದಿನ ಮೂರು ಆಟಗಳು

ದೇಶಕ್ಕಾಗಿ ಪ್ರಾಣ ನೀಗಿದ ದೇಶಭಕ್ತರ ಜೀವನವನ್ನು ನಿರೂಪಿಸುವ

ಕಿದಾರ್ ಶರ್ಮರವರ ಉತ್ತಮ ಹಿಂದಿ ಚಿತ್ರ

★ **ಶೋಕಿಯಾರ್** ★

ಪಾತ್ರ –ಸುರಯ್ಯಾ, ಪ್ರೇಂ ನಾಥ್ ಜೀವನ್ ಮತ್ತು ಕಮಲೇಶ ಕುಮಾರಿ

೧೯ ನೇ ಶತಮಾನದ ಭಾರತದ ಚರಿತ್ರೆಯ ಕೆಲವು ಅಂಶಗಳನ್ನು

ಸೂಚಿಸುವ ಉತ್ತಮ ಚಿತ್ರ

ಬರಲಿರುವ ಪ್ರದರ್ಶನ — ಫಿಲಿಮಿಸ್ತಾನರವರ **ಸಿಂಧೂರ್**

ಪ್ರಭುದೇವಾ ಟಾಕೀಸ್

(ದಿನವಹಿ 3 ಆಟಗಳು)

7-11-52 ರಿಂದ :: ಅಮೋಘ 4 ನೇ ವಾ

★ **ಬಡರೈತ** ★

(ತಮಿಳು)

(ಏಳೆಯ ಉಳವನ್)

ಪಾತ್ರ — ಅಂಜಲಿದೇವಿ, ಕಸ್ತೂರಿ ಶ್ರೀರಾಮಮೂರ್ತಿ, ಲಿಂಗಮೂರ್ತಿ

ಟೆಲಿಫೋನ್ ನಂ 792 ||ವಂದೇ ಮಾತರಂ|| ಒಂದಿತ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೯-೧೧-೧೯೫೬ [ಸಂಚಿಕೆ ೮೫

ಸಿಂಹಳ ಸರ್ಕಾರಕ್ಕೆ ಭಾರತದ ಪ್ರತಿಭಟನೆ

ಆಸ್ತಿ ಮೇಲಿನ ತೆರಿಗೆ ಮಸೂದೆ

ರಾಷ್ಟ್ರದಲ್ಲಿ ಸಂಪತ್ತನ್ನು ಸಮಾನ ...ದ ರೀತಿಯಲ್ಲಿ ಹಂಚುವ ಉದ್ದೇಶ ...ಂದ ಕೇಂದ್ರ ಸರ್ಕಾರದವರು ಪಾರ್ಲಿ ...ಮೆಂಟಿನಲ್ಲಿ ಆಸ್ತಿಗಳ ಮೇಲಿನ ತೆರಿಗೆ ...ಮಸೂದೆಯನ್ನು ಮಂಡಿಸಿರುವರು ...ದೊಂದು ಪ್ರಗತಿಪರ ಮಸೂದೆಯೆಂ ...ದು ಹಣಕಾಸಿನ ಮಂತ್ರಿ ಸಿ ಡಿ ದೇಶ ...ಮುಖ್‌ರವರು ತಿಳಿಸಿರುತ್ತಾರೆ

...ಕ್ಷಮೆ ನಿರಾಕರಿಸಿದ ಮಹಿಳೆ ...ಮೇಲೆ ಮತ್ತೆ ಮೊಕದ್ದಮೆ

...ವ ದಿಲ್ಲಿಸಿನ ಆಲವಂಡಾರ್ ಎಂಬ ...ವ್ಯಕ್ತನ ಕೊಲೆ ಸಂಬಂಧವಾಗಿ ಪತ್ರಿಕಾ ...ಸಂಪಾದಕ ಮೊನಪ್ಪರ ಮೇಲೆ ಪೊಲೀಸ ...ರು ಹೂಡಿರುವ ಮೊಕದ್ದಮೆಯಲ್ಲಿ ಆ ...ಪಾದಿತರಾಗಿದ್ದ ಅವರ ಪತ್ನಿ ದೇವಕಿ ...ಅಮ್ಮಾಳ್‌ರವರು ತಪ್ಪೊಪ್ಪಿಕೆಯನ್ನು ಅಪ್ರೂವರಾಗಿ ಕೊಡಲು ...ಅವರಿಗೆ ಕೊಟ್ಟ ಕ್ಷಮೆಯ ...ನ್ನು ...ಕೆಯು ನಿರಾಕರಿಸಿರುವರು. ಈಗ ...ಪೊಲೀಸರು ಈ ಪ್ರಕರಣದಲ್ಲಿ ಆಕೆಯ ...ಮೇಲೆ ಪ್ರತ್ಯೇಕ ಮೊಕದ್ದಮೆ ಹೂಡಲಿ ...ರುವರು.

ತರುಣಿಯನ್ನು ಗುಂಡಿಟ್ಟು ತಾನೂ ಹೊಡೆದುಕೊಂಡ

...ಬೆಂಗಳೂರಿನ ಬಳಿ ಅಚರಪಾಳ್ಯಂ ಎಂ ...ಬಲ್ಲಿರುವ ಬೋರ್ಡ್ ಹೈಸ್ಕೂಲಿನ ಉ ...ಪಾಧ್ಯಾಯರೊಬ್ಬರ ಮಗಳು ಸುಶೀ ...ಲ ಎಂಬ ೧೫ ವರ್ಷದ ಬಾಲಕಿಯು ...ನಿನ್ನೆ ಮುಂಜಾನೆ ತನ್ನ ಮನೆಯ ಹೆ ...ಬ್ಬಾಗಿಲಿಗೆ ಬಂದಾಗ, ಅದೇ ಊರಿನ ರಾ ...ಮಲಿಂಗಂ ಎಂಬ ೨೫ ವರ್ಷದ ತರುಣ ...ನು ...ಯ ಮೇಲೆ ಗುಂಡು ಹಾರಿಸಿ, ...ಮನೆಗೆ ಹೋಗಿ ತಾನೂ ಗುಂಡು ಹೊ ...ಡೆದುಕೊಂಡು ಮೃತಪಟ್ಟನೆಂದೂ, ಯು ...ವತಿಯು ಆಸ್ಪತ್ರೆಯಲ್ಲಿ ಸತ್ತು ಹೋದ ...ಳೆಂದೂ ವರದಿಯಾಗಿದೆ

...ಸುಳ್ಳು ಪ್ರಶಸ್ತಿ ಪತ್ರಕೊಟ್ಟು ಹೆಡ್ಮಾಸ್ಟರು ಪರಾರಿ

ಗುಲ್ಬರ್ಗಾ ಜಿಲ್ಲೆಯ ಪ್ರೌಢ ಶಾಲೆ ...ಯೊಂದರ ಮುಖ್ಯೋಪಾಧ್ಯಾಯರಾದ ...ಕೆ ಪಿ ರಾಬುಲ್ ಎಂಬುವರು ಹಣ ...ಪಡೆದು ಎಸ್ ಎಸ್ ಎಲ್ ಸಿ ವಿ ...ದ್ಯಾರ್ಥಿಗಳಿಗೆ ಸುಳ್ಳು ಪ್ರಶಸ್ತಿ ಪತ್ರಗಳ ...ನ್ನು ಕೊಟ್ಟು ಪರಾರಿಯಾಗಿರುವರೆಂದು ...ವರದಿಯಾಗಿದೆ. ಈ ಸುಳ್ಳು ಪ್ರಶಸ್ತಿಗಳ ...ನ್ನು ಪಡೆದ ಅನೇಕರು ಸರ್ಕಾರಿ ನೌಕ ...ರಿಗಳಿಗಾಗಲೇ ಸೇರಿರುವರು

ಕಾಂಗ್ರೆಸ್ ಅಧಿವೇಶನದ ...ಸ್ವಾಗತಾಧ್ಯಕ್ಷರಾಗಿ ತೀರ್ಥರು

...ಅಮೃತಸರದಲ್ಲಿ ನಡೆಯಲಿರುವ ...ಕಾಂಗ್ರೆಸ್ ಅಧಿವೇಶನದ ಸ್ವಾಗತ ಸ ...ಮಿತಿಯ ಅಧ್ಯಕ್ಷರಾಗಿ ರಮಾನಂದ ತೀ ...ರ್ಥರನ್ನು ಆರಿಸಲಾಗಿದೆ

...ಚುನಾವಣೆಯಲ್ಲಿ ಅವಿರೋಧ ಆಯ್ಕೆ

...ಕಾಂಗ್ರೆಸ್ ಪ್ರತಿನಿಧಿ ಸ್ಥಾನಕ್ಕೆ ಗುಂ ...ಡ್ಲುಪೇಟೆ ತಾಲ್ಲೂಕಿನಿಂದ ಶ್ರೀ ಹೆಚ್ ...ಬಿ ಸಿದ್ದಪ್ಪನವರು ಉಮೇದುವಾರಿಕೆ ...ಯನ್ನು ವಾಪಸು ತೆಗೆದುಕೊಂಡಿರುತ್ತಾ ...ರೆ ...ಬಿ ದೊಡ್ಡಯ್ಯನವರು ಅವಿ ...ರೋಧವಾಗಿ ಆರಿಸಿ ಬಂದಿರುವರು

ಐಸೆನ್‌ಹೋವರರಿಗೆ ೩ ಕೋಟಿ ೧೦ ಲಕ್ಷ ಓಟುಗಳು

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಆರಿಸಿ ಬಂದಿರುವ ಡಿ|| ಐಸೆನ್‌ಹೋವರರಿಗೆ ೩ ಕೋಟಿ ೧೦ ಲಕ್ಷಕ್ಕೂ ಹೆಚ್ಚಿನ ಓಟುಗಳು ಬಂದಿವೆ ಪ್ರತಿಸ್ಪರ್ಧಿಗೆ ೨|| ಕೋಟಿಯಷ್ಟು ಬಂದಿದ್ದುವು ೨೦ ವರ್ಷಗಳ ನಂತರ ಅಧಿಕಾರಕ್ಕೆ ಬಂದ ರಿಪಬ್ಲಿಕನ್ ಪಕ್ಷದವರಿಗೆ ಸೆನೆಟ್ ಮತ್ತು ಪ್ರಜಾಪ್ರತಿನಿಧಿ ಸಭೆಗಳ ಬಹುಮತವು ದೊರೆತಿದೆ

೬ ದಿನಗಳಿಂದ ಮಗುವಿನ ಹೆಣದ ಕಾವಲು

ಕೃಷ್ಣರಾಜಪೇಟೆ ಬಳಿ ಮಾರಗೋಡನಹಳ್ಳಿ ಗ್ರಾಮದಲ್ಲಿ ೬ ದಿನಗಳ ಹಿಂದೆ ಮೃತಪಟ್ಟ ಮಗುವೊಂದನ್ನು ಇಟ್ಟುಕೊಂಡು ಹೆಂಗಸೊಬ್ಬಳು ಕಾಯುತ್ತಿರುವಳೆಂದು ವರದಿಯಾಗಿದೆ ಮಗುವನ್ನು ಗಂಡನು ಕೊಲೆ ಮಾಡಿರುವುದಾಗಿ ಆಕೆಯು ಪೊಲೀಸರಿಗೆ ದೂರು ಇತ್ತು, ಶವವು ಪೊಲೀಸ್ ನಿರೀಕ್ಷೆಯಲ್ಲಿ ಇರುವಳೆಂದು ಹೇಳಲಾಗಿದೆ

ಪಂಚಲಿಂಗ ದರ್ಶನಕ್ಕಾಗಿ ಹೋಗುವವರಿಗೆ ಇನಾಕ್ಯುಲೇಷನ್

ತಲಕಾಡಿನಲ್ಲಿ ಇದೇ ೧೬ನೇ ತಾ|| ನಡೆಯುವ ಪಂಚಲಿಂಗ ದರ್ಶನಕ್ಕಾಗಿ ಹೋಗುವ ಯಾತ್ರಾರ್ಥಿಗಳು, ತಲಕಾಡಿನೊಳಗೆ ಪ್ರವೇಶಿಸುವ ಮುನ್ನ ಕಾಲರಾ ವ್ಯಾಧಿಯ ನಿರೋಧದ ಇನಾಕ್ಯುಲೇಷನ್ ಮಾಡಿಸಿಕೊಂಡ ಬಗ್ಗೆ ಸರ್ಟಿಫಿಕೇಟುಗಳನ್ನು ಹೊಂದಿರಬೇಕೆಂದೂ, ಅವುಗಳನ್ನು ಪಡೆಯದಿರುವವರನ್ನು ಆ ಪ್ರದೇಶದೊಳಗೆ ಬಿಡಲು ನಿಷೇಧಿಸಲಾಗುವುದೆಂದೂ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿರುತ್ತಾರೆ

ಮೈಸೂರು ತಾಲ್ಲೂಕು ಉಮೇದುವಾರರ ಅರ್ಜಿ ವಾಪಸು

ಮೈಸೂರು ತಾಲ್ಲೂಕಿನ ಕಾಂಗ್ರೆಸ್ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸಿದ್ದ ವರ ಪೈಕಿ ಶ್ರೀ ಶಿವನಂಜೇಗೌಡ ಮತ್ತು ಬಸವೇಗೌಡ ಇವರುಗಳು ಉಮೇದುವಾರಿಕೆಗಳನ್ನು ಹಿಂದಕ್ಕೆ ಪಡೆದಿರುವರು ಅಲ್ಲಿ ಈಗ ಉಳಿದವರಾದ ಶ್ರೀಗಳು ಹೆಚ್ ಸಿ ದಾಸಪ್ಪ ಮತ್ತು ಕೆ ಪುಟ್ಟಸ್ವಾಮಿಯವರಲ್ಲಿ ಸ್ಪರ್ಧೆ ನಡೆಯುವುದು

ಸಿಂಹಳಕ್ಕೆ ಭಾರತದ ಪ್ರತಿಭಟನೆ

೧೯೫೪ರ ಭಾರತ ಮತ್ತು ಪಾಕಿಸ್ತಾನ ನಾಗರಿಕರಿಗೆ ಸಂಬಧಿಸಿದ ಶಾಸನವನ್ನು ತಿದ್ದುಪಡಿ ಮಾಡಲು ಸಿಂಹಳದ ಸರ್ಕಾರದವರು ನಿರ್ಧರಿಸಿರುವುದಕ್ಕಾಗಿ ಭಾರತ ಸರ್ಕಾರದವರು ಪ್ರತಿಭಟನೆಯನ್ನು ಸೂಚಿಸಿರುತ್ತಾರೆ ಭಾರತೀಯ ಬುಡಕಟ್ಟಿಗೆ ಸೇರಿದ ಜನರ ಮೇಲೆ ಇನ್ನು ಹೆಚ್ಚಿನ ನಿರ್ಬಂಧವನ್ನು ಹಾಕಲು ಅಲ್ಲಿನ ಸರ್ಕಾರದವರು ತೀರ್ಮಾನಿಸಿರುವರು ಈ ವಿಷಯವನ್ನು ಸ್ನೇಹಪೂರ್ವಕವಾಗಿ ಪುನರ್ವಿಮರ್ಶೆ ಮಾಡುವಂತೆ ಭಾರತ ಸರ್ಕಾರದವರು ಸಿಂಹಳವನ್ನು ಕೋರಿರುತ್ತಾರೆ

ಅಧ್ಯಕ್ಷ ಟ್ರೂಮನ್ನರ ವಿಫಲ ಚುನಾವಣಾ ಪ್ರಚಾರ

ಡೆಮೊಕ್ರಾಟ್ ಪಕ್ಷದ ಉಮೇದುವಾರರಾದ ಗೌರ್ನರ್ ಸ್ಟೀವನ್ಸನ್ನರ ಪರವಾಗಿ ಚುನಾವಣೆ ಪ್ರಚಾರಕ್ಕಾಗಿ, ಅಧ್ಯಕ್ಷ ಟ್ರೂಮನ್ನರು ೧೮ ಸಾವಿರ ಮೈಲಿ ಸಂಚರಿಸಿ, ೩೧, ೨೧೩ ಪ್ರಚಾರ ಭಾಷಣಗಳನ್ನು ಮಾಡಿದ್ದರು

ಅಧಿಕಾರಿಗಳ ವೇತನದಲ್ಲಿ ಮೋಸ

ಮದ್ರಾಸಿನಲ್ಲಿ ಹೆಚ್ಚು ಸಂಬಳವನ್ನು ಪಡೆಯುವ ಅಧಿಕಾರಿಗಳ ಸಂಬಳದಲ್ಲಿ ಮೋಸ ಮಾಡುವ ವಿಷಯವು ಅಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ಹಣಕಾಸಿನ ಮಂತ್ರಿ ಸುಬ್ರಹ್ಮಣ್ಯಂರವರು ತಿಳಿಸಿರುವರು

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ಶ್ರೀ ಕಪಿಲ ಮಲ್ಲಿಕಾರ್ಜುನಸ್ವಾಮಿ ಮಠದಲ್ಲಿ ಕೊಣನೂರು ಶ್ರೀ ಸೀತಾರಾಮ ಶಾಸ್ತ್ರಿಗಳವರಿಂದ ರೇಣುಕ ವಿಜಯ ಎಂಬ ಹರಿಕಥೆಯನ್ನು ಈ ರಾತ್ರಿ ೯ ಗಂಟೆಗೆ ಮೈಸೂರು ವೀರಶೈವ ಯುವಕ ಸಂಘದವರು ಏರ್ಪಡಿಸಿರುತ್ತಾರೆ

○ ಕೊಡಗಿಗೆ ಮೈಸೂರು ಹೈಕೋರ್ಟ್ ವ್ಯಾಪ್ತಿಯನ್ನು ವಿಸ್ತರಿಸುವ ಬಗ್ಗೆ ಮೊನ್ನೆ ಪಾರ್ಲಿಮೆಂಟಿನಲ್ಲಿ ಮಸೂದೆಯೊಂದನ್ನು ಮಂಡಿಸಲಾಯಿತು ಇದುವರೆ ಮದ್ರಾಸು ಹೈಕೋರ್ಟಿಗೆ ಅದು ಒಳಪಟ್ಟಿತ್ತು

ರಾಜೂ ಅಪೀಲಿನ ವಜಾ

ವಿಷಪ್ರಾಶನ ಮೊಕದ್ದಮೆಯಲ್ಲಿ ಬೊಂಬಾಯಿ ಕೋರ್ಟಿನ ತೀರ್ಪು

ವಿಷಪ್ರಾಶನ ಮೊಕದ್ದಮೆಯಲ್ಲಿ ಶ್ರೀ ಎಲ್ ಎಸ್ ರಾಜುರವರು ಹೂಡಿದ್ದ ಅಪೀಲನ್ನು ಬೊಂಬಾಯಿಯ ಶ್ರೇಷ್ಠ ನ್ಯಾಯಾಧೀಶರಾದ ಎಂ ಸಿ ಚಾಗ್ಲಾ ಮತ್ತು ಜಸ್ಟಿಸ್ ದೀಕ್ಷಿತ್‌ರವರು ನೆನ್ನೆ ವಜಾ ಮಾಡಿ, ಸೆಷನ್ಸ್ ಕೋರ್ಟಿನವರು ಕೊಟ್ಟಿದ್ದ ಶಿಕ್ಷೆಯನ್ನು ಖಾಯಂ ಮಾಡಿದರು ಡಾ ಸ ಪ್ಪ ನಾಯ್ಡು ಮತ್ತು ಅಗ್ನೆಸ್ಸಳ ಅಪೀಲನ್ನು ವಜಾ ಮಾಡಲಾಗಿದೆ ಅಪರಾಧವು ಗುರುತರವಾದುದೆಂದೂ, ಆದ್ದರಿಂದ ವೃದ್ಧೆಯಾದ ಅಗ್ನೆಸ್ಸಳ ಕ್ಷಮಾ ಪ್ರಾರ್ಥನೆಯನ್ನು ಪುರಸ್ಕರಿಸಲು ಸಾಧ್ಯವಿಲ್ಲವೆಂದೂ ನ್ಯಾಯಾಧೀಶರು ತಿಳಿಸಿರುವರು ಆಕೆಯು ತನ್ನ ೧೧ ಮಕ್ಕಳನ್ನೂ ಗಂಡನನ್ನೂ ಸಾಕಬೇಕಾಗಿರುವುದರಿಂದ ಬಿಡುಗಡೆಗಾಗಿ ಪ್ರಾರ್ಥಿಸಿದಾಗ ದೀರ್ಘವಾದ ತಮ್ಮ ತೀರ್ಪಿನಲ್ಲಿ ಶ್ರೇಷ್ಠ ನ್ಯಾಯಾಧೀಶರು ಈ ರೀತಿ ತಿಳಿಸಿದರು

ಮೋದಪ್ಪನವರಿಗೆ ವಿಷಪ್ರಾಶನದ ಪ್ರಯತ್ನದ ಕಾರ್ಯದಲ್ಲಿ ರಾಜುರವರು ಜಾಣರಾಗಿದ್ದರೂ ಅವರಿಗೆ ಶಿಕ್ಷೆಯು ಬಹು ಕನಿಕರದಿಂದ ಕೊಡಲ್ಪಟ್ಟಿದೆ ಅಗ್ನೆಸ್ಸಳ ಮೇಲಿನ ಅಪರಾಧವು ರುಜುವಾತಾದ ನಂತರವೇ ರಾಜು ಮತ್ತು ದಾಸಪ್ಪನವರ ಅಪರಾಧವನ್ನು ರುಜುವಾತು ಮಾಡಿಕೊಡಬೇಕಾಗಿದೆ ಅಗ್ನೆಸ್ಸಳ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ಸ್ವಲ್ಪ ಅಂಸಬದ್ಧಗಳಿದ್ದರೂ ಅದು ನಿಜವಾಗಿದೆ

ರಾಜು ಅಂತಹ ಪ್ರಬಲ ವೃಂದ ಮತ್ತು ಸಾರ್ವಜನಿಕರ ಜೀವನದಲ್ಲಿ ಅಂತಸ್ತು ಹೊಂದಿರುವವರು ಮೈಸೂರು ಸಂಸ್ಥಾನದ ನ್ಯಾಯಾಸ್ಥಾನಗಳ ಮುಖ್ಯಸ್ಥರನ್ನು ಕೊಲ್ಲಲು ಪ್ರಯತ್ನಿಸಿದರೆ, ಸಾಮಾನ್ಯ ಮನುಷ್ಯನಿಗಿಂತಲೂ ಅವರಿಗೆ ಇನ್ನೂ ಉಗ್ರವಾದ ಶಿಕ್ಷೆ ವಿಧಿಸಬೇಕಾದುದು ಅಗತ್ಯ ರಾಜುರವರು ಮೋದಪ್ಪನವರನ್ನು ಕೊಲ್ಲಲು ತನ್ನ ಕೈಲಾದುದೆಲ್ಲವನ್ನೂ ಮಾಡಿದ್ದರು

ಅವರು ಮಹತ್ವಾಂತ ಮೊಕದ್ದಮೆಯಲ್ಲಿ ಅನುಭವಿಸುತ್ತಿರುವ ಶಿಕ್ಷೆಯೊಡನೆ ಈ ಶಿಕ್ಷೆಯನ್ನೂ ಅನುಭವಿಸುವಂತೆ ಹೂಡಿಸಲು ಮೈಸೂರು ಸಂಸ್ಥಾನದ ಮೇಲೆ ತಮಗೆ ಅಧಿಕಾರವಿಲ್ಲವೆಂದು ಜಡ್ಜರು ತಿಳಿಸಿದರು

ಬೆಂಗಳೂರಿಗೆ ಈ ಕೂಡಲೇ ರಾಜುರವರನ್ನು ಕರೆದುಕೊಂಡು ಹೋಗದಂತೆ ಆಜ್ಞೆಯಾಗಬೇಕೆಂದು ವಕೀಲರು ಮಾಡಿದ ಪ್ರಾರ್ಥನೆಯನ್ನು ನ್ಯಾಯಾಧೀಶರು ನಿರಾಕರಿಸಿ ಮೈಸೂರು ಮತ್ತು ಬೊಂಬಾಯಿ ಸರಕಾರಗಳು ಅವರ ಆರೋಗ್ಯವನ್ನು ಕೆಡಿಸುವ ಯಾವ ಕಾರ್ಯವನ್ನೂ ಮಾಡುವುದಿಲ್ಲವೆಂದು ಹೇಳಿದರು

ರಾಜೂರವರ ವಾದಿಸುವ ಮುಖ್ಯಾಂಶಗಳನ್ನು ಪರಾಮರ್ಶಿಸಿ ಅವರನ್ನು ಬಂಧನಕ್ಕೆ ಒಳಪಡಿಸಲಾಯಿತು ಸುಪ್ರೀಂ ಕೋರ್ಟಿಗೆ ಅಪೀಲು ಹಾಕಲು ಅನುಮತಿಯನ್ನು ಕೇಳಲಾಗಿ ಲಿಖಿತ ಅರ್ಜಿ ಸಲ್ಲಿಸುವಂತೆ ನ್ಯಾಯಾಧೀಶರು ವಕೀಲರಿಗೆ ತಿಳಿಸಿದರು

ಮದ್ರಾಸ್ ನಗರ ಪ್ರತ್ಯೇಕವಾಗಲೆಂದು ನಿರ್ಣಯ

ಮದ್ರಾಸು ನಗರವನ್ನು ಪ್ರತ್ಯೇಕ ಪ್ರಾಂತವನ್ನಾಗಿ ಮಾಡಿ ಕೂಡಲೇ ಆಂಧ್ರ ಸಂಸ್ಥಾನವನ್ನು ರಚಿಸಬೇಕೆಂದೂ, ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯು ನಿರ್ಧರಿಸಿರುತ್ತದೆ.

○ ಲಾಹೋರ್ ಮತ್ತು ಅಮೃತಸರ ನಗರಗಳ ಗಡಿ ಬಳಿ ಇರುವ ಅಲ್ಲೊ ಎಂಬ ಹಳ್ಳಿಯ ಹತ್ತಿರ ಇರುವ ಭಾರತೀಯ ಸೈನ್ಯಗಳನ್ನೆಲ್ಲಾ ಹಿಂದಕ್ಕೆ ಕರೆಸುವಂತೆ ಪಾಕಿಸ್ತಾನವು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿದೆ

ಗ್ರಾಮ ಪಂಚಾಯಿತಿಗಳಿಂದ ಅಕ್ರಮ ಧನವಸೂಲಿ

ಬೆಂಗಳೂರು ೬

ಸಂಸ್ಥಾನದ ವಿದ್ಯುಚ್ಛಕ್ತಿ ಇಲಾಖೆಯ ಪ್ರತಿನಿಧಿಗಳೆಂದು ಹೇಳಿಕೊಂಡು ಹಲವು ಜನರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿಸುವುದಾಗಿ ಹೇಳಿ, ಕೆಲವು ಗ್ರಾಮ ಪಂಚಾಯಿತಿಯವರುಗಳಿಂದ ಹಣವನ್ನು ವಸೂಲು ಮಾಡುವ ನಿದರ್ಶನಗಳು ಸರಕಾರದ ಗಮನಕ್ಕೆ ಬಂದಿರುವುದಾಗಿಯೂ, ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಪಂಚಾಯಿತಿಗಳಿಂದ ಮುಂಗಡ ಹಣವು ಇಲಾಖೆಗೆ ಅವಶ್ಯವಿಲ್ಲವೆಂದೂ ಸೂಚಿಸಿ ಸರ್ಕಾರದ ಪತ್ರಿಕಾ ಪ್ರಕಟಣೆಯೊಂದು ತಿಳಿಸಿರುತ್ತದೆ ಪಂಚಾಯಿತಿಯವರು ಆ ರೀತಿ ಬಂದವರಿಗೆ ಹಣವನ್ನು ಕೊಡಕೂಡದೆಂದೂ, ಹಾಗೆ ಮಾಡಿದರೆ ತಾವೇ ಹೊಣೆಗಾರರಾಗುವರೆಂದೂ ಸೂಚಿಸಲಾಗಿದೆ

ಕಾಶ್ಮೀರದಲ್ಲಿ ಭೂಕಂಪ

ಮೊನ್ನೆ ಬೆಳಗ್ಗೆ ಕಾಶ್ಮೀರದಲ್ಲಿ [illegible] ಅರ್ಧ ನಿಮಿಷ ಕಾಲ ಭೂಮಿಯು ಅದುರಿತೆಂದು ವರದಿಯಾಗಿದೆ ಸಾವು ನೋವುಗಳ, ಆಸ್ತಿಗಳ ನಾಶದ ಬಗ್ಗೆ ವರದಿಯೇನೂ ಬಂದಿರುವುದಿಲ್ಲ

ಉಪಾಧ್ಯಾಯರುಗಳ ಸಹಕಾರ ಸಂಘ

ನಂಜನಗೂಡು ತಾಲ್ಲೂಕಿನ ಉಪಾಧ್ಯಾಯರುಗಳ ಸಹಕಾರ ಸಂಘವೊಂದು ಕಳೆದ ಸೋಮವಾರ ಸ್ಥಾಪಿತವಾಯಿತು ಜ|| ಅಲಿ ಅಬ್ಬಾಸ್ ರವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧಿಕಾರ ವರ್ಗದವರ ಚುನಾವಣೆಯು ನಡೆದು ಶ್ರೀ ಹೆಚ್ ಎ ಗುರುರಾಜಾಚಾರ್ಯರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಗೋವಿಂದಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಜ|| ಅಲಿ ಅಬ್ಬಾಸ್‌ರವರು ಖಜಾಂಚಿಯಾಗಿಯೂ, ಶ್ರೀ ಹೆಚ್ ಎಸ್. ಚನ್ನಪ್ಪಯ್ಯನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ೧೫ ಜನರುಳ್ಳ ಸಮಿತಿಯನ್ನು ಆರಿಸಲಾಯಿತು.

ಸಿಟಿ ಟ್ಯುಟೋರಿಯಲ್ ಕಾಲೇಜು

ವಾಣಿವಿಲಾಸ ಮಾರ್ಕೆಟ್, ಮೈಸೂರು

ಮಿಡಲ್ ಸ್ಕೂಲ್ ವಿದ್ಯಾರ್ಥಿಗಳಿಗಾಗಿ ಸಾಯಂಕಾಲದ ತರಗತಿಗಳು ಪ್ರಾರಂಭವಾಗಿವೆ ವಿವರಗಳಿಗೆ ವಿಚಾರಿಸಿ

ಕೊಡಗಿನಲ್ಲಿ ವಿದ್ಯುತ್ ತಯಾರಿಕಾ ಕೇಂದ್ರ

ಕೊಡಗಿನಲ್ಲಿ ೨|| ಕೋಟಿ ರೂ. ವೆಚ್ಚದ ಅಂದಾಜಿನಲ್ಲಿ ೪೮ ಸಾವಿರ ಕಿಲೋವಾಟು ಶಕ್ತಿಯನ್ನು ಉತ್ಪತ್ತಿ ಮಾಡಬಲ್ಲ ವಿದ್ಯುತ್ ಕೇಂದ್ರವನ್ನು ಬಾರೆಪುರಿ ನದಿಯ ಅಣೆಕಟ್ಟಿನಲ್ಲಿ ಸ್ಥಾಪಿಸುವ ವಿಷಯವನ್ನು ಅಲ್ಲಿನ ಮುಖ್ಯಮಂತ್ರಿ ಸಿ. ಎಂ. ಪೂಣಚ್ಚರವರು ಪ್ರಸ್ತಾಪಿಸಿ, ಕೊಡಗಿನಲ್ಲಿ ತಯಾರಿಕೆ ಕೇಂದ್ರದ ಅವಶ್ಯಕತೆಯನ್ನು ಒತ್ತಿ ಹೇಳಿರುವರಲ್ಲದೆ, ಈ ವಿಷಯವನ್ನು ಕೇಂದ್ರ ಸರಕಾರದವರು ತಮ್ಮ ಪಂಚ ವಾರ್ಷಿಕ ಯೋಜನೆಯಲ್ಲಿ ಸೇರಿಸಿ, ಅದಕ್ಕಾಗಿ ತಗಲುವ ಹಣವನ್ನು ಸಹಾಯವಾಗಿಯಾಗಲಿ ಸಾಲವಾಗಿಯಾಗಲಿ ಒದಗಿಸಬೇಕೆಂದು ಕೋರಿರುತ್ತಾರೆ

ವಿವಾಹ ಮಹೋತ್ಸವ

ರಾಜಧಾನಿಯ ಪೋಲೀಸು ಶಿಕ್ಷಣ ಶಾಲೆಯ ಕನ್ನಡ ಷಾರ್ಟ್‌ಹ್ಯಾಂಡ್ ಇನ್‌ಸ್ಪೆಕ್ಟರ್ ಶ್ರೀ ಆರ್. ಜಿ ಕೃಷ್ಣರವರು ಸದರ್ನ್ ರೈಲ್ವೆಯಲ್ಲಿ ಸ್ಟೇಷನ್ ಮಾಸ್ಟರ್ ಆಗಿರುವ ತಮ್ಮ ಸಹೋದರ ಶ್ರೀ ಆರ್ ಅನಂತಕೃಷ್ಣರವರಿಗೆ, ನಾಗಮಂಗಲದ ತಾಲ್ಲೂಕಿನ ಫುಡ್ ಶಿರಸ್ತೆದಾರ್ ಶ್ರೀ ಬಿ ವಿ ವೆಂಕಟೇಶಯ್ಯನವರ ಮಗಳು ಸೌ|| ನಾಗರತ್ನರವರನ್ನು ತಂದು ಕೊಂಡು ಮೊನ್ನೆ ನಾಗಮಂಗಲದಲ್ಲಿ ವಿವಾಹವನ್ನು ನೆರವೇರಿಸಿದರು.

GRAND GALA OPENING OF

Messrs Metro Goldwyn Mayer's

Mammoth Production

'SCARAMOUCHE'

From 7th Nov 1952

Daily 3 Shows

AT SRI GAYATHRI

TALKIES, Mysore.

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207. ಸಯ್ಯಾಜಿರಾವ್ ರೋಡ್,

ಮೈಸೂರು

ABIDS OUTRIGHT AUCTION

ON SUNDAY the 9th NOV 1952 at 10 A M at Showrooms

R W 7'x6' sliding door glass showcase -Modern design as good as new, Jewellery Show case, New upholstered Spring sofa suites, Single cots Arm & armless chairs, stools, Single & double draw tables, Benches, New single door Almirah, Mirror 4 1/2'x3' in frame, Single Bullock Cart, Perambulators, Water Pumps, G E. Electric Table Fan, Table Lamps & stoves, Child's Motor car, Oil paintings complete Beedi Shop fittings, shelves, Boxes, Galla Box Doors, windows & ventilators with and without Shutters and several other useful articles, which may be inspected on Saturday, the 8th instant.

OFFICE OF THE PRESIDENT DISTRICT BOARD, MYSORE

1 Sealed tenders will be received at the Office of the President, District Board, Mysore upto 3 P. M on 13-11-1952 for the construction of works noted below:—

2 The works have to be completed by the end of March 53

3 Tenders should be given on percentage basis either above or below the sanctioned estimate. If any tenderer is willing to do the work at the sanctioned estimate rates, the fact should be noted in the tender.

4. Items not provided in the sanctioned estimate will be paid at the approved schedule of rates in force or data worked out during execution of the work

5 Each tender must be accompanied by a Treasury challan for having credited to treasury an earnest money deposit amount noted against each work

6 Adequate progress should be shown from the commencement i e, from the date of agreement failing which the earnest money will be forfeited and the contract cancelled without further notice and the balance work will be carried out at his risk

7 Controlled articles required for the construction will be supplied departmentally and the cost thereof adjusted in the bills that come for payment.

8 Successful tenderers will be required to produce the Income - Tax clearance or verification Certificate before entrusting the work

9 The President reserves the right of accepting or rejecting the tender without giving any reason

10 The decision of the District Board in respect of any dispute regarding rates or other matters arising will be final

11 Plans and estimates and other details connected with the work may be seen in the Office on any working day during office hours.

No		Name of the work	Estimate Rs	Earnest money required Rs.
1	Constructing	Veterinary dispensary at Periyapatna	7 500	350
2	do	A Stone Masonry bridge across Devanur Halla in Nanjangud Taluk	7 000	300
3	Sinking a well near Kabbahally High School		1,500	75
4	Constructing a culvert of Gorahalli	Chapparadahally Road	1,200	60
5	do	A culvert at 2/3 of Kittur Kimplapur Road.	1,200	60
6	do	A Tunnel in Karthal Kadu Road	1,200	60
7	do	A Bus Shelter at Kunnahally Periyapatna Taluk	1,000	50
8	do	Doctor's quarters at Ravandur Periyapatna Taluk	4,200	200
9	Converting Musafirkhana into a Dispensary building at Mugur T. N. Pur Taluk.		7 200	300

K. M. [illegible],

President. District Board, Mysore

Edited, Printed and Published by A R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ಡ್ ನಂ 79% ||ಶಾಂತಿಃ ಸಾಧುಶಂ|| ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೭] ಶನಿವಾರ ೪-೧೦-೧೯೫೨ [ಸಂಚಿಕೆ ೫೬

ಪಶ್ಚಿಮ ರಾಷ್ಟ್ರ ನಿರ್ಣಯಕ್ಕೆ ಭಾರತದ ವಿರೋಧ

ಭೆ ಎದುರಿನಲ್ಲಿ ಕಟುಕ ನಿಂದ ಗೋಹತ್ಯೆ

ಪಯ್ಯೋಲಿ ಘಟನೆ ಬಗ್ಗೆ ರಾಜಾಜಿಯವರ ವಿವರ

ಪಾಲಘಾಟಿನ ಪಯ್ಯೋಲಿ ಎಂಬಲ್ಲಿ ಇತ್ತೀಚೆಗೆ ನಡೆದ ಕೋಮುವಾರು ಘಟನೆ ಬಗ್ಗೆ ಮದ್ರಾಸು ಶಾಸನ ಸಭೆಯಲ್ಲಿ ಸಿಕ್ಕಿ ಮುಖ್ಯಮಂತ್ರಿ ರಾಜಾಜಿಯವರು ವಿವರಿಸಿದರು. ಕರೆಲಿ ಮತ್ತು ಗಲಭೆಗೆ ಕಾರಣವಾದ ದ ಬಗ್ಗೆ ಆಪಾದನೆ ಮುಂದುವರಿಯುತ್ತಿದ್ದು ಇದಾಗಿಯೂ, ನಿಳು ಜನ ಪ್ರಮುಖರ ಹೈಕಿ ನಾಲ ವನ್ನು ದಸ್ತಗಿರಿ ಮಾಡಿರುವುದಾಗಿಯೂ ಅವರು ಹೇಳಿದರು. ಕಳೆದ ಆ.ನೇ ತಾ|| ಕ್ಷ ವಾಸ್ಯೋಯ ಸ್ವಯಂ ಸೇವಕ ಸಂಘದ ವರು ಗೋವಧಾ ವಿರೋಧ ಪ್ರಚಾರವನ್ನು ಉಗ್ರವಾಗಿ ನಡೆಸುತ್ತಿದ್ದ ಸಂ ಜನರಿದ್ದ ಸಭೆ ಎದುರಿನಲ್ಲಿ ಒಬ್ಬ ಮುಸ್ಲಿಂ ಕಟುಕ ನು ಪಶುವೊಂದನ್ನು ಕತ್ತರಿಸಿದನಲ್ಲದೆ ಸಭೆ ಯನ್ನು ಉದ್ರೇಕಗೊಳಿಸುವ ಇತರ ಪ್ರಸಂಗಗಳು ಅಲ್ಲಿ ನಡೆದುವೆಂದೂ, ಮಾರನೇ ದಿನ ಸಭೆಯ ಪ್ರತಿನಿಧಿಗಳನ್ನು ೭ ಮಂದಿ ಮುಸ್ಲಿಮರು ಕ್ರೂರವಾಗಿ ಗಾಯಗೊಳಿಸಿದರು, ಕೆಲವು ದಿನಗಳ ಬಳಿಕ ಆ ಜನರ ನಾಯಕ ಮುಸ್ಲಿಮರು ಪೊಲೀಸರ ಕಣ್ಣೆದುರೇ ಬಂದರು ಎಂದೂ ತಿಳಿಸಿದರು. ಮಾರನೇ ದಿನ ಆರ್. ಎಸ್. ಎಸ್. ಪ್ರತಿನಿಧಿಗಳ ಬಂಧು ಪ್ರೇಕ್ಷಕರ ಮನೆಗೆ ನುಗ್ಗಿ ಗಲಾಟೆಯಾದುದಲ್ಲದೆ ದೈವಿಕಾಂದರಿಂದ ಅಲ್ಲಿಗೆ ಬಂದ ಮುಸಲ್ಮಾನರು ದೈವದ ನಿವ್ವಾಣದಲ್ಲೇ ಅಲ್ಲಿದ್ದ ಹಿಂದೂ ಮೇಲೆ ಕೈ ಮಾಡಿದರೆಂದೂ, ಹಿಂದೂ ಮುಖ್ಯ ಮುಖಂಡರು ತೀರಿಸಿದರೆಂದೂ, ಆ ಜನಗಳು ಮತ್ತು ಆ ಜನ ಮುಸ್ಲಿಮರು ಸಂಘಟನೆಗಳಾಗಿರುವುದೊಂದೂ, ಪೇರೂರು ಮುಕ್ಕಳದಲ್ಲಿ ಒಬ್ಬ ಶಿಕ್ಷಕರ ಗುಮಾಸ್ತರು ಎಂಬುವವರನ್ನು ಮನೆಯೊಳಗೆ ಅಟ್ಟಿಕೊಂಡು ಹೋಗಿ ಇರಿದು ಕೊಲ್ಲಲಾಯಿತೆಂದೂ ರಾಜಾಜಿಯವರು ತಿಳಿಸಿದರು. ಆರ್. ಎಸ್. ಎಸ್. ನಾಯಕರ ಮೇಲೆ ಹಿಂಸೆ ನಡೆಸಿದವರ ಮನೆಗೆ ಬೆಂಕಿ ಇಡಲಾಯಿತೆಂದು ಅವರು ತಿಳಿಸಿ ಈಗ ಪರಿಸ್ಥಿತಿ ಶಾಂತವಾಗಿರುವುದೆಂದು ಹೇಳಿದರು.

ಬೊಂಬಾಯಿ ವಾಹನಗಳ ತೆರಿಗೆಯಲ್ಲಿ ಸೋಡಾ

ಬೊಂಬಾಯಿ ಪ್ರಾಂತದ ಮೋಟಾರು ಗಳ ತೆರಿಗೆಯನ್ನು ಹೆಚ್ಚಿಸಿರುವ ಪ್ರಮಾಣದಲ್ಲಿ ಮೂರನೇ ಒಂದು ಭಾಗದಷ್ಟು ಮೊತ್ತವನ್ನು ಮಾಫಿ ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುತ್ತಾರೆ.

ಗೋಶಾಲೆಯಿಂದ ಆಹಾರದ ಕಳ್ಳ ಸಾಗಾಣಿಕೆ ಪತ್ತೆ

ರಾಜಧಾನಿಯ ಸರಸ್ವತಿಪುರದ ಸರಕಾರಿ ಆಹಾರದ ಗೋದಾಮಿನಿಂದ ಹೆಚ್ಚು ಮುಚ್ಚಿಟ್ಟು ಸುಮಾರು ೨೦ ಸೇರು ಗೋಧಿಯನ್ನು ಕಳ್ಳತನದಲ್ಲಿ ಸಾಗಿಸಲಾಯಿತೆಂದೂ, ರೇಷನ್ ಅಧಿಕಾರಿಗಳು ಸ್ಥಳಕ್ಕೆ ಬಂದು ಅವಸರವಾಗಿ ಮಾರು ತಾಗ ಜೋಳವನ್ನು ಸಾಗಿಸುತ್ತಿದ್ದುದೂ ಪತ್ತೆಯಾಯಿತೆಂದೂ ಈ ಬಗ್ಗೆ ರೇಷನ್ ಇನ್ಸ್‌ಪೆಕ್ಟರ್ ಶ್ರೀ ಗೋವಿಂದಪ್ಪನವರು ಮಹಜರು ನಡೆಸಿ ಹೇಳಿಕೆಗಳನ್ನು ತೆಗೆದುಕೊಂಡರೆಂದೂ ಹಲವರು ಸಂಚಾರ ಮಿತ್ರದಾರರು ತಿಳಿಸಿರುತ್ತಾರೆ.

ಹರಿಕಥೆ

ಚಾಮುಂಡಿಪುರಂನಲ್ಲಿರುವ ಶ್ರೀ ಶಂಕರ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಪ್ರತಿನಿತ್ಯ ಸಂಜೆ ೬-೩೦ಕ್ಕೆ ತಾ|| ಕೊನೆಯ ವರೆಗೆ ಶ್ರೀ ಲಕ್ಷ್ಮೀಪತಿ ಸಹೋದರರಿಂದ ರಾಮಾಯಣ ಕಥಾ ಕಾಲಕ್ಷೇಪವು ನಡೆಯುತ್ತಿದೆ.

ಪಂಡಿತ ಸುಂದರಲಾಲರ ಭಾಷಣ

ಮೈಸೂರು ೮

ಚೀನಾಕ್ಕೆ ಹೋಗಿದ್ದ ಸೌಹಾರ್ದ ನಿಯೋಗದ ನಾಯಕರಾಗಿದ್ದ ಪಂಡಿತ ಸುಂದರಲಾಲ್‌ರವರು ನಾಳೆ ಸಂಜೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿ ೬|| ಗಂಟೆಗೆ ಇಲ್ಲಿನ ಇಂಡಿಯಾ-ಚೀನಾ ಸ್ನೇಹ ಸಂಘದ ಆಶ್ರಯದಲ್ಲಿ ಟೌನ್ ಹಾಲ್ ಆವರಣದಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು.

ಪಂಚಲಿಂಗ ದರ್ಶನ ಯಾತ್ರಿಕರಿಗಾಗಿ ಇನಾಕ್ಯುಲೇಷನ್ ಕೇಂದ್ರಗಳು

ತಲಕಾಡಿನಲ್ಲಿ ಪಂಚಲಿಂಗ ದರ್ಶನಾರ್ಥವಾಗಿ ಹೋಗುವ ಯಾತ್ರಿಕರಿಗಾಗಿ ಮಳವಳ್ಳಿ, ಹೆಮ್ಮಿಗೆ, ವಿಜಯಪುರ, ಪಾಲಿಂಗಿ, ಕುಕ್ಕೂರು ಮತ್ತು ತಲಕಾಡುಗಳಲ್ಲೂ, ಮೈಸೂರು ಜಿಲ್ಲೆಯ ಎಲ್ಲಾ ಲೋಕಲ್ ಫಂಡ್ ಆಸ್ಪತ್ರೆಗಳಲ್ಲೂ ಕಾಲರಾ ವಿರೋಧಕ ಇನಾಕ್ಯುಲೇಷನ್ ಮಾಡಲು ಏರ್ಪಡಿಸಲಾಗಿರುವುದೆಂದೂ ಇನಾಕ್ಯುಲೇಷನ್ ಅಧಿಕಾರಿಗಳೇ ಪ್ರಶಸ್ತಿ ಪತ್ರಗಳನ್ನು ಕೊಡುವರೆಂದೂ ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿರುತ್ತಾರೆ.

ಭಗವದ್ಗೀತಾ ಪ್ರವಚನ

ರಾಜಧಾನಿಯ ಮಹಾರಾಜಾ ಸಂಸ್ಕೃತ ಕಾಲೇಜು ಕಟ್ಟಡದಲ್ಲಿರುವ ಶ್ರೀ ಸದ್ಗುರುಸೇವಾ ಮಂಡಲದವರು ಏರ್ಪಡಿಸಿರುವ ಭಗವದ್ಗೀತಾ ಪ್ರವಚನದ ಅಂಗವಾಗಿ ಈ ಸಂಜೆ ೭||ಗೆ ಗೀತೆಯ ೧೧ನೇ ಅಧ್ಯಾಯ ಅಥವಾ ವಿಶ್ವರೂಪ ದರ್ಶನದ ಭಾಗದ ವಾಚನವನ್ನು ವಿವರಿಸುವರು. ಎಲ್ಲರಿಗೂ ಆಹ್ವಾನ ವಿರುತ್ತದೆ.

ಸೆನೆಟ್ಟಿಗೆ ನಾಮಕರಣ

ಶ್ರೀಗಳಾದ ಎ ವೆಂಕಟಸ್ವಾಮಿ, ಜಿ ಎ ತಿಮ್ಮಪ್ಪಗೌಡ, ಜಿ ಜಾಕೆಬ್, ಕೊಂಡಜ್ಜಿ ಬಸಪ್ಪ, ಎಂ. ಮಾದಯ್ಯ, ಸೈಯದ್ ಅಬ್ದುಲ್ ರಹಮಾನ್, ಕೆ ಪೈ. ಮೈಲಾರಶೆಟ್ಟಿ, ರಾಮನಾರಾಯಣ ಚೆಲ್ಲಾರಾಂ, ವಿ ಎಲ್. ಡ್ಯೂಕ್ಸ್‌ರ್ಗೆಹಾಮ್, ಜಿ. ನಾರಾಯಣಗೌಡ, ಮತ್ತು ಎಸ್ ಸುಬ್ಬನಾಸ್ತಿ ಗೌಡರನ್ನು ೧-೩ ಪ್ರಮುಖರು ಸೆನೆಟ್ಟಿನ ಸದಸ್ಯರಾಗಿ ನಾಮಕರಣ ಮಾಡಿರುತ್ತಾರೆ.

ಸಕ್ಕರೆ ಬೆಲೆ ಇಳಿಯಿತು

ಭಾರತ ಸರ್ಕಾರದವರು ಬರುವ ತಿಂಗಳು ೧ನೇ ತಾ|| ನಿಂದ ಸಕ್ಕರೆ ಬೆಲೆಯನ್ನು ಇಳಿಸಲು ನಿರ್ಧರಿಸಿರುತ್ತಾರೆ. ಉತ್ತರ ಪ್ರದೇಶದ ಕಾರ್ಖಾನೆಗಳ ಸಕ್ಕರೆಯನ್ನು ಮಣಕ್ಕೆ ೩-೭ರೂ ನಂತೆಯೂ, ದಕ್ಷಿಣದಲ್ಲಿರುವ ಕಾರ್ಖಾನೆಗಳ ಸರಕಿಗೆ ೨೮ರೂ ನಂತೆಯೂ ಬೆಲೆಯನ್ನು ಗೊತ್ತುಪಡಿಸಲಾಗಿದೆ.

ಟ್ರೂಮನ್ನರಿಗೆ ೯೫|| ಡಾಲರ್ ವಿರಾಮ ವೇತನ

ಬರುವ ಜನವರಿ ೨೦ ನೇ ತಾ|| ಅಧ್ಯಕ್ಷ ಟ್ರೂಮನ್ನರು ನಿವೃತ್ತರಾದ ನಂತರ ತಿಂಗಳಿಗೆ ೯೫ ೬೬ ಡಾಲರ್ (ಸುಮಾರು ೪೫೦ ರೂ) ಅಷ್ಟು ಮಾತ್ರ ವಿರಾಮ ವೇತನವನ್ನು ಪಡೆಯುವರು. ಅವರು ಹಿಂದೆ ಪ್ರಥಮ ಪ್ರಪಂಚ ಯುದ್ಧದಲ್ಲಿ ಸಲ್ಲಿಸಿದ ಸೇವೆಗಾಗಿ ಈ ವೇತನವು ದೊರೆಯುತ್ತಿದೆ. ನಿವೃತ್ತ ಅಧ್ಯಕ್ಷರಿಗೆ ಅಲ್ಲಿ ವಿರಾಮ ವೇತನವನ್ನು ಕೊಡುವ ಪದ್ಧತಿ ಇರುವುದಿಲ್ಲ.

ವಿಶ್ವ ಸಂಸ್ಥೆ ಸಮಿತಿಗೆ ಹೊರಡಲಿರುವರು

ಸೆಂಟ್ರಲ್ ಕಾಲೇಜಿನ ಫಿಸಿಕ್ಸ್ ಮುಖ್ಯೋಪಾಧ್ಯಾಯರೂ, ರಸಾಯನ ಶಾಸ್ತ್ರಜ್ಞರೂ ಆದ ಡಾ|| ವಿ ಸುಬ್ರಹ್ಮಣ್ಯರವರು ಇದೇ ೧೬ ನೇ ತಾ|| ಪ್ಯಾರಿಸ್ಸಿನಲ್ಲಿ ನಡೆಯುವ ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಮಿತಿಯ ಅಧಿವೇಶನದಲ್ಲಿ ಭಾಗವಹಿಸುವ ಭಾರತದ ನಿಯೋಗದ ಸದಸ್ಯರಾಗಿ ಹೋಗುವರು. ಭಾರತದ ಉಪಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರವರು ಭಾರತದ ನಿಯೋಗದ ನಾಯಕರಾಗುವರು.

ಪರ್ಮಿಟ್ ಇಲ್ಲದೆ ಬಸ್ ಓಡಿಸಿದ್ದಕ್ಕೆ ಶಿಕ್ಷೆ

ಪರ್ಮಿಟ್ ಇಲ್ಲದೆ ಬಸ್ ಓಡಿಸಿದ್ದಕ್ಕಾಗಿ ಎಂ ವೈ ೪೬೨೨ ಎಸ್ಸ್ ಬಸ್ಸಿನ ಡ್ರೈವರ್ ಶೇಷಣ್ಣನಿಗೆ ೫೦ ರೂ. ಜುಲ್ಮಾನೆ ಮತ್ತು ಎಂ. ವೈ. ೪೯೫೫ ಎಸ್ಸ್ ಬಸ್ಸಿನ ಡ್ರೈವರ್ ನಾಗಯ್ಯನಿಗೆ ೫ ರೂ ಗಳ ಜುಲ್ಮಾನೆಯನ್ನು ನಗರ ನ್ಯಾಯಾಧೀಶರು ನೆನ್ನೆ ವಿಧಿಸಿದರು.

ಅಮೆರಿಕಾ ಮತ್ತು ಬ್ರಿಟನ್ ನಿರ್ಣಯಕ್ಕೆ ಭಾರತ ಒಪ್ಪುವುದಿಲ್ಲ

ಭದ್ರತಾ ಸಮಿತಿಯಲ್ಲಿ ಬ್ರಿಟನ್ ಮತ್ತು ಅಮೆರಿಕಾಗಳು ನಿರ್ಣಯವೊಂದನ್ನು ಮಂಡಿಸಿ, ಕಾಶ್ಮೀರದಲ್ಲಿ ಜನಮತ ಗಣನೆ ತೆಗೆದುಕೊಳ್ಳುವ ಪೂರ್ವಭಾವಿಯಾಗಿ, ಎರಡು ರಾಷ್ಟ್ರಗಳ ಸೈನ್ಯಗಳನ್ನು ಸಮಾನವಾಗಿ ಇಳಿಸಬೇಕೆಂದು ಕೋರಿವೆ. ನಿರ್ಣಯವನ್ನು ಮಂಡಿಸುತ್ತಾ, ಬ್ರಿಟಿಷ್ ಪ್ರತಿನಿಧಿಯು ಭಾರತ ಮತ್ತು ಪಾಕಿಸ್ತಾನಗಳು ಈ ಬಗ್ಗೆ ಒಪ್ಪಬೇಕೆಂದು ಸೂಚಿಸುತ್ತಾರೆ. ಸಮಾನವಾಗಿ ಸೈನ್ಯಗಳನ್ನು ಇಳಿಸಬೇಕೆಂದು ಪಾಕಿಸ್ತಾನವು ಕೇಳುತ್ತಿತ್ತು. ಭಾರತವು ಪೂರ್ತಿ ನಿರ್ಣಯವನ್ನು ಒಪ್ಪುವುದಿಲ್ಲವೆಂದು ಹೇಳಲಾಗಿದೆ. ಕಡ್ಡಾಯವಾಗಿ ಅಲ್ಲಿ ೨೧ ಸಾವಿರ ಸೈನ್ಯವನ್ನು ಇಡಬೇಕೆಂದು ಭಾರತವು ಈಗಾಗಲೇ ಗ್ರಹಾಂರವರಿಗೆ ತಿಳಿಯಪಡಿಸಿದೆ.

ಬಿಡಿಸಿಹೋದವರಿಗೆ ದಕ್ಷಿಣ ಕೊರಿಯಾ ಆಹ್ವಾನ

ಕೊರಿಯಕ್ಕೆ ಭೇಟಿ ಕೊಡಬೇಕೆಂದು ದಕ್ಷಿಣ ಕೊರಿಯಾ ಸರ್ಕಾರದವರು ಕೊಟ್ಟಿರುವ ಆಹ್ವಾನವನ್ನು ಅಮೆರಿಕದ ಅಧ್ಯಕ್ಷರಾಗಿ ಅರಿಸಲ್ಪಟ್ಟಿರುವ ಜ|| ಐಸೆನ್‌ಹೋವರರು ಅಂಗೀಕರಿಸಿರುವರು.

೨೦೦ ಕೊಲೆ, ಸಾವಿರ ದರೋಡೆ ಮಾಡಿದವನ ಬಂಧನ

೨೦೦ ಕೊಲೆ ಮತ್ತು ಸಾವಿರಕ್ಕೂ ಹೆಚ್ಚಿನ ದರೋಡೆಗಳನ್ನು ಮಾಡಿರುವ ಸಿಂಧ್ ದೇಶದ ನಾಯಕ ರಹೀಂ ಹಂಗಾರಿಯೋ ಎಂಬುವವನನ್ನು ಪಾಕಿಸ್ತಾನದ ಪೊಲೀಸರು ಹಿಡಿದಿರುತ್ತಾರೆ ಅವನು ೧೦೦ ಜನರನ್ನು ಅಪಹರಿಸಿ, ಲಕ್ಷಗಟ್ಟಲೆ ರೂ ಅನ್ನು ಸಂಪಾದಿಸಿರುವನೆಂದು ಹೇಳಲಾಗಿದೆ. ಅವನ ದಸ್ತಗಿರಿಗಾಗಿ ೫೦೦೦ ರೂ. ಮತ್ತು ೨೫ ಎಕರೆ ಜಮೀನಿನ ಬಹುಮಾನ ಕೊಡುವುದಾಗಿ ಸಾರಲಾಗಿತ್ತು.

ದಾರಿದ್ರ್ಯದ ಕಾರಣಕ್ಕಾಗಿ ಇಡೀ ಸಂಸಾರ ನದಿ ಪಾಲು

ಉದ್ಯೋಗವಿಲ್ಲದೆ ಇದ್ದ ಅಬ್ದುಲ್ಲಾ ಎಂಬ ಪೇಷಾ ಮುಸಲ್ಮಾನನೊಬ್ಬನು ತನ್ನ ಹೆಂಡತಿ ಮಕ್ಕಳ ಸಮೇತ ಪತ್ರಿಕದ ನದಿಯೊಂದಕ್ಕೆ ಬಿದ್ದು ಮೃತಪಟ್ಟಿರುವುದಾಗಿ ವರದಿಯಾಗಿದೆ. ೫ ಜನರ ಶವಗಳು ದೊರೆತಿವೆ. ಯುವಜನರ ಶವವು ದೊರೆತಿಲ್ಲ ತನ್ನ ಭಾರವನ್ನು ನೋಡುವುದಾಗಿ ಹೇಳಿ ಅವನು ಮನೆಯಿಂದ ಹೊರಹೊರಟನೆಂದು ಹೇಳಲಾಗಿದೆ.

ಅಕ್ರಮ ಬಂದೂಕ ತಯಾರಿಕೆಗಾಗಿ ೬ ತಿಂಗಳು ಶಿಕ್ಷೆ

ರಾಮನಗರಂ ತಾಲ್ಲೂಕಿನ ಕೆಂಪಮ್ಮ ಮಾದೇಗೌಡನ ದೊಡ್ಡಿಯಲ್ಲಿ ರಹೀಂ ಎಂಬುವನು ಕಳ್ಳತನದಲ್ಲಿ ಬಂದೂಕವನ್ನು ತಯಾರಿಸುತ್ತಿದ್ದುದಕ್ಕಾಗಿ ಅವನಿಗೆ ೬ ತಿಂಗಳು ಸಜಾ ವಿಧಿಸಲಾಗಿದೆ.

○ ಗಂಟೆಗೆ ೨೫೦೦ ಮೈಲಿ ವೇಗದಲ್ಲಿ ೨ ಲಕ್ಷ ಅಡಿ ಎತ್ತರದಲ್ಲಿ ಹಾರಬಲ್ಲ ವಿಮಾನಗಳನ್ನು ರಷ್ಯಾ ತಯಾರಿಸುತ್ತಿರುವುದಾಗಿ ಗೊತ್ತಾಗಿದೆ.

ತಿರುವಾಂಕೂರಿನಲ್ಲಿ ವಿದ್ಯುಚ್ಛಕ್ತಿಯ ರಾಷ್ಟ್ರೀಕರಣ

ವಿದ್ಯುಚ್ಛಕ್ತಿ ಸರಬರಾಜನ್ನು ರಾಷ್ಟ್ರೀಕರಿಸಲು ತಿರುವಾಂಕೂರು ಕೊಚ್ಚಿ ಸರ್ಕಾರದವರು ನಿರ್ಧರಿಸಿರುವರೆಂದು ಅಲ್ಲಿನ ಮಂತ್ರಿ ವೇಲಾಯುಧನ್ ನಾಯರ್‌ರವರು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ ನಾಗರ್‌ಕೋಯಿಲ್ ಮತ್ತು ಕಂಕೋಟಾಗಳಲ್ಲಿರುವ ವಿದ್ಯುತ್ ಕೇಂದ್ರಗಳನ್ನು ಅವರು ವಶಪಡಿಸಿಕೊಳ್ಳಲಿರುವರು

ಸಿನಿಮಾ ಚಿತ್ರ ತೆಗೆದುಕೊಳ್ಳುವಾಗ ನಟನಿಗೆ ಗಾಯ

ವಶೋವಿನತೋಟವೊಂದರಲ್ಲಿ ತೋಟಗಾರನನೊಬ್ಬನ ಮೇಲೆ ಕುಂಟ ಹುಡುಗರು ಕಲ್ಲುಗಳನ್ನೆಸಯುವ ಚಿತ್ರವನ್ನು ತೆಗೆದುಕೊಳ್ಳುತ್ತಿದ್ದಾಗ ಬಂಗಾಳದ ಹಾಸ್ಯ ನಟ ಅಸಾಬೋಸರ ತಲೆಗೆ ನಿಜವಾಗಿಯೂ ಕಲ್ಲು ಬಿದ್ದು ಅವರಿಗೆ ಪ್ರಜ್ಞೆ ತಪ್ಪಿತೆಂದೂ, ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ

ಗೋಹತ್ಯ ನಿರೋಧ ಚಳುವಳಿ ಸಭೆ

ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಇಲ್ಲಿನ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಗೋ ಹತ್ಯ ನಿರೋಧ ಚಳುವಳಿಯ ಅಂಗವಾಗಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಿರುತ್ತಾರೆ ವಿಶ್ವ ವಾಣಿ ಪತ್ರಿಕೆ ಸಂಪಾದಕರ ಶ್ರೀ ಎಂ ಎನ್ ಶಿವಯ್ಯ ಮುಂತಾದವರು ಭಾಷಣ ಮಾಡುವರು

ಮೈಸೂರು ಸಿಟಿ ಮುನಿಸಿಪಲ್ ಕಮಿಷನ್‌ರವರ ಆಫೀಸು

ಟೆಂಡರು ನೋಟಿಫಿಕೇಷನ್

ತಾರೀಖು 1 ನೆಯ ನವೆಂಬರ್ 1952

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ — ಇದೇ ಮುನಿಸಿಪಲ್ ಫಾರೆಸ್ಟಿನ ತೆಂಗಿನ ಫಲವನ್ನು 1953 ನೇ ಜನವರಿ ತಾರೀಖು 1ರ ಆರಾಭ್ಯ 1956 ನೇ ಡಿಸೆಂಬರ್ 31 ನೇ ತಾರೀಖಿನವರೆಗೂ ರೂಢಿಸುವ ಸಲುವಾಗಿ ತಾ|| 20-11-52 ನೇ ಗುರುವಾರ ಮಧ್ಯಾಹ್ನ 4 ಘಂಟೆಯೊಳಗೆ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್‌ಗಾಗಿ ಒಂದು ನೂರು ರೂಪಾಯಿಗಳನ್ನು ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನ್ ಟೆಂಡರ್ ಅರ್ಜಿಯೊಂದಿಗೆ ಲಗತ್ತು ಮಾಡಿ ಮುನಿಸಿಪಲ್ ಕಮೀಷನರ್‌ರವರಿಗೆ ತಮ್ಮ ಟೆಂಡರ್ ಅರ್ಜಿಗಳನ್ನು ಸೀಲುಮಾಡಿದ ಕವರಿನಲ್ಲಿ ಕೊಡಬಹುದು

ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳಿಗೆ ಮುನಿಸಿಪಲ್ ಆಫೀಸಿನಲ್ಲಾಗಲಿ ಮುನಿಸಿಪಲ್ ಫಾರೆಸ್ಟಿನಲ್ಲಾಗಲಿ ತಿಳಿಯಬಹುದು

ಎಚ್ ಎಂ ಅಬ್ದುಲ್ ರಹಿಂ,
ಮುನಿಸಿಪಲ್ ಕಮಿಷನರ್

ಕೆ. ಎಂ. ಪಿ. ಪಕ್ಷದಿಂದ ಆದಿತ್ಯನ್ನರ ಉಚ್ಚಾಟನೆ

ಮದ್ರಾಸಿನ ಶಾಸನ ಸಭೆಯ ಕೆ ಎಂ ಪಿ ಪಕ್ಷದ ನಾಯಕರಾದ ಎಸ್ ಬಿ ಆದಿತ್ಯನ್‌ರವರನ್ನು ಪಕ್ಷದ ಶಿಸ್ತು ಭಂಗಕ್ಕಾಗಿ ಉಚ್ಚಾಟನೆ ಮಾಡಲಾಗಿದೆ ಮದ್ರಾಸು ಪಕ್ಷದ ನಾಯಕ ಟಿ ಪ್ರಕಾಶಂರವರು ಹೇಳಿಕೆಯೊಂದನ್ನಿತ್ತು ಸದರಿ ಸದಸ್ಯರು ಪಕ್ಷವನ್ನು ಕೇಳದೆ ಸಂಯುಕ್ತ ನಾಗರಿಕರ ರಂಗವನ್ನು ಏರ್ಪಡಿಸಿದ್ದರೆಂದು ತಿಳಿಸಿರುತ್ತಾರೆ ಶಾಸನ ಸಭಾ ಸಂಯುಕ್ತ ರಂಗದಿಂದಲೂ ಅವರನ್ನು ಹೊರದೂಡುವಂತೆ ಕೆ ಎಂ ಪಿ ಪಕ್ಷವು ಸೂಚಿಸಿರುತ್ತದೆ

ಕೊರಿಯಾ ಶಾಂತಿಗಾಗಿ ಭಾರತದ ನಿರ್ಣಯ

ಕೊರಿಯಾ ಬಿಕ್ಕಟ್ಟಿನ ನಿವಾರಣೆಗಾಗಿ ಭಾರತವು ನಿರ್ಣಯವೊಂದನ್ನು ವಿಶ್ವಸಂಸ್ಥೆಗೆ ಕಳುಹಿಸಲಿದೆ ಈ ನಿರ್ಣಯವನ್ನು ಖಾಸಗಿಯಾಗಿ ಏಷ್ಯಾ ಅರಬ್ ಪ್ರತಿನಿಧಿ ಗಳೊಡನೆ ಚರ್ಚಿಸಲಾಗುವುದೆಂದು ಹೇಳಲಾಗಿದೆ

"ಸ್ಕಾರಮೂಷ್" ಚಿತ್ರ

ಅಮೆರಿಕದ ಪ್ರಖ್ಯಾತ ಚಿತ್ರ ತಯಾರಕರಾದ ಮೆಟ್ರೋಗೋಲ್ಡ್‌ವಿನ್ ಮೇಯರ್ ಸಂಸ್ಥೆಯವರ ಈ ಇಂಗ್ಲೀಷ್ ಚಿತ್ರವು ನಗರದ ರಾಯಲ್ ಟಾಕೀಸಿನಲ್ಲಿ ನೆನ್ನೆಯಿಂದ ಪ್ರದರ್ಶಿಸಲ್ಪಡುತ್ತಿದೆ ವರ್ಣರಂಜಿತವಾಗಿ ವಸ್ತ್ರಾಕರ್ಷಣೀಯವಾಗಿ ದ್ವಂದ್ವ ಯುದ್ಧ ಮುಂತಾದ ಮನೋಹರ ದೃಶ್ಯಗಳಿಂದ ಕೂಡಿದ ಈ ಚಿತ್ರವು ಬಹಳವ ಮನೋರಂಜಕವಾಗಿದೆ

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರೆಟರಿಯವರ ಆಫೀಸ್, ಮೈಸೂರು

ಟೆಂಡರ್ ನೋಟೀಸ್

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚೆಲುವಾಂಬಾ ಆಸ್ಪತ್ರೆಗಳಿಗೆ 1953 1954 ನೇ ಸಾಲಿಗೆ ರೋಗಿಗಳಿಗೆ ಬೇಕಾದ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಸಪ್ಲೈ ಮಾಡುವವರಿಂದ ವಗೈರು ಪ್ರತಿಗಳಲ್ಲಿ ಫುಲ್‌ಸ್ಕ್ಯಾಪ್ ಸೈಜ್ ಮೊಹರಾದ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ 1952 ನೇ ಇಸ್ವಿ ಡಿಸೆಂಬರ್ ಮಾಹೆ ತಾರೀಖು 8 12 1952 ನೇ ಸೋಮವಾರ ಮತ್ತು 9 12 1952 ನೇ ಮಂಗಳವಾರ 10 ಘಂಟೆಗೆ ಸರಿಯಾಗಿ ತೆಗೆದುಕೊಳ್ಳಲಾಗುತ್ತೆ ಹೆಚ್ಚಿಗೆ ವಿವರಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ ರಜಾ ದಿವಸಗಳು ವಿನಹಾ ಬಾಕಿ ದಿವಸಗಳಲ್ಲಿ ಬೆಳಗ್ಗೆ 8 ರಿಂದ 12 ಘಂಟೆಯವರೆಗೂ, ಮಧ್ಯಾಹ್ನ 1 ರಿಂದ 5 ಘಂಟೆಯ ವರೆಗೂ ಪಡೆಯಬಹುದು

ತಾ|| 8 12 1952 10 ಘಂಟೆಗೆ
1 ಆಹಾರದ ಸಾಮಾನುಗಳು
2 ಆಸ್ಪತ್ರೆ ಸಾಮಾನುಗಳು
3 ಸ್ವದೇಶಿಯ ಔಷಧಿಗಳು

ತಾ|| 9.12 1952 10 ಘಂಟೆಗೆ
1 ಅಪ್ಪಟ ಹಾಲು
2 ಬೀಳಿಯ ಬ್ರೆಡ್ಡು

(ಸಹಿ) ಎಂ. ಆರ್ ನರಸಿಂಗರಾವ್
ಸೆಕ್ರೆಟರಿ

ಹಳ್ಳಿ ದೊಂಬಿಯಲ್ಲಿ ೩ ಜನರ ಮರಣ

ಮದ್ರಾಸು ಪ್ರಾಂತದ ತಿಚ್ಚಿಯೂರಿನ ಬಳಿ ಚಿನ್ನಮಾಳಿಕುಂಟ್ಲ ಎಂಬ ಹಳ್ಳಿಯಲ್ಲಿ ಎರಡು ಗುಂಪುಗಳಿಗೆ ಸಂಭವಿಸಿದ ಘರ್ಷಣೆಯ ಪರಿಣಾಮವಾಗಿ ಕಂದಸ್ವಾಮಿ ನಾಯ್ಕರ್, ಸೋಲೆಸಾಮಿ ನಾಯ್ಕರ್ ಮತ್ತು ರಾಮಸಾಮಿ ನಾಯ್ಕರ್ ಎಂಬುವರಿಗೆ ಕತ್ತಿ ಮತ್ತು ಪಟ್ಟೆ ಕತ್ತಿಗಳಿಂದ ಪೆಟ್ಟುಬಿದ್ದು ಕೊಲೆಯಾಗಿರುವರೆಂದು ವರದಿಯಾಗಿದೆ ಪೋಲೀಸರು ಅಪರಾಧದ ನಾಡುಬಾಂಬುಗಳನ್ನು ವಶಪಡಿಸಿಕೊಂಡಿರುವರು

ಅಂಗಡಿ ಆರಂಭೋತ್ಸವ

ರಾಜಧಾನಿಯ ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಚೌಕದ ಗಾಣನೇ ನಂ ಮನೆಯಲ್ಲಿ ಶ್ರೀ ಹೆಚ್ ನಂಜಪ್ಪನವರು ಮೊನ್ನೆ ಸಂಜೆ ಶಾಂತಿ ರಾಖಿ ವರ್ಕ್ಸ್ ಎಂಬ ಅಂಗಡಿಯ ಪ್ರಾರಂಭೋತ್ಸವವನ್ನು ನೆರವೇರಿಸಿದರು

ದೆಹಲಿಗೆ ಸರ್ ಮಿರ್ಜಾ

ಸರ್ ಮಿರ್ಜಾ ಇಸ್ಮೇಲರು ಕಳೆದ ೫ ನೆ ತಾ ದೆಹಲಿಗೆ ಪ್ರಯಾಣ ಮಾಡಿದರು ಪರ್ಷಿಯದ ಪ್ರಧಾನಿಯವರೊಡನೆ ತೈಲ ವ್ಯಾಜ್ಯದ ಸಂಬಂಧವಾಗಿ ತಾವು ನಡೆಸಿದ ಮಾತುಕತೆಗಳ ವಿವರವನ್ನು ಪ್ರಧಾನ ಮಂತ್ರಿ ನೆಹರೂರವರಿಗೆ ಅವರು ವರದಿ ಮಾಡುವರೆಂದು ಹೇಳಲಾಗಿದೆ

ನಿಧನ

ರಾಜಧಾನಿಯ ಕಾಂಗ್ರೆಸ್ ಕಾರ್ಯಕರ್ತರುಗಳಾದ ಶ್ರೀಗಳು ಎನ್ ವಿಶಕಂಠರಾವ್, ಎನ್ ಗೋಪಾಲರಾವ್ ಮತ್ತು ಈಶ್ವರರಾಯರ ಬಂಧುವಾದ ಶ್ರೀ ನಂಜಪ್ಪರಾಯರು ಮೊನ್ನೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವಿ ಪ್ರಮಾಥುರ್ಯರ್, ಮಧ್ಯಾಹ್ನ ೧ ೩೦ ಜಲತರಂಗ್ ಪಿ ವಿನ್ನು ಮಾಳ್ಳ ನ ಗೀತೆಗಳು ಸಂಜೆ ೫ ೩೦ ಮತ್ತು ೭ ೩೦ ವಿಜಯಲಕ್ಷ್ಮಿ ಮತ್ತು ಲಕ್ಷ್ಮಿ ಶ್ರೀನಿವಾಸರ ಸಂಗೀತ ೬೧೦ ಮತ್ತು ಆ ಬಿ ಆರ್ ಶ್ರೀನಿವಾಸರ ಸಂಗೀತ ೮ ೩೦ ಅರ್ನಸ್ಟ್ ಎಗಾ ಸಾಹಿಲಾ ಟೀ ಬಿ ರಿಕಾರ್ಡ್ ಸಂಗೀತ ೯ ೩೦ ಕೊಲ್ಲೂರ್ ಕೆ ಕಳ ರಾಷ್ಟ್ರೀಯ ಕಾರ್ಯಕ್ರಮ ದೆಹಲಿ ಪ್ರಸಾರ

ಸ್ಪೆಷಲ್ ಬಸ್ಸಿನಲ್ಲಿ

ರಾಮೇಶ್ವರ ಮತ್ತು ದಕ್ಷಿಣ ಭಾರತ ಪುಣ್ಯ ಕ್ಷೇತ್ರಗಳ ಮಜಾ ಯಾತ್ರೆ

27-11 52 ನೇ ತಾ|| ಬಸ್ಸು ಮೈಸೂರಿನಿಂದ ಹೊರಡುವುದು

ಛಾರ್ಜ್ 125 ರೂಗಳು ಮಾತ್ರ

ಹೆಚ್ಚಿನ ವಿವರಗಳಿಗೆ 0 2-0 ಸ್ಟ್ಯಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯರಿ ಅಥವಾ ಮುಖತಃ ಬಂದು ನೋಡಿರಿ

ಚಾಮುಂಡೇಶ್ವರಿ ಯಾತ್ರಾ ಕಂಪೆನಿ,
1804, ಶಿವರಾಂಪೇಟೆ ಮೈಸೂರು

ಗೋಹತ್ಯೆ ಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕು

ಭಾರತದ ಅದ್ಯಂತ ಗೋವಧೆಯನ್ನು ಪೂರ್ಣವಾಗಿ ನಿಷೇಧಿಸುವ ಬಗ್ಗೆ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಲು ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಕ್ರಮ ಕೈಗೊಂಡಿರುವುದೆಂದೂ, ಈ ಕಾರ್ಯವು ಶ್ಲಾಘನೀಯವೆಂದೂ, ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಗೋವಂಶದ ಸಂರಕ್ಷಣೆಯು ಆವಶ್ಯಕವಾಗಿರುವುದರಿಂದ ಗೋವಧೆ ಯನ್ನು ನಿಷೇಧಿಸುವುದರಿಂದಲೇ ಭಾರತದ ಪಂಚ ವಾರ್ಷಿಕ ಯೋಜನೆಯು ಸಫಲವಾಗುವುದೆಂದೂ ರಾಜಧಾನಿಯ ಹಲವು ಪ್ರಮುಖರು ಮನವಿಯೊಂದನ್ನು ಹೊರಡಿಸಿ, ಸಾರ್ವಜನಿಕರು ಈ ಕಾರ್ಯದಲ್ಲಿ ಸರ್ವ ಸಹಾಯವನ್ನೂ ಮಾಡಬೇಕೆಂದು ವಿನಂತಿ ಮಾಡಿಕೊಂಡಿರುವರು ಶ್ರೀಗಳಾದ ಎಂ ರಾಮಸ್ವಾಮಿ, ಟಿ ಆರ್ ಜೋಸ್ಯರ್, ಎ ವೆಂಕಟೇಶಯ್ಯ, ಪುಟ್ಟಸ್ವಾಮಿರಾವ್, ಬಿ ಜಿ ದಾಸ್, ಕೃಷ್ಣಸ್ವಾಮಿ, ಹೆಚ್. ಕೆ ಕುವರಸ್ವಾಮಿ, ಎಂ ಎನ್ ತಿಮ್ಮಯ್ಯ, ಹೆಚ್. ಡಿ ರಾಘವರಾಜು ಮುಂತಾದವರು ಮನವಿಗೆ ರುಜು ಮಾಡಿರುವರು ಗೋಹತ್ಯೆಯನ್ನು ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಅವರು ಸೂಚಿಸಿರುವರು

ಕೇರಂ ಪಂದ್ಯ

ರಾಜಧಾನಿಯ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ನ್ಯೂ ಅಸೋಸಿಯೇಟ ಕೇರಂ ಕ್ಲಬ್ಬಿನವರು ಸಿಂಗಲ್ಸ್ ಪಂದ್ಯವನ್ನು ಏರ್ಪಡಿಸಿರುತ್ತಾರೆ ಪ್ರವೇಶ ಧನ ರೂ ಭಾಗವಹಿಸಲು ಇದೇ ೧೫ ನೇ ತಾ|| ಕೊನೇ ದಿನ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ
ಕಡಲೆಕಾಯಿ ಎಣ್ಣೆ	[illegible]	[illegible]
ಎಳ್ಳು	೬೮ ೧೪ ೦	೭೦-೦
ಹರಳು ಬೀಜ	೪೦ ೧-೦	೪೩ ೪
ಹುರುಳಿ	೫೭ ೮ ೦	೫೦ ೧೦
ತೊಗರಿ	೫೩-೪ ೦	೫೬
ಉದ್ದು	೫೮ ೮	
ಹಲಸಂದಿ	೫೫ ೧ -೦	
ಹುಚ್ಚೆಳ್ಳು	೫೪ ೦-೦	
ಅವರೆ	೫೯ ೧೦ ೦	
ಕ ಬಿಸಿನಾಯು ಮಂಜ ಗಿಣ್ಣೆ	೭ ೦ ೦	೧೮ ೦
ಮಾಲೆಕಡಲೆ	೫ ೧೫ ೦	೬ ೦೪
ಬೆಲ್ಲ	೪-೫-೦	
ಸೀಗೇಕಾಯಿ	೪ ೧೧-೦	೪-೧
ಹೊಂಗೇಬೀಜ	೧೫ ೧೨ ೦	

ಕಂಗಿನ ಕಾಯಿ,೧೧೦ ೧೨೫ ೦ ೦ ೨೪೪ ೦

ADMISSIONS RECEIVED
Coaching for MARCH 53
B.A & B Sc. (Eng & P.C M)
INTER (Eng P C M C B Z)
Private Tuitions Arranged
CITY TUTORIAL COLLEGE,
V. V Market Mysore

Edited, Printed and Published by A R Nagaraja at Sadhvi Press, D Subbiah Road, Mysore

ರೋ. ನಂ 792 WEEKLY EDITION ಒಂದು ಪ್ರತಿಗೆ ೧ ಆಣೆ

ಸಾಧ್ವಿ

ಸಂಪುಟ ೧೬] ಭಾನುವಾರ ೯ ೧೧-೧೯೫೩ [ಸಂಚಿಕೆ ೧೨

ಯೂರೋಪಿನಲ್ಲಿ ಬಿರುಗಾಳಿ ಅನಾಹುತ

ಬೊಂಬಾಯಿ ಮಂತ್ರಿಗಳ ಆಗಮನ

ಮೈಸೂರು ೯

ಬೊಂಬಾಯಿಯ ಸ್ಥಳೀಯ ಸಂಸ್ಥೆಗಳ ಮಂತ್ರಿ, ಶ್ರೀ ಎಂ ಪಿ ಪಾಟೀಲರು ನಿನ್ನೆ ದಿನ ಇಲ್ಲಿಗೆ ಆಗಮಿಸಿ, ವೆಸ್ಟ್‌ಲೇಕ್ ಭವನದಲ್ಲಿ ತಂಗಿರುವರು ಈ ದಿನ ಅವರು ನಗರದ ಹಲವು ಪ್ರೇಕ್ಷಣೀಯ ಪ್ರದೇಶಗಳಿಗೆ ಭೇಟಿಯಿತ್ತರು

ಸ್ನಾನ ಸಮಯದಲ್ಲಿ ಮೈಸುಟ್ಟು ಬಾಲಕಿಯ ಮರಣ

ರಾಜಧಾನಿಯ ಹಳೇ ಮೈಸೂರು ಬ್ಯಾಂಕು ರಸ್ತೆಯಲ್ಲಿರುವ ಸುಬ್ರಹ್ಮಣ್ಯೇಶ್ವರ ಹಾಲಿನ ಶ್ರೀ ಎಲ್. ಎ. ಕೃಷ್ಣಂಗಯ್ಯನವರ ೮ ವರ್ಷದ ಮಗಳು ಜಯನಾಗಮ್ಮ ಎಂಬ ಬಾಲಕಿಯು ಮೊನ್ನೆ ಬೆಳಗ್ಗೆ ಆರೋಗ್ಯ ರಸ್ತೆಯ ಹಿಂಭಾಗದಲ್ಲಿರುವ ಗೀತಾ ಪ್ರಚಾರಿಣಿ ಸಭೆಯ ಕಟ್ಟಡದ ಆವರಣದಲ್ಲಿರುವ ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆಮಾಡಿ ನಮಸ್ಕಾರ ಮಾಡುವಾಗ ಹಣತೆಯ ದೀಪವು ಬಾಲಕಿಯ ಸೀರೆ ಸೆರಗಿಗೆ ತಗುಲಿ ಹತ್ತಿಕೊಂಡಿತೆಂದೂ ಕೂಡಲೇ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಯಿತು ಆ ಹುಡುಗಿಯು ಮೃತಪಟ್ಟಳೆಂದೂ ವರದಿಯಾಗಿದೆ

ಪಂ ಶ್ರೀನಾರಾಯಣ ಪಂಡಿತರು ಆಯುರ್ವೇದ ಕಾಂ॥ ಉಪಾಧ್ಯಕ್ಷರು

[illegible]ಇಂದೂರಿನಲ್ಲಿ ನಡೆದ ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ಸಿನ ಉಪಾಧ್ಯಕ್ಷರಾಗಿ ಬೆಂಗಳೂರು ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯ ಶಾಲೆಯ ಮುಖ್ಯಾಧಿಕಾರಿಗಳಾದ ಶ್ರೀ ವೈದ್ಯ ನಾರಾಯಣ ಪಂಡಿತರು ಆರಿಸಲ್ಪಟ್ಟಿರುವರು

ಸುಳ್ಳು ಹೆಸರಿನಲ್ಲಿ ಮನಿಯಾರ್ಡರ್ ಪಡೆದುಕೊಳ್ಳೆ ದಸ್ತಗಿರಿ

ರಾಜಧಾನಿಯ ದಾಸ ಪ್ರಕಾಶ ಭವನದಲ್ಲಿ ಕಳೆದ ಎರಡು ತಿಂಗಳ ಕೆಳಗೆ ತಂಗಿದ್ದ ದಾವಣಗೆರೆಯ ಕೃಷ್ಣಾಚಾರ್ ಎಂಬಾತನು ಶಿವಮೊಗ್ಗೆಗೆ ಬಿ ವಿ ನಾಗರಾಜ ಶೆಟ್ಟರ ಹೆಸರಿನಲ್ಲಿ ತಂತಿ ಕಳುಹಿಸಿ ಅಲ್ಲಿಂದ ಬಂದ ೬೦೦ ರೂಪಾಯಿ ಮನಿಯಾರ್ಡರನ್ನು ತಾನೇ ನಾಗರಾಜಶೆಟ್ಟಿಯೆಂದು ಹೇಳಿ ಪಡೆದನೆಂದು ಪೋಲೀಸರು ಅವನನ್ನು ದಸ್ತಗಿರಿ ಮಾಡಿರುತ್ತಾರೆ

ಸಂತೋಷ್ ಫುಟ್‌ಬಾಲ್ ಆಟದಲ್ಲಿ ಮೈಸೂರಿನ ಜಯ

[illegible]ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್ಷಿಪಿಗಾಗಿ ಏರ್ಪಾಡಾಗಿರುವ ಸಂತೋಷ್ ಟ್ರೋಫಿ ಪಂದ್ಯವು ನಿನ್ನೆ ಬೆಂಗಳೂರು ಸ್ಟೇಡಿಯಂನಲ್ಲಿ ನಡೆದು ಮೈಸೂರಿನ ಆಟಗಾರರು ಎದುರಾಳಿ ತಂಡದವರು ಆಟ ಪ್ರಾರಂಭವಾದ [illegible] ನಿಮಿಷಗಳಲ್ಲೇ ಬಂಗಾಳದವರ ಮೇಲೆ ಒಂದು ಗೋಲು ಹೊಡೆದು ತಮ್ಮ ಟೀಮಿಗೆ ಜಯಗಳಿಸಿಕೊಟ್ಟರು ೪೦ ಸಾವಿರ ಪ್ರೇಕ್ಷಕರು ಆಟವನ್ನು ನೋಡಿದರು ೬ ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ ಬಂಗಾಳದವರು ಪಂದ್ಯವನ್ನು ಮೈಸೂರಿನವರು ಇದೇ ರೀತಿ ಸೋಲಿಸಿದ್ದರು ಆಗಲೂ ಮುನಿಗೌಂಡರವರೇ ಮೈಸೂರು ಟೀಮಿನ ಕ್ಯಾಪ್ಟನ್ ಆಗಿದ್ದರು

ಶಾಂತಿ ಚಳುವಳಿಯಿಂದ ಯುದ್ಧದ ನಿವಾರಣೆ

ಪಂಡಿತ ಸುಂದರಲಾಲರ ಭಾಷಣ

ಬೆಂಗಳೂರು ೮

ಇಂದು ಇಲ್ಲಿ ನಡೆದ ಶಾಂತಿ ಸಮ್ಮೇಳನದ ಪ್ರಾರಂಭೋತ್ಸವವನ್ನು ಅಲಹಾಬಾದಿನ ಶ್ರೀ ಪಂಡಿತ ಸುಂದರಲಾಲರು ನೆರವೇರಿಸುತ್ತಾ ಜಗತ್ತಿನ ಜನರು ಈಗಾಗಲೇ ಎರಡು ಮಹಾ ಯುದ್ಧಗಳನ್ನು ನೋಡಿ ಮೂರನೇ ಯುದ್ಧವು ಬೇಡವೆಂದು ಬಯಸುತ್ತಿರುವರೆಂದೂ ಶಾಂತಿಯ ಚಳುವಳಿಯಲ್ಲಿ ಎಲ್ಲರೂ ಸೇರಿದರೆ ಮತ್ತೊಂದು ಯುದ್ಧವು ಇಲ್ಲದಂತೆ ಮಾಡಲು ಸಾಧ್ಯವೆಂದೂ ಹೇಳಿದರು ಶಾಂತಿ ಚಳುವಳಿಯ ಕಮ್ಯೂನಿಸ್ಟರ ತಂತ್ರವಲ್ಲವೆಂದೂ ಅವರು ಹೇಳಿದರು

ಕೊರಿಯಾದಿಂದ ಎಲ್ಲ ವಿದೇಶೀ ಸೈನ್ಯಗಳನ್ನು ಹಿಂದಕ್ಕೆ ಕರೆಸಿದಲ್ಲಿ ಪ್ರಪಂಚದ ಶಾಂತಿಗೆ ಭಾರಿ ಉಪಾಯವೆಂದು ಅವರು ಸೂಚಿಸಿದರು ಚೀನದ ಎಲ್ಲ ಜನರೂ ಚಿಯಾಂಗ್ ಕೈಷೇಕರನ್ನು ಬಹಿಷ್ಕರಿಸಿರುವುದಾಗಿಯೂ ಗಾಂಧೀಜಿಯವರ ಉಪದೇಶಗಳ ಅನುಷ್ಠಾನದಲ್ಲಿ ಭಾರತೀಯರು ಮತ್ತು ಭಾರತ ಸರ್ಕಾರಕ್ಕಿಂತ ಅವರು ಸಹಾ ಮುಂದಿದ್ದಾರೆಂದೂ ಚೀನವು ಕಮ್ಯೂನಿಸ್ಟ್ ರಾಷ್ಟ್ರವೆಂದು ಕರೆಯಲ್ಪಟ್ಟರೆ, ಗಾಂಧಿ ತತ್ವಕ್ಕೂ ಕಮ್ಯೂನಿಸಂಗೂ ವ್ಯತ್ಯಾಸವೇ ಇಲ್ಲವೆಂದೂ ಅವರು ಹೇಳಿದರು ಭಾರತಕ್ಕೆ ಕಮ್ಯೂನಿಸ್ಟರಿಂದ ಹೆದರಿಕೆಯಿಲ್ಲವೆಂದೂ ಬಂಡವಾಳ ಶಾಹಿಗಳಿಂದಲೇ ಅಪಾಯವೆಂದೂ ನುಡಿದರು

ಅಡ್ವೋಕೇಟ್ ಜನರಲ್ಲರ ಸಂಭಾವನೆ

ಸಂಸ್ಥಾನದ ಅಡ್ವೋಕೇಟ್ ಜನರಲ್ಲರ ಕೆಲಸ ಕಾರ್ಯ ಮತ್ತು ಸಂಭಾವನೆಗಳನ್ನು ನಿಗದಿ ಮಾಡಿ ರಾಜಪ್ರಮುಖರು ಆಜ್ಞೆಯೊಂದನ್ನು ಹೊರಡಿಸಿ, ಕ್ರಿಮಿನಲ್ ಮೊಕದ್ದಮೆಯಲ್ಲಿ ಹಾಜರಾದರೆ ದಿನ ೧೦೦ ರೂ. ಗೆ ಹೆಚ್ಚಿಲ್ಲವೆ ಕೊಡಬಹುದೆಂದೂ, ಜಂಟಿ ಮತ್ತು ಕೊಡಲಾದ ಮೊಕದ್ದಮೆಗಳಲ್ಲಿ ಮಾತ್ರ ಅವುಗಳ ಪ್ರಾಮುಖ್ಯತೆಗೆ ತಕ್ಕಂತೆ ಹೆಚ್ಚಿನ ಫೀಸನ್ನು ಕೊಡಬಹುದೆಂದೂ ಸೂಚಿಸಿರುತ್ತಾರೆ ಒಂದೇ ದಿನದಲ್ಲಿ ಒಂದಕ್ಕಿಂತ ಹೆಚ್ಚಿನ ಮೊಕದ್ದಮೆಗಳಿದ್ದರೆ ಮೊಬಲಗು ನಿಗದಿಸಿದ ಫೀಸಿನ ಎರಡನೇ ಎರಡು ಭಾಗದಷ್ಟು ಹಣಕ್ಕೆ ಮೀರದಂತೆ ಹೆಚ್ಚಾಗಿ ಕೊಡಬಹುದೆಂದೂ ತಿಳಿಸಲಾಗಿದೆ

ಯೂರೋಪಿನಲ್ಲಿ ಭಾರಿ ಬಿರುಗಾಳಿ

ಗಂಟೆಗೆ ೧೦೫ ಮೈಲಿ ವೇಗದ ಭಾರಿ ಬಿರುಗಾಳಿಯು ಮೊನ್ನೆ ಯೂರೋಪಿನ ಮೇಲೆಲ್ಲಾ ಬೀಸಿದ ಪರಿಣಾಮವಾಗಿ ಅನೇಕ ಕಡೆ ಪ್ರವಾಹ, ಬೆಂಕಿ ಮತ್ತು ಇತರ ನಷ್ಟಗಳು ಸಂಭವಿಸಿರುವುವೆಂದು ವರದಿಯಾಗಿದೆ ಡನ್‌ಕರ್ಕ್ ತೀರದ ನಗರದ ಮೇಲೆ ಭಾರಿ ಅಲೆಗಳು ಬಡಿದ ಹಡಗುಗಳಿಗೆ ದಾರಿ ತೋರಿಸುವ ದೀಪದ ಸ್ತಂಭಗಳು ಕಾಣದಂತಾದುವು ಅನೇಕ ವರ್ಷಗಳಿಂದಲೂ ಇಂತಹ ಬಿರುಗಾಳಿಯು ಎದ್ದಿರಲಿಲ್ಲ ಇಂಗ್ಲಿಷ್ ಕಡಲ್ಗಾಲುವೆ ಮತ್ತು ಜರ್ಮನ್ ಸಮುದ್ರದಲ್ಲಿ ಹಡಗುಗಳು ಚೆಲ್ಲಾಪಿಲ್ಲಿಯಾದುವು ಜರ್ಮನಿಯ ತೀರದಲ್ಲಿ ಭಾರಿ ಮಳೆಗಾಳಿಯುಂಟಾಗಿ, ೪ ಜನ ತೀರದ ಕೆಲಸಗಾರರು ಮುಳುಗಿಹೋದರಲ್ಲದೆ ಇನ್ನೂ ಇಬ್ಬರು ಮಡಿದರೆಂದು ಹೇಳಲಾಗಿದೆ ಬೆಲ್ಜಿಯಂ ದೇಶದ ಅದ್ಯಂತವೂ ಅನೇಕ ಕಡೆ ಬೆಂಕಿಯುಂಟಾಯಿತು. ಫ್ರಾನ್ಸಿನಲ್ಲಿ ನೂರಾರು ಟೆಲಿಫೋನ್ ಕಂಬಗಳು ಮುರಿದು ಮನೆಗಳಿಗೆ ನಷ್ಟವುಂಟಾಗಿದೆ.

ಕೊಡಗಿನ ಹುಡುಗಿಯಿಂದ ಆಹಾರ ಸೇವನೆ

ಕಳೆದ ೬ ತಿಂಗಳುಗಳಿಂದಲೂ ಆಹಾರ, ನೀರುಗಳನ್ನು ಮುಟ್ಟದೆ ಇದ್ದ ಕೊಡಗಿನ ಶುಂಟಿಕೊಪ್ಪದ ಹುಡುಗಿ ಧನಲಕ್ಷ್ಮಿಯು ಮೊನ್ನೆಯಿಂದ ಆಹಾರ ಮತ್ತು ನೀರನ್ನು ಸೇವಿಸಲು ಪ್ರಾರಂಭಿಸಿರುವಳೆಂದು ವರದಿಯಾಗಿದೆ ಇದುವರೆಗೆ ಯಾವುದನ್ನಾದರೂ ತಿಂದರೆ ಆಕೆಗೆ ವಾಂತಿಯಾಗುತ್ತಿತ್ತು ಆಕೆಯು ಆರೋಗ್ಯವಾಗಿರುತ್ತಾಳೆ

೧೫೦೦ ರೂ ದುರುಪಯೋಗವೇ ?

ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿದ ಸುಮಾರು ೧,೫೦೦ ರೂ ಗಳನ್ನು ದುರುಪಯೋಗಪಡಿಸಿಕೊಂಡರೆಂದು ದೇವರಾಜಾ ಪೋಲೀಸರು ಆಸ್ಪತ್ರೆಯ ನೌಕರರಾದ ಬಿ ಜಿ ಸುಬ್ರಹ್ಮಣ್ಯಂ ಮತ್ತು ವರದರಾಜ ಇವರುಗಳ ಮೇಲೆ ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿಕೊಂಡಿರುತ್ತಾರೆ

ದಕ್ಷಿಣ ಆಫ್ರಿಕದ ದೊಂಬಿಯಲ್ಲಿ ೫ ಜನರ ಮರಣ

ದಕ್ಷಿಣ ಆಫ್ರಿಕದ ವಜ್ರದ ಗಣಿ ಕ್ಷೇತ್ರವಾದ ಕಿಂಬರ್ಲಿಯಲ್ಲಿ ನಿನ್ನೆ ನಡೆದ ದೊಂಬಿಯ ಪರಿಣಾಮವಾಗಿ ೫ ಮಂದಿ ಆಫ್ರಿಕನ್ನರು ಸತ್ತು, ೩೯ ಜನರಿಗೆ ಗಾಯಗಳಾಗಿವೆ ಅಲ್ಲಲ್ಲೇ ಗುಂಡು ಹಾರಿಸುವ ಪ್ರಕರಣಗಳು ನಡೆಯುತ್ತಿರುವುವೆಂದೂ ಹೇಳಲಾಗಿದೆ. ಅಲ್ಲಿನ ಪೌರ ಸಭಾ ಕಛೇರಿ ಮತ್ತು ಭವನಗಳಿಗೆ ಬೆಂಕಿ ಇಡಲಾಯಿತೆಂದೂ ವರದಿಯಾಗಿದೆ.

'ಶಾಂತಿ ಸಮ್ಮೇಳನ' ದಲ್ಲಿ ಕಾಂಗ್ರೆಸ್ಸಿನವರ ಪಾತ್ರವಿಲ್ಲ

ಪಂಜಾಬು ಪ್ರಾಂತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಜ್ಞಾನಿ ಗುರುಮುಖ ಸಿಂಗ್‌ರವರು ಸೂಚನೆಯೊಂದನ್ನು ಹೊರಡಿಸಿ ಕಾಂಗ್ರೆಸ್ಸಿನವರು ಶಾಂತಿ ಸಮ್ಮೇಳನಗಳಲ್ಲಿ ಭಾಗವಹಿಸಕೂಡದೆಂದು ತಿಳಿಸಿರುತ್ತಾರೆ ಕಾಂಗ್ರೆಸ್ ನಾಯಕರಿಂದ ಈ ಬಗ್ಗೆ ಸೂಚನೆಗಳು ಬಂದಿರುವುದಾಗಿಯೂ ಅವರು ಹೇಳಿರುವರು ಈ ಶಾಂತಿ ಸಮ್ಮೇಳನವು ಕಮ್ಯೂನಿಸ್ಟ್ ಪ್ರೇರಿತವಾದುದೆಂದೂ, ಕಾಂಗ್ರೆಸ್ಸು ಶಾಂತಿಯ ಧ್ಯೇಯದ ಆಧಾರದ ಮೇಲೆಯೇ ಕಟ್ಟಲ್ಪಟ್ಟಿರುವುದೆಂದೂ, ಅದರ ಮುಖಂಡರು ಸರ್ವದಾ ಶಾಂತಿಗಾಗಿಯೇ ಶ್ರಮಿಸುತ್ತಿರುವರೆಂದೂ ಪಂಜಾಬು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯವರು ತಿಳಿಸಿರುವರು

ಪೋರ್ಚುಗೀಸ್ ಗೌರ್ನರ್ ಜನರಲ್ಲರಿಗೆ ಕಪ್ಪು ಧ್ವಜ

ಪೋರ್ಚುಗೀಸರ ಸ್ವಾಸ್ಥ್ಯಗಳ ಹೊಸ ಗೌರ್ನರ್ ಜನರಲ್ಲರು ಮೊನ್ನೆ ಬೊಂಬಾಯಿ ಹೋಟೇಲಿಗೆ ಬಂದು ಇಳಿದಾಗ, ಹಲವರು ಕಪ್ಪು ಬಾವುಟಗಳನ್ನು ಹಿಡಿದು ಹೋಟೇಲಿನ ಮುಂದೆ ಪ್ರದರ್ಶನ ನಡೆಸಿ, ಅವರು ಹಿಂತಿರುಗಬೇಕೆಂದು ಘೋಷಿಸಿದರು ಶಾಂತಿಯ ಭಂಗವಾಗಿ ಅವರನ್ನು ಪೋಲೀಸರು ಚದುರಿಸಿದರು

ಫೆಬ್ರವರಿ ೧೫ ರಿಂದ ಶೃಂಗೇರಿಯಲ್ಲಿ ಸಮಾರಂಭಗಳು

ಬರುವ ಫೆಬ್ರವರಿ ೧೫ ರಿಂದ ಶೃಂಗೇರಿಯ ಶ್ರೀ ಮಠಾಧ್ಯಕ್ಷರಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರ ೬೦ ನೇ ವರ್ಷ ವರ್ಧಂತಿಯು ಶೃಂಗೇರಿಯಲ್ಲಿ ನೆರವೇರಿಸಲ್ಪಡುವುದು ಸಮಾರಂಭಕ್ಕಾಗಿ ಪೂರ್ವಸಿದ್ಧತೆಗಳು ಪ್ರಾರಂಭವಾಗಿವೆ ಈ ಸಂದರ್ಭದಲ್ಲಿ ವಿಶ್ವಶಾಂತಿ ಸ್ಥಾಪನೆಗಾಗಿ ಹವನ ಹೋಮಾದಿಗಳೂ, ಪಾರಾಯಣಾದಿಗಳೂ ನಡೆಯುವ ಏರ್ಪಾಡಾಗಿದೆ

ಪಂಚಲಿಂಗ ದರ್ಶನ ಯಾತ್ರಿಕರಿಗೆ ನಲ್ಲಿ ನೀರಿನ ವ್ಯವಸ್ಥೆ

ತಲಕಾಡಿನ ಪಂಚಲಿಂಗ ದರ್ಶನ ಯಾತ್ರೆಗೆ ಹೋಗುವವರಿಗಾಗಿ ಶುದ್ಧವಾದ ನೀರನ್ನು ಒದಗಿಸಲು ನಲ್ಲಿಗಳ ವಿಶೇಷ ಏರ್ಪಾಡನ್ನು ಮಾಡಲಾಗುವುದೆಂದೂ, ಯಾತ್ರಿಕರು ಶುದ್ಧವಾದ ನೀರನ್ನು ಮಾತ್ರ ಸೇವಿಸಬೇಕೆಂದೂ ಸಂಸ್ಥಾನದ ಆರೋಗ್ಯ ಇಲಾಖಾ ಡೈರೆಕ್ಟರರು ಸೂಚನೆಯೊಂದರಲ್ಲಿ ತಿಳಿಸಿರುತ್ತಾರೆ

ವಾರ ಭವಿಷ್ಯ

ತಾ|| ೯-೧೧-೫೨ರಿಂದ ೧೫-೧೧ ೫೨ರ ವರೆಗೆ

ಮೇಷ— ಪರಾಕ್ರಮದಿಂದ ಧನ ಲಾಭ ಆರೋಗ್ಯ ಉತ್ತಮ ಮಾನ ಸಸ್ತ್ಯ ನ ವ್ಯಾಪಾರಾದಿಗಳಲ್ಲಿ ಸಹಕಾರ ನೌಕರಿಯಲ್ಲಿ ಅಧಿಕಾರ ಪ್ರಾಪ್ತಿ ಸುಖ ಪ್ರವಾಸ ತಾ|| ೧೩, ೧೪ ಸಜ್ಜನರ ಭೇಟಿ, ಖರ್ಚು

ವೃಷಭ — ಉತ್ತಮ ಪರಿಸ್ಥಿತಿ. ಆರೋಗ್ಯದಲ್ಲಿ ಸುಧಾರಣೆ ಪ್ರವಾಸಕ್ಕೆ ಅನುಕೂಲವಿಲ್ಲ ನೌಕರಿಯಲ್ಲಿ ಪೇಚಿನ ಪ್ರಸಂಗ ತಪ್ಪುವುದು ತಾ|| ೧೦, ೧೧ ನೆಷ್ಟ, ಅಗ್ನಿಯಿಂದ ಹಾನಿ.

ಮಿಥುನ — ಮಾನಸಿಕ ಅಸ್ವಸ್ಥತೆ ಅಪಮಾನ. ಕುಟುಂಬದಲ್ಲಿ ಕಲಹ ಭ್ರಾತೃ ಕಲಹ ಪತ್ನಿಯ ಅಸಂತೃಪ್ತಿ ನೌಕರಿ ವ್ಯಾಪಾರಗಳಲ್ಲಿ ಕ್ಲೇಶ ವಿಶ್ವಾಸ ಘಾತ ತಾ|| ೧೩, ೧೪ ಕ್ಲೇಶ, ಅಪ್ತರಿಗೆ ಅಪಾಯ

ಕರ್ಕ— ಜಾಗರೂಕರಾಗಿರಿ ಆರೋಗ್ಯ ನೆಟ್ಟಗೆ ಹಣದ ನೆಷ್ಟ ವ್ಯಾಪಾರಾದಿಗಳಲ್ಲಿ ಸಂದಿಗ್ಧ ಸ್ಥಿತಿ. ತಾ|| ೧೦, ೧೧ ಅಪ್ರೇಕ್ಷಿತ ಭೇಟಿ ಕುರಿಲ ಪತ್ರ

ಸಿಂಹ — ಆರೋಗ್ಯ ಉತ್ತಮ ಸಾಹಸದ ಕಾರ್ಯ ಜನ ಪ್ರಿಯತೆ ವಸ್ತ್ರಗಳಿಗೆ ಚಿಂತೆ ವ್ಯಾಪಾರಾದಿಗಳಲ್ಲಿ ಧನಿಕಗೆಳೆಯರ ಸಹಕಾರ ನೌಕರಿಯಲ್ಲಿ ಸ್ನೇಹ ಅಧಿಕಾರ ಸುಖ ಪ್ರವಾಸ ತಾ|| ೯ ೧೦ ಪರೋಪಕಾರ, ವಸ್ತ್ರ ಖರೀದಿ

ಕನ್ಯಾ — ಆರೋಗ್ಯ ನೆಟ್ಟಗೆ ವ್ಯಾಪಾರಾದಿಗಳಲ್ಲಿ ಸಮರಸ ಹಣ ಕಾಸಿನ ಸ್ಥಿತಿ ಸಾಮಾನ್ಯ ತಾ|| ೧೦, ೧೧, ೧೨ ಪ್ರವಾಸದಲ್ಲಿ ವಿಘ್ನ, ಖರ್ಚು.

ತುಲಾ — ಆರೋಗ್ಯ ಸಾಧಾರಣ ವ್ಯಾಪಾರಾದಿಗಳಲ್ಲಿ ಕ್ಲೇಶ ಆದಾಯ ನೆಟ್ಟಗೆ ಖರ್ಚು ಹೆಚ್ಚು ತಾ|| ೧೩, ೧೪ ಜನಾರೋಗ್ಯ, ಕೆಮ್ಮಿನ ಬಾಧೆ

ವೃಶ್ಚಿಕ—ಆರೋಗ್ಯ ನೆಟ್ಟಗೆ ಕೊರ್ಟು ಕಾರ್ಯ ಅನುಕೂಲ ವ್ಯಾಪಾರಾದಿಗಳಲ್ಲಿ ಉಲ್ಲಾಸ. ಸ್ತ್ರೀರಾಶಿ ದೂರ ಸುಖ ತಾ|| ೧೩, ೧೪ ಮಿತ್ರ ಲಾಭ, ಯಶ.

ಧನು — ಜವಾಬ್ದಾರಿ ದೂರವಾಗುವುದು ಹಣ ಕಾಸಿನ ಖರ್ಚು ಹೆಚ್ಚು ವ್ಯಾಪಾರಾದಿಗಳಲ್ಲಿ ಉತ್ತಮ ಘಟನೆ ತಾ|| ೯,೧೦ ಕಣ್ಣುರಿ,ಧನ್ಯ ಭಾಗ್ಯಯ

ಮಕರ — ಮಕ್ಕಳಿಗೆ ಕ್ಲೇಶ. ದುಃಖದ ಕಾರ್ಯ ಗೃಹ ಕಲಹ ಆರೋಗ್ಯ ಚೆನ್ನಾಗಿಲ್ಲ ವ್ಯಾಪಾರಾದಿಗಳಲ್ಲಿ ಅಂದಾಜು ತಪ್ಪುವುದು ಪ್ರವಾಸದಲ್ಲಿ ತೊಂದರೆ ತಾ|| ೧೦, ೧೧ ಕ್ಲೇಶ,

ಪ್ರಭಾ ಅನೋಘ ಪ್ರಾರಂಭ ೭-೧೧-೫೨ ರಿಂದ

ದಿನವೂ ೩ ಪ್ರದರ್ಶನಗಳು

ಪೀಪಲ್ಸ್ ಆರ್ಟ್ ಪ್ರೊಡಕ್ಷನ್ಸ್‌ರವರ ಅತ್ಯುತ್ತಮ ತೆಲುಗು ಚಿತ್ರ

★ ಪಲ್ಲೆಟೂರು ★

(ಹಳ್ಳಿ)

ಪಾತ್ರ ಎನ್ ಟಿ ರಾಮರಾವ್,
(ಪಾತಾಳಭೈರವಿ ಪ್ರಖ್ಯಾತಿ)
ಸಾವಿತ್ರಿ, ರಂಗರಾವ್,

ಟ್ರಿಗ್ವಿ ಲಿಯವರ ಸ್ಥಾನಕ್ಕೆ ರಾಮುಲೊ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟ್ರಿಗ್ವಿಲಿಯವರು ಬರುವ ವರ್ಷ ನಿವೃತ್ತರಾಗಲಿರುವರಷ್ಟೆ? ಅವರ ಸ್ಥಾನಕ್ಕೆ ಫಿಲಿಪ್ಪೈನ್ ದ್ವೀಪಗಳ ಕ ರ್ಲೋಸ್ ರಾಮುಲೊರವರನ್ನು ನೇಮಿಸಲಾಗುವುದೆಂದು ಹೇಳಲಾಗಿದೆ

ಸುತ್ತೂರು ಮಾಧ್ಯಮಿಕ ಶಾಲಾ ಸಂಘ.

ನಂಜನಗೂಡು ತಾಲ್ಲೂಕು ಸುತ್ತೂರು ಮಾಧ್ಯಮಿಕ ಶಾಲಾ ಸಂಘದ ಪ್ರಾರಂಭೋತ್ಸವ ಸಮಾರಂಭವನ್ನು ತಾಲ್ಲೂಕು ಅಮಲ್ದಾರರಾದ ಶ್ರೀ ಶ್ರೀನಿವಾಸರಾಯರು ಕಳೆದ ೩೦ ನೇ ತಾ|| ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಎಸ್ ಎಂ ಪ್ರಭುಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ವಿದ್ಯಾಭ್ಯಾಸವು ಮುಗಿಯುವವರೆಗೆ ರಾಜಕೀಯದಿಂದ ದೂರವಾಗಿರಬೇಕೆಂದು ಶ್ರೀ ಶ್ರೀನಿವಾಸರಾಯರು ತಿಳಿಸಿದರು ಪ್ರತಿಭಾ ಮಾಸ ಪತ್ರಿಕೆಯ ಉದ್ಘಾಟನೆಯೂ ಆಯಿತು

ಆಶ್ರಮಾಧಿಕಾರ ಮತ್ತು ಪಟ್ಟ ದೀಕ್ಷಾ ಕಾರ್ಯ

ಮೈಸೂರು ಹೊಸ ಮಠಕ್ಕೆ ಸ್ವಾಮಿಗಳಾಗಿ ಆಯ್ಕೆಯಾದ ಶ್ರೀ ಗುರು ಶಾಂತ ಸ್ವಾಮಿ ಯವರಿಗೆ ಬರುವ ೧೮ ರ ಬೆಳಗ್ಗೆ ೯ ೧೦ ಘಂಟೆಯೊಳಗೆ ಆಶ್ರಮಾಧಿಕಾರವನ್ನು ವಹಿಸುವ ಕಾರ್ಯ ನೆರವೇರುವುದು ಸುತ್ತೂರಿನ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರು ಅಧ್ಯಕ್ಷತೆ ವಹಿಸುವರು ಅದೇ ಸಮಯದಲ್ಲಿ ವೀರಶೈವ ಪಟ್ಟಗಳಿಗೆ ದೀಕ್ಷಾ ಕಾರ್ಯವೂ ನಡೆಯುವುದು

ಮೀಸಹಿನಾರ

ಕುಂಭ — ಗೆಳೆಯರಿಂದ ಮೋಸ ಆರೋಗ್ಯ ನೆಟ್ಟಗಿರದು ಹಣದ ಬಗೆ ಕ್ಲೇಶ ವ್ಯಾಪಾರಾದಿಗಳಲ್ಲಿ ವಿಶ್ವಾಸ ಘಾತ ಪ್ರವಾಸದಲ್ಲಿ ಹಾನಿ ತಾ|| ೧೩,೧ ಖರ್ಚು, ಹಾನಿ

ಮೀನ — ಅಕಸ್ಮಿಕ ಹಣದ ಲಾಭ ಆರೋಗ್ಯ ನೆಟ್ಟಗೆ ಪ್ರಿಯಜನ ಸಹವಾಸ ಆರ್ಥಿಕ ಲಾಭ ತಾ|| ೧೩, ೧೦ ಶುಭ ವಾರ್ತೆ, ಮಿಷ್ಟಾನ್ನ ಲಾಭ

ಟೈರ್ ಮತ್ತು ಟ್ಯಾಂಕ್ ಸೋಲ್ ಚಪ್ಪಲಿಗಳು

ನಿಮಗೆ ಬೇಕಾದ ನಮೂನೆಯಲ್ಲಿ ಮಾಡಿಕೊಡುತ್ತೇವೆ

ಹನ್ಸ್ ಫುಟ್ ವೇರ್,

ಪಾಪಣ್ಣರಾವ್ ನಾರ್ಕೆಟ್ ಮೈಸೂರು.

ರಾಜಕಮಲ್ ಮೈಸೂರು

7-11-52ರಿಂದ ಅನೋಘ ಪ್ರದರ್ಶನ ಪ್ರತಿ ದಿನ ಮೂರು ಆಟಗಳು

ಸಂಸಾರಂ

(ತೆಲುಗು)

ಪಾತ್ರ - ಎನ್ ಟಿ ರಾಮರಾವ್,
ಪುಷ್ಪಲತಾ, 'ರೇಲಂಗಿ

ಕಾಂಗ್ರೆಸ್ ಅಧಿವೇಶನಕ್ಕೆ ನಾಮಕರಣ

ಗೋಲ್ಕೊಂಡದಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದ ಸ್ಥಳಕ್ಕೆ ನಾಸಲ್ ನಗರವೆಂದು ಹೆಸರಿಡಲಾಗಿದೆ ಹೈದರಾಬಾದು ಸಂಸ್ಥಾನದ ಪ್ರಥಮ ಅಧ್ಯಕ್ಷರಾದ ಡಾ ವಿ ಪಿ ರಾವ್ ನ ನ ಲ್ ರವರ ಹೆಸರನ್ನು ಅದಕ್ಕೆ ಕೊಡಲಾಗಿದೆ

ಶಿವ ಮತ್ತು ವಿಷ್ಣು ದೀಕ್ಷೆ

ರಾಜಧಾನಿಯ ರಾಮನಾಥ ಜಾ ರಸ್ತೆಯಲ್ಲಿರುವ ಟಿ ನಂಬರ್ ಮನೆಯಲ್ಲಿ ಜಗತ್ತಿನ ಕಲ್ಯಾಣಕ್ಕಾಗಿ ಕಾರ್ತೀಕ ಅಮಾವಾಸ್ಯೆ ಸೋಮವಾರ ಶತವಾರ ರುದ್ರಾಭಿಷೇಕ ಏಕಾದಶವಾರ ಅಭಿಷೇಕ, ವಿಶೇಷ ಜಪಾನುಷ್ಠಾನ ಇವುಗಳು ನಡೆಯುವುವು ೩೦ನೇ ತಾ|| ಬಾನ ವಾರ ಶಿವ ಮತ್ತು ವಿಷ್ಣು ದೀಕ್ಷೆಗಳನ್ನು ಏರ್ಪಡಿಸಲಾಗಿದೆ

ಗದಗಿ ನಮ್ಮ ಕರ ಶಾಲೆಗೆ ವಿಶ್ವ ಸಂಸ್ಥೆ ಪ್ರತಿನಿಧಿಗಳ ಭೇಟಿ

ವಿಶ್ವಸಂಸ್ಥೆಯ ಪ್ರಕಟಣ ಮತ್ತು ಸಾಂಸ್ಕೃತಿಕ ಶಾಖೆ ಬೆಲಿನ ಚಿತ್ರ ಶಿಲ್ಪ ಪ್ರವೀಣರಾದ ಶ್ರೀ ಬಟಿಗಾಲಿ ಯವರು ಸಂಸ್ಥಾನದ ಮೂಲಭೂತ ಶಿಕ್ಷಣ ವಿಭಾಗದ ಶ್ರೀಗಳು ಟಿ ವಿ ತಿಮ್ಮೇಗೌಡ ಮತ್ತು ಬಿ ವಿ ಸತ್ಯನಾರಾಯಣರೊಡನೆ ಸುಣ್ಣದ ಕೇರಿಯಲ್ಲಿರುವ ಬಿಸ್ತರ ಕ ನಾಯ್ಕನ ಗದಗಿ ನಮ್ಮ ಕರ ಶಾಲೆಗೆ ಮೊನ್ನೆ ಭೇಟಿಕೊಟ್ಟರು ನಯ ಸ್ಥಾಪಕ ಕವಿ ಪಿ ಎಸ್ ಬಗ್ಗೆ ವಿವರ ತಿಳಿದರು ... ಶಾಲೆಯ ಪ್ರದರ್ಶನ ... ನಡೆಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೮ ... ಸಂಸ್ಕೃತ ... ಮಧ್ಯಾಹ್ನ ... ಸಂಗೀತ ... ಸಂಜೆ ... ಗೀತಾಂಜಲಿ ... ಇಂಗ್ಲೀಷ್ ಭಾಷಣ ... ಸಂಗೀತ ... ಇಂಗ್ಲೀಷ್ ಭಾಷಣ

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

20 ಸಯ್ಯಾಜಿರಾವ್ ರೋಡ್,

ಮೈಸೂರು.

ADMISSIONS RECEIVED

Coaching Classes For The

S.S.L.C. Examination of March 53

Under the able guidance of

Sri B. SUBBANNACHAR B.Sc., L.T.

(Author of ಅಂಕಗಣಿತ Etc)

— Private Tuitions Arranged —

Separate Classes For Ladies

— FOR PARTICULARS —

CITY TUTORIAL COLLEGE,

V. V. Market, Mysore

ಸಂಗೀತ ಕಲಾಭಿವರ್ಧಿನಿ ಸಭೆ ಸ್ಥಾಪನೆ

ಮೈಸೂರು,

ಮೈಸೂರಿನ ಸಂಗೀತ ಕಲೋಪಾಸಕರ ಮತ್ತು ಕಲಾಭಿಮಾನಿಗಳ ಸಭೆಯು ನೆನ್ನೆ ಸಜೆ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಶ್ರೀ ಬಿ ಕೆ ಒದ್ದಿನಾಭಯ್ಯನವರ ಮಂದಿರದಲ್ಲಿ ಸೇರಿದ್ದಿತು. ಸಂಗೀತ ಶಾಸ್ತ್ರ ವಿಶಾರದ ಕೆ ವಾಸುದೇವಾಚಾರ್ಯರು ಅಧ್ಯಕ್ಷತೆ ವಹಿಸಿದರು ಸಂಗೀತ ಕಲೋಪಾಸಕರಿಗೆ ಪ್ರೋತ್ಸಾಹ ಕೊಡುವುದಕ್ಕಾಗಿ ಸಂಗೀತ ಕಲಾಭಿವರ್ಧಿನಿ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನವಾಯಿತು ಸಂಘದ ಕಾರ್ಯಕಾರಿ ಸಮಿತಿಯನ್ನೂ ಚುನಾಯಿಸಲಾಯಿತು

ತಲಕಾಡು ಮಹಾತ್ಮೆ ಮತ್ತು ಪಂಚಲಿಂಗ ದರ್ಶನ ಕ್ರಮ

ಮೈಸೂರು ತಾಲ್ಲೂಕು ರಾಘವೇಂದ್ರಪುರದ ಶ್ರೀನಿವಾಸ್ ಅಂಡ್ ಕೋ ರವರು ಸಂಗ್ರಹಿಸಿ, ಪ್ರಕಾಶಿಸಿರುವ ಪುಸ್ತಕದ ಗ್ರಂಥದ ಪ್ರತಿಯೊಂದು ನಮಗೆ ಬಂದಿದೆ ಕ್ಷೇತ್ರ ಮಹಿಮೆ ಪಂಚಲಿಂಗ ದರ್ಶನದ ಕಾಲ ಮತ್ತು ಕ್ರಮ ಮುಂತಾದುವನ್ನು ಅದರಲ್ಲಿ ಕೊಡಲಾಗಿದೆ ಬೆಲೆ ೧ ಆಣೆ, ಯಾತ್ರಾರ್ಥಿಗಳಿಗೆ ಉಪಯುಕ್ತವಾಗಿದೆ

" ಕಾರ್ತಿಕ" ಮಾಸ ಪತ್ರಿಕೆ

ಸಂಗೂರಿನ ಶ್ರೀ ನರಸಿಂಹಯ್ಯಂಗಾರ್ಯರು ನೆನ್ನೆ ಕಾರ್ತಿಕ ಎಂಬ ಕನ್ನಡ ಮಾಸಪತ್ರಿಕೆಯ ಸಂಪಾದಕ ಮತ್ತು ಪ್ರಕಟಣಕಾರರಾಗಿ ಡಿಕ್ಲೇರ್ ಮಾಡಿಕೊಂಡರು

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಆ ಪೈ	ರೂ ಆ ಪೈ
ನೆಲಗಡಲೆ	೧ ೨ ೮	೧೨ ...
ಎಳ್ಳು	೩೩-೨-೦	೩೨-೨-...
ಹತ್ತಿ ಬೀಜ	೪೧ ೨-೦	೪೨ ...
ಹುರುಳಿ	೩ ೨ ೮	
ಹೆಸರು	೪೩ ೩ ೦	೫೧ ...
ಉದ್ದು	೫೪ ೮-...	
ಹಲಸಂದೆ	೫೫ -೦	೩೩ ೨
ಹುಚ್ಚೆಳ್ಳು	೫೪ ೦ ೦	
ಅವರೆ	೭೯-೧೦-೦	
ಮೆಣಸಿನಕಾಯಿ		
ಮಣ ೧ಕ್ಕೆ	೧೦ ೪-೦	೧೭ ...
ಹುಣಸೇಹಣ್ಣು	೫ ೧೫ ೦	೬-೧೪
ಬೆಲ್ಲ	೩-೪-೦	
ಸೀಗೇಕಾಯಿ	೫-೮-೦	
ಕೊಂಗೇಬೀಜ	೧೫ ೧೨ ೦	
ತೆಂಗಿನಕಾಯಿ೧,೦೦೦ಕ್ಕೆ ೦ ೦ ೩೨ ೦		

FRESH ADMISSIONS

FOR

SHORTHAND & TYPEWRITING

Only, Leading to

November 1953 Examinations

Are now being received

At The

CHAMPION METROPOLITAN COLLEGE OF COMMERCE,

Co-operators Home

100 Feet Road, Mysore

Sd/- M. S. PUTTANNA

Vice Principal

Edited, Printed and Published by A. R. Nagaraj at Sadhvi Press, D...

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೦-೧೧ ೧೯೫೨ [ಸಂಚಿಕೆ ೪೭

ಹೆಗ್ಗಡದೇವನಕೋಟೆ ತಾ|| ಕಛೇರಿಯಲ್ಲಿ ಬೆಂಕಿ

ವಿಶ್ವ ಶಾಂತಿಗಾಗಿ ಚೀನಾ-ಭಾರತ ಬಾಂಧವ್ಯ ಅಗತ್ಯ

ಪಂಡಿತ ಸುಂದರಲಾಲರ ಭಾಷಣ

ಮೈಸೂರು ೧೦

ನವ ಚೀನದ ಸಿದ್ಧಿಸಾಧನೆಗಳನ್ನು ಅರಿತು ಬರಲು ಭಾರತ ನಿಯೋಗದ ನಾಯಕರಾಗಿ ಅಲ್ಲಿಗೆ ತೆರಳಿದ್ದ ಪಂಡಿತ ಸುಂದರಲಾಲರು ನಿನ್ನೆ ಚೀನಾ-ಭಾರತ ಸ್ನೇಹ ಸಂಘದ ಆಶ್ರಯದಲ್ಲಿ ಟೌನ್‌ಹಾಲಿನಲ್ಲಿ ಭಾಷಣ ಮಾಡಿದರು. ಶರೀಲಿಕಾದ ಶ್ರೀ ಎಂ. ಎ. ಶ್ರೀನಿವಾಸ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ... ಕೃಷ್ಣಮೂರ್ತಿಯವರೂ ಅಧ್ಯಕ್ಷರಾದ ಶ್ರೀ ತಗಡೂರು ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿದರು. ವಿಶ್ವವಿದ್ಯಾಲಯದ ಹಿಂದಿ ಅಧ್ಯಾಪಕರಾದ ಶ್ರೀ ಎನ್. ನಾಗಪ್ಪನವರು ಶ್ರೀ ಸುಂದರಲಾಲರ ಪರಿಚಯ ಮಾಡಿಕೊಟ್ಟರು. ಸುಂದರಲಾಲರ ಭಾಷಣದ ಸಾರಾಂಶ ಈ ರೀತಿ ಇದೆ –

ಚೀನಾಕ್ಕೂ ಭಾರತಕ್ಕೂ ನಿಕಟವಾದ ಸಂಬಂಧವಿರಬೇಕೆಂದು ನಾನು ದೃಢವಾಗಿ ನಂಬಿದ್ದೇನೆ. ಇದರಿಂದ ಇತರ ರಾಷ್ಟ್ರಗಳೊಡನೆ ಸ್ನೇಹವನ್ನು ಬೆಳೆಸಬೇಕೆಂದಿಲ್ಲ. ನಾನಾ ಕೋಟಿಯ ಮೈತ್ರಿಯೇ ನಮ್ಮ ಗುರಿ. ಭಾರತಕ್ಕೂ ಚೀನಕ್ಕೂ ಇರುವಷ್ಟು ನಿಕಟ ಸಂಬಂಧಗಳು ಬೇರೆ ಯಾವ ದೇಶಗಳಲ್ಲೂ ಇರುವುದಿಲ್ಲ. ಎರಡೂ ಅತ್ಯಂತ ಪುರಾತನವಾದ ಸಂಸ್ಕೃತಿಯ ರಾಷ್ಟ್ರಗಳು. ನೂರಾರು ವರ್ಷಗಳ ಹಿಂದಿನ ವರೆಗೆ ಈ ಎರಡು ರಾಷ್ಟ್ರಗಳೂ ಒಂದೇ ಪರಿಸ್ಥಿತಿಯಲ್ಲಿದ್ದುವು. ನಂತರ ಸಮಯದಲ್ಲಿ ಎರಡೂ ಪರಕೀಯರ ಪ್ರಭುತ್ವಕ್ಕೆ ಸ್ವಾಧೀನವಾಯಿತು.

ಕಮ್ಯೂನಿಸ್ಟ್ ತತ್ವಗಳಲ್ಲಿ ಸ್ವಲ್ಪವೂ ನಂಬಿಕೆಯಿಲ್ಲದ ನಾವು ಹದಿನೈದು ಜನರು ಚೀನಕ್ಕೆ ನಿಯೋಗ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡು ಆಶ್ಚರ್ಯಚಕಿತರಾಗಿದ್ದೇವೆ. ಚೀನಾವು ನಮ್ಮ ಮೇಲೆ ವಿಶೇಷವಾದ ಪ್ರಭಾವವನ್ನು ಬೀರಿದೆ. ನಮ್ಮ ದೇಶದಲ್ಲಿ ಆಹಾರದ ಕೊರತೆ ಜನಸಂಖ್ಯೆಯು ಹೆಚ್ಚುತ್ತಿರುವುದರಿಂದ ಎಂದು ಹೇಳಲಾಗಿದೆ. ಇಲ್ಲಿನ ಆಹಾರದ ಕೊರತೆ ಕೇವಲ ... ರಷ್ಟಿದೆ. ಆದರೆ ೧೯೪೯ ಕ್ಕೆ ಮುಂಚಿನ ಎಷ್ಟೋ ವರ್ಷಗಳಿಂದ ಚೀನಾದಲ್ಲಿ ಆಹಾರದ ಕೊರತೆ ಶೇ|| ೯ ರಷ್ಟಿತ್ತು. ೧೯೫೦ ರಲ್ಲಿ ಕೊರತೆ ಶೇ|| ... ರಷ್ಟು ಕಡಿಮೆಯಾಗಿ ಬಂದ ಮೇಲೆ ಶೇ|| ... ಕ್ಕೆ ಇಳಿಯಿತು. ಆಹಾರ ಬೆಳೆಯಲಾಯಿತು. ಹಿಂದಿನ ವರ್ಷ ಇನ್ನೂ ಶೇ|| ೦ ರಷ್ಟಿತ್ತು. ಆದರೆ ಮುಂದಿನ ವರ್ಷಕ್ಕೆ ... ಕೋಟಿ ಜನರಿಗೆ ಆಗುವ ಧಾನ್ಯವು ಉತ್ಪಾದನೆಯಾಯಿತು. ಹೀಗೆ ಅಲ್ಲಿ ಇಂದು ಆಹಾರದ ಸಮಸ್ಯೆಯೇ ಇರುವುದಿಲ್ಲ. ... ಸಹ ಅದು ಧಾನ್ಯವನ್ನು ಒದಗಿಸುತ್ತಿದೆ.

ಕಮ್ಯೂನಿಸ್ಟರು ಮನುಷ್ಯನ ನೀತಿ ನಡತೆಗಳಿಗೆ ಲಕ್ಷ್ಯ ಕೊಡುವುದಿಲ್ಲವೆಂಬ ಆಪಾದನೆಯುಂಟು. ಆದರೆ ಪೀಕಿಂಗ್ ನಗರದಲ್ಲಿ ಇದ್ದ ... ವೇಶ್ಯೆಯರಿಗೆ ಉತ್ತಮ ಶಿಕ್ಷಣ ಕೊಟ್ಟು ಒಂದು ವರ್ಷದಲ್ಲಿಯೇ ಅವರಿಗೆ ಗೌರವಯುತವಾದ ಗೃಹಿಣಿಯರ ಜೀವನವನ್ನು ನಡೆಸುವಂತೆ ಏರ್ಪಡಿಸಲಾಗಿದೆ. ... ನೈತಿಕ ಮಟ್ಟದಲ್ಲಿ ಚೀನರು ... ಎಷ್ಟೋ ಮುಂದಿದ್ದಾರೆ.

... ಭ್ರಷ್ಟಾಚಾರವೆಂಬುದೇ ಇಲ್ಲ ... ಲಂಚವೂ ಸಹ ಅಲ್ಲಿ ಪೂರ್ತಿಯಾಗಿ ನಿರ್ಮೂಲವಾಗಿದೆ.

... ಸುಧಾರಣೆಯನ್ನು ಚೀನವು ಅತ್ಯಂತ ... ಯಾಗಿ ಜಾರಿಗೆ ತಂದಿದೆ. ದೇಶದ ... ಜಮೀನನ್ನು ವಶಪಡಿಸಿಕೊಂಡು ... ತಲೆಗೂ ಹೆಣ್ಣು ಗಂಡು ಎನ್ನದೆ ... ಎಕರೆ ಬರುವಂತೆ ಹಂಚಲಾಗಿದೆ.

... ವನ್ನು ಸಂಪೂರ್ಣವಾಗಿ ತೊಡೆದು ... ಲಂಚ ವ್ಯವಹಾರವನ್ನು ಹೋಗ... ಕೃಷ್ಯವೆಂದು ಸರ್ಕಾರಿ ನೌಕರರು ಅರಿತಿರುತ್ತಾರೆ.

ಮಿತಿಮೀರಿದ ಜನಸಂಖ್ಯೆಯ ಸಮಸ್ಯೆಯ ವಿಚಾರವಾಗಿ ಅಲ್ಲಿನ ಒಬ್ಬ ಮೇಯರರೊಡನೆ ಮಾತನಾಡುತ್ತಿದ್ದಾಗ ಅವರು ತಮ್ಮಲ್ಲಿ ಜನಬಾಹುಳ್ಯದ ಸಮಸ್ಯೆಯೇ ಇಲ್ಲವೆಂದೂ ಭಾರತದಲ್ಲಿ ಹೆಚ್ಚಿನ ಜನರಿದ್ದರೆ ತಮ್ಮಲ್ಲಿಗೆ ಕಳುಹಿಸಿಕೊಡಬಹುದೆಂದೂ ಸೂಚಿಸಿದರು. ಗಾಂಧೀಜಿಯವರ ತತ್ವಗಳೇ ನವ ಚೀನದ ಪ್ರಗತಿಯ ಪ್ರೇರಣೆಗೆ ಮುಖ್ಯ ಆಧಾರ. ಭಾರತಕ್ಕಿಂತಲೂ ಸರ್ವೋದಯವನ್ನು ಚೀನವು ಮಹಾತ್ಮ ಗಾಂಧಿಯವರ ಆದರ್ಶಗಳಿಗೆ ಸಮೀಪವಾಗಿರುತ್ತದೆ. ನಾವು ಆ ತತ್ವಗಳನ್ನು ಕೊಲೆ ಮಾಡಿರುತ್ತೇವೆ.

ಚೀನದಲ್ಲಿ ಕನಿಷ್ಠ ದರ್ಜೆಯ ಕಾರ್ಮಿಕನ ಸಂಬಳ ೧೫೦ ರೂ. ಭಾರಿ ಅಧಿಕಾರಿಯ ಸಂಬಳ ೩೫೦ ರೂ. ವಿಶ್ವವಿದ್ಯಾಲಯದ ವೈಸ್ ಛಾನ್ಸಲರಿಗೂ ಅಷ್ಟೇ ಸಂಬಳ, ಅಲ್ಲಿನ ಅಧ್ಯಕ್ಷರಾದ ಮಾವೋತ್ಸೆ ತುಂಗ್‌ರವರಿಗೆ ಮಾತ್ರ ೭೦೦ ರೂ. ಸಂಬಳ. ೩೫೦ ರೂ. ನ ಚೀಫ್ ಇಂಜಿನಿಯರ್‌ಗಳೊಬ್ಬರಿಗೆ ಮಾತ್ರ ಸರ್ಕಾರದ ಮೋಟಾರು ಕಾರು, ಅವರಿಗೆ ಸ್ವಂತ ಕಾರಿಲ್ಲ. ಇತರ ಇಂಜಿನಿಯರುಗಳೂ, ಅಧಿಕಾರಿಗಳೂ ಗುಮಾಸ್ತರುಗಳೊಡನೆಯೂ, ಜವಾನರೊಡನೆಯೂ ಸಾಮಾನ್ಯ ಬಸ್ಸಿನಲ್ಲಿಯೇ ಸಂಚರಿಸುವರು.

ಮಾನವ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸುವಂತೆ ಮಹಾತ್ಮರು ಬೋಧಿಸಿದ ತತ್ವವು ಚೀನದಲ್ಲಿ ಜಾರಿಯಲ್ಲಿದೆ. ಪ್ರಜಾ ಸ್ವಾತಂತ್ರ್ಯವು ಬಂದೊಡನೆ ೯ ಲಕ್ಷ ಭಾವಿಗಳನ್ನು ಅವರು ತೋಡಿಸಿ ವ್ಯವಸಾಯವನ್ನು ವಿಶೇಷವಾಗಿ ವೃದ್ಧಿಪಡಿಸಿದರು. ೩ ಲಕ್ಷ ಜನರು ೬ ತಿಂಗಳ ಕಾಲ ಕೆಲಸಮಾಡಿ ಭಾರಿ ಕಾಲುವೆಯನ್ನು ತೋಡಿದರು.

ಚೀನದ ಶಾಲೆಗಳಲ್ಲಿ ಮಾನವೀಯತೆಯ ವಿಷಯವು ಮುಖ್ಯವಾಗಿ ಬೋಧಿಸಲ್ಪಡುತ್ತಿದೆ. ಅಮೇರಿಕಾ ಮೇಲೆ ಯುದ್ಧ ಮಾಡಿದರೂ ಅಲ್ಲಿನ ಜನರನ್ನು ಪ್ರೀತಿಸಬೇಕೆಂದು ತಿಳಿಸಲಾಗುತ್ತಿದೆ.

ಮೂರನೆ ಮಹಾ ಯುದ್ಧದ ಕಾರ್ಮೋಡಗಳು ಈಗ ಕಾಣಿಸುತ್ತಿವೆ. ಭಾರತ ಮತ್ತು ಚೀನಗಳು ಒಂದಾದರೆ ತಮ್ಮ ಸ್ನೇಹದ ಪ್ರಭಾವದಿಂದಲೇ ಯುದ್ಧ ಶಕ್ತಿಯನ್ನೂ ಎದುರಿಸಬಹುದು. ಪ್ರಪಂಚದ ಮೂರನೇ ಒಂದು ಭಾಗದಷ್ಟಾಗುವ ಈ ಎರಡು ರಾಷ್ಟ್ರಗಳ ಐಕ್ಯತೆಯು ವಿಶ್ವ ಶಾಂತಿಗೆ ಅತ್ಯಂತ ಸಹಕಾರಿಯಾದ ಅಸ್ತ್ರವೆಂದು ಧಾರಾಳವಾಗಿ ಹೇಳಬಹುದು.

ಪತ್ರಿಕಾ ಸಮ್ಮೇಳನ

ಈ ದಿನ ಬೆಳಿಗ್ಗೆ ಪಂಡಿತ ಸುಂದರಲಾಲರು "ಸಾಧ್ವಿ" ಕಛೇರಿಯಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ಚೀಣವು ವ್ಯವಸಾಯ ಸುಧಾರಣೆ ಮಾಡಿರುವ ವಿಧಾನವನ್ನು ವಿವರಿಸಿದರು. ಪ್ರತಿಯೊಬ್ಬ ಪ್ರಜೆಯೂ ಜಮೀನನ್ನು ಹೊಂದಿರುವುದಾಗಿಯೂ ಜಮೀನ್ದಾರರೆಲ್ಲರ ಭೂಮಿಯೆಲ್ಲವನ್ನೂ ವಶಪಡಿಸಿಕೊಂಡು ಪ್ರಜೆಗಳಿಗೆ ಹಂಚಲಾಗಿದೆಯೆಂದೂ ತಿಳಿಸಿದರು. ಹಿಂದೆ ರೈತರ ಮೇಲೆ ಇದ್ದ ಋಣ ಬಾಧೆಯನ್ನು ತೊಡೆದು, ಬಾಕಿ ಸಾಲದ ಪತ್ರಗಳನ್ನು ಬಹಿರಂಗವಾಗಿ ಸುಟ್ಟು ಹಾಕಲಾಯಿತೆಂದು ಹೇಳಿದರು. ಭಾರಿ ಕೈಗಾರಿಕೆಗಳೆಲ್ಲವೂ ಸರ್ಕಾರದ ಅಧೀನದಲ್ಲಿಯೇ ಇರುವುದಾಗಿಯೂ ತಿಳಿಸಿದರು. ಇಂದಿನ ಸರ್ಕಾರದ ಬದಲಾವಣೆಯಿಂದಲೇ ನಮ್ಮ ದೇಶದಲ್ಲೂ ಚೀಣದಂತಹ ಸುಧಾರಣೆಗಳನ್ನು ಆಚರಣೆಗೆ ತರಲು ಸಾಧ್ಯವೆಂದು ಅವರು ಅಭಿಪ್ರಾಯಪಟ್ಟರು.

ಪೀಕಿಂಗಿಗೆ ಐಸೆನ್‌ಹೋವರ್ ಭೇಟಿ

ಅಮೇರಿಕದ ಹೊಸ ಅಧ್ಯಕ್ಷರಾದ ಜ|| ಐಸೆನ್‌ಹೋವರರು ಸಧ್ಯದಲ್ಲೇ ಕೊರಿಯಾವಿಗೆ ಭೇಟಿಯಿತ್ತು ಕೂಡಲೇ ಕೊರಿಯಾ ಯುದ್ಧ ಮುಕ್ತಾಯದ ಬಗ್ಗೆ ಅಲ್ಲಿ ರಷ್ಯದ ವಿದೇಶಾಂಗ ಮಂತ್ರಿ ಮೊಲೊಟೊವರೊಡನೆ ಮಾತುಕತೆ ನಡೆಸುವರೆಂದು ಲಂಡನ್ನಿನ ಸಂಡೇ ಗ್ರಾಫಿಕ್ ಪತ್ರಿಕೆಯು ವರದಿ ಮಾಡಿದೆ. ಪೀಕಿಂಗಿನಲ್ಲಿ ನಡೆಯುವ ಮೇಲ್ಮಟ್ಟದ ಮಾತುಕತೆಗಳಲ್ಲಿ ಬ್ರಿಟಿಷ್ ಪ್ರತಿನಿಧಿಯೊಬ್ಬರೂ ಹಾಜರಿರುವರೆಂದು ಆ ಪತ್ರಿಕೆಯು ತಿಳಿಸಿದೆ

ಅಮೆರಿಕಾ ಶ್ವೇತ ಭವನದ ೧೦೦೦ ಅಧಿಕಾರಿಗಳ ವಜಾ

ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಉಮೇದುವಾರರಾದ ಐಸೆನ್‌ಹೋವರರು ಜಯಶೀಲರಾದುದರಿಂದ ಇದುವರೆಗೆ ಅಧಿಕಾರದಲ್ಲಿದ್ದ ಡೆಮೊಕ್ರಾಟಿಕ್ ಪಕ್ಷದ ಆಡಳಿತ ವ್ಯವಸ್ಥೆಯಲ್ಲಿ ಬಹಳ ಬದಲಾವಣೆಗಳಾಗಲಿವೆಯೆಂದೂ, ಅಲ್ಲಿನ ಶ್ವೇತ ಭವನದ ನಿರ್ಮೂಲೀಕರಣವಾಗಿ, ಅದರ ಪರಿಣಾಮವಾಗಿ ಒಂದು ಸಾವಿರ ಮಂದಿ ಅಧಿಕಾರಿಗಳ ಉಚ್ಚಾಟನೆಯಾಗಲಿದೆಯೆಂದೂ ಹೇಳಲಾಗಿದೆ

ತಾಲ್ಲೂಕು ಕಛೇರಿಯ ಧಾನ್ಯದ ಕಾಪಿಗೆ ಬೆಂಕಿ

ಹೆಗ್ಗಡದೇವನಕೋಟೆ ೧೦

ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಯ ಆಹಾರ ಕಾಪಿ ಮತ್ತು ಪೊಲೀಸು ಕಛೇರಿಗಳಿಗೆ ನೆನ್ನೆ ರಾತ್ರಿ ಬೆಂಕಿ ಬಿದ್ದು ನಷ್ಟ ಸಂಭವಿಸಿರುವುದೆಂದೂ, ಮೈಸೂರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರು ತನಿಖೆಗಾಗಿ ಸ್ಥಳಕ್ಕೆ ತೆರಳಿರುವರೆಂದೂ ತಿಳಿದುಬಂದಿದೆ. ಆಹಾರ ಕಾಪಿ ಕಛೇರಿಯ ಕಾಗದಪತ್ರಗಳು ಮತ್ತು ಬೆಂಚು ಕುರ್ಚಿ ಮೊದಲಾದುವು ಸುಟ್ಟುಹೋಗಿವೆ. ಬೆಂಕಿ ಬಿದ್ದ ಸುದ್ದಿಯು ತಾಲ್ಲೂಕು ಅಮಲ್ದಾರರಿಗೆ ತಿಳಿದ ಕೂಡಲೇ ಅವರು ಸ್ಥಳಕ್ಕೆ ಬಂದು ಠಾಣೆ ಮತ್ತು ಇತರ ಸ್ಥಳಗಳಿಗೆ ಬೆಂಕಿಯು ಹರಡದಂತೆ ತಡೆಗಟ್ಟಿ ಹತೋಟಿಗೆ ತಂದರು

ನಿರುದ್ಯೋಗದಿಂದ ಇಡೀ ಸಂಸಾರದ ಆತ್ಮಹತ್ಯೆ

ಪೂನಾ ನಗರದ ಇಬ್ರಾಹಿಂ ಅಬ್ದುಲ್ ಗನಿ ಎಂಬ ಮುಸ್ಲಿಂ ಯುವಕನು ಕೆಲವು ದಿನಗಳಿಂದ ಉದ್ಯೋಗವನ್ನು ಕಳೆದುಕೊಂಡು ತನ್ನ ಸಂಸಾರವನ್ನು ನಿರ್ವಹಿಸಲು ತೊಂದರೆಯುಂಟಾದ ಪರಿಣಾಮವಾಗಿ ಕಳೆದ ಗುರುವಾರ ಹೆಂಡತಿ ಮತ್ತು ನಾಲ್ಕು ಮಕ್ಕಳೊಡನೆ ನದಿಯಲ್ಲಿ ಬಿದ್ದು ಪ್ರಾಣಬಿಟ್ಟನೆಂದು ವರದಿಯಾಗಿದೆ. ಇಬ್ರಾಹಿಮನಿಗೆ ಬಹಳ ದಿನಗಳಿಂದಲೂ ಖಾಯಿಲೆಯಾಗಿದ್ದುದೂ ಆತ್ಮಹತ್ಯೆಗೆ ಒಂದು ಕಾರಣವೆಂದು ಹೇಳಲಾಗಿದೆ

ಗಂಡನನ್ನು ಕೊಂದ ಹೆಂಡತಿಯ ಖುಲಾಸೆ

ಯುವಾನ್ ಶೆವಲಿಯರ್ ಎಂಬ ೪೧ ವರ್ಷದ ಫ್ರೆಂಚ್ ಮಹಿಳೆಯು ಫ್ರಾನ್ಸಿನ ಮಂತ್ರಿಯಾದ ತನ್ನ ಗಂಡನನ್ನು ೫ ಸಾರಿ ಗುಂಡು ಹೊಡೆದು ಕೊಂದ ಬಗ್ಗೆ ಅವಳ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಅವಳನ್ನು ಖುಲಾಸೆ ಮಾಡಲಾಯಿತು. ಮತ್ತೊಬ್ಬ ಹೆಂಗಸಿಗೂ ತನ್ನ ಗಂಡನಿಗೂ ಇದ್ದ ಸಂಬಂಧವಾಗಿ ಅವಳು ಗಂಡನೊಡನೆ ಜಗಳವಾಡಿ "ಕೊನೆಗೆ ವ್ಯಾಮೋಹದಿಂದ ಮೃತ್ಯು"ವನ್ನು ನಡೆಸಿದುದಾಗಿ ಅವಳು ನ್ಯಾಯಾಧೀಶರ ಮುಂದೆ ತಿಳಿಸಿದಳು

ಇಸ್ರೇಲಿನ ಅಧ್ಯಕ್ಷರ ಮರಣ

ಇಸ್ರೇಲ್ ರಾಷ್ಟ್ರದ ಪ್ರಥಮ ಅಧ್ಯಕ್ಷರಾದ ಡಾ|| ಚಾಯಿಂ-ವೇಜ್‌ಮನ್‌ರವರು ನೆನ್ನೆ ತಮ್ಮ ೭೭ ನೇ ವಯಸ್ಸಿನಲ್ಲಿ ಮೃತಪಟ್ಟರೆಂದು ವರದಿಯಾಗಿದೆ

ಹಣಕಾಸಿನ ಶಾಖಾ ಕಾರ್ಯದರ್ಶಿಯವರಿಗೆ ಜೀವದಾನ

ಸಂಸ್ಥಾನದ ಹಣಕಾಸಿನ ಶಾಖಾ ಕಾರ್ಯದರ್ಶಿ ಶ್ರೀ ಎಂ ಧಾಮಣ್ಣನವರಿಗೆ ಬರುವ ಡಿಸೆಂಬರ್ ೩ ರಿಂದ ೧ ವರ್ಷ ಜೀವದಾನ ನೀಡಲಾಗಿದೆಯೆಂದು ಗೊತ್ತಾಗಿದೆ.

ಟಿ ಸುಬ್ರಹ್ಮಣ್ಯಂರವರ ಅವಿರೋಧ ಜಯ

ಶ್ರೀ ಟಿ ಸುಬ್ರಹ್ಮಣ್ಯಂರವರು ತುರುವೇಕೆರೆ ಕ್ಷೇತ್ರದಿಂದ ಎ ಐ ಸಿ ಸಿ ಗೆ ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಿರುವರೆಂದು ಗೊತ್ತಾಗಿದೆ

ಪ್ರಾದೇಶಿಕ ಸೈನ್ಯ ಸಪ್ತಾಹ

ಭಾರತದ ಪ್ರಮುಖ ನಗರಗಳಲ್ಲಿ ನೆನ್ನೆ ಪ್ರಾದೇಶಿಕ ಸೈನ್ಯ ಸಪ್ತಾಹದ ಆರಂಭೋತ್ಸವವು ಜರುಗಿತು ದೆಹಲಿಯ ಕೆಂಪು ಕೋಟೆಯಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಈ ಸಮಾರಂಭವನ್ನು ನೆರವೇರಿಸುತ್ತಾ ಭಾಷಣ ಮಾಡಿ ರಾಷ್ಟ್ರದ ರಕ್ಷಣಾ ಜವಾಬ್ದಾರಿಯು ಸೈನ್ಯಕ್ಕೇ ಅಲ್ಲದೆ ಪ್ರಜೆಗಳಿಗೂ ಸೇರಿದುದೆಂದೂ ಆಧುನಿಕ ಯುದ್ಧದ ಪರಿಣಾಮವು ಎಲ್ಲ ಪ್ರಜೆಗಳ ಮೇಲೂ ಉಂಟಾಗುವುದೆಂದೂ ಹೇಳಿ ಜನರು ಮಿಲಿಟರಿ ಶಿಕ್ಷಣ ಪಡೆದು ರಿಸರ್ವ್ ಸೇನೆಯನ್ನು ನಿರ್ಮಿಸಲು ತರಬೇತು ಹೊಂದಬೇಕೆಂದೂ ತಿಳಿಸಿದರು ಅಂತಹವರು ಶಾಂತಿ ಸಮಯದಲ್ಲಿ ತಮ್ಮ ನಿತ್ಯಕೆಲಸದಲ್ಲಿ ನಿರತರಾಗಿದ್ದು ತುರ್ತು ವೇಳೆಯಲ್ಲಿ ದೇಶ ರಕ್ಷಣೆಗೆ ನೆರವಾಗುವರೆಂಬುದೇ ಪ್ರಾದೇಶಿಕ ಸೈನ್ಯದ ಗುರಿಯೆಂದೂ ರಾಷ್ಟ್ರಾಧ್ಯಕ್ಷರು ತಿಳಿಸಿದರು ಕಾರ್ಖಾನೆಗಳಲ್ಲಿನ ಕಾರ್ಮಿಕರು ಪ್ರಾದೇಶಿಕ ಸೈನ್ಯಗಳಿಗೆ ಸೇರಿ ಶಿಕ್ಷಣ ಪಡೆಯಲು ಮಾಲೀಕರು ಅವಕಾಶ ಕಲ್ಪಿಸಬೇಕೆಂದು ಅವರು ಕೋರಿದರು

ಆಜಾದ್ ಕಾಶ್ಮೀರದಲ್ಲಿ ದಂಗೆಯೇ ?

ಆಜಾದ್ ಕಾಶ್ಮೀರದ ಜನರು ಅಲ್ಲಿನ ಅಧಿಕಾರಿಗಳ ವಿರುದ್ಧವಾಗಿ ದಂಗೆಯೇಳುತ್ತಿರುವರೆಂದೂ ಆ ಪ್ರದೇಶದಿಂದ ಕಾಶ್ಮೀರದೊಳಗೆ ಜನರು ಯಥೇಚ್ಛವಾಗಿ ಬರುತ್ತಿರುವರಲ್ಲದೆ ಪಾಕಿಸ್ತಾನದವರನ್ನು ಆಜಾದ್ ಕಾಶ್ಮೀರದಿಂದಲೇ ಓಡಿಸುವ ಸ್ಥಿತಿ ಒದಗಿದೆಯೆಂದೂ ಭಾರತ ಮಿಲಿಟರಿ ಕಾರ್ಯದರ್ಶಿ ಪಡೆಯ ಪಾಕಿಸ್ತಾನದವರನ್ನು ಎದುರಿಸಬೇಕಾದ ಸ್ಥಿತಿ ಇಲ್ಲವೆಂದೂ ವರದಿಗಳು ಬರುತ್ತಿವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಡಿ ರವೀಂದ್ರ ವೀಣಾ ವಾದನ ಮಧ್ಯಾಹ್ನ ೧೨ ಕೊಳಲು ೨ ಆರ್ ಎಸ್ ಬಿಡ್ಡಿ ಸಿತಾರ್ ಸಂಜೆ ೫-೧೦ ಆರ್ ಎಸ್ ಲಕ್ಷ್ಮಿ ಮತ್ತು ಲಕ್ಷ್ಮಿ ಶಣ್ಮುಗಂ ಕಲ ಸಂಗೀತ ೬-೧೫ ಗಾನವಿಹಾರ ೭ ಆರ್ ಎಸ್ ಬಿಡ್ಡಿ ಸಿತಾರ್ ೮-೩೦ ವೃಂದ ಸಂಗೀತ ೯ ರಿಂದ ಪೂನಾ ಪ್ರಯೋಗ ಶಾಲೆ ಇಂಗ್ಲಿಷ್ ಭಾಷಣ ೯-೪೦ ಸಾಮ್ಯತ

ರೈಲಿನಲ್ಲಿ ದರೋಡೆ ಮಾಡಿದವನ ಬಂಧನ

ಮದ್ರಾಸು ಮತ್ತು ಬೊಂಬಾಯಿಗಳ ನಡುವೆ ರೈಲು ದರೋಡೆ ಮಾಡುತ್ತಿದ್ದ ಗ್ಯಾಂಗಿಗೆ ಸೇರಿದವನೊಬ್ಬನನ್ನು ಬೊಂಬಾಯಿಯ ಜೆ ಜೆ ಆಸ್ಪತ್ರೆಯ ದಾದಿ ಮಿಸ್ ರಾಬರ್ಟ್ಸ್ ಎಂಬಾಕೆಯು ರೈಲಿನಲ್ಲಿ ಬಲವಾಗಿ ಹಿಡಿದುಕೊಂಡಿದ್ದು ಕೊನೆಗೆ ಅವನು ಒಂದು ಸ್ಟೇಷನ್ನಿನಲ್ಲಿ ಧುಮುಕಿದಾಗ ಪೋಲೀಸರಿಂದ ಹಿಡಿಯಲ್ಪಟ್ಟನೆಂದು ವರದಿಯಾಗಿದೆ ಆಕೆಯು ಮದ್ರಾಸಿಗೆ ಹೋಗುತ್ತಿದ್ದಾಗ, ಆಕೆಯ ಗಾಡಿಯೊಳಗೆ ದರೋಡೆಕಾರನು ನುಗ್ಗಿ ಕತ್ತಿನಲ್ಲಿದ್ದ ಚಿನ್ನದ ಹಾರವನ್ನು ಕಸಿದುಕೊಳ್ಳಲು ಯತ್ನಿಸಿದನೆಂದೂ, ಆಗ ಆಕೆಯು ಅವನೊಡನೆ ಬಹಳಹೊತ್ತು ಹೋರಾಡಿದಳೆಂದೂ ಹೇಳಲಾಗಿದೆ ಇದೇ ಗ್ಯಾಂಗಿನ ಡಕಾಯಿತರು ಹಿಂದೆ ಮಾಜಿ ಕೇಂದ್ರ ಮಂತ್ರಿ ಗಾಡ್ಗಿಲ್ಲರ ಮೇಲೆ ಬಿದ್ದು ಅವರನ್ನು ದೋಚಿದ್ದರೆಂದೂ ಹೇಳಲಾಗಿದೆ

ಲಲಿತ, ಪದ್ಮಿನಿಯರು ಇಂಗ್ಲೆಂಡಿಗೆ

ದಕ್ಷಿಣ ಭಾರತದ ಫಿಲಂ ನಟಿಯರೂ ನರ್ತಕಿಯರೂ ಆದ ಲಲಿತ ಮತ್ತು ಪದ್ಮಿನಿ ಸಹೋದರಿಯರು ಬರುವ ಏಪ್ರಿಲ್ ಇಂಗ್ಲೆಂಡಿಗೆ ತೆರಳಿ ಅಲ್ಲಿ ಕೆಲವು ತಿಂಗಳು ಕಾಲ ಪ್ರವಾಸ ಮಾಡುವರು

ಪ್ರಾರಂಭೋತ್ಸವ

ರಜಧಾನಿಯ ಜಲಪುರಿಯಲ್ಲಿ ಕಳೆದ ತಿಂಗಳು ವಿದ್ಯಾರ್ಥಿಗಳ ವಾಲೀಬಾಲ್ ಕ್ಲಬ್ಬಿನ ಪ್ರಾರಂಭೋತ್ಸವವು ಶ್ರೀ ಎಂ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಶ್ರೀ ಸಿ ಶಿವನಂಜು ಮತ್ತು ಶ್ರೀ ಡಿ ರಂಗರಾಜ್‌ರವರುಗಳಿಂದ ಸ್ವಾಗತ ಭಾಷಣ ಮತ್ತು ವಂದನಾರ್ಪಣೆಗಳಾದುವು

ಕಿಂಬರ್ಲಿ ಗಲಭೆಯ ಪ್ರಕರಣದಲ್ಲಿ ೧೪ ಮರಣ

ದಕ್ಷಿಣ ಆಫ್ರಿಕದ ಕಿಂಬರ್ಲಿಯ ಒಂದು ಮದ್ಯದ ಅಂಗಡಿಗೆ ಕರಿಯ ಜನಾಂಗದವರು ಪ್ರವೇಶಿಸಿದಾಗ ಮೊನ್ನೆ ದಿನ ನಡೆದ ಗುಂಡಿನ ಪ್ರಕರಣದಲ್ಲಿ ಒಟ್ಟು ೧೪ ಮಂದಿ ಆಫ್ರಿಕನ್ನರು ಮಡಿದು, ೩೯ ಜನರು ಗಾಯಗೊಂಡರೆಂದು ಇತ್ತೀಚಿನ ವರದಿಯಿಂದ ಗೊತ್ತಾಗಿದೆ

ರಿಫ್ರೀಜರೇಟರಿನಲ್ಲಿ ಕಳ್ಳನ ಪತ್ತೆ

ಸಿಡ್ನಿ ನಗರದಲ್ಲಿ ಒಬ್ಬ ಕಳ್ಳನು ಕಳುವಿನ ಪ್ರಯತ್ನದಲ್ಲಿ ಒಂದು ಮನೆಗೆ ನುಗ್ಗಿದಾಗ ಮನೆಯವರು ಎಚ್ಚರಗೊಂಡು ಅವನನ್ನು ಅಟ್ಟಿಸಿಕೊಂಡು ಬಂದಾಗ ಅವನು ಗಾಬರಿಯಿಂದ ಓಡಿ, ಸಮೀಪದ ಕಟುಕರ ಅಂಗಡಿಯೊಂದರಲ್ಲಿದ್ದ ರಿಫ್ರೀಜರೇಟರಿನಲ್ಲಿ ಅವಿತುಕೊಂಡನೆಂದೂ, ಸ್ವಲ್ಪ ಹೊತ್ತಿನನಂತರ ಪೋಲೀಸರು ಅಲ್ಲಿಗೆ ಬಂದು ನೋಡಿದಾಗ ಕಳ್ಳನ ಅಲ್ಲೇ ಪ್ರಜ್ಞೆತಪ್ಪಿ ಬಿದ್ದಿದ್ದನೆಂದೂ ವರದಿಯಾಗಿದೆ

ಚನ್ನಯ್ಯನವರ ಆಯ್ಕೆ

ಮೈಸೂರು ನಗರದ ಉತ್ತರ ಭಾಗದಿಂದ ಕಾಂಗ್ರೆಸ್ ಪ್ರತಿನಿಧಿಯಾಗಿ ಕಿ ಎಸ್ ಚನ್ನಯ್ಯನವರು ಅವಿರೋಧವಾಗಿ ಚುನಾಯಿತರಾದರು ಪ್ರತಿಸ್ಪರ್ಧಿಗಳಾದ ನ್ಯಾಯವಾದಿ ವೆಂಕಟಪ್ಪ ಮತ್ತು ಎಂ ಶಂಕರಯ್ಯನವರುಗಳು ತಮ್ಮ ಉಮೇದುವಾರಿಕೆಗಳನ್ನು ಹಿಂತೆಗೆದುಕೊಂಡಿರುತ್ತಾರೆ

ಸಿಟಿ ಟ್ಯುಟೋರಿಯಲ್ ಕಾಲೇಜು

ವಾಣಿವಿಲಾಸ ಮಾರ್ಕೆಟ್ ಮೈಸೂರು

ಮೆಟ್ರಿಕ್ ಸ್ಕೂಲ್ ವಿದ್ಯಾರ್ಥಿಗಳಿಗಾಗಿ ಸಾಯಂಕಾಲದ ತರಗತಿಗಳು ಪ್ರಾರಂಭವಾಗಿವೆ ವಿವರಗಳಿಗೆ ವಿಚಾರಿಸಿ

ಸ್ಪೆಷಲ್ ಬಸ್ಸಿನಲ್ಲಿ

ರಾಮೇಶ್ವರ ಮತ್ತು ದಕ್ಷಿಣ ಭಾರತ ಪುಣ್ಯಕ್ಷೇತ್ರಗಳ ಮಹಾ ಯಾತ್ರೆ

27 11 52 ನೇ ತಾ|| ಬಸ್ಸು ಮೈಸೂರಿನಿಂದ ಹೊರಡುವುದು ಛಾರ್ಜು 125 ರೂ ಗಳು ಮಾತ್ರ

ಹೆಚ್ಚಿನ ವಿವರಗಳಿಗೆ 0-2-0 ಸ್ಟಾಂಪಿನ ಜತೆ ಕೆಳಗಿನ ವಿಳಾಸಕ್ಕೆ ಬರೆಯಿರಿ ಅಥವಾ ಮುಖತಃ ಬಂದು ನೋಡಿರಿ

ಶ್ರೀ ಚಾಮುಂಡೇಶ್ವರಿ ಯಾತ್ರಾ ಕಂಪನಿ,

1814 ಶಿವರಾಂಪೇಟೆ ಮೈಸೂರು

ಭೂಪಾಳದಲ್ಲಿ ಮಂತ್ರಿ ಮಂಡಲದ ಬಿಕ್ಕಟ್ಟು

ಭೂಪಾಳದ ಮಂತ್ರಿಮಂಡಲದಲ್ಲಿ ಬಿಕ್ಕಟ್ಟು ಪ್ರಾಪ್ತವಾಗಿ, ಅಲ್ಲಿನ ಮುಖ್ಯಮಂತ್ರಿ ಡಾ|| ಶಂಕರ ದಯಾಳ್ ಶರ್ಮರವರು ತಾವು ರಾಜೀನಾಮೆ ಕೊಡುವುದಾಗಿಯೂ, ಹಣಕಾಸಿನ ಮಂತ್ರಿ ಛತ್ರೀ ಪ್ರಸಾದರೊಡನೆ ತಾವು ಇನ್ನು ಹೆಚ್ಚು ಕಾಲ ಒಟ್ಟಿಗೆ ಕೆಲಸ ಮಾಡಲು ಸಾಧ್ಯವಿಲ್ಲವೆಂದೂ ಪ್ರಧಾನಿ ನೆಹರೂರವರಿಗೆ ತಿಳಿಸಿರುತ್ತಾರೆ

ಫರೂಕರಿಂದ ನಹಾಸ್ ಪಾಷಾ ಕೊಲೆ ಯತ್ನ !

ಈಜಿಪ್ಟಿನ ಪ್ರಮುಖ ಪಕ್ಷವಾದ ವಾಫ್ಡಿನ ಮಾಜಿ ಮುಖಂಡರಾದ ನಹಾಸ್ ಪಾಷಾರವರನ್ನು ಫರೂಕರು ಮತ್ತು ಅವರ ಬೆಂಬಲಗಾರರು ಕೊಲ್ಲಲು ಯತ್ನಿಸಿದ್ದರೆಂದು ನಹಾಸ್ ಪಾಷಾರವರು ತನಿಖೆ ಸಮಿತಿಯೊಂದರಲ್ಲಿ ಹೇಳಿಕೆ ಇತ್ತಾಗ ತಿಳಿಸಿರುವರು ತಮ್ಮ ನಿವಾಸವನ್ನು ಸುಟ್ಟುಹಾಕಲು ಅವರುಗಳು ಆಲೋಚಿಸಿದ್ದರೆಂದೂ ಅವರು ಹೇಳಿರುತ್ತಾರೆ

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರೆಟರಿಯವರ ಆಫೀಸು, ಮೈಸೂರು

ಟೆಂಡರ್ ನೋಟೀಸ್

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚೆಲುವಾಂಬಾ ಆಸ್ಪತ್ರೆಗಳಿಗೆ 1953 1954 ನೇ ಸಾಲಿಗೆ ಬೇಕಾಗಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಸಪ್ಲೈ ಮಾಡುವವರಿಂದ ಸೀಲು ಮಾಡಿದ ಟೆಂಡರುಗಳನ್ನು ಪ್ರತ್ಯೇಕವಾಗಿ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ 1952 ನೇ ಡಿಸೆಂಬರ್ ಮಾಹೆ ತಾರೀಖು 8 12-1952 ನೇ ಸೋಮವಾರ ಮತ್ತು 9-12 1952 ನೇ ಮಂಗಳವಾರ 10 ಘಂಟೆಗೆ ಸರಿಯಾಗಿ ತೆಗೆಯಲಾಗುತ್ತೆ ಹೆಚ್ಚಿನ ವಿವರಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರೆಟರಿಯವರ ಆಫೀಸಿನಲ್ಲಿ ರಜಾ ದಿವಸಗಳು ವಿನಹಾ ಬಾಕಿ ದಿವಸಗಳಲ್ಲಿ ಬೆಳಿಗ್ಗೆ 8 ರಿಂದ 12 ಘಂಟೆಯವರೆಗೂ ಮಧ್ಯಾಹ್ನ 4 ರಿಂದ 6 ಘಂಟೆಯ ವರೆಗೂ ಪಡೆಯಬಹುದು.

ತಾ|| 8 12 1952 10 ಘಂಟೆಗೆ

1 ಆಹಾರದ ಸಾಮಾನುಗಳು
2 ಆಸ್ಪತ್ರೆ ಸಾಮಾನುಗಳು
3 ಸ್ವದೇಶಿಯ ಔಷಧಿಗಳು

ತಾ|| 9-12 1952 10 ಘಂಟೆಗೆ

1 ಅಪ್ಪಟ ಹಾಲು
2 ದಿನಸು ಬ್ರೆಡ್ಡು

(ಸಹಿ) ಎಂ. ಆರ್ ನರಸಿಂಗರಾವ್
ಸೆಕ್ರೆಟರಿ

ಮೊಸರು ಇಲ್ಲದ ಊಟ, ಕೆಸರು ಇಲ್ಲದ ಗದ್ದೆ ಬಸುರಾಗದವಳ ಬಾಳುವೆಯು ಬೇಸಿಗೆಯ ಬಿಸಿಲು ಕಾದಂತೆ ಸರ್ವಜ್ಞ ||

ನೂರಾರು ವರ್ಷಗಳ ಹಿಂದೆ ಸರ್ವಜ್ಞನು ಹೀಗೆ ಬರೆಯಲು ಕಾರಣ ?

ಶೋಭನ (NUPTIALS) ವಾಗಿ ಎಷ್ಟೋ ವರ್ಷಗಳ ದಾಗ್ಯೂ ಬಹಿಷ್ಠೆ ಸಂಬಂಧದ ಹೊಟ್ಟೆನೋವು ಸಂಪೂರ್ಣವಾಗಿ ಗುಣವಾಗುವ ತನಕ ಖಂಡಿತ ಸಂತಾನವಾಗುವುದಿಲ್ಲವೆಂಬುದು ನೆನಪಿರಲಿ!

ಈ ಹೊಟ್ಟೆನೋವು ಇತ್ಯಾದಿಗಳು ಕೂಡಲೇ ಗುಣವಾಗಿ ಪ್ರಾಕೃತ ಸಂತಾನ ಫಲ ಬೇಕೋ? ಹಾಗಾದರೆ ಮೈಸೂರು ಅರಮನೆಯ ರಾಜ ವೈದ್ಯರಾಗಿದ್ದ ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 94 ವರ್ಷಗಳಿಂದ ಪ್ರತ್ಯಕ್ಷವಾಗಿ ಅನೇಕ ಸಾಕ್ಷಿಗಳು ಮತ್ತು ಹೆಸರಾಂತ ಸಾರ್ವಜನಿಕರ ಶಿಫಾರಸು ಮತ್ತು ಮೆಚ್ಚಿಗೆಯನ್ನು ಪಡೆದಿರುವ ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

ಸಂತಾನ ಸಿಂಧೂರ

ಸಿದ್ಧೌಷಧವನ್ನು ಸತಿಪತಿಯರಿಬ್ಬರೂ ಮದನ ವಿಲಾಸದೊಡನೆ 1 ಸೆಟ್ ಸೇವಿಸಿರ ಫಲ ತಮಗೇ ಗೊತ್ತಾಗುತ್ತೆ ಈ ಮಹೌಷಧವು

★ ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ
★ ಅಕ್ರಮ ಸೂತಕ ಪ್ರವಾಹವು ಬಹಿಷ್ಠೆಯಾಗುವುದನ್ನು ಕ್ರಮಪಡಿಸಿ
★ ಗರ್ಭ ಪತನ ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸಿ
★ ಬಂಜೆತನವನ್ನು ಹೋಗಲಾಡಿಸಿ ಸಂತಾನವನ್ನು ಕೊಡುತ್ತದೆ

ಕ್ರಯ 1 ಸೆಟ್ 5 ರೂ ಟಪಾಲು ಖರ್ಚು ರೂ 1 ವಿ ಪಿ ಇಲ್ಲ

ಸ್ಟಾಕಿಸ್ಟುಗಳು ಬೇಕು ಪತ್ರ ವ್ಯವಹಾರ ಗುಪ್ತ

ವಿಳಾಸ ಎ ರಾಮಸ್ವಾಮಿ ಅಯ್ಯರ್ ಸ್ಕ್,

626 ಸಂತಾನ ಸಿಂಧೂರ ಆಫೀಸ್ ಚಾಮರಾಜ ರೋಡ್ ದಕ್ಷಿಣ ಕ್ರಾಸ್, ಕೃಷ್ಣಾ ರೈಸ್ ಮಿಲ್ ಹತ್ತಿರ, ಮೈಸೂರು

MAJAJANA CO-OPERATIVE SOCIETY, LTD.,

Vanivilas Mohalla Mysore

THE STORE HOUSE OF QUALITY GOODS

BINNY COATING, JUPITAR SHIRTING, FINLAY DHOTEES MOTI MULL, DORIA, STAPLE CHINTS, SUPERFINE VOILS, BANARES SAREES, DESI SILK

ETC - ETC - ETC

ARE AVAILABLE

Edited, Printed and Published by A R Nagarajan at Sadhvi Press, D Subbiah Road, Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೧ ೧೧ ೧೯೫೩ [ಸಂಚಿಕೆ ೫೮

ರಷ್ಯದೊಡನೆ ಆಫ್ರಿಕಾ ಸಂಬಂಧ ತ್ಯಾಗ?



ಕಳೆದ ತಿಂಗಳ ೨೦ನೇ ತಾರೀಖು ಶ್ರೀ ಚಾಮರಾಜನಗರ ರಂಗಸ್ವಾಮಿ ಬೆಟ್ಟದಲ್ಲಿ ಜನ್ಮ ಸವರ ದೇವಸ್ಥಾನದ ಕಲಶ ಸ್ಥಾಪನಾ ಮಹೋತ್ಸವ ಸಂದರ್ಭದಲ್ಲಿ ತೆಗೆದ ಚಿತ್ರ

ಕರ್ನಾಟಕದ ವಿದ್ವನ್ಮಣಿಗಳಿಗೆ ಸನ್ಮಾನ

ಕರ್ನಾಟಕ ಸಾಹಿತ್ಯ ಪರಿಷತ್ತಿನ ಮಾನ ಪತ್ರ

ಬೆಂಗಳೂರು, ೧೧

ಪ್ರಸಿದ್ಧ ಸಂಸ್ಕೃತ ಕವಿಗಳೂ, ಕವಿಗಳೂ ಆಸ್ಥಾನ ಮಹಾ ವಿದ್ವಾಂಸರೂ ಆದ ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಮತ್ತು ಪ್ರಖ್ಯಾತ ಕವಿ ವಿದ್ವಾಂಸರು ವೀರಶೈವ ಸಾಹಿತ್ಯ ಸಂಶೋಧಕರೂ ಆದ ಧಾರವಾಡದ ಶ್ರೀ ವೀರಭದ್ರಪ್ಪ ಹಾಲಭಾವಿಯವರುಗಳ ಗೌರವಾರ್ಥವಾಗಿ ನೆನ್ನೆ ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಸಮಾರಂಭವೊಂದನ್ನು ಏರ್ಪಡಿಸಿದ್ದರು. ಪರಿಷತ್ತಿನ ಅಧ್ಯಕ್ಷ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು.

ಈಶ ಪ್ರಾರ್ಥನೆಯಾದ ನಂತರ ಆಸ್ಥಾನ ವಿದ್ವಾಂಸರಾದ ಶ್ರೀ ಎಂ. ರಾಮಶಾಸ್ತ್ರಿಯವರು ಶ್ರೀಕಂಠಶಾಸ್ತ್ರಿಯವರು ರಚಿತವಾದ ಕಾವ್ಯವಾಚನ ಮಾಡಿದರು.

ಶ್ರೀ ಡಿ. ವಿ. ಗುಂಡಪ್ಪನವರು ಶ್ರೀ ಶಾಸ್ತ್ರಿಗಳನ್ನು ಪರಿಚಯ ಮಾಡಿಕೊಡುತ್ತ ಅವರ ವಿದ್ವತ್ತು, ಕೃತಿ ಮತ್ತು ಜೀವನ ಬಹಳ ಉಚ್ಚ ರೀತಿಯದೆಂದೂ, ಅವರ ಕಾವ್ಯಗಳು ಉತ್ಕೃಷ್ಟ ಮಟ್ಟದವೆಂದೂ ಹೇಳಿದರು. ಅ|| ವಿ|| ಬಿ. ಶಿವಮೂರ್ತಿ ಶಾಸ್ತ್ರಿಯವರು ಶ್ರೀ ಹಾಲಭಾವಿಯವರ ಪರಿಚಯ ಮಾಡಿಕೊಟ್ಟು ಅವರು ರಚಿಸಿರುವ ಅನೇಕ ವೀರಶೈವ ಗ್ರಂಥಗಳು ಉತ್ತಮ ಸಾಹಿತ್ಯ ಕೃತಿಗಳೆಂದು ತಿಳಿಸಿದರು. ಮುಖ್ಯ ಅತಿಥಿಗಳಿಗೆ ಮಾನಪತ್ರಗಳನ್ನು ಸಲ್ಲಿಸಲಾಯಿತು.

ಜಗ್ಗಡದೇವನಕೋಟೆ ಬೆಂಕಿ ಪ್ರಕರಣ

ಜಗ್ಗಡದೇವನಕೋಟೆ ತಾಲ್ಲೂಕು ಕಛೇರಿಯ ಹಲವು ಭಾಗಗಳಿಗೆ ಮೊನ್ನೆ ರಾತ್ರಿ ಬೆಂಕಿ ಬಿದ್ದ ಸಂಬಂಧವಾಗಿ ಅಲ್ಲಿನ ಪೋಲೀಸರು ೧೨೬ನೇ ನಿಬಂಧನೆ ಪ್ರಕಾರ ಕೇಸು ರಿಜಿಸ್ಟರ್ ಮಾಡಿಕೊಂಡಿದ್ದಾರೆ. ನೆನ್ನೆ ಮೈಸೂರು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರು ಅಲ್ಲಿಗೆ ಹೋಗಿ ಪರಿಶೀಲಿಸಿದರು. ಆಕಸ್ಮಿಕವಾಗಿ ಬೆಂಕಿ ಬಿದ್ದಿರಬಹುದೆಂದು ಊಹಿಸಲಾಗಿದೆ. ಸಿ. ಐ. ಡಿ. ಪೋಲೀಸರನ್ನು ಅಲ್ಲಿಗೆ ಕಳುಹಿಸಲಾಗಿದೆ.

ಉಪಾಧ್ಯಾಯರು ಬೆಂಕಿಗೆ ಆಹುತಿ

ಚನ್ನರಾಯಪಟ್ಟಣ ಬಳಿ ನಿಸ್ಸಂಗಲಂ ಎಂಬ ಗ್ರಾಮದಲ್ಲಿ ಕೋದಂಡಂ ಎಂಬ ಒಬ್ಬ ಉಪಾಧ್ಯಾಯರು ಕಳೆದ ೮ನೇ ತಾ|| ಶನಿವಾರ ರಾತ್ರಿ ಮನೆಯಲ್ಲಿ ರಾಮಾಯಣದ ಲಂಕಾದಹನದ ಭಾಗವನ್ನು ಓದುತ್ತಾ ಇದ್ದಾಗ ಆಕಸ್ಮಿಕವಾಗಿ ಪಕ್ಕದಲ್ಲಿದ್ದ ದೀಪವು ಕೆಳಗೆ ಬಿದ್ದು, ಓದುತ್ತಿದ್ದ ಪುಸ್ತಕವನ್ನೂ ಅವರ ಬಟ್ಟೆ ಹತ್ತಿಕೊಂಡು ಅವರಿಗೂ ಸುಟ್ಟ ಗಾಯಗಳಾದುವೆಂದು ಗೊತ್ತಾಗಿದೆ. ಆಸ್ಪತ್ರೆಗೆ ಸಾಗಿಸಲಾಗಿದ್ದಾದರೂ ಉಪಾಧ್ಯಾಯರು ಮೃತಪಟ್ಟರೆಂದು ಹೇಳಲಾಗಿದೆ.

ಕರಣಸಿಂಗರಿಂದ ಕಾಶ್ಮೀರ ಸಂಸ್ಥಾನಕ್ಕೆ ಮಾತ್ರ ನಿಷ್ಠೆ

ಯುವರಾಜ ಕರಣಸಿಂಗರು ಇದೇ ಶುಕ್ರವಾರ ಕಾಶ್ಮೀರ ಸಂಸ್ಥಾನ ಮತ್ತು ಅದರ ರಾಜ್ಯಾಂಗಕ್ಕೆ ಮಾತ್ರ ಈಗ ನಿಷ್ಠೆಯ ವಚನವನ್ನು ತೆಗೆದುಕೊಳ್ಳುವರೆಂದು ಹೇಳಲಾಗಿದೆ. ಆ ಸಂಸ್ಥಾನವು ಇನ್ನೂ ಭಾರತದಲ್ಲಿ ಐಕ್ಯ ಹೊಂದಿಲ್ಲದಿರುವುದೇ ಇದಕ್ಕೆ ಕಾರಣ. ಭಾರತದೊಳಗೆ ಸಂಸ್ಥಾನವು ಐಕ್ಯವಾದ ನಂತರ ಅವರು ಭಾರತಕ್ಕೆ ನಿಷ್ಠೆಯನ್ನು ವ್ಯಕ್ತಪಡಿಸುವರೆಂದು ಹೇಳಲಾಗಿದೆ.

ಟ್ರಿಗ್ವೆ ಲೀಯವರ ರಾಜೀನಾಮೆ

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾದ ನಾರ್ವೆಯ ಎಂ. ಟ್ರಿಗ್ವೆ ಲೀಯವರು ರಾಜೀನಾಮೆಯಿತ್ತಿರುವರೆಂದು ವರದಿಯಾಗಿದೆ.

ಜಪಾನ್ ಸಿಂಹಾಸನದ ಉತ್ತರಾಧಿಕಾರಿ

ಜಪಾನಿನಲ್ಲಿ ಸಿಂಹಾಸನದ ಉತ್ತರಾಧಿಕಾರಿಯನ್ನು ಆರಿಸುವ ಸಮಾರಂಭವು ಕಳೆದ ೨೫ ಶತಮಾನಗಳಿಂದ ರಹಸ್ಯವಾಗಿ ನಡೆಯುತ್ತಿತ್ತು. ಈ ಸಾರಿ ಅದು ನೆನ್ನೆ ಬಹಿರಂಗವಾಗಿ ಜರುಗಿ ಅಲ್ಲಿನ ರಾಜಕುಮಾರ ಅಕಿಹಿಟೋರವರನ್ನು ಚಕ್ರವರ್ತಿ ಹಿರೋಹಿಟೋರವರು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. ನೆನ್ನೆಯ ಸಮಾರಂಭದಲ್ಲಿ ಅಲ್ಲಿನ ಸಚಿವರೂ ರಾಜತಾಂತ್ರಿಕ ಪ್ರತಿನಿಧಿಗಳೂ ಮತ್ತು ಪತ್ರಿಕಾ ಕರ್ತರೂ ಹಾಜರಿದ್ದರು.

ರಷ್ಯದೊಡನೆ ದ| ಆಫ್ರಿಕದ ಸಂಬಂಧ ತ್ಯಾಗ?

ದಕ್ಷಿಣ ಆಫ್ರಿಕವು ರಷ್ಯದೊಡನೆ ರಾಜತಾಂತ್ರಿಕ ಸಂಬಂಧವನ್ನು ಕಡಿದು ಹಾಕಲಿರುವುದಾಗಿ ಪ್ರಿಟೋರಿಯಾ ಸುದ್ದಿಯೊಂದು ತಿಳಿಸಿರುತ್ತದೆ. ದಕ್ಷಿಣ ಆಫ್ರಿಕ ಮತ್ತು ಕೆನ್ಯಾಗಳಲ್ಲಿ ಇತ್ತೀಚೆಗೆ ನಡೆದ ಗಲಭೆಗಳಿಗೆ ರಷ್ಯವೇ ಕಾರಣವೆಂದು ಅಲ್ಲಿನ ರಾಷ್ಟ್ರೀಯ ಪತ್ರಿಕೆಗಳು ತಿಳಿಸಿ ರಷ್ಯವನ್ನು ಉಗ್ರವಾಗಿ ಖಂಡಿಸುತ್ತಿರುವುವೆಂದೂ ಹೇಳಲಾಗಿದೆ. ಕಳೆದ ಶುಕ್ರವಾರ ಅಲ್ಲಿ ನಡೆದ ರಷ್ಯಾ ಕ್ರಾಂತಿ ದಿನಾಚರಣೆಯಲ್ಲಿ ದಕ್ಷಿಣ ಆಫ್ರಿಕಾ ಸರ್ಕಾರದ ಪ್ರತಿನಿಧಿಗಳು ಭಾಗವಹಿಸಲಿಲ್ಲವೆಂದೂ ಹೇಳಲಾಗಿದೆ.

ಕೊಡಗಿನ ಹುಡುಗಿಯಿಂದ ಪುನಃ ಆಹಾರ ತ್ಯಾಗ

ಕೊಡಗಿನ ಕುಂತಿಕೊಪ್ಪದ ಹುಡುಗಿ ಧನಲಕ್ಷ್ಮಿಯು ಕಳೆದ ಶುಕ್ರವಾರ ಮಧ್ಯಾಹ್ನ ತಾನಾಗಿಯೇ ಆಹಾರ ಮತ್ತು ನೀರನ್ನು ಸೇವಿಸಿ ಒಂದು ಗಂಟೆಯ ನಂತರ ವಾಂತಿ ಮಾಡಿದಳೆಂದು ತಿಳಿದು ಬಂದಿದೆ. ಅವಳನ್ನು ಮಡಕೇರಿಯ ಆಸ್ಪತ್ರೆಯಲ್ಲಿಡಲಾಗಿದೆ. ಕೊಡಗಿನ ಮುಖ್ಯಾಧಿಕಾರಿಗಳಾದ ಶ್ರೀ ದಯವರು ಆಕೆಯನ್ನು ಸಂದರ್ಶಿಸಿದರು. ಅವಳು ಈಗ ಪುನಃ ಆಹಾರವನ್ನು ಸೇವಿಸುತ್ತಿಲ್ಲ.

ಸಿ ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಮ್ಮೇಳನ

ಸಿ ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಮ್ಮೇಳನವು ಇದೇ ತಿಂಗಳು ೨೨ನೇ ತಾ|| ಕೊಡಗಿನಲ್ಲಿ ಸೇರುವುದೆಂದು ವರದಿಯಾಗಿದೆ.

ದಕ್ಷಿಣ ಆಫ್ರಿಕಾ ಸಭೆ ಮೇಲೆ ಪೋಲೀಸರ ಗುಂಡು

ದಕ್ಷಿಣ ಆಫ್ರಿಕದ ಕೇಪ್ ಪ್ರಾಂತದ ಒಂದು ನಗರದಲ್ಲಿ ಮೊನ್ನೆ ಆಫ್ರಿಕನ್ನರು ನಡೆಸುತ್ತಿದ್ದ ಅಕ್ರಮವಾದ ಕೂಟದ ಸಭೆಯನ್ನು ಪೋಲೀಸರು ಚದುರಿಸಲೆತ್ನಿಸಿದಾಗ ಸಂಭವಿಸಿದ ಘರ್ಷಣೆಯ ಪರಿಣಾಮವಾಗಿ ಇಬ್ಬರು ಯುರೋಪ್ಯರೂ, ೪ ಜನ ಆಫ್ರಿಕನ್ನರೂ ಮಡಿದಿರುವರೆಂದು ವರದಿಯಾಗಿದೆ. ಅನಧಿಕೃತ ವರದಿ ಪ್ರಕಾರ ೩ ಯುರೋಪ್ಯರೂ, ೫ ಜನ ಆಫ್ರಿಕನ್ನರೂ ಸತ್ತಿರುವರು. ಅನೇಕರಿಗೆ ಗಾಯಗಳಾಗಿವೆ. ಪೋಲೀಸರು ಗುಂಡು ಹಾರಿಸಿರುವರೆಂದೂ ಹೇಳಲಾಗಿದೆ.

ಚೀಣಾದ ಪ್ರಧಾನಿ ಚೌ ಎನ್ ಲೈರವರಿಗೆ ನೆಹರೂ ಪತ್ರ

ಕೊರಿಯಾದ ಬಿಕ್ಕಟ್ಟಿನ ಬಗ್ಗೆ ಚೀಣಾದ ಪ್ರಧಾನಿ ಚೌ ಎನ್ ಲೈ ಯವರೊಡನೆ ಪ್ರಧಾನಿ ನೆಹರೂರವರು ಪತ್ರ ವ್ಯವಹಾರ ನಡೆಸುತ್ತಿರುವರೆಂದು ವರದಿಯಾಗಿದೆ. ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ಕೊರಿಯಾ ವಿಷಯವು ಪ್ರಸ್ತಾಪ ಮಾಡಲ್ಪಡುವುದೆಂದೂ ಈ ಬಿಕ್ಕಟ್ಟಿನ ಪರಿಹಾರಕ್ಕಾಗಿ ಭಾರತವು ಇನ್ನೂ ಯಾವ ಸೂತ್ರವನ್ನೂ ಮಂಡಿಸುವುದಿಲ್ಲವೆಂದೂ ಹೇಳಲಾಗಿದೆ. ಭಾರತವು ಬಿಕ್ಕಟ್ಟು ಪರಿಹಾರ ನಿರ್ಣಯವನ್ನು ಅರಬ್ ರಾಷ್ಟ್ರಗಳ ಗುಂಪಿನ ಜೊತೆಯಲ್ಲಿ ಮಂಡಿಸದೆ, ಪ್ರತ್ಯೇಕವಾಗಿ ತರಲಿರುವುದೆಂದೂ ಹೇಳಲಾಗಿದೆ.

ಖಾದಿ ಅಭಿವೃದ್ಧಿಗಾಗಿ ತೆರಿಗೆ

ಖಾದಿ ಮತ್ತು ಕೈಮಗ್ಗದ ಕೈಗಾರಿಕೆ ಮತ್ತು ಆ ಬಟ್ಟೆಗಳ ಮಾರಾಟದ ಅಭಿವೃದ್ಧಿಗಾಗಿ ಮಿಲ್ಲು ಬಟ್ಟೆಯ ಮೇಲೆ ಗಜವೊಂದಕ್ಕೆ ಮೂರು ಕಾಸು ಸೆಸ್ಸನ್ನು ವಿಧಿಸುವ ಮಸೂದೆಯೊಂದನ್ನು ಪಾರ್ಲಿಮೆಂಟಿನಲ್ಲಿ ನೆನ್ನೆ ಮಂಡಿಸಲಾಯಿತು. ಇದರಿಂದ ೬ ಕೋಟಿ ರೂ. ವರಮಾನ ಬರುವುದೆಂದು ನಿರೀಕ್ಷಿಸಲಾಗಿದೆ.

ಆರಂಭ ಭಾಷಣ

ರಾಜಧಾನಿಯ ಹುಸ್ನೂರು ವಿದ್ಯಾರ್ಥಿ ನಿಲಯ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೬ ಘಂಟೆಗೆ ಮೈಸೂರು ವಿಶ್ವ ವಿದ್ಯಾಲಯದ ಇಂಡಾಲಜಿ ಪ್ರೊಫೆಸರ್ ಶ್ರೀ ಕೆ. ಎ. ನೀಲಕಂಠ ಶಾಸ್ತ್ರಿಯವರು ಮಾಡುವರು.

ನೌಕರರ ನೇಮಕಕ್ಕೆ ಪರೀಕ್ಷೆ

ಸರ್ಕಾರಿ ನೌಕರರಲ್ಲಿ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಉದ್ಯೋಗಕ್ಕೆ ನೇಮಿಸಿಕೊಳ್ಳುವ ಮುಂಚೆ ಕಾಂಪಿಟಿಷನ್ ಪರೀಕ್ಷೆ ನಡೆಸುವ ಅಗತ್ಯವಿರುವುದೆಂದು ಪಬ್ಲಿಕ್ ಸರ್ವಿಸ್ ಕಮೀಷನ್ನಿನವರ ಮಾಡಿರುವ ಸಲಹೆಯಂತೆ ಸರ್ಕಾರದವರು ಪರೀಕ್ಷೆಗಳನ್ನು ಏರ್ಪಡಿಸುವರೆಂದು ಗೊತ್ತಾಗಿದೆ.

ಕ್ಷಾಮ ಪರಿಹಾರ ನಿಧಿಗೆ ದೆಹಲಿ ರೆಡ್‌ಕ್ರಾಸ್ ಸಂಸ್ಥೆ ಸಹಾಯ

ದೆಹಲಿಯಲ್ಲಿರುವ ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಕೇಂದ್ರ ಕಛೇರಿಯವರು ಮೈಸೂರು ಸಂಸ್ಥಾನದಲ್ಲಿ ಕ್ಷಾಮ ನಿವಾರಣೆ ಕಾರ್ಯಕ್ಕಾಗಿ ೨೫,೦೦೦-೦-೦ ರೂ ಗಳನ್ನು ಕೊಟ್ಟು ಈ ಹಣದಿಂದ ಬಟ್ಟೆಬರೆಯನ್ನು ಹಂಚಬೇಕೆಂದು ಸೂಚಿಸಿರುತ್ತಾರೆ.

ಚೀಣಾ ಮೇಲಿನ ಧಾಳಿಗಾಗಿ ೧ ಕೋಟಿ ಡಾಲರ್ ನಿಧಿ

ರಾಷ್ಟ್ರೀಯ ಚೀಣದ ಸಭೆಯೊಂದು ತಾಯ್‌ಪೇಯುಲ್ಲಿ ನಡೆದು ಚೀಣದ ಮೇಲೆ ಧಾಳಿ ನಡೆಸಲು ಫಾರ್ಮೋಸಾದಲ್ಲಿರುವ ಚಿಯಾಂಗ್ ಕೈ ಷೇಕರಿಗೆ ನೆರವು ನೀಡುವ ಸಲುವಾಗಿ ಒಂದು ಕೋಟಿ ಡಾಲರು ನಿಧಿಯನ್ನು ಸಂಗ್ರಹಿಸಲು ನಿರ್ಧರಿಸಿತೆಂದು ವರದಿಯಾಗಿದೆ. ಕಲ್ಕತ್ತಾ ನಗರದಲ್ಲಿ ನೆಲೆಸಿರುವ ೧೨ ಸಾವಿರ ಪೈಕಿ ಶೇಕಡ ೭೦ ಜನರು ರಾಷ್ಟ್ರೀಯ ಚೀಣದ ಬಗ್ಗೆ ಸಹಾನುಭೂತಿಯುಳ್ಳವರೆಂದು ಹೇಳಲಾಗಿದೆ

ಗಡಿನಾಡಿನ ಗಾಂಧಿಯವರಿಗೆ ಅನಾರೋಗ್ಯ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರು ತೀವ್ರ ಅಸ್ವಸ್ಥರಾಗಿ ಚಿಕಿತ್ಸೆ ಪಡೆಯಲು ಲಾಹೋರಿನ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು. ಪಾಕಿಸ್ಥಾನದ ಸರ್ಕಾರದವರು ಅವರನ್ನು ಬಂಧನದಿಂದ ಖುಲಾಸ ಮಾಡುವ ಅಭಿಲಾಷ ತೋರಿಸಿಲ್ಲವೆಂದು ಹೇಳಲಾಗಿದೆ

ಭೂದಾನಯಜ್ಞ ಕಾರ್ಯಕರ್ತರ ಸಭೆ

ಮೇಲ್ಕಂಡ ಕಾರ್ಯದಲ್ಲಿ ಆಸಕ್ತಿಯುಳ್ಳವರ ಸಭೆಯೊಂದನ್ನು ನಾಳೆ ಸಂಜೆ ೬ ಘಂಟೆಗೆ ರಾಜಧಾನಿಯ ಮಾದರಿ ಶಾಲೆಯಲ್ಲಿ ಏರ್ಪಡಿಸಲಾಗಿದೆ. ಮೈಸೂರು ಪ್ರಾಂತೀಯ ಭೂದಾನ ಯಜ್ಞ ಸಮಿತಿಯ ಸಂಯೋಜಕರಾದ ಶ್ರೀ ಬಿ. ನಾರಾಯಣಪ್ಪನವರು, ಸಂಸ್ಥಾನದಲ್ಲಿ ಭೂದಾನ ಯಜ್ಞ ಕಾರ್ಯಕ್ರಮದ ಬಗ್ಗೆಯೂ ಮತ್ತು ಅಖಿಲ ಭಾರತ ಸರ್ವಸೇವಾ ಸಂಘದ ಸಹಾಯ ಕಾರ್ಯದರ್ಶಿ ಶ್ರೀ ವಲ್ಲಭ ಸ್ವಾಮಿಯವರು ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳಲಿರುವ ಬಗ್ಗೆಯೂ ವಿವರಣೆಯನ್ನೀಯುವರು. ಸರ್ವರೂ ಸಭೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ

ಮರಿಯಪ್ಪನವರ ಅವಿರೋಧ ಆಯ್ಕೆ

ಮಂಡ್ಯ ಜಿಲ್ಲೆಯ ನಾಗಮಂಗಲ ಕ್ಷೇತ್ರದಿಂದ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಗೆ ಶ್ರೀಗಳಾದ ಟಿ. ಮರಿಯಪ್ಪ ಮತ್ತು ಎ. ಜಿ. ಬಂದೀಗೌಡರು ಸ್ಪರ್ಧಿಸಿದ್ದು, ಶ್ರೀ ಗೌಡರು ಉಮೇದುವಾರಿಕೆಯನ್ನು ವಾಪಸು ಪಡೆದುದರಿಂದ ಶ್ರೀ ಮರಿಯಪ್ಪನವರು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ಸಂಗೀತ ಕಲಾಭಿವರ್ಧಿನಿ ಸಭಾ

ರಾಜಧಾನಿಯ ಮೇಲ್ಕಂಡ ಸಭೆಯ ಕಾರ್ಯಕಾರಿ ಸಮಿತಿಯು ನೆನ್ನೆ ಸಯ್ಯಾಜಿರಾವ್ ರಸ್ತೆಯುಲ್ಲಿರುವ ಶ್ರೀ ಬಿ. ಕೆ. ಪದ್ಮನಾಭರಾಯರ ಮಂದಿರದಲ್ಲಿ ಸೇರಿ ಸಂಗೀತ ಶಾಸ್ತ್ರ ವಿಶಾರದ ಕೆ. ವಾಸುದೇವಾಚಾರ್ಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಚ್. ಯೋಗಾನರಸಿಂಹರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳು ಬೆಳಕವಾಡಿ ಶ್ರೀನಿವಾಸಯ್ಯಂಗಾರ್ಯರು ಮತ್ತು ಆರ್. ಎನ್. ದೊರೆಸ್ವಾಮಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಮತ್ತು ಶ್ರೀ ಬಿ. ಕೆ. ಪದ್ಮನಾಭರಾಯರನ್ನ ಕೋಶಾಧ್ಯಕ್ಷರನ್ನಾಗಿಯೂ ಚುನಾಯಿಸಿತು

ಧಾನ್ಯದ ಹತೋಟಿ ಪೂರ್ಣವಾಗಿ ರದ್ದಾಗುವುದಿಲ್ಲ

ಭಾರತದ ಪಂಚ ವಾರ್ಷಿಕ ಯೋಜನೆಗಳ ಬಗ್ಗೆ ಆಯೋಜನಾ ಮಂಡಲಿಯ ಸಭೆಯು ಡಿಹಲಿಯಲ್ಲಿ ಸಮಾವೇಶಗೊಂಡು ದೇಶದ ಆಹಾರ, ವ್ಯವಸಾಯ ಮತ್ತು ನಿರುದ್ಯೋಗಿಜನಗಳನ್ನು ಕುರಿತು ಚರ್ಚೆ ನಡೆಸಿತು. ಆಯೋಜನಾ ಮಂಡಲಿಯ ಸದಸ್ಯರೂ, ಪ್ರಧಾನಿ ನೆಹರೂ ಮತ್ತು ಸಂಸ್ಥಾನಗಳ ಮುಖ್ಯ ಮಂತ್ರಿಗಳೂ ಚರ್ಚೆಯುಲ್ಲಿ ಭಾಗವಹಿಸಿದ್ದರು. ಪಂಡಿತ ನೆಹರೂರವರು ಮಾತನಾಡುತ್ತಾ-ದೇಶದಲ್ಲಿ ಧಾನ್ಯದ ಹತೋಟಿಯನ್ನು ಈಗ ಇರುವುದಕ್ಕಿಂತ ಹೆಚ್ಚಾಗಿ ಸಡಿಲಿಸಲಾಗುವುದಿಲ್ಲವೆಂದೂ ಮತ್ತು ಧಾನ್ಯ ಸಂಗ್ರಹಣಾ ಕಾರ್ಯವು ಮುಂದುವರಿಯುವುದೆಂದೂ ತಿಳಿಸಿದರು. ಧಾನ್ಯದ ಹತೋಟಿಯ ಪೂರ್ಣ ರದ್ದಿನಿಂದ ಪರಿಸ್ಥಿತಿಯು ಪೂರ್ಣ ಹದಗೆಡುವುದೆಂದು ಅವರು ಎಚ್ಚರಿಸಿರುವರು

ನೆಹರೂರವರಿಗೆ ಅರಬ್ಬೀ ಭಾಷೆಯ ಭಾರತದ ಅರ್ಪಣೆ

ಲೆಬನಾನಿನ ಪ್ರಸಿದ್ಧ ಇತಿಹಾಸಜ್ಞರೂ ಪ್ರವಾಸಿಯೂ ಆದ ಟಬ್ಬಾನಿಯವರು ಅರಬ್ಬೀ ಭಾಷೆಯಲ್ಲಿ ಮಹಾಭಾರತವನ್ನು ಬರೆದಿರುವರೆಂದೂ, ಅವರ ಪರವಾಗಿ ಲೆಬನಾನಿನ ಪಾರ್ಲಿಮೆಂಟ್ ಸದಸ್ಯ ಎಮಿಲ್ ಟಬ್ಬಾನಿ ಎಂಬುವರು ಆ ಗ್ರಂಥವನ್ನು ಪ್ರಧಾನಿ ನೆಹರೂರವರಿಗೆ ಅರ್ಪಿಸುವ ಸಲುವಾಗಿ ಭಾರತಕ್ಕೆ ಹೊರಟಿರುವರೆಂದೂ ವರದಿಯಾಗಿದೆ

ಡಿಸೆಂಬರ್ ೧ ರಂದು ಮತ್ತೆ ಬೊಂಬಾಯಿ ಹರತಾಳ

ಬೊಂಬಾಯಿಯಲ್ಲಿ ವಿವಿಧ ಘಟ್ಟಗಳಲ್ಲಿ ವಿಧಿಸಲಾಗುತ್ತಿರುವ ಮಾರಾಟ ತೆರಿಗೆ ವಿರೋಧ ಸಂಘದವರು ಒಬ್ಬರು ತಿಂಗಳು ಒಂದನೇ ತಾರೀಕು ಪ್ರಾಂತ್ಯದ ಆದ್ಯಂತ ಪೂರ್ಣ ಹರತಾಳ ಆಚರಿಸಲು ನಿರ್ಧರಿಸಿರುವರು

ಹಿಂದೀ ತರಗತಿಗಳು

ಚಾಮರಾಜ ಮೊಹಲ್ಲಾ ಮತ್ತು ಆವರಣ ಸುತ್ತಮುತ್ತ ವಾಸಮಾಡುವವರ ಅನುಕೂಲಕ್ಕಾಗಿ ಚಾಮರಾಜಪುರಂ ಪೋಸ್ಟ್ ಆಫೀಸಿನ ಬಳಿ ಇರುವ ಅಮ್ಮಣ್ಣಿ ಸ್ಟೋರ್ಸ್ ಮಹಡಿಯಲ್ಲಿ ಪ್ರಾಥಮಿಕ, ಮಾಧ್ಯಮ, ರಾಷ್ಟ್ರಭಾಷಾ ಮತ್ತು ಪ್ರವೇಶಿಕಾ ತರಗತಿಗಳನ್ನು ತೆರೆಯಲಾಗಿದೆ. ವಿಶಾರದ ತರಗತಿಯನ್ನೂ ತೆರೆಯಲು ಏರ್ಪಾಡು ಮಾಡಲಾಗುತ್ತಿದೆ. ಹಿಂದೀ ವಿದ್ಯಾರ್ಥಿಗಳು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕಾಗಿ ಕೋರಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಸಂಗೀತ, ಎಂ. ಎಲ್. ಶಿವಯ್ಯ. ಮಧ್ಯಾಹ್ನ ೨ ವನಿತಾವಿಹಾರ ಮಹಿಳೆಯರ ಕಾರ್ಯಕ್ರಮ. ಸಂಜೆ ೬-೩೦ ಸಂಗೀತ, ಎಂ. ಎಲ್. ಶಿವಯ್ಯ. ೭ ಹಿಂದಿ ಗೀತೆಗಳು, ಎಚ್. ಆರ್. ಲೀಲಾವತಿ. ನಾಗಸ್ವರ, ಎ. ವಿ. ನಾರಾಯಣಪ್ಪ. ೯ ೧೫ ಕನ್ನಡ ಗೀತೆಗಳು, ೮ ನಾಗಪ್ಪ. ೯-೩೦ ಜನಪ್ರಿಯ ಮಹ್ಫಿಲಿನ ಗೀತೆಗಳು

೬ ಘಂಟೆ ಜೂಜಿನಲ್ಲಿ ಫರೂಕರಿಗೆ ೮೦ ಸಾವಿರ ರೂ. ನಷ್ಟ

ಇಟಲಿಯ ರಾಜಧಾನಿ ರೋಮಿನಲ್ಲಿ ನೆಲೆಸಿರುವ ಈಜಿಪ್ಟಿನ ಮಾಜಿ ದೊರೆ ಫರೂಕರು ಇತ್ತೀಚೆಗೆ ಒಂದು ಖಾಸಗಿ ಕ್ಲಬ್ಬಿನ ಸದಸ್ಯರಾಗಿ ಸೇರಿ ಇಸ್ಪೀಟು ಆಡಲು ಕುಳಿತು, ಮೂರು ಘಂಟೆ ಕಾಲದಲ್ಲಿ ಸುಮಾರು ೮೦ ಸಾವಿರ ರೂ. ಅನ್ನು ಕಳೆದರೆಂದು ವರದಿಯಾಗಿದೆ

ದೆಹಲಿಯ ಅತ್ಯಂತ ವೃದ್ಧನ ಮರಣ

ದೆಹಲಿಯ ಅತ್ಯಂತ ವೃದ್ಧನಾದ ಲಾಲ್ ಚಂದ್ ಎಂಬಾತನು ಮೊನ್ನೆ ದಿನ ತನ್ನ ೧೧೮ ನೇ ವಯಸ್ಸಿನಲ್ಲಿ ಮೃತಪಟ್ಟನೆಂದು ವರದಿಯಾಗಿದೆ

ಡ್ರೈವರನಿಗೆ ಶಿಕ್ಷೆ

ನಂಜುಂಡಯ್ಯ ಚೆಟ್ಟಿ ಎಂಬ ಡ್ರೈವರನು ಎಂ ವೈ ೧೧೫ ಎಕ್ಸ್ ಕಾರನ್ನು ತೆರಿಗೆ ಕಟ್ಟದೆ ಓಡಿಸಿದುದಕ್ಕಾಗಿ ೫ ರೂ. ಜುಲ್ಮಾನೆ ವಿಧಿಸಲ್ಪಟ್ಟಿರುವನು. ಆತನೂ ತೆರಿಗೆಯನ್ನ ಪಾವತಿಸಲು ಮಾಡಬೇಕೆಂದೂ ಆಜ್ಞೆ ಮಾಡಲಾಗಿದೆ

ಸಹಾಯಾರ್ಥ ಸಂಗೀತ ಕಛೇರಿ

ತಾ ೧೩-೧೧-೫೨ ನೇ ಗುರುವಾರ ಸಂಜೆ ೬ ಗಂಟೆಗೆ ನಂಜನಗೂಡಿನಲ್ಲಿರುವ ಕನಕದಾಸ ವಿದ್ಯಾರ್ಥಿ ನಿಲಯದ ಆವರಣದಲ್ಲಿ ದಿವಂಗತ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಶಿಷ್ಯವರ್ಗದವರಿಂದ ಸಂಗೀತ ಕಛೇರಿಯನ್ನು ಏರ್ಪಡಿಸಿದ್ದು ಮೇಲ್ಕಂಡ ಸಂಗೀತಕಛೇರಿಯ ಉತ್ಪತ್ತಿಯನ್ನು ನಿಲಯದ ಮೊಹಲ್ಲಾಗಳ ಲಗ್ನದ ಸಹಾಯಾರ್ಥವಾಗಿ ಉಪಯೋಗಿಸಬೇಕೆಂದು ಏರ್ಪಾಡು ಮಾಡಿರುವುದರಿಂದ ಮಹಜನರು ಉದಾರವಾಗಿ ಸಹಾಯ ಮಾಡುವುದ ಮೂಲಕ ಈ ಪ್ರಯತ್ನವನ್ನು ಯಶಸ್ವಿಗೊಳಿಸಿ ಪುಣ್ಯಭಾಗಿಗಳಾಗಬೇಕೆಂದು ವ್ಯವಸ್ಥಾಪಕರು ಪ್ರಾರ್ಥಿಸುತ್ತಾರೆ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೭೦ ೦ ೦	೨೨-೦-೦
ಎಳ್ಳು	೩೭ ೨ ೦	೩೯ ೮-೦
ಹರಳು ಬೀಜ	೪೧ ೨ ೦	೪೬ ೭ ೦
ಹುರುಳಿ	೫೮ ೩ ೦	
ಹೆಸರು	೫೧ ೨ ೦	೫೮ ೧೪ ೦
ಉಪ್ಪು	೫೮ ೪ ೬	
ಹಲಸಂದೆ	೫೬-೦-೦	೬೪ ೧೪ ೦
ಹುಚ್ಚೆಳ್ಳು	೫೪ ೦ ೦	
ಅವರೆ	೭೯ ೧೦ ೦	
ಮೆಣಸಿನಕಾಯಿ ಮುಣಗಿ	೭ ೬ ೦	೧೭ ೧೨ ೦
ಹುಣಸೇಹಣ್ಣು	೫ ೧೫ ೦	೬-೧೪ ೦
ಬೆಲ್ಲ	೪-೮-೦	
ಸೀಗೇಕಾಯಿ	೫-೦-೦	
ಹೊಂಗೇಬೀಜ	೧೫ ೧೨ ೦	
ತೆಂಗಿನಕಾಯಿ ೧೦೦೦ಕ್ಕೆ	೭೬ ೩೦೩ ೦ ೦	

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ.
ಔಷಧಿ ವ್ಯಾಪಾರಿಗಳು,
307 ಸಯ್ಯಾಜಿರಾವ್ ರೋಡ್,
ಮೈಸೂರು

ಸುಭಾಷರು ಬರುವರೆಂದು ಅವರ ಪತ್ನಿಯ ಹೇಳಿಕೆ

ಸುಭಾಷ್ ಬೋಸರ ಪತ್ನಿಯಾದ ಎಮಿಲಿ ಷ್ಕೆನ್ಕಲ್‌ರವರು ಮತ್ತು ಅವರ ೧೦ ವರ್ಷದ ಮಗಳು ಇವರಿಬ್ಬರನ್ನೂ ತಾವು ವಿಯನ್ನಾ ನಗರದಲ್ಲಿ ದೀಪಾವಳಿ ದಿನ ಕಂಡು ಮಾತನಾಡಿಸಿದುದಾಗಿಯೂ, ಬೋಸರು ಭಾರತಕ್ಕೆ ಮತ್ತೆ ಬರುವರೆಂದು ಅವರು ಭಾವಿಸಿರುವುದಾಗಿ ತಿಳಿಸಿದರೆಂದೂ, ಯುರೋಪಿಗೆ ತೆರಳಿ ಹಿಂತಿರುಗಿರುವ ಪಾರ್ಲಿಮೆಂಟ್ ಸದಸ್ಯರಾದ ಹೆಚ್. ವಿ. ಕಾಮತ್‌ರವರು ತಿಳಿಸಿರುತ್ತಾರೆ

ರೈಲು ಪ್ರಯಾಣದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ

ಚಾಮರಾಜನಗರದ ಕಡೆಯಿಂದ ಮೈಸೂರಿಗೆ ಬರುವ ಬೆಳಗಿನ ಗಾಡಿಯಲ್ಲಿ ನಾಲ್ಕು ಬೋಗಿಗಳು ಮಾತ್ರ ಇರುವುದರಿಂದ ಪ್ರಯಾಣಿಕರಿಗೆ ಬಹಳ ಕಷ್ಟವಾಗುತ್ತಿದೆ. ಅದರಲ್ಲಿ ಪ್ರಯಾಣ ಮಾಡುವ ನೂರಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸ್ಥಳ ಸಿಗದೆ ತೊಂದರೆಯಾಗುತ್ತಿದೆ. ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಾರಲಾಗಿದ್ದರೂ, ಏನೂ ಉಪಯೋಗವಿಲ್ಲ. ನೆನ್ನೆ ಎರಡನೇ ಅಪ್ ಗಾಡಿಯಲ್ಲಿ ಜಾಗವಿಲ್ಲದೆ, ವಿದ್ಯಾರ್ಥಿನಿಯರೂ, ವಿದ್ಯಾರ್ಥಿಗಳೂ ಇಂಟರ್ ತರಗತಿಯಲ್ಲಿ ಪ್ರಯಾಣ ಮಾಡಬೇಕಾಯಿತು. ವಿದ್ಯಾರ್ಥಿಗಳಿಂದ ಮಾತ್ರ ಇಂಟರ್ ತರಗತಿಯ ಛಾರ್ಜನ್ನು ವಸೂಲು ಮಾಡಲಾಯಿತು. ಇದು ಒಂದು ರೀತಿಯ ಶಿಕ್ಷೆಯಾಗಿ ಇರುವುದು ಸರಿಯಾಗಿಲ್ಲವೇ? ಸಂಬಂಧಪಟ್ಟ ಅಧಿಕಾರಿಗಳು ವಿಚಾರಿಸಬೇಕಾಗಿದೆ. ವಿದ್ಯಾರ್ಥಿಗಳಿಗೆ ಇರುವ ತೊಂದರೆಗಳನ್ನು ಗಮನಿಸಿ, ಪರಿಹರಿಸಬೇಕೆಂದು ನಂಜನಗೂಡಿನ ಹಲವು ವಿದ್ಯಾರ್ಥಿಗಳು ಕೋರಿರುತ್ತಾರೆ

ಬ್ಯಾಡ್ಮಿಂಟನ್ ಪಂದ್ಯ

ರಾಜಧಾನಿಯ ಇಟ್ಟಿಗೆಗೂಡು ಯುವಕರ ಸಂಘದವರು ಮೊನ್ನೆ ನಡೆಸಿದ ಬ್ಯಾಡ್ಮಿಂಟನ್ ಪಂದ್ಯಗಳಲ್ಲಿ ಬನುಮಯ್ಯ ಪ್ರೌಢಶಾಲೆಯವರನ್ನು ೨೧-೧೯, ೨೧-೧೫, ೨೧-೯ ಪಾಯಿಂಟುಗಳಿಂದಲೂ ಶ್ರೀಕೃಷ್ಣ ಸ್ಪೋರ್ಟ್ಸ್ ಟೀಮಿನವರನ್ನ ೨೧-೧೭, ೨೧-೧೫ ಪಾಯಿಂಟುಗಳಿಂದಲೂ ಸೋಲಿಸಿದರು

JOIN NOW
TYPEWRITING & SHORTHAND CLASSES
(Leading to Nov 53 Exams)
Individual Attention and Expert Training
EXCELLENT RESULTS IN THE LAST EXAMINATION
Further particulars can be had from
COMMERCIAL INSTITUTE
Attached to
Saradavilas High School,
K. M. Puram Mysore

Edited, Printed and Published by A R Nagaraj at Sadhvi Press, D. Subbaiah Road Mysore

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೨-೧೧ ೧೯೫೨ [ಸಂಚಿಕೆ ೮೯

ಭಾರತದೊಡನೆ ಫ್ರಾನ್ಸ್ ಸಂಬಂಧ ತ್ಯಾಗ

ಜಿಲ್ಲಾ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣಾ ಕೇಂದ್ರಗಳು

ಮೈಸೂರು ೧೨

...ಈ ತಿಂಗಳ ೧೫ ನೇ ತಾ|| ನಡೆ... ವ ಮೈಸೂರ ಜಿಲ್ಲಾ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಗಳು ಒ... ಪಟ್ಟಣ, ನಂಜನಗೂಡು, ಟಿ ನ... ಪುರಗಳಲ್ಲಿ ಆಯಾ ತಾಲ್ಲೂಕು ...ಗ್ರೆಸ್ ಕಛೇರಿಗಳಲ್ಲೂ ಮೈಸೂರು ...ನಗರದ ಪ್ರತಿನಿಧಿ ಚುನಾವಣೆಯು ...ರು ಜಿಲ್ಲಾ ಕಾಂಗ್ರೆಸ್ ಕಛೇರಿ ...ಬೆಳಗ್ಗೆ ೮ ರಿಂದ ಸಂಜೆ ೫ ಗಂ... ವರೆಗೆ ನಡೆಯುವುದಾಗಿ ಚುನಾವಣಾ ...ಗಳು ತಿಳಿಯಪಡಿಸಿರುತ್ತಾರೆ

ಉಮೇದುವಾರಿಕೆ ವಾಪಸು

ರಾಜಧಾನಿಯ ದಕ್ಷಿಣ ಪ್ರದೇಶದಿಂ... ಕಾಂಗ್ರೆಸ್ ಅಧಿವೇಶನದ ಚುನಾವ... ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸಿದ್ದವರ ...ರಾದ ಶ್ರೀ ಎಂ. ಗೋಪಾಲರಾ... ತಮ್ಮ ಉಮೇದುವಾರಿಕೆಯನ್ನು ...ಸು ಪಡೆದಿರುತ್ತಾರೆ

ಪೈರು ಮತ್ತು ಸಲಾಕಿ ಕದ್ದವರಿಗೆ ೨ ತಿಂಗಳು ಸಜಾ

...ರೂ ಬೆಲೆಯ ಪೈರು ಮತ್ತು ...ದ ಸಲಾಕಿಗಳನ್ನು ಶ್ರೀ ಮಹಂ... ...ರವರ ಮನೆಯಿಂದ ಕದ್ದರೆಂದು ...ಗಪ್ಪ ಮತ್ತು ನಟರಾಜರವ... ...ನಗರ ನ್ಯಾಯಾಧೀಶರು ... ತಿಂ... ...ಸಜಾ ವಿಧಿಸಿರುತ್ತಾರೆ

...ಲಕಾಡಿನಲ್ಲಿ ಮುಂಜಾಗ್ರತೆ ವ್ಯವಸ್ಥೆ

...ಲಕಾಡಿನಲ್ಲಿ ಪಂಚಲಿಂಗ ದರ್ಶನ ...ತ್ರೆ ಸಂಬಂಧವಾಗಿ ಅಲ್ಲಿನ ನಾಲಾ... ...ಮಯಾಗಿ ಬಾವಿಗಳನ್ನು ...ನೀರನ್ನು ಕ್ಲೋರಿನ್ ಮೂಲಕ ...ಮಾಡಿ, ನಲ್ಲಿಗಳಿಂದ ಜನರಿಗೆ ...ದಗಿಸಲಾಗುವುದು ಅದಕ್ಕಾಗಿ ಸಾ... ...ವಸ್ಥೆ ಸಿಬ್ಬಂದಿಯು ನಿರ್ಮಾಣ ಮಾ... ...ಜಾತ್ರೆಯಲ್ಲಿ ನಿರ್ಮಲೀಕರಣಕ್ಕಾ ...ವ್ಯವಸ್ಥೆಯಾಗಿ,೧೫೦ ಕಕ್ಕಸುಗಳನ್ನು ...ಕಲಾಗುವುದು

ಸ್ಥಳೀಯ ಸಂಸ್ಥೆ ನೌಕರರು ಉಡುಗೊರೆ ಪಡೆಯ ಕೂಡದು

...ಸಭೆ, ಜಿಲ್ಲಾ ಬೋರ್ಡು ...ತ್ತು ಪಂಚಾಯಿತಿಗಳ ನೌಕರರು ವಿ... ...ಮೊದಲಾದ ಸಂದರ್ಭಗಳಲ್ಲಿ ...ಬೆಳ್ಳಿ, ಪದಾರ್ಥಗಳು, ಇವೇ ...ಂದವನ್ನು ಬಹುಮಾನವಾಗಿ ...ಡಕೂಡದೆಂದು ಮದ್ರಾಸ್ ಸರ ...ಸುತ್ತೋಲೆ ಕಳುಹಿಸಿದೆ... ...ನ್ನು ಆಜ್ಞೆ ಮಾಡಿರುತ್ತಾರೆ ಪು... ...ಟ್ಟೆ ಮುಂತಾದ ಸಾಮಾನ್ಯ ...ಗಳನ್ನು ಪಡೆಯುವುದು ಸಿಬ್... ...ಪ್ರಿಕ್ಕ ಸರಿಯಾಗಿದ್ದರೂ ಚಿಕ್ಕ, ...ಬೆಳ್ಳಿ ಪಾತ್ರೆ ಇವುಗಳನ್ನು ಪಡೆ ...ದಾಕ್ಷಿಣ್ಯಕ್ಕೆ ಒಳಪಡಿಸುವ ...ಅನವಶ್ಯಕ ಟೀಕೆಗಳಿಗೆ ಆಸ್ಪದ ...ವುದೆಂದೂ, ಆ ರೀತಿ ಬಹುಮಾ... ...ಸಿಡಿವರೆ ಮುಯ್ಯಿ ತೀರಿಸಬೇ... ...ವುದೆಂದೂ, ಆದ್ದರಿಂದ ನೌಕರರು ...ರದ ವ್ಯಸ್ಥೆಯನ್ನು ಕಟ್ಟುನಿಟ್ಟಾ... ...ಬೇಕೆಂದೂ ಸೂಚಿಸಲಾಗಿದೆ

ವಿಶ್ವವಿದ್ಯಾಲಯದ ಘಟಿಕೋತ್ಸವ

ಮೈಸೂರು ೧೨

ಮೈಸೂರ ವಿಶ್ವವಿದ್ಯಾಲಯದ ಘಟಿಕೋತ್ಸವವು ಬರುವ ತಿಂಗಳು ೨೦ ನೇ ತಾರೀಖು ರಾಜಧಾನಿಯ ಕ್ರಾಫರ್ಡ್ ಭವನದಲ್ಲಿ ಜರುಗುವುದು

ಸಪ್ಲಿಮೆಂಟರಿ ಪರೀಕ್ಷೆ ಫಲಿತಾಂಶ

ಕಳೆದ ಸಪ್ಟೆಂಬರಿನಲ್ಲಿ ನಡೆದ ವಿಶ್ವವಿದ್ಯಾಲಯದ ಸಪ್ಲಿಮೆಂಟರಿ ಪರೀಕ್ಷೆಗಳ ಫಲಿತಾಂಶಗಳು ಇದೇ ತಿಂಗಳು ೧೯ ಅಥವಾ ೨೦ ನೇ ತಾರೀಖು ಹೊರಬೀಳುವುವು

ಅಮೇರಿಕಕ್ಕೆ ಚರ್ಚಿಲ್ಲರ ಭೇಟಿ

ಬ್ರಿಟನ್ನಿನ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್ಲರು ಬರುವ ಜನವರಿಯಲ್ಲಿ ಅಮೆರಿಕಕ್ಕೆ ತೆರಳಿ ಹೊಸದಾಗಿ ಅಧ್ಯಕ್ಷರಾಗುವ ಜ|| ಐಸನ್‌ಹೋವರರೊಡನೆ ಸಂಭಾಷಣೆ ನಡೆಸುವರೆಂದು ವರದಿಯಾಗಿದೆ

ವಾಫ್ಡ್ ಪಕ್ಷದಿಂದ ನಗೀಬರ ಆಜ್ಞೋಲ್ಲಂಘನೆ

ಈಜಿಪ್ಟಿನ ವಾಫ್ಡ್ ಪಕ್ಷವು ಜನರಲ್ ನಗೀಬ್‌ರವರ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ, ಮಾಜಿ ಪ್ರಧಾನಿ ನಹಾಸ್ ಪಾಷಾರವರನ್ನು ಪಕ್ಷದ ಗೌರವ ಅಧ್ಯಕ್ಷರನ್ನಾಗಿ ಮತ್ತೆ ಆರಿಸಿಕೊಂಡಿರುತ್ತದೆ ಮಾಜಿ ಸಚಿವ ಅಬ್ದೆಲ್ ಫತೇಲ್‌ರವರನ್ನೂ ಪಕ್ಷ ಸಂಸ್ಥೆಯ ಅಂಗ ರಚನಾ ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಳ್ಳಲಾಗಿದೆ ಅವರ ಹೆಸರನ್ನು ಸೇರಿಸಲೂ ನಗೀಬ್‌ರವರು ನಿಷೇಧಿಸಿದ್ದರು

ಸತ್ತ ೨೪ ನಿಮಿಷಗಳ ನಂತರ ಜೀವ ಬಂತು

ಇಂಗ್ಲೆಂಡಿನ ಡಿರ್ಬಿ ನಗರದ ಆಸ್ಪತ್ರೆಯೊಂದರಲ್ಲಿ ಶಸ್ತ್ರ ಚಿಕಿತ್ಸೆಯಾದ ಒಬ್ಬನು ಸತ್ತು ೨೪ ನಿಮಿಷಗಳನಂತರ ಅವನಿಗೆ ಪುನಃ ಜೀವವು ಬಂದ ಪ್ರಸಂಗವು ವರದಿಯಾಗಿದೆ ಶಸ್ತ್ರ ಚಿಕಿತ್ಸೆಯಾದನಂತರ ಅವನ ನಾಡಿಗಳು ನಿಂತು, ಶ್ವಾಸವು ಆಡಲಿಲ್ಲವೆಂದೂ ಹೃದಯವನ್ನು ಉಜ್ಜಿ ಇಂಜಕ್ಷನ್ ಕೊಟ್ಟಮೇಲೆ ಅವನು ಪುನಃ ಉಸಿರಾಡತೊಡಗಿದನೆಂದೂ ರೋಗಿಯು ಈಗ ಹುಷಾರಾಗಿರುವನೆಂದೂ ವರದಿಯಾಗಿದೆ

ವಿಶ್ವ ಸಂಸ್ಥೆಗೆ ರಷ್ಯಾ ಪ್ರತಿನಿಧಿಯ ಎಚ್ಚರಿಕೆ

ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಮೊನ್ನೆ ರಷ್ಯದ ವಿದೇಶಾಂಗ ಮಂತ್ರಿ ಆಂಡ್ರಿ ವಿಷಿನ್ಸ್ಕಿಯವರು ಮಾತನಾಡಿ, ಕೊರಿಯಾ ಯುದ್ಧದ ಬಂದಿಗಳನ್ನು ವಿನಿಮಯ ಮಾಡುವ ಪ್ರಶ್ನೆ ಬಗ್ಗೆ ವಿಶ್ವಸಂಸ್ಥೆಯು ಒತ್ತಾಯಪಡಿಸಿದರೆ ಪರ್ಯವಸಾನ ... ಮಾತುಕತೆಗಳು ಭಂಗವಾಗುವುದಾಗಿ ಹೇಳಿದರು ಕೊರಿಯಾ ಪ್ರಶ್ನೆಯನ್ನು ಬಗೆಹರಿಸಲು ಬ್ರಿಟನ್, ಫ್ರಾನ್ಸ್ ರಷ್ಯ, ಅಮೆರಿಕ ಕೆಂಪು ಚೀನ, ಭಾರತ ಬರ್ಮಾ ಉತ್ತರ ಮತ್ತು ದಕ್ಷಿಣ ಕೊರಿಯಾ ಮುಂತಾದ ೧೧ ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಬೇಕೆಂದು ಸೂಚಿಸಿರುತ್ತಾರೆ

ನಿಜಾಮರ ಮಾಜಿ ಸೊಸೆಗೆ ೧೦ ಲಕ್ಷ ರೂ. ಜೀವನಾಂಶ

ಹೈದರಾಬಾದಿನ ನಿಜಾಮರ ದ್ವಿತೀಯ ಪುತ್ರರಾದ ಮುಅಜಾಂ ಝಾ ಬಹದ್ದೂರರು ತಮ್ಮ ಪತ್ನಿ ತುರ್ಕಿ ದೇಶದ ರಾಜಕುಮಾರಿ ನಿಲೋಫರ್‌ರೊಡನೆ ವಿಚ್ಛೇದನ ಮಾಡಿಕೊಂಡ ನಂತರ ಆಕೆಗೆ ೧೦ ಲಕ್ಷ ರೂ ಗಳನ್ನು ಕೊಟ್ಟರೆಂದು ವರದಿಯಾಗಿದೆ ವಿಚ್ಛೇದನಕ್ಕೆ ಮುಂಚಿತವಾಗಿ ಆಕೆಯ ವೆಚ್ಚಕ್ಕಾಗಿ ವರ್ಷಕ್ಕೆ ೧ ಲಕ್ಷ ರೂ ಅನ್ನು ಕೊಡಲಾಗುತ್ತಿತ್ತು ಇವರಿಬ್ಬರ ವಿವಾಹವು ೧೯೩೧ ರಲ್ಲಿ ಆಗಿತ್ತು

ನರ್ತಕಿಯ ಮೈಗೆ ಹೆಬ್ಬಾವು ಸುತ್ತಿಕೊಂಡ ಪ್ರಸಂಗ

ಸರ್ಪಗಳೊಡನೆ ನರ್ತನ ಮಾಡುವುದರಲ್ಲಿ ಬಹಳ ಪ್ರಸಿದ್ಧಿ ಪಡೆದ ಬೆಟ್ಟಿ ಆರ್ಲೀ ಎಂಬ ೨೦ ವರ್ಷದ ನರ್ತಕಿಯು ಲಂಡನ್ ಬಳಿ ರೀಡಿಂಗ್ ಎಂಬಲ್ಲಿ ನೃತ್ಯ ಮಾಡುವಾಗ ಮೊನ್ನೆ ಹತ್ತು ಅಡಿ ಉದ್ದದ ಒಂದು ಹೆಬ್ಬಾವು ನಾಟ್ಯರಂಗದಲ್ಲಿ ಅವಳ ಕೈಗಳನ್ನು ಕಟ್ಟಿ ಮೈಗೆಲ್ಲಾ ಸುತ್ತಿಕೊಂಡಿತೆಂದೂ, ಹತ್ತಿರದಲ್ಲಿದ್ದ ಇಬ್ಬರು ಆಳುಗಳು ಶ್ರಮಪಟ್ಟು ಹಾವನ್ನು ಬಿಡಿಸಿದರೆಂದೂ ಗೊತ್ತಾಗಿದೆ ಸುಸ್ತಾಗಿದ್ದ ಆ ನರ್ತಕಿಯು ಕೆಳಗೆ ಬಿದ್ದುಬಿಟ್ಟಳೆಂದೂ, ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ ತಿಳಿದುಬಂದಿದೆ

ಇದೇ ೨೭ ನೇ ತಾ|| ಕಾವ್ಯ ವಾಚನದ ಆರಂಭೋತ್ಸವ

ಮಹಾರಾಜರವರ ಸಂದೇಶದ ಪಠನ

ಸ್ವಂ ಸು ವರ್ದಿ] ಬೆಂಗಳೂರು ೧೨

ಸಂಸ್ಥಾನದ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಈ ದಿನ ಜಿಲ್ಲಾಧಿಕಾರಿಗಳು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ವಿದ್ಯಾ ಇಲಾಖೆ ಡೈರೆಕ್ಟರ್ ಮುಂತಾದವರ ಸಭೆಯು ನಡೆದು ಇದೇ ತಿಂಗಳು ೨೭ ನೇ ತಾ|| (ಗೀತಾ ಜಯಂತಿ) ಸಂಸ್ಥಾನದ ಎಲ್ಲ ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿ ಕೇಂದ್ರಗಳಲ್ಲಿ ರಾಮಾಯಣ, ಭಾರತ ಮತ್ತು ಇತರ ಕಾವ್ಯ ವಾಚನ ಇವೇ ಮುಂತಾದ ಸಾಂಸ್ಕೃತಿಕ ಪ್ರಚಾರದ ಆರಂಭೋತ್ಸವವನ್ನು ನಡೆಸುವಂತೆ ತೀರ್ಮಾನವಾಯಿತು ಆ ದಿನ ಶ್ರೀಮನ್ಮಹಾರಾಜರವರ ಸಂದೇಶವನ್ನೂ ಪಠಿಸಲಾಗುವುದು ಜಿಲ್ಲಾ ಸಮಾರಂಭಗಳ ಆರಂಭೋತ್ಸವವನ್ನು ಒಬ್ಬೊಬ್ಬ ಮಂತ್ರಿಗಳು ನಡೆಸುವಂತೆ ಗೊತ್ತುಮಾಡಲಾಗಿದೆ

ಭಾರತದೊಡನೆ ಫ್ರಾನ್ಸಿನ ಸಂಬಂಧ ತ್ಯಾಗ ?

ಪಶ್ಚಿಮ ತೀರದಲ್ಲಿರುವ ಫ್ರೆಂಚರ ವಸಾಹತಾದ ಮಾಹಿಯ ಪಳ್ಳೂರು ಕಂಕನ್ನಾ, ಚಲಕ್ಕಾಲ್ ಮತ್ತು ಚೆಂಬ್ರ ಇವುಗಳಲ್ಲಿ ಸಂಜ್ಞೆ ಮೂಲಕ ವಿಷಯಗಳನ್ನು ತಿಳಿಸುವ ನೆಲೆಗಳನ್ನು ಏರ್ಪಡಿಸಿ, ಮಾಹಿಯೊಡನೆ ಸಂಪರ್ಕವನ್ನುಂಟುಮಾಡಲು ಫ್ರೆಂಚ್ ಅಧಿಕಾರಿಗಳು ಆಲೋಚಿಸುತ್ತಿರುವರೆಂದೂ, ಆ ಪ್ರದೇಶದ ಗುಡ್ಡಗಳ ಸರ್ವೇಯನ್ನು ನಡೆಸಲಾಗುತ್ತಿರುವುದೆಂದೂ, ಭಾರತದೊಡನೆ ಸಂಬಂಧವು ಕಡಿಯಲ್ಪಟ್ಟರೆ ಈ ಎಚ್ಚರಿಕೆ ಕ್ರಮವು ಅವಶ್ಯಕವೆಂದು ಅಲ್ಲಿನ ಅಧಿಕಾರಿಗಳು ಭಾವಿಸಿರುವರೆಂದೂ ವರದಿಯಾಗಿದೆ

ಬಂಗಾರಪೇಟೆ ಮೂಲಕ ಮಂಗಳೂರಿಗೆ ರೈಲಿಲ್ಲ

ಬಂಗಾರಪೇಟೆಯ ಮೂಲಕ ಮದ್ರಾಸು ಮತ್ತು ಮಂಗಳೂರುಗಳ ನಡುವೆ ನೇರವಾದ ರೈಲು ಸಂಪರ್ಕವೇರ್ಪಡಬೇಕೆಂದು ಮೈಸೂರಿನ ಮುಖ್ಯ ಮಂತ್ರಿಗಳು ಕೋರಿಕೆ ಮಾಡಿಕೊಂಡಿದ್ದರಾಗಿಯೂ, ಈಗ ಕೇಂದ್ರ ಸರ್ಕಾರದವರು ಅದಕ್ಕೆ ಕೈ ಹಾಕುವುದಿಲ್ಲವೆಂದೂ, ಭಾರತದ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪಾರ್ಲಿಮೆಂಟಿನಲ್ಲಿ ನೆನ್ನೆ ತಿಳಿಸಿದರು

ಸಯಾಂನಲ್ಲಿ ೧೦೦ ಮಂದಿ ಕಮ್ಯೂನಿಸ್ಟರ ಬಂಧನ

ಕಳೆದ ೪ ವರ್ಷಗಳಲ್ಲಿ ಅತ್ಯಂತ ಭಾರಿ ಪ್ರಮಾಣದಲ್ಲಿ ಮೊನ್ನೆ ಸಯಾಂ ಪೋಲೀಸರು ೧೦೦ ಮಂದಿ ಕಮ್ಯೂನಿಸ್ಟ್ ಸಹಾನುಭೂತಿಗಾರರನ್ನು ದಸ್ತಗಿರಿ ಮಾಡಿದರು ಅವರ ಪೈಕಿ ಪಾರ್ಲಿಮೆಂಟಿನ ಒಬ್ಬ ಸದಸ್ಯರೂ, ಇಬ್ಬರು ವಿಮಾನಾಧಿಕಾರಿಗಳೂ ಇರುವರು ಪತ್ರಿಕಾ ಸಂಪಾದಕರುಗಳೂ ಬಂಧಿತರಾಗಿರುವರು

ಮೈಸೂರು ಸಂಸ್ಥಾನದ ಮೂರನೇ ಎರಡು ಭಾಗದಷ್ಟು ಪ್ರದೇಶಗಳಲ್ಲಿರುವ ಸುಮಾರು ೫೦ ಲಕ್ಷ ಪ್ರಜೆಗಳು ಆಹಾರದ ಅಭಾವಕ್ಕೀಡಾಗಿರುವರೆಂದು ಆಹಾರ ಮಂತ್ರಿ ಸಿದ್ದಪ್ಪಯವರು ತಿಳಿಸಿರುತ್ತಾರೆ

ಟಿಬೆಟ್ಟಿನಲ್ಲಿ ದಂಗೆಗಳು

ಟಿಬೆಟ್ಟಿನ ಪೂರ್ವ ಗಡಿಯಲ್ಲಿ ೩೦೦ ಎಂ.ಒಲ್ಲಿನ ನಿವಾಸಿಗಳಿಗೂ ಚೀಣದ ವಿ ಮೋಚಕ ಪಡೆಗಳಿಗೂ ಘರ್ಷಣೆಯಾಗಿ ೩೦ ಮಂದಿ ಟಿಬೆಟನ್ನರೂ, ೧೦೦ ಜನ ಚೀಣರೂ ಮಡಿದಿರುವರೆಂದು ವರದಿಯಾಗಿದೆ. ಅಲ್ಲಿನ ನಿವಾಸಿಗಳು ಯುದ್ಧಪ್ರಿಯರೆಂದು ಹೆಸರುವಾಸಿಯಾಗಿರುವರು. ಟಿಬೆಟ್ ಸೈನ್ಯದಲ್ಲಿ ಇವರ ಸಂಖ್ಯೆಯೇ ಹೆಚ್ಚು. ಘರ್ಷಣೆಗೆ ಕಾರಣವು ಗೊತ್ತಿಲ್ಲವಾದರೂ, ಚೀಣಾ ಪಡೆಗಳು ಬಂದಿರುವುದಕ್ಕೆ ಅಲ್ಲಿನವರು ಅತೃಪ್ತರಾಗಿದ್ದರು.

ಉಚಿತ ಕಾಲರಾ ನಿರೋಧಕ ಇನಾಕ್ಯುಲೇಷನ್

ರಾಜಧಾನಿಯ ಪೌರಸಭಾ ಸದಸ್ಯರಾದ ಡಾ|| ಪಿ. ಡಿ. ಕೃಷ್ಣಸ್ವಾಮಿಯವರು, ಪೌರಸಭೆಯಿಂದ ಕಾಲರಾ ಇನಾಕ್ಯುಲೇಷನ್ ಟ್ಯೂಬುಗಳನ್ನು ತರಿಸಿ ಮೊನ್ನೆ ದೊಡ್ಡಪೇಟೆಯ ಶ್ರೀ ಬಿ. ಎಲ್. ಸಂಜೀವಶೆಟ್ಟರ ಮನೆಯಲ್ಲಿ ತಲಕಾಡು ಪಂಚಲಿಂಗ ದರ್ಶನಕ್ಕಾಗಿ ಹೋಗುವ ಸುಮಾರು ೧೦೦ ಜನರಿಗೆ ಉಚಿತವಾಗಿ ಇನಾಕ್ಯುಲೇಷನ್ ಮಾಡಿದರು. ಅಲ್ಲಿನ ನಿವಾಸಿಗಳು ಅವರಿಗೆ ಇದಕ್ಕಾಗಿ ಕೃತಜ್ಞರಾಗಿದ್ದಾರೆ.

ಧಾನ್ಯಗಳ ರಕ್ಷಣೆಗೆ ಕ್ರಮ

ಆಹಾರ ಪದಾರ್ಥಗಳನ್ನು ಹುಳುಗಳು ನಷ್ಟಪಡಿಸದಂತೆ ಕಾಪಾಡಲು ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದವರು ಕ್ರಮಗಳನ್ನು ಕೈಗೊಂಡಿರುತ್ತಾರೆ. ಆಹಾರ ಧಾನ್ಯವನ್ನು ಇಡಲಾಗುತ್ತಿರುವ ಗೋಣಿ ಚೀಲಗಳಿಗೆ ಕ್ರಿಮಿನಾಶಕ ಮತ್ತು ರಸಾಯನಿಕ ವಸ್ತುಗಳನ್ನು ಲೇಪಿಸಿ ಆ ಮೂಲಕ ಕ್ರಿಮಿಗಳು, ಧಾನ್ಯವನ್ನು ನಾಶಪಡಿಸದಿರುವ ಬಗ್ಗೆ ಅವರು ನಡೆಸುತ್ತಿರುವ ಪ್ರಯೋಗಗಳಲ್ಲಿ ಶಾಖೆಯವರು ಪ್ರಗತಿಯನ್ನು ಸಾಧಿಸುತ್ತಿರುವರು.

ನವಚಿತ್ರ ವಾರಪತ್ರಿಕೆ

ಸರಗೂರಿನ ಶ್ರೀ ನರಸಿಂಹಯ್ಯಂಗಾರ್ಯರು ಮತ್ತು ಅಕ್ಕಿ ಹೆಬ್ಬಾಳಿನ ಶ್ರೀ ಕೃ. ನ. ಮೂರ್ತಿಯವರು ನವಚಿತ್ರ ಎಂಬ ಸಚಿತ್ರ ಸಾಪ್ತಾಹಿಕ ಪತ್ರಿಕೆಯನ್ನು ಇದೇ ೧೩ನೇ ತಾ|| ನಿಂದ ಪ್ರತಿ ಗುರುವಾರವೂ ಪ್ರಕಟಿಸುವ ವ್ಯವಸ್ಥೆ ಮಾಡಿರುತ್ತಾರೆ. ಪತ್ರಿಕೆಯು ಡೆಮಿ ನಾಲ್ಕನೇ ಒಂದು ಭಾಗದಷ್ಟಿದ್ದು ಅದರ ಬೆಲೆಯು ಒಂದಾಣೆ ಇರುವುದು.

ತಲಕಾಡು ಮಹಾತ್ಮೆ

ಮತ್ತು

ಪಂಚಲಿಂಗ ದರ್ಶನ ಯಾತ್ರೆ

ಲೇಖಕರು —

ಟಿ. ಆರ್. ಸೀತಾರಾಮ ಶಾಸ್ತ್ರಿ

ಬೆಲೆ ೦ ೭-೦

ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲಾಗುತ್ತೆ

ಪ್ರತಿಗಳು ದೊರೆಯುವ ಸ್ಥಳ —

ಟಿ. ಆರ್. ಸೀತಾರಾಮ ಶಾಸ್ತ್ರಿ, ಸರಸ್ವತೀಪುರಂ, ಮತ್ತು ಸಾಧ್ವಿ ಆಫೀಸ್, ಮೈಸೂರು

ಈಜಿಪ್ಟಿನಲ್ಲಿ ೭ ಜನ ನ್ಯಾಯಾಧೀಶರ ವಜಾ

ಏಳು ಜನ ನ್ಯಾಯಾಧೀಶರೂ ಸೇರಿ ಹತ್ತು ಮಂದಿ ಹಿರಿಯ ಅಧಿಕಾರಿಗಳನ್ನು ಈಜಿಪ್ಟ್ ಸರ್ಕಾರದವರು ವಜಾ ಮಾಡಿರುತ್ತಾರೆ.

ಜಯಪ್ರಕಾಶರಿಂದ ಭೂದಾನ ಯಜ್ಞ ಕಾರ್ಯ

ಸಮಾಜವಾದಿ ಪಕ್ಷದ ನಾಯಕರಾದ ಜಯಪ್ರಕಾಶ್ ನಾರಾಯಣ್ ರವರು ಬಿಹಾರಿನಲ್ಲಿ ಭೂದಾನ ಯಜ್ಞದ ಕೆಲಸವನ್ನು ಕೈಗೊಳ್ಳುವರೆಂದು ವರದಿಯಾಗಿದೆ. ಸರ್ವ ಸೇವಾ ಸಂಘದವರು ಆ ಪ್ರಾಂತದಲ್ಲಿ ೪ ಲಕ್ಷ ಎಕರೆ ಜಮೀನನ್ನು ದಾನವಾಗಿ ಪಡೆಯಬೇಕೆಂದು ಗೊತ್ತುಪಡಿಸಿರುವ ಗುರಿಯನ್ನು ಜಯಪ್ರಕಾಶರು ಸಾಧಿಸಲು ಪ್ರಯತ್ನಿಸುವರೆಂದು ಹೇಳಲಾಗಿದೆ.

ಮಂಡ್ಯದಲ್ಲಿ ಗ್ರಾಮ ಕೈಗಾರಿಕೆ ಯೋಜನೆ ಆರಂಭೋತ್ಸವ

ಮಂಡ್ಯ ಜಿಲ್ಲೆಯ ಗ್ರಾಮಾಂತರ ಕೈಗಾರಿಕೆಗಳ ಯೋಜನೆಯ ಆರಂಭೋತ್ಸವವನ್ನು ಡಾ|| ಎಂ. ವಿಶ್ವೇಶ್ವರಯ್ಯನವರು ನ... ನೆರವೇರಿಸುವರು. ಬೊಂಬಾಯಿನ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಅಧ್ಯಕ್ಷತೆ ವಹಿಸುವರು.

ಗೋವಧಾ ನಿರೋಧಕ್ಕಾಗಿ ೫೦ ಸಾವಿರ ಜನರ ರುಜು

ಕಳೆದ ತಿಂಗಳು ...ನೇ ೩೧ ಗೋಪಾಷ್ಟಮಿಯ ದಿನದಿಂದ ರಾಜಧಾನಿಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಗೋವಧಾ ನಿರೋಧ ಚಳುವಳಿಯ ಅಂಗವಾಗಿ ನಡೆಸುತ್ತಿರುವ ಹಸ್ತಾಕ್ಷರಗಳನ್ನು ಪಡೆಯುವ ಕಾರ್ಯವು ಯಶಸ್ವಿಯಾಗಿರುವುದೆಂಬೂ ಈಗಾಗಲೇ ೫೦ ಸಾವಿರ ಜನರು ಗೋವಧಾ ನಿರೋಧಕ್ಕಾಗಿ ಶಾಸನವಾಗಬೇಕೆಂದು ಕೋರುವ ಮನವಿಗೆ ರುಜು ಹಾಕಿರುವರೆಂದೂ ತಿಳಿಸಲಾಗಿದೆ. ಈ ಕಾರ್ಯವನ್ನು ಇದೇ ೩೦ನೇ ತಾ||ನ ವರೆಗೂ ನಡೆಸಬೇಕಾಗಿರುವುದೆಂದೂ, ಹಳ್ಳಿಹಳ್ಳಿಗಳಲ್ಲೂ ಜನರ ರುಜುಗಳನ್ನು ಸಂಗ್ರಹಿಸಬೇಕಾಗಿರುವುದರಿಂದ ಅದಕ್ಕಾಗಿ ರಾಷ್ಟ್ರೀಯ ಸ್ವಯಂ ಸೇವಕರು ನಗರದ ಮನೆಮನೆಗೂ ಬರುವರೆಂದೂ, ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದೂ ಕೋರಲಾಗಿದೆ.

ಟೈರ್ ಮತ್ತು ಟ್ಯೂಬ್ ಸೋಲ್ ಚಪ್ಪಲಿಗಳು

ನಿಮಗೆ ಬೇಕಾದ ನಮೂನೆಯಲ್ಲಿ ಮಾಡಿಕೊಡುತ್ತೇವೆ

ಹನ್ಸ್ ಫುಟ್ ವೇರ್,

ದೇವರಾಜ ಮಾರ್ಕೆಟ್, ಮೈಸೂರು

ಸ್ಪೆಷಲ್ ಬಸ್ಸಿನಲ್ಲಿ

ರಾಮೇಶ್ವರ ಮತ್ತು ದಕ್ಷಿಣ ಭಾರತ ಪುಣ್ಯಕ್ಷೇತ್ರಗಳ ಮಹಾ ಯಾತ್ರೆ

27-1-52 ನೇ ತಾ|| ಬಸ್ಸು ಮೈಸೂರಿನಿಂದ ಹೊರಡುವುದು

ಚಾರ್ಜು 125 ರೂ ಗಳು ಮಾತ್ರ

ಹೆಚ್ಚಿನ ವಿವರಗಳಿಗೆ 0-2-0 ಸ್ಟಾಂಪಿನೊಡನೆ ಕೆಳಗಿನ ವಿಳಾಸಕ್ಕೆ ಬರೆಯಿರಿ ಅಥವಾ ಮುಖತಃ ಬಂದು ನೋಡಿರಿ

ಚಾಮುಂಡೇಶ್ವರಿ ಯಾತ್ರಾ ಕಂಪೆನಿ,

ವಿಠಲಾಯುರ ರಾಮಮಂದಿರದ ಹತ್ತಿರ, ಶಿವರಾಂಪೇಟೆ, ಮೈಸೂರು

೪೦೦ ನಕಲಿ ಪೆನ್ನುಗಳ ವಶ

ಜವಾಹರಿನ ಫೌಂಟೆನ್ ಪೆನ್ ವ್ಯಾಪಾರದ ಸಂಸ್ಥೆಯೊಂದು ತನ್ನ ಪೆನ್ನುಗಳ ನಾಮರೂಪವನ್ನು ಮದ್ರಾಸಿನಲ್ಲಿ ತಯಾರಿಸಿ ಅಗ್ಗದ ಬೆಲೆಯಲ್ಲಿ ಮಾರಲಾಗುತ್ತಿದೆಯೆಂದು ದೂರು ಕೊಟ್ಟಿದ್ದರಿಂದ ಪೋಲೀಸರು ಪೆನ್ನು ವ್ಯಾಪಾರಿಗಳಿಬ್ಬರ ಅಂಗಡಿಯನ್ನು ಶೋಧಿಸಿ ೪೦೦ ಪೆನ್ನುಗಳನ್ನು ವಶಪಡಿಸಿಕೊಂಡಿರುವರೆಂದು ವರದಿಯಾಗಿದೆ. ಒಂದು ಅಂಗಡಿಯಲ್ಲಿ ೧೫ ಡಜನ್ ಪೆನ್ನುಗಳನ್ನು "ದೀಪಾವಳಿ ಸಿಹಿ ತಿಂಡಿಗಳು" ಎಂದು ಅಚ್ಚು ಹಾಕಲಾಗಿದ್ದ ಪೆಟ್ಟಿಗೆಯಲ್ಲಿ ಮುಚ್ಚಿಡಲಾಗಿದ್ದಿತು.

ಸೇವಾ ದಳದವರಿಂದ ನೆಹರೂ ವರ್ಧಂತಿ ಆಚರಣೆ

ಹಿಂದೂಸ್ಥಾನಿ ಸೇವಾ ದಳದ ಪ್ರಥಮ ಅಧ್ಯಕ್ಷರೂ, ಭಾರತದ ಮಹಾ ಪ್ರಧಾನಿಗಳೂ ಆಗಿರುವ ಪಂ|| ನೆಹರೂರವರ ೬೩ನೇ ವರ್ಷ ವರ್ಧಂತಿಯನ್ನು ಇದೇ ೧೪ನೇ ತಾ|| ಸಂಸ್ಥಾನದ ಭಾರತ ಸೇವಾ ದಳದ ಎಲ್ಲ ಶಾಖೆಗಳೂ ಆಚರಿಸುವಂತೆ ಸೂಚಿಸಲಾಗಿದೆ. ಪ್ರಾತಃಕಾಲ ಧ್ವಜಾರೋಹಣವಾದ ನಂತರ ನೆಹರೂರವರ ದೀರ್ಘಾಯುಸ್ಸನ್ನು ಕೋರಲು ಪ್ರಾರ್ಥನೆಯನ್ನು ನಡೆಸತಕ್ಕದ್ದೆಂದೂ, ಆಯಾ ಪ್ರದೇಶಗಳಲ್ಲಿ ಸಾರ್ವಜನಿಕರಿಂದ ಆಚರಿಸಲ್ಪಡುವ ಸಮಾರಂಭಗಳಲ್ಲಿ ಸೇವಾ ದಳದವರು ಭಾಗಿಗಳಾಗುವುದು ಮಾತ್ರವಲ್ಲದೆ, ...ದ ಪರಿಸ್ಥಿತಿಗೆ ತಕ್ಕಂತೆ ಸೇವಾದಳ ಶಾಖೆಯವರೂ ಸ್ವತಂತ್ರ ಕಾರ್ಯಕ್ರಮಗಳನ್ನು ನಡೆಸುವಂತೆಯೂ ಸಂಸ್ಥಾನದ ಸೇವಾದಳದವರು ಸೂಚಿಸಿರುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ದಿಲ್ರುಬಾ, ಮಧ್ಯಾಹ್ನ ೧-೩೦ ವೀಣೆ ರಂಗಪ್ಪ, ವೇಣುಗಾನ ಸಂಜೆ ೫-೪೦ ಎಸ್. ರಾಮಚಂದ್ರರಾವ್, ಸಂಗೀತ ೬-೦೦ ಕನ್ನಡ ಗೀತೆಗಳು ೭ ವರೆ ...ಮುಕ ೭-೩೦ ಎಸ್. ಡಿ. ಕೀರ್ತನೆ... ಸಂಗೀತ ... ಮತ್ತು ... ಎಂ. ಎಸ್. ಚಂದ್ರಶೇಖರಯ್ಯ, ಪಿಟೀಲು ಗಾನ ೯-೩೦ ರಂಗನ್ನ ವೇಣುಗಾನ ೯-೪೦ ಮೈಸೂರು ಅರಮನೆ ಬ್ಯಾಂಡು

SRI GAYATHRI

M G M's

SCARAMOUCHE

TO-DAY & TOMORROW Only

— NEXT CHANGE —

From 14-11-52 for 2 days

I DOOD IT

Starring Red Skelton

ಒಲಿಂಪಿಯಾ ಟಾಕೀಸ್

13-11-52 ರಿಂದ ಪ್ರತಿನಿತ್ಯ ಪ್ರಾರಂಭ

ಪ್ರತಿದಿನ 3 ಆಟಗಳು

... ಪ್ರಸಿದ್ಧ ... ನಟಿಸಿರುವ

ಫ್ಲಾಷ್

ಭಯಂಕರ ಸಾಹಸ ಕೃತ್ಯಗಳ ... ಜೊತೆಗೂಡಿದ ಹಿಂದಿ ಚಿತ್ರ

— ಬರಲಿರುವ ಪ್ರದರ್ಶನ

ಮೊದಲು ... ಪಾತ್ರವಹಿಸಿರುವ

ಜಾಲ್ ಸಾಜ್

ಮನೆಗಂದಾಯಗಳ ಪುನರ್ವಿಮರ್ಶೆ

ಮೈಸೂರಿನ ಪೌರಸಭೆಯವರು ಪ್ರಸಕ್ತ ಸಾಲಿನ ಕಂದಾಯದ ಪುನರ್ವಿಮರ್ಶೆಯ ಸಂಬಂಧದಲ್ಲಿ ಮನೆ, ಅಂಗಡಿ ಮುಂತಾದುವುಗಳ ಕಂದಾಯವನ್ನು ಹೆಚ್ಚಿಸಿರುವ ಬಗ್ಗೆ ಪೌರಸಭಾ ಕಛೇರಿಯಿಂದ ನೋಟೀಸು ತಲುಪಿದ ೩೦ ದಿನಗಳೊಳಗೆ ಕಮಿಷನರರಿಗೆ ಅರ್ಜಿ ಸಲ್ಲಿಸಿದ್ದರೆ, ಹೊಸದಾಗಿ ಹಾಕಿರುವ ಹೆಚ್ಚಿನ ಕಂದಾಯದ ವಿಷಯವನ್ನು ಅವರು ಪರಿಶೀಲಿಸುವರೆಂದೂ, ಅಲ್ಲಿ ಪುನರ್ವಿಮರ್ಶೆ ತೃಪ್ತಿಕರವಾಗದಿದ್ದ ಪಕ್ಷದಲ್ಲಿ ಪೌರಸಭೆಗೆ ಅಪೀಲು ಮಾಡಿಕೊಳ್ಳುವ ಅವಕಾಶವು ತೆರಿಗೆದಾರರಿಗೆ ಇರುವುದೆಂದೂ ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ತಿಳಿಸಿರುತ್ತಾರೆ.

ಪ್ರಭಾ 14-11-52 ರಿಂದ

ಜಯಪ್ರದ 3ನೇ ವಾರ

ದಿನವಹಿ 3 ಪ್ರದರ್ಶನಗಳು

ಪೀಪಲ್ಸ್ ಆರ್ಟ್ ಪ್ರೊಡಕ್ಷನ್ಸ್‌ರವರ ಅತ್ಯುತ್ಕೃಷ್ಟ ತೆಲುಗು ಚಿತ್ರ

★ **ಪಲ್ಲೆಟೂರು** ★

(ಹಳ್ಳಿ)

ಪಾತ್ರ — ಎನ್. ಟಿ. ರಾಮರಾವ್

(ಪಾತಾಳಭೈರವಿ ಪ್ರಖ್ಯಾತಿ)

ಸಾವಿತ್ರಿ, ರಂಗರಾವ್

ಕೃಷ್ಣರಾಜೇಂದ್ರ ಆಸ್ಪತ್ರೆ ಸೆಕ್ರಟರಿಯವರ ಆಫೀಸ್, ಮೈಸೂರು

ಟೆಂಡರ್ ನೋಟೀಸ್

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚೆಲುವಾಂಬಾ ಆಸ್ಪತ್ರೆ ಗಳಿಗೆ 1953-1954ನೇ ಸಾಲಿಗೆ ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಸಪ್ಲೈ ಮಾಡುವವರಿಂದ ಮೊಹರು ಪ್ರತಿಗಳುಳ್ಳ ಫಿಲ್ಸ್ ಕ್ಯಾಪ್ ಸೈಜ್ ನೊಡನೆ ಪ್ರತ್ಯೇಕ ಟೆಂಡರುಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರಟರಿಯವರ ಆಫೀಸಿನಲ್ಲಿ 1952 ನೇ ಡಿಸೆಂಬರ್ ಮಾಹೆ ತಾರೀಖು 8-12-1952 ನೇ ಸೋಮವಾರ ಮತ್ತು 9-12-1952 ನೇ ಮಂಗಳವಾರ 10 ಘಂಟೆಗೆ ಸರಿಯಾಗಿ ತೆಗೆಯುವ ಕ್ಕೋಸ್ಕರ ... ವಿವರಗಳನ್ನು ಮೇಲ್ಕಂಡ ಆಸ್ಪತ್ರೆ ಸೆಕ್ರಟರಿಯವರ ಆಫೀಸಿನಲ್ಲಿ ರಜಾ ದಿವಸಗಳು ವಿನಹಾ ಬಾಕಿ ದಿವಸಗಳಲ್ಲಿ ಬೆಳಿಗ್ಗೆ 8 ರಿಂದ 12 ಘಂಟೆಯ ವರೆಗೂ ಮಧ್ಯಾಹ್ನ 4 ರಿಂದ 6 ಘಂಟೆಯ ವರೆಗೂ ನೋಡಬಹುದು.

ತಾ|| 8-12-1952 10 ಘಂಟೆಗೆ

1. ಆಹಾರದ ಸಾಮಾನುಗಳು
2. ಆಸ್ಪತ್ರೆ ಸಾಮಾನುಗಳು
3. ಸ್ಟೇಷನರಿ ಸಾಮಾನುಗಳು

ತಾ|| 9-12-1952 10 ಘಂಟೆಗೆ

1. ಅಪ್ಪಟ ಹಾಲು
2. ವಿಳಾಯತಿ ಬ್ರೆಡ್ಡು

(ಸಹಿ) ಎಂ. ಆರ್. ನರಸಿಂಗರಾವ್

ಸೆಕ್ರಟರಿ

Edited, Printed and Published by A. R. Nagaraja at Sadhvi Press, D. Subbaiah Road, Mysore

||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೪-೧೧ ೧೯೫೩ [ಸಂಚಿಕೆ ೯೦

ಗೋವಾದಲ್ಲಿ ನೆಹರೂ - ರವರ ಚಿತ್ರಕ್ಕೆ ಬೆಂಕಿ -

...ತೆರಿಗೆ ... ಕಾರ್ಡು ನಕಲು ಅವಶ್ಯಕವಿಲ್ಲ

ಮೈಸೂರು ೧೩

ಮೈಸೂರು ನಗರದಲ್ಲಿ ಪಡಿತರ ಪದ್ಧತಿ ... ವಜಾ ಆಗಿರುವುದರಿಂದ ಇಲ್ಲಿನ ಪಡಿತರ ಕಾರ್ಡುದಾರರು ಸ್ವಂತ ಉಪಯೋಗಕ್ಕೆ ತಮ್ಮ ಜವಿ(ನ ಗ(ಂದ ಧಾನ್ಯವನ್ನು ತರಲು ಅಡಚಣೆಯು ಆಗ ತಕ್ಕದ್ದಿಲ್ಲವೆಂದೂ, ಆದುದರಿಂದ ಇದುವರೆಗೆ ಪ್ರತಿ ವರ್ಷವೂ ಪಡೆಯುತ್ತಿದ್ದ ... ಕಾರ್ಡು ನಕಲನ್ನೂ ಪಡೆಯ ಬೇಕಾಗಿಲ್ಲವೆಂದೂ ನಗರದ ರೇಷನಿಂಗ್ ಅಧಿಕಾರಿಗಳು ತಿಳಿಸಿರುತ್ತಾರೆ

ಪ್ರಭುಗಳ ಆಫ್ರಿಕಾ ಪ್ರವಾಸ ಸದ್ಯಕ್ಕಿಲ್ಲ

ಬರುವ ತಿಂಗಳು ದಕ್ಷಿಣ ಆಫ್ರಿಕಕ್ಕೆ ಶ್ರೀ ಪ್ರಭುಗಳು ಪ್ರವಾಸ ಹೊರಡುವ ಕಾರ್ಯಕ್ರಮವು ಸದ್ಯಕ್ಕೆ ಇಲ್ಲವಲ್ಲದೆ ಕೊಂಚ ಕಾಲದ ನಂತರ ಅವರು ಅಲ್ಲಿಗೆ ತೆರಳುವರೆಂದು ಹೇಳಲಾಗಿದೆ

ಮನೆ ಮುಂಭಾಗದಲ್ಲೇ ಕೊಲೆ

... ಕೊಳ್ಳೇಗಾಲ ತಾಲ್ಲೂಕಿನ ತಿರುಮಕೂಡಲು ... ಅಪ್ಪಯ್ಯ ಎಂಬುವರನ್ನು ... ನೇ ತಾರೀಖು ರಾತ್ರಿ, ಅವರ ಮನೆಯ ಮುಂಭಾಗದಲ್ಲೇ ಯಾರೋ ... ಮತ್ತು ಮಚ್ಚುಗಳಿಂದ ಹೊಡೆದು ... ಪಾದಿ ಪರಾರಿಯಾಗಿರುವರೆಂದು ವರದಿಯಾಗಿದೆ ಅಪ್ಪಯ್ಯನವರು ... ರಾಮಾಯಣವನ್ನು ಓದಲು ಕಾಯ ... ಹೋಗುವ ಮುನ್ನ ಮನೆಗಾಗಿ ... ಯನ್ನು ಅಂಗಡಿಯಿಂದ ತರು ... ಈ ಘಟನೆಯು ನಡೆಯಿತೆಂದು ... ಅವರ ೧೨ ವರ್ಷದ ಮಗು ... ಮಾಡುತ್ತಿದ್ದುದನ್ನು ನೋಡಿ ... ಅವನನ್ನೂ ಹೊಡೆಯಲು ಹೋದಾಗ ಅವನು ತಪ್ಪಿಸಿಕೊಂಡು ... ಅಕ್ಕಪಕ್ಕದವರು ಬಂದು ... ಆಸ್ಪತ್ರೆಯೊಳಗೆ ಕೊಲೆಪಾತಕರು ... ಓಡಿಹೋಗಿದ್ದರೆಂದೂ ಹೇಳಲಾಗಿದೆ ಹಲವರನ್ನು ಈಗ ವಶ್ಯಗಿರಿ ಮಾಡಲಾಗಿದೆ

ಮುಚ್ಚಿದ ಸಕ್ಕರೆ ಕಾರ್ಖಾನೆ ಕೆಲಸಗಾರರ ಮುಷ್ಕರ ?

... ಸಕ್ಕರೆ ಕಾರ್ಖಾನೆಯ ... ಸಂಘದ ಸಾಮಾನ್ಯ ಸಭೆಯು ... ನಡೆದು, ನೌಕರರುಗಳಿಗೆ ಬಟ್ಟೆ ... ಇನ್ನೂ ಕಡಿಮಾಡುತ್ತಿರುವುದರಿಂದ ಮುಷ್ಕರದ ಬ್ಯಾಲೆಟ್ ... ತೆಗೆದುಕೊಳ್ಳಲು ನಿರ್ಧಾರವಾಯಿತು

ಚಿನ್ನದ ಬೆಲೆ ಇಳಿದು ಕೋಲಾರದ ಕಂಪೆನಿಗೆ ನಷ್ಟ

... ಕೋಲಾರದ ಚಿನ್ನದ ಗಣಿಗಳ ಕಂ ... ವಾರ್ಷಿಕ ಸಭೆಯು ಲಂಡನ್‌ನಲ್ಲಿ ... ನಡೆಯಿತು ಸ್ಟರ್ಲಿಂಗ್ ಕಂಪೆನಿಗಳನ್ನು ... ಜಾಗ್ರತೆ ಮುಕ್ತಾಯ ... ಮಾಡುವಂತೆ ಅಧ್ಯಕ್ಷ ಜಾರ್ಜ್ ಟೇಲರ್ ... ಸೂಚಿಸಿದರು. ಚಿನ್ನದ ಬೆಲೆ ... ಗೆ ೨೫೦ ರೂ ನಿಂದ ... ಇಳಿದಿರುವುದೆಂದೂ, ಇದರಿಂದ ... ಗಳಿಗೆ ಸಂಪಾದನೆಗೆ ತುಂಬಾ ಧಕ್ಕೆ ಯಾಗುವುದೆಂದೂ ಅವರು ತಿಳಿಸಿ

ಭಾರತಾದ್ಯಂತ ೧೬ ನೇ ತಾ॥ ಆಫ್ರಿಕಾ ದಿನಾಚರಣೆ

ಇದೇ ೧೬ ನೇ ತಾ॥ ಭಾನುವಾರ ಭಾರತಾದ್ಯಂತ ದಕ್ಷಿಣ ಆಫ್ರಿಕಾ ದಿನಾಚರಣೆಯನ್ನು ನಡೆಸಲಾಗುವುದು ದೇಶದಲ್ಲಿರುವ ಎಲ್ಲ ಕಾಂಗ್ರೆಸ್ ಸಮಿತಿಗಳೂ ಸ್ಥಳೀಯ ರಾಜಕೀಯ ಪಕ್ಷಗಳ ಸಹಕಾರ ಪಡೆದು ದಿನವನ್ನು ಆಚರಿಸಿ, ಅಲ್ಲಿರುವ ಭಾರತೀಯರ ಸತ್ಯಾಗ್ರಹಕ್ಕೆ ಬೆಂಬಲ ಕೊಡುವಂತೆ ಸೂಚಿಸಲಾಗಿದೆ

ಡಾ॥ ರಾಧಾಕೃಷ್ಣರ್ ವಿಶ್ವ ಸಂಸ್ಥೆ ಸಮಿತಿಗೆ ಅಧ್ಯಕ್ಷರು

ಭಾರತದ ಉಪಾಧ್ಯಕ್ಷರಾದ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರ ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿರುವರು ಅವರೊಬ್ಬರ ಹೆಸರನ್ನು ಮಾತ್ರ ಆ ಸ್ಥಾನಕ್ಕೆ ಸೂಚಿಸಲಾಗಿತ್ತು.

ಸನ್ಯಾಸಿನಿಯಿಂದ ಹೊಸ ಪಕ್ಷದ ಸ್ಥಾಪನೆ

ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಸ್ಥಾಪಿಸಲು ತಾವು ಲೋಕಶಾಂತಿ ಸಂಘ ಎಂಬ ಸಂಸ್ಥೆಯೊಂದನ್ನು ನಿರ್ಮಿಸಲಿರುವುದಾಗಿ ದೆಹಲಿಯ ಕೃಷ್ಣಾ ಮಾತಾ ಎಂಬ ಸನ್ಯಾಸಿನಿಯು ತಿಳಿಸಿರುತ್ತಾರೆ ಜನ ಸಾಮಾನ್ಯರ ಶೋಷಣೆಗಾಗಿ ಮತವನ್ನು ದುರುಪಯೋಗಪಡಿಸಲಾಗುತ್ತಿದೆಯೆಂದೂ, ನಿಜವಾದ ಧರ್ಮವು ಯಾವ ಪ್ರಭೇದವನ್ನೂ ಎಣಿಸದೆಂದೂ ಅವರು ತಿಳಿಸಿ, ತಮ್ಮ ಪಕ್ಷವು ಶಾಂತಿಯುತ ಮತ್ತು ಅಹಿಂಸಾತ್ಮಕ ಕಾರ್ಯಗಳಿಂದ ತನ್ನ ಧ್ಯೇಯವನ್ನು ಸಾಧಿಸುವುದೆಂದು ಹೇಳಿರುತ್ತಾರೆ ಉತ್ತರ ಪ್ರದೇಶದ ಶ್ರೀಮಂತ ಕುಟುಂಬಕ್ಕೆ ಸೇರಿದ ಆಕೆಯು ತಮ್ಮ ೧೬ ನೇ ವರ್ಷದಲ್ಲಿ ಸರ್ವಸಂಗ ಪರಿತ್ಯಾಗ ಮಾಡಿ, ಕೈಲಾಸ ಪರ್ವತಕ್ಕೆ ತೆರಳಿ ಅಲ್ಲಿ ಧ್ಯಾನ ಮಾಡುತ್ತಿದ್ದು ಈಗ ವಾಪಸು ಬಂದಿರುತ್ತಾರೆ

ಹಸಿವಿನಿಂದ ೧೧೦ ಸಾವಿರ ಪೂರ್ವ ಬಂಗಾಳಿಗಳ ಮರಣ

ಪೂರ್ವ ಬಂಗಾಳದ ಮುಲ್ಲಾ ಜಿಲ್ಲೆಯಲ್ಲಿ ಹತ್ತು ಸಾವಿರ ಜನರು ಹಸಿವಿನ ಬಾಧೆಯಿಂದ ಮೃತಪಟ್ಟಿರುವರೆಂದು ಪಾಕಿಸ್ಥಾನ ಪಾರ್ಲಿಮೆಂಟಿನಲ್ಲಿ ಪೂರ್ವ ಪಾಕಿಸ್ಥಾನದ ಸದಸ್ಯ ಶ್ರೀ ... ಕುಮಾರ ದತ್ತರವರು ತಿಳಿಸಿರುವರು

ಗೋವೆಯಲ್ಲಿ- ಹೊಸ ರೀತಿ ದಬ್ಬಾಳಿಕೆ ಆರಂಭ

ಗೋವಾದಲ್ಲಿ ಪೋರ್ಚುಗೀಸರ ದಬ್ಬಾಳಿಕೆಯು ಹೊಸ ರೂಪವನ್ನು ತಾಳಿ ಪೋರ್ಚುಗಲ್ಲಿನ ಪ್ರಧಾನಿ ಡಾ॥ ಸಾಲಜಾರ್‌ರವರ ಆಳ್ವಿಕೆಯಲ್ಲಿ ಜನರು ನಿಷ್ಠೆಯನ್ನು ಸೂಚಿಸಲು ಬಲವಂತಪಡಿಸಲಾಗುತ್ತಿರುವುದೆಂದು ವರದಿಯಾಗಿದೆ ಗೋವಾದ ಎಲ್ಲ ಅಂಗಡಿಗಳಲ್ಲೂ ಡಾ॥ ಸಾಲಜಾರ್‌ರವರ ಚಿತ್ರವನ್ನು ತಗುಲು ಹಾಕಿ, ಮಹಾತ್ಮಾ ಗಾಂಧಿ, ಪಂಡಿತ ನೆಹರೂ ಮುಂತಾದವರ ಭಾವಚಿತ್ರಗಳನ್ನು ತೆಗೆದುಹಾಕುವಂತೆ ತಾಲ್ಲೂಕು ಅಧಿಕಾರಿಗಳಿಗೆ ಸೂಚಿಸಲಾಗಿದೆಯೆಂದೂ, ಬಿಂಚೋಲಿ ಎಂಬ ಊರಿನ ಹೋಟೇಲಿನಲ್ಲಿದ್ದ ನೆಹರೂರವರ ಚಿತ್ರವನ್ನು ಪೊಲೀಸರು ಕಿತ್ತುಹಾಕಿ ಸುಟ್ಟರೆಂದೂ ಹೇಳಲಾಗಿದೆ

ಚರ್ಚಿಲ್ ಸರ್ಕಾರಕ್ಕೆ ಜಯ

ಚರ್ಚಿಲ್ಲರ ಮಂತ್ರಿಮಂಡಲದ ಆರ್ಥಿಕ ನೀತಿಯನ್ನು ಪ್ರಬಲವಾಗಿ ಖಂಡಿಸುವ ಲೇಬರ್ ಪಕ್ಷದ ನಿರ್ಣಯವು ನೆನ್ನೆ ಕಾಮನ್ಸ್ ಸಭೆಯಲ್ಲಿ ೩೦ ಹೆಚ್ಚಿನ ಬಹುಮತದಿಂದ ತಿರಸ್ಕರಿಸಲ್ಪಟ್ಟಿತು ನಿರ್ಣಯದ ಪರವಾಗಿ ೨೮೮ ಮತ್ತು ವಿರೋಧವಾಗಿ ೩೧೮ ಓಟುಗಳು ಬಂದವು

ವಿಶ್ವಸಂಸ್ಥೆಯ ಕಾರ್ಯದರ್ಶಿ ಸ್ಥಾನಕ್ಕೆ ಬಿ. ಎನ್. ರಾವ್ ?

ರಾಜೀನಾಮೆಯಿತ್ತ ಟ್ರಿಗ್ವೆ ಲಿಯವರ ಬದಲು ಭಾರತದ ಬಿ ಎನ್ ರಾಯರನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾಗಿ ನೇಮಿಸುವ ಸಂಭವವಿರುವುದೆಂದು ವರದಿಯಾಗಿದೆ ಬಿ. ಎನ್ ರಾಯರು ಈಗ ವಿಶ್ವ ನ್ಯಾಯಾಸ್ಥಾನದ ಸದಸ್ಯರುಗಳಲ್ಲಿ ಒಬ್ಬರಾಗಿರುವರು

ಉಪಾಧ್ಯಾಯಿನಿ ಮೇಲೆ ಕೈಮಾಡಿದುದಕ್ಕೆ ಶಿಕ್ಷೆ

ಹೋದ ವರ್ಷ ಇದೇ ತಿಂಗಳಿನಲ್ಲಿ ಮಾಲೂರಿನ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿದ್ದ ಮುನಿಸ್ವಾಮಿ ಎಂಬುವರು ಅದೇ ಸ್ಥಳದ ಉಪಾಧ್ಯಾಯಿನಿಯೊಬ್ಬರ ಮೇಲೆ ಕೈಮಾಡಿದರೆಂದು ಕೋಲಾರದ ನಗರ ನ್ಯಾಯಾಧೀಶರು ಅವರಿಗೆ ೧೫೦ ರೂ ದಂಡ,ತಪ್ಪಿದರೆ ೪ ತಿಂಗಳ ಕಠಿಣ ಸಜೆಯನ್ನು ವಿಧಿಸಿರುತ್ತಾರೆ

ಮೈಸೂರು ನಗರದ ನೀರು ಸರಬರಾಜಿನ ವ್ಯವಸ್ಥೆ

೩೧ ಲಕ್ಷ ರೂ ಅಂದಾಜಿನ ಪರಿಶೀಲನೆ

ಮೈಸೂರು ೧೩

ಮೈಸೂರು ನಗರದ ನೀರು ಸರಬರಾಜಿನ ವ್ಯವಸ್ಥೆಯನ್ನು ಉತ್ತಮಪಡಿಸಿ ಎಲ್ಲ ಪ್ರದೇಶಗಳಿಗೂ ಸಹ ಸಮರ್ಪಕವಾದ ರೀತಿಯಲ್ಲಿ ನೀರು ಒದಗುವಂತೆ ಮಾಡುವುದಕ್ಕಾಗಿ ಪೌರಸಭೆಯವರು ಮೊದಲೇ ತಯಾರಿಸಿದ್ದ ೩೧ ಲಕ್ಷ ರೂ. ಯೋಜನೆಯು ಬಗ್ಗೆ ಸರ್ಕಾರದಿಂದ ಬಂದಿದ್ದ ಪತ್ರವನ್ನು ಪರಿಶೀಲಿಸಲು ನೆನ್ನೆ ಪೌರಸಭೆಯು ವಿಶೇಷ ಅಧಿವೇಶನವು ಸೇರಿತ್ತು

ಕೆಲಸಕ್ಕೆ ಬೇಕಾದ ಮುಂತಾದ ಸಾಮಗ್ರಿಗಳ ಬೆಲೆಯು ಇತ್ತೀಚೆಗೆ ಹೆಚ್ಚಿರುವುದರಿಂದ ಮೊದಲು ಗೊತ್ತುಮಾಡಿದ್ದ ಅಂದಾಜಿನ ಮೊತ್ತವು ೩೯ ಲಕ್ಷ ರೂಪಾಯಿಗಳವರೆಗೆ ಹೆಚ್ಚುವುದೆಂದೂ ಈ ವಿಷಯದಲ್ಲಿ ಪುರಸಭೆಯ ಅಭಿಪ್ರಾಯವನ್ನು ತಿಳಿಸುವಂತೆಯೂ ಸರ್ಕಾರದವರು ಕೇಳಿದ್ದರು

ಮೊದಲು ಅಂದಾಜಾಗಿದ್ದ ಕೆಲವು ಕಾಮಗಾರಿಗಳಲ್ಲಿ ಮಾರ್ಪಾಟುಗಳನ್ನು ಮಾಡಿ ಹೊಸ ವಿಧಾನದ ಅಂದಾಜಿಗೆ ... ಯೋಜನೆಯನ್ನು ಪೂರೈಸತಕ್ಕದ್ದೆಂದು ಪೌರಸಭೆಯು ನಿರ್ಧರಿಸಿತು. ಬೆಳಗೊಳದಿಂದ ಮೈಸೂರಿಗೆ ... ಹಾಕಿರುವ ಭದ್ರವಾದ ಕೊಳಾಯಿಗಳನ್ನು ಅದಷ್ಟು ಮಟ್ಟಿಗೆ ಉಪಯೋಗಿಸಿಕೊಳ್ಳತಕ್ಕದ್ದೆಂತಲೂ ಹೆಚ್ಚು ಅಂದಾಜಾಗಿದ್ದ ೭೫೦೦ ಪಾಟರುಗಳ ಪೈಕಿ ಸದ್ಯಕ್ಕೆ ೪೫೦೦ ಮೀಟರುಗಳನ್ನು ಮಾತ್ರ ಕೊಂಡುಕೊಳ್ಳತಕ್ಕದ್ದೆಂದೂ ನಿರ್ಧರಿಸಲಾಯಿತು ಭಾರತ ಸರ್ಕಾರದಿಂದ ಮೈಸೂರು ಸಂಸ್ಥಾನಕ್ಕೆ ಕೊಡಲ್ಪಡುವ ... ಲಕ್ಷ ರೂ ಸಾಲದ ಮೊಬಲಗಿನಿಂದ ಈ ಹಣವನ್ನು ಪಡೆಯಬೇಕೆಂದೂ ಸಹ ಅಭಿಪ್ರಾಯಪಡಲಾಯಿತು ... ಮೊಬಲಗಿನಲ್ಲಿ ಅರ್ಧ ಭಾಗವನ್ನು ಸರ್ಕಾರದವರು ಗ್ರ್ಯಾಂಟಿನ ರೂಪದಲ್ಲಿಯೂ, ಉಳಿದುದನ್ನು ಸಾಲವಾಗಿಯೂ ಕೊಡಬೇಕೆಂದು ಪ್ರಾರ್ಥಿಸಬೇಕೆಂದು ತೀರ್ಮಾನಿಸಲಾಯಿತು

ಶ್ರೀ ಗ... ಸೀತಾರಾಮಯ್ಯ, ಎಂ ಆರ್ ಶ್ರೀನಿವಾಸಯ್ಯಂಗಾರ್, ಸಿ ಆರ್ ಮಹೇಶ್, ಬಿ ವೆಂಕಟರಮಣಯ್ಯ ಮತ್ತು ಬಿ ಕೆ. ರಾಮಕೃಷ್ಣಯ್ಯನವರು ಭಾಷಣ ಮಾಡಿ ಬೇಗನೆ ನಗರದ ನೀರು ಸರಬರಾಜಿನ ವ್ಯವಸ್ಥೆಯನ್ನು ಉತ್ತಮಪಡಿಸಿ ಪುರ ನಿವಾಸಿಗಳ ತೊಂದರೆಯನ್ನು ಪರಿಹರಿಸಬೇಕೆಂದು ಸೂಚಿಸಿದರು.

ತೆಂಗಿನ ಫಸಲಿನ ನಷ್ಟಕ್ಕಾಗಿ ಇಡೀ ಹಳ್ಳಿಗೆ ಬೆಂಕಿ

ಅರಸೀಕೆರೆ ಬಳಿ ಬೆಂಕಿಕೆರೆಯ ೧೯ ಮನೆಗಳಿರುವ ಕೊರಚರಹಟ್ಟಿ ಹಳ್ಳಿಗೆ ಕಳೆದ ಭಾನುವಾರ ರಾತ್ರಿ ಬೆಂಕಿ ಹತ್ತಿಸಿದರೆಂದು ಪಕ್ಕದ ಹಿರೇಹಳ್ಳಿ, ಬಸವಯ್ಯ ಸಿದ್ದಲಿಂಗಪ್ಪ ಮುಂತಾದ ೧೯ ಜನರನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾರೆ ... ಕೊರಚರು ಗಳನ್ನು ನಷ್ಟವಾಗಿರುವುದೆಂದು ಅಂದಾಜಾಗಿದೆ ತಮ್ಮ ತೆಂಗಿನ ತೋಟಗಳಲ್ಲಿ ಕಳ್ಳತನಗಳು ನಡೆಯದ ಆಗುತ್ತಿದ್ದುದನ್ನು ... ಬೇಸತ್ತು ... ಎಂಬುದೇ ಈ ಕೃತ್ಯಕ್ಕೆ ಕಾರಣವಾಗಿದೆ, ... ಹಳ್ಳಿಯವರನ್ನು ... ಒಂದು ಕೂಡ ಬರ ಹಟ್ಟಿಯ ೨೦೦ ಮಂದಿ ನಿವಾಸಿಗಳನ್ನು ಅಲ್ಲಿಂದ ಓಡಿಸಲು ಆ ಹಳ್ಳಿಗೆ ಬೆಂಕಿ ಇಟ್ಟರೆಂದು ಹೇಳಲಾಗಿದೆ ಬೆಂಕಿ ಆರಿಸಲು ಪ್ರಯತ್ನಪಟ್ಟ ಹಳ್ಳಿಯ ಜನರನ್ನು ತಡೆದು ಹಾಯಿಸಿದರೆಂದೂ, ಒಬ್ಬನಿಗೆ ಗಾಯವಾಯಿತೆಂದೂ ಹೇಳಲಾಗಿದೆ. ಬೆಂಕಿ ಹತ್ತಿಸಿದವರ ಪೈಕಿ ೩ ಜನರು ಪರಾರಿಯಾಗಿರುವರೆಂದೂ ಹೇಳಲಾಗಿದೆ

ಬೈಸಿಕಲ್ ಕೈಗಾರಿಕೆಗೆ ಕೇಂದ್ರ ಸರ್ಕಾರದ ರಕ್ಷಣೆ

ಭಾರತದ ಬೈಸಿಕಲ್ಲು ಕೈಗಾರಿಕೆಗೆ ಕೇಂದ್ರ ಸರ್ಕಾರದವರು ರಕ್ಷಣೆಯನ್ನು ಕೊಡಲು ನಿರ್ಧರಿಸಿರುತ್ತಾರೆ ಕಳೆದ ೮ ನೇ ತಾ|| ಮದ್ರಾಸಿನಲ್ಲಿ ನಡೆದ ಅ|| ಭಾ|| ಬೈಸಿಕಲ್ ಸಮ್ಮೇಳನದಲ್ಲಿ ಸದರಿ ಕೈಗಾರಿಕೆಗೆ ರಕ್ಷಣೆ ಕೊಡಬೇಕೆಂದು ಕೋರಲಾಗಿತ್ತು

ಗೋ ವಧಾ ನಿರೋಧದ ಪ್ರಚಾರ

ರಾಜಧಾನಿಯಲ್ಲಿ ಕಳೆದ ಭಾನುವಾರ ರಾಷ್ಟ್ರೀಯ ಸ್ವಯಂ ಸೇವಕರ ಸಂಘದ ಆಶ್ರಯದಲ್ಲಿ ಗೋಹತ್ಯಾ ನಿರೋಧ ಚಳವಳಿಯ ಸಂಬಂಧವಾಗಿ ಬಹಿರಂಗ ಸಭೆಯೊಂದು ನಡೆಯಿತು ಶ್ರೀ ಎಂ ಎಸ್ ಚಂದ್ರಶೇಖರ ಜೋಯಿಸರು ಅಧ್ಯಕ್ಷತೆ ವಹಿಸಿದ್ದರು ಮೈಸೂರು ಜಿಲ್ಲಾ ಪ್ರಚಾರಕರಾದ ಶ್ರೀ ಮಧ್ವರಾಯರು ಭಾಷಣ ಮಾಡಿ ಗೋ ಸಂಪತ್ತಿನ ರಕ್ಷಣೆಯ ಪ್ರಾಮುಖ್ಯತೆಯನ್ನು ವಿವರಿಸಿದರು

ಸುತ್ತೂರು ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣ

ರಾಜಧಾನಿಯ ವಾಣೀವಿಲಾಸ ರಸ್ತೆಯಲ್ಲಿರುವ ಸುತ್ತೂರು ವಿದ್ಯಾರ್ಥಿ ನಿಲಯ ಸಂಘದ ಆರಂಭ ಭಾಷಣವನ್ನು ನೆನ್ನೆ ಮೈಸೂರು ವಿಶ್ವವಿದ್ಯಾನಿಲಯದ ಇಂಡಾಲಜಿ ಪ್ರೊಫೆಸರ್ ಶ್ರೀ ಕೆ ಎ ನೀಲಕಂಠಶಾಸ್ತ್ರಿಗಳವರು ಮಾಡಿದರು ರಸಾಯನ ಶಾಸ್ತ್ರದ ಪ್ರೊಫೆಸರ್ ಶ್ರೀ ಎಂ ಷಡಕ್ಷರಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯಾದ ನಂತರ ಸಂಘದ ಉಪಾಧ್ಯಕ್ಷರಾದ ಶ್ರೀ ಎಸ್ ಪುಟ್ಟಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿಯವರಾದ ಶ್ರೀ ಡಿ ಬಸವಣ್ಣನವರು ವಂದನಾರ್ಪಣೆ ಮಾಡಿದನಂತರ ಸಮಾರಂಭವು ಮುಕ್ತಾಯಗೊಂಡಿತು

ಬಿ ಸಿ ಜಿ. ವ್ಯಾಕ್ಸಿನೇಷನ್ ಚಳುವಳಿ

ಕ್ಷಯ ರೋಗದ ವಿರುದ್ಧವಾಗಿ ಬಿ ಸಿ ಜಿ ವ್ಯಾಕ್ಸಿನೇಷನ್ ನಡೆಸಿದ ಪ್ರಯೋಗದಲ್ಲಿ ಶೇ|| ನೂರರಷ್ಟು ಯಶಸ್ಸು ದೊರೆತಿರುವುದಾಗಿ ಆರೋಗ್ಯ ಇಲಾಖಾಧಿಕಾರಿಗಳು ತಿಳಿಸಿರುತ್ತಾರೆ

ಪತ್ರಿಕಾಲಯಗಳ ಶೋಧನೆ

ಬೆಂಗಳೂರು ಸಿಟಿ ಪ್ರದೇಶದ ಪೋಲೀಸರು ನೆನ್ನೆ ಡೈಲಿ ಅಜಾದ್ ಮತ್ತು ಪಾಸಬಾನ್ ಎಂಬ ಎರಡು ಉರ್ದು ಪತ್ರಿಕೆಗಳ ಕಛೇರಿಗಳನ್ನು ಶೋಧಿಸಿ, ಆಕ್ಷೇಪಣೀಯವಾದ ಸಾಹಿತ್ಯ ಮತ್ತು ಕಾಗದ ಪತ್ರಗಳನ್ನು ವಶಪಡಿಸಿಕೊಂಡರು

ತಲಕಾಡು ಮಹಾತ್ಮೆ

ಮತ್ತು

ಪಂಚಲಿಂಗ ದರ್ಶನ ಯಾತ್ರೆ

ಲೇಖಕರು —

ಟಿ ಆರ್. ಸೀತಾರಾಮ ಶಾಸ್ತ್ರಿ

ಬೆಲೆ ೦ ೬–೦

ಮಾರಾಟಗಾರರಿಗೆ ಧಾರಾಳವಾದ ಕಮೀಷನ್ ಕೊಡಲಾಗುತ್ತೆ

ಪ್ರತಿಗಳು ದೊರೆಯುವ ಸ್ಥಳ —

ಟಿ ಆರ್. ಸೀತಾರಾಮ ಶಾಸ್ತ್ರಿ, ತಲಕಾಡು ಟಿ ನರಸೀಪುರ ತಾ|| ಮತ್ತು ಸಾಧ್ವಿ ಆಫೀಸ್, ಮೈಸೂರು

ಭೂ ದಾನ ಯಜ್ಞಕ್ಕೆ ೯೦೫ ಎಕರೆ ಜಮೀನು

ಕನ್ನನೂರಿನ ಸಿ ಸ್ಯಾಮುಯಲ್ ಆರನರವರು ಆಚಾರ್ಯ ವಿನೋಬಾ ಭಾವೆಯವರ ಭೂ ದಾನ ಯಜ್ಞಕ್ಕಾಗಿ ೯೦೫ ಎಕರೆ ಜಮೀನನ್ನು ದಾನವಾಗಿ ಕೊಟ್ಟಿರುತ್ತಾರೆ

ಧನ್ವಂತರಿ ಜಯಂತಿ

ನಂಜನಗೂಡಿನ ಸದ್ವೈದ್ಯಶಾಲೆಯ ಶ್ರೀ ಬಿ ವಿ ಪಂಡಿತರು ತಮ್ಮ ನಿವಾಸ, ಧನ್ವಂತರಿ ವಿಲಾಸದಲ್ಲಿ ನಾಳಿದ್ದು ಸಂಜೆ ೫ ಗಂಟೆಗೆ ಧನ್ವಂತರಿ ಜಯಂತಿ ಉತ್ಸವವನ್ನು ನೆರವೇರಿಸುವರು ವಿದ್ಯಾ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು ಹಿರಿಯ ಶಾಸನ ಸಭೆಯ ಸದಸ್ಯರಾದ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರ ಭಾಷಣವೂ, ವಿ|| ಟಿ ಎಸ್ ಕಾಶಿಂಚಾರ್ ಪಿಟೀಲು ಸಂ|| ರಾ|| ಟಿ ಎಂ ಪುಟ್ಟಸ್ವಾಮಯ್ಯನವರ ತಬಲ, ಆ|| ವಿ|| ಎನ್ ಸೀತಾರಾಮ ಶಾಸ್ತ್ರಿಗಳವರ ಘಟದೊಡನೆ ವಿದುಷಿ ಗೌರಿ ಕುಪ್ಪುಸ್ವಾಮಿಯವರ ಸಂಗೀತವೂ ಏರ್ಪಾಡಾಗಿವೆ

ಮೈಸೂರಿನ ಆಯುರ್ವೇದ ಕಾಲೇಜಿನಲ್ಲಿ ಧನ್ವಂತರಿ ಜಯಂತಿಯು ನಾಳಿದ್ದು ಬೆಳಿಗ್ಗೆ ೮|| ಘಂಟೆಗೆ ಜರುಗುವುದು ಸದಸ್ಯರೆಲ್ಲರೂ ಬರಬೇಕೆಂದು ಕೋರಲಾಗಿದೆ

೪೫ ಜನರ ಅವಿರೋಧ ಆಯ್ಕೆ

ಗೊತ್ತಾಗಿರುವ ಪ್ರಕಾರ ಮುಂದೆ ನಡೆಯುವ ಕಾಂಗ್ರೆಸ್ ಅಧಿವೇಶನಕ್ಕೆ ಸಂಸ್ಥಾನದಿಂದ ಇದುವರೆಗೆ ೪೫ ಮಂದಿ ಅವಿರೋಧವಾಗಿ ಚುನಾಯಿತರಾಗಿರುವರು ಇನ್ನು ೪೬ ಸ್ಥಾನಗಳಿಗೆ ಚುನಾವಣೆ ನಡೆಯಬೇಕಾಗಿದೆ ಹಂಪಾಪುರದಿಂದ ಸಚಿವ ಸಿದ್ದವೀರಪ್ಪನವರು ಚುನಾಯಿತರಾಗಿರುವರು

ADMISSIONS RECEIVED

Coaching for MARCH 53

B A & B Sc (Eng & P C M)

INTER (Eng P C M C B Z)

Private Tuitions Arranged

CITY TUTORIAL COLLEGE,

V V Market Mysore

ಪರ್ಷಿಯಾ ಮಾಜಿ ಪ್ರಧಾನಿಯ ವಿಚಾರಣೆ

ಪರ್ಷಿಯದ ಮಾಜಿ ಪ್ರಧಾನಿ ಗವಾಂ ಸುಲ್ತಾನೆಯವರನ್ನು ವಿಚಾರಣೆಗೆ ಗುರಿಪಡಿಸಿ ಅವರನ್ನು ಶಿಕ್ಷಿಸಲು ಮತ್ತು ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕರೆಲಾಗಿದ್ದ ಮಸೂದೆಗಳಿಗೆ ಅಲ್ಲಿನ ಪಾರ್ಲಿಮೆಂಟಿನ ರುಜು ಬಿದ್ದಿದೆ

ಮೂರು ಕಣ್ಣುಗಳುಳ್ಳ ಹಲ್ಲಿ ಆಕಾರದ ಪ್ರಾಣಿ

ನ್ಯೂಜಿಲೆಂಡಿನಿಂದ ಲಂಡನ್ ಮೃಗಾಲಯಕ್ಕೆ ಹಲ್ಲಿಯ ಆಕಾರದ ಒಂದು ಪ್ರಾಣಿಯನ್ನು ಬಹುಮಾನವಾಗಿ ಕೊಡಲಾಗಿದೆಯೆಂದೂ, ಅದಕ್ಕೆ ೩ ಕಣ್ಣುಗಳು ಇರುವುವೆಂದೂ ತಿಳಿದುಬಂದಿದೆ

ರಹದಾರಿ ರಿನ್ಯೂ ಮಾಡದಂತೆ ಬಿಟ್ಟವಗಿರಣಿ ಮಾಲೀಕರಲ್ಲಿ ಪ್ರಾರ್ಥನೆ

ರಾಜಧಾನಿಯ ಬಟ್ಟೆಯ ಗಿರಣಿಗಳ ಸಂಘದ ಕಾರ್ಯದರ್ಶಿಯವರಾದ ಶ್ರೀ ಹೆಚ್ ಕೆ ಕೃಷ್ಣಮೂರ್ತಿಯವರು ಮನವಿಯೊಂದನ್ನು ಹೊರಡಿಸಿ, ಮುನಿಸಿಪಲ್ ಅಧ್ಯಕ್ಷರಲ್ಲಿ ಸಂಘದವರು ಮಾಡಿಕೊಂಡ ಅರಿಕೆಗಳು ಇನ್ನೂ ಅವರ ಪರಿಶೀಲನೆಯಲ್ಲಿರುವುದೆಂದೂ ಈ ಮಧ್ಯೆ ನಗರದ ಆರೋಗ್ಯ ಇಲಾಖೆಯವರು ರಹದಾರಿಯನ್ನು ಮಾಲೀಕರು ಜಾಗ್ರತೆ ತೆಗೆದುಕೊಳ್ಳಬೇಕೆಂದು ಬೆದರಿಸುತ್ತಿರುವುದನ್ನೂ ಸಹ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆಯೆಂದೂ, ಸಂಘದ ಮನವಿಗೆ ಅಧ್ಯಕ್ಷರಿಂದ ಉತ್ತರ ಬರುವವರೆಗೂ ಸದಸ್ಯರು ತಮ್ಮ ರಹದಾರಿಗಳನ್ನು ರಿನ್ಯೂ ಮಾಡಿಕೊಳ್ಳಕೂಡದೆಂದೂ ಕೋರಿರುತ್ತಾರೆ

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

ಮೈಸೂರು ಪೇಟೆ ಧಾರಣೆ

ಪಲ್ಲ ಒಂದಕ್ಕೆ	ರೂ ಆಣೆ ಪೈ	ರೂ ಆ
ಹುರುಳಿ	[illegible]	[illegible]
ಎಳ್ಳು	[illegible]	
ಹರಳು ಬೀಜ	[illegible]	[illegible]
ತೊಗರಿ	[illegible]	
ಹೆಸರು	[illegible]	[illegible]
ಉದ್ದು	[illegible]	
ಕಡಲೆ	[illegible]	[illegible]
ಹುಚ್ಚೆಳ್ಳು	[illegible]	
ಅವರೆ	[illegible]	
ಕೊಬ್ಬರಿ ನೂರು ಒಂದಕ್ಕೆ	[illegible]	[illegible]
ಹುಣಸೇಹಣ್ಣು	[illegible]	[illegible]
ಬೆಲ್ಲ	[illegible]	
ಸೀಗೇಕಾಯಿ	[illegible]	
ಶೇಂಗೇಬೀಜ	[illegible]	
ತೆಂಗಿನಕಾಯಿ ೧,೦೦೦ಕ್ಕೆ	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕ್ಕೆ ಸಾಗೆಂಬ್ರಷ್ಟ ... ದೊಸೆಟ್. ... ೧೨ ೪೦ ದಿಲ್ಲಿ ... ನಿನ್ನ ದಿನ್ನಸ ಕಲಾವಿದರು ಸಂಜೆ ... ಮತ್ತು ೬ ೩೦ ಎಂ ಹಾರದ ಸಂಗೀತ ... ೭ ೧೦ ಗಾನವಿಹಾರ ... ಒಂದೇ ಗೀತೆಗಳು ... ಲಘು ಸಂಗೀತ ... ೪೦ ಒಂದು ನಾಟಕದ ... ಸ್ವಪ್ನ ಕಾರ್ಯಕ್ರಮ

ಒಲಿಂಪಿಯಾ ಟಾಕೀಸ್

13 11 52 ರಿಂದ ಅಶೋಕ್ ಪ್ರಾರಂಭ

ಪ್ರತಿದಿನ ೩ ಆಟಗಳು

ಸುಪ್ರಸಿದ್ಧ ನಟ ಮೈಸೂರು ಸಾಬ್ಲು ಪಾತ್ರವಹಿಸಿರುವ

ತಲಾಷ್

ಭಯಂಕರ ಕಾಡುಮೃಗಗಳ ಅದ್ಭುತ ದೃಶ್ಯಗಳಿಂದೊಡಗೂಡಿದ ಒಂದು ಚಿತ್ರ

— ಬೆಳಗಿನ ಪ್ರದರ್ಶನ —

ಮಧುಬಾಲ ಪಾತ್ರವಹಿಸಿರುವ

ಸಾ ಖ್ ಸೀ ನ್

ಚಾಮುಂಡೇಶ್ವರಿ ಟಾಕೀಸ್

14-11-52ರಿಂದ 3ನೇ ವಾರ

ಚಲನ ಚಿತ್ರ ಪ್ರಪಂಚದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಿರುವ

ಪರಾಶಕ್ತಿ

(ತಮಿಳು)

ನ್ಯಾಷನಲ್ ಪಿಕ್ಚರ್ಸ್ ... ನಿರ್ಮಾಣದ ಚಿತ್ರವು ೩ ನೇ ವಾರದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಡುತ್ತಿದೆ

15ನೇ ತಾ|| ಶನಿವಾರ ಮತ್ತು 16ನೇ ತಾ|| ಭಾನುವಾರ ವಿಶೇಷ ಬೆಳಗಿನ ಪ್ರದರ್ಶನ 9.30 ಘಂಟೆಗೆ

SRI GAYATHRI

TALKIES

M G M's

SCARAMOUCHE

TO-MORROW ONLY

On SATURDAY Only

I DOOD IT

Starring R d Skelton

Morning Shows on 15th & 16th

SWORD OF MONTECRISTO

|| ಶ್ರೀ ||

ಮಹಾಜನ ಹೈಸ್ಕೂಲಿನ ನಿಧಿಗಾಗಿ

ತಾ|| 16-11 52 ನೇ ಭಾನುವಾರ ಸಾಯಂಕಾಲ 4 ಘಂಟೆಗೆ

— ಕ್ರಾಫರ್ಡ್ ಹಾಲಿನಲ್ಲಿ —

ಘನವಾದ ಸಂಗೀತ ಕಛೇರಿ

ಕೋಕಿಲಗಾನ ಚಕ್ರವರ್ತಿನಿ

ಶ್ರೀಮತಿ ಎಂ ಎಸ್ ಸುಬ್ಬುಲಕ್ಷ್ಮಿ ಯವರ ಹಾಡುಗಾರಿಕೆ

ಶ್ರೀ ಆರ್ ಕೆ ವೆಂಕಟರಾಮಶಾಸ್ತ್ರಿ ... ಪಿಟೀಲು

ಶ್ರೀ ಟಿ ಕೆ ಮೂರ್ತಿಯವರ ಮೃದಂಗ

ಶ್ರೀ ಆಲಂಗುಡಿ ರಾಮಚಂದ್ರರವರ ಘಟ



ಟಿಕೇಟು ದರ- 25, 10, 5 ಮತ್ತು 3

ಸ್ತ್ರೀಯರಿಗೆ ಮಾತ್ರ ವಿಶೇಷ ರಿಯಾಯಿತಿ ದರ : ಎರಡು ರೂ

ವಿಶೇಷ ಸೂಚನೆ - ಕ್ರಾಫರ್ಡ್ ಭವನದ ಹೊರಗಡೆ ಸಂಗೀತ ಕೇಳಲು ಲೌಡ್ ಸ್ಪೀಕರ್ ವ್ಯವಸ್ಥೆಯುಂಟು

Edited, Printed and Published by A R Nagarajan at Sadhvi Press, Dhanvanthri Road, Mysore

ಅಂಚೆಯ ನಂ 752 ||ವಂದೇ ಮಾತರಂ|| ಇಂದಿನ ಪತ್ರಿಕೆಯ ಬೆಲೆ

ಸಾಧ್ವಿ

ಸಂಪುಟ ೧೧] ಶುಕ್ರವಾರ ೧೪ ೧೧ ೧೯೫೨ [ಸಂಚಿಕೆ ೪೧

ಕೊರಿಯಾ ಬಿಕ್ಕಟ್ಟಿನ ಪರಿಹಾರದ ಸಂಭವ

ಕೊರಿಯಾ ಬಿಕ್ಕಟ್ಟಿನ ಪರಿಹಾರದ ಸೂಚನೆ ?

...ಸಂಸ್ಥೆಯ ಸದಸ್ಯ ರಾಷ್ಟ್ರಗಳ ...ನಿಧಿಗಳ ನಡೆಸಿದ ಖಾಸಗಿ ಮಾತು ...ಪರಿಣಾಮವಾಗಿ ಕೊರಿಯದ ...ನಲ್ಲಿ ಉಂಟಾಗಿರುವ ಬಿಕ್ಕಟ್ಟು ...ರವಾಗಿ ವ ಸೂಚನೆಗಳಿರುವುದಾ ...ವರದಿಯಾಗಿದೆ ಬಿಕ್ಕಟ್ಟಿಗೆ ಕಾರಣ ...ರುವ ಯುದ್ಧ ಖೈದಿಗಳ ಪ್ರಶ್ನೆ ...ಗೆ ಭಾರತವು ಇಂದು ಪರಿಹಾರ ಸೂತ್ರವನ್ನು ರಚಿಸುವುದೆಂದೂ ಹೇಳಲಾಗಿದೆ

ಕರಣಸಿಂಗರೇ ಕಾಶ್ಮೀರದ ಚುನಾಯಿತ ಅಧಿಪತಿ

...ಕಾಶ್ಮೀರದಲ್ಲಿ ಆನುವಂಶಿಕ ರಾಜತ್ವ ...ದಲು ಚುನಾಯಿತ ಅಧಿಪತಿಯ ...ಕಲ್ಪಿಸಿ ತರಲಾದ ಮಸೂದೆಯನ್ನು ...ನ ರಾಜ್ಯಾಂಗ ಸಭೆಯು ಅಂಗೀಕರಿಸುತ್ತಲೇ, ದೇಶಕ್ಕೆ ಪ್ರತ್ಯೇಕ ಧ್ವಜ ...ವಂತೆ ಸೂಚಿಸುವ ಮಸೂದೆ ...ಲ್ಪಟ್ಟಿತು ಅಧಿಪತಿಸ್ಥಾನದ ...ಗೆ ಯುವರಾಜಾ ಕರಣಸಿಂಗರೊಬ್ಬರದೇ ಉಮೇದುವಾರಿಕೆ ಅರ್ಜಿ ...ದಿರುವುದರಿಂದ ಅವರೇ ಅಧಿಪತಿಯಾಗುವರೆಂದು ಗೊತ್ತಾಗಿದೆ

...ಬ್ಯಾಂಕ್ ಮೋಸ ...ಯಲ್ಲಿ ಹೆಂಗಸಿಗೆ ಸಜಾ

...ಲಾಯಿಡ್ಸ್ ಬ್ಯಾಂಕಿನ ...ಮೋಸದ ಮೊಕದ್ದಮೆಯಲ್ಲಿ ಮು ...ಪರಾಧಿಯಾದ ಅನೋಪಲಾಲನ ...ಲಾ ಎಂಬಾಕೆಯು ಕಳುವಾ ...ಲಕ್ಷ ರೂಗಳ ನೋಟುಗಳನ್ನು ಹೊಂದಿದ್ದಳೆಂದು ...ತಿಂಗಳ ಕಠಿಣ ಸಜಾ ವಿಧಿಸ ...ಬ್ಯಾಂಕಿನಲ್ಲೇ ನಿಕ್ಷೇಪವಿದ್ದುದು ತನಗೆ ಗೊತ್ತಿರಲಿಲ್ಲವೆಂದು ಆಕೆಯು ತಿಳಿಸಿ...

ಪೌರಸಭಾ ಸದಸ್ಯನ ಅಪಹಾರ !

...ದೇರದ ಚಿರಾಳದ ಪೌರ ಸದಸ್ಯ ...ಲಾಲ ಸಾವ್ಕ್ಯಾಯಲ ರವ ...ನ್ನು ...ಗಾರರು ಅಪಹರಿಸಿ ವಶದಲ್ಲಿಟ್ಟುಕೊಂಡಿರುವರೆಂದೂ, ಅವರನ್ನು ...ನ ಮುಂದೆ ಕರೆತರುವಂತೆ ...ಬೇಕೆಂದೂ ಮದ್ರಾಸು ಹೈಕೋರ್ಟಿನಲ್ಲಿ ನೆನ್ನೆ ಅರ್ಜಿಯನ್ನು ಸಲ್ಲಿಸಲಾಯಿತು ಅಲ್ಲಿನ ಪೌರ ಸಭಾಧ್ಯಕ್ಷತೆಗೆ ...ಮೇದುವಾರರಾಗಲಿರುವವರು ...ವರನ್ನು ...ವಾಗಿ ಇಟ್ಟುಕೊಂಡಿ... ...ಲಾಗಿದೆ

...ಳಂದಿರು ಮತ್ತು ಟಿ. ನರಸೀಪುರಗಳಿಂದ ಅವಿರೋಧ ಆಯ್ಕೆ

...ಪ್ರತಿನಿಧಿಗಳ ಚುನಾವಣೆಗೆ ...ತಾಲ್ಲೂಕಿನಿಂದ ಸ್ಪರ್ಧಿಸಿದ್ದ ...ಶ್ರೀ ಪುಟ್ಟಸೊಣ್ಣಪ್ಪನವರು ...ಮೇದುವಾರಿಕೆಯನ್ನು ವಾಪಸು ... ಶ್ರೀ ಡಿ ಸೂರ್ಯನಾರಾ... ...ಅವಿರೋಧವಾಗಿ ಆರಿಸಲ್ಪ... ... ಟಿ ನರಸೀಪುರದಿಂದಲೂ ...ಮೊಸ್ತಪ್ಪನವರು ಸ್ಪರ್ಧಿಸಿ... ...ಮೇದುವಾರಿಕೆಯನ್ನು ವಾಪಸು ...ದ ಮತ್ತೊಬ್ಬ ಸ್ಪರ್ಧಿ ಶ್ರೀ ...ಯ್ಯನವರು ಅವಿರೋಧವಾ... ...ಸಿದರು

ಗೃಹಕೃತ್ಯದ ಮೇಲ್ವಿಚಾರಣೆಗಾಗಿ ಪತ್ನಿಗೆ ಸಂಬಳ !

ಗೃಹಕೃತ್ಯವನ್ನು ಗಂಡನಿಗಾಗಿ ನಡೆಸುವ ಸ್ತ್ರೀಗೆ ಅವನ ಸಂಬಳದಲ್ಲಿ ಶೇ|| ಹತ್ತರಷ್ಟು ಹಣವನ್ನು ವೇತನವಾಗಿ ಗಂಡನು ಕೊಡಬೇಕೆಂದು ಶಾಸನವಾಗುವಂತೆ ಸ್ಕಾಟ್ಲೆಂಡಿನ ವಕೀಲರು ಸಲಹೆ ಮಾಡಿರುತ್ತಾರೆ ಗಂಡನ ಕೊಡಲೊಪ್ಪದಿದ್ದರೆ, ಆತನನ್ನು ಕೆಲಸಕ್ಕೆ ತೆಗೆದುಕೊಂಡಿರುವವರು ಅವನ ಸಂಬಳದಲ್ಲಿ ಕೊಡತಕ್ಕಂತೆ ನಿಬಂಧನೆ ಇರಬೇಕೆಂದೂ ಅವರು ಸೂಚಿಸಿರುವರು

ಪುರಾತನ ಕಾಲದ ಚಿನ್ನದ ನಾಣ್ಯಗಳ ಪತ್ತೆ

...ನಗರದ ತಾಲ್ಲೂಕು ಚನ್ನಪ್ಪನಪುರ ಎಂಬ ಗ್ರಾಮದಲ್ಲಿ ರಾಮ ಎಂಬ ... ವರ್ಷದ ... ಬಾಲಕನು ತನ್ನ ಅಣ್ಣ ... ವರ್ಷದ ... ಮತ್ತು ... ಎಂಬುವರೊಡನೆ ಕಳೆದ ತಿಂಗಳು ... ನೇ ತಾರೀಖು ಹೊಲದ ಬಳಿ ... ದಾಗ ರಾಮ ಎಂಬ ಬಾಲಕನಿಗೆ ಒಂದು ಸಣ್ಣ ಮಣ್ಣಿನ ಮಡಕೆಯು ಸಿಕ್ಕಿದುದನ್ನು ತೆಗೆದುಕೊಂಡು ತನ್ನ ಅಣ್ಣ ಮತ್ತು ... ಅರಸು ಇವರುಗಳಿಗೆ ತೋರಿಸಿದನೆಂದೂ, ಅದನ್ನು ... ಆವರಲ್ಲಿ ... ತೆರೆದು ನೋಡಲಾಗಿ ... ೩೮ ಚಿನ್ನದ ನಾಣ್ಯಗಳು ಸಿಕ್ಕಿದುವೆಂದೂ ಗೊತ್ತಾಗಿದೆ ಅವುಗಳಲ್ಲಿ ಕೆಲವನ್ನು ಮಾರಿ, ಕೆಲವನ್ನು ಕರಗಿಸಿದ್ದರೆಂದೂ, ಈ ಸಂಗತಿಯು ಗ್ರಾಮದ ಪಟೇಲರಿಗೆ ತಿಳಿಯಲಾಗಿ ಅವರು ಪೋಲೀಸರಿಗೆ ವರದಿ ಮಾಡಲು ಅವರು ೩೮ ನಾಣ್ಯಗಳನ್ನು ವಶಪಡಿಸಿಕೊಂಡರೆಂದು ಗೊತ್ತಾಗಿದೆ

ನಾಣ್ಯಗಳ ಮೇಲೆ ರಾಮ ಸೀತೆ, ಉಮಾ ಮಹೇಶ್ವರ ಮತ್ತು ಗಂಡಭೇರುಂಡ ಚಿತ್ರಗಳಿವೆಯೆಂದೂ ಹೇಳಲಾಗಿದೆ

ಹೆಗ್ಗಡದೇವನಕೋಟೆಯಲ್ಲಿ ಇರಿತದ ಪ್ರಸಂಗ

ಹೆಗ್ಗಡದೇವನಕೋಟೆ ಪೋಲೀಸ ಠಾಣೆಯ ಗುಮಾಸ್ತ ಶ್ರೀ ವೆಂಕಟೇಶ ಭಟ್ಟ ನವರನ್ನು ಮೊನ್ನೆ ಬೆಳಗ್ಗೆ ಯಾರೋ ಚೂರಿಯಿಂದ ಇರಿದು ಹಳ್ಳಕ್ಕೆ ಹಾಕಿದ್ದರೆಂದೂ ಸಂಜೆ ೪ ಗಂಟೆ ವೇಳೆಯಲ್ಲಿ ದನ ಕಾಯುವ ಹುಡುಗರು ಆರ್ತ ಧ್ವನಿ ಕೇಳಿ ವಿಷಯವನ್ನು ತಿಳಿಸಲಾಗಿ ಪೋಲೀಸರು ಬಂದು ಅವರನ್ನು ಮೊನ್ನೆ ರಾತ್ರಿ ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಿದರೆಂದೂ ಗೊತ್ತಾಗಿದೆ ಚೂರಿ ಇರಿಯುವ ಮುಂಚೆ ಅವರ ಕಣ್ಣಿಗೆ ಮೆಣಸಿನ್ನು ಎರಚಲಾಯಿತೆಂದೂ ಹೇಳಲಾಗಿದೆ

ನೆಹರೂ ಚಿರಾಯುವಾಗಲಿ

ಪ್ರಧಾನಿ ನೆಹರೂರವರಿಗೆ ಇಂದು ೬೩ ವರ್ಷಗಳು ತುಂಬಿ ಅವರು ೬೪ಕ್ಕೆ ಕಾಲಿಟ್ಟಿದ್ದಾರೆ ಈ ಶುಭ ಸನ್ನಿವೇಶದಲ್ಲಿ ಪರಮಾತ್ಮನು ಅವರಿಗೆ ಸಕಲ ಸನ್ಮಂಗಳಗಳನ್ನೂ ಉಂಟುಮಾಡಲೆಂದು ಹಾರೈಸುತ್ತೇನೆ

ಪಂಚೆ ನೇಯಲು ಕೈಮಗ್ಗಗಳಿಗೆ ಮಾತ್ರ ಅವಕಾಶ

ಕೈಮಗ್ಗಗಳಿಗೆ ಮಾತ್ರ ಪಂಚೆಗಳನ್ನು ನೇಯಲು ಅವಕಾಶವೀಯುವಂತೆ ಭಾರತ ಸರ್ಕಾರದವರು ನಿರ್ಣಯಿಸಿರುವರೆಂದು ವರದಿಯಾಗಿದೆ ಆ ಕೈಗಾರಿಕೆಯವರು ಸೀರೆಗಳನ್ನೂ ಧೋತ್ರಗಳನ್ನೂ ನೇಯುವಂತೆ ಅವಕಾಶ ಕೊಡಬೇಕೆಂದು ಮಾದಂಪಿಸಿದ್ದ ಮುಖ್ಯ ಮಂತ್ರಿ ರಾಜಾಜಿಯವರು ಒತ್ತಾಯಪಡಿಸಿರುವುದರಿಂದ ಮದರಾಸು ಸರ್ಕಾರದ ಕೋರಿಕೆಯನ್ನು ಅರ್ಧಭಾಗವಷ್ಟು ಕೂಡಲೇ ... ಕೇಂದ್ರ ಸರ್ಕಾರದವರು ಮುಂದೆ ಬರಲಿರುವರೆಂದು ಹೇಳಲಾಗಿದೆ

○ ಕೊಡಗಿಗೆ ಮೈಸೂರು ಹೈಕೋರ್ಟಿನ ವ್ಯಾಪ್ತಿಯನ್ನು ವಿಸ್ತರಿಸುವ ಮಸೂದೆಯು ಪಾರ್ಲಿಮೆಂಟಿನಲ್ಲಿ ಮೊನ್ನೆ ಅಂಗೀಕೃತವಾಯಿತು

ನೇಪಾಳಕ್ಕೆ ಚೀಣಾ ಸೈನ್ಯಗಳ ಪ್ರವೇಶ

ಚೀಣಾದ ಸೈನಿಕರು ಮೇಲಿಂದ ಮೇಲೆ ಟಿಬೆಟ್ ಕಡೆಯಿಂದ ನೇಪಾಳದೊಳಗೆ ಅತಿಕ್ರಮ ಪ್ರವೇಶ ಮಾಡುತ್ತಿರುವ ವರದಿಯಾಗಿದೆ ನೇಪಾಳದ ಗಡಿ ಪ್ರದೇಶಗಳಲ್ಲಿರುವ ಜನರ ದನಗಳನ್ನು ಹೊಡೆದುಕೊಂಡು ಹೋಗಿ, ಹತ್ತಿರದಲ್ಲೇ ಇರುವ ತಕ್ಲಾಕೋಟ್ ಎಂಬಲ್ಲಿ ತಮ್ಮ ಶಿಬಿರಗಳನ್ನು ಕಟ್ಟಿಕೊಳ್ಳುತ್ತಿರುವರೆಂದೂ ಹೇಳಲಾಗಿದೆ

೧೩೫ ವರ್ಷದ ವೃದ್ಧನ ಮರಣ

ಮೈನಾಪು ತಾಲ್ಲೂಕಿನ ಕೊಲಿಯಾಡಿಯ ಪಾಣಿರ್ಯಾ ಕುರುಪ್ಪ ಎಂಬ ೧೩೫ ವರ್ಷದ ಹರಿಜನನೊಬ್ಬನು ಇತ್ತೀಚೆಗೆ ಮೃತಿ ಹೊಂದಿದನು. ಅವನು ಸಾಯುವ ಹಿಂದಿನ ದಿನ ಪೇಟೆಗೆ ಹೋಗಿ ಸಾಮಾನುಗಳನ್ನು ಮನೆಗೆ ತಂದನೆಂದೂ ಹೇಳಲಾಗಿದೆ ಅವನಿಗೆ ೮೭ ವರುಷದ ಹಿರಿಯ ಮಗಳೂ, ಇನ್ನೂ ಇಬ್ಬರು ಹೆಣ್ಣು ಮಕ್ಕಳೂ ಇರುವರು

ಸಕ್ಕರೆ ಕಾರ್ಖಾನೆ ನೌಕರರಿಗೆ ಹೆಚ್ಚಿನ ಸಂಬಳ

ಮಂಡ್ಯದ ಸಕ್ಕರೆ ಕಾರ್ಖಾನೆ ಡೈರೆಕ್ಟರರ ತುರ್ತು ಸಭೆಯೊಂದು ನೆನ್ನೆ ಸೇರಿ ೪ ಸಾವಿರ ನೌಕರರಿಗೂ ಬಡ್ತಿ ಕೊಡಲು ನಿರ್ಧರಿಸಿತು ಮಂಡ್ಯದ ಹೊಸದಾಗಿ ಬ್ಯಾಲೆಟ್ ತೆಗೆದುಕೊಳ್ಳುವ ಬಗ್ಗೆ ಕಾರ್ಮಿಕರ ನಿರ್ಧಾರವನ್ನು ಡೈರೆಕ್ಟರುಗಳು ಪರಿಶೀಲಿಸಿದರೆಂದು ಹೇಳಲಾಗಿದೆ

ಕಾಂಗ್ರೆಸ್ ಚುನಾವಣೆ

ಮೈಸೂರು ನಗರದ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಪ್ರತಿನಿಧಿ ಸ್ಥಾನವೊಂದಕ್ಕೆ ಚುನಾವಣೆಯು ಇಂದು ಬಿರುಸಾಗಿ ನಡೆಯಿತು. ಕಾಂಗ್ರೆಸ್ ಚುನಾವಣೆಯಲ್ಲಿ ಮತದಾರರನ್ನು ಕರೆತರಲು ಇದೇ ಮೊದಲಾಗಿ ಮೋಟಾರು ಮುಂತಾದ ವಾಹನಗಳನ್ನು ಏರ್ಪಡಿಸಲಾಗಿದ್ದಿತು ಶ್ರೀ ಎಸ್ ಎಸ್ ಶಾಸ್ತ್ರಿಯವರು ತಮ್ಮ ಉಮೇದುವಾರಿಕೆಯನ್ನು ನೆನ್ನೆ ಹಿಂದಕ್ಕೆ ತೆಗೆದುಕೊಂಡು ಸ್ಪರ್ಧೆಯು ಶ್ರೀ ಕೆ ಎಸ್ ಸೂರ್ಯನಾರಾಯಣರಾವ್ ಮತ್ತು ಶ್ರೀ ಸಿ ಜೆ ದೇವನಾದ್ ಇವರುಗಳಿಗೆ ನಡೆಯಿತು

ಮೈಸೂರು ಪೌರಸಭಾ ಇಂಜನಿಯರರು

ಬೆಂಗಳೂರು ಕಾರ್ಪೊರೇಷನ್ನಿನ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಕೆ ಎಸ್ ರಾಮಣ್ಣನವರನ್ನು ಮೈಸೂರು ಪೌರಸಭಾ ಇಂಜನಿಯರಾಗಿ ವರ್ಗಾಯಿಸಿದ್ದುದನ್ನು ರದ್ದು ಮಾಡಿ, ಬಿಲ್ಡಿಂಗ್ ಡಿವಿಜನ್ನಿನ ಅಸಿಸ್ಟೆಂಟ್ ಇಂಜನಿಯರಾದ ಶ್ರೀ ತಿ ನಂಜಪ್ಪನವರನ್ನು ಮೈಸೂರು ಪೌರಸಭಾ ಇಂಜನಿಯರರಾಗಿ ಮೊಕರೂರು ಮಾಡಲಾಗಿದೆ ಶ್ರೀ ಮುಕುಂದರಾವ್‌ರನ್ನು ಮರಾಮತ್ತು ಇಲಾಖೆಯಲ್ಲೇ ಇಟ್ಟುಕೊಳ್ಳಲಾಗಿದೆ

○ ರಷ್ಯಾದ ಪಂಗೇರಿಗಳ ನಡುವೆ ಮಧ್ಯ ಏಷಿಯಾದ ಹಲವು ಗುಹೆಗಳಲ್ಲಿ ಶೋಧನೆ ನಡೆಸುತ್ತಿದ್ದಾಗ ೭೦ ಸಾವಿರ ವರ್ಷಗಳ ಹಿಂದಿನ ಕಾಲದ್ದೆಂದು ಹೇಳಲಾದ ಮನುಷ್ಯನ ತಲೆ ಬುರುಡೆಯ ಮುಂಭಾಗವು ದೊರೆತಿರುವುದು.

ಕಡೂರು-ಮಂಗಳೂರು ರಸ್ತೆ ವಿಷಯ ಮುಂದಕ್ಕೆ

ಕೇಂದ್ರ ರೈಲ್ವೆ ಸಚಿವರು ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಉತ್ತರವಿತ್ತು, ಕಡೂರು-ಚಿಕ್ಕಮಗಳೂರು, ಚಿತ್ರದುರ್ಗ-ರಾಯದುರ್ಗ ಮತ್ತು ಚಾಮರಾಜನಗರ-ಸತ್ಯಮಂಗಲ ರೈಲ್ವೆಗಳನ್ನು ಹಾಕಲು ಮೈಸೂರು ಸಂಸ್ಥಾನದಿಂದ ಅಂಕೆ ಬಂದಿರುವುದಾಗಿ ತಿಳಿಸಿರುತ್ತಾರೆ ಶ್ರೀ ಮಾದಯ್ಯಗೌಡರ ಪ್ರಶ್ನೆಗೆ ಉತ್ತರವಾಗಿ, ಕಡೂರು-ಮಂಗಳೂರು ರಸ್ತೆ ಹಾಕಲು ಚಿಕ್ಕಮಗಳೂರು ಪೌರಸಭೆಯ ಅಧ್ಯಕ್ಷರಿಂದ ಮನವಿಯು ಬಂದಿದ್ದಿತೆಂದೂ, ರೈಲ್ವೆಯವರು ಆ ಜಿಲ್ಲೆಯಲ್ಲಿ ರೈಲ್ವೆಯ ಸೆಕ್ಷನ್ನು ಪಸೊಲು ಮಾಡಿರುವುದಿಲ್ಲವೆಂದೂ, ಹಣದ ಅಭಾವ ಮತ್ತು ಇತರ ಯೋಜನೆಗಳ ಪ್ರಾಮುಖ್ಯತೆಯನ್ನು ಅರಿತು ಸದರಿ ರೈಲು ರಸ್ತೆ ವಿಷಯವನ್ನೂ ಮುಂದಕ್ಕೆ ಹಾಕಲಾಗಿರುವುದೆಂದೂ ಅವರು ಹೇಳಿರುತ್ತಾರೆ

ಸಹಾಯಾರ್ಥ ನಾಟಕ ಪ್ರದರ್ಶನ

ಕಿಲ್ಲೆಮೊಹಲ್ಲಾ ಆನೆಕರುಹಟ್ಟಿಯಲ್ಲಿ ಪ್ರತಿಷ್ಠಿತವಾಗಿರುವ ಶ್ರೀ ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಇದೀ ಶನಿ ತಾ|| ನಡೆಯುವ ಹನುಮಜ್ಜಯಂತಿ ಉತ್ಸವದ ಸಹಾಯಾರ್ಥವಾಗಿ ಶ್ರೀ ಬಸವೇಶ್ವರ ಕೃಪಾಪೋಷಿತ ಕರ್ನಾಟಕ ನಾಟಕ ಸಭೆಯವರು ಮೈಸೂರಿನ ಟೌನ್‌ಹಾಲಿನಲ್ಲಿ ನಾಳೆ ರಾತ್ರಿ ೧೦|| ಗಂಟೆಗೆ ಭಕ್ತ ಪ್ರಹ್ಲಾದ ಎಂಬ ನಾಟಕವನ್ನು ಅಭಿನಯಿಸುವರು

○ ಈ ತಿಂಗಳಿಗಾಗಿ ಮೈಸೂರಿಗೆ ೧೦,೦೦೦ ಟನ್ ಜೋಳವನ್ನು ಕೇಂದ್ರ ಸರ್ಕಾರದವರು ನಿಗದಿ ಮಾಡಿರುತ್ತಾರೆ

SRI GANESH

TALKIES

RELEASING ON 15 11-52

ABBOTT & COSTELLO MEET THE INVISIBLE MAN

ಹಾವಿನ ವಿಷದ ನಿವಾರಣೆಗೆ ಫೋನ್ ಮೂಲಕ ಮಂತ್ರ

ಬಹರ್ಾಂಪುರದಲ್ಲಿ ನಾಗರಹಾವಿನಿಂದ ಕಡಿಯಲ್ಪಟ್ಟ ಒಬ್ಬಾತನಿಗೆ ಪೋಸಂಗಾಬಾದಿನ ರೈಲ್ವೆ ಸಿಬ್ಬಂದಿಯವನೊಬ್ಬನು ಟೆಲಿಫೋನ್ ಮೂಲಕ ಮಂತ್ರವನ್ನು ಹಾಕಿ, ಅವನ ಜೀವವನ್ನು ಉಳಿಸಿರುವ ಪ್ರಸಂಗವು ವರದಿಯಾಗಿದೆ

ನಾಟಕ ಪ್ರದರ್ಶನ

ಮೈಸೂರು ವಾಣೀವಿಲಾಸ ಮೊಹಲ್ಲಾದಲ್ಲಿರುವ ಡಿ ಮಂಜಯ್ಯನವರ ವಿದ್ಯಾ ಮಂದಿರ ವಾರ್ಷಿಕೋತ್ಸವದ ಸಂಬಂಧದಲ್ಲಿ ಇದೇ ಶನಿವಾರ ಸಾಯಂಕಾಲ ಅಲ್ಲಿಯ ಪ್ರತಾಪ್ ನಾಟಕ ಮಂಡಲಿಯವರು ಶ್ರೀ ದಿಲೀಪ್‌ಕುಮಾರ್, ಮೈಸೂರು ಇವರಿಂದ ರಚಿತವಾದ ಮದುವೆ ಹುಚ್ಚು ಎಂಬ ಸಾಮಾಜಿಕ ನಾಟಕವನ್ನು ಆಡುವರು ಸರ್ವರೂ ಸಹಕರಿಸಬೇಕೆಂದು ಕೋರಲಾಗಿದೆ

ಚರಂಡಿ ವ್ಯವಸ್ಥೆ ಸರಿಯಾಗಿಲ್ಲ

ರಾಜಧಾನಿಯ ಕತ್ತ್ರಾಡಿಪುರದ ಅಗ್ರಹಾರದ ಚರಂಡಿಗಳ ವ್ಯವಸ್ಥೆಯು ಸರಿಯಾಗಿರದೆ ನೀರು ನಿಂತು ಕೊಳೆತು ... ರಸ್ತೆಯಲ್ಲಿ ... ಚರಂಡಿಗೆ ಕೊ... ಚರಂಡಿ ... ಸೊಳ್ಳೆಗಳು ... ರೋಗಗಳು ... ಸ್ವರ ... ಮಾಡುವುದು ... ನಿವಾಸಿಗಳೊಬ್ಬರು ತಿಳಿಸಿರುತ್ತಾರೆ

ತಲಕಾಡು ಮಹಾತ್ಮೆ ಮತ್ತು ಪಂಚಲಿಂಗ ದರ್ಶನ ಯಾತ್ರೆ

— ಲೇಖಕರು —

ಟಿ. ಆರ್. ಸೀತಾರಾಮ ಶಾಸ್ತ್ರಿ

ಬೆಲೆ ೦ ೬-೦

ಮಾರಾಟಗಾರರಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತೆ

ಪ್ರತಿಗಳು ದೊರೆಯುವ ಸ್ಥಳ

ಟಿ ಆರ್. ಸೀತಾರಾಮ ಶಾಸ್ತ್ರಿ, ತಲಕಾಡು ಟಿ ನರಸೀಪುರ ತಾ ಮತ್ತು ಸಾಧ್ವಿ ಆಫೀಸ್ ಮೈಸೂರು

ಚಿನ್ನದ ಗಣಿಗಳಲ್ಲಿ ಪ್ರತಿಬಂಧಕಾಜ್ಞೆ

ಕೋಲಾರದ ಚಿನ್ನದ ಗಣಿಗಳ ಪ್ರದೇಶದಲ್ಲಿ ಸಭೆ, ಮೆರವಣಿಗೆಗಳನ್ನು ನಡೆಸದಂತೆಯೂ, ೫ ಜನಕ್ಕಿಂತಲೂ ಹೆಚ್ಚು ಮಂದಿ ಸೇರದಂತೆಯೂ ಅಲ್ಲಿನ ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿರುತ್ತಾರೆ ಆ ಪ್ರದೇಶದಲ್ಲಿರುವ ಕಾರ್ಮಿಕರ ಪಕ್ಷ ಪ್ರತಿಪಕ್ಷಗಳ ಸಂಬಂಧವು ಕೆಟ್ಟಿರುವುದರಿಂದ ಈ ರೀತಿ ಆಜ್ಞೆ ಹೊರಡಿಸಲಾಗಿದೆ

ನಗರದಲ್ಲಿ ವನಮೃಗ ರಕ್ಷಣಾ ಸಮಿತಿ ಸಭೆ

ಇದೇ ತಿಂಗಳು ೨೫ ರಿಂದ ಡಿಸೆಂಬರ್ ೧೧ ನೇ ತಾ|| ವರೆಗೆ ಮೈಸೂರಿನಲ್ಲಿ ಕೇಂದ್ರ ವನಮೃಗ ರಕ್ಷಣಾ ಸಮಿತಿಯ ಸಭೆಯು ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವುದು ಸಮಿತಿಯಲ್ಲಿ ಒಟ್ಟು ೪೩ ಮಂದಿ ಸದಸ್ಯರಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೨೦ ಚಿತ್ರ ಗೀತೆ ಮಧ್ಯಾಹ್ನ ... ಗಿಟಾರ್ ... ಬಾಲ ಜಗತ್ ಮಕ್ಕಳ ಕಾರ್ಯಕ್ರಮ ಸಂಜೆ ೫ ೩೦ ಮತ್ತು ... ಆನಂದ ಮತ್ತು ರವಿ ಸಂಗೀತ ... ವಿಚಾರ ... ಗಮಕ, ಕಾಲಕ್ಷೇಪ ಭಗ... ತಾಳವಾದ್ಯ ಕಛೇರಿ ... ಆರ್ಕೆಸ್ಟ್ರಾ

JOIN NOW

TYPEWRITING & SHORTHAND CLASSES

(Leading to Nov 53 Exams)

Individual Attention and Expert Training

EXCELLENT RESULTS IN THE LAST EXAMINATION

Further particulars can be had from

COMMERCIAL INSTITUTE

Attached to

Saradavilas High School,

K M Puram Mysore

ಮೈಸೂರು ಪೇಟೆ ಧಾರಣೆ

	ಪಲ್ಲ ಗಳ್ಳಿ	ರೂ ಇಂದ ರೂ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಕುಸುಮೆ	[illegible]	
ಹೆಸರು	[illegible]	[illegible]
ಉದ್ದು	[illegible]	
ಹಲಸಂದೆ	[illegible]	[illegible]
ಹುರುಳಿ	[illegible]	[illegible]
ಅವರೆ	[illegible]	[illegible]
ಕೊಬ್ಬರಿ ... ಗಳ್ಳಿ	[illegible]	[illegible]
ಹುಣಸೇಹಣ್ಣು	[illegible]	[illegible]
ಬೆಲ್ಲ	[illegible]	
ಸೀಗೇಕಾಯಿ	[illegible]	
ಹೊಂಗೇಬೀಜ	[illegible]	
ತೆಂಗಿನಕಾಯಿ ೧,೦೦೦	[illegible]	[illegible]

ಇಹರ ಪರಿಚಯವಿದೆಯೋ.

ಮೈಸೂರು ಸಾಬೂನು

ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ ಶ್ರಮ ... ಮಾಡುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ

ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ

ಎಲ್ಲ ಕಡೆಯೂ ಸಿಗುತ್ತದೆ

ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು

MAHAJANA CO-OPERATIVE SOCIETY, LTD.,

Vanivilas Mohalla Mysore

THE STORE HOUSE OF QUALITY GOODS

BINNY COATING, JUPITAR SHIRTING, FINLAY DHOTEES MOTI MULL DORIA, STAPLES CHINTS, SUPERFINE VOILS, BANARES SAREES, DESI SILK

ETC - ETC - ETC

ARE AVAILABLE

॥ ಶ್ರೀ ॥

ಮಹಾಜನ ಹೈಸ್ಕೂಲಿನ ನಿಧಿಗಾಗಿ

ತಾ|| 16-11-52 ನೇ ಭಾನುವಾರ ಸಾಯಂಕಾಲ 4 ಘಂಟೆಗೆ

— ಕ್ರಾಫರ್ಡ್ ಹಾಲಿನಲ್ಲಿ —

ಘನವಾದ ಸಂಗೀತ ಕಛೇರಿ

ಕೋಕಿಲಗಾನ, ಅತ್ಯವಾದ

ಶ್ರೀಮತಿ ಎಂ. ಎಸ್ ಸುಬ್ಬುಲಕ್ಷ್ಮಿ

ಯವರ ಹಾಡುಗಾರಿಕೆ

ಶ್ರೀ ಆರ್ ಕೆ ವೆಂಕಟರಾಮಶಾಸ್ತ್ರಿಗಳ ಪಿಟೀಲು

ಶ್ರೀ ಟಿ ಕೆ ಮೂರ್ತಿಯವರ ಮೃದಂಗ

ಶ್ರೀ ಆಲಂಗುಡಿ ರಾಮಚಂದ್ರನವರ ಘಟಂ

ಟಿಕೇಟು ದರ 25, 10, 5 ಮತ್ತು 3

ಸ್ತ್ರೀಯರಿಗೆ ಮಾತ್ರ ವಿಶೇಷ ರಿಯಾಯಿತಿ ದರ: ಎರಡು ರೂ.

ವಿಶೇಷ ಸೂಚನೆ - ಕ್ರಾಫರ್ಡ್ ಜನರಿಗೆ ಹೊರಗಡೆ ಸಂಗೀತ ಕೇಳಲು

ಲೌಡ್ ಸ್ಪೀಕರ್ ವ್ಯವಸ್ಥೆಯಿದೆ

ಪ್ರಭುದೇವಾ ಟಾಕೀಸ್

(ಪ್ರತಿದಿನ ೩ ಆಟಗಳು)

14-11-52 ರಿಂದ :: ಅಮೋಘ 5ನೇ ವಾರ

ಬಡ ರೈತ

(ತಮಿಳು)

(ಪಿ ಕೆ ಯು ಉ ನ್ ವ ನ್)

ಪಾತ್ರ — ಅಂಜಲಿದೇವಿ ಕನ್ನಾಂಬ, ಶ್ರೀರಾಮಮೂರ್ತಿ, ಲಿಂಗಮೂರ್ತಿ

Edited, Printed and Published by A R Nagaraja at Sadhvi Press, D Subbaiah Road, Mysore

ಎಂ ಪೂ ನಂ 754 ||ವಂದೇ ಮಾತರಂ|| ಒಂದಿನ ಪತ್ರಿಕೆ ೨ ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೧೫-೧೧-೧೯೫೨ [ಸಂಚಿಕೆ ೯೩

ತಲಕಾಡು ಕೊಲೆ ಬಗ್ಗೆ – ೨೦ ಜನರಿಗೆ ಶಿಕ್ಷೆ –

ಮುಖ್ಯ ದಳಾಯ ಮೇಲೆ ಪಕೋಟಿ ರದ್ದಿಲ್ಲ

ಬೆಂಗಳೂರು ೧೫

ಮಳೆ ಬಾರದ ಪ್ರಯುಕ್ತ, ಸಂಸ್ಥಾನದಲ್ಲಿ ಬೆಳೆಯ ಪರಿಸ್ಥಿತಿ ಹದಗೆಡುವ ಸಂಭವವಿರುವುದರಿಂದ ಆಹಾರದ ಸೀಳಿ ಯಲ್ಲಿ ಎಚ್ಚರಿಕೆಯಿಂದ ವರ್ತಿಸಬೇಕೆಂದು ೧೩ ನೇ ತಾ|| ಇಲ್ಲಿ ನಡೆದ ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯಲ್ಲಿ ಅಭಿಪ್ರಾಯ ಪಡಲಾಯಿತೆಂದು ವರದಿಯಾಗಿದೆ. ಕೆಲವು ಪ್ರದೇಶಗಳಲ್ಲಿ ರಾಗಿ ಮತ್ತು ಜೋಳದ ಮೇಲೆ ಪಕೋಟಿ ತೆಗೆಯಬೇಕೆಂದು ಸರ್ಕಾರದವರ ಮತ್ತು ಇದಕ್ಕೆ ಅನುಮೋದನೆಯಿತ್ತ ಶಾಸನ ಸಭಾ ಸದಸ್ಯರ ಯೋಚನೆಯನ್ನು ಕೈಬಿಡಲಾಗುವುದೆಂದೂ ನಿರೀಕ್ಷಿಸಲಾಗಿದೆ. ಮಳೆಯ ಅಭಾವದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಯಾವರೀತಿ ಎದುರಿಸಬೇಕೆಂಬ ಬಗ್ಗೆ ಅಧಿಕಾರಿಗಳು ಸಮಾಲೋಚನೆ ನಡೆಸಿದರೆಂದೂ ಹೇಳಲಾಗಿದೆ

ಕೊಡಗಿನ ಹುಡುಗಿಯಲ್ಲಿ ಅದ್ಭುತ ಶಕ್ತಿ?

ಹಿಂದಿನವರ ಜೀವನಕ್ಕೆ ಅಗತ್ಯವಾದ ಜ್ಞಾಯ ಸ್ಮೃತಿಗಿರುವ ಯಾವುದೋ ವಿಶೇಷ ಜ್ಞಾನ ಶಕ್ತಿಯು ಕೊಡಗಿನ ಶುಂಠಿಕೊಪ್ಪದ ಧನಲಕ್ಷ್ಮಿ ಎಂಬ ೧೭ ವರ್ಷದ ಹುಡುಗಿಯಲ್ಲಿ ಅಡಗಿರಬೇಕೆಂದು ಆ ಜಿಲ್ಲೆಯ ಆರೋಗ್ಯ ಮಂತ್ರಿ ಶ್ರೀ ಕೆ ಮಲ್ಲಪ್ಪನವರು ತಿಳಿಸಿರುತ್ತಾರೆ. ಕೀಳು ಮತ್ತು ಆಹಾರವಿಲ್ಲದ ಆಕೆಯು ಪೂರ್ಣಾರೋಗ್ಯವಂತಳಾಗಿರುವಳೆಂದು ಅಲ್ಲಿನ ಸ್ಥಳೀಯ ವೈದ್ಯಾಧಿಕಾರಿಗಳು ಹೇಳಿರುತ್ತಾರೆ. ಹಸಿವನ್ನುಂಟುಮಾಡುವ ರಸಗ್ರಂಥಿಯೊಂದು ಸರಿಯಾಗಿ ಕೆಲಸ ಮಾಡದೆ ಇರುವುದು ಆಕೆಯು ಆಹಾರ ಸೇವನೆ ಮಾಡದಿರುವುದಕ್ಕೆ ಕಾರಣವೆಂದು ವೈದ್ಯರ ಅಭಿಪ್ರಾಯವಾಗಿದೆ. ಆಕೆಯ ಬಗ್ಗೆ ವಿವರಗಳನ್ನು ತಿಳಿಯಲು ಬಿಹಾರಿನ ಗೌರ್ನರ್ ಆರ್ ಆರ್ ದಿವಾಕರರು ಉತ್ಸುಕರಾಗಿರುವರು

೧೩ನೇ ಅಂತಸ್ತಿನ ಮಹಡಿಯಿಂದ ಹಾರಿ ಆತ್ಮಹತ್ಯೆ

ವಿಶ್ವಸಂಸ್ಥೆ ಕಛೇರಿಯಲ್ಲಿರುವ ಅಮೆರಿಕದ ನೌಕರರಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿರುವುದೇ ಎಂಬುದನ್ನು ತನಿಖೆ ನಡೆಸಿ ಬಂದ ಅಧಿಕಾರಿಗಳ ಪ್ರಶ್ನೆಗೆ ಉತ್ತರ ಕೊಡಲು ಹಿಂಜರಿದು, ವಿಶ್ವಸಂಸ್ಥೆಯ ನ್ಯಾಯ ಇಲಾಖಾಧಿಕಾರಿ ಅಬ್ರಹಾಂ ಫೆಲ್ಲರ್ ರವರು ಹನ್ನೆರಡನೇ ಅಂತಸ್ತಿನ ತಮ್ಮ ನಿವಾಸದಿಂದ ಕೆಳಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಅವರ ಪತ್ನಿಯು ಅವರನ್ನು ಹಿಡಿಯ ಬಂದರೂ, ಅಧೀರಳಾಗಿ ಆಕೆ ಕೈಗೆ ಸಿಕ್ಕಲಿಲ್ಲ

ನೆಹರೂರವರಿಗೆ ಕಂಚಿನ ಸರಸ್ವತಿ ವಿಗ್ರಹದ ಅರ್ಪಣೆ

ಪ್ರಧಾನಿ ನೆಹರೂರವರ ೬೩ನೇ ವರ್ಧಂತಿ ಸಂದರ್ಭದಲ್ಲಿ ರಾಜಧಾನಿಯ ಚಿತ್ರಕಾರರಾದ ಶ್ರೀ ಎಸ್ ಎನ್ ಶಾಸ್ತ್ರಿಯವರು ಕಂಚಿನಿಂದ ತಯಾರಿಸಲ್ಪಟ್ಟ ನಾಟ್ಯ ಸರಸ್ವತಿಯ ಪ್ರತಿಮೆಯೊಂದನ್ನು ಅವರಿಗೆ ಕಳುಹಿಸಿ ಕೊಟ್ಟಿರುತ್ತಾರೆ

ನೆಹರೂರವರ ವರ್ಧಂತಿಗಾಗಿ ಸ್ಟಾಲಿನ್ ಸಂದೇಶ

ನಿನ್ನೆ ೬೩ ನೇ ವರ್ಷ ವಯಸ್ಸು ತುಂಬಿದ ಪ್ರಧಾನಿ ನೆಹರೂರವರು ತಮ್ಮ ಹುಟ್ಟಿದ ನಿವಾಸದಲ್ಲಿ ನೂರಾರು ಮಕ್ಕಳೊಂದಿಗೆ ಎರಡು ಗಂಟೆ ಕಾಲ ನಲಿದಾಡಿದರು. ಪಂಡಿತ ನೆಹರೂರವರಿಗೆ ಶುಭಾಶಯಗಳನ್ನು ರಾಷ್ಟ್ರಾಧ್ಯಕ್ಷರು ಕಳುಹಿಸಿ ಕೊಟ್ಟಿದ್ದರು. ರಷ್ಯದ ಪ್ರಧಾನಿ ಮಾರ್ಷಲ್ ಸ್ಟಾಲಿನ್ನರು ಶುಭಾಶಯದ ತಂತಿ ಕಳುಹಿಸಿಕೊಟ್ಟಿರುವರು. ದೇಶ ವಿದೇಶಗಳಿಂದ ಅವರಿಗೆ ಅನೇಕ ತಂತಿಗಳು ಬಂದಿವೆ. ಪಾರ್ಲಿಮೆಂಟ್ ಭವನಕ್ಕೆ ನಿನ್ನೆ ಅವರು ಪ್ರವೇಶಿಸಿದಾಗ ಕಮ್ಯೂನಿಸ್ಟರು ವಿನಹ ಮಿಕ್ಕೆಲ್ಲ ಸದಸ್ಯರೂ ಕರತಾಡನಗಳಿಂದ ತಮ್ಮ ಆನಂದವನ್ನು ವ್ಯಕ್ತಪಡಿಸಿದರು

ಕೆ. ಎಸ್. ಸೂರ್ಯನಾರಾಯಣರವರ ಆಯ್ಕೆ

ಮೈಸೂರು ನಗರದ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಪ್ರತಿನಿಧಿಯಾಗಿ ನಗರ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ ಎಸ್ ಸೂರ್ಯನಾರಾಯಣರವರು ಆರಿಸಲ್ಪಟ್ಟಿರುತ್ತಾರೆ. ಅವರಿಗೆ ೬೦೭ ಮತ್ತು ಪ್ರತಿಸ್ಪರ್ಧಿ ಶ್ರೀ ಸಿ ಜೆ ದೇವನಾಥ್ ರವರಿಗೆ ೨೦೧ ಓಟುಗಳು ಬಂದುವು

ನೈಜೀರಿಯ ನಿಯೋಗದವರ ಆಗಮನ

ಆಫ್ರಿಕದ ನೈಜೀರಿಯಾ ರಾಜ್ಯದ ನಿಯೋಗದವರು ನಿನ್ನೆ ರಾಜಧಾನಿಗೆ ಆಗಮಿಸಿದರು. ಹಲವು ಪ್ರೇಕ್ಷಣೀಯ ಸ್ಥಳಗಳಿಗೆ ಅವರು ಭೇಟಿಯಿತ್ತರು. ಈ ರಾತ್ರಿ ೯ ಗಂಟೆಗೆ ಇಲ್ಲಿನ ಆಲ್ ಇಂಡಿಯಾ ರೇಡಿಯೋನಿಲಯದಲ್ಲಿ ಅವರ ಪ್ರಸಾರ ಭಾಷಣವು ಏರ್ಪಾಡಾಗಿದೆ

ತಲಕಾಡು ಕ್ಷೇತ್ರ ಮತ್ತು ಪಂಚಲಿಂಗ ಮಹಾತ್ಮೆ

ರಾಜಧಾನಿಯ ಶ್ರೀ ಶಾರದಾ ಪ್ರೆಸ್ಸಿನವರು ಮೇಲ್ಕಂಡ ಶಿರೋನಾಮೆಯುಳ್ಳ ಚಿತ್ರ ಪಟವನ್ನು ತಯಾರಿಸಿ ಪ್ರಕಟಿಸಿರುತ್ತಾರೆ. ಪಂಚಲಿಂಗಗಳ ಚರಿತ್ರೆಯನ್ನು ಚಿತ್ರರೂಪಗಳಲ್ಲಿ ಅವರು ಕೊಟ್ಟಿರುತ್ತಾರೆ. ದೇವಸ್ಥಾನಗಳು, ಕೊಳ, ಅನೆಯ ಶಿವಾರ್ಚನೆ, ಮುಂತಾದ ಇತಿಹಾಸ ವಿಷಯವೆಲ್ಲವೂ ಚಿತ್ರಗಳಲ್ಲಿವೆ. ಇದರ ಬೆಲೆ ೩ ಆಣೆ.

ಚಾಮರಾಜನಗರದಲ್ಲೂ ಅವಿರೋಧ ಆಯ್ಕೆ

ಸ್ವಸು ತಂತಿ] ಚಾಮರಾಜನಗರ ೧೫

ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಗೆ ಚಾಮರಾಜನಗರದ ತಾಲ್ಲೂಕಿನಿಂದ ಸ್ಪರ್ಧಿಸಿದ್ದ ಶ್ರೀಗಳಾದ ಶಂಕರಪ್ಪ ಮತ್ತು ಕುದೇರು ಕುಮಾರಸ್ವಾಮಿಯವರ ಪೈಕಿ ಶ್ರೀ ಶಂಕರಪ್ಪನವರು ಉಮೇದುವಾರಿಕೆಯನ್ನು ವಾಪಸು ಪಡೆದುದರಿಂದ ಶ್ರೀ ಕುಮಾರಸ್ವಾಮಿಯವರು ಅವಿರೋಧವಾಗಿ ಆರಿಸಲ್ಪಟ್ಟಿರುವರು

ನೆಹರೂರವರಿಗೆ ರಾಜಾಸ್ಥಾನದ ಕಾಣಿಕೆ

ನೆಹರೂರವರ ೬೩ನೇ ವರ್ಧಂತಿಯ ನೆನಪಿಗಾಗಿ ರಾಜಾಸ್ಥಾನದ ಸರ್ಕಾರದವರು ೬೩ ಶಾಲೆಗಳನ್ನು ನಿರ್ಮಿಸಲಿರುವರು. ಕೊಡಗಿನ ಶ್ರೀ ಹೆಚ್ ಸಿ ಕಾಳಂಗಪ್ಪ ಎಂಬ ಹಳ್ಳಿಯವನು ಅದೇ ಮಾರಿ ತಾನೊಂದು ಶಾಲೆಯನ್ನು ನಿರ್ಮಿಸಲು ನಿರ್ಧರಿಸಿರುವನೆಂದು ವರದಿಯಾಗಿದೆ.

ಆಹಾರ ಸಚಿವರುಗಳ ಸಮ್ಮೇಳನ ರದ್ದು

ದೇಶದ ಆಹಾರ ಸ್ಥಿತಿಯನ್ನು ಗಮನಿಸುವ ಬಗ್ಗೆ ದೆಹಲಿಯಲ್ಲಿ ನಾಳಿದ್ದು ನಡೆಯಬೇಕಾಗಿದ್ದ, ಸಂಸ್ಥಾನಗಳ ಆಹಾರ ಸಚಿವರ ಸಮ್ಮೇಳನವನ್ನು ಹಠಾತ್ತನೆ ರದ್ದುಗೊಳಿಸಲಾಗಿರುವುದಾಗಿ ಗೊತ್ತಾಗಿದೆ. ಮುಂದಿನ ಸ್ಥಿತಿಯನ್ನು ಕೇಂದ್ರ ಸರ್ಕಾರದವರೇ ನಿರ್ಧರಿಸುವರೆಂದೂ ಹೇಳಲಾಗಿದೆ

ಮೈಸೂರು ತಾಲ್ಲೂಕಿನಲ್ಲಿ ಚುನಾವಣೆ

ಕಾಂಗ್ರೆಸ್ ಪ್ರತಿನಿಧಿ ಸ್ಥಾನಕ್ಕೆ ಮೈಸೂರು ತಾಲ್ಲೂಕಿನಿಂದ ಇಂದು ಚುನಾವಣೆಯು ನಡೆಯುತ್ತಿದೆ. ಶ್ರೀ ಹೆಚ್ ಸಿ ದಾಸಪ್ಪ ಮತ್ತು ಶ್ರೀ ಕೆ ಪುಟ್ಟಸ್ವಾಮಿಯವರು ಸ್ಪರ್ಧಿಸಿರುವರು. ತಾಲ್ಲೂಕಿನ ಸುಮಾರು ೧೩೦೦ ಓಟುಗಳ ಪೈಕಿ ಈ ನಗರದ ಅನೇಕರು ಬಂದು ತಮ್ಮ ಮತವನ್ನು ಚಲಾಯಿಸಿರುತ್ತಾರೆ. ಎರಡು ಪಕ್ಷಗಳ ಕಡೆಯೂ ಪ್ರಚಾರವು ಬಹು ಜೋರಾಗಿದ್ದಿತು

ತಲಕಾಡು ಕೊಲೆ ಮೊಕದ್ದಮೆಯಲ್ಲಿ ತೀರ್ಪು

೨೦ ಜನರಿಗೆ ಜೀವಾವಧಿ ಶಿಕ್ಷೆ

ಮೈಸೂರು ೧೫

ಕಳೆದ ವರ್ಷ ಏಪ್ರಿಲ್ ೧೮ ನೇ ತಾ|| ತಲಕಾಡಿನ ಪಟೇಲ್ ಪುಟ್ಟೇಗೌಡ ಮತ್ತು ಆತನ ಸೋದರ ನಂಜೇಗೌಡ ಎಂಬುವರನ್ನು ದೊಂಬಿ ನಡೆಸಿ, ಕೊಲೆ ಮಾಡಿದರೆಂದು ಚಿಕ್ಕ ರಂಗೇಗೌಡ ವಗೈರೆ ೨೯ ಜನರ ಮೇಲೆ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ತಲಕಾಡು ಮತ್ತು ನರಸೀಪುರದ ಸ್ಪೆಷಲ್ ಜಡ್ಜ್ ಶ್ರೀ ಆರ್ ತಿಮ್ಮರಾಯ ಭಟ್ಟರು ಇಂದು ತೀರ್ಪಿತ್ತು, ೨೦ ಜನರಿಗೆ ಕೆಳಗೆ ಕಂಡಂತೆ ಶಿಕ್ಷೆ ವಿಧಿಸುತ್ತಾರೆ:-

೧, ೩, ೪, ೫ ೧೩ ೧೪, ೧೯ ಮತ್ತು ೨೫ ನೇ ಅಪರಾಧಿಗಳಾದ ಚಿಕ್ಕ ರಂಗೇಗೌಡ, ಗೋವಿಂದ ರಾಜ ಉರುಫ್ ಗೋಪಾಲ, ವೆಂಕಟರಮಣೇಗೌಡ ಉರುಫ್ ಪಟೇಲ್, ಪುಟ್ಟೇಗೌಡ, ಗೋವಿಂದ ಗೌಡ ಉರುಫ್ ಗಿಡ್ಡಯ್ಯ, ಗೋವಿಂದ ಗೌಡ ಉರುಫ್ ಜವರ, ಮರಿ ಕೊಳ್ಳ ಮತ್ತು ವೆಂಕಟರಮಣ ಉರುಫ್ ಬೋಳ ಎಂಬುವರಿಗೆ ಐ. ಪಿ. ಸಿ. ೧೪೮ ಮತ್ತು ೧೪೯ ನೇ ಸೆಕ್ಷನ್ ಪ್ರಕಾರ ೩ ವರ್ಷ ಕಠಿಣ ಸಜಾ, ಐ. ಪಿ. ಸಿ. ೩೦೨ ಮತ್ತು ೩೦೨/೩೪-೧೪೯ ಸೆಕ್ಷನ್ ಪ್ರಕಾರ ಜೀವಾವಧಿ ಶಿಕ್ಷೆಯನ್ನೂ ಮತ್ತು ೩ ಮತ್ತು ೨೦ ನೇ ಅಪರಾಧಿಗಳಾದ ಗೋವಿಂದ ಗೌಡ ಉರುಫ್ ಪಟೇಲ್ ಮತ್ತು ಗೋವಿಂದ ಇವರುಗಳಿಗೆ ೧೪೮ ಮತ್ತು ೧೪೯ ನೇ ಸೆಕ್ಷನ್ ಪ್ರಕಾರ ೩ ವರ್ಷ ಕಠಿಣ ಸಜಾ ಮತ್ತು ೩೦೨/೩೪. ೧೪೯ ನೇ ಸೆಕ್ಷನ್ ಪ್ರಕಾರ ಜೀವಾವಧಿ ಶಿಕ್ಷೆಯನ್ನೂ, ೬, ೭, ೮, ೯, ೧೧, ೧೬ ೧೭, ೨೦, ೨೨ ಮತ್ತು ೨೩ ನೇ ಅಪರಾಧಿಗಳಾದ ಚಿಕ್ಕರಂಗ, ಡಿ ರಂಗೇಗೌಡ, ವೀರಪ್ಪಾಜಿ, ಪುಟ್ಟೀರ, ಚಿಕ್ಕಮುದ್ದ, ರಾಮೇಗೌಡ, ಗೋವಿಂದ ಗೌಡ, ನರಸೇಗೌಡ ಮತ್ತು ಹುಚ್ಚಗೌಡ, ರಂಗೇಗೌಡ ಇವರುಗಳಿಗೆ ೧೪೮ನೇ ಸೆಕ್ಷನ್ ಪ್ರಕಾರ ೩ ವರ್ಷ ಕಠಿಣ ಶಿಕ್ಷೆ ಮತ್ತು ೩೦೨/೩೪ ೧೪೯ನೇ ಸೆಕ್ಷನ್ ಪ್ರಕಾರ ಜೀವಾವಧಿ ಶಿಕ್ಷೆಗಳನ್ನು ವಿಧಿಸಿ, ಏಕ ಕಾಲದಲ್ಲಿ ಅನುಭವಿಸುವಂತೆ ಆಜ್ಞೆ ಮಾಡಿರುತ್ತಾರೆ

೧೦, ೧೨, ೧೫, ೨೨, ೨೪, ೨೬, ೨೭, ೨೮ ಮತ್ತು ೨೯ನೇ ಅಪರಾಧಿಗಳಾದ ಚಿಕ್ಕ ರಂಗ, ದಾಸೇಗೌಡ, ಚಿಕ್ಕ ನಾರಾಯಣ ಗೌಡ, ಕಾಳಯ್ಯ ದೊಡ್ಡ ರಂಗ, ವೆಂಕಟರಮಣ ಚಿಕ್ಕ ಬಸವಾಚಾರಿ ತಿಮ್ಮ, ರಂಗೇಗೌಡ ಮತ್ತು ಮುದ್ದಬಸವ ಇವರುಗಳನ್ನು ಬಿಡುಗಡೆ ಮಾಡಲಾಗಿದೆ

ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಜಿ ಶಂಕರ ಭಟ್ಟರು ವಕಾಲತ್ತು ವಹಿಸಿದ್ದರು

ಬೊಂಬಾಯಿ ಸಂಪಾದಕರ ದಸ್ತಗಿರಿಗೆ ವಾರೆಂಟ್

ಬೊಂಬಾಯಿಯ ಬ್ಲಿಟ್ಸ್ ಮತ್ತು ಕರೆಂಟ್ ಪತ್ರಿಕೆಗಳ ಸಂಪಾದಕರುಗಳಾದ ಕರಂಜಿಯಾ ಮತ್ತು ಡಿ ಎಫ್. ಕರಾಕರವರುಗಳ ದಸ್ತಗಿರಿಗೆ ಜಾಮೀನಿನ ಮೇಲೆ ಬಿಡಬಹುದಾದ ವಾರೆಂಟನ್ನು ಬೊಂಬಾಯಿಯ ಪ್ರೆಸಿಡೆನ್ಸಿ ನ್ಯಾಯಾಧೀಶರು ಹೊರಡಿಸಿರುತ್ತಾರೆ. ಅಮೆರಿಕದ ರಾಯಭಾರಿ ಬೌಲ್ಸ್‌ರು ಪತ್ರ ಬರೆದರೆಂದು ಸುಳ್ಳು ಕಾಗದದ ಸೃಷ್ಟಿ ಮತ್ತು ಅದರ ಪ್ರಕಟಣೆ ಸಂಬಂಧವಾಗಿ ಪೋಲೀಸರು ದೂರು ಕೊಟ್ಟಿದ್ದರು

ವಿಶೇಷ ಇಂಜನಿಯರ್ ಹುದ್ದೆ ರದ್ದು

ಮಿತವ್ಯಯಕ್ಕಾಗಿ ಸರ್ಕಾರದವರು ವಿದ್ಯುತ್ ಚೀಫ್ ಇಂಜನಿಯರ್ ಹುದ್ದೆಯನ್ನು ರದ್ದುಗೊಳಿಸಿರುತ್ತಾರೆ. ತಿಂಗಳಿಗೆ ೧೫೦೦ ರೂ ಮೇಲೆ ಈ ಹುದ್ದೆಯು ಕಳೆದ ವರ್ಷ ಏರ್ಪಾಡಾಗಿದ್ದಿತು.

ಜಲಜನಕ ಬಾಂಬಿನಿಂದ ದ್ವೀಪವು ಅದೃಶ್ಯವಾಯಿತು

ಪೆಸಿಫಿಕ್ ದ್ವೀಪಸ್ತೋಮಗಳ ನಡುವೆ ಎನಿವೆಟಾಕ್ ಎಂಬ ದ್ವೀಪದಲ್ಲಿ ಇತ್ತೀಚೆಗೆ ಅಮೆರಿಕದ ಜಲಜನಕ ಬಾಂಬಿನ ಪ್ರಯೋಗ ನಡೆಯಿತೆಂದೂ, ಇದರ ಪರಿಣಾಮವಾಗಿ ಇಡೀ ದ್ವೀಪವೊಂದು ಸುಟ್ಟು ಭಸ್ಮವಾಗಿ ಕೇವಲ ಆರು ಘಂಟೆಗಳೊಳಗೆ ಪೂರ್ಣವಾಗಿ ಅದೃಶ್ಯವಾಯಿತೆಂದೂ ಪ್ರತ್ಯಕ್ಷವಾಗಿ ಕಂಡ ಒಬ್ಬ ನಾವಿಕನು ತಿಳಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಆಸ್ಫೋಟನೆಯಿಂದ ಉಂಟಾದ ಜ್ವಾಲೆಯು ೩ ಮೈಲಿ ಸುತ್ತಿನ ಪ್ರದೇಶಗಳಲ್ಲಿ ೫ ಮೈಲಿ ಎತ್ತರಕ್ಕೆ ಹರಡಿತ್ತೆಂದು ಹೇಳಲಾಗಿದೆ. ಆಸ್ಫೋಟನೆಯ ರಭಸದಿಂದ ೧೮ ಮೈಲಿ ದೂರದಲ್ಲಿದ್ದ ಒಂದು ಛಾವಣಿಯ ಮೇಲ್ಭಾವಣಿಯು ಹಾರಿಹೋಯಿತು.

ಕಾರ್ಮಿಕರ ವೇತನದ ಸಮಿತಿ

ವ್ಯವಸಾಯ ಕಾರ್ಮಿಕರ ವೇತನದ ಕನಿಷ್ಠಾಂಶವನ್ನು ನಿಗದಿ ಮಾಡುವ ಸಂಬಂಧವಾಗಿ ಸರ್ಕಾರದವರು ಈ ಕೆಳಗೆ ಕಂಡ ಸದಸ್ಯರ ಸಮಿತಿಯನ್ನು ರಚಿಸಿರುತ್ತಾರೆ: ಶ್ರೀ ಬಿ ಎಸ್ ಪುಟ್ಟಸ್ವಾಮಿ, ಅಧ್ಯಕ್ಷರು [illegible] ಮಾಧವರಾವ್, ಎಂ ಕೆ ಅಪ್ಪಾಜಪ್ಪ, ಬಿ ಎಂ ಪುಟ್ಟಸ್ವಾಗೌಡ, ಹೆಚ್ ಎಂ ಚನ್ನಬಸಪ್ಪ, ಪಿ ಮರಿಯಪ್ಪ, ಮಳವಳ್ಳಿ ವೀರಪ್ಪ, ಆರ್ ಮುಪ್ಪಿಸ್ವಾಮಯ್ಯ, ಸಿ ಟಿ ಹನುಮಂತಯ್ಯ

ಶಾಸನ ಸಭಾ ಅಂದಾಜು ಸಮಿತಿ

ಮೈಸೂರು ಕಿರಿಯ ಶಾಸನ ಸಭೆಯ ಅಂದಾಜು ಸಮಿತಿಯನ್ನು ಈ ರೀತಿ ರಚಿಸಲಾಗಿದೆ.— ಶ್ರೀ ಬಿ ನಾರಾಯಣಸ್ವಾಮಿ (ಅಧ್ಯಕ್ಷರು), ಶ್ರೀಗಳಾದ ಬಿ ಸಿ. ನಾಗರಾಜ ಮೂರ್ತಿ, ಎಸ್ ಶ್ರೀನಿವಾಸಯ್ಯಂಗಾರ್, ಜಿ ಮಹಮದ್ ಇಮಾಂ, ಬಿ ಎ ಬೋರಣ್ಣಗೌಡ, ಜಿ ಬಸಪ್ಪ, ಜಿ ನಾರಾಯಣಗೌಡ, ಡಿ ದೇವರಾಜ ಅರಸ್, ಬಿ. ಸಿ. ಹೊಂಬುಡಯ್ಯ, ಕೆ ವಿ ಶಂಕರೇಗೌಡ, ಬಿ. ಎಂ ಸೀನಪ್ಪ ಮತ್ತು ಕೆ ಪ್ರಭಾಕರ್ ಸದಸ್ಯರು

ಕಾಲೇಜು ಪ್ರವೇಶಕ್ಕೆ ದೇಹದ ಪರೀಕ್ಷೆ

ಹೆಚ್ಚಿನ ವ್ಯಾಸಂಗಕ್ಕಾಗಿ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಅವಶ್ಯಕವಾದ ದೇಹದ ಬೆಳವಣಿಗೆಯನ್ನು ಹೊಂದಿಲ್ಲದಿದ್ದರೆ ಅವರುಗಳನ್ನು ಸೇರಿಸಕೂಡದೆಂಬ ವಿಷಯವನ್ನು ತಾವು ಪರ್ಯಾಲೋಚಿಸುತ್ತಿರುವುದಾಗಿ ಬೊಂಬಾಯಿಯ ವಿದ್ಯಾಮಂತ್ರಿ ದಿನಕರ ದೇಸಾಯಿಯರು ತಿಳಿಸಿರುತ್ತಾರೆ

ಕಾಶ್ಮೀರದ ಸಿನಿಮಾಗಳಲ್ಲಿ ಧೂಮ ಪಾನಕ್ಕೆ ನಿಷೇಧ

ಕಾಶ್ಮೀರದ ಸಿನಿಮಾ ಮತ್ತು ನಾಟಕ ಮಂದಿರಗಳಲ್ಲಿ ಧೂಮಪಾನವನ್ನು ನಿಷೇಧಿಸಿ ಅಲ್ಲಿನ ಸರ್ಕಾರದವರು ಶಾಸನವನ್ನು ಜಾರಿ ಮಾಡಿರುವರು

ಪಂಚಲಿಂಗ ಯಾತ್ರಾಕ್ರಮ

ರಾಜಧಾನಿಯ ಶ್ರೀ ಎಂ ಎಸ್ ಸಿದ್ದಪ್ಪ ಮತ್ತು ಸಹೋದರರು ಪಂಚಲಿಂಗ ದರ್ಶನದ ಯಾತ್ರಾಕ್ರಮವನ್ನು ವಿವರಿಸುವ ಸಣ್ಣ ಪತ್ರಿಕೆಯನ್ನು ತ್ಯಾಗರಾಜ ರಸ್ತೆಯಲ್ಲಿರುವ ತಮ್ಮ ಅಂಗಡಿಯಲ್ಲಿ ಯಾತ್ರಾರ್ಥಿಗಳಿಗೆ ಉಚಿತವಾಗಿ ಹಂಚುವರು

ಬಾಲ ಸಾಹಿತ್ಯ ಮಾಲೆಯ "ಹೂ"

ಮೈಸೂರು ಜಾನಪದ ಪ್ರಕಾಶನ ಬಾಲಸಾಹಿತ್ಯ ಒಳಗಡೆಯಿಂದ ಪ್ರಕಾಶಿತವಾಗಿರುವ ಸಾಹಿತ್ಯ ಮಾಲೆಯ ಹೂ ಎಂಬ ಚಿಕ್ಕ ಪುಸ್ತಕದ ಪ್ರತಿಯೊಂದು ನಮ್ಮ ಕೈಸೇರಿದೆ ಶ್ರೀ ಸಿ ಪ್ರಸೂರ್ಯ ಪ್ರಸಾದರು ಇದರ ಸಂಪಾದಕರು. ಸುಲಭ ಶೈಲಿಯ ಈ ಪುಸ್ತಕವು ಮಕ್ಕಳಿಗೆ ಉಪಯುಕ್ತವಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಿತ್ರ ಮಾಧುರ್ಯ [illegible] ವ್ಯಾಖ್ಯಾನ [illegible] ಸಾವು ಮತ್ತು ನಮ್ಮವರು [illegible] ನಮ್ಮ ಮೆಚ್ಚಿನ ಗೀತೆಗಳು ಸಂಜೆ [illegible] ಮತ್ತು [illegible] ಸಾಗರದ ಶಾಸ್ತ್ರಿ ೬ ೦೦ ಮತ್ತು ೮ ಸಂಗೀತ, ಬಿ ನಾಗಪ್ಪ ೮ ೩೦ ಕಲಾಸಾಧಕರು [illegible] ನವದೆಹಲಿ ಸಂಘಟಿತ [illegible] ರಾಷ್ಟ್ರೀಯ ಕಾರ್ಯಕ್ರಮ

ಗೌರೀಶಂಕರದ ಎತ್ತರ ತಿಳಿಯಲು ಮತ್ತೆ ಪ್ರಯತ್ನ

ಹಿಮಾಲಯದ ಅತ್ಯುನ್ನತ ಶಿಖರವಾದ ಗೌರೀಶಂಕರದ ಎತ್ತರವನ್ನು ತಿಳಿಯಲು ಹೊಸ ಪ್ರಯತ್ನವೊಂದು ನಡೆದಿರುವುದು. ಭಾರತದ ಸರ್ವೆ ಇಲಾಖೆಯ ಹಲವು ಅಧಿಕಾರಿಗಳು ನೇಪಾಳ ಮತ್ತು ಟಿಬೆಟ್ ಗಡಿಯಲ್ಲಿ ಆ ಶಿಖರದಿಂದ ಸುಮಾರು ೩೦-೪೦ ಮೈಲಿ ದೂರದಲ್ಲಿ ಒಂದು ನೆಲೆಯನ್ನು ಏರ್ಪಡಿಸಿ, ಅಲ್ಲಿಂದ ತಮ್ಮ ಪ್ರಯತ್ನವನ್ನು ಸಾಗಿಸುವರೆಂದು ಹೇಳಲಾಗಿದೆ

ಕಥಾ ಲೋಕ

ಮೈಸೂರಿನ ಶ್ರೀ ಕೆ. ವಿ ಅನಂತರಾಮಯ್ಯನವರಿಂದ ಸಂಪಾದಿಸಲ್ಪಡುತ್ತಿರುವ ಕಥಾಲೋಕ ಎಂಬ ಕನ್ನಡ ಮಾಸಪತ್ರಿಕೆಯು ಈ ತಿಂಗಳಿನ ಸಂಚಿಕೆಯು ನಮ್ಮ ಕೈಸೇರಿದೆ. ಬೆಲೆ ಮೂರು ಆಣೆ

ಬಾಲರ ಜಗತ್ತು

ಕೃಷ್ಣರಾಜಸಾಗರದ ಓರಿ ಶಾಲೆಯ ಶ್ರೀ ವರಾಹ ಮೂರ್ತಿಯವರು ಕಿರಿಯ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲೆಂದು ಬಾಲರ ಜಗತ್ತು ಎಂಬ ಮಕ್ಕಳ ಮಾಸಪತ್ರಿಕೆಯೊಂದನ್ನು ಹೊರಡಿಸುತ್ತಾರೆ. ಮಕ್ಕಳಲ್ಲಿ ಜ್ಞಾನವನ್ನುಂಟು ಮಾಡುವ ಉದ್ದೇಶವನ್ನು ಅವರು ಹೊಂದಿರುತ್ತಾರೆ. ಚಿತ್ರಗಳು, ಚರಿತ್ರೆ ಮತ್ತು ಭೂವಿವರಣೆಯು ಜಾಡು [illegible] ಗಣಿತದ ಸಮಸ್ಯೆ ಇವುಗಳನ್ನು ಇದರಲ್ಲಿ ಕೊಡಲಾಗಿದೆ

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ.

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್,

ಮೈಸೂರು

SRI GAYATHRI

TALKIES

TO-DAY ONLY

I DOOD IT

Starring - Red Skelton

TO MORROW

DISTANT DRUMS

Starring Gary Cooper

Morning Shows on 16th & 16th

SWORD OF MONTECRISTO

ರೀಟಾ ಹೇವರ್ತಳ ಪುನರ್ವಿವಾಹ

ಅಗಾಖಾನರ ಪುತ್ರ, ಅಲಿಖಾನ್‌ರನ್ನು ರೀಟಾ ಹೇವರ್ತಳು ಈ ಮದುವೆಯಿಂದ ವಿಚ್ಛೇದನ ಪಡೆದ ನಂತರ ಆಕೆಯು ಸ್ಪೇನಿನ ಪ್ರಸಿದ್ಧ [illegible] ಕುದುರೆಗಳ ಸವಾರ [illegible] ಮೇರಿಯೊ ವಿಲ್ಲಮಿಲ್ [illegible] ಎಂಬ ಧನಿಕನನ್ನು ಮತ್ತೆ ಮದುವೆಯಾಗುವಳೆಂದು ಗೊತ್ತಾಗಿದೆ

ಮೈಸೂರು ಪೇಟೆ ಧಾರಣೆ

ಸಾಮಾನುಗಳು (ಪ್ರತಿಯೊಂದರ ಬೆಲೆ ಓದಲಾಗದು):

- ನೆಲಗಡಲೆ
- ಎಳ್ಳು
- ಹರಳು ಬೀಜ
- ಹುರುಳಿ
- ಹೆಸರು
- ಉದ್ದು
- ಕಡಲೆ
- ಮೆಣಸಿನಕಾಯಿ
- ಅವರೆ
- ಕೊತ್ತುಂಬರಿ
- ಮೆಂತ್ಯ
- ಸಾಸಿವೆ
- ಬೆಲ್ಲ
- ಹೊಗೆಸೊಪ್ಪು

ಮೈಸೂರು ನಗರಾಭಿವೃದ್ಧಿ ಸಮಿತಿ

ಪ್ರ ಕ ಟ ನೆ

ಮೈಸೂರು ನಗರಾಭಿವೃದ್ಧಿ ಸಮಿತಿಯ ಆಡಳಿತಕ್ಕೆ ಒಳಪಟ್ಟ ಹುದ್ದೆಗೆ ಒಂದು ಸಲ ನೇಮಕ ಮಾಡುವುದಕ್ಕಾಗಿ 1953 ನೇ ಡಿಸೆಂಬರ್ 30 ನೇ ತಾರೀಖಿನೊಳಗೆ ಕೆಳಕಂಡ ಅರ್ಹತೆಗಳನ್ನು ಹೊಂದಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಹುದ್ದೆಯು ಹಂಗಾಮಿಯಾದುದರಿಂದ ಪ್ರತ್ಯೇಕವಾಗಿದೆ. ತಿಂಗಳಿಗೆ ಸಂಬಳ ೩೦ ರೂ ಮತ್ತು ಸರ್ಕಾರದ ನಿಯಮಾನುಸಾರವಾಗಿ ತುಟ್ಟಿ ಭತ್ಯೆ ಮತ್ತು 15 ರೂ ವಾಹನ ಭತ್ಯೆ [illegible]

ಅರ್ಹತೆ — ಮೈಸೂರು ಸರ್ಕಾರದ ಎಲ್. ಎಸ್. ಎಲ್. ಸಿ. (ಅಥವಾ ತತ್ಸಮಾನ ಪರೀಕ್ಷೆ) [illegible] ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. [illegible]

ವಯಸ್ಸು — ಅರ್ಜಿ ಸಲ್ಲಿಸುವ ದಿನಾಂಕದಲ್ಲಿ [illegible] ವರ್ಷಗಳಿಗೆ ಮೀರಿರಬಾರದು. [illegible] ಅರ್ಜಿಯೊಡನೆ ಸರ್ಟಿಫಿಕೇಟುಗಳ ನಕಲು [illegible] ಲಕೋಟೆಯ ಮೇಲೆ [illegible] ಎಂದು ಬರೆಯಬೇಕು.

(ಸಹಿ) ಎಸ್. [illegible]

ಸೆಕ್ರೆಟರಿ

|| ಶ್ರೀ ||

ಮಹಾಜನ ಹೈಸ್ಕೂಲಿನ ನಿಧಿಗಾಗಿ

ತಾ|| 16-11-52 ನೇ ಭಾನುವಾರ ಸಾಯಂಕಾಲ 4 ಘಂಟೆಗೆ

— ಕ್ರಾಫರ್ಡ್ ಹಾಲಿನಲ್ಲಿ —

ಭಾಸವಾದ ಸಂಗೀತ ಕಛೇರಿ

ಕೋಕಿಲಗಾನ ಚಕ್ರವರ್ತಿನಿ

ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿ

ಯವರ ಹಾಡುಗಾರಿಕೆ

ಶ್ರೀ ಆರ್ ಕೆ ವೆಂಕಟರಾಮಶಾಸ್ತ್ರಿಗಳ ಪಿಟೀಲು

ಶ್ರೀ ಟಿ ಕೆ ಮೂರ್ತಿಯವರ ಮೃದಂಗ

ಶ್ರೀ ಆಲಂಗುಡಿ ರಾಮಚಂದ್ರರವರ ಘಟಂ

ಟಿಕೆಟು ದರ- 25, 10, 5 ಮತ್ತು 3

ಸ್ತ್ರೀಯರಿಗೆ ಮಾತ್ರ ವಿಶೇಷ ರಿಯಾಯಿತಿ ದರ: ಎರಡು ರೂ.

ವಿಶೇಷ ಸೂಚನೆ ಕ್ರಾಫರ್ಡ್ ಭವನದ ಹೊರಗಡೆ ಸಂಗೀತ ಕೇಳಲು ಲೌಡ್ ಸ್ಪೀಕರ್ ವ್ಯವಸ್ಥೆಯುಂಟು.

ನೆನಪಿರಲಿ ! ನೆನಪಿರಲಿ !

ಅಬೀದ್‌ರವರ ಹರಾಜು ಮಾರಾಟ

ಶುರು ಆಗುವುದು

ನಾಳೆ ಬೆಳಿಗ್ಗೆ :: 10 ಘಂಟೆ !

Edited, Printed and Published by A R Nagaraja

ಫೋ ನಂ 792 WEEKLY EDITION ಇಂದಿನ ಪತ್ರಿಕೆ 6 ಪುಟ

ಸಾಧ್ವಿ

ಸಂಪುಟ ೧೬] ಭಾನುವಾರ ೧೬-೧೧ ೧೯೫೩ [ಸಂಚಿಕೆ ೧೩

ಬೆಲ್ಜಿಯಂ ಧೊರೆಯ – ಕೊಲೆ ಪಿತೂರಿ –

ಕಾಂಗ್ರೆಸ್ ಚುನಾವಣೆಯಲ್ಲಿ ಪಾಸಪ್ಪನವರ ಜಯ

ಮೈಸೂರು ತಾಲ್ಲೂಕು ಕ್ಷೇತ್ರದಲ್ಲಿ ಬಿರುಸಿನ ಮತದಾನ

ಮೈಸೂರು ೧೩

... ಗ್ರೆಸ್ ಅಧಿವೇಶನದ ಪ್ರತಿನಿಧಿ ಸ್ಥಾ... ... ನ್ನ ಮೈಸೂರು ತಾಲ್ಲೂಕು ಪ್ರದೇಶ ... ಚುನಾವಣೆಯು ನಡೆದು ಮೈಸೂ... ... ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾ... ... ಜೆ. ಸಿ. ಪಾಸಪ್ಪನವರು ೪೪೬ ... ೧೯೪ ಬಹುಮತಗಳಿಗಳಾದರು ಮ... ... ಪ್ರಮೋದನಾಥರಾದ ಶ್ರೀ ಪುಟ್ಟ... ... ಯ್ಯನವರು ೪೫೫ ಓಟುಗಳನ್ನು ಪಡೆ... ... ನಾನಾ ಹಳ್ಳಿಗಳಿಂದ ಕಾಂಗ್ರೆಸ್ ಸದ... ... ನ್ನು ಓಟು ಮಾಡಲು ಬಸ್ಸುಗಳಲ್ಲಿ ... ಬರುತಿದ್ದು ಚುನಾವಣೆಯ ಸ್ಥಳವ... ... ಕಾಂಗ್ರೆಸ್ ಕಛೇರಿಯನ್ನು ಓಟು ... ಮುತ್ತಿದರು ಸ್ವಲ್ಪ ಹೊತ್ತು ಪಿ... ... ನ್ನು ಬಿಲ್ಲಿಸಬೇಕಾಯಿತು ಒಟ್ಟು ... ಮಂದಿ ಓಟುಗಳನ್ನು ಚಲಾಯಿಸಿ... ಟು ಕ್ಷೇತ್ರದ ಬಳಿ ಪೋಲೀಸರು ... ನ್ಯಾಸೊಂದು ಇದ್ದಿತು

... ಆರೂವರೆಗೆ ಗಂಟೆ ಹೊತ್ತಿ... ... ಲಿಂಗಪ್ಪ ಮುಕ್ತಾಯವಾಯಿತು ಕೂಡಲೇ ಶ್ರೀ ದಾಸಪ್ಪ ... ... ಸ ಮಾಡಿದರು ... ... ಈ ಚುನಾವಣೆಯನ್ನು ನೋ... ... ಸದ ಪಲವಾರು ಕಡೆಗಳಿಂದ ... ಸ್ಯರು ಆಗಮಿಸಿದ್ದರು.

ಮಹದೇಶ್ವರ ಸ್ವಾಮಿಯವರಿಗೆ ಅಭಿಷೇಕ

ಬಿಧಾನಿಯ ಕೃಷ್ಣರಾಜ ಮೊ... ತ್ಯಾಗರಾಜ ರಸ್ತೆಯ ಬಳಿ ಇರು... ಮಹದೇಶ್ವರಸ್ವಾಮಿ ದೇವಸ್ಥಾ... ... ಕಾರ್ತೀಕ ಸೋಮವಾರದ ಪ್ರ... ... ನಂಕ ರುದ್ರಾಭಿಷೇಕ, ಗಣಾ... ... ಧನೆ ಮೆರವಣಿಗೆ, ದೀಪೋತ್ಸವ... ... ಕಾರ್ಯವು ನಡೆಯುವುವು

ಕ್ಷಾಮ ಪರಿಹಾರ ನಿಧಿಗೆ ಸಹಾಯ

... ಮಂತ್ರಿಗಳ ಹೆಸರಿನಲ್ಲಿ ಸ್ಥಾ... ... ಗಿರುವ ಅಭಾವ ಪರಿಹಾರ ನಿಧಿ... ... ಗ್ರಾಮಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರು ೩,೩೩-೬-೦ ... ಗಳನ್ನು ಸಂಗ್ರಹಿಸಿ ಕೊಟ್ಟಿರು... ... ತ್ತಾರೆ

ದತ್ತಾತ್ರೇಯ ಜಯಂತಿ

... ರಾಜಧಾನಿಯ ಸುಬ್ಬರಾಯನಕೆ... ... ನೈರುತ್ಯದಿಕ್ಕಿನಲ್ಲಿ ನೂರಡಿ ರಸ್ತೆ... ... ಇರುವ ಶ್ರೀ ದತ್ತಾತ್ರೇಯ ದೇವಾ... ... ಲ್ಲಿ ದತ್ತಾತ್ರೇಯ ಜಯಂತಿ ಪ್ರ... ... ಇಂದಿನಿಂದ ೧೬ ದಿನಗಳ ವರೆಗೆ ಪ್ರತಿ ದಿನ ರಾತ್ರಿ ೯ ಘಂಟೆಯಿಂದ ... ರವರೆಗೆ ಗಮಕಿ ಶ್ರೀ ರಾಮಕೃ... ... ರವರಿಂದ ಹರಿಕಥೆಯು ಜ... ... ಮಾರ್ಗಶಿರ ಶುದ್ಧ ಪೂರ್ಣಿಮೆ ದಿ... ... ತ್ಸವವೂ ನೆರವೇರುವುದು

ಅಂಚೆ ನೌಕರರಿಗೆ ಖಾದಿ ಸಮವಸ್ತ್ರ

... ಮುತ್ತು ತಂತಿ ನೌಕರರುಗಳ... ... ಸಮವಸ್ತ್ರಗಳನ್ನು ಕೊಡುವ... ... ದ ಮಾಡಲು ಭಾರತ ಸರ್ಕಾರ ... ನಿರ್ಧರಿಸಿರುವರೆಂದು ಹೇಳಲಾ... ... ರೈಲ್ವೆ ನೌಕರರುಗಳಿಗೂ ಅದೆ... ... ಖಾದಿ ಬಟ್ಟೆಯನ್ನು ಕೊಡ... ... ಆಲೋಚಿಸಲಾಗುತ್ತಿದೆಯೆಂ... ... ಲಾಗಿದೆ

ಬೆಲ್ಜಿಯಂ ಅರಸರ ಕೊಲೆ ಪ್ರಯತ್ನ?

ಪೂರ್ವ ಬೆಲ್ಜಿಯಂನಲ್ಲಿ ಕಳೆದ ನಾಲ್ಕೈದು ದಿನಗಳಿಂದ ಪೋಲೀಸರ ಮತ್ತು ಮಿಲಿಟರಿಯವರ ತೀವ್ರವಾದ ಶೋಧನೆ ಮತ್ತು ದಸ್ತಗಿರಿಗಳು ಸಾಗಿ ಪ್ಯಾಂಬರ್ಗ್‌ನಿಂದ ಬೆಲ್ಜಿಯಮ್ಮಿಗೆ ಬಂದ ಒಬ್ಬ ಜರ್ಮನನನ್ನು ಬಂಧಿಸಿದ ಸಂಬಂಧವಾಗಿ ಅಲ್ಲಿನ ಪತ್ರಿಕೆಗಳು ಟೀಕಿಸಿ ಬೆಲ್ಜಿಯಂ ಅರಸರ ಕೊಲೆ ಒಗ್ಗೆ ಭಾರಿ ಪಿತೂರಿ ನಡೆದಿರಬೇಕೆಂದು ಉಲ್ಲೇಖಿಸು ತ್ತಿರುವುದಾಗಿ ವರದಿಯಾಗಿದೆ

ಫಾರ್ಮೋಸಾದಲ್ಲಿ ಬಿರುಗಾಳಿಯಿಂದ ೧೦೦ ಜನರ ಮರಣ

ಫಾರ್ಮೋಸಾ ದ್ವೀಪದ ದಕ್ಷಿಣ ತೀರದ ಹಲವು ನಗರಗಳ ಮೇಲೆ ಮೊನ್ನೆ ರಾತ್ರಿ ಪ್ರಚಂಡ ಬಿರುಗಾಳಿಯು ಬೀಸಿದ ಪರಿಣಾಮವಾಗಿ ನೂರು ಜನರು ಮಡಿದು, ಒಂದು ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡರೆಂದು ವರದಿಯಾಗಿದೆ

ವಿಮಾನ ಬೆಟ್ಟಕ್ಕೆ ಬಡಿದು ೪೪ ಜನರ ಮರಣ

ಅಮೆರಿಕದ ಟ್ರಾನ್ಸ್‌ಪೋರ್ಟ್ ವಿಮಾನವೊಂದು ಮೊನ್ನೆ ದಕ್ಷಿಣ ಕೊರಿಯದ ರಾಜಧಾನಿ ಸಿಯೋಲ್ ಬಳಿ ಒಂದು ಬೆಟ್ಟಕ್ಕೆ ಢಿಕ್ಕಿ ಹೊಡೆದು, ಅದರಲ್ಲಿದ್ದ ೪೨ ಮಂದಿ ಅಮೆರಿಕದ ಸೈನಿಕರೂ, ೭ ಮಂದಿ ವಿಮಾನ ಸಿಬ್ಬಂದಿಯವರೂ ಮೃತಪಟ್ಟರು

ಕಲ್ಕತ್ತಾದಲ್ಲಿ ಹಡಗಿಗೆ ಬೆಂಕಿ

ಕಲ್ಕತ್ತಾದ ಬಂದರಿನಲ್ಲಿ ಸಣಬು ತುಂಬಿದ್ದ ಬ್ರಿಟಿಷ್ ಹಡಗೊಂದು ನೆನ್ನೆ ಬೆಂಕಿಗೆ ಆಹುತಿಯಾಗಿ ಉರಿಯಲಾರಂಭಿಸಿತೆಂದೂ, ಅಗ್ನಿಶಾಮಕ ಪಡೆಯವರು ೮ ಗಂಟೆಕಾಲ ಹೋರಾಡಿ ಬೆಂಕಿಯನ್ನು ಹತೋಟಿಗೆ ತಂದರೆಂದೂ ವರದಿಯಾಗಿದೆ

○ ಪಾರ್ಲಿಮೆಂಟಿನ ಹೈಕೋರ್ಟಿನ ನಿರ್ಮಾಣದ ಶಾಸನವು ಕ್ರಮಬದ್ಧವಲ್ಲವೆಂದು ದಕ್ಷಿಣ ಆಫ್ರಿಕದ ಸುಪ್ರೀಂ ಕೋರ್ಟಿನವರು ಇತ್ತ ತೀರ್ಪಿಗೆ ಅಲ್ಲಿನ ಪ್ರಧಾನಿ ಮಲಾನರು ತಲೆ ಬಾಗುವುದಾಗಿ ತಿಳಿಸಿರುತ್ತಾರೆ

ಜನರಲ್ ನಗೀಬರಿಗೆ ಸರ್ವಾಧಿಕಾರ

ಈಜಿಪ್ಟಿನ ಪ್ರಧಾನಿ ಜನರಲ್ ನಗೀಬರು ರಾಷ್ಟ್ರದ ಪದ್ಧತಿ ಮತ್ತು ಪಿ ಲಿಟಿರಿ ಸ್ಥಿತಿಗಳ ಚಲನವಲನಗಳ ರಕ್ಷಣೆಯ ದೃಷ್ಟಿಯಿಂದ ಬರುವ ಜನವರಿ ತಿಂಗಳು ಮೂರನೇ ವಾರದವರೆಗೆ ಈಜಿಪ್ಟಿನಲ್ಲಿ ಸರ್ವಾಧಿಕಾರವನ್ನು ಪಡೆದಿರುವರೆಂದೂ ಈ ಬಗ್ಗೆ ಶಾಸನವು ಜಾರಿಯಾಗಿರುವುದಾಗಿಯೂ ತಿಳಿದುಬಂದಿದೆ

ಪಹರೆಯವನನ್ನು ಕೊಂದು ೫೬ ಸಾವಿರ ರೂ ಅಪಹಾರ

ಬಿಹಾರಿನ ಜಮ್‌ಶೆಡ್‌ಪುರ ಬಳಿ ಒಂದು ಕಡೆ ಯುನೈಟೆಡ್ ಕಮರ್ಷಿಯಲ್ ಬ್ಯಾಂಕಿನ ಹಣವಿದ್ದ ಮೋಟಾರೊಂದರ ಮೇಲೆ ನೆನ್ನೆ ಬೆಳಿಗ್ಗೆ ದರೋಡೆಗಾರರ ಗುಂಪೊಂದು ಬಿದ್ದು, ಗುಂಡು ಹಾರಿಸಿ ಒಳಗಿದ್ದ ಪಹರೆಯವನನ್ನು ಕೊಂದು ೫೬ ಸಾವಿರ ರೂಗಳನ್ನು ಅಪಹರಿಸಿಕೊಂಡು ಹೋಗಿರುವರೆಂದು ವರದಿಯಾಗಿದೆ ಡ್ರೈವರಿಗೆ ತುಂಬಾ ಗಾಯವಾಗಿದೆ ಕಾರಿನಲ್ಲಿದ್ದ ಇತರರು ಗುಂಡಿಗೆ ಹೆದರಿ ಓಡಿಹೋದರು

ಕೋಲಾರದ ಗ್ರಾಮದಲ್ಲಿ ಕೊಲೆ

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ನರಲಗುಂಟೆ ಗ್ರಾಮದ ಪಟೇಲರಾದ ಮುನಿವೆಂಕಟಪ್ಪ ಎಂಬುವರನ್ನು ಯಾರೋ ಕೊಲೆ ಮಾಡಿ, ಅವರ ಶರೀರವನ್ನು ಮೂರು ತುಂಡಾಗಿ ಕತ್ತರಿಸಿ ರಸ್ತೆಯಲ್ಲಿ ಎಸೆದಿದ್ದುದು ಮೊನ್ನೆ ಪತ್ತೆಯಾಯಿತೆಂದು ವರದಿಯಾಗಿದೆ ಮುನಿವೆಂಕಟಪ್ಪನವರು ಅನೈತಿಕ ಸಂಪರ್ಕವನ್ನು ಹೊಂದಿದ್ದರೆಂದು ಹೇಳಲಾದ ಅದೇ ಗ್ರಾಮದ ಒಬ್ಬ ಹೆಂಗಸಿನ ಶವವೂ ಒಂದು ಮನೆಯಲ್ಲಿ ಪತ್ತೆಯಾಯಿತೆಂದೂ ವರದಿಯಾಗಿದೆ

ಕೋಲಾರದ ಬಳಿ ರಾಯಲಪಾಡಿಗೆ ಸಮೀಪದ ಮುದಿಮನಗುರ್ಕೆಲಹಳ್ಳಿ ಎಂಬಲ್ಲಿ ಮೊನ್ನೆ ರಾತ್ರಿ ಒಂದು ಘಟನೆಯಲ್ಲಿ ಒಬ್ಬನನ್ನು ಕೊಲೆ ಮಾಡಿ ಮತ್ತೊಬ್ಬನನ್ನು ತೀವ್ರವಾಗಿ ಗಾಯಗೊಳಿಸಲಾಯಿತೆಂದೂ ಗೊತ್ತಾಗಿದೆ

೩ ಕಡೆ ಮೋಸ ಮಾಡಿದ ಐರೋಪ್ಯನ ಬಂಧನ

ಸುಳ್ಳು ಹೇಳಿಕೆ ಕೊಟ್ಟು ಗುಂತಕಲ್ಲು ವಿಳ್ಳುಪುರ ಮತ್ತು ಬೆಂಗಳೂರುಗಳಲ್ಲಿ ಮೋಸ ಮಾಡಿ ಅಧಿಕಾರಿಗಳಿಂದ ಹಣವನ್ನೂ ಮತ್ತು ಮುಫತ್ತು ರೈಲ್ವೆ ಪಾಸನ್ನೂ ಪಡೆದ ಡಿ ಪಿ. ಬ್ರೌಡೇಲ್ ಎಂಬ ಐರೋಪ್ಯನನ್ನು ಮದರಾಸಿನಲ್ಲಿ ಮೊನ್ನೆ ಬಂಧಿಸಲಾಗಿದೆ ಅವನು ಮೊದಲು ಗುಂತಕಲ್ಲಿನ ರೈಲ್ವೆ ನಿಲ್ದಾಣದಲ್ಲಿ ಪೋಲೀಸರಿಗೆ, ತನ್ನಲ್ಲಿದ್ದ ೨೦೦ ರೂಗಳು ಕಳುವಾಗಿ ತಾನು ಅಲ್ಲೇ ಉಳಿಯುವಂತಾಗಿದೆಯೆಂದು ಸುಳ್ಳು ದೂರನ್ನು ಕೊಟ್ಟು ಅಧಿಕಾರಿಗಳಿಂದ ಹಣವನ್ನು ಮತ್ತು ಮದರಾಸಿಗೆ ಮುಫತ್ತು ರೈಲ್ವೆ ಪಾಸನ್ನು ಪಡೆದನೆಂದೂ, ತರುವಾಯ ಅವನು ವಿಳ್ಳುಪುರಕ್ಕೆ ಹೋಗಿ ಅಲ್ಲಿ ೮೫೦ ರೂ, ಒಂದು ಚೆಕ್ಕು ಪುಸ್ತಕ ಮತ್ತು ೨೦೦ ರೂ ಬೆಲೆ ಬಾಳುವ ಇತರ ಪದಾರ್ಥಗಳು ಕಳುವಾಗಿರುವುದಾಗಿ ಸುಳ್ಳು ದೂರು ಕೊಟ್ಟು, ಮ್ಯಾಜಿಸ್ಟ್ರೇಟರಿಂದ ಸ್ವಲ್ಪ ಹಣ ಮತ್ತು ಬೆಂಗಳೂರಿಗೆ ಒಂದು ಮುಫತ್ತು ಪಾಸನ್ನು ಪಡೆದನೆಂದೂ ಗೊತ್ತಾಗಿದೆ ಬೆಂಗಳೂರಿನಲ್ಲಿ ಅವನು ಒಂದು ಹೋಟೇಲಿನ ಮಾಲೀಕರಿಗೂ ಸುಳ್ಳು ಹೇಳಿಕೆಯಿತ್ತು ಮೋಸದಿಂದ ಹಣ ಪಡೆದು ಮದರಾಸಿಗೆ ಕಳೆದ ಗುರುವಾರ ಹೋದಾಗ ಪೋಲೀಸರು ಅವನನ್ನು ಬಂಧಿಸಿ ರಿಮ್ಯಾಂಡು ಪಡೆದಿರುವರು

ಬರುವ ವರ್ಷ ಭಾರತದಿಂದ ಕಾಫಿ ರಫ್ತಿಲ್ಲ

ಭಾರತದಿಂದ ವಿದೇಶಗಳಿಗೆ ಈ ವರ್ಷ ಎರಡು ಸಾವಿರ ಟನ್ನು ಕಾಫಿಯನ್ನು ರಫ್ತು ಮಾಡಲಾಯಿತೆಂದೂ, ಬರುವ ವರ್ಷ ಕಾಫಿ ಬೆಳೆಯು ದೇಶಕ್ಕೆ ಸಾಕಾಗುವಷ್ಟು ಬಂದು ಹೆಚ್ಚಾಗಿ ಉಳಿದರೆ, ಮಾತ್ರ ಕೇಂದ್ರ ಸರ್ಕಾರದವರು ರಫ್ತು ಮಾಡಲು ಸಾಧ್ಯವೆಂದೂ, ಇಲ್ಲವಾದರೆ ರಫ್ತು ಮಾಡಲಾಗುವುದಿಲ್ಲವೆಂದೂ ತಿಳಿದುಬಂದಿದೆ

ಕೇಂದ್ರ ಸರ್ಕಾರದ ಆಹಾರ ನೀತಿಯ ಬದಲಾವಣೆ ಇಲ್ಲ

ಪಾರ್ಲಿಮೆಂಟಿನಲ್ಲಿ ಪ್ರಧಾನಿ ನೆಹರೂರವರು ಹೇಳಿಕೆಯೊಂದನ್ನಿತ್ತು, ಕೇಂದ್ರ ಸರ್ಕಾರದವರು ಆಹಾರದ ನೀತಿಯಲ್ಲಿ ಮುಖ್ಯವಾದ ಬದಲಾವಣೆ ಯಾವುದನ್ನೂ ಮಾಡುವುದಿಲ್ಲವೆಂದೂ, ಅಲ್ಲಲ್ಲಿ ಮಾತ್ರ ಅಲ್ಪಸ್ವಲ್ಪವಾದ ಮಾರ್ಪಾಡುಗಳನ್ನು ಮಾಡಲಾಗುವುದೆಂದೂ ಹೇಳಿರುತ್ತಾರೆ

ಸಿನಿಮಾ ಮಂದಿರದಲ್ಲಿ ಪ್ರಸವ

ಬರೋಡಾ ಜಿಲ್ಲೆಯ ಒಂದು ನಗರದ ಸಿನಿಮಾ ಮಂದಿರದಲ್ಲಿ ಚಿತ್ರವನ್ನೂ ನೋಡುತ್ತಾ ಕುಳಿತಿದ್ದ ಒಬ್ಬ ಹೆಂಗಸು ಅಲ್ಲೇ ಮಗುವನ್ನು ಪ್ರಸವಿಸಿದಳೆಂದೂ, ತರುವಾಯ ಪ್ರೇಕ್ಷಕರು ಆಕೆಯನ್ನೂ ಮತ್ತು ಮಗುವನ್ನೂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರೆಂದೂ ವರದಿಯಾಗಿದೆ

ವಾರ ಭವಿಷ್ಯ

ತಾ|| ೧೬-೧೧-೫೨ ರಿಂದ ೨೨-೧೧-೫೨ ರ ವರೆಗೆ

ಮೇಷ — ಮಹತ್ವದ ಕಾರ್ಯೋದ್ಯಮದಲ್ಲಿ ಜಯ ಪ್ರವಾಸ ಸಫಲ ವ್ಯಾಪಾರಾದಿಗಳಲ್ಲಿ ಪ್ರಗತಿ ಪರೀಕ್ಷೆಯಲ್ಲಿ ತೇರ್ಗಡೆ ತಾ|| ೨೦, ೨೧ ಧಾರ್ಮಿಕ ಜನರ ಸಹವಾಸ, ಸಂತೋಷ

ವೃಷಭ — ತೊಂದರೆಯು ಕ್ರಮೇಣ ದೂರವಾಗುವುದು ಕುಟುಂಬದಲ್ಲಿ ಕೆಟ್ಟ ಪರಿಸ್ಥಿತಿಯ ಸುಧಾರಣೆ ಪ್ರವಾಸಕ್ಕೆ ಉತ್ತಮ ತಾ|| ೧೮, ೨೧ ಲಾಭ, ಪ್ರಿಯಜನರ ಭೇಟಿ

ಮಿಥುನ — ಮೂರ್ಖರ ಸಹವಾಸ. ಆರೋಗ್ಯ ನೆಟ್ಟಗಿರದು. ಕೈಕೆಳಗಿನವರ ಆಲಸ್ಯ ವ್ಯಾಪಾರಾದಿಗಳಲ್ಲಿ ಕ್ಲೇಶ ತಾ|| ೧೭ ೨೧ ಧನಹಾನಿ ಅಪಘಾತ ಭಯ

ಕರ್ಕ — ಆರೋಗ್ಯ ಉತ್ತಮ ಪರೀಕ್ಷೆಯಲ್ಲಿ ಯಶ ಆಕಸ್ಮಿಕ ವಿಘ್ನ. ಹೆಚ್ಚು ಖರ್ಚು ವ್ಯಾಪಾರಾದಿಗಳಲ್ಲಿ ಸಹಕಾರವಿಲ್ಲ ತಾ|| ೧೯, ೨೦ ದುರ್ಘಟನೆ, ಬೇಸರಿಕೆ

ಸಿಂಹ — ಪರಾಕ್ರಮಕ್ಕೆ ತಕ್ಕ ಉತ್ತೇಜನ ಲೇಖಕರ ಹೆಸರು ಪ್ರಖ್ಯಾತಿಗೆ ಬರುವುದು ವ್ಯಾಪಾರಾದಿಗಳಲ್ಲಿ ಪ್ರಗತಿ ತಾ|| ೧೭, ೧೮ ಖರ್ಚು ಗೊಂದಲ

ಕನ್ಯಾ ಕೆಲಸ ಕಾರ್ಯಗಳು ಸುಖವಾಗಿ ಜರುಗುವುವು ಹಣಕಾಸಿನ ಸ್ಥಿತಿ ಸಮಾಧಾನಕರ ಮಕ್ಕಳ ಆರೋಗ್ಯಕ್ಕೆ ಕ್ಲೇಶ ತಾ|| ೧೮, ೨೨ ಮಹತ್ವದ ಪತ್ರ, ಅಲ್ಪ ಪ್ರವಾಸ.

ತುಲಾ — ಕುಟುಂಬ ಜೀವನದಲ್ಲಿ ಅಲ್ಲೋಲಕಲ್ಲೋಲ ಹಣಕಾಸಿನ ಸಂಬಂಧವಾಗಿ ತಕರಾರು ಮಾರಾಮಾರಿ ಪ್ರಸಂಗ ವಾಹನಾಪಘಾತ ಪ್ರಿಯಜನ ವಿಯೋಗ ತಾ|| ೧೮, ೨೦ ಶಾಂತಿ, ನೆಮ್ಮದಿ

ವೃಶ್ಚಿಕ — ಹಣ ಕಾಸಿನ ಚಿಂತೆ ನಿವಾರಣೆ ವ್ಯಾಪಾರಾದಿಗಳಲ್ಲಿ ಲಾಭ ನೌಕರಿಯಲ್ಲಿ ಅನುಕೂಲ ತಾ|| ೨೦, ೨೧ ಶುಭ ವಾರ್ತೆ, ಲಾಭ

ಧನು — ಮಾನಸಿಕ ಕ್ಲೇಶ ಕಡಿಮೆ ಹಣದ ವೆಚ್ಚ ಹೆಚ್ಚು ಆರೋಗ್ಯ ನೆಟ್ಟಗೆ ತಾ|| ೧೭, ೧೮ ಬಟ್ಟೆ ಬರೆ ಕಳುವು

ಮಕರ — ಚಂಚಲ ಚಿತ್ತ. ಪಿತ್ತ ವಿಕಾರ ವ್ಯಾಪಾರಾದಿಗಳಲ್ಲಿ ಕ್ಲೇಶ. ಪ್ರವಾಸ ಉತ್ತಮವಿಲ್ಲ. ಹಣದ ಸ್ಥಿತಿ ಉತ್ತಮವಿರದು ತಾ|| ೧೯, ೨೦ ಪ್ರಿಯಜನ ವಿಯೋಗ, ಮಹತ್ವ ಪತ್ರದ ಕಳುವು

ಕುಂಭ — ತೊಂದರೆಗಳ ಸಂಭವ ಜಾಗರಣೆ ಹಣಕಾಸಿನ ಸ್ಥಿತಿ ಸುಧಾರಣೆ ತಾ|| ೧೯, ೨೦ ಗೆಳೆಯರ ಸಹಾಯ, ಕ್ಲೇಶ ನಾಶ

ಮೀನ — ಆರೋಗ್ಯ, ಮೇಲಧಿಕಾರ ಪ್ರಾಪ್ತಿ ವೈವಾಹಿಕ ಜೀವನ ಮಧುರ. ಕೈಗೊಂಡ ಕಾರ್ಯ ಸಫಲ ತಾ|| ೧೭, ೨೧ ಪ್ರವಾಸ ಯೋಗ ವ್ಯಾಪಾರದಲ್ಲಿ ಲಾಭ.

ಕನ್ನಡ ಕವಿಗಳ ಬಗ್ಗೆ ಪ್ರಭುಗಳ ಪ್ರಶಂಸೆ

ಮೈಸೂರು ೧೫

ಕಳೆದ ಭಾನುವಾರ ಬೆಂಗಳೂರು ಕನ್ನಡ ಸಾಹಿತ್ಯ ಸಮ್ಮೇಳನದವರು ಅಧ್ಯಕ್ಷ ಮಹಾ ವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರಿಗೆ ಮಾನಪತ್ರ ಅರ್ಪಿಸಿದ ಸಮಾರಂಭಕ್ಕೆ ಶ್ರೀಮನ್ ಮಹಾರಾಜರು ಕಳುಹಿಸಿದ್ದ ಶುಭ ಸಂದೇಶದಲ್ಲಿ ಈ ರೀತಿ ತಿಳಿಸಿರುತ್ತಾರೆ:-

ಶ್ರೀ ಎನ್. ಶ್ರೀಕಂಠಶಾಸ್ತ್ರಿಗಳು ಕನ್ನಡ ಸಾಹಿತ್ಯ ಸೇವೆಯ ಜೊತೆಗೆ ಹಲವಾರು ನಾಟಕಗಳನ್ನು ರಚಿಸಿ, ಪ್ರಕಾಶ ಪಡಿಸುವುದರ ಮೂಲಕ ಕನ್ನಡ ನಾಟಕಗಳ ಅಭಿವೃದ್ಧಿಗೂ ಬೆಂಬಲವನ್ನಿತ್ತಿರುವರು ಉಪಾಧ್ಯಾಯ ವೃತ್ತಿಯನ್ನವಲಂಬಿಸಿ ಕನ್ನಡ ಭಾಷೆಯಲ್ಲಿ ಅನೇಕರಿಗೆ ಗುರುಗಳಾಗಿ ಪಾಠ ಪ್ರವಚನಗಳನ್ನು ನಡೆಸಿ ಅವರೆಲ್ಲರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಅವರಿಂದ ಕಲಿತವರಲ್ಲಿ ನಾವೂ ಒಬ್ಬರು ಈ ಸುಪ್ರಸಿದ್ಧ ಕನ್ನಡ ಸಾಹಿತಿಯ ಭಕ್ತಿಗೆ ಮಾನ ಪತ್ರವನ್ನು ಸಮರ್ಪಿಸುವುದರಿಂದ ಕನ್ನಡ ಸಾಹಿತ್ಯ ಪರಿಷತ್ತಿಗೂ ಒಂದು ಹೆಚ್ಚಿನ ಗೌರವವು ಸಂದಂತಾಯಿತೆಂದು ನಮ್ಮ ಭಾವನೆ.

ಮಾನ ಪತ್ರಕ್ಕೆ ಉತ್ತರವಿತ್ತು, ಶ್ರೀಕಂಠಶಾಸ್ತ್ರಿಗಳವರು ಒಡೆದು ಹೋಗಿರುವ ಮತ್ತು ಕಾವೇರಿಯಿಂದ ಗೋದಾವರಿ ವರೆಗೂ ಇರುವ ಕರ್ನಾಟಕದ ಭಾಗಗಳು ಒಂದುಗೂಡಿ ಮೆರೆಯುವ ಸೌಭಾಗ್ಯವು ದೊರಕಲೆಂದು ಹೇಳಿದರು

ಎತ್ತುಗಳ ಕಳುವು

ಚಾಮರಾಜನಗರದ ತಾಲ್ಲೂಕು ಅಮಚವಾಡಿಯಲ್ಲಿ ಕಳೆದ ೧೨ನೇ ತಾ|| ರಾತ್ರಿ ಕುಂಬಾರರ ಸಿದ್ಧಶೆಟ್ಟರುವರ ಪತ್ನಿ ಮಾರಮ್ಮ ಎಂಬಾಕೆಯ ಸುಮಾರು ೪೦೦ ರೂ ಬೆಲೆಬಾಳುವ ಬಿಳಿ ಎತ್ತುಗಳನ್ನು ಯಾರೋ ಕಳವು ಮಾಡಿಕೊಂಡು ಹೋಗಿರುವರೆಂದು ವರದಿ ಬಂದಿದೆ ಕಳ್ಳರ ಹಾವಳಿಯಿಂದ ಗ್ರಾಮದ ಜನಗಳಿಗೆ ಬಹಳ ತೊಂದರೆಯಾಗಿದೆ ಪೊಲೀಸರು ಬಂದೋಬಸ್ತು ಮಾಡಬೇಕೆಂದು ಕೋರಲಾಗಿದೆ

ನೆಹರೂ ಜಯಂತಿ

ರಾಜಧಾನಿಯ ವೈಸರಾಯ್ ರಸ್ತೆಯಲ್ಲಿರುವ ಶ್ರೀ ಶಾರದಾ ಸಂಘದ ಆಶ್ರಯದಲ್ಲಿ ಮೊನ್ನೆ ನೆಹರೂ ಜಯಂತಿಯು ಆಚರಿಸಲ್ಪಟ್ಟಿತು ಪ್ರಥಮ ದರ್ಜೆ ಕಾಲೇಜಿನ ಶ್ರೀ ಕೆ ಕೃಷ್ಣಯ್ಯಂಗಾರ್ ಮತ್ತು ಶ್ರೀ ವಿ ಚಂದ್ರಶೇಖರ್ ರವರು ಭಾಷಣ ಮಾಡಿದರು ಸಂಘದ ಅಧ್ಯಕ್ಷರಾದ ಶ್ರೀ ಕೆ ಎನ್. ಸೋಮಸುಂದರಂ ರವರು ಅಧ್ಯಕ್ಷತೆ ವಹಿಸಿದ್ದರು

ಲಾಯಕಾಲಿಯ ಭೂಮಿ ನಿರಾಶ್ರಿತರಿಗೆ

ಹೈದರಾಬಾದಿನಿಂದ ತಪ್ಪಿಸಿಕೊಂಡು ಪಾಕಿಸ್ತಾನಕ್ಕೆ ಹೋಗಿರುವ ಮಾಜಿ ಮುಖ್ಯ ಮಂತ್ರಿ ಮೀರ್ ಲಾಯಕಾಲಿಯವರಿಗೆ ಸೇರಿದ ೫೦೦ ಎಕರೆ ಅಳತೆಯ ಜಮೀನನ್ನು ಹೈದರಾಬಾದ್ ಸರ್ಕಾರದವರು ವಶಪಡಿಸಿಕೊಂಡು ಪಾಕೀಸ್ತಾನದಿಂದ ಬಂದಿರುವ ನಿರಾಶ್ರಿತರಿಗೆ ಸಾಗುವಳಿಗಾಗಿ ಕೊಡಲು ಆಲೋಚಿಸುತ್ತಿರುವರೆಂದು ಗೊತ್ತಾಗಿದೆ

ಆರತಿ ಅಕ್ಷತೆ

ಮೈಸೂರಿನ ಹಿರಿಯ ಶಾಸಕ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ತಮ್ಮ ಪುತ್ರ ಶ್ರೀ ಪಿ ಲಕ್ಷ್ಮೀನಾರಾಯಣಶೆಟ್ಟಿ ಮತ್ತು ಬುದನಹಳ್ಳಿಯ ಶ್ರೀ ಮಾರಂ ಸುಬ್ಬರಾಜಶೆಟ್ಟರ ಪುತ್ರಿ ಸೌ|| ಶ್ರೀಮತಿ ದೇವಿಯವರ ವಿವಾಹದ ಸಂಬಂಧವಾಗಿ ಮೊನ್ನೆ ತಮ್ಮ ನಿವಾಸದಲ್ಲಿ ಆರತಿ ಅಕ್ಷತೆಯನ್ನು ಏರ್ಪಡಿಸಿ, ಅಭ್ಯಾಗತರನ್ನು ಫಲಪುಷ್ಪಾದಿಗಳಿಂದ ಸತ್ಕರಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಎಸ್ ಸಿ. ವಸಂತಕೋಕಿಲಂ ಕರ್ನಾಟಕ ಸಂಗೀತ ಮಧ್ಯಾಹ್ನ ೧.೩೦ ನಾಗಸ್ವರ. ೨ ಚಿತ್ರ ಸಂಗೀತ. ಸಂಜೆ ೫.೩೦ ಮತ್ತು ೬ ಕಾರ ಶ್ರೀರಂಗಾಚಾರ್ ಪಿಟೀಲು ೬ ೧೦ ಗಾನ ವಿಹಾರ. ೭ ಟಿ ಎನ್ ರಾಜರತ್ನಂ ಪಿಳ್ಳೆ ನಾಗಸ್ವರ ೭ ೩೦ ಗೀತಾಂಜಲಿ ೮ ೩೦ ಮತ್ತು ೯ ೩೦ ಕೆ ಲಕ್ಷ್ಮಿ ಮತ್ತು ಸರಸ್ವತಿ ಸಂಗೀತ ೯ ೧೫ ಧರ್ಮದ ಕರೆ ಇಂಗ್ಲಿಷ್ ಭಾಷಣ

ನಿಧನ

ರಾಜಧಾನಿಯ ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಕಸಬಾ ಶ್ಯಾನುಭೋಗರಾದ ಶ್ರೀ ಎನ್. ಅನಂತರಾಮಯ್ಯನವರ ಚಿಕ್ಕಪ್ಪಂದಿರಾದ ಶ್ರೀ ಟಿ. ಅನಂತಯ್ಯನವರು ಮೊನ್ನೆ ತಮ್ಮ ೬೦ನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇನೆ ಶ್ರೀಯುತರು ಅನೇಕ ದಿನಗಳಿಂದಲೂ ಉಬ್ಬಸ ರೋಗಪೀಡಿತರಾಗಿದ್ದರು

ಟೈರ್ ಮತ್ತು ಟ್ಯೂಬ್ ಸೋಲ್ ಚಪ್ಪಲಿಗಳು
ನಿಮಗೆ ಬೇಕಾದ ನಮೂನೆಯಲ್ಲಿ ಮಾಡಿಕೊಡುತ್ತೇವೆ
ಬೆಸ್ಟ್ ಫುಟ್ ವೇರ್,
ವಾಣೀವಿಲಾಸ ಮಾರ್ಕೆಟ್, ಮೈಸೂರು

ದಂಪತಿಗಳ ಕೊಲೆಗಾಗಿ ೬ ಜನರಿಗೆ ಫಾಸಿ ಶಿಕ್ಷೆ

ನಾಗಪಟ್ಟಣದ ಬಳಿ ತಿರುಚಂದೂರು ಎಂಬಲ್ಲಿ ಆರು ಜನ ದರೋಡೆಕೋರರು ಕಳೆದ ಜೂನ್ ತಿಂಗಳು ೩೦ ನೇ ತಾರೀಖು ಪಂಡಿತ ಶ್ರೀನಿವಾಸಾಚಾರಿ ಮತ್ತು ಅವರ ಪತ್ನಿ ರುಕ್ಮಿಣಿಯಮ್ಮಾಳ್ ಎಂಬುವರನ್ನು ಅವರ ಮನೆಯಲ್ಲೇ ಕೊಲೆ ಮಾಡಿದ ಸಂದರ್ಭದಲ್ಲಿ ದರೋಡೆ ಮತ್ತು ಕೊಲೆ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿ ಪೂರ್ವ ತಂಜಾವೂರು ಸೆಷನ್ಸ್ ಜಡ್ಜರಿಂದ ಮೊನ್ನೆ ಮರಣದಂಡನೆ ಶಿಕ್ಷೆ ವಿಧಿಸಲ್ಪಟ್ಟಿರುವರು

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	೪೦-೨-೦	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	
ಹಲಸಂದೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಅವರೆ	[illegible]	[illegible]
ಹೊಂಗೇಬೀಜ	[illegible]	
ಹುಣಿಸೇಕಾಯಿ ಮಣಕ್ಕೆ	[illegible]	[illegible]
ಹುಣಸೇಹಣ್ಣು	[illegible]	
ಬೆಲ್ಲ	[illegible]	[illegible]
ಸೀಗೇಕಾಯಿ	[illegible]	
ತೆಂಗಿನಕಾಯಿ ೧,೦೦೦ ಕ್ಕೆ	[illegible]	[illegible]

ಪುನಃ ಈ ನಾಟಕವನ್ನು ಆಡುವುದಿಲ್ಲ
ಗುಬ್ಬಿ ಕಂಪೆನಿ
ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ
ತಾ|| 15-11-52 ರಿಂದ
ಪ್ರತಿ ದಿನ ರಾತ್ರಿ 10 ಕ್ಕೆ
ತಾ|| 16-11 52 ನೇ
ಭಾನುವಾರ ಸಂಜೆ 6-30 ಕ್ಕೆ
ಸಾಹುಕಾರ
ತಾ|| 21-11-52 ರಿಂದ
ಕಾಲ ಚಕ್ರ
ಅಥವಾ ಕಣ್ಣೀರು
ಹೊಸ ನಾಟಕ

ADMISSIONS RECEIVED
Coaching Classes For The
S.S.L.C. Examination of March
Under the able guidance of
Sri B. SUNDARAMACHAR B.Sc., B.
(Author of [illegible] Etc.)
—: Private Tuitions Arranged
Separate Classes For Ladies
—: FOR PARTICULARS
CITY TUTORIAL COLLEGE,
V. V. Market, Mysore

ರಾಜಕಮಲ್, ಮೈಸೂರು
14-11-52 ರಿಂದ ಅಮೋಘ 2 ನೇ ವಾರ
ಸಂಸಾರಂ

PALACE MARAMATH DEPT

ABSTRACT TENDER NOTIFICATION

Sealed tenders are invited for letting out the shops godowns and rooms in the newly constructed buildings behind Palace Mothikhana, Mysore, upto 3-30 P.M on 28-11-1952

For detailed information, please refer to the Notification pasted on the Notice Board in the Office of the undersigned on all working days between 11 A. M. and 5 P. M. or at the premises of the said buildings

Mysore
14th Nov 1952

H. K. PANDITARADHYA,
Palace Engineer.

Edited, Printed and Published by A. R. Nagaraja at Sadhvi Press, D. Subbaiah Road, Mysore.

ಟೆಲಿಫೋನ್ ನಂ. ೬೭೭ ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೭-೧೧-೧೯೫೭ [ಸಂಚಿಕೆ ೫೩

ಭಾರತದ ವೈದ್ಯಶಾಲೆಗಳಲ್ಲಿ ಡಬ್ಬಲ್ ಷಿಫ್ಟ್

ಮೆಡಿಕಲ್ ಕಾಲೇಜುಗಳಲ್ಲಿ ಡಬ್ಬಲ್ ಷಿಫ್ಟ್ ಪದ್ಧತಿ

...ನಲ್ಲಿ ವೈದ್ಯರ ಕೊರತೆಯನ್ನು ತ... ತಪ್ಪಿಸಲು ಎಲ್ಲಾ ವೈದ್ಯಕೀಯ ಶಿಕ್ಷಣ ...ಗಳಲ್ಲೂ ಕೂಡಲೇ ಡಬ್ಬಲ್ ಷಿಫ್ಟ್ ...ವನ್ನು ಜಾರಿಗೆ ತರುವಂತೆ ಭಾರತ ...ಡಿಕಲ್ ಕೌನ್ಸಿಲ್ಲಿನವರು ಸರ್ಕಾರಕ್ಕೆ ...ಲಹೆ ಮಾಡಿರುತ್ತಾರೆ ಭಾರತ ಸರ್ಕಾರ... ಅನುಮೋದಿಸಿದ ನಂತರ ಅದು ...ಗೆ ಬರುವುದು

ಆಹಾರದ ಹತೋಟಿಗೆ ಕಾಂಗ್ರೆಸ್ ಪಕ್ಷದ ಒಪ್ಪಿಗೆ

...ರತದ ಯೋಜನಾ ಸಮಿತಿಯವರು ...ರಲಿರುವ ಯೋಜನೆಗಳ ಅವಧಿ ...ಆಹಾರ ಧಾನ್ಯಗಳ ಮೇಲೆ ಪೂರ್ಣ ...ವಾದ ಹತೋಟಿ ಇರಬೇಕೆಂದು ಪಟ್ಟಿ... ಅಭಿಪ್ರಾಯವನ್ನು ಪಾರ್ಲಿಮೆಂಟಿನ ...ಸದಸ್ಯರು, ಕಾಂಗ್ರೆಸ್ ಪಕ್ಷದ ಮುಖಂ... ...ಲು ಚರ್ಚಿಸಿ, ಅದಕ್ಕೆ ಒಪ್ಪಿರುವು ...ಗೊತ್ತಾಗಿದೆ

ವಿಮಾನವು ಸಮುದ್ರಕ್ಕೆ ಬಿದ್ದು ೧೩ ಜನರ ಪತ್ತೆಯಿಲ್ಲ

...ಜನ ಪ್ರಯಾಣಿಕರಿದ್ದ ವಿಮಾನ ...ವು, ಮೊನ್ನೆ ರಾತ್ರಿ ಪೂರ್ವ ಕೊರಿಯ ...ತೀರದ ಬಳಿ ಸಮುದ್ರದಲ್ಲಿ ಮು... ...ದ್ದು ೧೩ ಜನರು ಪತ್ತೆಯಿಲ್ಲ ...ರುತ್ತಾರೆ ೭ ಜನರನ್ನು ರಕ್ಷಿಸ ...ಗಿದೆ

ಸಂಸ್ಥಾನದಲ್ಲಿ ಭೂದಾನ ಯಜ್ಞ ಚಳುವಳಿಗಾಗಿ ಪ್ರವಾಸ

...ದ ಸರ್ವ ಸೇವಾ ಸಂಘದ ಕಾರ್ಯ... ...ದರ್ಶಿ ಶ್ರೀ ವಲ್ಲಭಸ್ವಾಮಿಯವ... ...ನೇ ತಾ॥ ನಿಂದ ೨೭ರ ವರೆಗೆ ...ದಲ್ಲಿ ಪ್ರವಾಸ ಕೈಗೊಂಡು ... ಯಜ್ಞದ ಚಳುವಳಿಯೊಡನೆ ಕಲೆ... ...ನಾಡುವರು ಅವರು ೨೪ನೇ ತಾ॥ ...ನಂಜನಗೂಡಿಗೆ ತೆರಳಿ ಅಲ್ಲಿನ ವಿದ್ಯಾ... ...ಸಭೆ ನಡೆಸಿ, ಅದೇ ಸಂಜೆ ಮೈ... ...ಸಭೆಯಲ್ಲಿ ಭಾಗವಹಿಸುವರು ಮಾ... ...ಶ್ರೀರಂಗಪಟ್ಟಣಕ್ಕೆ ತೆರಳು... ...ವ

ಸಕ್ಕರೆ ಕಾರ್ಖಾನೆಯಲ್ಲಿ ೧೩೦೦ರೂ ದುರುಪಯೋಗವೇ ?

...ನ ಸಕ್ಕರೆ ಕಾರ್ಖಾನೆಯಲ್ಲಿ ಕೈತ... ...ನಸ್ ವಂಚನೆ ಸಂಬಂಧವಾಗಿ ... ತಯಾರಿಸಿ, ಚಿಟ್ಟಿನ ಗು... ...ವನ್ನು ತಾತಿಸಿ, ೧೩೦೦ ರೂ. ಗಳ... ...ವಾಗಿ ಪಡೆದಿರುವರೆಂದು ಕಾ... ...ದೆ ಒಬ್ಬ ಕ್ಲಾರ್ಕಿಯನ್ನು ಮತ್ತು ಓ... ...ನ್ನು ಸಸ್ಪೆಂಡ್ ಮಾಡಲಾ... ...ದೆ

...ಲೋ ಹಬ್ಬದ ಪ್ರಾರಂಭೋತ್ಸವ

...ನ ಟೌನ್‌ಹಾಲಿನಲ್ಲಿ ಬರುವ ...ನೇ ತಾ॥ ಶ್ರೀಮತಿ ಮಹಾದಾ... ...ಹಬ್ಬದ ಪ್ರಾರಂಭೋತ್ಸವವ ...ನೆರವೇರಿಸುವರು

ಸಮಾಜವಾದಿ ನಾಯಕರ ಉಪವಾಸ

...ರು ಬಳಿ ವೈಟ್ ಫೀಲ್ಡಿನಲ್ಲಿ ...ಗಳ ಡಿಪ್ಪೋ ಕಾರ್ಮಿಕರುಗ... ...ಅಧಿಕಾರಿಗಳು ನಡೆಸುತ್ತಿರು ...ಕೆಗೆ ಪ್ರತಿಭಟನೆ ಸೂಚಿಸ... ...ಕರ ಸಂಘದ ಅಧ್ಯಕ್ಷರೂ, ಬೆಂ... ...ನ ಸಮಾಜವಾದಿಗಳೂ ಆದ ...ಕಣ್ಣನ್‌ರವರು ಇದೇ ತಿಂಗಳು ...ನೇ ತಾ॥ ನಿಂದ ಡಿಪ್ಪೋ ಮುಂದೆ ...ವಾಸ ಮಾಡಲಿರುವರು ಈ ಬಗ್ಗೆ ...ರು ಕೇಂದ್ರ ರಕ್ಷಣಾ ಮಂತ್ರಿಯವ... ...ಪತ್ರ ಬರೆದಿರುತ್ತಾರೆ

ಫರೂಕರ ವಿಚಾರಣೆಗೆ ಜನಾಭಿಪ್ರಾಯ

...ಮಾತಿ ಫರೂಕರ... ...ರಣೆಗೆ ಗುರಿಪಡಿಸಬೇಕೆಂದು ಈಜಿಪ್ಟಿನ ... ...ಲಕ್ಷ ಜನರು ತಮ್ಮ ಅಭಿಮತವನ್ನು ಸೂ... ...ಚಿಸಿರುತ್ತಾರೆಂದು ಅಲ್ಲಿನ ಅಕ್ಬರ್ ಎಲ್ ...ಯೋಮ್ ಪತ್ರಿಕೆಯು ತಿಳಿಸಿರುತ್ತದೆ

ಕರಣಸಿಂಗರಿಗೆ 'ಶ್ರೀ' ಎಂದು ಮಾತ್ರ ಸಂಬೋಧನೆ

ಕಾಶ್ಮೀರದ ಚುನಾಯಿತ ಅಧಿಪತಿಯಾಗಿ ಯುವರಾಜ ಕರಣಸಿಂಗರು ಆರಿಸಲ್ಪಟ್ಟಿರುವರೆಂದು ರಾಷ್ಟ್ರಾಧ್ಯಕ್ಷರು ಪತ್ರಿಕೆ ... ಪ್ರಕಟಣೆಯೊಂದನ್ನು ಹೊರಡಿಸಿರುತ್ತಾರೆ ಈ ಸಂಬಂಧವಾಗಿ ರಾಜ್ಯಾಂಗಕ್ಕೆ ಹಲವು ಬದಲಾವಣೆಗಳನ್ನು ಮಾಡಲಾಗಿದೆ ಕರಣಸಿಂಗರನ್ನು ಇನ್ನು ಮುಂದೆ ಶ್ರೀ ಕರಣಸಿಂಗ್ ಎಂದು ಮಾತ್ರ ಸಂಬೋಧಿಸಲಾಗುವುದು

ಪೌರಸಭಾ ಅಧ್ಯಕ್ಷರಾಗಿ ಮಹಿಳೆಯ ಆಯ್ಕೆ

ಚಿತ್ತೂರಿನ ಪೌರಸಭೆಗೆ ಇದೇ ಮೊದಲಾಗಿ ಒಬ್ಬ ಸ್ತ್ರೀಯು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ ಕಾಂಗ್ರೆಸ್ ಉಮೇದುವಾರರಾದ ಶ್ರೀಮತಿ ರತ್ನಬಾಯಿಯವರಿಗೂ, ಶ್ರೀ ಗುರಪ್ಪನಾಯ್ಡುರವರಿಗೂ ಸಮನಾಗಿ ೧೧ ಓಟುಗಳು ಬಂದು ಚೀಟು ಹಾಕಲಾಗಿ ಶ್ರೀಮತಿ ರತ್ನಬಾಯಿಯವರು ಆರಿಸಲ್ಪಟ್ಟರು. ಆಕೆಯು ಮೈಸೂರು ವಿಶ್ವವಿದ್ಯಾಲಯದ ಪದವೀಧರರು

ಷಾರ್ಟ್‌ಹ್ಯಾಂಡ್ ಪರೀಕ್ಷೆಗೆ ವಿದ್ಯಾರ್ಥಿಗಳ ಬಹಿಷ್ಕಾರ

ಈ ದಿನ ರಾಜಧಾನಿಯ ಮಹಾರಾಜಾ ಹೈಸ್ಕೂಲಿನಲ್ಲಿ ಏರ್ಪಾಡಾಗಿದ್ದ ಸೀನಿಯರ್ ಷಾರ್ಟ್‌ಹ್ಯಾಂಡ್ ಸ್ಪೀಡ್ ಟೆಸ್ಟ್ ಪರೀಕ್ಷೆಗೆ ಕುಳಿತಿದ್ದ ... ಮಂದಿ ವಿದ್ಯಾರ್ಥಿಗಳು ಪರೀಕ್ಷಕರು ಯುಕ್ತವಾದ ಡಿಕ್ಟೇಷನ್ ಕೊಡುತ್ತಿಲ್ಲವೆಂದೂ, ಇದು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲವೆಂದೂ ತಿಳಿಸಿ ಮೇಲಧಿಕಾರಿಗಳಿಗೆ ದೂರು ಕೊಟ್ಟು ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆಯದೆ ಖಾಲಿ ಹಾಳೆಗಳನ್ನು ಕೊಟ್ಟಿರುವರೆಂದು ಗೊತ್ತಾಗಿದೆ. ಇವರು ನಾಳೆಯ ದಿನ ಜೂನಿಯರ್ ಷಾರ್ಟ್‌ಹ್ಯಾಂಡ್ ಪರೀಕ್ಷೆಗೂ ಕುಳಿತುಕೊಳ್ಳುವುದಿಲ್ಲವೆಂದು ತಿಳಿದುಬಂದಿದೆ

೧೦ ಲಕ್ಷ ರೂ. ಮೋಸಕ್ಕಾಗಿ ಮೊಕದ್ದಮೆ

ಉತ್ತರ ಭಾರತದ ಹಲವು ಊರುಗಳಿಂದ ಸರಕುಗಳನ್ನು ರವಾನಿಸುವುದಾಗಿ ನಂಬಿಸಿ ರೈಲ್ವೆ ರಶೀತಿಗಳನ್ನೂ ಹುಂಡಿಗಳನ್ನೂ ಕ್ಷೋತ್ರ... ಮಾತಿ ... ಮುಂತಾದ ಹಲವು ನಗರಗಳ ವರ್ತಕರುಗಳನ್ನು ೧೦ ಲಕ್ಷ ರೂ. ಗಳವರೆಗೆ ಮೋಸ ಪಡಿಸಿದರೆಂದು ... ಪೊಲೀಸರು ರಾಮಕೃಷ್ಣ, ... ಖನ್ನ, ಬಿ... ಲಾಲ್ ಮತ್ತು ಕೈಗೆ ಸಿಕ್ಕದೆ ಇರುವ ಇನ್ನು ... ಮೇಲೆ ಮೊಕದ್ದಮೆ ಹೂಡಿರುತ್ತಾರೆ ... ಜನ ಪ್ರಾಸಿಕ್ಯೂಷನ್ ಸಾಕ್ಷಿಗಳಿರುವರು

ಪರ್ಷಿಯಾ ಸುಪ್ರೀಂ ಕೋರ್ಟಿನ ರದ್ದು

ತನ್ನ ವಿಶೇಷ ಅಧಿಕಾರವನ್ನು ಚಲಾಯಿಸಿ, ಪರ್ಷಿಯದ ಪ್ರಧಾನಿ ಮುಸ್ಸದಿಕ್‌ರವರು ಅಲ್ಲಿನ ಸುಪ್ರೀಂ ಕೋರ್ಟನ್ನು ರದ್ದುಗೊಳಿಸಿ, ಹೊಸ ನ್ಯಾಯಾಸ್ಥಾನದ ಸ್ಥಾಪನೆಗಾಗಿ ಆಜ್ಞೆ ಮಾಡಿರುತ್ತಾರೆ

ನೆಹರೂರವರಿಗೆ ಚರ್ಚಿಲ್ಲರ ಶುಭಾಶಯ

ಪ್ರಧಾನಿ ನೆಹರೂರವರ ಹುಟ್ಟಿದ ಹಬ್ಬದ ದಿನವೆಂದು ಬ್ರಿಟನ್ನಿನ ಪ್ರಧಾನ ಮಂತ್ರಿ ವಿನ್‌ಸ್ಟನ್ ಚರ್ಚಿಲ್ಲರು ಶುಭಾಶಯದ ಸಂದೇಶವನ್ನು ಕಳುಹಿಸಿರುತ್ತಾರೆ

ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಈ ಸಂಜೆ ... ಘಂಟೆಗೆ ಶ್ರೀ ಹೆಚ್. ಎಸ್. ...ಲಿಂಗ ಸ್ವಾಮಿ ಹಿರೇಮಠರವರಿಂದಿ ಹೇಮರೆಡ್ಡಿ ಮಲ್ಲಮ್ಮ ಎಂಬ ಕಥೆಯೂ, ಅನಂತರ ಗಾಯತ್ರಿ ... ಏರ್ಪಾಡಾಗಿರುತ್ತದೆ

ಪೂರ್ವ ಬಂಗಾಳಾ ದಿನಾಚರಣೆಗೆ ಬಹಿಷ್ಕಾರ

ನವೆಂಬರ್ ... ನೇ ತಾ॥ ಪಶ್ಚಿಮ ರಾಜ್ಯದ ... ಪಕ್ಷಗಳು ನಡೆಸಬೇಕೆಂದಿರುವ ಪೂರ್ವ ಬಂಗಾಳಾ ದಿನಾಚರಣೆಯಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸಕೂಡದೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಪ್ರಾಂತೀಯ ಸಮಿತಿಗಳಿಗೆ ಸೂಚಿಸಿರುತ್ತದೆ

ಧನ್ವಂತರಿ ಜಯಂತಿ

ನಂಜನಗೂಡು ೧೬.

ಇಲ್ಲಿನ ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರು ತಮ್ಮ ಧನ್ವಂತರೀ ವಿಲಾಸದಲ್ಲಿ ನೆನ್ನೆ ದಿನ ಶ್ರೀ ಧನ್ವಂತರಿ ಜಯಂತಿಯನ್ನು ನೆರವೇರಿಸಿದರು. ಸಂಸ್ಥಾನದ ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು

ವಿ॥ ಎಸ್. ರಾಮಚಂದ್ರರಾಯರಿಂದ ಪ್ರಾರ್ಥನೆಯಾದ ನಂತರ ಶ್ರೀ ಬಿ ವಿ ಪಂಡಿತರು ಸ್ವಾಗತ ಭಾಷಣ ಮಾಡಿದ ತರುವಾಯ ಶಾಸನಸಭಾ ಸದಸ್ಯರಾದ ಶ್ರೀ ಎಂ. ಪಿ ಎಲ್. ಶಾಸ್ತ್ರಿಯವರು ಭಾರತೀಯ ಸಂಸ್ಕೃತಿ-ಆಯುರ್ವೇದ ಎಂಬ ವಿಷಯವಾಗಿ ಭಾಷಣ ಮಾಡಿ ಈ ರೀತಿ ತಿಳಿಸಿದರು.—

ಪ್ರಾಚೀನ ಕಾಲದಲ್ಲಿ ಗ್ರೀಕರು ಅಂಗ ಸೌಂದರ್ಯ, ಬೆಳವಣಿಗೆ ಮತ್ತು ಪ್ರತ್ಯಕ್ಷ ಮೊದಲಾದ ದೇಹ ಸೌಖ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಿದ್ದರು ಭಾರತೀಯರು ಆಯುರ್ವೇದ ವಿಜ್ಞಾನದಲ್ಲಿ ಅವರಿಗೂ ಹೆಚ್ಚಾಗಿ ಮುಂದುವರಿದು, ಇತರ ದೇಶಗಳವರು ಇನ್ನೂ ಸಂಶೋಧನೆಯ ಘಟ್ಟದಲ್ಲೇ ಇರುವಾಗ ಜೀವಾತ್ಮರಲ್ಲಿರಿಗಾಗಿ ಇರುವಂತಹ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳ ಬಗ್ಗೆ ಸಿದ್ಧಾಂತವನ್ನು ಸ್ಥಾಪಿಸಿ ಮಹತ್ತರವಾದ ಸಾಧನೆಯನ್ನು ಮಾಡಿದರು ಕೇವಲ ಪರಿವರ್ತನಾ ರೂಪವಾದ ಅಲ್ಪ ಸಂಶೋಧನೆಗಳಿಂದ ತೃಪ್ತಿಗೊಳ್ಳದೆ ಮೂರು ಲೋಕಗಳನ್ನೂ ಜಯಿಸಲು ಸಾಧ್ಯವಾದ ಮಹತ್ತರ ಶಕ್ತಿಯು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅಡಗಿದೆ

ತರುವಾಯ ಶ್ರೀಮತಿ ಗೌರಿ ಕುಪ್ಪಸ್ವಾಮಿಯವರ ಗಾಯನವು ವಿ॥ ತಾತಾಚಾರ್ಯರ ಪಿಟೀಲು, ಸಂಗೀತರತ್ನ ಟಿ. ಎಂ ಪುಟ್ಟಸ್ವಾಮಯ್ಯನವರ ಮೃದಂಗ ಮತ್ತು ವಿ॥ ಎ. ಸೀತಾರಾಮಶಾಸ್ತ್ರಿಗಳವರ ಘಟವಾದ್ಯದೊಡನೆ ಸುಶ್ರಾವ್ಯವಾಗಿ ಜರುಗಿತು.

ಮಂಗಳಾರತಿ, ಪ್ರಸಾದ ವಿನಿಯೋಗಗಳಾದನಂತರ ಶ್ರೀ ಬಿ ವಿ ಪಂಡಿತರು ವಂದನಾರ್ಪಣೆ ಮಾಡಿದರು. ಔಷಧದ ಕಾರ್ಖಾನೆಯಲ್ಲಿನ ನೌಕರರ ಕ್ರೀಡಾ ಸ್ಪರ್ಧೆಯಲ್ಲಿ ಜಯಶಾಲಿಗಳಾದವರಿಗೆ ಸಚಿವರು ಬಹುಮಾನಗಳನ್ನು ಹಂಚಿದರು

ವಿಶ್ವ ಶಾಂತಿಗಾಗಿ ೯ ದಿನಗಳ ಕಾಲ ಭೂ ಸಮಾಧಿ

ಧಾರವಾಡದ ಕಣಸನೂರಿನ ಶ್ರೀ ನಾರಾಯಣಾಚಾರ್ಯರೆಂಬ ೫೭ ವರ್ಷದ ಸಾಧುವೊಬ್ಬರು ವಿಶ್ವ ಶಾಂತಿಗಾಗಿ ದೆಹಲಿಯಲ್ಲಿ ೯ ದಿನಗಳ ಕಾಲ ಭೂ ಸಮಾಧಿಯಲ್ಲಿರಲು ನಿರ್ಧರಿಸಿರುವರೆಂದು ಹೇಳಲಾಗಿದೆ ಮೈಸೂರಿನಲ್ಲಿ ಶಿಕ್ಷಣ ಪಡೆದವರು, ಹೈದರಾಬಾದಿನಲ್ಲಿ ನೃಪತುಂಗ ವಿದ್ಯಾಲಯವನ್ನು ಸ್ಥಾಪಿಸಿರುವುದಲ್ಲದೆ, ರಾಜಕೀಯದಲ್ಲೂ ಸೇವೆ ಸಲ್ಲಿಸಿರುತ್ತಾರೆ. ಹಿಮಾಲಯದಲ್ಲಿ ಅವರು ಸಂಚರಿಸಿ...

ಮದರಾಸಿಗೆ ೧ ಕೋಟಿ ರೂ. ತಕಾವಿ ಸಾಲ

ಮದರಾಸಿನ ರೈತರು ಗೊಬ್ಬರ ಮತ್ತು ಬಿತ್ತನೆ ಕಾಳುಗಳನ್ನು ಕೊಳ್ಳುವ ಸಲುವಾಗಿ ತಕಾವಿ ಸಾಲ ಕೊಡಲು ಕೇಂದ್ರ ಸರ್ಕಾರದವರು ಈ ವರ್ಷ ಆ ಪ್ರಾಂತಕ್ಕೆ ಒಂದು ಕೋಟಿ ರೂ ಅನ್ನು ಮಂಜೂರು ಮಾಡಿರುವರು.

ಖಾಸಗಿ ಬಸ್ಸಿನವರಿಗೆ ಹೊಸ ಲೈಸನ್ಸು ?

ಸರ್ಕಾರದವರು ಬರುವ ಜನವರಿಯಿಂದ ವಹಿಸಿಕೊಳ್ಳಲಿರುವ ಆರು ಬಸ್ಸು ಮಾರ್ಗಗಳಲ್ಲಿ ಈಗ ಓಡಿಸುತ್ತಿರುವ ಬಸ್ ಮಾಲೀಕರುಗಳಿಗೆ ಬೇರೆ ಮಾರ್ಗಗಳಲ್ಲಿ ಬಸ್ಸುಗಳನ್ನು ಓಡಿಸಲು ಅವಕಾಶವೀಯಬೇಕೆಂದು ಸಂಸ್ಥಾನದ ಸಂಚಾರ ಸಲಹಾ ಸಮಿತಿಯು ಶಿಫಾರಸು ಮಾಡಿರುವುದೆಂದು ವರದಿಯಾಗಿದೆ.

ಶೇಷಕಮಲ ಕಲಾ ಮಂಡಲಿ

ಶ್ರೀ ಶೇಷ ಕಮಲ ನಾಟಕ ಮಂಡಲಿಯವರು ರಾಜಧಾನಿಯ ಟೌನ್‌ಹಾಲಿನಲ್ಲಿ ನಾಟಕ ಪ್ರದರ್ಶನಗಳನ್ನು ಆರಂಭಿಸಿ ನಿನ್ನೆ ಸಂಜೆ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾವ್‌ರ ಅಧ್ಯಕ್ಷತೆಯಲ್ಲಿ ದಾನಶೂರ ಕರ್ಣ ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸಿದರು. ಶ್ರೀಗಳಾದ ಎ. ಎಸ್. ಶೇಷಾಚಾರ್ ಕೊಟ್ಟೂರಪ್ಪ, ಸಂಗೀತ ವಿದ್ವಾಂಸರುಗಳಾದ ಎಚ್. ಸುಬ್ರಹ್ಮಣ್ಯ ಶಾಸ್ತ್ರಿ, ಬಿ. ಪಿ. ಪುಟ್ಟಬಸಪ್ಪ ಶ್ರೀಮತಿ [illegible] ತುಳಸಿ ಸಹೋದರಿಯರು, ಪದ್ಮರಾಜಮ್ಮ, ಕಲಾವತಿ ಮೊದಲಾದ ನಟನಟಿಯರಿಂದ ನಾಟಕವು ಉನ್ನತಮಟ್ಟದಲ್ಲಿ ಪ್ರದರ್ಶಿಸಲ್ಪಟ್ಟಿತು.

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕಛೇರಿ,
ಮೈಸೂರು ತಾ|| 10-11-1952
ನಂ. ಬಿ. 5 753/52

ಪ್ರಕಟಣೆ

ಈ ವಿಶ್ವವಿದ್ಯಾನಿಲಯದ (Statute) ಸ್ಟ್ಯಾಚ್ಯೂಟ್ ೬೯ (೧೯೪೭ನೇ ಕ್ಯಾಲೆಂಡರ್ ವಾಲ್ಯೂಂ ೧ ರಲ್ಲಿ ೩೧ ನೇ ಪುಟದಲ್ಲಿ) ದಂತೆ ನಮೂದಾಗಿರುವ ರಿಜಿಸ್ಟರ್ಡ್ ಪದವೀಧರ (ಈಗಾಗಲೇ ರಿಜಿಸ್ಟರ್ಡ್ ಪದವೀಧರರಾಗಿ ನಮೂದಾಗಿರುವವರ) ರಿಂದ, ಯಾರಾದರೂ ಬದಲಾವಣೆ ಅಥವಾ ತಿದ್ದುಪಡಿಯಿದ್ದಲ್ಲಿ ಈ ಕೆಳಗಿನ ಸಮಾಚಾರವನ್ನು ೧೯೫೨ ನೇ ಡಿಸೆಂಬರ್ ೧೫ ರ ಅಥವಾ ಅದಕ್ಕೆ ಮುಂಚಿತವಾಗಿ ಈ ಕೆಳಗೆ ತಿಳಿಸುವಂತೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

(Statute) ಸ್ಟ್ಯಾಚ್ಯೂಟ್ ೭೫ ಪ್ರಕಾರ ವರ್ಷದ ಜನವರಿ ೧ ನೇ ದಿನ ರಿಜಿಸ್ಟರ್ಡ್ ಪದವೀಧರರ ಜಾತೆಯನ್ನು ತಿದ್ದುಪಡಿಯೊಡನೆ ಬದಲಾಯಿಸಲಾಗುತ್ತೆ. ಬದಲಾವಣೆ ಅಥವಾ ತಿದ್ದುಪಡಿಗೆ ಅರ್ಜಿಗಳು ಡಿಸೆಂಬರ್ ೧೫ ಅಥವಾ ಅದಕ್ಕೆ ಮುಂಚಿತವಾಗಿ ರಿಜಿಸ್ಟ್ರಾರವರಿಗೆ ತಲುಪುವಂತಿರಬೇಕು.

೧. ಹೆಸರು ಮತ್ತು ಡಿಗ್ರಿ ಅಥವಾ ಡಿಗ್ರಿಗಳು.
೨. ಸದಸ್ಯತ್ವದ ಸಂಖ್ಯೆ
೩. ವಿಳಾಸ

ಅಪ್ಪಣೆ ಮೇರೆ,
(ರುಜು) ಪಿ. ರಂಗಾಚಾರ್,
ರಿಜಿಸ್ಟ್ರಾರ್.

ಆಜಾದ್ ಕಾಶ್ಮೀರದ ಮಂತ್ರಿಯ ರಾಜೀನಾಮೆ

ಆಜಾದ್ ಕಾಶ್ಮೀರ ಸರ್ಕಾರದ ವ್ಯವಸಾಯ ಮಂತ್ರಿ ಸರ್ದಾರ್ ಅಬ್ದುಲ್ ಖಯ್ಯೂಂ ಖಾನ್‌ರವರು ವೈಯಕ್ತಿಕ ಕಾರಣಗಳಿಗಾಗಿ ಇತ್ತಿರುವ ರಾಜೀನಾಮೆಯನ್ನು ಆಜಾದ್ ಕಾಶ್ಮೀರದ ಅಧ್ಯಕ್ಷರು ಒಪ್ಪಿರುತ್ತಾರೆ.

ಅಲಿಖಾನರಿಂದ ಮಗಳಿಗೆ ೧೦ ಲಕ್ಷ ಡಾಲರ್

ಅಲಿಖಾನರು ತಮ್ಮ ಮತ್ತು ರೀಟಾ ಹೇವರ್ತ್ ರವರ ಮಗಳಾದ ಯಾಸ್ಮಿನ್ ಎಂಬ ಹುಡುಗಿಗಾಗಿ ೧೦ ಲಕ್ಷ ಡಾಲರುಗಳ ಹಣವನ್ನು ಕೊಡಲಿರುವರು. ಮಗಳ ಪರವಾಗಿ ತಾಯಿಯು ಅದನ್ನು ಇಟ್ಟುಕೊಳ್ಳಲಿರುವರು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಕ್ಕೆ ಎಸ್. ಪರಸಪ್ಪ [illegible] ಮಧ್ಯಾಹ್ನ [illegible] ಕೊಳಲು. [illegible] ಸಂಗೀತ [illegible]

ಸುಬ್ಬುಲಕ್ಷ್ಮಿಯವರ ಸಂಗೀತದಿಂದ ೫,೦೦೦ ರೂಪಾಯಿ

[illegible] ಮಹಾಜನ ಹೈಸ್ಕೂಲ್ ಕಟ್ಟಡದ ನಿಧಿಗಾಗಿ ನಿನ್ನೆ ನಡೆದ ಶ್ರೀಮತಿ ಕೋಕಿಲಗಾನ ಎಂ. ಎಸ್. ಸುಬ್ಬುಲಕ್ಷ್ಮಿಯವರ ಸಂಗೀತ ಕಛೇರಿಯಿಂದ ಐದು ಸಾವಿರ ರೂ. ವಸೂಲಾಯಿತೆಂದು ತಿಳಿದುಬಂದಿದೆ.

FRESH ADMISSIONS
FOR
SHORTHAND & TYPEWRITING
Only Leading to
November 1953 Examinations
Are now being received
At The
CHAMPION METROPOLITAN COLLEGE OF COMMERCE,
Co-operators' Home
100 Feet Road, Mysore
Sd/- M S PUTTANNA,
Vice Principal

ತಾಜ್ ಮಹಲ್ ಬಗ್ಗೆ ವರ್ಣರಂಜಿತ ಚಿತ್ರ

"ತಾಜ್ ಮಹಲ್" ನಾಮಾಂಕಿತವಾದ ಚಿತ್ರವೊಂದನ್ನು ಬರುವ ವರ್ಷ ಇಂಗ್ಲೆಂಡಿನ ಅಲೆಕ್ಸಾಂಡರ್ ಕೊರ್ಡಾರವರು ತಯಾರಿಸಲಿರುವರು. ಭಾರತದ ಇತಿಹಾಸದಲ್ಲಿ ಬಹು ಪ್ರಖ್ಯಾತವಾಗಿರುವ ಪ್ರೇಮಪೂರಿತ ಕಥೆಯನ್ನು ಅವರು ಚಿತ್ರಿಸುವರು.

ಸಮುದ್ರದೊಳಗಿನಿಂದ ಹೊಸ ಜ್ವಾಲಾಮುಖಿ

ಪೆಸಿಫಿಕ್ ಸಾಗರದ ಬ್ರಿಟಿಷ್ ಸಾಲಮನ್ಸ್ ದ್ವೀಪದ ಬಳಿ ೧೫೫ ಅಡಿ ಎತ್ತರದ ಜ್ವಾಲಾಮುಖಿಯೊಂದು ಸಮುದ್ರದೊಳಗಿನಿಂದ ಹೊರಕ್ಕೆ ಬಂದಿರುತ್ತದೆ. ಅದು ೧೫೦ ಅಡಿ ಉದ್ದವಾಗಿಯೂ, ೩೦ ಅಡಿ ಅಗಲವಾಗಿಯೂ ಇರುವುದೆಂದು ಹೇಳಲಾಗಿದೆ.

ಕ್ಷಾಮ ಪರಿಹಾರ ನಿಧಿಗಾಗಿ ಸಹಾಯಾರ್ಥ ನಾಟಕ

ಅಭಾವ ಪರಿಹಾರದ ಸಲುವಾಗಿ ಏರ್ಪಡಿಸಿರುವ ಮುಖ್ಯ ಮಂತ್ರಿಗಳ ನಿಧಿಯ ಸಹಾಯಾರ್ಥವಾಗಿ ಶ್ರೀ ಜಿ. ಹೆಚ್. ವೀರಣ್ಣನವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿಯವರು ಇದೇ ೧೯ ನೇ ತಾ|| ಸಂಜೆ ೬|| ಗಂಟೆಗೆ ರತ್ನಾವಳಿ ಥಿಯೇಟರಿನಲ್ಲಿ "[illegible]" ಎಂಬ ನಾಟಕವನ್ನು ಅಭಿನಯಿಸುವರು. ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು.

ಪ್ರ[illegible] ಈ ನಾಟಕವನ್ನು ಆಡುವುದಿಲ್ಲ.
ಗುಬ್ಬಿ ಕಂಪೆನಿ
ಶಿವರಾಂಪೇಟೆ
ರತ್ನಾವಳಿ ಥಿಯೇಟರಿನಲ್ಲಿ
ತಾ|| 17-11-52 ರಿಂದ
ಪ್ರತಿ ದಿನ ರಾತ್ರಿ 10 ಕ್ಕೆ
ತಾ|| 16-11-52 ರ
ಭಾನುವಾರ ಸಂಜೆ 6-30 ಕ್ಕೆ
ಸಾಹುಕಾರ
ತಾ|| 21-11-52 ರಿಂದ
ಕಾಲಚಕ್ರ
ಅಥವಾ ಕಣ್ಣೀರು
ಹೊಸ ನಾಟಕ

ಕಾಡಿನಲ್ಲಿ ೨೫ ರೂ. ಗೆ ತೊಲ ಚಿನ್ನ !

ಹೈದರಾಬಾದಿನ ಸಿಕ್ತಪಲ್ಲಿ ಎಂ[illegible]ಲ್ಲಿಗೆ ಸ್ವಲ್ಪ ದೂರದಲ್ಲಿರುವ ಕಾಡೊಂದರಲ್ಲಿ ೨೫ ರೂ ಗಳಿಗೆ ಒಂದು ತೊಲ ಚಿನ್ನವನ್ನು ಎಷ್ಟು ಬೇಕಾದರೂ ಮಾ[illegible] ಕೊಂಡವರ ಮೇಲೆ ಅನಂತರ ಬಿದ್ದು ಭರ್ಜಿ ತೋರಿಸಿ ಅವರಿಂದ ಚಿನ್ನವನ್ನು ಅಪಹರಿಸುತ್ತಿದ್ದ ಒಂದು ಗ್ಯಾಂಗಿನ [illegible] ೧೭ ಜನರನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಕಳ್ಳರ ಈ ನಡವಳಿಕೆ ಬಗ್ಗೆ ಬಂದ ದೂರುಗಳನ್ನು ತನಿಖೆ ನಡೆಸಲು, ಕೃಷ್ಣಮೂರ್ತಿ ಎಂಬ ಒಬ್ಬ ಪೋಲೀಸಿನವನು ವ್ಯಾಪಾರಿಯಂತೆ ವೇಷ ಧರಿಸಿ [illegible] ಪೋಲೀಸರೊಡನೆ ಕಾಡಿಗೆ ತೆರಳಿ ಕಳ್ಳರನ್ನು ಸಂಧಿಸಿ ೧೦೨೦ ರೂ.ಗಳಷ್ಟು ಬೆಲೆಯ ಚಿನ್ನವನ್ನು ಕೊಂಡನೆಂದೂ, ನಂತರ ಅವನಿಂದ ಕಳ್ಳರು ಕಿತ್ತುಕೊಂಡು ಓಡಲೆತ್ನಿಸಿದರೆಂದೂ, ಆದರೆ ಸರ್ಕಲ್ ಇನ್ಸ್‌ಪೆಕ್ಟರು ರಿವಾಲ್ವರ್ ತೋರಿಸಿ ಅವರನ್ನು ಬಂಧಿಸಿದರೆಂದೂ ಹೇಳಲಾಗಿದೆ. ಕಾಡನ್ನು ಸುತ್ತುವರಿದ ಪೋಲೀಸರು ೧೭ ಜನರನ್ನು ದಸ್ತಗಿರಿ ಮಾಡಿರುವರು. ಇನ್ನು [illegible] ಜನರು ಪರಾರಿಯಾಗಿರುತ್ತಾರೆ.

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್,
ಮೈಸೂರು

PALACE OFFICE, MYSORE

12th November 1952

NOTIFICATION

Sealed tenders are in-vited to run a Vegetari Restaurant in the Pala Office Building for a peri of 2 years from 1-12 19 subject to the conditi notified in the Pala *Office Notice Board*

The tenders shou reach this office befor P. M on Thursday the 2 November 1952

Further particulars be had from the Man Palace Office.

B. N. PALLEGI
Huzur Secret

PALACE MARAMATH DEPT

ABSTRACT TENDER NOTIFICATION

Sealed tenders are invited for letting out the shops godowns and rooms in the newly constructed buildings behind Palace Mothikhana, Mysore, upto 3-30 P.M on 28-11-1952

For detailed information, please refer to the Notification pasted on the Notice Board in the Office of the undersigned on all working days between 11 A. M. and 5 P. M. or at the premises of the said buildings.

Mysore
12th Nov. 1952

B. K. PANDITARADHYA,
Palace Engineer

Edited, Printed and Published by A. R. Nagarj at Sadhvi Press, D. Subb [illegible]

ರಿಜಿಸ್ಟರ್ಡ್ ನಂ. 792 ॥ವಂದೇ ಮಾತರಂ॥ ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೮-೧೧-೧೯೫೨ [ಸಂಚಿಕೆ ೯೪

ಒಂದೇ ದಿನ ೧೮ ಸಹಸ್ರ ವಿಶ್ವಸಂಸ್ಥೆ ಸೈನಿಕರ ನಾಶ

ಪಂಚಲಿಂಗ ದರ್ಶನದ ವೈಭವ ಸಮಾರಂಭ

೩ ಲಕ್ಷ ಜನ ಯಾತ್ರಾರ್ಥಿಗಳ ಸೇವೆ

ತಲಕಾಡಿನಲ್ಲಿ ಮಹಾರಾಜರಿಂದ ದೇವರ ದರ್ಶನ

ತಲಕಾಡು ೧೭

ಸುಮಾರು ೧೨-೧೪ ವರ್ಷಗಳಿಗೊಮ್ಮೆ ಇಲ್ಲಿ ನಡೆಯುವ ಪಂಚಲಿಂಗ ದರ್ಶನ ಮಹೋತ್ಸವಕ್ಕಾಗಿ ದೇಶದ ನಾನಾ ಕಡೆಗಳಿಂದ ಸುಮಾರು ೩ ಲಕ್ಷ ಜನರು ಆಗಮಿಸಿ, ಪಂಚ ದೇವರುಗಳ ದರ್ಶನ ಮಾಡಿ ಸೇವೆಯನ್ನು ಸಲ್ಲಿಸಿದರು. ಗೋಕರ್ಣ ತೀರ್ಥ ಮತ್ತು ಕಾವೇರಿಯಲ್ಲಿ ಮಿಂದು ಜನರು ಆ ಕ್ಷೇತ್ರದಿಗಳಿಂದ ವೈದ್ಯನಾಥೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರುಳೇಶ್ವರ ಮತ್ತು ಮಲ್ಲಿಕಾರ್ಜುನೇಶ್ವರ ದೇವರುಗಳ ಸೇವಾ ಕೈಂಕರ್ಯವನ್ನು ಕೈಗೊಂಡರು.

ಶ್ರೀಮನ್ ಮಹಾರಾಜರು, ಮಹಾರಾಣಿ ಯವರು, ರಾಜಪುತ್ರಿಯರು ಜಯಚಾಮರಾಜೇಂದ್ರ..., ಶ್ರೀಮನ್ಮಹಾರಾಜ ರವರು ಮತ್ತು ಇತರ ರಾಜಬಂಧುಗಳು ... ದರ್ಶನ ಲಾಭವನ್ನು ಪಡೆದರು.

ವೈದ್ಯನಾಥೇಶ್ವರ ದೇವಾಲಯದ ಬಳಿ ಮಹಾರಾಜರಿಗೆ ದೇವಸ್ಥಾನದ ಧರ್ಮಾಧಿಕಾರಿಗಳಾದ ಶ್ರೀ ಮಲ್ಲಪ್ಪ, ಶ್ರೀ ಟಿ. ಎಂ. ಪಂಚಾಕ್ಷರಯ್ಯ, ಸಂಸ್ಥಾನದ ಶಿವಸ್ವಾಮಿ ಆ ಮಹಾಸ್ವಾಮಿ ಶ್ರೀ ಎಸ್. ಮಾಧವರಾವ್, ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪ ಮತ್ತು ಜಿಲ್ಲಾಧಿಕಾರಿಗಳಾದ ಎಂ. ... ಸ್ವಾಮಿನಾರ್ಥರವರುಗಳು ವೈಭವದ ಸ್ವಾಗತವನ್ನು ನೀಡಿದರು. ಮಹಾರಾಜರವರು ತಲಕಾಡಿಗೆಯಲ್ಲೇ ಐದು ದೇವಸ್ಥಾನಗಳಿಗೂ ತೆರಳಿದರು. ರಾಜಮನೆತನದವರು ಪಂಕ್ತಿಯಲ್ಲಿ ಕುಳಿತು ದೇವರ ದರ್ಶನ ಮಾಡಿ ... ಮಧ್ಯಾಹ್ನ ೪ ಗಂಟೆಗೆ ಶ್ರೀಮನ್ಮಹಾರಾಜರು ರಾಜಧಾನಿಗೆ ಹಿಂತಿರುಗಿದರು.

ದೇವಸ್ಥಾನಗಳ ಬಳಿ ಜನರನ್ನು ಕ್ರಮ ಗೊಳಿಸಿ, ಎಲ್ಲರಿಗೂ ದೇವರ ದರ್ಶನವು ಸುಲಭವಾಗಿ ದೊರೆಯುವಂತೆ ಏರ್ಪಡಿಸಲಾಗಿದ್ದಿತು. ಪೋಲೀಸರ ಬಂದೋಬಸ್ತು ಮತ್ತು ಭಾರತ ಸೇವಾದಳದವರ ಸಹಾಯ ಇವು ಉತ್ತಮವಾಗಿದ್ದುವು.

ಶ್ರೀಮನ್ ಮಹಾರಾಜರಿಗೆ ಜನರು ತಮ್ಮ ಭಕ್ತಿ ಗೌರವಗಳನ್ನು ಸಲ್ಲಿಸಿದರು.

ಯಾತ್ರಾದಿಗಳು ದೇವರ ಅರ್ಚನೆಗಾಗಿ ತಂದಿದ್ದ ಹಣ್ಣುಕಾಯಿ ಮತ್ತು ಪುಷ್ಪಗಳನ್ನು, ಶ್ರೀಮನ್ಮಹಾರಾಜರು ಮತ್ತು ರಾಜಮನೆತನದವರನ್ನು ಕಂಡಾಗ ಅವರು ಪ್ರತ್ಯಕ್ಷ ದೇವರೆಂಬ ಭಾವನೆಯಿಂದ ಅವರ ಮೇಲೆ ಎರಚಿ ನಮಸ್ಕರಿಸುತ್ತಿದ್ದರು.

ಸಂಸ್ಥಾನದ ಸಚಿವರುಗಳಾದ ಶ್ರೀಗಳು ಕೆ. ಸಿದ್ದಲಿಂಗಯ್ಯ, ಎ. ಜಿ. ರಾಮಚಂದ್ರರಾವ್, ಟಿ. ಚನ್ನಯ್ಯ ಮತ್ತು ಕಡಿದಾಳ್ ಮಂಜಪ್ಪ ಇವರುಗಳೂ, ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರೂ ದರ್ಶನಾರ್ಥಿಗಳಾಗಿ ಇಲ್ಲಿಗೆ ಆಗಮಿಸಿದ್ದರು.

ಬಿರುಗಾಳಿಯಿಂದ ೫೦೦ ಜನರ ಸಾವು

ಕಳೆದ ಶುಕ್ರವಾರ ಫಾರ್ಮೋಸಾ ದ್ವೀಪದಲ್ಲಿ ಬೀಸಿದ ಬಿರುಗಾಳಿಯ ಪರಿಣಾಮವಾಗಿ ೫೦೦ ಮಂದಿ ಮೃತಪಟ್ಟು ೧,೨೦೦ ಜನರು ಗಾಯಗೊಂಡರೆಂದು ಇತ್ತೀಚಿನ ವರದಿಯಿಂದ ತಿಳಿದು ಬಂದಿದೆ.

ಪ್ರಾಂತಗಳಲ್ಲಿ ಧಾನ್ಯವನ್ನು ನೇರವಾಗಿ ಕೊಳ್ಳಬಹುದು

ಪ್ರಾಂತದಿಂದ ಪ್ರಾಂತಕ್ಕೆ ಆಹಾರ ಧಾನ್ಯ ಮೊದಲಾದ ಇತರ ಮುಖ್ಯ ಧಾನ್ಯಗಳ ಸಾಗಣೆ ಬಗ್ಗೆ ಇರುವ ಪ್ರತಿಬಂಧಕವು ಮುಂದುವರಿಯುವುದೆಂದೂ, ಆದರೆ ಪೇಟೆ ಸಂಸ್ಥಾನಗಳು, ಕೇಂದ್ರದವರಿಂದ ಹೆಚ್ಚುವರಿಯೆಂದು ಅನುಮೋದಿಸಲ್ಪಟ್ಟ ಪ್ರಾಂತಗಳಲ್ಲಿ ನೇರವಾಗಿ ಧಾನ್ಯವನ್ನು ಕೊಳ್ಳಲು ಅವಕಾಶವೀಯಲಾಗುವುದೆಂದೂ ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ತಿಳಿಸಿರುತ್ತಾರೆ. ಅಕ್ಕಿ ಮತ್ತು ಗೋಧಿ ಇವುಗಳ ಮೇಲೆ ಹತೋಟಿಯು ಮುಂದುವರಿಯುವುದೆಂದೂ, ಅವರು ಹೇಳಿ, ಸಂಸ್ಥಾನದೊಳಗೆ ಮುಖ್ಯ ಧಾನ್ಯಗಳ ಸಾಗಣೆಯ ಬಗ್ಗೆ ಹತೋಟಿ ಇರುವುದಿಲ್ಲವೆಂದು ಸೂಚಿಸಿರುವರು.

ಕೋಲ್ಲೇಗಾಲದಲ್ಲಿ ಸ್ತ್ರೀ ಅಪಹಾರ

ದಕ್ಷಿಣ ತಿರುವಾಂಕೂರಿನ ಕೊಲ್ಲೇಗೋಡು ತಾಲ್ಲೂಕಿನ ಗಣ್ಯರಾದ ನಾಯರ್ ಸಂಸಾರದ ಮನೆಯೊಂದಕ್ಕೆ ಮೊನ್ನೆ ರಾತ್ರಿ ಇಪ್ಪತ್ತು ನಾಯರ್ ಪಂಗಡದ ಯುವಕರು ಪ್ರವೇಶಿಸಿ, ಒಬ್ಬ ಸ್ತ್ರೀಯನ್ನು ಕಾರಿನಲ್ಲಿ ಅಪಹರಿಸಿಕೊಂಡು ಹೋಗಿರುವರೆಂದೂ ಆ ಕಾರಿನಲ್ಲಿ ಹತ್ತಿದ ವಿಷಯ ತಿಳಿದ ಕಾರಣದಿಂದ ಅಲ್ಲಿಗೆ ತಿರುವನಂತಪುರದಿಂದ ವಿಶೇಷ ಪೊಲೀಸು ಪಡೆಯನ್ನು ಕಳುಹಿಸಲಾಗಿದೆಯೆಂದೂ ವರದಿಯಾಗಿದೆ. ಕಾರಿನ ಡ್ರೈವರ್ ಮತ್ತು ಇತರ ಅಂಗಡಿಯವನೊಬ್ಬನನ್ನು ಪೊಲೀಸರು ಬಂಧಿಸಿ, ಬಿಟ್ಟುಬಿಟ್ಟಿರುತ್ತಾರೆ. ಅಪಹೃತ ಮಹಿಳೆಯು ಪತ್ತೆಯಾಗುವುದು ತಿಳಿದುಬಂದಿಲ್ಲ.

ದಕ್ಷಿಣ ಆಫ್ರಿಕಾ ದಿನಾಚರಣೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಮೊನ್ನೆ ಶ್ರೀ ಜಿ. ನಿ. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ದಕ್ಷಿಣ ಆಫ್ರಿಕಾ ದಿನಾಚರಣೆಯನ್ನು ನಡೆಸಲಾಯಿತು. ಶ್ರೀಗಳಾದ ಡಿ. ಎಸ್. ತಂಗರಪ್ಪ, ಕಣ್ಣಯ್ಯ, ಬಸವೇಗೌಡ, ಅನಂತಯ್ಯ, ಬಾಮಯ್ಯ, ನಂಜುಂಡರಾವ್ ಇವರುಗಳು ಭಾಷಣ ಮಾಡಿ, ದಕ್ಷಿಣ ಆಫ್ರಿಕಾ ಸರ್ಕಾರದವರು ಭಾರತೀಯರು, ನೀಗ್ರೋಯರು ಇವರುಗಳ ಮೇಲೆ ತೋರುತ್ತಿರುವ ವರ್ತನೆಯನ್ನು ಟೀಕಿಸಿದರು. ಡಾ॥ ಮಲಾನ್ ಸರ್ಕಾರದ ವರ್ಣಭೇದ ನೀತಿಯ ಖಂಡನೆ. ಅಪಾರ ನೊಂದವರೆಲ್ಲರಿಗೂ ಸಹಾನುಭೂತಿ, ಅಲ್ಲಿ ನಡೆಯುತ್ತಿರುವ ಸತ್ಯಾಗ್ರಹವು ಯಶಸ್ವಿಯಾಗಬೇಕು ಇತ್ಯಾದಿ ಈ ಬಗ್ಗೆ ನಿರ್ಣಯಗಳಾದುವು. ವಿಶ್ವಸಂಸ್ಥೆಯು ದಕ್ಷಿಣ ಆಫ್ರಿಕಾ ಸರ್ಕಾರಕ್ಕೆ ಬುದ್ಧಿ ಹೇಳಬೇಕೆಂದೂ ಕೋರಲಾಯಿತು.

ಒಂದೇ ದಿನದಲ್ಲಿ ೧೮ ಸಹಸ್ರ ವಿಶ್ವಸಂಸ್ಥೆ ಸೈನಿಕರ ನಾಶ

ಕೊರಿಯಾದ ಮಧ್ಯ ರಣರಂಗದಲ್ಲಿ ಕಳೆದ ೧೫ ನೇ ತಾ॥ ಒಂದೇ ದಿನದಲ್ಲಿ ವಿಶ್ವಸಂಸ್ಥೆಯ ೧೮ ಸಾವಿರ ಸೈನಿಕರನ್ನು ಕೊರಿಯಾ ಮತ್ತು ಚೀನಾ ಸೈನಿಕರು ನಾಶಪಡಿಸಿರುವರೆಂದು ಪೀಕಿಂಗ್ ರೇಡಿಯೋವು ಹೇಳುತ್ತದೆ.

ವೈದಿಕ ಪಂಡಿತರಿಗೆ ರಾಷ್ಟ್ರಾಧ್ಯಕ್ಷರ ಸನ್ಮಾನ

ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದರು ಕಳೆದ ಶನಿವಾರ ಕಾಶಿ ಕ್ಷೇತ್ರಕ್ಕೆ ಭೇಟಿಯಿತ್ತು, ಅಲ್ಲಿನ ಸುಮಾರು ೨೦೦ ಮಂದಿ ವೇದಾಧ್ಯಯನ ಸಂಪನ್ನರಾದ ಸಂಸ್ಕೃತ ಪಂಡಿತರನ್ನು ಸನ್ಮಾನಿಸಿ, ಅವರನ್ನು ಬೆಳ್ಳಿಯ ಪೀಠಗಳ ಮೇಲೆ ಕೂರಿಸಿ ಪಾದಗಳನ್ನು ತೊಳೆದು ಗಂಧ ಪುಷ್ಪಾದಿಗಳನ್ನು ಸಲ್ಲಿಸಿ, ಸಿಹಿ ತಿಂಡಿಯನ್ನೂ ಮತ್ತು ತಲಾ ೧೧ ರೂ. ದಕ್ಷಿಣೆಯನ್ನೂ ಕೊಟ್ಟರೆಂದು ತಿಳಿದುಬಂದಿದೆ. ಪಂಡಿತರುಗಳು ರಾಷ್ಟ್ರಾಧ್ಯಕ್ಷರಿಗೆ ಒಂದು ಬಿನ್ನವತ್ತಳೆಯನ್ನು ಸಲ್ಲಿಸಿದರು.

ಮಂತ್ರಿಗಳಲ್ಲಿ ಮೆಡಿಕಲ್ ಕಾಲೇಜು ವಿದ್ಯಾರ್ಥಿನಿಯರ ನಿಯೋಗ

ಸ್ಥಳೀಯ ಮೆಡಿಕಲ್ ಕಾಲೇಜಿನ ಸುಮಾರು ೩೦ ಮಂದಿ ವಿದ್ಯಾರ್ಥಿನಿಯರು ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರ ಬಳಿ ಹೋಗಿ ಕಾಲೇಜು ಪ್ರಿನ್ಸಿಪಾಲರ ಪ್ರಕಟಣೆಯಂತೆ ಸುಮಾರು ೨೦೦ ರೂ. ಗಳ ವಿದ್ಯಾಶುಲ್ಕವನ್ನು ಒಟ್ಟಿಗೆ ಕೊಡಲು ಇರುವ ತೊಂದರೆಯನ್ನು ವಿವರಿಸಿದರಲ್ಲದೆ, ಇದುವರೆಗೂ ಇದ್ದಂತೆ ಮಾಹೆಯಾರು ಫೀಜು ಕೊಡುತ್ತಿರುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೋರಿಕೊಂಡರು. ಫೀಜನ್ನು ಇದೇ ತಿಂಗಳು ೨೫ನೇ ತಾ॥ ನೊಳಗೆ ಕೊಡಬೇಕಾಗಿದೆ. ಮಂತ್ರಿಗಳು ಅವರ ಅಹವಾಲುಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಿಳಿಸಿದರು.

○ ಹಾಲೆಂಡಿನ ಹೇಗ್ ನಗರದಲ್ಲಿರುವ ಶಾಂತಿ ಅರಮನೆಯಲ್ಲಿ ಭಾರತದಿಂದ ಕಳುಹಿಸಲಾಗಿರುವ ಗಾಂಧಿಜಿಯವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

ಅಳವಾಂಡರ್ ಕೊಲೆ ಆಪಾದಿತನ ಉಪವಾಸ ಮುಷ್ಕರ

ಮದ್ರಾಸಿನ ವರ್ತಕ ಆಳವಾಂಡರ್ ರವರ ಕೊಲೆ ಸಂಬಂಧದಲ್ಲಿ ಆಪಾದಿತನಾಗಿರುವ ಪತ್ರಿಕಾ ಸಂಪಾದಕ ಪಿ. ಪಿ. ಮೆನನ್ನನು ಜೈಲು ಅಧಿಕಾರಿಗಳ ಕಿರುಕುಳಗಳನ್ನು ಪ್ರತಿಭಟಿಸಿ ಉಪವಾಸ ಮುಷ್ಕರವನ್ನು ಆರಂಭಿಸಿರುವನು. ಅವನು ನ್ಯಾಯಾಸ್ಥಾನದಲ್ಲಿ ಹಾಜರಾಗುವ ಸ್ಥಿತಿಯಲ್ಲಿಲ್ಲದಿರುವುದರಿಂದ, ಮೊಕದ್ದಮೆಯನ್ನು ಇದೇ ತಿಂಗಳು ೨೪ ನೇ ತಾ॥ ಮುಂದುವರಿಸಲಾಗಿದೆ.

ಮದ್ರಾಸಿನ ಚೀಫ್ ಎಂಜನಿಯರರ ರಾಜೀನಾಮೆ

ಕೃಷ್ಣಾ ಪೆನ್ನಾರ್ ಯೋಜನೆಯ ಒಂದು ಭಾಗವು ಕುಸಿದು ಇಂಜನಿಯರರು ಮತ್ತು ಇನ್ನಿತರರು ನೀರಿನಲ್ಲಿ ಮುಳುಗಿಹೋದ ಸಂಬಂಧದಲ್ಲಿ, ತಮ್ಮ ಜವಾಬುದಾರಿಯು ಏನೂ ಇಲ್ಲದಿದ್ದರೂ ಸಹ, ತಾವೂ ನಿಂದನೆಗೆ ಭಾಗಿಗಳೆಂದು ತಿಳಿಸಿ, ಮದ್ರಾಸಿನ ನೀರಾವರಿ ಚೀಫ್ ಇಂಜನಿಯರ್ ಎ. ಆರ್. ವೆಂಕಟಾಚಾರ್ಯರವರು ರಾಜೀನಾಮೆಯನ್ನು ಸಲ್ಲಿಸಿರುತ್ತಾರೆ.

ಸೌರಾಷ್ಟ್ರ ಮಂತ್ರಿಯ ರಾಜೀನಾಮೆ

ಸೌರಾಷ್ಟ್ರ ಪ್ರಾಂತದ ಹಣಕಾಸಿನ ಮಂತ್ರಿ ಜಿ. ಬಿ. ಕೋಟಕ್‌ರವರು ರಾಜೀನಾಮೆಯಿತ್ತಿರುವರು. ಚುನಾವಣೆಗೆ ನಿಲ್ಲಲು ಅವರು ಮೊದಲು ನಿರಾಕರಿಸಿದ್ದರೆಂದೂ, ಸ್ನೇಹಿತರ ಒತ್ತಾಯದಿಂದ ಅವರು ನಿಂತು, ಮಂತ್ರಿಗಳಾಗಿದ್ದು ಈಗ ನಿವೃತ್ತರಾಗಲು ಆಶಿಸಿರುವರೆಂದೂ ಹೇಳಲಾಗಿದೆ.

ಮಿತ ಸಂತಾನಕ್ಕಾಗಿ ಪ್ರಪಂಚ ಸಮ್ಮೇಳನ

ಮಿತಸಂತಾನ ಮತ್ತು ಯೋಜನಾಬದ್ಧ ಪಿತೃತ್ವಕ್ಕಾಗಿ ಬೊಂಬಾಯಿಯಲ್ಲಿ ಇದೇ ತಿಂಗಳು ೨೪ ನೇ ತಾ॥ ನಿಂದ ಡಿಸೆಂಬರ್ ೧೮ ರ ವರೆಗೆ ಪ್ರಪಂಚ ಸಮ್ಮೇಳನವೊಂದು ನಡೆಯುವುದು. ಭಾರತದ ಉಪಾಧ್ಯಕ್ಷರಾದ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಆರಂಭೋತ್ಸವವನ್ನು ನೆರವೇರಿಸುವರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಅಭಿನಂದನೆ

ಜಿಲ್ಲಾ ಕಾಂಗ್ರೆಸ್ಸಿನ ಚುನಾವಣೆಗಳಲ್ಲಿ ಚುನಾವಣಾಧಿಕಾರಿಗಳಾಗಿಯೂ, ಪೋಲಿಂಗ್ ಅಧಿಕಾರಿಗಳಾಗಿಯೂ, ಕೆಲಸ ಮಾಡಿದ ಮತ್ತು ಇತರ ವಿಧಗಳಲ್ಲಿ ಸಹಕರಿಸಿದ ಎಲ್ಲ ಮಹನೀಯರುಗಳಿಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ವೈ. ಎ. ನಂಜುಂಡಪ್ಪನವರು ಧನ್ಯವಾದಗಳನ್ನು ಅರ್ಪಿಸಿರುತ್ತಾರೆ.

ಮಹಿಳೆಯನ್ನು ತಿವಿದು ಕೊಂದ ಪ್ರಸಂಗ

ಬೆಂಗಳೂರಿನ ಶ್ರೀರಾಂಪುರದ ಬಳಿ ಕಳೆದ ಶನಿವಾರ ಕೃಷ್ಣಪ್ರಸಾದ್ ಎಂಬುವನು ಲಕ್ಷ್ಮಿಬಾಯಿ ಎಂಬ ಮಹಿಳೆಯನ್ನು ಚೂರಿಯಿಂದ ಇರಿದ ಪರಿಣಾಮವಾಗಿ ಆಕೆಯು ಮೃತಿ ಹೊಂದಿದಳೆಂದೂ, ಅನಂತರ ಅವನು ತನ್ನನ್ನೂ ಚೂರಿಯಿಂದ ತಾನೂ ಕತ್ತಿಗೆ ತಿವಿದು ಗಾಯ ಮಾಡಿಕೊಂಡನೆಂದೂ, ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ.

ಭಾರತಕ್ಕೆ ದಕ್ಷಿಣ ಆಫ್ರಿಕಾ

ಬುದ್ಧನ ಶಿಷ್ಯರಾದ ಸಾರಿಪುತ್ರ ಮತ್ತು ಮೊಗ್ಗಲ್ಲಾನರವರ ಅವಶೇಷಗಳ ಸ್ಥಾಪನಾ ಮಹೋತ್ಸವವು ಇದೇ ತಿಂಗಳು ೨೯ ಮತ್ತು ೩೦ನೇ ತಾ|| ಗಳಲ್ಲಿ ಅಸ್ಸಾಮಿನ ಸಾಂಚಿಯಲ್ಲಿ ನೆರವೇರುವುದು. ಆ ಸಮಾರಂಭಕ್ಕೆ ಕಾಂಬೋಡಿಯಾ, ಥೈಲ್ಯಾಂಡ್ ಮತ್ತು ಸಿಕ್ಕಿಂಗಳ ಅರಸರು ಆಗಮಿಸುವರೆಂದೂ, ಟಿಬೆಟ್ಟಿನ ದಲೈಲಾಮಾರವರನ್ನೂ ಇದಕ್ಕೆ ಆಹ್ವಾನಿಸಲಾಗಿದೆಯೆಂದೂ, ಅವರು ಸಮಾರಂಭಕ್ಕೆ ಬರುವ ನಿರೀಕ್ಷೆಯಿದೆಯೆಂದೂ ಹೇಳಲಾಗಿದೆ

ನೆಹರೂ ಜಯಂತಿ

ರಾಜಧಾನಿಯ ಸಾವರ್ಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನೆಹರೂರವರ ಅರವತ್ತನಾಲ್ಕನೇ ವರ್ಷದ ಜಯಂತ್ಯುತ್ಸವವು ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಕುಪ್ಪುಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾರ್ಥನೆ ಮತ್ತು ಸ್ವಾಗತ ಭಾಷಣಗಳಾದ ನಂತರ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ಕಾಮೇಶ್ವರಮ್ಮ ಕುಪ್ಪುಸ್ವಾಮಿಯವರು ಭಾಷಣ ಮಾಡಿ, ಜವಾಹರಲಾಲ್‌ರವರ ಗುಣಗಳನ್ನು ಶ್ಲಾಘಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನೆಹರೂರವರ ರಾಜಕೀಯ ತಜ್ಞತೆಯನ್ನು ವಿವರಿಸಿದರು

ಊದುಬತ್ತಿ ತಯಾರಿಕೆ ಮಾಲೀಕರ ಸಂಘ

ರಾಜಧಾನಿಯ ಊದುಬತ್ತಿ ಕಂಪೆನಿ ಮಾಲೀಕರ ಸಭೆಯು ನೆನ್ನೆ ದಿನ ಜರುಗಿ ಅವರ ಸಂಘವೊಂದನ್ನು ಸ್ಥಾಪಿಸಿಕೊಂಡಿರುವರು. ಶ್ರೀ ಟಿ ಎಲ್ ಎಸ್ ಉಪಾಧ್ಯಾಯರು ಅಧ್ಯಕ್ಷರಾಗಿಯೂ, ಶ್ರೀ ಯೂಸುಫ್ ಸಾಹೇಬರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಲಕ್ಷ್ಮಣ ಚಂದ್‌ರವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಹಗಲಿನ ಕಳುವು

ವಾಣೀವಿಲಾಸ ಮೊಹಲ್ಲಾದಲ್ಲಿರುವ ಇಂಜಿನಿಯರ್ ಶ್ರೀ ಎಂ ಎಸ್ ಮಾಧವರಾವ್‌ರ ಮನೆಯಲ್ಲಿ ಹಗಲಿನಲ್ಲಿ ಕಳ್ಳತನವಾಗಿ ಸುಮಾರು ೫೦೦ ರೂಪಾಯಿನ ಸಾಮಾನು ಕಳುವು ಆಗಿ ಅಪಹರಿಸಲ್ಪಟ್ಟಿದೆ. ಪೋಲೀಸಿನವರಿಗೆ ದೂರು ಕೊಡಲಾಗಿದೆ. ಅವರ ಮನೆಯಲ್ಲಿ ಕಳ್ಳತನ ನಡೆದಿರುವುದು ಇದು ಮೂರನೇ ಬಾರಿ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಕ್ಕೆ ನಾಗಸ್ವರ ವಿ. ಕೃಷ್ಣಪ್ಪ ಮಧ್ಯಾಹ್ನ ೧ ೩೦ ಗೆ ಎಸ್ ರಾಜಯ್ಯಂಗಾರ್, ಕರ್ನಾಟಕ ಸಂಗೀತ ೩ ವನಿತಾ ವಿಹಾರ, ವಿವಿಧ ಕಾರ್ಯಕ್ರಮ ಸಂಜೆ ೬ ೩೦ ನಾಗಸ್ವರ ವಿ ಕೃಷ್ಣಪ್ಪ ೭ ೧೦ ಬಾಲಜಗತ್, ಮಕ್ಕಳ ಕಾರ್ಯಕ್ರಮ ೭ ಹಿಂದಿ ಗೀತೆಗಳು, ಇಂದಿರಾ ಶಾಮಣ್ಣ ೮ ಸಂಗೀತ, ಎಂ ಎಸ್ ಶೆಲ್ವಪಿಳ್ಳೆ ಅಯ್ಯಂಗಾರ್ ೯ ೧೫ ಕನ್ನಡ ಗೀತೆಗಳು, ಆರ್ ವಿ ನಾಗರತ್ನ ೯ ೩೦ ವಿವಿಧ ಮೆಲ್ಲಿಸ ಗೀತೆಗಳು

೯ ಅನುಕಂಪಕವಾಗಿ ಕಾಶ್ಮೀರದಲ್ಲಿ ನಡೆದು ಬಂದಿರುವ ಶೇಖನ ಗ್ರಾಮಾಧಿಕಾರಿಗಳ ಪದ್ಧತಿಯನ್ನು ರದ್ದುಗೊಳಿಸಲು ಕಾಶ್ಮೀರದ ಶಾಸನ ಸಭೆಯು ಒಪ್ಪಿರುತ್ತದೆ.

ಟ್ರಿಗ್ವಿ ಲೀ ಸ್ಥಾನಕ್ಕೆ ರಾಧಾಕೃಷ್ಣನ್?

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರ ಸ್ಥಾನಕ್ಕೆ ಭಾರತದ ಉಪಾಧ್ಯಕ್ಷರಾದ ಡಾ|| ಎಸ್ ರಾಧಾಕೃಷ್ಣನ್‌ರವರ ಹೆಸರನ್ನು ರಷ್ಯವು ಸೂಚಿಸಿರುವುದೆಂದು ಗೊತ್ತಾಗಿದೆ

ನಾಳೆ ಪರೀಕ್ಷಾ ಫಲಿತಾಂಶಗಳ ಪ್ರಕಟಣೆ

ಕಳೆದ ಸೆಪ್ಟೆಂಬರಿನಲ್ಲಿ ನಡೆದ ಮೈಸೂರು ವಿಶ್ವವಿದ್ಯಾಲಯದ ಪರೀಕ್ಷೆಗಳ ಫಲಿತಾಂಶಗಳು ನಾಳೆ ಬೆಳಿಗ್ಗೆ ೧೧ ಘಂಟೆಗೆ ಪ್ರಕಟಿಸಲ್ಪಡುವುವು

ಸಿಲ್ವರ್ ಜ್ಯೂಬಿಲಿ ವಾಲಿಬಾಲ್ ಪಂದ್ಯ

ಸಿಲ್ವರ್ ಜ್ಯೂಬಿಲಿ ಅಂತರ ಪ್ರೌಢಶಾಲಾ ವಾಲಿಬಾಲ್ ಫೈನಲ್ ಪಂದ್ಯದಲ್ಲಿ ಮೊನ್ನೆ ದಳವಾಯಿ ಹೈಸ್ಕೂಲಿನವರು ಬನುಮಯ್ಯ ಪ್ರೌಢಶಾಲೆಯವರನ್ನು ೧೫-೧೩ ಮತ್ತು ೧೫-೭ ಪಾಯಿಂಟುಗಳಿಂದ ಸೋಲಿಸಿ ಈ ವರ್ಷದ ಪಾರಿತೋಷಕವನ್ನು ಗಳಿಸಿದರು

ಶಿವರಾತ್ರೀಶ್ವರಸ್ವಾಮಿಗಳ ಜಯಂತಿ

ಸುತ್ತೂರಿನ ಶ್ರೀ ಶಿವರಾತ್ರೀಶ್ವರಸ್ವಾಮಿಗಳವರ ಜಯಂತಿಯು ನೆನ್ನೆ ರವಿವಾರ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಶ್ರೀ ಶಿವರಾತ್ರೀಶ್ವರ ಗುರುಕುಲದಲ್ಲಿ ನಡೆಯಿತು. ಪ್ರಾರ್ಥನೆ, ಸ್ವಾಗತ ಮತ್ತು ಶ್ರೀ ಎಂ ಸಿ ಮಹದೇವಸ್ವಾಮಿಯವರಿಂದ ಪರಿಚಯ, ಶ್ರೀಗಳಾದ ಎ ಪಿ ನಾಗರಾಜಮೂರ್ತಿ, ಹೆಚ್ ಗಂಗಾಧರನ್ ಮತ್ತು ಕಾಗಲವಾಡಿ ಮಠದ ಶ್ರೀ ಶಿವರುದ್ರಸ್ವಾಮಿಗಳವರ ಭಾಷಣಗಳಾದ ನಂತರ ಅಧ್ಯಕ್ಷರು ಮಾತನಾಡಿ ಜನರಲ್ಲಿ ನೈತಿಕ ಮಟ್ಟವು ಹೆಚ್ಚಬೇಕೆಂದೂ ಧಾರ್ಮಿಕ ತತ್ವಗಳ ಪರಿಪಾಲನೆ ಮುಖ್ಯವಾದುದೆಂದೂ ಹೇಳಿದರು. ಶ್ರೀ ಸುತ್ತೂರು ಸ್ವಾಮಿಗಳು ಸಹಸ್ರಾರು ವಿದ್ಯಾರ್ಥಿಗಳಿಗೆ ಮಾಡುತ್ತಿರುವ ಸಹಾಯಕ್ಕಾಗಿ ಅವರನ್ನು ಶ್ಲಾಘಿಸಿದರು.

ಆಶ್ರಮಾಧಿಕಾರ ಪ್ರದಾನ ಮಹೋತ್ಸವ

ಮೈಸೂರು ೧೮

ಲಿಂಗೈಕ್ಯರಾದ ಶ್ರೀ ಬಸವಲಿಂಗಸ್ವಾಮಿಗಳವರ ಸ್ಥಾನದಲ್ಲಿ ಮೈಸೂರಿನ ಹೊಸಮಠದ ಆಶ್ರಮಾಧಿಕಾರವನ್ನು ವ್ಯಾಕರಣ ವಿದ್ವಾಂಸರಾದ ಶ್ರೀ ಗುರುಶಾಂತಸ್ವಾಮಿಗಳವರಿಗೆ ವಹಿಸಿಕೊಡುವ ಸಮಾರಂಭವು, ಸುತ್ತೂರಿನ ಶ್ರೀ ಶಿವರಾತ್ರಿ ಸ್ವಾಮಿಗಳವರ ಸಮ್ಮುಖದಲ್ಲಿ ಕಳೆದ ೧೩ನೇ ತಾ|| ನಡೆಯಿತು. ಅನೇಕ ವೀರಶೈವ ವಟುಗಳಿಗೆ ದೀಕ್ಷೆಯನ್ನು ಇದೇ ಸಮಯದಲ್ಲಿ ಕೊಡಲಾಯಿತು. ಕಾಪಸಿದ್ಧನಹಳ್ಳಿಯ ಶ್ರೀ ದೇಗುಲಮಠದ ಶ್ರೀ ನಿರ್ವಾಣಸ್ವಾಮಿಗಳವರು ವಿರಕ್ತಾಶ್ರಮಾಧಿಕಾರವನ್ನು ನೂತನ ಸ್ವಾಮಿಗಳಿಗೆ ಒಪ್ಪಿಸಿದರು. ಆಶ್ರಮಾಧಿಕಾರವನ್ನು ವಹಿಸಿಕೊಂಡುದನ್ನು ಸಭೆಯು ಅಂಗೀಕರಿಸುವ ನಿರ್ಣಯವು ಶ್ರೀ ಎಂ ಸಿ ಮಹದೇವಸ್ವಾಮಿಯವರಿಂದ ಮಂಡಿಸಲ್ಪಟ್ಟು ಅಂಗೀಕೃತವಾಯಿತು

ನಂತರ ಪಂಡಿತರ ಸಭೆಯು ಜರುಗಿ ಶ್ರೀ ಚಂದ್ರಶೇಖರ ಶಾಸ್ತ್ರಿಗಳವರು, ಶ್ರೀ ನಂಜುಂಡಾರಾಧ್ಯರು, ಶ್ರೀ ಶಿವರುದ್ರಸ್ವಾಮಿಗಳವರು ಹಲವು ವಿಷಯಗಳ ಮೇಲೆ ಭಾಷಣಮಾಡಿದರು. ಶ್ರೀ ಶಿವರಾತ್ರಿ ಸ್ವಾಮಿಗಳವರು ಈ ಸಮಾರಂಭಕ್ಕೆ ನೆರವಾದವರೆಲ್ಲರನ್ನೂ ಹರಸಿದರು

ಸಂಸ್ಥಾನದ ಭೂದಾನ ಯಜ್ಞ ಸಮಿತಿ

ಬೆಂಗಳೂರು ಜಿಲ್ಲೆಯ ಬೆಳ್ಳಂಬದ ಶ್ರೀ ನಾರಾಣಪ್ಪ, ಶ್ರೀ ಅನಂತ ರಂಗಾಚಾರ್ ಮತ್ತು ಶ್ರೀಮತಿ ಸರಸ್ವತಿ ನಟರಾಜನ್ ಇವರುಗಳನ್ನೊಳಗೊಂಡ ಸಂಸ್ಥಾನದ ಭೂದಾನ ಯಜ್ಞ ಸಮಿತಿಯನ್ನು ಸರ್ವ ಸೇವಾ ಸಂಘದವರು ರಚಿಸಿರುತ್ತಾರೆ.

ನೆಹರೂ ಜಯಂತಿ ಅಂಗವಾಗಿ ಗ್ರಾಮ ನೈರ್ಮಲ್ಯ ಕಾರ್ಯ

ನಂಜನಗೂಡು ತಾ|| ಸುತ್ತೂರು ಮಾಧ್ಯಮಿಕ ಶಾಲಾ ಸಂಘದ ಆಶ್ರಯದಲ್ಲಿ ನೆಹರೂ ಜಯಂತಿಯನ್ನು ಆಚರಿಸಲಾಯಿತು. ಸಂಘದ ಅಧ್ಯಕ್ಷರಾದ ಎಸ್.ಎಂ ಪ್ರಭುಸ್ವಾಮಿಯವರು ಅಧ್ಯಕ್ಷತೆವಹಿಸಿದ್ದರು. ಶಾಲಾ ಬಾಲಕರಿಂದ ಪ್ರಾರ್ಥನೆ ಮತ್ತು ಕಾರ್ಯದರ್ಶಿ ಶ್ರೀ ಬಿ ಸ್ವಾಮಿಯವರಿಂದ ಸ್ವಾಗತ ಭಾಷಣವಾದ ನಂತರ ಅಧ್ಯಾಪಕರುಗಳಾದ ಶ್ರೀ ಸುಬ್ರಹ್ಮಣ್ಯಂ ಮತ್ತು ಶ್ರೀ ಜಯದೇವಪ್ಪ ಇವರುಗಳು ನೆಹರೂ ಜೀವನ ಚರಿತ್ರೆಯನ್ನು ವಿವರಿಸಿದರು. ಅಧ್ಯಕ್ಷರು—ನೆಹರೂರವರ ಜಯಂತಿಯ ಅಂಗವಾಗಿ ವಾರಕ್ಕೊಂದು ದಿವಸವಾದರೂ ವಿದ್ಯಾರ್ಥಿಗಳು ಗ್ರಾಮ ನೈರ್ಮಲ್ಯ ಮೊದಲಾದ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವುದು ಅವಶ್ಯಕವೆಂದು ತಿಳಿಸಿದರು. ಈ ವಾರದಿಂದಲೇ ಸದರಿ ಕಾರ್ಯವನ್ನು ಪ್ರಾರಂಭಮಾಡಬೇಕೆಂದು ತೀರ್ಮಾನಿಸಲಾಯಿತು

ಒಲಂಪಿಯಾ ಟಾಕೀಸ್

ಅವಲೋಕಿ ಪ್ರಾರಂಭ 20 11-52 ರಿಂದ

ದಿನವೂ ಮೂರು ಆಟಗಳು

ಫಿಲ್ಮ್ ಸೆಕ್ಯೂರ್‌ರವರ ಅತ್ಯುತ್ತಮ ಚಿತ್ರ

✻ ಬಾಗ್ದಾದ್ ✻

ಪಾತ್ರ — ಭಾರತಿ (ನ್ಯೂಥಿಯೇಟರ್ಸ್ ಪ್ರಖ್ಯಾತಿ), ರಂಜನ್, ವೀರಾ ಬಾಬು (ಮಹಾಕಾಳಿಯ ಕುಮಾರಿ) ಮತ್ತು ಹಾಸ್ಯನಟ ಭಗವಾನ್

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕಛೇರಿ,

ಮೈಸೂರು ತಾ|| 10.11.1952

ನಂ ಜಿ 5 753/5257

ಪ್ರಕಟಣೆ

ಈ ವಿಶ್ವವಿದ್ಯಾನಿಲಯದ (Statute) ಸ್ಟ್ಯಾಚ್ಯೂಟ್ ೨೪ (೧೯೪೭ ಅಕ್ಟೋಬರ್ ೧೯೪೮ ರಲ್ಲಿ ೪೧ ನೇ ಪುಟದಲ್ಲಿ) ರಲ್ಲಿ ನಮೂದಾಗಿರುವ ರಿಜಿಸ್ಟರ್ಡ್ ಪದವೀಧರ (ಈಗಾಗಲೇ ರಿಜಿಸ್ಟರ್ಡ್ ಪದವೀಧರರಾಗಿ ನಮೂದಾಗಿರುವವರ) ರಿಂದ, ಯಾವುದಾದರೂ ಬದಲಾವಣೆ ಅಥವಾ ತಿದ್ದುಪಡಿ ಇದ್ದಲ್ಲಿ ಈ ಕೆಳಗಿನ ನಮೂನೆ ಫಾರಂನಲ್ಲಿ ಬರೆದು ೧೯೫೨ ನೇ ಡಿಸೆಂಬರ್ ೧೫ ರ ಒಳಗಾಗಿ ಅವಶ್ಯ ಮುಂಚಿತವಾಗಿ ಈ ಕಛೇರಿಗೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ

(Statute) ಸ್ಟ್ಯಾಚ್ಯೂಟ್ ೬ ಪ್ರಕಾರ ಪ್ರತಿ ವರ್ಷದ ಜನವರಿ ೧ ನೇ ದಿನ ರಿಜಿಸ್ಟರ್ಡ್ ಪದವೀಧರರ ಪಟ್ಟಿಯನ್ನು ತಿದ್ದುಪಡಿ ಮಾಡಿ ಬದಲಾಯಿಸಲಾಗುತ್ತದೆ. ಬದಲಾವಣೆ ಅಥವಾ ತಿದ್ದುಪಡಿಗೆ ಅರ್ಜಿ ಇರುವವರು ಈ ಅಥವಾ ಅವಶ್ಯ ಮುಂಚಿತವಾಗಿ ಸ್ವರೂಪದಲ್ಲಿ ಕಳುಹಿಸಬೇಕು

೧ ಹೆಸರು, ಮತ್ತು ಡಿಗ್ರಿ ಅಥವಾ ಡಿಗ್ರಿಗಳು

೩ ನವಸ್ಥಾಪಿತದ ನಂಬರು

೪ ವಿಳಾಸ

ಅಪ್ಪಣೆ ಮೇರೆಗೆ

(ರುಜು) ಸಿ ರಂಗಾಚಾರ್,

ರಿಜಿಸ್ಟ್ರಾರ್

ಮೈಸೂರು ಪುರಸಭಾ ಕಛೇರಿ

ತಾ|| 13 11—1952

ಟೆಂಡರ್ ನೋಟೀಸ್

ಈ ಮೂಲಕ ತಿಳಿಯಪಡಿಸುವುದೇನೆಂದರೆ

1953-54 (1-2-1953 ರಿಂದ 31 1 1954) ನೇ ಸಾಲಿಗೆ ಬೇಕಾಗುವ, ಈ ಕೆಳಗೆ ವಿವರಿಸಿರುವ ಸಾಮಾನುಗಳನ್ನು ಮೈಸೂರು ಸಿಟಿ ಮುನಿಸಿಪಾಲಿಟಿಗೆ ಸಪ್ಲೈ ಮಾಡಲು ಮೊಹರಾದ (Sealed tenders with samples) ಟೆಂಡರುಗಳನ್ನು ಸ್ಯಾಂಪಲ್ಲುಗಳೊಡನೆ 1952 ನೇ ಇಸವಿ ನವಂಬರ್ ಮಾಹೆ ತಾರೀಖು 27 ನೇ ಗುರುವಾರ ಮಧ್ಯಾಹ್ನ 4 ಘಂಟೆ ವರೆವಿಗೂ ಮುನಿಸಿಪಲ್ ಕಮೀಷನರ್ ರವರಿಂದ ಸ್ವೀಕರಿಸಲಾಗುತ್ತೆ

ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಿಸಿರುವಂತೆ ಟೆಂಡರು ಡಿಪಾಜಿಟ್ಟು ಹಣವನ್ನು ಜಮಾ ಮಾಡಿ, ಮುನಿಸಿಪಲ್ ಆಫೀಸಿನಿಂದ ಪಡೆದ ಸರ್ಟಿಫೈಡ್ ಚಲನ್ (Certified Chellan) ಸಮೇತ ತಮ್ಮ ಟೆಂಡರುಗಳನ್ನು ಕಳುಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಆಫೀಸ್ ವೇಳೆಯಲ್ಲಿ ಮೇಲ್ಕಂಡ ಕಛೇರಿಯಲ್ಲಿ ಮತ್ತು ನೋಟೀಸ್ ಬೋರ್ಡಿನಲ್ಲಿಯೂ ಕಾಣಬಹುದು

— ವಿವರ :

	ಬಾಬ್ತು	ಡಿಪಾಜಿಟ್
1.	ಸುಮಾರು 1000 ಪಲ್ಲ ಹುರುಳಿ ಮತ್ತು 50 ಪಲ್ಲ ಉಪ್ಪು	ರೂ 300
2	ಒಣಗಿದ ನೆಲ್ಲು ಹುಲ್ಲು 800 ಟನ್	,, 300
3	ಚಿಗರಿ ಹಗ್ಗ ಸುಮಾರು 1500 ಕೇಜಿ ನೂಲು ಹಗ್ಗ 30 ಮಣ ಎರಿ ಎಣ್ಣೆ 60 ಮಣ	ರೂ. 150

ಎಫ್ ಎಂ. ಅಬ್ದುಲ್ ರಹೀಂ,

ಮುನಿಸಿಪಲ್ ಕಮೀಷನರ್

Edited, Printed and Published by A R Nagarajan at Sadhvi Press, D Subbaiah ... Mysore.

ಬಿಲಿಫೂ। ನಂ 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೧೯ ೧೧ ೧೯೫೨ [ಸಂಚಿಕೆ ೯೫

ಮದ್ರಾಸು ಅಧಿಕಾರಿಗಳ ಸಂಬಳದಲ್ಲಿ ಖೋತಾ

ಭತ್ತದ ಶೇಖರಣೆ ಬಗ್ಗೆ ಸರ್ಕಾರದ ಹೊಸ ಆಜ್ಞೆ

ಧಾನ್ಯಕ್ಕೆ ಹೆಚ್ಚು ಬೆಲೆ ನಿಗದಿ

ಬೆಂಗಳೂರು ೧೯

[illegible]ತ್ತದ ಶೇಖರಣೆಗೆ ಸಂಬಂಧಿಸಿದಂತೆ ಸರ್ಕಾರದವರು ಈ ಕೂಡಲೇ ಜಾರಿಗೆ ಬರುವ ಹಗ್ಗಿಯ ಆಜ್ಞೆಯನ್ನು ಪ್ರಕಟಿಸುತ್ತಾರೆ ಅದರಂತೆ, ಪ್ರತಿ ಗ್ರಾಮದ [illegible] ಹೆಚ್ಚುವರಿ ಧಾನ್ಯವಿರುವವರು, ಅವರ [illegible]ಕ್ಕೆ ಪ್ರಮಾಣವೆಷ್ಟು ಮ[illegible] ಯಾವ ಸರ್ಕಾರಿ ಡಿಪ್ಪೋವಿಗೆ ಯಾವ ಅವಧಿಯಲ್ಲಿ ಕೊಡಬೇಕು– ಇವೇ[illegible] ತಾಪುವನ್ನು ತಾಲ್ಲೂಕುಗಳ ಅಮ[illegible] ಮತ್ತು ಸಂಬಂಧಪಟ್ಟ ಅಧಿ[illegible]ರಿಗಳು ನಿರ್ಧರಿಸಿ ಗ್ರಾಮಗಳ ಚಾವಡಿಗಳಲ್ಲಿ ಪ್ರಕಟಿಸುವರಲ್ಲದೆ ತಾಂಟಾಂ[illegible]ಮೂಲಕ ಡಂಗೂರ ಹೊಡಿಸುವರೆಂದೂ, ಕಳೆದ ವರ್ಷಗಳಲ್ಲಿ ಸದರಿ ಹೆಚ್ಚುವರಿ ಧಾರನವರು ಸರ್ಕಾರಕ್ಕೆ ಒಪ್ಪಿಸಿದ ಧಾನ್ಯದ ಪ್ರಮಾಣದ ಸರಾಸರಿಯನ್ನು ತೆಗೆದು [illegible] ಅದರಲ್ಲಿ ಶೇ॥ ಹತ್ತರಷ್ಟು ಕಡಿಮೆ ಮಾಡಿ, ಉಳಿದ ಪ್ರಮಾಣವನ್ನು ಅ[illegible]ಗಳು ಕೊಡುವಂತೆ ನಿಗದಿ ಮಾಡ[illegible]ವುದೆಂದೂ ತಿಳಿಸಲಾಗಿದೆ

[illegible] ಕೊಳ್ಳುವ ೧ ನೇ ರಖಂ [illegible] ಪಲ್ಲಾ ೧ ಕ್ಕೆ ೨೫ ರೂ ನಂತೆ [illegible] ೩ ನೇ ರಖಂ ಭತ್ತಕ್ಕೆ ೨೩ ರೂ [illegible] ಡಿಪ್ಪೋ ಬಳಿ ಭತ್ತವನ್ನು ಒ[illegible] ಕೊಡಲಾಗುವುದು

[illegible]ಸನಾದ ಧಾನ್ಯಕ್ಕೆ ಮಾತ್ರ ಮೇ[illegible] ದರದಂತೆ ಹಣ ಕೊಡಲಾಗುವು[illegible] ಧಾನ್ಯದಲ್ಲಿ ಮಣ್ಣು ಕಲ್ಲು ಇದ್ದ[illegible]ರುವವನು ಅದನ್ನು ಹಸನು ಮಾಡಿಕೊಡತಕ್ಕದ್ದು, ಇಲ್ಲವಾದರೆ ಅವ[illegible] ಹಸನು ಮಾಡಿಸಿ ಕೊಳ್ಳಲಾಗವುದೆಂದೂ ಸೂಚಿಸಲಾಗಿದೆ

ಹೆಚ್ಚುವರಿ ಇಲ್ಲದವರು ರೇಷನ್ ಕಾ[illegible]ಗಳಲ್ಲಿ ನಮೂದಿಸಿರುವಷ್ಟು ಧಾನ್ಯವನ್ನು ಇಟ್ಟುಕೊಳ್ಳಬಹುದಾಗಿದೆ

[illegible]ನದ ಒಂದು ಕಡೆಯಿಂದ ಮ[illegible] ವಕ್ಕೆ ಜಿಲ್ಲಾಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಪ್ರಕ[illegible] ಧಾನ್ಯ ವಸೂಲಿ ಕಾಲದಲ್ಲೂ, ಅ[illegible] ತಿಂಗಳ ಅವಧಿಯ [illegible] ಧಾನ್ಯವನ್ನು ಅನುಮತಿಯಿಲ್ಲದೆ [illegible] ಅವಶ್ಯಕತೆಗಳಿಗೆ ತ[illegible] ೩೦ ಸೇರು ಭತ್ತ ಅಥವಾ ೧೦ [illegible] ಅಕ್ಕಿಯನ್ನು ಸಾಗಿಸಬಹುದಾಗಿದೆ

[illegible]ದಾಯವನ್ನು ಧಾನ್ಯದ ರೂಪದ[illegible] ಮಾಡಲಾಗುವುದು ಭತ್ತ[illegible] ಒಂದು ತಿಂಗಳೊಳಗೆ [illegible]ವನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ತಿಳಿಸಲಾಗಿದೆ ಮುಖ್ಯ ಧಾನ್ಯಗಳ [illegible] ಹತೋಟಿಯನ್ನು ರದ್ದು ಮಾಡಲು ಸರ್ಕಾರದವರು ನಿರ್ಧರಿಸಿರುವರೆಂ[illegible] ಈ ಬಗ್ಗೆ ಸಧ್ಯದಲ್ಲೇ ಆಜ್ಞೆಯು [illegible]ವುದೆಂದೂ ಗೊತ್ತಾಗಿದೆ

[illegible]ಹೆಚ್ಚುವರಿ ಧಾನ್ಯದ ನಿಗದಿ ಬಗ್ಗೆ [illegible]ದವರೂ ತೊಂದರೆ ಅದರೆ ಅಜ್ಞೆ [illegible] ಒಂದು ತಿಂಗಳೊಳಗೆ ಅಮಲ್ದಾ[illegible] ಅರ್ಜಿ ಹಾಕಿ ಸರಿಪಡಿಸಿಕೊಳ್ಳಬ[illegible] [illegible]ಮಲ್ದಾರರ ಆಜ್ಞೆ ಮೇಲೆ

ಮದ್ರಾಸು ಅಧಿಕಾರಿಗಳ ಸಂಬಳದಲ್ಲಿ ಶೇ॥ ೧೦ರ ಖೋತಾ

ಮದ್ರಾಸಿನಲ್ಲಿ ಮಿತವ್ಯಯದ ದೃಷ್ಟಿಯಿಂದ, ೩೦೦ ರೂ ಗಳಿಗೆ ಹೆಚ್ಚು ಸಂಬಳ ಪಡೆಯುವ ಎಲ್ಲ ಸರ್ಕಾರೀ ನೌಕರರ ವೇತನದಲ್ಲೂ ಶೇ॥ ೧೦ ರಷ್ಟು ಕಡಿಮೆ ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿರುವರು ಬರುವ ಡಿಸೆಂಬರ್ ತಿಂಗಳಿನ ಸಂಬಳವನ್ನು ಜನವರಿಯಲ್ಲಿ ಬಟವಾಡೆ ಮಾಡುವಾಗ ಈ ಕ್ರಮವು ಜಾರಿಗೆ ಬಂದು ೧೦ ವರ್ಷ ಕಾಲ ನಡೆಯುವುದು ಸಂಬಳದ ಪೈಕಿ ಮೊದಲಿನ ೩೦೦ ರೂ ಗಳಲ್ಲಿ ಈ ರೀತಿ ಹಿಡಿಯಲಾಗುವುದಿಲ್ಲ ಅಲ್ಲಿನ ಗೌರ್ನರರು ಮತ್ತು ಸಚಿವರುಗಳು ಈ ಗಾಗಲೇ ತಮ್ಮ ಸಂಬಳದಲ್ಲಿ ಸ್ವತಃ ಖೋತಾ ಹಾಕಿಕೊಂಡಿರುವರ ೩೦೦ ರೂ ಗೆ ಮೇಲ್ಪಟ್ಟು ಪಿಂಚಣಿ ಪಡೆಯುತ್ತಿರುವವರಿಗೂ ಈ ಖೋತಾವು ಅನ್ವಯಿಸುವುದು ಭತ್ಯಗಳಲ್ಲಿ ಯಾವ ಖೋತಾವನ್ನೂ ಮಾಡಲಾಗುವುದಿಲ್ಲ

ಗಾಜಿನ ಚೂರು ನುಂಗಿ ಆತ್ಮಹತ್ಯ ಪ್ರಯತ್ನ

ಹೈದರಾಬಾದಿನಲ್ಲಿ ವಿಚಾರಣೆಗೆ ಗುರಿಯಾಗಿ ಲಾಕಪ್ಪಿನಲ್ಲಿರುವ ಇಬ್ಬರು ಖೈದಿಗಳು ಕಳೆದ ಶನಿವಾರ ಚಹಾದೊಡನೆ ಗಾಜಿನ ಚೂರುಗಳನ್ನು ಸೇರಿಸಿ ಕುಡಿದು ಆತ್ಮಹತ್ಯ ಮಾಡಿಕೊಳ್ಳಲು ಪ್ರಯತ್ನಿಸಿದ್ದರೆಂದೂ, ಆಸ್ಪತ್ರೆಯಲ್ಲಿ ಪೋಲೀಸರು ತಡೆಗಟ್ಟಿದರೆಂದೂ ಹೇಳಲಾಗಿದೆ

ಹಣಕಾಸಿನ ಕಾರ್ಯದರ್ಶಿಯವರ ಮನೆಯಲ್ಲಿ ಕಳ್ಳತನ

ಸರ್ಕಾರದ ಹಣಕಾಸಿನ ಕಾರ್ಯದರ್ಶಿ ಶ್ರೀ ಎಂ ರಾಮಣ್ಣನವರ ನಿವಾಸದಲ್ಲಿ ಕಳೆದ ಶನಿವಾರ ೧೪೫೦ ರೂ ಗಳ ಬೆಲೆಯ ಆಭರಣಗಳು ಕಳುವಾಗಿರುವುದಾಗಿ ಗೊತ್ತಾಗಿದೆ

ಸಬ್ ಡಿವಿಜನ್ ಅಧಿಕಾರಿಗಳಲ್ಲಿ ೧೫ ದಿನಗಳೊಳಗೆ ಅಪೀಲು ಹಾಕಬಹುದು ಜಿಲ್ಲಾಧಿಕಾರಿಗಳು ತಾವಾಗಿಯೇ ಆಗಲೀ, ಪಾರ್ಟಿಯವರಿಂದ ಅರ್ಜಿ ಬಂದರಾಗಲಿ ಅಮ್ಮರಾಗಿ ತೀರ್ಮಾನ ಕೊಡಬಹುದು

ಕೊರಿಯಾ ಬಿಕ್ಕಟ್ಟಿನ ಪರಿಹಾರಕ್ಕೆ ಭಾರತದ ಸಲಹೆ

ಕೊರಿಯಾ ಶಾಂತಿ ಸಂಧಾನದ ಬಿಕ್ಕಟ್ಟಿನ ಪರಿಹಾರಕ್ಕಾಗಿ ಭಾರತವು ತಯಾರಿಸಿರುವ ೧೭ ಅಂಶಗಳ ಸಲಹೆಯ [illegible] ನಿರ್ಣಯವನ್ನು ವಿಶ್ವಸಂಸ್ಥೆಯ ಪರಿಶೀಲನೆಗಾಗಿ ಒಪ್ಪಿಸಲಾಗಿದೆ ಅಂತರರಾಷ್ಟ್ರೀಯ ಜಿನೀವಾ ಸೂತ್ರದ ಮೇರೆಯ [illegible] ದಿತರನ್ನು ಅವರ ಸ್ವದೇಶಗಳಿಗೆ ಕಳುಹಿಸಲು ವ್ಯವಸ್ಥಾ ಸಮಿತಿಯು ನೇಮಕವಾಗಬೇಕು, ಬಲ ಪ್ರಯೋಗ ಕೂಡದು ಉತ್ತರ ಕೊರಿಯಾ ಪ್ರಧಾನಿ ಪತ್ರದ ಪ್ರಕಾರ ಖೈದಿಗಳ ವರ್ಗೀಕರಣವಾಗಬೇಕು ಇವೇ ಮುಂತಾದ ಹಲವು ನಿಬಂಧನೆಗಳನ್ನು ಸಲಹೆಯಲ್ಲಿ ಸೇರಿಸಲಾಗಿದೆ ಅಮೇರಿಕವು ಈ ಸಲಹೆಗಳನ್ನು ಈಗ ಇರುವಂತೆ ತಿರಸ್ಕರಿಸಿರುವುದೆಂದು ಹೇಳಲಾಗಿದೆ

ರಾಜಾಜಿ ಶಾಸನ ಸಭಾ ಸದಸ್ಯತ್ವದ ಅವಧಿ

ಮದ್ರಾಸಿನ ಹಿರಿಯ ಶಾಸನ ಸಭೆಯ ಸದಸ್ಯರಾಗಿ ನಾಮಕರಣ ಮಾಡಲ್ಪಟ್ಟ ಮುಖ್ಯ ಮಂತ್ರಿ ಸಿ ರಾಜಗೋಪಾಲಚಾರಿಯವರ ಸದಸ್ಯತ್ವದ ಅವಧಿಯು ನಾಲ್ಕು ವರ್ಷಗಳ ಕಾಲದ್ದೆಂದು ಮದ್ರಾಸಿನ ಗೌರ್ನರ್ ಶ್ರೀಪ್ರಕಾಶರವರು ಪ್ರಕಟಿಸಿರುತ್ತಾರೆ ವಿದ್ಯಾಮಂತ್ರಿ, ಡಾ॥ ಎಂ ವಿ ಕೃಷ್ಣರಾಯರ ಅವಧಿಯು ಎರಡು ವರ್ಷ ಮರಾಮತ್ತು ಮಂತ್ರಿ ಎ[illegible] ರಂಗಾರೆಡ್ಡಿಯವರ ಅವಧಿಯು ನಾಲ್ಕು ವರ್ಷಗಳೆಂದು ತಿಳಿಸಲಾಗಿದೆ.

ಅಗಾಖಾನರ ಜೂಜಿನ ಕುದುರೆಗೆ ೧೦ ಲಕ್ಷ ಡಾಲರ್

ಡರ್ಬಿ, ಸೆಂಟ್ ಲೇಜರ್, ಎಕ್ಲಿಪ್ಸ್ ಸ್ಟೇಕ್ಸ್ ಮತ್ತು ೬ನೇ ಜಾರ್ಜ್ ಮತ್ತು ರಾಣಿ ಎಲಿಜಬೆತ್ ಸ್ಟೇಕ್ಸ್ ಕುದುರೆ ಜೂಜುಗಳಲ್ಲಿ ಗೆದ್ದ, ಅಗಾಖಾನರ ತಳ ಯಾರ್ ಎಂಬ ಜೂಜಿನ ಕುದುರೆಯನ್ನು ಕೊಳ್ಳಲು ಲಂಡನ್ನಿನ ಜೂಜು ಕುದುರೆ ಮಾಲೀಕರ ಸಂಘವೊಂದು ೧೦ ಲಕ್ಷ ಡಾಲರನ್ನು (೪೮ ಲಕ್ಷ ರೂ) ಕೊಡಲು ಮುಂದೆ ಬಂದಿದೆಯೆಂದು ಹೇಳಲಾಗಿದೆ

ಮಂತ್ರಿ ದೇಶಮುಖ್‌ರವರು ರಾಜೀನಾಮೆ ಕೊಟ್ಟಿದ್ದರೇ ?

ದೇಶದಲ್ಲಿ ಆಹಾರದ ಹತೋಟಿಯನ್ನು ರದ್ದು ಮಾಡಿದಲ್ಲಿ ತಾವು ರಾಜೀನಾಮೆ ಕೊಡುವುದಾಗಿ ನೆಹರೂರವರಿಗೆ ಒಂದು ಪತ್ರವನ್ನು ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಬರೆದು ಇಟ್ಟುಕೊಂಡು, ಅದನ್ನು ಆ ಯೋಜನಾ ಮಂತ್ರಿ ಶ್ರೀ ಗುಲ್ಜಾರಿ ಲಾಲ್ ನಂದಾರವರಿಗೆ ತೋರಿಸಿದ್ದರೆಂದೂ, ಈ ವಿಷಯವು ಪ್ರಧಾನಿ ನೆಹರೂರವರಿಗೆ ತಿಳಿಯಲಾಗಿ ಅವರು ಆಹಾರ ಸಚಿವ ಕಿದ್ವಾಯಿರಿಗೆ ಸೂಚನೆಯನ್ನಿತ್ತು ಧಾನ್ಯದ ಹತೋಟಿ ರದ್ದಿ[illegible] ಯೋಜನೆಯನ್ನು ಮುಂದುವರಿಸದಿರಬೇಕೆಂದು ತಿಳಿಸಿದರೆಂದೂ ಹೇಳಲಾಗಿದೆ ಧಾನ್ಯದ ಹತೋಟಿ ರದ್ದಿನ ಬಗ್ಗೆ ಕೇಂದ್ರ ಮಂತ್ರಿಮಂಡಲದಲ್ಲಿ ಉಂಟಾದ ಭಿನ್ನಾಭಿಪ್ರಾಯದಿಂದ ಈ ಬಿಕ್ಕಟ್ಟು ಸಂಭವಿಸಿತ್ತೆಂದೂ ವರದಿಯಾಗಿದೆ

ದಕ್ಷಿಣ ಆಫ್ರಿಕದಲ್ಲಿ ೭ ಸಾವಿರ ಸತ್ಯಾಗ್ರಹಿಗಳ ಬಂಧನ

ದಕ್ಷಿಣ ಆಫ್ರಿಕಕ್ಕೆ ಯಾಕಗ ನಿಯೋಗವನ್ನು ಕಳುಹಿಸುವ ಆಲೋಚನೆಯಿರುವುದಿಲ್ಲವೆಂದು ನೆಹರೂರವರು ತಿಳಿಸಿರುತ್ತಾರೆ ದಕ್ಷಿಣ ಆಫ್ರಿಕಾ ಸತ್ಯಾಗ್ರಹದಲ್ಲಿ ಇದುವರೆಗೆ ೭ ಸಾವಿರ ಪ್ರತಿರೋಧ ಕಾರರನ್ನು ದಸ್ತಗಿರಿ ಮಾಡಲಾಗಿರುವುದೆಂದು ಹೇಳಲಾಗಿದೆ

ಕಾಫಿ ಹರಾಜು ಅಕ್ರಮವೆಂದು ಹೈಕೋರ್ಟಿಗೆ ಅರ್ಜಿ

ಕೊಯಮುತ್ತೂರಿನಲ್ಲಿ ಅಕ್ಟೋಬರ್ ೭ ಮತ್ತು ನವೆಂಬರ್ ೧೧ನೇ ತಾ॥ ನಡೆದ ಕಾಫಿ ಹರಾಜುಗಳು ಅಕ್ರಮವೆಂದು ಘೋಷಿಸಬೇಕೆಂದು ಮೈಸೂರಿನ ಕಾಫಿ ಪ್ಲಾಂಟರ್ ಒಬ್ಬರು ಮದ್ರಾಸು ಹೈಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾರೆ ನ್ಯಾಯಾಧೀಶ ಚಂದ್ರರೆಡ್ಡಿಯವರು ಅದರ ಮೇಲೆ ಕಾಫಿ ಬೋರ್ಡಿನ ಚೀಫ್ ಮಾರ್ಕೆಟಿಂಗ್ ಅಧಿಕಾರಿಗಳಿಗೆ ನೋಟೀಸು ಕೊಟ್ಟಿರುತ್ತಾರೆ

ಮದ್ರಾಸಿನಲ್ಲಿ ೫ ಲಕ್ಷ ಟನ್ ಮುಖ್ಯ ಧಾನ್ಯದ ಖೋತಾ

ಮಳೆ ಬಾರದ ಪ್ರಯುಕ್ತ ಮದ್ರಾಸು ಪ್ರಾಂತದಲ್ಲಿ ಒಟ್ಟು ೫ ಲಕ್ಷ ಟನ್ ಮುಖ್ಯ ಧಾನ್ಯದ ಖೋತಾ ಬೀಳಲಿರುವುದಾಗಿ ಅಲ್ಲಿನ ಆಹಾರ ಮಂತ್ರಿ ಸುಬ್ರಹ್ಮಣ್ಯಂರವರು ತಿಳಿಸಿರುತ್ತಾರೆ

ತಲೆ ಮೇಲೆ ವಿಮಾನ ಬಿದ್ದು ೩ ಜನ ಕೂಲಿಗಳ ಮರಣ

ಸ್ಪೇನಿನ ರಾಜಧಾನಿ ಮ್ಯಾಡ್ರಿಡ್ಡಿನ ಬಳಿ ಸಮೀಪ್ಲಯ ವಿಮಾನ ನಿಲ್ದಾಣದ ರನ್‌ವೇಯಲ್ಲಿ ಮೊನ್ನೆ ದಿನ ಒಂದು ಮಿಲಿಟರಿ ವಿಮಾನವು ಅಲ್ಲಿದ್ದ ಮೂವರು ಕೂಲಿಗಳ ತಲೆ ಮೇಲೆ ಬಿದ್ದ ಪರಿಣಾಮವಾಗಿ ಅವರು ಮಡಿದರೆಂದು ವರದಿಯಾಗಿದೆ

○ ಸರ್ಕಾರದ ಹೊಸ ಆಹಾರ ನೀತಿಯನ್ನು ಕುರಿತು ಪರ್ಯಾಲೋಚಿಸಲು ದೆಹಲಿಯಲ್ಲಿ ಇದೇ ೨೧ ನೇ ತಾ॥ ಸಂಸ್ಥಾನ ಸರ್ಕಾರಗಳ ಆಹಾರ ಕಾರ್ಯದರ್ಶಿಗಳ, ಸಭೆಯು ನಡೆಯಲಿರುವುದೆಂದು ಗೊತ್ತಾಗಿದೆ.

ವಿಶ್ವಸಂಸ್ಥೆಗೆ ಕಾಶ್ಮೀರದ ಅಧಿಪತಿಯ ಎಚ್ಚರಿಕೆ

ಕಾಶ್ಮೀರದ ಚುನಾಯಿತ ಅಧಿಪತಿಯಾಗಿ ಕರಣ್‌ಸಿಂಗರು ಪ್ರಮಾಣ ವಚನವನ್ನು ಮೊನ್ನೆ ತೆಗೆದುಕೊಂಡರು. ಆ ಸಮಾರಂಭದಲ್ಲಿ ಅವರ ಪತ್ನಿಯೂ, ನೇಪಾಳದ ಮಾಜಿ ಪ್ರಧಾನಿ ಮೋಹನ್ ಶಂಷೇರ್ ಜಂಗ್ ರಾಣಾರವರ ಮೊಮ್ಮಗಳೂ ಆದ ರಾಜಕುಮಾರಿ ಲಕ್ಷ್ಮಿಯವರು ಭಾಗವಹಿಸಿದ್ದರು. ಕಾಶ್ಮೀರದ ಅಧಿಪತಿಯು ಮಾತನಾಡಿ, ವಿಶ್ವಸಂಸ್ಥೆಯು ಕಾಶ್ಮೀರದ ಸಮಸ್ಯೆಯನ್ನು ಜಯಪ್ರದವಾಗಿ ಬಗೆ ಹರಿಸಿರುವುದಿಲ್ಲವೆಂದೂ, ಆಕ್ರಮಣಕಾರನೊಡನೆ, ಆಕ್ರಮಣಕ್ಕೆ ಗುರಿಯಾದವನನ್ನು ಹೋಲಿಸುತ್ತಿರುವುದೇ ಬಿಕ್ಕಟ್ಟಿಗೆ ಕಾರಣವೆಂದೂ ಹೇಳಿದರು.

ರೈಲ್ವೆ ಕಾರ್ಮಿಕರ ಮುಖಂಡರೊಡನೆ ಮ್ಯಾನೇಜರರ ಭೇಟಿ

ದಕ್ಷಿಣ ರೈಲ್ವೆಗಳ ಜನರಲ್ ಮ್ಯಾನೇಜರರಾದ ಶ್ರೀ ರಾಮಾನುಜಂರವರು ಮೊನ್ನೆ ಇಲ್ಲಿನ ವರ್ಕ್‌ಶಾಪಿಗೆ ಭೇಟಿಯಿತ್ತ ನಂತರ, ರೈಲ್ವೆ-ಕಾರ್ಮಿಕರ ದಕ್ಷಿಣ ಶಾಖಾ ಸಂಘದ ಮುಖಂಡರುಗಳಾದ ಜಾ|| ರಜಾಬ್ ಅಲಿ, ಎಲ್ ತಿರುವೆಂಗಡಂ ಮತ್ತು ಶಿವಣ್ಣಂರವರೊಡನೆ ಸಂಭಾಷಿಸಿದರು. ಅಧಿಕಾರಿ ವರ್ಗ ಮತ್ತು ಕಾರ್ಮಿಕರ ನಡುವೆ ಮಧುರ ಬಾಂಧವ್ಯವಿರುವುದೆಂಬುದನ್ನು ಸೂಚಿಸಲು, ದಕ್ಷಿಣ ಶಾಖೋಪ ಆಸ್ಪತ್ರೆಗೆ ಲೋಕೋ ಶೂಪರಿಂಟೆಂಡೆಂಟರ ಕಛೇರಿಯನ್ನೂ ಸೇರಿಸಿ ಅಲ್ಲಿ ಹೊಸದಾಗಿ ಕಟ್ಟಡಗಳನ್ನು ಹಾಕಿಸಲು ಏರ್ಪಾಡು ಮಾಡುವುದಾಗಿ ಅವರು ಭರವಸೆಯಿತ್ತರೆಂದು ಹೇಳಲಾಗಿದೆ.

ಗಾಂಧಿ ಸಾಹಿತ್ಯ ವ್ಯಾಸಂಗ ಗೋಷ್ಠಿ ಮುಕ್ತಾಯ ಸಮಾರಂಭ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ಶುಕ್ರವಾರ ಗಾಂಧಿ ಸಾಹಿತ್ಯ ವ್ಯಾಸಂಗ ಗೋಷ್ಠಿಯ ಮುಕ್ತಾಯ ಸಮಾರಂಭವು ಶ್ರೀ ಎಂ. ಬಿ. ನಾರಾಯಣ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಸಾಮೂಹಿಕ ಪ್ರಾರ್ಥನೆ, ಸ್ವಾಗತ ಮತ್ತು ಸಂಗೀತಗಳಾದ ನಂತರ, ಗಾಂಧಿ ಸಾಹಿತ್ಯ ಗೋಷ್ಠಿಯ ವರದಿಯನ್ನು ಒಪ್ಪಿಸಲಾಯಿತು. ಶ್ರೀ ಎನ್. ಎಸ್. ವೆಂಕಟಸುಬ್ಬರಾಯರು ಗಾಂಧಿ ಸಾಹಿತ್ಯದ ಕೆಲವು ಭಾಗಗಳನ್ನು ಓದಿದರು. ಅಧ್ಯಕ್ಷರು ಮಾತನಾಡಿ, ಗಾಂಧಿಜಿಯವರ ಸರಳತೆಯನ್ನು ವಿವರಿಸಿ, ಅವರ ಆದರ್ಶಗಳಂತೆ ಎಲ್ಲರೂ ನಡೆಯಬೇಕೆಂದು ಹೇಳಿದರು. ವಂದನಾರ್ಪಣೆ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಮೈಸೂರಿನ ಹೊಸ ಮುಖ್ಯ ಜಿಲ್ಲಾ ನ್ಯಾಯಾಧೀಶರು

ಬೆಂಗಳೂರಿನ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಜಿ. ನಟರಾಜರವರನ್ನು ಮೈಸೂರಿನ ಜಿಲ್ಲಾ ಮತ್ತು ಸರ್ಕ್ಯೂಟ್ ನ್ಯಾಯಾಧೀಶರಾಗಿ ನೇಮಿಸಲಾಗಿದೆ. ಸಿವಿಲ್ ಪ್ರದೇಶದ ಸಬ್ ಜಡ್ಜರಾದ ಶ್ರೀ ಕೆ. ಗುಬ್ಬಯ್ಯನವರನ್ನು ಅಡಿಷನಲ್ ಬೆಂಗಳೂರು ಜಿಲ್ಲಾ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ಒಂದೇ ಕಡೆ ೧೬೦೦ ಮಂದಿ ಆಫ್ರಿಕನ್ನರ ಬಂಧನ

ಕೆನ್ಯಾದ ಬೆಟ್ಟಗುಡ್ಡಗಳ ಒಂದು ಭಾಗದಲ್ಲಿರುವ ಪೋಲೀಸರು ಒಂದೇ ಬಾರಿಗೆ ೧೬೦೦ ಜನ ಆಫ್ರಿಕನ್ನರನ್ನು ವಶಪಡಿಸಿಕೊಂಡಿದ್ದಾರೆ. ಮೌ ಮೌ ದಂಗೆ ಸಂಬಂಧವಾಗಿ ಸರ್ಕಾರದವರು ಈ ಕ್ರಮವನ್ನು ಜರುಗಿಸಿರುತ್ತಾರೆ.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎಸ್. ರಾಮಚಂದ್ರರಾವ್, ಸಂಗೀತ ಮಧ್ಯಾಹ್ನ ೧-೪೦ ವೀಣೆ ೨-೩೦ ನಾಗೇಂದ್ರಪ್ಪ ಕ್ಲಾರಿಯೊನೆಟ್. ಸಂಜೆ ೫-೪೦ ಮತ್ತು ೭-೩೦ ಜಿ. ಆರ್. ಅಡಿಗೇಲು ಮತ್ತು ಡಿ. ಆರ್. ಪದ್ಮ ಸಂಗೀತ ೬-೧೦ ಕನ್ನಡ ಗೀತೆಗಳು ೭ ಬಸಿಯಲ್ಲಿ ಕಾರ್ಯಕ್ರಮ. ಟಿ. ಡಿ. ದೊರೆಸ್ವಾಮಿ ಅಯ್ಯಂಗಾರ್ ಮತ್ತು ಆರ್. ಎಸ್. ದೊರೆಸ್ವಾಮಿ ದ್ವಂದ್ವ ವೀಣೆ ೮-೧೫ ಎಂ. ಆರ್. ರಾಮಕೃಷ್ಣರಾವ್, ಭಾರತ ವಾಣಿ ೯-೩೦ ಡಿ ನಾಗೇಂದ್ರಪ್ಪ ೯-೧೫ ಎಂ. ಎಸ್. ಸುಬ್ಬುಲಕ್ಷ್ಮಿ ರೆಕಾರ್ಡ್ ಸಂಗೀತ ೯-೩೦ ಇಂಗ್ಲಿಷಿನಲ್ಲಿ ಚರ್ಚೆ

ಹಿಂದೀ ಪ್ರಕಾಶ್

ಮೈಸೂರು ಸಂಸ್ಥಾನದ ಹೈಸ್ಕೂಲುಗಳ ೩ ಮತ್ತು ೪ನೇ ತರಗತಿಗಳಲ್ಲಿ ಹಿಂದಿ ಪ್ರಕಾಶ್ ಎಂಬ ಪುಸ್ತಕವನ್ನು ಪುಸ್ತಕಗಳ ಸಮಿತಿಯವರು ಇಟ್ಟಿರುತ್ತಾರೆ. ಇದರಲ್ಲಿ ಮೊದಲಿನಿಂದ ಕೊನೆಯವರೆಗೂ ಭಾಷೆ, ವ್ಯಾಕರಣ ತಪ್ಪುಗಳ ನ್ಯೂನತೆ ಇದೆ. ಆ ನ್ಯೂನತೆಗಳಿಂದ ತುಂಬಿರುವ ಪುಸ್ತಕವನ್ನು ಓದುವುದರಿಂದ ಭಾಷಾ ಜ್ಞಾನವು ಹೆಚ್ಚುವುದಿಲ್ಲ. ಇನ್ನು ಮುಂದಾದರೂ ಟೆಕ್ಸ್ಟ್ ಬುಕ್ ಸಮಿತಿಯವರು ಇಂತಹ ನ್ಯೂನತೆಗಳು ಆಗದಂತೆ ನೋಡುವರೆಂದು ನಂಬಲಾಗಿದೆ—ಎಂದು, ಚಾಮರಾಜನಗರದ ಆದಿಂದ ಹಿಂದೀ ಮಂದಿರದ ಕಾರ್ಯದರ್ಶಿ, ಶ್ರೀ ಟಿ. ವೆಂಕಟಕೃಷ್ಣಯ್ಯನವರು ತಿಳಿಸುತ್ತಾರೆ.

ಮೈಸೂರು ಪೇಟೆ ಧಾರಣೆ

	ಹಳ್ಳಿಗೆ	ರೂ ಖಂಡದ ರೂಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	
ಹಲಸಂದೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಅವರೆ	[illegible]	[illegible]
ಕೊಂಗೋಧೀಜ	[illegible]	
ಬೆಂಡಿನಕಾಯಿ		
ಮೂಡಗಿಳ್ಳೆ	[illegible]	[illegible]
ಮೆಣಸಿನಕಾಯಿ	[illegible]	
ಬೆಲ್ಲ	[illegible]	
ಸೇರ್ ಕಾಯಿ	[illegible]	

ತೆಂಗಿನ ಕಾಯಿ ೧೦೦೦ಕ್ಕೆ [illegible]

ಪತ್ರಿಕಾ ಗಿರಾಕಿಗಳಿಗೆ

ಮೈಸೂರು ನಗರದಲ್ಲಿ ಸಾಧ್ವಿ ಪತ್ರಿಕೆಯ ಚಂದಾದಾರರನ್ನು ಕೂಡಿಸಿ, ಪತ್ರಿಕೆ ಹಂಚಲು, ಅದೇ ಮೊಹಲ್ಲಾದಲ್ಲಿ ವಾಸವಾಗಿರುವ ಹುಡುಗರು ಬೇಕಾಗಿದ್ದಾರೆ.

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಏಜೆಂಟರು, ಮೈಸೂರು
ಇವರಲ್ಲಿ ವಿಚಾರಿಸಿ.

ಆಹಾರದ ಬೆಲೆ ಮಿತಿ ಅನಶ್ಯಕವೆಂದು ದೇಶಮುಖ್

ಪಾರ್ಲಿಮೆಂಟಿನಲ್ಲಿ ಮೊನ್ನೆ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ಮಾತನಾಡಿ, ಬೆಳೆಯುವವನು ಮತ್ತು ಕೊಳ್ಳುವವನು ಇವರಿಬ್ಬರ ಹಿತವನ್ನು ರಕ್ಷಿಸಲು ಬೆಳೆಗೆ ಸೂಕ್ತವಾದ ಬೆಲೆಯನ್ನು ನಿಗದಿ ಮಾಡಬೇಕಾದ ಅವಶ್ಯಕತೆ ಇರುವುದೆಂದು ತಿಳಿಸಿದರು. ಹೆಚ್ಚು ಬೆಲೆಕೊಟ್ಟರೆ ಮಾತ್ರ ಹೆಚ್ಚು ಬೆಳೆ ತೆಗೆಯುವರೆಂಬ ವಾದವು ಸರಿಯಲ್ಲವೆಂದು ಅವರು ಹೇಳಿದರು. ದೇಶದಲ್ಲಿ ಯೋಜನಾಬದ್ಧ ಕೆಲಸವು ನಡೆಯಬೇಕಾದರೆ, ಆ ಕೋಟೆಯು ಅವಶ್ಯಕವೆಂದು ಅವರು ತಿಳಿಸಿದರು. ಅವರು ಬೆಲೆಗಳ ಪಟ್ಟಿಯನ್ನು ಒದಗಿಸಿ, ಅಕ್ಕಿಯ ಬೆಲೆಯು ೧೯೩೯ರಲ್ಲಿ ೧೦೦ ರಷ್ಟು ಇದ್ದರೆ ಈಗ ೩೯೬ ರಷ್ಟು ಏರಿರುವುದಾಗಿ ಹೇಳಿದರು.

ಪಾಕಿಸ್ತಾನದ ನೆಲಿ ಮೇಲೆ ಫಕ್ತೂನರ ಧಾಳಿ

ಪಾಕಿಸ್ತಾನದ ಬನ್ನು ವಿಷಯದ ಪ್ರದೇಶದ ಮೇಲೆ ಇತ್ತೀಚೆಗೆ ಮಧ್ಯ ಫಕ್ತೂನಿಸ್ತಾನದ ಸೈನ್ಯಗಳು ಧಾಳಿ ನಡೆಸಿ, ಒಬ್ಬ ಪಾಕಿಸ್ತಾನಿ ಅಧಿಕಾರಿಯೊಬ್ಬನನ್ನು ಕೊಂದುದೆಂದು ವರದಿಯಾಗಿದೆ.

ನೆಹರೂ ಜಯಂತಿ

ರಾಜಧಾನಿಯ ಮಹಿಳಾ ಸಮಾಜದಲ್ಲಿ ಕಳೆದ ೧೪ನೇ ತಾ|| ನೆಹರೂರವರ ಜಯಂತಿಯು ನಡೆಯಿತು. ಅಡ್ವೊಕೇಟ್ ಬಾಂಬೆ ಶ್ರೀ ಹೆಚ್. ಸುಬ್ಬರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಎಂ. ಇಂದಿರಾಬಾಯಿಯವರು ಭಾರತದಲ್ಲಿನ ಕೆಲಸಕ್ಕೆ ನೆಹರೂರವರ ಅಧ್ಯಾಯವನ್ನು ಸ್ಪಷ್ಟವಾಗಿ ವಚನ ಮಾಡಿದರು. ಅಧ್ಯಕ್ಷರ ಭಾಷಣಾನಂತರ ವಂದನಾರ್ಪಣೆ, ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ.
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್
ಮೈಸೂರು.

ಷಾರ್ಟ್‌ಹ್ಯಾಂಡ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ವರ್ತನೆ

ವಿದ್ಯಾರ್ಥಿ ವೃಂದದಲ್ಲಿ ಇತ್ತೀಚೆಗೆ ಪ್ರಪಂಚದಾದ್ಯಂತದಿಂದ ನಡೆದು ಪರೀಕ್ಷೆಗಳಿಗೆ ಬಹಿಷ್ಕಾರದ ಮತ್ತು ಪ್ರತಿಭಟನೆಗಳು ಹೆಚ್ಚಾಗುತ್ತಿರುವ ಕಾರಣದ ಆಧಾರದಿಂದ ಮೊದಲಾದ ವಿಷಯಗಳನ್ನು ಕೇಳುವ ಪ್ರಸಂಗಗಳು ಹೆಚ್ಚುತ್ತಿವೆ. ಕಳೆದ ಸೋಮವಾರ ರಾಜಧಾನಿಯ ಮಹಾರಾಜಾ ಹೈಸ್ಕೂಲಿನಲ್ಲಿ ನಡೆದ ಷಾರ್ಟ್‌ಹ್ಯಾಂಡ್ ಪರೀಕ್ಷೆಗೆ ವಿದ್ಯಾರ್ಥಿಗಳು ಕುಳಿತು, ಪರೀಕ್ಷಕರು ಪ್ರಶ್ನೆ ಪತ್ರಿಕೆ ಕೊಟ್ಟರೆಂಬ ನೆಪದಿಂದ ಉತ್ತರವನ್ನೇ ಬರೆಯದೆ ಖಾಲಿ ಹಾಳೆಗಳನ್ನು ಇಟ್ಟು ಮತ್ತೆ ನನ್ನ ನಡೆದ ಪರೀಕ್ಷೆಗೆ ಹಾಜರಾಗದೆ ಇದ್ದುದು ಉಚಿತವಲ್ಲ. ಪ್ರಶ್ನೆಗೆ ತಮಗೆ ತಿಳಿದ ಉತ್ತರ ಬರೆದು ಅನಂತರದಲ್ಲಿ ಕಂಡುಬಂದ ನ್ಯೂನತೆಗಳನ್ನು ಪಾರುಪಡಿಸಿಕೊಳ್ಳಬಹುದು. ಸೂಕ್ತವಾದ ಮಾರ್ಗವಾದ ಇದನ್ನು ಬಿಟ್ಟು ಪರೀಕ್ಷೆಗಳಿಗೆ ಬಹಿಷ್ಕಾರ ಹಾಕುವುದು ಅಹಿತ ಮತ್ತು ದಕ್ಷತೆಯುಳ್ಳ ವಿದ್ಯಾರ್ಥಿಗಳು ಅನುಸರಿಸುವ ಮಾರ್ಗವಲ್ಲವೆಂದು ಹೇಳಬೇಕಾಗುತ್ತದೆ. ನವೆಂಬರ್ ನಡೆದ ಪರೀಕ್ಷೆಗೆ ಕುಳಿತಿದ್ದವರು ಷಾರ್ಟ್‌ಹ್ಯಾಂಡ್ ಡಿಕ್ಟೇಷನ್ ತೆಗೆದುಕೊಂಡರೂ, ಅದ ಟ್ರಾನ್ಸ್‌ಕ್ರೈಬ್ ಮಾಡದೆ ಖಾಲಿ ಹಾಳೆಗಳನ್ನು ಕೊಟ್ಟರೆಂದು ಹೇಳಲಾಗುತ್ತಿದೆ. ಆದುದರಿಂದ ಇನ್ನು ಮುಂದಾದರೂ ವಿದ್ಯಾರ್ಥಿಗಳು, ಈ ಬಗೆ ಬಹಿಷ್ಕಾರ ನೀತಿಯನ್ನು ಬಿಟ್ಟು ದಕ್ಷತೆ ಮತ್ತು ಆಸಕ್ತಿಯಿಂದ ತಮ್ಮ ಗುರಿ ಸಾಧಿಸುವುದು ಸೂಕ್ತವಾಗಿದೆ.

—ವಿದ್ಯಾರ್ಥಿ ಹಿತೈಷಿ

○ ಕಾಶ್ಮೀರದಲ್ಲಿ ರಾಜತ್ವವು ರದ್ದಾಗಿರುವುದರಿಂದ ಇನ್ನು ಮುಂದೆ ಜಮ್ಮು ಸಂಸ್ಥಾನ ಸರ್ಕಾರದವರು ಮಾಜಿ ಅರಸರಾದ ಮಹಾರಾಜಾ ಹರಿಸಿಂಗರಿಗೆ ತಮ್ಮ ಭಾಗದ ರಾಜಧನವನ್ನು ನಿಲ್ಲಿಸಿರುವರೆಂದು ಗೊತ್ತಾಗಿದೆ.

SRI GAYATHRI
TALKIES
Daily 2 Shows
On 19th and 20th
November 1952
THIS SIDE OF THE LAW
Starring Viveca Lindfor
Kent Smith & Robert Douglas
NEXT CHANGE
DETECTIVE STORY
Academy Art Picture

ಒಲಂಪಿಯಾ ★ ಪ್ರದರ್ಶನ ಪ್ರಾರಂಭ **20.11.52** ರಿಂದ
ದಿನವಹಿ ಮೂರು ಆಟಗಳು
ಜೆಮಿನಿ (ಮೈನರ್ ಡಿಸ್ಟ್ರಿಬ್ಯೂಟರ್ಸ್ ಪ್ರೆಸೆಂಟ್ಸ್) ವರ್ಣರಂಜಿತ ಮಾಂತ್ರಿಕ ಚಿತ್ರ
✻ ಬಾಗ್ದಾದ್ ✻
ನೃತ್ಯ ಗಾನ ಮತ್ತು ಭಯಂಕರ ಕ್ರೀಡೆಗಳಿಂದೊಡಗೂಡಿದ
ಅತೀವ ಚಿತ್ರ
ಪಾತ್ರವರ್ಗ — ಯಶೋದರಾ ಕಟ್ಟು, ಭಗವಾನ್ ಮತ್ತು
ನಾಡಿನ ಕಲಾವಿದರು
ಬೆಳಗಿನ ಪ್ರದರ್ಶನ — ಶಿ ಷ್ ಮ ತ್

Edited, Printed and Published by A. R. Nagaraj
at Sadhvi Press, D. Subbiah Road, Mysore

ಟೆಲಿಫೋನ್ ನಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೦-೧೧-೧೯೫೨ [ಸಂಚಿಕೆ ೯೩

ಕೊರಿಯದಲ್ಲಿ ವಿಷ ವಾಯು ಪ್ರಯೋಗ ?

ಶ್ರೀಕಂಠಶಾಸ್ತ್ರಿಗಳವರಿಗೆ ಪ್ರಭುಗಳ ಭೇಟಿ

ಮೈಸೂರು ೨೦

[illegible] ಮಹಾ ವಿದ್ವಾನ್ ನಂಜನ[illegible] ಶ್ರೀಕಂಠಶಾಸ್ತ್ರಿಗಳವರಿಗೆ ಶ್ರೀ [illegible] ಮಹಾರಾಜರು ನೆನ್ನೆ ಅರಮನೆ [illegible] ಬರಮಾಡಿ ಹಲವು ನಿಮಿ[illegible] ಸಂಭಾಷಣೆ ನಡೆಸಿದರು ಶ್ರೀ [illegible]ಗಳವರು ಪ್ರಭುಗಳಿಗೆ ತಮ್ಮ ಬೆಳ್ಳಿ[illegible] ವ್ಯಕ್ತಪಡಿಸಿ, ಕನ್ನಡ ಸಾಹಿತ್ಯ [illegible]ಷತ್ತಿನವರು ತಮಗೆ ಮಾಡಿದ ಸನ್ಮಾ[illegible]ವನ್ನು ವಿವರಿಸಿದರು ತಮ್ಮ ಗುರುಗ[illegible] ಶ್ರೀ ಶಾಸ್ತ್ರಿಯವರಿಂದ ಪ್ರಭುಗಳು [illegible]ರ್ವಾದ ಪಡೆದು ಅವರನ್ನು ಬೀ[illegible]ಟ್ಟರು.

[illegible] ದಳದಲ್ಲಿ ಸೇರಬಯಸುವವರಿಗೆ ಸೂಚನೆ

[illegible] ರತದ ನೌಕಾದಳದ ವಿಶೇಷ [illegible] ಉತ್ತಮ ವಿಭಾಗವಾದ ಆರ್ಟಿಫೈಸರ್ [illegible]ಟಿಸ್ ಶಾಖೆಗೆ ಸೇರಲಿಚ್ಛಿಸುವ [illegible] ವರ್ಷದಿಂದ ೧೬॥ ವರ್ಷದೊಳಗಿರು[illegible] ತ್ತು ಸೈನ್ಸ್ ಮತ್ತು ಮ್ಯಾಥಮ್ಯಾ[illegible] ಐಚ್ಛಿಕ ವಿಭಾಗವಾಗಿ ತೊಂದಿ [illegible] ಮೆಟ್ರಿಕ್ಯುಲೇಷನ್ ಪಾಸು ಮಾಡಿರುವ [illegible] ಇಲ್ಲಿಗೆ ಆಗಮಿಸಿರುವ ಭಾ[illegible] ನೌಕಾ ದಳದ ರಿಕ್ರೂಟಿಂಗ್ ಆಫೀ[illegible] ದ ಲೆ॥ ಡಿ ಎಸ್ ಶಹಿಯವರ[illegible] ಳಿ ಬೆಳಿಗ್ಗೆ ೮ ಗಂಟೆಗೆ ಇಲಾ[illegible]ಯಲ್ಲಿರುವ ಎಂಪ್ಲಾಯ್‌ಮೆಂಟ್ [illegible]ನಲ್ಲಾಗಲೀ ಅದವಾ ೩[illegible] ನೇ ತಾ॥ ಬೆಂಗಳೂರಿನ ಅ[illegible]ರಿಯಲ್ಲಾಗಲೀ ಭೇಟಿ ಮಾ[illegible] ಎಂದು ಈ ಮೂಲಕ ತಿಳಿಸಲಾ[illegible]

ಕೊ[illegible] ಫಾರಂ ಅಧಿಕಾರಿಗಳಿಗೆ ೨೫ ವರ್ಷ ಶಿಕ್ಷೆ

[illegible] ರಾಜಧಾನಿ, ಮಾಸ್ಕೋವಿನ [illegible] ಸಾರಪ್ಯಾನ ಧರ್ಮದರ್ಶಿ [illegible] ಜನ ಅಧಿಕಾರಿಗಳು ಇಲಾ[illegible] ಸಂಬಂಧಿಸಿದಂತೆ ೧೩೩ ಸಾವಿರ ರೂ[illegible]ಗಳನ್ನು ದುರುಪಯೋಗಪಡಿಸಿಕೊಂಡರೆಂದು ಶಿಕ್ಷೆಗೆ ಗುರಿಯಾಗಿರು[illegible] ಇಬ್ಬರು ಅಧಿಕಾರಿಗಳಿಗೆ ತಲಾ [illegible] ವರ್ಷ, ಉಳಿದವರಿಗೆ ೧೦ ರಿಂದ ೨೦ ವರ್ಷಗಳ ಸಜಾ ವಿಧಿಸಲಾಗಿದೆ ಅವ[illegible] ಮರಿ ಮತ್ತು ನೊಟ್ಟೆ ಗ[illegible] ನೇ ದರ್ಜೆಯ ಕೋಳಿಗಳ[illegible] ಎರಡನೇ ದರ್ಜೆಯವೆಂದು ಹೇಳಿ, [illegible] ದುಡ್ಡಿಗೆ ಮಾರಿ, ಬಂದುದರಲ್ಲಿ [illegible] ಭಾಗವನ್ನು ತಾವೇ ಉಪಯೋ[illegible] "ಮೃಷ್ಟಾನ್ನ ಭೋಜನ" ಮಾಡಿ[illegible] ಆಪಾದಿಸಲಾಗಿದ್ದಿತು

ಕುದಿಯುವ ಎಣ್ಣೆ ಹಾರಿ ಮಗುವಿನ ಮರಣ

[illegible] ನಗರದ ಮೈಸೂರು ರ[illegible] ಮನೆಯಲ್ಲಿ ಕಳೆದ ೧೬ ನೇ [illegible] ಪಾರ್ವತಿ ಎಂಬ ೫ ವರ್ಷದ [illegible] ಆಟವಾಡುತ್ತಾ, ಒಲೆ ಬಳಿ [illegible] ಬಾಣಲೆಯಲ್ಲಿ ಕುದಿಯು[illegible] ಎಣ್ಣೆಯು ಮಗುವಿನ ಮೈ ಮೇಲೆ [illegible] ಗಾಯವಾಯಿತೆಂದೂ, [illegible] ಆಸ್ಪತ್ರೆಗೆ ಸಾಗಿಸಲಾಗಿ [illegible] ಮಗುವು ಮೃತಪಟ್ಟಿತೆಂದೂ ವರ[illegible]ಯಾಗಿದೆ

ನಂಜನಗೂಡಿನಲ್ಲಿ ಕಾವ್ಯ ವಾಚನದ ಆರಂಭ

ಸ್ವಂ ಸು ಫೋ॥] ಬೆಂಗಳೂರು ೨೦

ಇದೇ ೨೩ ನೇ ತಾ॥ ಗೀತಾ ಜಯಂತಿಯ ದಿನ ನಂಜನಗೂಡಿನಲ್ಲಿ ಕಾವ್ಯ ಭಾರತ, ರಾಮಾಯಣ ಮುಂತಾದ ಸಾಂಸ್ಕೃತಿಕ ಪ್ರಚಾರದ ಆರಂಭೋತ್ಸವವನ್ನು ನೆರವೇರಿಸಲಾಗುವುದೆಂದೂ ಶ್ರೀಮನ್ಮಹಾರಾಜರವರು ಅದನ್ನು ನೆರವೇರಿಸಲಿರುವರೆಂದೂ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ತಿಳಿಸಿದರು ಒಂದೊಂದು ಜಿಲ್ಲೆಯಲ್ಲೂ ಎಡೆಬಿಡದೆ ಈ ಪ್ರಚಾರವನ್ನು ಒಂದು ತಿಂಗಳು ಕೈಗೊಳ್ಳಲಾಗುವುದೆಂದೂ ಅವರು ತಿಳಿಸಿದರು

ಸಂಬಳದ ಘೋಷಣಾ ಬಗ್ಗೆ ಅಧಿಕಾರಿಗಳ ಪ್ರತಿಭಟನೆ

ಇಂಡಿಯನ್ ಸಿವಿಲ್ ಸರ್ವಿಸ್ಸಿಗೆ ಸೇರಿದ ಮದ್ರಾಸು ಸರ್ಕಾರದ ಅಧಿಕಾರಿಗಳಿಗೆ ಸಂಬಳದಲ್ಲಿ ಕೇಂದ್ರ [illegible] ಘೋಷಣೆಯನ್ನು ಅನ್ವಯಿಸದಿರಬೇಕೆಂದು ಸರ್ಕಾರಕ್ಕೆ ಅರಿಕೆಮಾಡಿಕೊಳ್ಳಲು ಅವರು ನಿರ್ಧರಿಸಿರುವರೆಂದು ವರದಿಯಾಗಿದೆ ಅವರು ಭಾರತ ಸರ್ಕಾರಕ್ಕೆ ದೀರ್ಘವಾದ ಮನವಿಯೊಂದನ್ನು ಈ ಬಗ್ಗೆ ಸಲ್ಲಿಸುವರೆಂದು ಹೇಳಲಾಗಿದೆ ಸಂಬಳದ ಘೋಷಣೆಯಿಂದ ಪ್ರಸಕ್ತ ಸಾಲಿನಲ್ಲಿ ಮದ್ರಾಸು ಸರ್ಕಾರಕ್ಕೆ ೮ ಲಕ್ಷ ರೂ ಉಳಿತಾಯವಾಗುವುದೆಂದು ಗೊತ್ತಾಗಿದೆ ಮದ್ರಾಸು ನಗರದಲ್ಲಿರುವ ಅಧಿಕಾರಿಗಳಿಗೆ ತಿಂಗಳಿಗೆ ೭೫ ರೂ ನಂತೆ ದೊರೆಯುತ್ತಿರುವ ಮೋಟಾರು ಭತ್ಯವು ಘೋಷಣೆಯಿಂದ ನಿಂತುಹೋಗುವುದೆಂದು ಹೇಳಲಾಗಿದೆ

ನೇಪಾಳದಲ್ಲಿ ಚೀಣಾ ಸೈನಿಕನ ದಸ್ತಗಿರಿ

ಗಡಿಯನ್ನು ದಾಟಿ ನೇಪಾಳದೊಳಗೆ ಬಂದಿದ್ದ ಒಬ್ಬ ಚೀಣಾ ಸೈನಿಕನನ್ನು ೧ ಬಂದೂಕ ಮತ್ತು ೮೮ ಗುಂಡುಗಳ ಸಮೇತ ದಸ್ತಗಿರಿ ಮಾಡಿ ಪ್ರಶ್ನೆ ಮಾಡಲು ಖಟ್ಮಂಡು ನಗರಕ್ಕೆ ಕರೆತರಲಾಗಿದೆ ಆತನಿಗೆ ನೇಪಾಳಿ ಭಾಷೆಯಾಗಲಿ, ಇಂಗ್ಲಿಷ್ ಆಗಲಿ ಬರುತ್ತಿಲ್ಲವೆಂದೂ ಹೇಳಲಾಗಿದೆ

ಬೆಂಕಿಯಿಂದ ಮಗು ಮತ್ತು ೫ ಎಮ್ಮೆಗಳ ನಾಶ

ಚೆನ್ನಗಿರಿ ತಾಲ್ಲೂಕಿನ ಮಾಚನಾಯ್ಕನ ಹಳ್ಳಿಯಲ್ಲಿ ಕಳೆದ ೧೫ನೇ ತಾ॥ ರಾತ್ರಿ ಹುಲ್ಲಿನ ಮನೆಯೊಂದಕ್ಕೆ ಬೆಂಕಿ ಬಿದ್ದು ೫ ಎಮ್ಮೆಗಳೂ, ೩ ವರ್ಷದ ಒಂದು ಮಗುವೂ ಬೆಂದುಹೋದುವು.

ಆಹಾರದ ಬೆಳೆಗಾಗಿ ೬೫ ಲಕ್ಷ ರೂ. ಹೆಚ್ಚು ಸಹಾಯ

ಸ್ವಂ ಸು ಫೋ॥] ಬೆಂಗಳೂರು ೨೦

ಅಧಿಕ ಆಹಾರ ಬೆಳೆ ತೆಗೆಯುವ ಬಗ್ಗೆ ಕೇಂದ್ರ ಸರ್ಕಾರದವರು ಈಗಲೇ ೬,೬೫೦೦೦ ರೂ ಗಳನ್ನು ಸಹಾಯವಾಗಿಯೂ ೯೭ ಲಕ್ಷ ರೂ ಗಳನ್ನು ಸಾಲವಾಗಿಯೂ ಹೆಚ್ಚಾಗಿ ಬಿಡುತ್ತಾರೆ ಕೆರೆ ರಿಪೇರಿ ಭೂಮಿ ಅಭಿವೃದ್ಧಿ, ನೀರಾವರಿ ಇವುಗಳಿಗೆ ಈ ಹಣವನ್ನು ವಿನಿಯೋಗಿಸಲಾಗುವುದು

ಕಚ್ಚಾ ಫಿಲಂ ಕಾರ್ಖಾನೆಗೆ ೨೫ ಲಕ್ಷ ರೂ

ಕೃಷ್ಣರಾಜನಗರದಲ್ಲಿ ಸ್ಥಾಪಿಸಲಾಗುವ ಕಚ್ಚಾ ಫಿಲಂ ಕಾರ್ಖಾನೆಯನ್ನು ಮೈಸೂರು ಸರ್ಕಾರದವರೇ ಸ್ವತಂತ್ರವಾಗಿ ನಡೆಸುವರೆಂದೂ ಇದಕ್ಕಾಗಿ ಈಗಾಗಲೇ ೨೫ ಲಕ್ಷ ರೂ ಗಳ ವೆಚ್ಚದ ಅಂದಾಜನ್ನು ಸಿದ್ಧಗೊಳಿಸಲಾಗಿರುವುದೆಂದೂ ಗೊತ್ತಾಗಿದೆ

ಕೊರಿಯದಲ್ಲಿ ವಿಷವಾಯು ಬಾಂಬುಗಳ ಪ್ರಯೋಗ ?

ಕೊರಿಯದಲ್ಲಿ ಕ್ರಿಮಿ ಯುದ್ಧವನ್ನು ನಡೆಸುತ್ತಿರುವುದರ ಜೊತೆಗೆ ವಿಷವಾಯು ತುಂಬಿದ ಬಾಂಬುಗಳನ್ನು ಅಮೆರಿಕನ್ನರು ಹಾಕುತ್ತಿರುವುದೆಂದು ಉತ್ತರ ಕೊರಿಯಾ ಸರ್ಕಾರವು ವಿಶ್ವಸಂಸ್ಥೆಯ ಅಧ್ಯಕ್ಷರಿಗೆ ತಂತಿಮೂಲಕ ತಿಳಿಸಿರುತ್ತದೆ

ಸಕ್ಕರೆ ದರ ಏಪ್ರಿಲ್ಲಿನಿಂದ ಕಡಿಮೆ

ಮಣಕ್ಕೆ ೪ ರೂ ಗಳಂತೆ ಸಕ್ಕರೆಯ ಬೆಲೆಯನ್ನು ಮುಂದಿನ ಏಪ್ರಿಲ್ ತಿಂಗಳಿನಿಂದ ಕಡಿಮೆ ಮಾಡಬಹುದೆಂದು ಕೇಂದ್ರ ರೆವಿನ್ಯೂ ಮಂತ್ರಿ ಮಹಾವೀರ ತ್ಯಾಗಿಯವರು ತಿಳಿಸಿರುವರು.

ರಾಜೀನಾಮೆ ಕೊಡುವುದಾಗಿ ನಗೀಬ್ ಬೆದರಿಕೆ

ಈಜಿಪ್ಟಿನಲ್ಲಿ ವಾಮ ಪಕ್ಷದವರ ಚಳುವಳಿಯ ಬಗ್ಗೆ ಅಲ್ಲಿನ ಪ್ರಧಾನಿ ನಗೀಬ್‌ರವರು ಬೇಸರಗೊಂಡು, ತಮ್ಮ ಅಧಿಕಾರಕ್ಕೆ ರಾಜೀನಾಮೆ ಕೊಡುವುದಾಗಿ ತಿಳಿಸಿರುವರೆಂದು ವರದಿಯಾಗಿದೆ

ವಿಶ್ವ ಸಂಸ್ಥೆ ಸಮಿತಿಗೆ ಸ್ಪೇನಿನ ಪ್ರವೇಶ

ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಮಿತಿಗೆ ಸ್ಪೇನನ್ನು ಸೇರಿಸಲಾಗುವುದು

ಭತ್ತದ ದರ ಹೆಚ್ಚಿ ರೈತರಿಗೆ ೭೦ ಲಕ್ಷ ರೂ. ಹೆಚ್ಚು ಹಣ

ಶುದ್ಧವಾದ ಧಾನ್ಯವನ್ನು ಮಾತ್ರ ಕೊಳ್ಳುವಂತೆ ಸರ್ಕಾರದ ಸೂಚನೆ

ಸ್ವಂ ಸು.ಫೋ॥] ಬೆಂಗಳೂರು ೨೦

ರಾಗಿ, ಜೋಳ, ನವಣೆ, ಸಾವೆ ಇವೇ ಮುಂತಾದ ಖುಷ್ಕಿ ಧಾನ್ಯಗಳನ್ನು ಸಂಗ್ರಹಿಸುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇಂದು ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು ಭತ್ತವನ್ನು ಮಾತ್ರ ವಸೂಲು ಮಾಡಲಾಗುವುದೆಂದೂ, ಹತೋಟಿಯು ಹೋಗಿ ಜನರಿಗೆ ಈಗ ತೊಂದರೆಗಳು ಕಡಿಮೆಯಾಗಿ ಸ್ವಲ್ಪ ಮಟ್ಟಿನ ಸಮಾಧಾನವು ಬರುವುದೆಂದೂ ಅವರು ಹೇಳಿ, ಭತ್ತದ ಬೆಲೆಯನ್ನು ೪ ರೂ ಹೆಚ್ಚು ಮಾಡಿರುವುದರಿಂದ ಒಟ್ಟು ೭೦ ಲಕ್ಷ ರೂಗಳು ರೈತರಿಗೆ ಹೆಚ್ಚಾಗಿ ಸಂದಾಯವಾಗುವುವೆಂದೂ, ಅಧಿಕವಾಗಿ ಬೆಳೆಯನ್ನು ತೆಗೆಯಲು ಇದು ಉತ್ತೇಜನಕಾರಿಯೆಂದೂ ತಿಳಿಸಿದರು

ಆಹಾರದ ಬೆಲೆ ಮತ್ತು ಸಾಗಾಣಿಕೆ ಇವುಗಳನ್ನು ಪರಿಸ್ಥಿತಿಗೆ ಹೊಂದುವಂತೆ ವಿಮರ್ಶಿಸಬೇಕಾಗುವುದೆಂದು ಅವರು ಅಭಿಪ್ರಾಯಪಟ್ಟು, ಧಾನ್ಯಗಳ ಸಾಗಾಣಿಕೆಯು ಹತೋಟಿ ಇಲ್ಲದ ಕಡೆಗಳಲ್ಲಿ ಈಗಿನ ಹಾಗೆಯೇ ಮುಂದುವರಿಯುವುದೆಂದೂ, ಆದರೆ ನಗರಗಳಲ್ಲಿ ಖುಷ್ಕಿ ಧಾನ್ಯಗಳನ್ನು ರೇಷನ್ ಕಾರ್ಡುಗಳ ರೀತ್ಯಾ ಒದಗಿಸಲಾಗುವುದೆಂದೂ ಸ್ಪಷ್ಟಪಡಿಸಿದರು

ಭತ್ತವನ್ನು ಕೊಳ್ಳುವಾಗ ಶುದ್ಧವಾದ ಧಾನ್ಯವನ್ನೇ ಪಡೆಯುವಂತೆ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಾದ ಆಜ್ಞೆಯು ಸ್ಕೀಯಬೇಕಾಗಿದೆಯೆಂದೂ ಅವರು ತಿಳಿಸಿದರು

ಬರುವ ವರ್ಷ ಕೇಂದ್ರ ಸರ್ಕಾರದವರು ಒದಗಿಸುವ ೧,೪೦,೦೦೦ ಟನ್ ಧಾನ್ಯಗಳ ಪೈಕಿ, ೭೫ ಸಾವಿರ ಟನ್, ಅಕ್ಕಿ, ೮೦ ಸಾವಿರ ಟನ್ ಗೋಧಿ ೫೦ ಸಾವಿರ ಟನ್ ಕೆಂಪು ಜೋಳವಿರುವುದು

ವಿಶ್ವಸಂಸ್ಥೆ ಕಾರ್ಯದರ್ಶಿಗೆ ಅಮೆರಿಕದ ಕೋರ್ಟಿನ ಕರೆ

ಅಮೆರಿಕದಲ್ಲಿ ಬುಡಮೇಲು ಮಾಡುವ ಚಳುವಳಿಯನ್ನು ತನಿಖೆ ಮಾಡುತ್ತಿರುವ ಅಲ್ಲಿನ ಫೆಡರಲ್ ನ್ಯಾಯ ಮಂಡಲವು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟ್ರಿಗ್ವಿಲೀಯವರಿಗೆ ನೋಟೀಸು ಕೊಟ್ಟು ತಮ್ಮ ಮುಂದೆ ಹಾಜರಾಗಬೇಕೆಂದು ಸೂಚಿಸಿರುತ್ತದೆ

ಬಹುಮಾನ 25 ರೂ.

ಸೈಕಲ್ ಕಳುವು

ತಾ॥ 18-11-52 ನೇ ಮಂಗಳವಾರ ಬೆಳಿಗ್ಗೆ 11-30 ಘಂಟೆಯಲ್ಲಿ ರಾಜಧಾನಿಯ ಫಸ್ಟ್ ಗ್ರೇಡ್ ಕಾಲೇಜು ಬಳಿ 880567 ನೇ ನಂಬರಿನ ಫಿಲಿಪ್ಸ್ ಬೈಸಿಕಲ್ಲು, (ಬೂದಿ ಕಲರ್ ಡೈನಮೊ, ಬ್ರೂಕ್ಸ್ ಸೀಟು) ಕಳುವಾಗಿದೆ ಅದನ್ನು ಪತ್ತೆ ಮಾಡಿಕೊಟ್ಟವರಿಗೆ 25 ರೂ ಬಹುಮಾನ ಕೊಡಲಾಗುತ್ತೆ.

ಸಿ ಮಂಡಿಯಪ್ಪ,
ಒಕ್ಕಲಿಗರ ಹಾಸ್ಟೆಲ್, ನಜರ್‌ಬಾದ್
ಮೈಸೂರು

ಗುದ್ದಲಿಯಿಂದ ಹೊಡೆದು ಅಂಗಡಿ ಗಿರಾಕಿಯ ಕೊಲೆ

ಬೊಂಬಾಯಿಯ ಪೊಟ್ಟಿ ಅಂಗಡಿಯೊಂದರಲ್ಲಿ ಒಬ್ಬ ಗಿರಾಕಿಯು ಪೊಟ್ಟಿಯನ್ನು ಕೇಳಲಾಗಿ ಅಂಗಡಿಯವನು ಇಲ್ಲವೆಂದು ಹೇಳಲು, ಇಬ್ಬರಿಗೂ ವಾಗ್ವಾದನಡೆದು ಅಂಗಡಿಯವನು ಗಿರಾಕಿಯನ್ನು ಕೋಲಿನಿಂದಲೂ, ಗುದ್ದಲಿಯಿಂದಲೂ ಹೊಡೆಯಲು ಅವನು ಪ್ರಾಣಬಿಟ್ಟನೆಂದು ವರದಿಯಾಗಿದೆ. ಅಂಗಡಿಯವನೂ, ಗಿರಾಕಿಯೂ ಕುಡಿದ ಅಮಲಿನಲ್ಲಿದ್ದರೆಂದೂ ಹೇಳಲಾಗಿದೆ.

ನೆಹರೂ ಜನ್ಮ ದಿನಾಚರಣೆ

ರಾಜಧಾನಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಘದ ಆಶ್ರಯದಲ್ಲಿ ಮೊನ್ನೆ ಮೈಸೂರು ನಾರ್ತ್‌ನಲ್ಲಿರುವ ಕಾಲೇಜಿನ ಹೊಸ ಆವರಣದಲ್ಲಿ ನೆಹರೂ ಜಯಂತಿಯನ್ನು ವೈಭವದಿಂದ ಆಚರಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವಿ ಚಂದ್ರಶೇಖರ್‌ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪುಟ್ಟಣ್ಣಯ್ಯನವರ ಸ್ವಾಗತ ಭಾಷಣವಾದ ನಂತರ ಮಹಾರಾಜಾ ಕಾಲೇಜಿನ ಡಾ|| ಎಂ ವಿ ಕೃಷ್ಣರಾವ್‌ರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಎಸ್ ಆರ್ ಗೋಪಾಲಕೃಷ್ಣರವರ ವಂದನಾರ್ಪಣೆಯೊಡನೆ ಸಮಾರಂಭವು ಕೊನೆಗೊಂಡಿತು.

CITY TUTORIAL COLLEGE
V. V. Market, Mysore
COACHING CLASSES FOR
★ B. Sc., ★
(English - P. C. M. & P. M. M.)
★ INTERMEDIATE ★
(English - Kannada P C M & C.B.Z.)
PRIVATE TUITIONS ARRANGED
Classes begin on 24th
JOIN IMMEDIATELY
C. T. C., MYSORE

ರಾಧಾಕೃಷ್ಣನ್‌ರವರಿಗೆ ಆಕ್ಸ್‌ಫರ್ಡಿನ ಪ್ರಶಸ್ತಿ

ಭಾರತ ರಾಷ್ಟ್ರದ ಉಪಾಧ್ಯಕ್ಷರಾದ ಡಾ|| ಎಸ್ ರಾಧಾಕೃಷ್ಣನ್‌ರವರಿಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದವರು ಮೊನ್ನೆ "ಡಾಕ್ಟರ್ ಆಫ್ ಸಿವಿಲ್ ಲಾಸ್" ಎಂಬ ಪ್ರಶಸ್ತಿಯನ್ನಿತ್ತು ಗೌರವಿಸಿದರು.

ಆಕಾಶವಾಣಿ ನಾಳೆಯ ಕಾರ್ಯಕ್ರಮ

ಬೆಳಗ್ಗೆ ೭-೩೦ ವಿ ವೆಂಕಟಸುಬ್ಬರಾವ್ ವೀಣಾವಾದನ ೧೨-೪೦ ದಿಲ್ರುಬಾ ... ರವರು ಸಂಜೆ ೫-೩೦ ಮತ್ತು ೬-೩೦ ವಿ ಸತ್ಯವತಿ, ಸಂಗೀತ ... ಶಿವಪ್ರಸಾದ್, ರಾಮಾಯಣ ... ಕಾಳಿಂಗರಾವ್ ... ಗಂಟೆವರೆಗೆ.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಹುರುಳಿ	[illegible]	
ಹೆಸರು	[illegible]	[illegible]
ಉದ್ದು	[illegible]	
ಕಡಲೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಅವರೆ	[illegible]	[illegible]
ಮೆಣಸಿನಕಾಯಿ	[illegible]	
ಮೆಂತ್ಯ	[illegible]	[illegible]
ಕೊತ್ತಂಬರಿ	[illegible]	
ಬೆಲ್ಲ	[illegible]	
ಸಕ್ಕರೆ	[illegible]	
ಕೊಬ್ಬರಿ	[illegible]	[illegible]

SRI GAYATHRI
TALKIES
Daily 3 Shows
On 21 and 22 Nov 1952
Paramounts
DETECTIVE STORY
With - Kirk Douglas, Eleanor Parker, William Bendix, William Welers
From 23rd Nov 52
KANGAROO
In Technicolor)

ಮದ್ರಾಸಿನಲ್ಲಿ ೨|| ಲಕ್ಷ ಟನ್ ಅಕ್ಕಿ ವಸೂಲಿ

ಜನರೂರು ಸಮಯದ ಉಪಯೋಗಕ್ಕಾಗಿ ಮೀಸಲಾಗಿಡಲು ೨|| ಲಕ್ಷ ಟನ್ ಅಕ್ಕಿಯನ್ನು ಮದ್ರಾಸು ಸರ್ಕಾರದವರು ಹೆಚ್ಚುವರಿ ಜಿಲ್ಲೆಗಳಲ್ಲಿ ಸುಲಭವಾದ ಲೆವಿ ಪದ್ಧತಿಯ ರೂಪದಲ್ಲಿ ವಸೂಲು ಮಾಡುವರೆಂದು ಹೇಳಲಾಗಿದೆ.

ಹಿಂದೀ ಕಾರ್ಯಕರ್ತರ ಸಭೆ

ರಾಜಧಾನಿಯ ಎಲ್ಲ ವಿದ್ಯಾಸಂಸ್ಥೆಗಳ ಮತ್ತು ಖಾಸಗೀ ಸಂಸ್ಥೆಗಳ ಹಿಂದಿ ಕಾರ್ಯಕರ್ತರ ಸಭೆಯು ಕಳೆದ ಶನಿವಾರ ನಡೆದು, ಹಿಂದೀ ಪ್ರಚಾರ ಸಭೆಯ ಕಾರ್ಯಕಾರಿ ಸಮಿತಿಗೆ ಕಾರ್ಯಕರ್ತರುಗಳ ಪರವಾಗಿ ಶ್ರೀಗಳಾದ ಜಿ ಸಚ್ಚಿದಾನಂದ, ಶ್ರೀ ಎಸ್. ವೆಂಕಟರಾಮಯ್ಯ ಮತ್ತು ಶ್ರೀಮತಿ ಶಾಂತಾಬಾಯಿಯವರನ್ನು ಸದಸ್ಯರಾಗಿ ಆರಿಸಲಾಯಿತು. ಹಿಂದಿ ವಾಚನಾಲಯ ಮತ್ತು ಪುಸ್ತಕ ಭಂಡಾರಕ್ಕಾಗಿ ಒಂದು ವಿವಿಧ ವಿನೋದಾವಳಿಯನ್ನೂ, ಭಾಷಣ ಸ್ಪರ್ಧೆಯನ್ನೂ ಏರ್ಪಡಿಸಲು ತೀರ್ಮಾನಿಸಲಾಯಿತು. ಭಾಷಣ ಸ್ಪರ್ಧೆಗಾಗಿ ಒಂದು ಪಾರಿತೋಷಕವನ್ನು ಕೊಡಲು ಮಹಾರಾಜ ಕಾಲೇಜಿನ ಹಿಂದಿ ಅಧ್ಯಾಪಕರಾದ ಶ್ರೀ ... ಯ್ಯನವರು ಮುಂದೆ ಬಂದಿರುವರು.

ದಿವಾನ್ ಪೂರ್ಣಯ್ಯ ಪ್ರೌಢಶಾಲಾ ಹಳೆಯ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ದಿವಾನ್ ಪೂರ್ಣಯ್ಯ ಪ್ರೌಢಶಾಲಾ ಹಳೆಯ ವಿದ್ಯಾರ್ಥಿಗಳ ಸಂಘದ ಸಭೆಯು ಇದೇ ೨೩ ನೇ ತಾರೀಕು ಭಾನುವಾರ ಬೆಳಿಗ್ಗೆ ... ಗಂಟೆಗೆ ಶಾಲೆಯ ಆವರಣದಲ್ಲಿ ನಡೆಯಲೇರ್ಪಾಡಾಗಿದೆ. ಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲರೂ, ತಪ್ಪದೆ ಹಾಜರಾಗಿ ಸಂಘದ ಮುಂದಿನ ಕಾರ್ಯಕ್ರಮಗಳನ್ನು ರೂಪಿಸಲು ಸಹಾಯ ಕರಬೇಕಾಗಿ ಸಂಚಾಲಕರು ಕೋರಿರುತ್ತಾರೆ.

SRI GANESHA
TALKIES
From 21-11-52
Columbia
MASK OF THE AVENGER
(Technicolor)
With John Derek, Judy Lawrence, Anthony Quinn

ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ಶಿಕ್ಷೆ ಅವಶ್ಯಕ

ದುರ್ವರ್ತನೆಯ ವಿದ್ಯಾರ್ಥಿಗಳಿಗೆ ಅಲ್ಪ ದಂಡವನ್ನು ವಿಧಿಸಲು ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷರಿಗೆ ಅಧಿಕಾರವಿರಬೇಕೆಂದು ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು ಸಲಹೆ ಮಾಡಿರುತ್ತಾರೆ. ಕಾಲೇಜು ಸಂಘಗಳ ಅಧಿಕಾರ ವರ್ಗದವರು ಒಳ್ಳೆಯ ನಡತೆಯ ದಕ್ಷರಾಗಿರಬೇಕೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಹಾಟ್ ಹ್ಯಾಂಡ್ ಪರೀಕ್ಷೆ ಬಹಿಷ್ಕಾರದ ಪ್ರಕರಣ

ಕಳೆದ ಸೋಮವಾರ ನಡೆದ ಹಾಟ್ ಹ್ಯಾಂಡ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳ ನಡವಳಿಕೆಯು ಸರಿಯಾದುದಲ್ಲವೆಂದು ಟೀಕಿಸಿ ವಿದ್ಯಾರ್ಥಿಗಳ ಪತ್ರಿಕೆಯೊಬ್ಬರು ಬರೆದ ಲೇಖನಕ್ಕೆ ಉತ್ತರವಾಗಿ ಒಬ್ಬ ಶೀಘ್ರಲಿಪಿ ವಿದ್ಯಾರ್ಥಿಯು ಈ ರೀತಿ ತಿಳಿಸಿರುತ್ತಾರೆ. ವಿದ್ಯಾರ್ಥಿಗಳ ಅಪವಾದನೆಯು ಶೋಚನೀಯವಾದುದು. ಅವರಿಗೆ ಹಾಟ್ ಹ್ಯಾಂಡ್ ಪರಿಶ್ರಮವಿಲ್ಲದಿರುವಂತೆ ಕಾಣಬರುತ್ತದೆ. ಪರೀಕ್ಷೆಗೆ ಕುಳಿತವರಲ್ಲಿ ಗಲ ಮಂದಿಯೂ ದಕ್ಷತೆ ಇಲ್ಲದವರಲ್ಲ. ಪರೀಕ್ಷಾ ಪತ್ರಿಕೆಯು ನಿಮಿಷಕ್ಕೆ ೧೨೦ ಪದದಂತೆ ... ನಿಮಿಷಕ್ಕೆ ೧೨೦೦ ಪದಗಳೆಂದ ... ಗಳು ಮತ್ತು ಕಾಂಬಿನೇಶನ್‌ಗಳು ... ಕೂಡಿರುವುದಾಗುತ್ತದೆ. ವರ್ಬೇಟಿಂ ಟ್ರಾನ್ಸ್‌ಕ್ರಿಪ್ಷನ್ ಮಾಡಬೇಕಾಗಿರುವುದರಿಂದ ಮೇಲ್ಕಂಡ ವಿಷಯಗಳು ಮುಖ್ಯವಾದುವು. ಅವರಲ್ಲಿ ಯುಕ್ತಿ ... ದ್ದರೆ ಇದೇ ಪರೀಕ್ಷೆಯಲ್ಲಿ ಫೇಲಾದಂತೆ ಆಗುವ ... ಮೊದಲನೇ ಪತ್ರಿಕೆಯನ್ನು ಓದಿದ ಪರೀಕ್ಷಕರು ಯಾವದೊಂದು ವಿಷಯವನ್ನು ಪೂರ್ಣಗೊಳಿಸದೆ "ಯದ್ವಾ ತದ್ವಾ" ಓದಿದುದರಿಂದ ವಿದ್ಯಾರ್ಥಿಗಳು ಖಾಲಿ ಹಾಳೆಗಳನ್ನು ಕಟ್ಟಿ, ಮುಷ್ಕರ ಹೂಡಬೇಕಾಯಿತೇ ಹೊರತು ಬೇರೆ ಇಲ್ಲ.

ಚಾಮುಂಡೇಶ್ವರಿ
ಟಾಕೀಸ್
21-11-52ರಿಂದ ಜನಪ್ರಿಯ
4 ನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ
ಪರಾಶಕ್ತಿ
(ತಮಿಳು)
ಪಾತ್ರ – ... ಶ್ರೀರಂಜನಿ ಮುಂತಾದವರು

ಪ್ರಭುದೇವಾ ಟಾಕೀಸ್
(ಪ್ರತಿ ದಿನ 3 ಆಟಗಳು)
21—11—52ನೇ :: ಶುಕ್ರವಾರದಿಂದ :: ಅಮೋಘ ಪ್ರಾರಂಭ
★ ಸಾವಿತ್ರಿ ★
ಪಾತ್ರ - ನಿರೂಪ್ ರಾಯ್, ಉಮಾಶಂಕರ್, ಮುಂತಾದವರು
ಶೀಘ್ರದಲ್ಲೇ ಬರುತ್ತದೆ
ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ ★ ದಾಸಿ ★
ಸ್ವೀಟ್ಯಾಸುವಶೀರ್ ... ಯೊಳಗಿರುವ ... ಕಾಯರ್ ತತ್ಪರತೆಯ ... ದ ಭವ್ಯ ಚಿತ್ರ
ಪ್ರಭಾ
ಮೈಸೂರು
ಚಿತ್ರ ಮಂದಿರದಲ್ಲಿ 21-11-52 ರಿಂದ
ಪ್ರತಿ ದಿನ 3 ಆಟಗಳು
ಆಸ್‌ಮಾನ್ ★
ಪಾತ್ರ - ಶ್ಯಾಮ, ನಸೀರ್ ಖಾನ್, ಲಲಿತಾಪವಾರ್, ಜಯಪ್ರಕಾಶ್, ತೇಜಿರ್
ಚಿತ್ರಕತೆಯ ಸಂಗೀತ — ... (ನಗೀನ ಪ್ರಖ್ಯಾತಿ)
ಬೆಳಗಿನ ಪ್ರದರ್ಶನ 21-11-52 ರಿಂದ 3 ದಿನಗಳು
ನ್ಯೂ ಥಿಯೇಟರ್ಸ್‌ರವರ " ಅಂಜಾಂ ಘರ್ "

ಒಲಂಪಿಯಾ ★ ಅಮೋಘ ಪ್ರಾರಂಭ 20 11 52 ರಿಂದ
ದಿನವೂ ನಾಲ್ಕು ಆಟಗಳು
ಭಾರತ (ನ್ಯೂ ಥಿಯೇಟರ್ಸ್ ಪ್ರೊಡಕ್ಷನ್) ಮತ್ತು ರಂಜನ ... ರುವ
❋ ಬಾಗ್ದಾದ್ ❋
ನೃತ್ಯ, ಗಾನ ಮತ್ತು ಭಯಂಕರ ಖಡ್ಗ ಕಾಳಗಗಳಿಂದೊಡಗೂಡಿದ ಅಪೂರ್ವ ಚಿತ್ರ
ಪಾತ್ರವರ್ಗ — ... ಮತ್ತು ... ಮುಂತಾದವರು
ಬೆಳಗಿನ ಪ್ರದರ್ಶನ ಶಿ ಸ್ ಮ ತ್

Edited, Printed and Published by A R Nagaraja at Sadhvi Press, D Subbiah Road, Mysore

ಟೆಲಿಫೋನ್ ನಂ 792 ||ಸಂಜೆ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೧-೧೧-೧೯೫೨ [ಸಂಚಿಕೆ ೯೬

ಆಫ್ರಿಕಾ ವರ್ಣಭೇದ ನೀತಿ ಬಗ್ಗೆ ವಿಶ್ವಸಂಸ್ಥೆ ತನಿಖೆ

ಕೊಲೆ ಅಪಾದನೆಗಾಗಿ ಬಾಲಕರ ಸೆಷನ್ಸ್ ವಿಚಾರಣೆ

ಮೈಸೂರು ೨೧

ಕೃಷ್ಣರಾಜನಗರದ ತಾಲ್ಲೂಕು ತಿಪ್ಪೂರಿನ ... ವರ್ಷದ ಪುಟ್ಟ ಮತ್ತು ೧೧ ವರ್ಷದ ... ಎಂಬ ಇಬ್ಬರು ಬಾಲಕರು ಕಳೆದ ... ರಲ್ಲಿ ಅದೇ ಊರಿನ ೮ ವರ್ಷದ ... ಸ್ವಾಮಿ ಎಂಬುವನನ್ನು ಕಬ್ಬಿನ ... ಪ್ರದೇಶವೊಂದಕ್ಕೆ ಕರೆದುಕೊಂಡು ಹೋಗಿ ಕೊಲೆ ಮಾಡಿ ಅವನ ಸೊಂಟದಲ್ಲಿದ್ದ ... ಯ ಉಡಿದಾರವನ್ನು ಅಪಹರಿಸಿದರೆಂದು ಕೃಷ್ಣರಾಜನಗರದ ಪೋಲೀಸರು ಅಲ್ಲಿನ ಮುನ್ಸೀಫ್, ಮ್ಯಾ|| ಕೋರ್ಟಿನಲ್ಲಿ ಮೊಕದ್ದಮೆ ಹೂಡಿ, ಅಪಾದಿತರು ಸೆಷನ್ಸ್ ವಿಚಾರಣೆಗೆ ಗುರಿಯಾಗಿದ್ದರು. ಇಂದು ಇಲ್ಲಿನ ಸೆಷನ್ಸ್ ನ್ಯಾಯಾಧೀಶರ ಸನ್ನಿಧಿಯಲ್ಲಿ ವಿಚಾರಣೆ ಆರಂಭವಾಯಿತು.

ಸಿದ್ದರಾಮನಹುಂಡಿ ಕೊಲೆ ಅಪಾದಿತರ ಖುಲಾಸೆ

ಮೈಸೂರು ತಾಲ್ಲೂಕಿನ ಸಿದ್ದರಾಮನಹುಂಡಿಯ ಶ್ರೀ ಮರಿಗೌಡ ಮುಂತಾದ ... ಜನರ ಮೇಲೆ ತಾಲ್ಲೂಕು ಪೋಲೀಸಿನವರು ಹೂಡಿದ್ದ ಮೊಕದ್ದಮೆಯಲ್ಲಿ ಅಡಿಷನಲ್ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ. ಪುಟ್ಟಸ್ವಾಮಿಯವರು ನೆನ್ನೆ ತೀರ್ಪಿತ್ತು ಸದರಿ ಅಪಾದಿತರನ್ನು ಖುಲಾಸೆ ಮಾಡಿದರು. ಕಳೆದ ವರ್ಷ ಮೇ ತಿಂಗಳು ... ನೇ ತಾ|| ಬೆಳಗ್ಗೆ ಅಪಾದಿತರು ಅಕ್ರಮಕೂಟಕ್ಕೆ ಸೇರಿ ಕೊಡಲಿ ಮಚ್ಚು ಮುಂತಾದ ಆಯುಧಗಳಿಂದ ... ವರ್ಷದ ಕೆಂಪೇಗೌಡ ಎಂಬಾತನನ್ನು ಹೊಡೆದು ಕೊಲೆ ಮಾಡಿದರೆಂದು ಅಪಾದಿಸಲಾಗಿದ್ದಿತು. ಊರಿನಲ್ಲಿ ಎರಡು ಪಕ್ಷಗಳಿದ್ದು, ಒಂದು ಪಕ್ಷಕ್ಕೆ ಸೇರಿದ ಮೃತನು ಹಂಗಡದ ಕಟ್ಟೆಯನ್ನು ... ಹಲವರೊಡನೆ ಸೇರಿಕೊಂಡು ಪಕ್ಷದವರು ಏರ್ಪಡಿಸಿದ್ದ ಭೋಜನಕೂಟಕ್ಕೆ ಹೋದುದು ಅವನ ಮೇಲಿನ ಮನಸ್ತಾಪಕ್ಕೆ ಕಾರಣವಾಗಿತ್ತೆಂದು ಹೇಳಲಾಗಿದೆ.

ಕೇಂದ್ರ ವನಮೃಗ ರಕ್ಷಣಾ ಸಮಿತಿ ಕಾರ್ಯಕ್ರಮ

ಇದೇ ತಿಂಗಳ ... ತಾ|| ನಿಂದ ಒಂದು ವಾರ ಮೈಸೂರಿನಲ್ಲಿ ನಡೆಯುವ ಕೇಂದ್ರ ವನಮೃಗ ರಕ್ಷಣಾ ಸಮಿತಿಯ ಕಾರ್ಯದ ವಲ್ಲಿ ಕಾಡು ಮೃಗಗಳ ರಕ್ಷಣೆಗಾಗಿಯೇ ಇರುವ ... ಅಧಿಕಾರಿಗಳನ್ನು ನೇಮಿಸುವ ಮತ್ತು ಜಿವಿಗಳ ರಕ್ಷಣೆಗಾಗಿ ... ಮಾಡುವ ವಿಷಯಗಳು ಸಮಿತಿಯ ಸದಸ್ಯರು ಬಂಡಿಪುರ, ಚಾಮರಾಜನಗರ ... ಕಾಡುಗಳಿಗೆ ಭೇಟಿ ಕೊಡುವರು.

ಆಭರಣದ ಗಂಟನ್ನು ಹದ್ದು ಅಪಹರಿಸಿದ ಪ್ರಸಂಗ

... ನೆನ್ನೆ ... ಒಬ್ಬ ಸ್ತ್ರೀಯು ಆಭರಣಗಳ ಗಂಟನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದಾಗ, ಹಗಲ ಪ್ರಕಾಶಕ್ಕೆ ... ಒಂದು ಹದ್ದು ಗಂಟನ್ನು ಅಪಹರಿಸಿ ಒಂದು ಮನೆಯ ಮಹಡಿಯ ಮೇಲೆ ತೆಗೆದುಕೊಂಡುಹೋಗಿ, ತನಗೆ ಅದು ಉಪಯುಕ್ತವಾಗಿಲ್ಲವೆಂದು ತಿಳಿದ ನಂತರ ಅಲ್ಲಿಯೇ ಅದನ್ನು ಬಿಟ್ಟು ಹೋಯಿತೆಂದು ವರದಿಯಾಗಿದೆ. ಹೆಂಗಸು ತನ್ನ ಆಭರಣಗಳನ್ನು ವಾಪಸು ಪಡೆದಳು.

ತಾಲ್ಲೂಕು ಕಛೇರಿ ಬೆಂಕಿ ಬಗ್ಗೆ ಇಬ್ಬರ ದಸ್ತಗಿರಿ

ಹೆಗ್ಗಡದೇವನಕೋಟೆ ೨೧

ಇಲ್ಲಿನ ತಾಲ್ಲೂಕು ಕಛೇರಿಯ ಆಹಾರದ ಭಾಗ ಮತ್ತು ಪೋಲೀಸು ಕಛೇರಿ ಕಳೆದ ... ನೇ ತಾರೀಖು ಬೆಂಕಿ ಬಿದ್ದ ಸಂಬಂಧವಾಗಿ ಪೋಲೀಸರು ಮಾಜಿ ಶಿರಸ್ತೇದಾರ್ ... ಗುಮಾಸ್ತ ಸುಬ್ಬರಾವ್ ಮತ್ತು ... ಗುಮಾಸ್ತ ನಂಜುಂಡಯ್ಯ ಎಂಬ ಇಬ್ಬರನ್ನು ದಸ್ತಗಿರಿ ಮಾಡಿ ತನಿಖೆ ನಡೆಸುತ್ತಿದ್ದಾರೆ.

ಹೈಕೋರ್ಟಿನ ರಿಜಿಸ್ಟ್ರಾರರ ಕತ್ತು ಹಿಸುಕುವ ಪ್ರಯತ್ನ

ಬೆಳ್ಳೂರಿನ ... ವರ್ಷದ ಕೃಷ್ಣಮೂರ್ತಿ ಎಂಬ ಯುವಕನೊಬ್ಬನು ಮುಖ್ಯ ನ್ಯಾಯಾಧೀಶರನ್ನು ನೋಡಬೇಕೆಂದು ... ರಿಜಿಸ್ಟ್ರಾರರ ಕಛೇರಿಗೆ ಕಳೆದ ... ನೇ ತಾರೀಖು ಹೋದನೆಂದೂ, ಅವನ ಬಂದ ಉದ್ದೇಶವೇನೆಂದು ಕೇಳಲಾಗಿ ಯುವಕನು ಉತ್ತರವೀಯದೆ ಅವರ ಕುತ್ತಿಗೆ ಬಿಗಿ ಹಿಸುಕುವ ಪ್ರಯತ್ನ ಮಾಡಿದನೆಂದೂ, ಹತ್ತಿರ ಇದ್ದ ಜನರು ಅವನನ್ನು ಹಿಡಿದು ಪೋಲೀಸರ ವಶಪಡಿಸಿದರೆಂದೂ ವರದಿಯಾಗಿದೆ.

ಮೈಸೂರು ಸಾಬೂನು ಮೇಲೆ ವಿಮಾ ಕಂಪೆನಿ ಮೊಕದ್ದಮೆ

ಬೆಂಕಿ ವಿಮಾ ಸಂಸ್ಥೆಯಿಂದ ಅಕ್ರಮವಾಗಿ ಹಣ ಪಡೆದರೆಂದು ಚಲನಚಿತ್ರ ನಟ ಮೈಸೂರು ಸಾಬೂನಿನ ಮೇಲೆ ಅಮೇರಿಕದ ನ್ಯಾಷನಲ್ ಮ್ಯೂಚ್ಯುಯಲ್ ಕಂಪೆನಿಯವರು ಲಾಸ್ ಏಂಜಲ್ಸಿನ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಎರಡನೇ ಅಂತಸ್ತಿನ ತಮ್ಮ ನಿವಾಸಕ್ಕೆ ತಾನೇ ಬೆಂಕಿ ಹಚ್ಚಿಸಿ ಸುಮಾರು ೧೧ ಸಾವಿರ ಪೌಂಡುಗಳನ್ನು ಸಾಬೂರವರು ಪಡೆದರೆಂದು ಅಪಾದಿಸಲಾಗಿದೆ.

ಇಲವಾಲದ ಧಾನ್ಯದ ಡಿಪೋವಿನಲ್ಲಿ ಕಳ್ಳತನ

ಮೈಸೂರು ತಾಲ್ಲೂಕು ಇಲವಾಲದ ವಿವಿಧೋದ್ದೇಶ ಸಹಕಾರ ಸಂಘದ ಆಹಾರ ಡಿಪೋವಿಗೆ ನೆನ್ನೆ ರಾತ್ರಿ ಕಳ್ಳರು ನುಗ್ಗಿ ೧ ಮೂಟೆ ಜೋಳ, ಸುಮಾರು ... ಸೇರು ಅಕ್ಕಿ ಮತ್ತು ... ರೂ ಗಳಷ್ಟು ನಗದು ಹಣವನ್ನು ಅಪಹರಿಸಿರುವರೆಂದು ಗೊತ್ತಾಗಿದೆ.

ನೆಹರೂರವರೇ ಕಾಂ|| ಅಧ್ಯಕ್ಷರಾಗಬೇಕೆಂದು ಅಭಿಮತ

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೨೧

ನೆನ್ನೆ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ದೆಹಲಿಯ ಕಾಂಗ್ರೆಸ್ ವಲಯಗಳಲ್ಲಿ ನೆಹರೂರವರೇ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಬೇಕೆಂದು ಅಭಿಮತವಿದೆ ಎಂದು ಹೇಳಿದರು. ಕಾಂಗ್ರೆಸ್ಸಿನಲ್ಲಿ ಮಧುರ ಬಾಂಧವ್ಯ ಮತ್ತು ಐಕಮತ್ಯ ಇರುವ ಕಾರಣ ಜಗತ್ತಿನ ನಾನಾ ಕಡೆಯಿಂದ ಪ್ರಸಾರವಾಗುವ ಅಭಿಪ್ರಾಯ ... ಬೇರೂರಿದ ಪ್ರಾಂತೀಯ ... ಭಾವನೆಯು ಬೇರೂರಿರುವುದೆಂದೂ ಅದರಂತೆಯೇ ಪ್ರದೇಶ ಕಾಂಗ್ರೆಸ್ಸಿನಲ್ಲಿಯೂ ಇರಬೇಕಾದುದು ಅವಶ್ಯಕವೆಂದೂ, ಆದರೆ ಮುಖ್ಯ ಮಂತ್ರಿಯಾದವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿ, ಬಿಟ್ಟುಗಳನ್ನು ಬೇಡುವುದು ಸರಿಯಲ್ಲವೆಂದೂ ಅವರು ತಿಳಿಸಿದರು.

ಭದ್ರಾ ಜಲಾಶಯದ ಹೊಸ ಯೋಜನೆಗೆ ಕೇಂದ್ರದ ಸಹಾಯ

ಭದ್ರಾ ಜಲಾಶಯದ ಬಗ್ಗೆ ಮೈಸೂರು ಸರ್ಕಾರದ ಹೊಸ ಯೋಜನೆಯನ್ನು ಕೇಂದ್ರ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವರೆಂದೂ, ಅದನ್ನು ಪೂರೈಸಲು ಕೇಂದ್ರದ ಸಹಾಯಕ್ಕಾಗಿ ತಾವು ಒತ್ತಾಯ ಪಡಿಸಿರುವುದಾಗಿಯೂ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿರುತ್ತಾರೆ. ಈ ಯೋಜನೆಗೆ ಈಗಾಗಲೇ ೧.೭ ಕೋಟಿ ರೂ ವೆಚ್ಚ ಮಾಡಲಾಗಿದೆಯೆಂದೂ, ೫ ಅಥವ ವರ್ಷಗಳ ಕಾಲ ಹಿಡಿಯುವ ಈ ಕೆಲಸಕ್ಕಾಗಿ ಕೇಂದ್ರದವರು ೯ ಕೋಟಿ ರೂಗಳನ್ನು ಒದಗಿಸಬೇಕೆಂದೂ ಅವರು ಹೇಳಿರುವರು.

೮೦ ವರ್ಷದ ವೇದಾಂತಿಯ ವಿವಾಹ

ಬ್ರಿಟನ್ನಿನ ೮೦ ವರ್ಷದ ವೃದ್ಧ ವೇದಾಂತಿ ಬರ್ಟ್ರಾಂಡ್ ರಸ್ಸೆಲ್‌ರವರು ನಾಲ್ಕನೆಯ ಬಾರಿಗೆ ಅಮೇರಿಕದ ಪೆನ್ಸಿಲ್ವೇನಿಯಾ ಸಂಸ್ಥಾನದ ಎಡಿತ್ ಫಿಂಚ್ ಎಂಬ ಮಹಿಳೆಯನ್ನು ವಿವಾಹವಾದರು.

ದ|| ಆಫ್ರಿಕಾ ವರ್ಣಭೇದದ ಬಗ್ಗೆ ವಿಶ್ವಸಂಸ್ಥೆಯ ತನಿಖೆ

ದಕ್ಷಿಣ ಆಫ್ರಿಕಾ ಸರ್ಕಾರದ ವರ್ಣಭೇದ ನೀತಿಯು ಅಟ್ಲಾಂಟಿಕ್ ಘೋಷಣೆಯ ತತ್ವ ಮತ್ತು ಉದ್ದೇಶಗಳಿಗನುಗುಣವಾಗಿ ಇದೆ ಇಲ್ಲವೇ, ಎಂಬುದನ್ನು ಕುರಿತು ತನಿಖೆ ನಡೆಸಲು ಅಮೇರಿಕಾ, ಬ್ರಿಟನ್, ಫ್ರಾನ್ಸ್, ಚೀಣಾ, ಮುಂತಾದ ೧೭ ರಾಷ್ಟ್ರಗಳ ಪ್ರತಿನಿಧಿಗಳುಳ್ಳ ಸಮಿತಿಯನ್ನು ರಚಿಸಲು ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ನಿರ್ಧರಿಸಿದೆ.

ಡಿಸೆಂಬರಿನಿಂದ ಸಕ್ಕರೆ ಬೆಲೆ ಕಡಿಮೆ

ಇದೇ ಡಿಸೆಂಬರ್ ೧ನೇ ತಾ|| ನಿಂದ ಸಕ್ಕರೆ ಬೆಲೆಯನ್ನು ಮಣಕ್ಕೆ ೪ ರೂ. ನಂತೆ ಕಡಿಮೆ ಮಾಡಲಾಗುವುದೆಂದು ತಿಳಿಸಲಾಗಿದೆ.

ಪೆಪ್ಸು ಶಾಸನ ಸಭೆಯಲ್ಲಿ ಕಾಂ|| ಸದಸ್ಯರ ಸಭಾತ್ಯಾಗ

ಅಕಾಲಿ ಪಕ್ಷದ ಮುಖಂಡರಾದ ಮಾಸ್ಟರ್ ತಾರಾಸಿಂಗರ ಬಗ್ಗೆ ಕಾಂಗ್ರೆಸ್ ಪಕ್ಷದ ಸದಸ್ಯರೊಬ್ಬರು ಪೆಪ್ಸುವಿನ ಶಾಸನ ಸಭೆಯಲ್ಲಿ ಆಡಿದ ಮಾತನ್ನು ವಾಪಸ ತೆಗೆದುಕೊಳ್ಳದಿದ್ದುದಕ್ಕಾಗಿ, ಸದರಿ ಸದಸ್ಯರನ್ನು ಹೊರಕ್ಕೆ ಸಭಾಧ್ಯಕ್ಷರು ಕಳುಹಿಸಿದುದಕ್ಕೆ ಪ್ರತಿಭಟಿಸಲು ಕಾಂಗ್ರೆಸ್ ಪಕ್ಷದವರೆಲ್ಲರೂ ನೆನ್ನೆ ಸಭಾತ್ಯಾಗ ಮಾಡಿದರೆಂದು ವರದಿಯಾಗಿದೆ.

ದುರುಪಯೋಗದ ಹಣದಲ್ಲಿ ಮಸೀದಿ ನಿರ್ಮಾಣ

ಸರ್ಕಾರದ ಖಜಾನೆಯಿಂದ ೧,೬೦,೦೦೦ ರೂಗಳನ್ನು ದುರುಪಯೋಗ ಮಾಡಿದ ಮನುಷ್ಯನೊಬ್ಬನು ಅದರ ಒಹುಭಾಗವನ್ನು ತನ್ನ ಹಳ್ಳಿಯಲ್ಲಿ ಒಂದು ಮಸೀದಿ ಮತ್ತು ತನ್ನ ತಂದೆಯ ಗೋರಿಯನ್ನು ನಿರ್ಮಿಸಲು ವೆಚ್ಚ ಮಾಡಿರುವುದಾಗಿ ಗಡಿಪ್ರಾಂತದ ಮುಖ್ಯ ಮಂತ್ರಿ ಖಯೂಂ ಖಾನರು ತಿಳಿಸಿರುತ್ತಾರೆ.

ಹೋಟೆಲ್ಲು ಬಳಿ ರೈಲು ಕಂಬಿ ತಪ್ಪಿತು

ಸೋಲಾಪುರದ ಹತ್ತಿರ ಇರುವ ಹೋಟ್ಗಿ ಬಳಿ ನೆನ್ನೆ ಸಾಧನೋಪಕರಣಗಳ ರೈಲೊಂದು ಕಂಬಿ ತಪ್ಪಿದುದರಿಂದ, ಸಂಜೆ ಮೈಸೂರಿನಿಂದ ದಿಲ್ಲಿಗೆ ರೈಲೊಂದು ಅಲ್ಲಿಗೆ ತೆರಳಿತು. ಅಪಘಾತದಲ್ಲಿ ೨೭ ಜನ ಕೂಲಿಗಳಿಗೆ ಗಾಯವಾಗಿದೆ ೭ ಗೂಡ್ಸ್ ವ್ಯಾಗನ್ನುಗಳು ಉರುಳಿದುವು.

LATEST NEWS

ಬಾಲರತ್ನಂ ಮತ್ತು ಇನ್ನಿಬ್ಬರ ಖುಲಾಸೆ

ಹೈಕೋರ್ಟಿನ ತೀರ್ಪು

ಸ್ವಂತ ವರದಿಗಾರ] ಬೆಂಗಳೂರು ೨೧

ಈ ದಿನ ಹೈಕೋರ್ಟಿನವರು ದೊಡ್ಡಬಳ್ಳಾಪುರದ ಶ್ರೀ ವಿ. ರಾಮಕೃಷ್ಣಯ್ಯನವರ ಕೊಲೆ ಪ್ರಯತ್ನದ ಮೊಕದ್ದಮೆ ಅಪೀಲಿನಲ್ಲಿ ತೀರ್ಪಿತ್ತು, ವಕೀಲ ಶ್ರೀ ವಿ. ಬಾಲರತ್ನಂ, ... ಮತ್ತು ಹನುಮಂತರವರನ್ನು ಖುಲಾಸೆ ಮಾಡಿದರು. ಅಪರಾಧಿಗಳ ಮೇಲೆ ತಪ್ಪು ಸಾಬೀತಾಗುವ ಯಾವ ಸ್ವತಂತ್ರ ಸಾಕ್ಷ್ಯವೂ ಇಲ್ಲವೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟರು.

ಟ್ರೂಮನ್ ಮತ್ತು ಐಸೆನ್‌ಹೋವರರ ಭೇಟಿ

ಅಮೆರಿಕದ ಭಾವೀ ಅಧ್ಯಕ್ಷ ಜನರಲ್ ಐಸೆನ್‌ಹೋವರರು, ಈಗಿನ ಅಧ್ಯಕ್ಷರಾದ ಹ್ಯಾರಿ ಟ್ರೂಮನ್ನರೊಡನೆ ಮೊನ್ನೆ ಶ್ವೇತಭವನದಲ್ಲಿ ಮುಕ್ಕಾಲು ಗಂಟೆ ಕಾಲ, ಆಡಳಿತ ವಿಷಯವಾಗಿ ಮಾತುಕತೆ ನಡೆಸಿದರೆಂದು ವರದಿಯಾಗಿದೆ. ೨೦ ವರ್ಷಗಳ ನಂತರ ಅಧಿಕಾರಕ್ಕೆ ಬರುವ ರಿಪಬ್ಲಿಕನ್ ಪಕ್ಷವು ಆಡಳಿತ ಸೂತ್ರಗಳನ್ನು ವಹಿಸುವ ಸಿದ್ಧತೆಗಾಗಿ ಈ ಭೇಟಿ ನಡೆಯಿತು.

ಬೆಂಗಳೂರು ಬಳಿ ಗೋ ಸಂವರ್ಧನಾ ಕೇಂದ್ರ

ದಕ್ಷಿಣ ಭಾರತ ಹಿಂದೂ ಗೋ ಸೇವಾ ಸಂಘದವರು ಬೆಂಗಳೂರು ಬಳಿ ನಾಗರಬಾವಿಯಲ್ಲಿ ಹಸುಗಳ ತಳಿ ಅಭಿವೃದ್ಧಿ ಮತ್ತು ಹಾಲಿನ ಉತ್ಪತ್ತಿ ಕೇಂದ್ರಗಳನ್ನು ಸ್ಥಾಪಿಸಲು ೫೦ ಎಕರೆ ಜಮೀನನ್ನು ಪಡೆದಿರುವರೆಂದು ವರ್ಧಾ ದಿಂದ ಬಂದಿರುವ ವರ್ತಮಾನವು ತಿಳಿಸುತ್ತದೆ. ಕೇಂದ್ರ ಸರ್ಕಾರದ ವರಿ ಸಹಾಯ ಪಡೆದು ಮೈಸೂರು ಸರ್ಕಾರದವರು ಇದನ್ನು ನಡೆಸುವರು.

ಆಕಾಶವಾಣಿ ಸಂಗೀತ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಚಿತ್ರ ಜಗತ್ ಮಧ್ಯಾಹ್ನ ೧-೪೦ ಗಿಟಾರ್ ವಾದ್ಯ ಬಾಲಜಗತ್ ಸಂಜೆ ೫-೪೦ ಮತ್ತು ೭ ಎಸ್ ವೆಂಕಟರಾಮಯ್ಯ, ಸಿಟೀಲು ೬-೧೦ ನಾದಶ್ರೀ ೭-೩೦ ಮಹಿಳೆಯರ ಕಾರ್ಯಕ್ರಮ ೮ ಎಸ್ ಹೀರಣ್ಣಯ್ಯನವರ ಕಾವ್ಯ ಕಥಾ ಕಾಲಕ್ಷೇಪ ೯-೧೫ ನಾಟಕ ವೆಂಕಟೇಶನ್ ನಿನ್ನನ್ನು ರೀಚಾರ್ಡ್ ಸಿಟೀಲು ೯-೪೫ ಕೊಂಕಣಿ ಸುತ್ತಿದರೆ ಕನ್ನಡ ಕಥೆ

ಕಾಶ್ಮೀರದ ಅಧಿಪತಿಗೆ ೫,೫೦೦ ರೂ ವೇತನ

ಕಾಶ್ಮೀರದ ಚುನಾಯಿತ ಅಧಿಪತಿಗೆ ೫,೫೦೦ರೂ ಸಂಬಳ ಮತ್ತು ವರ್ಷಕ್ಕೆ ೧,೪೯,೦೦೦ ರೂ ಭತ್ಯವನ್ನು ಕೊಡಲಾಗುವುದು. ಈ ಹಣದ ಮೇಲೆ ತೆರಿಗೆಯನ್ನು ವಿಧಿಸಲಾಗುವುದು.

ಕ್ಷಾಮ ಪರಿಹಾರ ನಿಧಿಗಾಗಿ ಸಹಾಯಾರ್ಥ ನಾಟಕ ಪ್ರದರ್ಶನ

ಸಂಸ್ಥಾನದ ಮುಖ್ಯ ಮಂತ್ರಿಗಳ ಕ್ಷಾಮ ಪರಿಹಾರ ನಿಧಿ ಸಹಾಯಾರ್ಥವಾಗಿ ಮೊನ್ನೆ ಸಂಜೆ ಶ್ರೀ ಜಿ ಎಚ್ ವೀರಣ್ಣನವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿಯವರು ಗದೇಬಕಾವಲಿ ಎಂಬ ನಾಟಕವನ್ನು ಅಭಿನಯಿಸಿದರು. ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ಧಲಿಂಗಯ್ಯನವರು ಅಧ್ಯಕ್ಷತೆ ವಹಿಸಿದರು. ಪ್ರದರ್ಶನಾನಂತರ ನೌಕರಭಾರ ಮಂತ್ರಿಗಳಾದ ಶ್ರೀ ಎ ಕೃಷ್ಣಪ್ಪನವರು ಶ್ರೀ ಜಿ ಹೆಚ್ ವೀರಣ್ಣನವರನ್ನು ಅಭಿನಂದಿಸಿದರು. ಅಧ್ಯಕ್ಷರು ಮಾತನಾಡಿ, ಕಲಾಭಿವೃದ್ಧಿಗಾಗಿಯೇ ದುಡಿದ ಶ್ರೀ ವೀರಣ್ಣನವರನ್ನೂ ಶ್ರೀಮತಿ ಬಸಮ್ಮನವರನ್ನೂ ಪ್ರಶಂಸಿಸಿದರು. ಶ್ರೀ ವೀರಣ್ಣನವರು ಕೃತಜ್ಞತೆಯನ್ನು ಸೂಚಿಸಿದರು.

ಆಹಾರದ ದಾಸ್ತಾನು ವಿವರ

ಸರ್ಕಾರದಲ್ಲಿ ಈಗ ೧,೧೯ ಟನ್ ಅಕ್ಕಿ, ೫,೬೮೦ ಟನ್ ಗೋಧಿ, ೧,೫೦೦ ಟನ್ ಮುಸುಕಿನ ಜೋಳ, ಇತರ ಧಾನ್ಯ, ೬,೨೫೦ ಟನ್ ಗೋಧಿಯಿರುವುದಾಗಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ.

ರಾಜಾಜಿ ಹಸ್ತಾಕ್ಷರಕ್ಕೆ ೫ ರೂ.

ರಾಜಾಜಿಯವರಿಂದ ಹಸ್ತಾಕ್ಷರ ಪಡೆಯಬೇಕಾದರೆ ೫ ರೂ ಕೊಡಬೇಕಾಗಿದೆ. ಹಣವನ್ನು ಕೊಡದೆ ಇದ್ದುದರಿಂದ ಒಬ್ಬ ಕಾಲೇಜು ಯುವತಿಯ ಪುಸ್ತಕದಲ್ಲಿ ರುಜು ಮಾಡಲು ರಾಜಾಜಿಯವರು ನಿರಾಕರಿಸಿರುತ್ತಾರೆ.

ನೆಹರೂ ಜಯಂತಿ

ರಾಜಧಾನಿಯ ಪಡವಾರಹಳ್ಳಿಯಲ್ಲಿ ಮೊನ್ನೆ ಅಲ್ಲಿನ ವಿದ್ಯಾರ್ಥಿ ಸಂಘದವರು ನೆಹರೂ ಜಯಂತಿಯನ್ನು ಆಚರಿಸಿದರು. ಮಹಾರಾಜಾ ಕಾಲೇಜಿನ ಶ್ರೀ ಎಂ ಯಾಮುನಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು.

ಹೆಗ್ಗಡದೇವನಕೋಟೆ ತಾಲ್ಲೂಕು ಹೆಬ್ಬಲುಗುಪ್ಪೆ ಗ್ರಾಮದಲ್ಲಿ ಕಳೆದ ೧೫ನೇ ತಾ॥ ಶ್ಯಾನುಭೋಗರಾದ ಶ್ರೀ ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನೆಹರೂ ಜಯಂತಿಯು ಆಚರಿಸಲ್ಪಟ್ಟಿತು. ಹಳೇ ವಿದ್ಯಾರ್ಥಿ ಸಂಘದ ಸದಸ್ಯರುಗಳು ಮತ್ತು ಸಂಘದ ಅಧ್ಯಕ್ಷರಾದ ಶ್ರೀ ಹೆಚ್ ಎಲ್ ಸುಬ್ರಹ್ಮಣ್ಯರವರು ಭಾಷಣ ಮಾಡಿದರು.

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ಬೇಕಾಗಿದ್ದಾರೆ

ಮೈಸೂರು ನಗರಸಂಪರ್ಕದ ಪೇಟೆಗಳಲ್ಲಿ ಸಾಧ್ವಿ ಪತ್ರಿಕೆಗೆ ಚಂದಾದಾರರನ್ನು ಕೂಡಿಸಿ, ಪತ್ರಿಕೆ ಹಂಚಲು ಅದೇ ಮೊಹಲ್ಲಾದಲ್ಲಿ ವಾಸವಾಗಿರುವ ಹುಡುಗರು ಬೇಕಾಗಿದ್ದಾರೆ.

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಏಜೆಂಟರು, ಮೈಸೂರು,
ಇವರಲ್ಲಿ ವಿಚಾರಿಸಿ

Edited, Printed and Published by A. R. Nagarajan at Sadhvi Press, D. Subbiah Road, Mysore

ನಗರಾಭಿವೃದ್ಧಿ ಸಮಿತಿ, ಮೈಸೂರು
ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ— ಮೈಸೂರು ಸಿಟಿ ವಿದ್ಯಾ ಮೊಹಲ್ಲಾ ಪ್ರಭುದೇವ ಟಾಕೀಸ್ ಮುಂಭಾಗದ ತ್ಯಾಗರಾಜ ಸರ್ಕಲ್‌ನಲ್ಲಿ ಹೊಸದಾಗಿ ಕಟ್ಟಿಸಿರುವ ೯ ಅಂಗಡಿಗಳನ್ನು ಅನುಭವಿಸಿಕೊಳ್ಳುವವರಿಗೆ ಬಾಡಿಗೆಯ ಹಕ್ಕುದಾರಿಗಾಗಿ ತಾ|| ೮-೧೨ ಸೋಮವಾರ ಬೆಳಿಗ್ಗೆ ೯ ಗಂಟೆ ಆಗಾಯ್ತು ಮುಂಗಡ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ. ಇಷ್ಟವುಳ್ಳವರು ಛಾಪ ದರಖಾಸ್ತು ಮೂಲಕ ಮುಂಗಡಗಳನ್ನು ಬಾಡಿಗೆಗೆ ಪಡೆಯಬಹುದು. ಹರಾಜಿನಲ್ಲಿ ಬಿಡ್ ಮಾಡುವರು ೫೦ ರೂಪಾಯಿ ಠೇವಣಿ ಮುಂಗಡವಾಗಿ ಇಟ್ಟು ಬಿಡ್ ಮಾಡತಕ್ಕದ್ದು. ಹರಾಜು ಅಖೈರ್ ಆದ ಕೂಡಲೇ ಛಾಪ ದರಖಾಸ್ತುದಾರರ ಡಿಪಾಜಿಟ್ ವಿನಃ ಉಳಿದವರ ಡಿಪಾಜಿಟ್ ಮೊಬಲಗನ್ನು ವಾಪಸು ಕೊಡಲಾಗುತ್ತದೆ. ಹರಾಜುದಾರರ ಛಾಪ ದರಖಾಸ್ತನ್ನು ಮಂಜೂರು ಮಾಡುವ ಅಧಿಕಾರ ನಗರಾಭಿವೃದ್ಧಿ ಸಮಿತಿಗೇ ಸೇರಿದ್ದಾಗಿರುತ್ತದೆ. ಹರಾಜು ಮಂಜೂರು ಆದ ಬಳಿಕ ಒಂದು ವಾರದಲ್ಲಿ ೩ ತಿಂಗಳ ಬಾಡಿಗೆ ಅಡ್ವಾನ್ಸಾಗಿ ಪಾವತಿ ಮಾಡಿ ಕರಾರು ಬರೆದುಕೊಟ್ಟು, ಅಂಗಡಿ ಸ್ವಾಧೀನ ಪಡೆಯತಕ್ಕದ್ದು. ತಪ್ಪಿದಲ್ಲಿ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಅಂಗಡಿಯನ್ನು ಪುನರಾವಿಲೆ ಮಾಡಲಾಗುವುದು. ವಿವರಗಳನ್ನು ಆಫೀಸಿನಲ್ಲಿ ತಿಳಿಸಿಕೊಳ್ಳಬಹುದು.

ಮೇಲ್ಕಂಡ ೯ ಅಂಗಡಿಗಳ ಮೇಲ್ಭಾಗದಲ್ಲಿ ಕಟ್ಟಿರುವ ೩ ದೊಡ್ಡ ಅಂಗಳಗಳನ್ನು ಸ್ಕೂಲು ಮತ್ತು ಆಫೀಸು ವಗೈರೆ ಕೆಲಸಗಳ ಉಪಯೋಗಕ್ಕಾಗಿ ಬಾಡಿಗೆಗೆ ಕೊಡಲಾಗುತ್ತದೆ. ಇಷ್ಟವುಳ್ಳವರು ಬಾಡಿಗೆ ನಮೂದಿಸಿ ತಾ|| ೩೦-೧೧-೫೨ ನೇ ಸೋಮವಾರ ೩ ಗಂಟೆಯೊಳಗೆ ೧೦೦ ರೂಪಾಯಿ ಡಿಪಾಜಿಟ್ ಸಹ ಟೆಂಡರ್ ಹಾಜರು ಮಾಡಬಹುದು.

(ರುಜು) ಎಸ್. ಲಿಂಗಣ್ಣ
ಅಧ್ಯಕ್ಷರು

ರಣಜಿತ್
21—11—52 ರಿಂದ
ಯಶಸ್ವಿ 2ನೇ ವಾರ
ನಯ ಸನ್ಸಾರ್‌ರವರ ಹಿಂದಿ ಚಿತ್ರ
ಅನ್ — — ಹೋನೀ

— ತಾರಾಗಣ
ನರ್ಗಿಸ್ ರಾಜ್‌ಕಪೂರ್ ಆಗ,
ಡೇವಿಡ್, ಬದ್ರಿಪ್ರಸಾದ್,
ಜಾನಕಿದಾಸ್, ಮತ್ತು
ಓಂ ಪ್ರಕಾಶ್
ಕಥೆ, ಸಂಭಾಷಣೆ, ದಿಗ್ದರ್ಶನ ಮತ್ತು
ನಿರ್ಮಾಪಕ್ತ ಕೆ ಎ ಅಬ್ಬಾಸ್
ಸಂಗೀತ ರೋಷನ್

ಪ್ರಭುದೇವಾ ಟಾಕೀಸ್
(ಪ್ರತಿ ದಿನ ೩ ಆಟಗಳು)
21—11—52ನೇ .. ಶುಕ್ರವಾರದಿಂದ :: ಅಮೋಘ ಪ್ರಾರಂಭ
★ ಸಾವಿತ್ರಿ ★
ಪಾತ್ರ ನಿರೂಪ್ ರಾಯ್, ಉಮಾಕಾಂತ್, ಮುಂತಾದವರು
ಶೀಘ್ರದಲ್ಲೇ ಬರುತ್ತದೆ
ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ ★ ದಾಸಿ ★

ಅಮೋಘ ಹರಾಜು ಮಾರಾಟ
23-11-52 ನೇ ಭಾನುವಾರ . ಬೆಳಿಗ್ಗೆ 10 ಘಂಟೆ
ಶೋ ರೂಮ್ ಬಳಿ
ಸ್ಪ್ರಿಂಗ್ ಕುಷನ್ನು ಸೋಫಾ ಸೆಟುಗಳು, ಅಲ್ಮೈರಾಗಳು, ಗ್ಲಾಸಿನ ಬಾಗಿಲುಳ್ಳ ಬುಕ್ ಕೇಸ್ ಮೇಜುಗಳು, ಕುರ್ಚಿಗಳು, ಸ್ಟೂಲುಗಳು, ಆಫೀಸು ಟೇಬಲ್‌ಗಳು, ಡೈನಿಂಗ್ ಟೇಬಲ್, ದಂತದ ಇನ್‌ಲೇಡ್ ವಾಲ್ ಬ್ರಾಕೆಟ್‌ಗಳು, "ಪಾಲ್" ಇಂಗ್ಲಿಷ್ ಗ್ರಾಮಫೋನ್, ಮೈ ಮತ್ತು ಟ್ಯಾಬ್ ಸೆಟ್, ರೇಡಿಯೋ ಮತ್ತು ಎಲ್ ಸಿ ಸ್ಮಿತ ಟೈಪ್‌ರೈಟರ್‌ಗಳು, ಕಬ್ಬಿಣದ ಪೆಟ್ಟಿಗೆ ಲ್ಯಾಂಪ್ ಸ್ಟ್ಯಾಂಡ್, ತೈಲ ಚಿತ್ರಗಳು, ಕೈ ಗಡಿಯಾರಗಳು, ಫೌಂಟನ್ ಪೆನ್ನುಗಳು, ಕಟ್ಟಿಗೆಯ ಬೀರುಗಳು ಕದಗಳುಳ್ಳ ಮತ್ತು ಇಲ್ಲದ ಬಾಗಿಲು ಮತ್ತು ಕಿಟಕಿಗಳು ಮೊದಲಾದ ವಸ್ತುಗಳೂ ಪೆರಾಂಬುಲೇಟರ್ ಕ್ರೋಮಿಯಂ ಎಲೆಕ್ಟ್ರಿಕ್ ಸ್ಟವ್‌ಗಳು ಮತ್ತು ಗ್ಲಾಸ್ ಟೇಬಲ್ ಲ್ಯಾಂಪ್‌ಗಳು ಇವೇ ಮುಂತಾದ ಹಲವಾರು ಚರವಸ್ತುಗಳು ಮತ್ತು ಗೃಹೋಪಯುಕ್ತ ಸಾಮಾನುಗಳು.
ಅಬೀದ್ಸ್
ಗ್ಯಾಂಬ್ಲ್ಸ್ ಸ್ಕ್ವೇರ್ ಮೈಸೂರು

ರಿಜಿಸ್ಟರ್ಡ್ ನಂ. 792 ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೨-೧೧-೧೯೫೩ [ಸಂಚಿಕೆ ೯೦

ದಕ್ಷಿಣ ಭಾರತದಲ್ಲಿ ೪೦ ಕೈಗಾರಿಕೆಗಳ ಅಭಿವೃದ್ಧಿ

ಬಾಲರತ್ನಂ ಮತ್ತು ಇಬ್ಬರು ಅಪಾದಿತರ ಖುಲಾಸೆ

ಹೈಕೋರ್ಟಿನ ತೀರ್ಪಿನ ವಿವರ

ಬೆಂಗಳೂರು ೨೧

...ದೊಡ್ಡಬಳ್ಳಾಪುರದ ವಕೀಲರಾದ ಶ್ರೀ ...ರಾಮಕೃಷ್ಣಯ್ಯನವರನ್ನು ಕೊಲೆ ಮಾಡಲು ಪ್ರಯತ್ನಿಸಿದರೆಂದು ೩ ವರ್ಷ ಕಠಿಣ ಸಜಾ ಮತ್ತು ೩ ಸಾವಿರ ರೂ. ದಂಡ ವಿಧಿಸಲ್ಪಟ್ಟ ... ವಕೀಲರೂ ರಾಮಕೃಷ್ಣಯ್ಯನವರ ಮಕ್ಕಳೂ ಆದ ಶ್ರೀ ಬಿ. ಬಾಲರತ್ನಂ ಅವರನ್ನು ತಲಾ ೩ ವರ್ಷ ಕಠಿಣ ಶಿಕ್ಷೆಗೆ ಗುರಿಯಾದ ಮಾಗಡಿ ಹನುಮಂತ ಮತ್ತು ... ನ್ಯಾಯಪ್ಪನವರನ್ನೂ ನಿನ್ನೆ ಹೈಕೋರ್ಟ ನ್ಯಾಯಾಧೀಶರುಗಳಾದ ಶ್ರೀ ಆರ್. ವೆಂಕಟರಾಮಯ್ಯ ಮತ್ತು ಶ್ರೀ ಎಸ್. ಬಿ. ... ಯ್ಯನವರು ಖುಲಾಸೆ ಮಾಡಿದರು.

ಹೈಕೋರ್ಟಿನ ಅಪೀಲುಗಳನ್ನು ತೀರ್ಮಾನಿಸಿ ... ನ್ಯಾಯಾಧೀಶರು ನೊಳಪ್ಪನೇ ... ಸಾಕ್ಷಿಗಳ ... ಸಾಕ್ಷ್ಯಗಳನ್ನು ... ಸದರಿ ಸಾಕ್ಷಿಗಳು ದರ್ಪ ... ಬಳಕೆ ... ವರೆಂದು ... ಆಪಾದಿತರನ್ನು ... ಸಾಧನವಾಗಿ ಉಪಯೋಗಿಸ ... ಅಭಿಪ್ರಾಯ ... ಹೇಳಿಕೆಗಳಲ್ಲಿ ಸಂಶಯವು ... ಈ ಕಾರಣದ ಸಾಕ್ಷ್ಯ ... ಸಾಕ್ಷಿಗಳು ... ಕೊಳ್ಳಲು ... ತಿಳಿಸಿ ... ಹೇಳಿದರು.

... ಅಪಾದಿತರ ತಂದೆ ರಾಮಕೃಷ್ಣ ... ನವರು ಸಾಕ್ಷಿ ನೀಡುವುದರಲ್ಲಿ ಆಪಾದಿತರು ... ತಪ್ಪಿಸಿಕೊಳ್ಳಲು ... ವೆಂದೂ ನ್ಯಾಯಾಧೀಶರು ತಿಳಿಸಿದರು.

... ಬಾಲರತ್ನಂ, ರಾಮಕೃಷ್ಣಯ್ಯ ಮತ್ತು ... ಇವರುಗಳ ಪರಸ್ಪರ ಸಂಬಂಧವನ್ನು ವಿವರಿಸುತ್ತಾ ನ್ಯಾಯಾಧೀಶರು ರಾಮಕೃಷ್ಣಯ್ಯನವರಿಗೂ ... ಸಂಬಂಧವಿದ್ದ ... ಜಮೀನಿನ ... ವಾಗಿ ... ವಿಚಾರಿಸಲಾಗಿಲ್ಲವೆಂದೂ ಅಳಿಯ ... ವ್ಯವಹಾರದ ಗುಟ್ಟಾಗಿರುವುದೆಂಬುದನ್ನು ... ನ್ಯಾಯವಲ್ಲವೆಂದೂ ... ಆಪಾದಿತರು ತಮ್ಮ ತಂದೆ ಮತ್ತು ... ಬಗ್ಗೆ ಯಾವ ರೀತಿ ವರ್ತಿಸುತ್ತ ... ಮತ್ತು ನೊಳಪ್ಪನಿಗೆ ಅವನ್ನ ... ತಂದೆಯು ಕೆಂಗನ ಮನೆಯಲ್ಲಿ ... ಅಕ್ಷೇಪಣೆ ಇಲ್ಲವೆಂದು ಗೊತ್ತಾ ... ನ್ಯಾಯಾಧೀಶರು ತಿಳಿ ... ಸಂಬಂಧ ... ಸಾಕ್ಷ್ಯವಿಲ್ಲವೆಂದೂ ಕೊಲೆ ಪ್ರಯ ... ಆಪಾದಿತರುಗಳಲ್ಲಿ ಅವ ... ತರ್ಕ ... ಸಾಧ್ಯವಿಲ್ಲ ... ಹೇಳಿದರು.

ಮೈಸೂರಿಗೆ ಚೀನಾ ರೆಡ್ ಕ್ರಾಸ್ ಸಂಸ್ಥೆ ಸಹಾಯ

...ಕ್ಷಾಮ ಪ್ರಭಾವವಿರುವ ಪ್ರದೇಶಗಳಿ...

ಚೀಣದ ರೆಡ್ ಕ್ರಾಸ್ ಸಂಸ್ಥೆಯು ... ಇತ್ತೀಚೆಗೆ ಕೊಟ್ಟ ೫ ಲಕ್ಷ ರೂ ಗಳನ್ನು ಮದ್ರಾಸು, ಮೈಸೂರು, ... ಪ್ರಾಂತಗಳಿಗೆ ಹಂಚಲಾಗಿದೆ.

ರಾಜಧಾನಿಗೆ ಮುಖ್ಯ ಮಂತ್ರಿಗಳು

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂ ... ಯ್ಯನವರು ಇದೇ ತಿಂಗಳು ೨೩ ನೇ ... ರಾಜಧಾನಿಗೆ ಹಾಸನದಿಂದ ಆಗ ... ಎರಡು ದಿನಗಳ ಕಾಲ ಇರುವರು.

ಕಾಂಗ್ರೆಸ್ ಪ್ರತಿನಿಧಿ ಚುನಾವಣೆ ಬಗ್ಗೆ ತಕರಾರು ಅರ್ಜಿ

ಮೈಸೂರು ೨೧

ಮೈಸೂರು ತಾಲ್ಲೂಕಿನಿಂದ ಕಾಂಗ್ರೆಸ್ ಪ್ರತಿನಿಧಿ ಚುನಾವಣೆಯು ಕ್ರಮಬದ್ಧವಾಗಿ ನಡೆದಿಲ್ಲವೆಂದೂ ಈ ಬಗ್ಗೆ ವಿಚಾರಣೆ ನಡೆಸಬೇಕೆಂದೂ ಕೋರಿ ಕಾಂಗ್ರೆಸ್ ಸದಸ್ಯರಾದ ಶ್ರೀ ಬಿ. ಚನ್ನಸ್ವಾಮಿಯವರು ಜಿಲ್ಲಾ ಎಲೆಕ್ಷನ್ ಟ್ರಿಬ್ಯೂನಲ್ಗೆ ಅರ್ಜಿ ಹಾಕಿದ್ದಾರೆಂದು ಗೊತ್ತಾಗಿದೆ.

ಕನ್ಯಾಪಹಾರ ಮೊಕದ್ದಮೆಯಲ್ಲಿ ಯುವಕನ ಖುಲಾಸೆ

ರಾಜಧಾನಿಯ ಕಿಲ್ಲೆ ಮೊಹಲ್ಲಾ ನಿವಾಸಿಯೂ, ಪೌರಸಭೆಯ ಮಾಜಿ ನೌಕರರೂ ಆದ ಶ್ರೀ ರಂಗನಾಥಲುರವರ ಮಗಳು ಶ್ರೀಮತಿ ಇಂದಿರಾದೇವಿಯನ್ನು ಚಾಮರಾಜ ಮೊಹಲ್ಲಯ ಶ್ರೀ ಜಾರ್ಜ್ ಎಂಬ ಕ್ರೈಸ್ತ ಯುವಕನು ಅಪಹರಿಸಿದ್ದನೆಂದು ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ, ನಿನ್ನೆ ನಗರದ ೧ ನೇ ನ್ಯಾಯಾಧೀಶರು ಸದರಿ ಜಾರ್ಜನನ್ನು ಖುಲಾಸೆ ಮಾಡಿದರು. ಯುವತಿಯು ಕೋರ್ಟಿನಲ್ಲಿ ಹೇಳಿಕೆಯಿತ್ತು ತನಗೆ ೧೮ ವರ್ಷ ವಯಸ್ಸಾಗಿರುವುದೆಂದೂ, ತಾನು ಸ್ವತಂತ್ರಳಾಗಿರಬಲ್ಲೆನೆಂದೂ, ತಿಳಿಸಿದ್ದಳು. ಹುಡುಗಿಯ ತಾಯಿ, ತಂದೆ, ವೈದ್ಯರು ಮುಂತಾದವರ ವಿಚಾರಣೆಯು ನಡೆದು, ಅಪಾದಿತನು ಖುಲಾಸೆಯಾಯಿತು. ಹುಡುಗಿಯು ಬಸುರಿಯಾಗಿರುವುದರಿಂದ ಗರ್ಭಸ್ರಾವ ಮಾಡಿಸಲು ತಂದೆ ತಾಯಿಗಳು ಪ್ರಯತ್ನ ಪಟ್ಟರೆಂಬ ಆಪಾದನೆ ಮೇಲಿನ ಇನ್ನೊಂದು ಮೊಕದ್ದಮೆಯು ೨೮ ನೇ ತಾರೀಖಿಗೆ ಮುಂದುವರಿದಿರುತ್ತದೆ.

ಮಾರ್ಚ್ ಅಖೈರುವರೆಗೆ ಪೌರಸಭಾ ಅವಧಿ ಹೆಚ್ಚಿತು

ಮೈಸೂರಿನ ಪೌರಸಭೆಯ ಅವಧಿಯು ಇದೇ ಜನವರಿ ೩೧ನೇ ತಾರೀಖಿಗೆ ಮುಕ್ತಾಯವಾಗಬೇಕಾಗಿದ್ದು, ಈಗ ಸರ್ಕಾರದವರು ಅದನ್ನು ಮಾರ್ಚಿ ತಿಂಗಳು ೩೧ನೇ ತಾರೀಖಿನವರೆಗೆ ಹೆಚ್ಚಿಸಿರುತ್ತಾರೆ. ವಯಸ್ಕರ ಮತದಾನದ ಪ್ರಕಾರ ಸಭೆಗೆ ಹೊಸ ಚುನಾವಣೆಯು ನಡೆಯಬೇಕಾಗಿದೆ.

ವಿಶ್ವ ಸಂಸ್ಥೆ ತನಿಖೆ ಸಮಿತಿಗೆ ದಕ್ಷಿಣ ಆಫ್ರಿಕದ ನಿಷೇಧ

ವರ್ಣ ಭೇದದ ನೀತಿ ಬಗ್ಗೆ ತನಿಖೆ ನಡೆಸಲು ಸ್ಥಾಪಿಸಲಾಗುವ ವಿಶ್ವ ಸಂಸ್ಥೆಯ ಸಮಿತಿಗೆ ದಕ್ಷಿಣ ಆಫ್ರಿಕಾ ಸರ್ಕಾರದವರ ನಿಷೇಧ ಹಾಕಲಿರುವರೆಂದು ವರದಿಯಾಗಿದೆ.

ಹತ್ತು ಸಾವಿರ ರೂ. ನೋಟುಗಳ ಚಲಾವಣೆ

...ಐದು ಸಾವಿರ ಐದು ಸಾವಿರ ಮತ್ತು ಹತ್ತು ಸಾವಿರ ರೂ ಗಳ ನೋಟುಗಳನ್ನು ಪುನಃ ಚಲಾವಣೆ ... ಸರ್ಕಾರ ... ಬ್ಯಾಂಕಿಗೆ ಅಧಿಕಾರವೀಯುವ ಮಸೂದೆಯೊಂದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ.

ಎರಡು ತಲೆಗಳ ಕರು

ಹಾಸನದ ವರ್ತಕ ಶ್ರೀ ಎಲ್. ಎಸ್. ಸಿದ್ದಪ್ಪನವರ ಹಸುವೊಂದು ೨ ತಲೆಗಳುಳ್ಳ ವಿಚಿತ್ರ ಕರುವನ್ನು ಹಾಕಿತು. ಹುಟ್ಟುವಾಗಲೇ ಕರುವು ಸತ್ತು ಹೋಗಿದ್ದಿತು. ಎರಡು ತಲೆಗಳು ಪ್ರತ್ಯೇಕವಾಗಿದ್ದು, ೪ ಕಿವಿ, ೪ ಕಣ್ಣು, ಎರಡು ಮೂಗುಗಳಿದ್ದುವು. ಕರುವನ್ನು ಮೈಸೂರಿಗೆ ಕಳಿಸಿಕೊಡಲು ಇಲ್ಲಿನ ವೈದ್ಯರು ಅದನ್ನು ದ್ರಾವಕಗಳಲ್ಲಿಟ್ಟು ಮಾಡಿಸಿ ಕಳುಹಿಸಿದವರು ಅದನ್ನು ಈಗ ಜನರಿಗೆ ತೋರಿಸಲಾಗುತ್ತಿದೆ.

ಇಂಜನಿಯರಿಂಗ್ ಶಾಲಾ ವಿದ್ಯಾರ್ಥಿಗಳ ಸಭೆ

ಸೆಪ್ಟೆಂಬರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ರಾಜಧಾನಿಯ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ವಿದ್ಯಾರ್ಥಿಗಳ ಸಭೆಯೊಂದು ನಾಳೆ ಬೆಳಿಗ್ಗೆ ೯ ಗಂಟೆಗೆ ಶಾಲಾ ಆವರಣದಲ್ಲಿ ನಡೆಯುವುದು. ನವೆಂಬರ್ ತರಗತಿಗಳನ್ನು ಪ್ರಾರಂಭಿಸುವಂತೆ ಕಾಲೇಜು ಅಧಿಕಾರಿಗಳನ್ನು ಪ್ರಾರ್ಥಿಸುವುದೇ ಸಭೆಯ ಉದ್ದೇಶವಾಗಿದೆ.

ಚನ್ನರಾಯ ರೆಡ್ಡಿಯವರಿಗೆ ಬಡ್ತಿ

ಮೈಸೂರಿನ ಪ್ರಥಮ ಮುನ್ಸೀಫರಾದ ಶ್ರೀ ಜಿ. ಚನ್ನರಾಯರೆಡ್ಡಿಯವರನ್ನು ಮೊನ್ನೆಯಿಂದ ಸಬಾರ್ಡಿನೇಟ್ ಜಡ್ಜರಾಗಿ ಮಾಡಿ, ಬೆಂಗಳೂರು ಸಿವಿಲ್ ಪ್ರದೇಶಕ್ಕೆ ವರ್ಗಾಯಿಸಲಾಗಿದೆ. ಶ್ರೀ ಬಿ. ಸಿ. ಶ್ರೀನಿವಾಸರವರನ್ನು ಹಂಗಾಮಿ ಮುನ್ಸೀಫರಾಗಿ ನೇಮಿಸಲಾಗಿದೆ.

ದಕ್ಷಿಣ ಭಾರತದಲ್ಲಿ ೪೦ ಕೈಗಾರಿಕೆಗಳ ಅಭಿವೃದ್ಧಿ

ದಕ್ಷಿಣ ಭಾರತದ ಮದ್ರಾಸು, ಹೈದರಾಬಾದು, ಮೈಸೂರು ಮತ್ತು ತಿರುವಾಂಕೂರು ಕೊಚ್ಚಿ ಸಂಸ್ಥಾನಗಳಲ್ಲಿ ಅಲ್ಯೂಮಿನಂ, ಮೋಟಾರು ಬಿಡಿ ಭಾಗಗಳು, ಸಿಮೆಂಟು, ಹತ್ತಿ, ಬಟ್ಟೆ, ಸೈಕಲ್, ವಿದ್ಯುಚ್ಛಕ್ತಿ ಲ್ಯಾಂಪುಗಳು, ಕಬ್ಬಿಣ, ಉಕ್ಕು, ಪೆಟ್ರೋಲ್ ಶುದ್ಧೀಕರಣ ಇವೇ ಮುಂತಾದ ೪೦ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವ ವಿಷಯವನ್ನು ಭಾರತದ ಆಯೋಜನಾ ಸಮಿತಿಯು ಯೋಚಿಸಿರುವುದೆಂದು ಕೇಂದ್ರ ವಾಣಿಜ್ಯ ಮಂತ್ರಿಗಳು ತಿಳಿಸಿರುತ್ತಾರೆ.

ಬರ್ಮಾದಲ್ಲಿ ಪುನಃ ಕರೆನ್ನರ ದಂಗೆ

ಬರ್ಮಾದ ರಾಜಧಾನಿ ರಂಗೂನಿಗೆ ಪೂರ್ವದಲ್ಲಿರುವ ಥಾಟನ್ ಜಿಲ್ಲೆಯ ೬ ನಗರಗಳ ಮೇಲೆ ಸಾವಿರ ಕರೆನ್ ದಂಗೆಕೋರರು ಧಾಳಿ ಮಾಡಿ, ಅಲ್ಲಿನ ಸರ್ಕಾರಿ ನೌಕರರನ್ನ ಕೊಂದಿರುತ್ತಾರೆ. ಸರ್ಕಾರಿ ಪಡೆಗಳಿಗೂ ದಂಗೆಕೋರರಿಗೂ ಭಾರಿ ಕಾಳಗಗಳೇ ನಡೆದು ದಂಗೆಕೋರರ ಕಡೆ ಬಹಳವಾಗಿ ನಷ್ಟವಾಗಿರುವುದೆಂದೂ, ದಂಗೆಕೋರರು ಹಲವು ಹಳ್ಳಿಗಳಿಗೆ ಬೆಂಕಿ ಹಚ್ಚಿ, ಮಾರ್ಕೆಟ್ಟುಗಳನ್ನು ಲೂಟಿ ಮಾಡಿ, ಬಸ್ಸೊಂದನ್ನು ತಡೆದು ಪ್ರಯಾಣಿಕರಿಂದ ೫೦ ಸಾವಿರ ರೂ ಗಳನ್ನು ಅಪಹರಿಸಿರುವರೆಂದೂ ವರದಿಯಾಗಿದೆ.

ಅಮೇರಿಕಕ್ಕೆ ಹೊಸ ವಿದೇಶಾಂಗ ಕಾರ್ಯದರ್ಶಿ

ಪೂರ್ವ ರಾಷ್ಟ್ರಗಳ ವಿಷಯಗಳ ಪ್ರವೀಣರಾದ ಜಾನ್ ಫಾಸ್ಟರ್ ಡಲ್ಲೆಸ್‌ರವರನ್ನು ತಮ್ಮ ವಿದೇಶಾಂಗ ಕಾರ್ಯದರ್ಶಿಗಳಾಗಿ ತೆಗೆದುಕೊಳ್ಳುವುದಾಗಿ ಜ|| ಐಸನ್‌ಹೋವರರು ತಿಳಿಸಿರುವರು.

ಮೈಸೂರು ಸರ್ಕಾರದ ಮೇಲೆ ಮದ್ರಾಸಿನವರ ದೂರು

ಪಾರ್ಲಿಮೆಂಟಿನಲ್ಲಿರುವ ಮದ್ರಾಸಿನ ... ಜನ ಸದಸ್ಯರಾದ ಎಸ್. ಆರ್. ಎಂ. ಸ್ವಾಮಿ, ಎಂ. ಮುತ್ತುಕೃಷ್ಣನ್, ಡಾ|| ವಿ. ರಾಮಚಂದ್ರ ಮತ್ತು ಮದ್ರಾಸು ಶಾಸನ ಸಭಾ ಸದಸ್ಯರಾದ ಎಸ್. ಹಂ ... ರವರುಗಳು ಪ್ರಧಾನಿ ನೆಹರೂ ರವರಿಗೆ ದೂರೊಂದನ್ನು ಕಳುಹಿಸಿ, ಮೈಸೂರು ಮತ್ತು ಮದ್ರಾಸುಗಳ ನಡುವೆ ಪಾಲಾರ್ ನದಿಯ ನೀರಿನ ಬಳಕೆ ಬಗ್ಗೆ ತನಿಖೆಗಾಗಿ ಒಂದು ಮಂಡಲವನ್ನು ರಚಿಸುವಂತೆ ಕೋರಿರುತ್ತಾರೆ. ಮೈಸೂರು ಸರ್ಕಾರದವರು ಒಪ್ಪಂದವನ್ನುಲ್ಲಂಘಿಸಿ ಪಾಲಾರ್ ನದಿ ನೀರನ್ನು ತಾವೇ ಉಪಯೋಗಿಸಿಕೊಂಡಿರುವರೆಂದೂ ಅದರಿಂದ ಮದ್ರಾಸಿನ ಹಲವು ಹೆಚ್ಚಿನ ... ಪ್ರದೇಶಗಳು ನೀರಿಲ್ಲದೆ ಕೊರತೆ ಪ್ರದೇಶಗಳಾಗಿರುವುವೆಂದೂ ಅವರು ಹೇಳಿರುತ್ತಾರೆ.

ಸೂಚನೆ

ಸುಬ್ಬರಾಯನ ಷಷ್ಠಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ

ರಾಜಕೀಯದಲ್ಲಿ ಜಯಪ್ರಕಾಶರ ಬೇಸರಿಕೆ

ಜಯಪ್ರಕಾಶ ನಾರಾಯಣರವರಿಗೆ ಪ್ರವಾಸ ಮತ್ತು ಭಾಷಣ ಮಾಡುವಂತಹ ರಾಜಕೀಯ ಕಾರ್ಯದಲ್ಲಿ ಬೇಸರಿಕೆಯುಂಟಾಗಿರುವುದೆಂದೂ, ಆದ್ದರಿಂದ ಅವರು ಹಳ್ಳಿಯಲ್ಲಿ ನೆಲೆಸಿ, ಕೆಲಸಮಾಡಲು ನಿಶ್ಚಯಿಸಿರುವರೆಂದೂ ಕೇಳಲಾಗಿದೆ ರೈಲ್ವೆ ಕಾರ್ಮಿಕರ ಸಂಘದ ಅಧ್ಯಕ್ಷಸ್ಥಾನದಿಂದಲೂ ಅವರು ನಿವೃತ್ತಿ ಹೊಂದಲಿರುವರು

ನಿಜಾಮರ ಮೋಟಾರುಗಳ ಬಗ್ಗೆ ಹೈಕೋರ್ಟಿಗೆ ಅರ್ಜಿ

ನಿಜಾಮರಿಗೆ ಸೇರಿದ ಸಂಬರಿಂದ ೩೫ ಮೋಟಾರುಗಳು ಮತ್ತು ಕುದುರೆಗಾಡಿಗಳು ಹೈದರಾಬಾದು ರಸ್ತೆಗಳಲ್ಲಿ ಸಾರ್ವದಾ ಅತಿ ವೇಗವಾಗಿ ಓಡುತ್ತಿರುವುದನ್ನು ತಡಯುವಂತೆ ಇಂಜಂಕ್ಷನ್ ಆಜ್ಞೆಯಾಗಬೇಕೆಂದು ಹೈದರಾಬಾದ್ ನಗರದ ನ್ಯಾಯಾಧೀಶರ ಮುಂದೆ ಕೇಸ್ಕರ್ ಎಂಬುವರು ಅರ್ಜಿ ಸಲ್ಲಿಸಿರುತ್ತಾರೆ ನ್ಯಾಯಾಧೀಶರು ಅವರ ಕೇಳಿಕೆಯನ್ನು ತೆಗೆದು ಹಾಕಿರುತ್ತಾರೆ ಏಂದೆ ನಿಜಾಮರ (ಲಿ ಹ್ಯಾಂಡ್ ಗ್ರಸಡನ್ನು ಎಸದು ಕ್ರರೆಂದು ಅರ್ಜಿದಾರರಮೇಲೆ ಮೊಕದ್ದಮೆ ಹೂಡಿ, ಅವರ ಖುಲಾಸೆಯಾಗಿದ್ದಿತು

ಹಿರಿಯ ಶಾಸನ ಸಭೆಯ ಓಟರುಗಳ ಪಟ್ಟಿ ಪ್ರಕಟನೆ

ಮೈಸೂರಿನ ಲೆಜಿಸ್ಲೆಟಿವ್ ಕೌನ್ಸಿಲಿನ ಪದವೀಧರರ, ಉಪಾಧ್ಯಾಯರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳ ಓಟರು ಪಟ್ಟಿಯನ್ನು ಆಯಾ ರಿಜಿಸ್ಟ್ರೇಷನ್ ಅಧಿಕಾರಿಗಳ ಕಛೇರಿಗಳಲ್ಲಿ ಪ್ರಕಟಿಸಲಾಗಿದೆ ಅವುಗಳಲ್ಲಿ ಹೆಸರು ಸೇರದಿರುವವರು ತಮ್ಮ ಹೆಸರುಗಳನ್ನು ಸೂಚಿಸಬಹುದಾಗಿದೆ ಆಕ್ಷೇಪಣೆ ಮತ್ತು ನ್ಯೂನತೆಗಳಿದ್ದಲ್ಲಿ ಪಟ್ಟಿ ಪ್ರಕಟವಾದ ೩೦ ದಿನಗಳೊಳಗೆ ಆಯಾ ರಿಜಿಸ್ಟ್ರೇಷನ್ ಅಧಿಕಾರಿಗಳಿಗೆ ಬರೆದು ಸರಿಪಡಿಸಿಕೊಳ್ಳಬಹುದೆಂದು ಸರ್ಕಾರದ ಪತ್ರಿಕಾ ಪ್ರಕಟಣೆಯೊಂದು ತಿಳಿಸಿರುತ್ತದೆ.

ಬಾಂಬರು ಸಮುದ್ರಕ್ಕೆ ಬಿದ್ದು ೮ ವೈಮಾನಿಕರ ಮರಣ

ಅಮೆರಿಕಾ ರೋಡ್ ಐಲೆಂಡ್ ಬಳಿ ಬಾಂಬರ್ ಒಂದು ಸಮುದ್ರದಲ್ಲಿ ಬಿದ್ದು ಅದರ ೮ ಜನ ವೈಮಾನಿಕರು ಮೃತಿಹೊಂದಿರಬಹುದೆಂದು ವರದಿಯಾಗಿದೆ

ಕಾರ್ಮಿಕ ಮುಖಂಡರ ಉಪವಾಸಕ್ಕಾಗಿ ಸಹಾನುಭೂತಿ

ಮೈಸೂರು ಸಂಸ್ಥಾನದ ಪ್ರಜಾ ಸೋಷಲಿಸ್ಟ್ ಪಕ್ಷದ ಪ್ರಾಂತೀಯ ಕಾರ್ಯದರ್ಶಿ ಶ್ರೀ ಜಿ ಸದಾಶಿವರಾವ್‌ರವರು ಹೇಳಿಕೆಯೊಂದನ್ನಿತ್ತು, ಬೆಂಗಳೂರು ಬಸ್ ಟ್ರಾನ್ಸ್‌ಪೋರ್ಟ್ ಸರ್ವೀಸ ವಾಹನಗಳ ಡಿಪೋ ಕಾರ್ಮಿಕರ ಮುಖಂಡರಾದ ಶ್ರೀ ಕ್ರೀಷ್ ಕೆ. ಕಣ್ಣೀರವರು ಇದೇ ೨೪ನೇ ತಾರೀಖಿನಿಂದ ಕೈಗೊಳ್ಳುವ ಉಪವಾಸದ ಬಗ್ಗೆ ಸಾರ್ವಜನಿಕರ ಸಹಾನುಭೂತಿಯನ್ನು ಕೋರಿರುತ್ತಾರೆ

ಶಾರದಾ ಪೂಜೆ

ರಾಜಧಾನಿಯ ಮಾದರೀ ಶಾಲೆಯ ೮ನೇ ತರಗತಿ ವಿದ್ಯಾರ್ಥಿಗಳು ಮೊನ್ನೆ ಶಾರದಾ ಪೂಜೆಯನ್ನು ನೆರವೇರಿಸಿದರು ... ವರ್ಗ ಸ್ಪರ್ಧೆಗಳಲ್ಲಿ ... ಮನೋರಂಜನೆ ಕಾರ್ಯಕ್ರಮ ... ಮಾನ ... ಯೋಗವು ... [illegible]

ವಿವಾಹ ಮಹೋತ್ಸವ

... ಕೃಷ್ಣ ... ಸರ್ವ ... ಭಟ್ಟರ ಮಕ್ಕಳಿಗೆ ಶ್ರೀ ... ಭಟ್ಟರಿಗೆ ಕೊಟ್ಟು ಮಾನ್ಯ ... ತಿರುವಳ್ಳಿ ... ಶ್ರೀ ಎನ್ ಶ್ರೀನಿವಾಸಮೂರ್ತಿಯವರು ವಿವಾಹವನ್ನು ನೆರವೇರಿಸಿದರು

ಟೈರ್ ಮತ್ತು ಟ್ಯೂಬ್
ಸೋಲ್ ಚಪ್ಪಲಿಗಳು
ಸಮಾಧಾನ ಬೆಲೆಗೆ ...
ಮಾಡಿಕೊಡುತ್ತೇವೆ
ಹನ್ಸ್ ಫುಟ್ ವೇರ್,
... ಮಾರ್ಕೆಟ್, ಮೈಸೂರು

ಈಜಿಪ್ಟಿನಲ್ಲಿ ೧೩೦ ಜನರ ದಸ್ತಗಿರಿ

ಈಜಿಪ್ಟಿನ ಸಾರ್ವಜನಿಕ ಸುರಕ್ಷತೆಗೆ ಅಪಾಯಕಾರಿಗಳೆಂದು ೧೩೦ ಜನರನ್ನು ದಸ್ತಗಿರಿ ಮಾಡಲಾಗಿದೆ ಸುದಾನ್ ಚಳುವಳಿ ಸಂಬಂಧವಾಗಿ ಈ ದಸ್ತಗಿರಿ ಆಗಿದೆ

ಮೈಸೂರಿಗೆ ಉತ್ತರ ಭಾರತದ ಸನ್ಯಾಸಿನಿಯ ಆಗಮನ

ಉತ್ತರ ಭಾರತದ ಪ್ರಸಿದ್ಧ ಸನ್ಯಾಸಿನಿ ಆನಂದಮಯಿ ಮಾತಾ ಹಲವು ಭಕ್ತರೂ, ಸನ್ಯಾಸಿನಿಯರೂ ಉದಯಮಂಡಲದಿಂದ ಇದೇ ತಿಂಗಳು ೨೬ನೇ ತಾ|| ಮೈಸೂರು ನಗರಕ್ಕೆ ಆಗಮಿಸುವರು ಅವರು ಶ್ರೀರಂಗಪಟ್ಟಣ, ಬೃಂದಾವನ, ಚಾಮುಂಡಿಬೆಟ್ಟ, ಬೇಲೂರು, ಹಳೇಬೀಡು, ಶೃಂಗೇರಿ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವರು ೩೦ ನೇ ತಾ|| ಬೆಂಗಳೂರು ಪೌರಸಭೆಯವರು ಅವರಿಗೆ ಸ್ವಾಗತ ಸಮಾರಂಭವನ್ನು ಏರ್ಪಡಿಸುವರು

ಭೂದಾನ ಯಜ್ಞದ ಬಗ್ಗೆ ವಲ್ಲಭಸ್ವಾಮಿಯವರ ಉಪನ್ಯಾಸ

ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞದ ಬಗ್ಗೆ ಅಖಿಲ ಭಾರತ ಸರ್ವ ಸೇವಾಸಂಘದ ಕಾರ್ಯದರ್ಶಿಯವರಾದ ಶ್ರೀ ವಲ್ಲಭ ಸ್ವಾಮಿಯವರು ನಾಳೆ ಸಂಜೆ ೬ ಗಂಟೆಗೆ ... ಶಾರದಾ ... ಸ್ವಾಗತ ... ಶ್ರೀ ... ಅವರ ಅಧ್ಯಕ್ಷತೆಯಲ್ಲಿ ... ಉಪನ್ಯಾಸವಿದೆ.

SRI GAYATHRI
TALKIES
Daily 2 Shows
On SUNDAY 22nd
For A Day Only
Presents
DETECTIVE STORY
With Kirk Douglas
SPECIAL MORNING SHOW
On SUNDAY Only
DETECTIVE STORY
No Concession For
This Show
From 23rd Nov 52
KANGAROO
(In Technicolor)

ಕರ್ನಾಟಕದ ಸಂಗೀತ ಪರಿ...

ಕರ್ನಾಟಕ ಸಂಗೀತಾಭಿಮಾನಿಗಳಿಗೆ ... ಶ್ರೀ ಅಂಡಾಳ್‌ರವರು ರಚಿಸಿರುವ ತಿರುಪ್ಪಾವೈ ಮುಂತಾದ ೩೦ ಕೃತಿಗಳು, ಮಾಣಿಕ ವಾಚಗರ್‌ರವರ ತಿರುವೆಂಬಾವೈ, ತಿರುಪಳ್ಳಿ ಯುಳುಚ್ಚಿ ಮುಂತಾದ ೩೦ ಹಾಡುಗಳು- ಈ ೬೦ ಹಾಡುಗಳನ್ನು ಧನುರ್ಮಾಸದಲ್ಲಿ ನಡೆಯುವ ದೀಕ್ಷೆಯಲ್ಲಿ ಬಾಯಿ ಪಾಠವಾಗಿ ಹೇಳಿ ತೀರ್ಗಡೆಹೊಂದುವ ಬಾಲಕ ಬಾಲಿಕೆಯರಿಗೆ ಕುಂಭಕೋಣದ ಶ್ರೀ ಶಂಕರಾಚಾರ್ಯ ಮಠದವರು ಅಮೂಲ್ಯವಾದ ... ದ್ರಾಂಕಿತವಾದ ಭಂಗಾರದ ನಾಣ್ಯವನ್ನು ಬಹುಮಾನವಾಗಿ ಕೊಡಲಿರುವರು ಈ ಎರಡರ ಪ್ರತಿ ಒಂದು ಭಾಗವು ಮೂವತ್ತು ಹಾಡುಗಳನ್ನು ಹೇಳಿದವರಿಗೆ ಬೆಳ್ಳಿಯ ಕಾಸನ್ನು ಕೊಡಲಾಗುವುದು ಸದರಿ ಕೃತಿಗಳನ್ನು ಕಲಿಸಲು ೩೦| ಕೊಪ್ಪಲಿನ ಆಂಡಾಳ್ ಮಂದಿರಂ, ರಮಾವಿಲಾಸ ರಸ್ತೆಯ ಅಹೋಬಲ ಮಠ ಮತ್ತು ತೆಂಕನಂಚಿಂಬಾ ಅಗ್ರಹಾರದ ರಾಮನಿವಾಸ ಈ ಸ್ಥಳಗಳಲ್ಲಿ ಸ್ವ ... ಸಂಜೆ ೫|| ಕ್ಕೆ ಏರ್ಪಾಡಾಗಿದೆ ಇತರ ಕಡೆಗಳಲ್ಲೂ ಈ ಪದ್ಯಗಳನ್ನು ಹೇಳಿಕೊಡಲು ಶೀಘ್ರದಲ್ಲಿ ಪ್ರಸ್ತಿಸಿವರು. ಉಪಾಧ್ಯಾಯರನ್ನು ಒದಗಿಸುವುದು ಎಲ್ಲ ವರ್ಗದವರಿಗೂ ಪರೀಕ್ಷೆಯಲ್ಲಿ ಅವಕಾಶವಿರುತ್ತದೆ

ಬೇಕಾಗಿದ್ದಾರೆ
ಮೈಸೂರು ನಗರದಲ್ಲಿ ಈ ಮೊದಲು ... ಸಾಧ್ವಿ ಪತ್ರಿಕೆಗೆ ಚಂದಾದಾರರನ್ನು ... ಪತ್ರಿಕೆ ಹಂಚಲು ಅದೇ ನಗರದಲ್ಲಿ ವಾಸವಾಗಿರುವ ಹುಡುಗರು ಬೇಕಾಗಿದ್ದಾರೆ
ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಏಜೆಂಟರು, ಮೈಸೂರು
ಇವರಲ್ಲಿ ವಿಚಾರಿಸಿ

FRESH ADMISSIONS
FOR
SHORTHAND & TYPEWRITING
Only, Leading to
November 1953 Examinations
Are now being received
At The
CHAMPION METROPOLITAN
COLLEGE OF COMMERCE,
Co-operators Hall
100 Fort Road Mysore
Sd/- M S PUTTANNA
Vice Principal

ರಣಜಿತ್
21-11-52 ರಿಂದ
ಯಶಸ್ವಿ 2ನೇ ವಾರ
ನಯ ಸನ್ಸಾರ್‌ರವರ ಹಿಂದಿ ಚಿತ್ರ
ಆನ್ - ಹೋನೀ
— ತಾರಾಗಣ
ನರ್ಗಿಸ್, ರಾಜ್‌ಕಪೂರ್ ಆಗ,
ಡೇವಿಡ್, ಬದ್ರಿಪ್ರಸಾದ್
ಜಾನಕಿದಾಸ್, ಮತ್ತು
ಓಂ ಪ್ರಕಾಶ್
ಕಥೆ, ಸಂಭಾಷಣೆ ... ನಿರ್ದೇಶನ ...
ಸಂಗೀತ ...

ಪ್ರಭುದೇವಾ ಟಾಕೀಸ್
(ಕೃಷ್ಣ ಟಾಕೀಸ್ ...)
23 11 52ನೇ : ಭಾನುವಾರದಿಂದ
* ಸತಿ ಅಹಲ್ಯಾ *
(ಹಿಂದಿ)
... ಕಮಲಾ ಕೋಟ್ನಿಸ್ ... ಉಲ್ಹಾಸ್ ...
28-11-52ನೇ ಶುಕ್ರವಾರದಿಂದ
... ರವರ ತೆಲುಗು ಚಿತ್ರ ★ ದಾಸಿ ★

Edited, Printed and Published by A. R. Nagaraj at Sadhvi Press, D Subbiah Road, Mysore

ರಿಜಿಸ್ಟರ್ ನಂ. ೭೪೭ ನಿತ್ಯಸೇವೆ ಸಮಾಚಾರ|| ಉಚಿತ ಪತ್ರಿಕೆ ಬಾಕು

ಸಾಧ್ವಿ

ಸಂಪುಟ ೧೧] ಸೋಮವಾರ ೨೪-೧೧-೧೯೫೨ [ಸಂಚಿಕೆ ೯೯

ಬಾಗ್ದಾದಿನ ೨೦,೦೦೦ ಜನರ ಪ್ರಚಂಡ ಕ್ರಾಂತಿ

ಬಾಗ್ದಾದಿನ ಬ್ರಿಟಿಷ್, ಅಮೆರಿಕ ಕಛೇರಿಗಳಿಗೆ ಬೆಂಕಿ

೨೦,೦೦೦ ಪ್ರದರ್ಶನಕಾರರ ಪ್ರಚಂಡ ಕ್ರಾಂತಿ

ಕಳೆದ ತಿಂಗಳು ೨೭ ನೇ ತಾರೀಖು ಇರಾಕ್ ಪಾರ್ಲಿಮೆಂಟಿನ ವಿಸರ್ಜನೆಯಾದನಂತರ ಹೊಸ ಪಾರ್ಲಿಮೆಂಟಿನ ಸ್ಥಾಪನ ಸಂಬಂಧದ ಚುನಾವಣೆ ವಿಷಯವಾಗಿ ಮೊನ್ನೆ ಮತ್ತು ನೆನ್ನೆ ಭಾರಿ ಪ್ರದರ್ಶನವು ನಡೆದು ಸುಮಾರು ೨೦ ಸಾವಿರ ಜನರು ಚೂರಿ, ಬಾಕು ಮತ್ತು ರಿವಾಲ್ವರುಗಳ ಸಮೇತ ನುಗ್ಗಿ ರಾಜಧಾನಿಯಾದ ಬಾಗ್ದಾದಿನಲ್ಲಿರುವ ಅಮೆರಿಕ ಮತ್ತು ಬ್ರಿಟಿಷರುಗಳ ರಾಯಭಾರ ಕಛೇರಿಗಳು ಮತ್ತು ನಾನಾ ಇಲಾಖಾ ಕಛೇರಿಗಳಿಗೂ ಮತ್ತು ಸರ್ಕಾರೀ ಕಟ್ಟಡಗಳಿಗೂ ಬೆಂಕಿ ಹಚ್ಚಿದರೆಂದೂ, ಪೊಲೀಸರಿಗೂ ಸರ್ಕಾರೀ ಕಟ್ಟಡಗಳಿಗೂ ಕಲ್ಲು ಹೊಡೆದರೆಂದೂ ವರದಿಯಾಗಿದೆ ಆಂಗ್ಲ ಪತ್ರಿಕಾ ಕಛೇರಿಯೊಂದಕ್ಕೂ ಮತ್ತು ಅಮೆರಿಕಾ ರಾಯಭಾರ ಕಛೇರಿಯ ಸುದ್ದಿ ಶಾಖೆಗೂ ಬೆಂಕಿ ಇಡಲಾಯಿತು.

ಪ್ರದರ್ಶನಕಾರರು, ಬ್ರಿಟಿಷರು ಮತ್ತು ಅಮೆರಿಕನರು ತೊಲಗಿಹೋಗಬೇಕೆಂದೂ, ೧೭ ವರ್ಷ ವಯಸ್ಸಿನ ದೊರೆಯ ಪ್ರತಿಭುತ್ವಾಧಿಕಾರದಿಂದ ಕೂಡಿದ ಇರಾಕಿ ಆಡಳಿತವು ಮುಕ್ತಾಯವಾಗಬೇಕೆಂದೂ ಕೂಗುತ್ತಿದ್ದರು. ಕೆಲವು ಪೊಲೀಸು ಠಾಣೆಗಳನ್ನೂ ಸುಡಲಾಯಿತು

ಗಲಾಟೆಯನ್ನು ತಹಬಂದಿಗೆ ತರುವ ಸಲುವಾಗಿ ಶಸ್ತ್ರ ಸಜ್ಜಿತ ವಾಹನಗಳೊಡನೆ ಸೈನಿಕರು ಬಂದು ಅಶ್ರುವಾಯು ಪ್ರಯೋಗಿಸಿ, ತರುವಾಯ ಗುಂಡುಹಾರಿಸಿದರು ಇದರಿಂದ ಒಟ್ಟು ೧೦ ಜನರು ಮಡಿದು ಸುಮಾರು ೧೦೦ ಮಂದಿ ಗಾಯಗೊಂಡಿರುವರೆಂದು ವರದಿಯಾಗಿದೆ. ಅಲ್ಲಿನ ಪ್ರಧಾನಿ ಮುಸ್ತಫಾ ಉಮಾರಿಯವರ ಪಕ್ಷರಹಿತ ಸರ್ಕಾರವು ರಾಜೀನಾಮೆ ಕೊಟ್ಟಿರುವುದೆಂದೂ, ಇರಾಕಿನ ಚೀಫ್ ಆಫ್ ಜನರಲ್ ಸ್ಟಾಫರಾದ ಜನರಲ್ ನೂರುದ್ದಿನ್ ಮಹಮೂದ್‌ರವರು ಹೊಸ ಕೇರ್ ಟೇಕರ್ ಸರ್ಕಾರ ರಚಿಸುವರೆಂದೂ, ಇನ್ನು ಒಂದು ತಿಂಗಳೊಳಗೆ, ಅಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವುದೆಂದೂ ಹೇಳಲಾಗಿದೆ

ಸಾಧುವಿನಿಂದ ೨೪ ಗಂಟೆ ಕಾಲ ಭೂ ಸಮಾಧಿ

ಮೈಸೂರು ೨೪

ಹಿಮಾಲಯದ ತಪಸ್ವಿಗಳ ಶಿಷ್ಯರಾದ ಶ್ರೀ ಡಿ ಡಿ ಶರ್ಮ ಎಂಬುವರು ಮೊನ್ನೆ ಸಂಜೆ ನಗರದ ದೊಡ್ಡಕೆರೆ ಮೈದಾನದಲ್ಲಿ ಗುಂಡಿಯೊಂದನ್ನು ತೆಗೆಸಿ ಅದರೊಳಗೆ ಸಮಾಧಿ ಮಾಡಿಸಿಕೊಂಡು ನೆನ್ನೆ ಸಂಜೆ ಹೊರಗೆ ಬಂದರು. ಪೌರ ಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿ ರಾಯರು ನೆನ್ನೆ ಸಂಜೆ ಸಮಾಧಿಯಿಂದ ಏಳುವಾಗ ಹಾಜರಿದ್ದರು ಗುಂಡಿಯ ಮೇಲೆ ಮುಚ್ಚಿದ್ದ ಮಣ್ಣು ಮತ್ತು ಹಲಗೆಗಳನ್ನು ತೆಗೆದ ನಂತರ ಶ್ರೀ ಶರ್ಮರು ಯಾವ ಆಯಾಸವೂ ಇಲ್ಲದವರಂತೆ ಮೇಲೆದ್ದು ಬಂದರು ಈ ಅದ್ಭುತ ದೃಶ್ಯವನ್ನು ನೋಡಲು ಸಾವಿರಾರು ಮಂದಿ ನೆರೆದಿದ್ದರು

ಮದುವೆಯಾಗಲಿದ್ದ ವಧುವಿನ ಅಪಹರಣ

ಕಲ್ಕತ್ತಾ ಬಳಿ ಖರಗಪುರದಲ್ಲಿ ಭಾರಿ ಹತಾಯುಧರ ಗುಂಪೊಂದು ಕಳೆದ ಶುಕ್ರವಾರ ಒಂದು ಮನೆಯಲ್ಲಿ ಏಕಾಂಗಿಯಾಗಿದ್ದ ೨೦ ವರ್ಷದ ಮದುವೆಯಾಗಲಿದ್ದ ಕನ್ಯೆಯನ್ನೂ ಮತ್ತು ಐದು ಸಾವಿರ ರೂ ಬೆಲೆ ಬಾಳುವ ಒಡವೆಗಳನ್ನೂ ಅಪಹರಿಸಿಕೊಂಡು ಹೋದರೆಂದು ವರದಿಯಾಗಿದೆ

ಮಗುವನ್ನು ೫ ರೂ. ಗಳಿಗೆ ಮಾರಿದ ಪ್ರಸಂಗ

ಶ್ರೀರಂಗದ ಬಡ್ಡ ಬ್ರಾಹ್ಮಣ ಮಹಿಳೆಯು ಮಕ್ಕಳನ್ನು ಸಾಕಲಾರದೆ ೨೪ ದಿನಗಳ ವಯಸ್ಸಿನ ಹೆಣ್ಣು ಮಗುವೊಂದನ್ನು ೫ ರೂ ಗಳಿಗೆ ಮಾರಿದ ಪ್ರಸಂಗವೊಂದು ವರದಿಯಾಗಿದೆ ಆಕೆಯ ಗಂಡನು ಪತ್ನಿ ಮತ್ತು ಏಳು ಮಕ್ಕಳ ಸಂಸಾರವನ್ನು ನಿರ್ವಹಿಸಲಾರದೆ ಕೆಲವು ದಿನಗಳ ಹಿಂದೆ ಹೊರಟುಹೋದನೆಂದೂ, ಕಳೆದ ಗುರುವಾರ ಆಕೆಯು ತನ್ನ ಕೈಮಗು ಮತ್ತು ೧೨ ವರ್ಷದ ಇನ್ನೊಬ್ಬ ಮಗಳೊಡನೆ ಟಿಕೆಟ್ಟಿಲ್ಲದೆ ರೈಲಿನಲ್ಲಿ ಮದ್ರಾಸಿನ ಕಡೆ ಪ್ರಯಾಣ ಮಾಡುತ್ತಿದ್ದಾಗ ಕರೂರು ಜಿಲ್ಲಾಗದಲ್ಲಿ ರೈಲ್ವೆ ನೌಕರರು ಆಕೆಯನ್ನು ಕೆಳಗಿಳಿಸಲು ಅಲ್ಲಿ ಆಕೆಯು ಮಗುವನ್ನು ಒಬ್ಬ ವರ್ತಕನಿಗೆ ೫ ರೂ. ಗಳಿಗೆ ಮಾರಿ, ಮದರಾಸಿಗೆ ಪ್ರಯಾಣ ಬೆಳೆಸಿದಳೆಂದೂ ಹೇಳಲಾಗಿದೆ

ಶಿವಲಿಂಗದ ಮುಂದೆ ನರಬಲಿ

... ತ್ತರ ಭಾರತದ ಸಂಬಲ್‌ಪುರದ ಬಳಿ ... ಸರೆ ಎಂಬಲ್ಲಿ ಶಿವ ದೇವರ ವಿಗ್ರಹ ... ಬಿಟ್ಟ ... ನರಬಲಿಕೊಡಲ್ಪಟ್ಟ ವರದಿಯಾಗಿದೆ ಶಿವ ದೇವರನ್ನು ಕಟ್ಟಲು ಸ್ಥಾಪಿಸಲಾಗುವ ... ದ ಶಿಲೆಯನ್ನು ಪರಿಶುದ್ಧಿ ಮಾಡುವ ... ನರ ರಕ್ತವು ಅಗತ್ಯವಾಗಿತ್ತೆಂದು ... ಮುಂದೆ ಅಪರಿಚಿತರು ಕತ್ತರಿಸಲ್ಪಟ್ಟ ... ಬರುತ್ತಿದ್ದ ಮನುಷ್ಯನ ಮೇಲೆ ಬಿದ್ದು ... ನನ್ನು ನರಬಲಿಕೊಡಲು ಬಾಲಕನ ರುಂಡ ... ವಾಗಿಯೂ ತಿಳಿದುಬಂದಿದೆ

ಧಾನ್ಯ ಕೊಳ್ಳಲು ಖಾಸಗಿ ಏಜನ್ಸಿ ನೇಮಕ

... ಧಾನ್ಯಗಳ ಅಭಾವವಿರುವ ನಾಡ ... ಮುಂಬಾಯಿ, ಕೌನ್ಸಿಲ್ ಮತ್ತು ... ರು ಸಂಸ್ಥಾನಗಳ ಆಹಾರ ... ಉನ್ನತಾಧಿಕಾರಿಗಳ ಸಭೆಯು ಮೊನ್ನೆ ... ಯಲ್ಲಿ ನಡೆದು ಅಧಿಕ ಧಾನ್ಯ ಬೆಳೆ ... ವ ಕಡೆಗಳಿಂದ ಹುಚ್ಚು ಧಾನ್ಯಗಳನ್ನು ... ವ ಬಗ್ಗೆ ಪರ್ಯಾಲೋಚನೆ ನಡೆಸಿ ... ಈ ಸಂಬಂಧವಾಗಿ ಸಂಸ್ಥಾನಗಳಲ್ಲೇ ... ಬಹುದಾದ ಪ್ರತಿಫೋಟನ್ನು ... ಕಲು ನೋಟ್ಸ್‌ಂದ ನಾಲ್ಕು ಸಂಸ್ಥಾನಗ ... ನ್ನು ಕೊಳ್ಳುವ ಒಂದು ಖಾಸಗಿ ಏ ... ನ್ನು ನೇಮಿಸಿಕೊಳ್ಳುವ ಸಂಭವವಿ ... ಹೇಳಲಾಗಿದೆ

ಮನೆ ಮನೆಗೂ ಹೆರಿಗೆ ಸೌಕರ್ಯ

ಹಲವು ವರ್ಷಗಳಲ್ಲೇ ಹೈದರಾಬಾದು ಸಂಸ್ಥಾನದಲ್ಲಿ ಮನೆಮನೆಗೂ ಆರೋಗ್ಯ ... ಯುವವರು ಹೋಗಿ ಹೆರಿಗೆ ಸ ... ವನ್ನು ಏರ್ಪಡಿಸುವ ಯೋಜನೆ ... ಅಲ್ಲಿನ ಸರ್ಕಾರದವರು ಮಂ ... ಮಾಡಿರುತ್ತಾರೆ ಈ ಬಗ್ಗೆ ೧೧ ... ಆರೋಗ್ಯ ಕೇಂದ್ರಗಳ ... ತೆರೆಯಲಾಗುವುದು

ಮಧ್ಯ ಪ್ರದೇಶದ ತಾಯಿಯರಿಗೆ ಅಧಿಕ ಮಕ್ಕಳು

ಮಧ್ಯ ಪ್ರದೇಶದಲ್ಲಿ ಕಳೆದ ಬಾರಿ ತೆಗೆದುಕೊಂಡ ಜನಗಣತಿಯಿಂದ ಅಲ್ಲಿನ ... ತಾಯಿಯರಿಗೆ ತಲಾ ೩.೭ ಮಕ್ಕಳಿರುವುದಾಗಿ ಗೊತ್ತಾಗಿದೆ. ತಲಾ ... ಮಕ್ಕಳ ತಾಯಿಯರು ... ಮತ್ತು ತಲಾ ೧೫ ರಿಂದ ... ಮಕ್ಕಳನ್ನು ಪಡೆದ ತಾಯಿಯರು ... ಸಾವಿರ ಮಂದಿಯೂ ಇರುವರೆಂದು ತಿಳಿದುಬಂದಿದೆ

ಮದ್ರಾಸು ಮೃಗಾಲಯದ ಹುಲಿಗೆ ೪ ಮರಿಗಳು

ಮದ್ರಾಸು ಮೃಗಾಲಯದಲ್ಲಿರುವ ... ಎಂಬ ಹೆಣ್ಣು ಹುಲಿಗೆ ಕಳೆದ ... ಮರಿಗಳು ಹುಟ್ಟಿ ಅವೆ ... ವರ್ಷಗಳ ಹಿಂದೆ ಒಂದು ಹೆಣ್ಣು ... ರೀತಿ ಮರಿಗಳನ್ನು ಹಾಕಿತ್ತು ಸಾಧಾರಣವಾಗಿ ಬಂಧನದಲ್ಲಿ ... ಹುಲಿಯು ಮರಿಗಳನ್ನು ಹಾಕುವುದು ... ಎಂದು ಹೇಳಲಾಗಿದೆ

ಮಹಮದ್ ಅಲಿಯವರ ... ಹೆಚ್ಚಳ

ಮೈಸೂರು ... ಧಿಕಾರಿಗಳಿಂದ ... ರವರ ... ನೆಯ ತಾರೀಖಿನಿಂದ ಒಂ ... ಹೆಚ್ಚಿಸಲಾಗಿದೆ

೧೫ ಮಂದಿ ದಕ್ಷಿಣ ಆಫ್ರಿಕನ್ನರ ಕೊಲೆ

ದಕ್ಷಿಣ ಆಫ್ರಿಕದ ಕಿಂಬರ್ಲಿ ಎಂಬಲ್ಲಿ ನೆರೆದಿದ್ದ ಆಫ್ರಿಕನ್ನರ ಭಾರಿ ಸಭೆಯೊಂದರ ಮೇಲೆ ನೆನ್ನೆ ರಾತ್ರಿ ಪೊಲೀಸರು ಗುಂಡುಹಾರಿಸಿದ ಪರಿಣಾಮವಾಗಿ ೧೫ ಜನ ಆಫ್ರಿಕನ್ನರು ಮಡಿದರೆಂದು ತಿಳಿದುಬಂದಿದೆ

೫೨ ಜನರಿಂದ ಕೂಡಿದ ವಿಮಾನ ಪತ್ತೆಯಿಲ್ಲ

೫೨ ಮಂದಿ ಪ್ರಯಾಣಿಕರಿಂದ ಕೂಡಿದ ಅಮೆರಿಕದ ಭಾರಿ ವಿಮಾನವೊಂದು ಪತ್ತೆಯಿಲ್ಲದೆ, ನೆನ್ನೆ ಬೆಳಗ್ಗೆ ಅಲಾಸ್ಕಾ ಪರ್ಯಾಯ ದ್ವೀಪದಲ್ಲಿ ಒಂದು ಕಡೆ ಬಿದ್ದು ಎಲ್ಲರೂ ನಾಶವಾಗಿರಬಹುದೆಂದು ಊಹಿಸಲಾಗಿದೆ

ನೇಪಾಳದ ಮಾಜಿ ಪ್ರಧಾನಿಯ ಮರಣ

ನೇಪಾಳದ ಮಾಜಿ ಪ್ರಧಾನಿಯೂ ಮತ್ತು ಸರ್ವ ಸೇನಾನಿಯೂ ಆದ ಮಹಾರಾಜಾ ಜನರಲ್ ಯುದ್ಧ ಷಂಷೇರ್ ಜಂಗ್ ಬಹದ್ದೂರ್ ರಾಣಾರವರು ನೆನ್ನೆ ಬೆಳಗ್ಗೆ ನಿಧನರಾದರೆಂದು ತಿಳಿದುಬಂದಿದೆ.

ಹಿಂದಿ ಪ್ರಾಧ್ಯಾಪಕರುಗಳ ಸಮ್ಮೇಳನ

ವಿಶ್ವ ವಿದ್ಯಾಲಯಗಳಲ್ಲಿ ಹಿಂದಿಯನ್ನು ಕಲಿಸುವ ಸಂಬಂಧವಾಗಿ ಡಿಸೆಂಬರ್ ತಿಂಗಳು ೧೯ನೇ ತಾ|| ದೆಹಲಿಯಲ್ಲಿ ವಿಶ್ವ ವಿದ್ಯಾಲಯಗಳ ಹಿಂದಿ ಪ್ರೊಫೆಸರುಗಳ ಸಮ್ಮೇಳನವೊಂದು ನಡೆಯಲಿದೆ

ಪೊಲೀಸು ನೌಕರರ ಸಭೆ

ಮೈಸೂರು ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟರು ನೆನ್ನೆ ನಗರದ ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರುಗಳು ಮತ್ತು ಸಬ್ ಇನ್ಸ್‌ಪೆಕ್ಟರುಗಳ ಸಭೆ ನಡೆಸಿ, ವಾಹನ ಸಂಚಾರ ಕ್ರಮಗಳು ಮತ್ತು ಕಳ್ಳತನಗಳು ನಡೆಯದಂತೆ ನೋಡಿಕೊಳ್ಳುವ ಬಗ್ಗೆ ಉಪಯುಕ್ತ ಸಲಹೆಗಳನ್ನು ಕೊಟ್ಟರೆಂದು ಗೊತ್ತಾಗಿದೆ

ಹರಿಕಥೆ

ದತ್ತಾತ್ರೇಯ ಜಯಂತಿಯ ಅಂಗವಾಗಿ ಈ ರಾತ್ರಿ ೯ ಗಂಟೆಗೆ ರಾಜಧಾನಿಯ ತುಪ್ಪರಾಯನ ಕೆರೆ ನೈರುತ್ಯ ಭಾಗದಲ್ಲಿರುವ ಶ್ರೀ ದತ್ತಾತ್ರೇಯ ಮಂದಿರದಲ್ಲಿ ವೇ|| ಗಮಕಿ ರಾಮಕೃಷ್ಣ ಶಾಸ್ತ್ರಿಗಳವರಿಂದ ಮುದ್ರಿಕಾ ಪ್ರದಾನ ಎಂಬ ಹರಿಕಥೆಯು ಜರುಗುವುದು

ಶಿಕ್ಷಣ ಸಂಸ್ಥೆಯ ದಿನಾಚರಣೆ

ಶಾರದಾವಿಲಾಸ ಹೈಸ್ಕೂಲಿಗೆ ಸೇರಿರುವ ಕಮರ್ಷಿಯಲ್ ಇನ್‌ಸ್ಟಿಟ್ಯೂಟ್ ದಿನಾಚರಣೆಯು ನೆನ್ನೆ ವಿಧಾನ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಸಿ ಗೋಪಾಲಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆ, ಗೀತಾ ಅರ್ಚನ್ಸ್‌ಗಳಿಂದ ಸಂಗೀತ, ವರದಿ, ವಿವಿಧ ವಿನೋದಾವಳಿಗಳಾದ ನಂತರ ಅಧ್ಯಕ್ಷರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು ಅಧ್ಯಕ್ಷರ ಭಾಷಣ ಮತ್ತು ವಂದನಾರ್ಪಣೆಗಳಿಂದ ನಂತರ "ಗಗ್ಗಣ್ಣನ ಗಡಿಬಿಡಿ" ಎಂಬ ನಾಟಕವನ್ನು ಅಭಿನಯಿಸಲಾಯಿತು

ವ್ರಣ ರೋಗ ಮತ್ತು ಡಾ॥ ಸಿ. ವಿ. ಆರ್. ಖನೋಲ್ಕರ್

ರಾಜಧಾನಿಯ ಸಿಯೋ ಫಾರ್ಮೆಸಿ ವೈದ್ಯರಾದ ಶ್ರೀ ಎಸ್ ಎಸ್ ಸುಬ್ರಹ್ಮಣ್ಯ ಶಾಸ್ತ್ರಿಯವರು ಈ ರೀತಿ ತಿಳಿಸಿರುತ್ತಾರೆ —

ನಾಸ್ತಿಕತೆ ಹೆಚ್ಚಿದ ಈ ಕಾಲದಲ್ಲಿ ಜನಾಂಗವನ್ನು ಸನ್ಮಾರ್ಗದಲ್ಲಿರುವಂತೆ ಮಾಡಲು ವೈದ್ಯನೊಬ್ಬನೇ ಶಕ್ತ– ಎಂದು ಹೇಳಿದಲ್ಲಿ ಅತಿಶಯೋಕ್ತಿ ಆಗಲಾರದು ದೈವ ಮತ್ತು ಧರ್ಮಗಳಿಗೆ ಹೆದರದೆ ಮನಸ್ವಿ ನಡೆಯುವ ಧೈರ್ಯವಿದ್ದರೂ ಕೆಲವು ಖಾಯಿಲೆಗಳು ಎದೆ ನಡುಗಿಸುತ್ತವೆ ಆದ್ದರಿಂದ ವೈದ್ಯರು ತಮ್ಮ ಜವಾಬ್ದಾರಿ ಅರಿತು ಜನಗಳಿಗೆ ಸರಿಯಾದ ತಿಳಿವಳಿಕೆ ಕೊಡಬೇಕು ತಪ್ಪು ತಿಳಿವಳಿಕೆಯನ್ನು ಕೊಟ್ಟು ಜನಾಂಗಕ್ಕೆ ತೊಂದರೆ ಹೆಚ್ಚಲು ಬಿಡಬಾರದು

ಇದೇ ತಿಂಗಳು ೧೯ನೇ ತಾರೀಖು ಬೊಂಬಾಯಿನಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ವ್ರಣ ರೋಗದ ವಿಷಯವನ್ನು ಪ್ರಸ್ತಾಪಿಸುತ್ತಾ ತಾತಾ ಸ್ಮಾರಕ ಆಸ್ಪತ್ರೆ ಪ್ರಯೋಗ ಮಂದಿರಗಳ ಡೈರೆಕ್ಟರಾದ ಡಾ॥ ಸಿ ವಿ ಆರ್ ಖನೋಲ್ಕರ್‌ರವರು ಈ ರೀತಿ ತಿಳಿಸುತ್ತಾರೆ —

"ಭಾರತದಲ್ಲಿ ವ್ರಣ ರೋಗವೇ ಇಲ್ಲ ಅಥವಾ ಬಹಳ ಅಪರೂಪ ಎಂದು ಬಹುಕಾಲ ತಪ್ಪು ತಿಳಿವಳಿಕೆ ಇತ್ತು ಈಗ ಐರೋಪ್ಯರು ಮತ್ತು ಅಮೇರಿಕನ್ನರಂತೆಯೇ ಭಾರತೀಯರೂ ವ್ರಣ ರೋಗಕ್ಕೆ ಈಡಾಗುವರೆಂಬುದು ಸ್ಪಷ್ಟಪಟ್ಟಿದೆ

ಖನೋಲ್ಕರ್‌ರವರು 'ಬಹುಕಾಲ ತಪ್ಪು ತಿಳಿವಳಿಕೆ ಇತ್ತು' ಎಂದು ಹೇಳಿರುವುದು ಸತ್ಯವೇ ? ಈಗ ಐರೋಪ್ಯರು ಮತ್ತು ಅಮೇರಿಕನ್ನರಂತೆಯೇ ಭಾರತೀಯರೂ ವ್ರಣ ರೋಗಕ್ಕೆ ಈಡಾಗುವರೆಂಬುದು ಸ್ಪಷ್ಟಪಟ್ಟಿದೆ ಎಂದು ಹೇಳಿರುವುದನ್ನು ತಪ್ಪೆನ್ನಲಾಗದು, ಆದು ಸತ್ಯ ಅವರ ಅದರ ಮೇಲಿನ ಹೇಳಿಕೆ ನ್ಯಾಯರಹಿತವಾಗಿದೆ ಆ ರೀತಿ ಹೇಳಿದವರು ವೈದ್ಯ ವೃತ್ತಿಯಲ್ಲಿ ನುರಿತ, ಜವಾಬ್ದಾರಿ ತಿಳಿದ ಅನುಭವಿಗಳು ಆಗ ಇಲ್ಲದ ವ್ರಣ ಈಗ ಉಂಟಾಗಿದೆ ಅದಕ್ಕೆ ಈಗಿನ ಜನ ಭಾರತೀಯ ಸಂಸ್ಕೃತಿಯನ್ನು ಅಲ್ಲಗಳೆದು ತಮ್ಮ ನೀತಿ, ನಡೆ ನುಡಿ, ಆಹಾರ, ವ್ಯವಹಾರ ಇವುಗಳನ್ನು ದೂರ ದೃಷ್ಟಿ ಇಲ್ಲದೆ ಐರೋಪ್ಯ ಮತ್ತು ಅಮೇರಿಕನ್ನರ ಅನುಕರಣೆ ಮಾಡ ಹೋದುದರ ಫಲ– ಎಂಬ ಸತ್ಯಾಂಶವನ್ನು

ವಿಶ್ವ ವಿದ್ಯಾಲಯಗಳ ಸಮ್ಮೇಳನ

ವಿಶ್ವ ವಿದ್ಯಾಲಯಗಳಲ್ಲಿ ಇಂಗ್ಲಿಷ್ ಭಾಷೆಯ ಮಟ್ಟವು ಇಳಿದುಹೋದ ಬಗ್ಗೆ ಪರ್ಯಾಲೋಚಿಸಲು ಬರುವ ಜನವರಿ ೩ ಮತ್ತು ೪ನೇ ತಾ॥ ದೆಹಲಿಯಲ್ಲಿ ಭಾರತದ ವಿಶ್ವ ವಿದ್ಯಾಲಯಗಳ ಪ್ರತಿನಿಧಿಗಳ ಸಭೆಯು ಸೇರಲಿದೆ

ಮಳವಾಯ್ ಪ್ರೌಢ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ಮೇಲ್ಕಂಡ ಶಾಲಾ ಹಳೇ ವಿದ್ಯಾರ್ಥಿಗಳ ಸಂಘದ ಪ್ರಥಮ ಸಭೆಯು ಮೊನ್ನೆ ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಂಡವರಿಂದ ಕೂಡಿದ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು – ಶ್ರೀ ಎಚ್ ನಾಗಪ್ಪನವರು ಅಧ್ಯಕ್ಷರು, ಶ್ರೀ ಎ ಸೋಮಶೇಖರ್ ಉಪಾಧ್ಯಕ್ಷರು, ಶ್ರೀ ಆರ್ ಜಿ ಪದಕಿ ಕಾರ್ಯದರ್ಶಿ ಮತ್ತು ಖಜಾಂಚಿ, ಮತ್ತು ಶ್ರೀ ಬಿ ವಿ ನಾರಾಯಣ್ ಸಹ ಕಾರ್ಯದರ್ಶಿ

ಖನೋಲ್ಕರ್ ರವರ ಜನಾಂಗದ ಅವನತಿಗೆ ತಿಂಪೂಕೊಟ್ಟಿದ್ದಲ್ಲಿ ಜನಾಂಗಕ್ಕೆ ಉಪಕಾರವೂ ತಮ್ಮ ವೃತ್ತಿಯ ವೃದ್ಧಿಯ ಮಾತಿಗ ನ್ಯಾಯವಾದ ಮಾನ್ಯತೆಯೂ ಎ ದೂ ಏಕ ಕಾಲದಲ್ಲಿ ಗಿಟ್ಟುತ್ತಿತ್ತು ಮಾನ ಡಾಕ್ಟರ್‌ರವರಿಗೆ ವಿನಯದಿಂದ ವಿಜ್ಞಾಪಿಸುತ್ತೇನೆ ಏಕೆಂದರೆ ಇವರಿಗ ಒಂದಾ ಗವನ್ನು ರೂಪಿಸುವ ಒಂದು ಮಹದವಕಾಶವಿದೆ ತಮ್ಮ ಸ್ಥಾನ, ವ್ಯಕ್ತಿಯ ಮತ್ತು ಜ್ಞಾನ ಬಲಗಳಿಂದಾಗಿ, ಜನಗಳನ್ನು ಸಕಾಲದಲ್ಲಿ ಎಚ್ಚರಿಸಿ ಸನ್ಮಾರ್ಗದಲ್ಲಿ ನಡೆಸಿ ಸಮಾಜೋದ್ಧಾರ ಮಾಡುವ ಎಲ್ಲ ಸೌಕರ್ಯ ಹೊಂದಿದ್ದಾರೆ ಇವರು ತಮ್ಮ ಹೇಳಿಕೆಯಲ್ಲಿ ಇತರ ವಿಷಯಗಳ ಸನ್ನಿವೇಶಗಳನ್ನೂ ಭಾರತ ಜನಾಂಗಕ್ಕೂ ಮತ್ತು ಮುಂದಿನವರುಗಳಿಗೂ ಸರಿಯಾಗಿ ತಿಳಿಸಲಿ ಅಂತರ್ಜಾತೀಯ ವಿವಾಹ, ಮಿತ ಸಂತಾನ ಯೋಜನ, ಹೆಚ್ಚು ವಯಸ್ಸಾಗುವವರೆಗೂ ವಿವಾಹ ಮಾಡಬಾರದು, ಇತ್ಯಾದಿಗಳಿಂದಾಗಬಹುದಾದ ದುಷ್ಪರಿಣಾಮಗಳನ್ನು ಪದೇ ಪದೇ ಬಿಡಿಸಿ ಗಮನಿಸಿ ಭಾರತೀಯರ ನೀತಿ, ನಡತೆಗಳನ್ನು ತಿದ್ದಿ ಸಮಾಜವನ್ನು ಕಷ್ಟಗಳಿಂದ ರಕ್ಷಿಸಬೇಕಾಗಿ ಸವಿನಯ ವಿಜ್ಞಪ್ತಿ

ಡಾ॥ ಮೋದಿಯವರಿಗೆ ಬಿನ್ನವತ್ತಳೆ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ॥ ಮುರಿಗೆಪ್ಪ ಚೆನ್ನವೀರಪ್ಪ ಮೋದಿಯವರಿಗೆ ಕೊಡಗಿನ ಜನರು ಕಳೆದ ೧೭ನೇ ತಾ॥ ಬಿನ್ನವತ್ತಳೆಯೊಂದನ್ನು ಅರ್ಪಿಸಿದರು

ಧರ್ಮೋಜ್ಜೀವಿನೀ ಸಭಾ

ಮೈಸೂರು ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಸನಾತನ ಧರ್ಮ ಪ್ರಚಾರದ ಸಲುವಾಗಿ ರಾಜಕಾರ್ಯ ಪ್ರಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ "ಧರ್ಮೋಜ್ಜೀವಿನೀ ಸಭಾ" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ ನಿತ್ಯ ಕರ್ಮಾದಿಗಳಿಗೆ ಅಗತ್ಯವಾದ ಮಂತ್ರ ಭಾಗಗಳನ್ನು ಬ್ರಾಹ್ಮಣ ವಟುಗಳಿಗೆ ಹೇಳಿಕೊಡಲು ಸದ್ಯಕ್ಕೆ ಏರ್ಪಾಡು ಮಾಡಲಾಗಿದೆ ಕಲಿತುಕೊಳ್ಳಲು ಇಷ್ಟವುಳ್ಳವರು ಸದರೀ ಶ್ರೀ ಸೀತಾರಾಮ ದೇವಸ್ಥಾನದ ಪಕ್ಕದ ಮನೆಯ ಶ್ರೀ ವೆಂಕಟೇಶ ಅಯ್ಯಂಗಾರ್‌ರವರಲ್ಲಿ ತಿಳಿಸಬೇಕಾಗಿ ಕೋರಲಾಗಿದೆ

ನವ ಶಕ್ತಿ ವಾರ ಪತ್ರಿಕೆ

ರಾಜಧಾನಿಯಲ್ಲಿ ಮೊನ್ನೆಯಿಂದ ನವ ಶಕ್ತಿ ಎಂಬ ಕನ್ನಡ ವಾರ ಪತ್ರಿಕೆಯು ಹೊರಬಿದ್ದಿದೆ ಚಿಕ್ಕಹೆಬ್ಬೂರಿನ ಶ್ರೀ ಕೃಷ್ಣನ್ ಮೂರ್ತಿ ಯವರು ಇದರ ಸಂಪಾದಕರು ಮತ್ತು ಶ್ರೀ ಎಸ್ ನರಸಿಂಹ ಅಯ್ಯಂಗಾರ್ಯರು ಇವರ ಪ್ರಕಾಶಕರು ಪತ್ರಿಕೆಯು ಚಿರಕಾಲ ಬಾಳಿ ನಾಡು ನುಡಿಗಳ ಸೇವೆಯನ್ನು ಸಲ್ಲಿಸಲೆಂದು ಹಾರೈಸುತ್ತೇವೆ ಚಂದಾ ವರ್ಷಕ್ಕೆ ೩ ರೂ

CITY TUTORIAL COLLEGE

V. V. Market, Mysore

COACHING CLASSES FOR

★ **B. Sc.,** ★

(English P C M & P M M)

★ **INTERMEDIATE** ★

(English Kannada P C M & C.B.Z)

PRIVATE TUITIONS ARRANGED

Classes begin on 24th

JOIN IMMEDIATELY

C. T. C., MYSORE

ಚಾಮರಾಜನಗರದಲ್ಲಿ ಛಾಪಾಕಾಗದ ಅಭಾವ

ಚಾಮರಾಜನಗರ ತಾಲ್ಲೂಕಿನ ಖಜಾನೆಯಲ್ಲಿ ಕಳೆದ ಎರಡು ತಿಂಗಳುಗಳಿಂದಲೂ ನಾಲ್ಕಾಣೆಯಿಂದ ಹಿಡಿದು ಹನ್ನೆರಡು ರೂಪಾಯಿಗಳ ವರೆಗಿನ ಛಾಪಾ ಕಾಗದಗಳಾಗಲಿ, ಅರ್ಜಿ ಮತ್ತು ರಶೀತಿ ಸ್ಟಾಂಪುಗಳೂ ಇಲ್ಲದೆ ಜನರಿಗೆ ತುಂಬಾ ತೊಂದರೆಯಾಗಿದೆ ಸಾಲ ಪಡೆಯುವವರು ೧ ಅಣೆ ಕಾಗದಕ್ಕಾಗಿ ೩ ರೂ ಬಸ್ಸು ಛಾರ್ಜು ಕೊಟ್ಟು ನಂಜನಗೂಡು ಅಥವಾ ಗುಂಡ್ಲುಪೇಟೆಗಳಿಗೆ ಹೋಗಿ ಬರಬೇಕಾಗಿದೆ ಚಾಮರಾಜನಗರದ ತಾಲ್ಲೂಕು ಟ್ರೆಜರಿಯಿಂದ ಯಳಂದೂರು ತಾಲ್ಲೂಕಿಗೂ ಛಾಪಾ ಕಾಗದ, ಸ್ಟಾಂಪುಗಳನ್ನು ಒದಗಿಸಬೇಕಾಗಿರುವುದು ಆದ್ದರಿಂದ ಸ್ಟಾಂಪು ಮತ್ತು ಛಾಪಾಕಾಗದದ ಖರ್ಚು ಜಾಸ್ತಿಯಿದ್ದು ೩ ತಿಂಗಳಿಗೊಮ್ಮೆ ಅವುಗಳ ಸರಬರಾಜಾಗುವುದರಿಂದ ಜನರಿಗೆ ಕೊರತೆಯಿದ್ದಲ್ಲಿ ಜಿಲ್ಲಾ ಖಜಾನಾಧಿಕಾರಿಗಳಿಗೆ ಸೂಚನಾ ಮತ್ತು ಅರ್ಜಿಗಳ ಮೂಲಕ ತಿಳಿಸಿ ಮಾಡಿಕೊಂಡರೂ ಉಪಯೋಗವಿಲ್ಲವಾಗಿದೆ ಸರ್ಕಾರದವರು ಈ ಬಗ್ಗೆ ಜನರ ತೊಂದರೆಯನ್ನು ಪರಿಹರಿಸುವರೆಂದು ಚಾಮರಾಜನಗರದ ಪ್ರಜೆಯೊಬ್ಬರು ಅರಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ವೀಣಾವಾದನ ಎಸ್ ವೆಂಕಟಪ್ಪ ಚೆಟ್ಟಿ ಮಧ್ಯಾಹ್ನ ೩ ಸಿತಾರ್ ಅಬ್ದುಲ್ ರಹೀಂ ಸಂಜೆ ೫-೪೦ ವೀಣಾವಾದನ ಎಸ್ ವೆಂಕಟಪ್ಪ ಚೆಟ್ಟಿ ೭ ಮತ್ತು ೭-೩೦ ಸಿತಾರ್ ಅಬ್ದುಲ್ ರಹೀಂ ಸಂಗೀತ, ಎಸ್ ರಾಮಚಂದ್ರರಾವ್ ೮-೪೦ ವೃಂದ ಸಂಗೀತ ೯-೪೦ ಗಾನಾನ್ನ

ಬೇಕಾಗಿದ್ದಾರೆ

ಮೈಸೂರು ನರಸಿಂಹರಾಜ ಮೊಹಲ್ಲಾದಲ್ಲಿ ಸಾಧ್ವಿ ಪತ್ರಿಕೆಗೆ ಚಂದಾದಾರರನ್ನು ಹಿಡಿಯಲು, ಪತ್ರಿಕೆ ಹಂಚಲು, ಅದೇ ಮೊಹಲ್ಲಾದಲ್ಲಿ ವಾಸವಾಗಿರುವ ಹುಡುಗರು ಬೇಕಾಗಿದ್ದಾರೆ

ನ್ಯೂಸ್ ಪೇಪರ್ ಹೌಸ್,
ಸಾಧ್ವಿ ಏಜೆಂಟರು, ಮೈಸೂರು
ಇವರಲ್ಲಿ ವಿಚಾರಿಸಿರಿ

Edited, Printed and Published by A. R. Nagarajan at Sadhvi Press, D. Subbiah Road, Mysore

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು, ಚೋಳಿ ಪೀಸುಗಳು
ಪೂನಾ, ನಾಗಪೂರ್ ಸೀರೆಗಳಿಗೆ

★ M. V. ಬೋಜಯ್ಯ ಬಿ ಎ, ಇ ಡಿ. ಬೈಲ್ಗಾರ್ ಎದುರು ಮೈಸೂರು

ಪ್ರಭುದೇವಾ
ಟಾಕೀಸ್
28-11 52 ನೇ
ಶುಕ್ರವಾರದಿಂದ
ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ
ಪಾತ್ರ ಲಕ್ಷ್ಮೀರಾಜ್ಯ ಎನ್ ಟಿ ರಾಮರಾವ್
ರೇಲಂಗಿ ಎಂ ಅತ್ತಿರಾಜ

ದಾಸಿ

ರಿಜಿಸ್ಟರ್ಡ್ ನಂ 794 ||ವಂದೇ ಮಾತರಂ|| ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೪-೧೧-೧೯೫೩ [ಸಂಚಿಕೆ ೯೬

ಭಾರತದ ಸಲಹೆಗೆ ರಷ್ಯದ ತಿರಸ್ಕಾರ

ಭಾರತದ ಸಂಧಾನ ಸೂತ್ರಗಳಿಗೆ ರಷ್ಯದ ತಿರಸ್ಕಾರ

ಕೊರಿಯಾ ಶಾಂತಿ ಸಂಧಾನದ ಬಿಕ್ಕಟ್ಟಿಗೆ ಕಾರಣವಾದ ಯುದ್ಧ ಖೈದಿಗಳ ಪ್ರಶ್ನೆಯ ವಿಷಯವಾಗಿ ಭಾರತವು ತಯಾರಿಸಿದ ಸೂತ್ರಗಳನ್ನು ರಷ್ಯವು ತಿರಸ್ಕರಿಸುತ್ತದೆ

ಹೈದ್ರಾಬಾದಿನ ಸ್ಥಾನಬದ್ಧ ಕಮ್ಯೂನಿಸ್ಟರ ಬಿಡುಗಡೆ

ಮುನ್ನೆಚ್ಚರಿಕೆ ಸ್ಥಾನಬದ್ಧತಾ ಶಾಸನದ ಪ್ರಕಾರ ಹೈದರಾಬಾದಿನಲ್ಲಿ ಬಂಧಿಸಲ್ಪಟ್ಟಿದ್ದ ೨೭ ಮಂದಿ ಕಮ್ಯೂನಿಸ್ಟರು ತಮ್ಮ ಬಂಧನದ ಅವಧಿಯನ್ನು ಹೆಚ್ಚಿಸಿದ ... ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಲು ಹೋಗಿದ್ದರು ನೆನ್ನೆ ದಿನ ನ್ಯಾಯಮೂರ್ತಿ ಮಹಾಜನ್‌ರವರು ... ತೀರ್ಪಿತ್ತು ಸಂಸ್ಥಾನ ಸರ್ಕಾರವರಿಗೆ ಬಂಧನದ ಅವಧಿಯನ್ನು ಹೆಚ್ಚಿಸಲು ಅಧಿಕಾರವಿಲ್ಲವೆಂದು ತಿಳಿಸಿ ಎಲ್ಲರನ್ನು ಖುಲಾಸೆ ಮಾಡಿದರು

ಎಲ್. ಎಸ್. ರಾಜೂ ಅಪೀಲು ಅರ್ಜಿ ನಿರಾಕರಣೆ

ಮೋಟಾರ್ ಪ್ರವಾಸದ ವಿಷಯವಾಗಿ ಪ್ರಶ್ನೆಯ ಸಂಬಂಧದ ಮೊಕದ್ದಮೆಯಲ್ಲಿ ಅಪಾದಿತರಾದ ಶ್ರೀ ಎಲ್ ಎಸ್ ರಾಜು ಮತ್ತು ದಾಸಪ್ಪನಾಯ್ಡುರವರ ಅಪೀಲು ವಿಚಾರಣೆಯಲ್ಲಿ ಬೊಂಬಾಯಿ ಹೈಕೋರ್ಟ್ ನ್ಯಾಯಾಲಯದವರು ಅಪಾದಿತರಿಗೆ ಕೆಳಗಿನ ಕೋರ್ಟಿನವರು ಕೊಟ್ಟ ಶಿಕ್ಷೆಯನ್ನು ಖಾಯಂ ಮಾಡಿದ್ದರಿಂದ ಈ ಸಂಬಂಧವಾಗಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಅನುಮತಿ ಬೇಕೆಂದು ಅಪಾದಿತರು ಬೊಂಬಾಯಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಾಧೀಶರುಗಳಾದ ಶ್ರೀ ಚಾಗ್ಲ ಮತ್ತು ... ರವರು ನೆನ್ನೆ ತಿರಸ್ಕರಿಸಿರುವುದಾಗಿ ವರದಿಯಾಗಿದೆ

ರೇಡಿಯೋವಿನಲ್ಲಿ ವನಮೃಗ ಸಂರಕ್ಷಣಾ ಸಮಿತಿ ಕಾರ್ಯಕ್ರಮ

ಮೈಸೂರಿನ ಆಲ್ ಇಂಡಿಯಾ ರೇಡಿಯೋ ನಿಲಯದಿಂದ ಈ ರಾತ್ರಿ ೯ ೩೦ ಗಂಟೆಗೆ ಭಾರತದ ವನ್ಯ ಮೃಗಗಳ ರಕ್ಷಣಾ ಸಮಿತಿಯ ಕಾರ್ಯಕ್ರಮವನ್ನೂ ಶ್ರೀಮನ್ಮಹಾರಾಜರವರ ಆರಂಭ ಭಾಷಣವನ್ನೂ ಪ್ರಸಾರ ಮಾಡಲಾಗುವುದು

ಪಂಚ ವಾರ್ಷಿಕ ಯೋಜನೆಗೆ ಭದ್ರಾ ಪ್ರಾಜೆಕ್ಟ್ ಸೇರಿತು

ಭಾರತದ ಪಂಚ ವಾರ್ಷಿಕ ಯೋಜನೆಗೆ ಭದ್ರಾ ಜಲಾಶಯದ ಯೋಜನೆಯನ್ನು ಸೇರಿಸಲು ಪ್ಲಾನಿಂಗ್ ಕಮಿಷನ್ನಿನವರು ಒಪ್ಪಿರುವುದಾಗಿ ಮೈಸೂರು ಸಂಸ್ಥಾನದ ಚೀಫ್ ಇಂಜನಿಯರ್ ಶ್ರೀ ಕೆ ಎಸ್ ಗಂಗಾಧರರಾಯರವರು ತಿಳಿಸಿದ್ದಾರೆ

ಬೆಳಗಾವಿಯಲ್ಲಿ ಡಾ|| ಮೋದಿ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ ಸಿ ಮೋದಿಯವರು ಈಗ ಬೆಳಗಾವಿಯಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಆರಂಭಿಸಿರುವರು ಅವರ ... ದಿಂದ ಜನರಿಗೆ ಬಹಳ ಪ್ರಯೋಜನ ವಾಗುತ್ತಿರುವರೆಂದು ತಿಳಿದುಬಂದಿದೆ

ವನಮೃಗಗಳ ರಕ್ಷಣೆಯ ಆವಶ್ಯಕತೆ

ಕೇಂದ್ರ ಸಮಿತಿಯಲ್ಲಿ ಮಹಾರಾಜರ ಆರಂಭ ಭಾಷಣ

ಮೈಸೂರು ೨೩

ಶ್ರೀಮನ್ಮಹಾರಾಜರು ಇಂದು ಲಲಿತ ಮಹಲಿನಲ್ಲಿ ಸೇರಿದ್ದ ಕೇಂದ್ರ ವನಮೃಗ ರಕ್ಷಣಾ ಸಮಿತಿ ಸಭೆಯ ಆರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡಿದರು

ಪ್ರಾರಂಭದಲ್ಲಿ ಭಾರತದ ಅರಣ್ಯಗಳ ಇನ್‌ಸ್ಪೆಕ್ಟರ್ ಜನರಲ್ಲರಾದ ಶ್ರೀ ಎಂ ಡಿ ಚತುರ್ವೇದಿಯವರು ಸ್ವಾಗತ ಭಾಷಣ ಮಾಡಿದರು ನಂತರ ಸಮಿತಿಯ ಅಧ್ಯಕ್ಷರಾದ ಶ್ರೀಮನ್ ಮಹಾರಾಜರು ಭಾಷಣ ಮಾಡಿ ಈ ರೀತಿ ತಿಳಿಸಿದರು.

ಹಿಂದಿನ ಕಾಲದಲ್ಲಿ ಈ ದೇಶದ ಋಷಿಗಳು, ನವಾಬರು ಮತ್ತು ಆಳರಸರು ಬೇಟೆಗಾಗಿ ಅರಣ್ಯಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊಂದಿದ್ದರು ಭಾರತದ ಚರಿತ್ರೆಯ ಹಾಳೆಗಳು ತಿರುವಿದಲ್ಲಾ ಈ ಪರಿಸ್ಥಿತಿಯು ಬದಲಾವಣೆ ಹೊಂದಿ, ಅತಿ ಮನೋಹರವಾದ ಕಾಡುಮೃಗಗಳು ನಶಿಸಿಹೋಗುವ ಸ್ಥಿತಿಯುಂಟಾಗಿದೆ ಹಲವು ಜಾತಿಯವು ಈಗಾಗಲೇ ನಶಿಸಿಹೋಗಿವೆ ಭಾರತ ಸರ್ಕಾರದವರ ಮುಂದಾಲೋಚನೆಯಿಂದ ಅರಣ್ಯ ಮೃಗಗಳ ರಕ್ಷಣೆಯ ವಿಷಯವು ಎಲ್ಲರ ಗಮನವನ್ನೂ ಸೆಳೆದು ಅಪೃಶ್ಯವಾಗುತ್ತಿರುವ ಈ ಪ್ರಾಣಿಗಳ ಪುನರ್ವ್ಯವಸ್ಥೆಗೆ ಪ್ರಯತ್ನ ನಡೆಸುತ್ತಿರುವುದು ಶ್ಲಾಘನೀಯ ಇಂತಹ ಪ್ರಾಣಿಗಳನ್ನು ಯಾವ ರೀತಿ ಸಂರಕ್ಷಿಸಬೇಕೆಂಬುದನ್ನು ಕುರಿತು ಸಲಹೆ ಕೊಡುವುದೇ ಕೇಂದ್ರ ವನಮೃಗ ರಕ್ಷಣಾ ಸಮಿತಿಯ ಮುಖ್ಯ ಕೆಲಸವಾಗಿದೆ ಕಾಡು ಹಂದಿ ಮುಳ್ಳು ಹಂದಿ ಕಾಡು ಹಾಡು ... ಗಳ ನಾಶವನ್ನು ತಡೆಗಟ್ಟಬೇಕೆಂಬುದು ಕೇಂದ್ರ ಸರ್ಕಾರದ ಅಭಿಲಾಷೆಯಾಗಿದೆ

ಭಾರತ ಮತ್ತು ಪೂರ್ವ ರಾಷ್ಟ್ರಗಳಲ್ಲಿ ಪ್ರಜಾ ಸಂಖ್ಯೆಯು ಹೆಚ್ಚಿ ರಾಷ್ಟ್ರದ ಪ್ರಕೃತಿ ಸಂಪತ್ತಿನ ಮೇಲೆ ಹತೋಟಿಯಿಲ್ಲದ ಆಘಾತಗಳಾಗುತ್ತಿವೆ ಗುಡ್ಡಗಳ ಇಳಿಜಾರಿನ ಪ್ರದೇಶಗಳಲ್ಲಿ ಬೆಂಕಿ ಹಾಕಿ, ಅವನ್ನು ವ್ಯವಸಾಯ ಕ್ಷೇತ್ರವನ್ನಾಗಿ ಮಾರ್ಪಡಿಸುವ ಪ್ರಯತ್ನದಿಂದ ಕಾಡು ಮೃಗಗಳು ನಶಿಸುತ್ತಿರುವುವಲ್ಲದೆ ಭೂಮಿಯು ಸಾರವು ಬತ್ತುತ್ತಿದೆ ಮಳೆಯ ನೀರು ಭೂಮಿಯೊಳಗೆ ಇಂಗುವುದರ ಬದಲು ಗುಡ್ಡಗಳಿಂದ ಇಳಿದು ವ್ಯರ್ಥವಾಗುತ್ತಿವೆ, ಇಲ್ಲವೇ ಪ್ರವಾಹ ರೂಪವಾಗಿ ಪಂಜಿ ಫಸಲನ್ನು ಹಾಳು ಮಾಡುತ್ತಿವೆ ಇವುಗಳನ್ನು ಆಶ್ರಯವಾಗಿ ಹೊಂದಿರುವ ಪಕ್ಷಿಗಳೂ ಮರಗಳನ್ನು ದಿಮ್ಮಿಗಳಿಗಾಗಿ ಕಡಿದು ಹಾಕಲು ಅವಕಾಶವಿತ್ತರೂ, ಭೂಮಿಯು

ಎರಡು ಎಲೆಕ್ಟ್ರಿಕ್ ರೈಲ್ವೆ ವ್ಯವಸ್ಥೆ

ಭಾರತದ ಸೆಂಟ್ರಲ್ ರೈಲ್ವೆಯು ಇಗತ್‌ಪುರಿ-ಭುಸಾವಲ್ ಮತ್ತು ದಕ್ಷಿಣ ರೈಲ್ವೆಯು ತಾಂಬರಂ ಚೆಂಗಲ್ ಪಟ್ ಲೈನುಗಳಲ್ಲಿ ವಿದ್ಯುಚ್ಛಕ್ತಿ ರೈಲ್ವೆಯನ್ನು ವ್ಯವಸ್ಥೆಗೊಳಿಸುವ ಅಂಶವು ಕೇಂದ್ರ ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ತಿಳಿದುಬಂದಿದೆ

ಸಾರವು ಹಾಳಾಗುವುದು ತಾತ್ಕಾಲಿಕ ಲಾಭಕ್ಕಾಗಿ ಮನುಷ್ಯನು ಎಲ್ಲವನ್ನು ನಾಶಮಾಡುತ್ತಾನೆ ರಾಜಸ್ಥಾನದ ಮರುಭೂಮಿಯೇ ಇದಕ್ಕೆ ನಿದರ್ಶನ ಪ್ರತಿ ವರ್ಷವೂ ಆ ಮರುಭೂಮಿಯು ೫೦ ಚದರ ಮೈಲಿಯನ್ನು ಆವರಿಸುತ್ತಿದೆ ಆದ್ದರಿಂದ ಪ್ರಕೃತಿ ಸಂಪತ್ತಿನ ರಕ್ಷಣೆಯು ಅತ್ಯಾವಶ್ಯಕ

ಪ್ರಕೃತಿ ಸಂಪತ್ತನ್ನು ಕಾಪಾಡಲು ನಾಶ್ಮೀಯ, ವನಗಳನ್ನು ನಿರ್ಮಿಸಬೇಕಾದುದು ಅಗತ್ಯ

ಕಾಡುಗಳಿಂದ ದಿಮ್ಮಿಗಳ ಉಪಯೋಗವನ್ನು ಮಿತಿಗೊಳಿಸಿದರೆ, ಕಾಡುಮೃಗಗಳ ಹಿತವನ್ನು ರಕ್ಷಿಸಿದಂತಾಗುವುದು ಪಶ್ಚಿಮ ಘಟ್ಟಗಳಿಂದ ದಿಮ್ಮಿಗಳನ್ನು ಯಥೇಚ್ಛವಾಗಿ ಸಾಗಿಸಿದುದಕ್ಕಾಗಿ ಪಶ್ಚಿಮ ತೀರದಲ್ಲಿ ಮಳೆಯ ಅಭಾವವಾಗಿದೆ ಆದರಿಂದ ವ್ಯವಸಾಯಕ್ಕೆ ಧಕ್ಕೆ ತಗಲಿದೆ

ಬೇಟೆಯಲ್ಲಿ ವಿವೇಚನಾರಹಿತ ಕಾರ್ಯಕ್ರಮದಿಂದ ಕಾಡುಪ್ರಾಣಿಗಳು ಹಾಳಾಗಿವೆ ೧೯೫ ಅರಣ್ಯಗಳ ಹಿಂಡಗಳನ್ನೂ, ಆಸ್ಸಾಮ್, ಬಂಗಾಳ ಮತ್ತು ನೇಪಾಳದ ಖಡ್ಗಮೃಗಗಳನ್ನೂ ಉಳಿಸುವುದರಲ್ಲಿ ಹೆಚ್ಚು ಶ್ರಮಪಡುತ್ತಿರುವುದಾಗಿದೆ ೧೯೫೧ರ ಖಾನೇಷುಮಾರಿ ಪ್ರಕಾರ ಭಾರತದಲ್ಲಿ ೩೦೦ ಖಡ್ಗಮೃಗಗಳೂ, ೨೫೦ ಸಿಂಹಗಳೂ ಇವೆ

ಪ್ರಕೃತಿಯ ರಮ್ಯತೆಗೆ ಅನುಗುಣವಾಗಿರುವ ಕಾಡು ಮೃಗಗಳನ್ನು ರಕ್ಷಿಸುವುದರಲ್ಲಿ ವಿಧಾನವೊಂದು ಅವಶ್ಯಕ ಸ್ಥಳೀಯ ಪರಿಸ್ಥಿತಿಗನುಗುಣವಾಗಿ ರಕ್ಷಣಾ ವಿಧಾನವನ್ನು ನಿರ್ಧರಿಸಬೇಕು

ಕಾಡುಗಳನ್ನು ವ್ಯವಸಾಯ ಭೂಮಿಗಾಗಿ ಕೊಡುವ ಬಗ್ಗೆ ನನ್ನ ಬಲವಾದ ಆಕ್ಷೇಪಣೆಇದೆ. ವಿವೇಚನೆಯಿಲ್ಲದ ರೀತಿಯಲ್ಲಿ ಜಮೀನನ್ನು ಕೊಡಬಾರದು ಕಾಡಿನೊಳಗೆ ವ್ಯವಸಾಯಕ್ಕೆ ಅವಕಾಶ ಕೊಟ್ಟರೆ ಕಾಡು ಪ್ರಾಣಿಗಳು ಹಾಳಾಗುವುವು

ಸಂಸ್ಥಾನದಲ್ಲಿ ಫೇರ್‌ಪ್ರೈಸ್ ಡಿಪೋಗಳ ರದ್ದು

ಮೈಸೂರು ಸಂಸ್ಥಾನದಲ್ಲಿ ಭತ್ತದ ಲೆವಿಯನ್ನು ಬಗ್ಗೆ ಹಲವು ಮಾರ್ಪಾಡುಗಳನ್ನು ಮಾಡಿ, ಈಗಿನಂತೆಯೇ ವಸೂಲು ಮಾಡಲಾಗುವುದೆಂದೂ, ವಸೂಲಿ ಕ್ರಮವು ಮುಗಿದ ನಂತರ ಧಾನ್ಯ ಸಾಗಾಣಿಕೆಯ ಮೇಲಿನ ನಿರ್ಬಂಧವನ್ನು ಮತ್ತಷ್ಟು ಸಡಿಲಗೊಳಿಸಲಾಗುವುದೆಂದೂ, ಫೇರ್‌ಪ್ರೈಸ್ ಡಿಪೋಗಳನ್ನು ಕ್ರಮವಾಗಿ ತೆಗೆದುಹಾಕಲಾಗುವುದೆಂದೂ, ಕೇಂದ್ರ ಆಹಾರ ಮಂತ್ರಿ ಕಿದ್ವಾಯಿರು ತಿಳಿಸಿರುತ್ತಾರೆ

ರಿಕ್ತ ಸ್ಥಿತಿಯಲ್ಲಿರುವ ಸಾಹಿತಿಗಳಿಗೆ ಧನ ಸಹಾಯ

ರಿಕ್ತ ದೆಸೆಯಲ್ಲಿರುವ ಉನ್ನತ ಸಾಹಿತಿಗಳು ಮತ್ತು ಕಲೆಗಾರರಿಗೆ ಪ್ರತಿ ವರ್ಷವೂ ಕೇಂದ್ರ ಸರ್ಕಾರದವರು ಸೂಕ್ತ ಭತ್ಯವನ್ನಾಗಲೀ, ಅಥವಾ ಒಂದೇ ಮೊತ್ತದ ಧನ ಸಹಾಯವನ್ನಾಗಲೀ ನೀಡಲು ನಿರ್ಧರಿಸಿರುವರೆಂದೂ, ಈ ಸಹಾಯವನ್ನು ಪಡೆಯಬಿಚ್ಛಿಸುವವರು ಕೇಂದ್ರ ಸರ್ಕಾರದ ವಿದ್ಯಾ ಖಾತೆಗೆ ಬರೆದುಕೊಳ್ಳಬೇಕೆಂದೂ ಬೊಂಬಾಯಿ ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ

ಕೇಸ್ಕರ್ ಅರ್ಜಿ ವಜಾ

ನಿಜಾಮರ ನಂಬರುಗಳಿಲ್ಲದ ಮೋಟಾರುಗಳ ಓಡಾಟಕ್ಕೆ ಪ್ರತಿಬಂಧಕ ಹಾಕಬೇಕೆಂದು ಬಿ ಜಿ ಕೇಸ್ಕರ್ ಎಂಬುವರು ಸಲ್ಲಿಸಿದ ಅರ್ಜಿಯನ್ನು ಹೈದರಾಬಾದು ನ್ಯಾಯಾಧೀಶರು ತಿರಸ್ಕರಿಸಿರುತ್ತಾರೆ

ಬಂಗಾರಪೇಟೆ ಉಪಚುನಾವಣೆಗೆ ಕಾಂಗ್ರೆಸ್ ಉಮೇದುವಾರಿಕೆ

ಸ್ಥಳೀಯ ಶಾಸನ ಸಭೆಯ ಸ್ಥಾನಕ್ಕೆ ಶ್ರೀ ಕೆ ಸಿ ರೆಡ್ಡಿಯವರು ರಾಜೀನಾಮೆಯಿತ್ತ ಬಂಗಾರಪೇಟೆ ಕ್ಷೇತ್ರದಿಂದ ನಡೆಯಲಿರುವ ಉಪಚುನಾವಣೆಗೆ ಶ್ರೀ ಕೆ ವೆಂಕಟರಾಮ ರೆಡ್ಡಿಯವರನ್ನು ನಿಲ್ಲಿಸಬೇಕೆಂದು ಸ್ಥಳೀಯ ಜನರು ಕಾಂಗ್ರೆಸ್ ಪಾರ್ಲಿಮೆಂಟರಿ ಸಬ್ ಕಮಿಟಿಗೆ ಸಲಹೆ ಮಾಡಿರುವರೆಂದು ಗೊತ್ತಾಗಿದೆ ಶ್ರೀ ರೆಡ್ಡಿಯವರು ಸ್ಪರ್ಧಿಸಲು ನಿರಾಕರಿಸಿದಲ್ಲಿ ಶ್ರೀ ಗಾಜಿಗ ಆದಿನಾರಾಯಣ ಶೆಟ್ಟಿಯವರನ್ನು ನಿಲ್ಲಿಸಲು ಸೂಚಿಸಲಾಗಿದೆ

ರೆವಿನ್ಯೂ ಬೋರ್ಡಿನ ಸ್ಥಾಪನೆ ಇಲ್ಲ

ರೆವಿನ್ಯೂ ಅಪೀಲುಗಳನ್ನು ಮಂತ್ರಿಗಳು ಪರಿಶೀಲನೆ ಮಾಡುವುದರ ಬದಲು ಬೋರ್ಡೊಂದನ್ನು ಸ್ಥಾಪಿಸಿ ಆ ಕಾರ್ಯವನ್ನು ಅದಕ್ಕೆ ವಹಿಸುವ ವಿಷಯವನ್ನು ಸರ್ಕಾರದವರು, ಆರ್ಥಿಕ ಪರಿಸ್ಥಿತಿಯ ಪರಿಣಾಮವಾಗಿ ಕೈಬಿಟ್ಟಿರುತ್ತಾರೆ ಸ್ವತಂತ್ರ ಬೋರ್ಡನ್ನು ಸ್ಥಾಪಿಸುವುದಾಗಿ ಶಾಸನ ಸಭೆಯಲ್ಲಿ ಮಂತ್ರಿಗಳು ಆಶ್ವಾಸನೆಯಿತ್ತಿದ್ದರು

ನೇಪಾಳದ ಸಲಹೆಗಾರ ಸರ್ಕಾರವನ್ನು ಇನ್ನು ಎರಡು ತಿಂಗಳೊಳಗೆ ರದ್ದು ಮಾಡಬೇಕೆಂದೂ ಇಲ್ಲವಾದರೆ ಅದಕ್ಕಾಗಿ ಅಲ್ಲಿನ ಪ್ರಜಾಪರಿಷತ್ತಿನವರು ಸತ್ಯಾಗ್ರಹವನ್ನು ಹೂಡಲಿರುವುದಾಗಿ ಅವರು ತಿಳಿಸಿರುವರೆಂದೂ ಗೊತ್ತಾಗಿದೆ

ಮಾಧ್ವ ತತ್ವಜ್ಞಾನ ಸಮ್ಮೇಳನ

ಉಡುಪಿಯಲ್ಲಿ ಕಳೆದ ನವೆಂಬರಿನಲ್ಲಿ ನಡೆಯಬೇಕಾಗಿದ್ದ ಅಖಿಲ ಮಾಧ್ವ ತತ್ವಜ್ಞಾನ ಸಮ್ಮೇಳನವು ಅನಿವಾರ್ಯವಾಗಿ ಮುಂದಕ್ಕೆ ಹಾಕಲ್ಪಟ್ಟಿತ್ತಷ್ಟೆ. ಆ ಸಮ್ಮೇಳನವು ಬರುವ ಜನವರಿ ೪ನೇ ತಾರೀಖಿಗೆ ನಡೆಯಲು ನಿರ್ಧಾರವಾಗಿದೆ. ಮೈಸೂರಿನ ಶ್ರೀಮನ್ಮಹಾರಾಜರವರು ಈ ಸಮ್ಮೇಳನವನ್ನು ಉದ್ಘಾಟನೆ ಮಾಡಲಿದ್ದಾರೆ. ಮಹಾಜನರು ಈ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡಬೇಕೆಂದು ಸ್ವಾಗತ ಸಮಿತಿಯ ಅಧ್ಯಕ್ಷರಾದ ಉಡುಪಿ ಪರ್ಯಾಯ ಪೀಠಾಧಿಪರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ಕೋರಿದ್ದಾರೆ.

ಜಮೀನ್ದಾರರಿಗೆ ವಿನೋಬಾರವರ ಎಚ್ಚರಿಕೆ

ರಾಂಚಿಯಲ್ಲಿ ಮೊನ್ನೆ ನೆರೆದಿದ್ದ ಪ್ರಾರ್ಥನಾ ಸಭೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರು ಭಾಷಣ ಮಾಡುತ್ತಾ ಜಮೀನ್ದಾರರು ಕಾಲವನ್ನನುಸರಿಸಿ ನಡೆಯಬೇಕೆಂದೂ, ಬಡವರಿಗಾಗಿ ಭೂದಾನ ಮಾಡಬೇಕೆಂದೂ ನುಡಿದರು. ಕಾಲಗತಿಯನ್ನೆದುರಿಸಲು ಹೋದವರ ಗತಿಯು ನದೀ ಪ್ರವಾಹಕ್ಕೆ ಎದುರಾಗಿ ಈಜಲು ಹೋಗಿ ಸುಳಿಗೆ ಸಿಕ್ಕಿ ಕೊಚ್ಚಿ ಹೋದಂತೆ ಆಗುವುದೆಂದೂ, ಜಮೀನ್ದಾರರು ಭೂಮಿಯನ್ನು ಬಿಟ್ಟುಕೊಡಲು ಹಿಂದುಮುಂದು ನೋಡಿದರೆ ಭೂಮಿಯು ತಾನಾಗಿಯೇ ಅವರನ್ನು ಬಿಟ್ಟು ಹೋಗುವುದೆಂದೂ ಅವರು ಎಚ್ಚರಿಸಿರುವರು.

೧೦೦ ಶಾಲಾ ಬಾಲಕರ ಅಪಹರಣ

ಫಿಲಿಪ್ಪೈನ್ ದ್ವೀಪಸ್ತೋಮಗಳ ರಾಜಧಾನಿ ಮನಿಲಾದಲ್ಲಿ ಇತ್ತೀಚೆಗೆ ೧೦೦ ಶಾಲಾ ಬಾಲಕರನ್ನು ಅಪಹರಿಸಲಾಗಿದೆಯೆಂದೂ, ಬಾಲಕರನ್ನು ಕದ್ದು ಮಾರುವ ಮತ್ಸರ ಗುಂಪೊಂದು ಅಲ್ಲಿ ಪ್ರಬಲವಾಗಿರುವುದೆಂದೂ ವರದಿಯಾಗಿದೆ.

ಗೀತಾ ಪಾರಾಯಣ

ಮೈಸೂರಿನ ಶ್ರೀ ಜ್ಞಾನಾನಂದ ಸಮಾಜದವರು ಶ್ರೀ ಗೀತಾ ಜಯಂತಿ ಪ್ರಯುಕ್ತ ಇದೇ ೨೭ ನೇ ತಾ॥ ನಿಂದ ಡಿಸೆಂಬರ್ ೭ ರ ವರೆಗೆ ಶ್ರೀರಂಪೇಟೆಯಲ್ಲಿರುವ ಶ್ರೀಮತ್ಕೃಷ್ಣಕಾ ಪರಮೇಶ್ವರಿ ದೇವಾಲಯದಲ್ಲಿ ಶ್ರೀಮದ್ಭಗವದ್ಗೀತಾ ಪಾರಾಯಣವನ್ನು ಪ್ರತಿ ದಿನ ಬೆಳಿಗ್ಗೆ ೭ ರಿಂದ ೮॥ ರವರೆಗೆ ಏರ್ಪಡಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ನಾಗಸ್ವರ, ಎಸ್. ಸಿ. ಚೇಲೂರಯ್ಯ, ಮಧ್ಯಾಹ್ನ ೩ ವನಿತಾ ವಿಹಾರ, ಮಹಿಳೆಯರ ಕಾರ್ಯಕ್ರಮ. ಸಂಜೆ ೬-೩೦ ನಾಗಸ್ವರ, ಎಸ್. ಸಿ. ಚೇಲೂರಯ್ಯ, ೬-೧೦ ಬಾಲಜಗತ್, ಮಕ್ಕಳ ಕಾರ್ಯಕ್ರಮ, ೭ ಹಿಂದಿ ಗೀತೆಗಳು ಶ್ರೀ ರಾಮುಲು ನಾಯ್ಡು, ಸಂಗೀತ, ಚಿಂತಲಪಲ್ಲಿ ರಾಮಚಂದ್ರರಾವ್, ... ಕನ್ನಡ ಗೀತೆಗಳು, ... ೩೦ ಸಿನಿಮಾ ಮೆಚ್ಚಿನ ಗೀತೆಗಳು

ಬಾಗ್ದಾದಿನಲ್ಲಿ ಮಾರ್ಷಲ್ ಲಾ

ಇರಾಕಿನ ರಾಜಧಾನಿ ಬಾಗ್ದಾದಿನಲ್ಲಿ ಮೊನ್ನೆ ದಿನ ನಡೆದ ಗಲಭೆಯ ಪರಿಣಾಮವಾಗಿ ಮಿಲಿಟರಿಯವರು ನಗರದ ಎಲ್ಲ ಆಯಕಟ್ಟಾದ ಪ್ರದೇಶಗಳನ್ನೂ ತಮ್ಮ ವಶಕ್ಕೆ ತೆಗೆದುಕೊಂಡಿರುವರು. ಪ್ರಧಾನ ಸೈನ್ಯಾಧಿಕಾರಿಯಾದ ಜನರಲ್ ನೂರುದ್ದೀನರವರ ನೇತೃತ್ವದಲ್ಲಿ ಹೊಸ ಸರ್ಕಾರವು ರಚಿತವಾಗಿದೆ. ಬಾಗ್ದಾದಿನಲ್ಲಿ ಮಾರ್ಷಲ್ ಲಾ ಜಾರಿ ಮಾಡಲಾಗಿದೆ. ದೇಶದ ಎಲ್ಲ ರಾಜಕೀಯ ಪಕ್ಷಗಳ ವಿಸರ್ಜನೆಯಾಗಬೇಕೆಂದು ಮಿಲಿಟರಿ ಗವರ್ನರರಾದ ಜನರಲ್ ಅಬ್ದುಲ್ ಮುತಾಲಿಬ್ ಅಮೀನರು ಆಜ್ಞೆ ಮಾಡಿರುವರು.

ವಾರ್ಷಿಕೋತ್ಸವ

ಚಾಮುಂಡಿ ಬೆಟ್ಟದ ಪಾದದಲ್ಲಿರುವ "ಶ್ರೀ ಕೃಷ್ಣಕುಟೀರ"ದ ಮೂರನೆಯ ವಾರ್ಷಿಕೋತ್ಸವದ ಪ್ರಯುಕ್ತ ಕುಟೀರದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ಎಸ್. ನಂಜುಂಡಮೂರ್ತಿ ಭಾಗವತರಿಂದ ಭಕ್ತ ಕುಚೇಲ ಎಂಬ ಹರಿಕಥೆಯು ನಡೆಯುವುದು. ಎಲ್ಲರಿಗೂ ಆಹ್ವಾನವುಂಟು.

ಗೀತಾ ಸಪ್ತಾಹ ಮಹೋತ್ಸವ

ರಾಜಧಾನಿಯ ಶ್ರೀ ಗೀತಾ ಪ್ರಚಾರಿಣಿ ಸಭೆಯ ಆಶ್ರಯದಲ್ಲಿ ಅಕೋಕಾ ರಸ್ತೆಯಲ್ಲಿನ ಮೈಸೂರು ಫೂರ್ವ ಕ್ರಾಸ್ ರಸ್ತೆಯಲ್ಲಿರುವ ಗೀತಾ ಸದನದಲ್ಲಿ ನಾಳಿದ್ದಿನಿಂದ ೭ನೇ ತಾ॥ ಪೂರಾ ಗೀತಾ ಸಪ್ತಾಹ ಮಹೋತ್ಸವವು ಜರುಗುವುದು. ಪ್ರತಿ ನಿತ್ಯವೂ ಬೆಳಿಗ್ಗೆ ಅಭಿಷೇಕ, ಅರ್ಚನೆ, ಗೀತಾ ಪಾರಾಯಣ ಉಪನ್ಯಾಸಗಳೂ, ಸಂಜೆ ಭಾರತ ವಾಚನ, ಉಪನ್ಯಾಸ, ಸಂಗೀತ, ಹರಿಕಥೆ ಇವುಗಳೂ ನಡೆಯುವುವು. ೬ನೇ ತಾ॥ ಶನಿವಾರ ಬೆಳಿಗ್ಗೆ ೧೦ ಗಂಟೆಗೆ ಗೀತಾ ಪರೀಕ್ಷೆಯು ನಡೆಯುವುದು. ೧೮ ಅಧ್ಯಾಯಗಳನ್ನು ಕಂಠಪಾಠ ಮಾಡಿರುವವರು ಇದರಲ್ಲಿ ಭಾಗವಹಿಸಬಹುದು. ಉತ್ತೀರ್ಣರಾದವರಿಗೆ ಬಹುಮಾನವು ದೊರೆಯುತ್ತದೆ.

ವಿವಾಹ ಮಹೋತ್ಸವ

ಹೆಗ್ಗಡದೇವನಕೋಟೆ ತಾಲ್ಲೂಕು ಶಿಕ್ಷಾರಿನ ಶ್ರೀ ಕೆ ಆರ್ ಸೂರ್ಯನಾರಾಯಣ ಅಯ್ಯರ್‌ರವರು ತಮ್ಮ ಪುತ್ರಿ ಸೌ॥ ಸುಂದರಮ್ಮನನ್ನು ಕೆಂಗೇರಿಯ ಲೇಟ್ ನಾಗೇಶ್ವರ ಅಯ್ಯರ್‌ರವರ ದ್ವಿತೀಯ ಪುತ್ರ ಶ್ರೀ ಎನ್ ಶಂಕರ ಸುಬ್ರಹ್ಮಣ್ಯಂರವರಿಗೆ ಕೊಟ್ಟು ಮೊನ್ನೆ ದಿನ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ.
ಔಷಧಿ ವ್ಯಾಪಾರಿಗಳು,
207, ಸಯ್ಯಾಜಿರಾವ್ ರೋಡ್,
ಮೈಸೂರು

ಕಾರ್ಮಿಕ ಹಿತ ರಕ್ಷಣಾ ನಿಧಿಯ ಸ್ಥಾಪನೆ

ದೇಶದ ಎಲ್ಲ ಕೈಗಾರಿಕಾ ಸಂಸ್ಥೆಗಳಲ್ಲೂ ಇರುವ ಕಾರ್ಮಿಕರ ಹಿತ ದೃಷ್ಟಿಯಿಂದ ಕೈಗಾರಿಕಾ ಸಂಸ್ಥೆಗಳ ಮಾಲೀಕರು ಕಾರ್ಮಿಕರ ಹಿತ ರಕ್ಷಣಾ ನಿಧಿಯನ್ನು ಸ್ಥಾಪಿಸುವ ಅಂಶವನ್ನು ಸಂಸ್ಥಾನಗಳ ಸರ್ಕಾರಗಳವರು ಪರಿಶೀಲಿಸಬೇಕೆಂದು ಕೇಂದ್ರ ಸರ್ಕಾರದವರು ಎಲ್ಲ ಸಂಸ್ಥಾನಗಳಿಗೂ ಸೂಚನೆಯಿತ್ತಿರುವರೆಂದು ಗೊತ್ತಾಗಿದೆ. ಈ ನಿಧಿಯಿಂದ ಕಾರ್ಮಿಕರಿಗೆ ಮನರಂಜನೆ, ಕ್ರೀಡೆ, ಆಟಪಾಟಗಳು, ನಾಟಕ, ಸಿನಿಮಾ ನೋಟ ಇವುಗಳ ವ್ಯವಸ್ಥೆ ಮಾಡಬೇಕೆಂದೂ, ಇದಕ್ಕಾಗಿ ಮಾಲೀಕರು ಪ್ರತಿ ನೌಕರನಿಗೂ ಸಾಲಿಯಾನಾ ಒಂದು ರೂ ನಂತೆ ಒದಗಿಸಬೇಕೆಂದೂ ಸೂಚಿಸಲಾಗಿದೆ. ಕಾರ್ಮಿಕರಿಂದಲೂ ಇದಕ್ಕಾಗಿ ಸ್ವಲ್ಪ ಹಣವನ್ನೂ ವಸೂಲು ಮಾಡಬೇಕೆಂದೂ ತಿಳಿಸಲಾಗಿದೆ.

ಹೈದ್ರಾಬಾದಿನ ನಾಣ್ಯಗಳ ಚಲಾವಣೆ ರದ್ದು

ಹೈದರಾಬಾದಿನಲ್ಲಿ ಇದುವರೆಗೆ ಇದ್ದ ನಿಜಾಮರ ಸುಸ್ಥಾನಿಯಾ ನಾಣ್ಯದ ಚಲಾವಣೆಯನ್ನು ಬರುವ ಏಪ್ರಿಲ್ಲಿನಿಂದ ರದ್ದುಗೊಳಿಸಿ ಅದಕ್ಕೆ ಪ್ರತಿಯಾಗಿ ಭಾರತದ ನಾಣ್ಯಗಳ ಚಲಾವಣೆಯೊಂದನ್ನು ಮಾತ್ರ ಜಾರಿಯಲ್ಲಿಡಲಾಗುವುದು. ಈಗ ಎಲ್ಲ ಎರಡು ನಾಣ್ಯಗಳೂ ಚಲಾವಣೆಯಲ್ಲಿವೆ.

ರಿಜಿಸ್ಟರು ಲಕೋಟೆಯಲ್ಲಿ ಚೆಕ್ಕು, ಡ್ರಾಫ್ಟು ಕಳುಹಿಸಬೇಕು

ಬ್ಯಾಂಕಿನ ಡ್ರಾಫ್ಟುಗಳ, ಚೆಕ್ಕುಗಳು ಮತ್ತು ಇವೇ ವಿಧದ ಇತರ ಪತ್ರಗಳನ್ನು ರಿಜಿಸ್ಟರು ಮಾಡಿಸದೆ, ಅಂಚೆ ಲಕೋಟೆಗಳಲ್ಲಿ ಕಳುಹಿಸುವುದು ಅಂಚೆ ಮತ್ತು ತಂತಿ ಇಲಾಖೆಯ ನಿಯಮಗಳ ಉಲ್ಲಂಘನೆಯಾಗುವುದೆಂದೂ ಆದುದರಿಂದ ಅಂತಹ ಲಕೋಟೆಗಳು ರವಾನೆ ಕಾಲದಲ್ಲಿ ಕಳೆದು ಹೋದ ಪಕ್ಷಕ್ಕೆ ಅಂಚೆ ಕಛೇರಿಯವರು ಜವಾಬ್ದಾರರಾಗುವುದಿಲ್ಲವೆಂದೂ ಮದ್ರಾಸಿನ ಪೋಸ್ಟ್ ಮಾಸ್ಟರ್ ಜನರಲ್ಲರು ತಿಳಿಸಿರುವರು.

LORRY FOR SALE

Morris Commercial 5 ton Lorry for sale. Model 49. Registration 50 Diesel Engine For Particulars:- Room No 13,
MODERN HINDU HOTEL,
MYSORE

ಟ್ರೈರ್ ನಂಬರ್ ಟ್ರ್ಯಾಂಕ್
ಸೋಲ್ ಚಪ್ಪಲಿಗಳು
ತಿಮಗೆ ಬೇಕಾದ ನಮೂನೆಯಲ್ಲಿ
ಮಾಡಿಕೊಡುತ್ತೇವೆ
ಪಸ್ಟ್ ಫುಟ್ ವೇರ್,
ದೇವರಾಜ ಮಾರ್ಕೆಟ್, ಮೈಸೂರು

Edited, Printed and Published by A R. Nagarajan at Sadhvi Press, D Subbiah Road, Mysore

ಶಸ್ತ್ರ ಚಿಕಿತ್ಸೆಯಲ್ಲಿ ಬಾಲಕನ ಮರಣಕ್ಕಾಗಿ ವೈದ್ಯನ ವಜಾ

ಒಂದು ವರ್ಷದ ಹಿಂದೆ ಲಕ್ನೋ ಆಸ್ಪತ್ರೆಯೊಂದರಲ್ಲಿ ಏಳು ವರ್ಷದ ಬಾಲಕನಿಗೆ ಶಸ್ತ್ರ ಚಿಕಿತ್ಸೆ ನಡೆಸಿದಾಗ ಆಸ್ಪತ್ರೆಯ ವೈದ್ಯರಾದ ಡಾ॥ ಎಸ್ ಎಲ್. ಮಾಥುರ್‌ರವರು ಸರಿಯಾದ ಮುತುವರ್ಜಿ ವಹಿಸದೆ ಬಾಲಕನ ಮರಣಕ್ಕೆ ಕಾರಣರಾದರೆಂದು ಅವರನ್ನು ಕೆಲಸದಿಂದ ತೆಗೆಯಲು ಉತ್ತರ ಪ್ರದೇಶ ಸರ್ಕಾರದವರು ನಿರ್ಧರಿಸಿ, ಸದರಿ ಅಧಿಕಾರಿಯು ತಾನಾಗಿಯೇ ರಾಜೀನಾಮೆ ಕೊಡುವಂತೆ ಸೂಚಿಸಿರುತ್ತಾರೆ. ಮತ್ತೊಬ್ಬ ವೈದ್ಯರ ಬಡ್ತಿ ನಿಲ್ಲಿಸಲಾಗಿದೆ.

ನೀರಿನ ಜಗಳದಲ್ಲಿ ಇಬ್ಬರ ಮರಣ

ದಾವಣಗೆರೆ ಬಳಿ ಕಂದನಕೋವಿ ಎಂಬಲ್ಲಿ ನೀರು ಹರಬಂದಿಯ ಸಂಬಂಧವಾಗಿ ಎರಡು ಗುಂಪಿನವರಿಗೆ ಸಂಭವಿಸಿದ ಜಗಳದಲ್ಲಿ ಇಬ್ಬರು ಮಡಿದು, ಮತ್ತಿಬ್ಬರಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು.

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೩ ೨ ೦	೨೧ ೬-೦
ಎಳ್ಳು	೬ ೧-೦	೭೩ ೨ ೦
ಹರಳು ಬೀಜ	೪೨-೦-೦	೪೩ ೮ ೦
ಸುರುಳಿ	೫೧ ೨ ೮	೫೬ ೮ ೦
ಹೆಸರು	೫೦ ೦ ೦	೫೪ ೦ ೦
ಉದ್ದು	೬೬ ೬ ೦	೭೦-೦-೦
ಹಲಸಂದೆ	೫೦ ೮-೦	೬೪-೧೨-೦
ಹುಚ್ಚೆಳ್ಳು	೭೧ ೦ ೦	೬೪ ೮ ೦
ಅವರೆ	೫೮-೦-೦	೬೫ ೮ ೦
ಹೊಂಗೇಬೀಜ	೧೫ ೧೨-೦	
ಮೆಣಸಿನಕಾಯಿ		
ಸಣ್ಣಕ್ಕಿ	೧೦ ೪ ೦	೧೫ ೧೦ ೦
ದುಂಡೇಹಣ್ಣು	೪ ೪-೦	
ಬೆಲ್ಲ	೩ ೮ ೦	
ಸೀಗೇಕಾಯಿ	೪-೫-೦	
ತೆಂಗಿನಕಾಯಿ ೧,೦೦೦	೩೦ ೦-೦	೩೧ ೬ ೦

ಇದರ ಪರಿಚಯವಿದೆಯೇ ..
ಮೈಸೂರು ಸಾಬೂನು
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು ಯಾವ ಪ್ರಮಾದವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ. ಬಟ್ಟೆ, ಕೈಲ ... ಸಂಗಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನು ಕೊಡುತ್ತದೆ

ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ.
ಎಲ್ಲ ಕಡೆಯೂ ಸಿಗುತ್ತದೆ
ಸರ್ಕಾರದ
ಸಾಬೂನು ಕಾರ್ಖಾನೆ,
ಬೆಂಗಳೂರು

ರಿಜಿಸ್ಟರ್ ನಂ. 792 ||ವಂದೇ ಮಾತರಂ|| ಬಿಡಿಪ್ರತಿಗೆ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೬-೧೧-೧೯೫೨ [ಸಂಚಿಕೆ ೯೮

ಅಮೆರಿಕ ಗೋಧಿಯಲ್ಲಿ ಶೇ|| ೨೦ ರಷ್ಟು ಕಸ ಕಡ್ಡಿ

ಅಮೆರಿಕದ ಗೋಧಿಯಲ್ಲಿ ಶೇ|| ೨೦ ರಷ್ಟು ಕಸ

ಭಾರತಕ್ಕೆ ಅಮೆರಿಕವು ಸಾಲವಾಗಿ ಕೊಡುವ ಗೋಧಿಯಲ್ಲಿ ಶೇ|| ೨೦ ರಷ್ಟು ಕಸ, ಕಡ್ಡಿ ಮುಂತಾದುವು ಇದ್ದುವೆಂದು ಭಾರತದ ಆಹಾರದ ಉಪ ಮಂತ್ರಿ ಕೃಷ್ಣಪ್ಪನವರು ತಿಳಿಸಿರುತ್ತಾರೆ

ಮಕ್ಕಳನ್ನು ಭಾವಿಗೆ ಹಾಕಿ ಹೆಂಗಸಿನ ಆತ್ಮಹತ್ಯೆ

ಪರಿ ಬಳಿ ಮರವಪಟ್ಟಿ ಎಂಬಲ್ಲಿ ... ಮುಸ್ಲೀಮರ ಪತ್ನಿ ಅವಳೆ ... ಎಂಬಾಕೆಯು ಅತ್ತೆಯೊಡನೆ ವೈಮನಸ್ಯವಾಗಿ, ಕೊನೆಗೆ ತನ್ನ ಎರಡು ಮಕ್ಕಳನ್ನು ಭಾವಿಗೆ ಎಸೆದು, ತಾನೂ ಅದರಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ

ರಾತ್ರಿ ಹೊತ್ತು "ಮಂಗ" ಹಗಲು ಮನುಷ್ಯ

ಐಸ್ಲೆಂಗಿ ಆಪ ಪಯಸ್ಸಿನವನೊಬ್ಬನು ... ರಾತ್ರಿಹೊತ್ತು ಮಾತ್ರ ಮಂಗನಂತೆ ... ತನ್ನ ರೋಗಕ್ಕೆ ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿರುತ್ತಾನೆ. ಹಗಲೆಲ್ಲಾ ಸರಿಯಾಗಿ ... ಸದೆದುಕೊಳ್ಳುತ್ತಿರುವ ಅವನು ... ಗಂಟೆ ರಾತ್ರಿಯಲ್ಲಿ ಕೂಗಾಡುವುದು, ಮರ ಹತ್ತುವುದು ... ಮುಂತಾದ ಕಪಿ ಚೇಷ್ಟೆಯನ್ನು ... ಹಗಲಿನ ಬೆಳಕು ಬಿದ್ದೊಡನೆ ... ಮೊದಲಿನಂತೆ ಸರಿಯಾಗು ... ಹೇಳಲಾಗಿದೆ. ವೈದ್ಯರು ವಿಷಯ ... ರು ಕೇಳಿದರೂ ಅವನು ಏನ... ನ್ನು ತಿಳಿದಿಲ್ಲವೆಂದು ಗೊತ್ತಾ...

ಗಿರಣಿಗಳಲ್ಲಿ ಧೋತ್ರಗಳ ತಯಾರಿಕೆಗೆ ನಿರ್ಬಂಧ

... ರಲ್ಲಿ ತಯಾರಿಸಿದ ... ಪ್ರಮಾಣವನ್ನು ಇನ್ನು ಮುಂದೆ ... ಇಳಿಸಿಕೊಳ್ಳಬೇಕೆಂದು ಭಾ... ರದವರು ನಿರ್ಧರಿಸಿರುತ್ತಾರೆ. ... ತ್ರಗಳನ್ನು ಕೈಮಗ್ಗಗಳಲ್ಲಿ ಮಾ... ಸುವಂತೆ ಗಿರಣಿಗಳೇ ಸೂಚಿಸ... ವಣಗಳು, ವಿದ್ಯುಚ್ಛಕ್ತಿ ಮತ್ತು ... ಬಗ್ಗೆ ಆಮೂಲಾಗ್ರವಾದ ... ೧೦ ಜನರ ಸಮಿತಿಯನ್ನು ... ಶ್ರೀ ಹೆಚ್ ಸಿ ವಾಸ್ತಪ್ಪ ... ಲ್ಲಿ ಎಲ್ಲ ಸದಸ್ಯರಾಗಿರುತ್ತಾರೆ

ಶ್ರೀರಂಗಪಟ್ಟಣ ಕಸಬಾ ರೈತರ ಸಮ್ಮೇಳನ

ಶ್ರೀರಂಗಪಟ್ಟಣ ತಾಲ್ಲೂಕಿನ ಕಸಬಾ ಹೋಬಳಿ ರೈತರ ಸಮ್ಮೇಳನವು ... ವಾರ ನೋಟಾಪ್ಪುವಲ್ಲಿ ನಡೆಯಿತು ... ಸಭಾ ಸದಸ್ಯರಾದ ಶ್ರೀ ... ಸ್ವಾಮಿಯವರು ಅಧ್ಯಕ್ಷತೆ ವ... ಮಂಡ್ಯದ ಜಿಲ್ಲಾಧಿಕಾರಿಗಳು ಶ್ರೀ ... ದಪ್ಪನವರೂ, ಡಾ|| ಸಿ ... ನರೂ ಭಾಷಣ ಮಾಡಿದರು ... ರಸ್ತೆಗಳು ಮತ್ತು ಗ್ರಾಮಗಳ ಅಭಿವೃದ್ಧಿ ಪಡಿಸಲು ಸರ್ಕಾರದ ... ತಾಲ್ಲೂಕಿನಿಂದ ಸಂಗ್ರಹಿಸುವ ... ಸಲ್ಲಿ ಭತ್ತದ ಬೆಳೆಯಲ್ಲಿ ... ಕೊಳ್ಳುವ ಆನೆಯಂತೆ ಹಿಡಿದು ... ಗಳನ್ನು ಗ್ರಾಂಟ್ ರೂಪ... ತಾಲ್ಲೂಕಿಗಾಗಿ ಪ್ರತ್ಯೇಕ ... ನಿಧಿಯನ್ನು ಏರ್ಪಡಿಸಿ, ಇತ್ತ ... ಅಭಿವೃದ್ಧಿ ಕಾರ್ಯವನ್ನು ಕೈಗೊ... ಸರ್ಕಾರವನ್ನು ಕೋರುವ ... ವನ್ನು ಮಾಡಲಾಯಿತು

ಸಾಂಸ್ಕೃತಿಕ ಪ್ರಚಾರ ಆರಂಭೋತ್ಸವ

ನಂಜನಗೂಡು ೨೬

ಸರ್ಕಾರದವರು ಏರ್ಪಡಿಸಿರುವ ಕಾವ್ಯ ವಾಚನ,ಮಹಾಭಾರತ, ರಾಮಾಯಣ ಮುಂತಾದ ಸಾಂಸ್ಕೃತಿಕ ವಿಷಯಗಳ ಪ್ರಚಾರದ ಆರಂಭೋತ್ಸವವು ನಾಳೆ ಸಂಜೆ ೬ ಗಂಟೆಗೆ ಇಲ್ಲಿನ ರೀಡಿಂಗ್ ಭವನದಲ್ಲಿ ನಡೆಯುವುದು. ಶ್ರೀಮರ್ ಮಹಾರಾಜರು ಆರಂಭ ಭಾಷಣ ಮಾಡುವರು. ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು. ಶ್ರೀಗಳಾದ ಸಿ ಕೆ ವೆಂಕಟರಾಮಯ್ಯ, ನೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಯವರು ಉಪನ್ಯಾಸ ಮಾಡುವರು

ಭಾರತ ಸರ್ಕಾರದ ಮೇಲೆ ಮಾಜಿ ಅಧಿಕಾರಿ ದಾವಾ

ಭಾರತ ಸರ್ಕಾರದ ವ್ಯವಸಾಯ ಇಲಾಖೆಯ ಗೊಬ್ಬರದ ಡೈರೆಕ್ಟರ್ ಸ್ಥಾನದಿಂದ ತಮ್ಮನ್ನು ವಜಾ ಮಾಡಿದ್ದಕ್ಕೆ ೫೦ ಸಾವಿರ ರೂ ಪರಿಹಾರಬೇಕೆಂದು ವಜಾ ಆದ ಅಧಿಕಾರಿ ಸಿ ಎನ್ ಡಿ ಸ್ವಾಮಿಯವರು ಭಾರತ ಸರ್ಕಾರದ ಮೇಲೆ ದೆಹಲಿಯ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ. ಆಕ್ರಮ ಸಂಭಾವನೆ ಪಡೆದಿದ್ದರೆಂದು ಅವರನ್ನು ವಜಾ ಮಾಡಲಾಗಿದ್ದಿತು

ಗೀತಾ ಜಯಂತಿ

ರಾಜಧಾನಿಯ ಪೌರಸಭೆ ಆಶ್ರಯದಲ್ಲಿ ಗೀತಾ ಜಯಂತಿ ಮಹೋತ್ಸವವು ನಾಳೆ ಸಂಜೆ ೬|| ಗಂಟೆಗೆ ಟೌನ್ ಹಾಲಿನಲ್ಲಿ ನೆರವೇರುವುದು. ಆಸ್ಥಾನ ಧರ್ಮಾಧಿಕಾರಿಗಳಾದ ಶ್ರೀ ಬಿಚ್ ಎಲ್ ರಾಘವೇಂದ್ರಾಚಾರ್ಯರು ಭಾಷಣ ಮಾಡುವರು. ಶ್ರೀ ಕೃಷ್ಣಗಿರಿ ಕೃಷ್ಣರಾಯರ ಗಮಕ ವಾಚನವು ನಡೆಯುವುದು. ಸಕಲರಿಗೂ ಆಹ್ವಾನವುಂಟು

ಹಣೋಟಗಳ ವಿಮರ್ಶೆಗಾಗಿ ಸಮಿತಿ ನೇಮಕ

ಸಂಸ್ಥಾನದಲ್ಲಿ ಜಾರಿಯಲ್ಲಿರುವ ನಾನಾ ಹಣೋಟ ಪತ್ರಗಳನ್ನು ವಿಮರ್ಶಿಸಲು ಮತ್ತು ಅವುಗಳ ಸುಧಾರಣೆ ಬಗ್ಗೆ ಸೂಕ್ತ ಶಿಫಾರಸುಗಳನ್ನು ಮಾಡಲು ಸರ್ಕಾರದವರು ವಾಣಿಜ್ಯ ಮತ್ತು ಕೈಗಾರಿಕೆ ಡೈರೆಕ್ಟರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುವರು

ಬರುವ ವರ್ಷ ಆಹಾರದ ಆಮದಿನಲ್ಲಿ ಭಾರಿ ಖೋತಾ

೧೯೫೩ನೇ ಸಾಲಿನಲ್ಲಿ ಹೊರ ದೇಶಗಳಿಂದ ೩೫ ಲಕ್ಷ ಟನ್ ಧಾನ್ಯವನ್ನು ಮಾತ್ರ ತರಿಸಲಿರುವುದೆಂದೂ, ಈ ವರ್ಷದ್ದಕ್ಕಿಂತಲೂ ೧೪ ಲಕ್ಷ ಟನ್ ನಷ್ಟು ಆದು ಕಡಿಮೆಯೆಂದೂ ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ತಿಳಿಸಿರುತ್ತಾರೆ. ಡಿಸೆಂಬರ್ ತಿಂಗಳಲ್ಲಿ ಸಂಸ್ಥಾನಗಳ ಆಹಾರ ಸಚಿವರ ಸಮ್ಮೇಳನವನ್ನು ನಡೆಸಲಾಗುವುದೆಂದೂ ಅವರು ಹೇಳಿರುತ್ತಾರೆ

ಪೆಪ್ಸುವಿನ ಉಪಮಂತ್ರಿಯೊಬ್ಬರು ಕಾಂಗ್ರೆಸ್ಸಿಗೆ

ಪೂರ್ವ ಪಂಜಾಬು ಮತ್ತು ಪಾಟಿಯಾಲಾ ಸಂಸ್ಥಾನದ ರಾಜಿನಾಲ ಮಂತ್ರಿ ಮಂಡಲದಲ್ಲಿ ಉಪ ಮಂತ್ರಿಯಾಗಿದ್ದ ಪಂಡಿತ ದೇವಕಿನಂದನರವರು ರಾಜೀನಾಮೆ ಇತ್ತಿರುವರು. ಮಂತ್ರಿಮಂಡಲದ ಸಂಯುಕ್ತ ಪಕ್ಷದ ಸದಸ್ಯತ್ವಕ್ಕೂ ಅವರು ರಾಜೀನಾಮೆ ಸಲ್ಲಿಸಿ, ಕಾಂಗ್ರೆಸ್ಸಿಗೆ ಸೇರಿರುತ್ತಾರೆ

ಅಕೇಡೆಮಿಕ್ ಕೌನ್ಸಿಲ್ಲಿಗೆ ನಾಮಕರಣ

೫೩ ೫೪ನೇ ಸಾಲಿನಿಂದ ೩ ವರ್ಷಗಳ ಅವಧಿಯುಳ್ಳ ಮೈಸೂರು ವಿಶ್ವವಿದ್ಯಾಲಯದ ಅಕೇಡೆಮಿಕ್ ಕೌನ್ಸಿಲ್ಲಿಗೆ ಬೆಂಗಳೂರು ಮೆಡಿಕಲ್ ಶಾಲೆಯ ಪ್ರಿನ್ಸಿಪಾಲರು, ಮಾವಳ್ಳಿಯ ಅಮಲ್ದಾರ್ ಶ್ರೀ ಎಂ ಎಲ್ ನಂಜರಾಜೆ ಅರಸ್, ಬಿ ಟಿ. ಸಿ ಕಂಪನಿ ಅಧ್ಯಕ್ಷ ಶ್ರೀ-ಕೆ. ಆರ್ ಮಾಧವರಾವ್, ಡಾ|| ಎಂ ಸಿದ್ದಲಿಂಗಯ್ಯ, ಮತ್ತು ಎಸ್ ಎಂ. ಸಿದ್ದಯ್ಯ ಇವರುಗಳನ್ನು ಸದಸ್ಯರಾಗಿ ನಾಮಕರಣ ಮಾಡಲಾಗಿದೆ

ವಿವಾಹ ಮಹೋತ್ಸವ

ನಂಜನಗೂಡಿನ ಶ್ರೀ ಕೆ. ಆರ್ ನಂಜುಂಡಯ್ಯನವರು ತಮ್ಮ ಕುಮಾರ ಶ್ರೀ ಕೆ ಎನ್ ಶ್ರೀನಿವಾಸ್‌ರವರಿಗೆ ಕೃಷ್ಣರಾಜನಗರದ ಜಮೀನುದಾರರಾದ ಶ್ರೀ ವೈ ವಿ ಗುಂಡೂರಾಯರ ಮಗಳು ಸೌ|| ಜಯಲಕ್ಷ್ಮಿಯನ್ನು ತಂದುಕೊಂಡು ಕಳೆದ ಭಾನುವಾರ ಕೃಷ್ಣರಾಜನಗರದಲ್ಲಿ ವಿವಾಹ ಮಹೋತ್ಸವವನ್ನು ನೆರವೇರಿಸಿದರು

ಅಕ್ರಮ ಅಕ್ಕಿ ದಾಸ್ತಾನಿದ್ದ ಗೋಡೌನಿಗೆ ಮೊಹರು

ಮದುರೆಯ ಫೇರ್‌ಪ್ರೈಸ್ ಡಿಪೋಗಳಿಂದ ಅಕ್ರಮವಾಗಿ ಅಕ್ಕಿಯನ್ನು ಕೊಂಡು ದಾಸ್ತಾನು ಮಾಡಲಾಗಿದ್ದ ಒಂದು ಗೋಡೌನನ್ನು ಪೊಲೀಸರು ಶೋಧಿಸಿ ೩೩ ಮೂಟೆ ಅಕ್ಕಿ ಮತ್ತು ೭೩ ಮೂಟೆ ಭತ್ತವನ್ನು ಪತ್ತೆ ಹಚ್ಚಿ ಗೋಡೌನಿಗೆ ಮೊಹರು ಮಾಡಿ, ಮಾಲೀಕರ ಮೇಲೆ ಮೊಕದ್ದಮೆ ಹೂಡಿರುವರು

ವ್ಯಭಿಚಾರಕ್ಕಾಗಿ ತಾಯಿ ಮತ್ತು ಪತ್ನಿಯ ಕೊಲೆ

ಸೇಲಂ ಜಿಲ್ಲೆಯ ಅತ್ತೂರು ತಾಲ್ಲೂಕಿನ ಕಿಡವೂರು ಎಂಬಲ್ಲಿ ಕುತ್ತಾಯಿ ಎಂಬಾಕೆಯು ತನ್ನ ಸೊಸೆಯನ್ನು ವ್ಯಭಿಚಾರಕ್ಕೆ ಪ್ರೇರೇಪಿಸಿ ಒಂದು ದಿನ ರಾತ್ರಿ ಅವಳನ್ನು ಇನ್ನೊಬ್ಬ ಜಾರನೊಡನೆ ಸೇರಿಸಿ ತಾನು ಹೊರಗೆ ಕಾಯುತ್ತ ಕೊಂಡಿದ್ದುದನ್ನು ಕಂಡು, ಕುತ್ತಾಯಿಯ ಮಗನು ತಾಯಿ ಮತ್ತು ಹೆಂಡತಿಯರು ಬೈಲು ಪ್ರದೇಶದಲ್ಲಿದ್ದಾಗ ಕುಡುಗೋಲಿನಿಂದ ಹೊಡೆದು ಇಬ್ಬರನ್ನೂ ಕೊಲೆ ಮಾಡಿದನೆಂದೂ ಪೊಲೀಸರು ಅವನನ್ನು ಬಂಧಿಸಿರುವರೆಂದೂ ವರದಿಯಾಗಿದೆ. ಇದಕ್ಕೆ ಮೊದಲು ತಾಯಿ ಮತ್ತು ಹೆಂಡತಿಯನ್ನು ಅವನು ಇಂತಹ ಅಕ್ರಮ ನಡವಳಿಕೆ ಬಗ್ಗೆ ಹಲವು ಬಾರಿ ಎಚ್ಚರಿಸಿದ್ದನೆಂದೂ ಹೇಳಲಾಗಿದೆ

ಎಸ್. ಎಸ್. ಎಲ್ ಸಿ. ಫಲಿತಾಂಶ ೨೯ನೇ ತಾರೀಖು

ಕಳೆದ ಅಕ್ಟೋಬರ್‌ನಲ್ಲಿ ನಡೆದ ಎಸ್. ಎಸ್ ಎಲ್ ಸಿ. ಸಪ್ಲಿಮೆಂಟರಿ ಪರೀಕ್ಷೆಯ ಫಲಿತಾಂಶಗಳು ೨೯ನೇ ತಾರೀಖು ಹೊರಬೀಳುವುವು

ಮುಖ್ಯ ಮಂತ್ರಿಗಳ ಪ್ರಚಾರ ಭಾಷಣ

ಸಂಸ್ಥಾನದಲ್ಲಿ ಸಾಂಸ್ಕೃತಿಕ ಅಭಿವೃದ್ಧಿ ಯೋಜನೆಯ ಪ್ರಾರಂಭೋತ್ಸವದ ಸಂಬಂಧವಾಗಿ ನಾಳೆ ರಾತ್ರಿ ೮|| ಗಂಟೆಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಆಲ್ ಇಂಡಿಯಾ ರೇಡಿಯೋವಿನಲ್ಲಿ ಭಾಷಣ ಮಾಡುವರು

ಹಿಂದೀ ಪರೀಕ್ಷೆಗಳಿಗೆ ಅರ್ಜಿ ಪತ್ರ

೧೯೫೩ ನೇ ಫೆಬ್ರವರಿ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ರಾಷ್ಟ್ರಭಾಷಾ ಪ್ರವೀಣ, ರಾಷ್ಟ್ರಭಾಷಾ ವಿಶಾರದ ಮತ್ತು ಪ್ರವೇಶಿಕಾ ಪರೀಕ್ಷೆಗಳಿಗೆ ಅರ್ಜಿ ಪತ್ರಗಳನ್ನು ಕಳುಹಿಸಲು ತಾ|| ೩-೧೨-೫೨ ನೇ ಬುಧವಾರ ಕೊನೆಯ ದಿನವಾಗಿರುತ್ತೆ. ಅರ್ಜಿ ಪತ್ರಗಳನ್ನು ಸಭಾ ಕಾರ್ಯಾಲಯದಲ್ಲಿ ಪಡೆಯಬಹುದು. ವಿಳಂಬ ಶುಲ್ಕದೊಡನೆ ಕಳುಹಿಸಲು ತಾರೀಖು ೧೦-೧೨-೫೨ ನೇ ಬುಧವಾರ ಕೊನೆಯ ದಿನವಾಗಿರುತ್ತೆ—ಎಂದು ರಾಜಧಾನಿಯ ಹಿಂದೀ ಪ್ರಚಾರ ಸಭೆಯ ವ್ಯವಸ್ಥಾಪಕರು ಸೂಚಿಸಿರುವರು

‡ ದಾವಣಗೆರೆಯ ಹೈಸ್ಕೂಲಿನ ಹೆಡ್ ಮಾಸ್ಟರ್ ಶ್ರೀ ಜಿ ಆರ್ ರಂಗಸ್ವಾಮಿಯವರು ಶಾಲೆಯ ವಿದ್ಯಾರ್ಥಿಯ ಹೆಸರಿನಲ್ಲಿ ಅವಾನರ ಸಂಬಳವನ್ನು ಡ್ರಾ ಮಾಡಿದುದಕ್ಕಾಗಿ ಅವರಿಗೆ ಎಚ್ಚರಿಕೆಯನ್ನು ಕೊಡಲಾಯಿತು

ಭಾರತದ ಸಂಧಾನ ಸೂತ್ರಕ್ಕೆ ಅಮೇರಿಕಾ ಒಪ್ಪಿಗೆ

ಕೋರಿಯಾದ ಬಿಕ್ಕಟ್ಟಿನ ಪರಿಹಾರಕ್ಕಾಗಿ ಭಾರತದ ಸಲಹೆಗಳ ಸೂತ್ರವನ್ನು ಅಮೇರಿಕನ್ನರು ಒಪ್ಪುರುವರೆಂದೂ, ಸದರಿ ಸೂತ್ರವನ್ನು ೨೧ ರಾಷ್ಟ್ರಗಳ ಸಮಿತಿಯು ಪರಿಶೀಲಿಸಬೇಕೆಂದು ಅವರು ಮೊದಲು ಮಾಡಿದ್ದ ಸಲಹೆಯನ್ನು ವಾಪಸು ತೆಗೆದುಕೊಳ್ಳಲಿರುವರೆಂದೂ ಹೇಳಲಾಗಿದೆ ಕೊರಿಯಾದಲ್ಲಿ ಕದನವು ನಿಲ್ಲಬೇಕೆಂದು ರಷ್ಯಾ ಮಾಡಿದ ಸಲಹೆಯನ್ನು ಅಮೇರಿಕವು ನಿರಾಕರಿಸಿರುತ್ತದೆ

ಶ್ರೇಷ್ಠ ನ್ಯಾಯಾಧೀಶರಿಗೆ ನ್ಯಾಯಾಧೀಶರ ನೋಟೀಸು

ಕಲ್ಕತ್ತಾ ಹೈ ಕೋರ್ಟಿನ ರಿಜಿಸ್ಟ್ರಾರರನ್ನು ಶ್ರೇಷ್ಠ ನ್ಯಾಯಾಧೀಶರು ಕೆಲಸದಿಂದ ತೆಗೆದುಹಾಕಿದ ಬಗ್ಗೆ ಸದರಿ ಅಧಿಕಾರಿ ರಾಜ್ಯಾಂಗದ ೨೨೬ ನೇ ನಿಬಂಧನೆ ಪ್ರಕಾರ ಅರ್ಜಿ ಸಲ್ಲಿಸಿ, ತಮ್ಮನ್ನು ಕೆಲಸದಿಂದ ವಜಾ ಮಾಡಿದುದು ಸರಿಯಲ್ಲವೆಂದು ಅಪ್ಪಣೆಯಾಗಬೇಕೆಂದು ಕೋರಲಾಗಿ, ಹೈ ಕೋರ್ಟಿನ ನ್ಯಾಯಾಧೀಶ ಬೋಸರು ತಮ್ಮ ಮೇಲ್ಪಟ್ಟ ಅಧಿಕಾರಿಗಳಾದ ಶ್ರೇಷ್ಠ ನ್ಯಾಯಾಧೀಶರಿಗೆ ನೋಟೀಸು ಕೊಟ್ಟು, ಕೆಲಸದಿಂದ ತೆಗೆದ ಬಗ್ಗೆ ಆಜ್ಞೆಯನ್ನು ಏಕೆ ರದ್ದು ಮಾಡಬಾರದೆಂದು ಸಮಜಾಯಿಷಿ ಕೇಳಿರುತ್ತಾರೆ ಭಾರತದ ನ್ಯಾಯಾಸ್ಥಾನಗಳ ಇತಿಹಾಸದಲ್ಲೇ ಇಂತಹ ಘಟನೆಯು ಇದೇ ಮೊದಲೆಂದು ಹೇಳಲಾಗಿದೆ

ಹರಾಜು ನೋಟೀಸು

ಅರಮನೆ ಮೋತೀಖಾನೆ ಹಿಂಭಾಗದಲ್ಲಿ ಹೊಸದಾಗಿ ಕಟ್ಟಿರುವ ಷಾಪ್ ಗೋಡೌನುಗಳನ್ನ ಬಾಡಿಗೆಗೆ ಕೊಡಲು ಟೆಂಡರುಗಳನ್ನು ಸ್ವೀಕರಿಸಲು ಇದೇ ಮಾಹೆ 28ನೇ ತಾರೀಖು ಗೊತ್ತು ಪಡಿಸಲಾಗಿತ್ತಷ್ಟೆ

ಆದರೆ ಮಹಾಜನಗಳ ಕೋರಿಕೆ ಮೇರೆ ಸದರಿ ಗೋಡೌನುಗಳ ಬಾಡಿಗೆಯನ್ನು ಹರಾಜು ಮೂಲಕ ವಿಲೇವಾರಿ ಮಾಡಲು ಸದರಿ ಬಿಲ್ಡಿಂಗ್ ಬಳಿ ಇದೇ ಮಾಹೆ 30ನೇ ತಾರೀಖು ಭಾನುವಾರ ಪ್ರಾತಃಕಾಲ 9 ಘಂಟೆಯಿಂದ ಹರಾಜು ನಡೆಸಲು ಏರ್ಪಡಿಸಿರುತ್ತೆ. ಹೆಚ್ಚಿನ ವಿವರಗಳನ್ನು ಅರಮನೆ ಇಂಜನಿಯರವರ ಆಫೀಸಿನಲ್ಲಿ ತಿಳಿಯಬಹುದ

ಎಚ್. ಕೆ ಪಂಡಿತಾರಾಧ್ಯ,
ಪ್ಯಾಲೇಸ್ ಇಂಜನಿಯರ್

ಲಂಚ ನಿರೋಧ ಶಾಖೆಯವರ ಕಾರ್ಯಕ್ರಮ

ಬೆಂಗಳೂರು, ೨೬

ಪಬ್ಲಿಕ್ ಹೆಲ್ತ್ ಇಲಾಖೆಯ ಸೂಪರಿಂಟೆಂಡೆಂಟ್ ಶ್ರೀ ಎಂ ಆರ್ ರಾಜಗೋಪಾಲ್, ಬೆಂಗಳೂರು ಡಿವಿಜನ್ನಿನ ಪರೀಕ್ಷಕ ಶ್ರೀ ಆರ್ ಶ್ರೀನಿವಾಸರಾವ್, ರೇಷ್ಮೆ ಆಪರೇಟಿವ್ ಶ್ರೀ ಜಿ ವಿಠ್ಠಲಮೂರ್ತಿ, ಅಕೌಂಟೆಂಟ್ ಶ್ರೀ ಸಿ ಕೆ ವೆಂಕಟಯ್ಯ ಇವರುಗಳನ್ನು ನೌಕರಿಯಿಂದ ತೆಗೆದು ಹಾಕಲಾಗಿರುವುದೆಂದು ಸಂಸ್ಥಾನದ ಲಂಚ ನಿರೋಧ ಶಾಖೆಯವರು ತಿಳಿಸಿರುತ್ತಾರೆ ಅಮಲ್ದಾರ್ ಶ್ರೀ ನರಸಿಂಹಲುರವರ ಬಡ್ತಿಯನ್ನು ೧ ವರ್ಷ ಕಾಲವೂ, ಅಸಿಸ್ಟೆಂಟ್ ಇಂಜನಿಯರ್ ಶ್ರೀ ಏ ನಾಗೇಶರಾಯರ ಬಡ್ತಿಯನ್ನು ೨ ವರ್ಷ ಕಾಲವೂ ನಿಲ್ಲಿಸಲಾಗಿದೆ

ಸೆಂಟ್ರಲ್ ಫ್ಯಾಬ್ರಿಕ್ ಕಾಂಟ್ರಾಕ್ಟರ್ ಲಾರಿ [illegible] ಕಿಂಗ್ ಡಾಕ್ಟರ್ ಬೆಟ್ಟ... [illegible]

ಸರ್ಕಾರಿ [illegible]

SRI GAYATHRI

TALKIES

Daily 2 Shows

From 26-11-52 For 2 Days

Paramount's

DENVER & RIO - GRANDE

[In Technicolor]

Starring Edmund O'brien

— NEXT CHANGE

FLAMING FEATHER

— MORNING SHOWS

On 29th and 30th

SPANISH MAIN

(In Technicolor)

Edited, Printed and Published by A. R. Nagarajan at Sadhvi Press, D Subbiah Road, Mysore

ತೆಲುಗು, ತಮಿಳಿನಲ್ಲಿ 'ದಿ ವರ್ಲ್ಡ್' ಚಿತ್ರ

ಮದರಾಸಿನ ಸೊಸೈಟಿ ಪಿಕ್ಚರ್ಸ್ ಸಂಸ್ಥೆಯವರು "ದಿ ವರ್ಲ್ಡ್" ಎಂಬ ಚಿತ್ರವನ್ನು ಇಂಗ್ಲಿಷಿನಲ್ಲಿ ತಯಾರಿಸಿ, ಅದೇ ಚಿತ್ರವನ್ನು ತೆಲುಗಿನಲ್ಲಿ "ಪ್ರಪಂಚ" ಎಂದೂ ಮತ್ತು ತಮಿಳಿನಲ್ಲಿ "ಉಲಗಂ" ಎಂದೂ ತೆಗೆದಿರುವರು ತೆಲುಗು ಮತ್ತು ತಮಿಳು ಚಿತ್ರಗಳು ಸಧ್ಯದಲ್ಲೇ ದಕ್ಷಿಣ ಭಾರತದ ಪ್ರಮುಖ ಕೇಂದ್ರಗಳಲ್ಲಿ ಪ್ರದರ್ಶನಕ್ಕೆ ಬಂದು, ಲಕ್ಷಾಂತರ ಜನರ ಮನ ಸೆಳೆಯುವುದೆಂದು ಖಚಿತವಾಗಿ ತಿಳಿದು ಬಂದಿದೆ

ಕಡಲೇಪುರಿ ಭಟ್ಟಿ ಕಾರ್ಮಿಕರ ಸಂಘ

ರಾಜಧಾನಿಯ ಕಡಲೇಪುರಿ ಭಟ್ಟಿ ಕೆಲಸಗಾರರ ಸಭೆಯು ಕಳೆದ ೨೩ನೇ ತಾ|| ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ಕೆಲಸಗಾರರ ಸಂಘವೊಂದನ್ನು ಸ್ಥಾಪಿಸಲು ನಿರ್ಧರವಾಯಿತು ಸಂಘಕ್ಕೆ ಶ್ರೀ ಕೆ ಎಸ್ ಸೂರ್ಯನಾರಾಯಣರಾಯರು ಅಧ್ಯಕ್ಷರಾಗಿಯೂ ಶ್ರೀ ಮೊಯಿನ್ ಸಾಹೇಬರು ಉಪಾಧ್ಯಕ್ಷರ, ಶ್ರೀ ಎನ್. ಗೋವಿಂದರಾಜ್‌ರವರು ಕಾರ್ಯದರ್ಶಿ, ಶ್ರೀ ಡಿ ರಾಮಯ್ಯ ಸಹಕಾರ್ಯದರ್ಶಿ ಶ್ರೀ ಎಚ್ ಕೆಂಪಣ್ಣ ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು ೧೦ ಜನ ಸದಸ್ಯರನ್ನು ಕಾರ್ಯಕಾರಿ ಸಮಿತಿಗೆ ತೆಗೆದುಕೊಳ್ಳಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೦ ವೆಟ್ ಆರ್ ನಾಗರಾಜ ರಾವ್ ಹಿಂದೂಸ್ಥಾನಿ ಸಂಗೀತ ೧೪೦ ವೀಣೆ [illegible] ಆರ್ ಶಾಮಣ್ಣನವರ ವೇಣುಗಾನ. ಸಂಜೆ ೫೪೦ ಮತ್ತು ೬೩೦ ರಾಜಮ್ಮ ಎಸ್ ಆರ್ ಗೌಡ ಸಂಗೀತ ೬ ೧೦ ಕನ್ನಡ ಗೀತೆಗಳು ೭ ರಿಂದ ಹಿಂದೂಸ್ಥಾನಿ ಸಂಗೀತ ೨ [illegible] ವಿ ಸಾಗರಮುತ್ತು ವಲಿನ ಗಾ [illegible] ೯೪೦ ಬಿ ಆರ್ ಶಿವರಾಮಯ್ಯರ ವೇಣುಗಾನ ೯ ೧೫ ೬ ವೆಟ್ ಆನ್ಸ ರಿತಾನೂರ ೧೦ ಇಂದ್ರ ಧನುಷ್ ಹಿಂದಿ ಕಾರ್ಯಕ್ರಮ

SHARADAVILAS COLLEGE, MYSORE

Tutorial classes for the inter examination of March 53 in languages & P C M have been started Particulars may be obtained from the office during working hours

Honorary Secretary

ಬೆಳೆ ತೆಗೆಯುವ ಬಗ್ಗೆ ಜಮೀನುದಾರರ ನಿರ್ಧಾರ ಅವಶ್ಯಕ

ಜಮೀನಿನಲ್ಲಿ ಯಾವ ಬೆಳೆಯನ್ನು ತೆಗೆಯಬೇಕೆಂಬ ಬಗ್ಗೆ ಜಮೀನುದಾರರೇ ನಿರ್ಧರಿಸಬೇಕಾದುದು ಅಗತ್ಯವೆಂದು ಲಂಚಾಪೂರಿತ ಕೃಷಿಕರ ರಕ್ಷಣಾ ಮತ್ತು ದಿಯ ಬಗ್ಗೆ ಮುಖ್ಯವು ಶಾಸನ ಸಭೆಯ ಜಂಟಿ ಆಯ್ಕೆ ಸಮಿತಿಯು ಶಿಫಾರಸು ಮಾಡಿರುತ್ತದೆ ಗೊಬ್ಬರವನ್ನು ಹಾಕುವುದಕ್ಕೆ ತಗಲುವ ವೆಚ್ಚವನ್ನ ಕೃಷಿ ಮತ್ತು ಜಮೀನುದಾರರಿಬ್ಬರೂ ವಹಿಸಬೇಕೆಂದೂ ಸಮಿತಿಯು ಸೂಚಿಸಿದೆ. ಅಲ್ಪಾವಧಿ ಬೆಳೆಯನ್ನು ಕೃಷಿಕನು ತೆಗೆದರೆ, ಅದರಲ್ಲಿ ಐದನೇ ಒಂದು ಭಾಗವನ್ನು ಜಮೀನುದಾರರಿಗೆ ಕೊಡಬೇಕೆಂದೂ ಶಿಫಾರಸು ಮಾಡಲಾಗಿದೆ

ಮೈಸೂರು ಪೇಟೆ ಧಾರಣೆ

	ಪಲ್ಲ ಗಳ್ಗೆ	ರೂ. ಇಂದ	ರೂ.
ನೆಲಗಡಲೆ		೧೧ ೧೪ ೦	೩೧ ೦-೦
ಎಳ್ಳು		೬೨ ೧೪-೦	
ಹರಳು ಬೀಜ		೪೩-೦-೦	೪೫ ೨
ಹುರುಳಿ		೫೩ ೮ ೦	೫೪ ೮
ಹೆಸರು		೫೦ ೦ ೦	೫೪ ೪
ಉದ್ದು		೬೬ ೬ ೦	೬೦-೦-೦
ಹಲಸಂದೆ		೪೩ ೨ ೦	೬೬-೪-೦
ಹುಚ್ಚೆಳ್ಳು		೫೯ ೧೨-೦	೬೦ ೮
ಅವರೆ		೫೮-೦-೦	೬೫ ೦
ಹೊಂಗೇಬೀಜ		೧೫ ೧೨-೦	
ಹುಣಿಸೇಕಾಯಿ			
	ಮಣ ಗಳ್ಗೆ	೭ ೬-೦	೨೫ ೧೨
ಹುಣಸೇಹಣ್ಣು		೬ ೫ ೦	
ಬೆಲ್ಲ		೩ ೪ ೦	
ಹೊಗೆಸೊಪ್ಪು		೫-೧-೦	
ತೆಂಗಿನಕಾಯಿ ೧,೦೦೦		೨೨೬ ೦-೦	೨೫೪

CITY TUTORIAL COLLEGE

V. V. Market, Mysore

COACHING CLASSES FOR

★ B. Sc., ★

(English- P. C. M. & P. M. M.)

★ INTERMEDIATE ★

(English-Kannada P.C.M & C.B.Z)

PRIVATE TUITIONS ARRANGED

Classes begin on 24th

JOIN IMMEDIATELY

C. T. C., MYSORE

HOUSE FOR SALE

A big house with out house in Chamaraja Agrahar, Mysore. Enquire.—

JAYA & COMPANY,

House Lands & Finance Agents

Sayyaji Road

Phone 520

ಪ್ರಭುದೇವಾ

ಟಾ ಕೀ ಸ್

28-11-52 ನೇ

ಶುಕ್ರವಾರದಿಂದ

ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ

ಪಾತ್ರ - ಲಕ್ಷ್ಮಿರಾಜ್ಯಂ, ಎಸ್ ವಿ ರಾಮರಾವ್

ರಿಲಂಗಿ, ವೆಂಕಟರಾಮಯ್ಯ

ದಾಸಿ

ಬೆಂಗಳೂರು ನಂ 794 ||ಸಂಪದೇ ಸಾಧನಂ|| ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೭-೧೧-೧೯೫೨ [ಸಂಚಿಕೆ ೯೯

ಬ್ರಿಟನ್ ವಿರುದ್ಧ ಕೆನ್ಯದಲ್ಲಿ ಆಫ್ರಿಕನ್ನರ ದಂಗೆಯೋ ?

ಸಂಸ್ಕೃತಿಯ ಪ್ರಸಾರವು ದೇಶೋನ್ನತಿಗೆ ಅತಿ ಮುಖ್ಯ

ಪ್ರಜಾವರ್ಗದವರಿಗೆ ಶ್ರೀಮನ್ ಮಹಾರಾಜರವರ ಸಂದೇಶ

ಮೈಸೂರು ೨೭

...ರು ಸರ್ಕಾರದವರ ಸಂಸ್ಕೃತಿ ...ಯೋಜನೆಯ ಪ್ರಾರಂಭೋತ್ಸವ ...ಥವಾಗಿ ಶ್ರೀಮನ್ ಮಹಾರಾಜ ...ರು ಈ ಸಂದೇಶವನ್ನು ಕಳುಹಿಸಿರು...

...ಜಯಂತಿಯ ಶುಭ ದಿನ ಮೈಸೂ... ...ನದಲ್ಲಿ ಸಂಸ್ಕೃತಿ ಪ್ರಸಾರ ಯೋ... ...ಪ್ರಾರಂಭೋತ್ಸವವು ನಡೆಯುತ್ತ... ...ಸರ್ಕಾರದವರು ಏರ್ಪಡಿಸಿರುವು... ...ಮನಸ್ಸಿಗೆ ಬಹಳ ಸಂತೋಷವ... ...ಮಾಡಿ... ಈ ಯೋಜನೆಯ... ...ಲ್ಲಿ ಅವಿರತವಾದ ಉತ್ಸಾಹವ... ...ರು ನಡಿಸ ಬಹುದೆಂದು ನಂಬಿರು... ...ರು ಪ್ರಬಲವಾಗಿ ಆರೋಗ್ಯವೂ ಅದ... ...ಸಂಸ್ಕೃತಿಯು ವೈಶಿಷ್ಟ್ಯದ ಕಡೆಗೆ ...ಮನಸ್ಸು ತೀವ್ರವಾಗಿ ಸೆಳೆಯಬ... ...ದ ಉದ್ದೇಶವುಳ್ಳದ್ದಾಗಿದೆ.

...ಯ ಪ್ರಸಾರವು ದೇಶೋನ್ನತಿ ...ಕಾರ್ಯಗಳಲ್ಲಿ ಅತಿ ...ಗಳ ಗಣನೆಗೆ ಸೇರಿದೆ ... ...ದ ಸಂಪತ್ತಿನ ಸ್ಥಾಪನೆಯು ಒಂದು ಸೂತ್ರ ... ಜೀವನವು ಸುಖಮಯ... ...ಸಂಸ್ಕೃತಿಯು ಹುಟ್ಟಿದ್ದು ... ...ದ ಘನತೆ ಗೌರವಗಳು ...ಪೆ ಭಾರತೀಯ ಸಂಸ್ಕೃತಿ ...ಸ್ವರೂಪ ಸಂಸ್ಕೃತಿ ರಾಮಾಯಣ ...ರತ, ಭಾಗವತ ಮುಂತಾದ ...ಗಳೂ ಇತರ ಶ್ರೇಷ್ಠ ... ...ಗಳೂ ಶಿವಶರಣರ ಮತ್ತು ಹರಿ ...ರ ಭಾರತೀಯ ಸಂಸ್ಕೃತಿ ...ತಲಾಂತರದ ಬಹು ಕಾಲದಿಂ ...ತತ್ವಗಳ ಗಮನಕ್ಕೂ ತರುವುದೇ ಉ... ಫಲವು ... ನಮ್ಮ ಸಂಸ್ಕೃತಿ ...ಗೆಯು ಕುಂಠಿತವಾಗಲು ಅವ... ...ಮತ್ತು ಅವುಗಳನ್ನು ಜನರಲ್ಲಿ ...ಮಾತೃಭಾಷೆ ಸಂಸ್ಕೃತಿ ಪ್ರಸಾ... ...ತ್ತವೆ ಅವುಗಳಲ್ಲಿ ಚಿತ್ರಿತವಾಗಿ ...ಕ ಜೀವನವೂ ಉದಾತ್ತ ಧ್ಯೇ... ...ಜನರ ಮನಸ್ಸಿನ ಮೇಲೆ ಸತ್ಪರಿ... ...ಟುಮಾಡುತ್ತವೆ. ಆದರ ಫಲ... ...ಒಟ್ಟು ಜನಜೀವನವೇ ಮೇ... ...ದೆಯು, ದೇಶೋನ್ನತಿ ಸಾಧಕ ...ತ್ತು ಆತ್ಮಕಲ್ಯಾಣ ಸಾಧಕಗಳಾ... ...ಗಳು ವೃದ್ಧಿಯಾಗುತ್ತವೆ.

...ನಮ್ಮ ಸರ್ಕಾರದವರು ಈ ...ಪ್ರಸಾರ ಯೋಜನೆಯನ್ನೇರ್ಪಡಿ... ...ವಾಗಿಯೂ ಅಭಿನಂದ... ...ಸತ್ಪ್ರಯತ್ನ ಗೀತಾ ... ...ದಿನ ಪ್ರಾರಂಭೋತ್ಸವ ...ಈ ಯೋಜನೆಗೆ ಸಾರ್ವಜ... ...ಯ ಸಹಕಾರಗಳು ಲಭಿಸಿ ಅದ... ...ಫಲ ನಾನಾ ಕಾರ್ಯಕಲಾಪಗ... ...ಯಶಸ್ವಿಯಾಗಿ ನೆರವೇರಲೆಂ... ...ಪೂರ್ವಕವಾಗಿ ಹಾರೈಸು...

ವಹಿವಾಟಿ ಇಲ್ಲದೆ ಬಸ್ಸು ...ಡಿಸಿದುದಕ್ಕಾಗಿ ದಂಡ

...ಇಲ್ಲದೆ ಬಸ್ಸುಗಳನ್ನು ... ...ರಾಜಧಾನಿಯ ಟ್ರಾಫಿಕ್ ...ಮಾಡಿದ್ದ ಮೊಕದ್ದಮೆಯ ...ಸ್ಟ್ರೇಟರ ಮೋಟಾರು ... ಡ್ರೈವರ್ ಶ್ರೀ ಜಾಫರ್ ಖಾನ್ ... ಬಿ ಎಸ್ ... ...ಲಿತ ಮಾಡಿಕರು ಸರ್ವಿಸುಗಳ ...ಗಳಾದ ಶ್ರೀಗಳು ಬೇಲೂರ ...ಬಸಪ್ಪ ಇವರಿಗೆ ತಲಾ ... ದಂಡವನ್ನು ವಿಧಿಸಲಾಗಿದೆ.

ಖಜಾನೆ ಬಳಿ ಹಣದ ಅಪಹಾರದ ಪ್ರಯತ್ನ

ಮೈಸೂರು ೨೭

ರಾಜಧಾನಿಯ ಅಳತೆ ಮತ್ತು ತೂಕದ ಕಛೇರಿಯ ಜವಾನನೊಬ್ಬನು ನೆನ್ನೆ ಮಧ್ಯಾಹ್ನ ಇಲ್ಲಿನ ಜಿಲ್ಲಾ ಖಜಾನೆಗೆ ಕಟ್ಟಲು ೧೩೫೧ ರೂ. ಅನ್ನು ತಂದು ಕೌಂಟರ್ ಬಳಿ ನಿಂತಿದ್ದಾಗ, ಮಧುರೆಯ ವೇಲು ಮತ್ತು ಸುಬ್ರಹ್ಮಣ್ಯಂ ಎಂಬ ಇಬ್ಬರು ಅವನ ಹತ್ತಿರ ಬಂದರಂತೆ, ವೇಲುವು ೭ ಆಣೆಗಳನ್ನು ಆಳಿನ ಪಕ್ಕದಲ್ಲಿ ಕೆಳಕ್ಕೆ ಹಾಕಿ ಆಳಿನ ಗಮನವನ್ನು ಆ ಕಡೆ ಸೆಳೆದ. ನೋಟುಗಳನ್ನು ಅಪಹರಿಸಿ, ಸುಬ್ರಹ್ಮಣ್ಯಂ ಕೈಗೆ ಕೊಡಲು ಅವನು ಕಛೇರಿ ಹತ್ತಿರ ಬಿಡಲಾಗಿದ್ದ ಯಾವುದೋ ಸೈಕಲ್ಲಿನ ಮೇಲೆ ಹೊರಡಲು ಉದ್ಯುಕ್ತನಾದನೆಂದೂ, ಅಷ್ಟರೊಳಗೆ ಅವರಿಬ್ಬರನ್ನೂ ಹಿಡಿಯಲಾಯಿತೆಂದೂ ವರದಿಯಾಗಿದೆ. ಸದರಿಯವರನ್ನು ಲಕ್ಷ್ಮೀಪುರಂ ಪೋಲೀಸು ಸ್ಟೇಷನ್ನಿನ ಲಾಕಪ್ಪಿನಲ್ಲಿಡಲಾಗಿದೆ.

ಕೊಲೆ ಆಪಾದನೆಯಿಂದ ಬಾಲಕರ ಖುಲಾಸೆ

ಕೃಷ್ಣರಾಜನಗರದ ತಾಲ್ಲೂಕು ತಿಪ್ಪೂರಿನ ೪ ವರ್ಷದ ಬಾಲಕ ನಂಜುಂಡಸ್ವಾಮಿಯ ಬೆಳ್ಳಿ ಉಡಿದಾರವನ್ನು ಅಪಹರಿಸಲು ಅವನನ್ನು ಕಳೆದ ಫೆಬ್ರವರಿಯಲ್ಲಿ ಕೊಲೆಮಾಡಿದರೆಂದು ವಿಚಾರಣೆಗೆ ಗುರಿಯಾಗಿದ್ದ ಅದೇ ಊರಿನ ಪುಟ್ಟ ಮತ್ತು ರಾಮ ಎಂಬ ೧೦ ಮತ್ತು ೧೧ ವರ್ಷದ ಇಬ್ಬರು ಬಾಲಕರನ್ನು ನೆನ್ನೆ ಇಲ್ಲಿನ ಸೆಷನ್ಸ್ ನ್ಯಾಯಾಧೀಶರು ಖುಲಾಸೆ ಮಾಡಿದರು. ಆ ಪಾದಿತರ ಪರ ಶ್ರೀ ಟಿ ತಿಮ್ಮೇಗೌಡರೂ, ಶ್ರೀ ಎಸ್ ಗೋಪಾಲರಾಯರೂ ವಕಾಲತ್ತು ವಹಿಸಿದ್ದರು.

ವಿವಾಹ ಮಹೋತ್ಸವ

ಮೈಸೂರಿನ ನಿವೃತ್ತ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಶ್ರೀ ಎಂ ಎಸ್ ಕೃಷ್ಣಪ್ಪನವರು ತಮ್ಮ ಪುತ್ರಿ ಸೌ॥ ಸುಬ್ಬಲಕ್ಷ್ಮಮ್ಮನವರನ್ನು ಶ್ರೀ ಸರಗೂರು ಸುಬ್ಬರಾಯರ ಪುತ್ರ ಶ್ರೀ ಎಚ್ ಎಸ್ ಸುಬ್ಬರಾಮಯ್ಯನವರಿಗೆ ಕೊಟ್ಟು ನೆನ್ನೆ ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ಕಾಶ್ಮೀರ ಪ್ರಜಾ ಪರಿಷತ್ತಿನ ಅಧ್ಯಕ್ಷರ ಬಂಧನ

ಕಾಶ್ಮೀರದ ರಕ್ಷಣಾ ಶಾಸನವನ್ನು ಉಲ್ಲಂಘಿಸಿ ನೆನ್ನೆ ಮಧ್ಯಾಹ್ನ ಜಮ್ಮುವಿನಲ್ಲಿ ಸಭೆ ಮತ್ತು ಮೆರವಣಿಗೆಯನ್ನು ನಡೆಸಲು ಪ್ರಯತ್ನಿಸಿದ ಕಾಶ್ಮೀರ ಪ್ರಜಾ ಪರಿಷತ್ತಿನ ಅಧ್ಯಕ್ಷ ಪ್ರೇಮನಾಥ ಡೋಗ್ರಾ ಮತ್ತು ಅವರ ೧೪ ಮಂದಿ ಅನುಯಾಯಿಗಳನ್ನು ಬಂಧಿಸಲಾಯಿತೆಂದು ವರದಿಯಾಗಿದೆ. ಸಂಬಾ ಎಂಬ ಊರಿನಲ್ಲಿ ಪ್ರದರ್ಶನಕಾರರ ಗುಂಪೊಂದು ಸರ್ಕಾರಿ ಕಛೇರಿ ಮತ್ತು ಶಾಲೆಗಳಿಗೆ ನುಗ್ಗಲು ಪ್ರವೇಶಿಸಿತೆಂದೂ ಗೊತ್ತಾಗಿದೆ. ಗುಂಪಿನವರು ಅಲ್ಲಿ ಸಂಸ್ಥಾನದ ಧ್ವಜವನ್ನು ಸುಟ್ಟುಹಾಕಿದರೆಂದೂ ಹೇಳಲಾಗಿದೆ.

ಈಜಿಪ್ಟಿನಿಂದ ಸೂಯೆಜ್ ಕಾಲುವೆಯ ರಾಷ್ಟ್ರೀಕರಣ

ಸೂಯೆಜ್ ಕಡಲ್ಗಾಲುವೆಯನ್ನು ಅಂತರ್ರಾಷ್ಟ್ರೀಯ ಕಂಪೆನಿಗೆ ಕೊಟ್ಟಿರುವ ಬಗ್ಗೆ ೯೯ ವರ್ಷದ ಅವಧಿಯ ಒಪ್ಪಂದವು ೧೯೬೮ ನೇ ಇಸವಿಗೆ ಮುಕ್ತಾಯಗೊಳ್ಳುವುದೆಂದೂ, ಅನಂತರ ಅದನ್ನು ರಾಷ್ಟ್ರೀಕರಿಸುವ ಸಲುವಾಗಿ ಈಜಿಪ್ಟ್ ಸರ್ಕಾರದವರು ಒಂದು ಸಮಿತಿಯನ್ನು ರಚಿಸಿರುವರೆಂದೂ ಗೊತ್ತಾಗಿದೆ.

ಹನುಮಂತಯ್ಯನವರಿಗೆ ಕಪ್ಪು ಬಾವುಟದ ಪ್ರದರ್ಶನ ?

ಕಳೆದ ಸೆಪ್ಟೆಂಬರ್ ೨೪ ನೇ ತಾರೀಖು ರಾಜಧಾನಿಯ ಕ್ರಾಫರ್ಡ್ ಭವನದಲ್ಲಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ಆರಂಭೋತ್ಸವದ ಕಾಲದಲ್ಲಿ ನಡೆದ ಪ್ರದರ್ಶನದ ಸಂಬಂಧವಾಗಿ, ಹಲವು ವಿದ್ಯಾರ್ಥಿಗಳ ಮೇಲೆ ಹೂಡಿರುವ ಮೊಕದ್ದಮೆಯನ್ನು ಬರುವ ತಿಂಗಳು ೩ ನೇ ತಾರೀಖಿನೊಳಗೆ ವಾಪಸು ತೆಗೆದುಕೊಳ್ಳದಿದ್ದರೆ, ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಹಾರಾಜಾ ಕಾಲೇಜಿನಲ್ಲಿ ಅಂದು ಮಾಡುವ ಭಾಷಣದ ಸಮಯದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಸೂಚಿಸಲು ಕಪ್ಪು ಬಾವುಟಗಳನ್ನು ಪ್ರದರ್ಶಿಸಬೇಕೆಂದು ಈ ದಿನ ಕಾಲೇಜು ಮುಂಭಾಗದಲ್ಲಿ ನಡೆದ ವಿದ್ಯಾರ್ಥಿಗಳ ಬಹಿರಂಗ ಸಭೆಯಲ್ಲಿ ತೀರ್ಮಾನವಾಯಿತು.

ಕೆನ್ಯಾದಲ್ಲಿ ದಂಗೆಯಾಗುವು ದೆಂದು ಬ್ರಿಟನ್ ಮಂತ್ರಿ

ಆಫ್ರಿಕದ ಕೆನ್ಯಾ ದೇಶದಲ್ಲಿ ಮೌಮೌ ಜನರ ಚಟುವಟಿಕೆಯು ಶೀಘ್ರದಲ್ಲೇ ಬಹಿರಂಗ ದಂಗೆಯಾಗಿ ಪರಿಣಮಿಸಲಿದೆಯೆಂದು ಬ್ರಿಟನ್ನಿನ ವಸಾಹತುಗಳ ಮಂತ್ರಿ ಆಲಿವರ್ ಲಿಟಲ್‌ಟನರು ಕಾಮನ್ಸ್ ಸಭೆಯಲ್ಲಿ ಎಚ್ಚರಿಕೆಯನ್ನಿತ್ತಿರುವರು. ಮೌಮೌ ಚಳುವಳಿಯನ್ನು ಮಟ್ಟಹಾಕಲು ಉಗ್ರವಾದ ಶಿಕ್ಷೆ ವಿಧಿಸಲು ಕೆನ್ಯದ ಶಾಸನ ಸಭೆಯು ತೀರ್ಮಾನಿಸಿರುತ್ತದೆ.

ಭಾರತದ ಯೋಜನೆಗೆ ಚೀಣಾದ ತಿರಸ್ಕಾರ

ಕೊರಿಯಾ ಶಾಂತಿ ಸಂಧಾನದ ಬಿಕ್ಕಟ್ಟಿನ ಪರಿಹಾರದ ಬಗ್ಗೆ ಭಾರತವು ಮಾಡಿದ ಸಲಹೆಯನ್ನು ಚೀಣಾವು ತಿರಸ್ಕರಿಸಿರುವುದಾಗಿ ರಷ್ಯದ ವಿದೇಶಾಂಗ ಮಂತ್ರಿ ವಿಷಿನ್‌ಸ್ಕಿಯವರು ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ತಿಳಿಸಿರುತ್ತಾರೆ. ಭಾರತದ ಸಲಹೆಯನ್ನು ಮೊದಲು ಚರ್ಚೆಗೆ ತೆಗೆದುಕೊಳ್ಳುವ ಬಗ್ಗೆ ರಷ್ಯವು ಮಾಡಿದ ಆಕ್ಷೇಪಣೆಯನ್ನು ಸದರಿ ಸಮಿತಿಯು ತಳ್ಳಿಹಾಕಿದೆ.

ಅಸ್ಸಾಮಿನಲ್ಲಿ ೨೦ ಚಹಾ ತೋಟಗಳು ಬಂದ್

ಚಹಾ ಬೆಲೆಯು ಬಿದ್ದುಹೋಗಿರುವುದರಿಂದಲೂ, ಬ್ಯಾಂಕುಗಳ ಸಹಾಯವು ದೊರೆಯದಿರುವುದರಿಂದಲೂ ಅಸ್ಸಾಂ ಮತ್ತು ಬಂಗಾಳಗಳ ೨೦ ಚಹಾ ತೋಟಗಳು ಮುಚ್ಚಲ್ಪಟ್ಟಿವೆಯೆಂದು ವರದಿಯಾಗಿದೆ.

ಅಮೆರಿಕದ ಗ್ರಂಥಗಳ ಪ್ರದರ್ಶನ

ನಾನಾ ವಿಷಯಗಳ ಬಗ್ಗೆ ಅಮೆರಿಕದ ಪ್ರಸಿದ್ಧ ಗ್ರಂಥಕರ್ತರು ಬರೆದಿರುವ ಪ್ರಾಮುಖ್ಯವಾದ ಪುಸ್ತಕಗಳನ್ನು ರಾಜಧಾನಿಯ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ನಾಳೆಯಿಂದ ಹತ್ತು ದಿನಗಳ ಕಾಲ ಬೆಳಗ್ಗೆ ೮ ರಿಂದ ೧೧ ಮತ್ತು ಸಂಜೆ ೫ ರಿಂದ ೭ ಗಂಟೆವರೆಗೆ ಪ್ರದರ್ಶನಕ್ಕಾಗಿ ಇಡಲಾಗುವುದು.

ಇಂಟರ್ ತರಗತಿಗಳು ವಿದ್ಯಾ ಇಲಾಖೆಯ ವಶಕ್ಕೆ

ಇಂಟರ್‌ಮೀಡಿಯೇಟ್ ತರಗತಿಗಳನ್ನು ವಿಶ್ವವಿದ್ಯಾಲಯದ ಹತೋಟಿಯಿಂದ ತೆಗೆದು ವಿದ್ಯಾ ಇಲಾಖಾ ಡೈರೆಕ್ಟರವರ ಮೇಲ್ವಿಚಾರಣೆಗೆ ಒಪ್ಪಿಸುವ ವಿಷಯವು ವಿದ್ಯಾ ಸುಧಾರಣಾ ಸಮಿತಿಯ ತೀವ್ರ ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ.

ಮೈಸೂರಿಗೆ ೫೦ ಸಾವಿರ ಟನ್ ಹೈದರಾಬಾದು ಧಾನ್ಯ

ಬರುವ ವರ್ಷ ಹೈದರಾಬಾದು ಸಂಸ್ಥಾನದಿಂದ ಮೈಸೂರು ಸಂಸ್ಥಾನಕ್ಕೆ ೫೦ ಸಾವಿರ ಟನ್ ಮುಸುಕಿನ ಜೋಳ ಧಾನ್ಯವು ಬರಲಿದೆ.

ದೇಶಮುಖ ಗೋವಿಂದರಾಯರ ನಿಧನ

ದಿವಂಗತ ಲೋಕಾಚಾರ್ಯ ಪ್ರಹ್ಲಾದ ದೇಶಮುಖ ರಾಮರಾಯರ ಏಕಮಾತ್ರ ಪುತ್ರರಾದ ಶ್ರೀ ಗೋವಿಂದರಾಯರು ತಮ್ಮ ೫೭ ನೇ ವಯಸ್ಸಿನಲ್ಲಿ ಕಳೆದ ೨೩ ನೇ ತಾ॥ ರಾತ್ರಿ ಬೆಂಗಳೂರಿನಲ್ಲಿ ನಿಧನ ಹೊಂದಿದರೆಂದು ವರದಿಯಾಗಿದೆ.

ಮಾಸ್ಕೋ ಮೇಲೆ ಬಾಂಬು ಹಾಕಲು ಸಲಹೆಯೇ?

ಪೂರ್ವ ಪಶ್ಚಿಮ ರಾಷ್ಟ್ರಗಳ ಹೋರಾಟವು ಕೊರಿಯಾಕ್ಕೆ ಮಾತ್ರ ಅನ್ವಯವಾಗುವುದಿಲ್ಲವೆಂದೂ, ಮಾಸ್ಕೋವಿನ ಮೇಲೆ ಬಾಂಬನ್ನು ಹಾಕಿದರೆ ಎಲ್ಲವೂ ಸರಿಹೋಗುವುದೆಂದೂ ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀಯವರು ಹೇಳಿರುವರೆಂದು ವರದಿಯಾಗಿದೆ. ಕಮ್ಯೂನಿಸ್ಟರನ್ನು ಯಾಲೂ ನದಿಯಿಂದ ಆಚೆಗೆ ಅಟ್ಟಲು ೨೦ ಲಕ್ಷ ಕೊರಿಯನ್ನರಿಗೆ ಶಸ್ತ್ರಾಸ್ತ್ರ ಒದಗಿಸಲು ಅವರು ಅಮೆರಿಕದ ಐಸೆನ್‌ಹೋವರರಿಗೆ ಸೂಚಿಸಲಿರುವರೆಂದು ಹೇಳಲಾಗಿದೆ

ವಲ್ಲಭ ಸ್ವಾಮಿಯವರ ಉಪನ್ಯಾಸ

ಭಾರತ ಸರ್ವ ಸೇವಾ ಸಂಘದ ಕಾರ್ಯದರ್ಶಿಗಳಾದ ಶ್ರೀ ವಲ್ಲಭ ಸ್ವಾಮಿಯವರು ಕಳೆದ ಸೋಮವಾರ ಇಲ್ಲಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಸರ್ವೋದಯ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡಿದರು. ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞದ ವಿಷಯವನ್ನು ಅವರು ಪ್ರಸ್ತಾಪಿಸಿ, ಈಜಿಪ್ಟಿನಲ್ಲಿ ನಡೆದ ಭೂ ಸುಧಾರಣೆಯು ಮಿಲಿಟರಿ ಆಡಳಿತದಲ್ಲಿ ನಡೆಯಿತೆಂದು ಹೇಳಿದರು. ಜೀಣದ ಸುಧಾರಣೆಯನ್ನು ಅವರ ಒಪ್ಪಿದರೂ ಹಿಂಸಾತ್ಮಕ ರೀತಿಯಲ್ಲಿ ಭೂ ಸುಧಾರಣೆಯು ನಡೆಯಬಾರದೆಂದೂ, ಆರ್ಥಿಕ ಕ್ಷೇತ್ರದಲ್ಲೂ ಅಹಿಂಸೆಯ ಪ್ರತಿಷ್ಠಾಪನೆಯು ಆವಶ್ಯಕವೆಂದೂ, ಆಚಾರ್ಯ ವಿನೋಬಾರವರ ಭೂ ದಾನ ಯಜ್ಞದಿಂದ ಶಾಂತಿ ಸ್ಥಾಪನೆಯಾಗುವುದೆಂದೂ ಅವರು ಹೇಳಿದರು. ಶ್ರೀ ಬೆಳಗುಂಬ ನಾರಣಪ್ಪನವರು ಶ್ರೀ ವಲ್ಲಭ ಸ್ವಾಮಿಯವರ ಪರಿಚಯ ಮಾಡಿಕೊಟ್ಟರು. ಶ್ರೀ ಕೆ ಎಸ್ ನಾರಾಯಣ ಸ್ವಾಮಿಯವರು ವಂದನಾರ್ಪಣೆ ಮಾಡಿದರು

ನಗರದಲ್ಲಿ ಭಾರತದ ತತ್ವ ಶಾಸ್ತ್ರ ಸಮ್ಮೇಳನ

ಬರುವ ತಿಂಗಳು ೨೭, ೨೮ ಮತ್ತು ೨೯ ನೇ ತಾ|| ರಾಜಧಾನಿಯಲ್ಲಿ ಭಾರತ ತತ್ವ ಶಾಸ್ತ್ರ ಕಾಂಗ್ರೆಸ್ಸಿನ ೨೭ ನೇ ಅಧಿವೇಶನವು ನಡೆಯುವುದು. ರಾಷ್ಟ್ರದ ಉಪಾಧ್ಯಕ್ಷರಾದ ಸರ್ವೇಪಲ್ಲಿ ರಾಧಾಕೃಷ್ಣನ್‌ರವರು ಅದರಲ್ಲಿ ಭಾಗವಹಿಸುವರು. ನಗರದ ಪೌರಸಭೆಯವರು ಅವರ ಮತ್ತು ಅಧಿವೇಶನದ ಪ್ರತಿನಿಧಿಗಳ ಗೌರವಾರ್ಥವಾಗಿ ೨೯ ನೇ ತಾ|| ಸತ್ಕಾರ ಕೂಟವೊಂದನ್ನು ಏರ್ಪಡಿಸಲಿರುವರು

ಯೋಜನಾ ಇಲಾಖಾ ಕಾರ್ಯದರ್ಶಿ

ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರಾದ ಶ್ರೀ ಪಿ ವೆಂಕಟಕೃಷ್ಣರಾಯರನ್ನು ಸ್ಥಳೀಯ ಸಂಸ್ಥೆಗಳು ಮತ್ತು ಯೋಜನಾ ಇಲಾಖೆಗಳ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಅವರು ತಮ್ಮ ಕೆಲಸದ ಜೊತೆಗೆ ಹೊಸ ಇಲಾಖೆಗಳನ್ನೂ ನೋಡಿಕೊಳ್ಳುವರು

ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂರವರು ಮಾತ್ರ

ಗೌಹಾಟಿಯಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಪಂಡಿತ ನೆಹರೂರವರೇ ಪುನಃ ಆರಿಸಲ್ಪಡುವರೆಂದು ಹೇಳಲಾಗಿದೆ. ಅವರ ಹೆಸರನ್ನು ಪಾರ್ಲಿಮೆಂಟಿನ ಹಲವು ಪ್ರಮುಖ ಸದಸ್ಯರೂ, ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳೂ ಸೂಚಿಸಿರುತ್ತಾರೆ. ನೆಹರೂರವರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿರುವರೆಂದು ಹೇಳಲಾಗಿದೆ

ಶಾರದಾವಿಲಾಸ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಭೆ

ರಾಜಧಾನಿಯ ಶಾರದಾವಿಲಾಸ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಭೆಯು ಇದೇ ತಿಂಗಳು ೩೦ ನೇ ತಾರೀಕು ಜರುಗಿ ಶಾಲಾ ದಿನಾಚರಣೆಯನ್ನು ನೆರವೇರಿಸುವ ಬಗ್ಗೆ ಪರಿಶೀಲನೆ ನಡೆಸಲಾಗುವುದೆಂದೂ, ಹಳೆಯ ವಿದ್ಯಾರ್ಥಿಗಳೆಲ್ಲರೂ ಸಭೆಗೆ ಬರಬೇಕೆಂದೂ ಕೋರಲಾಗಿದೆ

ನಗರದ ರಸ್ತೆಗಳಿಗೆ ರಾಷ್ಟ್ರ ಮುಖಂಡರ ಹೆಸರು

ರಾಜಧಾನಿಯಲ್ಲಿರುವ ವಿವಿಧ ರಸ್ತೆಗಳಿಗೆ ಇರುವ ವಿದೇಶೀಯರ ಹೆಸರುಗಳ ಬದಲು ರಾಷ್ಟ್ರ ಮುಖಂಡರು ಮತ್ತು ಇತಿಹಾಸ ಪುರುಷರ ಹೆಸರುಗಳನ್ನಿಡಬೇಕೆಂದು ಸೂಚಿಸುವ ನಿರ್ಣಯವನ್ನು ಪೌರಸಭೆಯಲ್ಲಿ ಚರ್ಚೆಗಾಗಿ ಶ್ರೀ ಸಂ. ಲ್ ಪುರ್ಸರವರ ಕಳುಹಿಸಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೨೦ ರತ್ನಮ್ಮ ಕೃಷ್ಣಮೂರ್ತಿ ಸಂಗೀತ ಮಧ್ಯಾಹ್ನ ೧ ೩೦ ದಿಲ್ರುಬಾ ವಿಮ್ನ ಮೆಟ್ಟಿನ ಕಲಾವಿದರು ಸಂಜೆ ೬ ೩೦ ಮತ್ತು ೭ ೨೦ ಎಸ್ ಟಿ ಕೇಶವಮೂರ್ತಿ, ಸಂಗೀತ ೭ ೧೫ ಗಾನವಿಹಾರ ೭ ೨೦ ಬಾಲ್ಯರ ಹಿಂದೀಗೀತೆ ೮ ಗೀತಾ ಪಾಠ ೯ ೧೫ ಡಿ ಶಿವಪ್ಪ, ಕಬಲ ವಾದನ ೯ ೪೦ ಗಾನ ವಾರಿಧಿ

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ಕಛೇರಿ ಕಾಗದ ಪತ್ರಗಳ ಸ್ವಯಂ ಚಲನ

ಈಜಿಪ್ಟ್ ಸರ್ಕಾರದ ಹಣಕಾಸಿನ ರಿಕಾರ್ಡುಗಳ ಇಲಾಖೆಯಲ್ಲಿ ಕಾಗದ ಪತ್ರಗಳು ಮೊನ್ನೆ ತಾವಾಗಿಯೇ ಚಲಿಸಿದುವೆಂದೂ, ಇದನ್ನು ಕಂಡು ಗುಮಾಸ್ತರಿಗೆ ಆಶ್ಚರ್ಯ ಮತ್ತು ಆತಂಕವಾಯಿತೆಂದೂ ವರದಿಯಾಗಿದೆ. ಈ ವಿಷಯವನ್ನು ಅಧಿಕಾರಿಗಳಿಗೆ ವರದಿ ಮಾಡಿ, ಮಾಂತ್ರಿಕರನ್ನು ಕರೆಸಲು, ಅವರು ರಹಸ್ಯವನ್ನು ಭೇದಿಸಿದರೆಂದೂ, ಅವುಗಳ ಕೆಳಗೆ ಆರು ಹಾವುಗಳು ಸೇರಿ ಹೀಗಾಗುತ್ತಿತ್ತೆಂದೂ ಹೇಳಲಾಗಿದೆ

ಮಾರಾಟ ತೆರಿಗೆ ಬಗ್ಗೆ ವರ್ತಕರ ಮನವಿ

ತಾ|| ೧೮ ೧೧ ೫೨ ನೇ ಮಂಗಳವಾರ ಸಂತೆಪೇಟೆ ವರ್ತಕರ ಕೋರಿಕೆ ಮೇರೆ ಮಾಜಿ ಗೃಹ ಸಚಿವರಾದ ಶ್ರೀ ಟಿ. ಮರಿಯಪ್ಪನವರು, ಕಾಂಗ್ರೆಸ್ ಕಛೇರಿಗೆ ಕೆಲವರು ವರ್ತಕರನ್ನು ಬರಮಾಡಿಕೊಂಡು, ಮಾರಾಟ ತೆರಿಗೆಯನ್ನು ವಿವಿಧ ಕಡೆಗಳಲ್ಲಿ ವಸೂಲು ಮಾಡುತ್ತಿರುವ ವಿಷಯದ ಬಗ್ಗೆ ಅವರುಗಳ ಅಭಿಪ್ರಾಯವನ್ನು ಪಡೆದರು. ಒಂದೇ ಮುಖಾಂತರ ವಸೂಲು ಮಾಡುವಂತೆಯೂ ಮತ್ತು ಸೆಂಟ್ರಲ್ ಗೌರ್ನಮೆಂಟ್‌ನವರು, ಮನುಷ್ಯನ ದಿನಚರಿ ಜೀವನಕ್ಕೆ ಬೇಕಾಗುವ, ಸಲವಸ್ತ್ರ ಆಹಾರ ಪದಾರ್ಥಗಳ ಮೇಲೆ ಈ ತೆರಿಗೆಯನ್ನು ವಜಾ ಮಾಡುವಂತೆ ಮೈಸೂರು ಸರ್ಕಾರದವರೂ ಸಹ, ಅದೇ ರೀತಿ ಮಾಡಬೇಕೆಂದೂ ವರ್ತಕರು ತಿಳಿಸಿದರು. ಅದಕ್ಕೆ ಶ್ರೀ ಟಿ. ಮರಿಯಪ್ಪನವರು, ಈ ವಿಚಾರವನ್ನು ಯೋಚಿಸಲಾಗುವುದೆಂದು ತಿಳಿಸಿದರು— ಎಂದು ಪೌರಸಭಾ ಸದಸ್ಯರಾದ ಶ್ರೀ ಚೌಡಯ್ಯನವರು ತಿಳಿಸಿರುತ್ತಾರೆ

SRI GAYATHRI
TALKIES
Daily 2 Shows
From 28-11-52 For 2 Days
Paramount's
FLAMING FEATHER
[In Technicolor]
Starring — Sterling HAYDEN
— MORNING SHOWS
On 29th and 30th
SPANISH MAIN
(In Technicolor)

ಕಾರ್ಮಿಕ ಮುಖಂಡರ ಉಪವಾಸ

ಬೆಂಗಳೂರು ಬಳಿ ವೈಟ್ ಫೀಲ್ಡ್ ವಾಹನ ಡಿಪೋ ಮುಂದೆ ಕಳೆದ ೨೪ ನೇ ತಾ|| ನಿಂದ ಡಿಪೋ ಕಾರ್ಮಿಕರ ಮುಖಂಡರಾದ ಶ್ರೀ ಕಣ್ಣನ್‌ರವರು ಉಪವಾಸ ಹೂಡಿರುವರು. ಉಪವಾಸವನ್ನು ನಿಲ್ಲಿಸುವಂತೆ ಬೆಂಗಳೂರಿನ ಮೇಯರ್ ಶ್ರೀ ಬಿ. ವಿ ಲಿಂಕಪ್ಪನವರು ಅವರನ್ನು ಪ್ರಾರ್ಥಿಸಿರುತ್ತಾರೆ. ಉಪವಾಸಕ್ಕೆ ಬೆಂಬಲ ನೀಡಲು ೧೫ ಸಾವಿರ ಕಾರ್ಮಿಕರ ಮೆರವಣಿಗೆಯು ನೆನ್ನೆ ನಡೆಯಿತು

ತಪ್ಪು ವಯಸ್ಸು ಕೊಟ್ಟುದಕ್ಕಾಗಿ ವಜಾ

ತಪ್ಪು ವಯಸ್ಸು ಕೊಟ್ಟರೆಂಬ ಕಾರಣಕ್ಕಾಗಿ ಚಿತ್ರದುರ್ಗ ಜಿಲ್ಲೆಯ ಬಿ ಸಿ ಬಸಪ್ಪ, ಪಿ ಚನ್ನಪ್ಪ ಮತ್ತು ಕೆ ರಂಗಪ್ಪ ಎಂಬ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳನ್ನು ವಜಾ ಮಾಡಲಾಗಿದೆ

ಮೈಸೂರು ಪೇಟೆ ಧಾರಣೆ

ಪಲ್ಲಗಳಿಗೆ	ರೂ ಇಂದ	ರೂ ಗೆ
ನೆಲಗಡಲೆ	೧೦ ೩ ೦	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆಕಾಳು	[illegible]	[illegible]
ಹುಚ್ಚೆಳ್ಳು	[illegible]	[illegible]
ಅವರೆ	[illegible]	[illegible]
ಹೊಂಗೆಬೀಜ	[illegible]	
ಮೆಣಸಿನಕಾಯಿ		
ಮಣ ೧೨ಕ್ಕೆ	[illegible]	[illegible]
ಕಾಳುಮೆಣಸು	[illegible]	
ಬೆಲ್ಲ	[illegible]	
ಸೀಗೆಕಾಯಿ	[illegible]	

ತೆಂಗಿನಕಾಯಿ ೧,೧೦೦ ಕ್ಕೆ [illegible]

ಒಲಿಂಪಿಯಾ ಟಾಕೀಸ್
27-11-52 ರಿಂದ ಜಯಭೇರಿ 2ನೇ ವಾರ
ಫಾಲ್ಕನ್ ಪಿಕ್ಚರ್ಸ್ ರವರ
ಬಾಗ್ದಾದ್
ಪಾತ್ರ — ರಂಜನ್, ಭಾರತಿ, ಭಗವಾನ್
ಬೆಳ್ಳಿ ಪ್ರದರ್ಶನ
ಸುಲೋಚನ ಪಾತ್ರ ವಹಿಸಿರುವ
★ ಜವಾನಿ ★

Edited, Printed and Published by A R Nagarajan at Sadhvi Press, D Subbiah Road, Mysore

28—11—52ರಿಂದ
ಪ್ರಾರಂಭ
ಮೈಸೂರು ಪ್ರಭುದೇವಾ —
ಬೆಂಗಳೂರು
ಸ್ವಸ್ತಿಕ್ ★ ಶಾರದ
ಚಿತ್ರಮಂದಿರಗಳಲ್ಲಿ
ಪ್ರತಿದಿನ 3 ಆಟಗಳು
ರಾಜ್ಯಂ ಪಿಕ್ಚರ್ಸ್‌ರವರ ಸಾಮಾಜಿಕ ಚಿತ್ರ
• ದಾಸಿ •
(ತೆಲುಗು) —
ಲಕ್ಷ್ಮಿರಾಜ್ಯಂ, ಎನ್. ಟಿ. ರಾಮರಾವ್,
ರೇಲಂಗಿ, ಶಿವರಾವ್
ಅಭಿನಯ
RAJSHRI Release

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು, ಚೋಳಿ ಪೀಸುಗಳು
ಪೂನಾ, ನಾಗಪೂರ್ ಸೀರೆಗಳಿಗೆ
★ M. V. ಭೋಜಯ್ಯ
ಬಿ ಎ, ಇಂಡಿಯನ್ ಬ್ಯಾಂಕ್ ಎದುರು
ಮೈಸೂರು

ರಿಜಿಸ್ಟರ್ಡ್ ನಂ. 792 ||ಪಂಚೇ ಮಾತರಂ|| ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೮-೧೧-೧೯೫೨ [ಸಂಚಿಕೆ ೧೦೦

ಜೆಕೊಸ್ಲೊವೇಕಿಯದ ನಾಯಕರಿಗೆ ಗಲ್ಲುಶಿಕ್ಷೆ

ಜೆಕೊಸ್ಲೊವೇಕಿಯದ ೧೧ ನಾಯಕರಿಗೆ ಫಾಸಿ

ಜೆಕೊಸ್ಲೊವೇಕಿಯದ ಮಾಜಿ ವಿದೇಶಾಂಗ ಮಂತ್ರಿ ಡಾ|| ಕ್ಲೆಮೆಂಟಿಸ್, ಕಮ್ಯೂನಿಸ್ಟ್ ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ರಡಾಲ್ಫ್ ಸ್ಲಾನ್ಸ್ಕಿ ಮಾಸ್ಕೋವಿನಲ್ಲಿ ತರಪೇತು ಹೊಂದಿದ್ದ ಬೆಡ್ರಿಕ್ ಗೆಂಡರ್ ಮತ್ತು ಇನ್ನೂ ೮ ಮಂದಿ ಪ ಮುಖಂಡರಿನ್ನು ದೇಶದ್ರೋಹದ ಆಪಾದನೆ ಮೇಲೆ ಫಾಸಿ ಶಿಕ್ಷೆಗೆ ಗುರಿಪಡಿಸಲಾಗಿದೆ ಅಧ್ಯಕ್ಷ ಗೋಟ್ವಾಲ್ಡ್‌ರವರ ಆಡಳಿತದ ವಿರುದ್ಧವಾಗಿ ಅವರುಗಳು ಪಿತೂರಿ ನಡೆಸಿದ್ದರೆಂದು ಆಪಾದಿಸಲಾಗಿದ್ದಿತು

ದಿನೇ ದಿನೇ ಆಧುನಿಕತೆಯು ಹೆಚ್ಚುತ್ತಾ ಬಂದಿದೆ ಮನೋದೌರ್ಬಲ್ಯವು ಬೆಳೆಯುತ್ತಿದೆ ಧಾರ್ಮಿಕ ವಿಚಾರಗಳನ್ನು ಗ್ರಹಿಸುವ ಶಕ್ತಿಯೂ ಸಹ ಕುಗ್ಗಿ ಹೋಗಿದೆ ಭಾರತ ಸಂಸ್ಕೃತಿಯು ಅಭಿಮಾನವೂ ಹಾಗೂ ನಮ್ಮ ಧರ್ಮದ ಮೂಲ ಆದರ್ಶ ತತ್ವಗಳ ತಿಳುವಳಿಕೆಯೂ ಕಡಿಮೆಯಾಗಿ ಶೋಚನೀಯವಾದ ವಾತಾವರಣವೊಂದು ನಮ್ಮನ್ನು ಆವರಿಸಿದೆ ಈ ಕಾರ್ಯ ತ್ರಿಯಿಂದ ಜನಾಂಗವನ್ನು ಮುಕ್ತರನ್ನಾಗಿ ಮಾಡಿ ಸ್ವಾತಂತ್ರ್ಯವನ್ನು ಜನರಲ್ಲಿ ತುಂಬುವುದು ಸರ್ಕಾರದ ಮತ್ತು ನಾಯಕರ ಕರ್ತವ್ಯವಾಗಿದೆ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ತೀವ್ರ ಶಕ್ತಿಯನ್ನು ವಹಿಸುವುದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ

ಈ ಯೋಜನೆಯು ಕಾರ್ಯಕರ್ತರುಗಳ ಪರಿಶ್ರಮದಿಂದ ಫಲಪ್ರದವಾಗಿ ನಮ್ಮ ಸಂಸ್ಥಾನದಲ್ಲಿ ಒಟ್ಟು ಜನಜೀವನವೇ ನೈತಿಕತೆಯನ್ನು ಪಡೆದು ದೇಶೋನ್ನತಿ ಸಾಧನೆಗೆ ಸಹಾಯಕವಾಗಲೆಂದು ಹಾರೈಸುತ್ತೇವೆ

ಶ್ರೀ ಮೋಟಗಾನಹಳ್ಳಿ ಸುಬ್ರಹ್ಮಣ್ಯ ಶಾಸ್ತ್ರಿಯವರು ಮಹಾಭಾರತವನ್ನೂ ಶ್ರೀಮತಿ ಸ್ವರ್ಣಮ್ಮನವರು ಶಿವಶರಣರ ಕೃತಿಗಳನ್ನೂ ಶ್ರೀ ಎಂ ಸಿ. ಮಹದೇವಸ್ವಾಮಿಯವರು ದೇವೀ ಮಹಾತ್ಮೆಯನ್ನೂ ಸುಶ್ರಾವ್ಯವಾಗಿ ಓದಿದರು

ಸರ್ಕಾರದ ಭಾಷಾಂತರಕಾರರಾದ ಶ್ರೀ ಪಿ. ಕೆ ವೆಂಕಟರಾಮಯ್ಯನವರು ದೇಶದ ಸಂಸ್ಕೃತಿಯ ಬಗ್ಗೆ ಉಪನ್ಯಾಸ ಮಾಡಿ ಕಾವ್ಯಗಳಲ್ಲಿ ಅಡಗಿರುವ ದಿವ್ಯವಾದ ನೀತಿ ಬೋಧೆಯನ್ನು ಹೃದಯಂಗಮವಾಗಿ ವಿವರಿಸಿದರು

ಶ್ರೀಮತಿ ಇಂದಿರಮ್ಮನವರು ಕಿರಾತಾರ್ಜುನೀಯದಿಂದ ಹಲವು ಪದ್ಯಗಳನ್ನು ಹಾಡಿದರು. ಕರ್ನಾಟಕ ಸಾಮ್ರಾಜ್ಯದ ವೈಭವವನ್ನು ಕುರಿತು ಶ್ರೀ ವಿಶಕಂಠರಾಯರು ಭಾಷಣ ಮಾಡಿದರು.

ಸಂಸ್ಕೃತಿ ಪ್ರಸಾರೋತ್ಸವ

ಮೈಸೂರು ೨೮

ಇಲ್ಲಿನ ಮೈಸೂರು ಟೌನ್‌ಹಾಲಿನಲ್ಲಿ ಏರ್ಪಡಿಸಿದ್ದ ಸಂಸ್ಕೃತಿ ಪ್ರಸಾರದ ಆರಂಭೋತ್ಸವವನ್ನು ನೆನ್ನೆ ಅರಮನೆ ಧರ್ಮಾಧಿಕಾರಿಗಳಾದ ಶ್ರೀ ಹೆಚ್ ಎಸ್. ರಾಘವೇಂದ್ರಾಚಾರ್ಯರು ನೆರವೇರಿಸಿದರು ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು ರಾಜಪ್ರಮುಖರು ಮತ್ತು ವಿದ್ಯಾಸಚಿವರು ಕಳುಹಿಸಿದ್ದ ಸಂದೇಶಗಳನ್ನು ಓದಲಾಯಿತು ಶ್ರೀ ಕೃಷ್ಣಗಿರಿ ಕೃಷ್ಣರಾಯರು ಮಹಾಭಾರತದ ಹಲವು ಪದ್ಯಗಳನ್ನು ಸುಶ್ರಾವ್ಯವಾಗಿ ವಾಚನ ಮಾಡಿದರು

ಹೆಂಡತಿಯನ್ನು ಕೊಂದುದಕ್ಕಾಗಿ ೫ ವರ್ಷ ಕಠಿಣ ಶಿಕ್ಷೆ

ಟಿ. ನರಸೀಪುರ ತಾಲ್ಲೂಕು ಸೀಲಿಸೋಗೆಯಲ್ಲಿ ವಾಸವಾಗಿರುವ ಕುರೋಬಿನ ಕರಪಯ್ಯ ಉರುಫ್ ಕರಪೇಗೌಡರ್ ಎಂಬುವನು ಕಳೆದ ಮೇ ೧೫ ನೇ ತಾರೀಖು ರಾತ್ರಿ ತನ್ನ ಹೆಂಡತಿ ಲಕ್ಷ್ಮಿ ಎಂಬಾಕೆಯನ್ನು ಹೊಡೆದು, ಕತ್ತುಹಿಸುಕಿ ಕೊಂದನೆಂಬ ಆಪಾದನೆಗಾಗಿ ಜಿಲ್ಲಾ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರು ಅವನಿಗೆ ೫ ವರ್ಷ ಕಠಿಣ ಸಜಾವನ್ನು ಈದಿನ ವಿಧಿಸಿದರು

ಘಟಿಕೋತ್ಸವಕ್ಕೆ ಟಿಕೆಟ್ಟುಗಳು

ಮೈಸೂರು ವಿಶ್ವ ವಿದ್ಯಾಲಯದ ಪದವೀದಾನ ಸಮಾರಂಭಕ್ಕೆ ಪಾಸುಗಳಿಗಾಗಿ ಅರ್ಜಿ ಹಾಕುವವರೆಲ್ಲರಿಗೂ ಅವನ್ನು ಕೊಡಲಾಗುವುದಿಲ್ಲವೆಂದೂ, ಅದನ್ನು ಮುಂದಿಗೆ ಮಾತ್ರ ಒದಗಿಸಲಾಗುವುದೆಂದೂ, ಇದೇ ೨೮, ೨೯ ಮತ್ತು ಡಿಸೆಂಬರ್ ೧ನೇ ತಾ|| ಮಧ್ಯಾಹ್ನ ೪ ರಿಂದ ೫ ಘಂಟೆ ವರಿಗೆ ಮಹಾರಾಜಾ ಕಾಲೇಜಿನ ೧೭ನೇ ನಂಬರು ಕೊಠಡಿಯಲ್ಲಿ ಅವನ್ನು ಪಡೆಯಬಹುದೆಂದೂ ಪ್ರಕಟಿಸಲಾಗಿದೆ

ರಾಜಪ್ರಮುಖರ ಬಳಿ ಆರ್ ಎಸ್.ಎಸ್. ನಿಯೋಗ

ಗೋಹತ್ಯೆ ನಿರೋಧ ಚಳುವಳಿಯ ಸಂಬಂಧವಾಗಿ ಸಂಸ್ಥಾನದ ಆರ್ ಎಸ್ ಎಸ್ ನಿಯೋಗವದರು ಮಾಜಿಮಂತ್ರಿ ಶ್ರೀ ಸಿ ಹೆಚ್ ಕೃಷ್ಣರಾಯ ನೇತೃತ್ವದಲ್ಲಿ ಶ್ರೀಮನ್ಮಹಾರಾಜರನ್ನು ನಾಳೆ ಬೆಳಿಗ್ಗೆ ಭೇಟಿ ಮಾಡಲಿರುವರು

ನೌಕರರು ನಿಜವಾದ ವಯಸ್ಸು ಕೊಡಬೇಕು

ಸ್ವಂ ಸು ಪ್ರೋ[F] ಬೆಂಗಳೂರು ೨೮

ನಾನ್‌ಗೆಜೆಟೆಡ್ ನೌಕರರುಗಳು ತಮ್ಮ ನಿಜವಾದ ವಯಸ್ಸು ಮತ್ತು ಹುಟ್ಟಿದ ತಾರೀಖುಗಳನ್ನು ಜನವರಿ ತಿಂಗಳೊಳಗೆ ತಿಳಿಸಬೇಕೆಂದೂ ಕೊಡದವರನ್ನು ವಜಾ ಮಾಡಲಾಗುವುದೆಂದೂ ತಿಳಿಸಿ, ಸರ್ಕಾರದವರು ಸೂಚನೆಯೊಂದನ್ನು ಕಳುಹಿಸಿರುವರೆಂದು ವರದಿಯಾಗಿದೆ

○ ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ನೌಕರಿಗಾಗಿ ಅರ್ಜಿ ಹಾಕುವವರು ಯಾವ ವಿಧವಾದ ಪ್ರಭಾವಗಳನ್ನೂ ಬೀರಬಾರದೆಂದು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಎಚ್ಚರಿಕೆಯನ್ನಿತ್ತಿರುವರು

○ ಕೇಂದ್ರ ವ್ಯವಸಾಯ ಮಂತ್ರಿ ಡಾ|| ಪಿ. ಎಸ್ ದೇಶಮುಖ್‌ರವರು ಇಂದು ಇಲ್ಲಿಗೆ ಆಗಮಿಸಿದರು ನಾಳೆದ್ದು ಅವರು ಮೈಸೂರಿಗೆ ತೆರಳುವರು

ಹನುಮಜ್ಜಯಂತಿ ಉತ್ಸವ

ಮೈಸೂರು ೨೮

ರಾಜಧಾನಿಯ ದೇವರಾಜ ಮೊಹಲ್ಲಾ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮಾರುತಿ ಮಂದಿರದಲ್ಲಿ ಎಂದಿನಂತೆ ಈ ಸಾರಿಯೂ ನಾಳೆಯಿಂದ ಹತ್ತು ದಿನಗಳ ಕಾಲ ಹನುಮಜ್ಜಯಂತಿ ಉತ್ಸವವು ನೆರವೇರುವುದು ಬೆಳಿಗ್ಗೆ ಅಭಿಷೇಕ ಅರ್ಚನೆಗಳೂ, ಸಂಜೆ ೫|| ಗಂಟೆಯಿಂದ ಸ್ಥಳೀ ಪುರಸ್ಕರಗಳ ವಿದ್ವಾಂಸರ ಸಂಗೀತ ಕಛೇರಿಗಳೂ ನಡೆಯುವುವು. ಪ್ರತಿ ಸಂಜೆ ೪ ರಿಂದ ೫|| ವರೆಗೆ ಬೆಂಗಳೂರಿನ ಶ್ರೀ ಸಿ ರಾಮಸ್ವಾಮಿ ನಾಯ್ಡುರವರ ಹರಿಕಥೆಯೂ ಉಂಟು-ಎಂಬುದಾಗಿ ವ್ಯವಸ್ಥಾಪಕರಾದ ಗಾನ ವಿಶಾರದ ದೇವೇಂದ್ರಪ್ಪನವರು ತಿಳಿಸಿರುತ್ತಾರೆ

ಮಾರಾಟ ತೆರಿಗೆ ವಿರೋಧಿಸಲು ವರ್ತಕರ ಸಭೆ

ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆಗಳ ಬಗ್ಗೆ ಆಗುತ್ತಿರುವ ತೊಂದರೆಗಳನ್ನು ನಿವಾರಿಸಿಕೊಳ್ಳಲು ಸೂಕ್ತ ಮಾರ್ಗಗಳನ್ನು ಕಂಡುಹಿಡಿಯುವ ಸಲುವಾಗಿ ರಾಜಧಾನಿಯ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಮೈಸೂರು ಹಾಲಿನ ಮಹಡಿಯ ಮೇಲೆ ಇದೇ ೩೦ ನೇ ತಾ|| ಬೆಳಿಗ್ಗೆ ೧೦ ಗಂಟೆಗೆ ನಗರದ ವರ್ತಕರುಗಳ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ ವರ್ತಕರೆಲ್ಲರೂ ಸಭೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ

ಅಮೆರಿಕದ ಪ್ರಾಧ್ಯಾಪಕರ ಭಾಷಣ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳೆ ಸಂಜೆ ೪ ಗಂಟೆಗೆ ಸಂಸ್ಕೃತೋತ್ಸವವನ್ನು ಶಾಲೆಯ ವಿದ್ಯಾರ್ಥಿ ಸಂಘದವರು ಏರ್ಪಡಿಸಿರುವರು ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸುವರು ಅಮೆರಿಕ ಹಾರ್ವರ್ಡ್ ವಿಶ್ವವಿದ್ಯಾಲಯದ ಡಾ|| ಡೇನಿಯಲ್ ಇಂಗಲ್ಸ್‌ರವರು ಭಾಷಣ ಮಾಡುವರು

ಬೀಡಿ ಕಾರ್ಮಿಕರ ಸಭೆ

ರಾಜಧಾನಿಯ ಬೀಡಿ ಕಾರ್ಮಿಕರ ಸಂಘದವರ ಬಹಿರಂಗ ಸಭೆಯು ಬರುವ ೧ನೇ ತಾ|| ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಡೆಯಲಿದೆ.

ದೈವಭಕ್ತಿಯು ಅಚಲವಾಗಿ ಉಳಿಯಬೇಕು

ಸಂಸ್ಕೃತಿ ಪ್ರಸಾರದ ಆರಂಭೋತ್ಸವದಲ್ಲಿ ಶ್ರೀಮನ್ಮಹಾರಾಜರವರ ಭಾಷಣ

ನಂಜನಗೂಡು ೨೮

[illegible] ದೇಶಕ್ಕೆ ಸ್ವಾತಂತ್ರ್ಯವು ಲಭಿಸಿದ ಮೇಲೆ [illegible] ಜನದ ನಾನಾ ಕ್ಷೇತ್ರಗಳಲ್ಲಿ ಅಭಿವೃದ್ಧಿ [illegible] ಹೊಂದುವ ತೀವ್ರವಾದ ಇಚ್ಛೆಯು [illegible] ಜಾಗ್ರತಗೊಳಿಸಿದೆ. ಈ ಸಮಯದಲ್ಲಿ ಎಲ್ಲದಕ್ಕಿಂತಲೂ ಮಿಗಿಲಾಗಿ ಪ್ರತಿಯೊಬ್ಬ ಪ್ರಜೆಯೂ ತನ್ನ ಉದ್ಯೋಗ [illegible] ನದಿಂದಲೂ, ನಿಷ್ಠೆಯಿಂದಲೂ [illegible] ಮನೋಧರ್ಮವನ್ನು ಪೋಷಿಸಿ [illegible] ಕರ್ತವ್ಯ ಪಾಲನೆಯಿಂದಲೇ ಧರ್ಮ [illegible] ವಾಗಿ ಜಗತ್ತಿನ ಕಲ್ಯಾಣವಾಗ [illegible] ನೀತಿಯ ರಹಸ್ಯ ಈ ಮಹತ್ತ್ವ [illegible] ಆದರ್ಶವು ಭಾರತೀಯರಾದ ನಮ್ಮಲ್ಲಿ [illegible] ಸ್ಥಿರಗೊಳಿಸುವುದಾದರೆ ಹಾಗೂ [illegible] ಜೀವನದ ಉಸಿರಂತೆ ನಮ್ಮ [illegible] ನಂಬಿಕೆಗಳನ್ನು ಪೋಷಿಸುವುದಾದರೆ ಭಾ[illegible] ಸಮಾಜಗಳು ಹಿಂದಿನ ಪತನಾ[illegible] ಉನ್ನತ ಸ್ಥಿತಿಯನ್ನು ಮುಟ್ಟುವುದರಲ್ಲಿ ಸಂದೇಹವಿಲ್ಲ ನಮ್ಮ ಜನರಲ್ಲಿ ದೈವಭಕ್ತಿಯು ಅಚಲವಾಗಿ ಉಳಿ[illegible] ಪ್ರತಿಯೊಬ್ಬರೂ ಅವರ ಮನಃಪ್ರವೃತ್ತಿಗೆ ಅನುಗುಣವಾದ ರೀತಿಯಲ್ಲಿ [illegible] ಪ್ರಾಪಂಚಿಕ ಸಂಪತ್ತನ್ನು [illegible] ಸಾರ್ಥಕಗೊಳಿಸ ರೀತಿಯಲ್ಲಿ [illegible] ಪ್ರಪಂಚದ ಕಲ್ಯಾಣವನ್ನು ಸಾಧಿಸಬೇಕು [illegible] ಎಂಬುದಾಗಿ ಶ್ರೀಮನ್ಮಹಾರಾಜ[illegible] ನೆನ್ನೆ ಸಂಜೆ ಇಲ್ಲಿನ ಕೆಸಿಕೆಲ್ಲ [illegible] ನಡೆದ ಸಂಸ್ಕೃತಿ ಪ್ರಸಾರ ಯೋಜನೆಯ ಆರಂಭೋತ್ಸವವನ್ನು ನೆರವೇರಿಸಿದಾ[illegible] ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮನ್ ಮಹಾರಾಜರು ಮತ್ತು ಮುಖ್ಯ [illegible] ಪ್ರಿಯವರು ಕೆಸಿಕೆಲ್ಲ ಭವನಕ್ಕೆ [illegible] ಆಗಮಿಸಿದಾಗ ಸಬ್ ಡಿವಿಜನ್ ಅಧಿಕಾರಿಗಳು ನಂಜನಗೂಡು ಪುರ ಸಭಾಧ್ಯಕ್ಷ [illegible] ಮಲ್ಲಾರಾಧ್ಯರವರು ಅವರನ್ನು ಸ್ವಾಗತಿಸಿದರು

[illegible] ಪ್ರಾರ್ಥನೆಯೊಡನೆ ಸಮಾರಂಭ ಆರಂಭವಾಯಿತು ಶ್ರೀಮನ್ ಮಹಾರಾಜರು ಯೋಜನೆಯ ಉದ್ಘಾಟನೆ ಮಾಡಿ [illegible] ಮಾಡಿದರು

ಮಹಾರಾಜರ ಭಾಷಣ

[illegible] ಸಂಸ್ಕೃತಿಯು ಬಹಳ ಪ್ರಾಚೀನ [illegible] ಮತ್ತು ಶ್ರೇಷ್ಠವಾದ ಸಂಸ್ಕೃತಿ [illegible] ಅಸ್ಸೀರಿಯಾ ಮೊದಲಾದ ದೇಶಗಳ [illegible] ಸಂಸ್ಕೃತಿಗಳು ಅಳಿಸಿಹೋದರೂ ಭಾರತೀಯ ಸಂಸ್ಕೃತಿಯು ಮಾತ್ರ ಸ್ವತಂತ್ರವಾಗಿಯೂ ಸಜೀವವಾಗಿಯೂ ಇದ್ದು [illegible] ಭಾರತಕ್ಕೆ ಹೆಮ್ಮೆ, ಗೌರವ [illegible] ತಂದುಕೊಟ್ಟಿದೆ

[illegible] ಸಾಹಿತ್ಯ ಕೃತಿಗಳು [illegible] ಸಂಸ್ಕೃತಿಯ ಅಂಗಗಳಂತೆ ಬೆಳೆದು [illegible] ಧಾರ್ಮಿಕ ಪ್ರವೃತ್ತಿ, ದೈವಭಕ್ತಿ, ಮುಂತಾದ ಸದ್ಗುಣ [illegible] ಅವುಗಳಿಂದ ಸಹಾ[illegible] ನಮ್ಮ ಪೂರ್ವಿಕರು ಅವು [illegible] ಪ್ರಯೋಜನ ಹೊಂ[illegible] ಆ ಸದ್ಗುಣಗಳು ಅವರಲ್ಲಿ [illegible] ಅವುಗಳ ವಾಚನದಿಂದ [illegible] ಮಹಾಪುರುಷರ ಉದಾಹರಣೆಗಳೂ, [illegible] ಜನರ ಮನಸ್ಸಿನಲ್ಲಿ ಅ[illegible] ಎಲ್ಲರಿಗೂ ತಿಳಿದಿದೆ ಅವರ ಪರಿಣಾಮ [illegible] ಸದ್ಗುಣಗಳು ಶಾಶ್ವತವಾಗಿಯೇ [illegible] ಸಂಸ್ಕೃತಿಯ ಬೆಳವಣಿ[illegible] ಸಾಧನೆಗೂ ಸಹಾಯ [illegible]

[illegible] ವಿಚಾರಕ್ಕೆ ತಕ್ಕಷ್ಟು [illegible] ಪಾಶ್ಚಾತ್ಯ ವಿದ್ಯಾಭ್ಯಾ[illegible] ಮತ್ತು ಇತರ ಕಾರಣಗ[illegible] ನಮ್ಮ ಸಂಸ್ಕೃತಿಯ ಕಡೆಗೆ

ಧಾರ್ಮಿಕ ಪ್ರವೃತ್ತಿಯು ಶ್ರೇಯಸ್ಕರವಾದುದು

ಮುಖ್ಯಮಂತ್ರಿ ಕೆ. ಹನುಮಂತಯ್ಯನವರ ಭಾಷಣ

ನಂಜನಗೂಡು ೨೭

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇಂದು ಇಲ್ಲಿ ನಡೆದ ಸಂಸ್ಕೃತಿ ಪ್ರಸಾರ ಯೋಜನೆಯ ಆರಂಭೋತ್ಸವದಲ್ಲಿ ಅಧ್ಯಕ್ಷತೆ ವಹಿಸಿ ಈರೀತಿ ತಿಳಿಸಿದರು:-

ಇಂದು ಮಾರ್ಗಶಿರ ಶುದ್ಧ ಏಕಾದಶಿ ಶ್ರೀ ಕೃಷ್ಣ ಪರಮಾತ್ಮನು ಗೀತೆಯನ್ನು ಬೋಧಿಸಿದ ಪಾವನ ದಿನವು ಇದು ಭಗವಂತನು ಧರ್ಮದ ಸಾರವನ್ನು ೭೦೦ ಶ್ಲೋಕಗಳಲ್ಲಿ ಸರಳರೀತಿಯಲ್ಲಿ ಈ ಗೀತೆಯಲ್ಲಿ ಕ್ರೋಢೀಕರಿಸಿದ್ದಾನೆ ಗೀತೆಯು ಎಲ್ಲ ಆಸ್ತಿಕರ ಮಾರ್ಗದರ್ಶಕವಾಗಿದೆ ಮಹಾತ್ಮಾಗಾಂಧಿಯವರಿಗೆ ಸಂದೇಹಗಳು ಬಂದಾಗ, ನಿರಾಶೆಯಾದಾಗ ಗೀತೆಯನ್ನು ಓದುತ್ತಿದ್ದರು

ಗೀತೆಯು ಮಹಾಭಾರತದ ಒಂದು ಭಾಗ ಆದುದರಿಂದಲೇ ಮಹಾಭಾರತವನ್ನು ಐದನೇ ವೇದವೆಂದು ಹೇಳುತ್ತಾರೆ. ಪರ್ವತಗಳಲ್ಲೆಲ್ಲಾ ಹಿಮಾಲಯವು ಹೇಗೋ ಕಾವ್ಯಗಳಲ್ಲೆಲ್ಲಾ ಮಹಾಭಾರತವು ಹಾಗೆ ಇಂಥ ಮಹಾಕಾವ್ಯವನ್ನು ಪಡೆದಿರುವ ಭಾರತೀಯರಾದ ನಾವು ಅದೃಷ್ಟಶಾಲಿಗಳು.

ದೇಶದಲ್ಲಿ ನೀತಿಯ ಮಟ್ಟವೂ ಧರ್ಮಶ್ರದ್ಧೆಯೂ ಹೆಚ್ಚಲೆಂಬ ಉದಾತ್ತ ಉದ್ದೇಶದಿಂದ ಮೈಸೂರು ಸರ್ಕಾರದವರು ಮಹಾಭಾರತ, ರಾಮಾಯಣ, ಇತ್ಯಾದಿ ಕಾವ್ಯಗಳನ್ನು ಜನಕ್ಕೆ ಕಥೆ ಓದಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ

ಜನಜೀವನದ ಮಟ್ಟವನ್ನು ಹೆಚ್ಚಿಸುವುದು ಎಲ್ಲಾ ಸರ್ಕಾರಗಳ ಕಾರ್ಯನೀತಿಯಾಗಿದೆ ಈ ನೀತಿಯನ್ನು ಕೇವಲ ಜೀವನ ಸೌಕರ್ಯಗಳಿಗೆ ಮಾತ್ರ ಅನ್ವಯಿಸುತ್ತೇವೆ ಇದು ದೇಹ ಸುಖದ ಮಟ್ಟವನ್ನು ಮೇಲಕ್ಕೇರಿಸುವ ಪ್ರಯತ್ನ ಮಾತ್ರ. ಇದಕ್ಕಿಂತಲೂ ಹಿರಿದಾದುದು ಜನಜೀವನದ ನೈತಿಕಮಟ್ಟವನ್ನು ಹೆಚ್ಚಿಸುವುದು. ಜನಜೀವನದ ಆರ್ಥಿಕ ಮಟ್ಟವನ್ನು ಮೇಲಕ್ಕೇರಿಸಲು ಪಂಚವಾರ್ಷಿಕ ಯೋಜನೆ ಮೊದಲಾದ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಂಡಿದ್ದಾರೆ ಆದರೆ ಅವರು ನೈತಿಕ ಮಟ್ಟವನ್ನು ಹೆಚ್ಚಿಸುವ ಗೊಡವೆಗೆ ಹೋಗಿಲ್ಲ ಮನುಷ್ಯನು ಉದರಪೋಷಣೆಯಲ್ಲಿಯೇ ತಲ್ಲೀನನಾದರೆ ಅವನ ಮತ್ತು ಪಶುವಿನ ಜೀವನಗಳಿಗೆ ವ್ಯತ್ಯಾಸವಿರುವುದಿಲ್ಲ ಮನುಷ್ಯನು ಪಶುವಿನ ಸೃಷ್ಟಿಗಿಂತ ಮೇಲಿನ ಸೃಷ್ಟಿ, ಅವನು ಕಾಯಸಹಿತ ಕೈಲಾಸವನ್ನು ಸೇರಬೇಕೆಂಬ ಧ್ಯೇಯವುಳ್ಳವನು. ಇದಕ್ಕೆ ಬೇಕಾದ್ದು ಚಿತ್ತ ಸಂಸ್ಕಾರ

ರಾಮಾಯಣ, ಮಹಾಭಾರತ, ಹರಿಶ್ಚಂದ್ರ ಕಾವ್ಯ, ನಳಚರಿತ್ರೆ, ಶಿವಶರಣರ ವಚನಗಳು, ಹರಿದಾಸರ ಕೃತಿಗಳು— ಇವೇ ಮೊದಲಾದ ಗ್ರಂಥಗಳು ನೀತಿಧರ್ಮಗಳ ಬುಗ್ಗೆಯಾಗಿವೆ ಇವುಗಳನ್ನು ಓದುವುದರಿಂದ, ಓದಿಸಿ ಕೇಳಿ ತಿಳಿದುಕೊಳ್ಳುವುದರಿಂದ ಜನರ ಜೀವನ ಪಾವನಗೊಳ್ಳುತ್ತದೆ.

ಭಾಗವತವೂ ಬಹುಮಟ್ಟಿಗೆ ಶ್ರೀ ಕೃಷ್ಣನ ಮಹಿಮೆಯನ್ನೂ, ದೈವಭಕ್ತಿಯನ್ನೂ ಸಾರುವ ಪುರಾಣ ಗ್ರಂಥ ರಾಮಾಯಣವು ಶ್ರೀರಾಮನ ಪುಣ್ಯ ಕಥೆ, ಸಂಸ್ಕೃತ ಸಾಹಿತ್ಯದಲ್ಲಿಯೇ ಆದಿಕಾವ್ಯವೆನ್ನಿಸಿಕೊಂಡ ಹಿರಿಯ ಗ್ರಂಥ: ಅದರ ಸುಂದರಕಾಂಡದ ಸೌಂದರ್ಯವನ್ನೂ, ಅಯೋಧ್ಯಾಕಾಂಡದ ಔನ್ನತ್ಯವನ್ನೂ ಮೂಲವನ್ನು ಓದಿ, ಓದಿಸಿಯೇ ತಿಳಿಯಬೇಕು. ಸೀತಾರಾಮರ ಆದರ್ಶಗಳು ನಮಗೆ ಎಷ್ಟು ದೊಡ್ಡವಾಗಿವೆಯೆಂದರೆ, ಅವರ ನಾಮಸ್ಮರಣೆಯೇ ತಾರಕಮಂತ್ರವೆನಿಸಿಕೊಂಡಿದೆ

ಕನ್ನಡದಲ್ಲಿ ಕುಮಾರವ್ಯಾಸನು ಮಹಾಭಾರತವನ್ನು ಹೇಗೆ ರಚಿಸಿದ್ದಾನೆಯೋ ಹಾಗೆಯೇ ಕನಕದಾಸನೂ, ರಾಘವಾಂಕನೂ ನಳಚರಿತ್ರೆ, ಹರಿಶ್ಚಂದ್ರ ಚರಿತ್ರೆಗಳನ್ನು ಪಟ್ಟದೀ ಕಾವ್ಯಗಳಾಗಿ ಬರೆದಿದ್ದಾರೆ ಇಷ್ಟು ಘನವಾದ ವಿಷಯಗಳನ್ನು ಇಷ್ಟು ಲಲಿತವಾಗಿ ಬರೆದಿರುವುದು ಕನ್ನಡಿಗರ ಪುಣ್ಯ

ಈ ಧರ್ಮ ಗ್ರಂಥವನ್ನು ಓದುವಾಗ ಅರ್ಥವು ಪ್ರಧಾನವಾಗಿರಬೇಕು ಸಂಗೀತವು ಅತಿಯಾಗಿರಬಾರದು. ಹಾಡಲು ಚೆನ್ನಾಗಿ ಕಲಿತವರು ಅನೇಕ ವೇಳೆ ಅರ್ಥಕ್ಕೆ ಗಮನವನ್ನು ಕೊಡುವುದಿಲ್ಲ ಅವರ ದೃಷ್ಟಿ ತಾಳ, ರಾಗ, ಸ್ವರಗಳ ಮೇಲಿರುತ್ತದೆ ಅರ್ಥವು ಅಧ್ವಾನವಾಗಬಾರದು ಗಮಕದಲ್ಲಿ ಸಂಗೀತವು ಮಿತವಾಗಿದ್ದರೆ ಹಿತವಾಗಿರುತ್ತದೆ.

ಈ ನವೀನ ಕಾಲದಲ್ಲಿ ನಾವುಗಳು ದೇವಾಲಯಗಳಿಗೆ ಹೋಗುವುದು ಕಡಿಮೆಯಾಗಿದೆ ಧರ್ಮ ಗ್ರಂಥಗಳ ಶ್ರವಣವಂತೂ ಅಪರೂಪವಾಗಿದೆ ಇದರ ಫಲವಾಗಿ ಜನರ ನೀತಿಯ ಮಟ್ಟ ಇಳಿಯುತ್ತಿದೆ, ಮನಶ್ಯಾಂತಿಯು ಅಳಿಯುತ್ತಿದೆ ಎಲ್ಲೆಲ್ಲಿಯೂ ಅಸಮಾಧಾನ. ಅತೃಪ್ತಿ, ಆಕ್ರೋಶ, ಹಿಂಸೆ, ನಿಂದೆ ಸ್ವಾರ್ಥ ಇತ್ಯಾದಿ ದುರ್ಗುಣಗಳು ಬೆಳೆಯುತ್ತಿವೆ ದೇಶದಲ್ಲಿ ಅನೀತಿ ಹೆಚ್ಚಿದಷ್ಟು ಕಷ್ಟ ಕಾರ್ಪಣ್ಯಗಳು ಹೆಚ್ಚುತ್ತವೆ, ಪಾಪ ಹೆಚ್ಚಿದಂತೆಲ್ಲಾ ಕ್ಷಾಮಡಾಮರಗಳು ಬರುತ್ತವೆಂದು ಹಿರಿಯರು ಹೇಳುತ್ತಾರೆ ಅನೀತಿಗೆ ಇಳಿಯಬಾರದು, ಪಾಪ ಕೆಲಸ ಮಾಡಬಾರದು. ಎಂಬುದನ್ನು ನಾವೆಲ್ಲರೂ ಒಪ್ಪುತ್ತೇವೆ. ಒಪ್ಪಿದುದನ್ನು ಆಚರಣೆಗೆ ತರುವ ಶ್ರದ್ಧೆ, ದೃಢಮನಸ್ಸು ನಮಗೆ ಬೇಕಾಗಿದೆ ಆ ಶ್ರದ್ಧೆ ಮತ್ತು ದೃಢಮನಸ್ಸು ಸದ್ಗ್ರಂಥ ಶ್ರವಣದಿಂದ ಉಂಟಾಗುತ್ತವೆ

SHARADAVILAS COLLEGE, MYSORE

Tutorial classes for the inter e x a m i n a t i o n of March 53 in languages & P.C M have been started P a r t i c u l a r s may be obtained from the office during working hours

Honorary Secretary

ಸಾಂಗ್ಲಿ ಹುಡುಗಿಯ ವಿಚಿತ್ರ ವರ್ತನೆ

ಸಾಂಗ್ಲಿಯ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಸುಮನ್ ಪಾಟೆ ಎಂಬ ೧೫ ವರ್ಷದ ವಿದ್ಯಾರ್ಥಿನಿಯು ದಿನಕ್ಕೆ ಎರಡು ಲೋಟ ಟೀ ಮತ್ತು ೩ ಚಮಚ ಸಕ್ಕರೆ ಮಾತ್ರ ಸೇವಿಸುತ್ತಿರುವಳೆಂದು ವರದಿಯಾಗಿದೆ

ಹೊಸ ಚಾಡಿಗೆ ಹಕೋಟ ಅಧಿಕಾರಿಗಳು

ಅಡಿಷನಲ್ ಫಸ್ಟ್ ಮುನ್ಸೀಫರಾದ ಶ್ರೀ ಟಿ ರಾಮಸ್ವಾಮಿಯವರನ್ನು ಮೈಸೂರು ನಗರದ ಚಾಡಿಗೆ ಹಕೋಟ ಅಧಿಕಾರಿಯಾಗಿ ನೇಮಿಸಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩೦ ಚಿತ್ರ ಜಗತ್ತು ಮಧ್ಯಾಹ್ನ ೧.೩೦ ಗಿಟಾರ್ ೩ ಬಾಲ ಜಗತ್ತು ಸಂಜೆ ೪.೩೦ ಸುತ್ತು ೭ ಎಂ ಎಸ್ ಕೃಷ್ಣಪ್ಪ ಪಿಟೀಲು. ೬.೧೦ ಸಾವಿತ್ರೀ ೬.೨೦ ವನಿತಾ ವಿಹಾರ ೮ ಸೀತೂ ಮಾಧವ ರಾವ್-ಪುರಂದರ ದಾಸರ ಚರಿತ್ರೆ ಕಥೆ ೯.೧೫ ಉತ್ಪಲ ಸೆನ್, ರಾತ್ರಿ ಸಂಗೀತ. ೯.೩೦ ಕೊಂಕಣಿ ಕೃ.

ಮೈಸೂರು ಪೇಟೆ ಧಾರಣೆ

	ಪಲ್ಲ ಗೆ	ರೂ.ಅದ	ರೂ.ಗೆ
ಕಡಲೆಬೀಜ	[illegible]	[illegible]
ಎಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಕಡಲೆಕಾಳು	[illegible]	[illegible]
ಮೆಣಸಿನಕಾಯಿ	[illegible]	[illegible]
ಅವರೆ	[illegible]	[illegible]
ಹೊಂಗೆಬೀಜ	[illegible]	
ಮೆಣಸಿನಕಾಯಿ		
ಮಡಿ ಗೆ	[illegible]	[illegible]
ಹುಣಸೇಹಣ್ಣು	[illegible]	
ಬೆಲ್ಲ	[illegible]	
ಹೊಗೇಸೊಪ್ಪು	[illegible]	
ತೆಂಗಿನಕಾಯಿ,೧೦೦ ಗೆ	[illegible]	[illegible]

ಮಗನ ಚಿತೆಯ ಮೇಲೆ ತಾಯಿ ಹಾರಿದ ಪ್ರಸಂಗ

ಪೂರ್ವ ಬಂಗಾಳದ ಪಟಬಾಡಿನ ಬಳಿ ಒಂದು ಊರಿನಲ್ಲಿ ೭೫ ವರ್ಷದ ತಾಯೊಬ್ಬಳು ತನ್ನ ಮಗನ ಚಿತೆಯ ಮೇಲೆ ೫೦ ವರ್ಷದ ಸೊಸೆಯೊಡನೆ ಹಾರಿ ಆತ್ಮಾರ್ಪಣ ಮಾಡಿಕೊಂಡಳೆಂದು ವರದಿಯಾಗಿದೆ.

ಸಿದ್ಧಲಿಂಗಪುರದ ಜಾತ್ರೆಯಲ್ಲಿ ಅವ್ಯವಸ್ಥೆ

ಮೈಸೂರು ತಾಲ್ಲೂಕು ಸಿದ್ಧಲಿಂಗಪುರದಲ್ಲಿ ಕಳೆದ ಭಾನುವಾರ ನಡೆದ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಜಾತ್ರೆಯಲ್ಲಿ ಸರಿಯಾದ ವ್ಯವಸ್ಥೆಯಿಲ್ಲದೆ ಸಾರ್ವಜನಿಕರಿಗೆ ಬಹಳ ಅನಾನುಕೂಲವಾಯಿತು ಅನೇಕರಿಗೆ ದೇವರ ದರ್ಶನವೇ ದೊರೆಯಲಿಲ್ಲ ಪ್ರವೇಶ ದ್ವಾರವು ಕಿರಿದಾಗಿರುವುದರಿಂದ ಕಿಕ್ಕಿರಿದ ನಿಂತಿದ್ದ ಜನರನ್ನು ವ್ಯವಸ್ಥಿತವಾಗಿ ನಿಲ್ಲಿಸಲು ಪೋಲೀಸರು ಸಹಾಯಕರಾಗಲಿಲ್ಲ ಅನೇಕರು ದೇವಾಲಯದೊಳಗೆ ಹೋಗಲು ಸಾಧ್ಯವಾಗದೆ ಹೊರಗಡೆಯೇ ಕಾಯಿ ಒಡೆದು ನಿವೇದನ ಮಾಡಿ, ದೇವರ ದರ್ಶನವಾಗದೆ ನಿರಾಶರಾಗಿ ವಾಪಸು ಹೋದರು. ರಸ್ತೆಯಲ್ಲಿ ಟ್ರಾಫಿಕ್ ಪೋಲೀಸರು ಇದ್ದರೂ, ಸುವ್ಯವಸ್ಥಿತ ಓಡಾಟಕ್ಕೆ ಏರ್ಪಾಡಾಗಿರಲಿಲ್ಲ ಬ್ರಾಹ್ಮಣರಿಗೆಂದು ಏರ್ಪಡಿಸಿದ್ದ ಅನ್ನ ಸಂತರ್ಪಣೆಯಲ್ಲಿ ಸಾಲಾಗಿ ಕುಳಿತ ಜನರಿಗೆ ಬಡಿಸಿದ ದೊನ್ನೆಗಳಲ್ಲಿ ಅನ್ನವನ್ನು ಹಂಚಲು ಹೋಗಿ ಮತ್ತಷ್ಟು ಅವ್ಯವಸ್ಥೆಯಾಗಿ, ಜನರ ಮೇಲೆ ಅನ್ನವು ಚೆಲ್ಲಿತು. ಅನೇಕರಿಗೆ ಅನ್ನವೇ ಸಿಗದೆ ಬಳಲಿ ಹಿಂತಿರುಗಿದರು ಈ ರೀತಿಯ ಅವ್ಯವಸ್ಥೆಗಳು ಮುಂದಾದರೂ ನಡೆಯದಂತೆ ಅಧಿಕಾರಿಗಳೂ, ಪೋಲೀಸು ಇಲಾಖೆಯವರೂ ನೋಡಿಕೊಳ್ಳಬೇಕಾಗಿ ಬೇಡುತ್ತೇನೆ— ಎಂದು ಪ್ರತ್ಯಕ್ಷ ದರ್ಶಿಯೊಬ್ಬರು ತಿಳಿಸುತ್ತಾರೆ

ರಾಜಕಮಲ್, ಮೈಸೂರು

28-11-52 ರಿಂದ

ಅವಿಚ್ಛಿನ್ನ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಚಿನ್ನಮ್ಮಕಥಾ

ಜೆಮಿನಿ ಅವರ ತೆಲುಗು ಚಿತ್ರ

ಭೂಮಿಕೆ. - ಕೃಷ್ಣಕುಮಾರಿ, ಶೇಷಮಾಂಬ. ಬೇಬಿ ಅನ್ನಪೂರ್ಣ, ಡಾ|| ಸುಬ್ಬರಾವ್, ಶಿವರಾವ್ ಮುಂತಾದವರು

ಪ್ರಭುದೇವಾ ಟಾಕೀಸ್

ಪ್ರತಿದಿನ ೩ ಪ್ರದರ್ಶನಗಳು

28-11-52 ನೇ ಶುಕ್ರವಾರದಿಂದ ಪ್ರಾರಂಭ

ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ

★ ದಾಸಿ ★

ಪಾತ್ರ— ಲಕ್ಷ್ಮಿರಾಜ್ಯಂ, ಎಸ್. ವಿ. ರಂಗರಾವ್, ರೇಲಂಗಿ, ಶಿವರಾವ್,

ನೋಡಲು ತಾಯ್ನಾಡು ವಾರಕಾಲ ಎಲ್ಲ ವಿಷಯದ ಶಾಂತಿಯಿಂದಿರಿ ಮತ್ತು ಶ್ರೀ ಹಸುಗಳನ್ನು ಮನ್ನಾ ಮಾಡಲಾಗಿದೆ

Edited, Printed and Published by A. R. Nagarajan at Sadhvi Press, D. Subbiah Road, Mysore.

ಅಲಪ್ರು.. ನಂ. 798 ||ವಂದೇ ಮಾತರಂ|| ಇಂದಿನ ಪತ್ರಿಕೆ ೪ ಕಾಸು

ಸಾಧ್ವಿ

ಸಂಪುಟ ೧೦] ಶನಿವಾರ ೨೯-೧೧ ೧೯೫೨ [ಸಂಚಿಕೆ ೧೦೧

ಪ್ರಭುಗಳಲ್ಲಿ ಗೋವಧೆ ನಿರೋಧದ ನಿಯೋಗ

ಪರೀಕ್ಷೆಯಲ್ಲಿ ಫೇಲಾದ ತರುಣಿಯ ಆತ್ಮಹತ್ಯೆ

ಬೆಂಗಳೂರು ೨೮

ಕಳೆದ ಸೆಪ್ಟೆಂಬರ್ ಸಪ್ಲಿಮೆಂಟರಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತು ಉತ್ತೀರ್ಣಳಾಗದೆ ಹೋದುದರಿಂದ ... ಇಲ್ಲಿನ ಶ್ರೀ ಬಿ. ಎಸ್. ಚಂದ್ರಶೇಖರರಾಯರ ಪುತ್ರಿ, ... ಎಂಬ ೨೦ ವರ್ಷ ವಯಸ್ಸಿನ ... ಮೊನ್ನೆ ದಿನ ತನ್ನ ಮನೆಯ ... ಕೊಠಡಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡು ... ವರದಿಯಾಗಿದೆ. ಪರೀಕ್ಷೆಯ ಪರಿಣಾಮವು ತಿಳಿದಂದಿನಿಂದಲೂ ಆಕೆ ... ಯಾಗಿದ್ದಳೆಂದೂ, ಆಕೆಗೆ ... ಬುದ್ಧಿ ಭ್ರಮಣೆಯೂ ಸಹ ಉಂಟಾಗಿತ್ತೆಂದೂ ಹೇಳಲಾಗಿದೆ.

ಸಂಸ್ಥಾನದ ನೀರಾವರಿ ಕೆಲಸಗಳಿಗಾಗಿ ೬೫ ಲಕ್ಷ ರೂ.

ಮುಂದಿನ ಸಾಲಿನಲ್ಲಿ ಕೇಂದ್ರ ಸರ್ಕಾರವು ... ಸಂಸ್ಥಾನಗಳ ನೀರಾವರಿ ... ಕಾರ್ಯಗಳಿಗಾಗಿ ಹತ್ತು ಕೋಟಿ ... ಮಂಜೂರು ಮಾಡಿರುವರೆಂದೂ, ... ಮೈಸೂರಿಗೆ ೬೫ ಲಕ್ಷ ರೂ ಗಳನ್ನು ... ನೀಡಲಾಗುವುದೆಂದೂ ಕೇಂದ್ರ ... ಸರ್ಕಾರದ ... ವ್ಯವಸಾಯ ಸಚಿವ ... ಅಹಮದ್ ಕಿದ್ವಾಯಿಯವರು ತಿಳಿಸಿರುವರು.

ಭಾರತದ ಕೊರಿಯಾ ಶಾಂತಿ ಸಲಹೆಗೆ ಅಮೇರಿಕದ ಒಪ್ಪಿಗೆ

... ಹೋಗಲು ನಿರಾಕರಿಸುವ ಕೊರಿಯಾ ಯುದ್ಧ ಖೈದಿಗಳ ಅನಿಶ್ಚಿತ ... ಬಂಧನದ ಬಗ್ಗೆ ಅಮೇರಿಕವು ಮಾಡಿದ್ದ ಹಲವು ಆಕ್ಷೇಪಣೆಗಳ ಬಗ್ಗೆ ... ತೃಪ್ತಿಕರ ಉತ್ತರ ದೊರೆತಿರುವುದರಿಂದ ಅಮೇರಿಕವು ಈಗ ಭಾರತದ ಕೊರಿಯಾ ಶಾಂತಿ ಸಲಹೆಯನ್ನು ಅಂಗೀಕರಿಸಬಹುದೆಂದು ಅಮೇರಿಕದ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಚುನಾವಣಾ ಕಣಕ್ಕೆ ಇಳಿಯಲು ಅರ್ಜಿ ವಜಾ

ಮೈಸೂರು ತಾಲ್ಲೂಕು ಕಾಂಗ್ರೆಸ್ ... ಪ್ರತಿನಿಧಿ ಸ್ಥಾನದ ಚುನಾವಣೆಯಲ್ಲಿ ... ಅಕ್ರಮಗಳು ನಡೆದುವೆಂದು ... ತಾಲ್ಲೂಕು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ... ಯವರು ಹೂಡಿದ್ದ ತಕರಾರು ... ಅರ್ಜಿಯನ್ನು ಜಿಲ್ಲಾ ಚುನಾವಣಾ ... ಶ್ರೀ ಕೆ. ... ಯವರು ... ಕಾಂಗ್ರೆಸ್ ಅಂಗ ... ಉಮೇದುವಾರರು ... ತಕರಾರು ಅರ್ಜಿಯನ್ನು ವಜಾ ಮಾಡಲಾಗಿದೆ.

ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ

... ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ ಕೆಳಕಂಡ ಸದಸ್ಯರಿರುತ್ತಾರೆ:— ಶ್ರೀ ... ಜಿ. ದಾಸ್, ಬಿ. ಕೆ. ... ಶ್ರೀಕಂಠಪ್ಪ, ಶ್ರೀಕಂಠಶರ್ಮ, ... ತಿಮ್ಮಯ್ಯ, ಬಿ. ಸುಬ್ಬಣ್ಣ ... ಕೆ. ವಿಶ್ವನಾಥ್, ಟಿ. ... ರಾವ್, ಎಸ್. ಎಂ. ಸಿದ್ದ ... ಮತ್ತು ... ಹುಸೇನ್ ...

ಕಾಂಗ್ರೆಸ್ ಅಧ್ಯಕ್ಷತೆಗೆ ನಿಜಲಿಂಗಪ್ಪನವರ ಹೆಸರು

ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷತೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರ ಹೆಸರನ್ನು ಹಾಸನದ ಶ್ರೀ ಹಾರ್ನಹಳ್ಳಿ ರಾಮಸ್ವಾಮಿ ಮತ್ತು ಇನ್ನು ಹಲವರು ಜನ ಪ್ರತಿನಿಧಿಗಳು ಸೂಚಿಸಿರುತ್ತಾರೆ. ಶ್ರೀ ನಿಜಲಿಂಗಪ್ಪನವರು ಈಗ ಕಾರ್ಯಕಾರಿ ಸಮಿತಿಯ ಸದಸ್ಯರೂ ಆಗಿರುವರು.

ಆಫ್ರಿಕಾ ನಾಯಕರ ಮೇಲೆ ಗುಂಡುಹೊಡೆಯಲು ಶಾಸನ

ಗಲಭೆಗಳನ್ನು ತಡೆಯುವ ಬಗ್ಗೆ ಉಗ್ರಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸರ್ಕಾರಕ್ಕೆ ಅಧಿಕಾರ ಕೊಡುವಂತಹ ಒಂದು ಮಸೂದೆಯನ್ನು ದಕ್ಷಿಣ ಆಫ್ರಿಕದ ಪಾರ್ಲಿಮೆಂಟ್ ಸಭೆಯು ಬರುವ ಜನವರಿ ೨೩ ನೇ ತಾರೀಕು ಆರಂಭವಾದಾಗ ಮಂಡಿಸಲ್ಪಡುವುದೆಂದೂ, ಅದರ ಪ್ರಕಾರ ದಂಗೆಯ ಪ್ರಸಂಗಗಳಲ್ಲಿ ಪೋಲೀಸರು ಮನ ಬಂದಂತೆ ಗುಂಡುಹಾರಿಸಿ ನಾಯಕರ ಕಡೆ ಗುರಿಯಿಟ್ಟು ಹೊಡೆಯುವಂತೆ ಅವಕಾಶ ಕಲ್ಪಿಸಲಾಗುವುದೆಂದೂ ಅಲ್ಲಿನ ನ್ಯಾಯಾಂಗ ಮಂತ್ರಿ ಚಾರಲ್ಸ್‌ಸ್ವಾರ್ಟ್‌ರವರು ತಿಳಿಸಿರುವರು.

ವಿದ್ಯುಚ್ಛಕ್ತಿ ಮತ್ತು ಪೋರ್ಸಿಲೇನ್ ಕಾರ್ಖಾನೆ ಬೋರ್ಡುಗಳ ರದ್ದು

ಸರ್ಕಾರದ ವಿದ್ಯುಚ್ಛಕ್ತಿ ಮತ್ತು ಪೋರ್ಸಿಲೇನ್ ಕಾರ್ಖಾನೆಗಳ ಆಡಳಿತ ಸಮಿತಿಗಳನ್ನು ರದ್ದುಗೊಳಿಸಲಾಗಿದೆ. ಸಂಸ್ಥಾನದ ಎಲ್ಲ ಕೈಗಾರಿಕೆಗಳಿಗೂ ಒಂದೇ ಕೇಂದ್ರ ಸಮಿತಿಯನ್ನು ಸರ್ಕಾರದವರು ಏರ್ಪಡಿಸುವ ಪೂರ್ವಭಾವಿಯಾಗಿ ಈ ಕ್ರಮವನ್ನು ಕೈಗೊಳ್ಳಲಾಗಿರುವುದೆಂದು ಹೇಳಲಾಗಿದೆ.

ಅಂತರ ಪ್ರೌಢ ಶಾಲಾ ಅಕು ಭಾಷಣ ಸ್ಪರ್ಧೆ

ದಿವಂಗತ ಎಸ್. ಎಸ್. ಸುಬ್ಬರಾಯರ ಸ್ಮಾರಕ ಅಂತರ ಪ್ರೌಢ ಶಾಲಾ ಅಕು ಭಾಷಣ ಸ್ಪರ್ಧೆಯ ಶಾರದಾವಿಲಾಸ ಹೈಸ್ಕೂಲಿನಲ್ಲಿ ನಾಳೆ ಬೆಳಿಗ್ಗೆ ೮|| ಗಂಟೆಗೆ ನಡೆಯುವುದು.

ಗೋ ಸಂಪತ್ತಿನ ರಕ್ಷಣೆಗೆ ಹೆಚ್ಚು ಗಮನ ಕೊಡಬೇಕು

ಗೋವಧೆ ನಿರೋಧ ಚಳುವಳಿಯ ನಿಯೋಗಕ್ಕೆ ಪ್ರಭುಗಳ ಸೂಚನೆ

ಮೈಸೂರು ೨೮

ಗೋವಧೆಯನ್ನು ಸರ್ಕಾರವು ನಿರೋಧಿಸಬೇಕೆಂದು ಪ್ರಾರ್ಥಿಸಲು ಮಾಜಿ ಮಂತ್ರಿಗಳಾದ ಶ್ರೀಗಳು ಸಿ. ಹೆಚ್. ಕೃಷ್ಣರಾವ್, ಕಾಸಿಂದಿ ಸುಬ್ಬರಾಮಶೆಟ್ಟಿ ಮತ್ತು ಯಜಮಾನ್ ... ಜೋಷಿ ಪ್ರಮುಖರನ್ನು ಒಳಗೊಂಡ ... ಕೆ ... ಸೂರ್ಯನಾರಾಯಣ ರಾವ್, ಬಿ. ಜಿ. ... ಸುಬ್ರಹ್ಮಣ್ಯ ಸ್ವಾಮಿ ಇವರುಗಳ ನಿಯೋಗದವರು ಈ ದಿನ ಬೆಳಿಗ್ಗೆ ಶ್ರೀಮನ್ ಮಹಾರಾಜರನ್ನು ಭೇಟಿ ಮಾಡಿ ಒಂದು ಮನವಿಯನ್ನು ಅರ್ಪಿಸಿದರು. ಪ್ರಭುಗಳು ಚಳುವಳಿಯ ಅಭಿಪ್ರಾಯಕ್ಕೆ ತಮ್ಮ ಸಹಾನುಭೂತಿ ಮತ್ತು ಬೆಂಬಲಗಳನ್ನು ವ್ಯಕ್ತಪಡಿಸಿದರು. ಗೋವಧೆಯ ನಿರೋಧವೊಂದಕ್ಕೇ ಅಲ್ಲದೆ ಗೋ ಸಂಪತ್ತಿನ ರಕ್ಷಣೆಗೂ ಗಮನ ಕೊಡಬೇಕೆಂದೂ, ಇವಕ್ಕಾಗಿ ದೇಶದಲ್ಲಿ ಗೋ ಶಾಲೆಗಳನ್ನು ಅಭಿವೃದ್ಧಿಪಡಿಸಬೇಕೆಂದೂ ಅವರು ಸೂಚಿಸಿದರು.

ಮನವಿಯಲ್ಲಿ ಸಂಸ್ಥಾನದೊಳಕ್ಕೆ ಗೋ ಮಾಂಸದ ಆಮದನ್ನು ನಿಷೇಧಿಸಬೇಕೆಂದೂ ಪ್ರಾರ್ಥಿಸಲಾಗಿತ್ತು. ಗೋ ರಕ್ಷಣೆ ನಿರೋಧವು ಪವಿತ್ರತಮ ವಿಷಯವೆಂದೂ ನಿಯೋಗದವರು ಒತ್ತಿ ಹೇಳಿದರು.

ಭೇಟಿಯಾದ ನಂತರ ನಿಯೋಗದವರು ಒಂದು ಪತ್ರಿಕಾ ಗೋಷ್ಠಿಯನ್ನು ನಡೆಸಿ ಗೋ ವಧಾ ನಿರೋಧಕ್ಕಾಗಿ ಇದುವರೆಗೂ ಸಂಸ್ಥಾನದಲ್ಲಿ ೫ ಲಕ್ಷ ಜನರ ಸಹಿಗಳನ್ನು ಸಂಗ್ರಹಿಸಲಾಗಿದೆಯೆಂದೂ, ಈ ಚಳುವಳಿಯಲ್ಲಿ ಯಾವ ರಾಜಕೀಯವೂ ಇಲ್ಲವೆಂದೂ ಚಳುವಳಿಯು ಮುಖ್ಯವಾಗಿ ಸಹಿಯನ್ನು ಪಕ್ಕಕ್ಕೆ ಸಾಮಾಜಿಕ ಶಿಕ್ಷಣವು ಅಗತ್ಯವೆಂದೂ ನುಡಿದರು.

ಮಹಿಳೆಯರ ಅಪಹಾರಕ್ಕಾಗಿ ದಸ್ತಗಿರಿ

೧೬ ರಿಂದ ೨೦ ವಯಸ್ಸಿನೊಳಗಿನ ಯುವತಿಯರನ್ನು ಅಪಹರಿಸಿ, ಅವರನ್ನು ಉತ್ತರ ಭಾರತದ ನಾನಾ ಊರುಗಳಲ್ಲಿ ಮಾರುತ್ತಿದ್ದನೆಂದು ಕೋಲಾರದ ಚಿನ್ನದ ಗಣಿ ಬಳಿ ಇರುವ ಬೇತಮಂಗಲದ ಶರೀಫ್ ಅಲಿಯಾಸ್ ಕೃಷ್ಣರೆಡ್ಡಿ ಎಂಬಾತನನ್ನು ಕುಪ್ಪಂ ಪೋಲೀಸರು ಬಂಧಿಸಿರುವರೆಂದು ವರದಿಯಾಗಿದೆ. ಅವನು ಇಂತಹ ಕೃತ್ಯಗಳ ಗ್ಯಾಂಗೊಂದರ ಸದಸ್ಯನೆಂದು ಹೇಳಲಾಗಿದೆ.

ಉಪವಾಸ ನಿಲ್ಲಿಸುವಂತೆ ಕಣ್ಣಾರವರಿಗೆ ತಂತಿ

ಬೆಂಗಳೂರು ೨೮

ಮೈಸೂರು ... ಶ್ರೀ ಕೆ. ಕಣ್ಣಾರವರು ಉಪವಾಸ ನಿಲ್ಲಿಸುವಂತೆ ಬೆಂಬಲಿಸುತ್ತ ಪ್ರಜಾ ಸಮಾಜವಾದಿ ಪಕ್ಷದ ಮುಖಂಡರುಗಳಾದ ಮಹಾರಾಷ್ಟ್ರದ ಎಸ್. ಎಂ. ಜೋಷಿ ಮತ್ತು ಬೆಂಗಳೂರಿನ ಶ್ರೀ ಹಿ. ಜಿ. ಕೆ. ರೆಡ್ಡಿಯವರು ತಂತಿ ಕಳುಹಿಸಿ, ಮುಷ್ಕರದ ಕಾರಣಗಳನ್ನು ಕುರಿತು ತನಿಖೆ ನಡೆಸಲು ಸಮಿತಿಯೊಂದನ್ನು ನೇಮಿಸಬೇಕೆಂಬ ವಿಷಯವು ಪರಿಶೀಲನೆಯಲ್ಲಿ ಇದ್ದುದರಿಂದ ... ದೆಯೆಂದು ತಿಳಿಸಿರುತ್ತಾರೆ. ಈ ದಿನ ಜಾಥ ಮಾಡಿದಿಗರೂ ... ಕಾರ್ಮಿಕರು ಉಪವಾಸದ ಬಗ್ಗೆ ಸಹಾನುಭೂತಿಯನ್ನು ತೋರಿಸಲು ಮೆರವಣಿಗೆ ಹೊರಟು ... ಬಳಿಗೆ ಬಂದಾಗ, ಪೋಲೀಸರು ಬೇರೆ ಮಾರ್ಗದಲ್ಲಿ ಹೋಗುವಂತೆ ಅವರಿಗೆ ಹೇಳಿದರು. ಅಧಿಕಾರಿಗಳ ದಬ್ಬಾಳಿಕೆಯ ... ಉಪವಾಸ ಮುಷ್ಕರಕ್ಕೆ ಕಾರಣವೆಂದು ಗೊತ್ತಾಗಿದೆ.

ಬಿಹಾರ್ ಕಾಂಗ್ರೆಸ್ಸಿನ ಚುನಾವಣೆಯಲ್ಲಿ ದೊಂಬಿ

ಅಖಿಲ ಭಾರತ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯು ನೆನ್ನೆ ನಡೆದ ಸಂದರ್ಭಗಳಲ್ಲಿ ದೊಂಬಿ, ಹೊಡೆದಾಟ ಮತ್ತು ಬ್ಯಾಲೆಟ್ ಪೆಟ್ಟಿಗೆಗಳ ಕಿತ್ತಾಟ ಇವೇ ಮೊದಲಾದ ಅನುಚಿತ ವರ್ತನೆಗಳು ನಡೆದ ಪ್ರಸಂಗವು ಬಿಹಾರಿನ ರಾಂಚಿ,ಸರಣ ಮತ್ತು ಚಮೂರ್ ಎಂಬ ಕ್ಷೇತ್ರಗಳಿಂದ ವರದಿಯಾಗಿದೆ. ಗೋಪಾಲಗಂಜ್ ಎಂಬಲ್ಲಿ ಚುನಾವಣಾಧಿಕಾರಿಯಾದ ಒಬ್ಬ ಕಾಂಗ್ರೆಸ್ ಪ್ರಮುಖರು ಚುನಾವಣೆಯನ್ನು ಮುಂದೆ ಹಾಕಲು ಒಪ್ಪದಿದ್ದುದಕ್ಕಾಗಿ ಹಲವು ಕಾಂಗ್ರೆಸ್ಸಿನವರು ಒಂದು ಕೋಣೆಯಲ್ಲಿ ಕೂಡಿ ಬೀಗ ಹಾಕಿದ್ದರೆಂದೂ, ಅವರ ಕೈಲಿದ್ದ ಬ್ಯಾಲೆಟ್ ಪೇಪರುಗಳನ್ನು ಕಿತ್ತುಕೊಳ್ಳಲಾಯಿತೆಂದೂ ತಿಳಿದುಬಂದಿದೆ.

ಆಸ್ಪತ್ರೆ ಕಟ್ಟಡಕ್ಕೆ ಬೆಂಕಿ ಬಿದ್ದು ೧೫ ಜನರ ಮರಣ

ಅಮೇರಿಕದ ಸಂಯುಕ್ತ ಸಂಸ್ಥಾನದ ವರ್ಜಿನಿಯದ ಹಂಟಿಂಗ್‌ಟನ್ ಸ್ಟೇಟ್ ಆಸ್ಪತ್ರೆಯ ಮೂರು ಅಂತಸ್ತಿನ ಕಟ್ಟಡದಲ್ಲಿ ಕಳೆದ ಬುಧವಾರ ರಾತ್ರಿ ಬೆಂಕಿಯುಂಟಾಗಿ ೧೧ ಮಂದಿ ಹುಚ್ಚುಗಿಯರೂ, ಇತರ ನಾಲ್ಕು ಮಂದಿ ಸ್ತ್ರೀಯರೂ ಮೃತಪಟ್ಟರೆಂದು ವರದಿಯಾಗಿದೆ.

ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷರು

ಮೈಸೂರು ಪೌರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರನ್ನು ಅರಗು ಮತ್ತು ಬಣ್ಣದ ಕಾರ್ಖಾನೆಯ ಅಧ್ಯಕ್ಷರನ್ನಾಗಿ ಸರ್ಕಾರದವರು ನೇಮಿಸಿರುವರು. ಅವರ ನೇಮಕದ ಅವಧಿಯು ೨ ವರ್ಷ ಕಾಲವಿದ್ದು, ಅವರಿಗೆ ೪೦೦ ರೂ. ಗೌರವ ವೇತನವನ್ನು ಕೊಡಲಾಗುವುದು.

ಆಲಹಾಬಾದಿನಿಂದ ಹಲವು ಮಂದಿ ವಿಲಿಟರಿಯವರನ್ನೂ ಮತ್ತು ಅವರ ಸಂಬಂಧಿಕರನ್ನೂ ಹೊತ್ತು ವಾಷಿಂಗ್ಟನ್ನಿನ ಅಭಿಮುಖವಾಗಿ ಹೊರಟ ವಿಮಾನವೊಂದು ನೆನ್ನೆ ಆಸ್ಫೋಟಿಸಿ ಅವರಲ್ಲಿದ್ದ ೩೭ ಜನರು ಮೃತಿಹೊಂದಿರಬಹುದಾಗಿ ಶಂಕಿಸಲ್ಪಟ್ಟಿರುವರೆಂದು ವರದಿಯಾಗಿದೆ.

ಕಂದಾಯ ವಸೂಲಿಯಲ್ಲಿ ಲೋಪ

ಪುರಸಭಾಧಿವೇಶನದಲ್ಲಿ ವಿವರಣೆ

ಮೈಸೂರು ೨೭

ನೆನ್ನೆ ಮಧ್ಯಾಹ್ನ ಪುರಸಭೆಯ ಸಾಮಾನ್ಯ ಅಧಿವೇಶನವು ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದಲ್ಲಿ ಆರೋಗ್ಯ ಇಲಾಖೆಯವರ ಪರಿಶೀಲನೆಯಲ್ಲಿನ ಕುಂದುಕೊರತೆಗಳು ಮತ್ತು ಕೆಸರೆ ಬ್ಲಾಕಿನಲ್ಲಿ ನೀರಿನ ಅಭಾವ ಮುಂತಾದ ಕೆಲವು ತೊಂದರೆಗಳನ್ನು ಕೆಲವು ಸದಸ್ಯರು ಅಧ್ಯಕ್ಷರಲ್ಲಿ ನಿವೇದಿಸಿದರು ಅಧ್ಯಕ್ಷರು ಕೆಲಸ ಕಾರ್ಯಗಳಿಗೆ ಇರುವ ಕೆಲವು ಅಡ್ಡಿ ಆತಂಕಗಳನ್ನು ವಿವರಿಸಿ ಕುಂದುಕೊರತೆಗಳನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತರು

ಪೌರಸಭಾ ರೆವಿನ್ಯೂ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಕ್ರಮವಾಗಿ ನಡೆಯದೇ ಇರುವ ಕಾರಣದಿಂದ ಕಂದಾಯದ ವಸೂಲಿಯು ತೃಪ್ತಿಕರವಾಗಿಲ್ಲವೆಂದ ಶ್ರೀ ಎ. ವೆಂಕಟೇಶಯ್ಯನವರು ಹೇಳಿ. ತಾವೇ ಕಂದಾಯವನ್ನು ಕೊಡಲು ಹೋದಾಗ ಕಛೇರಿಯಲ್ಲಿ ಸಂಬಂಧಪಟ್ಟ ನೌಕರರೇ ಇಲ್ಲದಿದ್ದ ಪ್ರಸಂಗವನ್ನು ವಿವರಿಸಿದರು ಕಮಿಷನರು ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಭರವಸೆಯಿತ್ತರು

ಇನ್ನು ಮುಂದೆ ಸಂಸ್ಥಾನದಲ್ಲಿನ ಪುರಸಭೆಗಳು (ಬೆಂಗಳೂರು ಮೈಸೂರು ಮುಂತಾದ ನಗರ ಸಭೆಗಳೂ ಸೇರಿ) ಮತ್ತು ಗ್ರಾಮ ಪಂಚಾಯಿತಿಗಳು ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೂ ಮತ್ತು ಹಳೆಯವನ್ನು ರಿಪೇರಿ ಮಾಡುವುದಕ್ಕೂ ರಹದಾರಿ ಕೊಡುವಾಗ ವಿದ್ಯುಚ್ಛಕ್ತಿ ಇಲಾಖೆಯವರೊಡನೆ ಸಮಾಲೋಚಿಸಬೇಕೆಂಬ ಸರ್ಕಾರಿ ಆಜ್ಞೆಯನ್ನು ವಿದ್ಯುಚ್ಛಕ್ತಿ ಇಲಾಖೆಯೂ ಹೊಸ ಲೈನ್‌ಗಳನ್ನು ಹಾಕುವಾಗ ಪುರಸಭೆಗಳನ್ನು ಕೇಳಬೇಕೆಂಬ ಸೂಚನೆಯೊಡನೆ ಅಂಗೀಕರಿಸಲಾಯಿತು

ಜ|| ಎಸಾರ್ ನೂರ್ ಹುಸೇನರು ಕೇಳಿದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವಿತ್ತು ನಗರದಲ್ಲಿ ೫೮೨ ಬೀದಿ ನಲ್ಲಿಗಳೂ ಮತ್ತು ೨೬೦೭ ಬೀದಿ ದೀಪಗಳೂ ಇವೆಯೆಂಬೂ, ಆದರೆ ಬೀದಿ ದೀಪಗಳ ಮೊಹಲ್ಲಾವಾರು ಪಟ್ಟಿಯನ್ನು ಪುರಸಭೆಯು ಹೊಂದಿಲ್ಲವೆಂದೂ, ಕಳೆದ ೫ ವರ್ಷಗಳಲ್ಲಿ ೬೦ ಬೀದಿ ನಲ್ಲಿಗಳನ್ನೂ ಮತ್ತು ೩೩೩ ಬೀದಿ ದೀಪಗಳನ್ನು ಹೊಸದಾಗಿ ಹಾಕಿಸಲಾಗಿದೆಯೆಂದೂ ತಿಳಿಸಿದರು.

ನಗರದಲ್ಲಿ ವಿದೇಶೀಯರ ಹೆಸರುಗಳಿರುವ ಕಟ್ಟಡಗಳಿಗೆ ಮತ್ತು ಬೀದಿಗಳಿಗೆ ರಾಷ್ಟ್ರೀಯ ಮುಖಂಡರ ಮತ್ತು ಐತಿಹಾಸಿಕ ವ್ಯಕ್ತಿಗಳ ಹೆಸರುಗಳನ್ನಿಡಬೇಕೆಂಬ ನಿರ್ಣಯವನ್ನು ಜ|| ಎಸಾರ್ ನೂರ್ ಹುಸೇನರು ತಂದರು ಶ್ರೀ ಬಿ ಡಿ ದಾಸರು ಅನುಮೋದಿಸಿದರು ಪುರಸಭೆಯ ಅಧೀನದಲ್ಲಿರುವ ಯಾವ ಕಟ್ಟಡ ಅಥವಾ ಬೀದಿಗಳಿಗೂ ವಿದೇಶೀಯರ ಹೆಸರುಗಳಿಲ್ಲವೆಂದು ಶ್ರೀಗಳಾದ ಕೆ ಪುಟ್ಟಸ್ವಾಮಿ. ಮತ್ತು ಟಿ ನರಸಿಂಹಯ್ಯಂಗಾರ್ಯರು ತಿಳಿಸಿದರು ನಿರ್ಣಯವು ತಿರಸ್ಕೃತವಾಯಿತು

ನಗರದಲ್ಲಿ ಗೃಹ ಸಮಸ್ಯೆ, ಜನರ ವಸತಿ ಸೌಕರ್ಯ ಮತ್ತು ಆರೋಗ್ಯ ಇವುಗಳನ್ನು ಕುರಿತು ಆಮೂಲಾಗ್ರವಾದ ಪರಿಶೀಲನೆ ನಡೆಸುವ ಬಗ್ಗೆ ಬಂದ ನಿರ್ಣಯವನ್ನು ಕಾರ್ಯಕಾರಿ ಸಮಿತಿಗೆ ಒಪ್ಪಿಸಲಾಯಿತು

ಚಾಮರಾಜಮೊಹಲ್ಲಾ ದಿನಾಚರಣೆ

ಮೈಸೂರು ೨೭

ರಾಜಧಾನಿಯ ಪೌರಸಭೆಯವರು ಬರುವ ತಿಂಗಳು ೩ ನೇ ತಾ|| ಬುಧವಾರ ಚಾಮರಾಜಮೊಹಲ್ಲಾ ದಿನಾಚರಣೆಯನ್ನು ನೆರವೇರಿಸಲಿರುವರು ಆ ದಿನ ಬೆಳಗ್ಗೆ ನಿರ್ಮಲೀಕರಣ, ರಸ್ತೆಗಳ ರಿಪೇರಿ, ಗರ್ಭಿಣಿಯರ ಮತ್ತು ಮಕ್ಕಳ ಪರೀಕ್ಷೆ, ದೀಪ ಹಾಕುವುದು. ಇವುಗಳನ್ನು ನಡೆಸಲಾಗುವುದು ಸಂಜೆ ೬|| ಗಂಟೆಗೆ [illegible]ಪುರದ ಶಿವವಿಹಾರದ ಸಮೀಪದಲ್ಲಿ ಬಹಿರಂಗ ಸಭೆಯೊಂದು ನಡೆಯುವುದು ಮಹಾಜನರು ಸಹಕರಿಸಬೇಕೆಂದು ಪೌರಸಭಾಧ್ಯಕ್ಷರು ಕೋರಿರುತ್ತಾರೆ

ನವಚೀನಾ ಸಾಹಿತ್ಯದ ಬಗ್ಗೆ ಉಪನ್ಯಾಸ

ರಾಜಧಾನಿಯ ಇಂಡಿಯಾ-ಚೀನಾ ಸ್ನೇಹ ಸಂಘ ಮತ್ತು ಸಾರ್ವಜನಿಕ ವಿಚಾರ ಸಂಸ್ಥೆಗಳ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ [illegible]ಲ್ಲಿ ಸೇರುವ ಸಾರ್ವಜನಿಕ ವಿಚಾರಗೋಷ್ಠಿಯಲ್ಲಿ ನವಚೀನಾದ ಹೊಸ ಸಾಹಿತ್ಯ ಎಂಬ ವಿಷಯವಾಗಿ ಶ್ರೀ ತ. ರಾ. ಸುಬ್ಬರಾಯರು ಉಪನ್ಯಾಸ ಮಾಡುವರು ಶ್ರೀ ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ

ನಾಟಕಾಭಿನಯ

ರಾಜಧಾನಿಯ ಮಂಡಿ ಮೊಹಲ್ಲಾ ಬೆಂಕಿ ನವಾಬರ ಬೀದಿಯ ಕೋಣನ ಕೊಟ್ಟಿಗೆಯಲ್ಲಿ ಈ ರಾತ್ರಿ ೧೦-೩೦ಕ್ಕೆ ಕುಂಬಾರಗೇರಿಯವರು "ಗಂಗೆ ಗೌರಿ" ಎಂಬ ನಾಟಕವನ್ನು ಅಭಿನಯಿಸುವರು

ನಗರದಲ್ಲಿ ಸಂಸ್ಕೃತಿ ಪ್ರಸಾರೋತ್ಸವ

ಮೈಸೂರು ೨೭

ನಗರದ ನಾನಾ ಕಡೆಗಳಲ್ಲಿ ಮೊನ್ನೆ ಸಂಸ್ಕೃತಿ ಪ್ರಸಾರೋತ್ಸವವು ನಡೆಯಿತು ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ಅಂಟಿ ಸುಬ್ರಹ್ಮಣ್ಯ ಅಯ್ಯರ್ ರವರ ಅಧ್ಯಕ್ಷತೆಯಲ್ಲಿ ಸಮಾರಂಭವು ಜರುಗಿ, ರಾಜ ಪ್ರಮುಖರ ಸಂದೇಶವನ್ನು ಓದಲಾಯಿತು ಸಾಹಿತ್ಯ ಸಹಾಯೋಪಾಧ್ಯಾಯರಾದ ಶ್ರೀ ಎಂ ಜಿ ನಂಜುಂಡಾರಾಧ್ಯರು ಯೋಜನೆಯ ಉದ್ದೇಶವನ್ನು ವಿವರಿಸಿದರು ರಾಮಾಯಣದ ಸಂಸ್ಕೃತಿಯ ವಿಷಯವನ್ನು ಕುರಿತು ಪಂಡಿತರತ್ನಂ ಎಂ ಎಸ್ ವೆಂಕಟೇಶ ಶಾಸ್ತ್ರಿಗಳು ಭಾಷಣ ಮಾಡಿದರು ಮಹಾಪಾಠಶಾಲೆಯ ಅಧ್ಯಕ್ಷ, ಶ್ರೀ ಎಂ. ವಿಜಯೇಂದ್ರಾಚಾರ್ಯರು ಭಾರತ ವಾಚನವನ್ನೂ, ಆಂಗ್ಲ ಭಾಷಾಧ್ಯಾಪಕರಾದ ಶ್ರೀ ಬಿ. ಎಸ್ ವೆಂಕಟರಾಮಯ್ಯನವರು ಕನ್ನಡ ಲಾವಣಿ ರೂಪದಲ್ಲಿರುವ ಭಗವದ್ಗೀತೆಯನ್ನೂ ಸುಶ್ರಾವ್ಯವಾಗಿ ಪಠಿಸಿದರು ಪಂಚನಾರ್ಪಣೆ, ಮಂಗಳಾರತಿಗಳೊಡನೆ ಸಮಾರಂಭವು ಮುಕ್ತಾಯವಾಯಿತು.

ಸೇಂಟ್ ಫಿಲೋಮಿನಾ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ರೆ|| ಫಾದರ್ ಆಡಿಯೂರವರ ಅಧ್ಯಕ್ಷತೆಯಲ್ಲಿ ಸಮಾರಂಭವು ಜರುಗಿತು ಭಾಷಣಗಳೂ, ಕಾವ್ಯ ಮತ್ತು ಭಾರತ ವಾಚನಗಳೂ, [illegible] ಭಾಷೆಯಲ್ಲಿ ಭಾಷಣಗಳೂ ನಡೆದುವು

ಪಡುವಾರಹಳ್ಳಿಯ ವಿದ್ಯಾರ್ಥಿ ಸಂಘದವರು ಶ್ರೀ ಎಂ ವಿ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಶ್ರೀ ಎಂ ಯಾದವಾಚಾರ್ಯರು ಗೀತಾ ಸಂದೇಶದ ಮಹತ್ವವನ್ನು ವಿವರಿಸಿದರು ಶ್ರೀ ನಾಗರಾಜರಾಯರು ಗೀತಾ ಪಠಣ ಮಾಡಿದರು

ಮಹಾರಾಜಾ ಹೈಸ್ಕೂಲಿನಲ್ಲಿ ಶ್ರೀ ಕೆ. ಕೃಷ್ಣಸ್ವಾಮಿ. ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಸಮಾರಂಭವು ನಡೆಯಿತು

ಕರೀಘಟ್ಟದ ಪ್ರಕೃತಿ ಸೌಂದರ್ಯದ ಚಿತ್ರ

ಕರಿಘಟ್ಟಕ್ಕೆ ತೆರಳಿ ದೇವರದರ್ಶನ ಮಾಡಿದ, ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬೆಟ್ಟ ಮತ್ತು ಅದರ ಸುತ್ತಲೂ ಇರುವ ಸುಂದರ ದೃಶ್ಯಗಳನ್ನು ಚಿತ್ರಿಸಲು ಹಲವು ಕಲಾವಿದರನ್ನು ಆಹ್ವಾನಿಸಲಿರುವರು

ಪೋಲೀಸರಿಗೂ ಜನರಿಗೂ ಗುಂಡಿನ ಕಾಳಗ

ಕಾಶ್ಮೀರದ ಸಂಬ ಎಂಬಲ್ಲಿ ನಡೆದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಹಲವರು ಮೊನ್ನೆ ಪೋಲೀಸಿನವರ ಮೇಲೆ ಗುಂಡು ಹಾರಿಸಲಾಗಿ ಒಬ್ಬ ಕಾನ್‌ಸ್ಟೇಬಲ್ಲನಿಗೆ ಗಾಯವಾಯಿತೆಂದೂ, ನಂತರ ಪೋಲೀಸರು ಗುಂಡು ಹಾರಿಸಿ ಮೆರವಣಿಗೆಯನ್ನು ಚದುರಿಸಿದರೆಂದೂ ವರದಿಯಾಗಿದೆ ಮೆರವಣಿಗೆಯನ್ನು ಏರ್ಪಡಿಸಿದ್ದ ಠಾಕೂರ್ ರಘುನಾಥಸಿಂಗ್ ಎಂಬುವವನನ್ನು ಹಿಡಿಯಲು ಬಂದಾಗ ಈ ಘಟನೆಯು ಸಂಭವಿಸಿತು. ಆತನು ತಪ್ಪಿಸಿಕೊಂಡಿರುತ್ತಾನೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ೩೦ ಮಿಶ್ರ [illegible] ಮಧ್ಯಾಹ್ನ ೧ ೪೦ [illegible] ೩ [illegible] ನ ಗೀತೆಗಳು ಸಂಜೆ ೫.೪೦ ಮತ್ತು ೭ ೩೦ [illegible] ರಾಮಚಂದ್ರಶಾಸ್ತ್ರಿ, ಸಂಗೀತ. ೬.೧೦ ಮತ್ತು [illegible] ಅಯ್ಯಂಗಾರ್, ಸಂಗೀತ. ೭ ಪಿ. ಎಸ್ ರಾಮಯ್ಯಂಗಾರ್, [illegible]. ೮.೪೦ [illegible] ಪಿ. ಪಲುಸ್ಕರ್, [illegible] ಸಂಗೀತ. ೯ ೪೦ [illegible], ಕನ್ನಡದಲ್ಲಿ ಕೈಲಾಸಂ ನಾಟಕ.

ಸಂಸ್ಕೃತಿ ಪ್ರಸಾರಕ್ಕೆ ಆಯುರ್ವೇದ ವೈದ್ಯರ ಬೆಂಬಲ

ಜನಗಳಲ್ಲಿ ನೀತಿ, ಸತ್ಯ, ನಿಷ್ಠೆ ಧರ್ಮ ಶ್ರದ್ಧೆ, ದೈವ ಭಕ್ತಿ ಇವುಗಳನ್ನು ಬೆಳೆಸಲು ಸರಕಾರದವರು ಪ್ರಾರಂಭಿಸಿರುವ ಸಂಸ್ಕೃತಿ ಪ್ರಸಾರ ಯೋಜನೆಯು ಅಭಿನಂದನೀಯವಾಗಿದೆ ಆಯುರ್ವೇದವು ಮೊಟ್ಟಮೊದಲು ಇದನ್ನೇ ಉಪದೇಶಿಸುತ್ತದೆ ಆಯುರ್ವೇದ ಪ್ರಚಾರವೇ, ಆಯುರ್ವೇದದ ಉಪದೇಶದಂತೆ ಜನರು ಆಚರಣೆಯನ್ನು ರೂಢಿಸುವುದು, ಭಾರತ ಸಂಸ್ಕೃತಿ ಪ್ರಸಾರ ಯೋಜನೆಯಾಗಿದೆ ಸರ್ಕಾರದವರ ಈ ಮಹಾ ಕಾರ್ಯದಲ್ಲಿ ಆಯುರ್ವೇದ ವೈದ್ಯರೆಲ್ಲರೂ ಸಹಕರಿಸುವುದು ಅಗತ್ಯವಾಗಿದೆ-ಎಂದು ರಾಜಧಾನಿಯ ಆಯುರ್ವೇದ ಪಂಡಿತರಾದ ಶ್ರೀ ಕೆ. ಎ. [illegible]ರವರು ತಿಳಿಸಿರುತ್ತಾರೆ

ಸಿದ್ಧರಾಮ ಚರಿತೆಯು
ಸಂಗ್ರಹದ ಕೈಗನ್ನಡಿ
ಬೆಲೆ ೧ ೮-೦
ಕೃಷ್ಣ ಕಂಪನಿ,
ಸಾರದಿ ರಸ್ತೆ · ಮೈಸೂರು

ಪ್ರಭುದೇವಾ ಟಾಕೀಸ್
ಪ್ರತಿದಿನ ೩ ಪ್ರದರ್ಶನಗಳು
28-11-52 ನೇ ಶುಕ್ರವಾರದಿಂದ ಪ್ರಾರಂಭ
ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ
★ ದಾಸಿ ★
ಪಾತ್ರ:— ಲಕ್ಷ್ಮಿರಾಜ್ಯಂ, ಎನ್. ಟಿ ರಾಮರಾವ್, ರೇಲಂಗಿ, ಶಿವರಾವ್,
ಮೊದಲು [illegible] ವಾರಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು
ಫ್ರೀ ಪಾಸುಗಳನ್ನೂ ನಿಲ್ಲಿಸಲಾಗಿದೆ

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್
ಮೈಸೂರು

ಶ್ರೀ ರಮಣ
ಸಂಗೀತ ವಿದ್ಯಾಲಯ
1004-1, ಚಾಮುಂಡಿ ಅಗ್ರಹಾರ
(ಮನುವನದ ಎದುರಿಗೆ)
ನೀಲಕಂಠ ವಿದ್ಯಾಲಯದಲ್ಲಿ ಬಾಯಿ
ಹಾಡುಗಾರಿಕೆ ಮತ್ತು ಪಿಟೀಲು
ಶಿಕ್ಷಣವನ್ನು ಕೊಡುವ
ವ್ಯವಸ್ಥೆ ಮಾಡಲಾಗಿದೆ
ಎ. ಕೃಷ್ಣಮೂರ್ತಿ
ವ್ಯವಸ್ಥಾಪಕ.

Edited, Printed and Published by A R. Nagarajan at Sadhvi Press, D. Subbiah Road, Mysore

ಪೋ॥ ನಂ. 794 WEEKLY EDITION ಬಿಡಿ ಪ್ರತಿಗೆ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೩೦-೧೧-೧೯೫೨ [ಸಂಚಿಕೆ ೧೪

– ಚೀಣದ ಪ್ರಧಾನಿಗೆ – ನೆಹರೂರವರ ಪತ್ರ

...ಸ್ಕೃತವನ್ನು ಮರೆಯದಿರಿ

ಸಂಸ್ಕೃತೋತ್ಸವದಲ್ಲಿ ಅಮೇರಿಕದ ಪ್ರೊಫೆಸರರ ಭಾಷಣ

ಮೈಸೂರು ೩೦

...ಸ ಮಹಾರಾಜರ ಸಂಸ್ಕೃತ ಮ... ...ಲ್ಲಿ ...ಶಾಲಾ ...ರ್ಗ ಸಂಘದವರು ನೆನ್ನೆ ಸಂ...ತೋತ್ಸವವನ್ನು ನೆರವೇರಿಸಿದರು ...ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವ...ರು ಅಧ್ಯಕ್ಷತೆ ವಹಿಸಿದ್ದರು ಅಮೇರಿ... ಹಾರ್ವರ್ಡ್ ವಿಶ್ವವಿದ್ಯಾಲಯದ ...ಡೇನಿಯಲ್ ಹೆಚ್ ಹೆಚ್. ಇಂ...ರವರು ಸಂಸ್ಕೃತದಲ್ಲೂ ಇಂಗ್ಲೀ...ಲ್ಲೂ ಭಾಷಣ ಮಾಡಿ, ತಾವು ಸಂ...ಸ್ಕೃತವನ್ನು ಅಭ್ಯಾಸ ಮಾಡಿದುದೇಕೆಂ...ದನ್ನು ವಿವರಿಸುತ್ತಾ, ಬಹು ಪುರಾ...ತನ ಹಾಗೂ ಚೈತನ್ಯಪೂರ್ಣವೂ ಆದ ಭಾರ...ತದ ಸಂಸ್ಕೃತಿಯು, ಸಂಸ್ಕೃತ ಭಾಷ...ೆಯಲ್ಲಿ ಅಡಗಿರುವುದೆಂದು ಹೇಳಿದರು ...ರತದ ಸಂಸ್ಕೃತಿಯನ್ನು ಪರ ಭಾಷೆ...ಯ ತರ್ಜುಮೆ ಮೂಲಕ ಅರ್ಥ ಮಾಡಿ...ಕೊಳ್ಳುವುದಕ್ಕಿಂತಲೂ ಸಂಸ್ಕೃತದ ...ಮೂಲಕ ಓದಿದರೆ ಭಾರತೀಯ ಸಂಸ್ಕೃತಿ...ಯ ವಾಸ್ತವಿಕ ಅರಿವುಂಟಾಗುವುದೆಂದು ...ನನ್ನ ಸಿದ್ಧಾಂತವೆಂದು ಅವರು ಹೇಳಿ... ...ಭಾರತದ ಸಂಸ್ಕೃತಿಯು ಗ್ರೀ...ಕ್ ಸಂಸ್ಕೃತಿಯನ್ನು ಆಳವಡಿಸಿಕೊಂ...ಡಿರುವುದಕ್ಕೆ ಅನೇಕ ನಿದರ್ಶನಗಳಿವೆ ...ಈಗ ಗ್ರೀಕ್ ಸಂಸ್ಕೃತಿಯು ನಶಿ...ಸಿ, ಭಾರತೀಯ ಸಂಸ್ಕೃತಿಯು ...ನ್ನು ಉಳಿದಿರಲು, ಸಂಸ್ಕೃತವು ಪ್ರವ...ಹಮಾನವಾಗುತ್ತಿರುವ ಭಾಷೆಯಾಗಿ...ರುವುದೇ ಕಾರಣವೆಂದೂ ಅವರು ತಿಳಿಸಿ...ದರು

...ಭಾರತೀಯರು ಪಾಶ್ಚಾತ್ಯ ಸಂಸ್ಕೃ...ತಿಯ ಮೋಹಕ್ಕಾಗಿ ಮರುಳಾಗಿ ತಮ್ಮ ಪುರಾತನ ...ಸಂಸ್ಕೃತಿಯನ್ನು ಮರೆಯುವುದು ತ...ಪ್ಪೆಂದು ಅವರು ಎಚ್ಚರಿಸಿದರು. ...ಪಾಶ್ಚಾತ್ಯ ವಿಜ್ಞಾನಭಂಡಾರದಿಂದ ಉ...ಪಯುಕ್ತ ಜ್ಞಾನವನ್ನು ಮಾತ್ರ ಅರಿತು...ಕೊಳ್ಳುವುದು ನ್ಯಾಯವಾಗಿರುವುದೆಂದು ...ಅವರು ಹೇಳಿದರು ಸಂಸ್ಕೃತವನ್ನು ...ಭಾರತೀಯರು ನಶಿಸಲು ಬಿಟ್ಟರೆ ತಮ್ಮ ...ಪೂರ್ವದ ಇತಿಹಾಸವನ್ನೇ ಕಳೆದುಕೊಂ...ಡಂತಾಗುವುದೆಂದೂ, ಅದನ್ನು ಉಜ್ಜ್ವ...ಲಸ್ಥಿತಿಗೆ ತರಬೇಕೆಂದೂ ಸೂಚಿಸಿ... ...ವಂದನಾರ್ಪಣೆಯೊಡನೆ ಸಮಾ...ರಂಭವು ಮುಕ್ತಾಯವಾಯಿತು.

ನೈರೋಬಿಯ ಭಾರಿ ಮಾರ್ಕೆಟ್ಟಿಗೆ ಬೆಂಕಿ

...ಣ ಆಫ್ರಿಕದ ನೈರೋಬಿ ಎಂ...ಲ್ಲಿ ...ಲಾಗಿದ್ದ ಒಂದು ದೊಡ್ಡ ಮಾ...ರ್ಕೆಟ್ಟಿನಲ್ಲಿ ಬೇರೆಯವರಿಗೆ ಮೀಸಲಾಗಿ... ...ಮಳಿಗೆಗಳನ್ನು ಆಫ್ರಿಕನ್ನರು ...ಸಿಕೊಂಡಿದ್ದರೆಂಬ ಕಾರಣಕ್ಕಾ...ಗಿ ...ಪೋಲೀಸರು ಕಳೆದ ಗುರುವಾ...ರ ...ಮಂದಿ ಆಫ್ರಿಕನ್ನರನ್ನು ದಸ್ತ...ಗಿರಿ ಮಾಡಿದರೆಂದು ಗೊತ್ತಾಗಿದೆ ಈ ವ...ರ್ತಮಾನದ ಅರ್ಧ ಘಂಟೆಯೊಳಗೆ ಮಾ...ರ್ಕೆಟ್ಟಿಗೆ ಬೆಂಕಿ ಬಿದ್ದು ೭೫೦ ಮಳಿಗೆಗ...ಳು ಇತರ ಅಂಗಡಿಗಳೂ ಪೂರ್ಣವಾಗಿ ...ಸುಟ್ಟುಹೋದವೆಂದೂ, ಬೆಂಕಿಯ ಕಾರಣ ...ವು ತಿಳಿದುಬಂದಿಲ್ಲವೆಂದೂ ಹೇಳಲಾ...

ಕೌನ್ಸಿಲ್ ಆಫ್ ಸ್ಟೇಟ್ಸಿನಿಂದ ೫೪ ರಲ್ಲಿ ಕೆ.ಸಿ. ರೆಡ್ಡಿ ನಿವೃತ್ತಿ

ಪಾರ್ಲಿಮೆಂಟಿನ ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಯ ಸದಸ್ಯತನದ ಅವಧಿಯನ್ನು ರಾಷ್ಟ್ರಾಧ್ಯಕ್ಷರ ಆಜ್ಞೆಯಂತೆ ನೆನ್ನೆ ಲಾಟುಗಳ ಮೂಲಕ ನಿರ್ಧರಿಸಲಾಯಿತು ಅದರ ಪ್ರಕಾರ ಎನ್ ಜಿ ಅಯ್ಯಂಗಾರ್ಯರು ೫೮ ರಲ್ಲೂ, ಕೆ ಸಿ. ರೆಡ್ಡಿಯವರು, ಲಾಲ್‌ಬಹದ್ದೂರ್‌ಶಾಸ್ತ್ರಿ ಮತ್ತು ಸಿ ಸಿ ಬಿಸ್ವಾಸ್‌ರವರುಗಳು ೫೪ ರಲ್ಲೂ ನಿವೃತ್ತರಾಗಲಿರುವರು ಶ್ರೀ ಸಿ ಜಿ ಕೆ ರೆಡ್ಡಿಯವರು ೫೦ ರಲ್ಲಿ ನಿವೃತ್ತರಾಗಲಿರುವರು

ಹಾವು ನುಂಗಿದ ಆಡನ್ನು ಜೀವಸಹಿತ ರಕ್ಷಿಸಲಾಯಿತು

ಅರಕಲಗೂಡಿನಿಂದ ಮಲ್ಲಿಪಟ್ಟಣಕ್ಕೆ ಹೋಗುವ ಮಾರ್ಗದಲ್ಲಿ ಬಾಣಗಲ್ಲು ಎಂಬ ಗ್ರಾಮದ ಬಳಿ ೧೭ ಅಡಿ ಉದ್ದದ ಹೆಬ್ಬಾವೊಂದು ಬೇಲಿಯಲ್ಲಿ ಸೇರಿಕೊಂಡಿದ್ದು ಸಮೀಪದಲ್ಲಿ ಮೇಯುತ್ತಿದ್ದ ಒಂದು ಆಡಿನ ಮರಿಯನ್ನು ನುಂಗಿತೆಂದೂ. ಅಲ್ಲೇ ಆಡುತ್ತಿದ್ದ ಬಾಲಕರು ಮರಿಯು ಅರಚುತ್ತಿದ್ದ ಸದ್ದನ್ನು ಕೇಳಿ ಸಮೀಪಕ್ಕೆ ಬಂದಾಗ ಹಾವು ಅದನ್ನು ನುಂಗಿದ್ದನ್ನು ಕಂಡರೆಂದೂ, ಅದು ವಿಲುಗುಟ್ಟುತ್ತಾ ಹಾವಿನ ಹೊಟ್ಟೆಯನ್ನು ಸೇರಿತೆಂದೂ ವರದಿಯಾಗಿದೆ ಕೂಡಲೇ ಅವರು ಗ್ರಾಮಸ್ಥರಿಗೆ ಈ ಸುದ್ದಿಯನ್ನು ತಿಳಿಸಲಾಗಿ ಶ್ರೀ ಮಂಜಾಚಾರಿ ಎಂಬುವರು ಬಂದೂಕ ತೆಗೆದುಕೊಂಡು ಬಂದು ಹಾವನ್ನು ಹೊಡೆದು ಸಾಯಿಸಿ ಆಡಿನ ಮರಿಯನ್ನು ಜೀವಸಹಿತ ಹೊರಕ್ಕೆ ತೆಗೆದರೆಂದು ಗೊತ್ತಾಗಿದೆ ಹಾವನ್ನು ಉದ್ದಕ್ಕೂ ಸೀಳಲಾಯಿತೆಂದೂ, ಅದರ ಚರ್ಮವು ಒಂದು ಗಜ ಅಗಲವಿತ್ತೆಂದೂ ಹೇಳಲಾಗಿದೆ

ಜೈನ ದೇವರ ವಿಗ್ರಹದಲ್ಲಿ ಕಣ್ಣೀರು !

ಸಬರಮತಿ ಬಳಿ ರಾಮನಗರದ ಜೈನ ಮಂದಿರವೊಂದರಲ್ಲಿ ಪಾರ್ಶ್ವನಾಥ ಸ್ವಾಮಿಯವರ ಕಲ್ಲಿನ ವಿಗ್ರಹದ ಪ್ರತಿಷ್ಠಾಪನೆಯು ಕೆಲವು ದಿನಗಳ ಹಿಂದೆ ನಡೆಯಿತೆಂದೂ, ಆಗ ವಿಗ್ರಹದ ಕಣ್ಣಿನಲ್ಲಿ ೫ ನಿಮಿಷ ಕಾಲ ನೀರು ಸುರಿಯಿತೆಂದೂ ವರದಿಯಾಗಿದೆ

ಚೀಣದ ತಿರಸ್ಕಾರಕ್ಕೆ ಭಾರತದ ವಿಷಾದ

ಕೊರಿಯಾ ಬಿಕ್ಕಟ್ಟಿನ ಪರಿಹಾರಕ್ಕಾಗಿ ಭಾರತವು ತಯಾರಿಸಿದ ಶಾಂತಿಯ ಸೂತ್ರವನ್ನು ಚೀಣವು ತಿರಸ್ಕರಿಸಿರುವ ಬಗ್ಗೆ ಭಾರತ ಸರ್ಕಾರದವರು ವಿಷಾದವನ್ನು ವ್ಯಕ್ತಪಡಿಸಿರುವರೆಂದು ಭಾರತದ ವಿದೇಶಾಂಗ ಇಲಾಖಾಧಿಕಾರಿಯೊಬ್ಬರು ತಿಳಿಸಿರುತ್ತಾರೆ. ಚೀಣದ ಪ್ರಧಾನಿ ಚೌಎನ್‌ಲೈಯವರಿಗೆ ಪ್ರಧಾನಿ ನೆಹರೂ ರವರು ಮತ್ತೊಂದು ಪತ್ರವನ್ನು ಬರೆದು ಭಾರತವು ಮೊದಲು ತಯಾರಿಸಿದ ಸೂತ್ರಗಳಿಗೆ ಸ್ವಲ್ಪ ಬದಲಾವಣೆ ಮಾಡಿರುವ ಅಂಶವನ್ನು ತಿಳಿಸಿರುವರೆಂದೂ ವರದಿಯಾಗಿದೆ.

ಅಧಿಕಾರಿಗಳ ಆಸ್ತಿ ತನಿಖೆ ಬಗ್ಗೆ ನಿರ್ಣಯ

ಸರ್ಕಾರಿ ಅಧಿಕಾರ ವರ್ಗದಲ್ಲಿ ಲಂಚಕೋರತನವನ್ನು ಕುರಿತು ದೆಹಲಿಯ ಲೋಕ ಸಭೆಯಲ್ಲಿ ನೆನ್ನೆ ತೀವ್ರ ಚರ್ಚೆ ನಡೆಯಿತು ಅಕಾಲಿ ಪಕ್ಷದ ಸದಸ್ಯರಾದ ಸರ್ದಾರ್ ಹುಕುಂ ಸಿಂಗ್‌ರವರು ಒಂದು ನಿರ್ಣಯವನ್ನು ಮಂಡಿಸಿ ಭಾರತದ ಅತ್ಯಂತ ಸರ್ಕಾರಿ ನೌಕರರ ಮತ್ತು ಅವರ ಬಂಧುವರ್ಗದವರ ಆಸ್ತಿ ಮತ್ತು ಸ್ಥಿತಿಯ ಬಗ್ಗೆ ತನಿಖೆ ನಡೆಸಲು ಸಮಿತಿಯೊಂದನ್ನು ನೇಮಿಸಬೇಕೆಂದು ಸೂಚಿಸಿದ್ದರು. ಅಡಳಿತ ವರ್ಗದಲ್ಲಿ ಅನೀತಿ ಮತ್ತು ಲಂಚಕೋರತನವು ಇರುವುದೆಂದೂ, ಇದನ್ನು ನಿರ್ಮೂಲ ಮಾಡಿ ಪರಿಶುದ್ಧಗೊಳಿಸುವುದು ಅಗತ್ಯವೆಂದೂ ಸಭೆಯ ಎಲ್ಲ ಪಕ್ಷಗಳ ಸದಸ್ಯರೂ ಅಭಿಪ್ರಾಯಪಟ್ಟರು.

ಮುತ್ತಿಕ್ ರಾಮಸ್ವಾಮಿ ಶಾಸ್ತ್ರಿಗಳವರ ನಿಧನ

ರಾಜಧಾನಿಯ ಮುತ್ತಿಕ್ ರಾಮಸ್ವಾಮಿ ಶಾಸ್ತ್ರಿಗಳವರು ನೆನ್ನೆ ಬೆಳಗ್ಗೆ ಚಾಮರಾಜ ಅಗ್ರಹಾರದ ತಮ್ಮ ಮನೆಯಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಬಹುದಿನಗಳಿಂದಲೂ ಹಾಸಿಗೆ ಹಿಡಿದು ಮಲಗಿದ್ದರು ಅರಮನೆಯ ಮುತ್ತಿಕರಾಗಿದ್ದರು ಶ್ರೀ ಮನ್ಮಹಾರಾಜರಾದ ಕೃಷ್ಣರಾಜ ಒಡೆಯರವರು ಯೂರೋಪಿಗೆ ಹೋಗಿದ್ದಾಗ ಅವರೊಡನೆ ಶ್ರೀ ಶಾಸ್ತ್ರಿಗಳವರೂ ತೆರಳಿದ್ದರು.

ಎಲಿಜಬೆತ್ತರ ಕಿರೀಟ ಧಾರಣೋತ್ಸವಕ್ಕೆ ನೆಹರೂ

ಲಂಡನ್ನಿನಲ್ಲಿ ಬರುವ ವರ್ಷ ನಡೆಯಲಿರುವ ಬ್ರಿಟನ್ನಿನ ನೂತನ ರಾಣಿ ಎಲಿಜಬೆತ್ತರ ಕಿರೀಟ ಧಾರಣಾ ಮಹೋತ್ಸವಕ್ಕೆ ಭಾರತದ ಪ್ರಧಾನಿ ನೆಹರೂರವರಿಗೆ ಆಹ್ವಾನ ಬಂದಿರುವುದೆಂದೂ, ಅವರು ಪುತ್ರೀ ಸಮೇತರಾಗಿ ಸಮಾರಂಭಕ್ಕೆ ತೆರಳುವರೆಂದೂ ಗೊತ್ತಾಗಿದೆ

ರೈಲಿಗೆ ಸಿಕ್ಕಿ ತಾಯಿ ಮತ್ತು ೩ ಮಕ್ಕಳ ಮರಣ

ಪಾಟ್ನ ರೈಲ್ವೆ ಜಂಕ್ಷನ್ ನಿಲ್ದಾಣದಲ್ಲಿ ಕಳೆದ ಗುರುವಾರ ರಾತ್ರಿ, ಅಲ್ಲಿನ ಅಂಚೆ ನೌಕರರೊಬ್ಬರ ಪತ್ನಿಯೂ, ಅವರ ಇಬ್ಬರು ಹೆಣ್ಣು ಮಕ್ಕಳೂ ಮತ್ತು ಒಬ್ಬ ಮಗನೂ ರೈಲಿಗೆ ಸಿಕ್ಕಿ ಮೃತಪಟ್ಟರೆಂದು ತಿಳಿದುಬಂದಿದೆ.

ಗೋ ವಧೆ ಬಗ್ಗೆ ಕೇಂದ್ರದ ಶಾಸನವಿಲ್ಲವೆಂದು ನೆಹರೂ

ದೇಶದಲ್ಲಿ ಗೋ ವಧೆಯನ್ನು ನಿಷೇಧಿಸುವ ಬಗ್ಗೆ ಕೇಂದ್ರದಲ್ಲಿ ಶಾಸನಕ್ಕೆ ಅವಕಾಶವೀಯುವುದಿಲ್ಲವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ. ಜನರ ಮನೋಗತವನ್ನು ಗಮನಕ್ಕೆ ತೆಗೆದುಕೊಳ್ಳದೆ, ಈ ರೀತಿ ನಿರ್ಬಂಧ ಹಾಕುವುದು ಎಲ್ಲ ತತ್ವಗಳಿಗೂ ವಿರೋಧವಾದುದೆಂದೂ ಅವರು ಹೇಳಿರುತ್ತಾರೆ.

ಅಶೋಕ ಚಕ್ರ ಸಂಘ

ರಾಜಧಾನಿಯ ಅಶೋಕ ಚಕ್ರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ "ಸಾಧ್ವಿ" ಪತ್ರಿಕಾಕಛೇರಿ ಮಹಡಿ ಮೇಲೆ ಶ್ರೀ ಅಗರಂ ಸೂರ್ಯನಾರಾಯಣ ಪಂಡಿತರು "ತೀರ್ಥ ಕ್ಷೇತ್ರಗಳ ಮಹಿಮೆ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಸರ್ವರಿಗೂ ಸ್ವಾಗತವುಂಟು

ಕಣ್ಣಾರವರ ಉಪವಾಸ ಮುಕ್ತಾಯ

ವೈಟ್‌ಫೀಲ್ಡಿನ ವಾಹನಗಳ ಡಿಪೋ ನೌಕರರುಗಳ ಸಂಘದ ಅಧ್ಯಕ್ಷರಾದ ಶ್ರೀ ಕೆ ಕಣ್ಣಾರವರು ಸಿ ಜಿ ಕೆ ರೆಡ್ಡಿಯವರ ಭರವಸೆ ಮೇರೆ ಉಪವಾಸವನ್ನು ನೆನ್ನೆ ಸಂಜೆ ಮುಕ್ತಾಯಗೊಳಿಸಿದರು

ಸ್ವಾಗತ ಸಮಾರಂಭ

ರಾಜಧಾನಿಯ ವರ್ತಕರೂ ಮಾಜಿ ಪೌರಸಭಾ ಸದಸ್ಯರೂ ಆದ ಶ್ರೀ ಎ ಟಿ. ಆರ್ಮುಗ ಮುದಲಿಯಾರರು ತಮ್ಮ ಮಗ ಶ್ರೀ ಪಿ ಎ ಮೋಹನರಂಗಂ ಮತ್ತು ಬೆಂಗಳೂರಿನ ನಿವೃತ್ತ ಅರಣ್ಯಾಧಿಕಾರಿ ಶ್ರೀ ಜೆ.ವೇಣುಗೋಪಾಲ ನಾಯ್ಡು ರವರ ಕುಮಾರಿ ಶ್ರೀಮತಿ ಅಂಬುಜಾಕ್ಷಿ ಇವರುಗಳ ವಿವಾಹದ ಸಂಬಂಧವಾಗಿ ನೆನ್ನೆ ತಿಮ್ಮಯ್ಯಾಚಾರ್ಯರ ಛತ್ರದಲ್ಲಿ ಸ್ವಾಗತ ಸಮಾರಂಭವೊಂದನ್ನು ಏರ್ಪಡಿಸಿದ್ದರು

○ ಭಾರತ ಮತ್ತು ಪಾಕಿಸ್ತಾನಗಳ ಗಡಿಬಳಿ ಕಿತ್ತಳೆತೋಟಗಳನ್ನು ಇಟ್ಟುಕೊಂಡಿರುವ ಸುಮಾರು ೧೨೦ ಜನ ಆಸಾಮಿ ಗುತ್ತಿಗಾಡಿನವರನ್ನು ಪಾಕಿಸ್ತಾನ ಸೈನಿಕರು ದಸ್ತಗಿರಿ ಮಾಡಿರುತ್ತಾರೆ.

ವಾರ ಭವಿಷ್ಯ

[illegible]

ಪತ್ರಿಕೆ

ಮೇಷ — [illegible] ಆರೋಗ್ಯ ಉತ್ತಮ [illegible] ವ್ಯಾಪಾರಾದಿಗಳಲ್ಲಿ ಪ್ರೋತ್ಸಾಹ [illegible] ಭೇಟಿ, ಪ್ರವಾಸ

ವೃಷಭ — ಆರೋಗ್ಯ ಉತ್ತಮ [illegible] ಸಾಹಿತ್ಯ ಜೀವನದಲ್ಲಿ [illegible] ರಿಂದ ಲಾಭ ಸುಖ ಪ್ರವಾಸ ನೌಕರಿಯಲ್ಲಿ ಪ್ರಗತಿ [illegible] ತೀ, ಸನ್ಮಾನ

ಮಿಥುನ — [illegible] ಪ್ರವಾಸ ಬೇಡ ನೌಕರಿಯಲ್ಲಿ [illegible] ಅಗ್ನಿ ಅಪಘಾತ [illegible] ಭಯ [illegible] ಅಪ್ರಿಯ ವಾರ್ತೆ ಧನ ಹಾನಿ

ಕರ್ಕ — [illegible] ಭೇಟಿ [illegible] ಹೆಚ್ಚುವವು [illegible] ಆರೋಗ್ಯ [illegible] ನೌಕರಿಯಲ್ಲಿ ತಪ್ಪು [illegible] ಧನ ಚೇತ [illegible]

ಸಿಂಹ — [illegible] ಕುಟುಂಬ ಜೀವನದಲ್ಲಿ [illegible] ನೌಕರಿಯಲ್ಲಿ [illegible] ಪ್ರಾಪ್ತಿ [illegible] ಪಾರಾದಿಗಳಲ್ಲಿ [illegible]

ಕನ್ಯಾ — [illegible] ಆರೋಗ್ಯ [illegible] ವ್ಯಾಪಾರಾದಿಗಳಲ್ಲಿ [illegible] ನೂತನ [illegible]

ತುಲಾ — [illegible] ಆರೋಗ್ಯ [illegible] ಹಾನಿ [illegible] ವಾರ್ತೆ [illegible] ಪತ್ರದಿಂದ [illegible]

ವೃಶ್ಚಿಕ — ಉತ್ತಮ ವಾರ ಆರೋಗ್ಯ [illegible]

ಟೈರ್ ಮತ್ತು ಟ್ಯೂಬ್
ರಬ್ಬರ್ ಚಪ್ಪಲಿಗಳು
[illegible]
ಹಣ್ಣ್ ಫುಟ್ ವೇರ್,
[illegible] ಮೈಸೂರು

CITY TUTORIAL COLLEGE
[illegible] Mysore
COACHING CLASSES FOR
★ B. Sc., ★
(English- P C M & P.M M)
★ INTERMEDIATE ★
(English Kannada P C M & C.B Z)
PRIVATE TUITIONS ARRANGED
Classes begin on 24th
JOIN IMMEDIATELY
C. T. C., MYSORE

ಶೀತ ಮಾರುತಕ್ಕೆ ಸಿಕ್ಕಿ ೧೬ ಜನರ ಮರಣ

ಅಮೇರಿಕದ ಮಧ್ಯ ಪ್ರದೇಶದಲ್ಲಿ [illegible] ಕಳೆದ ಮೂರು ದಿನ [illegible] ಶೀತ ಮಾರುತ [illegible] ೧೬ ಜನರು [illegible] ನೂರಾರು ಜನರ [illegible]

ನಂಜನಗೂಡಿನಲ್ಲಿ ಚಿಕ್ಕ ಜಾತ್ರೆ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕ ಜಾತ್ರೆಯು [illegible] ಗಂಟೆಗೆ ನಡೆಯುವುದು

[illegible] ಮಂಗಲ [illegible] ಆನಾರೋಗ್ಯ [illegible]

ಮಕರ — [illegible] ವ್ಯವಹಾರಾದಿಗಳಲ್ಲಿ ಹಾನಿ [illegible] ಭಯ [illegible] ನೌಕರಿ [illegible]

ರಾಜಕಮಲ್, ಮೈಸೂರು
[illegible] ರಿಂದ ಆರಂಭ
ಚಿನ್ನಮ್ಮಕಥಾ

ತುಂಗಭದ್ರಾ ಯೋಜನೆಗೆ ೨॥ ಕೋಟಿ ರೂ. ಸಾಲ

ತುಂಗಭದ್ರಾ ಯೋಜನೆಗೆ ತಗಲುವ ೨॥ ಕೋಟಿ ರೂ ಗಳನ್ನು ಈ ವರ್ಷ ಕೇಂದ್ರ ಸರ್ಕಾರದವರು ಹೈದರಾಬಾದು ಸಂಸ್ಥಾನಕ್ಕೆ ಸಾಲವಾಗಿ ಒದಗಿಸಲಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಸಂಗೀತ [illegible] ಸಂಗೀತ [illegible]

ಕಾಂಗ್ರೆಸ್ ಚುನಾವಣಾ ತಕರಾರು ಅರ್ಜಿ ಇತ್ಯರ್ಥವಾಗಿಲ್ಲ

ಮೈಸೂರು, ತಾಲೂಕಿನ ಕಾಂಗ್ರೆಸ್ ಚುನಾವಣೆ ಸಂಬಂಧವಾಗಿ ಶ್ರೀ ಚಿನ್ನಸ್ವಾಮಿ ಯವರ ತಕರಾರು ಅರ್ಜಿಯನ್ನು ವಜಾ ಮಾಡಿರುವುದು [illegible] ಸರಿಯಾದ ಸುದ್ದಿಯಲ್ಲವೆಂದು ಜಿಲ್ಲಾ ಕಾಂಗ್ರೆಸ್ ಚುನಾವಣಾ ನ್ಯಾಯಾಧಿಕಾರಿ [illegible] ತಪ್ಪು [illegible]

FRESH ADMISSIONS
FOR
SHORTHAND & TYPEWRITING
[illegible]
November 1953 Examinations
[illegible]
At The
CHAMPION METROPOLITAN
COLLEGE OF COMMERCE,
[illegible]
[illegible] Mysore
Sd/ M S PUTTANNA,
Vice Principal

ಪ್ರಕಟಣೆ

ಈ ಕೆಳಗೆ [illegible] ದೇಣಿಗೆ [illegible]

[illegible] ಯಾವ ಸಂಬಂಧವಿಲ್ಲ

[illegible]

THE MODEL
TUTORIAL INSTITU[TE]
D Bommiah's School Build[ing]
MYSORE
Coaching Classes [for]
the benefit of Candid[ates]
appearing for the S S L
Public Examination
March 1953 will start
working From 8th Dec 52
Admissions received bet-
ween 11 A M & 5 P M
on working days
B Sathappa
Organis[er]

Edited, Printed and Pub-
lished by A R Nagaraj
at Sadhvi Press D Subb-
iah Road, Mysore

[illegible]
ಇವು [illegible]
ವಿಶ್ರಾಂತಿ ಭವನ್
[illegible]
ಒಂದು ದಿನ [illegible]
[illegible]
ನಿಮ್ಮ ಪ್ರೋತ್ಸಾಹವಿರಲಿ
[illegible] ಎಸ್. ಜಿ [illegible]
ನ್ಯೂ ಮ್ಯಾನೇಜ್‌ಮೆಂಟ್

28—11—52ರಿಂದ
ಪ್ರಾರಂಭ
ಮೈಸೂರು ಪ್ರಭುದೇವಾ —
ಬೆಂಗಳೂರು
ಸ್ವಸ್ತಿಕ್ ★ ಶಾರದ
ಚಿತ್ರಮಂದಿರಗಳಲ್ಲಿ
ರಾಜ್ಯಂ ಪಿಕ್ಚರ್ಸರವರ ಸಾಮಾಜಿಕ ಚಿತ್ರ
ದಾಸಿ
(ತೆಲುಗು) —
ಲಕ್ಷ್ಮಿರಾಜ್ಯಂ, [illegible] ಟಿ. ರಾಮರಾವ್,
[illegible]
ನಟಿಯ
ಪ್ರತಿದಿನ [illegible] ಆಟಗಳು
RAJSHRI Rel[ease]

ರಿಜಿಸ್ಟರ್ಡ್ ನಂ. ೧೨೭ ॥ಸತ್ಯಮೇವ ಜಯತೇ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧-೧೨-೧೯೫೬ [ಸಂಚಿಕೆ ೧೦೨

ಮೃಗಗಳ ರಕ್ಷಣೆಗಾಗಿ – ಅಭಯಾರಣ್ಯಗಳು –

ಬುದ್ಧನ ಪ್ರಿಯ ಶಿಷ್ಯರ ಅವಶೇಷಗಳ ಪ್ರತಿಷ್ಠೆ

ಸಾಂಚಿಯಲ್ಲಿ ಸಮಾರಂಭ

ಭಾರತದ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರ ನೇತೃತ್ವದಲ್ಲಿ ಬುದ್ಧನ ಆಪ್ತ ಶಿಷ್ಯರಾದ ಸಾಲಿಪುತ್ರ ಮತ್ತು ಮಹಾಮೊಗ್ಗಲಾನರವರ ಅವಶೇಷಗಳನ್ನು ನೆನ್ನೆ ದಿನ ಬಿಹಾರಿನ ಸಾಂಚಿಯಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಬೌದ್ಧ ವಿಹಾರದಲ್ಲಿ ಪ್ರತಿಷ್ಠಿಸಲಾಯಿತು ಆ ಸಂದರ್ಭದಲ್ಲಿ ನೆಹರೂರವರು ಭಾಷಣ ಮಾಡಿ ಬುದ್ಧನ ತತ್ವಗಳಾದ ಪ್ರೇಮ, ಸಹನೆ, ಸತ್ಯ ಭ್ರಾತೃ ಭಾವಗಳನ್ನು ಎಲ್ಲರೂ ಅನುಷ್ಠಾನಕ್ಕೆ ತಂದರೆ ಪ್ರಪಂಚದಲ್ಲಿ ಈಗ ಉದ್ಭವಿಸಿರುವ ನಾನಾ ತೊಡಕಿನ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಬಹುದೆಂದು ನುಡಿದರು

ಸಮಾರಂಭಕ್ಕೆ ಭಾರತ, ಬರ್ಮಾ, ಟಿಬೆಟ್ ಚೀಣಾ ಮೊದಲಾದ ಕಡೆಗಳಿಂದ ಸುಮಾರು ೫೦ ಸಾವಿರ ಜನರು ಆಗಮಿಸಿದ್ದರು ಸಾಂಚಿ ಬೆಟ್ಟದ ಮೇಲೆ ಎರಡು ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಲಾಗಿರುವ ಹೊಸ ಕಟ್ಟಡದಲ್ಲಿ ಭಾರತದ ಮಹಾ ಬೋಧಿ ಸಂಘದ ಭಿಕ್ಷು ಶ್ರೀ ಶ್ರೀನಿವಾಸ ನಾಯಕ ಹೇರಾರವರೂ ಮತ್ತು ಸಿಂಹಳದ ಮಹಾ ಬೋಧಿ ಸಂಘದ ಭಿಕ್ಷು ಡಾ|| ಪಿ ವಜೀರ ನಾನಾ ಮಹಾ ಹೇರಾರವರೂ ಅವಶೇಷಗಳನ್ನು ಪ್ರತಿಷ್ಠಿಸಿದರು ಸಾಲಿಪುತ್ರ ಮತ್ತು ಮಹಾಮೊಗಲನ್ನರ ಅವಶೇಷಗಳು ೧೮೫೧ರಲ್ಲಿ ಸಾಂಚಿ ಸ್ತೂಪಕ್ಕೆ ದಕ್ಷಿಣದಲ್ಲಿ ದೊರೆತು ಅವನ್ನು ಬ್ರಿಟನ್ನಿಗೆ ಕೊಂಡೊಯ್ಯಲಾಗಿತ್ತೆಂದೂ, ನಾಲ್ಕು ವರ್ಷಗಳ ಹಿಂದೆ ಭಾರತಕ್ಕೆ ವಾಪಸು ತರಲಾಯಿತೆಂದೂ ಗೊತ್ತಾಗಿದೆ

ಮದರಾಸಿನಲ್ಲಿ ಬಿರುಗಾಳಿಯ ಹಾವಳಿ

ಬಂಗಾಳ ಕೊಲ್ಲಿಯಲ್ಲಿ ನೆನ್ನೆ ಉಂಟಾದ ಪ್ರಚಂಡ ಬಿರುಗಾಳಿಯ ಪರಿಣಾಮವಾಗಿ ಪೂರ್ವ ತೀರದ ಪ್ರದೇಶಗಳಲ್ಲಿ ಬಹಳ ಅನಾಹುತ ಸಂಭವಿಸಿರುವುದೆಂದು ವರದಿಯಾಗಿವೆ ನೆನ್ನೆ ಸಂಜೆ ವೇಳೆಗೆ ಮದ್ರಾಸ್ ನಗರದೊಡನೆ ಹೊರಗಿನ ಟೆಲಿಫೋನ್ ಮತ್ತು ತಂತಿ ಸಂಪರ್ಕಗಳು ಕಡಿಯಲ್ಪಟ್ಟಿತ್ತೆಂದೂ, ಅನೇಕ ಕಡೆ ರೈಲು ಕಂಬಿಗಳ ಮೇಲೆ ಮರಗಳು ಉರುಳಿ ಬಿದ್ದುದರಿಂದ ಎಗ್ಮೋರಿನಿಂದ ಹೊರಕ್ಕೆ ಹೊರಡಬೇಕಾಗಿದ್ದ ಮತ್ತು ಇನ್ನೂ ಅನೇಕ ರೈಲುಗಳು ಹೊರಡಲಿಲ್ಲವೆಂದೂ, ಹೊರಟ ಕೆಲವು ರೈಲುಗಳು ಮಾರ್ಗಮಧ್ಯದಲ್ಲಿ ನಿಲ್ಲಿಸಲ್ಪಟ್ಟವೆಂದೂ ವರದಿಯಾಗಿದೆ

ಕಾವಲುಗಾರನನ್ನು ಬಂಧಿಸಿ ಖೈದಿಗಳ ಪರಾರಿ

ಪಶ್ಚಿಮ ಪಸ್ಸಿಲ್ವೇನಿಯದ ಪಿಟ್ಸ್‌ಬರ್ಗಿನ ಜೈಲಿನಲ್ಲಿ ಬಂಧನದಲ್ಲಿದ್ದ ಶಸ್ತ್ರಧಾರಿಗಳಾದ ಆರು ಮಂದಿ ಖೈದಿಗಳು ನೆನ್ನೆ ದಿನ ಜೈಲು ಗೋಡೆಯಿಂದ ಹಾರಿ ಕಾವಲುಗಾರರನ್ನು ಬಂಧಿಸಿ, ಬೀದಿಯಲ್ಲಿದ್ದ ಒಂದು ಕಾರನ್ನು ಅಪಹರಿಸಿ ಅದರಲ್ಲಿ ಕುಳಿತು ಪರಾರಿಯಾದರೆಂದು ಗೊತ್ತಾಗಿದೆ

ಕಪ್ಪು ಬಾವುಟ ಪ್ರದರ್ಶನಕ್ಕೆ ವಿದ್ಯಾರ್ಥಿಗಳ ವಿರೋಧ

ಮಹಾರಾಜಾ ಕಾಲೇಜಿನ ವಿವಿಧ ಸಂಸ್ಥೆಗಳ ಪ್ರತಿನಿಧಿಗಳಾದ ಶ್ರೀಗಳು ಹರಳ್ಳಿ ತುಲಸಿದಾಸ್, ಎಂ ಪಿ ರಾಜಶೇಖರ್, ಪಿ ಬಿ ಚಂದ್ರಶೇಖರಪ್ಪ ಟಿ ಡಿ. ಶ್ರೀನಿವಾಸ, ಕೆ ಕೆ ಕುಟ್ಟಪ್ಪ, ಜಿ ಎಂ ದಾಸ್ ಎಸ್. ಕೆ ಕೋಟೀಶ್ವರ್, ಹೆಚ್ ಡಿ. ರೆಡ್ಡಿ, ಎನ್ ರತ್ನ, ಎಂ ಎಸ್ ನಾಗರಾಜ್, ಎಸ್ ಆನಂತಮೂರ್ತಿ ಮುಂತಾದವರು ನಾಳೆ ದಿನ ನಡೆಯಲಿರುವ ಕಾಲೇಜಿನ ದಿನಾಚರಣೆಯ ಸಂಧರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ನಡೆಸಬೇಕೆಂದಿರುವ ಕಪ್ಪು ಬಾವುಟದ ಪ್ರದರ್ಶನವನ್ನು ವಿರೋಧಿಸುತ್ತಾ ಕೆಳಗೆ ಕಂಡಂತೆ ಹೇಳಿಕೆಯನ್ನಿತ್ತಿದ್ದಾರೆ.—

ನಾಳೆಯ ದಿನ ನಡೆಯಲಿರುವ ಸಮಾರಂಭದಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿ ಬರುವ ಮುಖ್ಯ ಅತಿಥಿಗಳಿಗೆ ಕಪ್ಪು ಬಾವುಟದ ಪ್ರದರ್ಶನ ನಡೆಸಬೇಕೆಂಬ ನಿರ್ಧಾರಕ್ಕೆ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಬೆಂಬಲವಿಲ್ಲ ಕೇವಲ ಕೆಲವು ವಿದ್ಯಾರ್ಥಿಗಳು ಈ ರೀತಿ ನಿರ್ಧರಿಸಿ ಇಡೀ ಕಾಲೇಜಿನ ವಿದ್ಯಾರ್ಥಿಗಳ ಗೌರವಕ್ಕೆ ಕಳಂಕ ತರುವ ನೀತಿಯನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿ ಅಂದು ಬರುವ ಮುಖ್ಯ ಅತಿಥಿಗಳ ವಿರುದ್ಧ ಕಾರ್ಯಕ್ರಮಗಳೇನಾದರೂ ನಡೆದರೆ ಅದು ಕಾಲೇಜಿನ ಗೌರವಕ್ಕೆ ಕುಂದುಂಟುಮಾಡುತ್ತದೆ

ವಿದ್ಯಾರ್ಥಿಗಳಾದ ನಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಲು ಬೇರೆ ಸಂದರ್ಭಗಳಿರುವಾಗ ಈ ಶುಭ ಮಹೋತ್ಸವದಲ್ಲಿ ಕಹಿ ವಾತಾವರಣಕ್ಕೆ ಎಡೆಗೊಡದೆ ನಮ್ಮೆಲ್ಲರಿಗೂ ಪ್ರಿಯವಾದ ಮತ್ತು ಮಾತೃ ಸಮಾನವಾದ ಕಾಲೇಜಿನ ವಾರ್ಷಿಕೋತ್ಸವದಲ್ಲಿ ವ್ಯವಸ್ಥಾಪಕರೊಡನೆ ಎಲ್ಲರೂ ಸಹಕರಿಸಿ ಅದನ್ನು ಯಶಸ್ವಿಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ಮಹಾರಾಜಾ ಕಾಲೇಜು ವಿದ್ಯಾರ್ಥಿನಿಲಯದ ಆವರಣದಲ್ಲಿ ಶ್ರೀ ಗೌಡಗೆರೆ ನಾಗಪ್ಪನವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಸಭೆಯೊಂದು ನಡೆದು ಕಾಲೇಜಿನ ಗೌರವಕ್ಕೆ ಕುಂದುಂಟುಮಾಡುವ ಮತ್ತು ವಿದ್ಯಾರ್ಥಿಗಳಲ್ಲಿ ಕಹಿ ವಾತಾವರಣವನ್ನು ಉಂಟುಮಾಡುವ ಈ ಪ್ರದರ್ಶನವನ್ನು ವಿರೋಧಿಸಿ ನಿರ್ಣಯ ಮಾಡಿತು

ಇದೇ ಅಭಿಪ್ರಾಯವನ್ನು ಪುಷ್ಟೀಕರಿಸಿ ಕಾಲೇಜಿನ ವಿದ್ಯಾರ್ಥಿಗಳಾದ ಶ್ರೀಗಳು ಎಂ. ಬೈರಯ್ಯ, ಕೆ ಸಿ ಕೆಂಪೇಗೌಡ, ಸಿದ್ಧಲಿಂಗೇಗೌಡ, ಹೆಚ್ ಎಂ. ಮುನಿವೀರೇಗೌಡ, ಗಂಗಾಧರಪ್ಪ, ಮತ್ತು ಎಸ್ ತಿಮ್ಮಯ್ಯನವರೂ ಸಹಾ ಪತ್ರವೊಂದನ್ನು ಬರೆದಿರುತ್ತಾರೆ ಕಪ್ಪು ಬಾವುಟ ಪ್ರದರ್ಶನಕ್ಕೆ ವಿದ್ಯಾರ್ಥಿಗಳಲ್ಲಿ ಶೇ|| ೯೯ ರಷ್ಟು ವಿರೋಧವಿವೆಯೆಂದು ಅವರು ಹೇಳಿಯುತ್ತಾರೆ.

ಹ ರಿ ಕ ಥೆ

ಹುಣ್ಣಿಮೆ ಪ್ರಯುಕ್ತ ಈ ರಾತ್ರಿ ೯ ಗಂಟೆಗೆ ೩ ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾ ಕಛೇರಿಯ ಮಹಡಿಯ ಮೇಲೆ ವೇ|| ಬ್ರ|| ಸದೀಶ್ವರಂ ಶ್ರೀನಿವಾಸ ಗಂಗಾಚಾರ್ಯರಿಂದ "ಸೀತಾ ಕಲ್ಯಾಣ' ಎಂಬ ಹರಿಕಥೆಯು ಜರುಗುವುದು. ಸರ್ವರಿಗೂ ಸ್ವಾಗತವುಂಟು

ಕ ನ್ನ ಡ ಹ ಬ್ಬ

ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಘದವರು ಬರುವ ೩ ಮತ್ತು ೪ ನೇ ತಾರೀಖು ಕನ್ನಡ ಹಬ್ಬವನ್ನು ಆಚರಿಸುವರು ಮೊದಲನೆಯ ದಿನ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ|| ಎಸ್. ವಿ ರಂಗಣ್ಣನವರು ಅಧ್ಯಕ್ಷತೆ ವಹಿಸುವರು ಡಾ|| ಎಸ್ ಶ್ರೀಕಂಠಶಾಸ್ತ್ರಿಗಳು "ಕರ್ನಾಟಕ ಸಂಸ್ಕೃತಿ" ಎಂಬ ವಿಷಯವಾಗಿಯೂ, ಮೈಸೂರಿನ ಮರಾಮತ್ತು ಇಲಾಖೆಯ ಸೂಪರಿಂಟೆಂಡಿಂಗ್ ಇಂಜನಿಯರಾದ ಶ್ರೀ ಎಂ ಆರ್ ಕೃಷ್ಣಮೂರ್ತಿರಾಯರಿಂದ "ರಾಣಿ ಶಾಂತಳಾದೇವಿ" ಎಂಬ ವಿಷಯದ ಮೇಲೆಯೂ ಭಾಷಣಗಳಾಗುವುವು ಎರಡನೆಯ ದಿನ ಸಂಘದ ಉಪಾಧ್ಯಕ್ಷರಾದ ಪ್ರೊ|| ಕೆ ಎನ್ ಶ್ರೀನಿವಾಸರವರ ನೇತೃತ್ವದಲ್ಲಿ ಶ್ರೀ ತ ರಾ ಸುಬ್ಬರಾಯರಿಂದ "ಸಾಹಿತ್ಯ ಮತ್ತು ಜನಜೀವನ" ದ ಬಗ್ಗೆ ಭಾಷಣವೂ ಕವಿಗಳು ಮತ್ತು ಕಲಾವಿದರುಗಳ ಕಾರ್ಯಕ್ರಮಗಳೂ ನಡೆಯುವುವು

ಮೃಗಗಳ ರಕ್ಷಣೆಗಾಗಿ ಅಭಯಾರಣ್ಯಗಳ ಸ್ಥಾಪನೆ

ವನಮೃಗ ರಕ್ಷಣಾ ಸಮಿತಿಯ ಸಲಹೆಗಳು

ಮೈಸೂರು ೧

ಕಳೆದ ಒಂದು ವಾರದಿಂದಲೂ ರಾಜಭವನದ ಲಲಿತ ಮಹಲ್ ಭವನದಲ್ಲಿ ನಡೆಯುತ್ತಿರುವ ಅಖಿಲ ಭಾರತ ವನಮೃಗ ರಕ್ಷಣಾ ಸಮಿತಿಯ ಕಾರ್ಯಕಲಾಪಗಳು ಇಂದು ಮುಕ್ತಾಯಗೊಂಡುವು ಸಮಿತಿಯ ಅಧ್ಯಕ್ಷರಾದ ಮೈಸೂರಿನ ರಾಜಪ್ರಮುಖರು ಅಗ್ರಾಸನವನ್ನು ವಹಿಸಿದ್ದರು

ಸಮಿತಿಯ ಉಪಾಧ್ಯಕ್ಷರಾದ ಶ್ರೀ ಕೆ. ಎಸ್. ಧರ್ಮಸಿಂಹಜಿಯವರು ಸ್ವಾಗತ ಭಾಷಣ ಮಾಡಿ ಮೈಸೂರು ಸಂಸ್ಥಾನದ ಬಂಡೀಪುರದಲ್ಲಿ ವನಮೃಗಗಳ ರಕ್ಷಣೆಗಾಗಿ ನಿರ್ಮಾಣವಾಗಿರುವ ಕೇಂದ್ರವು ಇತರ ಪ್ರಾಂತಗಳಿಗೆ ಆದರ್ಶಪ್ರಾಯವಾಗಿದೆಯೆಂದು ಹೇಳಿದರು

ಸ್ಥಳೀಯ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡಿ, ಕೇಂದ್ರ ಸರ್ಕಾರದ ಸೂಚನೆಯಂತೆ ಮೈಸೂರು ಸಂಸ್ಥಾನದಲ್ಲಿ ಕಾಡು ಪ್ರಾಣಿಗಳ ರಕ್ಷಣೆಗಾಗಿ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುವುದೆಂದು ತಿಳಿಸಿದರು

ಸಭಾಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮನ್ಮಹಾರಾಜರವರು ಸಮಿತಿಯ ಕಾರ್ಯಕಲಾಪಗಳ ವರದಿಯನ್ನು ಮಂಡಿಸಿದರು ಮೃಗಗಳ ಅಭಿವೃದ್ಧಿಗಾಗಿ ಅಲ್ಲಲ್ಲೇ ಅಭಯಾರಣ್ಯಗಳ ಸ್ಥಾಪನೆ ಮುಖ್ಯವಾಗಿ ಸಿಂಹಗಳ ಸಂತತಿಯನ್ನು ವೃದ್ಧಿಗೊಳಿಸುವುದು, ದೇಶದ ನಾನಾ ಕಡೆಗಳಲ್ಲಿ ಪ್ರಾಣಿ ಸಂಗ್ರಹಾಲಯಗಳನ್ನಿಟ್ಟು ಮನರಂಜನೆಗೆ ಏರ್ಪಾಡು ಮಾಡುವುದೂ ಇವೇ ಮುಂತಾದ ಸಲಹೆಗಳು ವರದಿಯಲ್ಲಿ ಅಡಕವಾಗಿದ್ದುವು ಸಿಂಹವು ಭಾರತ ಸಂಸ್ಕೃತಿಯಲ್ಲಿ ಪ್ರಮುಖ ಸ್ಥಾನವನ್ನು ಪಡೆದು, ಮೃಗರಾಜನೆಂಬ ಹೆಸರನ್ನು ಹೊಂದಿದೆಯೆಂದೂ ಶ್ರೀ ಚಾಮುಂಡೇಶ್ವರಿಗೆ ಅದು ವಾಹನವಾಗಿರುವುದೆಂದೂ ಅಶೋಕ ಸ್ತಂಭದಲ್ಲಿಯೂ ಸಹಾ ಸಿಂಹವು ಉನ್ನತ ಸ್ಥಾನವನ್ನು ಪಡೆದಿರುವುದಾಗಿಯೂ ಶ್ರೀಮನ್ಮಹಾರಾಜರವರು ಹೇಳಿ ಸಿಂಹಗಳ ಕುಲವನ್ನು ಬೆಳೆಸಬೇಕೆಂದು ಸೂಚಿಸಿದರು

ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿ ಶ್ರೀ ಪಂಜಾಬರಾವ್ ದೇಶಮುಖರವರು ಮಾತನಾಡಿ ವನಮೃಗಗಳ ಸಂರಕ್ಷಣೆಯು ನಮ್ಮ ಪೂರ್ವಜರಿಂದ ಬಂದಿರುವ ಒಂದು ಪವಿತ್ರವಾದ ಜವಾಬ್ದಾರಿಯೆಂದು ಹೇಳಿ ಮೃಗರಕ್ಷಣೆಯಲ್ಲಿ ವಿಶೇಷ ಆಸಕ್ತಿ ವಹಿಸಿರುವ ಮೈಸೂರು ಮಹಾರಾಜರ ನೇತೃತ್ವದಲ್ಲಿ ಈ ಕಾರ್ಯವು ಯಶಸ್ವಿಯಾಗಿ ನಡೆಯುವುದೆಂದು ಹಾರೈಸಿದರು ಶಾಸನಗಳಿಂದ ಆಗುವುದಕ್ಕಿಂತಲೂ ಹೆಚ್ಚಾಗಿ ಬೇಟೆಗಾರರ ಮನಸ್ಸಿನ ಪರಿವರ್ತನೆಯಿಂದ ಮೃಗಗಳ ರಕ್ಷಣೆಯು ಆಗಬಲ್ಲದೆಂದು ಅವರು ಅಭಿಪ್ರಾಯಪಟ್ಟರು

ಭಾರತ ಸರ್ಕಾರದ ವನಮೃಗ ಶಾಖೆಯ ಡೈರೆಕ್ಟರ್ ರಾವ್ ಎಸ್. ಎಲ್ ಹೋರಾ ಮತ್ತು ಕಾರ್ಯದರ್ಶಿ ಎಂ ಡಿ ಚತುರ್ವೇದಿಯವರಿಂದ ವಂದನಾರ್ಪಣೆಯಾಗಿ ಸಮಾರಂಭವು ಮುಕ್ತಾಯವಾಯಿತು

ಪರ್ಷಿಯದ ಮಾಜಿ ಪ್ರಧಾನಿ ಆಸ್ತಿಯ ಮುಟ್ಟುಗೋಲು

ಪರ್ಷಿಯದಲ್ಲಿ ನಾಲ್ಕು ದಿನಗಳ ಕಾಲ ಮುಖ್ಯ ಮಂತ್ರಿಯಾಗಿದ್ದ ಘವಾಂ ಸುಲ್ತಾನೆಯವರ ಆಸ್ತಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಅಲ್ಲಿನ ಈಗಿನ ಪ್ರಧಾನಿ ಡಾ|| ಮುಸ್ಸಾದಿಕ್ಕರು ಆಜ್ಞೆ ಹೊರಡಿಸಿರುವರು.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ೨೨ ನೇ ತಾ॥

ಇದೇ ತಿಂಗಳು ೨೨ ನೇ ತಾ॥ ಹೈದರಾಬಾದು ಕಾಂಗ್ರೆಸ್ ಅಧ್ಯಕ್ಷರ, ಎ ಐ ಸಿ ಸಿ ಸದಸ್ಯರ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳ ಚುನಾವಣೆಗಳು ನಡೆಯಬೇಕೆಂದು ಅ॥ಭಾ॥ ಕಾಂಗ್ರೆಸ್ ಸಮಿತಿಯು ಎಲ್ಲ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೂ ಸೂಚನೆಯನ್ನು ಕಳುಹಿಸಿರುತ್ತದೆ.

ಸೀಮೆ ಎಣ್ಣೆ ಪೆಟ್ರೋಲು ದರ ಇಳಿಯಿತು

ಭಾರತದಲ್ಲಿ ಇಂದಿನಿಂದ ಪೆಟ್ರೋಲು ಮತ್ತು ಸೀಮೆ ಎಣ್ಣೆಯ ದರವನ್ನು ಇಳಿಸಲಾಗಿದೆ ಸೀಮೆಎಣ್ಣೆಯ ಬೆಲೆಯನ್ನು ೮ ಗ್ಯಾಲನ್ನುಗಳಿಗೆ ೧ ಆಣೆಯಿಂದ ಮೂರೂವರೆ ಆಣೆಯವರೆಗೂ ಮತ್ತು ಪೆಟ್ರೋಲಿನ ದರವನ್ನು ಗ್ಯಾಲನ್ನಿಗೆ ಅರ್ಧ ಆಣೆಯಿಂದ ಒಂದು ಆಣೆಯವರೆವಿಗೂ ಇಳಿಸಲಾಗಿದೆ ವಿಮಾನದ ಎಣ್ಣೆ ಮತ್ತು ಡೀಸೆಲ್ ಎಣ್ಣೆಗಳ ಬೆಲೆಯನ್ನೂ ಇಳಿಸಲಾಗಿದೆ

ಸಹಾಯಾರ್ಥ ನಾಟಕ

ರಾಜಧಾನಿಯ ಶೇಷಕಮಲ ಕಲಾ ಮಂಡಲಿಯವರು ಈ ಸಂಜೆ ೬ ಗಂಟೆಗೆ ಶ್ರೀ ಮಿರ್ಲೆ ಶ್ರೀನಿವಾಸರಾಯರ ಮಕ್ಕಳ ವಿದ್ಯಾಭ್ಯಾಸದ ಸಹಾಯಾರ್ಥವಾಗಿ ಟೌನ್ ಹಾಲಿನಲ್ಲಿ ಕವಿರತ್ನ ಕಾಳಿದಾಸ ಎಂಬ ನಾಟಕವನ್ನು ಅಭಿನಯಿಸುವರು ಡಾ॥ ಬಿ ಜಿ ದಾಸ್‌ರವರು ಅಧ್ಯಕ್ಷತೆ ವಹಿಸುವರು.

ಸಂಸ್ಥಾನದಲ್ಲಿ ಕೇವಲ ೨ ಆಣೆ ಬೆಳೆಯೇ ?

ಮಳೆಯು ಬಾರದೆ ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿಯು ವಿಷಮಗೊಳ್ಳುವುದೆಂದೂ, ಸರಾಸರಿ ಎರಡು ಆಣೆಯ ಬೆಳೆಯೂ ಆಗದೆಂದೂ, ಶೀಘ್ರದಲ್ಲೇ ಮಳೆಯು ಬಂದರೆ ಚಿತ್ರದುರ್ಗದಲ್ಲಿ ೪ ಆಣೆಯ ಬೆಳೆಯಾಗಬಹುದೆಂದೂ ಹೇಳಲಾಗಿದೆ

ಸತ್ಕಾರ ಕೂಟ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಸಂಘದಲ್ಲಿ ಸದರಿ ಕೋಮಿನ ನೂತನ ಪದವೀಧರರು ಮತ್ತು ವಿಶ್ವವಿದ್ಯಾಲಯದ ಅಂತಿಮ ತರಗತಿಯ ವಿದ್ಯಾರ್ಥಿಗಳಿಗಾಗಿ ನಾಳೆ ಸಂಜೆ ೬-೩೦ ಘಂಟೆಗೆ ಒಂದು ಸತ್ಕಾರ ಕೂಟವನ್ನ ಏರ್ಪಡಿಸಲಾಗಿದೆ ಸಂಬಂಧಪಟ್ಟ ಮಹನೀಯರು ಸಮಾರಂಭಕ್ಕೆ ಆಗಮಿಸಬೇಕೆಂದು ಕಾರ್ಯದರ್ಶಿಯವರು ಕೋರಿರುತ್ತಾರೆ

ಕಡಲೆಪುರಿ ಭಟ್ಟಿ ಕೆಲಸಗಾರರ ಸಂಘ

ರಾಜಧಾನಿಯಲ್ಲಿ ಇತ್ತೀಚೆಗೆ ಸ್ಥಾಪಿತವಾದ ಕಡಲೆಪುರಿ ಭಟ್ಟಿ ಕೆಲಸಗಾರರ ಸಂಘಕ್ಕೆ ಸದಸ್ಯರು ಸೇರದಂತೆ ಹಲವು ಭಟ್ಟಿ ಮಾಲೀಕರು ತಡೆಗಟ್ಟಿ ಸಂಘದ ಶಕ್ತಿಯನ್ನು ಮುರಿಯಲು ಪ್ರಯತ್ನಿಸುತ್ತಿರುವರೆಂದು ಸಂಘದ ಕಾರ್ಯದರ್ಶಿಯವರು ಆಪಾದಿಸಿ, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಕೊರಿಯಾ ಮೇಲೆ ಪುನಃ ಭಾರಿ ಧಾಳಿ

ವಿಶ್ವಸಂಸ್ಥೆಯ ಸೂಪರ್ ವಿಮಾನಗಳು ಮೊನ್ನೆ ರಾತ್ರಿ ಇದೇ ಮೊದಲನೆಯಬಾರಿ ಉತ್ತರ ಕೊರಿಯಾ ಮೇಲೆ ಅತ್ಯಂತ ಬಾರಿ ಧಾಳಿಯನ್ನು ನಡೆಸಿರುವವೆಂದೂ, ಯಾಲೂ ನದಿ ಬಳಿ ಹಲವು ಬಾಂಬುಗಳನ್ನು ಹಾಕಲಾಯಿತೆಂದೂ ವರದಿಯಾಗಿದೆ.

ಮಧ್ಯ ಪ್ರದೇಶದಲ್ಲಿ ಮದ್ಯದ ಪಡಿತರ

ಮಧ್ಯ ಪ್ರದೇಶದ ಪಾನ ನಿರೋಧ ತನಿಖೆ ಸಮಿತಿಯವರು ಪಾನ ನಿರೋಧಕ್ಕೆ ಬದಲಾಗಿ ಸೇಂದಿಯ ಪಡಿತರ ಪದ್ಧತಿಯನ್ನು ಜಾರಿಗೆ ತರುವಂತೆ ಶಿಫಾರಸು ಮಾಡಿರುವರೆಂದೂ, ಬುಲ್ಡಾನ ಜಿಲ್ಲೆಯಲ್ಲೂ ಮತ್ತು ಜಬ್ಬಲ್ಪುರ ಜಿಲ್ಲೆಯ ಕಾಟ್ನಿ ತಹಸೀಲಿನಲ್ಲೂ ಮದ್ಯದ ಪಡಿತರವನ್ನು ಸಧ್ಯದಲ್ಲೇ ಜಾರಿಗೆ ತರಲಾಗುವುದೆಂದೂ ಗೊತ್ತಾಗಿದೆ.

ಆಶು ಭಾಷಣ ಮತ್ತು ಚರ್ಚಾ ಸ್ಪರ್ಧೆಗಳು

ರಾಜಧಾನಿಯ ಶಾರದಾವಿಲಾಸ ಕಾಲೇಜು ಹಿರಿಯ ತರುಣರ ಸಂಘದ ಆಶ್ರಯದಲ್ಲಿ ನೆನ್ನೆ ಆಶು ಭಾಷಣ ಸ್ಪರ್ಧೆಯು ಜರುಗಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು ಮಹಾರಾಜಾ ಪ್ರಿಪರೇಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಕೃಷ್ಣಸ್ವಾಮಿ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು ನಗರದ ಎಂಟು ಪ್ರೌಢ ಶಾಲೆಗಳ ಸ್ಪರ್ಧಿಗಳಲ್ಲಿ ಭಾಗವಹಿಸಿದ್ದರು ಮಹಾರಾಣಿ ಹೈಸ್ಕೂಲಿನ ಶ್ರೀಮತಿ ಎಸ್ ಪ್ರೇಮಲತಾ ಹಾರ್ಡ್ವಿಕ್ ಹೈಸ್ಕೂಲಿನ ಶ್ರೀ ಆರ್ ವಾಸುದೇವಮೂರ್ತಿ ಶಾರದಾವಿಲಾಸ ಹೈಸ್ಕೂಲಿನ ಶ್ರೀ ಆರ್ ಸುಧೀಂದ್ರ ಮತ್ತು ಅದೇ ಶಾಲೆಯ ಕೆ ವಿ ವೆಂಕಟರಾಮು ರವರಿಗೆ ಕ್ರಮವಾಗಿ ಪ್ರಥಮ, ದ್ವಿತೀಯ ತೃತೀಯ ಮತ್ತು ವಿಶೇಷ ಬಹುಮಾನಗಳು ದೊರೆತುವು

ಎಂ ಎಸ್ ಸುಬ್ಬರಾವ್ ಸ್ಮಾರಕ ಅಂತರ ಪ್ರೌಢ ಶಾಲಾ ಚರ್ಚಾಸ್ಪರ್ಧೆಯು ಶಾರದಾವಿಲಾಸ ಹೈಸ್ಕೂಲಿನಲ್ಲಿ ಮೊನ್ನೆ ಜರುಗಿತು "ವಿಶ್ವಸಂಸ್ಥೆಯಿಂದ ಶಾಂತಿ ಸ್ಥಾಪನೆ ಅಸಾಧ್ಯ" ಎಂಬ ವಿಚಾರವಾಗಿ ಚರ್ಚೆ ನಡೆಯಿತು ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾಲಯದ ಉಪ ಪ್ರಾಧ್ಯಾಪಕರಾದ ಶ್ರೀ ಭರತರಾಜ ಸಿಂಗ್ ರವರು ಬಹುಮಾನಗಳನ್ನು ಹಂಚಿದರು ಮಹಾರಾಣಿ ಹೈಸ್ಕೂಲಿನ ಶ್ರೀಮತಿ ಇಂದಿರಾ, ಮರಿಮಲ್ಲಪ್ಪ ಹೈಸ್ಕೂಲಿನ ಶ್ರೀ ಪಿ ಎಸ್. ಶ್ರೀನಿವಾಸನ್, ವಣಿವಿಲಾಸ ಹೈಸ್ಕೂಲಿನ ವಿಜಯಲಕ್ಷ್ಮಮ್ಮ ಮತ್ತು ಹಾರ್ಡ್ವಿಕ್ ಹೈಸ್ಕೂಲಿನ ಎಂ ಆರ್ ಗೋಪಿನಾಥರವರಿಗೆ ಕ್ರಮವಾಗಿ ನಾಲ್ಕು ಬಹುಮಾನಗಳು ದೊರೆತುವು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ಎಂ. ಡಿ. ಮಾಲತಿ ವೀಣಾ ವಾದನ ಮಧ್ಯಾಹ್ನ ೧-೪೦ ಓಲಗ. ೨ ಹಿಂದೂಸ್ಥಾನಿ ಸಂಗೀತ ಸಂಜೆ ೫-೩೦ ಆರ್. ಇಂದಿರಮ್ಮ ಮತ್ತು ಆರ್ ಲೀಲಾ ಸಂಗೀತ. ೬-೧೦ ಗಾನವಿಹಾರ ೭ ಹಿಂದೂಸ್ಥಾನಿ ಸಂಗೀತ. ೮-೪೦ ಸಂವಾದಮಾಲೆ ಕೃಷ್ಣ ಮತ್ತು ಉದ್ಧವ ೮ ಎಂ. ಡಿ ಮಾಲತಿ ವೀಣಾ ವಾದನ ೮-೪೦ ವೃಂದ ಸಂಗೀತ ೯-೧೫ ಕುಕಡ ಕಲೆ ೯-೪೦ ಗಾನಾಮೃತ

ಆಜಾದ್ ಕಾಶ್ಮೀರದಲ್ಲಿ ನಾಗರಿಕ ರಕ್ಷಣಾ ಶಿಕ್ಷಣ

ಪಾಕಿಸ್ತಾನದವರು ಆಕ್ರಮಿಸಿರುವ ಕಾಶ್ಮೀರದ ಪ್ರದೇಶದಲ್ಲಿ ನಾಗರಿಕ ರಕ್ಷಣಾ ವಿಧಾನದಲ್ಲಿ ತರಬೇತು ಕೊಡಲು ಆಲೋಚಿಸಿರುತ್ತಾರೆಂದು ವರದಿಯಾಗಿದೆ

ರಾಜ್ಯಪರಿಷತ್ತಿನ ಮೈಸೂರು ಸದಸ್ಯರ ನಿವೃತ್ತಿ

ಭಾರತದ ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಯಲ್ಲಿ ಮೈಸೂರಿನ ಸದಸ್ಯರಾಗಿರುವ ಶ್ರೀಗಳಾದ ಎಂ ಗೋವಿಂದ ರೆಡ್ಡಿ ಮತ್ತು ಎಸ್ ವಿ ಕೃಷ್ಣಮೂರ್ತಿ ರಾಯರು ೧೯೫೪ರಲ್ಲೂ ಬಿ ಪಿ ಬಸಪ್ಪ ಶೆಟ್ಟಿ ಮತ್ತು ಮಹಮದ್ ವಲಿಯುಲ್ಲಾ ರವರು ೧೯೫೬ರಲ್ಲೂ ನಿವೃತ್ತರಾಗಲಿರುವರು ಮೈಲ್ಕಂಡ ಮತ್ತು ಇತರ ಸದಸ್ಯರ ಅವಧಿಯ ಮುಕ್ತಾಯದ ಬಗ್ಗೆ ಮೊನ್ನೆ ಬೆಳಗ್ಗೆ ಚೀಫ್ ಎಲೆಕ್ಷನ್ ಕಮಿಷನರಾದ ಸುಕುಮಾರ್ ಸೇನ್‌ರವರು ಚೀಟಿ ಮೂಲಕ ನಿರ್ಧರಿಸಿದರೆಂದು ಗೊತ್ತಾಗಿದೆ

ಗೀತಾ ಜಯಂತಿ

ರಾಜಧಾನಿಯ ಚಾಮರಾಜ ರಸ್ತೆಯಲ್ಲಿರುವ ಪ್ರೈಮರಿ ಗರ್ಲ್ಸ್ ಸ್ಕೂಲು ಮತ್ತು ಬಾಲ ಬೋಧಿನಿ ಪ್ರೈಮರಿ ಬಾಯ್ಸ್ ಸ್ಕೂಲಿನವರು ಒಟ್ಟಿಗೆ ಸೇರಿ ಕಳೆದ ಗುರುವಾರ ಶ್ರೀ ಜಿ ಆರ್ ಜೋಯಿಸ್‌ರವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಗರ್ಲ್ಸ್ ಸ್ಕೂಲಿನಲ್ಲಿ ಗೀತಾ ಜಯಂತಿ ದಿನಾಚರಣೆಯನ್ನು ನೆರವೇರಿಸಿದರು.

ಸಂಸ್ಕೃತಿ ಪ್ರಸಾರೋತ್ಸವ

ರಾಜಧಾನಿಯ ಶಾರದಾವಿಲಾಸ ಕಾಲೇಜಿನಲ್ಲಿ ಮೇಲ್ಕಂಡ ಸಮಾರಂಭವು ಕಳೆದ ೨೭ ನೇ ತಾರೀಕು ಶ್ರೀ ಎಂ ಎಸ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಚ್ ಎಂ ಶಂಕರನಾರಾಯಣ ರಾಯರು ಸ್ವಾಗತ ಭಾಷಣ ಮಾಡಿದನಂತರ ಶ್ರೀ ಎಚ್ ಯೋಗಾನರಸಿಂಹರವರು ಸಂಸ್ಕೃತಿಯ ವಿಷಯವಾಗಿ ಉಪನ್ಯಾಸ ಮಾಡಿದರು ಭಾರತ ಮತ್ತು ಕಾವ್ಯ ವಾಚನಗಳಾದ ನಂತರ ವಂದನಾರ್ಪಣೆಯೊಡನೆ ಉತ್ಸವವು ಮುಕ್ತಾಯವಾಯಿತು.

SRI GAYATHRI

TALKIES

Daily 2 Shows

On 2-12-52 * One Day Only

20th Century's

JOURNEY INTO LIGHT

With Viveka Lindfors

From 3-12-52 * For 2 Days

Warner's

THE SANFRANSISCO STORY

With Yvonne DeCarlo

ಚಿರತೆಯಿಂದ ಮೂವರಿಗೆ ಗಾಯ

ಹೊಳೇನರಸೀಪುರದ ಬಳಿ ಹಳ್ಳಿಕೋಟೆ ಹಳ್ಳಿಯ ಹೊರ ಭಾಗದಲ್ಲಿ ಸೊಪ್ಪು ಕುಯ್ಯಲು ಹೋದ ನಂಜಪ್ಪ, ನಿಂಗಪ್ಪ ಮತ್ತು ಇನ್ನೊಬ್ಬ ನಂಜಪ್ಪ ಇವರುಗಳ ಮೇಲೆ ಚಿರತೆಯೊಂದು ಬಿದ್ದು ಗಾಯಗೊಳಿಸಿತೆಂದೂ, ಅವರನ್ನು ಹೊಳೇನರಸೀಪುರದ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ

ಉಚಿತ ಸಂಸ್ಕೃತ ವ್ಯಾಸಂಗದ ತರಗತಿ

ಅಖಿಲ ಭಾರತೀಯ ವಿದ್ಯಾ ಪರಿಷತ್ತಿನವರು ಉಚಿತ ಸಂಸ್ಕೃತ ವ್ಯಾಸಂಗ ತರಗತಿಯನ್ನು ಪ್ರತಿ ಬುಧವಾರ ಸಂಜೆ ೬॥ ಗಂಟೆಯಿಂದ ರಾತ್ರಿ ೯ರ ವರೆಗೂ ಭಾನುವಾರ ಮಧ್ಯಾಹ್ನ ೨॥ ಗಂಟೆಯಿಂದ ೪ರ ವರೆಗೂ ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಾ ಗಾಂಧಿ ಸೇವಾ ಸಂಘದಲ್ಲಿ ಏರ್ಪಡಿಸಿರುತ್ತಾರೆ ಈ ವ್ಯಾಸಂಗದಲ್ಲಿ ಅಭಿರುಚಿಯುಳ್ಳವರು ತಮ್ಮ ಹೆಸರನ್ನು ಪರಿಷತ್ತಿನ ಕಾರ್ಯದರ್ಶಿಯವರಿಗೆ ಕೊಡಬಹುದೆಂದು ತಿಳಿಯಪಡಿಸಲಾಗಿದೆ

ಕೈಲಾಸಂ ದಿನಾಚರಣೆ

ಯಳಂದೂರು ಪುರ ಪ್ರೌಢ ಶಾಲಾ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ೨೭ನೇ ತಾ॥ ಕೈಲಾಸಂ ದಿನಾಚರಣೆಯನ್ನು ನೆರವೇರಿಸಲಾಯಿತು ಯಳಂದೂರು ತಾಲ್ಲೂಕು ಅಮಲ್ದಾರರಾದ ಶ್ರೀ ಚಂದೂಲಾಲ್‌ರವರು ಅಧ್ಯಕ್ಷತೆ ವಹಿಸಿದ್ದರು ಸಂಘದ ಉಪಾಧ್ಯಕ್ಷರಾದ ಸತ್ಯನಾರಾಯಣರಾವ್‌ರವರು ಕೈಲಾಸಂ ದಿನಾಚರಣೆಯ ಪ್ರಾಮುಖ್ಯತೆಯನ್ನು ತಿಳಿಸಿ, ಅಂದಿನ ಮುಖ್ಯ ಅತಿಥಿಗಳನ್ನು ಸಭಿಕರಿಗೆ ಪರಿಚಯ ಮಾಡಿ ಕೊಟ್ಟರು ವಸಂತ, ಸಿಂಹನಾದ ಮುಂತಾದ ಪತ್ರಿಕೆಗಳ ಸಂಪಾದಕರಾದ ಶ್ರೀ ಎನ್ ಶ್ರೀಕಂಠಯ್ಯನವರು ಕೈಲಾಸಂರ ಜೀವನದ ಕೆಲವು ಘಟನೆಗಳನ್ನೂ, ಪ್ರತಿಭೆಯನ್ನೂ ವಿವರಿಸಿ, ಅವರ ನಾಟಕಗಳನ್ನು ಓದಿದರು

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

407. ಸಯ್ಯಾಜಿರಾವ್ ರೋಡ್,

ಮೈಸೂರು

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಆರ್. ಎಸ್. ಪಂಡಿತರು

ರಾಮಗೋಪಾಲ ವೈದ್ಯಶಾಲಾ

ದಿವಾನರ ರಸ್ತೆ, ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು, ಚೋಳಿ ಪೀಸುಗಳು

ಪೂನಾ, ನಾಗಪೂರ್ ಸೀರೆಗಳಿಗೆ

★ M. V. ಬೋಜಯ್ಯ ಬಿ.ಎ, ಇಂಡಿಯನ್ ಬ್ಯಾಂಕ್ ಎದುರು, ಮೈಸೂರು

ಟೆಲಿಫೋನ್ ನಂ. 794 ||ವಂದೇ ಮಾತರಂ|| ಬಿಡಿಯ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೩-೧೨-೧೯೫೩ [ಸಂಚಿಕೆ ೧೦೩

ದ|| ಆಫ್ರಿಕಾ ನಗರದಲ್ಲಿ ಬಿರುಗಾಳಿ ಅನಾಹುತ

ಜ್ಞಾನವು ವಿಶ್ವವ್ಯಾಪಿಯಾದುದು

ಎಡ್ವರ್ಡ್ ಜೆನ್ನಿಂಗ್ಸ್‌ರವರ ಘಟಿಕೋತ್ಸವ ಭಾಷಣ

ಮೈಸೂರು ೩

... ವಿಶ್ವವಿದ್ಯಾನಿಲಯದ ಘಟಿಕೋತ್ಸವವು ಈ ದಿನ ಬೆಳಗ್ಗೆ ಕ್ರಾಫರ್ಡ್ ... ಹಾಲ್ಲಿ ಛಾನ್ಸಲರಾದ ಶ್ರೀಮನ್ ಮಹಾ... ರವರ ಅಧ್ಯಕ್ಷತೆಯಲ್ಲಿ ನೆರವೇರಿತು ... ಶಾಖೆಗಳಲ್ಲಿ ಉತ್ತೀರ್ಣರಾದ ... ಜನರು ಪದವಿಗಳನ್ನು ಪಡೆದ ... ರೀಕ್ಷ ಪ್ರಶಸ್ತಿಯನ್ನು ಹೊಂದಿದವ ... ಶ್ರೀಮನ್ಮಹಾರಾಜರು ಸುವರ್ಣ ಪ... ಬಹುಮಾನವನ್ನು ಹಂಚಿದರು.

... ದ್ವೀಪದ ವಿಶ್ವವಿದ್ಯಾಲಯದ ... ಛಾನ್ಸಲರಾದ ಸರ್ ಐವೊರ್ ಜೆನ್ನಿಂ... ರವರು ಪದವೀಧರರನ್ನುದ್ದೇಶಿಸಿ, ಭಾ... ಮಾಡಿ ಈ ಕೆಳಗೆ ಕಂಡಂತೆ ಹೇಳಿ... ಎಂಡಳ ಮತ್ತು ಮೈಸೂರುಗಳಿಗೆ ... ಶತಮಾನಗಳಿಂದ ನಿಕಟ ಬಾಂಧವ್ಯ ... ಈ ಎರಡು ನಾಡುಗಳ ವಿಶ್ವವಿ... ಗಳಿಗೆ ಸಂಬಂಧವು ಏರ್ಪಟ್ಟಿರು ... ದೇ ನೋಡಲು ಭಾರತದ ಅನೇಕ ... ಲಯಗಳು ಪಡೆದಿರುವಂತಹ ... ಪ್ರತ್ಯಕ್ಷ ಸಂಪರ್ಕವಿಲ್ಲದೆ ... ಲರುಗಳಿಂದ ಕಲಿಯಲ್ಪಡುವವ ... ಸ್ವಲ್ಪ ವ್ಯಾಸಂಗ ಮಾಡಿ ಭವಿಷ್ಯ ... ಹೆಚ್ಚು ಜ್ಞಾನವನ್ನು ಸಂಪಾ... ಗಿರುವವರು ಮಾಸ್ತರುಗಳಿಂದ ... ನವರು, ಗುರುಗಳಾಗಲರ್ಹರಾ... ಪಾಕ್ಷರುಗಳೆಂಬುವರು ಸಂ... ಪಡೆದವರು—ಹೀಗೆ ಮೂರು ವಿ... ಧರರು ನಿಮ್ಮಲ್ಲಿರುತ್ತೀರಿ ನೊ... ಗಳಿಯು ಜ್ಞಾನಾರ್ಜನೆಯ ... ಅದರೆ ಇನ್ನೂ ಎರಡು ... ಬೇಡವೆ ಎಲ್ಲರೂ ಆ ಮೆಟ್ಟಿ... ಹತ್ತುವುದಿಲ್ಲ ಅಲೆಕ್ಸಾಂಡರ ... ತಿಕ್ಕೆ ಬಂದ ಅನಂತರ ಪ್ರಪಂಚ ... ಯನ್ನೇ ಹೊಂದಿಲ್ಲವೆಂದು ಹಲವ ... ರು. ಇದು ಅಸತ್ಯ ಜ್ಞಾನ ... ಲ್ಲಿ ಪ್ರಗತಿಯು ಬಹುವಾಗಿ ಸಾಧಿ ... ಅವರ ವಿವೇಕದಲ್ಲಿಯೂ ಸಾಧು ... ದಿರುವವೆಂದು ನಾನು ಹೇಳ ... ಳೆದ ಶತಮಾನದಲ್ಲಿ ಜ್ಞಾನಾರ್ಜನೆ ... ಗತಿಯು ಬಹುವೇಗದಿಂದ ಸಾಗಿ ... ಕೋಟಿಗೆ ಸಹಾಯಕವಾಗಿದೆಯೆಂ... ಹೇಳಬಲ್ಲೆ ಜ್ಞಾನ ಪ್ರಸಾರದ ... ಸುವುದು ಪ್ರಶಂಸಾರ್ಹವಲ್ಲದೆ, ಪದ ... ಗಳ ಮೇಲೆ ದಿವ್ಯ ಜನಾಚ್ಛಾದಿ ...

... ದ ವಿಶ್ವವಿದ್ಯಾಲಯದಲ್ಲಿ ವಿದ್ಯಾ... ವಿಧಿಸುವುದಿಲ್ಲ ಶುಲ್ಕವನ್ನೇ ... ಯಾವ ವಿಶ್ವವಿದ್ಯಾಲಯವೂ ... ವನ್ನು ಮಂಡಿಸುವರೆಸಲು ಸಾ... ರ್ಥಿಗಳಿಗೆ ಉದ್ಯೋಗ ಮತ್ತು ... ತನಗಳು ದೊರೆಯಲೆಂದು ಸ... ನಿಮ್ಮ ವಿದ್ಯೆಗೆ ಹಣವನ್ನು ಒದಗಿ... ಸಾಮಾನ್ಯ ಜನರ ಹಿತಕ್ಕಾಗಿಯೇ ... ವಿದ್ಯೆಯನ್ನು ಉಪಯೋಗಿಸು ... ಸಮಾಜವು ನಿಮ್ಮಿಂದ ನಿರೀಕ್ಷಿಸು ... ಕಲೆ, ನಾಟಕ, ಕಾವ್ಯ, ಕಲೆ ಮತ್ತು ... ವೇ ಮುಂತಾದ ಜ್ಞಾನಪ್ರಬೋ... ಗಳಿಂದ ವಿವೇಕವನ್ನು ಪಡೆ...

... ದ ಸಮಿತಿಗಳಿಗಿಂತಲೂ ಒಬ್ಬ ... ಸಮಿತಿಯು ಹೆಚ್ಚು ಉಪಯುಕ್ತ ... ಒಂದು ಬರಹವನ್ನು ಲಕ್ಷಗಟ್ಟ ... ಅಭ್ಯಾಸ ಮಾಡಿಸಲಾಗಿದೆ. ಅದ ... ರವರು ಮಾತ್ರ ಬುದ್ಧಿವಂತಿಕೆಯಿಂದ ... ಜ್ಞಾನದಲ್ಲಿ ಐಕ್ಯತೆಯನ್ನು ... ಪಡೆಯಬೇಕು ಪಡಿಸಬೇಕಾದ ವಿವಿಧ ... ಗಳು ಇದ್ದರೂ ಅವುಗಳ ಮೂಲವು ... ದಾಪ್ತೀಯ ವಿದ್ಯೆ ಎಂಬುದು ಪ್ರ... ಜ್ಞಾನವು ವಿಶ್ವವ್ಯಾಪಿ ಸಾಮ್ರಾ... ನ ಸಾಮ್ರಾಜ್ಯವನ್ನು ನೀವು ಆಶ್ರಯಿಸಿದರೆ ನಿಮ್ಮ ಅನಾಚ್ಛಾದಿಯೂ ಹೆಚ್ಚುವುದು

ವಿದ್ಯೆಯ ಹಲವು ಭಾಗಗಳಲ್ಲಿ ಪ್ರಾವೀಣ್ಯತೆಯನ್ನು ಪಡೆಯಬಹುದು ಆದರೆ ಅವನ್ನು ಸ್ವಕೀಯ ಪರಿಸ್ಥಿತಿಗೆ ಅನುವು ಮಾಡಿಕೊಳ್ಳಬೇಕಾದುದು ಅಗತ್ಯ ನಮಗೆ ತಿಳಿದಿರುವುದು, ತಿಳಿಯಬೇಕಾದುದರಲ್ಲಿ ಒಂದು ಅಂಶ ಮಾತ್ರವಾಗಿರಬಹುದು ಸರ್ವವ್ಯಾಪಿಯಾದ ಜ್ಞಾನದ ಪ್ರಭಾವಶಕ್ತಿಯಲ್ಲಿ ಎಲ್ಲರೂ ಸೇರಿ ಆನಂದಪಡುವ ಕಾಲುವಂತಾಗಲೆಂದು ಹಾರೈಸೋಣ.

ಉತ್ತರಪ್ರದೇಶದ ನೌಕರರು ಆಸ್ತಿ ಪಟ್ಟಿ ಒಪ್ಪಿಸಬೇಕು

ಉತ್ತರ ಪ್ರದೇಶದ ಸರ್ಕಾರದವರು ಅಲ್ಲಿನ ಎಲ್ಲ ನೌಕರರಿಗೂ ಸೂಚನೆಯೊಂದನ್ನಿತ್ತು ಅವರು ಕೆಲಸಕ್ಕೆ ಸೇರುವುದಕ್ಕೆ ಮುಂಚೆ ಅವರಿಗೂ ಮತ್ತು ಅವರ ಸಂಸಾರದವರಿಗೂ ಇದ್ದ ಸ್ಥಿರ ಆಸ್ತಿಯ ಪಟ್ಟಿಯನ್ನೂ, ಅವರು ಕೆಲಸದ ಮೇಲಿರುವ ವೇಳೆಯಲ್ಲಿ ಸಂಪಾದಿಸಲಾದ ಆಸ್ತಿಯ ವಿವರವನ್ನು ಕೊಡಬೇಕೆಂದು ಕೇಳುತ್ತಾರೆ. ವಿವಾಹ ಮೊದಲಾದ ಸಮಾರಂಭಗಳಲ್ಲಿ ಮುಯ್ಯಿ ಅಥವಾ ಬೇರೆ ಯಾವ ವಿಧವಾದ ಬಹುಮಾನವನ್ನೂ ಸ್ವೀಕರಿಸಬಾರದೆಂದೂ, ಅವರು ಕೊಂಡುಕೊಂಡ ಪದಾರ್ಥಗಳಿಗೆ ಸಕಾಲದಲ್ಲಿ ಪೂರ್ಣ ಬೆಲೆಯನ್ನು ಕೊಡಬೇಕೆಂದೂ ಮತ್ತು ಕೈ ಕೆಳಗಿನ ನೌಕರರ ಮೂಲಕ ಯಾವ ಪದಾರ್ಥಗಳನ್ನೂ ತರಿಸಬಾರದೆಂದೂ ನಮೂದಿಸಲಾಗಿದೆ

ಮುದ್ರಣಾಲಯದ ಶೋಧನೆ

ರಾಜಧಾನಿಯ ಸೂರಡಿ ರಸ್ತೆಯಲ್ಲಿರುವ ಶ್ರೀ ಕುಮಾರಾ ಪ್ರೆಸ್ಸನ್ನು ನಗರದ ಕೃಷ್ಣರಾಜಾ ಪೊಲೀಸರು ನೆನ್ನೆ ಶೋಧನೆ ಮಾಡಿ, ಮಹಾರಾಜಾ ಕಾಲೇಜಿನಲ್ಲಿ ಮುಖ್ಯ ಮಂತ್ರಿಗಳು ಭಾಗವಹಿಸುವ ಸಮಾರಂಭದ ಕಾಲದಲ್ಲಿ ಅವರಿಗೆ ಕಪ್ಪು ಬಾವುಟಗಳನ್ನು ಪ್ರದರ್ಶಿಸುವ ವಿಷಯವನ್ನು ತಿಳಿಸುವ ಹಸ್ತ ಪತ್ರಿಕೆಗಳ ಮತ್ತು ಅದರ ಕೈಬರೆಹದ ಮೂಲ ಪ್ರತಿಯನ್ನೂ ವಶಪಡಿಸಿಕೊಂಡರು. ಹಸ್ತ ಪತ್ರಿಕೆಗಳಲ್ಲಿ ಮುದ್ರಣಾಲಯದ ಹೆಸರು ಅಚ್ಚಾಗಿರಲಿಲ್ಲವೆಂಬ ಬಗ್ಗೆ ಶೋಧನೆ ನಡೆಸಲು ನಗರದ ನ್ಯಾಯಾಧೀಶರು ಆಜ್ಞೆ ಹೊರಡಿಸಿದ್ದರು.

ಬಿರುಗಾಳಿಯಿಂದ ಆಫ್ರಿಕದಲ್ಲಿ ೨೦ ಜನರ ಮರಣ

ದಕ್ಷಿಣ ಆಫ್ರಿಕದ ಹಲ್ಬರ್ಟ್ಸ್‌ವಿಲ್ಲೆ ನಗರದ ಮೇಲೆ ನೆನ್ನೆ ಭಾರಿ ಬಿರುಗಾಳಿಯು ಬೀಸಿದ ಪರಿಣಾಮವಾಗಿ ೨೦ ಜನರು ಮಡಿದರಲ್ಲದೆ, ೪೦೦ ಮಂದಿಗೆ ಗಾಯಗಳಾಗಿರುತ್ತವೆ ಗಾಳಿಯ ವೇಗವು ಅತಿಯಾಗಿ, ಅದಕ್ಕೆ ಸಿಕ್ಕಿದ ಒಂದು ಮೋಟಾರು ಕಾರು ಆಕಾಶಕ್ಕೆ ಹಾರಿಸಲ್ಪಟ್ಟು ೫೦೦ ಗಜ ದೂರಕ್ಕೆ ಕೊಂಡೊಯ್ಯಲ್ಪಟ್ಟಿತೆಂದು ಹೇಳಲಾಗಿದೆ ಪ್ರಿಟೋರಿಯದಲ್ಲಿ ೧೫ ಮಂದಿ ಮಡಿದರೆಂದು ವರದಿಯಾಗಿದೆ

ವನಮೃಗ ರಕ್ಷಣಾ ಸಮ್ಮೇಳನದಲ್ಲಿ ಹುಲಿ ಮರಿಗಳ ಭಾಗ

ವನಮೃಗ ರಕ್ಷಣಾ ಸಮಿತಿ ಸಮ್ಮೇಳನದ ಅಧ್ಯಕ್ಷರು ಸಭೆಯು ನೆನ್ನೆ ಸೇರಿದಾಗ ಸಭಾಂಗಣದ ಮಧ್ಯೆ ಒಂದು ಬೋನಿನಲ್ಲಿ ಮೂರು ತಿಂಗಳು ವಯಸ್ಸಿನ ಐದು ಹುಲಿ ಮರಿಗಳನ್ನು ಕೂಡಲಾಗಿದ್ದಿತು. ಅವುಗಳೂ ಸಭೆಯಲ್ಲಿ ಮೂಕ ಪ್ರತಿನಿಧಿಗಳಾಗಿ ಭಾಗ ವಹಿಸಿರುವುವೆಂದು ಸಮಿತಿಯ ಉಪಾಧ್ಯಕ್ಷರಾದ ಶ್ರೀ ಚತುರ್ವೇದಿಯವರು ತಿಳಿಸಿದರು.

ಮಹಾರಾಜರ ಉಪ ಕಾರ್ಯದರ್ಶಿಯವರ ವರ್ಗ

ಶ್ರೀಮನ್ಮಹಾರಾಜರವರ ಉಪ ಕಾರ್ಯದರ್ಶಿಗಳಾಗಿರುವ ಶ್ರೀ ಕೆ ನರಸಿಂಹಯ್ಯಂಗಾರ್ಯರನ್ನು ದಾವಣಗೆರೆ ಪೌರಸಭೆಯ ಕಮೀಷನರನ್ನಾಗಿಯೂ, ಹಾಸನದ ಸಬ್ ಡಿವಿಷನ್ ಅಧಿಕಾರಿಗಳಾದ ಶ್ರೀ ನಾರಾಯಣಮೂರ್ತಿಯವರನ್ನು ಶ್ರೀ ನರಸಿಂಹಯ್ಯಂಗಾರ್ಯರ ಸ್ಥಾನಕ್ಕೂ ವರ್ಗಾಯಿಸಲಾಗಿದೆ

ವನಮೃಗ ರಕ್ಷಣಾ ಸಮಿತಿ ಸದಸ್ಯರಿಗೆ ಮುಖ್ಯ ಮಂತ್ರಿಗಳ ಸತ್ಕಾರ

ಕೇಂದ್ರದ ವನಮೃಗ ರಕ್ಷಣಾ ಸಮಿತಿಯ ಸದಸ್ಯರುಗಳ ಗೌರವಾರ್ಥವಾಗಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಸರ್ಕಾರಿ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀಮನ್ಮಹಾರಾಜರೂ, ಕೇಂದ್ರ ವ್ಯವಸಾಯ ಮಂತ್ರಿ ಶ್ರೀ ಪಂಜಾಬರಾವ್ ದೇಶಮುಖ್ ಮುಂತಾದವರೂ ಭಾಗ ವಹಿಸಿದ್ದರು.

ಮುಟ್ಟದೊಡ್ಡಿ ರೈತರಿಗೆ ಶಿಕ್ಷೆ

ಬೆಂಗಳೂರು ೩

ರಾಮನಗರದ ತಾಲ್ಲೂಕು ಮುಟ್ಟದೊಡ್ಡಿ ರೈತರುಗಳ ಮೇಲೆ ಹೂಡಲಾದ ಒಳ್ಳೆಯ ನಡತೆಯ ಮೊಕದ್ದಮೆಯಲ್ಲಿ ರಾಮನಗರದ ನ್ಯಾಯಾಧೀಶರು ಮರಿ ಸಿದ್ದೇಗೌಡ, ಪುಟ್ಟೇಗೌಡ ಮತ್ತು ೨೯ ಜನರಿಗೆ ತಲಾ ೧೦ ತಿಂಗಳ ಶಿಕ್ಷೆಯನ್ನು ವಿಧಿಸಿ, ಒಳ್ಳೆಯ ನಡತೆಯಲ್ಲಿರುವುದಾಗಿ ಮುಚ್ಚಳಿಕೆಯನ್ನು ಕೊಡಬೇಕೆಂದು ಕೇಳಲಾಗಿ ಅವರು ನಿರಾಕರಿಸಿದ ಪ್ರಯುಕ್ತ ಜೈಲಿಗೆ ಹೋಗುವಂತೆ ಜಡ್ಜರು ಆಜ್ಞಾಪಿಸಿದರು. ಇದೇ ಮೇರೆಗೆ ಎಲ್ಲೇಗೌಡ ಮುಂತಾದ ೧೬ ಜನರನ್ನು ಮತ್ತೊಂದು ಮೊಕದ್ದಮೆಯಲ್ಲಿ ಅದೇ ರೀತಿ ಜೈಲಿಗೆ ಕಳುಹಿಸಲಾಯಿತು ಗುಡಿಸಿಲೊಂದನ್ನು ಸುಟ್ಟುಹಾಕಿದರೆಂದು ೬ ಜನರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಯಿತು

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ತಮ್ಮ ಶ್ರೀ ನಂಜಪ್ಪನವರಿಗೆ ಆ ಹಳ್ಳಿಯಲ್ಲಿ ೫೦ ಎಕರೆ ಜಮೀನನ್ನು ಕೊಟ್ಟ ಸಂದರ್ಭದಲ್ಲಿ ಸದರಿ ಆಸಾಮಿಗಳಿಗೂ ಶ್ರೀ ನಂಜಪ್ಪನವರಿಗೂ ಘರ್ಷಣೆಯಾಗಿ, ಈ ಬಗ್ಗೆ ಶ್ರೀಯುತರು ಪೋಲೀಸರಿಗೆ ದೂರು ಕೊಟ್ಟಿದ್ದರು.

ನಾಟಕ ಮಂದಿರಗಳನ್ನು ತೆರೆಯಲು ಕಾಲದ ನಿಗದಿ

ಅಂಗಡಿ ಮುಚ್ಚುವ ಕಾನೂನಿನ ಪ್ರಕಾರ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ ಇದೇ ೧೫ನೇ ತಾರೀಕಿನಿಂದ ಬೆಂಗಳೂರು, ಮೈಸೂರು, ದಾವಣಗೆರೆ, ಕೆ.ಜಿ.ಎಫ್ ನಗರಗಳು ಮತ್ತು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಪಟ್ಟಣಗಳಲ್ಲಿ ಪ್ರತಿ ದಿನ ಬೆಳಗ್ಗೆ ೯ ಘಂಟೆಗೆ ಮುಂಚೆಯೂ ಮತ್ತು ರಾತ್ರಿ ೩-೩೦ರ ನಂತರವೂ ನಾಟಕ ಮಂದಿರಗಳನ್ನು ತೆರೆದಿರಕೂಡದೆಂದು ಸೂಚಿಸಿರುವರು

ಗಾಂಜ ಗಿಡಗಳ ಪತ್ತೆ

ಚಾಮರಾಜನಗರದ ರೇಂಜ್ ಎಕ್ಸೈಸ್ ಇನ್ಸ್‌ಪೆಕ್ಟರರು ಯಳಂದೂರು ಮತ್ತು ಚಾಮರಾಜನಗರದ ಕಸಬಾ ರೇಂಜ್‌ಗಳ ಅಸಿಸ್ಟೆಂಟ್ ಇನ್ಸ್‌ಪೆಕ್ಟರರ ಸಮೇತ ಕಳೆದ ೨೫ನೇ ತಾ|| ಆ ತಾಲ್ಲೂಕಿನ ಬೇಡಗುಳಿಗೆ ಸೇರಿದ ಕಾರ್ಟ್‌ಕೆರ್ರಿ ಕಾಫಿ ತೋಟದ ರಾಗಿ ಹೊಲದಲ್ಲಿ ಬೆಳೆಯಲಾಗಿದ್ದ ೫೬ ಗಾಂಜಾ ಗಿಡಗಳನ್ನು ಪತ್ತೆ ಮಾಡಿ, ಸಿದ್ದಮಲ್ಲ ಮೇಸ್ತ್ರಿ ಮುಂತಾದ ೩ ಜನರ ಮೇಲೆ ಮೊಕದ್ದಮೆ ಹೂಡಿರುತ್ತಾರೆ

ರಾಜಧಾನಿಯ ಮೃಗಾಲಯಕ್ಕೆ ನಾಲ್ಕು ಹುಲಿ ಮರಿಗಳು

ಹಾಸನ ಜಿಲ್ಲೆಯ ಹೊಸೂರು ಎಸ್ಟೇಟಿನ ಶ್ರೀ ಆರ್ ರಾಡ್‌ಕ್ಲಿಫ್ ಎಂಬುವರು ತಾವು ಹಿಡಿದ ೪ ಹುಲಿ ಮರಿಗಳನ್ನು ರಾಜಧಾನಿಯ ಮೃಗಾಲಯಕ್ಕೆ ಕಳುಹಿಸಿ ಕೊಟ್ಟಿರುವರೆಂದು ಗೊತ್ತಾಗಿದೆ

ನಾಟಕಗಳ ಪ್ರದರ್ಶನ

ರಾಜಧಾನಿಯ ಟೀಚರ್ಸ್ ಕಾಲೇಜಿನ ನಾಟ್ಯಕಲಾ ಮಂಡಲಿಯವರು ಈ ಸಂಜೆ ೬ ಘಂಟೆಗೆ ಕಾಲೇಜಿನ ಆವರಣದಲ್ಲಿ ಬೇಸ್ತು, ಡಬ್ಬಲ್ ಫಕಾಯ್ತು ಎಂಬ ಕನ್ನಡ ನಾಟಕಗಳನ್ನೂ ಮತ್ತು ರೀಫಂಡ್ ಎಂಬ ಇಂಗ್ಲಿಷ್ ನಾಟಕವನ್ನೂ ಅಭಿನಯಿಸುವರು.

ಒಂದು ಕಾಲಿಗೆ ೫ ಲಕ್ಷ ಡಾಲರು ಬೆಲೆ!

ಅಮೆರಿಕದ ಚಿಕಾಗೋವಿನ ಒಬ್ಬನು ಜಖಂ ಆಗಿದ್ದ ತನ್ನ ಕಾಲನ್ನು ತೆಗೆಸಿ ಹಾಕಲು ಆಸ್ಪತ್ರೆಗೆ ಹೋದಾಗ, ಅಲ್ಲಿ ಜಖಂ ಆಗಿದ್ದ ಕಾಲಿಗೆ ಬದಲು ಸರಿಯಾಗಿದ್ದ ಕಾಲನ್ನು ಕತ್ತರಿಸಲಾಗಿ ಆತನು ಐದು ಲಕ್ಷ ಡಾಲರು ಪರಿಹಾರ ಕೇಳಿ ಆಸ್ಪತ್ರೆಯ ಮೇಲೆ ದಾವಾ ಹೂಡಿರುವನೆಂದೂ, ಬೇರೆ ಆಸ್ಪತ್ರೆಗೆ ಹೋಗಿ ಜಖಂ ಆಗಿದ್ದ ಕಾಲನ್ನೂ ತೆಗೆಸಿದನೆಂದೂ ಗೊತ್ತಾಗಿದೆ

ಅಂತರ ಕರ್ನಾಟಕ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದ ಆಶ್ರಯದಲ್ಲಿ ಅಖಿಲ ಕರ್ನಾಟಕ ಅಂತರ ವಿದ್ಯಾರ್ಥಿನಿಲಯಗಳ ಕನ್ನಡ ಚರ್ಚಾ ಸ್ಪರ್ಧೆಯು ೨೧-೧೨-೫೨ ನೇ ಭಾನುವಾರ ಜರುಗಲಿದೆ. ಅದರಲ್ಲಿ ಭಾಗ ವಹಿಸುವ ವಿದ್ಯಾರ್ಥಿ ನಿಲಯಗಳು ಇದೇ ೧೨ ನೇ ತಾ|| ನೊಳಗೆ ಕಾರ್ಯದರ್ಶಿಗಳಿಗೆ ಎರಡು ರೂ ಪ್ರವೇಶ ಧನದೊಡನೆ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಬೇಕಾಗಿ ಕೋರಲಾಗಿದೆ ಪರ್ಯಾಯ ಪಾರಿತೋಷಕವನ್ನು ಉತ್ತಮವಾಗ್ಮಿಗಳನ್ನು ಪ್ರತಿನಿಧಿಸುವ ವಿದ್ಯಾರ್ಥಿನಿಲಯಕ್ಕೆ ಕೊಡಲಾಗುವುದು ಅಲ್ಲದೆ ಐದು ವೈಯಕ್ತಿಕ ಬಹುಮಾನಗಳನ್ನೂ ಹಂಚಲಾಗುವುದು ನಗರದ ಹೊರಗಿನಿಂದ ಬರುವವರಿಗೆ ಊಟ ವಸತಿಗಳನ್ನು ಏರ್ಪಡಿಸಲಾಗುವುದು

ನೊಂದ ವಿದ್ಯಾರ್ಥಿಗಳ ಸಭೆ

ರಾಜಧಾನಿಯ ಮೇಲ್ಕಂಡ ವಿದ್ಯಾರ್ಥಿಗಳ ಸಭೆಯು ನಾಳೆ ಸಂಜೆ ೫-೩೦ ಕ್ಕೆ ಒಂಟಿಕೊಪ್ಪಲಿನ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಸೇರಿ ವಿಶ್ವವಿದ್ಯಾನಿಲಯದ ಬಿ ಎ. ಮತ್ತು ಬಿ ಎಸ್‌ಸಿ ಪರೀಕ್ಷೆ ಫಲಿತಾಂಶವನ್ನೂ ಮತ್ತು ಕೇವಲ ಮೂರು ತಿಂಗಳಲ್ಲಿಯೇ ನಡೆಯುವ ಮಾರ್ಚಿ ಪರೀಕ್ಷೆಗೆ ಓದಲುಗಳ ಇಂಗ್ಲಿಷ್ ಪಠ್ಯ ಪುಸ್ತಕಗಳನ್ನು ವಿಧಿಸಿರುವುದನ್ನೂ ಚರ್ಚಿಸಲಿದೆ ಸಭೆಗೆ ನೊಂದ ವಿದ್ಯಾರ್ಥಿಗಳೆಲ್ಲರೂ ಬರಬೇಕೆಂದು ಪ್ರಾರ್ಥಿಸಲಾಗಿದೆ

COACHING SECTION,
DALVOY HIGH SCHOOL
MYSORE
MODERATE FEES
MORNING CLASSES
Golden opportunity for students appearing for the S S L C Examination in March 1953 Expert coaching by experienced teachers
Classes have just started Join immediately Further particulars from
R. G PADKI,
Secretary

ಶ್ರೀರಂಗಪಟ್ಟಣದ ತಾಲ್ಲೂಕು ರೈತರ ಸಮ್ಮೇಳನ

ಕಳೆದ ಶನಿವಾರ ಶ್ರೀರಂಗಪಟ್ಟಣದ ಸಂತೆ ಮೈದಾನದಲ್ಲಿ ತಾಲ್ಲೂಕು ರೈತರ ಸಮ್ಮೇಳನವು ಡಾ|| ಸಿ ಬಂದೀಗೌಡರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ಕಾಳಸಿದ್ಧಯ್ಯನವರಿಂದ ಸ್ವಾಗತ ಭಾಷಣವಾದನಂತರ ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ ಪುಟ್ಟಸ್ವಾಮಿಯವರು ಪ್ರಾರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡಿ ದೇಶದ ಸಂಪತ್ತು ಜನಗಳಲ್ಲಿರುವ ಉತ್ಪಾದನಾ ಶಕ್ತಿಯನ್ನು ಅವಲಂಬಿಸಿದೆಯೆಂದೂ, ಉತ್ಪಾದನಾ ಕರ್ತರಾದ ರೈತರು ಮತ್ತು ಕಾರ್ಮಿಕರಿಗೆ ಸಮಾಜದಲ್ಲಿ ಗೌರವ ಸನ್ಮಾನಗಳು ದೊರೆಯಬೇಕೆಂದೂ ಹೇಳಿದರು ಉಳುವವನೇ ಜಮೀನಿನ ಒಡೆಯನಾಗಬೇಕೆಂದು ಹೇಳಿದರು ತಾಲ್ಲೂಕಿನಲ್ಲಿ ರೈತರ ಸಂಘ ಸ್ಥಾಪನೆಯಾಗಬೇಕೆಂಬ ಸಲಹೆಯನ್ನು ಸಭೆಯು ಒಪ್ಪಿ ಸಂಘಟನಾ ಕಾರ್ಯಕ್ರಮ ಕೈಗೊಳ್ಳಲು ಶ್ರೀ ಕೆ ಪುಟ್ಟಸ್ವಾಮಿ, ಡಾ|| ಬಂದೀಗೌಡ ಮತ್ತು ಇನ್ನಿತರ ನಾಲ್ಕು ಮಂದಿ ಸದಸ್ಯರ ಒಂದು ಸಮಿತಿಯನ್ನೂ ನೇಮಿಸಲಾಯಿತು

ಸಗ್ಗಿಯಲ್ಲಿ ಕೇಳಿಬರಲಾಗುವ ಪ್ರತಿಸಲವೂ [illegible] ಹಿಡಿದು ತಪ್ಪೇ ಮೊಬಲಗನ್ನು ಗ್ರಾಂಟು ಕೊಟ್ಟು ತಾಲ್ಲೂಕಿಗಾಗಿ ಪ್ರತ್ಯೇಕ ಅಭಿವೃದ್ಧಿಯನ್ನು ಏರ್ಪಡಿಸಬೇಕೆಂದು ಸರ್ಕಾರದವರನ್ನು ಕೋರುವ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು

ಅಧ್ಯಕ್ಷತೆ ವಹಿಸಿದ್ದ ಡಾ|| ಸಿ ಬಂದೀಗೌಡರು ಭತ್ತದ ಲೇವಿಯ ಕಾನೂನು ಸಮರ್ಪಕವಾಗಿಲ್ಲವೆಂದೂ, ರೈತರಿಗೆ ತೊಂದರೆಯಾಗದಲ್ಲಿ ರೀತಿಯ ಅದನ್ನು ಜಾರಿಗೆ ತರಬೇಕೆಂದೂ ಹೇಳಿದರು ಕೂಲಿ ಪರ್ಮಿಟ್ ಪಡೆಯುವುದರಲ್ಲಿ ಆಗುತ್ತಿದ್ದ ಲೋಪದೋಷಗಳನ್ನು ವಿವರಿಸಿ ಈ ವರ್ಷಕ್ಕೆ ರೈತರ ಹಿಡುವಳಿಗೆ ತಕ್ಕಂತೆ ಕೂಲಿ ಭತ್ತವನ್ನಾಗಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಸೂಚಿಸಿದರು

THE MODEL
TUTORIAL INSTITUTE,
D Banumiah's School Buildings.
MYSORE
Coaching Classes for the benefit of Candidates appearing for the S.S L C Public Examination of March 1953 will start working from 8th Dec 52
Admissions received between 11 A M & 5 P M on working days
B Seshagiri Rao,
Organiser

ನಾನ್ ಗೆಜೆಟೆಡ್ ನೌಕರರಿಗೆ ಹೆಚ್ಚಿನ ತುಟ್ಟಿ ಭತ್ಯ

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸಂಬಳದ ಶ್ರೇಣಿಯನ್ನು ಉತ್ತಮಪಡಿಸುವ ವಿಷಯವು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿರುವುದೆಂದೂ, ಅವರ ತುಟ್ಟಿ ಭತ್ಯವನ್ನು ಹೆಚ್ಚಿಸುವ ವಿಷಯ ಮತ್ತು ಅವರ ಸಂಸಾರದವರಿಗೆ ಉಚಿತ ವೈದ್ಯ ಸಹಾಯವನ್ನು ಒದಗಿಸುವ ಬಗ್ಗೆ ಸಧ್ಯದಲ್ಲೇ ಒಂದು ನಿರ್ಧಾರವನ್ನು ಸರ್ಕಾರದವರು ಕೈಗೊಳ್ಳಲಿರುವರೆಂದೂ ತಿಳಿದುಬಂದಿದೆ

ಜನರಲ್ ಮರ್ಚೆಂಟ್ಸ್ ಅಸೋಸಿಯೇಷನ್ ಸ್ಥಾಪನೆ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹಿಂದೂಸ್ತಾನ್ ಇನ್ವೆಸ್ಟ್‌ಮೆಂಟ್ಸ್ ಕಛೇರಿ ಆವರಣದಲ್ಲಿ ಮೊನ್ನೆ ಮೇಲ್ಕಂಡ ಸಂಘದ ಪ್ರಾರಂಭೋತ್ಸವವು ಶ್ರೀ ವಿ ನಾರಾಯಣ ಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು ವಿವಿಧ ಘಟ್ಟಗಳ ಮಾರಾಟ ತೆರಿಗೆಯಿಂದ ವರ್ತಕರಿಗೂ ಮತ್ತು ಪ್ರಜೆಗಳಿಗೂ ಆಗುತ್ತಿರುವ ತೊಂದರೆ ವಿಚಾರದಲ್ಲಿ ಚರ್ಚೆಯಾಗಿ, ಅನೇಕ ಸಲಹೆಗಳು ಸೂಚಿಸಲ್ಪಟ್ಟು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಆದಷ್ಟು ಬೇಗ ಮುಂದಿನ ಸಭೆಯನ್ನು ಸೇರಿಸಬೇಕೆಂದು ನಿರ್ಧರಿಸಲಾಯಿತು ಸಂಘಕ್ಕೆ ಎಲ್ಲ ವ್ಯಾಪಾರಗಾರರೂ ಸದಸ್ಯರಾಗಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಇದರ ಕಾರ್ಯಕಲಾಪಗಳನ್ನು ನಿರ್ವಹಿಸಲು ಐವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು

ಶ್ರೀ ಧನ್ವಂತರಿ ಮತ್ತು ಷೇಕ್ ಅಬು ಅಲಿ ಸೀನಾ ಸಪ್ತಾಹ

ಮೇಲ್ಕಂಡ ಉತ್ಸವದ ಅಂಗವಾಗಿ ರಾಜಧಾನಿಯ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯಲ್ಲಿ ಈ ಸಂಜೆ ೫ ಘಂಟೆಗೆ ಡಾ|| ಎಲ್ ಅಶ್ವತ್ಥನಾರಾಯಣರವರು ಪಾಂಡು ರೋಗ ಎಂಬ ವಿಷಯವಾಗಿಯೂ, ನಾಳೆ ಸಂಜೆ ಡಾ|| ಕೆ ಎಸ್ ವೆಂಕಟೇಶಯ್ಯನವರು ವಾತ ರೋಗ ಎಂಬ ವಿಷಯವಾಗಿಯೂ ಉಪನ್ಯಾಸ ಮಾಡುವರು

ಸಿದ್ಧರಾಮ ಚರಿತೆಯ
ಸಂಗ್ರಹದ ಕೈಗನ್ನಡಿ
ಬೆಲೆ ೧೮೦
ಕೃಷ್ಣ ಕಂಪನಿ,
ನೂರಡಿ ರಸ್ತೆ ಮೈಸೂರು

ಒಲಿಂಪಿಯಾ ಟಾಕೀಸ್
4-12-52 ರಿಂದ [illegible] ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ಪ್ರಕಾಶ್ ಪಿಕ್ಚರ್ಸ್‌ರವರ ಉತ್ಕೃಷ್ಟ
ಸಂಗೀತಮಯ ಚಿತ್ರ
ಬೈಜೂ ಬಾವ್ರಾ
ಪಾತ್ರ — ಮೀನಾ ಕುಮಾರಿ ಕುಲದೀಪ್,
ಭಾರತ್ ಭೂಷಣ್ ಮತ್ತು ಸುರೇಂದ್ರ
ನಿರ್ದೇಶನ ವಿಜಯಭಟ್
ಸಂಗೀತ — ನೌಷದ್

ಪೈಗಂಬರ್ ಜಯಂತಿ

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ನೆನ್ನೆ ಶ್ರೀ ಎಚ್ ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಪೈಗಂಬರ್ ಜಯಂತಿಯನ್ನು ಆಚರಿಸಲಾಯಿತು ಶ್ರೀಗಳಾದ ಪಿ ಎಂ ಸಿದ್ದಯ್ಯ, ಪಿ ದೇವರಾಜ ಅರಸ್ ಮತ್ತು ವಿದ್ಯಾರ್ಥಿಗಳಾದ ಕಾನಾ ಕೃಷ್ಣಮೂರ್ತಿ, ದಾವೂದ್ ಷರೀಫ್‌ರವರು ಭಾಷಣ ಮಾಡಿದರು ಅಧ್ಯಕ್ಷರು ಜಯಂತಿ ದಿನಗಳ ಮಹತ್ವವನ್ನು ತಿಳಿಸಿದರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಸಂಗೀತ, ಎಸ್ ರಾಮಚಂದ್ರರಾವ್ ಮಧ್ಯಾಹ್ನ ೩ ವನಿತಾ ವಿಭಾಗ, ಮಹಿಳೆಯರ ಕಾರ್ಯಕ್ರಮ ಸಂಜೆ ೫ ೩೦ ಸಂಗೀತ ಎಸ್ ರಾಮಚಂದ್ರರಾವ್ ೬ ೧೦ ಬಾಲಜಗತ್ ಮಕ್ಕಳ ಕಾರ್ಯಕ್ರಮ ೭ ಹಿಂದೀ ಗೀತೆಗಳು ಹೆಚ್ ಆರ್ ಲೀಲಾವತಿ ೮ ಸಂಗೀತ, ಎಂ ಎಸ್ [illegible] ಅಯ್ಯಂಗಾರ್ ೯ ೧೫ ಕನ್ನಡ ಗೀತೆಗಳು ೯ ೩೦ ನಿಮ್ಮ ಮೆಚ್ಚಿನ ಗೀತೆಗಳು

ವಿವಾಹ ಮಹೋತ್ಸವ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿರುವ ಬೊಂಬಾಯಿ ಇಂದ್ರಭವನದ ಮಾಲೀಕರಾದ ಶ್ರೀ ಬದರಿಪ್ರಸಾದ್‌ರವರು ತಮ್ಮ ಪುತ್ರಿ ಚಿ|| ಸೌ|| ಗಾಯತ್ರಿ ದೇವಿಯನ್ನು ಜಬ್ಬಲ್ಪುರದ ಸೂಪರಿಂಟೆಂಡಿಂಗ್ ಇಂಜನಿಯರರಾದ ಶ್ರೀ ಶ್ಯಾಮಸುಂದರಲಾಲಜಿಯವರ ಪುತ್ರ ಚಿ|| ಕೈಲಾಸ ಚಂದ್ರರವರಿಗೆ ಕೊಟ್ಟು ನೆನ್ನೆ ಅಲಿಗಢದಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	
ಅಲಸಂದೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಅವರೆ	[illegible]	[illegible]
ಹೊಂಗೆಬೀಜ	[illegible]	
ಮೆಣಸಿನಕಾಯಿ		
ಮಣ ೧ಕ್ಕೆ	[illegible]	[illegible]
ಹುಣಿಸೇಹಣ್ಣು	[illegible]	
ಬೆಲ್ಲ	[illegible]	
ಸೀಗೇಕಾಯಿ	[illegible]	
ತೆಂಗಿನಕಾಯಿ ೧೦೦ಕ್ಕೆ	[illegible]	[illegible]

ಶ್ರೀ ರಮಣ
ಸಂಗೀತ ವಿದ್ಯಾಲಯ
1064-1, ಚಾಮರಾಜ ಅಗ್ರಹಾರ
(ಮನುವನದ ಎದುರಿಗೆ)
ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ
ಹಾಡುಗಾರಿಕೆ ಮತ್ತು ಪಿಟೀಲು
ಶಿಕ್ಷಣವನ್ನು ಕೊಡುವ
ವ್ಯವಸ್ಥೆ ಮಾಡಲಾಗಿದೆ
ಎ. ಕೃಷ್ಣಮೂರ್ತಿ,
ವ್ಯವಸ್ಥಾಪಕ

Edited, Printed and Published by A R Nagarajan at Sadhvi Press, D Subbiah Road, Mysore.

ಬಲಪುರ ಸಂ ೨೨೮ ||ವಂದೇ ಮಾತರಂ|| ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೩-೧೨ ೧೯೫೩ [ಸಂಚಿಕೆ ೧೧೮

ಜಪಾನಿನಲ್ಲಿ ೨೦ ಲಕ್ಷ ಕಾರ್ಮಿಕರ ಮುಷ್ಕರ

ನೀರಿನ ಇಲಾಖೆ ಕಾರ್ಮಿಕರ ಕುಂದುಕೊರತೆಗಳು

ಮುಖ್ಯ ಮಂತ್ರಿ, ಹನುಮಂತಯ್ಯ ನವರ ಭರವಸೆ

ಮೈಸೂರು ೩

...ವಿಭಾಗದ ವಾಟರ್ ವರ್ಕ್ಸ್ ಇಲಾಖೆಯ ಕೆಲಸಗಾರರ ಸಂಘದ ವಾರ್ಷಿಕೋತ್ಸವವು ಈ ದಿನ ಬೆಳಗ್ಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು

ಪ್ರಾರ್ಥನೆಯಾದ ನಂತರ ಸಂಘದ ...ರಾದ ಡಾ|| ವಿಜಾರ್ನೂರ್ ರವರು ಸ್ವಾಗತ ಭಾಷಣ ಮಾಡಿ ಕೆಲಸಗಾರರಿಗೆ ಹೆಚ್ಚಿನ ವೇತನ ವಿರಾಮ ವೇತನ, ಗೃಹವಸತಿ ಸೌಕರ್ಯ ಮುಂತಾದ ವಿಷಯಗಳಲ್ಲಿ ಸರ್ಕಾರದವರು ...ಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಕೋರಿದರು

ಸಂಘದ ಉಪಾಧ್ಯಕ್ಷರಾದ ಶ್ರೀ ಬಿ ಎಸ್ ಚಂದ್ರಶೇಖರಯ್ಯನವರು ವರದಿಯನ್ನೊಪ್ಪಿಸಿ, ಸಂಘವು ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಉನ್ನತಿಗಾಗಿ ... ಮತ್ತಿರುವ ಕೆಲಸವನ್ನು ವಿವರಿಸಿ ... ಸರ್ಕಾರದವರು ಸಂಘಕ್ಕೆ ಅಗ... ವ ಸಹಾಯವನ್ನೊದಗಿಸಬೇಕೆಂದು ಕೋರಿದರು

...ರ್ ರಂಗಸ್ವಾಮಿ ಮತ್ತು ಮಂಡಲಿ ... ವರಿಂದ ಸ ಶಾಸ್ತ್ರೀಯವಾದ ಗಾನವಾದ ನಂತರ ಅಧ್ಯಕ್ಷರು ಭಾಷಣ ಮಾಡಿ, ಕೆಲಸಗಾರರು ತಮ್ಮ ಸಂಘದ ಮೂಲಕ ...ತವಾದ ರೀತಿಯಲ್ಲಿ ತಮ್ಮ ಉ...ನ್ನೂ ಮತ್ತು ಮಹಾ ಜನರ ...ಯನ್ನೂ ಮಾಡಲು ಪ್ರಯತ್ನಿಸು... ಪ್ರದರ್ಶನಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿ... ಪೌರಸಭೆಯ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿ, ಕೆಲಸಗಾರರಿಗೆ ವಿರಾಮ ವೇತನವನ್ನು ದೊರೆಕಿಸುವ ಅಂಶವನ್ನೂ ಮತ್ತು ಅವರು ವಸತಿ ...ನ್ನು ಕಟ್ಟಿಕೊಳ್ಳಲು ರಿಯಾಯಿತಿ ದರದಲ್ಲಿ ಸ್ಥಳವನ್ನು ಕೊಡಿಸುವ ವಿಷಯವನ್ನೂ ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆಯಿತ್ತರು. ... ಸಾಧನೆಯಲ್ಲಿ ತೊಡಗಬೇಕೇ ಹೊರತು ಕಲಹ ಸಾಧನೆಯಲ್ಲಿ ನಿರತರಾಗಬಾರದೆಂದು ಮುಖ್ಯ ಮಂತ್ರಿಯವರು ಕೆಲಸಗಾರರಿಗೆ ಹಿತೋಕ್ತಿಯನ್ನಿತ್ತು ಮುಷ್ಕರ ಮುಂತಾದ ಬೆದರಿಕೆಗಳಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ, ಸ್ನೇಹ ಸೌಹಾರ್ದಗಳಿಂದ ಬೇಡಿಕೆಗಳನ್ನು ಸುಲಭವಾಗಿ ಈಡೇರಿಸಿಕೊಳ್ಳಬಹುದೆಂದೂ ಅವರು ನುಡಿದರು

ವಿಶ್ವಸಂಸ್ಥೆಯಲ್ಲಿ ಭಾರತ ನಿರ್ಣಯದ ಅಂಗೀಕಾರ

... ಕೊರಿಯಾ ಬಿಕ್ಕಟ್ಟಿನ ಪರಿಹಾರಕ್ಕಾಗಿ ... ತಂದಿದ್ದ ನಿರ್ಣಯವನ್ನು ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ಪ್ರಚಂಡ ಬಹುಮತದಿಂದ ಅಂಗೀಕರಿಸಿತು ... ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿಲ್ಲವೆಂದು ... ತನ್ನ ಅಭಿಪ್ರಾಯವನ್ನು ... ರಾಷ್ಟ್ರಗಳ ಪರ ... ಮಾಡಿದುದು ರಾಷ್ಟ್ರೀಯ ಚೀಣ ... ಕೆಟ್ಟದ್ದಾಗಿತ್ತು ... ಪ್ರತಿನಿಧಿ ... ಸಭೆಗೆ ಬಂದಿರಲಿಲ್ಲ

ಮಹಾರಾಜಾ ಕಾಲೇಜು ದಿನಾಚರಣೆ

ಹಳೇ ಮತ್ತು ಹೊಸ ವಿದ್ಯಾರ್ಥಿಗಳ ಸಮ್ಮಿಳನ

ಮೈಸೂರು ೩

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಮಹಾರಾಜಾ ಕಾಲೇಜಿನ ದಿನಾಚರಣೆಯು ಹಳೇ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ವೈಭವದಿಂದ ನೆರವೇರಿತು ಸಮಾರಂಭಕ್ಕೆ ಅನೇಕ ಜನ ಹಳೆಯ ಮತ್ತು ಹೊಸ ವಿದ್ಯಾರ್ಥಿಗಳು ಬಂದಿದ್ದರು ಪ್ರಾರ್ಥನೆಯೊಡನೆ ಸಮಾರಂಭವು ಆರಂಭವಾಯಿತು

ಸಂಘದ ಅಧ್ಯಕ್ಷರಾದ ಶ್ರೀ ಟಿ ಸಿದ್ದಲಿಂಗಯ್ಯನವರು ಸ್ವಾಗತ ಭಾಷಣ ಮಾಡಿದ ನಂತರ ಕಾಲೇಜು ಅಧ್ಯಕ್ಷರಾದ ಶ್ರೀ ಎಸ್ ವಿ ರಂಗಣ್ಣನವರು ವರದಿಯನ್ನೊಪ್ಪಿಸಿ ಈ ಸಂಸ್ಥೆಯು ಕಳೆದ ಒಂದು ವರ್ಷದಿಂದಲೂ ಹೊಂದುತ್ತಿರುವ ಪ್ರಗತಿಯನ್ನು ವಿವರಿಸಿದರು

ಈ ಕಾಲೇಜು ಅಧ್ಯಕ್ಷರಾದ ಶ್ರೀ ಎಂ ನಾರಾಯಣರಾಯರು ಭಾಷಣ ಮಾಡಿ ತಮ್ಮ ಕಾಲೇಜು ಜೀವನದ ಸವಿ ನೆನಪುಗಳನ್ನು ವರ್ಣಿಸಿದರು ಶ್ರೀ ಕೆ ವಿ ಪುಟ್ಟಪ್ಪನವರು ಕನ್ನಡದಲ್ಲಿ ಮಾತನಾಡಿ ಕಾಲೇಜಿನ ಸ್ಥಾಪನೆಯ ಕಾಲದಲ್ಲಿ ವ್ಯಕ್ತಪಡಿಸಲಾಗಿದ್ದ ಕನ್ನಡದ ಆದರ್ಶವು ಬೇಗನೆ ಈಡೇರಲೆಂದು ಹಾರೈಸಿದರು ಸಚಿವರಾದ ಶ್ರೀ ಎ ಜಿ ರಾಮಚಂದ್ರರಾಯರೂ, ನಗರದ ಮಾಜಿ ಶ್ರೀ ಹೆಚ್ ಸುಬ್ಬರಾಯರೂ ಮಾಜಿ ಮಂತ್ರಿ ಡಾ|| ಸುಬ್ರಮಣ್ಯ ... ಪರೀಕ್ಷಾಧಿಕಾರಿ ನೃಪತೇಂದ್ರ ಸ್ವಾಮಿಯವರೂ, ಶ್ರೀನಿವಾಸ ಕರುಣಾಕರನ್ನವರೂ ಭಾಷಣ ಮಾಡಿ ಈ ಸಂಸ್ಥೆಯ ಆದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಪ್ರತಿಬಿಂಬಿಸುವಂತಾಗಲೆಂದು ಹಾರೈಸಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿ ದಸೆಯಿಂದಲೂ ತಮಗೆ ಕನ್ನಡ ಭಾಷೆಯಲ್ಲಿ ಇದ್ದ ಆಸಕ್ತಿಯನ್ನು ವಿವರಿಸಿ ಮಹಾರಾಜಾ ಕಾಲೇಜಿನ ಬಹುಸಂಖ್ಯಾತ ಹಳೆಯ ವಿದ್ಯಾರ್ಥಿಗಳೇ ಇಂದು ಮೈಸೂರು ಮಂತ್ರಿಮಂಡಲವನ್ನು ನಡೆಸುತ್ತಿರುವ ಅಂಶವನ್ನು ತಿಳಿಸಿ ಈ ಹಿರಿಮೆಯನ್ನು ಮುಂದಿನ ವಿದ್ಯಾರ್ಥಿಗಳೂ ಉಳಿಸಿಕೊಂಡು ಬರಲೆಂದು ಹಾರೈಸಿದರು

ಸಂಗೀತ ನಾಟಕ, ಪ್ರಹಸನ ಮತ್ತು ಬಹುಮಾನ ವಿನಿಯೋಗಗಳಾದನಂತರ ಕಾರ್ಯದರ್ಶಿಗಳಾದ ಶ್ರೀ ಎಂ ಎಸ್ ಸಾರ್ಥ ಸಾರಥಿಯವರಿಂದ ವಂದನಾರ್ಪಣೆಯಾಗಿ ಸಮಾರಂಭವು ಮುಕ್ತಾಯವಾಯಿತು

ಮುಖ್ಯ ಮಂತ್ರಿಗಳಿಗೆ ಕಪ್ಪು ಬಾವುಟ ಪ್ರದರ್ಶನ ಯತ್ನ

ಆರು ಜನರ ಬಂಧನ ಮತ್ತು ಬಿಡುಗಡೆ

ಮೈಸೂರು ೩

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಹಾರಾಜಾ ಕಾಲೇಜಿನ ದಿನಾಚರಣೆಯಲ್ಲಿ ಭಾಗವಹಿಸಲು ನಿನ್ನೆ ಬರುವುದಕ್ಕೆ ೧ ಘಂಟೆ ಮುಂಚಿತವೇ ಅವರಿಗೆ ಕಪ್ಪು ಬಾವುಟಗಳನ್ನು ಪ್ರದರ್ಶಿಸಲು ಕಾಲೇಜಿನ ಮುಂಭಾಗದಲ್ಲಿ ಧ್ವಜಗಳನ್ನು ಹಿಡಿದು ನಿಂತಿದ್ದ ಶ್ರೀಗಳಾದ ಕೆ ಬಿ ಶಿವಪ್ಪ ಕೆ ಸಿ ಶಾ ಕಮೂರ್, ಜಿ ವಿ ತಿಂಜನಪ್ಪ ಇವರುಗಳನ್ನೂ ಶ್ರೀಗಳು ಬಿ ಶ್ರೀಕಂಠಪ್ಪ ರತ್ನನಾಥ್ ಮತ್ತು ನಾರಾಯಣ ಹೆಗ್ಡೆಗೆ ಇವರುಗಳನ್ನೂ ನಿನ್ನೆ ಪೋಲೀಸರು ದಸ್ತಗಿರಿ ಮಾಡಿ ಒಂಟಿಕೊಪ್ಪಲು ಪೋಲೀಸು ಸ್ಟೇಷನ್ನಿಗೆ ಕರೆದೊಯ್ದು ರಾತ್ರಿ ೧೧ ಗಂಟೆಯ ನಂತರ ಬಿಟ್ಟುಬಿಟ್ಟರು

ಸಂಜೆ ೫|| ಗಂಟೆ ಮೇಲೆ ಕಾರ್ಯಕಲಾಪಗಳು ಆರಂಭವಾದುವು ಸ್ವಲ್ಪ ಹೊತ್ತಿನ ನಂತರ ದೀಪಗಳು ನಂದಿಹೋಗಿ, ಪೆಟ್ರೊಮಾಕ್ಸ್ ದೀಪದ ಸಹಾಯದಿಂದ ಸಮಾರಂಭವನ್ನು ಮುಂದುವರಿಸಲಾಯಿತು. ಈ ಮಧ್ಯೆ ಒಬ್ಬ ವಿದ್ಯಾರ್ಥಿಯು ಕಪ್ಪು ಬಣ್ಣದ ಕಾರ್ಬನ್ ಕಾಗದಗಳನ್ನು ಹಿಡಿದು ವೇದಿಕೆಯ ಮುಂದೆ ಬಂದು ಮೌನವಾಗಿ ಅವುಗಳನ್ನು ಚೆಲ್ಲಿ ವಾಪಸು ಹೋದನು ಕಾಲೇಜಿನ ಹೊರಗಡೆ ಅನೇಕ ವಿದ್ಯಾರ್ಥಿಗಳು ನಿಂತಿದ್ದರು ಕಾಲೇಜಿನ ಸದಸ್ಯತ್ವ ಚೀಟಿಯನ್ನು ಹೊಂದಿದವರನ್ನು ಮಾತ್ರ ಸಮಾರಂಭಕ್ಕೆ ಬಿಡುವ ವ್ಯವಸ್ಥೆಯಾಗಿದ್ದಿತು

೨೦ ಲಕ್ಷ ಜಪಾನ್ ಕಾರ್ಮಿಕರ ಮುಷ್ಕರ

ಜಪಾನಿನ ರೈಲ್ವೆ ಮತ್ತು ಸಾರ್ವಜನಿಕ ಸೇವಾ ಕೆಲಸಗಾರರು ಹೆಚ್ಚು ಭತ್ಯ ಮತ್ತು ಸಂಬಳಕ್ಕಾಗಿ ಮುಷ್ಕರ ಹೂಡಿರುತ್ತಾರೆ ಅಲ್ಲಿನ ಕಲ್ಲಿದ್ದಲು ಗಣಿ ಕೆಲಸಗಾರರು ಆಗಾಗಲೇ ೬ ವಾರಗಳಿಂದ ಮುಷ್ಕರ ಹೂಡಿರುವರು ಒಟ್ಟು ೨೦ ಲಕ್ಷ ಜನರು ಮುಷ್ಕರಕ್ಕೆ ಸೇರಿರುತ್ತಾರೆ.

ಶ್ರೇಷ್ಠ ನ್ಯಾಯಾಧೀಶರ ಆಗಮನ

ಸ್ವಂ ಸ. ಪ್ರೋ] ಬೆಂಗಳೂರು ೩

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪತಂಜಲಿ ಶಾಸ್ತ್ರಿಗಳವರು ಇದೇ ೧೭ ನೇ ತಾ|| ಇಲ್ಲಿಗೆ ಬಂದು ನಾಲ್ಕು ದಿನಗಳ ಕಾಲ ಹೈಕೋರ್ಟಿನ ಪರಿಶೀಲನೆ ನಡೆಸುವರು ೧೮ನೆ ತಾರೀಖಿನಿಂದ ಶಾಸನವನ್ನು ಶ್ರೀರಂಗಪಟ್ಟಣ, ಮಧುಗಿರಿ, ತುಮಕೂರುಗಳು, ಬಂಗಾರಪೇಟೆ ಮುಂತಾದ ತಾಲ್ಲೂಕುಗಳಿಗೆ ಅನ್ವಯಿಸಲಾಗಿದೆ ೦ದೆಹಲಿಯಲ್ಲಿ ನಡೆಯಲಿರುವ ಬಟ್ಟೆ ಕೈಗಾರಿಕೆಗಳ ಸಭೆಯಲ್ಲಿ ಭಾಗವಹಿಸಲು ಶ್ರೀ ಹೆಚ್ ಸಿ ದಾಸಪ್ಪನವರು ನಾಳೆ ಅಲ್ಲಿಗೆ ತೆರಳುವರು

ಪೌರಸಭಾಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆ

ಮೈಸೂರು ೩

ನಗರದ ಪೌರಸಭೆಯ ಅವಧಿಯನ್ನು ಬರುವ ವರ್ಷ ಮಾರ್ಚಿ ಅಖೈರುವರೆಗೆ ಹೆಚ್ಚಿಸಲಾಗಿರುವುದಷ್ಟೆ. ಪೌರಸಭಾಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ಚುನಾವಣೆಯು ನಡೆಯುವಂತೆ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಅದರಂತೆ ಇದೇ ತಿಂಗಳು ೧೭ ನೇ ತಾ|| ಆವೆರಡು ಸ್ಥಾನಗಳಿಗೆ ಚುನಾವಣೆಯನ್ನು ನಡೆಸಲು ಪೌರಸಭೆಯ ವಿಶೇಷ ಅಧಿವೇಶನವು ಜರುಗಲಿದೆ

ಪ್ರಶಸ್ತಿ ಅರ್ಪಣೆ

ರಾಜಧಾನಿಯ ನಾರದ ರಸ್ತೆಯಲ್ಲಿರುವ ದತ್ತಾತ್ರೇಯ ದೇವಸ್ಥಾನದಲ್ಲಿ ಈ ... ೬ ೩೦ ಘಂಟೆಗೆ ಸಂಗೀತ ಶಾಸ್ತ್ರ ವಿಶಾರದ ಶ್ರೀ ಕೆ ವಾಸುದೇವಾಚಾರ್ಯರ ಅಧ್ಯಕ್ಷತೆಯಲ್ಲಿ ಸುಪ್ರಸಿದ್ಧ ನಟರಾದ ಶ್ರೀ ಎಂ. ಸುಬ್ಬರಾಯರಿಗೆ ಅಭಿನಯ ಶಿರೋಮಣಿ ಎಂಬ ಪ್ರಶಸ್ತಿಯನ್ನು ಮಹಾತ್ಮಾ ಗಾಂಧಿ ಸೇವಾ ಸಂಘದವರು ಅರ್ಪಿಸುವರು. ಸರ್ವರಿಗೂ ಆಹ್ವಾನವುಂಟು

ಬಸ್ ಅಪಘಾತ

ರಾಜಧಾನಿಯಿಂದ ಚೆಟ್ಟಿದಪುರಕ್ಕೆ ಹೋಗುವ ಬಸವೇಶ್ವರ ಸರ್ವಿಸ್ಸಿನ ಬಸ್ಸೊಂದು ನಿನ್ನೆ ಮೈಸೂರು ಉಕ್ಕಡದ ಬಳಿ ಅಪಘಾತಕ್ಕೆ ಈಡಾಗಿ ಮಗುಚಿಕೊಂಡು ಅದರಲ್ಲಿದ್ದ ೧೬ ಜನರಿಗೆ ಗಾಯವಾಗಿ ಆಸ್ಪತ್ರೆಗೆ ದಾಖಲಾಗಿರುವರೆಂದೂ ಪೊಲೀಸ್ ಟೌನ್ ಇನ್ಸ್ಪೆಕ್ಟರ್ ಶ್ರೀ ಬಸಪ್ಪನವರ ಕೋರ್ಟಿಗೆ ಜಖಂ ಆಗಿರುತ್ತೆಂದೂ ತಿಳಿದುಬಂದಿದೆ

ಆರ್. ಎಸ್. ಎಸ್ ವಿದ್ಯಾರ್ಥಿಗಳ ಮೇಲಿನ ನಿರ್ಬಂಧ ವಾಪಸು

ಕಳೆದವರ್ಷ ಮೈಸೂರು ಪ್ರಥಮ ದರ್ಜೆ ಕಾಲೇಜಿನ ಬಳಿ ನಡೆದ ಘರ್ಷಣೆ ವಿಚಾರವಾಗಿ ಹಲವು ಜನ ಆರ್ ಎಸ್ ಎಸ್ ವಿದ್ಯಾರ್ಥಿಗಳ ಮೇಲೆ ಹಾಕಲಾಗಿದ್ದ ನಿರ್ಬಂಧವನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳುವಂತೆ ಆಜ್ಞೆ ಮಾಡಿರುವುದಾಗಿ ಗೊತ್ತಾಗಿದೆ. ವಿಶ್ವವಿದ್ಯಾಲಯದ ಅಧಿಕಾರಿಗಳು ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಕರೆಸಿ ಮಾತುಕತೆಗಳನ್ನು ನಡೆಸಿದ ಮೇಲೆ ಅವರಿಬ್ಬರಿಗೂ ಉಂಟಾದ ಸ್ನೇಹ ಸೌಹಾರ್ದದ ಪರಿಣಾಮವಾಗಿ ಈ ಆಜ್ಞೆಯು ಮಾಡಲ್ಪಟ್ಟಿರುವುದೆಂದು ತಿಳಿದುಬಂದಿದೆ

ನೆಹರೂ ಮತ್ತು ಪ್ರಸಾದರ ಭಾವಚಿತ್ರಗಳ ಅನಾವರಣ

ಕಬ್ಬಹಳ್ಳಿ ತಾ|| ೩೦

ಇಲ್ಲಿನ ಜಿಲ್ಲಾ ಬೋರ್ಡ್ ಹೈಸ್ಕೂಲು ಸಂಘದ ಆಶ್ರಯದಲ್ಲಿ ನೆನ್ನೆ ದಿನ ನಡೆದ ಸಮಾರಂಭದಲ್ಲಿ ಮೈಸೂರಿನ ವಕೀಲರಾದ ಶ್ರೀ ಎಸ್ ರಂಗರಾಮಯ್ಯನವರು ಪ್ರಧಾನಿ ನೆಹರೂರವರ ಭಾವಚಿತ್ರವನ್ನೂ, ಗ್ರಾಮದ ಪ್ರಮುಖರಾದ ಶ್ರೀ ಸಿರಿಗಯ್ಯನವರು ರಾಷ್ಟ್ರಪತಿ ರಾಜೇಂದ್ರಪ್ರಸಾದರ ಭಾವಚಿತ್ರವನ್ನೂ ಅನಾವರಣ ಮಾಡಿದರು. ಶ್ರೀ ಬಿಗರಂ ರಂಗಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸ್ಥಳ ಪರಸ್ಥಳಗಳಿಂದ ನೂರಾರು ಜನ ವಿದ್ಯಾರ್ಥಿಗಳೂ, ಇತರ ಮಹನೀಯರುಗಳೂ ದಯಮಾಡಿಸಿದ್ದರು.

ಶ್ರೀ ಎಸ್ ಭಾಷ್ಯಂರವರಿಂದ ಪ್ರಾರ್ಥನೆಯಾದ ನಂತರ ವಿದ್ಯಾರ್ಥಿಗಳಾದ ಎನ್. ಎಸ್ ಕುಮಾರಸ್ವಾಮಿ, ಎಂ ಮಲ್ಲಯ್ಯ, ಎಂ ಲಿಂಗಣ್ಣ, ವೆಂಕಟರಮಣಶೆಟ್ಟಿ ಮುಂತಾದವರಿಂದ ಗೀತೆಗಳು ಹಾಡಲ್ಪಟ್ಟುವು.

ಶಾಲಾ ಅಧ್ಯಕ್ಷರಾದ ಶ್ರೀ ಎ ಎಸ್ ರಾಮಾಶಾಸ್ತ್ರಿಯವರು ಎಲ್ಲರಿಗೂ ಸ್ವಾಗತವನ್ನು ಬಯಸಿ, ಶಾಲೆಯು ಇದುವರೆಗೆ ಕ್ರಮ ಕ್ರಮವಾಗಿ ಹೊಂದುತ್ತಿರುವ ಪುರೋಭಿವೃದ್ಧಿಯನ್ನೂ, ಮಹಾಜನರು ಅದಕ್ಕೆ ನೀಡುತ್ತಿರುವ ಬೆಂಬಲವನ್ನೂ ವಿವರಿಸಿದರು.

ಶ್ರೀ ಕೆ. ಎಂ ಗುರುಸ್ವಾಮಿಯವರಿಂದ ಭಾರತವಾಚನವಾದ ನಂತರ ಶ್ರೀ ಸೂರ್ಯನಾರಾಯಣರಾಯರು ಗೀತಾ ರಹಸ್ಯದ ವಿಷಯವಾಗಿಯೂ ಪಂಡಿತ ಶ್ರೀನಿವಾಸರಂಗಾಚಾರ್ಯರು ಪ್ರಧಾನಿ ನೆಹರೂರವರ ವಿಚಾರವಾಗಿಯೂ ಭಾಷಣ ಮಾಡಿದರು.

ಶ್ರೀ ರಂಗರಾಮಯ್ಯನವರು ತಮ್ಮ ಭಾಷಣದಲ್ಲಿ ರಾಜೇಂದ್ರಪ್ರಸಾದ್ ಮತ್ತು ಪಂಡಿತ ನೆಹರೂರವರ ದೇಶಸೇವೆ ಸ್ವಾರ್ಥತ್ಯಾಗ ಮತ್ತು ಇತರ ಗುಣಾತಿಶಯಗಳನ್ನು ವಿವರಿಸಿ, ವಿದ್ಯಾರ್ಥಿಗಳು ಅವರ ಮೇಲ್ಪಂಕ್ತಿಯಂತೆ ನಡೆದು ನಾಡಿಗೂ ತಮ್ಮ ಶಾಲೆಗೂ ಕೀರ್ತಿಯನ್ನು ತರಬೇಕೆಂದು ಕೋರಿದರು.

ಪಂಡಿತ ನೆಹರೂರವರು ಮೈಸೂರಿಗೆ ಹಿಂದೆ ಬಂದಿದ್ದಾಗ ನಡೆದ ಕೆಲವು ಘಟನೆಗಳನ್ನು ಅಧ್ಯಕ್ಷರು ವಿವರಿಸಿ ನೆಹರೂರವರು ವ್ಯಕ್ತಿಗಳಿಗಿಂತಲೂ ಸಂಸ್ಥೆಗೂ ತತ್ವಕ್ಕೂ ಹೇಗೆ ಪ್ರಾಮುಖ್ಯತೆಯನ್ನು ಕೊಡುತ್ತಿದ್ದರೆಂಬುದನ್ನು ತಿಳಿಸಿ ಈ ಭಾವಚಿತ್ರಗಳ ಸ್ಫೂರ್ತಿಯು ವಿದ್ಯಾರ್ಥಿಗಳ ಮೇಲೆ ಒಳ್ಳೆಯ ಪ್ರಭಾವವನ್ನು ಬೀರಲೆಂದು ಹಾರೈಸಿದರು.

ವಿವಿಧ ವೇಷಗಳಲ್ಲಿ ಸ್ಪರ್ಧಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಲಾಯಿತು.

ಉಪಾಧ್ಯಾಯ ವರ್ಗದ ಕಾರ್ಯದರ್ಶಿಗಳಾದ ಶ್ರೀ ಕೆ ಎಸ್ ಗೋಪಾಲಕೃಷ್ಣಶಾಸ್ತ್ರಿಯವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಮಹಾ ಸಭಾಧ್ಯಕ್ಷರಾಗಿ ಎನ್. ಸಿ ಚಟರ್ಜಿ

ಅಖಿಲ ಭಾರತ ಹಿಂದೂ ಮಹಾ ಸಭೆಯ ಅಧ್ಯಕ್ಷರಾಗಿ ಬಂಗಾಳದ ಎನ್ ಸಿ ಚಾಟರ್ಜಿಯವರು ಆರಿಸಲ್ಪಟ್ಟಿರುತ್ತಾರೆ. ಈ ತಿಂಗಳು ಆಖೈರಿಗೆ ಭೊಪಾಲಿನಲ್ಲಿ ಮಹಾಸಭೆಯ ಅಧಿವೇಶನವು ನಡೆಯಲಿದೆ.

ಆಯುರ್ವೇದ ಶಾಲೆಗಳನ್ನು ಮುಚ್ಚಲು ವಿರೋಧ

ರಾಜಧಾನಿಯ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪದವೀಧರರ ಸಂಘದ ಅಧ್ಯಕ್ಷರಾದ ಶ್ರೀ ಎನ್ ಗುಂಡಪ್ಪನವರು ಪತ್ರಿಕಾ ಪ್ರತಿನಿಧಿಗಳನ್ನು ಮೊನ್ನೆ ಚಾಮುಂಡೇಶ್ವರಿ ಭವನದಲ್ಲಿ ಬರಮಾಡಿಕೊಂಡು, ಎಲ್ ಎಂ ಎ ಪರೀಕ್ಷೆ ಪಾಸು ಮಾಡಿದವರು ಮಾಡುವಷ್ಟು ಕೆಲಸವನ್ನು ಆಯುರ್ವೇದದಲ್ಲಿ ಪದವಿ ಪಡೆದವರೂ ಮಾಡುವರೆಂದೂ, ತವರೆ ಅವರುಗಳಲ್ಲಿರುವ ಸಂಬಳದ ವ್ಯತ್ಯಾಸವು ಹೋಗಬೇಕೆಂದೂ ತಿಳಿಸಿದರು. ಆಯುರ್ವೇದ ಶಾಲೆ ಮತ್ತು ಆಸ್ಪತ್ರೆಗಳನ್ನು ಮುಚ್ಚುವ ನಿರ್ಧಾರವನ್ನು ತಾವು ಸಂಪೂರ್ಣವಾಗಿ ವಿರೋಧಿಸುವುದಾಗಿ ತಿಳಿಸಿ, ಆಯುರ್ವೇದಿಕ್ ಕಾಲೇಜಿನ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಇಷ್ಟು ಶಾಖೆಗಳನ್ನು ಹೆಚ್ಚಾಗಿ ಏರ್ಪಡಿಸುವುದಲ್ಲದೆ ಲ್ಯಾಬೊರೇಟರಿ ಸಲಕರಣೆಗಳನ್ನು ಒದಗಿಸಬೇಕೆಂದು ಅವರು ಕೋರಿದರು.

ಪಾಕಿಸ್ತಾನದಲ್ಲಿ ಕಾನೂನು ಭಂಗ ಚಳುವಳಿಯೇ ?

ಪಾಕಿಸ್ತಾನ ಸರ್ಕಾರವು ಸರಿಯಾಗಿ ವರ್ತಿಸುವಂತೆ ಪಾಠ ಕಲಿಸಲು ಅಲ್ಲಿನ ಜನರು ಕಾನೂನು ಭಂಗ ಚಳುವಳಿಯನ್ನು ಹೂಡುವರೆಂಬ ಇಂಗಿತವನ್ನು ಆಜಾದ್ ಪಾಕಿಸ್ತಾನ ಪಕ್ಷದ ಮುಖಂಡರಾದ ಮಿಯಾನ್ ಇಫ್ತಿಕರ್ ಉದ್ದೀನ್‌ರವರು ತಿಳಿಸಿರುತ್ತಾರೆ. ನಾಗರಿಕ ಹಕ್ಕುಗಳನ್ನು ಕಾಪಾಡಲು ಇನ್ನು ಮುಂದೆ ಗಳಲನೇ ನಿಬಂಧನೆಯನ್ನು ಉಲ್ಲಂಘಿಸುವುದಾಗಿ ಅವಾಮಿ ಲೀಗಿನ ಅಧ್ಯಕ್ಷರಾದ ಸುಹ್ರವರ್ದಿಯವರು ತಿಳಿಸಿರುತ್ತಾರೆ.

ಮೆಡಿಕಲ್ ಕಾಲೇಜುಗಳಲ್ಲಿ ಡಬ್ಬಲ್ ಷಿಫ್ಟು

ಮೆಡಿಕಲ್ ಕಾಲೇಜುಗಳಲ್ಲಿ ಡಬ್ಬಲ್ ಷಿಫ್ಟುಗಳನ್ನು ಏರ್ಪಡಿಸುವ ವಿಷಯವಾಗಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ಲಿನ ಅಧ್ಯಕ್ಷರಾದ ಡಾ|| ಸಿ ಎಸ್ ಪಟೇಲ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ಶಿಕ್ಷಣದ ಮಟ್ಟವು ಇಳಿಯದಿರುವಂತೆ ನೋಡಿಕೊಳ್ಳಲು ಸಾಧ್ಯವಾದಂತಹ ಕಾಲೇಜುಗಳಲ್ಲಿ ಮಾತ್ರ ಡಬ್ಬಲ್ ಷಿಫ್ಟನ್ನು ಏರ್ಪಡಿಸಬೇಕೆಂದು ತಿಳಿಸಿರುವರು.

ಶ್ರೀ ವರಲಕ್ಷ್ಮಿ ಅಕಡೆಮೀಸ್ ಆಫ್ ಫೈನ್ ಆರ್ಟ್ಸ್

ಮೇಲ್ಕಂಡ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ಈ ೫-೮ ೭ ಘಂಟೆಗೆ ಸಂಗೀತ ಮತ್ತು ಸಾಹಿತ್ಯ ವಿದ್ವಾನ್ ಶ್ರೀ ಎಚ್ ರಾಮರಾವ್ ಜಾಚಾರ್ ಇವರಿಂದ ಸೂಕ್ತ ಪಕ್ಕವಾದ್ಯಗಳೊಡನೆ ಸಂಗೀತ ಕಛೇರಿಯನ್ನು ಏರ್ಪಡಿಸಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಎ ಜಿ ಕೃಷ್ಣಮೂರ್ತಿ, ಸಂಗೀತ [illegible] ಮಧ್ಯಾಹ್ನ ೧ ೪೦ [illegible] ಕೃಷ್ಣಮೂರ್ತಿ, ಸಂಗೀತ ೬ ೧೦ ಕನ್ನಡ ಗೀತೆಗಳು ೭ ರಸಪ್ರಶ್ನೆ ೭ ೩೦ ವೀಣಾಗಾನ [illegible] ವೆಂಕಟಸುಬ್ಬಯ್ಯರ್, [illegible] ಸಂಗೀತ [illegible] ಭಾರತ [illegible] ೮ ೧೦ ರತ್ನಮ್ಮ ಕೃಷ್ಣಮೂರ್ತಿ, ಸಂಗೀತ [illegible] ಶ್ರೀನಿವಾಸಯ್ಯರ್ [illegible] ಸಂಗೀತ [illegible]

ಮುಖ್ಯ ಮಂತ್ರಿಗಳಲ್ಲಿ ವರ್ತಕರುಗಳ ನಿಯೋಗ

ಮೈಸೂರು ೩

ತರಕಾರಿ, ಹಣ್ಣು, ಹಂಪಲು, ಕೋಳಿ ಮೊಟ್ಟೆ ವಿಳ್ಳೇದೆಲೆ ಇವೇ ಮುಂತಾದ ಸಾಮಾಗ್ರಿಗಳ ಮೇಲೆ ವಿಧಿಸಲಾಗುವ ಮಾರಾಟ ತೆರಿಗೆಯಿಂದ ತಮಗೆ ಉಂಟಾಗುತ್ತಿರುವ ತೊಂದರೆಗಳನ್ನು ಅರಿಕೆ ಮಾಡಲು, ದೇವರಾಜ ಮಾರ್ಕೆಟ್ಟಿನ ಹೆಂಗಸರು, ಗಂಡಸರು ಆದಿಯಾಗಿ ಸುಮಾರು ೭೦ ಜನ ವರ್ತಕರು ನೆನ್ನೆ ದಿನ ಶ್ರೀಗಳಾದ ಬಿ ನಾರಾಯಣಸ್ವಾಮಿ ಮತ್ತು ಎ ಶಿವಣ್ಣನವರ ನೇತೃತ್ವದಲ್ಲಿ ಮುಖ್ಯ ಮಂತ್ರಿಗಳ ಬಳಿಗೆ ನಿಯೋಗ ಹೋಗಿದ್ದರು. ದಿನಚರಿ ಉಪಯೋಗಕ್ಕೆ ಆವಶ್ಯಕವಾಗಿದ್ದು ಬೇಗನೆ ಕೆಟ್ಟುಹೋಗುವ ಮೇಲ್ಕಂಡ ಪದಾರ್ಥಗಳಿಗೆ ವ್ಯಾಪಾರದಿಂದ ತಮಗೆ ಬರುವ ಅಲ್ಪಸ್ವಲ್ಪ ವರಮಾನದ ಮೇಲೆ ಮಾರಾಟ ತೆರಿಗೆಯನ್ನು ವಿಧಿಸುವುದರಿಂದ ಉಂಟಾಗಿರುವ ತೊಂದರೆಯನ್ನು ನಿಯೋಗದವರು ವಿವರಿಸಿದರು. ಈ ವಿಷಯವನ್ನು ಇಲಾಖೆಯ ಅಧಿಕಾರಿಗಳೊಡನೆ ಪರಿಶೀಲಿಸಿ ಸೂಕ್ತ ಪರಿಹಾರಗಳನ್ನು ದೊರಕಿಸಲು ಪರ್ಯಾಲೋಚಿಸುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿದರು.

ಸಂತೇಪೇಟೆ ವರ್ತಕರೂ ಸಹಾ ಶ್ರೀಗಳಾದ ಚೌಡಯ್ಯ, ನಂದೀಬಸಪ್ಪ, ಜಿ ಪುಟ್ಟಸ್ವಾಮಯ್ಯ ಮುಂತಾದವರ ನೇತೃತ್ವದಲ್ಲಿ ಮುಖ್ಯ ಮಂತ್ರಿಗಳಲ್ಲಿ ಮತ್ತೊಂದು ನಿಯೋಗವನ್ನು ಕೊಂಡೊಯ್ದಿದ್ದರು. ಈಗ ಮಾರಾಟ ತೆರಿಗೆಯನ್ನು ವಸೂಲು ಮಾಡುತ್ತಿರುವ ವಿಧಾನದಿಂದ ವರ್ತಕರಿಗೆ ವಿಶೇಷ ಕಿರುಕುಳವಾಗುತ್ತಿರುವುದಲ್ಲದೆ ಸರ್ಕಾರದ ಬೊಕ್ಕಸಕ್ಕೂ ನಷ್ಟವು ಸಂಭವಿಸುತ್ತಿರುವುದೆಂದು ಅವರು ಅರಿಕೆ ಮಾಡಿದರು. ವರ್ತಕರಿಗೆ ತೊಂದರೆಯನ್ನುಂಟುಮಾಡುವುದು ಸರ್ಕಾರದ ಉದ್ದೇಶವಲ್ಲವೆಂದು ಮುಖ್ಯ ಮಂತ್ರಿಗಳು ತಿಳಿಸಿ, ಈಗಿನ ತೊಂದರೆಗಳನ್ನು ತಪ್ಪಿಸಿ, ಸರ್ಕಾರಕ್ಕೆ ಬರುತ್ತಿರುವ ವರಮಾನವೂ ಸಲೀಸಾಗಿ ಬರುವಂತೆ ಬೇರೆ ಮಾರ್ಗಗಳನ್ನು ವರ್ತಕರು ಸೂಚಿಸಿದರೆ ಅದನ್ನು ಪರ್ಯಾಲೋಚಿಸಲಾಗುವುದೆಂದು ಉತ್ತರವಿತ್ತರು.

FRESH ADMISSIONS
FOR
SHORTHAND & TYPEWRITING
Only, Leading to
November 1953 Examinations
Are now being received
At The
CHAMPION METROPOLITAN
COLLEGE OF COMMERCE,
Co-operators Home
100 Tent Road, Mysore
Sd/- M S PUTTANNA,
Vice Principal

Edited, Printed and Published by A R Nagarajan at Sadhvi Press, D Subbiah Road, Mysore

ಸಿದ್ಧರಾಮ ಚರಿತೆಯ
ಸಂಗ್ರಹದ ಕೈಗನ್ನಡಿ
ಬೆಲೆ ೧ ೮-೦
ಕೃಷ್ಣ ಕಂಪನಿ,
ನಾರದ ರಸ್ತೆ ಮೈಸೂರು

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

ಒಲಂಪಿಯಾ
4-12-52 ರಿಂದ ಪ್ರಾರಂಭ
ಪ್ರತಿದಿನ 3 ಆಟಗಳು
ಶ್ರೇಷ್ಠ ನಿರ್ದೇಶಕರಾದ ಶ್ರೀ ವಿಜಯಭಟ್‌ರವರ ಉತ್ಕೃಷ್ಟ ಮಸ್ತಿನ ಸಂಗೀತಮಯ ಹಿಂದಿ ಚಿತ್ರ
ಸಂಗೀತದ ಮಹಿಮೆಯನ್ನು ಪ್ರತಿಬಿಂಬಿಸುವ ಮನೋರಂಜನೀಯ ಅದ್ಭುತ ಕಥೆಯನ್ನೊಳಗೊಂಡು, ಪ್ರೇಕ್ಷಕರನ್ನು ಮುಗ್ಧಗೊಳಿಸುವ ಅತ್ಯುತ್ತಮ ಕಲಾಕೃತಿ
* ಬೈಜೂಬಾವ್ರ
ಸಂಗೀತ ನೌಷಾದ್
ತಾರಾ — ಭಾರತ್ ಭೂಷಣ್, ಮೀನಾ ಕುಮಾರಿ, ಸುರೇಂದ್ರ, ಕುಲದೀಪ್
ಬೆಳಗಿನ ಪ್ರದರ್ಶನ ಶಾಂತಾರಾಂ ರವರ ಮತ್ವಾಲಿಷಾಯಿರ್ ರಾಂ ಜೋಷಿ

ಟೆಲಿಫೋನ್ ನಂ 792 ||ವಂದೇ ಮಾತರಂ|| ಒಂದಿನ ಬಿಡಿಪ್ರತಿ ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೪-೧೨-೧೯೫೨ [ಸಂಚಿಕೆ ೧೦೫

ಗೋವಾದಲ್ಲಿ ಅನೇಕ ದೇಶಪ್ರೇಮಿಗಳ ಬಂಧನ

ಚಾಮರಾಜ ಮೊಹಲ್ಲಾ ದಿನಾಚರಣೆ

ಮೈಸೂರು ೪ ... ಪೌರಸಭೆಯವರು ನೆನ್ನೆ ಇ... ...ನ ಕಟಕಪುರದಲ್ಲಿ ಚಾಮುಂಡಿ ... ಮೊಹಲ್ಲಾ ದಿನಾಚರಣೆಯನ್ನು ನೆರ... ಬೆಳಿಗ್ಗೆ ಹಲವು ಪ್ರದೇಶ... ನಿರ್ಮಲೀಕರಣ, ಮತ್ತು ಮಕ್ಕಳ ... ರೋಗ್ಯ ಪರೀಕ್ಷೆಯೂ, ಸಿಹುಬು... ವಿತರಣೆ, ಗರ್ಭಿಣಿಯರ ಪರೀಕ್ಷೆಗ... ನಡೆದುವು ಚೊಕ್ಕಟವಾಗಿ ಮನೆ ... ಇಟ್ಟುಕೊಳ್ಳುವ ಬಗ್ಗೆ ಸ್ಪರ್ಧೆಯನ್ನು ಏರ್ಪ... ಡಿಸಲಾಗಿದ್ದಿತು ಸಂಜೆ ಶ್ರೀ ಲಿಂಗಯ್ಯ... ...ಶಿಶುವಿಹಾರ ಕೇಂದ್ರದಲ್ಲಿ ಪೌರ... ...ಕ್ಷರು ಶ್ರೀ ಎ ಕೃಷ್ಣಮೂರ್ತಿ ರಾ... ...ರ ಅಧ್ಯಕ್ಷತೆಯಲ್ಲಿ ಸಭೆಯು ಜರು... ...ಚೊಕ್ಕಟವಾಗಿಡಲಾಗಿದ್ದ ೩ ಮ... ...ಗೆ ೧, ೨, ಮತ್ತು ೩ ನೇ ಬಹು... ...ನಗಳನ್ನೂ, ಮೂರು ಮಕ್ಕಳಿಗೆ ಆ... ...ದ ಬಹುಮಾನಗಳನ್ನೂ ಹಂಚ... ...ತು ಶ್ರೀಗಳಾದ ಬಿ ಜಿ ದಾಸ್ ... ಸ್ವಾಮಿ, ಜಿ ಲಿಂಗಯ್ಯ ಎ... ...ಣ್ಣ ಮತ್ತು ಅಧ್ಯಕ್ಷರು ಭಾಷಣ... ...ಜನರ ಪುರೋಭಿವೃದ್ಧಿ ಬಗ್ಗೆ ... ಸಲಹೆ ಮತ್ತು ಹಿತೋಕ್ತಿಗಳ... ...ದರು. ರಾಜಧಾನಿಯ ವನಿ... ...ತು ಮಹಿಳಾ ಸದನಗಳವರು ... ಮತ್ತು ಮಕ್ಕಳ ಆಟಪಾಟ... ...ನ ಏರ್ಪಡಿಸಿದ್ದರು

೨ ವರ್ಷ ಚಿಕಿತ್ಸೆ ಪಡೆದು ಹೆಂಗಸಾದ ಗಂಡಸು

... ಜಾರ್ಜ್ ಜರ್ಗನ್ಸನ್ ಎಂಬ ೨೬ ವ... ... ಸೈನಿಕನು ಡೆನ್ಮಾರ್ಕಿನ ... ವರಲ್ಲಿ ೨ ವರ್ಷ ಹಾರ್ಮೋನ್ ... ಚಿಕಿತ್ಸೆ ಪಡೆದು ಹೆಣ್ಣಾಗಿ ಪರಿವರ್ತ... ...ತ್ತಾನೆ ಅಮೆರಿಕದ ಸೈನ್ಯದಲ್ಲಿ ... ಕಾಲ ಅವನು ಇದ್ದಾಗ, ಅವನ ... ಪೈಂಗಿಕ ವ್ಯತ್ಯಾಸವು ಕಂಡು ... ಅವನು ಡಾ|| ಹ್ಯಾಂಬರ್ಗರ್‌ರವರ ... ಚಿಕಿತ್ಸೆ ಹೊಂದಿದನು ಶಸ್ತ್ರ ಚಿಕಿತ್ಸೆಯೇ ... ...ರೀತಿ ಪರಿವರ್ತನೆಯಾಗಿ ಅವನು ... ಯುವತಿಯಾಗಿ, ಕ್ರಿಸ್ಟೀನ್ ಎಂ... ...ಬದಲಾಯಿಸಿಕೊಂಡು ಸಂತೋಷದಿಂದ ... ಎಂದು ಹೇಳಲಾಗಿದೆ

ದಕ್ಷಿಣ ಆಫ್ರಿಕಾ ಮುಖಂಡರುಗಳಿಗೆ ಶಿಕ್ಷೆ

...ಆಫ್ರಿಕದ ಭಾರತೀಯ ಮ... ...ರ್ಕ ಜನರ ಕಾಂಗ್ರೆಸ್ ಸಂಸ್ಥೆ... ...ಅಧ್ಯಕ್ಷರುಗಳಾದ ಯೂಸೂಫ್ ದಾ... ...ಮತ್ತು ಜೆ ಎಸ್ ಮೊರೋಕ ... ...ರಾದ ೨೦ ಜನ ಮುಖಂಡರುಗ... ...ಕಮ್ಯೂನಿಸಂ ಶಾಸನದ ಉದ್ದೇಶ... ...ಸಿದ್ಧಿಸಿದರೆಂದು ಅವರುಗಳ ... ...ಶಿಕ್ಷೆ ವಿಧಿಸಿ, ೨ ವರ್ಷಗಳ ... ...ವನ್ನು ಅಮಾನತ್ತಿನಲ್ಲಿಡಲಾ... ...ದೆ

ಆಯುರ್ವೇದದ ಪ್ರೋತ್ಸಾಹಕ್ಕಾಗಿ ನೆಹರೂ ಕರೆ

ಆಯುರ್ವೇದ ಮತ್ತು ಯುನಾನಿ ... ಪದ್ಧತಿಗಳಲ್ಲಿ ಬಹು ಪರಿಣಾಮ... ...ಗುವಂತಹ ಔಷಧಗಳು ದೊರೆ... ...ತ್ತಿವೆಯೆಂದೂ, ಆ ಪದ್ಧತಿಗಳನ್ನು ... ಪ್ರೋತ್ಸಾಹಿಸಬೇಕಾದುದು ಅಗತ್ಯವೆಂ... ...ಪ್ರಧಾನಿ ನೆಹರೂರವರು ತಿಳಿಸಿರು... ...ರೆ

ಸಚಿವರಿಗೆ ಪೌರಸಭೆಯ ಕಪ್ಪುಬಾವುಟ ಪ್ರದರ್ಶನ

ಚಿಕ್ಕಮಗಳೂರಿನಲ್ಲಿ ಕಳೆದ ಸೋಮವಾರ ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರ ಗೌರವಾರ್ಥವಾಗಿ ನಡೆದ ಸತ್ಕಾರ ಕೂಟದಲ್ಲಿ ಪೌರಸಭಾಧ್ಯಕ್ಷರಾದ ಶ್ರೀ ಸಿ ವಿ ಧನ್ವಂತರಿ ಮಾತನಾಡಿ, ಇಲ್ಲಿನ ಪೌರಸಭೆಯು ಇದಿಬಳಿಗೆ ಯಾವ ಮಂತ್ರಿಯೇ ಆಗಲಿ ಬಂದರೂ, ಪೌರಸಭಾ ಸದಸ್ಯರು ಮತ್ತು ಸಾರ್ವಜನಿಕರು ಅವರಿಗೆ ಕಪ್ಪು ಬಾವುಟವನ್ನು ಪ್ರದರ್ಶಿಸಲು ನಿರ್ಧರಿಸಿದ ವರದಿಯು ತಿಳಿಸಿದರು ಸರ್ಕಾರದವರು ಮಲೆನಾಡ ಪ್ರಜೆಗಳಿಗೆ ಕೊಟ್ಟ ಸುಳ್ಳು ವಚನಗಳ ಬಗ್ಗೆ ಇಲ್ಲಿನ ಜನರು ತುಂಬಾ ಜಿಗುಪ್ಸೆ ಹೊಂದಿರುವರೆಂದು ಅವರು ತಿಳಿಸಿದರು

ಬೊಂಬಾಯಿ ಸಂಸ್ಥಾನದ ೭೪ ಕಡೆಗಳಲ್ಲಿ ಪಡಿತರ ರದ್ದು

ಬೊಂಬಾಯಿ ಪ್ರಾಂತದ ೭೪ ಸಣ್ಣ ಊರುಗಳಲ್ಲಿ ಬರುವ ಜನವರಿ ೧ ನೇ ತಾ|| ಪಡಿತರವನ್ನು ಪೂರ್ಣವಾಗಿ ತೆಗೆದು ಹಾಕಲಾಗುವುದು ೨೦-೫೦ ಸಾವಿರ ಪ್ರಜಾ ಸಂಖ್ಯೆಯುಳ್ಳ ಪಟ್ಟಣಗಳಲ್ಲಿ ಸಾಮಾನ್ಯ ರೀತಿಯ ಪಡಿತರವನ್ನು ಏರ್ಪಡಿಸಲಾಗುವುದು

೧೭೬ ವರ್ಷದ ಅತ್ಯಂತ ವಯೋವೃದ್ಧ

ಕಾಶ್ಮೀರದ ಪಠಾಣಕೋಟೆಯಲ್ಲಿ ಬಾಬಾ ನಾರಾಯಣ ಸಿಂಗ್ ಎಂಬ ೧೭೬ ವರ್ಷ ವಯಸ್ಸಿನ ಒಬ್ಬ ವೃದ್ಧರಿರುತ್ತಾರೆ ಇನ್ನೂ ೨೫ ವರ್ಷ ತಾವು ಬದುಕುವುದಾಗಿ ಅವರ ನಂಬಿಕೆ. ೧೭೭೬ ರಲ್ಲಿ ಅವರು ಹುಟ್ಟಿದರು ಅವರ ಹಲ್ಲುಗಳೂ ಗಟ್ಟಿಯಾಗಿವೆ ಕೂದಲು ನರೆತಿಲ್ಲ ಯೋಗಾಭ್ಯಾಸ ಮತ್ತು ದೈವ ಭಕ್ತಿಯೇ ತಮ್ಮ ಆಯುಸ್ಸಿನ ರಹಸ್ಯವೆಂದು ಅವರು ಅಭಿಪ್ರಾಯಪಡುತ್ತಾರೆ ಪ್ರಪಂಚದಲ್ಲೇ ಇವರಿಗಿಂತಲೂ ಹೆಚ್ಚು ವಯಸ್ಸಿನವರಿಲ್ಲವೆಂದು ಹೇಳಲಾಗಿದೆ

ಕಾಂಗ್ರೆಸ್ ಅಧ್ಯಕ್ಷತೆಗೆ ೩ ಜನರ ಹೆಸರು

ಅ|| ಭಾ|| ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂ, ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ಎಸ್ ನಿಜಲಿಂಗಪ್ಪ ಇವರುಗಳ ಹೆಸರುಗಳನ್ನು ಸೂಚಿಸಲಾಗಿದೆ ಕಡೆಯವರಿಬ್ಬರೂ ತಮ್ಮ ಉಮೇದುವಾರಿಕೆಗಳನ್ನು ವಾಪಸು ತೆಗೆದುಕೊಳ್ಳುವರೆಂದೂ ಹೇಳಲಾಗಿದೆ

ಶೀತ ಮಾರುತದಿಂದ ೧೨ ಜನರ ಪ್ರಾಣಹಾನಿ

ಮದ್ರಾಸು ಪ್ರಾಂತದ ಹಲವು ಕಡೆ ಶೀತಮಾರುತವು ಬೀಸಿದ ಪರಿಣಾಮವಾಗಿ ತಿರುಚನಾಪಳ್ಳಿ ಮತ್ತು ಸುತ್ತಮುತ್ತಲ ಒಟ್ಟು ೬ ಮಂದಿ ಪ್ರಾಣಬಿಟ್ಟರು ಅನೇಕ ಮರಗಳೂ, ಮನೆ ಛಾವಣಿಗಳೂ ಹಾರಿಹೋದುವು ವಿದ್ಯುಚ್ಛಕ್ತಿ ಸರಬರಾಜು ನಿಂತುಹೋಗಿದ್ದಿತು

ಕುಂಭಕೋಣದಲ್ಲಿ ೬ ಜನರು ಮಡಿದಿರುವರು ಅಲ್ಲಿ ಆದ ಗಾಳಿ ಮಳೆಯು ಹಿಂದೆಂದೂ ಸಂಭವಿಸಿರಲಿಲ್ಲವೆಂದೂ ಲಕ್ಷಗಟ್ಟಲೆ ರೂ ನಷ್ಟ ಸಂಭವಿಸಿರುವುದೆಂದೂ ಹೇಳಲಾಗಿದೆ ಮನೆಯಲ್ಲಿ ಬಾವಿಯೊಳಕ್ಕೆ ನೀರು ಸೇದುತ್ತಿದ್ದವನು ಎತ್ತರಕ್ಕೆ ಬರುತ್ತಿದ್ದ ಒಂದು ಸಿನಿಮಾ ಮಂಟಪದ ಅಂತಸ್ತಿನ ಗಾಳಿಗೆ ಸಿಕ್ಕಿ ಮಡಿದನು ವಿದ್ಯುಚ್ಛಕ್ತಿ ಕಂಬಗಳು ಇಂಗ್ಲೀಷಿನ "ಯು" ಅಕ್ಷರದಂತೆ ಬಗ್ಗಿದ್ದುವು ಒಂದು ರಸ್ತೆಯಲ್ಲಿ ೮೦ ಮರಗಳು ಉರುಳಿದ್ದುವು ದೇವರ ಸೇವೆಗಾಗಿ ಸ್ವಾಮಿ ಮಠಕ್ಕೆ ಹೋಗಿದ್ದ ಗಂಡ, ಹೆಂಡತಿ ಮತ್ತು ಮಗುವಿನ ಒಂದು ಸಂಸಾರದ ತಲೆ ಮೇಲೆ ಗೋಡೆ ಉರುಳಿ ಅವರ ಸ್ಥಿತಿ ಚಿಂತಾಜನಕವಾಗಿದೆ ಒಂದು ದೇವಸ್ಥಾನದ ಮೇಲಿನ ಗೋಪುರವು ಹಾರಿಹೋಯಿತು

ಈ ಮಹಾ ಮಾರುತದಿಂದ ತಂಜಾವೂರು, ಪುದುಕೋಟೆ, ಟ್ರಾಂಕ್ವಿಬಾರ್ ಕಾರೈಕಾಲ್ ಮುಂತಾದ ನಾನಾ ಭಾಗಗಳಲ್ಲಿ ಅಪಾರ ನಷ್ಟವಾಗಿದೆ ಟ್ರಾಂಕ್ವಿಬಾರಿನಲ್ಲಿ ಸಮುದ್ರವು ಭೂಮಿಯೊಳಗೆ ೨ ಮೈಲಿ ದಾಟಿತ್ತು ಮತ್ತೊಂದು ಕಡೆ ಬಸ್ಸಿನ ಮೇಲ್ಭಾಗವು ಕಿತ್ತು ಹಾರಿಹೋಯಿತು

೧೫ ಬಂಡಿಗಳನ್ನು ಎಳೆದ ಸಾಹಸಿ

ಸಿನ್ನಾರ್ ಎಂಬಲ್ಲಿ ಘೋರ್ಪಡೆ ಎಂಬ ಯುವಕನೊಬ್ಬನು ಬೇರಾವ ಸಹಾಯವೂ ಇಲ್ಲದೆ ಏಕ ಕಾಲದಲ್ಲಿ ೧೫ ಬಂಡಿಗಳನ್ನು ಎಳೆದು ತನ್ನ ಬಲವನ್ನು ಪ್ರದರ್ಶಿಸಿರುತ್ತಾನೆಂದು ವರದಿಯಾಗಿದೆ

ಮಿಡಲ್ ಸ್ಕೂಲುಗಳ ಡೆ|| ಡೈರೆಕ್ಟರ್

ಶಿಕ್ಷಣ ಸುಧಾರಣಾ ಸಮಿತಿಯ ಉಪ ಕಾರ್ಯದರ್ಶಿಯವರಾದ ಶ್ರೀ ಟಿ ಎಸ್ ಕೃಷ್ಣರಾಯರನ್ನು ರಜದ ಮೇಲಿರುವ ಶ್ರೀ ಎಲ್ ಅಬ್ದುಲ್ ಅಜೀಜ್‌ರವರ ಸ್ಥಾನದಲ್ಲಿ ಮಿಡಲ್ ಸ್ಕೂಲುಗಳ ಡೆಪ್ಯುಟಿ ಡೈರೆಕ್ಟರಾಗಿ ನೇಮಿಸಲಾಗಿದೆ

ಗೋವಾದಲ್ಲಿ ಅನೇಕ ರಾಜಕಾರಣಿಗಳ ಬಂಧನ

ಗೋವಾದಲ್ಲಿ ಫ್ರಾನ್ಸಿಸ್ ಕ್ಸೇವಿಯರ್ ಮಹಾಶಯನ ಕಳೇಬರವನ್ನು ಪ್ರದರ್ಶಿಸುವ ಸಮಯದಲ್ಲಿ ಅಶಾಂತಿಯುಂಟಾಗುವುದೆಂಬ ಕಾರಣಕ್ಕಾಗಿ ಅಲ್ಲಿನ ಅನೇಕ ರಾಷ್ಟ್ರೀಯ ಕಾರ್ಯಕರ್ತರನ್ನು ಪೋರ್ಚುಗೀಸ್ ಅಧಿಕಾರಿಗಳು ಬಂಧಿಸುತ್ತಿರುವರೆಂದು ವರದಿಯಾಗಿದೆ ಕ್ಸೇವಿಯರನು ೪೦೦ ವರ್ಷಗಳ ಹಿಂದೆ ಮಡಿದ ಪೋರ್ಚುಗಲ್ಲಿನ ಸಾಧು

ರಾಷ್ಟ್ರಾಧ್ಯಕ್ಷರ ವರ್ಧಂತಿ

ರಾಷ್ಟ್ರಾಧ್ಯಕ್ಷ, ರಾಜೇಂದ್ರಪ್ರಸಾದರಿಗೆ ನೆನ್ನೆ ೬೮ ನೇ ವರ್ಷ ಪ್ರಾರಂಭವಾಯಿತು ನೆನ್ನೆ ಬೆಳಿಗ್ಗೆ ಪಂಡಿತ ನೆಹರೂ, ಡಾ|| ರಾಧಾಕೃಷ್ಣನ್ ಮೊದಲಾದವರು ಅಧ್ಯಕ್ಷರಿಗೆ ಶುಭಾಶಯವನ್ನು ಕೋರಿದರು ಮೊಗಲಾಯರ ವನದಲ್ಲಿ ರಾಜೇಂದ್ರ ಬಾಬುರವರು ವ್ಯಾಯಾಮ ಮತ್ತು ಸರ್ಕಸ್ ಪ್ರದರ್ಶನಗಳನ್ನು ನೋಡಿ, ಹಲವರಿಗೆ ಬಹುಮಾನಗಳನ್ನು ಹಂಚಿದರು

ಭಾರತದ ನಿರ್ಣಯಕ್ಕೆ ತಿದ್ದುಪಡಿ

ಕೊರಿಯಾ ಶಾಂತಿ ಬಗ್ಗೆ ಅಂಗೀಕಾರವಾದ ಭಾರತದ ನಿರ್ಣಯಕ್ಕೆ ತಿದ್ದುಪಡಿಯನ್ನು ರಷ್ಯದ ಪ್ರತಿನಿಧಿಯು ವಿಶ್ವಸಂಸ್ಥೆಯಲ್ಲಿ ತಂದಿರುತ್ತಾರೆ ರಷ್ಯದ ಆಕ್ಷೇಪಣೆಯನ್ನು ನಿವಾರಿಸಲು ಕೂಡಲೇ ಕದನ ವಿರಾಮ ಒಪ್ಪಂದಕ್ಕಾಗಿ ತಿದ್ದುಪಡಿ ಕೊಡಲಾಗಿದೆ

ಗ್ಯಾಸ್ ಯಂತ್ರ ಸಿಡಿದು ಒಬ್ಬನ ಮರಣ

ತುಮಕೂರು ಸಂತೇಪೇಟೆಯ ಕಾರ್ಖಾನೆಯೊಂದರಲ್ಲಿ ವೆಲ್ಡಿಂಗ್ ಮಿಷಿನ್ ಅನ್ನು ಕಂಟ್ರಾಕ್ಟರ್ ಶ್ರೀ ಕೃಷ್ಣಶೆಟ್ಟಿಯೆಂಬುವರು ಹೊತ್ತಿ ಪರೀಕ್ಷಿಸುತ್ತಿದ್ದಾಗ ಗ್ಯಾಸ್ ಮಿಷನ್ನಿಗೆ ಪ್ರೆಶರ್ ಜಾಸ್ತಿಯಾಗಿ ಅದು ಒಡೆದು ಹೋದುದರ, ಪರಿಣಾಮವಾಗಿ ಶೆಟ್ಟರಿಗೆ ತೀವ್ರ ಗಾಯಗಳಾದುವೆಂದೂ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಅವರು ಮೃತಪಟ್ಟರೆಂದೂ ಗೊತ್ತಾಗಿದೆ

ಸ್ಟಾಂಪು ಇಲ್ಲದ ಅರ್ಜಿಗಳ ತಿರಸ್ಕಾರ

ಕಾನೂನಿನ ನಿಬಂಧನೆ ಪ್ರಕಾರ ಸ್ಟಾಂಪು ಹಚ್ಚಲ್ಪಡದೇ ಬರುವ ಅರ್ಜಿಗಳನ್ನು ವಾಪಸು ಕಳುಹಿಸಲಾಗುವುದು ಅಥವಾ ತಿರಸ್ಕರಿಸಲಾಗುವುದೆಂದೂ, ಸಾರ್ವಜನಿಕರು ತಮ್ಮ ಅರ್ಜಿಗಳಿಗೆ ಸ್ಟಾಂಪನ್ನು ಲಗತ್ತಿಸಿ ಕಳುಹಿಸಬೇಕೆಂದೂ ಸರ್ಕಾರದವರು ಪ್ರಕಟಿಸಿರುತ್ತಾರೆ

ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿ ಬೆಂಕಿ ಪ್ರಕರಣ

ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಗೆ ಕಳೆದ ತಿಂಗಳು ೯ ನೇ ತಾರೀಕು ಬೆಂಕಿ ಬಿದ್ದ ಸಂಬಂಧದಲ್ಲಿ ಒಟ್ಟು ೩ ಜನರ ವಶ್ತಗಿರಿಯಾಗಿದೆ ನಡೆಯುವ ದಗೆಗಳ ಮೇಲೆ ಸಧ್ಯದಲ್ಲೇ ಚಾರ್ಜು ಷೀಟು ಹಾಕಲಾಗುವುದು ಐ ಜಿ. ಪಿ ಶ್ರೀ ಬಾಬು ರೆಡ್ಡಿಯವರು ಕಳೆದ ೨೬ ನೇ ತಾ|| ಅಲ್ಲಿಗೆ ಹೋಗಿ ಪರಿಶೀಲನೆ ನಡೆಸಿದರು

ಕೊರಿಯಕ್ಕೆ ಐಸೆನ್‌ಹೋವರರ ಪ್ರಯಾಣ

ಅಮೆರಿಕದ ಅಧ್ಯಕ್ಷರಾಗಲಿರುವ ಡ್ವೈಟ್ ಐಸೆನ್‌ಹೋವರರು ಮೊನ್ನೆ ಕೊರಿಯಾಕ್ಕೆ ತೆರಳಿದರೆಂದು ವರದಿಗಳು ಬಂದಿವೆ

ಅಮೆರಿಕಾ ಗೂಢಚಾರರೆಂದು ೩ ಜನರಿಗೆ ಗಲ್ಲು

ಉತ್ತರ ಕೊರಿಯದಲ್ಲಿ ಗೂಢಚಾರ ಕೆಲಸಕ್ಕಾಗಿ ಪ್ಯಾರಾಚೂಟುಗಳಿಂದ ವಿಮಾನದಲ್ಲಿ ಇಳಿಸಲ್ಪಟ್ಟ ೩ ಜನ ಅಮೆರಿಕನ್ನರನ್ನು ಉತ್ತರ ಕೊರಿಯಾ ರಾಜಧಾನಿ ಪ್ಯೊಂಗ್ಯಾಂಗ್‌ನಲ್ಲಿ ಮೊನ್ನೆ ಬಹಿರಂಗವಾಗಿ ಗಲ್ಲಿಗೇರಿಸಲಾಯಿತೆಂದು ವರದಿಯಾಗಿದೆ

ಸಂಸ್ಕೃತಿ ಪ್ರಸಾರ

ನಂಜನಗೂಡು ಕಸಬಾ ರೇಂಜಿನ ಕನ್ನಡ ಮತ್ತು ಉರ್ದು ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೨॥ ಘಂಟೆಗೆ ನಂಜನಗೂಡಿನ ದಳವಾಯಿಯವರ ಕಟ್ಟಡದಲ್ಲಿ ಸಂಸ್ಕೃತಿ ಪ್ರಸಾರದ ಸಮಾರಂಭವು ಜರುಗುವುದು. ಪೌರ ಸಭಾಧ್ಯಕ್ಷರಾದ ಶ್ರೀ ಎಸ್ ಕೆ ಮರಿಕೆಂಪಯ್ಯನವರು ಅಧ್ಯಕ್ಷತೆ ವಹಿಸುವರು ಶ್ರೀ ಬಿ ವಿ ಸಂಡಿತರು ಆರಂಭೋತ್ಸವವನ್ನು ನೆರವೇರಿಸುವರು

ಜಿಲ್ಲಾ ಬೋರ್ಡ್ ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯು ಇದೇ ತಿಂಗಳು ೧೦ನೇ ತಾ|| ಚಾಮುಂಡಿ ಬೆಟ್ಟದ ಮೇಲೆ ನಡೆಯುವುದು

ಅಷ್ಟೋತ್ತರ ಶತನಾಮಾವಳಿ

ಆಸ್ಥಾನ ಮಹಾ ವಿದ್ವಾನ್ ಶ್ರೀ ಟಿ ವಿ ನರಸಿಂಹಾಚಾರ್ಯರ ೬೫ನೇ ಜನ್ಮದಿನೋತ್ಸವದ ಸಂಬಂಧವಾಗಿ ಅವರ ಪುತ್ರರಾದ ಶ್ರೀ ಎಸ್ ರಂಗನಾಥಾಚಾರ್ಯರು ಶ್ರೀ ವೆಂಕಟೇಶದೇವರ ಅಷ್ಟೋತ್ತರ ಶತನಾಮಾವಳಿಯನ್ನು ಮುದ್ರಿಸಿ ಕಳೆದ ೧ನೇ ತಾ|| ಪ್ರಕಟಿಸಿರುತ್ತಾರೆ

SRI RAGHAVENDRA TUTORIAL INSTITUTE

1661 Channmal Mutt St. Lashkar Mohalla Mysore

COACHING FOR

L S, SSLC, Madras Matric

(Separate Classes for Ladies)

Office Time.- 7 A.M to 3 P M

M RAMA RAO,

B Sc, D Com

ಐಸೆನ್‌ಹೋವರ್ ಸರ್ಕಾರದಲ್ಲಿ ವಿರೋಧ ಪಕ್ಷದ ಸದಸ್ಯ

ಅಮೆರಿಕದ ರಿಪಬ್ಲಿಕ್ ಪಕ್ಷದ ಉಮೇದುವಾರರಾಗಿ ಜಯಗಳಿಸಿದ ಐಸೆನ್‌ಹೋವರರು ತಮ್ಮ ವಿರೋಧ ಪಂಗಡವಾದ ಡೆಮೋಕ್ರಾಟ್ ಪಕ್ಷದೊಡನೆ ಸೌಹಾರ್ದಪೂರಿತವಾಗಿ ವರ್ತಿಸಲು ಉದ್ದೇಶಿಸಿ, ಮಾರ್ಟಿನ್ ಡರ್ಕಿ ಎಂಬ ಆ ಪಕ್ಷದ ಸದಸ್ಯರೊಬ್ಬರನ್ನು ತಮ್ಮ ಮಂತ್ರಿಮಂಡಲದ ಕಾರ್ಮಿಕ ಇಲಾಖಾ ಮಂತ್ರಿಯಾಗಿ ತೆಗೆದುಕೊಂಡಿರುತ್ತಾರೆ ಇದರಿಂದ ರಿಪಬ್ಲಿಕನ್ ಪಕ್ಷದಲ್ಲಿ ಒಡಕುಂಟಾಗಿದೆ

ರೇಡಿಯೋವಿನಲ್ಲಿ ಬೆಂಗಳೂರು ಕ್ರಿಕೆಟ್ ಪಂದ್ಯದ ಪ್ರಸಾರ

ಬೆಂಗಳೂರಿನಲ್ಲಿ ಇದೇ ೫, ೬, ೭ನೇ ತಾ|| ಬೆಳಗ್ಗೆ ೧೧ ರಿಂದ ೧೨ ಮತ್ತು ಮಧ್ಯಾಹ್ನ ೪ ರಿಂದ ೫ರ ವರೆಗೆ ನಡೆಯುವ ಕ್ರಿಕೆಟ್ ಪಂದ್ಯಗಳ ಬಗ್ಗೆ ಪ್ರಸಾರವನ್ನು ಮೈಸೂರು ರೇಡಿಯೋವಿನಲ್ಲಿ ಸಚ್ಚಿದಾನಂದ, ಎಂ ಜಿ ಪಾರ್ಥಸಾರಥಿ ಮತ್ತು ಎಂ ಎಸ್ ಪಾರ್ಥಸಾರಥಿಯವರು ಮಾಡುವರು

ಪ್ರಜಾ ಪಕ್ಷಕ್ಕೆ ಸೇರಿಲ್ಲ

ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ರಾಜಧಾನಿಯ ... ಕಾರ್ಯಕಾರಿ ಸಮಿತಿಯ ಸದಸ್ಯರನ್ನಾಗಿ ತಮ್ಮನ್ನು ತೆಗೆದುಕೊಂಡಿರುವುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವುದೆಂದೂ, ಪೌರಸಭೆಯಲ್ಲಿ ಯಾವ ಪಕ್ಷದ ಸದಸ್ಯರಾಗಿ ತಾವು ಆರಿಸಲ್ಪಟ್ಟಿದ್ದರೋ ಅದರ ಸದಸ್ಯತ್ವವಿಲ್ಲದೆ ಬೇರೆ ಯಾವ ಪಕ್ಷದ ಸದಸ್ಯರಾಗಿರಲೂ ಸಾಧ್ಯವಿಲ್ಲವೆಂದೂ ಶ್ರೀ ಬಿ. ಸುಬ್ಬಣ್ಣನವರು ತಿಳಿಸಿರುತ್ತಾರೆ.

THE MODEL TUTORIAL INSTITUTE,

D. Banumiah's School Buildings MYSORE

Coaching Classes for the benefit of Candidates appearing for the S.S L C Public Examination of March 1953 will start working From 8th Dec. 52 Admissions received between 11 A M & 5 P M on working days

B. Seshagiri Rao,
Organiser.

ನಿಜಾಮರ ಮಗನ ಪುನರ್ವಿವಾಹ

ಬರುವ ಶನಿವಾರ ನಿಜಾಮರ ಎರಡನೇ ಮಗ ಮೊಜಂ ಝಾರವರು ಅರಮನೆಯಲ್ಲಿ ನೌಕರಿಯಲ್ಲಿರುವ ಅಧಿಕಾರಿಯೊಬ್ಬನ ಮಗಳನ್ನು ವಿವಾಹ ಮಾಡಿಕೊಳ್ಳಲಿರುವರು ಅವರು ಈಗಾಗಲೇ ತಮ್ಮ ಮೊದಲಿನ ಹೆಂಡತಿ ನಿಲೋಫರರೊಡನೆ ವಿಚ್ಛೇದನ ಮಾಡಿಕೊಂಡು, ಆಕೆಗೆ ೧೦ ಲಕ್ಷ ರೂ ಪರಿಹಾರ ಕೊಟ್ಟಿರುತ್ತಾರೆ.

ಭೂದಾನ ಯಜ್ಞಕ್ಕೆ ಮೈಸೂರು ಮಹಿಳೆಯ ದಾನ

ಆಚಾರ್ಯ ವಿನೋಬಾ ಭಾವೆಯವರ ಭೂ ದಾನ ಯಜ್ಞ ಸಮಿತಿ ಸದಸ್ಯರಾದ ಶ್ರೀಮತಿ ಸರಸ್ವತಿ ನಟರಾಜನ್‌ರವರು ತಮ್ಮ ೧೬ ಎಕರೆ ಖುಷ್ಕಿ ಜಮೀನನ್ನು ಪ್ರಪ್ರಥಮವಾಗಿ ಕೊಟ್ಟಿರುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಎಂ ಎಸ್ ಸುಬ್ರಹ್ಮಣ್ಯಂ, ಪಿಟೀಲು ಮಧ್ಯಾಹ್ನ ೧ ೪೦ ದಿಲ್ಲಿ ... ನಿಮ್ಮ ನೆಚ್ಚಿನ ಕಲಾವಿದರು ... ಸಂಗೀತ ... ಗಾನ ವಿಹಾರ ... ಹಿಂದೀ ಗೀತೆ ... ಎಸ್ ಸುಬ್ರಹ್ಮಣ್ಯಂ, ಪಿಟೀ... ... ನವಾಣಿ.

... ಕೃಷ್ಣ-ರಂಬಾದಿನ ಪೂ ಕಂದಾಯದ ... ಬಾಕಿ ನಿಂತಿರುವುದು ... ಪ್ರಕಟವಾಗಿದೆ

SHARADAVILAS COLLEGE, MYSORE

Tutorial classes for the Inter examination of March 53 in languages & P C M have been started Particulars may be obtained from the office during working hours

Honorary Secretary

ಸಚಿವರು ಮತ್ತು ಅಧಿಕಾರಿಗಳ ಆಸ್ತಿ ಬಗ್ಗೆ ಕಾನೂನು

ಸಂಸ್ಥಾನಗಳು ಮತ್ತು ಕೇಂದ್ರ ಸರ್ಕಾರಗಳ ಸಚಿವರು ಮತ್ತು ಉನ್ನತಾಧಿಕಾರಿಗಳ ಆಸ್ತಿಪಾಸ್ತಿಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ಪ್ರತಿ ವರ್ಷವೂ ವರದಿ ಮಾಡಬೇಕೆಂಬ ಕಾನೂನನ್ನು ಸಧ್ಯದಲ್ಲೇ ಕೇಂದ್ರ ಸರ್ಕಾರದವರು ಜಾರಿಗೆ ತರಲಿರುವರೆಂದೂ, ಅಂತಹ ಆಸ್ತಿಪಾಸ್ತಿಗಳ ಪಟ್ಟಿಯನ್ನು ರಹಸ್ಯವಾಗಿಡಲಾಗುವುದೆಂದೂ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ.ಇಂದ	ರೂ ಗೆ
ನೆಲಗಡಲೆ	೧೨ ೦ ೦	೨೦-೦-೦
ಎಳ್ಳು	೩೯ ೦ ೦	
ಹರಳು ಬೀಜ	೩೮-೦-೦	೪೫ ೧೪ ೦
ಹುರುಳಿ	೪೩ ೧೨ ೦	೪೭ ೧ ೦
ಹೆಸರು	೪೮ ೪ ೦	೫೪ ೧೦ ೦
ಉದ್ದು	೩೭ ೨ ೦	
ಹಲಸಂದೆ	೫೦ ೨ ೦	೩೭ ೬-೦
ಹುಚ್ಚೆಳ್ಳು	೪೫ ೦ ೦	೫೦ ೧೨-೦
ಅವರೆ	೫೮-೦-೦	೩೫ ೦ ೦
ಹೊಂಗೆಬೀಜ	೧೫ ೧೨ ೦	
ಮೆಣಸಿನಕಾಯಿ ಮಣ ೧ಕ್ಕೆ	೧೨ ೦ ೦	೧೬ ೧೨
ಹುಣಸೇಹಣ್ಣು	೬ ೫ ೦	
ಬೆಲ್ಲ	೩ ೮ ೦	
ಸೀಗೇಕಾಯಿ	೩-೧೦-೦	

ತೆಂಗಿನಕಾಯಿ ೧,೦೦೦ಕ್ಕೆ [illegible]

SRI GAYATHRI TALKIES

Daily 2 Shows

From 5-12-52 For 2 Days

20th Century's

FIXED BAYONETS

With - Richard Basehart

- NEXT CHANGE -

TARZAN'S SAVAGE FURY

Edited, Printed and Published by A R Nagarajan at Sadhvi Press, D Subbiah Road, Mysore

ಒಲಂಪಿಯಾ

4-12-52 ರಿಂದ ಪ್ರಾರಂಭ ಪ್ರತಿದಿನ 3 ಆಟಗಳು

ಶ್ರೇಷ್ಠ ನಿರ್ದೇಶಕರಾದ ಶ್ರೀ ವಿಜಯಭಟ್‌ರವರ ಉನ್ನತ ಮಟ್ಟದ ಸಂಗೀತಮಯ ಹಿಂದಿ ಚಿತ್ರ

ಸಂಗೀತದ ಮಹಿಮೆಯನ್ನು ಪ್ರತಿಪಾದಿಸುವ ಮನೋರಂಜನೀಯ ಅಪೂರ್ವ ಕಥೆಯನ್ನೊಳಗೊಂಡು, ಪ್ರೇಕ್ಷಕರನ್ನು ಮುಗ್ಧಗೊಳಿಸುವ ಅತ್ಯುತ್ಕೃಷ್ಟ ಕಲಾಕೃತಿ

ಬೈಜೂಬಾವ್ರ

ಸಂಗೀತ ನೌಷದ್

ತಾರೆಯರು ಭಾರತ್ ಭೂಷಣ್, ಮೀನಾ ಕುಮಾರಿ, ಸುರೇಂದ್ರ, ಕುಲದೀಪ್ ಕೌರ್

ಬೆಳಗಿನ ಪ್ರದರ್ಶನ ಜೆಮಿನಿಯವರ ಮಿಸ್ಟರ್ ಸಂಪತ್

ಪ್ರಭುದೇವಾ

ಟಾಕೀಸ್

5—12—52 ರಿಂದ

ಅಮೋಘ 2 ನೇ ವಾರ

ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ

ತಾರೆಯರು:- ಲಕ್ಷ್ಮೀರಾಜ್ಯಂ ಎನ್.ಟಿ ರಾಮರಾವ್ ರೇಲಂಗಿ, ಶಾಂತಕುಮಾರಿ

ದಾಸಿ

ಟೆಲಿಫೋನ್ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೫-೧೨-೧೯೫೨ [ಸಂಚಿಕೆ ೧೦೬

ವಿಶ್ವ ಸಂಸ್ಥೆ ಸಮಿತಿಗೆ – ಫ್ರಾನ್ಸಿನ ಬಹಿಷ್ಕಾರ –

ಸಾಬೂನು ಕಾರ್ಖಾನೆ ಬಳಿ ಕಾರ್ಮಿಕರ ಸತ್ಯಾಗ್ರಹ

ಮೈಸೂರು ೫

ರಾಜಧಾನಿಯಲ್ಲಿರುವ ಸಾಬೂನು ... ಕೆಲಸಗಾರರ ಸಂಘದ ... ಗಿರುವ ... ಚಾ ... ನೌಕರರುಗಳಿಗೆ ಅವರ ... ತೊಂದರೆ ಮತ್ತು ... ಕುಳಗಳನ್ನು ಕೊಡುತ್ತಿರುವರೆಂ ... ಮತ್ತು ಅವರನ್ನು ವಜಾ ಮಾಡಿ ... ಈ ಬಗ್ಗೆ ಕಾರ್ಮಿಕರ ... ಕಮೀಷನರು ಎಷ್ಟು ಪ್ರಯ ... ಸಫಲವಾಗಲಿಲ್ಲವೆಂದೂ, ... ದ ಮಾಲೀಕರಿಗೆ ಹೃದಯ ಪರಿ ... ಸಯಾಗುವಂತೆ ಮಾಡಲು ಕಾರ್ಮಿ ... ನಾಳೆ ಬೆಳಿಗ್ಗೆ ... ಗಂಟೆಯಿಂದ ... ನೆಯ ಮುಂದೆ ಶಾಂತಿಯುತ ... ಸತ್ಯಾಗ್ರಹವನ್ನು ನಡೆಸುವುದಾಗಿ ... ರಿಸಿರುವರೆಂದೂ ತಿಳಿಸಲಾಗಿದೆ.

ಜಿಲ್ಲಾ ವಿದ್ಯಾಧಿಕಾರಿಗಳಾಗಿ ವರ್ಗ

ರಾಜಧಾನಿಯ ... ಗಳ್ಸ್ ... ಉಪಾಧ್ಯಾಯಿನಿಯರುಗಳ ಶಿಕ್ಷಣ ಕಾಲೇಜಿನ ಸೂಪರಿಂಟೆಂಡೆಂಟರಾದ ... ಅಹಮದ್‌ರವರನ್ನು ... ಜಿಲ್ಲಾ ವಿದ್ಯಾಧಿಕಾರಿಗಳಾ ... ಶಾಂತರಾಜಪುರದ ಪ್ರೌಢಶಾ ... ಹೆಡ್ಮಾಸ್ಟರ್ ಜ|| ... ರವರನ್ನು ಚಿತ್ರದುರ್ಗ ಜಿಲ್ಲಾ ವಿದ್ಯಾಧಿ ... ಗಳನ್ನಾಗಿಯೂ ವರ್ಗಾಯಿಸಲಾಗಿದೆ.

ಆಹಾರ ಸಂಶೋಧನಾಲಯಕ್ಕೆ ಮದ್ರಾಸು ಕಮೀಷನರರ ಭೇಟಿ

ಮದ್ರಾಸಿನ ... ಪರಿಹಾರ ಕ ... ಶ್ರೀ ಪಿ ಎಸ್ ... ಯವರು ನೆನ್ನೆ ಇಲ್ಲಿನ ಕೇಂದ್ರ ... ಸಂಶೋಧನಾಲಯಕ್ಕೆ ಭೇಟಿ ... ಸಿಲಯದವರು ಚಿತ್ರದುರ್ಗದ ... ಅಗ್ಗವಾದ ಆಹಾರವ ... ಜನರಿಗೆ ಒದಗಿಸುತ್ತಿರುವ ಕಾರ್ಯ ... ಪ್ರಶಂಸಿಸಿದರು. ಮದ್ರಾಸಿನ ... ಪ್ರದೇಶಗಳಿಗೂ ಈ ... ಜನೆಯನ್ನು ವಿಸ್ತರಿಸುವಂತೆ ... ಯವರನ್ನು ಕೋರಿರುವುದಾ ... ಗಿದೆ.

ಸಹಾಯಾರ್ಥ ಚಿತ್ರಪ್ರದರ್ಶನ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿ ... ಶ್ರೀ ಸಮಾಜದವರು ... ನಡೆಸುತ್ತಿರುವ ಮಕ್ಕಳ ಉಚಿತ ಶಾಲೆ ... ನಿಧಿಯ ಸಹಾಯಾರ್ಥವಾಗಿ ನಾ ... ಬೆಳಿಗ್ಗೆ ೧೧ ಗಂಟೆಗೆ ನಗರದ ... ಎಕ್ಸ್‌ಲ್ಸಿಯರ್ ಹೌಸಿನಲ್ಲಿ ಜನೋವಾ ... ಎಂಬ ಚಿತ್ರದ ಪ್ರದರ್ಶನವು ನಡೆಯಲಿದೆ.

ಧನ್ವಂತರಿ ಮತ್ತು ಅಬು ಅಲಿ ಸೀನಾ ಸಪ್ತಾಹ

... ಸರ್ಕಾರಿ ... ಕಾಲೇಜಿನ ... ಸಪ್ತಾಹದ ಅಂಗವಾಗಿ ... ಸಂಜೆ ... ಗಂಟೆಗೆ ಡಿ|| ... ವಿ. ಶ್ರೀ ... ಪ್ರದರ್ಶನವೂ. ನಾಳೆ ಸಂ ... ಗಂಟೆಗೆ ಡಾ|| ಎಸ್ ಲಕ್ಷ್ಮೀನಾ ... ರವರಿಂದ ವಿಷಮ ಜ್ವರ ಎಂಬ ... ಉಪನ್ಯಾಸವೂ ನಡೆಯು ... ಸಕಲರಿಗೂ ಸ್ವಾಗತವಿದೆ.

ಟೆಲಿಫೋನ್ ದರವು ಮಿತಿ ಮೀರಿ ಏರಲಿದೆ

ಮೈಸೂರು ೫

ಮೈಸೂರು ಮತ್ತು ಬೆಂಗಳೂರುಗಳಲ್ಲಿ ಈಗ ಜಾರಿಯಲ್ಲಿರುವ ಟೆಲಿಫೋನ್ ಬಾಡಿಗೆ ದರವನ್ನು ಬರುವ ತಿಂಗಳಿಂದ ಮಾಹೆಯಾ ... ರೂ. ವಿಪರೀತ ಹೆಚ್ಚಿಸಲಾಗುವುದೆಂ ... ಪ್ರಕಟಿಸಲಾಗಿದೆ. ಈಗ ... ರೂ. ... ಗಂತೆ ವಸೂಲು ಮಾಡಲಾಗುತ್ತಿದೆ. ಇದ ... ಮೈಲಿಗಿಂತಲೂ ಹೆಚ್ಚು ... ಪ್ರದೇಶಗಳಿಗೆ ಪ್ರತಿ ಅರ್ಧ ಮೈಲಿಗೂ ... ರೂ. ... ತೆ ಹೆಚ್ಚು ಬಾಡಿಗೆ ವಿಧಿಸಲಾ ... ಗುವುದು.

ಟೆಲಿಫೋನ್ ಇಲಾಖೆಯು ಮೈಸೂರು ಸಂಸ್ಥಾನದಿಂದ ಭಾರತ ಸರ್ಕಾರಕ್ಕೆ ಸೇರಿದ ಮೇಲೆ ದರಗಳನ್ನು ಹೆಚ್ಚಿಸುತ್ತಿರುವುದು ... ಎರಡನೆಯ ... ಮೊದಲ ... ಎಷ್ಟು ... ಹೆಚ್ಚಿಸಲಾ ... ಪ್ರತಿಯೊಂದು ... ಗೆ ... ಬೇಕೆಂಬ ಸೂಚನೆಯಿತ್ತು. ಈಗ ... ಗಿ ... ಗೆ ಏರಿಸುವುದಾಗಿ ಬಂ ... ದಿರುವ ಸೂಚನೆಯಿಂದ ಅನೇಕ ಜನ ಟೆಲಿಫೋನ್ ಉಪಯೋಗಿಸುವವರಿಗೆ ಅಸಮಾಧಾನವುಂಟಾಗಿದೆ ಮತ್ತು ಹಲವರು ತಮ್ಮ ಟೆಲಿಫೋನನ್ನೇ ಬೇಡವೆಂದೂ ಹಿಂತಿರುಗಿಸಿರುವುದಾಗಿಯೂ ಗೊತ್ತಾಗಿದೆ. ಹೊಸದಾಗಿ ಟೆಲಿಫೋನ್ ಪಡೆಯಬೇಕೆಂದಿರುವವರಲ್ಲಿಯೂ ಕೆಲ ಹಲವರು ಸದ್ಯಕ್ಕೆ ಅದು ತಮಗೆ ಬೇಡವೆಂದು ಹೇಳುತ್ತಿರುವರು. ಮೈಸೂರು, ಬೆಂಗಳೂರುಗಳಂತಹ ಸಣ್ಣ ಊರುಗಳಲ್ಲಿ ಟೆಲಿಫೋನ್ ದರಗಳನ್ನು ಮಿತಿಮೀರಿ ಹೆಚ್ಚಿಸುವುದರಿಂದ ಪ್ರಜೆಗಳಿಗೆ ಬಹಳ ತೊಂದರೆಯಾಗುವುದಲ್ಲದೆ ಟೆಲಿಫೋನಿನ ಉಪಯೋಗವೂ ಕಡಿಮೆಯಾಗಿ ಇಲಾಖೆಗೆ ನಷ್ಟವೇ ಸಂಭವಿಸುವುದೆಂದೂ, ಸರ್ಕಾರವು ವಿಧಿಸಲಾಗಿರುವ ಈ ಹೊಸ ದರಗಳನ್ನು ಜಾರಿಗೆ ತರದೆ, ಈಗಿರುವ ದರಗಳನ್ನೇ ಕಡಿಮೆ ಮಾಡುವುದೂ ಹಿತಕರವಾಗಿದೆಯೆಂದು ಅನೇಕ ಜನ ಟೆಲಿಫೋನ್ ಉಪಯೋಗಿಸುವವರು ಅಭಿಪ್ರಾಯಪಟ್ಟಿರುತ್ತಾರೆ.

ಕಳುವಿನ ಪತ್ತೆಗಾಗಿ ಕಾದ ಎಣ್ಣೆಯಲ್ಲಿ ಕೈ ಅದ್ದಿಸಿದರು

ಬೈಸಿಕಲ್ ಒಂದರ ಕಳ್ಳತನವನ್ನು ಪತ್ತೆಹಚ್ಚಲು ಅಹಮದಾಬಾದಿನ ಮಂತ್ರಗಾರನೊಬ್ಬನು ಏಳು ಜನ ಬಾಲಕರ ಕೈಗಳನ್ನು ಕಾದ ಎಣ್ಣೆಯಲ್ಲಿ ಅದ್ದಿಸಿದ ಪರಿಣಾಮವಾಗಿ ಕೈಗಳು ಬೆಂದುಹೋಗಿ ಬಾಲಕರೆಲ್ಲರೂ ಅವರನ್ನು ಆಸ್ಪತ್ರೆಗೆ ಸೇರಿಸಬೇಕಾಯಿತೆಂದೂ, ಮಾಂತ್ರಿಕನು ಪರಾರಿಯಾಗಿರುವನೆಂದೂ ವರದಿಯಾಗಿದೆ.

ನಿಜಾಮರ ಅರಮನೆ ಬಳಿ ಊಳಿಗದವರ ಪ್ರದರ್ಶನ

ಹೈದರಾಬಾದಿನ ರಾಜಪ್ರಮುಖರಾದ ನಿಜಾಮರ ಅರಮನೆಯಲ್ಲಿ ಊಳಿಗ ಕೈಂಕರ್ಯದವರು ತಮ್ಮ ಕುಂದುಕೊರತೆಗಳ ನಿವಾರಣೆಗಾಗಿ ಇದೇ ತಿಂಗಳು ೧೧ನೇ ತಾರೀಖು ಅರಮನೆ ಮುಂದೆ ಪ್ರದರ್ಶನ ನಡೆಸಲು ನಿರ್ಧರಿಸಿರುತ್ತಾರೆ. ೧೫೦೦ ಮಂದಿ ನೌಕರರ ಪೈಕಿ ೫೦೦ ಜನರು ಸಂಘವೊಂದನ್ನು ರಚಿಸಿಕೊಂಡಿದ್ದು ... ರು ಪ್ರಪಂಚದಲ್ಲೇ ಅತ್ಯಂತ ಶ್ರೀಮಂತ ... ರಿಂದ ... ಸಂಘ ... ದರು ... ಕಡಿಮೆ ಸಂಬಳವು ಬರುತ್ತಿದೆ ಎಂದೂ ಸಂಘದವರು ಹೇಳುತ್ತಾರೆ.

ಮಂಡ್ಯ ಜಿಲ್ಲಾ ಬೋರ್ಡು ಅಧ್ಯಕ್ಷರು

ಮಂಡ್ಯ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಶ್ರೀ ಜಿ. ಎಸ್ ಬೊಮ್ಮೇಗೌಡರು ಚುನಾಯಿತರಾಗಿರುತ್ತಾರೆ. ಇವರು ಕಾಂಗ್ರೆಸ್ ಪಕ್ಷದ ಉಮೇದುವಾರರು.

ಆಕಾಶದಲ್ಲಿ ನೀಲಿಯ ಬೆಳಕು

ನೆನ್ನೆ ಸಂಜೆ ಸುಮಾರು ೬-೧೦ ಗಂಟೆ ಸಮಯದಲ್ಲಿ ನಗರದ ಉತ್ತರ ದಿಕ್ಕಿನ ಕಡೆ ಆಕಾಶದಲ್ಲಿ ಪ್ರಕಾಶಮಾನವಾಗಿ ಮಿನುಗುವ ನಕ್ಷತ್ರಕ್ಕಿಂತಲೂ ಆಕಾರದಲ್ಲಿ ದೊಡ್ಡದಾದ, ನೀಲ ವರ್ಣದ ಬೆಳಕು ಕಾಣಿಸಿಕೊಂಡು ಸುಮಾರು ... ಮಾರು ದೂರ ಕಿಡಿಯೊಡನೆ ಹಾರಿ ಮರೆಯಾಯಿತು ... ವೇಗದಲ್ಲಿ ಅದೃಶ್ಯವಾದ ಆಶ್ಚರ್ಯ ದೃಶ್ಯವೊಂದನ್ನು ತಾವು ನೋಡಿದುದಾಗಿ ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಯೊಬ್ಬರು ತಿಳಿಸಿರುತ್ತಾರೆ.

ಮೈಸೂರು ಸಂಸ್ಥಾನದ ಹಿಂದೂ ಮಹಾಸಭಾಧಿವೇಶನ

ಶಿವಮೊಗ್ಗಾ ಜಿಲ್ಲೆಯ ಸಾಗರದಲ್ಲಿ ಬರುವ ಫೆಬ್ರವರಿಯ ಮೊದಲನೇ ವಾರ ಮೈಸೂರು ಸಂಸ್ಥಾನದ ಹಿಂದೂ ಮಹಾಸಭೆಯ ... ನೇ ಅಧಿವೇಶನವು ಸೇರುವುದು. ಅದರ ಅಧ್ಯಕ್ಷತೆಯನ್ನು ಮಹಾಸಭೆಯ ನೂತನ ಅಧ್ಯಕ್ಷ ಎನ್ ಸಿ ಚಾಟರ್ಜಿಯವರು ವಹಿಸುವರು ... ಸ್ವಾಗತ ಸಮಿತಿಯೊಂದನ್ನು ಶ್ರೀ ... ಬಸಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಡಾ|| ಕೆ ವಾಸುದೇವರಾವ್ ನೇತೃತ್ವದಲ್ಲಿ ಅದರ ಕಾರ್ಯಸಮಿತಿಯನ್ನು ರಚಿಸಲಾಗಿದೆ.

ಪಾಕಿಸ್ತಾನ ಮತ್ತು ಯೂನಿವರ್ಸಿಟಿ ಕ್ರಿಕೆಟ್ ಪಂದ್ಯ

೫ ವಿಕೆಟ್ಟಿಗೆ ೧೮೪ ರನ್ನುಗಳು

ಸ್ವ. ಸು ಫೋ] ಬೆಂಗಳೂರು ೫

ಈ ದಿನ ಭಾರತದ ವಿಶ್ವವಿದ್ಯಾಲಯಗಳ ಟೀಮಿಗೂ ಪಾಕಿಸ್ತಾನದ ಪ್ರವಾಸಿಗ ಟೀಮಿಗೂ ಇಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ, ವಿಶ್ವ ವಿದ್ಯಾಲಯದವರು ಮೊದಲು ಆಟವನ್ನು ಪ್ರಾರಂಭಿಸಿ, ಮಧ್ಯಾಹ್ನ ೩-೧೫ ಗಂಟೆಗೆ ೫ ವಿಕೆಟ್ಟುಗಳಿಗೆ ೧೮೪ ರನ್ನುಗಳನ್ನು ಮಾಡಿದ್ದರು.

ಕ್ಯಾಪ್ಟನ್ ಗೋಪಿನಾಥ್‌ರವರು ೩೮ ರನ್ನುಗಳಿಗೆ ಔಟಾದರು. ಎ. ಜಿ ಕಂಟ್ರಾಕ್ಟರ್-೩೯ ಉದಯ್ ಚಿನ್ನಾಭಾಯ್ ೨೪, ಎ ಎಸ್ ಕಂಠಾನೆ-೩೦, ಹೆಚ್ ಟಿ. ದಾನಿ ೨೫ ರನ್ನು ಮಾಡಿದರು.

ಪಾಕಿಸ್ತಾನದವರೇ ಟಾಸ್ ಗೆದ್ದರೂ, ಫೀಲ್ಡ್ ಮಾಡಲು ಬಯಸಿದರು. ಆದಕ್ಕೆ ಮುಂಚೆ, ಮುಖ್ಯ ಮಂತ್ರಿಯವರಿಗೆ ಆಟಗಾರರೆಲ್ಲರ ಪರಿಚಯ ಮಾಡಿಸಲಾಯಿತು. ೧೦ ಸಾವಿರ ಮಂದಿ ಪ್ರೇಕ್ಷಕರು ಇದ್ದರು.

ವಿಶ್ವವಿದ್ಯಾಲಯಗಳ ಕ್ರಿಕೆಟ್ ಟೀಮು

ಪಾಕಿಸ್ತಾನದವರ ಮೇಲೆ ಈ ದಿನ ಆಡಿದ ಕ್ರಿಕೆಟ್ ಪಂದ್ಯದಲ್ಲಿ ವಿಶ್ವವಿದ್ಯಾಲಯಗಳ ಟೀಮಿನಲ್ಲಿ ಈ ಕೆಳಗೆ ಕಂಡವರು ಇದ್ದರು: ... ಉದಯ್ ಚಿನ್ನಾಭಾಯ್, ಎಸ್ ಎಸ್ ಕಂಠಾನೆ, ಎ ಜಿ ಕಂಟ್ರಾಕ್ಟರ್, ಹೆಚ್ ಟಿ ದಾನಿ, ಸಿ. ಡಿ. ಗೋಪಿನಾಥ್, ಆರ್ ... ಪಿ ಎಸ್ ವಿಶ್ವನಾಥ್ (ಮೈಸೂರು), ... ಅಬ್ರಹಂ, ಜೆ ಎಂ ಘೋರ್ಪಡೆ, ಟಿ ... ಕೃಷ್ಣ (ಮೈಸೂರು), ಜಿ ಆರ್ ಸುಂದರಂ.

○ ಶ್ರೀ ಎನ್ ಡಿ ಎಂ ಅಪ್ಪನವರನ್ನು ಡೆಪ್ಯೂಟಿ ಚೀಫ್ ಎಲೆಕ್ಟ್ರಿಕಲ್ ಇಂಜನಿಯರರನ್ನಾಗಿ ನೇಮಿಸಲಾಗಿದೆ.

ವಿಶ್ವ ಸಂಸ್ಥೆ ಸಮಿತಿಗೆ ಫ್ರಾನ್ಸಿನ ಬಹಿಷ್ಕಾರ

ಉತ್ತರ ಆಫ್ರಿಕದಲ್ಲಿರುವ ಟ್ಯೂನಿಸಿಯಾ ಪ್ರಶ್ನೆಯ ಇತ್ಯರ್ಥಕ್ಕಾಗಿ ಅರಬ್ ಮತ್ತು ಏಷ್ಯಾಖಂಡದ ದೇಶಗಳ ನಿರ್ಣಯವನ್ನು ನೆನ್ನೆ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ಚರ್ಚೆಗೆ ತೆಗೆದುಕೊಂಡಾಗ, ಫ್ರಾನ್ಸು ಸಮಿತಿಗೆ ಬಹಿಷ್ಕಾರ ಹಾಕಿತು. ಫ್ರೆಂಚ್ ಪ್ರತಿನಿಧಿಗಳ ಕುರ್ಚಿಗಳು ಖಾಲಿಯಾಗಿದ್ದುವು.

ಭಾರತದ ನಿರ್ಣಯಕ್ಕೆ ವಿಶ್ವಸಂಸ್ಥೆಯ ಅಂಗೀಕಾರ

ವಿಶ್ವಸಂಸ್ಥೆಯ ಸಾಧಾರಣಾ ಸಭೆಯು ಹಿಂದೆಂದೂ ಇಲ್ಲದಷ್ಟು ಅತ್ಯಂತ ಬಹುಮತದಿಂದ ಕೊರಿಯಾ ಶಾಂತಿ ಬಗ್ಗೆ ಭಾರತವು ಮಂಡಿಸಿದ ತಿದ್ದುಪಡಿಯಾದ ನಿರ್ಣಯವನ್ನು ನೆನ್ನೆ ಅಂಗೀಕರಿಸಿತು. ೫೪ ರಾಷ್ಟ್ರಗಳು ನಿರ್ಣಯದ ಪರವಾಗಿಯೂ, ರಷ್ಯ, ಮತ್ತು ಅದರ ಹಿಂಬಾಲಕ ೪ ರಾಷ್ಟ್ರಗಳು ವಿರೋಧವಾಗಿಯೂ ಓಟು ಮಾಡಿದುವು.

○ ತಿರುವಾಂಕೂರು ರಾಜ ಮನೆತನದವರಿಗೆ ದೊರೆಯುತ್ತಿರುವ ೩,೫೪,೦೦೦ ರೂ. ಗಳ ಧನವನ್ನು ಈ ವರ್ಷ ೩,೬೫,೦೦೦ ರೂ. ಗಳಿಗೆ ಹೆಚ್ಚಿಸಲಾಗಿದೆಯೆಂದು ವರದಿಯಾಗಿದೆ.

ವಿನಾಶ ಕಾರ್ಯಕ್ಕಾಗಿ ರಷ್ಯದಲ್ಲಿ ಐವರಿಗೆ ಮರಣ ದಂಡನೆ

ವ್ಯಾಪಾರದಲ್ಲಿ ವಿನಾಶ ಕೃತ್ಯ ನಡೆಸಿದರೆಂದು ೫ ಜನ ರಷ್ಯನರನ್ನು ಗುಂಡಿನಿಂದ ಹೊಡೆದು ಕೊಲ್ಲಬೇಕೆಂದು ಕೀವ್ ನಗರದ ನ್ಯಾಯಾಸ್ಥಾನವು ತೀರ್ಪಿತ್ತಿದೆ

ನಾಲ್ಕು ಕಾಲಿನ ಕೋಳಿ

ಆಂಧ್ರ ದೇಶದ ನವರಂಗಪುರ ಎಂಬ ಗ್ರಾಮದಲ್ಲಿ ಒಂದು ಕೋಳಿಗೆ ನಾಲ್ಕು ಕಾಲುಗಳು ಇರುವುವೆಂದೂ, ಈ ವೈಚಿತ್ರ್ಯವನ್ನು ನೋಡಲು ಅನೇಕರು ಬಂದುಹೋಗುತ್ತಿರುವರೆಂದೂ ಗೊತ್ತಾಗಿದೆ

ಅಂತರ ಕರ್ನಾಟಕ ಚರ್ಚಾ ಸ್ಪರ್ಧೆ

ನಂಜನಗೂಡಿನ ಪ್ರೌಢಶಾಲಾ ಆವರಣದಲ್ಲಿ ಬರುವ ೭ ನೇ ತಾ|| ಭಾನುವಾರ ಸಂಜೆ ೫|| ಗಂಟೆಗೆ ಅಖಿಲ ಕರ್ನಾಟಕದ ಅಂತರ ಕರ್ನಾಟಕ ಸಂಘಗಳ ಚರ್ಚಾ ಸ್ಪರ್ಧೆಯನ್ನು ಅಲ್ಲಿನ ಕರ್ನಾಟಕ ಸಂಘದವರು ಏರ್ಪಡಿಸಿರುತ್ತಾರೆ. ಮೈಸೂರು ಸಬ್ ಜಡ್ಜರಾದ ಶ್ರೀ ಟಿ ಗುರುನಂಜಯ್ಯನವರು ಅಧ್ಯಕ್ಷತೆ ವಹಿಸುವರು ಶ್ರೀಗಳಾದ ಕೆ ಕೃಷ್ಣಯ್ಯಂಗಾರ್, ಎಂ. ಪಿ ನಾಗರಾಜ ರಾವ್ ಮತ್ತು ಆರ್ ಪಿ ದೇವಣ್ಣನವರುಗಳು, ತೀರ್ಪುಗಾರರಾಗಿರುವರು

ವಿವಾಹ ಮಹೋತ್ಸವ

ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ ಹೆಚ್ ಯೋಗಾನರಸಿಂಹ ರವರು ತಮ್ಮ ಕುಮಾರಿ ಶ್ರೀಮತಿ ಲಕ್ಷ್ಮೀದೇವಿ ರವರನ್ನು ಭದ್ರಾವತಿ ಕಬ್ಬಿಣದ ಕಾರ್ಖಾನೆಯ ನಿವೃತ್ತ ಚೀಫ್ ಕ್ಯಾಷಿಯರ್ ಶ್ರೀ ಹೆಚ್ ಸುಬ್ಬರಾಯರ ಮಕ್ಕಳು ಶ್ರೀ ಹೆಚ್ ರಾಜಣ್ಣನವರಿಗೆ ಕೊಟ್ಟು ಮೊನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು ಸಂಜೆ ಸ್ವಾಗತ ಸಮಾರಂಭವೂ ಏರ್ಪಾಡಾಗಿದ್ದಿತು

ಈಜಿಪ್ಟಿಗೆ ಹೊಸ ರಾಜ್ಯಾಂಗ

ಈಜಿಪ್ಟಿನಲ್ಲಿ ಜಾರಿಗೆ ತರಲು ಹೊಸ ರಾಜ್ಯಾಂಗವನ್ನು ರಚಿಸುವಂತೆ ಅಲ್ಲಿನ ಸರ್ಕಾರದವರ ಸ್ಪೆಷಲ್ ಕಮಿಟಿಯೊಂದನ್ನು ನೇಮಿಸುತ್ತಾರೆ

ವಯಸ್ಕರ ಸಮಿತಿಯ ಚಲನ ಚಿತ್ರ ಪ್ರದರ್ಶನ

ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯವರು ಕಳೆದ ತಿಂಗಳು ೨೭ ನೇ ತಾ|| ಸಾಲಿಗ್ರಾಮದ ಹೋಬಳಿ ಅಂಕನಹಳ್ಳಿಯಲ್ಲಿ ಗೀತಾಜಯಂತಿ, ಸಮಾರಂಭವನ್ನು, ೨೮ ನೇ ತಾ|| ಕರ್ಪೂರವಳ್ಳಿ, ೨೯ ನೇ ತಾ|| ಸಾಲಿಗ್ರಾಮದ ಹರಿಜನಕೇರಿ, ಮತ್ತು ೩೦ ನೇ ತಾ|| ಕೃಷ್ಣರಾಜನಗರಗಳಲ್ಲಿ ವಯಸ್ಕರುಗಳಿಗಾಗಿ ಚಲನಚಿತ್ರ ಪ್ರದರ್ಶನಗಳನ್ನೂ ಏರ್ಪಡಿಸಿದ್ದರು ವಯಸ್ಕರ ಶಿಕ್ಷಣ ಸಮಿತಿ ಅಧಿಕಾರಿಗಳಾದ ಶ್ರೀ ಎಸ್ ವಿ ರಾಮರಾಜ ಅಯ್ಯಂಗಾರ್ ಮತ್ತು ಬಿ ಎ ಸತ್ಯನಾರಾಯಣರವರು ಭಾಷಣಗಳನ್ನು ಮಾಡಿದರು

SHARADA TUTORIAL INSTITUTE,

[illegible]

Coaching classes for the benefit of Candidates appearing for the S S L C Examination of March 53 will start working from 10th Dec 52

Admissions received between 11 a m & 4 30 p m on all working days

H V Rajagopala Iyengar, Organiser

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ಚಿತ್ರ ಜಗತ್ ಮಧ್ಯಾಹ್ನ ೧ ೪೦ ಗಿಟಾರ್ ಬಾಲ ಜಗತ್, ಮಕ್ಕಳ ಕಾರ್ಯಕ್ರಮ ಸಂಜೆ ೫ ೪೦ ಮತ್ತು ೭ ಸಂಗೀತ ೬ ೧೦ ನಾದಶ್ರೀ ೭ ೩೦ ಮಹಿಳಾ ವಿಹಾರ, ಮಹಿಳೆಯರ ಕಾರ್ಯಕ್ರಮ ೮ ಎಸ್ ಶ್ರೀನಿವಾಸ ರಂಗಾಚಾರ್ ಕಥಾ ಕಾಲಕ್ಷೇಪ ೯ ೧೫ ಕೇಶವಧರರು—ಹೆಚ್ ವೀರಣ್ಣನವರೊಡನೆ ಭೇಟಿ ೯ ೪೦ ಜೂತಿಕಾರಾಯ್, ರಿಕಾರ್ಡ್ ಸಂಗೀತ

ಮೈಸೂರು ಪೇಟೆ ಧಾರಣೆ

ಪಲ್ಲ ಒಕ್ಕ	ರೂ ಇಂದ	ರೂ ಗೆ
ನೆಲಗಡಲೆ	೯ ೨ ೦	೨೪-೪-೦
ಎಳ್ಳು	೬೫ ೦ ೦	
ಹರಳು ಬೀಜ	೩೯-೪-೦	೪೬ ೦ ೦
ಹುರುಳಿ	೪೭ ೧೨ ೦	೫೦ ೬ ೦
ಹೆಸರು	೪೭ ೪ ೦	೫೩ ೦ ೦
ಉದ್ದು	೬೭ ೨ ೦	
ಕಡಲೆಬೇಳೆ	೪೯ ೮ ೦	೬ ೮-೦
ಹುಚ್ಚೆಳ್ಳು	೪೩ ೮ ೦	೪೯-೪-೦
ಅವರೆ	೫೫-೦-೦	೬೫ ೦ ೦
ಹೊಂಗೇಬೀಜ	೨೫ ೧೨ ೦	
ಮೆಣಸಿನಕಾಯಿ		
ಮಣ ಒಕ್ಕ	೧೨ ೪ ೦	೧೬ ೧೪ ೦
ಹುಣಸೇಹಣ್ಣು	೬ ೪ ೦	
ಬೆಲ್ಲ	೩ ೪ ೦	
ಶುಂಗಿ ೯ ಮ	೪ ೧೨ ೦	

ಕೆ ಎಸ್ ಮಣ ೧೦೦ ೧೨೭ ೦ ೦ ೩೧೬ ೦ ೦

SRI RAGHAVENDRA TUTORIAL INSTITUTE

1661 Kalur Road

Lashkar Mohalla Mysore

COACHING FOR

L S SSLC, Madras Matric

Separate Classes for Ladies

Open time 7 A M to 8 P M

M RAMA RAO,

B Sc, D Com

Edited, Printed and Published by A. R. Nagarajan at Sadhvi Press, D Dubbah Road, Mysore

'ದಾಸಿ' ಚಿತ್ರ

ನಗರದ ಪ್ರಭುದೇವಾ ಟಾಕೀಸಿನಲ್ಲಿ ೨ ನೇ ವಾರದಲ್ಲಿ ಯಶಸ್ವಿಯಾಗಿ ಪ್ರದರ್ಶಿಸಲ್ಪಡುತ್ತಿರುವ ಈ ಚಿತ್ರವು ಅತ್ಯಧಿಕ ಜನರ ಮೆಚ್ಚುಗೆಯನ್ನು ಪಡೆದಿದೆ. ಲಕ್ಷ್ಮೀರಾಜ್ಯಂ, ಎಸ್ ವಿ ರಾಮರಾವ್, ರೇಲಂಗಿ, ಶಿವರಾವ್ ಇವರುಗಳ ಜೋಡಿಯು ಈ ಚಿತ್ರದ ಮುಖ್ಯ ಆಕರ್ಷಣೆ ಇತ್ತೀಚಿನ ಸಾಮಾಜಿಕ ಚಿತ್ರಗಳಲ್ಲಿ ದೇಶದವನ್ನು ಬಿಂಬಿಸುತ್ತಿರುವ ಮಿತಿಮೀರಿದ ಪ್ರಣಯ ಪ್ರಸಂಗಗಳು ಈ ಚಿತ್ರದಲ್ಲಿಲ್ಲದಿರುವುದು ಗಮನಾರ್ಹವಾಗಿದೆ ಮೊದಲಿನಿಂದ ಕೊನೆಯವರೆಗೂ ಜೀವನದ ಕಷ್ಟ-ಸುಖಗಳನ್ನು ಈ ಚಿತ್ರದಲ್ಲಿ ಯಶಸ್ವಿಯಾಗಿ ಚಿತ್ರಿಸಲಾಗಿದೆ "ದಾಸಿ" ಯಲ್ಲಿ ಶ್ರೀಮಂತ ವರ್ಗದ ದರ್ಪದ ಕಠಿಣತೆಯು ಪ್ರೇಕ್ಷಕರ ಮನಸ್ಸಿಗೆ ಚೆನ್ನಾಗಿ ನಾಟುತ್ತದೆ ಲಕ್ಷ್ಮೀರಾಜ್ಯಂ ಅಭಿನಯವು ಕಾರುಣ್ಯದ ತ್ಯಾಗ ಪೂರ್ಣವಾದ ಹಿರಿಮೆಯನ್ನು ಪ್ರೇಕ್ಷಕರ ಮನಸ್ಸಿಗೆ ಬೀರುತ್ತದೆ ಅಲ್ಲಲ್ಲಿ ಕೆಲವು ಲೋಪದೋಷಗಳಿದ್ದರೂ ದಿಗ್ದರ್ಶನದ ಪ್ರಭಾವದಿಂದ ಅವು ಮುಚ್ಚಿಹೋಗಿವೆ ಸಂಗೀತವು ಅನುಕರಣೀಯವಾಗಿದೆ ಛಾಯಾಗ್ರಹಣ, ಶಬ್ದ ಗ್ರಹಣ ಮತ್ತು ದೃಶ್ಯದ ಜೋಡಣೆಯು ಬಹಳ ಪ್ರಶಂಸನೀಯವಾಗಿದೆ "ದಾಸಿ" ಯು ಸರ್ವರು ನೋಡಬೇಕಾದ ಚಿತ್ರ

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳು

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೊ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

ಒಲಂಪಿಯಾ 4-12 52 ರಿಂದ ಪ್ರಾರಂಭ ಪ್ರತಿದಿನ 3 ಆಟಗಳು

ಶ್ರೇಷ್ಠ ನಿರ್ದೇಶಕರಾದ ಶ್ರೀ ವಿಜಯಭಟ್ಟರವರ ಉನ್ನತ ಮಟ್ಟದ ಸಂಗೀತಮಯ ಹಿಂದಿ ಚಿತ್ರ

ಸಂಗೀತದ ಮಾಧುರ್ಯವನ್ನು ಪ್ರತಿಭಾಶಾಲಿ ಮನೋರಂಜನೆಯ ಅದ್ಭುತ ಕಥೆಯ ಸ್ವಾರಸ್ಯದೊಂದು, ಪ್ರೇಕ್ಷಕರನ್ನು ಮುಗ್ಧಗೊಳಿಸುವ ಅತ್ಯುತ್ತಮ ಕಲಾಕೃತಿ

*** ಬೈಜೂಬಾವ್ರ**

ಸಂಗೀತ — ನೌಷದ್

ಪಾತ್ರ — ಭಾರತ್ ಭೂಷಣ್ ಮೀನಾ ಕುಮಾರಿ, ಸುರೇಂದ್ರ, ಕುಲದೀಪ್‌ಕೌರ್

ಬೆಳಗಿನ ಪ್ರದರ್ಶನ ರಾಂಬಾಗಿ ರವರ ಮಾತ್ಸಾಲಿಷಾಯಿರ್ ರಾಂಜೋಷಿ

DON'T FORGET AUCTION WHICH IS WORTH ATTENDING

SUNDAY 7th DECEMBER AT SHOWROOMS AT 10 A M

FURNITURE & HOUSEHOLD EFFECTS, including Single & Double cots spring mattressed sofa suites, Milk safe IRON cot teapoy and chair writing table arm & armless chairs, benches, stools cradles cash boxes low writing desks KODAK Camera BUILDING MATERIALS tubelight hangers and many other knick knacks

A B I D S

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು, ಚೋಳಿ ಪೀಸುಗಳು

ಪೂನಾ, ನಾಗಪೂರ್ ಸೀರೆಗಳಿಗೆ

ಪ್ರಭಾ ಇಂದಿನಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ಮುಗ್ಧ ಮತ್ತು ಚೈತನ್ಯಪೂರ್ಣ ಹಿರಿಯ ತರುಣಿಯ ಮನರಂಜಕ ಜೀವನವನ್ನು ನಿರೂಪಿಸುವ ಅಲ್ಲಾದ್ ಚಿತ್ರ ರವರ ಅತ್ಯುತ್ತಮವಾದ ಹಿಂದಿ ಚಿತ್ರ

★ ಬಾಲ ಜೋಜೋರೆ ★

ಭೂಮಿಕೆ — ಉಷಾ ಕಿರಣ್, ಸುಲೋಚನ, ಸಜ್ಜನ್ ಕುಮಾರ್

ನಿರ್ಮಾಪಕ ಮತ್ತು ದಿಗ್ದರ್ಶಕ ಪತ್ರಿಧರಾಣಧರಾ (ನಕ್ಷತ್ರಮಣಿ ಪ್ರಭ್ಯೂ)

ಬೆಳಗಿನ ಪ್ರದರ್ಶನ 3 12 52 ರಿಂದ 4 ದಿನಗಳು

ನಳಿನಿಜಯವಂತ್, ನರ್ಗೀಸ್, ದಿಲೀಪ್‌ಕುಮಾರ್ ನಟಿಸಿರುವ ಅನೋಖಾ ಪ್ಯಾರ್

CITY TUTORIAL COLLEGE, MYSORE

New Buildings Near V V Market

Provides Excellent Coaching For The

S. S. L. C. Examination of March 53

Separate Classes For Girls *Special Class For English Only*

Please Enquire For Particulars —

READ C I C PUBLICATIONS

★ M. V. ಬೋಪಯ್ಯ ಬಿ ಎ, ಇಂಡಿಯನ್ ಬ್ಯಾಂಕ್ ಎದುರು ಪೋ ನಂ 446 ಮೈಸೂರು

ಟೆಲಿಫೋನ್ ನಂ 754   ಚಿಪಾಂಡೇ ಮಾಹಲ್ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧]   ಶನಿವಾರ ೬-೧೨-೧೯೫೨   [ಸಂಚಿಕೆ ೧೦೭

ಕೆಂಪು ಚೀಣಕ್ಕೆ ಅಮೆರಿಕದ ಮನ್ನಣೆ ?

ನಿತ್ಯಾವಶ್ಯಕ ವಸ್ತುಗಳಿಗೆ ಮಾರಾಟ ತೆರಿಗೆ ಕೂಡದು

ಪ್ರತಿನಿಧಿ ಅಧಿವೇಶನದಲ್ಲಿ ನಿರ್ಣಯ

ಮೈಸೂರು ೬

... ಪ ಧ್ಯಾಕ್ಷ ಪುರ ಸಭೆಯ ... ಮುಂದಿನ ಅಧಿವೇಶನವು ಸೇರಿ ಕೆ... ಕೆಳ ನಿ ಣ ರ್ಯ ಗಳನ್ನು ... ಡಿತು.

... ಕೇಂದ್ರ ಸರ್ಕಾರದ ನೀತಿಗನುಗು ... ವಾಗಿ ಮೈಸೂರು ಸರ್ಕಾರವೂ ಅತಿ ನಿ ತ್ಯಾವಶ್ಯಕ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ರದ್ದು ಮಾಡಬೇಕು ... ವ ... ವ ಹೆಚ್ಚುತ್ತಿರುವ ಕಳ್ಳತನಗಳನ್ನು ತಪ್ಪಿಸಲು ಜಿಲ್ಲಾಧಿಕಾರಿಗಳೂ ಮತ್ತು ... ಪೊಲೀಸ್ ಸೂಪರಿಂಟೆಂಡೆಂಟ ... ವಿಜಿಲೆನ್ಸ್ ಸಮಿತಿ ಏರ್ಪಾಡು ... ಂತಾದ ಸೂಕ್ತ ಕ್ರಮಗಳನ್ನು ಕೈ ... ಬೇಕು ... ರಾಜಧಾನಿಯಲ್ಲಿ ... ನಿವಾರಣೆ, ಒಳಚರಂಡಿ ವ್ಯವಸ್ಥೆ ... ನಗರಕ್ಕೆ ಸೇರಿರುವ ಹಳ್ಳಿಗಳ ಅ ... ಭಿವೃದ್ಧಿಗಾಗಿ ನಗರಾಭಿವೃದ್ಧಿ ಸಮಿತಿ ... ಪಂಚ ವಾರ್ಷಿಕ ಯೋಜನೆಯ ... ಕೈಗೊಳ್ಳಬೇಕು

ಸರ್ವೋದಯ ವಿಚಾರ ಗೋಷ್ಠಿ

... ರಾಜಧಾನಿಯ ದಿವಾನರ ಅಗ್ರಹಾರ ... ವ ಮಹಿಳಾ ಸದನದಲ್ಲಿ ನಾಳೆ ಬೆ ... ಗಂಟೆಗೆ ಸಾಮೂಹಿಕ ಪ್ರಾರ್ಥ ... ಮತ್ತು ಸರ್ವೋದಯ ವಿಚಾರ ಗೋ ... ನ್ನು ಸರ್ವೋದಯ ಸಮಾಜದವ ... ರು ಡಿಸಿರುತ್ತಾರೆ ಸರ್ವರಿಗೂ ಆ ... ನವು ಬ

... ಎನು ಕಾರ್ಖಾನೆ ಕಾರ್ಮಿಕರ ಮು ಷ್ಕ ರ

... ಗೊತ್ತಾಗಿದ್ದಂತೆ ರಾಜ ... ರಾಜಾ ಸ್ಟೋನ್ ವರ್ಕ್ಸಿನ ... ಕರು ಮಾಲೀಕರ ಹೃದಯ ಪರಿವ ... ಗಿ ಈ ಬೆಳಗಿನಿಂದ ಕಾರ್ಖಾನೆ ಬ ... ಸತ್ಯಾಗ್ರಹವನ್ನು ಆರಂಭಿಸಿರುವರು

ಫೇಲಾದ ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗೆ ಸೂಚನೆ

... ಳೆದ ಸೆಪ್ಟೆಂಬರಿನ ಸ್ಕೂಲ್ ಫೈನ ... ಪರೀಕ್ಷೆಯಲ್ಲಿ ಉತ್ತೀರ್ಣರಾಗದವ ... ಬರುವ ಮಾರ್ಚ ತಿಂಗಳಿನ ಪರೀಕ್ಷ ... ಯಸಗಿದಾಗಿ ಕುಳಿತುಕೊಳ್ಳಬಹು ... ವರು ಈ ತಿಂಗಳು ... ಕ್ಕೆ ... ಪ್ರವೇಶಕ್ಕಾಗಿ ಬರೆದುಕೊಳ್ಳ ... ವುದು. ... ರೂ ದಂಡವನ್ನು ... ಜನವರಿ ತಿಂಗಳು ... ರ ವರೆಗೆ ... ಗಳನ್ನು ಸ್ವೀಕರಿಸಲಾಗುವುದು

ಪಾಕಿಸ್ತಾನಕ್ಕೆ ಮೈಸೂರು ಮುಸ್ಲಿಮರ ಸೌಹಾರ್ದ ನಿಯೋಗ

ಪಾಕಿಸ್ತಾನಕ್ಕೆ ಮೈಸೂರು ಸಂಸ್ಥಾ ... ನ ಮುಸ್ಲಿಮರ ಸೌಹಾರ್ದ ನಿಯೋಗ ... ವನ್ನು ತೆಗೆದುಕೊಂಡು ಹೋಗಲು ... ಸೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯರಾದ ಶ್ರೀ ಸೈಯದ್ ಅಬ್ದುಲ್ ... ರವರು ಆಲೋಚಿಸಿ, ಈ ಬಗ್ಗೆ ... ರಿಗೆ ಪ್ರಾರ್ಥನೆಯೊಂದನ್ನು ಸ ... ನಿಯೋಗದಲ್ಲಿ ಸೇರುವಂತೆ ಸೂಚಿ ... ದ್ದಾರೆ ಈ ವಿಷಯವನ್ನು ಪ್ರಧಾನಿ ... ರವರ ಮುಂದೆ ಇಟ್ಟು ಅವರು ... ತಿಳಿದರೆ ಪಾಕಿಸ್ತಾನಕ್ಕೆ ಹೋಗ ... ವುದೆಂದು ಹೇಳಲಾಗಿದೆ

ಸಿಂಗರಾಜಪುರ ಕೊಲೆ ಅಪಾದಿತರ ಖುಲಾಸೆ

ಹೈಕೋರ್ಟ್ ಅಪೀಲಿನಲ್ಲಿ ಮರಣ ದಂಡನೆ ರದ್ದು

ಬೆಂಗಳೂರು ೬

ಚನ್ನಪಟ್ಟಣ ತಾಲ್ಲೂಕಿನ ಸಿಂಗರಾಜಪುರ ದ ಸ್ಟಾಂಡರ್ಡ್ ಮೋಟಾರು ಸರ್ವಿಸ್ಸಿನ ಮಾಲೀಕರಾದ ಶ್ರೀ ಎಸ್ ಎಂ ನರಸಿಂಹ ಮೂರ್ತಿ ರಾಯರ ಕೊಲೆ ಬಗ್ಗೆ ಕೃಷ್ಣ ಸ್ವಾಮಿರಾವ್, ನುಡಿ ತಿಮ್ಮ ತಿರುಕ ಉರು ... ಚಿಕ್ಕ ತಿಮ್ಮ ಮತ್ತು ಚಿಕ್ಕೀರಯ್ಯ ಎಂ ಬುವರಿಗೆ ವಿಧಿಸಲಾಗಿದ್ದ ಮರಣ ದಂಡನೆ ಮತ್ತು ... ಸಾವಿರ ರೂ ದಂಡವನ್ನೂ ಕೆಂಗೌಡನೆಂಬ ಮತ್ತೊಬ್ಬನ ದಂಡವನ್ನೂ ಶ್ರೇಷ್ಠ ನ್ಯಾಯಾಧೀಶ ಶ್ರೀ ಸಿ ಮೇದಪ್ಪ ಮತ್ತು ಜಸ್ಟಿಸ್ ಶ್ರೀ ಬಿ ವಾಸುದೇವ ಮೂರ್ತಿಯವರು ವಜ್ಜಾಗೊಳಿಸಿರುತ್ತಾರೆ ಪ್ರಾಸಿಕ್ಯೂಷನ್ ಕತೆಯು ಸಂದೇಹಕ್ಕೆ ದೂರವಾಗಿಲ್ಲವೆಂದು ಹಲವು ಸಂದರ್ಭಗಳಲ್ಲಿ ಕಂಡು ಬಂದಿರುವುದಾಗಿ ನ್ಯಾಯಾಧೀಶರುಗಳು ಅಭಿಪ್ರಾಯಪಟ್ಟು ಅಪಾದಿತರೆಲ್ಲರಿಗೂ ಬೆನಿಫಿಟ್ ಆಫ್ ಡೌಟ್ ಕೊಟ್ಟು ಖುಲಾಸೆ ಮಾಡಿರುತ್ತಾರೆ

ಸಂಪಂಗಿ ರಾಮಯ್ಯನವರು ಪುನಃ ಪೊಲೀಸರ ವಶಕ್ಕೆ

ಸೀಬೆಯೊಬ್ಬನನ್ನು ... ಯಲ್ಲಿ ಮಾರಿದರೆಂದು ಕೊಡಲಾಗಿದ್ದ ಶಿಕ್ಷೆಗೆ ನಿರು ಪ್ಪವಾಗಿ ಬೆಂಗಳೂರಿನ ವರ್ತಕರಾದ ಶ್ರೀ ಸಂಪಂಗಿರಾಮಯ್ಯನವರು ಸುಪ್ರೀಂ ಕೋರ್ಟಿನಲ್ಲಿ ಸಲ್ಲಿಸಿದ್ದ ಅಪೀಲು ತಿರಸ್ಕರಿಸಲ್ಪಟ್ಟಿರುವುದರಿಂದ ಅವರನ್ನು ಮೊನ್ನೆ ಪೊಲೀಸರು ಪುನಃ ತಮ್ಮ ವಶಕ್ಕೆ ತೆಗೆದುಕೊಂಡರು

ಮೃತ್ಯುವಿನ ಭಾವಿ

ಮದ್ರಾಸಿನ ಬಳಿ ಪೂನಮಲಿಯಲ್ಲಿ ಒಂದು ಭಾವಿಯಲ್ಲಿ ಕಂಪು ಸೆಟ್ಟನ ರಿಪೇರಿಗಾಗಿ ಮೊದಲು ಇಬ್ಬರು ಒಳಗೆ ಇಳಿದಾಗ ಅವರು ಉಸಿರುಕಟ್ಟಿ ಮೃತಪಟ್ಟರೆಂದೂ, ಅನಂತರ ಅವರನ್ನು ಉಳಿಸಲು ಹೋದ ಇನ್ನಿಬ್ಬರೂ ಪ್ರಜ್ಞೆ ತಪ್ಪಲು, ಅವರನ್ನು ಮೇಲಕ್ಕೆ ಎತ್ತಲಾಯಿತೆಂದೂ, ಅವರೂ ಸಹ ಒಳಗಡೆಯಿಂದ ಬರುತ್ತಿದ್ದ ಕಾರ್ಬನ್ ಡೈ ಆಕ್ಸೈಡ್ ವಾಯುವಿನಿಂದ ಮೃತಪಟ್ಟರೆಂದೂ ಹೇಳಲಾಗಿದೆ

... ರಾಜಧಾನಿಯ ನಜರ್‌ಬಾದಿನ ... ಸಹಪಟ್ಟಿಲ್ಲವನ್ನ ನಸವ ದೇವಾಲಯದಲ್ಲಿ ಈ ರಾತ್ರಿ ... ಗಂಟೆಗೆ ಶ್ರೀ ರಾಮಸ್ವಾಮಿ ... ನಾಯ್ಡು ಮತ್ತು ಶ್ರೀ ಆರ್ ... ರಾಜನಾಯ್ಡುರವರಿಂದ ಕೋಟಿ ಕಥೀರ್ ಪರೀಕ್ಷೆಯು ಸಂಪ ... ರೂಪವಾಗಿ ನಡೆ ಯುವುದು

ಪೀಕಿಂಗ್ ಆಡಳಿತಕ್ಕೆ ಐಸೆನ್‌ಹೋವರ್ ಮನ್ನಣೆ

ಕೊರಿಯಾ ಶಾಂತಿ ಬಗ್ಗೆ ಭಾರತದ ನಿರ್ಣಯಕ್ಕೆ ಬ್ರಿಟಿಷ್ ವಿ ದೇ ಶಾಂ ಗ ಮಂತ್ರಿ ಈಡನ್ನರು ಇತ್ತೀಚೆ ಒಲವಿಂದ ಅಮೆರಿಕದ ಮೇಲೆ ತೀವ್ರ ಪರಿಣಾಮವುಂಟಾಗಿರುವುದೆಂದೂ, ಐಸೆನ್‌ಹೋವರರು ಅಧಿಕಾರಕ್ಕೆ ಬಂದನಂತರ ಅಮೆರಿಕವು ಕಮ್ಯೂನಿಸ್ಟ ಚೀಣಕ್ಕೆ ಮನ್ನಣೆ ಕೊಡುವ ಬಗ್ಗೆ ಅಮೆರಿಕದ ಹೊಸ ವಿದೇಶಾಂಗ ಮಂತ್ರಿ ಡಲ್ಲೆಸ್ ರವರ ವಿಚಾರಿಸಲಿರುವರೆಂದೂ ಲಂಡನ್ನಿನ ಡೈಲಿ ಮೇಲ್ ಪತ್ರಿಕೆಯು ತಿಳಿಸಿರುತ್ತದೆ. ಐಸೆನ್‌ಹೋವರರು ಕೊರಿಯಾ ಪ್ರದೇಶದ ಮೇಲೆ ವಿಮಾನದಲ್ಲಿ ಸಂಚರಿಸಿ ನೆನ್ನೆ ಸ್ವದೇಶಕ್ಕೆ ಹಿಂದಿರುಗಿದರು

ಮದ್ರಾಸು ಸಂಯುಕ್ತರಂಗದಿಂದ ಪ್ರಕಾಶಂ ಹೊರಕ್ಕೆ

ಮದ್ರಾಸಿನ ಶಾಸನ ಸಭೆಯಲ್ಲಿರುವ ಪ್ರಜಾ ಸಂಯುಕ್ತ ಪಕ್ಷದಿಂದ ... ಮಜದೂರ್ ಪ್ರಜಾಪಕ್ಷದ ಸದಸ್ಯರು ಟಿ ಪ್ರಕಾಶಂರವರ ನೇತೃತ್ವದಲ್ಲಿ ಹೊರಕ್ಕೆ ಬಂದು ಅವರೊಡನೆ ತಮ್ಮ ೧೦ ತಿಂಗಳ ಸಂಬಂಧವನ್ನು ಕಡಿದುಹಾಕಿರುತ್ತಾರೆ ಅಲ್ಲಿನ ಹಿರಿಯ ಶಾಸನ ಸಭೆಯ, ಕೆ ಎಂ ಪಿ ಪಕ್ಷದ ಸದಸ್ಯರಿಂದ ವಹಾ ಆದ ಆಟಕ್ಕೆ ... ರನ್ನು ಪ್ರಜಾ ಸಂಯುಕ್ತ ರಂಗದಿಂದ ಓಡಿಸಬೇಕೆಂದು ಪ್ರಕಾಶಂರವರು ತಿಳಿಸಿದ್ದರು ಈ ಬಗ್ಗೆ ಪಕ್ಷವು ಒಪ್ಪದಿದ್ದುದರಿಂದ ಅದರಲ್ಲಿ ಈ ರೀತಿಯ ಬಿಕ್ಕಟ್ಟುಂಟಾಗಿರುತ್ತದೆ

ಟ್ಯೂನಿಸ್ಸಿನಲ್ಲಿ ಕರ್ಫ್ಯೂ, ಕಾರ್ಮಿಕ ನಾಯಕರ ಕೊಲೆ

ಉತ್ತರ ಆಫ್ರಿಕದ ಟ್ಯೂನೀಷಿಯದ ರಾಜಧಾನಿ ಟ್ಯೂನಿಸ್ಸಿನಲ್ಲಿ ಮೊನ್ನೆ ಕಾರ್ಮಿಕ ಮುಖಂಡ ಹಾಚೆಡ್ ಎಂಬುವರ ಕೊಲೆಯ ಪರಿಣಾಮವಾಗಿ ಆ ನಗರದಲ್ಲಿ ರಾತ್ರಿ ... ರಿಂದ ಬೆಳಗ್ಗೆ ... ರ ವರೆಗೆ ಕರ್ಫ್ಯೂ ಆಜ್ಞೆ ಜಾರಿ ಮಾಡಲಾಗಿದೆ ಟ್ಯೂನಿಸ್ಸಿಗೆ ... ಮೈಲಿ ದೂರದಲ್ಲಿ ಅವರ ಶರೀರವು ಸಿಕ್ಕಿತು ಮೊನ್ನೆ ರಾತ್ರಿ ನಗರದಲ್ಲಿ ಭಾರಿ ಗಲಾಟೆಗಳಾಗಿ ಅನೇಕ ಫ್ರೆಂಚರನ್ನು ಕೊಲ್ಲಲಾಯಿತೆಂದೂ ಹೇಳಲಾಗಿದೆ ಸರತ್ರ ಟ್ಯೂನಿಷಿಯನ್ನರಿಗೂ ಫ್ರೆಂಚ್ ಸೈನ್ಯಗಳಿಗೂ ಒಂದು ಕದನ ಕಾಳಗ ನಡೆಯಿತೆಂದೂ ಹೇಳಲಾಗಿದೆ

ಪಾಕಿಸ್ತಾನದ ನಿರಾಶಾದಾಯಕ ಆಟ

೯೩ ರನ್ನಿಗೆ ಎಲ್ಲರೂ ಔಟಾದರು

ಸ್ವಂ ಸು ಫೋನ್]   ಬೆಂಗಳೂರು ೬

ಪಾಕಿಸ್ತಾನದ ಪ್ರವಾಸಿಗ ಮತ್ತು ಭಾರತದ ಎಲ್ಲ ವಿಶ್ವವಿದ್ಯಾಲಯಗಳ ಟೀಮುಗಳ ಕ್ರಿಕೆಟ್ ಪಂದ್ಯವು ಈ ದಿನ ಬೆಳಗ್ಗೆ ಮುಂದುವರಿದು ಭಾರತ ವಿಶ್ವವಿದ್ಯಾಲಯಗಳವರು ೩೪೦ ರನ್ನುಗಳಿಗೆ ೮ ವಿಕೆಟ್ಟುಗಳನ್ನು ಕಳೆದುಕೊಂಡರು ನೆನ್ನೆ ಮುಕ್ತಾಯವಾಗುವ ವೇಳೆಗೆ ೫ ವಿಕೆಟ್ಟಿಗೆ ೨೨೫ ರನ್ನುಗಳಾಗಿದ್ದುವು ಬೊಂಬಾಯಿಯ ಶ್ರೀ ಕೆನ್ನಿಯವರು ಈ ದಿನ ತಮ್ಮ ಸ್ಕೋರನ್ನು ೯೯ ರನ್ನಿಗೆ ಹೆಚ್ಚಿಸಿ, ಎಲ್ ಬಿ. ಡಬ್ಲ್ಯು ಆಗಿ ಔಟಾದರು ಮೈಸೂರಿನ ಶ್ರೀ ಟಿ. ಡಿ ಕೃಷ್ಣರವರು ಆಟವನ್ನು ಪ್ರಾ ರಂ ಭಿ ಸಿ ಎರಡು ರನ್ನುಗಳನ್ನು ಮಾಡಿದ ನಂತರ ಡಿಕ್ಲೇರ್ ಮಾಡಿಕೊಳ್ಳಲಾಯಿತು

ತರುವಾಯ ಪಾಕಿಸ್ತಾನದವರು ಆಟವನ್ನು ಆರಂಭಿಸಿ ೯೩ ರನ್ನುಗಳನ್ನು ಮಾಡಿ ಎಲ್ಲ ವಿಕೆಟ್ಟುಗಳನ್ನು ಕಳೆದುಕೊಂಡರು ಭಾರತದ ಆಟಗಾರರು ಈ ರೀತಿ ರನ್ನುಗಳನ್ನು ಮಾಡಿರುವರು — ಸಿ ಎ ಸುಂದರಂ ೩೮, ಘೋರ್ಪಡೆ ೧೮, ಅಬ್ರಹಾಂ ೨೦

ಪಾಕಿಸ್ತಾನದ ಮಕ್ಸೂದ್ ಅಹಮದ್ ೧೩, ನಜರ್ ಅಹಮದ್ ೬, ಇಂತಿಯಾಜ್ ೦ ರನ್ನು ಮಾಡಿದರು ಪಾಕಿಸ್ತಾನದ ಬ್ರಾಡ್‌ಮನ್ ಎಂದೆನಿಸಿಕೊಂಡ ಹನೀಫ್‌ರವರು ೨೦ ರನ್ನುಗಳಿಗೆ ಡೀಪ್ ಲೆಗ್‌ನಲ್ಲಿ ಮೈಸೂರಿನ ವಿಶ್ವನಾಥ್‌ರವರಿಗೆ ಕ್ಯಾಚ್ ಕೊಟ್ಟರು

ಇಟಲಿ ಪಾರ್ಲಿಮೆಂಟಿನಲ್ಲಿ ಭಾರಿ ಹೊಡೆದಾಟ

ಇಟಲಿಯ ಚುನಾವಣೆಯಲ್ಲಿ ಹಲವು ಸುಧಾರಣೆಗಳನ್ನು ಮಾಡುವ ಬಗ್ಗೆ ಅಲ್ಲಿನ ಪಾರ್ಲಿಮೆಂಟು ಮೊನ್ನೆ ರಾತ್ರಿ ಚರ್ಚಿಸುತ್ತಿದ್ದಾಗ ಸದಸ್ಯರು ಕುರ್ಚಿ, ಮೇಜು, ಶಾಯಿ ಕುಡಿಕೆ ಮತ್ತು ಪಾದರಕ್ಷೆಗಳನ್ನು ಪ್ರಯೋಗಿಸಿ ಜೋರಾಗಿ ಹೊಡೆದಾಡಿದರೆಂದೂ, ದ್ವಾರಪಾಲಕನೊಬ್ಬನಿಗೆ ಏಟು ಬಿದ್ದು ಅವನ ತಲೆಬುರುಡೆಯು ಸೀಳಿ, ಆಸ್ಪತ್ರೆಗೆ ಸೇರಿಸಲ್ಪಟ್ಟನೆಂದೂ ವರದಿಯಾಗಿದೆ ಹಲವು ಸದಸ್ಯರಿಗೂ ತೀವ್ರ ಗಾಯಗಳಾಗಿವೆ

ಶೀತಮಾರುತದಿಂದ ೧೩೪ ಮರಣಗಳು

ಕಳೆದ ಭಾನುವಾರ ಮದ್ರಾಸು ಪ್ರಾಂತದಲ್ಲಿ ಬೀಸಿದ ಪ್ರಚಂಡ ಶೀತಮಾರುತದ ಪರಿಣಾಮವಾಗಿ ೧೩೪ ಜನರು ಮಡಿದಿರುವರೆಂದು ಇತ್ತೀಚಿನ ವರದಿಗಳು ತಿಳಿಸುತ್ತವೆ ಸಿಂಪರದ ಉತ್ತರ ಭಾಗಕ್ಕೂ ಅದು ವ್ಯಾಪಿಸಿ ಅಲ್ಲಿ ... ಜನರು ಮಡಿದಿರುತ್ತಾರೆ

ಎಸ್. ವೆಂಕಟರಂಗ ಅಯ್ಯಂಗಾರ್ಯರ ನಿಧನ

ಸ್ವಂ ಸು ಫೋನ್]   ಬೆಂಗಳೂರು ೬

ನಿವೃತ್ತ ಮೈಸೂರು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎಸ್ ವೆಂಕಟರಂಗಯ್ಯಂಗಾರ್ಯರು ತಮ್ಮ ೬೦ನೇ ವಯಸ್ಸಿನಲ್ಲಿ ನೆನ್ನೆ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇನೆ

ರೇಡಿಯೋ ರಹದಾರಿಗಾಗಿ ನೋಟೀಸು ಕೊಡುವುದಿಲ್ಲ

ರೇಡಿಯೋಗಳ ರಹದಾರಿಗಳು ಈ ತಿಂಗಳು ಅಖೈರಿಗೆ ಮುಕ್ತಾಯವಾಗುವುವೆಂದೂ, ಹೊಸ ರಹದಾರಿ ಪಡೆಯಲು ಮುಂಚಿನಂತೆ ನೋಟೀಸನ್ನು ಕೊಡಲಾಗುವುದಿಲ್ಲವೆಂದೂ, ೧೯೫೩ ನೇ ಜನವರಿ ೧೫ ರೊಳಗೆ ದಂಡವಿಲ್ಲದೆ ರಿನ್ಯೂಯಲ್ಲಿಗಾಗಿ ಅರ್ಜಿ ಹಾಕಬಹುದೆಂದೂ ಕೇಂದ್ರ ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ. ಅದಾದನಂತರ ಬರುವ ಅರ್ಜಿಗಳಿಗೆ ಸರ್ ಚಾರ್ಜ್ ಕೊಡಬೇಕಾಗುವುದು ರೇಡಿಯೋಗಳು ಕೆಟ್ಟು ಹೋಗಿದ್ದರೂ ಅಥವಾ ಇನ್ನಾವ ರೀತಿಯಲ್ಲೇ ಉಪಯುಕ್ತವಾಗಿಲ್ಲದಿದ್ದರೂ ರಹದಾರಿಯನ್ನು ಪಡೆಯಬೇಕಾಗುವುದು

ಫೇಲಾದ ವಿದ್ಯಾರ್ಥಿಗಳ ಸಭೆ

ಬಿ ಎ ಮತ್ತು ಬಿ ಎಸ್ಸಿ ಪರೀಕ್ಷೆಗಳಲ್ಲಿ ಫೇಲಾದ ನಗರದ ವಿದ್ಯಾರ್ಥಿಗಳ ಸಭೆಯು ೩ನೇ ತಾ|| ನಡೆದು, ೪೧ ಇಂಗ್ಲಿಷ್ ಪಠ್ಯಪುಸ್ತಕಗಳನ್ನು ಓದಬೇಕೆಂದು ವಿದ್ಯಾರ್ಥಿಗಳನ್ನು ನಿರ್ಬಂಧಿಸಿದುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿಯೂ, ಫೇಲಾದವರಲ್ಲಿ ೭೫ ಮತ್ತು ಅದಕ್ಕೆ ಹೆಚ್ಚು ಅಂಕಗಳನ್ನು ಪಡೆದವರಿಗೆ ತಲಾ ೫ ಅಂಕಗಳನ್ನು ಸೇರಿಸಿ ಉತ್ತೀರ್ಣರನ್ನಾಗಿ ಮಾಡುವಂತೆ ಮತ್ತು ಉಳಿದವರಿಗೆ ಮೊದಲಿನ ಐದು ಪಠ್ಯ ಪುಸ್ತಕಗಳನ್ನು ಮಾರ್ಚಿ ಪರೀಕ್ಷೆಗೆ ಇಡುವಂತೆ ಕೋರಿಯೂ ನಿರ್ಣಯಗಳನ್ನು ಮಾಡಲಾಯಿತು. ೫ ಅಂಕಗಳನ್ನು ಸೇರಿಸಲು ಸಾಧ್ಯವಾಗದಿದ್ದರೆ ಮುಂದಿನ ಮಾರ್ಚಿ ಮತ್ತು ಸೆಪ್ಟೆಂಬರ್ ಪರೀಕ್ಷೆಗಳಿಗೆ ಐದು ಪಠ್ಯ ಪುಸ್ತಕಗಳನ್ನು ಇಡುವಂತೆ ಕೋರುವ ನಿರ್ಣಯವನ್ನೂ ಮಾಡಿ, ನಿರ್ಣಯಗಳನ್ನು ಕಾರ್ಯಗತ ಮಾಡಲು ಶ್ರೀಗಳಾದ ಎಸ್. ಬೈರಪ್ಪ, ಎ. ನಾರಾಯಣ, ಎಲ್. ಗೋವಿಂದ ಗೌಡ, ಆರ್ ಪುಟ್ಟರಾವ್ ಮತ್ತು ಎಸ್ ಕರೀಗೌಡ ಇವರುಗಳ ಸಮಿತಿಯೊಂದರ ರಚನೆಯನ್ನೂ ಮಾಡಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವಿಷ್ಣು ಪೂರ್ಥ್ಯ ಮಧ್ಯಾಹ್ನ ೧ ೩೦ ಮಹಿಳೆಯರಿಗೆ ತಮ್ಮ ದೇಶದ ಗೀತೆಗಳು ಸಂಜೆ ೫ ೩೦ ಪತ್ರಿಕೆ ೭ ೩೦ ವಿ ನಾರಾಯಣ ಅಯ್ಯರ್ ವೀಣೆ ೬.೧೦ ಮತ್ತು ೮ ತಟ್ಟೆ ಕೃಷ್ಣಯ್ಯಂಗಾರ್ ಸಂಗೀತ ೭ ನಾರಾಯಣರಾವ್ ವ್ಯಾಸ್, ರೆಕಾರ್ಡ್ ಸಂಗೀತ ೮ ೩೦ ಆರ್ಕೆಸ್ಟ್ರಾ ೯ ೧೫ ವೃತ್ತಾಂತ ಸಾರಸ್ವತ, ರೆಕಾರ್ಡ್ ಸಂಗೀತ ೯ ೩೦ ಹೃದಯಾಂತರಾಳ-ಕನ್ನಡ ನಾಟಕ

SHARADAVILAS COLLEGE, MYSORE

Tutorial classes for the Interexamination of March 53 in languages & P C M have been started Particulars may be obtained from the office during working hours

Honorary Secretary

ಮದ್ರಾಸು ಶಾಸನ ಸಭಾಧ್ಯಕ್ಷರ ಸಂಬಳದಲ್ಲಿ ಖೋತಾ

ತಮ್ಮ ಸಂಬಳದಲ್ಲಿ ಶೇ|| ೧೦ ರಷ್ಟನ್ನು ಖೋತಾ ಹಾಕಿಕೊಳ್ಳಲು ಮದ್ರಾಸಿನ ಮಂತ್ರಿಗಳೂ ಮತ್ತು ಎರಡು ಶಾಸನ ಸಭೆಗಳ ಅಧ್ಯಕ್ಷರೂ ಮುಂದೆ ಬಂದಿರುತ್ತಾರೆ ಮೊದಲಿನ ೫೦೦ ರೂ. ಗಳಿಗೆ ಖೋತಾವು ಅನ್ವಯವಾಗುವುದಿಲ್ಲ

೩೦,೦೦೦ ಜಪಾನ್ ಖೈದಿಗಳ ಬಿಡುಗಡೆಗೆ ಚೀಣಾ ಒಪ್ಪಿಗೆ

ಚೀಣಾದಲ್ಲಿರುವ ೩೦ ಸಾವಿರ ಜಪಾನ್ ಖೈದಿಗಳನ್ನು ಸ್ವದೇಶಕ್ಕೆ ವಾಪಸು ಕಳುಹಿಸಲು ಕಮ್ಯೂನಿಸ್ಟ್ ಚೀಣಾವು ಒಪ್ಪಿರುವುದೆಂದು ಜಪಾನಿನ ವಿದೇಶಾಂಗ ಮಂತ್ರಿಯು ತಿಳಿಸಿರುತ್ತಾರೆ

ಅಂತರ್ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಬೆಂಗಳೂರಿನ ಕಲಾ ಸಂಘದವರು ಏರ್ಪಡಿಸುವ ಅಂತರ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದ ಪ್ರಾರಂಭೋತ್ಸವವನ್ನು ಶ್ರೀಮನ್ ಮಹಾರಾಜರು ೧೧ ನೇ ತಾ|| ಅಲ್ಲಿ ನೆರವೇರಿಸುವರು ಮೈಸೂರ ವಿದ್ವಾಂಸರುಗಳಾದ ಟಿ ಚೌಡಯ್ಯ, ದೇವೇಂದ್ರಪ್ಪ, ದೊರೆಸ್ವಾಮಿ ಅಯ್ಯಂಗಾರ್ ಮುಂತಾದ ೧೫ ಮಂದಿಯ ಸಂಗೀತಗಳು ನಡೆಯುವುವು ೧೭ನೇ ತಾ|| ನ್ಯೂಜಿಲೆಂಡಿನ ಸಂಗೀತಗಾರ ರಿಚರ್ಡ್ ಫ ರೆಲ್ ರವರ ಕಾರ್ಯಕ್ರಮವಿದೆ ಪ್ರತಿ ತಿಂಗಳಲ್ಲೂ ಇಂತಹ ೬೦ದೊಂದು ಕಾರ್ಯಕ್ರಮವಿರುವುದು

ಬೆಂಗಳೂರು ಧಾನ್ಯ ವರ್ತಕರ ಬ್ಯಾಂಕಿನ ರಜತೋತ್ಸವ

ಬೆಂಗಳೂರಿನ ಧಾನ್ಯ ವರ್ತಕರ ಸಹಕಾರ ಬ್ಯಾಂಕಿನ ರಜತೋತ್ಸವವು ಇದೇ ೭ ನೇ ತಾ|| ಸೋಮವಾರ ಬೆಳಗ್ಗೆ ೧೦ ಗಂಟೆಗೆ ನೆರವೇರುವುದು ಶ್ರೀಮನ್ ಮಹಾರಾಜರು ಅದರ ಪ್ರಾರಂಭೋತ್ಸವವನ್ನು ನಡೆಸುವರು ರಜತೋತ್ಸವದ ಜ್ಞಾಪಕಾರ್ಥವಾಗಿ ಶ್ರೀ ಗಜಲಕ್ಷ್ಮಿ ಮಂಟಪವನ್ನು ಮಹಾರಾಜರು ತೆರೆಯಲಿರುವರು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸಂಜೆ ನಡೆಯುವ ಸಮಾರಂಭದ ಅಧ್ಯಕ್ಷತೆ ವಹಿಸುವರು

ಸಂತೋಷ ಮತ್ತು ವಿದಾಯ
ಇವುಗಳಿಗೆ ಸದವಕಾಶ
ಪ್ರಭಾ ಚಿತ್ರ ಮಂದಿರದಲ್ಲಿ
7-12-52 ನೇ ಭಾನುವಾರ ಬೆಳಗ್ಗೆ 10||ಗೆ
ಸಹಾಯಾರ್ಥ ಪ್ರದರ್ಶನ
ಬಾಂಬೇ ಫಿಲಂಸ್‌ರವರ ಹಿಂದಿ ಚಿತ್ರ
ಅನೋಖಾ ಪ್ಯಾರ್
ದಿಲೀಪ್ ಕುಮಾರ್ ನರ್ಗೀಸ್ ಮತ್ತು ನಳಿನಿ ಜಯವಂತ್ ಪಾತ್ರ
ವಾಣೀವಿಲಾಸ ಮೊಹಲ್ಲೆಯ ಭಾರತ ಸ್ತ್ರೀ ಸಮಾಜದವರು ಏರ್ಪಡಿಸಿರುವ ದಕ್ಷಿಣ ರೈಲ್ವೆಯ
ಮಕ್ಕಳ ಉಚಿತ ಹಾಲು ನಿಧಿಗಾಗಿ
ದರ ರೂ. 5, 3 2, 1 ಮತ್ತು 8 ಆಣೆ
ಸ್ತ್ರೀಯರಿಗೆ 6 ಆಣೆ
(ಕಡೆಯ ಎರಡು ತರಗತಿಗಳಲ್ಲಿ ಹೆಚ್ಚಿನ ದರವಿಲ್ಲ)
ವಿ ಸೂ —ಆ ದಿನ ವಿಶೇಷ ಬಸ್ಸುಗಳ ಸಂಚಾರದ ವ್ಯವಸ್ಥೆ ಮಾಡಲಾಗಿದೆ

ಶೀತ ಮಾರುತದಿಂದ ಮದ್ರಾಸ್ ಪ್ರಾಂತದಲ್ಲಿ ಅನೇಕ ಮರಣ

ಕಳೆದ ಭಾನುವಾರ ಮದ್ರಾಸ್ ಪ್ರಾಂತದಲ್ಲಿ ಬೀಸಿದ ಶೀತ ಮಾರುತದಿಂದ ನಾಗಪಟ್ಟಣ ಮತ್ತು ಕಾರೈಕಲ್ಲುಗಳಲ್ಲಿ ಬಹಳ ನಷ್ಟ ಸಂಭವಿಸಿರುವುದಾಗಿ ಗೊತ್ತಾಗಿದೆ ಕಾರೈಕಲ್ಲಿನಲ್ಲಿಯೇ ೪೩ ಮಂದಿ ಮಡಿದಿರುವರು. ಅಲ್ಲಿನ ೩ ಸಾವಿರ ಹಂಚಿನ ಮನೆಗಳೆಲ್ಲವೂ ಮುರಿದು ೨೦ ಲಕ್ಷ ರೂ ನಷ್ಟವಾಗಿದೆ ಸಾವಿರಗಟ್ಟಲೆ ದನಕರುಗಳು ಸತ್ತಿವೆ. ನಾಗಪಟ್ಟಣಕ್ಕೆ ಹೊರಗಿನ ಸಂಪರ್ಕವೆಲ್ಲವೂ ಕಡಿದುಹಾಕಲ್ಪಟ್ಟಿದೆ ಆದ್ದರಿಂದ ಯಾವ ವಾರ್ತೆಯೂ ದೊರೆಯದೆ ತಿರುವಾರೂರಿಗೆ ಸರಿದು ಬಂದ ಒಬ್ಬನ ಹೇಳಿಕೆ ಪ್ರಕಾರ, ನಗರವನ್ನು ಪುನಃ ನಿರ್ಮಾಣ ಮಾಡಿ ಹೊಸ ಹೆಸರನ್ನು ಇಡಬೇಕಾಗಿದೆ ತಿರುಚಿ ಮತ್ತು ತಂಜಾವೂರುಗಳಲ್ಲೂ ನಷ್ಟವಾಗಿದೆ ಒಂದು ಕಡೆ ದೇವರ ಮಂಟಪವು ಕುಸಿದು ಏಳು ಮಂದಿ ಮೃತಪಟ್ಟರು ಮಳೆ ಗಾಳಿಯು ಅತ್ಯಂತ ರಭಸವಾಗಿದ್ದಾಗ ಕಷ್ಟಕ್ಕೆ ಸಿಕ್ಕಿದ ಜನ ಹರಿಜನ, ಗರ್ಭಿಣಿ ಸ್ತ್ರೀಯರಿಗೆ ಸವರ್ಣರು ಆಶ್ರಯವಿತ್ತರು ಅವರುಗಳಿಗೆ ಅಲ್ಲೇ ಮಕ್ಕಳು ಜನಿಸಿದುವು ತಿರುಚಿಯಲ್ಲಿ ಮರ ಬಿದ್ದು, ಕೈಯಲ್ಲಿದ್ದ ಕೂಸಿನೊಡನೆ ಒಬ್ಬಳು ಮೃತಪಟ್ಟಳು ಮತ್ತೊಂದು ಕಡೆ ಆಂಜನೇಯ ದೇವಸ್ಥಾನವು ಬಿದ್ದು ಇಬ್ಬರು ಕೊರವರು ಸತ್ತರು ತಂಜಾವೂರುಗಳ ಮತ್ತು ಕುಂಭಕೋಣದ ರಸ್ತೆಯಲ್ಲಿ ದಿಡ್ಡಿ ಸಾಲು ಮರಗಳು ಬಿದ್ದಿರುವುದರಿಂದ ಸಂಚಾರವು ನಿಂತಿದೆ ಬಾಳೆ ಕಬ್ಬು ವೀಳೆಯದೆಲೆ ತೋಟಗಳು ಹಾಳಾಗಿವೆ ನಾಗಪಟ್ಟಣದ ಆಸ್ಪತ್ರೆಯಲ್ಲಿ ೧೦ ಅಡಿ ನೀರು ನಿಂತಿತ್ತು ಕಾರೈಕಲ್ಲಿನಲ್ಲಿ ಮನೆಗಳ ಸೋಲ್ಪಣಗಳು ಹಾರಿ, ಜಾನುವಾರುಗಳು ಕಾಣದೆ ಹಾರಿಹೋಗಿ ಆಕಾಶದಲ್ಲಿ ಹಾರಾಡ ತ್ತಿದ್ದುವು ಅನೇಕ ದೋಣಿಗಳು ಊರಿನೊಳಕ್ಕೆ ಒಯ್ಯಲ್ಪಟ್ಟಿದ್ದುವು

ಬಾಳೆ ದಿಂಡಿನಲ್ಲಿ ಪಿಷ್ಟ ಪದಾರ್ಥ

ಬಾಳೆ ಗಿಡದ ದಿಂಡಿನಲ್ಲಿ ತಿನ್ನಲು ಅರ್ಹವಾದ ಪಿಷ್ಟ ಪದಾರ್ಥವಿರುವುದೆಂದು ರಾಜಧಾನಿಯ ಕೇಂದ್ರ ಆಹಾರ ಸಂಶೋಧನಾಲಯದ ಶ್ರೀ ಎಸ್. ಎಲ್ ಶೈರಿಯರು ತಿಳಿಸಿರುತ್ತಾರೆ ಪ್ರತಿಯೊಂದು ಬಾಳೆ ದಿಂಡಿನಲ್ಲೂ ೧|| ಯಿಂದ ೩ ಪೌಂಡಿನಷ್ಟು ಪಿಷ್ಟವು ದೊರೆಯುವುದೆಂದು ಅವರು ಹೇಳುವರು

SRI GAYATHRI
TALKIES
Daily 2 Shows
From 7-12-52
R K O's
TARZAN'S SAVAGE FURY
Starring Lex Barker
ಇದುವರೆಗಿನ ಟಾರ್ಜಾನ್ ಚಿತ್ರಗಳಲ್ಲೆಲ್ಲಾ ಪ್ರಥಮ ಸ್ಥಾನವನ್ನು ಗಳಿಸಿರುವ ಈ ಚಿತ್ರವನ್ನು ಪ್ರತಿಯೊಬ್ಬ ಪ್ರೇಕ್ಷಕರೂ ತಪ್ಪದೆ ನೋಡಬೇಕು

Edited, Printed and Published by A R Nagarajan at Sadhvi Press, D Dubbiah Road, Mysore

ಹಲವು ನಗರಗಳಲ್ಲಿ ವಿದ್ಯುಚ್ಛಕ್ತಿ ರೈಲುಗಳು

ಭಾರತದ ಹಲವು ನಗರಗಳಲ್ಲಿ ಸ್ಥಳೀಯವಾದ ವಿದ್ಯುಚ್ಛಕ್ತಿಯ ರೈಲುಗಳನ್ನು ಓಡಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ

ಬಾಲಾ ಜೋಜೋರೆ ಚಿತ್ರ

ಮರಾಠಿ ಚಿತ್ರಗಳು ಯಾವಾಗಲೂ ಅಪರೂಪ ಶಾಂತಾರಾಂರವರ "ಅಮರ ಭೂಪಾಲಿ"ಯ ನಂತರ ಎರಡನೆಯ ಮರಾಠಿ ಚಿತ್ರ ಪ್ರಭಾ ಚಿತ್ರ ಮಂದಿರಕ್ಕೆ ಬಂದಿರುವ "ಬಾಲ ಜೋ ಜೋರೆ" ಇದರಲ್ಲಿ ಮರಾಠಿಯರ ನಿತ್ಯದ ಗೃಹಜೀವನವನ್ನು ಬಹಳ ಮೋಹಕವಾಗಿಯೂ ತಾಯ್ತನದ ಪ್ರೇಮವನ್ನು ಪರಿಣಾಮಕಾರಿಯಾಗಿಯೂ ಚಿತ್ರಿಸಲಾಗಿದೆ ಸಂಗೀತವು ಪ್ರಶಂಸಾರ್ಹವಾಗಿದೆ ಚಿತ್ರಪ್ರೇಮಿಗಳು ನೋಡಬಹುದಾದ ಚಿತ್ರಗಳಲ್ಲಿ ಇದೂ ಒಂದಾಗಿದೆ

ಜಿಲ್ಲಾ ವಿದ್ಯಾಧಿಕಾರಿಗಳು

ಸರ್ಕಾರದ ಟ್ರೈನಿಂಗ್ ಕಾಲೇಜು ಸೂಪರಿಂಟೆಂಡೆಂಟರಾದ ಡಾ|| ಬಷೀರ್ ಹುಸೇನರವರನ್ನು ಶಿವಮೊಗ್ಗಕ್ಕೂ, ಶ್ರೀ ನಾಗಲಿಂಗಯ್ಯನವರನ್ನು ಚಿತ್ರದುರ್ಗಕ್ಕೂ, ಶ್ರೀ ಕೆ. ಕಾಳಸ್ವಾಮಿಯವರನ್ನು ತುಮಕೂರಿಗೂ ಮತ್ತು ಕಾಂತರಾಜಪುರದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಡಾ|| ಖುದ್ದೂಸ್‌ರವರನ್ನು ಕೋಲಾರಕ್ಕೂ ಜಿಲ್ಲಾ ವಿದ್ಯಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆಯೆಂದು ಗೊತ್ತಾಗಿದೆ ಬಷೀರ್ ಹುಸೇನ್ ಮತ್ತು ಖುದ್ದೂಸ್‌ರವರ ಬಗ್ಗೆ ನಿನ್ನೆ ಬಿದ್ದ ಪ್ರಕಟಣೆಯನ್ನು ಮೇಲ್ಕಂಡಂತೆ ಓದಿಕೊಳ್ಳಬೇಕಾಗಿ ವಿನಂತಿ

ಇದರ ಪರಿಚಯವಿದೆಯೇ .
ಮೈಸೂರು ಸಾಬೂನು
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಾಸಾಯನಿಕ ದ್ರವ್ಯಗಳೂ ಇಲ್ಲದ ಉತ್ಕೃಷ್ಟವಾದ ಒಗೆಯುವ ಸಾಬೂನು ಯಾವ ಶ್ರಮವಿಲ್ಲದೆಯೇ ಬಟ್ಟೆಗಳಿಂದ ಕೊಳೆಯನ್ನು ತೆಗೆಯುತ್ತದೆ ... ಸಂಪೂರ್ಣ ತೃಪ್ತಿಯನ್ನು ಕೊಡುತ್ತದೆ

ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ
ಎಲ್ಲ ಕಡೆಯೂ ಸಿಗುತ್ತದೆ
ಸರ್ಕಾರದ ಸಾಬೂನು ಕಾರ್ಖಾನೆ,
ಬೆಂಗಳೂರು

ನೋ. ನಂ. 796 WEEKLY EDITION ಬೆಲೆ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೭-೧೨-೧೯೫೭ [ಸಂಚಿಕೆ ೧೫

ವಿಶ್ವಸಂಸ್ಥೆ ನಿರ್ಣಯಕ್ಕೆ ದ. ಆಫ್ರಿಕಾ ತಿರಸ್ಕಾರ

ಬಟ್ಟೆ ವರ್ತಕರಿಗೆ ಕೇಂದ್ರ ವಾಣಿಜ್ಯ ಸಚಿವರ ಎಚ್ಚರಿಕೆ

ಕೇಂದ್ರ ವಾಣಿಜ್ಯ ಮತ್ತು ಕೈಗಾರಿ... ಸಚಿವ ಟಿ ಟಿ ಕೃಷ್ಣಮಾಚಾರಿಯು ... ಗುರುವಾರ ದೆಹಲಿಯಲ್ಲಿ ಶಸ್ತ್ರ ಶ... ಎವಿ.ತಿ.ಎ ಸ್ಪದನ ಸಭೆಯಲ್ಲಿ ಮಾತನಾಡುತ್ತಾ ಬಟ್ಟೆ ವರ್ತಕರು ...ವಾಗಿ ಜೊಂಬಾಯಿಯವರು ಇ... ಕಾಬರಿಯನ್ನು ಹುಟ್ಟಿಸಿ ಬಟ್ಟೆಯ ...ಲಿನ ರಫ್ತು ಸುಂಕವನ್ನು ರದ್ದು ಮಾ... ಪ್ರಯತ್ನಿಸಿ ಆ ಮೂಲಕ ಹಲ... ವಿದೇಶೀಯರು ಮತ್ತು ತಾವು ಹೆ... ಹಣ ಗಂಪಾದಿಸಲು ಮಾರ್ಗ ಕಲ್ಪಿ... ಪ್ರಯತ್ನಿಸುತ್ತಿರುವರೆಂದು ...ದಿಸಿ, ರಫ್ತು ಸುಂಕವನ್ನು ವರ್ತಕ ...ಗೀಕರಿಸಲೇಬೇಕೆಂದೂ ಇಲ್ಲವಾ... ವ್ಯಾಪಾರವನ್ನು ತ್ಯಜಿಸಬೇಕೆಂದೂ ...ರಿಸಿದರು. ಅಗತ್ಯಬಿದ್ದಲ್ಲಿ ಬಟ್ಟೆಯ ...ವ್ಯಾಪಾರವನ್ನು ಸರ್ಕಾರವೇ ವ... ಕೊಳ್ಳಲು ಸಿದ್ಧವಾಗಿರುವುದೆಂದೂ ... ವ್ಯಕ್ತಪಡಿಸಿದರು

ರೋಗಿಗಳಿಗೆ ಬ್ರೆಡ್ ಬದಲು ಇಡ್ಲಿ ಸರಬರಾಜು

...ಸಂಸ್ಥಾನದ ಕೆಲವು ಆಸ್ಪ... ...ರುವ ರೋಗಿಗಳಿಗೆ ಬ್ರೆಡ್ ಬದ... ಇಡ್ಲಿ ಸಾಂಬಾರನ್ನು ಅಥವಾ ಚ...ವನ್ನು ಒದಗಿಸಲಾಗುತ್ತಿದೆಯೆಂ... ಎಲ್ಲ ಆಸ್ಪತ್ರೆಗಳಲ್ಲೂ ಇಡ್ಲಿಯ... ಒದಗಿಸುವ ವಿಷಯವು ಸರ್ಕಾರದ ... ಆಲೋಚನೆಯಲ್ಲಿರುವುದೆಂದೂ ಅಲ್ಲಿ... ರೋಗ್ಯ ಮಂತ್ರಿ ಎ ಬಿ ಶೆಟ್ಟಿಯ... ತಿಳಿಸಿರುತ್ತಾರೆ. ಬ್ರೆಡ್ಡಿಗಿಂತ ... ಆರೋಗ್ಯಕರವೂ ಅಗ್ಗವೂ ...ವುದೆಂದು ಅವರು ಹೇಳಿರುವರು

ಬ್ರಿಟಿಷ್ ಹಡಗಿನ ಮೇಲೆ ರಾಷ್ಟ್ರೀಯ ಚೀಣರ ಗುಂಡು

...ಟಿಷರ ಸೋಸಿಟಾ ಎಂಬ ವ್ಯಾಪಾ... ಹಡಗು ಮೊನ್ನೆ ಹಾಂಗ್‌ಕಾಂಗ್ ... ಸಮುದ್ರದಲ್ಲಿ ರಾಷ್ಟ್ರೀಯ ಚೀಣರ ... ಪ್ರತಿಬಂಧಕವನ್ನು ಲೆಕ್ಕಿಸದೆ ... ಹೋಗುತ್ತಿದ್ದಾಗ ಚೀಣರ ಗನ್ ಬೋಟ... ಗುಂಡು ಹಾರಿಸಿ, ಹಡಗಿಗೆ ... ...ವನ್ನು ವಶಪಡಿಸಿಕೊಂಡು ... ಮಾಡಲಾಯಿತೆಂದೂ, ಹಡಗಿನ ...ಪ್ಟನ್ನನು ಮತಿದನೆಂದೂ ವರದಿ ...ಗಿದೆ

ಕಲ್ಲು ಎಸೆದುದಕ್ಕಾಗಿ ೨೦ ವರ್ಷ ಸಜಾ

...ನಿಸ್ಸಿನಲ್ಲಿ ಟ್ರಾಲಿ ಬಸ್ಸುಗಳ ... ಒಬ್ಬ ೨೦ ವರ್ಷದ ಯುವಕ ... ನ್ನೆಸದನೆಂದು ಅಲ್ಲಿನ ಮಿಲಿಟರಿ ... ನ್ಯಾಯಾಲಯವು ಅವನಿಗೆ ೨೦ ವರ್ಷ ...ಶಿಕ್ಷೆ ವಿಧಿಸಿರುತ್ತದೆ.

ಮನಶ್ಶಾಸ್ತ್ರದ ಪ್ರೊಫೆಸರ್

...ಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಬಿ. ...ಸ್ವಾಮಿಯವರನ್ನು ಮಹಾರಾಜಾ ...ಜ ಮನಶ್ಶಾಸ್ತ್ರದ ಪ್ರೊಫೆಸರ... ನೇಮಿಸಲಾಗಿದೆ.

ಎಂ. ಶಾಮಣ್ಣನವರಿಗೆ ಮುಕ್ತಿ ಒಂದು ವರ್ಷ ಜೀವದಾನ

...ಸಂಸ್ಥಾನದ ಆರ್ಥಿಕ ಶಾಖಾ ಕಾರ್ಯ... ಶ್ರೀ ಎಂ ಶಾಮಣ್ಣನವರಿಗೆ ಕ... ...ನೇ ತಾರೀಕಿನಿಂದ ಒಂದು ವರ್ಷ... ಜೀವದಾನ ಕೊಡಲಾಗಿದೆ

ಸ್ತ್ರೀಯ ಕೊಲೆಗಾಗಿ ೫ ವರ್ಷ ಶಿಕ್ಷೆ

ಮೈಸೂರು ೭

ಮೈಸೂರು ತಾಲ್ಲೂಕು ಉಲಚಹಳ್ಳಿಯ ನಿವಾಸಿ ದೇಪು ಗೌಡ ಎಂಬುವನು ಗಂಗೂರಾವ್ ಛತ್ರದ ಜವರಮ್ಮ ಉರುಫ್ ಕಿವುಡನ್ನು ಎಂಬಾಕೆಯನ್ನು ಕಳೆದ ಜನವರಿ ೧೪ ನೇ ತಾ|| ಕೊಂದು ಆಕೆಯ ಬಳಿ ಇದ್ದ ಎಲೆ ಅಡಿಕೆ ಚೀಲ ಮತ್ತು ೪ ೭ ೦ ರೂ ಗಳನ್ನು ಕಸಿದುಕೊಂಡನೆಂದು ವಿಚಾರಣೆಗೆ ಗುರಿಯಾಗಿ, ನೆನ್ನೆ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ ಮುನಿಸ್ವಾಮಯ್ಯನವರು ಅವನಿಗೆ ೫ ವರ್ಷ ಕಠಿಣ ಸಜಾ ವಿಧಿಸಿದರು.

ಜಿಲ್ಲಾಧಿಕಾರಿಗಳ ಆಹಾರದ ಸಹಾಯಾಧಿಕಾರಿ

ಸಾಗರದಲ್ಲಿ ಅಮಲ್ದಾರರಾಗಿರುವ ಶ್ರೀ ಮುರುಗೇಂದ್ರ ಸ್ವಾಮಿಯವರನ್ನು ಮೈಸೂರು ನಗರದ ಅಸಿಸ್ಟೆಂಟ್ ರೇಷನ್ ಅಧಿಕಾರಿಗಳಾಗಿ ನೇಮಿಸಿ, ಮೈಸೂರು ಜಿಲ್ಲಾಧಿಕಾರಿಗಳ ಆಹಾರ ಸಹಾಯಾಧಿಕಾರಿಯಾಗಿ ವರ್ಗಾಯಿಸಲಾಗಿದೆ

ದ|| ಆಫ್ರಿಕಾ ಸತ್ಯಾಗ್ರಹದಲ್ಲಿ ಬಿಳಿಯರ ಪಾತ್ರ

ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯ ವಿರುದ್ಧವಾಗಿ ಅಲ್ಲಿನ ಹಲವು ಬಿಳಿಯರೂ ಸೇರುವರೆಂದೂ, ಪಾಲಿಕಾಕ್ಸ್ ಎಂಬ ಬಿಳಿಯ ಕಾರ್ಮಿಕ ಮುಖಂಡನ ನೇತೃತ್ವದಲ್ಲಿ ಒಂದು ಬಿಳಿಯರ ಸ್ವಯಂಸೇವಕರ ಪಡೆಯೂ ಸತ್ಯಾಗ್ರಹ ನಡೆಸುವುದೆಂದೂ ವರದಿಯಾಗಿದೆ.

ಗಂಡನಿಗೆ ವಿಷ ಹಾಕಲು ಯತ್ನಿಸಿದ ಪತ್ನಿಗೆ ಸಜಾ

ವಿಜಯವಾಡಾ ಬಳಿ ಪೂರಾಂಕಿ ಎಂಬಲ್ಲಿನ ಅಗಸರ ಹೆಂಗಸೊಬ್ಬಳು ತನ್ನ ವಿಟನೊಬ್ಬನ ಪ್ರೇರಣೆ ಮೇಲೆ ಗಂಡನಿಗೆ ವಿಷ ಪ್ರಯೋಗ ಮಾಡಲು ಪ್ರಯತ್ನಿಸಿದ ಅಪಾದನೆಗಾಗಿ ಮೂರು ತಿಂಗಳು ಕಠಿಣ ಸಜಾ ಶಿಕ್ಷೆಗೆ ಗುರಿಯಾಗಿರುವಳು

○ ಮಹೌರಿ ಸಂಸ್ಥಾನದ ರಾಣಿ ಪ್ರೀತಂ ಕೌರ್‌ರವರು ಹೆಚ್ಚು ಅಫೀಮನ್ನು ಸೇವಿಸಿ ಆತ್ಮಹತ್ಯೆ ಪ್ರಯತ್ನ ನಡೆಸಿದರೆಂದು ಅವರ ಮೇಲೆ ಅಂಬಾಲಾ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ

ವಿಶ್ವಸಂಸ್ಥೆಯ ನಿರ್ಣಯಕ್ಕೆ ಆಫ್ರಿಕದ ತಿರಸ್ಕಾರ

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಸಭೆಯು ಮೊನ್ನೆ ಸೇರಿ, ದಕ್ಷಿಣ ಆಫ್ರಿಕದಲ್ಲಿ ವರ್ಣಭೇದದ ಪರಿಸ್ಥಿತಿಯನ್ನು ಪರಿಶೀಲಿಸಲು ಮೂರು ಜನರ ಒಂದು ಸಮಿತಿಯನ್ನು ನೇಮಿಸುವಂತೆ ನಿರ್ಧರಿಸಿತು. ಈ ನಿರ್ಧಾರವು ಹೊರಬಿದ್ದ ಕೂಡಲೇ ದಕ್ಷಿಣ ಆಫ್ರಿಕದ ಪ್ರತಿನಿಧಿಯು ಒಂದು ಹೇಳಿಕೆಯಿತ್ತು—ನಿರ್ಣಯವು ಅಕ್ರಮವೆಂದು ತಮ್ಮ ಸರ್ಕಾರದವರು ತೀರ್ಮಾನಿಸಿ ಅದನ್ನು ತಿರಸ್ಕರಿಸುವುದಾಗಿ ತಿಳಿಸಿದರು

ತಲೆಗಳು ಕೂಡಿಕೊಂಡಿರುವ ಅವಳಿ ಮಕ್ಕಳು

ಸಯಾಮಿನಲ್ಲಿ ೧೯೫೫ ನೇ ಸೆಪ್ಟೆಂಬರ್ ೧೬ ನೇ ತಾ|| ಜನಿಸಿದ ರಾಡ್ನಿ ಮತ್ತು ರೋಜರ್ ಬ್ರೋಡೀ ಎಂಬ ಅವಳಿ ಮಕ್ಕಳ ತಲೆಗಳು ನೆತ್ತಿ ಭಾಗದಲ್ಲಿ ಒಟ್ಟಿಗೆ ಕೂಡಿಕೊಂಡು ಅಮೆರಿಕದ ಇಲ್ಲಿನಾಯ್ಸ್ ಎಂಬಲ್ಲಿನ ಒಂದು ಆಸ್ಪತ್ರೆಯಲ್ಲಿರುವುವೆಂದೂ, ಈಗ ಶಸ್ತ್ರ ಚಿಕಿತ್ಸೆ ನಡೆಸಿ ಮಕ್ಕಳನ್ನು ಬೇರ್ಪಡಿಸಲು ವೈದ್ಯರು ಆಲೋಚಿಸುತ್ತಿರುವರೆಂದೂ ವರದಿಯಾಗಿದೆ. ಅವರಿಬ್ಬರಿಗೂ ಪ್ರತ್ಯೇಕವಾದ ಗಳ್ಳನಾಳ ಮತ್ತು ನರಗಳಿರುವುದಾಗಿಯೂ ಗೊತ್ತಾಗಿದೆ

ರಾಜೇಂದ್ರ ಪ್ರಸಾದರ ವರ್ಧಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಶ್ರೀ ಬಿ ಎಸ್ ಶ್ರೀಕಂಠೇಶ್ವರರವರ ಅಧ್ಯಕ್ಷತೆಯಲ್ಲಿ ಕಳೆದ ೩ ನೇ ತಾರೀಖು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರ ವರ್ಧಂತಿಯು ನಡೆಯಿತು. ಶ್ರೀಗಳಾದ ಆ ನಾ ಕೃಷ್ಣಮೂರ್ತಿ, ಬಿ. ಆರ್ ರಾಮಯ್ಯ, ನಂಜುಂಡರಾವ್‌ರವರು ಭಾಷಣ ಮಾಡಿದ ನಂತರ ರಾಷ್ಟ್ರಾಧ್ಯಕ್ಷರಿಗೆ ಶ್ರೇಯಃ ಪ್ರಾರ್ಥನೆ ಮಾಡಲಾಯಿತು. ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

ಬೆಂಗಳೂರಿಗೆ ಅಮೆರಿಕಾ ರಾಯಭಾರಿ

ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಚೆಸ್ಟರ್ ಬೌಲ್ಸ್‌ರವರು ಇದೇ ತಿಂಗಳು ೧೧ ನೇ ತಾ|| ಬೆಂಗಳೂರಿಗೆ ಬರುವರು

ಬಾಯಿಗೆ ಬಟ್ಟೆ ತುರುಕಿ ಮಹಿಳೆಯೊಡನೆ ಅಪಚಾರ

ಮೈಸೂರು ೭

ರಾಜಧಾನಿಯ ದೇವರಾಜ ಮೊಹಲ್ಲೆಯ ಶಿವಯ್ಯನವರ ಬೀದಿಯಲ್ಲಿರುವ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ನೌಕರರಾದ ಶ್ರೀ ರಾಜಶೇಖರ್‌ರವರ ಮನೆಗೆ ನೆನ್ನೆ ಮಧ್ಯಾಹ್ನ ೩ ಘಂಟೆಯಲ್ಲಿ ಆಗಂತುಕನೊಬ್ಬನು ಅವರು ಇಲ್ಲದ ವೇಳೆ ನುಗ್ಗಿ, ಮನೆಯ ಬಾಗಿಲಿಗೆ ಚಿಲಕ ಹಾಕಿ ಒಳಗಿದ್ದ ಹೆಂಗಸಿಗೆ ಚಾಕುವನ್ನು ತೋರಿಸಿ, ಬಾಯಿಗೆ ಬಟ್ಟೆಯನ್ನು ತುರುಕಿ ಆಕೆಯ ಕಿವಿಯ ಓಲೆ, ಕೈ ಬಳೆ ಕಾಲುಂಗುರ ಇವೇ ಮುಂತಾದ ಆಭರಣಗಳನ್ನು ಅಪಹರಿಸಿಕೊಂಡು ಹೋದನೆಂದು ವರದಿಯಾಗಿದೆ. ರಾಜಶೇಖರ್‌ರವರ ಪತ್ನಿಯು ಒಳಗಡೆ ಕೆಲಸ ಮಾಡುತ್ತಿದ್ದರೆಂದೂ, ಹೊರಗೆ ಬಾಗಿಲು ಸ್ವಲ್ಪ ತೆರೆದಿದ್ದುದನ್ನು ನೋಡಿ, ಆಗಂತುಕನು ಪ್ರವೇಶಿಸಿ ಯಜಮಾನರು ಇಲ್ಲವೇ ಎಂದು ಕೇಳಲು, ಒಳಗಿನಿಂದ ಇಲ್ಲವೆಂದು ಉತ್ತರ ಬಂದಾಗ ಅವನು ಗಲಾಟೆ ಮಾಡಿದರೆ ಆಕೆಯನ್ನೂ ಮಗುವನ್ನೂ ಕೊಂದು ಹಾಕುವುದಾಗಿ ಬೆದರಿಸಿದನೆಂದೂ ಹೇಳಲಾಗಿದೆ. ದೇವರಾಜ ಪೊಲೀಸರಿಗೆ ದೂರು ಕೊಡಲಾಗಿದೆ

ಔತಣಕೂಟಗಳಿಗೆ ಅತಿಥಿಗಳ ಸಂಖ್ಯೆಯ ಮಿತಿ

ಸಾಧಾರಣ ಔತಣ ಸಮಾರಂಭಗಳಲ್ಲಿ ೨೪ ಜನ, ವಿವಾಹ ಅಥವಾ ಮರಣ ಸಂಬಂಧವಾದ ಭೋಜನಕೂಟಗಳಲ್ಲಿ ೫೦ ಜನ ಅತಿಥಿಗಳಿಗಿಂತ ಹೆಚ್ಚಾಗಿರಕೂಡದೆಂದು ಮಿತಿಗೊಳಿಸಿದ್ದ ಆಜ್ಞೆಯನ್ನು ಸರ್ಕಾರದವರು ಸಡಿಲಗೊಳಿಸಿ ಮೊದಲಿನ ಸಂಖ್ಯೆಯನ್ನು ೩೦ಕ್ಕೂ ಮತ್ತು ಎರಡನೇಯದನ್ನು ೧೦೦ಕ್ಕೂ ಹೆಚ್ಚಿಸಿರುತ್ತಾರೆ. ಅಕ್ಕಿ ಮತ್ತು ಗೋಧಿ ಇವುಗಳನ್ನು ಉಪಯೋಗಿಸುವ ಸಮಾರಂಭಗಳಿಗೆ ಮಾತ್ರ ಈ ಆಜ್ಞೆಯು ಅನ್ವಯಿಸುತ್ತದೆ. ಇವುಗಳನ್ನು ಉಪಯೋಗಿಸದ ಸಮಾರಂಭಗಳಲ್ಲಿ ಅತಿಥಿಗಳ ಸಂಖ್ಯೆಗೆ ಮಿತಿಯಿರುವುದಿಲ್ಲ

ಬರುವ ವರ್ಷದ ರಜಾ ದಿನಗಳು

ಕೇಂದ್ರ ಸರ್ಕಾರದವರು ಈ ಕೆಳಗೆ ಕಂಡಂತೆ ಬರುವ ವರ್ಷದ ರಜಾ ದಿನಗಳನ್ನು ಪ್ರಕಟ ಮಾಡಿರುತ್ತಾರೆ:- ಜನವರಿ ೧ ಹೊಸವರ್ಷ, ೨೬ ರಿಪಬ್ಲಿಕ್ ದಿನ, ಫೆಬ್ರವರಿ ೧೩ ಶಿವರಾತ್ರಿ, ೨೮ ಮತ್ತು ಮಾರ್ಚಿ ೧ ಕಾಮನ ಹಬ್ಬ, ಮಾರ್ಚಿ ೨೩ ರಾಮನವಮಿ, ಏಪ್ರಿಲ್ ೩ ಗುಡ್‌ಫ್ರೈಡೇ, ೧೩ ಮೈ ೫ ೨ ಜೂನ್ ೧೮ ಇದ್‌ಉಲ್‌ಫಿತರ್, ಆಗಸ್ಟ್ ೧೫ ಸ್ವಾತಂತ್ರ್ಯ ದಿನ, ೨೧ ಇದುಉಲ್ ಜುಹಾ, ೩೧ ಜನ್ಮಾಷ್ಟಮಿ, ಸೆಪ್ಟೆಂಬರ್ ೧೯ ಮೊಹರಂ, ಅಕ್ಟೋಬರ್ ೨ ಮಹಾತ್ಮಾಗಾಂಧಿ ಜಯಂತಿ, ೧೫,೧೬ ಮತ್ತು ೧೭ ದಸರಾ, ನವೆಂಬರ್ ೭ ಮತ್ತು ೭ ದೀಪಾವಳಿ, ೨೦ ಗುರುನಾನಕ್ ದಿನ, ಡಿಸೆಂಬರ್ ೨೫ ಕ್ರಿಸ್‌ಮಸ್

○ ಕೊರಿಯಾಕ್ಕೆ ಬಹುಮಟ್ಟಿನ ಸಹಾಯವನ್ನು ನೀಡುವುದಾಗಿ ಐಸೆನ್‌ಹೋವರರು ಭರವಸೆಯಿತ್ತಿರುವುದಾಗಿ ದಕ್ಷಿಣ ಕೊರಿಯದ ಅಧ್ಯಕ್ಷ ಸಿಂಗ್ಮನ್ ರ್ಹೀಯವರು ತಿಳಿಸಿರುತ್ತಾರೆ

ವಾರ ಭವಿಷ್ಯ

ತಾ|| ೭-೧೨-೫೨ ರಿಂದ ೧೪-೧೨-೫೨ರ ವರೆಗೆ

ಮೇಷ — ಎಲ್ಲಿ ಕಡೆಯೂ ನಿಮ್ಮ ಪ್ರಭಾವವೇ. ಆರೋಗ್ಯ ಉತ್ತಮ ಹಣದ ಲಾಭ ಪರೀಕ್ಷೆಯಲ್ಲಿ ತೇರ್ಗಡೆ ವ್ಯಾಪಾರಾದಿಗಳಲ್ಲಿ ಲಾಭ ತಾ|| ೧೦, ೧೩ ಖರ್ಚು, ಗೊಂದಲ.

ವೃಷಭ—ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಲಾಭ ಉದ್ಯೋಗ ನೌಕರಿಗಳಲ್ಲಿ ಉತ್ಸಾಹ ಕೌಲು ಕರಾರಿಗೆ ಅನುಕೂಲ ತಾ|| ೭, ೮ ಮನರಂಜನೆ, ಖರ್ಚು

ಮಿಥುನ — ಆರೋಗ್ಯ ಕೆಡುವ ಸಂಭವ. ಕಾರ್ಯದಲ್ಲಿ ವಿಘ್ನ ವ್ಯಾಪಾರಾದಿಗಳಲ್ಲಿ ಶತ್ರು ಕಾಟ ನೌಕರಿಯಲ್ಲಿ ಸಮರಸವಿಲ್ಲ ಪ್ರವಾಸದಲ್ಲಿ ಸಂಕಟ ತಾ|| ೧೦, ೧೧ ಪ್ರಿಯಜನ ವಿಯೋಗ, ಶಸ್ತ್ರ ಭಯ.

ಕರ್ಕ —ಮಾನಸಿಕ ಕ್ಲೇಶ. ಆರೋಗ್ಯ ಉತ್ತಮ ಶತ್ರುಗೆ ಖಾಯಿಲೆ ಮನಸ್ಸಿನಲ್ಲಿ ಭೀತಿ ವಿಪರೀತ ಖರ್ಚು ತಾ|| ೮, ೧೦ ಚಿಂತಾ ನಾಶ, ಆಕಸ್ಮಿಕ ಸಹಾಯ.

ಸಿಂಹ —ಅನೇಕ ಸಾಹಸ ಕಾರ್ಯ ಆರೋಗ್ಯ ನೆಟ್ಟಗೆ ಮಂಗಳ ಕಾರ್ಯ ವ್ಯಾಪಾರಾಗಳದಿಲ್ಲಿ ಲಾಭ ಶತ್ರು ನಾಶ ತಾ|| ೧೦, ೧೧ ಪ್ರವಾಸ, ಶುಭ ವಾರ್ತೆ

ಕನ್ಯಾ — ಮನಸ್ಸಿಗೆ ಸಮಾಧಾನವಿಲ್ಲ ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ತಂಕೆ ಸಾಮು ಪ್ರಿಯಜನ ಸಹವಾಸ. ಹಣಕಾಸಿನ ಅನುಕೂಲ್ಯ ಪ್ರವಾಸ ಸುಖಪ್ರದ ತಾ|| ೮, ೯ ಮಕ್ಕಳಿಗೆ ಕ್ಲೇಶ, ಖರ್ಚು

ತುಲಾ — ಆರೋಗ್ಯ ನೋಡಿಕೊಳ್ಳಿ ಜಮೀನು ಬಗ್ಗೆ ತಕರಾರು ಸಾಹುಕಾರರು ಮತ್ತು ಜಮೀನುದಾರರಿಗೆ ನಿರಾಶೆ. ಉದ್ಯೋಗ ನೌಕರಿಗಳಲ್ಲಿ ಹೊಸ ಸಮಸ್ಯೆ ತಾ|| ೧೦, ೧೧ ಪ್ರಿಯಜನ ವಿಯೋಗ, ಅಪಘಾತ ಭಯ

ವೃಶ್ಚಿಕ — ಪರಾಕ್ರಮ ಕಾರ್ಯ. ಆರೋಗ್ಯ ನೆಟ್ಟಗೆ ಸುಖ ಪ್ರವಾಸ ನೌಕರಿಯಲ್ಲಿ ಹೊಸ ಅಧಿಕಾರಿಗಳ ಸಹವಾಸ, ವ್ಯಾಪಾರಾದಿಗಳಲ್ಲಿ ಧನ ಪ್ರಾಪ್ತಿ. ಮಹತ್ವದ ಪತ್ರ ತಾ|| ೧೦, ೧೧ ಶುಭ ವಾರ್ತೆ ಶತ್ರು ನಾಶ

ಧನು - ಅನೇಕ ಶುಭ ಕಾರ್ಯಗಳು ಜರುಗುವುವು. ಇತರರ ಮನಸ್ಸನ್ನು ಅರಿತು ನಿಮ್ಮ ಕಾರ್ಯದ ಸಾಧನೆ [illegible], ಪ್ರವಾಸ. ತಾ|| ೮, ೧೦ ಆರ್ಥಿಕ ಸಹಾಯ, ಮಹತ್ವದ ಪತ್ರ.

ಮಕರ — ಚಿಂತಾಜನಕ ಘಟನೆ ಯೋಚಿಸಿದ ಕಾರ್ಯ ನಾಶ. ಪ್ರವಾಸ ಬೇಡ ಅಪಘಾತ ಭಯ ನೌಕರಿಯಲ್ಲಿ ಸಂಕಟ ವ್ಯಾಪಾರಾದಿಗಳಲ್ಲಿ ಶತ್ರು ಕಾಟ ತಾ|| ೭, ೮ ಅಗ್ನಿ ಭಯ, ಖರ್ಚು

ಕುಂಭ — ಉದ್ಯೋಗದ ವಾರ ವ್ಯಾಪಾರಾದಿಗಳಲ್ಲಿ ನಿರುತ್ಸಾಹ ಕುಟುಂಬದಲ್ಲಿ ಕಲಹ ತಾ|| ೧೦, ೧೧ ಕಳುವು ಕ್ಲೇಶ

ಮೀನ — ಕೈಗೊಂಡ ಕಾರ್ಯದಲ್ಲಿ ಯಶಸ್ಸು ಆರೋಗ್ಯ ಉತ್ತಮ ಮಾನಸನ್ಮಾನ ಪವಿತ್ರ ಕ್ಷೇತ್ರಗಳ ದರ್ಶನ ತಾ|| ೮, ೧೩ ಅತಿಥಿಗಳ ಆಗಮನ, ಖರ್ಚು.

ಭಾರತಕ್ಕೆ ನೇತಾಜಿ ಬೋಸರ ಅಸ್ಥಿ

ನೇತಾಜಿ ಬೋಸರ ಅಸ್ಥಿ ಶೇಷಗಳನ್ನು ಟೋಕಿಯೋವಿನ ಒಂದು ದೇವಾಲಯದಲ್ಲಿ ೧೯೪೫ ರಿಂದಲೂ ಇಟ್ಟು ಅದಕ್ಕೆ ಒಬ್ಬ ಭಿಕ್ಷುವು ಪೂಜೆ ಮಾಡುತ್ತಿರುವರೆಂದೂ, ಅದನ್ನು ಭಾರತದ ರಾಜಧಾನಿ ಅಥವಾ ಬೋಸರ ಜನ್ಮಸ್ಥಳದಲ್ಲಿ ಇಡಲು ಸೂಕ್ತ ವ್ಯವಸ್ಥೆಯನ್ನು ಶೀಘ್ರದಲ್ಲೇ ಮಾಡಲು ಬೋಸರ ದೇಶದ ಜನರು ಏರ್ಪಡಿಸುವರೆಂದು ತಾವು ನಂಬಿರುವುದಾಗಿಯೂ ಸಾಂಚಿಗೆ ಬಂದಿರುವ ಒಬ್ಬ ಬೌದ್ಧ ಭಿಕ್ಷುವು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩೦ ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಕರ್ನಾಟಕ ಸಂಗೀತ. ಮಧ್ಯಾಹ್ನ ೧.೩೦ ಚಿತ್ರ ಸಂಗೀತ ಸಂಜೆ ೫.೩೦ ಮತ್ತು ೮ ಮಹದೇವಪ್ಪ ಪಿಟೀಲು ೬.೧೦ ಗಾನ ವಿಹಾರ ೭ ಪಾಲಘಾಟ್ ಸುಬ್ರಹ್ಮಣ್ಯ ಅಯ್ಯರ್ ಕರ್ನಾಟಕ ಸಂಗೀತ ೭.೩೦ ವಿಶ್ವ ವಾರ್ತಾ ವಿಮರ್ಶೆ ೮.೩೦ ಮತ್ತು ೯.೩೦ ಸರೋಜಾ ದೇವಿ ಸಂಗೀತ ೯.೧೫ ನಾಲ್ವನೇ ಅಸ್ತಿ ವರದಿಗಾರ

ಮದ್ರಾಸ್ ಆಯವ್ಯಯದಲ್ಲಿ ೧೦½ ಕೋಟಿ ರೂ. ಕೊರತೆ

ಮದ್ರಾಸಿನ ಆಯವ್ಯಯದಲ್ಲಿ ಹತ್ತು ಕೋಟಿ ರೂ ಗಳ ಕೊರತೆ ತಲೆದೋರುವ ಸಂಭವವಿರುವುದೆಂದು ಅಲ್ಲಿನ ಮುಖ್ಯಮಂತ್ರಿ ರಾಜಾಜಿಯವರು ತಿಳಿಸಿರುತ್ತಾರೆ. ಹೊಸ ತೆರಿಗೆಯನ್ನು ಹಾಕಬೇಕಾದ ಅವಶ್ಯಕತೆಯನ್ನು ಅವರು ಒತ್ತಿ ಹೇಳಿ, ಈಗ ತೋರಿಸಲಾಗಿರುವ ೩-೪ ಕೋಟಿ ರೂ ಕೊರತೆಯು ಹತ್ತಕ್ಕೆ ಹೆಚ್ಚಬಹುದೆಂದು ನುಡಿದಿರುವರು.

ಕನ್ನಡ ಹಬ್ಬ

ರಾಜಧಾನಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್‌ನ ಕರ್ನಾಟಕ ಸಂಘದ ಆಶ್ರಯದಲ್ಲಿ ಕಳೆದ ೩ ಮತ್ತು ೪ನೇ ತಾರೀಖುಗಳಲ್ಲಿ ಕನ್ನಡ ಹಬ್ಬವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮೊದಲನೆಯ ದಿನದ ಅಧ್ಯಕ್ಷತೆಯನ್ನು ಪ್ರೊ|| ಎಸ್ ವಿ ರಂಗಣ್ಣನವರು ವಹಿಸಿದ್ದರು ಡಾ|| ಶ್ರೀಕಂಠಶಾಸ್ತ್ರಿ ಮತ್ತು ಶ್ರೀ ಎಂ ಆರ್ ಕೃಷ್ಣಮೂರ್ತಿರಾವ್‌ರವರಿಂದ ಭಾಷಣಗಳನ್ನೂ, ಕಾಲೇಜು ಕಲಾವಿದರಿಂದ ನಾಟಕ, ಮೊದಲಾದ ಕಾರ್ಯಕ್ರಮಗಳನ್ನೂ ಏರ್ಪಡಿಸಲಾಗಿತ್ತು ಎರಡನೆಯ ದಿನ ಶ್ರೀ ಕೆ.ಎನ್ ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಕವಿಗಳು ಮತ್ತು ಕಲಾವಿದರು ಎಂಬ ಕಾರ್ಯಕ್ರಮ, ಶ್ರೀ ತ. ರಾ. ಸುಬ್ಬರಾಯರಿಂದ ಭಾಷಣ, ಶ್ರೀ ನಾಗಂದ್ರಾಯ ರಿಂದ ಜನಪದ ಗೀತೆಗಳು, ಕಾಲೇಜು ಕಲಾವಿದರಿಂದ ನಾಟಕ, ಕನ್ನಡ ಗೀತೆಗಳು ಮೊದಲಾದವು ಜರುಗಿದುವು. ಪ್ರೊ. ಶ್ರೀ ಎಸ್.ಆರ್ ಗೋಪಾಲಕೃಷ್ಣರವರು ವಂದನೆಯನ್ನರ್ಪಿಸಿದರು ಈ ಪಾರಿಭಾಷಿಕ ಕಾಲೇಜಿನಲ್ಲಿ ಕರ್ನಾಟಕ ಸಂಘದ ಚಟುವಟಿಕೆಯನ್ನು ಮೆಚ್ಚಿ ಅನೇಕ ಮಹನೀಯರುಗಳು ಸಂದೇಶಗಳನ್ನು ಕಳುಹಿಸಿದ್ದರು.

ಮೆಟ್ರೊಪಾಲಿಟನ್ ಕಾಲೇಜ್ ವಿದ್ಯಾರ್ಥಿಗಳಿಗೆ ಉದ್ಯೋಗ

ಭಾರತದ ರಿಸರ್ವ್ ಬ್ಯಾಂಕಿನವರು ರಾಜಧಾನಿಯಲ್ಲಿರುವ ಚಾಂಪಿಯನ್ ಮೆಟ್ರೊಪಾಲಿಟನ್ ಕಾಲೇಜಿನಲ್ಲಿ ಓದಿದ ಐದು ವಿದ್ಯಾರ್ಥಿಗಳಿಗೆ ಈ ವರ್ಷ ಹುದ್ದೆಗಳನ್ನು ಕೊಟ್ಟಿರುತ್ತಾರೆ.

ಡಕಾಯಿತರಿಂದ ಅಂಗಡಿಯಲ್ಲಿದ್ದ ೪ ಜನರ ಅಪಹಾರ

ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳ ಒಕ್ಕೂಟದ ಭಟಿಂಡಾ ಎಂಬಲ್ಲಿನ ಗೊನಿಯಾನಾ ಮಂಡಿ ಎಂಬ ಪ್ರದೇಶದಲ್ಲಿ ಕಳೆದ ಬುಧವಾರ ಐದು ಮಂದಿ ಶಸ್ತ್ರ ಸಜ್ಜಿತ ಡಕಾಯಿತರು ಒಂದು ವ್ಯಾಪಾರಿ ಸಂಸ್ಥೆಗೆ ನುಗ್ಗಿ ಇಬ್ಬರು ದೊಡ್ಡವರು ಮತ್ತು ಇಬ್ಬರು ಹುಡುಗರನ್ನು ಅಪಹರಿಸಿ ಹಣದ ಪೆಟ್ಟಿಗೆಯನ್ನೂ ತೆಗೆದುಕೊಂಡು ಪರಾರಿಯಾದರೆಂದೂ, ಸ್ವಲ್ಪ ಹೊತ್ತಿನ ನಂತರ ದೊಡ್ಡವರಿಬ್ಬರನ್ನೂ ಬಿಟ್ಟುಬಿಟ್ಟು, ೨೦ ಸಾವಿರ ರೂ ಹಣವನ್ನು ತಂದುಕೊಟ್ಟು ಇನ್ನಿಬ್ಬರು ಹುಡುಗರನ್ನು ಬಿಡಿಸಿಕೊಂಡು ಹೋಗುವಂತೆ ಹೇಳಿ ಕಳುಹಿದರೆಂದೂ ವರದಿಯಾಗಿದೆ. ಇದೇ ರೀತಿ ಹಣ ಪಡೆಯುವ ಸಲುವಾಗಿ ಅವರು ೧೬ ಮಂದಿಯನ್ನು ತಮ್ಮ ವಶದಲ್ಲಿಟ್ಟುಕೊಂಡಿರುವರೆಂದು ಹೇಳಲಾಗಿದೆ.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಗಾಗಿ ಸೂಚನೆ

ಮೈಸೂರು ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ೨೦ ಸದಸ್ಯರು ಕೂಡಲೇ ಪಕ್ಷದ ಸಭೆಯನ್ನು ಸೇರಿಸುವಂತೆ ಸೂಚಿಸಿರುತ್ತಾರೆಂದು ಗೊತ್ತಾಗಿದೆ. ಹೊಸ ಜಿಲ್ಲಾ ಬೋರ್ಡುಗಳ ಸ್ಥಾಪನೆ ಆಹಾರದ ನೀತಿ ಇವುಗಳ ಬಗ್ಗೆ ವಿಳಂಬ, ಅನೇಕ ರೆವಿನ್ಯೂ ಸರ್ಕಲ್‌ಗಳನ್ನು ರದ್ದು ಮಾಡಿರುವುದು ಮತ್ತು ಹಲವು ಮುಖ್ಯವಾದ ಆಡಳಿತದ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದು ಈ ವಿಷಯಗಳನ್ನು ಪರಿಶೀಲಿಸಲು ಸಭೆ ಸೇರಬೇಕೆಂದು ಅವರುಗಳು ಕೋರಿರುವಂತೆ ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ದವಸಗಳು	ರೂ. ಇಂದ	ರೂ. [illegible]
ನೆಲಗಡಲೆ	೧೧ ೦.೦	೨೨ ೧೫-
ಎಳ್ಳು	೭೨ ೦ ೦	
ಹರಳು ಬೀಜ	೪೧-೦-೦	೪೫ ೨
ಹುರುಳಿ	೫೦ ೬ ೦	೫೧ ೪
ಹೆಸರು	೫೨ ೮ ೦	೫೪ ೨
ಉದ್ದು	೬೭ ೩.೦	
ಹಲಸಂದೆ	೫೦ ೦ ೦	೫೧-೪-
ಹುಚ್ಚೆಳ್ಳು	೪೫ ೮.೦	೪೮ ೨
ಅವರೆ	೫೮-೦-೦	೬೫ ೦
ಹೊಂಗೇಬೀಜ	೧೬ ೨.೦	
ಮೆಣಸಿನಕಾಯಿ [illegible]	೧೦ ೦.೦	೧೫ [illegible]
ಹುಣಸೇಹಣ್ಣು	೬ ೪.೦	
ಬೆಲ್ಲ	೩ ೮ ೦	
ತೆಂಗಿನಕಾಯಿ	೪-೧೨-೦	
ತೆಂಗಿನಕಾಯಿ ೧,೦೦೦	೧೬೬.೦.೦	೨೦೦ [illegible]

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

407. ಸಯ್ಯಾಜಿರಾವ್ ರೋಡ್,

ಮೈಸೂರು

ರಾಜಕಮಲ್, ಮೈಸೂರು

5-12-52 ರಿಂದ · ಅಮೋಘ 2ನೇ [illegible]

ಚಿನ್ನಮ್ಮಕಥಾ

COACHING SECTION,

DALVOY HIGH SCHOOL

MYSORE

MODERATE FEES

MORNING CLASSES

Golden opportunity for students appearing for the S.S.L.C. Examination in March 1953. Expert coaching by experienced teachers.

Classes have just started. Join immediately Further particulars from :—

B. S. PADKI,

Secretary.

FRESH ADMISSIONS

FOR

SHORTHAND & TYPEWRITING

Only, Leading to

November 1953 Examinations

Are now being received

At The

CHAMPION METROPOLITAN

COLLEGE OF COMMERCE,

Co-operators' Home

100 Feet Road, Mysore

Sd/- M S PUTTANNA,

Vice Principal

CITY TUTORIAL COLLEGE, MYSORE

New Buildings, Near V. V. Market.

Provides Excellent Coaching For The

S. S. L. C. Examination of March 53

Separate Classes For Girls :: Special Class For English Only

Please Enquire For Particulars

READ C T C PUBLICATIONS

Edited, Printed and Published by A. R. Nagarajan at Sadhvi Press, D Dubbiah Road, Mysore.

ರಿಜಿಸ್ಟರ್ ನಂ. 792 ॥ವಂದೇ ಮಾತರಂ॥ ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೮-೧೨-೧೯೫೨ [ಸಂಚಿಕೆ [illegible]

ಅಮೆರಿಕದ ಪ್ರಜೆಗಳಿಗೆ ಐಸೆನ್ಹೋವರ್ ಎಚ್ಚರಿಕೆ

ದೇಶದ ಅಭಿವೃದ್ಧಿಯಲ್ಲಿ ಸಹಕಾರದ ಪಾತ್ರ

ಧಾನ್ಯವರ್ತಕರ ಸಹಕಾರ ಸಂಸ್ಥೆಯಲ್ಲಿ ಮಹಾರಾಜರ ಭಾಷಣ

[illegible] ಫೋನ್] ಬೆಂಗಳೂರು ೮

[illegible] ವರ್ತಕರ ಸಹಕಾರ ಬ್ಯಾಂಕಿನ [illegible] ಆರಂಭೋತ್ಸವವನ್ನು ಶ್ರೀ [illegible] ಮಹಾರಾಜರು ಈ ದಿನ ಬೆಳಗ್ಗೆ ನೆರವೇರಿಸಿ ಸಂಸ್ಥಾನದ ಆರ್ಥಿಕಾಭಿವೃದ್ಧಿಗೆ ಸಹಕಾರ ಸಂಘಗಳು ಎಷ್ಟು ಅಗತ್ಯವೆಂಬುದನ್ನು ವಿವರಿಸಿದರು.

[illegible] ಕಳೆದ ೨೫ ವರ್ಷದಿಂದಲೂ [illegible] ಸೇವೆಯನ್ನೂ, ಸಾಧಿಸಿರುವ ಪ್ರಗತಿ[illegible]ವೃದ್ಧಿಯನ್ನೂ ವಿವರಿಸಿ ದಿನ್ನವತ್ಸ[illegible] ರಜತ ಕರಂಡದಲ್ಲಿ ಬ್ಯಾಂಕಿನ ಪರವಾಗಿ ಶ್ರೀಮನ್ಮಹಾರಾಜರಿಗೆ ಸಮರ್ಪಿಸಲಾಯಿತು.

ಸಹಕಾರ ಸಂಘಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ಪ್ರಯೋಜನಗಳನ್ನೂ, ಧಾನ್ಯ ವರ್ತಕರ ಸಂಘದಿಂದ ಮಹಾಜನರಿಗೂ ವರ್ತಕರಿಗೂ ದೊರೆಯುತ್ತಿರುವ ಸೌಲಭ್ಯಗಳನ್ನು ವಿವರಿಸಿ ಪರಸ್ಪರ ಸಹಾಯ ಸಂಘಗ[illegible] ಭಾಷಣ ಮಾಡಿದರು

ಈ ಸಂದರ್ಭದಲ್ಲಿ ಬ್ಯಾಂಕಿನವರು [illegible] ನೂತನ ಗಜಲಕ್ಷ್ಮೀ ಮಂಟಪದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರು [illegible] ನೆರವೇರಿಸಿದರು

[illegible] ಸ್ಥಾಪಿತವಾದಂದಿನಿಂದ [illegible] ಪ್ರಗತಿ ಮತ್ತು [illegible] ಕಾರ್ಯಸಾಧನೆಗಾಗಿ ಶ್ರೀಮನ್ಮಹಾರಾಜರು ಮೆಚ್ಚುಗೆಯನ್ನು ಸೂಚಿಸಿ ಅದರ [illegible]ವನ್ನು ಅಭಿನಂದಿಸಿ ಸಂಸ್ಥೆ [illegible] ಕಿಯುಳ್ಳದ್ದಾಗಿ ವೃದ್ಧಿ [illegible] ಹಾರೈಸಿದರು ವಿವಿಧ ಧರ್ಮಗ[illegible] ಗಳನ್ನೂ ಕ್ಷಾಮ ಪರಿ[illegible] ಗಳನ್ನು ಒದ[illegible] ಅಭಿನಂದನೆಯನ್ನು ಸಲ್ಲಿ[illegible]

[illegible] ಸಮಾಜದ ಆರ್ಥಿಕ ರಚನೆಗೆ [illegible] ಚಳುವಳಿಯು ಆಧಾರಪ್ರಾಯ[illegible] ಶ್ರೀಮನ್ಮಹಾರಾಜರು [illegible] ನೇ ಇಸವಿಯಿಂದಲೇ ಸಂಸ್ಥಾನದಲ್ಲಿ ಸಹಕಾರ ಚಳುವಳಿಯು ಆರಂ[illegible] ದಿನೇದಿನೇ ಯಶಸ್ವಿಯಾಗಿ ಮುಂ[illegible] ಭಾರತದ ಇತರ ಭಾಗಗಳಿಗೆ ಆ[illegible]ಪ್ರಾಯವಾಗಿದೆಯೆಂದು ಅಭಿಪ್ರಾಯ[illegible] ಸಂಸ್ಥಾನದಲ್ಲಿ ೫೦೦೦ ಸಾವಿರಕ್ಕೂ [illegible] ಸಹಕಾರ ಸಂಘಗಳಲ್ಲಿ ಸುಮಾರು [illegible] ಲಕ್ಷ ಜನರು ಪ್ರಯೋಜನ ಪಡೆಯುತ್ತಿರುವರೆಂದು ಸೂಚಿಸಿದರು ಸಹಕಾರ ಮನೋಭಾವನೆಯು ಪ್ರಾಚೀನ ಕಾಲದಿಂದ [illegible]ದೇಶದಲ್ಲಿ ರಕ್ತಗತವಾಗಿ ಬಂದ [illegible] ಸೇವಾ ಬುದ್ಧಿ[illegible] ಮತ್ತು ದಕ್ಷತೆಯುಳ್ಳ [illegible] ಈ ಸಂಘಗಳಲ್ಲಿ ಹೆಚ್ಚು [illegible] ಅವು ವಿಶೇಷ ಪರಿಣಾಮ[illegible]ವೆಂದೂ ಅವರು ತಿಳಿಸಿದರು [illegible]ಗಳಲ್ಲಿ ಮಾತ್ರವೇ ಅಲ್ಲದೆ ಗ್ರಾಮಾಂತರಗಳಲ್ಲಿಯೂ ಮತ್ತು ಕೃಷಿಕರಿಗಳಿಗೂ [illegible] ಸಹಕಾರ ಸಂಸ್ಥೆಗಳು ಅತ್ಯಾವಶ್ಯಕ[illegible]ವೆಂದು ಹೇಳಿದರು ಸಂಸ್ಥಾನ[illegible] ಚಳುವಳಿಯು ಸರ್ವತೋ[illegible] ಬೆಳೆದು ಸಾಧಿಸ ಅಭ್ಯುದಯ[illegible]ವೆಂದು ಹಾರೈಸಿದರು.

ಬೆಂಕಿ ಬಿದ್ದು, ಮಲಗಿದ್ದ ದಂಪತಿಗಳ ಮರಣ

ಹೈದರಾಬಾದಿನ ಔರಂಗಾಬಾದ್ ಜಿ[illegible] ಎಂಬಲ್ಲಿ ಮೊನ್ನೆ ದಂಪತಿಗಳು ಮಲಗಿ ನಿದ್ರಿಸುತ್ತಿದ್ದ ಕೊಠಡಿಯಲ್ಲಿಟ್ಟಿದ್ದ ದೀಪವು ಹಾಸಿಗೆಯ ಮೇಲೆ ಬಿದ್ದು ಅದು ಹತ್ತಿಕೊಂಡು, ದಂಪತಿಗಳು ಬೆಂಕಿಯ ಶಾಖದಿಂದ ಸುಟ್ಟು [illegible]ವರೆಂದು ವರದಿಯಾಗಿದೆ.

'ವಿಜಯ' ಪತ್ರಿಕೆ ಸಂಪಾದಕರಿಗೆ ಪ್ರೊ॥ ಶ್ರೀಕಂಠಯ್ಯನವರ ನೋಟೀಸು ?

ಮೈಸೂರು ೮

ವಿಜಯ ಪತ್ರಿಕೆಯ ೭-೧೨-೫೨ ರ ಸಂಚಿಕೆಯಲ್ಲಿ ಕಾಲೇಜು ದಿನಾಚರಣೆ ಸಂದರ್ಭದಲ್ಲಿ ನಡೆದ ಘಟನೆಯೆಂದು ಪ್ರೊ॥ ಶ್ರೀಕಂಠಯ್ಯನವರ ಮೇಲೆ ಮಾಡಿರುವ ಆಪಾದನೆಗಳು ಶುದ್ಧ ಸುಳ್ಳೆಂದೂ, ಆ ಲೇಖನದಲ್ಲಿ ಉಪಯೋಗಿಸಿರುವ ಶಬ್ದಗಳೂ, ಗೂಡಾರ್ಥ ಮತ್ತು ವ್ಯಂಗ್ಯೋಕ್ತಿಗಳು ತಮಗೆ ಅಪಮಾನವನ್ನುಂಟುಮಾಡುತ್ತಿರುವುವಲ್ಲದೆ ಸಾರ್ವಜನಿಕರಲ್ಲಿ ತಮ್ಮ ಬಗ್ಗೆ ತಪ್ಪುಭಾವನೆಯುಂಟುಮಾಡಿ, ತಮ್ಮ ಸ್ಥಾನಮಾನಕ್ಕೆ ಚ್ಯುತಿ ತಂದಿವೆಯೆಂದೂ, ಆದ್ದರಿಂದ "ವಿಜಯ" ಸಂಪಾದಕರು ೪೮ ಘಂಟೆಗಳೊಳಗೆ ಲಿಖಿತ ಮೂಲಕ ತಮ್ಮ ಕ್ಷಮಾಪಣೆಯನ್ನು ಸಲ್ಲಿಸಿ ತಮ್ಮ ಪತ್ರಿಕೆಯಲ್ಲೂ ಪ್ರಕಟಿಸಬೇಕೆಂದೂ ತಪ್ಪಿದಲ್ಲಿ ತಕ್ಕ ಕ್ರಮ ಕೈಗೊಳ್ಳಲಾಗುವುದೆಂದೂ ತಿಳಿಸಿ 'ವಿಜಯ' ಸಂಪಾದಕರಿಗೆ ಪ್ರೊ॥ ಶ್ರೀಕಂಠಯ್ಯನವರು ಪತ್ರ ಬರೆದಿರುವರೆಂದು ತಿಳಿದುಬಂದಿದೆ

ವಿದ್ಯಾರ್ಥಿಗಳ ಪ್ರದರ್ಶನ

ಈ ದಿನ ಬೆಳಗ್ಗೆ ಸುಮಾರು ೮೦೦ ಜನ ವಿದ್ಯಾರ್ಥಿಗಳು ಮಹಾರಾಜಾ ಕಾಲೇಜಿನ ಬಳಿ ಸಭೆ ಸೇರಿ ಹಸ್ತಪತ್ರಿಕೆಗಳನ್ನು ಹಂಚಿ ವಿಜಯ ಪತ್ರಿಕೆಗೆ ಬಹಿಷ್ಕಾರ ಎಂಬ ಘೋಷಣೆಗಳೊಡನೆ ಮೆರವಣಿಗೆ ಮಾಡಿಕೊಂಡು ಸದರಿ ಪತ್ರಿಕಾಲಯದ ಬಳಿ ಹೋಗಿ ಪ್ರದರ್ಶನ ನಡೆಸಿದರೆಂದು ತಿಳಿದುಬಂದಿದೆ.

ಗೀತಾ ಸಪ್ತಾಹ

ರಾಜಧಾನಿಯ ತಿಮ್ಮಯ್ಯಪೇಟೆ ರಾಜಕಮಲ್ ಟಾಕೀಸ್ ಬಳಿ, ಗೀತಾ ಸಪ್ತಾಹದ ಪ್ರಯುಕ್ತ ಈ ರಾತ್ರಿ ೯ ಘಂಟೆಗೆ ಕುಮಾರಿ ಕಮಲಮ್ಮನವರಿಂದ ಪಿಟೀಲು ವಾದನ, ಆನಂತರ ವೀಣೆ ಮತ್ತು ಹಾಡುಗಾರಿಕೆಗಳು ಏರ್ಪಾಡಾಗಿವೆ. ರಾತ್ರಿ ೧೦ ಕ್ಕೆ ಶ್ರೀ ಪಿ ರಾಮಸ್ವಾಮಿ ನಾಯ್ಡು ರವರ ಮಕ್ಕಳಿಂದ ಐರಾವತ ಅಥವಾ ಗಜಗೌರಿ ಎಂಬ ಹರಿಕಥೆಯೂ ನಡೆಯುವುದು.

ಕೊಲೆ ಪ್ರಯತ್ನದ ಆಪಾದನೆಯಿಂದ ಹನುಮಂತರೆಡ್ಡಿಯವರ ಖುಲಾಸೆ

ಒಳ್ಳೆಯ ನಡತೆಗಾಗಿ ಜಾಮೀನು

ಸ್ವಂ ಸು ಫೋನ್] ಬೆಂಗಳೂರು ೮

ಮಾಜಿ ಸಚಿವರಾದ ಶ್ರೀ ಹೆಚ್ ಸಿ ದಾಸಪ್ಪನವರನ್ನು ಕೊಲೆ ಮಾಡುವ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿದರೆಂದು ಮುಂತಾಗಿ ಆಪಾದನೆಗೆ ಗುರಿಯಾಗಿದ್ದ ಶ್ರೀ ಹನುಮಂತರೆಡ್ಡಿಯವರನ್ನು ಕೊಲೆ ಪ್ರಯತ್ನದ ಆಪಾದನೆಯಲ್ಲಿ ಅವರು ನಿರ್ದೋಷಿಗಳೆಂದು ಹೇಳಿ ಈ ದಿನ ಸೆಷನ್ಸ್ ನ್ಯಾಯಾಧಿಕರಣದ ಶ್ರೀ ಕೆ. ಎಸ್ ಪದ್ಮನಾಭಯ್ಯನವರು ಖುಲಾಸೆ ಮಾಡಿದರು. ಅತಿಕ್ರಮ ಪ್ರವೇಶದ ವಿಚಾರದಲ್ಲಿ ಅಸೆಸರುಗಳು ಆಪಾದಿತರನ್ನು ನಿರ್ದೋಷಿಗಳೆಂದು ಹೇಳಿರುವ ಅಭಿಪ್ರಾಯವನ್ನು ನ್ಯಾಯಾಧೀಶರು ಅಂಗೀಕರಿಸದೆ ಅದನ್ನು ಹೈಕೋರ್ಟಿನ ಪರಿಶೀಲನೆಗೆ ಕಳುಹಿಸುವುದಾಗಿ ತಿಳಿಸಿದರು

ಆಪಾದಿತರಿಗೆ ಬುದ್ಧಿ ಭ್ರಮೆ ಹಿಡಿಯಾಗಿರಲಿಲ್ಲವೆಂಬ ಅಂಶವು ಸ್ಥಾಪಿತವಾಗಿದೆ. ಕೊಲೆ ಮಾಡುವ ಉದ್ದಿಶ್ಯವಿದ್ದರೆ ಯಾವುದಾದರೂ ಆಯುಧವನ್ನು ಹಿಡಿದುಕೊಂಡು ಹೋಗುತ್ತಿದ್ದರು ಆದರೆ ಈಗ ಯಾವುದನ್ನೂ ತೆಗೆದುಕೊಂಡು ಹೋಗಿರಲಿಲ್ಲ—ಎಂಬುದಾಗಿ ನ್ಯಾಯಾಧೀಶರು ಅಭಿಪ್ರಾಯಪಟ್ಟು, ಆಪಾದನೆಯನ್ನು ೩೨೩ನೇ ಕಲಂ ಪ್ರಕಾರ ಸಾಮಾನ್ಯ ನೋವು (simple hurt) ಎಂಬುವಕ್ಕೆ ಬದಲಾಯಿಸಿ ಆಪಾದಿತರು ಮಾಡಿರುವುದು ಇದೇ ಮೊದಲನೆ ಅಪರಾಧವಾಗಿರುವುದರಿಂದ ಅವರ ವಿದ್ಯಾಭ್ಯಾಸ ಮತ್ತು ಇತರ ಅರ್ಹತೆಗಳನ್ನೂ, ಈ ಮೊಕದ್ದಮೆಯ ವಿಶೇಷ ಸನ್ನಿವೇಶವನ್ನೂ ಗಮನಿಸಿ ಅವರನ್ನು ಕೊಲೆ ಪ್ರಯತ್ನದ ಆಪಾದನೆಯಿಂದ ಖುಲಾಸೆ ಮಾಡಿರುವುದಾಗಿ ಹೇಳಿ, ಆಪಾದಿತರು ಒಂದು ವರ್ಷ ಕಾಲ ಒಳ್ಳೆಯ ನಡತೆಯಿಂದಿರುವುದಕ್ಕಾಗಿ ೧೦೦೦ ರೂಪಾಯಿನ ಸ್ವಂತ ಮುಚ್ಚಳಿಕೆಯನ್ನೂ, ಅದೇ ಮೊತ್ತದ ಇನ್ನೆರಡು ಮುಚ್ಚಳಿಕೆಗಳನ್ನೂ ಕೊಡಬೇಕೆಂದು ಆಜ್ಞೆ ಮಾಡಿದರು.

ಅಮೆರಿಕದ ರಕ್ಷಣೆಗಾಗಿ ಐಸೆನ್‌ಹೋವರರ ಕರೆ ?

ಅಮೆರಿಕದ ನೂತನ ಅಧ್ಯಕ್ಷರಾಗಿ ಚುನಾಯಿತರಾಗಿರುವ ಜ॥ ಐಸೆನ್‌ಹೋವರರು ಕೊರಿಯದ ಪ್ರವಾಸವನ್ನು ಮುಗಿಸಿಕೊಂಡು ಸ್ವದೇಶಕ್ಕೆ ಹಿಂದಿರುಗಿದ ನಂತರ ಮೊನ್ನೆ ವಾಷಿಂಗ್ಟನ್ನಿನಲ್ಲಿ ಪರ್ಲ್ ಹಾರ್ಬರಿನ ವಾರ್ಷಿಕೋತ್ಸವದ ಸಂದರ್ಭದ ಟೆಲಿವಿಷನ್ ಮೂಲಕ ಭಾಷಣಮಾಡುತ್ತಾ ೧೧ ವರ್ಷಗಳ ಕೆಳಗೆ ಅದೇ ದಿನ ರಾತ್ರಿ ಅಮೆರಿಕನರೆಲ್ಲರೂ ಕಣ್ಣುಮುಚ್ಚಿ ಗಾಢನಿದ್ರೆಯಲ್ಲಿದ್ದರೆಂದೂ, ಶೀಘ್ರವಾಗಿ ದರೋಡೆಕಾರ ಶತ್ರುಗಳು ಅಮೆರಿಕಕ್ಕೆ ಅತ್ಯಂತ ಭಾರಿ ಪೆಟ್ಟನ್ನು ಕೊಟ್ಟಿದ್ದರೆಂದೂ ಹೇಳಿ ಆ ಪ್ರಕರಣವು ಮತ್ತೆ ನಡೆಯದಂತೆಯೂ, ಸ್ವತಂತ್ರ ರಾಷ್ಟ್ರವಾಗಿ ಅಮೆರಿಕವು ಉಳಿಯಲು ಇರುವ ಸವಾಲನ್ನು ಎದುರಿಸಲು ಅಲ್ಲಿನ ಸಮಸ್ತ ಸ್ತ್ರೀಪುರುಷರ ನೆರವೂ ಬೇಕಾಗಿದೆಯೆಂದೂ ಸೂಚಿಸಿ ಇನ್ನು ಎಂದೆಂದಿಗೂ ಅಮೆರಿಕದವರು ದುರ್ಬಲರಾಗಿರದೆ ಅವರು ಶಕ್ತಿಯುತರಾಗಿಯೂ ಜಾಗ್ರತರಾಗಿಯೂ ಇರಬೇಕೆಂದು ಕೋರಿದ್ದಾರೆ

ವಿಮಾನ ಸಮುದ್ರಕ್ಕೆ ಬಿದ್ದು ೩೭ ಜನರ ಮರಣ

ಸ್ಪೇನಿನ ರಾಜಧಾನಿ ಮ್ಯಾಡ್ರಿಡ್ಡಿನಿಂದ ಹವಾನಾವಿಗೆ ಮೊನ್ನೆ ಹೊರಟ ವಿಮಾನವೊಂದು ಮಾರ್ಗದಲ್ಲಿ ಕ್ಯಾಬಾ[illegible] ಬಂದರಿನಲ್ಲಿ ಸ್ವಲ್ಪ ಹೊತ್ತು ಇಳಿದಿದ್ದು ಮುಂದೆ ಹೊರಟಾಗ ಸಮುದ್ರ ಪ್ರವೇಶದ ಮೇಲೆ ವಿಮಾನದ ಇಂಜನ್ನಿಗೆ ಬೆಂಕಿ ಹತ್ತಿಕೊಂಡು ಆಸ್ಫೋಟಿಸಿ ಬಿದ್ದಿತೆಂದೂ, ಅದರ ಪರಿಣಾಮವಾಗಿ ೩೭ ಜನರು ಮೃತಪಟ್ಟರೆಂದೂ ವರದಿಯಾಗಿದೆ. ಅವರಲ್ಲಿದ್ದ ಮೂವರು ಮಹಿಳೆಯರು ಮತ್ತು ಒಬ್ಬ ಪುರುಷನನ್ನು ದೋಣಿಗಳ ಮೂಲಕ ರಕ್ಷಿಸಿ, ಮೃತದೇಹಗಳನ್ನು ದಡಕ್ಕೆ ತರಲಾಯಿತೆಂದು ಗೊತ್ತಾಗಿದೆ

ಎಲ್. ಎಸ್. ಮತ್ತು ಸ್ಕೂಲ್ ಫೈನಲ್ ತರಗತಿಗಳು

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದ ಆಶ್ರಯದಲ್ಲಿ ಮೇಲ್ಕಂಡ ತರಗತಿಗಳು ಬೆಳಗ್ಗೆ ಮತ್ತು ಸಂಜೆ ನಡೆಯುತ್ತಿವೆ. ಬಡ ಹುಡುಗರ ಅನುಕೂಲಕ್ಕೆ ತಕ್ಕಂತೆ ಪಾಠ ಹೇಳಿಕೊಡಲಾಗುವುದು. ಉಚಿತ ಹಿಂದಿ ತರಗತಿಗಳೂ ನಡೆಯುತ್ತಿವೆ ಈ ತಿಂಗಳು ೧೫ರ ವರೆಗೆ ಸೇರುವ ಅವಕಾಶವಿರುವುದು

ವಿದ್ಯಾರ್ಥಿಗಳ ಸಭೆ

ವಿದ್ಯಾರ್ಥಿಗಳ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವುದಕ್ಕೂ, ಸಮಾಜದಲ್ಲಿ ವಿದ್ಯಾರ್ಥಿಗಳ ಗೌರವವನ್ನು ಹೆಚ್ಚಿಸಿಕೊಳ್ಳುವುದಕ್ಕೂ, ವಿದ್ಯಾರ್ಥಿಗಳ ಸಂಘವೊಂದು ಅವಶ್ಯಕವಾಗಿರುವುದರಿಂದ ಕಾಲೇಜು ಮತ್ತು ಹೈಸ್ಕೂಲ್ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರೆಲ್ಲರೂ ನಾಳೆ ಸಂಜೆ ೫-೩೦ಕ್ಕೆ ನರಸಿಂಹರಾಜಪುರದಲ್ಲಿರುವ ವಿದ್ಯಾಶ್ರಮ (ಮುಸ್ಲಿಂ ಹಾಸ್ಟೆಲ್ ಹತ್ತಿರ) ಕಟ್ಟಡದಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸಿ ಸಹಕರಿಸಬೇಕೆಂದು ವ್ಯವಸ್ಥಾಪಕರು ಕೋರಿರುತ್ತಾರೆ.

○ ದಿವಂಗತ ನ್ಯಾಯಮೂರ್ತಿ ವೆಂಕಟರಂಗಯ್ಯಂಗಾರ್ಯರ ಗುಣಗಾನ ಮಾಡಿ ಈ ದಿನ ಬೆಂಗಳೂರು ಹೈಕೋರ್ಟಿನಲ್ಲಿ ಭಾಷಣಗಳಾದುವು

ಪ್ರಪಂಚ ಯುದ್ಧದಿಂದ ಭಾರತವು ದೂರವಿರುವುದು

ಪ್ರಪಂಚದ ಯಾವ ಯುದ್ಧದಲ್ಲೇ ಆಗಲಿ ಭಾರತವು ಭಾಗವಹಿಸದೆ ದೂರವಿರುವುದೆಂದು ಪ್ರಧಾನಿ ನೆಹರೂರವರು ಬೊಂಬಾಯಿಯಲ್ಲಿ ನೆನ್ನೆ ತಿಳಿಸಿದರು. ಭಾರತವು ಶಾಂತಿಗಾಗಿಯೇ ಶ್ರಮಿಸುವುದೆಂದೂ, ಅದನ್ನು ಬಿಟ್ಟು ಬೇರೆ ಮಾರ್ಗವನ್ನು ಅನುಸರಿಸಲು ಭಾರತವನ್ನು ಯಾರೂ ಬಲವಂತಪಡಿಸಲು ಅವಕಾಶ ಕೊಡುವುದಿಲ್ಲವೆಂದೂ ಅವರು ಹೇಳಿದರು. ಕೊರಿಯಾವನ್ನು ಉಳಿಸಲು ಪ್ರಪಂಚವು ಅಲ್ಲಿ ಪ್ರವೇಶಿಸಿ ಈಗ ಆ ರಾಜ್ಯವು ಮಣ್ಣುಗೂಡಿರುವುದೆಂದು ಅವರು ಅಭಿಪ್ರಾಯಪಟ್ಟು, ಈ ಯುದ್ಧವು ಮತ್ತೊಂದು ಭಾರಿ ಪ್ರಪಂಚ ಯುದ್ಧಕ್ಕೆ ದಾರಿಯಾಗಬಹುದೆಂದು ಭೀತಿ ಪಟ್ಟರು. ಮುಂದಿನ ಯುದ್ಧವು ಅತ್ಯಂತ ಘೋರವಾಗುವುದೆಂದೂ, ಅಣು ಮತ್ತು ಜಲಜನಕ ಬಾಂಬುಗಳಿಂದ ನಾಗರಿಕತೆಯ ವಿನಾಶವೇ ಆಗುವುದೆಂದೂ ಅವರು ಹೇಳಿದರು.

ಕೊರಿಯಾ ಶಾಂತಿ ಬಗ್ಗೆ ಭಾರತದ ಪಾತ್ರವನ್ನು ಅವರು ಪ್ರಸ್ತಾಪಿಸಿ ಹಲವು ರಾಜ್ಯಗಳು ಭಾರತದ ನಿರ್ಣಯವನ್ನು ಒಪ್ಪಿದುವೆಂದೂ, ಕೆಲವು ಅಂಗೀಕರಿಸಲಿಲ್ಲವೆಂದೂ ತಿಳಿಸಿದರು. ರಷ್ಯವು ನಿರ್ಣಯವನ್ನು ತಿರಸ್ಕರಿಸುವಾಗ ಭಾರತದ ಬಗ್ಗೆ ಆಡಿದ ಮಾತುಗಳು ವಿಚಾರರಹಿತವಾಗಿವೆಯೆಂದು ಅವರು ಹೇಳಿ, ರಷ್ಯ ಮತ್ತು ಚೀಣಾಗಳು ಭಾರತೀಯರ ನಡವಳಿಕೆ ಬಗ್ಗೆ ಅಪವಾದವನ್ನು ಮಾಡುತ್ತಿರುವುದಕ್ಕೂ, ಕೊರಿಯಾ ವಿಷಯದ ಬಗ್ಗೆ ಭಾರತದ ಪ್ರಾಮಾಣಿಕತೆಯನ್ನು ಶಂಕಿಸುತ್ತಿರುವುದಕ್ಕೂ ವಿಷಾದವನ್ನು ವ್ಯಕ್ತಪಡಿಸಿದರು. ಭಾರತವು ಮೋಸವನ್ನು ಮಾಡುತ್ತಿರುವುದೆಂದು ಆ ದೇಶಗಳು ಭಾವಿಸಿರುವಂತೆ ಕಾಣಬರುವುದಾಗಿಯೂ, ಅನ್ಯರ ವಿರೋಧಿ ರಾಷ್ಟ್ರಗಳು ತಯಾರಿಸಿರುವ ಹಂಚಿಕೆಗಳನ್ನು ರಷ್ಯಾ ಮತ್ತು ಚೀಣಗಳು ಒಪ್ಪುವಂತೆ ಭಾರತವು ಪ್ರೇರೇಪಿಸಿರುವುದೆಂದು ಅವು ಭಾವಿಸಿರುವುವೆಂದೂ ಅವರು ಹೇಳಿದರು. ಚೀಣಾ ರಷ್ಯಗಳು ಕಟುವಾದ ಟೀಕೆಗಳನ್ನು ಮಾಡಿವೆ, ಬಹುಶಃ ಉದ್ರೇಕದಿಂದ ಹಾಗೆ ಮಾಡಿರಬೇಕು. ಆದರೆ ಭಾರತವು ತನ್ನ ಕರ್ತವ್ಯವನ್ನು ಪಾಲಿಸಿದೆ. ಕೊರಿಯದಲ್ಲಿ ಶಾಂತಿ ಸ್ಥಾಪನೆಗಾಗಿ ಇನ್ನು ಯಾವುವನ್ನು ಮಾಡಬೇಕಾದರಾಗಲೀ, ಭಾರತವು ತನ್ನ ಕೆಲಸವನ್ನು ಮುಂದುವರಿಸುವುದೆಂದು ಅವರು ಸ್ಪಷ್ಟಪಡಿಸಿದರು.

ಸಿದ್ಧರಾಮ ಚರಿತೆಯ
ಸಂಗ್ರಹದ ಕೈಗನ್ನಡಿ
ಬೆಲೆ ೧ ೮ ೦
ಕೃಷ್ಣ ಕಂಪನಿ,
ಸೂರಿ ರಸ್ತೆ . ಮೈಸೂರು

ಸುಲಭ ಬೆಲೆಯಲ್ಲಿ ಕೃತಕ ಅಕ್ಕಿ

ಹೊರಗಿನಿಂದ ಆಮದಾಗುವ ಅಕ್ಕಿಗಿಂತಲೂ ಕೃತಕ ಅಕ್ಕಿ ಬೆಲೆಯು ಕಾಲು ಭಾಗದಷ್ಟು ಕಡಿಮೆಯಾಗಿರುವುದೆಂದು ಕೇಂದ್ರದ ಸಂಶೋಧನಾ ಖಾತೆ ಮಂತ್ರಿ ಕೆ ಡಿ ಮಾಳವೀಯರವರು ತಿಳಿಸಿರುತ್ತಾರೆ. ಮೈಸೂರಿನ ಆಹಾರ ಸಂಶೋಧನಾಲಯದಲ್ಲಿ ಸಾಮಾನ್ಯ ಅಕ್ಕಿಯಂತೆ ಕಾಣುವ, ಸುಲಭವಾಗಿ ಪಚನವಾಗುವ ಮತ್ತು ಸಾರವತ್ತಾದ ಕೃತಕ ಅಕ್ಕಿಯನ್ನು ತಯಾರಿಸುವ ಬಗ್ಗೆ ಸಂಶೋಧನೆಯು ನಡೆಯುತ್ತಿರುವುದೆಂದೂ ಅವರು ತಿಳಿಸಿರುವರು.

ಕಬ್ಬಪಳ್ಳಿ ಮಿಡ್ಲ್ ಸ್ಕೂಲಿನಲ್ಲಿ ಸಂಸ್ಕೃತಿ ಪ್ರಸಾರ

ಈ ಶಾಲೆಯಲ್ಲಿ 'ಗೀತಾ ಏಕಾದಶಿ' ದಿವಸ ಗೀತಾ ಜಯಂತಿ ಉತ್ಸವವು ವೈಭವದಿಂದ ನೆರವೇರಿತು. ಮುಖ್ಯೋಪಾಧ್ಯಾಯರು ಗೀತೆ ಮತ್ತು ಗೀತಾ ಏಕಾದಶಿ ಇವುಗಳ ವೈಶಿಷ್ಟ್ಯವನ್ನು ಸೂಕ್ಷ್ಮವಾಗಿ ತಿಳಿಸಿದರು. ಡಾ॥ ಎ ಸಿ ಭಟ್ಟಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ನಾರಾಯಣಮೂರ್ತಿ, ಕೆ ಎಂ ಗುರುಸ್ವಾಮಿ, ವೀರಪ್ಪ, ರಂಗಪ್ಪ ಇವರುಗಳು ಭಾರತ, ರಾಮಾಯಣ ಶ್ರೀ [illegible] ಇವುಗಳ ಕೆಲವು ಭಾಗಗಳನ್ನು ಓದಿದರು. [illegible] ಗೀತೆಯ ರಹಸ್ಯಗಳನ್ನು ವಿವರಿಸಿದರು. ನಂತರ ಅಧ್ಯಕ್ಷರ ಭಾಷಣ, ರಾಷ್ಟ್ರಗೀತೆಯೊಡನೆ ಉತ್ಸವವು ಮುಗಿಯಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ 8 ... ಸಂಗೀತ ಮಧ್ಯಾಹ್ನ 1 30 ... ಶಂಕರರಾವ್ ಹೊಂಬಾಳಕರ್, ಹಿಂದೂಸ್ಥಾನಿ ಸಂಗೀತ ಸಂಜೆ 5 30 ... ಪಾರಿಜಾತ ... 6 00 ಗಾನವಿಹಾರ 6 30 ಶಂಕರರಾವ್ ಹೊಂಬಾಳಕರ್, ಹಿಂದೂಸ್ಥಾನಿ ಸಂಗೀತ 8 20 ವೃಂದ ಸಂಗೀತ 9 00 ... ಇಂಗ್ಲಿಷ್ ಭಾಷಣ 9 40 ಗಾನಾಮೃತ

ಚೀಣಾದಲ್ಲಿ ಹೆಚ್ಚಿನ ವಿವಾಹ ವಿಚ್ಛೇದನ

ಚೀಣದ ನ್ಯಾಯಾಲಯಗಳಲ್ಲಿರುವ ವಿವಾಹ ವಿಚ್ಛೇದನದ ಅರ್ಜಿಗಳನ್ನು ಬೇಗ ಇತ್ಯರ್ಥ ಪಡಿಸಬೇಕೆಂದು ಒತ್ತಾಯ ಮಾಡಲಾಗುತ್ತಿದೆಯೆಂದೂ, ಇಂತಹ ಅರ್ಜಿಗಳು ಇನ್ನೂ ಹೆಚ್ಚುಹೆಚ್ಚಾಗಿ ಬರಲಿವೆಯೆಂದೂ ಹೇಳಲಾಗಿದೆ.

ಹನುಮಂತರೆಡ್ಡಿ ನಿರ್ದೋಷಿಯೆಂದು ಅಸೆಸರ ಅಭಿಪ್ರಾಯ

ಮಾಜಿ ಮಂತ್ರಿ ಶ್ರೀ ಹೆಚ್ ಸಿ ದಾಸಪ್ಪನವರ ಕೊಲೆ ಪ್ರಯತ್ನದ ಆಪಾದನೆಗೆ ಗುರಿಯಾಗಿರುವ ಶ್ರೀ ಹನುಮಂತರೆಡ್ಡಿಯವರು ಕೊಲೆ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿದರೆಂಬ ಆಪಾದನೆಯಲ್ಲಿ ನಿರ್ದೋಷಿಗಳೆಂದು ಅಸೆಸರು ಅಭಿಪ್ರಾಯಪಟ್ಟಿರುತ್ತಾರೆ. ಕೊಲೆ ಪ್ರಯತ್ನದ ಆಪಾದನೆಯಲ್ಲಿ ಅವರು ತಪ್ಪಿತಸ್ಥರಲ್ಲವೆಂದು ಮೂವರು ಅಸೆಸರುಗಳು ಅಭಿಪ್ರಾಯಪಟ್ಟಿರುತ್ತಾರೆ. ಮತ್ತೊಬ್ಬರು "ಅನುಮಾನವಿರುವುದೆಂದು" ಅಭಿಪ್ರಾಯಪಟ್ಟಿರುತ್ತಾರೆ. ದಾಸಪ್ಪನವರನ್ನು ಸಾಧಾರಣವಾಗಿ ಗಾಯಗೊಳಿಸಿರುವರೆಂದು ಇತರ ಮೂವರು ಹೇಳಿರುತ್ತಾರೆ. ಆಪಾದಿತರು ಇತ್ತ ಹೇಳಿಕೆಯಲ್ಲಿ ಕೃತ್ಯದ ಅರಿವು ತಮಗಿರಲಿಲ್ಲವೆಂದೂ, ಅಂತರ್ವಾಣಿಯ ಪ್ರೇರಣೆಯಂತೆ ಹಾಗೆ ವರ್ತಿಸಿದುದಾಗಿಯೂ ತಿಳಿಸಿದ್ದರು.

ಸತ್ಕಾರ ಸಮಾರಂಭ

ರಾಜಧಾನಿಯ ಊರನಗೆರೆ ವೀರಶೈವರ ಪೈಕಿ ಪ್ರಥಮ ಪದವೀಧರರಾದ ಶ್ರೀ ... ಬಿ ಪ್ರಭುಸ್ವಾಮಿಯವರ ಗೌರವಾರ್ಥವಾಗಿ ಅಲ್ಲಿನ ವೀರಶೈವರು ಸತ್ಕಾರ ಸಮಾರಂಭವೊಂದನ್ನು ಕಳೆದ 4 ನೇ ತಾ॥ ನಡೆಸಿದರು. ಶ್ರೀ ಬಿ ಸುಬ್ಬಣ್ಣನವರ ಅಧ್ಯಕ್ಷತೆ ವಹಿಸಿದ್ದರು.

ಅಮೋಘ ಸಂಗೀತ ಕಛೇರಿ
ಬಿನಾರಂ ಕೃಷ್ಣಪ್ಪನವರ
ರಾಮ ಮಂದಿರಂ, ಮೈಸೂರು.
10-12 52 ನೇ ಬುಧವಾರ
ಸಾಯಂಕಾಲ 6 ಘಂಟೆಗೆ
ರಾಜ್ಯ ಸೇವಾಸಕ್ತ, ಸಂಗೀತ ಕಲಾನಿಧಿ
ಸೆಮ್ಮಂಗುಡಿ ಶ್ರೀನಿವಾಸಯ್ಯರ್
ರವರ ಹಾಡುಗಾರಿಕೆ
ಸಂಗೀತರತ್ನ, ಆಸ್ಥಾನ ವಿದ್ವಾನ್
ಚೌಡಯ್ಯನವರ ಪಿಟೀಲು,
ತಿರುವಾಂಕೂರು ಆಸ್ಥಾನ ವಿದ್ವಾನ್
ಪಾಲಘಾಟ್ ಮಣಿ ಅಯ್ಯರ್ ರವರ
ಮೃದಂಗವೂ ಸಹ
2 ಮೆಂಬರುಗಳಲ್ಲದವರಿಗೆ
ಟಿಕೆಟ್ ಮೂಲಕ ಪ್ರವೇಶ
— ಟಿಕೆಟ್ ದರ —
ದೊಡ್ಡವರಿಗೆ 3 ರೂ, ಹುಡುಗರಿಗೆ 1 8-0
(ಯಾರಿಗೂ ಉಚಿತ ಪ್ರವೇಶವಿಲ್ಲ)

Edited, Printed and Published by A R. Nagarajan at Sadhvi Press, D Subbiah Road, Mysore

ಗಂಡಂದಿರ ಮೇಲೆ ಲಕ್ನೋ ಮಹಿಳೆಯರ ದೂರು

ಲಕ್ನೋವಿನ 30 ವರ್ಷಕ್ಕಿಂತಲೂ ಕಿರಿ ವಯಸ್ಸಿನ ಯುವತಿಯರು ಅಲ್ಲಿ ನ್ಯಾಯಾಧೀಶರ ಬಳಿ ತಂದೆ, ತಾಯಿಯರು, ಗಂಡಂದಿರು ಮತ್ತು ಪೋಷಕರ ಹತೋಟಿಯಿಂದ ತಮ್ಮನ್ನು ತಪ್ಪಿಸಬೇಕೆಂದು ಕೋರಿ, ದೂರು ಕೊಟ್ಟಿರುತ್ತಾರೆ. ಒಬ್ಬ ತರುಣಿಯನ್ನು ಹಣದಾಸೆಗಾಗಿ ಮಾತಾಪಿತೃಗಳು ಒಬ್ಬ ವೃದ್ಧನಿಗೆ ಮಾರಲೆತ್ನಿಸಿದರೆಂದು ಹೇಳಲಾಗಿದೆ. ವಿವಾಹಿತ ತರುಣಿಯರು ತಮ್ಮ ಗಂಡಂದಿರು ಕ್ರೂರಿಗಳು ಮತ್ತು ವ್ಯಭಿಚಾರಿಗಳು, ತಮ್ಮನ್ನು ಕಂತರೆ ಅಲಕ್ಷ್ಯ ಮಾಡುವರು ಎಂದು ಹೇಳಿರುವರು. ಮತ್ತೊಬ್ಬ ಸ್ತ್ರೀಯು ತನ್ನ ಗಂಡನನ್ನು ಷಂಡನೆಂದು ಹೇಳಿರುತ್ತಾಳೆ.

ಧಾತ್ರಿ ಹವನ

ನಂಜನಗೂಡಿನ ಕಾವೇರಿ ಪ್ರಾಕಾರದ ಕಾರ್ಖಾನೆ ಬಳಿ ಇರುವ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರಿಗೆ ಇದೇ ಬುಧವಾರ 10ನೇ ತಾ॥ ಅಭಿಷೇಕ ಮತ್ತು ಮಹಾ ಮಂಗಳಾರತಿಗಳನ್ನೂ ಧಾತ್ರಿ ಹವನವನ್ನೂ ಏರ್ಪಡಿಸಲಾಗಿದೆ. ವೈಶ್ಯ ಮತ ಬಾಂಧವರು ದಯಮಾಡಿಸಬೇಕೆಂದು ಅಲ್ಲಿನ ಆರ್ಯ ವೈಶ್ಯ ಮಂಡಲಿಯವರು ಕೋರಿರುತ್ತಾರೆ.

ವಿವಾಹ ಮಹೋತ್ಸವ

ಚಿಟ್ಟನಪುರದ ದೊಡ್ಡ ಮನೆ ರಂಗಣ್ಣನವರ ಮಕ್ಕಳಾದ ಶ್ರೀ ಜವರಾಯಪ್ಪನವರು ತಮ್ಮ ಪುತ್ರಿ ಸೌ॥ ಸಾವಿತ್ರಮ್ಮನನ್ನು ಗುಂಡ್ಲುಪೇಟೆಯಲ್ಲಿರುವ ವೇ॥ ಬ್ರ॥ ಸುಬ್ಬಾಜೋಯಿಸರ ಪುತ್ರರಾದ ಶ್ರೀ ಸೀತಾರಾಮುರವರಿಗೆ ಕೊಟ್ಟು ಈ ದಿನ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು.

ಅಂಗಡಿ ಮತ್ತು ಮನೆ
ಬಿಕರಿಗಿದೆ
ಅಶೋಕಾ ರಸ್ತೆಯಲ್ಲಿರುವ 603-603/1 ನಂಬರಿನ ಮನೆ ಮತ್ತು ಅಂಗಡಿ ಬಿಕರಿಗಿದೆ
ವಿಸ್ತೀರ್ಣ - ಪೂರ್ವಪಶ್ಚಿಮ 62 ಅಡಿ, ದಕ್ಷಿಣೋತ್ತರ 1 ...
ವಿವರಗಳನ್ನು ಸಯ್ಯಾಜಿರಾವ್ ರಸ್ತೆಯಲ್ಲಿರುವ ಅಂಬಿಕಾ ಸ್ಟೋರ್ಸ್‌ನಲ್ಲಿ ವಿಚಾರಿಸಬಹುದು

ಶ್ರೀ ರಮಣಿ
ಸಂಗೀತ ವಿದ್ಯಾಲಯ
1064-1, ಚಾಮುಂಡಿ ಅಗ್ರಹಾರ
(... ಎದುರಿಗೆ)
ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ
ಎ. ಕೃಷ್ಣಮೂರ್ತಿ
ವ್ಯವಸ್ಥಾಪಕ

ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು, ಚೋಳಿ ಪೀಸುಗಳು
ಪೂನಾ, ನಾಗಪೂರ್ ಸೀರೆಗಳಿಗೆ (ಫೋನ್ ನಂ 446)
★ M. V. ಬೋಪಯ್ಯ
ಮೈಸೂರು

ರಿಜಿಸ್ಟರ್ಡ್ ನಂ. 798 ||ವಂದೇ ಮಾತರಂ|| ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೯-೧೨-೧೯೫೩ [ಸಂಚಿಕೆ ೧೮೯

ಫ್ರೆಂಚರ ಗುಂಡಿಗೆ ೪೧ ಮೊರಾಕನ್ನರ ಬಲಿ

... ಘರ್ಷಣೆಯಲ್ಲಿ ೪೧ ಜನರ ಮರಣ

ಮೊರಾಕ್ಕೋವಿನ ಪ್ರೇತ್ಯ ನಗರವಾದ ಕಸಬ್ಲಾಂಕಾದಲ್ಲಿ ನೆನ್ನೆ ಪೋಲೀಸರಿಗೂ, ಪ್ರದರ್ಶನಕಾರರಿಗೂ ಘರ್ಷಣೆ ನಡೆದ ಪರಿಣಾಮವಾಗಿ ೪೧ ಜನರು ಮಡಿದರೆಂದೂ, ಇಬ್ಬರು ಫ್ರೆಂಚರನ್ನು ಇರಿದು ಕೊಲ್ಲಲಾಯಿತೆಂದೂ ವರದಿಯಾಗಿದೆ. ಗಲಭೆ ನಿಲ್ಲಿಸಲು ಮಿಲಿಟರಿಯವರು ಪೋಲೀಸರಿಗೆ ಸಹಾಯ ಮಾಡಿದರು. ಫ್ರೆಂಚ್ ಪೋಲೀಸರು ೭೫ ಜನರನ್ನು ದಸ್ತಗಿರಿ ಮಾಡಿರುತ್ತಾರೆ.

... ಸಿಸನ್ಹೋವರರ ರಕ್ಷಣೆಗಾಗಿ ೧,೩೦೦ ವಿಮಾನಗಳು

ಅಮೆರಿಕದ ನೂತನ ಅಧ್ಯಕ್ಷರಾಗಿ ಚುನಾಯಿತರಾಗಿರುವ ಜನರಲ್ ಐಸೆನ್‌ಹೋವರರು ಇತ್ತೀಚೆಗೆ ಕೊರಿಯಾದಲ್ಲಿ ಪ್ರವಾಸ ಕೈಗೊಂಡಾಗ ಮಿತ್ರ ರಾಷ್ಟ್ರಗಳ ೧,೩೦೦ ವಿಮಾನಗಳು ಕಾವಲ ಕಾಯುತ್ತಾ ಅವರಿಗೆ ರಕ್ಷಣೆ ನೀಡಿದ ವಿಷಯ ವರದಿಯಾಗಿದೆ. ಐಸೆನ್‌ಹೋವರರು ... ದ್ವೀಪಕ್ಕೂ ಭೇಟಿ ಇತ್ತಿದ್ದ ... ಗೊತ್ತಾಗಿದೆ. ಅವರು ದಕ್ಷಿಣ ಕೊರಿಯದ ರಾಜಧಾನಿ ಸಿಯೋಲಿಗೆ ... ಹಿಂದಿರುಗುವ ಸಮಯದ ... ಸುಮಾರು ... ವಿಮಾನಗಳು ... ಮೇಲೆ ಧಾಳಿ ನಡೆಸಲು ಪ್ರ... ಪಟ್ಟವೆಂದೂ, ಆದರೆ ಅವುಗಳನ್ನು ಹಿಂದಕ್ಕಟ್ಟಿ ಐಸೆನ್‌ಹೋವರರನ್ನು ... ಸಲಾಯಿತೆಂದೂ ವರದಿಯಾಗಿದೆ.

ತಮಿಳು ನಾಡಿನಲ್ಲಿ ಪುನಃ ಮಳೆ

ತಮಿಳು ನಾಡಿನಲ್ಲಿ ಮೊನ್ನೆಯಿಂದ ಪುನಃ ಮಳೆಯು ಸುರಿಯುತ್ತಿದೆ. ನಾಗಪಟ್ಟಣದಲ್ಲಿ ಮೊನ್ನೆ ೪ ಅಂಗುಲ ಮಳೆಯಾಗಿ ಬೇಸಿಗೆ ತುಂಬಾ ನಷ್ಟವಾಗಿದೆ. ... ಪುರದಲ್ಲಿ ೧೧ ಅಂಗುಲ ಮಳೆಯೂ ... ಕುಂಭಕೋಣದಲ್ಲಿ ಸುಮಾರು ... ಅಂಗುಲ ಮಳೆಯಾಗಿದೆ. ಅಲ್ಲಿ ಮಂಟಪ ... ಕುಸಿದು ಒಬ್ಬ ಹೆಂಗಸು ಮೃತಪಟ್ಟಿರುತ್ತಾಳೆ.

ಮತ್ತೊಂದು ಸಭಾ ಪರಿತ್ಯಾಗ

ಪಾರ್ಲಿಮೆಂಟಿನಲ್ಲಿ ನೆನ್ನೆ ಆಂಧ್ರರಾಷ್ಟ್ರ ಉಪವಾಸ ಸಂಬಂಧವಾಗಿ ಸಭಾ ಪರಿತ್ಯಾಗವಾದ ನಂತರ ಸಂಜೆ ಮತ್ತೊಂದು ಪರಿತ್ಯಾಗ ಪ್ರಕರಣವು ಮೈಸೂರಿನ ಶ್ರೀ ಎಂ ಎಸ್. ಗುರುಪಾದಸ್ವಾಮಿಯವರ ಮುಖಂಡತ್ವದಲ್ಲಿ ನಡೆಯಿತು. ಇವರಲ್ಲಿ ಕಮ್ಯೂನಿಸ್ಟ್ ಸದಸ್ಯರು ... ಪಾತ್ರ ವಹಿಸಿದ್ದರು. ಕಬ್ಬಿಣ ... ಉತ್ಪನ್ನ ಕಂಪೆನಿಗಳನ್ನು ಏಕ್ಯ ... ಸುವ ಬಗ್ಗೆ ತರಲಾಗಿದ್ದ ಮಸೂದೆ ... ಯನ್ನು ಮುಕ್ತಾಯ ಮಾಡಲು ಸಭೆಯು ನಿರ್ಧರಿಸಿರುವುದೇ ಇದಕ್ಕೆ ಕಾರಣವಾಗಿತ್ತು.

ಸಲಾರ್‌ಕಿಮಿಡಿ ಯುವರಾಜರ ಮರಣ

ಸಲಾರ್‌ಕಿಮಿಡಿಯ ಯುವರಾಜರು ... ಒಕ್ಕನಲ್ಲಿರುವ ತಮ್ಮ ಮನೆಯ ಕೋಟೆ ... ಮೊನ್ನೆ ಬೆಳಿಗ್ಗೆ ಸತ್ತು ಬಿದ್ದಿದ್ದ ... ವರದಿಯಾಗಿದೆ. ಅವರ ಬಳಿ ಒಂದು ಬಂದೂಕವು ಇದ್ದಿತು.

ಗಲಭೆಗಾಗಿ ವಿದ್ಯಾರ್ಥಿಗಳ ದಸ್ತಗಿರಿ

ಮೈಸೂರು ೯

ಮಹಾರಾಜಾ ಕಾಲೇಜು ವಿದ್ಯಾರ್ಥಿಗಳು ನೆನ್ನೆ "ವಿಜಯ" ಪತ್ರಿಕಾಲಯದ ಮುಂದೆ ಪ್ರದರ್ಶನ ನಡೆಸಿ ಗಲಭೆ ಮಾಡಿದ ಸಂದರ್ಭದಲ್ಲಿ ಶ್ರೀಗಳಾದ ವೇದಾಂತ ಹೆಮ್ಮಿಗೆ, ಗಂಗಾಧರಪ್ಪ, ಮತ್ತು ಬಿ ಶ್ರೀಕಂಠಪ್ಪನವರನ್ನು ದೇವರಾಜ ಪೋಲೀಸರು ದಸ್ತಗಿರಿ ಮಾಡಿ, ಅವರುಗಳ ಮೇಲೆ ೧೪೭, ೧೪೮, ೪೫೧, ಮತ್ತು ೩೩೯ನೇ ಸೆಕ್ಷನ್ ಪ್ರಕಾರ ಧಾಳಿ, ಸಾಮಾನು ಗಳ ನಾಶ, ಮತ್ತು ಅಕ್ರಮ ಪ್ರವೇಶಕ್ಕಾಗಿ, ಕೇಸು ರಿಜಿಸ್ಟರು ಮಾಡಿಕೊಂಡಿರುತ್ತಾರೆ. ದಸ್ತಗಿರಿಯಾಗಿದ್ದವರನ್ನು ಸ್ವಂತ ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ.

ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆ ೧೩ಕ್ಕೆ

ಕ್ರಾಫರ್ಡ್ ಹಾಲ್ ಪ್ರಕರಣದ ಸಂಬಂಧವಾಗಿ ಶ್ರೀ ಶ್ರೀಕಂಠಪ್ಪ ಮುಂತಾದವರ ಮೇಲಿರುವ ಮೊಕದ್ದಮೆಯನ್ನು ನಗರದ ನ್ಯಾಯಾಧೀಶರು ೧೩ನೇ ತಾ|| ಗೆ ಮುಂದುವರಿಸಿ ಅಂದು ಡಿಫೆನ್ಸ್ ಸಾಕ್ಷಿಗಳ ವಿಷಯವಾಗಿ ತಮ್ಮ ತೀರ್ಮಾನ್ನು ಕೊಡುವುದಾಗಿ ತಿಳಿಸಿರುತ್ತಾರೆ. ಮುಖ್ಯಮಂತ್ರಿ ಶ್ರೀ ಹನುಮಂತಯ್ಯ, ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್, ಶ್ರೇಷ್ಠ ನ್ಯಾಯಾಧೀಶ ಶ್ರೀ ಪಿ ಮೇದಪ್ಪ, ವೈಸ್ ಛಾನ್ಸಲರ್ ಶ್ರೀ ಬಿ ಎಲ್ ಮಂಜುನಾಥ್ ಶ್ರೀಗಳಾದ ಎಸ್ ಚನ್ನಯ್ಯ, ಕೆ ಪುಟ್ಟಸ್ವಾಮಿ, ಡಾ|| ಮಹಮದ್ ಅಹಮದ್, ಶಿಕ್ಷಣ ಶಾಖಾಧಿಕಾರಿ ಶ್ರೀ ಜೆ ಬಿ ಮಲ್ಲಾರಾಧ್ಯ ಮತ್ತು ಶ್ರೀಮತಿ ಧಿಲ್ಲಾನರವರನ್ನು ಸಾಕ್ಷಿಗಳಾಗಿ ಕರೆಯಬೇಕೆಂದು ಆಪಾದಿತರ ಪರ ವಕೀಲರು ಅರ್ಜಿ ಸಲ್ಲಿಸಿರುವರು.

ಬಿರುಗಾಳಿಯಿಂದ ಮರ ಬಿದ್ದು ೮ ಜನರ ಮರಣ

ಕಳೆದ ವಾರ ಬೀಸಿದ ಬಿರುಗಾಳಿಯ ಪರಿಣಾಮವಾಗಿ ತಿರುಚಿರಾಪಳ್ಳಿ ಬಳಿಯ ಗ್ರಾಮವೊಂದರ ಗುಡಿಸಿನ ಮೇಲೆ ಒಂದು ಭಾರಿ ಮರವು ಬಿದ್ದು, ಒಳಗಿದ್ದ ಎಂಟು ಜನರು ಮೃತಪಟ್ಟರೆಂದು ವರದಿಯಾಗಿದೆ.

ಪಂಚ ವಾರ್ಷಿಕ ಯೋಜನೆಯ ಮಂಡನೆ

ಎರಡು ವರ್ಷಗಳ ಕಾಲ ಸತತವಾಗಿ ಶ್ರಮಪಟ್ಟು ತಯಾರಿಸಲಾದ ಪಂಚವಾರ್ಷಿಕ ಯೋಜನೆಯ ಅಖೈರು ವರದಿಯನ್ನು ಪಾರ್ಲಿಮೆಂಟಿನ ಎರಡು ಸಭೆಗಳಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಂಡಿಸಿದರು. ಒಟ್ಟು ೨,೦೬೯ ಕೋಟಿ ರೂಗಳ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆ-(ರೈಲ್ವೆಯೂ ಸೇರಿ) ಗಳಿಗೆ ಒಟ್ಟು ೧೨೪೧ ಕೋಟಿ ರೂಗಳನ್ನೂ, ಎ ವರ್ಗದ ಸಂಸ್ಥಾನಗಳಿಗೆ ೬೧೦ ಕೋಟಿ ರೂ, ಬಿ. ವರ್ಗದವುಗಳಿಗೆ ೧೭೩ ಕೋಟಿ ರೂ. ಮತ್ತು ಸಿ ವರ್ಗಕ್ಕೆ ೩೨ ಕೋಟಿ ರೂಗಳನ್ನೂ, ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಕ್ಕೆ ೧೩ ಕೋಟಿ ರೂ ಗಳನ್ನೂ ಈ ಐದು ವರ್ಷಗಳಲ್ಲಿ ವೆಚ್ಚ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುವುದು. ಮೈಸೂರಿಗಾಗಿ ೨೬.೬ ಕೋಟಿ ರೂ ಗಳನ್ನು ವೆಚ್ಚ ಮಾಡಲಾಗುವುದು.

ಪಾರ್ಲಿಮೆಂಟಿನಲ್ಲಿ ಸಭಾ ಪರಿತ್ಯಾಗ

ಆಂಧ್ರ ಪ್ರಾಂತ್ಯಕ್ಕಾಗಿ ಕಳೆದ ೫೦ ದಿನಗಳಿಂದಲೂ ಉಪವಾಸ ಮಾಡುತ್ತಿರುವ ಕಾಂಗ್ರೆಸ್ ಕಾರ್ಯಕರ್ತ ಪೊಟ್ಟಿ ಶ್ರೀರಾಮುಲುರವರ ಬಗ್ಗೆ ಪಾರ್ಲಿಮೆಂಟಿನಲ್ಲಿ ತರಲಾದ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ ಸಂಬಂಧವಾಗಿ ವಿರೋಧ ಪಕ್ಷದ ೫೦ ಮಂದಿ ಸದಸ್ಯರು ಸಭಾ ಪರಿತ್ಯಾಗ ಮಾಡಿದರು. ಉಪವಾಸ ಮಾಡುವವರ ಉಳಿವು ಅಥವಾ ಅಳಿವಿನ ಪ್ರಶ್ನೆ ಇದಾಗಿರಬಹುದಾದರೂ ಅದಕ್ಕೆ ತಲೆಬಾಗಿದರೆ ಪಾರ್ಲಿಮೆಂಟಿನ ಅಧಿಕಾರಕ್ಕೂ ಪ್ರಜಾಪ್ರಭುತ್ವಕ್ಕೂ ಮನ್ನಣೆಯಿಲ್ಲದಿರುವುದೆಂದು ನೆಹರೂರವರು ಪ್ರತಿಭಟಿಸಿದರು.

ಕುರುಬರ ಸಂಘದ ಸಭೆ

ಮೈಸೂರು ನಗರದ ಕುರುಬರ ಸಂಘದ ಸರ್ವ ಸದಸ್ಯರ ಸಭೆಯು ನಾಳೆ ಮಧ್ಯಾಹ್ನ ೩ ಗಂಟೆಗೆ ಹೊಸ ಬಂಡೀಕೇರಿಯಲ್ಲಿರುವ ಪಕ್ಕೂ ಜನರ ಗರಡಿಯಲ್ಲಿ ನಡೆಯಲಿರುವುದರಿಂದ ಸಂಘದ ಸದಸ್ಯರೆಲ್ಲರೂ ಭಾಗವಹಿಸಬೇಕೆಂದು ವ್ಯವಸ್ಥಾಪಕರು ಕೋರಿರುತ್ತಾರೆ.

ಶಿಶು ಸಂರಕ್ಷಣಾ ಕೇಂದ್ರದ ಆರಂಭೋತ್ಸವ

ಸ್ವಂ. ಸು ಪ್ರೋ] ಬೆಂಗಳೂರು ೯

ಈ ಬೆಳಿಗ್ಗೆ ಶ್ರೀ ಮಹಾರಾಜರು ನಗರ ಭವನದ ಎದುರಿನಲ್ಲಿ ಎಣ್ಣೆಗೆರೆ ಯ ಜಹಗೀರ್ ಶ್ರೀ ಆರ್ ವೆಂಕಟರಾಮಯ್ಯ ಹೊನ್ನಮ್ಮದೇವಿ ಶಿಶು ಸಂರಕ್ಷಣಾ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸಿದರು. ಇದಕ್ಕೆ ಶ್ರೀ ವೆಂಕಟರಾಮಯ್ಯನವರು ೧೫,೦೦೦ ರೂ ಗಳನ್ನೂ, ಪೌರಸಭೆಯವರು ಹದಿಮೂರು ಸಾವಿರ ರೂ ಗಳನ್ನೂ ಕೊಟ್ಟಿರುವರು.

ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂ ಒಬ್ಬರೇ ಸ್ಪರ್ಧಿ

ಶ್ರೀ ಎಸ್. ನಿಜಲಿಂಗಪ್ಪ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಗಳವರು ತಮ್ಮ ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಸೂಚಿಸಿರುವುದರಿಂದ, ಈಗ ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂರವರೊಬ್ಬರೇ ಸ್ಪರ್ಧಿಯಾಗಿರುವರು.

ಪೌರಸಭೆಯ ಅಧ್ಯಕ್ಷ, ಉಪಾಧ್ಯಕ್ಷತೆಗೆ ಕಾಂಗ್ರೆಸ್ ಉಮೇದುವಾರರು

ನಗರದ ಪೌರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷತೆಗಳಿಗೆ ಇದೇ ೧೯ನೇ ತಾರೀಖು ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಪರವಾಗಿ ನಿಗಿರುವ ಅಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾವ್ ಮತ್ತು ಉಪಾಧ್ಯಕ್ಷ ಶ್ರೀ ಎನ್ ರಾಚಯ್ಯ ಇವರುಗಳ ಹೆಸರನ್ನೇ ಸೂಚಿಸುವಂತೆ ನಿರ್ಧಾರವಾಗಿರುತ್ತದೆ.

ಸರ್ಕಾರದ ಕನ್ನಡ ಭಾಷಾಂತರಕಾರರು

ಸ್ವಂ. ಸು ಪ್ರೋ] ಬೆಂಗಳೂರು ೯

ಸರ್ಕಾರದ ಕನ್ನಡ ಭಾಷಾಂತರಕಾರರಾದ ಶ್ರೀ ಕೆ ಸಿ ವೆಂಕಟರಾಮಯ್ಯನವರು ನಾಳೆಯಿಂದ ನಿವೃತ್ತರಾಗಲಿರುವರು. ಅವರನ್ನು ಮತ್ತೊಂದು ಹುದ್ದೆಗೆ ಸರ್ಕಾರದವರು ನೇಮಿಸಿಕೊಳ್ಳಲಿರುವರು. ಸಹಾಯಕ ಕನ್ನಡ ಭಾಷಾಂತರಕಾರರಾದ ಶ್ರೀ ವಿ ಎನ್ ರಾಮರಾಯರನ್ನು ಶ್ರೀ ಸಿ ಕೆ ವೆಂಕಟರಾಮಯ್ಯನವರ ಸ್ಥಾನಕ್ಕೂ, ಶ್ರೀ ಸೀತಾರಾಮರಾಯರನ್ನು, ಶ್ರೀ ವಿ ಎನ್. ರಾಮರಾಯರ ಸ್ಥಾನಕ್ಕೂ ನೇಮಕ ಮಾಡಲಾಗಿದೆ.

○ ಹಾಂಕಾಂಗಿಗೆ ತೆರಳಿದ್ದ ವಿದ್ಯುದಿಲಾಖಾ ಅಧಿಕಾರಿಗಳಾದ ಡಾ|| ಹಯಾತ್‌ರವರು ಈ ದಿನ ವಾಪಸು ಬಂದರು.

○ ಸರ್ಕಾರಿ ಮುದ್ರಣಾಲಯದ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಬಿ. ಗೋಪಾಲಯ್ಯಂಗಾರ್ಯರು ಈ ತಿಂಗಳು ೧೫ಕ್ಕೆ ನಿವೃತ್ತರಾಗಬೇಕಾಗಿದ್ದು ಅವರು ೧ ವರ್ಷ ಕಾಲ ಅದೇ ಹುದ್ದೆಯಲ್ಲಿ ಮುಂದುವರಿಯುವಂತೆ ಆಜ್ಞೆಯಾಗಿದೆ.

ಶೀತಮಾರುತದಿಂದ ೧೬೮ ಜನರ ಮರಣ

ಮದ್ರಾಸಿನಲ್ಲಿ ಕಳೆದ ೩೦ನೇ ತಾ|| ಆದ ಶೀತ ಮಾರುತದ ಪರಿಣಾಮವಾಗಿ ಮದ್ರಾಸು ಸಂಸ್ಥಾನದ ನಾನಾ ಭಾಗಗಳಲ್ಲಿ ಒಟ್ಟು ೧೬೮ ಮಂದಿ ಮಡಿದಿರುವರು. ನಷ್ಟಹೊಂದಿದವರಿಗೆ ಪರಿಹಾರ ನೀಡಬೇಕೆಂದು ರಾಜಾಜಿಯವರು ಪ್ರಾರ್ಥಿಸಿರುತ್ತಾರೆ.

ಆಂಧ್ರ ಸಮ್ಮೇಳನ ಗೊಂದಲದಲ್ಲಿ ಪರ್ಯವಸಾನ

ಆಂಧ್ರ ದೇಶದ ಸ್ಥಾಪನೆ ಮತ್ತು ಮದ್ರಾಸಿನ ಭವಿಷ್ಯವನ್ನು ಕುರಿತು ಚರ್ಚಿಸುವ ಸಲುವಾಗಿ, ಮೊನ್ನೆ ಮದರಾಸಿನಲ್ಲಿ ಆಂಧ್ರದ ರಾಜಕೀಯ ಪಕ್ಷಗಳು ಆಂಧ್ರ ಪ್ರಜಾ ಪರಿಷತ್ ಎಂಬ ಸಮ್ಮೇಳನವನ್ನು ಕರೆದಿದ್ದುವು ಮೊನ್ನೆ ಮಧ್ಯಾಹ್ನದ ಸಭೆಗೆ ಶ್ರೀ ಟಿ ಪ್ರಕಾಶಂರವರು ಅಧ್ಯಕ್ಷತೆ ವಹಿಸಿದ್ದರು ಪ್ರಜಾ ಸೋಷಿಯಲಿಸ್ಟ್ ಪಕ್ಷದ ಶ್ರೀ ಟಿ ವಿಶ್ವನಾಥರವರು ಮದ್ರಾಸು ನಗರವು ರಾಜಧಾನಿಯಾಗಿ ಉಳ್ಳ ಆಂಧ್ರ ಪ್ರಾಂತ ರಚನೆ ಅಥವಾ ಆ ನಗರವನ್ನು ಚೀಫ್ ಕಮಿಷನರರ ಪ್ರಾಂತವನ್ನಾಗಿ ಮಾಡಬೇಕೆಂದು ಮಂಡಿಸಿದ ನಿರ್ಣಯವು ಮಂಜೂರಾಗಿರುವುದಾಗಿ ಅವರು ಘೋಷಿಸಿದರು ಕಮ್ಯೂನಿಸ್ಟ್ ಮುಖಂಡರಾದ ಶ್ರೀ ನಾಗಿರೆಡ್ಡಿಯವರು ಇದಕ್ಕೆ ಪ್ರತಿಯಾಗಿ ಒಂದು ನಿರ್ಣಯವನ್ನು ಮಂಡಿಸಿ ಮದ್ರಾಸು ನಗರದ ವಿಷಯವಾಗಿ ಜನಾಭಿಪ್ರಾಯ ತೆಗೆದುಕೊಳ್ಳಬೇಕೆಂದು ಸೂಚಿಸಿದರು ಇದರಿಂದ ಉಂಟಾದ ಗಲಭೆಯ ಪರಿಣಾಮವಾಗಿ ಕಮ್ಯೂನಿಸ್ಟೇತರರೆಲ್ಲರೂ ಸಭೆಯಿಂದ ಹೊರಗೆ ಹೊರಟುಹೋದರು ತರುವಾಯ ಕಮ್ಯೂನಿಸ್ಟರೇ ಸಭೆ ನಡೆಸಿ, ಶ್ರೀ ರೆಡ್ಡಿಯವರ ನಿರ್ಣಯವನ್ನು ಅಂಗೀಕರಿಸಿದರು.

ಮದರಾಸಿನಲ್ಲಿ ಮಳೆ ಅನಾಹುತ

ಬಂಗಾಳಾ ಕೊಲ್ಲಿಯಲ್ಲಿ ಉಂಟಾದ ಶೀತ ಮಾರುತದ ಪರಿಣಾಮವಾಗಿ ಮೊನ್ನೆ ಮದರಾಸಿನ ಅನೇಕ ಕಡೆಗಳಲ್ಲಿ ಭಾರಿ ಮಳೆಯಾಗಿ ಹಲವು ರೈಲು ಮಾರ್ಗಗಳು ಕಡಿಯಲ್ಪಟ್ಟಿರುವುವೆಂದು ವರದಿಯಾಗಿದೆ ಹಲವು ನಗರಗಳಲ್ಲಿ ಏಳು ಅಂಗುಲದಷ್ಟು ಮಳೆಯಾಗಿ ನದಿಗಳಲ್ಲಿ ಪ್ರವಾಹವೂ ವಿಪರೀತವಾಗಿ ಬಂದಿರುವುದಾಗಿ ಗೊತ್ತಾಗಿದೆ

ಗೌರೀಶಂಕರ ಶಿಖರವನ್ನು ಹತ್ತುವ ಪ್ರಯತ್ನ ವಿಫಲ

ಗೌರೀಶಂಕರ ಶಿಖರವನ್ನೇರಲು ಹೋದ ಸ್ವಿಟ್ಸರ್ಲೆಂಡಿನ ಪರ್ವತಾರೋಹಿಗಳ ಎರಡನೇ ತಂಡದ ಪ್ರಯತ್ನವೂ ವಿಫಲಗೊಂಡಿರುವುದಾಗಿ ಹೇಳಲಾಗಿದೆ ಅವರೆಲ್ಲರೂ ಸುರಕ್ಷಿತವಾಗಿ ತಮ್ಮ ನೆಲೆಗಳಿಗೆ ಹಿಂತಿರುಗಿರುತ್ತಾರೆ ಈ ಶಿಖರದ ಎತ್ತರವು ೨೯,೦೦೦ ಅಡಿ ಇರುವುದೆಂದು ಹೇಳಲಾಗಿದೆ ಇದುವರೆಗೆ ೨೯,೦೦೨ ಅಡಿ ಎಂದು ನಂಬಲಾಗಿತ್ತು.

ಹರಿಕಥೆ

ಮಲ್ಲೆ ಮೊಹಲ್ಲಾ ರಾಮಾನುಜಾ ರೋಡು ಆನೆ ಕರುಹಟ್ಟಿ ಮೂಲೆಯಲ್ಲಿರುವ ಶ್ರೀಪ್ರಸನ್ನಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಹನುಮಜ್ಜಯಂತೀ ಪ್ರಯುಕ್ತ ೧೧ ದಿನಗಳಿಂದಲೂ ಶ್ರೀ|| ನಾರಾಯಣ ಶಾಸ್ತ್ರಿಗಳವರಿಂದ ಶ್ರೀಮದ್ರಾಮಾಯಣ ಹರಿಕಥೆ ನಡೆಯುತ್ತಿದ್ದು ಈ ದಿನ ಅದರ ಮಂಗಳದ ಅಂಗವಾಗಿ ರಾತ್ರೆ ೯ ಘಂಟೆಗೆ ಲವ ಕುಶ ಎಂಬ ಹರಿಕಥೆಯು ಏರ್ಪಾಡಾಗಿದೆ

ಕಾಂಗ್ರೆಸ್ ಚುನಾವಣೆಗಳಲ್ಲಿ ನಾಚಿಕೆಗೇಡಿನ ನಡವಳಿಕೆ

ಕಾಂಗ್ರೆಸ್ ಚುನಾವಣೆಗಳಲ್ಲಿ ಸಂಸ್ಥೆಗೆ ಅಗೌರವವನ್ನೂ, ಕಳಂಕವನ್ನೂ ತರುವ ಪ್ರಸಂಗಗಳು ನಡೆದಿರುವುದಾಗಿ ಪ್ರಧಾನಿ ನೆಹರೂರವರು ತಿಳಿಸುತ್ತಾರೆ ಚುನಾವಣಾಧಿಕಾರಿಗಳನ್ನು ದೂಡಿ ಹಾಕಿರುವುದು, ಬ್ಯಾಲೆಟ್ ಪತ್ರಗಳನ್ನು ಕೊಂಡೊಯ್ದುದು ಇವೇ ಮುಂತಾದ ದುರ್ನಡವಳಿಕೆಗಳಾಗಿರುವುವೆಂದೂ ಅಪ್ರಾಮಾಣಿಕವಾಗಿ ಜಯಶೀಲರಾಗಿರುವ ಕಾಂಗ್ರೆಸ್ ಪ್ರತಿನಿಧಿಗಳನ್ನು ತಾವು ವಜಾ ಮಾಡುವುದಾಗಿಯೂ ಅವರು ಹೇಳುವರು

ಟ್ಯೂನಿಸ್ ಪೋಲೀಸರೊಡನೆ ಜನರ ಘರ್ಷಣೆ

ಉತ್ತರ ಆಫ್ರಿಕದ ಟ್ಯೂನಿಸ್ಸಿನ ಪ್ರಸಿದ್ಧ ಮಸೀತಿಯೊಂದರ ಕಡೆ ಮೊನ್ನೆ ಪ್ರದರ್ಶನಕಾರರ ಗುಂಪನ್ನು ಚದುರಿಸಲು ಹೊರಟಾಗ ಪೋಲೀಸರಿಗೂ ಗುಂಪಿನವರಿಗೂ ಘರ್ಷಣೆಯಾಗಿ ಒಬ್ಬ ಪೋಲೀಸನ ಮುಂಗೈ ಮುರಿಯಿತೆಂದೂ, [illegible] ಲಾಯಿತೆಂದೂ ವರದಿಯಾಗಿದೆ

ದೇಶಬಂಧು ಶಂಕರಲಿಂಗೇ ಗೌಡರ ನಿಧನ

ಮೈಸೂರ [illegible] ಸಭೆಯ [illegible] ದೇಶಬಂಧು ಶಂಕರಲಿಂಗೇ ಗೌಡರು ಕಳೆದ [illegible] ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೬೨ ವರ್ಷ ವಯಸ್ಸಾಗಿತ್ತು

ಗಮಕ ಗೋಷ್ಠಿ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ಜಿ ಪಿ ಕೃಷ್ಣಸ್ವಾಮಿಯವರ ೧೬೭೭ ನೇ ನಂಬರು ಮನೆಯಲ್ಲಿ ನಾಳೆ ಸಂಜೆ ೫-೩೦ ಘಂಟೆಗೆ ಶ್ರೀಮತಿ ಗೌರಮ್ಮನವರಿಂದ ಭಾರತ ವಾಚನವನ್ನು ಏರ್ಪಡಿಸಲಾಗಿದೆ ಶ್ರೀಮತಿ ಎ ಎಸ್ ಮೀನಾಕ್ಷಮ್ಮನವರು ಅಧ್ಯಕ್ಷತೆ ವಹಿಸುವರು ಎಲ್ಲ ಗಮಕಿಗಳೂ ಮತ್ತು ರಸಿಕರೂ ಭಾಗಿಗಳಾಗಬೇಕೆಂದು ಕೋರಲಾಗಿದೆ

ಗೀತಾ ಜಯಂತಿ

ರಾಜಧಾನಿಯ ಬಂಟಿಕೊಪ್ಪಲಿನ ಭಾರತಿ ಶ್ರೀ ನಿವಾಸದಲ್ಲಿ ಗೀತಾ ಜಯಂತಿಯ ಅಂಗವಾಗಿ ಕಳೆದ ೬ನೇ ತಾ|| ಭಾರತದ ನಾಗಮ್ಮನವರು ಗೀತಾ ಪಠನವನ್ನು ಮಾಡಿದರು ಶ್ರೀಮತಿ ಅನುಸೂಯಾರವರಿಂದ ಸಂಗೀತವು ಏರ್ಪಾಡಾಗಿತ್ತು ಮತ್ಯಾರಿಗೆ ಸಿಹಿ ತಿಂಡಿಗಳನ್ನು ಹಂಚಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಕ್ಲಾರಿಯೊನೆಟ್ ದಿ ನಾಗೇಂದ್ರಪ್ಪ ಮಧ್ಯಾಹ್ನ ೧ ವನಿತಾ ಗಾನ ಮಹಿಳೆಯರ ಕಾರ್ಯಕ್ರಮ ಸಂಜೆ ೫-೩೦ ಕ್ಲಾರಿಯೊನೆಟ್, ಬಿ ರಂಗಪ್ಪ ೬-೧೦ ಬಾಲ ಜಗತ್ ಮಕ್ಕಳ ಕಾರ್ಯಕ್ರಮ ೭-೩೦ ಭಕ್ತಿ ಗೀತೆಗಳು, ಮೋಹನ ಕುಮಾರಿ ೮ ಸಂಗೀತ, ಟಿ ಎಸ್ ರಾಮಚಂದ್ರ ೯-೩೦ [illegible] ಮಕ್ಕಳ ಗೀತೆಗಳು

ಶ್ರೀಮನ್ಮಹಾರಾಜರು ಮಂಗಳೂರಿಗೆ

ಮೈಸೂರಿನ ಶ್ರೀಮನ್ಮಹಾರಾಜರವರು ಬರುವ ತಿಂಗಳು ೩ ನೇ ತಾ|| ಮಂಗಳೂರಿಗೆ ಭೇಟಿ ಕೊಡುವರು ಆಗ ಅಲ್ಲಿನ ಪೌರಸಭೆಯವರು ಒಂದು ಬಿನ್ನವತ್ತಳೆಯನ್ನು ಅವರಿಗೆ ಸಲ್ಲಿಸುವರು. ಅಲ್ಲಿಂದ ಅವರು ಮಲ್ಪೆ ರೇವಿಗೂ ಭೇಟಿ ಕೊಡುವರು ಉಡುಪಿಯಲ್ಲಿ ನಡೆಯುವ ಮಾಧ್ವ ತತ್ವ ಶಾಸ್ತ್ರ ಸಮ್ಮೇಳನದ ಆರಂಭೋತ್ಸವವನ್ನು ೪ ನೇ ತಾ|| ನೆರವೇರಿಸುವರು

ಲಂಡನ್ ನಗರದ ಮೇಲೆ ಅಗಾಧ ಮಂಜು

ಲಂಡನ್ ನಗರದ ಮೇಲೆ ಕಳೆದ ಶನಿವಾರ ಅಗಾಧವಾದ ಮಂಜು ಮಳೆಯಂತೆ ಬಿದ್ದ ಪರಿಣಾಮವಾಗಿ ಅಲ್ಲಿನ ಲಕ್ಷಾಂತರ ನಾಗರಿಕರು ಮನೆಯಿಂದ ಹೊರಕ್ಕೆ ಬರಲು ಸಾಧ್ಯವೇ ಆಗದೆ ಬಂದರಿನಲ್ಲಿ ಯಾನ ಕೆಲಸವೂ ನಡೆಯಲಿಲ್ಲವೆಂದೂ, ಮತ್ತು ನಗರದಿಂದ ಹೊರಕ್ಕಾಗಲೀ ಆಕಾಶ ಹೊರಗಿನಿಂದ ಅಲ್ಲಿಗಾಗಲೀ ವಿಮಾನ ಸಂಚಾರವನ್ನು ಪೂರ್ಣವಾಗಿ ನಿಲ್ಲಿಸಲಾಗಿತ್ತೆಂದೂ ಗೊತ್ತಾಗಿದೆ

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸಂಘದ ಶಾಖೆ

ಮೈಸೂರು ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರುಗಳ ಸಂಘದ ಶಾಖೆಯೊಂದನ್ನು ಸ್ಥಾಪಿಸುವ ಸಲುವಾಗಿ ಇಲ್ಲಿನ ಎಲ್ಲಾ ನೌಕರರುಗಳ ಸಭೆಯು [illegible] ಭವನದಲ್ಲಿ ನೆನ್ನೆ ಸೇರಿದ್ದಿತು ಶಾಖೆಯನ್ನು ಸ್ಥಾಪಿಸುವಂತೆ ನಿರ್ಧರಿಸಲಾಯಿತು ಈ ಬಗ್ಗೆ ಎಲ್ಲ ಸರ್ಕಾರಿ ನೌಕರರುಗಳ ಸಾಧಾರಣ ಸಭೆಯನ್ನು ಶೀಘ್ರದಲ್ಲೇ ಕರೆಸುವಂತೆ ತೀರ್ಮಾನವಾಯಿತು

ವಿವಾಹ ಮಹೋತ್ಸವ

[illegible] ಫಾರಮ್ಮಿನ ಚನ್ನಪಟ್ಟಣದ ಕಛೇರಿಯಲ್ಲಿರುವ ಮೈಸೂರಿನ ಶ್ರೀ ಎ ಕೆ ಶ್ರೀನಿವಾಸರಾಯರು ತಮ್ಮ ಎರಡನೇ ಮಗಳ ಚಿ|| ಸೌ|| ಶಾಂತಾಬಾಯಿಯನ್ನು ಬೆಂಗಳೂರಿನಲ್ಲಿರುವ ನಿವೃತ್ತ ಪೋಲೀಸ್ ಕಛೇರಿ ಗುಮಾಸ್ತೆ ಶ್ರೀ ಡಿ ಭೀಮರಾಯರ ಕುಮಾರ ಶ್ರೀ ಶ್ರೀನಿವಾಸಮೂರ್ತಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

CAR FOR SALE
AUSTIN Car, 10 H P
1948 Model Excellent condition
Enquire
B R LAKSHMANA CHETTY,
The Elm Broking House,
(Upstairs)
North to Chamundeswari
Talkies Sayaji Rao Road

ತಂದೆ ಸತ್ತನೆಂದು ಹೇಳಿ ಹಣ ಪಡೆಯುವ ಪ್ರಯತ್ನ

ಕಲ್ಕತ್ತೆಯ ವಿಮಾ ಕಂಪೆನಿಯೊಂದನ್ನು ಮೋಸಗೊಳಿಸಲು ಸೇಠ್ ವ್ಯಾಪಾರಿ ಪಗಲ್‌ಮಲ್ ಶರ್ಮ ಎಂಬಾತನ ಮಗ ಬನ್ವಾರಿಲಾಲ್ ಶರ್ಮ ಎಂಬುವನು ತನ್ನ ತಂದೆ ಸತ್ತನೆಂದು ಹೇಳಿ ಪೂರ್ವ ಪಾಕಿಸ್ತಾನದಲ್ಲಿ ಮರಣದ ಸರ್ಟಿಫಿಕೇಟನ್ನು ಪಡೆದುದಲ್ಲದೆ, ವೈದ್ಯಕೀಯ ಪತ್ರದ ದಾಖಲೆಯನ್ನು ತೋರಿಸಿ ಕಂಪೆನಿಯಿಂದ ೧ ಲಕ್ಷ ರೂ ಗಳನ್ನು ಪಡೆಯಲು ಹವಣಿಸಿದ್ದನೆಂದು ಗೊತ್ತಾಗಿದೆ ಈ ಬಗ್ಗೆ ವಿಚಾರಣೆಯು ಹೊರಬಿದ್ದು, ತಂದೆಯು ಉತ್ತರ ಪ್ರದೇಶದ ಒಂದು ಹಳ್ಳಿಯಲ್ಲಿ ಸುರಕ್ಷಿತನಾಗಿರುವನೆಂದೂ ಮಗನು ತಲೆಮರೆಸಿಕೊಂಡಿರುವನೆಂದೂ ಹೇಳಲಾಗಿದೆ. ಮರಣದ ಸರ್ಟಿಫಿಕೇಟನ್ನು ಈಗ ಪಾಕಿಸ್ತಾನದವರು ವಜಾ ಮಾಡಿರುತ್ತಾರೆ

ಕ್ಷಾಮ ನಿಧಿಗೆ ಸಂಸ್ಥಾನದ ಕ್ರಿಕೆಟ್ ಸಂಘದ ಸಹಾಯ

ಮೈಸೂರು ಸಂಸ್ಥಾನದ ಕ್ರಿಕೆಟ್ ಸಂಘದವರು ಮುಖ್ಯ ಮಂತ್ರಿಗಳ ಕ್ಷಾಮ ನಿವಾರಣಾ ನಿಧಿಗೆ ೧೦೦೧ ರೂ ಗಳನ್ನು ಕೊಟ್ಟಿರುವರು

ಮೈಸೂರು ಪೇಟೆ ಧಾರಣೆ

	ಪಲ್ಲ ೧ಕ್ಕೆ	ರೂ ... ರಿಂದ	ರೂ ...
ನೆಲಗಡಲೆ		೧೦ ೩ [illegible]	೨೧ ೮
ಎಳ್ಳು		೬೨ ೦ ೦	
ಹರಳು ಬೀಜ		೪೨ ೮ ೦	೪೩ ೪
ಹುರುಳಿ		೫೧ ೪ ೦	೫೨ ೦
ಹೆಸರು		೪೨ ೮ ೦	೪೪ ೪
ಉದ್ದು		೬೭ ೩ ೪	
ಹಲಸಂದೆ		೪೬ ೦ ೦	೬೦ ೧
ಹುಚ್ಚೆಳ್ಳು		೪೯ ೧ ೦	೪೯ ೧೨
ಅವರೆ		೫೮ ೦-೦	೬೧ ೦
ಕೊಂಗೇಬೀಜ		೧೬ ೩ ೦	
ಮೆಣಸಿನಕಾಯಿ			
ಮಣ ೧ಕ್ಕೆ		೯ ೮ ೦	೧೭ ೧
ಹುಣಸೇಹಣ್ಣು		೬ ೪ ೦	
ಬೆಲ್ಲ		೩ ೮ ೦	
ಸೀಗೇಕಾಯಿ		೪-೧೨ ೦	
ತೆಂಗಿನಕಾಯಿ ೧೦೦ ಕ್ಕೆ		೧೮ ೦ ೦	೨೦ ೦

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳು
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

Edited, Printed and Published by A. R Nagaraja at Sadhvi Press, D Subbaiah Road, Mysore

AT YOUR SERVICE AGAIN
Paddy & Rice Transporters, Please Remember
the Quick Safe & Easy Transport
MYSORE TRANSIT SERVICE (Regd)
THIRTHA & COMPANY, (Phone 537) Ramavilas Road, Mysore

ಟೆಲಿಫೋನ್ ನಂ. 796 ॥ಚಂದಾ ಮುಂಗಡ॥ ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೩೧], ಬುಧವಾರ ೧೧-೦೨-೧೯೫೩ [ಸಂಚಿಕೆ ೧೧೦

ಸುಡಾನ್ ಬಗ್ಗೆ ಬ್ರಿಟರ್ – ಈಜಿಪ್ಟ್ ಒಪ್ಪಂದ –

ಎ. ಕೃಷ್ಣಮೂರ್ತಿರಾವ್ ಪುನಃ ಪೌರಸಭಾಧ್ಯಕ್ಷರು

ಎಸ್. ರಾಚಯ್ಯನವರು ಉಪಾಧ್ಯಕ್ಷರು

ಮೈಸೂರು, ೧೧

... ೧೯ ವರೆಗೆ ಜೀವದಾನ ಮಾಡಲ್ಪ... ವ ನಗರದ ಪೌರಸಭೆಯ ಅಧ್ಯಕ್ಷತೆಗೆ ... ಎ. ಕೃಷ್ಣಮೂರ್ತಿರಾಯರ ಹೆಸರ... ಮಾತ್ರ ನೆನ್ನೆ ಸೂಚಿಸಲಾಗಿದ್ದಿತು ... ಉಪಾಧ್ಯಕ್ಷತೆಗೆ ಶ್ರೀ ಎಸ್ ರಾಚಯ್ಯನವರ ಹೆಸರು ಸೂಚಿಸಲಾಗಿದ್ದಿತು ಅವರಲ್ಲದೆ ...ಯವರ ಹೆಸರುಗಳಾವುವೂ ಬಂದಿರ... ಕಾಂಗ್ರೆಸ್ ಪರವಾಗಿ ನಿಂತಿರುವ ... ಮೇಲ್ಕಂಡವರುಗಳೇ ಅಯಾ ಸ್ಥಾ... ಆರಿಸಲ್ಪಟ್ಟಿರುವವರು ಅವರಿಬ್ಬ... ಅಧ್ಯಕ್ಷ ಉಪಾಧ್ಯಕ್ಷರುಗಳಾಗಿ ...ರು

...ಡಾ ಕ್ಲಬ್ಬಿನ ಆರಂಭೋತ್ಸವ

ರಾಜಧಾನಿಯ ಫ್ರೆಂಡ್ಸ್ ಯೂನಿ... ಸ್ಪೋರ್ಟ್ಸ್ ಕ್ಲಬ್ಬಿನ ಕೊಠಡಿಯ ...ಭೋತ್ಸವವನ್ನು ನಾಳೆ ಬೆಳಿಗ್ಗೆ ... ಬನುಮಯ್ಯ ರಸ್ತೆಯಲ್ಲಿರುವ ...ನೆ ಬಿಲ್ಡಿಂಗಿನಲ್ಲಿ ನೆರವೇರಿಸಲಾ... ...ದೆ

...ಬ್ಬ ವಿದ್ಯಾರ್ಥಿಯ ದಸ್ತಗಿರಿ ಮತ್ತು ಬಿಡುಗಡೆ

...ನ್ನೆ ವಿಜಯ ಪತ್ರಿಕಾಲಯದಲ್ಲಿ ...ನಡೆಸಿದ ಬಗ್ಗೆ ಶ್ರೀ ಜಿ ವಿ ಅಂ...ಪ್ಪ ಎಂಬ ಮಹಾರಾಜಾ ವಿದ್ಯಾರ್ಥಿ... ...ನ್ನು ರಾತ್ರಿ ಬಂಧಿಸಿ, ಜಾಮೀ... ...ರಿ ಬಿಡುಗಡೆ ಮಾಡಲಾಗಿದೆ ... ಜನರನ್ನು ಬಂಧಿಸುವ ಸಂಭ... ...ವೆಂದು ಗೊತ್ತಾಗಿದೆ.

ಬತ್ತದ ವ್ಯಾಪಾರಿಗಳಿಗೆ ಜಿಲ್ಲಾಧಿಕಾರಿಗಳ ಸೂಚನೆ

ಮೈಸೂರು ನಗರದಲ್ಲಿರುವ ಬತ್ತದ ...ದಾರರು ತಮ್ಮ ಜಮೀನುಗಳಿಂ... ...ಸ್ವಂತ ಉಪಯೋಗಕ್ಕಾಗಿ ಬತ್ತವ... ...ತ ಮಾರಿಕೊಳ್ಳುವ ಬಗ್ಗೆ ಮೈಸೂರು ...ಧಿಕಾರಿಗಳು ಸೂಚನೆಯೊಂದನ್ನಿ... ...ವರ್ತಕಾರ್ಡುಗಳ ಎಕ್ಸ್‌ಟ್ರ್ಯಾಕ್ಟ್ ...ಪಡೆಯಬೇಕಾಗಿಲ್ಲವೆಂದೂ ಕಾ... ...ದಾರರು ತಮ್ಮ ಕಾರ್ಡುಗಳನ್ನು ...ವಾಗಿರುವ ಪ್ರದೇಶದಲ್ಲಿ ಸಂ... ...ಪಟ್ಟ ಅಧಿಕಾರಿಗಳಲ್ಲಿ ಹಾಜರುಪ... ...ಬತ್ತವನ್ನು ಸಾಗಿಸಲು ರಹದಾರಿ ... ಪಡೆಯಬಹುದೆಂದೂ ತಿಳಿಸಿರು... ...ರೆ

...ನಂಬ ಭ್ರಾಂತಿಯಿಂದ ...ತನ ಮರಣ

...ಗಳೊಡನೆ ಸ್ವಲ್ಪ ದೂರವಿರುವ ... ...ಕ್ಕಿಯ ಕೃಷಿಕನೊಬ್ಬನು ತನ್ನ ಗ... ...ವ ಸೀರನ್ನು ತಿರುಗಿಸಿ, ರಾತ್ರಿ ... ...ನ ಲಗ್ನವನ್ನೆಂಬೂ ಎಲ್ಲರನಾ... ...ಲಾವಿಯಲ್ಲಿ ತಾನ ಬಿದ್ದಿದ್ದನು ... ...ತೆಂಬೂ ಈ ರೀತಿ ಸ್ವಪ್ನದಲ್ಲಿ... ...ವನ್ನ ವ ಕೆಲಸವಿರಬೇಕೆಂದು ... ...ದು ಮೂರನೇ ದಿನ ಅವನು ... ...ನೆಂಬೂ ವರದಿಯಾಗಿದೆ

...ತಿ ವೆಂಕಟರಾಮಯ್ಯನವರು ...ಸ್ಕೃತಿ ಪ್ರಶಸ್ತಿ ಪ್ರಕಾರ ಪ್ರೈಸಿಕ್ಯಾಸ್ ... ...ಸಿನ ನಿವೃತ್ತ ಭಾಷಾಂತರ ಕಾ... ...ರ್ರಿ ಸಿ ಕೆ ವೆಂಕಟರಾಮಯ್ಯ... ...ವನ್ನು ಇಂದಿನಿಂದ ಸಂಸ್ಥಾನದ ಸಂ... ...ಪ್ರಕಾರ ಯೋಜನೆಯ ಪ್ರಕಾರ ... ...ಎರಡು ವರ್ಷ ಕಾಲ ನೇಮಿಸಿಕೊ... ...ಗಿದೆ

ಮೈಸೂರಿನಲ್ಲೇ ಜಿಲ್ಲಾ ಬೋರ್ಡ್ ಸಭೆ

ಮೈಸೂರು ೧೧

ನೆನ್ನೆ ದಿನ ಏಕಾಂತರಾಮಯ್ಯ... ಬಿ... ಪ್ಪನವರಿಂದ ಈ ದಿನ ಚಾಮುಂಡಿಬೆಟ್ಟದ ಮೇಲೆ ನಡೆಯಬೇಕಾಗಿದ್ದ ಮೈಸೂರು ಜಿಲ್ಲಾ ಬೋರ್ಡಿನ ಅಧಿವೇಶನದ ಕಾರ್ಯ ಕಲಾಪಗಳ ವ್ಯವಸ್ಥೆಯನ್ನು ಅಲ್ಲಿ ಮಾಡಲಾಗದೆ, ಈ ಊರಿನಲ್ಲಿಯೇ ಸಭೆಯನ್ನು ನಡೆಸಲಾಯಿತು ಅಧ್ಯಕ್ಷರಾದ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಒಂದು ಹೇಳಿಕೆಯನ್ನಿತ್ತು, ಜಿಲ್ಲಾ ಬೋರ್ಡುಗಳಿಗೆ ಸಂಬಂಧಪಟ್ಟ ಹೊಸ ಶಾಸನದ ಪರಿಣಾಮವನ್ನು ವಿವರಿಸಿದರು ಜಿಲ್ಲಾ ಬೋರ್ಡುಗಳ ಪರಿಸ್ಥಿತಿಯು ಈ ಶಾಸನದಿಂದ ಒಂದು ಅನಿಶ್ಚಿತವಾದ ರೀತಿಯಲ್ಲಿರುವುದಾಗಿ ಅವರು ಹೇಳಿದರು ಮುಂದೆ ಜಿಲ್ಲಾ ಬೋರ್ಡುಗಳ ರಚನೆಯಾಗಬೇಕಾದ ವಿಧಾನದ ವಿವರವು ಇನ್ನೂ ನಿರ್ಧಾರವಾಗದೇ ಇರುವುದರಿಂದ ಈ ಅನಿರ್ದಿಷ್ಟ ಪರಿಸ್ಥಿತಿಗೆ ಕಾರಣವಾಗಿದೆಯೆಂದು ಹೇಳಿದರು

ಮೈಸೂರು ಜಿಲ್ಲಾ ಬೋರ್ಡಿನ ಆ...ಯವ್ಯಯದ ಅಂದಾಜು ಪಟ್ಟಿಯು ಇನ್ನೂ ಸರ್ಕಾರದಿಂದ ಮಂಜೂರಾಗಿ ಬಂದಿಲ್ಲವೆಂದೂ, ಆದರೂ ಶಾಸನದ ಪ್ರಕಾರ ಆ ಪಟ್ಟಿಯನ್ನೇ ಅನುಸರಿಸಿ ಕೆಲಸಕಾರ್ಯಗಳನ್ನು ಮುಂದುವರಿಸಲಾಗುತ್ತಿದೆಯೆಂದೂ ಅವರು ತಿಳಿಸಿದರು

ಆಂಧ್ರ ಪ್ರಾಂತರಚನೆ ಬಗ್ಗೆ ನೆಹರೂ ಭರವಸೆ

ಭಾರತದ ರಾಜ್ಯಪರಿಷತ್ತಿನ ಸಭೆಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಾತನಾಡುತ್ತಾ, ಆಂಧ್ರರು ಮದ್ರಾಸಿನ ... ಕೇಳಿದಿರುವ ಬಗ್ಗೆ ಜಾಗ್ರತೆಯನ್ನು ... ಬಂದಲ್ಲಿ ಆಂಧ್ರ ಪ್ರಾಂತದ ರಚನಾಕಾರ್ಯವನ್ನು ಶೀಘ್ರ ಸರ್ಕಾರದವರು ಕೈಗೊಳ್ಳಲು ಸಿದ್ಧರಾಗಿರುವರೆಂದು ತಿಳಿಸಿದರು.

ಆಟ್ಟೈರು ಟೆಸ್ಟಿನಲ್ಲಿ ಹಜಾರೆ ಇರುವುದಿಲ್ಲ

ಕಲ್ಕತ್ತದಲ್ಲಿ ೧೩ನೇ ತಾ॥ ನಡೆಯುವ ಭಾರತ ಮತ್ತು ಪಾಕಿಸ್ತಾನಗಳ ಕ್ರಿಕೆಟ್ ಟೀಮುಗಳ ಅಟ್ಟೈರು ಟೆಸ್ಟಿನಲ್ಲಿ ಹಜಾರೆಯವರು ಆಡುವುದಿಲ್ಲವೆಂದು ವರದಿಯಾಗಿದೆ

ಶ್ರೀ ಎ. ಕೃಷ್ಣಮೂರ್ತಿರಾವ್

ಇನ್ನೂ ೩ ತಿಂಗಳ ಕಾಲ ಪೌರಸಭಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು

ರಾಜಧಾನಿಯಲ್ಲಿ ೩॥ ಅಂಗುಲ ಮಳೆ

ಮೈಸೂರು ೧೧

ರಾಜಧಾನಿಯಲ್ಲಿ ನೆನ್ನೆ ರಾತ್ರಿ ಬಂದ ಭಾರಿ ಮಳೆಯು ಕಳೆದ ಎಂಟು ವರ್ಷಗಳಿಂದ ಈಚೆಗೆ ಬಂದಿಲ್ಲವೆಂದರೂ, ನೆನ್ನೆ ೩-೪೦ ಅಂಗುಲ ಮಳೆ ಬಿದ್ದಿತೆಂದೂ ತಿಳಿದುಬಂದಿದೆ ಹಲವು ಭಾರಿ ಗುಡುಗು ಸಿಡಿಲುಗಳೂ ಸಂಭವಿಸಿದುವು ನಗರದ ದೀಪಗಳು ಬಹಳ ಹೊತ್ತು ಕೆಟ್ಟುಹೋಗಿದ್ದುವು

ದೋಣಿ ಮಗುಚಿ ೮ ಮಂದಿ ಸ್ತ್ರೀಯರ ಮರಣ

ನಿಕುಟ್ರ್ಯೋಲು ಬಳಿ ಕನ್ನಂಬಾಡಿಯ ಕಾಲುವೆಯಲ್ಲಿ ಹೋಗುತ್ತಿದ್ದ ದೋಣಿಯೊಂದು ಮೊನ್ನೆ ಮಗುಚಿ ೮ ಜನ ಸ್ತ್ರೀಯರು ಮೃತಪಟ್ಟರೆಂದು ಹೇಳಲಾಗಿದೆ. ೪೦ ಜನ ಕಾರ್ಮಿಕರು ದೋಣಿಯಲ್ಲಿದ್ದರು ಉಳಿದವರು ಸ್ವಲ್ಪ ಗಾಯ ಹೊಂದಿ ಬದುಕಿಕೊಂಡರೆಂದು ತಿಳಿದು ಬಂದಿದೆ

ಇಸ್ರೇಲಿನ ಹೊಸ ಅಧ್ಯಕ್ಷರು

ಇಸ್ರೇಲ್ ರಾಜ್ಯದ ಅಧ್ಯಕ್ಷರಾಗಿ ರಷ್ಯದ ಬಾತಕಳ್ಳಿಗೆ ಸೇರಿದ ಬೆಜ್ವಿ ಎಂಬ ಸಮಾಜವಾದಿ ಮತ್ತು ಯಹೂದಿ ಮುಖಂಡರನ್ನು ಅಲ್ಲಿನ ಪಾರ್ಲಿಮೆಂಟು ಆರಿಸಿರುತ್ತದೆ

ಸುಡಾನ್ ಬಗ್ಗೆ ಇಂಗ್ಲೆಂಡ್ ಈಜಿಪ್ಟುಗಳಿಗೆ ಒಪ್ಪಂದ

ಸುಡಾನಿನ ಭವಿಷ್ಯದ ಬಗ್ಗೆ ಬ್ರಿಟನ್ ಮತ್ತು ಈಜಿಪ್ಟುಗಳಲ್ಲಿ ನೆನ್ನೆ ಒಪ್ಪಂದವಾಯಿತೆಂದು ವರದಿಯಾಗಿದೆ ಈಜಿಪ್ಟಿನ ಪ್ರಧಾನಿ ನಗೀಬ್‌ರವರಿಗೂ ಅಲ್ಲಿರುವ ಬ್ರಿಟಿಷ್ ರಾಯಭಾರಿಗೂ ಮಾತುಕತೆಗಳು ನಡೆದು, ಆವೆರಡು ದೇಶಗಳಿಗೂ ಸಾಮಾನ್ಯ ಒಪ್ಪಂದವಾಗಲಿರುವುದೆಂದೂ ಹೇಳಲಾಗಿದೆ

ಕೆಸಬ್ಲಾಂಕಾ ಗುಂಡಿನ ಪ್ರಕರಣದಲ್ಲಿ ೫೦ ಮರಣ

ಮೊರಾಕೋವಿನ ಕೆಸಬ್ಲಾಂಕಾ ನಗರದಲ್ಲಿ ಫ್ರೆಂಚ್ ಪೋಲೀಸರು ಪ್ರದರ್ಶನಕಾರರ ಮೇಲೆ ಗುಂಡುಹಾರಿಸಿದ ಪರಿಣಾಮವಾಗಿ ೫೦ ಕ್ಕೂ ಮೇಲ್ಪಟ್ಟು ಜನರು ಮಡಿದಿರುವರೆಂದು ಹೇಳಲಾಗಿದೆ ಊರಿಗೆ ಹೊರಗಿನಿಂದ ನುಗ್ಗಲೆತ್ನಿಸಿದ ೬೦೦೦ ಜನ ಮೊರಾಕನ್ನರೊಡನೆ ಫ್ರೆಂಚ್ ಪೋಲೀಸರು ಮತ್ತು ಸೈನಿಕರು ಒಂದು ಗಂಟೆ ಹೋರಾಡಿ ಚದುರಿಸಿದರೆಂದೂ ಹೇಳಲಾಗಿದೆ ಅಲ್ಲಿನ ಅರಬ್ಬರಲ್ಲಿ ಪರದೇಶೀಯರ ವಿರುದ್ಧದ ಭಾವನೆಯು ಬೇರೂರಿ, ಗಲಭೆಗಳಿಗೆ ಕಾರಣವಾಗಿದೆ. ಅಲ್ಜಿಯರ್ಸ್ ನಗರಕ್ಕೂ ಈ ಗಲಭೆಗಳು ಹಬ್ಬಿರುವುವೆಂದೂ ಹೇಳಲಾಗಿದೆ ಕೆಸಬ್ಲಾಂಕಾದಲ್ಲಿ ಕರ್ಫ್ಯೂ ಆಜ್ಞೆ ಜಾರಿ ಮಾಡಲಾಗಿದೆ

ಮಣಿಲಾಲ್ ಗಾಂಧಿ ಮತ್ತು ೩೧ ಜನರ ಬಂಧನ

ದಕ್ಷಿಣ ಆಫ್ರಿಕದ ವರ್ಣವಿಭೇದ ನೀತಿಯ ವಿರುದ್ಧದ ಸತ್ಯಾಗ್ರಹದ ಸಂಬಂಧವಾಗಿ ಮೊನ್ನೆ ಜೋಹಾನ್ಸ್‌ಬರ್ಗಿನಲ್ಲಿ ಮಹಾತ್ಮ ಗಾಂಧಿಯವರ ಪುತ್ರ ಮಣಿಲಾಲ್ ಗಾಂಧಿಯವರನ್ನು ಮತ್ತು ಏಳು ಮಂದಿ ಯುರೋಪ್ಯರು, ೧೧ ಮಂದಿ ಆಫ್ರಿಕನ್ನರು ಮತ್ತು ೧೩ ಮಂದಿ ಭಾರತೀಯರನ್ನು ಬಂಧಿಸಲಾಯಿತು ಬಂಧಿಸಲ್ಪಟ್ಟ ಯುರೋಪ್ಯರಲ್ಲಿ ದಕ್ಷಿಣ ಆಫ್ರಿಕದ ಮಾಜಿ ಗವರ್ನರ್ ಜನರಲ್ಲರ ಪುತ್ರರೂ, ಪಲವು ಮುಖಂಡರೂ ...ವೇ ಮೊದಲಾಗಿ ಸೇರಿದ್ದರು ಹಲವು ಸ್ತ್ರೀಯರು ಮತ್ತು ವಿದೇಶೀ ಪತ್ರಿಕಾ ವರದಿಗಾರರನ್ನೂ ಬಂಧಿಸಲಾಗಿದೆ

ಭಾರತದ ಗಡಿ.ಗೆ ಪಾಕಿಸ್ತಾನದವರ ಗುಂಡು

ಪೂರ್ವ ಪಾಕಿಸ್ತಾನದ ಕಡೆಯಿಂದ ಪಾಕಿಸ್ತಾನ್ ಸೈನ್ಯಗಳು ಜಲಪೈಗುರಿ ಜಿಲ್ಲೆಯ ಮಾಣಿಕ್ ಗಂಜ್ ಬಳಿ ೩೦ ತೌಂಡು ಗುಂಡು ಹಾರಿಸಿರುತ್ತಾರೆಂದು ವರದಿಯಾಗಿದೆ. ಗುಂಡು ಹಾರಿಸಿದ ನಂತರ ಆ ಸೈನಿಕರು ವಾಪಸಾದರೆಂದೂ ಹೇಳಲಾಗಿದೆ

ಶ್ರೀ ಹನುಮಂತೋತ್ಸವ

ಮೈಸೂರು ಕೋಟೆ ಆಂಜನೇಯಸ್ವಾಮಿಯವರ ದೇವಸ್ಥಾನದಲ್ಲಿ ನಡೆಯುತ್ತಿರುವ ಶ್ರೀ ಹನುಮಜ್ಜಯಂತಿ ಉತ್ಸವವು ನಾಳೆ ಮುಕ್ತಾಯವಾಗಿ ನಾಳೆ ಸಂಜೆ ೬ ಗಂಟೆಗೆ ಉತ್ಸವವು ಹೊರಡುವುದು ಈ ರಾತ್ರಿ ೮ ಗಂಟೆಗೆ ಶ್ರೀ ಸುಬ್ಬರಾಮಯ್ಯ ಭಾಗವತರ ಹರಿಕಥೆಯೂ ನಾಳೆ ಬೆಳಿಗ್ಗೆ ೯-೩ ಗಂಟೆಗೆ ಪಟ್ಟಾಭಿಷೇಕವೂ ನಡೆಯುವುವು

○ಪೀಕಿಂಗ್ ಆಜ್ಞೆಯ ಪ್ರಕಾರ ಟಿಬೆಟ್ಟಿನಲ್ಲಿರುವ ಚೀನಾ ಸಮಿತಿಯು "ಪ್ರತಿಕ್ರಾಂತಿಕಾರಿಗಳನ್ನು" ಉಚ್ಚಾಟನೆ ಮಾಡುತ್ತಿರುವುದೆಂದು ವರದಿಯಾಗಿದೆ ಟಿಬೆಟ್ಟಿನಲ್ಲಿ ಸೈನ್ಯದ ಅಧಿಕಾರಿಯೊಬ್ಬನನ್ನೂ ದಸ್ತಗಿರಿ ಮಾಡಲಾಗಿರುವುದೆಂದೂ ಹೇಳಲಾಗಿದೆ

ಅಖಿಲ ಮಾಧ್ವ ಸಮ್ಮೇಳನ

ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಕೆ ಎಲ್ ವ್ಯಾಸರಾಯ ಶಾಸ್ತ್ರಿಗಳು ಈ ರೀತಿ ಬರೆದಿರುತ್ತಾರೆ

ಬರುವ ಜನವರಿ ತಿಂಗಳ ದಿನಾಂಕ ೪ ರಂದ ಉಡುಪಿಯಲ್ಲಿ ಶ್ರಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಪ್ರಯತ್ನದ ಫಲವಾಗಿ ಜರುಗತಕ್ಕ ಅಖಿಲ ಮಾಧ್ವ ಸಮ್ಮೇಳನವು ಅಪೂರ್ವ ಸನ್ನಿವೇಶವೆಂದು ಹೇಳಬಹುದು ಶ್ರೀ ಮಧ್ವಾಚಾರ್ಯರು ಅವತಾರವಾಗಿ ಇಂದಿನವರೆಗೆ ಇಂತಹ ಸಮ್ಮೇಳನವು ನಡೆದುದಿಲ್ಲ ವಿಜ್ಞಾನ ಸೂರ್ಯನು ಅತ್ಯೋನ್ನತನಾಗಿರುವ ಈ ಕಾಲದಲ್ಲಿ, ಈಗಿರುವ ಸಮ್ಮೇಳನಗಳನ್ನು ಸೇರಿಸಿ ಮತಗಳಿಂದ ಸಮಾಜಕ್ಕೆ ಉಂಟಾಗತಕ್ಕ ಪ್ರಯೋಜನಗಳನ್ನು ವ್ಯಕ್ತಪಡಿಸಿ ಆಧ್ಯಾತ್ಮಿಕ ತತ್ವಗಳನ್ನು ಸಮಾಜದಲ್ಲಿ ಪ್ರಚಾರಗೊಳಿಸುವುದು ಮತ ಸಂಸ್ಥೆಗಳ ಇಂದಿನ ಮುಖ್ಯ ಕರ್ತವ್ಯವಾಗಿದೆ ಹೀಗೆ ಮಾಡಿದರೆ ನಮ್ಮ ಜನಾಂಗದ ಮುಂದಿನ ಪೀಳಿಗೆಯು ಜ್ಞಾನಕಿರಣಗಳಿಂದ ಭಾಸಿತವಾಗಿ ವಿವೇಕೀಯ ನಂಬಿಕೆಯನ್ನು ಪಡೆದು ನಮ್ಮ ಭಾರತ ವರ್ಷದ ಸಂಸ್ಕೃತಿಯನ್ನೂ ಚಿರಾರ್ಜಿತವಾದ ಉತ್ಕರ್ಷವನ್ನೂ ನೆಲೆಗೊಳಿಸಬಹುದು ಈ ಮಹತ್ಕಾರ್ಯ ಧ್ಯೇಯವನ್ನು ಪೂರೈಸ ಪ್ರಯತ್ನಿಸಿದೆ ಈ ಸಮ್ಮೇಳನವು [illegible]

ಈ ಸಮ್ಮೇಳನದಲ್ಲಿ ಸಮಸ್ತ ಮಾಧ್ವರೂ ಒಂದಾಗಿ ಸೇರಿದರೆ ಉದ್ದಿಷ್ಟ ಫಲಗಳನ್ನು ಸಾಧಿಸಲು [illegible] ಸಮಾಜದೊಂದಿಗೆ ಸೇರದೆ ಬೇರೆಯಾಗಿದ್ದರೆ [illegible] ಮತ ಸಂಸ್ಥೆಗಳ ಸ್ಥಿರತೆಗಳು [illegible] ಅಂಥ ಪರಿವರ್ತನೆಗಳ [illegible] ಸಮ್ಮೇಳನದಿಂದಲೇ ಶಕ್ಯ [illegible] ಈ ಸಂದರ್ಭದಲ್ಲಿ [illegible] ಸೇರಿದ ಮಠಾಧಿಪತಿಗಳೂ [illegible] ಮತಾಭಿಮಾನಿಗಳೂ ನಮ್ಮ [illegible] ಸಹಾನುಭೂತಿಯನ್ನು ತೋರಿಸುವುದು ಪರಮ ಧರ್ಮ

ಮಠಗಳೊಳಗೆ ಪರಸ್ಪರ ಭಿನ್ನಾಭಿಪ್ರಾಯಗಳೂ ಭಿನ್ನ ಸಂಪ್ರದಾಯಗಳೂ [illegible] ಭಾವನೆಗಳೂ ಬರಬಹುದು [illegible] ಅವುಗಳನ್ನೆಲ್ಲಾ ಈ ಸಂದರ್ಭದಲ್ಲಿ ತೊರೆದು—ಇದು ಕೇವಲ ಶ್ರೀಮಧ್ವಾಚಾರ್ಯರ ಸೇವೆಯೆಂದು ಬಗೆದು ಎಲ್ಲಾ ಮಾಧ್ವ ಮಠಾಧಿಪತಿಗಳೂ ಸಮ್ಮೇಳನದಲ್ಲಿ ಸನ್ನಿಹಿತರಾದರೆ ನಮ್ಮ ಮಾಧ್ವ ಸಮುದಾಯವು ಲೋಕದ ಪ್ರಶಂಸೆಗೆ ಪಾತ್ರವಾಗುವುದು ಅನ್ಯಥಾ ಶ್ರೀಮಧ್ವಾಚಾರ್ಯರ ಸೇವೆಯನ್ನು ಸರಿಯಾಗಿ ಸಲ್ಲಿಸದ ಕೊರತೆಯು ಉಂಟಾಗಬಹುದು

ಮಾನ್ಯ ಶ್ರೀಗಳಾದ ಶ್ರೀಮನ್ ಮೈಸೂರು ಮಹಾರಾಜರವರು ಉಡುಪಿಗೆ ಚಿತ್ತೈಸಿ ಈ ಸಮ್ಮೇಳನವನ್ನು ಉದ್ಘಾಟನೆ ಮಾಡಲು ಒಪ್ಪಿಕೊಂಡಿದ್ದಾರೆಂಬ ಸಮಾಚಾರವು [illegible] ಮದ್ರಾಸ್ ನ್ಯಾಯ ವಿಧಾಯಕ ಸಭೆಗಳಲ್ಲಿ ಮಂದಿ ಮಾನ್ಯ ಸದಸ್ಯರು [illegible] ಸಮ್ಮೇಳನದಲ್ಲಿ [illegible] ಉತ್ಸಾಹದಿಂದ ತಕ್ಕ ಸಮ್ಮಾನಗಳನ್ನು ನೀಡಿ [illegible] ಈ ಸಮ್ಮೇಳನದ [illegible] ಶ್ರೀ ಬಿ ವೆಂಕಟೇಶಾಚಾರ್ಯರ ಅಧ್ಯಕ್ಷತೆಯಲ್ಲಿ ನಿಖಿಲ ಮಾಧ್ವ ಮಠಾಧಿಪತಿಗಳ ಪ್ರೋತ್ಸಾಹದ ಸಾನ್ನಿಧ್ಯದಿಂದಲೂ ಅಖಿಲ ಮಾಧ್ವ ವೃಂದದ ಯೋಗ್ಯವಾದ ಸಹಕಾರದಿಂದಲೂ ಯಶಸ್ವಿಯಾಗಿ ಜರುಗುವುದೆಂದು ನಂಬುತ್ತೇನೆ

ಬಿಹಾರ್ ಕಾಂಗ್ರೆಸ್ ಚುನಾವಣೆಗಳ ರದ್ದಿಯಾತಿ

ಹೈದರಾಬಾದು ಕಾಂಗ್ರೆಸ್ ಅಧಿವೇಶನಕ್ಕೆ ಬಿಹಾರಿನಿಂದ ಆದ ಪ್ರತಿನಿಧಿ ಚುನಾವಣೆಗಳಲ್ಲಿ ಅಕ್ರಮ ನಡವಳಿಕೆಗಳಾದುದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಅವನ್ನು ರದ್ದುಗೊಳಿಸಲು ನಿರ್ಧರಿಸಿರುವರೆಂದು ವರದಿಯಾಗಿದೆ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಪುನಃ ಹೊಸದಾಗಿ ಕೂಡಿಸುವಂತೆಯೂ ಆಜ್ಞೆ ಮಾಡಲಾಗಿದೆಯೆಂದು ಗೊತ್ತಾಗಿದೆ

ಸರ್ಕಾರಿ ವೈದ್ಯರ ಖಾಸಗಿ ವೃತ್ತಿಗೆ ನಿಷೇಧ

ಸರ್ಕಾರಿ ವೈದ್ಯರು ಖಾಸಗಿಯಾಗಿ ತಮ್ಮ ವೃತ್ತಿಯಲ್ಲಿ ತೊಡಗಬಾರದೆಂದು ಕೇಂದ್ರ ಸರ್ಕಾರದವರು ನಿಷೇಧಿಸಿರುವ ಮೇರೆ ದೆಹಲಿ ಪ್ರಾಂತ್ಯದಲ್ಲಿ ಈಗಾಗಲೇ ಅದನ್ನು ಜಾರಿಗೆ ತರಲಾಗಿದೆಯೆಂದೂ, ಹಲವು ಪ್ರಾಂತ್ಯ ಸರ್ಕಾರಗಳವರೂ ಇದಕ್ಕೆ ಒಪ್ಪಿರುವರೆಂದೂ ಮತ್ತು ದೇಶದ ಆದ್ಯಂತ ಪೇಟೆಲ್ಲೆಂಡ ನಿಷೇಧವನ್ನು ಜಾರಿಗೆ ತರುವಂತೆ ಸಂಬಂಧಪಟ್ಟ ಸರ್ಕಾರಗಳಿಗೆ ಸೂಚನೆ ಕೊಡಲಾಗಿದೆಯೆಂದೂ ಗೊತ್ತಾಗಿದೆ

ರಷ್ಯದಲ್ಲಿ ಅಣು ಬಾಂಬ್ ವಾಹಕ ವಿಮಾನಗಳು

ರಷ್ಯವು ಜರ್ಮನಿಯ ನಿಪುಣರ ಸಹಾಯದಿಂದ ಅಣು ಬಾಂಬ್ ವಾಹಕ ವಿಮಾನಗಳನ್ನು ತಯಾರಿಸುತ್ತಿದೆಯೆಂದೂ, ಆ ವಿಮಾನಗಳು ರಷ್ಯದಿಂದ ಎಲ್ಲೂ ನಿಲ್ಲದೆ ನೇರವಾಗಿ ಅಮೆರಿಕಕ್ಕೆ ಹೋಗಿ ಹಿಂದಿರುಗಬಲ್ಲವೆಂದೂ ಹೇಳಲಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೩೦ ಎ ಎಲ್ ಕಲಾವರ [illegible] ಸಂಗೀತ ಮಧ್ಯಾಹ್ನ ೧.೪೦ ವೀಣೆ. ಆರ್ ಎಸ್ ನಾರಾಯಣಮೂರ್ತಿ, ವೇಣುಗಾನ ಸಂಜೆ ೬.೪೦ ಎ ಎಲ್ ಚಲುವರಾಜ್, ಸಂಗೀತ ೭.೧೦ ಕನ್ನಡ ಗೀತೆಗಳು ೭ ರಸನಿಮಿಷ ೭.೩೦ ಕೆ ಎಸ್ ನಾರಾಯಣಮೂರ್ತಿ, ವೇಣುಗಾನ ಆ ಶ್ರೀಧರ ಪರ್ವತಕರ್, ಪಿಟೀಲು (ರೆಕಾರ್ಡ್) ೮ ೧೫ ಆರ್ ಸುಬ್ಬರಾವ್, ಕನ್ನಡ ಗೀತೆಗಳು ೮.೩೦ ರತ್ನಮ್ಮ ಕೃಷ್ಣಮೂರ್ತಿ ಸಂಗೀತ [illegible] ಎಂ ಎಸ್ ಸುಬ್ಬಲಕ್ಷ್ಮಿ, ರೆಕಾರ್ಡ್ ಸಂಗೀತ ೯.೪೦ ವಿದ್ಯಾರ್ಥಿ ಮಂಡಲಿ ವಿದ್ಯಾರ್ಥಿಗಳಿಂದ ಕನ್ನಡದಲ್ಲಿ ಕಾರ್ಯಕ್ರಮ (ಐತಿಹಾಸಿಕ ಪುರುಷರ ಬಗ್ಗೆ ಶ್ರೀ ವಿ ಟಿ ಆರ್ ಕಾವೇರಮ್ಮನವರಿಂದ [illegible] ಗಣಿತದ ತೊಡಕು ಮತ್ತು [illegible] ಮಹಾರಾಣಿ ಹೈಸ್ಕೂಲು ವಿದ್ಯಾರ್ಥಿನಿಯರಿಂದ ಅರ್ಕೆಸ್ಟ್ರಾ ಇರುತ್ತವೆ)

ಕಾಶ್ಮೀರದ ಬಗ್ಗೆ ನಿರ್ಣಯಕ್ಕೆ ಭಾರತದ ತಿರಸ್ಕಾರ

ಕಾಶ್ಮೀರದ ಬಗ್ಗೆ ಇಂಗ್ಲೆಂಡ್ ಮತ್ತು ಅಮೆರಿಕಗಳು ಭದ್ರತಾ ಸಮಿತಿಯಲ್ಲಿ ಮಂಡಿಸಿರುವ ನಿರ್ಣಯವನ್ನು ಭಾರತವು ತಿರಸ್ಕರಿಸಿರುವುದಾಗಿ ಸದರಿ ಸಮಿತಿಯಲ್ಲಿ ಭಾರತದ ಪ್ರತಿನಿಧಿ, ವಿಜಯಲಕ್ಷ್ಮಿ ಪಂಡಿತರು ತಿಳಿಸಿರುತ್ತಾರೆ.

ಸೇತುವೆ ಮೇಲೆ ಪ್ರವಾಹ ನುಗ್ಗಿ ಬಸ್ಸು ತಲೆಕೆಳಗು

ಚಿಯ್ಯಾರಿನಿಂದ ವಾಂಡಿವಾಷಿಗೆ ಕಳೆದ ೭ನೇ ತಾ|| ಸಂಜೆ ಹೋಗುತ್ತಿದ್ದ ಬಸ್ಸೊಂದು ಒಂದು ಸೇತುವೆಯನ್ನು ದಾಟುತ್ತಿದ್ದಾಗ ಅನಿರೀಕ್ಷಿತವಾಗಿ ಪ್ರವಾಹವು ಬಂದು ಬಸ್ಸು ಉರುಳಿ ತಲೆಕೆಳಗಾಯಿತೆಂದೂ, ಒಳಗಿದ್ದ ಪ್ರಯಾಣಿಕರೆಲ್ಲರೂ ರಕ್ಷಿಸಲ್ಪಟ್ಟರೂ, ಡ್ರೈವರನು ಪತ್ತೆಯಿಲ್ಲವೆಂದೂ ವರದಿಯಾಗಿದೆ

ಜೆಕೋಸ್ಲೊವೇಕಿಯಾ ಉಪ ಪ್ರಧಾನಿಯ ದಸ್ತಗಿರಿ

ಜೆಕೊಸ್ಲೊವೇಕಿಯದ ಉಪಪ್ರಧಾನಿ ಫಿಯರ್‌ಲಿಂಗರ್, ಐದು ಮಂದಿ ಮಾಜಿ ಮಂತ್ರಿಗಳು ಮತ್ತು ಇತರ ಅನೇಕರನ್ನು ದಸ್ತಗಿರಿ ಮಾಡಲಾಗಿರುವುದೆಂದು ವರದಿಯಾಗಿದೆ ಈಚೆಗೆ ಗಲ್ಲಿಗೇರಿಸಲ್ಪಟ್ಟ ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ರೂಡಾಲ್ಫ್ ಸ್ಲಾನ್ಸ್ಕಿಯವರಿಗೆ ಇವರುಗಳು ಸ್ನೇಹಿತರಾಗಿದ್ದದೇ ಇವರ ದಸ್ತಗಿರಿಗೆ ಕಾರಣವೆಂದೂ ಹೇಳಲಾಗಿದೆ

ಪ್ರಜಾ ಸಂಘದ ಸಭೆ

ಇದೇ ತಿಂಗಳು ೧೪ನೇ ತಾ|| ಭಾನುವಾರ ಸಂಜೆ ೩ ಗಂಟೆಗೆ ಒನುಮಯ್ಯನವರ ಪ್ರೌಢಶಾಲೆಯ ಹಿಂಭಾಗದಲ್ಲಿರುವ ಸಾಹುಕಾರ್ ದೊಡ್ಡಮಲ್ಲಣ್ಣನವರ ಮನೆಯಲ್ಲಿ ಎಲ್ಲ ವಿರೋಧಿ ಪಂಗಡಗಳ ಮತ್ತು ನಗರದ ಮುಖಂಡರ ಸಭೆಯು ಪೌರಸಭಾ ಸದಸ್ಯ ಶ್ರೀ ಎ ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಪೌರಸಭೆಯವರು ಏರ್ಪಾಡು ಮಾಡಲಿರುವ ವಾರ್ಡುಗಳ ವಿಂಗಡನೆಯ ಬಗ್ಗೆ ಅಲ್ಲಿ ಪರಿಶೀಲನೆಯಾಗುವುದು

ಕುರುಬರ ಸಂಘ

ಚಾಮುಂಡಿಪುರದ ಶ್ರೀರಾಮ ಮಂದಿರದಲ್ಲಿ ಇದೇ ೧೪ ನೇ ತಾರೀಕು ಭಾನುವಾರ ಮಧ್ಯಾಹ್ನ ೩ ಘಂಟೆಗೆ ಮೈಸೂರು ಸಂಘದ ಸಭೆಯನ್ನು ಏರ್ಪಡಿಸಲಾಗಿದೆ ಈ ದಿನ [illegible] ಅಂಕಿತ [illegible] ಕುಲಬಾಂಧವರು ಈ ದಿನದ ಸಭೆಯನ್ನು [illegible]

ರಾಜಕಮಲ್, ಮೈಸೂರು

11 12 52 ರಿಂದ ಅನೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ತಮಿಳ್ ನಾಡು ಟಾಕೀಸ ರವರ ತಮಿಳು ಚಿತ್ರ

* ಪೆಣ್ ಮನಮ್ *

(ಹೆಂಗಸಿನ ಮನಸ್ಸು)

[illegible] ಈ ಚಿತ್ರ ಕಲೆಯ ಕಥಾವಸ್ತು

ಭೂಮಿಕೆ ಎಂ ವಿ ರಾಜಮ್ಮ, ಮೋಹನ ಟಿ ಕೆ ಷಣ್ಮುಗಂ

ಟಿ ಕೆ ರಾಮಸ್ವಾಮಿ [illegible]

ಉಡ್‌ಲ್ಯಾಂಡ್ಸ್ ಟಾಕೀಸಿನಲ್ಲಿ

11-12-1952 ರಿಂದ ಅನೋಘ ಪ್ರಾರಂಭ

ಎಲ್ಲಾ ಪತ್ರಿಕೆಗಳೂ ಮುಕ್ತಕಂಠದಿಂದ ಹೊಗಳಿರುವ

ವಿಶಿಷ್ಟ ಸಂಗೀತಮಯ ಚಿತ್ರ !

ಅಶೋಕ್ ಕುಮಾರ್ ಮತ್ತು ನಳಿನಿ ಜಯವಂತ್ ನಟಿಸಿರುವ

ಮುನಸಿ ಪ್ರೊಡಕ್ಷನ್ಸ್ ರವರ ಹಿಂದಿ ಚಿತ್ರ

★ ಕಾಫಿಲ ★

ಕಾಫಿಲ

ಉತ್ತಮ ಸಂಗೀತ ಮತ್ತು ಮನರಂಜನೆಯಿಂದ ಕೂಡಿದ ಚಿತ್ರ

ಚಿತ್ರಗುಪ್ತ

‘ಕಾಫಿಲ’

ಚಿತ್ರ ಉತ್ಕೃಷ್ಟ ಮನರಂಜನೆಯ ದೃಷ್ಟಿ ಕೋನಗಳಿಂದ ರಸಿಕರು ಕೈವಾಡದಿಂದ ಮನಗೊಂಡಿದೆ

ನಳಿನಿ ಅಶೋಕ್ ಮೋಹಕ ಅಭಿನಯದಲ್ಲಿ ಮಿಂಚಿದ್ದಾರೆ

ಜನಪ್ರಗತಿ



ಕಾಫಿಲ

ಸಹಜ ಅಭಿನಯ ಸಂಗೀತ ಮತ್ತು ಸರಳ ಸಂಭಾಷಣೆ ಚಿತ್ರವನ್ನು ಮನೋರಂಜಿಸಿದೆ

ಪ್ರಜಾಮತ

‘ಕಾಫಿಲ’

ರಮ್ಯವಾದ ಅಭಿನಯದಿಂದ ಕೂಡಿರುವ ಜನಮೆಚ್ಚಿಕೆಯ ಚಿತ್ರ

ಕಾಡವಾಣಿ

★

ಸಹಾಯಕ ನಟವರ್ಗ

ರಂಜನ್, ಮೋತೀಲಾಲ್, ಪ ಸೋಮ, ಸುನಾಲಿನಿ ದೇವಿ

ಪ್ರತಿಯೊಬ್ಬರೂ ನೋಡಬೇಕಾದ ಚಿತ್ರ

Release Through B L N SETTY MYSORE

SRI GANESH

TALKIES

From 11 12 52

Republic's Masterpiece

ADVENTURES OF CAPTAIN FABIAN

featuring Errol Flynn and Micheline Prelle

Edited, Printed and Published by A R Nagarajan at Sadhvi Press, D Subbiah Road, Mysore

ಎಲ್.ಪೋ. ನಂ. ೧೫೭ ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೧೧-೩ ೧೯೫೩ [ಸಂಚಿಕೆ ೧೧೧

— ತಂಜಾವೂರಿನಲ್ಲೇ — ೩೪೦ ಜನರ ಮರಣ

ಯಂತ್ರ ಪ್ರಸಾರದಿಂದ ಸಂಗೀತದ ಮಟ್ಟ ಇಳಿದಿದೆ

ಕಲಾ ಸಂಘದ ಆರಂಭೋತ್ಸವದಲ್ಲಿ ಶ್ರೀ ಜಯಚಾಮರಾಜರ ಭಾಷಣ

ಬೆಂಗಳೂರು ೫

... ಭವನದಲ್ಲಿ ಮೊನ್ನೆ ಸಂ... ಕಲಾ ಸಂಘ... ಮಹೋತ್ಸವವನ್ನು ನೆರವೇರಿಸಿ ... ಸಂಸ್ಥೆಯು ಪುರೋಭಿವೃದ್ಧಿ ... ಕಲೆ ಮತ್ತು ಸಂಗೀತಗಳ ಪಾತ್ರ ಅತಿ ಮುಖ್ಯವಾದುದೆಂದೂ, ಮಾನವನ ವ್ಯಕ್ತಿತ್ವ ವಿಕಾಸಹೊಂದಲು ... ಸಾಧನೆಗಳೆಂದೂ ತಿಳಿಸಿ ... ಸಂಗೀತ ಮತ್ತು ನೃತ್ಯ ಕಲೆಗಳು ಮಾನವನಷ್ಟೇ ಪುರಾತನವಾಗಿವೆ ... ತ್ವವನ್ನು ಮಸುಕು ಮಾಡುವ ನಿತ್ಯ ಜೀವನದ ... ಸಂಗೀತವು ತೊಡೆದು ... ಸಾಗರೀಕತೆಯು ಉದಯವಾದಂದಿನಿಂದಲೂ ನೃತ್ಯಕಲೆಯು ... ಜೀವನದ ಒಂದು ಅಂಗವಾಗಿ ... ನೃತ್ಯವಿಲ್ಲದೆ, ಸಂಗೀತ ಪರಿಪೂರ್ಣವಾಗಿಲ್ಲ, ಎಂದು ಹೇಳಿ ಈ ಎರಡು ಕಲೆಗಳಿಗೂ ಪ್ರೋತ್ಸಾಹವು ಜಗತ್ತಿನ ... ಗ್ರಾಮಾಫೋನ್, ರೇಡಿಯೋ, ಸಿನಿಮಾ ಮುಂತಾದ ಯಂತ್ರ ಪ್ರಸಾರ ಸಾಧನೆಗಳಿಂದ ಸಂಗೀತವು ಅಗ್ಗವಾಗಿ, ಅದರ ಮಟ್ಟವೇ ಇಳಿದುಹೋಗಿರುವುದೆಂದೂ, ಕಲಾ ದೃಷ್ಟಿಯಿಂದ ಇದು ಸರಿಯಲ್ಲ ... ತಿಳಿಸಿದರು.

ಮದ್ರಾಸ್ ಪ್ರಾಂತದಲ್ಲಿ ... ಮಾರುತದ ಅನಾಹುತ

... ೩೦ ನೇ ತಾರೀಖು ಬೀಸಿದ ... ಮಾರುತದಿಂದ ಮದ್ರಾಸಿನ ತಂ... ಜಿಲ್ಲೆಯೊಂದರಲ್ಲೇ ೫ ಕೋಟಿ ... ನಷ್ಟವಾಗಿರುವುದೆಂದೂ ... ಜನರೂ, ... ದನಕರು ... ಸತ್ತು, ... ಮನೆಗಳು ... ವಾಗಿವೆಯೆಂದೂ, ... ಗಳು ನಷ್ಟಕ್ಕೀಡಾಗಿರುವುದಾಗಿಯೂ ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಿಳಿಸಿರುತ್ತಾರೆ ... ಎಕರೆ ... ಹಾಳಾಗಿರುವುದೆಂದೂ, ... ಎಕರೆ ಜಮೀನಿನಲ್ಲಿ ಬಾಳೆ ... ನಷ್ಟವಾಗಿರುವುದೆಂದೂ ಅವರ ... ನಾಗಪಟ್ಟಣ ಮತ್ತು ... ಹಳ್ಳಿಗಳಲ್ಲಿ ೧೧ ... ಎಕರೆ ಜಮೀನುಗಳಲ್ಲಿ ಎಲ್ಲ ಹೆಣ್ಣು ... ಹಾಳಾಗಿವೆ ಮದ್ರಾಸು ... ತೆಸರಿನಲ್ಲಿ ಪರಿಹಾರ ನಿಧಿ ... ಏರ್ಪಡಿಸಲಾಗಿದೆ ... ೧೫ ಸಾವಿರ ರೂ ಗಳನ್ನು ಕೊಟ್ಟಿರುತ್ತಾರೆ ಮದ್ರಾಸು ... ೧೦೦೦ ರೂ ಗಳನ್ನು ಮಂಜೂರು ಮಾಡಿರುವರು

ಇನ್ನೂ ಇಬ್ಬರು ವಿದ್ಯಾರ್ಥಿಗಳ ದಸ್ತಗಿರಿ ಮತ್ತು ಬಿಡುಗಡೆ

... ಪತ್ರಿಕೆ ಕಛೇರಿಯ ... ಪ್ರದರ್ಶನ ನಡೆಸಿದ ... ಶ್ರೀಗಳಾದ ... ನಾರಾಯಣ್ ... ಇನ್ನೂ ಇಬ್ಬರು ವಿದ್ಯಾರ್ಥಿಗಳನ್ನು ಪೋಲೀಸರು ದಸ್ತಗಿರಿ ಮಾಡಿ, ಸ್ವಂತ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ

ಬೋರ್ಡುಗಳ ಚುನಾವಣೆಗಳನ್ನು ಬೇಗ ನಡೆಸಬೇಕು

ಜಿಲ್ಲಾ ಬೋರ್ಡು ಸಭೆಯಲ್ಲಿ ನಿರ್ಣಯ

ಮೈಸೂರು ೧೧

ನೆನ್ನೆ ಮಧ್ಯಾಹ್ನ ನಡೆದ ಜಿಲ್ಲಾ ಬೋರ್ಡಿನ ಸಾಧಾರಣ ಸಭೆಯಲ್ಲಿ ಜಿಲ್ಲೆಯ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ಈಗಿರುವ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕಾಗಿ ಬೋರ್ಡು ೩೦ ಲಕ್ಷ ರೂ ಸಾರ್ವಜನಿಕ ಸಾಲವನ್ನು ಎತ್ತುವ ಸಲುವಾಗಿ ಅಧ್ಯಕ್ಷರು ಸರ್ಕಾರದೊಡನೆ ವ್ಯವಹರಿಸಬೇಕೆಂದು ತೀರ್ಮಾನಿಸಲಾಯಿತು.

ಹಿರಿಯಾಪಟ್ಟಣದ ಸಬ್ ಡಿವಿಷನ್ನಿನ ... ನಡವಳಿಕೆ ವಿಚಾರವಾಗಿ ಶ್ರೀ ... ವೆಂಕಟಸುಬ್ಬಯ್ಯನವರ ಪ್ರಶ್ನೆಗೆ ಅಧ್ಯಕ್ಷರು ಉತ್ತರವೀಯುತ್ತಾ, ಈ ಬಗ್ಗೆ ದೂರು ಬಂದಿದ್ದಾಗ ಅದನ್ನು ಸರಿಪಡಿಸಲಾಯಿತೆಂದು ತಿಳಿಸಿದರು

ಚಾಮುಂಡಿಬೆಟ್ಟದ ಮೆಟ್ಟಿಲುಗಳ ರಿಪೇರಿಗೆ ೫ ಸಾವಿರ ರೂ ಗಳನ್ನು ಮಂಜೂರು ಮಾಡಲಾಯಿತು ಜಿಲ್ಲಾ ಬೋರ್ಡು ಹೈಸ್ಕೂಲುಗಳಲ್ಲಿ ಕ್ಯಾಂಟೀನ್ ಗಳನ್ನು ೪೦೦ ರಿಂದ ೬೦೦ ರೂ ವರೆಗಿನ ಖರ್ಚಿನಲ್ಲಿ ಏರ್ಪಡಿಸಬೇಕೆಂದು ತೀರ್ಮಾನಿಸಲಾಯಿತು

ಹೊಸ ಬೋರ್ಡುಗಳಿಗೆ ಚುನಾವಣೆಗಳನ್ನು ಅನಿರ್ದಿಷ್ಟವಾಗಿ ಮುಂದೆ ಹಾಕಿರುವುದರಿಂದ, ಹಾಲಿ ಬೋರ್ಡಿನ ಕಾರ್ಯಕಲಾಪಗಳು ಕಷ್ಟವಾಗುತ್ತಿವೆಯೆಂದೂ, ಕೂಡಲೇ ಚುನಾವಣೆಗಳನ್ನು ನಡೆಸಬೇಕೆಂದೂ ಸರ್ಕಾರವನ್ನು ಕೋರುವ ನಿರ್ಣಯವನ್ನು ಶ್ರೀ ಟಿ ಸಿ ಹೊನ್ನಪ್ಪನವರು ಸಭೆಯ ಮುಂದಿಡುತ್ತಾ ಸರ್ಕಾರವು ಪ್ರಜಾ ಪ್ರಭುತ್ವ ತತ್ವಕ್ಕನುಗುಣವಾಗಿ ನಡೆಯದೆ ಸರ್ವಾಧಿಕಾರ ಧೋರಣೆಯನ್ನು ತಾಳಿದೆಯೆಂದೂ ಇದನ್ನು ಪ್ರತಿಭಟಿಸಬೇಕೆಂದೂ ನುಡಿದರು ಶ್ರೀಗಳಾದ ... ಪುಟ್ಟಣ್ಣ, ... ಗಾಳಪ್ಪ, ಮತ್ತು ಪಿ ವೆಂಕಟಸುಬ್ಬಯ್ಯನವರು ಮಾತನಾಡಿ, ಸರ್ಕಾರದವರು ಜನರ ಸ್ವಾತಂತ್ರ್ಯವನ್ನು ಕಸಿಯುವ ಯೋಜನೆಯನ್ನು ಬಿಟ್ಟು ಪ್ರಜಾ ಪ್ರಭುತ್ವವನ್ನು ಬೆಳಸಬೇಕೆಂದು ಒತ್ತಾಯಪಡಿಸಿದರು

ಅಧ್ಯಕ್ಷರು ಮಾತನಾಡಿ, ಸರ್ಕಾರವು

ಆಕಾಶದಲ್ಲಿ ವಿಚಿತ್ರ ವಸ್ತು

ಮೈಸೂರು ೧೧

ಈ ದಿನ ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ನಗರದ ಆಗ್ನೇಯ ದಿಕ್ಕಿನಿಂದ ವಾಯವ್ಯದ ಕಡೆ ಆಕಾಶದಲ್ಲಿ ೫ ಅಡಿ ಉದ್ದ, ಎರಡು ಅಂಗುಲ ಅಗಲದಷ್ಟು ಆಕಾರದಲ್ಲಿ ಕಾಣುವ ಬಿಳಿಯ ವಸ್ತುವೊಂದು ಹೋಗುತ್ತಿರುವುದು ಕಾಣುತ್ತಾ ಹಾಯ್ದುಹೋಗಿ ನೋಡುವಲ್ಲಿ ಮರೆಯಾಯಿತೆಂದೂ, ನೂರಾರು ಜನರು ಅದನ್ನು ನೋಡಿದರೆಂದೂ ತಿಳಿದುಬಂದಿದೆ

ಭಾರಿ ಕಳವಿಗೆ ಸಜಾ

ಈರ್ವಿನ್ ರಸ್ತೆ ... ಭಾರಿ ಕಳವು ಗೋಣಿ ಬುರುಡ್ ... ಮೊನ್ನೆ ಮಾರ್ಕೆಟ್ ... ಜೇಬುಗಳ್ಳತನ ನಡೆಸುತ್ತಿದ್ದಾಗ ದೇವರಾಜ ಪೋಲೀಸರು ಹಿಡಿದು ಮೊಕದ್ದಮೆ ಹೂಡಿದ್ದರ ಮೇಲೆ ನೆನ್ನೆ ನಗರದ ನ್ಯಾಯಾಧೀಶರು ಅವನಿಗೆ ೨ ವರ್ಷ ಕಠಿಣ ಸಜಾ ವಿಧಿಸಿದರು

ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಇದೇ ತಿಂಗಳು ೨೧ ನೇ ತಾರೀಖು ನಡೆಯುವ ಅ॥ ಕರ್ನಾಟಕ ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆಗಾಗಿ ಪ್ರತಿನಿಧಿಗಳನ್ನು ಕಳುಹಿಸುವ ತಾರೀಖನ್ನು ನಾಳೆಯ ಬದಲು ೧೪ ನೇ ತಾರೀಖಿಗೆ ಮುಂದುವರಿಸಲಾಗಿದೆ

ಈಗತಾನೆ ಜಾರಿಗೆ ತಂದ ಕಾನೂನನ್ನು ಆಗಲೇ ಬದಲಾಯಿಸುವುದು ... ನೀತಿಯಲ್ಲ ಬೋರ್ಡುಗಳನ್ನು ವಜಾ ಮಾಡಬೇಕೆಂಬುವಂತಹ ಅಪ್ರಜಾಸತ್ತಾತ್ಮಕ ನೀತಿಯು ಮತ್ತೊಂದಿಲ್ಲ ಈ ರೀತಿ ಬರುತ್ತಿರುವುದೆಂದು ಹೇಳಲಾಗುತ್ತಿರುವ ವದಂತಿಗಳು ಬೇಜವಾಬ್ದಾರಿಯುತವಾಗಿವೆ ಹೀಗೆ ಮಾಡಿದರೆ ಸ್ಥಳೀಯ ಸಂಸ್ಥೆಗಳು ಕ್ರಮೇಣವಾಗಿ ನಿಶ್ಶಕ್ತವಾಗುವುವು ಜಿಲ್ಲಾ ಬೋರ್ಡಿನ ಆದಾಯದಲ್ಲಿ ಕಡಿಮೆಯಾಗುವುದರಿಂದ ರಚನಾತ್ಮಕ ಕೆಲಸ ಕಾರ್ಯಗಳಿಗೆ ಭಾರಿ ಆಘಾತವಾಗುತ್ತದೆ ಎಂಬ ... ತಿಳಿಸಿ, ಈಗಿನ ಕಾನೂನಿನ ಒಂದು ... ಅನಾವಶ್ಯಕವಾಗಿರುವುದರಿಂದ ಅದನ್ನು ಮಾಡಕೂಡದೆಂಬ ತಿದ್ದುಪಡಿಯನ್ನು ಸೂಚಿಸಿದರು ಸಭೆಯು ತಿದ್ದುಪಡಿಯೊಡನೆ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತು

ಚೆಸ್ಟರ್ ಬೌಲ್ಸ್‌ರವರ ಆಗಮನ

ಸ್ವಂ ಸು ಪ್ರಾ] ಬೆಂಗಳೂರು ೧೧

ಭಾರತದಲ್ಲಿ ಅಮೇರಿಕದ ರಾಯಭಾರಿಯಾಗಿರುವ ಚೆಸ್ಟರ್ ಬೌಲ್ಸ್‌ರವರು ಈ ದಿನ ತಮ್ಮ ಹೆಣ್ಣುಮಕ್ಕಳೊಡನೆ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು ಅವರನ್ನು ಮುಖ್ಯ ಮಂತ್ರಿಗಳೇ ಮುಂತಾದ ಅಧಿಕಾರಿಗಳು ಸ್ವಾಗತಿಸಿದರು ನಾಳೆ ಅವರು ತಿರುವಾಂಕೂರಿಗೆ ಪ್ರಯಾಣ ಬೆಳೆಸುವರು

ಈ ಮಧ್ಯಾಹ್ನ ಬೌಲ್ಸ್‌ರವರು ಪತ್ರಿಕಾ ಸಮ್ಮೇಳನವನ್ನು ನಡೆಸಿ, ಭಾರತದಲ್ಲಿ ಸಾಮೂಹಿಕ ಯೋಜನೆಗಳು ಬಹು ಚೆನ್ನಾಗಿ ಕೆಲಸಮಾಡುತ್ತಿರುವುವೆಂದೂ ಅಮೇರಿಕನ್ನರು ೨೦ ವರ್ಷಗಳಲ್ಲಿ ಸಾಧಿಸಿದ ಕೆಲಸವನ್ನು ಭಾರತೀಯರು ಇನ್ನೂ ಮುಂಚೆ ಸಾಧಿಸುವರೆಂಬುದು ತಮ್ಮ ಅಭಿಪ್ರಾಯವೆಂದೂ ಹೇಳಿದರು ವಿಶ್ವಸಂಸ್ಥೆಯ ಬಗ್ಗೆ ಅಮೇರಿಕನ್ ಹೆಚ್ಚು ಭರವಸೆ ಹೊಂದಿರುವುದೆಂದೂ, ಕಾಶ್ಮೀರದ ವಿಷಯವು ಇತ್ಯರ್ಥವಾಗದಿರುವುದಕ್ಕೆ ಸಣ್ಣ ವಿಷಯಗಳನ್ನು ದೊಡ್ಡದು ಮಾಡುತ್ತಿರುವುದೇ ಕಾರಣವೆಂದೂ ಅವರು ತಿಳಿಸಿ, ಈ ವಿಷಯವು ಶೀಘ್ರತೆಯಾಗಿ ತೀರ್ಮಾನವಾಗುವ ಆಶೆಯು ತಮಗಿರುವುದೆಂದು ಹೇಳಿದರು

ಗೋವಧೆಯ ನಿರೋಧಕ್ಕಾಗಿ ೮ ಗಾಡಿ ಅರ್ಜಿಗಳು !

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರನ್ನು ಮೊನ್ನೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರಾದ ಎಂ ಎಸ್. ಗೋಳ್ವಾಲ್ಕರ್‌ರವರು ಭೇಟಿ ಮಾಡಿ, ಗೋವಧೆಯ ನಿರೋಧಕ್ಕಾಗಿ ಶಾಸನವನ್ನು ಮಾಡಬೇಕೆಂದು ಸರ್ಕಾರವನ್ನು ಕೋರುವ ಮನವಿಗೆ ರುಜುಗಳಿರುವ ಪಟ್ಟಿಗಳನ್ನು ಒಪ್ಪಿಸಲು ಅನುಮತಿಯನ್ನು ಬೇಡಿದರು ೨೨ ಸಂಸ್ಥಾನಗಳಲ್ಲಿರುವ ೧೭೭ ಲಕ್ಷ ಮಂದಿ ಹಿಂದೂಗಳು, ಪಾರಸಿ ಗಳು, ಕ್ರೈಸ್ತರು ಮತ್ತು ಮುಸಲ್ಮಾನರು ರುಜು ಮಾಡಿರುವ ಈ ಅರ್ಜಿಗಳು ಎಂಟು ಗಾಡಿಗಳಲ್ಲಿ ಗಾಡಿಯೊಂದಕ್ಕೆ ೧೬ ಮಣದಂತೆ ತುಂಬುವಷ್ಟಿವೆಯೆಂದು ಹೇಳಲಾಗಿದೆ ಗೋವಧಾ ನಿಷೇಧ ಶಾಸನವು ಕೇಂದ್ರ ಸರ್ಕಾರದ ರೀತಿ ನೀತಿಯಿಂದ ನಿರ್ಧರಿಸಲ್ಪಡತಕ್ಕ ಅಂಶವಾಗಿದೆಯೆಂದು ರಾಷ್ಟ್ರಾಧ್ಯಕ್ಷರು ಉತ್ತರವಿತ್ತರೆಂದು ಗೊತ್ತಾಗಿದೆ

ಭತ್ತ,ಮಿಲ್ಲು ಮಾಡಲು ಅಕ್ಕಿ ಗಿರಣಿಗಳಿಗೆ ಮಾತ್ರ ಅವಕಾಶ

ಬರುವ ಏಪ್ರಿಲ್ ತಿಂಗಳು ೧ ನೇ ತಾರೀಖು ವರೆಗೂ, ಮೈಸೂರು, ಮಂಡ್ಯ, ಶಿವಮೊಗ್ಗ, ಹಾಸನ ಮತ್ತು ಚಿಕ್ಕಮಗಳೂರಿನ ಅಕ್ಕಿ ಗಿರಣಿಗಳ ಮಾಲೀಕರು ಹೊರತು ಇನ್ಯಾರೂ ಭತ್ತವನ್ನು ಮಿಲ್ಲು ಮಾಡುವುದಾಗಲಿ ಅಥವಾ ಅಕ್ಕಿಯನ್ನು ಪಾಲೀಷ್ ಮಾಡುವುದಾಗಲಿ ಕೂಡದೆಂದು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಭತ್ತವನ್ನೂ ಸಹ ತಯಾರು ಮಾಡಕೂಡದೆಂದೂ ಸದರಿ ಜಿಲ್ಲೆಗಳಲ್ಲಿ ನಿಷೇಧವು ಹಾಕಲಾಗಿದೆ.

ಮೇಲುಕೋಟೆ ದೇವಸ್ಥಾನದ ಆಡಳಿತದ ಬಗ್ಗೆ ಉಪವಾಸ

ಮುಖ್ಯ ಮಂತ್ರಿಗಳಿಗೆ ಸಂಪತ್ಕುಮಾರರವರ ಪತ್ರ

ಮೇಲುಕೋಟೆಯ ಸ್ಥಳೀಯ ಕಾಂಗ್ರೆಸ್ ಅಧ್ಯಕ್ಷರಾಗಿರುವ ಶ್ರೀ ಬಿ. ಎ. ಸಂಪತ್ಕುಮಾರರವರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ಪತ್ರವೊಂದನ್ನು ಬರೆದು, ಅಲ್ಲಿನ ಚೆಲುವನಾರಾಯಣಸ್ವಾಮಿ ದೇವಸ್ಥಾನಕ್ಕೆ ಖಾಸಗಿ ವ್ಯವಸ್ಥಾ ಸಮಿತಿಯೊಂದನ್ನು ಈ ತಿಂಗಳು ೨೫ರೊಳಗೆ ಸರ್ಕಾರದವರು ರಚಿಸದಿದ್ದರೆ, ಅಂದಿನಿಂದ ತಾವು ಆಮರಣಾಂತ ಉಪವಾಸವನ್ನು ಕೈಗೊಳ್ಳಲಿರುವುದಾಗಿ ತಿಳಿಸಿರುತ್ತಾರೆ. ಸದರಿ ದೇವಸ್ಥಾನದಲ್ಲಿ ಸೇವಾದಿ ಕ್ರಮಗಳನ್ನು ವಿಹಿತವಾಗಿ ನಡೆಸಿಕೊಂಡು ಬರುವ ಬಗ್ಗೆ ಖಾಸಗಿ ಸಮಿತಿಯೊಂದನ್ನು ರಚಿಸಬೇಕೆಂದು ಹಿಂದೆಯೇ ತಾವು ಮನವಿ ಮಾಡಿದ್ದುದಾಗಿಯೂ, ಕಳೆದ ೪೯ನೇ ಇಸವಿ ಆಗಸ್ಟ್ ೧೬ರಲ್ಲಿ ತಾವೂ ಮತ್ತು ಶ್ರೀ ಅರಿಯಾರ್ ಶ್ರೀನಿವಾಸ ಅಯ್ಯಂಗಾರ್ಯರೂ ಈ ಬಗ್ಗೆ ಉಪವಾಸವನ್ನು ಕೈಗೊಂಡಾಗ, ಆಗಿನ ಮುಜರಾಯಿ ಮಂತ್ರಿಗಳು ಉಪವಾಸ ವ್ರತವನ್ನು ನಿಲ್ಲಿಸುವಂತೆ ಕೋರಿ, ಅಲ್ಲಿನ ಸನ್ನಿವೇಶಗಳನ್ನು ಕುರಿತು ವರದಿ ಮಾಡಲು ಒಂದು ಸಮಿತಿಯನ್ನು ರಚಿಸುವುದಾಗಿ ಭರವಸೆಯಿತ್ತು, ಅದರ ಪ್ರಕಾರ ಸದರಿ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿ, ಈಗಾಗಲೇ ಎರಡು ವರ್ಷಗಳಾಗಿದ್ದರೂ ಇದುವರೆಗೂ ಯಾವ ಕ್ರಮವನ್ನೂ ಕೈಗೊಂಡಿಲ್ಲವೆಂದೂ ಸೂಚಿಸಿರುತ್ತಾರೆ. ಕಳೆದ ಫೆಬ್ರವರಿ ೧೫ರ ಒಳಗಾಗಿ ಆಜ್ಞೆಯು ಹೊರಬೀಳುವುದೆಂದು ತಮಗೆ ಸರ್ಕಾರದಿಂದ ಪತ್ರ ಬಂದಿದ್ದಿತೆಂದೂ ಅವರು ತಿಳಿಸಿ, ಈಗಲೂ ಈ ವಿಷಯದಲ್ಲಿ ವಿಳಂಬ ಮಾಡುವುದಾದರೆ ತಾವು ವಿಧಿಯಿಲ್ಲದೆ ಉಪವಾಸ ಮಾಡಬೇಕಾಗಿರುವುದೆಂದು ಹೇಳಿರುವರು

ದಿ ಕೂರ್ಗ್ ಅಂಡ್ ಮೈಸೂರ್ ಕಾಫಿ ಕ್ಯೂರಿಂಗ್ ಕಂಪೆನಿ,

(1937) ಲಿಮಿಟೆಡ್

(ಮೈಸೂರಿನಲ್ಲಿ ಸ್ಥಾಪಿತವಾದುದು)

ಚಾಮುಂಡಿ ಕ್ಯೂರಿಂಗ್ ವರ್ಕ್ಸ್,

ವಾಣಿವಿಲಾಸ ಮೊಹಲ್ಲಾ, ಮೈಸೂರು

ನಮ್ಮ ಕಂಪೆನಿಗೆ ಸೇರಿದ ಹನ್ನೊಂದು ಎಕರೆ ಜಮೀನಿನಲ್ಲಿ ಬೆಳೆದು ನಿಂತಿರುವ ಅವರೆ ಫಸಲನ್ನು ಇದೇ ತಿಂಗಳು ಹದಿನೈದನೇ ತಾರೀಖಿನ ಸಂಜೆ 5-45 ಘಂಟೆಗೆ ನಮ್ಮ ಕಂಪೆನಿಯ ಇದಿರಿನಲ್ಲಿರುವ ಕ್ಯಾಂಟೀನಿನಲ್ಲಿ ಹರಾಜು ಹಾಕುತ್ತೇವೆ.

ಕೊಳ್ಳಲು ಇಷ್ಟವುಳ್ಳವರು ಭಾಗವಹಿಸಬೇಕಾಗಿ ಕೋರಲಾಗಿದೆ

ಮ್ಯಾನೇಜರ್,
ಚಾಮುಂಡಿ ಕ್ಯೂರಿಂಗ್ ವರ್ಕ್ಸ್
ಮೈಸೂರು

ಏಷ್ಯಾ ಸೋಷಿಯಲಿಸ್ಟ್ ಸಮ್ಮೇಳನಕ್ಕೆ ಅಟ್ಲಿ

ಬರುವ ತಿಂಗಳು ೬ನೇ ತಾರೀಕಿನಿಂದ ಒಂದು ವಾರ ಕಾಲ ರಂಗೂನಿನಲ್ಲಿ ನಡೆಯುವ ಮೇಲ್ಕಂಡ ಸಮ್ಮೇಳನದಲ್ಲಿ ಭಾರತದ ಪರವಾಗಿ ಆಚಾರ್ಯ ನರೇಂದ್ರದೇವರು ನಿಯೋಗವನ್ನು ಕೊಂಡೊಯ್ಯುವರು. ಬ್ರಿಟನ್ನಿನ ಲೇಬರ್ ಪಕ್ಷದ ನಾಯಕರೂ ಮತ್ತು ಮಾಜಿ ಪ್ರಧಾನಿಯೂ ಆದ ಅಟ್ಲೀಯವರು ಸಮ್ಮೇಳನದಲ್ಲಿ ಭಾಗವಹಿಸುವರೆಂದು ಗೊತ್ತಾಗಿದೆ

ಚೀಣಾದಲ್ಲಿ ಕದನಕ್ಕೆ ರಾಷ್ಟ್ರೀಯ ಚೀಣರು ಸಿದ್ಧ

ಚೀಣದ ಮುಖ್ಯ ಭೂಭಾಗದಲ್ಲಿ ರಾಷ್ಟ್ರೀಯ ಚೀಣರು ಕದನಕ್ಕೆ ಸಿದ್ಧವಾಗಿರುವರೆಂದು ರಾಷ್ಟ್ರೀಯ ಚೀಣದ ವಿದೇಶಾಂಗ ಮಂತ್ರಿ, ಜಾರ್ಜ್ ಯೆಯವರು ತಿಳಿಸಿರುತ್ತಾರೆ. ಕೊರಿಯಕ್ಕೆ ತಮ್ಮ ಸೈನ್ಯಗಳನ್ನು ಕಳುಹಲು ಅವರು ತಯಾರಾಗಿಲ್ಲವೆಂದೂ, ಫಾರ್ಮೋಸಾವಿಗೆ ಕಮ್ಯೂನಿಸ್ಟರಿಂದ ತೊಂದರೆಯಾಗದಿರುವಂತೆ ಪಶ್ಚಿಮ ರಾಷ್ಟ್ರಗಳು ಸಹಾಯ ಮಾಡಿದರೆ, ಕೆಂಪು ಚೀಣರ ಮೇಲೆ ರಾಷ್ಟ್ರೀಯರು ಕಾದಾಡುವರೆಂದೂ ಅವರು ಹೇಳಿರುತ್ತಾರೆ

ಸತ್ಯನಾರಾಯಣ ಪೂಜೆ

ರಾಜಧಾನಿಯ ಕೃಷ್ಣರಾಜ ಮೊಹಲ್ಲೆ ಜ. ಸೊಪ್ಪಿನ ಕೊಳದ ಬೀದಿ ಶ್ರೀ ಮಾರುತಿ ದೇವಸ್ಥಾನದಲ್ಲಿ ಇದೇ ತಿಂಗಳು ೧ನೇ ತಾ॥ ನಿಂದ ೪೮ ದಿನಗಳ ವರೆಗೆ ೧ ಮಂಡಲದ ಪರ್ಯಂತ ಶ್ರಿ ಬಲಮುರಿ ಸ್ವಯಂ ಉದ್ಭವ ಶ್ವೇತಾರ್ಕ ಗಣಪತಿ, ಬ್ರಹ್ಮಾಶ್ವತ್ಥನಾರಾಯಣರ ಸ್ವಯಂ ಉದ್ಭವ ಚತುರ್ಮುಖ ಬ್ರಹ್ಮ ಶ್ರೀತಾವತಾರ, ಲಕ್ಷ್ಮೀಶಂಭು, ಕೊಲ್ಲಾಪುರ ಮಹಾಲಕ್ಷ್ಮಿ, ಸತ್ಯನಾರಾಯಣ ಇವುಗಳ ಪೂಜೆಯನ್ನು ಅರ್ಚಕರೂ, ಗೌರವ ಮಾರ್ಗದರ್ಶಿಗಳೂ ಆದ ಶ್ರೀ ಸುಬ್ರಹ್ಮಣ್ಯಾಚಾರ್ಯರು ನಡೆಸುವರು

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,
207. ಸಯ್ಯಾಜಿರಾವ್ ರೋಡ್,
ಮೈಸೂರು.

ಖಾದಿಯ ಬೆಲೆಯಲ್ಲಿ ಇಳಿತಾಯ

ಖಾದಿಯ ಬೆಲೆಯಲ್ಲಿ ಶೇ|| ೨೦ ರಷ್ಟು ಕಡಿಮೆ ಮಾಡಲು ಮದ್ರಾಸು ಸರ್ಕಾರದವರು ನಿರ್ಧರಿಸಿರುತ್ತಾರೆ. ಹೊಸ ದರದಂತೆ ಬಟ್ಟೆ ಮಾರಲು, ಅವುಗಳನ್ನು ಪ್ರದರ್ಶನ ಮತ್ತು ಜಾತ್ರೆಗಳಲ್ಲಿಡಲಾಗುವುದು

ಜನರಲ್ ರಿಜ್ವೇ ಯೂರೋಪಿನ ಸೇನಾಧಿಪತಿ

ಯೂರೋಪಿನ ರಾಷ್ಟ್ರಗಳಲ್ಲ ಅಟ್ಲಾಂಟಿಕ್ ಕೌನ್ಸಿಲಿಗೆ ಸೇರಿದ ರಾಜ್ಯಗಳ ಸೇನಾಧಿಪತಿಯಾಗಿ ಅಮೆರಿಕದ ಜನರಲ್ ರಿಜ್ವೇಯವರನ್ನು ನೇಮಿಸಲಾಗಿದೆ. ಈ ಸ್ಥಾನಕ್ಕೆ ಬ್ರಿಟನ್ನಿನ ಅಧಿಕಾರಿಯನ್ನು ನೇಮಿಸಬೇಕೆಂದು ಇಂಗ್ಲೆಂಡು ಪಟ್ಟ ಪರಿಶ್ರಮವೆಲ್ಲವೂ ವ್ಯರ್ಥವಾಗಿ, ಈಗ ಬ್ರಿಟಿಷ್ ಕಮ್ಯಾಂಡರಾದ ಲಾರ್ಡ್ ಮೌಂಟ್ ಬ್ಯಾಟನರವರು ರಿಜ್ವೇಯವರ ಕೈ ಕೆಳಗಿನ ಅಧಿಕಾರಿಗಳಾಗಲಿರುವರು

ಹಿಂದೂಸ್ತಾನ ವಿಮಾನದ ಹಾರಾಟ ಪರೀಕ್ಷೆ

ಹಿಂದೂಸ್ತಾನ ವಿಮಾನ ಕಾರ್ಖಾನೆಯಲ್ಲಿ ತಯಾರಾದ ಹೆಚ್ ಟಿ. ೯ ನೇ ನಂಬರಿನ ಶಿಕ್ಷಕ ವಿಮಾನವು ಮದ್ರಾಸಿನಲ್ಲಿ ಮೊನ್ನೆ ಎಲ್ಲ ವಿಧವಾದ ಪರೀಕ್ಷೆಗಳಿಗೂ ಒಳಪಟ್ಟು ಯಶಸ್ವಿಯಾಯಿತು ಪ್ರಶಸ್ತಿ ಪತ್ರ ಪಡೆಯುವ ಬಗ್ಗೆ ಈ ಪರೀಕ್ಷೆಯು ಏರ್ಪಾಡಾಗಿದ್ದಿತು

CITY TUTORIAL COLLEGE, MYSORE

New Buildings, V V Market

**INTERMEDIATE CLASSES
IN FULL SWING**

(English—P C. M & C B Z)

B Sc, Mathematics Classes

(From 15-12-52)

ಒಲಂಪಿಯಾ ಟಾಕೀಸ್

11-12-52 ರಿಂದ ಅನಭರಿತ 2ನೇ ವಾರ
ಪ್ರತಿದಿನ 3 ಆಟಗಳು
ಪ್ರಕಾಶ್ ಪಿಕ್ಚರ್ಸ್ ರವರ

ಬೈಜೂ ಬಾವ್ರ

ಪಾತ್ರ — ಮೀನಾಕುಮಾರಿ, ಭಾರತ್ ಭೂಷಣ್, ಸುರೇಂದ್ರ ಮತ್ತು ಕುಲದೀಪ್ ಕೌರ್

— ಬೆಳಗಿನ ಪ್ರದರ್ಶನ —
ದಿಲೀಪ್ ಕುಮಾರ್ ಪಾತ್ರ ವಹಿಸಿರುವ
ಶಬನಮ್

ಆರ್. ಜಿ. ಬ್ರಾಂಡ್

ಕುಕಿಂಗ್ ಮೀಡಿಯಂ

(ಅಡಿಗೆ ಸಾಧನ)

—. ಮಾರಾಟದ ದರ:—

38 ಪೌಂಡು — ರೂ	35-8-0	9 ಪೌಂಡು — ರೂ	9-12-0
5 ,, ,,	5-9-0	2 ,, ,,	2-6-0

ಐಸೆನ್‌ಹೋವರರ ಅಧಿಕಾರ ಸ್ವೀಕಾರಕ್ಕೆ ೫೦ ಲಕ್ಷ ರೂ

ಮುಂದಿನ ತಿಂಗಳು ೨೦ ನೇ ತಾರೀಖು ಅಮೆರಿಕದ ಅಧ್ಯಕ್ಷ ಪದವಿಯನ್ನು ಐಸೆನ್‌ಹೋವರರು ಅಲಂಕರಿಸುವ ಸಮಾರಂಭಕ್ಕಾಗಿ ೧೦ ಲಕ್ಷ ಡಾಲರ್ (೫೦ ಲಕ್ಷ ರೂ) ಅಷ್ಟು ಹಣವನ್ನು ವೆಚ್ಚ ಮಾಡಲಾಗುವುದೆಂದು ಗೊತ್ತಾಗಿದೆ. ಟ್ರೂಮನ್ನರು ಹಿಂದೆ ಅಧಿಕಾರ ವಹಿಸಿದ್ದಾಗ ೬ ಲಕ್ಷ ಡಾಲರ್ ವೆಚ್ಚವಾಗಿತ್ತು

೫೪ರಲ್ಲಿ ಪ್ರಥಮ ಎಣ್ಣೆ ಕಾರ್ಖಾನೆ ಆರಂಭ

೧೯೫೪ ನೇ ಇಸವಿಯ ಮಧ್ಯ ಭಾಗದಲ್ಲಿ ಭಾರತದ ಮೊದಲನೇ ಎಣ್ಣೆ ಶುದ್ಧೀಕರಣದ ಕಾರ್ಖಾನೆಯು ಕೆಲಸವನ್ನು ಆರಂಭಿಸುವುದೆಂದು ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೩೦ ರಂಗಸ್ವಾಮಿ, ವೇಣುವಾದನ ಮಧ್ಯಾಹ್ನ ೧-೩೦ ದಿಲ್ಲಿ ... ಸಂಜೆ ೬-೩೦ ... ೭-೩೦ ಸಿ. ಎಸ್. ಕೃಷ್ಣ, ಸಂಗೀತ ೮-೧೦ ಗಣಪತಿದಾಸ ... ಅಬ್ದುಲ್ ಗಫರ್ ಗಜಲ್ ... ಗೀತಾವಳಿ ... ತಬಲ ವಾದನ ೯-೩೦ ಗಾನವಾರಿಧಿ

ಪುನಹ ತಮ್ಮ ಸೇವೆಗೆ!

ಭಕ್ತ ಮತ್ತು ಅಕ್ಕ ಸಾಗಿಸುವವರು ಮೈಸೂರು ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿನ ವಿಶ್ವಾಸದ ಜಾಗ್ರತೆಯ ಹಾಗೂ ಸುಲಭ ರೀತಿಯ ಸಾಗಾಣಿಕೆಯ ಅವಕಾಶವನ್ನು ದಯಮಾಡಿ ಉಪಯೋಗಿಸಿಕೊಳ್ಳ ಬೇಕಾಗಿ ...

ಮೈಸೂರು ಟ್ರಾನ್ಸ್‌ಪೋರ್ಟ್ ಸರ್ವಿಸ್ (ರಿಜಿಸ್ಟರ್ಡ್)

(ಲೀಡರ್ ಮತ್ತು ಕಂಪನಿ)
ರಾಮವಿಲಾಸ ರಸ್ತೆ ಮೈಸೂರು
(ಫೋನ್ ನಂ 537)

SRI GAYATHRI
TALKIES

From 12-12-52 Daily 2 Shows
Comedian Mr Bob Hope and
Your Favourite Lady Hedy Lamarr
In Paramount's

MY FAVOURITE SPY

MORNING SHOWS —
On 13th and 14th
R K O's
SAVAGE SPLENDOUR
(Technicolor)

— NEXT CHANGE —
From 14—12—52
M G M's
THE WILD NORTH

Edited, Printed and Published by A R Nagaraja at Sadhvi Press, D Subbiah Road, Mysore

ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು, ಚೋಳಿ ಪೀಸುಗಳು

ಪೂನಾ, ನಾಗಪೂರ್ ಸೀರೆಗಳು (ಫೋನ್ ನಂ 446)

★ **M. V. ಬೋಜಯ್ಯ** ಶ್ರೀ ಬಿ. ಎ., ಇಂಡಿಯನ್ ಬ್ಯಾಂಕ್ ಎದುರು ಮೈಸೂರು

ರಿಜಿಸ್ಟರ್ಡ ನಂ 792 ||ವಂದೇ ಮಾತರಂ|| ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ [illegible] [ಸಂಚಿಕೆ [illegible]

ಸುಪ್ರೀಂ ಕೋರ್ಟಿನಲ್ಲೂ ರಾಜೂ ಅರ್ಜಿ ವಜಾ

ಸುಪ್ರೀಂ ಕೋರ್ಟಿನಲ್ಲಿ ರಾಜು ರವರ ಅಪೀಲು ಅರ್ಜಿ ವಜಾ

[illegible] ಪ್ರಯತ್ನದ ಆಪಾದನೆ ಮೇ[illegible] ಪಟ್ಟಿ [illegible] ಯಾಯಿ ನ್ಯಾ[illegible] ಅಪೀಲಿನಲ್ಲಿ ಕೆಳಗಿನ ಕೋರ್ಟಿ[illegible] ವಿಧಿಸಲ್ಪಟ್ಟ ಬಗ್ಗೆ [illegible] ಕೋರ್ಟಿನಲ್ಲಿ ಅಪೀಲು ಹೂಡ[illegible] ಅನುಮತಿ ಬೇಡಿ, ಶ್ರೀ ಎಲ್[illegible] ರಾಜುರವರ ಪರವಾಗಿ ಸಲ್ಲಿಸಲ್ಪಟ್ಟ [illegible] ನೆನ್ನೆ ದಿವಸ ತಿರಸ್ಕರಿಸಲ್ಪಟ್ಟಿ[illegible] ನಿರ್ಣಯದ ಮೇಲೆ ದಿಡುವಂತೆ ಹಾಳ[illegible] ಸುಪ್ರೀಂ ಕೋರ್ಟಿನ ಅರ್ಜಿಯನ್ನು ತಿರ[illegible] ರಾಜುರವರ ಪರವಾಗಿ [illegible] ಬ್ಯಾರಿಸ್ಟರವರೂ, ಮೈಸೂರು ಸರ[illegible] ಪರವಾಗಿ ಅಟಾರ್ನಿ ಜನರಲ್ಲರಾದ [illegible] ಸೆಟಲ್‌ವಾಡರೂ ವಕಾಲತ್ತು ವ[illegible] ಈ ಮೊಕದ್ದಮೆಯಲ್ಲಿ ಪ್ರಾಸಿ[illegible] ಇನ್ಸಪೆಕ್ಟರಾಗಿದ್ದ ಶ್ರೀ ಕೆ [illegible] ನರಸಿಂಹೆಯ್ಯಂಗಾರರವರು ಸೆಟಲ್‌[illegible] ಸಹಾಯಕರಾಗಿದ್ದರು

೪೦೦೦ ಮದ್ರಾಸ್ ಪೋಲೀಸ್ ನೌಕರರ ಮೋರ್ಚಾ

[illegible] ಜಾತಿಯ [illegible] ಅಧಿಕಾರಿಗ[illegible] ಕಾನ್‌ಸ್ಟೇಬಲ್ಲುಗಳು ಮತ್ತು [illegible] ಗುಮಾಸ್ತರನ್ನು ಕೆಲಸದಿಂದ [illegible] ಕರವಾಗಿ ಮದ್ರಾಸಿನ [illegible] ಜಾಥಿಯವರು ಶೀಘ್ರ ಸಧ್ಯ [illegible] ಹೆಚ್ಚಿನ ಸಿಬ್ಬಂದಿ ಮೋರ್ಚಾ ಹೂ[illegible] ಜನವರಿಯಲ್ಲಿನೆಂದು ಹೇಳಿರು[illegible]

ದಿಂಡಿ ಮಹೋತ್ಸವ

[illegible] ಚಾಮರಾಜಪೇಟೆ ಬೀದಿ [illegible] ಶ್ರೀ ಪಾಂಡುರಂಗಸ್ವಾಮಿ ದೇ[illegible] ಶ್ರೀ ಕ್ರೈಸ್ತ ಪಾಪಪರ್ಯಂತ ಶ್ರೀ [illegible] ದೇವರವರ ೩ನೇ ಪುಣ್ಯ[illegible] ಉತ್ಸವವು ಈ ದಿನದಿಂದ ೧೫ನೇ [illegible] ವರೆಗೆ ನಡೆಯುವು[illegible] ದಿನ ಮಧ್ಯಾಹ್ನ ಗಾಥಾ ಸ್ವಾಸನೆ, [illegible] ಭಜನೆಗಳೂ, ಸಂಜೆ ಗಂ[illegible] ಸಂಬಂಧನೂರ್ತಿಯವರಿಂದ ಹ[illegible] ನಡೆಯುವುವು ೧೫ ನೇ ತಾ[illegible] ಗೌರವಸ್ಥಾಧ್ಯಕ್ಷ ಶ್ರೀ ಎ ಕೃಷ್ಣ [illegible] ಅವರ ಅಧ್ಯಕ್ಷತೆಯಲ್ಲಿ ಕೀರ್ತ[illegible] ಮಂಗಳಾರತಿಗಳು ಏರ್ಪಾ[illegible] ಸಂಜೆ ೬ ಗಂಟೆಗೆ ದಿಂಡಿ [illegible] ಉತ್ಸವವು ನಡೆಯುವುದು

ಸುಳಿಯಿಂದ ೨೦೦೦೦ ಸಕ್ಕರೆ ಮೂಟೆಗಳು ಕರಗಿವೆ

ಮುಂಬೈ ೧೧

[illegible] ಇಲ್ಲಿ ವಿಶೇಷ ಮಳೆಯಾದ [illegible] ತುಂಬಾ ನಷ್ಟ ಸಂಭವಿಸಿ [illegible] ಭತ್ತದ ಪೈರಿನ ಕಾಳುಗಳಲ್ಲಿ [illegible] ಹೋಗಿವೆ ಸಕ್ಕರೆ ಕಾರ್ಖಾ[illegible] ಸಾವಿರ ಮೂಟೆಗಳಷ್ಟು ಸ[illegible] ಮಳೆಯ ನೀರು ಬಿದ್ದು ಒಟ್ಟೆ [illegible] ಕರಗಿವೆಯೆಂದೂ ವರದಿಯಾಗಿದೆ

[illegible] ಧಾನ್ಯ ಮಾರಾಟದ [illegible] ಕಾನೂನು ಅನ್ವಯ

[illegible] ಧಾನ್ಯಗಳ ಮಾರಾಟದ [illegible] ಮತ್ತು ಸಂಗ್ರಹಣೆಗೆ ಸಂಬಂಧಿ[illegible] ಕೇಂದ್ರ ಸರ್ಕಾರದವರು ಮಾಡಿ[illegible] ನಿಯಮವನ್ನು ಮೈಸೂರು ಸಂಸ್ಥಾ[illegible] ಕಳೆದ ತಿಂಗಳು ೨೬ ರಿಂದ ಜಾ[illegible] ತರಲಾಗಿದೆಯೆಂದು ಭಾರತ ಸರ್ಕಾ[illegible] ಪ್ರಕಟಣೆಯೊಂದು ತಿಳಿಸಿರುತ್ತದೆ [illegible] ಧಾನ್ಯವನ್ನು ಮಾರಾಟ ಮಾ[illegible] ವರ್ತಕರು ರಹದಾರಿ ಪಡೆಯಬೇ[illegible] ಕಾನೂನು ವಿಧಾಯಕವಾ[illegible] ಕ್ತವ

ಬೊಂಬಾಯಿ ಮಾರಾಟ ತೆರಿಗೆ ಶಾಸನ ಅಕ್ರಮ

ಕಳೆದ ತಿಂಗಳು ೧೬ನೇ ತಾ|| ಬೊಂಬಾಯಿ ಸಂಸ್ಥಾನದಲ್ಲಿ ಜಾರಿಗೆ ಬಂದ ಮಾರಾಟ ತೆರಿಗೆಯ ಕಾನೂನು ಶಾಸನ ಬಾಹಿರವೆಂದು ಬೊಂಬಾಯಿ ಹೈಕೋರ್ಟ್ ನೆನ್ನೆ ತೀರ್ಪು ಕೊಟ್ಟಿತು ಬೊಂಬಾಯಿಯ ೪ ಮೋಟಾರು ಕಂಪೆನಿಗಳವರು ಈಬಗ್ಗೆ ವ್ಯವಹಾರ ಹೂಡಿದ್ದರು ತೆರಿಗೆ ವಿಧಿಸುವಂತೆ ನಿಷೇಧಿಸಲ್ಪಟ್ಟಿರುವ ಮಾರಾಟಗಳ ಮೇಲೆಲ್ಲಾ ಅದನ್ನು ಹಾಕಲು ಬೊಂಬಾಯಿಯ ಶಾಸನವು ಅವಕಾಶ ಕೊಡುತ್ತಿರುವುದೆಂದೂ, ಅದು ಅಲ್ಲಿನ ಶಾಸನ ಸಭೆಯ ಅಧಿಕಾರ ವ್ಯಾಪ್ತಿಗೆ ಮೀರಿದ ವಿಷಯವೆಂದೂ ನ್ಯಾಯಾಧೀಶರುಗಳು ತಿಳಿಸಿದರು

ರಾಜ್ಯಾಂಗದ ೨೮೬ ನೇ ನಿಬಂಧನೆ ಪ್ರಕಾರ ಯಾವುದೇ ಪ್ರಾಂತದ ಹೊರಗಡೆ ನಡೆದ ವ್ಯಾಪಾರದ ಮೇಲೆ ಮತ್ತು ಭಾರತಕ್ಕೆ ಹೊರಗಿನಿಂದ ಆಮದು ಮತ್ತು ಭಾರತದಿಂದ ಹೊರಕ್ಕೆ ರಫ್ತು ಆಗುವ ವಸ್ತುಗಳ ಮಾರಾಟದ ಮೇಲೆ ತೆರಿಗೆ ವಿಧಿಸಲು ಯಾವ ಪ್ರಾಂತ ಸರಕಾರಕ್ಕೂ ಅಧಿಕಾರವಿಲ್ಲವೆಂದು ಅರ್ಜಿದಾರರು ಸೂಚಿಸಿದುದನ್ನು ಹೈಕೋರ್ಟಿನವರು ಒಪ್ಪಿರುವರು. ಈ ಬಗ್ಗೆ ಬೊಂಬಾಯಿ ಸರಕಾರದವರು ಸುಪ್ರೀಂ ಕೋರ್ಟಿಗೆ ಅಪೀಲು ಮಾಡಿರುವರು ವಿವಿಧ ಘಟ್ಟಗಳಲ್ಲಿ ಮಾರಾಟ ತೆರಿಗೆ ವಿಧಿಸುವುದನ್ನು ಪುನಃ ಸರಿಯಾದ ರೀತಿಯಲ್ಲಿ ಜಾರಿಗೆ ತರಲಾಗುವುದೆಂದು ಬೊಂಬಾಯಿಯ ಮುಖ್ಯಮಂತ್ರಿ ಮುರಾರ್ಜಿ ದೇಸಾಯಿಯವರು ತಿಳಿಸಿರುತ್ತಾರೆ

ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಯಲ್ಲಿ ಸಾಕ್ಷಿ ಪಟ್ಟಿಯ ವಿಚಾರಣೆ

ಕ್ರಾಫರ್ಡ್ ಹಾಲ್ ಬಳಿ ಪ್ರದರ್ಶನದ ಸಂಬಂಧವಾಗಿ ನಡೆಯುತ್ತಿರುವ ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಯು ಇಂದು ವಿಚಾರಣೆಗೆ ಬಂದು, ೨೬ ನೇ ತಾ||ಗೆ ಮುಂದುವರಿಸಲ್ಪಟ್ಟಿತು ಕೋರ್ಟು ಸಾಕ್ಷಿಗಳಾಗಿ ಕರೆಸಬೇಕೆಂದು ಆಪಾದಿತರ ಪರ ವಕೀಲರು ಸಲ್ಲಿಸಿದ್ದ ಶ್ರೀ ಕೆ ಹನುಮಂತಯ್ಯ ಮುಂತಾದರ ಸಾಕ್ಷಿಗಳಿರುವ ಪಟ್ಟಿಯನ್ನು ನ್ಯಾಯಾಧೀಶರು ತಿರಸ್ಕರಿಸಿದರು

ಅಮೆರಿಕದ ರಾಯಭಾರಿ

೩ನೇ ಯುದ್ಧ ಅನಿವಾರ್ಯವಲ್ಲವೆಂದು ಚೆಸ್ಟರ್ ಬೌಲ್ಸ್

ಬೆಂಗಳೂರು ೧೧

ನೆನ್ನೆ ಇಲ್ಲಿನ ನಗರ ಭವನದಲ್ಲಿ ಮಾತನಾಡುತ್ತಾ ಅಮೆರಿಕದ ರಾಯಭಾರಿ, ಚೆಸ್ಟರ್ ಬೌಲ್ಸ್‌ರವರು ತೃತೀಯ ಮಹಾಯುದ್ಧವು ಅನಿವಾರ್ಯವಲ್ಲವೆಂದು ತಿಳಿಸಿದರು ಯುದ್ಧ ಮಾಡುವುದರಿಂದ ಯಾರಿಗೂ ಲಾಭವಿಲ್ಲವೆಂಬುದನ್ನು ಹಿರಿಯ ರಾಷ್ಟ್ರಗಳು ಅರಿತಿರುವುದಾಗಿ ಅವರು ಹೇಳಿದರು ಒದಗುವ ಹತ್ತು-ಇಪ್ಪತ್ತು ವರ್ಷಗಳಲ್ಲಿ ಇನ್ನೂ ಹೆಚ್ಚಿನ ಕಷ್ಟಗಳೂ, ಬಿಕ್ಕಟ್ಟುಗಳೂ ಬಂದರೂ ಸಹ, ಯುದ್ಧ ಹೂಡದೇ ಅವನ್ನು ನಿವಾರಣೆ ಮಾಡಿಕೊಳ್ಳಲಾಗುವುದೆಂದು ಅವರು ಆಶಿಸಿದರು

ಹರಿಕಥೆ

ರಾಜಧಾನಿಯ ನೂರಡಿ ರಸ್ತೆಯಲ್ಲಿರುವ ದತ್ತಾತ್ರೇಯ ದೇವಾಲಯದಲ್ಲಿ ಈ ರಾತ್ರಿ ೯ ಗಂಟೆಗೆ ವಿ|| ಪಿ ರಾಮಸ್ವಾಮಿನಾಯ್ಡು ಮತ್ತು ಶ್ರೀ ಗುರುರಾಜ ನಾಯ್ಡುರವರಿಂದ ಶಬರ ಶಂಕರ ವಿಲಾಸ ಎಂಬ ಹರಿಕಥೆಯು ಏರ್ಪಾಡಾಗಿದೆ ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಗಳಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಶ್ರೀಮದ್ರಾಮಾಯಣವು ಹರಿಕಥಾ ರೂಪವಾಗಿ ಹೇಳಲ್ಪಡುತ್ತಿದೆ

ಆಂಧ್ರ ಚಳುವಳಿಗಾಗಿ ರೈಲು ಸಂಚಾರಕ್ಕೆ ಅಡ್ಡಿ

ಆಂಧ್ರ ಪ್ರಾಂತವನ್ನು ರಚಿಸಬೇಕೆಂದು ಒತ್ತಾಯಪಡಿಸಲು ತೆಲುಗು ಪ್ರದೇಶಗಳಲ್ಲಿ ನಡೆಯುತ್ತಿರುವ ಚಳುವಳಿಯು ಹೊಸ ರೂಪವನ್ನು ತಾಳಿದೆ ಗುಂಟೂರಿನಲ್ಲಿ ಸಂಪೂರ್ಣ ಹರತಾಳವನ್ನು ನೆನ್ನೆ ಆಚರಿಸಲಾಯಿತು ಅಂಗಡಿ ಹೋಟೇಲು ಮತ್ತು ಸಿನಿಮಾ ಮಂದಿರಗಳು ಮುಚ್ಚಲ್ಪಟ್ಟಿದ್ದುವು ನಗರದಲ್ಲಿ ವಿದ್ಯಾರ್ಥಿಗಳ ಪ್ರದರ್ಶನವೂ ನಡೆಯಿತು ಅಲ್ಲಿಗೆ ಬರುವ ರೈಲುಗಳನ್ನು ನಿಲ್ದಾಣಕ್ಕೆ ಅರ್ಧ ಮೈಲಿ ದೂರದಲ್ಲಿ ೩ ಗಂಟೆ ಕಾಲ ತಡೆದು ನಿಲ್ಲಿಸಲಾಗಿತ್ತು ಗಾಡಿಗಳನ್ನು ಇಂಜನ್ನಿಂದ ಪ್ರತ್ಯೇಕಿಸಿ, ಟೆಲಿಫೋನ್ ಕೇಬಲ್ಲುಗಳನ್ನು ಮುರಿದು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಲಾಗಿತ್ತು ಜಿಲ್ಲಾ ಕಲೆಕ್ಟರು ಸಿಬ್ಬಂದಿಯೊಡನೆ ಬಂದು ಗುಂಪನ್ನು ಚದುರಿಸಿದರು

ಪ್ರಕಾಶಂ, ಮುಂತಾದ ೨೪ ಜನರ ಚುನಾವಣೆ ರದ್ದು

ಮದ್ರಾಸಿನ ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಸದಸ್ಯರಾದ ಟಿ. ಪ್ರಕಾಶಂ, ಮಂತ್ರಿ ಎಂ ರಂಗಾರೆಡ್ಡಿ, ಆರ್ ಕೆ ಷಣ್ಮುಂ ಒಟ್ಟಿ ಆ ದಿ ತ್ಯ ರ್, ರಾಜೇಶ್ವರರಾವ್ ಮುಂತಾದ ೨೪ ಮಂದಿ ಸದಸ್ಯರ ಚುನಾವಣೆಯನ್ನು ಮದ್ರಾಸಿನ ಚುನಾವಣಾ ನ್ಯಾಯಾಸ್ಥಾನವು ರದ್ದುಗೊಳಿಸಿರುತ್ತದೆ ಮಂಗಳೂರಿನ ಯು ವಿ. ಸುಬ್ರಮಣ್ಯ ಭಟ್ಟರು ಚುನಾವಣೆ ಮೊಕದ್ದಮೆ ಹೂಡಿ, ತಮ್ಮ ಹೆಸರನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿದ್ದುದು ಅಕ್ರಮವೆಂದು ತಿಳಿಸಿದ್ದರು

ನೆನ್ನೆ ಆಕಾಶದಲ್ಲಿ ಕಾಣಿಸಿದ್ದು ಬ್ರಿಟಿಷ್ ಜೆಟ್ ವಿಮಾನ

ನೆನ್ನೆ ದಿನ ಆಕಾಶದಲ್ಲಿ ವಿಚಿತ್ರ ವಸ್ತುವು ಹಾರಿಹೋಯಿತೆಂದು ವರದಿಯಾಗಿರುವ ಬಗ್ಗೆ ಮೈಸೂರು ಮಂಡಳಿಯ ವಿಮಾನ ನಿಲ್ದಾಣದ ಅಧಿಕಾರಿಗಳಾದ ಶ್ರೀ ಅಚ್ಯುತರಾಯರು ಒಂದು ಹೇಳಿಕೆಯಿತ್ತು-ಅದು ಲಂಡನ್ನಿನಿಂದ ಕೊಲಂಬೋಗೆ ಹೋಗುವ ಬಿ ಓ ಎ ಸಿ ಕಂಪೆನಿಯ ಕಾಮೆಟ್ ಜೆಟ್ ಏರ್ ಲೈನರ್ ವಿಮಾನವೆಂದೂ, ಅದು ಪ್ರತಿ ಗುರುವಾರ ಬೊಂಬಾಯಿ ಮಾರ್ಗವಾಗಿ ಬರುವುದೆಂದೂ ತಿಳಿಸಿರುವರು ವಿಮಾನವು ಸುಮಾರು ೩೦-೪೦ ಸಾವಿರ ಅಡಿ ಎತ್ತರದಲ್ಲಿ ಹಾರುವುದರಿಂದ ಅದು ಕಾಣಿಸದೆ ಅದರ ಹೊಗೆಯ ಸಾಲು ಮಾತ್ರ ಗೋಚರಿಸುವುದೆಂದು ಹೇಳಲಾಗಿದೆ.

ಬಂಗಾರುಪೇಟೆ ಚುನಾವಣಾ ಸ್ಪರ್ಧೆ

ಬಂಗಾರುಪೇಟೆ ತಾಲ್ಲೂಕು ಕ್ಷೇತ್ರದಿಂದ ಮೈಸೂರಿನ ಕಿರಿಯ ಶಾಸನ ಸಭೆಯ ಚುನಾವಣೆಗೆ ಕಾಂಗ್ರೆಸ್ ಪರವಾಗಿ ಶ್ರೀ ಇ ನಾರಾಯಣಗೌಡರನ್ನು ನಿಲ್ಲಿಸಲು ಮೈಸೂರು ಕಾಂಗ್ರೆಸ್ ಚುನಾವಣಾ ಸಮಿತಿಯು ನಿರ್ಧರಿಸಿರುತ್ತದೆ

೭ ವರ್ಷದ ಬಾಲಕನಿಗೆ ಗೀತೆಯ ಕಂಠಪಾಠ

ರಾಜಧಾನಿಯ ಗೀತಾ ಪ್ರಚಾರಿಣಿ ಸಭೆಯವರು ಏರ್ಪಡಿಸಿದ್ದ ಗೀತೆಯ ೧೮ ಅಧ್ಯಾಯಗಳ ಬಾಯಿಪಾಠದ ಸ್ಪರ್ಧೆಯಲ್ಲಿ, ಭಾಗವಹಿಸಿದ್ದ ಅನಂತಮೂರ್ತಿ ಎಂಬ ೭ ವರ್ಷದ ಬಾಲಕನಿಗೆ ಪ್ರಥಮ ಬಹುಮಾನವು ದೊರೆತಿರುತ್ತದೆ.

ಭಾರತವು ಜಾತ್ಯತೀತವಾದರೂ ನಾಸ್ತಿಕ ರಾಷ್ಟ್ರವಲ್ಲ

ಮಥುರಾ ಬಳಿ ಇರುವ ಬೃಂದಾವನದ ವೈಷ್ಣವ ವಿದ್ಯಾಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ, ಮೊನ್ನೆ ಉಪಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರವರು ಭಾರತವು ಜಾತ್ಯತೀತ ರಾಷ್ಟ್ರವಾದರೂ ನಾಸ್ತಿಕ ರಾಷ್ಟ್ರವಲ್ಲವೆಂದು ಹೇಳಿರುತ್ತಾರೆ. ಮನುಷ್ಯನಿಗೆ ಸತ್ಯದ ಸಾಕ್ಷಾತ್ಕಾರ ಮತ್ತು ಮಾನವ ಪ್ರೇಮವೇ ಮುಖ್ಯವಾದ ಗುರಿಯಾಗಿರಬೇಕೆಂದು ಅವರು ತಿಳಿಸಿರುತ್ತಾರೆ.

ಸಾವಿರ ಮೊರಾಕನ್ನರ ದಸ್ತಗಿರಿ

ಫ್ರೆಂಚ್ ಮೊರಾಕೋವಿನಲ್ಲಿ ಇತ್ತೀಚೆಗೆ ನಡೆದ ಪ್ರದರ್ಶನಗಳ ಸಂಬಂಧವಾಗಿ ಫ್ರೆಂಚರು ಸಾವಿರ ಮೊರಾಕೊ ಅರಬ್ಬರನ್ನು ದಸ್ತಗಿರಿ ಮಾಡಿರುವರೆಂದು ವರದಿಯಾಗಿದೆ.

ಕಾರ್ಮಿಕರ ಆರೋಗ್ಯದ ರಕ್ಷಣೆ ಅಗತ್ಯ

ಕೈಗಾರಿಕಾ ವೈದ್ಯದ ಬಗ್ಗೆ ಒನೇ ಅಖಿಲ ಭಾರತ ಸಮ್ಮೇಳನದ ಆರಂಭೋತ್ಸವವನ್ನು ಮೊನ್ನೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆರವೇರಿಸಿ ಕಾರ್ಮಿಕರ ಆರೋಗ್ಯ ರಕ್ಷಣೆ ಬಗ್ಗೆ ವೈದ್ಯರುಗಳು ಗಮನಕೊಡುವುದು ಅಗತ್ಯವೆಂದು ತಿಳಿಸಿದರು. ಮೆಡಿಕಲ್ ಕಾಲೇಜಿನಲ್ಲಿ ಕೈಗಾರಿಕಾ ವೈದ್ಯರ ವಿಷಯವಾಗಿ ಪಾಠವನ್ನು ಏರ್ಪಡಿಸುವ ಬಗ್ಗೆ ತಮಗೆ ಸೂಚನೆ ಬಂದಿರುವುದಾಗಿಯೂ, ಅದನ್ನು ತಾವು ಸ್ವಾಗತಿಸುವುದಾಗಿಯೂ ಈ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾದ ಕೆಲಸವನ್ನೆಲ್ಲಾ ಮಾಡಲಾಗುವುದೆಂದೂ ತಿಳಿಸಿದರು.

ಕೆನ್ಯಾ ಪೊಲೀಸರ ಮೇಲೆ ವಿಷಪೂರಿತ ಬಾಣ

ಕೆನ್ಯಾದ ಆಫ್ರಿಕ ಜನಾಂಗಕ್ಕೆ ಸೇರಿದ ಒಬ್ಬ ಪೊಲೀಸನ ಮೇಲೆ ವಿಷಪೂರಿತ ಬಾಣವನ್ನು ಹೊಡೆಯಲಾಯಿತೆಂದು ವರದಿಯಾಗಿದೆ. ಮೌ ಮೌ ಚಳವಳಿಯನ್ನು ತಡೆಯಲು ಕೈಕೊಳ್ಳುತ್ತಿರುವ ಕ್ರಮವನ್ನು ವಿರೋಧಿಸಲು ಅಲ್ಲಿನ ಕಿಕುಯು ಜನರು ಅತ್ಯಂತ ಪುರಾತನವೂ ಮತ್ತು ಪ್ರಾಣಾಪತ್ತು ತರುವಂತಹುದೂ ಆದ ಈ ಆಯುಧವನ್ನು ಉಪಯೋಗಿಸುತ್ತಿರುವುದು ಇದೇ ಮೊದಲೆಂದು ಹೇಳಲಾಗಿದೆ.

ಬೃಂದಾವನದಲ್ಲಿ ದೀಪೋತ್ಸವ

ಕೃಷ್ಣರಾಜ ಸಾಗರದಲ್ಲಿ ನೀರಿನ ಶೇಖರಣೆಯು ಉತ್ತಮಗೊಳ್ಳುವ ವರೆಗೂ ಬೃಂದಾವನದ ದಕ್ಷಿಣ ಭಾಗದಲ್ಲಿ ಸ್ವಲ್ಪವಾಗಿಯೂ, ಉತ್ತರ ಭಾಗದಲ್ಲಿ ಪೂರ್ತಿಯಾಗಿಯೂ ದೀಪೋತ್ಸವವನ್ನು ನಡೆಸಲಾಗುವುದೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ.

ಗುಂಡ್ಲುಪೇಟೆಯಲ್ಲಿ ಮಹಾಭಾರತದ ವಾಚನ

ಗುಂಡ್ಲುಪೇಟೆಯ ಶ್ರೀ ರಾಮ ಮಂದಿರದಲ್ಲಿ ಕಳೆದ ಫೆಬ್ರವರಿ ೨ನೇ ತಾ|| ರಥಸಪ್ತಮಿ ದಿನದಿಂದ ಶ್ರೀಗಳಾದ ಹಂಗಳದ ವೆಂಕಟಸುಬ್ಬಯ್ಯ ಮತ್ತು ವಿಜಯ ಗುರುಕ ಲದ ಘನಪಾಠಿ ನಾರಾಯಣರವರಿಂದ ಮಹಾಭಾರತದ ೧೮ ಪರ್ವಗಳ ವಾಚನ ಮತ್ತು ಅನುವಾದಗಳು ಸಾಂಗವಾಗಿ ನಡೆದು ಕಳೆದ ಶನಿವಾರ ಮಂಗಳವು ಆಚರಿಸಲ್ಪಟ್ಟಿತು. ಸಮಾರಂಭಕ್ಕೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥರವರು, ನಂಜನಗೂಡು ಸಬ್‌ಡಿವಿಜನ್ ಅಧಿಕಾರಿಗಳಾದ ಶ್ರೀ ನರಸಿಂಹರಾಯರು ಮತ್ತು ಅಮಲ್ದಾರ್, ಶ್ರೀ ಎಂ. ಎಸ್. ರಾಜಗೋಪಾಲಯ್ಯಂಗಾರ್ಯರೊಡನೆ ಬಂದಿದ್ದು ಸಂಸ್ಕೃತಿ ಪ್ರಸಾರ ಕಾರ್ಯವು ಇದೇ ರೀತಿ ಅವಿಚ್ಛಿನ್ನವಾಗಿ ನಡೆಯಲೆಂದು ಜಿಲ್ಲಾಧಿಕಾರಿಗಳು ಹಾರೈಸಿದರು.

ರಂಗೂನಿನಲ್ಲಿ ಸರ್ಕಾರದ ಗಿರವಿ ಅಂಗಡಿಗಳು

ಬೆಲೆ ಬಾಳುವ ಒಡವೆ ವಸ್ತುಗಳನ್ನು ಗಿರವಿ ಇಟ್ಟುಕೊಂಡು ಹಣವನ್ನು ಸಾಲ ಕೊಡುವ ಸಂಸ್ಥೆಗಳನ್ನು ಬರ್ಮಾ ಸರ್ಕಾರದವರು ರಂಗೂನಿನಲ್ಲಿ ತೆರೆದಿರುವರೆಂದು ಗೊತ್ತಾಗಿದೆ. ಇಂತಹ ಸಂಸ್ಥೆಗಳನ್ನು ಬರ್ಮಾ ದೇಶದ ಆದ್ಯಂತ ತೆರೆಯಲು ಆಲೋಚಿಸಿ ಸರ್ಕಾರೀ ಗಿರವಿ ಅಂಗಡಿಗಳ ಸಮಿತಿಯೊಂದನ್ನು ಅಲ್ಲಿ ರಚಿಸಲಾಗಿದೆ. ಈಗ ಆ ದೇಶದಲ್ಲಿ ಸುಮಾರು ಐದು ಸಾವಿರ ಮಂದಿ ಭಾರತೀಯರು ಮತ್ತು ಚೀಣೀಯರು ಗಿರವಿ ಅಂಗಡಿಗಳನ್ನು ಇಟ್ಟುಕೊಂಡಿರುವರೆಂದು ಹೇಳಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಚಿತ್ರ ಜಗತ್ ಮಧ್ಯಾಹ್ನ ೧-೪೦ ಗಿಟಾರ್ ೨ ಬಾಲಜಗತ್ ಸಂಜೆ ೬-೩೦ ವ ತ್ತು ೭ ಕೆ ವಿ ಮನುಷ್ಯ ಮತ್ತು, ನಾಗಸ್ವರ ೮ ೧೦ ಸಂದರ್ಶ ೭ ೩೦ ಮಹಿಳಾ ವಿಚಾರ ೮ ಟಿ ಕೆ ವೇಣುಗೋಪಾಲದಾಸ್ ಕಥಾ ಕಾಲಕ್ಷೇಪ ೯ ೧೫ ಬಡೇ ಗುಲಾಂ ಅಲಿ ಹಿಂದೂಸ್ಥಾನಿ ಸಂಗೀತ

೧ ಕನ್ನಡದಲ್ಲಿ ... ಕಾರ್ಯಕ್ರಮ

ಒಲಿಂಪಿಯಾ ಟಾಕೀಸ್

೧೧ ೧೨ ... ಡಿಸೆಂಬರ್ ೨ನೇ ವಾರ

ಪ್ರತಿದಿನ ೩ ಆಟಗಳು

... ಪಿಕ್ಚರ್ಸ್‌ರವರ

ಬೈಜೂ ಬಾವ್ರಾ

ಪಾತ್ರ ... ಮೀನಾಕುಮಾರಿ, ... ಭರತ್ ಭೂಷಣ್ ... ಮತ್ತು ಕುಲದೀಪ್ ಕೌರ್

— ಬೆಳಗಿನ ಪ್ರದರ್ಶನ —

ದಿಲೀಪ್‌ಕುಮಾರ್ ಪಾತ್ರ ವಹಿಸಿರುವ

ಶಬನಮ್

ಜನತಾ ಶಿಕ್ಷಣ ಕೇಂದ್ರ

ನಂಜನಗೂಡು ತಾಲ್ಲೂಕಿನ ಹೊಸಕೋಟೆ ಗ್ರಾಮದಲ್ಲಿ ಕಳೆದ ೩ನೇ ತಾ|| ಜನತಾ ಶಿಕ್ಷಣ ಕೇಂದ್ರ ಮತ್ತು ಪುಸ್ತಕ ಭಂಡಾರದ ಆರಂಭೋತ್ಸವವು ನಂಜನಗೂಡು ಅಮಲ್ದಾರರಾದ ಶ್ರೀ ಸಿ. ಕೆ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಗ್ರಾಮದ ಶ್ಯಾನುಭೋಗರಾದ ಶ್ರೀ ವಿ. ಕೃಷ್ಣಯ್ಯನವರು ಸ್ವಾಗತ ಭಾಷಣ ಮಾಡಿದರು. ಸುಗ್ಗಿ ಕುಣಿತ, ಪಂಜುವರಸೆ, ಬೀಸುಕುಸ್ತಿ, ಮುಂತಾದ ಗ್ರಾಮಕಲಾ ಪ್ರದರ್ಶನಗಳು ನಡೆದುವು. ವಯಸ್ಕರ ಶಿಕ್ಷಣ ಸಮಿತಿಯ ಶ್ರೀ ಬಿ. ವಿ. ಸತ್ಯನಾರಾಯಣರವರು ಜನತಾ ಶಿಕ್ಷಣದ ಬಗ್ಗೆಯೂ ಮತ್ತು ನಂಜನಗೂಡಿನ ಶ್ರೀ ಕೆ. ವಿಶ್ವೇಶ್ವರಗೌಡರು ಗ್ರಾಮಗಳ ಪರಿಸ್ಥಿತಿ ಬಗ್ಗೆಯೂ ಭಾಷಣ ಮಾಡಿದರು. ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದ್ದಿತು.

ಪ್ರಭಾ ★

ಇಂದಿನಿಂದ ಪ್ರತಿದಿನ ೩ ಆಟಗಳು

ಬೇಕರಾರ್

ಪಾತ್ರ ... ಎಸ್. ... ಮತ್ತು ...

ಬೆಳಗಿನ ಪ್ರದರ್ಶನ

೧೨ ೧೨ ೫೨ ರಿಂದ ೩ ದಿನ

... ಮತ್ತು ಚಂದ್ರಶೇಖರ್ ನಟಿಸಿರುವ

★ ಪ್ರೀತ್ ★

Edited, Printed and Published by A. R. Nagarajan at Sadhvi Press, D. Subbaiah Road, Mysore

WANTED A TEACHER

Minimum Qualification S S L C and a pass in Hindi Praveshika capable of handling the general classes of Middle School

CITY TUTORIAL COLLEGE, MYSORE

ಪ್ರಭುದೇವಾ ಟಾಕೀಸ್

(ಪ್ರತಿ ದಿನ ೩ ಆಟಗಳು)

12-12-52 ರಿಂದ : ಅವೋಘ 3 ನೇ ವಾರ

ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ

★ ದಾಸಿ ★

ಪಾತ್ರ — ಲಕ್ಷ್ಮಿರಾಜ್ಯಂ, ಎನ್. ಟಿ. ರಾಮರಾವ್, ರೇಲಂಗಿ, ಶಾಂತಕುಮಾರಿ

ಅಬೀದ್‌ರವರ ಔಟ್‌ರ್ಕಟ್ ಹರಾಜು ಮಾರಾಟ

14-12-52 ನೇ ಭಾನುವಾರ · ಬೆಳಿಗ್ಗೆ 10 ಘಂಟೆಗೆ

ಷೋ ರೂಮ್ ಬಳಿ

ಸ ಸಜ್ಜಿತವಾದ ಸ್ಪ್ರಿಂಗ್ ಕುಷನ್ನು ಸೋಫಾ ಸೆಟ್ಟುಗಳು, ಸಿಂಗಲ್ ಮತ್ತು ಡಬಲ್ ಮಂಚಗಳು, ಕುರ್ಚಿಗಳು, ಮೇಜುಗಳು, ಬೆಂಚುಗಳು, ಹೊಸ ರೆಕ್ಸಿನ್ ಬಟ್ಟೆಯ ಸುರುಳಿ, ಪುಸ್ತಕಗಳ ಪಟ್ಟಿಗೆ ಹಾಕುವ 100 ಗಜ ಕಾಗದ (ಸುರುಳಿಗಳಲ್ಲಿ), ಗಾಜು ಮತ್ತು ಕಟ್ಟುಗಳುಳ್ಳ 100 ವಿಧವಿಧವಾದ ಫೋಟೋಗಳು ಮತ್ತು ಚಿತ್ರಗಳು, (ಸಣ್ಣ ಸಣ್ಣ ಆಟಗಳಲ್ಲಿ) ಚಕ್ರಗಳುಳ್ಳ ಚಲಿಸುವ ಅಂಗಡಿ, ವಿದ್ಯುಚ್ಛಕ್ತಿ ಟೇಬಲ್ ಲ್ಯಾಂಪುಗಳು ಮತ್ತು ಶೇಡ್ಗಳು, ಅಲಾರಂ ಟೇಬಲ್ ಗಡಿಯಾರ ಒಂದು ಸ್ಕೂಟರ್ ಮೋಟಾರ್ ಸೈಕಲ್ಲು ಸ್ಟೇಷನರಿ ಸಾಮಾನುಗಳು ಮತ್ತು ಹಲವಾರು ಉಪಯುಕ್ತ ಸಾಮಗ್ರಿಗಳು ಇವೆ

ಈಗ ಬಂದು ನೋಡಬಹುದು

ಬೇಗನೆ ಬರಲಿದೆ!

★

★

ರಿಜಿಸ್ಟರ್ಡ್ ನಂ 192 ||ವಂದೇ ಮಾತರಂ|| ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಪುಸ್ತಕ ೧೧] ಶನಿವಾರ ೧೬-೧೨ ೧೯೫೦ [ಸಂಚಿಕೆ ೧೦೩

ಫಕ್ತೂನಿಸ್ತಾನದ ಮೇಲೆ ಪಾಕಿಸ್ತಾನ್ ಬಾಂಬು

ದಂಡಗಳನ್ನು ಕೋರ್ಟಿನಲ್ಲಿ ಹಾಜರುಪಡಿಸಿದವನಿಗೆ ಶಿಕ್ಷೆ

ಬೆಂಗಳೂರು ೧೩

[illegible] ಫೆಬ್ರವರಿ ೨೮ ನೇ ತಾ|| ಒಬ್ಬ [illegible] ಮತ್ತು ಒಬ್ಬ ಯುವಕನ ಕಥೆ [illegible] ಸ್ಪೆಷಲ್ ನ್ಯಾಯಾಧೀಶ [illegible] ಸಮ್ಮುಖದಲ್ಲಿ [illegible] ಪಡಿಸಿದ ಸಂಬಂಧವಾಗಿ ಹೊ [illegible] ದ ಎರಡು ಕೊಲೆ ಮೊಕದ್ದಮೆಗ [illegible] ಗೊಟ್ಟಿಗೆರೆಯ ಹನುಮಂತ ಎಂಬ [illegible] ರ್ನಾಟಕನಿಗೆ ಒಂದು ಮೊಕದ್ದ [illegible] ನಿನ್ನೆ ಸೆಷನ್ಸ್ ನ್ಯಾಯಾಧೀ [illegible] ಶ್ರೀ ಕೆ ಗುಬ್ಬಯ್ಯನವರು ಜೀ [illegible] ಶಿಕ್ಷೆಯನ್ನು ವಿಧಿಸಿದರು ತನ್ನ [illegible] ಮುನಿ ಮತ್ತು ನೆರೆಯವನಾದ [illegible] ಎಂಬುವರಿಬ್ಬರೂ ಅಕ್ರಮ ಸಂ [illegible] ಹೊಂದಿದ್ದರೆಂದು ಅವರನ್ನು ಹ [illegible] ತನು ಕಳೆದ ಫೆಬ್ರವರಿ ೨೭ ನೇ [illegible] ರಾತ್ರಿ ಕೊಲೆ ಮಾಡಿ ಅವರುಗಳ [illegible] ಗಳನ್ನು ಚೀಲದಲ್ಲಿ ಹಾಕಿ ಇಲ್ಲಿಗೆ [illegible] ದಿನ ತಂದಿದ್ದನು ಗುಬ್ಬನ ಕೊ [illegible] ಈಗ ಶಿಕ್ಷೆ ವಿಧಿಸಲಾಗಿದೆ ಹೆಂ [illegible] ಕೊಲೆಗಾಗಿ ಅವನ ಮೇಲೆ ಬೇ [illegible] ಮೊಕದ್ದಮೆಯು ನಡೆಯುತ್ತಿದೆ

ಸಂಸ್ಕೃತಿ ಪ್ರಚಾರದ ಬಗ್ಗೆ ಸಭೆ

[illegible] ಸಂಸ್ಥಾನದಲ್ಲಿ ಪ್ರಾರಂಭಿಸಲಾಗಿರು [illegible] ತಿ ಪ್ರಚಾರ ಯೋಜನೆಯನ್ನು [illegible] ವಡಿಸುವ ಬಗ್ಗೆ ಈ ದಿನ ಮು [illegible] ತ್ರಿಗಳ ಅಧ್ಯಕ್ಷತೆಯಲ್ಲಿ ಸುಮಾ [illegible] ಜನ ಸಾಹಿತಿಗಳು, ಅಧಿಕಾರಿಗ [illegible] ವ ಶಿಗಳೇ ಮುಂತಾದವರ ಸಭೆ [illegible] ಸದರಿ ಯೋಜನೆಯನ್ನು [illegible] ನಡೆಸುವ ಸೂಕ್ತ ಸಲಹೆ ನೀ [illegible] ಜನರುಳ್ಳ ಸಮಿತಿಯೊಂದ [illegible] ಚಿಸಲಾಯಿತು

[illegible] ಎಸ್. ಹಿರಣ್ಣಯ್ಯನವರು [illegible] ಸಂಸ್ಥೆಗಳ ಕಮಿಷನರ್ [illegible] ದ ಮೇಲಿರುವ ಶ್ರೀ ಎಚ್ ಎಸ್ [illegible] ಯ್ಯನವರನ್ನು ಸಂಸ್ಥಾನದ [illegible] ಸಂಸ್ಥೆಗಳ ಕಮಿಷನರ್ ಮತ್ತು [illegible] ಸಲಹಾ ಕಾರ್ಪೊರೇಷನ್ನಿನ [illegible] ರಾಗಿ ನೇಮಿಸಲಾಗಿದೆ

ಟೆಲಿಫೋನ್ ತಂತಿ ಬಳಿಯಲ್ಲಿ ಸಿಡಿಲು ಹೊಡೆತ

[illegible] ಮೈಸೂರಿನಿಂದ ಹೊರಟ ಮೆ [illegible] ಟ್ರೈನು ಬೆಂಗಳೂರಿಗೆ ೧೧ ಮೈಲಿ [illegible] ಮುಳಿಯಂಪ ಸ್ಟೇಷನಿನ ಬಳಿ [illegible] ನುಹೋಗಿದ್ದುದರಿಂದ ಎಂಜಿನ್ನು [illegible] ದಿ ನಿಂತು ಹೋಗಲು ಬೇರೆ [illegible] ಕಳುಹಿಸುವಂತೆ ಕಾಗದ ಕೊ [illegible] ರ್ಡ್ ಗಾರ್ಡನ್ನು ಬೆಂಗಳೂರಿ [illegible] ಮಾತಿಂದೂ ರೈಲಿನಲ್ಲಿ [illegible] ಶ್ರೀ ಕೃಷ್ಣಾಚಾರ್ಯರವರು [illegible] ಇರುವ ಟೆಲಿಫೋನನ್ನು ಉಪ [illegible] ಕೊಂಡು ಮಾತನಾಡಬಹುದೆಂದು [illegible] ಮೇಲೆ ಬ್ಯಾಟರಿಯಾ ಸು [illegible] ಎಂಬುವರು ಟೆಲಿಫೋನನ್ನು ತಕ್ಕ [illegible] ಗೆ ಜೋಡಿಸಿ ಬ್ಯಾಟರಿಗೆ [illegible] ರಿಂದೂ ರೈಲಿನ ಗಾರ್ಡ್ ಶ್ರೀ [illegible] ಮತ್ತು ಎ ಟಿ ಎಸ್ ಸಹಾ ಅ [illegible] ನಿಂತಿದ್ದಾಗ, ಆ ವೇಳೆಗೆ [illegible] ಲು ಬಂದು ಬಡಿದ ಪರಿಣಾಮ [illegible] ರವರು ಪ್ರಜ್ಞೆ ತಪ್ಪಿ ಬಿದ್ದ [illegible] ಟಿ ಎಸ್ ರವರಿಗೂ ಕೊಂಚ [illegible] ದೆಂದೂ ಗೊತ್ತಾಗಿ [illegible] ರವರನ್ನು ಬೆಂಗಳೂರು ಆ [illegible] ಗಿಸಲಾಗಿದೆ

ಮತ್ತೆ ಕಾಂಗ್ರೆಸ್ ಅಧ್ಯಕ್ಷರಾಗಲು ನೆಹರೂ ಒಪ್ಪಿಗೆ

ಮುಂದಿನ ಎರಡು ವರ್ಷಗಳ ಅವಧಿಗೂ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರಲು ಪ್ರಧಾನಿ ನೆಹರೂರವರು ಒಪ್ಪಿ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಲವಂತರಾಯ್ ಮೆಹತಾರವರಿಗೆ ಪತ್ರ ಬರೆದಿರುತ್ತಾರೆ ತಾವು ಅಧ್ಯಕ್ಷರಾಗಲು ಅಪೇಕ್ಷಿಸದಿದ್ದರೂ ಸಹ ದೇಶದ ನಾನಾ ಕಡೆಗಳಿಂದಲೂ ತಾವೇ ಅಧ್ಯಕ್ಷರಾಗುವಂತೆ ಒತ್ತಾಯಪಡಿಸಿ ಅನೇಕ ಪತ್ರಗಳು ಬಂದಿದ್ದುವೆಂದು ಅವರು ಹೇಳಿ, ವಿಧಿಯಿಲ್ಲದೆ ಒಪ್ಪಬೇಕಾಯಿತೆಂದು ತಿಳಿಸಿರುತ್ತಾರೆ

ಮದ್ರಾಸ್ ನಗರದ ಬಸ್ಸಿನಲ್ಲಿ ದರೋಡೆ ಪ್ರಯತ್ನ

ಮದ್ರಾಸು ನಗರದಲ್ಲಿ ಓಡಾಡುವ ಸರ್ಕಾರಿ ಬಸ್ಸಿನಲ್ಲಿ ಮೊನ್ನೆ ಸಂಜೆ ಪ್ರಯಾಣಿಕರನ್ನು ದರೋಡೆ ಮಾಡುವ ಪ್ರಯತ್ನವೊಂದು ನಡೆಯಿತೆಂದು ವರದಿಯಾಗಿದೆ ಪ್ಯಾರೀಸ್ ಮತ್ತು ವ್ಯಾಪಾರ ಮಾರ್ಗದಲ್ಲಿ ಬಸ್ಸು ಹೋಗುತ್ತಿದ್ದಾಗ ಒಬ್ಬ ಪ್ರಯಾಣಿಕನ ಜೇಬನ್ನು ಜೇಬುಗಳ್ಳನು ಬ್ಲೇಡಿನಿಂದ ಕತ್ತರಿಸಿದುದು ಗೊತ್ತಾಗಿ ಆತನು ಕೂಗಿಕೊಳ್ಳಲು, ಕಳ್ಳನ ಸಹಾಯಕ್ಕೆ ಇನ್ನೂ ಮೂವರು ಬಂದು ಅಲ್ಲಿದ್ದ ಪ್ರಯಾಣಿಕರನ್ನು ಹೆದರಿಸಿ ಚಾಕುವನ್ನು ತೋರಿಸಿದರೆಂದೂ, ಬಸ್ಸು ನಿಲ್ಲುತ್ತಲೇ ಎಲ್ಲರೂ ಪರಾರಿಯಾದರೆಂದೂ ವರದಿಯಾಗಿದೆ

ಶಾರದಾದೇವಿಯವರ ಜನ್ಮದಿನೋತ್ಸವ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ ಶಾರದಾದೇವಿಯವರ ಜನ್ಮದಿನೋತ್ಸವವನ್ನು ಆಚರಿಸಲಾಗುವುದು ಈ ಸಂಬಂಧವಾಗಿ ಸಂಗೀತವಿದುಷಿ ಜಲಜಾಕ್ಷಮ್ಮ ಮತ್ತು ಪಾರ್ಟಿಯವರ ಗಾಯನವೂ ಮತ್ತು ಶ್ರೀಮತಿಯರಾದ ಚಂದ್ರಮ್ಮ ದೇವೇಂದ್ರಪ್ಪ ಮತ್ತು ಶಕ್ತಿ ಪತ್ರಿಕೆಯ ಸಂಪಾದಕಿ ಕಾವೇರಮ್ಮನವರಿಂದಲೂ ಮತ್ತು ಸ್ವಾಮಿ ಸೋಮನಾಥಾನಂದಜೀಯವರಿಂದಲೂ ಉಪನ್ಯಾಸಗಳೂ ನಡೆಯುವುವು ಸರ್ವರಿಗೂ ಸ್ವಾಗತವುಂಟು.

ಹನುಮಂತಯ್ಯನವರಿಂದ ಮದ್ರಾಸ್ ಖಾದಿ ಪ್ರದರ್ಶನದ ಆರಂಭ

ಸ್ವಂ ಸು. ಫೋ] ಬೆಂಗಳೂರು ೧೩

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು, ಮದ್ರಾಸಿನ ಮುಖ್ಯ ಮಂತ್ರಿಗಳಾದ ರಾಜಗೋಪಾಲಾಚಾರಿಯವರ ಆಹ್ವಾನವನ್ನು ಸ್ವೀಕರಿಸಿ ಬರುವ ವಾರ ಮದ್ರಾಸಿನಲ್ಲಿ ಅಖಿಲ ಭಾರತ ಕೈಗಾರಿಕಾ ಮತ್ತು ಖಾದಿ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಲಿರುವರು

ರಿಪಬ್ಲಿಕ್ ದಿನಾಚರಣೆಯ ಏರ್ಪಾಡು

ಬರುವ ತಿಂಗಳು ರಿಪಬ್ಲಿಕ್ ದಿನಾಚರಣೆ ಸಂಬಂಧವಾಗಿ ಬೆಂಗಳೂರಿನಲ್ಲಿ ನಡೆಯಬೇಕಾದ ಉತ್ಸವದ ಏರ್ಪಾಡಿಗಾಗಿ ಸರ್ಕಾರದವರು, ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಜೆ ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುತ್ತಾರೆ ಸಂಸ್ಥಾನದ ನಾನಾ ಕಡೆಗಳಲ್ಲೂ ಸಮಾರಂಭವನ್ನು ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಡಲಾಗಿದೆ ಬೆಂಗಳೂರು ಸಮಾರಂಭಕ್ಕಾಗಿ ೭೫೦೦ ರೂ ಗಳನ್ನು ಮಂಜೂರು ಮಾಡಲಾಗಿದೆ ಆ ದಿನದ ಉತ್ಸವದಲ್ಲಿ ಸುಶ್ರಾವ್ಯವಾಗಿ ಹೇಳಲು ರಚಿಸಲ್ಪಡುವ ಉತ್ತಮ ಕವನಕ್ಕೆ ೨೫೦ ರೂ ಗಳನ್ನು ಬಹುಮಾನವಾಗಿ ಕೊಡಲಾಗುವುದು

ಸಾಮೂಹಿಕ ಯೋಜನೆ ಸಮಿತಿ ಅಧ್ಯಕ್ಷರಾಗಿ ಹೆಚ್ ಎಸ್ ರುದ್ರಪ್ಪನವರು

ಸಂಸ್ಥಾನದ ಸಾಮೂಹಿಕ ಯೋಜನೆಗಳ ಸಮಿತಿಯ ಅಧ್ಯಕ್ಷರಾಗಿ ಶ್ರೀ ಹೆಚ್ ಎಸ್ ರುದ್ರಪ್ಪನವರನ್ನು ಸರ್ಕಾರದವರು ನೇಮಿಸಿರುತ್ತಾರೆ ಇದುವರೆಗೆ ರೆವಿನ್ಯೂ ಮಂತ್ರಿಗಳೇ ಸದರಿ ಸಮಿತಿಯ ಅಧ್ಯಕ್ಷರಾಗಿದ್ದರು

ಹೊರಗಿನ ಭಿಕ್ಷುಕರ ರವಾನೆ ಬಗ್ಗೆ ಜನಾಭಿಪ್ರಾಯ

ಹೊರಗಿನಿಂದ ಸಂಸ್ಥಾನದೊಳಗೆ ಬಂದಿರುವ ಭಿಕ್ಷುಕರನ್ನು ಆಚೆಗೆ ಕಳುಹಿಸುವ ಬಗ್ಗೆ ಭಿಕ್ಷುಕರ ಶಾಸನಕ್ಕೆ ತಿದ್ದುಪಡಿ ಮಾಡಲು ಸಾರ್ವಜನಿಕರ ಅಭಿಪ್ರಾಯವನ್ನು ಕೇಳಿ, ಸರ್ಕಾರದವರು ಪ್ರಕಟಣೆಯೊಂದನ್ನು ಈ ದಿನ ಹೊರಡಿಸಿರುತ್ತಾರೆ

ವಿದ್ಯಾ ಸಮಿತಿಯಲ್ಲಿ ರಾಧಾಕೃಷ್ಣನ್ನರ ಭಾಷಣ

ಜನವರಿ ೨ನೇ ತಾ|| ಬೆಂಗಳೂರಿನಲ್ಲಿ

ಸ್ವಂ ಸು ಫೋ] ಬೆಂಗಳೂರು ೧೩

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ದಿನ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿದರು ವಿದ್ಯಾ ಮಂತ್ರಿ, ಶ್ರೀ ಎ. ಜಿ. ರಾಮಚಂದ್ರರಾಯರು ಹಾಜರಿದ್ದು ಈ ರೀತಿ ತಿಳಿಸಿದರು:

ವಿದ್ಯಾಭ್ಯಾಸದಲ್ಲಿ ಸುಧಾರಣೆಯ ಬಗ್ಗೆ ಸ್ಥಾಪಿತವಾಗಿರುವ ಸಮಿತಿಯು, ಹಣ ಕಾಸು, ವಿಶ್ವವಿದ್ಯಾಲಯ ಮತ್ತು ಪ್ರಾರಂಭಿಕ ಉಪ ಸಮಿತಿಗಳನ್ನು ಬಿಟ್ಟು, ಉಳಿದ ಸಮಿತಿಗಳ ವರದಿಗಳು ಮುಗಿದಿವೆ. ಸಾಮಾನ್ಯವಾಗಿ ಸದಸ್ಯರೆಲ್ಲರೂ ಒಮ್ಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರ ಅಧ್ಯಕ್ಷರ ವರದಿಯು ಜನವರಿ ತಿಂಗಳಲ್ಲಿ ಸಿದ್ಧವಾಗುವುದು ಶಾಲೆಗಳ ಹೊರಗಡೆಯ ಕಾರ್ಯ ಚಟುವಟಿಕೆಗಳಲ್ಲಿ ಭಾರಿ ಬದಲಾವಣೆಗಳು ಆಗುವುವು

ಜನವರಿ ೨ನೇ ತಾ|| ಬೆಂಗಳೂರಿನಲ್ಲಿ ಸೇರುವ ಸಮಿತಿಯ ಬಹಿರಂಗ ಅಧಿವೇಶನವನ್ನುದ್ದೇಶಿಸಿ ಭಾರತದ ಉಪಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರವರು ಭಾಷಣ ಮಾಡುವರು ಶಾಸನ ಸಭೆಯ ಕಾಂಗ್ರೆಸ್ ಪಕ್ಷವನ್ನು ಸಮಿತಿ ವರದಿಯ ಪರಿಶೀಲನೆಗಾಗಿ ಕರೆಯಬೇಕಾಗುವುದು

ಪಕ್ಷದ ವಿಶೇಷ ಸಭೆಯನ್ನು ಕರೆಯಲು ಹಲವು ಸದಸ್ಯರು ಸೂಚಿಸಿಲ್ಲವೇ, ಎಂದು ಪ್ರಶ್ನಿಸಲಾಗಿ, ಮುಖ್ಯ ಮಂತ್ರಿಗಳು ಲಿಖಿತ ಪ್ರಾರ್ಥನೆಯು ಬಂದಿಲ್ಲವೆಂದು ಹೇಳಿದರು

ಫಕ್ತೂನ್ ಜನರ ಮೇಲೆ ಪಾಕಿಸ್ತಾನ್ ವಿಮಾನ ಧಾಳಿ

ಕಳೆದ ೯ ನೇ ತಾ|| ಪಾಕಿಸ್ತಾನದ ಬಾಂಬರ್ ವಿಮಾನಗಳು ಮತ್ತು ಮಿಷಿನ್ ಗನ್ನುಗಳು ಬೆಳಗ್ಗೆ ೯ ರಿಂದ ಸಂಜೆ ೫ರ ವರೆಗೂ ಸತತವಾಗಿಯೂ ವಿವೇಚನಾರಹಿತವಾಗಿಯೂ ನಡೆಸಿದ ಧಾಳಿಯ ಪರಿಣಾಮವಾಗಿ ಫಕ್ತೂನಿಸ್ತಾನದ ಅನೇಕರು ಪ್ರಜೆಗಳು ಮರಣ ಹೊಂದಿರುವರು ಮತ್ತು ಗಾಯಗೊಂಡಿರುವರೆಂದು ದೆಹಲಿಯಲ್ಲಿರುವ ಅಫ್ಘನ್ ರಾಯಭಾರಿ ಕಛೇರಿಯ ಪ್ರಕಟಣೆಯೊಂದು ತಿಳಿಸಿರುತ್ತದೆ ಮಲಿಕ್ ವಾಲಿಖಾನ್ ಮುಬಾರಕ್‌ರವರ ನೇತೃತ್ವದಲ್ಲಿ ಅಲ್ಲಿನ ಜನರು ಪಾಕಿಸ್ತಾನಿಗಳ ದುಂಡಾವರ್ತಿಯನ್ನು ಖಂಡಿಸಲು ಪ್ರದರ್ಶನವನ್ನು ನಡೆಸುತ್ತಿದ್ದಾಗ ಪಾಕಿಸ್ತಾನದ ವಿಮಾನಗಳು ಬಾಂಬು ಧಾಳಿ ಮಾಡಿದುವೆಂದು ಹೇಳಲಾಗಿದೆ ಮತ್ತೊಂದು ಕಡೆ ಪಾಕಿಸ್ತಾನದ ಟ್ಯಾಂಕುಗಳು ಮತ್ತು ವಿಮಾನಗಳ ಮೇಲೆ ಬಿದ್ದು ಬಂದರೂ ಹೆದರದೆ, ಪಕ್ತೂನ ಪ್ರಜೆಗಳು ತಮ್ಮ ಪ್ರತಿಭಟನೆಯನ್ನು ಸೂಚಿಸಿದರೆಂದೂ ಹೇಳಲಾಗಿದೆ

೭ ಫ್ರೆಂಚ್ ಪೋಲೀಸರು ಮೊರಾಕೋವಿನ ರಾಷ್ಟ್ರೀಯ ಚಳುವಳಿಯ ಮುಖಂಡರನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ ರಾಬಟ್, ಕಸಬ್ಲಾಂಕಾ, ಫೆಜ್, ಮೆಕ್ನೆಸ್ ಎಂಬಲ್ಲಿ ೪೮ ಜನ ರಾಷ್ಟ್ರೀಯರು ಮತ್ತು ೧೨ ಜನ ಕಮ್ಯೂನಿಸ್ಟ್ ನಾಯಕರನ್ನೂ ಸೆರೆ ಹಿಡಿಯಲಾಗಿದೆ

ಭತ್ತ ಸಂಗ್ರಹಣದ ಅಜ್ಞೆಯಿಂದ ತೊಂದರೆ

ಅಸೆಂಬ್ಲಿ ಸದಸ್ಯರಾದ ಟಿ ನರಸೀಪುರದ ಶ್ರೀ ಎಸ್ ಶ್ರೀನಿವಾಸ ಅಯ್ಯಂಗಾರ್ಯರು ಈ ರೀತಿ ಬರೆಯುತ್ತಾರೆ

ಸರ್ಕಾರದವರು ಹಿಂದೆ ತಂದ ಭತ್ತ ಸಂಗ್ರಹಣದ ಆಜ್ಞೆಯಿಂದ ಆದ ಕಷ್ಟನಷ್ಟ ಮತ್ತು ತೊಂದರೆಗಳನ್ನು ಶಾಸನ ಸಭೆಯಲ್ಲೂ ಮತ್ತು ಹೊರಗಡೆಯೂ ಸರ್ಕಾರದ ಗಮನಕ್ಕೆ ತಂದರೂ ಈಗ ಮತ್ತೆ ಭತ್ತದ ಸಂಗ್ರಹಣೆ ಆಜ್ಞೆಯನ್ನು ಜಾರಿಗೆ ತರಲಾಗಿದೆ ಶಾಸನ ಸಭೆಯಲ್ಲಿ ಈ ವಿಷಯ ಚರ್ಚಿಸಲ್ಪಟ್ಟಾಗ ಇಂದಿಗೆ ಐದು ವರ್ಷಗಳಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಭತ್ತದ ಪರಿಮಾಣವೆಷ್ಟೆಂಬುದರ ಮೇಲೆ ಈ ವರ್ಷ ಸಲ್ಲಿಸಬೇಕಾದ ಮೊತ್ತವನ್ನು ಗೊತ್ತುಪಡಿಸಲಾಗುವುದೆಂದು ಸಾಮಾನ್ಯವಾಗಿ ನಂಬಲಾಗಿತ್ತು ಆದರೆ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟು ಮತ್ತು ಸಲ್ಲಿಸಲಾದ ಒಟ್ಟು ಮೊತ್ತದ ಶೇಕಡ ೧೦ ರಷ್ಟನ್ನು ಜಮೀನುದಾರನಿಗೆ ದಿಟಲಾಗುತ್ತದೆ ಆದರೆ ಈ ರೀತಿ ಶೇಕಡ ೧೦ ರಷ್ಟನ್ನು ಬಿಟ್ಟರೂ ಹಿಂದಿನ ವರ್ಷಗಳಲ್ಲಿ ಉಳಿಯುತ್ತಿದ್ದುದಕ್ಕಿಂತ ಬಹಳ ಕಡಿಮೆಯಾಗುತ್ತದೆ ಉದಾಹರಣೆಗಾಗಿ ಒಂದು ತಾಲ್ಲೂಕು ಒಂದು ಲಕ್ಷ ಪಲ್ಲ ಸಂಗ್ರಹಿಸಬೇಕೆಂದು ನಿರ್ಧಾರ ಮಾಡಿಕೊಂಡಿದ್ದು ಶೇಕಡ ೩೦ರಷ್ಟು ಸಂಗ್ರಹಿಸಿತೆಂದು ಇಟ್ಟುಕೊಳ್ಳೋಣ ಅದೇ ತಾಲ್ಲೂಕು ಈಗ ಸರ್ಕಾರದಿಂದ ಬೆಳೆ ಕೆಟ್ಟ ಪ್ರದೇಶವೆಂದು ಸಾರಲ್ಪಟ್ಟಿದ್ದರೂ ಶೇಕಡ ೭೭ ಮತ್ತು ೭ಅರಷ್ಟನ್ನು ಸಂಗ್ರಹಿಸಬೇಕಾಗುತ್ತದೆ ಇದು ಸರ್ಕಾರದವರು ರೈತರಿಂದ ಕೊಡಿ ರೈತರಿಗೆ ತೋರಿದ ಕೃಪೆ ಈ ಬಾಧೆಯಿಂದಲೂ ಸಾಕಷ್ಟು ಮಳೆ ಬಂದೇ ಇಲ್ಲ

ಸರ್ಕಾರಕ್ಕೆ ಸಲ್ಲಿಸಬೇಕಾದ ಮೊತ್ತವೆಷ್ಟೆಂಬುದು ಪ್ರಕಟವಾದ ೧ ಮ ತಿಂಗಳೊಳಗಾಗಿ ಪುನರ್ಪರಿಶೀಲನೆಗೆ ಸಂಬಂಧಪಟ್ಟವರು ಮುತ್ತಸಬೇಕು ಇಲ್ಲವಾದರೆ ಇದರಿಂದ "ನೊಂದವರು" ಯಾರು ಎಂಬುದು ಹೇಗೆ ಪತ್ತೆಯಾಗುತ್ತದೆ? ಸಲ್ಲಿಸಬೇಕಾದ ಆಹಾರದ ಮೊತ್ತವು ಪ್ರಕಟವಾದ ಒಂದು ತಿಂಗಳ ಮೇಲೆ ಸುಗ್ಗಿ ಮುಗಿದರೆ ಅಗ ಅಂಥ ರೈತನು ಅಥವಾ ಜಮೀನುದಾರನು " ನೊಂದವನಾಗಿದ್ದರೂ" ಸಹ ಪುನರ್ಪರಿಶೀಲನೆಗೆ ಅರ್ಜಿ ಹಾಕಲು ಸಾಧ್ಯವಿಲ್ಲ ಅದ್ದರಿಂದ ಇಂಥ ಷರತ್ತುಗಳೇ ಉಪವಿಧಿಯಂತೆ ತೊಂದರೆಗೆ ಸಿಕ್ಕಿಕೊಳ್ಳಬೇಕಾಗುತ್ತದೆ

ಕ್ಲಾಜ್ ೮ (೩) ರ ಮೇರೆಗೆ ಲೆಕ್ಕಹಾಕಿದ ಇರುವ ಭತ್ತದ ಮೊತ್ತವನ್ನು ಸಲ್ಲಿಸಬೇಕಾಗುವುದು ಮತ್ತು ಪುನರ್ಪರಿಶೀಲನೆಯ ಅರ್ಜಿಯ ಜೊತೆಗೆ ರಸೀತಿಯನ್ನು ಕಳಿಸಬೇಕು ಇಲ್ಲವಾದರೆ ವಿಚಾರಣೆ ಸಾಧ್ಯವಿಲ್ಲ ಸರ್ಕಾರೀ ಅಜ್ಞೆಯು ಜಾರಿಗೆ ಬಂದ ಎರಡು ತಿಂಗಳೊಳಗಾಗಿ ಸುಗ್ಗಿಯಾಗಿದ್ದರೆ ಅಷ್ಟರೊಳಗಾಗಿಯೇ ಪುನರ್ಪರಿಶೀಲನೆಗೆ ಅರ್ಜಿ ಹಾಕಬೇಕೆಂದು ನಿಗದಿಯಾಗಿರುವಾಗ ಲೆಕ್ಕ ಹಾಕಿರುವ ಭತ್ತವನ್ನು ಗೊತ್ತುಮಾಡುವುದಾಗಲೀ ಅಥವಾ ಸಲ್ಲಿಸುವುದಾಗಲೀ ಹೇಗೆ ಸಾಧ್ಯ? ಇದು ಸೂಕ್ಷ್ಮವಾಗಿಲ್ಲ

೮ (೪) ಕ್ಲಾಜ್ ಕೀರ ವಿಚಿತ್ರವೂ ಕಷ್ಟವನ್ನುಂಟು ಮಾಡುವಂಥದೂ ಆಗಿದೆ ರೈತನು ತನ್ನ ಉಪಯೋಗಕ್ಕಾಗಿ ಇಟ್ಟುಕೊಂಡಿದ್ದ ... ಸರ ... ಲೆಕ್ಕ ... ಇದರ ... ಕೊಳ್ಳಲು ... ಕಾಣುವದೆ

... ಜಿಲ್ಲೆಯಲ್ಲಿ ಒಂದು ... ಭತ್ತ ... ಭತ್ತವನ್ನು ... ಇದು ಅಜ್ಞೆಯ ... ದಿಂದ

ಗ ಸಕ್ಕರೆಯ ಸಂಬಂಧವಾಗಿ ಭತ್ತವನ್ನು

೧೨೦ ವರ್ಷದವನ ಮರಣ

ಬರೇಲಿಯ ಪಂಡಿತ್ ಕಾಳೀಚರಣ್ ಎಂಬ ೧೩೦ ವರ್ಷ ವಯಸ್ಸಿನ ಬ್ರಾಹ್ಮಣನು ಕಳೆದ ೮ ನೇ ತಾ|| ಮೃತಪಟ್ಟನು ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ಅನೇಕ ವರ್ಷ ಅವನು ನೌಕರನಾಗಿದನೆಂದು ಹೇಳಲಾಗಿದೆ ೧೮೫೭ರ ಸಿಪಾಯಿ ದಂಗೆಯನ್ನು ಅವನು ಚೆನ್ನಾಗಿ ವಿವರಿಸುತ್ತಿದ್ದನು

ರಮಣಿ ಸಂಗೀತ ವಿದ್ಯಾಲಯ

ರಾಜಧಾನಿಯ ಚಾಮರಾಜ ಅಗ್ರಹಾರದಲ್ಲಿ ೧೦೬೪ ೧ ನೇ ನಂಬರು ಮನೆಯಲ್ಲಿ ಮೊನ್ನೆ ರಮಣಿ ಸಂಗೀತ ವಿದ್ಯಾಲಯದ ಪ್ರಾರಂಭವಾಯಿತು ನಿಲಯದ ವ್ಯವಸ್ಥಾಪಕರಾದ ಸಂಗೀತ ವಿದ್ವಾನ್ ಶ್ರೀ ಎ ಕೃಷ್ಣಮೂರ್ತಿಯವರ ಶಿಷ್ಯೆಯರಾದ ಕುಮಾರಿ ಲೀಲಾವತಿ ಮತ್ತು ನಾಗಮಣಿಯವರುಗಳಿಂದ ಸುಶ್ರಾವ್ಯವಾದ ಸಂಗೀತವು ನಡೆಯಿತು ನಿಲಯದಲ್ಲಿ ಸಂಗೀತ ಶಿಕ್ಷಣವು ... ಕಾಲ ಭಾಗದಲ್ಲಿ ದೊರೆಕೊಡಲಾಗುವುದು ಸಾರ್ವಜನಿಕರು ಇದರ ಪ್ರಯೋಜನವನ್ನು ಹೊಂದುವರೆಂದು ನಂಬಲಾಗಿದೆ

ಇಲವಾಲದಲ್ಲಿ ವಿದ್ಯುದ್ದೀಪೋತ್ಸವ

ರಾಜಧಾನಿಗೆ ಸಮೀಪದ ಇಲವಾಲದಲ್ಲಿ ಮೊನ್ನೆ ಸಂಜೆ ಜಿಲ್ಲಾ ... ಅಧ್ಯಕ್ಷ ... ದೀಪೋತ್ಸವವನ್ನು ನೆರವೇರಿಸಿದರು ... ಅಧಿಕಾರಿಗಳು ... ರು

ಮಿಶ್ರಿಮಲ್ಲಿ ... ಸಾರಿಸಲಿಕ್ಕಾಗಿ ... ಮೊತ್ತ ... ಅಜ್ಞೆಯಲ್ಲಿ ... ಅಂಶವೆಂದು ... ಬೇಕು

... ಆ ಅಜ್ಞೆ ... ರೈತ ... ಕೊಡಿದ್ದು ಮತ್ತು ರೈತ ... ಸುಗ್ಗಿಯ ... ಅಜ್ಞೆ ... ಸಂಗ್ರಹಿಸಬೇ... ಈ ... ಮಾಡುವುದು ...

ಪರ್ಷಿಯಾದ ಷಹಾರವರ ಮೇಲೆ ಟೊಮ್ಯಾಟೊ

ಪರ್ಷಿಯದ ಷಹಾರವರು ರಾಣಿಯವರ ಸಮೇತ ಲಬನಾನ್ ನಗರಕ್ಕೆ ಬುಧವಾರ ಭೇಟಿಯಿತ್ತಾಗ ಅಲ್ಲಿನ ಕಮ್ಯೂನಿಸ್ಟ್ ಪ್ರದರ್ಶನಕಾರರು ಅವರುಗಳ ಮೇಲೆ ಟೊಮ್ಯಾಟೊ ಹಣ್ಣುಗಳನ್ನು ಎಸೆದರೆಂದು ವರದಿಯಾಗಿದೆ ಷಹಾರವರ ರಕ್ಷಣೆಗೆ ಅತ್ಯಂತ ಅಗಾಧವಾದ ವ್ಯವಸ್ಥೆ ಮಾಡಲಾಗಿತ್ತು ಷಹಾರವರ ಪತನವಾಗಲಿ, ಪಹರಿವಂಶವು ಉರುಳಲಿ ಎಂಬುದಾಗಿ ಕಮ್ಯೂನಿಸ್ಟರು ಕೂಗಿದರು

ಒಬ್ಬನ ಹಲ್ಲು ಮತ್ತೊಬ್ಬನಿಗೆ ಜೋಡಣೆ

ವಿಯನ್ನಾ ನಗರದಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರೊಬ್ಬರು ಕಳೆದ ಬುಧವಾರ ಅಲ್ಲಿನದಂತ ವೈದ್ಯರ ಸಂಘದಲ್ಲಿ ಒಬ್ಬನ ಹಲ್ಲನ್ನು ಕಿತ್ತು ಅದನ್ನು ಮತ್ತೊಬ್ಬನಿಗೆ ಯಶಸ್ವಿಯಾಗಿ ಜೋಡಿಸಿದರು ೩ ವರ್ಷಗಳ ಕೆಳಗೆ ಕೆನ್ನೆ ಊದಿದ್ದ ಒಬ್ಬ ೧೧ ವರ್ಷದ ಬಾಲಕನ ದವಡೆ ಹಲ್ಲನ್ನು ತೆಗೆದು ಕಿತ್ತು ೩೦ ವರ್ಷದ ಮಹಿಳೆಯೊಬ್ಬಳಿಗೆ ಜೋಡಿಸಿದ್ದರಿಂದು ಹೇಳಲಾಗಿದೆ ... ಜೋಡಿಸಿದ ಹಲ್ಲು ... ಗಟ್ಟಿ ... ಗಿದೆ ... ಗಿದೆ

ಎಲ್ಲಾ ಬಗೆಯ

ಹೋಮಿಯೋಪತಿಕ್ ಔಷಧಿಗಳೂ

... ದ ಬೆಲೆಗೆ

... ಗುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

107 ಸಯ್ಯಾಜೀರಾವ್ ರೋಡ್

ಮೈಸೂರು

Edited, Printed and Published by A R Nagarajan at Sadhvi Press D Subbaiah Road Mysore

ಮದ್ರಾಸಿನಲ್ಲಿ ಶಾಂತಿ ಮತ್ತು ಕಮ್ಯೂನಿಸ್ಟರಿಲ್ಲದ ಪಕ್ಷ

ಕಾಂಗ್ರೆಸ್ಸಿನವರೂ, ಕಮ್ಯೂನಿಸ್ಟರೂ ಇಲ್ಲದ ಹೊಸ " ರಾ ಷ್ಟ್ರೀ ಯ ಪ್ರಜಾ ಪ್ರಭುತ್ವದ ಪಕ್ಷ"ವೊಂದನ್ನು ಮದ್ರಾಸಿನ ಶಾಸನ ಸಭಾ ಸದಸ್ಯರ ಪೈಕಿ ಹಲವರು ಏರ್ಪಡಿಸಿರುತ್ತಾರೆ ಪ್ರಜಾ ಕೃಷಿಕಾರ್ ಮತ್ತು ಹಲವು ಸ್ವತಂತ್ರ ಪಕ್ಷಗಳ ಸದಸ್ಯರು ಈ ಹೊಸ ಪಕ್ಷ ಸ್ಥಾಪನೆ ಮಾಡಿರುತ್ತಾರೆ ಅದರಲ್ಲಿ ... ಜನ ಸದಸ್ಯರಿರುವರು ತಮಿಳು ನಾಡ ಪ್ರಮುಚೀ...ಗಳ ಪಕ್ಷದವರು ಸಂಯುಕ್ತ ಸಂಗಡದಿಂದ ಬೇರ್ಪಟ್ಟು, ತಾವೇ ಪ್ರತ್ಯೇಕ ಸಂಗಡವಾಗಿರಲು ನಿರ್ಧರಿಸಿದ್ದಾರೆ

ಅಂತರ ಕರ್ನಾಟಕ ಸಂಘಗಳ ಚರ್ಚಾ ಸ್ಪರ್ಧೆ

ನಂಜನಗೂಡಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಕಳೆದ ೭ನೇ ತಾ|| ಅಲ್ಲಿನ ಪ್ರೌಢಶಾಲೆಯಲ್ಲಿ ಅಖಿಲ ಕರ್ನಾಟಕ ಅಂತರ ಕರ್ನಾಟಕ ಸಂಘಗಳ ಚರ್ಚಾ ಸ್ಪರ್ಧೆಯು, ಮೈಸೂರಿನ ಸಬ್ ಡಿವಿಜನ್ ನ್ಯಾಯಾಧೀಶರಾದ ಶ್ರೀ ಟಿ ಗುರುನಂಜಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಟಿ ಎಲ್ ಶ್ರೀಕಂಠಯ್ಯನವರು ಚರ್ಚೆಗಾಗಿ "ವಿದ್ಯಾವಂತ ಸ್ತ್ರೀಯರಿಗೆ ಉದ್ಯೋಗ" ವೆಂಬ ವಿಷಯವನ್ನು ಕಳುಹಿಸಿದ್ದರು ಶ್ರೀ ಎ ಎ ಪಂಡಿತರ ಸಹಾಯದಿಂದ ನಾರಿಸಿ ... ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಅಫ್ ಇಂಜನಿಯರಿಂಗ್ ಕರ್ನಾಟಕ ಸಂಘಕ್ಕೆ ಕೊಡಲಾಯಿತು ಹಲವು ಕರ್ನಾಟಕ ಸಂಘಗಳ ಪ್ರತಿನಿಧಿಗಳಿಗೂ ಬಹುಮಾನಗಳನ್ನು ಕೊಡಲಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಮಿಶ್ರ ನಾದ ಸ್ವರ ... ೧ ೩೦ ಮುಖ್ಯ ವಿಚಾರ ... ಮಧ್ಯಾಹ್ನ ... ಸಂಜೆ ... ಲಕ್ಷ್ಮಮ್ಮ, ಸಂಗೀತ ... ಶ್ರೀ ಚಂದ್ರಶೇಖರಯ್ಯ ... ಸಂಗೀತ ... ಮತ್ತು ... ಸಂಗೀತ ... ಸಂಗೀತ ... ಸುಬ್ಬಲಕ್ಷ್ಮಿ ... ಕನ್ನಡದಲ್ಲಿ ...

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ	ರೂ
ಪಲ್ಲಕ್ಕೆ	ರೂ ...ದ	ರೂ ...
ನೆಲಗಡಲೆ	೯ ೩ ೦	೩ ...
ಎಳ್ಳು	೩೭ ೪ ೦	
ಹರಳು ಬೀಜ	೪೦ ...	೪೭ ...
ಹುರಳಿ	೪ ...	...
ತೊಗರಿ	... ೦	...
ಉದ್ದು	...	
ಹುಲಿಸ್ಯಂಡೆ	೪೦ ೦ ೦	...
ಹುಚ್ಚೆಳ್ಳು	...	...
ಅವರೆ	...	...
ಕೊಬ್ಬರಿ	... ೦	
ಕೆ ಅಚ್ಚನಕ್ಕಾಯಿ		
...	...	
ಬೆಲ್ಲ	...	
...	...	
ಕೆಂಪುನಿಮ್ಮುರು ...	...	

ನಾಯಿ ಕೆಮ್ಮಿಗೆ ಔಷಧಿ

(WHOOPING COUGH REMEDY)

ಆರ್. ಎಸ್ ಪಂಡಿತರು

ಶಾಮುಗೋಪಾಲ ವೈದ್ಯಶಾಲೆ

ದಿವಾನರ ರಸ್ತೆ, ಮೈಸೂರು

AT YOUR SERVICE AGAIN

Paddy & Rice Transporters Please Remember the Quickest Safe & Easy Transport

MYSORE TRANSIT SERVICE (Regd.)

THIRTHA & COMPANY, (Phone 537) Ramavilas Road, Mysore

ಉಡ್ ಲ್ಯಾಂಡ್ಸ್ ಟಾಕೀಸಿನಲ್ಲಿ

11-12-1952 ರಿಂದ ಅನೋಘ ಪ್ರಾರಂಭ

ಎಲ್ಲಾ ವೃತ್ತಪತ್ರಿಕೆಗಳೂ ಮುಕ್ತಕಂಠದಿಂದ ಹೊಗಳಿದ ಪರಿಶುದ್ಧ ಸಂಗೀತಮಯ ಚಿತ್ರ!

ಅಶೋಕ್ ಕುಮಾರ್ ಮತ್ತು ನಳಿನಿ ಜಯವಂತ್ ನಟಿಸಿರುವ

ಮುನಿಸಿ ಪ್ರೊಡಕ್ಷನ್ಸ್‌ರವರ

ಹಿಂದಿ ಚಿತ್ರ

ಕಾಫಿಲ

— ಸಹಾಯ ಕ ನಟವರ್ಗ —

ದಾರ್ಜ ... ...

ಪ್ರತಿಯೊಬ್ಬರೂ ನೋಡಬೇಕಾದ ಚಿತ್ರ

— Release Through —

B L. A. SETTY MYSORE

ನೋಂ. ನಂ. 794 WEEKLY EDITION ಬಿಡಿಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೬] ಭಾನುವಾರ ೧೪-೦೩-೧೯೫೩ [ಸಂಚಿಕೆ ೧೬

ಹೈದ್ರಾಬಾದ್ ಸರ್ಕಾರದ - ಮೇಲೆ ಅವಿಶ್ವಾಸ -

ಸಂಸ್ಥಾನದ ರೇಷ್ಮೆ ಕೈಗಾರಿಕೆಗೆ ಸಹಾಯ

ಬೆಂಗಳೂರು ೧೪

... ತದ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಕೇಂದ್ರ ಸರ... ರು ಸ್ಥಾಪಿಸಿದ ರೇಷ್ಮೆ ಸಮಿತಿ ... ದರು ಮೈಸೂರು ಸಂಸ್ಥಾನಕ್ಕೆ ಈ ... ಸಹಾಯ ದ್ರವ್ಯವನ್ನು ಕೊಟ್ಟಿದ್ದಾರೆ —

೫೧-೫೨ರಲ್ಲಿ ಕಳೆದ ವರ್ಷದ ಗಿಡ ... ಯೋಜನೆಗಾಗಿ ೩೫,೪೦೦ ರೂ ಮತ್ತು ೫೨-೫೩ಕ್ಕೆ ೧೦೦೦೦, ರೇಷ್ಮೆ ... ಗಳ ಪುಷ್ಟಿ ಆಹಾರಕ್ಕಾಗಿ ೫೧-೫೨ ... ಲಿಗೆ ೪೦,೫೦೦ ರೂ ಮತ್ತು ೫೨-೫೩ಕ್ಕೆ ೧೬,೦೦೦ ರೂ ಮೊಟ್ಟೆಗಳ ... ಗಳನ್ನು ನಡೆಸಲು ೫೧-೫೨ ... ೫೦೦೦ ರೂ, ೫೨-೫೩ರಲ್ಲಿ ಅಂ... ಗಳನ್ನು ಶೇಖರಿಸಲು ೬೬೦೦ ರೂ ಜವಾಸಿನಿಂದ ಹತ್ತಿರ ನೇಕಾರ ... ನ್ನು ನಡೆಸಲು ೫೨-೫೩ಕ್ಕೆ ೩,೦೦೦ ... ಸಂಶೋಧನಾ ಶಾಲೆಯ ... ಯೋಜನೆಗಾಗಿ ೪,೬೦೦೦ ರೂ, ೫೨-೫೩ ... ನಲ್ಲಿ ರೇಷ್ಮೆ ಕೈಗಾರಿಕೆ ಮ... ದ ಶೋಧನೆಗಳನ್ನು ಪರಿಶೀಲಿಸಲು ರೂ

ಗಡಿನಾಡಿನಲ್ಲಿ ಸ್ತ್ರೀ ಪೊಲೀಸು ದಳ

... ಸ್ಥಾನದ ಗಡಿನಾಡಿನಲ್ಲಿ ಸ್ತ್ರೀ ... ಪೊಲೀಸು ದಳವೊಂದನ್ನು ಏರ್ಪ... ಗುವುದೆಂದು ವರದಿಯಾಗಿದೆ ... ದಲ್ಲಿ ಒಬ್ಬ ಮಹಿಳಾ ಇನ್ಸ್‌ಪೆಕ್ಟರ್, ... ಮಹಿಳಾ ಹೆಡ್ ಕಾನ್ಸ್‌ಟೇಬಲ್ ... ೪ ಮಂದಿ ಸ್ತ್ರೀ ಪೊಲೀಸರನ್ನು ... ಸಲಾಗುವುದು

ಜಂಗಮ ಸಮಾರಾಧನೆ

... ನೆ ಶ್ರೀ ಜಡದಕಟ್ಟೆ ಮಠದಲ್ಲಿ ... ದ ಶ್ರೀ ಸದಾಶಿವ ಶಿವಾಚಾರ್ಯಸ್ವಾಮಿಗಳವರು ಲಿಂಗೈಕ್ಯರಾದ ನಾಲ್ಕನೇ ... ದ ಆರಾಧನೆಯನ್ನು ನಡೆಸಲಾಯಿ... ಪಟ್ಟಾಧ್ಯಕ್ಷ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳವರು ಸಾವಿರಾರು ಜನರಿಗೆ ಸಂತರ್ಪಣೆಯನ್ನು ನಡೆಸಿದರು

ಸಂಗೀತ ಕಲಾಭಿವರ್ಧಿನಿ ಸಭೆಯ ಆರಂಭ

... ಧಾನಿಯ ಸಂಗೀತ ಕಲಾಭಿವ... ಸಭೆಯ ಆರಂಭೋತ್ಸವವನ್ನು ... ಗಂಟೆಗೆ ನೂರಡಿ ರಸ್ತೆ ... ನ ಸಹಕಾರ ಭವನದಲ್ಲಿ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ... ಎಲ್. ಮಂಜುನಾಥ್‌ರವರು ... ಸಂಗೀತಶಾಸ್ತ್ರ ವಿ... ಶ್ರೀ ವಾಸುದೇವಾಚಾರ್ಯರಿಂದ ... ಭಾಷಣವೂ, ಶ್ರೀಮತಿ ಎಲ್ ... ಮತ್ತು ಪಾರ್ಟಿಯವರಿಂದ ... ನಡೆಯುವುವು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಗೆ ಎಸ್ ಚನ್ನಯ್ಯನವರ ಹೆಸರು

... ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ... ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಹೆಸರ... ಕೆ ಎಸ್ ಸೂರ್ಯನಾರಾ... ಟಿ ಸಿ ಬೋರಯ್ಯ ಹೆ... ಯ್ಯ, ಡಿ ಸೂರ್ಯನಾರಾಯಣ ... ರವರು ಸೂಚಿಸಿರುತ್ತಾರೆ

ಹೈದರಾಬಾದ್ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ

ಹೈದರಾಬಾದಿನ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿ ಅವಿಶ್ವಾಸ ನಿರ್ಣಯಗಳನ್ನು ತರಲು ಅಲ್ಲಿನ ಶಾಸನ ಸಭೆಯ ವಿರೋಧ ಪಂಗಡವಾದ ಸಂಯುಕ್ತ ಪ್ರಜಾ ಪಕ್ಷದ ೪ ಜನ ಸದಸ್ಯರಿಗೆ ಸಭೆಯು ನೆನ್ನೆ ಅನುಮತಿ ಕೊಟ್ಟಿತು ನಿರ್ಣಯಗಳನ್ನು ಒಟ್ಟಾಗಿ ಇದೇ ೧೭ ಮತ್ತು ೧೮ ನೇ ತಾ|| ಚರ್ಚಿಸಲಾಗುವುದು

ಹಡಗುಗಳ ಢಿಕ್ಕಿ

ಸ್ಯಾನ್‌ಫ್ರಾನ್ಸಿಸ್ಕೋವಿನ ರೇವು ಬಳಿ ಮೊನ್ನೆ ಪನಾಮಾ ರ್‍ಯಾಂಚರ್ ಎಂಬ ... ಟನ್ ತೂಕದ ಹಡಗಿನೊಡನೆ ... ಟನ್ನಿನ ಫರ್ನ್ ಸ್ಟ್ರೀಂ ಎಂಬ ನಾರ್ವೆಯ ಹಡಗು ಢಿಕ್ಕಿ ಹೊಡೆದು ಮುಳುಗಿತೆಂದು ವರದಿಯಾಗಿದೆ ಅದರಲ್ಲಿದ್ದ ೧೩ ಮಂದಿ ಪ್ರಯಾಣಿಕರೂ, ೩೦ ಜನ ಸಿಬ್ಬಂದಿಯವರೂ ಪಾರಾಗಿರುವರು

'ರಾಷ್ಟ್ರೀಯ' ಪ್ರಯೋಗಕ್ಕೆ ಅನುಮತಿ ಬೇಕು

ಕೇಂದ್ರ ಸರ್ಕಾರದ ಅನುಮತಿ ಪಡೆಯದೆ ಸಂಸ್ಥಾನ ಸರ್ಕಾರಗಳವರು ಯಾವ ಸಂಸ್ಥೆಗಳಿಗೂ "ನ್ಯಾಷನಲ್" ಎಂಬ ಪದವನ್ನು ಸೇರಿಸಬಾರದೆಂದು ಕೇಂದ್ರ ಸರ್ಕಾರದವರು ಎಲ್ಲ ಸಂಸ್ಥಾನಗಳಿಗೂ ಸೂಚನೆಯಿತ್ತಿರುವರೆಂದು ತಿಳಿದು ಬಂದಿದೆ

ಜೈನ ಗೆಳೆಯರ ಕೂಟ

ರಾಜಧಾನಿಯ ಎಂ ಎಲ್ ಜೈನ ವಿದ್ಯಾರ್ಥಿ ನಿಲಯದ ಗೆಳೆಯರ ಕೂಟದಲ್ಲಿ ಈ ಸಂಜೆ ೭ ಘಂಟೆಗೆ ಮಹಾರಾಜಾ ಕಾಲೇಜು ಅಧ್ಯಾಪಕರಾದ ಶ್ರೀ ಎಸ್. ವಿ ಪರಮೇಶ್ವರ ಭಟ್ಟರು ಸಂಸ್ಕೃತವಿಯ ವಿಕ್ರಮಾರ್ಜುನ ವಿಜಯ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಅ|| ವಿ|| ನ್ಯಾಯತೀರ್ಥ ಎಸ್ ಬಿ ಜಿನಚಂದ್ರ ಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು

೧೯೫೧ರಲ್ಲಿ ಸಂಸ್ಥಾನದಲ್ಲಿ ಜನನ ಸಂಖ್ಯೆಯೇ ಹೆಚ್ಚು

೧೯೫೧ನೇ ಇಸವಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ೧,೩೮,೦೩೮ ಜನನಗಳಾದುವೆಂದೂ, ೬೭,೦೧೩ ಮರಣಗಳು ಸಂಭವಿಸಿದುದಾಗಿಯೂ ವರದಿಯಾಗಿದೆ.

ಫ್ರೆಂಚ್ ಸರ್ಕಾರದ ಪರಾಜಯ

... ವಿಧವಾದ ಸುಧಾರಣೆ ... ರದ ಬಗ್ಗೆ ಫ್ರೆಂಚ್ ಸರ್ಕಾರವು ತ... ಪುನರ್ವಿಮರ್ಶಿತ ಸೂಚನೆಗಳನ್ನು ... ನ ಪಾರ್ಲಿಮೆಂಟು ೩೩೭-೨೭೨ ... ಗಳಿಂದ ತಿರಸ್ಕರಿಸಿರುತ್ತದೆ

ಗುಡ್ಡಗಾಡಿನವರ ಮೇಲೆ ಬಾಂಬು ಧಾಳಿ

ಗಡಿನಾಡು ಪ್ರದೇಶದ ಗುಡ್ಡಗಾಡಿನ ಜನರ ದಾಂಧಲೆಯನ್ನು ವಿಮಾನ ಧಾಳಿ ... ನಡೆಸಿ ಅಡಗಿಸಲಾಯಿತೆಂದು ... ಪ್ರಕಟಣೆಯೊಂದು ತಿಳಿಸುತ್ತದೆ ೪ ಸಾವಿರ ಗುಡ್ಡಗಾಡಿನ ಜನರು ಖೈಬರ್ ಮತ್ತು ಕೊಹತ್ ... ಲ್ಲಿ ಶೇಖರಣೆಯಾಗಿದ್ದರೆಂದೂ ಅವರ ಮೇಲೆ ಬಾಂಬು ಹಾಕಿದ ಪರಿಣಾಮವಾಗಿ ೪೦ ಸಾವು ನೋವುಗಳಾದವೆಂದೂ ಹೇಳಲಾಗಿದೆ ಕಾಬೂಲಿನಿಂದ ಬಂದ ಸುದ್ದಿ ಪ್ರಕಾರ ೫ ಜನರು ಮಡಿದಿರುತ್ತಾರೆ

ಬಂಗಾರಪೇಟೆ ಚುನಾವಣೆಗೆ ಉಮೇದುವಾರರು

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕು ಕ್ಷೇತ್ರದಿಂದ ಮೈಸೂರಿನ ಕಿರಿಯ ಶಾಸನ ಸಭೆಗೆ ಶ್ರೀಗಳಾದ ಬಿ ನಾಗಭೂಷಣಗೌಡ, ಆರ್ ಎ ಬೈರಾರೆಡ್ಡಿ, ೩ ನಾರಾಯಣಗೌಡ, ಆರ್ ಕೆ ಪ್ರಸಾದ್, ಕಾ ವಿ ನಾರಾಯಣರೆಡ್ಡಿ, ಮತ್ತು ಆರ್ ವಿ ಬನಶಿಲಾಲ್‌ರವರು ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿರುತ್ತಾರೆ

ವರಲಕ್ಷ್ಮಿ ಸಂಗೀತ ಮಂದಿರ

ರಾಜಧಾನಿಯ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ನೆನ್ನೆ ಸಂಜೆ ಚೀನೀ ಸಂಗೀತದ ರೆಕಾರ್ಡುಗಳನ್ನು ಇಂಡಿಯಾ-ಚೀನಾ ಸಂಘದವರು ಏರ್ಪಡಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಡಾ|| ಶ್ರೀಕಂಠಶಾಸ್ತ್ರಿಯವರು ಚೀನೀ ಸಂಗೀತವು ಬಹುಮಟ್ಟಿಗೆ ಭಾರತದ ಸಂಗೀತವನ್ನು ಹೋಲುವುದೆಂದೂ, ಎರಡು ರಾಷ್ಟ್ರಗಳಿಗೂ ಸಾಂಸ್ಕೃತಿಕ ಸಂಬಂಧವು ಸಾವಿರಾರು ವರ್ಷಗಳಿಂದ ಬೆಳೆದುಬರುತ್ತಿದೆಯೆಂದೂ ತಿಳಿಸಿದರು

ಎಲಿಜಬೆತ್ತರು ಆರು ರಾಷ್ಟ್ರಗಳ ರಾಣಿ

ಬ್ರಿಟನ್ನಿನ ರಾಣಿ ಎರಡನೇ ಎಲಿಜಬೆತ್ತರ ಬಿರುದಾವಳಿ ಬಗ್ಗೆ ಕಾಮನ್‌ವೆಲ್ತ್ ಪ್ರಧಾನಿಗಳು ಒಪ್ಪಂದ ಮಾಡಿಕೊಂಡಿರುವ ಪ್ರಕಾರ ಕಾಮನ್‌ವೆಲ್ತಿನ ಆರು ರಾಜ್ಯಗಳಿಗೆ ಅವರು ರಾಣಿಯಾಗಿರುವರು ಭಾರತವು ಆಕೆಯನ್ನು ರಾಣಿಯೆಂದು ಕರೆಯದೆ, ಕಾಮನ್‌ವೆಲ್ತಿನ ಅಧಿಪತಿಯೆಂದು ಕರೆಯುತ್ತದೆ ಪಾಕಿಸ್ತಾನ ಮತ್ತು ಸಿಂಹಳಗಳು ಆಕೆಯನ್ನು ರಾಣಿಯೆಂದು ಒಪ್ಪಿದರೂ ಬಿರುದಿನಲ್ಲಿ ಸ್ವಲ್ಪ ಬದಲಾವಣೆ ಮಾಡಿವೆ

ಹಿಂದುಳಿದವರ ಹಿತಸಾಧನೆಗಾಗಿ ಸಮಿತಿ ಸ್ಥಾಪನೆ

ಹಿಂದುಳಿದ ನಿಮ್ನ ವರ್ಗದ ಮತ್ತು ಕಾಡು ಜನರ ಪುರೋಭಿವೃದ್ಧಿ ಬಗ್ಗೆ ನೆನ್ನೆ ಭಾರತದ ಲೋಕಸಭೆಯಲ್ಲಿ ಚರ್ಚೆ ನಡೆದಾಗ, ರಾಜ್ಯಾಂಗದ ೩೪೦ ನೇ ನಿಬಂಧನೆ ಪ್ರಕಾರ ಹಿಂದುಳಿದ ವರ್ಗಗಳ ಕಮಿಷನ್ ಒಂದನ್ನು ಬರುವ ವಾರ ನೇಮಿಸಲಾಗುವುದೆಂದು ಗೃಹ ಸಚಿವ ಶ್ರೀ ಕಟ್ಜುರವರು ಸೂಚಿಸಿದರು ಮೇಲ್ಕಂಡ ಕೋಮಿನವರ ಸಾಮಾಜಿಕ ಮತ್ತು ವಿದ್ಯಾಭ್ಯಾಸ ಮಟ್ಟವನ್ನು ಹೆಚ್ಚಿಸಲು ಸಮಿತಿಯವರು ಪರೋಕ್ಷವಾಗಿ ಎಲ್ಲ ವಿಧವಾದ ಕಾರ್ಯಗಳನ್ನೂ ಕೈಗೊಳ್ಳಬಹುದೆಂದು ನ್ಯಾಯಾಂಗ ಉಪಮಂತ್ರಿ ಬಿ ಎ ದಾತಾರ್‌ರವರು ತಿಳಿಸಿದರು ಹಿಂದೂ ಸಮಾಜಕ್ಕೆ ಕಳಂಕಪ್ರಾಯವಾಗಿರುವ ಅಸ್ಪೃಶ್ಯತೆಯು ಸಾವಿರಾರು ವರ್ಷಗಳಿಂದ ನಡೆದು ಬಂದು, ಅದನ್ನು ಇನ್ನು ಹತ್ತು ವರ್ಷಗಳಲ್ಲಿ ತೊಡೆದುಹಾಕಿ, ವರ್ಗ ಮತ್ತು ವರ್ಣ ರಹಿತವಾದ ಸಮಾಜವನ್ನು ನಿರ್ಮಿಸಲು ದೇಶವು ಪಣತೊಟ್ಟಿರುವುದೆಂದೂ ಅವರು ಹೇಳಿದರು

೭೦ ಅಡಿ ಎತ್ತರದಿಂದ ಬಿದ್ದ ೩ ವರ್ಷದ ಮಗು ಪಾರು

ಇಟಲಿಯ ಪಿಯೋಡಿ ಎಂಬಲ್ಲಿ ೭೦ ಅಡಿ ಎತ್ತರದ ೩ನೇ ಅಂತಸ್ತಿನ ಕಿಟಕಿಯಿಂದ ಅಕಸ್ಮಾತ್ ಕೆಳಗೆ ಬಿದ್ದ ೩ ವರ್ಷದ ಗಂಡು ಮಗುವು, ಮೊದಲು ವಿದ್ಯುಚ್ಛಕ್ತಿ ತಂತಿಗಳ ಮೇಲೆ ಬಿತ್ತೆಂದೂ ಅನಂತರ ನೆಲಕ್ಕುರುಳಿತೆಂದೂ ಹೇಳಲಾಗಿದೆ ಅವರಿಗೆ ಯಾವ ಗಾಯವೂ ಆಗದೆ, ಅದು ಸುಖವಾಗಿ ತನ್ನ ಮನೆಯನ್ನು ಸೇರಿತೆಂದು ವರದಿಯಾಗಿದೆ

ಹಿಟ್ಲರ ವಿದ್ಯಾರ್ಥಿಗಳ ದಸ್ತಗಿರಿ

ವಿಜಯ ಪತ್ರಿಕೆ ಕಚೇರಿಯ ಮುಂದೆ ನಡೆದ ಪ್ರದರ್ಶನದ ಸಂಬಂಧವಾಗಿ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಾದ ಶ್ರೀಗಳು ಎಂ ಎ ರಾಜಶೇಖರ್, ಕೆ ಸಿ ಮಾಚಯ್ಯ ಮತ್ತು ಜಿ ಎಂ ಪ್ರಕಾಶ್‌ರವರನ್ನು ನೆನ್ನೆ ದೇವರಾಜ ಪೊಲೀಸರು ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ

ಸಂಸ್ಕೃತಿ ಪ್ರಸಾರಕ್ಕೆ ೧೫ ಲಕ್ಷ ರೂ

ಸಂಸ್ಥಾನದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಪ್ರಸಾರಕ್ಕೆ ೧೦ ರಿಂದ ೧೫ ಲಕ್ಷ ರೂಪಾಯಿನ ವರೆಗೆ ವೆಚ್ಚಮಾಡಲಾಗುವುದೆಂದು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿರುತ್ತಾರೆ

ವಾರ ಭವಿಷ್ಯ

ತಾ|| ೧೪-೧೨-೫೨ರಿಂದ ೨೧-೧೨-೫೨ ರ ವರೆಗೆ

ಮೇಷ— ಆರೋಗ್ಯ ಉತ್ತಮ. ವ್ಯಾಪಾರಾದಿಗಳಲ್ಲಿ ಏಳಿಗೆ. ಸಜ್ಜನರ ಸಹವಾಸ. ಹಿತಕ್ಕರವಾದ ವಾರ. ತಾ|| ೧೫, ೧೬ ಅತಿಥಿಗಳ ಹಾವಳಿ, ಅಧಿಕ ಖರ್ಚು.

ವೃಷಭ — ಮಹತ್ವದ ಕಾರ್ಯಕ್ಕೆ ಉತ್ತೇಜನ. ವ್ಯಾಪಾರಾದಿಗಳಲ್ಲಿ ಮೆಚ್ಚುಗೆಯ ಪಾತ್ರ. ಮೇಲಧಿಕಾರಿಗಳ ಪ್ರಶಂಸೆ. ಕೌಲುಕಾರರಿಗೆ ಉತ್ತಮ. ತಾ|| ೧೭, ೧೮ ಖರ್ಚು, ಗೊಂದಲ

ಮಿಥುನ — ಎಚ್ಚರಿಕೆ ಬೇಕು. ಆರೋಗ್ಯ ನೆಟ್ಟಗಿರದು. ಹಣಕಾಸಿನ ಸ್ಥಿತಿ ಅಸಮರ್ಪಕ. ವ್ಯಾಪಾರಾದಿಗಳ ಚಿಂತಾಜನಕ ಘಟನೆ ಅಲಕ್ಷ್ಯ. ತಾ|| ೧೫, ೧೯ ಅಪ್ರಿಯ ವಾರ್ತೆ, ಅಪಘಾತ ಭಯ

ಕರ್ಕ — ಆರೋಗ್ಯ ನೆಟ್ಟಗೆ. ಮಾನಸಿಕ ಕ್ಲೇಶ. ತಪ್ಪು ತಿಳವಳಿಕೆ. ಸ್ತ್ರೀಯರಿಂದ ಅಪಮಾನ. ಖರ್ಚು. ವ್ಯಾಪಾರಾದಿಗಳಲ್ಲಿ ಶತ್ರು ಕಾಟ. ಪ್ರವಾಸ ಕ್ಲೇಶಕರ. ತಾ|| ೧೭,೧೮ ವಿಯೋಗ, ಭಯ

ಸಿಂಹ — ಸಂತೋಷಕರ ಘಟನೆಗಳು. ಆಪ್ತರ ಸಹವಾಸ. ವ್ಯಾಪಾರಾದಿಗಳಲ್ಲಿ ಲಾಭ. ಪ್ರವಾಸ ಉಂಟು. ಆರೋಗ್ಯ ನೆಟ್ಟಗೆ. ಸಾಹಸದ ವಿಚಾರಗಳ ಯೋಚನೆ. ತಾ|| ೧೫, ೧೬ ಪ್ರವಾಸ, ಖರ್ಚು.

ಕನ್ಯಾ — ಆರೋಗ್ಯ ಉತ್ತಮ. ಸುಖಪ್ರವಾಸ. ಮಂಗಳ ಕಾರ್ಯ. ಕೋರ್ಟು ಕಾರ್ಯದ ಪುನರಾರಂಭ. ತಾ|| ೧೬, ೧೭ ಹೆಚ್ಚು ಖರ್ಚು, ಅತಿಥಿ ಆಗಮನ

ತುಲಾ — ನಿರುತ್ಸಾಹಕರ ಘಟನೆ. ಆರೋಗ್ಯ ನೆಟ್ಟಗಿರದು. [illegible] ಬಗ್ಗೆ ತಕರಾರು. ಮಕ್ಕಳಿಗೆ ಕಾಹಿಲೆ. ವ್ಯಾಪಾರಾದಿಗಳಲ್ಲಿ ಚಿಂತೆ. ತಾ|| ೧೭, ೧೮ ಕುಶಲ ವಾರ್ತೆ, ಮಿತ್ರರ ಭೇಟಿ

ವೃಶ್ಚಿಕ — ಆರೋಗ್ಯಕ್ಕೆ ಕೊಂಚ ಕ್ಲೇಶ. ಹಣಕಾಸಿನ ಸ್ಥಿತಿ ಉತ್ತಮ. ವ್ಯಾಪಾರಾದಿಗಳಲ್ಲಿ ಸಹಕಾರ. ನೌಕರಿಯಲ್ಲಿ ಮೇಲಧಿಕಾರಿಗಳ ಪ್ರೀತಿ. ಸುಖ ಪ್ರವಾಸ. ತಾ|| ೧೭,೧೮ ಔತಣ, ಲಾಭ

ಧನು — ಶುಭ ವಾರ್ತೆ. ಪ್ರಕೃತ ಮಹತ್ವದ ವಿಷಯದ ಬಗ್ಗೆ ತೀರ್ಪು. ಸಂತೋಷ [illegible]. ಹಣದ ಲಾಭ. ತಾ|| ೧೫, ೧೬ ಆಪ್ತರ ಆಗಮನ, ಬಡವರಿಗೆ ಸಹಾಯ

ಮಕರ — ಅನುಕೂಲದ ವಾರವಲ್ಲ. ಆರೋಗ್ಯ ಸರಿ ಇಲ್ಲ. ಎತ್ತರದಿಂದ ಬೀಳುವ ಪ್ರಸಂಗ. ಹಣದ ಬಗ್ಗೆ ಕ್ಲೇಶ. ವ್ಯಾಪಾರಾದಿಗಳಲ್ಲಿ ಶತ್ರು ಕಾಟ. ತಾ|| ೧೬, ೧೮ ನೌಕರಿಯಲ್ಲಿ ಹಾನಿ, ಕಲಹ.

ಕುಂಭ — ಕಾರ್ಯದಲ್ಲಿ ವಿಘ್ನ. ಆರೋಗ್ಯ ನೆಟ್ಟಗಿರದು. ಹಣಕಾಸಿನ ಸ್ಥಿತಿ ಕ್ಲೇಶಕರ. ನೌಕರಿಯಲ್ಲಿ ತೊಂದರೆ. ಪ್ರವಾಸದಲ್ಲಿ ಕಂಟಕ. ತಾ|| ೧೭, ೧೮ ಧನಲಾಭ, ಚಿಂತಾ ನಾಶ.

ಮೀನ — ಉತ್ತಮ ಆರೋಗ್ಯ. ಆಕಸ್ಮಿಕ ಖರ್ಚು. ನೌಕರಿಯಲ್ಲಿ ತೊಂದರೆ. ವ್ಯಾಪಾರಾದಿಗಳಲ್ಲಿ ಶತ್ರುಗಳ ಕಾಟ. ಮಹತ್ವದ ಕಾರ್ಯ ಈಗಲೇ ಮುಗಿಸಿ. ತಾ|| ೧೫, ೧೮ ಮಹತ್ವದ ಪತ್ರ, ಕುಶಲ ವಾರ್ತೆ.

ಕಾರುಗಳ ಆಮದಿಗೆ ರಹದಾರಿ

ಬರುವ ವರ್ಷ ಏಪ್ರಿಲ್ ೧ ರಿಂದ ಭಾರತಕ್ಕೆ ಮೋಟಾರು ಕಾರುಗಳನ್ನು ರಹದಾರಿ ಇಲ್ಲದೆ ಆಮದು ಮಾಡಲು ಅವಕಾಶವೀಯುವುದಿಲ್ಲನೆಂದು ಕೇಂದ್ರ ವಾಣಿಜ್ಯ ಇಲಾಖೆಯವರು ತಿಳಿಸಿರುತ್ತಾರೆ. ಆವರೆಗೆ ಹಂಗಾಮಿಯಾಗಿ ಆಮದಾಗುವ ಕಾರುಗಳಿಗೆ ವಿನಾಯಿತಿ ತೋರಲಾಗುವುದು.

ವಾರ್ಷಿಕ ಸಂತೋಷ ಕೂಟ

ರಾಜಧಾನಿಯ ಶಾರದಾವಿಲಾಸ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಸಂತೋಷ ಕೂಟವು ಈ ತಿಂಗಳು ೨೪ ನೇ ತಾ|| ಕಾಲೇಜಿನಲ್ಲಿ ನಡೆಯುವುದು. ಹಳೆಯ ವಿದ್ಯಾರ್ಥಿಗಳು ತಮ್ಮ ಚಂದಾವನ್ನು ಇದುವರೆಗೂ ಕೊಡದಿದ್ದರೆ, ಕೊಟ್ಟು ಸದಸ್ಯರಾಗಬೇಕೆಂದು ಕೋರಲಾಗಿದೆ. ತಮ್ಮ ವಿಳಾಸಗಳನ್ನೂ ತಿಳಿಸುವಂತೆಯೂ ಸೂಚಿಸಲಾಗಿದೆ

ಮಂಜುನಾಥೇಶ್ವರ ನಾಟಕ ಮಂಡಲಿಯ ಪ್ರಾರಂಭೋತ್ಸವ

ರಾಜಧಾನಿಯ ಶ್ರೀ ಮಂಜುನಾಥೇಶ್ವರ ನಾಟಕ ಮಂಡಲಿಯ ಆರಂಭೋತ್ಸವವು [illegible] ಲಕ್ಷ್ಮೀಪುರದ [illegible] ನೇ [illegible] ವೈಭವದಿಂದ ನೆರವೇರಿತು. ಶ್ರೀ ಎಂ. ಎಸ್. [illegible] ರವರು ಅಧ್ಯಕ್ಷ ವಹಿಸಿದ್ದರು. ಶ್ರೀ ಎಂ. ಆರ್. [illegible] ಪ್ರವರ್ತಕರಾಗಿರುವರು.

CITY TUTORIAL COLLEGE, MYSORE

New Buildings, V. V. Market

INTERMEDIATE CLASSES IN FULL SWING

(English-P. C. M & C. B. Z.)

B. Sc, Mathematics Classes

(From 15-12-52)

Edited, Printed and Published by A R. Nagarajan at Sadhvi Press, D. Subbiah Road, Mysore

ದೆಹಲಿಗೆ ಯಶೋಧರಾ ದಾಸಪ್ಪನವರ ಪ್ರಯಾಣ

ಅಖಿಲ ಭಾರತ ಗಾಂಧಿ ಸ್ಮಾರಕ ನಿಧಿಯ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ, ಶ್ರೀಮತಿ ಯಶೋಧರಾ ದಾಸಪ್ಪನವರು ಮೊನ್ನೆ ದೆಹಲಿಗೆ ಪ್ರಯಾಣ ಬೆಳೆಸಿದರು

ಕನ್ನಡ ಟೈಪ್‌ರೈಟರ್ ಬಗ್ಗೆ ಸತ್ಯಾಗ್ರಹ

ರಾಜಧಾನಿಯ ಸೇವಕ ಪತ್ರಿಕೆಯ ಶ್ರೀ ಕೆ ಅನಂತಸುಬ್ಬರಾಯರು ಕನ್ನಡ ಟೈಪ್‌ರೈಟರ್ ಸಂಬಂಧವಾಗಿ ಸಧ್ಯದಲ್ಲೇ ಸತ್ಯಾಗ್ರಹ ಹೂಡಲಿರುವುದಾಗಿ ತಿಳಿಸಿರುತ್ತಾರೆ. ಟೈಪ್ ರೈಟರ್ ಬಗ್ಗೆ ಸರ್ಕಾರದವರ ಸಮಿತಿಯವರು ಕನ್ನಡ ನಾಡಿಗೂ, ತಮಗೂ ಅಪರಾಧ ಮಾಡಿರುವರೆಂದು ಅವರು ತಿಳಿಸಿ, ಈ ಬಗ್ಗೆ ಸರ್ಕಾರದವರಲ್ಲಿ ತಾವು ಮಾಡಿಕೊಂಡ ಅರಿಕೆಗಳಿಗೆ ಯಾವ ಉತ್ತರವೂ ಬಂದಿಲ್ಲವೆಂದೂ, ಇದು ನಾಡು ನುಡಿಗೆ ಸಂಬಂಧಿಸಿದ ಪ್ರಶ್ನೆಯಾಗಿರುವುದರಿಂದ ತಾವು ಸರ್ಕಾರದ ಮುಂದೆ ಸತ್ಯಾಗ್ರಹ ನಡೆಸಬೇಕಾಗಿರುವುದೆಂದೂ ಅವರು ತಿಳಿಸಿ, ಈ ಕಾರ್ಯದಲ್ಲಿ ಕನ್ನಡಾಭಿಮಾನಿಗಳೆಲ್ಲರ ಸಹಕಾರವನ್ನು ಕೋರಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩೦ ವಸಂತಕೋಕಿಲ: ಕಿರುತೆರೆ(?) ಸಂಗೀತ. ಮಧ್ಯಾಹ್ನ ೧.೨೦ ಪ್ರಸಿದ್ಧ ೩ ಚಿತ್ರ ಸಂಗೀತ. ಸಂಜೆ ೫ ೪೦ ಪತ್ರಿಕೆ [illegible] ಎಂ. ಆರ್. ಸುಬ್ಬಣ್ಣ ಸಿಟೀಲು ೬.೧೦ ಗಾನವಿಹಾರ. ೭. ಟಿ. ಎಂ. ರಾಜಗೋಪಾಲಶರ್ಮ [illegible] ಸಂಗೀತ. ೭ ೪೦ ನಮ್ಮ ಯುಗ. ೮.೩೦ ಮುಕ್ತಾ. ೯.೩೦ [illegible] ಮಧುರೆ ಭಾಗವತರ್ ಸಂಗೀತ. ೯.೧೫ ಪ್ರೋಗ್ರಾಮ್ ಜನರಲ್‌ಓವ್ಯೂ-ಇಂಗ್ಲಿಷ್ ಭಾಷಣ.

THE MODEL TUTORIAL INSTITUTE,

D. Banumiah's School Buildings.

MYSORE

Coaching Classes for the S. S. L. C. candidates of 1953 have started working. Special attention is paid to English and Second Languages. The classes continue to work even during the X Mas holidays Admissions received.

B. SESHAGIRI RAO,

Organiser.

ಪಂ|| ಅಂಬಳೆ ರಾಮಸ್ವಾಮಯ್ಯಂಗಾರವರ ಸುಪ್ರಸಿದ್ಧ

—ಸಂತಾನ ಸಿಂಧೂರ—

ಈ ಸುಪ್ರಸಿದ್ಧ ಔಷಧಿ ಋತು ಸಂಬಂಧ (Menstrual) ಹುಟ್ಟು ನೋವನ್ನು [illegible]

ಸರಕಾರ [illegible] ಆಫೀಸ್ [illegible] ಛತ್ರದ ಹಿಂದೆ, ಮೈಸೂರು.

ರಾಜಕಮಲ್, ಮೈಸೂರು

11-12-52 ರಿಂದ :: ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು,

[illegible] ಟಾಕೀಸ್‌ರವರ [illegible] ಚಿತ್ರ

* ಪೆಣ್ ಮನಮ್ *

(ಹೆಂಗಸಿನ ಮನಸ್ಸು)

ಒಲಿದರೆ ನಾರಿ, ಮುನಿದರೆ ಮಾರಿ ಎಂಬುದೇ ಈ ಚಿತ್ರ ಕಥೆಯ ಕಥಾವಸ್ತು

ಭೂಮಿಕೆ. ಎಂ. ವಿ. ರಾಜಮ್ಮ, ಪೇಣಕ, ಟಿ. ಕೆ. ಷಣ್ಮುಗಂ

ಪಿ. ಕೆ. ರಾಮಸ್ವಾಮಿ, ಪ್ರೇಮಾವತಿ, ಸಾರಂಗಪಾಣಿ.

ನಾಟ್ಯಕಲಾಭೂಷಣೆ ವೈಜಯಂತಿಮಾಲಾರವರ ಅತ್ಯಮೋಘ ನರ್ತನ

ಕಾಸ್ಮಾಪಾಲಿಟನ್ ಕ್ಲಬ್ ಸುವರ್ಣ ಮಹೋತ್ಸವದ ಅಂಗವಾಗಿ

ಮೈಸೂರು ಕ್ರಾಫರ್ಡ್ ಹಾಲಿನಲ್ಲಿ

21-12 52ನೇ ಭಾನುವಾರ ಸಂಜೆ 6 ಘಂಟೆಗೆ

—: ಟಿಕೆಟ್ ದರ :—

ರೂ. 20 10, 5, 3, 2, 1

ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ನಿರ್ದಿಷಿಸಿದೆ

ಎಂ. ಎ. ಸೋಮಶೇಖರ್, ಮೆಂಬರ್ ಇನ್ ಛಾರ್ಜ್

ಟಿಕೆಟ್ ದೊರೆಯುವ ಸ್ಥಳ :

1 ಕಾರೊನೇಷನ್ ಜ್ಯೂಯಲರಿ ಮಾರ್ಟ್, ಸಯ್ಯಾಜಿರಾವ್ ರೋಡ್

2 ಎಂ. ಕೆ. ವಜ್ರನಾಭಯ್ಯ ಮಾರ್ವಾಡೀಸ್ ಮರ್ಚೆಂಟ್, ದೊಡ್ಡಪೇಟೆ.

3 ಬಾದಾಮಿ ಸ್ಟೋರ್ಸ್ 8ನೇ ಕ್ರಾಸ್, ಒಂಟಿಕೊಪ್ಪಲ್

4 ಎಸ್. ಶೆಟ್ಟಿಣ್ಣ ಮರ್ಚೆಂಟ್, ವಾಣಿವಿಲಾಸ ಮಾರ್ಕೆಟ್ ಸರ್ಕಲ್

5 ಬಲ್ಲಾಳ್ ಹೋಟೆಲ್ ಲಕ್ಷ್ಮೀಪುರಂ

6 ಕಾಸ್ಮಾಪಾಲಿಟನ್ ಕ್ಲಬ್

ಪೋ॥ ಶಂ. 792 ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೧೫-೧೨-೧೯೫೨ [ಸಂಚಿಕೆ ೧೧೪

ಆಂಧ್ರ ಸತ್ಯಾಗ್ರಹಿಗಳಿಂದ -ಭತ್ತದ ಲೂಟಿ-

ಬೆಂಗಳೂರಿನಲ್ಲಿ ರೇಡಿಯೋ ಕೇಂದ್ರ

ಭಾರತ ಸರ್ಕಾರದ ಪಂಚ ವಾರ್ಷಿಕ ಯೋಜನೆಯ ಪ್ರಕಾರ ೧೯೫೨-೫೩ ರ ಅವಧಿಯೊಳಗೆ ಬೆಂಗಳೂರು, ಇಂದೂರು, ಪುಣೆ, ಜಯಪುರ, ಜೋಧ್‌ಪುರ, ಗ್ವಾಲಿಯರ್ ಮತ್ತು ರಾಜಕೋಟೆಗಳಲ್ಲಿ ಹೊಸ ರೇಡಿಯೋ ಪ್ರಸಾರ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ. ಕೇಂದ್ರ ಸರ್ಕಾರದವರು ೫॥ ಕೋಟಿ ರೂ. ವೆಚ್ಚದ ಒಂದು ಯೋಜನೆಯನ್ನು ತಯಾರಿಸಿರುವರು. ಇದರ ಪ್ರಕಾರ ಉನ್ನತ ಮಟ್ಟದ ಐದು ಷಾರ್ಟ್‌ವೇವ್ ಟ್ರಾನ್ಸ್‌ಮಿಟರುಗಳನ್ನೂ, ಬೆಂಗಳೂರು ಮತ್ತು ಇತರ ಐದು ಕಡೆಗಳಲ್ಲಿ ಉನ್ನತ ಮಟ್ಟದ ಮೀಡಿಯಂ ವೇವ್ ಟ್ರಾನ್ಸ್‌ಮಿಟರುಗಳನ್ನೂ ಮತ್ತು ಸಾಧಾರಣ ಮಟ್ಟದ ಐದು ಮೀಡಿಯಂ ವೇವ್ ಟ್ರಾನ್ಸ್‌ಮಿಟರುಗಳನ್ನೂ ಸ್ಥಾಪಿಸಲಾಗುವುದು. ೧೯೫೫ ನೇ ಇಸವಿಯ ವೇಳೆಗೆ ಮದರಾಸು, ಬೊಂಬಾಯಿ ಮತ್ತು ಕಲಕತ್ತೆಗಳಲ್ಲಿನ ರೇಡಿಯೋ ಸ್ಟೇಷನ್ನುಗಳನ್ನು ೧೦೦ ಕಿಲೋವಾಟುಗಳಿಗೆ ಏರಿಸಲಾಗುವುದು. ಈಗ ದೆಹಲಿಯಿಂದ ಪ್ರಸಾರ ಮಾಡಲಾಗುತ್ತಿರುವ ರಾಷ್ಟ್ರೀಯ ಸಂಗೀತ ಕಾರ್ಯಕ್ರಮವನ್ನು ಮುಂದೆ ಇತರ ಸ್ಟೇಷನ್ನುಗಳಲ್ಲೂ ವ್ಯವಸ್ಥೆ ಮಾಡುವಂತೆ ಏರ್ಪಡಿಸಲಾಗುವುದು. ೫೦, ೬೦ ಮೈಲಿಗಳ ಅಂತರದೊಳಗಿರುವ, ಬಹು ಮಟ್ಟಿಗೆ ಒಂದು ಕಿಲೊವಾಟ್ ಶಕ್ತಿಯ, ಪ್ರಸಾರ ಕೇಂದ್ರಗಳನ್ನು ಇನ್ನು ಮುಂದೆ ಒಟ್ಟು ಮಾಡಲಾಗುವುದೆಂದೂ ಗೊತ್ತಾಗಿದೆ.

ಮೊರಾಕೋ ಮಾಜಿ ಜಡ್ಜರ ಬಂಧನ

ಮೊರಾಕೋದಲ್ಲಿ ಕೆಲವು ದಿನಗಳ ಹಿಂದೆ ನಡೆದ ಗಲಭೆಯ ಪರಿಣಾಮವಾಗಿ ಅಲ್ಲಿನ ಮಾಜಿ ಜಡ್ಜಿಯೂ ಮತ್ತು ಸುಲ್ತಾನರ ಸಲಹಾ ಸಮಿತಿಯ ಮಾಜಿ ಸದಸ್ಯರೂ ಆದ ಅಹಮದ್ ಬೆನ್ನಾನಿ ಎಂಬುವರನ್ನು ನೆನ್ನೆ ಬಂಧಿಸಿರುವರು. ಕೆಸಬ್ಲಾಂಕಾ ನಗರವು ಈಗ ಶಾಂತಯುತವಾಗಿರುವುದೆಂದು ವರದಿಯಾಗಿದೆ.

ಮಾರಾಟ ತೆರಿಗೆಯಿಲ್ಲದೆ ಕಾರುಗಳ ಬಿಕರಿ

ಬೊಂಬಾಯಿಯಲ್ಲಿನ ಮಾರಾಟ ತೆರಿಗೆಯು ಅಕ್ರಮವೆಂದು ಅಲ್ಲಿನ ಹೈಕೋರ್ಟಿನ ತೀರ್ಪಿನ ಒಂದು ವ್ಯವಹಾರದ ತೀರ್ಮಾನ ನಂತರ ನೆನ್ನೆ ಅಲ್ಲಿನ ಏಳು ಮೋಟಾರು ವ್ಯಾಪಾರ ಸಂಸ್ಥೆಗಳು ಮಾರಾಟ ತೆರಿಗೆಯನ್ನು ವಸೂಲು ಮಾಡದೆ ಕಾರುಗಳನ್ನು ಮಾರಿದುವೆಂದು ವರದಿಯಾಗಿದೆ. ಮೇಲ್ಕಂಡ ಕೋರ್ಟಿನ ತೀರ್ಪಿನ ಮೇಲೆ ಬೊಂಬಾಯಿ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿರುವರೆಂದೂ, ಬರುವ ಫೆಬ್ರವರಿಯಲ್ಲಿ ಸಂಸ್ಥಾನ ಶಾಸನಸಭೆಯು ಬಜೆಟ್ ಅಧಿವೇಶನವು ಸೇರುವವರಿಗೆ ಮಾರಾಟ ತೆರಿಗೆ ಕಾನೂನನ್ನು ಶಾಸನಬದ್ಧಗೊಳಿಸುವ ಒಂದು ವಿಶೇಷ ಶಾಸನವನ್ನು ಜಾರಿಗೆ ತರಬಹುದೆಂದೂ ಹೇಳಲಾಗಿದೆ.

ವೆ

ಪೆಪ್ಸು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ

ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನದ ಕಾಂಗ್ರೆಸ್ ಪಕ್ಷದವರು ಅಲ್ಲಿರುವ ಕಾಂಗ್ರೆಸ್ಸೇತರ ಸರ್ಕಾರದ ಮೇಲೆ ಅವಿಶ್ವಾಸ ಸೂಚಕ ನಿರ್ಣಯವನ್ನು ತರಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿರುವರೆಂದೂ ಇದೇ ತಿಂಗಳು ೨೨ ನೇ ತಾರೀಕು ಆರಂಭವಾಗುವ ಅಲ್ಲಿನ ಶಾಸನ ಸಭೆಯಲ್ಲಿ ಅದು ಸೂಚಿಸಲ್ಪಡುವುದೆಂದೂ ಗೊತ್ತಾಗಿದೆ.

ಭಾರತದಲ್ಲಿ ರೇಡಿಯೋ ಭಾಗಗಳ ತಯಾರಿಕೆ

ಭಾರತದಲ್ಲಿ ರೇಡಿಯೋ ಯಂತ್ರೋಪಕರಣಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸುವ ಬಗ್ಗೆ ಫ್ರೆಂಚ್ ಕೈಗಾರಿಕಾ ಸಂಸ್ಥೆಯೊಂದರೊಡನೆ ಇಲ್ಲಿನ ಸರ್ಕಾರದವರು ಒಪ್ಪಂದ ಮಾಡಿಕೊಂಡಿರುವರೆಂದು ಗೊತ್ತಾಗಿದೆ.

ಅಮೆರಿಕದ ಹವಾಮಾನ ಕೇಂದ್ರದ ಭಸ್ಮ

ಮೊರಾಕೋದಲ್ಲಿ ಕೆಸಬ್ಲಾಂಕಾ ಮತ್ತು ರಾಬಾಟ್ ನಗರಗಳ ನಡುವೆ ಶೇಖರಿಸಲಾಗಿದ್ದ ಪೆಟ್ರೋಲಿಗೆ ಮೊನ್ನೆ ರಾತ್ರಿ ಬೆಂಕಿ ಬಿದ್ದ ಪರಿಣಾಮವಾಗಿ ಅಲ್ಲಿನ ಅಮೆರಿಕದ ಹವಾಮಾನ ಕೇಂದ್ರವು ಅಸ್ಫೋಟಿಸಿ ಪೂರ್ಣವಾಗಿ ಸುಟ್ಟು ಹೋಯಿತೆಂದೂ, ಈ ಸಂಬಂಧವಾಗಿ ಮೊರಾಕೋ ಕಮ್ಯೂನಿಸ್ಟ್ ಪಕ್ಷದ ೪ ಸದಸ್ಯರನ್ನು ವಶ್ತಗಿರಿ ಮಾಡಲಾಗಿದೆಯೆಂದೂ ತಿಳಿದುಬಂದಿದೆ.

ಸಿದ್ದಪ್ಪಾಜಿ ದೇವಸ್ಥಾನದ ಆಡಳಿತ ಸಮಿತಿ

ರಾಜಧಾನಿಯ ನಜರ್‌ಬಾದಿನಲ್ಲಿರುವ ಸಿದ್ಧಪ್ಪಾಜಿ ದೇವಸ್ಥಾನದಲ್ಲಿ ನಜರ್‌ಬಾದ್ ನಿವಾಸಿಗಳ ಸಭೆಯು ನೆನ್ನೆ ಸೇರಿ ೫೨ ೫೩ ನೇ ಸಾಲಿಗೆ ದೇವಸ್ಥಾನದ ಕಾರ್ಯ ಕಲಾಪಗಳನ್ನು ಮುಂದುವರಿಸಲು ಕೆಳಗೆ ಕಂಡವರನ್ನು ಚುನಾಯಿಸಿತು:— ಶ್ರೀಗಳಾದ ದೊಡ್ಡ ಬೋರಯ್ಯ ಮತ್ತು ಮರಿಯಪ್ಪ—ಯಜಮಾನರು; ಎಂ.ಎಲ್. ಶಿವಲಿಂಗಯ್ಯ, ಎಂ. ಆರ್. ಲಿಂಗಪ್ಪ, ರಾಮಯ್ಯ, ನಂಜಯ್ಯ ಮತ್ತು ತಮ್ಮಯ್ಯ—ಕಾರ್ಯದರ್ಶಿಗಳು.

ಕಾರ್ಪೋರೇಷನ್ ಸಭೆಯಲ್ಲಿ ಧೂಮಪಾನಕ್ಕೆ ನಿಷೇಧ

ಜಬ್ಬಲ್ಪುರದ ಪೌರಸಭೆಯು ನಡೆಯುವಾಗ ಸಭಾ ಭವನದಲ್ಲಿ ಧೂಮಪಾನ ಮಾಡುವುದನ್ನು ನಿಷೇಧಿಸಲಾಗಿದೆ. ಕಳೆದ ಸೋಮವಾರ ನಡೆದ ಸಭೆಯಲ್ಲಿ ಒಬ್ಬ ಸದಸ್ಯರು ಧೂಮಪಾನ ಮಾಡಲು ಅವರನ್ನು ಹೊರಕ್ಕೆ ಕಳುಹಿಸಲಾಯಿತೆಂದು ತಿಳಿದುಬಂದಿದೆ.

ಹೈದ್ರಾಬಾದ್ ನೌಕರರಿಗೆ ಮನೆ ಬಾಡಿಗೆ ಭತ್ಯ ರದ್ದು

ಹೈದರಾಬಾದಿನಲ್ಲಿ ಮಾಹೆಯಾನ ೧೫೦ ರೂ ಗಳಿಗಿಂತ ಹೆಚ್ಚು ಸಂಬಳ ಪಡೆಯುವ ಎಲ್ಲ ಸರ್ಕಾರೀ ನೌಕರರಿಗೂ ಈ ತಿಂಗಳು ಒಂದನೇ ತಾರೀಕಿನಿಂದ ಮನೆ ಬಾಡಿಗೆ ಭತ್ಯವನ್ನು ರದ್ದು ಮಾಡಿರುವುದಾಗಿ ಗೊತ್ತಾಗಿದೆ. ಇದರಿಂದ ಸರ್ಕಾರಕ್ಕೆ ಸಾಲಿಯಾನಾ ೩೦ ಲಕ್ಷ ರೂ. ಉಳಿತಾಯವಾಗುವುದು.

ಎರಡು ತಲೆಯ ಮೀನು

ಮೆಲ್ಬೋರನ್ನಿನಿಂದ ಬಂದಿರುವ ಸುದ್ದಿಯ ಪ್ರಕಾರ ಎ. ವ್ಯಾಲೇಸ್ ಎಂಬುವರೊಬ್ಬರಲ್ಲಿ ಇರುವ ಒಂದು ಮೀನಿಗೆ ಎರಡು ತಲೆಗಳಿರುವುವೆಂದೂ, ಅವೆರಡರಲ್ಲಿ ಇರುವ ಬಾಯಿಗಳ ಮೂಲಕ ಅದು ಆಹಾರವನ್ನು ಸೇವಿಸುವುದೆಂದೂ ವರದಿಯಾಗಿದೆ. ಮೀನಿಗೆ ಐದು ತಿಂಗಳು ವಯಸ್ಸೆಂದು ಗೊತ್ತಾಗಿದೆ.

ಪೋಸ್ಟ್ ಮಾಸ್ಟರ್ ಜನರಲ್ಲರ ಬಳಿ ಆರ್. ಎಂ. ಎಸ್. ನೌಕರರ ನಿಯೋಗ

ಅಂಚೆ ಮತ್ತು ತಂತಿ ಇಲಾಖೆಯ ರಾಜಧಾನಿಯ ಆರ್. ಎಂ. ಎಸ್. ಶಾಖೆಯವರು, ನಗರದ ಅಂಚೆ ಮತ್ತು ತಂತಿ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ನೇತೃತ್ವದಲ್ಲಿ ನೆನ್ನೆ ಮದರಾಸು ಸರ್ಕಲ್ಲಿನ ಪೋಸ್ಟ್ ಮಾಸ್ಟರ್ ಜನರಲ್ಲರನ್ನು ರಾಜಧಾನಿಯಲ್ಲಿ ಭೇಟಿ ಮಾಡಿ ತಮ್ಮ ಕುಂದುಕೊರತೆಗಳ ಬಗ್ಗೆ ಅಹವಾಲು ಹೇಳಿಕೊಂಡರು. ಪೋಸ್ಟ್ ಮಾಸ್ಟರ್ ಜನರಲ್ಲರು ಅವುಗಳನ್ನು ಸಾಧ್ಯವಾದ ಮಟ್ಟಿಗೆ ನಿವಾರಿಸುವುದಾಗಿ ಭರವಸೆಯಿತ್ತರು.

ಆಂಧ್ರ ಸತ್ಯಾಗ್ರಹಿಗಳಿಂದ ಭತ್ತದ ವ್ಯಾಗನ್ ಲೂಟಿ

ಆಂಧ್ರ ಪ್ರಾಂತದ ಸ್ಥಾಪನೆ ಬಗ್ಗೆ ಚಳುವಳಿಯನ್ನು ಆರಂಭಿಸಿರುವ ೩೦೦ ಮಂದಿ ಪ್ರದರ್ಶನಕಾರರು ನೆನ್ನೆ ಏಲೂರು ರೈಲ್ವೆ ಸ್ಟೇಷನ್ ಯಾರ್ಡಿನಲ್ಲಿ ಭತ್ತದ ಮೂಟೆಗಳಿಂದ ತುಂಬಿದ್ದ ವ್ಯಾಗನ್ನುಗಳನ್ನು ಒಡೆದು ಬಾಗಿಲು ತೆಗೆದು ಮೂಟೆಗಳನ್ನೆಲ್ಲಾ ಹೊರಕ್ಕೆ ಎಸೆದು ಲೂಟಿ ಮಾಡಿದರೆಂದು ವರದಿಯಾಗಿದೆ.

ಚಳುವಳಿಯ ಪರಿಣಾಮವಾಗಿ ಮದರಾಸು ಸೆಂಟ್ರಲ್ ಸ್ಟೇಷನ್ನಿಗೆ ನೆನ್ನೆ ಬರಬೇಕಾಗಿದ್ದ ರೈಲುಗಳೆಲ್ಲವೂ ಅನೇಕ ಗಂಟೆಗಳ ಕಾಲ ತಡವಾಗಿ ಬಂದುವು. ಮೊನ್ನೆ ಸಂಜೆ ಸುಮಾರು ೩೦೦ ಮಂದಿ ವಿದ್ಯಾರ್ಥಿಗಳು ಮದರಾಸಿಗೆ ಬರುತ್ತಿದ್ದ ಕಲ್ಕತ್ತಾ ಮೇಲ್ ರೈಲಿನ ಬೋಗಿಗಳನ್ನು ಪವರ್‌ಪೇಟೆ ಎಂಬ ನಿಲ್ದಾಣದಲ್ಲಿ ಕಳಚಿಹಾಕಿದುದಲ್ಲದೆ ಇಂಜನ್ನಿನಿಂದ ಆವಿಯನ್ನು ಹೊರಕ್ಕೆ ಬಿಟ್ಟುಬಿಟ್ಟರೆಂದೂ ಹೇಳಲಾಗಿದೆ.

ಆಂಧ್ರ ಪ್ರಾಂತ್ಯ ಸ್ಥಾಪನೆ ಬಗ್ಗೆ ಕಳೆದ ೫೮ ದಿನಗಳಿಂದಲೂ ಉಪವಾಸವನ್ನು ಕೈಗೊಂಡಿರುವ ಪೊಟ್ಟಿ ಶ್ರೀರಾಮುಲುರವರು ಮೃತಪಟ್ಟರೆಂದು ಕಾಕಿನಾಡದಲ್ಲಿ ಸುಳ್ಳು ಸುದ್ದಿಯು ಹರಡಿ, ಅಲ್ಲಿನ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ, ರೈಲ್ವೆ ನಿಲ್ದಾಣಕ್ಕೆ ಮೆರವಣಿಗೆ ಹೋಗಿ, ರೈಲನ್ನು ತಡೆದು ಗಲಭೆ ನಡೆಸಿದರೆಂದೂ, ಪೋಲೀಸರು ಪರಿಸ್ಥಿತಿಯನ್ನು ಹತೋಟಿಗೆ ತಂದರೆಂದೂ, ಶ್ರೀರಾಮುಲುರವರು ಸುಖವಾಗಿ ಜೀವಂತರಾಗಿರುವರೆಂದು ತಿಳಿಸಿದನಂತರ ಗುಂಪಿನವರು ಚದುರಿದರೆಂದೂ ವರದಿಯಾಗಿದೆ.

ಡಾ॥ ಮಲಾನರಿಗೆ ವಿಶೇಷ ಸರ್ವಾಧಿಕಾರ

ದಕ್ಷಿಣ ಆಫ್ರಿಕದ ವರ್ಣಭೇದ ಶಾಸನದ ವಿರುದ್ಧವಾಗಿ ನಡೆಯುತ್ತಿರುವ ಚಳುವಳಿಯನ್ನು ಹತ್ತಿಕ್ಕಲು ಮಾರ್ಷಲ್ ಲಾವನ್ನು ಜಾರಿಗೆ ತರುವ ಮತ್ತು ಅಲ್ಲಿನ ಪ್ರಧಾನಿ ಡಾ॥ ಮಲಾನರು ಪಾರ್ಲಿಮೆಂಟಿನ ಅನುಮತಿಯನ್ನು ಪಡೆಯದೆ ಸರ್ವಾಧಿಕಾರವನ್ನು ಚಲಾಯಿಸುವ ವಿಶೇಷಾಧಿಕಾರವನ್ನು ಅವರಿಗೆ ಕೊಡುವ ವ್ಯವಸ್ಥೆಯು ನಡೆಯುತ್ತಿರುವುದಾಗಿ ಗೊತ್ತಾಗಿದೆ.

೮೦೦೦ ರೂ. ಗಳೊಡನೆ ಸೊಸೈಟಿ ನೌಕರರ ಪರಾರಿ

ಚಿತ್ರದುರ್ಗದ ಆಡಳಿತ ಪರಸ್ಪರ ಸಹಾಯ ಸಂಘದ ಮ್ಯಾನೇಜರ್ ಕೆ. ಆರ್. ರಾಮಸ್ವಾಮಿ ಉರುಫ್ ಮುತ್ತಯ್ಯಂಗಾರ್ ಎಂಬುವರು ಸಂಘದ ೮೦೦೦ ರೂ ಗಳನ್ನು ದುರುಪಯೋಗಪಡಿಸಿಕೊಂಡು ಪರಾರಿಯಾಗಿದ್ದಾರೆಂದು ವರದಿಯಾಗಿದೆ. ಸೊಸೈಟಿ ಸದಸ್ಯರುಗಳಿಂದ ಹಣ ಪಡೆದು ಲೆಕ್ಕಕ್ಕೆ ಜಮಾ ಮಾಡಿಲ್ಲವೆಂದೂ ಸಂಘದ ರಶೀತಿ ಕೊಡದೆ ಅವೇ ತರಹೆಯ ಬೇರೆ ಚೀಟಿಗಳನ್ನು ಕೊಟ್ಟಿದ್ದಾರೆಂದೂ ದೂರುಗಳು ಬಂದಿವೆ.

ಮೂಳೆಗಳ ಬ್ಯಾಂಕಿನ ಸ್ಥಾಪನೆ

ಡಚ್ ರೆಡ್ ಕ್ರಾಸ್ ಸಂಸ್ಥೆಯವರು ಮೂಳೆಯ ಬ್ಯಾಂಕೊಂದನ್ನು ಸ್ಥಾಪಿಸಿರುವರೆಂದು ಗೊತ್ತಾಗಿದೆ.

ಜಿಲ್ಲಾ ಬೋರ್ಡುಗಳಿಗೆ ಪಂಚಾಯಿತಿಯಿಂದಲೇ ಚುನಾವಣೆ

ಜಿಲ್ಲಾ ಬೋರ್ಡುಗಳಿಗೆ ಪಂಚಾಯಿತಿಗಳ ಮೂಲಕವೇ ಚುನಾವಣೆಗಳು ನಡೆಯಬೇಕೆಂದು ಮೈಸೂರು ಪ್ರದೇಶ ಕಾಂಗ್ರೆಸ್ ಮತ್ತು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಗಳು ನಿರ್ಧರಿಸಿವೆಯೆಂದೂ ಅದರಂತೆ ಜಿಲ್ಲಾ ಬೋರ್ಡುಗಳಿಗೆ ಪರೋಕ್ಷ ಚುನಾವಣೆಗಳನ್ನು ಶೀಘ್ರದಲ್ಲೇ ನಡೆಸಲಾಗುವುದೆಂದೂ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ. ಹೊಸ ಚುನಾವಣೆಗಳು ನಡೆಯುವವರೆಗೂ ಈಗಿನ ಬೋರ್ಡುಗಳೇ ಮುಂದುವರಿಯಬಹುದೆಂದು ಹೊಸ ಶಾಸನದಲ್ಲಿಯೇ ಸಮಾವೇಶಿಸಲಾಗುವುದಾಗಿಯೂ ಆದ್ದರಿಂದ ಚುನಾವಣೆಗಳಾಗುವವರೆಗೂ ಬೋರ್ಡುಗಳಿಗೆ ಜೀವದಾನ ಮಾಡುವ ಆವಶ್ಯಕವಿಲ್ಲವೆಂದೂ ಅವರು ಹೇಳಿರುವರು.

ಶ್ರೀ, ಶ್ರೀಮತಿ ಮತ್ತು ಕುಮಾರಿ ಎಂದು ಮಾತ್ರ ಸಂಬೋಧನೆ

ಹಿಂದೂ, ಮುಸ್ಲಿಂ, ಕ್ರೈಸ್ತ ಮುಂತಾದ ಎಲ್ಲ ಭಾರತೀಯರನ್ನೂ ಗಂಡಸರಾದರೆ ಶ್ರೀ, ಹೆಂಗಸರಾದರೆ ಶ್ರೀಮತಿ ಮತ್ತು ಅವಿವಾಹಿತ ತರುಣಿಯರಾದರೆ ಕುಮಾರಿ ಎಂದು ಕರೆಯಬೇಕೆಂದು ಮದರಾಸು ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ರೀತಿಯಲ್ಲಿಯೇ ಸಂಬೋಧಿಸಬೇಕೆಂದು ಪ್ರಧಾನಿ ನೆಹರೂರವರ ಸೂಚನೆ ಕೊಟ್ಟಿರುವರು.

ಹಿಂದೀ ಪರೀಕ್ಷೆಗೆ ಅರ್ಜಿ ಪತ್ರ (ಹಿಂದೀ ಪರೀಕ್ಷೆಗೆ ಆವೇದನ ಪತ್ರ)

ಬರುವ ವರ್ಷ ಫೆಬ್ರವರಿ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರಾಥಮಿಕ ಮಾಧ್ಯಮ ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಆವೇದನ ಪತ್ರಗಳನ್ನು ಇದೇ ತಿಂಗಳು ೧೯ ನೇ ಶುಕ್ರವಾರ ಸಂಜೆ ೬ ಗಂಟೆಯೊಳಗೆ ಸ್ವೀಕರಿಸಲಾಗುವುದೆಂದೂ ಅವುಗಳನ್ನು ಇಲ್ಲಿನ ಹಿಂದಿ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಪಡೆಯಬಹುದೆಂದೂ ತಿಳಿಸಲಾಗಿದೆ. ವಿಳಂಬ ಶುಲ್ಕದೊಡನೆ ೨೬ ನೇ ತಾ|| ವರೆಗೂ ಅವನ್ನು ಕಳುಹಿಸಬಹುದು.

ಕೊಡಗಹಳ್ಳಿಗೆ ಜಿಲ್ಲಾಧಿಕಾರಿಗಳ ಭೇಟಿ

ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮಕ್ಕೆ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಕಳೆದ ೧೧ ನೇ ತಾ|| ಭೇಟಿ ಕೊಟ್ಟಿದ್ದರು. ಶ್ರೀ ಕೊಡಗಹಳ್ಳಿ ರಾಮಸ್ವಾಮಿಯವರು ಅಲ್ಲಿ ಗ್ರಾಮಾಭಿವೃದ್ಧಿ ಕಾರ್ಯವು ನಡೆದಿರುವ ಬಗ್ಗೆ ವಿವರಣೆ ಕೊಟ್ಟರು. ಜಿಲ್ಲಾಧಿಕಾರಿಗಳು ಮಾತನಾಡುತ್ತ ಜನರು ಸ್ವಾವಲಂಬಿಗಳಾಗಬೇಕೆಂದು ತಿಳಿಸಿದರು. ಶಾಲೆಯೊಂದನ್ನು ನಿರ್ಮಿಸಲು ಜನರು ಹಣ ಶೇಖರಿಸುವುದಾಗಿ ವಾಗ್ದಾನ ಮಾಡಿದರು.

ಟ್ರಾಮು, ಬಸ್ಸುಗಳಲ್ಲಿ ಧೂಮಪಾನ ನಿಷೇಧ

ಟ್ರಾಂ ಕಾರುಗಳು ಮತ್ತು ಬಸ್ಸುಗಳಲ್ಲಿ ಧೂಮಪಾನವನ್ನು ನಿಷೇಧಿಸಿ ಶಾಸನ ಮಾಡಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವನ್ನು ಕಲ್ಕತ್ತಾ ಪೌರ ಸಭೆಯು ಸರ್ವಾನುಮತದಿಂದ ಅಂಗೀಕರಿಸಿರುತ್ತದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಆರ್. ಎಂ. ಜನಾರ್ದನ, ವೀಣೆ. ಮಧ್ಯಾಹ್ನ ೧-೪೦ ಕೊಳಲು ೩-೩ ಗುರುವಯ್ಯ ಪದನಾಯಕ್. ಸಂಜೆ ೫-೩೦ ವಸಂತ ಸುಂದರಂ ಸಂಗೀತ. ೬-೧೦ ಗಾನ ವಿಹಾರ. ೬-೬ ಗುರುವಯ್ಯ ಪದನಾಯಕ್. ೭-೪೦ ಸಂವಾದ ಮಾಲೆ ಎಂ. ಎಲ್. ನಾರಾಯಣರಾವ್. ೮ ಆರ್. ಎಂ. ಜನಾರ್ದನ, ವೀಣೆ. ೮-೩೦ ವೃಂದ ಸಂಗೀತ. ೯-೧೫ ಧರ್ಮದ ಕಥೆ, ಕೆ. ಗುರುದತ್ತರಿಂದ ಇಂಗ್ಲೀಷ್ ಭಾಷಣ. ೯-೩೦ ಗಾನಾಮೃತ.

ಪುನಹ ತಮ್ಮ ಸೇವೆಗೆ !

ಛತ್ರಿ ಮತ್ತು ಅಕ್ಕಿ ಸಾಗಿಸುವವರು ಮೈಸೂರು ಟ್ರಾನ್ಸ್ಪೋರ್ಟ್ ಸರ್ವಿಸ್ಸಿನ ವ್ಯವಸ್ಥೆಯ ಜಾಗ್ರತೆಯ ಹಾಗೂ ಸುಲಭ ರೀತಿಯ ಸಾಗಾಣಿಕೆಯ ಅವಕಾಶವನ್ನು ಪಡೆಯಬೇಕು. ಉಪಯೋಗಿಸಿಕೊಳ್ಳಬೇಕೆಂದು ಕೋರಿಕೆ.

ಮೈಸೂರು ಟ್ರಾನ್ಸ್ಪೋರ್ಟ್ ಸರ್ವಿಸ್ (ರಿಜಿಸ್ಟರ್ಡ್)

(ತೀರ್ಥ ಮತ್ತು ಕಂಪೆನಿ)

ರವಿವಾರಪೇಟೆ ರಸ್ತೆ, ಮೈಸೂರು

(ಫೋನ್ ನಂ 537)

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207. ಸಯ್ಯಾಜಿರಾವ್ ರೋಡ್, ಮೈಸೂರು

ಹೊಸ ಚೀನ-ಹೊಸ ಪ್ರಪಂಚ

ಹಲವಾರು ವರ್ಷಗಳ ಕಾಲ ಚೀನಾದಲ್ಲಿ ಇದ್ದು ಅಲ್ಲಿನ ಸ್ವಾತಂತ್ರ್ಯ ಹೋರಾಟವನ್ನು ಕಣ್ಣಾರೆ ಕಂಡ ಬ್ರಿಟಿಷ್ ಪತ್ರಿಕೋದ್ಯೋಗಿ ಆರ್ಥರ್ ಕ್ಲೆಗ್‌ರವರ ಇಂಗ್ಲೀಷ್ ಪುಸ್ತಕವನ್ನು ಇಲ್ಲಿನ ಇಂಡೋ-ಚೀನಾ ಸ್ನೇಹ ಸಂಘದವರು ಕನ್ನಡದಲ್ಲಿ ಪ್ರಕಟಿಸಿರುತ್ತಾರೆ. ೧೯೪೯ ರಲ್ಲಿ ಜನತಾ ಸರ್ಕಾರ ಸ್ಥಾಪನೆಯಾದ ನಂತರ ಚೀನಾದಲ್ಲಿ ಹಳೆಯ ಬಂಡವಾಳಶಾಹಿ ಪದ್ಧತಿಯನ್ನು ನಾಶಗೊಳಿಸಿ ಹೊಸ ಸಮಾಜವನ್ನು ಯಾವ ರೀತಿ ನಿರ್ಮಿಸಲಾಗುತ್ತಿದೆಯೆಂಬುದನ್ನು ಲೇಖಕರು ಹೃದಯಂಗಮವಾಗಿ ವಿವರಿಸಿರುತ್ತಾರೆ. ನವ ಚೀಣದ ಅದ್ಭುತ ಸಾಧನೆಗಳ ಬಗ್ಗೆ ವಿವರಗಳನ್ನು ತಿಳಿಯಬೇಕಾದ ಪ್ರತಿಯೊಬ್ಬರೂ ಅಗತ್ಯವಾಗಿ ಓದಬೇಕಾದ ಪುಸ್ತಕ ಇದು. ೧೪೪ ಪುಟಗಳ ಈ ಪುಸ್ತಕದ ಬೆಲೆ ರೂ ೧-೦-೦

ಪಂಪನ ಕಲಿಕರ್ಣ

(ಕರ್ಣ ರಸಾಯನ ನೋಟ್ಸ್)

ಶ್ರೀ ಜಿ. ಬ್ರಹ್ಮಪ್ಪನವರಿಂದ

ಅನುವಾದಿಸಲಾಗಿರುವುದು

ಮೆಟ್ರಿಕ್ಯುಲೇಷನ್ ಮತ್ತು ಸೀನಿಯರ್ ಇಂಟರ್ ವಿದ್ಯಾರ್ಥಿಗಳಿಗೆ ಉಪಯುಕ್ತವಾದುದು

ಬೆಲೆ 1 [illegible]

ಜೈನ ಸಾಹಿತ್ಯ ಪ್ರಚಾರ ಸಂಘ,

ಸಯ್ಯಾಜಿರಾವ್ ರಸ್ತೆ,

[illegible] ಮೈಸೂರು

ಮುನಿಸಿಪಲ್ ಕಮೀಷನರ್‌ರವರ ಆಫೀಸ್

ಮೈಸೂರು ತಾ|| 12-12-1952

ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ :—

ಸನ್ 1952 ನೇ ಇಸವಿ ಡಿಸೆಂಬರ್ ಮಾಹೆ ತಾ|| 31 ನೇ ಬುಧವಾರ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಪಾಲಿಟಾರು ಪ್ರಮುಖ್ತರುಗಳನ್ನು ಮುನಿಸಿಪಲ್ ಇಂಜನಿಯರ್‌ರವರಿಂದ ಬಹಿರಂಗವಾಗಿ ಮುನಿಸಿಪಲ್ ಆಫೀಸ್ ಕಾಂಪೌಂಡಿನಲ್ಲಿ ಹರಾಜು ಮಾಡಲ್ಪಡುತ್ತದೆ. ಅಪೇಕ್ಷೆಯುಳ್ಳವರು ಸದರಿ ಹರಾಜಿಗೆ ಹಾಜರಾಗಿ ಛಡ ದರಖಾಸ್ತಿನಲ್ಲಿ ಮಾಲನ್ನು ಪಡೆಯಬಹುದು. ಹರಾಜು ಖೈಮು ಆದನಂತರ ಆಖೈರು ಬಿಡ್ಡುದಾರರು ಅವರು ಬಿಡ್ಡು ಪೂರ್ತಿ ಹಣವನ್ನು ಮುನಿಸಿಪಲ್ ಖಜಾನೆಗೆ ಪಾವತಿ ಮಾಡಿ ಮುನಿಸಿಪಲ್ ಕಮಿಷನರ್‌ರವರಿಂದ ಮಂಜೂರು ಆದನಂತರ ಮಾಲನ್ನು ಪಡೆಯತಕ್ಕದ್ದು.

(1) ದೊಡ್ಡ ಸೈಜು ಪ್ರಮುಖ್ತರುಗಳು 137

(2) ಸಣ್ಣ ಸೈಜು " 630

(ಸಹಿ) ಎಫ್. ಎಂ. ಅಬ್ದುಲ್ ರಹೀಂ,

ಮುನಿಸಿಪಲ್ ಕಮಿಷನರ್

Edited, Printed and Published by A. R. Nagraju at Sadhvi Press, D. Subbiah Road, Mysore

ಆರ್. ಜಿ. ಬ್ರಾಂಡ್

ಕುಕಿಂಗ್ ಮೀಡಿಯಂ

(ಅಡಿಗೆ ಸಾಧನ)

ನಾಟ್ಯಕಲಾಭೂಷಣೆ **ವೈಜಯಂತಿಮಾಲಾರವರ ಅತ್ಯಮೋಘ ನರ್ತನ**

ಕಾಸ್ಮಾಪಾಲಿಟನ್ ಕ್ಲಬ್ ಸುವರ್ಣ ಮಹೋತ್ಸವದ ಅಂಗವಾಗಿ

ಮೈಸೂರು ಕ್ರಾಫರ್ಡ್ ಹಾಲಿನಲ್ಲಿ

21-12-52ನೇ ಭಾನುವಾರ ಸಂಜೆ 6 ಘಂಟೆಗೆ

—: ಟಿಕೆಟ್ ದರ :—

ರೂ 20, 10, 5, 3, 2, 1

ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

ಎಂ. ಎ. ಸೋಮಶೇಖರ್, ಮೆಂಬರ್ ಇನ್ ಛಾರ್ಜ್

ಟಿಕೆಟ್ ದೊರೆಯುವ ಸ್ಥಳ —

1 ಕಾರೊನೇಷನ್ ಜ್ಯುಯಲರಿ ಮಾರ್ಟ್, ಸಯ್ಯಾಜಿರಾವ್ ರೋಡ್

2 ಕಾರೊನೇಷನ್ ಕ್ಲಾತ್ ಎಂಪೋರಿಯಂ, ಅರಮನೆ ರಸ್ತೆ

3 ಬಾಂಬೆ ಸ್ಟೋರ್ಸ್ [illegible]

4 ಎಸ್. ವೆಂಕಟೇಶ [illegible]

5 ಬಲ್ಲಾಳ್ ಹೋಟೇಲ್, ಲಕ್ಷ್ಮೀಪುರಂ

6 ಕಾಸ್ಮಾಪಾಲಿಟನ್ ಕ್ಲಬ್

7 ನೈಸರ್ಗು ಜ್ಯುಯಲರಿ ಮಾರ್ಟ್, ದೊಡ್ಡಪೇಟೆ

ಕ್ರಿಸ್ಮಸ್ ಹಬ್ಬಕ್ಕಾಗಿ ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,

ಚೋಳಿ ಪೀಸುಗಳು ಪೂನಾ, ನಾಗಪೂರ್ ಸೀರೆಗಳಿಗೆ (ಫೋನ್ ನಂ 446)

★ **M. V. ಬೋಜಯ್ಯ** ಬಿ. ಎ., [illegible] ಶೆಟ್ಟಿ ಮೈಸೂರು

ಪೋ|| ನಂ ೧೪೬ ||ವಂದೇ ಮಾತರಂ|| ಬಿಡಿಯ ಪ್ರತಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೧೬-೧೨-೧೯೫೨ [ಸಂಚಿಕೆ ೧೧೫

ಆಂಧ್ರ ಸತ್ಯಾಗ್ರಹಿ ಶ್ರೀರಾಮುಲು ನಿಧನ

ಸಂಗೀತ ಕಲಾಭಿವರ್ಧಿನಿ ಸಭಾ

ಮೈಸೂರು ೧೫

...ವಿದ್ಯಾಲಯದ ವೈಸ್ ಛಾನ್ಸೆಲರ್ ಶ್ರೀ|| ಬಿ ಎಲ್ ಮಂಜುನಾಥ್ ... ನಿನ್ನೆ ಪುರಭವನದಲ್ಲಿ ಸಂಗೀತ ಸಭೆಯ ಆರಂಭೋತ್ಸವವನ್ನು ... ರಿಸಿದರು ವಿ|| ಸುಬ್ಬಕೃಷ್ಣಯ್ಯ ನವರ ಪ್ರಾರ್ಥನೆಯಾದ ನಂತರ ಸಂಘದ ಅಧ್ಯಕ್ಷರಾದ ಸಂ||ಶಾ|| ವಿ|| ಶ್ರೀ ಕೆ ... ವಾಚಾರ್ಯರವರು ಸ್ವಾಗತ ... ಮಾಡಿ, ಸಂಗೀತ ಕಲೆಯ ಮ...ವನ್ನೂ ಅದಕ್ಕೆ ಸಕಲರೂ ಪ್ರೋ... ನೀಡಬೇಕಾದ ಅವಶ್ಯಕತೆಯ...ನ್ನೂ ತಿಳಿಸಿದರು

...ರ್ಯದರ್ಶಿಗಳಾದ ಶ್ರೀ ಟಿ ಶ್ರೀನಿ... ಅಯ್ಯಂಗಾರ್ಯರವರು ವರದಿಯ... ಒಪ್ಪಿಸಿ, ಒಂದು ತಿಂಗಳ ಹಿಂ... ಸ್ಥಾಪಿತವಾದ ಈ ಸಭೆಗೆ ಇದುವರೆಗೆ ... ಜನ ಸದಸ್ಯರಾಗಿರುವರೆಂದು ತಿಳಿ... ಇನ್ನೂ ಹೆಚ್ಚುಹೆಚ್ಚಾಗಿ ವಿದ್ಯಾಂಸ... ಸಾರ್ವಜನಿಕರೂ ಅದಕ್ಕೆ ಪ್ರೋ... ನೀಡಬೇಕೆಂದು ಕೋರಿದರು ... ಎನ್ ಚೊಕ್ಕಮ್ಮ ಮತ್ತು ... ವಲಿಯವರಿಂದ ಸುಶ್ರಾವ್ಯವಾದ ... ತವು ನಡೆಯಿತು

...ಧ್ಯಕ್ಷರು ತಮ್ಮ ಭಾಷಣದಲ್ಲಿ ಸಂ... ತ ಕಲೆಯ ಮಹತ್ವವನ್ನು ವಿವರಿಸಿ ...ವಿದ್ಯಾಲಯದಲ್ಲಿ ಸಂಗೀತದ ಪದವಿ ...ನ್ನು ಏರ್ಪಡಿಸಲು ಅದಕ್ಕೆ ಎಲ್ಲಾ ... ತ್ಸಾಹಗಳನ್ನೂ ನೀಡಲು ಪ್ರಯ... ವುದಾಗಿ ತಿಳಿಸಿದರು.

...ಘದ ಉಪಾಧ್ಯಕ್ಷರಾದ ಶ್ರೀ ಯೋ... ನರಸಿಂಹರವರಿಂದ ವಂದನಾರ್ಪಣೆ ...ಯ ನಂತರ ಸಭೆ ಮುಕ್ತಾಯವಾ...

...ತಾಲ್ಲೂಕು ಕಾಂಗ್ರೆಸ್ ಚುನಾವಣಾ ತಕರಾರು ಅರ್ಜಿ ವಜಾ

...ಲ ಭಾರತ ಕಾಂಗ್ರೆಸ್ಸಿಗೆ ಮೈ... ತಾಲ್ಲೂಕಿನಿಂದ ಇತ್ತೀಚೆಗೆ ನಡೆ... ಚುನಾವಣೆಯು ಕ್ರಮಬದ್ಧವಾಗಿಲ್ಲ ... ತಾಲ್ಲೂಕು ಕಾಂಗ್ರೆಸ್ ಕಾರ್ಯ... ಶ್ರೀ ವಿ ಚಿನ್ನಸ್ವಾಮಿಯವರು ... ಚುನಾವಣಾ ನ್ಯಾಯಾಧಿಕಾರಿ ... ಶೇಷಾದ್ರಿಯವರಲ್ಲಿ ಹೂಡಿದ್ದ ... ಅರ್ಜಿಯನ್ನು ಸ್ವೀಕರಿಸಲು ... ಅಧಿಕಾರವಿಲ್ಲವೆಂದು ಶ್ರೀ ಶೇ... ಯವರು ಸೂಚಿಸಿ, ಅರ್ಜಿಯನ್ನು ... ಗಿರುತ್ತಾರೆ ಶ್ರೀ ಚಿನ್ನಸ್ವಾಮಿ ... ಈಗ ನೇರವಾಗಿ ಅಖಿಲ ಭಾರ... ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ... ಅಪೀಲು ಹಾಕಲಿರುವರೆಂದು ...ಗಿದೆ

ಬಹಿರಂಗ ಸಭೆ

...ತ್ಯ ಪ್ರಾಂತ್ಯ ರಚನೆಗಾಗಿ ಉಪ... ...ಮ್ಮರ ಹೂಡಿ, ಹುತಾತ್ಮರಾದ ಪೊಟ್ಟಿ ಶ್ರೀ ರಾಮುಲುರವರ ಮರಣದ ... ತಾಪ ಸೂಚಿಸಿ, ಆಂಧ್ರ ಪ್ರಾಂ... ರಚನೆಯ ಚಳುವಳಿಗೆ ಬೆಂಬಲ ... ವಿವಿಧ ಭಾಷಾವಾರು ಪ್ರಾಂತ... ರಚನೆ...ಗೆ ಒತ್ತಾಯ ಮಾಡಲು ... ಪಕ್ಷದ ಆಶ್ರಯದಲ್ಲಿ ನಾಳೆ ... ಘಂಟೆಗೆ ರಾಜಧಾನಿಯ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ... ಏರ್ಪಡಿಸಲಾಗಿದೆ.

ಟೆಲಿಫೋನ್ ದರ ಹೆಚ್ಚಿಸುವುದಕ್ಕೆ ಪ್ರತಿಭಟನೆ

ಮೈಸೂರು ೧೫

ನೆನ್ನೆ ದಿನ ನಗರದ ಪತ್ರಿಕೋದ್ಯೋಗಿಗಳ ಸಂಘದ ಸಭೆಯು ನಡೆದು, ಬರುವ ಜನವರಿ ತಿಂಗಳಿಂದ ಟೆಲಿಫೋನ್ ದರಗಳನ್ನು ತಿಂಗಳಿಗೆ ೨೫ ರೂ ಗಳಿಂದ ೩೦ ರೂ ಗೆ ಹೆಚ್ಚಿಸುವ ಸೂಚನೆಯನ್ನು ತೀವ್ರವಾಗಿ ಪ್ರತಿಭಟಿಸಿ ನಿರ್ಣಯ ಮಾಡಲಾಯಿತು. ಈಗಿರುವ ಟೆಲಿಫೋನ್ ಬಾಡಿಗೆ ಮತ್ತು ಟ್ರಂಕ್ ಕಾಲ್ ದರಗಳು ವಿಪರೀತವಾಗಿರುವುದರಿಂದ ಅವುಗಳನ್ನು ಕಡಿಮೆ ಮಾಡಬೇಕೆಂದೂ ಕೋರಲಾಯಿತು ಈ ವಿಷಯದಲ್ಲಿ ಅಗತ್ಯವಾದ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಭಾರತದ ಪಾರ್ಲಿಮೆಂಟಿನ ಮೈಸೂರು ಸಂಸ್ಥಾನದ ಸದಸ್ಯರುಗಳನ್ನು ಕೋರಬೇಕೆಂದು ನಿರ್ಣಯ ಮಾಡಲಾಯಿತು. ಸಧ್ಯದಲ್ಲಿಯೇ ಬಹಿರಂಗ ಸಭೆಯೊಂದನ್ನು ಕರೆದು ಈ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನೂ ವ್ಯಕ್ತಪಡಿಸಬೇಕೆಂದೂ ಗೊತ್ತು ಮಾಡಲಾಯಿತು

ಮೈಸೂರು ವಿಶ್ವ ವಿದ್ಯಾಲಯದಲ್ಲಿ ಜರ್ಮನ್ ಕಲಿಯಲು ಜರ್ಮನ್ ಪ್ರೊಫೆಸರುಗಳು

ಮೈಸೂರು ವಿಶ್ವವಿದ್ಯಾಲಯದಲ್ಲಿ ಭಾಷಾಂತರ ಪದ್ಧತಿಯನ್ನು ಕಲಿಯಲು ರಂಗೂನಿನ ವಿಶ್ವವಿದ್ಯಾಲಯದ ಪ್ರೊಫೆಸರುಗಳಾದ ಮೈಯರ್, ಡಾ ಮೂಂಗ್, ಪೋತಾ ಮತ್ತು ಯರ್ಕರವರುಗಳು ಇಲ್ಲಿಗೆ ಕಳುಹಿಸಲ್ಪಡಲಿರುವರು ಬರ್ಮದ ಭಾಷೆಗೆ ವಿಶ್ವವಿದ್ಯಾಲಯದ ಪುಸ್ತಕಗಳನ್ನು ೩ ವರ್ಷಗಳಲ್ಲಿ ತರ್ಜುಮೆ ಮಾಡಬೇಕೆಂದು ಅಲ್ಲಿನ ಸೆನೆಟ್ ತೀರ್ಮಾನಿಸಿದೆ

ಷಾನ ಮಾಡುವುದಿಲ್ಲವೆಂದು ಸರ್ಕಾರಿ ನೌಕರರ ಪ್ರತಿಜ್ಞೆ

ಮಧ್ಯ ಪ್ರದೇಶದಲ್ಲಿ ಸರ್ಕಾರಿ ನೌಕರಿಗಳಿಗೆ ಹೊಸದಾಗಿ ನೇಮಿಸಿಕೊಳ್ಳುವವರೆಲ್ಲರಿಂದಲೂ ಇನ್ನು ಮುಂದೆ ಮದ್ಯಪಾನ ಮಾಡುವುದಿಲ್ಲವೆಂಬ ಪ್ರತಿಜ್ಞೆಗೆ ರುಜು ಪಡೆಯಲು ಅಲ್ಲಿನ ಸರ್ಕಾರವು ನಿಶ್ಚಯಿಸಿರುವುದಾಗಿ ಗೊತ್ತಾಗಿದೆ.

ಪೊಟ್ಟಿ ಶ್ರೀರಾಮುಲುರವರ ನಿಧನ

ಆಂಧ್ರ ಪ್ರಾಂತ ಸ್ಥಾಪನೆಗಾಗಿ ಕಳೆದ ೫೮ ದಿನಗಳಿಂದ ಉಪವಾಸ ವ್ರತ ಕೈಗೊಂಡಿದ್ದ ಪೊಟ್ಟಿ ಶ್ರೀರಾಮುಲು ರವರು ನೆನ್ನೆ ರಾತ್ರಿ ೧೧ ೨೦ ಘಂಟೆಯಲ್ಲಿ ನಿಧನ ಹೊಂದಿದರೆಂಬ ವಿಷಾದ ವಾರ್ತೆ ಬಂದಿರುತ್ತದೆ ಅವರಿಗೆ ೫೧ ವರ್ಷ ವಯಸ್ಸಾಗಿತ್ತು

ನೆನ್ನೆ ರಾತ್ರಿ ೭ ೪೦ ರ ಹೊತ್ತಿಗೆ ಅವರಿಗೆ ಪ್ರಜ್ಞೆ ತಪ್ಪಿತು ಮರಣದಯ್ಯೆಟಲ ನಾಂಬಮೂರ್ತಿ, ಅವರ ಸೋದರಳಿಯ, ಅತನ ಹೆಂಡತಿ ಮತ್ತು ಮಗು ಇಷ್ಟಜನರು ವೈದ್ಯರುಗಳೊಡನೆ ಇದ್ದರು ಹಿಂದೆ ೨ ಅಥವಾ ೩ ಬಾರಿ ಶ್ರೀರಾಮುಲುರವರು ಉಪವಾಸ ಮಾಡಿದ್ದರು ಮಹಾತ್ಮಾಗಾಂಧಿಜಿಯವರ ಮರಣಾನಂತರ ಸೇವಾ ಗ್ರಾಮದಲ್ಲಿ ಅವರು ಪ್ರತಿ ತಿಂಗಳಲ್ಲೂ ಒಂದು ದಿನ ಹರಿಜನ ದಿನವನ್ನು ಆಚರಿಸಬೇಕೆಂದು ಕೋರಿ ಉಪವಾಸ ಮಾಡಿದ್ದರು. ೧೯೩೦ ರ ಉಪ್ಪಿನ ಸತ್ಯಾಗ್ರಹ, ಕಾನೂನು ಭಂಗ ಚಳುವಳಿ, ಕ್ವಿಟ್ ಇಂಡಿಯಾ ಆಂದೋಳನ ಮತ್ತು ವೈಯಕ್ತಿಕ ಸತ್ಯಾಗ್ರಹದಲ್ಲಿ ಅವರು ಭಾಗವಹಿಸಿ ಎರಡು ಬಾರಿ ಕಾರಾಗೃಹ ವಾಸವನ್ನು ಅನುಭವಿಸಿದ್ದರು

ಭಾರತದ ಸಲಹೆಗೆ ಚೀಣಾದ ತಿರಸ್ಕಾರ

ಕೋರಿಯಾ ಶಾಂತಿ ಸ್ಥಾಪನೆ ಸಂಬಂಧವಾಗಿ ಭಾರತವು ಸೂಚಿಸಿದ" ಯುದ್ಧ ಸ್ತಂಭನ ಯೋಜನೆ ನಿರ್ಣಯಕ್ಕೆ ವಿಶ್ವ ಸಂಸ್ಥೆಯಲ್ಲಿ ಬಹುಮತವು ದೊರೆತು ಅನು ಅಂಗೀಕೃತವಾಗಿತ್ತಷ್ಟೆ ಅಮೆರಿಕದ ವಿದೇಶಾಂಗ ಸಚಿವ ಡೀನ್ ಆಚಿಸನ್‌ರವರು ಕಳೆದ ೫ ನೇ ತಾ|| ಪೆಲ್ಲಂಡ ಯೋಜನೆಯನ್ನು ಪೀಕಿಂಗ್ ಸರ್ಕಾರಕ್ಕೆ ಕಳುಹಿಸಿದ್ದರು ಚೀಣದ ಪ್ರಧಾನಿ ಚೌ-ಎನ್-ಲೈ ರವರು ನೆನ್ನೆ ಅದನ್ನು ತಿರಸ್ಕರಿಸಿ, ಈ ಹೊಸ ಸಲಹೆಯು ಕಳೆದ ಅಕ್ಟೋಬರಿನಲ್ಲಿ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯ ರಾಜಕೀಯ ಸಮಿತಿಯಲ್ಲಿ ೨೧ ರಾಷ್ಟ್ರಗಳು ಮಂಡಿಸಿದ ನಿರ್ಣಯದ ಪ್ರತೀಕವೆಂದು ಅವರು ತಿಳಿಸಿರುವರು.

ಜಮ್ಮು ಚಳುವಳಿಗಾರರ ಮೇಲೆ ಗುಂಡು

ಜಮ್ಮು ನಗರಕ್ಕೆ ೩೦ ಮೈಲಿ ದೂರದ ಚಾಂಬ್ ಎಂಬಲ್ಲಿ ಮೊನ್ನೆ ೮೦೦ ಜನರ ಹಿಂಸಾತ್ಮಕ ಗುಂಪೊಂದು ಅಲ್ಲಿನ ತಾಲ್ಲೂಕು ಕಛೇರಿ ಮತ್ತು ಪೊಲೀಸು ಕಟ್ಟಡಗಳ ಮೇಲೆ ಧಾಳಿ ನಡೆಸಿದಾಗ ಪೊಲೀಸರು ಗುಂಡು ಹಾರಿಸಿದರೆಂದು ವರದಿಯಾಗಿದೆ ಪ್ರದರ್ಶನಕಾರರ ಬಳಿ ಲಾಠಿ, ಭರ್ಜಿ, ಮತ್ತು ಕೊಡಲಿಗಳಿದ್ದುವೆಂದೂ, ಅವರು ಸದರಿ ಕಛೇರಿಗಳ ಮೇಲೆ ಪ್ರಜಾ ಪರಿಷತ್ತಿನ ಬಾವುಟವನ್ನು ಏರಿಸಲು ಪ್ರಯತ್ನಿಸಿ, ಅಲ್ಲಿಂದ ಚದುರಲು ನಿರಾಕರಿಸಿದರೆಂದೂ ಹೇಳಲಾಗಿದೆ ಇಬ್ಬರು ಪೊಲೀಸಿನವರ ತಲೆಗೆ ಕೊಡಲಿ ಪೆಟ್ಟು ತಗುಲಿದೆಯೆಂದೂ ಸಬ್ ಇನ್ಸ್‌ಪೆಕ್ಟರ್ ಮತ್ತು ಇನ್ಸ್‌ಪೆಕ್ಟರ ಮೇಲೆ ದುಂಡಾವರ್ತಿ ನಡೆಸಲಾಯಿತೆಂದೂ ಹೇಳಲಾಗಿದೆ ಗುಂಡಿನಲ್ಲಿ ಸತ್ತವನೊಬ್ಬ ಪೇಕಲ... ಒಬ್ಬನ ಶರೀರವನ್ನು ಜಮ್ಮುವಿನಲ್ಲಿ ಪ್ರದರ್ಶನದ ಮೂಲಕ ಸ್ಮಶಾನಕ್ಕೆ ಕೊಂಡೊಯ್ಯಲಾಯಿತು

ಕಮ್ಯೂನಿಸ್ಟ್ ಖೈದಿಗಳ ದಂಗೆಯಲ್ಲಿ ೮೫ ಮರಣ

ಕೋರಿಯಾ ನಾಗರೀಕ ಕಮ್ಯೂನಿಸ್ಟ್ ಖೈದಿಗಳು ನೆನ್ನೆ ಪೊಂಗಾಂ ಶಿಬಿರದಲ್ಲಿ ದಂಗೆ ನಡೆಸಿದುದನ್ನು ಅಡಗಿಸಲು ವಿಶ್ವಸಂಸ್ಥೆ ಪಡೆಗಳು ಕೈಗೊಂಡ ಕ್ರಮದಿಂದ ೮೫ ಜನ ಖೈದಿಗಳು ಮಡಿದಿರುತ್ತಾರೆ. ೧೧೩ ಮಂದಿಗೆ ಗಾಯಗಳಾಗಿವೆ ಅಮೆರಿಕ ಸೈನಿಕರಿಬ್ಬರು ಮತ್ತು ದಕ್ಷಿಣ ಕೊರಿಯಾ ಸೈನಿಕರಿಬ್ಬರಿಗೆ ಗಾಯಗಳಾದುವು ೩ ಸಾವಿರ ಜನ ಖೈದಿಗಳು ದಂಗೆಯಲ್ಲಿ ಭಾಗವಹಿಸಿದ್ದರೆಂದು ಹೇಳಲಾಗಿದೆ ಕೋಜೆ ಶಿಬಿರದಿಂದ ಇವರನ್ನು ಪೊಂಗಾಮಿಗೆ ವರ್ಗಾಯಿಸಲಾಗಿದ್ದಿತು

ಜ್ಯೋತಿಷ್ಯರಿಗೆ ಉಪಯೋಗವಾಗುವ ಹೊಸ ಗಡಿಯಾರ

ನಾಗರದ ಜ್ಯೋತಿಷ್ಯರಾದ ಶ್ರೀ ಸೂರ್ಯನಾರಾಯಣ ಜೋಯಿಸರು ಜ್ಯೋತಿಷ್ಯರಿಗೆ ಉಪಯುಕ್ತವಾದ ಒಂದು ಹೊಸ ಗಡಿಯಾರವನ್ನು ತಯಾರಿಸಿರುವರೆಂದೂ, ಅದು ಅಲಾರಂ ಹೊಡೆಯುವುದು ಮತ್ತು ಘಂಟೆ, ನಿಮಿಷವನ್ನು ತೋರಿಸುವುದಲ್ಲದೆ ಸೂರ್ಯನ ಚಾರ, ನಕ್ಷತ್ರ ಮತ್ತು ಪಾದ, ಘಟಿಕಾ ಮತ್ತು ವಿಘಟಿಕಾ, ಸೂರ್ಯೋದಯಾಸ್ತ, ತಾತ್ಕಾಲಿಕ ಲಗ್ನ ಮತ್ತು ಅವುಗಳ ಸಪ್ತವರ್ಗಗಳು, ಲಗ್ನ ಗತಘಟಿ ಮುಂತಾದುವನ್ನು ತಿಳಿಸಬಲ್ಲದೆಂದೂ ಹೇಳಲಾಗಿದೆ

ವಿಜಯವಾಡಾ ರೈಲುಗಳಿಗೆ ಅಡ್ಡಿ

ಆಂಧ್ರ ಪ್ರಾಂತದ ಚಳುವಳಿಗಾರರು ನೆನ್ನೆ ವಿಜಯವಾಡಕ್ಕೆ ಬಂದ ಎಲ್ಲಾ ರೈಲುಗಳನ್ನೂ ಮುಂದೆ ಹೋಗದಂತೆ ತಡೆದರೆಂದೂ, ಎಲೂರು ಮತ್ತು ರಾಜಮಹೇಂದ್ರಿಯಲ್ಲೂ ಸಹ ರೈಲುಗಳ ಸಂಚಾರಕ್ಕೆ ಅಡ್ಡಿಯಾಗುತ್ತಿರುವುದಾಗಿಯೂ ಗೊತ್ತಾಗಿದೆ

ಹರಿಕಥೆ

ಮೈಸೂರು ಮಂಡಿ ಮೊಹಲ್ಲಾ ಕಾಳಪ್ಪನಗುಡಿ ಬೀದಿ ಶ್ರೀ ಚಾಮೇಶ್ವರ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ವಿ ರಾಮಸ್ವಾಮಿ ನಾಯ್ಡು ಮತ್ತು ಆರ್ ಗುರುರಾಜುಲು ನಾಯ್ಡುರವರುಗಳಿಂದ ಇಂದ್ರಕೀಲನೆಂಬ ಶಿವಕಥೆ ನಡೆಯುತ್ತೆ.

ಮೊರಾದಾಬಾದಿನಲ್ಲಿ ಭಾರಿ ಹೊಡೆದಾಟ

ಮೊರಾದಾಬಾದಿನಲ್ಲಿ ಕಳೆದ ಶುಕ್ರವಾರ ರಾತ್ರಿ ಒಬ್ಬ ರಿಕ್ಷಾ ಎಳೆಯುವವನು ಗಾಡಿಯನ್ನೆಳೆಯುತ್ತಿದ್ದಾಗ ಅದರ ಚಕ್ರವು ಒಬ್ಬ ಪಾದಚಾರಿಯ ಮೇಲೆ ಹರಿಯಲು ಅವರಿಬ್ಬರಿಗೂ ಜಗಳವಾಗಿ ಕಡೆಗೆ ಎರಡು ಕಡೆಯೂ ಜನರು ಜಮಾಯಿಸಿ ಜಗಳವು ಪ್ರಬಲಿಸಿತು. ಎಳು ಜನರಿಗೆ ತೀವ್ರಗಾಯಗಳಾದುವು ೪೨ ಜನರನ್ನು ಬಂಧಿಸಲಾಗಿದೆ

ಭಾರತಕ್ಕೆ ಚಾರ್ಲಿ ಚಾಪ್ಲಿನ್

ಭಾರತಕ್ಕೆ ಸುಪ್ರಸಿದ್ಧ ಬ್ರಿಟಿಷ್ ನಟರಾದ ಚಾರ್ಲಿ ಚಾಪ್ಲಿನ್‌ರವರು ಸದ್ಯದಲ್ಲೇ ಭೇಟಿ ಕೊಡಲು ಆಲೋಚಿಸುತ್ತಾರೆ

ವಯಸ್ಕರ ವಿದ್ಯಾಭ್ಯಾಸ ಶಾಲೆಯ ಪ್ರಾರಂಭೋತ್ಸವ

ರಾಜಧಾನಿಯ ಪಡುವಾರಹಳ್ಳಿಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಮೊನ್ನೆ ಶ್ರೀ ಎಚ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ವಯಸ್ಕರ ವಿದ್ಯಾಭ್ಯಾಸದ ಶಾಲೆಯನ್ನು ತೆರೆಯಲಾಯಿತು. ಶ್ರೀ ಎಂ. ಯಮುನಾಚಾರ್ಯರು ಅಕ್ಷರ ಪ್ರಚಾರದ ವಿಷಯವಾಗಿ ಹಲವಾರು ಮಾತುಗಳನ್ನು ತಿಳಿಸಿದರು. ವಿದ್ವಾನ್ ಶ್ರೀ ಪಾದಯ್ಯನವರಿಂದ ಹಳ್ಳಿಯ ಅಭಿವೃದ್ಧಿಯ ವಿಚಾರವಾಗಿಯೂ ಮತ್ತು ಅಕ್ಷರ ಪ್ರಚಾರದ ವಿಷಯವಾಗಿಯೂ ಭಾಷಣ ನಡೆಯಿತು. ಮತ್ತು ವಯಸ್ಕರ ಶಿಕ್ಷಣ ಸಮಿತಿಯವರು ಚಲನ ಚಿತ್ರಗಳನ್ನು ತೋರಿಸಿದರು

ರಾಷ್ಟ್ರೀಯ ವ್ಯಾಸಂಗ ಗೋಷ್ಠಿಗೆ ಮೈಸೂರಿನ ಪ್ರತಿನಿಧಿಗಳು

ಹೊಸದಾಗಿ ಅಕ್ಷರ ಕಲಿತ ವಯಸ್ಕರಿಗೆ ಒದಗಿಸಬೇಕಾದ ಸಾಹಿತ್ಯದ ಬಗ್ಗೆ ಮೂರನೆಯ ರಾಷ್ಟ್ರೀಯ ವ್ಯಾಸಂಗ ಗೋಷ್ಠಿಯು ದೆಹಲಿ ಬಳಿ ಜಾಮಿಯಾ ನಗರದಲ್ಲಿ ಈ ತಿಂಗಳು ೨೦ ನೇ ತಾರೀಕಿನಿಂದ ೨೭ ನೆಯ ತಾರೀಕಿನ ವರೆಗೆ ನಡೆಯುತ್ತದೆ ಪ್ರಧಾನ ನೆಹರೂರವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸುವರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಮಾದಯ್ಯಗೌಡರು ಗೋಷ್ಠಿಯ ಅಧ್ಯಕ್ಷತೆ ವಹಿಸುತ್ತಾರೆ. ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನಾಧಿಕಾರಿಗಳಾದ ಶ್ರೀ ಟಿ. ಎ. ತಿಮ್ಮೇಗೌಡರೂ, ಪ್ರಧಾನ ಸಂಪಾದಕರಾದ ಶ್ರೀ ಆರ್ ಎ. ಶ್ರೀನಿವಾಸಮೂರ್ತಿಯವರೂ ಗೋಷ್ಠಿಯಲ್ಲಿ ಭಾಗವಹಿಸಲು ನೆನ್ನೆ ದಿನ ದೆಹಲಿಗೆ ತೆರಳಿದರು

ಪಂಪನ ಕಲಿಕರ್ಣ

(ಕರ್ಣ ರಸಾಯನದ ನೋಟ್ಸ್)

ಶ್ರೀ ಜಿ. ಬ್ರಹ್ಮಪ್ಪನವರಿಂದ

ಅನುವಾದಿತವಾಗಿರುವುದು

ಜೂನಿಯರ್ ಮತ್ತು ಸೀನಿಯರ್ ಇಂಟರ್ ವಿದ್ಯಾರ್ಥಿಗಳಿಗೆ ಉಪಯುಕ್ತವಾದುದು.

ಬೆಲೆ 1-4-0

ಜೈನ ಸಾಹಿತ್ಯ ಪ್ರಚಾರ ಸಂಘ,

ಜಯಾಜಿರಾವ್ ರಸ್ತೆ,

ಶಾಂತಿನಾಥ ದೇವಾಲಯ : ಮೈಸೂರು

ಅಂತರ ರಾಷ್ಟ್ರೀಯ ಸಮಾಜ ಸೇವಾ ಸಮ್ಮೇಳನ

ಅಂತರ ರಾಷ್ಟ್ರೀಯ ಸಮಾಜ ಸೇವಾ ಕಾರ್ಯದ ಸಮ್ಮೇಳನದ ಆರಂಭೋತ್ಸವವನ್ನು ಮೊನ್ನೆ ಮದರಾಸಿನಲ್ಲಿ ಅಲ್ಲಿನ ಗವರ್ನರ್ ಶ್ರೀಪ್ರಕಾಶರವರು ನೆರವೇರಿಸಿದರು. ಬೊಂಬಾಯಿನ ಸಚಿವರಾದ ಡಾ|| ಜೀವರಾಜ ಮೆಹತಾರವರು ಅಧ್ಯಕ್ಷತೆ ವಹಿಸಿದ್ದರು ವಿಶ್ವದ ೩೦ ರಾಷ್ಟ್ರಗಳ ೧೩೦೦ ಪ್ರತಿನಿಧಿಗಳು ಭಾಗವಹಿಸಿದ್ದರು

ನಂಜನಗೂಡು ಕರ್ನಾಟಕ ಸಂಘಕ್ಕೆ ಕಾಣಿಕೆ

ಶ್ರೀ ಎಂ ನಾಗರಾಜರಾವ್ ಅವರಿಗೆ ಶ್ರೀಮತಿ ಕೆ. ನಾಗರತ್ನಾಬಾಯಿಯವರನ್ನು ಕೊಟ್ಟು ಮೈಸೂರಿನಲ್ಲಿ ವಿವಾಹ ಮಹೋತ್ಸವವು ನಡೆದ ಸಂದರ್ಭದಲ್ಲಿ ಕಳೆದ ರವಿವಾರ ಶ್ರೀಯುತರು ಕರ್ನಾಟಕ ಸಂಘಕ್ಕೆ ೧೦ ರೂಪಾಯಿಗಳನ್ನು ಕಾಣಿಕೆಯಾಗಿ ಸಲ್ಲಿಸಿದ್ದಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಸಂಗೀತ, ಜಿ ವಿ ಸೀತಾರಾಂ ಮಧ್ಯಾಹ್ನ ವನಿತಾ ವಿಹಾರ ಮಕ್ಕಳ ಕಾರ್ಯಕ್ರಮ ಸಂಜೆ ೬-೦ ಸಂಗೀತ, ಜಿ. ವಿ. ಸೀತಾರಾಂ ೬-೧೦ ಬಾಲ ಜಗತ್, ಮಕ್ಕಳ ಕಾರ್ಯಕ್ರಮ ೭-೩೦ ಗೀತೆಗಳು, ಕೆ ವಿ ಶ್ರೀನಿವಾಸ ... ನಮ್ಮ ಪುಸ್ತಕ ಭಂಡಾರ ಪುಸ್ತಕ ವಿಮರ್ಶೆ ವೀಣಾ ವಾದನ, ಆರ್ ಎಸ್ ಕೇಶವಮೂರ್ತಿ ... ಕನ್ನಡ ಕವನಗಳ ಗಾಯನ, ಕೆ ಎಸ್ ನರಸಿಂಹಸ್ವಾಮಿ ... ನಮ್ಮ ಮೆಚ್ಚಿನ ಗೀತೆಗಳು

ENGLISH CLASSES FOR

B.A & B.Sc. (1952 Texts)

Begin on 20-12-52

Admissions open for the

B.Sc. Mathematics classes

CITY TUTORIAL COLLEGE,

Near V. V. Mark t, Mysore

Edited, Printed and Published by A. R. Nagarajan, at Sadhvi Press, D. Subbiah Road, Mysore

ಪಾಕಿಸ್ತಾನದ ಕೈಮಗ್ಗದ ಕಾರ್ಖಾನೆಗಳ ಬಂದು

ಪಾಕಿಸ್ತಾನದ ಕೈಮಗ್ಗದ ಕಾರ್ಖಾನೆಗಳೆಲ್ಲವೂ ವಿದೇಶೀ ನೂಲುಗಳನ್ನೇ ಅವಲಂಬಿಸಿದ್ದವೆಂದೂ, ಈಗ ಅದರ ಅಭಾವವುಂಟಾಗಿರುವುದರಿಂದ ಕಾರ್ಖಾನೆಗಳೆಲ್ಲವೂ ಮುಚ್ಚಲ್ಪಡುತ್ತವೆಂದೂ ಹೇಳಲಾಗಿದೆ

ಪೌರ ಸಭಾಧ್ಯಕ್ಷತೆಗೆ ಸದಸ್ಯರೆಲ್ಲರ ಸ್ಪರ್ಧೆ

ಪಾಕಿಸ್ತಾನದಲ್ಲಿ ಸಿಂಧ್ ಪ್ರಾಂತ್ಯದ ಹೈದರಾಬಾದಿನ ಪೌರಸಭೆಗೆ ಚುನಾಯಿತರಾಗಿರುವ ೪೦ ಮಂದಿ ಸದಸ್ಯರೂ ಈ ಸಲದ ಪೌರಸಭಾಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿರುವರೆಂದು ತಿಳಿದು ಬಂದಿದೆ

PLEASE REMEMBER !

FROM TO-MORROW :: 17 12-1952

AT SRI GAYATHRI TALKIES

ನಾಟ್ಯಕಲಾಭೂಷಣ ವೈಜಯಂತಿಮಾಲಾರವರ ಅತ್ಯಮೋಘ ನರ್ತನ

ಕಾಸ್ಮೋಪಾಲಿಟನ್ ಕ್ಲಬ್

ಸುವರ್ಣ ಮಹೋತ್ಸವದ

ಅಂಗವಾಗಿ

ಮೈ ಸೂ ರು

ಕ್ರಾಫರ್ಡ್ ಹಾಲಿನಲ್ಲಿ

21-12-52ನೇ ಭಾನುವಾರ

ಸಂಜೆ 6 ಘಂಟೆಗೆ

—: ಟಿಕೆಟ್ ದರ :—

ರೂ 20, 10, 5, 3, 2, 1

ಸ್ತ್ರೀಯರಿಗೆ ಪ್ರತ್ಯೇಕ

ಸ್ಥಳ ಏರ್ಪಡಿಸಿದೆ

ಎಂ. ಎನ್. ಸೋಮಶೇಖರ್,

ಸೆಂಟರ್ ಇನ್ ಛಾರ್ಜ್

ಟಿಕೆಟ್ ದೊರೆಯುವ ಸ್ಥಳ —

1 ಕಾರೊನೇಷನ್ ಜ್ಯುಯಲರಿ ಮಾರ್ಟ್ ಸಯ್ಯಾಜಿರಾವ್ ರೋಡ್

2 ಕಾರೊನೇಷನ್ ಕ್ಲಾತ್ ಎಂಪೋರಿಯಂ, ಅಶೋಕ ರಸ್ತೆ

3 ಬಾದಾಮಿ ಸ್ಟೋರ್ಸ್ ... ಪ್ರೆಸ್, ಬಂಟಿಕೊಪ್ಪಲು

4 ಎಚ್. ಪುಟ್ಟಣ್ಣ ಮರ್ಚೆಂಟ್ ... ಮಾರ್ಕೆಟ್ ಸರ್ಕಲ್

5 ಬಲ್ಲಾಳ್ ಹೋಟೆಲ್ ಲಕ್ಷ್ಮೀಪುರಂ

6 ಕಾಸ್ಮೋಪಾಲಿಟನ್ ಕ್ಲಬ್

7 ಮೈಸೂರು ಜ್ಯುಯಲರಿ ಮಾರ್ಟ್ ದೊಡ್ಡಪೇಟೆ

ಪೋ. ನಂ 79೭ ॥ವಂದೇ ಮಾತರಂ॥ ಒಂದು ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೦] ಬುಧವಾರ ೧೭-೧೨-೧೯೫೨ [ಸಂಚಿಕೆ ೧೧೬

ನೆಲ್ಲೂರಲ್ಲಿ ಗುಂಡಿನಿಂದ ಮೂವರ ಮರಣ

ಸುಪ್ರೀಂ ಕೋರ್ಟಿಗೆ ಹೋಗಲು ನಂದೀ

ಬಸಪ್ಪನವರ ಅರ್ಜಿ

ಬೆಂಗಳೂರು ೧೭.

...ಯರ ದಾಸ್ತಾನು ಬಗ್ಗೆ ಅಕ್ರಮ ...ದ ಲೆಕ್ಕಗಳನ್ನು ಕೊಟ್ಟಿರೆಂದು ...ನ ಹೈಕೋರ್ಟಿನವರಿಂದ ...೦೦ ರೂ ಗಳ ದಂಡವನ್ನು ವಿಧಿಸಲ್ಪಟ್ಟಿರುವ, ಮೈಸೂರಿನ ಶ್ರೀ ಕೆ. ನಂದೀಬಸಪ್ಪನವರು ಶಿಕ್ಷೆಯ ವಿರುದ್ಧವಾಗಿ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಲು ಸರ್ಟಿಫಿಕೇಟ್ ಬೇಕೆಂದು ಸಲ್ಲಿಸಿದ್ದ ಅರ್ಜಿಯು ಪ್ರಧಾನ ನ್ಯಾಯಾಧೀಶ, ಶ್ರೀ ... ನಂಜಪ್ಪ ಮತ್ತು ನ್ಯಾಯಾಧೀಶ ಶ್ರೀ ... ಪಾಳಿ. ದೇವಮೂರ್ತಿಯವರ ... ವಲ್ಲಿ ವಿಚಾರಣೆಗೆ ಬಂದ ಕಾಲ... ಸಂದರ್ಭವಿದ್ದ ಈ ...ಯಲ್ಲಿ ಕೋರ್ಟಿನವರು ಅ... ವಯಸ್ಸಿನ ಕಾರಣದಿಂದ ...ವಾಗಿ ವರ್ತಿಸಿದ್ದರೂ ಸಹ ಸ... ಟಿನಾಗಿ ಅರ್ಜಿಯು ಬಂದ ಬ... ನ್ಯಾಯಾಧೀಶರು ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರು.

...ರವರಿಂದ ಸಲಹೆಯನ್ನು ... ಂತರ ತಾವು ತಮ್ಮ ಅಭಿಪ್ರಾಯವನ್ನು ಹೇಳಬೇಕಾಗಿರುವುದೆಂದು ಅಡ್ವೊಕೇಟ್ ಜನರಲ್ಲರಾದ ಶ್ರೀ ಎ ... ಸೋಮನಾಥ ಅಯ್ಯರ್‌ರವರು ... ಕಾಲಾವಕಾಶ ಬೇಕೆಂದು ಕೇಳಿ... ಅದರಂತೆ ಮೊಖದ್ದಮೆಯನ್ನು ಮುಂದೆ ಹಾಕಲಾಯಿತು.

ಆಂಧ್ರ ಪ್ರಾಂತ ರಚನೆಗಾಗಿ ನೆಹರೂರವರ ಕಾರ್ಯಕ್ರಮ

...ವ ಹರಲಾಲ್, ಸರ್ದಾರ್ ಪಟೇಲ್ ... ವತ್ತು ಡಾ॥ ಪಟ್ಟಾಭಿಯವರ ಸ... ವರದಿಯ ಆಧಾರದ ಮೇಲೆ ಆಂಧ್ರ ಪ್ರಾಂತ ರಚನೆಗಾಗಿ ಪೂರ್ವ ... ಕಾರ್ಯಕ್ರಮವನ್ನು ಕೈಗೊಂಡಿರು... ಪ್ರಧಾನಿ ನೆಹರೂರವರು ಪಾ... ಮೆಂಟಿನಲ್ಲಿ ನೆನ್ನೆ ತಿಳಿಸಿದರು. ಮ... ಸ್ ನಗರವನ್ನು ಬಿಟ್ಟು ಉಳಿದ ... ವಾದ ಪ್ರದೇಶಗಳನ್ನು ಸೇ... ಆಂಧ್ರ ಪ್ರಾಂತವನ್ನು ರಚಿಸುವ ... ಕೈಗೊಳ್ಳಲಾಗುವುದು. ರಾ... ಪರಿಷತ್ತಿನಲ್ಲಿ ಉಪಾಧ್ಯಕ್ಷರಾದ ಡಾ॥ ...ಕೃಷ್ಣರವರು ನೆಹರೂರವರ ಹರ... ಈ ವಿಷಯವನ್ನು ಪ್ರಕಟಿಸಿ, ಮ... ಸ್ ಸರ್ಕಾರದೊಡನೆ ನೆಹರೂರ... ಆಗಲೇ ಮುಂದಿನ ಕ್ರಮದ ... ಸಮಾಲೋಚನೆ ನಡೆಸುತ್ತಿರುವ... ತಿಳಿಸಿದರು. ಶ್ರೀ ರಾಮುಲುರ... ದೇಶಪ್ರೇಮವನ್ನು ಅವ... ಅವರ ನಿಧನದಿಂದ ರಾಷ್ಟ್ರ... ನಷ್ಟವಾಗಿರುವುದೆಂದು ಹೇಳಿದರು.

ಮೆಟ್ರೋಪಾಲಿಟನ್ ಕಾಲೇಜು ಸಂಘ

...ಸಿಯ ಮೇಲ್ಕಂಡ ಸಂಘದ ... ಮಹಾರಾಜಾ ಕಾಲೇಜಿನ ...ಸ್ಟೆಂಟ್ ಪ್ರೊಫೆಸರ್ ಶ್ರೀ ಜಿ ರಾಮ... ಯವರು ನಾಳೆ ಸಂಜೆ ೬ ಗಂ... ಪಣ ಮಾಡುವರು. ಶ್ರೀ ಶೈಲಂ... ಂದ ಗಾನ ಸುಧೆಯನ್ನು ಏರ್ಪಡಿ...

ತತ್ವಜ್ಞಾನ ಸಮ್ಮೇಳನ

ಸ್ವಂ. ಸು ಪ್ರೋ॥] ಬೆಂಗಳೂರು ೧೭

ಈ ತಿಂಗಳು ೨೭. ೨೮ ಮತ್ತು ೨೯ ನೇ ತಾರೀಖುಗಳಲ್ಲಿ ಭಾರತದ ತತ್ವಜ್ಞಾನ ಸಮ್ಮೇಳನವು ಮೈಸೂರಿನಲ್ಲಿ ನಡೆಯುವುದು. ಭಾರತದ ಉಪಾಧ್ಯಕ್ಷರಾದ ಡಾ॥ ರಾಧಾಕೃಷ್ಣರವರು ೨೬ ನೇ ತಾರೀಖು ಬೆಂಗಳೂರಿಗೆ ಬಂದು ಮಾರನೇದಿನ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರಿಗೆ ತೆರಳುವರು.

○ ಈ ರಾತ್ರಿ ಮುಖ್ಯ ಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಮದ್ರಾಸಿಗೆ ತೆರಳಿ ೨೦ ನೇ ತಾರೀಖು ವಾಪಸು ಬರುವರು.

○ ಬೊಂಬಾಯಿಗೆ ತೆರಳಿದ್ದ ಶ್ರೀ ಟಿ ಸಿದ್ಧಲಿಂಗಯ್ಯನವರು ಈ ದಿನ ...ಂದಿರುಗಿದರು.

○ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪತಂಜಲಿಶಾಸ್ತ್ರಿಯವರು ಈ ದಿನ ಇಲ್ಲಿಗೆ ಬಂದರು. ಅವರು ಜೋಗ್, ಭದ್ರಾವತಿ, ಮೈಸೂರು, ಬಂಡೀಪುರಗಳಿಗೆ ಭೇಟಿ ಕೊಡುವರು.

○ ಜರ್ಮನ್ ರಾಯಭಾರಿ ಪ್ರೊ. ಕಿಯಾ ಮಾರವರು ಇಲ್ಲಿನ ಕೈಗಾರಿಕೆಗಳನ್ನು ಪರಿಶೀಲಿಸಲು ಬೊಂಬಾಯಿಯಿಂದ ಈ ದಿನ ಆಗಮಿಸಿದರು.

○ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆನ್ನೆ ಸೇರಿ, ಅಂಗರಚನೆಗೆ ಸಂಬಂಧಪಟ್ಟ ಅಂಶಗಳನ್ನು ಪರಿಶೀಲಿಸಿತು. ಮೊಳಕಾಲ್ಮೂರಿನಲ್ಲಿ ನಿಂತುಹೋಗಿದ್ದ ಚುನಾವಣೆಯನ್ನು ನಡೆಸಲು ಅನುಮತಿ ಇತ್ತಿತ್ತು.

ಆಂಧ್ರ ಪ್ರಾಂತ ರಚನೆಗಾಗಿ ನ್ಯಾಯಾಧೀಶರ ನೇಮಕ

ಆಂಧ್ರಪ್ರಾಂತವನ್ನು ರಚಿಸುವ ಬಗ್ಗೆ ಕೈಗೊಳ್ಳಬೇಕಾದ ಉಚಿತವಾದ ಕ್ರಮಗಳನ್ನು ಸೂಚಿಸಿ ೬೦ ದಿನಗಳಲ್ಲಿ ವರದಿಯೊಪ್ಪಿಸುವ ಸಲುವಾಗಿ ಸುಪ್ರೀಂ ಕೋರ್ಟಿನ ಅಥವಾ ಸಂಸ್ಥಾನದ ಹೈಕೋರ್ಟಿನ ನ್ಯಾಯಾಧೀಶರೊಬ್ಬರನ್ನು ನೇಮಿಸಲು ಅತಿ ಶೀಘ್ರದಲ್ಲೇ ಕ್ರಮವನ್ನು ಭಾರತ ಸರ್ಕಾರದವರು ಕೈಗೊಳ್ಳುವರೆಂದು ವರದಿಯಾಗಿದೆ. ಗಡಿ ನಿರ್ಧಾರದ ಸಮಿತಿ ನೇಮಕದ ಬಗ್ಗೆ ಸಲಹೆಯನ್ನು ಕೋರಲಾಗುವುದು. ಈ ವಿಷಯವನ್ನು ಪರ್ಯಾಲೋಚಿಸಲು ಈದಿನ ಅಥವಾ ನಾಳೆ ಕೇಂದ್ರ ಮಂತ್ರಿ ಮಂಡಲದ ಸಭೆಯು ನಡೆಯುವುದು.

ಪಾರ್ಲಿಮೆಂಟಿನಲ್ಲಿ ಸಭಾ ತ್ಯಾಗ

ಪೊಟ್ಟಿ ಶ್ರೀ ರಾಮುಲುರವರ ನಿಧನದ ಬಗ್ಗೆ ಪಾರ್ಲಿಮೆಂಟಿನ ಕಲಾಪ ಸಭೆಯು ... ನಿಲುವಳಿ ಸೂಚನೆಗೆ ಅವಕಾಶ ಕೊಡಲಿಲ್ಲವೆಂದು ಆಂಧ್ರ ಸಂಬಂಧದವರ ನೇತೃತ್ವದಲ್ಲಿ ವಿರೋಧ ಪಕ್ಷಗಳ ಸದಸ್ಯರನೇಕರು ಸಭಾತ್ಯಾಗ ಮಾಡಿದರು. ನಿಧನದ ಬಗ್ಗೆ ಎರಡು ಅರೂರು ಪ್ರಶ್ನೆಗಳೂ, ಒಂದು ನಿಲುವಳಿ ಸೂಚನೆಯೂ ಬಂದಾಗ ನೆಹರೂರವರು ಭಾಷಣ ಮಾಡಿ ಶ್ರೀ ರಾಮುಲುರವರ ನಿಧನಕ್ಕಾಗಿ ತಮ್ಮ ಆಳವಾದ ವ್ಯಸನವನ್ನು ಸೂಚಿಸಿದರು. ಒಂದು ಧ್ಯೇಯಕ್ಕಾಗಿ ಆತ್ಮಾರ್ಪಣೆ ಮಾಡಿದವರು ಎಲ್ಲರ ಗೌರವಕ್ಕೂ ಪಾತ್ರರಾಗಿರುವರೆಂದೂ ಆದರೆ ರಾಜಕೀಯ ಉದ್ದೇಶ ಸಾಧನೆಗಾಗಿ ಉಪವಾಸ ಮಾಡುವುದು ಸರಿಯಲ್ಲವೆಂದು ತಾವು ಹಿಂದೆಯೇ ಹೇಳಿರುವುದಾಗಿಯೂ ನೆಹರೂರವರು ತಿಳಿಸಿದರು. ಮೃತರ ಗೌರವಾರ್ಥವಾಗಿ ಸಭೆಯು ಎರಡು ನಿಮಿಷ ಎದ್ದುನಿಲ್ಲುವಂತೆ ಡಾ॥ ಮುಖರ್ಜಿಯವರು ಪ್ರಾರ್ಥಿಸಲಾಗಿ, ಮಹಾತ್ಮ ಗಾಂಧಿಯವರೊಬ್ಬರನ್ನು ಬಿಟ್ಟು, ಸಭೆಯ ಸದಸ್ಯರಲ್ಲದವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿಲ್ಲವೆಂದೂ, ಹಾಗೆ ಮಾಡಿದರೆ ತೊಡಕುಂಟಾಗುವುದೆಂದೂ ನೆಹರೂರವರು ಹೇಳಿದರು. ನಿಲುವಳಿ ಸೂಚನೆ ಮತ್ತು ಅರೂರು ಪ್ರಶ್ನೆಗಳನ್ನು ಉಪಾಧ್ಯಕ್ಷರು ತಳ್ಳಿ ಹಾಕಿದರು.

ನೆಲ್ಲೂರು ಪ್ರದರ್ಶನಕಾರರ ಮೇಲೆ ಗುಂಡಿನೇಟು

ಮೂವರ ಮರಣ; ೧೨ ಜನರಿಗೆ ಗಾಯ

ಶ್ರೀ ರಾಮುಲುರವರ ನಿಧನದ ಸಂಬಂಧವಾಗಿ ನೆಲ್ಲೂರಿನಲ್ಲಿ ಪ್ರದರ್ಶನವು ನೆನ್ನೆ ನಡೆದು, ಹಲವು ಖಾಲಿ ರೈಲ್ವೆ ಗಾಡಿಗಳನ್ನು ಸುಡಲೆತ್ನಿಸಿದಾಗ ಪೊಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ಮೂವರು ಮಡಿದರೆಂದು ವರದಿಯಾಗಿದೆ. ೧೨ ಜನರಿಗೆ ಪೆಟ್ಟು ತಗುಲಿ, ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರು. ೮ ಜನರ ಸ್ಥಿತಿ ತೀವ್ರವಾಗಿದೆ. ಘೋಷಣೆಗಳನ್ನು ಕೂಗುತ್ತಾ, ಹಲವರು ಖಾಲಿ ರೈಲುಗಾಡಿಗಳನ್ನು ಪ್ಲಾಟ್‌ಫಾರಂ ಸೇತುವೆಯ ಮೇಲೆ ತಳ್ಳಿಕೊಂಡು ಹೋದರೆಂದೂ, ಬೆಂಕಿಯನ್ನಾರಿಸಲು ಯತ್ನಿಸಿದ ಫೈರ್ ಇಂಜನ್ನಿನ ಮೇಲೆ ಕಲ್ಲು ಬೀರಿದರೆಂದೂ ಹೇಳಲಾಗಿದೆ. ಶ್ರೀರಾಮುಲು ಎಂಬುವನು ಗುಂಡಿನೇಟಿನಿಂದ ಸ್ಥಳದಲ್ಲೇ ಸತ್ತನು. ಇನ್ನಿಬ್ಬರು ಆಸ್ಪತ್ರೆಗೆ ಹೋಗುವಾಗ ಮಡಿದರು.

ಲಿಂಗಪ್ಪಯ್ಯನವರ ಮೇಲೆ ಕಂಟೆಂಪ್ಟ್ ಮೊಕದ್ದಮೆ

ಹೈಕೋರ್ಟಿಗೆ ಕ್ಷಮಾಪಣೆ

ಬೆಂಗಳೂರು ೧೭

ಮೈಸೂರಿನ ಬಾಡಿಗೆ ಹತೋಟಿ ಅಧಿಕಾರಿಗಳು ಹೈಕೋರ್ಟಿನ ಗಮನಕ್ಕೆ ತಂದ ವಿದ್ಯಮಾನವೊಂದರಲ್ಲಿ ಮೈಸೂರಿನ ಅಡ್ವೊಕೇಟರಾದ ಶ್ರೀ ವಿ ಲಿಂಗಪ್ಪಯ್ಯನವರು ಮತ್ತು ಇನ್ನಿಬ್ಬರ ಮೇಲೆ ಕಂಟೆಂಪ್ಟ್ ಮೊಕದ್ದಮೆಯನ್ನು ಹೈಕೋರ್ಟಿನವರು ಹೂಡಿದ್ದ ಸಂದರ್ಭದಲ್ಲಿ ಶ್ರೀ ಲಿಂಗಪ್ಪಯ್ಯನವರೂ, ಅವರ ಕಕ್ಷಿಗಾರರಾದ ಬಸವರಾಜು ಮತ್ತು ದೇವೀರಮ್ಮ ಎಂಬುವರೂ ಸಲ್ಲಿಸಿದ ಕ್ಷಮಾಪಣೆಯಿಂದ ನ್ಯಾಯಾಧೀಶರುಗಳಾದ ಶ್ರೀ ಆರ್ ವೆಂಕಟರಾಮಯ್ಯ ಮತ್ತು ಶ್ರೀ ಟಿ ಎನ್ ಮಲ್ಲಪ್ಪನವರು ಸದರಿಯವರ ಮೇಲೆ ಯಾವ ಕ್ರಮವನ್ನೂ ಜರುಗಿಸಬೇಕಾಗಿಲ್ಲವೆಂದು ನೆನ್ನೆ ಆಜ್ಞೆ ಮಾಡಿದರು. ಹಲವು ಬಾಡಿಗೆದಾರರನ್ನು ಮನೆಯಿಂದ ಹೊರಡಿಸುವ ಬಗ್ಗೆ ಮೈನರ್ ಬಸವರಾಜು ಮತ್ತು ಗಾರ್ಡಿಯನ್ ತಾಯಿ ದೇವೀರಮ್ಮ ಇವರುಗಳು ಬಾಡಿಗೆ ಹತೋಟಿ ಅಧಿಕಾರಿಗಳಲ್ಲಿ ೩ ಅರ್ಜಿಗಳನ್ನು ಸಲ್ಲಿಸಿದ್ದರೆಂದೂ, ಅರ್ಜಿಗಳನ್ನು ಕೊಡುವ ಪೂರ್ವಭಾವಿಯಾಗಿ ಹೈಕೋರ್ಟಿನವರು ಸದರಿ ದೇವೀರಮ್ಮನವರನ್ನು ಆಕೆಯ ಗಂಡನ ಆಸ್ತಿಗಳ ಬಗ್ಗೆ ಆಡಳಿತಗಾರರನ್ನಾಗಿ ನೇಮಿಸಿದ್ದರೆಂದೂ, ಈ ವಿಷಯವನ್ನು ಬಾಡಿಗೆ ಹತೋಟಿ ಅಧಿಕಾರಿಗಳ ಬಳಿ ಸಲ್ಲಿಸಿದ್ದ ಅರ್ಜಿಗಳಲ್ಲಿ ನಮೂದಿಸಿರಲಿಲ್ಲವೆಂದೂ, ಬಸವರಾಜವು ಸದರಿ ಅಧಿಕಾರಿಗೆ ಆ ಮೂಲಕ ಮರೆಮಾಚಲು ಪ್ರಯತ್ನಿಸಿದನೆಂದೂ, ಉಳಿದವರಿಬ್ಬರು ಇದೇ ರೀತಿ ಮಾಡಿದರೆಂದೂ, ಕಂಟೆಂಪ್ಟ್ ಮೊಕದ್ದಮೆ ಹೂಡಲಾಗಿತ್ತು.

ವಿಜಯವಾಡ ನಿಲ್ದಾಣ ಪುಂಡರ ಕೈಯಲ್ಲಿ

ವಿಜಯವಾಡ ರೈಲ್ವೆ ನಿಲ್ದಾಣವು ನೆನ್ನೆ ಸ್ವಲ್ಪ ಹೊತ್ತು ಪೂರ್ಣವಾಗಿ ಪುಂಡರ ವಶದಲ್ಲಿ ಇದ್ದುದಾಗಿಯೂ, ರೈಲ್ವೆ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಅಲ್ಲಿಂದ ಓಡಿಸಲಾಗಿತ್ತೆಂದೂ ಹೇಳಲಾಗಿದೆ. ಶ್ರೀರಾಮುಲುರವರ ನಿಧನದ ಸಂಬಂಧವಾಗಿ ಅಲ್ಲಿ ಪ್ರದರ್ಶನಗಳಾದಾಗ, ಪುಂಡರೂ ಅದರಲ್ಲಿ ಸೇರಿ ರೈಲ್ವೆ ನಿಲ್ದಾಣದ ಮೇಲೆ ನೆನ್ನೆ ಧಾಳಿ ನಡೆಸಿದರು. ಗೂಡ್ಸ್ ಮತ್ತು ಪಾರ್ಸೆಲ್ ಗಾಡಿಗಳ ಬೀಗವನ್ನೊಡೆದು ಒಳಗಿದ್ದ ಪದಾರ್ಥಗಳನ್ನು ಲೂಟಿ ಮಾಡಲಾಯಿತೆಂದೂ, ಅಕ್ಕಿ ಮತ್ತು ಭತ್ತದ ಮೂಟೆಗಳೂ, ಬಟ್ಟೆಗಳ ಬೇಲುಗಳೂ ಹೊಗೆಸೊಪ್ಪು ಮುಂತಾದುವೂ ವ್ಯಾನುಗಳಲ್ಲಿದ್ದವೆಂದೂ ಅವೆಲ್ಲವೂ ಪುಂಡರ ಪಾಲಾದುವೆಂದೂ ಹೇಳಲಾಗಿದೆ. ಅಲ್ಲದೆ ನಿಲ್ದಾಣದ ಉಪಾಹಾರ ಗೃಹ, ಪುಸ್ತಕದ ಅಂಗಡಿ, ಮತ್ತು ಹಣ್ಣುಗಳ ಗಾಡಿಗಳನ್ನು ಲೂಟಿ ಮಾಡಲಾಯಿತು. ಆಕ್ಷಿದ್ದ ಪೋಲೀಸರಾಗಲಿ, ಅಧಿಕಾರಿಗಳಾಗಲಿ ಪುಂಡರನ್ನು ತಡೆಯಲಿಲ್ಲ. ವಿಜಯವಾಡದಲ್ಲಿ ಐದು ಮಂದಿಗಿಂತ ಹೆಚ್ಚು ಜನರು ಸೇರಕೂಡದೆಂದು ಈಗ ಪ್ರತಿಬಂಧಕಾಜ್ಞೆಯನ್ನು ಜಾರಿಮಾಡಲಾಗಿದೆ.

ವಿಶ್ವಶಾಂತಿಗಾಗಿ ಶೃಂಗೇರಿಯಲ್ಲಿ ಸಮಾರಂಭಗಳು

ಆಸ್ತಿಕ ಮಹಾಶಯರಲ್ಲಿ ವಿಜ್ಞಾಪನೆ

ಶಿವಮೊಗ್ಗದಲ್ಲಿರುವ ಶ್ರೀ ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳ ಸೇವಾ ಸಮಿತಿಯವರು ಈ ಕೆಳಗೆ ಕಂಡಂತೆ ಮನವಿ ಮಾಡಿರುತ್ತಾರೆ —

ಶ್ರೀ ಶೃಂಗೇರಿ ವಿದ್ಯಾಪೀಠವನ್ನಲಂಕರಿಸಿರುವ ಮಹಾಮಹಿಮರಾದ ಪರಮಹಂಸ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಯವರು ಈಗ ತಾನೆ ತಮ್ಮ ದಿವ್ಯ ಜೀವನದ ಅರವತ್ತು ವರ್ಷ ವಯಸ್ಸನ್ನು ಪೂರ್ಣಗೊಳಿಸಿ, ಜೀವನ್ಮುಕ್ತ ದೆಸೆಯನ್ನು ಹೊಂದಿ ಅಪಾರವಾದ ಆಧ್ಯಾತ್ಮ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ವಿಷಯ ಸರ್ವವೇದ್ಯವಾಗಿದೆ. ಅವಿಚ್ಛಿನ್ನಾನುಸಂಧಾನದ ತಪ್ತ ಜೀವನದಿಂದ ನಿರಂತರವೂ ಜಗತ್ಕಲ್ಯಾಣ ಸಾಧಕರಾದ ಈ ಮಹಾ ಯೋಗಿವರ್ಯರ ದಿವ್ಯ ತೇಜಸ್ಸು ಸಮಸ್ತ ಜೀವ ರಾಶಿಗಳನ್ನೂ ಆಕರ್ಷಿಸುತ್ತಾ ಸಕಲರ ಹಿತಸಾಧನೆಯಲ್ಲಿಯೇ ನಿರತವಾಗಿದೆ. ನಮ್ಮೆಲ್ಲರ ಪುಣ್ಯೋದಯದಿಂದ ಒದಗಿರುವ ಈ ಸುಸಮಯವನ್ನು ಉಪಯೋಗಿಸಿಕೊಂಡು ಶ್ರೀ ಶೃಂಗೇರಿ ದಿವ್ಯ ಕ್ಷೇತ್ರದಲ್ಲಿ ಈ ಮಹಾ ತಪಸ್ವಿಗಳ ಸಾನ್ನಿಧ್ಯದಲ್ಲಿ ಅತ್ಯಂತ ಮಂಗಳಕರವಾದ ಶ್ರೀ ಅತಿ ರುದ್ರ, ಶ್ರೀ ಸಹಸ್ರ ಚಂಡಿ ಶ್ರೀ ಗಣಪತಿ, ಶ್ರೀ ಗಾಯತ್ರಿಯೇ ಮೊದಲಾದ ಹೋಮಗಳನ್ನು ಜಗತ್ತಿನ ಸುಖಶಾಂತಿಗಾಗಿ ನೆರವೇರಿಸಲು ಸಂಕಲ್ಪಿಸಿ ಈ ಮಹತ್ಕಾರ್ಯಗಳು ಸಾಂಗವಾಗಿ ನಡೆಯಲು ಶಿಷ್ಯರೆಲ್ಲರೂ ಸೇರಿ ಅವರವರ ತಮ್ಮಗಳ ಸೇವಾ, ದ್ರವ್ಯ ಮೊದಲಾದುವುಗಳನ್ನು ಕೊಟ್ಟು ಉತ್ಸವದಲ್ಲಿ ಭಾಗಿಗಳಾಗಿ ಶ್ರೀ ಶ್ರೀ ಜಗದ್ಗುರುಗಳಿಗೆ ಸೇವೆಯನ್ನು ಅರ್ಪಿಸಿ ಅವರ ಅನುಗ್ರಹವನ್ನು ಪಡೆಯಬೇಕಾಗಿ ಈ ಮೊದಲೇ ಅರಿಕೆ ಮಾಡಿಕೊಂಡಿದ್ದೆವು.

ಈ ರೀತಿ ಲೋಕ ಕಲ್ಯಾಣಕ್ಕಾಗಿ ಮಾಡಿರತಕ್ಕ ಶಿಷ್ಯರುಗಳ ಈ ಪ್ರಯತ್ನಗಳಲ್ಲಿ ತಮ್ಮ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಇದೇ ಶ್ರೀ ನಂದನ ನಾಮ ಸಂವತ್ಸರದ ಫಾಲ್ಗುಣ ಶುಕ್ಲ ದ್ವಿತೀಯಾ ಶುಭ ದಿನದಲ್ಲಿ (೧೫-೩-೧೯೫೩) ಈ ಶುಭ ಕಾರ್ಯಗಳನ್ನು ಪ್ರಾರಂಭಿಸಲು ಅನುಗ್ರಹಪೂರ್ವಕವಾಗಿ ಸಮ್ಮತಿ ಶ್ರೀಮುಖವನ್ನೂ ಸಹ ದಯಪಾಲಿಸಿದ್ದಾರೆ.

ಶ್ರೀ ಶ್ರೀ ಜಗದ್ಗುರುಗಳವರಲ್ಲಿ ನೇರವಾಗಿ ಕಾರ್ಯಕ್ರಮಗಳನ್ನೆಲ್ಲಾ ವಿಚಾರಿಸಿಕೊಂಡು ಶಾಸ್ತ್ರ ವಿಧಿಯನ್ನನುಸರಿಸಿ ಅತ್ಯಂತ ಸಾತ್ವಿಕ್ಯದಿಂದ ಕಾರ್ಯಗಳನ್ನು ನಡೆಸಿ ಉಳಿಯಬಹುದಾದ ಮೊಬಲಗನ್ನು ಸರ್ವಜನೋಪಯುಕ್ತವಾದ, ಶಾಶ್ವತ ಕೆಲಸದಲ್ಲಿ ವಿನಿಯೋಗವಾಗುವಂತೆ ಉದ್ದೇಶ ಮಾಡಿಕೊಂಡಿರುವ ವಿಷಯವನ್ನೂ ಮತ್ತು ಮಹಾ ಜನಗಳಿಂದ ಈ ಬಗ್ಗೆ ಬಂದಿರುವ ಸಲಹೆಗಳನ್ನೂ ಅರಿಕೆ ಮಾಡಿಕೊಳ್ಳಲಾಗಿ, ಜಗತ್ಕಲ್ಯಾಣಕ್ಕಾಗಿ ಆರಂಭಿಸಿರುವ ಈ ಸೇವಾಕಾಂಕ್ಷೆಯ ವಿಷಯದಲ್ಲಿ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ ವಿಷಯವನ್ನು ಸೂಚಿಸಲು ಸಮಿತಿಯು ಸಂತೋಷಿಸುತ್ತದೆ. ಉಳಿದ ದ್ರವ್ಯವನ್ನು ಎಲ್ಲರಿಗೂ ಉಪಯೋಗವಾಗುವಂತೆ ಸೂಕ್ತವಾದ ಕೆಲಸಕ್ಕೆ ಶ್ರೀ ಶ್ರೀ ಜಗದ್ಗುರುಗಳವರ ಅಪ್ಪಣೆ ಪಡೆದು ವಿನಿಯೋಗ ಮಾಡಬೇಕೆಂದೂ ಸಮಿತಿಯವರ ಸಂಕಲ್ಪವಾಗಿರುತ್ತದೆ.

ಈ ಕಾರ್ಯಕ್ಕಾಗಿ ಪ್ರತಿ ಸ್ಥಳದಲ್ಲಿಯೂ ಮಹಾಜನಗಳು ಅವಶ್ಯಕವಾದ ಉಪ ಸಮಿತಿಗಳನ್ನು ನೇಮಿಸಿಕೊಂಡು ಧನಸಂಗ್ರಹ ಮಾಡಿ ಈ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಹೆಚ್. ಸಿ. ಸಂಪತ್ ಅಯ್ಯಂಗಾರ್, ಶಿವಮೊಗ್ಗ — ಇವರ ವಿಳಾಸಕ್ಕೆ ಅವಶ್ಯ ಜಾಗ್ರತೆ ರವಾನಿಸಬೇಕಾಗಿ ಕೋರಿದೆ.

ಸಂಗೀತ ಪಾಠಶಾಲೆಯ ಶಾಖೆ

ರಾಜಧಾನಿಯ ಶ್ರೀ ಪುರಂದರ ತ್ಯಾಗರಾಜ ಸಂಗೀತ ಪಾಠಶಾಲೆಯ ವ್ಯವಸ್ಥಾಪಕರಾದ ಶ್ರೀ ಎಂ. ಆರ್. ರಾಮಕೃಷ್ಣ ಭಾಗವತರು ಕೃಷ್ಣರಾಜ ಮೊಹಲ್ಲೆಯ ವಾಣೀವಿಲಾಸ ಮಾರ್ಕೆಟ್ ಎದುರು ಇರುವ ಫಿಲಿಪ್ಸ್ ರೇಡಿಯೋ ಅಂಗಡಿ ಮಹಡಿ ಮೇಲೆ ನಾಳೆ ಸಂಜೆ ೬ ಗಂಟೆಗೆ ತಮ್ಮ ಶಾಲೆಯ ೫ ನೇ ಶಾಲೆಯನ್ನು ತೆರೆಯಲಿರುವರು. ಬರ್ಮಾಷೆಲ್ ಏಜೆಂಟರಾದ ಶ್ರೀ ವಿ. ನಾರಾಯಣರಾಯರು ಅಧ್ಯಕ್ಷತೆ ವಹಿಸುವರು. ಶ್ರೀ ಕೃಷ್ಣಪ್ರಸಾದ ಯಕ್ಷಗಾನ ಮಂಡಲಿಯಿಂದ ಸುಭದ್ರಾ ಕಲ್ಯಾಣವೆಂಬ ಯಕ್ಷಗಾನವು ನಡೆಯುವುದು.

ನಿಧನ

ರಾಜಧಾನಿಯ ಲಷ್ಕರ್ ಮೊಹಲ್ಲೆಯ ಜಲಪುರಿಯಲ್ಲಿರುವ ಆದಿ ಜಾಂಬವ ಸಮಿತಿಯ ಕಾರ್ಯದರ್ಶಿಯವರೂ, ಯುವಕ ಸಂಘದ ಅಧ್ಯಕ್ಷ ಶ್ರೀ ರಂಗಯ್ಯನವರ ಪುತ್ರರೂ ಆದ ಶ್ರೀ ಪುಟ್ಟರಂಗಯ್ಯನವರು ಕಳೆದ ಭಾನುವಾರ ಹೃದಯ ಸ್ತಂಭನದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ತಮ್ಮ ಸಮಾಜದ ಏಳಿಗೆಗಾಗಿ ಶ್ರಮವಹಿಸಿ ದುಡಿದು ಆ ಜನರ ಪ್ರೀತಿಗೌರವಗಳನ್ನು ಸಂಪಾದಿಸಿದ್ದರು.

ಎಂ. ಎಸ್. ಸಿ. ಪರೀಕ್ಷೆಗೆ ತರಬೇತಿ ಕೊಡುವ

ವಿಶೇಷ ತರಗತಿಗಳು

ಬಾಲಕಿಯರಿಗೆ ಬೆಳಿಗ್ಗೆ 10 ರಿಂದ 1

ಬಾಲಕರಿಗೆ ಸಂಜೆ 5 ರಿಂದ 8

ಸಿಟಿ ಟ್ಯುಟೋರಿಯಲ್ ಕಾಲೇಜು

ವಾಣೀವಿಲಾಸ ಮಾರ್ಕೆಟ್ ಮೈಸೂರು

ಪಂಪನ ಕಲಿಕರ್ಣ

(ಕರ್ಣ ರಸಾಯನ ಟಿಪ್ಪಣಿ)

ಶ್ರೀ ಜಿ. ಬ್ರಹ್ಮಪ್ಪನವರಿಂದ

ಅನುವಾದಿತವಾಗಿರುವುದು

ಜೂನಿಯರ್ ಮತ್ತು ಸೀನಿಯರ್ ಇಂಟರ್ ವಿದ್ಯಾರ್ಥಿಗಳಿಗೆ ಉಪಯುಕ್ತವಾದುದು

ಬೆಲೆ 1-4-0

ಜೈನ ಸಾಹಿತ್ಯ ಪ್ರಚಾರ ಸಂಘ,

ಸಯ್ಯಾಜಿರಾವ್ ರಸ್ತೆ,

ಶಾಂತಿನಾಥ ದೇವಾಲಯ ಮೈಸೂರು

ಮಹಿಳೆಯ ಹೊಟ್ಟೆಯಲ್ಲಿ ೬ ಮೊಟ್ಟೆಗಳ ಜನನ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಕಳೆದ ೧೩ ನೇ ತಾ|| ಒಬ್ಬ ಸ್ತ್ರೀಯು ೬ ಮೊಟ್ಟೆಗಳನ್ನು ಹಡೆದಳೆಂದು ವರದಿಯಾಗಿದೆ. ಅವು ಬಾತು ಕೋಳಿಯ ಮೊಟ್ಟೆಗಳ ಆಕಾರದಲ್ಲಿದ್ದು ಜನರಿಗೆ ಆಶ್ಚರ್ಯವನ್ನುಂಟುಮಾಡಿವೆಯೆಂದೂ, ಒಳಗಡೆ ಯಾವ ಪ್ರಾಣಿ ಇರಬಹುದೆಂಬ ಕುತೂಹಲಕ್ಕೆ ಕಾರಣವಾಗಿದೆಯೆಂದೂ ಹೇಳಲಾಗಿದೆ.

೧೫ ಸಾವಿರ ಜನರಿಗೊಂದು ಆಸ್ಪತ್ರೆ

೧೫,೮೭೭ ಜನರಿಗೆ ಒಂದರಂತೆ ಸಂಸ್ಥಾನದಲ್ಲಿ ಆಸ್ಪತ್ರೆಗಳಿವೆಯೆಂದು ಕಳೆದ ವರ್ಷದ ವೈದ್ಯ ಇಲಾಖೆಯ ವರದಿಯು ತಿಳಿಸಿರುತ್ತದೆ.

ತಾತಯ್ಯನವರ ದಿನಾಚರಣೆ

ರಾಜಧಾನಿಯ ಅಗ್ರಹಾರದ ಸಾಹಿತ್ಯ ಸಂಘದವರು ತಮ್ಮ ಆಲಯದ ಆವರಣದಲ್ಲಿ ಇದೇ ತಿಂಗಳು ೨೫ ನೇ ತಾ|| ಸಂಜೆ ೫|| ಘಂಟೆಗೆ ಪೂಜ್ಯ ತಾತಯ್ಯನವರ ದಿನಾಚರಣೆಯನ್ನು ಏರ್ಪಡಿಸಿರುತ್ತಾರೆ. ಶ್ರೀ ಎಸ್. ಶಿವರಾಮು ಬಿ. ಎ. ಯವರ ಅವರು ಬಿ. ಎ. ಅಧ್ಯಕ್ಷತೆಯನ್ನು ವಹಿಸುವರು.

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ಸಯ್ಯಾಜಿರಾವ್ ರೋಡ್

ಮೈಸೂರು

Edited, Printed and Published by A. R. Nagarajan at Sadhvi Press, D. Subbiah Road, Mysore

ಕೊಡಗಿಗೆ ಮೈಸೂರಿನ ವಿದ್ಯುಚ್ಛಕ್ತಿ

ಕೊಡಗಿಗೆ ಮೈಸೂರಿನಿಂದ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಎರಡು ಸರ್ಕಾರಗಳಿಗೂ ಒಪ್ಪಂದವಾಗಿದೆಯೆಂದೂ, ಈ ಯೋಜನೆಗೆ ೨೫ ಲಕ್ಷ ರೂ. ವೆಚ್ಚವಾಗುವುದೆಂದೂ ಗೊತ್ತಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ಎಸ್. ರಾಮಸ್ವಾಮಿಯವರ ದೇವರ ನಾಮ; ಮಧ್ಯಾಹ್ನ ೧-೩೦ ವೀಣೆ: ವಿ. ರಂಗಪ್ಪ, ಕೊಳಲು ಸಂಜೆ ೬-೦ ಮಕ್ಕಳ ೭-೦ ಸಿ. ಶೇಷಗಿರಿರಾವ್ ಸಂಗೀತ; ೮-೦ ಕನ್ನಡ ಗೀತೆಗಳು; ೭-೩೦ ವೀಣೆ: ವಿ. ರಂಗಪ್ಪ, ಕೊಳಲು ... ಗಾಯನ ಜೋಶಿ, ರಾಮರಾವ್ ಸಂಗೀತ ... ೯-೦ ... ಕ್ಕೆ ಸಂಬಂಧಿಸಿದ ... ನ ವಿಷಯ ದೇಶಪಾಂಡೆ ... "ಕನಸುಗಳ ಅರ್ಥ" ಇಂಗ್ಲಿಷ್ ಉಪನ್ಯಾಸ (ಜಿ. ಆರ್. ಜೋಸ್ಯರ್) ... ಎ. ... ಕೋಪ್ ... ಕೃಷ್ಣಸ್ವಾಮಿ ಅವರು ಭಾಗವಹಿಸುವರು.

FOR QUICK SALE

One German Camera used with 4.5 Radionar lens in a leather case. Accessories: One close-up lens, adapter and 3 filters. All in good condition. ... A. G. N. 1082, Chamarajpet, Agrahar, Mysore.

ಒಲಂಪಿಯಾ ಟಾಕೀಸ್

15-12-52 ರಿಂದ ಪ್ರತಿದಿನ 3 ಆಟಗಳು

ಪ್ರಕಾಶ್ ಪಿಕ್ಚರ್ಸ್ ರವರ

ಬೈಜು ಬಾವ್ರ

ಭಾರತ ಭೂಷಣ್, ಮೀನಾಕುಮಾರಿ ...

ಮತ್ತು ಇತರರು

19-12-52 ರಿಂದ ಬೆಳಿಗ್ಗೆ 10 ಗಂಟೆಗೆ

ವಿ. ಶಾಂತಾರಾಂರವರ ಅಂದಾಜ್

AT YOUR SERVICE AGAIN

Public Transporters Please Remember

Quick, Safe & Easy Transport

MYSORE TRANSIT SERVICE (Regd)

THIRTHA & COMPANY, (Phone 537) Ramavilas Road, Mysore

ನಾಟ್ಯಕಲಾಭೂಷಣೆ ವೈಜಯಂತಿಮಾಲಾರವರ ಅತ್ಯಮೋಘ ನರ್ತನ

ಕಾಸ್ಮಾಪಾಲಿಟನ್ ಕ್ಲಬ್

ಸುವರ್ಣ ಮಹೋತ್ಸವದ ಅಂಗವಾಗಿ

ಮೈಸೂರು ಕ್ರಾಫರ್ಡ್ ಹಾಲಿನಲ್ಲಿ

21-12-52ನೇ ಭಾನುವಾರ ಸಂಜೆ 6 ಘಂಟೆಗೆ

— ಟಿಕೆಟ್ ದರ —

ರೂ 20, 10, 5, 3, 2, 1

ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

ಎಂ. ಎಸ್. ಸೋಮಶೇಖರ್, ಮೆಂಬರ್ ಇನ್ ಛಾರ್ಜ್

ಟಿಕೆಟ್ ದೊರೆಯುವ ಸ್ಥಳ —

1 ಕಾರೊನೇಷನ್ ಜ್ಯೂಯಲರಿ ಮಾರ್ಟ್ ಸಯ್ಯಾಜಿರಾವ್ ರೋಡ್

2 ಕಾರೊನೇಷನ್ ಫ್ಯಾನ್ಸಿ ಎಂಪೋರಿಯಂ, ಅಶೋಕ ರಸ್ತೆ

3 ಬಾಂಬೆ ಸ್ಟೋರ್ಸ್ ನ್ಯೂ ಬ್ಯಾಂಕ್, ಬಿಲ್ಡಿಂಗ್ಸ್

4 ಎಸ್. ಶೆಟ್ಟಿ, ಮೆಡಿಕಲ್ಸ್, ವಾಣಿವಿಲಾಸ ಮಾರ್ಕೆಟ್ ಸರ್ಕಲ್

5 ಬೃಂದಾವನ ಹೋಟೆಲ್ ಲಕ್ಷ್ಮೀಪುರಂ

6 ಕಾಸ್ಮಾಪಾಲಿಟನ್ ಕ್ಲಬ್

[illegible] ನಂ.79[illegible] ॥ವಂದೇ ಮಾತರಂ॥ [illegible] ಪತ್ರಿಕೆ 3 ಕಾಸೆ

ಸಾಧ್ವಿ

ಸಂಪುಟ ೧೧] ಗುರುವಾರ ೧೮-೧೨-೧೯೫೨ [ಸಂಚಿಕೆ ೧೦೭

ಆಂಧ್ರ ಗಲಭೆಗಾರರಿಗೆ – ರಾಜಾಜಿ ಎಚ್ಚರಿಕೆ –

ಕಾಂಗ್ರೆಸ್ಸಿಗೆ ಟಿ. ಚನ್ನಯ್ಯ ನವರ ಆಯ್ಕೆ ರದ್ದು

ಬೆಂಗಳೂರು ೧೮ [illegible] ಸ್ಥಾನದ ಆರೋಗ್ಯ ಮಂತ್ರಿ [illegible] ಚನ್ನಯ್ಯನವರು ಕಾಂಗ್ರೆಸ್ [illegible] ಗಳಿಗೆ ಇತ್ತೀಚೆ ಪಟ್ ಜಾ [illegible] ಕ್ಷೇತ್ರದಿಂದ ಅವಿರೋಧವಾಗಿ ಆ [illegible] ದಿರುವರೆಂದು ಘೋಷಿಸಿರುವ [illegible] ಜಿಲ್ಲಾ ಕಾಂಗ್ರೆಸ್ ಚುನಾವಣಾ ನ್ಯಾಯಾಧೀಶರು ರದ್ದುಗೊಳಿಸಿ ಹೊಸ [illegible] ಣೆಯು ನಡೆಯುವಂತೆ ಆಜ್ಞೆ ಮಾಡಿ ತ್ತಾರೆ ಚುನಾವಣಾಧಿಕಾರಿಗ [illegible] ತ್ತಾಬ್ಬ ಸ್ಪರ್ಧಿ ಗಾರರಾದ ಶ್ರೀ ಟಿ [illegible] ರಾಯರವರ ನಾಮಪತ್ರವ [illegible] ತಳ್ಳಿಹಾಕಿದ ಬಗ್ಗೆ ಅವರು ಕಳಕಾ [illegible] ರ್ಜಿ ಸಲ್ಲಿಸಿದ್ದರು ಶ್ರೀ ಟಿ ಚನ್ನ [illegible] ರ ಉಮೇದುವಾರಿಕೆಗೆ ಸೂಚ [illegible] ಗಿರುವವರು ಆ ಕ್ಷೇತ್ರದ ಮತದಾ [illegible] ಗಿಲ್ಲವಾದ್ದರಿಂದಲೂ ಉಮೇದುವಾ [illegible] ರಿ ಸೂಚಕರು ಅಥವಾ ಅನು [illegible] ಅಕರಾಗಲಿ ಅರ್ಜಿಯನ್ನು ಸಲ್ಲಿಸಲಿ [illegible] ರಿಂದಲೂ ಶ್ರೀ ಚನ್ನಯ್ಯನವರ [illegible] ವಣೆಯು ಕ್ರಮಬದ್ಧವಲ್ಲವೆಂದು [illegible] ಕೂಡಲಾಗಿದೆ

ಆಂಧ್ರ ದೇಶದ ಮತ್ತೆರಡು ಕಡೆ ಗುಂಡಿನೇಟು

[illegible] ನೆಲ್ಲೂರು [illegible] ರೈಲ್ವೆ ನಿಲ್ದಾಣದಲ್ಲಿ [illegible] ನ್ಯಾಗನ್ನುಗಳಲ್ಲಿದ್ದ ಕುಮುಸಲಕ್ಕ [illegible] ಗಳನ್ನು ಜನರು ಲೂಟಿ ಮಾಡಿದರೆಂ [illegible] ಪೋಲೀಸರು ಬಂದು ಚೆದರಿದರೂ ಅವ [illegible] ತೆ ಕಲ್ಲನ್ನು ಎಸೆಯಲಾಯಿತೆಂ [illegible] ಲೀಸರು ಗುಂಡು ಹಾರಿಸಿದ ಕಾರ [illegible] ಜನರಿಗೆ ಗಾಯಗಳಾದುವೆಂ [illegible] ಲಾಗಿದೆ ಅನಕಪಲ್ಲಿಯಲ್ಲಿ ರೈಲ್ವೆ [illegible] ಗಳಿಗೆ ಬೆಂಕಿ ಹೊತ್ತಿಸಿ [illegible] ರೈಲು ಕಂಬಿ ಕತ್ತರಿಸಿದ ಜನ [illegible] ಗುಂಡು ಹಾರಿಸಬೇಕಾಗಿ ಬಂ [illegible] ಜನರು ಮಡಿದಿರುತ್ತಾರೆ [illegible] ಯಗಳಾಗಿವೆ ನೆಲ್ಲೂರು ಬಳಿ [illegible] ರೈಲನ್ನು ಕಡಿದು ಬೀಳಿಸಲಾಗಿ [illegible] ಖವಾಡದಲ್ಲಿ ಮಿಲಿಟರಿ ಕಾವಲು [illegible] ರು, ವಿಜಯವಾಡ ಮತ್ತು [illegible] ಲ್ಲಿ ಗುಂಡನ್ನು ಚದುರಿಸಲು [illegible] ವ ನೆಮ್ಮೆ ಅಶ್ರುವಾಯುವನ್ನು ಪ್ರ [illegible] ಸಿದರು

ಮ್ಯಾಜಿಸ್ಟ್ರೇಟರು ಮತ್ತು ಪೊ॥ ಅಧಿಕಾರಿಗಳ ಬಂಧನ

[illegible] ಗಲಭೆಗಾರರು ರಾಜಮಹೇಂ [illegible] ರೆಗ್ಗೆ ಕೆಲವು ಕಾಲ "ಸ್ವತಂ [illegible] ನ್ನು ಏರ್ಪಡಿಸಿದ್ದರೆಂದು ವರ [illegible] ಜಿಲ್ಲಾ ಪೋಲೀಸು ಅಧಿಕಾರಿ [illegible] ಮಂಜಿಸ್ಟ್ರೇಟರನ್ನು ರೈಲ್ವೆ [illegible] ಬಂಧಿಸಲಾಗಿತ್ತು ಗೋದಾ [illegible] ಸೇತುವೆ ಸೇತುವಿನ ರೈಲು ಕಂಬಿ ಕೀಳ [illegible] ಪೋಲೀಸರು ಗುಂಡುಹಾರಿ [illegible] ರು ಲೆಕ್ಕಿಸಲಿಲ್ಲವೆಂದೂ ಹೇಳ [illegible] ಪರಿಸ್ಥಿತಿ ವಿಷಮಗೊಂಡಿದೆ

ರಾಜಾಜಿಯವರ ಪ್ರತಿಮೆಯ ದಹನ

[illegible] ವರಂನಲ್ಲಿ ಆಂಧ್ರ ಚಳುವಳಿಗಾ [illegible] ಮುಖ್ಯ ಮಂತ್ರಿ ರಾಜಾಜಿ [illegible] ಪ್ರತಿಮೆ ಮಾಡಿ ಮೆರವಣಿಗೆಯಲ್ಲಿ [illegible] ಅದನ್ನು ಸುಟ್ಟಿರುತ್ತಾರೆ [illegible] ನೀತಿಯನ್ನು ಪ್ರತಿಭಟಿ [illegible] ಶಾಸನಸಭಾ ಸದಸ್ಯರಾದ [illegible] ರೆಡ್ಡಿ, ಭೂಪತಿರಾಜು, ಸು [illegible] ದರವರು ರಾಜೀನಾಮೆಯಿತ್ತಿರು

ಗಾಂಧಿ ಸ್ಮಾರಕ ಮ್ಯೂಸಿಯಂಗೆ ೨೫ ಲಕ್ಷ

ಗಾಂಧಿ ಸ್ಮಾರಕ ನಿಧಿಯಿಂದ ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ೧೮ ಲಕ್ಷ ರೂ ಗಳನ್ನು ವೆಚ್ಚ ಮಾಡಬೇಕೆಂದು ಸ್ಮಾರಕ ಸಮಿತಿಯವರು ನಿರ್ಧರಿಸಿರುತ್ತಾರೆ ಬೊಂಬಾಯಿ ಗಿರಣಿ ಮಾಲೀಕರು ನಿಧಿಗೆ ಕೊಟ್ಟಿರುವ ಹಣದಲ್ಲಿ ೫೪,೭೫೦೦೦ರೂ ವೆಚ್ಚದಲ್ಲಿ ಅಲ್ಲಿನ ಕಾರ್ಮಿಕರಿಗಾಗಿ ಆಸ್ಪತ್ರೆಯೊಂದನ್ನು ನಿರ್ಮಿಸಲು ತೀರ್ಮಾನವಾಗಿದೆ ದೆಹಲಿಯ ರಾಜಘಾಟಿನ ಬಳಿ ೪೫ ಎಕರೆ ಜಮೀನಿನಲ್ಲಿ ಒಂದು ಗಾಂಧಿ ಮ್ಯೂಸಿಯಂ ಮತ್ತು ಇತರ ಕಟ್ಟಡಗಳನ್ನು ಕಟ್ಟಲು ೨೫ ಲಕ್ಷ ರೂ ಮಂಜೂರು ಮಾಡಲಾಗಿದೆ ಎಕರೆಗೆ ೬೦೦ ರಿಂದ ೪ ಸಾವಿರ ಪೌಂಡಿನವರೆಗೆ ಹೆಚ್ಚು ಸಿಗಬಹುದಾದ ಹೊಸ ಭತ್ತದ ಬೆಳೆಯ ವಿಧಾನಕ್ಕಾಗಿ ೧೯ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ

ಬೆಂಗಳೂರು ರೈಲನ್ನು ಉರುಳಿಸುವ ಪ್ರಯತ್ನ

ಮಚಲಿ ಪಟ್ಟಣದಿಂದ ಕಳೆದ ಭಾನುವಾರ ಬೆಂಗಳೂರಿಗೆ ಹೊರಟಿದ್ದ ರೈಲೊಂದನ್ನು ಉರುಳಿಸುವ ಪ್ರಯತ್ನವೊಂದು ಅಲ್ಲಿ ಆಂಧ್ರ ಪ್ರಾಂತ ಪ್ರದರ್ಶಕಗಾರರಿಂದ ನಡೆಯಿತೆಂದೂ, ನಿಲ್ದಾಣದ ಸಿಗ್ನಲ್ ಬಳಿ ಕಂಬಿಗಳನ್ನು ಕಿತ್ತು ಹಾಕಲಾಗಿತ್ತೆಂದೂ ಹೇಳಲಾಗಿದೆ ಸಕಾಲದಲ್ಲಿ ಅದು ತಿಳಿದುಬಂದು ಅನಾಹುತವಾಗುವುದು ತಪ್ಪಿತೆಂದು ವರದಿಯಾಗಿದೆ

ಅಂತರ್ರಾಷ್ಟ್ರೀಯ ಫುಟ್‌ಬಾಲ್ ರೆಫ್ರಿಗಳಾಗಿ ಮೈಸೂರಿನವರು

ಸ್ವಿಟ್ಸರ್ಲೆಂಡಿನಲ್ಲಿ ನಡೆಯುವ ಫುಟ್‌ಬಾಲ್ ಪಂದ್ಯಗಳಲ್ಲಿ ಅಂತರ ರಾಷ್ಟ್ರೀಯ ರೆಫ್ರಿಗಳಾಗಿ ಭಾರತದ ಐದು ಮಂದಿಯನ್ನು ಆರಿಸಲಾಗಿದೆ ಆ ಪೈಕಿ ಮೈಸೂರಿನ ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರೂ ಒಬ್ಬರು ದೆಹಲಿಯ ಕ್ಯಾ॥ ಹನ್ಸರಾಂಸಿಂಗ್, ಬೊಂಬಾಯಿಯ ಪಿ ಎಸ್ ಗೋಪಾಲ್, ಕಲ್ಕತ್ತೆಯ ಶ್ರೀ ಗಡು ಚಟರ್ಜಿ ಮತ್ತು ಎನ್ ಕೆ. ಘೋಷ್‌ರವರು ಉಳಿದವರು

ಆಂಧ್ರ ಪ್ರಾಂತಕ್ಕಾಗಿ ಹೆಚ್ಚಿನ ಉಪವಾಸಗಳು

ಬೊಂಬಾಯಿಯಲ್ಲಿರುವ ಸಮಾಜವಾದಿ ಆಂಧ್ರ ಮಹಾಜನ ಸಭೆಯ ಕಾರ್ಯದರ್ಶಿ, ರಾಜಾರಾಂ ವೆಂಕಯ್ಯ ಪಕ್ಕಂಟಿ ಎಂಬುವರು ಆಂಧ್ರ ಸಂಸ್ಥಾನದ ಸ್ಥಾಪನೆಯ ಬಗ್ಗೆ ಬೊಂಬಾಯಿಯ ಆಂಧ್ರರು ಒಮ್ಮತದಿಂದ ಇರುವರೆಂದು ಸೂಚಿಸಲೂ ಮತ್ತು ಈ ವಿಷಯವಾಗಿ ಭಾರತ ಸರ್ಕಾರದವರ ತೀರ್ಮಾನ ಆಸಕ್ತಿಗೆ ಪ್ರತಿಭಟಿಸಲೂ ಮೊನ್ನೆಯಿಂದ ಅನಿರ್ದಿಷ್ಟಕಾಲದ ಉಪವಾಸವನ್ನು ಪ್ರಾರಂಭಿಸಿರುತ್ತಾರೆ

ಶ್ರೀಕಾಕುಳಂ ಜಿಲ್ಲೆಯ ಕಾಂಗ್ರೆಸ್ ಮುಖಂಡರಾದ ಸಿಲ್ಲರಾಜುಲ ರೆಡ್ಡಿಯವರು "ಪೊಟ್ಟಿ ಶ್ರೀರಾಮುಲುರವರ ಉಪವಾಸ ವ್ರತವನ್ನು ಮುಂದುವರಿಸಲು' ಆಮರಣಾಂತ ಉಪವಾಸವನ್ನು ಕೈಗೊಂಡಿರುತ್ತಾರೆ

ಪೊಟ್ಟಿ ಶ್ರೀರಾಮುಲುರವರ ನಿಧನದ ಬಗ್ಗೆ ಸಂತಾಪ ಸೂಚಿಸಲು ಮೊನ್ನೆ ಗುಂಟೂರಿನಲ್ಲಿ ಸೇರಿದ್ದ ಸಭೆಯಲ್ಲಿ ಸ್ಥಳೀಯ ಕಾಲೇಜಿನ ವಿದ್ಯಾರ್ಥಿ ಓಬಾ ರೆಡ್ಡಿ ಎಂಬುವನು ಮಾರನೇ ದಿವಸದಿಂದ ಉಪವಾಸ ಮಾಡುವುದಾಗಿ ತಿಳಿಸಿದನು ಸ್ವಾಮಿ ಸೀತಾರಾಂರವರೊಡನೆ ೩೫ ದಿನಗಳ ಪರ್ಯಂತ ಉಪವಾಸ ಮಾಡಿದ ಶೆ ಸಂಪತ್ಕುಮಾರ್‌ರವರು ಟಿ ಪ್ರಕಾಶಂರವರಿಗೆ ತಂತಿ ಕಳುಹಿಸಿ, ಆಮರಣಾಂತ ಉಪವಾಸ ಕೈಗೊಳ್ಳಲು ಅವರ ಅನುಮತಿ ಬೇಡಿರುವರೆಂದು ವರದಿಯಾಗಿದೆ

ಸಂತಾಪ ಸೂಚಕ ಸಭೆ

ರಾಜಧಾನಿಯ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನೆನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯೊಂದು ನಡೆದು, ಆಂಧ್ರ ಪ್ರಾಂತಕ್ಕಾಗಿ ಉಪವಾಸ ಮಾಡಿದ ಪೊಟ್ಟಿ ಶ್ರೀರಾಮುಲುರವರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು. ಪ್ರಧಾನಿ ನೆಹರೂ ಮತ್ತು ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರ ವರ್ತನೆಯನ್ನು ಖಂಡಿಸಲಾಯಿತಲ್ಲದೆ, ಭಾಷಾವಾರು ಪ್ರಾಂತ ರಚನೆಗಾಗಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಮಾಡಲಾಯಿತು

ವಕೀಲರು ಗ್ರಾಮಾಂತರಗಳಲ್ಲಿ ನೆಲೆಸಬೇಕು

ಶ್ರೇಷ್ಠ ನ್ಯಾಯಾಧೀಶರ ಸಲಹೆ

ಬೆಂಗಳೂರು ೧೮

ಇಲ್ಲಿನ ವಕೀಲರ ಸಂಘದವರು ಇತ್ತೀಚಿಗೆ ಸಮಾರಂಭದಲ್ಲಿ ಭಾಷಣ ಮಾಡುತ್ತಾ,ಭಾರತದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪತಂಜಲಿ ಶಾಸ್ತ್ರಿಗಳವರು ಗ್ರಾಮಾಂತರ ಪ್ರದೇಶಗಳಲ್ಲಿ ವಕೀಲರುಗಳು ಹೋಗಿ ನೆಲೆಸಿ ಸಮಾಜ ಸೇವೆಯನ್ನು ಮಾಡುವುದಲ್ಲದೆ,ತನ್ಮೂಲಕ ತಮ್ಮ ಜೀವನವನ್ನೂ ಉತ್ತಮಪಡಿಸಿಕೊಳ್ಳಬಹುದೆಂದು ಸೂಚಿಸಿದರು ಹೊಸ ಸನ್ನಿವೇಶಕ್ಕೆ ಹೊಂದಿಕೊಂಡು ಸಾಮಾನ್ಯ ಪ್ರಜೆಗಳ ಸೇವೆಯಲ್ಲಿ ತೊಡಗದಿದ್ದರೆ ವಕೀಲರುಗಳಿಗೆ ಏಳಿಗೆಯಿಲ್ಲವೆಂದೂ ಅವರು ತಿಳಿಸಿದರು ಹಳ್ಳಿಗಳಲ್ಲಿ ನೆಲೆಸುವುದರಿಂದ ವಕೀಲರುಗಳು ಅನೇಕ ದುರ್ವ್ಯಾಜ್ಯಗಳನ್ನು ತಪ್ಪಿಸಬಹುದೆಂದೂ ಅವರು ಅಭಿಪ್ರಾಯಪಟ್ಟರು.

ಆಂಧ್ರದಲ್ಲಿ ಗಲಭೆಗಳನ್ನು ತಡೆಗಟ್ಟಲು ರಾಜಾಜಿ ಮನವಿ

ಆಂಧ್ರದಲ್ಲಿ ಶಾಂತಿ ಮತ್ತು ಶಿಸ್ತನ್ನು ಕಾಪಾಡಲು ಪ್ರಭಾವಶಾಲಿಗಳಾದ ಎಲ್ಲ ಸಭ್ಯ ಪ್ರಜೆಗಳೂ ಶ್ರಮಿಸಬೇಕೆಂದು ಮದ್ರಾಸಿನ ಮುಖ್ಯ ಮಂತ್ರಿ, ರಾಜಾಜಿಯವರು ಕೋರಿರುತ್ತಾರೆ ಪ್ರತ್ಯೇಕವಾದ ಆಂಧ್ರಪ್ರಾಂತ ರಚನಾ ಸಮಸ್ಯೆಯನ್ನು ಪರಿಹರಿಸಲು ಪ್ರಧಾನಿ ನೆಹರೂರವರೂ ಮತ್ತು ತಾವೂ ಪ್ರಯತ್ನಿಸುತ್ತಿರುವಾಗಲೇ ಜನರು ಮತಿಗೆಟ್ಟಿರುವುದಕ್ಕಾಗಿಯೂ, ಜನರ ವಿವೇಕರಹಿತ ಆಶಿಸ್ತನ್ನು ತಡೆಗಟ್ಟಲು ಯಾರೂ ಶಕ್ತಿಯುತರಾಗಿಲ್ಲದಿರುವುದಕ್ಕಾಗಿಯೂ ಅವರು ವಿಷಾದವನ್ನು ಸೂಚಿಸಿರುತ್ತಾರೆ ಲೂಟಿ, ಗಲಭೆ,ದೊಂಬಿ ಮುಂತಾದ ತಡೆಯಿಲ್ಲದೆ ಮುಂದುವರಿಯಲು ಅವಕಾಶವೀಯುವುದಕ್ಕಾಗುವುದಿಲ್ಲವೆಂದೂ ಅವರು ಎಚ್ಚರಿಸಿರುತ್ತಾರೆ ಈ ಗಲಭೆಗಳನ್ನು ಅಡಗಿಸುವುದರಲ್ಲಿ ನಿರಪರಾಧಿಗಳಾದ ಅನೇಕರ ಪ್ರಾಣಹರಣವಾಗಿರುವುದಕ್ಕಾಗಿಯೂ ಅವರು ವಿಷಾದವನ್ನು ವ್ಯಕ್ತಪಡಿಸಿರುತ್ತಾರೆ

ಪೌರಸಭಾಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ನೆನ್ನೆ ನಡೆದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ಶ್ರೀ ಎ. ಕೃಷ್ಣಮೂರ್ತಿ ರಾಯರನ್ನು ಅಧ್ಯಕ್ಷರನ್ನಾಗಿಯೂ ಮತ್ತು ಶ್ರೀ ಎಂ ರಾಚಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ ಸರ್ವಾನುಮತದಿಂದ ಚುನಾಯಿಸಲಾಯಿತು. ಶ್ರೀಗಳಾದ ಸಿ ಸೀತಾರಾಮಯ್ಯ, ಎ ವೆಂಕಟೇಶಯ್ಯ, ಜಾ ಡ [illegible] ಯ್ಯ, ಬಿ ಜಿ ದಾಸ್, ಎ ಡಿ ಕೃಷ್ಣಸ್ವಾಮಿ, ಮತ್ತು ಡಾ॥ ಅಹಮದ್ ಖಾನ್‌ರವರು ಭಾಷಣ ಮಾಡಿ ಚುನಾಯಿತರನ್ನು ಅಭಿನಂದಿಸಿದರು ಶ್ರೀ ಕೃಷ್ಣಮೂರ್ತಿರಾಯರು ಸರ್ವರ ಸಹಕಾರವನ್ನೂ ಕೋರಿ ತಮ್ಮನ್ನು ಮತ್ತೆ ಚುನಾಯಿಸಿದುದಕ್ಕೆ ವಂದನೆಯನ್ನರ್ಪಿಸಿದರು,

ಜಿಲ್ಲಾ ಬೋರ್ಡು ಚುನಾವಣೆಗಳು

ಮೈಸೂರು ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಪಿ. ವೆಂಕಟಸುಬ್ಬಯ್ಯನವರು ಈ ರೀತಿ ತಿಳಿಸುತ್ತಾರೆ.—

ತಾ॥೧೦-೧೨-೫೨ರಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆ ವಿಷಯವಾಗಿ ಬಂದ ನಿರ್ಣಯಕ್ಕೆ ನಾನು ಬೆಂಬಲ ಕೊಟ್ಟು ಮಾತನಾಡಿದೆನೆಂದು ಪ್ರಕಟವಾಗಿರುವುದಕ್ಕೆ ನಾನು ವಿಷಾದಿಸುತ್ತೇನೆ ಆ ರೀತಿ ನಾನು ಬೆಂಬಲ ಕೊಡಲಿಲ್ಲ. ಡಿಸ್ಟ್ರಿಕ್ಟ್ ಡೆವಲಪ್ಮೆಂಟ್ ಕಮಿಟಿ ವಿಸರ್ಜನೆಯಾದ ಬಳಿಕ ಅದರ ಕೆಲಸ ಮತ್ತು ಜವಾಬ್ದಾರಿಯನ್ನೆಲ್ಲಾ ಡಿಸ್ಟ್ರಿಕ್ಟ್ ಬೋರ್ಡು ನಡೆಸತಕ್ಕದ್ದೆಂದು ೫೧ ನೇ ಇಸವಿ ಶಾಸನದಲ್ಲಿ ವಿಧಾಯಕವಾಗಿ ಅದರಂತೆ ನಡೆಯದೆ ಇರುವುದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿ ನಿರ್ಣಯದಲ್ಲಿ ಅದನ್ನು ಕಾಣಿಸಬೇಕೆಂದು ಹೇಳಿ, ಡಿಸ್ಟ್ರಿಕ್ಟ್ ಡೆವಲಪ್ಮೆಂಟ್ ಕಮಿಟಿಗೆ ಕೊಡುತ್ತಿದ್ದ ಗ್ರ್ಯಾಂಟ್ ಸಹ ಸರ್ಕಾರ ಕೊಡದೆ ಉದಾಸೀನ ಮಾಡಿ ತನ್ಮೂಲಕ ತೊಂದರೆ ಉಂಟುಮಾಡಿರುವುದಕ್ಕಾಗಿ ಸರ್ಕಾರವನ್ನು ಟೀಕಿಸಿದೆನು

ಜಿಲ್ಲಾಬೋರ್ಡು ಚುನಾವಣೆ ಯಾವ ರೀತಿ ನಡೆಸಬೇಕೆಂಬ ವಿಷಯದಲ್ಲಿ ಸರ್ಕಾರವು ನಿರ್ಧರಿಸಿರುವ ಕಮಿಟಿಯ ತೀರ್ಮಾನವು ಸರ್ಕಾರಕ್ಕೆ ತಲುಪದೆಯಿರುವುದರಿಂದ ತೀರ್ಮಾನದ ಆಜ್ಞೆ ಹೊರಡಲು ಅಡ್ಡಿಯಾಗಿದೆಯೆಂದು ಇನ್ನೊಬ್ಬ ಸದಸ್ಯರು ಹೇಳಿದ್ದನ್ನು ಒಪ್ಪಬೇಕಾಗಿದೆಯೆಂದೂ, ಚುನಾವಣೆಯನ್ನು ಮುಂದಕ್ಕೆ ಹಾಕಿರುವುದರಿಂದ ಬೋರ್ಡಿನ ಕಾರ್ಯ ಸರಿಯಾಗಿ ನಡೆಯುವುದಕ್ಕೆ ಅಡ್ಡಿಯಾಗಿದೆ ಎಂಬುದಾಗಿ ಕೆಲವು ಸದಸ್ಯರು ಹೇಳಿದ್ದು ಸರಿಯಲ್ಲವೆಂದೂ ಇದರಿಂದ ಯಾವ ತೊಂದರೆಯೂ ಆಗಿಲ್ಲವೆಂದೂ ನಾನು ಖಂಡಿತವಾಗಿ ಹೇಳುತ್ತೇನೆ

ಮಕ್ಕಳ ಪುಸ್ತಕಗಳ ವಾರ

ರಾಜಧಾನಿಯ ವನಿತಾ ಸದನದಲ್ಲಿರುವ ಮಕ್ಕಳ ಪುಸ್ತಕದ ಕೌನ್ಸಿಲ್ಲಿನವರು ಬರುವ ತಿಂಗಳಿನಲ್ಲಿ ಮಕ್ಕಳ ಪುಸ್ತಕದ ವಾರವನ್ನು ನೆರವೇರಿಸಲಿರುವರು ಮಕ್ಕಳ ಪುಸ್ತಕಗಳನ್ನು ಮತ್ತು ಬೋಧಪ್ರದವಾದ ಇತರ ವಸ್ತುಗಳನ್ನು ಅಲ್ಲಿ ಪ್ರದರ್ಶಿಸಲಾಗುವುದು ೩ ರಿಂದ ೧೨ ವಯಸ್ಸಿನ ಮಕ್ಕಳ ಗುಪ್ತಶಕ್ತಿಗಳನ್ನು ಕಂಡುಹಿಡಿಯಲು ವಿವಿಧ ಸ್ಪರ್ಧೆಗಳೂ ಏರ್ಪಾಡಾಗುವುವು ಮಕ್ಕಳ ಸ್ಪರ್ಧೆಗಳಲ್ಲಿ ಬರವಣಿಗೆ, ಭಾರತ ವಾಚನ ದೇವರ ನಾಮ ಮತ್ತು ವಚನ ಗಾಯನ, ನೃತ್ಯ, ಡ್ರಿಲ್, ರೇಡಿಯೋ ಮುಂತಾದ ಸಾಮೂಹಿಕ ಆಟಗಳು ,ನಾಟಕ, ಕಥೆ, ಚಿತ್ರ ಇತ್ಯಾದಿಗಳ ರಚನೆ ಇವೂ ಸೇರಿವೆ ಮಕ್ಕಳ ಪುಸ್ತಕಗಳ ಗ್ರಂಥಕರ್ತರ, ಚಿತ್ರಗಾರರ ಮತ್ತು ಪ್ರಕಾಶಕರ ಸಮ್ಮೇಳನವೂ ಸಹಾ ಆಗಲೇ ನಡೆಯಲಿದೆ

SRI GAYATHRI
TALKIES
From Wednesday the 17th
A GREAT JAPANESE FILM
(With English Title)
WHICH BRINGS NEW EXPE-
RIENCE IN THE CINEMA
SPECIAL ACADEMY AWARD
GRAND PRIZE WINNER
VENICE FILM FESTIVAL
RASHO-MON
(World's Best Film)
(For Adults Only)

ನಿಧನ

ಮಹಾರಾಜಾ ಕಾಲೇಜಿನಲ್ಲಿ ಗಣಿತ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರಾಗಿದ್ದ ಎಲ್. ಎಸ್ ಸಪ್ತರ್ಷಿ ಅಯ್ಯರ್‌ರವರ ಪತ್ನಿ ಶ್ರೀಮತಿ ನಾಗಮ್ಮನವರು ಮೊನ್ನೆ ಸಂಜೆ ೫॥ ಘಂಟೆಗೆ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಬಹಳ ದೈವಭಕ್ತಿಯುಳ್ಳವರಾಗಿದ್ದರು

ಮೋತಿಲಾಲ್ ಟಾಕೀಸ್
ಮಂಡಿ ಮೊಹಲ್ಲಾ, ಮೈಸೂರು
19-12-52 ರಿಂದ ಪ್ರತಿದಿನ 3 ಆಟಗಳು
ಎ ವಿ ಎಂ ರವರ ಹಿಂದಿ ಚಿತ್ರ
★ ಬಹಾರ್ ★
ತಾರೆ — ವೈಜಯಂತಿ ಮಾಲ ಮತ್ತು ಕರನ್ ದಿವಾನ್
ಬೆಳಗಿನ ಪ್ರದರ್ಶನ ದಿಲ್

ಜಿನವಾಣಿ

ಶ್ರವಣಬೆಳಗೊಳದ ಗೋಮಟೇಶ್ವರನ ಮಹಾ ಮಸ್ತಕಾಭಿಷೇಕ ನಿಮಿತ್ತವಾಗಿ ಮಾರ್ಚಿ ೫ ನೇ ತಾರೀಖಿಗೆ ವಿಶೇಷಾಂಕ ೨೦೦ ಪುಟಗಳು ಪ್ರಕಟವಾಗಲಿದೆ ಸುಮಾರು ೫-೬ ಲಕ್ಷ ಜನರು ಯಾತ್ರಾನಿಮಿತ್ತವಾಗಿ ಬರಲಿದ್ದಾರೆ ಉತ್ತಮ ವರ್ಗದ ಲೇಖನಗಳಿಂದ ಪ್ರಕಟವಾಗಲಿದೆ ವ್ಯಾಪಾರಸ್ಥರು ಅಡ್ವರ್ಟೈಸ್‌ಮೆಂಟ್ ಮೂಲಕ ಸಹಕರಿಸಬೇಕಾಗಿ ವಿನಂತಿ.

ಮ್ಯಾನೇಜರ್
ಜಿನವಾಣಿ ಕಾರ್ಯಾಲಯ ಮೈಸೂರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ೨ ನಿ ವಾದ್ಯಸಂಗೀತ, ಪುರಂದರ ದಾಸರ ಪದಗಳು ... ೧ ೪೦ ... ಸಂಜೆ ೫ ೪೫ ಮತ್ತು ೭ ೩೦ ... ವೆಂಕಟಸುಬ್ಬರಾವ್ ಮತ್ತು ... ಅಯ್ಯರ್, ರಾತ್ರಿ ೭ ೧೫ ಗಾನ ವಿಹಾರ ... ಗೀತಾ ... ಗಾನವಾರಿಧಿ ... ಅರ್ಪಣ

SRI GANESH
TALKIES
Season's Special Attractions
From 19-12-52
Academy Award-Winner Joseph Ferrer Co-starring Mala Powers in Stanley Kramer's Masterpiece
CYRANO
DE BERGERAC
Movie Entertainment
At its Best
— NEXT CHANGE —
On 26—12—52
Universal's
BATTLE AT APACHE PASS
(In Technicolor)
On 29—12—52
MUCH-AWAITED
SOUTH SEA SINNER
(For Adults Only)

Edited, Printed and Published by A R Nagaraja at Sadhvi Press, D Subbiah Road, Mysore

ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

ಇವರ ಪರಿಚಯವಿದೆಯೇ.
ಮೈಸೂರು
ಸಾಬೂನು
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ವಸ್ತುಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ, ಶ್ರಮ, ಕಾಲ ಹಣ ಉಳಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ


ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ.
ಎಲ್ಲ ಕಡೆಯೂ ಸಿಗುತ್ತದೆ
ಸರ್ಕಾರದ
ಸಾಬೂನು ಕಾರ್ಖಾನೆ,
ಬೆಂಗಳೂರು

ನಾಟ್ಯಕಲಾಭೂಷಣೆ ವೈಜಯಂತಿಮಾಲಾರವರ ಅತ್ಯಮೋಘ ನರ್ತನ

ಕಾಸ್ಮಾಪಾಲಿಟನ್ ಕ್ಲಬ್
ಸುವರ್ಣ ಮಹೋತ್ಸವದ
ಅಂಗವಾಗಿ
ಮೈಸೂರು
ಕ್ರಾಫರ್ಡ್ ಹಾಲಿನಲ್ಲಿ
21-12-52ನೇ ಭಾನುವಾರ
ಸಂಜೆ 6 ಘಂಟೆಗೆ
— ಟಿಕೆಟ್ ದರ —
ರೂ 20, 10, 5, 3, 2, 1
ಸ್ತ್ರೀಯರಿಗೆ ಪ್ರತ್ಯೇಕ
ಸ್ಥಳ ಏರ್ಪಡಿಸಿದೆ
ಎಂ. ಎ. ಸೋಮಶೇಖರ್,
ಮೆಂಬರ್ ಇನ್ ಛಾರ್ಜ್
ಟಿಕೆಟ್ ದೊರೆಯುವ ಸ್ಥಳ —
1 ಕಾರೊನೇಷನ್ ಜ್ಯೂಯಲರಿ ಮಾರ್ಟ್ ಅಶೋಕಾ ರಸ್ತೆ
2 ಕಾರೊನೇಷನ್ ಕ್ಲಾತ್ ಎಂಪೋರಿಯಂ ಸಯ್ಯಾಜಿರಾವ್ ರೋಡ್
3 ಬಾದಾಮಿ ಸ್ಟೋರ್ಸ್ ... ಕ್ರಾಸ್ ...
4 ಎಸ್. ಪುಟ್ಟಣ್ಣ ಮರ್ಚೆಂಟ್, ... ಮಾರ್ಕೆಟ್ ಸರ್ಕಲ್
5 ಬಲ್ಲಾಳ್ ಹೋಟೆಲ್ ಲಕ್ಷ್ಮೀಪುರಂ
6 ಕಾಸ್ಮಾಪಾಲಿಟನ್ ಕ್ಲಬ್

ಕ್ರಿಸ್ಮಸ್ ಹಬ್ಬಕ್ಕಾಗಿ ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,
ಚೋಳಿ ಪೀಸುಗಳು ಪೂನಾ, ನಾಗಪೂರ್ ಸೀರೆಗಳಿಗೆ (ಫೋನ್ ನಂ 446)
★ M. V. ಬೋಜಯ್ಯ ಶ್ರೀ
ಬಿ. ಎ., ಇಂಡಿಪೆಂಡೆಂಟ್ ... ಮೈಸೂರು

ನೋಂ. ನಂ.794 ||ವಂದೇ ಮಾತರಂ|| ಬಿಡಿಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧) ಶುಕ್ರವಾರ ೧೯-೧೩-೧೯೫೩ [ಸಂಚಿಕೆ ೧೧೮

ವಾಲ್ಟೇರಿನಲ್ಲಿ ಗುಂಡು: ಮಹಿಳೆಯ ಮರಣ

ನಮ್ಮ ಸಂಸ್ಕೃತಿಯನ್ನು ಮರೆಯಬಾರದು

ಶ್ರೀ ಸಂ. ಮ. ಶಂಕರ ಭಾಷಣ

ಮೈಸೂರು ೧೯

... ಮಹಾರಾಜಾ ಕಾಲೇಜಿನ ಕರ್ನಾ... ಘದ ಆರಂಭೋತ್ಸವವನ್ನು ಮುಖ್ಯ... ಅತಿಥಿಗಳಾದ ಶ್ರೀ ಕೆ. ಶಿವರಾಮ... ರವರು, ನೆನ್ನೆ ನೆರವೇರಿಸಿದರು. ... ಅಧ್ಯಕ್ಷ ಶ್ರೀ ಎಸ್. ವಿ. ರಂಗಣ್ಣ ... ಧ್ಯಕ್ಷತೆ ವಹಿಸಿದ್ದರು.

... ಘದ ಉಪಾಧ್ಯಕ್ಷರಾದ ಶ್ರೀ ಎಸ್. ... ನೃಸಿಂಹಸ್ವಾಮಿ ಯವರು ಸ್ವಾಗ... ಮಾಡಿದ ಮೇಲೆ, ಶ್ರೀ ರಾಮ... ಯರಿಂದ ಕಾವ್ಯ ವಾಚನವು ನಡೆ...

... ಶಂಕರರು ಭಾಷಣ ಮಾಡಿ ಭಾರ... ಸಂಸ್ಕೃತಿಯು ಪುರಾತನವೂ ಅತ್ಯಂತ ... ವೂ ಆಗಿರುವುದೆಂದೂ ಅದನ್ನು ಭಾ... ರು ಮರೆಯಬಾರದೆಂದೂ ಹೇಳಿ ... ಭಾರತ ಸಂಸ್ಕೃತಿಯು ಮಹಿಮೆಯು... ಪಾಶ್ಚಾತ್ಯ ದೇಶಗಳ ಜನರು ಚೆನ್ನಾಗಿ ... ನನ್ನು ಬಳಕೆಗೆ ತರುತ್ತಿರುವರೆಂ... ತಮ ಸಂಸ್ಕೃತಿಯನ್ನು ಮರೆ... ರು ಅನ್ಯ ದೇಶೀಯರ ಆಚಾರ ... ರಗಳನ್ನು ಅನುಕರಿಸುತ್ತಿರುವುದು ... ವೆಂದೂ ಹೇಳಿದರು ನಮ್ಮ ಸಂ... ಸ್ಕೃತಿಯು ಪ್ರಕಾಶಕ್ಕೆ ಬರುವ ... ಗನೆ ಬರಲೆಂದು ಅವರು ಹಾರೈ...

... ಕಾವ್ಯಪರಿಷತ್ ಶ್ರೀ ಡಿ. ರಾಮೇ... ವಂದನಾರ್ಪಣೆಯೊಡನೆ, ಸಮಾ... ರಂಭ ಮುಕ್ತಾಯವಾಯಿತು

ಉಪನ್ಯಾಸ ಮತ್ತು ಹರಿಕಥೆ

... ಯ ಡಿ. ಬಸವಯ್ಯನ ... ಯಲ್ಲಿರುವ ಕುಂಚಿಟಿಗರ ಶ್ರೀ ... ಮಂದಿರದಲ್ಲಿ ಈ ರಾತ್ರಿ ೭|| ಗಂ... ಕೆ ಪಾರ್ಥಸಾರಥಿ ನಾ... ರು ಭಕ್ತಿಯ ವಿಷಯವಾಗಿ ಉ... ಪನ್ಯಾಸ ಮಾಡುವರು ನಾಳೆ ಮಧ್ಯಾ... ಗಂಟೆಗೆ ಈದಿಗಾಡದಲ್ಲಿರುವ ಶಿವ... ವಲ್ಲಿ ಅವರಿಂದ " ಶ್ರೀ ಶನಿ ಮಹಾತ್ಮೆ ಕಥೆಯೂ ನಡೆಯುವುದು

ವಿಜಯ ಪತ್ರಿಕೆ ಸಂಪಾದಕರ ವಿಷಾದ

... ಪತ್ರಿಕೆಯ ೬-೧೩-೫೩ ರ ... ಯಲ್ಲಿ ಪ್ರೊ|| ಎಲ್ ಶ್ರೀಕಂಠ... ಬಗ್ಗೆ ಪ್ರಕಟಿಸಿರುವ ಲೇಖನ... ಸನೆಗಳು ನಿರಾಧಾರವಾದುವೆಂ... ದು ಅದಕ್ಕಾಗಿ ವಿಷಾದವನ್ನು ... ವಿಜಯ ಪತ್ರಿಕೆ ಸಂಪಾದಕರು ಪ್ರೊ|| ಶ್ರೀ ...ರಯ್ಯನವರಿಗೆ ಪತ್ರ ಬರೆ...

ಕೈಲಾಸಂ ದಿನಾಚರಣೆ

... ರಾಜಧಾನಿಯ ದಿವಾನರ ಅಗ್ರಹಾರ... ಮಹಿಳಾ ಸದನದಲ್ಲಿ ಕೈ... ಲಾಸಂರವರ ದಿನಾಚರಣೆ ಸಮಾರಂಭ... ಸಂಜೆ ೫-೭೦ ಗಂಟೆಗೆ ... ಶ್ರೀಮತಿ ಎಂ. ಶ್ರೀ... ನವರು ಕೈಲಾಸಂರವರ ನಾಟ... ವನ್ನು ಮಾಡುತ್ತಾರೆ. ಎಲ್ಲ ... ರೂ ಸಮಾರಂಭದಲ್ಲಿ ಭಾಗವ... ಕೋರಲಾಗಿದೆ

ಕೋಲಾರದಲ್ಲಿ ಭೂಕಂಪ

... ದಿನ ರಾತ್ರಿ ೧೧-೪೫ ಘಂಟೆ ... ಕೋಲಾರದಲ್ಲಿ ಭೂಮಿಯು ೧ ... ನಡುಗಿದ ಶಬ್ದದ ಅನುಭವವಾ... ಯಿತೆಂದು ವರದಿಯಾಗಿದೆ ಅನೇಕರು ... ಬಿಟ್ಟು ಬೀದಿಗಳಿಗೆ ಓಡಿಬಂದ... ರೂ ವರದಿಯಾಗಿದೆ

ಪಶ್ಚಿಮ ರಾಷ್ಟ್ರಗಳ ನಿರ್ಣಯಕ್ಕೆ ಪಾಕಿಸ್ತಾನದ ಒಪ್ಪಿಗೆ

ಪಾಕಿಸ್ತಾನ ಮತ್ತು ಭಾರತಗಳೆರಡೂ ಸೀಜ್ ಫೈರ್ ಪಂಕ್ತಿಯ ಉಭಯ ಕಡೆಗಳಲ್ಲೂ ನಿಶ್ಯಸ್ತ್ರೀಕರಣವಾದ ನಂತರ ಎಷ್ಟು ಸೈನ್ಯಗಳನ್ನು ಇಡಬೇಕೆಂಬ ಬಗ್ಗೆ ಸಂಧಾನಕ್ಕೆ ತೊಡಗಬೇಕೆಂದು ರಕ್ಷಣಾ ಭದ್ರತಾ ಸಮಿತಿಯಲ್ಲಿ ಇಂಗ್ಲೆಂಡ್ ಮತ್ತು ಅಮೆರಿಕಗಳು ತಂದಿರುವ ನಿರ್ಣಯವನ್ನು ಪಾಕಿಸ್ತಾನದ ವಿದೇಶಾಂಗ ಮಂತ್ರಿ, ಜಫರುಲ್ಲಾಖಾನರು ಒಪ್ಪಿರುವುದಾಗಿ ತಿಳಿಸಿರುತ್ತಾರೆ ಆದರೆ, ವಿಶ್ವಸಂಸ್ಥೆಯ ಪ್ರತಿನಿಧಿ, ಡಾ|| ಗ್ರಹಾಂರವರ ಮೂಲಕ ಸಂಧಾನವು ಮುಂದುವರೆಯಬೇಕೆಂದೂ, ಅವರು ಭದ್ರತಾ ಸಮಿತಿಗೆ ತಮ್ಮ ವರದಿಯನ್ನೊಪ್ಪಿಸಬೇಕೆಂದೂ ಅವರು ಸಲಹೆ ಮಾಡುತ್ತಾರೆ ನಿಶ್ಯಸ್ತ್ರೀಕರಣವಾದ ನಂತರ, ಅಜಾದ್ ಕಾಶ್ಮೀರದಲ್ಲಿ ಈಗಿರುವ ಸೈನ್ಯಗಳನ್ನು ಇಡಲು ಅವಕಾಶವಿತ್ತರೆ, ಭಾರತದ ಕಡೆ ೨೮ ಸಹಸ್ರ ಸೈನ್ಯಗಳು ಇರಲು ತಾವು ಒಪ್ಪುವುದಾಗಿಯೂ, ಅವರು ಹೇಳಿರುವರು

ಶಾಸನ ಸಭಾ ಕಾಂ|| ಪಕ್ಷದ ಸಭೆ

ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ೨೫ ಮಂದಿ ಸದಸ್ಯರ ಕೋರಿಕೆಯ ಮೇರೆ, ಪಕ್ಷದ ಸಭೆಯು ಇದೇ ತಿಂಗಳು ೨೫ ನೇ ತಾ|| ಬೆಂಗಳೂರು ರೆಸಿಡೆನ್ಸಿ ಭವನದಲ್ಲಿ ಜರಗುವುದು ಜಿಲ್ಲಾಬೋರ್ಡ್ ಮಸೂದೆ, ಶಾಸನ ಸಭಾಧಿವೇಶನವು ಸೇರಬೇಕಾದ ಅಗತ್ಯ, ಆಹಾರ ಧಾನ್ಯ ಸಂಗ್ರಹಣೆ ಬಗ್ಗೆ ಪಕ್ಷದಿಂದ ಅನುಮೋದನೆ ಹೊಂದದೆ ಇರುವ ನೀತಿಯ ಜಾರಿ,ಇವೇ ಮುಂತಾದ ಹಲವು ಪ್ರಮುಖ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಬೇಕೆಂದು ಸದಸ್ಯರು ಕೋರಿರುವರು

ಚಿನ್ನದ ಗಣಿ ಸಿಡಿತದಲ್ಲಿ ೬ ಜನರಿಗೆ ಗಾಯ

ಕೋಲಾರದ ಚಾಂಪಿಯನ್ ರೀಫ್ ಗಣಿಯ ೮೮-೮೯ ನೇ ಮಟ್ಟದಲ್ಲಿ ಭೂಮಿಯೊಳಗೆ ನೊನ್ನೆ ರಾತ್ರಿ ಬಂಡೆ ಸಿಡಿತವಾಗಿ, ೬ ಜನ ಕಾರ್ಮಿಕರಿಗೆ ಗಾಯಗಳಾಗಿವೆಯೆಂದೂ, ಸಿಡಿತದ ಪ್ರಮಾಣವು ಜೋರಾಗಿದ್ದು, ೧೪ ಮೈಲಿ ದೂರವಿರುವ ಬಂಗಾರಪೇಟೆಗೂ ಕೇಳಿಸಿತೆಂದೂ ವರದಿಯಾಗಿದೆ. ಅಲ್ಲಿ ಕೆಲಸವನ್ನು ಈಗ ನಿಲ್ಲಿಸಲಾಗಿದೆ

ಸ್ವದೇಶಿ ವಸ್ತುಗಳನ್ನೇ ಕೊಳ್ಳಬೇಕು

ಮದ್ರಾಸು ವಸ್ತು ಪ್ರದರ್ಶನದಲ್ಲಿ ಕೆ ಹನುಮಂತಯ್ಯನವರ ಭಾಷಣ

ಮದ್ರಾಸಿನ ಅ|| ಭಾ|| ಖಾದಿ ಮತ್ತು ಸ್ವದೇಶಿ ವಸ್ತು ಪ್ರದರ್ಶನವನ್ನು ನೆನ್ನೆ ಆರಂಭಿಸುತ್ತಾ, ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ, ಸ್ವರಾಜ್ಯ ಹೋರಾಟಕ್ಕೆ ಸ್ಫೂರ್ತಿಯನ್ನಿತ್ತ ಸ್ವದೇಶೀ ಚಳುವಳಿಯು ಸ್ವಾತಂತ್ರ್ಯ ಬಂದ ನಂತರ ಕ್ಷೀಣಿಸುತ್ತಿರುವ ಬಗ್ಗೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು ಸ್ಥಳೀಯವಾಗಿ ಉತ್ಪನ್ನವಾಗುವ ವಸ್ತುಗಳು ಸ್ವಲ್ಪ ಹೆಚ್ಚು ಬೆಲೆಯಾದರೂ, ಅವನ್ನೇ ಕೊಳ್ಳಬೇಕೆಂದೂ, ಅದರಿಂದ ದೇಶದ ಆರ್ಥಿಕ ಪ್ರಗತಿಯಾಗುವುದೆಂದೂ ಅವರು ಹೇಳಿ, ರಾಜಕೀಯ ಸ್ವಾತಂತ್ರ್ಯಕ್ಕೆ ಸ್ವದೇಶೀ ಭಾವನೆಯು ಆಧಾರವಾಗಿರುವುದೆಂದು ತಿಳಿಸಿದರು

ಪೋಪರೊಡನೆ ಯುಗೊಸ್ಲೇವಿಯದ ಸಂಬಂಧ ತ್ಯಾಗ

ಯುಗೋಸ್ಲೇವಿಯ ಸರ್ಕಾರ ಮತ್ತು ಅಲ್ಲಿನ ಕ್ಯಾಥೊಲಿಕ್ ಪಾದ್ರಿಗಳ ನಡುವೆ ರೋಮ್ ನಗರದ ಕ್ರಿಸ್ತರ ಜಗದ್ಗುರು ಪೋಪರು ಪ್ರವೇಶಿಸಿದರೆಂದು, ಯುಗೊಸ್ಲೇವಿಯವು ಪೋಪರೊಡನೆ ಸಂಬಂಧವನ್ನು ಕಡಿದುಹಾಕಿರುತ್ತದೆ

ಕೂಡಿಕೊಂಡಿದ್ದ ಜಂಟಿ ಮಕ್ಕಳ ಬೇರ್ಪಡೆ

ಅಮೆರಿಕದ ಓಹಿಯೋ ಪ್ರಾಂತದ ಕ್ಲೀವ್‌ಲೆಂಡ್ ಆಸ್ಪತ್ರೆಯೊಂದರಲ್ಲಿ ಒಂದು ತಿಂಗಳ ಹಿಂದೆ ಜನನವಾದ ಪರಸ್ಪರ ಅಂಟಿಕೊಂಡಿದ್ದ ಎರಡು ಮಕ್ಕಳನ್ನು ಶಸ್ತ್ರ ಚಿಕಿತ್ಸೆ ಮೂಲಕ ಪ್ರತ್ಯೇಕಿಸಲಾಯಿತೆಂದು ವರದಿಯಾಗಿದೆ

ಆಹಾರ ಸಿಬ್ಬಂದಿ ಹೋಕಾದಿಂದ ೧೩ ಲಕ್ಷ ರೂ. ಉಳಿತಾಯ

ಸಂಸ್ಥಾನದ ಆಹಾರದ ಇಲಾಖೆಯ ಸಿಬ್ಬಂದಿಯಲ್ಲಿ ವರ್ಷಕ್ಕೆ ವೆಚ್ಚವಾಗುತ್ತಿದ್ದ ೩೯ ಲಕ್ಷ ರೂ. ಗಳನ್ನು ೨೬ ಲಕ್ಷ ರೂ ಗಳಿಗೆ ಇಳಿಸಲಾಗಿರುವುದೆಂದೂ ಸಿಬ್ಬಂದಿ ಹೋಕಾದಿಂದ ದಕ್ಷತೆ ಕಡಿಮೆಯಾಗಿವೆಂದೂ ತಿಳಿದುಬಂದಿದೆ

ವಾಲ್ಟೇರ್ ನಿಲ್ದಾಣದಲ್ಲಿ ಗುಂಡಿನೇಟಿಗೆ ಮಹಿಳೆ ಬಲಿ

ವಾಲ್ಟೇರಿನ ನಿಲ್ದಾಣದಲ್ಲಿ ಜನತಾ ಎಕ್ಸ್‌ಪ್ರೆಸ್ ರೈಲಿನ ಸಂಚಾರವನ್ನು ತಡೆಯುವ ಪ್ರಯತ್ನ ನಡೆಸಿದ ಜನರ ಗುಂಪಿನ ಮೇಲೆ ಪೋಲೀಸರು ನೆನ್ನೆ ೧೧ ಬಾರಿ ಗುಂಡು ಹಾರಿಸಿದಾಗ, ಒಬ್ಬ ಮಹಿಳೆಯು ಮೃತಪಟ್ಟು, ಮೂವರು ಗಂಡಸರಿಗೆ ಗಾಯಗಳಾಗಿವೆಯೆಂದೂ, ಗಂಡಸರ ಪೈಕಿ ಮಧ್ಯ ವಯಸ್ಕನೊಬ್ಬನು ತುಂಬಾ ರಕ್ತ ಸುರಿಸುತ್ತಾ ದಾರಿಯಪಕ್ಕದಲ್ಲಿ ಬಿದ್ದನೆಂದೂ ವರದಿಯಾಗಿದೆ ನಿಂತುಹೋಗಿದ್ದ ರೈಲನ್ನು ನಡೆಸಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾಗ, ವಿದ್ಯಾರ್ಥಿಗಳ ನೇತೃತ್ವದಲ್ಲಿ ಗಲಭೆಕೋರರ ಗುಂಪೊಂದು ನುಗ್ಗಿ, ಇಂಜಿನ್ನಿನ ಮೇಲೆ ಧಾಳಿ ನಡೆಸುತ್ತಿದ್ದಾಗ ಅವರನ್ನು ಚದುರಿಸಲು ಪೋಲೀಸರು ಮಾಡಿದ ಲಾಠಿ ಪ್ರಯೋಗವು ನಿರರ್ಥಕವಾಗಲು, ಅವರು ಗುಂಡನ್ನು ಹಾರಿಸಬೇಕಾಯಿತೆಂದು ಹೇಳಲಾಗಿದೆ.

ಚಿನ್ನದ ಗಣಿಗಳ ಕಾರ್ಮಿಕರ ಹರತಾಳ

ಕಳೆದ ವರ್ಷದ ಬೋನಸ್ಸನ್ನು ಕೊಡುವ ಬಗ್ಗೆ ಆಡಳಿತ ವರ್ಗದವರು ತೋರಿಸಿರುವ ತಾತ್ಸಾರಕ್ಕಾಗಿ ಪ್ರತಿಭಟಿಸಲು, ಕೋಲಾರದ ಚಿನ್ನದ ಗಣಿಗಳ ಕಾರ್ಮಿಕರೂ ಮತ್ತು ವಿದ್ಯುಚ್ಛಕ್ತಿ ಕೆಲಸಗಾರರೂ ಕಳೆದ ೧೬ನೇ ತಾ|| ಹರತಾಳವನ್ನಾಚರಿಸಿದರು ನಂದೀದುರ್ಗ ಮತ್ತು ಚಾಂಪಿಯನ್ ಗಣಿಗಳ ಹಲವು ಕಾರ್ಮಿಕರು ಅದರಲ್ಲಿ ಸೇರಿರಲಿಲ್ಲ.ಅಲ್ಲಿನ ಕಾರ್ಮಿಕರ ಇನ್ಸ್‌ಪೆಕ್ಟರ್, ಶ್ರೀ ತಂಬಯ್ಯ ದೇವತರವರು ಎರಡು ಪಕ್ಷದವರಿಗೂ ಸೌಹಾರ್ದಯುತ ಒಪ್ಪಂದಕ್ಕಾಗಿ ಪ್ರಯತ್ನ ಪಡುತ್ತಿರುವರು

ರಷ್ಯದ ಕೈವಾಡಕ್ಕಾಗಿ ಭಾರತದ ಆಕ್ಷೇಪಣೆ

ಪಾರ್ಲಿಮೆಂಟಿನ ಹಿರಿಯ ಸಭೆಯಲ್ಲಿ ನೆಹರೂರವರ ಪಾರ್ಲಿಮೆಂಟರಿ ಕಾರ್ಯದರ್ಶಿ ಲಕ್ಷ್ಮೀಮೆನನ್ನರು ಟಿ ಜಿ. ಕೆ ರೆಡ್ಡಿಯವರ ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಕಮ್ಯೂನಿಸ್ಟ್ ಪಕ್ಷದ ಕಾಂಗ್ರೆಸ್ ಸಭೆಯಲ್ಲಿ ರಷ್ಯದ ಪ್ರಧಾನಿ ಮಾರ್ಷಲ್ ಸ್ಟಾಲಿನ್ನರು ಈ ಸಾರಿ ಮಾಡಿರುವ ಭಾಷಣವು, ಇತರ ರಾಷ್ಟ್ರಗಳ "ಒಳ ವಿಷಯಗಳಲ್ಲಿ ರಷ್ಯವು ಪ್ರವೇಶಿಸುತ್ತಿರುವದು ಸ್ಪಷ್ಟ ನಿದರ್ಶನವಾಗಿರುವುದೆಂದು ತಿಳಿಸಿ, ಭಾರತ ಅಥವಾ ಇಲ್ಲಿನ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಭಾಷಣದಲ್ಲಿ ನೇರವಾದ ಪ್ರಸ್ತಾಪ ಮಾಡದಿರುವುದರಿಂದ, ಮಾಸ್ಕೋವಿನೊಡನೆ ವ್ಯವಹಾರ ನಡೆಸುವುದರಿಂದ ಪ್ರಯೋಜನವೇನೂ ಇಲ್ಲವೆಂದು ಹೇಳಿದರು.

ಅಪ್ರತ್ಯಕ್ಷವಾಗಿ ಆ ಭಾಷಣವು ಭಾರತಕ್ಕೂ ಅನ್ವಯಿಸುವುದೆಂದು ಪ್ರಧಾನಿ ನೆಹರೂರವರು ಒಪ್ಪಿದರು ಹೊರದೇಶಗಳಲ್ಲಿರುವ ಕಮ್ಯೂನಿಸ್ಟ್ ಮತ್ತು ಅದಕ್ಕೆ ಸಂಬಂಧಪಟ್ಟ ಸಂಗಡಗಳು ರಷ್ಯಕ್ಕೆ ಸಹಾಯ ಮತ್ತು ಸಹಾನುಭೂತಿಯನ್ನು ನೀಡಬೇಕೆಂದೂ ರಷ್ಯವೂ ಸಹಾ ಅವುಗಳಿಗೆ ತನ್ನ ಬೆಂಬಲವನ್ನು ಕೊಡುವುದಾಗಿಯೂ, ಸ್ಟಾಲಿನ್ನರು ಮೇಲ್ಕಂಡ ಭಾಷಣದಲ್ಲಿ ತಿಳಿಸಿದ್ದರು

ಬರುವ ತಿಂಗಳು ೧ನೇ ತಾ|| ನಿಂದ ಮದ್ರಾಸು ನಗರದಲ್ಲಿ ಕಾಳದ ಮೂಲಕವಲ್ಲದೆ ಬೇರೆ ರೀತಿಯಲ್ಲಿ ಉಪ್ಪನ್ನು ಮಾರಾಟ ಮಾಡಕೂಡದೆಂದು ಅಲ್ಲಿನ ಸರ್ಕಾರದವರು ಸೂಚಿಸಿರುತ್ತಾರೆ.

ಕಾರು ಅಪಘಾತದಿಂದ ಘರೂಕರು, ಪತ್ನಿ ಪಾರು

ಎಲ್ಲಾ ಬಗೆಯ ಅಲೋಪಥಿಕ್ ಔಷಧಿಗಳೂ ನ್ಯಾಯವಾದ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು, 207. ಸಯ್ಯಾಜಿರಾವ್ ರೋಡ್, ಮೈಸೂರು

ಸಿಟಿ ಕೋ-ಆಪರೇಟಿವ್ ಬ್ಯಾಂಕ್

ಡೈರೆಕ್ಟರುಗಳ ಚುನಾವಣೆ

ತಾ|| 21 12-52 ನೇ ಭಾನುವಾರ

ನಂ. 29

ಶ್ರೀ ಎ.ಆರ್. ವಿಶ್ವೇಶ್ವರಯ್ಯ,

ಮೋತಿಲಾಲ್ ಟಾಕೀಸ್

19-12-52 ರಿಂದ: ಪ್ರತಿದಿನ 3 ಆಟಗಳು

ಬಹಾರ್

ಪಾತ್ರ:— ವೈಜಯಂತಿಮಾಲಾ ಮತ್ತು ಕರಣ್ ದಿವಾನ್

ಬರಲಿರುವ ಪ್ರದರ್ಶನ ದಿಲ್

ಪುನಃ ನಮ್ಮ ಸೇವೆಗೆ !

ಮೈ ಸೂ ರು ಟ್ರಾ ನ್ಸಿ ಟ್ ಸರ್ವಿಸ್ (ರಿಜಿಸ್ಟರ್ಡ್)

(ಫೋನ್ ನಂ. 537)

Edited, Printed and Published by A. R. Nagarajan at Sadhvi Press, D Subbiah Road, Mysore

ಸಿಟಿ ಟ್ಯುಟೋರಿಯಲ್ ಕಾಲೇಜು, ಮೈಸೂರು

ಪ್ರಭಾತ್ 19-12-52 ರಿಂದ ಪ್ರತಿದಿನ 3 ಆಟಗಳು

ಮ ಹಾ ರಾ ಣಿ ಝಾನ್ಸಿ

(ಅಥವಾ ಝಾನ್ಸಿಕಿ ರಾಣಿ)

ಎಂಬ ಚಿತ್ರವನ್ನು ನೋಡಲು ಮರೆಯಬೇಡಿ

ಶೀಘ್ರದಲ್ಲಿಯೇ ನಿರೀಕ್ಷಿಸಿ.—

ON THE CIRCUS ARENA

(Technicolor)

SRI GANESH TALKIES

SEASON'S SPECIAL ATTRACTION

GALA RELEASE ON 19 12 1952

Academy Award Winner Joseph Ferrer, Co-starring Mala Powers

In STANLEY KARMER'S MASTER PIECE

CYRANO DE BERGERAC

Movie Entertainment At Its Best

NEXT CHANGE On 26-12-52

Universal's BATTLE AT APACHE PASS (In Technicolor)

On 29-12-52 MUCH AWAITED

SOUTH SEA SINNER (For Adults Only)

ನಾಟ್ಯಕಲಾಭೂಷಣೆ ವೈಜಯಂತಿಮಾಲಾರವರ ಅತ್ಯಮೋಘ ನರ್ತನ

ಕಾಸ್ಮಾಪಾಲಿಟನ್ ಕ್ಲಬ್ ಸುವರ್ಣ ಮಹೋತ್ಸವದ ಅಂಗವಾಗಿ

ಮೈ ಸೂ ರು ಕ್ರಾಫರ್ಡ್ ಹಾಲಿನಲ್ಲಿ

21-12-52ನೇ ಭಾನುವಾರ ಸಂಜೆ 6 ಘಂಟೆಗೆ

—. ಟಿಕೆಟ್ ದರ —

ರೂ 20, 10, 5, 3, 2, 1

ಟಿಕೆಟ್ ದೊರೆಯುವ ಸ್ಥಳ

1 ಕಾರೊನೇಷನ್ ಜ್ಯೂಯಲರಿ ಮಾರ್ಟ್

2 ಕಾರೊನೇಷನ್ ಕ್ಲಾತ್ ಎಂಪೋರಿಯಂ,

3 ಬಾದಾಮಿ ಸ್ಟೋರ್ಸ್

4 ಎಸ್. ಪುಟ್ಟಣ್ಣ

5 ಬೃಂದಾವನ್ ಹೋಟೆಲ್

6 ಕಾಸ್ಮಾಪಾಲಿಟನ್ ಕ್ಲಬ್

ABID'S OUTRIGHT AUCTION SALE

On SUNDAY the 21st Dec. 1952 at 10 A.M. at the Show rooms

FURNITURE & HOUSEHOLD EFFECTS consisting of R.W & T.W single and double cots, Tables Cushioned chairs, R. W Ivory Inlaid Teapoys, spring cushioned Sofa suites, Stools, Benches, Kodak Box Camera, Alnram Table Time-piece, Tricycle, Perambulator, 62 Locks with keys, R W. Mandasana, Windows with glass panes, and Several other Useful articles.

Also, one set of "STAMP BEEDI" blocks with its GOODWILL, pledged by Sri T M. Mohamed Khan Saheb to Janab Md Ameer Saheb will be put up and sold at the risk of Janab T M. Mohamed Khan Saheb. The blocks and the documents concerned may be inspected during business hours.

ಪ್ರಭುದೇವಾ ಟಾಕೀಸ್

(ಪ್ರತಿ ದಿನ 3 ಆಟಗಳು)

19-12-52 ರಿಂದ :: ಅಮೋಘ 4ನೇ ವಾರ

ದಾಸಿ

ಮುಂದಿನ ಬದಲಾವಣೆ:

ಚಾ ಮು ರಾ ಜ ನ ಗ ರ ದ

ಚಾಮುಂಡೇಶ್ವರಿ ಭವನದಲ್ಲಿ

ಪೋ॥ ನಂ.7೪೬ ॥ವಂದೇ ಮಾತರಂ॥ ಬಿಡಿ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೦-೧೨-೧೯೫೨ [ಸಂಚಿಕೆ ೧೧೯

– ಬರುವ ಏಪ್ರಿಲ್ಲಿನಲ್ಲಿ – ಆಂಧ್ರ ಪ್ರಾಂತ ರಚನೆ

ಮದ್ರಾಸು ನಗರವಿಲ್ಲದ ಆಂಧ್ರ ಪ್ರಾಂತದ ರಚನೆ

ಪಾರ್ಲಿಮೆಂಟಿನಲ್ಲಿ ನೆಹರೂರವರ ಘೋಷಣೆ

ಮದ್ರಾಸು ನಗರವನ್ನು ಬಿಟ್ಟು ಆ ಸಂಸ್ಥಾನದ ಉಳಿದ ತೆಲುಗು ಭಾಗಗಳನ್ನು ಒಳಗೊಂಡ ಆಂಧ್ರ ಪ್ರಾಂತವನ್ನು ರಚಿಸಲು ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ಘೋಷಣೆ ಮಾಡಿದರು. ಹೊಸ ಪ್ರಾಂತದ ಆರ್ಥಿಕ ಮುಂತಾದ ಸಂಬಂಧಗಳ ಬಗ್ಗೆ ಪೂರ್ಣ ಭಾಗ ಪರಿಶೀಲಿಸಿ ವರದಿಯನ್ನೊಪ್ಪಿಸಲು ರಾಜಸ್ಥಾನದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಎಲ್. ವಾಂಚುರವರನ್ನು ನೇಮಿಸುತ್ತಲಾಗಿಯೂ, ಅವರು ಎರಡು ತಿಂಗಳು ಅವಧಿಯೊಳಗಾಗಿ ತಮ್ಮ ವರದಿಯನ್ನು ಒಪ್ಪಿಸುವಂತೆ ಕೋರಲಾಗಿಯೂ, ನೆಹರೂರವರು ಹೇಳಿದರು.

ಕೇಂದ್ರದ ಹಿರಿಯ ಸಭೆಯಲ್ಲಿ ಇದೇ ರೀತಿ ಗೃಹ ಮಂತ್ರಿ ಕಟ್ಜುರವರು ನೆನ್ನೆ ಘೋಷಿಸಿದರು. ಜಸ್ಟಿಸ್ ವಾಂಚುರವರು ಹಣಕಾಸು, ನ್ಯಾಯಾಧೀಶರು ಅಲ್ಲಿಗೆ ಹೋಗಬೇಕೆಂದೂ, ಗವರ್ನರ್ ನೇಮಕ, ಹೈಕೋರ್ಟ್ ಕಟ್ಟಡಗಳು, ವಿಶ್ವ ವಿದ್ಯಾಲಯ, ಆಸ್ಪತ್ರೆ ಇವೇ ಮುಂತಾದ ವಿಷಯಗಳ ಬಗ್ಗೆ ವರದಿಯೊಪ್ಪಿಸುವರೆಂದೂ ತಿಳಿಸಲಾಯಿತು.

೧೪,೦೦೦ ಉಪಾಧ್ಯಾಯರುಗಳ ಮುಷ್ಕರ

ಸಂಜಾಬಿನ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿರುವ ಶಾಲೆಗಳ ೧೪,೦೦೦ ಮಂದಿ ಉಪಾಧ್ಯಾಯರುಗಳು ಬರುವ ಒನೇ ತಾರೀಖಿನಿಂದ ಮುಷ್ಕರ ಹೂಡಲು ನಿರ್ಧರಿಸಿರುವರೆಂದು ಗೊತ್ತಾಗಿದೆ. ಸಂಸ್ಥಾನದ ಮಂತ್ರಿಗಳ ಮನೆಗಳ ಎದುರಿನಲ್ಲಿ ಉಪವಾಸವನ್ನು ಅವರು ಕೈಗೊಳ್ಳುವರೆಂದು ಹೇಳಲಾಗಿದೆ. ಅವರುಗಳು ಮಂಡಿಸಿರುವ ಬೇಡಿಕೆಗಳನ್ನು ಪುರೈಸದಿರುವುದೇ ಮುಷ್ಕರಕ್ಕೆ ಕಾರಣ.

ಸಹಕಾರ ಶಿಕ್ಷಣ ತರಗತಿಗಳ ಮುಕ್ತಾಯದ ಭಾಷಣ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಸಹಕಾರ ಶಿಕ್ಷಣ ತರಗತಿಗಳ ಮುಕ್ತಾಯದ ಭಾಷಣವನ್ನು ವಿದ್ಯಾ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ನಾಳಿದ್ದು ಮಧ್ಯಾಹ್ನ ೪-೩೦ ಗಂಟೆಗೆ ಸಹಕಾರ ಭವನದಲ್ಲಿ ಮಾಡಲಿರುವರು.

ನಂಜನಗೂಡು ಪ್ರೌಢಶಾಲೆಯ ಹಳೇ ವಿದ್ಯಾರ್ಥಿಗಳ ಸಂಘ

ನಂಜನಗೂಡಿನ ಪ್ರೌಢಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ಹೊಸ ಕಾರ್ಯಕಾರಿ ಸಮಿತಿಯ ಚುನಾವಣೆಗಾಗಿ ಹಳೆಯ ವಿದ್ಯಾರ್ಥಿಗಳ ಸಭೆಯು ನಾಳೆ ಸಂಜೆ ೪ ಗಂಟೆಗೆ ಅಲ್ಲಿನ ರಿಕ್ರಿಯೇಷನ್ ಕ್ಲಬ್ಬಿನ ಮೈದಾನದಲ್ಲಿ ಜರುಗುವುದು.

ಮೈಸೂರಿನಲ್ಲಿ ಭತ್ತದ ಬೆಲೆ ಏರಿಕೆಗೆ ಕೇಂದ್ರದ ಮಂಜೂರಾತಿ

ಮದ್ರಾಸು ಮತ್ತು ಮೈಸೂರಿನಲ್ಲಿ ಭತ್ತವನ್ನು ಕೊಳ್ಳುವ ಬೆಲೆಯನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಲು ಕೇಂದ್ರ ಸರ್ಕಾರದವರು ಅವಕಾಶವಿತ್ತಿರುವರು. ಆದರೆ ಸಾರ್ವತ್ರಿಕವಾಗಿ ಹೆಚ್ಚಿಸಲು ಅವಕಾಶ ನೀಡಿಲ್ಲವೆಂಬುದಾಗಿ ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ಹೇಳಿರುವರು.

ಬಂಗಾರಪೇಟೆ ಅಧಿಕೃತ ಕಾಂ॥ ಉಮೇದುವಾರರು

ಶ್ರೀ ರಾಮಕೃಷ್ಣ ಪ್ರಸಾದ್‌ರವರನ್ನು ಬಂಗಾರಪೇಟೆ ಉಪಚುನಾವಣೆಗೆ ಅಧಿಕೃತ ಉಮೇದುವಾರರಾಗಿ ಕಾಂಗ್ರೆಸ್ ಅಧ್ಯಕ್ಷ, ನೆಹರೂರವರು ಅಂಗೀಕರಿಸಿರುವರೆಂದು ವರದಿಯಾಗಿದೆ. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯವರು ಶಿಫಾರಸು ಮಾಡಿದ್ದ ಶ್ರೀ ಇ. ನಾರಾಯಣ ಗೌಡರ ಹೆಸರನ್ನು ಈಗ ತಿರಸ್ಕರಿಸಿರುವುದರಿಂದ ಶ್ರೀ ಇ. ನಾರಾಯಣ ಗೌಡರು ಕಾಂಗ್ರೆಸ್ಸಿಗೆ ರಾಜೀನಾಮೆಯಿತ್ತು ಸ್ವತಂತ್ರರಾಗಿ ಸ್ಪರ್ಧಿಸಲು ನಿರ್ಧರಿಸಿರುತ್ತಾರೆ. ಈ ಕ್ಷೇತ್ರದಿಂದ ಉಮೇದುವಾರಿಕೆ ಸಲ್ಲಿಸಿದ್ದ ಶ್ರೀಗಳಾದ ಕೆ. ವಿ. ನಾರಾಯಣ ರೆಡ್ಡಿ ಮತ್ತು ನಾಗಭೂಷಣ ಗೌಡರು ತಮ್ಮ ಉಮೇದುವಾರಿಕೆಗಳನ್ನು ವಾಪಸು ಪಡೆದಿರುವುದರಿಂದ ಈಗ ಕಮ್ಯೂನಿಸ್ಟ್ ಶ್ರೀ ಆರ್. ಎ. ಭೈರಾರೆಡ್ಡಿ, ಕಾಂಗ್ರೆಸ್ಸಿನ ಶ್ರೀ ಆರ್. ಕೆ. ಪ್ರಸಾದ್ ಮತ್ತು ಸ್ವತಂತ್ರರಾದ ಶ್ರೀ ನಾರಾಯಣ ಗೌಡರು ಮಾತ್ರ ಸ್ಪರ್ಧಿಸಲಿದ್ದಾರೆ.

ರೈಲು ಬರುವಾಗಲೇ ಕಂಬಿ ದಾಟಲೆತ್ನಿಸಿ ಮರಣ

ಮೈಸೂರಿನಿಂದ ಸಂಜೆ ಹೊರಡುವ ಮದ್ರಾಸು ಪಟಲ್ ರೈಲು ಪಾಂಡವಪುರದ ಫಿಲ್ಟರ್ ಮಾಡ ಸಮೀಪದಲ್ಲಿ ಕಳೆದ ಮಂಗಳವಾರ ಹೋಗುತ್ತಿದ್ದಾಗ, ೩೦ ವರ್ಷದ ಅಪರಿಚಿತ ಯುವಕನೊಬ್ಬನು ರೈಲು ಕಂಬಿ ದಾಟಲೆತ್ನಿಸಿ, ಇಂಜನ್ನಿಗೆ ಸಿಕ್ಕಿ, ಅದರಿಂದ ತಳ್ಳಲ್ಪಟ್ಟುದರಿಂದ ಜೋರಾಗಿ ಪೆಟ್ಟು ತಗುಲಿ, ಸ್ವಲ್ಪಕಾಲದ ನಂತರ ಮರಣ ಹೊಂದಿದನೆಂದು ವರದಿಯಾಗಿದೆ.

ನಡುರಾತ್ರಿಯಲ್ಲಿ ಭಜನೆ ಮಾಡುತ್ತಿದ್ದವರ ಬಂಧನ

ನಗರದ ಮಂಡಿಮೊಹಲ್ಲಾ ಪೋಲೀಸರು ಕಳೆದ ಬುಧವಾರ ರಾತ್ರಿ ೧೧-೩೦ ಗಂಟೆಯಲ್ಲಿ ಭಜನೆ ಮಾಡುತ್ತಿದ್ದ ಪೆಪ್ಪರ್‌ಮೆಂಟ್ ವ್ಯಾಪಾರಿ ಶ್ರೀ ಗಂಗಾರಾಂ ಮತ್ತು ಇನ್ನಿಬ್ಬರನ್ನು ದಸ್ತಗಿರಿ ಮಾಡಿರುವರು. ಅಕ್ಕಪಕ್ಕದ ನಿವಾಸಿಗಳಿಗೆ ಇದರಿಂದ ತುಂಬಾ ತೊಂದರೆಯಾಯಿತೆಂದು ಬಂದ ದೂರಿನ ಮೇಲೆ ಈ ಕ್ರಮವನ್ನು ಕೈಗೊಳ್ಳಲಾಯಿತು.

ಹೈದರಾಬಾದ್ ಸರ್ಕಾರದಲ್ಲಿ ಅವಿಶ್ವಾಸ ಠರಾವಿಗೆ ಸೋಲು

ಹೈದರಾಬಾದು ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸಿ ತರಲಾದ ನಿರ್ಣಯವನ್ನು, ಅಲ್ಲಿನ ಶಾಸನ ಸಭೆಯು ೯೫-೭೭ ಓಟುಗಳಿಂದ ನೆನ್ನೆ ತಿರಸ್ಕರಿಸಿತು. ನಿರ್ಣಯದ ಮೇಲೆ ಐದು ದಿನಗಳ ಚರ್ಚೆ ನಡೆಯಿತು. ೬ ಜನ ಹರಿಜನ ಕಾಂಗ್ರೆಸ್ ಸದಸ್ಯರು ವಿರೋಧ ಪಕ್ಷಗಳ ಜೊತೆಗೆ ಸೇರಿ, ನಿರ್ಣಯದ ಪರವಾಗಿ ಓಟು ಮಾಡಿದರು.

ವಿನೋಬಾ ಭಾವೆಯವರ ಸ್ಥಿತಿ ಕಳವಳಕರ

ಆಚಾರ್ಯ ವಿನೋಬಾ ಭಾವೆಯವರು ಮಲೇರಿಯಾ ಜ್ವರದಿಂದ ಹಾಸಿಗೆ ಹಿಡಿದು ಮಲಗಿರುತ್ತಾರೆ. ಅವರ ಸ್ಥಿತಿ ಕಳವಳಕ್ಕೆ ಆವಕಾಶವಿತ್ತಿದೆ. ಅವರು ಔಷಧವನ್ನು ಸೇವಿಸಲು ಒಪ್ಪುತ್ತಿಲ್ಲ.

ಕೊಳದಲ್ಲಿ ಬಿದ್ದು ಆತ್ಮಹತ್ಯೆ

ಮೈಸೂರು ರೈಲ್ವೆ ಸ್ಟೇಷನ್ನಿನ ಮುಖ್ಯ ಟಿಕೆಟ್ ಕಲೆಕ್ಟರ್, ಶ್ರೀ ಸಿಂಗಾರುವೇಲು ಮೊದಲಿಯಾರರ ೧೮ ವರ್ಷದ ಮಗ, ಷಣ್ಮುಗಂ ಎಂಬಾತನ ಶವವು ವಾಣಿವಿಲಾಸ ವಾಟರ್ ವರ್ಕ್ಸಿನ ಕೊಳದಲ್ಲಿ ತೇಲುತ್ತಿದ್ದುದು, ಈ ಬೆಳಿಗ್ಗೆ ಪತ್ತೆಯಾಗಿದೆ. ಜೀವನದಲ್ಲಿ ಜಿಗುಪ್ಸೆಗೊಂಡು ತಾನು ಈ ರೀತಿ ಮಾಡಿಕೊಂಡಿರುವುದಾಗಿ ಆತನು ಪತ್ರವೊಂದನ್ನು ಬರೆದಿಟ್ಟಿದ್ದನೆಂದು ಹೇಳಲಾಗಿದೆ.

ರಜತೋತ್ಸವ

ರಾಜಧಾನಿಯ ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿ ಕಛೇರಿಗಳ ನೌಕರರ ಸಂಘದ ರಜತ ಮಹೋತ್ಸವವು ನಾಳೆ ಬೆಳಿಗ್ಗೆ ೯ ಗಂಟೆಗೆ ಪೌರಸಭಾ ಕಛೇರಿಯಲ್ಲಿ ನಡೆಯುವುದು. ಗೃಹ ಮಂತ್ರಿಗಳಾದ ಶ್ರೀ ಹೆಚ್. ಸಿದ್ದವೀರಪ್ಪನವರು ಅಧ್ಯಕ್ಷತೆ ವಹಿಸುವರು.

ಶನಿ ಮಹಾತ್ಮೆ ಕಥೆ

ರಾಜಧಾನಿಯ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಶ್ರೀ ಟಿ. ನಾರಾಯಣಗೌಡರು ಭಕ್ತ ಸಹಾಯಾಧ್ಯರಿಗಳೊಡನೆ ಶನಿ ಮಹಾತ್ಮೆ ಕಥೆಯನ್ನು ಈ ರಾತ್ರಿ ೯ ಗಂಟೆಗೆ ಪಠಣ ಮಾಡುವರು. ಶ್ರೀ ಹಿರಣ್ಣಯ್ಯನವರ ವ್ಯಾಖ್ಯಾನವಿದೆ.

ಮುಂದಿನ ಏಪ್ರಿಲ್‌ನಲ್ಲಿ ಆಂಧ್ರ ಪ್ರಾಂತದ ಸ್ಥಾಪನೆ

ಬರುವ ವರ್ಷ ಮಾರ್ಚಿ ೧ ಅಥವಾ ಏಪ್ರಿಲ್ ೧ ನೇ ತಾ॥ನಲ್ಲಿ ಹೊಸ ವರ್ಷದ ಆರಂಭದೊಳಗೆ ಆಂಧ್ರ ಪ್ರಾಂತವು ರಚನೆಯಾಗಬಹುದೆಂದೂ, ಅನಂತರ ಜಾಗ್ರತೆಯಾಗಿಯೇ ಅಲ್ಲಿ ಸ್ಥಾಪಿತವಾಗುವ ಶಾಸನ ಸಭೆಗೆ ಸಾರ್ವತ್ರಿಕ ಚುನಾವಣೆಗಳು ನಡೆಯುವುವೆಂದೂ ಪಾರ್ಲಿಮೆಂಟಿನ ವಲಯಗಳಿಂದ ಬಂದ ಸುದ್ದಿಯು ತಿಳಿಸಿರುತ್ತದೆ.

ಆಂಧ್ರದ ಕೆ.ಎಂ.ಪಿ. ಸದಸ್ಯರ ರಾಜೀನಾಮೆ

ಆಂಧ್ರ ಪ್ರಾಂತದ ರಚನೆ ಬಗ್ಗೆ ಸರಕಾರದವರು ತೋರಿಸುತ್ತಿರುವ ತಾತ್ಸಾರವನ್ನು ಪ್ರತಿಭಟಿಸಲು ಮದ್ರಾಸು ಶಾಸನ ಸಭೆಯ ಆಂಧ್ರದ ಕೆ. ಎಂ. ಪಿ. ಸದಸ್ಯರೆಲ್ಲರೂ ರಾಜೀನಾಮೆ ಕೊಡುವ ಸಂಭವವಿರುವುದೆಂದು ನೆಲ್ಲೂರಿನ ಜಿಲ್ಲಾ ಕೆ.ಎಂ.ಪಿ ಅಧ್ಯಕ್ಷ ಬಿ. ರಾಮಕೃಷ್ಣ ರೆಡ್ಡಿಯವರು ತಿಳಿಸಿರುತ್ತಾರೆ.

ಕಾಂ॥ ಅಧ್ಯಕ್ಷತೆಗೆ ಟಿ. ಸುಬ್ರಹ್ಮಣ್ಯ ಮತ್ತು ವೆಂಕಟಪ್ಪನವರು

ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷತೆಗೆ ತುಮಕೂರಿನ ಶ್ರೀ ಟಿ. ಸುಬ್ರಹ್ಮಣ್ಯರವರ ಹೆಸರನ್ನು ಹೆಗ್ಗಡದೇವನ ಕೋಟೆಯ ಶ್ರೀ ಹೆಚ್. ಕೆ. ತಿಮ್ಮಯ್ಯ ಮತ್ತು ನಂಜನಗೂಡಿನ ಶ್ರೀ ಪಿ. ಮಹದೇವಯ್ಯನವರೂ, ಶ್ರೀ ವೆಂಕಟಪ್ಪನವರ ಹೆಸರನ್ನು ಗಾನಕಾನಹಳ್ಳಿಯ ಡಿ. ವೆಂಕಟಾಚಲಪತಿ ಶೆಟ್ಟರು ಮತ್ತು ರಾಮನಗರದ ಶ್ರೀ ಕೆ. ಸುಬ್ಬರಾಯರೂ ಸೂಚಿಸಿದ್ದಾರೆ.

ನಾಟಕ ಕಲಾವಿದರಿಗೆ ಸಾರ್ವಜನಿಕ ಸನ್ಮಾನಪತ್ರ

ಗುಬ್ಬಿನಾಟಕ ಕಂಪೆನಿಯ ನಾಟಕರತ್ನ, ಶ್ರೀ ಜಿ. ಎಚ್. ವೀರಣ್ಣ, ಶ್ರೀಮತಿ ಜಿ. ಸುಂದರಮ್ಮ ಮತ್ತು ಶ್ರೀ ಭಾಷಾ ಶಾರಿ, ಶ್ರೀಮತಿ ಬಿ. ಜಯಮ್ಮನವರಿಗೆ ನಾಳಿದ್ದು ಸಂಜೆ ೬ ಗಂಟೆಗೆ ಪುರಭವನದಲ್ಲಿ ಸಾರ್ವಜನಿಕರ ಪರವಾಗಿ ಮಾನ ಪತ್ರಗಳನ್ನು ಅರ್ಪಿಸಲಾಗುವುದು. ಕಿರಿಯ ಶಾಸನ ಸಭಾಧ್ಯಕ್ಷರಾದ ಶ್ರೀ ಹೆಚ್. ಸಿದ್ದಯ್ಯನವರು ಅಧ್ಯಕ್ಷತೆ ವಹಿಸುವರು.

ಉಪನ್ಯಾಸ

ನಂಜನಗೂಡಿನ ಭಾರತೀ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಅಲ್ಲಿನ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನ ಶ್ರೀ ನವೀನಂ ವೆಂಕಟೇಶ ಶಾಸ್ತ್ರಿಗಳವರು ಉಪನಿಷತ್ತು ಮತ್ತು ಭಾರತೀಯ ಸಂಸ್ಕೃತಿ ಇವುಗಳ ಬಗ್ಗೆ ಉಪನ್ಯಾಸ ಮಾಡುವರು.

ರಾಗಿ, ಜೋಳ ಮತ್ತು ಗೋಧಿ ಒದಗಿಸಲು ಒತ್ತಾಯಕ್ಕಾಗಿ ಸಭೆ

ಕೂಲಿಗಾರರಿಗೆ ಅವಶ್ಯಕವಾದ ರಾಗಿ, ಜೋಳ ಮತ್ತು ಗೋಧಿಗಳನ್ನು ಸಾಕಷ್ಟು ಪ್ರಮಾಣದಲ್ಲೂ, ಕಡಿಮೆ ಬೆಲೆಯಲ್ಲೂ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಲು, ನಾಳೆ ಸಂಜೆ ೫ ಗಂಟೆಗೆ ಇಲ್ಲಿನ ಟೌನ್ ಹಾಲ್ ಮೈದಾನದಲ್ಲಿ ನಗರದ ಪೌರಸಭಾ ಕೆಲಸಗಾರರ ಸಂಘದ ಆಶ್ರಯದಲ್ಲಿ ಸಭೆಯು ನಡೆಯುವುದು. ಅದಕ್ಕೆ ಮುಂಚೆ ಕೆಲಸಗಾರರ ಮೆರವಣಿಗೆಯೂ ಜರುಗುವುದು.

ಹಳ್ಳಿಗಳಲ್ಲಿ ಆಹಾರ ಪರಿಸ್ಥಿತಿ ಬಗ್ಗೆ ಮುಂಜಾಗ್ರತೆ ಕ್ರಮ

ಮಂತ್ರಿ ಸಿದ್ದವೀರಪ್ಪನವರ ವಿವರಣೆ

ಬೆಂಗಳೂರು ೧೯

ಸಂಸ್ಥಾನದ ಮಳೆ ಕಡಿಮೆಯಾಗಿರುವ ಪ್ರದೇಶಗಳಲ್ಲಾಗಲಿ, ಗ್ರಾಮಾಂತರ ಭಾಗಗಳಲ್ಲಾಗಲಿ ಆಹಾರವಿಲ್ಲದೆ ಯಾರೂ ಪರಿತಪಿಸುವಂತಹ ಸ್ಥಿತಿಗೆ ಬರಲು ಅವಕಾಶವಿಲ್ಲದಂತೆ ಸರ್ಕಾರದವರು ಸೂಕ್ತ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿರುವರೆಂದೂ ಮಳೆ ಬೆಳೆಯ ದುಸ್ಥಿತಿಯ ಪರಿಣಾಮವಾಗಿ ತಲೆದೋರಬಹುದಾದ ಅಭಾವವನ್ನು ತಡೆಯಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗಿರುವುದೆಂದೂ ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರು ತಿಳಿಸಿರುತ್ತಾರೆ. ಗ್ರಾಮಾಂತರ ಜನರಿಗಾಗಿಯೇ ಕಳೆದ ವರ್ಷ ೩೩,೪೯೯ ಟನ್ನಿನಷ್ಟು ಈ ಸಾಲಿನಲ್ಲಿ ೫೭,೧೧೩ ಟನ್ನಿನಷ್ಟು ಕೆಂಪು ಜೋಳವನ್ನು ಆಮದು ಮಾಡಲಾಗಿತ್ತೆಂದೂ ಅವೆಲ್ಲವೂ ಮುಗಿದು ಈಗ ಹೈದರಾಬಾದಿನಿಂದ ೬ ಸಾವಿರ ಟನ್ ಜೋಳ ಬಂದಿರುವುದೆಂದೂ, ಇನ್ನೂ ಹೆಚ್ಚು ಧಾನ್ಯ ಬರಲಿದೆಯೆಂದೂ ಅವರು ಹೇಳಿದರು.

ಈ ಸಲದ ಸುಗ್ಗಿಯಲ್ಲಿ ೧೨ ರಿಂದ ೧೪ ಲಕ್ಷ ಪಲ್ಲಾ ಧಾನ್ಯದ ಕೊರತೆಗಾಗಿ ಯೋಚಿಸಲಾಗಿರುವುದು. ರಾಗಿ ಮತ್ತು ಜೋಳಗಳ ಬೆಳೆ ಸ್ಥಿತಿಯು ಹದಗೆಟ್ಟಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಸುಮಾರಾಗಿ ಬೆಳೆ ಆಗಿದೆ. ಇತ್ತೀಚಿನ ಮಳೆಯಿಂದ ಜೋಳದ ಬೆಳೆಗೆ ಸಹಾಯವಾಗಿದೆ ಎಂದು ಮಂತ್ರಿಗಳು ತಿಳಿಸಿ, ಮುಂದಿನ ವರ್ಷ ಪರಿಸ್ಥಿತಿಯನ್ನು ಧೈರ್ಯವಾಗಿ ಎದುರಿಸಲು ಸರ್ಕಾರವು ಸನ್ನದ್ಧವಾಗಿರುವುದಾಗಿ ಹೇಳಿದರು.

ಸಂಸ್ಥಾನದಲ್ಲಿ ಜನವರಿಯಿಂದ ನವೆಂಬರ್ ತಿಂಗಳು ಆಖೈರಿನ ವರೆಗೆ ಗೋಧಿ ಮತ್ತು ಕೆಂಪು ಜೋಳವನ್ನು ಹೆಚ್ಚಿನ ಬೆಲೆಗೆ ಕೊಂಡು, ಕಡಿಮೆ ಬೆಲೆಗೆ ಜನರಿಗೆ ಒದಗಿಸಿದ್ದರಿಂದ ಸರ್ಕಾರಕ್ಕೆ ೯೫,೪೯ ೩೩೦ ರೂ. ನಷ್ಟವಾಗಿರುವುದೆಂದು ಅವರು ವಿವರವನ್ನಿತ್ತರು. ಅಸಲು ಬೆಲೆಗೆ ಮಾರಾಟ ಮಾಡಬೇಕೆಂಬುದನ್ನು ಕಟ್ಟುನಿಟ್ಟಾಗಿ ಜಾರಿಯಿಸಲು ಸಾಧ್ಯವಿಲ್ಲವೆಂದೂ ಅವರು ನುಡಿದರು.

ಮುಂದಿನ ವರ್ಷ ೧೪೦,೦೦೦ ಟನ್ ಧಾನ್ಯ ಆಮದು ಮಾಡಲಾಗುವುದು. ರಾಗಿ ಬೆಳೆಯು ೨ ೩ ಅಂಶದಷ್ಟಾಗಿದೆಯೆಂದು ಹೇಳಿದರು.

ಸಚಿವರು ಆಹಾರ ಧಾನ್ಯದ ವಿವರವನ್ನು ಈರೀತಿ ಕೊಟ್ಟಿರುತ್ತಾರೆ —

ಅಕ್ಕಿ ೧,೯೫,೬೯೬ ಪಲ್ಲಾ, ರಾಗಿ, ೩ ೫೯೮ ಪಲ್ಲಾ, ಗೋಧಿ ಮತ್ತು ಅದರ ಪದಾರ್ಥಗಳು ೩೪,೧೫೮ ಪಲ್ಲಾ. ಜೋಳದ ದಾಸ್ತಾನು ಇರುವುದಿಲ್ಲ.

ಗೋವಾದಲ್ಲಿ ಯೂರೋಪು ರಕ್ಷಣಾ ಸೈನ್ಯದ ಕೇಂದ್ರ

ಅಟ್ಲಾಂಟಿಕ್ ರಾಷ್ಟ್ರಗಳ ರಕ್ಷಣಾ ವ್ಯವಸ್ಥೆಗೆ ಭಾರತದಲ್ಲಿರುವ ಪೋರ್ಚುಗೀಸು ವಸಾಹತಾದ ಗೋವವೂ ಸೇರಿ, ಅದು ಪ್ರಮುಖ ಕೇಂದ್ರವಾಗಲಿರುವದೆಂದು ಬೊಂಬಾಯಿಯಲ್ಲಿರುವ ಗೋವಾ ಸಂಘದವರಿಗೆ ತಿಳಿದುಬಂದಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೩೦ ವಿ. ಕ್ರಿ ಸಹಾಧ್ಯಾಯರ್ ಮಧ್ಯಾಹ್ನ ೧ ೩೦ ಮಂಜುವಾಣಿ ೨ ನಿಮ್ಮ ನೆಚ್ಚಿನ ಗೀತೆಗಳು. ಸಂಜೆ ೫ ೩೦ ಮತ್ತು ೬ ೩೦ ೩೦ ಅ[illegible] ಶ್ರೀನಿವಾಸ ರಾಘವಾಚಾರ್ ಸಂಗೀತ ೬ ೯೦ ಮತ್ತು ೮ ಟಿ ಸಾಗಮ್ಯ ಸಂಗೀತ ೭ ೬ ಎಸ್ ಸೈಗಾಲ್ ಮತ್ತು ಶಾಂತಾಆಪ್ಟೆ ಗಜಲ್) ೮ ೩೦ ಆರ್ಕೆಸ್ಟ್ರ ೯ ೩ ಹೇಮಂತ ಕುಮಾರ್ ರವೀಂದ್ರ ಸಂಗೀತ ೯ ೩೦ ಪೃಥ್ವಿರಾಜ್ ಕಪೂರ್ ಒಂದಿ ನಾಟಕದ ಕನ್ನಡ ಅನುವಾದ

ರೇಡಿಯೊ ಸಂಗೀತಗಾರರ ಪರೀಕ್ಷೆ

ಭಾರತದ ನಾನಾ ರೇಡಿಯೊಗಳಲ್ಲಿ ಸಂಗೀತಗಾರರನ್ನೇ ವರ್ಗವಾರಾಗಿ ತೆಗೆದ ಕೊಳ್ಳುವ ಬಗ್ಗೆ ಅವರುಗಳನ್ನು ಪರೀಕ್ಷಿಸಲು ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತದಲ್ಲಿ ಪ್ರವೀಣರಾಗಿರುವ ಸಮಿತಿಯೊಂದನ್ನು ಭಾರತ ಸರ್ಕಾರದವರು ರಚಿಸಿರುವರು.

ಕೌಟಿಲ್ಯ ಮಂಡಲಿಯ ಆರಂಭ ಭಾಷಣ

ರಾಜಧಾನಿಯ ಕೌಟಿಲ್ಯ ಮಂಡಲಿಯ ಆರಂಭ ಭಾಷಣವನ್ನು ಇದೇ ೨೨ನೇ ತಾ|| ಸೋಮವಾರ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರ ರಾಯರು ಮಾಡುವರು.

ಶ್ರೀರಾಮುಲುರವರಿಗೆ ಶ್ರದ್ಧಾಂಜಲಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಬುಧವಾರ ಶ್ರೀ ಬಿ ಎಸ್. ಶ್ರೀಕಂಠೇಶ್ವರರವರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ಆಂಧ್ರ ಪ್ರಾಂತಕ್ಕಾಗಿ ಉಪವಾಸಮಾಡಿ ಮಡಿದ ಶ್ರೀ ರಾಮುಲುರವರ ನಿಧನಕ್ಕಾಗಿ ಸಂತಾಪವನ್ನು ವ್ಯಕ್ತಪಡಿಸಲಾಯಿತು. ಭಾಷಾ ಪ್ರಾಂತಗಳ ಬಗ್ಗೆ ಭಾರತ ಸರ್ಕಾರದವರು ತೀವ್ರಗತಿ ನಿರ್ಧರಿಸಬೇಕೆಂದು ಪ್ರಾರ್ಥಿಸಲಾಯಿತು. ಶ್ರೀಗಳಾದ ಬಿ ಎಸ್ ಸುಬ್ಬಣ್ಣ, ನಂಜುಂಡರಾವ್, ರಾಮಯ್ಯ, ಮುಂತಾದವರ ಭಾಷಣಗಳಾದುವು.

ವಿದ್ಯಾ ಶುಲ್ಕದ ವಸೂಲಿ ಮುಂದೆ ಹಾಕಲು ಕೋರಿಕೆ

ಫ್ರೀ ಷಿಪ್ಪಿಗಾಗಿ ಅರ್ಜಿ ಹಾಕಿರುವ ವಿದ್ಯಾರ್ಥಿಗಳು ನವೆಂಬರ್ ತಿಂಗಳಿಂದ ಶುಲ್ಕವನ್ನು ಕೊಡುವಂತೆ ಒತ್ತಾಯ ಮಾಡಲಾಗುತ್ತಿರುವುದೆಂದೂ ಕೊಡದವರ ಹೆಸರನ್ನು ವಜಾ ಮಾಡಲಾಗಿದೆಯೆಂದೂ, ಫ್ರೀಷಿಪ್ ನಿರ್ಧಾರವಾಗುವ ವರೆಗೂ ವಸೂಲಾತಿಯನ್ನು ಮುಂದೆಹಾಕಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದೂ ವಿದ್ಯಾಧಿಕಾರಿಗಳನ್ನು ಕೋರಿ, ನ್ಯಾಯವಾದಿಗಳೊಬ್ಬರು ಪತ್ರ ಬರೆದಿರುತ್ತಾರೆ.

ಪೂರೆ ಬಂದ ಕಣ್ಣಿಗೆ ಪ್ಲಾಸ್ಟಿಕ್ ಗುಡ್ಡೆ

ಕಲ್ಕತ್ತೆಯ ಒಂದು ಆಸ್ಪತ್ರೆಯಲ್ಲಿ ೩೪ ವರ್ಷದ ಯುವಕನೊಬ್ಬನ ಪೊರೆಯ ಕಣ್ಣುಗುಡ್ಡೆ ಬದಲು ಪ್ಲಾಸ್ಟಿಕ್ಕಿನ ಗಾಜನ್ನು ಜಯಪ್ರದವಾಗಿ ಜೋಡಿಸಿರುವ ಅಂಶವು ವರದಿಯಾಗಿದೆ. ಭಾರತದಲ್ಲಿ ಈ ತರಹದ ಶಸ್ತ್ರ ಚಿಕಿತ್ಸೆಯು ಇದೇ ಮೊದಲು. ಕಣ್ಣ ಕಳೆಗಳನ್ನು ಹಾಕದೆ ಪ್ಲಾಸ್ಟಿಕ್ ಗುಡ್ಡೆಗಳ ಸಹಾಯದಿಂದ ನೋಡಬಹುದಾಗಿದೆ.

ಮಾರ್ಚಿ ಮತ್ತು ಸೆಪ್ಟೆಂಬರ್ ಪರೀಕ್ಷೆಗೆ ೫ ಪತ್ರ ಪುಸ್ತಕಗಳು

ಬರುವ ವರ್ಷದ ಮಾರ್ಚಿ ಮತ್ತು ಸೆಪ್ಟೆಂಬರಿನ ಬಿ ಎಸ್ಸಿ, ಬಿ. ಎ ಮತ್ತು ಅವುಗಳ ಪ್ರಿಲಿಮಿನರಿ ಪರೀಕ್ಷೆಗಳಿಗೆ ೧೯೫೭ರ ೫ ಪತ್ರ ಪುಸ್ತಕಗಳನ್ನು ಇಡಲಾಗಿರುವುದೆಂದೂ, ಅದಕ್ಕಾಗಿ ವೈಸ್ ಚಾನ್ಸೆಲರ್, ವಿದ್ಯಾಮಂತ್ರಿ ಮುಂತಾದವರಿಗೆ ವಿದ್ಯಾರ್ಥಿಗಳು ಚಿರಋಣಿಗಳಾಗಿರುವರೆಂದೂ ಹಲವು ಫೇಲಾದ ವಿದ್ಯಾರ್ಥಿಗಳು ತಿಳಿಸಿ ಪತ್ರ ಬರೆದಿರುತ್ತಾರೆ.

MATHEMATICS

TUITION

Will be given to **INTERMEDIATE & DEGREE STUDENTS** by an experienced teacher. For terms apply sharp to—

'MATHS'

321 D Subbiah Road,

Mysore

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಡೈರೆಕ್ಟರುಗಳ ಚುನಾವಣೆ

—

ತಾ|| 21 12-52 ನೇ ಭಾನುವಾರ ಡಿ ಬನುಮಯ್ಯನವರ ಸ್ಕೂಲಿನಲ್ಲಿ

ನಂ. 29

ಶ್ರೀ ಎ. ಆರ್. ವಿಶ್ವೇಶ್ವರಯ್ಯ,

ಇವರಿಗೆ ದಯವಿಟ್ಟು ತಮ್ಮ ಅಮೂಲ್ಯ ಒಂದು ವೋಟನ್ನು ಕೊಡಬೇಕಾಗಿ ವಿನಂತಿ

ಕಾರುಗಳಿಗೆ ಡಿಕ್ಕಿಯಾಗಿ ಜಟಕಾ ಗಾಡಿಗೆ ಜಖಂ

ಮೈಸೂರು ನಗರದ ಚಾಮುಂಡೇಶ್ವರಿ ಮತ್ತು ವಾಣಿವಿಲಾಸ ರಸ್ತೆಗಳು ಕೂಡುವ ಸಿದ್ದಪ್ಪ ಚೌಕದಲ್ಲಿ ನೆನ್ನೆ ಮಧ್ಯಾಹ್ನ ಇಂಜನಿಯರಿಂಗ್ ಕಂಟ್ರಾಕ್ಟರ್, ಶ್ರೀ ಎಂ ಆರ್ ದೊರೆಸ್ವಾಮಿ ಅಯ್ಯಂಗಾರ್ಯರ ಮೋಟಾರು ಗಾಡಿಗೂ, ಶ್ರೀ ವೆಂಕಟರಾಮಯ್ಯನವರ ಕಾರಿಗೂ ಡಿಕ್ಕಿಯಾಗಿ, ಚೌಕದಲ್ಲಿಯೇ ಇದ್ದ ಜಟಕಾ ಗಾಡಿಗೆ ಕಾರು ತಗಲಿ ಅದರ ಚಕ್ರಗಳು ಮುರಿದುವೆಂದೂ, ಗಾಡಿಯ ಕೆಳಭಾಗದಲ್ಲಿ ಕುದುರೆಯು ಸಿಕ್ಕಿ ಕೊಂಡಿತೆಂದೂ ವರದಿಯಾದೆ. ಗಾಡಿಯವನಿಗೂ ಗಾಯಗಳಾಗಿವೆ.

ಪವರ್ ಲೂಮ್ ಸೌಕರ್ಯರ ಕೊಂದ

ಮೈಸೂರು ನಗರದ ಕುರಿಮಂಡಿಯಲ್ಲಿರುವ ಶ್ರೀ ಜಯಲಕ್ಷ್ಮಿ ವೀವಿಂಗ್ ಫ್ಯಾಕ್ಟರಿಯ ಮಾಲೀಕರಾದ ಶ್ರೀ ಟಿ ಲಕ್ಷ್ಮೀನಾರಾಯಣಯ್ಯನವರು ಕಾರ್ಖಾನೆಯನ್ನು ದೊಡ್ಡಬಳ್ಳಾಪುರಕ್ಕೆ ತೆಗೆದುಕೊಂಡು ಹೋಗುವುದಾಗಿ ಕಾರ್ಮಿಕರುಗಳಿಗೆ ತಿಳಿಸುತ್ತಾರೆ. ಈ ಹಿಂದೆಯೂ ಅವರು ತಮ್ಮ ಕಾರ್ಖಾನೆಯನ್ನು ಮುಚ್ಚುವುದಾಗಿ ನೋಟೀಸನ್ನು ಕೊಟ್ಟಿದ್ದರು. ಅಸಿಸ್ಟೆಂಟ್ ಲೇಬರ್ ಕಮಿಷನರವರು ಎಷ್ಟು ಸಮಾಧಾನ ಹೇಳಿದರೂ ಮಾಲೀಕರು ಕೇಳದೆ ೭೫ ಜನರ ಕೆಲಸಗಾರರಿಗೆ ಕಾರಣರಾಗಿದ್ದಾರೆ ಎಂದು ಪವರ್ ಲೂಂ ಕೆಲಸಗಾರರ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

SRI GAYATHRI

TALKIES

RASHO MON

LAST DAY

From To-Morrow 21-12-52

M G M's

SKIRTS AHOY

(In Technicolor)

With — Esther Williams

Edited, Printed and Published by A. R. Nagarajan at Sadhvi Press, D Subbiah Road, Mysore

ನಾಟ್ಯಕಲಾಭೂಷಣ ವೈಜಯಂತಿಮಾಲಾರವರ ಅತ್ಯಮೋಘ ನರ್ತನ

ಕಾಸ್ಮಾಪಾಲಿಟನ್ ಕ್ಲಬ್ ಸುವರ್ಣ ಮಹೋತ್ಸವದ ಅಂಗವಾಗಿ

ಮೈಸೂರು

ಕ್ರಾಫರ್ಡ್ ಹಾಲಿನಲ್ಲಿ

21-12 52ನೇ ಭಾನುವಾರ ಸಂಜೆ 6 ಘಂಟೆಗೆ

—. ಟಿಕೆಟ್ ದರ —

ರೂ 20, 10, 5, 3, 2, 1

ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

ಎಂ. ಪಿ. ಸೋಮಶೇಖರ್, ಮೆಂಬರ್ ಇನ್ ಛಾರ್ಜ್

ಟಿಕೆಟ್ ದೊರೆಯುವ ಸ್ಥಳ

1 ಕಾಮಧೇನು ಜ್ಯೂಯಲರಿ ಮಾರ್ಟ್ ಅರಮನೆ ರಸ್ತೆ

2 ಕಾರೊನೇಷನ್ ಕ್ಲಾತ್ ಎಂಪೋರಿಯಂ, ಸಯ್ಯಾಜಿರಾವ್ ರೋಡ್

3 ಬಾದಾಮಿ ಸ್ಟೋರ್ಸ್ ೨ನೇ ಕ್ರಾಸ್, ಒಂಟಿಕೊಪ್ಪಲ್

4 ಎಸ್. ಪುಟ್ಟಣ್ಣ ಮರ್ಚೆಂಟ್ ನ ಸಿನಿರಾಜ ಮಾರ್ಕೆಟ್ ನರಸಿಂಹ

5 ಬಲ್ಲಾಳ್ ಹೋಟೆಲ್ ಲಕ್ಷ್ಮೀಪುರಂ

6 ಕಾಸ್ಮಾಪಾಲಿಟನ್ ಕ್ಲಬ್

ನೋಂ. ನಂ. 793 WEEKLY EDITION ಬಿಡಿ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೭] ಭಾನುವಾರ ೨೧-೧೨-೧೯೫೨ [ಸಂಚಿಕೆ ೧೭

ಟ್ಯೂನಿಸ್ಸಿನಲ್ಲಿ ಫ್ರೆಂಚರ ಮಿಲಿಟರಿ ಕಾರ್ಯಾಚರಣೆ

ಸಂಬಾರ ದಿನಸಿ ಪರಿಶೀಲನಾ ಸಮಿತಿಯವರೊಡನೆ ಭೇಟಿ

ಮೈಸೂರು ೨೧

ಸಂಬಾರದ ದಿನಸಿಗಳ ಉತ್ಪನ್ನ ಮತ್ತು ವ್ಯಾಪಾರಗಳನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದವರು ನೇಮಿಸಿರುವ ಶ್ರೀ ದಾಮಲೆ ಸಮಿತಿಯವರು ಮೊನ್ನೆ ಇಲ್ಲಿಗೆ ಆಗಮಿಸಿ ನೆನ್ನೆ ದಿನ ಇಲ್ಲಿನ ವರ್ತಕರುಗಳಿಗೂ ಮತ್ತು ಏಲಕ್ಕಿ, ಮೆಣಸು ಬೆಳೆಯುವವರಿಗೂ ಭೇಟಿ ಕೊಟ್ಟಿದ್ದರು. ಸದರಿ ಬೆಳೆಗಳು ದಕ್ಷಿಣ ಭಾರತದಲ್ಲಿ ಆಗುತ್ತಿರುವುದರಿಂದ ಅವುಗಳ ಉತ್ಪನ್ನವನ್ನು ಹೆಚ್ಚಿಸುವುದೇ ಕೇಂದ್ರ ಸರ್ಕಾರದವರ ಆಶಯವೂ, ಅಮೆರಿಕ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಅವುಗಳಿಗೆ ವಿಶೇಷ ಗಿರಾಕಿ ಇದ್ದು, ಕಳೆದ ವರ್ಷವೇ ಅವುಗಳ ವ್ಯಾಪಾರದಿಂದ ೩೦ ಕೋಟಿ ರೂ ವರಮಾನ ಬಂದಿರುವುದಾಗಿಯೂ, ಅದ್ದರಿಂದ ವರ್ತಕರು ಮತ್ತು ಬೆಳೆಗಾರರು ಈ ದಿನಸಿಗಳ ಕಡೆ ಹೆಚ್ಚು ಗಮನವೀಯಬೇಕೆಂದೂ ಶ್ರೀ ದಾಮಲೆಯವರು ತಿಳಿಸಿದರು.

ಸಂಸ್ಥಾನದಲ್ಲಿ ೮೪೦ ಖೈಲ್ಸ್ ಮೆಣಸು ೨೦ ಸಾವಿರ ಮಣ ಏಲಕ್ಕಿ, ೫ ಸಾವಿರ ಮಣ ಗೋಡಂಬಿ, ೪ ಸಾವಿರ [illegible] ಶುಂಠಿ, ಮತ್ತು ೪೮೦ ಟನ್ ಅರಿಶಿನ ಇಷ್ಟು ಬೆಳೆಯಾಗುತ್ತಿರುವುದೆಂದೂ, ಅವುಗಳಿಗೆ ಸರಿಯಾದ ಬೆಲೆಯನ್ನು ಕೊಟ್ಟು ಸೂಕ್ತ ಸೌಲಭ್ಯಗಳನ್ನೊದಗಿಸಿದರೆ ಹೆಚ್ಚು ಬೆಳೆಯಬಹುದೆಂದೂ ಕೋಲಾರ ಪುರದ ಬೆಳೆಯುವವರು ತಿಳಿಸಿದರು. ಸಮಿತಿಯವರು ಈ ದಿನ ಬೆಂಗಳೂರಿಗೆ ತೆರಳಿದರು.

ಕಾಂಗ್ರೆಸ್ ಅಧ್ಯಕ್ಷತೆಗೆ ಇಬ್ಬರ ಹೆಸರು

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆಗೆ ಶ್ರೀಗಳಾದ ಎ. ಸಿ. ನಾಗಯ್ಯ ಶೆಟ್ಟಿ ಮತ್ತು ಎಂ. ಎಲ್. ನಂಜುಂಡ ಶೆಟ್ಟಿಯವರ ಹೆಸರುಗಳನ್ನೂ ಸೂಚಿಸಲಾಗಿದೆ.

ಲಂಚ ತಪ್ಪಿಸಲು ಭಾರತ ಸರ್ಕಾರದ ದೃಢ ಸಂಕಲ್ಪ

ಲಂಚ ಕೊಡುವಿಕೆಯನ್ನು ತಡೆಗಟ್ಟಲು ಭಾರತ ಸರ್ಕಾರದವರು ದೃಢ ಸಂಕಲ್ಪ ಮಾಡಿರುವರೆಂದೂ ಅದರ ನಿರ್ಮೂಲಕ್ಕಾಗಿ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುತ್ತಿರುವುದೆಂದೂ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ನೆನ್ನೆ ತಿಳಿಸಿದರು. ಕೇಂದ್ರ ರೆವಿನ್ಯೂ ಶಾಖೆಯ ಅಕೌಂಟೆಂಟ್ ಜನರಲ್‌ರವರ ಕಛೇರಿ ಗುಮಾಸ್ತರೊಬ್ಬರು ಅಕ್ರಮವಾಗಿ ಹಣ ಸಂಪಾದಿಸಿದರೆಂಬ ಆಪಾದನೆಯನ್ನು [illegible] ಪುರುಷೋತ್ತಮದಾಸ್ ಟಂಡನ್‌ರವರು ಮಾಡಿದ ಬಗ್ಗೆ ಮೇಲ್ಕಂಡಂತೆ ನೆಹರೂರವರು ನುಡಿದರು. [illegible] ಪ್ರಾಮಾಣಿಕತೆಯನ್ನು ಸಲ್ಲಿಸುತ್ತಿರುವ ಸಾರ್ವಜನಿಕ ನೌಕರರು ಸಂಸ್ಥಾರಿ ಆಡಳಿತವನ್ನು ನಡೆಸುವಾಗ ಕೋಟ್ಯಾಂತರ ರೂ. ಗಳ ವ್ಯವಹಾರವನ್ನು ನೋಡಿಕೊಳ್ಳುತ್ತಿರುವುದರಿಂದ ಸರ್ಕಾರವು ನೌಕರರ ನಿಷ್ಠೆ ಮತ್ತು ಪ್ರಾಮಾಣಿಕತೆಗಳ ಮೇಲೆ ಆಧಾರವಾಗಿದೆ. ಕೇವಲ ಅನುಮಾನದಿಂದ ಅವರನ್ನು [illegible] ಉಚಿತವಲ್ಲವೆಂದೂ ಅಭಿಪ್ರಾಯಪಟ್ಟರು.

ಸಹಕಾರ ಸಂಘಗಳಿಂದ ಸಮಾಜದ ಅಭ್ಯುದಯ

ರಜತೋತ್ಸವದಲ್ಲಿ ಸಚಿವ, ಸಿದ್ಧವೀರಪ್ಪನವರ ಭಾಷಣ

ಮೈಸೂರು ೨೧

ಮೈಸೂರು ನಗರದ ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿ ನೌಕರರ ಸಹಕಾರ ಸಂಘದ ರಜತ ಮಹೋತ್ಸವವು ಈ ದಿನ ಗೃಹ ಮಂತ್ರಿ, ಶ್ರೀ ಹೆಚ್. ಸಿದ್ಧವೀರಪ್ಪನವರ ಅಧ್ಯಕ್ಷತೆಯಲ್ಲಿ ವೈಭವದಿಂದ ನಡೆಯಿತು.

ಕುಮಾರಿ ಲಲಿತಾರವರಿಂದ ಸುಶ್ರಾವ್ಯವಾಗಿ ಮಂಗಳಾಚರಣೆಯಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಅಬ್ದುಲ್ ರಹೀಂರವರು ಸ್ವಾಗತ ಭಾಷಣ ಮಾಡಿದರು.

ಕಾರ್ಯದರ್ಶಿಯವರಾದ ಶ್ರೀ ಬಿ. ಕೆ. ಮಾದಪ್ಪನವರು ಸಚಿವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ, ಸಂಘವು ಕಳೆದ ೨೫ ವರ್ಷಗಳಿಂದಲೂ ಹೊಂದಿರುವ ಪುರೋಭಿವೃದ್ಧಿಯನ್ನು ವಿವರಿಸಿ, ಅದಕ್ಕೆ ಸರಕಾರದಿಂದಲೂ ಮತ್ತು ಅಧಿಕಾರಿ ವರ್ಗದವರಿಂದಲೂ ಹೆಚ್ಚಿನ ಸಹಾಯವು ಬೇಕೆಂದು ಕೋರಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಈ ಸಂಘವು ನೌಕರ ಮಹನೀಯರುಗಳಿಗೆ ನೆರವು ನೀಡುವುದರಲ್ಲಿ ಅಗ್ರಸ್ಥಾನವನ್ನು ಪಡೆದಿರುವುದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಅದು ಇನ್ನೂ ಹೆಚ್ಚಿನ ಪುರೋಭಿವೃದ್ಧಿಯನ್ನು ಹೊಂದಲೆಂದು ಹಾರೈಸಿದರು. ಅದಕ್ಕೆ ಇಲಾಖೆಯಿಂದ ಧನ ಸಹಾಯವನ್ನು ನೀಡುವುದಾಗಿಯೂ ಭರವಸೆಯಿತ್ತರು. ಭಾರತ ರಾಜ್ಯಾಂಗದಲ್ಲಿ ಸಹಕಾರಕ್ಕೆ ಅತ್ಯುನ್ನತ ಸ್ಥಾನವಿರುವುದೆಂದು ಹೇಳಿ, ಸಹಕಾರ ಸಂಘಗಳ ಮೂಲಕ ನಮ್ಮ ಅಭ್ಯುದಯವು ಬಹುಮಟ್ಟಿಗೆ ಸಾಧಿಸಲ್ಪಡಬಹುದೆಂದು ತಿಳಿಸಿದರು.

ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಮಾತನಾಡಿ, ಸಹಕಾರ ಚಳುವಳಿಯು ಪ್ರಾಚೀನ ಕಾಲದಿಂದಲೇ ಬೆಳೆದು ಬಂದಿರುವ ಅಂಶವನ್ನು ವಿವರಿಸಿ, ಇತ್ತೀಚೆಗೆ ಅಧಿಕಾರಿ ವರ್ಗದವರ ಪ್ರವೇಶದಿಂದ ಇದಕ್ಕೆ ಧಕ್ಕೆಯುಂಟಾಗುವ ಪರಿಸ್ಥಿತಿಯೊದಗಿದೆಯೆಂದು ಹೇಳಿ, ಸಹಕಾರ ಸಂಘಗಳಲ್ಲಿ ಸ್ವೇಚ್ಛೆಯಿಂದ ಕೆಲಸ ಮಾಡುತ್ತಿರುವ ಕಾರ್ಯದರ್ಶಿಗಳನ್ನು ತೆಗೆದುಹಾಕಿ ಅವರ ಸ್ಥಾನಕ್ಕೆ ಅಧೀನರಾಗಿಲ್ಲದಿರುವ ಸಂಬಳದ ಕಾರ್ಯದರ್ಶಿಗಳನ್ನು ನೇಮಿಸುವಂತೆ ಸರಕಾರದವರು ಮಾಡಿರುವ ಆಜ್ಞೆಯಿಂದ ಬಹಳ ಅನರ್ಥವುಂಟಾಗುವುದೆಂದೂ, ಇದನ್ನು ಸಚಿವರು ಪರಿಶೀಲಿಸಬೇಕೆಂದೂ ಕೋರಿದರು.

ಇದಕ್ಕೆ ಸಚಿವರು ಉತ್ತರವಿತ್ತು, ವಿಧಿಯಿಲ್ಲದೆ ಅತ್ಯಗತ್ಯವಾದ ಸಂದರ್ಭಗಳಲ್ಲಿ ಮಾತ್ರ ಸರ್ಕಾರದವರು ಪ್ರವೇಶಿಸುವರೆಂದೂ ಅಧಿಕಾರ ಲಾಲಸೆಯಿಂದ ಅಲ್ಲವೆಂದೂ ಹೇಳಿ, ಈ ಪ್ರವೇಶದ ಮೂಲಕಾರಣವನ್ನು ನಿವಾರಿಸಿದರೆ ಈ ಸಮಸ್ಯೆಯು ತಾನಾಗಿಯೇ ಬಗೆಹರಿಯುವುದೆಂದೂ ಹೇಳಿದರು.

ಶ್ರೀಮತಿ ಜಲಜಾಕ್ಷಮ್ಮನವರಿಂದ ಇಂಪಾದ ಗಾನವು ನಡೆಯಿತು.

ನೆಹರೂರವರ ನಿರ್ಧಾರಕ್ಕೆ ಸ್ವಾಮಿ ಸೀತಾರಾಂ ಒಪ್ಪಿಗೆ

ಆಂಧ್ರ ಪ್ರಾಂತ ರಚನೆ ಬಗ್ಗೆ ನೆಹರೂರವರು ಕೈಗೊಂಡಿರುವ ಕ್ರಮಗಳನ್ನು ಸ್ವಾಮಿ ಸೀತಾರಾಂರವರು ಸ್ವಾಗತಿಸಿ, ಆಂಧ್ರದ ಎಲ್ಲ ರಾಜಕೀಯ ಪಕ್ಷಗಳೂ ಈ ಬಗ್ಗೆ ನೇಮಕವಾಗಿರುವ ನ್ಯಾಯಮೂರ್ತಿಗಳಿಗೆ ಅಗತ್ಯವಾದ ಸಲಹೆಗಳನ್ನು ನೀಡಬೇಕೆಂದು ಕೋರಿರುವರಲ್ಲದೆ ಏಪ್ರಿಲ್ ೧ನೇ ತಾರೀಖಿನೊಳಗೆ ಆಂಧ್ರ ಪ್ರಾಂತವನ್ನೂ ಏರ್ಪಡಿಸುವಂತಾಗಲೆಂದು ಆಶಿಸಿರುವರು.

೧೨೩ ಜನರಿದ್ದ ಭಾರಿ ವಿಮಾನದ ದುರಂತ

ಅಮೆರಿಕದ ಭಾರಿ ಮಿಲಿಟರಿ ವಿಮಾನವೊಂದು ನೆನ್ನೆ ವಾಷಿಂಗ್ಟನ್ನಿನ ಡಾರ್ಸೆಟ್ ಏರ್‌ಫೋರ್ಸ್ ನಿಲ್ದಾಣದಿಂದ ಮೇಲಕ್ಕೆ ಹಾರುತ್ತಿದ್ದಾಗ ಬೆಂಕಿ ಹತ್ತಿಕೊಂಡು ದುರಂತಕ್ಕೀಡಾಯಿತೆಂದು ಗೊತ್ತಾಗಿದೆ. ಅದರಲ್ಲಿದ್ದ ೧೨೩ ಜನರ ಪೈಕಿ ಕೆಲವರು ಪಾರಾದರೆಂದೂ, ಎಷ್ಟು ಮಂದಿ ಸತ್ತಿರುವರೆಂಬುದು ಇನ್ನೂ ತಿಳಿದುಬಂದಿಲ್ಲವೆಂದೂ ವರದಿಯಾಗಿದೆ. ವಿಮಾನವು ಕೆಳಗೆ ಬಿದ್ದ ಕೂಡಲೇ ಪೆಟ್ರೋಲ್ ಹೊರಕ್ಕೆ ಚೆಲ್ಲಿ, ಧಗಧಗನೆ ಉರಿಯುದ್ದು ವಿಮಾನವು ಪೂರ್ತಿಯಾಗಿ ಸುಟ್ಟುಹೋಯಿತು.

ಟ್ಯೂನಿಷಿಯಾ ಪ್ರಜೆಗಳ ಮೇಲೆ ಫ್ರೆಂಚರ ಭಾರಿ ಧಾಳಿ

ದಕ್ಷಿಣ ಟ್ಯೂನಿಷಿಯಾದ ಗ್ರಾಮಾಂತರ ಪ್ರದೇಶದಲ್ಲೆಲ್ಲಾ ಅಲ್ಲಿನ ಫ್ರೆಂಚ್ ಸೈನ್ಯಾಧಿಪತಿ ಜನರಲ್ ಗಾರ್ಬೆಯವರು ಪೂರ್ಣವಾದ ಸೈನ್ಯ ಕಾರ್ಯಾಚರಣೆಯಲ್ಲಿ ತೊಡಗಿರುವರೆಂದು ವರದಿಯಾಗಿದೆ. ಕಳೆದ ೩ ದಿನಗಳಲ್ಲಿ ಸಾವಿರಗಟ್ಟಲೆ ಸ್ತ್ರೀ ಪುರುಷರನ್ನು ಬಂಧಿಸಿ, ಅವರನ್ನೆಲ್ಲಾ ಲಾರಿಗಳಲ್ಲಿ ತುಂಬಿ ಸಹರಾ ಮರುಭೂಮಿಯ ಗೊತ್ತಿಲ್ಲದ ಪ್ರದೇಶಗಳಿಗೆ ರವಾನಿಸಲಾಗುತ್ತಿರುವುದಾಗಿಯೂ ಹೇಳಲಾಗಿದೆ. ವಿನಾಶಕಾರಿಯಾದ ಹಲ್ಲೆಯವರು ಮತ್ತು ಸೈನಿಕರ ಈ ಧಾಳಿಯಿಂದ ಜಾರಾಗಿಲ್ಲ. ತೋಪುಗಳು ಮತ್ತು ಟ್ಯಾಂಕುಗಳು ಹಳ್ಳಿಗಳ ಮೇಲೆಲ್ಲಾ ನುಗ್ಗಿ ಗುಂಡು ಹಾರಿಸುತ್ತಿವೆಯೆಂದೂ, ಈಗಾಗಲೇ ೬೦ ಮನೆಗಳನ್ನು ನೆಲಸಮ ಮಾಡಲಾಗಿರುವುದೆಂದೂ ಹೇಳಲಾಗಿದೆ. ಇತ್ತೀಚೆಗೆ ಆ ಪ್ರದೇಶಗಳಲ್ಲಿ ಫ್ರೆಂಚರ ವಿರುದ್ಧದ ಚಳುವಳಿಯು ಜೋರಾಗಿ, ಹಲವು ಸ್ಥಳಗಳನ್ನು ಅವರು ಆಕ್ರಮಿಸಿರುವುದಕ್ಕೆ ಪ್ರತೀಕಾರ ಮಾಡಿ, ಚಳುವಳಿಯನ್ನು ನಿರ್ನಾಮ ಮಾಡುವ ಉದ್ದೇಶದಿಂದ ಈ ರೀತಿ ಧಾಳಿಯಾಗುತ್ತಿರುವುದೆಂದು ತಿಳಿದುಬಂದಿದೆ.

ಕಾಶ್ಮೀರದಲ್ಲಿ ಯುದ್ಧಕ್ಕಾಗಿ ಡಾನ್ ಪತ್ರಿಕೆಯ ಕರೆ

ಭದ್ರತಾ ಸಮಿತಿಯು ಕಾಶ್ಮೀರದ ಸಮಸ್ಯೆಯನ್ನು ಈ ಸಾರಿ ಪರಿಹರಿಸಲು ಅಸಾಧ್ಯವಾದರೆ, ಪಾಕಿಸ್ತಾನಕ್ಕೆ ಉಳಿದಿರುವ ಮಾರ್ಗ ಯುದ್ಧವೊಂದೇ ಎಂಬುದಾಗಿ ಕರಾಚಿಯ ಡಾನ್ ಪತ್ರಿಕೆಯು ತಿಳಿಸಿರುತ್ತದೆ. ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಚರ್ಚೆಯು ನಾಳೆಯಾದ ಕಾಶ್ಮೀರದಲ್ಲಿ ಜನಮತಗಣನೆಯನ್ನು ತೆಗೆದುಕೊಳ್ಳುವ ವಿಷಯವನ್ನು ಬಲವಂತವಾಗಿ ಒತ್ತಾಯಪಡಿಸಲಾಗುವುದೆಂದೂ, ಅಲ್ಲಿ ನ್ಯಾಯವಾದ ಮತ್ತು ಪಕ್ಷಪಾತ ರಹಿತ ಜನಮತಗಣನೆಯಾಗಬೇಕೆಂದೂ, ಪಾಕಿಸ್ತಾನದ ಪ್ರಧಾನಿ ಖ್ವಾಜಾ ನಾಜಿಮುದ್ದೀನರವರು ಹೇಳಿರುವರು.

ಬ್ರಿಟನ್-ಅಮೆರಿಕಾ ಸಲಹೆಗೆ ನೆಹರೂ ನಿರಾಕರಣೆ

ಕಾಶ್ಮೀರ ಸಮಸ್ಯೆಯ ಪರಿಹಾರಕ್ಕಾಗಿ ಬ್ರಿಟನ್ ಮತ್ತು ಅಮೆರಿಕಗಳು ಮಂಡಿಸಿರುವ ನಿರ್ಣಯದ ಸಲಹೆಗಳನ್ನು ಭಾರತವು ಒಪ್ಪುವುದಿಲ್ಲವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ. ಭಾರತ ಮತ್ತು ಪಾಕಿಸ್ತಾನಗಳು ಕಾಶ್ಮೀರದಲ್ಲಿ ನಿಶ್ಶಸ್ತ್ರೀಕರಣದ ಬಗ್ಗೆ ಕೂಡಲೇ ಸಂಧಾನಕ್ಕೆ ತೊಡಗಬೇಕೆಂದು ನಿರ್ಣಯದಲ್ಲಿ ಸೂಚಿಸಲಾಗಿದೆ.

ಮೈಸೂರಿನ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರ ಪ್ರಶ್ನೆಗೆ ಉತ್ತರವೀಯುತ್ತಾ, ನೆಹರೂರವರು ಪಾಕಿಸ್ತಾನದ ಎಲ್ಲ ಸೈನ್ಯಗಳೂ "ಅಜಾದ್ ಕಾಶ್ಮೀರ" ಪ್ರದೇಶದ ಸುತ್ತಲೂ ನಿಂತಿರುವವೆಂದೂ, ಅಜಾದ್ ಕಾಶ್ಮೀರದ ಸೇನಾ ದಳಗಳೇ ೩೦ ರಿಂದ ೩೨ ಬಟಾಲಿಯನ್ನಿನಷ್ಟಾಗುವವೆಂದೂ ಹೇಳಿದರು. ವಿಶ್ವಸಂಸ್ಥೆಗೆ ಭಾರತವು ಕಾಶ್ಮೀರದ ಬಗ್ಗೆ ಕೊಟ್ಟಿರುವ ದೂರನ್ನು ವಾಪಸು ತೆಗೆದುಕೊಳ್ಳುವುದಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು.

ವಾರ ಭವಿಷ್ಯ

ತಾ|| ೨೧-೧೨-೫೨ ರಿಂದ ೨೮-೧೨-೫೨ ರ ವರೆಗೆ

ಮೇಷ — ಆರೋಗ್ಯ ಉತ್ತಮ ಮನಸ್ಸಿಗೆ ಆನಂದ. ರಕ್ತ ಸಂಬಂಧಿಕರ ಸೋಲು ಪ್ರವಾಸ ಯೋಗ ಪರೋಪಕಾರ ಕಾರ್ಯ ನೌಕರಿಯಲ್ಲಿ ಹೆಚ್ಚಿನ ಅಧಿಕಾರ. ತಾ|| ೨೨, ೨೪ ಅತಿಥಿಗಳ ಆಗಮನ ಖರ್ಚು.

ವೃಷಭ — ಕೋರ್ಟು ಕಾರ್ಯದಲ್ಲಿ ಯಶ ಆರೋಗ್ಯ ಉತ್ತಮ. ಗೆಳೆಯರ ಸಹಾಯ ವ್ಯಾಪಾರಾದಿಗಳಲ್ಲಿ ಪ್ರಗತಿ. ಸುಖ ಪ್ರವಾಸ ಸಾರ್ವಜನಿಕ ಕಾರ್ಯದಲ್ಲಿ ಜಯ. ತಾ|| ೨೩, ೨೪ ಶುಭ ವಾರ್ತೆ, ಔತಣ

ಮಿಥುನ — ಆರೋಗ್ಯದ ಕಡೆ ಗಮನವಿರಲಿ ಪ್ರವಾಸ ಬೇಡ ವ್ಯಾಪಾರಾದಿಗಳಲ್ಲಿ ಕೈಕೆಳಗಿನವರಿಗೆ ಸಲಿಗೆ ಬೇಡ ಮುಂದಿನ ವಾರ ಉತ್ತಮ ತಾ|| ೨೫, ೨೬ ಕುಶಲ ವಾರ್ತೆ, ಚಿಂತಾ ನಿವಾರಣೆ.

ಕರ್ಕ — ಕುಟುಂಬ ಸ್ಥಿತಿ ಚಿಂತಾಜನಕ. ಪತ್ನಿಯೊಡನೆ ಭಿನ್ನತೆ ಆರೋಗ್ಯ ನೆಟ್ಟಗಿರದು ನಿರುತ್ಸಾಹಕರ ವಾರ ಪ್ರವಾಸದಲ್ಲಿ ಗೊಂದಲ ತಾ|| ೨೧, ೨೨ ಪ್ರಿಯಜನ ವಿಯೋಗ, ಅಪ್ರಿಯ ವಾರ್ತೆ

ಸಿಂಹ — ಜಾಗರೂಕತೆ ಬೇಕು ಆರೋಗ್ಯ ಕ್ಲೇಶಕರವಲ್ಲ. ಅನಿರೀಕ್ಷಿತ ಘಟನೆ ವ್ಯಾಪಾರಾದಿಗಳಲ್ಲಿ ಚಿಂತಾಜನಕ ಪ್ರಸಂಗ ವಿಪರೀತ ಖರ್ಚು ಅನುವಾದ ತಾ|| ೨೩, ೨೪ ಪತ್ನಿಗೆ ಬಾಯಿಲೆ, ಶುಭ ಕಾರ್ಯದಲ್ಲಿ ವಿಘ್ನ.

ಕನ್ಯಾ — ಮನಸ್ಸಿಗೆ ಉತ್ಸಾಹದ ಘಟನೆ ವಿದ್ವಾಂಸರ ಸಹವಾಸ ಪ್ರವಾಸ ಯೋಗ ಆರೋಗ್ಯ ನೆಟ್ಟಗೆ. ನ್ಯಾಯದ ಪತ್ರ ವ್ಯಾಪಾರಾದಿಗಳಲ್ಲಿ ಶುಭ ಘಟನೆ. ಶತ್ರು ಸೋಲು ತಾ|| ೨೫, ೨೬ ಗೊಂದಲ, ಖರ್ಚು

ತುಲಾ — ಪರಿಸ್ಥಿತಿ ದಾರಿಯಲ್ಲಿ ಕಡಿಮೆ ಆರೋಗ್ಯದಲ್ಲಿ ಸುಧಾರಣೆ ಹಣದ ಚಿಂತೆ ದೂರ ಅಪ್ತರಿಂದ ಕುಶಲ ಪತ್ರ. ತಾ|| ೨೩ ೨೪ ಶ್ರಮ, ಮನರಂಜನೆಗೆ ಖರ್ಚು.

ವೃಶ್ಚಿಕ — ಆರೋಗ್ಯ ನೆಟ್ಟಗಿರದು ಕಾರ್ಯ ವಿಘ್ನ ಪ್ರವಾಸದಲ್ಲಿ ಸಂಕಟ ತಾ|| ೨೫, ೨೬ ವ್ಯಾಪಾರಾದಿಗಳಲ್ಲಿ ವಿಚಿತ್ರ ಚಿಂತೆ, ಖರ್ಚು

ಧನು — ಗೆಳೆಯರ ಉತ್ತೇಜನ. ಆರೋಗ್ಯ ನೆಟ್ಟಗೆ. ವ್ಯಾಪಾರಾದಿಗಳಲ್ಲಿ ಉತ್ಸಾಹಜನಕ ವಾರ್ತೆ ತಾ|| ೨೩, ೨೪ ಅಪ್ತರ ಆಗಮನ, ಖರ್ಚು

ಮಕರ — ಉತ್ತಮ ವಾರ. ಹಣಕಾಸಿನ ಸ್ಥಿತಿಯು ಸುಧಾರಣೆ ಆರೋಗ್ಯ ಉತ್ತಮ. ವ್ಯಾಪಾರಾದಿಗಳು ಹೆಚ್ಚೋಟಿಗೆ ಬರುವುವು. ನೌಕರಿಯಲ್ಲಿ ಉತ್ತಮ ತಾ|| ೨೫, ೨೬ ಅನಪೇಕ್ಷಿತ ಪ್ರವಾಸ

ಕುಂಭ — ಆರೋಗ್ಯ ನೆಟ್ಟಗಿರದು. ವ್ಯಾಪಾರಾದಿಗಳಲ್ಲಿ ಹಾನಿ ಅಗ್ನಿ ಭಯ ವಾಹನಗಳಿಂದ ಧಕ್ಕೆ. ಕ್ಲೇಶಕರ ವಾರ ತಾ|| ೨೪, ೨೬ ಉತ್ತಮ, ಸಹಾಯ

ಮೀನ — ಕ್ಲೇಶಗಳ ಆರಂಭ ಆರೋಗ್ಯ ನೆಟ್ಟಗಿರದು ವ್ಯಾಪಾರಾದಿಗಳ ಸ್ಥಿತಿ ಕ್ಲೇಶಕರವಲ್ಲದಿದ್ದರೂ, ತೊಂದರೆಗಳಿಗೆ ಆರಂಭ. ಪ್ರವಾಸಕ್ಕೆ ಉತ್ತಮವಲ್ಲ ತಾ|| ೨೧, ೨೨ ಹಾನಿ, ಅಪ್ರಿಯ ವಾರ್ತೆ

ಜನವರಿ ೪ನೇ ತಾ|| ದೆಹಲಿಗೆ ಅಟ್ಲಿ ಆಗಮನ

ಬ್ರಿಟನ್ನಿನ ಮಾಜಿ ಪ್ರಧಾನಿ ಮತ್ತು ಅಲ್ಲಿನ ಕಾರ್ಮಿಕ ಪಕ್ಷದ ನಾಯಕರಾದ ಕ್ಲೆಮೆಂಟ್ ಅಟ್ಲೀಯವರು ಒರುವ ೧೯೫೩ ೪ನೇ ತಾ|| ದೆಹಲಿಗೆ ಆಗಮಿಸುವರೆಂದು ನಿರೀಕ್ಷಿಸಲಾಗಿದೆ. ರಂಗೂನಿಗೆ ೬ನೇ ತಾ|| ಅವರು ಪ್ರಯಾಣ ಬೆಳಸಿ, ಅಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನದಲ್ಲಿ ಭಾಗವಹಿಸುವರು

ಸತ್ಯನಾರಾಯಣ ಪೂಜೆ

ರಾಜಧಾನಿಯ ವಿದ್ಯಾರ್ಥಿ ನಿಲಯದ ಶ್ರೀ ಕೆ ರಾಮಕೃಷ್ಣರವರು ಗುರುವಾರ ನಾರಾಯಣ ಶಾಸ್ತ್ರಿ ರಸ್ತೆಯ ಚೇತನಾ ಪುಸ್ತಕಾಲಯದ ಬಳಿ ಇರುವ ತಮ್ಮ ಮನೆಯಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯನ್ನು ನೆರವೇರಿಸಿ, ಇಷ್ಟ ಮಿತ್ರರುಗಳನ್ನು ಕರೆದು ಭೋಜನ ಕೂಟದಿಂದ ಸತ್ಕರಿಸಿದರು

ಆಕಾಶವಾಣಿಯಲ್ಲಿ ವಿಶ್ವೇಶ್ವರಯ್ಯನವರೊಡನೆ ಸಂಭಾಷಣೆ

ಮೈಸೂರು ಸರ್ಕಾರದ ಕೈಗಾರಿಕಾ ಮಂತ್ರಿ ಶ್ರೀ ಟಿ ಸಿದ್ದಲಿಂಗಯ್ಯನವರು ರಾಜಧಾನಿಯಲ್ಲಿ ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರೊಡನೆ ನಡೆಸಿದ ಸಂಭಾಷಣೆಯನ್ನು ಮೈಸೂರಿನ ಆಲ್ ಇಂಡಿಯಾ ರೇಡಿಯೋದವರು ನಾಳೆ ರಾತ್ರಿ ೯-೧೫ ಗಂಟೆಗೆ ಪ್ರಸಾರ ಮಾಡುವರು

ಅಮ್ಮತಾಬಾಯಿಯವರ ಸ್ಮಾರಕೋತ್ಸವ

ರಾಜಧಾನಿಯಲ್ಲಿ ಭಗಿನೀ ಸೇವಾ ಸಮಾಜವನ್ನು ಸ್ಥಾಪಿಸಿ, ೨೮ ವರ್ಷ ಸೇವೆ ಸಲ್ಲಿಸಿ, ಸರ್ವತೋಮುಖವಾದ ಅಭಿವೃದ್ಧಿಗೆ ತಂದ ಶ್ರೀಮತಿ ಮೈ. ಕೆ. ಅಮ್ಮತಾ ಬಾಯಿಯವರ ಸ್ಮಾರಕೋತ್ಸವನ್ನು ನಾಳೆ ಸಂಜೆ ೫ ಘಂಟೆಗೆ ಭಗಿನೀ ಸೇವಾ ಸಮಾಜದಲ್ಲಿ ನೆರವೇರಿಸಲಾಗುವುದು ನಿವೃತ್ತ ವಿದ್ಯಾಧಿಕಾರಿಗಳಾದ ಶ್ರೀ ಕೆ ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು

ಎಂ. ಎಸ್ ಪರೀಕ್ಷೆಗೆ ತಯಾರು ಮಾಡುವ

-: ವಿ ಶೇ ಷ ತ ರ ಗ ತಿ ಗ ಳು -

ಬಾಲಕಿಯರಿಗೆ ಬೆಳಿಗ್ಗೆ 7 30 ರಿಂದ 9.30

ಬಾಲಕರಿಗೆ ಸಾಯಂಕಾಲ 6 ರಿಂದ 8

ಸಿಟಿ ಟ್ಯುಟೋರಿಯಲ್ ಕಾಲೇಜು,

ವಾಣಿವಿಲಾಸ ಮಾರ್ಕೆಟ್, ಮೈಸೂರು.

ಇಂಡಿಯಾ-ಚೀನಾ ಸ್ನೇಹ ಸಂಘಕ್ಕೆ ಅಧಿಕಾರಿಗಳು ಸೇರಲು ಅಡ್ಡಿ

ತಗಡೂರು ರಾಮಚಂದ್ರ ರಾಯರ ಖಂಡನೆ

ಮೈಸೂರು ಸಂಸ್ಥಾನದ ಇಂಡಿಯಾ ಚೀನಾ ಸ್ನೇಹ ಸಂಘದ ಅಧ್ಯಕ್ಷರಾದ ಶ್ರೀ ತಗಡೂರು ರಾಮಚಂದ್ರರಾಯರು ಈ ರೀತಿ ತಿಳಿಸಿರುತ್ತಾರೆ:—

ಭಾರತದಲ್ಲಿ ನೆಹರೂರವರ ಆಡಳಿತವೂ, ಅದರ ಪರಿಣಾಮವಾಗಿ ಆಚಾರ್ಯ ವಿನೋಬಾಭಾವೆಯವರು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಸಂಪತ್ತು ಮತ್ತು ಭೂದಾನ ಯಜ್ಞವನ್ನು ನಡೆಸುತ್ತಿರುವ ಚಳುವಳಿಯೂ, ಭಾರತದ ಪರಿಸ್ಥಿತಿ ಮತ್ತು ಸಂಸ್ಕೃತಿಗಳ ಅನುಸಾರವಾಗಿ ಇವೆ. ಈ ಅಹಿಂಸಾ ಕ್ರಾಂತಿಗೆ ಭಾರತ ಸರ್ಕಾರದವರೂ, ಎಲ್ಲ ಸಾರ್ವಜನಿಕ ಸಂಸ್ಥೆಗಳೂ ಬೆಂಬಲ ನೀಡುತ್ತಿರುವರು ಈ ವಿಷಯವನ್ನು ಚೀನಾದ ಪ್ರಜೆಗಳಿಗೆ ತಿಳಿಸುವುದು ಚೀನಾ ಸ್ನೇಹ ಸಂಘದ ಉದ್ದೇಶ

ಹೀಗಿದ್ದಾಗ್ಯೂ ಇಂಡಿಯಾ ಸರ್ಕಾರದವರು ಪ್ರಾಂತ ಸರ್ಕಾರಗಳಿಗೆ ಸೂಚನೆ ಕಳುಹಿಸಿ, ಸರ್ಕಾರಿ ನೌಕರರು ಚೀನಾ-ಭಾರತ ಸ್ನೇಹ ಸಂಘದಲ್ಲಿ ಭಾಗವಹಿಸಕೂಡದೆಂದು ಆರ್ಡರು ಬರುವಂತೆ ತಿಳಿಸಿರುತ್ತಾರೆ ಸರ್ಕಾರಿ ವಿದ್ಯಾಸಂಸ್ಥೆಗಳಿಗೂ ಸಹಾಯ ಪಡೆಯುವ ಶಾಲೆಗಳಿಗೂ ಈ ಆಜ್ಞೆಯು ಅನ್ವಯಿಸುವುದು ಇದು ಇಂಡಿಯಾ ಚೀನಾ ಸ್ನೇಹ ಸಂಘದ ಚಳುವಳಿಯನ್ನು ತಡೆಯಲು ಹೂಡಿರುವ ತಂತ್ರವಾಗಿದೆ ಮತ್ತು ನೆಹರೂರವರ ತಾಟಸ್ಥ್ಯ ನೀತಿಗೆ ಇದು ವಿರುದ್ಧವಾಗಿದೆ ಇದೇ ಸಮಯದಲ್ಲಿ ಭಾರತದಲ್ಲಿರುವ ಅಮೆರಿಕಾ ರಾಯಭಾರಿಗಳು ತಾವು ಪ್ರವಾಸ ಹೋದೆಡೆಯಲ್ಲೆಲ್ಲಾ ಚೀನಾ ವಿರುದ್ಧವಾಗಿ ಭಾಷಣ ಮಾಡುತ್ತಿರುವರು ಕಮ್ಯೂನಿಸಂ ಅನ್ನು ಎದುರಿಸುತ್ತೇವೆಂಬ ಸೋಗಿನಲ್ಲಿ ಭಾರತದ ವಿದೇಶಾಂಗ ನೀತಿಯ ವಿರುದ್ಧವಾಗಿ ಮಾತನಾಡುತ್ತಿರುವರು ಇವರ ವರ್ತನೆಯು ಸರಿಯಲ್ಲ.

ರೈಲ್ವೆ ಪುಸ್ತಕ ಸ್ಟಾಲುಗಳಲ್ಲಿ ಅಮೆರಿಕದ ಪುಸ್ತಕಗಳಿಗೆ ಅವಕಾಶವಿರುತ್ತದೆ ಆದರೆ ಚೀನಾ ಪುಸ್ತಕಗಳನ್ನು ಇಡದಂತೆ ತಡೆಯಲಾಗಿದೆ ಈ ನೀತಿಯು ಸಹನಾತೀತವಾದದ್ದು ಈ ಮಾರ್ಗವನ್ನು ಬಿಟ್ಟು ಸೌಹಾರ್ದ ವಾತಾವರಣವನ್ನು ಸರ್ಕಾರದವರು ಇನ್ನಾದರೂ ಕಲ್ಪಿಸುವರೆಂದು ನಂಬಿರುತ್ತೇನೆ

ಎಲ್ಲಾ ಬಗೆಯ

ಅಲೋಪತಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207 ನಮ್ಮ್ಯಾಜರಾವ್ ರೋಡ್,

ಮೈಸೂರು

ಮೈಸೂರು ಪೇಟೆ ಧಾರಣೆ

	ರೂ. ಇಂದ	ರೂ ಗೆ
ನೆಲಗಡಲೆ	೧೩-೮-೦	೨೮ ೧ ?
ಎಳ್ಳು	೬೦-೦-೦	೬೨ ೦
ಹರಳು ಬೀಜ	೪೩ ೧೨-೦	೪೬ ೦-೦
ಹುರುಳಿ	೩೬ ೧೦-೦	೪೫ ೬ ೦
ಹೆಸರು	೫೦ ೨ ೦	೫೪ ೦ ೦
ಉದ್ದು	೩೫ ೨-೦	
ಹಲಸಂದೆ	೫೨-೬ ೦	೬೩ ೬ ೦
ಹುಚ್ಚೆಳ್ಳು	೪೨ ೧೪-೦	೪೯ ೮-೦
ಅವರೆ	೫೫-೨ ೦	೬೫ ೦ ೦
ಹೊಂಗೇಬೀಜ	೧೬ ೨ ೦	
ಹುಣಿಸೆಕಾಯಿ		
ರಾಗಿ	೧೧-೦-೦	೧೮ ೬-೦
ಬೆಲ್ಲ	೩-೮-೦	
ಹುರುಳೀಕಾಳು	೪-೧೪-೦	೬ ೦ ೦
ಸೀಗೇಕಾಯಿ	೪-೪-೦	೪-೯-೦
ತೆಂಗಿನಕಾಯಿ೧,೦೦೦ ೧೪೫-೦	೦ ೨೪೬ ೦ ೦	

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೮ ೩೦ ಎಂ ಎಸ್ ಸುಬ್ಬುಲಕ್ಷ್ಮಿ ಕರ್ನಾಟಕ ಸಂಗೀತ ಮಧ್ಯಾಹ್ನ ೧ ೪೦ ನಾಗಸ್ವರ ೨ ಚಿತ್ರ ಸಂಗೀತ. ಸಂಜೆ ೫.೪೦ ಮತ್ತು ೬ ಡಿ. ಕೇಶವಮೂರ್ತಿ, ಪಿಟೀಲು ೬ ೧೦ ಗಾನ ವಿಹಾರ ೭ ಬಡೆ ಗುಲಾಂ ಅಲಿ ಕರ್ನಾಟಕ ಸಂಗೀತ ೭ ೨೦ ಗೀತಾಂಜಲಿ ೭ ೪೦ ವಿಶ್ವ ವಾರ್ತಾ ವಿಮರ್ಶೆ, ೮ ೪೨ ವಾರ್ತೆ ೯ ೪೦ ಚನ್ನಮ್ಮ ಸಂಗೀತ ೯-೧೫ ವಿಶ್ವೇಶ್ವರಯ್ಯನವರೊಡನೆ ಭೇಟಿ

FOR QUICK SALE

One German Camera with F 3.5 Radionar lens in leather case Accessories One film pack adopter and 3 slides All in good condition Contact — A.G.N 1082 Chamaraja Agrahar, Mysore

---

ಶ್ರೀ ರಮಣಿ ಸಂಗೀತ ವಿದ್ಯಾಲಯ

1064-1, ಚಾಮರಾಜ ಅಗ್ರಹಾರ

(ಮಾರುವನದ ಎದುರಿಗೆ)

ಮೇಲ್ಕಂಡ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ. ಕೃಷ್ಣಮೂರ್ತಿ,

ವ್ಯವಸ್ಥಾಪಕ

ಮೈಸೂರು ಪಿಂಜರಾಪೋಲು ಸಂಘ

ಪ್ರ ಕ ಟ ಣೆ

ಮೈಸೂರು ಚಾಮುಂಡಿ ಬೆಟ್ಟದ ಪಾದದಲ್ಲಿರುವ ಪಿಂಜ್ರಾಪೋಲಿನ ಸ್ವಂತ ತೋಟದಲ್ಲಿರುವ ಹುಣಸೆ, ಮಾವು ಮೊದಲಾದ ಫಸಲನ್ನು ೧೯೫೩-೫೪ ನೇ ಸಾಲು ಗುತ್ತಿಗೆಗೆ ಬಹಿರಂಗವಾಗಿ ... ನೇ ಡಿಸೆಂಬರು ಮಾಹೆ ... ಭಾನುವಾರ ಬೆಳಿಗ್ಗೆ ... ಗಂಟೆಗೆ ... ಸ್ಥಳದಲ್ಲಿ ಹರಾಜು ಮಾಡಲಾಗುತ್ತೆ ... ಸ್ವವುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ, ಭರ ದರಖಾಸ್ತು ... ತ್ತಿಗೆ ಮೊಬಲಗನ್ನು ಪಾವತಿ ಮಾಡಿ ... ತೀರ ಪಡೆಯುವುದು. ಹೆಚ್ಚಿಗೆ ... ಮೈಸೂರು ವಾಣಿ ವಿಲಾಸ ರೋಡಿನಲ್ಲಿರುವ ಪಿಂಜ್ರಾಪೋಲ್ ಆಫೀಸಿನಲ್ಲಿ ... ಯಬಹುದು.

(ರುಜು) ಎಂ. ಗಂಗಾಧರ ಶಾಸ್ತ್ರಿ

ಗೌರವ ಕಾರ್ಯದರ್ಶಿ ...

AT YOUR SERVICE AGAIN

Paddy & Rice Transporters, Please Remember the Quick, Safe & Easy Transport

MYSORE TRANSIT SERVICE (Regd.

THIRTHA & COMPANY, (Phone 557) **Ramavilas Road, Mysore**

Edited, Printed and Published by A R Nagarajan at Sadhvi Press, D Subb-

ಪೋ॥ ನಂ.೨೪೮ ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೨ ೧೨-೧೯೫೩ [ಸಂಚಿಕೆ ೧೨೩

ಸಂಸ್ಥಾನಕ್ಕೆ ರಿಸರ್ವ್ ಬ್ಯಾಂಕಿನಿಂದ ಸಾಲ

ವಿಪ್ರೋಗಳಲ್ಲಿ ರಾಗಿ, ಜೋಳ ನಾರಲು ಒತ್ತಾಯ

ಮೈಸೂರು ೨೨

[illegible] ರಾಜಧಾನಿಯ ಪೌರಸಭೆಯು ಕೆಲಸ [illegible] ತಮಗೆ ಸಿಗದಿರುವ ಬೆಲೆಯು [illegible] ರಾಗಿ, ಜೋಳಗಳು ದೊರೆ [illegible] ವೆಂದು ಒಲಿವ ಪ್ಲೆಕಾರ್ಡುಗಳ [illegible] ನಗರದ ಮುಖ್ಯ ಬೀದಿಗ [illegible] ಮೆರವಣಿಗೆ ಹೋಗಿ ಪಂಚ [illegible] ಶ್ರೀ ಬಿ ಎ ಬೆಲ್ಲಿಯ [illegible] ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಕೆ [illegible] ನಿರ್ಣಯಗಳನ್ನು ಮಾಡಿ [illegible]

[illegible] ವಿಪ್ರೋಗಳಲ್ಲಿ ರಾಗಿ, ಜೋಳ [illegible] ಹೊರಗಿನ ಅಂಗ [illegible] ದೊರೆಯುತ್ತಿರುವ ಕಡ ಬೆರಕೆ [illegible] ಬೆಲೆ ಕೊಟ್ಟು ಕೊಳ್ಳ [illegible] ಕೂಲಿಗಾರರಿಗೂ ಮತ್ತು ಜನ [illegible] ಕಷ್ಟವಾಗಿದೆ ಆದುದರಿಂದ ಡಿ [illegible] ಕೂಡಲೇ ರಾಗಿ, ಜೋಳಗಳ [illegible] ಪ್ರಮಾಣದಲ್ಲಿ ಬೆಕರಿ ಮಾ [illegible] ಸರ್ಕಾರದವರು ಏರ್ಪಡಿಸಬೇ [illegible] ಧಾನ್ಯವನ್ನು ಕೊಳ್ಳಲು [illegible] ವಿಪ್ರೋಗಳಲ್ಲಿ ಈಗ ಮಾರುತ್ತಿ [illegible] ಪೂರ್ಣ ಪ್ರಮಾಣದಲ್ಲಿ [illegible] ಹಂಚಬೇಕು.

[illegible] ಪೌರಸಭೆಗೆ [illegible] ಹೋಗುವಂತೆಯೂ [illegible]

ಕನ್ನೂರಿನ ೩೮ ಉಪಾಧ್ಯಾಯರ ಸಸ್ಪೆಂಡ್

[illegible] ಜಿಲ್ಲಾ ಬೋರ್ಡಿನ [illegible] ಮುಖ್ಯಾಧಿಕಾರಿಗಳು [illegible] ಬೋರ್ಡಿನ ಪ್ರಾಥಮಿಕ ಶಾಲೆ [illegible] ಪರಿಣಾಮವಾ [illegible] ಬೋರ್ಡು ಅಧ್ಯಕ್ಷರು [illegible] ಉಪಾಧ್ಯಾಯರನ್ನು ಸಸ್ಪೆಂಡ್ [illegible] ಅಧಿಕಾರಿಗಳು [illegible] ಭೇಟಿ ಕೊಟ್ಟಾಗ ಹಲವು [illegible] ಗೈರುಹಾಜರಾಗಿದ್ದ [illegible] ಕೆಲವರು ತಮ್ಮ ಹಾಜ [illegible] ಪುಸ್ತಕದಲ್ಲಿ ಬರೆದಿರಲಿಲ್ಲ [illegible] ಕೆಲವು ಶಾಲೆಗಳೇ ಮುಚ್ಚಲ್ಪ [illegible] ವರದಿಯಾಗಿದೆ.

[illegible] ಮೈಸೂರಿನಿಂದ ಸಕ್ಕರೆ [illegible]

ರಿಜರ್ವ್ ಬ್ಯಾಂಕಿನಿಂದ ಸಂಸ್ಥಾನಕ್ಕೆ ಸಾಲ

ಸಂಸ್ಥಾನದ ವ್ಯವಸಾಯಾಭಿವೃದ್ಧಿ ಕಾರ್ಯಗಳಿಗಾಗಿ ರಿಜರ್ವ್ ಬ್ಯಾಂಕಿನವರು ಪ್ರತಿ ವರ್ಷವೂ ಒಂದು ಕೋಟಿ ರೂ. ಸಾಲ ಕೊಡಲು ಒಪ್ಪಿದ್ದಾರೆಂದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿರುವರು. ರೈತರು ಧಾನ್ಯವನ್ನು ಹೆಚ್ಚಾಗಿ ಬೆಳೆಯುವಂತೆ ಪ್ರೋತ್ಸಾಹಿಸುವ ಸಲುವಾಗಿ ಅವುಗಳನ್ನು ಕೊಳ್ಳುವ ಧಾರಣೆಯನ್ನು ಹೆಚ್ಚಿಸಲಾಗಿದೆಯೆಂದೂ, ಧಾನ್ಯದ ಪತಿಕೋಟಿ ಯಿಂದ ಜನರಿಗೆ ಉಂಟಾಗುವ ತೊಂದರೆಯನ್ನು ನಿವಾರಿಸಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದೆಂದೂ ಅವರು ಭರವಸೆ ಕೊಟ್ಟಿರುವರು.

ವಿನೋಬಾಭಾವೆಯವರಿಂದ ಔಷಧಿ ಸೇವನೆ

ಬಾಟ್ಯಾದ ಚಾಂಡಿಲ್ ಎಂಬಲ್ಲಿ ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿರುವ ಆಚಾರ್ಯ ವಿನೋಬಾಭಾವೆಯವರು ಔಷಧ ತೆಗೆದುಕೊಳ್ಳಬೇಕೆಂದು ಬಿಹಾರಿನ ಮುಖ್ಯ ಮಂತ್ರಿ ಶ್ರೀ ಕೃಷ್ಣಸಿನ್ಹ ಮತ್ತು ರೆವಿನ್ಯೂ ಸಚಿವ ಶ್ರೀ ಕೃಷ್ಣವಲ್ಲಭಸಹಾಯರವರು ಒತ್ತಾಯಪಡಿಸಿದುದರಿಂದ ಮೊನ್ನೆ ರಾತ್ರಿ ೧೦-೩೦ ಘಂಟೆ ಸಮಯದಲ್ಲಿ ಅವರು ಔಷಧಿಯನ್ನು ಸೇವಿಸಿದರೆಂದೂ, ಅವರು ಕಾಂಗ್ರೆಸ್ಸಿನ ಕಾರ್ಯದರ್ಶಿ [illegible] ತಿಳಿದು ಬಂದಿದೆ. [illegible] ಈ ದಿನ ಚಾಂಡಿಲ್‌ಗೆ ತೆರಳಿ ವಿನೋಬಾಜಿಯವರನ್ನು ಸಂದರ್ಶಿಸುವರೆಂದು ವರದಿಯಾಗಿದೆ.

ತಿರುವಾಂಕೂರು ಮಂತ್ರಿಗಳ ಮೇಲೆ ಲಂಚದ ಆಪಾದನೆ

ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಹಲವು ಸಚಿವರ ಮೇಲೆ ಲಂಚ, ಮುಂತಾದವುಗಳ ಹಲವು ದೂರುಗಳು ಅಖಿಲ ಭಾರತ ಕಾಂಗ್ರೆಸ್ಸಿಗೆ ಹೋಗಿದ್ದುದರಿಂದ ಆ ಬಗ್ಗೆ ಪರಿಶೀಲನೆ ನಡೆಸಲು ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಮಲ್ಲಯ್ಯನವರು ಈ ದಿನ ಅಲ್ಲಿಗೆ ತೆರಳುವರೆಂದು ಗೊತ್ತಾಗಿದೆ.

ಮಧ್ಯ ಸುಬ್ರಹ್ಮಣ್ಯ ಘಾಟಿ ಕ್ಷೇತ್ರದ ಚಿತ್ರಪಟ

ಘಾಟಿ ಸುಬ್ರಹ್ಮಣ್ಯ ಕ್ಷೇತ್ರದ ಮಹಾತ್ಮೆಗಳನ್ನು ವಿವರಿಸುವ ಸುಂದರವಾದ ಚಿತ್ರಪಟವೊಂದನ್ನು ರಾಜಧಾನಿಯ ಶಾರದಾ ಪ್ರೆಸ್ಸಿನವರು ಕಳುಹಿಸಿರುತ್ತಾರೆ. ಇದನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಇದರ ಬೆಲೆ ೦ ೪-೦.

ಟೆಲಿಫೋನ್ ದರ ಹೆಚ್ಚಿಸಿದ ಬಗ್ಗೆ ಪ್ರತಿಭಟನಾ ಸಭೆ

ಮೈಸೂರು ೨೨

ಟೆಲಿಫೋನಿನ ದರ ಮತ್ತು ಬಾಡಿಗೆಗಳನ್ನು ಕೇಂದ್ರ ಸರ್ಕಾರದವರು ಹೆಚ್ಚಿಸಿರುವ ಬಗ್ಗೆ ಪ್ರತಿಭಟನೆಯನ್ನು ಸೂಚಿಸಲು ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಆಶ್ರಯದಲ್ಲಿ ನಾಳೆ ೭ ಘಂಟೆಗೆ ಪೌರಹಾಲಿನಲ್ಲಿ ಟೆಲಿಫೋನ್ ಚಂದಾದಾರರ ಮತ್ತು ಸಾರ್ವಜನಿಕರ ಸಭೆಯೊಂದನ್ನು ಕರೆಯಲಾಗಿದೆ. ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸುವರು.

ವೀರಶೈವಮತ ತತ್ವದ ಉಪದೇಶ

ರಾಜಧಾನಿಯ ವೀರಶೈವ ಮಂಡಲಿಯ ಆಶ್ರಯದಲ್ಲಿ, ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯ ಕಟ್ಟಡದಲ್ಲಿ ಶ್ರೀಮನ್ನಿರುಪಾಧಿ ಶ್ರೀ ಗಿರಿ ಸೂರ್ಯ ಸಿಂಹಾಸನಾಧೀಶ್ವರರಾದ ಶ್ರೀ ಜಗದ್ಗುರು ಪಟ್ಟದ ಚನ್ನಬಸವರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಯವರು ಇಂದಿನಿಂದ ಪ್ರತಿ ಸಂಜೆ ೭ ಘಂಟೆಗೆ ವೀರಶೈವ ಮತತತ್ವದ ಬಗ್ಗೆ ಉಪದೇಶವನ್ನು ಮಾಡಲಿರುವರು. ಈ ಸಂದರ್ಭದಲ್ಲಿ ವಿದ್ವಾಂಸರುಗಳಿಂದ ಕೀರ್ತನೆ ಮತ್ತು ಕಾವ್ಯ ವಾಚನಗಳೂ ಜರುಗುವುವು.

ಕಾಂಗ್ರೆಸ್ ಅಧ್ಯಕ್ಷತೆಗೆ ಚನ್ನಬಸಪ್ಪನವರ ಹೆಸರು

ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷತೆಗೆ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಹೆಸರನ್ನು ಶ್ರೀಗಳಾದ ಎಂ. ಎಲ್. ನಂಜರಾಜೆ ಅರಸ್ ಮತ್ತು ಕೆ. ಎಸ್. ಕುಮಾರಸ್ವಾಮಿಯವರು ಸೂಚಿಸಿರುವರು. ಎ. ಐ. ಸಿ. ಸಿ. ಗೆ ಮೈಸೂರು ಪ್ರತಿನಿಧಿಯಾಗಿ ಶ್ರೀ ಹೆಚ್. ಸಿ. ದಾಸಪ್ಪನವರ ಹೆಸರನ್ನು ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ ಮತ್ತು ಡಿ. ಎಂ. ಸಿದ್ದಯ್ಯನವರು ಸೂಚಿಸಿರುವರು.

ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಶುಲ್ಕವನ್ನು ಹೆಚ್ಚಿಸಬೇಕೆಂದು ಆಲೋಚಿಸಿರುವ ಬಗ್ಗೆ ಮೊನ್ನೆ ಅಲ್ಲಿನ ಹಲವು ಕಾಲೇಜು ವಿದ್ಯಾರ್ಥಿಗಳು ತರಗತಿಗಳಿಗೆ ಹೋಗದೆ ಮುಷ್ಕರ ಹೂಡಿದ್ದರೆಂದು ಗೊತ್ತಾಗಿದೆ.

-ಚರ್ಚಿಲ್ಲರವರಿಗೆ ನ್ಯಾಬಲ್ಸರ ಶಾಂತಿ ಬಹುಮಾನ

ನೆನ್ನೆ ವಾಸ್ಕೋವಿನಲ್ಲಿ ರಷ್ಯದ ನಾಯಕ ಸ್ಟಾಲಿನ್ನರ ೭೪ ನೇ ಜನ್ಮ ದಿನೋತ್ಸವವು ನಡೆದ ಸಂದರ್ಭದಲ್ಲಿ ಪ್ರಪಂಚದ ಹಲವು ಮಂದಿ ಪ್ರಮುಖ ವ್ಯಕ್ತಿಗಳಿಗೆ ಶಾಂತಿ ಪಾರಿತೋಷಕವನ್ನು ನೀಡಲಾಯಿತು. ಅಖಿಲ ಭಾರತದ ಶಾಂತಿ ಸಮಿತಿಯ ಅಧ್ಯಕ್ಷರಾದ ಡಾ॥ ಕಿಚ್ಲುರವರಿಗೂ ಒಂದು ಬಹುಮಾನವು ದೊರೆತಿದೆ. ಅವರಿಗೆ ಒಂದು ಯೋಗ್ಯತಾಪತ್ರ (ಡಿಪ್ಲೊಮಾ), ಒಂದು ಚಿನ್ನದ ಪದಕ ಮತ್ತು ಒಂದು ಲಕ್ಷ ರೂಬೆಲ್ಲು [ಸುಮಾರು ಒಂದೂಕಾಲು ಲಕ್ಷರೂ] ಬಹುಮಾನ ದೊರೆಯಲಿದೆ. ಕಳೆದ ಮೂರು ವರ್ಷದಿಂದಲೂ ಈ ಪಾರಿತೋಷಕವನ್ನು ಸ್ಟಾಲಿನ್ನರ ವರ್ಧಂತಿ ಸಂದರ್ಭದಲ್ಲಿ ಕೊಡಲಾಗುತ್ತಿದೆ. ಬಹುಮಾನವನ್ನು ಸ್ವೀಕರಿಸಲು ಡಾ॥ ಕಿಚ್ಲುರವರನ್ನು ಮಾಸ್ಕೋವಿಗೆ ಆಹ್ವಾನಿಸಲಾಗಿದೆ. ಅವರು ಅಲ್ಲಿಗೆ ಹೋಗಲು ಸಾಧ್ಯವಾಗದಿದ್ದಲ್ಲಿ ಒಬ್ಬ ವಿಶೇಷ ಪ್ರತಿನಿಧಿಯ ಮೂಲಕ ಅದನ್ನು ಭಾರತಕ್ಕೆ ಕಳುಹಿಸಲಾಗುವುದು.

ಬ್ರಿಟಿಷ್ ರಾಣಿಯ ಮೇಲೆ ದಾವಾ

ಇಟಲಿಯ ಮಿಲಾನ್ ನಗರದ ದಂಪತಿಗಳಿಬ್ಬರು ತಮ್ಮ ಭವನವನ್ನು ಬ್ರಿಟಿಷ್ ರಾಯಭಾರ ಕಛೇರಿಗಾಗಿ ಕೊಟ್ಟು, ನಂತರ ಅದನ್ನು ಖಾಲಿ ಮಾಡಿದಾಗ ಭವನವು ವಾಸಕ್ಕೆ ಯೋಗ್ಯವಾದ ರೀತಿಯಲ್ಲಿಲ್ಲದೆ ಇದ್ದುದನ್ನು ದುರಸ್ತು ಪಡಿಸಲು ೫ ಲಕ್ಷ ಲೈರುಗಳು ವೆಚ್ಚವಾಗಿರುವುದೆಂದು ತಿಳಿಸಿ, ಆ ಹಣಕ್ಕಾಗಿ ಬ್ರಿಟಿಷ್ ಸರ್ಕಾರದ ಮೇಲೆ ದಾವಾ ಹೂಡಿ, ಅದರಲ್ಲಿ ಅಲ್ಲಿನ ನೂತನ ರಾಣಿ ಎಲಿಜಬೆತ್ತರನ್ನೂ ಪ್ರತಿವಾದಿಯಾಗಿ ಸೇರಿಸಿರುವರೆಂದು ಗೊತ್ತಾಗಿದೆ.

ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಡೈರೆಕ್ಟರುಗಳು

[illegible]

ಕೃಷ್ಣಮೂರ್ತಿಪುರದಲ್ಲಿ ಕಳ್ಳತನಗಳು

[illegible]

ಬಂಡವಾಳಶಾಹಿಗೂ ಕಮ್ಯೂನಿಸಂಗೂ ಮಧ್ಯ ಮಾರ್ಗ ಸಹಕಾರ

ಬಂಡವಾಳಶಾಹಿಯನ್ನು ಖಂಡಿಸಲಾಗುತ್ತಿದೆಯಾದರೂ ಭಾರತೀಯರು ಕಮ್ಯೂನಿಸಂ ತತ್ವವನ್ನು ಒಪ್ಪುವುದಿಲ್ಲವೆಂದೂ, ಇವೆರಡು ತತ್ವಗಳಿಗೂ ಮಧ್ಯಸ್ಥವಾದ ಸಹಕಾರ ತತ್ವದ ಸಹಾಯದಿಂದ ಜನರು ತಮ್ಮ ಅಭ್ಯುದಯವನ್ನು ಸಾಧಿಸಿಕೊಳ್ಳಬಹುದೆಂದೂ ಸಹಕಾರ ತತ್ವದಲ್ಲಿ ಬಂಡವಾಳಶಾಹಿಯಲ್ಲಿನ ಉತ್ತಮ ಗುಣಗಳೆಲ್ಲ ಸಮಾಜವಾದದ ಎಲ್ಲ ತತ್ವಗಳನ್ನೂ ಅದು ಒಳಗೊಂಡಿರುವುದಾಗಿಯೂ ಮದ್ರಾಸ್ ಸಂಸ್ಥಾನದ ೨೪ನೇ ಸಹಕಾರ ಸಮ್ಮೇಳನದ ಆರಂಭೋತ್ಸವವನ್ನು ಮೊನ್ನೆ ನೆರವೇರಿಸುತ್ತಾ ಮುಖ್ಯ ಮಂತ್ರಿ ರಾಜಾಜಿಯವರು ತಿಳಿಸಿರುವರು

ವೈಜಯಂತಿಮಾಲಾರವರ ನೃತ್ಯ

ಮೈಸೂರು ಶಾಸ್ತ್ರಾರ್ಟ್ಸ್ ಕ್ಲಬ್ಬಿನ ಸುವರ್ಣ ಮಹೋತ್ಸವದ ಸಹಾಯಾರ್ಥವಾಗಿ ನೆನ್ನೆ ಕ್ರಾಫರ್ಡ್ ಭವನದಲ್ಲಿ ಮದರಾಸಿನ ನಾಟ್ಯಕಲಾ ಭೂಷಣ ವೈಜಯಂತಿಮಾಲಾ ಮತ್ತು ಮಂಡಲಿಯವರ ನೃತ್ಯವು ಬಹಳ ಮನೋಹರವಾಗಿ ನಡೆಯಿತು ದೇವೀ ಪೂಜಾ, ಮಲಬಾರ್ ನೃತ್ಯ, ಜತೀಸ್ವರಂ, ವಸಂತ ನಟನ, ಸ್ವರಜಿತ್, ಮಾರ್ವಾಡಿ ರಂಗನ್ ಚಿಪ್ಪಿ, ಹಾವಾಡಿಗ ಮುಂತಾದ ದೃಶ್ಯಗಳು ನೇತ್ರಾನಂದಕರವಾಗಿ ಅಭಿನಯಿಸಲ್ಪಟ್ಟವು ಭವನದ ತುಂಬಾ ಸ್ತ್ರೀ ಪುರುಷರು ಕಿಕ್ಕಿರಿದು ನೆರೆದಿದ್ದರು ಶ್ರೀ ಎ ವೆಂಕಟೇಶಯ್ಯನವರು ಮಹೋತ್ಸವ ಸಮಿತಿಯ ಪರವಾಗಿ ವೈಜಯಂತಿಮಾಲಾ, ಅವರ ತಂದೆ ಶ್ರೀ ಎ ಡಿ ರಾಮನ್ ಮತ್ತು ಅವರ ಅಜ್ಜಿ ಶ್ರೀಮತಿ ಯದುಗಿರಿಯಮ್ಮಾಳ್‌ರವರಿಗೂ ಇತರರಿಗೂ ಧನ್ಯವಾದಗಳನ್ನು ಸಲ್ಲಿಸಿದರು

ಮಹಾರಾಜಾ ಹೈಸ್ಕೂಲಿನ ದಿನಾಚರಣೆ

ನಗರದ ಮಹಾರಾಜಾ ಹೈಸ್ಕೂಲಿನ ದಿನಾಚರಣೆಯು ನೆನ್ನೆ ಈ ದಿನ, ನಾಳೆ, ಶಾಲಾ ಕಟ್ಟಡದಲ್ಲಿ ನೆರವೇರಿಸಲ್ಪಡುವುದು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಕೃಷ್ಣಸ್ವಾಮಿ ಅಯ್ಯಂಗಾರ್ಯರು ನೆನ್ನೆ ಸಂಜೆ ಅದರ ಆರಂಭೋತ್ಸವವನ್ನು ನೆರವೇರಿಸಿದರು ನಾಳೆ ಸಂಜೆ ೫ ಗಂಟೆಗೆ ನಡೆಯುವ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಸ್ ಕಾಳಪ್ಪನವರು ವಹಿಸುವರು

ನದಿಗಳಲ್ಲಿ ಶ್ರೀರಾಮುಲು ರವರ ಅಸ್ಥಿ ವಿಸರ್ಜನೆ

ಆಂಧ್ರ ಪ್ರಾಂತಕ್ಕಾಗಿ ಉಪವಾಸ ಮಾಡಿ ಮಡಿದ ಶ್ರೀರಾಮುಲುರವರ ಅಸ್ಥಿಶೇಷವನ್ನು ಆಂಧ್ರ ದೇಶದ ಜೀವ ನದಿಗಳಲ್ಲಿ ಇದೇ ತಿಂಗಳು ೨೪ನೇ ತಾ॥ ವಿಸರ್ಜನೆ ಮಾಡಲಾಗುವುದು

ಫರೂಕ್ ಮತ್ತು ಅಮಾನುಲ್ಲಾ ಒಂದೇ ಕಡೆ ವಾಸ

ಅಫ್ಘಾನಿಸ್ತಾನದ ಮಾಜಿ ದೊರೆ ಅಮಾನುಲ್ಲಾ ಮತ್ತು ಈಜಿಪ್ಟಿನ ಫರೂಕರು ರೋಮಿನ ಬಳಿ ಇರುವ ಒಂದೇ ಸ್ಥಳದಲ್ಲಿ ಅಕ್ಕಪಕ್ಕದಲ್ಲೇ ವಾಸಿಸುತ್ತಿರುವರು ಅವರಿಬ್ಬರೂ ಆಗಾಗ್ಗೆ ಭೇಟಿ ಮಾಡಿ ಸಂಜೆ ಹೊತ್ತು ಹವಾಕ್ಕಾಗಿ ಹೋಗುವರು ಮತ್ತು ಆಟಗಳನ್ನೂ ಆಡುವರು

ಹರಿಕಥಾ ಕಾಲಕ್ಷೇಪ

ಮೈಸೂರು ಲಷ್ಕರ್ ಮೊಹಲ್ಲಾ ಕೊಳದ ಸಂದಿಯಲ್ಲಿರುವ ಜ ವ ಳಿ ಮತ್ತು ನೂಲಂಗಡಿ ಬಿ ಕೆಂಚಪ್ಪ ಸನ್ಸ್‌ರವರ ಮನೆ ಮುಂಭಾಗದಲ್ಲಿ ಹಾಕಿರುವ ಚಪ್ಪರದಲ್ಲಿ ಈ ರಾತ್ರಿ ೯ ಘಂಟೆಗೆ ಬೆಂಗಳೂರಿನ ಶ್ರೀ ಬಿ ರಾಮಸ್ವಾಮಿ ನಾಯ್ಡು ರವರಿಂದ ಭೂ ಕೈಲಾಸ ಎಂಬ ಹರಿಕಥೆ ನಡೆಯುತ್ತೆ

ಚಿಕ್ಕಬಳ್ಳಾಪುರ ಜಾತ್ರೆಗೆ ಹೋಗುವ ಜನರಿಗೆ ಕಾಲರಾ ಇನಾಕ್ಯುಲೇಷನ್

ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಲೂರಿನಲ್ಲಿ ಇದೇ ೩೧ನೇ ತಾ॥ ನಿಂದ ಆರಂಭವಾಗುವ ಜಾತ್ರೆಯಲ್ಲಿ ಕಾಲರಾ ವ್ಯಾಧಿಯು ಹರಡಬಹುದೆಂಬ ಭೀತಿಯಿರುವುದರಿಂದ ಅಲ್ಲಿಗೆ ಹೋಗುವವರು ಒ[illegible]ದ ವರಕ್ಕೆ ಮುಂಚೆ ಇನಾಕ್ಯುಲೇಷನ್ ಮಾಡಿಸಿಕೊಂಡು ಸಟಿಫಿಕೇಟನ್ನು ಪಡೆಯಬೇಕೆಂದೂ ಜಿಲ್ಲೆಯ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲೂ ಉಚಿತವಾಗಿ ಇನಾಕ್ಯುಲೇಷನ್ ಮಾಡಲಾಗುವುದೆಂದೂ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿಗಳು ಸೂಚನೆಯಿತ್ತಿರುವರು

FOR QUICK SALE

One German Camera fitted with 4 5 Radionar lens in leather case Accessories — One Film pack adopter and 3 slide All in good condition Contact A G N 1082 Chamraja Agrahar Mysore

ಭಾವಿಗಳಲ್ಲಿ ಹೆಂಗಸಿನ ರುಂಡ ಮುಂಡಗಳು

ಶಂಕರನ್‌ಕೋವಿಲ್ ತಾಲ್ಲೂಕಿನ ನಾಗಡಿಹಳ್ಳಿಯ ಭಾವಿಯೊಂದರಲ್ಲಿ ರುಂಡವಿಲ್ಲದ ಶರೀರವೊಂದು ಸಿಕ್ಕಿದ ಬಗ್ಗೆ ಪೊಲೀಸರು ನಡೆಸಿದ ತನಿಖೆಯ ಪರಿಣಾಮವಾಗಿ ಮತ್ತೊಂದು ಭಾವಿಯಲ್ಲಿ ಹೆಂಗಸಿನ ರುಂಡವೂ, ಇನ್ನೂ ಒಂದು ಭಾವಿಯಲ್ಲಿ ಸೀರೆಯೂ ದೊರೆತುವೆಂತಲೂ, ಅದು ಕೊಲೆಯು ಪ್ರಕರಣವಾಗಿರಬೇಕೆಂದೂ ಊಹಿಸಲಾಗಿದೆ ಹಲವಾರು ತಿಂಗಳಿಂದ ತಪ್ಪಿಸಿಕೊಂಡಿದ್ದ ತಿರುಚೆಂದೂರಿನ ಸಮೀಪದ ಪಕ್ಕೆ ಸೇರಿದ ಶಾಂತಿ ಎಂಬ ಹೆಂಗಸಿನ ದೇಹವು ಅದೆಂದು ಹೇಳಲಾಗಿದೆ ಹಲವು ತಿಂಗಳ ಹಿಂದೆ ಆಕೆ ಮಣಿಯನ್ ಎಂಬುವನೊಡನೆ ಪ್ರೀತಿ ಬೆಳೆಸಿ ಅವಳು ಓಡಿಹೋದಳೆಂದೂ, ೨॥ ತಿಂಗಳ ನಂತರ ಅವನನ್ನು ತ್ಯಜಿಸಿ, ಆಕೆಯು ತಿರುನಲ್ವೇಲಿಯಲ್ಲಿ ವೇಶ್ಯಾ ವೃತ್ತಿಯಲ್ಲಿ ತೊಡಗಿದಳೆಂದೂ ಅನಂತರ ಪುನಃ ಪರಮಶಿವನನ್ನು ಕೂಡಿಕೊಂಡಳೆಂದೂ ಆಕೆಯ ಈ ವರ್ತನೆಯನ್ನು ಕಂಡು ಅವನಿಗೆ ಬೇಸರಿಕೆ ಹುಟ್ಟಿ, ಅವನು ತನ್ನ ಚಿಕ್ಕಪ್ಪನೊಡನೆ ಕಳೆದ ನವೆಂಬರ್ ೧೧ನೇ ತಾ॥ ರಾತ್ರಿ ಆಕೆಯನ್ನು ಸಿನಿಮಾಕ್ಕೆ ಕರೆದ ಕೊಂಡುಹೋಗುವ ನೆಪ ಹೇಳಿ ಒಬ್ಬಂಟಿ ಮಾರ್ಗದಿಂದ ಹೊಡೆದು ಕೊಂದರೆಂದೂ ಹೇಳಲಾಗಿದೆ ಈ ಕೃತ್ಯವನ್ನು ಮಾಡಿದ ನಂತರ ಪರಮಶಿವನ್ ತನ್ನ ಪತ್ನಿಯೊಡನೆ ವಾಸಿಸಲು [illegible] ನಕ್ಕೆ ತೆರಳಿದನು. ಪೊಲೀಸರು ಅವನನ್ನೂ ಅವನ ಚಿಕ್ಕಪ್ಪನನ್ನೂ ದಸ್ತಗಿರಿ ಮಾಡಿರುವರೆಂದೂ ವರದಿಯಾಗಿದೆ

ಉಪನ್ಯಾಸ

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನವರ ಕೋರಿಕೆಯ ಮೇಲೆ ಶ್ರೀಮತಿ ಕುಂತಳಮ್ಮನವರ ಸ್ಮಾರಕೋಪನ್ಯಾಸದ ಅಂಗವಾಗಿ ನಾಳೆ ಸಂಜೆ ೫-೩೦ ಗಂಟೆಗೆ ಲಕ್ಷ್ಮೀಪುರದಲ್ಲಿರುವ ಭಗಿನೀ ಸೇವಾ ಸಮಾಜದಲ್ಲಿ ಮಹಾರಾಜಾ ಕಾಲೇಜಿನ ಶ್ರೀ ಎಂ ವಾಮನಾಚಾರ್ಯರು ಭರತ ಖಂಡದ ಸಂತ ಮಹಿಳೆಯರು ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

MATHEMATICS TUITION

Will be given to INTERMEDIATE & DEGREE STUDENTS by an experienced teacher For terms apply sharp to 'MATHS' 321 D Subbiah Road Mysore

Edited, Printed and Published by A R Nagarajan at Sadhvi Press, D Subbiah Road, Mysore

ಹಾವು ಕಡಿದವನಿಗೆ ಚಿಕಿತ್ಸೆ

ತುಮಕೂರಿನ ಸಾರ್ವಜನಿಕ ಆಸ್ಪತ್ರೆಯ ಶೌಚಗಾರ ರೇವಯ್ಯ ಎಂಬಾತನ ಕಣ್ಣನ್ನು ಕಳೆದ ೧೪ನೇ ತಾ॥ ನಾಗರಹಾವು ಕಡಿದು ಅವನಿಗೆ ಪ್ರಜ್ಞೆ ತಪ್ಪಿತ್ತೆಂದೂ, ಅವನನ್ನು ಸೋಮೇಶ್ವರದಲ್ಲಿರುವ ವಿಷವೈದ್ಯ ಕಾಳೇಗೌಡ ದಫೇದಾರ್ ಶ್ರೀ ಗರುಡಯ್ಯನವರ ಬಳಿ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಲಾಯಿತೆಂದೂ, ಈಗ ಅವನು ಬದುಕಿರುವನೆಂದೂ ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಸಂತಾಪ ಸೂಚಕ ಸಭೆ

ರಾಜಧಾನಿಯ ಚಾಮರಾಜ ರಸ್ತೆಯಲ್ಲಿರುವ ಧರ್ಮಪ್ರವರ್ತ ಗೊಂಬೆ ರಂಗಯ್ಯನವರ ಚಿತ್ತರಂಜನ ಮಹಡಿಯಲ್ಲಿರುವ ಸರ್ವಜನ ವಿದ್ಯಾರ್ಥಿ ನಿಲಯದಲ್ಲಿ ನೆನ್ನೆ ಸಂಜೆ ಶಾ॥ ಬಿ ಜಿ ದಾಸ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪೊಟ್ಟಿ ಶ್ರೀರಾಮುಲು ರವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು

ಇರುವಾಲದ ರಸ್ತೆಯಲ್ಲಿ ಒಂದೇ ಮಾರ್ಗದ ಸಂಚಾರ

ರಾಜಧಾನಿಯ ದೇವರಾಜ ಮಾರ್ಕೆಟ್ಟಿನಿಂದ ನಲ್ಲಪ್ಪನ ಛತ್ರದ ವರೆಗೆ ಇರುವಾಲದ ರಸ್ತೆಯಲ್ಲಿ ಹೆಚ್ಚು ವಾಹನಗಳ ಓಡಾಟದಿಂದ ಜನರಿಗೆ ತೊಂದರೆ ಮತ್ತು ಅಪಾಯವಾಗದಿರುವಂತೆ ಮಾಡಲು ಪೂರ್ವದಿಂದ ಪಶ್ಚಿಮಕ್ಕೆ ಒಂದು ಮಾರ್ಗದ ಸಂಚಾರವನ್ನು ಏರ್ಪಡಿಸುವ ಬಗ್ಗೆ ಸಾರ್ವಜನಿಕರು ತಮ್ಮ ಸಲಹೆಯನ್ನಾಗಲಿ, ಆಕ್ಷೇಪಣೆಯನ್ನಾಗಲಿ ಬರುವ ತಿಂಗಳು ೧೦ನೇ ತಾ॥ ನೊಳಗೆ ತಮಗೆ ಕಳುಹಿಸಬಹುದೆಂದು ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಎಸ್ ಸ್ವಾಮಿನಾಥನ್‌ರವರು ಸೂಚಿಸುತ್ತಾರೆ

ಯಾವ ಧ್ಯೇಯವನ್ನೇ ಆಗಲಿ ಸಾಧಿಸಲು ಯುದ್ಧವು ಮಾರ್ಗವಲ್ಲವೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ಶ್ರೀ ರಾಮ ಸಂಗೀತ ವಿದ್ಯಾಲಯ

1064-1 ಚಾಮರಾಜ ಅಗ್ರಹಾರ (ಮಸೀದಿಯ ಎದುರಿಗೆ)

ನೇಟ್ಕಿಂತ ವಿದ್ಯಾಲಯದಲ್ಲಿ ಬಾಯಿ ಹಾಡುಗಾರಿಕೆ ಮತ್ತು ಪಿಟೀಲು ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ ಕೃಷ್ಣಮೂರ್ತಿ
ವ್ಯವಸ್ಥಾಪಕ

ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

ಕ್ರಿಸ್ಮಸ್ ಹಬ್ಬಕ್ಕಾಗಿ ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,
ಚೋಳಿ ಪೀಸುಗಳು ಪೂನಾ, ನಾಗಪೂರ್ ಸೀರೆಗಳಿಗೆ (ಫೋನ್ ನಂ 446)

★ M. V. ಬೋಜಯ್ಯ ಶ್ರೇಷ್ಠಿ ಬಿ ಎ, ಇಂದಿರು ಬ್ಯಾಂಕ್ ಎದುರು ಮೈಸೂರು

ರಿ। ನಂ ೧೯೬ ॥ವಂದೇ ಮಾತರಂ॥ ... ಪ್ರತಿ ೨ ಕಾಸು

ಸಾಧ್ವಿ

ಸಂಪುಟ ೧೧] ಮಂಗಳವಾರ ೨೩-೧೨-೧೯೫೨ [ಸಂಚಿಕೆ ೧೨೧

ಜಪಾನ್ ಕಾರ್ಖಾನೆ ಸಿಡಿತದಲ್ಲಿ ೩೦ ಜನರ ಮರಣ

ಜಿ. ಹೆಚ್. ವೀರಣ್ಣ, ಸುಂದರಮ್ಮ ಮತ್ತು ಜಯಮ್ಮನವರಿಗೆ ಸನ್ಮಾನ

ಪುರಭವನದಲ್ಲಿ ಸಮಾರಂಭ

ಮೈಸೂರು ೨೪

ಶ್ರೀ ಚನ್ನಬಸವೇಶ್ವರಸ್ವಾಮಿ ... ಸಂಸ್ಥೆಯ ಮಾಲೀಕರೂ, ವಿಧಾನ ಪರಿಷತ್ತಿನ ಸದಸ್ಯರೂ ಆದ ನಾಟಕರತ್ನ ಶ್ರೀ ಜಿ. ಹೆಚ್. ವೀರಣ್ಣನವರು, ಪ್ರಖ್ಯಾತ ನಾಟಕ ಕಲಾವಿದೆ, ಶ್ರೀಮತಿ ಜಿ. ಸುಂದರಮ್ಮನವರು ... ಪ್ರಭಾಷಾ ಕಾರೆ, ಶ್ರೀಮತಿ ಬಿ. ಜಯಮ್ಮನವರ ಗೌರವಾರ್ಥವಾಗಿ ... ಸಂಜೆ ಪುರಭವನದಲ್ಲಿ ಭಾರಿ ಸಮಾರಂಭವೊಂದು ಏರ್ಪಾಡಾಗಿದ್ದಿತು. ... ಸಭಾಧ್ಯಕ್ಷ ಶ್ರೀ ಹೆಚ್. ಸಿದ್ದ...ನವರು ಅಧ್ಯಕ್ಷತೆ ವಹಿಸಿದ್ದರು.

ಕುಮಾರಿ ಎಂ. ಎಸ್. ಸೀತಾದೇವಿಯವರಿಂದ ಸ್ವಾಗತ ಗೀತೆಯೂ ಶ್ರೀ... ವಾದ ಜಿ. ವಿ. ಸ್ವರ್ಣಮ್ಮ ಮತ್ತು ... ಮಾಲತಮ್ಮನವರಿಂದ ಕರ್ನಾಟಕ ಗಾನವೂ, ಶ್ರೀಮತಿ ಚೊಕ್ಕಮ್ಮನವರ ಮಂಡಲಿಯವರಿಂದ ಸಂಗೀತವೂ, ಕುಮಾರಿ ಶಕುಂತಲಾ ಮತ್ತು ... ವರಿಂದ ನೃತ್ಯವೂ ಆದ ನಂತರ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎ. ... ರಾಯರು ಅತಿಥಿಗಳನ್ನು ಪರಿಚಯ ಮಾಡಿಕೊಟ್ಟರು. ... ಗೆ ಯಶಸ್ಸನ್ನು ಕೋರಿ ಬಂದಿದ್ದ ... ಗಳನ್ನು ಶ್ರೀ ಬಿ. ಎಸ್. ಸುಬ್ಬ...ರವರು ಓದಿದರು.

... ಸೀತಾರಾಮಯ್ಯನವರು ಶ್ರೀ ಜಿ. ಹೆಚ್. ವೀರಣ್ಣನವರಿಗೂ, ಶ್ರೀ ... ಕೃಷ್ಣಮೂರ್ತಿರಾಯರು ಶ್ರೀಮತಿ ... ಸುಂದರಮ್ಮನವರಿಗೂ, ಶ್ರೀ ಎ. ವೆಂ...ಮ್ಮನವರು ಶ್ರೀಮತಿ ಬಿ. ಜಯಮ್ಮನವರಿಗೂ ಬಿನ್ನವತ್ತಳೆಗಳನ್ನು ಓದಿ... ದರು. ಶ್ರೀಮತಿಗಳಾದ ಸುಂದ... ಜಯಮ್ಮ ಮತ್ತು ಗುಬ್ಬಿ ಕಂ... ಸ್ವರ್ಣಮ್ಮ ಮತ್ತು ಮಾಲತ... ವರುಗಳಿಗೆ ರತ್ನಹಾರಗಳನ್ನೂ ... ಸಲಾಯಿತು.

... ಪ್ರದರ್ಶಕರವರ ಶ್ರೀ ಗೋವಿಂ... ಮುದಲಿಯಾರರು ಶ್ರೀಮತಿ ... ಜರವರ ಭಾವಚಿತ್ರವನ್ನು ಶ್ರೀ ... ನವರಿಗೆ ಸಮರ್ಪಿಸಿದರು. ಶ್ರೀ ... ರವರು ಭಾಷಣ ಮಾಡಿ, ನಾಟಕ ಮತ್ತು ಚಿತ್ರ ಕಲೆಗಳಿಗೆ ಶ್ರೀ ವೀರಣ್ಣನವರು ನೀಡುತ್ತಿರುವ ಪ್ರೋತ್ಸಾಹ... ಮೆಚ್ಚುಗೆಯನ್ನು ಸೂಚಿಸಿದರು.

... ಫುಟ್‌ಬಾಲ್ ಸಂಸ್ಥೆಗೆ ಶ್ರೀ ... ರಣ್ಣನವರು ಅರ್ಪಿಸಿದ ಒಂದು ... ಪರ್ಯಾಯ ಪಾರಿತೋಷಕವ... ಪರವಾಗಿ ಶ್ರೀ ಡಿ. ರಾಮ... ರವರು ಕೃತಜ್ಞತೆಯಿಂದ ಸ್ವೀಕರಿಸಿದರು.

ಶ್ರೀ ವೀರಣ್ಣನವರು ಈ ಸಮಾರಂಭಕ್ಕಾಗಿ ... ವಾದವನ್ನು ಸೂಚಿಸಿ, ಕಳೆದ ... ವರ್ಷಗಳ ಹಿಂದೆ ತಮ್ಮ ... ನೇ ... ಜೀವನೋಪಾಯಕ್ಕಾಗಿ ... ಸಂಬಳದ ಮೇಲೆ ಗುಬ್ಬಿ ... ಶ್ರೀ ಚಂದಣ್ಣನವರಲ್ಲಿ ಸೇ... ಜನರ ಪ್ರೀತಿ ವಿಶ್ವಾಸಗಳಿಂದಲೂ, ... ಜನರ ಮತ್ತು ಪ್ರಭುಗಳ ಪ್ರೋತ್ಸಾಹದಿಂದಲೂ ಕ್ರಮಕ್ರಮವಾಗಿ ಅಭಿವೃದ್ಧಿಗೆ ಬಂದು ದೇಶ, ಭಾಷೆ ಮತ್ತು ರಂಗಭೂಮಿಯ ಸೇವೆ ಸಲ್ಲಿಸಲು ಅವಕಾಶ ದೊರೆಕಿರುವುದಕ್ಕಾಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ನಾಟಕ ಕಲೆಗೆ ತಮ್ಮ ಜೀವಮಾನವನ್ನೆಲ್ಲಾ ಮುಡಿಪಾಗಿಟ್ಟಿರುವುದಾಗಿ ತಿಳಿಸಿದರು. ಇದಕ್ಕೆ ಮಹಾಜನರು ಹೆಚ್ಚು ಹೆಚ್ಚಾದ ನೆರವನ್ನು ನೀಡಬೇಕೆಂದೂ ಕೋರಿದರು.

ಶ್ರೀಮತಿ ಸುಂದರಮ್ಮನವರೂ ಸಹ ಬಿನ್ನವತ್ತಳೆಗಾಗಿ ತಮ್ಮ ವಂದನೆಗಳನ್ನು ಸಲ್ಲಿಸಿದರು.

ಶ್ರೀಮತಿ ಬಿ. ಜಯಮ್ಮನವರು ತಮ್ಮ ಭಾಷಣದಲ್ಲಿ ತಾವು ಮಲೆನಾಡಿನಲ್ಲಿ ಜನಿಸಿ ಒಂದು ಕಾಡುಮಲ್ಲಿಗೆಯಂತೆ ಇದ್ದದಾಗಿಯೂ ಶ್ರೀ ವೀರಣ್ಣನವರ ಸಹಾಯದಿಂದ ತಮಗೆ ಸಂಗೀತ ಮತ್ತು ನಾಟ್ಯ ಕಲೆಗಳಲ್ಲಿ ಉತ್ತಮ ಶಿಕ್ಷಣ ದೊರೆತು ಇಂದಿನ ಯಶಸ್ಸಿಗೆ ಅದೇ ಮುಖ್ಯ ಕಾರಣವಾಯಿತೆಂದೂ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅತಿಥಿಗಳ ಕಲಾ ನೈಪುಣ್ಯತೆ ಮತ್ತು ದಾನ ಧರ್ಮಗಳನ್ನು ಕೊಂಡಾಡಿ ಅವರಿಗೆ ಇನ್ನೂ ಹೆಚ್ಚಿನ ಮಂಗಳವುಂಟಾಗಲೆಂದು ಹಾರೈಸಿದರು. ಚಿತ್ರರಂಗದಿಂದ ಸಮಾಜದ ಅವನತಿಗೆ ಅವಕಾಶವಾಗದೇ, ಜನರ ನೀತಿ ಮಟ್ಟವು ಹೆಚ್ಚುವಂತಾಗಲೆಂದು ಹಾರೈಸಿದರು.

ನಾಟ್ಯಕಲಾ ವಿಶಾರದ ಶ್ರೀ ಎಂ. ಸಿ. ಮಹದೇವಸ್ವಾಮಿಯವರಿಂದ ಧನ್ಯವಾದಗಳಾದ ನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಹೈದರಾಬಾದು ವಿಭಜನೆಗೆ ನಿಜಲಿಂಗಪ್ಪನವರ ಸಲಹೆ

ಹೈದರಾಬಾದು ಸಂಸ್ಥಾನವನ್ನು ಒಡೆದು ಹಾಕಿದರೆ ಅದರಿಂದ ದಕ್ಷಿಣ ಭಾರತದ ಭಾಷಾವಾರು ಪ್ರಾಂತಗಳ ಸಮಸ್ಯೆಯು ಒಂದೇ ಸಾರಿಗೆ ಪರಿಹರಿಸಿದಂತಾಗುವುದೆಂದು ... ಘಟಕದ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿರುತ್ತಾರೆ. ದಕ್ಷಿಣ ಭಾರತ ಭಾಷಾ ಪ್ರಾಂತ ಸಮಸ್ಯೆ ಬಗ್ಗೆ ಕೂಡಲೇ ... ಸಮಿತಿಗಳ ನೇಮಕವು ಅಗತ್ಯವೆಂದು ಅವರು ಸೂಚಿಸಿರುವರು. ಹೊಸ ಭಾಷಾ ಪ್ರಾಂತಗಳ ರಚನೆಯಿಂದ ಪಂಚ ವಾರ್ಷಿಕ ಯೋಜನೆಯ ಕೆಲಸಕ್ಕೆ ಅಡಚಣೆಯಾಗುವುದರ ಬದಲು ಅದು ... ಹೆಚ್ಚಿಗೆ ಯಶಸ್ವಿಯಾಗಲು ಸಹಾಯಕವಾಗುವುದೆಂದು ಅವರು ತಿಳಿಸಿರುವರು.

ಕೌಟಿಲ್ಯ ಮತ್ತು ಗಾಂಧಿಯವರಿಗೆ ಹೋಲಿಕೆ

ಕೌಟಿಲ್ಯ ಮಂಡಲಿಯಲ್ಲಿ ಎ. ಜಿ. ರಾಮಚಂದ್ರರಾಯರ ಭಾಷಣ

ಮೈಸೂರ ೨೪

ನೆನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಕೌಟಿಲ್ಯ ಮಂಡಲಿಯ ಪ್ರಾರಂಭ ಭಾಷಣವನ್ನು ವಿದ್ಯಾಸಚಿವರಾದ ಶ್ರೀ ಎ. ಜಿ. ರಾಮಚಂದ್ರರಾಯರು ಮಾಡಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಸ್ವಾಗತ ಭಾಷಣಮಾಡಿ ಕಳೆದ ನಾಲ್ಕು ವರ್ಷಗಳಿಂದಲೂ ಕೌಟಿಲ್ಯ ಮಂಡಲಿಯು ನಡೆಸುತ್ತಿರುವ ಕಾರ್ಯಗಳನ್ನು ವಿವರಿಸಿದರು.

ವಿದ್ಯಾಸಚಿವರು ಭಾಷಣಮಾಡುತ್ತಾ ಭಾರತದಲ್ಲಿ ಹಿಂದೆ ಅವ್ಯವಸ್ಥೆ ತೋರಿದ್ದ ಕಾಲದಲ್ಲಿ ಕೌಟಿಲ್ಯನು ಮುಂದೆ ಬಂದು, ನಿಸ್ವಾರ್ಥ ಸೇವೆ ಸಲ್ಲಿಸಿದನೆಂದೂ, ಅವನನ್ನು ಮಹಾತ್ಮ ಗಾಂಧಿಯವರೊಂದಿಗೆ ಹೋಲಿಸಬಹುದೆಂದೂ ಹೇಳಿದರು.

ಭಾಷಾವಾರು ಪ್ರಾಂತಗಳ ನಿರ್ಮಾಣದ ವಿಷಯವನ್ನು ಪ್ರಸ್ತಾಪಿಸಿ, ಅವುಗಳ ಅವಶ್ಯಕತೆಯಿದ್ದರೂ ಭಾಷಾ ಪ್ರದೇಶಗಳ ಏಕತೆಯ ಆಧಾರದ ಮೇಲೆ ಪ್ರಾಂತ ನಿರೂಪಣೆ ಮಾಡಬೇಕೆನ್ನುವುದು ವಿವಾದಗ್ರಸ್ತವೆಂದೂ ಕೌಟಿಲ್ಯ ಮಂಡಲಿಯಂಥವರು ಅದನ್ನು ಅಧ್ಯಯನ ಮಾಡಿ ಪ್ರಜಾಭಿಪ್ರಾಯ ರೂಪಗೊಳಿಸಬೇಕೆಂದೂ ಹೇಳಿದರು.

ಗೂಡ್ಸ್ ರೈಲು ಘರ್ಷಣೆಯಲ್ಲಿ ಐವರ ಮರಣ

ಅಲಹಾಬಾದಿಗೆ ೬ ಮೈಲಿ ಇರುವ ಘಾಘಾಮೊ ನಿಲ್ದಾಣದಲ್ಲಿ ನೆನ್ನೆ ಎರಡು ಗೂಡ್ಸ್ ರೈಲುಗಳು ಎದುರಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮವಾಗಿ ೫ ಜನರು ಸತ್ತು ಮತ್ತೈವರು ಗಾಯಗೊಂಡು ಚಿಂತಾಜನಕ ಸ್ಥಿತಿಯಲ್ಲಿರುವರೆಂದು ಹೇಳಲಾಗಿದೆ. ಹನ್ನೊಂದು ಗಾಡಿಗಳು ಪುಡಿಯಾದುವು. ಎರಡು ರೈಲುಗಳ ಡ್ರೈವರ್ ಮತ್ತು ಫೈರ್‌ಮನ್ನುಗಳು ಮಡಿದಿರುತ್ತಾರೆ. ಗಾರ್ಡುಗಳು ಮಾತ್ರ ಉಳಿದಿರುವರು.

ಕಾರ್ಖಾನೆ ಸಿಡಿದು ೩೦ ಜನರ ಮರಣ

ಮಧ್ಯ ಜಪಾನಿನ ನಗೋಯ ನಗರದ ಒಂದು ರಸಾಯನಿಕ ಕಾರ್ಖಾನೆಯು ನೆನ್ನೆ ಸಿಡಿತವಾಗಿ ಇಡೀ ಊರೇ ಅಲುಗಿತೆಂದೂ ೩೦ ಜನರು ಮಡಿದು ೫೦ ಮಂದಿಗೆ ಗಾಯಗಳಾಗಿರುವುವೆಂದೂ ವರದಿಯಾಗಿದೆ. ಕಾರ್ಖಾನೆಯಲ್ಲಿ ಪ್ರತಿ ತಿಂಗಳೂ ೯೦೦೦ ಟನ್ನಷ್ಟು ಸೀಮೆಗೊಬ್ಬರವು ತಯಾರಾಗುತ್ತಿದ್ದು, ಕಾರ್ಖಾನೆ ಯಂತ್ರವು ನಾಶವಾಗಿದೆ.

೫೦೦ ಜನರಿದ್ದ ಯಾತ್ರಿಕರ ಹಡಗಿನ ದುಸ್ಥಿತಿ

ಕ್ರಿಸ್‌ಮಸ್ ಹಬ್ಬಕ್ಕಾಗಿ ಪ್ಯಾಲಸ್ಟೈನಿನ ಜರೂಸಲೆಂ ನಗರಕ್ಕೆ ಹೊರಟಿದ್ದ ೫೦೦ ಜನ ಯಾತ್ರಿಕರ ಹಡಗೊಂದು ಬೀರುಟ್ ಬಳಿ ತೀರದಲ್ಲಿ ನೆನ್ನೆ ನೆಲಕಚ್ಚಿತೆಂದೂ ಅಲೆಗಳು ಹಡಗನ್ನು ಅಪ್ಪಳಿಸುತ್ತಿರುವುವೆಂದೂ ಯಾತ್ರಿಕರುಗಳಿಗೆ ಜೀವ ಭಯವು ಸಂಭವಿಸಿರುವುದೆಂದೂ ವರದಿಯಾಗಿದೆ. ಹಡಗಿನವರು ಜನರನ್ನು ಪಾರುಮಾಡಲು ವಿಶೇಷ ಶ್ರಮ ವಹಿಸುತ್ತಿರುವರೆಂದು ಹೇಳಲಾಗಿದೆ.

ಪಾಕಿಸ್ತಾನಕ್ಕೆ ಮುಸ್ಲಿಮರೇ ಅಧಿಪತಿಯಾಗಲು ಸಲಹೆ

ಪಾಕಿಸ್ತಾನದ ರಾಜ್ಯಾಂಗ ಸಭೆಯ ಮೂಲ ತತ್ವಗಳ ಸಮಿತಿಯು ೮೦ ಪುಟಗಳ ವರದಿಯಲ್ಲಿ ಪಾಕಿಸ್ತಾನಕ್ಕೆ ಮುಸ್ಲಿಂ ಮಾತ್ರವೇ ಅಧ್ಯಕ್ಷನಾಗಬೇಕೆಂದು ಸೂಚಿಸಿರುತ್ತದೆ. ಪಾಕಿಸ್ತಾನಕ್ಕೆ ಎರಡು ಶಾಸನ ಸಭೆಗಳೂ ಪ್ರಾಂತಗಳಿಗೆ ಒಂದೊಂದು ಸಭೆಯೂ ಇರಬೇಕೆಂದು ವರದಿಯು ತಿಳಿಸಿರುತ್ತದೆ. ಆ ರಾಜ್ಯದ ರಾಜಭಾಷೆಯ ಬಗ್ಗೆ ವರದಿಯು ಪ್ರಸ್ತಾಪ ಮಾಡಿರುವುದಿಲ್ಲ.

ಕಾಶ್ಮೀರ ಮತ್ತು ಜುನಾಘಡಗಳಿಗೆ ಪಾಕಿಸ್ತಾನದ ಕೇಂದ್ರ ಶಾಸನ ಸಭೆಯಲ್ಲಿ ಸ್ಥಾನ ಕಲ್ಪಿಸಲು ಏರ್ಪಾಡಾಗುವುದು. ಪಾಕಿಸ್ತಾನದ ಜನರನ್ನು ಮುಸ್ಲಿಮರು, ಪರಿಶಿಷ್ಟ ವರ್ಗದವರು, ಇತರ ಹಿಂದುಗಳು, ಕ್ರೈಸ್ತರು, ಬೌದ್ಧರು, ಪಾರ್ಸಿಗಳೆಂದು ೬ ವಿಧವಾಗಿ ವಿಂಗಡಿಸಿ ಅವರಿಗೆಲ್ಲಾ ಪ್ರತ್ಯೇಕ ಚುನಾವಣೆಗಳನ್ನು ಏರ್ಪಡಿಸಲು ವರದಿಯು ಸೂಚಿಸಿರುತ್ತದೆ.

ಸಿ. ಡಿ. ದೇಶಮುಖರೊಡನೆ ದುರ್ಗಾಬಾಯಿ ವಿವಾಹ

ಭಾರತದ ಯೋಜನಾ ಮಂಡಲಿಯ ಸದಸ್ಯೆಯಾದ ಶ್ರೀಮತಿ ದುರ್ಗಾಬಾಯಿಯವರು ಕೇಂದ್ರ ಹಣಕಾಸಿನ ಮಂತ್ರಿ ಚಿಂತಾಮಣಿ ದೇಶ್‌ಮುಖ್‌ರವರನ್ನು ವಿವಾಹವಾಗಲಿರುವರು. ವಿವಾಹವು ಬರುವ ತಿಂಗಳ ನಡೆಯಲಿದೆ. ಈ ಕಾರಣಕ್ಕಾಗಿ ಅವರು ಯೋಜನಾ ಮಂಡಲಿಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವರು.

○ ಅಮೇರಿಕದ ನೀಗ್ರೋ ವಂಶಕ್ಕೆ ಸೇರಿದವರೂ ನೋಬೆಲ್ ಶಾಂತಿ ಪಾರಿತೋಷಕ ಪಡೆದವರೂ ಆದ ಡಾ|| ರಾಲ್ಫ್ ಬಂಚ್ ಮತ್ತು ಐನ್‌ಸ್ಟೈನರನ್ನು ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯ ಪರಿಶೀಲನೆಗಾಗಿ ವಿಶ್ವಸಂಸ್ಥೆಯು ನೇಮಿಸುತ್ತದೆ. ಮೆಕ್ಸಿಕೊ ಮತ್ತು ಚಿಲಿ ದೇಶಗಳಿಗೆ ಇವರಿಬ್ಬರು ಸೇರಿದವರು.

ಫೇಸ್ ಪೌಡರ್, ಲಿಪ್-ಸ್ಟಿಕ್ ಗಳಿಗಿಂತ ಅರಿಶಿನ-ಕುಂಕುಮಗಳೇ ಹೆಚ್ಚು ಲಕ್ಷಣ

ಮಹಿಳಾ ಸಮಾಜದ ರಜತೋತ್ಸವದಲ್ಲಿ ಹನುಮಂತಯ್ಯನವರ ಸೂಚನೆ

ಬೆಂಗಳೂರು ೨೨

ಬಾಲಕಿಯರಿಗೆ ಶಾಲೆಗಳಲ್ಲಿ ಡ್ರಿಲ್ ಮಾಡಿಸುವ ಬದಲು ಅಂಗಸಾಧನೆಯನ್ನು ಕೊಡುವ ಭರತನಾಟ್ಯದ ಶಿಕ್ಷಣವನ್ನು ಕಲ್ಪಿಸುವ ಉದ್ದೇಶವು ತಮಗಿದೆಯೆಂದೂ ಇದನ್ನು ಇನ್ನೂ ನಾಲ್ಕೈದು ವರ್ಷಗಳಲ್ಲಿ ಜಾರಿಗೆ ತರಲು ತಾವು ಇಚ್ಛಿಸುವುದಾಗಿಯೂ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಮಲ್ಲೇಶ್ವರದ ಮಹಿಳಾ ಸಮಾಜದ ರಜತ ಮಹೋತ್ಸವದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಸ್ತ್ರೀಯರು ಉಪಯೋಗಿಸುವ ಅರಿಶಿನ ಕುಂಕುಮಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿವೆಯೆಂದೂ ಅವು ಶರೀರಕ್ಕೆ ಆರೋಗ್ಯಕರವಾಗಿಯೂ ಇರುವುದರಿಂದ, ಸ್ತ್ರೀಯರು ಅವುಗಳನ್ನು ಉಪಯೋಗಿಸಬೇಕೆಂದೂ, ವಿದೇಶೀ ಸೌಂದರ್ಯ ಸಾಧನಗಳಾದ ಫೇಸ್ ಪೌಡರ್, ಲಿಪ್ ಸ್ಟಿಕ್‌ಗಳನ್ನು ಉಪಯೋಗಿಸಿ ಸೌಂದರ್ಯವನ್ನು ಹಾಳುಮಾಡಿಕೊಳ್ಳಬಾರದೆಂದೂ ಹೇಳಿದರು. ನಮ್ಮ ನಾಡಿನ ಹೆಸರುಗಳು ಸುಮಧುರವಾಗಿವೆಯಾದರೂ ನಮ್ಮ ಸ್ತ್ರೀಯರು ಪಾಶ್ಚಿಮಾತ್ಯರಂತೆ ಮಿಸೆಸ್ ಎಂದು ಕರೆಸಿಕೊಳ್ಳುವುದು ಸರಿಯಲ್ಲವೆಂದೂ ಅದಕ್ಕೆ ಬದಲಾಗಿ ಶ್ರೀಮತಿ ಎಂದು ಕರೆಸಿಕೊಂಡರೆ ಚನ್ನಾಗಿರುವುದೆಂದೂ ತಿಳಿಸಿದರು. ನಮ್ಮ ಸ್ತ್ರೀಯರ ಸ್ವಾಭಾವಿಕವಾದ ಕೂದಲು ಸೌಂದರ್ಯದಾಯಕವಾಗಿರುವುದೆಂದೂ, ಪರಕೀಯರಂತೆ ಬಾಬ್ ಮಾಡಿಸಿಕೊಳ್ಳುವುದು ಅವಲಕ್ಷಣವೆಂದೂ ಸೂಚಿಸಿದರು.

ಪಶ್ಚಿಮ ರಾಷ್ಟ್ರಗಳ ಸೈನ್ಯಗಳ ವಾಪಸಿಗೆ ಕರೆ

ಕೊರಿಯಾ, ಇಂಡೋಚೀನಾ ಮತ್ತು ಮಲಯಗಳಲ್ಲಿ ಆಗುತ್ತಿರುವ ಹೋರಾಟವು ಕೂಡಲೇ ಮುಕ್ತಾಯವಾಗಿ, ಅಲ್ಲಿರುವ ವಿದೇಶೀ ಸೈನ್ಯವನ್ನೆಲ್ಲಾ ವಾಪಸು ಕರೆಸಬೇಕೆಂದು ವಿಯನ್ನಾ ನಗರದಲ್ಲಿ ನಡೆದ ಪ್ರಪಂಚದ ಶಾಂತಿ ಸಮ್ಮೇಳನದಲ್ಲಿ ನಿರ್ಣಯವನ್ನು ಮಾಡಲಾಗಿದೆ. ಸಂಯುಕ್ತ ಜರ್ಮನಿ ಬಗ್ಗೆ ಚತುರ್ರಾಷ್ಟ್ರ ಸಭೆಯು ನಡೆಯಬೇಕೆಂದು ಕೋರಲಾಗಿದೆ. ಪಶ್ಚಿಮ ಜರ್ಮನಿಯನ್ನು ಅಟ್ಲಾಂಟಿಕ್ ಕೌಲಿಗೆ ಸೇರುವಂತೆ ಮಾಡಿದರೆ ಯುದ್ಧದ ಅಪಾಯವು ಹೆಚ್ಚುವುದೆಂದೂ ಭಾವಿಸಲಾಗಿದೆ.

ಎಂ. ಎಸ್. ಪರೀಕ್ಷೆಗೆ ತರಬೇತು ಮಾಡುವ

—. ವಿ ಶೇ ಷ ತ ರ ಗ ತಿ ಗ ಳು :—

ಬಾಲಕಿಯರಿಗೆ ಬೆಳಿಗ್ಗೆ 7.30 ರಿಂದ 9.30

ಬಾಲಕರಿಗೆ ಸಾಯಂಕಾಲ 6 ರಿಂದ 8

ಸಿಟಿ ಟ್ಯುಟೋರಿಯಲ್ ಕಾಲೇಜು,

ವಾಣಿವಿಲಾಸ ಮಾರ್ಕೆಟ್, ಮೈಸೂರು

Edited, Printed and Published by A. R. Nagarajan at Sadhvi Press, D. Subbiah Road, Mysore

ಮಾರಾಟ ತೆರಿಗೆ ವಿರುದ್ಧ ಚಳುವಳಿಗಾರರ ಬಂಧನ

ಮಾರಾಟ ತೆರಿಗೆಯ ವಿರುದ್ಧವಾಗಿ ರಾಜಕೋಟೆಯಲ್ಲಿ ಮೊನ್ನೆ ಪ್ರದರ್ಶನ ನಡೆಸಿ ಸರ್ಕಾರಿ ಕಛೇರಿಗೆ ನುಗ್ಗಲು ಪ್ರಯತ್ನಿಸಿದ ೧೭ ಜನರನ್ನು ಬಂಧಿಸಲಾಯಿತು. ಈ ಬಗ್ಗೆ ಹಿಂದಿನ ದಿನ ಇನ್ನೂ ೩೪ ಜನರನ್ನು ಬಂಧಿಸಿ, ಪ್ರದರ್ಶನಕಾರರ ಮೇಲೆ ಲಾಟಿ ಪ್ರಹಾರ ಮಾಡಲಾಗಿತ್ತು. ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸಬಾರದೆಂದು ನಿರ್ಬಂಧಿಸಲಾಗಿದ್ದ ಪ್ರದೇಶಕ್ಕೆ ನುಗ್ಗಿದ ಹಲವರನ್ನೂ ದಸ್ತಗಿರಿ ಮಾಡಲಾಗಿದೆ.

ಶನಿವಾರ ಶಾಸನ ಸಭೆ ಕೂಡದು

ಶನಿವಾರವೂ ಶಾಸನ ಸಭೆಯು ನಡೆಯಬೇಕೆಂದು ಸೂಚಿಸುವ ಮಸೂದೆಯನ್ನು ಉತ್ತರ ಪ್ರದೇಶ ಸ್ಥಳೀಯ ಸಂಸ್ಥೆ ಮಂತ್ರಿಗಳಾದ ಮೋಹನಲಾಲ್ ಗೌತಮ್ ರವರು ಮಂಡಿಸಲು, ಅದನ್ನು ಪ್ರತಿಭಟಿಸಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು.

ಫ್ರಾನ್ಸಿನಲ್ಲಿ ಮಳೆಯಿಂದ ವಿಪರೀತ ಪ್ರವಾಹ

ಮಧ್ಯ ಫ್ರಾನ್ಸಿನ ಬೆಟ್ಟದ ಪ್ರದೇಶದಲ್ಲಿ ವಿಪರೀತ ಮಳೆ ಬರುತ್ತಿರುವುದರ ಪರಿಣಾಮವಾಗಿ ಅಲ್ಲಿನ ನದಿಗಳಲ್ಲಿ ಕಳೆದ ೫೦ ವರ್ಷಗಳಿಂದ ಎಂದೂ ಇಲ್ಲದಷ್ಟು ಪ್ರವಾಹವು ಬಂದು, ಹಣ್ಣುಗಳು ಮತ್ತು ಗೋಧಿ ಪಸಲಿಗೆ ಬಹಳ ನಷ್ಟ ಸಂಭವಿಸಿದೆಯೆಂದು ತಿಳಿದುಬಂದಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೩೦ ಸಂಗೀತ, ವಿ. ಶಂಕರನ್, ಮಧ್ಯಾಹ್ನ ೩ ಪಠಿತಾ ವಿಹಾರ, ಮಹಿಳೆಯರ ಕಾರ್ಯಕ್ರಮ. ಸಂಜೆ ೫-೪೦ ಸಂಗೀತ, ವಿ. ಶಂಕರನ್, ೬-೧೫ ಬಾಲಜಗತ್ತು ವ. ಶ್ಯಾಮಲ ಕಾರ್ಯಕ್ರಮ ೭ ಹಿಂದಿ ಭಜನೆ, ವಸಂತ ಸುಂದರಂ ೮ ಪಿಟೀಲು, ಎ. ವಿ. ಕೃಷ್ಣಮಾಚಾರ್ ಮತ್ತು ಎಸ್. ವೆಂಕಟರವರಿಯ್ಯ ೯-೧೫ ಕನ್ನಡ ಗೀತೆಗಳು, ೮ ನಾಗಮ್ಮ ೯-೪೦ ನಿಮ್ಮ ಮೆಚ್ಚಿನ ಗೀತೆಗಳು.

ಶಾರದಾ ವಿಲಾಸ್ ಕಾಲೇಜ್ ಹಳೆಯ ವಿದ್ಯಾರ್ಥಿಗಳ ಸಂಘ

ಮೇಲ್ಕಂಡ ಸಂಘದ ಆಶ್ರಯದಲ್ಲಿ ನಡೆಯಲಿರುವ ಹಳೇ ವಿದ್ಯಾರ್ಥಿಗಳ ಸಂಘದ ದಿನಾಚರಣೆಯನ್ನು ಕಾರಣಾಂತರದಿಂದ ೨೫ನೇ ತಾರೀಖಿಗೆ ಮುಂದೂಡಲಾಗಿದೆ. ಈ ಸಂದರ್ಭದಲ್ಲಿ ನಾಳೆ ಬೆಳಿಗ್ಗೆ ಹಳೆಯ ವಿದ್ಯಾರ್ಥಿಗಳಿಗೆ ಆಟಗಳ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ. ಹಳೆಯ ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕಾಗಿ ಸಂಘದ ಕಾರ್ಯದರ್ಶಿಗಳು ಕೋರಿರುತ್ತಾರೆ.

ಎಲ್ಲಾ ಬಗೆಯ

ಅಲೋಪೆಥಿಕ್ ಔಷಧಿಗಳೂ

ನ್ಯಾಯವಾದ ಬೆಲೆಗೆ

ನಮ್ಮಲ್ಲಿ ದೊರೆಯುತ್ತವೆ

ರಘುಲಾಲ್ & ಕೋ

ಔಷಧಿ ವ್ಯಾಪಾರಿಗಳು,

207, ಸಯ್ಯಾಜಿರಾವ್ ರೋಡ್,

ಮೈಸೂರು.

ನಿಸ್ವಾರ್ಥ ಸೇವೆಯಿಂದಲೇ ಸಹಕಾರದ ಬೆಳವಣಿಗೆ

ವಿದ್ಯಾ ಸಚಿವ ಎ. ಜಿ. ರಾಮಚಂದ್ರರಾಯರ ಭಾಷಣ

ಮೈಸೂರು ೨೨

ನೆನ್ನೆ ಸಂಜೆ ಸಹಕಾರ ಭವನದಲ್ಲಿ ಜಿಲ್ಲಾ ಸಹಕಾರ ಸಂಘದವರು ನಡೆಸುತ್ತಿದ್ದ ಸಹಕಾರ ಶಿಕ್ಷಣ ತರಗತಿಯ ಮುಕ್ತಾಯ ಭಾಷಣವನ್ನು ವಿದ್ಯಾ ಸಚಿವರಾದ ಶ್ರೀ ಎ. ಜಿ. ರಾಮಚಂದ್ರರಾಯರು ನೆರವೇರಿಸಿದರು.

ಜಿಲ್ಲಾ ಸಂಘದ ಅಧ್ಯಕ್ಷ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಸ್ವಾಗತ ಭಾಷಣ ಮಾಡುತ್ತಾ, ಸಹಕಾರ ಶಿಕ್ಷಣ, ತರಬೇತು ಮತ್ತು ಪ್ರಚಾರಕ್ಕೆ ಹಲ್ಲಬೇಕಾದ ಪ್ರಾಮುಖ್ಯತೆ ಸರ್ಕಾರದಿಂದಾಗಲಿ ಸಾರ್ವಜನಿಕರಿಂದಾಗಲಿ ದೊರೆಯುತ್ತಿಲ್ಲವೆಂದೂ, ದೇಶದ ಕೇಂದ್ರ ಸಹಕಾರ ಸಂಘಗಳ ಸೈಕಿ ಕೇವಲ ೭೦ ಸಂಘಗಳು ಮಾತ್ರ ಕೇಂದ್ರ ಪ್ರಚಾರ ಸಂಘಕ್ಕೆ ಸದಸ್ಯರಾಗಿರುವುದನ್ನು ತೋರಿಸಿದರೆ, ಯಾರಿಗಾದರೂ ತಿರುವ್ಯಾಸವಾಗದಿರದೆಂದೂ, ಕೇಂದ್ರ ಸಂಘಕ್ಕೆ ಸರ್ಕಾರದ ನೆರವು ಇಲ್ಲದಿರುವುದೂ, ಸಂಘಗಳ ಹಣ ವ್ಯವಸ್ಥೆ ಲಾಭದಲ್ಲಿ ಒಂದು ಕನಿಷ್ಠ ಭಾಗವನ್ನಾದರೂ ಪ್ರಚಾರ ಮತ್ತು ಸಹಕಾರ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲಾಗಿಟ್ಟು ಕೇಂದ್ರ ಸಂಸ್ಥೆಗೆ ಕೊಡಬೇಕೆಂಬ ನಿಯಮವಿಲ್ಲದಿರುವುದೂ ಈ ಉಪೇಕ್ಷೆಗೆ ಕಾರಣವೆಂದೂ ಹೇಳಿದರು. ಸರ್ಕಾರದವರು ಇವನ್ನು ನಿವಾರಿಸಬೇಕೆಂದು ಕೋರಿದರು.

ವಿದ್ಯಾ ಸಚಿವರು ತಮ್ಮ ಭಾಷಣದಲ್ಲಿ ಸಹಕಾರ ಪ್ರಚಾರ ಮತ್ತು ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ಕೊಟ್ಟು ಹೋರಿ. ಆ ಕಾರ್ಯವು ತತ್ಕ್ಷಣವಾಗಿಲ್ಲ, ಸಾಧ್ಯವಿಲ್ಲವೆಂದೂ, ಮಾಸ ವಿದ್ಯಾ ಸುಧಾರಣೆಯಲ್ಲಿ ಸಹಕಾರ ಶಿಕ್ಷಣವೂ ಐಚ್ಛಿಕ ವಿಷಯಗಳಲ್ಲೊಂದಾಗಿ ರುವುದೆಂದೂ ಹೇಳಿದರು.

ಸಹಕಾರ ತತ್ವವು ಬೆಳೆಯ ಬೇಕಾದರೆ ಹಣವಿದ್ದರೆ ಕೇವಲ ಹೊಸಬರೇ ಯಾವುದನ್ನೂ ಸಾಧಿಸಲು ಸಾಧ್ಯವಿಲ್ಲವೆಂದೂ, ಹಳಬರು ಮತ್ತು ಹೊಸಬರು ಹೊಂದಿಕೊಂಡು ಹೋಗಬೇಕೆಂದೂ ಹೇಳಿದರು. ಯಾರಾದರೂ ತಮ್ಮ ಸೇವೆಯ ಫಲವಾಗಿ ಮುಂದೆ ಬಂದರೆ, ಅಂತಹವರನ್ನು ನಿಂದಿಸಿ ಹೊರ ನೂಕುವ ಮನೋಭಾವವು ಹೆಚ್ಚಾಗುತ್ತಿದೆಯೆಂದೂ ಅದು ಹೋಗಬೇಕೆಂದು ತಿಳಿಸಿ, ತಾವು ೧೯೪೧ರಲ್ಲಿ ಹಾಸನದ ಸೊಸೈಟಿಯ ಅಧ್ಯಕ್ಷರಾಗಿದ್ದಾಗ ತಮ್ಮ ಮೇಲೆ ಒಂದು ಅವಿಶ್ವಾಸ ನಿರ್ಣಯವು ಬಂದು ಅದು ಬಿದ್ದು ಹೋಯಿತೆಂಬುದು ಅನಂತರ ಸ್ಪಷ್ಟ ವಿವರವನ್ನು ಹೇಳಿದರು. ನಿಸ್ವಾರ್ಥ ಸೇವೆಯಿಂದ ಮಾತ್ರ ಸಹಕಾರವು ಮುಂದುವರಿಯಬಲ್ಲದೆಂದು ಹೇಳಿ, ತರಬೇತಾದ ವಿದ್ಯಾರ್ಥಿಗಳಿಗೆ ಯಶಸ್ಸನ್ನು ಕೋರಿದರು.

ಸಂಘದ ಕಾರ್ಯದರ್ಶಿ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು ವಂದನಾರ್ಪಣೆಯನ್ನು ಮಾಡಿದರು.

ಪುನಹ ತಮ್ಮ ಸೇವೆಗೆ !

ಭಕ್ತ ಮತ್ತು ಆಸ್ತಿ ಸಾಗಿಸುವವರು ಮೈಸೂರು ಟ್ರಾನ್ಸಿಟ್ ಸರ್ವೀಸ್ಸಿನ ಮಿತವ್ಯಯದ ಜಾಗ್ರತೆಯ ಹಾಗೂ ಸುಲಭ ರೀತಿಯ ಸಾಗಾಣಿಕೆಯ ಅವಕಾಶವನ್ನು ದಯೆಯಿಟ್ಟು ಉಪಯೋಗಿಸಿಕೊಳ್ಳುವರೆಂದು ಆಶಿಸಲಾಗಿದೆ.

ಮೈ ಸೂ ರು ಟ್ರಾ ನ್ಸಿ ಟ್ ಸರ್ವಿಸ್ (ರಿಜಿಸ್ಟರ್ಡ್)

(ಲೀಡ್ ಮತ್ತು ಏಜೆನ್ಸಿ)

ಶಿವರಾಮಪೇಟೆ ರಸ್ತೆ, ಮೈಸೂರು.

(ಫೋನ್ ನಂ. 537)

ಆಂಧ್ರ ಪ್ರಾಂತಕ್ಕೆ ಹೈದರಾಬಾದು ರಾಜಧಾನಿಯಾಗಲಿ

ಆಂಧ್ರ ಪ್ರಾಂತಕ್ಕೆ ಹೈದರಾಬಾದು ನಗರವನ್ನು ರಾಜಧಾನಿಯಾಗಿ ಮಾಡಬೇಕೆಂದೂ, ಅದಕ್ಕಾಗಿ ಆ ನಗರವನ್ನು ಬಿಡಿಗಿಸಿಕೊಳ್ಳಲು ಸರ್ವ ಪ್ರಯತ್ನಗಳೂ ನಡೆಯಬೇಕೆಂದೂ ಆಂಧ್ರ ದೇಶದ ಮುಖಂಡರಲ್ಲೊಬ್ಬರಾದ ಎ. ಕಾಳೇಶ್ವರರಾಯರು ತಿಳಿಸಿರುತ್ತಾರೆ.

ನಾಟಕ ಕಲಾವಿದರಿಗೆ ಪೌರಸಭೆಯ ಸತ್ಕಾರ

ಸುಪ್ರಸಿದ್ಧ ನಾಟಕ ಕಲಾಕೋವಿದರಾದ ಗುಬ್ಬಿ ಕಂಪೆನಿಯ ನಾಟಕ ರತ್ನ ಶ್ರೀ ಜಿ. ಎಚ್. ವೀರಣ್ಣ, ಶ್ರೀಮಾನ್ ಜಿ. ಸುಂದರಮ್ಮ ಮತ್ತು ಶ್ರೀಭಾಷಾ ಶಾರ ದೆ ಶ್ರೀಮತಿ ಬಿ. ಜಯಮ್ಮನವರುಗಳ ಗೌರವಾರ್ಥವಾಗಿ ಮೈಸೂರಿನ ಪೌರಸಭೆಯವರು ನೆನ್ನೆ ಒಂದು ಭಾರಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಉಪಹಾರಾನಂತರ ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಭಾಷಣಮಾಡಿ, ಅತಿಥಿಗಳ ಕಲಾ ಕೌಶಲ್ಯ, ಪ್ರತಿಭೆ ಮತ್ತು ಸಮಾಜ ಸೇವೆಗಳನ್ನು ಪ್ರಶಂಸಿಸಿದರು. ಶ್ರೀ ವೀರಣ್ಣನವರು ಸತ್ಕಾರಕ್ಕಾಗಿ ವಂದನವನ್ನರ್ಪಿಸಿ, ನಾಟಕ ಕಲೆಗೆ ಒಂದು ಕಾಲದಲ್ಲಿ ನಮ್ಮ ಸಂಸ್ಥಾನದಲ್ಲಿ ಪೌರಸಭೆ ಶಾಸನಸಭೆ, ರಾಜಾಸ್ಥಾನ ಮತ್ತು ಸಮಾಜದಲ್ಲಿ ಆದರ್ಶ ಪುರಸ್ಕಾರವು ದೊರೆಯುತ್ತಿರುವುದಕ್ಕಾಗಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ತಮ್ಮ ಸೇವೆಗೆ ಅನೇಕ ವರ್ಷಗಳ ಹಿಂದೆ ಮೈಸೂರು ನಗರದಲ್ಲಿ ದೊರೆತ ಪ್ರೋತ್ಸಾಹವೇ ಇಂದು ತಮ್ಮ ಮತ್ತು ತಮ್ಮ ಸಂಸ್ಥೆಯ ಅಭಿವೃದ್ಧಿಗೆ ಕಾರಣವೆಂಬುವುದನ್ನು ಕೃತಜ್ಞತೆಯಿಂದ ಸ್ಮರಿಸಿದರು. ಶ್ರೀಮತಿ ಜಯಮ್ಮನವರೂ ಸಹ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ಮೈಸೂರು ಪೇಟೆ ಧಾರಣೆ

ಪಲ್ಲ ಗಳ್ಳಿ	ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಹಲಸಂದೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಅವರೆ	[illegible]	[illegible]
ಹೊಂಗೆಬೀಜ	[illegible]	
ಬೆಳ್ಳುಳ್ಳಿ		
ಮಣಗಳ್ಳಿ	[illegible]	[illegible]
ಬೆಲ್ಲ	[illegible]	
ಹುಣಸೇಹಣ್ಣು	[illegible]	
ಸೀಗೇಕಾಯಿ	[illegible]	[illegible]
ತೆಂಗಿನಕಾಯಿ, ೧೦೦ ರ ಬೆಲೆ	[illegible]	[illegible]

ಕ್ರಿ ಸ್ಮ ಸ್ ಹ ಬ್ಬ ದ ಸ ಲು ವಾ ಗಿ

ಅತ್ಯುತ್ತಮ ಗಡಿಯಾರಗಳಾದ ವೆಸ್ಟ್ ಎಂಡ್, ಫೇವರ್ ಲ್ಯೂಬಾ, ಕ್ರೌನ್ ಮತ್ತು ಲಾಂಜಿನ್ಸ್ ವಾಚ್ ಮುಂತಾದ ಗಡಿಯಾರಗಳು ನಮ್ಮಲ್ಲಿ ಬಹಳ ಸುಲಭ ಬೆಲೆಗೆ ದೊರಕುತ್ತವೆ. ದಯವಿಟ್ಟು ಒಂದು ಸಲ ಬಂದು ನೋಡಿ.

ಕೆ. ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್, (Estd. 1911)

ಗಡಿಯಾರ ಮತ್ತು ಕನ್ನಡಕ ವ್ಯಾಪಾರಿಗಳು

ಅಶೋಕಾ ರಸ್ತೆ, ಮೈಸೂರು

ಪೋ|| ನಂ./೪೭ ||ವಂದೇ ಮಾತರಂ|| ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೨೪-೧೨-೧೯೫೨ [ಸಂಚಿಕೆ ೧೩೨

೫ ವರ್ಷದ ಯೋಜನೆಗೆ ಜನರ ಒತ್ತಾಯದ ಸೇವೆ

ಟೆಲಿಫೋನ್ ದರಗಳನ್ನು ಹೆಚ್ಚಿಸಿದುದಕ್ಕೆ ಪ್ರತಿಭಟನೆ

ಬಹಿರಂಗ ಸಭೆಯಲ್ಲಿ ನಿರ್ಣಯಗಳು

ಮೈಸೂರು ೨೪

ಬರುವ ತಿಂಗಳಿಂದ ಟೆಲಿಫೋನುಗಳ ವಾರ್ಷಿಕ ಬಾಡಿಗೆ ದರವನ್ನು ೧೦೦ ರೂಪಾಯಿನಿಂದ ೩೦ ರೂಪಾಯಿಗೆ [illegible]ಯುವರು ಹೆಚ್ಚಿಸಲಿರುವ ಬಗ್ಗೆ ಟೆಲಿಫೋನು ಚಂದಾದಾರರ ಮತ್ತು ಸಾರ್ವಜನಿಕರ ಪ್ರತಿಭಟನೆಯನ್ನು ಸೂಚಿಸಲು ನೆನ್ನೆ ಸಂಜೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆಯೊಂದು ನಗರದ ಪತ್ರಿಕೋದ್ಯೋಗಿಗಳ ಸಂಘದ ಆಶ್ರಯದಲ್ಲಿ ನಡೆಯಿತು. ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ಆರ್ ಗೋಪಾಲಕೃಷ್ಣರಾಯರು ಸಭೆಯ ಉದ್ದೇಶಗಳನ್ನು ವಿವರಿಸಿದರು ಶ್ರೀಗಳಾದ ಪಿ. ಸೀತಾರಾಮಯ್ಯ, ಅಗರಂ ರಂಗಯ್ಯ ಎ ರಾಮಣ್ಣ, ಬಿ ಎಸ್ ಸುಬ್ಬರಾವ್ ಎಂ. ಆರ್. ಸಿ ಬಸಪ್ಪ, ಜಿ ಎಲ್ ಸ್ವಾಮಿ ಮತ್ತು ವೆಂಕಟಸುಬ್ಬ ಶರ್ಮರವರುಗಳು ಭಾಷಣ ಮಾಡಿ ಟೆಲಿಫೋನ್ ಬಾಡಿಗೆ ದರವು ಈಗಲೇ ವಿಪರೀತವಾಗಿರುವುದರಿಂದ ಅದನ್ನು ಹೆಚ್ಚಿಸುವುದು ಸರ್ವಥಾ ಉಚಿತವಲ್ಲವೆಂದು ಹೇಳಿದರು

ಬೊಂಬಾಯಿ, ಮದ್ರಾಸು, ಕಲ್ಕತ್ತ ಮೊದಲಿ ಮುಂತಾದ ದೊಡ್ಡ ನಗರಗಳಲ್ಲಿ ಜಾರಿಯಲ್ಲಿರುವ ದರಗಳನ್ನು ಮೈಸೂರು ಸಂಸ್ಥಾನದ ಸಣ್ಣ ಪ್ರದೇಶಗಳಿಗೆ ಅನ್ವಯಿಸುವುದು ಅನುಚಿತವೆಂದು ಅವರು ಅಭಿಪ್ರಾಯಪಟ್ಟರು. ಟೆಲಿಫೋನುಗಳನ್ನು ಕೇವಲ ಸುಖ ಭೋಗಗಳಿಗಾಗಿ ಜನರು ಇಟ್ಟುಕೊಳ್ಳುವುದಿಲ್ಲವೆಂದೂ ಅತ್ಯಾವಶ್ಯಕವಾದ ಸಾರ್ವಜನಿಕ ವ್ಯವಹಾರಗಳಿಗಾಗಿ ಅದನ್ನು ಉಪಯೋಗಿಸಲಾಗುವುದೆಂದೂ, ಆದುದರಿಂದ ಸರ್ಕಾರದವರು ಕೇವಲ ಲಾಭದ ದೃಷ್ಟಿಯಿಂದ ಈ ವಿಷಯದಲ್ಲಿ ವರ್ತಿಸುವುದು ತಪ್ಪೆಂದೂ ಸಹ ತಿಳಿಸಲಾಯಿತು.

ಅನಂತರ ಕೆಳಗೆ ಕಂಡ ನಿರ್ಣಯಗಳ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು —

ಜನವರಿ ತಿಂಗಳಿಂದ ಟೆಲಿಫೋನಿನ ದರಗಳನ್ನು ತಿಂಗಳಿಗೆ ೨೧ ರೂ. ೨ ನಿಂದ ೩೦ ರೂ ಗೆ ಹೆಚ್ಚಿಸುವುದಾಗಿ ಸರ್ಕಾರದವರು ಮಾಡಿರುವ ನಿರ್ಧಾರವು ಅನುಚಿತವೂ, ಅನ್ಯಾಯವೂ ಆಗಿರುತ್ತದೆ ಈ ಸೂಚನೆಯನ್ನು ಈ ಸಭೆಯು ತೀವ್ರವಾಗಿ ಪ್ರತಿಭಟಿಸುತ್ತದೆ ಸಂಸ್ಥಾನದ ಟೆಲಿಫೋನ್ ಇಲಾಖೆಯನ್ನು ಕೇಂದ್ರ ಸರ್ಕಾರಕ್ಕೆ ವಹಿಸುವ ಮೊದಲು ಇದ್ದ ದರಗಳನ್ನು ಪುನಃ ಜಾರಿಗೆ ತರುವಂತೆ ಈ ಸಭೆಯು ಕೇಂದ್ರ ಸರ್ಕಾರದವರನ್ನು ಒತ್ತಾಯಿಸುತ್ತದೆ.

ಮೈಸೂರಿನಿಂದ ಬೆಂಗಳೂರಿಗೆ ಟೆಲಿಫೋನು ಟ್ರಂಕ್ ಕಾಲ್‌ಗಳಿಗೆ ಇದ್ದ ದರವನ್ನು ೨-೩-೦ ರೂ ಗೆ ಹೆಚ್ಚಿಸುವುದು ಅಕ್ರಮವೂ, ಬಹಳ [illegible]ಯೂ ಆಗಿರುವುದರಿಂದ ಅದನ್ನು ಸಹ ಮೊದಲಿನ ದರಕ್ಕೆ ಇಳಿಸಬೇಕೆಂದು ಈ [illegible] ಒತ್ತಾಯಪಡಿಸುತ್ತದೆ.

೩. ಈ ನಿರ್ಣಯಗಳನ್ನು ಮೈಸೂರು ಸರ್ಕಾರಕ್ಕೂ ಕೇಂದ್ರ ಶಾಸನ ಸಭೆಯ ಮೈಸೂರು ಪ್ರತಿನಿಧಿಗಳಿಗೂ ಕಳುಹಿಸಿಕೊಟ್ಟು ಅವರು ಕೇಂದ್ರ ಸರ್ಕಾರದೊಡನೆ ಈ ಬಗ್ಗೆ ಸೂಕ್ತ ವ್ಯವಹಾರ ನಡೆಸಬೇಕೆಂದು ಕೋರುತ್ತದೆ

೪. ಮೇಲ್ಕಂಡ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಶ್ರೀಗಳಾದ ಪಿ ಗೋಪಾಲಕೃಷ್ಣಶೆಟ್ಟಿ, ಆರ್. ಗೋಪಾಲಕೃಷ್ಣರಾವ್, ಪಿ ಸೀತಾರಾಮಯ್ಯ, ಅಗರಂ ರಂಗಯ್ಯ ಮತ್ತು ಎಂ ಆರ್ ಸಿ ಬಸಪ್ಪ ಇವರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಲಾಗಿದೆ

ಅಧ್ಯಕ್ಷರ ಭಾಷಣವಾದ ನಂತರ ಧನ್ಯವಾದಗಳೊಡನೆ ಸಭೆಯು ಮುಕ್ತಾಯವಾಯಿತು.

ವಿನೋಬಾರವರ ಸ್ಥಿತಿ ಅಪಾಯದಿಂದ ಪಾರು

ಆಚಾರ್ಯ ವಿನೋಬಾ ಭಾವೆಯವರ ದೇಹಸ್ಥಿತಿಯು ಉತ್ತಮಗೊಂಡಿದೆ. ನೆನ್ನೆ ರಾತ್ರಿ ಅವರಿಗೆ ಸುಖ ನಿದ್ರೆ ಬಂದಿತು ಅವರು ಅಪಾಯಕರ ಸ್ಥಿತಿಯನ್ನು ದಾಟಿದರೆಂದು ವೈದ್ಯರು ಅಭಿಪ್ರಾಯಪಟ್ಟಿರುತ್ತಾರೆ ರಾಷ್ಟ್ರಾಧ್ಯಕ್ಷರು ನೆನ್ನೆ ಆಚಾರ್ಯರನ್ನು ಸಂದರ್ಶಿಸಿ, ಅವರು ಔಷಧಿ ಸೇವಿಸಲೊಪ್ಪಿದುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು

ದುರ್ಗಾಬಾಯಿ-ದೇಶಮುಖ್ ವಿವಾಹ

ಬರುವ ತಿಂಗಳು ೧೪ ನೇ ತಾ|| ಕೇಂದ್ರ ಹಣಕಾಸಿನ ಮಂತ್ರಿ, ಸಿ. ಡಿ. ದೇಶಮುಖ್ ಮತ್ತು ಆಂಧ್ರ ದೇಶದ ಶ್ರೀಮತಿ ದುರ್ಗಾಬಾಯಿ ಇವರುಗಳು ವಿವಾಹವಾಗಲಿರುವರು

ಕೋಡಿಯ ದಸ್ತಗಿರಿ

ರಾಜಧಾನಿಯ ಕ್ರೈಂ ಬ್ರಾಂಚ್ ಪೊಲೀಸರು ನೆನ್ನೆ ರಾತ್ರಿ ಆನೇಕಲ್‌ನಲ್ಲಿ ಮುಂಡಿ ಮೊಹಲ್ಲಾದಲ್ಲಿ ಒಂದು ಕಡೆ ಕನ್ನ ಹಾಕುವ ಪ್ರಯತ್ನದಲ್ಲಿದ್ದ ಭಾರಿ ಕೇಡಿ ಅಬ್ದುಲ್ ಸತ್ತಾರ್ ಎಂಬುವನನ್ನು ಬಂಧಿಸಿ, ಅವನ ಮೇಲೆ ನೇರ್ ಚಾರ್ಲ್ ಜಾಮೀನಿನ ಮೊಕದ್ದಮೆ ಹೂಡಿರುತ್ತಾರೆ. ಅವನಿಗೆ ಹಿಂದೆ ೧೭ ಬಾರಿ ಶಿಕ್ಷೆಯಾಗಿತ್ತು

ಫರೂಕರಿಗೆ ಈಜಿಪ್ಟಿನ ಪ್ರಜಾ ಹಕ್ಕು ವಜಾ

ಈಜಿಪ್ಟಿನ ರಾಜ್ಯಾಂಗ ದತ್ತವಾದ ನಿಬಂಧನೆಗಳ ದುರುಪಯೋಗಕ್ಕಾಗಿಯೂ ಅಲ್ಲಿನ ರಾಜಕೀಯವನ್ನು ಕಲುಷಿತಗೊಳಿಸಿದುದಕ್ಕಾಗಿಯೂ ಮಾಜಿ ದೊರೆ ಫರೂಕರನ್ನು ಅವರ ಗೈರುಹಾಜರಿಯಲ್ಲಿ ಕೈರೋವಿನಲ್ಲಿ ವಿಚಾರಣೆಗೆ ಗುರಿಪಡಿಸಲಾಗುವುದು. ಜ|| ನಗೀಬರ ಆಜ್ಞೆ ಪ್ರಕಾರ, ಅವರು ಈಜಿಪ್ಟಿನ ಪ್ರಜಾ ಹಕ್ಕನ್ನು ಕಳೆದುಕೊಳ್ಳಲಿರುವರು. ಈಜಿಪ್ಟಿನಿಂದ ಐಶ್ವರ್ಯವನ್ನು ಫರೂಕರು ಕಳ್ಳತನದಲ್ಲಿ ರವಾನೆ ಮಾಡಿರುವರೆಂದೂ ಹೇಳಲಾಗಿದೆ

ಹಡಗು ಇಬ್ಭಾಗವಾಯಿತು

ಜೆರೂಸಲಂಗೆ ಕ್ರಿಸ್‌ಮಸ್ ಯಾತ್ರಿಕರನ್ನು ಕೊಂಡೊಯ್ಯುತ್ತಾ ನೆನ್ನೆ ನೆಲ ಕಚ್ಚಿದ ಫ್ರೆಂಚ್ ಹಡಗು ಈಗ ಒಡೆದು ಇಬ್ಭಾಗವಾಗಿರುವುದೆಂದೂ, ಅದರಲ್ಲಿದ್ದವರಲ್ಲಿ ಅನೇಕರನ್ನು ರಕ್ಷಿಸಲಾಯಿತೆಂದೂ, ಹಡಗಿನ ಕಂಪೆನಿಯ ಒಬ್ಬ ಡೈರೆಕ್ಟರು, ಒಬ್ಬ ಪ್ರಯಾಣಿಕ ಮತ್ತು ೧೩ ಜನ ನಾವಿಕರು ಮಾತ್ರ ಮಡಿದರೆಂದೂ ವರದಿಯಾಗಿದೆ

ಸಿದ್ದರಾಮನ ಹುಂಡಿ ಕೊಲೆ ಅಪಾದಿತರ ಖುಲಾಸೆ

ಮೈಸೂರು ತಾಲ್ಲೂಕು ಸಿದ್ದರಾಮನ ಹುಂಡಿಯಲ್ಲಿ ಕಳೆದ ವರ್ಷ ಮೇ ತಿಂಗಳಿನಲ್ಲಿ ಕೆಂಪೂವಯ್ಯ ಎಂಬಾತನ ಕೊಲೆ ಸಂಬಂಧವಾಗಿ ಸೆಷನ್ಸ್ ವಿಚಾರಣೆಗೆ ಗುರಿಯಾಗಿದ್ದ ಅದೇ ಊರಿನ ಮರಿಗೌಡ ಮುಂತಾದ ೧೯ ಜನರನ್ನು, ನ್ಯಾಯಾಧಿಪರು ಕಳೆದ ೨೦ನೇ ತಾ|| ಖುಲಾಸೆ ಮಾಡಿದರು ಕಳೆದ ತಿಂಗಳು ಇನ್ನೊಂದು ಮೊಕದ್ದಮೆಯಲ್ಲೂ ಸಹ ಅವರ ಖುಲಾಸೆಯಾಗಿದ್ದಿತು.

ಹರಿಕಥೆ

ರಾಜಧಾನಿಯ ಹಳೇ ಅಗ್ರಹಾರದ ಭಕ್ತ ಮಂಡಲಿಯವರು ಶ್ರೀ ಪಿ ರಾಮಸ್ವಾಮಿನಾಯ್ಡು ಮತ್ತು ಅವರ ಮಕ್ಕಳು ಶ್ರೀ ಪಿ ಆರ್. ಗುರುರಾಜನಾಯ್ಡುರವರುಗಳಿಂದ ಈ ರಾತ್ರಿ ೯|| ಗಂಟೆಗೆ ಪ್ರಭುದೇವಾ ಟಾಕೀಸ್ ಚೌಕದಲ್ಲಿ ಹರಿಶ್ಚಂದ್ರ-ವಿಶ್ವಾಮಿತ್ರ ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತಾರೆ.

ಪಂಚವಾರ್ಷಿಕ ಯೋಜನೆಗೆ ಕಾರ್ಮಿಕರ ಬಲವಂತದ ಸೇವೆ

ಭಾರತದ ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಕಾರ್ಮಿಕರನ್ನು ಬಲವಂತವಾಗಿ ಸೇರಿಸಿಕೊಳ್ಳುವ ವಿಷಯವು ಗಮನದಲ್ಲಿರುವುದಾಗಿ ಕೇಂದ್ರ ಯೋಜನಾ ಮಂತ್ರಿ, ಗುಲ್ಜಾರಿ ಲಾಲ್ ನಂದಾರವರು ತಿಳಿಸಿರುತ್ತಾರೆ. ಪ್ರಜಾ ವರ್ಗದ ಅಭ್ಯುದಯಕ್ಕಾಗಿ, ಜನರ ಪೈಕಿ ಹಲವರ ವಿರೋಧವಿದ್ದರೂ ಸಹ ಹೇಗೆ ತೆರಿಗೆಗಳನ್ನು ಹಾಕಲಾಗಿರುವುದೋ, ಅದರಂತೆಯೇ ಕಾರ್ಮಿಕರನ್ನು ಒತ್ತಾಯದಿಂದ ಸೇರಿಸಿ, ಆ ಮೂಲಕ ಅಗಾಧವಾದ ಮನುಷ್ಯ ಶಕ್ತಿಯನ್ನು ಯೋಜನೆಯ ಪೂರೈಕೆಗೆ ಉಪಯೋಗಿಸುವುದು ತಪ್ಪಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು.

ಅಗ್ಗದ ಬೆಲೆಗೆ ಮೋಟಾರು ಭಾಗಗಳು

ಈಗ ಇರುವುದಕ್ಕಿಂತಲೂ ಇನ್ನೂ ಅಗ್ಗದ ಬೆಲೆಗಳಿಗೆ ಮೋಟಾರು ಭಾಗಗಳು ದೊರೆಯುವುವೆಂದು ಹೇಳಲಾಗಿದೆ ಆಮದು ಬಂಧನೆಯನ್ನು ಸರ್ಕಾರದವರು ಸಡಿಲಿಸಿರುವುದೇ ಇದಕ್ಕೆ ಕಾರಣ

ಫ್ರೆಂಚ್ ಸರ್ಕಾರದ ರಾಜೀನಾಮೆ

ಬರುವ ವರ್ಷದ ಆಯವ್ಯಯದ ಬಗ್ಗೆ ಸೋಲುಂಟಾಗುವುದೆಂದು ಹೆದರಿ ಫ್ರಾನ್ಸಿನ ಆಂಟೋನಿ ಪಿನೆಯವರ ಮಂತ್ರಿ ಮಂಡಲವು ತನ್ನ ರಾಜೀನಾಮೆಯನ್ನು ಅಲ್ಲಿನ ಅಧ್ಯಕ್ಷ ಆರಿಯೊಲ್‌ರವರು ಅಂಗೀಕರಿಸಿರುತ್ತಾರೆ.

ಡಿಪೋಗಳಲ್ಲಿ ರೇಷನ್ ಪದಾರ್ಥ ಒದಗಿಸುವಂತೆ ಕಾರ್ಮಿಕರ ಮನವಿ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ತುರ್ತು ಸಭೆಯು ಕಳೆದ ಭಾನುವಾರ ನಡೆದು, ನಗರದಲ್ಲಿ ಹೆಚ್ಚು ಟೋಕನ್‌ಗಳನ್ನು ತೆಗೆದ ಮೇಲೆ ಡಿಪೋಗಳಲ್ಲಿ ಸರಿಯಾಗಿ ಆಹಾರ ಧಾನ್ಯಗಳ ಸರಬರಾಜಾಗುತ್ತಿಲ್ಲವೆಂದೂ, ಇದರಿಂದ ಕಾರ್ಮಿಕರಿಗೆ ತುಂಬಾ ಅನಾನುಕೂಲವಾಗಿದೆಯೆಂದೂ, ಧಾನ್ಯವನ್ನು ಸರಿಯಾಗಿ ಒದಗಿಸುವಂತೆ ಏರ್ಪಾಡು ಮಾಡಿ, ಸರ್ಕಾರದವರು ಜನರಿಗೆ ಅನುಕೂಲ ಮಾಡಿಕೊಡಬೇಕೆಂದೂ ಕೋರುವ ನಿರ್ಣಯವನ್ನು ಮಾಡಲಾಯಿತು.

ಐ. ಎ. ಎಸ್. ದರ್ಜೆ ಅಧಿಕಾರಿಗಳ ಎರಡನೇ ಪಟ್ಟಿ

ಸ್ವಂ. ಸು ಹೋ|] ಬೆಂಗಳೂರು ೨೪

ಭಾರತದ ಆಡಳಿತ ಸರ್ವಿಸ್ಸಿನ ಸೇವೆಗೆ ಈಗಾಗಲೇ ಸೇರಿಸಲ್ಪಟ್ಟಿರುವ ಹಿರಿಯ ಅಧಿಕಾರಿಗಳ ಪಟ್ಟಿಯ ನಂತರ ಈಗ ಎರಡನೇ ದರ್ಜೆ ಅಧಿಕಾರಿಗಳ ಮತ್ತೊಂದು ಪಟ್ಟಿಯನ್ನು ಪ್ರಕಟಿಸಲಾಗಿದೆ ಅದರಲ್ಲಿ ಈ ಕೆಳಗಿನವರು ಇರುವರು —

ಶ್ರೀಗಳಾದ ಎಸ್. ಎಸ್. ಹಿರಿಯಣ್ಣಯ್ಯ, ಎ. ಸಿ. ಶಿವರ್ಣೇಗೌಡ, ಎ ಎಸ್. ಬಿಲೀಲ್, ತಿಪ್ಪೇರುದ್ರಯ್ಯ, ಹೆಚ್ ಎಸ್. ಹಾಲೇನಾಲ್, ರಂಗಮಲ್ಲಯ್ಯ, ಸಿ. ಎಸ್. ಶೇಷಾದ್ರಿ, ಅಬುಬೇಕರ್, ಬಿ ವೀರಪ್ಪ ಮತ್ತು ಎಂ. ಎಸ್. ಸ್ವಾಮಿನಾಥನ್

ಕಾಂಗ್ರೆಸ್ ಅಧ್ಯಕ್ಷತೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಕೆ ಹನುಮಂತಯ್ಯ ಮತ್ತು ಹೆಚ್ ಕೆ. ವೀರಣ್ಣ ಗೌಡರ ಹೆಸರುಗಳನ್ನೂ ಸೂಚಿಸಲಾಗಿದೆ.

ಪುಟ್ಟಪ್ಪನವರಿಗೆ ಮಂಡ್ಯದ ಪುರ ಜನರ ಸನ್ಮಾನ

ಕನ್ನಡ ಕವಿಗಳಾದ ಶ್ರೀ ಕೆ ವಿ ಪುಟ್ಟಪ್ಪನವರ ಗೌರವಾರ್ಥವಾಗಿ ಮೊನ್ನೆ ಮಂಡ್ಯದ ನಿವಾಸಿಗಳು ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿದ್ದರು ಶ್ರೀ ಕೆ ವಿ ಶಂಕರೇಗೌಡರು ಸ್ವಾಗತ ಭಾಷಣ ಮಾಡಿದರು ಶ್ರೀ ಎಂ ಬಿ ಬೋರೇಗೌಡರು ಬಿನ್ನವತ್ತಳೆಯನ್ನು ಕರಡದಲ್ಲಿಟ್ಟು ಅರ್ಪಿಸಿದರು ಅದನ್ನು ಸ್ವೀ[illegible]ಯ ಕರ್ನಾಟಕ ಸಂಪುಟಕ್ಕೆ ಶ್ರೀ ಪುಟ್ಟಪ್ಪನವರು ಒಪ್ಪಿ, ರಾಮಾಯಣ ದರ್ಶನವನ್ನು ಚೆನ್ನಾಗಿ ಓದುವವರಿಗೆ ಅದನ್ನು ಪರ್ಯಾಯ ಪಾರಿತೋಷಕವಾಗಿ ಕೊಡಬೇಕೆಂದು ಸೂಚಿಸಿದರು ಕನ್ನಡವನ್ನು ಶಿಕ್ಷಣ ಮಾಧ್ಯಮ ಮಾಡಬೇಕೆಂದು ಅವರು ಅಭಿಪ್ರಾಯಪಟ್ಟರು

ಅಗ್ನಿಶಾಮಕ ಠಾಣೆಯಲ್ಲಿ ಭೂತದ ಚೇಷ್ಟೆ

ಆಗ್ನೇಯ ಲಂಡನ್ನಿನ ಒಂದು ಕಡೆ ಇರುವ ಅಗ್ನಿಶಾಮಕ ಠಾಣೆಯಲ್ಲಿ ನಿತ್ಯವೂ ರಾತ್ರಿ ಮಲಗಿರುವ ಜನರ ಬೆನ್ನಿನ ಮೇಲೆ ಭೂತವೊಂದು ತಟ್ಟಿ ಎಬ್ಬಿಸುತ್ತಿರುವುದೆಂದು ವರದಿಯಾಗಿದೆ ಅವನ್ನು ಓಡಿಸುವವರು ಯಾರಾದರೂ ಇದ್ದಲ್ಲಿ ತಮ್ಮನ್ನು ಅದರ ಕಾಟದಿಂದ ತಪ್ಪಿಸುವಂತೆ ಅವರು ಕೋರಿರುವರು

ಕೋತಿಯು ಮಗುವನ್ನು ಕೊಂಡುಹೋದ ಪ್ರಸಂಗ

ಕಲ್ಕತ್ತಾ ಬಳಿ ದಕ್ಷಿಣೇಶ್ವರದಲ್ಲಿ ಕಳೆದ ಶನಿವಾರ ಒಂದು ಕೋತಿಯು ಎಂಟು ವರ್ಷದ ಒಂದು ಮಗುವನ್ನು ಎತ್ತಿಕೊಂಡು ಹೋಗಿ ಮಾವಿನ ಮರದ ಮೇಲೆ ಕುಳಿತುಕೊಂಡಿತೆಂದೂ, ಬಾಲಕರು ಸೇರಿ ಕೂಗಿ ಗಲಾಟೆ ಮಾಡಲು ಕೋತಿಯು ಮಗುವಿನೊಡನೆ ಒಂದರಿಂದ ಮತ್ತೊಂದು ಮರಕ್ಕೆ ಹಾರುತ್ತಿದ್ದಾಗ ಮಗುವು ಅದರ ಕೈಯಿಂದ ಕಳಚಿ ಬಿದ್ದು ತಕ್ಷಣ ಮೃತಪಟ್ಟಿತೆಂದೂ ವರದಿಯಾಗಿದೆ

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಭೇಟಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಅಂತರ ರಾಷ್ಟ್ರೀಯ ಯುವಜನ ವಿದ್ಯಾರ್ಥಿ ನಿಲಯಗಳ ಸಂಘಗಳ ಮಾಜಿ ಅಧ್ಯಕ್ಷರಾದ ಡಾ ಸ್ಟೇಂಸ್ ಜಾನ್ ಕ್ಯಾಥ್ ಪ್ರೂಬ್‌ರವರು ನೆನ್ನೆ ಬೆಳಗ್ಗೆ ಭೇಟಿಯಿತ್ತು ಅಂತರ ರಾಷ್ಟ್ರೀಯ ಯುವಕರ ಸಂಘಟನೆ ವಿಷಯವಾಗಿ ಭಾಷಣ ಮಾಡಿದರು ನಿಲಯದ ಅಧ್ಯಕ್ಷ ಶ್ರೀ ಆರ್ ವಾಸುದೇವಮೂರ್ತಿಯವರು ಅತಿಥಿಗಳನ್ನು ಸತ್ಕರಿಸಿದರು

SRI GAYATHRI

TALKIES

Daily 2 Shows

From 24-12-1952

INTRUDER IN THE DUST

Acting— David Brian

Edited, Printed and Published by A R Nagarajan at Sadhvi Press, D Subbiah Road, Mysore

ಆನೆಗಳಿಂದ ಫಸಲಿಗೆ ನಷ್ಟ

ಚಾಮರಾಜನಗರ ೨೩

ಶ್ರೀ ಸಿ ಡಿ ನಾರಾಯಣರಾಯರು ಈ ರೀತಿ ಬರೆಯುತ್ತಾರೆ

ಚಾಮರಾಜನಗರದ ತಾಲ್ಲೂಕಿನಲ್ಲಿ ಈ ವರ್ಷ ಕಾಲದಲ್ಲಿ ಮಳೆ ಬಾರದೆ, ಮುಸ್ಸು ಮತ್ತು ತರಿ ಫಸಲು ಸುಮಾರಾಗಿ ಕೆಟ್ಟುಹೋಗಿರುವುದು ಸರ್ಕಾರದ ಅವಗಾಹನೆಗೆ ಬಂದಿರುತ್ತೆ ಹೀಗಿರುವಲ್ಲಿ ಉಳಿರುವ ಅಲ್ಪ ಸ್ವಲ್ಪ ತರಿ ಮತ್ತು ಮುಸ್ಸು ಫಸಲಿಗೆ ಕಾಡಾನೆಗಳ ಕಾಟವು ಹೇಳತೀರದಾಗಿದೆ ದೊಳ್ಳೀಪುರದ ಬೈಲಿನಲ್ಲೂ ತಿಂಡಕೆರೆ ಬೈಲಿನಲ್ಲೂ ಸಹ ಆನೆಗಳು ಬಂದು ಸುಮಾರು ಈಗಾಗಲೇ ೩೦ ಎಕರೆ ತರಿ ಜಮೀನಿನಲ್ಲಿ ಫಸಲನ್ನು ಸಂಪೂರ್ಣ ನಾಶಪಡಿಸಿರುತ್ತವೆ ಅಕ್ಕಪಕ್ಕದ ಗ್ರಾಮಗಳಾದ ಬಸವಾಪುರ, ದೊಡ್ಡಮೋಳೆ ವಗ್ಗೆರೆ ಗ್ರಾಮಗಳ ಮುಸ್ಸು ಜಮೀನಿಗೆ ಸುಗ್ಗಿ ರಾಗಿ ಫಸಲನ್ನು ನಾಶಪಡಿಸುತ್ತವೆ ಸುಗ್ಗಿ ಕಾಲದಲ್ಲಿ ರಾಗಿಗೆ ಸರಿಯಾಗಿರುವ ಜಮೀನುಗಳಿಗೆ ಕಾಡಾನೆಗಳು ಬಂದು ನಾಶಪಡಿಸದಂತೆ ನೋಡಿಕೊಳ್ಳಲು ಅರಣ್ಯ ಇಲಾಖೆಯವರಿಗೆ ಸ್ಟ್ಯಾಂಡಿಂಗ್ ಆರ್ಡರು. ಇದ್ದಾಗ್ಯೂ ಅವರು ನಿಗಾ ತೆಗೆದುಕೊಂಡಂತೆ ಕಾಣುವುದಿಲ್ಲ ಅರಣ್ಯ ಇಲಾಖೆಯವರಿಗೂ ಈ ವಿಚಾರದಲ್ಲಿ ರೈತರು ದೂರು ಕೊಟ್ಟಿರುತ್ತಾರೆ ರೈತರ ಗೋಳು ಹೇಳತೀರದು [illegible] ಸರಿಯಾದ [illegible] ಅಲ್ಪ ಸ್ವಲ್ಪ ಬೆಳೆಯನ್ನಾದರೂ ರೈತರ ಕೈಸೇರುವ ಹಾಗೆ ಮಾಡುವರೇ?

ಈ ತಾಲ್ಲೂಕಿನ [illegible] ಶ್ರೀ [illegible] ಸರ್ಕಾರದವರು [illegible] ಈ ಕಾಲದಲ್ಲಿ ಶ್ರೀಯುತ [illegible] ಇಲ್ಲಿಗೆ [illegible] ಅವರು ಬಂದು ಕೇವಲ ಎರಡು ತಿಂಗಳೇ ಆಗಿದೆ ಅವರನ್ನು ಸರ್ಕಾರದವರು ಬೇರೆ ಕಡೆಗೆ ವರ್ಗ ಮಾಡಿದ್ದಾಗಿ ಕೇಳುತ್ತೇವೆ ಈಗ ತಾಲ್ಲೂಕ ಜಮಾಬಂದಿ ನಡೆಯುತ್ತಿದೆ. ಭತ್ತ ಮತ್ತು ರಾಗಿ ಫಸಲು ಕಟಾವು ಆಗುತ್ತಿರುತ್ತೆ [illegible] ಸಂಗ್ರಹಣೆ ಆಗಬೇಕಾಗಿದೆ ಸಾಧಾರಣವಾಗಿ ಸಂಗ್ರಹಣೆ ಕಾಲದಲ್ಲಿ ಅಮಲ್ದಾರರುಗಳನ್ನು ವರ್ಗಾಯಿಸುವ ಪದ್ಧತಿ ಇಲ್ಲ ಇವರು ಬಂದು ಕೇವಲ ಎರಡು ತಿಂಗಳೇ ಆದ್ದರಿಂದಲೂ ತಾಲ್ಲೂಕು ಜಮಾಬಂದಿ ಮತ್ತು ಸುಗ್ಗಿ ಕಳೆಯುವವರೆಗಾದರೂ ಸರ್ಕಾರದವರು ಇವರನ್ನು ಇಲ್ಲಿಯೇ ಇಟ್ಟುಕೊಳ್ಳುವರೇ?

ಪ್ರಭಾ 26 12-52 ರಿಂದ ದಿನವಹಿ 3 ಪ್ರದರ್ಶನ

ಸೋವಿಯಟ್ ಫಿಲಂ[illegible]ರವರ ಅದ್ಭುತ ಸಾಹಸಗಳಿಂದಲೂ, ಚಮತ್ಕಾರಗಳಿಂದಲೂ ಕೂಡಿದ ವರ್ಣರಂಜಿತ ಚಿತ್ರ

ಆನ್ ದಿ ಸರ್ಕಸ್ ಎರೀನ

ವಿಶೇಷ ಬೆಳಗಿನ ಪ್ರದರ್ಶನ 27-12-52

ರವಿವಾರ 10-30 ಘಂಟೆಗೆ

ಸಾಯಂಕಾಲದ ಆಟದ ದರದಂತೆ

MATHEMATICS

TUITION

Will be given to **INTERMEDIATE & DEGREE STUDENTS** by an experienced teacher

For terms apply sharp to.

'MATHS'

321, D Subbiah Road,

Mysore

DISTRICT BOARD, MYSORE

1 **Sealed tenders will be received at the Office of the President, District Board, Mysore upto 4 P M on 29-12-52 for the construction of the works** noted below:—

2. **The works have to be completed by the** end of March 1953

3. **Tenders should be given on percentage** basis **either above or below the sanctioned estimate** If any tenderer is willing to do the work at the sanctioned estimate rates, the fact should be noted in the tender

4 **Items not provided in the sanctioned estimate will be paid at the approved schedule of rates** in force or data worked out during the execution of work.

5. **Each tender must be accompanied by a Treasury Challan for having credited to treasury an earnest money deposit amount noted against each** work

6 **Adequate progress should be shown from the commencement** i. e., from the date of the agreement failing which the earnest money will be forfeited and the contract cancelled without further notice and the balance of work will be carried out at his risk.

7 Controlled articles required for the construction will be supplied departmentally and the cost thereof adjusted in the bills that come for payment

8 Successful tenderers will be required to produce an Income Tax clearence or verification certificate before entrusting the work

9 The President reserves the right of accepting or rejecting the tender without giving any reason

10 The decision of the District Board in respect of any dispute regarding rates or other matters arising will be final

11. Plans and estimates and other details connected with the work may be seen in the office on any working day during office hours

No	Name of Work	Estimate	Earnest money required
1	Construction of a Musafirkhana at Kanagal, Periyapatna Taluk	Rs 6500	Rs 300
2.	Constructing a Primary School Building at Chakkodanahally, Heggadadevanakote Taluk	„ 2500	100
3.	Construction of a Stone Masonry Bridge across Devanur Halla Nanjangud Taluk	„ 7000	„ 300
4	Constructing a Veterinary dispensary at Periyapatna	7500	„ 3[illegible]
5.	Constructing a Primary School at Hosahalli Heggadadevanakote Taluk	„ 2500	100
6	Constructing a Musafirkhana Building at Yelandur	„ 6600	100

H. M. CHANNABASAPPA,
President
District Board, Mysore

ಫೋನ್ ನಂ. ೬೪೨ ||ವಂದೇ ಮಾತರಂ|| ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧] ಗುರುವಾರ ೨೫ ೧೨ ೧೯೫೩ [ಸಂಚಿಕೆ ೧೨೩

ಮೈ|| ಸರ್ಕಾರ-ರಿಸರ್ವ್ ಬ್ಯಾಂಕ್ ಒಪ್ಪಂದ

ರೈಲ್ವೆ ನಿಲ್ದಾಣದ ಬಳಿ ಕೊಲೆ ಬಗ್ಗೆ ಮೊಕದ್ದಮೆ

ಮೈಸೂರು ೨೪

ಕೃಷ್ಣರಾಜನಗರದ ಮೊ ಪ್ರಿ ಕ್ಲಾಸ್ ಜಡ್ಜರಾದ ಶ್ರೀ ಎ ಎಲ್ [illegible] ಅವರ ಸಮ್ಮುಖದಲ್ಲಿ ಕ [illegible] ನಂಜಪ್ಪ ಎಂಬ ಮಾಜಿ [illegible] ಮೇಲೆ ಹೊರಲಾಗಿರುವ ೨ [illegible] ವಿಚಾರಣೆಯು [illegible] ಕೊಲೆ ಮತ್ತು ಹಿಂಸೆ [illegible] ಆಪಾದನೆಯನ್ನು ಹೊರಿಸ [illegible] ಮಾಡಲಾಗಿದೆ. ಕೃಷ್ಣರಾಜೇ [illegible] ಯ ಡಾ|| [illegible], ಶ್ರೀ [illegible] ಬಾಲಕೃಷ್ಣಮೂರ್ತಿ, ಮತ್ತು [illegible] ಶೆಟ್ಟಿ ಇವರುಗಳ ವಿಚಾರಣೆ ನಡೆಯಿತು. ಬರುವ ೩ ನೇ ತಾ|| ಗೆ ಮೊ [illegible] ಮುಂದುವರಿಯಿತು.

ಕಳೆದ ತಿಂಗಳ ಹಿಂದೆ ಹೊಳೆ [illegible] ಮುಳ್ಳಹಳ್ಳಿಯಿಂದ ಬಂದ ಕಣ್ಣ [illegible] ಹೆಣ್ಣು ಮಗುವೂ ಸೇರಿ [illegible] ಮಚ್ಚಿನಿಂದ ಹೊಡೆದು [illegible] ಈಗಾಗಲೇ ಪ್ರಕಟವಾಗಿದೆ.

ಬೈಸಿಕಲ್ ಕಳುವಿಗಾಗಿ ಬಂಧನ

ರಾಜಧಾನಿಯ ಕ್ರೈಂ ಬ್ರಾಂಚ್ ಪೊಲೀಸರು ರಾಮರಾಜೆ ಅರಸ್ ಎಂಬುವನನ್ನು ಮೊನ್ನೆ ದಿನ ದಸ್ತಗಿರಿ ಮಾಡಿ, [illegible] ಬೈಸಿಕಲ್ಲುಗಳನ್ನು ವಶಪಡಿಸಿಕೊಂಡು ನೆನ್ನೆ ಅವರ ಮೇಲೆ ಮೊಕದ್ದಮೆ ಹೂಡಿದರು.

ಪ್ರಕಾಶಂರವರ ಚುನಾವಣಾ ತಕರಾರು ಅರ್ಜಿ ವಜಾ

[illegible] ಯ ಮುಖ್ಯ ಮಂತ್ರಿ [illegible] ಯವರು ಅಲ್ಲಿನ ಶಾಸನ ಸಭೆಗೆ [illegible] ನಗರದ ಹಾರ್ಬರ್ ಕ್ಷೇತ್ರ [illegible] ಚುನಾವಣೆಯಲ್ಲಿ [illegible] ಆರಿಸಿ ಬರುವುದು ಕ್ರಮ ಬದ್ಧವಲ್ಲ [illegible] ಪ್ರತಿಸ್ಪರ್ಧಿಗಳಾದ ಟಿ ಪ್ರಕಾ [illegible] ಸಲ್ಲಿಸಿದ್ದ ತಕರಾರು ಅರ್ಜಿ [illegible] ಚುನಾವಣಾ ನ್ಯಾಯಮಂಡಳಿ ನೆನ್ನೆ ತಿರಸ್ಕರಿಸಿ, ಮೊಕದ್ದಮೆಗಾಗಿ [illegible] ಕೃಷ್ಣರಾಯರಿಗೆ ತಗಲಿದ [illegible] ಗಳ ವೆಚ್ಚವನ್ನು ಪ್ರಕಾಶಂ [illegible] ಕೊಡುವಂತೆ ಆಜ್ಞೆ ಮಾಡಿತು [illegible] ಚುನಾವಣಾ ನಿಯಮಗಳ ಉಲ್ಲಂ [illegible] ತಾದ ಆಪಾದನೆಗಳನ್ನು ಮಾ [illegible] ಎನ್ನು ಅರ್ಜಿದಾರರು ವಿ [illegible] ಅವನ್ನು ಪುಷ್ಟೀಕರಿಸಲಿಲ್ಲವೆಂ [illegible] ನ್ಯಾಯಾಧಿಕರಣ ತಿಳಿಸಿದರು.

ಪ್ರೊ|| ಕೆ. ಆರ್. ಕೆ. ಅನಂತಕೇರರ ನಿಧನ

ರಾಜಧಾನಿಯ ಉಪಾಧ್ಯಾಯರ ಕಾ [illegible] ಎಜುಕೇಷನ್ ಪ್ರೊಫೆಸರ್, ಶ್ರೀ [illegible] ಅನಂತಕೇರರವರು ನೆನ್ನೆ ರಾ [illegible] ಹೃದಯಸ್ತಂಭನದಿಂದ ಮೃತರಾ [illegible] ತಿಳಿಸಲು ವಿಷಾದಿಸುತ್ತೇವೆ [illegible] ನರಿಗೆ ೬೨ ವರ್ಷ ವಯಸ್ಸಾಗಿದ್ದಿತು [illegible] ಗ್ಲಾಸ್ಗೊ ವಿಶ್ವ ವಿದ್ಯಾಲಯದ [illegible] ಮತ್ತು ಲೀಡ್ಸ್ ವಿಶ್ವ ವಿದ್ಯಾ [illegible] ಎಂ ಎ ಡಿ ಪದವಿಗಳನ್ನು ಪ [illegible] ರಾಜ್ಯ ವಿಶ್ವವಿದ್ಯಾನಿಲಯದಲ್ಲಿ ಉಪಾ [illegible] ಗಿದ್ದರು. ಮೃತರ ಆತ್ಮಕ್ಕೆ [illegible] ದೊರೆಯಲೆಂದು ಕೋರಿ ಅವರ [illegible] ದವರಿಗೆ ನಮ್ಮ ಅನುತಾಪ [illegible] ಸೂಚಿಸುತ್ತೇವೆ.

ಕಾಶ್ಮೀರದ ಬಗ್ಗೆ ಅಮೆರಿಕಾ ಬ್ರಿಟನ್ ನಿರ್ಣಯದ ಒಪ್ಪಿಗೆ

ಕಾಶ್ಮೀರ ಸಮಸ್ಯೆಯು ಪರಿಹಾರಕ್ಕಾಗಿ ಭಾರತ ಮತ್ತು ಪಾಕಿಸ್ತಾನಗಳೆರಡೂ ಸಂಧಾನಕ್ಕೆ ತೊಡಗುವಂತೆಯೂ ನಿಸ್ಸೈನೀಕರಣವಾದ ನಂತರ ಪಾಕಿಸ್ತಾನದ ಕಡೆ ೩ ರಿಂದ ೬,೦೦೦ ಸೈನ್ಯಗಳು ಆಜಾದ್ ಕಾಶ್ಮೀರದಲ್ಲೂ ಭಾರತದ ಕಡೆ ೧೨ ರಿಂದ ೧೮ ಸಾವಿರ ಸೈನ್ಯಗಳೂ ಇರಬಹುದೆಂದೂ ಸೂಚಿಸಿ ಭದ್ರತಾ ಸಮಿತಿಗೆ ಇಂಗ್ಲೆಂಡ್ ಮತ್ತು ಅಮೆರಿಕಾಗಳು ಕಳುಹಿಸಿರುವ ನಿರ್ಣಯವು ಅಂಗೀಕೃತಗೊಳ್ಳುತ್ತದೆ. ಪಾಕಿಸ್ತಾನ ನಿರ್ಣಯದ ಬಗ್ಗೆ ಸಂಧಾನ ಮಾಡುವುದಿಲ್ಲವೆಂದು ಭಾರತದ ಪ್ರತಿನಿಧಿ ವಿಜಯಲಕ್ಷ್ಮಿ ಪಂಡಿತರು ತಿಳಿಸಿದ್ದಾರೆ.

ಭಾರತದಲ್ಲಿ ಅಣು ಶಕ್ತಿ ಉತ್ಪನ್ನಕ್ಕಾಗಿ ಯೋಜನೆ

ಭಾರತದಲ್ಲಿ ಅಣು ಶಕ್ತಿಯನ್ನು ಅಭಿವೃದ್ಧಿಗೊಳಿಸಲು ೫ ವರ್ಷಗಳ ಯೋಜನೆಗೆ ಭಾರತ ಸರ್ಕಾರದವರು ಅನುಮತಿಯನ್ನಿತ್ತಿರುವರೆಂದು ಪ್ರಧಾನಿ ನೆಹರೂರವರು ನೆನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದರು. ವಿನಾಶಕಾರಿಕ ಅಸ್ತ್ರಗಳನ್ನು ತಯಾರಿಸುವುದು ಭಾರತದ ಉದ್ದೇಶವಲ್ಲವೆಂದೂ ರಚನಾತ್ಮಕ ಕಾರ್ಯಗಳಿಗೆ ಅಣು ಶಕ್ತಿಯನ್ನು ಉಪಯೋಗಿಸಲಾಗುವುದೆಂದೂ ಅವರು ಹೇಳಿದರು.

ಪೆಪ್ಸು ಸರ್ಕಾರದಲ್ಲಿ ಅವಿಶ್ವಾಸ ನಿರ್ಣಯದ ತಿರಸ್ಕಾರ

ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನಗಳ ಒಕ್ಕೂಟದ ಸಂಯುಕ್ತರಂಗದ ಮಂತ್ರಿ ಮಂಡಲದಲ್ಲಿ ಅಲ್ಲಿನ ಕಾಂಗ್ರೆಸ್ ಪಕ್ಷದವರು ಅವಿಶ್ವಾಸ ಸೂಚಿಸಿ ತಂದ ನಿರ್ಣಯವು ಅಲ್ಲಿನ ಶಾಸನ ಸಭೆಯಲ್ಲಿ ೩೦-೨೦ ಓಟುಗಳಿಂದ ತಿರಸ್ಕೃತವಾಗಿದೆ. ಮೂವರು ಕಮ್ಯೂನಿಸ್ಟರು ಮತ್ತು ಒಬ್ಬ ಸ್ವತಂತ್ರರು ಮಾತ್ರ ಓಟು ಮಾಡಲಿಲ್ಲ.

ಮಹಮದ್ ಅಹಮದ್‌ರವರಿಗೆ ಹೆಚ್ಚಿನ ರಜಾ

ರಜದ ಮೇಲಿರುವ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಮಹಮದ್ ಅಹಮದ್‌ರವರ ರಜವನ್ನು ಇದೇ ೨೧ ನೇ ತಾರೀಕಿನಿಂದ ಒಂದು ತಿಂಗಳ ಕಾಲ ಹೆಚ್ಚಿಸಲಾಗಿದೆ.

ಪತ್ರಿಕಾ ಕಛೇರಿ ಬಳಿ ಪ್ರದರ್ಶನಕ್ಕಾಗಿ ಮೊಕದ್ದಮೆ

ಮೈಸೂರು ೨೪

ರಾಜಧಾನಿಯ ವಿಜಯ ಪತ್ರಿಕಾ ಕಛೇರಿಯ ಮುಂದೆ ಕಳೆದ ೮ ನೇ ತಾ|| ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದ ಸಂಬಂಧವಾಗಿ ದೇವರಾಜಾ ಪೊಲೀಸರು ನೆನ್ನೆ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಶ್ರೀಗಳಾದ ಬಿ ಶ್ರೀಕಂಠಪ್ಪ, ಗಂಗಾಧರಪ್ಪ, ಜಿ ವಿ ಲಿಂಗಪ್ಪ ಬಿ [illegible] ನಾರಾಯಣ್, ಹೆಚ್ ಟಿ ರೆಡ್ಡಿ ಮತ್ತು ಕ ಎಸ್ ಮಂಜೇಗೌಡ ಎಂಬ ವಿದ್ಯಾರ್ಥಿಗಳ ಮೇಲೆ ಪತ್ರಿಕೋದ್ಯಮಿ ಶ್ರೀ ವೇದಾಂತ ಹೆಮ್ಮಿಗೆಯವರ ಮೇಲೂ ಅಕ್ರಮ ಕೂಟ ಅತಿಕ್ರಮ ಪ್ರವೇಶ ಮತ್ತು ಶಾಂತಿ ಭಂಗದ ಆಪಾದನೆಗಳನ್ನು ಮಾಡಿ ಮೊಕದ್ದಮೆ ಹೂಡಿದರು. ಪತ್ರಿಕಾ ಕಛೇರಿ ವ್ಯವಸ್ಥಾಪಕರ ಮೇಲೆ ವಿದ್ಯಾರ್ಥಿಗಳು ೨೦೦ ರೂ ಗಳನ್ನು ಪತ್ರಿಕಾಲಯದ ಆಸ್ತಿಗೆ ನಷ್ಟ ಉಂಟು ಮಾಡಲಾಯಿತೆಂದು ಆಪಾದಿಸಲಾಗಿದೆ. ಮಹಾರಾಜಾ ಕಾಲೇಜಿನ ಪ್ರೊಫೆಸರ್ ಶ್ರೀಕಂಠಯ್ಯನವರ ವಿರುದ್ಧವಾಗಿ ಪತ್ರಿಕೆಯಲ್ಲಿ ಬಂದ ಲೇಖನದ ಸಂಬಂಧವಾಗಿ ಪ್ರದರ್ಶನ ನಡೆಯಿತು. ಮೊಕದ್ದಮೆಯನ್ನು ಬರುವ ೩ ನೇ ತಾ|| ಗೆ ವಿಚಾರಣೆಗಾಗಿ ಇಟ್ಟುಕೊಳ್ಳಲಾಗಿದೆ.

ಎರ್ನಾಕುಲಂ-ಕ್ವಿಲಾನ್ ರೈಲು ರಸ್ತೆಯ ಗುದ್ದಲಿ ಪೂಜೆ

ಪ್ರಧಾನಿ ನೆಹರೂರವರು ನೆನ್ನೆ ಎರ್ನಾಕುಲಂ ಕ್ವಿಲಾನ್ ನಗರಗಳ ನಡುವೆ ರೈಲು ರಸ್ತೆಯ ನಿರ್ಮಾಣಕ್ಕಾಗಿ ಎರ್ನಾಕುಲಂನಲ್ಲಿ ಗುದ್ದಲಿ ಪೂಜೆಯನ್ನು ನಡೆಸಿದರು. ತಿರುವಾಂಕೂರು ಮತ್ತು ಕೊಚ್ಚಿ ಮಹಾರಾಜರುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ೯೬ ಮೈಲಿ ಇರುವ ಈ ರಸ್ತೆಯು ೬೩ ಭಾರಿ ಸೇತುವೆಗಳು, ಮತ್ತು ಒಟ್ಟು ಸಾವಿರ ಅಡಿ ಉದ್ದದ ಎರಡು ಸುರಂಗಗಳನ್ನು ಹೊಂದಿರುವುದು. ೫|| ಕೋಟಿ ರೂ ವೆಚ್ಚದಿಂದ ೧೧ ಲಕ್ಷ ಪ್ರಜೆಗಳಿಗಾಗಿ ರಸ್ತೆಯು ನಿರ್ಮಾಣವಾಗುವುದು. ನೆಹರೂರವರು ಈ ಸಂದರ್ಭದಲ್ಲಿ ಭಾಷಣ ಮಾಡಿ, ದೇಶ ಪ್ರಗತಿಪರವಾಗುವುದರಿಂದ ಅವಸರ್ಯಾದೆಯಾಗುವುದೆಂಬ ಭಾವನೆಯು ತಪ್ಪಬೇಕೆಂದು ಸೂಚಿಸಿದರು.

ಆಹಾರ ಧಾನ್ಯ ವಸೂಲಿ ಬಗ್ಗೆ ಸರ್ಕಾರದ ಆಜ್ಞೆ

ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಟೀಕೆಗಳು

ಸ್ವಂ ಫೋ] ಬೆಂಗಳೂರು ೨೪

ಕಾಂಗ್ರೆಸ್ ಪಕ್ಷದ ಸಭೆಯು ರೆಸಿಡೆನ್ಸಿ ಭವನದಲ್ಲಿ ಇಂದು ಬೆಳಗ್ಗೆ ಸೇರಿ ಮಧ್ಯಾಹ್ನ ೧ ಗಂಟೆ ವರೆಗೂ ಆಹಾರ ಧಾನ್ಯಗಳ ವಸೂಲಿ ಬಗ್ಗೆ ಸರ್ಕಾರದ ಹುಗ್ಗಿ ಆಜ್ಞೆಯನ್ನು ಕುರಿತು ಚರ್ಚಿಸಿತು. ಶ್ರೀಗಳಾದ ಎ ವೆಂಕಟಪ್ಪ, ಟಿ ಮರಿಯಪ್ಪ, ಎ ಭೀಮಪ್ಪ ನಾಯಕ್ ಮುಂತಾದವರು ಭಾಷಣ ಮಾಡಿ, ಹುಗ್ಗಿ ಆಜ್ಞೆಯಿಂದ ರೈತರಿಗೆ ಕಿರುಕುಳವಾಗುವುದೆಂದು ಆಕ್ಷೇಪಿಸಿದರು. ೫ ವರ್ಷಗಳಲ್ಲಿ ವಿಧಿಸಲಾದ ಧಾನ್ಯ ವಸೂಲಾತಿಯು ಕೋಟಾದ ಸರಾಸರಿಯ ಬದಲು, ರೈತನು ಒಪ್ಪಿಸಿರುವ ಮೊತ್ತದಲ್ಲಿ ಸರಾಸರಿಯಂತೆ ವಸೂಲು ಮಾಡುವುದು ಉತ್ತಮವೆಂದು ಸದಸ್ಯರು ತಿಳಿಸಿದರು.

ಶುದ್ಧವಾದ ಧಾನ್ಯವನ್ನೇ ಕೊಡಬೇಕೆಂದು ಹೊರಡಿಸಿರುವ ಆಜ್ಞೆಯಿಂದ ಅಧಿಕಾರಿಗಳು ಸ್ವೇಚ್ಛೆಯಾಗಿ ವರ್ತಿಸಲು ಅವಕಾಶವಿರುವುದೆಂದು ಅವರು ತಿಳಿಸಿದರು. ರೈತರಿಗೆ ಪ|| ೧೦ ರಷ್ಟು ಧಾನ್ಯವನ್ನು ಬಿಡುವುದರ ಬದಲು ೨೫ ರಷ್ಟು ಬಿಡಬೇಕೆಂದೂ ಸೂಚಿಸಲಾಯಿತು.

ಆಹಾರದ ಮಂತ್ರಿ ಶ್ರೀ ಸಿದ್ದವೀರಪ್ಪನವರು ಉತ್ತರವಿತ್ತು, ಹಿಂದಿನಂತೆ ಮಾಡಿದರೆ ಅನೇಕರು ಧಾನ್ಯ ಕೊಡದೆ ತಪ್ಪಿಸಿಕೊಳ್ಳಲು ಅವಕಾಶವಾಗುವುದೆಂದೂ, ಸದಸ್ಯರ ಸಲಹೆಯಂತೆ ವರ್ತಿಸಿದರೆ ಧಾನ್ಯವೇ ವಸೂಲಾಗುವುದಿಲ್ಲವೆಂದೂ ತಿಳಿಸಿದರು.

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಾತನಾಡಿ, ಹುಗ್ಗಿ ಆಜ್ಞೆಯನ್ನು ಬದಲಾಯಿಸಲು ಸಾಧ್ಯವಿಲ್ಲವಾದರೂ, ರೈತರಿಗೆ ಕಿರುಕುಳವಾಗದಂತೆ, ನೋಡಿಕೊಳ್ಳುವುದಾಗಿ ಭರವಸೆಯಿತ್ತರು.

ಸಭೆಗೆ ೮೦ ಜನ ಸದಸ್ಯರೂ, ಶ್ರೀಗಳಾದ ಹೆಚ್ ಸಿ ದಾಸಪ್ಪ ಮತ್ತು ಎಲ್ ಎಸ್ ವೆಂಕಟಾಜೀರಾಯರೂ ಬಂದಿದ್ದರು. ಮಧ್ಯಾಹ್ನ ಪುನಃ ಸಭೆ ಸೇರಿತ್ತು.

ಮೈಸೂರು ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ಒಪ್ಪಂದ

ಫೆಡರಲ್ ಹಣಕಾಸಿನ ಏಕತೆಯ ಯೋಜನೆಯ ಅಂಗವಾಗಿ ಮೈಸೂರು ಸರ್ಕಾರದವರು ಮತ್ತು ಭಾರತದ ರಿಸರ್ವ್ ಬ್ಯಾಂಕಿನವರು ನೆನ್ನೆ ಬೊಂಬಾಯಿಯಲ್ಲಿ ಒಪ್ಪಂದವನ್ನು ಮಾಡಿಕೊಂಡರು. ಅದರ ಪ್ರಕಾರ ಬರುವ ಜನವರಿ ೧ ರಿಂದ ಮೈಸೂರು ಸರ್ಕಾರಕ್ಕೆ ರಿಸರ್ವ್ ಬ್ಯಾಂಕಿನವರು ಸಾಲ, ಬ್ಯಾಂಕರುಗಳಾಗುವರು. ಅದರಂತೆ ರಿಸರ್ವ್ ಬ್ಯಾಂಕಿನವರು ಎಲ್ಲ ಸಹವಾಟುಗಳನ್ನು ಮೈಸೂರು ಸರ್ಕಾರದ ಪರವಾಗಿ ನಡೆಸಲು ಕ್ರಮಕ್ರಮವಾಗಿ ಸಂಸ್ಥಾನದಲ್ಲಿ ಅವಶ್ಯಕವಾದಷ್ಟು ಶಾಖೆಗಳನ್ನು ತೆರೆಯುವರು. ಶೀಘ್ರದಲ್ಲೇ ಬೆಂಗಳೂರಿನಲ್ಲಿ ಆ ಬ್ಯಾಂಕಿನ ಶಾಖೆಯೊಂದು ಸ್ಥಾಪಿಸಲ್ಪಡುವುದು. ಮೈಸೂರು ಬ್ಯಾಂಕು ಸಂಸ್ಥಾನದಲ್ಲಿ ರಿಸರ್ವ್ ಬ್ಯಾಂಕಿನ ಪ್ರತಿನಿಧಿಯಾಗಿ [illegible] ಕೆಲಸ ಮಾಡುವುದು.

ಪಾನ ನಿರೋಧ ಕ್ರಮ ಸಡಿಲಿಸಲು ಪ್ರಾಂತಗಳ ಒಪ್ಪಿಗೆ

ಕೇಂದ್ರ ಸರ್ಕಾರದವರ ಸೂಚನೆ ಪ್ರಕಾರ ಎಲ್ಲ ಸಂಸ್ಥಾನಗಳ ಸರ್ಕಾರಗಳೂ ಪಾನ ನಿರೋಧ ಕ್ರಮವನ್ನು ಸಡಿಲಗೊಳಿಸಲು ಒಪ್ಪಿರುವುವೆಂದು ವರದಿಯಾಗಿದೆ ಪೂರ್ಣ ಪಾನ ನಿರೋಧವಿರುವ ಬೊಂಬಾಯಿ ಮತ್ತು ಮದ್ರಾಸು ಸಂಸ್ಥಾನಗಳಲ್ಲಿ, ವಿದೇಶೀಯರುಗಳಿಗೆ ರಹದಾರಿಯನ್ನು ಒದಗಿಸಲು ಒಪ್ಪಲಾಗಿದೆ ಹಾಲರು ಮುಂತಾದ ವಿದೇಶೀ ನಾಣ್ಯಗಳನ್ನು ಸಂಗ್ರಹಿಸುವ ಉದ್ದೇಶದಿಂದ ನಮ್ಮ ದೇಶದಲ್ಲಿ ವಿದೇಶೀಯರ ಪ್ರವಾಸಕ್ಕೆ ಉತ್ತೇಜನವೀಯಬೇಕೆಂದೂ ಆಲೋಚಿಸಲಾಗಿದೆ

ಮಹಾರಾಜಾ ಹೈಸ್ಕೂಲು ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಮಹಾರಾಜಾ ಹೈಸ್ಕೂಲಿನ ಸಂಘದ ವಾರ್ಷಿಕೋತ್ಸವವು ಕಳೆದ ೩ ದಿನಗಳಿಂದ ನಡೆದು ನೆನ್ನೆ ಮುಕ್ತಾಯವಾಯಿತು ರಾಲೆಯ [illegible] ದಾನ ಅಧಿಕಾರಿ ಶ್ರೀ ಕೆ [illegible] ಅಯ್ಯಂಗಾರ್‌ರವರೂ ಅಧ್ಯಕ್ಷ [illegible] ವರೂ ಸಮಾರಂಭವನ್ನು [illegible] ರು ಮೊದಲನೇ ದಿನದ ಸಮಾರಂಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಭಾಷಣ ಮಾಡಿದರು [illegible] ಪ್ರಸಿದ್ಧ ಪೌರಾಣಿಕ ನಾಟಕಗಳು [illegible] ಯ ವಿದ್ಯಾರ್ಥಿಗಳಿಂದಲೂ ಮತ್ತು [illegible] ಧ್ಯಾಪಕ ವರ್ಗದವರಿಂದಲೂ ಅಭಿನಯಿಸಲ್ಪಟ್ಟವು ಎರಡನೆಯ ದಿವಸ [illegible] ನ್ನಡ ನಾಟಕಗಳೂ, ಒಂದು [illegible] ನಾಟಕವೂ ಅಭಿನಯಿಸಲ್ಪಟ್ಟವು [illegible] ನೇ ದಿವಸದ ಕಾರ್ಯಕಲಾಪಗಳು [illegible] ಜಿಲ್ಲಾಧಿಕಾರಿಗಳಾದ ಶ್ರೀ ಎಸ್ [illegible] ರವರ ಅಧ್ಯಕ್ಷತೆಯಲ್ಲಿ ನಡೆದುವು ಆಟಪಾಟ, ಫ್ಯಾನ್ಸಿಡ್ರೆಸ್ ಮತ್ತು ಇತರ ಸಾಹಿತ್ಯ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಅಧ್ಯಕ್ಷರು ಬಹುಮಾನವನ್ನು ಹಂಚಿದರು ಒಂದು [illegible] ಕನ್ನಡ ನಾಟಕಗಳೂ, ಒಂದು ಹಿಂದೀ ನಾಟಕವೂ ಅಭಿನಯಿಸಲ್ಪಟ್ಟವು ಸಮಾರಂಭದ ಅಂಗವಾಗಿ ಒಂದು ವಸ್ತುಪ್ರದರ್ಶನವೂ ಏರ್ಪಟ್ಟಿತ್ತು

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible] ಮುಖವೀಣೆ, [illegible] ನಾರಾಯಣಯ್ಯಂಗಾರ್, [illegible] ನಮ್ಮ [illegible] ಸಂಗೀತ [illegible] ಮತ್ತು [illegible] ಸಂಗೀತ [illegible]

ಎಲ್ಲಾ ಬಗೆಯ
ಅಲೋಪಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ಕಣದಲ್ಲಿ ಮಲಗಿದ್ದವರ ಮೇಲೆ ದುಂಡಾವರ್ತಿ

ಮೈಸೂರು ೨೪

ರಾಜಧಾನಿಯ ಸುಪ್ರಸಿದ್ಧ ಜ್ಯೋತಿಷ್ಯರಾದ ಶ್ರೀ ವೆಂಕಟಾಚಾರ್‌ರವರು ಪತ್ರವೊಂದನ್ನು ಬರೆದು, ಕಳೆದ [illegible] ನೇ ತಾ|| ಶನಿವಾರ ರಾತ್ರಿ [illegible] ಗಂಟೆ ಸಮಯದಲ್ಲಿ ತಮ್ಮ ಮಗ ಶ್ರೀ ಕೆ ಶ್ರೀನಿವಾಸಾಚಾರ್ ಮತ್ತು ಸಹೋದರರಾದ ಶ್ರೀ ತಿರುನಾರಾಯಣಾಚಾರ್ಯರು ಟಿ ನರಸೀಪುರದ ತಾಲ್ಲೂಕು [illegible] ಗ್ರಾಮದಲ್ಲಿರುವ ತಮ್ಮ ಜಮೀನಿನಲ್ಲಿ ಭತ್ತದ ರಾಶಿ ಹಾಕಿಕೊಂಡು ಕಾವಲು [illegible] ಮಲಗಿದ್ದಾಗ, [illegible] ಜನರು ಅವರನ್ನು ದೊಣ್ಣೆ ಮತ್ತು ಕಲ್ಲುಗಳಿಂದ ಹೊಡೆದು ತೀವ್ರವಾಗಿ [illegible] ಹಳ್ಳಕ್ಕೆ ತಳ್ಳಿ, ಭತ್ತವನ್ನು ಕಳುವು ಮಾಡಿರುವರೆಂದು ತಿಳಿಸಿರುತ್ತಾರೆ [illegible] ರನ್ನು ರಾಜಧಾನಿಗೆ ಕರೆತಂದು ಚಿಕಿತ್ಸೆ ಮಾಡಲಾಗುತ್ತಿದೆ [illegible]

ಪರ್ವತಕ್ಕೆ ವಿಮಾನ ಡಿಕ್ಕಿ ಹೊಡೆದು ೧೦ ಜನರ ಮರಣ

[illegible] ಡಿಕ್ಕಿ ಹೊಡೆದ [illegible] ಜನರು ಉಳಿದಿರುವರೆಂದೂ ವರದಿಯಾಗಿದೆ

ಪ್ಯಾಡಲ್ ಟೆನಿಸ್ ಪಂದ್ಯ

[illegible] ಕೃಷ್ಣಮೂರ್ತಿಪುರದ [illegible] ಕ್ಲಬ್ಬಿನ ಆಶ್ರಯದಲ್ಲಿ ಇದೇ ತಿಂಗಳು ೨೭ ನೇ ತಾ|| ನಿಂದ ಪ್ಯಾಡಲ್ ಟೆನ್ನಿಸ್ ಪಂದ್ಯಗಳು ನಡೆಯುವುವು ಭಾಗವಹಿಸುವವರು ಕಾರ್ಯದರ್ಶಿ [illegible] ಕೃಷ್ಣಮೂರ್ತಿಪುರ ಈ ವಿಳಾಸದವರಿಗೆ [illegible] ನೇ ತಾ|| ಪ್ರವೇಶ ಧನದೊಡನೆ ತಿಳಿಸಿ, ಹೆಚ್ಚಿನ ವಿವರಗಳನ್ನು ಪಡೆಯಬಹುದು

ಕಮಲಾ ನೆಹರೂ ಸ್ಮಾರಕ ಉದ್ಯಾನ ವನ

ಪಂಡಿತ ಜವಾಹರಲಾಲ್ ನೆಹರೂರವರ ಪತ್ನಿ ಕಮಲಾ ನೆಹರೂರವರ ಸ್ಮಾರಕಾರ್ಥವಾಗಿ ಬೊಂಬಾಯಿ ನಗರದ ಮಲಬಾರ್ ಗುಡ್ಡದ ಮೇಲೆ ಒಂದು ಸುಂದರವಾದ ಉದ್ಯಾನವನವನ್ನು ಅಲ್ಲಿನ ಸರ್ಕಾರದವರು ನಿರ್ಮಿಸಿರುವರು ಬೊಂಬಾಯಿ ಗೌರ್ನರರು ಅದರ ಆರಂಭೋತ್ಸವವನ್ನು ಮೊನ್ನೆ ನೆರವೇರಿಸಿದರು

ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಕಳೆದ ೨೧ ನೇ ತಾ|| ಅಖಿಲ ಕರ್ನಾಟಕ ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾ ಸ್ಪರ್ಧೆಯು ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ಬಸವಯ್ಯನವರ ಪ್ರಾರ್ಥನೆಯಾದನಂತರ, ಶ್ರೀ [illegible] ರವರಿಂದ ಸೂಚಿತ [illegible] ನೆಹರೂರವರಿಂದ [illegible] ದ ಅಹಿತ್ಯವನ್ನು [illegible] ಸತ್ಯವನ್ನು ಹೇಳುವುದರಿಂದ [illegible] ವಿಷಯದ ಮೇಲೆ ಚರ್ಚೆ [illegible] ವಿದ್ಯಾರ್ಥಿ ನಿಲಯ [illegible] ಪ್ರತಿನಿಧಿಗಳು ಭಾಗವಹಿಸಿ [illegible] ಕಾಲೇಜಿನ ವಿದ್ಯಾರ್ಥಿ [illegible] ಭಾಷಣಕಾರರಿಗೆ [illegible] ಬಹುಮಾನಗಳೂ, ಪ್ರದೇಶ [illegible] ಅಧ್ಯಕ್ಷ ಶ್ರೀ [illegible] ರವರಿಂದ ಹಂಚಲ್ಪಟ್ಟುವು ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಕ್ರಿಕೆಟ್ ಪಂದ್ಯ

ರಾಜಧಾನಿಯ ಸ್ಟಾರ್ ಕ್ರಿಕೆಟ್ ಟೀಮಿನವರು ಚಲುವಾಂಬ ಅಗ್ರಹಾರದ ಟೀಮಿನವರನ್ನು ನೆನ್ನೆ ಒಂದು ಇನಿಂಗ್ಸ್ ಮತ್ತು [illegible] ರನ್ನುಗಳಿಂದ ಸೋಲಿಸಿದರು

ಸೀಮೆಯೆಣ್ಣೆ ಸುರಿದು ತಾಯಿ, ಮಗನ ಕೊಲೆ

ತಿರುಪ್ಪೂರು ಬಳಿ ಕುಲಿಪಾಳ್ಯದಲ್ಲಿ ರೈಲ್ವೆ ಸ್ಟೇಷನ್ ಮಾಸ್ಟರ್ ಆದ ರಾಮಚಂದ್ರರಾಯರ ಎರಡನೇ ಹೆಂಡತಿ [illegible] ಲ್ಯಾಣ ಕುಟ್ಟಿ ಅಮ್ಮಾಳ್ ಎಂಬಾಕೆಯನ್ನೂ, ಆಕೆಯ ಆರ್ತಿಂಗಳ ಗಂಡು ಮಗುವನ್ನೂ ಸೀಮೆಯೆಣ್ಣೆ ಸುರಿದು ಸುಟ್ಟು ಕೊಲೆ ಮಾಡಲಾಗಿದೆಯೆಂದೂ, ಆಕೆಯ ಮತ್ತೊಬ್ಬ ಮಗಳಿಗೆ ಸುಟ್ಟ ಗಾಯಗಳಾಗಿವೆಯೆಂದೂ ವರದಿಯಾಗಿದೆ ರಾಮಚಂದ್ರರಾಯರ ಮೊದಲನೆ ಹೆಂಡತಿಯನ್ನು ಪೋಲೀಸರು ವಶ್ಯಗಿರಿ ಮಾಡಿರುವರು

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	[illegible]	[illegible]
ಎಳ್ಳು	[illegible]	[illegible]
ಹರಳು ಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಉದ್ದು	[illegible]	[illegible]
ಹಲಸಂದೆ	[illegible]	[illegible]
ಹುಚ್ಚೆಳ್ಳು	[illegible]	[illegible]
ಕೊಬ್ಬರಿ ಸರಾಸರಿ ಮಣ ೧ಕ್ಕೆ	[illegible]	[illegible]
ಬೆಲ್ಲ	[illegible]	
ಮೆಣಸಿನಕಾಯಿ	[illegible]	
ಸೀಗೆಕಾಯಿ	[illegible]	
ತೆಂಗಿನಕಾಯಿ ೧,೦೦೦ ಕ್ಕೆ	[illegible]	[illegible]

ಕ್ರಿಸ್ಮಸ್ ಹಬ್ಬದ ಸಲುವಾಗಿ
ಆಕರ್ಷಕವಾದ ಗಡಿಯಾರಗಳು, ವಾಚ್‌ಗಳು, ಕ್ಲಾಕ್ ಮುಂತಾದ ಗಡಿಯಾರಗಳು ನಮ್ಮಲ್ಲಿ ಬಹಳ ಸುಲಭ ಬೆಲೆಗೆ ದೊರಕುತ್ತವೆ ದಯವಿಟ್ಟು ಒಂದು ಸಲ ಬಂದು ನೋಡಿರಿ
ಕೆ. ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್, (Estd 1911)
ಗಡಿಯಾರ ಮತ್ತು ಕನ್ನಡಕ ವ್ಯಾಪಾರಿಗಳು
ಅಶೋಕಾ ರಸ್ತೆ, ಮೈಸೂರು

ಒಲಿಂಪಿಯಾ ಟಾಕೀಸ್
25 12-52 ರಿಂದ 4ನೇ ಕಡೇ ವಾರ
★ ಬೈಜು ಬಾವ್ರ ★
ಮುಂದಿನ ಬದಲಾವಣೆ 1-1 53 ರಿಂದ
[illegible] ಮತ್ತು [illegible]
★ ಭಕ್ತ ಪೂರಣ್ ★

SRI GANESH
TALKIES
From 26-12-1952
THE BATTLE AT APACHE PASS
(Technicolor)
Starring — John Lund Jeff Chandler and Susan Cabot
From 29 12 52
SOUTH SEA SINNER
(For Adults Only)
To Day — LAST DAY
CYRANO DE BERGERAC

AT YOUR SERVICE AGAIN
Paddy & Rice Transport is Please Remember
the Quick Safe & Fast Transport
MYSORE TRANSIT SERVICE (Regd.)
THIRTHA & COMPANY, (Phone 537) Ramavilas Road, Mysore

ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

Edited, Printed and Published by A R Nagarajan at Sadhvi Press, D Subbiah Road, Mysore.

ಪೋ॥ ನಂ ೧೪೭ ॥ವಂದೇ ಮಾತರಂ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶುಕ್ರವಾರ ೨೬-೧೨-೧೯೫೩ [ಸಂಚಿಕೆ ೧೭೪

– ಐಸೆನ್‌ಹೋವರರ – ಭೇಟಿಗೆ ಸ್ಟಾಲಿನ್ ಸಿದ್ಧ

ಶ್ರೀಕಂಠಯ್ಯನವರ ದಿನಾಚರಣೆ

ಮೈಸೂರು ೨೬

…ಧಿಕಾರಿಯಲ್ಲಿ ಸಾಹಿತ್ಯ ಸಂಘದವರು … ದಿವಂಗತ ಪ್ರೊ॥ ಬಿ. ಎಂ. … ಶ್ರೀಕಂಠಯ್ಯನವರ ದಿನಾಚರಣೆಯು … ವರಿಗೆ ನೆರವೇರಿಸಿದರು. ಶ್ರೀ … ಶಿವನಸಮುದ್ರ ಶಾಸ್ತ್ರಿಯವರು ಅಧ್ಯಕ್ಷತೆ … ಪ್ರಾರ್ಥನೆಯಾದ ನಂತರ ಅಧ್ಯಕ್ಷರಾದ ಶ್ರೀ ಎಸ್ ಶ್ರೀನಿವಾ… ಯ್ಯರ್, ಸ್ವಾಗತ ಭಾಷಣ ಮಾಡಿ…

…ಕಾಲೇಜಿನ ಪ್ರೊ॥ ಉಪಾಧ್ಯಾಯರುಗಳಾದ … ಎಸ್ ಸತ್ಯನಾರಾಯಣ, ಸಾ… ರಾಮಣ್ಣ, ಎಸ್ ಶ್ರೀನಿವಾಸರವ… ಗಳಾದ ಆಗರಂ ರಂಗಯ್ಯ, ವೇ… ಹಮ್ಮಿಗೆ, ಕೃಷ್ಣರಾವ್ ಮತ್ತು … ರಾಮಯ್ಯನವರೂ ಪ್ರಾಧ್ಯಾ… … ದ ವೇಶಾಭಿಮಾನ, ಸ್ವಾರ್ಥತ್ಯಾಗ … ಪ್ರಯೋಗ ಸಾಹಸ ಮುಂತಾದ … ಪ್ರಶಂಸಿಸಿ, ವಿದ್ಯಾರ್ಥಿಗಳು ಅವ… ಪ್ರವೃತ್ತಿಯನ್ನು ಅನುಕರಿಸಬೇಕೆಂದು … ರು

… ಎಂಬ ಕೈಬರಹದ ಪತ್ರಿಕೆಯ … ಬಿಡುಗಡೆಯ ನಂತರ ಅಧ್ಯಕ್ಷರ … ಪಡಿ ಹಿತೋಕ್ತಿಗಳನ್ನಿತ್ತರು … ಕಾರ್ಯದರ್ಶಿಯವರಾದ ಶ್ರೀ ಹೆಚ್ … ವಾಸಮೂರ್ತಿಯವರು ವರದಿಯ… ಧನ್ಯವಾದಗಳನ್ನರ್ಪಿಸಿದ ನಂತ… ಯಿತು

…ತ ನಿಧಿಗಾಗಿ ನಗರದಲ್ಲಿ ನಷ್ಟಪರಿಹಾರಕ್ಕಾಗಿ ನಟನಟಿಯರ ಕ್ರಿಕೆಟ್ ಪಂದ್ಯ

…ನಲ್ಲಿ ಇತ್ತೀಚೆಗೆ ಸಂಭವಿಸಿದ … ಅನಾಹುತದಲ್ಲಿ ನೊಂದವರಿಗೆ ಪರಿ… …ಹಲು ಬೊಂಬಾಯಿ ಮತ್ತು … ಚಲನಚಿತ್ರಗಳಲ್ಲಿ ನಟನ… ಕ್ರಿಕೆಟ್ ಪಂದ್ಯವನ್ನು ಜನ… ನೇ ತಾ॥ ಮದ್ರಾಸಿನಲ್ಲಿ ಆಡು… ವ ಪ್ರಾರ್ಥಿಸು ಟೀಮಿನ ಕಡೆ ವೈ… ವಮಾಲಾ, ಸೂರ್ಯಕುಮಾರಿ, … ಪದ್ಮಿನಿ, ಪಿ ಕೆ ಸರಸ್ವತಿ, ಟಿ… ರಾಮಚಂದ್ರ, ಸಹಸ್ರನಾಮಂ … ದವರು, ಬೊಂಬಾಯಿ ಟೀಮಿ… … ನ್ಸ್ ನಳಿನಿ ಜಯವಂತ್, … ತರ್ತ,ಬಿನಾರಾಯ್ ಬೇಗಂ … ಶೇಖರ ಕಟ್ಟು, ರಾಜಕ … ಮೋತೀಲಾಲ್ ಜೈರಾಜ್, … ವ ಂತರಾದವರೂ ಆಡುವ… ವು ಆರಂಭವಾಗುವ ಮೊದ… ಎಸ್ ಕೃಷ್ಣನ್, ಟಿ ಎ ಮ… ರಂಜನ್, ದುರ್ಗಾಖೋಟೆ … ವರ ಹಾಸ್ಯ, ಸಂಗೀತ ಮುಂ… ಏರ್ಪಡಿಸಲಾಗಿದೆ

…ವಿದ್ಯಾಲಯದ ತನಿಖೆ ಪ್ರಕರಣ

ಪತ್ರಿಕೆಗಳ ಸಂಬಂಧವಾಗಿ … ಪರೀಕ್ಷೆಗಳನ್ನು ತನಿಖೆ ಮಾ… ಡಿದವರು ತೀರ್ಮಾನ ಮಾ… …ಟವಲ್ಲಿ ತನಿಖೆಯನ್ನು ಮೊ… ನಡೆಸಿದರೆ ವಿಶ್ವವಿದ್ಯಾಲಯ… ಗೆ ಕುಂದುಕ ಒದಗುವುದೆಂದೂ … ಯೇ ನಡೆಸ ಫಿದಾಗಿಯೂ … ವಿದ್ಯಾಲಯದ ಕೌನ್ಸಿಲ್ಲಿನ … ಪಿಸಿರುವ ವರದಿಯು ಸರ್ಕಾ… ಪರಿಶೀಲನೆಯಲ್ಲಿದೆಯೆಂದೂ ಗೊ… …ದೆ

ಭಾರತ ತತ್ತ್ವಶಾಸ್ತ್ರ ಸಮ್ಮೇಳನ

೩೦೦ ಮಂದಿ ಪ್ರತಿನಿಧಿಗಳು ಭಾಗವಹಿಸುವರು

ಮೈಸೂರು ೨೬

ಭಾರತೀಯ ತತ್ತ್ವಶಾಸ್ತ್ರದ ಕಾಂಗ್ರೆಸ್ಸಿನ ೨೮ ನೇ ಅಧಿವೇಶನವು ನಾಳೆಯ ಬೆಳಿಗ್ಗೆ ೧೦ ಗಂಟೆಗೆ ಇಲ್ಲಿನ ಕ್ರಾಫರ್ಡ್ ಭವನದಲ್ಲಿ ನೆರವೇರುವುದು. ಭಾರತದ ಉಪಾಧ್ಯಕ್ಷರಾದ ಡಾ॥ ಎಸ್ ರಾಧಾಕೃಷ್ಣನ್‌ರವರು ಉದ್ಘಾಟನಾ ಭಾಷಣವನ್ನು ಮಾಡುವರು. ಮೈಸೂರು ಶ್ರೀಮನ್ಮಹಾರಾಜರು ಆರಂಭ ಭಾಷಣ ಮಾಡುವರು. ಪಾಟ್ನಾ ವಿಶ್ವವಿದ್ಯಾಲಯದ ಡಾ॥ ಡಿ ಎಂ ದತ್ತಾತ್ರೇಯರವರು ಅಧ್ಯಕ್ಷತೆ ವಹಿಸುವರು.

ಅಧಿವೇಶನಕ್ಕೆ ೩೦೦ ಮಂದಿ ಪ್ರತಿನಿಧಿಗಳು ಬರಲಿರುವರು. ಆ ಪೈಕಿ ೪೦ ಮಂದಿ ಮಹಿಳೆಯರು ಇರುವರು. ಇಬ್ಬರು ಜಪಾನೀಯರೂ ಭಾಗವಹಿಸುವರು. ಅವರಲ್ಲೊಬ್ಬರು ಸಮ್ಮೇಳನದಲ್ಲಿ ಭಾಷಣವನ್ನು ಮಾಡಲಿರುವರು. ಪ್ರತಿನಿಧಿಗಳನ್ನು ಕೈಗಾರಿಕಾ ಮಂತ್ರಿ, ಶ್ರೀ ಟಿ ಸಿದ್ಧಲಿಂಗಯ್ಯನವರು ಸ್ವಾಗತಿಸುವರು. ಸಮ್ಮೇಳನವು ೨೮ ಮತ್ತು ೩೦ ನೇ ತಾ॥ ಗಳಲ್ಲೂ ನಡೆಯುವುದು.

೨೮ ನೇ ತಾ॥ ರಾತ್ರಿ ೮-೩೦ ಗಂಟೆಗೆ ಆಕಾಶವಾಣಿಯವರು ಪ್ರಾರಂಭೋತ್ಸವದ ಸಮಾರಂಭವನ್ನು ಪ್ರಸಾರ ಮಾಡುವರು.

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿಯವರು ನಮಗೆ ಕಳುಹಿಸಿಕೊಟ್ಟಿರುವ ಸುಂದರವಾದ ಹೊಸ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿರುತ್ತೇವೆ.

ಬಸ್ಸು ತಲೆಕೆಳಗಾಗಿ ೫ ಜನರ ಮರಣ

ಕಣ್ವಾದಿಂದ ದೊಡ್ಡ ಆಲಹಳ್ಳಿಗೆ ಮೊನ್ನೆ ಹೊರಟ ಒಸ್ಸೊಂದು ಕನಕಪುರದ ತಾಲ್ಲೂಕು ದೊಡ್ಡ ಆಲಹಳ್ಳಿ ಕೆರೆಯ ಕಾಲುವೆ ಸೇತುವೆ ಪಕ್ಕದಲ್ಲಿ ತಲೆಕೆಳಗಾಗಿ ಬಿದ್ದು, ೫ ಜನ ಪ್ರಯಾಣಿಕರು ಮೃತರಾದರೆಂದೂ, ೧೧ ಮಂದಿಗೆ ಗಾಯಗಳಾದುವೆಂದೂ ವರದಿಯಾಗಿದೆ.

ಧಾನ್ಯ ವಸೂಲಿ ಬಗ್ಗೆ ಟೀಕೆ

ಸದಸ್ಯರ ಆಕ್ಷೇಪಣೆಗಳಿಗೆ ಸಚಿವರ ಸಮಾಧಾನ

ಬೆಂಗಳೂರು ೨೬

ಭತ್ತದ ಸಂಗ್ರಹಣೆ ನೀತಿಯ ಬಗ್ಗೆ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನೆನ್ನೆ ಆದ ಟೀಕೆಗಳಿಗೆ ಸಮಾಧಾನ ಕೊಡುತ್ತಾ, ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಆಹಾರ ನೀತಿಯಲ್ಲಿರುವ ಲೋಪದೋಷಗಳ ನಿವಾರಣೆಗಾಗಿ ಸದಸ್ಯರ ಸಹಕಾರವನ್ನು ಕೋರಿದರು. ಹಾಲಿ ಕಾನೂನಿನಲ್ಲೇ ತೆಗಲಿ ಲೋಪದೋಷಗಳಿದ್ದೇ ಇರುವುವೆಂದೂ, ಪಡಿತರವಿರುವ ಮತ್ತು ಇಲ್ಲದ ಪ್ರದೇಶಗಳ ಜನರೆಲ್ಲರಿಗೂ ಆಹಾರ ಒದಗಿಸುವ ಜವಾಬ್ದಾರಿಯನ್ನು ಸರ್ಕಾರವು ಹೊತ್ತಿರುವುದರಿಂದ ಇದರಿಂದ ತಪ್ಪಿಸಿಕೊಳ್ಳುವ ಹಾಗಿಲ್ಲವೆಂದೂ ಅವರು ಹೇಳಿ, ಎಲ್ಲ ಜಿಲ್ಲಾಧಿಕಾರಿಗಳ ಮತ್ತು ಜಿಲ್ಲೆಯ ಪ್ರಮುಖ ಶಾಸನ ಸಭಾ ಸದಸ್ಯರನ್ನು ಕರೆಸಿಕೊಂಡು ಪರ್ಯಾಲೋಚನೆ ನಡೆಸುವುದಾಗಿಯೂ ತಿಳಿಸಿದರು.

ಸುಗ್ಗಿ ಕಾಲದಲ್ಲಿ ೩ ತಿಂಗಳು ಧಾನ್ಯ ರವಾನೆಗೆ ಅಡ್ಡಿ ಹಾಕಿರುವುದನ್ನೂ, ಹೆಚ್ಚುವರಿ ಧಾನ್ಯ ಹೊಂದಿರುವವರಿಗೆ ಬಿಡಲಾಗುವ ಶೇ॥ ೧೦ ರಷ್ಟು ಭಾಗದ ಧಾನ್ಯವನ್ನು ಮಾರಲು ಪ್ರತಿಬಂಧಕ ಹಾಕಿರುವುದನ್ನೂ ಸದಸ್ಯರು ಟೀಕಿಸಿದರೆಂದು ಹೇಳಲಾಗಿದೆ.

ಐಸೆನ್‌ಹೋವರರೊಡನೆ ಭೇಟಿಗೆ ಸ್ಟಾಲಿನ್ನರು ಸಿದ್ಧ

ಅಂತರ ರಾಷ್ಟ್ರೀಯ ಮನಸ್ತಾಪಗಳ ನಿವಾರಣೆಗಾಗಿ ಐಸೆನ್‌ಹೋವರರೊಡನೆ ಭೇಟಿ ಮಾಡುವ ಬಗ್ಗೆ ಸಾಧ್ಯಾಸಾಧ್ಯತೆಯನ್ನು ಕುರಿತು ಪರಿಶೀಲಿಸಲು ಅಮೆರಿಕದ ಹೊಸ ಅಧ್ಯಕ್ಷರ ಅಧಿಕಾರಿಗಳೊಡನೆ ರಾಜತಾಂತ್ರಿಕ ಮಾತುಕತೆಗಳು ನಡೆಯಲು ರಷ್ಯದ ಪ್ರಧಾನಿ ಸ್ಟಾಲಿನ್ನರು ಒಪ್ಪಿಗೆಯನ್ನು ಸೂಚಿಸಿರುತ್ತಾರೆ. ಅಮೆರಿಕಾ ಮತ್ತು ರಷ್ಯಗಳ ನಡುವೆ ಯುದ್ಧವು ಅನಿವಾರ್ಯವಲ್ಲವೆಂದು ತಾವು ಇನ್ನೂ ಭಾವಿಸಿರುವುದಾಗಿ ಅವರು ಹೇಳಿ, ಕೊರಿಯದ ಯುದ್ಧ ಪರಿಸಮಾಪ್ತಿಯಲ್ಲಿ ರಷ್ಯಕ್ಕೆ ಪೂರ್ಣ ಆಸಕ್ತಿಯಿರುವುದರಿಂದಲೇ, ಹೊಸ ರಾಜತಾಂತ್ರಿಕ ಸಂಧಾನಗಳಿಗೆ ತಾವು ಒಡಂಬಡುವುದಾಗಿ ತಿಳಿಸಿರುತ್ತಾರೆ.

ಸಂಸ್ಕೃತಿ ಪ್ರಸಾರ ಯೋಜನೆ ಡೈರೆಕ್ಟರ ನೇಮಕ

ಕಾಂ॥ ಪಕ್ಷದ ಸದಸ್ಯರ ಟೀಕೆಗಳಿಗೆ ಹನುಮಂತಯ್ಯನವರ ಉತ್ತರ

ಬೆಂಗಳೂರು ೨೬

ಮೈಸೂರು ಸರ್ಕಾರದ ಸಂಸ್ಕೃತಿ ಪ್ರಸಾರ ಯೋಜನೆಯನ್ನು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಮುಂದೆ ತಂದು ಅದನ್ನು ಚರ್ಚಿಸದೆ, ಆಯವ್ಯಯದಲ್ಲಿ ಆ ಪಕ್ಕೆ ಹಣ ಮಂಜೂರಾತಿ ಪಡೆಯದೆ ೧೫ ಲಕ್ಷ ರೂ ಗಳನ್ನು ಅದಕ್ಕಾಗಿ ಒದಗಿಸಿ, ಒಬ್ಬ ಡೈರೆಕ್ಟರರನ್ನು ನೇಮಿಸಿದುದಕ್ಕಾಗಿ ಪಕ್ಷದ ಸದಸ್ಯರು ಟೀಕಿಸಿದರೆಂದು ವರದಿಯಾಗಿದೆ.

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮಾತನಾಡಿ, ಎಲ್ಲ ವಿಷಯಗಳನ್ನೂ ಪಕ್ಷದ ಮುಂದೆ ತರಲು ಸಾಧ್ಯವಿಲ್ಲವೆಂದೂ, ದೂರ ದೃಷ್ಟಿ, ನಿರ್ಧಾರಕ ಶಕ್ತಿ ಮುಂತಾದ ಗುಣಗಳನ್ನು ಹೊಂದಿರುವ ಒಬ್ಬನನ್ನು ನಾಯಕನನ್ನಾಗಿ ಸದಸ್ಯರು ಆರಿಸುವರೆಂದೂ, ದೇಶದ ಹಿತದೃಷ್ಟಿಯಿಂದ ಪಕ್ಷದ ಬೆಂಬಲವು ದೊರಕುವುದೆಂಬ ನಿರೀಕ್ಷೆ ಇಟ್ಟುಕೊಂಡು ನಾಯಕನು ಮುಂದೆ ಹೋಗುವನೆಂದೂ ತಿಳಿಸಿ, ತಮ್ಮ ನೀತಿಗಳಿಗೆ ಸದಸ್ಯರು ಒಪ್ಪದಿದ್ದರೆ ತಮ್ಮನ್ನು ಆ ಸ್ಥಾನದಿಂದ ತೆಗೆಯಬಹುದೆಂದು ಹೇಳಿದುದಾಗಿ ಗೊತ್ತಾಗಿದೆ.

ಜಿಲ್ಲಾ ಬೋರ್ಡುಗಳಿಗೆ ಪರೋಕ್ಷ ಚುನಾವಣೆ

ನೆನ್ನೆ ನಡೆದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ, ಸಂಸ್ಥಾನದ ಜಿಲ್ಲಾ ಬೋರ್ಡುಗಳಿಗೆ ಪಂಚಾಯಿತಿಗಳ ಮೂಲಕ ಸದಸ್ಯರ ಚುನಾವಣೆಯು ನಡೆಯಬೇಕೆಂದು ತೀರ್ಮಾನವಾಗಿ ಗೊತ್ತಾಗಿದೆ. ಕಡಿದಾಳ್ ಮಂಜಪ್ಪನವರು ಮಂಡಿಸಿದ … ಶ್ರೀ ಕಡಿದಾಳ್ ಮಂಜಪ್ಪನವರು ಮಂತಾದಿ ಅದಷ್ಟು ಜಾಗ್ರತೆ ಚುನಾವಣೆಗಳನ್ನು ಏರ್ಪಡಿಸುವುದಾಗಿ ಭರವಸೆಯಿತ್ತರೆಂದು ಹೇಳಲಾಗಿದೆ.

ಒರಿಸ್ಸಾ ಮಂತ್ರಿಗಳಿಂದ ಭೂಮಿಯ ದಾನ

ಒರಿಸ್ಸಾದ ಮುಖ್ಯ ಮಂತ್ರಿ ನಭ ಕೃಷ್ಣ ಚೌಧರಿಯವರು ತಮ್ಮ ಸ್ವಂತ ಜಮೀನನ್ನೆಲ್ಲ ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ದಾನವಾಗಿ ಕೊಡಲು ವಾಗ್ದಾನ ಮಾಡಿರುವರೆಂದು ಗೊತ್ತಾಗಿದೆ. ನೀರಾವರಿ ಇಲಾಖೆಯ ಮಂತ್ರಿಯವರು ತಮ್ಮ ಜಮೀನಿನ ಕಾಲು ಭಾಗವನ್ನು ಕೊಡುವುದಾಗಿ ಅಲ್ಲಿನ ವಿದ್ಯಾ ಮಂತ್ರಿ ರಾಧಾನಾಥ್ ರಥ್‌ರವರೂ, ತಮ್ಮ ಎಕರೆಯನ್ನು ಕೊಡುವುದಾಗಿ ನ್ಯಾಯಾಂಗ ಮಂತ್ರಿ ಲೇಶ ಬಂಧು ಕಾನೂನಿನವರೂ ತಿಳಿಸಿರುವರೆಂದು ಹೇಳಲಾಗಿದೆ.

ಹುಡುಗ ಸಿಕ್ಕಿರುತ್ತಾನೆ

ಉದ್ದನೆಯ ಮುಖ, ಕೆಂಪು ವರ್ಣ, ತಲೆಯಲ್ಲಿ ತುಂಬಾ ಜುಟ್ಟು ಮತ್ತು ಜಡೆ ಉಳ್ಳವನು, ಹಳದಿ ನಿಕ್ಕರು ಬಿಳಿಯ ಬನೀನು, ೫-೬ ವರ್ಷದ ಅಣ್ಣಾವಾಲೆ ಎಂದು ಹೆಸರುಳ್ಳ ಹುಡುಗನು ಸಿಕ್ಕಿರುವನು. ತಂದೆ ಹೆಸರು ಗೋವಿಂದ. ಬಂಗಾಲಿ ಸ್ವಲ್ಪ ತಿಳಿಯುವ ರೀತಿಯಲ್ಲಿದೆ. ನೂರಡಿ ರಸ್ತೆಯಲ್ಲಿರುವ ಮೈಸೂರು ಬ್ಲಾಸ್ ಮಿಲ್ಸ್ ಷಾಪಿನ ಶ್ರೀ ಸಿ ಬಿ ಲಿಂಗಯ್ಯನವರಲ್ಲಿ ವಿಚಾರಿಸಿ, ವಾರಸುದಾರರು ಹುಡುಗನನ್ನು ಕರೆದುಕೊಂಡು ಹೋಗಬಹುದು.

ಬರುವ ತಿಂಗಳು ಬೊಂಬಾಯಿ ಲಾರಿಗಳ ಮುಷ್ಕರ

ಬೊಂಬಾಯಿ ಟ್ರಾನ್ಸ್‌ಪೋರ್ಟ್ ಆಪರೇಟರುಗಳ ಕ್ರಿಯಾ ಸಮಿತಿಯವರು ಸರಕಾರಕ್ಕೆ ಒಂದು ಸೂಚನೆಯ ಸ್ಮಿತ್ರು ತೆರಿಗೆಯನ್ನು ಹೆಚ್ಚಿಸಿರುವುದರಿಂದ ಲಾರಿಗಳನ್ನು ಲಾಭದಾಯಕವಾಗಿ ಓಡಿಸಲು ಸಾಧ್ಯವಿಲ್ಲವೆಂದು ತಿಳಿಸಿರುವರು. ಹೆಚ್ಚಿನ ತೆರಿಗೆಯನ್ನು ವಿಧಿಸುವುದರ ಪರಿಣಾಮವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸದಿದ್ದರೆ ಬರುವ ಜನವರಿ ತಾ ೧ ರಿಂದ ಪ್ರಾಂತದಲ್ಲಿ ಲಾರಿಗಳನ್ನು ಓಡಿಸುವುದಿಲ್ಲವೆಂದೂ ಅವರು ಹೇಳಿರುವರು. ಸಾಮಾನು ಸಾಗಿಸುವ ಬೆಲೆಯನ್ನು ನಿರ್ಧರಿಸಲು ಸರ್ಕಾರದವರು ಒಂದು ನಿಷ್ಪಕ್ಷಪಾತವಾದ ಸಮಿತಿಯನ್ನು ನೇಮಿಸುವುದಾದರೆ ತಾವು ಎಲ್ಲ ವಾಹನಗಳನ್ನೂ ಸರ್ಕಾರದ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ನಿಗೆ ವಹಿಸಲು ಸಿದ್ಧವಾಗಿರುವುದಾಗಿಯೂ ಅವುಗಳ ಬೆಲೆಯನ್ನು ತಮಗೆ ಸರ್ಕಾರದವರ ಮೂರು ಸಮವಾದ ಕಂತುಗಳಲ್ಲಿ ಕೊಡಬಹುದೆಂದೂ ಅವರು ತಿಳಿಸಿರುವರೆಂದು ಗೊತ್ತಾಗಿದೆ

ಬೊಂಬಾಯಿ ಮಾರಾಟ ತೆರಿಗೆ ಬಗ್ಗೆ ಆರ್ಡಿನೆನ್ಸ್

ಬೊಂಬಾಯಿ ಹೈಕೋರ್ಟಿನವರು ಅಕ್ರಮವೆಂದು ಸಾರಿದ ಅಲ್ಲಿನ ಮಾರಾಟ ತೆರಿಗೆ ಶಾಸನದಲ್ಲಿದ್ದ ಹಲವು ನ್ಯೂನತೆಗಳನ್ನು ಸರಿಪಡಿಸಿ, ಕಳೆದ ವರ್ಷ ನವೆಂಬರ್‌ನಿಂದ ಜಾರಿಯಾಗುವ ವಿಶೇಷಾಜ್ಞೆಯೊಂದನ್ನು ಬೊಂಬಾಯಿ ಸರ್ಕಾರದವರು ಈಗ ಹೊರಡಿಸಿರುತ್ತಾರೆ.

ಸ್ಕೋಪಕ ಬೋಧಕ ಸಂಘ

ಚಾಮರಾಜನಗರದ ತಾಲ್ಲೂಕು ಸ ಕರಲ್ ಸಂಘಗಳ ಇನ್ಸ್‌ಪೆಕ್ಟರ್ ಶ್ರೀ ಡಿ ವೆಂಕಟರಮಣರವರ ಅಧ್ಯಕ್ಷತೆಯಲ್ಲಿ ಶಿವಪುರ ಗ್ರಾಮದಲ್ಲಿ ಕಳೆದ ೧೬ ನೇ ತಾ|| ಸ್ಕೋಪಕ ಬೋಧಕ ಸಂಘದ ಸಭೆಯು ನಡೆಯಿತು. ವಿದ್ಯಾ ಇನ್‌ಸ್ಪೆಕ್ಟರ್ ಶ್ರೀ ಸಿ ಬಿ. ಸೀತಾರಾಮ ಮುದಲಿಯಾರರು ಆರಂಭ ಭಾಷಣ ಮಾಡಿದರು. ವಯಸ್ಕರ ಶಿಕ್ಷಣದ ವಿಚಾರವಾಗಿ ಶಿಕ್ಷಣಾಧಿಕಾರಿಯ ಶ್ರೀಗಳ . ನಂಜುಂಡೇಗೌಡರು ಮತ್ತು ಶಾಮಣ್ಣನವರಿಂದ ಭಾಷಣಗಳೂ, ಶ್ರೀ ಅಶ್ವತ್ಥನಾರಾಯಣ ಶಾಸ್ತ್ರಿಗಳಿಂದ ಭಾರತ ಪಠಣವೂ ನಡೆದುವು.

ಮೇಲುಕೋಟೆ ದೇವಸ್ಥಾನಗಳ ವ್ಯವಸ್ಥೆಗಾಗಿ ಸಮಿತಿ

ಮೇಲುಕೋಟೆಯ ಶ್ರೀ ಯೋಗಾನರಸಿಂಹಸ್ವಾಮಿ ಮತ್ತು ಇತರ ದೇವಾಲಯಗಳ ವ್ಯವಸ್ಥೆಗಾಗಿ ೩ ವರ್ಷಕ್ಕೆ ೧೩ ಜನರ ಸಮಿತಿಯನ್ನು ಸರ್ಕಾರದವರು ನೇಮಿಸಿರುತ್ತಾರೆ. ಶ್ರೀವೈಷ್ಣವ ಮತದ ಗ್ರಂಥಗಳ ಪ್ರಚಾರ, ವೇದಾಂತ ಶಿಕ್ಷಣ, ಧಾರ್ಮಿಕ ಮತ್ತು ವೇದಾಂತ ಸಮ್ಮೇಳನ, ಮೇಲುಕೋಟೆಯನ್ನು ಪ್ರವಾಸಿ ಸ್ಥಳವಾಗಿ ಮಾಡಲು ಕ್ರಮ, ಪ್ರವಾಸ ಸಾಹಿತ್ಯ ಪ್ರಕಟಣೆ ಈ ಕಾರ್ಯಗಳನ್ನು ಸಮಿತಿಗೆ ವಹಿಸಲಾಗಿದೆ. ಸಮಿತಿಯಲ್ಲಿ ಮೈಸೂರು ಪರಕಾಲ ಮಠದ ಪ್ರತಿನಿಧಿ, ಮೇಲುಕೋಟೆ ದೇವಾಲಯದ ಆಗಮಿಕರು, ಅಲ್ಲಿನ ಆಚಾರ್ಯ ಪುರುಷರು, ದೇವಾಲಯಗಳಿಗೆ ಅಲ್ಲಿನ ದಾಸಿಗಳ ಮತ್ತು ಮೈಸೂರು ಸಂಸ್ಥಾನದ ದಾಸಿಗಳ ಪೈಕಿ ಇಬ್ಬಿಬ್ಬರು, ಹೊರಗಿನವರ ಪೈಕಿ ೩ ಜನ ಪ್ರತಿನಿಧಿಗಳು ಇರುವರು

ಬಹುಸಂಖ್ಯಾತರು ಬಯಸಿದರೆ ಗೋವಧೆ ನಿಷೇಧ

ಪಾಟ್ನಾದಲ್ಲಿ ಮಂಗಳವಾರ ನಡೆದ ಗೋಸೇವಾ ಸಮ್ಮೇಳನದಲ್ಲಿ ಕೇಂದ್ರ ವ್ಯವಸಾಯ ಮಂತ್ರಿ ಕಿದ್ವಾಯಿಯವರ ಮಾತನಾಡಿ, ಗೋವಧೆಯನ್ನು ನಿಷೇಧಿಸಬೇಕೆಂದು ಬಹುಸಂಖ್ಯಾತ ಭಾರತೀಯರು ಹೇಳಿದರೆ ಹಾಗೆಯೇ ಮಾಡಬೇಕಾಗುತ್ತದೆಂದೂ ಪ್ರಜಾಸತ್ತಾತ್ಮಕ ರಾಜ್ಯವಾದುದರಿಂದ ಬಹುಸಂಖ್ಯಾತರ ಅಭಿಪ್ರಾಯವನ್ನು ಮನ್ನಿಸಬೇಕೆಂದೂ ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಘನಶ್ಯಾಮದಾಸ್ ಬಿರ್ಲಾರವರು ಮಾತನಾಡಿ ಗೋವಧೆ ನಿಷೇಧಕ್ಕಾಗಿ ನೆಹರೂರವರು ವಿರೋಧವಾಗಿಲ್ಲವೆಂದೂ ಡಾ|| ರಾಜೇಂದ್ರ ಪ್ರಸಾದರು, ಪಂತರವರಂತೆ ಅವರೂ ಸಹ ಅದನ್ನು ಅನುಮೋದಿಸುವರೆಂದೂ ತಿಳಿಸಿದರು

ರಾಜಕೋಟೆ ಹರತಾಳ ನಡೆಯುತ್ತಲೇ ಇದೆ

ಮಾರಾಟ ತೆರಿಗೆ ವಿರುದ್ಧವಾಗಿ ರಾಜಕೋಟೆಯಲ್ಲಿ ಬಟ್ಟೆ ದಿನಸಿ ಮುಂತಾದ ಅಂಗಡಿಗಳು ೨೨ ದಿನಗಳಿಂದಲೂ ಮುಚ್ಚಿವೆ. ಅದರ ಮಾರಾಟ ತೆರಿಗೆ ಇದ್ದಿರುವ ಪದಾರ್ಥಗಳನ್ನು ಮಾರುವ ಕೂಟ ... ಫಲಾಹಾರ ಮಂದಿರ ಮುಂತಾದವು ತೆರೆದಿವೆ

ನಂಜನಗೂಡು ಪ್ರೌಢಶಾಲಾ ಹಳೇ ವಿದ್ಯಾರ್ಥಿಗಳ ಸಂಘ

ಕಳೆದ ೨೧ ನೇ ತಾ|| ನಂಜನಗೂಡಿನ ಪ್ರೌಢಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ಸದಸ್ಯರ ಸಭೆಯು ನಡೆದು, ಪ್ರೊಫೆಸರ್ ಶ್ರೀ ಎಸ್ ಕೆ. ಪುರಿಕೆಂಪಯ್ಯನವರು ಅಧ್ಯಕ್ಷರಾಗಿಯೂ ಶ್ರೀಗಳಾದ ಎಂ ನಾಗರಾಜರಾವ್ ಮತ್ತು ವಿ ಆರ್ ಶ್ರೀನಿವಾಸಮೂರ್ತಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ. ಸಂಘದ ವಾರ್ಷಿಕೋತ್ಸವವು ಬರುವ ತಿಂಗಳು ನಡೆಯಲಿದೆ

ಹರಿಕಥೆ

ಮೈಸೂರು ಶಿವರಾಮಪೇಟೆ ನಲ್ಲಪ್ಪನ ರಾಣಿ ಬಳಿ ಇರುವ ರಾಮಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಹರಿನಾರಾಯಣದಾಸರಿಂದ ಭಕ್ತ ಮೀರಾ ಎಂಬ ಹರಿಕಥೆಯು ನಡೆಯುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬.೩೦ ಚಿತ್ರ ಜಗತ್ ಮಧ್ಯಾಹ್ನ ೧.೩೦ ಗಿಟಾರ್ ೩ ಬಾಲ ಜಗತ್ ಸಂಜೆ ೪.೩೦ ಮತ್ತು ೭ ಎಂ ಸಿ ಶೇಷಾದ್ರಿ, ಸಿಟೀಲು ೬.೧೦ ಸಾನಗೀತೆ. ೬.೩೦ ವನಿತಾ ವಿಚಾರ ೮ ಆರ್ ಶ್ರೀನಿವಾಸ್, ಕಥಾ ಕಾಲಕ್ಷೇಪ ೯.೩೦ ಗಂಗವ್ವನ ಆಶೆ-ಕನ್ನಡ ನಾಟಕ

ಆಂಧ್ರ ದೇಶದ ಬಗ್ಗೆ ನೆಹ್ರೂ ಮತ್ತು ರಾಜಾಜಿ ಮಾತುಕತೆ

ಆಂಧ್ರ ಪ್ರಾಂತದ ರಚನೆ ಬಗ್ಗೆ ಪ್ರಧಾನಿ ನೆಹರೂ ಮತ್ತು ಮದ್ರಾಸಿನ ಮುಖ್ಯಮಂತ್ರಿ ರಾಜಾಜಿಯವರಿಗೆ ಶೀಘ್ರದಲ್ಲೇ ಉನ್ನತ ಮಟ್ಟದ ಮಾತುಕತೆಗಳು ನಡೆಯುವುವು. ಇದರಲ್ಲಿ ಕೇಂದ್ರ ಗೃಹಮಂತ್ರಿ ಕಟ್ಜುರವರು ಭಾಗವಹಿಸುವರು. ಕಟ್ಜುರವರು ನಾಗಪುರದಲ್ಲಿ ತಂಗಿ, ಪಿ ಸಿ ವರದಿಗೆ ರುಜು ಮಾಡಿರುವ ಡಾ|| ಪಟ್ಟಾಭಿಯವರೊಡನೆ ಸಮಾಲೋಚನೆ ನಡೆಸಿ, ಮದ್ರಾಸಿಗೆ ಆಗಮಿಸುವರು. ನೆಹರೂರವರೊಡನೆ ಚರ್ಚೆ ನಡೆಸಿದ ನಂತರ ಮದ್ರಾಸು ಸರ್ಕಾರದವರು ಸೂಕ್ತ ನಿರ್ಧಾರವನ್ನು ಈ ಮಾಸಾಂತ್ಯದಲ್ಲಿ ಕೈಗೊಳ್ಳುವರು. ನೆಹರೂರವರೊಡನೆ ಟಿ ಪ್ರಕಾಶಂ ಮುಂತಾದ ನಾಯಕರು ಭೇಟಿ ಮಾಡುವರು.

ಅಜಾಗರೂಕರಾಗಿದ್ದ ವೈದ್ಯರ ವಜಾ

ಉತ್ತರಪ್ರದೇಶದ ಆಹಾರದ ಪತ್ತೆದಾರ ಸಹಾಯಾಧಿಕಾರಿ ಆರ್ ಕೆ ಕೌಲ್‌ರವರ ತಂದೆ ಪಂಡಿತ ಸತ್ಯ ಶಸ್ತ್ರ ಚಿಕಿತ್ಸೆ ನಡೆದ ಸ್ವಲ್ಪ ಹೊತ್ತಿನಲ್ಲಿಯೇ ಮೃತಪಟ್ಟ ಸಂಬಂಧದಲ್ಲಿ ನಡೆದ ವಿಚಾರಣೆಯ ಪರಿಣಾಮವಾಗಿ ಅಜಾಗರೂಕತೆಯಿಂದ ವರ್ತಿಸಿದರೆಂದು ಅಲ್ಲಿನ ಜಿಲ್ಲಾ ಸ್ವಿಡ್ಯಾಧಿಕಾರಿ, ಡಾ|| ಕಿಲ್ಲಾವಾಲ ಮತ್ತು ... ಪೀಟರ್‌ರವರನ್ನು ಕೆಲಸದಿಂದ ವಜಾ ಮಾಡಲಾಗಿದೆ

ವಿಶ್ವವಿದ್ಯಾಲಯದ ಅಧ್ಯಾಪಕರು

ರಾಜಧಾನಿಯ ಮಹಾರಾಜಾ ಕಾಲೇಜಿನ ಇಂಗ್ಲೀಷ್ ಅಸಿಸ್ಟೆಂಟ್ ಪ್ರೊಫೆಸರಾಗಿರುವ ಶ್ರೀ ಎಚ್ ... ರಾಜೀವ್‌ರವರನ್ನು ಅದೇ ಸ್ಥಾನದಲ್ಲಿ ಖಾಯಂ ಮಾಡಲಾಗಿದೆ. ಸದರಿ ಕಾಲೇಜಿನ ಲೆಕ್ಚರರಾಗಿರುವ ಶ್ರೀ ಎಚ್ ಸುಬ್ಬರಾಯರನ್ನು ಹಂಗಾಮಿ ಇಂಗ್ಲೀಷ್ ಅಸಿಸ್ಟೆಂಟ್ ಪ್ರೊಫೆಸರರಾಗಿ ನೇಮಿಸಲಾಗಿದೆ

ಉದಾರ ದಾನ

ರಾಜಧಾನಿಯ ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಪ್ರಸನ್ನ ಸೀತಾರಾಮ ದೇವಸ್ಥಾನದ ಪೂರ್ವ ಭಾಗಕ್ಕಿರುವ ಖಾಲಿ ನಿವೇಶನವನ್ನು ನಗರಾಭಿವೃದ್ಧಿ ಸಮಿತಿಯು ದೇವಸ್ಥಾನದವರು ಕೊಳ್ಳಲು ... ವ್ಯಾಪಾರಿಗಳಾದ ಶ್ರೀ ತಂಬಳ್ ... ಸ್ವಾಮಿ ... ದಾನವಾಗಿ ಕೊಟ್ಟಿರುತ್ತಾರೆ

ಉಡುಪಿ ಮಾಧ್ವ ತತ್ವ ಸಮ್ಮೇಳನಕ್ಕೆ ಕಾಣಿಕೆ

ಮೈಸೂರು ...

ಉಡುಪಿಯಲ್ಲಿ ಬರುವ ತಿಂಗಳು ನಡೆಯುವ ಮಾಧ್ವ ತತ್ವ ಸಮ್ಮೇಳನಕ್ಕೆ ರಾಜಧಾನಿಯ ಈ ಕೆಳಗೆ ಕಂಡ ಮಹನೀಯರು, ಈ ರೀತಿ ಉದಾರವಾಗಿ ದ್ರವ್ಯ ಸಹಾಯ ಮಾಡಿರುತ್ತಾರೆ:—

ಶ್ರೀಗಳಾದ. ಕೆ ಗೋಪಾಲಾಚಾರ್ ರೂ ೩೦೧; ಕೆ ಅನಂತಾಚಾರ್ ರೂ ೨೦೧; ಬಿ ಎಸ್. ಶಂಕ್ರಿಯವರು ೧೦೦, ಮಹಾತ್ಮಾ ಪಿಕ್ಚರ್ಸ್‌ರವರ ವಿಠ್ಠಲಾಚಾರ್ ೫೦, ಮಾಡರ್ನ್ ಕೆಫೆ ಮಾಲೀಕರು ರೂ ೪೪; ಕೆ ಲಕ್ಷ್ಮೀನಾರಾಯಣರಾವ್, ಎನ್ ರಾಘವೇಂದ್ರ ರಘುಬಾಬು ಎಲ್ ಎಸ್ ವಿ ರಾಮಯ್ಯಂಗಾರ್‌ರವರು, ಸರ್ದಾರ್ ಹೆಚ್ ಎಲ್ ದೇವರಾಜ ಅರಸಿನವರು, ಬಿ ಮಾಧವ ಹೆಬ್ಬಾರ್‌ರವರು, ಡಿ. ಪುಟ್ಟಯ್ಯನವರು, ಕೆ ಪಿ ಶ್ರೀನಿವಾಸಾಚಾರ್ಯರು, ನಂಜನಗೂಡು ಶ್ರೀ ಯು. ನಾರಾಯಣರಾಯರು ತಲಾ ರೂ ೨೫, ವೈ ಕೆ. ರಾಮಚಂದ್ರರಾಯರು ರೂ ೨೦, ಕೆ ನಾರಾಯಣಾಚಾರ್, ನಾರಾಯಣರಾವ್ (ಶಾಂತಿ), ವಿ ವೆಂಕಟರಾವ್, ಪಿ ಶ್ರೀನಿವಾಸಾಚಾರ್, ಎಂ ಕೃಷ್ಣಸ್ವಾಮಿರಾವ್‌ರವರು ತಲಾ ರೂ ೧೫, ಆರ್ ಗುಂಡೂರಾವ್, ಕಲ್ಯಾಣ ಕೃಷ್ಣಾಚಾರ್ಯರು, ಸಿ ಎಸ್ ರಘುನಾಥರಾಯರು ತಲಾ ರೂ ೧೦, ಇತರರುಗಳಿಗೆ ಕಲಿಸಿ ಕೊಟ್ಟವರಿಂದ ಒಟ್ಟು ೧೪೪ ರೂ ... ಸಂಗ್ರಹವಾಗಿರುತ್ತದೆ

ಬಟ್ಟೆ ವರ್ತಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಬಟ್ಟೆ ವರ್ತಕರ ಸಂಘದ ... ನೇ ವಾರ್ಷಿಕೋತ್ಸವವು ಇದೇ ೨೯ ನೇ ತಾ|| ಸೋಮವಾರ ಬೆಳಿಗ್ಗೆ ೧೦ ಗಂಟೆಗೆ ಇರ್ವಿನ್ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಭವನದಲ್ಲಿ ನಡೆಯುವುದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು

SRI GAYATHRI
TALKIES
Daily 2 Shows
From 26-12-52 For 4 days
Warner's
JACK & THE BEANSTALK
[Technicolor]
With — Abbott
Lou Costello

Morning Shows on 27 & 28
THE LADY WITHOUT PASSPORT
With — Hedy Lamarr

— Coming Shortly
THE GREATEST SHOW ON EARTH

ಪ್ರಭುದೇವಾ ಟಾಕೀಸ್
(ಶ್ರೀ ... ಆಟಗಳು)

26-12-52 ರಿಂದ :: ಅನೋಘ 4ನೇ ವಾರ

ರಾಜ್ಯಂ ಪಿಕ್ಚರ್ಸ್‌ರವರ ತೆಲುಗು ಚಿತ್ರ

ದಾಸಿ

ಪಾತ್ರ:- ಲಕ್ಷ್ಮಿರಾಜ್ಯಂ, ಎನ್.ಟಿ ರಾಮರಾವ್, ರೇಲಂಗಿ, ಶಾಂತಕುಮಾರಿ

ಮುಂದಿನ ಬದಲಾವಣೆ: ಶೋಭನಾ ಫಿಲಂಸ್‌ರವರ ಪ್ರಜಾ ಸೇವಾ

Edited, Printed and Published by A. R. Nagarajan at Sadhvi Press, D Subbaiah Road, Mysore

ಪೋ।। ನಂ ೭೨೭ ।।ವಂದೇ ಮಾತರಂ।। ಕುಂದಿನ ಹತ್ತಿಕೆ 3 ಕಾಸು

ಸಾಧ್ವಿ

ಸಂಪುಟ ೧೧] ಶನಿವಾರ ೨೭-೧೨-೧೯೫೨ [ಸಂಚಿಕೆ ೧೨೫

- ಸಂಸ್ಥಾನದಲ್ಲಿ - ಯಾತ್ರಿಕರ ತೆರಿಗೆ

ಸಂಸ್ಥಾನದಲ್ಲಿ ಯಾತ್ರಿಕರ ಮೇಲೆ ತೆರಿಗೆ

ವಿಧಿಸಲು ಸರ್ಕಾರದ ಆಲೋಚನೆ

ಬೆಂಗಳೂರು ೨೭

ಸಂಸ್ಥಾನದಲ್ಲಿ ನಡೆಯುವ ಜಾತ್ರೆ ಮುಂತಾದ ಸಾರ್ವಜನಿಕ ಕೂಟಗಳಲ್ಲಿ ಯಾತ್ರಿಕರ ... ವಾಹನ ಮತ್ತು ಪ್ರಾಣಿಗಳ ಮೇಲೆ ತೆರಿಗೆಯನ್ನು ವಿಧಿಸಲು ಸರ್ಕಾರದವರು ಆಲೋಚಿಸುತ್ತಿದ್ದಾರೆ. ಈ ಬಗ್ಗೆ ಸಾರ್ವಜನಿಕ ಅಭಿಪ್ರಾಯವನ್ನು ಬರುವ ಫೆಬ್ರುವರಿ ೧೫ ರೊಳಗೆ ತಿಳಿಯಲು ಸೂಕ್ತ ನಿಬಂಧನೆಗಳನ್ನು ರಚಿಸಿ ಪ್ರಕಟಿಸಲಾಗಿದೆ. ಆರೋಗ್ಯ ... ಪ್ರಕಾರ ವಿಧಿಸುವ ಈ ತೆರಿಗೆಯಿಂದ ಜಾತ್ರೆ ಮುಂತಾದವುಗಳಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ... ಸೌಕರ್ಯಗಳನ್ನು ಒದಗಿಸಲು ತಗಲುವ ವೆಚ್ಚವನ್ನು ಸರಿದೂಗಿಸಲಾಗುವುದು. ಯಾತ್ರಿಕರ ತೆರಿಗೆ ಕೊಡದವರಿಗೆ ೩೦ ರೂ ... ವಾಹನ ತೆರಿಗೆ ಕೊಡದವರಿಗೆ ೫೦ ... ವರೆಗೆ ದಂಡ ವಿಧಿಸಲಾಗುವುದು. ... ಸ್ಥಳವಾನದಲ್ಲಿ ಮೂರನೇ ಒಂದು ಭಾಗ ... ಜಿಲ್ಲಾ ಬೋರ್ಡುಗಳಿಗೂ ಉಳಿದ ... ವಸೂಲಿ ಖರ್ಚು ಕಳೆದು ಬಾಕಿ ... ಗಳನ್ನು ಜಾತ್ರೆ ನಡೆಯುವ ಸ್ಥಳದ ... ಗಳಿಗೂ ಕೊಡಲಾಗುವುದು

ಎಲ್ ಆರ್ ಜಯರಾಯರಿಗೆ ನಿವೃತ್ತಿ ಪೂರ್ವ ರಜಾ

... ನಗರದ ನ್ಯಾಯಾಂಗ ಕಾರ್ಯದ ... ರಾದ ಶ್ರೀ ಎಲ್ ಆರ್. ಜಯರಾಯರು ನಿವೃತ್ತರಾಗುವ ಪೂರ್ವ ಭಾವಿಯಾಗಿ ಜನವರಿ ೧ ರಿಂದ ಅವರಿಗೆ ... ೧೮೯ ದಿನಗಳ ರಜವನ್ನು ಕೊಡಲಾಗಿದೆ. ಸಬಾರ್ಡಿನೇಟ್ ನ್ಯಾಯಾಧೀಶ ಶ್ರೀ ಎಂ. ಸದಾಶಿವಯ್ಯನವರಿಗೆ ... ಕೊಟ್ಟು ನ್ಯಾಯಾಂಗ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ

ಆಂಧ್ರ ಮತ್ತು ಮದ್ರಾಸು ಗಳಿಗೆ ಒಬ್ಬರೇ ಗೌರ್ನರ್

ಪ್ರತ್ಯೇಕವಾದ ಆಂಧ್ರ ಮತ್ತು ಉಳಿದ ಮದ್ರಾಸು ಸಂಸ್ಥಾನಗಳಿಗೆ ಒಬ್ಬರೇ ಗೌರ್ನರ್ ಮತ್ತು ಒಂದೇ ಹೈ ಕೋರ್ಟ್ ಇರಬೇಕೆಂದು ಕೇಂದ್ರ ಸರ್ಕಾರ ... ಮನೋಗತವಾಗಿರುವುದೆಂದು ... ಗಿದೆ. ಮದ್ರಾಸು ನಗರವೂ ಸಹ ... ಕ್ಕೆ ಆಂಧ್ರದ ರಾಜಧಾನಿಯಾಗಿರು ... ಹೇಳಲಾಗಿದೆ

ಶಾಂತಿಗಾಗಿ ಸ್ಟಾಲಿನ್ನರ ಸ್ಪಷ್ಟ ಸೂಚನೆಗೆ ಕೋರಿಕೆ

... ರಲ್ ಸ್ಟಾಲಿನ್ನರು ಪ್ರಪಂಚ ... ಯನ್ನು ಬಲಗೊಳಿಸಲು ನಿಖರವಾದ ... ಸ್ಪಷ್ಟವಾದ ಸೂಚನೆಗಳ ... ಬೇಕೆಂದು ಅಮೆರಿಕದ ... ತನಾದರು ಸವಾಲು ಹಾಕಿರು ... ಮುಂದಿನ ಅಮೆರಿಕಾ ವಿದೇ ... ಮಂತ್ರಿ ಜಾನ್ ಫಾಸ್ಟರ್ ಡಲ್ಲೆಸ್ ... ಕೇಳಿರುತ್ತಾರೆ ಅಂತಹ ಸೂಚ ... ತಾವು ತೀವ್ರವಾಗಿಯೂ ... ಸಹಾನುಭೂತಿಯುತವಾಗಿಯೂ ... ಸುವುದಾಗಿ ಅವರು ಹೇಳಿರುವ ... ಸೋವಿಯಟ್ ಸೋವಿಯಟ್ ನಾಯಕರೊಡನೆ ಸ್ಟಾಲಿನ್ ... ಅವರು ಟೆಲಿಫೋನ್ ... ನಡೆಸಿ ಮೈತ್ರಿಯಿಂದಲೇ ... ಐಸನ್ ಹೋವರ್. ಸ್ಟಾಲಿನ್ ... ಏರ್ಪಡಿಸಲು ಡಲ್ಲೆಸ್ ರವರ ... ಸಮ್ಮತದಲ್ಲೇ ಪ್ರಯಾಣ ... ಊಹಿಸಲಾಗಿದೆ

ಲಂಚ ತೆಗೆದುಕೊಂಡ ಅಧಿಕಾರಿಯ ವಜಾ

ಬೆಂಗಳೂರು ೨೭

ಬೆಂಗಳೂರಿನಲ್ಲಿ ಮನೆ ಬಾಡಿಗೆ ಹತೋಟಿ ಅಧಿಕಾರಿಯಾಗಿದ್ದು ಲಂಚ ತೆಗೆದುಕೊಂಡ ಅಪಾದನೆಗೆ ಶಿಕ್ಷೆ ಹೊಂದಿರುವ ಅಸಿಸ್ಟೆಂಟ್ ಕಮೀಷನರ್ ಟಿ. ಎ. ಬಷೀರುದ್ದೀನ್‌ರವರನ್ನು ೧೯೫೦ ನೇ ಜುಲೈ ೧೧ ನೇ ತಾರೀಖಿನಿಂದ ಕೆಲಸದಿಂದ ವಜಾ ಮಾಡಿರುವುದಾಗಿ ಶ್ರೀಮನ್ ಮಹಾರಾಜರು ಆಜ್ಞೆ ಮಾಡಿರುತ್ತಾರೆ ಇಂದಿನವರೆಗೆ ಅವರನ್ನು ಕೆಲಸದಿಂದ ಸಸ್ಪೆಂಡ್ ಮಾಡಲಾಗಿತ್ತು

ಟೈಲ್ಲು, ಅಂಗಿ ಬಟ್ಟೆಗಳ ಬೆಲೆ ಹತೋಟಿ ರದ್ದು

ಬರುವ ತಿಂಗಳು ೧ನೇ ತಾ।। ನಿಂದ ಟೈಲ್ಲುಗಳು, ಅಂಗಿ ಮತ್ತು ಇತರ ಹಲವು ಬಗೆಯ ಅತಿ ನಯವಾದ ಬಟ್ಟೆಗಳ ಬೆಲೆ ಹತೋಟಿಯನ್ನು ಭಾರತ ಸರ್ಕಾರದವರು ರದ್ದು ಮಾಡಲಿರುವರು ಷೀಟಿಂಗುಗಳು, ಲಾಂಗ್‌ಕ್ಲಾತ್, ಷರ್ಟಿಂಗ್, ಡ್ರಿಲ್ ಮತ್ತು ಸುತಿಬಟ್ಟೆಗಳ ಮೇಲೆ ಮಾತ್ರ ಬೆಲೆ ಹತೋಟಿಯು ಈಗಿನಂತೆಯೇ ಮುಂದಿನ ೩ ತಿಂಗಳಿಗೂ ಮುಂದುವರಿಯುವುದೆಂದು ಹೇಳಲಾಗಿದೆ.

ಮಾಲ್ಡಿವ್ ದ್ವೀಪಗಳಿಗೆ ರಿಪಬ್ಲಿಕ್ ಸ್ಥಾನ

ಹಿಂದೂ ಸಾಗರದಲ್ಲಿ ಸುಮಾರು ೧೨,೦೦೦ ಸಣ್ಣ ದ್ವೀಪಗಳಾದ ಮಾಲ್ಡಿವ್ ದೇಶವು ಬರುವ ಜನವರಿ ೧ನೇ ತಾರೀಖಿನಿಂದ ರಿಪಬ್ಲಿಕ್ ಆಗುವುದು ಅದರ ಈಗಿನ ಮುಖ್ಯ ಮಂತ್ರಿ ಅಮಿನ್ ದಿದಿ ಯವರು, ಪ್ರಥಮ ಅಧ್ಯಕ್ಷರಾಗಿ ಚುನಾಯಿತರಾಗಿರುತ್ತಾರೆ ಈ ದೇಶದ ೯೩ ಸಾವಿರ ಜನರಲ್ಲಿ ಒಬ್ಬ ಕ್ರಿಶ್ಚಿಯನ್ನನ ಹೊರತು ಎಲ್ಲರೂ ಮುಸ್ಲಿಮರು

ಭಜನೆ ಮತ್ತು ಧರ್ಮೋಪದೇಶ

ರಾಜಧಾನಿಯ ಶ್ರೀಮನ್ ಮಹಾರಾಜರವರ ಸಂಸ್ಕೃತ ಕಾಲೇಜಿನ ಭವನದಲ್ಲಿ ನಾಳೆ ಸಂಜೆ ೬ ಗಂಟೆಗೆ ಲೋಕ ಕಲ್ಯಾಣಾರ್ಥವಾಗಿ ಭಗವನ್ನಾಮ ಭಜನೆಯೂ, ಶ್ರೀಮನ್ನಿ ರುಮಾಯಿಡಿ ಜಗದ್ಗುರುಗಳಾದ ಶ್ರೀ ಚನ್ನ ಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳಿಂದ ಧರ್ಮೋಪದೇಶವೂ ನಡೆಯುತ್ತದೆ.

ಟಿ. ನರಸೀಪುರದಲ್ಲಿ ಎರಡು ಅಕ್ಕಿ ಗಿರಣಿಗಳ ತನಿಖೆ

ಮೈಸೂರು ೨೭

ಸಂಸ್ಥಾನದ ಲಂಚ ನಿರೋಧ ... ಕಚೇರಿಗೆ ಟಿ. ನರಸೀಪುರದ ಹಲವರಿಂದ ಬಂದ ಸಮಾಚಾರದ ಪ್ರಕಾರ ಅಲ್ಲಿನ ರಾಮಲಿಂಗೇಶ್ವರ ಮತ್ತು ಕಂಪನಿಯ ಅಕ್ಕಿ ಗಿರಣಿಗಳಿಗೆ ಅಧಿಕಾರಿಗಳು ಹಠಾತ್ತನೆ ಭೇಟಿಯಿತ್ತು ಒಟ್ಟು ೫೦೦ ಪಲ್ಲಾ ಧಾನ್ಯವು ಲೆಕ್ಕಾ ಆಗಿರುವುದನ್ನು ಪತ್ತೆ ಹಚ್ಚಿರುವರೆಂದು ತಿಳಿದುಬಂದಿದೆ

ಸೀಮೆಯೆಣ್ಣೆ ವ್ಯಾಗನ್ನಿಗೆ ಬೆಂಕಿ ತಗುಲಿ ಬಾಲಕನ ಮರಣ

ಮುಂಬೈನ ರೈಲ್ವೆ ಸಿಗ್ನಲ್ಲಾ ದ ಹಿಂಭಾಗದಲ್ಲಿ ವ್ಯಾಗನ್ನಿನಲ್ಲಿದ್ದ ಸೀಮೆಯೆಣ್ಣೆಯನ್ನು ರೈಲ್ವೆ ಪಾಯಿಂಟ್ಸ್ ಮನ್ ಮಾದಯ್ಯ ಎಂಬುವನ ಮಗ ೮ ವರ್ಷದ ಬಸವ ಎಂಬ ಹುಡುಗನು ಕದಿಯುತ್ತಿದ್ದಾಗ ಗಾಡಿಯಲ್ಲಿದ್ದ ಹುಲ್ಲಿಗೆ ಬೆಂಕಿ ತಗುಲಿ ವ್ಯಾಗನ್ನು ಹತ್ತಿಕೊಂಡು ಅವನಿಗೆ ಸುಟ್ಟ ಗಾಯಗಳಾದುವೆಂದೂ ಅವನು ಆಸ್ಪತ್ರೆಯಲ್ಲಿ ಮೃತನಾದನೆಂದೂ ವರದಿಯಾಗಿದೆ

ಭಾರಿ ಕೇಡಿ ಪತ್ತೆ

ರಾಜಧಾನಿಯ ಲಷ್ಕರ್ ಮೊಹಲ್ಲೆಯ ಒಬ್ಬ ವೇಶ್ಯೆಯ ಮನೆಯಲ್ಲಿದ್ದ ಸೇಲಂ ಕಡೆಯ ವಡಿವೇಲು ಎಂಬೊಬ್ಬ ಭಾರಿ ಕೇಡಿಯನ್ನು ಕ್ರೈಂ ಬ್ರಾಂಚಿನ ಪೋಲೀಸ್ ದಫೇದಾರ್ ಶ್ರೀ ನರಸಿಂಹಯ್ಯನವರು ಪತ್ತೆಮಾಡಿ ಬಂಧಿಸಿರುತ್ತಾರೆ ಅವನಲ್ಲಿದ್ದ ೩೦೦ ರೂ ಬೆಲೆ ಬಾಳುವ ಸೀರೆಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ವಡಿವೇಲುವಿನ ಬಳಿ ಈತನು ಕಳುವು ಮಾಡಿದ್ದ ಮೊಗಳಿಗೆ ಸಂಬಂಧಿಸಿದ ೧೫೦೦ ರೂ ಬೆಲೆಯಾಗುವ ಮಾಲುಗಳು ಪತ್ತೆಯಾಗಿವೆ

ಡಿಪೋ ಗುಮಾಸ್ತರು ಸೆಷನ್ಸ್ ವಿಚಾರಣೆಗೆ

ರಾಜಧಾನಿಯ ಆಹಾರ ಡಿಪೋ ನೌಕರನಾಗಿದ್ದ ವೇದಾಂತ ದೇಶಿಕ್ ಎಂಬಾತನು ಸುಮಾರು ೧೧ ಸಾವಿರ ರೂ. ಗಳಷ್ಟು ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡ ಅಪಾದನೆ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ಅವನನ್ನು ಮೊನ್ನೆ ಸೆಷನ್ಸ್ ವಿಚಾರಣೆಗೆ ಗುರುಪಡಿಸಿರುತ್ತಾರೆ.

ಶಿಕ್ಷಣ ಸುಧಾರಣೆ ಬಗ್ಗೆ ರಾಧಾಕೃಷ್ಣರೊಡನೆ ಮಾತುಕತೆ

ಅವರಿಂದ ಸಮಿತಿಯ ಕಾರ್ಯಕಲಾಪಗಳ ಪ್ರಶಂಸೆ

ಸ್ವಂ ಸು ಪ್ರೋ।] ಬೆಂಗಳೂರು ೨೭

ಭಾರತದ ಉಪಾಧ್ಯಕ್ಷರಾದ ಡಾ।। ಎಸ್ ರಾಧಾಕೃಷ್ಣರವರೊಡನೆ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ, ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್ ಮತ್ತು ಶ್ರೀ ಜಿ. ಬಿ ಮಲ್ಲಾರಾಧ್ಯರವರು ನೆನ್ನೆ ಮತ್ತು ಇಂದು ಭೇಟಿ ಮಾಡಿ ಮಾತುಕತೆ ನಡೆಸಿದರು ಸಮಿತಿಯವರು ಇದುವರೆಗೆ ನಡೆಸಿರುವ ಕೆಲಸ ಕಾರ್ಯಗಳ ವರದಿಯನ್ನು ಉಪಾಧ್ಯಕ್ಷರಿಗೆ ಒಪ್ಪಿಸಲಾಯಿತು.

ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ಹೊಸ ಪಾಠ ಕ್ರಮವು ಬರುವುದೆಂಬುದನ್ನು ಅರಿತು ಡಾ।। ರಾಧಾಕೃಷ್ಣರವರು ಸಮಾಧಾನವನ್ನು ಸೂಚಿಸಿದರು. ವಿಶ್ವವಿದ್ಯಾಲಯದಲ್ಲಿ ಬುದ್ಧಿಶಾಲಿಗಳಾದ ಬಡ ವಿದ್ಯಾರ್ಥಿಗಳಿಗೆ ಅವಕಾಶ ತಪ್ಪಿಸುವುದು ಉಚಿತವಲ್ಲವೆಂದು ಅಭಿಪ್ರಾಯಪಟ್ಟರು. ಪ್ರಾಥಮಿಕ ಶಾಲಾ ಬಾಲಕರಿಗೆ ಸಾಮೂಹಿಕ ಡ್ರಿಲ್ ಏರ್ಪಡಿಸಬೇಕೆಂದು ಅವರು ಸೂಚಿಸಿದರೆಂದೂ ಗೊತ್ತಾಗಿದೆ.

ಹೊಸ ವಿದ್ಯಾಭ್ಯಾಸ ಸುಧಾರಣೆಯು ಜಾರಿಗೆ ಬರುವ ಮೊದಲು ಆಗುವ ಬದಲಾವಣೆ ಕಾಲದಲ್ಲಿ ಸಹ್ಯ ಸ್ಪರ್ಶ ಮಾತಲು ಒಂದು ವಿಶೇಷ ಸಮಿತಿಯನ್ನು ರಚಿಸುವಂತೆ ವಿದ್ಯಾ ಸುಧಾರಣಾ ಸಮಿತಿಯವರು ಸರ್ಕಾರಕ್ಕೆ ಸಲಹೆ ಮಾಡಿರುವುದಾಗಿಯೂ ತಿಳಿದುಬಂದಿದೆ

ರಣಜಿ ಕ್ರಿಕೆಟ್ ಪಂದ್ಯ

ದಕ್ಷಿಣ ವಲಯದ ರಣಜಿ ಕ್ರಿಕೆಟ್ ಪಂದ್ಯವು ಈ ದಿನ ಮೈಸೂರು ಮತ್ತು ಮದ್ರಾಸ್ ಟೀಮುಗಳಿಗೆ ನಡೆದು, ಮದ್ರಾಸಿನವರು ೩ ವಿಕೆಟ್ಟಿಗೆ ೧೦೦ ರನ್ನುಗಳನ್ನು ಮಾಡಿರುವರು.

ಮೈಸೂರಿನಲ್ಲಿ ವಿದ್ಯಾ ಸುಧಾರಣಾ ಸಮಿತಿಗಳ ಸಭೆ

ವಿದ್ಯಾಭ್ಯಾಸ ಸುಧಾರಣೆಗಾಗಿ ಏರ್ಪಾಡಾಗಿರುವ ಸಮಿತಿಯ ಉಪ ಸಮಿತಿಗಳ ಸಭೆಯು ಇದೇ ತಿಂಗಳು ೨೮ ನೇ ತಾ।। ನಿಂದ ರಾಜಧಾನಿಯಲ್ಲಿ ಸೇರುವುದು ಡಾ।। ರಾಧಾಕೃಷ್ಣರವರು ಒಂದೊಂದು ಸಮಿತಿಯ ಸದಸ್ಯರೊಡನೆಯೂ, ಪ್ರಾಥಮಿಕ,ಮಾಧ್ಯಮ ಮತ್ತು ವಿಶ್ವ ವಿದ್ಯಾಲಯದ ವಿದ್ಯಾಭ್ಯಾಸಗಳ ಬಗ್ಗೆ ಮಾತುಕತೆ ನಡೆಸುವರೆಂದು ವರದಿಯಾಗಿದೆ

ಯೋಚಿ ಮಿನ್‌ರವರು ಮರಣ ಹೊಂದಿರುವರೇ ?

ಇಂಡೋಚೈನಾದ ಕಮ್ಯೂನಿಸ್ಟ್ ನಾಯಕ ಹೋಚಿ ಮಿನ್‌ರವರು ಈಗ ಕೆಲವು ದಿನಗಳ ಹಿಂದೆ ನಡೆದ ಫ್ರೆಂಚ್ ವಿಮಾನ ದಾಳಿಯಲ್ಲಿ ಮರಣ ಹೊಂದಿರುವರೆಂದು ಅನಧಿಕೃತ ವರದಿಗಳಿಂದ ತಿಳಿದು ಬಂದಿದೆ ಈ ವರದಿಗೆ ಸಮರ್ಥನೆ ದೊರೆತಿಲ್ಲ.

WEEKLY EDITION

[illegible]

[illegible]

[illegible]

[illegible]

SRI GAYATRI
TALKIES
Daily 2 Shows
From 26-12-52 For 4 days
Warners(?)
JACK & THE
BEANSTALK
(In Super Cine Color)
With — Abbott and
Lou Costello

Edited, Printed and Published by A R Nagarajan at Sadhvi Press, D Subbiah Road, Mysore

ವಾರ ಭವಿಷ್ಯ

ತಾ|| ೨೮ ೧೨ ೫೨ ರಿಂದ ೪ ೧ ೫೩ ರ ವರೆಗೆ

ಮೇಷ — ಆರೋಗ್ಯ ಉತ್ತಮ ಮನಸ್ಸಿಗೆ ಸಂತೋಷ ವ್ಯಾಪಾರಾದಿಗಳಲ್ಲಿ ಆಕಸ್ಮಿಕ ಲಾಭ. ಸುಖ ಪ್ರವಾಸ ಮಹತ್ವ ಪತ್ರ ತಾ|| ೩೦, ೩೧ ನೌಕರಿಯಲ್ಲಿ ಪ್ರಿಯ ವಾರ್ತೆ, ನೂತನ ಪರಿಚಯ

ವೃಷಭ — ಆರೋಗ್ಯ ಉತ್ತಮ ವ್ಯಾಪಾರಾದಿಗಳಲ್ಲಿ ಏಳಿಗೆ ನೌಕರಿಯಲ್ಲಿ ಮನ್ನಣೆ ಸುಖ ಪ್ರವಾಸ ತಾ|| ೧, ೨ ವ್ಯಾಪಾರಾದಿಗಳಲ್ಲಿ ಶುಭ ವಾರ್ತೆ, ಲಾಭಕರ ಪ್ರವಾಸ

ಮಿಥುನ — ಅನೇಕ ಕಾರ್ಯಗಳಲ್ಲಿ ಯಶಸ್ಸು ಆರೋಗ್ಯ ಉತ್ತಮ ಸುಖ ಪ್ರವಾಸ ನೌಕರಿಯಲ್ಲಿ ತೊಂದರೆ ದೂರ ವ್ಯಾಪಾರಾದಿಗಳಲ್ಲಿ ಸಹಕಾರ ತಾ|| ೨೮, ೨೯ ಮನರಂಜನೆ

ಕರ್ಕ — ರೋಗ ಘಟನೆಗಳಿಂದ ವ್ಯಥೆ ರಕ್ತದ ಒತ್ತಡ ವ್ಯಾಪಾರಾದಿಗಳಲ್ಲಿ ವಗದಗ ಆಪ್ತೇಷ್ಟರ ತಪ್ಪು ತಿಳುವಳಿಕೆ ಕಲಹ ತಾ|| ೩೦, ೩೧ ಅಪಘಾತ ಭಯ, ಧನ ಚಿಂತೆ.

ಸಿಂಹ — ಪ್ರಿಯರೊಬ್ಬರ ಅಗಲುವಿಕೆ ವಾರದಲ್ಲೇ ಮನಸ್ಸಿಗೆ ಅಸಮಾಧಾನ ಹಣಕಾಸಿನ ಸ್ಥಿತಿ ತೃಪ್ತಿಕರವಲ್ಲ ನೌಕರಿಯಲ್ಲಿ ತೊಂದರೆ ತಾ|| ೩೦ ೩೧ ತಾತ್ಕಾಲಿಕ ಚಿಂತಾ ನಿವಾರಣೆ ಶಾಂತಿ

ಕನ್ಯಾ — ನಿಮ್ಮ ದಕ್ಷತೆ ಕಂಡು ಇತರರು ಆಕರ್ಷಿತರಾಗುವರು ಆರೋಗ್ಯ ನೆಟ್ಟಗೆ. ಹಣಕಾಸಿನ ಸ್ಥಿತಿ ಸಮಾಧಾನಕರ ನೌಕರಿಯಲ್ಲಿ ಏಳಿಗೆ ಸುಖ ಪ್ರವಾಸ ತಾ|| ೧, ೨ ಮಿತ್ರರಿಂದ ಲಾಭ, ಶುಭ ವಾರ್ತೆ.

ತುಲ — ನಿಮ್ಮ ಕಾರ್ಯಗಳಿಗೆ ಪ್ರಾಧಾನ್ಯತೆ ದೊರೆಯುವುದು ಪತ್ನಿ ಸಹಕಾರ ಆರೋಗ್ಯ ಉತ್ತಮ ವ್ಯಾಪಾರಿಗಳ ತೊಂದರೆಗಳು ಬಗೆಹರಿಯುವುವು ತಾ|| ೩೦, ೩೧ ಪ್ರವಾಸ, ಮಹತ್ವದ ಪತ್ರ

ವೃಶ್ಚಿಕ — ದುಃಖಕರ ಘಟನೆ ಕುಟುಂಬ ಜೀವನ ಸುಖವಲ್ಲ, ಅಶಾಂತಿ ತಪ್ಪು ತಿಳುವಳಿಕೆ ಆಸ್ತಿ ಬಗ್ಗೆ ತಕರಾರು ಆರೋಗ್ಯ ಕೆಡುವುದು ತಾ|| ೩೦, ೩೧ ವಾಹನ ಭಯ, ವ್ಯಾಪಾರಾದಿಗಳಲ್ಲಿ ಗಂಡಾಂತರ ಸ್ಥಿತಿ

ಧನು — ಆರೋಗ್ಯ ಉತ್ತಮ ಮನಸ್ಸಿನಲ್ಲಿ ಉದಾತ್ತವಾದ ದೊಡ್ಡ ವಿಷಯಗಳ ಯೋಜನೆ ತೀರ್ಥ ಕ್ಷೇತ್ರಗಳ ಸಂದರ್ಶನ ಆಕಸ್ಮಿಕ ಲಾಭ ತಾ|| ೧, ೨ ಗೊಂದಲ, ಖರ್ಚು

ಮಕರ — ಜಾಗರಣೆ ಆದಾಯ ಇದ್ದರೂ ಖರ್ಚು ಹೆಚ್ಚು. ವ್ಯಾಪಾರಾದಿಗಳಲ್ಲಿ ಸ್ನೇಹಿತರ ಆಶ್ವಾಸನೆ ತಾ|| ೧, ೨ ಆಪ್ತರ ಸಹಾಯ ಕಾಲವ್ಯಯ

ಕುಂಭ — ಆರೋಗ್ಯಕ್ಕೆ ಗಮನ ಕೊಡಿ ಕಾಗದ ಪತ್ರ ಮತ್ತು ಬೆಲೆಯಾಗುವ ವಸ್ತುವಿನ ಅಪಹಾರದ ಸಂಭವ ತಾ|| ೩೦, ೩೧ ಆರ್ಥಿಕ ಚಿಂತಾ ನಾಶ, ಹರ್ಷ

ಮೀನ — ಹಣಕಾಸಿನ ತೊಂದರೆ ಖರ್ಚಿಗೆ ಆದಾಯ ಸಾಲದು ಕುಟುಂಬ ಜೀವನದಲ್ಲಿ ಅಶಾಂತಿ. ತಾ|| ೩೦, ೩೧ ಕಾಲಿಗೆ ಆಘಾತ, ಅಪ್ರಿಯ ವಾರ್ತೆ

ರಾಜಕೋಟೆಯಲ್ಲಿ ಗುಂಡಿನ ಪ್ರಕರಣ

ಸೌರಾಷ್ಟ್ರದ ರಾಜಕೋಟೆಯಲ್ಲಿ ಮಾರಾಟ ತೆರಿಗೆಯ ವಿರುದ್ಧ ಚಳುವಳಿಯು ನಡೆಯುತ್ತಲೇ ಇದೆ ಈ ಸಂಬಂಧವಾಗಿ ನೆನ್ನೆ ನಡೆದ ಭಾರಿ ಪ್ರದರ್ಶನದಲ್ಲಿ ಸೇರಿದ್ದ ಜನರನ್ನು ಚದುರಿಸಲು ಪೋಲೀಸರು ಎರಡು ಬಾರಿ ಲಾಠಿ ಪ್ರಯೋಗ ಮಾಡಿ, ಮೂರು ರೌಂಡು ಗುಂಡು ಹಾರಿಸಿ, ಅಶ್ರುವಾಯುವನ್ನೂ ಪ್ರಯೋಗಿಸಿದರೆಂದು ವರದಿಯಾಗಿದೆ ಕಳೆದ ಗುರುವಾರ ಈ ಸಂಬಂಧವಾಗಿ ನಡೆದ ಪ್ರದರ್ಶನದಲ್ಲಿ ಆರು ಸಾವಿರ ಜನರು ಭಾಗವಹಿಸಿದ್ದರು ಅವರ ಪೈಕಿ ೪೫ ಮಂದಿಯನ್ನು ಬಂಧಿಸಲಾಯಿತು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳು

ತಮಿಳುನಾಡು ಪ್ರದೇಶ ಕಾಂಗ್ರೆಸ್ ಸಮಿತಿಗೆ ಶ್ರೀ ಕಾಮರಾಜ ನಾಡಾರ್ ಆಂಧ್ರಕ್ಕೆ ಶ್ರೀ ಎನ್ ಸಂಜೀವ ರೆಡ್ಡಿ ಬೊಂಬಾಯಿಗೆ ಶ್ರೀ ಎಸ್ ಕೆ ಪಾಟೀಲ್ ಮತ್ತು ಹೈದರಾಬಾದಿಗೆ ಸ್ವಾಮಿ ರಮಾನಂದ ತೀರ್ಥರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಕೇರಂ ಪಂದ್ಯದ ಬಹುಮಾನ ವಿನಿಯೋಗ

ರಾಜಧಾನಿಯ ನ್ಯೂ ಅಶೋಕ ಕೇರಂ ಕ್ಲಬ್ಬಿನವರು ನಡೆಸುತ್ತಿದ್ದ ಪಂದ್ಯಗಳಲ್ಲಿ ಜಯಶಾಲಿಗಳಾದ ಶ್ರೀ ವಿಜಯಸಿಂಗ್ ರವರಿಗೂ, ರನ್ನರ್ ಅಪ್ ಶ್ರೀ ವೇಣುಗೋಪಾಲ್ ರವರಿಗೂ ನೆನ್ನೆ ದಿನ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಲಿಂಗಣ್ಣನವರು ಬೆಳ್ಳಿ ಬಟ್ಟಲಿನ ಬಹುಮಾನಗಳನ್ನು ವಿನಿಯೋಗ ಮಾಡಿದರು ಇದಕ್ಕಾಗಿ ಮೆಥಾಡಿಸ್ಟ್ ಮಿಷನ್ ಶಾಲೆಯಲ್ಲಿ ಒಂದು ಸಮಾರಂಭವು ಏರ್ಪಾಡಾಗಿದ್ದಿತು

ಗುಂಡ್ಲುಪೇಟೆ ಮಿತ್ರ ಕೂಟ

ಗುಂಡ್ಲುಪೇಟೆಯ ಮಿತ್ರಕೂಟದ ಆರಂಭ ಭಾಷಣವನ್ನು ಶ್ರೀ ಶ್ರೀನಿವಾಸ ಥಿಯೇಟರಿನಲ್ಲಿ ನಾಳೆ ಸಂಜೆ ೬ ಗಂಟೆಗೆ ವಿಶ್ವ ವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಶ್ರೀ ತ ಸು ಶಾಮರಾಯರು ಮಾಡಲಿರುವರು ಅಲ್ಲಿನ ಪೌರಸಭಾಧ್ಯಕ್ಷರಾದ ಶ್ರೀ ಜಿ ಎ ಅಬ್ದುಲ್ ಗಫೂರ್ ಸಾಹೇಬರವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಮಂತ್ರಿಗಳ ಪ್ರವಾಸ

ಬರುವ ತಿಂಗಳ ೬ರಿಂದ ೧೦ನೇ ತಾ|| ವರೆಗೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಹಾಸನ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ವಿ ವಿ ಪದಗೋಷ್ಠಿ, ೮ ಕರ್ನಾಟಕ ಸಂಗೀತ ಮಧ್ಯಾಹ್ನ ೧ ೩೦ ನಾಗಸ್ವರ ೨ ಚಿತ್ರ ಸಂಗೀತ ಸಂಜೆ ೫ ೩೦ ಮತ್ತು ೮ ಎಂ ಎಸ್ ಸುಬ್ರಹ್ಮಣ್ಯಂ ಪಿಟೀಲು ೬ ೧ ಗಾನ ವಿಹಾರ ೬ ೩೦ ಗೀತಾಂಜಲಿ ೮.೪೦ ಮತ್ತು ೯ ೪೦ ಎಂ ಆರ್ ಸರೋಜಿನಿದೇವಿ ಸಂಗೀತ ೯ ರಿಂದ ಇಂಗ್ಲಿಷಿನಲ್ಲಿ ಗ್ರಂಥ ವಿಮರ್ಶೆ

ಕೊರಿಯದಲ್ಲಿ ಪುನಃ ಕ್ರಿಮಿ ಶಸ್ತ್ರ ಪ್ರಯೋಗದ ಆಪಾದನೆ

ಕೊರಿಯದಲ್ಲಿ ವಿಶ್ವ ಸಂಸ್ಥೆ ವಿಮಾನಗಳು ಕಳೆದ ೨೩ ನೇ ತಾ|| ಪುನಃ ಕ್ರಿಮಿ ಬಾಂಬುಗಳನ್ನು ಹಾಕಿದವೆಂದು ಉತ್ತರ ಕೊರಿಯದ ಪ್ಯೋಂಗ್ಯಾಂಗ್ ರೇಡಿಯೋವು ತಿಳಿಸಿರುತ್ತದೆ

ರೈಲ್ವೆ ಕಲ್ಲಿದ್ದಲು ಗಣಿಗಳಲ್ಲಿ ೪,೦೦೦ ಕಾರ್ಮಿಕರ ಖೋತಾ

ಭಾರತದ ರೈಲ್ವೆಗಳ ಕಲ್ಲಿದ್ದಲು ಗಣಿಗಳಲ್ಲಿರುವ ಕಾರ್ಮಿಕರಲ್ಲಿ ಸುಮಾರು ೪ ಸಾವಿರ ನೌಕರರನ್ನು ತೆಗೆದುಹಾಕಲಾಗುವುದೆಂದು ವರದಿಯಾಗಿದೆ ಗಣಿಗಳಲ್ಲಿ ನಷ್ಟವಾಗಿರುವುದರಿಂದ ಹೆಚ್ಚಿನ ಜನರೆಂದು ಹೇಳಲಾದವರನ್ನು ತೆಗೆಯಲು ನಿರ್ಧರಿಸಲಾಯಿತು

ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲು ಪ್ರಭುಗಳಿಂದ ೫೦ ರೂ.

ಶ್ರೀಮನ್ಮಹಾರಾಜರು ರಾಜಧಾನಿಯ ಧರ್ಮಪ್ರಕಾಶ ಡಿ ಬನುಮಯ್ಯನವರ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚುವ ಸಲುವಾಗಿ ೫೦ ರೂ ಗಳನ್ನು ಕೊಟ್ಟಿರುವರು

ಮುಸ್ಲಿಂ ಅನಾಥಾಲಯದ ವಾರ್ಷಿಕ ಸಭೆ

ರಾಜಧಾನಿಯ ನ್ಯೂ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಮುಸ್ಲಿಂ ಬಾಲಕ ಬಾಲಕಿಯರ ಅನಾಥಾಲಯದ ವಾರ್ಷಿಕ ಸಭೆಯು ನಾಳೆ ಸಂಜೆ ೪ ಗಂಟೆಗೆ ಆಲಯದ ಆವರಣದಲ್ಲಿ ಜರುಗುವುದು ಭಾರತದ ಉಪ ರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್ ರವರು ಅಧ್ಯಕ್ಷತೆ ವಹಿಸುವರು

ಮೈಸೂರು ಪೇಟೆ ಧಾರಣೆ

ಪಲ್ಲ ೧ಕ್ಕೆ	ರೂ ಇಂದ	ರೂ ಗೆ
[illegible]	[illegible]	[illegible]
[illegible]	[illegible]	[illegible]
ಸಜ್ಜೆ	[illegible]	[illegible]
[illegible] ಬೇಳೆ	[illegible]	[illegible]
[illegible]	[illegible]	[illegible]
ಹೆಸರು	[illegible]	[illegible]
ಉದ್ದು	[illegible]	
ಅವರೆ	[illegible]	[illegible]
[illegible]	[illegible]	[illegible]
[illegible]	[illegible]	[illegible]
ಬೆಲ್ಲ	[illegible]	
ಹುಣಿಸೇಹಣ್ಣು	[illegible]	
ಸೀಗೇಕಾಯಿ	[illegible]	
ತೆಂಗಿನಕಾಯಿ	[illegible]	[illegible]

ರಾಧಾಕೃಷ್ಣನ್ ರವರಿಗೆ ಮಹಾರಾಜರ ಸತ್ಕಾರ

ಮೈಸೂರು, ೨೭

ನೆನ್ನೆ ಸಂಜೆ ಚಾಮುಂಡಿ [illegible]ದಲ್ಲಿ ಶ್ರೀಮನ್ಮಹಾರಾಜರವರು ಭಾರತದ ಉಪಾಧ್ಯಕ್ಷರಾದ ಡಾ|| ರಾಧಾಕೃಷ್ಣನ್ ರವರ ಗೌರವಾರ್ಥವಾಗಿ ಒಂದು ಸಂತೋಷಕೂಟವನ್ನೇರ್ಪಡಿಸಿದರು ತತ್ವಶಾಸ್ತ್ರ ಸಮ್ಮೇಳನದ ಪ್ರತಿನಿಧಿಗಳೂ ಮತ್ತು ಸಂಸ್ಥಾನದ ಅನೇಕ ಪ್ರಮುಖರೂ ಬಂದಿದ್ದರು ಉಪಾಹಾರಾನಂತರ ಡಾ|| ರಾಧಾಕೃಷ್ಣನ್ ರವರು ಎಲ್ಲ ಅತಿಥಿಗಳ ಬಳಿಗೂ ಹೋಗಿ ಕುಶಲ ಸಂಭಾಷಣೆ ಮಾಡಿದರು

ವಿಮಾನ ಅಪಘಾತದಲ್ಲಿ ೨೪ ಜನರ ಮರಣ

ಪರ್ಷಿಯದ ಅಬದಾನಿನಿಂದ ಹೊರಟ ಇರಾನಿನ ವಿಮಾನವೊಂದು ಮೊನ್ನೆ ಟೆಹರಾನಿನ ನಿಲ್ದಾಣದಲ್ಲಿ ಅಪಘಾತಕ್ಕೀಡಾಗಿ ೨೪ ಜನರು ಮೃತಪಟ್ಟರೆಂದೂ ಇಬ್ಬರು ಇರಾನಿಗಳು ಪಾರಾದರೆಂದೂ ಗೊತ್ತಾಗಿದೆ ರಾತ್ರಿ ಮಂಜು ಮುಸುಕಿದ್ದ ವೇಳೆಯಲ್ಲಿ ಈ ಘಟನೆ ಸಂಭವಿಸಿತೆಂದು ಹೇಳಲಾಗಿದೆ

ತಿರುವಾಂಕೂರು ನೋಟು ಚಲಾವಣೆ ರದ್ದು

ಬರುವ ಏಪ್ರಿಲ್ ೧ರಿಂದ ತಿರುವಾಂಕೂರು ನೋಟು ಮತ್ತು ನಾಣ್ಯಗಳ ಚಲಾವಣೆ [illegible] ರದ್ದಾಗುವುದೆಂದು ಗೊತ್ತಾಗಿದೆ

ಛತ್ರದ ಗಿರಣಿಗಳ ತನಿಖೆ

ಮೊನ್ನೆ ೮ ನರಸೀಪುರದ ಛತ್ರದ ಗಿರಣಿಗಳ ತನಿಖೆ ನಡೆದಾಗ [illegible] ಮಿಲ್ಲಿನ ದಾಸ್ತಾನಿನಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ ಸರಿಯಾಗಿದೆಯೆಂದು ತಿಳಿದು ಬಂದಿದೆ

ರಾಜಕಮಲ್, ಮೈಸೂರು

26 12-52 ರಿಂದ 3 ನೇ ವಾರ

★ ಪೆಣ್ ಮನಮ್ ★

[[illegible]]

Edited, Printed and Published by A R Nagaraja at Sadhvi Press, D Subbaiah Road Mysore

SRI GAYATHRI TALKIES

GRAND GALA OPENING

From 1—1—1953 Daily 3 Shows



ಫೋ: ಫಂ ೭೨೬೬ ಬಿಡಿ ಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೯-೧೨-೧೯೫೨ [ಸಂಚಿಕೆ ೧೩೩

ಚೀಣಾದಲ್ಲಿ ಬರುವ ವರ್ಷ ಸಾರ್ವತ್ರಿಕ ಚುನಾವಣೆ

ಬಟ್ಟೆ ವರ್ತಕರ ಸಂಘದ ವಾರ್ಷಿಕ ಸಭೆ

ಮೈಸೂರು ೨೮

... ನಗರ ಬಟ್ಟೆ ವರ್ತಕರ ಸಂಘದ ... ಸಭೆಯು ಈ ದಿನ ಬೆಳಗ್ಗೆ ... ಜೇಶ್ವರಿ ಭವನದಲ್ಲಿ ನಡೆಯಿತು ... ಮುಖ್ಯಮಂತ್ರಿ ಶ್ರೀ ಕೆ ಹನುಮಂ... ನವರು ಅಧ್ಯಕ್ಷತೆ ವಹಿಸಿದ್ದರು. ಉ... ನಂತರ ಸಂಘದ ಅಧ್ಯಕ್ಷರಾ... ಎಸ್ ಸತ್ಯನಾರಾಯಣ ಅವ... ಸಂಘದ ಪರವಾಗಿ ಬಟ್ಟೆ ವ್ಯಾಪಾ... ಇರುವ ಕುಂದುಕೊರತೆಗಳ... ವಿವರಿಸಿ ಅವುಗಳನ್ನು ಮುಖ್ಯ... ನಿವಾರಿಸಬೇಕೆಂದು ಕೋ... ರಿದ ಇಲಾಖೆಯ ಅಧಿಕಾರಿ... ಮಾಪ ಲೆಕ್ಕವನ್ನು ಒಪ್ಪದೆ ಕಿ... ಕೂರುತ್ತಿರುವರೆಂದೂ, ವಾ... ವರ ಪರಿಗೆ ಮತ್ತು ಅಕ್ಷಯ ಪಂ... ಎರಡೂ ಇರುವುದು ಒಂದು ದೋ... ವಾಗಿರುವುದೆಂದೂ ಅವರು ... ಈ ತೊಂದರೆಗಳನ್ನು ಶೀಘ್ರ ... ಕೋರಿದರು

... ಮಂತ್ರಿಗಳಾದ ಶ್ರೀ ಬಿ ... ನಗ್ರಪ್ಪನವರು ವರದಿಯನ್ನು ... ನಂತರ ಅಧ್ಯಕ್ಷರು ಭಾಷಣ ... ಪ್ರತಿಸ್ಪರ್ಧೆ ಪ್ರಶ್ನೆದಲ್ಲಿ ಸರ್ಕಾರವ ... ನಡೆಸಲು ಆಗಲುವ ವೆಚ್ಚದ ... ಎಲ್ಲರ ಮೇಲೂ ಬಿದ್ದಿ ... ಮಾರಾಟದ ತೆರಿಗೆಯು ... ವೊತ್ತದ ಬೇರೆ ವರವಾ ... ವರ್ಗಗಳನ್ನು ಸೂಚ ... ವನ್ನು ಅಗತ್ಯವಾಗಿ ಪರ್ಯಾ ... ವಾಗುವುದೆಂದೂ ಹೇಳಿದರು ... ಬಟ್ಟೆಗಳ ಮೇಲಿನ ಹತೋಟಿ ... ತೆಗೆಯುವುದು ಮತ್ತು ಎಕ್ಸೈ... ಮುಂತಾದ ವಿಷಯಗಳು ... ಸರ್ಕಾರಕ್ಕೆ ಸಂಬಂಧಪಟ್ಟಿರು ... ಒಗ್ಗೆ ವರ್ತಕರ ಮನವಿ ... ಬಗ್ಗೆ ಕಳುಹಿಸಿಕೊಡಲಾ ... ಹೇಳಿದರು ಆಕ್ಟ್ರಾಯ್ ... ವನ್ನು ರದ್ದು ಮಾಡುವ ವಿಚಾರದ ... ಸಭೆಯೊಡನೆ ವರ್ತಕ ಪ್ರಮು ... ಸಮಾಲೋಚನೆ ಮಾಡ ... ಸೂಚಿಸಿದರು ಸಂಘದವರು ... ರೂಪಾಯಿಯನ್ನು ನಿಧಿಯ ... ಒರಿಸಿದರೆ ಕಟ್ಟಡವನ್ನು ಕಟ್ಟ ... ದ ನಿವೇದನವನ್ನು ಕೊ ... ಸಂಗಾಭಿವೃದ್ಧಿ ಸಮಿತಿಗೆ ಸ ... ವುದಾಗಿಯೂ ತಿಳಿಸಿದರು

ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಹಾಯ

... ಚಾಮುಂಡೇಶ್ವರಿ ಭ ... ಈ ದಿನ ಮುಖ್ಯ ... ೨೧ ರೂ ಕಾಣಿಕೆಯ ... ನಿಧಿಗಾಗಿ ಒಪ್ಪಿಸಿದರು

ಹುಬ್ಬಳ್ಳಿ, ವಾಟೆಯೂಲಾಗಳಲ್ಲಿ ಭೂಕಂಪ

ಮೊನ್ನೆ ಮಧ್ಯ ರಾತ್ರಿ ವೇಳೆಯಲ್ಲಿ ... ವಾಟೆಯಲ್ಲಿ ಸಾಮಾನ್ಯ ರೀತಿಯ ಭೂ ... ಅರ್ಧ ನಿಮಿಷ ಕಾಲ ಸಂಭವಿಸಿ ... ಕಿಟಕಿಗಳು ಮತ್ತು ಬಾಗಿಲು ... ಅಲುಗಾಡಿದುವೆಂದು ವರದಿಯಾ ... ಬಳ್ಳಿಯಲ್ಲೂ ಇದೇ ರೀತಿ ಭೂ ... ಸಿತು ಎಂದು ಹೇಳಲಾಗಿದೆ

ಅಖಂಡ ಭಾರತದ ಸ್ಥಾಪನೆಗೆ ಮಹಾ ಸಭೆಯ ಸತತ ಪ್ರಯತ್ನ

ಅಖಿಲ ಭಾರತ ಹಿಂದೂ ಮಹಾ ಸಭೆಯ ... ನೇ ವಾರ್ಷಿಕಾಧಿವೇಶನವು ನೆನ್ನೆ ... ಯಲ್ಲಿ ಆರಂಭವಾಯಿತು ಮಹಾ ಸಭೆ ಅಧ್ಯಕ್ಷ ... ಮಾತನಾಡಿ, ಭಾರತದ ವಿಭಜನೆಯನ್ನು ಹಿಂದೂ ಮಹಾ ಸಭೆಯು ಸದಾ ವಿರೋಧಿಸುತ್ತದೆಂದೂ ಮತ್ತು ಅಖಂಡ ಭಾರತದ ಸ್ಥಾಪನೆಗೆ ... ಸತತ ಪ್ರಯತ್ನ ನಡೆಸುವುದೆಂದೂ ನುಡಿದರು ಈ ಸಾರಿ ಅಧಿವೇಶನದ ಅಧ್ಯಕ್ಷತೆ ವಹಿಸುವ ಶ್ರೀ ಎನ್ ಸಿ ಚಟರ್ಜಿಯವರು ತಮ್ಮ ಭಾಷಣದಲ್ಲಿ, ಪಾಕಿಸ್ತಾನದ ಬಗ್ಗೆ ಭಾರತವು ಸಡಿಲ ನೀತಿಯನ್ನು ತ್ಯಜಿಸಿ, ಆರ್ಥಿಕ ದಿಗ್ಬಂಧನವನ್ನು ಹಾಕಬೇಕೆಂದೂ ಕಾಶ್ಮೀರ ಸಮಸ್ಯೆಯನ್ನು ಸಂಯುಕ್ತ ರಾಷ್ಟ್ರದಿಂದ ವಾಪಸು ಪಡೆಯಬೇಕೆಂದೂ ಹೇಳಿದರು ಹಿಂದೂ ಕೋಡ್ ಮಸೂದೆಯನ್ನು ಅವರು ವಿರೋಧಿಸಿದರು

ಮದ್ರಾಸಿನಲ್ಲಿ ಆಂಧ್ರರ ಆಸ್ತಿ ಬಗ್ಗೆ ಪರಿಹಾರ

ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಸಭೆಯು ಮೊನ್ನೆ ಬೆಜವಾಡದಲ್ಲಿ ಶ್ರೀ ಎನ್ ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗಿ ಆಂಧ್ರ ಪ್ರಾಂತ್ಯದ ಸ್ಥಾಪನೆ ಬಗ್ಗೆ ನೆಹರೂರವರು ಮಾಡಿದ ಘೋಷಣೆಯನ್ನು ಸ್ವಾಗತಿಸಿ ಸರ್ವಾನುಮತದ ನಿರ್ಣಯ ಮಾಡಿತು ಆಂಧ್ರರು ಮದರಾಸಿನಲ್ಲಿ ಹೊಂದಿರುವ ಆಸ್ತಿ ಪಾಸ್ತಿಗಳಿಗೆ ಪರಿಹಾರವನ್ನು ಪಡೆಯುವ ಬಗ್ಗೆ ಜಸ್ಟಿಸ್ ವಾಂಚೂರವರಿಗೆ ಮನವಿಯನ್ನು ಸಲ್ಲಿಸಲು ಒಂದು ಸಮಿತಿಯನ್ನು ರಚಿಸಲಾಯಿತು

ದಸರಾ ವಸ್ತು ಪ್ರದರ್ಶನದಿಂದ ೪೦೦೦೦ ರೂ ಲಾಭ

ಈ ಸಾರಿ ನಡೆದ ನವರಾತ್ರಿ ವಸ್ತು ಪ್ರದರ್ಶನದಿಂದ ಖರ್ಚು ಕಳೆದು ಒಟ್ಟು ೪೦೦೦೦ ರೂ ಲಾಭ ಬಂದಿರುವುದಾಗಿ ಗೊತ್ತಾಗಿದೆ ವಸ್ತು ಪ್ರದರ್ಶನವು ಸ್ಥಾಪಿತವಾದಂದಿನಿಂದ ಇದುವರೆಗೆ ಪ್ರತಿ ವರ್ಷವೂ ನಷ್ಟದಲ್ಲಿಯೇ ನಡೆಯುತ್ತಿದ್ದ ಈ ಪ್ರದರ್ಶನವು ಈ ಸಾರಿ ಖಾಸಗಿ ಮಹನೀಯರ ನೇತೃತ್ವದಲ್ಲಿ ನಡೆದು ವೆಚ್ಚವೆಲ್ಲವೂ ಕಳೆದು ಈ ರೀತಿ ಲಾಭವನ್ನು ಪಡೆದಿರುವುದು ಗಮನಾರ್ಹವಾಗಿದೆ

ಬ್ರಿಟಿಷ್-ಅಮೇರಿಕಾ ನಿರ್ಣಯಕ್ಕೆ ಭಾರತದ ನಿರಾಕರಣೆ

ಕಾಶ್ಮೀರದ ಸಮಸ್ಯೆಯನ್ನು ಕುರಿತು ವಿಶ್ವಸಂಸ್ಥೆಯಲ್ಲಿ ಮಂಜೂರಾದ ಬ್ರಿಟಿಷ್ ಅಮೇರಿಕಾಗಳ ನಿರ್ಣಯವನ್ನು ಭಾರತವು ಅಂಗೀಕರಿಸುವುದಿಲ್ಲವೆಂದೂ, ಭಾರತವು ಆ ನಿರ್ಣಯಕ್ಕೆ ಕಟ್ಟುಬಿದ್ದು ಯಾವ ಕಾರ್ಯಕ್ರಮವನ್ನೂ ನಡೆಸುವುದಿಲ್ಲವೆಂದೂ ಪ್ರಧಾನಿ ಪಂಡಿತ ನೆಹರೂರವರು ತಿಳಿಸಿರುವರು ಕಾಪ್ಪು ದಿಪಲಿಗೆ ತೆರಳಿದ ನಂತರ, ಈ ನಿರ್ಣಯವನ್ನು ಕೂಲಂಕಷವಾಗಿ ಪರಿಶೀಲಿಸಿ ಹೆಚ್ಚಿನ ವಿವರ ಹೇಳುವುದಾಗಿ ಅವರು ಹೇಳಿದರು

ಹೆಚ್ಚು ಭತ್ತದ ಬೆಳೆ ತೆಗೆಯಲು ಹೊಸ ವಿಧಾನ

ದೇಶದಲ್ಲಿ ಹೆಚ್ಚು ಭತ್ತದ ಬೆಳೆಯನ್ನು ತೆಗೆಯುವ ಉತ್ತಮ ವಿಧಾನವನ್ನು ಕಂಡುಹಿಡಿಯುವ ಒಗ್ಗೆ ಬೊಂಬಾಯಿಯಲ್ಲಿ ಗಾಂಧಿ ಮತ್ತು ಕಸ್ತೂರಿಬಾಯಿ ರಾಷ್ಟ್ರೀಯ ಸ್ಮಾರಕ ನಿಧಿಗಳ ಸಮಿತಿಯ ಸಭೆಗಳು ಶಾಲೆಯಿಂದ ಮೂರು ದಿನಗಳ ಕಾಲ ನಡೆಯುವುವು ಇದಕ್ಕಾಗಿ ನಿಧಿಯಿಂದ ೯ ಲಕ್ಷ ರೂ ಗಳನ್ನು ತೆಗೆದಿಡಲಾಗುವುದೆಂದು ಹೇಳಲಾಗಿದೆ ಈ ಹೊಸ ವಿಧಾನದ ಪ್ರಕಾರ ಬೀಜದ ಭತ್ತವನ್ನು ಉಪ್ಪುನೀರಿನಲ್ಲಿ ಹಾಕಿ ಅದರಲ್ಲಿ ಕೆಳಗೆ ಮುಳುಗಿದುವನ್ನು ಆರಿಸಿ ಬಿತ್ತಲಾಗುವುದೆಂದೂ, ಇದರಿಂದ ಎರಡರಷ್ಟು ಹೆಚ್ಚಿನ ಫಸಲು ದೊರೆಯುವುದೆಂದೂ ಹೇಳಲಾಗಿದೆ ಉಪ್ಪುನೀರಿನ ಮೇಲೆ ತೇಲುವ ಭತ್ತವು ಶ್ರೇಷ್ಠವಾದ ಬೀಜವಾಗುವುದಿಲ್ಲವೆಂದು ಹೇಳಲಾಗಿದೆ

ಜೇಸಲಕತ್ತಿಗೆ ಮುರಿ

ಮೀರತ್ತಿನಲ್ಲಿ ಏಳು ವರ್ಷ ವಯಸ್ಸಿನ ಒಂದು ಜೇನುಕತ್ತೆಯು ಮರಿಯೊಂದನ್ನು ಹಾಕಿರುವುದೆಂದೂ, ಇದರಿಂದ ಅಲ್ಲಿನ ಅಧಿಕಾರಿಗಳು ಆಶ್ಚರ್ಯಚಕಿತರಾಗಿರುವರೆಂದೂ ವರದಿಯಾಗಿದೆ ಜೇಸಲಕತ್ತೆಗಳು ಮರಿಗಳನ್ನು ಹಾಕುವುದಿಲ್ಲವೆಂದೇ ಹೇಳಲಾಗಿದೆ

○ ಸಂಸ್ಥಾನದ ಪ್ರಜಾ ಸೋಷಿಯಲಿಸ್ಟ್ ಪಕ್ಷದ ಕಾರ್ಯ ನಿರ್ವಾಹಕ ಸಮಿತಿಗೆ ಜೆ ಮಹಮದ್ ಇಮಾಂರವರು ರಾಜೀನಾಮೆಯಿತ್ತಿರುವರೆಂದು ಗೊತ್ತಾಗಿದೆ

ಬರುವ ವರ್ಷ ಚೀಣಾದಲ್ಲಿ ಸಾರ್ವತ್ರಿಕ ಚುನಾವಣೆ

ಚೀಣಾದಲ್ಲಿ ಬರುವ ವರ್ಷ ಸಾರ್ವತ್ರಿಕ ಚುನಾವಣೆಯು ನಡೆಯುವುದೆಂದೂ, ಆಗಿನಿಂದಲೇ ಅಲ್ಲಿ ಪ್ರಥಮ ಪಂಚ ವಾರ್ಷಿಕ ಯೋಜನೆಯು ಜಾರಿಗೆ ಬರುವುದೆಂದೂ ಅಲ್ಲಿನ ಪ್ರಧಾನಿ ಚೌ ಎನ್ ಲೈ ರವರು ತಿಳಿಸಿರುವರು

ಅತ್ಯಾಚಾರವನ್ನು ಎದುರಿಸಿ ೧೫ ವರ್ಷದ ಬಾಲಕಿಯ ಮರಣ

ಸ್ಪೇನಿನ ಮಾಡ್ರಿಡ್ ಎಂಬ ಪಟ್ಟಣದ ಜೋಸೆಫಿನಾ ಅಲ್ಬಿಮಾ ಎಂಬ ೧೫ ವರ್ಷದ ಬಾಲಕಿಯು ಕಳೆದ ಅನೇಕ ಬಾರಿ ತನ್ನ ಮೇಲೆ ಅತ್ಯಾಚಾರ ಮಾಡಲು ಬಂದವನೊಬ್ಬನೊಡನೆ ಬಹು ಸಾಹಸ ಮತ್ತು ಧೈರ್ಯದಿಂದ ಹೋರಾಡಿದರೂ ಕಡೆಗೆ ಅವನ ಚೂರಿಯ ಇರಿತಕ್ಕೆ ಸಿಕ್ಕಿ ಹೊರಳಾಡುತ್ತಿದ್ದ ಬಳಿ ಗಾಯಗೊಂಡ, ದಿಗ್ಭ್ರಮೆಯಾಗ ಅವಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತೆಂದೂ, ಅವಳನ್ನು ರಕ್ಷಿಸಲು ವೈದ್ಯರು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾಗಿ ಅವಳು ಮೃತಪಟ್ಟಳೆಂದೂ ಗೊತ್ತಾಗಿದೆ ಆ ಬಾಲಕಿಯ ಗೌರವಾರ್ಥವಾಗಿ ಮೊನ್ನೆ ಆ ಊರಿನ ಅಂಗಡಿಗಳು, ಆಫೀಸುಗಳು ಮತ್ತು ಮಾರುಕಟ್ಟೆಯೂ ಮುಚ್ಚಲ್ಪಟ್ಟಿದ್ದುವೆಂದೂ ಅವಳ ಅಂತಿಮ ಯಾತ್ರೆಯ ಮೆರವಣಿಗೆಯಲ್ಲಿ ೪೦ ಸಾವಿರ ಜನರು ಭಾಗವಹಿಸಿದ್ದರೆಂದೂ ವರದಿಯಾಗಿದೆ ಹಿಂದೆ ಇಟಲಿಯ ಪೆರಿಯಾಗಿಟ್ಟಿ ಎಂಬ ೧೧ ವರ್ಷದ ಬಾಲಕಿಯು ಇದೇ ರೀತಿ ಮಡಿದಿದ್ದಳು. ಅವಳನ್ನು ೨ ವರ್ಷಗಳ ಹಿಂದೆ ಸಾಧು ಸಂತರ ಶ್ರೇಣಿಗೆ ಸೇರಿಸಲಾಯಿತು

ಲಾಹೋರಿನಲ್ಲೂ ಭೂಕಂಪ

ಮೊನ್ನೆ ರಾತ್ರಿ ಲಾಹೋರಿನಲ್ಲೂ ಒಂದು ನಿಮಿಷ ಕಾಲ ಭೂಕಂಪವು ಸಂಭವಿಸಿತೆಂದೂ, ಇದರಿಂದ ಗಾಬರಿಗೊಂಡ ಜನರು ಮನೆಯಿಂದ ಹೊರಕ್ಕೆ ಬಂದರೆಂದೂ ವರದಿಯಾಗಿದೆ ಭೂಮಿಯು ನಡುಗಿದಾಗ ಭಾರಿ ಆರ್ಭಟವೂ ಉಂಟಾಯಿತೆಂದು ಗೊತ್ತಾಗಿದೆ ಜಮ್ಮುವಿನಲ್ಲೂ ಅದೇ ಕಾಲದಲ್ಲಿ ಎರಡು ನಿಮಿಷ ಕಾಲ ಭೂಕಂಪವು ಸಂಭವಿಸಿತೆಂದು ತಿಳಿದುಬಂದಿದೆ

ಶಿಕ್ಷಣ ಸುಧಾರಣಾ ಸಮಿತಿಯವರಿಗೆ ರಾಧಾಕೃಷ್ಣರವರ ಸಲಹೆ

ಸಂಸ್ಥಾನದ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ವಿವಿಧ ಉಪ ಸಮಿತಿಗಳವರು ಈ ದಿನ ಬೆಳಗ್ಗೆ ಡಾ|| ಎಸ್ ರಾಧಾಕೃಷ್ಣರವರನ್ನು ಭೇಟಿ ಮಾಡಿ ಹಲವು ಮುಖ್ಯ ವಿಷಯಗಳನ್ನು ಕುರಿತು ಚರ್ಚಿಸಿದರು. ಇಂಗ್ಲೀಷ್ ಭಾಷೆಯನ್ನು ಮುಂದುವರಿಸಬೇಕಾದುದು ಅನಿವಾರ್ಯವೆಂದೂ ಪ್ರಾದೇಶಿಕ ಶಿಕ್ಷಣವು ಬಹು ಮುಖ್ಯವಾದುದೆಂದೂ ಡಾ|| ರಾಧಾಕೃಷ್ಣರವರು ತಿಳಿಸಿದುದಾಗಿ ಗೊತ್ತಾಗಿದೆ ವಿಶ್ವವಿದ್ಯಾಲಯದ ಪದವಿಯುಂಟಾದರೇ ಎಲ್ಲ ಹುದ್ದೆಗಳಿಗೂ ಅರ್ಹತೆಯುಂಟಾಗುವುದೆಂದು ತಿಳಿಯಬಾರದೆಂದೂ, ಉನ್ನತ ಶಿಕ್ಷಣ ಪಡೆಯಲು ಸೌಕರ್ಯವಿಲ್ಲದ ಬಡವರಿಗೆ ಉದ್ಯೋಗ ಪಡೆಯುವ ಬಗ್ಗೆ ತರಬೇತು ಕೊಡುವ ವ್ಯವಸ್ಥೆಯಾಗಬೇಕೆಂದೂ ಅವರು ಸೂಚಿಸಿದರೆಂದು ತಿಳಿದುಬಂದಿದೆ

ಹರಿಕಥೆ

ರಾಜಧಾನಿಯ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ವಿಶ್ವೇಶ್ವರ ಭವನದ ಮುಂಭಾಗದಲ್ಲಿ ಈ ರಾತ್ರಿ ೯-೩೦ ಕ್ಕೆ ಶ್ರೀ ಶಿವಲಿಂಗಸ್ವಾಮಿ ಹಿರೇಮಠರವರಿಂದ ಭಕ್ತ ಶ್ರೀಯಾಳ" ಎಂಬ ಹರಿಕಥೆಯು ನಡೆಯುತ್ತದೆ

ಉಪ ರಾಷ್ಟ್ರಪತಿಗಳೊಡನೆ ವಿದ್ಯಾ ಸುಧಾರಣಾ ಸಮಿತಿಯವರ ಭೇಟಿ

ಮಾಜಿ ಸೈನಿಕರಿಗೆ ಉದ್ಯೋಗದ ಬಗ್ಗೆ ರಾಧಾಕೃಷ್ಣನ್‌ರವರ ಸಲಹೆ

ಮೈಸೂರು ೨೯

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರೂ, ವಿದ್ಯಾ ಸಚಿವ ಶ್ರೀ ಎ. ಜಿ ರಾಮಚಂದ್ರರಾಯರೂ ಮತ್ತು ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಜೆ ಬಿ ಮಲ್ಲಾರಾಧ್ಯರವರೂ ಮತ್ತು ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರೂ ನೆನ್ನೆ ಬೆಳಿಗ್ಗೆ ಉಪ ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರನ್ನು ಭೇಟಿ ಮಾಡಿ ಸಂಸ್ಥಾನದಲ್ಲಿ ಶಿಕ್ಷಣ ಸುಧಾರಣೆಯನ್ನು ಕುರಿತು ಸಮಾಲೋಚನೆ ನಡೆಸಿದರು. ಮೂಲ ಶಿಕ್ಷಣದ ಅಭಿವೃದ್ಧಿ ಬಗ್ಗೆ ಚರ್ಚಿಸಲಾಯಿತು ಪ್ರಾಥಮಿಕ ಶಿಕ್ಷಣದ ಜೊತೆಗೆ ಮೂಲ ಶಿಕ್ಷಣವನ್ನೂ ವಿಸ್ತರಿಸಬೇಕೆಂಬ ಸಲಹೆಗೆ ರಾಧಾಕೃಷ್ಣನ್‌ರವರು ಒಪ್ಪಿಗೆಯಿತ್ತರೆಂದು ತಿಳಿದುಬಂದಿದೆ

ಹಣ ದೊರೆತಂತೆಲ್ಲಾ, ಯಾವ ಯಾವ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದರ ಬಗ್ಗೆ ವಿದ್ಯಾ ಸುಧಾರಣಾ ಸಮಿತಿಯ [illegible] ಮತ್ತು ಆಪಳಿತ ವಿಭಾಗದ ಸಮಿತಿಯು ಸೂಚಿಸಿದ ಸಲಹೆಯನ್ನು ಡಾ॥ ರಾಧಾಕೃಷ್ಣನ್‌ರವರು ಒಪ್ಪಿದರೆಂದು ಗೊತ್ತಾಗಿದೆ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ವ್ಯಾಯಾಮ ಶಿಕ್ಷಣವನ್ನು ಏರ್ಪಡಿಸುವ ಅಂಶವನ್ನು ಅವರು ಸ್ವಾಗತಿಸಿ, ಆ ಬಗ್ಗೆ ತರಪೇತು ಹೊಂದಿದ ಶಿಕ್ಷಕರು ದೊರೆಯದಿರುವುದರಿಂದ ಸುಶಿಕ್ಷಿತರಾದ ಮಾಜಿ ಸೈನಿಕರನ್ನು ಆ ಹುದ್ದೆಗೆ ಸೇರಿಸಿಕೊಳ್ಳುವಂತೆ ಸಲಹೆ ಮಾಡಿ, ಆ ಮೂಲಕ ವಿಸರ್ಜಿತ ಸೈನಿಕರ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದಂತಾಗುವುದೆಂದೂ ತಿಳಿಸಿದರು. ಸಂಸ್ಥಾನದಲ್ಲಿರುವ ೨೨ ಸಾವಿರ ಉಪಾಧ್ಯಾಯರ ಪೈಕಿ ೧೩ ಸಾವಿರ ಜನರು ಟ್ರೈನಿಂಗ್ ಪಡೆದಿಲ್ಲವೆಂದೂ, ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದೂ ಉಪರಾಷ್ಟ್ರಪತಿಯವರು ಸಲಹೆ ಮಾಡಿದರು.

ಪ್ರಾರಂಭಿಕ ಶಿಕ್ಷಣದ ಜೊತೆಗೆ ಚಿತ್ರಕಲೆ ಮತ್ತು ಸಂಗೀತ ಶಿಕ್ಷಣದ ವ್ಯವಸ್ಥೆಯನ್ನು ಸೇರಿಸಬೇಕೆಂದು ಸುಧಾರಣಾ ಸಮಿತಿಯು ಮಾಡಿದ ಸಲಹೆಯನ್ನು ರಾಧಾಕೃಷ್ಣನ್‌ರವರು ಅಂಗೀಕರಿಸಿ ಅದನ್ನು ಪುನರ್ ಪರಿಶೀಲಿಸಬೇಕೆಂದು ಸಲಹೆ ಮಾಡಿದರು. ವಿದ್ಯಾಭ್ಯಾಸವನ್ನು ಮುಗಿಸಿಕೊಂಡ ತರುವಾಯ ಪದವೀಧರರೂ ಮತ್ತು ಇಲ್ಲದವರೂ ಯಾವ ತಾರತಮ್ಯವೂ ಇಲ್ಲದೆ ಎಲ್ಲ ಕೆಲಸಗಳಿಗೂ ಅರ್ಜಿ ಹಾಕುತ್ತಿರುವುದರ ಬಗ್ಗೆ ಯಾವ ಯಾವ ಕೆಲಸಕ್ಕೆ ಯಾರ್ಯಾರನ್ನು ಚುನಾಯಿಸಬೇಕೆಂಬ ವಿಷಯವಾಗಿ ಸಮಿತಿಯು ಚರ್ಚಿಸಿತು

ಮಂಡ್ಯದಲ್ಲಿ ಬೆಂಕಿ ಅನಾಹುತ

ಮಂಡ್ಯದ ಆಸ್ಪತ್ರೆ ಬಳಿ ಮೊನ್ನೆ ಬೆಂಕಿಯುಂಟಾಗಿ ೧೨೨ ಮಂದಿಯುಳ್ಳ ೧೭ ಸಂಸಾರಗಳವರು ಸ್ಥಳ ವಸತಿಯನ್ನು ಕಳೆದುಕೊಂಡು ಬಹಳ ನಷ್ಟ ಹೊಂದಿದರೆಂದೂ, ಅವರುಗಳಿಗೆ ಗುಡಿಸಲನ್ನು ನಿರ್ಮಿಸಲು ಪ್ರತಿ ಸಂಸಾರಕ್ಕೂ ೨೫ ರೂ. ಗಳನ್ನು ಕೊಡುವುದಾಗಿ ಅಧಿಕಾರಿಗಳು ತಿಳಿಸಿರುವರೆಂದೂ ಗೊತ್ತಾಗಿದೆ

ರಾಧಾಕೃಷ್ಣನ್‌ರವರಿಗೆ ಮುಖ್ಯ ಮಂತ್ರಿಗಳ ಸತ್ಕಾರ

ನೆನ್ನೆ ಸಂಜೆ ಸರ್ಕಾರಿ ಭವನದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಡಾ॥ ಎಸ್ ರಾಧಾಕೃಷ್ಣನ್‌ರವರ ಮತ್ತು ತತ್ವ ಶಾಸ್ತ್ರ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಸಮಾರಂಭಕ್ಕೆ ಶ್ರೀಮನ್ಮಹಾರಾಜರೂ ಅಧಿಕಾರಿಗಳೂ ಮತ್ತು ಖಾಸಗಿ ಪ್ರಮುಖರೂ ಆಗಮಿಸಿದ್ದರು ರಾಧಾಕೃಷ್ಣನ್‌ರವರು ಅತಿಥಿಗಳೊಡನೆ ಕಲೆತು ಸ್ವಲ್ಪ ಕಾಲವನ್ನು ವಿನೋದವಾಗಿ ಕಳೆದರು ಈ ಸತ್ಕಾರ ಕೂಟದಲ್ಲಿ ಪ್ರತಿಯೊಬ್ಬರೂ ತಮಗೆ ಬೇಕಾದ ಆಹಾರವನ್ನು ತಾವೇ ತೆಗೆದುಕೊಂಡು ಬಡಿಸಿಕೊಳ್ಳುತ್ತಿದ್ದ "ಬಫೆ" ಎಂಬ ಹೊಸ ಪದ್ಧತಿಯನ್ನು ಬಳಕೆಗೆ ತಂದಿದ್ದರು

ಬಸಮಯ್ಯನವರ ಮಾಧ್ಯಮಿಕ ಶಾಲಾ ಸ್ಕೌಟುಗಳ ಪ್ರವಾಸ

ಧರ್ಮಪ್ರಕಾಶ ಡಿ. ಬಸಮಯ್ಯನವರ ಮಾಧ್ಯಮಿಕ ಶಾಲಾ ಸ್ಕೌಟು ದಳದವರು ಕಳೆದ ಬುಧವಾರ ಶ್ರೀರಂಗಪಟ್ಟಣಕ್ಕೆ ವಿಹಾರಾರ್ಥವಾಗಿ ಹೋಗಿದ್ದಾಗ ಸಂಗಮದ ಬಳಿ ಚೀಫ್ ಸ್ಕೌಟರಾದ ಶ್ರೀಮನ್ಮಹಾರಾಜರ ಸಂದರ್ಶನವನ್ನು ಅನಿರೀಕ್ಷಿತವಾಗಿ ಪಡೆಯುವ ಸುಯೋಗವನ್ನು ಹೊಂದಿದರು ಬಾಲಕರ ನಡೆನುಡಿಗಳನ್ನು ಮೆಚ್ಚಿ, ನೆನ್ನೆಯ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ, ಪ್ರಭುಗಳು ಅವರಿಗೆ ಸಿಹಿ ತಿಂಡಿಗಳನ್ನು ಹಂಚಲು ೫೦ ರೂ ಗಳನ್ನು ಉದಾರವಾಗಿ ದಯಪಾಲಿಸಿದರು

ವಿಮಾನ ಅಸ್ಫೋಟಿಸಿ ೧೪ ಜನರ ಮರಣ

ಗ್ರೀಸಿನ ಒಂದು ವಿಮಾನವು ಮೊನ್ನೆ ದಕ್ಷಿಣ ಕೊರಿಯದ ನಿಲ್ದಾಣದಲ್ಲಿ ಅಸ್ಫೋಟಿಸಿ ೧೪ ಜನರು ಮಡಿದರೆಂದು ಗೊತ್ತಾಗಿದೆ

೬ ಮಾರ್ಗಗಳಲ್ಲಿ ಬಸ್ಸು ಸಂಚಾರದ ರಾಷ್ಟ್ರೀಕರಣ

ಸರ್ಕಾರದವರು ೬ ಮಾರ್ಗಗಳಲ್ಲಿ ಬಸ್ಸು ಸಂಚಾರವನ್ನು ರಾಷ್ಟ್ರೀಕರಿಸಲು ನಿರ್ಧರಿಸಿರುವುದನ್ನು ಬರುವ ಗುರುವಾರದಿಂದ ಜಾರಿಗೆ ತರಲಾಗುವುದೆಂದೂ, ಆ ಕಡೆಗಳಲ್ಲಿ ಬಸ್ಸುಗಳನ್ನು ಓಡಿಸುತ್ತಿದ್ದ ಖಾಸಗಿಯವರಿಗೆ ಬೇರೆ ಮಾರ್ಗಗಳಲ್ಲಿ ಓಡಿಸಲು ಅವಕಾಶ ಕೊಡಲಾಗಿದೆಯೆಂದೂ, ಆ ಮಾರ್ಗಗಳಲ್ಲಿ ಸಂಚರಿಸುವ ಸರ್ಕಾರಿ ಬಸ್ಸುಗಳನ್ನು ನಿಲ್ಲಿಸಲಾಗುವುದೆಂದೂ ಗೃಹಸಚಿವ ಶ್ರೀ ಸಿದ್ದವೀರಪ್ಪನವರು ತಿಳಿಸಿರುವರು.

ರಾಧಾಕೃಷ್ಣನ್‌ರವರಿಗೆ ಚಿತ್ರ ಸಮರ್ಪಣೆ

ನೆನ್ನೆ ದಿನ ಲಲಿತಮಹಲಿನಲ್ಲಿ ಉಪಾಧ್ಯಕ್ಷರಾದ ಡಾ॥ ರಾಧಾಕೃಷ್ಣನ್‌ರವರನ್ನು ಮೈಸೂರಿನ ಪ್ರಸಿದ್ಧ ಕಲಾವಿದರಾದ ಎಸ್ ಜೆ ರಾಮುರವರು ಭೇಟಿ ಮಾಡಿ, ತಾವೇ ಚಿತ್ರಿಸಿದ್ದ ರಾಧಾಕೃಷ್ಣನ್‌ರವರ ತೈಲ ಚಿತ್ರವನ್ನು ಅರ್ಪಿಸಿದರು ಉಪಾಧ್ಯಕ್ಷರು ರಾಮುರವರ ಕಲಾ ಪ್ರೌಢಿಮೆಯನ್ನು ಮೆಚ್ಚಿ ಆಶೀರ್ವದಿಸಿದರು

ಉಪನ್ಯಾಸ

ಈ ದಿನ ಸಾಯಂಕಾಲ ೬-೩೦ ಗಂಟೆಗೆ ನಗರದ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ನೂರಡಿ ರಸ್ತೆಯಲ್ಲಿರುವ ಸಭಾ ಭವನದಲ್ಲಿ ಕಾಶೀಯ ಹಿಂದೂ ವಿಶ್ವ ವಿದ್ಯಾನಿಲಯದ ದರ್ಶನ ಶಾಸ್ತ್ರದ ಪ್ರೊಫೆಸರಾದ ಶ್ರೀ ಆತ್ರೇಯರವರು ಮತ್ತು ಮಹಾರಾಜ ಕಾಲೇಜಿನ ದರ್ಶನ ಶಾಸ್ತ್ರದ ಪ್ರೊಫೆಸರಾದ ಶ್ರೀಮತಿ ಮಾಧುರಿ ದೇವಿ ಷಾ ರವರು ಭಾಷಣ ಮಾಡುವರು. ಸರ್ವರೂ ದಯಮಾಡಿಸಬೇಕಾಗಿ ಕೋರಿದೆ

ಆಂಧ್ರ ಪ್ರಾಂತ್ಯ ಸ್ಥಾಪನೆಗೆ ವಿರೋಧ

ರಾಯಲಸೀಮಾ ಮಹಾ ಸಭಾ ಸಮಿತಿಯು ಸಭೆಯು ಮೊನ್ನೆ ಮದರಾಸಿನಲ್ಲಿ ನಡೆದು ಆಂಧ್ರ ಪ್ರಾಂತ್ಯದ ರಚನೆಗೆ ತನ್ನ ವಿರೋಧವನ್ನು ವ್ಯಕ್ತಪಡಿಸಿ ಮದರಾಸು ಸಂಸ್ಥಾನವನ್ನು ಪ್ರತ್ಯೇಕ ಪ್ರದೇಶದಲ್ಲಿ ಭಾಷಾವಾರಾಗಿ ವಿಂಗಡಿಸುವುದರಿಂದ ಬಹಳ ದುಷ್ಪರಿಣಾಮಗಳು ಸಂಭವಿಸುವುವೆಂದು ಎಚ್ಚರಿಸಲಾಯಿತು

ಪರೀಕ್ಷೆ ಫಲಿತಾಂಶದಲ್ಲಿ ತಾರತಮ್ಯ

ವಿಶ್ವ ವಿದ್ಯಾಲಯದ ಸೆಪ್ಟೆಂಬರ್ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸಿದ ಸಂದರ್ಭದಲ್ಲಿ ಪಿ ಸಿ ಎಂ. ವಿಭಾಗದ ವಿದ್ಯಾರ್ಥಿಗಳಿಗೆ ೧೦-೧೫ ಅಂಕಗಳು ಕಡಿಮೆ ಬಂದಿದ್ದರೂ ಅವರನ್ನು ತೇರ್ಗಡೆ ಮಾಡಿಸಿ, ಬಾಟನಿ ವಿಭಾಗದವರಿಗೆ ಕೇವಲ ಒಂದು ಅಂಕದ ಕಡಿಮೆಯಾಗಿದ್ದಾಗ ಅವರನ್ನು ಉತ್ತೀರ್ಣರಾಗದಂತೆ ಮಾಡಲಾಗಿದೆಯೆಂದೂ, ಈ ತಾರತಮ್ಯವನ್ನು ಬಿಟ್ಟು ವಿಶ್ವ ವಿದ್ಯಾಲಯದವರು ಎಲ್ಲರಿಗೂ ನ್ಯಾಯವನ್ನು ಕೊಡಬೇಕೆಂದೂ ಕೋರಿ ನೊಂದವರೊಬ್ಬರು ಪತ್ರ ಬರೆದಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ವೀಣೆ, ಎಸ್ ರಾಜಾರಾವ್. ಮಧ್ಯಾಹ್ನ ೨ ಸಿತಾರ್ ಎ ಆರ್ ರಘುನಾಥ್ ಸಂಜೆ ೬-೩೦ ಸಂಗೀತ, ಎಸ್ ಕೆ ವಸಂತ ೭ ಮತ್ತು ೭.೩೦ ಸಿತಾರ್ ಎ ಆರ್. ರಘುನಾಥ್ ೮ ವೀಣೆ ಎಸ್. ರಾಜಾರಾವ್ ೮ ೩೦ ವೃಂದ ಸಂಗೀತ, ರೇಡಿಯೋ ಆರ್ಕೆಸ್ಟ್ರಾ ೯ ೩೦ ಗಾನವನ್ನು ೩, ರಿಲೆ ರಾಷ್ಟ್ರೀಯ ಕಾರ್ಯಕ್ರಮ

ಎಲ್ಲಾ ಬಗೆಯ
ಅಲೋಪತಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
201 ಸಯ್ಯಾಜಿರಾವ್ ರೋಡ್,
ಮೈಸೂರು

ಕ್ರಿಸ್ಮಸ್ ಹಬ್ಬದ ಸಲುವಾಗಿ
ಅತ್ಯುತ್ತಮ ನವನವೀನವಾದ ಪರ್ಫ್ಯೂಮ್, ಫೇಸ್ ಪೌಡರ್, ಕ್ರೀಮ್ ಮತ್ತು ಟಾಯ್ಲೆಟ್ ಸ್ನೋ ಮುಂತಾದ ನವೀನ ಸಾಮಾನುಗಳು ಬಹಳ ಸುಲಭ ಬೆಲೆಗೆ ದೊರೆಯುತ್ತವೆ ದಯವಿಟ್ಟು ಒಂದು ಸಲ ಬಂದು ನೋಡಿ
ಕೆ. ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್. (Estd. 19[illegible])
ನರಸಿಂಹರಾಜ ಮತ್ತು ಕೃಷ್ಣರಾಜ ವ್ಯಾಪಾರಗಳ ಆಪೋಸಿಟ್ ರಸ್ತೆ, ಮೈಸೂರು

AT YOUR SERVICE AGAIN
Paddy & Rice Transporters, Please Remember
the Quick, Safe & Easy Transport
MYSORE TRANSIT SERVICE (Regd.)
THIRTHA & COMPANY, (Phone 537) Ramavilas Road, Mysore

ಆರ್. ಜಿ. ಬ್ರಾಂಡ್
ಕುಕಿಂಗ್ ಮೀಡಿಯಂ
(ಅಡಿಗೆ ಸಾಧನ)

Edited, Printed and Published by A. R. Nagarajan at Sadhvi Press, D. Subbiah Road, Mysore.

ಕ್ರಿಸ್ಮಸ್ ಹಬ್ಬಕ್ಕಾಗಿ ರೇಷ್ಮೆ ಸೀರೆಗಳು, ಕ್ರೇಪ್ ಸೀರೆಗಳು,
ಜೋಡಿ ಪೇಟುಗಳು ಪೂನಾ, ನಾಗಪೂರ್ ಸೀರೆಗಳಿಗೆ (ಫೋನ್ ನಂ. 446)
★ M. V. ಬೋಜಯ್ಯ ಬಿ. ಎ., ಇಂಡಿಯಾ ಬ್ಯಾಂಕ್ ಎದುರು ಮೈಸೂರು

ನೋ. ನಂ 792 ||ವಂದೇ ಮಾತರಂ|| ಬಿಡಿ ಪ್ರತಿ 3 ಕಾಸು

ಸಾಧ್ವಿ

ಸಂಪುಟ ೧೧) ಮಂಗಳವಾರ ೩೦-೦೬-೧೯೫೩ [ಸಂಚಿಕೆ ೧೨೬

ಜಮ್ಮು ಪೋಲೀಸರ ಗುಂಡಿಗೆ ಇಬ್ಬರ ಬಲಿ

ಧರ್ಮಾಭಿಮಾನವನ್ನು ಆಚರಣೆಯಲ್ಲಿ ತೋರಬೇಕು

ಮುಸ್ಲಿಂ ಅನಾಥಾಲಯದಲ್ಲಿ [illegible]ಧ್ಯಕ್ಷರವರ ಉಪದೇಶ

ಮೈಸೂರು ೩೦

[illegible] ಮುಸ್ಲಿಂ ವಿದ್ಯಾರ್ಥಿ ವಿದ್ಯಾರ್ಥಿ [illegible] ಅನಾಥಾಲಯಗಳ ವಾರ್ಷಿಕ ಸಭೆ [illegible] ಕಾರ್ಯಕ್ರಮವನ್ನು ಕುರಿತು ನಿನ್ನೆ ಸಂಜೆ [illegible] ಉಪಾಧ್ಯಕ್ಷರವರು ಧರ್ಮದ ಮೇ[illegible] ಭಿಮಾನವನ್ನು ಕಾರ್ಯರೂಪದಲ್ಲಿ [illegible] ದರ್ಶಿಸುವುದು ಅಗತ್ಯವೆಂಬುದನ್ನು [illegible] ಹೇಳಿದರು

[illegible] ಅನಾಥಾಲಯದ ಬಾಲಕರಿಂದ ಪ್ರಾರ್ಥ[illegible] ಹಿಂದೀ ಭಾಷೆಯಲ್ಲಿ ಸ್ವಾಗತ [illegible] ದನಂತರ, ಸಭಾ ಅಧ್ಯಕ್ಷ [illegible] ಸೈಯದ್ ಷಾಹ್ ಪೀರಾರವರು [illegible] ಭಾಷಣ ಮಾಡಿ ಈ ಶಿಲೆಯನ್ನು [illegible] ಮಾಣದಲ್ಲಿ ಆರಂಭವಾಗಿ ಅನೇಕ [illegible] ಮತ್ತು ಸರ್ಕಾರದವರ ಸಹಾಯ[illegible] ಕ್ರಮಕ್ರಮವಾಗಿ ವೃದ್ಧಿ ಹೊಂದು[illegible] ಅಂಶವನ್ನು ವಿವರಿಸಿದರು. ಕಾರ್ಯ[illegible] ಕ್ಯಾಪ್ಟನ್ ಎಮ್. ಎ. [illegible] ವರದಿಯನ್ನು ಓದಿ ಒಪ್ಪಿಸಿದರು [illegible] ಉಪಾಧ್ಯಕ್ಷರವರು ಈ ರೀತಿ ನು[illegible]

[illegible] ಗೌತಮ ಬುದ್ಧನ ಅವಶೇಷ [illegible] ಪ್ರತಿಷ್ಠಿಸಲು ಸಾಂಚಿ ಕ್ಷೇತ್ರದಲ್ಲಿ [illegible] ನಡೆದ ಸಮಾರಂಭದಲ್ಲಿ ನಾನು ಭಾ[illegible] ದ್ದೆನು. ಇಲ್ಲಿ ಇಂದು ಇವೆಲ್ಲ ಕಾಣ[illegible] ಇವಕ್ಕೆ ಮುಂಚೆ ಅನೇಕ [illegible] ಗಳಲ್ಲಿಯೂ, ಮುಸ್ಲಿಂ ಮಸೀದಿ[illegible], ಬೌದ್ಧ ವಿಹಾರಗಳಲ್ಲಿಯೂ, [illegible] ದೇವಾಲಯಗಳಲ್ಲಿಯೂ ನಾನು [illegible] ವನ್ನು ಪಡೆದ್ದೇನೆ. ಇದರಲ್ಲಿ ಯಾ[illegible] ಸನಾಗಲಿ ಆಶ್ಚರ್ಯವಾಗಲಿ ಇರು[illegible] ಈ ರೀತಿ ಭಾಗವಹಿಸುವುದರಿಂದ ಸ[illegible] ಸಾಮರಸ್ಯ ಸಾಧನೆಗೆ ಯಾವ[illegible] ಕುಂದುಕೊರತೆಯೂ ಉಂಟಾಗು[illegible] ಸಕಲ ಮತಗಳ ಉದಾತ್ತ ಧ್ಯೇಯ [illegible] ಸಮಾನವಾದ ಸಾಧನಾಸ್ಥ ಪ್ರಮಾ[illegible] ಅನೇಕವಾಗಿರುತ್ತವೆ. ಮಾನವ ಸಂ[illegible] ಸಂಬಂಧಪಟ್ಟ ಭಾವನೆಗಳು [illegible] ಬಹು ಹೋಲುವುದಾಗುವವು. ನಮ್ಮ [illegible] ಉಪನಿಷತ್ತುಗಳೂ ಮಹರ್ಷಿಗಳ [illegible] ಗಳೂ, ಗೌತಮ ಬುದ್ಧ, ಏಸು [illegible] ಮುಂತಾದ ಮಹಾತ್ಮರುಗಳೂ, [illegible] ತಂತೆ ಧರ್ಮಾಚರಣೆಯನ್ನು [illegible] ತತ್ವ ನಿರೂಪಣದಿಂದ ನಿರ್ಧರಿಸಿರಾ [illegible] ಮಾನವನ ದಿನಚರಿಯು ನಡತೆಯಿಂ[illegible] ನಿರ್ಧರಿಸಬೇಕು. ಬರೀ ಸಂಪತ್[illegible] ಅಲ್ಲದೆ ಕಾರ್ಯಾಚರಣೆಯಿಂದ [illegible] ಮಾಡಬೇಕು.

[illegible] ಅನೇಕ ಮ[illegible] ಹೊಂದಿರುತ್ತವೆ. ಅವುಗಳ ಪ್ರತಿ[illegible] ಪಟ್ಟಿತತ್ವಗಳ್ಳ [illegible] ಇರುತ್ತದೆ

[illegible] ನಾಗಲಿ, ಶೋಷಣಾಗಲಿ, ಸ್ವಾರ್ಥವಾ[illegible] ವರ್ತನ್ನವಾಗಲಿ ತನಗೆ ಬೇಕಾದಂ[illegible] ಇದರಿಂದ ಬಳಲಿ ತೊಳಲುತ್ತಿರುವ [illegible] ಕಷ್ಟಪರಿಹಾರದ ಶಕ್ತಿಯನ್ನು [illegible] ಕರೆಕೊಟ್ಟಿರುವ ಧರ್ಮ [illegible] ಕರೆಯೋ ಅರಮಾತ್ಮನಿಗೆ ಸಲ್ಲಿಸುವ [illegible] ತ್ತ ಮವಾದ ಪ್ರಾರ್ಥನೆ. ಮಾನವ [illegible] ಹೇಗಳವಾದ ಹೇಳ ಸಂಗ್ರಹ, [illegible] ಜನಸಮುದಾಯ ಅಥವಾ [illegible] ಕಾರ್ಯಾಚರಣೆಗಳು ಧರ್ಮದ [illegible] ಆಧಾರವಲ್ಲ. ಮಾನವ [illegible] ಹೀನಾಯ ಸ್ಥಿತಿ [illegible] ಈ ಆದರ್ಶದ [illegible] ನೆಲೆಯಲ್ಲಿ ಕೆಂಡುಬಂದುದರಿಂ[illegible] ಅಲ್ಲಿಗೆ ಈ ದಿನ ಬಂದಿರುತ್ತೇ[illegible] ಪ್ರಯತ್ನಗಳು ನಿಜವಾಗಿಯೂ [illegible] ಸಮಾನವು. ಹಿಂದೂ [illegible] ಕ್ರೈಸ್ತರಾಗಲಿ, ಮುಸ್ಲಿಮರಾ[illegible]

ಪೌರ ಚುನಾವಣೆಯಲ್ಲಿ ಜಾಡಮಾಲಿಯು ಸ್ಪರ್ಧೆ

ಸಧ್ಯದಲ್ಲೇ ನಡೆಯಲಿರುವ ತಿರುಪ ನಂತಪುರದ ಪೌರಸಭಾ ಚುನಾವಣೆಯಲ್ಲಿ ಕೃಷ್ಣ ಎಂಬ ಜಾಡಮಾಲಿಯೊಬ್ಬನು ಸ್ವತಂತ್ರವಾಗಿ ಸ್ಪರ್ಧಿಸಿ ಉಮೇದುವಾರಿಕೆ ಅರ್ಜಿ ಸಲ್ಲಿಸಿರುವನೆಂದು ಗೊತ್ತಾಗಿದೆ. ಅಲ್ಲಿನ ಪ್ರಜಾ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿರುವ, ಜಾಡಮಾಲಿಗಳ ಸಂಘದವರು ಪಕ್ಷದ ಪರವಾಗಿ ಕೃಷ್ಣನ್ನನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿದರೆಂದೂ, ಅದನ್ನು ನಿರಾಕರಿಸಿದುದರಿಂದ ಅವನನ್ನು ಸ್ವತಂತ್ರವಾಗಿ ನಿಲ್ಲಿಸಲಾಯಿತೆಂದೂ ಹೇಳಲಾಗಿದೆ.

ರೇಷನ್ ಡಿಪೋಗಳಿಗೆ ರಜಾ

ರಾಜಧಾನಿಯಲ್ಲಿರುವ ರೇಷನ್ ಡಿಪೋಗಳು, ನೊಸ್ಸೆಟ್ಟಿಗಳು ಮತ್ತು ಸಿಕಾರೀ ಗೋಡೌನುಗಳಲ್ಲಿನ ರೇಷನ್ ಪದಾರ್ಥಗಳ ದಾಸ್ತಾನಿನ ತನಿಖೆ ನಡೆಸಬೇಕಾಗಿರುವುದರಿಂದ ನಾಳೆ ಅವುಗಳೆಲ್ಲ ತಪ್ಪದೆ ಮುಚ್ಚಲಾಗುವವು. ನಾಳಿದ್ದು ಡಿಪೋಗಳು ತೆರೆದಿರುತ್ತವೆ

○ ವಿದ್ಯಾಧಿಕಾರಿಗಳಾದ ಶ್ರೀ ಟಿ ಎಸ್ ಕೃಷ್ಣರಾಯರಿಗೆ ಇಲಾಖಾ ಡೆಪ್ಯುಟಿ ಡೈರೆಕ್ಟರ್ ಆಗಿ ಬಡ್ತಿ ಕೊಡಲಾಗಿದೆ.

ಗಲಿ, ಎಲ್ಲರೂ ಮೊದಲು ಮಾನವರು; ಸಮ್ಮೆಲ್ಲರಿಗೂ ಜೀವನದಲ್ಲಿ ಸಮಾನವಾದ ಅನೇಕ ಅಂಶಗಳಿರುತ್ತವೆ

ಮತ ಧರ್ಮವು ತನ್ನ ನಿಜವಾದ ಪ್ರಾಕೃತಿಕ ಚೇತನವನ್ನು ಕಳೆದುಕೊಂಡಿರುವುದೇ ಅದು ಇಂದು ಕ್ಷೀಣದೆಸೆಯಲ್ಲಿರಲು ಕಾರಣ. ಎಲ್ಲಾ ಧರ್ಮಗಳಿಗೂ ಶಾಂತಿಯೇ ಗುರಿಯಾಗಿರುತ್ತದೆ. ಇಸ್ಲಾಂ ಧರ್ಮದ ಭವ್ಯವಾದ ಪ್ರಾಚೀನ ಕಾಲದಲ್ಲಿ ಅದೊಂದು ಚೇತನವೂ ಮತ್ತು ಸ್ಫೂರ್ತಿದಾಯಕವೂ ಆದ ಶಕ್ತಿಯಾಗಿದ್ದಿತು. ವೇದದಲ್ಲಿ ಧರ್ಮ ಮತ್ತು ಕಲಾಭಿರುಚಿಯೂ ಪ್ರೇಮ ಇವೇ ಇಸ್ಲಾಂ ಧರ್ಮದ ತಿರುಳು. ವಿಶಾಲ ಭಾವನೆಯಿಂದಲೂ ಮತ್ತು ಹೊಂದಿಕೆಯ ಮನೋಭಾವದಿಂದಲೂ ಅದು ಬೆಳಗುತ್ತಿತ್ತು. ಧರ್ಮದ ಮೂಲ ಸ್ವರೂಪವನ್ನು ಜನಗಳು ಅದನ್ನು ನಿಜವಾಗಿಯೂ ಕಾರ್ಯರೂಪಕ್ಕೆ ತರುವುದರಿಂದಲೇ ಶೀಘ್ರ ನಮ್ಮ ಕಾರ್ಯಸಾಧನೆಯಲ್ಲಿ ಯಶಸ್ವಿಯಾಗುವರು

ಉಪಾಧ್ಯಕ್ಷರಾದ ಜಾ ಇಸ್ಮೇಲ್ ಷರೀಫರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಜಮ್ಮುವಿನಲ್ಲಿ ಪೋಲೀಸರಿಂದ ೧೦ ಸಾರಿ ಗುಂಡಿನೇಟು

ಇಬ್ಬರ ಮರಣ; ಒಬ್ಬನಿಗೆ ಗಾಯ

ಕಾಶ್ಮೀರದ ಜಮ್ಮು ಪ್ರಾಂತದ ಸುಂದರಬನಿ ಎಂಬಲ್ಲಿ ಮೊನ್ನೆ ೩೦೦೦ ಜನರ ಉದ್ರಿಕ್ತ ಗುಂಪೊಂದನ್ನು ಚದುರಿಸಲು ಪೋಲೀಸರು ೧೦ ಬಾರಿ ಗುಂಡು ಹಾರಿಸಿದುದರಿಂದ, ಇಬ್ಬರು ಮಡಿದ, ಒಬ್ಬನಿಗೆ ತೀವ್ರ ಗಾಯವಾಗಿರುವುದಾಗಿ ತಿಳಿದುಬಂದಿದೆ. ಗುಂಪಿನವರ ಕಲ್ಲೇಟಿನಿಂದ ಅಲ್ಲಿನ ಜಿಲ್ಲಾಧಿಕಾರಿ ಅರ್ಜುನ್ ನಾಥ್ ಸಪ್ರು ಮತ್ತು ಒಂಭತ್ತು ಜನ ಪೋಲೀಸರಿಗೆ ತೀವ್ರ ಗಾಯಗಳಾಗಿವೆ. ಗುಂಪಿನವರು ಅಕ್ಕಪಕ್ಕದ ಪ್ರದೇಶಗಳಿಂದ ಬಂದು ಆ ಊರಿನ ಒಂದು ಸರ್ಕಾರಿ ಕಛೇರಿ ಮೇಲೆ ಧಾಳಿ ನಡೆಸಿದರೆಂದು ಹೇಳಲಾಗಿದೆ. ಅವರ ಪೈಕಿ ಅನೇಕರು ಕೊಡಲಿ, ಲಾಠಿ ಮುಂತಾದ ಆಯುಧಗಳನ್ನು ಹೊಂದಿದ್ದರೆಂದೂ, ಶಾಂತಿಯುತವಾಗಿ ಚದರುವಂತೆ ಸೂಚಿಸಿದರೂ ಅವರು ಕೇಳಲಿಲ್ಲವೆಂದೂ, ಅವರ ಪೈಕಿ ಒಬ್ಬನು ಪೋಲೀಸಿನವನನ್ನು ಲಾಠಿಯಿಂದ ಹೊಡೆದನೆಂದೂ, ನಂತರ ಗಲಭೆಗೆ ಪ್ರಾರಂಭವಾಯಿತೆಂದೂ ಹೇಳಲಾಗಿದೆ

ಬೆಂಗಳೂರು-ಗುಂಡ್ಲುಪೇಟೆ ಬಸ್ ವ್ಯವಸ್ಥೆ

ಮೈಸೂರು ಸರ್ಕಾರದವರು ನಾಳಿದ್ದಿನಿಂದ ವಹಿಸಿಕೊಳ್ಳಲಿರುವ ಆರು ಮಾರ್ಗಗಳ ಪೈಕಿ ಬೆಂಗಳೂರು ಮೈಸೂರು ಮಾರ್ಗದಲ್ಲಿ ೩೧ ಬಸ್ಸುಗಳ ಓಡಾಡುವುವು. ಮೈಸೂರಿನಿಂದ ನಂಜನಗೂಡು ಮೂಲಕ ಗುಂಡ್ಲುಪೇಟೆಗೆ ೯ ಬಸ್ಸುಗಳು ಹೋಗಿಬರುವುವು. ಈ ಪೈಕಿ ೭ ಬಸ್ಸುಗಳು ಬುಧರ ಮುಂತಲು ಮತ್ತು ಕಲ್ಲಿಕೋಟೆಗೆ ನೇರವಾದ ಸರ್ವೀಸ್ ಕೊಡುವುವು. ಉಳಿದ ಮೂರು ಬಸ್ಸುಗಳು ಮೈಸೂರು-ಗುಂಡ್ಲುಪೇಟೆಗೆ ಮಧ್ಯ ಇರುವ ಸ್ಥಳಗಳ ಪ್ರಯಾಣಿಕರಿಗಾಗಿ ಓಡಾಡುವುವು. ಹೀಗೆಂದು ಸರಕಾರಿ ಪ್ರಕಟಣೆಯೊಂದು ತಿಳಿಸುತ್ತದೆ. ಮೈಸೂರು ನಂಜನಗೂಡುಗಳ ಮಧ್ಯೆ ೩ ಬಸ್ಸುಗಳು ದಿನಕ್ಕೆ ೨೨ ಸಾರಿ ಓಡಾಡುವುವು. ಮೈಸೂರು-ಗುಂಡ್ಲುಪೇಟೆ ಮಾರ್ಗದಲ್ಲಿ ಊಟಿ ಮತ್ತು ಕಲ್ಲಿಕೋಟೆಗೆ ಹೋಗಿಬರುವ ಖಾಸಗಿ ಬಸ್ಸಿನ ಮಾಲೀಕರು ಮುಂದೆ ಪ್ರಯಾಣ

ದೇವನಾಗರಿ ಲಿಪಿಯು ಪ್ರಾಮುಖ್ಯತೆ

ಪ್ರೊ|| ಆತ್ರೇಯರವರ ಭಾಷಣ

ಮೈಸೂರು ೩೦

ತತ್ವ ಶಾಸ್ತ್ರ ಸಮ್ಮೇಳನದ ಪ್ರತಿನಿಧಿಗಳಾಗಿ ಬಂದಿರುವ ಕಾಶಿ ವಿಶ್ವವಿದ್ಯಾಲಯದ ದರ್ಶನ ಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಆತ್ರೇಯವರೂ ಮತ್ತು ಮೊರಾದಾಬಾದು ಕಾಲೇಜಿನ ತತ್ವ ಶಾಸ್ತ್ರದ ಪ್ರಾಧ್ಯಾಪಕರ, ಶ್ರೀಮತಿ ಮಾಧುರೀದೇವಿ ಸಿನ್ಹಾರವರೂ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನೆನ್ನೆ ಸಂಜೆ ಭಾಷಣ ಮಾಡಿದರು. ಶ್ರೀ ತಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಪ್ರಪಂಚದ ಎಲ್ಲ ಲಿಪಿಗಳಿಗಿಂತಲೂ ದೇವನಾಗರಿಯು ಹೆಚ್ಚು ಪರಿಷ್ಕೃತವಾಗಿರುವುದೆಂದು ಶ್ರೀ ಆತ್ರೇಯವರು ತಮ್ಮ ಭಾಷಣದಲ್ಲಿ ಹೇಳಿದರು. ರೋಮನ್ ಲಿಪಿಯಲ್ಲಿ ಲಿಪಿಗೂ ಶಬ್ದೋಚ್ಚಾರಗಳಿಗೂ ಇರುವ ವಿರೋಧಾಭಾಸಗಳನ್ನು ಅನೇಕ ಉದಾಹರಣೆಗಳಿಂದ ಅವರು ಸ್ವಾರಸ್ಯವಾಗಿ ವಿವರಿಸಿದರು. ಲಿಪಿಕವಾದ ಒಂದೇ ಪದವು ಅನೇಕ ವಿಧಗಳಲ್ಲಿ ಉಚ್ಚರಿಸಲ್ಪಟ್ಟು ವಿವಿಧ ಅರ್ಥಗಳನ್ನು ಕೊಟ್ಟು ಅನರ್ಥಗಳಿಗೆ ಕಾರಣವಾಗಬಹುದೆಂದು ತಿಳಿಸಿದರು. ಹೀಗೆಯೇ ಚೀನಾ ಜಪಾನ್, ಉರ್ದು ಪಾರಸೀ ಮತ್ತು ಇತರ ಅನೇಕ ಭಾಷೆಗಳ ಲಿಪಿಗಳಲ್ಲಿಯೂ ಇರುವ ಲೋಪದೋಷಗಳನ್ನು ವಿವರಿಸಿದರು. ದೇವನಾಗರಿಯಲ್ಲಿಯೂ ಕೆಲವು ಸಣ್ಣಪುಟ್ಟ ಕೊರತೆಗಳಿದ್ದರೂ ಅದು ಒಟ್ಟಿನಲ್ಲಿ ಹೆಚ್ಚು ಪರಿಪೂರ್ಣವಾದ ಲಿಪಿಯೆಂದು ಅಭಿಪ್ರಾಯಪಟ್ಟರು. ಭಾರತದ ಸಂಸ್ಕೃತಿ, ಧರ್ಮ ಮತ್ತು ಕಲೆಗಳಿಗೆ ಮಾತೃ ಸ್ಥಾನವಾದ ಸಂಸ್ಕೃತ ಭಾಷೆಯ ಲಿಪಿಯಾಗಿರುವ ದೇವನಾಗರಿಯು ಇಡೀ ಭಾರತದ ಭಾಷೆಗಳಿಗೆಲ್ಲಾ ಆಧಾರವಾಗಿದ್ದವೆ. ಹಿಂದಿಯೇ ರಾಷ್ಟ್ರೀಯ ಭಾಷೆಯಾಗಿರುವುದರಿಂದ ಈ ಲಿಪಿಯನ್ನು ಎಲ್ಲರೂ ಅಂಗೀಕರಿಸುವುದು ಅಗತ್ಯವೆಂದು ಅವರು ಹೇಳಿದರು

ಕಾಳ ಸರ್ಪದೊಡನೆ ಶಿಶುವಿನ ಸರಸ

ಬಂಗಾಳದ ಸೋನೆಪುರ ಎಂಬ ಹಳ್ಳಿಯ ಒಬ್ಬ ಹೆಂಗಸು ಗದ್ದೆ ಕೆಲಸಕ್ಕಾಗಿ ಮೊನ್ನೆ ಹೊರಟು ತನ್ನ ೧೮ ತಿಂಗಳ ಮಗುವೊಂದನ್ನು ಮನೆಯ ಬಾಗದಲ್ಲಿ ಮಲಗಿಸಿದ್ದಳೆಂದೂ, ಕೆಲಸ ಮುಗಿದ ಮೇಲೆ ಮಗುವನ್ನು ಎತ್ತಿಕೊಳ್ಳಲು ಬಂದಾಗ ಅದರ ಮೇಲೆ ಕಾಳಸರ್ಪವೊಂದು ಹೆಡೆಯನ್ನು ಆಡಿಸುತ್ತಿತ್ತೆಂದೂ, ಮಗುವೂ ಸಹ ಅದರೊಡನೆ ಸರಸವಾಡುತ್ತಿತ್ತೆಂದೂ, ರೋಮಾಂಚಕರವಾದ ಈ ಪ್ರಸಂಗದಲ್ಲಿ ಮಧ್ಯೆ ಪ್ರವೇಶಿಸಲು ಹೆಂಗಸೂ ಮತ್ತು ಆಕೆಯೊಡನೆ ಇದ್ದವರೂ ಹೆದರಿ ಸ್ವಲ್ಪ ಹೊತ್ತು ಕಾತುರದಿಂದ ಇದ್ದಾಗ, ಎಲ್ಲಿಂದಲೋ ಬಂದ ಒಂದು ಮುಂಗುಸಿಯನ್ನು ಕಂಡು ಹಾವು ಮಗುವನ್ನು ಬಿಟ್ಟು ಓಡಿತೆಂದೂ ವರದಿಯಾಗಿದೆ

ವಮಾಡುವವರಿಗೆ ಪ್ರಥಮ ಅವಕಾಶವೀಯಬೇಕೆಂದು ತಿಳಿಸಲ್ಪಟ್ಟಿರುತ್ತಾರೆ.

ಸ್ಪೇನಿನಲ್ಲಿ ಅಮೆರಿಕದ ವಿಮಾನ ಸೈನ್ಯ ನೆಲೆ

ಸ್ಪೇನಿನಲ್ಲಿ ಅಮೆರಿಕದ ವಿಮಾನ ಸೈನ್ಯ ನೆಲೆಗಳನ್ನು ಸ್ಥಾಪಿಸುವ ಬಗ್ಗೆ ಉಭಯ ರಾಷ್ಟ್ರಗಳ ನಡುವೆ ಸಂಧಾನ ನಡೆಯುತ್ತಿರುವುದೆಂದೂ, ಬರುವ ವರ್ಷ ಬ್ರಿಟನ್ನಿನಲ್ಲಿರುವ ಅಮೆರಿಕದ ವಿಮಾನ ಬಲಗಳನ್ನು ಸ್ಪೇನಿನ ನೆಲೆಗಳಿಗೆ ವರ್ಗಾಯಿಸುವ ಸಂಭವವಿರುವುದಾಗಿಯೂ ಅಮೆರಿಕದ ರಕ್ಷಣಾ ಇಲಾಖೆಯ ಸುದ್ದಿಯು ತಿಳಿಸುತ್ತದೆ.

ಇಂಡೋಚೀಣದಲ್ಲಿ ಸುರಂಗ ಹಾಕಿ ರೈಲಿನ ಆಸ್ಫೋಟನೆ

ಇಂಡೋಚೀಣದ ಸೈಗಾನಿಗೆ ಉತ್ತರದಲ್ಲಿ ಮೊನ್ನೆ ದಿನ ೧೧೦ ಮಂದಿ ವಿಯಟ್‌ಮಿನ್ ಸೈನಿಕರು ಒಂದು ಪ್ರಯಾಣಿಕರ ರೈಲಿಗೆ ಸುರಂಗ ಹಾಕಿ ಆಸ್ಫೋಟಿಸಿದರೆಂದೂ, ಅದರ ಪರಿಣಾಮವಾಗಿ ಒಬ್ಬ ಫ್ರೆಂಚ್ ಅಧಿಕಾರಿಯೂ ಮತ್ತು ಮೂವರು ಯೋಧರೂ ಮಡಿದರೆಂದೂ ವರದಿಯಾಗಿದೆ. ಆಸ್ಫೋಟನೆಯ ನಂತರ ವಿಯಟ್‌ಮಿನ್ ಸೈನಿಕರು ಫ್ರೆಂಚ್ ಸೈನಿಕರ ಮೇಲೆ ಗುಂಡು ಹಾರಿಸಿದರೆಂದೂ, ಸ್ವಲ್ಪ ಹೊತ್ತಿನ ನಂತರ ಅದನ್ನು ತಡೆಯಲಾಯಿತೆಂದೂ ಗೊತ್ತಾಗಿದೆ.

ತತ್ವಜ್ಞಾನ ಸಮ್ಮೇಳನದ ಪ್ರತಿನಿಧಿಗಳಿಗೆ ಪೌರಸಭೆಯ ಸತ್ಕಾರ

ನೆನ್ನೆ ಸಂಜೆ ನಗರದ ಪೌರಸಭೆಯವರು ತತ್ವಜ್ಞಾನ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು. ಉಪಾಹಾರಾನಂತರ, ನಗರ ಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಅತಿಥಿಗಳಿಗೆ ಸ್ವಾಗತ ಹೇಳಿ ಮೈಸೂರು ಪೌರಸಭೆಯು ನಗರದ ಸೌಂದರ್ಯವನ್ನೂ, ಪುರನಿವಾಸಿಗಳ ಸೌಲಭ್ಯಗಳನ್ನೂ ಅಭಿವೃದ್ಧಿಗೊಳಿಸುವುದರಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿದರು. ತತ್ವಜ್ಞಾನ ಸಮ್ಮೇಳನದ ಅಧ್ಯಕ್ಷರಾದ ಶ್ರೀ ದತ್ತಾರವರು ಅತಿಥಿಗಳ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿ, ತತ್ವಜ್ಞಾನಿಗಳಿಗೆ ಈ ರೀತಿ ಗೌರವವನ್ನು ಸಲ್ಲಿಸುವುದರಲ್ಲಿ ಮೈಸೂರು ನಗರವೇ ಮೊದಲನೆಯದೆಂದು ಹೇಳಿದರು. ಇವಲ್ಲದೆ ನಗರ ಶೃಂಗಾರದ ಅಚ್ಚುಕಟ್ಟು, ಒಳಚರಂಡಿ ವ್ಯವಸ್ಥೆ ಮತ್ತು ವಸತಿ ಸೌಲಭ್ಯ ಮುಂತಾದ ವ್ಯವಸ್ಥೆಗಳಲ್ಲಿಯೂ ಮೈಸೂರು ನಗರವು ಇತರ ಪಟ್ಟಣಗಳಿಗೆ ಆದರ್ಶಪ್ರಾಯವಾಗಿದೆಯೆಂದು ಹೇಳಿದರು. ಗ್ರಾಮುಸಾರಗಳನ್ನು ವಿಲೇ ಮಾಡುವ ಸಮಸ್ಯೆಯನ್ನು ಉತ್ತರ ಭಾರತದ ಅನೇಕ ಊರುಗಳಲ್ಲಿ ಬಗೆಹರಿಸದೆ ಇರುವಾಗ, ಇಲ್ಲಿ ಅದನ್ನು ಯುಕ್ತಿಯಾಗಿ ಇತ್ಯರ್ಥಗೊಳಿಸಿರುವುದಲ್ಲದೆ ಗ್ರಾಮುಸಾರದಿಂದ ಉತ್ತಮವಾದ ಗೊಬ್ಬರವನ್ನು ತಯಾರುಮಾಡಿ ಲಾಭವನ್ನು ಸಹ ಪಡೆಯುತ್ತಿರುವುದು ಶ್ಲಾಘ್ಯವಾದ ಅಂಶವಾಗಿದೆಯೆಂದು ಹೇಳಿದರು. ಪ್ರೊ|| ಎ. ಆರ್. ವಾಡಿಯಾರವರೂ ಸಹ ಸತ್ಕಾರಕ್ಕಾಗಿ ವಂದನೆಯನ್ನರ್ಪಿಸಿ, ಮೈಸೂರು ನಗರದ ಪ್ರಗತಿಗಾಗಿ ಅಭಿನಂದಿಸಿದರು.

ಹಣ ನಿಂಗಿಸಲು ೧೯ ಹೆಂಡಿರ ಮದುವೆ

ರಷ್ಯದ ವಿದ್ಯಾಶಾಖೆಯ ಸೀನಿಯರ್ ಆಡಿಟರ್ ಷಯಟಿಂ" ಪೆಟ್ರೋವಿಚ್ ಕೋಕುಷ್ಕಿನ್ ಎಂಬಾತನು, ಹಣದ ಉಳಿತಾಯದ ಬಗ್ಗೆ ಒಂದು ಉಪಾಯವನ್ನು ಹುಡುಕಿ ದೇಶದ ೧೯ ಪಟ್ಟಣಗಳಲ್ಲಿ ೧೯ ಮಂದಿ ಮಹಿಳೆಯರನ್ನು ವಿವಾಹವಾಗಿ ತನ್ನ ಕಛೇರಿ ಕೆಲಸಕ್ಕಾಗಿ ಒಂದೊಂದು ಊರಿಗೂ ಹೋದಾಗ ಅಲ್ಲಿ ಪತ್ನಿಯ ಬಳಿ ಉಚಿತವಾಗಿ ತಂಗಿದ್ದು, ಆ ಮೂಲಕ ತನಗೆ ತಗಲುತ್ತಿದ್ದ ವೆಚ್ಚವನ್ನು ನಿಂಗಿಸುತ್ತಿದ್ದನೆಂದು ಹೇಳಲಾಗಿದೆ. ಆತನ ಒಬ್ಬ ಪತ್ನಿಯು ಅವನ ಕಾಗದಪತ್ರಗಳ ಕಡತವನ್ನು ನೋಡಿದಾಗ ರಹಸ್ಯವು ಬಯಲಾದುದನ್ನು ಅವನು ಕಂಡು ಲೆನಿನ್‌ಗ್ರಾಡಿಗೆ ಹೋಗಿ ಮತ್ತೊಬ್ಬಳನ್ನು ಮದುವೆಯಾಗಿ, ಅನಂತರ ಅಲ್ಲಿಂದ ಮಾಸ್ಕೋವಿಗೆ ತೆರಳಿ ಹಿಂದಿನ ಪತ್ನಿಯೊಬ್ಬಳೊಡನೆ ನೆಲೆಸಿದನೆಂದು ಗೊತ್ತಾಗಿದೆ.

ಮಹಿಳಾ ಪ್ರದರ್ಶನಕಾರರನ್ನು ಚದುರಿಸಲು ಅಶ್ರುವಾಯು

ಕಾಶ್ಮೀರದ ಜಮ್ಮುವಿನಲ್ಲಿ ಪ್ರಜಾಪರಿಷತ್ತಿನ ಆಶ್ರಯದಲ್ಲಿ ಮಹಿಳೆಯರ ತಂಡವೊಂದರ ಮೆರವಣಿಗೆ ಮತ್ತು ಪ್ರದರ್ಶನಗಳನ್ನು ತಡೆದು ಚದುರಿಸಲು ಪೋಲೀಸರು ಮೊನ್ನೆ ಅಶ್ರುವಾಯು ಪ್ರಯೋಗಿಸಿ, ಮೆರವಣಿಗೆಯ ನಾಯಕತ್ವ ವಹಿಸಿದ್ದ ಮೂವರು ಮಹಿಳೆಯರನ್ನು ಬಂಧಿಸಿದರೆಂದೂ ವರದಿಯಾಗಿದೆ.

ಜಿಲ್ಲಾ ಸರ್ವೆ ಅಧಿಕಾರಿಗಳ ಆಜ್ಞೆಯಿಂದ ತೊಂದರೆ

ಚಾಮರಾಜನಗರ ತಾ||

ಶ್ರೀ ಸಿ. ಡಿ. ನಾರಾಯಣರಾವ್‌ರವರು ಈ ರೀತಿ ಬರೆಯುತ್ತಾರೆ:—

ಈ ತಾಲ್ಲೂಕಿನ ಆರು ಹೋಬಳಿಗಳಿಂದ ನಾಲ್ಕು ಜನ ಸರ್ವೆಯವರು ನೇಮಿಸಲ್ಪಟ್ಟು ಅವರು ತಮ್ಮ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರು. ಈಗ್ಗೆ ಎರಡು ತಿಂಗಳ ಹಿಂದೆ ಮೈಸೂರು ಜಿಲ್ಲಾ ಸರ್ವೆ ಅಧಿಕಾರಿಗಳು ತಾಲ್ಲೂಕಿನ ೪ ಹೋಬಳಿಗಳಲ್ಲಿ ಮಾತ್ರ ದೀರ್ಘವಾದ ಸರ್ವೆ ನಡೆಸಲು ಅವರನ್ನು ನೇಮಿಸಿರುವರೆಂದು ಕೇಳುತ್ತೇನೆ. ಇದರಿಂದ ಬಾಕಿ ಎರಡು ಹೋಬಳಿಗಳಲ್ಲಿ ಸರ್ವೆ ಕೆಲಸ ನಡೆಯಲು ಅಡಚಣೆ ಮತ್ತು ತಾವಕಾಶವಾಗುವುದು. ಆ ಹೋಬಳಿಗಳಿಗೆ ಸಂಬಂಧಪಟ್ಟಂತೆ ಕೋರ್ಟು ವ್ಯವಹಾರವೇ ಮೊದಲಾದ ಅತಿ ಜರೂರಾದ ಸಂದರ್ಭಗಳಲ್ಲಿ ರಿಕಾರ್ಡುಗಳನ್ನು ದಾಖಲು ಮಾಡುವ ಅವಶ್ಯವೊದಗಿದಾಗ ಸರ್ವೆಯವರು ಕೆಲಸ ಮಾಡದೆ ಬಹಳ ತೊಂದರೆಯಾಗುವುದು. ಸಂಬಂಧಪಟ್ಟ ಅಧಿಕಾರಿಗಳು ಮೇಲ್ಕಂಡ ಅಂಶವನ್ನು ಪರಿಶೀಲಿಸಿ ಮೇಲ್ಕಂಡ ತಾಲ್ಲೂಕಿನ ಆರು ಹೋಬಳಿಗಳಲ್ಲೂ ಸರ್ವೆ ಕೆಲಸಗಳು ಸಮನಾಗಿ ಎಲ್ಲಾ ಕಾಲದಲ್ಲೂ ನಡೆಯುವಂತೆ ಏರ್ಪಡಿಸಿ ಈಗಿನ ತೊಂದರೆಯನ್ನು ನಿವಾರಿಸುವರೆಂದು ನಂಬಿರುತ್ತೇನೆ.

ಹೆಣ್ಣು ಮಕ್ಕಳ ರಕ್ಷಣೆಗೆ ಫರೂಕರು ಅನರ್ಹರೇ?

ಈಜಿಪ್ಟಿನ ಮಾಜಿ ದೊರೆ ಫರೂಕರು ತಮ್ಮ ನೂತನ ರಾಣಿ ಮತ್ತು ಹಿರಿಯ ಪತ್ನಿಯ ಮೂರು ಹೆಣ್ಣು ಮಕ್ಕಳೊಡನೆ ಇಟಲಿಯ ಹೋಟೇಲೊಂದರಲ್ಲಿ ವಾಸಿಸುತ್ತಿರುವುದರಿಂದ ಅವರಿಂದ ವಿಚ್ಛೇದನ ಹೊಂದಿ, ಕೈರೋವಿನಲ್ಲಿರುವ ಅವರ ಹಿರಿಯ ರಾಣಿ ಫರೀದಾರವರು ತಮ್ಮ ಹೆಣ್ಣು ಮಕ್ಕಳನ್ನು ನೋಡಲು ಸಾಧ್ಯವಿಲ್ಲವಾಗಿದೆಯೆಂದೂ, ಹೆಣ್ಣು ಮಕ್ಕಳು ಹೋಟೇಲಿನಲ್ಲಿ ವಾಸಿಸುವುದು ಇಸ್ಲಾಂ ಧರ್ಮಕ್ಕೆ ವಿರುದ್ಧವಾಗಿರುವುದರಿಂದ ಫರೂಕರು ಆ ಹೆಣ್ಣು ಮಕ್ಕಳ ಪೋಷಕರಾಗಿರಲು ಅನರ್ಹರಾಗಿರುವರೆಂದೂ ಹೆಣ್ಣು ಮಕ್ಕಳನ್ನು ಅವರ ತಾಯಿಯ ವಶಕ್ಕೆ ಒಪ್ಪಿಸಬೇಕೆಂದೂ ಈಜಿಪ್ಟ್ ವಿಶ್ವವಿದ್ಯಾಲಯದ ಧಾರ್ಮಿಕ ಸಮಿತಿಯು ತೀರ್ಮಾನಿಸಿರುತ್ತದೆ.

ಸಿಗರೇಟಿನಿಂದ ವ್ರಣ ರೋಗ

ಧೂಮಪಾನದಿಂದ, ಅದರಲ್ಲೂ ಮುಖ್ಯವಾಗಿ ಸಿಗರೇಟನ್ನು ಸೇದುವುದರಿಂದ ಶ್ವಾಸಕೋಶಗಳಲ್ಲಿ ವ್ರಣ ರೋಗವು ಸಂಭವಿಸುವುದೆಂದು ಬೆಲ್ಜಿಯಮ್ಮಿನ ಪ್ರಾಣವೈದ್ಯರಾದ ಡಾ|| ಎಚ್. ಜೆ. ಎಫ್. ವೈಸೀರವರು ತಿಳಿಸಿರುವರು.

ಉತ್ತರ ಕೊರಿಯದ ಮೇಲೆ ಅಮೆರಿಕದ ವಿಮಾನ ಧಾಳಿ

ಅಮೆರಿಕದ ೨೨೦ ಬಾಂಬರ್ ವಿಮಾನಗಳು ಮೊನ್ನೆ ಉತ್ತರ ಕೊರಿಯದ ರಾಜಧಾನಿ ಪ್ಯೊಂಗ್‌ಯಾಂಗಿಗೆ ಆಗ್ನೇಯ ದಿಕ್ಕಿನಲ್ಲಿರುವ ಸೈನ್ಯ ನೆಲೆಗಳು ಮತ್ತು ಯುದ್ಧೋಪಕರಣಗಳ ಮೇಲೆ ಧಾಳಿ ನಡೆಸಿದವೆಂದೂ, ಇದರಿಂದ ೬೦ ಕಟ್ಟಡಗಳು ನಾಶವಾದುವೆಂದೂ ಗೊತ್ತಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬.೩೦ ನಾಗಸ್ವರ, ಎ. ವಿ. ನಾರಾಯಣಪ್ಪ. ಮಧ್ಯಾಹ್ನ ೨ ಮಹಿಳಾ ವಿಹಾರ, ಮಕ್ಕಳ ಕಾರ್ಯಕ್ರಮ. ಸಂಜೆ ೫.೩೦ ನಾಗಸ್ವರ, ಎ. ವಿ. ನಾರಾಯಣಪ್ಪ. ೬.೦೦ ಬಾಲಜಗತ್, ಮಕ್ಕಳ ಕಾರ್ಯಕ್ರಮ. ೭ ಹಿಂದಿ ಗೀತೆಗಳು, ಇಂದಿರಾ ಕಾಮತ್ ಅವರ ಸಂಗೀತ, ಟಿ. ಎಸ್. ವಿಶ್ವನಾಥರಾವ್. ೮.೩೦ ಪ್ರಧಾನಿ ನೆಹರೂರವರಿಂದ ಪಂಚವಾರ್ಷಿಕ ಯೋಜನೆ ಕುರಿತು ಭಾಷಣ, ದೆಹಲಿ ರೇಡಿಯೋ ಕೇಂದ್ರದ ಪುನಃ ಪ್ರಸಾರ. ೯.೧೫ ಕನ್ನಡ ಗೀತೆಗಳು, ರಮಣಮ್ಮ ಕೃಷ್ಣಮೂರ್ತಿ. ೯.೩೦ ಸಮ್ಮಿಶ್ರ ಗೀತೆಗಳು.

ಶ್ರೀ ರಮಣಿ ಸಂಗೀತ ವಿದ್ಯಾಲಯ

1051-1, ಚಾಮರಾಜ ಅಗ್ರಹಾರ
(ಮಸೀದಿಯ ಎದುರಿಗೆ)

ವೀಣೆ, ಹಾಡುಗಾರಿಕೆ ಮತ್ತು ಪಿಟೀಲು ವಿದ್ಯಾಲಯದಲ್ಲಿ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಲಾಗಿದೆ

ಎ. ಕೃಷ್ಣಮೂರ್ತಿ,
ವ್ಯವಸ್ಥಾಪಕ.

Edited, Printed and Published by A. R. Nagarajan at Sadhvi Press, D. Subbiah Road, Mysore.

ಆಂಧ್ರ ಪ್ರಾಂತ್ಯದ ಬಗ್ಗೆ ನೆಹರೂ-ರಾಜಾಜಿ ಭೇಟಿ

ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರು ತಿರುವಾಂಕೂರು-ಕೊಚ್ಚಿಯಲ್ಲಿ ಪ್ರವಾಸ ಮುಗಿಸಿಕೊಂಡು ನೆನ್ನೆ ಬೆಳಿಗ್ಗೆ ವಿಮಾನದಲ್ಲಿ ಮದರಾಸಿಗೆ ತೆರಳಿದರು. ಅಲ್ಲಿ ಅವರು ಆಂಧ್ರ ಪ್ರಾಂತ್ಯದ ರಚನೆ ಬಗ್ಗೆ ಶ್ರೀಗಳಾದ ಸಿ. ರಾಜಗೋಪಾಲಾಚಾರಿ ಮತ್ತು ಟಿ. ಪ್ರಕಾಶಂರವರೊಡನೆ ಮಾತುಕತೆ ನಡೆಸಿ ಮಧ್ಯಾಹ್ನ ೧-೪೫ ಗಂಟೆಗೆ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದರು. ಮದರಾಸು ನಗರದ ಭವಿಷ್ಯವನ್ನು ಆಂಧ್ರರಿಗೆ ತೃಪ್ತಿಯಾಗುವ ರೀತಿಯಲ್ಲಿ ತೀರ್ಮಾನಿಸಿ ಅದನ್ನು ಪ್ರತ್ಯೇಕ ಪ್ರಾಂತ್ಯವಾಗಿ ವಿಂಗಡಿಸಬೇಕೆಂದು ಶ್ರೀ ಟಿ. ಪ್ರಕಾಶಂರವರು ನೆಹರೂರವರಿಗೆ ಸ್ಪಷ್ಟಪಡಿಸಿದರೆಂದು ಹೇಳಲಾಗಿದೆ.

ಬಹಿರಂಗ ಸಭೆ

ನಾಳೆ ಸಂಜೆ ೬.೩೦ ಗಂಟೆಗೆ ಮೈಸೂರು ಟೌನ್‌ಹಾಲ್ ಮೈದಾನದಲ್ಲಿ ನಗರದ ಪೇಪರ್ ದಾರರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯೊಂದನ್ನು ಏರ್ಪಡಿಸಲಾಗಿದೆ. ಲೋಕಸಭೆಯ ಸದಸ್ಯರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಮೈಸೂರು ಪೇಟೆ ಧಾರಣೆ

ಪಲ್ಲ ಗಳ್ಗೆ	ರೂ. ಇಂದ	ರವರೆಗೆ
ನೆಲಗಡಲೆ	೧೬ ೨-೦	೨೪ ೮.೦
ಎಳ್ಳು	೩೦ ೦-೦	೩೭.೩.೦
ಹುಚ್ಚೆಳ್ಳು	೩೦.೮.೦	೪೬-೧-೦
ಹರಳು ಬೀಜ	೪೦.೦-೦	೪೪.೮-೦
ಹುರುಳಿ	೩೦ ೦.೦	೪೦.೧೪.೦
ಹೆಸರು	೫೩-೦-೦	೫೭.೧೪.೦
ಉದ್ದು	೬೨-೦.೦	
ಅವರೆ	೫೨ ೪.೦	೫೬ ೬.೦
ಹಲಸಂದೆ	೫೦ ೦-೦	೬೨ ೪-೦
ಮೆಣಸಿನಕಾಯಿ		
ಮಣ ಗಳ್ಗೆ	೭.೮.೦	೧೮ ೦ ೦
ಬೆಲ್ಲ	೫-೦ ೦	೫-೪ ೦
ಹುಣಸೇಹಣ್ಣು	೭-೧೪-೦	
ಸೀಗೇಕಾಯಿ	೫-೩-೦	
ತೆಂಗಿನಕಾಯಿ ೧,೦೦೦	೧೧೧-೦-೦	೨೪೨.೦.೦

ಇದರ ಪರಿಚಯವಿದೆಯೇ ...

ಮೈಸೂರು ಸಾಬೂನು

ಸಂಪೂರ್ಣವಾಗಿ ಶುದ್ಧವಾದ, ಚರ್ಮದ ಬೆಳವಣಿಗೆಯೂ, ಆರೋಗ್ಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಬಗೆಯುವ ಸಾಬೂನು. ಯಾವ ಶ್ರಮವಿಲ್ಲದೆಯೇ ಹೇರಳವಾಗಿ ನೊರೆಯುತ್ತದೆ. ಕ್ರಮ, ಕಾಲ, ಹಣ ಉಳಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನು ಕೊಡುತ್ತದೆ.



ಒಂದು ಪೆಟ್ಟಿಗೆಯನ್ನು ಬಳಸಿ ನೋಡಿ.
ಎಲ್ಲ ಕಡೆಯೂ ಸಿಗುತ್ತದೆ.

ಸರ್ಕಾರದ
ಸಾಬೂನು ಕಾರ್ಖಾನೆ,
ಬೆಂಗಳೂರು

ರಿ. ನಂ. 7೨೮ ||ವಂದೇ ಮಾತರಂ|| ಬಿಡಿಪ್ರತಿ ೩ ಕಾಸು

ಸಾಧ್ವಿ

ಸಂಪುಟ ೧೧] ಬುಧವಾರ ೩೧-೧೨-೧೯೫೨ [ಸಂಚಿಕೆ ೧೨೮

ಫಿಲಿಪ್ಪೈನ್ ದ್ವೀಪದಲ್ಲಿ ಬಿರುಗಾಳಿ ಅನಾಹುತ

ಭಾರತದ ಮಹಿಳೆಯರಿಂದ ಸಂಸ್ಕೃತಿ ಉಳಿದಿದೆ

ಮಹಿಳಾ ಸಂಘದ ರಜತೋತ್ಸವದಲ್ಲಿ ರಾಧಾಕೃಷ್ಣನ್‌ರವರ ಭಾಷಣ

ಚಿಕ್ಕಮಗಳೂರು ೩೦

ಭಾರತದ ಉಪಾಧ್ಯಕ್ಷರಾದ ಡಾ|| ಎಸ್. ರಾಧಾಕೃಷ್ಣನ್‌ರವರು ಈ ದಿನ ಇಲ್ಲಿನ ಮಹಿಳಾ ಸೇವಾ ಸಮಾಜದ ರಜತೋತ್ಸವವನ್ನು ಆರಂಭಗೊಳಿಸಿ, ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ಉಳಿಸಿಕೊಂಡು ಬಂದಿರುವವರು ಮಹಿಳೆಯರೇ ಎಂದು ಹೇಳಿದರು. ಪುರುಷರು ಅಸಹಾಯಕರಾದಾಗ ಮಹಿಳೆಯರು ಅವರಿಗೆ ಸಹಾಯ ಒದಗಿಸಲು ಚೇತನವನ್ನು ಪಡೆದಿರುವರೆಂದು ಅವರು ಅಭಿಪ್ರಾಯಪಟ್ಟರು. ಮನಸ್ಸು, ಶರೀರ ಮತ್ತು ಆತ್ಮದ ಬೆಳವಣಿಗೆಗೆ ಎಲ್ಲರೂ ಪ್ರಾರ್ಥನೆ ಗೈಯಬೇಕೆಂದು ಅವರು ಹೇಳಿದರು. ಮಹಿಳೆಯರಿಗೆ ಪುರುಷರೊಡನೆ ಸಮಾನ ಹಕ್ಕು ಬಾಧ್ಯತೆಗಳಿರುವುದಾದರೂ, ದೈವನಿಯಾಮಕದಂತೆ ಅವರು ಮಾತೆಯರಾಗಿಯೂ, ಪತ್ನಿಯರಾಗಿಯೂ ಬಾಳಿ ಗೃಹಿಣಿಯರ ಜೀವನವನ್ನು ನಿರ್ವಹಿಸಬೇಕಾದುದು ಅವರ ಪಾತ್ರವೆಂದು ನುಡಿದರು. ಮಹಿಳೆಯರ ಜನ್ಮತಃ ಸಹಜಗುಣಗಳೆಂದರೆ ತಾಳ್ಮೆ, ದಯೆ, ಸತ್ಯಪ್ರಿಯತೆ ಮತ್ತು ಮಹಿಳೆಯರಿಗೆ ಗೌರವ ಇವುಗಳಿಂದ ಮಾನವನು ಅಜ್ಞಾನವನ್ನು ನೀಗಿ ಜೀವನದ ಸವಿಯನ್ನು ಕಾಣುವುದಾಗಿ ಹೇಳಿದರು.

ಡಾ|| ರಾಧಾಕೃಷ್ಣನ್‌ರವರಿಗೆ ಅಲ್ಲಿನ ಪುರಸಭೆ ಮತ್ತು ಜಿಲ್ಲಾ ಬೋರ್ಡಿನವರು ಬಿನ್ನವತ್ತಳೆಗಳನ್ನು ಅರ್ಪಿಸಿದರು. ಕಡೂರು-ಮಂಗಳೂರು ರೈಲ್ವೆ ರಸ್ತೆ ನಿರ್ಮಾಣ ಮುಂತಾದ ಸ್ಥಳೀಯ ಕುಂದುಕೊರತೆಗಳನ್ನು ಅವರಿಗೆ ನಿವೇದಿಸಿಕೊಳ್ಳಲಾಯಿತು.

ಡಾ|| ರಾಧಾಕೃಷ್ಣನ್‌ರವರು ನೆನ್ನೆ ರಾತ್ರಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರೊಡನೆ ಬೆಂಗಳೂರಿನಿಂದ ರೈಲಿನಲ್ಲಿ ಹೊರಟು ಇಲ್ಲಿಗೆ ಬಂದರು.

ಗೀತಾ ಸಂದೇಶ ಸಾರಲು ೨೧ ದಿನಗಳ ಉಪವಾಸ

ಹೈದರಾಬಾದಿನ ಮಾಜಿ ಕಾರ್ಯಕರ್ತರೂ ಮತ್ತು ಅಖಿಲ ಭಾರತ ಗೀತಾ ಸಮ್ಮೇಳನದ ಅಧ್ಯಕ್ಷರೂ ಆದ ಎಸ್. ಐಯ್ಯಂಗಾರ್ಯರು ಕಳೆದ ಸೋಮವಾರದಿಂದ ೨೧ ದಿನಗಳ ಉಪವಾಸ ಮಾಡುತ್ತಿರುವರು. ಗೀತಾ ಸಂದೇಶವನ್ನು ಸಾರುವ ಉದ್ದೇಶದಿಂದ ಅವರು ಈ ವ್ರತವನ್ನು ಕೈಗೊಂಡಿರುವರು. ಜನರಲ್ಲಿ ಗೀತಾಧ್ಯಯನದ ಆಸಕ್ತಿಯನ್ನು ಹುಟ್ಟಿಸಲೆಂದು ಅವರು ಹೊರಟಿರುತ್ತಾರೆ.

ಮಹಾರಾಜ್ ಚಿಟ್ನೀಸ ಪತ್ನಿಯವರ ನಿಧನ

ಹೈದರಾಬಾದಿನ ಕೆ. ಪಿ. ಸಿ. ಸಿ. ಮೆಂಬರು ಹಾಗೂ ಧನಿಕರಾದ ಶ್ರೀ ಪೆರುಮಾಳ್ ರವರ ಪತ್ನಿ ಶ್ರೀಮತಿ ನಾಗಮ್ಮನವರು ನೆನ್ನೆ ರಾತ್ರಿ ತಮ್ಮ ೫೦ ನೇ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ ನಿಧನರಾದ ರೆಂದು ತಿಳಿಸಲು ವಿಷಾದಿಸುತ್ತೇವೆ.

ಹರಿಕಥೆ

ಮೈಸೂರು ೩೧

ಈ ದಿನ ರಾತ್ರಿ ೯ ಗಂಟೆಗೆ ಹುಣ್ಣಿಮೆ ಪ್ರಯುಕ್ತ ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ವೇ|| ಬ್ರಂ|| ಶ್ರೀ ನದೀಪುರಂ ಶ್ರೀನಿವಾಸ ರಂಗಾಚಾರ್ಯರಿಂದ "ಆಂಗೀರಸ ಯಜ್ಞಯಾಚನೆ" ಎಂಬ ಹರಿಕಥೆ ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ.

ಭಾರತ ವಾಚನ

ರಾಜಧಾನಿಯ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಪತ್ರಿಕಾಲಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಗಮಕ ಕಲಾ ಸಂಘದ ಆಶ್ರಯದಲ್ಲಿ ಕುಮಾರಿಗಳಾದ ಚಂಪಾ ಮತ್ತು ಲೀಲಾರವರುಗಳಿಂದ ಭಾರತ ವಾಚನವನ್ನು ಏರ್ಪಡಿಸಲಾಗಿದೆ. ಶ್ರೀ ಎಸ್. ಅನಂತನಾರಾಯಣರವರ ಅಧ್ಯಕ್ಷತೆ ವಹಿಸುವರು. ಕಲಾಭಿಮಾನಿಗಳೆಲ್ಲರೂ ದಯಮಾಡಿಸಬೇಕೆಂದು ಸಂಘದ ಕಾರ್ಯದರ್ಶಿಯವರು ಕೋರಿರುತ್ತಾರೆ.

ಶೃಂಗೇರಿ ಸ್ವಾಮಿಗಳೊಡನೆ ರಾಧಾಕೃಷ್ಣನ್ನರ ಭೇಟಿ

ಭಾರತದ ಉಪಾಧ್ಯಕ್ಷರಾದ ಡಾ|| ಎಸ್. ರಾಧಾಕೃಷ್ಣನ್‌ರವರು ನೆನ್ನೆ ಶೃಂಗೇರಿಯನ್ನು ತಲುಪಿ, ಶಾರದಾಂಬ ಮತ್ತು ವಿದ್ಯಾಶಂಕರ ದೇವಾಲಯಗಳಿಗೆ ಭೇಟಿಯಿತ್ತು, ಹಿರಿಯ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಯವರು ಮತ್ತು ಕಿರಿಯ ಗುರುಗಳೊಡನೆ ಸಂಭಾಷಣೆ ನಡೆಸಿದರು. ಅನಂತರ ಅವರು ಶಿವಮೊಗ್ಗೆಗೆ ತೆರಳಿದರು.

ಕಂಡಕ್ಟರುಗಳ ಉಪವಾಸ

ಬಿಜಾಪುರದ ಸರ್ಕಾರಿ ಬಸ್ಸು ಸರ್ವೀಸಿನ ೧೪ ಮಂದಿ ಕಂಡಕ್ಟರುಗಳನ್ನು ಅಧಿಕಾರಿಗಳು ವಜಾ ಮಾಡಿರುವುದರಿಂದ ಅವರೆಲ್ಲರೂ ಅಧಿಕಾರಿಗಳ ಕಛೇರಿ ಮುಂದೆ ಉಪವಾಸ ಮಾಡುತ್ತಲಿರುವರೆಂದು ತಿಳಿದುಬಂದಿದೆ.

ನೆಹರೂರವರ ರೇಡಿಯೋ ಭಾಷಣ

ಭಾರತದ ಪಂಚವಾರ್ಷಿಕ ಯೋಜನೆ ಬಗ್ಗೆ ಪ್ರಧಾನಿ ನೆಹರೂರವರು ಇಂದು ರಾತ್ರಿ ೮-೩೦ ಗಂಟೆಗೆ ದೆಹಲಿ ರೇಡಿಯೋವಿನಲ್ಲಿ ಪ್ರಸಾರ ಭಾಷಣ ಮಾಡುವರು.

ಕಾಂ|| ಚುನಾವಣೆ ಮುಂದುವರಿಸಲು ಸೂಚನೆ

ಸ್ವಂ. ಸು. ಪ್ರೋ॥] ಬೆಂಗಳೂರು ೩೧

ಪ್ರದೇಶ ಕಾಂಗ್ರೆಸ್ ಚುನಾವಣೆಯು ಈ ದಿನ ನಡೆಯಬೇಕಾಗಿರುವುದಷ್ಟೆ? ಈ ದಿನ ಇಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರು ನಿರ್ಣಯವೊಂದನ್ನು ಮಂಡಿಸಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯನ್ನು ಮುಂದುವರಿಸಬೇಕೆಂದು ತಿಳಿಸಿದರು. ಆ|| ಭಾ|| ಸಂಸ್ಥೆಯವರೇ ವೇಳಾಪಟ್ಟಿಯನ್ನು ಗೊತ್ತುಪಡಿಸಿರುವುದರಿಂದ, ಈ ಚುನಾವಣೆಯನ್ನು ಮುಂದುವರಿಸಲು ಸಾಧ್ಯವಿಲ್ಲವೆಂದು ಅಧ್ಯಕ್ಷ ದಾಸಪ್ಪನವರು ತಿಳಿಸಿದರೆಂದು ಹೇಳಲಾಗಿದೆ.

ಚುನಾವಣೆಯನ್ನು ಮುಂದುವರಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರನ್ನು ಪ್ರಾರ್ಥಿಸುವ ಒಂದು ಮನವಿಗೆ ೩೦ ಜನ ಸದಸ್ಯರು ರುಜುಮಾಡಿರುವರೆಂದು ವರದಿಯಾಗಿದೆ. ಚುನಾವಣೆಯು ನಡೆದರೆ, ಶ್ರೀ ಎಸ್. ಚನ್ನಯ್ಯ ಮತ್ತು ಶ್ರೀ ಹೆಚ್. ಎಂ. ಚನ್ನಬಸಪ್ಪನವರಿಗೆ ಮಾತ್ರ ಸ್ಪರ್ಧೆ ಬೀಳಬಹುದೆಂದು ಹೇಳಲಾಗಿದೆ.

ಫಿಲಿಪ್ಪೈನಿನಲ್ಲಿ ಬಿರುಗಾಳಿ ಅನಾಹುತದಲ್ಲಿ ೧೧ ಮರಣ

ಫಿಲಿಪ್ಪೈನ್ ದ್ವೀಪಸ್ತೋಮಗಳಲ್ಲಿ ಒಂದಾದ ಮಿಂಡನಾವೊ ದ್ವೀಪದಲ್ಲಿ ೫೦ ವರ್ಷಗಳಿಂದಲೂ ಜರುಗದೆ ಇದ್ದಂತಹ ಬಿರುಗಾಳಿಯು ನೆನ್ನೆ ಬೀಸಿದುದರಿಂದ ೧೧ ಮಂದಿ ಮೃತಪಟ್ಟು ೩೧ ಜನರು ಕಣ್ಮರೆಯಾಗಿರುತ್ತಾರೆ. ನದಿಗಳಲ್ಲಿ ಪ್ರವಾಹವು ಬಂದುದರಿಂದ ೬೦೦ ಮಂದಿ ಮನೆ ಮಠಗಳನ್ನು ಕಳೆದುಕೊಂಡಿರುವರು.

ಸಂಸ್ಥಾನದಲ್ಲಿ ಅಗಸೆ ನಾರು ಕೈಗಾರಿಕೆ

ಭಾರತದಲ್ಲಿ ಇದುವರೆಗೂ ತಯಾರಿಸಲ್ಪಡದೇ ಇರುವ ಅಗಸೆನಾರಿನ ಉತ್ಪತ್ತಿಗಾಗಿ ಸಂಸ್ಥಾನದಲ್ಲಿ ಒಂದುಕಡೆ ೧೮ ಸಾವಿರ ಎಕರೆ ಜಮೀನನ್ನು ಕಲ್ಪತ್ತ್ಯ ಕಂಪೆನಿಯೊಂದು ಪಡೆದಿರುವುದೆಂದು ಗೊತ್ತಾಗಿದೆ. ಮಧ್ಯಮ ದರ್ಜೆಯ ನಾರನ್ನು ಈ ದೇಶದಲ್ಲಿ ಬೆಳೆಯಬಹುದೆಂದು ಗೊತ್ತಾಗಿದೆ. ರಷ್ಯ, ಬೆಲ್ಜಿಯಂ ಮತ್ತು ಹಾಲೆಂಡುಗಳಲ್ಲಿ ಮಾತ್ರ ಅಗಸೆನಾರು ಉತ್ಪತ್ತಿಯಾಗುತ್ತಿದೆ.

ವೈಸ್ ಚಾನ್ಸೆಲರನ್ನು ಚಾನ್ಸೆಲರೇ ನೇಮಿಸಬೇಕು

ಡಾ|| ರಾಧಾಕೃಷ್ಣನ್‌ರವರ ಅಭಿಪ್ರಾಯ

ಸ್ವಂ. ಸು. ಪ್ರೋ॥] ಬೆಂಗಳೂರು ೩೧

ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರನ್ನು ಚಾನ್ಸೆಲರೇ ನೇಮಿಸಬೇಕೆಂದೂ ವಿಶ್ವ ವಿದ್ಯಾಲಯದ ಸಿಂಡಿಕೇಟಿನವರು ಈ ನೇಮಕಕ್ಕೆ ಮುಂಚೆ ೩ ಜನರ ಹೆಸರುಗಳನ್ನು ಸೂಚಿಸಬಹುದೆಂದೂ ಡಾ|| ಎಸ್. ರಾಧಾಕೃಷ್ಣನ್‌ರವರು ಇಂದು ವಿದ್ಯಾ ಸುಧಾರಣಾ ಸಮಿತಿಯಲ್ಲಿ ತಿಳಿಸಿದರೆಂದು ವರದಿಯಾಗಿದೆ.

ವಿಶ್ವ ವಿದ್ಯಾಲಯಕ್ಕೆ ಹುದ್ದೆಗಳ ನೇಮಕದ ಬಗ್ಗೆ ಪೂರ್ಣ ಸ್ವಾತಂತ್ರ್ಯವಿರಬೇಕು; ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಬಗ್ಗೆ ವಿಶ್ವ ವಿದ್ಯಾಲಯಗಳಿಗೆ ಪೂರ್ಣವಾದ ಅವಕಾಶವಿರಬೇಕು. ಆದರೆ ಅವರು ಸರ್ಕಾರದ ನೀತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಉಪಾಧ್ಯಾಯರುಗಳ ಸಿಬ್ಬಂದಿ ಬಗ್ಗೆಯೂ ಅವರಿಗೆ ಸ್ವಾತಂತ್ರ್ಯವಿರಬೇಕು. ವಿಶ್ವ ವಿದ್ಯಾಲಯದ ಘಟ್ಟದಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಬೇಕು.

ಇಂಟರ್ ಕಾಲೇಜುಗಳನ್ನು ವಿದ್ಯಾ ಇಲಾಖೆಗೆ ಒಪ್ಪಿಸಬಹುದು. ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಮೂಲ ಶಿಕ್ಷಣ ಪದ್ಧತಿ, ಸಕಲ ವಿದ್ಯೆ ಮತ್ತು ಸಂಸ್ಕೃತಿಯ ಬಗ್ಗೆ ಜ್ಞಾನ ದೊರಕಿಸುವ ಅವಕಾಶವಿರಬೇಕು. ೫ ಮತ್ತು ೬ ನೇ ತರಗತಿಗಳಲ್ಲಿ ಇಂಗ್ಲೀಷನ್ನು ಐಚ್ಛಿಕ ಭಾಷೆ ಮಾಡುವುದು ಸೂಕ್ತ.

ಪಠ್ಯ ಪುಸ್ತಕಗಳ ಬಗ್ಗೆ ಪೂರ್ಣ ಬದಲಾವಣೆ ಅವಶ್ಯಕ, ವಯಸ್ಕರ ಶಿಕ್ಷಣಕ್ಕೆ ವಾಸಗಿಯವರ ನೆರವು ಹೆಚ್ಚಾಗಿ ಪಡೆಯಬೇಕು, ಪರಿಸ್ಥಿತಿಗೆ ತಕ್ಕಂತೆ ಜಮಾ ಪ್ರದೇಶಗಳಲ್ಲಿ ವಾರದ ರಜಾ ಗೊತ್ತುಪಡಿಸಬೇಕು.

ವ್ಯಾಯಾಮವೂ ಸಹ ಶಿಕ್ಷಣದ ಅಂಗವಾಗಿರಬೇಕು. ವಿದ್ಯಾರ್ಥಿನಿಯರಿಗೆ ಕಡ್ಡಾಯವಾಗಿ ಸಂಗೀತ ಮುಂತಾದ ಕಲೆಗಳ ಅಭ್ಯಾಸ ಮಾಡಿಸಬೇಕು-ಎಂದು ರಾಧಾಕೃಷ್ಣನ್‌ರವರು ಅಭಿಪ್ರಾಯಪಟ್ಟಿರುತ್ತಾರೆ.

ಟಿ. ಸುಬ್ರಹ್ಮಣ್ಯರವರ ಉಮೇದುವಾರಿಕೆ ವಾಪಸು

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸೂಚಿಸಲ್ಪಟ್ಟಿದ್ದ ತಮ್ಮ ಹೆಸರನ್ನು ಶ್ರೀ ತಾಳಕೆರೆ ಸುಬ್ರಹ್ಮಣ್ಯರವರು ವಾಪಸು ಪಡೆದಿರುವರೆಂದು ಹೇಳಲಾಗಿದೆ.

ಕಾಂ|| ಕಾರ್ಯಕಾರಿ ಸಮಿತಿಗೆ ಟಂಡನ್ನರ ರಾಜೀನಾಮೆ

ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ಬಾಬು ಪುರುಷೋತ್ತಮದಾಸ್ ಟಂಡನ್‌ರವರು ರಾಜೀನಾಮೆಯನ್ನು ಸಲ್ಲಿಸಿರುವರೆಂದು ಗೊತ್ತಾಗಿದೆ. ಕಾಂಗ್ರೆಸ್ ವಾರ್ಷಿಕಾಧಿವೇಶನಕ್ಕೆ ಪ್ರತಿನಿಧಿಗಳನ್ನು ಚುನಾಯಿಸುವುದರ ಬಗ್ಗೆ ಕಾಂಗ್ರೆಸ್ ಅಂಗರಚನೆಯಲ್ಲಿ ತಿದ್ದುಪಡಿ ಮಾಡಿರುವುದಕ್ಕೂ, ಪ್ರಧಾನಿಯವರೇ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿರುವುದಕ್ಕೂ ಟಂಡನ್‌ರವರು ವಿರೋಧವಾಗಿರುವರೆಂದೂ, ಇದೇ ಅವರ ರಾಜೀನಾಮೆಗೆ ಕಾರಣವೆಂದೂ ಹೇಳಲಾಗಿದೆ.

ತತ್ವ ಶಾಸ್ತ್ರ ಸಮ್ಮೇಳನದ ಲೋಪದೋಷಗಳು

ಕ್ರಾಫರ್ಡ್ ಭವನದಲ್ಲಿ ವಿದ್ಯಾ ಸುಧಾರಣಾ ಸಮಿತಿಯ ಆರಂಭೋತ್ಸವದ ಅಭಾಸಗಳು ಇನ್ನೂ ಮರೆತಿಲ್ಲ. ಹೀಗಿದ್ದರೂ ಮೊನ್ನೆ ನಡೆದ ತತ್ವಶಾಸ್ತ್ರ ಸಮ್ಮೇಳನದಲ್ಲಿಯೂ ಅದೇ ಒಗೆಯ ಕುಂದು ಕೊರತೆಯಿದ್ದುದು ವಿಷಾದಕರ. ವಿದ್ಯಾ ಸುಧಾರಣಾ ಸಭೆಯಲ್ಲಿ ಸರಸ್ವತಿ ಚಿತ್ರಪಟಕ್ಕೆ ಹೂವಿನ ಹಾರವಿಲ್ಲದೆ ಎಷ್ಟೊಂದ ಟೀಕೆಗೆ ಕಾರಣವಾಯಿತೆಂಬುದು ಗೊತ್ತೇ ಇದೆ. ಸಮ್ಮೇಳನದಲ್ಲಿ ಹೂವಿನ ಹೆಸರೇ ಇಲ್ಲದೆ ನಿರ್ಗಂಧ ಕುಸುಮದಂತೆ ಇದ್ದುದು ಒಂದು ಸೋಜಿಗ. ವಿಶ್ವ ಸಂಸ್ಥೆಗೆ ಶ್ರೀ ಎಸ್. ಎ. ಸ್ವಾಮಿಯವರು ಸಮರ್ಪಿಸಿದ ಮಹಾತ್ಮ ಗಾಂಧಿಯವರ ಚಿತ್ರ ಪಟಕ್ಕೆ ಒಂದು ಹಾರವಿಲ್ಲ. ಇಷ್ಟೇ ಅಲ್ಲದೆ ಶ್ರೀಮನ್ಮಹಾರಾಜರಿಗಾಗಲಿ, ರಾಧಾಕೃಷ್ಣನ್‌ರವರಿಗಾಗಲಿ, ಸಮ್ಮೇಳನದ ಅಧ್ಯಕ್ಷರಿಗಾಗಲಿ ಹಾರವಿಲ್ಲ. ಸರಸ್ವತಿಗೆ ಆದಂತೆ ಇವರುಗಳಿಗೂ ಆಯಿತು. ವೇದಾಂತಕ್ಕೂ ಪುಷ್ಪ ಹಾರಕ್ಕೂ ಬಹುದೂರವೆಂದು ಭಾವಿಸಿದಂತೆ ಕಾಣುತ್ತದೆ. ಆದರೆ ಸಮ್ಮೇಳನದ ಇತರ ಶೃಂಗಾರಗಳೆಲ್ಲವೂ ಇದ್ದುವು.

ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲು ದೇವತಾ ಪ್ರಾರ್ಥನೆಯು ಇತ್ತು. ಅದು ನಡೆಯಲೇ ಇಲ್ಲ. ಎಲ್ಲರೂ ಅದನ್ನು ನಿರೀಕ್ಷಿಸುತ್ತಿದ್ದರು. ಆದರೆ ಸ್ವಾಗತಾಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರ ಭಾಷಣದೊಡನೆ ಸಭೆ ಆರಂಭಿಸಿಯೇಬಿಟ್ಟಿತು. ಪ್ರಾರ್ಥನೆ ಮಾಡಲು ಬಂದಿದ್ದವರು ತಮ್ಮನ್ನು ಕರೆಯಬಹುದೆಂದು ನಿರೀಕ್ಷಿಸಿಕೊಂಡಿದ್ದು ವಿಫಲರಾದರೆಂದು ತಿಳಿದುಬಂದಿದೆ. ವೇದಾಂತದ ಅಂತ್ಯ ಘಟ್ಟವನ್ನು ಮುಟ್ಟಿ ನಿರ್ಗುಣೋಪಾಸನೆಯಲ್ಲಿ ವ್ಯವಸ್ಥಾಪಕರು ಮಗ್ನರಾದಂತೆ ತೋರುತ್ತದೆ.

ಶ್ರೀಮನ್ಮಹಾರಾಜರ ಮತ್ತು ಡಾ॥ ರಾಧಾಕೃಷ್ಣನ್‌ರವರ ಸ್ಫೂರ್ತಿದಾಯಕ ಭಾಷಣಗಳ ಈ ಲೋಪದೋಷಗಳಿಗೆ ಪರಿಹಾರ ನೀಡುತ್ತಿದ್ದುವು. ಆದರೆ ಪತ್ರಿಕಾ ಪ್ರತಿನಿಧಿಗಳಿಗೆ ಬಹು ದೂರದಲ್ಲಿ ಸ್ಥಳವನ್ನು ಗೊತ್ತುಮಾಡಿದ್ದರಿಂದ ಅಚ್ಚು ಹಾಕದೆ ಬಾಯಿ ಸಲ್ಲಿಯೇ ಹೇಳಿದ ಡಾ॥ ರಾಧಾಕೃಷ್ಣನ್‌ರವರ ಭಾಷಣವನ್ನು ಅಕ್ಷರಶಃ ಬರೆದುಕೊಂಡು ವರದಿ ಮಾಡಲು ಸೌಕರ್ಯವಿರಲಿಲ್ಲ.

ಅಧ್ಯಕ್ಷರ ಅಚ್ಚುಹಾಕಿದ ಭಾಷಣವನ್ನು ಸಭೆಗೆ ಮೊದಲೇ ಆಗಲೀ ಅಥವಾ ಆ ಬಳಿಕ ನಂತರವಾಗಲಿ ಪತ್ರಿಕೆಯವರಿಗೆ ಕೂಡ ಹಂಚದೇ ಇದ್ದ ಸಮ್ಮೇಳನವು ಇದೊಂದೇ ಎಂದು ಹೇಳಬಹುದು. ಸಭೆ ಮುಗಿದು ಎಷ್ಟೋ ಹೊತ್ತಾದಮೇಲೆಯೂ ಭಾಷಣದ ಪ್ರತಿಗಳು ದೊರೆಯಲಿಲ್ಲ. ಅವಕ್ಕೆ ಉತ್ತರವಾದಿಗಳು ಯಾರೂ ಇರಲಿಲ್ಲ. ಮುದಂಗಿಸಿಂದ ಬಂದಿದ್ದ ಕಾರ್ಯದರ್ಶಿಗಳ ಕಡೆ ಎಲ್ಲರೂ ತೋರುತ್ತಿದ್ದರು. ಆದರೆ ಅವರ ಎಲ್ಲೂ ಕಾಣುತ್ತಿರಲಿಲ್ಲ. ಸ್ಥಳದ ವ್ಯವಸ್ಥಾಪಕರಗಳ ಸಮ್ಮೇಳನದ ಸೌಲಭ್ಯಗಳನ್ನು ವ್ಯವಸ್ಥೆ ಮಾಡುವುದಲ್ಲದೆ ಬೇರೆ ಯಾವ ಅಧಿಕಾರವನ್ನೂ ಹೊಂದಿದ್ದಂತೆ ಕಾಣಲಿಲ್ಲ.

ಅಧ್ಯಕ್ಷರಾದ ಶ್ರೀ ಪತ್ರರ ಭಾಷಣವು ಬಹು ದೀರ್ಘವೆಂದು ಅವರೇ ಹೇಳಿ ಕೆಲವು ಭಾಗಗಳನ್ನು ಮಾತ್ರ ಓದಿದರು. ಅವೂ ಒಬ್ಬರಿಗೂ ಸರಿಯಾಗಿ ಕೇಳಿಸಲಿಲ್ಲ. ಹೀಗಾಗಿ ಅವರು ಏನು ಹೇಳಿದರೆಂಬುದೇ ಅನೇಕರಿಗೆ ತಿಳಿಯದಾಗಿದೆ.

ಸಮ್ಮೇಳನದಲ್ಲಿ ಪದ್ಧತಿ ಮೀರಿ ತಿಂಡಿ, ತೀರ್ಥ, ಸಂಗೀತ, ನೋಟ ಮುಂತಾದ ಮನರಂಜನೆಗಳು ಎಂದಿನಂತೆ ನಡೆದುವು.

—ವರದಿಗಾರ

ಮೈಸೂರು ಪೇಟೆ ಧಾರಣೆ

ಪಲ್ಲಕ್ಕೆ	ರೂ ಇಂದ	ರೂ ಗೆ
ನೆಲಗಡಲೆ	೧೫ ೩ ೦	೨೨ ೦ ೦
ಎಳ್ಳು	೩೦ ೦ ೦	೩೭ ೬ ೦
ಹುಚ್ಚೆಳ್ಳು	೩೪ ೦	೪೭-೧೪-೦
ಹರಳು ಬೀಜ	೩೯ ೧೪-೦	೪೪ ೩-೦
ಹುರುಳಿ	೩೨ ೬.೦	೪೦ ೮.೦
ಹೆಸರು	೯೪ ೩ ೦	೫೭ ೦ ೦
ಅವರೆ	೫೩ ೦ ೦	೫೩ ೪ ೦
ಹಲಸಂದೆ	೫೦ ೦-೦	೫೯ ೩ ೦
ಮೆಣಸಿನಕಾಯಿ		
ಮುಣಿಗೆ	೯ ೪ ೦	೧೬ ೧೨ ೦
ತೆಂಗಿನಕಾಯಿ ೧೦೦	೧೫೩ ೦ ೦	[illegible]

ಪ್ರಸಹ ತನ್ನು ಸೇವೆಗೆ!

ಭಕ್ತ ಮತ್ತು ಜಕ್ಕ ಸಾಗಿಸುವವರು ಮೈಸೂರು ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿನ ಪಾತವ್ಯದ ದಕ್ಷತೆಯು ಹಾಗೂ ಸುಲಭ ರೀತಿಯ ಸಾಗಾಣಿಕೆಯ ಅವಕಾಶವನ್ನು ದಯಮಾಡಿ ಉಪಯೋಗಿಸಿಕೊಳ್ಳುವರೆಂದು ಆಶಿಸಲಾಗಿದೆ

ಮೈಸೂರು ಟ್ರಾನ್ಸ್‌ಪೋರ್ಟ್ ಸರ್ವಿಸ್ (ರಿಜಿಸ್ಟರ್ಡ್)

(ತೀರ್ಥ ಮತ್ತು ಕಂಪೆನಿ)
ರಮಾವಿಲಾಸ ರಸ್ತೆ, ಮೈಸೂರು
(ಫೋನ್ ನಂ 537)

ಎಲ್ಲಾ ಬಗೆಯ
ಅಲೋಪೆಥಿಕ್ ಔಷಧಿಗಳೂ
ನ್ಯಾಯವಾದ ಬೆಲೆಗೆ
ನಮ್ಮಲ್ಲಿ ದೊರೆಯುತ್ತವೆ
ರಘುಲಾಲ್ & ಕೋ
ಔಷಧಿ ವ್ಯಾಪಾರಿಗಳು,
207 ಸಯ್ಯಾಜಿರಾವ್ ರೋಡ್,
ಮೈಸೂರು

ದುಷ್ಕೃತ್ಯಗಳೇ ಇಲ್ಲದ ಹಳ್ಳಿ

ಪಾಟಿಯಾಲಾ ಮತ್ತು ಪೂರ್ವ ಪಂಜಾಬು ಸಂಸ್ಥಾನದ ಚಂಡೀಗಸ್ಸಿ ಎಂಬ ಗ್ರಾಮದಲ್ಲಿ ಕಳೆದ ೫೦ ವರ್ಷಗಳಿಂದ ಯಾವ ವಿಧವಾದ ದುಷ್ಕೃತ್ಯಗಳೂ ನಡೆದಿಲ್ಲವೆಂದು ವರದಿಯಾಗಿದೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಎಸ್ ಎಸ್ ರಾಮಚಂದ್ರಾಚಾರ್, ಸಂಗೀತ. ಮಧ್ಯಾಹ್ನ ೧ ೪೦ ವೀಣೆ ೨ ರಂಗಸ್ವ ವೇಣುಗಾನ ಸಂಜೆ ೫ ೪೦ ಎಸ್ ಎ ರಾಮಚಂದ್ರಾಚಾರ್ ಸಂಗೀತ ೬ ೧೦ ಕನ್ನಡ ಗೀತೆಗಳು ೭ ೩೦ ಎಂ ಎ ವರದಾಚಾರ್ಯರು ಗೀತಾ ಗುರುದೇವರಿಂದ ಗೀತ ಕಾರ್ಯಕ್ರಮ ೮ ೧೫ ಭಾರತ ವಾರ್ತೆ ೮ ೪೦ ವೇಣುಗಾನ

ಕ್ರಿಸ್ಮಸ್ ಹಬ್ಬದ ಸಲುವಾಗಿ

ಅತ್ಯುತ್ತಮ ಗಡಿಯಾರಗಳಾದ ವೆಸ್ಟ್ ಎಂಡ್ ವಾಚ್ ಕಂಪನಿ, ರೋಲೆಕ್ಸ್ ಮುಂತಾದ ಗಡಿಯಾರಗಳ ನಮ್ಮಲ್ಲಿ ಬಹಳ ಸುಲಭ ಬೆಲೆಗೆ ದೊರಕುತ್ತವೆ ದಯವಿಟ್ಟು ಒಂದು ಸಲ ಬಂದು ನೋಡಿ

ಕೆ ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್. (*Estd* 1911)
ಗಡಿಯಾರ ಮತ್ತು ಕನ್ನಡಕ ವ್ಯಾಪಾರಿಗಳು
ಅಶೋಕಾ ರಸ್ತೆ, ಮೈಸೂರು

Edited, Printed and Published by A R Nagarajan at Sadhvi Press, D Subbiah Road, Mysore

WHY HURRY! STOP!!
Here is a happy combination of Hollywood Magic The World's Greatest Circus See all the excitement The laughter The Drama The Top Stars of
THE GREATEST SHOW ON EARTH
AT SRI GAYATHRI
TALKIES, MYSORE
FROM 1-1-1953 :: Daily 3 Shows
Matinee 2 45 1st Show 6 15 2nd Show 9.45

Please Note —
Enhanced Rates For This Picture Only
Balcony - Box 3.9.0 1-14.0. 1.8.0
Down Floor 1.3.0 0.13.0. 0.8.0. Ladies 0.8.0

ಮೈಸೂರು ಅರಗು ಮತ್ತು ಬಣ್ಣದ
ಕಾರ್ಖಾನೆ ಲಿಮಿಟೆಡ್, ಮೈಸೂರು
ಅವರು ತಮ್ಮ ಎಲ್ಲಾ ಗಿರಾಕಿಗಳಿಗೂ ಹೊಸ ವರ್ಷದ
ಸುಭಾಶಯಗಳನ್ನು ಕೋರುತ್ತಾರೆ
ಮತ್ತು ಉತ್ತಮ ವರ್ಗದ
ಡಿಸ್ಟೆಂಪರ್ ಬಣ್ಣಗಳನ್ನು
ನೂತನ ವರ್ಷಕ್ಕಾಗಿ ಹೊಸದಾಗಿ ತಯಾರಿಸಿ ಮಾರಾಟಕ್ಕೆ
ಇಡಲಿರುವುದಾಗಿಯೂ ಪ್ರಕಟಪಡಿಸಿರುತ್ತಾರೆ

ಒಲಿಂಪಿಯಾ
ಅನೋಖ ಪ್ರಾರಂಭ 1-1-1953 ರಿಂದ
ಪ್ರತಿ ದಿನ ಮೂರು ಆಟಗಳು
ವಿನೋದ್ ಪಿಕ್ಚರ್ಸ್‌ರವರು ಪ್ರಣಯ ಸಾಹಿತ್ಯದಲ್ಲಿ ಪರಿಶ್ರಮ ಪಟ್ಟು,
ಶೋಭಿಸುವ ಅದ್ಭುತ ಸಂಗೀತಮಯ ಚಿತ್ರ
* ಭಕ್ತ ಪುರಂದರ್ *
ತಾರೆ ನಿರೂಪರಾಯ್, ಮನಮೋಹನ್ ಕೃಷ್ಣ, ಶನಿಮಾಲ, ಸಪ್ರು

1—1 ರಿಂದ ಬೆಳಗಿನ ಪ್ರದರ್ಶನ: ★ ದರ್ದ ★

ಪ್ರಭುದೇವಾ ಟಾಕೀಸ್
(ಪ್ರತಿ ದಿನ 3 ಆಟಗಳು)
2—1—53 ನೇ :: ಶುಕ್ರವಾರದಿಂದ
ಶೋಭನಾ ಫಿಲಂಸ್‌ರವರ ತೆಲುಗು ಚಿತ್ರ
* ಪ್ರಜಾಸೇವಾ *
ತಾರೆ ಲಕ್ಷ್ಮೀರಾಜ್ಯಂ, ಗಿರಿಜಾ ಮುಂತಾದವರು